Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

English-Kannada Dictionary

Acc. No. 29990

R
491. 432
KAN-E

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

J113940

पुस्तकालय

गुरुकुल कांगड़ी विश्वविद्यालय, हरिद्वार

वर्ग संख्या............... आगत संख्या...............

पुस्तक-विवरण की तिथि नीचे अंकित है। इस तिथि सहित ३० वे दिन तक यह पुस्तक पुस्तकालय में वापिस आ जानी चाहिए। अन्यथा ५० पैसे प्रति दिन के हिसाब से विलम्ब-दण्ड लगेगा।

J113940

Stock Verification-2024

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

सन्दर्भ ग्रन्थ
REFERENCE BO

यह पुस्तक वितरित न की जाय
NOT TO BE ISSUED

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೈಸೂರು ವಿಶ್ವವಿದ್ಯಾನಿಲಯದ

ಇಂಗ್ಲಿಷ್-ಕನ್ನಡ ನಿಘಂಟು

THE MYSORE UNIVERSITY

ENGLISH–KANNADA DICTIONARY

CHECKED 1973

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

UNIVERSITY OF MYSORE
MYSORE

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

All Rights Reserved

BANGALORE:
PRINTED BY THE SUPERINTENDENT AT THE GOVERNMENT PRESS
1947

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

EDITORIAL COMMITTEE

CHAIRMAN AND CHIEF EDITOR

1. *Rajasevasakta* B. Venkatanaranappa, M.A.
   Retired Professor of Physics, Central College, Bangalore
   (1933 June—1943 July)

   Mr. M. R. Sreenivasamurty, B.A.
   (Mysore Educational Service) (1943 August—1946 December)

MEMBERS :

2. Mr. D. V. Gundappa
   Journalist, Sometime Vice-President of the Kannada Sahitya Parishat, Bangalore City
3. *Rajasevasakta* B. M. Srikantia, M.A., B.L.
   University Professor of English and Honorary Professor of Kannada in the Mysore University, Bangalore
4. Mr. T. S. Venkannaiya, M.A.
   Professor of Kannada, Maharaja's College, Mysore
5. Mr. A. R. Krishna Sastri, M.A.
   Professor of Kannada, Maharaja's College, Mysore
6. Mr. C. K. Venkataramayya, M.A., LL.B.
   Kannada Translator to the Government of Mysore, Bangalore
7. Mr. B. Puttaiya, B.A.
   Retired Superintendent, Government Printing, Bangalore
8. Mr. D. C. Subbarayappa, B.A., B.L.
   Retired Under-Secretary to the Government of Mysore, Bangalore

ASSISTANT TO THE CHIEF EDITOR :

1. Mr. M. R. Sreenivasamurty, B.A.
   (1939 June—1943 July)

   Mr. K. V. Raghavachar, M.A., B.T.
   (1943 November—1946 June)

LITERARY ASSISTANTS :

1. Mr. L. Gundappa, M.A.
2. Mr. K. V. Raghavachar, M.A., B.T.
3. Mr. M. V. Seetharamiah, M.A.

CLERK :

1. Mr. U. V. Sreenivasa Rao
   Mr. T. Thathachar

ASSOCIATE MEMBERS :

1. Dr. S. C. Nandimath, M.A., Ph.D., Belgaum
2. Mr. K. G. Kundanagar, M.A., Kolhapur
3. Mr. Ullal Mangesha Rao, B.A., L.T., Mangalore
4. Mr. K. Shankarabhatta, Mangalore

PROOF-READER :

Mr. M. Krishna Rao

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಪಾದಕ ಮಂಡಲಿ

ಅಧ್ಯಕ್ಷರು ಮತ್ತು ಪ್ರಧಾನ ಸಂಪಾದಕರು :

೧. ರಾಜಸೇವಾಸಕ್ತ ಬಿ. ವೆಂಕಟನಾರಣಪ್ಪ, ಎಂ.ಎ.
ಭೌತ ವಿಜ್ಞಾನದ ನಿವೃತ್ತ ಮಹೋಪಾಧ್ಯಾಯರು, ಸೆಂಟ್ರಲ್ ಕಾಲೇಜು, ಬೆಂಗಳೂರು
(೧೯೩೩ ಜೂನ್—೧೯೪೩ ಜುಲೈ)

ಶ್ರೀ. ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.
(ಮೈಸೂರು ವಿದ್ಯಾಭ್ಯಾಸದ ಇಲಾಖೆ) (೧೯೪೩ ಆಗಸ್ಟ್—೧೯೪೬ ಡಿಸೆಂಬರ್)

ಸದಸ್ಯರು :

೨. ಶ್ರೀ. ಡಿ. ವಿ. ಗುಂಡಪ್ಪ
ಪತ್ರಿಕೋದ್ಯೋಗಿಗಳು ಮತ್ತು (ಕೆಲವು ಕಾಲ) ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರು, ಬೆಂಗಳೂರು.

೩. ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.
ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಮಹೋಪಾಧ್ಯಾಯರು ಮತ್ತು ಕನ್ನಡದ ಗೌರವ ಮಹೋಪಾಧ್ಯಾಯರು, ಬೆಂಗಳೂರು.

೪. ಶ್ರೀ. ಟಿ. ಎಸ್. ವೆಂಕಣ್ಣಯ್ಯ, ಎಂ.ಎ.
ಕನ್ನಡದ ಮಹೋಪಾಧ್ಯಾಯರು, ಮಹಾರಾಜರವರ ಕಾಲೇಜು, ಮೈಸೂರು

೫. ಶ್ರೀ. ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
ಕನ್ನಡದ ಮಹೋಪಾಧ್ಯಾಯರು, ಮಹಾರಾಜರವರ ಕಾಲೇಜು, ಮೈಸೂರು

೬. ಶ್ರೀ. ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್ಎಲ್.ಬಿ.
ಮೈಸೂರು ಸರ್ಕಾರದ ಕನ್ನಡ ಭಾಷಾಂತರಕರ್ತರು, ಬೆಂಗಳೂರು

೭. ಶ್ರೀ. ಬಿ. ಪುಟ್ಟಯ್ಯ, ಬಿ.ಎ.
ಮೈಸೂರು ಸರ್ಕಾರದ ಮುದ್ರಣಾಲಯದ ನಿವೃತ್ತ ಸೂಪರಿಂಟೆಂಡೆಂಟರು, ಬೆಂಗಳೂರು

೮. ಶ್ರೀ. ಡಿ. ಸಿ. ಸುಬ್ಬರಾಯಪ್ಪ, ಬಿ.ಎ., ಬಿ.ಎಲ್.
ಮೈಸೂರು ಸರ್ಕಾರದ ನಿವೃತ್ತ ಅಂಡರ್ ಸೆಕ್ರೆಟರಿ, ಬೆಂಗಳೂರು

ಸಹಾಯ ಸಂಪಾದಕರು :

೧. ಶ್ರೀ. ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.
(೧೯೩೯ ಜೂನ್—೧೯೪೩ ಜುಲೈ)

ಶ್ರೀ. ಕೆ. ವಿ. ರಾಘವಾಚಾರ್, ಎಂ.ಎ., ಬಿ. ಟಿ.
(೧೯೪೩ ನವೆಂಬರ್—೧೯೪೬ ಜೂನ್)

ಸಹಾಯಕ ಪಂಡಿತರು :

೧. ಶ್ರೀ. ಎಲ್. ಗುಂಡಪ್ಪ, ಎಂ.ಎ.
೨. ಶ್ರೀ. ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.
೩. ಶ್ರೀ. ಎಂ. ವಿ. ಸೀತಾರಾಮಯ್ಯ, ಎಂ.ಎ.

ಸಹ ಸದಸ್ಯರು :

೧. ಡಾ॥ ಎಸ್. ಸಿ. ನಂದಿಮಠ, ಎಂ.ಎ., ಪಿಎಚ್.ಡಿ., ಬೆಳಗಾಂ
೨. ಶ್ರೀ. ಕೆ. ಜಿ. ಕುಂದಣಗಾರ್, ಎಂ.ಎ., ಕೊಲ್ಹಾಪುರ
೩. ಶ್ರೀ. ಉರ್ಲಾಳ ಮಂಗೇಶರಾವ್, ಬಿ.ಎ., ಎಲ್.ಟಿ., ಮಂಗಳೂರು.
೪. ಶ್ರೀ. ಕೆ. ಶಂಕರಭಟ್ಟ, ಮಂಗಳೂರು

ಗುಮಾಸ್ತರು :

೧. ಶ್ರೀ. ಯು. ವಿ. ಶ್ರೀನಿವಾಸರಾವ್
ಶ್ರೀ. ಟಿ. ತಾತಾಚಾರ್

ಕರಡಚ್ಚು ಓದಿದವರು :

ಶ್ರೀ. ಎಂ. ಕೃಷ್ಣರಾವ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

PREFACE

THE first Chairman of the Editorial Committee and Chief Editor of the "MYSORE UNIVERSITY ENGLISH-KANNADA DICTIONARY," the late *Rajasevasakta* Prof. B. Venkatanaranappa, M.A., gave a brief account of the origin of the work, as well as a succinct definition of its object and scope, in his inaugural preface (reprinted below) attached to the first part of the work issued on the 28th of June 1936. But, with characteristic modesty, he made no reference there to the part which he had himself played in providing the impetus for the undertaking. Now, when the task he initiated has reached its conclusion, the Committee considers it its duty, in justice no less than in gratitude, to place on record what the work owes to his inspiration.

So far ago as the 6th of October 1925, Mr. B. Venkatanaranappa, who was then a member of the Mysore Representative Assembly, elected by the Mysore University Constituency, moved a resolution worded as follows at a session of that body:

> "that with a view to making at least the elements of the Western Sciences available to the masses, among whom it will not be possible, in the near future, to spread a sufficient knowledge of English, this Assembly recommends that suitable steps may be taken early by the Government to make provision for the compilation of a comprehensive English–Kannada Dictionary and a Kannada Encyclopaedia, by employing suitable agency for doing the work."

The resolution "was put to vote and unanimously carried". It is in pursuance of this resolution that the Government of Mysore were pleased to pass their Order No. E. 100-201—Uni. 153-31-13, dated the 15th of July 1933, sanctioning the appointment of the Editorial Committee and other necessary arrangements.

The Dictionary Office began work on 1st November 1933. The first formal meeting of the Editorial Committee was held on 28th September 1933 and its last meeting on 26th June 1946, the total number of meetings held being 210.

The object that the Committee set before itself was the production of a dictionary for the use of persons possessing a knowledge of English of about the High School standard and seeking lexical help in the study of English books and journals on the various subjects of living interest to the world of to-day. The dictionary was also to be of assistance to those—such as teachers, translators, writers, journalists and lecturers—who are engaged in the communication of ideas and knowledge derived from English sources to the Kannada public. The dictionary was to be made acceptable to the public of all Karnataka including the Kannada-speaking areas beyond the borders of Mysore; and it was to give special attention to the interpretation of terms of modern science and modern thought. It was to be a dictionary of current English and current Kannada, designed for the average reader rather than for the scholar or specialist in any field of knowledge or learning. The need for such a work must come to be felt as all the more urgent with the increasing adoption of Kannada as the medium of instruction in schools and colleges.

The preparation of material had to be in four successive stages. First, the Literary Assistants in the Office wrote out drafts of vocables and their meanings under the guidance of the Chief Editor. Then the Chief Editor scrutinized the drafts and had them re-written as revised by him. Next, the Editorial Committee considered the revised drafts at its meetings and introduced changes as a result of its own discussions and its consideration of suggestions sent by Associate Members. Finally, the Chief Editor reviewed the matter

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

again at the printing stage and made any possible further improvements, sometimes in consultation with some of the members. In dealing with terms of Science and Technology he sought the assistance of specialists when necessary. These complicated processes, together with certain difficulties connected with the scriptory and mechanical part of the work, explain the length of time taken for the completion of the work.

To help the Committee in getting at Kannada expressions in popular use in Southern and Northern Karnataka, two Associate Members, one from Mangalore and the other from the Dharwar region, were added on to the Committee; and their collaboration proved very useful.

It was at first estimated, when there was no basis of experience or precedent for the calculation, that the work could be finished in about 1,150 pages and would require about five years. But as the work progressed, the Committee came to realize that an increase of the size of the work and an extension of the time granted for it were both inevitable. The Committee now feels that, as it shared the impatience of the subscribers who were expecting to see the work completed much earlier, they will now share its sense of relief.

The Committee is far from feeling satisfied that its performance has reached the level of its ideal. All that it wishes to say for itself is that it has not grudged attention and industry in study and workmanship. The Committee would also venture to submit that some at least of the kinds of imperfection that may be noticed by the reader are in their nature a reflex of the deficiencies noticeable in the present state of popular education and linguistic development in the country. To take the average reader to the meaning of a new word, the only vehicle that the lexicographer can provide is one made out of the old stock of words and phrases which the reader is already able to understand. The progress towards the unfamiliar is necessarily from and through the familiar. But modern science and technology are practically an untrodden field of knowledge to all but a minute fraction of the masses in India. The compiler of an English-Indian Dictionary (whichever be the Indian language) has to contend against the difficulty that the more important of the vocables he has to deal with connote ideas and objects which were born and developed in circumstances totally unknown to India. He has to write for a reader who is not acquainted with the historical and social background of the things of the Western world and who has not yet been intellectually prepared for the phraseology that must be employed in the explanation of scientific and technical terms. These difficulties of the lexicographer can diminish only with a larger and deeper diffusion of modern knowledge and general information among the people. In the meantime, he has to console himself with the thought that his work,—although it may not, even at its best, be considered to be more than a rough and rudimentary draft,—is still a foundation necessary for the far finer kind of book he contemplates as his ideal. A perfect dictionary, if there be such a thing, can only be the product of a long process of evolution; it is the fruit of many repeated experiments. The present work represents only a first effort on its scale. Under no head can it be claimed for this work that it is exhaustive, whether from the point of view of the selection of words or from that of the treatment of individual words. We had to content ourselves with attending to the more familiar vocabulary of the more familiar subjects and that on an elementary popular level. Research and discovery in science and technology have been proceeding with such great rapidity that scores of new words and expressions have come into being since the last edition of the Concise Oxford Dictionary, particularly during

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

the second World War; and these recent additions to English vocabulary could not be accommodated in the present work.

In facing its trials, the Editorial Committee had the advantage of studying how labourers in a similar field in other Indian languages have striven for success. We have constantly consulted lexicons and glossaries in Sanskrit, Hindi, Bengali, Mahrathi, Tamil and Telugu, besides seeking help from older English-Kannada Dictionaries; and it is our impression that the success attained is everywhere of mostly the same level, the conditions being almost the same throughout India. We cherish the hope that when examined in comparison with a similar work so far published in any other Indian language, ours will not be found to be inferior to any.

In dealing with scientific and technical words, full definitions are given in Kannada so that their connotations may be clearly understood. It is possible that these definitions may not satisfy the scientist who may require a more elaborate and perhaps a more precise definition. The Editors of the GREAT ENGLISH-INDIAN DICTIONARY (Lahore) have tried to give Sanskrit equivalents to all scientific terms:—(Hydrogen=ಉದಜನ; Bromine=ದುರಾಘ್ರೀ; Nitrogen=ಧೂಯಾತಿ; Iodine=ಜಮ್ಬುಕೀ; Oxygen=ಜಾರಕ; Carbon=ಪ್ರಾಂಗಾರ). Prof. Manindranath Banerjee, F.C.S., in his 'A System of Indian Scientific Terminology' has adopted a different line of argument in favour of Sanskrit equivalents and has given the following words as suitable equivalents: Hydrogen=ಆರ್ದ್ರಜನ; Bromine=ಬರಮೀಣ; Nitrogen=ನೇತ್ರಜನ; Iodine=ಏತಿನ; Oxygen=ಅಕ್ಷಜನ; Carbon=ಕಾರಜನ. No such attempt has been made in this Dictionary. The Committee is of the opinion that scientific terminology for Indian languages should be settled on an All-India basis. Indeed, the terms of science should, as far as possible, be of international currency. That would make for both accuracy and facility in the spread of scientific knowledge. Moreover, fabrication from Sanskrit can serve no useful purpose in the present system of education in which English is the medium of instruction in all the higher courses of the Universities in India. Some of the Sanskritic equivalents which have been in use in Mysore (for example: Oxygen=ಆಮ್ಲಜನಕ; Hydrogen=ಜಲಜನಕ) are retained in this Dictionary; but the corresponding English words are also added on in transliteration. It is possible that in some contexts the use of the English original by a speaker or writer can make for greater clarity or precision.

It is necessary that we should indicate, however briefly, the principles we have had in view in finding or coining Kannada equivalents for English expressions. Brevity, simplicity and intelligibility, rather than any idealistic notion of correct form or definition, constituted our first consideration. Where a word in common use was available, we have generally preferred it in spite of its inexactness or roughness, to a word more satisfactory to a pedantic standard of accuracy. Where such an equivalent in one word is readily found, it is given first and is followed by fuller explanations. But where the object to be described or the idea to be expounded is a complex or a difficult one, the explanation has taken the first place and is followed by approximate one-word equivalents. We claim no finality for the equivalents we have suggested. Our aim has been mainly to furnish a working phrase for general use. As a matter of fact, when the work had advanced far enough to render reference to its earlier portions possible for the preparation of later ones, the Committee began to discover that the work at the initial stages left much scope for improvement. It was in the very nature of the task that the Committee had to proceed groping its way at every stage. The later pages have had the benefit of the experience provided by the earlier ones.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

The value of a newly coined word can be tested only by occasions of its actual use in the various contexts for which it is meant; and such occasions can arise on a sufficiently large scale only when education is wide-spread and there is a general intellectual and social awakening in the land. Thus a fair judgement on the suitability of words herein provisionally offered can be formed only after the lapse of some years. At the moment, we can only appeal to speakers and writers in Kannada that they may give a fair chance to the words recommended in this work. We are gratified to note that some of these expressions have already come into use in Newspapers and Journals.

The term 'Kannada' has here been taken to mean the entire vocabulary in current use among the people of the Karnataka, irrespective of the origin of the word. The demands of etymological purism are not always reconcilable with the requirements of the expanding speech of a progressive people. And ours is a work designed mainly for the use of the people at large. Not only Sanskrit, which has for centuries been like an adoptive mother to Kannada,—hundreds of Sanskrit words having replaced their Kannada equivalents even in common speech,—but also Persian, Arabic, Urdu and Mahrathi have made contributions to the treasury of the Kannada tongue. And yet, it needs more; and instances have not been rare in which no Indian language, not even Sanskrit, could supply the precise term needed and the Committee felt obliged to recommend that the English word may itself be transliterated in Kannada to be put into currency in Kannada in that same form.

As regards the pronunciation of English words, it should be stated that it has not been possible to show in Kannada with any very great accuracy the different shades of foreign vowel and other sounds. The pronunciation of many English words is found to be not fixed or uniform. Even among the lexicographers, opinions differ as to the way in which many words are to be pronounced. For example: 'Thought' and 'Third' are pronounced as ತಾಟ್ and ತರ್ಡ್ by some and as ಥಾಟ್ and ಥರ್ಡ್ by others. Words like 'Culture' and 'Scripture',—ending in '-ture' —are pronounced both as ಕಲ್ಚ್ಯುರ್ and ಕಲ್ಚರ್, ಸ್ಕ್ರಿಪ್ಟ್ಯೂರ್ and ಸ್ಕ್ರಿಪ್ಚರ್. We have adopted the Oxford Dictionaries as our guide; and in a few instances the variations given in Webster and other Dictionaries have also been noted. For a correct pronunciation of the words, the reader has to refer to the English Dictionaries, preferably to 'The Shorter Oxford Dictionary' and 'The Concise Oxford Dictionary'.

The usefulness of this publication would have increased if some three hundred illustrations at least had been inserted, especially under the technical and scientific words; and this defect, it is hoped, will be remedied in the next edition.

The Committee has the melancholy duty of recording the serious loss it suffered by the death of as many as four out of its nine members. The four are:—

1. Mr. T. S. Venkannaiya, M.A., (Member) in February 1939.
2. *Rajasevasakta* Professor B. Venkatanaranappa, M.A., (Chief Editor and Chairman of the Editorial Committee) in August 1943.
3. Mr. B. Puttaiya, B.A., (Member) in December 1944.
4. *Rajasevasakta* B. M. Srikantia, M.A., B.L., (Member) in January 1946.

The Chief Editor wishes to express his grateful thanks to the members of the staff who have borne the brunt of the work of compilation and have heartily co-operated in this laborious task. During discussions, the Members have shown an admirable spirit of accommodation, and every one of them has contributed his best out of his love for the Kannada country and for the development of Kannada literature. The Chief Editor is

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

deeply grateful to the Members of the Editorial Committee who are scholars of outstanding merit, and who with mutual forbearance and friendly criticism have laboured with him to make the Dictionary as authoritative and useful as possible.

Successive Vice-Chancellors—Dr. E. P. Metcalfe, D.SC., *Rajakaryapravina* N. S. Subba Rao, M.A., BAR-AT-LAW, *Rajasabhabhushana* E. G. McAlpine, M.A., Dip. in Edn., V.D., J.P., *Rajadharmaprasakta* T. Singaravelu Mudaliar, B.A., B.L., and Mr. M. Sultan Mohiyuddin, M.A., LL.B., M.Ed., have all evinced keen interest in the progress of this work and helped it in several ways. On behalf of the Committee the Chief Editor expresses his thankfulness for their uniform sympathy and encouragement.

Finally, the Chief Editor wishes to express his gratitude to the successive Superintendents of Government Printing, particularly Mr. B. Sreenivasa Iyengar, B.A., who gave his expert advice regarding the set-up of the Dictionary and to Mr. B. Krishnaswamy Chetty, B.E., A.R.P.S., who has with uniform courtesy co-operated in speeding up the printing work and to the Sub-Assistant Superintendent, Mr. B. Gopala Iyengar, under whose direct supervision the whole printing has been efficiently done.

BANGALORE
10th December 1946

M. R. SREENIVASAMURTY
Chief Editor and Chairman of the Editorial Committee.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

PREFACE

(*Written when the First Part was published*)

A SUFFICIENTLY comprehensive and authoritative English-Kannada Dictionary, which would help to convey into the vernacular modern ideas expressed in English, has long been needed. The rich store of knowledge—scientific, technical, historical, sociological, etc., easily available in English has been practically shut off from that large majority of our people who have not had the benefit of English education, even at a time when our contact with the West has been so intimate. The problem of improving this position has been engaging the attention of the public for a long time, and as a result, the Mysore Representative Assembly, at its Dasara session, in September 1925, passed a resolution requesting the Government to arrange for the compilation of a comprehensive English-Kannada Dictionary. The Board of Education of the Mysore Economic Conference followed up this recommendation at its meeting held in July 1927. But owing to financial stringency, immediate effect could not be given to these proposals.

However, Sir Mirza M. Ismail, the Dewan of Mysore, considered this subject as too important to be allowed to lie over, and took early steps to put the work in hand. After consulting the Vice-Chancellor and the Director of Public Instruction in Mysore, it was decided to entrust the work to the University. Accordingly, an order sanctioning the preparation of the Dictionary was passed by Government on the 15th July 1933. By that order an editorial committee of Kannada scholars and an office staff were appointed to carry on the work. The following is the personnel of the editorial committee as at present constituted :—

Chairman and Chief Editor—

(1) Mr. B. Venkatanaranappa, M.A., retired Professor of Physics, Central College, Bangalore

Members—

(2) Mr. D. V. Gundappa, Journalist, and Vice-President, The Karnataka Sahitya Parishat, Bangalore
(3) Mr. B. M. Srikantia, M.A., B.L., University Professor of English and Honorary Professor of Kannada in the Mysore University, Bangalore
(4) Mr. T. S. Venkannaiya, M.A., Professor of Kannada, Maharaja's College, Mysore
(5) Mr. A. R. Krishna Sastri, M.A., Assistant Professor of Kannada, Central College, Bangalore
(6) Mr. C. K. Venkataramayya, M.A., LL.B., Kannada Translator to the Government of Mysore Bangalore
(7) Mr. B. Puttaiya, B.A., retired Superintendent, Government Printing, Bangalore
(8) Mr. D. C. Subbarayappa, B.A., B.L., Under-Secretary to the Government of Mysore, Bangalore

The literary assistants are—(1) Mr. L. Gundappa, M.A. (Kannada)
(2) Mr. K. V. Raghavachar, M.A. (Kannada), B.T.

In the matter of selection of words, the committee have taken as their guide *The Concise Oxford Dictionary*. In the grouping of words under single headings, *The Concise English Dictionary* by Charles Annandale has been generally followed. *The Shorter Oxford Dictionary* and *Webster's International Dictionary* have also been frequently consulted for meanings and for additional useful words—scientific, technical, etc. With regard to finding suitable equivalents, reference has been made to almost all the dictionaries and glossaries that are available in the several Indian vernaculars—Kannada, Telugu, Tamil, Marathi, Hindi, Bengali—and to Sanskrit dictionaries.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Dr. E. P. Metcalfe, the Vice-Chancellor of the University, is taking a deep interest in the work of the Dictionary and is helping the editorial committee by scrutinizing the pronunciation of English words. Our acknowledgments are due to him and to all those authors and publishers whose books and writings we have laid under contribution, and to the Karnataka Sahitya Parishat, which has not only given us free accommodation in its buildings but has also placed its library at our disposal. We are particularly grateful to Mr. B. Srinivasa Iyengar, B.A., Superintendent, Government Printing, for his expert assistance in the printing of the Dictionary.

The Dictionary is to be completed in twelve parts of 96 pages each, of which the first part is now placed before the public. The committee have spared no pains in their attempt to make the Dictionary worthy of the great aim with which it has been undertaken and of the University under whose auspices it is being compiled. At the same time, they are not unaware of its shortcomings and are ever ready to welcome with gratitude constructive criticisms and helpful suggestions from all those interested in the advancement of the Kannada language and its literature.

BANGALORE
28th June 1936

B. VENKATANARANAPPA
Chief Editor, and Chairman of the Editorial Committee.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುನ್ನುಡಿ

ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷು-ಕನ್ನಡ ನಿಘಂಟಿನ ಮೊದಲನೆಯ ಪ್ರಧಾನ ಸಂಪಾದಕರೂ ಸಂಪಾದಕ ಮಂಡಲಿಯ ಮೊದಲನೆಯ ಅಧ್ಯಕ್ಷರೂ ಆಗಿದ್ದ ಕೀರ್ತಿಶೇಷರಾದ ರಾಜಸೇವಾಸಕ್ತ ಪ್ರೊಫೆಸರ್ ಬಿ. ವೆಂಕಟನಾರಣಪ್ಪ, ಎಂ.ಎ. ಅವರು, ಈ ನಿಘಂಟಿನ ಪ್ರಥಮಭಾಗವು ೧೯೩೬ನೆಯ ಜೂನ್ ೨೮ರಲ್ಲಿ ಪ್ರಕಟವಾದಾಗ ಅದರ ಪೀಠಿಕೆಯಲ್ಲಿ, ಈ ಪ್ರಯತ್ನದ ಸಂಕ್ಷೇಪ ವರದಿಯನ್ನೂ ನಿಘಂಟಿನ ಉದ್ದೇಶ ಮತ್ತು ವ್ಯಾಪ್ತಿಗಳ ಸಂಕ್ಷೇಪ ಸೂತ್ರವನ್ನೂ ತಿಳಿಸಿದ್ದರು. ಆ ಪೀಠಿಕೆಯ ಭಾಷಾಂತರವನ್ನು ಮುಂದೆ ಮುದ್ರಿಸಲಾಗಿದೆ. ಆದರೆ ಆ ಉದ್ಯಮಕ್ಕೆ ಚಾಲಕಶಕ್ತಿಯನ್ನು ಕೊಡುವುದರಲ್ಲಿ ತಾವು ವಹಿಸಿದ್ದ ಪಾತ್ರವನ್ನು ಮಾತ್ರ, ತಮಗೆ ಸಹಜವಾಗಿದ್ದ ಸಂಕೋಚದಿಂದ ಅವರು ಹೇಳದೆ ಬಿಟ್ಟುಬಿಟ್ಟರು. ಅವರು ಆರಂಭಿಸಿದ ಕೆಲಸ ಮುಕ್ತಾಯಕ್ಕೆ ಬಂದಿರುವ ಈ ಸಮಯದಲ್ಲಿ ಅವರ ಪ್ರೇರಣೆ ಮತ್ತು ಸ್ಫೂರ್ತಿಗಳಿಗೆ ಈ ನಿಘಂಟು ಎಷ್ಟರಮಟ್ಟಿಗೆ ಋಣಿ ಎಂಬುದನ್ನು ಇಲ್ಲಿ ಕಾಣಿಸುವುದು ಕೃತಜ್ಞತೆಯ ದೃಷ್ಟಿಯಿಂದ ಮಾತ್ರವಲ್ಲದೆ ನ್ಯಾಯ ದೃಷ್ಟಿಯಿಂದಲೂ ತನ್ನ ಕರ್ತವ್ಯವೆಂದು ಸಂಪಾದಕ ಮಂಡಲಿ ತಿಳಿದುಕೊಂಡಿದೆ.

ಮೈಸೂರು ವಿಶ್ವವಿದ್ಯಾನಿಲಯದ ಚುನಾವಣಾಕ್ಷೇತ್ರದಿಂದ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಚುನಾವಣೆಯಾಗಿ, ಆ ಸಭೆಯ ಸದಸ್ಯರಾಗಿದ್ದ ಶ್ರೀ. ಬಿ. ವೆಂಕಟನಾರಣಪ್ಪನವರು ೧೯೩೨ನೆಯ ಅಕ್ಟೋಬರಿನಷ್ಟು ಹಿಂದೆಯೇ ಮುಂದೆ ಹೇಳಿರುವ ಸೂಚನೆಯನ್ನು ಆ ಸಭೆಯಲ್ಲಿ ತಂದರು :

"ಜನಸಾಮಾನ್ಯದಲ್ಲಿ ತಕ್ಕಷ್ಟು ಇಂಗ್ಲಿಷ್ ಜ್ಞಾನವನ್ನು ಹರಡುವುದು ಸದ್ಯದಲ್ಲಿ ಸಾಧ್ಯವಿಲ್ಲವಾದದ್ದರಿಂದ ಅವರಿಗೆ ಪಾಶ್ಚಾತ್ಯ ವಿಜ್ಞಾನದ ಮೂಲಾಂಶಗಳ ತಿಳಿವಳಿಕೆಯಾದರೂ (ಕನ್ನಡದಲ್ಲಿ) ಲಭ್ಯವಾಗುವಂತೆ ಮಾಡುವುದಕ್ಕಾಗಿ ಸರ್ಕಾರದವರು ತಕ್ಕ ಸಿಬ್ಬಂದಿಯನ್ನು ನೇಮಿಸಿ, ಒಂದು ಸಕಲ ವಿಷಯ ಸಂಗ್ರಹವಾದ ಇಂಗ್ಲಿಷು-ಕನ್ನಡ ನಿಘಂಟು ಮತ್ತು ಕನ್ನಡದಲ್ಲಿ ಒಂದು ವಿಶ್ವಕೋಶ—ಇವುಗಳ ರಚನೆಗೆ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಈ ಸಭೆ ಶಿಫಾರಸು ಮಾಡುತ್ತದೆ."

ಈ ನಿರ್ಣಯವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ಈ ನಿರ್ಣಯಾನುಸಾರವಾಗಿಯೇ ಮೈಸೂರು ಸರ್ಕಾರದವರು ಇಂಗ್ಲಿಷು-ಕನ್ನಡ ನಿಘಂಟಿನ ಸಂಪಾದಕ ಮಂಡಲಿಯ ನೇಮಕವನ್ನೂ ಇತರ ಆವಶ್ಯಕವಾದ ಏರ್ಪಾಟುಗಳನ್ನೂ ಮಂಜೂರು ಮಾಡಿ No. E. 100-201—Uni. 153-11-13, ತಾರೀಕು 15-7-1933, ಹುಕುಮನ್ನು ಹೊರಡಿಸಿದರು.

ನಿಘಂಟಿನ ಕಚೇರಿ ೧-೧೧-೩೩ರಲ್ಲಿ ಕೆಲಸವನ್ನು ಆರಂಭಿಸಿತು. ಸಂಪಾದಕ ಮಂಡಲಿಯ ಮೊದಲನೆಯ ವಿಧಿವಿಹಿತ ಅಧಿವೇಶನವು ತಾರೀಕು ೨೮-೯-೧೯೩೩ರಲ್ಲೂ, ಕೊನೆಯ ಅಧಿವೇಶನ ತಾರೀಕು ೨೯-೬-೧೯೪೬ರಲ್ಲೂ ನಡೆದುವು. ಒಟ್ಟು ೨೧೦ ಅಧಿವೇಶನಗಳಾದುವು.

ಯಾರು ಸುಮಾರು ಹೈಸ್ಕೂಲು ದರ್ಜೆಯಷ್ಟು ಇಂಗ್ಲಿಷ್ ಭಾಷಾಜ್ಞಾನವನ್ನು ಪಡೆದು, ಈಗಿನ ಪ್ರಪಂಚಕ್ಕೆ ಆಸಕ್ತಿಕರಗಳಾದ ವಿವಿಧ ವಿಷಯಗಳ ಮೇಲೆ ಬರುತ್ತಿರುವ ಇಂಗ್ಲಿಷು ಗ್ರಂಥಗಳ ಮತ್ತು ಪತ್ರಿಕೆಗಳ ವ್ಯಾಸಂಗಕ್ಕೆ ಶಬ್ದಾರ್ಥಜ್ಞಾನ ಸಹಾಯವನ್ನು ಅಪೇಕ್ಷಿಸುವರೋ ಅಂಥವರ ಉಪಯೋಗಕ್ಕಾಗಿಯೂ, ಯಾರು ಇಂಗ್ಲಿಷು ಮೂಲಗಳಿಂದ ತೆಗೆದ ಭಾವಗಳನ್ನೂ ವಿಷಯಜ್ಞಾನವನ್ನೂ ಕನ್ನಡ ಜನಕ್ಕೆ ಕನ್ನಡದಲ್ಲಿ ತಿಳಿಸುವ ಕೆಲಸದಲ್ಲಿ ನಿರತರಾಗಿರುವರೋ ಅಂತಹ ಉಪಾಧ್ಯಾಯರು, ಭಾಷಾಂತರಕಾರರು, ಲೇಖಕರು, ಪತ್ರಿಕೋದ್ಯೋಗಿಗಳು, ಉಪನ್ಯಾಸಕರು ಮೊದಲಾದವರ ಸಹಾಯಕ್ಕಾಗಿಯೂ ನಿಘಂಟು ರಚನೆಯಾಗಬೇಕೆಂಬುದು ಸಂಪಾದಕ ಮಂಡಲಿಯ ಉದ್ದೇಶವಾಯಿತು. ಅಖಿಲ ಕರ್ಣಾಟಕದ ಜನರಿಗೆ—ಎಂದರೆ ಮೈಸೂರು ಸಂಸ್ಥಾನದ ಹೊರಗಿರುವ ಕನ್ನಡ ನಾಡಿನ ಜನರಿಗೂ ಸಹ—ಈ ನಿಘಂಟು ಅಂಗೀಕಾರಾರ್ಹವಾಗಿರಬೇಕೆಂದೂ, ಆಧುನಿಕ ವಿಜ್ಞಾನ ಮತ್ತು ಆಧುನಿಕ ಭಾವಗಳ ಅರ್ಥವಿವರಣೆಗೆ ವಿಶೇಷವಾದ ಗಮನವನ್ನು ಕೊಡಬೇಕೆಂದೂ ಉದ್ದೇಶಪಡಲಾಯಿತು. ಶಾಸ್ತ್ರ ಪ್ರಪಂಚದಲ್ಲಿ ಪಂಡಿತರಾದವರಿಗಾಗಲಿ ವಿಶೇಷಜ್ಞರಿಗಾಗಲಿ ಉದ್ದೇಶಿಸದೆ, ಸಾಮಾನ್ಯ ವಾಚಕನಿಗೆ ಪ್ರಚಲಿತ ಇಂಗ್ಲಿಷ್ ಜ್ಞಾನವನ್ನು ಪ್ರಚಲಿತ ಕನ್ನಡದಲ್ಲಿ ತಿಳಿಸುವ ನಿಘಂಟಾಗಿರಬೇಕೆಂಬುದೇ ನಮ್ಮ ಧ್ಯೇಯ. ಪಾಠಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ಎಲ್ಲ ಬೋಧ್ಯ ವಿಷಯಗಳಿಗೂ ಕನ್ನಡವನ್ನೇ ಹೆಚ್ಚು ಹೆಚ್ಚಾಗಿ ಬಳಸುತ್ತ ಬರಬೇಕೆಂದಿರುವ ಈಗಿನ ಸಂದರ್ಭದಲ್ಲಂತೂ ಇಂಥ ನಿಘಂಟು ಇನ್ನೂ ಹೆಚ್ಚು ಅವಶ್ಯವಾಗುತ್ತದೆಯಷ್ಟೆ.

ಈ ನಿಘಂಟಿನ ಸಾಮಗ್ರಿ ಕ್ರಮವಾದ ನಾಲ್ಕು ಹಂತಗಳಲ್ಲಿ ತಯಾರಾಗಬೇಕಾಯಿತು. ಮೊದಲನೆಯದಾಗಿ, ಕಚೇರಿಯಲ್ಲಿನ ಸಹಾಯಕ ಪಂಡಿತರು ಇಂಗ್ಲಿಷು ಶಬ್ದಗಳನ್ನೂ ಅವುಗಳ ಕನ್ನಡ ಅರ್ಥಗಳನ್ನೂ ಪ್ರಧಾನ ಸಂಪಾದಕರ ಮಾರ್ಗದರ್ಶನದಂತೆ ಬರೆದು ಕರಡು ಪ್ರತಿಯನ್ನು ಸಿದ್ಧಗೊಳಿಸುತ್ತಿದ್ದರು. ಬಳಿಕ ಪ್ರಧಾನ ಸಂಪಾದಕರು ಆ ಕರಡುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ತಿದ್ದುಪಡಿಗಳನ್ನು ಮಾಡಿ, ತಿದ್ದುಪ್ರತಿಯನ್ನು ಬರೆಯಿಸುತ್ತಿದ್ದರು. ಈ ತಿದ್ದುಪ್ರತಿಗಳನ್ನು ಸಂಪಾದಕ ಮಂಡಲಿ ತನ್ನ ಅಧಿವೇಶನದಲ್ಲಿ ಪರ್ಯಾಲೋಚಿಸಿ, ತಮ್ಮ ಚರ್ಚೆಯ ಫಲವಾಗಿಯೂ ಹೊರಗಿನ ಸಹ ಸದಸ್ಯರು ಕಳುಹಿಸಿದ್ದ ಸಲಹೆಗಳ ಫಲವಾಗಿಯೂ ಯುಕ್ತ ತಿದ್ದುಪಡಿಗಳನ್ನು ಮಾಡುತ್ತಿತ್ತು. ಕೊನೆಗೆ ಮುದ್ರಣಾವಸ್ಥೆಯಲ್ಲಿ ಪ್ರಧಾನ ಸಂಪಾದಕರು ವಿಷಯವನ್ನು ಮತ್ತೊಮ್ಮೆ ಪರಿಶೀಲಿಸಿ ಸಾಧ್ಯವಾದ ಮೇಲ್ಪಾಡುಗಳನ್ನು—ಕೆಲವು ವೇಳೆ ಮಂಡಲಿಯ ಕೆಲವು ಸದಸ್ಯರೊಡನೆ ಸಮಾಲೋಚನೆಮಾಡಿ—ಸೇರಿಸುತ್ತಿದ್ದರು. ವಿಜ್ಞಾನ ಮತ್ತು ಯಂತ್ರಪರಿಕರ್ಮಶಾಸ್ತ್ರಗಳ ಪರಿಭಾಷೆಗಳಿಗೆ ಆಯಾ ಶಾಸ್ತ್ರ ಪಂಡಿತರ ಸಹಾಯವನ್ನು ಆವಶ್ಯಕತೆ ಕಂಡಾಗ ಪ್ರಧಾನ ಸಂಪಾದಕರು ತೆಗೆದುಕೊಳ್ಳುತ್ತಿದ್ದರು. ಈ ಸಂಕೀರ್ಣಕ್ರಮಗಳೂ, ಜೊತೆಗೆ ಲಿಪಿ ಭಾಗದ ಮತ್ತು ಯಂತ್ರಕಾರ್ಯಭಾಗದ ಕೆಲವು ತೊಂದರೆಗಳೂ, ಈ ನಿಘಂಟು ಮುಗಿಯುವುದಕ್ಕೆ ಇಷ್ಟು ದೀರ್ಘಕಾಲ ಹಿಡಿಯಲು ಕಾರಣವಾದುವು.

ದಕ್ಷಿಣ ಕರ್ಣಾಟಕ ಮತ್ತು ಉತ್ತರ ಕರ್ಣಾಟಕಗಳಲ್ಲಿ ಬಳಕೆಯಲ್ಲಿರುವ ಪದಗಳನ್ನು ಸಂಪಾದಕ ಮಂಡಲಿಗೆ ಒದಗಿಸಿ ಸಹಾಯಮಾಡುವುದಕ್ಕಾಗಿ, ಮಂಗಳೂರು ಪ್ರಾಂತದಿಂದ ಒಬ್ಬರನ್ನೂ, ಧಾರ್ವಾಡ ಪ್ರಾಂತದಿಂದ ಒಬ್ಬರನ್ನೂ—ಹೀಗೆ ಇಬ್ಬರು ಸಹ ಸದಸ್ಯರನ್ನು—ಸಂಪಾದಕ ಮಂಡಲಿಗೆ ಸೇರಿಸಿಕೊಳ್ಳಲಾಯಿತು. ಅವರ ಸಹಕಾರದಿಂದ ಬಹಳ ಪ್ರಯೋಜನವಾಯಿತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಷ್ಟು ಪ್ರಮಾಣದಲ್ಲಿ ಮತ್ತು ಎಷ್ಟು ಕಾಲದಲ್ಲಿ ನಿಘಂಟು ಮುಗಿಯಬಹುದೆಂಬುದಕ್ಕೆ ಅನುಭವದ ಅಥವಾ ಪೂರ್ವ ನಿದರ್ಶನದ ಆಧಾರವಿಲ್ಲದೆ, ಸುಮಾರು ೧,೧೫೦ ಪುಟಗಳಲ್ಲಿ ಮುಗಿಯಬಹುದೆಂದೂ, ಸುಮಾರು ಐದು ವರ್ಷಗಳ ಕಾಲ ಹಿಡಿಯಬಹುದೆಂದೂ ಮೊದಲು ಅಂದಾಜು ಮಾಡಿತ್ತು. ಆದರೆ ಕೆಲಸ ಮುಂದುವರಿದಾಗ, ಗಾತ್ರ ಹೆಚ್ಚುವುದೂ ಕಾಲ ಹೆಚ್ಚುವುದೂ ಅನಿವಾರ್ಯಗಳೆಂದು ಸಂಪಾದಕ ಮಂಡಲಿಗೆ ಮನದಟ್ಟಾಯಿತು. ಕೆಲಸ ಬೇಗ ಮುಗಿಯುವುದೆಂದು ನಿರೀಕ್ಷಿಸಿದ್ದ ಚಂದಾದಾರರು ಕಾಲವಿಳಂಬವಾದುದಕ್ಕೆ ಪಡುತ್ತಿದ್ದ ತವಕದಲ್ಲಿ ಸಂಪಾದಕ ಮಂಡಲಿಯವರು ಹಿಂದೆ ಭಾಗಿಗಳಾಗಿದ್ದಂತೆ, ಈಗ ನಿಘಂಟು ಮುಕ್ತಾಯವಾಗಿ ಆ ಮಂಡಲಿಯವರು ಹೊರೆಯಿಳಿಸುವ ಹರ್ಷದಲ್ಲಿ ಚಂದಾದಾರರೂ ಭಾಗಿಗಳಾಗಲೆಂದು ಕೋರುತ್ತೇವೆ.

ಸಂಪಾದಕ ಮಂಡಲಿಗೆ ತಾನು ಇಟ್ಟುಕೊಂಡಿದ್ದ ಆದರ್ಶದ ಮಟ್ಟವನ್ನು ಈ ನಿಘಂಟು ಮುಟ್ಟಿದೆಯೆಂಬ ತೃಪ್ತಿಯೇನೂ ಇಲ್ಲ. ಆದರೆ ವಿಷಯ ಪರಿಶೀಲನೆಯಲ್ಲಿಯೂ ಕೆಲಸಗಾರಿಕೆಯಲ್ಲಿಯೂ ಎಚ್ಚರಿಕೆಯನ್ನೂ, ಶ್ರಮವನ್ನೂ ಕಾರ್ಪಣ್ಯ ಮಾಡಿಲ್ಲವೆಂಬುದನ್ನು ಮಾತ್ರ ಅದು ಒತ್ತಿ ಹೇಳಲು ಬಯಸುತ್ತದೆ. ವಾಚಕನಿಗೆ ಕಂಡುಬರಬಹುದಾದ ಕುಂದುಕೊರತೆಗಳಲ್ಲಿ ಕೆಲವಾದರೂ, ದೇಶದಲ್ಲಿಯ ಸಾರ್ವಜನಿಕ ವಿದ್ಯಾಭ್ಯಾಸ ಮತ್ತು ಭಾಷಾಭಿವೃದ್ಧಿಗಳ ಸದ್ಯದ ಪರಿಸ್ಥಿತಿಯಲ್ಲಿ ಕಂಡುಬರುವ ಕುಂದು ಕೊರತೆಗಳ ಪ್ರತಿಬಿಂಬ ಮತ್ತು ಪ್ರತಿಪರಿಣಾಮಗಳೆಂದೇ ಅದು ಅರಿಕೆ ಮಾಡಿಕೊಳ್ಳುತ್ತದೆ: ಸಾಮಾನ್ಯ ವಾಚಕನಿಗೆ ಹೊಸ ಪದದ ಅರ್ಥಪರಿಚಯ ಮಾಡಿಸಬೇಕಾದರೆ ನಿಘಂಟುಕಾರನಿಗಿರುವ ಏಕಮಾತ್ರ ಸಾಧನವಾದರೋ ಆ ವಾಚಕನು ಗ್ರಹಿಸಲಾಗುವ ಹಳೆಯ ಶಬ್ದ ಭಂಡಾರದಿಂದ ತಯಾರಾದದ್ದು. ಪರಿಚಿತ ವಿಷಯದಿಂದ ಮತ್ತು ಪರಿಚಿತ ವಿಷಯದ ಮೂಲಕ ತಾನೆ ಅಪರಿಚಿತವಾದುದರ ಕಡೆಗೆ ಮುಂದುವರಿಯಬೇಕು ? ಆದರೆ ಆಧುನಿಕ ವಿಜ್ಞಾನವೂ ಯಂತ್ರಪರಿಕರ್ಮಶಾಸ್ತ್ರವೂ ಇಂಡಿಯಾದಲ್ಲಿ ತೀರಾ ಅಪರಿಚಿತ ಕ್ಷೇತ್ರಗಳು. ಇಂಡಿಯದ ಯಾವ ಭಾಷೆಯಲ್ಲೇ ಆಗಲಿ, ಇಂಗ್ಲಿಷು-ಇಂಡಿಯನ್ ನಿಘಂಟಿನ ಸಂಕಲನಕಾರನು ಎದುರಿಸಬೇಕಾದ ತೊಂದರೆಯೇನೆಂದರೆ, ತಾನು ಅರ್ಥವಿವರಣೆ ಮಾಡುವ ಪಾರಿಭಾಷಿಕ ಪದಗಳಲ್ಲಿ ಹೆಚ್ಚು ಮುಖ್ಯವಾದುವು, ಇಂಡಿಯಕ್ಕೆ ಸ್ವಲ್ಪವೂ ತಿಳಿದಿಲ್ಲದ ಸಂದರ್ಭಗಳಲ್ಲಿ ಹುಟ್ಟಿದ ಮತ್ತು ಬೆಳೆದು ಬಂದ ಭಾವಗಳಿಗೂ ವಸ್ತುಗಳಿಗೂ ಸಂಬಂಧಪಟ್ಟುವು ಎಂಬುದೇ. ಪಾಶ್ಚಾತ್ಯ ವಸ್ತು ವಿಷಯಗಳ ಐತಿಹಾಸಿಕ ಮತ್ತು ಸಾಮಾಜಿಕ ಹಿನ್ನೆಲೆಯ ಪರಿಚಯವಿಲ್ಲದ, ಮತ್ತು ವೈಜ್ಞಾನಿಕ ಮತ್ತು ಪಾರಿಭಾಷಿಕ ಪದಗಳ ವಿವರಣೆಯಲ್ಲಿ ಉಪಯೋಗಿಸಬೇಕಾದ ಪದಪುಂಜಗಳನ್ನು ಗ್ರಹಿಸಲು ವಿದ್ಯಾ ಸಿದ್ಧತೆಯಿಲ್ಲದ ವಾಚಕನಿಗಾಗಿ ನಿಘಂಟುಕಾರನು ಬರೆಯಬೇಕಾಗಿದೆ. ಆಧುನಿಕ ಶಾಸ್ತ್ರಜ್ಞಾನವೂ ಸಾಮಾನ್ಯ ತಿಳಿವಳಿಕೆಯೂ ಜನರಲ್ಲಿ ಆಳವಾಗಿಯೂ ವಿಶಾಲವಾಗಿಯೂ ಹರಡುತ್ತ ಬಂದಾಗ ಮಾತ್ರ ನಿಘಂಟುಕಾರನ ಈ ತೊಂದರೆಗಳು ಕಡಮೆಯಾಗುತ್ತವೆ. ಈ ಮಧ್ಯದಲ್ಲಿ ಈ ನಿಘಂಟು ಎಷ್ಟೇ ಉತ್ತಮವಾದುದೆಂದರೂ ಒಂದು ಕಚ್ಚಾ ಕರಡು ಮಾತ್ರ, ಮತ್ತು ಮುಂದೆ ತನ್ನ ಆದರ್ಶಕ್ಕನುಗುಣವಾಗಿ ಬರಬಹುದಾದ ಉತ್ತಮ ಕೃತಿಗೆ ಆವಶ್ಯಕವಾದ ಒಂದು ಅಸ್ತಿಭಾರ ಮಾತ್ರ ಎಂದು ನಿಘಂಟುಕಾರನು ಸಮಾಧಾನಪಟ್ಟುಕೊಳ್ಳಬೇಕಾಗಿದೆ. ನಿರ್ದುಷ್ಟವಾದ ಸಮಗ್ರ ನಿಘಂಟು ಎನ್ನುವುದು—ಅಂತಹುದೊಂದು ಇರುವುದಾದರೆ—ಬಹು ದೀರ್ಘ ಕಾಲದ ಪರಿಶ್ರಮದ ಫಲ ; ಅದು ಅನೇಕ ಸಂತತ ಪ್ರಯೋಗ ಪರೀಕ್ಷೆಗಳ ಪರಂಪರಾ ಫಲ. ಪ್ರಕೃತ ಗ್ರಂಥವು ಆ ಪರಿಶ್ರಮ ಶ್ರೇಣಿಯಲ್ಲಿ ಪ್ರಥಮ ಪ್ರಯತ್ನವಾಗಿ ಮಾತ್ರ ಇದೆ. ಶಬ್ದಗಳ ಆಯ್ಕೆಯ ದೃಷ್ಟಿಯಿಂದಾಗಲಿ, ಒಂದೊಂದೂ ಪದದ ಅರ್ಥವಿವರಣೆಯ ದೃಷ್ಟಿಯಿಂದಾಗಲಿ—ಯಾವ ಬಾಬಿನಲ್ಲಿಯೂ ಈ ನಿಘಂಟು ಸಮಗ್ರವಾಗಿದೆಯೆಂದು ನಾವು ಹೇಳುವುದಿಲ್ಲ. ಹೆಚ್ಚು ಪರಿಚಯದ ವಿಷಯಗಳು, ಅವುಗಳಲ್ಲಿ ಹೆಚ್ಚು ಪರಿಚಯದ ಶಬ್ದಗಳು—ಇವುಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಸಾರ್ವಜನಿಕರ ತಿಳಿವಳಿಕೆಯ ಮೂಲ ಮಟ್ಟವನ್ನನುಸರಿಸಿ ಅರ್ಥವಿವರಣೆ ಮಾಡಿದರೆ ಸಾಕೆಂದು ತೃಪ್ತಿಪಟ್ಟುಕೊಳ್ಳಬೇಕಾಯಿತು. ವಿಜ್ಞಾನದಲ್ಲಿಯೂ ಯಂತ್ರಪರಿಕರ್ಮಶಾಸ್ತ್ರದಲ್ಲಿಯೂ ಪರಿಶೋಧನೆ ಮತ್ತು ಪರಿಜ್ಞಾನ ಬಹು ವೇಗವಾಗಿ ಮುಂದುವರಿಯುತ್ತಿರುವುದರಿಂದ Concise Oxford Dictionaryಯ ಹಿಂದಿನ ಮುದ್ರಣದಿಂದ ಈಚೆಗೆ,—ಮುಖ್ಯವಾಗಿ ಪ್ರಪಂಚದ ಎರಡನೆಯ ಮಹಾ ಯುದ್ಧಕಾಲದಲ್ಲಿ—ನೂರಾರು ಹೊಸ ಪದಗಳೂ ಪದಪುಂಜಗಳೂ ರಚನೆಯಾಗಿಹೋಗಿವೆ. ಇಂಗ್ಲಿಷಿನ ಶಬ್ದಕೋಶಕ್ಕೆ ಹೀಗೆ ಈಚೆಗೆ ಸೇರಿರುವುವನ್ನು ಈ ನಿಘಂಟಿನಲ್ಲಿ ಸೇರಿಸಲಾಗಲಿಲ್ಲ.

ಸಂಪಾದಕ ಮಂಡಲಿ ತನ್ನ ಕಷ್ಟಗಳನ್ನು ಎದುರಿಸುವುದರಲ್ಲಿ ಇಂಡಿಯದ ಇತರ ಭಾಷೆಗಳ ನಿಘಂಟು ಕ್ಷೇತ್ರದಲ್ಲಿ ದುಡಿದವರು ಎಷ್ಟರ ಮಟ್ಟಿಗೆ ಜಯಶೀಲರಾಗಿರುವರೆಂಬುದನ್ನು ಪರಿಶೀಲಿಸಿದೆ. ಸಂಸ್ಕೃತ, ಹಿಂದಿ, ಬಂಗಾಳಿ, ಮರಾಟಿ, ತಮಿಳು ಮತ್ತು ತೆಲುಗು ನಿಘಂಟುಗಳನ್ನೂ, ಇತರ ಇಂಗ್ಲಿಷು-ಕನ್ನಡ ನಿಘಂಟುಗಳನ್ನೂ ಪದೇ ಪದೇ ನಾವು ಪರಾಮರ್ಶಿಸಿದ್ದೇವೆ. ಇಂಡಿಯದಲ್ಲೆಲ್ಲ ಸ್ಥಿತಿಗತಿಗಳು ಬಹುಶಃ ಒಂದೇ ಆಗಿರುವುದರಿಂದ, ಎಲ್ಲ ಕಡೆಯೂ ಫಲಸಿದ್ಧಿ ಬಹುಮಟ್ಟಿಗೆ ಒಂದೇ ಮಟ್ಟದ್ದಾಗಿದೆ ಎಂದು ನಮಗೆ ತೋರಿಬಂದಿದೆ. ಇಂಡಿಯದ ಯಾವ ಭಾಷೆಯಲ್ಲಾಗಲಿ ಇದುವರೆಗೆ ಪ್ರಕಟವಾಗಿರುವ ಇತರ ನಿಘಂಟಿನೊಡನೆ ಹೋಲಿಸಿದಾಗ ಈ ನಿಘಂಟು ಅದಕ್ಕಿಂತ ಕೀಳಾಗಿ ಕಂಡುಬರಲಾರದೆಂಬ ಒಂದು ಧರವಸೆ ನಮಗಿದೆ.

ವೈಜ್ಞಾನಿಕ ಮತ್ತು ಯಂತ್ರ ಪರಿಕರ್ಮದ ಪದಗಳಿಗೆ, ಅವುಗಳ ಗರ್ಭಿತಾರ್ಥಗಳೆಲ್ಲ ಸ್ಪಷ್ಟವಾಗಿ ತಿಳಿಯುವಂತೆ ಸಂಪೂರ್ಣವಾದ ಲಕ್ಷಣ ನಿರೂಪಣೆಯನ್ನು ಕನ್ನಡದಲ್ಲಿ ಕೊಡಲಾಗಿದೆ. ಹೆಚ್ಚು ವಿವರಣಾತ್ಮಕವಾದ ಮತ್ತು ಹೆಚ್ಚು ಖಚಿತವಾದ ಲಕ್ಷಣ ನಿರೂಪಣೆಯನ್ನು ಕೋರುವ ವೈಜ್ಞಾನಿಕನಿಗೆ ನಾವು ಕೊಟ್ಟಿರುವ ಲಕ್ಷಣ ನಿರೂಪಣೆ ತೃಪ್ತಿಕರವಾಗಿಲ್ಲದಿರಬಹುದು. ಲಾಹೋರಿನಿಂದ ಪ್ರಕಟವಾಗುತ್ತಿರುವ "ಆಂಗಲ—ಭಾರತೀಯ ಮಹಾಕೋಷ'ದ ಸಂಪಾದಕರು ಎಲ್ಲ ವೈಜ್ಞಾನಿಕ ಪದಗಳಿಗೂ ಸಂಸ್ಕೃತದ ಸಮಾನಾರ್ಥಕಗಳನ್ನು ಕೊಡಲು ಪ್ರಯತ್ನಿಸಿದ್ದಾರೆ. ಉದಾಹರಣೆಗೆ: Hydrogen =ಉದಜನ; Bromine =ದುರಾಘ್ರೀ; Nitrogen =ಧೂಯಾತಿ: Iodine =ಜಮ್ಬುಕೀ; Oxygen =ಜಾರಕ; Carbon =ಪ್ರಾಂಗಾರ. ಪ್ರೊಫೆಸರ್ ಮಣೀಂದ್ರನಾಥ ಬ್ಯಾನರ್ಜಿ, ಎಫ್.ಸಿ.ಎಸ್., ಅವರು ತಾವು ಬರೆದಿರುವ 'A System of Indian Scientific Terminology' ಎಂಬ ಶಬ್ದಕೋಶದಲ್ಲಿ ಸಂಸ್ಕೃತದಲ್ಲಿ ಸಮಾನಾರ್ಥಕಗಳನ್ನು ಕೊಡುವ ಬಗ್ಗೆ ಬೇರೊಂದು ವಿಧದಲ್ಲಿ ಚರ್ಚಿಸಿ, ಮುಂದೆ ಹೇಳಿರುವುವು ತಕ್ಕ ಪದಗಳೆಂದು ಕೊಟ್ಟಿದ್ದಾರೆ: Hydrogen =ಆರ್ದ್ರಜನ; Bromine =ಬರಮಾಣ; Nitrogen =ನೇತ್ರಜನ; Iodine =ಏತಿನ; Oxygen =ಅಕ್ಷಜನ; Carbon =ಕಾರಜನ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಮ್ಮ ಈ ನಿಘಂಟಿನಲ್ಲಿ ಇಂತಹ ಯಾವ ಪ್ರಯತ್ನವನ್ನೂ ಮಾಡಿಲ್ಲ. ಇಂಡಿಯದ ಭಾಷೆಗಳು ಬಳಸಬೇಕಾದ ವೈಜ್ಞಾನಿಕ ಪರಿಭಾಷೆಯನ್ನು ಅಖಿಲ ಭಾರತಕ್ಕೂ ಅನ್ವಯಿಸುವ ತಳಹದಿಯಮೇಲೆ ರಚಿಸಬೇಕೆಂದು ಈ ಸಂಪಾದಕ ಮಂಡಲಿ ಅಭಿಪ್ರಾಯ ಪಡುತ್ತದೆ. ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ವಿಶ್ವವಿದ್ಯಾನಿಲಯಗಳ ಮೇಲಿನ ವ್ಯಾಸಂಗ ಕ್ಷೇತ್ರಗಳಲ್ಲಿ ಇಂಗ್ಲಿಷನ್ನು ವಾಹನವಾಗಿಟ್ಟುಕೊಂಡಿರುತ್ತಾರೆ. ಆದ್ದರಿಂದ ಸುಮ್ಮನೆ ಸಂಸ್ಕೃತ ಪದಗಳನ್ನು ಸೃಷ್ಟಿಸುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಮೈಸೂರು ಪ್ರಾಂತದಲ್ಲಿ ಯಾವ ಪದಗಳು ಬಳಕೆಯಾಗಿರುವುವೋ (ಉದಾ.: Oxygen =ಆಮ್ಲಜನಕ; Hydrogen =ಜಲಜನಕ) ಆ ಪದಗಳನ್ನು ಈ ನಿಘಂಟಿನಲ್ಲಿ ಉಳಿಸಿಕೊಂಡಿದೆ; ಆದರೆ ಇಂಗ್ಲಿಷು ಪದಗಳನ್ನು ಕೂಡ ಕನ್ನಡದ ಅಕ್ಷರಗಳಲ್ಲಿ ಕೊಡಲಾಗಿದೆ.

ಇಂಗ್ಲಿಷು ಪದಗಳಿಗೆ ಕನ್ನಡದ ಸಮಾನಾರ್ಥಕಗಳನ್ನು ಹುಡುಕುವುದರಲ್ಲಿಯೂ ನಿರ್ಮಿಸುವುದರಲ್ಲಿಯೂ ನಾವು ದೃಷ್ಟಿಯಲ್ಲಿಟ್ಟುಕೊಂಡ ತತ್ತ್ವಗಳನ್ನು ಸಂಕ್ಷೇಪವಾಗಿಯಾದರೂ ನಿರ್ದೇಶಿಸಬೇಕಾದುದು ಆವಶ್ಯಕವೆಂದು ತೋರುತ್ತದೆ. ಆದರ್ಶಾತ್ಮಕವಾದ ನಿರ್ದುಷ್ಟ ಪದರೂಪ ಅಥವಾ ಖಚಿತವಾದ ಲಕ್ಷಣ ನಿರೂಪಣೆ—ಇವುಗಳಿಗಿಂತ ಅಡಕ, ಸರಳತೆ ಮತ್ತು ಅರ್ಥ ಸುಲಭತೆ—ಇವು ಮುಖ್ಯವೆಂದು ನಾವು ಪರಿಗಣಿಸಿದೆವು. ಬಳಕೆಯಲ್ಲಿ ಒಂದು ಪದ ಸಿದ್ಧವಾಗಿದ್ದಾಗ ಅದು ಅನಿಷ್ಕೃಷ್ಟವಾಗಿದ್ದರೂ ಒರಟಾಗಿದ್ದರೂ, ಪಾಂಡಿತ್ಯದ ನಿಷ್ಕೃಷ್ಟತೆಗೆ ಹೆಚ್ಚು ತೃಪ್ತಿಕರವಾದ ಪದವನ್ನು ಕೈ ಬಿಟ್ಟು, ಸಾಮಾನ್ಯವಾಗಿ ಆ ಬಳಕೆಯ ಪದವನ್ನೇ ಉಪಯೋಗಿಸಿದ್ದೇವೆ. ಏಕ ಪದಾತ್ಮಕವಾದ ಇಂತಹ ಸಮಾನಾರ್ಥಕವು ದೊರೆತಾಗ ಅದನ್ನು ಮೊದಲಿನಲ್ಲೇ ಕೊಟ್ಟು ವಿವರಣೆಯನ್ನು ಆಮೇಲೆ ಕೊಟ್ಟಿದ್ದೇವೆ. ಆದರೆ ಎಲ್ಲಿ ವಿವರಿಸಬೇಕಾದ ವಸ್ತು ಅಥವಾ ಭಾವ ಸಂಕೀರ್ಣವಾದುದೋ ಅಥವಾ ಕ್ಲಿಷ್ಟವಾದುದೋ ಅಲ್ಲಿ ಮೊದಲು ವಿವರಣೆಯನ್ನೂ, ಅನಂತರ ಏಕ ಪದಾತ್ಮಕವಾದ ಸರಿಸುಮಾರು ಸಮಾನಾರ್ಥಕಗಳನ್ನೂ ಕೊಟ್ಟಿದ್ದೇವೆ. ನಾವು ಸೂಚಿಸಿರುವ ಸಮಾನಾರ್ಥಕಗಳೇ ಕೊನೆಯ ಮಾತೆಂದು ನಾವೇನೂ ಸಾಧಿಸುವುದಿಲ್ಲ. ಮುಖ್ಯವಾಗಿ ಸಾಮಾನ್ಯ ಬಳಕೆಗೆ ಕಾರ್ಯಕಾರಿಯಾದ ಒಂದು ಪದವನ್ನು ಒದಗಿಸುವುದೇ ನಮ್ಮ ಉದ್ದೇಶ. ವಾಸ್ತವವಾಗಿ ಹೇಳುವುದಾದರೆ, ಗ್ರಂಥದ ಮುಂದಿನ ಭಾಗಗಳಲ್ಲಿ ಬರುವ ಪದಗಳಿಗೆ ಸಮಾನಾರ್ಥಕಗಳನ್ನು ಹುಡುಕುವುದರಲ್ಲಿ ಹಿಂದಿನ ಭಾಗಗಳನ್ನು ಪರಾಮರ್ಶಿಸುವಷ್ಟು ನಿಘಂಟು ಮುಂದುವರಿದಾಗ, ಮೊದಲ ಹಂತಗಳಲ್ಲಿ ಮಾಡಿದ ಕೆಲಸ ಇನ್ನೂ ಬಹಳ ಪರಿಷ್ಕಾರವಾಗಬೇಕೆಂಬುದು ಸಂಪಾದಕ ಮಂಡಲಿಯವರಿಗೇ ಮನದಟ್ಟಾಯಿತು. ಈ ಕಾರ್ಯಸ್ವಭಾವದ ಫಲವಾಗಿಯೇ ಪ್ರತಿಯೊಂದು ಮಜಲಿನಲ್ಲಿಯೂ ಸಂಪಾದಕ ಮಂಡಲಿ ತಡಕಾಡಿಕೊಂಡು ಹೋಗಬೇಕಾಯಿತು. ಮೊದಲ ಭಾಗಗಳಿಂದ ಆದ ಅನುಭವದ ಲಾಭ ಮುಂದಿನ ಭಾಗಗಳಿಗೆ ದೊರೆತಿದೆ.

ಹೊಸದಾಗಿ ಸೃಷ್ಟಿಸಿದ ಪದದ ಜೀವಾಳ ಪರೀಕ್ಷೆಗೆ ಬರುವುದು ಉದ್ದಿಷ್ಟವಾದ ಹಲವು ಪ್ರಕರಣಗಳಲ್ಲಿ ಅದನ್ನು ಸಾಕ್ಷಾತ್ತಾಗಿ ಬಳಸಿದಾಗ; ವಿದ್ಯಾಭ್ಯಾಸ ಸಾರ್ವತ್ರಿಕವಾಗಿ ಹರಡಿ ನಾಡಿನಲ್ಲಿ ಬೌದ್ಧಿಕ ಮತ್ತು ಸಾಮಾಜಿಕ ಜಾಗೃತಿ ತಲೆದೋರಿದಾಗ ಮಾತ್ರ ಇಂತಹ ಪ್ರಕರಣಗಳು ಸಾಕಷ್ಟು ಹೆಚ್ಚಾಗಿ ಉದ್ಭವಿಸಬಲ್ಲುವು. ಆದ್ದರಿಂದ ತಾತ್ಕಾಲಿಕವಾಗಿ ನಾವು ಸೂಚಿಸಿರುವ ಸಮಾನಾರ್ಥಕಗಳ ಉಪಯುಕ್ತತೆಯ ಬಗ್ಗೆ ನ್ಯಾಯವಾದ ತೀರ್ಮಾನ ಇನ್ನೂ ಕೆಲವು ವರ್ಷಗಳು ಕಳೆದನಂತರ ಬರಬೇಕಾಗಿದೆ. ಸದ್ಯದಲ್ಲಿ ನಾವು ಈ ನಿಘಂಟಿನಲ್ಲಿ ಸೂಚಿಸಿರುವ ಪದಗಳಿಗೆ ನ್ಯಾಯವಾದ ಅವಕಾಶವನ್ನು ಕೊಡಬೇಕೆಂದು ಮಾತ್ರ ಕನ್ನಡದ ಭಾಷಣಕಾರರಿಗೂ ಲೇಖಕರಿಗೂ ನಾವು ಮನವಿ ಮಾಡಿಕೊಳ್ಳುತ್ತೇವೆ. ನಮ್ಮ ಪದಗಳು ಈಗಾಗಲೇ ವೃತ್ತಪತ್ರಿಕೆಗಳಲ್ಲಿಯೂ ಮಾಸ ಪತ್ರಿಕೆಗಳಲ್ಲಿಯೂ ಬಳಕೆಗೆ ಬರುತ್ತಿರುವುದನ್ನು ನೋಡಿ ನಾವು ಹರ್ಷಿಸುತ್ತೇವೆ.

ಇಲ್ಲಿ 'ಕನ್ನಡ' ಎನ್ನುವುದನ್ನು—ಅದರಲ್ಲಿ ಸೇರಿರುವ ಪದಗಳ ಮೂಲವನ್ನು ಲಕ್ಷಿಸದೆ—'ಕನ್ನಡ ನಾಡಿನ ಜನರ ಪ್ರಚಲಿತ ಭಾಷೆಯಲ್ಲಿರುವ ಶಬ್ದಕೋಶವೆಲ್ಲ' ಎಂದು ಅರ್ಥಮಾಡಿದೆ. ಪ್ರಗತಿಪರರಾದ ಜನರ ಬೆಳೆಯುತ್ತಿರುವ ಭಾಷೆಯ ಆವಶ್ಯಕತೆಗಳಿಗೂ ಶಬ್ದಪಾರಿಶುದ್ಧ್ಯದ ನಿರ್ಬಂಧಗಳಿಗೂ ಎಲ್ಲ ಕಾಲದಲ್ಲೂ ಹೊಂದಾವಣೆ ಸಾಧ್ಯವಲ್ಲ. ನಮ್ಮ ಕೃತಿ ಮುಖ್ಯವಾಗಿ ಜನಸಾಮಾನ್ಯರ ಉಪಯೋಗಕ್ಕಾಗಿ ಉದ್ದೇಶಿಸಿದ್ದಾಗಿದೆ. ಕನ್ನಡ ನುಡಿಯ ಭಂಡಾರಕ್ಕೆ ಅದರ ಸಾಕುತಾಯಿಯಂತಿರುವ ಸಂಸ್ಕೃತ ಮಾತ್ರವೇ ಅಲ್ಲ,—ಬಳಕೆಯ ಭಾಷೆಯಲ್ಲಿ ಕೂಡ ಅನೇಕ ಕನ್ನಡ ಪದಗಳ ಬದಲು ಸಂಸ್ಕೃತ ಪದಗಳು ಬಂದುಬಿಟ್ಟಿವೆ—ಪರ್ಷಿಯನ್, ಅರಬ್ಬಿ, ಉರ್ದು, ಮರಾಟಿ ಭಾಷೆಗಳು ಕೂಡ ಪದಗಳನ್ನು ತುಂಬಿಕೊಟ್ಟಿವೆ. ಆದರೂ ನಮ್ಮ ಭಂಡಾರಕ್ಕೆ ಹೊರಗಿನಿಂದ ಇನ್ನೂ ತರಬೇಕಾಗಿದೆ. ಹಲವು ಇಂಗ್ಲಿಷು ಪದಗಳಿಗೆ ಇಂಡಿಯದ ಯಾವ ಭಾಷೆಯೂ—ಕಡೆಗೆ ಸಂಸ್ಕೃತ ಭಾಷೆಯು ಕೂಡ—ಸಮಾನಾರ್ಥಕಗಳನ್ನು ಒದಗಿಸಲಾಗದ ಸಂದರ್ಭಗಳು ಅಪರೂಪವೇನಲ್ಲ. ಆದ್ದರಿಂದ ಇಂತಹ ಕೆಲವು ಸಂದರ್ಭಗಳಲ್ಲಿ ಕನ್ನಡದ ಅಕ್ಷರಗಳಲ್ಲಿ ಬರೆದು ಆ ಇಂಗ್ಲಿಷು ಪದಗಳನ್ನೇ ಬಳಕೆಗೆ ತರಬೇಕೆಂದು ಹೇಳುವ ನಿರ್ಬಂಧ ಸಂಪಾದಕ ಮಂಡಲಿಗೆ ಒದಗಿತು.

ಇಂಗ್ಲಿಷು ಪದಗಳ ಉಚ್ಚಾರಣೆಯ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಅವುಗಳಲ್ಲಿರುವ ಸ್ವರ ಮತ್ತು ಇತರ ಧ್ವನಿಗಳನ್ನು ಕನ್ನಡದ ಲಿಪಿಯಲ್ಲಿ ಬಹಳ ಕರಾರುವಾಕಾಗಿ ತೋರಿಸಲು ಸಾಧ್ಯವಾಗಿಲ್ಲ. ಇದರ ಜೊತೆಗೆ ಹಲವು ಇಂಗ್ಲಿಷು ಪದಗಳ ಉಚ್ಚಾರಣೆ ನಿರ್ಧಾರವಾಗಿಲ್ಲ ಅಥವಾ ಏಕರೂಪವಾಗಿಲ್ಲ. ಆ ಪದಗಳ ಉಚ್ಚಾರಣೆಯ ವಿಷಯದಲ್ಲಿ ನಿಘಂಟುಕಾರರಲ್ಲಿಯೇ ಭಿನ್ನಾಭಿಪ್ರಾಯಗಳಿವೆ. ಉದಾಹರಣೆಗೆ: 'Thought' ಮತ್ತು 'Third' ಎಂಬ ಪದಗಳನ್ನು ಕೆಲವರು 'ತಾಟ್' ಮತ್ತು 'ತರ್ಡ್' ಎಂದೂ ಮತ್ತೆ ಕೆಲವರು 'ಥಾಟ್' ಮತ್ತು 'ಥರ್ಡ್' ಎಂದೂ ಉಚ್ಚಾರಣೆ ಮಾಡುತ್ತಾರೆ. '-ture' ಪ್ರತ್ಯಯಾಂತವಾದ Culture, Scripture, ಮೊದಲಾದ ಪದಗಳನ್ನು 'ಕಲ್ಚ್ಯೂರ್, ಕಲ್ಚರ್' ಮತ್ತು 'ಸ್ಕ್ರಿಪ್‌ಟ್ಯೂರ್, ಸ್ಕ್ರಿಪ್‌ಚರ್' ಎಂದು ಮೊದಲಾಗಿ ಎರಡೆರಡು ರೂಪಗಳಲ್ಲಿ ಉಚ್ಚಾರಮಾಡುತ್ತಾರೆ. ಉಚ್ಚಾರಣೆಯ ಬಗ್ಗೆ ನಾವು ಆಕ್ಸ್‌ಫರ್ಡ್ ನಿಘಂಟುಗಳ ಮಾರ್ಗವನ್ನು ಅನುಸರಿಸಿದ್ದೇವೆ; ಕೆಲವು ಸಂದರ್ಭಗಳಲ್ಲಿ ವೆಬ್‌ಸ್ಟರ್ ಮತ್ತು ಇತರ ನಿಘಂಟುಗಳಲ್ಲಿ ಕಂಡುಬರುವ ರೂಪಾಂತರಗಳನ್ನು ಕೊಟ್ಟಿದ್ದೇವೆ. ಇಂಗ್ಲಿಷು ಪದಗಳ ಸರಿಯಾದ ಉಚ್ಚಾರಣೆಗೆ ವಾಚಕರು ಆಕ್ಸ್‌ಫರ್ಡ್ ನಿಘಂಟುಗಳನ್ನು, ಮೇಲಾಗಿ 'Shorter Oxford Dictionary' ಮತ್ತು 'Concise Oxford Dictionary'—ಈ ನಿಘಂಟುಗಳನ್ನು ನೋಡಿಕೊಳ್ಳಬೇಕು.

ಈ ನಿಘಂಟಿನಲ್ಲಿ ಕನಿಷ್ಠಪಕ್ಷ ಸುಮಾರು ಮುನ್ನೂರು ಚಿತ್ರಗಳನ್ನಾದರೂ—ಮುಖ್ಯವಾಗಿ ವೈಜ್ಞಾನಿಕ ಮತ್ತು ಯಂತ್ರಪರಿಕರ್ಮಶಾಸ್ತ್ರದ ಪದಗಳ ಕೆಳಗೆ—ಸೇರಿಸಿದ್ದಿದ್ದರೆ ನಿಘಂಟಿನ ಪ್ರಯೋಜನ ಹೆಚ್ಚುತ್ತಿತ್ತು. ಈಗಿನ ಮುದ್ರಣದಲ್ಲಿರುವ ಈ ಕೊರತೆ ಮುಂದಿನ ಮುದ್ರಣದಲ್ಲಿ ಪರಿಹಾರವಾದೀತೆಂದು ಆಶಿಸುತ್ತೇವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಪಾದಕ ಮಂಡಲಿಯ ಒಂಬತ್ತು ಸದಸ್ಯರಲ್ಲಿ ನಾಲ್ವರ ಅಕಾಲ ಮರಣದಿಂದ ನಿಘಂಟಿಗಾದ ದೊಡ್ಡ ನಷ್ಟವನ್ನು ಇಲ್ಲಿ ವಿಷಾದದಿಂದ ತಿಳಿಸಬೇಕಾಗಿದೆ. ಅವರ ಹೆಸರುಗಳನ್ನು ಮುಂದೆ ಕೊಟ್ಟಿದೆ :

೧. ಶ್ರೀ. ಟಿ. ಎಸ್. ವೆಂಕಣ್ಣಯ್ಯ, ಎಂ.ಎ., (ಸದಸ್ಯರು) ೧೯೩೯ನೆಯ ಫೆಬ್ರುವರಿಯಲ್ಲಿ.

೨. ರಾಜಸೇವಾಸಕ್ತ ಪ್ರೊಫೆಸರ್ ಬಿ. ವೆಂಕಟನಾರಣಪ್ಪ, ಎಂ.ಎ., (ಪ್ರಧಾನ ಸಂಪಾದಕರು ಮತ್ತು ಸಂಪಾದಕ ಮಂಡಲಿಯ ಅಧ್ಯಕ್ಷರು) ೧೯೪೩ನೆಯ ಆಗಸ್ಟಿನಲ್ಲಿ.

೩. ಶ್ರೀ ಬಿ. ಪುಟ್ಟಯ್ಯ, ಬಿ.ಎ., (ಸದಸ್ಯರು) ೧೯೪೪ನೆಯ ಡಿಸೆಂಬರಿನಲ್ಲಿ.

೪. ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., (ಸದಸ್ಯರು) ೧೯೪೬ನೆಯ ಜನವರಿಯಲ್ಲಿ.

ನಿಘಂಟು ಸಂಕಲನದ ಮುಖ್ಯ ಭಾರವನ್ನು ವಹಿಸಿ ಈ ಶ್ರಮಸಾಧ್ಯವಾದ ಕಾರ್ಯದಲ್ಲಿ ಮನಃಪೂರ್ವಕವಾಗಿ ಸಹಕರಿಸಿದ ಕಚೇರಿಯ ಸಿಬ್ಬಂದಿಯವರಿಗೆ ಪ್ರಧಾನ ಸಂಪಾದಕರು ಕೃತಜ್ಞತೆಯನ್ನು ತಿಳಿಸಲು ಬಯಸುತ್ತಾರೆ. ಪದಗಳ ಅರ್ಥ ಮೊದಲಾದುವನ್ನು ಚರ್ಚಿಸುವ ಸಂದರ್ಭಗಳಲ್ಲೆಲ್ಲ ಪರಸ್ಪರವಾಗಿ ಹೊಂದಿಕೊಂಡುಹೋಗುವ ಮನೋಭಾವವನ್ನು ಅವರು ತೋರಿಸಿರುತ್ತಾರಲ್ಲದೆ ಅವರಲ್ಲಿ ಪ್ರತಿಯೊಬ್ಬರೂ ಕನ್ನಡ ನಾಡಿನ ಪ್ರೇಮದಿಂದಲೂ ಕನ್ನಡ ಸಾಹಿತ್ಯದ ಪುರೋಭಿವೃದ್ಧಿಯ ದೃಷ್ಟಿಯಿಂದಲೂ ತಮ್ಮ ಶಕ್ತಿಮೀರಿ ಈ ನಿಘಂಟಿಗಾಗಿ ದುಡಿದಿದ್ದಾರೆ. ಈ ನಿಘಂಟು ಸಾಧ್ಯವಾದಷ್ಟು ಪ್ರಾಮಾಣಿಕವಾಗಿಯೂ ಪ್ರಯೋಜನಕಾರಿಯಾಗಿಯೂ ಏರ್ಪಡುವಂತೆ ಪರಸ್ಪರ ಸ್ಮರಣೆಯಿಂದಲೂ ಸ್ನೇಹಪೂರ್ವಕವಾದ ವಿಮರ್ಶೆಗಳಿಂದಲೂ ತಮ್ಮೊಂದಿಗೆ ದುಡಿದ ದೊಡ್ಡ ದೊಡ್ಡ ವಿದ್ವಾಂಸರಾದ ಸಂಪಾದಕ ಮಂಡಲಿಯ ಸದಸ್ಯರಿಗೆ ಪ್ರಧಾನ ಸಂಪಾದಕರು ಬಹಳ ಕೃತಜ್ಞರಾಗಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಅನುಕ್ರಮ ಉಪಾಧ್ಯಕ್ಷರುಗಳಾದ ಡಾಕ್ಟರ್ ಇ. ಪಿ. ಮೆಟ್‌ಕಾಫ್, ಡಿ.ಎಸ್‌ಸಿ., ರಾಜಕಾರ್ಯಪ್ರವೀಣ ಎನ್. ಎಸ್. ಸುಬ್ಬರಾವ್, ಎಂ.ಎ., ಬಾರ್-ಅಟ್-ಲಾ, ರಾಜಸಭಾಭೂಷಣ ಇ. ಜಿ. ಮೆಕಾರ್ಲ್ಬೈನ್, ಎಂ.ಎ., ಡಿಪ್.-ಇನ್-ಎಜ್ಯುಕೇಷನ್, ವಿ.ಡಿ., ಜೆ.ಪಿ., ರಾಜಧರ್ಮಪ್ರಸಕ್ತ ಟಿ. ಸಿಂಗಾರುವೇಲು ಮೊದಲಿಯಾರ್, ಬಿ.ಎ., ಬಿ.ಎಲ್., ಮತ್ತು, ಶ್ರೀ. ಎಂ. ಸುಲ್ತಾನ್ ಮೊಹಿಯುದ್ದೀನ್, ಎಂ.ಎ., ಎಲ್‌ಎಲ್.ಬಿ., ಎಂ.ಇಡಿ., —ಈ ಮಹನೀಯರುಗಳೆಲ್ಲರೂ ನಿಘಂಟಿನ ಅಭಿವೃದ್ಧಿಯಲ್ಲಿ ಅತ್ಯಾಸಕ್ತಿಯನ್ನು ವಹಿಸಿ ಹಲವು ವಿಧಗಳಲ್ಲಿ ಸಹಾಯ ಮಾಡಿರುತ್ತಾರೆ. ಅವರು ತೋರಿಸಿದ ಏಕರೀತಿಯಾದ ಸಹಾನುಭೂತಿಗೂ, ಪ್ರೋತ್ಸಾಹಕ್ಕೂ ಸಂಪಾದಕ ಮಂಡಲಿಯ ಪರವಾಗಿ ಪ್ರಧಾನ ಸಂಪಾದಕರು ಅವರಿಗೆಲ್ಲ ವಂದನೆಗಳನ್ನು ಸಮರ್ಪಿಸುತ್ತಾರೆ.

ಕೊನೆಯದಾಗಿ, ಈ ನಿಘಂಟಿನ ಮುದ್ರಣದ ರೂಪುರೇಖೆ ಅಚ್ಚುಕಟ್ಟುಗಳ ಬಗ್ಗೆ ತಮ್ಮ ನುರಿತ ಸಲಹೆಯನ್ನು ಕೊಟ್ಟ ಬೆಂಗಳೂರಿನ ಸರ್ಕಾರದ ಮುದ್ರಣಾಲಯದ ಹಿಂದಿನ ಸೂಪರಿಂಟೆಂಡೆಂಟರಾದ ಶ್ರೀ. ಬಿ. ಶ್ರೀನಿವಾಸ ಅಯ್ಯಂಗಾರ್, ಬಿ.ಎ., ಅವರಿಗೂ, ಈ ನಿಘಂಟಿನ ಮುದ್ರಣಕಾರ್ಯವನ್ನು ತ್ವರೆಗೊಳಿಸುವುದು, ಮೊದಲಾದುವುಗಳಲ್ಲಿ ಏಕರೀತಿಯಾದ ಸೌಹಾರ್ದದಿಂದ ಸಹಕರಿಸಿದ ಈಗಿನ ಸೂಪರಿಂಟೆಂಡೆಂಟರಾದ ಶ್ರೀ. ಬಿ. ಕೃಷ್ಣಸ್ವಾಮಿ ಚೆಟ್ಟಿ, ಬಿ.ಇ., ಎ.ಆರ್.ಪಿ.ಎಸ್., ಅವರಿಗೂ, ಮುದ್ರಣಕಾರ್ಯದ ನೇರ ಮೇಲ್ವಿಚಾರಣೆಯನ್ನು ವಹಿಸಿದ್ದು ಎಲ್ಲವನ್ನೂ ದಕ್ಷತೆಯಿಂದಲೂ ತೃಪ್ತಿಕರವಾಗಿಯೂ ಮುದ್ರಿಸಿಕೊಟ್ಟ ಸಬ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಶ್ರೀ. ಬಿ. ಗೋಪಾಲ ಅಯ್ಯಂಗಾರ್ ಅವರಿಗೂ ಪ್ರಧಾನ ಸಂಪಾದಕರು ತಮ್ಮ ಕೃತಜ್ಞತೆಯನ್ನು ತಿಳಿಸಬಯಸುತ್ತಾರೆ.

ಬೆಂಗಳೂರು
೧೯೪೬ನೆಯ ಡಿಸೆಂಬರ್ ೧೦

ಎಂ. ಆರ್. ಶ್ರೀನಿವಾಸಮೂರ್ತಿ
ಪ್ರಧಾನ ಸಂಪಾದಕರು ಮತ್ತು ಸಂಪಾದಕ ಮಂಡಲಿಯ ಅಧ್ಯಕ್ಷರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಥಮಭಾಗ ಪ್ರಕಟವಾದಾಗ ಬರೆದಿದ್ದ ಪೀಠಿಕೆ

ಇಂಗ್ಲಿಷಿನಲ್ಲಿರುವ ಆಧುನಿಕ ವಿಷಯ ಭಾವನೆಗಳನ್ನು ಕನ್ನಡದಲ್ಲಿ ತಿಳಿಸುವುದಕ್ಕೆ ಸಹಾಯಮಾಡುವ, ಸಾಕಾದಷ್ಟು ಸಮಗ್ರವಾದ ಮತ್ತು ಪ್ರಾಮಾಣಿಕವಾದ ನಿಘಂಟಿನ ಅವಶ್ಯಕತೆ ಬಹಳ ಕಾಲದಿಂದಲೂ ಇದೆ. ಪಾಶ್ಚಾತ್ಯ ವಿದ್ಯೆಯೊಡನೆ ನಿಕಟಸಂಬಂಧ ಪಡೆದಿರುವ ಈಗಿನ ಕಾಲದಲ್ಲೂ ಇಂಗ್ಲಿಷು ವಿದ್ಯಾಭ್ಯಾಸದ ಲಾಭ ಪಡೆದಿಲ್ಲದ ನಮ್ಮ ಜನರಲ್ಲಿ ಬಹುಸಂಖ್ಯಾತರಿಗೆ ಇಂಗ್ಲಿಷಿನಲ್ಲಿ ಸುಲಭವಾಗಿ ದೊರೆಯುವ—ವಿಜ್ಞಾನ, ಯಂತ್ರ ಪರಿಕರ್ಮಶಾಸ್ತ್ರ, ಇತಿಹಾಸ, ಸಾಮಾಜಿಕ ಶಾಸ್ತ್ರ, ಮೊದಲಾದ—ಸಮೃದ್ಧ ಜ್ಞಾನಭಂಡಾರವು ವಸ್ತುತಃ ಮುಚ್ಚಿಹೋಗಿದೆ. ಈ ಸ್ಥಿತಿಯನ್ನು ಉತ್ತಮಗೊಳಿಸುವ ಸಮಸ್ಯೆ ಸಾರ್ವಜನಿಕರ ಗಮನದಲ್ಲಿ ಬಹುಕಾಲದಿಂದಲೂ ಇದ್ದು ತತ್ಫಲವಾಗಿ ಮೈಸೂರು ಪ್ರಜಾಪ್ರತಿನಿಧಿಸಭೆಯು ೧೯೩೫ನೆಯ ಸೆಪ್ಟೆಂಬರ್-ಅಕ್ಟೋಬರ್ ತಿಂಗಳ ದಸರಾ ಅಧಿವೇಶನದಲ್ಲಿ ಒಂದು ಸಮಗ್ರ ಇಂಗ್ಲಿಷ್-ಕನ್ನಡ ನಿಘಂಟಿನ ರಚನೆ ಪ್ರಕಟನೆಗಳಿಗಾಗಿ ವ್ಯವಸ್ಥೆಮಾಡುವಂತೆ ಸರ್ಕಾರವನ್ನು ಪ್ರಾರ್ಥಿಸುವ ಒಂದು ನಿರ್ಣಯವನ್ನು ಆ ಸಭೆಯು ಅಂಗೀಕರಿಸಿತು. ಮೈಸೂರು ಸಂಸ್ಥಾನದ ಆರ್ಥಿಕ ಸಮ್ಮೇಳನದ ವಿದ್ಯಾಭ್ಯಾಸ ಸಮಿತಿಯು ೧೯೩೭ನೆಯ ಜುಲೈನಲ್ಲಿ ಸೇರಿದ್ದ ತನ್ನ ಅಧಿವೇಶನದಲ್ಲಿ ಮೇಲಿನ ನಿರ್ಣಯವನ್ನು ಅನುಸರಿಸಿ ಮುಂದಿನ ಕಾರ್ಯವನ್ನು ನಡಸಿತು. ಆದರೆ ಹಣಕಾಸಿನ ಮುಗ್ಗಟ್ಟಿನ ದೆಸೆಯಿಂದ ಈ ಸಲಹೆಗಳನ್ನು ಕೂಡಲೆ ಜಾರಿಗೆ ತರಲಾಗಲಿಲ್ಲ.

ಆದರೂ ಮೈಸೂರಿನ ದಿವಾನರಾದ ಸರ್ ಮಿರ್ಜಾ ಇಸ್ಮೈಲ್ ಅವರು, ಇದು ಬಹು ಮುಖ್ಯಕಾರ್ಯವೆಂದೂ, ಹಾಗೆಯೇ ತಳ್ಳಿದತಕ್ಕದ್ದಲ್ಲ ವೆಂದೂ ಪರ್ಯಾಲೋಚಿಸಿ ಇದರ ಬಗ್ಗೆ ಶೀಘ್ರದಲ್ಲಿಯೇ ಸೂಕ್ತಕಾರ್ಯಕ್ರಮಗಳನ್ನು ಕೈಕೊಂಡರು. ಮೈಸೂರು ವಿಶ್ವವಿದ್ಯಾನಿಲಯದ ಉಪಾಧ್ಯಕ್ಷರನ್ನೂ, ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರನ್ನೂ ಸಲಹೆ ಕೇಳಿದ ಮೇಲೆ ಈ ಕಾರ್ಯವನ್ನು ವಿಶ್ವವಿದ್ಯಾನಿಲಯಕ್ಕೆ ವಹಿಸುವುದೆಂದು ತೀರ್ಮಾನವಾಯಿತು. ಅದರಂತೆ ನಿಘಂಟಿನ ರಚನೋದ್ಯಮವನ್ನು ಮಂಜೂರುಮಾಡಿ ಸರ್ಕಾರದವರು ೧೯೩೩ನೆಯ ಜುಲೈ ೧೫ರಲ್ಲಿ ಹುಕುಮನ್ನು ಹೊರಡಿಸಿದರು. ಆ ಹುಕುಮಿನ ಪ್ರಕಾರ ನಿಘಂಟು ಕಾರ್ಯ ನಡಸಲು ಕನ್ನಡ ಪಂಡಿತರ ಒಂದು ಸಂಪಾದಕ ಮಂಡಲಿಯೂ, ಕಚೇರಿಯ ಸಿಬ್ಬಂದಿಯೂ ನೇಮಕರಾದರು. ಸದ್ಯದಲ್ಲಿ ರಚಿತವಾದ ಸಂಪಾದಕ ಮಂಡಲಿಯ ಸದಸ್ಯರ ಹೆಸರುಗಳನ್ನು ಮುಂದೆ ಕಾಣಿಸಿದೆ :—

ಅಧ್ಯಕ್ಷರು ಮತ್ತು ಪ್ರಧಾನ ಸಂಪಾದಕರು:

(೧) ಶ್ರೀ. ಬಿ. ವೆಂಕಟನಾರಣಪ್ಪ, ಎಂ.ಎ., ಭೌತಶಾಸ್ತ್ರದ ನಿವೃತ್ತ ಮಹೋಪಾಧ್ಯಾಯರು, ಸೆಂಟ್ರಲ್ ಕಾಲೇಜು, ಬೆಂಗಳೂರು.

ಸದಸ್ಯರು:

(೨) ಶ್ರೀ. ಡಿ. ವಿ. ಗುಂಡಪ್ಪ, ಪತ್ರಿಕೋದ್ಯೋಗಿಗಳು ಮತ್ತು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರು, ಬೆಂಗಳೂರು.

(೩) ಶ್ರೀ. ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ವಿಶ್ವವಿದ್ಯಾನಿಲಯದ ಇಂಗ್ಲಿಷ್ ಮಹೋಪಾಧ್ಯಾಯರು ಮತ್ತು ಕನ್ನಡದ ಗೌರವ ಮಹೋಪಾಧ್ಯಾಯರು, ಬೆಂಗಳೂರು.

(೪) ಶ್ರೀ. ಟಿ. ಎಸ್. ವೆಂಕಣ್ಣಯ್ಯ, ಎಂ.ಎ., ಕನ್ನಡದ ಮಹೋಪಾಧ್ಯಾಯರು, ಮಹಾರಾಜರ ಕಾಲೇಜು, ಮೈಸೂರು.

(೫) ಶ್ರೀ. ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ಕನ್ನಡದ ಸಹಾಯಕ ಮಹೋಪಾಧ್ಯಾಯರು, ಸೆಂಟ್ರಲ್ ಕಾಲೇಜು, ಬೆಂಗಳೂರು.

(೬) ಶ್ರೀ. ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ., ಮೈಸೂರು ಸರ್ಕಾರದ ಕನ್ನಡ ಭಾಷಾಂತರಕಾರರು, ಬೆಂಗಳೂರು.

(೭) ಶ್ರೀ. ಬಿ. ಪುಟ್ಟಯ್ಯ, ಬಿ.ಎ., ಸರ್ಕಾರದ ಮುದ್ರಣಾಲಯದ ನಿವೃತ್ತ ಸೂಪರಿಂಟೆಂಡೆಂಟರು, ಬೆಂಗಳೂರು.

(೮) ಶ್ರೀ. ಡಿ. ಸಿ. ಸುಬ್ಬರಾಯಪ್ಪ, ಬಿ.ಎ., ಬಿ.ಎಲ್., ಮೈಸೂರು ಸರ್ಕಾರದ ನಿವೃತ್ತ ಅಂಡರ್ ಸೆಕ್ರೆಟರಿ, ಬೆಂಗಳೂರು.

ಸಹಾಯಕ ಪಂಡಿತರು:

(೧) ಶ್ರೀ. ಎಲ್. ಗುಂಡಪ್ಪ, ಎಂ.ಎ. (ಕನ್ನಡ)

(೨) ಶ್ರೀ. ಕೆ ವಿ. ರಾಘವಾಚಾರ್, ಎಂ.ಎ.(ಕನ್ನಡ), ಬಿ.ಟಿ.

ಪದಗಳ ಆಯ್ಕೆಯ ವಿಚಾರದಲ್ಲಿ The Concise Oxford Dictionaryಯನ್ನು ಸಂಪಾದಕ ಮಂಡಲಿ ಅನುಸರಿಸಿದೆ. ಸಂಬಂಧಪಟ್ಟ ಪದಗಳನ್ನು ಪ್ರಧಾನ ಪದದ ಕೆಳಗೆ ಗುಂಪು ಕೂಡಿಸುವುದರಲ್ಲಿ ಚಾರ್ಲ್ಸ್ ಅನಂಡೇಲ್ ಅವರ The Concise English Dictionaryಯನ್ನು ಸಾಮಾನ್ಯವಾಗಿ ಅನುಸರಿಸಿದೆ. ಅರ್ಥಗಳಿಗಾಗಿಯೂ ಉಪಯುಕ್ತವಾದ ವೈಜ್ಞಾನಿಕ, ಪಾರಿಭಾಷಿಕ, ಮೊದಲಾದ ಹೆಚ್ಚಿನ ಪದಗಳಿಗಾಗಿಯೂ The Shorter Oxford Dictionary ಮತ್ತು Webster's International Dictionaryಗಳನ್ನು ಸಹ ಪದೇ ಪದೇ ಪರಾಮರ್ಶಿಸಿದೆ. ತಕ್ಕ ಸಮಾನಾರ್ಥಕಗಳನ್ನು ಹುಡುಕುವ ಬಗ್ಗೆ ಇಂಡಿಯದ ಹಲವು ದೇಶೀಯ ಭಾಷೆಗಳಲ್ಲಿ—ಕನ್ನಡ, ತೆಲುಗು, ತಮಿಳು, ಮರಾಟಿ, ಹಿಂದಿ, ಬಂಗಾಳಿಗಳಲ್ಲಿ—ದೊರೆಯುವ ಮುಕ್ಕಾಲು ಪಾಲು ಎಲ್ಲ ನಿಘಂಟುಗಳನ್ನೂ ಶಬ್ದಕೋಶಗಳನ್ನೂ, ಜೊತೆಗೆ ಸಂಸ್ಕೃತ ನಿಘಂಟುಗಳನ್ನೂ ನೋಡಲಾಗಿದೆ.

ವಿಶ್ವವಿದ್ಯಾನಿಲಯದ ಉಪಾಧ್ಯಕ್ಷರಾದ ಡಾಕ್ಟರ್ ಇ. ಪಿ. ಮೆಟ್ಕಾಫ್ ಅವರು ನಿಘಂಟಿನ ಕಾರ್ಯದಲ್ಲಿ ಗಾಢವಾದ ಆಸಕ್ತಿಯನ್ನು ವಹಿಸಿದ್ದಾರೆ ಮತ್ತು ಇಂಗ್ಲಿಷು ಪದಗಳ ಉಚ್ಚಾರಣೆಯನ್ನು ವಿಮರ್ಶಿಸುತ್ತ ಸಂಪಾದಕ ಮಂಡಲಿಗೆ ಸಹಾಯಮಾಡುತ್ತಿದ್ದಾರೆ. ಅವರಿಗೂ, ಯಾರ ಯಾರ ಗ್ರಂಥಗಳಿಗೆ, ಲೇಖನಗಳಿಗೆ, ನಾವು ಋಣಿಗಳೋ ಆ ಗ್ರಂಥಕರ್ತರಿಗೂ, ಪ್ರಕಾಶಕರಿಗೂ, ಮತ್ತು ತನ್ನ ಕಟ್ಟಡದಲ್ಲಿ ಉಚಿತವಾಗಿ ಸ್ಥಳವಸತಿಯನ್ನು ಕೊಟ್ಟಿರುವುದಲ್ಲದೆ ತನ್ನ ಪುಸ್ತಕ ಭಂಡಾರವನ್ನೂ ನಮ್ಮ ವಶಪಡಿಸಿರುವ ಕರ್ಣಾಟಕ ಸಾಹಿತ್ಯ ಪರಿಷತ್ತಿಗೂ ನಮ್ಮ ಕೃತಜ್ಞತೆ ಸಲ್ಲಬೇಕಾಗಿದೆ. ನಿಘಂಟಿನ ಮುದ್ರಣದಲ್ಲಿ ತಮ್ಮ ನುರಿತ ಸಲಹೆ ಸಹಾಯಗಳನ್ನು ಕೊಟ್ಟಿರುವ ಸರ್ಕಾರದ ಮುದ್ರಣಾಲಯದ ಸೂಪರಿಂಟೆಂಡೆಂಟರಾದ ಶ್ರೀಮಾನ್ ಬಿ. ಶ್ರೀನಿವಾಸ ಅಯ್ಯಂಗಾರ್, ಬಿ.ಎ., ಅವರಿಗೆ ನಾವು ವಿಶೇಷವಾಗಿ ಕೃತಜ್ಞರಾಗಿದ್ದೇವೆ.

CC-0. In Public Domain. Gurukul Kangri Collection, Haridwar

ಪ್ರತಿಯೊಂದು ಭಾಗವೂ ೯೬ ಪುಟಗಳಷ್ಟಿರುವ ೧೨ ಭಾಗಗಳಲ್ಲಿ ನಿಘಂಟು ಮುಗಿಯಬೇಕೆಂದು ಉದ್ದೇಶಿಸಿದೆ ; ಅದರ ಮೊದಲನೆಯ ಭಾಗವನ್ನು ಈಗ ಸಾರ್ವಜನಿಕರ ಮುಂದೆ ಇಟ್ಟಿದೆ. ಯಾವ ಮಹತ್ತರವಾದ ಧ್ಯೇಯಕ್ಕಾಗಿ ಈ ಕಾರ್ಯವನ್ನು ಕೈಕೊಳ್ಳಲಾಯಿತೋ ಆ ಧ್ಯೇಯಕ್ಕೂ, ಯಾರ ಮಹದಾಶ್ರಯದಲ್ಲಿ ಈ ಸಂಕಲನ ಕಾರ್ಯ ನಡೆಯುತ್ತಿದೆಯೋ ಆ ವಿಶ್ವವಿದ್ಯಾನಿಲಯಕ್ಕೂ ಗೌರವ ತರುವಂತೆ ನಿಘಂಟನ್ನು ಯೋಗ್ಯ ಕೃತಿಯನ್ನಾಗಿ ಮಾಡುವ ಪ್ರಯತ್ನದಲ್ಲಿ ಸಂಪಾದಕ ಮಂಡಲಿ ಯಾವ ಶ್ರಮವನ್ನೂ ಕಾರ್ಪಣ್ಯ ಮಾಡಿಲ್ಲ. ಆದರೂ ಅದರಲ್ಲಿರುವ ಕುಂದು ಕೊರತೆಗಳನ್ನು ಅವರು ತಿಳಿಯದೆ ಹೋಗಿಲ್ಲ. ಕನ್ನಡ ಭಾಷಾ ಸಾಹಿತ್ಯಗಳ ಪುರೋವೃದ್ಧಿಯಲ್ಲಿ ಆಸಕ್ತರಾದ ಎಲ್ಲ ಮಹನೀಯರಿಂದಲೂ ರಚನಾತ್ಮಕವಾದ ವಿಮರ್ಶೆಗಳನ್ನೂ, ಸಹಾಯಕಗಳಾದ ಸಲಹೆಗಳನ್ನೂ ಸ್ವಾಗತಿಸಲು ಸಂಪಾದಕ ಮಂಡಲಿ ಸದಾ ಸಿದ್ಧವಾಗಿರುತ್ತದೆ.

ಬೆಂಗಳೂರು
೧೯೩೬ನೆಯ ಜೂನ್ ೨೮

ಬಿ. ವೆಂಕಟನಾರಣಪ್ಪ
ಪ್ರಧಾನ ಸಂಪಾದಕರು ಮತ್ತು ಸಂಪಾದಕ
ಮಂಡಲಿಯ ಅಧ್ಯಕ್ಷರು

Digitized by Arya Samaj Foundation Chennai and eGangotri
CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

SYMBOLS AND ABBREVIATIONS

I. New symbols used in this Dictionary—

(1) ಆ್ಯ to indicate the sound of **a** as in **bat** (ಬ್ಯಾಟ್)

(2) ಫ಼, ಸ಼, ಷ಼ to indicate respectively the sounds of (i) **f** as in **affirm** (ಅಫ಼ರ್ಮ್‌), (ii) **z** as in **assize** (ಅಸೈಸ಼್), (iii) **z** as in **azure** (ಏಷ಼ರ್)

(3) ಡ್‌ to indicate the **d** sound that is practically silent, as in **badge** (ಬ್ಯಾಡ್ಜ್)

II. Abbreviations—

ಅಂ. ರ. ಶಾ.	ಅಂಗ ರಚನಾ ಶಾಸ್ತ್ರ (Anatomy)
ಅಮೆ. ಸಂ.	ಅಮೆರಿಕದ ಸಂಯುಕ್ತ ಸಂಸ್ಥಾನಗಳು (U. S. A.)
ಅಲಂ.	ಅಲಂಕಾರ ಶಾಸ್ತ್ರ (Rhetoric)
	ಆಲಂಕಾರಿಕವಾಗಿ (Rhetorically)
ಅವ್ಯ.	ಅವ್ಯಯ (Indeclinable)
ಅಸಂ.	ಅಸಂಸ್ಕಾರಿ ಭಾಷೆ (Slang)
ಆಂ. ಇಂ.	ಆ್ಯಂಗ್ಲೊ-ಇಂಡಿಯನ್ (Anglo-Indian)
ಉ.	ಉತ್ತರ (North)
ಉದಾ.	ಉದಾಹರಣೆ (Example)
ಉಪ.	ಉಪಸರ್ಗ (Preposition)
ಉ. ಪ್ರ.	ಉತ್ತರ ಪ್ರತ್ಯಯ (Suffix)
ಏ. ವ.	ಏಕ ವಚನ (Singular number)
ಕ್ರಿ.	ಕ್ರಿಯಾ ಪದ (Verb)
ಕ್ರಿ ಅಕ.	ಅಕರ್ಮಕ ಕ್ರಿಯಾ ಪದ (Intransitive verb)
ಕ್ರಿ. ಪೂ.	ಕ್ರಿಸ್ತ ಪೂರ್ವ (Before Christ)
ಕ್ರಿ. ವಿ.	ಕ್ರಿಯಾ ವಿಶೇಷಣ (Adverb)
ಕ್ರಿ. ಶ.	ಕ್ರಿಸ್ತ ಶಕ (Christian era)
ಕ್ರಿ. ಸಕ.	ಸಕರ್ಮಕ ಕ್ರಿಯಾ ಪದ (Transitive verb)
ಖ. ವಿ.	ಖಗೋಳ ವಿಜ್ಞಾನ (Astronomy)
ಗ. ಪ್ರ.	ಗತ ಪ್ರಯೋಗ (Obsolete)
ಗ್ರಾಂ.	ಗ್ರಾಂಥಿಕ (Literary)
ಗು.	ಗುಣವಾಚಕ (Adjective)
ಛಂ.	ಛಂದಶ್ಶಾಸ್ತ್ರ (Prosody)
ಜ್ಯಾ.	ಜ್ಯಾಮಿತಿ (Geometry)
ಜೀ. ವಿ.	ಜೀವ ವಿಜ್ಞಾನ (Biology)
ಜ್ಯೋ.	ಜ್ಯೋತಿಷ (Astrology)
ತ. ಶಾ.	ತತ್ತ್ವಶಾಸ್ತ್ರ (Philosophy)
ದ.	ದಕ್ಷಿಣ (South)
ದೃ. ವಿ.	ದೃಗ್ವಿಜ್ಞಾನ (Optics)
ದೇವ. ಶಾ.	ದೇವತಾ ಶಾಸ್ತ್ರ (Theology)
ನಾ.	ನಾಮ ವಾಚಕ (Noun)
ನ್ಯಾ. ಶಾ.	ನ್ಯಾಯ ಶಾಸ್ತ್ರ (Law)
ಪ.	ಪಶ್ಚಿಮ (West)
ಪ. ಶಾ.	ಪವನ ಶಾಸ್ತ್ರ (Meteorology)
ಪ್ರ.	ಪ್ರಯೋಗ (Usage)
ಪ್ರಾ.	ಪ್ರಾಚೀನ (Antiquity)
ಪ್ರಾ. ವಿ.	ಪ್ರಾಣಿ ವಿಜ್ಞಾನ (Zoology)
ಪ್ರಾಚೀ. ಪ್ರ.	ಪ್ರಾಚೀನ ಪ್ರಯೋಗ (Archaic)
ಪ್ರಾಚೀ. ಶಾ.	ಪ್ರಾಚೀನ ವಸ್ತು ಶಾಸ್ತ್ರ (Archæology)
ಪ್ರಾಂ. ಪ್ರ.	ಪ್ರಾಂತ ಪ್ರಯೋಗ (Dialectical usage)
ಪೂ.	ಪೂರ್ವ (East)
ಪೂ. ಪ್ರ.	ಪೂರ್ವ ಪ್ರತ್ಯಯ (Prefix)
ಬ. ವ.	ಬಹು ವಚನ (Plural number)
ಬಳ. ಮಾ.	ಬಳಕೆಯ ಮಾತು (Colloquial word)
ಬೀ. ಗ.	ಬೀಜ ಗಣಿತ (Algebra)
ಭಾ. ಶಾ.	ಭಾಷಾ ಶಾಸ್ತ್ರ (Philology)
ಭಾವ. ಅವ್ಯ.	ಭಾವ ಸೂಚಕಾವ್ಯಯ (Interjection)
ಭೂತ.	ಭೂತ ರೂಪ (Past tense)
ಭೂ. ಕೃ.	ಭೂತ ಕೃದ್ವಾಚಿ (Past participle)
ಭೂ. ವಿ.	ಭೂ ವಿಜ್ಞಾನ (Geology)
ಭೌ. ವಿ.	ಭೌತ ವಿಜ್ಞಾನ (Physics)
ಮ. ಶಾ.	ಮನಶ್ಶಾಸ್ತ್ರ (Psychology)
ಮು.	ಮುಖ್ಯವಾಗಿ (Especially)
ಮೊ.	ಮೊದಲಾದ (Etcetera)
ರ. ವಿ.	ರಸಾಯನ ವಿಜ್ಞಾನ (Chemistry)
ರೂಪ.	ರೂಪಕವಾಗಿ (Figuratively)
ರೋ. ಕ್ಯಾ.	ರೋಮನ್ ಕ್ಯಾತೊಲಿಕ್ (Roman Catholic)
ರೋ. ಪ್ರಾ.	ರೋಮನ್ ಪ್ರಾಚೀನ (Roman antiquities)
ವಾ. ಶಾ.	ವಾಸ್ತು ಶಾಸ್ತ್ರ (Architecture)
ವ್ಯಾ.	ವ್ಯಾಕರಣ (Grammar)
ವಿರ. ಪ್ರ.	ವಿರಳ ಪ್ರಯೋಗ (Rare usage)
ವಿ. ವಿ. ನಿ.	ವಿಶ್ವವಿದ್ಯಾನಿಲಯ (University)
ವೈ. ಶಾ.	ವೈದ್ಯ ಶಾಸ್ತ್ರ (Medicine)
ಶ. ಮಾ.	ಶತಮಾನ (Century)
ಶ. ವಿ.	ಶರೀರ ವಿಜ್ಞಾನ (Physiology)
ಶಾ.	ಶಾಸ್ತ್ರ (Science)
ಸ. ನಾ.	ಸರ್ವನಾಮ (Pronoun)
ಸ. ಪೂ. ಪ.	ಸಮಾಸದಲ್ಲಿ ಪೂರ್ವ ಪದ (First member of [a compound word)
ಸ. ವಿ.	ಸಸ್ಯ ವಿಜ್ಞಾನ (Botany)
ಸ್ಕಾ. ಪ್ರ.	ಸ್ಕಾಟ್ಲೆಂಡಿನ ಪ್ರಯೋಗ (Scotticism)
ಸ್ತ್ರೀ.	ಸ್ತ್ರೀಲಿಂಗ (Feminine gender)
ಸು.	ಸುಮಾರು (About)
ಸಂ.	ಸಂಗೀತ (Music)
ಸಂ. ಅವ್ಯ.	ಸಂಬಂಧಾವ್ಯಯ (Conjunction)
ಸಾ.	ಸಾಮಾನ್ಯವಾಗಿ (Usually)
F	French
G	German
Gk.	Greek
It.	Italian
L	Latin

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪದಗಳ ಉಚ್ಚಾರಣೆಯ ಬಗ್ಗೆ ಕೆಲವು ಸೂಚನೆಗಳು

ಉಚ್ಚಾರಣೆಯ ಭೇದಗಳನ್ನು ಕೆಲವು ವೇಳೆ ಪ್ರತ್ಯೇಕವಾಗಿಯೇ ಕೊಟ್ಟಿದೆ. ಕೆಲವು ಸಂದರ್ಭಗಳಲ್ಲಿ ( ) ಎಂಬ ಆವರಣ ಚಿಹ್ನೆಗಳನ್ನು ಉಪಯೋಗಿಸಿ ಭೇದಗಳನ್ನು ತೋರಿಸಿದೆ. ಈ ಆವರಣ ಚಿಹ್ನೆಗಳು ಬಂದಾಗ ಮತ್ತು ಇತರ ಸಂದರ್ಭಗಳಲ್ಲಿ ಓದಬೇಕಾದ ಕ್ರಮವನ್ನು ಮುಂದಿನ ಉದಾಹರಣೆಗಳಿಂದ ತಿಳಿಯಬೇಕು :—

ಪದ		ಉಚ್ಚಾರಣೆ
Góndola ಗಾಂಡ(ಡೊ)ಲ	....	ಗಾಂಡಲ ಅಥವಾ ಗಾಂಡೊಲ
Gráma, Grámma ಗ್ರಾ(ಗ್ರ್ಯಾ, ಗ್ರೇ)ಮ	....	ಗ್ರಾಮ, ಗ್ರ್ಯಾಮ, ಅಥವಾ ಗ್ರೇಮ
Hágiarchy ಹ್ಯಾಗಿಯಾರ್ಕಿ, ಹೇಜಿ—	....	ಹ್ಯಾಗಿಯಾರ್ಕಿ, ಹೇಜಿಯಾರ್ಕಿ
Lucid ಲ್ಯೂ(ಲೂ)ಸಿಡ್	....	ಲ್ಯೂಸಿಡ್ ಅಥವಾ ಲೂಸಿಡ್
Our ಔ(ಅ)ರ್	....	ಔಅರ್, ಔರ್
Paralipsis ಪ್ಯಾರಲಿಪ್ಸಿಸ್, —**leipsis** —ಲೈಪ್ಸಿಸ್	....	ಎರಡನೆಯ ಪದ : ಪ್ಯಾರಲೈಪ್ಸಿಸ್
Parasite ಪ್ಯಾರಸೈಟ್. **Parasitology** —ಟಾಲೊಜಿ	....	ಎರಡನೆಯ ಪದ : ಪ್ಯಾರಸೈಟಾಲೊಜಿ
Parasitic(al) —ಸಿಟಿ—	....	ಪ್ಯಾರಸಿಟಿಕ್, ಪ್ಯಾರಸಿಟಿಕಲ್
Schedule ಷೆ(ಸ್ಕೆ)ಡ್ಯೂಲ್	....	ಷೆಡ್ಯೂಲ್, ಸ್ಕೆಡ್ಯೂಲ್

ಅರ್ಥಗಳನ್ನು ಓದಿಕೊಳ್ಳುವ ಬಗ್ಗೆ ಕೆಲವು ಸೂಚನೆಗಳು

ಸ್ಥಳವನ್ನು ಮಿಗಿಸುವ ಉದ್ದೇಶದಿಂದ ಪುನರಾವರ್ತವಾಗುವ ಪದಗಳ ಬದಲಾಗಿ ಗೆರೆಯನ್ನು (—) ಉಪಯೋಗಿಸಿ ಆ ಪದಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಇಟ್ಟಿಸಿದೆ. ಮುಂದಿನ ಕೆಲವು ಉದಾಹರಣೆಗಳಿಂದ ಕ್ರಮ ಮನದಟ್ಟಾಗುವುದು.

God ಪದದ ಕೆಳಗೆ	**Godward**	ದೇವರ ಕಡೆಗೆ ; —ಕಡೆಯ ; —ವಿಷಯದಲ್ಲಿ ; —ಸಂಬಂಧದಲ್ಲಿ (ಗೆರೆಯ ಜಾಗದಲ್ಲಿ ದೇವರ ಎಂಬ ಪದವನ್ನು ಹಾಕಿಕೊಂಡು : ದೇವರ ಕಡೆಯ ; ದೇವರ ವಿಷಯದಲ್ಲಿ ; ದೇವರ ಸಂಬಂಧದಲ್ಲಿ).
Granite ಪದದ	**Granitic**	ಗ್ರ್ಯಾನಿಟ್ಟಿನ ; —ತೆರದ ; —ಉಳ್ಳ ; —ಇಂದಾದ. (ಗೆರೆಯ ಜಾಗದಲ್ಲಿ ಗ್ರ್ಯಾನಿಟ್ಟಿನ ಮೊದಲಾಗಿ ಸೇರಿಸಿದರೆ : ಗ್ರ್ಯಾನಿಟ್ಟಿನ ತೆರದ ; ಗ್ರ್ಯಾನಿಟ್ಟುಳ್ಳ ; ಗ್ರ್ಯಾನಿಟ್ಟಿನಿಂದಾದ)
Plague ಪದದ ಕೆಳಗೆ	**Plaguy**	ಕಿರುಕುಳ ಕೊಡುವ (—ಕೊಡುತ್ತ) (ಗುಣವಾಚಕಾರ್ಥಕ್ಕೆ : ಕಿರುಕುಳ ಕೊಡುವ. ಕ್ರಿಯಾವಿಶೇಷಣಾರ್ಥಕ್ಕೆ : ಕಿರುಕುಳ ಕೊಡುತ್ತ).
Filing (ನಾ.) (ಕ್ರಿಯಾರ್ಥಗಳಲ್ಲಿ)		(' ಉದು ' ಪ್ರತ್ಯಯವನ್ನು ಕ್ರಿಯಾರ್ಥಕ್ಕೆ ಸೇರಿಸಿದರೆ : ಅರದಿಂದ ಉಜ್ಜಿಹಾಕುವುದು, ಉಜ್ಜಿನಯ ಮಾಡುವುದು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿದ್ದೋಲೆ

ಪುಟ	ಪದ	ತಪ್ಪು	ಒಪ್ಪು
3	**Abject**	(ಗು., ಅ.)	(ಗು., ನಾ.)
10	**Active**	**Actívity**	**Actively** (ಕ್ರಿ. ವಿ.) ; **Actívity**
12	**Adieu**	ಅಡ್ಯೂ (ಉಪ.)	ಅಡ್ಯೂ (ಅವ್ಯ., ನಾ.)
45	**Aqua** ಕೆಳಗೆ **Aqueous**	Aqueous rocsk	Aqueous rocks
47	**Archie**	ಆರ್ಕಿ, ...	ಆರ್ಚಿ,
51	**Arthritis** ಕೆಳಗೆ **Arthrosis**	ಆತ್ರೋರ್ಸಿಸ್ (ನಾ.) ;	ಆತ್ರೋರ್ಸಿಸ್ (ನಾ.)
52	**Articular** ಕೆಳಗೆ **Articulation**	ಕೀಲುಗೂಡಿಸಿರುವ ; ಕೀಲುಗೂಡಿಸುವ ರೀತಿ	ಕೀಲುಗೂಡಿಸಿರುವ, ಕೀಲುಗೂಡಿಸುವ, —ರೀತಿ
53	**Asepsis** ಕೆಳಗೆ **Aseptic**	ಗಾಯ, ಶಸ್ತ್ರಗಳು, ಇತರ ಪರಿಕರಗಳು — ಇವನ್ನು ವಿಷಾಣುರಹಿತವನ್ನಾಗಿ ಮಾಡಿದ :	(ಗಾಯ, ಶಸ್ತ್ರಗಳು, ಮತ್ತು ಗಾಯಪಟ್ಟಿಕಟ್ಟುಗಳ ವಿಷಯದಲ್ಲಿ) ವಿಷಾಣು ರಹಿತವನ್ನಾಗಿ ಮಾಡಿದ,
55	**Assert**	ಪ್ರತಿವಾದಿಸು ;	ಪ್ರತಿಪಾದಿಸು ;
56	**Associate** ಕೆಳಗೆ **Association**	—ಷಿ(ಸಿ)ಯೇಷನ್.	—ಷಿ(ಸಿ)ಯೇಷನ್
57	**At**	ಅಟ್ (ಅವ್ಯ.)	ಅಟ್ (ಉಪ.)
61	**Aunt** ಕೆಳಗೆ **Auntie, Aunty**	ಸಂಬೋದಿಸುವಾಗ	ಸಂಬೋಧಿಸುವಾಗ
62	**Authority** ಕೆಳಗೆ **Authoritative**	ವಿಧಿಸಹಿತ	ವಿಧಿ ವಿಹಿತ
63	**Auto-da-fe**	ಕ್ಯಾತೊಲಿಕ್	ಕ್ಯಾತೊಲಿಕ್
64	**Ave**	ಏವಿ (ಉಪ., ನಾ.)	ಏವಿ (ಭಾವ. ಅವ್ಯ., ನಾ.)
73	**Band** ಕೆಳಗೆ **Bándstand**	ವಾದ್ಯರಂಗ	ವಾದ್ಯ —ರಂಗ, ವೇದಿಕೆ.
74	**Banner**	(ಕಾವ್ಯ) ಗುಡಿ ;	(ಗ್ರಾಂ.) ಗುಡಿ ;
77	**Barque**	**Bárque**	**Barque**
93	**Betoken**	ಸೂಚನೆ	ಸೂಚನೆ
106	**Blue**	**B. rum** ಕೆಟ್ಟ ಮದ್ಯ	**B. ruin** (ಕೆಟ್ಟ) ಜಿನ್ ಮದ್ಯ, ಪೂರ್ತಿನಾಶ.
136	**Cable**	ಅಥವಾ ಸರಪಣಿ	ಅಥವಾ ಸರಪಣಿ.
137	**Caftan**	ಕ್ಯಾಫ್ಟನ್ ಕಾಫ್ಟಾನ್, ...	ಕ್ಯಾಫ್ಟನ್, ಕಾಫ್ಟಾನ್
139	**Calibre**	**Cálibre Cáliber**	**Cálibre, Cáliber**
140	**Callisthenic**	**Callisthénic Calis-**	**Callisthénic, Calis-**
143	**Cannikin**	**Cánnikin Cáni-**	**Cánnikin, Cáni-**
177	**Christ**	ಏಸುಕ್ರಿಸ್ತ.	ಯೇಸು ಕ್ರಿಸ್ತ.
196	**Cock-eyed**	ಮೆಳೆಗಣ್ಣಿನ ;	ಮೆಳ್ಳೆಗಣ್ಣಿನ ;
199	**Cognovit**	ಕಾಗ್ನೋವಿಟ್ (ನಾ., ಸ್ತ್ರಿ)	ಕಾಗ್ನೋವಿಟ್ (ನಾ.)
,,	**Coil**[1]	ಎಗುರುಪಟ್ಟಿ (ಎಗುರು ಕಂಬಿ), ಮೊ. ಗಳ ಸರುಳಿ ಸಿಂಬಿ;	ಎಗುರು ಪಟ್ಟಿ (ಅಥವಾ ಎಗುರು ಕಂಬಿ), ಮೊ. ಗಳ ಸುರುಳಿ, ಸಿಂಬಿ ;
200	**Cold**	**Cóldblooded Cóldhearted**	**Coldblooded Coldhearted**
204	**Come**	ಭೂ. ಕೃ. Come.	ಭೂ. ಕೃ. come)
206	**Commandeer**	ಕಾಮಂಡೀರ್	ಕಾಮಂಡೀಯರ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುಟ	ಪದ	ತಪ್ಪು	ಒಪ್ಪು
208	**Common** ಕೆಳಗೆ **Commoner**	**Cómmoner.**	**Cómmoner**
„	**Commune**[2]	ಕಾಮ್ಯ್ಯಾನ್	ಕಾಮ್ಯೂನ್
253	**Crustacea**	(ಉದಾ., ಏಡಿ, ನಳ್ಳಿ, ಮೊ.)	(ಉದಾ., ಏಡಿ, ಮೊ.)
256	**Culture**	(ಜೇನಹುಳು,	(ಜೇನು ಹುಳು,
„	**Cumulate** ಕೆಳಗೆ Cumulative Voting (C. voting)	ಎಷ್ಟುಮಂದಿ ಉಮೇದುವಾರರಿರುವರೊ	ಎಷ್ಟು ಮಂದಿ ಪ್ರತಿನಿಧಿಗಳಿರಬೇಕೊ
276	**Deep** ಕೆಳಗೆ **Deepness**	**Deepness** (ನಾ.)	**Deepness** (ನಾ.);
276	**Default**	ಕೊರತೆ, ಅಭಾವ, ಆಗಿರು ಗೈರಹಾಜರಿ ತೀರ್ಪುಕೊಡು	ಕೊರತೆ, ಅಭಾವ, —ಆಗಿರು ; ಗೈರಹಾಜರಿ ತೀರ್ಪು ಕೊಡು.
317	**Divine** ಕೆಳಗೆ D. Service	[............ದೇವತಾರಾಧನೆ]	[............ದೇವತಾರಾಧನೆ].
320	**Dog**	**D.-seep**	**D.-sleep**
323	**Double**	ಹೆಚ್ಚಿದ, ದ್ವಿಗುಣಿತ —ದಳದ.	ಹೆಚ್ಚಿದ, ದ್ವಿಗುಣಿತ, —ದಳದ.
334	**Drum**	**D. -h. major**	**D. major**
335	**Duce**	Il, D.	Il D.
353	**Emanate**	ಬರು, ಮಾಡು	ಬರು, ಮೂಡು
359	**End**	E.-to-e. ಒಂದು ದೇಶದ ಕೊನೆಯಿಂದ	ದೇಶದ ಒಂದು ಕೊನೆಯಿಂದ
370	**Equity**	ಸಮದರ್ಶಿಯಾದ. **Equitableness** (ನಾ.); **Equitably** (ಕ್ರಿ. ವಿ.)	(ಕೊನೆಯಲ್ಲಿರುವ 'ಧರ್ಮಸಮ್ಮತವಾದ' ಪದದ ತರುವಾಯ) : **Equitableness** (ನಾ.); **Equitably** (ಕ್ರಿ. ವಿ.)
374	**Ethmoid**	ಜಾಲರಾಸ್ತಿ	ಜಾಲರಾಸ್ಥಿ
380	**Except**	E. for the omission of accents ಸ್ವರ ಭಾರ ಹಾಕದೆಯಿರುವುದನ್ನು ಬಿಟ್ಟರೆ	E. for the omission of accents ಸ್ವರ ಭಾರ ಹಾಕದಿರುವುದನ್ನು ಬಿಟ್ಟರೆ
386	**Export**	(ಸಾ., ಬ. ವ. ದಲ್ಲಿ.)	(ಸಾ., ಬ. ವ. ದಲ್ಲಿ)
387	**Expose** ಕೆಳಗೆ **Exposition**	ವಾಖ್ಯಾನ	ವ್ಯಾಖ್ಯಾನ
388	**External** ಕೆಳಗೆ E. evidence	ಬಾಹ್ಯ ಪ್ರಮಾಣ)	ಬಾಹ್ಯ ಪ್ರಮಾಣ).
389	**Extraórdinary**	**Exatraórdinary**	**Extraórdinary**
391	**Eyre**	(Justices in E. ಸಂಚಾರ ನ್ಯಾಯ ಸ್ಥಾನದಲ್ಲಿಯ ನ್ಯಾಯಾಧಿಪತಿಗಳು.	(Justices in E. ಸಂಚಾರ ನ್ಯಾಯಸ್ಥಾನದಲ್ಲಿಯ ನ್ಯಾಯಾಧಿಪತಿಗಳು)
393	**Factotum**	ಫ್ಯಾಕ್ಟೋಟಂ	ಫ್ಯಾಕ್ಟೋಟಂ
398	**Famish**	ತಿಂಡಿಯಿಲ್ಲದೆ ಬಹಳ ಹಸಿವಿನಿಂದ. ತಪಿಸು, ತಪಿಸುವಂತೆ ಮಾಡು ;	ತಿಂಡಿಯಿಲ್ಲದೆ, ಬಹಳ ಹಸಿವಿನಿಂದ, —ತಪಿಸು, ತಪಿಸುವಂತೆ ಮಾಡು ;
403	**Fate**	ಹಣೆಯ ಬರಹ ಪರಿಣಾಮ,	ಹಣೆಯ ಬರೆಹ, ಪರಿಣಾಮ,
406	**Feculent**	**Fecu-ence**	**Fecu-lence**
407	**Feign**	(F. that one is mad ; F. oneself mad ;	(F. that one is mad, F. oneself mad,
412	**Fever** ಕೆಳಗೆ Typhoid f.	'ಟೈಫಾಯ್ಡ್' ಜ್ವರ).	'ಟೈಫಾಯ್ಡ್' ಜ್ವರ.
424	**Five**	ಐದನೆಯ ಆಳತೆಯ ಕ್ರೈಚೀಲ, ಜೋಡು, ಮೊ. ವು	ಐದನೆಯ ಅಳತೆಯ ಕೈಚೀಲ, ಜೋಡು, ಮೊ. ವು.
425	**Flag**[4]	Yellow f. .... ಅಂಟುರೋಗದ ನಿಯುತಿ ಕಾಲ	.... ಅಂಟುರೋಗದ ನಿಯುತ ಕಾಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುಟ	ಪದ	ತಪ್ಪು	ಒಪ್ಪು
433	**Flora** ಕೆಳಗೆ **Florid**	F. speech ಪುಷ್ಪಿತವಾಕ್ಕು	F. speech ಪುಷ್ಪಿತವಾಕ್ಕು
436	**Flute**	ಫ್ಲೂಟ್	ಫ್ಲೂಟ್
438	**Fog**[2]	**F. b-ow**	**F.-bow**
446	**Forgo**	**Foregó**	**Foregó**[2]
447	**Form** ಕೆಳಗೆ **Formally**	~ಯಮಾನುಸರಣೆಗಾಗಿ.	ನಿಯಮಾನುಸರಣೆಗಾಗಿ.
455	**Freeze** ಕೆಳಗೆ Freezing-point	ಘನೀಭವನಶಾಖಾಂಕ]	ಘನೀಭವನಶಾಖಾಂಕ].
459	**From**	ಫ್ರಾಮ್ (ಉಪ.) —ಇಂದ	ಫ್ರಾಮ್ (ಉಪ.) —ಇಂದ ;
460	**Frowzy**	ಚೊಕ್ಕಟವಿಲ್ಲದ	ಚೊಕ್ಕಟವಿಲ್ಲದ.
462	**Fuliginous**	ಮಸಕಾದ	ಮಸುಕಾದ
,,	**Fulminate** ಕೆಳಗೆ **Fulminic** ನಲ್ಲಿ F. acid.	'ಫ಼ಲ್ಮನಿಕ್', ಆಮ್ಲ.	'ಫ಼ಲ್ಮನಿಕ್' ಆಮ್ಲ.
465	**Fury**	ರಾಧ್ರಿಯರು ;	ರಾಧ್ರಿ(ಯರು) ;
466	**Future** ಕೆಳಗೆ **Futurity**	ಘಟನೆಗ(ಳು)	ಘಟನೆ(ಗಳು)
467	**Gadhelic**	**Gælic**	**Gaelic**
472	**Gander**	ಪ್ರಮಾಣಗಳ್ನನ್ನೇ	ಪ್ರಮಾಣಗಳನ್ನೇ
473	**Garble**	ಆಭಾಸಮಾಡಿ	ಆಭಾಸ:ಾಡಿ
,,	**Garden** (ಗು.)	ಕೃಷಿಮಾಡಿ ಬೆಳಸಿದ, (ಕಾಡಿನದಲ್ಲ)	ಕೃಷಿಮಾಡಿ ಬೆಳಸಿದ (ಕಾಡಿನದಲ್ಲ)
,,	**Garland**	ಗ್ರಂಥ ಸಂಗ್ರಹ;	ಗ್ರಂಥ ಸಂಗ್ರಹ ;
476	**Gather** ಕೆಳಗೆ **Gathering**	ಕೂಟ.	ಕೂಟ.
476	**Gauntlet** ಕೆಳಗೆ Run the g.	ಉಗ್ರಟೀಕೆಗೆ ಒಳಗಾಗು,.	ಉಗ್ರಟೀಕೆಗೆ ಒಳಗಾಗು.
477	**Gel**	ಅಸ್ಫಟಿಕ ದ್ರಾವಣ	ಅಸ್ಫಟಿಕ ದ್ರಾವಣ
,,	**Gelatin(e)** ಕೆಳಗೆ Blasting g.	ಸ್ಫೋಟಕ ಜೆಲಟಿನ್	ಸ್ಫೋಟಕ ಜೆಲಟಿನ್
478	**General** ಕೆಳಗೆ G. word, term, notion	ಪದ, ಭಾವನೆ.]	ಪದ, ಭಾವನೆ].
480	**Gentle** ಕೆಳಗೆ **Gentleman** ಪದದಲ್ಲಿ G. at large	ಸ್ವತಂತ್ರ ಪುರುಷ.].	ಸ್ವತಂತ್ರ ಪುರುಷ].
483	**Get** ಕೆಳಗೆ G. the upper hand of a person	ಮೇಲ್ಕೈ ಆಗು	ಮೇಲ್ಗೈ ಆಗು
484	**Get.** ಕ್ರಿ.ವಿ. ಗಳೊಡನೆ G. on	ಏಳಿಗೆ ಹೊಂದು.]	ಏಳಿಗೆ ಹೊಂದು : [
485	**Ghoul**	ಪಿರಿತಿನಿ (ಗಾಂ.)	ಪಿರಿತಿನಿ (ಗ್ರಾಂ.)
,,	**Giant**	ಭೂಮ್ಯಧಿದೇವತೆಗೊ.	ಭೂಮ್ಯಧಿದೇವತೆಗೂ
489	**Gladstone** ಕೆಳಗೆ G. Claret	(ಹಾಸ್ಯ ಪ್ರ)	(ಹಾಸ್ಯ ಪ್ರ.)
495	**Go** ಕೆಳಗೆ Go it (ಅನಂ.)	ವ್ಯಭಿಚಾರದಲ್ಲಿ, ದುರ್ವ್ಯಸನಗಳಲ್ಲಿ – ಲೋಲುಪನಾಗು.	ವ್ಯಭಿಚಾರದಲ್ಲಿ, ದುರ್ವ್ಯಸನಗಳಲ್ಲಿ,— ಲೋಲುಪನಾಗು.
496	**Goat** ಕೆಳಗೆ **Goatskin**	ಆಡಿನ ಚರ್ಮದಿಂದ ಮಾಡಿದ	ಆಡಿನ ಚರ್ಮ(ದಿಂದ ಮಾಡಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುಟ	ಪದ	ತಪ್ಪು	ಒಪ್ಪು
497	**God** ಕೆಳಗೆ **Godless**	ದೇವರಿಲ್ಲದ:	ದೇವರಿಲ್ಲದ;
498	**Gold**	**Gódlen**	**Góldeu**
500	**Good** ಕೆಳಗೆ **Good sense**	ವ್ಯಾವಹಾರಿಕ ಬುದ್ಧಿ	ವ್ಯಾವಹಾರಿಕ ಬುದ್ಧಿ.
505	**Grain**	**Grainless**	**Graínless**
,,	,,	**Gránulo** —(ಸ. ಪೂ. ಪ.)	**Granulo** —(ಸ. ಪೂ. ಪ.)
506	**Grand** (ನಾ.)	ಪಿಯಾನೋವಾದ್ಯ.)	ಪಿಯಾನೋ ವಾದ್ಯ)
512	**Grey**	ಮದ್ಯಸ್ಥವಾದ	ಮಧ್ಯಸ್ಥವಾದ
,,	,,	ವೃದ್ಧಾಪ್ಯದ ಒಳ್ಳೆಯ ಅನುಭವವುಳ್ಳ;	ವೃದ್ಧಾಪ್ಯದ; ಒಳ್ಳೆಯ ಅನುಭವವುಳ್ಳ;
512	**Grill**[1]	ಸರಳು ಚೌಕಟ್ಟಿನ ಮೇಲೆ ಸುಡು (ಸ.ಕ., ಅ. ಕ. ಸಹ)	ಸರಳು ಚೌಕಟ್ಟಿನಮೇಲೆ ಸುಡು.
514	**Grizzled** ಕೆಳಗೆ **Grizzly** ಪದದಲ್ಲಿ G. bear	ಬೂದು ಕರಡಿ)	ಬೂದು ಕರಡಿ).
515	**Ground** (ಕ್ರಿ.)	ಸಾಪಿಸು, ...	ಸ್ಥಾಪಿಸು,
521	**Gut**	ಸ್ತತ್ವ.	ಸತ್ತ್ವ.
525	**Hail**[2]	(ಹಡಗು, ಮನುಷ್ಯ, ಮೊ. ನ್ನು ಗಮನ ಸೆಳೆಯುವ ಕೂಗು); —ಸೆಳೆಯಲು ಕೂಗುಹಾಕು.	(ಹಡಗು, ಮನುಷ್ಯ, ಮೊ. ನ್ನು ಗಮನ ಸಳೆಯಲು) ಹೋಯ್ ಎಂದು ಕೂಗುಹಾಕು.
526	**Half** ಕೆಳಗೆ **H.-witted**	ಶೂನ್ಯ ಬುದ್ಧಿಯ.	ಶೂನ್ಯ ಬುದ್ಧಿಯ.
530	**Hang** ಕೆಳಗೆ **Hanger**[1]	ನೆಲವು.	ನೆಲುವು.
534	**Haughty**	ಅಹಂಕಾರದ:	ಅಹಂಕಾರದ;
548	**High** ಕೆಳಗೆ **H. Church**	ಪ್ರಾಧಾಥ್ಯ ಕೊಡುವ	ಪ್ರಾಧಾನ್ಯ ಕೊಡುವ
581	**Importune**	ಬೇಡಿಕೊ	ಬೇಡಿಕೊ;
583	**Impulse**	ನಿರ್ಧಿಷ್ಟವಾದ	ನಿರ್ದಿಷ್ಟವಾದ
586	**Incentive**	**íncéntive**	**Incéntive**
592	**Indigestion**	**Indigestibílity** (ನಾ.)	**Indigestibílity** (ನಾ.);
628	**Jove**	ದೇವರಾಣೆ !)	ದೇವರಾಣೆ !).
658	**Leave**[2] ಕೆಳಗೆ L. the track	ತಪ್ಪು.	ತಪ್ಪು.
666	**Liberal**	ಸಭ್ಯನಿಗೆ ಯೋಗ್ಯವಾದ	ಸಭ್ಯನಿಗೆ,—ಯೋಗ್ಯವಾದ
672	**Like** ಕೆಳಗೆ **Liken**	ನಿರಂಕುಶ ಪ್ರಭುತ್ವದಂತೆ ಮಾಡುತ್ತದೆ.	ನಿರಂಕುಶ ಪ್ರಭುತ್ವದಂತೆ ಮಾಡುತ್ತದೆ).
676	**Lip** (ಕ್ರಿ.)	(ನೀರಿನ ವಿಷಯದಲ್ಲ) ಸೋಕು.	(ನೀರಿನ ವಿಷಯದಲ್ಲಿ) ಸೋಕು,
677	**List**[3]	(ಹಡಗು—ತೂತು ಬಿದ್ದು, ಸಾಮಾನು ಜರಗಿ,	(ಹಡಗಿನ ವಿಷಯದಲ್ಲಿ; ತೂತುಬಿದ್ದು, ಸಾಮಾನು ಜರಗಿ,
682	**Local**[1] ಕೆಳಗೆ L. Government	ಸ್ಥಳೀಯ ಸರ್ಕಾರ, ಆಡಳಿತ	ಸ್ಥಳೀಯ—ಸರ್ಕಾರ, ಆಡಳಿತ.
690	**Lord** ಕೆಳಗೆ L. Lieutenant	ಮತ್ತು ದಂಡಾಧ್ಯಕ್ಷ	ಮತ್ತು ದಂಡಾಧ್ಯಕ್ಷ]
694	**Luck** ಕೆಳಗೆ **Luckily**	ಅದೃಷ್ಟವಶದಿಂದ (ವಿರ.ಪ್ರ.)	ಅದೃಷ್ಟ ವಶದಿಂದ (ವಿರ. ಪ್ರ.);
695	**Lunar**	ಕ್ಷೀಣ ಬಾಲಚಂದ್ರಾಕೃತಿಯ	ಕ್ಷೀಣ. ಬಾಲಚಂದ್ರಾಕೃತಿಯ
696	**Lunisolar** ಕೆಳಗೆ L. Year	ಕಾಲಾವಧಿಯ	ಕಾಲಾವಧಿಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುಟ	ಪದ	ತಪ್ಪು	ಒಪ್ಪು
701	**Maid**	ಹೆಣ್ಣಾಳು. (=Maidservant)	ಹೆಣ್ಣಾಳು (=Maidservant)
	Maid ಕೆಳಗೆ **Maiden**	=Maid ;	=Maid ; (ಕ್ರಿಕೆಟ್ ಆಟ) ಒಂದು ಓಟವನ್ನೂ ಕೊಟ್ಟಿಲ್ಲದ ಚೆಂಡೆಸತದ ಸರದಿ (=M. over).
	Maiden (ಗು.)	=M. over. (ಹೆಣ್ಣುಪ್ರಾಣಿಯ ವಿಷಯದಲ್ಲ)	(ಹೆಣ್ಣುಪ್ರಾಣಿಯ ವಿಷಯದಲ್ಲಿ)
702	**Main**^{2}	(........ಆಟದಲ್ಲ).	(........ಆಟದಲ್ಲಿ)
703	**Malachite**	ಇಂಗಾರಾಮ್ಸ ಲವಣ	ಇಂಗಾರಾಮ್ಲ ಲವಣ
707	**Mangel**	ಮ್ಯಾಂಗೊಲ್ಡ್=(ನಾ.)	ಮ್ಯಾಂಗೊಲ್ಡ್ (ನಾ.)
722	**Mellow**	ಜೇಡಿನಿಂದಲೂ	ಜೇಡಿಯಿಂದಲೂ
725	**Meridian** ಕೆಳಗೆ **Meridional**	ದ. ಯೂರೋಪಿನ (ನಿವಾಸಿಗಳ).	ದ. ಯೂರೋಪಿನ (ನಿವಾಸಿಗಳ).
731	**Milanese**	**Milánese**	**Milanése**
„	**Mile** ಕೆಳಗೆ **Milage**	ಥತ್ಯ (ಥತ್ತೆ)	ಥತ್ಯ (ಥತ್ತ)
731	**Milk**	ಸಸ್ಯಕ್ಷೀರ	ಸಸ್ಯಕ್ಷೀರ.
739	**Mitre**	ಉದ್ದಟೋಪಿ. [**Mitred**	ಉದ್ದ ಟೋಪಿ [**Mitred**
743	**Monad**	(........ತತ್ತ್ವಶಾಸ್ತ್ರದಲ್ಲಿ). [**Monadism.**	(........ತತ್ತ್ವ ಶಾಸ್ತ್ರದಲ್ಲಿ) [**Monadism**
747	**Moor**^{2}	ಅರಬ್ಬಿ ಜಾತಿಗಳ	ಆರಬ್ಬೀ ಜಾತಿಗಳ
762	**Napoleon**	=nap^3 (ಇಸ್ಪೀಟಾಟ).	=Nap^3 (ಇಸ್ಪೀಟಾಟ).
771	**Neur(o)**—ಕೆಳಗೆ **Neurine**	ನ್ಯೂರೈನ್ ನರದ್ರವ್ಯ.	(ನ್ಯೂರೈನ್) ನರದ್ರವ್ಯ.
	Neuritis	ಉರಿಯೂತ [Neuro-] :	ಉರಿಯೂತ. [Neuro-]:
790	**Object** ಕೆಳಗೆ **Objective**	(ವೈ.ಶಾ.) ರೋಗಲಕ್ಷಣಗಳ ವಿಷಯದಲ್ಲಿ	(ವೈ.ಶಾ.) (ರೋಗ ಲಕ್ಷಣಗಳ ವಿಷಯದಲ್ಲಿ)
796	**Odd** ಕೆಳಗೆ O.-come-shortly.	ಸಮೀಪ ದಿನಗಳಲ್ಲೊಂದು	ಸಮೀಪ ದಿನಗಳಲ್ಲೊಂದು).
805	**Onymous**	ಹೆಸರಿರುವ	ಹೆಸರಿರುವ ;
817	**Out** ಕೆಳಗೆ **Outer**	ಮಾನಸಿಕ ಅಥವಾ ಆಧ್ಯಾತ್ಮಿಕ, ಅಲ್ಲದ ;	ಮಾನಸಿಕ, ಆಧ್ಯಾತ್ಮಿಕ,—ಅಲ್ಲದ ;
853	**Penetrate**	(........through, to ಉಪ. ದೊಡನೆ)	(........through, to ಉಪ. ದೊಡನೆ).
854	**Penny**	A p. plain & two pence coloured	A p. plain & twopence coloured
„	**Penta-** ಕೆಳಗೆ **Pentachord**	(ಸಂಗೀತ)ಾವದ್ಯ ;	(ಸಂಗೀತ)ವಾದ್ಯ ;
881	**Plant** ಕೆಳಗೆ **Plantation**	ಭೂಸ್ವಾಸ್ಥ	ಭೂಸ್ವಾಸ್ಥ್ಯ
896	**Pomander**	ಸೋಂಕು (ಸೋಂಕಿನ)	ಸೋಂಕು
„	**Pomology** ಕೆಳಗೆ **Pomological**	ಪೋವೊರಾ—(ಗು.)	ಪೋವೊರಾ—(ಗು.) ;
897	**Pope**^{1} ಕೆಳಗೆ **Popery**	(ವಿಧರ್ಮಿಗಳ ಪ್ರ.) **Pópish**	(ವಿಧರ್ಮಿಗಳ ಪ್ರ.). **Pópish**
935	**Prostrate**	(Had laid the Whig party p.) ಪ್ರತಿರ್ಸುಸು	(Had laid the whig party p.). ಪ್ರತಿರ್ಸುಸ್ತು
959	**Quest** (ಕ್ರಿ.)	ಹುಡುಕಾಡು (*About* ಉಪ)	ಹುಡುಕಾಡು (*About*
962	**Quit**	ಬಿಡ ಗಡೆ	ಬಿಡುಗಡೆ
977	**Ravish**	(ಕ್ರಿ ಸಕ.)	(ಕ್ರಿ. ಸಕ.)
993	**Reel**^{1}	ಶೀಘ್ರ ಪರಂಪರೆಯಲ್ಲ]	ಶೀಘ್ರ ಪರಂಪರೆಯಲ್ಲಿ].
1000	**Relax** ಕೆಳಗೆ **Relaxation**	ವಿನೋದಗಳು ಬಗಿತ,	ವಿನೋದಗಳು. ಬಗಿತ,

D

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುಟ	ಪದ	ತಪ್ಪು	ಒಪ್ಪು
1011	**Reserve** (ಪಂಕ್ತಿ 33)	ಬಹ ಮಾನ	ಬಹುಮಾನ
1017	**Reticulate**	**Reticulately**	**Retículately**
1021	**Revolution**	ಇದಕೆ	ಇದಕ್ಕೆ
1022	**Rex**	ದೊರೆ ರಾಜ	ದೊರೆ, ರಾಜ
1027	**Right**	(R. Whale)	(R. whale).
1032	**Roadstead**	**Roádsted**	**Roádstead**
1033	**Robust**	(ವ್ಯಾಯಾಮ, ವೊ ಪು)	(ವ್ಯಾಯಾಮ, ವೊ. ಪು)
1038	**Rose**[1] (ಪಂಕ್ತಿ 22)	ಮಾಟ ಪಾದರಕ್ಷೆಯ	ಮಾಟ. ಪಾದರಕ್ಷೆಯ
1041	**Rough** ಕೆಳಗೆ R. tongue	ಮಾತನಾಡುವ ಅಭ್ಯಾಸ.	ಮಾತನಾಡುವ, ಅಭ್ಯಾಸ.
1946	**Ruff**[1]	(ಅಥವಾ ಪ್ರಾಣಿಯ ವಿಷಯದಲ್ಲಿ)	(ಅಥವಾ ಪ್ರಾಣಿಯ ವಿಷಯದಲ್ಲ)
1055	**Sacrament** ಕೆಳಗೆ Take, receive, the s. to do *or* upon.	(ವಾಗ್ದಾನವನ್ನು. ಶಪಥವನ್ನು,	(ವಾಗ್ದಾನವನ್ನು, ಶಪಥವನ್ನು,
1061	**Salt** ಕೆಳಗೆ (ಗು)	(ಸಸ್ಯಗಳ ವಿಷಯದಲ್ಲಿ)	(ಸಸ್ಯಗಳ ವಿಷಯದಲ್ಲ)
1662	**Salute** (ಪಂಕ್ತಿ 12)	ತೋಫು	ತೋಪು
1070	**Sauce** (ಕ್ರಿ.) (ಪಂಕ್ತಿ 4)	-ರುಚಿಕಟ್ಟು. ತಯಾರಿಸು.	-ರುಚಿಕಟ್ಟು, ತಯಾರಿಸು.
1070	**Save**[1] ಕೆಳಗೆ Stitch in time saves nine.	ಶ್ರಮ ಉಳಿದೀತು]	....ಶ್ರಮ ಉಳಿದೀತು].
1075	**Scarlet** ಕೆಳಗೆ **S. hat**	ಟೊಪ್ಪಿಗ;	ಟೊಪ್ಪಿಗೆ ;
1090	**Sea** ಕೆಳಗೆ **S. urchin**	........ಸಸ್ಯ.	........ಪ್ರಾಣಿ.
1094	**Secret** ಕೆಳಗೆ S. service	S.-s. money	S.-service money
1095	**Sect** ಕೆಳಗೆ **Sectarianize**	ಪಂಥಾಭಿಮಾನದಿಂದ ವರ್ತಿಸು;	ಪಂಥಾಭಿಮಾನದಿಂದ ವರ್ತಿಸು.
1099	**Select**	ಸಿಲೆಕ್ಟ್	ಸಿಲೆಕ್ಟ್
1119	**Sex** ಕೆಳಗೆ **Sex(i)valent**	ಸಂಯೋಜಕ ಶಕ್ತಿಯುಳ್ಳ	ಸಂಯೋಗ ಶಕ್ತಿಯುಳ್ಳ
1126	**Shelter** ಕೆಳಗೆ Sheltered trades	....ಒಳನಾಡ ಸಾಮಾನು ಸಾಗಣೆ, ವೊ.ಪು]	....ಒಳನಾಡ ಸಾಮಾನು ಸಾಗಣೆ, ವೊ. ಪು)]
1127	(Catch-words)	**Rheppy, Rhilling**	**Sheppy, Shilling**
1130	**Shogun** ಕೆಳಗೆ **Shogunate**	ಷೋಗುನ್ (ನಾ.) —ಅಧಿಕಾರ,	(ನಾ.) ಷೋಗುನ್ —ಅಧಿಕಾರ,
1139	**Side** ಕೆಳಗೆ **S. wind**	Which by as-w. reflected	which by a s.-w. reflected
1147	**Sink** (ನಾ.) (ಪಂಕ್ತಿ 7)	ಬುತ್ತಿಹೋಗುವ,	ಬತ್ತಿಹೋಗುವ,
1147	**Sinn Fein**	ಉದ್ದೆಥ	ಉದ್ದೇಶ
	,,	ಆರಂಂವಾದ	ಆರಂಭವಾದ
1151	**Sketch** (ಪಂಕ್ತಿ 1)	ಮುಂಗುರಿತಿನ	ಮುಂಗುರುತಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುಟ	ಪದ	ತಪ್ಪು	ಒಪ್ಪು
1151	**Skew** ಕೆಳಗೆ Skewbald	piebald ಪದ ಪ್ರ.)	piebald ಪದ ಪ್ರ.).
1151	**Skid**	ತಡೆ—ಮರ ತುಂಡು	ತಡೆ— ಮರ, ತುಂಡು
1154	**Slap** ಕೆಳಗೆ **Slapdash** (ಕ್ರಿ.ವಿ.)	ಸಾಕಷ್ಟು (ಆಲೋಚನೆ,	(ಸಾಕಷ್ಟು ಆಲೋಚನೆ
1182	**Soviet** ಕೆಳಗೆ Union of Soviet Socialist Republics.	ರಷ್ಯದ ಮಹಾಕ್ರಾಂತಿಯ ತರುವಾಯದ ಸಂಸ್ಥಷ್ಟಿ ಸರಕಾರ ; ಸೋವಿಯೆಟ್ ರಷ್ಯ.	ರಷ್ಯದ ಮಹಾಕ್ರಾಂತಿಯ ತರುವಾಯದ ಸಂಸೃಷ್ಟಿ ಸರಕಾರ ; ಸೋವಿಯೆಟ್ ರಷ್ಯ.
1187	**Specific** ಕೆಳಗೆ A Style s. to that school of painters	ಆವರ್ಣ ಚಿತ್ರಕಾರರ	ಆ ವರ್ಣ ಚಿತ್ರಕಾರರ
1195	**Splendid** ಕೆಳಗೆ Sun in s.	(ವಂಶಲಾಂಥನದಲ್ಲ).	(ವಂಶಲಾಂಛನದಲ್ಲಿ)
1198	**Spoon**[2] (ಕ್ರಿ.)	ಪೆದ್ದುಪೆದ್ದಾಗಿ ಪ್ರಣಯ ; ತೋರು	ಪೆದ್ದುಪೆದ್ದಾಗಿ ಪ್ರಣಯತೋರು ;
1201	**Sprout** (ನಾ.)	ಚಿಗುರು	ಚಿಗುರು,
1204	**Squeeze** ಕೆಳಗೆ Squeezed orange	ನಿಸ್ಸಾರವಾಗಿ ಹೋದ ವ್ಯಕ್ತಿ,	ನಿಸ್ಸಾರವಾಗಿಹೋದ ವ್ಯಕ್ತಿ,
1205	**Squill**	ವಿರೇಚಕ, ಮೊ. = ಉಪಯೋಗವಾಗುವ)	ವಿರೇಚಕ, ಮೊ. ಗಿ ಉಪಯೋಗವಾಗುವ)
1213	(Catch-word)	**Stat**	**State**
1221	**Stick**	(ಭಳ. ಮಾ.) (ಒಂದು ಗೊತ್ತಾದ ಸ್ಥಳದಲ್ಲ, ರೀತಿಯಲ್ಲ) ಇಡ,	(ಬಳ. ಮಾ.) (ಒಂದು ಗೊತ್ತಾದ ಸ್ಥಳದಲ್ಲಿ, ರೀತಿಯಲ್ಲಿ) ಇಡು,
1231	**Storm** ಕೆಳಗೆ **S.-card**	ಅದರ ಳಿವಳಿಕೆಯಿಂದ	ಅದರ ತಿಳಿವಳಿಕೆಯಿಂದ
1231	**Story**[2]	(ಒಂದು ಘಟನೆ, ಮೊ. ಗಳ) ಕಥನ,	(ಒಂದು ಘಟನೆ, ಮೊ.ಗಳ) ಕಥನ,
1232	**Story**[2] ಕೆಳಗೆ That face must have a s. belonging to it	ಆ ಮು ಕ್ಕೆ	ಆ ಮುಖಕ್ಕೆ
1233	**Strain** (ನಾ.) ಕೆಳಗೆ Is suffering from (over-)s	ಮಿತಿಮೀರಿದ ದು ತದಿಂದ,	ಮಿತಿಮೀರಿದ ದುಡಿತದಿಂದ,
1234	**Strange** ಕೆಳಗೆ It feels s.	ಅದೊಂದು ಹೊಸ ವಿಚಿತ್ರ, —ಅನುಥವ.	ಅದೊಂದು ಹೊಸ, ವಿಚಿತ್ರ,—ಅನುಭವ
1255	**Sulk** ಕೆಳಗೆ **Sulky**	(Sulk ಪದದ ನಾಮವಾಚಕಾರ್ಥಗಳಲ್ಲ),	(Sulk ಪದದ ನಾಮವಾಚಕಾರ್ಥಗಳಲ್ಲಿ).
1266	**Swallow**[1]	(Wills. anything you tell him) ;	(Will s. anything you tell him) ;
1278	**Table** (ಪಂಕ್ತಿ 2)	ಹಲಗೆ ರಹ	ಹಲಗೆ ಬರಹ
1281	**Taj**	ಚೊಪ್ಪರ, ತಾಜಮಹಲು	ಚೊಪ್ಪರ. ತಾಜಮಹಲು
1283	**Take** ಕೆಳಗೆ T.-off (ನಾ.)	(ವ್ಯಂಗ್ಯ,	ವ್ಯಂಗ್ಯ,
1295	**Tell** ಕೆಳಗೆ **Teller**	ಮತಗಣಕ	ಮತಗಣಕ.
1298	**Tend**[1] ಕೆಳಗೆ **Téndency, Tendentious**	ಟೆಂಡೆನ್ಸಿ (ಒಂದರ ಕಡೆಗೆ, ಟೆಂಡೆನ್ಷಷ್ (ಬರೆವಣಿಗೆ, ಮೊ. ವು)	ಟೆಂಡೆನ್ಸಿ (ನಾ.) (ಒಂದರ ಕಡೆಗೆ, ಟೆಂಡೆನ್ಷಸ್ (ಗು.) (ಬರೆವಣಿಗೆ, ಮೊ. ವು)
1301	**Terrace**	T.-gardne	T. -garden
1305 -06	**That** ಕೆಳಗೆ Had t. in his eye which forbade further trifling.	....ತಡೆಯಬಲ್ಲ ನೋಟ) ಅವನ ಕಣ್ಣಿನಲ್ಲಿತ್ತು.	....ತಡೆಯಬಲ್ಲ ನೋಟ ಅವರ ಕಣ್ಣಿನಲ್ಲಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುಟ	ಪದ	ತಪ್ಪು	ಒಪ್ಪು
1307	**Thence** ಕೆಳಗೆ	(It would t ; follow	(It would t. follow
1310	**Thing** Things Japanese, political, feminine	ಜಪಾನು ಸಾಮಾನುಗಳು ರಾಜಕೀಯ ವಿಷಯಗಳು,	ಜಪಾನು ಸಾಮಾನುಗಳು, ರಾಜಕೀಯ ವಿಷಯು ಗಳು,
1319	**Tidy** ಕೆಳಗೆ Toilet. -t.	ಬಾಚಣಿಗೆ ಪೆಟ್ಟಿಗೆ	ಬಾಚಣಿಗೆ ಪೆಟ್ಟಿಗೆ
1323	**Tinkle**	(ಗತ್ರಪ್ರ.) = Tingle.	(ಗತ ಪ್ರ.) = Tingle.
1328	**Tomtom**	ಡಂಗುರ ಟಾಂ ಟಾಂ	ಡಂಗುರ, ಟಾಂಟಾಂ
1328	**-tomy**	(ಮು., ಶಸ್ತ್ರ ಚಿಕಿತ್ಸಾ ಪದಗಳಲ್ಲಿ ಪ್ರ.	(ಮು., ಶಸ್ತ್ರ ಚಿಕಿತ್ಸಾಪದಗಳಲ್ಲಿ ಪ್ರ.)
1342	**Trans-**	ಟ್ರಾನ್ಸ್—, ಟ್ರಾನ್ಸ್ (ಸ.ಪೂ.ಪ.)	ಟ್ರಾನ್ಸ್—, ಟ್ರಾನ್ಸ್—(ಸ.ಪೂ.ಪ.)
1345	**Transmute** ಕೆಳಗೆ **Transmutation**	ಮತ್ತೊಂದು ಕಾಯವನ್ನಾಗಿ ಮಾರ್ಪಡಿ ಸುವುದು :	ಮತ್ತೊಂದು ಕಾಯವನ್ನಾಗಿ, ಮಾರ್ಪಡಿಸುವುದು :
1346	**Trap**[1]	ಗ ರಿಸಿಡಿ, ...	ಗುರಿಸಿಡಿ
1354	**Trick** ಕೆಳಗೆ Won the t.	ಪಟ್ಟು ಗೆದ್ದನು	ಪಟ್ಟು ಗೆದ್ದನು.
1356	**Trim** (ಪಂಕ್ತಿ 12)	....ದೋಣಿ. ಮೊ. ನ್ನು)	....ದೋಣಿ, ಮೊ. ನ್ನು)
1356	**Trip**	ಪ್ರಯಾಣ ಪ್ರವಾಸ	ಪ್ರಯಾಣ, ಪ್ರವಾಸ
1357	**Tripod**	ಮೂರು ಕಾಲಿನ ಬಟ್ಟಲು ತ್ರಿಪಾದಿ ಬಟ್ಟಲು.	ಮೂರು ಕಾಲಿನ ಬಟ್ಟಲು : ತ್ರಿಪಾದಿ ಬಟ್ಟಲು.
1362	**Trump** ಕೆಳಗೆ A call for trumps	ತುರುಪು ಇಳಿಯುವಂತೆ	ತುರುಫು ಇಳಿಯುವಂತೆ
1365	**Tuft** (ಕ್ರಿ.)	—ಇಡು, ಅಳವಡಿಸು	—ಇಡು, ಅಳವಡಿಸು ;
1366	**Tuism**	್ಯುಇಷ್ಟಂ (ನಾ.)	ಟ್ಯುಇಷ್ಟಂ (ನಾ.)
1366	**Tumble** (ಪಂಕ್ತಿ 12)	ಹೊಡೆದು, ಗುಂಡು ಹಾರಿ --ಕೆಡವು ;	ಹೊಡೆದು, ಗುಂಡು ಹಾರಿಸಿ, —ಕೆಡವು ;
1367	**Tunic** ಕೆಳಗೆ **Tunicate**	ಚರ್ಮಕವಚ	ಚರ್ಮಕವಚ,
1367	**Turban**	ಮುಂಡಾಸ , ...	ಮುಂಡಾಸು,
1370	**Turn** (ನಾ.)	ಸುತ್ತು(ವಿಕೆ), ತಿರುಗ (ವಿಕೆ)	ಸುತ್ತು(ವಿಕೆ), ತಿರುಗು(ವಿಕೆ)
1392	**Unkempt**	ಎಚ್ಚರಿಕೆ ತಪ್ಪಿದ ಒರಟಾದ, ...	ಎಚ್ಚರಿಕೆ ತಪ್ಪಿದ, ಒರಟಾದ,
1401	**Vantage**	(=Advantage ಸಮ ಆಟವಾದಮೇಲೆ ಗೆದ್ದ ಗೆಲ್ಲಂಕ ಅಥವಾ ಆಟ	(=Advantage ಸಮ ಆಟವಾದ ಮೇಲೆ ಗೆದ್ದ ಗೆಲ್ಲಂಕ ಅಥವಾ ಆಟ
1402	**Varlet**	ನೈಟ್ ವೀರನ ಅನುಚರ	ನೈಟ್ ವೀರನ ಅನುಚರ.
1406	**Venal**	ಲಂಚಕೊಳ್ಳಾಗುವ	ಲಂಚಕ್ಕೊಳಗಾಗುವ
1407	**Venous**	ನರಗಳುಳ್ಳ	ನರಗಳುಳ್ಳ,
1409	**Vermian** ಕೆಳಗೆ **Vermiculation**	ತರಂಗ ರೇಖಾಂಕತನ.	ತರಂಗ ರೇಖಾಂಕನ.
1411	**Vertex**	(ಜ್ಯಾ.) (ತ್ರಿಕೋನ, ಬಹುಭುಜ	(ಜ್ಯಾ). (ತ್ರಿಕೋನ, ಬಹುಭುಜ,
1411	**Very**[1] ಕೆಳಗೆ : Must consent from v. shame	ಅಪಕೀರ್ತಿ ಭಯದಿಂದಲಾದರೂ ಒಪ್ಪಬೇಕು	ಅಪಕೀರ್ತಿಭಯದಿಂದಲಾದರೂ, ಒಪ್ಪಬೇಕು
1415	**View** ಕೆಳಗೆ (v. finder ಪದದ ತರುವಾಯ)	. **halloo**	**v. halloo**
1418	**Virtue** ಕೆಳಗೆ **Virtual** v. velocity	ಅತ ಲ್ಪ ಚಲನೆ, ಸ್ಥಾನಾಂತರ :	ಅತ್ಯಲ್ಪ ಚಲನೆ, ಸ್ಥಾನಾಂತರ :
1443	**Weld**[2]	(ರೂಪ.) (ಆರಂಭಿಗರು	(ರೂಪ.) (ಆರಂಭಿಗರು,
1463	**Wondrous**	(ಕ್ರಿ.ವಿ.) ; Wonderfully	(ಕ್ರಿ. ವಿ.) = Wonderfully
1472	**Y**	ವೈ.	**Y ವೈ.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುಟ	ಪದ	ತಪ್ಪು	ಒಪ್ಪು
1475	**You** ಕೆಳಗೆ **Yours**	ಯ (ಅ)ರ್ಸ್	ಯೂ(ಅ)ರ್ಸ್
1475	"	ನಿನ್ನವನ (ಳು, ರು),	ನಿನ್ನವನು(ಳು, ರು),
1477	**Zircon** ಕೆಳಗೆ **Zirconic**	(ಗು.) ; Z. acid	(ಗು.) Z.acid
1478	**Zygal**	ಸ್ಯೆಗರ್	ಜ್ಯೆಗರ್ .

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೈಸೂರು ವಿಶ್ವವಿದ್ಯಾನಿಲಯದ
ಇಂಗ್ಲಿಷ್–ಕನ್ನಡ ನಿಘಂಟು

THE MYSORE UNIVERSITY
ENGLISH-KANNADA DICTIONARY

A

A ಏ. ಇಂಗ್ಲಿಷ್ ವರ್ಣಮಾಲೆಯ ಮೊದಲನೆಯ ಅಕ್ಷರ. (ಗು.) ಒಂದು; ಒಬ್ಬ; ಒಂದಾನೊಂದು; ಒಬ್ಬಾನೊಬ್ಬ. (ಉಪ.) ಕಡೆಗೆ; ಮೇಲೆ (Ashore ದಡದ ಕಡೆಗೆ; Abed ಹಾಸಿಗೆಯ ಮೇಲೆ). ಅಲ್ಲಿ; ಇಂದ; ಕ್ಕೆ (Asleep ನಿದ್ದೆಯಲ್ಲಿ; Athirst ಬಾಯಾರಿಕೆಯಿಂದ; A-hunting ಬೇಟೆಯಾಡುವುದಕ್ಕೆ). (ಪೂ. ಪ್ರ.) ಅತಿಶಯಾರ್ಥಕ (Arise ಎದ್ದೇಳು). ನಿಷೇಧಾರ್ಥಕ (Atheist ಅದ್ವೈವಕ; ನಾಸ್ತಿಕ). ಬೇರೆ ಕಡೆಗೆ (Avert ಬೇರೆ ಕಡೆಗೆ ತಿರುಗಿಸು). (ಉ. ಪ್ರ.) ಸ್ತ್ರೀವಾಚಕ (Donna ಶ್ರೀಮಂತಳು). ನಪುಂಸಕ ಬಹುವಚನ ಸೂಚಕ (Data ಆಧಾರಗಳು)

ಸಂಕ್ಷಿಪ್ತಗಳು.—**A. D. C.** Aide-de-camp ಏಡ್ ಡ ಕಾಂಪ್: ಸೇನಾಧಿಕಾರಿ; ದೊರೆ ಮೊದಲಾದವರ ಸಮೀಪದಲ್ಲಿದ್ದುಕೊಂಡು ಅವರ ಆಜ್ಞೆಗಳನ್ನು ಒಯ್ಯುವ ಅಧಿಕಾರಿ. **A. D.** Anno Domini ಆ್ಯನೊ ಡಾಮಿನೈ: (ಸ್ವಾಮಿಯ ವರ್ಷ), ಕ್ರಿಸ್ತ ಶಕ. **A. H.** Anno Hegirae ಆ್ಯನೊ ಹೆಜಿರೀ: ಹಿಜರೀ ಶಕ. **A. M.** Ante Meridiem ಆ್ಯನ್ಟಿ ಮೆರಿಡಿಯೆಮ್: ಮಧ್ಯಾಹ್ನಕ್ಕೆ ಹಿಂದೆ; ಪೂರ್ವಾಹ್ಣ. **A. V.** Authorized Version ಆಥರೈಸ್ಡ್ ವರ್ಷನ್: (ಬೈಬಲ್ಲಿನ) ಪ್ರಮಾಣ ಪಾಠ. **A 1** ಏ ವನ್: (ಬಳ. ಮಾ.) ಮೇಲ್ತರದಲ್ಲಿ ಮೊದಲನೆಯದು; ಅತ್ಯುತ್ತಮ.

Abáck ಅಬ್ಯಾಕ್ (ಕ್ರಿ. ವಿ.) ಹಿಂದಕ್ಕೆ; ಹಿಂದುಗಡೆಗೆ. (ನಾವಿಕರ ಭಾಷೆಯಲ್ಲಿ) ಗಾಳಿಯು ಪಟಗಳನ್ನು ನೂಕಿ ಹಡಗನ್ನು ಹಿಂದಕ್ಕೆ (ತಳ್ಳು ವಾಗ). (ರೂಪ.) Taken aback ಬೆರಗಾಗಿ; ಬೆಚ್ಚಿ; ಚಕಿತನಾಗಿ.

A'bacus ಆ್ಯಬಕಸ್ (ನಾ.) ಮಕ್ಕಳಿಗೆ ಲೆಕ್ಕ ಕಲಿಸುವುದಕ್ಕಾಗಿ ಬಣ್ಣದ ಗುಂಡುಗಳನ್ನು ತಂತಿಯ ಮೇಲೆ ಓಡಾಡುವಂತೆ ಅಳವಡಿಸಿರುವ ಚೌಕಟ್ಟು: ಮಣಿ ಚೌಕಟ್ಟು.

Abáft ಅಬಾಫ್ಟ್ (ಕ್ರಿ. ವಿ.) ಹಡಗಿನ ಹಿಂಭಾಗದ ಕಡೆಗೆ.

Abándon ಅಬ್ಯಾನ್ಡನ್ (ಕ್ರಿ. ಸಕ.) ಕೈ ಬಿಡು; ತೊರೆದುಬಿಡು; ಪರಿತ್ಯಾಗ ಮಾಡು; ವರ್ಜಿಸು; ಮತ್ತೊಬ್ಬನ ಅಧೀನಕ್ಕಾಗಲಿ ದಯೆಗಾಗಲಿ ಬಿಟ್ಟುಬಿಡು; ಸ್ವಾಧೀನದಲ್ಲಿರುವುದನ್ನು ಬಿಟ್ಟುಬಿಡು. ತಲ್ಲೀನನಾಗು; ಪರವಶನಾಗು; ದುರ್ವ್ಯಸನಗಳಿಗಾಗಲಿ ಆವೇಶಕ್ಕಾಗಲಿ ಸಂಪೂರ್ಣವಾಗಿ ವಶಪಡು. (ನಾ.) ಸ್ವೇಚ್ಛೆ; ಇಷ್ಟಬಂದ ನಡತೆ; ನಿಶ್ಚಿಂತೆಯಾದ ಸ್ವಾತಂತ್ರ್ಯ. ನಿರರ್ಗಳವಾದ ಉತ್ಸಾಹ. **Abándoned** (ಗು.) ದುರಾಚಾರವುಳ್ಳ; ದುರ್ಮಾರ್ಗಿಯಾದ; ಕೆಟ್ಟುಹೋದ. **Abándonment** (ನಾ.) ಬಿಟ್ಟುಬಿಡುವುದು; ತೊರೆದುಬಿಡುವುದು; ಪರಿತ್ಯಾಗ. ತೊರೆಯಲ್ಪಡುವುದು. ತಾನಾಗಿ ಅಧೀನನಾಗುವುದು; ಆತ್ಮಾರ್ಪಣ. ನಿರ್ಲಕ್ಷ್ಯವಾದ ನಡತೆ; ಮನಸ್ಸು ಬಂದಂತೆ ನಡೆಯುವುದು.

Abáse ಅಬೇಸ್ (ಕ್ರಿ. ಸಕ.) ತಗ್ಗಿಸು; ಕೀಳ್ಮಾಡು; ಹೀನೈಸು; ತುಚ್ಛೀಕರಿಸು. **Abásement** (ನಾ.) ಕ್ಷೀಣಾಯ; ಹೀನಸ್ಥಿತಿ; ಕೀಳುದೆಸೆ.

Abásh ಅಬ್ಯಾಷ್ (ಕ್ರಿ. ಸಕ.) ಮುಖ ಮುರಿ; ಮುಖ ಕೆಡಿಸು; ನಾಚಿಸು. **Abáshed** (ಗು.) ಮುಖ ಮುರಿದ; ನಾಚಿದ. **Abáshment** (ನಾ.)

Abásk ಅಬಾಸ್ಕ್ (ಕ್ರಿ. ವಿ.) ಬಿಸಿಲು ಕಾಯಿಸಿಕೊಳ್ಳುತ್ತ.

Abáte ಅಬೇಟ್ (ಕ್ರಿ.) ಕಡಮೆ ಮಾಡು; ಕಡಮೆಯಾಗು; ತಗ್ಗಿಸು; ತಗ್ಗು; ಇಳಿಸು; ಇಳಿ. (ಕಾನೂನಿನಲ್ಲಿ) ರದ್ದುಮಾಡು. **Abáted** (ಗು.) ತಗ್ಗಿದ; ಕಡಮೆಯಾದ. **Abátement** (ನಾ.) ಕಡಮೆ ಮಾಡುವುದು; ಕಡಮೆಯಾಗುವುದು.

Abattoír (F) ಆಬಾಟ್ವಾರ್ (ನಾ.) ಪಶುಗಳನ್ನು ಆಹಾರಕ್ಕಾಗಿ ಕಡಿಯುವ ಮನೆ: ಕಸಾಯಿ ಖಾನೆ.

Abb ಆ್ಯಬ್ (ನಾ.) ನೇಯಿಗೆಯಲ್ಲಿ ಅಡ್ಡಳೆ: ಹೊಕ್ಕು.

A'bba ಆ್ಯಬ (ನಾ.) ಅಪ್ಪ; ತಂದೆ: (ದೇವರನ್ನು ಸಂಬೋಧಿಸುವಾಗ ಕ್ರೈಸ್ತರು ಹೇಳುವ ಮಾತು). ಕ್ರೈಸ್ತರ ಕೆಲವು ಪಂಗಡಗಳ ಮೇಲ್ದರ್ಜೆಯ ಮಠಾಧಿಕಾರಿಗಳ ಬಿರುದು.

A'bbacy }
Abbátial } **Abbot** ನೋಡಿ.

A'bbe ಆಬೇ (ನಾ.) Abbot ಎಂಬ ಇಂಗ್ಲಿಷ್ ಮಾತಿಗೆ ಫ್ರೆಂಚ್ ಭಾಷೆಯ ಪದ. (ಫ್ರಾನ್ಸ್ ದೇಶದಲ್ಲಿ, ಮಠಾಧಿಕಾರವಿರಲಿ ಇಲ್ಲದಿರಲಿ, ಕ್ರೈಸ್ತ ಮಠ ಸಂಬಂಧವಾದ ಉಡುಪನ್ನು ಧರಿಸುವ ಪ್ರತಿಯೊಬ್ಬನಿಗೂ ಸಲ್ಲುವ ಹೆಸರು)

A'bbess }
A'bbey } **Abbot** ನೋಡಿ.

A'bbot ಆ್ಯಬಟ್ (ನಾ.) ಕ್ರೈಸ್ತ ಮಠಾಧಿಪತಿ; ಕ್ರೈಸ್ತ ಸಂನ್ಯಾಸಿ ಸಂಘದ ಮುಖ್ಯಾಧಿಕಾರಿ. **A'bbotcy** (ನಾ.) = **A'bbotship** (ನಾ.) = **A'bbacy** ಆ್ಯಬಸಿ (ನಾ.) 'ಆ್ಯಬಟ್ಟ'ನ ಉದ್ಯೋಗ, ಅಧಿಕಾರ, ಅಧಿಕಾರ ಕಾಲ. **Abbátial** ಅಬೇಷಲ್ (ಗು.) 'ಆ್ಯಬಿ', 'ಆ್ಯಬಟ್' ಅಥವಾ 'ಆ್ಯಬೆಸ್'—ಇವರ. **A'bbess** ಆ್ಯಬೆಸ್ (ನಾ.) ಕ್ರೈಸ್ತ ಸಂನ್ಯಾಸಿನಿಯರ ಮಠದ ಅಧಿಕಾರಿಣಿ. **A'bbey** ಆ್ಯಬಿ (ನಾ.) 'ಆ್ಯಬಟ್' ಅಥವಾ 'ಆ್ಯಬೆಸ್' ಎಂಬ ಅಧಿಕಾರಿಯ ವಿಚಾರಣೆಗೊಳಪಟ್ಟ ಕ್ರೈಸ್ತ ಮಠ; ಅಂಥ ಸಂನ್ಯಾಸಿ ಸಂಘ.

Abbréviate ಅಬ್ರೀವಿಯೇಟ್ (ಕ್ರಿ. ಸಕ.) ಹ್ರಸ್ವ ಮಾಡು; ಸಂಗ್ರಹ ಮಾಡು; ಸಂಕ್ಷೇಪಿಸು. ಸಂಕೇತಾಕ್ಷರವಾಗಿ ಬರೆ (ಉದಾ.—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೀ॥ = ತೀರ್ಥರೂಪು ; **A. D.** = Anno Domini). **Abbreviátion** (ನಾ.) ಸಂಕ್ಷೇಪ ಮಾಡುವುದು. ಸಂಕ್ಷೇಪ ; ಸಂಗ್ರಹ ; ಸಂಕೇತಾಕ್ಷರ. **Abbréviate** ಅಬ್ರೀವಿಯೆಟ್ (ಗು.) (ತಾರತಮ್ಯದೃಷ್ಟಿಯಿಂದ) ಮೊಟಕಾದ, ಹ್ರಸ್ವವಾದ (ಮು., ಜೀ. ವಿ.)

A B C ಏ ಬೀ ಸೀ (ನಾ.) (ಇಂಗ್ಲಿಷ್ ವರ್ಣಮಾಲೆಯ ಮೊದಲನೆಯ ಮೂರಕ್ಷರಗಳು). ವರ್ಣಮಾಲೆ ; ಓನಾಮ (A B C Railway Guide ವರ್ಣಮಾಲೆಯ ಕ್ರಮದಲ್ಲಿ ಹೆಸರುಗಳನ್ನು ಬರೆದಿರುವ ರೈಲು ಮಾರ್ಗದರ್ಶಿನಿ). ವರ್ಣಮಾಲೆಯ ಪುಸ್ತಕ ; ಅಕ್ಷರ ಶಿಕ್ಷೆ ; ಬಾಲ ಶಿಕ್ಷೆ ; ಮೂಲ ಪಾಠ (He does not know the A B C of the subject ಆ ವಿಷಯದ ಓನಾಮ ಸಹ ಆತನಿಗೆ ತಿಳಿಯದು). **ABCDárian, A'becedárian** ಏಬಿಸೀಡೇರಿಯನ್ (ಗು., ನಾ.) ವರ್ಣಮಾಲೆಗೆ ಸಂಬಂಧಪಟ್ಟ ; ವರ್ಣ (ಅಕ್ಷರ) ಕ್ರಮದಲ್ಲಿ ಯೋಜಿಸಿದ. ಆರಂಭ ದೆಸೆಯಲ್ಲಿರುವ ; ಅರಿವಿಲ್ಲದ. ಓನಾಮ ಕಲಿತುಕೊಳ್ಳುತ್ತಿರುವವನು.

A'bdicate ಆ್ಯಬ್ಡಿಕೇಟ್ (ಕ್ರಿ. ಸಕ.) ತೊರೆದುಬಿಡು ; ಬಿಟ್ಟುಕೊಡು ; ತ್ಯಜಿಸು. (ಅಧಿಕಾರವನ್ನಾಗಲಿ, ಹಕ್ಕು ಬಾಧ್ಯತೆಯನ್ನಾಗಲಿ) ವಿಧಿಗನುಸಾರವಾಗಿ ಬಿಟ್ಟುಬಿಡು. ದೊರೆತನವನ್ನು ಬಿಟ್ಟುಬಿಡು. ಅಧಿಕಾರ ತಪ್ಪಿಸು ; ಪದಚ್ಯುತನನ್ನಾಗಿ ಮಾಡು. **A'bdicated** (ಗು.) ವಿಧಿಗನುಸಾರವಾಗಿ ತ್ಯಜಿಸಿಬಿಟ್ಟ ; ಪದಚ್ಯುತನನ್ನಾಗಿ ಮಾಡಿದ ; ತಾನಾಗಿ ಪದಚ್ಯುತನಾದ. **Abdicátion** (ನಾ.) ತೊರೆಹ ; (ಅಧಿಕಾರ, ಹಕ್ಕು ಬಾಧ್ಯತೆ, ಮೊ. ಗಳ) ವಿಧಿಗನುಸಾರವಾದ ಪರಿತ್ಯಾಗ ; ರಾಜ್ಯತ್ಯಾಗ.

Abdómen ಆ್ಯಬ್ಡೋಮೆನ್ (ನಾ.) ಹೊಟ್ಟೆ ; ಮುಂಡದ ಕೆಳ ಅರ್ಧ ಭಾಗ ; ಜಠರ, ಕರುಳು, ಮೊ. ಜೀರ್ಣಾಂಗಗಳಿರುವ ಮುಂಡದ ಭಾಗ. (ವೈ. ಶಾ.) ವಸ್ತಿ. ಜೇಡರ ಹುಳು, ಮೊ. ಕೀಟಗಳ ದೇಹದ ಹಿಂಭಾಗ. **Abdóminal** ಆ್ಯಬ್ಡಾಮಿನಲ್ (ಗು.) ಹೊಟ್ಟೆಯ ; ಹೊಟ್ಟೆಗೆ ಸಂಬಂಧಪಟ್ಟ. (ಮೀನಿನ ವಿಷಯದಲ್ಲಿ) ಹೊಟ್ಟೆಯ ಕೆಳಗೆ ಈಜುರೆಕ್ಕೆಗಳುಳ್ಳ. (ನಾ.) ಅಂಥ ಮೀನಿನ ಜಾತಿ. **Abdóminous** (ಗು.) ದೊಡ್ಡ ಹೊಟ್ಟೆಯುಳ್ಳ ; ಸ್ಥೂಲ ದೇಹವುಳ್ಳ.

Abdúcent. **Abduct** ನೋಡಿ.

Abdúct ಆ್ಯಬ್‌ಡಕ್ಟ್ (ಕ್ರಿ. ಸಕ.) ಅಪಹರಿಸು ; ಎತ್ತಿಕೊಂಡು ಹೋಗು ; ನ್ಯಾಯವಿರುದ್ಧವಾಗಿ ಹಾರಿಸಿಕೊಂಡು ಹೋಗು. (ಹೆಂಗಸರು, ಮಕ್ಕಳು, ಮೊ. ರನ್ನು) ಮೋಸದಿಂದಾಗಲಿ ಬಲಾತ್ಕಾರದಿಂದಾಗಲಿ ಸಾಗಿಸಿಕೊಂಡು ಹೋಗು. (ಶ.ವಿ.) (ಒಂದು ಅಂಗವನ್ನು ಅದರ ನಿಯತ ಸ್ಥಾನದಿಂದ) ಸೆಳೆ. **Abdúction** (ನಾ.) ಅಪಹರಣ. (ತರ್ಕ) ಸಂಭವ ಪಕ್ಷನ್ಯಾಯ. **Abdúctor** (ನಾ.) ಅಪಹಾರಕ ; ಅಪಕರ್ಷಕ. (ಶ. ವಿ.) ದೇಹದ ಯಾವ ಭಾಗವನ್ನಾದರೂ ಅದರ ನಿಯತ ಸ್ಥಾನದಿಂದ ಎಳೆಯುವ ಸ್ನಾಯು. **Abdúcent** — ಡ್ಯೂಸೆಂಟ್ (ಗು.) ಅಪಕರ್ಷಕ (ಮು., ಶ. ವಿ.)

Abeám ಅಬೀಮ್ (ಕ್ರಿ. ವಿ.) (ನಾವೆ) ಹಡಗಿನ ಉದ್ದಕ್ಕೆ ಸಮಕೋನದಲ್ಲಿರುವ ರೇಖೆಯಲ್ಲಿ. Abeam of ಹಡಗಿನ ಪಕ್ಕದ ಮಧ್ಯಕ್ಕೆದುರಾಗಿ ; ಎದೆ ಸಮನಾಗಿ.

A'becedárian. **A B C** ನೋಡಿ.

Abéd ಅಬೆಡ್ (ಕ್ರಿ. ವಿ.) ಹಾಸಿಗೆಯಲ್ಲಿ. ರೋಗದಿಂದ ಮಲಗಿ (He is abed with gout ಅವನು ವಾಯುರೋಗದಿಂದ ಮಲಗಿದ್ದಾನೆ). To bring abed ಮಗುವನ್ನು ಹೆರುವುದು.

A'berglaúbe (G) ಆಬರ್‌ಗ್ಲವ್ಬ (ನಾ.) ಅತಿನಂಬಿಕೆ ; ವಿಚಾರವಿಲ್ಲದ ನಂಬಿಕೆ.

Abérrant ಅಬೆರಂಟ್ (ಗು.) ದಾರಿ ತಪ್ಪುವ ; ಅಡ್ಡದಾರಿಗೆ ಹೋಗುವ ; ನಡತೆ ತಪ್ಪಿ ಹೋಗುವ. **Abérrance** (ನಾ.) ; **Abérrancy** (ನಾ.) ; **Aberrátion** ಆ್ಯಬೆರೇಷನ್ (ನಾ.) ದಾರಿ ತಪ್ಪುವುದು ; ಅಲೆತ ; ಬವಣೆ ; ಅಪಗತಿ (The aberrations of my life ನನ್ನ ಬಾಳಿನ ಬವಣೆಗಳು) ; ಬುದ್ಧಿಭ್ರಮಣೆ. (ಜೀ. ವಿ.) ಜಾತಿಸ್ವಭಾವದಿಂದ ವ್ಯತ್ಯಾಸಹೊಂದುವುದು : ಅಪಸರಣ (Aberration of structure and function ರಚನೆಯಲ್ಲಿಯೂ ಕಾರ್ಯದಲ್ಲಿಯೂ ನಿಯಮ ತಪ್ಪುವುದು). (ಭೌ. ವಿ.) ಏಕ ಕೇಂದ್ರಾಭಿಮುಖವಾಗಿ ಹೊರಟ ಬೆಳಕಿನ ಕಿರಣಗಳು ಒಂದೇ ಕೇಂದ್ರದಲ್ಲಿ ಸೇರದೆ ಅನೇಕ ಕೇಂದ್ರಗಳಲ್ಲಿ ಸೇರುವುದು : ಕೇಂದ್ರಾಪಸರಣ. (Spherical aberration ಒಂದೇ ಬಿಂದುವಿನಿಂದ ಹೊರಟ ಬೆಳಕಿನ ಕಿರಣಗಳು ಗೋಳ ದರ್ಪಣದ ಅಥವಾ ಲೆನ್ಸಿನ ಮೇಲೆ ಬಿದ್ದು ಪ್ರತಿಫಲಿಸಿ ಅಥವಾ ಬಾಗಿ, ಏಕಕೇಂದ್ರಾಭಿಮುಖವಾಗಿ ಹೊರಟು, ಒಂದೇ ಕೇಂದ್ರದಲ್ಲಿ ಸೇರದೆ ಅನೇಕ ಕೇಂದ್ರಗಳಲ್ಲಿ ಸೇರುವುದು : ಗೋಳಾಪಸರಣ. Chromatic aberration ಬಿಳಿಯ ಬೆಳಕಿನ ಅಂತರ್ಭಾಗಗಳಾದ ಬೇರೆಬೇರೆ ಬಣ್ಣದ ಕಿರಣಗಳು ಬಾಗುವಾಗ ಒಂದೇ ಪ್ರಮಾಣದಲ್ಲಿ ಬಾಗದೆ ಬೇರೆ ಬೇರೆ ಪ್ರಮಾಣಗಳಲ್ಲಿ ಬಾಗುವುದರಿಂದಾಗುವ ವರ್ಣಾಪಸರಣ). (ಖ. ವಿ.) ಭೂಗೋಳದ ಸುತ್ತುವಿಕೆಯಿಂದಲೂ, ಬೆಳಕಿನ ಕಿರಣಗಳು ಸ್ಥಳದಿಂದ ಸ್ಥಳಕ್ಕೆ ಹೋಗಲು ಕಾಲವನ್ನು ತೆಗೆದುಕೊಳ್ಳುವುದರಿಂದಲೂ, ಯಾವುದಾದರೂ ಒಂದು ಆಕಾಶಸ್ಥ ವಸ್ತು ತಾನಿದ್ದ ಸ್ಥಳದಲ್ಲಿ ಕಾಣದೆ ಬೇರೆ ಕಡೆಯಲ್ಲಿ ಕಾಣುವುದು : ಅಪಸರಣ ; ಭ್ರಂಶ.

Abét ಅಬೆಟ್ (ಕ್ರಿ.) ದುಷ್ಕಾರ್ಯದಲ್ಲಿ ಅಥವಾ ದುಷ್ಕಾರ್ಯ ಮಾಡುವವನಿಗೆ ನೆರವಾಗು, ಒತ್ತಾಸೆ ಕೊಡು ಅಥವಾ ಒಪ್ಪಿಗೆ ಕೊಡು ; ದುಷ್ಟಾನುಕೂಲನಾಗು. **Abétment** (ನಾ.) ; **Abétter** (ನಾ.) ; **Abéttor** (ನಾ.)

Ab éxtra (L) ಆ್ಯಬ್ ಎಕ್ಸ್‌ಟ್ರಾ (ಕ್ರಿ. ವಿ.) ಹೊರಗಿನಿಂದ.

Abeýance ಅಬೇಅನ್ಸ್ (ನಾ.) (ನಡೆಯಬೇಕಾದ) ಕಾರ್ಯವನ್ನು ತೀರ್ಮಾನ ಮಾಡದೆ ಅಥವಾ ಆಚರಣೆಗೆ ತರದೆ ನಿಲ್ಲಿಸಿರುವುದು ; 'ಜಾರಿ'ಗೆ ತರದೆ ಅಥವಾ ಬಾರದೆ ಇರುವುದು ; ತಡೆಗಡೆ.

Abhór ಆ್ಯಭಾರ್ (ಕ್ರಿ. ಸಕ.) ಹೇಸು ; ಅಸಹ್ಯಪಡು. **Abhórrence** (ನಾ.) ಹೇಸಿಗೆ. **Abhórrent** (ಗು.) ಹೇಸಿಗೆಯಾದ ; ಹೇಯವಾದ ; ಅಸಹ್ಯ ಹುಟ್ಟಿಸುವ. **Abhórrer** (ನಾ.)

Abíde ಅಬೈಡ್ (ಕ್ರಿ.) ಒಕ್ಕಲಾಗಿರು ; ವಾಸ ಮಾಡು ; ಉಳಿ ; ನೆಲಸು ; ಶಾಶ್ವತವಾಗಿರು (The earth abides for ever ಭೂಮಿ ಶಾಶ್ವತವಾಗಿರುವುದು. Though much is taken much abides ಎಷ್ಟೋ ಹೋದರೂ ಇನ್ನೂ ಎಷ್ಟೋ ಉಳಿದಿದೆ). ತಾಳಿಕೊ ; ಅನುಸರಿಸು (I shall abide by your decision ನಿನ್ನ ತೀರ್ಮಾನವನ್ನನುಸರಿಸಿ ನಡೆಯುತ್ತೇನೆ. He is a law-abiding citizen ಆತನು ನ್ಯಾಯಸಂಧನಾದ ಪ್ರಜೆ). **Abídance** (ನಾ.) ವಾಸವಾಗಿರುವುದು. (ನಿಯಮಾದಿಗಳ) ಪಾಲನೆ. **Abíding** (ಗು.) ಶಾಶ್ವತವಾದ ; ಸ್ಥಿರವಾದ ; ನೆಲೆಯಾದ. **Abídingly** (ಕ್ರಿ. ವಿ.)

Abílity. **Able** ನೋಡಿ.

Ab inítio (L) ಆ್ಯಬ್ ಇನಿಷಿಯೋ (ಕ್ರಿ. ವಿ.) ಮೊದಲಿನಿಂದ ; ಆರಂಭದಿಂದ.

A'biogénesis ಆ್ಯಬಯೊಜೆನೆಸಿಸ್ (ನಾ.) (ಜೀ. ವಿ.) ನಿರ್ಜೀವ ವಸ್ತುವಿನಿಂದ ಜೀವ ವಸ್ತು ಹುಟ್ಟುವುದು. **A'biogenétic** (ಗು.) ಹೀಗೆಂಬ ವಾದಕ್ಕೆ ಸಂಬಂಧಪಟ್ಟ. **A'biogenétically** (ಕ್ರಿ. ವಿ.) ; **Abiógenist** (ನಾ.) ಈ ವಾದದಲ್ಲಿ ನಂಬಿಕೆಯುಳ್ಳವನು. **Abiógenous** (ಗು.) ; **Abiógeny** (ನಾ.) = Abiogenesis.

Abiológical ಆ್ಯಬಯೊಲಾಜಿಕಲ್ (ಗು.) ನಿರ್ಜೀವ ವಸ್ತುಗಳ ವಿಚಾರಕ್ಕೆ ಸಂಬಂಧಪಟ್ಟ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

A'bject ಆ್ಯಬ್ಜೆಕ್ಟ್ (ಗು., ನಾ.) ಕೀಳು; ಹೀನ; ತುಚ್ಛ; ಅಲ್ಪ; ನೀಚ. **Abjéction** ಆ್ಯಬ್— (ನಾ.); **A'bjectly** ಆ್ಯಬ್— (ಕ್ರಿ. ವಿ.); **A'bjectness** (ನಾ.)

Abjúre ಆ್ಯಬ್ಜೂರ್ (ಕ್ರಿ. ಸಕ.) (ಅಭಿಪ್ರಾಯವನ್ನಾಗಲಿ, ಮತವನ್ನಾಗಲಿ, ವ್ಯಾಜ್ಯಪಕ್ಷವನ್ನಾಗಲಿ, ಹಕ್ಕನ್ನಾಗಲಿ, ಹಕ್ಕುದಾರನನ್ನಾಗಲಿ) ಪ್ರಮಾಣ ಮಾಡಿ ಪರಿತ್ಯಜಿಸು; ಶಪಥಪೂರ್ವಕ ದೇಶತ್ಯಾಗ ಮಾಡು. **Abjurátion** ಆ್ಯಬ್ಜುರೇಷ್ನ್ (ನಾ.)

Abkári ಅಬ್ಕಾರಿ (ನಾ.) (ಪರ್ಷ್ಯನ್ ಭಾಷೆಯಲ್ಲಿ) ಮಾದಕ ದ್ರವ್ಯಗಳ ತಯಾರಿ ಅಥವಾ ಮಾರಾಟ; (ಈಗಿನ ಅರ್ಥ) ಅವುಗಳ ಮೇಲೆ ಹಾಕುವ ಸುಂಕ.

Ablactátion ಆ್ಯಬ್‌ಲ್ಯಕ್ಟೇಷನ್ (ನಾ.) (ಮಗುವಿಗೆ ಅಥವಾ ಕರುವಿಗೆ) ತಾಯಿಯ ಮೊಲೆಹಾಲನ್ನು ಬಿಡಿಸುವುದು: ಹಾಲು ತಪ್ಪಿಸುವುದು.

Ablátion ಆ್ಯಬ್ಲೇಷನ್ (ನಾ.) (ಶಸ್ತ್ರ ಚಿಕಿತ್ಸೆಯಿಂದ ದೇಹದ ಯಾವುದಾದರೂ ಒಂದು ಭಾಗವನ್ನು) ತೆಗೆದುಹಾಕಿಬಿಡುವುದು. (ಭೂ. ವಿ.) ಕಲ್ಲುಬಂಡೆಯ, ಅಥವಾ ಹಿಮನದಿಯ ನೀರ್ಗಲ್ಲಿನ ಹೊರಮೈಯ ಕ್ಷಯ.

A'blative ಆ್ಯಬ್ಲಟಿವ್ (ಗು., ನಾ.) ಪಂಚಮೀ ವಿಭಕ್ತಿ (ಇಂದ, ದೆಸೆಯಿಂದ)

A'blaut (G) ಅಬ್ಲೌಟ್ (ನಾ.) (ಭಾಷಾ ಶಾಸ್ತ್ರದಲ್ಲಿ) ಸ್ವರ ವ್ಯತ್ಯಯ: (ಉದಾ.—Sing, Sang, Song, Sung. ಕಿಡು, ಕೇಡು)

Abláze ಅಬ್ಲೇಸ್ (ಕ್ರಿ. ವಿ.) ಉರಿಯೇಳುತ್ತ; ಧಗಧಗಿಸುತ್ತ. (ಕೋಪದಿಂದ) ಕಿಡಿಕಿಡಿಯಾಗಿ.

A'ble ಏಬ್‌ಲ್ (ಗು.) ಶಕ್ತಿಯುಳ್ಳ; ಬುದ್ಧಿಯುಳ್ಳ; ಅರ್ಹತೆಯುಳ್ಳ; ದಕ್ಷತೆಯುಳ್ಳ; ಗಟ್ಟಿಗನಾದ. **A'bly** (ಕ್ರಿ. ವಿ.); **Abílity** ಅಬಿಲಿಟಿ (ನಾ.) ಶಕ್ತಿ; ಸಾಮರ್ಥ್ಯ; ಅರ್ಹತೆ; ದಕ್ಷತೆ; ಜಾಣ್ಮೆ; ಯೋಗ್ಯತೆ; ಆಪು; ಅಳವು; ಬಲ್ಮೆ.

A'blings, A'blins, Aíblins ಏಬ್ಲಿನ್ಸ್ (ಕ್ರಿ. ವಿ.) ಬಹುಶಃ; ಪ್ರಾಯಶಃ; ಒಂದು ವೇಳೆ.

Abloóm ಅಬ್ಲೂಮ್ (ಕ್ರಿ. ವಿ.) ಅರಳಿ; ಹೂವು ಬಿಟ್ಟು.

Ablúsh ಅಬ್ಲಷ್ (ಕ್ರಿ. ವಿ.) ನಾಚಿಕೆಯಿಂದ; ಮುಖ ಕೆಂಪೇರಿ.

Ablútion ಆ್ಯಬ್ಲೂಷನ್ (ನಾ.) ಶಾಸ್ತ್ರಸ್ನಾನ; ಶುಚಿಸ್ನಾನ; ಸಂಪ್ರೋಕ್ಷಣೆ; ಮಜ್ಜನ; ಮೀಹ. (ಮು., ಕ್ಯಾಥೊಲಿಕ್ ಸಂಸ್ಕಾರದಲ್ಲಿ) ವಸ್ತುಗಳನ್ನು ತೊಳೆದ ನೀರು.

A'bnegate ಆ್ಯಬ್‌ನಿಗೇಟ್ (ಕ್ರಿ. ಸಕ.) ತನಗೆ ಬೇಡವೆಂದು ಬಿಡು; ತ್ಯಜಿಸು; (ಹಕ್ಕನ್ನೊ ನಂಬಿಕೆಯನ್ನೊ) ತೊರೆ. **Abnegátion** (ನಾ.) ನಿರಾಕರಣ; ತ್ಯಾಗ; ತೊರೆಹ.

Abnórmal ಆ್ಯಬ್‌ನಾರ್ಮಲ್ (ಗು.) ಅಸಾಮಾನ್ಯ; ಸ್ವಭಾವ ವ್ಯತಿರಿಕ್ತ; ಅತಿರೇಕ; ವಿಪರೀತ. **Abnormálity** —ಮ್ಯಾಲಿಟಿ (ನಾ.) ಅಸಾಮಾನ್ಯತೆ; ವಿಪರೀತತೆ. **Abnórmally** (ಕ್ರಿ. ವಿ.); **Abnórmity** (ನಾ.) ವೈಪರೀತ್ಯ; ವಿಕಾರ ರೂಪು.

Aboárd ಅಬೋರ್ಡ್ (ಕ್ರಿ. ವಿ.) ಹಡಗಿನಲ್ಲಿ; ಹಡಗಿನೊಳಕ್ಕೆ. ಪಕ್ಕದಲ್ಲಿ; ಹತ್ತಿರ (Close aboard, hard aboard). Lay (another ship) aboard (ಯುದ್ಧಕ್ಕಾಗಿ) ಒಂದು ಹಡಗಿನ ಪಕ್ಕದಲ್ಲ ಮತ್ತೊಂದು ಹಡಗನ್ನು ನಿಲ್ಲಿಸು. Fall aboard (ಮತ್ತೊಂದು ಹಡಗಿಗೆ) ಡಿಕ್ಕಿ ಹೊಡೆ.

Abóde ಅಬೋಡ್ (ನಾ.) ಮನೆ; ಬೀಡು; ನೆಲೆ; ವಾಸಸ್ಥಾನ.

Aboíl ಅಬಾಯ್‌ಲ್ (ಕ್ರಿ. ವಿ.) ಕುದಿಯುತ್ತ.

Abólish ಅಬಾಲಿಷ್ (ಕ್ರಿ. ಸಕ.) ತೆಗೆದುಹಾಕು; ಅಳಿಸು; ತೊಡೆದುಹಾಕು; ವಜಾ(ವರ್ಜ)ಮಾಡು; ರದ್ದು ಮಾಡು. **Abólishable** (ಗು.); **Abólisher** (ನಾ.); **Abólishment** (ನಾ.); **Abolítion** ಆ್ಯಬೊಲಿಷನ್ (ನಾ.); **Abolítionary** (ಗು.) ನಾಶಕರವಾದ. **Abolítionism** (ನಾ.) ನೀಗ್ರೋ ಜನರ ದಾಸ್ಯವನ್ನು ತೊಡೆದುಹಾಕಬೇಕೆಂಬ ವಾದ. **Abolítionist** (ನಾ.) ದಾಸ್ಯ ವಿರೋಧಿ.

Abomásum, —sus ಆ್ಯಬೊಮೇಸಂ, —ಸಸ್ (ನಾ.) ಮೆಲುಕು ಹಾಕುವ ಪ್ರಾಣಿಗಳ ಆಹಾರವು ಸರಿಯಾಗಿ ಜೀರ್ಣವಾಗುವ (ನಾಲ್ಕನೆಯ) ಜಠರ.

Abóminable ಅಬಾಮಿನಬ್‌ಲ್ (ಗು.) ಅಸಹ್ಯಕರವಾದ; ಹೇಸಿಕೆಯಾದ; ಜುಗುಪ್ಸೆ ಹುಟ್ಟಿಸುವ; ಅವಲಕ್ಷಣವಾದ; ಹೇಯ. **Abóminableness** (ನಾ.); **Abóminably** (ಕ್ರಿ. ವಿ.); **Abóminate** —ನೇಟ್ (ಕ್ರಿ.) ಅಸಹ್ಯಪಡು. **Abóminate** —ನೆಟ್ (ಗು.); **Abominátion** (ನಾ.) ಅಸಹ್ಯತೆ; ಅಸಹ್ಯಕರವಾದ ಅಥವಾ ನೀಚ ಪದ್ಧತಿ, ನಡತೆ. ಅಸಹ್ಯತೆಯನ್ನುಂಟುಮಾಡುವ ವಸ್ತು, ವ್ಯಕ್ತಿ.

Aboríginal ಆ್ಯಬೊರಿಜಿನಲ್ (ಗು., ನಾ.) ಮುಮ್ಮೊದಲಿನ; ಪೂರ್ವದ; ಮೂಲ ನಿವಾಸಿಯಾದ. (ನಾ.) ಒಂದು ದೇಶದಲ್ಲಿ ಹೊರಗಿನವರು ಬಂದು ನೆಲಸುವುದಕ್ಕೆ ಮೊದಲೇ ಅಲ್ಲಿದ್ದವನು: ಮೂಲ ನಿವಾಸಿ. **Aboriginálity** (ನಾ.) ಮೂಲ ನಿವಾಸಿತ್ವ. **Aboríginally** (ಕ್ರಿ. ವಿ.); **Aborígines** —ನೀಸ್ (ನಾ., ಬ. ವ.) ಮೂಲ ನಿವಾಸಿಗಳು.

Abórt ಅಬಾರ್ಟ್ (ಕ್ರಿ. ಅಕ.) ಮೈಯಿಳಿ; ಗರ್ಭಸ್ರಾವವಾಗು. (ಜೀ. ವಿ.) ಗೊಡ್ಡಾಗು; ಕುರುಟುಬೀಳು; (ಸಸ್ಯಗಳು, ಪ್ರಾಣಿಗಳು ಅಥವಾ ಅವುಗಳ ಭಾಗಗಳು) ಸ್ವಾಭಾವಿಕವಾಗಿ ಬೆಳೆಯದೆ ತಡೆಹೊಂದು. (ರೂಪ.) ಎಣಿಸಿದಂತೆ ನಡೆಯದೆಹೋಗು, ನಡೆಯದ ಹಾಗೆ ಮಾಡು; ಸಾರ್ಥಕವಾಗದೆಹೋಗು; ಸಾರ್ಥಕವಾಗದ ಹಾಗೆ ಮಾಡು; (ಪ್ರಯತ್ನ) ಅರ್ಧದಲ್ಲಿ ಕೆಟ್ಟುಹೋಗು. **Abórted** (ಗು.) ಕಾಲಕ್ಕೆ ಮುಂಚೆ ಹುಟ್ಟಿದ. (ಜೀ. ವಿ.) ಬೆಳೆವಣಿಗೆ ಮಟ್ಟಾದ (Thorns are aborted branches ಮುಳ್ಳುಗಳು ಬೆಳೆವಣಿಗೆ ಮಟ್ಟಾದ ರೆಂಬೆಗಳು). **Abórtion** (ನಾ.) ಮೈಯಿಳಿತ; ಗರ್ಭಪಾತ; ಗರ್ಭಸ್ರಾವ ಮಾಡಿಸುವುದು. (ರೂಪ. ಸಹ). ಯಾವುದಾದರೂ ಅಂಗ ಅಥವಾ ಅವಯವದ ಬೆಳೆವಣಿಗೆಯ ಮಟ್ಟು. ಕುರುಚಾಗಿಯೂ ವಿಕಾರವಾಗಿಯೂ ಇರುವ ಪ್ರಾಣಿ. ಕಾರ್ಯಭಂಗ; ಉದ್ದೇಶ ಭಂಗ. **Abórtionist** (ನಾ.); **Abórtive** (ಗು.) ಕಾಲಕ್ಕೆ ಮುಂಚಿನ (ಜನನ ಮೊ.). ಕೈಗೂಡದ; ಭಗ್ನ; ನಿಷ್ಫಲ. (ಅವಯವ, ಮೊ.) ಹುಟ್ಟಿದಂತೆಯೇ ಇರುವ; ಬೆಳೆವಣಿಗೆ ಮೊಟಕಾದ. **Abórtively** (ಕ್ರಿ. ವಿ.); **Abórtiveness** (ನಾ.); **Abortifácient** ಅಬಾರ್ಟಿಫ್ಯಾಸಿಯೆಂಟ್,—ಫೇಷಂಟ್ (ಗು., ನಾ.) ಗರ್ಭಸ್ರಾವಕ (ಔಷಧ ವಸ್ತು, ಮೊ.)

Aboúlia, Abúlia ಅಬೌಲಿಯ, ಅಬ್ಯೂಲಿಯ (ನಾ.) ಇಚ್ಛಾಶಕ್ತಿ ನಾಶ.

Aboúnd ಅಬೌಂಡ್ (ಕ್ರಿ. ಅಕ.) ತುಂಬಿರು; ತುಂಬಿ ತುಳುಕು; ಸಮೃದ್ಧಿಯಾಗಿರು; ನೆರೆ (ಗ್ರಾಂ.). (*in, with* ಎಂಬ ಉಪ. ದೊಡನೆ)

Aboút ಅಬೌಟ್ (ಕ್ರಿ. ವಿ., ಉಪ.) ಸುತ್ತ; ಸುತ್ತುಮುತ್ತ; ಅತ್ತಿತ್ತ. ಸುಮಾರು. ಕುರಿತು (About his business ಆತನ ಕಾರ್ಯವನ್ನು ಕುರಿತು, ಹಿಡಿದು. What are you about? ನೀನು ಏನು ಮಾಡುತ್ತಿರುವೆ?). ಹತ್ತಿರ; ಬಳಿ (I have not a pie about me ನನ್ನ ಹತ್ತಿರ ಒಂದು ಕಾಸೂ ಇಲ್ಲ). To bring about ಆಗಮಾಡಿಸು; ನೆರವೇರಿಸು. Out and about (ಆರೋಗ್ಯಲಾಭವಾದ ಮೇಲೆ) ಓಡಾಡುತ್ತ, ಸಹಜ ಸ್ಥಿತಿಯನ್ನು ಹೊಂದಿ. Right about turn ಬಲಕ್ಕೆ ತಿರುಗಿ ಹಿಂದುಮುಂದಾಗು.

Abóve ಅಬವ್ (ಕ್ರಿ. ವಿ., ಉಪ.) ಮೇಲೆ; ಮೇಲಕ್ಕೆ; ಮೇಲುಗಡೆ; ಊರ್ಧ್ವ ಲೋಕದಲ್ಲಿ; ಸ್ವರ್ಗದಲ್ಲಿ. ಮತ್ತು; ಜೊತೆಗೆ; ಮೀರಿ. Above all ಎಲ್ಲಕ್ಕಿಂತಲೂ ಹೆಚ್ಚಾಗಿ; ಮುಖ್ಯವಾಗಿ. **Abóve-board**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕ್ರಿ. ವಿ.) ಮುಚ್ಚುಮರೆಯಿಲ್ಲದೆ ; ಸಂಶಯಾಸ್ಪದವಲ್ಲದೆ ; ಋಜುವಾಗಿ. Above criticism ನಿರಾಕ್ಷೇಪವಾಗಿ. Above my understanding ನನ್ನ ತಿಳುವಳಿಕೆಗೆ ಮೀರಿ. From above (ನಾ.) ಮೇಲಿನಿಂದ.

Ab óvo (L) ಆ್ಯಬ್ ಓವೊ (ಕ್ರಿ. ವಿ.)(ಬೇಸರ ಹುಟ್ಟುವಂತೆ) ಮೊದಲಿನಿಂದಲೂ (ಹೇಳುತ್ತಹೋಗುವುದು)

A'bracadábra ಆ್ಯಬ್ರಕಡ್ಯಾಬ್ರ (ನಾ.) ಮಾಟದ ಮಂತ್ರ ; ವ್ಯಾಧಿ, ಭೀತಿ, ಮೊ. ಗಳ ಪರಿಹಾರಕ್ಕೆಂದು ಕಟ್ಟುವ ಯಂತ್ರದಲ್ಲಿ ತ್ರಿಕೋನಾಕಾರವಾಗಿ ಬರೆಯುವ ಬೀಜಾಕ್ಷರಗಳು. ಅರ್ಥವಿಲ್ಲದ ಭಾಷೆ : 'ಗೊಜ ಗೊಜ'.

Abráde ಅಬ್ರೇಡ್ (ಕ್ರಿ. ಸಕ.) ಉಜ್ಜಿಹಾಕು ; ತೇದುಬಿಡು. (ರೂಪ.) ತೊಡೆದುಹಾಕು (To abrade the popularity of a government ಸರ್ಕಾರದ ವಿಷಯದಲ್ಲಿ ಜನರಿಗಿರುವ ವಿಶ್ವಾಸವನ್ನು ತೊಡೆದುಹಾಕುವುದು). **Abrásion** —ಷನ್ (ನಾ.) (A bed-sore is a simple abrasion ಯಾವಾಗಲೂ ಮಲಗಿರುವುದರಿಂದಾದ ಗಾಯವು ಬರಿಯ ಉಜ್ಜುಗಾಯ). **Abrásive**—ಸಿವ್ (ಗು., ನಾ.) ಉಜ್ಜಿಹಾಕುವ ಗುಣವುಳ್ಳ ; ಸಾಣೆಹಿಡಿಯುವುದಕ್ಕೆ ಉಪಯೋಗಿಸುವ ಪದಾರ್ಥ ; ಘರ್ಷಕ (ವಸ್ತು)

A'braham-man, A'bram-man ಏಬ್ರಹ್ಯಾಂ ಮ್ಯಾನ್, ಏಬ್ರಂ — (ನಾ.) ಹದಿನಾರನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ, ನೆಲೆಯಿಲ್ಲದೆ ಅಲೆಯುತ್ತ ಹುಚ್ಚರಂತೆ ನಟಿಸುತ್ತಿದ್ದ ಭಿಕ್ಷುಕರ ಪಂಗಡದವನು (To sham Abram ರೋಗಿಯಂತೆ ಅಥವಾ ಹುಚ್ಚನಂತೆ ನಟಿಸುವುದು)

Abránchial, Abránchiate ಅಬ್ರ್ಯಾಂಕಿಯಲ್, —ಯೇಟ್ (ಗು.) ಜಲಶ್ವಾಸಾಂಗ ರಹಿತ.

Abrásion. Abráde ನೋಡಿ.

Abreást ಅಬ್ರೆಸ್ಟ್ (ಕ್ರಿ. ವಿ.) ಪಕ್ಕ ಪಕ್ಕದಲ್ಲಿ ಒಂದೇ ಕಡೆಗೆ ಮುಖ ತಿರುಗಿಸಿಕೊಂಡು ; ಸರಿಯೆದೆಯಾಗಿ ; ಎದೆ ಸಮನಾಗಿ (A breach that sixteen men might enter abreast ಹದಿನಾರು ಮಂದಿ ಎದೆಸಮನಾಗಿ ನುಗ್ಗಬಹುದಾದ ಕೋಟೆಯ ಕಂಡಿ). (ಅಭಿವೃದ್ಧಿಯಲ್ಲಿ, ಜ್ಞಾನಾಭಿವೃದ್ಧಿಯಲ್ಲಿ) ಹಿಂದುಬೀಳದೆ (Abreast of the times ಕಾಲಕ್ಕೆ ಸರಿಯಾಗಿ ; ಕಾಲಸ್ಥಿತಿಗೆ ಹಿಂದಾಗದೆ)

Abrídge ಅಬ್ರಿಡ್ಜ್ (ಕ್ರಿ. ಸಕ.) ಸಂಗ್ರಹಿಸು; ಸಂಗ್ರಹ ಮಾಡು; ಸಂಕ್ಷೇಪಿಸು ; ಕುಗ್ಗಿಸು ; ಕಡಮೆ ಮಾಡು. (Abridged in his freedom ಸ್ವಾತಂತ್ರ್ಯ ಕಡಮೆ ಮಾಡಿದ). **Abridgement, —gment** (ನಾ.) ಕಡಮೆ ಮಾಡುವುದು; ಕೋತ ಮಾಡುವುದು. ಸಂಗ್ರಹ; ಸಾರಾಂಶ ; ಗೋಷ್ವಾರೆ.

Abroád ಅಬ್ರಾಡ್ (ಕ್ರಿ. ವಿ.) ಹೊರಗಡೆ ; ಎಲ್ಲ ಕಡೆಯೂ ; ದಿಕ್ಕುದಿಕ್ಕಿನಲ್ಲೂ; ಹರಡಿ ; ದೇಶಾಂತರದಲ್ಲಿ, —ಕ್ಕೆ. (The schoolmaster is abroad ಉಪಾಧ್ಯಾಯರು ಹೊರಗೆ ಬಂದಿದ್ದಾರೆ: ವಿದ್ಯಾಭ್ಯಾಸ ಹರಡುತ್ತಿದೆ)

A'brogate ಆ್ಯಬ್ರೊಗೇಟ್ (ಕ್ರಿ. ಸಕ.) ರದ್ದು ಮಾಡು ; ವಜಾ ಮಾಡು ; ಕಿತ್ತುಹಾಕು. **Abrogátion** (ನಾ.)

Abrúpt ಅಬ್ರಪ್ಟ್ (ಗು.) ಇದ್ದಕ್ಕಿದ್ದಹಾಗೆ ಬಂದ ; ಥಟಕ್ಕನೆ, ಥಟ್ಟನೆ ಸಂಭವಿಸಿದ ; ಏಕಾಏಕಿಯಾದ. ಕಡಿದಾದ. (ಜೀ. ವಿ.) ತಲೆ ಕಡಿದ. (ಭೂ. ವಿ.) ಭೂಮಿಯ ಒಳಪದರವು ಥಟ್ಟನೆ ಮೇಲೆದ್ದು ಕಾಣುವ. **Abrúptly** (ಕ್ರಿ. ವಿ.) ಹಠಾತ್ತಾಗಿ. **Abrúptness** (ನಾ.) ; **Abrúption** (ನಾ.) ಕೊಂಚ ಭಾಗ ಬೇರೆಯಾಗುವುದು ; ಥಟ್ಟನೆ ಮುರಿಯುವುದು.

A'bscess ಆ್ಯಬ್ಸೆಸ್ (ನಾ.) ದೇಹದೊಳಗಡೆ ಕೀವು ತುಂಬಿ ಆದ ಕುರು ; ಒಳ ಕುರು,

Abscíssa ಆ್ಯಬ್ಸಿಸ (ನಾ.; ಬ. ವ.—æ, as), **A'bsciss(e)** ಆ್ಯಬ್ಸಿಸ್ (ನಾ. ; ಬ. ವ.—es) (ಜ್ಯಾ.) ಕ್ಷಿತಿಜ ದೂರ.

[ಒಂದು ಸಮತಲದಲ್ಲಿಯ ಬಿಂದುವೊಂದರ ಸ್ಥಾನವನ್ನು ಗುರುತಿಸಿ ಹೇಳಬೇಕಾದರೆ, ಅದೇ ಸಮತಲದಲ್ಲಿ ಒಂದರೊಡನೊಂದು ಕೋನವಾಗುವಂತೆ (ಸಾ., ಸಮಕೋನವಾಗುವಂತೆ) ಎಳೆದ ಎರಡು ನಿರ್ದಿಷ್ಟ ಸರಳ ರೇಖೆಗಳಿಗೆ ಆ ಬಿಂದುವನ್ನು ಸಂಬಂಧಿಸಬೇಕು. ಈ ಎರಡು ರೇಖೆಗಳಿಗೂ ಅನ್ವಯಾಕ್ಷಗಳೆಂದು ಹೆಸರು. ಪ್ರಕೃತ ಸಂದರ್ಭದಲ್ಲಿ, ಈ ಎರಡು ಅಕ್ಷಗಳು ಸಮಕೋನವಾಗುವುವೆಂದೆಣಿಸೋಣ : ಒಂದು ಕ್ಷಿತಿಜಾಕ್ಷ, ಮತ್ತೊಂದು ಲಂಬಾಕ್ಷ. ಈಗ, ಮೇಲೆ ಹೇಳಿದ ಬಿಂದುವಿನ ಸ್ಥಾನವನ್ನು ಗುರುತಿಸಿ ಹೇಳಬೇಕಾದರೆ, ಆ ಬಿಂದುವಿನಿಂದ ಕ್ಷಿತಿಜಾಕ್ಷಕ್ಕೂ ಲಂಬಾಕ್ಷಕ್ಕೂ ಲಂಬ ರೇಖೆಗಳನ್ನೆಳೆಯಬೇಕು. ಈ ಲಂಬ ರೇಖೆಗಳಲ್ಲಿ ಕ್ಷಿತಿಜಾಕ್ಷಕ್ಕೆ ಸಮಾನಾಂತರದಲ್ಲಿರುವ ರೇಖೆಗೆ 'ಆ್ಯಬ್ಸಿಸ' ಎಂದು ಹೆಸರು, ಲಂಬಾಕ್ಷಕ್ಕೆ ಸಮಾನಾಂತರದಲ್ಲಿರುವ ರೇಖೆಗೆ 'ಆರ್ಡಿನೇಟ್' ಎಂದು ಹೆಸರು]

Abscíssion ಆ್ಯಬ್ಸಿಷನ್ (ನಾ.) (ಶಸ್ತ್ರ ವೈದ್ಯ) ಕತ್ತರಿಸಿ ಹಾಕುವುದು ; ಛೇದನ. (ರೂಪ. ಸಹ)

Abscónd ಆ್ಯಬ್ಸ್ಕಾಂಡ್ (ಕ್ರಿ. ಅಕ.) ತಲೆತಪ್ಪಿಸಿಕೊಂಡು ಹೋಗು ; ನ್ಯಾಯಕ್ಕೆ ಸಿಕ್ಕದಂತೆ ಓಡಿಹೋಗು ; ಪಲಾಯನ ಮಾಡು. **Abscóndence** (ನಾ.) ; **Abscónder** (ನಾ.)

A'bsence ಆ್ಯಬ್ಸೆನ್ಸ್ (ನಾ.) ಗೊತ್ತಾದ ಸ್ಥಳದಲ್ಲಿಲ್ಲದಿರುವುದು ; 'ಗೈರ್ ಹಾಜರಿ' ; 'ಗೈರ್‌ಹಾಜರಿ'ಯ ಕಾಲ ; ಇಲ್ಲವೆ (ಗ್ರಾಂ.) ; ಅಭಾವ. Absence of mind ಮನಸ್ಸು ಬೇರೆ ಕಡೆ ಇರುವುದು: ಅನ್ಯ ಮನಸ್ಕತೆ. **Absént** (ಕ್ರಿ.) ಬಾರದೆ, ಹೋಗದೆ, ನಿಂತುಬಿಡು ; 'ಗೈರ್‌ಹಾಜರಾ'ಗು. **Absenteé** (ನಾ.) ತನ್ನ ಸ್ಥಳದಲ್ಲಿಲ್ಲದಿರುವವನು ; 'ಗೈರ್‌ಹಾಜರಾ'ಗಿರುವವನು. ಸಾಮಾನ್ಯವಾಗಿ ತನ್ನ ಸ್ಥಳದಲ್ಲಿಯೊ ದೇಶದಲ್ಲಿಯೊ ವಾಸವಿರದೆ ದೂರದಲ್ಲಿರುವವನು (ಮು., ಜಮೀನ್ದಾರ). **Absenteéism** (ನಾ.) ; **A'bsent** (ಗು.) ಇಲ್ಲದ. ಅನ್ಯ ಮನಸ್ಕನಾಗಿರುವ. **A'bsently** (ಕ್ರಿ. ವಿ.) ; **A'bsentness** (ನಾ.) ; **Absent-mínded** (ಗು.) ಅನ್ಯಮನಸ್ಕನಾದ. **Absent-míndedly** (ಕ್ರಿ. ವಿ.) ; **Absent-míndedness** (ನಾ.)

A'bsidal. Apsidal ನೋಡಿ.

A'bsinth(e) ಆ್ಯಬ್‌ಸಿನ್ತ್ (ನಾ.) ಔಷಧಕ್ಕೊದಗುವ ಕಹಿಯಾದ 'ವರ್ಮ್‌ವುಡ್' ಎಂಬ ಗಿಡ ಅಥವಾ ಅದರ ಸಾರ. ದ್ರಾಕ್ಷಾರಸಕ್ಕೆ ಈ ಕಹಿಪದಾರ್ಥವನ್ನು ಬೆರಸಿ ಮಾಡಿದ ಮದ್ಯ.

A'bsit ómen (L) ಅಬ್ಸಿಟ್ ಓಮೆನ್ (ವಾಕ್ಯ) ಈ ಮಾತುಗಳು ಅಪಶಕುನ ಸೂಚಕವಾಗದಿರಲಿ ; ನನ್ನ ಭೀತಿಯು ನಿರಾಧಾರವಾಗಲಿ.

A'bsolute ಆ್ಯಬ್ಸೊಲ್ಯುಟ್ (ಗು.) ಕೇವಲ ; ಪರಮ ; ಶ್ರೇಷ್ಠ ; ಶುದ್ಧ (Absolute alcohol ಅಪ್ಪಟವಾದ, ನೀರು ಬೆರಕೆಯಿಲ್ಲದ, ಮದ್ಯಸಾರ). ಸಂಪೂರ್ಣ ; ಸಮಗ್ರ. ಖಂಡಿತ. ನಿರಂಕುಶ ; ಸ್ವತಂತ್ರ (God's absolute power ಪರಮೇಶ್ವರನ ಸರ್ವತಂತ್ರ ಸ್ವತಂತ್ರಾಧಿಕಾರ. Absolute ownership ಸರ್ವಸ್ವಾಮ್ಯ. Absolute monarchy ನಿರಂಕುಶ ರಾಜಪ್ರಭುತ್ವ). ಪಾರಮಾರ್ಥಿಕ. ನಿರಪೇಕ್ಷ; ಸಾಪೇಕ್ಷರಹಿತ ; ಉಪಾಧಿ ರಹಿತ (An absolute proposition ನಿರುಪಾಧಿಕ ಪ್ರತಿಜ್ಞೆ ; ಅನವಚ್ಛಿನ್ನ ಪ್ರತಿಜ್ಞೆ). The absolute (ನಾ.) ಪರ ತತ್ತ್ವ ; ಬ್ರಹ್ಮ. **A'bsolutely** (ಕ್ರಿ. ವಿ.) ; **A'bsoluteness** (ನಾ.)

Absolútion ಆ್ಯಬ್ಸೊಲ್ಯೂಷನ್ (ನಾ.) (ತಪ್ಪಿತ, ದಂಡನೆ, ಹಂಗು— ಇವುಗಳಿಂದ) ವಿಧಿವತ್ತಾದ ಬಿಡುಗಡೆ ; ವಿಮೋಚನೆ ; ನಿಷ್ಕೃತಿ.

A'bsolutism ಆ್ಯಬ್ಸೊಲ್ಯುಟಿಸ್ಮ್ (ನಾ.) (ಕ್ರೈಸ್ತ) ಮುಕ್ತಿಯ ವಿಷಯದಲ್ಲಿ ಭಗವಂತನು ಸರ್ವತಂತ್ರ ಸ್ವತಂತ್ರನೆಂಬ ವಾದ. ನಿರಂಕುಶ ಪ್ರಭುತ್ವ (ತತ್ತ್ವ). **A'bsolutist** (ನಾ.) ನಿರಂಕುಶ ಪ್ರಭುತ್ವ ವಾದಿ. (ಅಧ್ಯಾತ್ಮ ತತ್ತ್ವದಲ್ಲಿ) ಅಭೇದ ವಾದಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Absólve ಆ್ಯಬ್ಸಾಲ್ವ್, ಅ್ಯಬ್ಸಾಲ್ವ್ (ಕ್ರಿ. ಸಕ.) (ತಪ್ಪಿತ, ಪಾಪ, ಋಣ, ಮೊ. ನ್ನು) ಕ್ಷಮಿಸು. **Absólvable** (ಗು.)

A'bsonant ಆ್ಯಬ್ಸೊನಂಟ್ (ಗು.) ದುಶ್ರಾವ್ಯ; ಅಪಸ್ವನ; ಅಪಸ್ವರ. ಅಸಂಬದ್ಧ ; ಅಸಂಗತ.

Absórb ಆ್ಯಬ್ಸಾರ್ಬ್ (ಕ್ರಿ. ಸಕ.) ಹೀರು ; ಒಳಕೊಳ್ಳು ; ಲೀನವಾಗಿಸು ; ಐಕ್ಯ ಮಾಡಿಕೊ ; ಮಗ್ನನಾಗುವಂತೆ ಮಾಡು. **Absórbable** (ಗು.) ಹೀರಲಾಗುವ ; ಹೀರಲು ಸಾಧ್ಯವಾದ ; **Absorbabílity** (ನಾ.) ಹೀರಿಕೊಳ್ಳಲಾಗುವ ಗುಣ ; ಲೀನತ್ವ ಸಾಧ್ಯತೆ. **Absórbed** (ಗು.) ಹೀರಲ್ಪಟ್ಟ ; ಮಗ್ನವಾದ. **Absórbedly** (ಕ್ರಿ. ವಿ.) **Absorbefácient** — ಬೆಫೇಷಂಟ್ (ಗು., ನಾ.) (ಗಂತಿ ಮೊ. ವು) ಒಣಗಿಹೋಗುವ ಹಾಗೆ ಅಥವಾ ಇಂಗಿಹೋಗುವ ಹಾಗೆ ಮಾಡುವ (ಪದಾರ್ಥ). **Absórbent** (ಗು.) ಹೀರಿಕೊಳ್ಳುವ ; (ನಾ.) ಹೀರಿಕೊಳ್ಳುವ ವಸ್ತು ; ಲೀನಕಾರಿ. (ಜೀ. ವಿ.) ಆಹಾರವನ್ನು ಹೀರಿಕೊಳ್ಳುವ ನಾಳ. **Absórbing** (ಗು.) ಹೀರಿಕೊಳ್ಳುವ ; ಮಗ್ನಗೊಳಿಸುವ. **Absórbingly** (ಕ್ರಿ. ವಿ.) ; **Absórption** (ನಾ.) ಹೀರಿಕೆ ; ಮಗ್ನತೆ ; ಲೀನತೆ. **Absórptive** (ಗು.) ಹೀರಿಕೊಳ್ಳುವ ಗುಣವುಳ್ಳ. **Absórptiveness** (ನಾ.)

Abstaín ಆ್ಯಬ್‌ಸ್ಟೆಯ್ನ್ (ಕ್ರಿ. ಅಕ.) ಸೇರದೆ ಇರು ; ಬಳಸದಿರು ; ಉಳಿದುಕೊಳ್ಳು ; ವಿಮುಖನಾಗಿರು. (ಮದ್ಯವನ್ನು) ಸೇವಿಸದಿರು. (*from* ಎಂಬ ಉಪ. ದೊಡನೆ). **Abstaíner** (ನಾ.) ಕುಡುಕನಲ್ಲದವನು. **Abstaíning** (ಗು.)

Abstémious ಆ್ಯಬ್‌ಸ್ಟೀಮಿಯಸ್ (ಗು.) (ಅನ್ನಪಾನಗಳಲ್ಲಿ) ಮಿತವಾಗಿರುವ, ಹಾಳಿತವಾಗಿರುವ ; ಮಿತಾಹಾರಿಯಾದ. **Abstémiously** (ಕ್ರಿ. ವಿ.) ; **Abstémiousness** (ನಾ.)

Absténtion ಆ್ಯಬ್‌ಸ್ಟೆನ್‌ಷನ್ (ನಾ.) ವರ್ಜನೆ ; ವಿಮುಖತೆ ; ಬಿಟ್ಟು ಬಿಟ್ಟಿರುವುದು ; ಸೇರದಿರುವುದು.

Abstérgent ಆ್ಯಬ್‌ಸ್ಟರ್ಜಂಟ್ (ಗು., ನಾ.) ಶುಚಿಕಾರಕ (ವಸ್ತು). **Abstérsion** (ನಾ.) ಶುಚೀಕರಣ ; ವಿರೇಚಕ. **Abstérsive** (ಗು.)

A'bstinence ಆ್ಯಬ್‌ಸ್ಟಿನೆನ್ಸ್ (ನಾ.) (ಭೋಗ) ವರ್ಜನೆ ; ಉಪವಾಸ ; ಮಿತಿ. Total abstinence ಮದ್ಯದ ಪೂರ್ಣ ವರ್ಜನೆ. **A'bstinency** (ನಾ.) (ಭೋಗ)ವರ್ಜನ ಶೀಲತೆ ; ಉಪವಾಸ ಮಾಡುವ ಅಭ್ಯಾಸ. **A'bstinent** (ಗು.) ಮಿತವಾಗಿರುವ. **A'bstinently** (ಕ್ರಿ. ವಿ.)

A'bstract ಆ್ಯಬ್‌ಸ್ಟ್ರ್ಯಾಕ್ಟ್ (ಗು.) ಚಿನ್ಮಾತ್ರ ಗೋಚರ ; ಕೇವಲ ಭಾವನಾ ರೂಪವಾದ ; ಗುಣ ರೂಪವಾದ ; ಭಾವನೆಯಲ್ಲಿ ಮಾತ್ರ ಇರತಕ್ಕ ; ಅಮೂರ್ತ ; ದುರವಗಾಹ್ಯ. (ನಾ.) In the abstract ಭಾವದೃಷ್ಟಿಯಿಂದ ; ತತ್ತ್ವಸ್ವರೂಪದಲ್ಲಿ. **A'bstractly** (ಕ್ರಿ. ವಿ.) ; **A'bstractness** (ನಾ.) ; **A'bstract** (ನಾ.) ತಿರುಳು ; ಸಂಗ್ರಹ ; ಸಾರಾಂಶ ; ಗೋಷ್ವಾರೆ. (=Abstract term) ಭಾವ ವಾಚಿ. **Abstráct** ಆ್ಯಬ್‌ಸ್ಟ್ರ್ಯಾಕ್ಟ್ (ಕ್ರಿ. ಸಕ.) ಬೇರ್ಪಡಿಸು ; ತೆಗೆ ; ಎತ್ತಿ ತೆಗೆ ; ಕಳೆ ; ಅಪಹರಿಸು ; ಕಳವು ಮಾಡು ; ತಪ್ಪಿಸಿಬಿಡು. ಭಾವ ರೂಪದಲ್ಲಿ ಗ್ರಹಿಸು. ಸಂಗ್ರಹಿಸು. **Abstrácted** (ಗು.) ಬೇರ್ಪಡಿಸಿದ. ಯೋಚನೆಯಲ್ಲಿ ಮಗ್ನನಾದ ; ಗಮನ ಕೊಡದಿರುವ. **Abstráctedly** (ಕ್ರಿ. ವಿ.) ಅನವಧಾನವಾಗಿ ; ಅಡ್ಡಜ್ಞಾನವಾಗಿ. **Abstráctedness** (ನಾ.) ; **Abstráction** (ನಾ.) ಅಪಕರ್ಷಣ ; ಅಪಹರಣ ; ಒಂದು ವಿಷಯದ ಮೂರ್ತ ಸ್ವರೂಪವನ್ನು ಗಣನೆಗೆ ತಾರದೆ ಅದರ ಭಾವ ಮಾತ್ರ ಗ್ರಹಿಸುವುದು : ಭಾವ ಮಾತ್ರ ಗ್ರಹಣ ; ಹಾಗೆ ಗ್ರಹಿಸಲ್ಪಟ್ಟ ಭಾವ ; ಅಮೂರ್ತ ಭಾವನೆ ; ಕೇವಲ ಕಾಲ್ಪನಿಕ ಭಾವನೆ ; ಬರಿಯ ಭ್ರಾಂತಿ. ಅನ್ಯ ಮನಸ್ಕತೆ ; ಅಡ್ಡ ಜ್ಞಾನ.

Abstrúse ಆ್ಯಬ್‌ಸ್ಟ್ರೂಸ್ (ಗು.) ತಿಳಿಯಲು ಕಷ್ಟವಾದ ; ಗಹನ ; ದುರ್ಬೋಧ ; ದುರ್ಜ್ಞೇಯ ; ಅತಿ ಸೂಕ್ಷ್ಮ ; ಕ್ಲಿಷ್ಟ. **Abstrúsely** (ಕ್ರಿ. ವಿ.) ; **Abstrúseness** (ನಾ.)

Absúrd ಆ್ಯಬ್‌ಸರ್ಡ್ (ಗು.) ಅಸಂಬದ್ಧ ; ಅಸಂಗತ ; ಅವಿವೇಕ ; ಹಾಸ್ಯಾಸ್ಪದ ; ಹುಚ್ಚು. **Absúrdly** (ಕ್ರಿ. ವಿ.) ; **Absúrdity** (ನಾ.) ಹುಚ್ಚುತನ ; ಅಸಂಬದ್ಧತೆ ; ಅಸಂಬದ್ಧ ಪ್ರಲಾಪ ಅಥವಾ ಕಾರ್ಯ.

Abúlia. Aboulia ನೋಡಿ.

Abúndance ಅಬನ್ಡನ್ಸ್ (ನಾ.) ಸಮೃದ್ಧಿ ; ಪುಷ್ಕಳತೆ ; ಯಥೇಷ್ಟತೆ ; ಬೇಕಾದಷ್ಟು ; ಹೇರಳ. ಪೆಂಪು ; ಐಶ್ವರ್ಯ ; ಸಂಪತ್ತು. ಹುಲುಸು (ಬೆಳೆ). **Abúndant** (ಗು.) ತುಂಬಿ ತುಳುಕುವ ; ಸಮೃದ್ಧ ; ತುಂಬ ; ಯಥೇಷ್ಟ. **Abúndantly** (ಕ್ರಿ. ವಿ.)

Abúse ಅಬ್ಯೂಸ್ (ಕ್ರಿ. ಸಕ.) ತಪ್ಪಾಗಿ ಉಪಯೋಗಿಸು ; ದುರುಪಯೋಗ ಮಾಡು. ಬಯ್ಯಿ ; ತೆಗಳು ; ನಿಂದಿಸು ; ದೂಷಿಸು. **Abúse** ಅಬ್ಯೂಸ್ (ನಾ.) ತಪ್ಪು ಉಪಯೋಗ ; ದುರುಪಯೋಗ ; ಅಪಪ್ರಯೋಗ ; ಕೆಟ್ಟ ಪದ್ಧತಿ ; ದುರಾಚಾರ ; ಅನ್ಯಾಯ. ಬೈಗುಳು ; ದೂಷಣೆ. **Abúsive** (ಗು.) ; **Abúsively** (ಕ್ರಿ. ವಿ.) ; **Abúsiveness** (ನಾ.)

Abút ಅಬಟ್ (ಕ್ರಿ. ಅಕ.) ಸೇರಿಕೊಂಡಿರು ; ಹೊಂದಿಕೊಂಡಿರು ; ಎಲ್ಲೆಗೂಡಿರು ; ಪಕ್ಕಕಟ್ಟಿರು. ಒರಗಿರು ; ಊರೆಯಾಗಿರು. **Abútment** (ನಾ.) ಕೊನೆ ಕೊನೆ ಸೇರಿರುವುದು (ಮು., ಕಟ್ಟಡದಲ್ಲಿ) ; ಹಾಗೆ ಸೇರಿರುವ ಭಾಗ. ಪಕ್ಕದಲ್ಲಿಯ ಆಧಾರ, ಊರೆ, ಒದೆ. ಒಂದು ಕಮಾನಿಗೆ ಅಥವಾ ಸೇತುವೆಗೆ ಆಧಾರವಾಗಿರುವ ಕಟ್ಟಡದ ಭಾಗ ; ಕಮಾನಿನ ಗುದ್ದು ಕಂಬ ; ಕಮಾನೂ ಅದರ ಆಧಾರವೂ ಸಂಧಿಸುವ ಸ್ಥಳ. **Abútter** (ನಾ.) (ನ್ಯಾ. ಶಾ.) ಎಲ್ಲೆ ಸೇರಿರುವ (ಹೊಲ, ಗದ್ದೆ, ಮನೆ, ಮೊ.) ಭೂಸ್ಥಿತಿಗಳ ಒಡೆಯ ; ಪಕ್ಕದ ಜಮೀನಿನವನು.

Abý, Abyé ಅಬೈ (ಕ್ರಿ. ಸಕ.) (ಪ್ರಾಚೀ. ಪ್ರ., ಭೂತ., ಭೂ. ಕೃ. Abought) (ಮಾಡಿದ ತಪ್ಪಿತಕ್ಕೆ ಹೆಚ್ಚಾಗಿ) ದಂಡ ಕೊಡು.

Abýsm ಅಬಿಸ್ಮ್ (ನಾ.) Abyss ಎಂಬುದರ ಪೂರ್ವ ರೂಪ. **Abýsmal** (ಗು.) ಅಗಾಧವಾದ ; ತಳವಿಲ್ಲದ. **Abýsmally** (ಕ್ರಿ. ವಿ.)

Abýss ಅಬಿಸ್ (ನಾ.) ಪಾತಾಳ ; ಅಗಾಧ. ಸೃಷ್ಟಿಗೆ ಪೂರ್ವಭಾವಿಯಾಗಿ ಪಂಚ ಭೂತಗಳೂ ಅಸ್ತವ್ಯಸ್ತವಾಗಿ ಬೆರೆತುಕೊಂಡಿದ್ದ ಅಗಾಧ ಕೂಪ. ಭೂಗರ್ಭ ಕುಹರ ; ಅಧೋಲೋಕ ; ನರಕ ಕೂಪ ; ದೊಡ್ಡ ಆಳ. **Abýssal** (ಗು.) ಅಗಾಧವಾದ. ಸಮುದ್ರದಲ್ಲಿ ಮುನ್ನೂರು ಆಳುಮಟ್ಟಕ್ಕೆ ಕೆಳಗಿರುವ.

Acácia ಅಕೇಷಿಯ (ನಾ.) ಜಾಲಿಯ ಜಾತಿಯ ಮರ ; ಎರಡಾಗಿ ಒಡೆಯುವ ಬೀಜಕೋಶವುಳ್ಳ ಗಿಡ ಮರಗಳ ವರ್ಗಕ್ಕೆ ಸೇರಿದ, ಮತ್ತು ಗೋಂದು ಸ್ರವಿಸುವ, ಒಂದು ವೃಕ್ಷಜಾತಿ.

Acádemy ಅಕ್ಯಾಡೆಮಿ (ನಾ.) ಗ್ರೀಸ್ ದೇಶದ ದಾರ್ಶನಿಕರಲ್ಲೊಬ್ಬನಾದ ಪ್ಲೇಟೊ ಎಂಬಾತನು ಆಥೆನ್ಸ್ ಪಟ್ಟಣದ ಬಳಿ ಪಾಠ ಹೇಳುತ್ತಿದ್ದ ತೋಟ ; (ಆ ಕಾರಣದಿಂದ) ಪ್ಲೇಟೋವಿನ ಸಿದ್ಧಾಂತ ; ಪ್ಲೇಟೋವಿನ ಅನುಯಾಯಿಗಳು. ಪ್ರೌಢ ವಿದ್ಯಾಶಾಲೆ. ಯಾವುದಾದರೂ ಒಂದು ಕಲೆಯನ್ನು ಅಭ್ಯಾಸ ಮಾಡಿಸುವ ಶಾಲೆ. ಸಾಹಿತ್ಯದ, ಶಾಸ್ತ್ರದ ಅಥವಾ ಕಲೆಗಳ ಅಭ್ಯಾಸ ಅಭಿವೃದ್ಧಿಗಳಿಗಾಗಿ ಏರ್ಪಟ್ಟಿರುವ ಸಂಸ್ಥೆ ; (ಪ್ರತಿಷ್ಠಾಕಾಂಕ್ಷಿಯಾದ ವಿದ್ಯಾಸಂಸ್ಥೆಯ ವಿಷಯದಲ್ಲಿ ವ್ಯಂಗ್ಯವಾಗಿ ಪ್ರಯೋಗಿಸುವುದೂ ಉಂಟು). **Académic** ಆ್ಯಕಡೆಮಿಕ್ (ಗು., ನಾ.) ಪ್ಲೇಟೋವಿನ ಸಿದ್ಧಾಂತಕ್ಕೆ ಅಥವಾ ಅನುಯಾಯಿಗಳಿಗೆ ಸಂಬಂಧಪಟ್ಟ. (ಪ್ಲೇಟೋವಿನ ತರುವಾಯ ಬಂದ ಕೆಲವರು ದಾರ್ಶನಿಕರ ಅಭಿಪ್ರಾಯದ ಮೇರೆಗೆ) ಸಂಶಯೋತ್ಪಾದಕ. ಪ್ಲೇಟೋಮತಾನುಯಾಯಿಗಳಲ್ಲಿ ಪ್ರಾಚೀನ ಸಂಪ್ರದಾಯದವನು. ವಿದ್ಯಾಸಂಸ್ಥೆಗೆ ಸಂಬಂಧಪಟ್ಟ. ಪ್ರೌಢ ; ಪಾಂಡಿತ್ಯವುಳ್ಳ. (ಕೇವಲ ಪಾಂಡಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ಯದ ಫಲವಾಗಿ) ಕಾರ್ಯಕ್ಕೆ ಒದಗದ ; ಅಗದ ಹೋಗದ ; ಕ್ರಿಯಾತ್ಮಕವಲ್ಲದ ; ಶುಷ್ಕ ತಾರ್ಕಿಕ. ಒಂದು ವಿದ್ಯಾಪೀಠದ ಸದಸ್ಯ. ವಿದ್ಯಾಸಂಸ್ಥೆಯ ತತ್ತ್ವಗಳಿಗೆ ಅಥವಾ ಸಂಪ್ರದಾಯಗಳಿಗೆ ಅತಿಯಾಗಿ ದಾಸನಾದವನು. **Académics** (ನಾ.) ಜಿಜ್ಞಾಸ ; ಶಾಸ್ತ್ರೀಯ ದೃಷ್ಟಿಯುಳ್ಳ ಜಿಜ್ಞಾಸ. ವಿಶ್ವವಿದ್ಯಾಪೀಠದ ಲಾಂಛನವಾದ ಉಡುಪು (=**Acadèmicals**). **Acadèmical** = Acadèmic (ಗು.) ; **Acadèmically** (ಕ್ರಿ. ವಿ.) ; **Acadèmícian** ಅಕ್ಯಾಡೆಮಿಷನ್ (ನಾ.) ಒಂದು ವಿದ್ಯಾಸಂಸ್ಥೆಯ ಅಥವಾ ಕಲಾಸಂಸ್ಥೆಯ ಸದಸ್ಯ.

A'cajou ಅಕಾಷೂ (ನಾ.) ಗೇರುಬೀಜದ (ಗೋಡಂಬಿಯ) ಮರ (=Cashew)

Acánthus ಅಕ್ಯಾನ್ಥಸ್ (ನಾ.) ಒಂದು ಸಸ್ಯಜಾತಿ. (ಈ ಸಸ್ಯದ ಎಲೆಯ ಆಕಾರವನ್ನು ಗ್ರೀಕ್ ವಾಸ್ತುಶಿಲ್ಪದಲ್ಲಿ ಕಂಭಗಳ ಮೇಲಿನ ಚಿತ್ರವಾಗಿ ಉಪಯೋಗಿಸುತ್ತಾರೆ)

Acápsular ಅಕ್ಯಾಪ್ಸ್ಯುಲರ್ (ಗು.) ಹೊದಿಕೆ, ಹೊಟ್ಟು ಅಥವಾ ಪೊರೆ ಇಲ್ಲದ.

Acárdiac ಅಕಾರ್ಡಿಯಕ್ (ಗು.) (ಶ. ವಿ.) ರಕ್ತಕೋಶವಿಲ್ಲದ ; ಹೃದಯಾಂಗವಿಲ್ಲದ.

Acárpous ಅಕಾರ್ಪಸ್ (ಗು.) (ಸ. ವಿ.) ಹಣ್ಣು ಬಿಡದ ಜಾತಿಯ ; ಅಫಲ ಜಾತಿಯ.

Acataléctic ಅಕ್ಯಾಟಲೆಕ್ಟಿಕ್ (ಗು., ನಾ.) (ಛಂ.) ಒಂದು ಅಕ್ಷರವೂ ಲೋಪವಿಲ್ಲದ, ಪೂರ್ಣ (ಪಾದ) ; ಅನ್ಯೂನ (ಪಾದ).

Acátalepsy ಅಕ್ಯಾಟಲೆಪ್ಸಿ (ನಾ.) (ದಾರ್ಶನಿಕ) ಅಜ್ಞೇಯತೆ. **Acataléptic** (ಗು.) ಅಜ್ಞೇಯತಾ ಸಂಬಂಧವಾದ ; ಅಜ್ಞೇಯ.

Acaúlous ಅಕಾಲಸ್ (ಗು.) (ಸ. ವಿ.) ತಾಳು ಇಲ್ಲದಂತೆ ಕಾಣುವ ; ಬಹು ಸಣ್ಣ ತಾಳುಳ್ಳ ; ಅಸ್ಪಷ್ಟ ಕಾಂಡ.

Accéde ಅ್ಯಕ್ಸೀಡ್ (ಕ್ರಿ. ಅಕ.) ಅಧಿಕಾರಕ್ಕೆ ಬರು ; ಅಧಿಕಾರ ವಹಿಸಿಕೊ. (ಒಂದು ಪಂಗಡವನ್ನು) ಸೇರು. (ಒಂದು ಅಭಿಪ್ರಾಯಕ್ಕೆ ಅಥವಾ ನೀತಿಗೆ) ಒಪ್ಪು, ಸಮ್ಮತಿಸು.

Accélerate ಅ್ಯಕ್ಸೆಲರೇಟ್ (ಕ್ರಿ.) ವೇಗವನ್ನು ಹೆಚ್ಚಿಸು ; ತ್ವರೆಪಡಿಸು. ವೇಗವೃದ್ಧಿ ಹೊಂದು ; ವೇಗ ಹೆಚ್ಚೆ ಹಾಕು. **Accélerated** (ಗು.) ವೇಗವೃದ್ಧಿ ಹೊಂದಿದ ; ವೇಗವು ಕ್ರಮೇಣ ಹೆಚ್ಚುತ್ತ ಹೋದ. **Accélerating** (ಗು.) ವೇಗ ವರ್ಧಕ. **Acceleration** (ನಾ.) ವೇಗ ವರ್ಧನೆ. (ಭೌ. ವಿ.) ಚಲಿಸುತ್ತಿರುವ ವಸ್ತುವಿನ ಗತಿವೃದ್ಧಿಯ ಪ್ರಮಾಣ ; ಗತಿವೃದ್ಧಿ ; ಗತ್ಯುಪಚಯ. (ಖ. ವಿ.) **A.** of stars ಸ್ಥಿರ ನಕ್ಷತ್ರಗಳು ಪ್ರತಿ ದಿನವೂ ಸೂರ್ಯನನ್ನು ಮೀರಿ ಮುಂಬರಿವ ಕಾಲ ಪರಿಮಿತಿ. **A.** of planets ಸೂರ್ಯೋಚ್ಚದಿಂದ ಸೂರ್ಯನೀಚದ ವರೆಗೆ ಗ್ರಹಗತಿಯಲ್ಲುಂಟಾಗುವ ವೇಗವೃದ್ಧಿ. **A.** of tides (ಸಮುದ್ರದ ಏರಿಳಿತದಲ್ಲಿ) ಯಾವುದಾದರೂ ಒಂದು ಸ್ಥಳದಲ್ಲಿ, ಗಣಿತ ಕಾಲಕ್ಕಿಂತ ಎಷ್ಟುಮುಂಚೆ ನೀರೊತ್ತು ಸಂಭವಿಸುವುದೊ ಆ ಕಾಲಪರಿಮಿತಿ. **Accélerative** (ಗು.) ವೇಗವೃದ್ಧಿಯುಂಟುಮಾಡುವ ; ವೇಗವನ್ನು ಹೆಚ್ಚಿಸುವ. **Accélerator** (ನಾ.) ವೇಗವರ್ಧಕ (ಮನುಷ್ಯ ಅಥವಾ ವಸ್ತು) : (ಮು.) ವೇಗವನ್ನು ಹೆಚ್ಚಿಸುವುದಕ್ಕೆ ಮೋಟಾರು ಬಂಡಿಯಲ್ಲಿರುವ ಉಪಕರಣ. ವೇಗ ವರ್ಧಕ ನರಗಳೂ ಸ್ನಾಯುಗಳೂ.

A'ccent ಅ್ಯಕ್ಸೆಂಟ್ (ನಾ.) ಒತ್ತು ; ಗಟ್ಟಿ ಸ್ವರ ; ಉಚ್ಚಾರಣೆಯಲ್ಲಿ ಪದದ ಒಂದು ಅಕ್ಷರಕ್ಕಿರುವ ಪ್ರಾಧಾನ್ಯ ; ಸ್ವರ ಚಿಹ್ನೆ. (ವೈಯಕ್ತಿಕ, ಸ್ಥಳೀಯ, ದೇಶೀಯ) ಉಚ್ಚಾರಣಾ ರೀತಿ. ಮನೋಭಾವ ಪ್ರದರ್ಶನಕ್ಕಾಗಿ ಮಾಡುವ ಉಚ್ಚಾರಣಾ ವ್ಯತ್ಯಾಸ. (ಇಂಗ್ಲಿಷ್ ಛಂ., ಸಂ.) ತಾಳಕ್ಕನುಸಾರವಾದ ಸ್ವರಭಾರ, ಒತ್ತಡ ; ಖಂಡನೆ ; ಚಾಪು. (ರೂಪ.) ಉದಾತ್ತತೆ ; ವೈಲಕ್ಷಣ್ಯ. (ಬ. ವ., ಕಾವ್ಯ) ಭಾಷೆ ; ಮಾತು. **Accént** ಅ್ಯಕ್ಸೆಂಟ್ (ಕ್ರಿ. ಸಕ.) ಸ್ವರ ಹಾಕು ; ಒತ್ತು ; ಎತ್ತರಿಸು. **Accéntor** (ನಾ.) ಸಂಗೀತದಲ್ಲಿ ಪ್ರಧಾನ ಭಾಗವನ್ನು ಹಾಡುವವನು. ಒಂದು ಪಕ್ಷಿಜಾತಿ. **Accéntual** — ಟ್ಯುಅಲ್ (ಗು.) (ಉಚ್ಚಾರಣೆಯ) ಸ್ವರಕ್ಕೆ ಸಂಬಂಧಪಟ್ಟ. **Accéntuate** —ಟ್ಯುಏಟ್ (ಕ್ರಿ. ಸಕ.) ಸ್ವರ ಹಾಕು ; ಒತ್ತಿ ಉಚ್ಚರಿಸು ; ಒತ್ತಿ ಹೇಳು. ಪ್ರಧಾನ ಮಾಡು ; ವೃದ್ಧಿಗೊಳಿಸು ; ತೀವ್ರಗೊಳಿಸು ; ಬೆಳಸು ; ದೊಡ್ಡದು ಮಾಡು. **Accéntuátion** (ನಾ.)

Accépt ಅ್ಯಕ್ಸೆಪ್ಟ್ (ಕ್ರಿ. ಸಕ.) ಕೈಕೊಳ್ಳು ; ಒಪ್ಪಿಕೊ ; ಒಪ್ಪಿಸಿಕೊ ; ಸಮ್ಮತಿಸು ; ಸ್ವೀಕರಿಸು ; ಅಂಗೀಕರಿಸು. ವಿಶ್ವಾಸ ತೋರಿಸು ; ಅಭಿಮಾನ ತೋರಿಸು. (ಜವಾಬ್ದಾರಿ) ವಹಿಸು. **Accéptable** (ಗು.) ಸ್ವೀಕರಿಸಬಹುದಾದ ; ಅಂಗೀಕರಿಸಬಹುದಾದ ; ಒಪ್ಪಬಹುದಾದ ; ಒಪ್ಪಲು ಯೋಗ್ಯವಾದ ; ಗ್ರಾಹ್ಯ. ಹಿತಕರ ; ಮನೋಹರ. **Accéptably** (ಕ್ರಿ. ವಿ.) ; **Acceptability** (ನಾ.) ; **Accéptableness** (ನಾ.) ಸ್ವೀಕಾರಾರ್ಹತೆ ; ಗ್ರಾಹ್ಯತೆ. **Accéptance** (ನಾ.) ಒಪ್ಪಿಗೆ ; ಸಮ್ಮತಿ ; ಮೆಚ್ಚಿಕೆ ; ಸ್ವೀಕಾರ ; ಅಂಗೀಕಾರ. ಪಕ್ಷಪಾತ. ಹುಂಡಿಗೆ ಹಣಕೊಡುವ ಒಪ್ಪಿಗೆ ; ಹಾಗೆ ಒಪ್ಪಿಗೆ ಪಡೆದ ಹುಂಡಿ. **Accéptancy** (ನಾ.) ಅಂಗೀಕರಿಸುವ ಇಚ್ಛೆ. **Accéptant** (ಗು., ನಾ.) ಮನಃಪೂರ್ತಿಯಾಗಿ ಅಂಗೀಕರಿಸುವ(ವನು). ಹುಂಡಿಯನ್ನು ಅಂಗೀಕರಿಸುವವನು. **Acceptátion** (ನಾ.) ಒಂದು ಪದಕ್ಕೆ ಸಾಧಾರಣವಾಗಿ ಅಂಗೀಕೃತವಾದ ಅರ್ಥ : ರೂಢಾರ್ಥ. **Accépted** (ಗು.) ಸಾಮಾನ್ಯವಾಗಿ ಅಂಗೀಕೃತವಾದ. **Accéptedly** (ಕ್ರಿ. ವಿ.) ; **Accépter** (ನಾ.) ಒಪ್ಪಿಕೊಳ್ಳುವವನು. **Accéptor** (ನಾ.) ಹುಂಡಿಗೆ ಹಣ ಕೊಡಲು ಒಪ್ಪಿಕೊಳ್ಳುವವನು.

A'ccess ಅ್ಯಕ್ಸೆಸ್, **Accéss** ಅ್ಯಕ್ಸೆಸ್ (ನಾ.) ಪ್ರವೇಶ ; ಹಾದಿ ; ದಾರಿ ; ಮಾರ್ಗ ; ಬಾಗಿಲು ; ಬಾಟೆ. ಪ್ರವೇಶಾಧಿಕಾರ. ಸೇರಿಕೆ ; ವೃದ್ಧಿ. (ವ್ಯಾಧಿ, ಕೋಪ, ಮನೋಭಾವ—ಇವುಗಳ) ವೃದ್ಧಿ, ಉದ್ರೇಕ, ಉಲ್ಬಣ. **A'ccessary, Accéssary** (ನಾ.) ಸಹಾಯಕ ; ನೆರವಿಗ ; ಸಹಕಾರಿ. (ನ್ಯಾ. ಶಾ.) ದುಷ್ಕಾರ್ಯದಲ್ಲಿ ಸಹಾಯ ಮಾಡುವವನು, ಅಥವಾ ಮೊದಲೇ ಅದಕ್ಕೆ ಅಭಿಮತ ಕೊಡುವವನು ; 'ಶಾಮೀಲು 'ದಾರ. ಉಪಕರಣ ; ಸಾಧನ ಸಾಮಗ್ರಿ ; ಸಲಕರಣೆ. **Accéssible** (ಗು.) ಪ್ರವೇಶಿಸಲು ಅಥವಾ ಪಡೆಯಲು ಸಾಧ್ಯವಾದ ; ಸುಗಮ್ಯ ; ಸುಲಭ. (ರೂಪ.) ಅಧಿಕಾರ ದಾಕ್ಷಿಣ್ಯಕ್ಕೆ ಅಥವಾ ಪ್ರೇರಣೆಗೆ ಒಳಪಡುವ. **Accessibility** (ನಾ.) ; **Accéssibly** (ಕ್ರಿ. ವಿ.) ; **Accéssion** (ನಾ.) ಪ್ರವೇಶ ; ಪ್ರಾಪ್ತಿ ; (ಸ್ಥಿತಿಗೆ, ಪದವಿಗೆ, ಮು., ಪಟ್ಟಕ್ಕೆ) ಬರುವುದು. ಸನ್ನಿಧಿಗೆ, ಸಮೀಪಕ್ಕೆ, ಬರುವುದು, ಬರಮಾಡಿಕೊಳ್ಳುವುದು. ಸೇರಿಕೆ ; ಸೇರಿದ ವಸ್ತು. ಒಪ್ಪಿಗೆ ; ಅಂಗೀಕಾರ. (ನ್ಯಾ. ಶಾ.) ಆಸ್ತಿಯ ವೃದ್ಧಿ ಅಥವಾ ಬೆಳವಣಿಗೆ. **A'ccessory, Accéssory** (ಗು.) ಮಿಗಿಲಾದ ; ಸೇರಿದ ; ಸಹಾಯಕ ; ಅನುಷಂಗಿಕ. The accessories (ನಾ.) ಸಾಧನ ಸಾಮಗ್ರಿ.

A'ccidence ಅ್ಯಕ್ಸಿಡೆನ್ಸ್ (ನಾ.) ವಿಭಕ್ತಿ ಪ್ರತ್ಯಯಗಳನ್ನೂ ಆಖ್ಯಾತ ಪ್ರತ್ಯಯಗಳನ್ನೂ ವಿವರಿಸುವ ವ್ಯಾಕರಣ ಭಾಗ : ವಿಭಕ್ತಿ ಪ್ರಕರಣ. (ಯಾವುದಾದರೂ ಒಂದು ವಿಷಯದ) ಮೂಲಾಂಶಗಳು.

A'ccident ಅ್ಯಕ್ಸಿಡೆನ್ಟ್ (ನಾ.) ಆಕಸ್ಮಿಕ ; ಅದೃಷ್ಟ ; ದುರದೃಷ್ಟ ; ಪ್ರಮಾದ ; ವಿಪತ್ತು ; ಅನಿರೀಕ್ಷಿತ ಘಟನೆ ; ದೈವಯೋಗ. ಅನುದ್ದಿಷ್ಟ ; ಮುಖ್ಯವಲ್ಲದ್ದು ; ಗೌಣ. By accident or design ಅಕಸ್ಮಾತ್ತಾಗಿಯೋ ಉದ್ದೇಶ ಪೂರ್ವಕವಾಗಿಯೋ. **Accidéntal** (ಗು.) ಅನಿರೀಕ್ಷಿತ ; ಅಕಸ್ಮಾತ್ ಸಂಭವಿಸುವ ; ಹಠಾತ್ತಾದ ; ಪ್ರಾಸಂಗಿಕ ; ಅಪ್ರಸಕ್ತ ; ಅಮುಖ್ಯ ; ಆಗಂತುಕ. ಅಂತರಿಂದ್ರಿಯಕ್ಕೆ ಮಾತ್ರ ಗೋಚರವಾಗುವ. (ಭೌ. ವಿ.) Accidental colours ಬಾಹ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಿಲ್ಲದ, ಮನಸ್ಸಿಗೆ ಮಾತ್ರ ಗೋಚರವಾಗುವ, ಬಣ್ಣಗಳು. **Accidéntally** (ಕ್ರಿ. ವಿ.)

Accípitral ಆ್ಯಕ್ಸಿಪಿಟ್ರಲ್ (ಗು.) ಡೇಗೆಯಂಥ. ದೋಚುವ. ತೀಕ್ಷ್ಣ ದೃಷ್ಟಿಯುಳ್ಳ.

Acclaím ಅಕ್ಲೆಯ್ಮ್ (ಕ್ರಿ. ಸಕ.) ಗಟ್ಟಿಯಾಗಿಯೂ ಉತ್ಸಾಹದಿಂದಲೂ ಹೊಗಳು ; 'ಭೇಷ್, ಭಲಾ, ಶಹಬಾಸ್' ಎನ್ನು ; ಉಗ್ಗಡಿಸು ; ಉದ್ಘೋಷಿಸು ; ಪ್ರಶಂಸಿಸು ; ಜಯಘೋಷ ಮಾಡು. (ನಾ.) ಜಯಘೋಷ ; ಪ್ರಶಂಸಾ ಘೋಷ. **Acclamátion** ಆ್ಯಕ್ಲಮೇಷನ್ (ನಾ.) ಜಯಘೋಷದೊಡನೆ ಒಪ್ಪಿಗೆ ಕೊಡುವುದು ; ಉಗ್ಗಡಣೆ.

Acclimátion ಆ್ಯಕ್ಲಿಮೇಷನ್, **Acclimatátion** ಅಕ್ಲೈಮಟೇಷನ್, **Acclímatizátion** ಅಕ್ಲೈಮಟೈಸೇಷನ್ (ನಾ.) ಹೊಸ ವಾಯುಗುಣಕ್ಕೆ ಪಳಗಿಸುವುದು ಅಥವಾ ಒಗ್ಗಿಸುವುದು, ಪಳಗುವುದು, ಒಗ್ಗುವುದು. ಹೊಸ ವಾಯುಗುಣಕ್ಕೆ ಪಳಗಿದ ವ್ಯಕ್ತಿ ಅಥವಾ ವಸ್ತು (ಪ್ರಾಣಿ, ಗಿಡ, ಮೊ.). Acclimatization gardens ವಾಯುಗುಣಕ್ಕೆ ಹೊಂದುವಂತೆ ಗಿಡಗಳನ್ನು ಪಳಗಿಸುವ ತೋಟಗಳು. **Acclímate** ಅಕ್ಲೈಮೆಟ್ (ಕ್ರಿ.), **Acclímatize** (ಕ್ರಿ.) ಹೊಸವಾಯುಗುಣಕ್ಕೆ ಒಗ್ಗಿಸು, ಪಳಗಿಸು ; ಹವ ಒಗ್ಗಿಸು. (ರೂಪ.) ಹೊಸ ಸನ್ನಿವೇಶಕ್ಕೆ ಒಗ್ಗಿಸು, ಒಗ್ಗು.

Acclívity ಅಕ್ಲಿವಿಟಿ (ನಾ.) ಏರುದಿಣ್ಣೆ ; ಗುಡ್ಡದ ಅಥವಾ ಬೆಟ್ಟದ ಏರುವೋರೆ.

Accloý ಅಕ್ಲಾಯ್ (ಕ್ರಿ. ಸಕ.) ಕುದುರೆಗೆ ಲಾಳಕಟ್ಟುವಾಗ ಮೊಳೆ ಚುಚ್ಚು; ಕುಂಟು ಮಾಡು. (ರೂಪ. ಸಹ). ಕಂಡಿಯನ್ನು ಮೊಳೆ, ಮೊ. ಳಿಂದ ಮುಚ್ಚು. ತಡೆ ; ಅಡ್ಡಗಿಸು. ನಾಳ ಬಂಧ ಮಾಡು.

Accoláde ಆ್ಯಕೊಲೇಡ್, ಆಕೊಲಾಡ್ (ನಾ.) 'ನೈಟ್‌ಹುಡ್' ('ಸರ್' ಪದವಿಯನ್ನು) ಕೊಡುವಾಗ ಮಾಡುವ ಖಡ್ಗಸ್ಪರ್ಶ ಮೊ. ಗೌರವ ಕ್ರಿಯೆಗಳು.

Accómmodate ಅಕಾಮೊಡೇಟ್ (ಕ್ರಿ. ಸಕ.) (ಒಂದು ವಸ್ತುವನ್ನಾಗಲಿ ವ್ಯಕ್ತಿಯನ್ನಾಗಲಿ ಮತ್ತೊಂದಕ್ಕೆ) ಸರಿಹೊಂದಿಸು ; ಹೊಂದಿಕೆಮಾಡು. (ಮನಸ್ತಾಪ ಅಥವ ಜಗಳವನ್ನು) ಪರಿಹರಿಸು ; ಸಮಾಧಾನಗೊಳಿಸು. ಅನುಕೂಲ ಮಾಡಿಕೊಡು ; ಹವಣಿಸು ; ಒದಗಿಸಿ ಕೊಡು. ಅನುಗ್ರಹ ಮಾಡು. ಸ್ಥಳ ಕೊಡು. To accommodate the eye to different distances ದೃಷ್ಟಿಯನ್ನು (ಕಣ್ಣನ್ನು) ದೂರಕ್ಕೆ ತಕ್ಕಂತೆ ಹೊಂದಿಸಿಕೊಳ್ಳುವುದು. **Accómmodating** (ಗು.) ಹೊಂದಿಕೊಂಡುಹೋಗುವ ; ದಾಕ್ಷಿಣ್ಯಪರನಾದ ; ಸುಲಭ ವಶ್ಯ ; ಹಿಡಿತವಿಲ್ಲದ. **Accommodátion** (ನಾ.) ಹೊಂದಿಕೆ ; ಹೊಂದಿಸುವುದು. ಮೂಲಕ್ಕಿಂತ ಬೇರೆಯಾದ ಅರ್ಥಕ್ಕೊ ಕಾರ್ಯಕ್ಕೊ ಯಾವುದನ್ನಾದರೂ ಹೊಂದಿಸುವುದು, ಹೊಂದಿಕೊಳ್ಳುವುದು. ವ್ಯವಸ್ಥೆ ; ರಾಜಿ. ಕೆಲಸಕ್ಕೊದಗುವ ವಸ್ತು. ಅನುಕೂಲ್ಯ ; ವಸತಿ ; ಸ್ಥಳ. ಅನುಕೂಲ ಮಾಡಿಕೊಡುವುದು. ಹಣದ ಸಾಲ. Progress is from necessaries to accommodations ಅವಶ್ಯ ವಸ್ತುಗಳಿಂದ ಅನುಕೂಲ ವಸ್ತುಗಳ ಸಂಪಾದನೆಗೆ ಹೊರಡುವುದು ಅಭ್ಯುದಯ. Accommodation Bill ಒಬ್ಬನ ದರದು ನಿಮಿತ್ತವಾಗಿ ಅವನಿಗೆ ಹಣ ದೊರಕಿಸಲು ಕೊಟ್ಟ ಹುಂಡಿ: ದರದು ಹುಂಡಿ.

Accómpany ಅಕಂಪನಿ (ಕ್ರಿ. ಸಕ.) ಜೊತೆಯಲ್ಲಿರು ; ಒಡಗೂಡಿ ಹೋಗು ; ಸಹಚರಿಸು ; (ಮರ್ಯಾದೆಗಾಗಿ ಅಥವಾ ರಕ್ಷಣೆಗಾಗಿ) ಹಿಂದೆ ಹೋಗು. ಸಹಾಯಕನಾಗಿ ಹಾಡು ಅಥವಾ ಬಾರಿಸು. **Accómpaniment** (ನಾ.) ಜೊತೆ ; ಅನುಬಂಧ ; ಪರಿಕರ. (ಸಂ.) ಹಿಮ್ಮೇಳ ; ಪಕ್ಕವಾದ್ಯ. **Accómpanist, Accómpanyist** (ನಾ.) ಹಿಮ್ಮೇಳದವನು ; ಪಕ್ಕವಾದ್ಯದವನು ; ಉಪಗಾಯಕ.

Accómplice ಅಕಾಂಪ್ಲಿಸ್ (ನಾ.) (ಅಪರಾಧದಲ್ಲಿ ಅಥವಾ ದುಷ್ಕಾರ್ಯದಲ್ಲಿ) ಸಹಾಯಕ ; 'ಷರೀಕು' ಅಥವಾ 'ಶಾಮಿಲು' ಆದವನು ; ಸಹಾಪರಾಧಿ.

Accómplish ಅಕಾಂಪ್ಲಿಷ್ (ಕ್ರಿ. ಸಕ.) ನೆರವೇರಿಸು ; ನಿರ್ವಹಿಸು. ಸಾಧಿಸು ; ಸಾಂಗಗೊಳಿಸು ; ಈಡೇರಿಸು ; ಮುಗಿಸು ; ಪೂರಯಿಸು ; ಸಂಸ್ಕೃತನನ್ನಾಗಿ ಮಾಡು ; ಸುಶಿಕ್ಷಿತನನ್ನಾಗಿ ಮಾಡು ; ಕಲಾಕುಶಲನನ್ನಾಗಿ ಮಾಡು. **Accómplished** (ಗು.) ; **Accómplishment** (ನಾ.) ನೆರವೇರಿಕೆ ; ಪೂರಯಿಕೆ ; ಸಾಧನೆ ; ನಿರ್ವಹಣ ; ಕಾರ್ಯಸಿದ್ಧಿ. ಸಂಪನ್ನತೆ ; ನಯ ; ಸುಶಿಕ್ಷಣ ; ಸಂಸ್ಕೃತಿ ; ಕುಶಲತೆ. ಸುಸಭ್ಯನೆನಿಸಲು ಪಡೆದಿರಬೇಕಾದ ಸಂಸ್ಕಾರ. ಅಲಂಕಾರ ; ಭೂಷಣ. ಥಳುಕು ; ಮೇಲ್ಮೆರುಗು.

Accómpt ಅಕೌಂಟ್, ಅಕಾಮ್ಟ್ (ನಾ.) ; **Accómptant** : (ನಾ.) : Account, Accountant ಪದಗಳ ಪ್ರಾಚೀನ ರೂಪ.

Accórd ಅಕಾರ್ಡ್ (ಕ್ರಿ.) ಅನುಕೂಲವಾಗಿರು ; ಹೊಂದಿಕೆಯಿಂದಿರು ; ತಕ್ಕಂತೆ ಇರು ; ಒಪ್ಪು ; ಒಡಂಬಡು ; ಒಪ್ಪಿಕೆಯಿಂದಿರು ; ಒಮ್ಮನವಾಗು ; ಸರಿಬೀಳು ; ಸರಿಹೋಗು ; ಸಮಂಜಸವಾಗಿರು. ಒಡಂಬಡಿಸು ; ಹೊಂದಿಕೊಳ್ಳುವಂತೆ ಮಾಡು. ಕೊಡು ; ದಯಪಾಲಿಸು ; ಅನುಗ್ರಹಿಸು. **Accórding** (*as, to*) ಅನುಸಾರವಾಗಿ ; ಹಾಗೆ ; ಅದರಂತೆ. **Accórdingly** (ಕ್ರಿ. ವಿ.) ; **Accórd** (ನಾ.) ಸಮಾಧಾನ ; ಒಡಂಬಡಿಕೆ ; ಸಮ್ಮತಿ ; ಒಪ್ಪಿಕೆ ; ಒಮ್ಮನಸ್ಸು ; ಐಕಮತ್ಯ. ರಾಜಿ ; ಕೌಲು ; ಸಂಧಿ ; ಒಪ್ಪಂದ ; ಶಾಂತಿಯ ಕರಾರು. (ಬಣ್ಣ, ಸ್ವರ, ರಾಗ—ಇವುಗಳ) ಹೊಂದಿಕೆ, ಮೇಳನ, ಸಾಮರಸ್ಯ. **Accórdance** (ನಾ.) ಹೊಂದಿಕೆ ; ಅನುಗುಣ ; ಅನುಮತಿ ; ಒಪ್ಪಿಕೆ ; ಸಾಮರಸ್ಯ; ಸಾದೃಶ್ಯ. In accordance with ಅನುಸಾರವಾಗಿ ; ಅನುಗುಣವಾಗಿ ; ತಕ್ಕಂತೆ ; ಮೇರೆಗೆ ; ಪ್ರಕಾರವಾಗಿ ; ಆಧಾರದ ಮೇಲೆ. **Accórdant** (ಗು.) ; **Accórdantly** (ಕ್ರಿ. ವಿ.)

Accórdion ಅಕಾರ್ಡಿಯನ್ (ನಾ.) ವಾದ್ಯ ವಿಶೇಷ ; ರಾಗಮಾಲಿಕೆ. **Accórdionist** (ನಾ.) ರಾಗಮಾಲಿಕೆ ಬಾಜಿಸುವವನು.

Accóst ಅಕಾಸ್ಟ್ (ಕ್ರಿ. ಸಕ.) ಗುರುತಿಸಿ ಮಾತನಾಡು ; ಸಂಭಾಷಣೆಗೆ ಮೊದಲುಮಾಡು ; ಕರೆದು ಮಾತನಾಡಿಸು. (ಸೂಳೆಯ ವಿಷಯದಲ್ಲಿ) ಶೃಂಗಾರ ಚೇಷ್ಟೆಯಿಂದ ಆಕರ್ಷಿಸು. (ನಾ.) ಉಪಚಾರದ, ಕ್ಷೇಮಸಮಾಚಾರದ ಮಾತು ; ನಮಸ್ಕಾರ ; ಶರಣಾರ್ಥಿ.

Accoúchement ಆಕೂಷ್‌ಮಾಙ್, ಅಕೂಷ್ಮೆಂಟ್, ಅಕೌಚ್ಮೆಂಟ್ (ನಾ.) ಹೆರಿಗೆ ; ಪ್ರಸವ. **Accoúche** ಆಕೂಷ್, ಅಕೌಚ್ (ಕ್ರಿ. ಸಕ.) ಸೂಲಗಿತ್ತಿಯ ಕೆಲಸ ಮಾಡು ; ಹೆರಿಗೆ ಮಾಡಿಸು. **Accoucheúr** ಆಕೂಷರ್ (ನಾ.) ಹೆರಿಗೆ ಮಾಡಿಸುವವನು, ಮಾಡಿಸುವವಳು ; ಸೂಲಗಿತ್ತಿ. (ರೂಪ. ಸಹ)

Accoúnt ಅಕೌಂಟ್ (ಕ್ರಿ.) ಎಣಿಸು ; ಲೆಕ್ಕ ಮಾಡು ; ಗಣಿಸು ; ಪರಿಗಣಿಸು. Account for (ವಶದಲ್ಲಿಟ್ಟಿದ್ದ ಹಣಕ್ಕೆ) ಲೆಕ್ಕ ಕೊಡು. (ನಡತೆಗೆ, ಮಾರಿದುದಕ್ಕೆ) ಸಮಾಧಾನ ಹೇಳು, ಕಾರಣ ಕೊಡು, ಕಾರಣವಾಗಿರು. ಬೇಟೆಯನ್ನು ಕೆಡಹು. **Accoúnt** (ನಾ.) ಎಣಿಕೆ ; ಲೆಕ್ಕ ; ಲೆಕ್ಕಾಚಾರ ; ಗಣನೆ. ಹೇಳಿಕೆ ; ಕಥೆ ; ವಿಷಯ ಕಥನ. He has gone to his account ಅವನು ಲೆಕ್ಕ ಒಪ್ಪಿಸಲು ಹೋದನು (ಎಂದರೆ, ಸತ್ತುಹೋದನು). This cannot be turned to any account ಇದನ್ನು ಯಾವ ವಿಧದಲ್ಲಿಯೂ ಉಪಯೋಗಪಡಿಸಲು ಸಾಧ್ಯವಿಲ್ಲ. A man of account ಗಣ್ಯ(ಮಾನ್ಯ)ನಾದವನು. **Accoúntable** (ಗು.) ಹೊರೆ ಹೊತ್ತ ; ಹೊಣೆಯಾದ ; ಜವಾಬ್ದಾರನಾದ ; ಉತ್ತರವಾದಿಯಾದ ; ಲೆಕ್ಕ ಒಪ್ಪಿಸಬೇಕಾದ. ಕಾರಣ ಕೊಡಬಹುದಾದ ; ಅರ್ಥಮಾಡಿಕೊಳ್ಳಬಹುದಾದ. **Accountabílity** (ನಾ.) ; **Accoúntableness** (ನಾ.) ; **Accoúntancy** (ನಾ.) ; ಲೆಕ್ಕ ಇಡುವವನ ಉದ್ಯೋಗ ; ಲೆಕ್ಕಗಾರತನ ; ಗಣಕೋದ್ಯೋಗ. **Accoúntant** (ನಾ.) ಕರಣಿಕ ; ಲೆಕ್ಕಿಗ ; ಗಣಕ ; ಲೆಕ್ಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಡುವ, ಅಥವಾ ಲೆಕ್ಕವನ್ನು ಪರೀಕ್ಷಿಸುವ, ಅಧಿಕಾರಿ; ಲೆಕ್ಕ ಪರೀಕ್ಷಕ. (ನ್ಯಾ. ಶಾ.) ಲೆಕ್ಕ ಒಪ್ಪಿಸುವ ಜವಾಬ್ದಾರಿಯುಳ್ಳವನು; ಲೆಕ್ಕಾಚಾರದ ವ್ಯವಹಾರದಲ್ಲಿ ಪ್ರತಿವಾದಿ. **Accountantship** (ನಾ.)

Accoútre ಅಕೂಟರ್ (ಕ್ರಿ. ಸಕ.) ಉಡುಪು ಹಾಕು. (ವಿಶೇಷ ಸಂದರ್ಭದ ತೊಡಿಗೆ ಹಾಕಿ) ಸಜ್ಜುಗೊಳಿಸು. **Accoútred** — ಟರ್ಡ್ (ಗು.); **Accoútrement** —ಟರ್‌ಮೆಂಟ್ (ನಾ.; ಸಾ., ಬ. ವ. ದಲ್ಲಿ) ವಿಶೇಷ ಸಂದರ್ಭದ ಉಡಿಗೆ ತೊಡಿಗೆ. ಸನ್ನಾಹ. (ಸೈನಿಕ ಸಂಬಂಧವಾಗಿ) ಯೋಧನ ಉಡಿಗೆ ತೊಡಿಗೆಗಳಲ್ಲಿ, ಆಯುಧಗಳು ಮತ್ತು ಉಡುಪನ್ನು ಬಿಟ್ಟು ಉಳಿದುವು (ಎಂದರೆ, ನಡುಕಟ್ಟು, ಸಾಮಾನಿನ ತೊಗಲು ಚೀಲ, ಮೊ.)

Accrédit ಅಕ್ರೆಡಿಟ್ (ಕ್ರಿ. ಸಕ.) ನಂಬಿಕೆಯಿಡು; (ಮನುಷ್ಯನನ್ನು) ನಂಬು; (ಬುದ್ಧಿವಾದಕ್ಕೊ, ಬುದ್ಧಿ ಹೇಳುವವನಿಗೊ) ನಂಬಿಕೆ ಅಥವಾ ಪ್ರಾಬಲ್ಯವನ್ನು ದೊರಕಿಸು. ಯೋಗ್ಯತಾ ಪತ್ರಗಳನ್ನು ಒದಗಿಸು. (ರಾಯಭಾರಿ, ಮೊ. ನ್ನು) ಯೋಗ್ಯತಾ ಪತ್ರಗಳೊಡನೆ (ರಾಜಾಸ್ಥಾನಕ್ಕೊ, ಗೌರವಸ್ಥನ ಬಳಿಗೊ) ಕಳುಹಿಸಿಕೊಡು. **Accrédited** (ಗು.) ತಕ್ಕ ಅಧಿಕಾರ ಸ್ಥಾನದಿಂದ ಅಂಗೀಕರಿಸಲ್ಪಟ್ಟ (ಪ್ರತಿನಿಧಿ, ರಾಯಭಾರಿ, ಮೊ.). ಸಾಮಾನ್ಯವಾಗಿ ಅಂಗೀಕರಿಸಿದ, ಶಾಸ್ತ್ರಾನುಸಾರವಾದ, ಸಂಪ್ರದಾಯ ಸಿದ್ಧವಾದ (ನಂಬಿಕೆಗಳು)

Accréscent ಅಕ್ರೆಸೆಂಟ್ (ಗು.) ಬೆಳೆಯುತ್ತಲೇ ಹೋಗುವ. (ಸ. ವಿ.) ಹೂವು ಬಿಟ್ಟಮೇಲೆ ದೊಡ್ಡದಾಗಿ ಬೆಳೆಯುವ.

Accréte ಅಕ್ರೀಟ್ (ಕ್ರಿ. ಅಕ.) ಒಂದಕ್ಕೊಂದು ಸೇರಿಕೊಂಡು ಬೆಳೆ; ಒಂದುಗೂಡಿ ಬೆಳೆ. (ಒಂದು ವಸ್ತುವಿನ ಮೇಲೆ) ಸುತ್ತಲೂ ಸೇರು, ಸುತ್ತಲೂ ಬೆಳೆ. (ಕ್ರಿ. ಸಕ.) ಸುತ್ತಲೂ ಸೇರಿಸಿಕೊ, ಆಕರ್ಷಿಸಿಕೊ. (ಗು.) (ಸ. ವಿ.) ಮತ್ತೊಂದರೊಡನೆ ಸೇರಿ ಒಂದಾಗಿ ಬೆಳೆದ. **Accrétion** (ನಾ.) ಜೈವಕ್ರಿಯೆಯಿಂದಾಗುವ ಅಂಗವೃದ್ಧಿ. ಒಂದುಗೂಡಿಕೆ. ಸಾಮಾನ್ಯವಾಗಿ ಪ್ರತ್ಯೇಕವಾಗಿರುವ ವಸ್ತುಗಳು (ಅಥವಾ ಕಣಗಳು) ಒಂದುಗೂಡಿ ಬೆಳೆಯುವುದು; ಹೀಗೆ ಬೆಳೆದು ಆದ ವಸ್ತು. (ನ್ಯಾ. ಶಾ.) ಹಕ್ಕುದಾರಿಯಿಂದ ಬಂದ ಒಬ್ಬನ ಆಸ್ತಿಗೆ, ಇತರ ಉತ್ತರಾಧಿಕಾರಿಗೆ ತಪ್ಪಿಹೋದ ಭಾಗವೂ ಸೇರಿ ಬೆಳೆಯುವುದು: ಆಸ್ತಿವೃದ್ಧಿ.

Accrué ಅಕ್ರೂ (ಕ್ರಿ. ಅಕ.) ಕೂಡಿಬರು. (ಸ್ವಾಭಾವಿಕವಾಗಿ ಅಥವಾ ಅನುಕೂಲ್ಯದಿಂದ) ಬೆಳೆದುಬರು, ಒದಗಿಬರು. **Accruéd** (ಗು.); **Accruément** (ನಾ.)

Accúmulate ಅಕ್ಯೂಮ್ಯುಲೇಟ್ (ಕ್ರಿ.) ಕೂಡಹಾಕು; ಒಟ್ಟುಗೂಡಿಸು; ಗಳಿಸು; ಶೇಖರಿಸು; ಹಣ ಸಂಗ್ರಹಿಸು. ಬೆಳೆಯುತ್ತ ಹೋಗು; ರಾಶಿಗೂಡು. **Accumulátion** (ನಾ.) ಕೂಡಹಾಕುವುದು; ಸಂಚಯ; ಬೆಳೆಯುತ್ತ ಹೋಗುವುದು; ರಾಶಿಗೂಡುವುದು; ಒಟ್ಟು ಹಾಕುವುದು; ರಾಶಿ. **Accúmulative** (ಗು.) ಕೂಡುತ್ತ ಹೋಗುವ; ಬೆಳೆಯುತ್ತ ಹೋಗುವಂತೆ ಏರ್ಪಡಿಸಿದ; ಕೂಡಿಡುವ. Accumulative evidence ಕೂಡುತ್ತ ಹೋಗುವ ಸಾಕ್ಷ್ಯ. **Accúmulatively** (ಕ್ರಿ. ವಿ.); **Accúmulator** (ನಾ.) ಕೂಡಹಾಕುವವನು; ಹಣಮಾಡುವವನು. (ಭೌ. ವಿ.) ವಿದ್ಯುಚ್ಛಕ್ತಿಯನ್ನು ಕೂಡಿಡುವ ಸಾಧನ; ವಿದ್ಯುತ್ಸಂಗ್ರಹಿ. **Accúmulate** —ಲೆಟ್ (ಗು.) ಸಂಚಿತ.

A'ccurate ಆ್ಯಕ್ಯುರೆಟ್ (ಗು.) ಸರಿಯಾದ; ಹೆಚ್ಚುಕಡಮೆಯಿಲ್ಲದ; ಯಥಾರ್ಥವಾದ; ನಿಷ್ಕೃಷ್ಟವಾದ; 'ಕರಾರುವಾಕ'. ಸೂಕ್ಷ್ಮ. ಜಾಗರೂಕತೆಯಿಂದ ಸಿದ್ಧವಾದ, ಪರಿಶೀಲಿಸಿದ. **A'ccuracy** (ನಾ.) ನಿಷ್ಕೃಷ್ಟತೆ. ಸೂಕ್ಷ್ಮತಾ ದೃಷ್ಟಿ. **A'ccurately** (ಕ್ರಿ. ವಿ.)

Accúrsed ಅಕರ್ಸ್ಡ್, **Accúrst** ಅಕರ್ಸ್ಟ್ (ಗು.) ಪಾಪಿಷ್ಠ; ಧೃಷ್ಟ; ಶಾಪಗ್ರಸ್ತ; ದುರದೃಷ್ಟ; ನಿರ್ಭಾಗ್ಯ.

Accúsative ಅಕ್ಯೂಸೆಟಿವ್ (ಗು., ನಾ.) (ವ್ಯಾ.) ದ್ವಿತೀಯಾ ವಿಭಕ್ತಿ.

Accusatíval —ಟೈವಲ್ (ಗು.); **Accúsatively** —ಟಿವ್ಲಿ (ಕ್ರಿ. ವಿ.)

Accúse ಅಕ್ಯೂಸ್ (ಕ್ರಿ. ಸಕ.) ತಪ್ಪುಹೊರಿಸು; (ಅಪರಾಧವನ್ನು) ಆಪಾದನೆ ಮಾಡು; ದೂಷಿಸು; ತೆಗಳು; ದೂರು. **Accúsable** (ಗು.); **Accúsal** (ನಾ.) (Accusation ಪದಕ್ಕೆ ಬದಲಾಗಿ ಕೆಲವು ಸಂದರ್ಭಗಳಲ್ಲಿ ಪ್ರಯೋಗ). **Accusátion** ಆ್ಯಕ್ಯುಸೇಷನ್ (ನಾ.) (ಕ್ರಿಯಾರ್ಥಗಳಲ್ಲಿ); ಆಪಾದನೆಗೊಳಪಡುವುದು; 'ಫಿರ್ಯಾದು'. **Accusatórial** ಅಕ್ಯೂಸಟೋರಿಯಲ್ (ಗು.) (ನ್ಯಾ. ಶಾ.) ತಪ್ಪನ್ನು ಆಪಾದಿಸುವವನೂ ವಿಚಾರಣಕರ್ತನೂ ಒಬ್ಬನೇ ಅಲ್ಲದ ವ್ಯವಹಾರಕ್ಕೆ ಸಂಬಂಧಪಟ್ಟ. **Accúsatory** (ಗು.) ತಪ್ಪುಹೊರಿಸುವ ಭಾವವುಳ್ಳ. **Accúsed** (ಗು.) ತಪ್ಪು ಹೊರಿಸಲ್ಪಟ್ಟ. (ನಾ.) ತಪ್ಪು ಹೊರಿಸಲ್ಪಟ್ಟವನು; ಆಪಾದಿತ; ಅಪರಾಧಿ. **Accúser** (ನಾ.) ದೂರುವವನು; ತೆಗಳುವವನು; ತಪ್ಪನ್ನು ಆಪಾದನೆ ಮಾಡುವವನು; ಫಿರ್ಯಾದಿ. **Accusingly** (ಕ್ರಿ. ವಿ.)

Accústom ಅಕಸ್ಟಂ (ಕ್ರಿ. ಸಕ.) ರೂಢಿ (ಅಭ್ಯಾಸ) ಮಾಡು; ರೂಢಿ ಮಾಡಿಕೊಳ್ಳು; ರೂಢಿಗೆ (ಬಳಕೆಗೆ) ತರು; ಒಗ್ಗಿಸು. **Accústomed** (ಗು.) ರೂಢಿಗೆ ಬಂದ; ವಾಡಿಕೆಯಾದ; ಬಳಕೆಯಾದ; ಪದ್ಧತಿಯಾದ; ಒಗ್ಗಿದ; ಪಳಗಿದ.

Ace ಏಸ್ (ನಾ.) (ಪಗಡೆಯಾಟದಲ್ಲಿ ಉಪಯೋಗಿಸುವ) ದಾಳದ ಮೇಲಿನ ಒಂದನೆಯ ಸಂಖ್ಯೆಯ ಗುರುತು; ಪಗಡೆ. (ಇಸ್ಪೀಟಾಟದಲ್ಲಿ) ಹಾಸು, ಎಕ್ಕ. (ರೂಪ.) ಅತ್ಯಲ್ಪವಾದ ಅಂಶ; ಅಣು; ಲವ. ಉತ್ತಮ; ಉತ್ಕೃಷ್ಟ. Within an ace of (=on the very point of) ಹತ್ತಿರ ಹತ್ತಿರ (I was within an ace of being trampled to death ತುಳಿತಕ್ಕೆ ಸಿಕ್ಕಿ ಇನ್ನೇನು ಸಾಯುವುದರಲ್ಲಿದ್ದೆ)

Acéldama ಅಕೆ(ಸೆ)ಲ್‌ಡಮ (ನಾ.) ರಕ್ತಹರಿದ ರಣರಂಗ; ಕೊಲೆಯ ರಂಗ.

Acéntric ಅಸೆಂಟ್ರಿಕ್ (ಗು.) ಕೇಂದ್ರರಹಿತ.

Acéphalous ಅಸೆಫಲಸ್ (ಗು.) ತಲೆಯಿಲ್ಲದ; ಶಿರೋರಹಿತ. ಮುಖ್ಯಸ್ಥನಿಲ್ಲದ. ನಾಯಕನನ್ನು ಅಂಗೀಕರಿಸದ. (ಪ್ರಾ. ವಿ.) ದೇಹದಲ್ಲಿ ತಲೆಯನ್ನು ಸೂಚಿಸುವ ಅಂಗವಿಲ್ಲದ. (ಸ. ವಿ.) ತಲೆ ಕತ್ತರಿಸಿದ; ತಲೆ ಮೊಟಕಾದ; ಛಿನ್ನಾಗ್ರ.

A'cerbate ಆ್ಯಸರ್ಬೇಟ್ (ಕ್ರಿ. ಸಕ.) ಹುಳಿ ಹಿಡಿಸು; ಕಹಿಗೂಡಿಸು. (ರೂಪ. ಸಹ.). (Exacerbate ನೋಡಿ). **Acérbic** ಅಸರ್ಬಿಕ್ (ಗು.) ಹುಳಿಯಾದ; ಕಟುವಾದ. **Acérbity** (ನಾ.) ಕಹಿ ಹುಳಿ; ಕಟು ರುಚಿ. (ಮಾತಿನಲ್ಲಿ, ರೀತಿಯಲ್ಲಿ, ಅಥವಾ ಪ್ರಕೃತಿಯಲ್ಲಿ) ನಿಷ್ಠುರತೆ.

A'cervate ಅಸರ್ವೆಟ್ (ಗು.) ರಾಶಿಗೂಡಿದ; ಗುಂಪುಗುಂಪಾಗಿ ಅಥವಾ ಗೊಂಚಲುಗೊಂಚಲಾಗಿ ಬೆಳೆಯುವ.

Acéscent ಅಸೆಸೆಂಟ್ (ಗು.) ಹುಳಿಗೂಡುವ; ಹುಳಿಹುಳಿಯಾದ. (ರೂಪ. ಸಹ). **Acéscence** (ನಾ.) ಹುಳಿ ತಿರುಗುವುದು.

Acetábulum ಆ್ಯಸಿಟ್ಯಾಬ್ಯುಲಂ (ನಾ.) (ಪ್ರಾಚೀನ ರೋಮನರಲ್ಲಿ) ಊಟದ ಮೇಜಿನಮೇಲೆ ದ್ರಾಕ್ಷಿಯ ಹುಳಿರಸ ಹಾಕಿ ಇಡುವ ಬಟ್ಟಲು. ಒಂದು ಅಳತೆಯ ಬಟ್ಟಲು. (ಪ್ರಾ. ವಿ.) (೧) ಶೀರ್ಷಪದಿ (Cephalopoda) ವರ್ಗಕ್ಕೆ ಸೇರಿದ ಕೆಲವು ಪ್ರಾಣಿಗಳ ದೇಹದಲ್ಲಿರುವ ಬಟ್ಟಲಿನ ಆಕಾರದ ಒಂದು ಹೀರುವ ಅಂಗ. (೨) ತೊಡೆಯ ಮೇಲ್ಕೀಲು ಆಡುವ ಎಲುಬಿನ ಕುದುರು. (೩) ಹುಳುಗಳ ಅಂಗದಲ್ಲಿಯ ಕೀಲುಗಳ ಕುದುರು.

Acetárious ಆ್ಯಸಿಟೇರಿಯಸ್ (ಗು.) (ಸಸ್ಯಗಳ ವಿಷಯದಲ್ಲಿ) ಪಚ್ಚಡಿಗಾಗಿ ಉಪಯೋಗಿಸುವ.

A'cetate ಆ್ಯಸಿಟೇಟ್ (ನಾ.) ಅಸಿಟಿಕ್ ಆಮ್ಲದೊಡನೆ ಒಂದು ಕ್ಷಾರವು ಸಂಯೋಗಹೊಂದುವುದರಿಂದ ಹುಟ್ಟುವ ಲವಣ: ಆ್ಯಸಿಟೇಟ್.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

A'cetated (ಗು.) ಅಸೀಟಿಕಾಮ್ಲದಿಂದ ಸಂಸ್ಕರಿಸಿದ. **Acétic** ಅಸೀ(ಸೆ)ಟಿಕ್ (ಗು.) ಹುಳಿರಸದ ಸಂಬಂಧವಾದ ಅಥವಾ ಸ್ವಭಾವದ. **Acétify** ಅಸೆಟಿಫೈ (ಕ್ರಿ.) ಹುಳಿರಸವಾಗಿ ಮಾಡು ; ಹುಳಿಯಾಗು. **Acetification** (ನಾ.) ; **Acétifier** (ನಾ.) ; **A'cetous** ಆ್ಯಸಿಟಸ್ (ಗು.) ಹುಳಿರಸದ ಗುಣವುಳ್ಳ ; ಹುಳಿಯಾದ.

A'cetone ಆ್ಯಸಿಟೋನ್ (ನಾ.) ಅನೇಕ ಜೈವ ಸಂಯುಕ್ತಗಳನ್ನು ಲೀನಮಾಡಿಕೊಳ್ಳುವ ಉಪಯುಕ್ತ ಗುಣವುಳ್ಳ ಸ್ವಚ್ಛವಾದ ಒಂದು ವರ್ಣರಹಿತ ದ್ರವ : ಆ್ಯಸಿಟೋನ್.

Acétylene ಅಸೆಟಿಲೀನ್ (ನಾ.) ಪ್ರಕಾಶವಾಗಿ ಉರಿಯುವ, ಬೆಳಕಿಗಾಗಿ ಉಪಯೋಗಿಸುವ, ವರ್ಣರಹಿತವಾದ ಒಂದು ಅನಿಲ : ಅಸೆಟಿಲೀನ್.

Achaéan ಅಕೀಯನ್ (ಗು., ನಾ.) ಗ್ರೀಸ್‌ದೇಶದ ಅಕೀಯ ಪ್ರಾಂತದ (ನಿವಾಸಿ). ಗ್ರೀಸ್ ದೇಶದ(ವನು)

Achárnement (F) ಆಷಾರ್ನ್‌ಮಾಜ್, ಅಚಾರ್ನ್‌ಮೆಂಟ್ (ನಾ.) ಕಿರಾತ ಕ್ರೌರ್ಯ ; ರಕ್ತದಾಹ ; ಭೀಷಣತೆ.

Achátes ಅಕೇಟೀಸ್ (ನಾ.) ಈನಿಯಸ್ ಎಂಬ ಒಬ್ಬ ಪ್ರಸಿದ್ಧ ರೋಮನನ ಆಪ್ತಮಿತ್ರನ ಹೆಸರು. ಆಪ್ತ ಮಿತ್ರ.

Ache ಏಕ್ (ಕ್ರಿ. ಅಕ.) ನೋಯಿ ; ನೋವುಪಡು ; ನಿರಂತರವಾದ ಅಥವಾ ದೀರ್ಘ ಕಾಲದ ನೋವನ್ನನುಭವಿಸು ; ನೋವಿನಿಂದ ನರಳು. (ನಾ.) ನೋವು ; ನಿರಂತರವಾದ ಯಾತನೆ ; ವೇದನೆ ; ಬೇನೆ ; ಶೂಲೆ. **A'cheless** (ಗು.) ; **A'ching** (ಗು.)

Achiéve ಅಚೀವ್ (ಕ್ರಿ. ಸಕ.) ಸಾಧಿಸು ; ನೆರವೇರಿಸು ; ನಿರ್ವಹಿಸು ; ಮುಗಿಸು. ಪಡೆ ; ಹೊಂದು. **Achiévable** (ಗು.) ; **Achiévement** (ನಾ.) ಸಾಧನ ; ನಿರ್ವಹಣ ; ಕಾರ್ಯಸಿದ್ಧಿ. ಮಹಾ ಕಾರ್ಯ. ಮಹಾಕಾರ್ಯಕ್ಕಾಗಿ ಕೊಟ್ಟ ಬಿರುದಿನ ಚಿಹ್ನೆ.

Achílous ಅಕೈಲಸ್ (ಗು.) (ಸ. ವಿ.) ತುಟಿಯಿಲ್ಲದ ; ನಿರೋಷ್ಠ.

Achlamýdeous ಆ್ಯಕ್ಲಮಿಡಿಯಸ್ (ಗು.) (ಸ. ವಿ.) ಪುಷ್ಪಕೋಶ ರಹಿತ ; ಪುಷ್ಪಪಾತ್ರವೂ ಪುಷ್ಪದಳಗಳೂ ಇಲ್ಲದ.

Achromátic ಆ್ಯಕ್ರೊಮ್ಯಾಟಿಕ್ (ಗು.) (ದೃ. ವಿ.) ವರ್ಣರಹಿತ. ಬೆಳಕನ್ನು ಬೇರೆ ಬೇರೆ ಬಣ್ಣಗಳಾಗಿ ಒಡೆಯದೆ ಹಾಗೆಯೇ ತನ್ನಲ್ಲಿ ಹಾಯಗೊಡುವ. **Achromátically** (ಕ್ರಿ. ವಿ.) ; **Achromatícity** ಅಕ್ರೋಮಟಿಸಿಟಿ (ನಾ.) ; **Achrómatism** (ನಾ.) ; **Achrómatize** (ಕ್ರಿ. ಸಕ.)

A'cid ಆ್ಯಸಿಡ್ (ನಾ.) ಹುಳಿ. (ರ. ವಿ.) ಆಮ್ಲ : [ಜಲಜನಕದೊಡನೆ ಒಂದು ಅಥವಾ ಹೆಚ್ಚಾದ ಮೂಲದ್ರವ್ಯಗಳ ಸಂಯೋಗದಿಂದ ಹುಟ್ಟಿ, ಸಾಮಾನ್ಯವಾಗಿ ಹುಳಿಯಾಗಿದ್ದು, ಸಸ್ಯಜನ್ಯವಾದ ನೀಲಿಯ ಬಣ್ಣವನ್ನು ಕೆಂಪು ಬಣ್ಣಕ್ಕೆ ತಿರುಗಿಸುವ ಗುಣವುಳ್ಳದ್ದಾಗಿಯೂ, ಕ್ಷಾರವಸ್ತುಗಳಿಂದ ನಿರಾಮ್ಲವಾಗತಕ್ಕದ್ದಾಗಿಯೂ ಇರುವ ರಾಸಾಯನಿಕ ವಸ್ತು]. Acid test ಒಂದು ಪದಾರ್ಥದ ದ್ರವ್ಯರಚನೆಯನ್ನು ತಿಳಿಯುವುದಕ್ಕಾಗಿ ಆಮ್ಲವನ್ನು ಪ್ರಯೋಗಿಸಿ ಮಾಡುವ ಪರೀಕ್ಷೆ (ಉದಾ.—ಒಂದು ವಸ್ತುವಿನಲ್ಲಿ ಚಿನ್ನವಿದೆಯೇ ಎಂದು ತಿಳಿಯುವುದಕ್ಕಾಗಿ ಅದನ್ನು 'ರಾಜಾಮ್ಲ'ವೆಂಬ ದ್ರವದಲ್ಲಿಟ್ಟರೆ, ಮಿಕ್ಕ ಪದಾರ್ಥಗಳೆಲ್ಲವೂ ಅದರಲ್ಲಿ ಲೀನವಾಗಿ, ಚಿನ್ನವಿದ್ದಲ್ಲಿ, ಅದು ಮಾತ್ರ ಹಾಗೆಯೇ ಉಳಿಯುವುದು). (ರೂಪ.) ಸತ್ವಪರೀಕ್ಷೆ ; ವಿಷ ಪರೀಕ್ಷೆ. **Acídify** ಅಸಿಡಿಫೈ (ಕ್ರಿ.) ಹುಳಿಯಾಗು ; ಹುಳಿಯಾಗಿಸು. (ರ. ವಿ.) ಆಮ್ಲವನ್ನಾಗಿ ತಿರುಗಿಸು ; ಆಮ್ಲೀಕರಿಸು. **Acídifiable** (ಗು.) ; **Acidificátion** (ನಾ.) ಆಮ್ಲೀಕರಣ. **Acídifier** (ನಾ.) ಆಮ್ಲೀಕಾರಕ. **Acidímeter** ಆ್ಯಸಿಡಿಮಿಟರ್ (ನಾ.) ಆಮ್ಲಬಲ ಮಾಪಕ. **Acidímetry** (ನಾ.) ಆಮ್ಲಬಲ ಮಾಪನ. **Acidósis** ಆ್ಯಸಿಡೋಸಿಸ್ (ನಾ.) (ವೈ. ಶಾ.) ಮೂತ್ರವ್ಯಾಧಿಯಲ್ಲಿ ಸಂಭವಿಸುವಂಥ ರಕ್ತದ ಆಮ್ಲತೆ. **Acídulated** ಅಸಿಡ್ಯುಲೇಟೆಡ್ (ಗು.) ಸ್ವಲ್ಪ ಮಟ್ಟಿಗೆ ಆಮ್ಲೀಕರಿಸಿದ ಅಥವಾ ಹುಳಿಮಾಡಿದ : ಈಷದಾಮ್ಲೀಕೃತ. ರುಚಿಗಾಗಿ ಹುಳಿ ಹಾಕಿ ಮಾಡಿದ. **Acídulous** (ಗು.) ಸ್ವಲ್ಪ ಮಟ್ಟಿಗೆ ಆಮ್ಲವಾಗಿರುವ. **A'cid** (ಗು.) ಹುಳಿಯಾದ. (ರ. ವಿ.) ಆಮ್ಲದ ಮುಖ್ಯ ಗುಣಗಳುಳ್ಳ. **Acídity** ಅಸಿಡಿಟಿ (ನಾ.) ಆಮ್ಲತೆ ಅಥವಾ ಆಮ್ಲಗುಣ.

A'cinus ಆ್ಯಸಿನಸ್ (ನಾ. ; ಬ. ವ. Acini ಆ್ಯಸಿನೈ) (ಹಲಸಿನ ಹಣ್ಣಿನಂಥ) ಸಂಯುಕ್ತ ಫಲದಲ್ಲಿಯ ಒಂದು ತೊಳೆ ; ಅಂಥ ಸಂಯುಕ್ತ ಫಲ. ದ್ರಾಕ್ಷಿ, ಮೊ. ಹಣ್ಣು, ಕಾಯಿಗಳೊಳಗಿರುವ ಬೀಜ. (ಪ್ರಾ. ವಿ.) ಗೊಂಚಲಿನಂತಿರುವ ಗ್ರಂಥಿ. **Acíniform** (ಗು.) ಗೊಂಚಲು ಗೊಂಚಲಾಗಿರುವ.

Acknowledge ಆ್ಯಕ್ನಾಲೆಜ್ (ಕ್ರಿ. ಸಕ.) ಒಪ್ಪಿಕೊ ; ಅಂಗೀಕರಿಸು. ಒಬ್ಬನ ಅಧಿಕಾರವನ್ನಾಗಲಿ ಹಕ್ಕನ್ನಾಗಲಿ ಮಾನ್ಯಮಾಡು. ನ್ಯಾಯಸಮ್ಮತವೆಂದು ಅಂಗೀಕರಿಸು. ಶಾಸನಾನುಸಾರವಾಗಿ ಅಥವಾ ವಿಹಿತ ರೀತಿಯಲ್ಲಿ ಒಪ್ಪಿಗೆ ಕೊಡು. ಉಪಕಾರ ಸ್ಮರಣೆಯನ್ನು ಅಥವಾ ಕೃತಜ್ಞತೆಯನ್ನು ಸೂಚಿಸು. ಸಂದಿದೆಯೆಂದು ತಿಳಿಸು ; ಸಲ್ಲಿಕೆ ಕೊಡು. **Acknowledgement, Acknowledgment** (ನಾ.) ಒಪ್ಪಿಗೆ ; ಸ್ವೀಕಾರ ; ಸಲ್ಲಿಕೆ ; ರಸೀತಿ.

Aclínic ಅಕ್ಲಿನಿಕ್ (ಗು.) ಬಗ್ಗಿರದ ; ಓಲಿರದ. Aclinic line (ಅಯಸ್ಕಾಂತ ಸೂಚಿ ಬಗ್ಗದೆ ಸಮತಲದಲ್ಲಿರುವ) ಅಯಸ್ಕಾಂತ ನಿರಕ್ಷ ರೇಖೆ.

A'cme ಆ್ಯಕ್ಮಿ (ನಾ.) ತುತ್ತತುದಿ ; ಶಿಖರ. ಪರಾಕಾಷ್ಠತೆ.

A'cne ಆ್ಯಕ್ನಿ (ನಾ.) ಮೊಡವೆ ; ಮೊಡವೆಗಳಾಗುವ ರೋಗ.

A'colyte ಆ್ಯಕೊಲೈಟ್ (ನಾ.) ಕ್ರೈಸ್ತ ದೇವಾಲಯದ ಒಬ್ಬ ಕೆಳ ಅಧಿಕಾರಿ. ಅನುಚರ ; ಸಹಾಯಕ. ಹೊಸಬ ; ನೂತನ ಶಿಷ್ಯ.

A'conite ಆ್ಯಕೊನೈಟ್ (ನಾ.) ಒಂದು ಬಗೆಯ ವಿಷಸಸ್ಯ : ವತ್ಸನಾಭ ; ಈ ಸಸ್ಯದ ಕಷಾಯ. **Aconític** (ಗು.) ; **Acónitine** ಅಕಾನಿಟೈನ್ (ನಾ.)

A'corn ಏಕಾರ್ನ್ (ನಾ.) 'ಓಕ್' ಎಂಬ ಮರದ ಹಣ್ಣು ಅಥವಾ ಬೀಜ. Acorn shell ಓಕ್ ಹಣ್ಣಿನ ಚಿಪ್ಪು. ಒಂದು ಸಮುದ್ರ ಪ್ರಾಣಿವಿಶೇಷ.

Acósmism ಅಕಾಸ್ಮಿಸ್ಮ್ (ನಾ.) ಜಗನ್ಮಿಥ್ಯಾತ್ವ ವಾದ ; ಮಾಯಾವಾದ.

Acotylédon ಅಕಾಟಿಲೀಡನ್ (ನಾ.) ಬೀಜದಳ ಶೂನ್ಯ ಸಸ್ಯ. **Acotylédonous** (ಗು.) ಬೀಜದಳ ಶೂನ್ಯ.

Acoúmeter ಅಕೌಮಿಟರ್ (ನಾ.) ಶ್ರವಣಶಕ್ತಿ ಮಾಪಕ. **Acoúmetry** (ನಾ.) ಶ್ರವಣಶಕ್ತಿ ಮಾಪನ.

Acoústic ಅಕೌಸ್ಟಿಕ್, ಅಕೂಸ್ಟಿಕ್ (ಗು.) ಶ್ರವಣೇಂದ್ರಿಯ ಸಂಬಂಧವಾದ ; ಶ್ರವಣ ಸಂಬಂಧವಾದ ; ಧ್ವನಿಶಾಸ್ತ್ರ ಸಂಬಂಧಿ. (ನಾ.) ಶ್ರವಣ (ಕಿವಿ ಕೇಳಲು ಸಹಾಯಮಾಡುವ) ಸಾಧನ ಅಥವಾ ಔಷಧ. **Acoústics** (ನಾ.) ಧ್ವನಿ ವಿಜ್ಞಾನ. **Acoústical** (ಗು.) ; **Acoústically** (ಕ್ರಿ. ವಿ.) ; **Acoustícian** —ಸ್ಟಿಷನ್ (ನಾ.) ಧ್ವನಿ ವೈಜ್ಞಾನಿಕ.

Acquaínt ಅಕ್ವೆಯ್‌ನ್ಟ್ (ಕ್ರಿ. ಸಕ.) ತಿಳಿಯಪಡಿಸು ; ಶ್ರುತಪಡಿಸು. ಪರಿಚಯ (ಗುರುತು) ಮಾಡಿಕೊಡು, ಮಾಡಿಕೊ. **Acquaíntance** (ನಾ.) ಪರಿಚಯ ; ಪರಿಚಯಸ್ಥ ; ಪರಿಚಿತ ; ಗುರುತಿನವ. **Acquaíntanceship** (ನಾ.)

Acquést ಅಕ್ವೆಸ್ಟ್ (ನಾ.) ಸಂಪಾದಿಸಿದುದು ; ಪಡೆದುದು. (ನ್ಯಾ. ಶಾ.) ಸ್ವಯಾರ್ಜಿತ ಆಸ್ತಿ.

Acquiésce ಆ್ಯಕ್ವಿಯೆಸ್ (ಕ್ರಿ. ಅಕ.) ಮೂಗೊಪ್ಪಿಗೆ ಕೊಡು ; ಒಪ್ಪಿಕೊ ; ಅನುಮತಿಸು. **Acquiéscence** (ನಾ.) ಮೂಗೊಪ್ಪಿಗೆ ; ಮೌನಾನುಮತಿ ; ಎದುರು ಹೇಳದೆ ಒಪ್ಪಿಕೊಳ್ಳುವುದು. **Acquiéscent** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Acquíre ಅಕ್ವೈಯ್ರ್ (ಕ್ರಿ. ಸಕ.) ಗಳಿಸು ; ಪಡೆ ; ಸಂಪಾದಿಸು ; ಆರ್ಜಿಸು. An acquired taste ಅಭ್ಯಾಸದಿಂದ ಬಂದ (ಕಲತ, ಸ್ವಾಭಾವಿಕವಲ್ಲದ) ರುಚಿ. **Acquírement** (ನಾ.) ಆರ್ಜನೆ ; ಸಂಪಾದನೆ ; ಗಳಿಕೆ ; ಪಡೆದುದು ; ಪಡಪು. ಸಾಧಿಸಿದ ಗುಣ ; ಕಲತ ಗುಣ. ವಿದ್ಯಾಸಂಪತ್ತಿ ; ಪಾಂಡಿತ್ಯ ; ವ್ಯುತ್ಪತ್ತಿ.

Acquisítion ಆ್ಯಕ್ವಿಸಿಷನ್ (ನಾ.) ಆರ್ಜನೆ ; ಸಂಪಾದನೆ ; ದೊಡ್ಡ ಲಾಭ. (Acquirement ನೋಡಿ). **Acquísitive** ಅ— (ಗು.) ಕೂಡಹಾಕುವ ; ಸಂಗ್ರಹಿಸುವ ; ಸಂಗ್ರಹಣ ಸ್ವಭಾವವುಳ್ಳ. **Acquísitiveness** (ನಾ.) ಸಂಗ್ರಹಣ ಶೀಲತೆ.

Acquít ಅಕ್ವಿಟ್ (ಕ್ರಿ. ಸಕ.) (ಕಡವನ್ನು) ತೀರಿಸು. ಬಿಡುಗಡೆ ಮಾಡು ; ವಿಮೋಚನೆ ಮಾಡು ; 'ಖುಲಾಸೆ' ಮಾಡು ; ನಿರ್ದೋಷಿಯೆಂದು ಅಥವಾ ನಿರಪರಾಧಿಯೆಂದು ತೀರ್ಮಾನಿಸಿ ಹೇಳು. ಹೊರೆಯಿಳಿಸಿಕೊ ; ಕರ್ತವ್ಯಭಾರವನ್ನಿಳಿಸಿಕೊ. Acquit oneself well ಕಾರ್ಯವನ್ನು ಸಮರ್ಪಕವಾಗಿ ನಿಭಾಯಿಸು. **Acquíttal** (ನಾ.) ಬಿಡುಗಡೆ, 'ಖುಲಾಸೆ' ; (ಋಣ, ದೋಷ) ವಿಮೋಚನೆ. ಕರ್ತವ್ಯ ನಿರ್ವಹಣ. **Acquíttance** (ನಾ.) ಸಾಲ ತೀರಿಸುವುದು ; ಋಣ ವಿಮೋಚನೆ ; ಪಾವತಿ. ಸಲ್ಲಿಕೆಯ ಚೀಟಿ ; ಸಲ್ಲುಚೀಟಿ ; ರಸೀತಿ ; ಪೂರ್ತ ಸಂದಾಯವಾಗಿದೆಯೆಂಬ ರಸೀತಿ ; ಫೈಸಲು ಚೀಟಿ.

A'cre ಏಕರ್ (ನಾ.) ಎಕರೆ (೪೮೪೦ ಚದರ ಗಜ ವಿಸ್ತೀರ್ಣ). ಹೊಲ ; ಗದ್ದೆ. Broad acres ವಿಸ್ತಾರವಾದ ಜಮೀನು. God's Acre ರುದ್ರಭೂಮಿ ; ಸಮಾಧಿ ಭೂಮಿ. **A'creage** ಏಕರೆಜ್ (ನಾ.) ಒಟ್ಟು ಎಕರೆ ; ಎಕರೆಯ ಲೆಕ್ಕ.

A'crid ಆ್ಯಕ್ರಿಡ್ (ಗು.) ಅತಿ ಕಹಿ ಮತ್ತು ಕಾರವಾದ ; ತೀಕ್ಷ್ಣವಾದ ; ಕಟುವಾದ ; ಸುಡುವ. ಉಗ್ರ ; ಕಠಿನ ; ನಿಷ್ಠುರ ; ಪರುಷ. **Acrídity** (ನಾ.)

A'crimony ಆ್ಯಕ್ರಿಮನಿ (ನಾ.) (ಸ್ವಭಾವದ) ತೀಕ್ಷ್ಣತೆ ; ಉಗ್ರತೆ. **Acrimónious** —ಮೋನಿಯಸ್ (ಗು.) ; **Acrimóniously** (ಕ್ರಿ. ವಿ.)

A'crita ಆ್ಯಕ್ರಿಟ (ನಾ.) (ಪ್ರಾ. ವಿ.) ಸ್ಪಷ್ಟವಾದ ನರವ್ಯೂಹವಿಲ್ಲದ ಒಂದು ಪ್ರಾಣಿವರ್ಗ.

Acritochrómacy ಆ್ಯಕ್ರಿಟೊಕ್ರೋಮಸಿ (ನಾ.) ಬಣ್ಣಗಳನ್ನು ಬೇರೆ ಬೇರೆಯಾಗಿ ಗುರುತಿಸಲಾಗದಿರುವುದು : ವರ್ಣಾಂಧತೆ ; ಬಣ್ಣ ಗುರುಡು.

A'crobat ಆ್ಯಕ್ರೊಬ್ಯಾಟ್ (ನಾ.) ದೊಂಬರಾಟದವನು. (ರೂಪ.) ಸಮಯಕ್ಕೆ ತಕ್ಕಂತೆ ಜಾರಿಕೊಳ್ಳುವ, ಹೊರಳಿಕೊಳ್ಳುವ, ರಾಜತಂತ್ರಿ, ನಯಜ್ಞ, ಮೊ. ; ಉಪಾಯಗಾರ. **Acrobátic** (ಗು.) ; **Acrobátics** (ನಾ.) ದೊಂಬರಾಟ ; ಲವಿ ಸಾಧನೆ. **Acrobátically** (ಕ್ರಿ. ವಿ.) ; **A'crobatism** (ನಾ.)

A'crogen ಆ್ಯಕ್ರೊಜೆನ್ (ನಾ.) (ಸ. ವಿ.) ಬೆಳೆಯುವ ಭಾಗವು ಅಗ್ರದಲ್ಲಿರುವ ಒಂದು ಸಸ್ಯವರ್ಗ (ಪಾಚಿ, ಜರೀಗಿಡ, ಮೊ.) ; ಅಗ್ರವರ್ಧಿ (ಶೀರ್ಷವರ್ಧಿ) ಸಸ್ಯವರ್ಗ. **Acrógenous** ಅಕ್ರಾಜೆನಸ್ (ಗು.)

A'crolith ಆ್ಯಕ್ರೊಲಿತ್ (ನಾ.) ತಲೆಯೂ ಕೈಕಾಲುಗಳೂ ಕಲ್ಲಿನಿಂದ ಮಾಡಿದ ಪ್ರತಿಮೆ.

Acronarcótic ಆ್ಯಕ್ರೊನಾರ್ಕಾಟಿಕ್ (ಗು.) ಕಟುವಾಗಿಯೂ ಮಯಕ ಬರಿಸುವುದಾಗಿಯೂ ಇರುವ ಗುಣವುಳ್ಳ.

Acrónyc(h)al ಅಕ್ರಾನಿಕಲ್ (ಗು.) ಸಂಧ್ಯಾ ಕಾಲಿಕ ; ಸಂಜೆಯಲ್ಲಿ ಅಥವಾ ನಿಶಾರಂಭದಲ್ಲಿ ಆಗುವ (ನಕ್ಷತ್ರಗಳ ಉದಯ ಅಥವಾ ಅಸ್ತ). **Acrónychally** (ಕ್ರಿ. ವಿ.)

Acroók ಅಕ್ರುಕ್ (ಕ್ರಿ. ವಿ.) ಓರೆಯಾಗಿ ; ಸೊಟ್ಟಗೆ ; ವಕ್ರವಾಗಿ.

Acrópetal ಅಕ್ರಾಪೆಟಲ್ (ಗು.) ಕೆಳಗಿನಿಂದ ಮೇಲಕ್ಕೆ ಬೆಳೆಯುತ್ತ ಹೋಗುವ ; ಊರ್ಧ್ವವರ್ಧಿ.

Acrópolis ಅಕ್ರಾಪೊಲಿಸ್ (ನಾ.) ಗ್ರೀಕ್ ಪಟ್ಟಣದ (ಮು., ಅಥೆನ್ಸಿನ) ಉನ್ನತ ಪ್ರದೇಶ ಅಥವಾ ದುರ್ಗ. (ರೂಪ. ಸಹ)

Acróss ಅಕ್ರಾಸ್ (ಕ್ರಿ. ವಿ.) ಶಿಲುಬೆಯಾಕಾರವಾಗಿ. ಅಡ್ಡವಾಗಿ. ಆಚೆ ಕಡೆಗೆ. To come across ಕಣ್ಣಿಗೆ ಬೀಳು. The king across the water ದೇಶಾಂತರದಲ್ಲಿರುವ (ರಾಜ್ಯಭ್ರಷ್ಟನಾದ) ದೊರೆ. Put it across a person (ಅಸಂ.) ತಕ್ಕದ್ದುಮಾಡು. ಮೋಸಗೊಳಿಸು.

Acróstic ಅಕ್ರಾಸ್ಟಿಕ್ (ನಾ.) ಒಂದು ಜಾತಿಯ ಪದ್ಯ (ಪದ) ಬಂಧ (ಪ್ರತಿಪಾದದ ಮೊದಲನೆಯ, ಮಧ್ಯದ, ಅಥವಾ ಅಂತ್ಯದ ಅಕ್ಷರಗಳನ್ನು ಸೇರಿಸಿದರೆ ಯಾವುದಾದರೂ ಒಂದು ಪದ ಅಥವಾ ಪದಸಮುದಾಯವಾಗುವಂಥ ಬಂಧ). **Acróstic** (ಗು.) ; **Acróstically** (ಕ್ರಿ. ವಿ.)

Act ಆ್ಯಕ್ಟ್ (ನಾ.) ಕಾರ್ಯ ; ಕೆಲಸ ; ಗೆಯ್ಮೆ ; ಎಸಕ ; ಕರ್ಮ ; ಕ್ರಿಯೆ ; ಕೃತ್ಯ. (ನ್ಯಾ. ಶಾ.) ಶಾಸನ ; ವಿಧಿ ; ನಿಬಂಧನೆ ; ಕಾನೂನು ; ಕಾಯಿದೆ. (ನಾಟಕದಲ್ಲಿ) ಅಂಕ. Act of God ದೈವ ಘಟನೆ. Act and deed ಖುದ್ದು ರಾಜಿಯಿಂದ ಬರೆದುಕೊಟ್ಟ ಪತ್ರ. **Act** (ಕ್ರಿ.) ನಟಿಸು ; ಪಾತ್ರ ವಹಿಸು ; ಅಭಿನಯಿಸು ; ವೇಷ ಹಾಕು. ಕೆಲಸ ಮಾಡು ; ನಡೆದುಕೊ ; ವರ್ತಿಸು ; ವ್ಯವಹರಿಸು ; ಆಚರಿಸು. **A'cting** (ನಾ.) ಕಾರ್ಯ ಮಾಡುವುದು. ಅಭಿನಯ. (ಗು.) ಹಂಗಾಮಿ ಕೆಲಸ ಮಾಡುವ ; ಬದಲಿ ನೋಡುವ ; ನಿಜವಾಗಿ ಕೆಲಸ ಮಾಡುವ. **A'ctor** ಆ್ಯಕ್ಟರ್ (ನಾ.) ನಟ ; ನಾಟ್ಯಗಾರ ; ಅಭಿನಯಗಾರ ; ಆಟಗಾರ ; ವೇಷಗಾರ. (ವಿರಳವಾಗಿ) ಕಾರ್ಯಕರ್ತ. Condemn the fault and not the actor of it ತಪ್ಪನ್ನು ಖಂಡಿಸು, ಅದರ ಕರ್ತೃವನ್ನು ಬೇಡ. **A'ctress** ಆ್ಯಕ್ಟ್ರೆಸ್ (ನಾ.) ನಟಿ ; ಆಟಗಾತಿ. **A'ction** ಆ್ಯಕ್‌ಷನ್ (ನಾ.) ಕ್ರಿಯೆ ; ಕಾರ್ಯ ; ಕೆಲಸ ; ಗೆಯ್ಮೆ ; ಎಸಕ ; ಕೃತ್ಯ ; ಕರ್ಮ ; ಪ್ರವೃತ್ತಿ ; ವ್ಯಾಪಾರ ; ನಡೆವಳಿ ; ನಡತೆ ; ಚರ್ಯೆ. (ನಾಟಕದಲ್ಲಿ) ಅಭಿನಯ ; ಅಂಗ ವಿಕ್ಷೇಪ ; ನಟನೆ ; ನಾಟಕದ ವಸ್ತು, ಕಾರ್ಯ, ಕಾರ್ಯಭಾಗ, ಸಂಘಟನೆ. (ನ್ಯಾ. ಶಾ.) ವ್ಯವಹಾರ ; ದಾವಾ ; ವ್ಯಾಜ್ಯ ; ಮೊಕದ್ದಮೆ. ಕಾಳಗ ; ಯುದ್ಧ. (ಯಂತ್ರ) ಚಲನೆ. (ಕ್ರಿ. ಸಕ.) ಮೊಕದ್ದಮೆ ಹೂಡು ; ದಾವಾ ಮಾಡು ; ವ್ಯವಹಾರ ನಡೆಯಿಸು. **A'ctionable** (ಗು.) ವ್ಯವಹಾರ ಯೋಗ್ಯವಾದ ; ವ್ಯವಹಾರ್ಯ ; ವ್ಯಾಜ್ಯ ಯೋಗ್ಯ.

A'ctinism ಆ್ಯಕ್ಟಿನಿಸ್ಮ್ (ನಾ.) ರಾಸಾಯನಿಕ ವಿಕಾರವನ್ನುಂಟುಮಾಡುವ ಸೂರ್ಯ ಕಿರಣಗಳ ಧರ್ಮ (ಛಾಯಾಚಿತ್ರ ಕ್ರಿಯೆಯಲ್ಲಿಯಂತೆ). **A'ctinic** (ಗು.) Actinic rays ರಾಸಾಯನಿಕ ವಿಕಾರವನ್ನುಂಟುಮಾಡುವ ಕಿರಣಗಳು. Actinic balance ತೇಜಸ್ಸನ್ನು ಅಳೆಯುವ ಸಲಕರಣೆ : ತೇಜೋಮಾಪಕ.

Actínium ಆ್ಯಕ್ಟಿನಿಯಂ (ನಾ.) 'ಪಿಚ್‌ಬ್ಲೆಂಡ್'ಎಂಬ ಖನಿಜದಲ್ಲಿ ದೊರೆಯುವ ಒಂದು ಸ್ವಪ್ರಕಾಶ ಮೂಲದ್ರವ್ಯ : ಆ್ಯಕ್ಟಿನಿಯಂ.

A'ctivate ಆ್ಯಕ್ಟಿವೇಟ್ (ಕ್ರಿ. ಸಕ.) ಚುರುಕಾಗುವಂತೆ ಮಾಡು ; ಕ್ರಿಯಾಶಕ್ತವನ್ನಾಗಿ ಮಾಡು. (ಭೌ. ವಿ.) ರೇಡಿಯೋ ಪಟುವನ್ನಾಗಿ ಮಾಡು. Activated sludge ವಾಯುಜೀವಿ ದಂಡಾಣುಗಳನ್ನೊಳಕೊಂಡ, ಗಾಳಿ ಸೇರಿಸಿದ ಬೀದಿಯ ರೊಜ್ಜು.

A'ctive ಆ್ಯಕ್ಟಿವ್ (ಗು.) ಚಟುವಟಿಕೆಯಾದ ; ಚುರುಕಾದ ; ಸುಟಿಯಾದ ; ಚೂಟಿಯಾದ. ಕೆಲಸ ಮಾಡುವ ; ಕಾರ್ಯಶೀಲ ; ಉದ್ಯೋಗಶೀಲ ; ಸೋತ್ಸಾಹ ; ಪಟು ; ಕ್ರಿಯಾಶಕ್ತ. ಕಾರ್ಯಕಾರಿ ; ಪರಿಣಾಮಕಾರಿ. (ವ್ಯಾ.) ಕರ್ತರಿ ಪ್ರಯೋಗ. (ವೈ. ಶಾ.) ಒಡನೆ ವ್ಯಾಪಿಸುವ ; ಶೀಘ್ರವ್ಯಾಪಕ. Active principle ಸತ್ವ ; ಸತ್ವಾಂಶ. **Activity** ಆ್ಯ —(ನಾ.) ಚಟುವಟಿಕೆ ; ಕ್ರಿಯೆ ; ಕಾರ್ಯಶಕ್ತಿ ; ಓಡಾಟ. **Actívities** ಕಾರ್ಯ ಕಲಾಪಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

A'ctual ಆ್ಯಕ್ಚ್ಯುಅಲ್ (ಗು.) ವಾಸ್ತವಿಕ ; ಯಥಾರ್ಥ ; ನಿಜ ; ಪ್ರತ್ಯಕ್ಷ ; ಸಾಕ್ಷಾತ್. ಪ್ರಸ್ತುತ ; ನಡೆಯುತ್ತಿರುವ ; ಸದ್ಯದ ; ಈಗಿನ. ಕ್ರಿಯಾತ್ಮಕ. **Actuálity** —ಆ್ಯಲಿಟಿ (ನಾ.) ವಾಸ್ತವಿಕತೆ ; ವಾಸ್ತವತೆ ; ಯಾಥಾರ್ಥ್ಯ. **Actuálities** ವಾಸ್ತವಿಕ ಸ್ಥಿತಿ ; ವಿದ್ಯಮಾನ. **A'ctualism** — ಅಲಿಸ್ಮ್ (ನಾ.) ಸೃಷ್ಟಿಯೆಲ್ಲವೂ ಸಚೇತನವೆಂಬ ವಾದ. **A'ctualize** (ಕ್ರಿ. ಸಕ.) ಕಾರ್ಯತಃ ಸಾಧಿಸು. ಕಣ್ಣಿಗೆ ಕಟ್ಟುವಂತೆ ವರ್ಣಿಸು. **Actualizátion** (ನಾ.) ; **A'ctually** (ಕ್ರಿ. ವಿ.) ವಾಸ್ತವವಾಗಿ ; ನಿಜವಾಗಿ. ಸದ್ಯಕ್ಕೆ ; ಸದ್ಯದಲ್ಲಿ. He actually pulled him out ಅವನನ್ನು ಎಳೆದು ಕೂಡ ಹಾಕಿದನು.

A'ctuary ಆ್ಯಕ್ಚ್ಯುಅರಿ (ನಾ.) (ಜೀವ ವಿಮೆ, ಅಗ್ನಿ ವಿಮೆ, ಆಕಸ್ಮಿಕ ವಿಮೆ — ಇವೇ ಮೊ.) ವಿಮಾ ಸಂಬಂಧದ ಲೆಕ್ಕಾಚಾರಗಳಲ್ಲಿ ಪ್ರವೀಣ: ವಿಮಾ ಗಣಕ. **Actuárial** — ಏರಿಯಲ್ (ಗು.)

A'ctuate ಆ್ಯಕ್ಚ್ಯುಏಟ್ (ಕ್ರಿ. ಸಕ.) (ಯಂತ್ರ ಮೊ. ಗಳ ವಿಷಯದಲ್ಲಿ) ಚಲನ ಕೊಡು, ನಡೆಯಿಸು. ಕೆರಳಿಸು ; ಮಿಾಟು ; ಚೋದಿಸು ; ಪ್ರೇರಿಸು. **A'ctuated** (ಗು.) ; **A'ctuating** (ಗು.) ; **Actuátion** (ನಾ.) ಚಾಲನ ; ಪ್ರೇರಣ.

A'cuate ಆ್ಯಕ್ಯುಏಟ್ (ಕ್ರಿ. ಸಕ.) ಹರಿತ ಮಾಡು ; (ರೂಪ. ಸಹ). **Acuátion** (ನಾ.) ; **A'cuate** — ಎಟ್ (ಗು.) ಮೊನಚಾದ. **Acúity** ಅಕ್ಯೂಯಿಟಿ (ನಾ.) (ಸೂಜಿ, ಆಮ್ಲ, ಚಾತುರ್ಯ, ಮೊ. ಗಳ) ಹರಿತ, ತೀವ್ರತೆ, ತೀಕ್ಷ್ಣತೆ, ಮೊನಚು, ಚುರುಕು, ಚೂಪು.

Acúleate ಅಕ್ಯೂಲಿಯೆಟ್, **Acúleated** —ಏಟೆಡ್ (ಗು.) (ಜೀ. ವಿ.) ಚುಚ್ಚುಕೊಂಡಿಯುಳ್ಳ. (ಸ. ವಿ.) ಮುಳ್ಳುಗಳಿಂದ ಕೂಡಿದ ; ಕಂಟಕಿತ ; ಸಕಂಟಕ. (ರೂಪ.) ಚುಚ್ಚುವ ; ಕುಟುಕುವ ; ಮರ್ಮ ಭೇದಕ. **Aculeátion** (ನಾ.) ಮೊನಚಾಗಿರುವುದು. **Acúleus** (ನಾ ; ಬ. ವ. — lei, — ಲೈ) (ಜೀ. ವಿ.) ಚುಚ್ಚುಕೊಂಡಿ. (ಸ. ವಿ.) ಮುಳ್ಳು.

Acúmen ಅಕ್ಯೂಮೆನ್ (ನಾ.) ಚುರುಕು ; ಚೂಟಿ ; ತೀಕ್ಷ್ಣ ಬುದ್ಧಿ ; ತೀವ್ರ ವಿವೇಚನೆ. (ಸ. ವಿ.) ಮೊನಚಾದ ಕೊನೆ. **Acúminate** — ಮಿನೆಟ್ (ಗು.) ಕೊನೆ ಮೊನಚಾದ ; ತೀಕ್ಷ್ಣಾಗ್ರ ; ಸೂಚ್ಯಗ್ರ. (ಕ್ರಿ. ಸಕ.) (—ಮಿನೇಟ್) ಹರಿತ ಮಾಡು ; ಚೂಪು ಮಾಡು ; ತೀವ್ರತೆ ಅಥವಾ ಚುರುಕನ್ನುಂಟುಮಾಡು ; ತೀಕ್ಷ್ಣಗೊಳಿಸು. **Acúminated** (ಗು.) ; **Acúminating** (ಗು.) ; **Acuminátion** (ನಾ.) ; **Acúminous** (ಗು.)

Acúte ಅಕ್ಯೂಟ್ (ಗು.) ಹರಿತವಾದ ; ಮೊನಚಾದ ; ಚೂಪಾದ (Acute angle ಸಮಕೋನಕ್ಕ ಕಡಮೆಯಾದ ಕೋನ : ಲಘು ಕೋನ). (ವ್ಯಾಧಿ) ತೀವ್ರತೆಗೇರುವ ; ದೀರ್ಘಕಾಲದ್ದಲ್ಲದ. (ಇಂದ್ರಿಯಗಳು, ಬುದ್ಧಿ—ಇವುಗಳ ವಿಷಯದಲ್ಲಿ) ತೀಕ್ಷ್ಣ ; ಚುರುಕು (An acute logician ತೀಕ್ಷ್ಣ ಬುದ್ಧಿಯ ತಾರ್ಕಿಕ). (ನಾದದ ವಿಷಯದಲ್ಲಿ) ಊರ್ಧ್ವ ; (ಸ್ವರದ ವಿಷಯದಲ್ಲಿ) ಉದಾತ್ತ ; ಕರ್ಕಶ. **Acútely** (ಕ್ರಿ. ವಿ.) ; **Acúteness** (ನಾ.)

Adáctylous ಅಡ್ಯಾಕ್ಟಿಲಸ್ (ಗು.) (ಪ್ರಾ. ವಿ.) ಕೈಬೆರಳಾಗಲಿ ಕಾಲ್ಬೆರಳಾಗಲಿ ಇಲ್ಲದ ; (ಏಡಿ ಮೊ. ವಲ್ಕವಂತಗಳಲ್ಲಿ) ಉಗುರುಗಳಿಲ್ಲದ.

A'dage ಆ್ಯಡೆಜ್ (ನಾ.) ಲೋಕೋಕ್ತಿ ; ಪ್ರಾಚೀನೋಕ್ತಿ ; ಸಾಮತಿ ; ಗಾದೆ ; ನಾಣ್ಣುಡಿ.

Adágio ಅಡಾಜಿಯೊ (ಕ್ರಿ. ವಿ., ಗು., ನಾ.) (ಸಂಗೀತದಲ್ಲಿ) ಸಾವಧಾನವಾಗಿ, ಸಾವಧಾನವಾದ ; ವಿಲಂಬ ಕಾಲದ (ಸಂಗೀತ). (ರೂಪ. ಸಹ)

A'dam ಆ್ಯಡಮ್ (ನಾ.) (ಬೈಬಲ್ಲಿನಲ್ಲಿ ಹೇಳಿರುವಂತೆ) ಆದಿಯಲ್ಲಿ ಸೃಷ್ಟಿಯಾದ ಮನುಷ್ಯ. (ಮಾನವ ವರ್ಗದ) ಆದಿ ಪುರುಷ. (ರೂಪ.) ಪ್ರಾಕೃತಸ್ಥಿತಿ ; ಅನಾಗರಿಕ ಸ್ಥಿತಿ. Adam's ale or wine ಆದಮನ ಮದ್ಯ, ಎಂದರೆ, ಸೀನೀರು. Adam's apple ಆದಮನ ಸೇಬು, ಎಂದರೆ, (೧) ಕಿತ್ತಿಳೆಯ ಜಾತಿಯ ಒಂದು ಬಗೆಯ ಹಣ್ಣು ; (೨) ಗಂಟಲಲ್ಲಿ ಶ್ವಾಸನಾಳದ ಹೊರಮೆಯ್ಯಲ್ಲಿ ಕಾಣುವ 'ಥೈರಾಯ್ಡ್ ಕಾರ್ಟಿಲೆಜ್' ಎಂಬ ಮೃದ್ವಸ್ಥಿಯ ಚಾಚಿಕೊಂಡಿರುವ ಭಾಗ: ಕಂಠ ಮಣಿ ; ಗಂಟಲ ಮಣಿ ; ಗೋಮಾಳೆ. **A'damite** (ನಾ.) ಆದಮನ ಸಂತತಿಯವನು : ಮನುಷ್ಯ. ಬಟ್ಟೆಯುಡದ ಮನುಷ್ಯ ; ನಗ್ನ ; ಈ ವಿಷಯದಲ್ಲಿ ಆದಮನನ್ನನುಸರಿಸಿ ನಡೆದ ಪಂಗಡ. **A'damites** (ಇವರು ಮಾತ್ರವೇ) ಆದಮನ ಸಂತತಿಯವರೆಂದು ಕೆಲವರು ಊಹಿಸುವ ಪಂಗಡ.

A'damant ಆ್ಯಡಮಂಟ್ (ನಾ.) ಅಭೇದ್ಯವಾದ ಕಠಿನ ವಸ್ತು ; ವಜ್ರ. Be adamant (ಬೇಡಿದುದನ್ನು ನಡೆಯಿಸಿ ಕೊಡದೆ) ವಜ್ರಹೃದಯನಾಗಿರು. **Adamántine** — ಮ್ಯಾಂಟೈನ್ (ಗು.) ವಜ್ರದಿಂದ ಮಾಡಿದ, ವಜ್ರದಂತಿರುವ, ವಜ್ರಪ್ರಾಯ ; ಕಠಿನವಾದ. ಪ್ರವೇಶಿಸಲಸಾಧ್ಯವಾದ ; ಅಭೇದ್ಯ ; ದುರ್ಭೇದ್ಯ.

A'damite ಆ್ಯಡಮೈಟ್ (ನಾ.) (Adam ನೋಡಿ). ಸತು ಎಂಬ ಲೋಹ ಸಂಯುಕ್ತವಾದ ಒಂದು ಖನಿಜ.

A'damsite ಆ್ಯಡಂಸೈಟ್ (ನಾ.) (ಖನಿಜ) ಅಭ್ರಕ.

Adápt ಅಡ್ಯಾಪ್ಟ್ (ಕ್ರಿ. ಸಕ.) ಹೊಂದಿಸು ; ಹೊಂದಿಕೆ ಮಾಡು ; (ಒಂದು ವಸ್ತುವನ್ನು ಮತ್ತೊಂದಕ್ಕೆ) ಜೋಡಿಸು ; (ಹೊಸ ಪರಿಸ್ಥಿತಿಗೆ ಹೊಂದುವಂತೆ) ಮಾರ್ಪಡಿಸು ; ಯೋಜಿಸು ; ಸರಿಮಾಡು ; ಸರಿಪಡಿಸು ; ಅನುಗೊಳಿಸು. ಅನುವಾದ ಮಾಡು. **Adáptable** (ಗು.) ತಕ್ಕಂತೆ ಮಾರ್ಪಡಿಸಲಾಗುವ ; ಬೇಕಾದಂತೆ ಪಳಗುವ. **Adaptability** (ನಾ.) ; **Adaptátion** ಆ್ಯಡ್ಯ — (ನಾ.) ಅನುವಾದ ; ಹೊಂದಿಸಿಕೊಳ್ಳುವುದು ; ಹೊಂದಿಸಿಕೊಂಡದ್ದು. **Adápted** ಅಡ್ಯಾ — (ಗು.) ; **Adáptive** (ಗು.) ; **Adápter** (ನಾ.) ಸಂಯೋಜಕ. ಎರಡು ವಸ್ತುಗಳನ್ನು ಜೋಡಿಸುವ ಭಾಗ. (ರ. ವಿ.) ಎರಡು ಸಲಕರಣೆಗಳನ್ನು ಜೋಡಿಸುವ ಕೊಳವೆ : ಸಂಯೋಜಕ.

Add ಆ್ಯಡ್ (ಕ್ರಿ.) (ಒಂದನ್ನೊಂದಕ್ಕೆ) ಸೇರಿಸು ; ಕೂಡು ; ಕೂಡಿಸು ; ಜೋಡಿಸು ; ಒಟ್ಟುಮಾಡು ; ಸಂಕಲಿಸು ; ಹೆಚ್ಚಿಸು. **A'dder** (ನಾ.) ಕೂಡುವವನು ; ಸಂಕಲನ ಮಾಡುವ ಯಂತ್ರ : ಸಂಕಲಕ. **Addítion** ಅಡಿಷನ್ (ನಾ.) ಸಂಕಲನ ; ಕೂಡುವುದು ; ತೇರೀಜು. ಸಂಯೋಜನ ; ಹೆಚ್ಚಿಕೆ ; ವೃದ್ಧಿ ; ಅನುಬಂಧ ; ಸೇರಿಸಿದುದು. **Addítional** (ಗು.) ಸೇರಿಸಿದ ; ಅಧಿಕ ; ಹೆಚ್ಚಿಗೆಯ. **Addítionally** (ಕ್ರಿ. ವಿ.) ; **A'dditive** ಆ್ಯಡಿಟಿವ್ (ಗು.) ಸೇರಿಸಬೇಕಾದ ; ಸೇರಿಸಲುಳ್ಳ.

A'ddax ಆ್ಯಡಕ್ಸ್ (ನಾ.) ಉತ್ತರ ಆಫ್ರಿಕದಲ್ಲೂ ಅರೇಬಿಯಾದಲ್ಲೂ ವಾಸಿಸುವ ತಿರುಮುರಿಯ ಕೊಂಬುಗಳುಳ್ಳ ಒಂದು ಜಾತಿಯ ಜಿಂಕೆ.

Addéndum ಅಡೆಂಡಂ (ನಾ., ಬ. ವ. —da) ಜೊತೆಗೆ ಸೇರಿಸಬೇಕಾದದ್ದು : ಅನುಬಂಧ.

A'dder ಆ್ಯಡರ್ (ನಾ.) ಒಂದು ಜಾತಿಯ ಸಣ್ಣ ವಿಷಸರ್ಪ.

Addíct ಅಡಿಕ್ಟ್ (ಕ್ರಿ. ಸಕ.) ಅಭ್ಯಾಸಕ್ಕೆ (ಸಾ., ದುರಭ್ಯಾಸಕ್ಕೆ) ವಶವಾಗು ; ವ್ಯಸನಕ್ಕೊಳಪಡು ; ಲಂಪಟನಾಗು ; ಚಟ ಹಿಡಿ. (ಒಂದು ಕಾರ್ಯದಲ್ಲಿ) ಅಭ್ಯಾಸ ಬಲದಿಂದ ನಿರತನಾಗು, ಅತ್ಯಾಸಕ್ತನಾಗು. (ರೋಮನ್ ನ್ಯಾ. ಶಾ.) ನ್ಯಾಯಾಧಿಪತಿಯ ತೀರ್ಪಿನ ಮೇಲೆ ಬಿಟ್ಟುಕೊಡು. **Addíction** (ನಾ.) ದುರ್ವಿಷಯಾಸಕ್ತಿ ; ವ್ಯಸನ ; ದುಷ್ಪ್ರವೃತ್ತಿ. (ರೋಮನ್ ನ್ಯಾ. ಶಾ.). **A'ddict** ಆ್ಯಡಿಕ್ಟ್ (ನಾ.) (ಅಫೀಮು, ಗಾಂಜಾ, ಮೊ. ಮಾದಕ ದ್ರವ್ಯಗಳ ಸೇವನೆಗೆ) ತೊತ್ತಾದವನು ; —ಲಂಪಟ ; —ವ್ಯಸನಿ.

A'ddison's disease ಆ್ಯಡಿಸನ್ಸ್ ಡಿಸೀಸ್ (ನಾ.) ಕ್ರಮೇಣ ಹೆಚ್ಚುತ್ತ ಹೋಗುವ ರಕ್ತಕ್ಷಯ, ಶಕ್ತಿಹೀನತೆ, ಚರ್ಮವು ಕಂದುಬಣ್ಣಕ್ಕೆ ತಿರುಗುವುದು—ಈ ಲಕ್ಷಣಗಳುಳ್ಳ ವ್ಯಾಧಿ : ಆ್ಯಡಿಸನ್ ವ್ಯಾಧಿ (ಡಾಕ್ಟರ್ ಆ್ಯಡಿಸನ್ ಎಂಬಾತನ ಹೆಸರಿನಿಂದ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

A'dditament ಆ್ಯಡಿಟಮೆಂಟ್ (ನಾ.) ಸೇರಿಸಿದುದು ; ಕೂಡಿಸಿದುದು.

Addítion. **Add** ನೋಡಿ.

A'ddle ಆ್ಯಡ್‌ಲ್ (ಗು.) ಕೊಳೆತು ನಾರುವ. ಗೊಡ್ಡಾದ (Addle egg ಕೊಳೆತ ಮೊಟ್ಟೆ ; ಮರಿಯಾಗದ ಮೊಟ್ಟೆ). (ರೂಪ.) ಬರಿದಾದ ; ಟೊಳ್ಳಾದ ; ವ್ಯರ್ಥವಾದ ; ಗಲಿಬಿಲಿಯಾದ ; ಅಸ್ತವ್ಯಸ್ತ ; ಭ್ರಾಂತಿಗೊಂಡ (Addle-brained ಭ್ರಾಂತ ಚಿತ್ತನಾದ). **A'ddle** (ಕ್ರಿ.) ಕೊಳೆ ; ಫಲವಿಲ್ಲದಂತೆ ಮಾಡು ; ವ್ಯರ್ಥಗೊಳಿಸು. ಭ್ರಾಂತಿಗೊಳ್ಳು ; ಭ್ರಾಂತಿಗೊಳಿಸು ; ಗಲಿಬಿಲಿಯಾಗು ; ಗಲಿಬಿಲಿಮಾಡು. **A'ddled** (ಗು.)

Addréss ಅಡ್ರೆಸ್ (ಕ್ರಿ. ಸಕ.) ಕಾಗದ ಬರೆ. ಸಂಬೋಧಿಸು ; ಉದ್ದೇಶಿಸಿ ಹೇಳು ; ಭಾಷಣ ಮಾಡು ; (ಮಾತಿನಿಂದಾಗಲಿ, ಬರಹದಿಂದಾಗಲಿ) ಅಭಿಪ್ರಾಯ ತಿಳಿಸು. ಮೇಲ್ವಿಳಾಸ ಬರೆ. ಪ್ರಾರ್ಥಿಸು ; ವಿನಂತಿ ಮಾಡು ; ನಿವೇದಿಸು. (ಕಾರ್ಯಕ್ಕೆ) ಮನಸ್ಸು ಕೊಡು, ತೊಡಗು, ಪ್ರವರ್ತಿಸು, ಉದ್ಯುಕ್ತನಾಗು. (ಗಾಲ್ಫ್ ಚೆಂಡಾಟದಲ್ಲಿ) ಗುರಿಯಿಡು. (ನಾ.) ಸಿದ್ಧತೆ. ಜಾಣ್ಮೆ ; ಕುಶಲತೆ ; ಚತುರತೆ ; ಚಾಕಚಕ್ಯ ; ಪ್ರಸಂಗ ; ಭಾಷಣ. ಅಭಿನಂದನ ಪತ್ರ ; ಮಾನ ಪತ್ರ ; ಬಿನ್ನವತ್ತಳೆ ; ಬಿನ್ನಹ. (ಕಾಗದದ) ಮೇಲ್ವಿಳಾಸ ; ಒಕ್ಕಣೆ. ನಡೆ ನುಡಿಗಳ ರೀತಿ. **Addrésses** (ನಾ.) ಒಲಿಸಿಕೊಳ್ಳುವುದು ; ಪ್ರೇಮಾನುಸರಣ ; ಪ್ರೇಮ ಸಲ್ಲಾಪ. **Addresseé** (ನಾ.) ವಿಳಾಸದಾರ. **Addréssograph** ಅಡ್ರೆಸೊಗ್ರಾಫ್ (ನಾ.) ವಿಳಾಸ ಮುದ್ರಣ ಯಂತ್ರ.

Addúce ಅಡ್ಯೂಸ್ (ಕ್ರಿ. ಸಕ.) (ಆಲೋಚನೆಗಾಗಿ) ಮುಂದಿಡು ; ಉದಾಹರಿಸು ; ದೃಷ್ಟಾಂತ ಕೊಡು ; ಸಾಕ್ಷ್ಯ ಒದಗಿಸು. **Addúceable** — ಸೆಬ್‌ಲ್ (ಗು.) ; **Addúcible** — ಸಿಬ್‌ಲ್ (ಗು.) ; **Addúction** ಅಡಕ್‌ಷನ್ (ನಾ.) ದೃಷ್ಟಾಂತ ಕೊಡುವುದು ; ಉದಾಹರಿಸುವುದು.

Addúcent ಅಡ್ಯೂಸೆಂಟ್ (ಗು.) (ಶ. ವಿ.) (ಸ್ನಾಯುಗಳ ವಿಷಯದಲ್ಲಿ) ಸಮಾನ ಕೇಂದ್ರಕ್ಕೆ ಎಳೆಯುತ್ತಿರುವ ; (ಕೇಂದ್ರ) ಅಭಿಕರ್ಷಕ.

Addúct ಅಡಕ್ಟ್ (ಕ್ರಿ. ಸಕ.) (ಶ. ವಿ.) ಸಮಾನ ಕೇಂದ್ರಕ್ಕೆ ಎಳೆ ; ಅಭಿಕರ್ಷಿಸು. **Addúction** (ನಾ.) (ಕೇಂದ್ರ) ಅಭಿಕರ್ಷಣ. **Addúctor** ಆ್ಯಡಕ್ಟರ್ (ನಾ.) (ಕೇಂದ್ರ) ಅಭಿಕರ್ಷಕ ಸ್ನಾಯು.

Adeém ಅಡೀಮ್ (ಕ್ರಿ.) (ನ್ಯಾ. ಶಾ.) ರದ್ದುಪಡಿಸು. **Adémption** ಅಡೆಮ್‌ಷನ್ (ನಾ.)

A'denoids ಆ್ಯಡೆನಾಯ್ಡ್ಸ್ (ನಾ., ಬ. ವ.) ಒಳಮೂಗಿನ ಹಿಂಭಾಗಕ್ಕೂ ಗಂಟಲಿಗೂ ನಡುವೆ ಇರುವ ಸ್ಪಂಜಿನಂತಹ ಗ್ರಂಥಿಗಳು : ಆ್ಯಡೆನಾಯ್ಡ್ ಗ್ರಂಥಿಗಳು ; ಈ ಗ್ರಂಥಿಗಳ ಊತ.

Adépt ಅಡೆಪ್ಟ್ (ಗು., ನಾ.) ನಿಪುಣ ; ಕುಶಲ ; ಪ್ರವೀಣ ; ಸಮರ್ಥ ; ಅಭಿಜ್ಞ.

A'dequate ಆ್ಯಡಿಕ್ವೆಟ್ (ಗು.) ಸಾಕಾದ ; ತಕ್ಕ ; ಅನುರೂಪ ; ಯಥೋಚಿತ. **A'dequacy** — ಕ್ವೆಸಿ (ನಾ.) ; **A'dequately** (ಕ್ರಿ. ವಿ.)

Adéspota ಅಡೆಸ್ಪೊಟ (ನಾ., ಬ. ವ.) ಲೇಖಕನು ಯಾರೆಂಬುದು ತಿಳಿಯದ, ಅಥವಾ ಯಾರೂ ತಮ್ಮದೆಂದು ಹೇಳದ, ಸಾಹಿತ್ಯ ಗ್ರಂಥಗಳು.

A deux (F) ಆ ಡ (ಕ್ರಿ. ವಿ., ಗು.) ಇಬ್ಬರಿಗಾಗಿ ; ಇಬ್ಬರೊಳಗೆ.

A'devism ಆ್ಯಡಿವಿಸ್ಮ್ (ನಾ.) ಪುರಾಣ ದೇವತೆಗಳ ನಿರಾಕರಣೆ (ನಾಸ್ತಿಕತೆಯಲ್ಲ)

Adhére ಆ್ಯಡ್ಹೀಯರ್ (ಕ್ರಿ. ಅಕ.) ಬಲವಾಗಿ ಅಂಟಿಕೊ ; ಹತ್ತಿಕೊ ; ಕಚ್ಚಿಕೊ. (ರೂಪ.) ನೆಮ್ಮು ; ಅನುಸರಿಸು ; (ಮತ, ಪಕ್ಷ, ವ್ಯಕ್ತಿ—ಇವನ್ನು) ಆಶ್ರಯಿಸು, ಅವಲಂಬಿಸು, ಪಾಲಿಸು. **Adhérent** (ಗು., ನಾ.) (ವಸ್ತುವಿಗೆ) ಹತ್ತಿಕೊಳ್ಳುವ, ಅಂಟಿಕೊಳ್ಳುವ ; ಅನುಷಂಗಿ ; ಸಂಬಂಧಿಸಿದ ; ಅವಲಂಬಿಸಿದ ; ಪಕ್ಷೀಯ. ಆಶ್ರಿತ ; ಅವಲಂಬಿ ; ಅನುಯಾಯಿ. **Adhérence** (ನಾ.) ; **Adhésion** ಆ್ಯಡ್ಹೀಷನ್ (ನಾ.) ಅಂಟಿಕೊಳ್ಳುವುದು. (ರೂಪ. ಸಹ.). (ಭೌ. ವಿ.) ಅನುಸಕ್ತಿ. (Cohesion = ಸಂಸಕ್ತಿ). **Adhésive** — ಸಿವ್ (ಗು.) ಅಂಟಿಕೊಳ್ಳುವ ಗುಣವುಳ್ಳ ; ಅಂಟಂಟಾದ. (ನಾ.) ಅಂಟುಪದಾರ್ಥ ; ಅಂಟು ; ಸರಿ. **Adhésively** (ಕ್ರಿ. ವಿ.) ; **Adhésiveness** (ನಾ.)

Adhíbit ಆ್ಯಡ್ಹಿಬಿಟ್ (ಕ್ರಿ. ಸಕ.) ಹಚ್ಚು. (ಔಷಧವನ್ನು) ಸೇವನೆ ಮಾಡಿಸು. (ರುಜು) ಹಾಕು. **Adhibítion** (ನಾ.)

Ad hoc (L) ಆ್ಯಡ್ ಹಾಕ್ (ಗು.) ಒಂದು ಉದ್ದೇಶಕ್ಕಾಗಿ ಗೊತ್ತು ಮಾಡಿದ ; ಅವಶ್ಯಬಿದ್ದಂತೆ ನಿಯಮಿಸಿದ ; ತತ್ಪೂರ್ತ ; ಕ್ಲ್ಪಪ್ತಾರ್ಥಕ.

Ad hóminem (L) ಆ್ಯಡ್ ಹಾಮಿನೆಂ (ಕ್ರಿ. ವಿ.) ಮನುಷ್ಯ ವ್ಯಕ್ತಿಗೆ ; ವೈಯಕ್ತಿಕವಾಗಿ (ಎಂದರೆ, ಅವನ ನಿಯಮಗಳು, ಆತ್ಮೀಯ ದೃಷ್ಟಿ, ಕಾಮಕ್ರೋಧಾದಿಗಳು ಅಥವಾ ಪಕ್ಷಪಾತ—ಇವುಗಳನ್ನು ಹಿಡಿದು ; ಯಥಾರ್ಥತೆ ಅಥವಾ ನ್ಯಾಯ ವಿವೇಚನೆಯಿಂದಲ್ಲ)

Ad honórem (L) ಆ್ಯಡ್ ಹೊನೋರೆಂ (ಕ್ರಿ. ವಿ.) ಘನತೆಗಾಗಿ ; ಗೌರವಾರ್ಥವಾಗಿ.

Adiabátic ಆ್ಯಡಯಬ್ಯಾಟಿಕ್ (ಗು.) (ಭೌ. ವಿ.) ಒಂದು ವಸ್ತುವು ಘನಪರಿಮಾಣದಲ್ಲಾಗಲಿ ಒತ್ತಡದಲ್ಲಾಗಲಿ ವ್ಯತ್ಯಾಸ ಹೊಂದಿದರೆ ಅದರಲ್ಲಿಯ ಉಷ್ಣಪರಿಮಾಣವು ಹೆಚ್ಚದೆಯೂ ತಗ್ಗದೆಯೂ ಇದ್ದು, ಶಾಖಮಾತ್ರ ಸಂದರ್ಭಾನುಸಾರ ವ್ಯತ್ಯಾಸಹೊಂದುತ್ತಿರುವ: ಸ್ಥಿರೋಷ್ಣ. (ನಾ.) ಸ್ಥಿರೋಷ್ಣ ರೇಖೆ.

Adiactínic ಆ್ಯಡಯಾಕ್ಟಿನಿಕ್ (ಗು.) (ರ. ವಿ.) ರಸಕ್ರಿಯಾತ್ಮಕ ಕಿರಣಗಳು (ಎಂದರೆ, ರಾಸಾಯನಿಕ ಕಾರ್ಯಮಾಡುವ ಕಿರಣಗಳು) ತೂರಿ ಹೋಗದಂತೆ ತಡೆಯುವ : ರಸಕಿರಣಾಭೇದ್ಯ.

Adiáphorism ಆ್ಯಡಯಾಫೊರಿಸ್ಮ್ (ನಾ.) ಮತಾಚರಣೆಗಳ ವಿಷಯದಲ್ಲಿ ಔದಾಸೀನ್ಯ ಅಥವಾ ಅನಿಷ್ಕರ್ಷೆ. **Adiáphorist** (ನಾ.)

Adiathérmic ಆ್ಯಡಯಥರ್ಮಿಕ್ (ಗು.) (ಭೌ. ವಿ.) ಉಷ್ಣ ತರಂಗಗಳು ತೂರಿಹೋಗದಂತೆ ತಡೆಯುವ : ಉಷ್ಣಾಭೇದ್ಯ. **Adiathérmancy** (ನಾ.)

Adieú ಅಡ್ಯೂ (ಅವ್ಯ., ನಾ.) (ಬೀಳ್ಕೊಡುವ ಮಾತು) ದೇವರು ರಕ್ಷಿಸಲಿ ; ಸ್ವಸ್ತಿ.

Ad infinítum (L) ಆ್ಯಡ್ ಇನ್‌ಫಿನೈಟಂ (ಕ್ರಿ. ವಿ.) ಅನಂತವಾಗಿ ; ಕೊನೆಯಿಲ್ಲದೆ.

Ad ínterim (L) ಆ್ಯಡ್ ಇನ್ಟೆರಿಂ. (ಗು., ಕ್ರಿ. ವಿ.) ಮಧ್ಯಕಾಲದ ; ಅಂತರ ; ತಾತ್ಕಾಲಿಕ ; ಏತನ್ಮಧ್ಯೆ ; 'ಹಂಗಾಮಿ' ಯಾಗಿ.

A'dipose ಆ್ಯಡಿಪೋಸ್ (ಗು., ನಾ.) ಮೇದಸ್ಸಿನ (ಕೊಬ್ಬಿನ) ಸಂಬಂಧವಾದ ; ಮೇದಸ್ಸಿನಿಂದ (ಕೊಬ್ಬಿನಿಂದ) ಕೂಡಿದ. ಕೊಬ್ಬು ; ಮೇದಸ್ಸು. **Adipósity** — ಪಾಸಿಟಿ (ನಾ.) ಬೊಜ್ಜು.

Adípsia, A'dipsy ಅಡಿಪ್ಸಿಯಾ, ಆ್ಯಡಿಪ್ಸಿ (ನಾ.) (ವೈ. ಶಾ.) ಬಾಯಾರಿಕೆಯೇ ಇಲ್ಲದಿರುವುದು ; ಅತೃಷ್ಣೆ ; ನಿರ್ದಾಹ. **Adípsous** ಅಡಿಪ್ಸಸ್ (ಗು.) ಬಾಯಾರಿಕೆ ತೀರಿಸುವ.

A'dit ಆ್ಯಡಿಟ್ (ನಾ.) ದ್ವಾರ. (ಗಣಿಯ ವಿಷಯದಲ್ಲಿ) ಸಮತಲದಲ್ಲಿ ಒಳಗೆ ಹೋಗುವ ಹಾದಿ. ಪ್ರವೇಶ ; ಸಮೀಪಿಸುವುದು.

Adjácent ಅಜ್‌ಜೇಸೆಂಟ್ (ಗು.) ಹತ್ತಿರವಿರುವ ; ಪಕ್ಕದಲ್ಲಿರುವ ; ಸೇರಿಕೊಂಡಿರುವ ; ಹೊದ್ದಿರುವ ; ಒತ್ತಿನ ; ಮಗ್ಗುಲಿನ ; ಸಮೀಪಸ್ಥ ; ಪಾರ್ಶ್ವಸ್ಥ (Adjacent angles ಪಾರ್ಶ್ವ ಕೋನಗಳು). **Adjácency** (ನಾ.) ಸಾಮೀಪ್ಯ ; ಅಕ್ಕಪಕ್ಕ ; ನೆರೆಹೊರೆ. **Adjácently** (ಕ್ರಿ. ವಿ.)

A'djective ಆ್ಯಜ್‌ಜೆಕ್ಟಿವ್ (ನಾ., ಗು.) (ವ್ಯಾ.) ವಿಶೇಷಣ ; ಗುಣವಾಚಕ. ಸ್ವತಂತ್ರವಾಗಿ ನಿಲ್ಲಲಾರದ ; ಪರಾವಲಂಬಿ (Adjective colours ಆಧಾರವಿಲ್ಲದೆ ನಿಲ್ಲಲಾರದ ಬಣ್ಣಗಳು). ಗೌಣ ; ಅಪ್ರಧಾನ. (ನ್ಯಾ. ಶಾ.) ನ್ಯಾಯ ನಿರ್ಣಯದ ಕ್ರಮಕ್ಕೆ ಸಂಬಂಧಪಟ್ಟ (ತತ್ತ್ವಕ್ಕಲ್ಲ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Adjectíval —ಕ್ಟೈವಲ್ (ಗು.) ; **Adjectívally** (ಕ್ರಿ. ವಿ.) ; **A'djectively** — ಟಿವ್ಲಿ (ಕ್ರಿ. ವಿ.)

Adjoín ಅಡ್‌ಜಾಯ್ನ್ (ಕ್ರಿ. ಸಕ.) ಸೇರಿಸು ; ಅಂಟಿಸು ; ಜೋಡಿಸು. ಸೇರಿರು ; ಪಕ್ಕದಲ್ಲಿರು ; ನೆರೆಯಲ್ಲಿರು ; ಮಗ್ಗುಲಲ್ಲಿರು. **Adjóined** (ಗು.) ; **Adjoíning** (ಗು.) ಪಕ್ಕದಲ್ಲಿರುವ ; ನೆರೆಯಲ್ಲಿರುವ. (ರೂಪ.) ಸಂಬಂಧಪಟ್ಟ ; ಸೇರಿದ.

Adjoúrn ಅಡ್‌ಜರ್ನ್ (ಕ್ರಿ.) ಮುಂದಕ್ಕಿಡು ; ತಳ್ಳಿಡು ; ಮುಂದಕ್ಕೆ ಹಾಕು; ಮುಂದೆ ನಡೆಯಿಸುವುದಕ್ಕಾಗಿ ಈಗ ನಿಲ್ಲಿಸು. (ಸಭೆ) ಸೇರುವ ಸ್ಥಳವನ್ನು ಬದಲಾಯಿಸು. ಒಟ್ಟಾಗಿ ಬೇರೆ ಸ್ಥಳಕ್ಕೆ ಹೋಗು. **Adjoúrnment** (ನಾ.) ನಿಲುವಳಿ ; ನಿಲುಗಡೆ ; ಮುಂದಕ್ಕೆ ತಳ್ಳುವುದು.

Adjúdge ಅಡ್‌ಜಡ್‌ಜ್ (ಕ್ರಿ. ಸಕ.) ನ್ಯಾಯ ಸಲ್ಲಿಸು ; ತೀರ್ಪು ಕೊಡು ; ತೀರ್ಮಾನಿಸು. ಶಿಕ್ಷೆ ವಿಧಿಸು. **Adjúdg(e)ment** (ನಾ.) ತೀರ್ಪು ; ತೀರ್ಮಾನ.

Adjúdicate ಅಡ್‌ಜೂಡಿಕೇಟ್ (ಕ್ರಿ.) (ಹಕ್ಕು ಮೊ. ವಿಚಾರಗಳಲ್ಲಿ) ತೀರ್ಪುಕೊಡು ; ತೀರ್ಮಾನಿಸು. **Adjudicátion** (ನಾ.) ; **Adjúdicative** (ಗು.) ; **Adjúdicator** (ನಾ.)

A'djunct ಆ್ಯಡ್‌ಜಂಕ್ಟ್ (ನಾ.) ಅಪ್ರಧಾನ, ಗೌಣ ಅಥವಾ ಅಧೀನ ವಸ್ತು ; ಅನುಷಂಗ. (ವ್ಯಾ.) ವಿಶೇಷಣ. (ತರ್ಕ) ಅಪ್ರಧಾನ ಲಕ್ಷಣ, ಗುಣ. **Adjúnctive** (ಗು.) ; **Adjúnctively** (ಕ್ರಿ. ವಿ.)

Adjúre ಅಡ್‌ಜ್ಯೂರ್ (ಕ್ರಿ. ಸಕ.) ಆಣೆಯಿಟ್ಟು, ಶಾಪದ ಭಯವಿಟ್ಟು ವಿಧಿಸು. ಶ್ರದ್ಧೆಯಿಂದ ಕೇಳಿಕೊ. **Adjurátion** ಆ್ಯಡ್‌ಜ್ಯುರೇಷನ್ (ನಾ.) ಆಣೆ. ಶ್ರದ್ಧಾಪೂರ್ವಕವಾದ ಪ್ರಾರ್ಥನೆ.

Adjúst ಅಡ್‌ಜಸ್ಟ್ (ಕ್ರಿ. ಸಕ.) ಸರಿಹೊಂದಿಸು ; ಕ್ರಮಪಡಿಸು ; ಹೊಂದಿಸಿಕೊ. **Adjústable** (ಗು.) ; **Adjústment** (ನಾ.) ಜೋಡಣೆ ; ಸಂಧಾನ ; ವ್ಯವಸ್ಥೆ.

A'djutant ಆ್ಯಡ್‌ಜ್ಯುಟಂಟ್ (ಗು., ನಾ.) ಸಹಾಯಕ. ಸೇನೆಯ ಮೇಲಧಿಕಾರಿಗಳಿಗೆ ಪತ್ರ ವ್ಯವಹಾರಾದಿ ಕಾರ್ಯಗಳಲ್ಲಿ ಸಹಾಯ ಮಾಡುವ ಸೇನಾಧಿಕಾರಿ. (ಇಂಡಿಯಾದಲ್ಲಿ ದೊರೆಯುವ) ಸ್ಥೂಲ ಕಾಯದ ಒಂದು ಕೊಕ್ಕರೆ ಜಾತಿಯ ಪಕ್ಷಿ. **A'djutancy** (ನಾ.) 'ಆ್ಯಡ್‌ಜ್ಯುಟಂಟ್' ಎಂಬ ಅಧಿಕಾರಿಯ ಅಧಿಕಾರ ಅಥವಾ ದರ್ಜೆ.

A'djuvant ಆ್ಯಡ್‌ಜ್ಯುವಂಟ್ (ಗು., ನಾ.) ಸಹಾಯಕ ; ನೆರವಾಗುವ. ಸಹಾಯಕ್ಕೊದಗುವ ಪದಾರ್ಥ ಅಥವಾ ಮನುಷ್ಯ. ಔಷಧದಲ್ಲಿಯ ಮುಖ್ಯ ಪದಾರ್ಥದ ಗುಣವನ್ನು ಹೆಚ್ಚಿಸುವುದಕ್ಕಾಗಿ ಸೇರಿಸುವ ಪದಾರ್ಥ : ಅನುಪಾನ ; ಸಹಾಯಕ ದ್ರವ್ಯ.

Ad líbitum (L) ಆ್ಯಡ್ ಲಿಬಿಟಂ (ಸಂಕ್ಷಿಪ್ತರೂಪ Ad lib.) (ಕ್ರಿ. ವಿ.) ಮನಸ್ಸಿಯಾಗಿ ; ಸ್ವೇಚ್ಛೆಯಾಗಿ ; ಮಿತಿಯಿಲ್ಲದೆ.

Admeásure ಆ್ಯಡ್‌ಮೆಷರ್ (ಕ್ರಿ. ಸಕ.) ಹಂಚು ; ಪಾಲು ಮಾಡು ; ವಿಭಾಗ ಮಾಡು ; ಅಳತೆ ಮಾಡಿಕೊಡು. **Admeásurement** (ನಾ.) ಹಂಚಿಕೆ ; ಅಳತೆ.

Admínicle, —cule ಆ್ಯಡ್‌ಮಿನಿಕ್‌ಲ್, —ಕ್ಯೂಲ್ (ನಾ.) ಸಹಾಯ ; ನೆರವು. (ನ್ಯಾ. ಶಾ.) ಸ್ಥಿರೀಕರಿಸುವ ಸಾಕ್ಷ್ಯ. **Admínicles** (ನಾ.) (ಪ್ರಾಚೀ. ಶಾ.) ನಾಣ್ಯ ಮೊ. ಗಳ ಮೇಲಿರುವ ಚಿತ್ರಗಳ ಸುತ್ತುವರಿದಿರುವ ಅಲಂಕಾರಗಳು. **Adminícular** (ಗು.)

Adminículum ಆ್ಯಡ್‌ಮಿನಿಕ್ಯುಲಂ (ನಾ.; ಬ. ವ. —cula) (ಕ್ರಿಮಿ ವಿಜ್ಞಾನ ; ಬ. ವ. ದಲ್ಲಿ) ಕೆಲವು ಕ್ರಿಮಿಗಳ ಮರಿಹುಳುವಿನ ಅವಸ್ಥೆಯಲ್ಲಿ ಅವುಗಳ ಹೊಟ್ಟೆಯ ಮೇಲಿರುವ ಸಣ್ಣ ಮುಳ್ಳುಗಳು.

Admínister ಆ್ಯಡ್‌ಮಿನಿಸ್ಟರ್ (ಕ್ರಿ.) ನಿರ್ವಹಿಸು ; ಆಡಳಿತ ನಡೆಯಿಸು. (ನ್ಯಾ. ಶಾ.) ಸತ್ತವನ ಆಸ್ತಿಯನ್ನು ಅವನ ಅಂತಿಮ ಇಷ್ಟಪತ್ರಕ್ಕೆ (ವಿಲ್ಲಿಗೆ, ಉಯಿಲಿಗೆ) ಅನುಗುಣವಾಗಿಯೊ, ಕೋರ್ಟಿನ ಅಧಿಕಾರ ಬಲದಿಂದಲೊ ನಿರ್ವಹಿಸು. ಮತ ಸಂಸ್ಕಾರ ಕ್ರಿಯೆಯನ್ನು ನಡೆಯಿಸು. Administer an oath ಪ್ರಮಾಣ ಮಾಡಿಸು. Administer to one's comforts (ಸೌಖ್ಯ, ಮೊ. ಕ್ಕೆ) ಏರ್ಪಾಟು ಮಾಡು. **Admínistrable** (ಗು.) ; **Administrátion** (ನಾ.) ಆಡಳಿತ ; ಕಾರ್ಯ ನಿರ್ವಹಣ ; ಕಾರ್ಯಭಾರ ; ಕಾರುಬಾರು. ರಾಜ್ಯಭಾರ. ಮಂತ್ರಿ ಮಂಡಲ. ಸರ್ಕಾರ. (ನ್ಯಾ. ಶಾ.) ಸತ್ತವನ ಆಸ್ತಿಯ ಆಡಳಿತ. Letters of administration ಅಂತಿಮ ಇಷ್ಟಪತ್ರ ಬರೆಯದೆ ಸತ್ತವನ ಆಸ್ತಿಯ ಆಡಳಿತ ಮಾಡಲು ಕೊಟ್ಟ ಅಧಿಕಾರಪತ್ರ : ಆಸ್ತಿನಿರ್ವಹಣ ಪತ್ರ. Administration of law ನ್ಯಾಯ ಪರಿಪಾಲನೆ. **Admínistrative** (ಗು.) ಆಡಳಿತ ಅಥವಾ ಕಾರ್ಯಭಾರ ಸಂಬಂಧವಾದ ; ಆಡಳಿತದ ; ನಿರ್ವಾಹಕ. **Admínistratively** (ಕ್ರಿ. ವಿ.) ; **Admínistrator** (ನಾ.) ಆಡಳಿತಗಾರ ; ಕಾರ್ಯನಿರ್ವಾಹಕ ; ಕಾರಬಾರಿ. ಹಕ್ಕುದಾರನ ಆಸ್ತಿಯನ್ನು ಅವನು ಪ್ರಾಪ್ತ ವಯಸ್ಕನಾಗುವ ವರೆಗೆ ಆಡಳಿತ ನೋಡಿಕೊಳ್ಳಲು, ಅಥವಾ ತಕ್ಕ ಅಧಿಕಾರಿಗಳನ್ನು ನಿಯಾಮಕ ಮಾಡದೆ ಸತ್ತವನ ಆಸ್ತಿಯನ್ನು ನೋಡಿಕೊಳ್ಳಲು, ಅಧಿಕಾರ ಪಡೆದವನು : ಆಸ್ತಿ ನಿರ್ವಾಹಕ. **Admínistratorship** (ನಾ.) ; **Admínistratrix** (ನಾ.) ಆಡಳಿತಗಾತಿ.

A'dmirable ಆ್ಯಡ್‌ಮಿರಬ್‌ಲ್ (ಗು.) ಮೆಚ್ಚತಕ್ಕ ; ಶ್ಲಾಘ್ಯ; ಆಶ್ಚರ್ಯಕರ. **A'dmirably** (ಕ್ರಿ. ವಿ.)

A'dmiral ಆ್ಯಡ್ಮಿರಲ್ (ನಾ.) (ರಾಜ್ಯದ) ನೌಬಲಾಧಿಪತಿ ; ನೌಬಲದ ಪ್ರಧಾನಾಧಿಕಾರಿ. ನೌಗಣದ ಅಧಿಪತಿ ; ನೌಬಲಾಧಿಪತಿಯಿರುವ ಹಡಗು. ಯೂರೋಪಿನ ಒಂದು ಜಾತಿಯ ಪತಂಗದ ಹುಳುವಿನ ಎರಡು ಸಂತತಿಗಳು (ಕೆಂಪು, ಬಿಳುಪು). **A'dmiralship** (ನಾ.) ; **A'dmiralty** (ನಾ.) ನೌಬಲಾಧಿಪತಿಯ ಅಧಿಕಾರ ; ನೌಬಲಾಧಿಪತ್ಯ; ನೌಕಾ ಖಾತೆಯ ಮೇಲ್ವಿಚಾರಣೆ ನೋಡಿಕೊಳ್ಳುವ ಅಧಿಕಾರಿವರ್ಗ; ನೌಕಾಧಿಪತ್ಯದ ಕಚೇರಿ. Court of Admiralty ಸಮುದ್ರಸಂಚಾರ ಸಂಬಂಧವಾದ ವಿಚಾರಗಳನ್ನೂ ಅಪರಾಧಗಳನ್ನೂ ವಿಚಾರಣೆ ಮಾಡಿ ತೀರ್ಪು ಕೊಡುವ ನ್ಯಾಯಸ್ಥಾನ.

Admíre ಆ್ಯಡ್‌ಮೈಯರ್ (ಕ್ರಿ. ಸಕ.) ಒಪ್ಪು ; ಮೆಚ್ಚು ; ಶ್ಲಾಘಿಸು. **Admirátion** ಆ್ಯಡ್ಮಿರೇಷನ್ (ನಾ.) ಮೆಚ್ಚಿಕೆ ; ಶ್ಲಾಘನೆ. Note of admiration ಆಶ್ಚರ್ಯಚಿಹ್ನೆ (!). **Admírer** (ನಾ.) ಮೆಚ್ಚುವವನು ; ಶ್ಲಾಘಿಸುವವನು ; ಒಲಿದವನು ; ಅನುರಾಗಿ.

Admít ಆ್ಯಡ್ಮಿಟ್ (ಕ್ರಿ.) ಸೇರಿಸು ; ಸೇರಿಸಿಕೊಳ್ಳು; ಎಡೆಗೊಡು ; ಅವಕಾಶ ಕೊಡು ; ಒಳಕ್ಕೆ ಬಿಡು ; ಪ್ರವೇಶ ಕೊಡು ; ಬರಗೊಡು. ಒಪ್ಪಿಕೊ; ಅಂಗೀಕರಿಸು. **Admíttable** (ಗು.) ಸೇರಿಸಲು, ಎಡೆಗೊಡಲು, ಅಂಗೀಕರಿಸಲು, ಯೋಗ್ಯವಾದ. **Admíttance** (ನಾ.) ಪ್ರವೇಶ ; ಸೇರಿಸುವುದು. **Admíttedly** (ಕ್ರಿ. ವಿ.) ಒಪ್ಪಿಕೊಂಡಿರುವಂತೆ. **Admíssible** (ಗು.) ಅಂಗೀಕರಿಸಬಹುದಾದ ; ಗ್ರಾಹ್ಯವಾದ ; ಒಪ್ಪಿಕೊಳ್ಳಬಹುದಾದ ; (ಒಂದು ಸ್ಥಾನಕ್ಕೆ) ಸೇರಿಸಿಕೊಳ್ಳಲು ಅರ್ಹವಾದ. **Admissibílity** (ನಾ.) ಗ್ರಾಹ್ಯತೆ ; ಅಂಗೀಕಾರಾರ್ಹತೆ. **Admíssion** (ನಾ.) ಸೇರಿಸುವುದು ; ಪ್ರವೇಶ; ಅಂಗೀಕಾರ ; ಒಪ್ಪಿಕೆ ; ಸ್ವೀಕಾರ. **Admíssive** (ಗು.) ಸೇರಿಸಿಕೊಳ್ಳುವ.

Admíx ಆ್ಯಡ್‌ಮಿಕ್ಸ್ (ಕ್ರಿ.) ಬೆರಸು ; ಬೆರಕೆ ಮಾಡು ; ಮಿಶ್ರ ಮಾಡು. **Admíxture** — ಮಿಕ್ಸ್‌ಚ್ಯುರ್ (ನಾ.) ಕಲಬೆರಕೆ ; ಮಿಶ್ರಣ ; ಸಂಕರ.

Admónish ಆ್ಯಡ್ಮಾನಿಷ್ (ಕ್ರಿ. ಸಕ.) ಬುದ್ಧಿ ಹೇಳು ; ಎಚ್ಚರಿಕೆ ಕೊಡು ; ತಪ್ಪು ತೋರಿಸು. **Admónishment** (ನಾ.) ; **Admonítion** ಆ್ಯಡ್ಮೊನಿಷನ್ (ನಾ.) ಎಚ್ಚರಿಕೆ ; ಬುದ್ಧಿವಾದ ; ವಾಗ್ದಂಡ. **Admónitory** ಆ್ಯಡ್ಮಾನಿಟರಿ (ಗು.)

A'dnate ಆ್ಯಡ್‌ನೇಟ್ (ಗು.) (ಶ. ವಿ., ಸ. ವಿ.) ಆಗರ್ಭವಾಗಿ ಅಂಟಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊಂಡು ಬೆಳೆಯುವ. **Adnátion** (ನಾ.) (ಸ. ವಿ.) ಹೂವಿನ ಸುತ್ತುಗಳು ಒಂದಕ್ಕೊಂದು ಅಂಟಿಕೊಂಡು ಬೆಳೆಯುವುದು.

Ad naúseam (L) ಆ್ಯಡ್ ನಾಷಿಆ್ಯಂ (ಕ್ರಿ. ವಿ.) ಅಸಹ್ಯವಾಗುವಷ್ಟು; ಬೇಜಾರು ಹಿಡಿಯುವಷ್ಟು.

A'dnoun ಆ್ಯಡ್‌ನೌನ್ (ನಾ.) ಗುಣವಾಚಕ ; ವಿಶೇಷಣ ; ನಾಮವಾಚಿಯಾಗಿ ಉಪಯೋಗಿಸಿದ ಗುಣವಾಚಕ. **Adnóminal** —ನಾಮಿನಲ್ (ಗು.) ವಿಶೇಷಣ ಅಥವಾ ಗುಣವಾಚಕ ಸಂಬಂಧವಾದ ; ನಾಮ ಪದಕ್ಕೆ ಸೇರಿದ.

Adó ಅಡೂ (ನಾ.) ಗಡಿಬಿಡಿ ; ಗದ್ದಲ ; ಗೊಂದಲ. ಪ್ರಯಾಸ ; ಶ್ರಮ ; ಕ್ಲೇಶ.

Adóbe ಅಡೋಬಿ, ಅಡೋಬ್ (ನಾ.) (ಬಿಸಿಲಿನಲ್ಲಿ ಒಣಗಿಸಿದ) ಹಸಿಯಿಟ್ಟಿಗೆ ; ಹೆಂಟೆ.

Adoléscence ಆ್ಯಡೊಲೆಸೆನ್ಸ್ (ನಾ.) ಬಾಲ್ಯದಿಂದ ಪ್ರೌಢಾವಸ್ಥೆಯ ವರೆಗಿನ ಕಾಲ (ಗಂಡಸಿನಲ್ಲಿ ೧೪ರಿಂದ ೨೫, ಹೆಂಗಸಿನಲ್ಲಿ ೧೨ರಿಂದ ೨೧) ; ತಾರುಣ್ಯ. (ರೂಪ. ಸಹ). **Adoléscent** (ಗು.) ತರುಣಾವಸ್ಥೆಯ. (ನಾ.) ತರುಣ ; ತರುಣಿ.

Adónis ಅಡೋನಿಸ್ (ನಾ.) (ಗ್ರೀಕ್ ಪುರಾಣದಲ್ಲಿ) ಪ್ರೀತಿ ಸೌಂದರ್ಯಗಳ ಅಧಿದೇವತೆಯಾದ 'ವೀನಸ್ಸಿ'ಗೆ ಪ್ರೀತಿಪಾತ್ರನಾದ ಒಬ್ಬ ಸುಂದರ ಯುವಕ. ಸೊಗಸುಗಾರ ; ಕಾಮಣ್ಣ; ವಿಲಾಸ ಪುರುಷ. (ಸ. ವಿ.) ಒಂದು ಸಸ್ಯಜಾತಿ. (ಜೀ. ವಿ.) ಒಂದು ಜಾತಿಯ ಚಿಟ್ಟೆ. **A'donize** ಆ್ಯಡೊನೈಸ್ (ಕ್ರಿ.) ಸೊಗಸು (ಅಲಂಕಾರ) ಮಾಡಿಕೊ, ಮಾಡು.

Adópt ಅಡಾಪ್ಟ್ (ಕ್ರಿ. ಸಕ.) ಸ್ವೀಕಾರ ಮಾಡು ; ದತ್ತು ಮಾಡಿಕೊ, ತೆಗೆದುಕೊ. (ಇತರರಿಂದ, ಅಭಿಪ್ರಾಯ ವೊ. ನ್ನು) ತೆಗೆದುಕೊ ; ಗ್ರಹಿಸು ; ಅಂಗೀಕರಿಸು. (ಇತರ ಭಾಷೆಯ ಪದವನ್ನು ಮಾರ್ಪಾಡು ಮಾಡದೆ) ಉಪಯೋಗ ಮಾಡಿಕೊ. ಆಯ್ದುಕೊ. ಅನುಸರಿಸು. **Adoptabílity** (ನಾ.) ಸ್ವೀಕಾರಾರ್ಹತೆ ; ಸ್ವೀಕರಣೀಯತೆ. **Adóption** (ನಾ.) ಸ್ವೀಕಾರ; ದತ್ತಸ್ವೀಕಾರ. **Adóptable** (ಗು.) ; **Adóptive** (ಗು.) ದತ್ತುಸಂಬಂಧದ (Adoptive son ದತ್ತು ಮಗ) ; ಸ್ವೀಕಾರಾರ್ಹ ; ಸ್ವೀಕಾರಶೀಲ. **Adóptively** (ಕ್ರಿ. ವಿ.) ; **Adópted** (ಗು.) ; **Adópter** (ನಾ.)

Adóre ಅಡೋರ್ (ಕ್ರಿ. ಸಕ.) (ದೇವರಂತೆ) ಪೂಜಿಸು ; ಆರಾಧಿಸು. ಕೇವಲ ಭಕ್ತಿವಿಶ್ವಾಸಗಳಿಂದ ಕಾಣು. **Adórable** (ಗು.) ಪೂಜ್ಯ ; ಪೂಜನೀಯ ; ಆರಾಧನೀಯ. **Adórably** (ಕ್ರಿ. ವಿ.) ; **Adorátion** ಆ್ಯಡೊರೇಷನ್ (ನಾ.) ಪೂಜೆ ; ಆರಾಧನೆ; ಭಕ್ತಿ ; ಮನ್ನಣೆ. **Adórer** ಅಡೋರರ್ (ನಾ.) ಪೂಜಕ ; ಆರಾಧಕ ; ಭಕ್ತ ; ದಾಸ. ಪ್ರೇಮಿ.

Adórn ಅಡಾರ್ನ್ (ಕ್ರಿ. ಸಕ.) ಸಿಂಗರಿಸು ; ಅಲಂಕರಿಸು ; ಭೂಷಿಸು ; ಅಂದಗೊಳಿಸು. ಶೋಭಾಯಮಾನ ಮಾಡು. **Adórned** (ಗು.) ಶೋಭಿತ ; ಭೂಷಿತ. **Adórnment** (ನಾ.) ಶೃಂಗಾರ ; ಭೂಷಣ ; ಅಲಂಕಾರ ; ಆಭರಣ ; ತೊಡವು ; ಒಡವೆ.

Adowń ಅಡೌನ್ (ಕ್ರಿ. ವಿ.) ಕೆಳಕ್ಕೆ ; ತಳಕ್ಕೆ.

Ad rem (L) ಆ್ಯಡ್ ರೆಮ್ (ಕ್ರಿ. ವಿ.) ಸಂದರ್ಭಕ್ಕೆ ತಕ್ಕಷ್ಟು ; ವಿಷಯ ಬಿಟ್ಟು ಹೋಗದೆ.

Adrénal ಆ್ಯಡ್‌ರೀನಲ್ (ಗು., ನಾ.) ಮೂತ್ರ ಜನಕಾಂಗಗಳ ಮೇಲ್ಗಡೆ ಅಂಟಿಕೊಂಡಿರುವ (ನಿರ್ನಾಳ ಗ್ರಂಥಿ). ಈ ಗ್ರಂಥಿಗೆ ಸಂಬಂಧಪಟ್ಟ. **Adrénalin** (ನಾ.) ಈ ಗ್ರಂಥಿಗಳು ರಕ್ತದಿಂದ ಶೇಖರಿಸಿ ತೆಗೆದ ಜಾಗೃತ ದ್ರವ್ಯ (ರಕ್ತಸಂಚಲನದ ಮೇಲೆಯೂ ಸ್ನಾಯುಗಳ ಕಾರ್ಯದ ಮೇಲೆಯೂ ಪರಿಣಾಮವನ್ನುಂಟುಮಾಡುವ ಉತ್ತೇಜಕ ವಸ್ತು). ಪ್ರಾಣಿಗಳಿಂದ ಸಂಗ್ರಹಿಸಿ ತೆಗೆದ ಈ ಉತ್ತೇಜಕ ವಸ್ತು : 'ಆ್ಯಡ್ರೀನಲಿನ್'.

Adríft ಅಡ್ರಿಫ್ಟ್ (ಕ್ರಿ. ವಿ.) (ಗಾಳಿಗೂ, ಪ್ರವಾಹಕ್ಕೂ) ತೂರಿಕೊಂಡು, ಹೊಡೆದುಕೊಂಡು, ಹೋಗುತ್ತ ; ಕೊಚ್ಚಿಕೊಂಡುಹೋಗುವಂತೆ. (ನಾವೆ) ಕಟ್ಟಿಹಾಕದೆ. ಗೊತ್ತುಗುರಿಯಿಲ್ಲದೆ ; ನೆಲೆಯಿಲ್ಲದೆ ; ನಿರಾಲಂಬವಾಗಿ.

Adroít ಅಡ್ರಾಯ್ಟ್ (ಗು.) ಚಮತ್ಕಾರವುಳ್ಳ; ಉಪಾಯವುಳ್ಳ; ಚಾಕಚಕ್ಯವುಳ್ಳ. **Adroítly** (ಕ್ರಿ. ವಿ.) ; **Adroítness** (ನಾ.)

Adrý ಅಡ್ರೈ (ಕ್ರಿ. ವಿ.) ಒಣಗಿ ; ಬಾಯಾರಿ.

Adscitítious ಆ್ಯಡ್‌ಸಿಟಿಷಸ್ (ಗು.) ಹೊರಗಿನಿಂದ ತೆಗೆದುಕೊಂಡ ; ಸೇರಿಸಿದ ; ಸಹಾಯಕ.

A'dscript ಆ್ಯಡ್‌ಸ್ಕ್ರಿಪ್ಟ್ (ಗು.) (ತಳದಲ್ಲಲ್ಲದೆ) ಪಕ್ಕದಲ್ಲಿ ಬರೆದ. **Adscríption** = Ascription.

Adscríptus glébae (L) ಆ್ಯಡ್‌ಸ್ಕ್ರಿಪ್ಟಸ್ ಗ್ಲೀಬೀ (ಗು., ನಾ.) ಜಮೀನಿನೊಂದಿಗೆ ಸೇರಿದ (ಗುಲಾಮ)

Adsórption ಆ್ಯಡ್‌ಸಾರ್ಪ್ಷನ್ (ನಾ.) ಘನವಸ್ತುಗಳ ಮೈಮೇಲೆ ಅನಿಲಗಳು ಮಂದಗಟ್ಟುವುದು.

A'dsum (L) ಆ್ಯಡ್‌ಸಂ (ಕ್ರಿ. ಅಕ.) ನಾನು ಇಲ್ಲಿದ್ದೇನೆ.

A'dulate ಆ್ಯಡ್ಯುಲೇಟ್ (ಕ್ರಿ. ಸಕ.) ಅತಿಸ್ತುತಿ ಮಾಡು ; ಮರ್ಯಾದೆ ಮೀರಿ ಹೊಗಳು. **Adulátion** (ನಾ.) ; **A'dulator** (ನಾ.) ಹೊಗಳುಭಟ್ಟ. **A'dulatory** — ಲಟರಿ (ಗು.)

Adúlt ಅಡಲ್ಟ್ (ಗು., ನಾ.) ಪ್ರಾಯಕ್ಕೆ ಬಂದ; ನೆರೆದ; ಪ್ರಾಪ್ತವಯಸ್ಕ ; ದೊಡ್ಡವನು. (ರೂಪ.) ಪೂರ್ಣವಾಗಿ ಬೆಳೆದ.

Adúlterate ಅಡಲ್ಟರೇಟ್ (ಕ್ರಿ. ಸಕ.) ಬೆರಕೆ ಮಾಡು ; ಕೀಳುಪದಾರ್ಥಗಳನ್ನು ಬೆರಸಿ ಅಶುದ್ಧ ಮಾಡು. **Adúlterant** (ಗು., ನಾ.) ಬೆರಕೆ ಮಾಡಲು ಉಪಯೋಗಿಸುವ (ಪದಾರ್ಥ). **Adulterátion** (ನಾ.) ; **Adúlterator** (ನಾ.) ; **Adúlterate** — ರೆಟ್ (ಗು.) ವ್ಯಭಿಚಾರ ಸಂಬಂಧವುಳ್ಳ ; ಕಳಂಕವುಳ್ಳ ; ಅಶುದ್ಧ. **Adúlterer** (ನಾ.) ವ್ಯಭಿಚಾರಿ ; ಜಾರ ; ಹಾದರ ಮಾಡುವವನು. **Adúlteress** (ನಾ.) ವ್ಯಭಿಚಾರಿಣಿ ; ಜಾರೆ ; ಹಾದರಗಿತ್ತಿ. **Adúlterine** — ರೈನ್ (ಗು.) ಹಾದರದ ; ವ್ಯಭಿಚಾರದ ; ಹಾದರಕ್ಕೆ ಹುಟ್ಟಿದ. ಕೀಳ್ಬೆರಕೆ ಮಾಡಿದ. ನ್ಯಾಯಸಮ್ಮತವಲ್ಲದ. ಅನುಜ್ಞೆಯಿಲ್ಲದ ; ಕಾನೂನಿಗೆ ವಿರುದ್ಧವಾದ. **Adúlterous** (ಗು.) ; **Adúltery** (ನಾ.) ವ್ಯಭಿಚಾರ ; ಹಾದರ.

A'dumbrate ಆ್ಯಡಂಬ್ರೇಟ್ (ಕ್ರಿ. ಸಕ.) ಛಾಯೆ ತೋರಿಸು ; ರೇಖಿಸು. ಹೆಗ್ಗುರುತು ಮಾಡು ; ನೆರಳು ಕವಿ ; ಮಸುಕು ಮಾಡು (Good qualities are adumbrated by defects ನ್ಯೂನತೆಗಳಿಂದ ಸದ್ಗುಣಗಳು ಮಸುಕಾಗುತ್ತವೆ). **Adúmbral** (ಗು.) ನೆರಳುಗವಿಸುವ. **Adumbrátion** (ನಾ.) ಸ್ಥೂಲ ನಿರ್ದೇಶ ; ದಿಕ್ಪ್ರದರ್ಶನ. **Adúmbrative** (ಗು.)

Adúst ಅಡಸ್ಟ್ (ಗು.) ಒಣಗಿಹೋದ ; ತರಗಾದ ; ತಾರಿದ. (ರೂಪ.) ಖಿನ್ನ ; ಕಂದಿದ ; ಮಂಕು ಹಿಡಿದ.

Ad valórem (L) ಆ್ಯಡ್ ವಲೋರೆಂ (ಕ್ರಿ. ವಿ., ಗು.) ಬೆಲೆಗೆ ತಕ್ಕಂತೆ ; ಕ್ರಯಾನುಸಾರ ; (ಸನಗುಗಳ ಅಥವಾ ಸರಕುಗಳ ಮೇಲೆ ತೆರಿಗೆ ಹಾಕುವ ಸಂದರ್ಭದಲ್ಲಿ, ಅವುಗಳ) ಅಂದಾಜುಬೆಲೆಯ ಮೇಲೆ.

Advánce ಆ್ಯಡ್ವಾನ್ಸ್ (ಕ್ರಿ. ಸಕ.) ಮುಂದುವರಿಸು ; ಮುಂಬರಿಸು ; ಮುಂದಕ್ಕೆ ತರು ; ಅಭಿವೃದ್ಧಿ ಮಾಡು ; ಉನ್ನತಿಗೆ ತರು ; ಮುಂದಿಡು. (ಕಾರ್ಯಗಳನ್ನು) ಕ್ಷಿಪ್ರಗೊಳಿಸು, ತ್ವರೆಪಡಿಸು. ಮುಂಗಡ ಕೊಡು ; ಸಾಲ ಕೊಡು. (ಬೆಲೆ) ಹೆಚ್ಚಿಸು. (ಕ್ರಿ. ಅಕ.) ಮುಂದಾಗು ; ಮುಂದೆ ಸಾಗು ; ಅಭಿವೃದ್ಧಿ ಹೊಂದು ; ಏಳಿಗೆ ಪಡೆ ; ಪ್ರವರ್ಧಮಾನಕ್ಕೆ ಬರು ; ಉತ್ಕರ್ಷ ಹೊಂದು ; ಬೆಲೆ ಏರು. (ನಾ.) ಮುಂದುವರಿಯುವುದು ; ಅಭಿವೃದ್ಧಿ ; ಏಳಿಗೆ; ಉತ್ಕರ್ಷ ; (ಬೆಲೆ) ಏರಿಕೆ. ಮುಂಗಡ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಲ ; ಸಂಚಕಾರ. Advance copy of a book ಪ್ರಕಟನೆಯಾಗುವ ಮೊದಲು ಕಳುಹಿಸಿದ ಪುಸ್ತಕದ ಪ್ರತಿ : ಮುಂಪ್ರತಿ. Make advances ಸ್ನೇಹ ಸಂಧಾನ ಮಾಡು. **Advánced** (ಗು.) ಮುಂಬರಿದ ; ಮುಂದಿರುವ. ವಯಸ್ಸಿನಲ್ಲಿ ಅಥವಾ ಕಾಲದಲ್ಲಿ ಬಹಳ ಮುಂದುವರಿದ. (ಪರಿಮಾಣದಲ್ಲಿ) ಏರಿದ (Advanced studies ಪ್ರೌಢ ವ್ಯಾಸಂಗ. Advanced in ideas ಅಭಿಪ್ರಾಯಗಳಲ್ಲಿ ಮುಂದುವರಿದ). **Adváncement** (ನಾ.)

Advántage ಆ್ಯಡ್ವಾನ್ಟೆಜ್ (ನಾ.) ಅನುಕೂಲ ; ಉತ್ತಮ ಸ್ಥಿತಿ ; ಮೇಲ್ಮೆ ; ಪ್ರಾಧಾನ್ಯ ; ಪ್ರಯೋಜನ ; ಸೌಕರ್ಯ. ಸಮಯ ; ಅವಕಾಶ. **Advantágeous** — ನ್ಟೇಜಸ್ (ಗು.) ; **Advantágeously** (ಕ್ರಿ. ವಿ.). Take advantage of a circumstance ಒದಗಿದ ಸಂದರ್ಭದಿಂದ ಪ್ರಯೋಜನವನ್ನುಂಟುಮಾಡಿಕೊ. Take advantage of a person ಒಬ್ಬನ ಅಶಕ್ತತೆಯನ್ನೊ ಅಲಕ್ಷ್ಯತೆಯನ್ನೊ ಸ್ವಪ್ರಯೋಜನಕ್ಕಾಗಿ ಉಪಯೋಗಪಡಿಸಿಕೊ. Take a person at advantage ಒಬ್ಬನು ಮೈಮರೆತಿರುವುದನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊ. To have the advantage of one ನಮ್ಮ ವಿಷಯ ತಿಳಿಯದಾತನ ವಿಷಯವನ್ನು ನಾವು ತಿಳಿದುಕೊಂಡಿರುವುದು. To show to advantage ಗುಣ ಪ್ರಕಾಶವಾಗುವಂತೆ ತೋರಿಸುವುದು. **Advántage** (ಕ್ರಿ. ಸಕ.) ಅನುಕೂಲಿಸು ; ಪ್ರಯೋಜನವಾಗು.

A'dvent ಆ್ಯಡ್‌ವೆನ್ಟ್ (ನಾ.) ಆಗಮನ ; ಬರವು ; (ಮಹಾಪುರುಷನ) ಅವತರಣ. ಯೇಸುಕ್ರಿಸ್ತನ ಜನ್ಮೋತ್ಸವದ ಹಿಂದಣ ನಾಲ್ಕು ವಾರಗಳು. ಯೇಸುಕ್ರಿಸ್ತನ ಪುನರಾಗಮನ.

Adventítious ಆ್ಯಡ್‌ವೆನ್ಟಿಷಸ್ (ಗು.) ಎಲ್ಲಿಂದಲೊ ಬಂದು ಕೂಡಿದ ; ಅನಿರೀಕ್ಷಿತ ; ಆಕಸ್ಮಿಕ. (ನ್ಯಾ. ಶಾ.) ಅದೃಷ್ಟವಶದಿಂದ, ಅಪರಿಚಿತನಿಂದ, ಅಥವಾ ದೂರ ಸಂಬಂಧಿಯಿಂದ, ಬಂದ ; ಯಾದೃಚ್ಛಿಕ. (ಸ. ವಿ.) ಆಕಸ್ಮಿಕವಾಗಿ ಅಥವಾ ಅಸಾಧಾರಣ ಸ್ಥಳಗಳಲ್ಲಿ ಕಾಣಿಸಿಕೊಳ್ಳುವ : ಆಕಸ್ಮಿಕ. **Adventítiously** (ಕ್ರಿ. ವಿ.)

Advénture ಆ್ಯಡ್ವೆನ್‌ಟ್ಶುರ್, — ಚರ್ (ನಾ.) ಸಾಹಸ ; ಸಾಹಸ ಕಾರ್ಯ ; ಧೈರ್ಯದ ಕೆಲಸ ; ಅಪಾಯದ ಕೆಲಸ ; ಅನಿರೀಕ್ಷಿತ ಘಟನೆ. ಧೃಷ್ಟತನ ; ಸಾಹಸಿಗತನ. ಅತಿಲಾಭಾಕಾಂಕ್ಷೆಯಿಂದ ಲಕ್ಷ್ಯವಿಲ್ಲದೆ ಮಾಡುವ ವ್ಯಾಪಾರ : ಸಟ್ಟಾ ವ್ಯಾಪಾರ. **Advénture** (ಕ್ರಿ.) ಅಪಾಯವನ್ನು ಲಕ್ಷಿಸದೆ ಪ್ರವರ್ತಿಸು ; ಅಪಾಯಕ್ಕೆ ಈಡುಮಾಡು, ಈಡಾಗು ; ಧೈರ್ಯದಿಂದ ನುಗ್ಗು. **Advénturer** (ನಾ.) ಘಟಕ ; ಗಟ್ಟಿಗ ; ಸಾಹಸಿ ; ಸಾಹಸಿಗ ; ಸಾಹಸಗಾರ. ಹಣಕ್ಕಾಗಿ ಅಥವಾ ಹೆಸರಿಗಾಗಿ ಕಾದುವ ಯೋಧ. ಸಟ್ಟಾವ್ಯಾಪಾರಿ. ಚಾತುರ್ಯದಿಂದ ಜೀವನ ಸಂಪಾದಿಸಿಕೊಳ್ಳುವವನು ; ಉಪಾಯಗಾರ. **Advénturesome** (ಗು.) ; **Advénturess** (ನಾ.) ಸಾಹಸಿಯಾದ ಹೆಂಗಸು ; ಗಟ್ಟಿಗಿತ್ತಿ. **Advénturous** (ಗು.) ; **Advénturously** (ಕ್ರಿ. ವಿ.)

A'dverb ಆ್ಯಡ್‌ವರ್ಬ್ (ನಾ.) ಕ್ರಿಯಾ ವಿಶೇಷಣ ; ಕ್ರಿಯೆಯ ದೇಶ, ಸ್ಥಳ, ಕಾಲ, ಸ್ಥಿತಿ, ಮೊ. ಗಳ ಸಂಬಂಧವನ್ನು ತಿಳಿಸುವ ಪದ. **Advérbial** ಆ್ಯ — (ಗು.) ; **Advérbially** (ಕ್ರಿ. ವಿ.)

Ad vérbum (L) ಆ್ಯಡ್ ವರ್ಬಂ (ಕ್ರಿ. ವಿ., ಗು.) ಮಾತಿಗೆ ಮಾತಿಟ್ಟು ; ಪದಶಃ.

A'dverse ಆ್ಯಡ್‌ವರ್ಸ್ (ಗು.) ವ್ಯತಿರಿಕ್ತ ; ವಿರುದ್ಧ ; ಪ್ರತಿಕೂಲ ; ಬಾಧಕ. ಎದುರಿನಲ್ಲಿರುವ. **A'dversary** (ನಾ.) ಎದುರಾಳು ; ಮಾರಾಳು ; ಪ್ರತಿಕಕ್ಷಿ ; ವೈರಿ ; ವಿರೋಧಿ ; ಶತ್ರು ; ಹಗೆ. The Adversary 'ಸೈತಾನ'. **A'dversely** (ಕ್ರಿ. ವಿ.) ; **Advérsity** ಆ್ಯಡ್‌ವರ್ಸಿಟಿ (ನಾ.) ಕೇಡು ; ಎಡರು ; ಕಷ್ಟ ; ವಿಪತ್ತು ; ಆಪತ್ತು ; ವಿಪತ್ಕಾಲ. **Advérsative** (ಗು.) ವಿರುದ್ಧಾರ್ಥ ಸೂಚಕ. **Advérsatively** (ಕ್ರಿ. ವಿ.)

Advérsifóliate, —ous ಆ್ಯಡ್‌ವರ್ಸಿಫೋಲಿಯೆಟ್, —ಯಸ್ (ಗು.) (ಸ. ವಿ.) ಎಲೆಗಳು ಕಾಂಡದ ಮೇಲೆ ಎದುರುಬದುರಾಗಿರುವ : ಅಭಿಮುಖ ಪರ್ಣಿ.

Advért ಆ್ಯಡ್‌ವರ್ಟ್ (ಕ್ರಿ. ಅಕ.) (ಮಾತಿನಲ್ಲಾಗಲಿ ಬರಹದಲ್ಲಾಗಲಿ) ಗಮನ ಕೊಡು ; ಪ್ರಸ್ತಾವಿಸು ; ನಿರ್ದೇಶಿಸು. ಮನಸ್ಸು ಕೊಡು ; ಲಕ್ಷ್ಯದಲ್ಲಿಡು. **Advértence** (ನಾ.) ಲಕ್ಷ್ಯ ; ಗಮನ ; ನಿರ್ದೇಶ. **Advértency** (ನಾ.)

A'dvertise ಆ್ಯಡ್‌ವರ್ಟೈಸ್ (ಕ್ರಿ.) ಪ್ರಕಟಪಡಿಸು ; ಪ್ರಸಿದ್ಧಪಡಿಸು ; ಪ್ರಚಾರ ಮಾಡು. **Advértisement** — ಟಿಸ್‌ಮೆಂಟ್ (ನಾ.) ಪ್ರಕಟನೆ ; 'ಜಾಹೀರಾತು'.

Advíce ಆ್ಯಡ್‌ವೈಸ್ (ನಾ.) ಬುದ್ಧಿವಾದ ; ಆಲೋಚನೆ ; ಸಲಹೆ. ಸಮಾಚಾರ ; ವರ್ತಮಾನ ; ತಿಳಿವಳಿಕೆ. (ಕರ್ತವ್ಯದ ವಿಷಯವಾಗಿ ಕೊಟ್ಟ) ಅಭಿಪ್ರಾಯ (ಮು., ವೈದ್ಯದಲ್ಲಿಯೂ ನ್ಯಾಯದಲ್ಲಿಯೂ). **Advíces** ದೂರದಿಂದ ಕಳುಹಿಸಿದ ವರ್ತಮಾನ, ತಿಳಿವಳಿಕೆ. **Advíse** — ವೈಸ್ (ಕ್ರಿ.) ಬುದ್ಧಿ ಹೇಳು ; ತಿಳಿವಳಿಕೆ ಕೊಡು ; ಆಲೋಚನೆ ಹೇಳು ; ಸಲಹೆ ಕೊಡು ; ಉಪದೇಶಿಸು ; ತಿಳಿಸು. **Advísable** (ಗು.) ಯುಕ್ತ ; ಸೂಕ್ತ ; ಉಚಿತ. **Advisabílity** (ನಾ.) ; **Advísableness** (ನಾ.) ; **Advísably** (ಕ್ರಿ. ವಿ.) ; **Advíser** (ನಾ.) ಸಲಹೆಗಾರ ; ಮಂತ್ರಿ (Legal adviser ವಕೀಲ. Medical adviser ವೈದ್ಯ). **Advísed** (ಗು.) ಸಮಾಲೋಚಿಸಿದ ; ವಿಚಾರ ಮಾಡಿ ನಿರ್ಧರಿಸಿದ ; ವಿವೇಚಿತ. **Advísedly** (ಕ್ರಿ. ವಿ.) ವಿಚಾರ ಪೂರ್ವಕವಾಗಿ ; ಬುದ್ಧಿ ಪೂರ್ವಕವಾಗಿ. Ill-advised (ಗು.) ವಿವೇಚನೆಯಿಲ್ಲದ. **Advísory** — ವೈಸರಿ (ಗು.) ಸಲಹೆ ಕೊಡುವ ; ಆಲೋಚನೆ ಹೇಳುವ.

A'dvocate ಆ್ಯಡ್ವೊಕೇಟ್ (ಕ್ರಿ. ಸಕ.) (ಒಬ್ಬನ ಪರವಾಗಿ) ವಾದಿಸು ; ವಕೀಲಿ ವಹಿಸು ; ಪಕ್ಷ ಹಿಡಿದು ಮಾತನಾಡು ; ಸಮರ್ಥಿಸು. ಅಭಿಮಾನದಿಂದ ಜನರಲ್ಲಿ ಪ್ರಚಾರ ಮಾಡು. **A'dvocate** ಆ್ಯಡ್ವೊಕೆಟ್ (ನಾ.) ವಕೀಲ ; ನ್ಯಾಯವಾದಿ ; ಪಕ್ಷವಾದಿ. Devil's advocate ಒಬ್ಬನ ಹೆಸರನ್ನು ಸಾಧು ಸಂತರ ಪಟ್ಟಿಯಲ್ಲಿ ಸೇರಿಸಬೇಕೆಂಬುದಕ್ಕೆ ಪ್ರತಿಪಕ್ಷ ಹಿಡಿದು ವಾದಿಸುವವನು ; ಸೈತಾನ್ ಪಕ್ಷವಾದಿ. ದೋಷೋದ್ಘಾಟಕ. **A'dvocacy** — ಕೆಸಿ (ನಾ.) ವಕೀಲಿ ; ವಕೀಲತನ. ಸಮರ್ಥನೆ ; ಪಕ್ಷ ವಾದ. **A'dvocatory** — ಕೇಟರಿ (ಗು.)

Adynámia ಆ್ಯಡಿನೇಮಿಯ (ನಾ.) (ವೈ. ಶಾ.) ಸತ್ವಹೀನತೆ ; ನಿತ್ರಾಣ. **Adynámic** ಆ್ಯಡಿನ್ಯಾಮಿಕ್ (ಗು.) (ವೈ. ಶಾ.) ಸತ್ವಹೀನತಾ ಸಂಬಂಧವಾದ. (ಭೌ. ವಿ.) ಬಲರಹಿತ.

A'dytum ಆ್ಯಡಿಟಂ (ನಾ. ; ಬ. ವ. Adyta) (ದೇವಾಲಯದ) ಗರ್ಭಗುಡಿ, ಗರ್ಭಗೃಹ. (ರೂಪ.) ಏಕಾಂತಗೃಹ.

Adze, Adz ಆ್ಯಡ್ಜ್ (ನಾ.) ಕೈಬಾಚಿ ; ಬಾಚಿ. (ಕ್ರಿ. ಸಕ.) ಬಾಚಿಯ ಕೆಲಸ ಮಾಡು ; ಬಾಚಿಯಿಂದ ಕೆತ್ತು.

Aédicule ಈಡಿಕ್ಯೂಲ್ (ನಾ.) ಒಂದು ಸಣ್ಣ ಮನೆ ಅಥವಾ ಕೋಣೆ ; ಗೋಡೆಯಲ್ಲಿಯ ಗೂಡು ; ಮಾಡ.

Aédile ಈಡೈಲ್ (ನಾ.) ಸಾರ್ವಜನಿಕ ಕಟ್ಟಡಗಳ, ಪ್ರದರ್ಶನಗಳ ಮತ್ತು ನಗರ ರಕ್ಷಕರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ರೋಮನ್ ನ್ಯಾಯಾಧಿಕಾರಿ. ಪೌರ ಸಂಸ್ಥಾಧಿಕಾರಿ. **Aédileship** (ನಾ.)

Aégis ಈಜಿಸ್ (ನಾ.) ರಕ್ಷಣೆ ; ಆಶ್ರಯ. (ಮು., ಗ್ರೀಕ್ ದೇವತೆಗಳಾದ 'ಜ್ಯೂಸ್' ಅಥವಾ 'ಅಥೀನೆಯ') ಗುರಾಣಿ.

Aeipathy ಏಐಪತಿ (ನಾ.) (ವೈ. ಶಾ.) ಯಾವುದಕ್ಕೂ ಸಗ್ಗದ, ಬೇರೂರಿದ ಅಥವಾ ಅಸ್ಥಿಗತವಾದ, ವ್ಯಾಧಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Aenéid, Aéneid ಇನೀಯಿಡ್, ಈನಿಯಿಡ್ (ನಾ.) ರೋಮನ್ ಕವಿ 'ವರ್ಜಿಲ್' ಎಂಬಾತನ ಇತಿಹಾಸ ಕಾವ್ಯ. (ಈ ಕಾವ್ಯದ ನಾಯಕನು 'ಈನಿಯಸ್' ಎಂಬ ಪುರುಷ)

Aeólian ಇಯೋಲಿಯನ್ (ಗು.) 'ಇಯೋಲಸ್' ಎಂಬ ವಾಯುದೇವತೆಯ. ವಾಯು ಸಂಬಂಧವಾದ. 'ಏಷ್ಯಾಮೈನರಿ' ನಲ್ಲಿರುವ 'ಇಯೋಲಿಸ್' ಅಥವಾ 'ಇಯೋಲಿಯ' ಎಂಬ ಪ್ರದೇಶದ. Aeolian harp ಗಾಳಿಗೊಡ್ಡಿದರೆ ಬಾಜಿಸುವ ಒಂದು ತೆರದ ತಂತಿಯ ವಾದ್ಯ. **Aeólic** (ಗು., ನಾ.) 'ಇಯೋಲಿಯನ್' ಭಾಷಾ ಪ್ರಭೇದ.

Aéolist ಈಯೊಲಿಸ್ಟ್ (ನಾ.) ದೈವಜ್ಞಾನಿಯೆಂದು ಹೇಳಿಕೊಳ್ಳುವ ಠಕ್ಕುಗಾರ. **Aéolistic** (ಗು.) (ಬೇಸರವಾಗುವಂತೆ) ಮಿತಿ ಮೀರಿ ಮಾತನಾಡುವ.

Aeolótropy ಈಯೊಲಾಟ್ರೊಪಿ (ನಾ.) ಒಂದು ವಸ್ತುವಿನ ಭೌತಗುಣವು ಆ ವಸ್ತುವಿನಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ಒಂದೇ ಸಮವಾಗಿಲ್ಲದಿರುವುದು. (Isotropy ಗೆ ವಿರುದ್ಧ). **Aeolotrópic** — ಲೊಟ್ರಾಪಿಕ್ (ಗು.)

Aéon, Éon ಈಯಾನ್ (ನಾ.) ಕಲ್ಪ; ಮನ್ವಂತರ; ಗಣನಾತೀತ ಕಾಲ; ಅನಂತಕಾಲ. (ಪ್ಲೇಟೋವಿನ ತತ್ತ್ವರೀತಿಯೊಗಿ) ಅನಾದಿಯಿಂದಲೂ ಬಂದಿರುವ ಒಂದು ಶಕ್ತಿವಿಶೇಷ. ಪರಮೇಶ್ವರನ ಒಂದು ಕಲೆ ಅಥವಾ ಅಂಶ. **Aeónial, Aeónian** (ಗು.) ಸಾರ್ವಕಾಲಿಕ; ಅನಂತ.

A'erate ಏಅರೇಟ್ (ಕ್ರಿ. ಸಕ.) ಗಾಳಿ ಕುಡಿಸು; ವಾಯು ಸಂಸರ್ಗಕ್ಕೊ ವಾಯು ಸಂಯೋಜನಕ್ಕೊ ಒಡ್ಡು. ಇಂಗಾಲಾಮ್ಲವಾಯು ಹುದುಗುವಂತೆ ಒತ್ತರಿಸು. **Aerátion** (ನಾ.). Aerated waters ಇಂಗಾಲಾಮ್ಲ ವಾಯುವನ್ನು ಹುದುಗಿಸಿದ ಸೋಡಾ, ಲೆಮೊನೇಡ್, ಮೊ. ಪಾನೀಯಗಳು.

Aérial ಏರಿಯಲ್, ಎಯೊರಿಯಲ್ (ಗು., ನಾ.) ಗಾಳಿಯ; ವಾಯುವಿನ; ಅನಿಲದ. ವಾಯುವಿನಂತೆ ಸೂಕ್ಷ್ಮವಾಗಿರುವ; ಸೂಕ್ಷ್ಮತಮ; ಅಶರೀರ. ತಿರುಳಿಲ್ಲದ; ಕಾಲ್ಪನಿಕ. ಉನ್ನತ. ತಂತಿಯಿಲ್ಲದ ಟೆಲಿಗ್ರಾಫಿನ ಉಪಕರಣಗಳಲ್ಲಿ ಆಕಾಶ ತರಂಗಗಳ ಸಂಗ್ರಹಣಕ್ಕಾಗಲಿ ಪ್ರಸರಣಕ್ಕಾಗಲಿ ಉಪಯೋಗಿಸುವ ಎತ್ತರವಾಗಿ ನಿಲ್ಲಿಸಿದ ತಂತಿ. Aerial Derby ವರ್ಷೇವರ್ಷೇ ನಡೆಯುವ ಒಂದು ವಿಮಾನ ಪಂದ್ಯ. Aerial railway, ropeway (ಎತ್ತರದಲ್ಲ ತಂತಿಯ ಹೊರಜಿಗಳನ್ನು ಉದ್ದವಾಗಿ ಬಿಗಿದು, ಅದರಿಂದ ಜೋರಾಡುವಂತೆ ಬಂಡಿಗಳನ್ನು ತಗುಲಹಾಕಿ, ಇವನ್ನು ಸಾಮಾನ್ಯವಾಗಿ ವಿದ್ಯುಚ್ಛಕ್ತಿಯಿಂದ ನಡೆಯಿಸಲು ಏರ್ಪಾಡು ಮಾಡಿರುವ) ಆಕಾಶ ಸೂತ್ರಪಥ; ಆಕಾಶದ ರೈಲುಮಾರ್ಗ, ಹೊರಜಿಯ ಹಾದಿ. **Aeriálity** (ನಾ.); **Aérially** (ಕ್ರಿ. ವಿ.)

A'erie, A'ery, Eýrie, Eýry ಏಅರಿ, ಈಯರಿ, ಅಯ್‌ರಿ (ನಾ.) (ರಣಹದ್ದಿನಂಥ) ಘಾತುಕ ಪಕ್ಷಿಯ, ಬಹಳ ಎತ್ತರದಲ್ಲಿ ಕಟ್ಟಿರುವ, ಗೂಡು; ಆ ಗೂಡಿನಲ್ಲಿರುವ ಅಂಥ ಪಕ್ಷಿಯ ಮರಿಗಳು. (ರೂಪ.) ಬೆಟ್ಟದ ಮೇಲೆ ಎತ್ತರದಲ್ಲಿ ಕಟ್ಟಿರುವ ಮನೆ.

Aeríferous ಏಅರಿಫೆರಸ್ (ಗು.) ವಾಯು ವಾಹಕ.

A'eriform ಏಅರಿಫಾರ್‌ಮ್ (ಗು.) ವಾಯು ರೂಪದ; ಅನಿಲ ರೂಪದ. (ರೂಪ.) ಅವಾಸ್ತವ.

A'ero ಏರೊ (ನಾ.; ಬ. ವ. Aeros) (ಬಳ. ಮಾ.) ಹಾರುಯಂತ್ರ; ಆಕಾಶ ಯಾನ; ವಾಯು ರಥ; ಗಾಳಿ ಹಡಗು. ವಾಯು ಗಮನ.

Aero- (ಸಮಾಸ ಪದಗಳಲ್ಲಿ): **Aerobátics** ಏ(ಅ)ರೊಬ್ಯಾಟಿಕ್ಸ್ (ನಾ.) ವಾಯುಗಮನದಲ್ಲಿ ಪಳಗಿದವರು ಆಕಾಶದಲ್ಲಿ ಹಾರುಯಂತ್ರದ ಮೂಲಕ (ಪ್ರದರ್ಶನಕ್ಕಾಗಿ) ಮಾಡುವ ಸಾಮು: ಹಾರುಯಂತ್ರದ ಸಾಮು. **A'erobus** (ನಾ.) (ಅಸಂ.) ಹಾರುಯಂತ್ರ. **A'erodrome** (ನಾ.) ಹಾರುಯಂತ್ರಗಳು ಹಾರುವುದಕ್ಕೆ ಮೊದಲಿಡಲು ಅನುಕೂಲ ಮಾಡಿರುವ ಸಮಭೂಮಿ; ವಿಮಾನಾಂಗಣ. **Aerodynámics** (ನಾ.) ವಾಯುಚಲನ ವಿಜ್ಞಾನ. (ಯಂತ್ರಸಹಾಯದಿಂದ ಮಾಡುವ) ಅಂತರಿಕ್ಷ ಗಮನ. **A'erofoil** (ನಾ.) ಹಾರುಯಂತ್ರದ ರೆಕ್ಕೆ. **A'erogram** — ಗ್ರ್ಯಾಮ್ (ನಾ.) ವಾಯುವಾರ್ತೆ. **Aerógraphy** ಏರಾಗ್ರಫಿ (ನಾ.) ವಾಯುಮಂಡಲ ವಿವರಣೆ. **A'erolite, —lith** ಏರೊಲೈಟ್, —ಲಿತ್ (ನಾ.) ಉಲ್ಕ; ಉಲ್ಕಾಶ್ಮ. **Aerólogy** ಏರಾಲೊಜಿ (ನಾ.) ವಾಯುಮಂಡಲ ವಿಜ್ಞಾನ. **A'eromancy** ಏರೊಮ್ಯಾನ್ಸಿ (ನಾ.) ಗಾಳಿಯ ಶಕುನ. ವಾಯುಸ್ಥಿತಿ ಸೂಚನೆ. **Aerómeter** ಏರಾಮಿಟರ್ (ನಾ.) ಅನಿಲ ಗುರುತ್ವ ಮಾಪಕ. **Aerómetry** (ನಾ.) ವಾಯು ವಿಜ್ಞಾನ. **A'eronaut** ಏರೊನಾಟ್ (ನಾ.) ವಾಯು ನಾವಿಕ. **Aeronaútic(al)** (ಗು.); **Aeronaútics** (ನಾ.) ವಾಯು ಯಾನದ ವಿದ್ಯೆ, ವಿಜ್ಞಾನ, ಕಲೆ ಅಥವಾ ತಂತ್ರ. **A'erophyte** — ಫೈಟ್ (ನಾ.) ಪೂರ್ಣವಾಗಿ ವಾಯುವಿನಲ್ಲೇ ಬೆಳೆಯುವ ಸಸ್ಯ. **A'eroplane** (ನಾ.) (ವಾಯುವಿಗಿಂತಲೂ ಹೆಚ್ಚು ತೂಕದ) ಹಾರುಯಂತ್ರ. **A'erosphere** (ನಾ.) ಭೂಗೋಳವನ್ನು ಸುತ್ತಲೂ ಆವರಿಸಿಕೊಂಡಿರುವ ವಾಯುಪದಾರ್ಥ: ವಾಯುಗೋಳ. **A'erostat** — ಸ್ಟ್ಯಾಟ್ (ನಾ.) ಆಕಾಶ ಬುಟ್ಟಿ; ವಾಯುಗಾಮಿ. ವೈಮಾನಿಕ. **Aerostátics** (ನಾ.) ವಾಯು ಸಂಸ್ಥಿತಿ ವಿಜ್ಞಾನ.

A'erobe ಏಅರೋಬ್ (ನಾ.) (ಜೀ. ವಿ.) ವಾಯುಮಂಡಲದಲ್ಲಿಯ ಆಮ್ಲಜನಕ ಸೇವನೆಯಿಂದ ಜೀವಿಸಿರುವ ಅಣುಜೀವಿ: ವಾಯ್ವಣುಜೀವಿ. **Aeróbian** (ಗು.); **Aeróbic** (ಗು.)

Aerúginous ಇರೂಜಿನಸ್ (ಗು.) ತಾಮ್ರದ ಕಿಲುಬಿನ ಗುಣವುಳ್ಳ, ಬಣ್ಣವುಳ್ಳ. **Aerúgo** ಇರೂಗೊ (ನಾ.) ತಾಮ್ರ ಅಥವಾ ಹಿತ್ತಾಳೆಯ ಕಿಲುಬು. ಯಾವುದಾದರೂ ಲೋಹದ ತುಕ್ಕು.

Aesculápius ಈಸ್ಕ್ಯುಲೇಪಿಯಸ್ (ನಾ.) ರೋಮನರ ವೈದ್ಯಾಧಿದೇವತೆ (ಧನ್ವಂತರಿ); ವೈದ್ಯ. **Aesculápian** (ಗು.)

Aesthésics ಈಸ್ಥೀಸಿಕ್ಸ್, ಎಸ್ಥೀ— (ನಾ.) ವೇದನ ಶಾಸ್ತ್ರ. **Aesthésis** (ನಾ.) ಇಂದ್ರಿಯಗಳ ಮೂಲಕ ಬಾಹ್ಯಪ್ರಪಂಚ ಜ್ಞಾನ; ವೇದನ.

Aesthétic ಈಸ್ಥೆಟಿಕ್, ಎಸ್ಥೆಟಿಕ್ (ಗು.) ಸೌಂದರ್ಯೋಪಾಸನೆಯ ಸಂಬಂಧವಾದ. ಸುಸಂಸ್ಕೃತಾಭಿರುಚಿಯ. **Aesthétical** (ಗು.) **Aesthétically** (ಕ್ರಿ. ವಿ.); **Aesthéticism** (ನಾ.) ರಸಾಭಿಜ್ಞತೆ; ರಸಜ್ಞತೆ; ಸೌಂದರ್ಯ ತತ್ತ್ವ. **Aesthétics** (ನಾ.) ರಸಾಭಿಜ್ಞಾನ; ಸೌಂದರ್ಯ ತತ್ತ್ವ; ರಸ ಶಾಸ್ತ್ರ. **Aésthete** ಈಸ್‌ಥೀಟ್, ಎಸ್— (ನಾ.) ರಸಾಭಿಜ್ಞ; ಸೌಂದರ್ಯಾಭಿಜ್ಞ; ಸೌಂದರ್ಯೋಪಾಸಕ.

Aestho-physiólogy ಈ(ಎ)ಸ್ಥೊ ಫಿಸಿಯಾಲೊಜಿ (ನಾ.) ಜ್ಞಾನೇಂದ್ರಿಯಗಳ ಶಾಸ್ತ್ರೀಯ ವ್ಯಾಸಂಗ: ಜ್ಞಾನೇಂದ್ರಿಯ ಶಾಸ್ತ್ರ; ವೇದನೇಂದ್ರಿಯ ಶಾಸ್ತ್ರ.

Aéstival, Estíval ಈಸ್ಟಿವಲ್, ಇಸ್ಟೈವಲ್, (ಗು.) ಬೇಸಗೆಯ; ಬೇಸಗೆಯಲ್ಲಿ ಕಾಣಿಸಿಕೊಳ್ಳುವ ಅಥವಾ ಉತ್ಪತ್ತಿಯಾಗುವ. **Aéstivate** (ಕ್ರಿ. ಅಕ.) ಬೇಸಗೆಯನ್ನು ಕಳೆ. (ಪ್ರಾ. ವಿ.) ನಿಶ್ಚೇಷ್ಟವಾಗಿ ಬೇಸಗೆಯನ್ನು ಕಳೆ. **Aestivátion** (ನಾ.) (ಪ್ರಾ. ವಿ.) ಬೇಸಗೆಯನ್ನು ನಿಶ್ಚೇಷ್ಟವಾಗಿ ಕಳೆಯುವುದು: ಗ್ರೀಷ್ಮನಿಶ್ಚೇಷ್ಟತೆ. (ಸ. ವಿ.) ಮೊಗ್ಗು ಅರಳುವುದಕ್ಕೆ ಮುಂಚಿನ ಅದರಲ್ಲಿಯ ಪುಷ್ಪದಳಗಳ ವಿನ್ಯಾಸ: ಮುಕುಳದಳ ವಿನ್ಯಾಸ.

Aetátis (L) ಈಟಾಟಿಸ್, **Aet.**, **Aetat.** (ಗು.) ಆ ವಯಸ್ಸಿನ; ಆ ವಯಸ್ಸಿನಲ್ಲಿ.

Aetiólogy ಈಟಿಯಾಲೊಜಿ, ಎಟಿ— (ನಾ.) ಕಾರಣ ನಿರ್ದೇಶ; ಕಾರ್ಯಕಾರಣ ವಿಚಾರ. (ವೈ. ಶಾ.) ವ್ಯಾಧಿಕಾರಣ ವಿಜ್ಞಾನ; ರೋಗ ನಿದಾನ. **Aetiológical** (ಗು.); **Aetiológically** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Afár ಅಫಾರ್ (ಕ್ರಿ. ವಿ.) ದೂರದಿಂದ ; ದೂರವಾಗಿ ; ದೂರಕ್ಕೆ ; ದೂರದಲ್ಲಿ.

A'ffable ಆ್ಯಫಬಲ್ (ಗು.) ಸಭ್ಯ ; ಸುಲಭ ; ವಿನಯವುಳ್ಳ ; ಸೌಜನ್ಯವುಳ್ಳ. **Affability** (ನಾ.) ಸಭ್ಯತೆ ; ಸೌಜನ್ಯ ; ಸರಸತೆ ; ಮೃದುಶೀಲತೆ ; ಸುಲಭತೆ. **A'ffably** (ಕ್ರಿ. ವಿ.)

Affaír ಅಫೇರ್ (ನಾ.) ಕೆಲಸ ; ಕಾರ್ಯ ; ವಿಚಾರ ; ವಿಷಯ ; ಸಂಗತಿ. **Affaírs** (ನಾ.) ವಿಚಾರಗಳು ; ವ್ಯವಹಾರಗಳು. Domestic affairs ಗೃಹಕೃತ್ಯ ವಿಚಾರಗಳು. Public affairs ಸಾರ್ವಜನಿಕ ವಿಚಾರಗಳು. State affairs ರಾಜ್ಯ ವಿಚಾರಗಳು. Tame affair ನೀರಸ ವಿಚಾರ. Affair of honour (ಮಾನಕ್ಕಾಗಿ ಮಾಡುವ) ದ್ವಂದ್ವ ಯುದ್ಧ.

Affaíre de coeúr (F) ಅಫೇರ್ ಡ ಕರ್ (ನಾ.) ಪ್ರಣಯ ವ್ಯಾಪಾರ ; ಪ್ರಣಯ ಸಂಗತಿ.

Afféct ಅಫೆಕ್ಟ್ (ಕ್ರಿ ಸಕ.) (ಉಡುಪು, ರೀತಿ, ಮೊ. ವನ್ನು) ಹೊರಕ್ಕೆ ತೋರಿಸಿಕೊ ; ನಟಿಸು ; ವೇಷ ಧರಿಸು. ತಾಳು ; ಬಳಸು ; ಸಂಬಂಧಪಡು. (ವ್ಯಾಧಿ) ತಾಕು, ತಗುಲು ; ಬಾಧಿಸು. (ಮನಸ್ಸನ್ನು) ನಾಟು, ಕಲಕು ; ಮನಮುಟ್ಟು. **Affectátion** ಆ್ಯ— (ನಾ.) ತೋರ್ಕೆ ; ನಟನೆ ; ಸೋಗು ; ಒಯ್ಯಾರ ; ಒಲಪು ; ಅಸ್ವಾಭಾವಿಕತೆ ; ಕೃತಕತೆ. **Affécted** ಅ— (ಗು.) ; **Affectedly** (ಕ್ರಿ. ವಿ.) ; **Afféctedness** (ನಾ.) ; **Afféctingly** (ಕ್ರಿ. ವಿ.) ಮನಮುಟ್ಟುವಂತೆ ; ಮನ ಕರಗುವಂತೆ. **Afféctive** (ಗು.) ಮನೋವಿಕಾರ ಸಂಬಂಧವುಳ್ಳ.

Afféction ಅಫೆಕ್‌ಷನ್ (ನಾ.) ಒಲುಮೆ ; ಒಲವು ; ಪ್ರೀತಿ ; ಪ್ರೇಮ ; ವಾತ್ಸಲ್ಯ. ಮನೋಭಾವ ; ರಾಗ. ವ್ಯಾಧಿ ; ಅಸ್ವಸ್ಥತೆ (An affection of the heart ಹೃದ್ರೋಗ). **Afféctional** (ಗು.) ; **Afféctionate** (ಗು.) ; **Afféctionately** (ಕ್ರಿ. ವಿ.) ; **Afféctionateness** (ನಾ.)

A'fferent ಆ್ಯಫೆರೆಂಟ್ (ಗು.) (ಶ. ವಿ.) ಅಂತರ್ವಾಹಿ ; ಅಭಿವಾಹಿ. Afferent nerves ಮಿದುಳಿಗೆ ಸಮಾಚಾರ ಒಯ್ಯುವ ನರಗಳು : ಅಂತರ್ವಾಹಿ ನರಗಳು. Afferent blood-vessels ರಕ್ತಕೋಶದ ಕಡೆಗೆ ರಕ್ತವನ್ನು ಒಯ್ಯುವ ರಕ್ತನಾಳಗಳು : ಅಭಿವಾಹಿ ರಕ್ತನಾಳಗಳು.

Affíance ಅಫಯನ್ಸ್ (ನಾ.) ನಂಬಿಕೆ. ನಿಶ್ಚಿತಾರ್ಥ. (ಕ್ರಿ. ಸಕ.) (ವಿವಾಹ) ನಿಶ್ಚಿತಾರ್ಥ ಮಾಡು.

Affidávit ಆ್ಯಫಿಡೇವಿಟ್ (ನಾ.) (ನ್ಯಾ. ಶಾ.) ವ್ಯವಹಾರದಲ್ಲಿ ಪ್ರಮಾಣ ಮಾಡಿ ಬರೆದುಕೊಟ್ಟ ಹೇಳಿಕೆ : ಪ್ರಮಾಣ ಪತ್ರ ; ಶಪಥ ಪತ್ರ.

Affíliate ಅಫಿಲಿಯೇಟ್ (ಕ್ರಿ. ಸಕ.) (ಒಂದು ಸಂಸ್ಥೆಯನ್ನು) ಅಂಗವನ್ನಾಗಿ ಸೇರಿಸಿಕೊ ; (ವ್ಯಕ್ತಿಗಳನ್ನು, ಸಂಸ್ಥೆಯ) ಸದಸ್ಯರನ್ನಾಗಿ ಸೇರಿಸಿಕೊ. ಸೇರಿಸು ; ಸಂಯೋಜಿಸು ; ಸಂಬಂಧ ಬೆಳಸು. (ನ್ಯಾ. ಶಾ.) (ಜಾರತ್ವದಿಂದ ಹುಟ್ಟಿದ ಮಗುವಿನ ಸಂರಕ್ಷಣೆಗಾಗಿ, ಅದರ) ತಂದೆ ಯಾರೆಂಬುದನ್ನು ಗೊತ್ತುಮಾಡು. (ರೂಪ.) (ಯಾವುದಾದರೂ ಒಂದು ವಿಷಯಕ್ಕೆ) ಕರ್ತೃತ್ವವನ್ನು ಆಪಾದಿಸು, ಮೂಲವನ್ನು ನಿರ್ದೇಶಿಸು. **Affíliate** — ಯೆಟ್ (ಗು., ನಾ.) ಸ್ವೀಕೃತ. **Affíliated** —ಯೇಟೆಡ್ (ಗು.) ; **Affiliátion** (ನಾ.) ಪುತ್ರ ಸ್ವೀಕಾರ ; ದತ್ತ ಸ್ವೀಕಾರ. ಒಂದು ಸಂಸ್ಥೆ ಇತರ ಸಂಸ್ಥೆಗಳನ್ನು ತನ್ನ ಅಂಗಗಳನ್ನಾಗಿ ಸೇರಿಸಿಕೊಳ್ಳುವುದು ; ಸ್ವೀಕಾರ. ಒಂದು ಮಗುವಿನ ತಂದೆ ಇಂಥವನೆಂದು ಗೊತ್ತುಮಾಡುವುದು : ಪಿತೃ ನಿರ್ದೇಶ. (ರೂಪ.) ಕರ್ತೃತ್ವಾಪಾದನೆ ; ಮೂಲ ನಿರ್ದೇಶ.

Affínal ಅಫೈನಲ್ (ಗು.) ವಿವಾಹ ಸಂಬಂಧವುಳ್ಳ. ಒಂದೇ ವಂಶದ, ಕುಲದ, ಅನ್ವಯದ. **Affíned** (ಗು.) ಸಂಬಂಧವುಳ್ಳ ; ಸಂಬಂಧಿಸಿದ.

Affínity ಅಫಿನಿಟಿ (ನಾ.) ವಿವಾಹ ಸಂಬಂಧ (ಜ್ಞಾತಿ ಸಂಬಂಧವಲ್ಲ) ; ವಿವಾಹ ಸಂಬಂಧಿಗಳು ; ನೆಂಟರು ; ಸಂಬಂಧಿಗಳು. ನೆಂಟತನ ; ಸಂಬಂಧ. (ಪ್ರಾಣಿಗಳಲ್ಲಿ, ಸಸ್ಯಗಳಲ್ಲಿ, ಭಾಷೆಗಳಲ್ಲಿ) ರಚನಾ ಸಾದೃಶ್ಯ. (ರೂಪ.) ಸಾದೃಶ್ಯ ; ಸಂಬಂಧ ; ಕುಟುಂಬದ ಹೋಲಿಕೆ. ಪ್ರೀತಿ ; ಒಲವು ; ಆಕರ್ಷಣ. (ರ. ವಿ.) ಕೆಲವು ಮೂಲಧಾತುಗಳಲ್ಲಿ ಒಂದರೊಡನೊಂದು ರಾಸಾಯನಿಕ ಸಂಯೋಗವಾಗುವ ಪ್ರವೃತ್ತಿ : ರಾಸಾಯನಿಕ ಆಕರ್ಷಣ.

Affírm ಅಫರ್ಮ್ (ಕ್ರಿ.) ನಿಜವೆನ್ನು ; ಒತ್ತಿಹೇಳು ; ದೃಢೀಕರಿಸು. (ನ್ಯಾ. ಶಾ.) (ಆಣೆಯಿಟ್ಟು ಹೇಳಲು ಮನಸ್ಸೊಪ್ಪದವನು) ಸತ್ಯವಾಗಿ ಹೇಳು. (ತೀರ್ಪನ್ನು) ಸ್ಥಿರಪಡಿಸು. (ತರ್ಕ, ವ್ಯಾಕರಣ) ಅಸ್ತ್ಯರ್ಥದಲ್ಲಿ (ನಿಷೇಧಾರ್ಥದಲ್ಲಲ್ಲ) ಹೇಳು. **Affírmable** (ಗು.) ; **Affírmatory** (ಗು.) ; **Affirmátion** ಆ್ಯಫರ್ಮೇಷನ್ (ನಾ.) ಸ್ಥಿರೀಕರಣ ; (ನ್ಯಾ. ಶಾ.) ಸತ್ಯವಚನ. **Affírmative** ಅಫರ್ಮಟಿವ್ (ಗು.) ಸ್ಥಿರೀಕರಿಸುವ ; ಸ್ಥಾಪಿಸುವ ; ಅಹುದೆನ್ನುವ ; ದೃಢ ಸೂಚಕ. (ತರ್ಕ) ಅನ್ವಯಾತ್ಮಕ. **Affírmatively** (ಕ್ರಿ. ವಿ.)

Affíx ಅಫಿಕ್ಸ್ (ಕ್ರಿ. ಸಕ.) ಸೇರಿಸು ; ಜೋಡಿಸು ; ಸಂಬದ್ಧ ಮಾಡು ; ಹಚ್ಚು ; ಅಂಟಿಸು ; ಕೂಡಿಸು. (ಮುದ್ರೆ) ಒತ್ತು. (ಸಹಿಯನ್ನೊ ಹೆಚ್ಚೊೀಲೆಯನ್ನೊ) ಬರವಣಿಗೆಯಲ್ಲಿ ಸೇರಿಸು. **Affíxture** (ನಾ.) ಸೇರಿಸಿದುದು ; ಜೋಡಣೆ. **A'ffix** ಆ್ಯಫಿಕ್ಸ್ (ನಾ.) ಅನುಬಂಧ ; ಸೇರಿಸಿದುದು. (ವ್ಯಾ.) ಪ್ರತ್ಯಯ ; ಉಪಸರ್ಗ.

Afflátus ಅಫ್ಲೇಟಸ್ (ನಾ.) ಆವೇಶ ; ದೈವಪ್ರೇರಣೆ. (ವೈ. ಶಾ.) ಒಂದು ಬಗೆಯ ದದ್ದು ರೋಗ.

Afflíct ಅಫ್ಲಿಕ್ಟ್ (ಕ್ರಿ. ಸಕ.) ವ್ಯಥೆಗೊಳಿಸು ; ಹಿಂಸಿಸು ; ನೋಯಿಸು. **Afflíction** (ನಾ.) ವ್ಯಥೆ ; ಸಂಕಟ ; ಕ್ಲೇಶ ; ನೋವು. **Afflíctive** (ಗು.)

A'ffluence ಆ್ಯಫ್ಲ್ಯುಎನ್ಸ್ (ನಾ.) ಒಂದು ಕಡೆಗೆ ಹರಿಯುವುದು ; ತುಂಬಿ ಹರಿಯುವುದು ; ಪ್ರವಾಹ. ಸಮೃದ್ಧಿ ; ಐಶ್ವರ್ಯ. **A'ffluent** (ಗು.) ತುಂಬಿ ಹರಿಯುವ ; ಸಮೃದ್ಧ ; ಸಂಪತ್ಸಮೃದ್ಧ. (ನಾ.) ಉಪ ನದಿ. **A'ffluently** (ಕ್ರಿ. ವಿ.)

A'fflux ಆ್ಯಫ್ಲಕ್ಸ್ (ನಾ.) ಒಂದು ಸ್ಥಾನಕ್ಕೆ ಹರಿಯುವುದು ; ಅಭಿಗಮನ ; ಅಭಿವಾಹ.

Affórd ಅಫೋರ್ಡ್ (ಕ್ರಿ. ಸಕ.) ಆಗು ; ಶಕ್ತನಾಗಿರು (He cannot afford to give ಅವನು ಕೊಡಲಾರನು). (ಮಾಡಲು) ಸಮರ್ಥನಾಗು. ಕೊಡು ; ಒದಗಿಸು ; ಹವಣಿಸು (It affords shelter ಅದು ಆಶ್ರಯ ಕೊಡುತ್ತದೆ)

Affórest ಅಫಾರೆಸ್ಟ್ (ಕ್ರಿ. ಸಕ.) ಕಾಡು ಬೆಳೆಯಿಸು. **Afforestátion** (ನಾ.) ವನ ನಿರ್ಮಾಣ.

Affránchise ಅಫ್ರಾನ್‌ಚಿಸ್, —ಚೈಸ್ (ಕ್ರಿ. ಸಕ.) (ದಾಸ್ಯದಿಂದ ಅಥವಾ ಉಪಕಾರದ ಹಂಗಿನಿಂದ) ಬಿಡುಗಡೆ ಮಾಡು.

Affraý ಅಫ್ರೇ (ನಾ.) ಸಾರ್ವಜನಿಕ ಸ್ಥಳದಲ್ಲಿ ಶಾಂತಿಭಂಗವನ್ನುಂಟು ಮಾಡುವ ಕಲಹ, ಕಾದಾಟ ; ದೊಂಬಿಯ ಜಗಳ.

Affreíght ಅಫ್ರೆಯ್ಟ್ (ಕ್ರಿ. ಸಕ.) ಸಾಮಾನು ಸಾಗಿಸಲು ಹಡಗನ್ನು ಬಾಡಿಗೆಗೆ ಗೊತ್ತುಮಾಡಿಕೊ. **Affreíghtment** (ನಾ.)

Affríght ಅಫ್ರೈಟ್ (ಕ್ರಿ. ಸಕ.) ಭಯಗೊಳಿಸು ; ಹೆದರಿಸು. (ನಾ.) ಭಯ ; ಗಾಬರಿ ; ಹೆದರಿಕೆ. **Affríghted** (ಗು.) ಭೀತಿಗೊಂಡ ; ಗಾಬರಿಗೊಂಡ.

Affrónt ಅಫ್ರಂಟ್ (ಕ್ರಿ. ಸಕ.) ಬಹಿರಂಗವಾಗಿ ಅಪಮಾನ ಮಾಡು ; ಎದುರಿಸು ; ಪ್ರತಿಭಟಿಸು. (ನಾ.) ಮುಖಭಂಗ ; ತಿರಸ್ಕಾರ ; ಅವಮರ್ಯಾದೆ ; ಅವಮಾನ (Offer an affront to ಪ್ರತ್ಯಕ್ಷ ಮಾನಭಂಗ ಮಾಡು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Affúsion ಅಫ್ಯೂಷನ್ (ನಾ.) ನೀರೆರೆಯುವುದು ; ಸೇಚನ. ಕ್ರೈಸ್ತರ ಜ್ಞಾನಸ್ನಾನ. (ವೈ. ಶಾ.) ಜ್ವರರೋಗಿಗಳ ಮೈಮೇಲೆ ತಣ್ಣೀರನ್ನು ಸುರಿಯುವುದು : ಜಲಸೇಚನ.

A'fghan ಆ್ಯಫ್ಘನ್ (ನಾ.) ಅಫ್ಘಾನಿಸ್ಥಾನದವನು ; ಅಫ್ಘನ್ ಭಾಷೆ. ಹೆಣೆದ ಉಣ್ಣೆಯ ಹೊದಿಕೆ, —ಕವುದಿ.

Afiéld ಅಫೀಲ್ಡ್ (ಕ್ರಿ. ವಿ.) ಮೈದಾನದಲ್ಲಿ, —ಕ್ಕೆ ; ಹೊಲ ಗದ್ದೆಗಳಲ್ಲಿ, —ಗಳಿಗೆ ; ಕಳದಲ್ಲಿ, —ಕ್ಕೆ ; ರಣರಂಗದಲ್ಲಿ, —ಕ್ಕೆ ; ಮನೆಯಿಂದ ಬಹು ದೂರ ಹೊರಗೆ.

Afíre ಅಫೈಯ್ರ್ (ಕ್ರಿ. ವಿ.) ಬೆಂಕಿ ಹೊತ್ತಿ ; ಉರಿಯುತ್ತ. (ರೂಪ. ಸಹ)

Afláme ಅಫ್ಲೇಮ್ (ಕ್ರಿ. ವಿ.) ಉರಿಯಾಗಿ ; ಜ್ವಲಿಸುತ್ತ. (ರೂಪ. ಸಹ). All aflame with curiosity ಕುತೂಹಲದಿಂದ ಉದ್ದೀಪ್ತರಾಗಿ.

Afloát ಅಫ್ಲೋಟ್ (ಕ್ರಿ. ವಿ.) ತೇಲುತ್ತ ; ತೇಲಿಕೊಂಡು ಹೋಗುತ್ತ. ನೀರಿನ ಮೇಲೆ ; ಸಮುದ್ರದ ಮೇಲೆ ; ಹಡಗಿನಲ್ಲಿ. ನಾವಿಕೋದ್ಯೋಗದಲ್ಲಿ. ಸಾಲವಿಲ್ಲದೆ ; ತನ್ನ ವೆಚ್ಚಗಳಿಗಾಗಿ ತಾನೇ ಸಂಪಾದಿಸಿಕೊಳ್ಳುತ್ತ. ಪ್ರಚಾರದಲ್ಲಿ ; 'ಚಲಾವಣೆ'ಯಲ್ಲಿ (Various rumours were afloat ವಿಧವಿಧವಾದ ವದಂತಿಗಳು ಹರಡಿದ್ದುವು). (ವ್ಯಾಪಾರ) ವ್ಯವಹಾರ ಯೋಗ್ಯವಾಗಿ. ಅವ್ಯವಸ್ಥಿತವಾಗಿ ; ಕಟ್ಟಿಲ್ಲದೆ.

Aflower ಅಫ್ಲವರ್ (ಕ್ರಿ. ವಿ.) ಹೂವು ಬಿಟ್ಟು.

A fónd (F) ಆ ಫಾಂಡ್ (ಕ್ರಿ. ವಿ.) ಬುಡಮುಟ್ಟ ; ಸಂಪೂರ್ಣವಾಗಿ.

Afoót ಅಫುಟ್ (ಕ್ರಿ. ವಿ.) ಕಾಲ್ನಡಗೆಯಲ್ಲಿ ; ನಡೆಯುತ್ತ ; ಚಲಿಸುತ್ತ. ಕಾರ್ಯತಃ ಪರಿಣಮಿಸುತ್ತ ; ಕಾರ್ಯ ಮಾಡುತ್ತ.

Afóre ಅಫೋರ್ (ಕ್ರಿ. ವಿ., ಉಪ.) (ನಾವೆ) ಎದುರಿಗೆ ; ಎದುರಿನಲ್ಲಿ (Afore the mast ಪಟಸ್ತಂಭದ ಎದುರಿಗೆ). (ಪ್ರಾಚೀ. ಪ್ರ.) ಮುಂಚಿನ. **Afore-** (ಸಮಾಸ ಪದಗಳಲ್ಲಿ) ಹಿಂದೆ-: Afore-named, Afore-said ಹಿಂದೆ ಹೇಳಿದ. Afore-thought ಮೊದಲೇ ಆಲೋಚಿಸಿದ (Malice afore-thought ಮೊದಲಿಂದಲೂ ಮನಸ್ಸಿನಲ್ಲಿಟ್ಟಿದ್ದ ವೈರ). Afore-time ಹಿಂದೆಯೇ.

A fortióri (L) ಏ ಫೋ(ಫಾ)ರ್ಷಿಯೋರೈ (ಕ್ರಿ. ವಿ.) ಬಲವತ್ತರ ಕಾರಣದಿಂದ.

Afraíd ಅಫ್ರೇಡ್ (ಗು.) ಹೆದರಿದ ; ಅಂಜಿದ ; ದಿಗಿಲುಬಿದ್ದ.

Afrésh ಅಫ್ರೆಷ್ (ಕ್ರಿ. ವಿ.) ಹೊಸದಾಗಿ ; ಮರಳಿ ; ಪುನಃ.

A'frican ಆ್ಯಫ್ರಿಕನ್ (ಗು., ನಾ.) ಆಫ್ರಿಕಾ ಖಂಡದ (ವನು). **A'fricanism** (ನಾ.) (ಭಾಷೆ, ಪದ್ಧತಿಗಳು, ವೊ. ಗಳಲ್ಲಿ) ಆಫ್ರಿಕದ, ಆಫ್ರಿಕನ್ನರ, ವೈಶಿಷ್ಟ್ಯ. ಬೈಬಲ್ಲಿನ ಆದ್ಯ ಲ್ಯಾಟಿನ್ ಭಾಷಾಂತರದ ವೈಶಿಷ್ಟ್ಯ. **A'fricanize** (ಕ್ರಿ. ಸಕ.) ; **Afrikaáns** ಆ್ಯಫ್ರಿಕಾನ್ಸ್ (ನಾ.) (ದಕ್ಷಿಣ ಆಫ್ರಿಕದ ಡಚ್ಚರ ಅಥವಾ ಕೇಪ್ ಡಚ್ಚರ) ಟಾಲ್ ಭಾಷೆ. **Afrikánder** ಆ್ಯಫ್ರಿಕ್ಯಾಂಡರ್ (ನಾ., ಗು.) ದಕ್ಷಿಣ ಆಫ್ರಿಕದಲ್ಲಿ ನೆಲಸಿದ ಐರೋಪ್ಯರ (ಮು., ಡಚ್ಚರ) ಸಂತತಿಯ ದಕ್ಷಿಣ ಆಫ್ರಿಕದ ನಾಡಿಗ. Afrikander Bond ಆಫ್ರಿಕಾಂಡರರ ಪುರೋಭಿವೃದ್ಧಿಗಾಗಿಯೂ ಕ್ರಮೇಣ ದಕ್ಷಿಣ ಆಫ್ರಿಕ ಸಂಯುಕ್ತ ಸಂಸ್ಥಾನಗಳ ಸ್ಥಾಪನೆಗಾಗಿಯೂ ಏರ್ಪಟ್ಟಿರುವ ಒಂದು ಸಂಸ್ಥೆ.

Aft ಆಫ್ಟ್ (ಕ್ರಿ. ವಿ.) ಹಡಗಿನ ಹಿಂಭಾಗದಲ್ಲಿ ಅಥವಾ ಹಿಂಭಾಗದ ಹತ್ತಿರ ; ಹಡಗಿನ ಹಿಂಭಾಗದ ಕಡೆಗೆ. Fore and aft ಹಡಗಿನ ಮುಂಭಾಗದಿಂದ ಹಿಂಭಾಗದ ವರೆಗೆ ; ಹಡಗಿನ ಉದ್ದಕ್ಕೂ.

A'fter ಆಫ್ಟರ್ (ಕ್ರಿ. ವಿ., ಉಪ., ಸಂ. ಅವ್ಯ.) ಹಿಂದೆ ; ಹಿಂದುಗಡೆ ; ಹಿಂದಿನಿಂದ. ವಿಚಾರವಾಗಿ (Look after him ಅವನನ್ನು ವಿಚಾರಿಸಿಕೊ). ತರುವಾಯ ; ಆಮೇಲೆ ; ಬಳಿಕ. ಆ ಕಾರಣದಿಂದ (After such behaviour ಇಂಥ ನಡತೆಯನ್ನು ನೋಡಿ). After a fashion ಒಂದು ರೀತಿಯಲ್ಲಿ. The town is named after him ಆ ನಗರಕ್ಕೆ ಆತನ ಹೆಸರನ್ನಿಟ್ಟಿದೆ. The boy takes after his father ಈ ಹುಡುಗನು ತಂದೆಯನ್ನು ಹೋಲುತ್ತಾನೆ. After all ಕಟ್ಟಕಡೆಗೆ ; ಎಷ್ಟು ಮಾಡಿದರೂ, ಎಷ್ಟು ಹೇಳಿದರೂ. **A'fter** (ಗು.) ಆ ಮೇಲಿನ ; ಮುಂದಿನ (After years ಮುಂದಿನ ಕಾಲ). (ನೌಕ) ಹಿಂದಣ ; ಹಿಂಭಾಗದ (After cabin ಹಿಂದಣ ಕೋಣೆ). **A'fter-birth** (ಮಗು ಹುಟ್ಟಿದ ಮೇಲೆ ಬೀಳುವ) ಸೆತ್ತೆ, ಕಸ, ಮಾಸು ; ಜರಾಯು. **A'fter-care** ಕೆಲವು ಕಾಲ ರೋಗಚಿಕಿತ್ಸೆ ವೊ. ನ್ನು ನಡೆಯಿಸಿದ ನಂತರ ಒಬ್ಬನ ವಿಷಯದಲ್ಲಾಗಲಿ ಒಂದು ಪಂಗಡದ ವಿಷಯದಲ್ಲಾಗಲಿ ತೋರಿಸುವ ಆದರಣೆ, ಮಾಡುವ ಆರೈಕೆ : ಪಶ್ಚಾದ್ಯೋಗಕ್ಷೇಮ (After-care association —ಸಂಘ). **A'ftercrop** ಎರಡನೆಯ ಬೆಳೆ. **A'fterdamp** ಕಲ್ಲಿದ್ದಲು ವೊ. ಗಣಿಗಳಲ್ಲಿರುವ ಹಬೆ ಸಿಡಿಯುವುದರಿಂದುಂಟಾದ, ಉಸಿರುಸಿಕ್ಕಿಸುವ, ವಿಷದ ಹೊಗೆ. **A'fterglow** ಹೊತ್ತು ಮುಳುಗಿದಮೇಲೆ ಪಶ್ಚಿಮ ದಿಕ್ಕಿನಲ್ಲಿ ಕಾಣುವ ಬೆಳಕು : ಬೈಗಿನ ಬೆಳಕು. (ರೂಪ. ಸಹ). **A'fter-grass** ಮೊದಲನೆಯ ಕೊಯ್ಲು ಆದಮೇಲೆ ಬೆಳೆಯುವ ಹುಲ್ಲು : ಕೂಳೆ ಹುಲ್ಲು. **A'fter-image** (ಕಣ್ಣೆದುರಿಗಿದ್ದ ಬೆಳಕನ್ನು ಅಥವಾ ಬೆಳಗುವ ವಸ್ತುವನ್ನು ಮರೆ ಮಾಡಿಬಿಟ್ಟಮೇಲೆಯೂ ಕಣ್ಣಿಗೆ ಗೋಚರವಾಗುವ) ಅನುಬಿಂಬ. **A'fterings** (—ರಿಂಗ್ಸ್) ಹಸು ಕರೆಯುವಾಗ ಕೊನೆಯ ಸೊರುವಿನ ಹಾಲು. **A'ftermath** ಎರಡನೆಯ ಕಟಾವು ; ಮೊದಲನೆಯ ಕೊಯ್ಲಾದ ಮೇಲೆ ಆಗುವ ಹುಲ್ಲಿನ ಬೆಳೆ. (ರೂಪ.) ಫಲಾಂತರ (The aftermath of the great rebellion ಆ ದೊಡ್ಡ ದಂಗೆಯ ಫಲಾಂತರ, ಪರಿಣಾಮ). **A'ftermost** (ಗು.) (ನೌಕ) ಹಡಗಿನ ತೀರ ಹಿಂಭಾಗದ. **Afternoón** ಮಧ್ಯಾಹ್ನದ ಮೇಲೆ ; ಅಪರಾಹ್ಣ (ನಡುಹಗಲಿನಿಂದ ಸಂಜೆಯ ವರೆಗಿನ ಕಾಲ). (ರೂಪ.) ಇಳಿಗಾಲ (The afternoon of life ಅಪರ ವಯಸ್ಸು). **A'fter-pains** ಮಗು ಹುಟ್ಟಿದ ತರುವಾಯ ಬರುವ ಬಾಣಂತಿಬೇನೆ. (ರೂಪ. ಸಹ). **A'fterpiece** ಮುಖ್ಯ ನಾಟಕ ಮುಗಿದಮೇಲೆ ಪ್ರದರ್ಶಿಸುವ ಪ್ರಹಸನ ಅಥವಾ ವಿನೋದ : ಉಪ ನಾಟಕ. (ರೂಪ. ಸಹ). (ನೌಕ) ಹಡಗಿನ ಕರ್ಣದ ಹಿಮ್ಮಡ (The heel of a rudder). **A'fterthought** ಕಾರ್ಯ ಮುಗಿದ ಮೇಲೆ ಹೊಳೆಯುವ ಆಲೋಚನೆ : ಹಿನ್ನೆಣಿಕೆ. ತರುವಾಯ ಮಾಡುವ ಉಪಾಯ ಅಥವಾ ಕೊಡುವ ನೆಪ. **A'fterwards** (ಕ್ರಿ. ವಿ.) ತರುವಾಯ ; ಆಮೇಲೆ ; ಬಳಿಕ ; ತದನಂತರ.

Agaín ಅಗೆನ್, ಅಗೆಯ್ನ್ (ಕ್ರಿ. ವಿ.) ಮರಳಿ ; ಮತ್ತೆ ; ತಿರುಗಿ ; ಪುನಃ. (Again and again ; Time and again ಮತ್ತೆ ಮತ್ತೆ ; ಪುನಃ ಪುನಃ. Ever and again ; Now and again ಆಗಾಗ್ಗೆ ; ಮತ್ತೆ ಮತ್ತೆ ; ಮೇಲೆ ಮೇಲೆ ; ಪದೇ ಪದೇ. As much again ಇಮ್ಮಡಿಯಾಗಿ ; ಎರಡರಷ್ಟು. Half as much again ಒಂದೂವರೆಯಷ್ಟು). ಮತ್ತು ; ಇನ್ನೂ ; ಅಲ್ಲದೆ ; ಅದೂ ಅಲ್ಲದೆ. ಪ್ರತಿಯಾಗಿ.

Agaínst ಅಗೆನ್ಸ್ಟ್, ಅಗೆಯ್ನ್ಸ್ಟ್ (ಉಪ., ಸಂ. ಅವ್ಯ.) ಎದುರಿಗೆ (Over against ಕಟ್ಟೆದುರಿಗೆ). ಎದುರುಬದುರಾಗಿ. ವಿರುದ್ಧವಾಗಿ ; ವ್ಯತಿರಿಕ್ತವಾಗಿ ; ಭೇದ ತೋರುವಂತೆ (Against a dark background ಕಪ್ಪು ಹಿನ್ನೆಲೆಯ ಮೇಲೆ ಭೇದ ತೋರುವಂತೆ). ನಿರೀಕ್ಷಣೆಯಿಂದ (Against a rainy day ಕಷ್ಟಕಾಲ ನಿರೀಕ್ಷಣೆಯಿಂದ). Warn me against thieves ಕಳ್ಳರ ವಿಷಯವಾಗಿ ನನ್ನನ್ನು ಎಚ್ಚರಿಸು. The boat ran against a rock ದೋಣಿ ಬಂಡೆಗೆ ಡಿಕ್ಕಿಹೊಡೆಯಿತು. I ran against a friend ನಾನು ಒಬ್ಬ ಸ್ನೇಹಿತನನ್ನು ಅಕಸ್ಮಾತ್ತಾಗಿ ಸಂಧಿಸಿದೆನು. Be ready against he comes ಅವನು ಬರುವ ಹೊತ್ತಿಗೆ ಸರಿಯಾಗಿ ಸಿದ್ಧನಾಗಿರು.

Agaláctous ಆ್ಯಗಲ್ಯಾಕ್ಟಸ್ (ಗು.) (ವೈ. ಶಾ.) ಎದೆಹಾಲಿಲ್ಲದ ; ಸ್ತನ್ಯಹೀನ. **A'galaxy** (ನಾ.) ಸ್ತನ್ಯಹೀನತೆ.

Agámic ಆಗ್ಯಾಮಿಕ್ (ಗು.) (ಜೀ. ವಿ.) ಪುಂಸ್ತ್ರೀ ಕ್ರಿಯಾ ರಹಿತ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

A'gamogénesis ಆ್ಯಗಮೋಜೆನೆಸಿಸ್ (ನಾ.) (ಜೀ. ವಿ.) ಪುಂಸ್ತ್ರೀ ಕ್ರಿಯಾ ರಹಿತ ಜನನ; ಸ್ತ್ರೀಪುರುಷ ಸಂಪರ್ಕವಿಲ್ಲದೆ ಹುಟ್ಟುವುದು (ಎಂದರೆ, ಪ್ರತ್ಯೇಕ ಭಾಗಗಳಾಗಿ ಒಡೆದಾಗಲಿ ಎಲೆಯ ಮೂಲಕವೊ ಎಲೆಮೊಗ್ಗಿನ ಮೂಲಕವೊ ಸ್ಥಾಪನೆಯಾಗಿ ಅಗಲ ಅಭಿವೃದ್ಧಿ ಹೊಂದುವುದು). **Agamogenétic** (ಗು.); **Agamogenétically** (ಕ್ರಿ. ವಿ.)

A'gamous ಆ್ಯಗಮಸ್ (ಗು.) (ಜೀ. ವಿ.) (ಸ್ಪಷ್ಟವಾದ) ಜನನೇಂದ್ರಿಯ ರಹಿತ.

A'gamy (ನಾ.) ವಿವಾಹ ಸಂಬಂಧವಿಲ್ಲದಿರುವುದು; ವಿವಾಹ ಸಂಬಂಧ ವನ್ನು ಒಪ್ಪದಿರುವುದು.

Agápe ಅಗೇಪ್ (ಕ್ರಿ. ವಿ.) ಬಾಯಿ ತೆರೆದುಕೊಂಡು; (ಆಶ್ಚರ್ಯದಿಂದಲೊ ನಿರೀಕ್ಷಣೆಯಿಂದಲೊ) ಬಿಟ್ಟ ಬಾಯಿಂದ.

A'gape ಆ್ಯಗಪಿ (ನಾ.) ಕ್ರೈಸ್ತರಲ್ಲಿ ಹಿಂದೆ ಬಳಕೆಯಲ್ಲಿದ್ದ ಮತ ಸಂಬಂಧವಾದ ಪ್ರೇಮದ ಊಟ; ಭಕ್ತ ಸಂತರ್ಪಣೆ.

Agapémone ಆ್ಯಗಪೀಮೊನಿ (ನಾ.) ಸ್ವೇಚ್ಛಾ ಪ್ರೇಮಗೃಹ. **Agapémonite** (ಗು., ನಾ.) ಸ್ವೇಚ್ಛಾ ಪ್ರೇಮ ಸಂಘದ(ವನು)

A'gar-ágar ಏಗರ್-ಏಗರ್, ಆಗಾರ್-ಆಗಾರ್ (ನಾ.) ಅಣುಜೀವಿ ಗಳನ್ನು ಬೆಳೆಯಿಸಲು ಸಮುದ್ರದ ಕಳೆಯಿಂದ ತಯಾರಿಸಿದ ಜೀವ್ಯಣು ವರ್ಧಕ ಸಾಧನ.

A'garic ಆ್ಯಗರಿಕ್, **Agáric** ಅಗ್ಯಾರಿಕ್ (ನಾ.) ನಾಯಿಕೊಡೆ; ಅಣಬೆ.

Agástric ಅಗ್ಯಾಸ್ಟ್ರಿಕ್ (ಗು.) (ಪ್ರಾ. ವಿ.) ಪ್ರತ್ಯೇಕ ಅನ್ನನಾಳವಿಲ್ಲದ; ಜೀರ್ಣನಾಳ ರಹಿತ.

A'gate ಆ್ಯಗೇಟ್ (ನಾ.) ಒಂದು ಬಗೆಯ ಪ್ರಶಸ್ತ ಶಿಲೆ. ಚಿನ್ನದ ತಂತಿ ಗಾರರು ಮೆರುಗು ಕೊಡುವುದಕ್ಕಾಗಿ ಉಪಯೋಗಿಸುವ ಸಾಧನ. (ಅಮೆ. ಸಂ.) ಒಂದು ಬಗೆಯ ಅಚ್ಚಿನ ಮೊಳೆ.

Agáve ಅಗೇವಿ (ನಾ.) (ಸ. ವಿ.) ಕತ್ತಾಳೆ ಜಾತಿಯ ಗಿಡ; ಭೂತಾಳೆ.

Agáze ಅಗೇಜ಼್ (ಕ್ರಿ. ವಿ.) ದುರದುರನೆ ನೋಡುತ್ತ; ದಿಟ್ಟಿಸಿ ನೋಡುತ್ತ.

Age ಏಜ್ (ನಾ.) ವಯಸ್ಸು; ಜೀವಮಾನ. ಪ್ರಾಯ (ನಡು—, ಮುದಿ—). (He has come of age ಅವನು ಪ್ರಾಪ್ತವಯಸ್ಕನಾಗಿದ್ದಾನೆ. He is over-age ಅವನಿಗೆ ವಯಸ್ಸು ಮೀರಿದೆ). ಕಾಲ; ಯುಗ (Golden age ಸತ್ಯಯುಗ. Stone age ಶಿಲಾಯುಧಗಳ ಯುಗ). ವಾರ್ಧಕ್ಯ; ಮುಪ್ಪು. ತಲೆಮಾರು; ತಲೆಮೊರೆ. (ಭೂ. ವಿ.) ದೀರ್ಘ ಕಾಲ; ಯುಗ (Ice age ನೀರ್ಗಲ್ಲಿನ ಯುಗ). (ಬಳ. ಮಾ.) ಬಹಳ ಹೊತ್ತು (I have been waiting for ages ನಾನು ಬಹಳ ಹೊತ್ತಿನಿಂದ ಕಾದಿದ್ದೇನೆ). **Age** (ಕ್ರಿ.) ಮುದಿ ಯಾಗಿಸು; ಹಳೆಯದಾಗಿಸು; ವಯಸ್ಸಾಗು. **A'ged** ಏಜ್ಡ್ (ಗು.) ವಯಸ್ಸಾದ; ಮುದಿಯಾದ; ಮುಪ್ಪೇರಿದ; ವೃದ್ಧ. **A'gedness** (ನಾ.); **A'ged** ಏಜ್ಡ್ (ಗು.) (ಅ) ವಯಸ್ಸಿನ. **A'geless** (ಗು.) ಮುದಿಯಾಗದ; ಮುಪ್ಪಾಗದ; ಅಜರ.

Agénda ಅಜೆಂಡ (ನಾ.) ಮಾಡಬೇಕಾದ ಕಾರ್ಯಗಳು; ಆಲೋಚ್ಯ ವಿಷಯಗಳು; ಸಭೆಯಲ್ಲಿ (ಸಮಿತಿಯಲ್ಲಿ) ಪರ್ಯಾಲೋಚಿಸಬೇಕಾದ ವಿಷಯಗಳ ಪಟ್ಟಿ: ಕಾರ್ಯ ಸೂಚಿ.

A'gent ಏಜೆಂಟ್ (ನಾ.) ನಿಯೋಗಿ; ಕಾರ್ಯಭಾರಿ. Political agent ರಾಜ ನಿಯೋಗಿ. Chemical agent ರಾಸಾಯನಿಕ ಕಾರಕ. **A'gency** (ನಾ.) ನಿಯೋಗ; ನಿಯೋಗಿಯ ಕಾರ್ಯಶಾಲೆ ಅಥವಾ ಸಿಬ್ಬಂದಿ. ಕರ್ತೃತ್ವ; ಕಾರ್ಯಭಾರ. ಕರ್ತೃ. **Agéntial** — ಷಲ್ (ಗು.)

Agglómerate ಅಗ್ಲಾಮೆರೇಟ್ (ಕ್ರಿ.) ರಾಶಿಗೂಡಿಸು, —ಯಾಗು; ಮುದ್ದೆಗೂಡಿಸು, —ಯಾಗು. (ಗು., ನಾ.) (—ರೆಟ್) ರಾಶಿಗೂಡಿಸಿದ, —ಯಾದ; ಮುದ್ದೆಗೂಡಿಸಿದ, —ಯಾದ. ಚೆಲ್ಲಾಪಿಲ್ಲಿ ಯಾಗಿ ಹಾಕಿದ ವಸ್ತುಗಳ ರಾಶಿ. (ಭೂ. ವಿ.) ಜ್ವಾಲಾಮುಖಿ ಸಂಬಂಧವಾದ ವಸು ವಿನ ಚೂರುಗಳು ಶಾಖದಿಂದ ಒಟ್ಟುಗೂಡಿ ಆದ ಮುದ್ದೆ. **Agglomerátion** — ರೇಷನ್ (ನಾ.); **Agglómerative** — ರೆಟಿವ್ (ಗು.)

Agglútinate ಅಗ್ಲೂಟಿನೇಟ್ (ಕ್ರಿ.) (ವಜ್ರಹಾಕಿದಂತೆ) ಅಂಟಿಸು; ಅಂಟಿಕೊಳ್ಳುವಂತೆ ಮಾಡು. ಅಂಟುಪದಾರ್ಥವಾಗಿ ತಿರುಗು, ತಿರುಗಿಸು. (ಭಾ. ಶಾ.) ಒಟ್ಟುಅರ್ಥ ಕೊಡುವಂತೆ ಮೂಲಪದಗಳನ್ನು ಒಂದಾಗಿ ಜೋಡಿಸು. **Agglútinátion** (ನಾ.); **Agglútinative** (ಗು.): Agglutinative language (ಭಾ. ಶಾ.) ಮೂಲಪದಗಳನ್ನು ಅರ್ಥ ವ್ಯತ್ಯಾಸವಾಗದಂತೆ ಒಂದರೊಡನೊಂದನ್ನು ಜೋಡಿಸಿ ಸಮಾಸಮಾಡಿದ, ಮತ್ತು ಅಂಥ ಪದಗಳು ಕ್ರಮೇಣ ರೂಪವ್ಯತ್ಯಾಸ ಹೊಂದಿದರೂ ಅವುಗಳ ಮೂಲ ರೂಪವನ್ನು ಅರಿಯಲು ಸಾಧ್ಯವಾಗುವಂತಿರುವ, ಪ್ರಕೃತಿ ಪ್ರತ್ಯಯ ಗಳ ಜೋಡಣೆ ಸ್ಪಷ್ಟವಾಗಿ ಕಾಣುವ ಪದಗಳುಳ್ಳ ಭಾಷೆ: ಸಂಶ್ಲೇಷ ಭಾಷೆ. **Agglútinant** (ಗು.) (ವಜ್ರದಂತೆ) ಅಂಟಿಸುವ. (ನಾ.) (ವಸ್ತುಗಳು ಒಂದರೊಡನೊಂದು ಅಂಟಿಕೊಳ್ಳುವಂತೆ ಮಾಡುವ) ಅಂಟು ಪದಾರ್ಥ. **Agglútinate** — ನೆಟ್ (ಗು.) (ವಜ್ರದಿಂದ ಅಥವಾ ವಜ್ರ ಹಾಕಿದಂತೆ) ಅಂಟಿಸಿದ; ಅಂಟಿಕೊಂಡ. (ಭಾ. ಶಾ.) ಅರ್ಥ ಕೆಡದಂತೆಯೂ ವಿಶೇಷ ರೂಪವ್ಯತ್ಯಾಸ ಹೊಂದದಂತೆಯೂ ಸಮಾಸ ಮಾಡಿ ಜೋಡಿಸಿದ ಮೂಲಪದಗಳನ್ನುಳ್ಳ: ಸಂಶ್ಲೇಷ.

A'ggrandize ಆ್ಯಗ್ರ್ಯಂಡೈಜ಼್ (ಕ್ರಿ. ಸಕ.) (ಅಧಿಕಾರ, ಘನತೆ, ಐಶ್ವರ್ಯ, ವ್ಯಥೆ, ಮೊ. ನ್ನು) ಹೆಚ್ಚುಮಾಡು, ಅತಿಶಯಗೊಳಿಸು, ಅತಿ ವಿಸ್ತರಪಡಿಸು. ಅತಿಶಯವಾದ ಹಾಗೆ ಕಾಣುವಂತೆ ಮಾಡು; ಅತಿಯಾಗಿ ಮಾಡು. (ಕ್ರಿ. ಅಕ.) ಹೆಚ್ಚಾಗು; ಅತಿಯಾಗು; ದೊಡ್ಡೊಕ್ಕಲು ಆಗು, ಮಾಡಿಕೊ. **Aggrándiz(s)ement** ಅಗ್ರ್ಯಾಂಡಿಜ಼್‌ಮೆಂಟ್ (ನಾ.): Self-aggrandizement (ನಾ.) ಸ್ವಪ್ರತಿಷ್ಠೆ.

A'ggravate ಆ್ಯಗ್ರವೇಟ್ (ಕ್ರಿ. ಸಕ.) (ಭಾರ, ತಪ್ಪು, ರೋಗ, ಅಪರಾಧ, ಮೊ. ನ್ನು) ಹೆಚ್ಚುಮಾಡು, ಹೆಚ್ಚಿಸು; ಇರುವುದಕ್ಕಿಂತಲೂ ಹೆಚ್ಚು ಗುರುತ್ವವುಳ್ಳಂತೆ ತೋರಿಸು. ಉದ್ರೇಕಿಸು; ರೇಗಿಸು; ಕೆರಳಿಸು. **A'ggravating** (ಗು); **Aggravátion** (ನಾ.) ಉದ್ರೇಕ. **A'ggravative** (ಗು.)

A'ggregate ಆ್ಯಗ್ರಿಗೇಟ್ (ಗು., ನಾ.) ಒಂದಾಗಿ ಸೇರಿಸಿದ; ಒಟ್ಟು ಗೂಡಿದ; ಸಮಷ್ಟಿ. (ನ್ಯಾ. ಶಾ.) ಅನೇಕ ಮಂದಿ ಸೇರಿ ಒಂದು ಸಂಸ್ಥೆಯಾದ. (ಪ್ರಾ. ವಿ.) ಕೆಲವು ಪ್ರತ್ಯೇಕ ಪ್ರಾಣಿಗಳು ಸೇರಿ ಒಂದೇ ಸಂಯುಕ್ತ ವ್ಯಕ್ತಿಯಾದ. (ಸ. ವಿ.) ಅನೇಕ ಸಣ್ಣ ಹೂವುಗಳು ಅಥವಾ ಕಾಯಿಗಳು ಒಟ್ಟಾಗಿ ಸೇರಿ ಒಂದುಗೂಡಿರುವ. (ನಾ.) ಒಟ್ಟು; ಮೊತ್ತ; ಗುಂಪು. ಜಲ್ಲಿಗಾರೆಗೆ (concrete) ಉಪಯೋಗಿಸುವ ಜಲ್ಲಿ, ಮೊ. (ಭೌ. ವಿ.) ಸಜಾತೀಯ ಕಣಗಳಿಂದ ಕೂಡಿದ ಮುದ್ದೆ. In the aggregate ಒಟ್ಟಿನಲ್ಲಿ. **A'ggregate** —ಗೇಟ್ (ಕ್ರಿ. ಸಕ.) ಒಟ್ಟುಗೂಡಿಸು. (ಒಬ್ಬನನ್ನು ಒಂದು ಸಂಘಕ್ಕೆ) ಸೇರಿಸು. (ಕ್ರಿ. ಅಕ.) ಒಟ್ಟುಗೂಡು. ಒಟ್ಟು (ಮೊತ್ತ) ಆಗು. **Aggregátion** (ನಾ.); **A'ggregative** (ಗು.)

Aggréss ಅಗ್ರೆಸ್ (ಕ್ರಿ. ಅಕ.) ಜಗಳ ಹೂಡು (ವಿರಳ ಪ್ರಯೋಗ)

Aggréssive ಅಗ್ರೆಸಿವ್ (ಗು., ನಾ.) (ಕಾರಣವಿಲ್ಲದೆ) ಕೆಣಕುವ; (ಮೊದಲು) ಮೇಲೆಬೀಳುವ; ಜಗಳ ಹೂಡುವ ಸ್ವಭಾವದ. ಆಕ್ರಮಿಸುವ. Assume the aggressive ಜಗಳವನ್ನು ಹೂಡು. **Aggréssively** (ಕ್ರಿ. ವಿ.); **Aggréssiveness** (ನಾ.); **Aggréssion** (ನಾ.) ತಾನಾಗಿ ಜಗಳ ಹೂಡುವುದು; (ಕಾರಣವಿಲ್ಲದೆ) ಮೇಲೆಬೀಳುವುದು; ಆಕ್ರಮಣ; ಮೇಲೆಬೀಳುವ ಪ್ರವೃತ್ತಿ. **Aggréssor** (ನಾ.) ಜಗಳಕ್ಕೆ ಮೊದಲಾಗಿ ನುಗ್ಗುವವನು; ತಾನಾಗಿ ಮೇಲೆಬೀಳುವವನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Aggriéve ಅಗ್ರೀವ್ (ಕ್ರಿ. ಸಕ.) ವ್ಯಥೆಪಡಿಸು ; ಬಾಧಿಸು ; ಕ್ಲೇಶಗೊಳಿಸು; ನೋವು ಕೊಡು. **Aggriéved** (ಗು.) ತೊಂದರೆಗೀಡಾದ ; ಅಹವಾಲುಳ್ಳ.

Aghást ಅಗಾಸ್ಟ್ (ಗು.) ಭೀತಿಗೊಂಡ ; ಗಾಬರಿಪಟ್ಟ ; ದಿಗ್ಭ್ರಮೆಗೊಂಡ ; ಬೆಪ್ಪಾದ.

A'gile ಆ್ಯಜಿಲ್, ಆ್ಯಜೈಲ್ (ಗು.) ಚಳಕವುಳ್ಳ ; ಚಾಕಚಕ್ಯವುಳ್ಳ ; ಚುರುಕಾದ ; ಚಟುವಟಿಕೆಯುಳ್ಳ ; ಲಘುವಾದ ; ಲಘು ಗತಿಯುಳ್ಳ ; ಲವಿಯುಳ್ಳ. **A'gilely** (ಕ್ರಿ. ವಿ.) ; **Agílity** ಅಜಿಲಿಟಿ (ನಾ.)

A'gio ಆ್ಯಜಿಯೊ, ಏಜಿಯೊ (ನಾ.) ಕಾಗದದ ನಾಣ್ಯಕ್ಕೆ ನಗದುಹಣವನ್ನು ಕೊಡಲು, ಅಥವಾ ಒಂದು ಬಗೆಯ ನಾಣ್ಯದಿಂದ ಹೆಚ್ಚು ಬೆಲೆಯುಳ್ಳ ಮತ್ತೊಂದು ಬಗೆಯ ನಾಣ್ಯಕ್ಕೆ (ಉದಾ. — ಬೆಳ್ಳಿಯದನ್ನು ಚಿನ್ನದ್ದಕ್ಕೆ) ಬದಲಾಯಿಸಲು, ಕೊಡಬೇಕಾದ (ಸೇಕಡ) ವಟ್ಟ ; ಇಂಥ ಪರಿವರ್ತನ ವ್ಯಾಪಾರ. **A'giotage** — ಟೇಜ್ (ನಾ.) ಪರಿವರ್ತನ ವ್ಯಾಪಾರ ; ಸಟ್ಟಾ ವ್ಯಾಪಾರ ; ಸರ್ಕಾರದ ಅಥವಾ ಇತರ ಸಂಸ್ಥೆಯ ಸಾಲದ ಪತ್ರಗಳ ಮೇಲೆ ಅತಿಲಾಭ ಪಡೆಯುವ ಉದ್ದೇಶದಿಂದ ಮಾಡುವ ಅದೃಷ್ಟದ ವ್ಯಾಪಾರ.

Agíst ಅಜಿಸ್ಟ್ (ಕ್ರಿ. ಸಕ.) ದನಗಳನ್ನು ಕೂಲಿಗೆ ಮೇಯಿಸಲು ತೆಗೆದುಕೊ. ಜಮೀನಿನ ಮೇಲೆ ಅಥವಾ ಜಮೀನ್ದಾರನ ಮೇಲೆ ತೆರಿಗೆ ಹಾಕು. **Agístment** (ನಾ.)

A'gitate ಆ್ಯಜಿಟೇಟ್ (ಕ್ರಿ. ಸಕ.) ಅಳ್ಳಾಡಿಸು ; ಕಲಕು ; ಕದಡು. ರೇಗಿಸು ; ಕೆರಳಿಸು ; ಉದ್ರೇಕಿಸು. ಚರ್ಚೆ ಮಾಡು ; ವಾದಿಸು ; ಚಳವಳಿ ನಡೆಯಿಸು ; ಪ್ರಜೆಗಳಲ್ಲಿ ಅತೃಪ್ತಿಯನ್ನು, ಅಶಾಂತಿಯನ್ನು, ಎಬ್ಬಿಸು. **Agitátion** (ನಾ.) ; **A'gitator** (ನಾ.) ಚಳವಳಿಕಾರ. ಕಲಕುವ ಅಥವಾ ಬೆರಸುವ ಯಂತ್ರಸಾಧನ : ಕ್ಷೋಭಕ ಯಂತ್ರ.

Agitáto (It.) ಆಜಿಟಾಟೊ (ಕ್ರಿ. ವಿ.) (ಸಂ.) ಕ್ಷುಬ್ಧವಾಗಿ ; ಉದ್ರೇಕದಿಂದ.

A'glet, Aíglet ಆ್ಯಗ್ಲೆಟ್, ಏಯ್‌ಗ್ಲೆಟ್ (ನಾ.) ಉಡುಪಿನಲ್ಲಿ ಅಲಂಕಾರಕ್ಕಾಗಿ ಸೇರಿಸುವ ಜರತಾರಿಯ ಗೊಂಡೆ.

Agleý ಅಗ್ಲೇ (ಕ್ರಿ. ವಿ.) ಓರೆಯಾಗಿ ; ವಕ್ರವಾಗಿ.

Aglóssal ಅಗ್ಲಾಸಲ್ (ಗು.) ನಾಲಗೆಯಿಲ್ಲದ.

Aglow ಅಗ್ಲೋ (ಕ್ರಿ. ವಿ.) ಹೊಳೆಯುತ್ತ ; ಜ್ವಲಿಸುತ್ತ. (ರೂಪ. ಸಹ)

A'gnail ಆ್ಯಗ್‌ನೇಯ್‌ಲ್ (ನಾ.) ಉಗುರುಸುತ್ತು.

A'gnate ಆ್ಯಗ್ನೇಟ್ (ನಾ., ಗು.) ಸಗೋತ್ರ ; ವಂಶಿಕ. (ರೂಪ.) ಸಂಬಂಧವುಳ್ಳ ; ಸಜಾತೀಯ ; ಸದೃಶ. **Agnátion** (ನಾ.) ; **Agnátic** ಆ್ಯಗ್ನ್ಯಾಟಿಕ್ (ಗು.)

Agnómen ಆ್ಯಗ್ನೋಮೆನ್ (ನಾ.) ಬಿರುದಿನ ಹೆಸರು ; ಉಪ ನಾಮ.

Agnóstic ಆ್ಯಗ್ನಾಸ್ಟಿಕ್ (ನಾ., ಗು.) ಜಡಪ್ರಪಂಚವನ್ನುಳಿದು ಮತ್ತೆ ಯಾವುದಾಗಲಿ ಸೃಷ್ಟಿಕರ್ತನಾಗಲಿ ಉಂಟೆಂಬುದೂ, ಇಂದ್ರಿಯ ಗೋಚರವಾದದ್ದರ ಹೊರತು ಬೇರೆ ಯಾವ ತತ್ತ್ವವಾದರೂ ಇರುವುದೆಂಬುದೂ, ತಿಳಿಯಲು ಸಾಧ್ಯವಲ್ಲವೆಂದು ವಾದಿಸುವವನು : ಅಜ್ಞೇಯತಾ ವಾದಿ. (ಗು.) ಅಜ್ಞೇಯತಾ ವಾದದ. **Agnósticism** (ನಾ.) ಅಜ್ಞೇಯತಾ ವಾದ.

Agó ಅಗೋ (ಕ್ರಿ. ವಿ.) (ಕಾಲವಾಚಿ) ಹಿಂದೆ ; ಪೂರ್ವದಲ್ಲಿ.

Agóg ಅಗಾಗ್ (ಕ್ರಿ. ವಿ.) ಸಡಗರದಿಂದ ; ಸಂಭ್ರಮದಿಂದ. ಅತಿಶಯ ಕುತೂಹಲವುಳ್ಳವನಾಗಿ.

Agónic ಅಗಾನಿಕ್ (ಗು.) ಅಕೋನಕ ; ಕೋನವಾಗದ. (ಭೌ. ವಿ.) Agonic line ಕಾಂತ ಸೂಚಿಯು (ಎಂದರೆ, ಉತ್ತರಮುಖಿಯು) ಎಲ್ಲಾ ಪ್ರದೇಶಗಳಲ್ಲೂ ಸಾಮಾನ್ಯವಾಗಿ ಉತ್ತರದಕ್ಷಿಣ ನಿಜಧ್ರುವಗಳನ್ನು ಸರಿಯಾಗಿ ತೋರಿಸುವಂತೆ ನಿಲ್ಲದೆ, ಕಲವು ಪ್ರದೇಶಗಳಲ್ಲಿ ಮಾತ್ರ ಹಾಗೆ ನಿಲ್ಲುವುದರಿಂದ, ಉತ್ತರದಕ್ಷಿಣ ನಿಜಧ್ರುವ ರೇಖೆಯೂ, ಉತ್ತರದಕ್ಷಿಣ ಕಾಂತಧ್ರುವ ರೇಖೆಯೂ ಸಮಾನವಾಗಿ ಯಾವ ಪ್ರದೇಶಗಳಲ್ಲಿರುತ್ತವೆಯೊ (ಎಂದರೆ, ಕಾಂತ ಸೂಚಿಯು ನಿಜಧ್ರುವಗಳನ್ನು ತೋರಿಸುತ್ತ ನಿಲ್ಲುತ್ತದೆಯೊ) ಅಂಥ ಪ್ರದೇಶಗಳೆಲ್ಲವನ್ನೂ ಸೇರಿಸಿ ಭೂಪಟದ ಮೇಲೆ ಎಳೆದ ರೇಖೆ : ಅಕೋನಕ ರೇಖೆ.

Agonístic ಆ್ಯಗೊನಿಸ್ಟಿಕ್ (ಗು.) (ಮು., ಪುರಾತನ ಗ್ರೀಕರ) ಜಟ್ಟಿಕಾಳಗಕ್ಕೆ ಸಂಬಂಧ ಪಟ್ಟ. (ಅಲಂ.) ವಾಗ್ಯುದ್ಧದ ; ಬಲಾತ್ಕಾರದ ; ಆಟೋಪದ. **Agonístical** (ಗು.) ; **Agonístically** (ಕ್ರಿ. ವಿ.)

A'gony ಆ್ಯಗೊನಿ (ನಾ.) ವ್ಯಥೆ ; ಯಾತನೆ ; ಸಂಕಟ ; ಮರಣ ಯಾತನೆ ; ಪ್ರಾಣ ಸಂಕಟ. ಹೋರಾಟ. ವಿಪರೀತ ಸಂತೋಷ. **A'gonize** (ಕ್ರಿ. ಸಕ.) ಯಾತನೆಪಡಿಸು ; ಹಿಂಸೆಗೊಳಿಸು ; ಸಂಕಟಪಡಿಸು ; ವ್ಯಥೆಗೊಳಿಸು. (ಕ್ರಿ. ಅಕ.) ಯಾತನೆಪಡು ; ನರಳು ; ಸಂತಪಿಸು ; ಮರಣಸಂಕಟಪಡು. ಅಖಾಡದಲ್ಲಿ ಹೋರಾಡು, ಕುಸ್ತಿ ಮಾಡು (ರೂಪ. ಸಹ). ಬಾಹ್ಯ ಪರಿಣಾಮವುಂಟುಮಾಡುವುದಕ್ಕಾಗಿ ಒದ್ದಾಡು. **A'gonizingly** (ಕ್ರಿ. ವಿ.)

Agoraphóbia ಆ್ಯಗೊರಫೋಬಿಯ (ನಾ.) ಸಾರ್ವಜನಿಕ ಸ್ಥಳಗಳ ವಿಷಯದಲ್ಲಿ ಭಯ ; ಸಭಾ ಕಂಪ.

Agrárian ಅಗ್ರೇರಿಯನ್ (ಗು.) ಭೂಸ್ವತ್ತಿಗೆ ಸಂಬಂಧಪಟ್ಟ ; ವ್ಯವಸಾಯದ ಭೂಮಿಗೆ ಅಥವಾ ಭೂವ್ಯವಸಾಯಕ್ಕೆ ಸಂಬಂಧಪಟ್ಟ. (ನಾ.) ಭೂಸ್ವತ್ತಿನ ಹಂಚಿಕೆಯ ಕ್ರಮವನ್ನು ಬದಲಾಯಿಸಬೇಕೆಂದು ವಾದಿಸುವವನು. **Agrárianism** (ನಾ.) ಭೂಸ್ವಾಮ್ಯ ವಿಭಾಗ ತತ್ತ್ವ ; ಜಮೀನುಗಳ ಹಿಡುವಳಿಯ ವಿಷಯವಾಗಿ ಈಗಿರುವ ನಿಯಮಗಳನ್ನೊಪ್ಪದೆ ಅಸಮಾಧಾನದಿಂದ ಹುಟ್ಟಿದ ಕಲಹಗಳು ಅಥವಾ ಚಳವಳಿ : ಕ್ಷೇತ್ರ ವಿಷಯದ ಚಳವಳಿ. **Agrárianize** (ಕ್ರಿ.)

Agreé ಅಗ್ರೀ (ಕ್ರಿ.) ಒಪ್ಪು ; ಒಪ್ಪಿಕೊ ; ಒಡಂಬಡು ; ಹೊಂದಿಕೊ ; ಒಗ್ಗು ; ಸರಿಬೀಳು. (ಲೆಕ್ಕ) ತಾಳೆಹೋಗಿಸು, ತಾಳೆಹೋಗು. (ವ್ಯಾ.) (ಲಿಂಗ, ವಿಭಕ್ತಿ, ವಚನ, ಮೊ. ಗಳಲ್ಲಿ) ಅನ್ವಯವಾಗಿರು. **Agreéable** ಅಗ್ರೀಅಬ್‌ಲ್ (ಗು.) ಹಿತವಾದ ; ಒಗ್ಗುವ ; ಸರಿಬೀಳುವ ; ಅನುಕೂಲವಾದ ; ಇಷ್ಟವಾದ. **Agreéableness** (ನಾ.) ; **Agreéably** (ಕ್ರಿ. ವಿ.) ; **Agreéd** (ಗು.) ; **Agreément** (ನಾ.) ಒಪ್ಪಿಗೆ ; ಒಡಂಬಡಿಕೆ ; ಸಮ್ಮತಿ ; ಏಕಾಭಿಪ್ರಾಯ. (ನ್ಯಾ. ಶಾ.) ಒಪ್ಪಂದ ; ಮುಚ್ಚಳಿಕೆ. (ಭಾವ, ಅಭಿಪ್ರಾಯ, ಮೊ. ಗಳಲ್ಲಿ) ಹೊಂದಿಕೆ, ಸಾಮ್ಯ, ಸಾದೃಶ್ಯ. (ವ್ಯಾ.) ಅನ್ವಯ.

Agreménts (F) ಆಗ್ರೇಮಾನ್ (ನಾ., ಬ. ವ.) ಹಿತವಾದ ಗುಣಗಳು ಅಥವಾ ಸನ್ನಿವೇಶಗಳು.

Agréstial ಅಗ್ರೆಸ್ಟಿಯಲ್ (ಗು.) ಹೊಲ ಮೈದಾನಗಳಲ್ಲಿ ವಾಸಿಸುವ ; ಕಾಡು ; ಅನಾಗರಿಕ ; ಒರಟು. (ಸ. ವಿ.) ವ್ಯವಸಾಯದ ಜಮೀನಿನಲ್ಲಿ ಕಾಡುಬೆಳೆಯಾಗಿ ಬೆಳೆಯುವ. **Agréstic** (ಗು.) ಹಳ್ಳಿಗಾಡಿನ ; ಅನಾಗರಿಕ ; ಒರಟಾದ.

A'griculture ಆ್ಯಗ್ರಿಕಲ್ಚ್ಯರ್, —ಕಲ್ಚರ್ (ನಾ.) ಭೂವ್ಯವಸಾಯ ; ಬೇಸಾಯ ; ಆರಂಬ ; ಕೃಷಿ. ಭೂವ್ಯವಸಾಯ ಶಾಸ್ತ್ರ. **Agricúltural** (ಗು.) ; **Agricúlturist** = **Agricúlturalist** (ನಾ.) ಒಕ್ಕಲಿಗ ; ರೈತ ; ವ್ಯವಸಾಯಗಾರ ; ಆರಂಬಗಾರ.

Agriólogy ಆ್ಯಗ್ರಿಯಾಲೊಜಿ (ನಾ.) ಅನಾಗರಿಕ ಮನುಷ್ಯಜಾತಿಗಳ ನಡೆ ನುಡಿಗಳ ತುಲನಾತ್ಮಕ ವಿಚಾರ : ಅನಾಗರಿಕಮಾನವ ಶಾಸ್ತ್ರ. **Agriólogist** (ನಾ.)

Agrónomy ಅಗ್ರಾನೊಮಿ (ನಾ.) ಭೂಮಿಯಲ್ಲಿ ಬೆಳೆತೆಗೆಯುವ ವಿಷಯಕ್ಕೆ ಸಂಬಂಧಪಟ್ಟ ವಿದ್ಯೆ : ಕೃಷಿವಿದ್ಯೆ ; ಕೃಷ್ಯಾದಿ ಗ್ರಾಮವೃತ್ತಿಗಳು. ಕೃಷಿ ವಾರ್ತಾ ಶಾಸ್ತ್ರ **Agronómic(al)** ಆ್ಯಗ್ರೊನಾಮಿಕ್,—ಕಲ್ (ಗು.) ; **Agronómics** (ನಾ.) ; **Agrónomist** ಅಗ್ರಾನೊಮಿಸ್ಟ್ (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

491.1/49 2999०

Agroúnd ಅಗ್ರೌಂಡ್ (ಕ್ರಿ. ವಿ.) ಆಳವಿಲ್ಲದ ನೀರಿನ ತಳದಲ್ಲಿ (The ship ran aground ಹಡಗು ಆಳವಿಲ್ಲದ ನೀರಿನಲ್ಲಿ ನೆಲಹತ್ತಿತು)

Agrýpnia ಅಗ್ರಿಪ್ನಿಯ (ನಾ.) ನಿದ್ದೆಯಿಲ್ಲದಿರುವುದು. **Agrýpnode** (ಗು.) (ವೈ. ಶಾ.) ನಿದ್ದೆ ಬರದಂತೆ ಮಾಡುವ ; ನಿದ್ರಾ ನಿರೋಧಿ. **Agrypnótic** ಆ್ಯಗ್ರಿಪ್‌ನಾಟಿಕ್ (ಗು., ನಾ.) (ವೈ. ಶಾ.) ನಿದ್ರಾ ನಿರೋಧಕ (ವಸ್ತು)

A'gue ಎಯ್‌ಗ್ಯು (ನಾ.) ಚಳಿಜ್ವರ ; ಮಲೇರಿಯಾ ಜ್ವರ. ನಡುಕ (ರೂಪ. ಸಹ). Ague cake ಮಲೇರಿಯಾ ಜ್ವರದಿಂದ ಯಕೃತ್ತು ಅಥವಾ ಪ್ಲೀಹವು ಬಾತುಕೊಳ್ಳುವುದು : ಜ್ವರಗೆಡ್ಡೆ. **A'guish** (ಗು.) ಚಳಿಜ್ವರದ ಸ್ವಭಾವದ ; ಚಳಿಜ್ವರ ಬರುವಂತೆ ಮಾಡುವ ; ಚಳಿಜ್ವರಕ್ಕೆ ಗುರಿಯಾದ ; ಚಳಿಜ್ವರದಂತಿರುವ. ನಡುಗುವ. ಇದ್ದಕ್ಕಿದ್ದಹಾಗೆ ಬರುವ. **A'guishly** (ಕ್ರಿ. ವಿ.)

Agýrate ಅಜ್ಯೈರೇಟ್ (ಗು.) (ಸ. ವಿ.) ಸುತ್ತುಸುತ್ತಾಗಿಯಾಗಲಿ ವೃತ್ತಗಳಲ್ಲಾಗಲಿ ಇಲ್ಲದಿರುವ.

Ah ಆ (ಭಾವ. ಅವ್ಯ.) ಹಾ ! ಆಹಾ ! (ವ್ಯಸನ, ಚಿಂತೆ, ಆಶ್ಚರ್ಯ, ಮೆಚ್ಚುಗೆ, ಬೇಡಿಕೆ, ಅಲಕ್ಷ್ಯ, ಅಸಹ್ಯ, ಪರಿಹಾಸ್ಯ — ಈ ಭಾವಗಳನ್ನು ಸೂಚಿಸುವ ಪದ). **Ahá** ಆಹಾ, ಅಹಾ (ಭಾವ. ಅವ್ಯ.) (ಆಶ್ಚರ್ಯ, ಜಯೋತ್ಸಾಹ, ಪರಿಹಾಸ್ಯ, ನಿಂದಾಸ್ತುತಿ — ಈ ಭಾವಗಳನ್ನು ಸೂಚಿಸುವ ಪದ)

Aheád ಅಹೆಡ್ (ಕ್ರಿ. ವಿ.) ಮುಂದಾಗಿ ; ಮುಂದೆ ; ಎಲ್ಲರಿಗಿಂತಲೂ ಮುಂದೆ ; ನೆಟ್ಟಗೆ ಮುಂದೆ ; ಕಟ್ಟೆದುರಿಗೆ. ಆತುರದಿಂದ ; (ನಿರ್ಲಕ್ಷ್ಯವಾಗಿ) ಮುಂದಕ್ಕೆ. (ರೂಪ.) ಕಟ್ಟಿಲ್ಲದೆ.

Aheáp ಅಹೀಪ್ (ಕ್ರಿ. ವಿ.) ಏಕ ರಾಶಿಯಾಗಿ ; ಒಂದು ಗುಡ್ಡೆಯಾಗಿ.

Ahém ಅಹೆಂ (ಭಾವ. ಅವ್ಯ.) (ಇತರರ ಗಮನವನ್ನು ಸೆಳೆಯಲು, ಅಥವಾ ತಾನು ಹೇಳುವುದನ್ನು ತಡಮಾಡಲು, ಗಂಟಲನಲ್ಲಿ ಮಾಡುವ) 'ಅಹೆಂ' ಎಂಬ ಶಬ್ದ.

Ahoý ಅಹಾಯ್ (ಭಾವ. ಅವ್ಯ.) ಅಹೋ ! (ನಾವಿಕರ ಕರೆ)

A'hriman ಆರಿಮನ್ (ನಾ.) (ಝೋರಾಸ್ಟರ್ ಮತ ತತ್ತ್ವದಲ್ಲಿ) ತಮೋಭಿಮಾನ ದೇವತೆ ; ಪಾಪ ದೇವತೆ ; ಸೈತಾನ್.

Ahúll ಅಹಲ್ (ಕ್ರಿ. ವಿ.) (ನೌಕ) (ಬಿರುಗಾಳಿಯಲ್ಲಿ) ಹಡಗಿನ ಧ್ವಜಪಟಗಳನ್ನು ಸುತ್ತಿ ಕಟ್ಟಿಟ್ಟು.

Aíblins. **Ablings** ನೋಡಿ.

Aid ಏಯ್ಡ್ (ಕ್ರಿ. ಸಕ.) ಸಹಾಯ ಮಾಡು ; ನೆರವಾಗು ; ಒತ್ತಾಸೆ ಕೊಡು. (ನಾ.) ಸಹಾಯ ; ನೆರವು ; ಒತ್ತಾಸೆ. ಸಹಾಯಕ. (ಇಂಗ್ಲಿಷ್ ಚರಿತ್ರೆಯಲ್ಲಿ) ಸರ್ಕಾರಕ್ಕೆ ಕೊಡುವ ಸಹಾಯ ದ್ರವ್ಯ, ತೆರಿಗೆ, ಸಾಲ. (ನ್ಯಾ. ಶಾ.) ಒಂದು ವ್ಯವಹಾರದಲ್ಲಿ ಪ್ರತಿವಾದಿಯಾಗಿರುವವನು ತನ್ನಂತೆಯೇ ಆ ವ್ಯವಹಾರದಲ್ಲಿ ಸಂಬಂಧಪಟ್ಟಿರುವ ಮತ್ತೊಬ್ಬನಿಂದ ನ್ಯಾಯಾನುಸಾರವಾಗಿ ಕೇಳಿ ಪಡೆಯಬಹುದಾದ ಸಹಾಯ. **Aids** (ನಾ.) ಸಹಾಯಸಂಪತ್ತು.

Aíde-de-camp ಏಡ್ ಡ ಕಾಙ್ (ನಾ. ; ಬ. ವ. Aides — ಏಡ್ ಡ ಕಾಙ್ಸ್) ಸೇನಾಪತಿಯ (ಅಥವಾ ರಾಜನ) ಆಜ್ಞೆಯನ್ನು ಇತರರಿಗೆ ತಲಪಿಸುವುದೇ ಮೊ. ಕಾರ್ಯಗಳನ್ನು ಮಾಡುವುದಕ್ಕೆ ಸಹಾಯಕನಾಗಿರುವ ಅಧಿಕಾರಿ ; ಸೇನಾಪತಿ ಸಹಾಯಕ.

A'ide-memoire ಏಡ್ ಮೆಮ್ವಾರ್ (ನಾ.) ಜ್ಞಾಪಕ ಸಾಧನ (ಪುಸ್ತಕ, ಪತ್ರ, ಮೊ. : ಮು., ರಾಯಭಾರ ಸಂಬಂಧದಲ್ಲಿ)

Aíglet. **Aglet** ನೋಡಿ.

Aígrette ಏಯ್‌ಗ್ರೆಟ್ (ನಾ.) ಅಂದವಾದ ಬಿಳಿಯ ಗರಿಗಳುಳ್ಳ 'ಹೆರನ್' ಜಾತಿಯ ಒಂದು ಹಕ್ಕಿ. ಹಕ್ಕಿಯ ಗರಿಯಿಂದಲೊ ಕೂದಲಿನಿಂದಲೊ ರತ್ನಗಳಿಂದಲೊ ಮಾಡಿದ, ತಲೆಯಲ್ಲಿ ಧರಿಸುವ ಆಭರಣ ; ಶಿರಪೇಷ್ ತುರಾಯಿ. (ಜೀ. ವಿ.) ಕೀಟಗಳ ತಲೆಯಮೇಲಿರುವ ಶಿಖೆ. (ಖ. ವಿ.) ಸೂರ್ಯಗ್ರಹಣದಲ್ಲಿ ಚಂದ್ರನ ಹಿಂದುಗಡೆಯಿಂದ ಬರುವ ಕಿರಣಗಳು.

Ail ಏಯ್‌ಲ್ (ಕ್ರಿ.) ಬಾಧೆಪಡು ; ನರಳು ; ಕ್ಲೇಶಪಡು ; ಅಸ್ವಸ್ಥವಾಗಿರು. ಬಾಧೆಗೊಳಿಸು ; ನರಳಿಸು ; ವ್ಯಥೆಗೊಳಿಸು. **Aílment** (ನಾ.) ವ್ಯಾಧಿ ; ಜಾಡ್ಯ ; ಕಾಯಿಲೆ ; ಅಸ್ವಾಸ್ಥ್ಯ.

Aim ಏಯ್‌ಮ್ (ಕ್ರಿ.) ಗುರಿಯಿಡು ; ಗುರಿಯಿಟ್ಟು ಹೊಡೆ. (Aim at ಒಬ್ಬನನ್ನು ಗುರಿಯಲ್ಲಿಟ್ಟುಕೊಂಡು ಕಾರ್ಯನಡೆಯಿಸು). (ನಾ.) ಗುರಿಯಿಡುವುದು. ಗುರಿ ; ಈಡು ; ಲಕ್ಷ್ಯ ; ಉದ್ದೇಶ. **Aímless** (ಗು.) ; **Aímlessly** (ಕ್ರಿ. ವಿ.) ಗುರಿಯಿಲ್ಲದೆ ; ಉದ್ದೇಶವಿಲ್ಲದೆ. **Aímlessness** (ನಾ.)

Aír ಏರ್ (ನಾ.) ವಾಯು ; ಗಾಳಿ ; ಎಲರು. ವಾಯುಮಂಡಲ ; ವಾತಾವರಣ. ಆಕಾಶ. (Open air ಬಯಲು). ನಸುಗಾಳಿ. ರಾಗ ; ಧಾಟಿ ; ಮಟ್ಟು. ಲಕ್ಷಣ ; ಸೂಚನೆ ; ರೀತಿ ; ತೋರ್ಕೆ ; ವೇಷ ; ಅನುಕರಣ. ಡಂಭ ; ಠೀವಿ ; ಅಟ್ಟಹಾಸ ; ಡಾಂಭಿಕ ಚೇಷ್ಟೆ. Fresh air ನಿರ್ಮಲ ವಾಯು ; ಹೊಸ ಗಾಳಿ. Triumphant air ಗೆಲುವಿನ ಜರ್ಬು,—ಠೀವಿ. To give oneself airs ಇಲ್ಲದ ದೊಡ್ಡತನದ ವೇಷ ಹಾಕುವುದು ; ಪ್ರತಿಷ್ಠೆ ತೋರಿಸುವುದು ; ಜಂಭ ಮಾಡುವುದು. To give person the air (ಅಮೆ. ಸಂ., ಅಸಂ.) (ಇರಬೇಡವೆಂದು) ಕಳುಹಿಸಿಬಿಡು. To take the air ಗಾಳಿಸವಾರಿ ಹೋಗುವುದು. To take air ಹೊರಬೀಳುವುದು ; ಪ್ರಚಾರವಾಗುವುದು. In the air ನಿಷ್ಕರ್ಷೆಯಿಲ್ಲದೆ. ಹರಡಿ ; ಗಾಳಿಸಮಾಚಾರವಾಗಿ. Castles in the air ಗಾಳಿಗೋಪುರಗಳು ; ಕಾರ್ಯಸಾಧ್ಯವಲ್ಲದ ಕಲ್ಪನೆಗಳು. An air of absurdity ಅಸಂಬದ್ಧತೆಯ ಲಕ್ಷಣ. On the air ನಿಸ್ತಂತುವಿನ ಮೂಲಕ ಹರಡಿ.

A.-balloon ಗಾಳಿತುಂಬಿದ ರಬ್ಬರಿನ ಚೀಲ. **A.-bladder** (ಕೆಲವು ಪ್ರಾಣಿಗಳಲ್ಲಿಯೂ ಸಸ್ಯಗಳಲ್ಲಿಯೂ ಇರುವ) ಗಾಳಿಯ ಚೀಲ. (ಮೀನುಗಳು ಮತ್ತು ಇತರ ಜಲಚರಗಳು ನೀರಿನಲ್ಲಿ ಈಜಾಡಲು ಅನುಕೂಲಿಸುವಂತೆ ಅವುಗಳ ದೇಹದಲ್ಲಿರುವ) ಈಜುಬುರುಡೆ. **A.-brake** ಯಂತ್ರ ಚಲನೆಯನ್ನು ತಡೆಯುವುದಕ್ಕಾಗಿ ದಟ್ಟವಾಗಿಸಿದ ಗಾಳಿಯ ಒತ್ತಡವನ್ನು ಉಪಯೋಗಿಸಿಕೊಳ್ಳುವ ಸಲಕರಣೆ : ವಾಯುತಡೆ. **A.-brick** (ವಾಯುಸಂಚಾರಕ್ಕಾಗಿ) ರಂಧ್ರಗಳುಳ್ಳ ಇಟ್ಟಿಗೆ. **A.-cavity** ವಾಯುಬಿಲ. **A.-cell** ಗಾಳಿಗೂಡು. **A.-chamber** (ಯಂತ್ರಗಳಲ್ಲಿ ಒತ್ತಡವನ್ನು ಸಮತೂಕವಾಗಿಟ್ಟಿರುವುದಕ್ಕಾಗಿ ಅಳವಡಿಸಿರುವ) ಗಾಳಿಯ ಕೋಣೆ. **Aircraft** (—ಕ್ರಾಫ್ಟ್) ವ್ಯೋಮಯಾನಗಳು ; ವಿಮಾನಗಳು. **Aircraft(s)man** ಆಕಾಶಸೈನ್ಯದಲ್ಲಿ ಒಬ್ಬ ಅಧಿಕಾರಿ. **A.-cushion** ಗಾಳಿ (ತುಂಬಿದ) ಮೆತ್ತೆ. **A.-duct** ವಾಯುನಾಳ. **A.-engine** ವಾಯುಬಲದಿಂದ ನಡೆಯುವ ಯಂತ್ರ : ವಾತ ಯಂತ್ರ. **Air Force** ಆಕಾಶ ಸೈನ್ಯ. **A.-gun** ಗಾಳಿಯ ಬಲದಿಂದ ಹೊಡೆಯುವ ತುಪಾಕಿ : ಗಾಳಿಕೋವಿ ; ಗಾಳಿಬಂದೂಕು. **A.-hole** ಗಾಳಿಕಂಡಿ ; ಗವಾಕ್ಷ ; ವಾತಾಯನ. **A.-jacket** (ನೀರಿನಲ್ಲಿ ಬಿದ್ದ ಮನುಷ್ಯನನ್ನು ತೇಲಿಸುವ) ಗಾಳಿತುಂಬಿದ ಕವಚ : ವಾಯುಕವಚ. **A.-line** ನೇರವಾದ ಮಾರ್ಗ. (ಸಾರ್ವಜನಿಕ ಉಪಯೋಗಕ್ಕಾಗಿರುವ) ಆಕಾಶಯಾನ, —ಪಂಕ್ತಿ, —ಮಾರ್ಗ, —ವ್ಯವಸ್ಥೆ. **Aír-mail** ಆಕಾಶ ಟಪಾಲು. **Aírman** (—ಮ್ಯನ್) ವ್ಯೋಮಯಾನ ಸಂಚಾರಿ ; ವೈಮಾನಿಕ. **Aírplane, Aéroplane** (ಏಯ್ರೊಪ್ಲೇನ್), **A'eroplane** (ಏ ಅರೊ —) ವಾಯು ಫಲಕಯಾನ. **A.-port** ವ್ಯೋಮಯಾನಗಳು ಇಳಿಯುವುದಕ್ಕೂ ಮೇಲೇರುವುದಕ್ಕೂ, ಅವು ಸಾಮಾನನ್ನು ಇಳಿಸುವುದಕ್ಕೂ ಭರತಿಮಾಡಿಕೊಳ್ಳುವುದಕ್ಕೂ, ಅನುಕೂಲ ಪಡಿಸಿರುವ ಸ್ಥಳ ; ವಿಮಾನದ ಬಂದರು, ನಿಲ್ದಾಣ. ಹಡಗಿನ ಗವಾಕ್ಷ. **A.-pump** ವಾಯುರೇಚಕ ಯಂತ್ರ. **A.-raid** ವ್ಯೋಮಯಾನಗಳಿಂದ ಶತ್ರುಗಳಮೇಲೆ ಬೀಳುವುದು : ಆಕಾಶ ದಾಳಿ.

पुस्तकालय गुरुकुल काँगड़ी

J113940

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Aírship ವಾಯುವಿಗಿಂತಲೂ ಹಗುರವಾದ ವಿಮಾನ ; ವಾಯು ಹಡಗು ; ಆಕಾಶ ನೌಕ. **A.-thermometer** (ಪಾದರಸಕ್ಕೆ ಬದಲಾಗಿ) ವಾಯುತುಂಬಿದ ಶಾಖಮಾಪಕ; ವಾಯು ಶಾಖಮಾಪಕ. **A.-threads** ಜೇಡನ ಬಲೆ. **A.-tight** ಗಾಳಿ ಹೊಗದಂತೆ ತಡೆಯುವ ; ಗಾಳಿ ತೂರದ. **A.-trap** (ಮುಚ್ಚಿರುವ ಚರಂಡಿಗಳು, ನಿರ್ವಾಯು ಪಾತ್ರೆಗಳು — ಇವುಗಳಿಂದ ಅಥವಾ ಇವುಗಳಿಗೆ) ಗಾಳಿ ಹೊಗದಂತೆ ತಡೆಯುವ ಸಲಕರಣೆ : ಗಾಳಿತಡೆ. **Aírway** ವಾಯು ಮಾರ್ಗ ; ಆಕಾಶ ಮಾರ್ಗ. ಗಣಿಗಳಲ್ಲಿಯ ವಾಯುಮಾರ್ಗ. **Aírworthy** ವಾಯುಗಮನ ಯೋಗ್ಯ. **Aírworthiness** (ನಾ.)

Air (ಕ್ರಿ. ಸಕ.) ಗಾಳಿಗೊಡ್ಡು ; ಗಾಳಿಯಾಡುವಂತೆ ಮಾಡು ; ಒಣಗಿಸು. ನಿರ್ಮಲ ವಾಯು ಸೇವನೆಗಾಗಿ (ಗಾಳಿ ತೆಗೆದುಕೊಳ್ಳಲು) ಬಯಲಿಗೆ ಹೋಗು. ಹೇಳಿಕೊ ; ಕೊಚ್ಚಿಕೊ ; ತೋರಿಸಿಕೊ ; ಮೆರಸು (To air one's views ತನ್ನ ಅಭಿಪ್ರಾಯಗಳನ್ನು ಮೆರಸುವುದು). **Aíring** (ನಾ.) ಗಾಳಿಗೊಡ್ಡುವುದು ; ಒಣಗಿಸುವುದು. ವಾಯುಸೇವನೆಗಾಗಿ (ನಡೆದುಕೊಂಡೊ ವಾಹನದಮೇಲೆಯೊ) ಹೋಗುವುದು. ಕುದುರೆಗಳನ್ನು ಬಯಲಿನಲ್ಲಿ ವ್ಯಾಯಾಮಕ್ಕಾಗಿ ಓಡಾಡಿಸುವುದು. **Aírless** (ಗು.) ಗಾಳಿ ಬೀಸದ ; ಗಾಳಿಯಿಲ್ಲದೆ ಉಬ್ಬಸವಾಗುವ ; ನಿರ್ವಾಯು. **Aíry** (ಗು.) ಗಾಳಿಯ ; ಗಾಳಿ ಬೀಸುವ ; ಗಾಳಿಯಾಡುವ. ಎತ್ತರವಾದ ; ಮುಗಿಲು ಮುಟ್ಟುವ. ತಿರುಳಿಲ್ಲದ ; ಹುರುಳಿಲ್ಲದ ; ಪೊಳ್ಳು ; ಜಳ್ಳು ; ಆಳವಿಲ್ಲದ ; ಅಸಾರ. ಸೂಕ್ಷ್ಮತಂತು ರಚಿತ ; ತೆಳುವಾದ ; ನಾಜೂಕಾದ. ಸೂಕ್ಷ್ಮಗಮನದ. ಉಲ್ಲಾಸ ಶೀಲ. ಸೂಕ್ಷ್ಮ ; ಮೃದು. **Aírily** (ಕ್ರಿ. ವಿ.) ; **Aíriness** (ನಾ.)

Aíredale ಏರ್‌ಡೇಲ್ (ನಾ.) ಇಂಗ್ಲೆಂಡ್ ದೇಶದ ಯಾರ್ಕ್‌ಷಯರ್ ಜಿಲ್ಲೆಯಲ್ಲಿರುವ ಒಂದು ಪ್ರಾಂತ. (ಆ ಪ್ರಾಂತದಿಂದ ಬಂದದ್ದಾಗಿ) ಒರಟು ಕೂದಲುಳ್ಳ ಒಂದು ಜಾತಿಯ ದೊಡ್ಡ ನಾಯಿ.

Aisle ಐಯ್‌ಲ್ (ನಾ.) ಕ್ರೈಸ್ತ ದೇವಾಲಯದ ಇಕ್ಕೆಲದ ಹಜಾರಗಳು. ಕ್ರೈಸ್ತ ದೇವಾಲಯದಲ್ಲಿ ಹಾಕಿರುವ ಆಸನಗಳ ಸಾಲುಗಳ ನಡುವೆ ಬಾಗಿಲುಕಡೆಯಿಂದ ಹೋಗುವ ದಾರಿ.

Ait ಏಯ್ಟ್ (ನಾ.) ನದಿಯಲ್ಲಿಯ ಒಂದು ಸಣ್ಣ ದ್ವೀಪ.

Ajár[1] ಅಜಾರ್ (ಕ್ರಿ. ವಿ.) (ಬಾಗಿಲು) ಸ್ವಲ್ಪ ತೆರೆದು.

Ajár[2] ಅಜಾರ್ (ಕ್ರಿ. ವಿ.) ಕಿರುಗುಟ್ಟುತ್ತ ; ಕರ್ಕಶ ಧ್ವನಿ ಮಾಡುತ್ತ. ಹೊಂದಿಕೆಯಿಲ್ಲದೆ.

Akímbo ಅಕಿಂಬೋ (ಕ್ರಿ. ವಿ.) ಮೊಣಕೈ ಹೊರಕ್ಕೆ ಚಾಚಿ ಸೊಂಟದ ಮೇಲೆ ಕೈಯಿಟ್ಟುಕೊಂಡು.

Akín ಅಕಿನ್ (ಗು.) ರಕ್ತಸಂಬಂಧವುಳ್ಳ. ಸಮಾನ ಧರ್ಮ ಅಥವಾ ಲಕ್ಷಣ ಉಳ್ಳ.

A' la (F) ಆ ಲಾ (ಉಪ.) ಆ ರೀತಿಯಾಗಿ ; ಆ ನಮೂನೆಯಾಗಿ.

Alabáster, A'labaster ಆ್ಯಲಬಾಸ್ಟರ್ (ನಾ.) ಹಾಲುಗಲ್ಲು ; 'ಕ್ಯಾಲ್ಸಿಯಂ ಸಲ್ಫೇಟ್' ಅಥವಾ 'ಕ್ಯಾಲ್ಸಿಯಂ ಕಾರ್ಬೋನೇಟ್'ನ ರಚನೆಯುಳ್ಳ ಅನೇಕ ವರ್ಗದ ಕಲ್ಲು. (ಖನಿಜ) ಸೂಕ್ಷ್ಮ ಕಣ ರಚನೆಯ 'ಕ್ಯಾಲ್ಸಿಯಂ ಸಲ್ಫೇಟ'ನ ಭಾರವಾದ ಖನಿಜ. ಈ ಶಿಲೆಯಿಂದ ಮಾಡಿದ ಪೆಟ್ಟಿಗೆ. (ಗು.) ಹಾಲುಗಲ್ಲಿನಂಥ ಬಿಳಿಯ ಬಣ್ಣವೂ ನುಣುಪೂ ಉಳ್ಳ. **Alabástrine** — ಸ್ಟ್ರಿನ್ (ಗು.)

Alabástrum ಆ್ಯಲಬಾಸ್ಟ್ರಂ (ನಾ.) (ಸ. ವಿ.) ಹೂವುಮೊಗ್ಗು.

A la cárte (F) ಆ ಲಾ ಕಾರ್ಟ್ (ಕ್ರಿ. ವಿ.) (ಹೇಳಿ ಮಾಡಿಸಿದ ಅಡಿಗೆಯ ಪರುಠವಣೆಯ) ಪಟ್ಟಿಯ ಮೇರೆಗೆ.

Aláck ಅಲ್ಯಾಕ್ (ಭಾವ. ಅವ್ಯ.) (ಪ್ರಾಚೀ. ಪ್ರ.) ಅಯ್ಯೋ ! ಅಯ್ಯೊ ! (ಪಶ್ಚಾತ್ತಾಪ ಅಥವಾ ಆಶ್ಚರ್ಯ ಸೂಚಕ ಪದ)

Alácrity ಅಲ್ಯಾಕ್ರಿಟಿ (ನಾ.) ಉತ್ಸಾಹದಿಂದ ಕೂಡಿದ ಸಿದ್ಧತೆ ; ತ್ವರಿತತೆ ; ಚುರುಕು.

Aláddin's lamp ಅಲ್ಯಾಡಿನ್ಸ್ ಲ್ಯಾಂಪ್ (ನಾ.) ಅಲ್ಲಾವುದ್ದೀನನ ಅದ್ಭುತ ದೀಪ ; ಕೋರಿದ್ದನ್ನು ಕೊಡುವ ವಸ್ತು ; ಕಾಮಿತಾರ್ಥ ಪ್ರದಾಯಿನಿ.

A'lamode, A la móde (F) ಆ್ಯಲಮೋಡ್, ಆ ಲಾ ಮೊಡ್ (ಕ್ರಿ. ವಿ.) ಪ್ರಕೃತ ಕಾಲದ ನಾಜೂಕಿನ ರೀತಿಯನ್ನನುಸರಿಸಿ. (ಗು.) ತತ್ಕಾಲದ (ಅಂದಿನ) ನಾಗರಿಕ ರೀತಿಯನ್ನನುಸರಿಸಿದ.

Alamórt, A la mórt (F) ಆ್ಯಲಮಾರ್ಟ್, ಆ ಲಾ ಮೋರ್ (ಕ್ರಿ. ವಿ.) ಸತ್ತರೂ ಸರಿಯೆ ; ಸತ್ತುಹೋಗುವ ವರೆಗೂ. (ಗು.) ಸಾಯುವಷ್ಟು ಅಸ್ವಸ್ಥತೆ ಅಥವಾ ಬೇಸರವುಳ್ಳ ; ಧೈರ್ಯಗುಂದಿದ.

A'lar ಎಯ್ಲಾರ್ (ಗು.) ರೆಕ್ಕೆಗಳಿಗೆ ಸಂಬಂಧಪಟ್ಟ ; ರೆಕ್ಕೆಯಂತಿರುವ ; ರೆಕ್ಕೆಯ ಆಕಾರದ. (ಶ. ವಿ.) ಕಂಕುಳಿಗೆ ಸಂಬಂಧಪಟ್ಟ ; ಕಕ್ಷ ಸಂಬಂಧಿ. (ಸ. ವಿ.) ಪತ್ರಕ್ಕೂ ಕಾಂಡಕ್ಕೂ, ಶಾಖೆಗೂ ಸ್ಕಂಧಕ್ಕೂ, ಮಧ್ಯೆ ಇರುವ ಸಂಧಿಯ ; ಕಕ್ಷೀಯ ; ಕಕ್ಷ ಸಂಬಂಧಿ. **A'lary** ಎಯ್ಲರಿ (ಗು.) ; **A'late** ಎಯ್ಲೇಟ್, **A'lated** (ಗು.) ರೆಕ್ಕೆಯುಳ್ಳ ಅಥವಾ ರೆಕ್ಕೆಯಂಥ ಅಂಗವುಳ್ಳ. **Alátion** (ನಾ.) ರೆಕ್ಕೆಯುಳ್ಳ ಸ್ಥಿತಿ. ಕೀಟಗಳ ರೆಕ್ಕೆಗಳು ಅಳವಟ್ಟಿರುವ ರೀತಿ : ಪಕ್ಷ ವಿನ್ಯಾಸ.

Alárm ಅಲಾರ್‌ಮ್ (ನಾ.) ಭಯದ ಕೂಗು ; ಕಾಳಗದ ಕರೆ ; ಸನ್ನಾಹ ಭೇರಿ ; ಅಪಹಾರ ತೂರ್ಯ (ಗ್ರಾಂ.) ; ಶತ್ರು ಸಾಮೀಪ್ಯ ಸೂಚಕ ವಾರ್ತೆ ; ಅಪಾಯ ಸೂಚಕ ಧ್ವನಿ ; ಎಚ್ಚರಿಕೆ ; ಅಪಾಯದ ಭೀತಿ. (ಕ್ರಿ. ಸಕ.) ಅಪಾಯ ಸೂಚನೆ ಕೊಡು ; ಎಚ್ಚರಿಸು ; ಗಾಬರಿಪಡಿಸು ; ಭಯಗೊಳಿಸು ; ಭೀತಿಯನ್ನುಂಟುಮಾಡು. **Alármingly** (ಕ್ರಿ. ವಿ.) ; **Alármist** (ನಾ.) ತಕ್ಕಷ್ಟು ಕಾರಣವಿಲ್ಲದೆ ಭಯ ಹುಟ್ಟಿಸುವವನು ; ಭೀತಿಕಾರಕ.

Alárum ಅಲೇರಂ, ಅಲ್ಯಾರಂ (ನಾ.) (Alarm ಪದದ ಮತ್ತೊಂದು ರೂಪ. ಈಗ ಕಾವ್ಯದಲ್ಲಿ ಮತ್ತು ಮುಂದೆ ಕೊಡುವ ಅರ್ಥದಲ್ಲಿ ಮಾತ್ರ). ಅಪಾಯ ಸೂಚಕ ಧ್ವನಿ ; ಎಚ್ಚರಿಕೆ ಕೊಡುವುದಕ್ಕಾಗಿ ಉಪಯೋಗಿಸುವ ಯಂತ್ರಸಲಕರಣೆ. (Alarum clock ಗೊತ್ತಾದ ಕಾಲಕ್ಕೆ ಬಾರಿಸಿ ಎಚ್ಚರಿಸುವ ಗಡಿಯಾರ)

Alás ಅಲಾಸ್ (ಭಾವ. ಅವ್ಯ.) ಅಯ್ಯೋ ! ಹಾ ! ಅಕ್ಕಟಾ ! (ವ್ಯಸನ, ಕನಿಕರ, ಚಿಂತೆ—ಈ ಭಾವಗಳನ್ನು ಸೂಚಿಸುವ ಪದ)

Alástor ಅಲಾಸ್ಟರ್ (ನಾ.) (ಗ್ರೀಕರಲ್ಲಿ) ಮತ್ಸರ ತೀರಿಸುವ ದೇವತೆ ; ನಿಷ್ಕರುಣ ದೈವ.

A'late, A'lated; Alátion. Alar ನೋಡಿ.

A'lay. Ally[2] ನೋಡಿ.

Alb ಆ್ಯಲ್ಬ್ (ನಾ.) (ಕ್ರೈಸ್ತ ಪಾದ್ರಿಗಳೂ, ಸಂಸ್ಕಾರಪಡೆದ ಅಥವಾ ಅಭಿಷಿಕ್ತರಾದ ಕೆಲವರು ದೊರೆಗಳೂ, ತೊಡುವ) ಬಿಳಿಯ ನಿಲುವಂಗಿ.

Albánian ಆ್ಯಲ್ಬೇನಿಯನ್ (ಗು., ನಾ.) (ಚರಿತ್ರೆ) ಸ್ಕಾಟ್ಲೆಂಡಿನ (ಅಲ್ಬೇನಿಯದ) ವನು.

Albáta ಆ್ಯಲ್ಬೇಟ (ನಾ.) ಬೆಳ್ಳಿಗಿರುವ ಒಂದು ಮಿಶ್ರಲೋಹ : 'ಜರ್ಮನ್ ಸಿಲ್ವರ್'.

A'lbatross ಆ್ಯಲ್ಬಟ್ರಾಸ್ (ನಾ.) ಪೆಸಿಫಿಕ್ ಮತ್ತು ದಕ್ಷಿಣ ಸಾಗರಗಳ ನಿವಾಸಿಯಾದ ಒಂದು ಜಾತಿಯ ಕಡಲುಕೋಳಿ. ಆಸ್ಟ್ರಿಯಾ ದೇಶದ ಒಂದು ತೆರದ ಫಲಕ ವ್ಯೋಮಯಾನ.

Albédo ಆ್ಯಲ್ಬೀಡೊ (ನಾ.) ಬಿಳುಪು. (ಖ. ವಿ.) ಒಂದು ಗ್ರಹದ (ನಿರ್ದಿಷ್ಟ ಭಾಗದ)ಮೇಲೆ ಬಿದ್ದ ಸೂರ್ಯಕಾಂತಿಯ ಮೊತ್ತಕ್ಕೂ ಆ ಭಾಗದಿಂದ ಮರಳಿ ಹಿಂದಕ್ಕೆ ಬಂದ (ಪ್ರತಿಫಲಿಸಿದ) ಕಾಂತಿಯ ಮೊತ್ತಕ್ಕೂ ಇರುವ ಪ್ರಮಾಣ : ಪ್ರತಿಫಲಿತ ಕಾಂತಿಪ್ರಮಾಣ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Albéit ಅಲ್ಬೀಯಿಟ್ (ಸಂ. ಅವ್ಯ.) ಆದರೂ ; ಆದಾಗ್ಯೂ ; ಹಾಗಿದ್ದರೂ ಕೂಡ.

A'lbert ಅ್ಯಲ್ಬರ್ಟ್ (ನಾ.) ಒಂದು ಬಗೆಯ ಗಡಿಯಾರದ ಸರಪಣಿ. (ವಿಕ್ಟೋರಿಯಾ ಮಹಾರಾಣಿಯ ಪತಿಯಾದ 'ಪ್ರಿನ್ಸ್ ಆಲ್ಬರ್ಟ್' ಅವರ ಹೆಸರಿನಿಂದ)

Albéscent ಅ್ಯಲ್ಬೆಸೆಂಟ್ (ಗು.) ಬಿಳುಪೇರುವ ಅಥವಾ ಬಿಳುಪು ಛಾಯೆಗೆ ತಿರುಗುತ್ತಿರುವ.

Albiflórous ಅ್ಯಲ್ಬಿಫ್ಲೋರಸ್ (ಗು.) (ಸ. ವಿ.) ಬಿಳಿಯ ಹೂವಿನ.

Albíno ಅ್ಯಲ್ಬೀನೊ, ಅ್ಯಲ್‌ಬೈನೋ (ನಾ.) ದೇಹಕ್ಕೆ ಸಹಜ ವರ್ಣವನ್ನು ಕೊಡುವ ಪದಾರ್ಥವು ಗರ್ಭತಃ ಚರ್ಮದಲ್ಲಿಯೂ ಕೂದಲಲ್ಲಿಯೂ ಕಣ್ಣಲ್ಲಿಯೂ ಇಲ್ಲದೆ, ದೇಹವೂ ಕೂದಲೂ ಬೆಳ್ಳಗೂ, ಕಣ್ಣು ಕೆಂಚಗೂ ಬೆಳಕನ್ನು ಸಹಿಸಲಾರದುದಾಗಿಯೂ ಹುಟ್ಟಿದ ಮನುಷ್ಯ : ಬಿಳಿಚ; ಶ್ವೇತವರ್ಣಿ. ಈ ರೀತಿಯಾಗಿರುವ ಇತರ ಪ್ರಾಣಿ ; ಶ್ವೇತವರ್ಣಿ. ಸಹಜ ವರ್ಣವು (ಪತ್ರಹರಿತ್ತು) ಇಲ್ಲದೆ ಬಿಳಿಚಿಕೊಂಡು ಬೆಳೆದ ಸಸ್ಯ. **Albíness** (ನಾ.) (ಸಹಜ ವರ್ಣವಿಲ್ಲದ) ಶ್ವೇತ ವರ್ಣಸ್ತ್ರೀ : ಬಿಳಿಚಿ. **A'lbinism** — ನಿಸ್‌ಮ್ (ನಾ.)

A'lbion ಅ್ಯಲ್ಬಿಯನ್ (ನಾ.) (ಕಾವ್ಯ) ಗ್ರೀಕರೂ ರೋಮನರೂ ಬ್ರಿಟನ್ ದೇಶಕ್ಕೆ ಇಟ್ಟ ಹೆಸರು. ('ಶ್ವೇತ ದ್ವೀಪ')

A'lbum ಅ್ಯಲ್ಬಂ (ನಾ.) ಕೈಬರಹಗಳು, ತಸ್ವೀರುಗಳು, ಚಿತ್ರಗಳು, ಮೊ. ನ್ನು ಸೇರಿಸಿ ಇಟ್ಟುಕೊಳ್ಳುವುದಕ್ಕೆ ತಕ್ಕಂತೆ ಮಾಡಿದ ರಟ್ಟಿನ ಪುಸ್ತಕ : ಇಡುವಹಿ ; ಚಿತ್ರ ಸಂಪುಟ ; 'ಅ್ಯಲ್ಬಂ'.

Albúmen ಅ್ಯಲ್‌ಬ್ಯೂಮೆನ್ (ನಾ.) ಮೊಟ್ಟೆಯೊಳಗಿನ ಬಿಳಿಯ ಹೊರ ಲೋಳೆ. ಪ್ರಾಣಿಗಳ ದೇಹದಲ್ಲಿಯ ಘನ ದ್ರವ ವಸ್ತುಗಳಲ್ಲಿಯೂ, ಬೀಜ ಗಡ್ಡೆ ಗೆಣಸುಗಳಲ್ಲಿಯೂ ದೊರೆಯುವ ಸಸಾರಜನಕ ಪದಾರ್ಥ : 'ಅ್ಯಲ್‌ಬ್ಯೂಮೆನ್'. (ಸ. ವಿ.) ಅನೇಕ ಬೀಜಗಳ ಹೊಟ್ಟೆಗೂ ಭ್ರೂಣಕ್ಕೂ ಮಧ್ಯೇ ಇರುವ (ಸಾ. ಆಹಾರೋಪಯೋಗವಾದ) ಪದಾರ್ಥ. **Albúmenize** (ಕ್ರಿ. ಸಕ.) (ಛಾಯಾ ಚಿತ್ರದಲ್ಲಿ) ಸಸಾರಜನಕದ ಲೋಳೆಯ ದ್ರವವನ್ನು (ಕಾಗದದಮೇಲೆ) ಬಳಿ. **Albúminoid** (ಗು.) ಅ್ಯಲ್‌ಬ್ಯೂಮೆನಿನಂಥ. **Albúminoids** (ನಾ.) ಜೀವಿಗಳ ಅಂಗಗಳಲ್ಲಿಯೂ ಅಂಗರಚನಾ ಸಾಮಗ್ರಿಯಲ್ಲಿಯೂ ಹೆಚ್ಚು ಭಾಗವಾಗಿರುವ ಜೈವಿಕ ಸಂಯುಕ್ತ ಪದಾರ್ಥಗಳು ; ಸಸಾರಜನಕಗಳು. **Albuminoídal** (ಗು.) ; **Albúminose** (ಗು.) = **Albúminous** (ಗು.)

Albuminúria ಅ್ಯಲ್‌ಬ್ಯೂಮಿನ್ಯೂರಿಯ (ನಾ.) (ವೈ. ಶಾ.) ಮೂತ್ರದಲ್ಲಿ ಅ್ಯಲ್‌ಬ್ಯೂಮೆನ್ ಪದಾರ್ಥವು ಹೋಗುವ ವ್ಯಾಧಿ.

Albúrnum ಅ್ಯಲ್ಬರ್ನಂ, **A'lburn** ಅ್ಯಲ್ಬರ್ನ್ (ನಾ.) ಹೊರಗೆ ಪದರದ ಮೇಲೆ ಪದರ ಬೆಳೆದುಕೊಂಡುಬರುವ ಜಾತಿಯ ಮರಗಳಲ್ಲಿ ಹೊಸದಾಗಿ ಬೆಳೆದ ದಾರುಪದಾರ್ಥ : ಬಿಳಿಮರ.

A'lcahest. **Alkahest** ನೋಡಿ.

Alcáic ಅ್ಯಲ್ಕೇಯಿಕ್ (ಗು.) (ಗ್ರೀಕ್ ಛಂ.) ಆಲ್ಕೇಯಸ್ ಕವಿಗೆ, ಅಥವಾ ಆತನು ನಿರ್ಮಿಸಿದ ವೃತ್ತಕ್ಕೆ, ಸಂಬಂಧಪಟ್ಟ. **Alcáics** (ನಾ.) ಅಲ್ಕೇಯಿಕ್ ವೃತ್ತಗಳು.

Alcarráza ಅ್ಯಲ್ಕರಾಸ (ನಾ.) ಹೊರ ಮೈಯ್ಯ ನೀರು ಬೇಗಬೇಗನೆ ಆವಿಯಾಗಿ ಹೋಗಿ ಒಳಗಿನ ನೀರು ತಣ್ಣಗಾಗುವಂತೆ ಮಾಡಲು ಉಪಯೋಗಿಸುವ ಮಡಕೆ : ತಂಪಿನ ನೀರುಮಡಕೆ.

A'lchemy ಅ್ಯಲ್ಕಿಮಿ (ನಾ.) ರಸ ವಾದ ; ರಸ ತಂತ್ರ : ಮು., ಕ್ಷುದ್ರ ಲೋಹಗಳನ್ನು ಚಿನ್ನವಾಗಿ ಮಾರ್ಪಡಿಸುವ ಉದ್ದೇಶವುಳ್ಳ ವಿದ್ಯೆ ; ಸ್ಪರ್ಶವೇದಿಯನ್ನು ಕಂಡುಹಿಡಿಯಲು ಯತ್ನಿಸುವ ವಿದ್ಯೆ. **Alchémic(al)** ಅ್ಯಲ್ಕೆಮಿಕ್, — ಕಲ್ (ಗು.) ರಸತಂತ್ರ ಸಂಬಂಧವಾದ. **Alchémically** (ಕ್ರಿ. ವಿ.) ; **A'lchemist** ಅ್ಯಲ್ಕಿಮಿಸ್ಟ್ (ನಾ.) ರಸವಾದಿ. **A'lchemize** (ಕ್ರಿ. ಸಕ.) ರಸತಂತ್ರದ ರೀತಿಯಲ್ಲಿ ಪರಿವರ್ತಿಸು ; ರೂಪಾಂತರಗೊಳಿಸು.

A'lcohol ಅ್ಯಲ್ಕೊಹಾಲ್ (ನಾ.) (ದ್ರಾಕ್ಷಾಮದ್ಯದಿಂದ ಬಟ್ಟಿಯಿಳಿಸಿ ತೆಗೆದ) ಮದ್ಯಸಾರ ; 'ಅ್ಯಲ್ಕೊಹಾಲ್'. ಈ ಪದಾರ್ಥವಿರುವ ಪಾನೀಯ. (ರ. ವಿ.) ಮದ್ಯಸಾರದ ರಚನೆಯಿರುವ ಅನೇಕ ಸಂಯುಕ್ತ ಪದಾರ್ಥಗಳ ವರ್ಗ. **Alcohólic** (ಗು.) ಮದ್ಯಸಾರದ ಅಥವಾ ಅದರ ಸಂಬಂಧವಾದ ಅಥವಾ ಅದರ ಗುಣವುಳ್ಳ ; ಮದ್ಯಸಾರದಿಂದುಂಟಾದ ; ಮದ್ಯಸಾರವನ್ನುಳ್ಳ ; ಮದ್ಯಸಾರವನ್ನುಪಯೋಗಿಸುವ. **A'lcoholism** — ಲಿಸ್‌ಮ್ (ನಾ.) ಮನುಷ್ಯನ ದೇಹದಲ್ಲಿ ಮದ್ಯಸಾರದಿಂದ ಆಗುವ ಪರಿಣಾಮ. ಮಿತಿ ಮೀರಿ ಮದ್ಯಪಾನ ಮಾಡುವುದರಿಂದುಂಟಾಗುವ ರೋಗಾವಸ್ಥೆ. **A'lcoholize** (ಕ್ರಿ. ಸಕ.) ಮದ್ಯಸಾರದಿಂದ ಪರಿಪೂರಿತ ಮಾಡು ; ಮದ್ಯಸಾರ ಪ್ರಭಾವಕ್ಕೆ ಈಡು ಮಾಡು. **Alcoholizátion** (ನಾ.) ; **Alcoholómeter** — ಹಾಲಾಮಿಟರ್ (ನಾ.) ಯಾವುದಾದರೂ ಮದ್ಯದಲ್ಲಿರುವ ಮದ್ಯಸಾರದ ಪ್ರಮಾಣವನ್ನು ಅಳೆಯುವ ಸಾಧನ : ಮದ್ಯಸಾರ ಮಾಪಕ. **Alcoholómetry** (ನಾ.) ಮದ್ಯಸಾರ ಮಾಪನ.

A'lcoran, Alcorán ಅ್ಯಲ್ಕೊರಾನ್, — ರ್ಯಾನ್ (ನಾ.) ಕುರಾನ್ ಎಂಬ ಮಹಮ್ಮದೀಯರ ವೇದಪುಸ್ತಕ. **Alcoránic** (ಗು.)

A'lcove, Alcóve ಅ್ಯ(ಅ್ಯ)ಲ್‌ಕೋವ್ (ನಾ.) ಕೋಣೆಯ ಗೋಡೆಯಲ್ಲಿ (ಮು., ಹಾಸಿಗೆಗಾಗಿ) ಮಾಡಿರುವ ಕಮಾನುಗೂಡು. ವಸಂತ ಮಂದಿರ ; ಉದ್ಯಾನ ಕುಂಜ.

A'ldéhyde ಅ್ಯಲ್ಡಿಹೈಡ್ (ನಾ.) ಮದ್ಯಸಾರವನ್ನು ಆಮ್ಲ ಜನಕದೊಡನೆ ಸಂಯೋಗ ಮಾಡುವುದರಿಂದ ನಿರ್ವರ್ಣವೂ, ಉಸಿರು ಕಟ್ಟಿಸುವ ವಾಸನೆಯುಳ್ಳದ್ದೂ, ಆವಿಯಾಗಿ ಹಾರಿಹೋಗುವ ಸ್ವಭಾವವುಳ್ಳದ್ದೂ ಆಗಿ ಹುಟ್ಟುವ ದ್ರವವಸ್ತು : 'ಅ್ಯಲ್ಡಿಹೈಡ್'. ಈ ಮಾದರಿಯ ಸಂಯುಕ್ತ ಪದಾರ್ಥ ವರ್ಗ. **Aldehýdic** (ಗು.)

A'lder ಆಲ್ಡರ್ (ನಾ.) ಒಂದು ಜಾತಿಯ ಮರ.

A'lderman ಆಲ್ಡರ್‌ಮ್ಯನ್ (ನಾ.) ಇಂಗ್ಲಿಷ್ ಮತ್ತು ಐರಿಷ್ ಪಟ್ಟಣಗಳಲ್ಲಿ 'ಮೇಯರ್' ಎಂಬ ಪೌರಸಭಾಧ್ಯಕ್ಷನಿಗಿಂತ ಕೆಳಗಿನ ದರ್ಜೆಯ ನ್ಯಾಯಾಧಿಕಾರಿ : 'ಆಲ್ಡರ್‌ಮನ್' ; ಶ್ರೇಷ್ಠಿ ; ಸೆಟ್ಟಿ ; ಪುರಪ್ರಮುಖ ; ಊರಿನ ಹಿರಿಯ. **A'ldermanry** (ನಾ.) ಆಲ್ಡರ್‌ಮನ್ನಿನ ಪದವಿ, ಅಧಿಕಾರಕ್ಕೊಳಪಟ್ಟ ಪ್ರಾಂತ. **A'ldermanship** (ನಾ.) ಆಲ್ಡರ್‌ಮನ್ನಿನ ಅಧಿಕಾರ, ಪದವಿ. **Aldermánic** — ಮ್ಯಾನಿಕ್ (ಗು.)

A'ldine ಆಲ್‌ಡೈನ್ (ಗು.) ಒಂದು ಮಾದರಿಯ ಅಲಂಕಾರದ ಅಚ್ಚಕ್ಷರ (ಒಬ್ಬ ಮುದ್ರಣಕಾರನ ಹೆಸರಿನಿಂದ). (ನಾ.) ಆಲ್‌ಡೈನ್ ಅಕ್ಷರದಲ್ಲಿ ಮುದ್ರಿತವಾದ ಪುಸ್ತಕ.

Ale ಏಯ್‌ಲ್ (ನಾ.) ಮೊಳೆತ ಜವೆಗೋಧಿಯನ್ನು ನೀರಿನಲ್ಲಿ ಕೊಳೆಯ ಹಾಕಿ, ಹುಳಿಯಾದ ಮೇಲೆ ಆ ದ್ರವಕ್ಕೆ 'ಹಾಪ್ಸ್' ಎಂಬ ಕಹಿಯಾದ ಸಸ್ಯಪದಾರ್ಥವನ್ನು ರುಚಿಗಾಗಿ ಬೆರಸಿ ಮಾಡಿದ ಮದ್ಯ : 'ಏಲ್' ಮದ್ಯ. ಮದ್ಯ ಕುಡಿದು ಮೆರೆಯುವ ಸಂತೋಷ ಕೂಟ. **A'leconner** — ಕಾನರ್ (ನಾ.) ಮದ್ಯ ಮತ್ತು ಅದರ ಅಳತೆಯ ಪಾತ್ರೆಗಳ ಪರೀಕ್ಷಕ : (ಈಗ, ಗೌರವಾರ್ಥಕ ಮಾತ್ರ). Ale-house ಮದ್ಯದಂಗಡಿ. Ale-wife ಮದ್ಯದಂಗಡಿ ಇಟ್ಟಿರುವವಳು. ಅಮೆರಿಕದ ಒಂದು ಜಾತಿಯ ಮೀನು.

A'leatory ಏಯ್ಲಿಅಟರಿ (ಗು.) ನೆತ್ತದ ಗರವನ್ನವಲಂಬಿಸಿದ ; ಅದೃಷ್ಟವಶವಾದ.

Alémbic ಅಲೆಂಬಿಕ್ (ನಾ.) ಹಿಂದಿನ ಕಾಲದಲ್ಲಿ ಬಟ್ಟಿಯಿಳಿಸುವುದಕ್ಕೆ ಉಪಯೋಗಿಸುತ್ತಿದ್ದ ಸಲಕರಣೆ ; ಬಕಯಂತ್ರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Alért ಅಲರ್ಟ್ (ಗು., ನಾ.) ಎಚ್ಚರಿಕೆಯುಳ್ಳ; ಜಾಗರೂಕ; ಚಟುವಟಿಕೆಯುಳ್ಳ; ಚುರುಕಾದ. (ನಾ.) ಅಪಾಯ ಸೂಚನೆ. On the alert ಜಾಗರೂಕನಾಗಿ; ಎಚ್ಚರಿಕೆಯಿಂದ. **Alértly** (ಕ್ರಿ. ವಿ.); **Alértness** (ನಾ.)

Aleúron, Aleúrone ಅಲಿಯೂರನ್, — ರೋನ್ (ನಾ.) ಸಸ್ಯಗಳ ಬೀಜ ಮೊ. ಗಳಲ್ಲಿ ದೊರೆಯುವ ಸಸಾರಜನಕ ಪದಾರ್ಥ. **Aleurómeter** ಆ್ಯಲ್ಯುರಾಮಿಟರ್ (ನಾ.) ಗೋಧಿ ಮೊ. ಧಾನ್ಯಗಳ ಹಿಟ್ಟಿನಲ್ಲಿರುವ 'ಗ್ಲೂಟನ್' ಎಂಬ ಸಸಾರಜನಕ ವಸ್ತುವಿನ ಪ್ರಮಾಣವನ್ನು ಕಂಡುಹಿಡಿಯುವ ಸಲಕರಣೆ : ಪಿಷ್ಟಸಸಾರಜನಕಾಂಶ ಮಾಪಕ.

Alexándrine ಆ್ಯಲೆಗ್‌ಸಾಂಡ್ರಿನ್ (ಗು., ನಾ.) ಇಂಗ್ಲಿಷ್ ಮತ್ತು ಫ್ರೆಂಚ್ ಛಂದಸ್ಸಿನಲ್ಲಿ (ಎರಡೆರಡು ಅಕ್ಷರದ) ಆರು ಗಣಗಳುಳ್ಳ (ಪಾದ)

Aléxin ಅಲೆಕ್ಸಿನ್ (ನಾ.) ರಕ್ತದ್ರವದಲ್ಲಿಯ ರೋಗಬೀಜಗಳನ್ನು ನಾಶಗೊಳಿಸಬಲ್ಲ ಒಂದು ಸಸಾರಜನಕ ಪದಾರ್ಥ.

Alexiphármic ಅಲೆಕ್ಸಿಫಾರ್ಮಿಕ್ (ಗು., ನಾ.) ವಿಷ ಪ್ರತಿಕ್ರಿಯೆಯುಳ್ಳ; ವಿಷಹರ; ಪ್ರತಿವಿಷ.

Alexipyrétic ಅಲೆಕ್ಸಿಪೈರೆಟಿಕ್ (ಗು., ನಾ.) ಜ್ವರಹರ.

Alexitéric ಅಲೆಕ್ಸಿಟೆರಿಕ್ (ಗು., ನಾ.) ವಿಷಾಪಹಾರಕ; ಅಂಟುರೋಗಗಳನ್ನು ತಡೆಯುವ.

Alfálfa ಆ್ಯಲ್‌ಫ್ಯಾಲ್ಫ (ನಾ.) ಒಂದು ಜಾತಿಯ ಕುದುರೆಮಸಾಲೆಯ ಸೊಪ್ಪು.

Alfrésco ಆ್ಯಲ್‌ಫ್ರೆಸ್ಕೊ (ಕ್ರಿ. ವಿ.) ಬಯಲಿನಲ್ಲಿ. (ಗು.) ಬಯಲಿನ.

A'lga ಆ್ಯಲ್ಗ (ನಾ.; ಬ. ವ. Algae ಆ್ಯಲ್ಜೀ) ಸಮುದ್ರದ ಪಾಚಿ; ಸಮುದ್ರದ ಕಳೆ; ಶೈವಲ. (ಸ. ವಿ.) (ಸಮುದ್ರದ ಕಳೆಯನ್ನೂ ಇದೇ ಜಾತಿಗೆ ಸೇರಿದ ಸಿಹಿನೀರಿನ ಸಸ್ಯಗಳನ್ನೂ ಗಾಳಿಯಲ್ಲಿ ಬೆಳೆಯುವ ಕೆಲವು ಜಾತಿಯ ಸಸ್ಯಗಳನ್ನೂ ಒಳಕೊಂಡ) 'ಗುಹ್ಯಪುಷ್ಪೀಯ' ಕುಟುಂಬಕ್ಕೆ ಸೇರಿದ ಒಂದು ಸಸ್ಯಜಾತಿ. **A'lgal** (ಗು.); **A'lgoid** (ಗು.) ಪಾಚಿಯಂಥ; ಶೈವಲ ಸದೃಶ. **A'lgous** ಆ್ಯಲ್ಗಸ್ (ಗು.) ಶೈವಲ ಸಂಬಂಧವಾದ; ಶೈವಲಪೂರ್ಣ. **Algólogy** ಆ್ಯಲ್ಗಾಲೊಜಿ (ನಾ.) ಸಸ್ಯವಿಜ್ಞಾನದಲ್ಲಿ ಶೈವಲ ವಿಷಯದ ಶಾಖೆ. **Algológical** ಆ್ಯಲ್ಗೊಲಾಜಿಕಲ್ (ಗು.); **Algólogist** (ನಾ.), **A'lgist** ಆ್ಯಲ್‌ಜಿಸ್ಟ್ (ನಾ.) ಶೈವಲ ಶಾಸ್ತ್ರಜ್ಞ.

A'lgebra ಆ್ಯಲ್ಜಿಬ್ರ (ನಾ.) ಸಂಖ್ಯಾವಿಚಾರವನ್ನು ಅಕ್ಷರ ಸಂಜ್ಞೆಯ ಮೂಲಕ ಪ್ರತಿಪಾದಿಸುವ ಶಾಸ್ತ್ರ : ಬೀಜ ಗಣಿತ. **Algebráic(al)** — ಬ್ರೇಯಿಕ್, — ಕಲ್ (ಗು.); **Algebráically** (ಕ್ರಿ. ವಿ.); **A'lgebraist, — brist** (ನಾ.)

Algedónic ಆ್ಯಲ್ಜಿಡಾನಿಕ್ (ಗು.) ಸುಖ ದುಃಖ ವಿಚಾರವಾದ.

Algefácient ಆ್ಯಲ್ಜಿಫೇಷನ್ಟ್ (ಗು.) (ವೈ. ಶಾ.) ತಂಪು ಮಾಡುವ.

Algétic ಆ್ಯಲ್ಜೆಟಿಕ್ (ಗು.) ಬಾಧೆಯುಂಟುಮಾಡುವ; ನೋವು ಕೊಡುವ; ಬಾಧಾ ಸಂಬಂಧವಾದ.

A'lgid ಆ್ಯಲ್ಜಿಡ್ (ಗು.) (ಮು., ಚಳಿಜ್ವರದ ಆರಂಭದಲ್ಲಿ ಬರುವ) ಚಳಿಯ. **Algídity** (ನಾ.) (ಮು., ಪ್ರಾಣಹೋಗುವ ಸ್ಥಿತಿಯ) ಚಳಿ. **A'lgor** ಆ್ಯಲ್ಗರ್ (ನಾ.) (ಮು., ಜ್ವರಾರಂಭದ) ಚಳಿ.

A'lgorism ಆ್ಯಲ್ಗೊರಿಸ್‌ಮ್ (ನಾ.) (ಅರಬ್ಬಿಯವರ ಅಥವಾ) ದಶಮಾನ ರೀತಿಯ ಗಣನೆ; ಅಂಕ ಗಣಿತ.

Alhámbra ಆ್ಯಲ್‌ಹ್ಯಾಂಬ್ರ (ನಾ.) ಸ್ಪೈಯ್‌ನ್ ದೇಶದ ಗ್ರಾನಡಾ ಪಟ್ಟಣದಲ್ಲಿಯ ಮೂರ್ ದೊರೆಗಳ ಅರಮನೆ. **Alhambrésque** — ಬ್ರೆಸ್ಕ್ (ಗು.) ಆ ಅರಮನೆಯ ರೀತಿಯ.

A'lias ಏಲಿಯಸ್, ಆ್ಯಲಿಯಸ್ (ನಾ.; ಬ. ವ. —es) ಉಪನಾಮ; ಅಡ್ಡಹೆಸರು. (ಕ್ರಿ. ವಿ.) ಅಡ್ಡಹೆಸರಾಗಿ; 'ಉರುಫ್'.

A'libi ಆ್ಯಲಿಬೈ (ಕ್ರಿ. ವಿ.) ಅನ್ಯತ್ರ; ಬೇರೆ ಕಡೆ. (ನಾ.) ಒಂದು ಕೃತ್ಯ ನಡೆದಾಗ ತಾನು ಬೇರೆ ಸ್ಥಳದಲ್ಲಿದ್ದೆನೆಂದು ಹೇಳುವ ನೆಪ.

A'lible ಆ್ಯಲಿಬ್‌ಲ್ (ಗು.) ದೇಹ ಪೋಷಕ; ಪುಷ್ಟಿಕರ. **Alibílity** (ನಾ.)

A'lidad(e) ಆ್ಯಲಿಡ್ಯಾಡ್, —ಡೇಡ್ (ನಾ.) ದೃಗ್ಯಂತ್ರಗಳು ಮೊ. ಗಳಲ್ಲಿ ನಿಷ್ಕೃಷ್ಟ ಮಾಪನಕ್ಕಾಗಿ ಅಳವಡಿಸಿರುವ ಭಾಗ.

A'lien ಏಯ್ಲಿಯೆನ್ (ಗು.) ತನ್ನದಲ್ಲದ; ಅನ್ಯ; ಪರಕೀಯ; ಹೆರ; ಹೊರಗಿನ; ವಿದೇಶಿ. ಪರ ರಾಜ್ಯನಿಷ್ಠ. ಭಿನ್ನ ಸ್ವಭಾವದ. ಮನಸ್ಸಿಗೊಪ್ಪದ. (ನಾ.) ಹೊರಗಿನವ; ಹೊರ ನಾಡಿಗ; ಅನ್ಯ ಜನ; ಪರದೇಶಿ; ನೆಲಸುಹಕ್ಕನ್ನು ಪಡೆಯದಿರುವ ಪರದೇಶದವನು. (ಸ. ವಿ.) ಹಿಂದೆ ಪರದೇಶದಿಂದ ತಂದು ಬೆಳೆಯಿಸಿದ ಸಸ್ಯ. (ನ್ಯಾ. ಶಾ.) Alien friend ಮಿತ್ರರಾಜ್ಯದ ಪರದೇಶೀಯ; Alien enemy ವೈರಿರಾಜ್ಯದ ಪರದೇಶೀಯ. **A'lienism** (ನಾ.) ವಿದೇಶೀಯತೆ. ಮನೋವ್ಯಾಧಿ ವಿಜ್ಞಾನ, ಚಿಕಿತ್ಸೆ. **A'lienist** (ನಾ.) ಹುಚ್ಚರ ವೈದ್ಯ; ಮನೋವ್ಯಾಧಿ ಚಿಕಿತ್ಸಕ. **A'lien** (ಕ್ರಿ. ಸಕ.) (ನ್ಯಾ. ಶಾ.) ಪರಾಧೀನ ಮಾಡು. (ಕಾವ್ಯ) ವಿಮುಖಗೊಳಿಸು. **A'lienable** (ಗು.); **Alienabílity** (ನಾ.); **A'lienage** — ನೆಜ್ (ನಾ.) ಅನ್ಯದೇಶೀಯನ ಸ್ಥಿತಿ, ನ್ಯಾಯಸಮ್ಮತಸ್ಥಾನ. **A'lienate** —ನೇಟ್ (ಕ್ರಿ. ಸಕ.) ಹೊರಗು ಮಾಡು; ದೂರ ಮಾಡು; ಆಗದಂತೆ ಮಾಡು; ಅಭಿಮಾನ ತಪ್ಪಿಸು; ಮನಸ್ಸು ಕೆಡಿಸು; ವಿಶ್ವಾಸ ಕಳೆ; ವಿಮುಖಗೊಳಿಸು. ಪರಭಾರೆ ಮಾಡು; ಪರಾಧೀನ ಮಾಡು; ಅನ್ಯಾಕ್ರಾಂತ ಮಾಡು. ಬೇರೆ ಕಡೆಗೆ ತಿರುಗಿಸು. **A'lienator** (ನಾ.); **Alienátion** (ನಾ.) (ಕ್ರಿಯಾರ್ಥಗಳಲ್ಲಿ). ಬುದ್ಧಿಭ್ರಮಣೆ; ಬುದ್ಧಿವಿಕಲ್ಪ; ಹುಚ್ಚು (Mental alienation). **Alieneé** (ನಾ.) ಆಸ್ತಿ ಯಾರಿಗೆ ಪರಾಧೀನವಾಗಿದೆಯೊ ಅವನು.

A'liform ಏಯ್ಲಿಫಾರ್‌ಮ್ (ಗು.) ರೆಕ್ಕೆಯ ಆಕಾರದ; ಪಕ್ಷಾಕೃತಿಯ.

Alíght[1] ಅಲೈಟ್ (ಕ್ರಿ. ಅಕ.) (ಕುದುರೆಯಿಂದ, ಬಂಡಿಯಿಂದ, ಆಕಾಶದಿಂದ) ಇಳಿ; ಎರಗು; ಇಳಿದುಕೊ; ತಂಗು.

Alíght[2] ಅಲೈಟ್ (ಗು.) ಹೊತ್ತಿಸಿದ; ಉರಿಯುತ್ತಿರುವ; ಜ್ವಲಿಸುತ್ತಿರುವ.

Alígn, Alíne ಅಲೈನ್ (ಕ್ರಿ.) ಸಾಲಾಗಿಸು; ಸಾಲುಗೂಡಿಸು; ಸಾಲುಹಿಡಿ. ಸಮರೇಖೆಗೊಳಿಸು (ಮು., ಮೂರು ನಾಲ್ಕು ಬಿಂದುಗಳನ್ನು ಒಂದೇ ಸಮರೇಖೆಗೆ ತರು). ಸಾಲಾಗು; ಸಾಲುಗೂಡು. **Alígnment** (ನಾ.) ಸಾಲು ನಿಲವು; ಸಾಲು ನೆಲೆ.

Alíke ಅಲೈಕ್ (ಗು.) ಒಂದೇ ತೆರದ; ಸದೃಶ; ಸಮ. (ಕ್ರಿ. ವಿ.) ಅಂತೆ; ಹಾಗೆ, ಒಂದೇ ರೀತಿಯಲ್ಲಿ.

A'liment ಆ್ಯಲಿಮೆಂಟ್ (ನಾ.) ಅನ್ನ; ಆಹಾರ; ದೇಹ ಪೋಷಕ ದ್ರವ್ಯ. (ರೂಪ.) ಆಧಾರ; ಆಶ್ರಯ; ಬುದ್ಧಿಪೋಷಕ. **Aliméntal** (ಗು.); **Aliméntally** (ಕ್ರಿ. ವಿ.); **Aliméntary** (ಗು.) (ದೇಹ) ಪೋಷಕ; (ದೇಹಕ್ಕೆ) ಪುಷ್ಟಿ ಕೊಡುವ. ಜೀವನಾಧಾರವನ್ನೊದಗಿಸುವ. Alimentary canal ಅನ್ನನಾಳ. Alimentary endowment ಜೀವನಾಧಾರಕ್ಕೆ ದತ್ತಿ. **Alimentátion** (ನಾ.) ದೇಹ ಪೋಷಣೆ.

A'limony ಆ್ಯಲಿಮನಿ (ನಾ.) (ದೇಹ)ಪೋಷಣೆ. ಜೀವನಾಂಶ; ಅನ್ನ ಬಟ್ಟೆ. (ಕೆಲವು ಕಾರಣಗಳಿಂದ ಹೆಂಡತಿ ಗಂಡನಿಂದ ಬೇರೆಯಾದರೆ ಆಕೆಯ ಜೀವನಕ್ಕಾಗಿ ಗಂಡನ ಸ್ವತ್ತಿನಿಂದ ಸಲ್ಲಬೇಕಾದ) ಆಸ್ತಿ ಅಥವಾ ದ್ರವ್ಯ : ಜೀವನಾಂಶ.

Alíne. **Align** ನೋಡಿ.

A'liped ಆ್ಯಲಿಪೆಡ್ (ಗು.) (ಬಾವಲಿಯಂತೆ) ರೆಕ್ಕೆಕಾಲುಳ್ಳ; ಪಕ್ಷಪಾದಿ. (ನಾ.) ಬಾವಲಿಯ ಜಾತಿಯ ಪ್ರಾಣಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Aliphátic ಆ್ಯಲಿಫ್ಯಾಟಿಕ್ (ಗು.) (ರ. ವಿ.) ಮೇದಸ್ಸಿನ : (ಕೆಲವು ಜೈವಿಕ ಸಂಯುಕ್ತಗಳ ವಿಶೇಷಣವಾಗಿ ಉಪಯೋಗಿಸುವ ಪದ)

A'liquant ಆ್ಯಲಿಕ್ವಂಟ್ (ಗು.) ಸಶೇಷ ಭಾಜಕ (ಉದಾ. — ಮೂರು, ಎಂಟರ ಸಶೇಷ ಭಾಜಕ.)

A'liquot ಆ್ಯಲಿಕ್ವಟ್ (ಗು.) ನಿಶ್ಶೇಷ ಭಾಜಕ (ಉದಾ. — ಮೂರು, ಒಂಬತ್ತರ ನಿಶ್ಶೇಷ ಭಾಜಕ). (ನಾ.) ನಿಶ್ಶೇಷ ಭಾಜಕ ಸಂಖ್ಯೆ.

Alíve ಅಲೈವ್ (ಕ್ರಿ. ವಿ.) ಬದುಕಿ ; ಜೀವಂತನಾಗಿ ; ಸಜೀವವಾಗಿ. ಎಚ್ಚತ್ತು ; ಜಾಗ್ರತನಾಗಿ ; ಸೂಕ್ಷ್ಮವೇದಿಯಾಗಿ ; ಚಟುವಟಿಕೆಯಾಗಿ ; ಚುರುಕಾಗಿ ; ಗೆಲುವಾಗಿ ; ಉಲ್ಲಾಸದೊಡನೆ ; ಜೀವಕಳೆ ಹೊಂದಿ. ತುಂಬಿ ; ಇಡಿಕಿರಿದು (The river alive with boats ದೋಣಿಗಳಿಂದ ಇಡಿಕಿರಿದ ನದಿ)

Alízarin ಅಲಿಜ಼ರಿನ್ (ನಾ.) (ರ. ವಿ.) 'ಮ್ಯಾಡರ್' ಎಂಬ ಸಸ್ಯದ ಬೇರಿನಲ್ಲಿಯ ಕೆಂಪು ವರ್ಣದ್ರವ್ಯ.

A'lkahest ಆ್ಯಲ್ಕಹೆಸ್ಟ್ (ನಾ.) ರಸವಾದಿಯ ಸರ್ವಲೀನಕಾರಿ ಪದಾರ್ಥ. (ರೂಪ. ನಹ)

Alkaléscent. **Alkali** ನೋಡಿ.

A'lkali ಆ್ಯಲ್ಕಲಿ (ನಾ. ; ಬ. ವ. —lis, —lies) (ರ. ವಿ.) ನೀರಿನಲ್ಲಿ ಸುಲಭವಾಗಿ ಲೀನವಾಗಿ, ದಹಿಸುವ ಅಥವಾ ಕ್ಷಯಿಸುವ ಗುಣವುಳ್ಳ ದ್ರಾವಕವಾಗುವ, ತೀಕ್ಷ್ಣಾಮ್ಲಗಳನ್ನು ನಿರಾಮ್ಲಗೊಳಿಸುವ, ಸಸ್ಯಜನ್ಯವಾದ ಕೆಂಪುಬಣ್ಣವನ್ನು ನೀಲಿಯ ಬಣ್ಣವಾಗಿಯೂ ಹಳದಿಯನ್ನು ಕಪಿಲವರ್ಣವಾಗಿಯೂ ಧೂಮ್ರವರ್ಣವನ್ನು ಹಸಿರುಬಣ್ಣವಾಗಿಯೂ ಮಾರ್ಪಡಿಸುವ, ಮತ್ತು ಆಮ್ಲಸಂಯೋಗದಿಂದ ಲವಣವಾಗುವ, ಪದಾರ್ಥ : (ಸೋಡಾ, ಪಾಟ್ಯಾಷ್, ಅಮೋನಿಯಾ, ಮೊ.) ಕ್ಷಾರ. (ವ್ಯಾಪಾರ) ಸೋಡಾ ಕ್ಷಾರ, ಪಾಟ್ಯಾಷ್ ಕ್ಷಾರ, ಮೊ. **Alkaléscent** —ಲೆಸೆಂಟ್ (ಗು., ನಾ.) ಸ್ವಲ್ಪಕ್ಷಾರ (ವಸ್ತು). **Alkaléscence** (ನಾ.) ; **Alkaléscency** (ನಾ.) ; **A'lkalifíable** (ಗು.) ಕ್ಷಾರೀಕರಣ ಸಾಧ್ಯ. **A'lkalify** (ಕ್ರಿ. ಸಕ.) ಕ್ಷಾರೀಕರಿಸು. **Alkalímetry** (ನಾ.) ಕ್ಷಾರಶಕ್ತಿ ಮಾಪನ. **A'lkaline** (ಗು.) ಕ್ಷಾರೀಯ ; ಕ್ಷಾರ ಸಂಬಂಧಿ ; ಕ್ಷಾರ ಸ್ವಭಾವವುಳ್ಳ. Alkali(ne) metals ಕ್ಷಾರೀಯ ಲೋಹಗಳು. Alkaline earths ಕ್ಯಾಲ್ಸಿಯಂ, ಬೇರಿಯಂ, ಸ್ಟ್ರಾನ್ಷಿಯಂ ಲೋಹಗಳ ಭಸ್ಮಗಳು (ಅಮ್ಲಜನಕ ಘಟಿತಗಳು). **A'lkalize** (ಕ್ರಿ. ಸಕ.) ಕ್ಷಾರೀಕರಿಸು. **A'lkaloid** ಆ್ಯಲ್ಕಲಾಯ್ಡ್ (ನಾ.) ಸಸಾರಜನಕ ಕ್ಷಾರದ್ರವ್ಯ (ಮು., ಸಸ್ಯಜನ್ಯ) ; ಸಸ್ಯಕ್ಷಾರ. **Alkaloídal** (ಗು.)

A'lkanet ಆ್ಯಲ್ಕನೆಟ್ (ನಾ.) (ಒಂದು ಜಾತಿಯ ಸಸ್ಯದ ಬೇರಿನಲ್ಲಿ ದೊರೆಯುವ) ಹಸನಾದ ಕೆಂಪು ವರ್ಣದ್ರವ್ಯ. ಈ ವರ್ಣದ್ರವ್ಯವನ್ನು ಕೊಡುವ ಗಿಡ.

All ಆಲ್ (ಗು., ನಾ., ಕ್ರಿ. ವಿ.) ಎಲ್ಲ ; ಸರ್ವ ; ಸಕಲ ; ಸಮಸ್ತ ; ವಿಶ್ವ ; ಪೂರ್ಣ ; ಪೂರ್ತಿ. (ನಾ.) ಸರ್ವಸ್ವ (He lost his all ಅವನು ತನ್ನ ಸರ್ವಸ್ವವನ್ನೂ ಕಳೆದುಕೊಂಡನು). He is all in all ಅವನು ಸರ್ವಸ್ವತಂತ್ರನು ; ತಾನೇ ತಾನು ; ಎಲ್ಲವೂ ಅವನೇ. Did you speak at all ? ನೀನು ಮಾತನಾಡಿದ್ದಾದರೂ ಉಂಟೊ ? In all ಒಟ್ಟಿಗೆ ; ಮೊತ್ತವಾಗಿ ; ಜುಮ್ಲಾ. One and all ಪ್ರತಿಯೊಬ್ಬನೂ. All and sundry ಎಲ್ಲರೂ ಒಟ್ಟಿಗೆ. All one ಎಲ್ಲಾ ಒಂದೇ. It is all very fine (ವ್ಯಂಗ್ಯ, ಅಸಮಾಧಾನ ಸೂಚಕ) ಬಹಳ ಚೆನ್ನಾಗಿದೆ ! All at once ಥಟ್ಟನೆ ; ತಟಕ್ಕನೆ. All right ಸರಿ ; ಸರಿಸರಿ ; ಒಳ್ಳೆಯದು (ವ್ಯಂಗ್ಯ). All right ! you shall repent this ಆಗಲಿ ! ಮುಂದೆ ನೀನು ಇದಕ್ಕಾಗಿ ಪಶ್ಚಾತ್ತಾಪ ಪಡುವೆ. He was punished all the same ಆದರೂ ಕೂಡ ಅವನಿಗೆ ಶಿಕ್ಷೆ ಆಯಿತು. All the same, I wish you had not done it ಅದು ಹೇಗೇ ಇರಲಿ, ನೀನು ಆ ಕೆಲಸ ಮಾಡದಿದ್ದರೆ ಚೆನ್ನಾಗಿತ್ತು. **All Fools' Day** ಏಪ್ರಿಲ್ ತಿಂಗಳ ಮೊದಲನೆಯ ತಾರೀಖು (ಹುಚ್ಚು ಕಾಗದಗಳನ್ನು ಒಬ್ಬರಿಗೊಬ್ಬರು, ತಮ್ಮ ಹೆಸರು ಹಾಕದೆ, ಬರೆಯುವ ರೂಢಿಯ ದಿನ). **All-in** ಎಲ್ಲವನ್ನೂ ಒಳಕೊಂಡು ; ಎಲ್ಲಾ ಮುಗಿದು. ಕಟ್ಟು ನಿಟ್ಟಿಲ್ಲದ (ಕುಸ್ತಿಯ ವರಸೆ). **All-out** ಸರ್ವಶಕ್ತಿಯನ್ನೂ ಉಪಯೋಗಿಸಿ (He was going all-out ಶಕ್ತಿಯನ್ನೆಲ್ಲ ಉಪಯೋಗಿಸಿ ವೇಗದಿಂದ ಹೋಗುತ್ತಿದ್ದನು). **All-over** (ಎಲ್ಲವೂ) ಆ ರೀತಿಯ (That is Jones all-over ಅದೆಲ್ಲ ಜೋನ್ಸಿನ ರೀತಿಯೇ). **All-overísh** (ಬಳ. ಮಾ.) ಮೈಯೆಲ್ಲ ಆಲಸ್ಯವಾಗಿರುವ. **All-knowing, All-wise** ಸರ್ವಜ್ಞ.

A'llah ಆ್ಯಲ, ಅಲ್ಲಾ (ನಾ.) ಮುಸಲ್ಮಾನರಲ್ಲಿ ದೇವರ ಹೆಸರು.

Alláy ಅಲೇ (ಕ್ರಿ. ಸಕ.) (ಗಲಾಟೆಯನ್ನು) ಅಡಗಿಸು ; ತಗ್ಗಿಸು ; (ನೋವನ್ನು) ಆರಿಸು ; ಉಪಶಮನ ಮಾಡು ; ಸಮಾಧಾನಗೊಳಿಸು.

Allége ಅಲೆಜ್ (ಕ್ರಿ. ಸಕ.) ಆಪಾದನೆ ಮಾಡು ; ಆರೋಪಿಸು ; ನಿಜವೆಂದು ಹೇಳು ; ನಿಮಿತ್ತ ಹೇಳು ; ನೆಪ ಹೇಳು. **Allegátion** ಆ್ಯಲಿಗೇಷನ್ (ನಾ.)

Allégiance ಅಲೀಜನ್ಸ್, ಅಲೀಜಿಯನ್ಸ್ (ನಾ.) ನಿಷ್ಠೆ ; ಸ್ವಾಮಿನಿಷ್ಠೆ ; ರಾಜ ನಿಷ್ಠೆ.

A'llegory ಆ್ಯಲಗೊರಿ (ನಾ.) ಒಂದು ವಿಷಯವು ಮನಸ್ಸಿಗೆ ಹಿಡಿಯುವಂತೆ ಅದೇ ರೀತಿಯ ಮತ್ತೊಂದು ವಿಷಯವನ್ನು ಎತ್ತಿಕೊಂಡು ಹೇಳುವ ಕಥನ : ಅರ್ಥಾಂತರೋಕ್ತಿ ; ರೂಪಕ ಕಥೆ. ಮರೆ ; ರಹಸ್ಯಾರ್ಥ ; ಗೂಢಾರ್ಥ ದ್ಯೋತಕ. **Allegóric(al)** —ಗಾರಿಕ್, —ಕಲ್ (ಗು.); **Allegórically** (ಕ್ರಿ. ವಿ.) ; **A'llegorist** — ಗೊರಿಸ್ಟ್ (ನಾ.) ; **A'llegorize** (ಕ್ರಿ.)

Allégro (It.) ಅಲ್‌ಲೇಗ್ರೊ (ಗು., ಕ್ರಿ. ವಿ., ನಾ.) (ಸಂ.) ಸೋಲ್ಲಾಸ ; ದ್ರುತ.

Allelúia ಆ್ಯಲಲ್ಯೂಯಿಯ (ನಾ.) ದೈವಸ್ತುತಿ ; ಸಂಕೀರ್ತನೆ.

Alléviate ಅಲೀವಿಯೇಟ್ (ಕ್ರಿ. ಸಕ.) ಕಡಮೆ ಮಾಡು ; ತಗ್ಗಿಸು ; ಉಪಶಮನ ಮಾಡು ; ಸುದಾರಿಸು ; ಹಗುರ ಮಾಡು ; ಲಘುವಾಗಿಸು ; ಸಹಿಸಿಕೊಳ್ಳುವಂತೆ ಮಾಡು. **Alleviátion** (ನಾ.) ; **Alléviative** (ಗು.) ; **Alléviator** (ನಾ.) ; **Alléviatory** (ಗು.)

A'lley[1] ಆ್ಯಲಿ (ನಾ.) (ಉದ್ಯಾನ ಅಥವಾ ತೋಟದಲ್ಲಿಯ) ಕಾಲುದಾರಿ, ಹಾದಿ. ಸಂದಿಗೊಂದಿ ; ಓಣಿ. Blind alley ಸ್ವಲ್ಪ ದೂರ ಹೋಗಿ ನಿಂತುಬಿಡುವ ಓಣಿ ; ಮೂಗು ಓಣಿ ; ಕುರುಡು ಗಲ್ಲಿ.

A'lley[2]. **Ally**[2] ನೋಡಿ.

Alliáceous ಆ್ಯಲಿಯೇಷಸ್ (ಗು.) 'ಆ್ಯಲಿಯಂ' ಎಂಬ ಸಸ್ಯಜಾತಿಯ ; ಈರುಳ್ಳಿ, ಬೆಳ್ಳುಳ್ಳಿ, ಮೊ. ಸಸ್ಯವಂಶಗಳು ಸೇರಿದ ಜಾತಿಯ. ಉಳ್ಳಿಗೆಡ್ಡೆಯ ವಾಸನೆ ಅಥವಾ ರುಚಿ ಉಳ್ಳ.

Allíance, **Allied** } **Ally**[1] ನೋಡಿ.

A'lligator ಆ್ಯಲಿಗೇಟರ್ (ನಾ.) ಮೊಸಳೆ ; ನೆಗಳು ; ಮಕರ ; ಮೊಸಳೆಯ ಜಾತಿಯ ಪ್ರಾಣಿ.

Alliterátion ಅಲಿಟರೇಷನ್ (ನಾ.) ಆದ್ಯಕ್ಷರ ಪ್ರಾಸ ; ಅನುಪ್ರಾಸ. **Allíterate** (ಕ್ರಿ. ಅಕ.) ಪ್ರತಿ ಮಾತನ್ನೂ ಒಂದೇ ಅಕ್ಷರದಿಂದ ಆರಂಭ ಮಾಡು ; ಪ್ರತಿ ಮಾತೂ ಒಂದೇ ಅಕ್ಷರದಲ್ಲಿ ಆರಂಭವಾಗು. **Allíterative** (ಗು.) ; **Allíteratively** (ಕ್ರಿ. ವಿ.)

A'llocate ಆ್ಯಲೊಕೇಟ್ (ಕ್ರಿ. ಸಕ.) ಹಂಚು ; ಗೊತ್ತುಮಾಡು ; ನಿಯತಮಾಡು. ಸ್ಥಳನಿರ್ದೇಶ ಮಾಡು. **Allocátion** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Allocútion ಆ್ಯಲೊಕ್ಯೂಷನ್ (ನಾ.) ಉತ್ತೇಜಕ ಭಾಷಣ (ಮು., ಪೋಪಿನದು)

Al(l)ódium ಅಲೋಡಿಯಂ (ನಾ.) ಸಂಪೂರ್ಣ ಸ್ವಾಮ್ಯಕ್ಕೆ ಸೇರಿದ ಆಸ್ತಿ.

Allógamy ಆ್ಯಲಾಗಮಿ (ನಾ.) (ಸ. ವಿ.) ಅನ್ಯ ಪುಷ್ಪಪರಾಗ ಸಂಪರ್ಕದಿಂದಾಗುವ ಗರ್ಭಧಾರಣೆ ; ಅನ್ಯಪರಾಗ ಗರ್ಭಾಧಾನ.

A'llograph ಆ್ಯಲೊಗ್ರಾಫ್ (ನಾ.) ಮತ್ತೊಬ್ಬನಿಗಾಗಿ ಬರೆದ ಬರವಣಿಗೆ ಅಥವಾ ಸಹಿ.

Allópathy ಆ್ಯಲಾಪತಿ (ನಾ.) (ವೈ. ಶಾ.) ವ್ಯಾಧಿಕಾರಣವಾಗಿರುವ ದೇಹವ್ಯಾಪಾರಗಳಿಗೆ ಪ್ರತಿಯಾದ ವ್ಯಾಪಾರಗಳನ್ನುಂಟುಮಾಡಿ ವ್ಯಾಧಿಯನ್ನು ವಾಸಿಮಾಡುವ ವಿಧಾನ : ವಿದೃಶ ಕ್ರಿಯಾ ಚಿಕಿತ್ಸೆ. (ಸದೃಶ ಕ್ರಿಯಾ ಚಿಕಿತ್ಸೆ = Homoeopathy). **Allopáthic** ಆ್ಯಲೊಪ್ಯಾತಿಕ್ (ಗು.) ; **Allopáthically** (ಕ್ರಿ. ವಿ.) ; **Allópathist** ಆ್ಯಲಾಪತಿಸ್ಟ್ (ನಾ.)

Allót ಅಲಾಟ್ (ಕ್ರಿ. ಸಕ.) ಹಂಚು ; ಭಾಗವಿಡು ; ಗೊತ್ತುಮಾಡಿ ಕೊಡು ; ನಿರ್ದೇಶಿಸು ; ವಿಧಿಸಿಕೊಡು. **Allotteé** (ನಾ.) ಹಂಚಿಕೆ ಪಡೆದವನು. **Allótter** (ನಾ.) ಹಂಚಿಕೆ ಮಾಡುವವನು. **Allótment** (ನಾ.) ಹಂಚಿಕೆ ; ಹಂಚಿಕೆಯಾಗಿ ಬಂದ ಭಾಗ, ಪಾಲು. ಸಾಗುವಳಿಗೆ ಕೊಟ್ಟ ಜಮೀನಿನ ಪಾಲು, ಹಸುಗೆ. ಪ್ರಾಪ್ತಿ ; (ರೂಢಿ) ಕೇಳಿಕೊಂಡುಬಂದದ್ದು ; ಪಡೆದುಕೊಂಡುಬಂದದ್ದು.

A'llotheism ಆ್ಯಲೊತೀಯಿಸ್ಮ್ (ನಾ.) ಅನ್ಯದೇವತಾರಾಧನೆ.

Allótropy ಆ್ಯಲಾಟ್ರೊಪಿ (ನಾ.) ಪದಾರ್ಥ ವ್ಯತ್ಯಾಸವಾಗದೆ ಅದರ ಭೌತ ಗುಣಗಳು ವ್ಯತ್ಯಾಸವಾಗುವುದು ; ಭಿನ್ನ ರೂಪತೆ ; ಅನ್ಯ ರೂಪತೆ. **Allotrópic(al)** ಆ್ಯಲೊಟ್ರಾಪಿಕ್, — ಕಲ್ (ಗು.) ; **Allotrópically** (ಕ್ರಿ. ವಿ.) ; **Allótropism** ಆ್ಯಲಾಟ್ರೊಪಿಸ್ಮ್ (ನಾ.)

Allow ಅಲೌ (ಕ್ರಿ.) ಎಡೆಗೊಡು ; ಅವಕಾಶ ಕೊಡು. ಕೊಡು. ಒಪ್ಪಿಕೊ ; ಒಪ್ಪಿಗೆ ಕೊಡು ; ಅನುಮತಿಸು. ಬಿಟ್ಟುಬಿಡು ; ಸೋಡಿ ಮಾಡು. ಅವಕಾಶವಾಗು. **Allowable** (ಗು.) ಅವಕಾಶ ಕೊಡಬಹುದಾದ ; ಒಪ್ಪಬಹುದಾದ ; ಗ್ರಾಹ್ಯ ; ಅಂಗೀಕಾರಾರ್ಹ ; ಉಚಿತ. **Allowably** (ಕ್ರಿ. ವಿ.) ; **Allowance** — ಅನ್ಸ್ (ನಾ.) ಅಪ್ಪಣೆ ; ಅನುಮತಿ ; ಅವಕಾಶ. ವರ್ಷಾಶನ, ಮಾಸಾಶನ, ಮೊ. ; ಭತ್ಯ ; ವಿಶೇಷ ಸಂಭಾವನೆ. ಸೋಡಿ ; ಉತ್ತಾರ ; ವಟ್ಟ. (ಕ್ರಿ. ಸಕ.) To allowance a person ಪಡಿಭತ್ಯ ಕೊಡುವುದು ; ಹೆಚ್ಚಾಗಿ ಕೊಡದೆ ಕ್ಲುಪ್ತವಾಗಿ ಕೊಡುವುದು. **Allowed** (ಗು.) ಅಂಗೀಕರಿಸಿದ ; ಅಂಗೀಕೃತ ; ಒಪ್ಪಿಕೊಂಡ. ಗೊತ್ತಾಗಿ ಕೊಟ್ಟ.

Alloý ಅಲಾಯ್ (ನಾ.) ಬೆರಕೆಯ ಲೋಹ ; ಮಿಶ್ರ ಲೋಹ ; ಚಿನ್ನ ಅಥವಾ ಬೆಳ್ಳಿಯೊಡನೆ ಕೀಳ್ತರದ ಲೋಹವನ್ನು ಬೆರಸಿ ಮಾಡಿದ ಮಿಶ್ರಲೋಹ ; ಆ ಮಿಶ್ರಣದಲ್ಲಿಯ ಕೀಳುಲೋಹ. (ರೂಪ.) ಗುಣದಲ್ಲಿ ಅಥವಾ ಯೋಗ್ಯತೆಯಲ್ಲಿ ಕಡಮೆಯಾಗುವಂತೆ ಸೇರಿದ ದೋಷ ; ಬೆರಕೆ ಬುದ್ಧಿ. ಚಿನ್ನ ಅಥವಾ ಬೆಳ್ಳಿಯ ಬಣ್ಣ. (ಕ್ರಿ. ಸಕ.) (ಕೀಳ್ತರದ ಲೋಹವನ್ನು) ಬೆರಕೆ ಮಾಡು ; (ಲೋಹಗಳನ್ನು) ಮಿಶ್ರಣ ಮಾಡು. (ರೂಪ.) ಗುಣ ತಗ್ಗಿಸು.

A'llseed ಆರ್‌ಸೀಡ್ (ನಾ.) ಹೆಚ್ಚು ಬೀಜ ಬಿಡುವ ಸಸ್ಯಗಳು ; ಬೀಜಪೂರ್ಣ.

A'llspice ಆರ್‌ಸ್ಪೈಸ್ (ನಾ.) ದಾಲ್ಚಿನ್ನಿ, ಜಾಯಿಕಾಯಿ, ಲವಂಗ — ಇವುಗಳೆಲ್ಲದರ ರುಚಿಯುಳ್ಳದ್ದೆಂದು ಹೇಳುವ ' ಪಿಮೆಂಟ ' ಎಂಬ ಒಂದು ಸಸ್ಯದ ಸುವಾಸನೆಯ ಕಾಯಿ, ಅದರಿಂದ ಮಾಡಿದ ಸುವಾಸನಾ ದ್ರವ್ಯ ; ಜಮೇಕಾ ಮೆಣಸು. ಇತರ ಕೆಲವು ಜಾತಿಯ ಸುವಾಸನಾ ಸಸ್ಯಗಳು.

Allúde ಅಲ್ಯೂಡ್ (ಕ್ರಿ. ಅಕ.) ಪ್ರಾಸಂಗಿಕವಾಗಿ ಪ್ರಸ್ತಾವಿಸು ; ಅಪ್ರತ್ಯಕ್ಷವಾಗಿ ಸೂಚಿಸು ; ಕುರಿತು ಹೇಳು ; ನಿರ್ದೇಶಿಸು ; ವೃತ್ತಾಂತ ಸೂಚಿಸು. **Allúsion** — ಷನ್ (ನಾ.) ಪೂರ್ವಕಥಾ ಸೂಚನೆ ; ಅಪ್ರತ್ಯಕ್ಷ ಸೂಚನೆ. **Allúsive** — ಸಿವ್ (ಗು.) ಪ್ರಾಸ್ತಾವಿಕ. **Allúsively** (ಕ್ರಿ. ವಿ.) ; **Allúsiveness** (ನಾ.)

Allúre ಅಲ್ಯೂರ್ (ಕ್ರಿ. ಸಕ.) ಆಕರ್ಷಿಸು ; ಆಸೆದೋರಿಸು ; ಮರುಳುಗೊಳಿಸು ; ಮೋಹಗೊಳಿಸು ; ಬಲೆಗೆ ಹಾಕಿಕೊ ; ಉಪಾಯ ಮಾಡಿ ವಂಚಿಸು. (ನಾ.) ಆಕರ್ಷಕತ್ವ ; ಸೆಳೆತ ; ಮನೋಹರತೆ. **Allúrement** (ನಾ.)

Allúsion. **Allude** ನೋಡಿ.

Allúvial. **Alluvium** ನೋಡಿ.

Allúvion ಅಲ್ಯೂವಿಯನ್ (ನಾ.) ದಡಕ್ಕೆ ಸಮುದ್ರದ ಅಥವಾ ನದಿಯ ನೀರಿನ ಹೊಡೆತ. ಪ್ರವಾಹ ; ನೆರೆ. ಪ್ರವಾಹ ಹೊತ್ತುಕೊಂಡು ಬಂದು ಸೇರಿಸಿದ ಪದಾರ್ಥ ; ನೆರೆಮಣ್ಣು. (ನ್ಯಾ. ಶಾ.) ನೀರಿನ ಚಲನೆಯಿಂದ ಕ್ರಮೇಣ ಹೊಸ ನೆಲವಾಗುವುದು.

Allúvium ಅಲ್ಯೂವಿಯಂ (ನಾ.) ಪ್ರವಾಹ ತಂದು ಕೆಡವಿದ ಮಣ್ಣು, ಮರಳು, ಮೊ. ; ನೆರೆ ಮಣ್ಣು, —ಮರಳು ; ಮೆಕ್ಕಲು ; ಒಂಡು. **Allúvial** (ಗು.) ನೆರೆಮಣ್ಣಿನ ; ಒಂಡು.

Allý[1] ಅಲೈ (ಕ್ರಿ.) ಜೊತೆಗೂಡು ; ಒಂದಾಗು ; ಒಟ್ಟುಗೂಡು ; ಒಕ್ಕಟ್ಟಾಗು ; ಸಂಬಂಧ ಮಾಡು ; ಬೀಗತನ ಬೆಳಸು. ಪರರಾಷ್ಟ್ರದೊಡನೆ ಸ್ನೇಹ ಬೆಳಸು. Allied to ಸಂಬಂಧಪಟ್ಟ. **Allíance** ಅಲಯನ್ಸ್ (ನಾ.) (ಪರಸ್ಪರ ಸಹಾಯಕ) ಮೈತ್ರಿ ; ಸೇರುವೆ ; ಸಂಬಂಧ. ವಿವಾಹ ಸಂಬಂಧ ; ಬಾಂಧವ್ಯ ; ನೆಂಟತನ. (ಯಾವುದಾದರೂ ಉದ್ದೇಶಕ್ಕಾಗಿ ರಾಜ್ಯಗಳ) ಸಂಧಿ. ಸ್ವಭಾವ ಸಾದೃಶ್ಯ. (ಸ. ವಿ.) ಸ್ವಭಾವ ಸಾಮ್ಯವುಳ್ಳ ಸಸ್ಯವರ್ಗ. **Allý** (ನಾ.) ಸಂಬಂಧಿ ; ಸಹಕಾರಿ ; ಸಹೋದ್ಯೋಗಿ. ಸಮಾನೋದ್ದೇಶದಿಂದ ಸಂಬಂಧ ಮಾಡಿದ ರಾಜ್ಯ (ರಾಜ) ; ಮಿತ್ರ ರಾಜ (ರಾಜ್ಯ)

A'lly[2], **Alley, Alay** ಆ್ಯಲಿ (ನಾ.) ಹಾಲುಗಲ್ಲಿನಿಂದ ಮಾಡಿದ ಸೊಗಸಾದ ಆಟದ ಗೋಲಿ.

A'lmagest ಆ್ಯಲ್ಮಜೆಸ್ಟ್ (ನಾ.) ಟಾಲೆಮಿಯೆಂಬ ವೈಜ್ಞಾನಿಕನ ಪ್ರಸಿದ್ಧ ಖಗೋಳ ವಿಜ್ಞಾನ ಗ್ರಂಥ. ಜ್ಯೋತಿಷ ಮತ್ತು ರಸತಂತ್ರ ಸಂಬಂಧವಾದ ಇತರ ಪ್ರಸಿದ್ಧ ಗ್ರಂಥಗಳು.

A'lma Máter (L) ಆ್ಯಲ್ಮ ಮೇಟರ್ (ನಾ.) ವಿದ್ಯಾಮಾತೆ : (ವಿದ್ಯಾರ್ಥಿಗಳಿಗೆ ತಾಯಿಯೆಂದು ಹೇಳಬಹುದಾದ) ವಿಶ್ವವಿದ್ಯಾಪೀಠ, ಪಾಠಶಾಲೆ.

A'lmanac ಆಲ್ಮನ್ಯಾಕ್ (ನಾ.) ಪಂಚಾಂಗ.

Almíghty ಆರ್‌ಮೈಟಿ (ಗು.) ಸರ್ವಶಕ್ತ (The Almighty ಪರಮೇಶ್ವರ). (ಅಸಂ.) ಮಹಾ ; ಮಹತ್ವವುಳ್ಳ. **Almíghtiness** (ನಾ.) ಸರ್ವಶಕ್ತತ್ವ.

Almírah, — **mýra** ಆ್ಯಲ್‌ಮೈರ (ನಾ.) ಬೀರು ; ಅಲಮಾರು.

A'lmner. **Almoner** ನೋಡಿ.

A'lmond ಆಮಂಡ್ (ನಾ.) ಬಾದಾಮಿ ; ಬಾದಾಮಿಯ ಮರ ; ಬಾದಾಮಿಯಿಂದ ಮಾಡಿದ, ಬಾದಾಮಿಯ ಆಕಾರದ, ಬಾದಾಮಿಯ ಚಿಗುರಿನ ಬಣ್ಣದ, ಪದಾರ್ಥ. Almond tumbler ಒಂದು ಜಾತಿಯ ಪಾರಿವಾಳದ ಹಕ್ಕಿ. **A'lmondy** (ಗು.) ಬಾದಾಮಿಯ; ಬಾದಾಮಿಯ ಮಾಟದ.

A'lmoner, A'lmner ಆ್ಯಲ್ಮೊನರ್, ಆಮ್ನರ್ (ನಾ.) ಮತ್ತೊಬ್ಬನು ಮಾಡಿದ ದಾನ ಧರ್ಮಗಳನ್ನು ಹಂಚಲು (ಮಠಾದಿಗಳಲ್ಲಿ) ನಿಯಮಿತನಾದ ಅಧಿಕಾರಿ ; ದಾನಾಧಿಕಾರಿ ; ಧರ್ಮಕರ್ತ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

A'lmost ಆಲ್ಮೋಸ್ಟ್, ಅಲ್ಮಸ್ಟ್ (ಕ್ರಿ. ವಿ.) ಬಹು ಮಟ್ಟಿಗೆ ; ಬಹುತರ.

Alms ಆಮ್ಸ್ (ನಾ.) ದಾನ ಧರ್ಮ ; ತಿರುಪ ; ಭಿಕ್ಷ ; ಉಪಾದಾನ. **A'lms-folk, A'lmsman** ತಿರುಕ ; ಭಿಕ್ಷುಕ. **A'lms-house** ಸತ್ರ ; ಧರ್ಮಶಾಲೆ ; ಲಂಗರುಖಾನೆ.

A'loe ಆ್ಯಲೊ (ನಾ.) ನೆಟ್ಟಗೆ ನಿಂತಿರುವ ತೆನೆಯಂಥ ಹೂಗೊಂಚಲುಳ್ಳ ಮತ್ತು ಕಹಿಯಾದ ರಸವಿರುವ ಒಂದು ಸಸ್ಯಜಾತಿ (ಲೋಳೆಸರ, ಕತ್ತಾಳೆ, ಮೊ.). **A'loes** (ನಾ.) ಈ ಜಾತಿಯ ಸಸ್ಯಗಳ ರಸದಿಂದ ತೆಗೆದ ಕಹಿಯಾದ ಭೇದಿಯ ಔಷಧ. (ರೂಪ.) ಕಟುವಾದ ಅನುಭವಗಳು. **Aloétic** — ಎಟಿಕ್ (ಗು., ನಾ.) (ವೈ. ಶಾ.) ಲೋಳೆಸರದ ಜಾತಿಯ ಪದಾರ್ಥವುಳ್ಳ ಅಥವಾ ಆ ಜಾತಿಯ ಪದಾರ್ಥದಂತಿರುವ (ಔಷಧ). **A'loid** ಆ್ಯಲೊಯಿಡ್ (ಗು.) ಲೋಳೆಸರದ ಜಾತಿಯ ಪದಾರ್ಥವನ್ನು ಹೋಲುವ.

Alóft ಅಲಾಫ್ಟ್ (ಕ್ರಿ. ವಿ.) ಎತ್ತರದಲ್ಲಿ ; ಉನ್ನತವಾಗಿ ; ಎತ್ತರವಾಗಿ ; ಮೇಲ್ಗಡೆಗೆ ; ಆಕಾಶದ ಕಡೆಗೆ.

Alóne ಅಲೋನ್ (ಗು.) ಒಂದೇ ; ಒಬ್ಬನೇ. (ಕ್ರಿ. ವಿ.) ಒಂಟಿಯಾಗಿ ; ಒಬ್ಬೊಂಟಿಗನಾಗಿ ; ಏಕಾಂಗಿಯಾಗಿ (Let or leave him alone ಅವನಷ್ಟಕ್ಕೆ ಅವನನ್ನು ಬಿಟ್ಟುಬಿಡು). ಮಾತ್ರವೇ ; ಇತರ ಸಂಬಂಧವಿಲ್ಲದೆ ; ತಾನೇ.

Alóng ಅಲಾಂಗ್ (ಕ್ರಿ. ವಿ., ಉಪ.) ಉದ್ದಕ್ಕೂ ; ಉದ್ದದಲ್ಲಿ. ಮುಂದು ಮುಂದಕ್ಕೆ. Get along ಮುಂದುವರಿ. Along with him ಅವನೊಡನೆ. All along ಉದ್ದಕ್ಕೂ ; ಇಷ್ಟುಹೊತ್ತೂ ; ಅನುಗಾಲವೂ. Alongside of ಪಕ್ಕಪಕ್ಕದಲ್ಲ ; ಜೊತೆಯಲ್ಲಿ. (ರೂಪ. ಸಹ)

Aloóf ಅಲೂಫ್ (ಕ್ರಿ. ವಿ.) ಬೇರೆಯಾಗಿ ; ಪ್ರತ್ಯೇಕವಾಗಿ ; ಪೃಥಕ್ಕಾಗಿ ; ಒತ್ತಟ್ಟಿಗೆ ; ದೂರವಾಗಿ. (ರೂಪ. ಸಹ). **Aloófness** (ನಾ.) ತಾಟಸ್ಥ್ಯ ; ಉದಾಸೀನತೆ.

Alopécia ಆ್ಯಲೊಪೀಸಿ(ಷಿ)ಯ (ನಾ.) (ವೈ. ಶಾ.) ಕೂದಲು ಉದುರಿಹೋಗಿರುವುದು ; ಪಟ್ಟ ತಲೆ. **Alópecist** —ಸಿಸ್ಟ್, ಅಲಾಪಿಸಿಸ್ಟ್ (ನಾ.) ಪಟ್ಟತಲೆಗೆ ವೈದ್ಯಮಾಡುವವನು.

Aloúd ಅಲೌಡ್ (ಕ್ರಿ. ವಿ.) ಗಟ್ಟಿಯಾಗಿ ; ಗಟ್ಟಿಯಾದ ದನಿಯಲ್ಲಿ ; ಕೇಳಿಸುವಂತೆ.

Alow ಅಲೋ (ಕ್ರಿ. ವಿ.) (ನೌಕ) ಹಡಗಿನ ತಳದಲ್ಲಿ ಅಥವಾ ತಳಕ್ಕೆ.

Alp ಆ್ಯಲ್ಪ್ (ನಾ.) ಪರ್ವತ ಶಿಖರ. (ಸ್ವಿಟ್ಸರ್ಲೆಂಡ್ ದೇಶದಲ್ಲಿ) ಬೆಟ್ಟದ ಹಸಿರು ಹುಲ್ಲುಗಾವಲು. ಯಾವುದಾದರೂ ಉನ್ನತವಾದ ಹಿಮ ಶಿಖರ ಪರ್ವತ. **Alps** (ನಾ.) ಫ್ರಾನ್ಸ್‌ದೇಶಕ್ಕೂ ಇಟಲೀ ದೇಶಕ್ಕೂ ಮಧ್ಯೆ ಇರುವ ಪರ್ವತಶ್ರೇಣಿ. **A'lpine** ಆ್ಯಲ್ಪೈನ್ (ಗು.) ಆಲ್ಪ್ಸ್‌ಪರ್ವತದ ಅಥವಾ ಉನ್ನತವಾದ ಇತರ ಪರ್ವತದ. ಉನ್ನತವಾದ. **A'lpinist** (ನಾ.) ಆಲ್ಪ್ಸ್‌ಪರ್ವತ ಹತ್ತುವವನು.

Alpáca ಆ್ಯಲ್ಪ್ಯಾಕ (ನಾ.) ಪೆರೂವಿಯಾ ದೇಶ ನಿವಾಸಿಯಾಗಿ, ಉದ್ದವಾಗಿಯೂ ರೇಷ್ಮೆಯಂತೆ ಮೃದುವಾಗಿಯೂ ಇರುವ ತುಪ್ಪಟದ ಕೂದಲುಳ್ಳ, ಒಂಟೆಯ ಜಾತಿಗೆ ಸೇರಿದ, ಮೆಲುಕುಹಾಕುವ, ಒಂದು ಸಣ್ಣ ಮೃಗ ; ಈ ಮೃಗದ ತುಪ್ಪಟ ; ಈ ತುಪ್ಪಟದಿಂದ ಮಾಡಿದ ಬಟ್ಟೆ : 'ಅಲ್ಪಾಕ'.

A'lpenstock ಆ್ಯಲ್ಪೆನ್‌ಸ್ಟಾಕ್ (ನಾ.) ಆಲ್ಪ್ಸ್ ಮೊ. ಬೆಟ್ಟಗಳನ್ನು ಹತ್ತುವಾಗ ಹಿಡಿದುಕೊಳ್ಳುವ, ಕಬ್ಬಿಣದ ಅಣಚು ಹಾಕಿದ, ಉದ್ದವಾದ ಕೋಲು.

A'lpha ಆ್ಯಲ್ಫ (ನಾ.) ಗ್ರೀಕ್ ವರ್ಣಮಾಲೆಯ ಮೊದಲನೆಯ ಅಕ್ಷರ (α = ಅ). Alpha and omega ಮೊದಲೂ ಕೊನೆಯೂ ; ಆದಿಯೂ ಅಂತ್ಯವೂ. (ಖ. ವಿ.) ಯಾವುದಾದರೂ ನಕ್ಷತ್ರಪುಂಜದ ಮುಖ್ಯ ನಕ್ಷತ್ರ. Alpha rays ರೇಡಿಯಂ ಮೊದಲಾದ ಸ್ವಯಂಪ್ರಕಾಶ ಪದಾರ್ಥಗಳು ಸೂಸುವ ಮೂರು ತೆರದ ಕಿರಣಗಳಲ್ಲಿ ಮೊದಲನೆಯವು : ಆ್ಯಲ್ಫ ಕಿರಣಗಳು (ಇವು ಧನ ವಿದ್ಯುದ್ವಾಹಕ ಕಣಗಳು)

A'lphabet ಆ್ಯಲ್ಫಬೆಟ್ (ನಾ.) ವರ್ಣಮಾಲೆ ; ಅಕ್ಷರ ಮಾಲೆ. ಮೂಲ ಪಾಠಗಳು (ಓನಾಮ). **Alphabétic(al)** (ಗು.) ವರ್ಣಮಾಲೆಯ ; ವರ್ಣಾನುಕ್ರಮದ. **Alphabétically** (ಕ್ರಿ. ವಿ.) ; **Alphabétics** (ನಾ.) ಅಕ್ಷರ ಶಾಸ್ತ್ರ.

Alreády ಆಲ್‌ರೆಡಿ (ಕ್ರಿ. ವಿ.) ಆಗಲೇ ; ಮೊದಲೇ ; ಇಷ್ಟು ಬೇಗನೆ.

A'lso ಆಲ್ಸೋ (ಕ್ರಿ. ವಿ) ಕೂಡ ; ಸಹ ; ಅಲ್ಲದೆ ; ಮತ್ತು ; — ಊ.

Alt ಆ್ಯಲ್ಟ್ (ನಾ.) (ಸಂ.) ಉಚ್ಚಸ್ವರ ; ತಾರಸ್ವರ. (ರೂಪ.) In alt ಮನಸ್ಸಮುನ್ನತಿಯಿಂದ ; ಉಲ್ಲಾಸದಿಂದ.

A'ltar ಆಲ್ಟರ್ (ನಾ.) ಬಲಿಪೀಠ ; ಯಜ್ಞವೇದಿ. ದೇವರ ಧ್ಯಾನಕ್ಕಾಗಿ ಪ್ರತ್ಯೇಕವಾಗಿಟ್ಟಿರುವ ಸ್ಥಳ : ಪವಿತ್ರಸ್ಥಾನ. ಒಂದು ನಕ್ಷತ್ರ ಪುಂಜದ ಹೆಸರು. Lead to the altar ಮದುವೆಯಾಗು. **A'ltar-wise** (ಕ್ರಿ. ವಿ.) ಬಲಿಪೀಠದ ರೀತಿಯಲ್ಲಿ.

Altázimuth ಆ್ಯಲ್ಟ್ಯಾಜ಼ಿಮತ್ (ನಾ.) ಆಕಾಶಸ್ಥ ಕಾಯಗಳ ಉನ್ನತಿಯನ್ನೂ ದಿಗಂತಾಂತರವನ್ನೂ ಅಳೆಯುವ ಯಂತ್ರ : ಉನ್ನತಿ ದಿಗಂಶ ಮಾಪಕ.

A'lter ಆಲ್ಟರ್ (ಕ್ರಿ.) ಮಾರ್ಪಡಿಸು ; ತಿದ್ದು ; ವ್ಯತ್ಯಾಸಪಡಿಸು ; ಪಲ್ಲಟಿಸು ; ಬದಲಾಯಿಸು. ಮಾರ್ಪಡು ; ವ್ಯತ್ಯಾಸವಾಗು ; ಬದಲಾಗು. **A'lterable** (ಗು.) ಬದಲಾಯಿಸಲಾಗುವ ; ವ್ಯತ್ಯಸ್ಯ. **Alterabílity** (ನಾ.) ; **A'lterant** (ಗು., ನಾ.) ವ್ಯತ್ಯಾಸವುಂಟುಮಾಡುವ (ಪದಾರ್ಥ). **Alterátion** (ನಾ.) ಮಾರ್ಪಾಟು ; ತಿದ್ದುಪಡಿ ; ತಿದ್ದುಪಾಟು ; ಬದಲಾವಣೆ ; ರೂಪಾಂತರ. **A'lterative** — ರೆಟಿವ್ (ಗು., ನಾ.) ಮಾರ್ಪಡಿಸುವ ; ವ್ಯತ್ಯಾಸಪಡಿಸುವ ; ಬದಲಾಯಿಸುವ. (ವೈ. ಶಾ.) ದೇಹದಲ್ಲಿ ಪೋಷಣ ವ್ಯಾಪಾರಗಳನ್ನು ಬದಲಾಯಿಸಿ, ಅವನ್ನು ಆರೋಗ್ಯಸ್ಥಿತಿಗೆ ತರುವಂಥ (ಔಷಧ, ಚಿಕಿತ್ಸೆ)

A'ltercate ಆ್ಯ(ಆ)ಲ್ಟರ್‌ಕೇಟ್ (ಕ್ರಿ. ಅಕ.) ರೋಷದಿಂದ ವಾದಿಸು ; ಜಗಳವಾಡು ; ಮಾತಿಗೆ ಮಾತು ಜೋಡಿಸು. **Altercátion** (ನಾ.) ವ್ಯಾಜ್ಯ ; ವಿವಾದ ; ವಾಕ್ಕಲಹ.

A'lter égo (L) ಆ್ಯಲ್ಟರ್ ಎಗೊ (ನಾ.) ಆತ್ಮ ಸಮ ; ತನ್ನ ಎರಡನೆಯ ಪ್ರಾಣ ; ಆಪ್ತ ಮಿತ್ರ ; ಪ್ರಾಣಸ್ನೇಹಿತ.

Altérnant ಆ್ಯ(ಆ)ಲ್ಟರ್ನೆಂಟ್ (ಗು.) ಒಂದು ತಪ್ಪಿ ಒಂದು ಬರುವ. (ಖನಿಜ) ಕೆಲವು ಶಿಲೆಗಳಲ್ಲಿ ಒಂದು ತೆರದ ಪದರವಾದಮೇಲೆ ಮತ್ತೊಂದು ತೆರದ ಪದರವು ವರಸೆಯಾಗಿ ಬರುವ.

Altérnate ಆ್ಯ(ಆ)ಲ್ಟರ್ನೆಟ್ (ಗು.) (ಎರಡು ತೆರದ ವಸ್ತುಗಳಲ್ಲಿ) ಒಂದಾದ ಮೇಲೆ ಮತ್ತೊಂದರಂತೆ ವರಸೆಯಾಗಿ ಬರುವ : ಅನ್ಯಪ್ರತ್ಯನ್ಯ ; ಏಕಾಂತರ ; ಪರ್ಯಾಯ. Alternate generation ಪರ್ಯಾಯ ಸಂತತಿ ಕ್ರಮ : (ಕೆಲವು ಪ್ರಾಣಿವರ್ಗಗಳಲ್ಲಿ ಒಂದು ಸಂತತಿಯು ಪುಂಸ್ತ್ರೀ ಕ್ರಿಯೆಯಿಂದಲೂ ಅದರ ಮುಂದಣ ಸಂತತಿ ಪುಂಸ್ತ್ರೀ ಕ್ರಿಯೆಯಿಂದಾಗದೆ ಪ್ರತಿ ವ್ಯಕ್ತಿಯೂ ಬಿರಿದು ಒಡೆಯುತ್ತ ಬೇರೆ ಬೇರೆ ಪ್ರಾಣಿಯಾಗುವುದೇ ಮೊ. ಅಪುಂಸ್ತ್ರೀಕ್ರಿಯೆಯಿಂದಲೂ, ಮರಳಿ ಪುಂಸ್ತ್ರೀ ಕ್ರಿಯೆಯಿಂದಲೂ — ಹೀಗೆ ಪರ್ಯಾಯ ಕ್ರಮದಲ್ಲಿ ವಂಶಾಭಿವೃದ್ಧಿಯಾಗುವುದು. ಹಾಗೆಯೇ ಕೆಲವು ಸಸ್ಯವರ್ಗಗಳಲ್ಲಿಯೂ ನಡೆಯುವುದು). **Altérnately** (ಕ್ರಿ. ವಿ.) ; **A'lternate** ಆ್ಯ(ಆ)ಲ್ಟರ್ನೇಟ್ (ಕ್ರಿ.) ಒಂದಾದಮೇಲೆ ಮತ್ತೊಂದು ಕ್ರಮವಾಗಿ ಬರುವಂತೆ (ಅಥವಾ ಆಗುವಂತೆ) ಮಾಡು, ಏರ್ಪಡಿಸು. (ಕಾಲದಲ್ಲಾಗಲಿ, ಕ್ಷೇತ್ರದಲ್ಲಾಗಲಿ) ಒಂದಾದಮೇಲೊಂದು ವರಸೆಯಾಗಿ ಬರು. **A'lternating** (ಗು.) ; **Alternátion** (ನಾ.) ; **Altérnative** ಆ್ಯ(ಆ) —, (ಗು., ನಾ.) ಎರಡು ವಸ್ತುಗಳಲ್ಲಿ ಯಾವುದಾದರೂ ಒಂದನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾತ್ರ ಆಯ್ದುಕೊಳ್ಳಬಹುದಾದ ಅವಕಾಶ: ವಿಕಲ್ಪ; ಪಕ್ಷಾಂತರ. **Altérnatively** (ಕ್ರಿ. ವಿ.); **A'lternator** (ನಾ.) ಕ್ರಮವಾದ ಅಂತರಗಳಲ್ಲಿ ಸಂತತವಾಗಿ ದಿಗ್ಭೇದ ಹೊಂದುತ್ತಿರುವ ವಿದ್ಯುತ್ಪ್ರವಾಹವನ್ನು ಕೊಡುವ 'ಡೈನಮೊ' ಎಂಬ ವಿದ್ಯುತ್ಪ್ರವಾಹ ಜನಕ: ಪರ್ಯಾಯ ವಿದ್ಯುತ್ಪ್ರವಾಹ ಜನಕ.

Althoúgh ಆಲ್ದೋ (ಸಂ. ಅವ್ಯ.) ಆದರೂ; ಆದಾಗ್ಗೂ.

Altímeter ಆ್ಯಲ್ಟಿಮಿಟರ್ (ನಾ.) ಎತ್ತರವನ್ನು (ಸಾ., ಜ್ಯಾಮಿತಿಯ ವಿಧಾನದಲ್ಲಿ) ಅಳೆಯುವ ಸಾಧನ: ಉನ್ನತಿ ಮಾಪಕ.

A'ltitude ಆ್ಯಲ್ಟಿಟ್ಯೂಡ್ (ನಾ.) ಎತ್ತರ; ಉನ್ನತಿ; ಔನ್ನತ್ಯ. (ರೂಪ. ಸಹ). (ಜ್ಯಾ.) ತ್ರಿಕೋನ ಮೊ. ಗಳ ಲಂಬೋನ್ನತಿ. ಸಮುದ್ರ ಮಟ್ಟದ ಮೇಲಿನ ಎತ್ತರ. (ಖ. ವಿ.) ಯಾವುದಾದರೂ ಆಕಾಶಸ್ಥ ಕಾಯದ ಕೋನೋನ್ನತಿ (ಎಂದರೆ, ಕ್ಷಿತಿಜ ರೇಖೆಯೊಡನೆ ಆ ಕಾಯವು ಮಾಡುವ ಕೋನ). **A'ltitudes** (ನಾ.) ಉನ್ನತ ಪ್ರದೇಶ. (ರೂಪ. ಸಹ)

A'lto ಆ್ಯಲ್ಟೊ (ನಾ.) (ಸಂ.) ಗಂಡಸಿನ ಉಚ್ಚತಮ ಧ್ವನಿ; ಈ ಧ್ವನಿಯ ಸಂಗೀತ ಭಾಗ. ಇದೇ ಸ್ಥಾಯಿಯುಳ್ಳ ಹೆಂಗಸಿನ ಧ್ವನಿ; ಇದರ ಸಂಗೀತ ಭಾಗ. ಈ ಧ್ವನಿಯ ಗಾಯಕ.

Altogéther ಆಲ್ಟುಗೆದರ್ (ಕ್ರಿ. ವಿ., ನಾ.) ಒಟ್ಟಿಗೆ; ಒಟ್ಟಿನಲ್ಲಿ; ಪೂರ್ತಿಯಾಗಿ; ಶುದ್ಧಾಂಗವಾಗಿ. (ನಾ.) ಒಟ್ಟಿನ ಪರಿಣಾಮ. The altogether (ಬಳ. ಮಾ.) ಬತ್ತಲೆ, ದಿಗಂಬರ, ನಗ್ನ—(ಚಿತ್ರ, ವಿಗ್ರಹ, ಅವಸ್ಥೆ)

A'lto-relièvo ಆಲ್ಟೊರಿಲೀವೊ (ನಾ.) (ಶಿಲ್ಪ) ಪ್ರತಿಮೆಯ ಹೆಚ್ಚುಬ್ಬು; ಅರ್ಧ ಭಾಗಕ್ಕಿಂತ ಸ್ವಲ್ಪ ಹೆಚ್ಚಾಗಿ ಮುಂದಕ್ಕೆ ಚಾಚಿಕೊಂಡಿರುವಂತೆ ಕೆತ್ತಿದ ಪ್ರತಿಮೆ: ಹೆಚ್ಚುಬ್ಬಿನ ಪ್ರತಿಮೆ.

A'ltruism ಆ್ಯಲ್‌ಟ್ರೂಇಸ್ಮ್ (ನಾ.) ಪರಾರ್ಥತೆ; ಪರಾರ್ಥಪರತೆ; ಪರಹಿತ ಚಿಂತನೆ; ಪರೋಪಕಾರ ಬುದ್ಧಿ. **A'ltruist** (ನಾ.) ಪರಾರ್ಥಪರ; ಪರೋಪಕಾರಿ. **Altruístic** (ಗು.) ಲೋಕಹಿತಾರ್ಥವಾದ. **Altruístically** (ಕ್ರಿ. ವಿ.)

A'lum ಆ್ಯಲಂ (ನಾ.) ಪಟಿಕ. **A'lums** (ನಾ.) (ರ. ವಿ.) ಪಟಿಕದ ಜಾತಿಯ ಲವಣಗಳು; ಇವನ್ನೊಳಕೊಂಡ ಲವಣಕುಟುಂಬ. (ಖನಿಜ) ಸ್ವಾಭಾವಿಕವಾಗಿ ದೊರೆಯುವ ಅನೇಕ ಪಟಿಕ ಖನಿಜಗಳು.

Alumínium ಆ್ಯಲ್ಯೂಮಿನಿಯಂ (ನಾ.) ಬೆಳ್ಳಗಿರುವ, ಹಗುರವಾದ, ಸ್ಫುಟಧ್ವನಿ ಕೊಡುವ, ತಂತಿಯೆಳೆಯಲು ಸಾಧ್ಯವಾದ, ತಗಡಾಗಿ ಹೊಡೆಯಲಾಗುವ, ಗಾಳಿಯಲ್ಲಿ ಕಿಲುಬು ಹಿಡಿಯದ, ಪಾತ್ರೆ ಮೊ. ಸಾಧನಗಳಿಗಾಗಿಯೂ ಲೋಹ ಮಿಶ್ರಣಕ್ಕೂ ಉಪಯೋಗವಾಗುವ, ಒಂದು ಲೋಹ: 'ಅಲ್ಯೂಮಿನಿಯಂ'. Aluminium bronze ಅಲ್ಯೂಮಿನಿಯಂ ಮತ್ತು ತಾಮ್ರ ಸೇರಿ ಆದ ಮಿಶ್ರಲೋಹ: ಅಲ್ಯೂಮಿನಿಯಂ ಕಂಚು. **Alúmina** ಅಲ್ಯೂಮಿನ (ನಾ.) ಅಲ್ಯೂಮಿನಿಯಂ ಭಸ್ಮ (ಅಲ್ಯೂಮಿನಿಯಂ ಲೋಹವು ಆಮ್ಲಜನಕದೊಡನೆ ಸಂಯುಕ್ತವಾಗಿ ಆದ ಭಸ್ಮ). **Alúminous** (ಗು.) ಪಟಿಕ ಅಥವಾ ಅಲ್ಯೂಮಿನಿಯಂ ಭಸ್ಮದ ಸ್ವಭಾವದ, ಅಥವಾ ಅವುಗಳಲ್ಲಿ ಯಾವುದನ್ನಾದರೂ ಉಳ್ಳ. **Alúminum** (ನಾ.) Aluminium ಎಂಬುದರ ಮತ್ತೊಂದು ರೂಪ.

Alumnus (L) ಅಲಂನಸ್ (ನಾ.; ಬ. ವ. — ni, — ನೈ) (ಯಾವುದಾದರೂ ಒಂದು ಪಾಠಶಾಲೆಯ ಅಥವಾ ವಿಶ್ವವಿದ್ಯಾನಿಲಯದ) ಶಿಷ್ಯ.

Alvéolus ಆ್ಯಲ್ವೀಒಲಸ್ (ನಾ.) ಸಣ್ಣ ಗೂಡು. ಹಲ್ಲಿನ ಗೂಡು; ದಂತಾಶಯ. ಜೇನುಹುಟ್ಟಿಯಲ್ಲಿಯ ಒಂದು ಗೂಡು. **Alvéolar** (ಗು.) ಹಲ್ಲಿನ ಗೂಡುಗಳಿಗೆ ಅಥವಾ ಮೇಲ್ಪವಡೆಗೆ ಸಂಬಂಧಪಟ್ಟ; ಹಲ್ಲುಗೂಡಿನ. **A'lveolate** — ಲೆಟ್ (ಗು.) ಸಣ್ಣ ಸಣ್ಣ ಗೂಡುಗಳಿಂದ ಕೂಡಿದ.

A'lways ಆಲ್ವೇಸ್, ಆಲ್ವೆಸ್ (ಕ್ರಿ. ವಿ.) ಯಾವಾಗಲೂ; ಎಂದಿಗೂ; ಸದಾ; ಸರ್ವದಾ; ಎಲ್ಲಾ ಸಂದರ್ಭಗಳಲ್ಲಿಯೂ.

Am. **Be** ನೋಡಿ.

Amaín ಅಮೆಯ್ನ್ (ಕ್ರಿ. ವಿ.) (ಕಾವ್ಯದಲ್ಲಿ ಮಾತ್ರ) ರಭಸವಾಗಿ; ಜೋರಾಗಿ.

Amálgam ಅಮ್ಯಾಲ್ಗಂ (ನಾ.) ಪಾದರಸ ಮಿಶ್ರಿತ ಲೋಹ (Gold amalgam ರಸ ಮಿಶ್ರ ಕಾಂಚನ; ರಸಬಂಗಾರ). ಎರಡು ಅಥವಾ ಅನೇಕ ಪದಾರ್ಥಗಳು ಚೆನ್ನಾಗಿ ಕಲೆತು ಆದ ಮೃದುಮಿಶ್ರಣ. (ರೂಪ.) ಸಂಪೂರ್ಣ ಮಿಶ್ರಣ. **Amálgamate** — ಮೆಟ್ (ಗು.) (ಮು., ಭಾಷೆಗಳ ವಿಷಯದಲ್ಲಿ) ಕಲೆತುಹೋದ. (ಕ್ರಿ.) (— ಮೇಟ್) ಬೆರಸು; ಬೆರೆ. ಪಾದರಸದೊಡನೆ ಬೆರಸು, ಬೆರೆ. (ಪಂಗಡಗಳನ್ನು, ಸಂಘಗಳನ್ನು, ಭಾವಗಳನ್ನು) ಸೇರಿಸು. **Amalgamátion** (ನಾ.) ಪಾದರಸವನ್ನು ಸೇರಿಸುವುದು; ರಸಮಿಶ್ರಿತ ಸ್ಥಿತಿ; ರಸಮಿಶ್ರಣ. ಸಾ., ಲೋಹಮಿಶ್ರಣ. (ರೂಪ.) ಏಕರೂಪತಾ ಸಂಯೋಗ. **Amálgamator** (ನಾ.) ಮಿಶ್ರಣಕಾರಿ. ಸಾರ್ವಜನಿಕ ಸಂಘಗಳನ್ನು ಒಟ್ಟುಗೂಡಿಸುವವನು. ಚಿನ್ನದ, ಬೆಳ್ಳಿಯ, ಅದುರಿನೊಡನೆ ಪಾದರಸವನ್ನು ಮಿಶ್ರಮಾಡಿ ಅದರಿಂದ ಲೋಹವನ್ನು ಬೇರ್ಪಡಿಸುವ ಸಾಧನ.

Amanuénsis ಅಮ್ಯಾನ್ಯುಎನ್ಸಿಸ್ (ನಾ.; ಬ. ವ. — nses) ಹೇಳುತ್ತ ಹೋಗುವುದನ್ನು ಬರೆದುಕೊಳ್ಳುತ್ತ ಹೋಗುವವನು: ಉಕ್ತಲೇಖಕ; ಮತ್ತೊಬ್ಬನು ಬರೆದಿರುವುದನ್ನು ಪ್ರತಿಮಾಡುವವನು.

A'marant(h) ಆ್ಯಮರ್ಯಾನ್ಟ್, — ರ್ಯಾನ್ತ್ (ನಾ.) (ಕಾಲ್ಪನಿಕವಾದ) ಬಾಡದ ಹೂವು; ಅಮರ ಪುಷ್ಪ. ಬಣ್ಣದ ಪತ್ರಾವಳಿಯಿರುವ ಒಂದು ಸಸ್ಯಜಾತಿ: 'ಅಮರಾಂತು'. ಧೂಮ್ರವರ್ಣ. **Amarán-t(h)ine** — ನ್ಟಿನ್, ನ್ತಿನ್ (ಗು.) ಅಮರಾಂತಿನ; ಅಮರಾಂತಿಗೆ ಸಂಬಂಧಪಟ್ಟ ಅಥವಾ ಅಮರಾಂತಿನಂತಿರುವ; ಅಮರಾಂತಿನ ಬಣ್ಣದ. ಎಂದಿಗೂ ಬಾಡದ; ಅಮರ.

Amarýllis ಆ್ಯಮರಿಲಸ್ (ನಾ.) ಶರದೃತುವಿನಲ್ಲಿ ಹೂವುಬಿಡುವ ಒಂದು ಗೆಡ್ಡೆಗಿಡದ ಜಾತಿ.

Amáss ಅಮ್ಯಾಸ್ (ಕ್ರಿ. ಸಕ.) ಕೂಡಹಾಕು; ಒಟ್ಟುಗೂಡಿಸು; ರಾಶಿಹಾಕು. (ಹಣವನ್ನು) ಕೂಡಿಸಿಡು, ಶೇಖರಿಸು.

A'mateur ಆ್ಯಮಟ್ಯೂರ್, **Amateúr** — ಟರ್ (ನಾ.) ಯಾವುದಾದರೂ ಕಲೆಯನ್ನು ಅಥವಾ ವಿದ್ಯೆಯನ್ನು ಕಸಬಾಗಿ ಅಥವಾ ಸಂಪಾದನೆಗಾಗಿ ಕಲಿಯದೆ ಆತ್ಮವಿನೋದಕ್ಕಾಗಿ ಅಭ್ಯಾಸ ಮಾಡುವವನು: ಕಲಾ ಹವ್ಯಾಸಿ; ಕಲಾ ವಿಲಾಸಿ; ಕಲಾ ವಿನೋದಿ. ತಕ್ಕ ಪಾಂಡಿತ್ಯವಿಲ್ಲದೆ ತಿಳಿದವನಂತೆ ಓಡಾಡುವವನು: ಅಲ್ಪ ಪರಿಶ್ರಮಿ; ಅವ್ಯವಸಾಯಿ; ಅಡ್ಡ ಕಸಬಿ. **Amateúrish** (ಗು.) ಸರಿಯಾದ ಶಿಕ್ಷಣವಿಲ್ಲದ ಅಥವಾ ಅಭ್ಯಾಸವಿಲ್ಲದ.

A'mative ಆ್ಯಮಟಿವ್ (ಗು.) ವಿಷಯಾಸಕ್ತಿಯುಳ್ಳ; ಅನುರಾಗವುಳ್ಳ; ಪ್ರಣಯಶೀಲ. **A'mativeness** (ನಾ.); **A'matory** — ಟರಿ (ಗು.) ಪ್ರಣಯ ಸಂಬಂಧದ. **Amatórial** — ಟೋರಿಯಲ್ (ಗು.)

Amaurósis ಆ್ಯಮರೋಸಿಸ್ (ನಾ.) (ಕಣ್ಣಿನ ಮುಖ್ಯನರಕ್ಕೆ ಬೇನೆಯುಂಟಾದುದರಿಂದ) ದೃಷ್ಟಿಮಾಂದ್ಯ, ದೃಷ್ಟಿನಾಶ. **Amaurótic** (ಗು.)

Amáze ಅಮೆಯ್ಜ್ (ಕ್ರಿ. ಸಕ.) ಬೆರಗುಗೊಳಿಸು; ಅಚ್ಚರಿಗೊಳಿಸು; ಸ್ತಬ್ಧನನ್ನಾಗಿ ಮಾಡು; ವಿಸ್ಮಯಗೊಳಿಸು. **Amázedly** (ಕ್ರಿ. ವಿ.); **Amázing** (ಗು.); **Amázingly** (ಕ್ರಿ. ವಿ.); **Amázement** (ನಾ.) ಬೆರಗು; ಅತಿಶಯವಾದ ಆಶ್ಚರ್ಯ. **Amáze** (ನಾ.) (ಕಾವ್ಯದಲ್ಲಿ ಮಾತ್ರ) = Amazement.

A'mazon ಆ್ಯಮಝಾನ್ (ನಾ.) ಸಿಥಿಯಾ ದೇಶದಲ್ಲಿದ್ದರೆಂದು ಪ್ರಸಿದ್ಧಿಯಾಗಿರುವ ಸ್ತ್ರೀಯೋಧ ಜಾತಿ. ವೀರ ಸ್ತ್ರೀ; ವೀರ ಕನ್ಯೆ; ರಣಶೂರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಳಾದ ಹೆಂಗಸು ; ಪ್ರಮಿಳೆ. ಗಂಡುಬೀರಿ. **Amazónian** — ಜೋನಿಯನ್ (ಗು.) ವೀರಸ್ತ್ರೀಯ ; ವೀರಸ್ತ್ರೀ ಸಂಬಂಧವಾದ. ಗಂಡುಬೀರಿತನವುಳ್ಳ. ಅಮೆರಿಕಾ ದೇಶದ ಆ್ಯಮಜ಼ಾನ್ ನದಿಯ ಅಥವಾ ಅದರ ಜಲಾನಯನ ಭೂಮಿಯ.

A'mbages ಆ್ಯಂಬೆಜೆಜ಼್, **Ambáges** ಅ್ಯಂಬೇಜೀಸ್ (ನಾ., ಬ. ವ.) ಬಳಸುದಾರಿಗಳು ; ಸುತ್ತುಹಾದಿಗಳು. ವಕ್ರಪ್ರವೃತ್ತಿಗಳು. ಕಾಲ ವಿಳಂಬ ಮಾಡುವ ದುಷ್ಪ್ರವೃತ್ತಿ.

Ambássador ಆ್ಯಂಬ್ಯಾಸಡರ್ (ನಾ.) ಒಬ್ಬ ರಾಜನಿಂದಾಗಲಿ ಒಂದು ರಾಜ್ಯದಿಂದಾಗಲಿ ಮತ್ತೊಬ್ಬ ರಾಜನ ಬಳಿಗೆ ಅಥವಾ ರಾಜ್ಯಕ್ಕೆ ಕಳುಹಿಸಲ್ಪಟ್ಟ ನಿಯೋಗಿ : ರಾಯಭಾರಿ. ಒಂದು ದೇಶದ ರಾಜನಿಗಾಗಲಿ ರಾಜ್ಯಕ್ಕಾಗಲಿ ಪ್ರತಿನಿಧಿಯಾಗಿ ಪರ ರಾಜ್ಯದಲ್ಲಿ ಸಾರ್ವಕಾಲಿಕವಾಗಿರುವ ನಿಯೋಗಿ : ಪ್ರಣಿಧಿ. ರಾಜದೂತ ; ನಿಯೋಗಿ. Ambassador plenepotentiary ಸರ್ವಾಧಿಕಾರವುಳ್ಳ ನಿಯೋಗಿ (ಎಂದರೆ, ಕೌಲು, ಕರಾರು, ಸಂಧಿಪತ್ರ, ಮೊ. ಗಳಿಗೆ ರಾಜ್ಯದ ಪರವಾಗಿ ರುಜುಮಾಡುವ ಅಧಿಕಾರವುಳ್ಳವನು). **Ambassadórial** (ಗು.) ; **Ambássadress** (ನಾ.) ಸ್ತ್ರೀ ರಾಯಭಾರಿ ; ರಾಯ ಭಾರಿಯ ಹೆಂಡತಿ.

A'mber ಆ್ಯಂಬರ್ (ನಾ., ಗು.) ಕಾರೂಬಾ ಮಣಿ ; ಶಿಲಾ ರಾಳ ; ತೃಣಮಣಿ ; ತೈಲಸ್ಫಟಿಕ ; ಅಂಬರ್ (ಬಾಲ್ಟಿಕ್ ಸಮುದ್ರದ ದಕ್ಷಿಣ ದಡದಲ್ಲಿ ದೊರೆಯುವ, ಹೊಂಬಣ್ಣವುಳ್ಳ, ಜ್ಯೋತಿಃಪ್ರಸಾರಕವಾದ, ಒಂದು ಪ್ರಾಚೀನಾವಶಿಷ್ಟ ರಾಳಪದಾರ್ಥ. ಇದನ್ನು ಉಜ್ಜಿದರೆ ಇದರಲ್ಲಿ ವಿದ್ಯುತ್ತು ಹುಟ್ಟುವುದು). ನಾಲ್ಕು ಭಾಗ ಚಿನ್ನವನ್ನೂ ಒಂದು ಭಾಗ ಬೆಳ್ಳಿಯನ್ನೂ ಒಟ್ಟಿಗೆ ಕರಗಿಸಿ ಮಾಡಿದ ಮಿಶ್ರಲೋಹ. (ಗು.) ಅಂಬರ್ ಬಣ್ಣದ. **A'mberíte** (ನಾ.) ಹೊಗೆ ಹೊರಡದ ಒಂದು ತೆರದ ಸಿಡಿಮದ್ದು.

A'mbergris ಆ್ಯಂಬರ್‌ಗ್ರೀಸ್ (ನಾ.) ಉಷ್ಣ ವಲಯದ ಸಮುದ್ರಗಳಲ್ಲಿ ತೇಲುತ್ತ ದೊರೆಯುವ, ಒಂದು ಜಾತಿಯ ತಿಮಿಂಗಿಲದ ಕರುಳಿನಲ್ಲಿ ಹುಟ್ಟುವ, ಮೇಣದಂತೆ ಮೆತ್ತಗಿರುವ, ಸುಗಂಧದ್ರವ್ಯ : ಪನ್ನಂಬರ.

Ambidéxter ಆ್ಯಂಬಿಡೆಕ್ಸ್ಟರ್ (ಗು., ನಾ.) ಬಲಗೈಯಂತೆಯೇ ಎಡ ಗೈಯನ್ನೂ ಸರಾಗವಾಗಿ ಉಪಯೋಗಿಸಬಲ್ಲ(ವನು) ; ಇಕ್ಕೈಗಾರಿಯ ; ಸವ್ಯಸಾಚಿ. ದ್ವಿಪಕ್ಷಪಾತ. (ನ್ಯಾ. ಶಾ.) ಎರಡು ಕಕ್ಷಿಗಳಿಂದಲೂ ಹಣ ತೆಗೆದುಕೊಳ್ಳುವವನು ; ವಂಚಕ. **Ambidextérity** (ನಾ.) ; **Ambidéxt(e)rous** (ಗು.)

A'mbient ಆ್ಯಂಬಿಯೆನ್ಟ್ (ಗು.) ಸುತ್ತುವರಿದ ; ಸುತ್ತಲೂ ವ್ಯಾಪಿಸಿರುವ ; ಪರಿವೇಷ್ಟಕ.

Ambigúity ಆ್ಯಂಬಿಗ್ಯೂಯಿಟಿ (ನಾ.) ದ್ವಂದ್ವಾರ್ಥತೆ ; ಸಂದಿಗ್ಧತೆ ; ಅನಿಶ್ಚಯಾರ್ಥ. **Ambíguous** ಆ್ಯಂಬಿಗ್ಯುಅಸ್ (ಗು.) ; **Ambíguously** (ಕ್ರಿ. ವಿ.) ; **Ambíguousness** (ನಾ.)

A'mbit ಆ್ಯಂಬಿಟ್ (ನಾ.) ಎಲ್ಲೆ ; ಮೇರೆ ; ಗಡಿ ; ಆವರಣ ; ಮಂಡಲ ; ಪರಿಧಿ ; ಮಿತಿ ; ವಿಸ್ತೀರ್ಣ.

Ambítion ಆ್ಯಂಬಿಷನ್ (ನಾ.) ಹೆಬ್ಬಯಕೆ ; ಮಹಾ ಕಾಂಕ್ಷೆ ; ಅತ್ಯಾಶೆ. ಅಂಥ ಆಕಾಂಕ್ಷಾ ವಿಷಯ ಅಥವಾ ವಸ್ತು. **Ambítious** (ಗು.) : Ambitious attempt ದೊಡ್ಡ ಪ್ರಯತ್ನ. **Ambítiously** (ಕ್ರಿ. ವಿ.) ; **Ambítiousness** (ನಾ.)

A'mble ಆ್ಯಂಬ್‌ಲ್ (ಕ್ರಿ. ಅಕ.) (ಕುದುರೆ ಮೊ. ಗಳ ವಿಷಯದಲ್ಲಿ) ಬಲ ಗಡೆಯ ಕಾಲೆರಡನ್ನೂ ತರುವಾಯ ಎಡಗಡೆಯ ಕಾಲೆರಡನ್ನೂ ಒಟ್ಟಿಗೆ ಎತ್ತಿಟ್ಟು ಸುಲಭವಾಗಿ ನಡೆ ; ಜಗ್ಗುಹಾಕಿಕೊಂಡು ನಡೆ; ಒಯ್ಯಾರದಿಂದ ನಡೆ. ಅಂಥ ಕುದುರೆಯಮೇಲೆ ಸವಾರಿಮಾಡು ; ಅಂಥ ಕುದುರೆಯ ನಡೆಯಂತೆ ನಡೆ ಅಥವಾ ಕುಣಿ. ನಿಧಾನವಾದ ನಡೆಯಿಂದ ಸವಾರಿಮಾಡು. **A'mble** (ನಾ.) ; **A'mbling** (ಗು.) ; **A'mblingly** (ಕ್ರಿ. ವಿ.)

Ambleocárpous, Amblyo — ಆ್ಯಂಬ್ಲಿಯೊಕಾರ್ಪಸ್ (ಗು.) (ಸ. ವಿ.) ಬೀಜಗಳು ಪೂರ್ತಿಯಾಗಿ ಅಥವಾ ಬಹುಮಟ್ಟಿಗೆ ಫಲವಾಗದ : ವ್ಯರ್ಥಬೀಜ.

Amblósis ಆ್ಯಂಬ್ಲೋಸಿಸ್ (ನಾ.) (ವೈ. ಶಾ.) ಗರ್ಭಸ್ರಾವ. **Amblótic** (ಗು., ನಾ.) ಗರ್ಭಸ್ರಾವಕ (ಔಷಧ)

Amblyópia ಆ್ಯಂಬ್ಲಿಯೋಪಿಯ (ನಾ.) (ವೈ. ಶಾ.) (ದೃಷ್ಟಿಪಟದ ನಿಶ್ಶಕ್ತಿ ಮೊ. ದರಿಂದುಂಟಾದ) ದೃಷ್ಟಿಮಾಂದ್ಯ. **Amblyópic** — ಯಾಪಿಕ್ (ಗು.)

Ambrósia ಆ್ಯಂಬ್ರೋಸ್ಸಿಯ, —ಷಿಯ (ನಾ.) ಅಮೃತ. (ರುಚಿಯಿಂದಾಗಲಿ ವಾಸನೆಯಿಂದಾಗಲಿ) ಇನಿದಾದ ಪದಾರ್ಥ. ಜೇನುಣಿಸು. (ಸ. ವಿ.) ಒಂದು ಜಾತಿಯ ಕಳೆ. **Ambrósial** (ಗು.) ಅಮೃತ ಸದೃಶ ; ಮಧುರ. ಸ್ವರ್ಗೀಯ ; ಅಮರ.

A'mbulance ಆ್ಯಂಬ್ಯುಲನ್ಸ್ (ನಾ.) (ಸೈನ್ಯದ ಹಿಂದೆ ಹೋಗುವ) ಚರ ಚಿಕಿತ್ಸಾಲಯ. ರೋಗಿಗಳಿಗೂ ಗಾಯಪಡೆದವರಿಗೂ ಉಪಯೋಗಿಸುವ ವಾಹನ (ಬಂಡಿ ಮೊ.) : ಅಶಕ್ತಯಾನ.

A'mbulant ಆ್ಯಂಬ್ಯುಲನ್ಟ್ (ಗು.) ನಡೆಯುವ ; ಸಂಚರಿಸುವ. (ರೋಗ ವಿಷಯದಲ್ಲಿ) ದೇಹದ ಒಂದು ಭಾಗದಿಂದ ಮತ್ತೊಂದಕ್ಕೆ ಹೋಗುವ; ರೋಗಿಗಳನ್ನು ಸಂತತವಾಗಿ ಹಾಸಿಗೆಯಲ್ಲಿಯೇ ಮಲಗಿಸಿರದ. (ಚಿಕಿತ್ಸೆಯ ವಿಷಯದಲ್ಲಿ) ರೋಗಿಗಳು ಅಂಗಚಲನೆ ಮಾಡುತ್ತಿರಬೇಕಾದ. **Ambulátion** — ಲೇಷನ್ (ನಾ.) ನಡಗೆ ; ನಡೆಯುವ ಕೆಲಸ ; ಸಂಚಾರ. **A'mbulator** (ನಾ.) ಸಂಚಾರಿ. ಪ್ರಯಾಣ ಮಾಡಿದ ದೂರವನ್ನು ಅಳೆಯುವ ಸಲಕರಣೆ : ಸಂಚಾರ ಮಾಪಕ. **A'mbulatory** — ಲಟರಿ (ಗು., ನಾ.) ನಡಗೆಗೆ ಸಂಬಂಧಪಟ್ಟ ; ನಡೆಯುವುದಕ್ಕಾಗಿ ಏರ್ಪಡಿಸಿದ. ಚಲಿಸುವ ; ಅಸ್ಥಿರ. (ನಾ.) ಅಡ್ಡಾಡುವ ಸ್ಥಳ ; ಮೇರ್ಲ್ಲಾವಣಿಯಿರುವ ಹಾದಿ. ಸಂನ್ಯಾಸಿಯ ಮಠದಲ್ಲಿಯ ಏಕಾಂತ ಸ್ಥಾನ.

Ambuscáde ಆ್ಯಂಬಸ್ಕೇಡ್ (ನಾ., ಕ್ರಿ.) = **Ambush.**

A'mbush ಆ್ಯಂಬುಷ್ (ನಾ.) ಸೈನ್ಯವನ್ನು ಮರೆಮಾಡಿಟ್ಟಿರುವುದು; ಅಡವಿ ಮೊ. ಕಡೆಗಳಲ್ಲಿ ಮೇಲೆಬೀಳುವುದಕ್ಕಾಗಿ ಅಡಗಿಸಿಟ್ಟಿರುವ ಸೈನ್ಯ. (ಕ್ರಿ.) ಸೈನ್ಯವನ್ನು ಅಡಗಿಸಿಟ್ಟಿರು. ಹೊಂಚುಹಾಕಿಕೊಂಡಿರು.

Ameér, Amír ಅಮೀರ್ (ನಾ.) ಸಿಂಧುದೇಶದಲ್ಲಿಯ ಮತ್ತು ಆಫ್ಘಾನಸ್ಥಾನದಲ್ಲಿಯ ಹಲವು ಮಹಮ್ಮದೀಯ ರಾಜ್ಯಾಧಿಪತಿಗಳ ಅಧಿಕಾರ ನಾಮ : ಅಮೀರ. ಸರದಾರ ; ಮುಖ್ಯಾಧಿಕಾರಿ.

Améliorate ಅಮೀಲಿಯೊರೇಟ್ (ಕ್ರಿ.) ಮೇಲಾಗಿಸು ; ಮೇಲಾಗು ; ಒಳ್ಳಿತುಗೊಳಿಸು ; ಉತ್ತಮವಾಗಿಸು ; ಉತ್ತಮವಾಗು ; ಒಳ್ಳಿತಾಗು. **Amelioration** (ನಾ.) ಉತ್ತಮೀಕರಣ. **Améliorator,** — **ter** (ನಾ.) ; **Améliorative** (ಗು.)

A'mén ಏಮೆನ್, ಆಮೆನ್ (ಭಾವ. ಅವ್ಯ.) ತಥಾಸ್ತು ! ಹಾಗೇ ಆಗಲಿ !

Aménable ಅಮೀನಬ್‌ಲ್ (ಗು.) ಸಗ್ಗುವ ; ಬಗ್ಗುವ ; ತಿದ್ದಬಹುದಾದ ; ಶಿಕ್ಷಣೀಯ. (ಪರೀಕ್ಷೆಮಾಡಲು) ಸಾಧ್ಯವಾದ. **Amenability** (ನಾ.) ; **Aménableness** (ನಾ.) ; **Aménably** (ಕ್ರಿ. ವಿ.)

Aménd ಅಮೆಂಡ್ (ಕ್ರಿ.) ತಿದ್ದಿಕೊ ; ದುರ್ಮಾರ್ಗವನ್ನು ಬಿಟ್ಟುಬಿಡು, ಬಿಡಿಸು. (ದಸ್ತಾವೇಜುಗಳಲ್ಲಿ) ತಿದ್ದು. (ಸಭೆಯಲ್ಲಿ ತೀರ್ಮಾನವಾಗಲು ಇಟ್ಟಿರುವ ಗೊತ್ತುವಳಿಯನ್ನು) ಯುಕ್ತತೋರಿದಂತೆ ತಿದ್ದುಪಡಿ ಮಾಡು, ನೇರ್ಪಡಿಸು. **Améndable** (ಗು.) ; **Améndment** (ನಾ.) ತಿದ್ದುಪಾಟು ; ತಿದ್ದುಪಡಿ. **Améńds** ಅಮೆಂಡ್ಸ್ (ನಾ.) ಪರಿಹಾರ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಷ್ಕೃತಿ. Make amends ನಷ್ಟ ಕಟ್ಟಿಕೊಡು ; ತಪ್ಪುಕಾಣಿಕೆ ಕೊಡು ; ಕ್ಷಮಾಪಣೆ ಕೇಳಿಕೊ.

Améndé honoráble (F) ಆಮಾಂಡ್ ಒನೊರಾಬ್ಲ್ (ನಾ.) ಮಾಡಿದ ತಪ್ಪಿಗೆ ಬಹಿರಂಗವಾಗಿ ಕ್ಷಮಾಪಣೆ ಬೇಡಿ ನಷ್ಟ ಕಟ್ಟಿ ಕೊಡುವುದು.

Aménity ಅಮೆನಿಟಿ (ನಾ.) (ಸ್ಥಳ, ನೋಟ, ವಾಯುಗುಣ, ಜನರ ನಡೆ ನುಡಿಗಳು — ಇವುಗಳ ವಿಷಯದಲ್ಲಿ) ಹಿತವಾಗಿಯೂ ಮನೋಹರ ವಾಗಿಯೂ ಇರುವ ಸ್ಥಿತಿ. **Aménities** (ನಾ.) ಸೌಕರ್ಯಗಳು ; ಮನೋಹರವಾದ ಸ್ಥಳಗಳು, ಉದ್ಯೋಗಗಳು, ನಡತೆಗಳು, ಮರ್ಯಾದೆಗಳು. Amenities of civic life ನಾಗರಿಕ ಜೀವನದ ಸೌಕರ್ಯಗಳು.

Améntia ಅಮೆನ್ಷಿಯ, — ಮೆನ್ಷ (ನಾ.) ಬುದ್ಧಿರಾಹಿತ್ಯ. ಯೋಗ ಸಮಾಧಿ ; ಆತ್ಮ ತಲ್ಲೀನತೆ.

Amérce ಅಮರ್ಸ್ (ಕ್ರಿ. ಸಕ.) ದಂಡ ಹಾಕು ; ತಪ್ಪಿತ ಹಾಕು ; ಜುಲ್ಮಾನೆ ಹಾಕು ; ದಂಡಿಸು. **Amércement** (ನಾ.), **Amérciament** (ನಾ.) ದಂಡ ವಿಧಿಸುವುದು ; ದಂಡ ; ಜುಲ್ಮಾನೆ. **Amérciable** (ಗು.)

Américan ಅಮೆರಿಕನ್ (ಗು.) ಅಮೆರಿಕಾ ಖಂಡದ, ಅಥವಾ ಅಮೆರಿಕದ ಸಂಯುಕ್ತ ಸಂಸ್ಥಾನಗಳ. (ನಾ.) ಐರೋಪ್ಯ ಸಂತತಿಯ ಅಮೆರಿಕ ದೇಶದವನು. ಅಮೆರಿಕದ ಸಂಯುಕ್ತ ಸಂಸ್ಥಾನಗಳ ಪ್ರಜೆ. **Américanism** — ನಿಸ್ಮ್ (ನಾ.) ಅಮೆರಿಕದ ಅಥವಾ ಅದರ ಸಂಯುಕ್ತ ಸಂಸ್ಥಾನಗಳ ಮಾತಿನ (ಪದ ಪ್ರಯೋಗದ) ವೈಲಕ್ಷಣ್ಯ. ಅಮೆರಿಕದ ಸಂಯುಕ್ತ ಸಂಸ್ಥಾನಗಳ ವಿಷಯದಲ್ಲಿ ಅಭಿಮಾನ ಅಥವಾ ಸಹಾನುಭೂತಿ. **Américanist** (ನಾ.) ಅಮೆರಿಕಕ್ಕೆ ಸಂಬಂಧಪಟ್ಟ ವಿಷಯಗಳನ್ನು (ಎಂದರೆ, ಅದರ ಜನಾಂಗಕ್ಕೆ ಸಂಬಂಧಪಟ್ಟ ವಿಷಯಗಳು ಮೊ. ನ್ನು ನಿರ್ಧರಿಸುವ ಉದ್ದೇಶದಿಂದ) ವಿಚಾರ ಮಾಡುವವನು. **Américanize** (ಕ್ರಿ.) ಅಮೆರಿಕನನ್ನಾಗಿ ಮಾಡು (ಮು., ಅದರ ಸಂಯುಕ್ತ ಸಂಸ್ಥಾನಗಳ ಪ್ರಜೆಯನ್ನಾಗಿ ಅಂಗೀಕರಿಸು). ಅಮೆರಿಕದ ಲಕ್ಷಣಗಳುಳ್ಳದ್ದನ್ನಾಗಿ ಮಾಡು. ಅಮೆರಿಕದ ಲಕ್ಷಣಗಳುಳ್ಳವನಾಗು. ಅಮೆರಿಕದವರ ಮಾತಿನ ವೈಲಕ್ಷಣ್ಯಗಳನ್ನುಪಯೋಗಿಸು.

Ametábola ಆ್ಯಮಿಟ್ಯಾಬೊಲ (ನಾ., ಬ. ವ.) (ಜೀ. ವಿ.) ರೂಪ ಪರಾವರ್ತನ ಹೊಂದದ ಕೀಟಜಾತಿಯ ಒಂದು ಉಪ ವರ್ಗ (ಹೇನು, ಮೊ.) : ಪರಾವರ್ತನ ರಹಿತ ಕೀಟವರ್ಗ.

A'methyst ಆ್ಯಮಿತಿಸ್ಟ್ (ನಾ.) ಪಾಟಲ ಅಥವಾ ನೀಲಲೋಹಿತ ವರ್ಣದ ಒಂದು ರತ್ನ : ಪದ್ಮರಾಗ ಮಣಿ. Oriental amethyst (ಅಪೂರ್ವವಾಗಿ ದೊರೆಯುವ) ಪಾಟಲ ವರ್ಣದ, ಪಚ್ಚೆಯ ಜಾತಿಯ ರತ್ನ. **Amethýstine** — ಟಿನ್ (ಗು.) ಪದ್ಮರಾಗ ಮಣಿ ಸಂಬಂಧಿ, ಅಥವಾ ಪದ್ಮರಾಗಮಣಿಯುಳ್ಳ ; ಪದ್ಮರಾಗದ ಬಣ್ಣವುಳ್ಳ ; ನೀಲ ಲೋಹಿತ ವರ್ಣದ.

A'miable ಏಮಿಯಬ್ಲ್ (ಗು.) ಪ್ರೇಮಶೀಲ ; ಸ್ನೇಹಪರ ; ವಿಶ್ವಾಸ ಪರ ; ಹೊಂದಿಕೊಳ್ಳುವ ಸ್ವಭಾವದ ; ಸೌಜನ್ಯವುಳ್ಳ. **Amiabílity** (ನಾ.) ; **A'miableness** (ನಾ.) ; **A'miably** (ಕ್ರಿ. ವಿ.) ಸೌಹಾರ್ದದಿಂದ ; ಸೌಜನ್ಯದಿಂದ.

Amiánt(h)us ಆ್ಯಮಿಯಾನ್ಟಸ್, — ನ್ತಸ್ (ನಾ.) (ಖನಿಜ) ಮೆತುವಾದ, ನಾರುನಾರಾಗಿ ಸೀಳಲಾಗುವ, ಬಟ್ಟೆಯಂತೆ ನೆಯ್ಯಲಾಗುವ, ಒಂದು ಜಾತಿಯ ಕಲ್ಲುನಾರು. ನಾರುನಾರಾಗಿರುವ ಹಸಿರುಬಣ್ಣದ ಒಂದು ಜಾತಿಯ ಮಣಿ.

A'mic ಆ್ಯಮಿಕ್ (ಗು.) (ರ. ವಿ.) ಅಮೋನಿಯಾ ಸಂಬಂಧಿ.

A'micable ಆ್ಯಮಿಕಬ್ಲ್ (ಗು.) ಸ್ನೇಹಭಾವವುಳ್ಳ ; ವಿಶ್ವಾಸವುಳ್ಳ ; ಒಲವುಳ್ಳ ; ಅನ್ಯೋನ್ಯ ವಿಶ್ವಾಸದಿಂದ ಕೂಡಿದ. Amicable suit ಒಂದು ನ್ಯಾಯವಿಚಾರವಾಗಿ ನ್ಯಾಯಸ್ಥಾನದಿಂದ ತಕ್ಕ ತೀರ್ಪನ್ನು ಪಡೆಯಲು ಇಬ್ಬರು ಕಕ್ಷಿಗಳೂ ಸ್ನೇಹಭಾವದಿಂದ ಮಾಡಿದ ದಾವೆ. **Amicabílity** (ನಾ.) ; **A'micableness** (ನಾ.) ; **A'micably** (ಕ್ರಿ. ವಿ.).

Amícus cúriae (L) ಅಮೈಕಸ್ ಕ್ಯೂರಿಯಿ (ನಾ.) ನ್ಯಾಯಸ್ಥಾನದ ಮಿತ್ರ ; ನಿಷ್ಪಕ್ಷಪಾತವಾಗಿ ಬುದ್ಧಿವಾದ ಕೊಡುವವನು.

Amíd, Amídst ಅಮಿಡ್, ಅಮಿಡ್‌ಸ್ಟ್ (ಉಪ.) ನಡುವೆ ; ಮಧ್ಯೆ. ಸಂದರ್ಭದಲ್ಲಿ.

A'midin ಆ್ಯಮಿಡಿನ್ (ನಾ.) ಪಿಷ್ಟದಲ್ಲಿಯ ಲೀನವಾಗಬಲ್ಲ ಪದಾರ್ಥ. ದ್ರಾವಿತ (ಎಂದರೆ, ದ್ರವದಲ್ಲಿ ಲೀನವಾಗಿರುವ) ಪಿಷ್ಟ.

A'midol ಆ್ಯಮಿಡೋ(ಡಾ)ಲ್ (ನಾ.) ಛಾಯಾಚಿತ್ರ ಪ್ರಕ್ರಿಯೆಯಲ್ಲಿ ಒಂದು ಚಿತ್ರವಿಕಸನ ಪದಾರ್ಥ. (ವ್ಯಾಪಾರದ ಹೆಸರು)

Amídships ಅಮಿಡ್‌ಷಿಪ್ಸ್ (ಕ್ರಿ. ವಿ.) ಹಡಗಿನ ಮಧ್ಯಭಾಗದಲ್ಲಿ.

A'mildar ಆ್ಯಮಿಲ್ದಾರ್ (ನಾ.) ಒಂದು ತಾಲ್ಲೂಕಿನ ಮುಖ್ಯಾಧಿಕಾರಿ : ಅಮಲ್ದಾರ.

Amír. Ameer ನೋಡಿ.

Amíss ಅಮಿಸ್ (ಕ್ರಿ. ವಿ.) ಗುರಿತಪ್ಪಿಹೋಗಿ ; ಗುರಿಗೆಟ್ಟು. ಎಣಿಸಿದಂತೆ ನಡೆಯದೆ. ತೆರನಲ್ಲದೆ ; ನೇರವಲ್ಲದೆ ; ಕೆಟ್ಟು. To come or happen amiss ಗೊತ್ತುತಪ್ಪಿ (ಎಣಿಸಿದಂತಲ್ಲದೆ) ಸಂಭವಿಸುವುದು. To act amiss ತಪ್ಪಾಗಿ ನಡೆಯುವುದು. To take amiss ತಪ್ಪು ತಿಳಿದುಕೊಳ್ಳುವುದು ; ಅಪರಾಧವೆಂದು ಭಾವಿಸುವುದು. Not amiss ಅನುಚಿತವಲ್ಲ.

A'mity ಆ್ಯಮಿಟಿ (ನಾ.) ಕೆಳೆತನ ; ಹೊಂದಿಕೆ ; ಪ್ರೀತಿಭಾವ.

A'mmeter ಆ್ಯಮಿಟರ್ (ನಾ.) ವಿದ್ಯುತ್ಪ್ರವಾಹ ಮಾಪಕ.

Ammónia ಅಮೋನಿಯ (ನಾ.) ಘಾಟುವಾಸನೆಯುಳ್ಳ, ನಿರ್ವರ್ಣವಾದ, ಒಂದು ಕ್ಷಾರಾನಿಲ : ಅಮೋನಿಯ. Liquid ammonia ನೀರಿನಲ್ಲಿ ಲೀನವಾಗಿರುವ ಅಮೋನಿಯಾ ಅನಿಲ : ಅಮೋನಿಯಾ ದ್ರಾವಣ. **Ammóniac** ಅಮೋನಿಆ್ಯಕ್ (ಗು., ನಾ.) ಅಮೋನಿಯಾ ಸ್ವಭಾವದ. Sal ammoniac ಅಮೋನಿಯವೂ ಕ್ಲೋರೀನ್ ಎಂಬ ಪೀತಾನಿಲವೂ ಸಂಯೋಗಹೊಂದಿ ಆಗಿರುವ ಲವಣ : ನವಾಸಾಗರ. **Ammoníacal** ಆ್ಯಮೊನೈಅಕಲ್ (ಗು.) ಅಮೋನಿಯದ, ಅಮೋನಿಯಾ ಸ್ವಭಾವದ ಅಥವಾ ಅದರ ಸಂಬಂಧದ. **Ammóniated** ಅಮೋನಿಯೇಟೆಡ್ (ಗು.) ಅಮೋನಿಯದೊಡನೆ ಸಂಯೋಗಹೊಂದಿದ : ಅಮೋನಿಯಾ ಸಂಯುಕ್ತ. **Ammónium** (ನಾ.) ಅಮೋನಿಯಾ ಲವಣಗಳಲ್ಲಿ ಲೋಹಸ್ಥಾನದಲ್ಲಿರುವ ಊಹಿತ ಮೂಲಘಟಕ.

A'mmonite ಆ್ಯಮೊನೈಟ್ (ನಾ.) ಯುಗಾಂತರಗಳ ಹಿಂದೆ ಜೀವಿಸುತ್ತಿದ್ದ, ಸುರುಳಿಚಿಪ್ಪುಳ್ಳ ಒಂದು ಸಮುದ್ರ ಪ್ರಾಣಿಜಾತಿ. (ಈ ಚಿಪ್ಪಿನೊಳಗೆ ಸುತ್ತುಸುತ್ತಾಗಿ ಬಳಸಿಕೊಂಡು ಚಿತ್ರಕೊರೆದಂತಿರುವ ಕಾಲುವೆಯು ಪ್ರಾಣಿಯ ನೆಲೆ. ಪ್ರಾಣಿ ಸತ್ತಮೇಲೆ ಚಿಪ್ಪು ನೀರಿನ ತಳಕ್ಕೆ ಮುಳುಗಿ ಅದರ ಮೇಲೆ ಕ್ರಮೇಣ ಕಲ್ಲುಪದಾರ್ಥ ಸೇರುತ್ತ ನೆಲದಲ್ಲಿ ಹೂತುಹೋಗಿ ಜೈವಿಕ ಪದಾರ್ಥ ನಾಶಹೊಂದಿ ಚಿತ್ರದ ಕಾಲುವೆಯ ಅಚ್ಚುಮಾತ್ರ ಉಳಿದಿರುವ ಪಳೆಯುಳಿಕೆಯ ಕಲ್ಲು). ಸಾಲಗ್ರಾವದ ಜಾತಿಯ ಕಲ್ಲು.

Ammunítion ಆ್ಯಮ್ಯುನಿಷನ್ (ನಾ.) ಮದ್ದು, ಗುಂಡು, ಸಿಡಿಗುಂಡು ಮೊ. ಯುದ್ಧಸಾಮಗ್ರಿ. Ammunition boots ಸೈನಿಕರಿಗೆ ಕೊಡುವ ಕಾಲುಜೋಡುಗಳು.

Amnésia ಆ್ಯಮ್‌ನೀಸಿಯ (ನಾ.) (ವೈ. ಶಾ.) ಮರವುರೋಗ ; ಸ್ಮೃತಿನಾಶ. **Amnéstic** — ನೆಸ್ಟಿಕ್ (ಗು.) ಮರವನ್ನುಂಟು ಮಾಡುವ ; ನೆನಹು ನಂದಿಸುವ.

A'mnesty ಆ್ಯಮ್ನೆಸ್ಟಿ (ನಾ.) (ಇತರರ) ತಪ್ಪನ್ನು ಮರೆತುಬಿಡುವುದು, ಮನಸ್ಸಿಗೆ ಹಚ್ಚಿಕೊಳ್ಳದಿರುವುದು ; ಕ್ಷಮಾದಾನ ; (ರಾಜಕೀಯ ಅಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಧ) ಕ್ಷಮಾಪಣೆ ; ಸರ್ವಾಪರಾಧ ಕ್ಷಮೆ. (ಕ್ರಿ. ಸಕ.) ಕ್ಷಮಾದಾನ ಮಾಡು ; ಅಪರಾಧವನ್ನು ಮರೆತುಬಿಡು.

A'mnion ಆ್ಯಮ್ನಿಯಾನ್ (ನಾ. ; ಬ. ವ. —nia) ಭ್ರೂಣದ ಮೇಲಿನ ಮೊದಲನೆಯ ಪೊರೆ ; ಗರ್ಭವೇಷ್ಟನೆ.

Amoéba ಅಮೀಬ (ನಾ.) ತನ್ನ ರೂಪನ್ನು ಸಂತತವಾಗಿ ಬದಲಾಯಿಸುತ್ತಿರುವ ಒಂದು ಅಣುಪ್ರಾಣಿ : ಚಲರೂಪಿ ಜೀವಾಣು ; ಅಮೀಬ. **Amoébiform** (ಗು.) ; **Amoéboid** (ಗು.) ಅಮೀಬದಂತೆ ಅಸ್ಥಿರ ರೂಪವುಳ್ಳ.

Amoebaéan ಆ್ಯಮಿಬೀಯನ್ (ಗು.) ಪರ್ಯಾಯವಾಗಿ ಉತ್ತರ ಕೊಡುವ ; ಮರುಗುಡುವ.

Amóng, Amóngst ಅಮಂಗ್, ಅಮಂಗ್‌ಸ್ಟ್ (ಉಪ.) ನಡುವೆ ; ಮಧ್ಯೆ ; —ಅಲ್ಲಿ ; —ಒಳಗೆ ; 'ಪೈಕಿ'. You have killed him amongst you ನೀವು ಒಟ್ಟುಗೂಡಿ ಅವನನ್ನು ಕೊಂದಿರಿ.

Amóral ಏಮಾರಲ್ (ಗು.) ನೀತಿವಿಷಯಕ್ಕೆ ಸಂಬಂಧಪಡದ ; ನೀತಿವಿವಕ್ಷೆಯಿಲ್ಲದ ; ನೀತ್ಯತೀತ.

A'morous ಆ್ಯಮೊರಸ್ (ಗು.) ಪ್ರಣಯಾಸಕ್ತ ; ಅನುರಕ್ತ ; ವಿಲಾಸವುಳ್ಳ ; ಒಲುಮೆಯುಳ್ಳ ; ಬೇಟವುಳ್ಳ. **A'morously** (ಕ್ರಿ.ವಿ.) ; **A'morousness** (ನಾ.) ಮೋಹ ; ಬೇಟ ; ವಿಲಾಸ. **Amoúr** ಅ(ಆ)ಮೂರ್ (ನಾ.) ರಹಸ್ಯಪ್ರಣಯ ಸಂಧಾನ ; ಕಳ್ಳೊಲುಮೆ. **Amourétte** ಆಮೂರೆಟ್ (ನಾ.) ಅಲ್ಪವಾದ ಪ್ರಣಯ ಸಂಧಾನ.

Amórphism ಅಮಾರ್‌ಫಿಸ್‌ಮ್ (ನಾ.) ನಿಯತರೂಪ ರಾಹಿತ್ಯ (ಮು., ಸ್ಫಟಿಕಾಕೃತಿ ರಾಹಿತ್ಯ). **Amórphous** (ಗು.) ರೂಪ ರಹಿತ ; ಅರೂಪ ; ಅನಿಷ್ಕೃಷ್ಟ. (ರ. ವಿ.) ಸ್ಫಟಿಕಾಕೃತಿ ರಹಿತ ; ಅಸ್ಫಟಿಕ. (ಜೀ. ವಿ.) ನಿಷ್ಕೃಷ್ಟ ರಚನೆಯಿಲ್ಲದ. (ರೂಪ.) ಅವ್ಯವಸ್ಥಿತ ; ಅಪರಿಪಕ್ವ. **Amórphousness** (ನಾ.)

Amorphozóa ಅಮಾರ್ಫೊಸೋಅ (ನಾ., ಬ. ವ.) (ಜೀ. ವಿ.) ಆದಿ ಜೀವಿಗಳು (ಸ್ಪಂಜು ಮೊ. ಆಕಾರ ರಹಿತ ಜೀವಿಗಳು)

Amortis(z)átion ಅಮಾರ್ಟಿಸೇಷನ್ (ನಾ.) ಜಮೀನನ್ನು ಪರಾಧೀನ ಮಾಡಲಾಗದಂತೆ ದತ್ತಿಬಿಡುವುದು : ಅಪರವಶ್ಯ ದತ್ತಿ. ಸಾಲವನ್ನು ಕ್ರಮೇಣ (ಸಾ., ಇಳಿನಿಧಿಯ=Sinking fund ಮೂಲಕ) ತೀರಿಸಿ ಬಿಡುವುದು. **Amórtis(z)e** ಅಮಾರ್ಟಿಸ್ (ಕ್ರಿ. ಸಕ.)

Amoúnt ಅಮೌಂಟ್ (ನಾ.) ಒಟ್ಟು ; ಒಟ್ಟು ಮೊಬಲಗು ; ಅಸಲೂ ಬಡ್ಡಿಯೂ ಸೇರಿ ಆಗುವ ಮೊತ್ತ. ಪರಿಮಾಣ. (ರೂಪ.) ಫಲಿತಾರ್ಥ ; ಒಟ್ಟು ಅಭಿಪ್ರಾಯ. (ಕ್ರಿ. ಅಕ.) ಒಟ್ಟಾಗು ; ಒಟ್ಟು ಅಭಿಪ್ರಾಯವಾಗು.

Amoúr. Amorous ನೋಡಿ.

A'mour-própre (F) ಆಮೂರ್‌ಪ್ರೊಪ್ರ್ (ನಾ.) ಸ್ವಾಭಿಮಾನ ; ಆತ್ಮಗೌರವ.

A'mpere ಆ್ಯಂಪೇರ್, ಆನ್ಪೆರ್ (ನಾ.) ವಿದ್ಯುತ್ಪ್ರವಾಹವನ್ನು ಅಳೆಯುವ ಮಾನ : ಒಂದು 'ಓಮ್' ಮಾನವುಳ್ಳ ಪ್ರತಿರೋಧದಲ್ಲಿ (ತಡೆಯಲ್ಲಿ), ಒಂದು 'ವೋಲ್ಟ್' ಮಾನವುಳ್ಳ ವಿದ್ಯುದ್ಬಲವು ಕಳುಹಿಸಲಾಗುವ ವಿದ್ಯುತ್ಪ್ರವಾಹ : ಆಂಪೇರ್.

Amphíbia ಆ್ಯಂಫಿಬಿಯ (ನಾ., ಬ. ವ.) ಸರೀಸೃಪ ವರ್ಗಕ್ಕೂ ಮೀನವರ್ಗಕ್ಕೂ ಮಧ್ಯೇ ಇರುವ, ಬೆನ್ನೆಲುಬುಳ್ಳ ಪ್ರಾಣಿಗಳ ಒಂದು ಜಾತಿ (ಕಪ್ಪೆ ಮೊ.). ನೀರಿನಲ್ಲೂ ನೆಲದಮೇಲೂ ಸಹ ವಾಸಿಸಬಲ್ಲ ಪ್ರಾಣಿಗಳು : ಉಭಯ ಜೀವಿಗಳು. (ರೂಪ.) ಸಂದಿಗ್ಧ ಸ್ವಭಾವವುಳ್ಳವು ; ದ್ವಿಮಾರ್ಗ ಜೀವಿಗಳು. **Amphíbian** (ಗು., ನಾ.) ಸ್ಥಲ ಜಲೋಭಯ ಜೀವಿ. ನೆಲದಿಂದಾಗಲಿ ನೀರಿನಿಂದಾಗಲಿ ಮೇಲಕ್ಕೇರಿ, ನೆಲದ ಮೇಲಾಗಲಿ ನೀರಿನಮೇಲಾಗಲಿ ಇಳಿಯಲಾಗುವಂತೆ ರಚಿಸಿರುವ ಆಕಾಶ ಯಾನ ; ಸ್ಥಲ ಜಲ ಆಕಾಶ ಯಾನ : ಉಭಯ ಯಾನ. (ರೂಪ.) ಸಂದಿಗ್ಧ ಸ್ವಭಾವ ಜೀವಿ. **Amphíbious** (ಗು.) ಭೂಮಿಗೂ ನೀರಿಗೂ ಹೊಂದುವ ಅಥವಾ ಸಂಬಂಧಪಟ್ಟ : ಸ್ಥಲ ಜಲ ಸಂಬಂಧಿ. **Amphíbiously** (ಕ್ರಿ. ವಿ.) ; **Amphibiólogy** (ನಾ.) ಉಭಯಜೀವಿಗಳನ್ನು ಕುರಿತ ಪ್ರಾಣಿವಿಜ್ಞಾನ.

Amphibólogy ಆ್ಯಂಫಿಬಾಲೊಜಿ (ನಾ.) ಹೊರಳುಮಾತು ; ಸಂದಿಗ್ಧಾರ್ಥವುಳ್ಳ ಮಾತು. **Amphibológical** (ಗು.) (ವಾಕ್ಯ ಅಥವಾ ವಾಕ್ಯಭಾಗದಲ್ಲಿ) ಸಂದಿಗ್ಧಾರ್ಥವುಳ್ಳ.

A'mphigam ಆ್ಯಂಫಿಗ್ಯಾಮ್ (ನಾ.) (ಸ. ವಿ.) ಸ್ಪಷ್ಟವಾದ ಜನನಾಂಗಗಳಿಲ್ಲದ ಸಸ್ಯ. **Amphígamous** (ಗು.)

Amphigoúri, A'mphigory ಆ್ಯಂಫಿಗೂರಿ, — ಗೊರಿ (ನಾ.) ಅರ್ಥವಿಲ್ಲದ ಬರವಣಿಗೆ.

Amphimíxis ಆ್ಯಂಫಿಮಿಕ್ಸಿಸ್ (ನಾ.) (ಜೀ. ವಿ.) ಎರಡು ವ್ಯಕ್ತಿಗಳ ಅಥವಾ ಅವುಗಳ ಬೀಜಾಂಕುರಗಳ ಸಂಯೋಗ (ಪುಂಸ್ತ್ರೀ ಸಂಯೋಗದಿಂದಾಗುವ ಪ್ರತ್ಯುತ್ಪತ್ತಿಯಲ್ಲಿಯಂತೆ) : ಉಭಯ ಬೀಜ ಸಂಯೋಗ.

Amphióxus ಆ್ಯಂಫಿಆಕ್ಸಸ್ (ನಾ.) ಒಂದು ಮೀನಜಾತಿ.

Amphípoda ಆ್ಯಂಫಿಪೊಡ (ನಾ., ಬ. ವ.) ಎರಡು ವಿಧವಾದ ಪಾದಗಳುಳ್ಳ ವಲ್ಕವಂತ ಪ್ರಾಣಿವರ್ಗ : ಉಭಯಪಾದಿ. **A'mphipod** —ಪಾಡ್ (ನಾ.) ; **Amphípodan** —ಪೊಡನ್ (ಗು.) ; **Amphípodous** (ಗು.)

Amphíprostyle ಆ್ಯಂಫಿಪ್ರೊಸ್ಟೈಲ್ (ಗು.) ಹಿಂದೆ ಮುಂದೆ ಎರಡು ಕಡೆಗಳಲ್ಲಿಯೂ ಮುಖಮಂಟಪವುಳ್ಳ.

Amphisbaéna ಆ್ಯಂಫಿಸ್‌ಬೀನಾ (ನಾ.) (ಕಾಲ್ಪನಿಕ) ಎರಡು ತುದಿಗಳಲ್ಲಿಯೂ ತಲೆಯಿರುವ ಹಾವು : ಇರ್ತಲೆ ಹಾವು. (ಪ್ರಾ. ವಿ.) ಹುಳುವಿನಂತಿರುವ ಒಂದು ಹಲ್ಲಿಯ ಜಾತಿ.

A'mphitheatre, —ter ಆ್ಯಂಫಿತೀಯಟರ್ (ನಾ.) ಮಧ್ಯೇ ಇರುವ ರಂಗಭೂಮಿಯ ಸುತ್ತಲೂ ಮೆಟ್ಟಲು ಮೆಟ್ಟಲಾಗಿ ಪ್ರೇಕ್ಷಕರಿಗೆ ಸ್ಥಳ ಮಾಡಿರುವ ವೃತ್ತಾಕಾರದ ಅಥವಾ ಅಂಡಾಕಾರದ ಕಟ್ಟಡ : ವರ್ತುಲ ನಾಟಕಶಾಲೆ. ಅಂಥ ಅರ್ಧಚಂದ್ರಾಕಾರದ ಪೀಠಪಂಕ್ತಿ. ಮಲ್ಲರಂಗ ; ಅಖಾಡ. ಸುತ್ತಲೂ ಗುಡ್ಡಗಳು ಅಥವಾ ಬೆಟ್ಟಗಳು ಹಬ್ಬಿಕೊಂಡಿರುವ ಪ್ರದೇಶ. **Amphitheátrical** —ತಿಆ್ಯಟ್ರಿಕಲ್ (ಗು.)

Amphítryon ಆ್ಯಂಫಿಟ್ರಿಯಾನ್ (ನಾ.) ಅತಿಥಿ ಸತ್ಕಾರಿ ; ಆತಿಥ್ಯಕಾರ ; ಆತಿಥೇಯ ; ಅನ್ನದಾನಿ.

A'mple ಆ್ಯಂಪ್‌ಲ್ (ಗು.) ಬೇಕಾದಷ್ಟು ; ಹೇರಳ ; ಯಥೇಷ್ಟ ; ವಿಸ್ತಾರ ; ವಿಪುಲ ; ಪುಷ್ಕಲ. **A'mpleness** (ನಾ.) ; **A'mply** (ಕ್ರಿ. ವಿ.) ; **A'mpliative** ಆ್ಯಂಪ್ಲಿಯೆಟಿವ್ (ಗು.) (ತರ್ಕ) ಭಾವಾರ್ಥವನ್ನು ವಿಶದೀಕರಿಸುವ ; ಅರ್ಥವರ್ಧಕ. **A'mplify** (ಕ್ರಿ.) ವಿಶದೀಕರಿಸು ; ವಿಸ್ತರಿಸು. **Amplificátion** (ನಾ.) ; **A'mplifier** —ಫೈಅರ್ (ನಾ.) ಪರಿವರ್ಧಕ ; ವಿಸ್ತಾರಕ. ನಿಸ್ತಂತು ವಾರ್ತಾ ಪ್ರಸರಣದಲ್ಲಿ ಬರುವ ವಿದ್ಯುತ್ತಿನ ಸಂಜ್ಞೆಗಳನ್ನು ಗ್ರಹಿಸಿ, ಕೇಳರಾಗುವಂತೆ ಪುಷ್ಟಿಗೊಳಿಸುವ ಸಲಕರಣೆ : ಧ್ವನಿ ವರ್ಧಕ. **A'mplitude** (ನಾ.) ವೈಶಾಲ್ಯ ; ವಿಸ್ತರ ; ವಿಸ್ತೃತಿ ; ವಿಸ್ತೀರ್ಣತೆ ; ಹರವು ; ಸಮೃದ್ಧಿ. ಮಹತ್ತ್ವ ; ಗೌರವ. (ಖ. ವಿ.) ಒಂದು ಆಕಾಶಸ್ಥ ಜ್ಯೋತಿಯು ಹುಟ್ಟುವಾಗ ಅಥವಾ ಅಸ್ತಮಿಸುವಾಗ ಅದಕ್ಕೂ ಕ್ಷಿತಿಜದ ಪೂರ್ವ ಅಥವಾ ಪಶ್ಚಿಮ ದಿಕ್ಪ್ರದೇಶಕ್ಕೂ ಇರುವ ಕೋನದೂರ. (ಭೌ. ವಿ.) ಚಲನ ವೈಶಾಲ್ಯ. Amplitude of vibration ಕಂಪನ ವೈಶಾಲ್ಯ.

Ampúlla ಆ್ಯಂಪಲ (ನಾ.) (ರೋಮನರ) ಎರಡು ಹಿಡಿಯ ಗುಂಡುಗಾಜಿನ ಪಾತ್ರೆ ; ಪವಿತ್ರ ಕಾರ್ಯಕ್ಕೆ ಉಪಯೋಗಿಸುವ ತೈಲ ಮೊ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನುಳ್ಳ ಕಲಶ. (ಜೀ. ವಿ.) ಪ್ರಾಣಿಗಳ ದೇಹದಲ್ಲಿಯ ನಾಳದ ಉಬ್ಬಿದ ಕೊನೆ: ವಿಸ್ತೃತ ನಾಳಾಗ್ರ.

A'mputate ಆ್ಯಂಪ್ಯುಟೇಟ್ (ಕ್ರಿ. ಸಕ.) ಕೊಯ್ದುಹಾಕು ; ಕತ್ತರಿಸಿ ಹಾಕು. (ಶಸ್ತ್ರವೈದ್ಯ) ಅಂಗಚ್ಛೇದವಮಾಡು. **Amputátion** (ನಾ.) ; **A'mputator** (ನಾ.)

Amúck ಅಮಕ್ (ಕ್ರಿ. ವಿ.) (To run amuck ಕೊಲ್ಲುವ ಹುಚ್ಚಿನಿಂದ ಓಡಾಡು). (ರೂಪ.) ಹುಚ್ಚುಹುಚ್ಚಾಗಿ.

A'mulet ಆ್ಯಮ್ಯುಲೆಟ್ (ನಾ.) (ಕೇಡುಂಟಾಗದಂತೆ ಧರಿಸುವ) ತಾಯಿತಿ ; ಕಾಪು ; ಯಂತ್ರ ; ರಕ್ಷೆ.

Amúse ಅಮ್ಯೂಸ್ (ಕ್ರಿ. ಸಕ.) (ವಿನೋದಕ್ಕಾಗಿ) ಮನಸ್ಸನ್ನು ಬೇರೆ ಕಡೆಗೆ ತಿರುಗಿಸು ; ನಗಿಸು ; ನಗುವಹಾಗೆ ಮಾಡು ; ವಿನೋದ ಪಡಿಸು ; ಹೊತ್ತುಕಳೆ. **Amúsable** (ಗು.) ; **Amúsive** (ಗು.) ; **Amúsement** (ನಾ.) ವಿನೋದ ; ಕ್ರೀಡೆ.

Amygdálic ಆ್ಯಮಿಗ್‌ಡ್ಯಾಲಿಕ್ (ಗು.) ಬಾದಾಮಿಯ. (Amygdalic acid ಬಾದಾಮಿ ಆಮ್ಲ)

Amýgdaloid ಅಮಿಗ್‌ಡಲಾಯ್ಡ್ (ಗು., ನಾ.) ಬಾದಾಮಿಯಾಕಾರದ ಖನಿಜ ಗ್ರಂಥಿಗಳಿರುವ (ಅಗ್ನಿಶಿಲೆ)

A'myl ಆ್ಯಮಿಲ್ (ನಾ.) (ರ. ವಿ.) ವಿವಿಧ ಮದ್ಯಸಾರಗಳ ಘಟಕಾಂಶ. **Amýlic** (ಗು.)

Amyláceous ಆ್ಯಮಿಲೇಷಸ್ (ಗು.) ಪಿಷ್ಟದ ; ಪಿಷ್ಟಗುಣವುಳ್ಳ. **A'myloid** (ಗು.) ಪಿಷ್ಟದಂಥ. (ನಾ.) ಸಸಾರಜನಕವಿಲ್ಲದ ಪಿಷ್ಟಾಹಾರ.

Amylópsin ಆ್ಯಮಿಲಾಪ್ಸಿನ್ (ನಾ.) ದೇಹದಲ್ಲಿ ಪಿಷ್ಟವನ್ನು ಶರ್ಕರವನ್ನಾಗಿ ಮಾರ್ಪಡಿಸುವ ಶಕ್ತಿಯುಳ್ಳ ಮೇದೋಜೀರಕ ರಸದಲ್ಲಿಯ ವಿಕರಣಸಾರ (Ferment) : ಶರ್ಕರ ಕಾರಕ ವಿಕರಣಸಾರ.

An. A ನೋಡಿ.

A'na ಏನ, ಆನ (ನಾ. ; ಬ. ವ. Anas) ಯಾವನಾದರೂ ಒಬ್ಬ ಮಹಾಪುರುಷನ ವಚನಗಳು, ಆತನ ವಿಷಯವಾದ ಕಥೆಗಳು, ಐತಿಹ್ಯಗಳು ; ಒಬ್ಬ ಮನುಷ್ಯನ ಅಥವಾ ಸ್ಥಳದ ವಿಷಯವಾದ ಪ್ರವಾದಗಳು ; ಸಾಹಿತ್ಯ ಸಂಬಂಧವಾದ ತುಣುಕು ಮಿಣುಕುಗಳು. (ಉ. ಪ್ರ.) ಈ ಅರ್ಥ ಕೊಡುವ ಪ್ರತ್ಯಯ : ಉದಾ. — Shakesperiana.

Anabáptism ಆ್ಯನಬ್ಯಾಪ್ಟಿಸ್ಮ್ (ನಾ.) (ಕ್ರೈಸ್ತಮತದ) ಪುನರ್ಜ್ಞಾನಸ್ನಾನ. 'ಆ್ಯನಬ್ಯಾಪ್ಟಿಸ್ಟ್' ಎಂಬ ಕ್ರೈಸ್ತಪಂಗಡದ ಮತತತ್ತ್ವ. **Anabáptist** (ನಾ.) ಮಗುವಾಗಿದ್ದಾಗ ಮಾಡಿಸಿದ ಜ್ಞಾನಸ್ನಾನವು ವಿಧ್ಯುಕ್ತವಲ್ಲವೆಂದೂ ಪ್ರಾಯದಲ್ಲಿ ಪುನಃ ಜ್ಞಾನಸ್ನಾನ ಮಾಡಿಸುವುದು ಅವಶ್ಯಕವೆಂದೂ ಅಭಿಪ್ರಾಯಪಡುವ ಕ್ರೈಸ್ತ ಮತಸ್ಥ.

Anábas ಆ್ಯನಬ್ಯಾಸ್ (ನಾ.) ಕೆಲವು ವೇಳೆ ನೀರಿನಿಂದ ಹೊರಗೆ ಬಂದು ಗಿಡಗಳನ್ನು ಕೂಡ ಹತ್ತುವ ಒಂದು ಮೀನಜಾತಿ.

Anábasis ಅನ್ಯಾಬಸಿಸ್ (ನಾ.) ದಂಡಯಾತ್ರೆ (ಮು., 'ಸೆನೊಫನ್' ಎಂಬ ಗ್ರೀಕ್ ಚರಿತ್ರಕಾರನು ಹೇಳಿರುವಂತೆ, ಪರ್ಷ್ಯದ ದೊರೆಯಾದ ಕಿರಿಯ ಕೈರಸ್ಸನು ಏಷ್ಯಾಕ್ಕೆ ದಂಡೆತ್ತಿಹೋದ ಯಾತ್ರೆ)

Anabátic ಆ್ಯನಬ್ಯಾಟಿಕ್ (ಗು.) (ಪ. ಶಾ.) ಮೇಲಕ್ಕೇರುವ : (Anabatic wind ವಾಯು ಮೇಲಕ್ಕೇರುವುದರಿಂದುಂಟಾದ ಗಾಳಿ : ಊರ್ಧ್ವಮುಖ ವಾತ)

A'nabranch ಆ್ಯನಬ್ರ್ಯಾಂಚ್ (ನಾ.) ಒಂದು ನದಿಯಿಂದ ಹೊರಟು ಅದೇ ನದಿಯ ಕೆಳಭಾಗದಲ್ಲಿ ಮರಳಿ ಸೇರುವ ಹೊಳೆ : ಪುನಸ್ಸಂಗಮ ಶಾಖೆ.

Anáchronism ಅನ್ಯಾಕ್ರನಿಸ್ಮ್ (ನಾ.) ಕಾಲದ ತಪ್ಪೆಣಿಕೆ ; ಈಚಿನ ಕಾಲದ ವ್ಯಕ್ತಿ, ನಡವಳಿ, ಅಭಿಪ್ರಾಯ, ಮೊ. ನ್ನು ಅದರ ಹಿಂದಿನ ಕಾಲದ ಕಥೆಯಲ್ಲಿ ಸೇರಿಸುವುದು. ಕಾಲವಿರೋಧ ; ಅಸಂಗತಿ. **Anachrónic** ಆ್ಯನಕ್ರಾನಿಕ್ (ಗು.) ಕಾಲವಿರೋಧವುಳ್ಳ. **Anáchronístic** ಅನ್ಯಾಕ್ರನಿಸ್ಟಿಕ್ (ಗು.) ಕಾಲವಿರೋಧಾತ್ಮಕ.

Anaclástic ಆ್ಯನಕ್ಲಾಸ್ಟಿಕ್ (ಗು.) ಕಿರಣ ವಕ್ರೀಭಾವ ಸಂಬಂಧವಾದ. Anaclastic glasses ತಳವು ಸ್ವಲ್ಪಮಟ್ಟಿಗೆಬಹಿರ್ಗೋಲಾಕಾರವಾಗಿರುವ ಬಹಳ ತೆಳ್ಳನೆಯ ಗಾಜಿನ ಕುಡಿಕೆಗಳು (ಅವುಗಳೊಳಗಿನ ಗಾಳಿಯನ್ನು ಹೀರಿದರೆ ತಳವು ಒಳಕ್ಕೆದ್ದು ಅಂತರ್ಗೋಲಾಕಾರವಾಗಿ, ಬಿಟ್ಟರೆ ಚಟಚಟನೆ ಶಬ್ದಮಾಡುತ್ತ ಮರಳಿ ಅವು ಪೂರ್ವರೂಪವನ್ನು ಪಡೆಯುವುವು)

Anacolúthon ಆ್ಯನಕೊಲ್ಯೂತನ್ (ನಾ.) (ವ್ಯಾ.) ವಾಕ್ಯರಚನೆಯಲ್ಲಿ ಕ್ರಮಭಂಗಮಾಡಿ ಬರೆದ (ಹೇಳಿದ) ಭಾಗಗಳುಳ್ಳ ವಾಕ್ಯ ; ಅನ್ವಯಭಂಗ. (ಉದಾ. — He that curseth father or mother, let him die the death . . . . ತಂದೆ ತಾಯಿಗಳನ್ನು ಬಯ್ಯುವವನು, ಅಂಥವನಿಗೆ ದುರ್ಮರಣ ಪ್ರಾಪ್ತವಾಗಲಿ)

Anacónda ಆ್ಯನಕಾಂಡ (ನಾ.) ಸಿಲೋನಿನ ಒಂದು ಹೆಬ್ಬಾವಿನ ಜಾತಿ. ದಕ್ಷಿಣ ಅಮೆರಿಕದ 'ಬೋಆ' ಎಂಬ ದೊಡ್ಡ ಹಾವು ; ತನ್ನ ಆಹಾರದ ಪ್ರಾಣಿಯನ್ನು ಸುತ್ತಿಕೊಂಡು ನೆಗ್ಗುವ ಯಾವುದಾದರೂ ಹೆಬ್ಬಾವು.

Anacrúsis ಆ್ಯನಕ್ರೂಸಿಸ್ (ನಾ.) (ಛಂ.) ಪಾದಾದಿಯಲ್ಲಿಯ ಸ್ವರ ಹಾಕದ ಅಕ್ಷರ.

Anaémia ಅನೀಮಿಯ (ನಾ.) ರಕ್ತಹೀನತೆ ; ರಕ್ತಕ್ಷಯ ; ಬಿಳಿಚು ರೋಗ. **Anaémic** (ಗು.) ರಕ್ತಹೀನ ; ರಕ್ತಕ್ಷಯ ಸಂಬಂಧವಾದ.

Anaérobe ಅನೇಯ್ರೋಬ್ (ನಾ.) ಅಸಕ್ತ ಆಮ್ಲಜನಕವಿಲ್ಲದೆಯೇ ಜೀವಿಸಬಲ್ಲ ಅಣುಜೀವಿ : ಅವಾಯ್ವಣುಜೀವಿ. **Anaeróbian** (ಗು.) ; **Anaeróbic** —ರಾಬಿಕ್ (ಗು.)

Anaesthésia ಆ್ಯನೆ(ನಿ)ಸ್ತೀಸಿಯ (ನಾ.) ಸೋಕಿನ ತಿಳಿವಿಲ್ಲದಿರುವುದು ; ಇಂದ್ರಿಯ ಸುಪ್ತಿ. **Anaesthétic** ಆ್ಯನೆಸ್ತೆಟಿಕ್, —ಸ್ತೀಟಿಕ್ (ಗು., ನಾ.) ಸ್ಪರ್ಶಜ್ಞಾನವಿಲ್ಲದಂತೆ ಮಾಡುವ (ಪದಾರ್ಥ) : ವೇದನ ಪ್ರತಿಬಂಧಿ. **Anaesthétically** (ಕ್ರಿ. ವಿ.) ; **Anaésthetize** ಅನೆಸ್ತಿಟೈಸ್, ಅನೀಸ್ತಿಟೈಸ್ (ಕ್ರಿ. ಸಕ.) ಸ್ಪರ್ಶಜ್ಞಾನವಿಲ್ಲದಂತೆ ಮಾಡು. (ರೂಪ. ಸಹ). **Anaésthetist** (ನಾ.) —ಮಾಡುವವನು. **Anaesthetizátion** (ನಾ.)

A'naglyph ಆ್ಯನಗ್ಲಿಫ್ (ನಾ.) ನಸು ಉಬ್ಬುಕೆತ್ತನೆಯ ಚಿತ್ರ. **Anaglýphic** (ಗು.)

Anagóge ಆ್ಯನಗೋಜಿ (ನಾ.) ಆಧ್ಯಾತ್ಮಿಕ ಅಥವಾ ಗೂಢವಾದ ಅರ್ಥದ ನಿರೂಪಣೆ. **Anagógic(al)** (ಗು.) ; **Anagógically** (ಕ್ರಿ. ವಿ.)

A'nagram ಆ್ಯನಗ್ರ್ಯಾಂ (ನಾ.) (ಒಂದು ಶಬ್ದ, ಹೆಸರು, ಅಥವಾ ವಾಕ್ಯಭಾಗ — ಇದರಿಂದ ಹೊಸ ಶಬ್ದ, ಅಥವಾ ಹೊಸ ವಾಕ್ಯಭಾಗವಾಗುವಂತೆ ಮಾಡುವ) ಅಕ್ಷರ ಪಲ್ಲಟ : (ಉದಾ.—Gustavus, Augustus). **Anagrammátic(al)** (ಗು.) ; **Anagrammátically** (ಕ್ರಿ. ವಿ.) ; **Anagrámmatize** — ಗ್ರ್ಯಾಮಟೈಸ್ (ಕ್ರಿ. ಸಕ.) ; **Anagrámmatism** (ನಾ.) ; **Anagrámmatist** (ನಾ.)

A'nal ಏನಲ್ (ಗು.) ಗುದದ್ವಾರದ ; ಗುದದ್ವಾರ ಸಮೀಪದಲ್ಲಿಯ.

A'nalects, Analécta ಆ್ಯನಲೆಕ್ಟ್ಸ್, — ಲೆಕ್ಟ (ನಾ., ಬ. ವ.) ಅನೇಕ ಗ್ರಂಥಗಳಿಂದ ಆರಿಸಿ ತೆಗೆದ ಸಣ್ಣ ಸಣ್ಣ ಭಾಗಗಳು.

Analéptic ಆ್ಯನಲೆಪ್ಟಿಕ್ (ಗು., ನಾ.) (ವೈ. ಶಾ.) ಪುನರುಜ್ಜೀವಕ (ಔಷಧ) ; ಶಕ್ತಿವರ್ಧಕ (ಔಷಧ) ; ಪುಷ್ಟಿಕಾರಕ. **Analépsis** (ನಾ.) (ವೈ. ಶಾ.) ರೋಗ ವಾಸಿಯಾದಮೇಲೆ ಶಕ್ತಿ ಬರುವುದು (ಗತ ಪ್ರಯೋಗ) ; ಒಂದು ತೆರದ ಅಪಸ್ಮಾರ ರೋಗ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Analgésia ಆ್ಯನ್ಯಲ್'ಜೀಸಿಯ (ನಾ.) (ವೈ. ಶಾ.) ನೋವು ತಿಳಿಯದಿರುವುದು. **Analgésic** (ಗು., ನಾ.) ನೋವು ತಿಳಿಯದಂತೆ ಮಾಡುವ (ಔಷಧ)

Análogy ಅನ್ಯಾಲೊಜಿ (ನಾ.) ಹೋಲಿಕೆ ; ಅನುರೂಪತೆ ; ಸಾಮ್ಯ ; ಸಾದೃಶ್ಯ ; ಸಮಾನ ಭಾವ. (ಗಣಿತ) ಪ್ರಮಾಣ ; ಅನುಪಾತ. (ತರ್ಕ) ವಸ್ತುಗಳಲ್ಲಿ ಕೆಲವು ಗುಣಗಳ ಸಾದೃಶ್ಯವಿದ್ದರೆ ಅಂಥ ಸಾದೃಶ್ಯಗಳು ಮತ್ತೆ ಕೆಲವು ಇರಬೇಕೆಂಬ ಕಲ್ಪನೆಯಿಂದ ತರ್ಕ ಮಾಡುವುದು. (ಭಾ. ಶಾ.) ಕೆಲವು ಶಬ್ದಗಳಿಗೆ ರೂಢಿಯಲ್ಲಿರುವ ವಿಭಕ್ತಿ ಪ್ರತ್ಯಯ ಮೊ. ನ್ನು ಹಿಡಿದು, ಇತರ ವಿಚಾರ ಮಾಡದೆ, ಹೊಸ ಶಬ್ದಗಳಿಗೂ ಅವನ್ನು ಅನ್ವಯಿಸುವುದು. (ಜೀ. ವಿ.) ಪರಸ್ಪರ ಸಂಬಂಧವಿಲ್ಲದ ಅಂಗಗಳ ರೂಪದಲ್ಲಾಗಲಿ ಕ್ರಿಯೆಯಲ್ಲಾಗಲಿ ತೋರಿಬರುವ ಸಾದೃಶ್ಯ. **Analógic** ಆ್ಯನಲಾಜಿಕ್ (ಗು.) ಸಾದೃಶ್ಯದ. **Analógical** (ಗು.) ಸಾದೃಶ್ಯ ರೀತಿಯ ; ಸಾದೃಶ್ಯ ಹೇಳುವ. **Análogist** ಅನ್ಯಾಲೊಜಿಸ್ಟ್ (ನಾ.) ಸಾದೃಶ್ಯಗಳನ್ನು ಹಿಡಿದು ವಾದಿಸುವವನು. ಮಾತುಗಳಲ್ಲಿ, ಅವು ಹೇಳುವ ವಸ್ತುರೂಪಗಳನ್ನು ಕಾಣುವ ತತ್ತ್ವವಾದಿ. **Análogize** (ಕ್ರಿ.) ಸಾದೃಶ್ಯ ಕೊಟ್ಟು ನಿರೂಪಿಸು ; ಹೋಲಿಕೆಯಿಟ್ಟು ಹೇಳು ; ಸಾದೃಶ್ಯವುಳ್ಳವೆಂದು ತೋರಿಸು ; ಸಾದೃಶ್ಯವನ್ನುಪಯೋಗಿಸು. ಹೊಂದಿಕೆಯಿಂದಿರು. **Análogous** — ಗಸ್ (ಗು.) ಸದೃಶ ; ಸರೂಪ. **Análogously** (ಕ್ರಿ. ವಿ.) ; **Análogousness** (ನಾ.) ; **A'nalogue** ಆ್ಯನಲಾಗ್ (ನಾ.) ಸದೃಶ ಶಬ್ದ ಅಥವಾ ವಸ್ತು.

A'nalyse,-ze ಆ್ಯನಲೈಸ್ (ಕ್ರಿ. ಸಕ.) ವಿಭಜಿಸು ; ಗಂಟುಬಿಡಿಸು ; ಒಡೆದು ಕಾಣಿಸು ; ಬಿಡಿಸಿ ತೋರಿಸು. (ಒಂದು ವಸ್ತುವಿನ) ರಚನೆಯನ್ನು ಸೂಕ್ಷ್ಮ ದೃಷ್ಟಿಯಿಂದ ಪರೀಕ್ಷಿಸು. (ಭೌ. ವಿ., ರ. ವಿ.) (ಸಂಯುಕ್ತ ಪದಾರ್ಥದ) ಮೂಲವಸ್ತುಗಳನ್ನು ಕಂಡುಹಿಡಿ : ವಿಶ್ಲೇಷಿಸು. (ಗ್ರಂಥ. ಮೊ. ಗಳ) ಸಾರಾಂಶವನ್ನು ಗ್ರಹಿಸಿ ವಿವರಿಸು. (ವ್ಯಾ.) ವಾಕ್ಯವಿಭಜನೆ ಮಾಡು. **A'nalysable,-zable** (ಗು.) ವಿಭಜಿಸಲಾಗುವ ; ವಿಭಾಜ್ಯ. **A'nalyser,-zer** (ನಾ.) ; **Análysis** ಅನ್ಯಾಲಿಸಿಸ್ (ನಾ ; ಬ. ವ. — yses ,— ಸೀಸ್) ವಿಭಜನೆ ; ಪದ ವಿಭಾಗ ; ವಾಕ್ಯ ವಿಭಜನೆ ; ವಿಶ್ಲೇಷಣ. **A'nalyst** ಆ್ಯನಲಿಸ್ಟ್ (ನಾ.) ಮು., ರಾಸಾಯನಿಕ ವಿಭಜನ ಕಾರ ; ವಿಶ್ಲೇಷಕ. **Analýtic** (ಗು.) ವಿಭಜನ ಸಂಬಂಧದ. **Analýtics** (ನಾ.) ವಿಭಜನ ಶಾಸ್ತ್ರ, — ವಿದ್ಯೆ ; ಈ ವಿಷಯದ ತರ್ಕಶಾಸ್ತ್ರ ಭಾಗ. **Analýtical** (ಗು.) ವಿಭಜನ ವಿಧಾನವನ್ನುಪಯೋಗಿಸುವ ; ವಿಭಜನ ಮಾರ್ಗದ. Analytical language ವಿಭಕ್ತ್ಯಾದಿ ಕಾರ್ಯಗಳಿಗೆ ಬೇರೆ ಬೇರೆ ಪದಗಳನ್ನು ಜೋಡಿಸಿ ಹೇಳುವ ಭಾಷೆ ; ವಿಶ್ಲೇಷ ಭಾಷೆ. **Analýtically** (ಕ್ರಿ. ವಿ.)

Anamnésis ಆ್ಯನಮ್'ನೀಸಿಸ್ (ನಾ.) ಸ್ಮರಣೆ(ಮು., ಪೂರ್ವಜನ್ಮ ಸ್ಮರಣೆ)

Anamórphosis ಆ್ಯನಮಾರ್ಫೊಸಿಸ್ (ನಾ.) (ಒಂದು ಕಡೆಯಿಂದ ಮಾತ್ರ ಸರಿಯಾಗಿಯೂ ಇತರ ಕಡೆಗಳಿಂದ ವಿಕೃತವಾಗಿಯೂ ಕಾಣುವ) ವಿಕೃತ ಚಿತ್ರ. (ಸ. ವಿ.) ಅಸಾಧಾರಣ ರೂಪಾಂತರ.

Anánas ಅನಾ(ನೇ)ನಸ್ (ನಾ.) 'ಅನಾನಾಸ್' ಎಂಬ ಹಣ್ಣು ಮತ್ತು ಗಿಡ ; ಮುಳ್ಳುಹಲಸು ; ಪರಂಗಿಹಲಸು ; ನೆಲಹಲಸು. **Anonáceous** ಆ್ಯನೊನೇಷಸ್ (ಗು.) ಮುಳ್ಳುಹಲಸು ಹಣ್ಣಿನ, ಅಥವಾ ಆ ಹಣ್ಣಿಗೆ ಸಂಬಂಧಪಟ್ಟ.

Anándrous ಆ್ಯನ್ಯಾನ್'ಡ್ರಸ್ (ಗು.) ಪುಷ್ಪಕೇಸರಗಳಿಲ್ಲದ ; ಕೇಸರ ರಹಿತ.

A'napaest ಆ್ಯನಪೆಸ್ಟ್, — ಪೀಸ್ಟ್ (ನಾ.) (ಛಂ.) 'ಸ'ಗಣ (ಎರಡು ಲಘು, ಒಂದು ಗುರು) ವನ್ನು ಹೋಲುವ ಇಂಗ್ಲಿಷ್ ಛಂದಸ್ಸಿನ ಗಣ. **Anapaéstic** (ಗು.)

Anáphora ಅನ್ಯಾಫೊರ (ನಾ.) ಪದ ಅಥವಾ ಪದಪುಂಜದ ಪುನರಾವರ್ತನ.

A'narchy ಆ್ಯನರ್ಕಿ (ನಾ.) ಅನಾಯಕತೆ ; ಅರಾಜಕತೆ ; ಅವ್ಯವಸ್ಥೆ. **Anárchic(al)** ಅನಾರ್ಕಿಕ್, — ಕಲ್ (ಗು.) ; **Anárchically** (ಕ್ರಿ. ವಿ.) ; **A'narchism** ಆ್ಯನರ್ಕಿಸ್ಮ್ (ನಾ.) ಅರಾಜಕತಾ ವಾದ. **A'narchist** (ನಾ.) ರಾಷ್ಟ್ರವಿಪ್ಲವಕಾರಿ ; ಅರಾಜಕತಾ ವಾದಿ ; ಕ್ರಾಂತಿಕಾರ. **A'narch** ಆ್ಯನರ್ಕ್ (ನಾ.) ಕ್ರಾಂತಿ ನಾಯಕ. Philosophical anarch ಮನುಷ್ಯರು ತಮ್ಮತಮ್ಮನ್ನು ತಾವುತಾವೇ ಆಳಿ ಹದ್ದಿನಲ್ಲಿಟ್ಟುಕೊಳ್ಳಬೇಕೇ ಹೊರತು ಸರ್ಕಾರವೆಂಬ ಹೊರಗಿನ ಶಕ್ತಿಯೊಂದು ಅವರನ್ನು ಆಳಬೇಕಾದುದಲ್ಲವೆಂದು ವಾದಿಸುವವನು.

Anárthrous ಆ್ಯನಾರ್'ತ್ರಸ್ (ಗು.) (ಶ. ವಿ.) ಕೀಲುಗಳಿಲ್ಲದ, ಅಥವಾ ಸ್ಪಷ್ಟವಾದ ಕೀಲುಗಳಿಲ್ಲದ. (ಗ್ರೀಕ್ ವ್ಯಾ.) ಉಪ ಪದ ಹಾಕದೆ ಉಪಯೋಗಿಸಿದ.

Anasárca ಆ್ಯನಸಾರ್ಕ (ನಾ.) (ವೈ. ಶಾ.) ಜಲೋದರ ರೋಗ ; ಮಹೋದರ ; ಸೋಬೆ. **Anasárcous** (ಗು.)

Anastátic ಆ್ಯನಸ್ಟ್ಯಾಟಿಕ್ (ಗು.) ಉಬ್ಬೆತ್ತಿದ. Anastatic printing ಸತ್ತುಫಲಕದಮೇಲಿನ ಉಬ್ಬುಚಿತ್ರದಿಂದ ಮುದ್ರಣ ಮಾಡುವುದು : ಉಬ್ಬುಚಿತ್ರದ ಮುದ್ರಣ.

Anastigmátic ಆ್ಯನ್'ಆ್ಯಸ್ಟಿಗ್ಮ್ಯಾಟಿಕ್ (ಗು.) ಅಸಮ ದೃಷ್ಟಿಯಿಲ್ಲದ (ಮು., ಛಾಯಾಚಿತ್ರಗ್ರಾಹಿ ಲೆನ್ಸುಗಳ ವಿಷಯದಲ್ಲಿ) : ಅವಿಷಮ ದೃಷ್ಟಿಯ. **Anastígmat** (ನಾ.) ದೃಷ್ಟಿಯ ಅಸಮತೆ ಸರಿಪಡಿಸಿರುವ ಲೆನ್ಸು ಅಥವಾ ಲೆನ್ಸ್‌ವ್ಯೂಹ.

Anastomósis ಅನ್ಯಾಸ್ಟೊಮೋಸಿಸ್ (ನಾ. ; ಬ. ವ. — oses ,— ಸೀಸ್) (ರಕ್ತನಾಳ, ಮರದ ರೆಂಬೆ, ನದಿ — ಇವೇ ಮೊ. ವು ತಮ್ಮತಮ್ಮಲ್ಲಿ) ಒಂದರೊಡನೊಂದು ಬೇರೆ ಶಾಖೆಯ ಮೂಲಕ ಸೇರುವುದು : ಅಡ್ಡಸೇರುವೆ. **Anástomose** — ಮೋಸ್ (ಕ್ರಿ. ಅಕ.) ಅಡ್ಡಸೇರು ; ಅಡ್ಡ ಕೂಡು.

Anáthema ಅನ್ಯಾಥಿಮ (ನಾ.) ಶಾಪಗ್ರಸ್ತ ವಸ್ತು ಅಥವಾ ವ್ಯಕ್ತಿ ; ಶಾಪ ; ದೈವ ಶಾಪ ; ಗುರು (ಮಠದ) ಶಾಪ ; ಬಹಿಷ್ಕಾರ. ತತ್ತ್ವ ಖಂಡನೆ. **Anáthematize** (ಕ್ರಿ.) ಶಪಿಸು ; ಶಾಪ ಹಾಕು ; ಶಾಪ ಕೊಡು.

Anátomy ಅನ್ಯಾಟೊಮಿ (ನಾ.) (ದೇಹರಚನೆಯ ಪರೀಕ್ಷೆಗಾಗಿ) ಅವಯವ ವಿಚ್ಛೇದನ ; ಅಂಗರಚನ ಶಾಸ್ತ್ರ (ವಿಜ್ಞಾನ). ದೇಹ ರಚನೆ. ಸವಿಸ್ತರ ಪರೀಕ್ಷೆ ಅಥವಾ ವಿಭಜನೆ. (ರೂಢಿಯಾಗಿ) ಅಸ್ಥಿ ಪಂಜರ ; ರಕ್ಷಿತ ಶವ (ಕೊಳೆಯದಂತಿಟ್ಟಿರುವ ಹೆಣ) ; (ರೂಪ.) ಜೀವಚ್ಛವ. **Anatómical** ಆ್ಯನಟಾಮಿಕಲ್ (ಗು.) ; **Anatómically** (ಕ್ರಿ. ವಿ.) ; **Anátomist** ಅನ್ಯಾಟೊಮಿಸ್ಟ್ (ನಾ.) ಅಂಗ ರಚನ ಶಾಸ್ತ್ರಜ್ಞ ; (ರೂಪ.) ವಿಭಜಕ. **Anátomize** (ಕ್ರಿ.) (ಅಂಗರಚನೆಯ ಪರೀಕ್ಷೆಗಾಗಿ) ವಿಚ್ಛೇದಿಸು ; (ರೂಪ.) ವಿಭಜಿಸು.

Anátta, Anátto, Annátto ಅನ್ಯಾಟ, — ಟೊ (ನಾ.) ರಂಗು ಮಾಲೆಯ ಕಾಯಿಂದ ತೆಗೆದ ಕಿತ್ತಿಳೆಯಬಣ್ಣದ ರಂಗು.

Anaxagoréan ಆ್ಯನ್ಯಕ್ಸ್ಯಾಗೊರೀಯನ್ (ಗು.) ದ್ರವ್ಯವು ನಿತ್ಯವೆಂದೂ ಅದನ್ನು ನಿರತಿಶಯ ಪ್ರಜ್ಞಾಶಾಲಿಯಾದ ಈಶ್ವರನೊಬ್ಬನು ದೇಹಗಳಾಗಿ ರಚಿಸುವನೆಂದೂ ಪ್ರತಿಪಾದಿಸಿದ 'ಅನಕ್ಸಾಗೊರಸ್' ಎಂಬ ಗ್ರೀಕ್ ತತ್ತ್ವಜ್ಞನ, ಅಥವಾ ಅವನ ಸಂಬಂಧವಾದ.

A'nbury, Am— ಆ್ಯನ್ಬರಿ, ಆ್ಯಮ್ಬರಿ (ನಾ.) ಕುದುರೆಗಳ ಮತ್ತು ಎತ್ತುಗಳ ಮೈಮೇಲೆ ಏಳುವ ಮೃದುವಾದ ಗಂತಿ, ಗೆಡ್ಡೆ. ಗಾಜಿನ ಗೆಡ್ಡೆಯ (ಟರ್ನಿಪ್) ಜಾತಿಯ ಸಸ್ಯಗಳಿಗೆ ಬರುವ ಒಂದು ರೋಗ.

A'ncestor ಆ್ಯನ್ಸೆಸ್ಟರ್ (ನಾ.) ಪೂರ್ವಿಕ ; ಪೂರ್ವಜ ; ಮೂಲ ಪುರುಷ ; ಮೊದಲಗ ; ಹಿಂದಿನವನು ; ಹಿರಿಯ. **A'ncestress** (ನಾ.) ಪೂರ್ವಜಳು. **A'ncestry** (ನಾ.) ಮನೆತನ ; ಹಳಮೊರೆ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಂಶ ; ಕುಲ ; ಗೋತ್ರ ; ವಂಶ ಪರಂಪರೆ ; ಪೀಳಿಗೆ ; ಪಿತೃವರ್ಗ. **Ancéstral** ಆ್ಯ — (ಗು.) ಪಿತೃಸಂಬಂಧವಾದ ; ಪಿತ್ರಾರ್ಜಿತವಾಗಿ ಬಂದ.

A'nchor ಆ್ಯಂಕರ್ (ನಾ.) ಹಡಗು ಮೊ. ನ್ನು ಒಂದು ಸ್ಥಳದಲ್ಲಿ ನಿಂತಿರುವಂತೆ ಸಮುದ್ರದ ಅಥವಾ ನದಿಯ ತಳಕ್ಕೆ ಬಂಧಿಸುವುದಕ್ಕಾಗಿ ಉಪಯೋಗಿಸುವ ಭಾರವಾದ ಕಬ್ಬಿಣದ ಸಲಕರಣೆ : ಲಂಗರು ; ಬೀಳ್ಗುಂಡು. (ರೂಪ.) ಸ್ಥಿರತ್ವವನ್ನು ಅಥವಾ ದೃಢತೆಯನ್ನು ಕೊಡತಕ್ಕದ್ದು. Sheet-anchor ಅತ್ಯಂತ ಬಲವಾದ ದೊಡ್ಡ ಲಂಗರು ; (ರೂಪ.) ಹೆಚ್ಚು ಭರವಸೆಯುಳ್ಳದ್ದು ; ಕೊನೆಯ ಆಧಾರ. Cast anchor ಲಂಗರು ಹಾಕು. Weigh anchor ಲಂಗರು ಎತ್ತು. At anchor ಲಂಗರುಹಾಕಿದ ಸ್ಥಿತಿಯಲ್ಲಿ. **A'nchor** (ಕ್ರಿ.) ಲಂಗರು ಹಾಕು ; ಲಂಗರುಹಾಕಿ ನಿಲ್ಲಿಸು. (ರೂಪ.) ದೃಢವಾಗಿ ಬಂಧಿಸು. **A'nchorage** — ರೆಜ್ (ನಾ.) ಲಂಗರು ಹಾಕುವುದು ; ಲಂಗರು ಹಾಕಿ ನಿಲ್ಲುವುದು ; ಲಂಗರುಹಾಕಿ ನಿಲ್ಲುವ ಸ್ಥಳ ; ಲಂಗರು ನೆರೆ. ಲಂಗರು ಸುಂಕ. (ರೂಪ.) ಆಧಾರ ; ಅವಲಂಬನ ; ಆಸರೆ. **A'nchored** (ಗು.)

A'nchoret, — ite ಆ್ಯಂಕೊರೆಟ್, — ರೈಟ್ (ನಾ.) ನಿಸ್ಸಂಗಿ ; ವಿರಕ್ತ ; ಏಕಾಂತ ವಾಸಿ. **Anchorétic** (ಗು.) ವಿರಕ್ತ ಸಂಬಂಧವಾದ ; ವಿರಕ್ತನಂಥ. **A'nchoress, A'ncress** (ನಾ.) ನಿಸ್ಸಂಗಿನಿ ; ವಿರಾಗಿಣಿ.

Anchylósis, Anky — ಆ್ಯಂಕಿಲೋಸಿಸ್ (ನಾ.) ದೇಹದ ಕೀಲುಗಳ ಹಿಡಿತ ; ಸಂಧಿ ವಾತ. ಅಸ್ಥಿ ಸಂಯೋಗ. **A'nchylose** — ಲೋಸ್ (ಕ್ರಿ.) (ಕೀಲು, ಮೂಳೆ) ಪೆಡಸಾಗು, ಕೂಡಿಕೊಳ್ಳು, ಕೂಡಿಸು.

Ancién regíme (F) ಅನ್‌ಸ್ಯಾನ್ ರೇಝೀಮ್ (ನಾ.) ಫ್ರಾನ್ಸ್ ದೇಶದಲ್ಲಿಯ ರಾಜ್ಯ ವಿಪ್ಲವಕ್ಕೆ ಹಿಂದಿನ ಕಾಲ. (ರೂಪ.) ಆಗಿಹೋದ ದವಲತ್ತು.

A'ncient ಏನ್ಷೆಂಟ್ (ಗು., ನಾ.) ಹಳೆಯ ; ಪುರಾತನ ; ಪ್ರಾಚೀನ ; ಹಿಂದಿನಿಂದ ನಡೆದುಬಂದ. ಹಳಬ ; ಮುದುಕ ; ಪುರಾತನ ಮನುಷ್ಯ. The ancients ಪುರಾತನ ಕಾಲದ ನಾಗರಿಕ ಜನಾಂಗಗಳು. The Ancient of Days ಪುರಾಣ ಪುರುಷ ; ದೇವರು. Ancient history ಪುರಾತನ ಚರಿತ್ರೆ. Ancient lights ಬೆಳಕು ಬಾರದಂತೆ ಕಟ್ಟಡ ಕಟ್ಟಲು ಪಕ್ಕದ ಮನೆಯವನಿಗೆ ಹಕ್ಕಿಲ್ಲದ ಕಿಟಕಿ. **A'nciently** (ಕ್ರಿ. ವಿ.) ಪುರಾತನ ಕಾಲದಲ್ಲಿ. **A'ncientness** (ನಾ.) ಪ್ರಾಚೀನತೆ ; ಹಳಮೆ. **A'ncientry** (ನಾ.) ಪುರಾತನತೆ ; ಹಳೆಯತನ ; (ರೂಢಿಯಲ್ಲಿಲ್ಲದ) ಹಳೆಯ ರೀತಿ.

A'ncillary ಆ್ಯನ್ಸಿಲರಿ (ಗು.) ಕೆಲಸಕ್ಕೊದಗುವ ; ಅಧೀನ ; ಕೈಕೆಳಗಿನ.

A'ncle. Ankle ನೋಡಿ.

A'ncon ಆ್ಯಂಕನ್ (ನಾ.) (ಶ. ವಿ.) ಮೊಣಕೈ. (ವಾ. ಶಾ.) ಕಟ್ಟಡದ ಗೋಡೆಯಿಂದ ಮುಂದಕ್ಕೆ ಚಾಚಿಕೊಂಡು ಮೇಲಣ ಭಾಗಕ್ಕೆ ಆಧಾರವಾಗಿರುವ ಅಥವಾ ಆಧಾರದಂತಿರುವ ಕೂಚ, ಮೂಲೆ. Ancon sheep ನೀಳ ದೇಹವೂ ಮೋಟು ಕಾಲೂ ಡೊಂಕಾದ ಮುಂಗಾಲುಗಳೂ ಉಳ್ಳ ಒಂದು ಕುರಿಯ ಜಾತಿ.

And ಆ್ಯಂಡ್ (ಸಂ. ಅವ್ಯ.) (ಸಮುಚ್ಚಯ : ಎಂದರೆ, ಪದಗಳನ್ನೂ ವಾಕ್ಯಭಾಗಗಳನ್ನೂ ಕೂಡಿಸುವ ಪದ) ಮತ್ತು ; — ಊ — ಊ. (ಫಲತಾಂಶ ಸೂಚಕವಾಗಿ) Stir, and you are a dead man ಕದಲದೆಯೊ, ನೀನು ಸತ್ತ.

Andéan ಆ್ಯಂಡಿಯನ್ (ಗು.) ದಕ್ಷಿಣ ಅಮೆರಿಕದ ಆ್ಯಂಡೀಸ್ ಪರ್ವತದ ; ಆ ಪರ್ವತದಂತಿರುವ.

A'ndiron ಆ್ಯಂಡೈಅರ್ನ್ (ನಾ.) ಒಲೆಯಲ್ಲಿ ಉರಿಯುತ್ತಿರುವ ಸೌದೆಗೆ ಆಸರೆಯಾದ ಕಬ್ಬಿಣದ ಸಲಕರಣೆ.

Androécium ಆ್ಯಂಡ್ರೀಷಿಯಂ (ನಾ.) (ಸ. ವಿ.) ಪುಷ್ಪಕೇಸರ ಮಂಡಲ ; ಪುಷ್ಪದ ಪುಂಭಾಗ.

Andrógynous ಆ್ಯಂಡ್ರಾಜಿನಸ್ (ಗು.) ಪುಂ ಸ್ತ್ರೀ ಭಾಗಗಳೆರಡೂ ಉಳ್ಳ : ದ್ವಿಲಿಂಗ. (ಸ. ವಿ.) ಒಂದೇ ಹೂವಿನಲ್ಲಿ ಅಥವಾ ಒಂದೇ ಗಿಡದಲ್ಲಿ ಕೇಸರಗಳೂ ಶಲಾಕಗಳೂ ಇರುವ. **Andrógyny** (ನಾ.) ದ್ವಿಲಿಂಗತ್ವ.

Andrómeda ಆ್ಯಂಡ್ರಾಮಿಡ (ನಾ.) (ಖ. ವಿ.) ಉತ್ತರಾರ್ಧ ಗೋಳದಲ್ಲಿರುವ ದೇವಯಾನಿ ಎಂಬ ನಕ್ಷತ್ರಪುಂಜ.

A'necdote ಆ್ಯನೆಕ್‌ಡೋಟ್ (ನಾ.) ಕಥೆ ; ದಂತ ಕಥೆ ; ಐತಿಹ್ಯ. **A'necdotes** (ನಾ.) ಗೂಢವಾದ ಅಥವಾ ಇನ್ನೂ ಪ್ರಕಟವಾಗದಿರುವ ವೃತ್ತಾಂತಗಳು ಅಥವಾ ಚರಿತ್ರಾಂಶಗಳು. **A'necdotist** (ನಾ.) ; **A'necdotal** (ಗು.) ; **A'necdotage** — ಟೇಜ್ (ನಾ.) ದಂತಕಥೆಗಳು. (ಹಾಸ್ಯವಾಗಿ) ಹರಟೆಯ ಮುಪ್ಪು. **Anecdótic(al)** — ಡಾಟಿಕ್, — ಕಲ್ (ಗು.)

Anémograph ಅನೆಮೊಗ್ರ್ಯಾಫ್ (ನಾ.) ಗಾಳಿ ಬೀಸುವ ದಿಕ್ಕನ್ನೂ ಅದರ ವೇಗವನ್ನೂ ಕಾಗದದಮೇಲೆ ಗುರುತಿಸುವ ಸಲಕರಣೆ : ವಾಯುಗತಿ ಲೇಖಕ. **Anemográphic** (ಗು.) ; **Anémogram** — ಗ್ರ್ಯಾಂ (ನಾ.) ವಾಯುಗತಿ ಲೇಖಕವು ಚಿತ್ರಿಸಿದ ಹಾಳೆ. **Anemómeter** ಆ್ಯನಿಮಾಮಿಟರ್ (ನಾ.) ವಾಯುಗತಿ ಮಾಪಕ. ' ಆರ್ಗನ್ ' ಎಂಬ ಗಾಳಿವಾದ್ಯದಲ್ಲಿ ವಾಯುಬಲವನ್ನು ನಿರ್ದೇಶಿಸುವ ಸಾಧನ. **Anemómetry** (ನಾ.) ; **Anemométric** — ಮೊಮೆಟ್ರಿಕ್ (ಗು.)

Anémone ಅನೆಮನಿ, **Anemóne** ಆ್ಯನಿಮೋನಿ (ನಾ.) ' ಗಾಳಿಹೂವು ' ಎಂದು ಕರೆಯಬಹುದಾದ ಹೂವನ್ನು ಬಿಡುವ ಒಂದು ಸಸ್ಯಜಾತಿ. (ಪ್ರಾ. ವಿ.) Sea anemone ಸಸ್ಯದಂತೆ ಕಾಣುವ ಸಮುದ್ರದಲ್ಲಿಯ ಒಂದು ಪ್ರಾಣಿಜಾತಿ.

Anemóphilous ಆ್ಯನಿಮಾಫಿಲಸ್ (ಗು.) (ಸಸ್ಯದಲ್ಲಿ) ಗಾಳಿಯಿಂದ ಒಯ್ಯಲ್ಪಟ್ಟ ಪುಷ್ಪಪರಾಗದಿಂದ ಗರ್ಭಧಾರಣೆಯಾಗುವ : ವಾಯುಗರ್ಭೀಕೃತ.

Anént ಅನೆನ್ಟ್ (ಉಪ.) (ಅ) ವಿಚಾರವಾಗಿ, ವಿಷಯವಾಗಿ, ಸಂಬಂಧವಾಗಿ ; ಕುರಿತು.

A'neroid ಆ್ಯನೆರಾಯ್ಡ್ (ಗು., ನಾ.) ದ್ರವವಸ್ತುವಿಲ್ಲದ. Aneroid (barometer) ವಾಯುಮಂಡಲದ ಒತ್ತಡವನ್ನು (ದ್ರವ ಸ್ತಂಭದಿಂದಲ್ಲದೆ) ಅಳೆಯುವ ಒಂದು ಸಲಕರಣೆ : ನಿರ್ದ್ರವ ವಾಯುಭಾರ ಮಾಪಕ. [ಇಂತಹ ಸಲಕರಣೆಯೊಂದರಲ್ಲಿಯ ಮುಖ್ಯಭಾಗವು ತೆಳುವಾದ ಲೋಹದ ರೇಕಿನ ಮುಚ್ಚಳವನ್ನು ಬೆಸೆದಿರುವ ಮುಚ್ಚಿದ ಡಬ್ಬಿ. ಈ ಡಬ್ಬಿಯಲ್ಲಿದ್ದ ವಾಯುವನ್ನು ತೆಗೆದುಬಿಟ್ಟಿರುವುದರಿಂದ, ವಾಯುಮಂಡಲದ ಒತ್ತಡದಲ್ಲುಂಟಾಗುವ ವ್ಯತ್ಯಾಸಗಳನ್ನು ತೆಳುವು ರೇಕಿನ ಸ್ಥಿತಿಸ್ಥಾಪಕ ಗುಣದ ಮೂಲಕ ಅಳೆಯಲಾಗುವಂತೆ ಏರ್ಪಡಿಸಿರುವುದು.]

A'neurysm, — ísm ಆ್ಯನ್ಯೂರಿಸ್ಮ್ (ನಾ.) (ವ್ಯಾಧಿಕಾರಣದಿಂದ) ಅಪಧಮನಿಯ ಊತ, ಊದು. ಅಸಾಧಾರಣವಾದ ಊದು. **Aneurýsmal, — ísmal** (ಗು.)

Anéw ಅನ್ಯೂ (ಕ್ರಿ. ವಿ.) ಮತ್ತೆ ; ತಿರುಗಿ ; ಪುನಃ ; ಹೊಸದಾಗಿ ; ಬೇರೆ ವಿಧವಾಗಿ.

Anfractuósity ಆ್ಯನ್‌ಫ್ರ್ಯಾಕ್ಚುಆಸಿಟಿ (ನಾ.) ಸುತ್ತುಬಳಸಿರುವಿಕೆ ; ತೊಡಕಾಗಿರುವಿಕೆ ; (ರೂಪ. ಸಹ). (ಸಾ., ಬ. ವ. ದಲ್ಲಿ) ಸುತ್ತುಬಳಸಿರುವ ಮಾರ್ಗ (ಮು., ಮಿದುಳಿನ ಸುತ್ತುಗಳ ಮಧ್ಯೇ ಇರುವ ಸಂದುಗಳು)

A'ngary ಆ್ಯಂಗರಿ (ನಾ.) ಯುದ್ಧಕ್ಕೆ ನಿಂತಿರುವ ಯಾವ ಪಕ್ಷದವನಿಗೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗಲ ಆವಶ್ಯಕ ಬಿದ್ದಾಗ, ತಟಸ್ಥನ ಸ್ವತ್ತನ್ನು, ಪರಿಹಾರಕೊಟ್ಟು ಉಪಯೋಗಿಸಿಕೊಳ್ಳಲು ಅಥವಾ ನಾಶಮಾಡಲು, ಇರುವ ಹಕ್ಕು.

A'ngel ಏನ್ಜೆಲ್ (ನಾ.) ದೇವದೂತ; ದಿವ್ಯಪುರುಷ. ಮನೋಹರವಾದ, ಸುಂದರವಾದ ಅಥವಾ ನಿಷ್ಕಲಂಕವಾದ ವ್ಯಕ್ತಿ. ಇಂಗ್ಲಿಷರ ಹಳೆಯ ಒಂದು ಚಿನ್ನದ ನಾಣ್ಯ. Angel of death ಯಮದೂತ. Angel fish ನಕ್ರಜಾತಿಯ ಒಂದು ಮೀನು. Good angel ಭಾಗ್ಯ ದೇವತೆ. Guardian angel ರಕ್ಷಣ ದೇವತೆ. Angel's visits ಅಪೂರ್ವ ದರ್ಶನ. Entertain an angel unawares ಮಹಾಪುರುಷನನ್ನು ಅರಿಯದೆ ಸತ್ಕರಿಸು. **Angélic** ಆ್ಯಂಜೆಲಿಕ್ (ಗು.) ದಿವ್ಯ; ದೈವಯೋಗ್ಯವಾದ; ದೇವದೂತ ಸಂಬಂಧವಾದ; ಅತಿಮಾನುಷ ಗುಣಗಳುಳ್ಳ. **Angélical** (ಗು.); **Angélically** (ಕ್ರಿ. ವಿ.); **Angelólatry** ಏಂಜೆಲಾಲಟ್ರಿ (ನಾ.) ದಿವ್ಯಪುರುಷ ಪೂಜೆ. **Angelólogy** (ನಾ.) ದಿವ್ಯಪುರುಷರ ವಿಷಯವನ್ನು ಹೇಳುವ ಶಾಸ್ತ್ರಭಾಗ.

A'nger ಆ್ಯಂಗರ್ (ನಾ.) ಕೋಪ; ಸಿಟ್ಟು; ಕ್ರೋಧ; ರೋಷ; ಮುನಿಸು. (ಕ್ರಿ. ಸಕ.) ಕೋಪಗೊಳಿಸು; ಸಿಟ್ಟೆಬ್ಬಿಸು. **A'ngry** (ಗು.) ಸಿಟ್ಟುಬಂದ; ಸಿಟ್ಟುಗೊಂಡ; ಕೋಪಗೊಂಡ; ಕೆರಳಿದ; ಕೋಪ ಸ್ವಭಾವದ. (ಹುಣ್ಣು, ಗಾಯ, ಮೊ. ಗಳ ವಿಷಯದಲ್ಲಿ) ಬಾತುಕೊಂಡ, ಕೆರಳಿದ, ಉರಿಯುತ್ತಿರುವ. **A'ngrily** (ಕ್ರಿ. ವಿ.); **A'ngriness** (ನಾ.)

A'ngina ಆ್ಯಂಜಿನ, **Angína** ಆ್ಯಂಜೈನ (ನಾ.) (ವೈ. ಶಾ.) ಗಂಟಲೂತ. Angina pectoris (ಹೃದ್ರೋಗವಿರುವವನು ಹೆಚ್ಚಾಗಿ ದೇಹಶ್ರಮ ಪಡುವುದರಿಂದುಂಟಾಗುವ) ಎದೆಸೆಳವು.

A'ngle[1] ಆ್ಯಂಗ್‌ಲ್ (ನಾ.) ಒಂದನ್ನೊಂದು ಸಂಧಿಸುವ ಎರಡು ರೇಖೆಗಳ ಅಥವಾ ಎರಡು ಸಮಕ್ಷೇತ್ರಗಳ ಸಂಧಿಸ್ಥಾನದಲ್ಲಿಯ ಅವಕಾಶ: ಮೂಲೆ. (ಜ್ಯಾ.) ಒಂದೇ ಸಮರೇಖೆಯಲ್ಲಿರದ ಎರಡು ರೇಖೆಗಳು, ಅಥವಾ ಎರಡು ಸಮಕ್ಷೇತ್ರಗಳು, ಸಂಧಿಸಿದಾಗ ಆಗುವ ಕೋನ. (Acute angle ಲಘುಕೋನ. Obtuse angle ಗುರುಕೋನ. Right angle ಸಮಕೋನ. Re-entrant angle ಪ್ರವೃದ್ಧಕೋನ). ಮೂಲೆ: (ಚೂಪಾಗಿ ಚಾಚಿಕೊಂಡಿರುವ ಭಾಗ); ಮೂಲೆ: (ಅಪ್ರಸಿದ್ಧವಾದ ಸ್ಥಳ). (ಜ್ಯೋ.) ಕುಂಡಲಿಯ ಚತುರ್ದಿಕ್ಕುಗಳಲ್ಲಿರುವ ಯಾವುದಾದರೂ ಒಂದು 'ಮನೆ'. Angle-iron L-ಆಕಾರದ ಕಬ್ಬಿಣದ ಮೂಲೆಕಟ್ಟು. **A'ngled** (ಗು.) ಕೋನಯುಕ್ತ. **A'nglewise** (ಕ್ರಿ. ವಿ.) ಕೋನವಾಗಿ. **A'ngular** (ಗು.) ಕೋನದ; ಕೋನಯುತ; ಕೋನಸ್ಥ; ಕೋನ ಮಾಪಿತ. ಚೂಪಾದ; ಮೊನೆಯಾದ. ವಕ್ರ; ಸೊಟ್ಟ. ಮೂಳೆ ಬಿಟ್ಟುಕೊಂಡಿರುವ. ಸುಗಮವಲ್ಲದ; ಸಲಿಗೆ ಕೊಡದ; ಜಗಳಗಂಟಿ. Angular distance ಕೌನಿಕಾಂತರ; ಕೌನಿಕ ದೂರ. **Angulárity** (ನಾ.) ವಕ್ರಭಾವ; ವಕ್ರತೆ. **A'ngularly** (ಕ್ರಿ. ವಿ.); **A'ngulate** ಆ್ಯಂಗ್ಯುಲೆಟ್ (ಗು.) ಮೂಲೆಗಳುಳ್ಳ; ಮೂಲೆಮೂಲೆಯಾಗಿ ಮಾಡಿದ. (ಕ್ರಿ. ಸಕ., — ಲೇಟ್) ಮೂಲೆಮೂಲೆಯಾಗಿ ಮಾಡು. **Angulátion** (ನಾ.)

A'ngle[2] ಆ್ಯಂಗ್‌ಲ್ (ಕ್ರಿ. ಸಕ.) ಗಾಳಹಾಕಿ ಮೀನುಹಿಡಿ; (ರೂಪ.) ಯಾರನ್ನಾದರೂ ಹಿಡಿಯುವುದಕ್ಕಾಗಲಿ ಯಾವುದನ್ನಾದರೂ ಪಡೆಯುವುದಕ್ಕಾಗಲಿ ತಂತ್ರವನ್ನುಪಯೋಗಿಸು: ಗಾಳ ಹಾಕು; ಬಲೆ ಬೀಸು (ರೂಪ.). **A'ngler** (ನಾ.) ಗಾಳಹಾಕಿ ಮೀನುಹಿಡಿಯುವವನು. (ಪ್ರಾ. ವಿ.) ಕ್ರಿಮಿಗಳಂತೆ ತೋರುವ ತನ್ನ ಅಂಗರಚನೆಯಿಂದ ಸಣ್ಣ ಮೀನುಗಳನ್ನು ಆಕರ್ಷಿಸಿ ತಿನ್ನುವ ಒಂದು ಮೀನಜಾತಿ. (ಅಸಂ.) ಕೊಕ್ಕೆಯಿರುವ ಕೋಲನ್ನುಪಯೋಗಿಸಿ ಕಿಟಕಿಯಿಂದ ಒಳಗಿನ ಸಾಮಾನನ್ನು ಅಪಹರಿಸುವ ಕಳ್ಳ. **A'ngling** (ನಾ.) ಗಾಳಹಾಕಿ ಮೀನುಹಿಡಿಯುವ ಕಾರ್ಯ ಅಥವಾ ವಿದ್ಯೆ.

A'ngles ಆ್ಯಂಗ್‌ಲ್ಸ್ (ನಾ., ಬ. ವ.) ಬ್ರಿಟನ್ನಿನ ಕೆಲವು ಪ್ರಾಂತಗಳಲ್ಲಿ ನೆಲಸಿದ್ದು ಆ ದೇಶಕ್ಕೆ ತಮ್ಮ ಹೆಸರನ್ನು ಕೊಟ್ಟ ಜರ್ಮನಿ ದೇಶದ ಒಂದು ಬುಡಕಟ್ಟಿನವರು. **A'nglican** ಆ್ಯಂಗ್ಲಿಕನ್ (ಗು., ನಾ.) ಇಂಗ್ಲಿಷರ ಅಥವಾ ಇಂಗ್ಲೆಂಡಿನ ಸುಧಾರಿತ ಧರ್ಮದ (ಅನುಯಾಯಿ). **A'nglicanism** (ನಾ.); **A'nglice** (L) ಆ್ಯಂಗ್ಲಿಸೀ (ಕ್ರಿ. ವಿ.) ಇಂಗ್ಲಿಷಿನಲ್ಲಿ. **A'nglicism** (ನಾ.) ಆಂಗ್ಲಭಾಷಾ ಮರ್ಯಾದೆ (ಸಂಪ್ರದಾಯ). ಇಂಗ್ಲಿಷರ ರಾಜಕೀಯ ತತ್ತ್ವಗಳು. **A'nglicize** (ಕ್ರಿ. ಸಕ.) ರೂಪದಲ್ಲಾಗಲಿ ರೀತಿಯಲ್ಲಾಗಲಿ ಇಂಗ್ಲಿಷ್ ಮಾಡು (ಆಂಗ್ಲೀಕರಿಸು). **A'nglo-Américan** (ಗು., ನಾ.) ಇಂಗ್ಲಿಷ್ ಸಂತತಿಗೆ ಸೇರಿದ ಅಮೆರಿಕಸ್ಥ. **A'nglo-Índian** (ಗು., ನಾ.) ಇಂಡಿಯಾದೇಶದಲ್ಲಿ ಬಹುಕಾಲ ವಾಸವಾಗಿದ್ದ ಅಥವಾ ವಾಸಿಸುತ್ತಿರುವ ಬ್ರಿಟಿಷ್ ಸಂತತಿಗೆ ಸೇರಿದ(ವನು). **A'nglo-Sáxon** (ಗು., ನಾ.) ಬ್ರಿಟನ್ನಿನಲ್ಲಿ ನೆಲಸಿದ ಆಂಗ್ಲರು, ಸ್ಯಾಕ್ಸನರು, ಮೊ. ಕುಲಗಳವರು ಕಲೆತು ಆದ ಜನಾಂಗ, ಇವರ ಭಾಷೆ, ಅಥವಾ ಇವರ ಸಂತತಿಯ(ವನು); ಇಂಗ್ಲಿಷರ ಆದಿಭಾಷೆ. **Anglománia** (ನಾ.) ಇಂಗ್ಲಿಷರ ಆಚಾರ ವ್ಯವಹಾರಗಳ ಮೇಲಿನ ನಿರತಿಶಯ ವಿಶ್ವಾಸ, ಗೌರವ: ಆಂಗ್ಲೋನ್ಮಾದ; ಆಂಗ್ಲಾನುಕರಣೆಯ ಹುಚ್ಚು. **A'nglophobe** — ಫೋಬ್ (ನಾ.) ಆಂಗ್ಲದ್ವೇಷಿ; ಆಂಗ್ಲಭೀತ. **Anglophóbia** ಇಂಗ್ಲಿಷರ, ಅವರ ಆಚಾರಗಳ, ಅಥವಾ ಅವರ ಸಂಸ್ಥೆಗಳ, ವಿಷಯದಲ್ಲಿ ಅತ್ಯಂತ ದ್ವೇಷ ಅಥವಾ ಭೀತಿ: ಆಂಗ್ಲದ್ವೇಷ; ಆಂಗ್ಲಭೀತಿ.

A'nglic ಆ್ಯಂಗ್ಲಿಕ್ (ನಾ.) ಸಕಲ ಪ್ರಪಂಚದ ಭಾಷೆಯಾಗಬೇಕೆಂಬ ಉದ್ದೇಶದಿಂದ (Prof. R. E. Zachrisson ಎಂಬಾತನು) ನಿರ್ದೇಶಿಸಿದ ಅಕ್ಷರಸಂಯೋಜನ ಸೌಲಭ್ಯವುಳ್ಳ ಇಂಗ್ಲಿಷ್ ಭಾಷೆಯ ಒಂದು ರೂಪ.

Angóla, Angóra ಆ್ಯಂಗೋಲ, — ಗೋರ (ನಾ.) ಏಷ್ಯಾಮೈನರಿನಲ್ಲಿಯ ಅ್ಯಂಗೋರಾ ಪಟ್ಟಣದ ಹೆಸರಿನ ಒಂದು ಜಾತಿಯ ಮೇಕೆಯ ಉಣ್ಣೆಯಿಂದ ಮಾಡಿದ ಬಟ್ಟೆ.

A'ngry. **Anger** ನೋಡಿ.

A'ngstrom únit ಓಂಗ್‌ಸ್ಟ್ರಾಂ ಯೂನಿಟ್, ಆಂಗ್ — (ನಾ.) ಅತ್ಯಂತ ಸಣ್ಣ ಉದ್ದವನ್ನು ಅಳೆಯುವ ಮಾನ: (ಭೌ. ವಿ.) ಒಂದು ಸೆಂಟಿಮೀಟರಿನ (ಸುಮಾರು $\frac{2}{5}$ ಅಂಗುಲದ) ಹತ್ತುಕೋಟಿಯಲ್ಲಿಯ ಒಂದು ಭಾಗ (ತೇಜಸ್ತರಂಗಗಳ ಉದ್ದವನ್ನು ಅಳೆಯುವುದರಲ್ಲಿ ಉಪಯೋಗಿಸುವ ಮಾನ): ಆಂಗ್‌ಸ್ಟ್ರಾಂ ಮಾನ. (ಸ್ವೀಡನ್ ದೇಶದ 'ಓನ್ಗ್‌ಸ್ಟ್ರಾಂ' ಎಂಬ ಭೌತ ವೈಜ್ಞಾನಿಕನ ಹೆಸರಿನಿಂದ)

A'nguine ಆ್ಯಂಗ್ವಿನ್ (ಗು.) ಹಾವಿನ; ಹಾವಿನಂಥ; ಸರ್ಪ ಸದೃಶ.

A'nguish ಆ್ಯಂಗ್ವಿಷ್ (ನಾ.) (ದೇಹದ ಅಥವಾ ಮನಸ್ಸಿನ) ಸಂಕಟ, ಯಾತನೆ; ಅಳಲು; ಬೇಗುದಿ.

A'ngular } **Angle**[1] ನೋಡಿ.
A'ngulate }

Anhýdrous ಆ್ಯನ್‌ಹೈಡ್ರಸ್ (ಗು.) (ರ. ವಿ.) ಸ್ಫಟಿಕಾಕೃತಿಯುಳ್ಳ ವಸ್ತುಗಳಲ್ಲಿ ಸಾಮಾನ್ಯವಾಗಿ ಅಂತರ್ಗತವಾಗಿರುವ ಜಲಭಾಗವಿಲ್ಲದ; ಅನಾರ್ದ್ರ. ನೀರಾರಿದ; ರಸರಹಿತ; ಶುಷ್ಕ. **Anhýdride** (ನಾ.) ಜಲಭಾಗವಿಲ್ಲದ ಆಮ್ಲಜನಕ ಸಂಯುಕ್ತಗಳ ವರ್ಗದ ಪದಾರ್ಥ. **Anhýdrite** (ನಾ.) ಜಲಾಂಶ ರಹಿತ 'ಕ್ಯಾಲ್ಸಿಯಂ ಸಲ್ಫೇಟ್' ಖನಿಜ.

Anicónic ಆ್ಯನೈಕಾನಿಕ್ (ಗು.) (ವಿಗ್ರಹಗಳ ಮತ್ತು ಸಂಕೇತಗಳ ವಿಷಯದಲ್ಲಿ) ಮನುಷ್ಯ (ಅಥವಾ ಇತರ ಪ್ರಾಣಿ) ರೂಪವಲ್ಲದ. ವಿಗ್ರಹ ರಹಿತ.

A'n(n)icut ಆ್ಯನಿಕಟ್ (ನಾ.) ನೀರನ್ನು ಶೇಖರಿಸಲು ನದಿಗೆ ಹಾಕಿದ ಅಡ್ಡಕಟ್ಟೆ; ಅಣೆಕಟ್ಟೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Anígh ಅನ್ಯೆ (ಕ್ರಿ. ವಿ., ಉಪ.) ಹತ್ತಿರ.

A'nil ಆ್ಯನಿಲ್ (ನಾ.) ನೀಲಿ (ಗಿಡ, ಬಣ್ಣ). **A'niline** — ಲೈನ್ (ನಾ.) ಹಿಂದೆ ನೀಲಿಯ ಗಿಡದಿಂದಲೂ, ಈಚೆಗೆ ವಿಶೇಷವಾಗಿ ಕೋಲ್ ಟಾರಿನಿಂದಲೂ (ಎಂದರೆ, ಕೀಲೆಣ್ಣೆಯಿಂದಲೂ) ತಯಾರಿಸುವ, ಅನೇಕ ಉಜ್ಜ್ವಲ ವರ್ಣಗಳಿಗೆ ಮೂಲವಾದ, ಒಂದು ರಾಸಾಯನಿಕ ಆಧಾರ ವಸ್ತು : ನೀಲಿ.

A'nile ಆ್ಯನೈಲ್ (ಗು.) ಅರುಳುಮರುಳು. ಮುದುಕಿಯ ; ಮುದುಕಿಯಂಥ. **Anílity** ಅನಿಲಿಟಿ (ನಾ.)

Animadvérsion ಆ್ಯನಿಮ್ಯಡ್ವರ್ಷನ್ (ನಾ.) ಆಕ್ಷೇಪಣೆ ; ಖಂಡನೆ ; ತಪ್ಪುಹೊರಿಸುವುದು. **Animadvért** (ಕ್ರಿ. ಅಕ.)

A'nimal ಆ್ಯನಿಮಲ್ (ನಾ.) ಪ್ರಾಣಿ ; ಮನುಷ್ಯೇತರ ಪ್ರಾಣಿ ; ಪಶು ; ಮೃಗ. (ಗು.) ಪಾಶವ ; ಪ್ರಾಣಿ ಸಂಬಂಧವಾದ. Animal passions ಕಾಮ ಕ್ರೋಧಗಳು. Animal spirits ಉತ್ಸಾಹ ; ಹಮ್ಮು ; ಹುಮ್ಮಸ್ಸು. **A'nimally** (ಕ್ರಿ. ವಿ.) ದೈಹಿಕವಾಗಿ (ಮಾನಸಿಕವಾಗಲ್ಲ). **A'nimalism** (ನಾ.) ಪ್ರಾಣಿಚೇಷ್ಟೆ ; ವಿಷಯ ಲಂಪಟತೆ. ಮನುಷ್ಯನು ಪ್ರಾಣಿಮಾತ್ರದವನೆಂಬ ವಾದ. **Animálity** — ಮ್ಯಾಲಿಟಿ (ನಾ.) ಪಶುಸ್ವಭಾವ ; ಪ್ರಾಣಿಧರ್ಮ. ಪ್ರಾಣಿವರ್ಗ. **A'nimalize** — ಮಲೈಸ್ (ಕ್ರಿ. ಸಕ.) ಪ್ರಾಣಿಕ ವಸ್ತುವನ್ನಾಗಿ ಮಾಡು ; ಪಶುಸ್ವಭಾವಕ್ಕೆ ತರು ; ವಿಷಯ ಲಂಪಟನನ್ನಾಗಿ ಮಾಡು. **Animalizátion** (ನಾ.) ; **Animálcule** — ಮ್ಯಾಲ್‌ಕ್ಯುಲ್ (ನಾ.) ಸೂಕ್ಷ್ಮತಮ ಪ್ರಾಣಿ ; ಅಣುಪ್ರಾಣಿ. **Animálculism** (ನಾ.) ಪ್ರಾಣಕ್ಕೂ ರೋಗಾದಿಗಳಿಗೂ ಅಣುಪ್ರಾಣಿಗಳೇ ಕಾರಣವೆಂಬ ವಾದ : ಅಣುಪ್ರಾಣಿ ವಾದ. **Animálculist** (ನಾ.) ; **A'nimate** — ಮೆಟ್ (ಗು.) ಬದುಕಿರುವ ; ಜೀವಂತ ; ಸಜೀವ ; ಚೇತನ ; ಸಚೇತನ ; ಉತ್ಸಾಹವುಳ್ಳ. (ಕ್ರಿ. ಸಕ.) (—ಮೇಟ್) ಚೇತನಗೊಳಿಸು ; ಉಸಿರೆರೆ ; ಜೀವ ಹೊಯ್ಯಿ ; ಕಳೆದುಂಬು ; ಪ್ರೇರಿಸು. **A'nimatedly** (ಕ್ರಿ. ವಿ.) ; **Animátion** (ನಾ.) ಉಜ್ಜೀವನ ; ಉತ್ಸಾಹ. **A'nimater, — or** (ನಾ.)

Animátograph ಆ್ಯನಿಮ್ಯಾಟೊಗ್ರಾಫ್ (ನಾ.) Cinematograph ಎಂಬುದರ ಹಿಂದಣ ಹೆಸರು : ಚಲಚ್ಚಿತ್ರ ಪ್ರದರ್ಶಕ.

A'nimism ಆ್ಯನಿಮಿಸ್ಮ್ (ನಾ.) ಪ್ರಾಣಿಗಳ ಸಮಸ್ತ ವ್ಯಾಪಾರಗಳೂ ಅಪಾರ್ಥಿವ ಚೇತನವೊಂದರಿಂದ ಉಂಟಾಗುವುವೆಂಬ ವಾದ. ಜಡ ವಸ್ತುಗಳಿಗೂ ಪ್ರಕೃತಿ ವ್ಯಾಪಾರಗಳಿಗೂ ಚೇತನವನ್ನಾರೋಪಿಸುವ ವಾದ : ಸರ್ವಚೇತನ ವಾದ. **A'nimist** (ನಾ.) ; **Animístic** (ಗು.)

Animósity ಆ್ಯನಿಮಾಸಿಟಿ (ನಾ.) ದ್ವೇಷೋದ್ರೇಕ ; ಬದ್ಧ ವೈರ. **A'nimus** (ನಾ.) ಉದ್ದೇಶ. ಉದ್ರೇಕ ; ಆಗ್ರಹ (= Animosity)

A'nise ಆ್ಯನಿಸ್ (ನಾ.) ಸೋಪು ಗಿಡ ; ಸಾಲೇಯ. **A'niseed** (ನಾ.) (ವಾಯುಹರ ಔಷಧಿಗೆ ಉಪಯೋಗಿಸುವ) ಸೋಪು ಬೀಜ. **A'nisated** (ಗು.) ಸೋಪು ಬೆರಸಿದ. **Anisétte** — ಸೆಟ್ (ನಾ.) ರುಚಿಗಾಗಿ ಸೋಪು ಬೆರಸಿದ ಮದ್ಯ.

Aniso—, ಆ್ಯನೈಸೊ — (ಸಮಾಸದಲ್ಲಿ ಪೂರ್ವಪದ) ಅಸಮ. **Anisómerous** — ಸಾಮರಸ್ (ಗು.) ಅಸಮ ಭಾಗಗಳುಳ್ಳ ; ಅಸಮ ಪ್ರಮಾಣವುಳ್ಳ. **Anisosthénic** —ಸೊಸ್ತೆನಿಕ್ (ಗು.) ಅಸಮ ಬಲದ.

A'nkle, A'ncle ಆ್ಯಂಕ್‌ಲ್ (ನಾ.) ಕಾಲಿನ ಹರಡು. **A'nklet** (ನಾ.) ಕಾಲಂದಿಗೆ ; ಕಾಲ್ಕಡಗ ; ಕಾಲುಗೊಲಸು ; ರುಳಿ, ಮೊ. ಒಡವೆ. ಹರಡಿನ ರಕ್ಷೆ.

A'nna ಆ್ಯನ (ನಾ.) ರೂಪಾಯಿಯ ಹದಿನಾರನೆಯ ಒಂದು ಭಾಗ : ಆಣೆ,

A'nnals ಆ್ಯನಲ್ಸ್ (ನಾ.) ವರ್ಷಾನುಚರಿತ್ರೆ ; ಚರಿತ್ರ ಲೇಖನಗಳು ; ಚರಿತ್ರೆ ; ವಂಶಾನುಚರಿತ್ರೆ ; ' ಬಖೈರು 'ಗಳು ; **A'nnalist** (ನಾ.) ಚರಿತ್ರ ಲೇಖಕ. **Annalístic** (ಗು.)

Anneál ಅನೀಲ್ (ಕ್ರಿ. ಸಕ.) (ಕಾಯಿಸಿ ಕ್ರಮೇಣ ಆರಿಸುವುದರಿಂದ) ಹದ ಕೊಡು ; (ರೂಪ. ಸಹ)

Annéctent ಅನೆಕ್ಟೆಂಟ್ (ಗು.) ಕೂಡಿಸುವ ; ಯೋಜಕ.

Annélida ಅನೆಲಿಡ (ನಾ., ಬ. ವ.) (ಪ್ರಾ. ವಿ.) ವಲಯದೇಹಿಗಳಾದ (ಎಂದರೆ, ದೇಹವು ಉಂಗುರುಂಗುರಗಳಾಗಿರುವ) ಕೆಂಪು ರಕ್ತವುಳ್ಳ ಕೀಟಜಾತಿ : ವಲಯದೇಹಿಗಳು. **A'nnelid(e)** ಆ್ಯನೆಲಿಡ್ (ನಾ.) ವಲಯದೇಹಿ. **Annélidan** (ಗು.)

Annéx ಅನೆಕ್ಸ್ (ಕ್ರಿ. ಸಕ.) ಸೇರಿಸು ; ಸೇರಿಸಿಕೊ ; ಕೂಡಿಸು ; ಕೂಡಿಸಿಕೊ ; ಅನುಬಂಧಿಸು. (ರಾಜ್ಯ ಮೊ. ನ್ನು) ಆಕ್ರಮಿಸು, ಸ್ವಾಧೀನಪಡಿಸಿಕೊ. **Annéxable** (ಗು.) ; **Annexátion** ಆ್ಯನೆಕ್ಸೇಷನ್ (ನಾ.) ; **Annéx(e)** ಅನೆಕ್ಸ್ (ನಾ.) ದಸ್ತೈವಜಿನ (ಪತ್ರದ) ಅನುಬಂಧ. ಉಪಗೃಹ. **Annéxure** (ನಾ.) ಅನುಬಂಧ.

Anníhilate ಅನೈಹಿಲೇಟ್ (ಕ್ರಿ. ಸಕ.) ನಿರ್ನಾಮ ಮಾಡು ; ನಿಶ್ಶೇಷ ಮಾಡು ; ನಾಶ ಮಾಡು ; ಹುಟ್ಟಡಗಿಸು. **Anníhilator** (ನಾ.) ; **Annihilátion** (ನಾ.) ಸರ್ವನಾಶ ; ಪ್ರಳಯ ; ದೇಹಾತ್ಮ ವಿನಾಶ. **Annihilátionism** (ನಾ.) ದುಷ್ಟರು ಸತ್ತಮೇಲೆ ಅವರ ಆತ್ಮ ಸಹ ನಾಶವಾಗುವುದೆಂಬ ವಾದ : ದೇಹಾತ್ಮ ವಿನಾಶ ವಾದ. **Annihilátionist** (ನಾ.)

Annivérsary ಆ್ಯನಿವರ್ಸರಿ (ನಾ.) ವಾರ್ಷಿಕ ; ವಾರ್ಷಿಕೋತ್ಸವ.

A'nno aetátis súae (L) ಆ್ಯನೋ ಇಟೇಟಿಸ್ ಸ್ಯೂಈ (ವಾಕ್ಯಖಂಡ) : ಅವನ, ಅವಳ, — ನೆಯ ವಯಸ್ಸಿನಲ್ಲಿ.

A'nno Dómini (L) ಆ್ಯನೊ ಡಾಮಿನೈ (ಸಂಕ್ಷಿಪ್ತ : A. D.) ಸ್ವಾಮಿಯ ವರ್ಷ ; ಕ್ರಿಸ್ತ ಶಕ. (ಹಾಸ್ಯದ ಮಾತಿನಲ್ಲಿ) ಅಪರ ವಯಸ್ಸು.

A'nnotate ಆ್ಯನೊಟೇಟ್ (ಕ್ರಿ.) (ಒಂದು ಗ್ರಂಥಕ್ಕೆ, ಅಥವಾ ಗ್ರಂಥಕರ್ತೃವಿನ ವಿಷಯವಾಗಿ) ಟಿಪ್ಪಣಿ ಬರೆ, ಟೀಕಿಸು. **Annotátion** (ನಾ.) ; **Annotátions** (ನಾ.) ಟೀಕು ; ಟಿಪ್ಪಣಿ. **A'nnotator** (ನಾ.) ಟೀಕಾಕಾರ.

Annoúnce ಅನೌನ್ಸ್ (ಕ್ರಿ. ಸಕ.) ಸಮಾಚಾರ ತಿಳಿಸು ; ಸಾರು ; ಪ್ರಕಟಪಡಿಸು ; ಪ್ರಸಿದ್ಧಗೊಳಿಸು. (ಯಾರಾದರೊಬ್ಬರ) ಆಗಮನವನ್ನು ಶ್ರುತಪಡಿಸು. (ಮಾತಾಡದೆ) ಮನಸ್ಸಿಗೆ ಅಥವಾ ಇಂದ್ರಿಯಗಳಿಗೆ ಸ್ಪಷ್ಟವಾಗುವಂತೆ ಸೂಚಿಸು. **Annoúncement** (ನಾ.) ; **Annoúncer** (ನಾ.) ಪ್ರಕಟನೆ ಮಾಡುವವನು (ಮು., ನಿಸ್ತಂತು ವಾರ್ತೆಗಳನ್ನು)

Annoý ಅನಾಯ್ (ಕ್ರಿ. ಸಕ.) ಕಾಡು ; ಪೀಡಿಸು ; ರೇಗಿಸು. (ನಾ., ಪ್ರಾಚೀ. ಪ್ರ. = Annoyance). **Annoýance** (ನಾ.) ಕಾಟ ; ಕಿರುಕುಳ ; ಜುಗುಪ್ಸೆ.

A'nnual ಆ್ಯನ್ಯುಅಲ್ (ಗು., ನಾ.) ವಾರ್ಷಿಕ ; ವರ್ಷೇವರ್ಷೇ ಬರುವ ; ಒಂದು ವರ್ಷವಿರುವ. ವರ್ಷಾಯು (ಸಸ್ಯ). ವರ್ಷಕ್ಕೊಂದು ಬಾರಿ ಪ್ರಕಟವಾಗುವ (ಪುಸ್ತಕ, ಮೊ.) : ವಾರ್ಷಿಕ ಪ್ರಕಟನೆ. **A'nnually** (ಕ್ರಿ. ವಿ.) ವರ್ಷೇವರ್ಷೇ ; ' ಸಾಲೀಯಾನ '.

Annúity ಅನ್ಯೂಯಿಟಿ (ನಾ.) ವರ್ಷಾಶನ ; ವಾರ್ಷಿಕ ವೇತನ ; (ಕೆಲವು ವರ್ಷಗಳಿಗಾಗಲಿ, ಆಜೀವವಾಗಲಿ, ಅಥವಾ ನಿರಂತರವಾಗಲಿ) ವರ್ಷೇವರ್ಷೇ ಒಂದು ಗೊತ್ತಾದ ಆದಾಯ ಬರುವಂತೆ ಹಾಕಿದ ಠೇವಣಿ. Life, Terminable, Perpetual, annuity ಆಜೀವ, ಸಾವಧಿ, ನಿರಂತರ, ವರ್ಷಾಶನ. **Annúitant** (ನಾ.) ವರ್ಷಾಶನ ಪಡೆಯುವವನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Annúl ಅನಲ್ (ಕ್ರಿ. ಸಕ.) ತೊಡೆದುಹಾಕು ; ಅಳಿಸು ; ವರ್ಜಿಸು ; ನಿರರ್ಥಕ ಮಾಡು ; 'ರದ್ದು'ಮಾಡು. **Annúlment** (ನಾ.)

A'nnular ಆ್ಯನ್ಯುಲರ್ (ಗು.) ಉಂಗುರದ; ವಲಯಾಕಾರದ; ಕಂಕಣ. Annular eclipse ಕಂಕಣಗ್ರಹಣ (ಎಂದರೆ, ಸೂರ್ಯ ಬಿಂಬದ ಮಧ್ಯಭಾಗ ಮಾತ್ರ ಚಂದ್ರನಿಂದ ಮರೆಯಾಗಿ ಸುತ್ತಲೂ ವಲಯಾಕಾರದ ಬೆಳಕು ಕಾಣಿಸುತ್ತಿರುವ ಸೂರ್ಯಗ್ರಹಣ). **A'nnularly** (ಕ್ರಿ. ವಿ.) ; **A'nnulate(d)** (ಗು.) ಉಂಗುರಗಳಂಥ ಗುರುತುಗಳುಳ್ಳ, ಅಥವಾ ಉಂಗುರಗಳುಳ್ಳ ; ಉಂಗುರಗಳಿಂದ ಮಾಡಿದ; ವಲಯಿತ ; ವಲಯ ಮುದ್ರಿತ. **Annulátion** (ನಾ.) ; **A'nnulet** (ನಾ.) ಸಣ್ಣ ಉಂಗುರ. (ವಾ. ಶಾ.) ಕಂಬದಮೇಲೆ ಮಾಡಿರುವ ವಲಯ ಚಿತ್ರ. **A'nnuloid** (ಗು.) ಉಂಗುರದಂತಿರುವ. (ಪ್ರಾ. ವಿ.) ಉಂಗುರಗಳಂಥ ಭಾಗಗಳಿಂದ ಕೂಡಿದ ದೇಹವುಳ್ಳ. **A'nnulus** (ನಾ.) ಉಂಗುರ ; ಉಂಗುರದಂಥ ವಸ್ತು.

Annum ಆ್ಯನಂ (ನಾ.) Per annum ವರ್ಷಕ್ಕೆ.

Annúnciate ಅನನ್ಸಿಯೇಟ್ (ಕ್ರಿ. ಸಕ.) ಸಾರು ; ಮುಂತಿಳಿಸು ; ಸಿದ್ಧತೆಯನ್ನಾಗಲಿ ಆಗಮನವನ್ನಾಗಲಿ ತಿಳಿಸು. **Annunciátion** —ಸಿಯೇಷನ್ (ನಾ.) ಪ್ರಕಟಿಸುವುದು ; ಪ್ರಕಟನೆ. ಕ್ರಿಸ್ತನು ಅವತಾರ ಮಾಡುವನೆಂದು ಗೇಬ್ರಿಯಲ್ ದೇವದೂತನು ಮೇರೀ ಕನ್ಯಕೆಗೆ ಕೊಟ್ಟ ಮುನ್‌ಸೂಚನೆ ; ಈ ಸಂಗತಿಯ ಜ್ಞಾಪಕಾರ್ಥವಾಗಿ ಕ್ರೈಸ್ತ ದೇವಾಲಯಗಳಲ್ಲಿ (ಮಾರ್ಚಿ ೨೫ನೆಯ ತಾರೀಖಿನಲ್ಲಿ) ಆಚರಿಸುವ ಉತ್ಸವ. **Annúnciator** —ಷಿಯೇಟರ್ (ನಾ.) ಸಾರುವವನು ; ತಿಳಿಯಪಡಿಸುವವನು. (ದೂರವಾಣಿ, ಗಂಟೆ, ದೀಪ, ಮೊ. ಗಳ ಮೂಲಕ) ಕರೆ ಎಲ್ಲಿಂದ ಬಂದಿತೆಂಬುದನ್ನು ಸೂಚಿಸುವ ಸಲಕರಣೆ : ಗಮನಾಕರ್ಷಿ.

A'node ಆ್ಯನೋಡ್ (ನಾ.) (ಮೊದಲನ ಅರ್ಥ) ವಿದ್ಯುತ್ಪ್ರವಾಹವು ಧನಮುಖದಿಂದ ಹೊರಟು ಋಣಮುಖವನ್ನು ಸೇರುವುದಕ್ಕಾಗಿ, ವಿದ್ಯುದ್ವಿಭಜನವಾಗಬೇಕಾದ ದ್ರಾವಣದಲ್ಲಿ, ಹೋಗುವ ಮಾರ್ಗ. (ರೂಢಿಯಲ್ಲಿ) ಧನವಿದ್ಯುದ್‌ಧ್ರುವ.

A'nodyne ಆ್ಯನೊಡೈನ್ (ಗು., ನಾ.) (ವೈ. ಶಾ.) ನೋವನ್ನು ಕಡಮೆ ಮಾಡುವ (ಔಷಧ) ; ಶಮನಕಾರಿ. ಮನಶ್ಶಾಂತಿಕಾರಿ.

Anoésis ಆ್ಯನೊಈಸಿಸ್ (ನಾ.) (ಮ. ಶಾ.) ಬುದ್ಧಿಗೋಚರವಾಗದೆ ಇಂದ್ರಿಯಗೋಚರ ಮಾತ್ರ ಆಗುವುದು : ಪ್ರಜ್ಞಾರಹಿತ ಚೇತನ. **Anoétic** —ಎಟಿಕ್ (ಗು.)

Anoínt ಅನಾಯ್‌ಂಟ್ (ಕ್ರಿ. ಸಕ.) ಎಣ್ಣೆಯೊತ್ತು ; ಎಣ್ಣೆ ಹಚ್ಚು ; ಅಭ್ಯಂಜನ ಮಾಡು ; ಮುಲಾಮು ಹಚ್ಚು. (ರಾಜ್ಯದ ಅಥವಾ ಗುರುಮಠದ ಪಟ್ಟಾಭಿಷೇಕ ಮತ್ತು ಇತರ ಸಂಸ್ಕಾರಗಳಲ್ಲಿ) ಎಣ್ಣೆ ಹಚ್ಚು, —ಎರೆ. (ವ್ಯಂಗ್ಯಾರ್ಥ) ಚೆನ್ನಾಗಿ ಹೊಡೆ. **Anoínted** (ಗು.) ಎಣ್ಣೆ ಹಚ್ಚಿದ ; ಅಭಿಷಿಕ್ತ. The Lord's Anointed ಏಸುಕ್ರಿಸ್ತ. ದೈವಾಭಿಷಿಕ್ತ. **Anoínting** (ನಾ.) ; **Anoíntment** (ನಾ.)

Anómaly ಅನಾಮಲಿ (ನಾ.) ಅಸಮತೆ; ಅಸಂಗತಿ; ನಿಯಮವಿರೋಧ ; ವ್ಯತಿಕ್ರಮ. (ಖ. ವಿ.) ಸೂರ್ಯನೀಚದಿಂದ (ಅಥವಾ ಚಂದ್ರನೀಚದಿಂದ) ಗ್ರಹಕ್ಕೆ ಅಥವಾ ಉಪಗ್ರಹಕ್ಕೆ ಇರುವ ಕೋನದೂರ : ನೀಚಾಂತರ ; ಮಂದಫಲ; ಸೌರಶೃಂಗಾಂತರ. **Anomalístic(al)** (ಗು.) : Anomalistic year ಭೂಮಿ (ಅಥವಾ ಇತರ ಗ್ರಹವು) ಸೂರ್ಯನೀಚದಿಂದ ಪುನಃ ಸೂರ್ಯನೀಚಕ್ಕೆ ಬರಲು ಹಿಡಿಯುವ ಕಾಲ. Anomalistic month ಚಂದ್ರನು ನೀಚದಿಂದ ನೀಚಕ್ಕೆ ಬರಲು ಹಿಡಿಯುವ ಕಾಲ. **Anómalous** (ಗು.) ಅಸಂಗತ ; ಅಸಂಬದ್ಧ ; ವಿಪರೀತ. **Anómalously** (ಕ್ರಿ. ವಿ.) ; **Anómalousness** (ನಾ.)

Anomo— ಆ್ಯನೊಮೊ—, ಅನಾಮೊ— (ಸಮಾಸದಲ್ಲಿ ಪೂರ್ವಪದ) ಅಕ್ರಮ ; ಅಸಾಧಾರಣ. **Anomocárpous** (ಗು.) ಅಸಾಧಾರಣವಾದ ಹಣ್ಣು ಬಿಡುವ. **Anomophýllous** (ಗು.) (ಸ. ವಿ.) ಅಕ್ರಮ ಪತ್ರ ವಿನ್ಯಾಸವುಳ್ಳ.

Anón ಅನಾನ್ (ಕ್ರಿ. ವಿ.) ಬೇಗನೆ ; ಕೂಡಲೆ ; ಈಗಲೆ ; ಮತ್ತಾಗಲೆ. Ever and anon ಆಗಾಗ್ಗೆ ; ಆಗಿಂದಾಗ್ಗೆ ; ಅಡಿಗಡಿಗೆ; ಬಾರಿ ಬಾರಿಗೂ ; ಮತ್ತೆ ಮತ್ತೆ ; ಪದೇ ಪದೇ.

Anonáceous. **Ananas** ನೋಡಿ.

A'nonym ಆ್ಯನೊನಿಮ್ (ನಾ.) ತನ್ನ ಹೆಸರು ತಿಳಿಸದೆ ಇರುವವನು : ಅನಾಮಕ ; ಅಜ್ಞಾತ ನಾಮ. ಕೃತಕ ನಾಮ. **Anonýmity** (ನಾ.) ಅನಾಮಕತ್ವ. **Anónymous** ಅನಾನಿಮಸ್ (ಗು.) ಹೆಸರಿಲ್ಲದ ; ಹೆಸರು ತಿಳಿಯದ ; ಅನಾಮಧೇಯ. ಅಜ್ಞಾತ ಕರ್ತೃತ್ವದ. Anonymous petition ಮೂಗರ್ಜಿ. **Anónymously** (ಕ್ರಿ. ವಿ.) ; **Anónymousness** (ನಾ.)

Anópheles ಅನಾಫಿಲೀಸ್ (ನಾ.) (ಮಲೇರಿಯಾ ಜ್ವರಕ್ಕೆ ಕಾರಣವಾದ) ಸೊಳ್ಳೆಯ ಒಂದು ಜಾತಿ ; ಮಲೇರಿಯಾ ಸೊಳ್ಳೆ ; ಅನಾಫಿಲೀಸ್.

Anósmia ಆ್ಯನಾಸ್ಮಿಯ (ನಾ.) (ವೈ. ಶಾ.) ವಾಸನೆಹಿಡಿಯುವ ಶಕ್ತಿ ಹೋಗುವುದು ; ಘ್ರಾಣಶಕ್ತಿ ನಾಶ.

Anóther ಅನದರ್ (ಸ. ನಾ., ಗು.) ಮತ್ತೊಂದು ; ಮತ್ತೊಬ್ಬ ; ಇನ್ನೊಂದು ; ಇನ್ನೊಬ್ಬ ; ಬೇರೊಂದು ; ಬೇರೊಬ್ಬ ; ಅನ್ಯ.

Anoúrous ಅನೂರಸ್, ಅನೌ— (ಗು.) (ಪ್ರಾ. ವಿ.) (ಕಪ್ಪೆಯಂತೆ) ಬಾಲವಿಲ್ಲದ ; ಅಪುಚ್ಛ.

A'nserine ಆ್ಯನ್ಸೆರೈನ್ (ಗು.) 'ಗೂಸ್' ಎಂಬ ಕೋಳಿಯ, ಅದರ ಸಂಬಂಧವಾದ ಅಥವಾ ಅದರ ಸ್ವಭಾವದ. ದಡ್ಡ ; ಮಡ್ಡಿ ; ಜಡ ; ಮೂಢ.

A'nswer ಆನ್ಸರ್ (ನಾ.) ಉತ್ತರ ; ಪ್ರತ್ಯುತ್ತರ ; ಮರುನುಡಿ. (ಆಕ್ಷೇಪಣೆಗೆ) ಜವಾಬು, ಸಮಾಧಾನ. ಪ್ರತಿಕ್ರಿಯೆ. (ಕ್ರಿ.) ಉತ್ತರ (ಪ್ರತ್ಯುತ್ತರ) ಕೊಡು ; ಪ್ರತಿ ಹೇಳು. (ಆಕ್ಷೇಪಣೆಗೆ) ಸಮಾಧಾನ ಹೇಳು. He answers to that description ಅವನು ಆ ವರ್ಣನೆಗೆ ಸರಿಹೋಗುತ್ತಾನೆ. Answer to your name ನಿನ್ನ ಹೆಸರು ಕೂಗಿದಾಗ ಉತ್ತರ ಕೊಡು. That answers my purpose ಅದು ನನ್ನ ಕೆಲಸಕ್ಕೆ ಸಾಕು. Answer the door ತಟ್ಟಿದಾಗ ಬಾಗಿಲು ತೆಗೆ. I shall answer for him ನಾನು ಅವನಿಗೆ ಹೊಣೆಯಾಗುತ್ತೇನೆ. Answer an entertainment by an entertainment ಔತಣಕ್ಕೆ ಪ್ರತಿಔತಣ ಮಾಡು. **A'nswerable** (ಗು.) ಜವಾಬಾಗಿರುವ; ಅನುರೂಪವಾಗಿರುವ ; ಜವಾಬ್ದಾರಿಯುಳ್ಳ ; ಜವಾಬು ಕೊಡಬೇಕಾದ; ಉತ್ತರ ಕೊಡಲು ಸಾಧ್ಯವಾದ.

Ant ಆ್ಯಂಟ್ (ನಾ.) ಇರುವೆ. Ant-eater ಇರುವೆಗಳನ್ನು ತಿನ್ನುವ ಒಂದು ಮೃಗ. Ant-eggs ಇರುವೆಗಳ ಮೊಟ್ಟೆಗಳಂತೆ ಕಾಣುವ ಅವುಗಳ ಮರಿಹುಳುಗಳು. Ant-fly ರೆಕ್ಕೆ ಇರುವೆ. Ant-hill ಹುತ್ತ. White ant ಗೆದ್ದಲು ಹುಳು.

Antácid ಆ್ಯನ್ಟ್ಯಾಸಿಡ್ (ಗು., ನಾ.) (ವೈ. ಶಾ.) (ಮು., ಜಠರದಲ್ಲಿ) ಹುಳಿಯನ್ನು ಹೊಡೆಯುವ ; ಪ್ರತ್ಯಾಮ್ಲ.

Antágonism ಆ್ಯನ್ಟ್ಯಾಗೊನಿಸ್ಮ್ (ನಾ.) ವಿರೋಧ ; ವೈರ. **Antágonist** (ನಾ.) ಪ್ರತಿಕಕ್ಷಿ ; ವಿರೋಧಿ ; ವೈರಿ. (ಶ. ವಿ.) ಪ್ರತೀಕಾರಕ ಸ್ನಾಯು. **Antagonístic(al)** (ಗು.) ; **Antagonístically** (ಕ್ರಿ. ವಿ.) ; **Antágonize** (ಕ್ರಿ. ಸಕ.) ಪ್ರತೀಕರಿಸು. ವಿರೋಧ ಮಾಡಿಕೊ ; ದ್ವೇಷ ಕಟ್ಟಿಕೊ.

Antálgic ಆ್ಯನ್ಟ್ಯಾಲ್ಜಿಕ್ (ಗು., ನಾ.) (ವೈ. ಶಾ.) ನೋವನ್ನು ತೆಗೆಯುವ ಅಥವಾ ಮಟ್ಟುಮಾಡುವ ; ವೇದನ ಹಾರಿ.

Antálkali ಆ್ಯನ್ಟ್ಯಾಲ್ಕಲಿ (ನಾ.) ಕ್ಷಾರವನ್ನು ಹೊಡೆಯುವ ಪದಾರ್ಥ; ಕ್ಷಾರ ಹಾರಿ ; ಪ್ರತಿಕ್ಷಾರ. **Antálkaline** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Antaphrodísiac ಆ್ಯನ್ಟಾಫ್ರೊಡಿಸಿಆ್ಯಕ್ (ಗು., ನಾ.) ಕಾಮ ನಿವಾರಕ ; ಪ್ರತಿ ವಾಜೀಕರಣ.

Antárctic ಆ್ಯನ್ಟಾರ್ಕ್‌ಟಿಕ್ (ಗು.) ಭೂಗೋಳದ ಪ್ರತಿ (ದಕ್ಷಿಣ) ಧ್ರುವ ಪ್ರದೇಶದ.

Antarthrític ಆ್ಯನ್ಟಾರ್‌ಥ್ರಿಟಿಕ್ (ಗು., ನಾ.) ವಾತರೋಗ ನಿವಾರಕ.

Antasthmátic ಆ್ಯನ್ಟಾ್ಯಸ್ತ್‌ಮ್ಯಾಟಿಕ್ (ಗು., ನಾ.) ಉಬ್ಬಸ ನಿಲ್ಲಿಸುವ ; ಶ್ವಾಸ ಕಾಸ ನಿವಾರಕ.

Antatróphic ಆ್ಯನ್ಟಟ್ರಾಫಿಕ್ (ಗು., ನಾ.) ಕ್ಷಯ ನಿವಾರಕ.

A'ntebellum ಆ್ಯನ್ಟಿಬೆಲಂ (ಗು.) ಯುದ್ಧಪೂರ್ವ.

Antecédence ಆ್ಯನ್ಟಿಸೀಡೆನ್ಸ್ (ನಾ.) (ಕಾಲದಲ್ಲಿಯೊ ಕಾರಣ ಸಂಬಂಧದಲ್ಲಿಯೊ) ಪೂರ್ವಭಾವಿತ್ವ ; ಹಿನ್ನಡೆ. (ಖ. ವಿ.) ವಕ್ರ ಗತಿ. **Antecédent** (ಗು., ನಾ.) ಮೊದಲಿನ ; ಹಿಂದಿನ ; ಪೂರ್ವ ; ಪೂರ್ವಗತ ; ಪೂರ್ವಗಾಮಿ ; ಪೂರ್ವ ನಿರ್ದಿಷ್ಟ. (ತರ್ಕ) ಆಧಾರ ವಾಕ್ಯ ; ಪೂರ್ವ ಪ್ರತಿಜ್ಞೆ. (ವ್ಯಾ.) ಸಂಬಂಧ ಸರ್ವನಾಮವು ಸೂಚಿಸುವ ಪೂರ್ವಗಾಮಿ ಪದ ಅಥವಾ ವಾಕ್ಯ. (ಗಣಿತ) ಪ್ರಮಾಣದಲ್ಲಿ ಅಗ್ರ ಪದ (ಅಂಕ), ಪ್ರಥಮಾಂಕ. **Antecédents** (ನಾ.) (ಮು., ವ್ಯಕ್ತಿಗಳ) ಹಿಂದಿನ ನಡೆವಳಿ ; ಪೂರ್ವ ಚರಿತ್ರೆ. **Antecédently** (ಕ್ರಿ. ವಿ.)

A'ntechamber ಆ್ಯನ್ಟಿಚೇಂಬರ್ (ನಾ.) ಮನೆಯ ಮುಖ್ಯಶಾಲೆಯ ಮುಂಭಾಗದಲ್ಲಿರುವ ಕೋಣೆ : ಮುಂಗೋಣೆ.

A'ntechapel ಆ್ಯನ್ಟಿಚ್ಯಾಪೆಲ್ (ನಾ.) ಕ್ರೈಸ್ತ ಪೂಜಾಗೃಹದ ಪಶ್ಚಿಮ ಪಾರ್ಶ್ವದಲ್ಲಿಯ ಹೊರಕೋಣೆ, ತಾವಾರ.

A'ntedate ಆ್ಯನ್ಟಿಡೇಟ್ (ನಾ.) (ಬರೆವಣಿಗೆಯ ವಿಷಯದಲ್ಲಿ ನಿಜವಾದ ತೇದಿಗೆ ಬದಲಾಗಿ ಹಾಕಿದ) ಹಿಂದಣ ತೇದಿ. **Antedáte** (ಕ್ರಿ. ಸಕ.) (ಪತ್ರಕ್ಕಾಗಲಿ ಯಾವುದಾದರೂ ಸಂಗತಿಗಾಗಲಿ) ಹಿಂದಣ ತೇದಿ ಹಾಕು. ಮುಂಚೆ ಬರು ; ಮುಂದಾಗಿ ನಿರೀಕ್ಷಿಸು.

Antedilúvian ಆ್ಯನ್ಟಿಡಿಲ್ಯೂವಿಯನ್ (ಗು.) ಆದಿ ಪ್ರಳಯಕ್ಕೆ ಹಿಂದಿನ. (ನಾ.) ಹಳೆಯ ಪದ್ಧತಿಯವನು ; ಓಬೀರಾಯನ ಕಾಲದವನು ; ಹಳೆಯ ಕಂದಾಚಾರದವನು. (ರೂಪ.) ಹಣ್ಣುಹಣ್ಣು ಮುದುಕ.

A'ntelope ಆ್ಯನ್ಟಿಲೋಪ್ (ನಾ.) ಒಂದು ಜಾತಿಯ ಜಿಂಕೆ, ಚಿಗರಿ.

A'nte merídiem (L) ಆ್ಯನ್ಟಿ ಮೆರಿಡಿಯೆಂ, **Antemerídian** (ಗು.) (ಸಂಕ್ಷಿಪ್ತ : A. M.) ಮಧ್ಯರಾತ್ರಿಯಿಂದ ಮಧ್ಯಾಹ್ನದ ಒಳಗಿನ : ಪೂರ್ವಾಹ್ಣ.

Antemúndane ಆ್ಯನ್ಟಿಮಂಡೇನ್ (ಗು.) ಸೃಷ್ಟಿಪೂರ್ವದ.

Antenátal ಆ್ಯನ್ಟಿನೇಟಲ್ (ಗು.) ಹುಟ್ಟುವುದಕ್ಕೆ ಮೊದಲಿನ ; ಜನನ ಪೂರ್ವದ.

Anténna ಆ್ಯನ್ಟೆನ (ನಾ. ; ಬ. ವ. —ae, —as) (ಪ್ರಾ. ವಿ.) (ಕೀಟಗಳ, ಏಡಿಯಂಥ ವಲ್ಕವಂತಗಳ, ತಲೆಯಮೇಲೆ ಎರಡು ಕಡೆಗಳಲ್ಲೂ ಇರುವ) ಸ್ಪರ್ಶಾಂಗ. (ಸ. ವಿ) 'ಆರ್ಕಿಡ್' ಎಂಬ ಕೆಲವು ಸಸ್ಯ ಜಾತಿಗಳಲ್ಲಿಯ ಗಂಡು ಹೂವುಗಳಲ್ಲಿ, ಮುಂದಕ್ಕೆ ಚಾಚಿಕೊಂಡು, ಮುಟ್ಟಿದರೆ ಪರಾಗ ಪುಂಜವನ್ನು ಸಿಡಿಸುವ ಎರಡು ತಂತುಗಳು. (ನಿಸ್ತಂತು ವಾರ್ತೆಯಲ್ಲಿ) ವಾರ್ತಾ ಗ್ರಾಹಕ ಮತ್ತು ವಾರ್ತಾ ಪ್ರಸಾರಕ ತಂತಿ. **Anténnal** (ಗು.) ; **Anténnary** (ಗು.)

Antenúptial ಆ್ಯನ್ಟಿನಪ್ಷಲ್ (ಗು.) ಮದುವೆಗೆ ಮೊದಲಿನ ; ವಿವಾಹ ಪೂರ್ವ. Antenuptial contract ವಿವಾಹಪೂರ್ವದ ಕರಾರು.

Antepéndium ಆ್ಯನ್ಟಿಪೆಂಡಿಯಂ (ನಾ.) ಬಲಿಪೀಠದ ಮುಂದಿನ ತೆರೆ.

Antepenúlt ಆ್ಯನ್ಟಿಪಿನಲ್ಟ್, **Antepenúltimate** — ಪಿನಲ್ಟಿಮೆಟ್ (ಗು., ನಾ.) ಎರಡುಳಿದು ಕೊನೆಯ(ದು) ; ಪೂರ್ವೋಪಾಂತ್ಯ ; ಉಪೋಪಾಂತ್ಯ.

Anteprándial ಆ್ಯನ್ಟಿಪ್ರ್ಯಾನ್ಡಿಯಲ್ (ಗು.) ಊಟಕ್ಕೆ ಮೊದಲಿನ ; ಭೋಜನ ಪೂರ್ವ.

Antérior ಆ್ಯನ್ಟೀರಿಯರ್ (ಗು.) ಮುಂದುಗಡೆಯ ; ಮುಂಭಾಗದ. (ಕಾಲದಲ್ಲಿ) ಮೊದಲಿನ, ಹಿಂದಿನ. **Antériorly** (ಕ್ರಿ. ವಿ.) ; **Anteriórity** — ಯಾರಿಟಿ (ನಾ.) ಪೂರ್ವತೆ.

A'nte-room ಆ್ಯನ್ಟಿರೂಂ (ನಾ.) ಒಳಗಿನ ಕೋಣೆಯ ಹಾದಿಯಲ್ಲಿರುವ ಕೋಣೆ : ಮುಂಗೋಣೆ.

Anthélion ಆ್ಯನ್ಥೀಲಿಯನ್, ಆ್ಯನ್ಟ್‌ಹೀಲಿಯನ್ (ನಾ) ಸೂರ್ಯನಿಗೆದುರಾಗಿರುವ ಮೋಡದ ಮೇಲೆ ಅಥವಾ ಮಂಜಿನ ತೆರೆಯಮೇಲೆ ಪ್ರೇಕ್ಷಕನ ತಲೆಯ ನೆರಳಿನ ಸುತ್ತಲೂ ಕಾಣುವ ಪ್ರಭಾವಳಿ.

Anthelmíntic ಆ್ಯನ್ಥೆಲ್‌ಮಿನ್ಟಿಕ್ (ಗು., ನಾ.) (ವೈ. ಶಾ.) ಕರುಳಿನಲ್ಲಿಯ ಜಂತುಗಳನ್ನು ನಾಶಮಾಡುವ (ಔಷಧ) : ಅಂತ್ರಕ್ರಿಮಿ ನಾಶಕ.

A'nthem ಆ್ಯನ್ಥೆಂ (ನಾ.) ಉತ್ತರ ಪ್ರತ್ಯುತ್ತರದಂತೆ ಹಾಡುವ ಗೀತೆ : ಸಂವಾದ ಗೀತೆ. (ಬೈಬಲ್ಲಿನಿಂದ ಅಥವಾ ಕ್ರೈಸ್ತ ಆರಾಧನ ವಿಧಿಯಿಂದ ತೆಗೆದು) ಪವಿತ್ರಗಾನಕ್ಕೆ ಹೊಂದಿಸಿದ ಗದ್ಯಗೀತೆ. ಸ್ತೋತ್ರಗೀತೆ ; ಸಂಕೀರ್ತನೆ ; ಆನಂದ ಗೀತೆ. National anthem ರಾಷ್ಟ್ರ ಗೀತೆ.

A'nther ಆ್ಯನ್ಥರ್ (ನಾ.) (ಸ. ವಿ.) ಪುಷ್ಪ ಪರಾಗವಿರುವ ಕೇಸರಭಾಗ ; ಪರಾಗ ಕೋಶ. Anther dust ಪರಾಗ. Anther valve ಪರಾಗ ಕವಾಟ. **A'ntheral** (ಗು.) ಪರಾಗ ಕೋಶದ. **Antheríferous** (ಗು.) ಪರಾಗ ಕೋಶ ಧಾರಿ. **A'ntheroid** (ಗು.) ಪರಾಗ ಕೋಶ ದಂಥ.

A'nthoid ಆ್ಯನ್ಥಾಯ್ಡ್ (ಗು.) ಹೂವಿನ ಆಕಾರದ ; ಪುಷ್ಪ ಸದೃಶ.

Anthólogy ಆ್ಯನ್ಥಾಲೊಜಿ (ನಾ.) ಆರಿಸಿ ತೆಗೆದ ಉತ್ತಮವಾದ ಸಣ್ಣ ಕವಿತೆಗಳ ಸಂಗ್ರಹ ; ಕಾವ್ಯ ಮಂಜರಿ. **Anthólogist** (ನಾ.) ಕವಿತಾ ಸಂಗ್ರಹಕಾರ.

A'nthracite ಆ್ಯನ್ಥ್ರಸೈಟ್ (ನಾ.) ಹೊಗೆಯಿಲ್ಲದೆ ನಿರ್ವರ್ಣ ಜ್ವಾಲೆಯಿಂದ ಉರಿದು ಅಧಿಕ ಶಾಖ ಕೊಡುವ, ಲೋಹದಂತೆ ಹೊಳಪುಳ್ಳ, ಗಟ್ಟಿಕಲ್ಲಿದ್ದಲಿನ ಜಾತಿ. **A'nthracitous** (ಗು.) ; **Anthracític** — ಸಿಟಿಕ್ (ಗು.)

A'nthrax ಆ್ಯನ್ಥ್ರ್ಯಾಕ್ಸ್ (ನಾ.) ಕೆಟ್ಟ ಕುರು ; ಉಗ್ರ ವ್ರಣ. ದನ ಕುರಿಗಳ ಪ್ಲೀಹಜ್ವರ ; ನೆರಡಿ ರೋಗ. ಪಶುಗಳಿಗೆ ಬಂದ ಇಂಥ ರೋಗದ ಸೋಂಕು ಮನುಷ್ಯನಿಗೆ ತಗುಲಿ ಆಗುವ ಕೆಟ್ಟ ಹುಣ್ಣು.

Anthropocéntric ಆ್ಯನ್ಥ್ರೊಪೊಸೆನ್ಟ್ರಿಕ್ (ಗು.) ಮನುಷ್ಯನು ಸೃಷ್ಟಿಯಲ್ಲಿ ಕೇಂದ್ರಪ್ರಾಯನಾಗಿರುವನೆಂಬ ಭಾವನೆಯುಳ್ಳ : ಮನುಷ್ಯ ಕೇಂದ್ರೀಯ.

Anthropógeny ಆ್ಯನ್ಥ್ರೊಪಾಜಿನಿ (ನಾ.) ಮನುಷ್ಯ ಮೂಲದ ವಿಮರ್ಶೆ.

Anthrópoglot ಆ್ಯನ್ಥ್ರೊಪೊಗ್ಲಾಟ್ (ನಾ.) ಮನುಷ್ಯನಂತೆ ನಾಲಗೆಯುಳ್ಳ ಪ್ರಾಣಿ (ಉದಾ.— ಗಿಣಿ) : ಮಾನುಷ ಜಿಹ್ವಿ.

Anthropógraphy ಆ್ಯನ್ಥ್ರೊಪಾಗ್ರಫಿ (ನಾ.) ಮಾನವ ಜಾತಿಗಳು ಪ್ರಪಂಚದ ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿಕೊಂಡು ಹೇಗೆ ವ್ಯತ್ಯಾಸಹೊಂದುತ್ತಬಂದುವು ಎಂಬ ವಿಚಾರವನ್ನು ವಿವರಿಸುವ ಶಾಸ್ತ್ರ : ಮನುಷ್ಯ ಪ್ರಸರಣ ಶಾಸ್ತ್ರ.

A'nthropoid ಆ್ಯನ್ಥ್ರೊಪಾಯ್ಡ್ (ಗು.) ಮನುಷ್ಯಾಕಾರದ ; ಮನುಷ್ಯಸದೃಶ. (ನಾ.) ಆಕಾರದಲ್ಲಿ ಮಾತ್ರ ಮನುಷ್ಯನಂತಿರುವ ಪ್ರಾಣಿ : ನರ ವಾನರ.

Anthropólatry ಆ್ಯನ್ಥ್ರೊಪಾಲಟ್ರಿ (ನಾ.) ಮನುಷ್ಯಾರಾಧನೆ ; ನರಪೂಜೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Anthrópolite, —ith ಆ್ಯನ್ಥ್ರೊಪೊಲೈಟ್, —ಲಿತ್ (ನಾ.) ಶಿಲೀಭೂತ ಮನುಷ್ಯ (ಎಂದರೆ, ಅನೇಕ ಯುಗಗಳ ಹಿಂದೆ ಮನುಷ್ಯದೇಹವು ಭೂಮಿಯ ಪದರಗಳಲ್ಲಿ ಸಿಕ್ಕಿ, ಮೃದು ಪದಾರ್ಥವೆಲ್ಲ ಅಳಿದುಹೋಗಿ, ಅಸ್ಥಿಭಾಗವು ಮೇಲಿನ ಒತ್ತಡದಿಂದ ಕ್ರಮೇಣ ಗಟ್ಟಿಯಾಗುತ್ತಬಂದು ಕಲ್ಲಾಗಿ, ಈಗ ಭೂಮಿಯಲ್ಲಿ ಅಗೆದರೆ ಕೆಲವು ಪ್ರದೇಶಗಳಲ್ಲಿ ದೊರೆಯುವ ಅವಶೇಷ)

Anthropólogy ಆ್ಯನ್ಥ್ರೊಪಾಲೊಜಿ (ನಾ.) ಮನುಷ್ಯನಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತ ಶಾಸ್ತ್ರ ; ಶಾರೀರಕ ಮತ್ತು ಮಾನಸಿಕ ವಿಚಾರಗಳನ್ನು ಕುರಿತ ಮನುಷ್ಯಶಾಸ್ತ್ರ; ಮನುಷ್ಯನನ್ನು ಪ್ರಾಣಿದೃಷ್ಟಿಯಿಂದ ವಿಚಾರಮಾಡುವ ಶಾಸ್ತ್ರ ; ಮಾನವ ಶಾಸ್ತ್ರ. **Anthropólogist** (ನಾ.) ; **Anthropológical** ಆ್ಯನ್ಥ್ರೊಪೊಲಾಜಿಕಲ್ (ಗು.) ; **Anthropológically** (ಕ್ರಿ. ವಿ.)

Anthropómetry ಆ್ಯನ್ಥ್ರೊಪಾಮೆಟ್ರಿ (ನಾ.) ಮನುಷ್ಯದೇಹದ ಮತ್ತು ಅದರ ಭಾಗಗಳ ಸಾಮಾನ್ಯ ಪ್ರಮಾಣವನ್ನು, ಬೇರೆ ಬೇರೆ ವಯಸ್ಸುಗಳಲ್ಲಿಯೂ ಬೇರೆ ಬೇರೆ ಜನಾಂಗಗಳಲ್ಲಿಯೂ ಕುಲಗಳಲ್ಲಿಯೂ ಗೊತ್ತುಪಡಿಸುವುದಕ್ಕಾಗಿ ಮಾಡುವ ಅಳತೆ : ಮನುಷ್ಯದೇಹ ಮಾಪನ. **Anthropómetrist** (ನಾ.)

Anthropomórphic ಆ್ಯನ್ಥ್ರೊಪೊಮಾರ್ಫಿಕ್ (ಗು.) ಭಗವಂತನನ್ನು ಮಾನವ ರೂಪು ಮತ್ತು ಗುಣಗಳುಳ್ಳಂತೆ ಭಾವಿಸುವ; ಮನುಷ್ಯತ್ವಾರೋಪಣದ ; ಮನುಷ್ಯವದ್ಭಾವನೆಯ. **Anthropomórphize** (ಕ್ರಿ. ಸಕ.) ಮನುಷ್ಯತ್ವವನ್ನು ಆರೋಪಿಸು. **Anthropomórphism** (ನಾ.) ಮನುಷ್ಯತ್ವಾರೋಪಣೆ. **Anthropomórphist** (ನಾ.) ; **Anthropomórphous** (ಗು.) ಮನುಷ್ಯ ರೂಪಿನ.

Anthropóphagous ಆ್ಯನ್ಥ್ರೊಪಾಫಗಸ್ (ಗು.) ಮನುಷ್ಯನನ್ನು ತಿನ್ನುವ ; ನರಭಕ್ಷಕ. **Anthropóphagi** — ಜೈ (ನಾ., ಬ. ವ.) ನರಭಕ್ಷಕರು. **Anthropóphagy** — ಜಿ (ನಾ.) ಮನುಷ್ಯನನ್ನು ತಿನ್ನುವಿಕೆ ; ನರಭಕ್ಷಣ.

Anthropophóbia ಆ್ಯನ್ಥ್ರೊಪೊಫೋಬಿಯ (ನಾ.) ಮನುಷ್ಯದ್ವೇಷ ; ಮನುಷ್ಯಭಯ.

Anti-aírcraft ಆ್ಯನ್ಟಿ ಏರ್‌ಕ್ರಾಫ್ಟ್ (ಗು.) ಶತ್ರುವ್ಯೋಮಯಾನಗಳನ್ನು ಹೊಡೆದುಹಾಕಲು ಉಪಯೋಗಿಸುವ (ಫಿರಂಗಿ, ಮೊ.) : ವ್ಯೋಮಯಾನ ವಿನಾಶಕ.

A'ntiar ಆ್ಯನ್ಟ್ಯರ್, ಆ್ಯನ್ಟಿಯರ್ (ನಾ.) ಯವ (ಜಾವಾ) ದ್ವೀಪದ 'ಯೂಪಸ್' ಎಂಬ ಮರ; ಅರಂಜಿ ಮರ ; ಆ ಮರದಿಂದ ತೆಗೆದ ವಿಷ.

Antibílious ಆ್ಯನ್ಟಿಬಿಲಿಯಸ್ (ಗು.) ಪಿತ್ತಹರ ; ಪಿತ್ತನಾಶಕ.

A'ntibody ಆ್ಯನ್ಟಿಬಾಡಿ (ನಾ.) (ಶ. ವಿ.) ರಕ್ತದಲ್ಲಿ ಸೇರಬಹುದಾದ ವಿಷಾಣುಗಳ ದುಷ್ಪರಿಣಾಮವನ್ನು ತಡೆಯುವುದಕ್ಕೆ ರಕ್ತದಲ್ಲಿ ಉತ್ಪತ್ತಿಯಾಗುವ ಪದಾರ್ಥವಿಶೇಷ: ಪ್ರತಿವಿಷ ವಸ್ತು.

A'ntic ಆ್ಯನ್ಟಿಕ್ (ಗು., ನಾ.) (ವಾ. ಶಾ.) ವಿಕಾರ ; ವಿಚಿತ್ರ. ವಿಕಟ ; ಹಾಸ್ಯರೂಪದ. (ನಾ.) — ವಿಗ್ರಹ ಅಥವಾ ಚಿತ್ರ. (ಪ್ರಾಚೀ. ಪ್ರ.) ನಕಲಿ ಮಾಡುವವನು. ಗುಜರಿ ವೈದ್ಯ ; ಡಂಭಾಚಾರಿ. **A'ntics** (ನಾ.) ವಿಕಟ ಚೇಷ್ಟೆ ; ಕೋಡಂಗಿ ಚೇಷ್ಟೆ.

A'ntichlor(e) ಆ್ಯನ್ಟಿಕ್ಲೋರ್ (ನಾ.) (ರ. ವಿ.) ಚೆಲುವೆಯ ಪುಡಿಯನ್ನುಪಯೋಗಿಸಿ ಬಟ್ಟೆ, ಮೊ. ಗಳಲ್ಲಿಯ ಕೊಳೆತೆಗೆದು ಬೆಳ್ಳಗೆ ಮಾಡಿದ ಮೇಲೆ ಅವುಗಳಲ್ಲಿ ನಿಂತಿರಬಹುದಾದ 'ಕ್ಲೋರೀನ್' ಎಂಬ ಪೀತಾನಿಲವನ್ನು ನಿಶ್ಶೇಷವಾಗಿ ಕಳೆದುಹಾಕಲು ಉಪಯೋಗಿಸುವ ವಸ್ತು : ಪೀತಾನಿಲ ಹಾರಕ.

A'ntichrist ಆ್ಯನ್ಟಿಕ್ರೈಸ್ಟ್ (ನಾ.) ಕ್ರಿಸ್ತ ವಿರೋಧಿ. **Antichrístian** — ಕ್ರಿಸ್ಟಿಯನ್, — ಕ್ರಿಶ್ಚನ್ (ಗು.) ಕ್ರಿಸ್ತ ವಿರುದ್ಧ ; ಕ್ರೈಸ್ತ ಮತ ವಿರುದ್ಧ. (ನಾ.) ಕ್ರೈಸ್ತ ಮತ ವಿರೋಧಿ. **Antichrístianism** (ನಾ.)

Antícipate ಆ್ಯನ್ಟಿಸಿಪೇಟ್ (ಕ್ರಿ. ಸಕ.) ನಿರೀಕ್ಷಿಸು ; ಮೊದಲೇ ತಿಳಿ ; ಮುಂಭಾವಿಸು ; ಮುಂಚೆಯೇ ಚರ್ಚಿಸು, ಯೋಚಿಸು, ಅನುಭವಿಸು; ಮೊದಲೇ ಉಪಯೋಗಿಸು ಅಥವಾ ವೆಚ್ಚಮಾಡು (To anticipate one's income ಆಯವನ್ನು, ಬರುವುದಕ್ಕೆ ಮೊದಲೇ ವ್ಯಯ ಮಾಡು). ತ್ವರೆಗೊಳಿಸು (Anticipate one's ruin ಒಬ್ಬನ ನಾಶವನ್ನು ತ್ವರೆಗೊಳಿಸು). **Antícipant** (ಗು.) ಮೊದಲೇ ಕಾರ್ಯಪ್ರವೃತ್ತವಾಗುವ ; ನಿರೀಕ್ಷಣೆಯಿಂದಿರುವ. (ನಾ.) ನಿರೀಕ್ಷಕ. **Anticipátion** ಆ್ಯ — (ನಾ.) (ಕ್ರಿಯಾರ್ಥಗಳಲ್ಲಿ). (ವೈ. ಶಾ.) ಚಿಹ್ನೆಗಳು ಕಾಲಕ್ಕೆ ಮೊದಲೇ ಕಾಣಿಸಿಕೊಳ್ಳುವುದು. (ಸಂ.) ಸ್ವರಮೇಳನದ ಪೂರ್ವ ಸೂಚನೆ. **Antícipative** (ಗು.) ; **Antícipatively** (ಕ್ರಿ. ವಿ.) ; **Antícipator** (ನಾ.) ನಿರೀಕ್ಷಕ. **Antícipatory** (ಗು.)

Anticlímax ಆ್ಯನ್ಟಿಕ್ಲೈಮ್ಯಾಕ್ಸ್ (ನಾ.) ಒಂದು ವಾಕ್ಯದಲ್ಲಿ, ಮೊದಲು ಹೇಳುವ ಭಾವಗಳು ಕ್ರಮೇಣ ಏರುತ್ತಹೋಗಿ, ಕಡೆಗೆ ಇಳಿದು ಬಿಡುವ ಅಲಂಕಾರ : ಆರೋಹಣ ಭಂಗ ; ಪ್ರತಿಸಾರಾಲಂಕಾರ.

Anticlínal ಆ್ಯನ್ಟಿಕ್ಲೈನಲ್ (ಗು.) (ಭೂ. ವಿ.) ಭೂಗರ್ಭದ ಕಲ್ಲು ಪದರಗಳು ಮೇಲ್ಗಡೆ ಒಂದಕ್ಕೊಂದು ಒರಗಿ, ಅಲ್ಲಿಂದ ಮನೆಯ ಇಪ್ಪಾರಿನಂತೆ ಇಳಿಜಾರಾಗುತ್ತಹೋಗುವ ; ವಿಮುಖಾವನತ. Anticlinal axis (ಭೂ. ವಿ.) ವಿಮುಖಾವನತ ಅಕ್ಷರೇಖೆ.

Anticonstitútional ಆ್ಯನ್ಟಿಕಾನ್ಸ್ಟಿಟ್ಯೂಷನಲ್ (ಗು.) (ರಾಜ್ಯ ಮೊ. ವಿಷಯಗಳಲ್ಲಿ) ಅಂಗರಚನೆಗೆ ವಿರುದ್ಧವಾದ.

Anticýclone ಆ್ಯನ್ಟಿಸೈಕ್ಲೋನ್ (ನಾ.) ವಾಯುಮಂಡಲದಲ್ಲಿ ಹೆಚ್ಚು ಒತ್ತಡವಿರುವ ಪ್ರದೇಶದಿಂದ ವಾಯು ಹೊರಕ್ಕೆ ನುಗ್ಗಿ, ಸುತ್ತುತ್ತ ಹೋಗುವ ವಾಯುಸ್ಥಿತಿ : ಅಪಭ್ರಮಣ ಮಾರುತ; ಬಹಿರ್ಮುಖ ಭ್ರಮಣ ಮಾರುತ. **Anticyclónic** — ಕ್ಲಾನಿಕ್ (ಗು.)

A'ntidote ಆ್ಯನ್ಟಿಡೋಟ್ (ನಾ.) ವಿಷವನ್ನಾಗಲಿ ರೋಗವನ್ನಾಗಲಿ ನಿವಾರಣೆ ಮಾಡುವ ಮದ್ದು : ವಿಷಹಾರಿ ; ಪ್ರತಿವಿಷ. (ರೂಪ.) ಪರಿಹಾರ. **A'ntidotal** (ಗು.)

A'ntigen ಆ್ಯನ್ಟಿಜೆನ್ (ನಾ.) ವಿಷಾಣು ನಿರೋಧಕ ಪದಾರ್ಥಗಳು ರಕ್ತದಲ್ಲಿ ಉತ್ಪನ್ನವಾಗುವಂತೆ ಪ್ರಚೋದಿಸುವುದಕ್ಕಾಗಿ ರಕ್ತಕ್ಕೆ ಸೇರಿಸುವ ವಸ್ತು : ಪ್ರತಿವಿಷಜನಕ.

Antigrópelos ಆ್ಯನ್ಟಿಗ್ರಾಪಿಲೋಸ್ (ನಾ., ಬ. ವ.) ನೀರು ತೂರದ ಕಾಲುಪಟ್ಟಿಗಳು.

Antilíthic ಆ್ಯನ್ಟಿಲಿತಿಕ್ (ಗು., ನಾ.) ಮೂತ್ರಕೋಶದಲ್ಲಿ ಕಲ್ಲು ಕೂಡದಂತೆ ಮಾಡುವ, ಮತ್ತು ಕೂಡಿದ ಕಲ್ಲನ್ನು ಕರಗಿಸುವ (ಮದ್ದು) : ಅಶ್ಮರೀ ಹಾರಕ.

Antilógarithm ಆ್ಯನ್ಟಿಲಾಗರಿತ್‌ಮ್ (ನಾ.) ಘಾತಮಾಪಕವು ಯಾವ ಅಂಕಕ್ಕೆ ಸಂಬಂಧಿಸಿದೆಯೊ ಅದು : ಪ್ರತಿಘಾತ ಪದ ; ಘಾತಮೂಲ ; ಪ್ರತಿ ಲಾಗರಿತಂ. [ವಿವರಣೆ.—ಸಂಖ್ಯೆಗಳನ್ನೆಲ್ಲ ಹತ್ತರ ಘಾತವಾಗಿ ಭಾವಿಸಿದರೆ, ($100 = 10^2$) 2 ಎಂಬುದು 100 ರ ಘಾತ ; 100 ಎಂಬುದು 2 ರ ಪ್ರತಿಘಾತ]

Antílogy ಆ್ಯನ್ಟಿಲೊಜಿ (ನಾ.) ಪದ ವಿರೋಧ ; ಭಾವ ವಿರೋಧ.

Antimacássar ಆ್ಯನ್ಟಿಮಕ್ಯಾಸರ್ (ನಾ.) ಕುರ್ಚಿ, ಸೋಫಾ, ಮೊ. ಗಳಮೇಲೆ ಅಲಂಕಾರಕ್ಕಾಗಲಿ ತಲೆಗೂದಲಿನ ಜಿಡ್ಡು ಸೇರದಂತಿರುವುದಕ್ಕಾಗಲಿ ಹಾಕುವ ಗವಸು.

A'ntimasque, — mask ಆ್ಯನ್ಟಿಮಾಸ್ಕ್ (ನಾ.) ಮೊಗವಾಡ ನಾಟಕದ ಮಧ್ಯೆ ಬರುವ ಕೀಳುವೇಷ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Antimónarchy ಆ್ಯನ್ಟಿಮಾನರ್ಕಿ (ನಾ.) ರಾಜತ್ವ ವಿರೋಧ. **Antimonárchic(al)** — ಮೊನಾರ್ಕಿಕ್, — ಕಲ್ (ಗು.) ರಾಜತ್ವ ವಿರೋಧಕ. **Antimónarchist** —ಮಾನರ್ಕಿಸ್ಟ್ (ನಾ.)

A'ntimony ಆ್ಯನ್ಟಿಮನಿ (ನಾ.) ಭಿದುರತೆ (ಎಂದರೆ, ಚೂರುಚೂರಾಗಿ ಒಡೆದುಹೋಗುವುದು), ಹೊಳೆಯುವ ನೀಲಚ್ಛಾಯೆಯ ಬಿಳುಪು, ಸ್ಫಟಿಕಾಕೃತಿ, ಪದರ ಪದರವಾಗಿರುವುದು — ಈ ಗುಣಗಳುಳ್ಳ ಒಂದು ಮೂಲಲೋಹ : ಆ್ಯನ್ಟಿಮನಿ.

Antínomy ಆ್ಯನ್ಟಿನೊಮಿ (ನಾ.), (ಒಂದೇ ನ್ಯಾಯ ಸೂತ್ರದ, ಧರ್ಮ ಸೂತ್ರದ, ಅಂಶಗಳಲ್ಲಿ, ಅಥವಾ ಎರಡು ನ್ಯಾಯ ಸೂತ್ರಗಳಲ್ಲಿ, ಧರ್ಮ ಸೂತ್ರಗಳಲ್ಲಿ) ಪರಸ್ಪರ ಅಸಂಗತಿ. (ಒಂದೊಂದೂ ಸರಿಯೆಂದು ತೋರುವ ವಿಚಾರಗಳಲ್ಲಿ) ಪರಸ್ಪರ ಭಾವವಿರೋಧ; ಅನನ್ವಯ. **Antinómian** — ನೋಮಿಯನ್ (ಗು., ನಾ.) ನೀತಿಶಾಸ್ತ್ರದ ಕಟ್ಟನ್ನು ಒಪ್ಪದ(ವನು) (ಮು., ಬೈಬಲ್ಲಿನನುಸಾರವಾಗಿ ಶ್ರದ್ಧಾಭಕ್ತಿಗಳು ಮಾತ್ರವೇ ಆವಶ್ಯಕವೆಂಬ ಆಧಾರದಮೇಲೆ)

Antípathy ಆ್ಯನ್ಟಿಪತಿ (ನಾ.) ಸ್ವಭಾವಸಿದ್ಧ ವೈರ; ರೂಢ ವೈರ. **Antipathétic(al)** — ತೆ — (ಗು.); **Antipathétically** (ಕ್ರಿ. ವಿ.). **Antipáthic** ಆ್ಯನ್ಟಿಪ್ಯಾಥಿಕ್ (ಗು.) ವಿರುದ್ಧ ಸ್ವಭಾವದ. (ವೈ. ಶಾ.) ವಿರುದ್ಧ ಲಕ್ಷಣಗಳುಳ್ಳ ಅಥವಾ ವಿರುದ್ಧ ಲಕ್ಷಣಗಳನ್ನುಂಟುಮಾಡುವ.

Antiperiódic ಆ್ಯನ್ಟಿಪೀರಿಯಾಡಿಕ್ (ಗು.) (ವೈ. ಶಾ.) (ಒಂದು ಕ್ರಮವನ್ನನುಸರಿಸುತ್ತಿರುವ ವ್ಯಾಧಿಗಳ) ಕಾಲಕ್ರಮವನ್ನು ತಪ್ಪಿಸುವ, ಸರದಿ ತಪ್ಪಿಸುವ.

Antiphlogístic ಆ್ಯನ್ಟಿಫ್ಲೊಜಿಸ್ಟಿಕ್ (ಗು., ನಾ.) ತಪನ ಹಾರಿ (ಔಷಧ, ಲೇಪ, ಮೊ.) **Antiphlogístine** (ನಾ.) ತಪನಹಾರಿ ಔಷಧ.

A'ntiphon ಆ್ಯನ್ಟಿಫೊನ್ (ನಾ.) ಗಾಯಕ ಕೂಟದವರು ಉತ್ತರ ಪ್ರತ್ಯುತ್ತರ ರೀತಿಯಲ್ಲಿ ಹಾಡುವ ವಚನ ಅಥವಾ ಚರಣ : ಸವಾಲು ಜವಾಬು ಹಾಡು. **Antíphonal** ಆ್ಯ — (ಗು., ನಾ.) ಪರ್ಯಾಯದಲ್ಲಿ (ಸರದಿಯ ಮೇರೆ) ಹಾಡುವ; ಸಂವಾದಿ; ಸಂವಾದ ಗೀತಗುಚ್ಛ. **Antíphonally** (ಕ್ರಿ. ವಿ.); **Antíphonary** (ನಾ.) ಸಂವಾದ ಗೀತಗಳ ಪುಸ್ತಕ. **Antíphony** ಆ್ಯ — (ನಾ.) ಸಂವಾದ ಗಾನ. ಪ್ರತಿವಚನ; ಪ್ರತ್ಯುಕ್ತಿ; ಪ್ರತಿ ಧ್ವನಿ; ಮರು ದನಿ; ಹೊಳಲು.

Antíphrasis ಆ್ಯಂಟಿಫ್ರಸಿಸ್ (ನಾ.) (ಅಲಂ.) ಶಬ್ದಗಳನ್ನು ಅವುಗಳ ನೈಜಾರ್ಥ ವಿರುದ್ಧವಾಗಿ ಪ್ರಯೋಗಿಸುವುದು; ವಿರೋಧಾರ್ಥ ಪ್ರಯೋಗ.

A'ntípodes ಆ್ಯನ್ಟಿಪೊಡೀಸ್ (ನಾ., ಬ. ವ.) ಯಾವುದಾದರೂ ಭೂವ್ಯಾಸದ ಎರಡು ಕೊನೆಗಳಲ್ಲಿ ಎದುರುಬದುರಿಗಿರುವ ಸ್ಥಳಗಳು : ಅಧಿಪಾದಿ. (ರೂಪ.) ಪೂರ್ಣವಿರುದ್ಧ; ಪ್ರತಿ. **Antípodal** (ಗು.); **Antipodéan** — ಡೀಯನ್ (ಗು.)

A'ntipole ಆ್ಯನ್ಟಿಪೋಲ್ (ನಾ.) ಪ್ರತಿಧ್ರುವ. (ರೂಪ.) ಪೂರ್ಣ ವಿರುದ್ಧ.

A'ntipope ಆ್ಯನ್ಟಿಪೋಪ್ (ನಾ.) ವಿಹಿತ ಕ್ರಮದಲ್ಲಿ ನೇಮಕವಾದ ಪೋಪ್‌ಗುರುವಿಗೆ (ರೋಮನ್ ಕ್ಯಾತೊಲಿಕ್ ಮತದ ಜಗದ್ಗುರುವಿಗೆ) ಪ್ರತಿಯಾಗಿ ಆರಿಸಲ್ಪಟ್ಟ ಗುರು.

Antipyrétic ಆ್ಯನ್ಟಿಪಿರೆಟಿಕ್ (ಗು., ನಾ.) ಜ್ವರವನ್ನು ತಡೆಯುವ ಅಥವಾ ಶಮನ ಮಾಡುವ (ಔಷಧ); ಜ್ವರ ನಿವಾರಕ; ಜ್ವರ ಹರ. **Antipýrin** — ಪೈರಿನ್ (ನಾ.) ಜ್ವರ ನಿಲ್ಲಿಸುವ ಒಂದು ಔಷಧ ವಿಶೇಷ.

Antiquárian ಆ್ಯನ್ಟಿಕ್ವೇರಿಯನ್ (ಗು., ನಾ.) ಪುರಾತನ ಸಂಗತಿಗಳ ಮತ್ತು ವಸ್ತುಗಳ ಪರಿಶೋಧನೆಗೆ ಸಂಬಂಧಪಟ್ಟ : ಪ್ರಾಚೀನಾನ್ವೇಷಕ. ನಕ್ಷೆ ಬರೆಯುವ ಕಾಗದದ ದೊಡ್ಡ ಹಾಳೆ.

Antiquárianism (ನಾ.); **A'ntiquary** — ಕ್ವರಿ (ನಾ.) ಪ್ರಾಚೀನಾನ್ವೇಷಕ. **A'ntiquate** (ಕ್ರಿ. ಸಕ.) ಬಳಕೆಯಿಲ್ಲದಂತೆ ಮಾಡು; ಕಾಲಕ್ಕೆ ತಕ್ಕದ್ದಲ್ಲವೆಂದು ತಳ್ಳಿಹಾಕು; ಹಳೆಯದನ್ನಾಗಿಸು; ಹಳೆಯ ರೂಪವನ್ನು ಕೊಡು. **A'ntiquated** (ಗು.) ಹಳೆಯದಾಗಿಹೋದ; ರೂಢಿ ತಪ್ಪಿದ; ವಾಡಿಕೆ ತಪ್ಪಿದ. ಓಬೀರಾಯನ ಕಾಲದ; ಹಳೆಯ ಕಂದಾಚಾರದ. **Antíque** ಆ್ಯನ್ಟೀಕ್, **A'ntique** ಆ್ಯನ್ಟಿಕ್ (ಗು.) ಹಿಂದಣ ಕಾಲದ; ಹಿಂದಿನಿಂದ ಬಂದ; ಹಿಂದಿನ ಪದ್ಧತಿಯ; ರೂಢಿಯಳಿದ; ಪೂರ್ವಾಚಾರದ. (ನಾ.) ಹಿಂದಿನ ಕಲೆಯ ಅಥವಾ ಸಂಪ್ರದಾಯಗಳ ಅವಶೇಷ : ಜೀರ್ಣಾವಶೇಷ. The antique ಪುರಾತನ ಕಲೆ. **Antíqueness** (ನಾ.); **Antíquity** (ನಾ.) ಪುರಾತನತ್ವ; ಪ್ರಾಚೀನತೆ; ಹಳಮೆ. ಪ್ರಾಚೀನರು; ಹಳಬರು. **Antíquities** (ನಾ.) ಹಳೆಯ ಸಂಪ್ರದಾಯಗಳು, ನಡೆ ನುಡಿಗಳು, ವ್ಯವಹಾರಗಳು. ಪುರಾತನ ಅವಶೇಷಗಳು.

Antirábic ಆ್ಯನ್ಟಿರ್ಯಾಬಿಕ್ (ಗು.) ಹುಚ್ಚುನಾಯಿಯ ವಿಷವನ್ನು ನಿವಾರಣೆ ಮಾಡುವ; ಈ ಚಿಕಿತ್ಸೆಗೆ ಸಂಬಂಧಪಟ್ಟ.

Antísaloon ಆ್ಯನ್ಟಿಸಲೂನ್ (ಗು.) ಮದ್ಯದಂಗಡಿಗಳು ಇರಕೂಡದೆನ್ನುವ.

Antiscorbútic ಆ್ಯನ್ಟಿಸ್ಕಾರ್ಬ್ಯೂಟಿಕ್ (ಗು., ನಾ.) (ನಾವಿಕರಿಗೆ ಬರುವ) ರಕ್ತಪಿತ್ತ ವ್ಯಾಧಿಯನ್ನು ನಿವಾರಿಸುವ (ಔಷಧ) : ರಕ್ತಪಿತ್ತ ನಿವಾರಕ.

Antiscríptural ಆ್ಯನ್ಟಿಸ್ಕ್ರಿಪ್ಚ್ಯುರಲ್ (ಗು.) ಕ್ರೈಸ್ತವೇದಕ್ಕೆ (ಬೈಬಲ್ಲಿಗೆ) ವಿರುದ್ಧವಾದ; ಶ್ರುತಿ ವಿರುದ್ಧ; ವೇದ ವಿರುದ್ಧ; ಶಾಸ್ತ್ರ ವಿರುದ್ಧ.

Anti-Sémite ಆ್ಯನ್ಟಿಸೀ(ಸೆ)ಮೈಟ್ (ಗು., ನಾ.) ಯೆಹೂದ್ಯ ವಿರೋಧಿ. **Anti-Semític** (ಗು.)

Antiséptic ಆ್ಯನ್ಟಿಸೆಪ್ಟಿಕ್ (ಗು., ನಾ.) ಕೊಳೆತವನ್ನು ತಡೆಯುವ; ಪೂತಿ ನಾಶಕ. (ರೂಪ.) ನೀತಿಕ್ಷಯ ನಿವಾರಕ. **Antiséptically** (ಕ್ರಿ. ವಿ.); **Antisépsis** (ನಾ.) (ವೈ. ಶಾ.) ಪೂತಿಕಾರಕ ಬೀಜ ಸಂಪರ್ಕವಾಗದ ರೀತಿಯಲ್ಲಿ ಮಾಡುವ ಶಸ್ತ್ರಚಿಕಿತ್ಸೆ; ಅಪೂತಿ ಶಸ್ತ್ರ ಚಿಕಿತ್ಸೆ.

Antisócial ಆ್ಯನ್ಟಿಸೋಷಲ್ (ಗು.) ಸಮಾಜ ಕಂಟಕ; ಸಮಾಜವು ಯಾವ ತಳಹದಿಯ ಮೇಲೆ ಕಟ್ಟಿದೆಯೊ ಆ ತತ್ತ್ವಕ್ಕೆ ವಿರುದ್ಧವಾದ : ಸಮಾಜತತ್ತ್ವ ವಿರುದ್ಧ.

Antispasmódic ಆ್ಯನ್ಟಿಸ್ಪ್ಯಾಸ್‌ಮಾಡಿಕ್ (ಗು., ನಾ.) ಸೆಳವುರೋಗವನ್ನು ತಡೆಯುವ (ಔಷಧ)

Antístrophe ಆ್ಯನ್ಟಿಸ್ಟ್ರೊಫಿ (ನಾ.) ಗ್ರೀಕ್ ನಾಟಕದಲ್ಲಿ ಮೇಳದವರು ರಂಗದಮೇಲೆ ಎಡದಿಂದ ಬಲಕ್ಕೆ ತಿರುಗುವುದು; ಆಗ ಹೇಳುವ ಹಾಡಿನ ಚರಣಗಳು : ಪ್ರತಿಪದ್ಯ; ಎದುರು ಮೇಳ. ವಿಪರ್ಯಯ ಸಂಬಂಧ. ವಿಲೋಮಾಲಂಕಾರ. **Antistróphic** — ಸ್ಟ್ರಾ — (ಗು.)

Antithéist ಆ್ಯನ್ಟಿತೀಯಿಸ್ಟ್ (ನಾ.) ದೇವರಿರುವನೆಂಬ ನಂಬಿಕೆಗೆ ವಿರೋಧಿ; ಅನೀಶ್ವರ ವಾದಿ; ಆಸ್ತಿಕ್ಯ ವಿರೋಧಿ. **Antitheístic** (ಗು.); **Antithéism** (ನಾ.)

Antíthesis ಆ್ಯನ್ಟಿತಿಸಿಸ್ (ನಾ., ಬ. ವ. — theses, — ತಿಸೀಸ್) (ಅಲಂ.) ಕೇವಲ ವಿರೋಧ ಸೂಚಕ ಶಬ್ದಗಳನ್ನು ಒಂದೇ ವಾಕ್ಯದಲ್ಲಿಯೊ ಸಮೀಪ ವಾಕ್ಯಗಳಲ್ಲಿಯೊ ಉಪಯೋಗಿಸಿ ಭಾವ ವಿರೋಧವನ್ನು ಸ್ಪಷ್ಟಗೊಳಿಸುವುದು : (ಉದಾ.—Thou shalt wax and he shall dwindle ನೀನು ಉನ್ನತಿ ಹೊಂದುವೆ, ಅವನು ಅವನತಿ ಹೊಂದುವನು). ವಿರೋಧ ನ್ಯಾಸ; ವಿರೋಧಾಲಂಕಾರ. ವಿರೋಧ; ಪ್ರತಿ. **Antithétic(al)** ಆ್ಯನ್ಟಿತೆ — (ಗು.); **Antithétically** (ಕ್ರಿ. ವಿ.)

Antitóxin ಆ್ಯನ್ಟಿಟಾಕ್ಸಿನ್ (ನಾ.) (ವೈ. ಶಾ.) ಒಂದು ರೋಗಕಾರಣವಾದ ವಿಷವನ್ನು ಹೊಡೆಯುವುದಕ್ಕಾಗಿ ರಕ್ತದಲ್ಲಿ ಉತ್ಪತ್ತಿಯಾಗುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಹಾರಕ ವಸ್ತು, ಅಥವಾ ಅದಕ್ಕಾಗಿ ರಕ್ತಕ್ಕೆ ಸೇರಿಸುವ 'ಸೀರಂ' ಎಂಬ ಸಂಸ್ಕರಿಸಿದ ರಕ್ತದ್ರವ: ವಿಷ ಹಾರಿ.

A'nti-trade ಆ್ಯನ್ಟಿಟ್ರೇಡ್ (ಗು., ನಾ.) ಉಷ್ಣ ವಲಯದ ಕಡೆಗೆ ಸಂತತವಾಗಿ ಬೀಸುತ್ತ, ಭೂಭ್ರಮಣದಿಂದ ಪಶ್ಚಿಮ ದಿಕ್ಕಿಗೆ ತಳ್ಳಲ್ಪಟ್ಟು, ಉತ್ತರಾರ್ಧ ಭೂಗೋಳದಲ್ಲಿ ನೈರುತ್ಯಕ್ಕೂ ದಕ್ಷಿಣಾರ್ಧ ಭೂಗೋಳದಲ್ಲಿ ವಾಯುವ್ಯಕ್ಕೂ ಬೀಸುವ ವಾಣಿಜ್ಯ ಮಾರುತಗಳೆಂಬ ಗಾಳಿಗೆ ಎದುರಾಗಿ ಬೀಸುವ (ಗಾಳಿ): ವಾಣಿಜ್ಯ ಪ್ರತಿಮಾರುತ.

Antitrinitárian ಆ್ಯನ್ಟಿಟ್ರಿನಿಟೇರಿಯನ್ (ಗು., ನಾ.) ಕ್ರೈಸ್ತ ಮತದ ತ್ರಿಮೂರ್ತಿ ಸಿದ್ಧಾಂತಕ್ಕೆ ವಿರೋಧಿಯಾದ (ವನು). **Antitrinitárianism** (ನಾ.)

A'ntitype ಆ್ಯನ್ಟಿಟೈಪ್ (ನಾ.) ಒಂದು ಮಾದರಿ ಅಥವಾ ಚಿಹ್ನೆ ಯಾವುದನ್ನು ಸೂಚಿಸುವುದೊ ಅದು; ಪ್ರತಿಬಿಂಬದ ಮೂಲ; ಮೂಲ ಬಿಂಬ. **Antitýpical** (ಗು.)

A'ntivenéne ಆ್ಯನ್ಟಿವಿನೀನ್ (ನಾ.) ವಿಷ ಹಾರಿ (ಮು., ಸರ್ಪ ವಿಷಹಾರಿ)

Antizýmic, Antizymótic ಆ್ಯನ್ಟಿಸಿಮಿಕ್, —ಸಿ(ಸ್ಮೈ)ಮಾಟಿಕ್ (ಗು., ನಾ.) ಹುಳಿಯುವುದನ್ನು ತಡೆಯುವ (ವಸ್ತು)

A'ntler ಆ್ಯನ್ಟ್ಲರ್ (ನಾ.) ಸಾರಂಗದ ಅಥವಾ ಇತರ ಜಿಂಕೆಯ ಕವಲ್ಗೊಂಬು, ಕೊಂಬಿನ ಕವಲು. **A'ntlered** (ಗು.)

Antonomásia ಆ್ಯನ್ಟನೊಮೇಸಿಯ (ನಾ.) ಅಂಕಿತ ನಾಮಕ್ಕೆ ಬದಲಾಗಿ ವಿಶೇಷಣ ಮೊ. ನ್ನು ಉಪಯೋಗಿಸುವುದು: ಪ್ರತಿನಾಮ ಕರಣ; ರೂಪಕ ನಾಮ ಪ್ರಯೋಗ (ಉದಾ.—'ಟಿಪ್ಪೂ ಸುಲ್ತಾನ್' ಎನ್ನುವುದಕ್ಕೆ ಪ್ರತಿಯಾಗಿ 'ಮೈಸೂರು ಹುಲಿ' ಎನ್ನುವುದು). ಯಾವುದಾದರೂ ಒಂದು ಭಾವವನ್ನು ಹೇಳುವುದಕ್ಕೆ ಬದಲಾಗಿ ಅಂಕಿತ ನಾಮವನ್ನುಪಯೋಗಿಸುವುದು: (ಉದಾ.—ಬಹು ವಿದ್ಯಾವಂತನನ್ನು 'ಬೃಹಸ್ಪತಿ' ಅಥವಾ 'ಸರಸ್ವತಿ' ಎನ್ನುವುದು)

A'ntonym ಆ್ಯನ್ಟೊನಿಮ್ (ನಾ.) ಒಂದು ಶಬ್ದಕ್ಕೆ ವಿರುದ್ಧವಾದ ಅರ್ಥವನ್ನು ಕೊಡುವ ಶಬ್ದ: ಪ್ರತ್ಯರ್ಥಕ ಶಬ್ದ: (ಉದಾ.—ಸುಖ, ದುಃಖ; ಪಾಪ, ಪುಣ್ಯ; ಹುಟ್ಟು, ಸಾವು)

A'ntrum ಆ್ಯನ್ಟ್ರಂ (ನಾ.; ಬ. ವ. —tra) ಗುಹೆ; ಗಹ್ವರ; (ಮು., ಶ. ವಿ.) ದೇಹದಲ್ಲಿಯ ಬಿಲ, ಕುಹರ.

A'nus ಏನಸ್ (ನಾ.) ಆಹಾರ ನಾಳದ ಕೆಳಗಣ ದ್ವಾರ; ಅಸನ ದ್ವಾರ.

A'nvil ಆ್ಯನ್ವಿಲ್ (ನಾ.) (ಕಮ್ಮಾರನು ಉಪಯೋಗಿಸುವ ಕಬ್ಬಿಣದ) ಅಡಿಗಲ್ಲು; ಬಡಿಗಲ್ಲು; ಸ್ಥೂಣ. (ಶ. ವಿ.) ಕಿವಿಯೊಳಗಿನ ಒಂದು ಸಣ್ಣ ಎಲುಬಿನ ಹೆಸರು: ಸ್ಥೂಣಾಸ್ಥಿ.

Anxíety ಆ್ಯಙ್ಗ್ಸೈಎಟಿ (ನಾ.) ಆತಂಕ; ವ್ಯಾಕುಲ; ಕಾತರ; ತಲ್ಲಣ; ತವಕ; ಕಳವಳ; ಕುತೂಹಲ. **A'nxious** ಆ್ಯಙ್ಕ್‌ಷಸ್ (ಗು.) — ಗೊಂಡ; — ಗೊಳಿಸುವ. **A'nxiously** (ಕ್ರಿ. ವಿ.)

A'ny ಎನಿ (ಗು., ಸ. ನಾ., ಕ್ರಿ. ವಿ.) ಯಾವ — ಆದರೂ: ಯಾವುದಾದರೂ; ಏನಾದರೂ; ಯಾವನಾದರೂ; ಯಾರಾದರೂ. **A'nybody** — ಬಾ(ಬ)ಡಿ, (ನಾ., ಸ. ನಾ.) ಯಾವನೊ ಒಬ್ಬ; ಯಾವನಾದರೂ. If you wish to be anybody ನೀನೂ ಒಬ್ಬ ಮನುಷ್ಯ(ಗಣ್ಯ)ನೆನಿಸಿಕೊಳ್ಳಬೇಕಾದರೆ. Two or three anybodies ಯಾರೋ ಇಬ್ಬರು ಮೂವರು ಅನಾಮಧೇಯರು. **A'nyhow** (ಕ್ರಿ. ವಿ., ಸಂ. ಅವ್ಯ.) ಹೇಗಾದರೂ; ಹೇಗೊ; ಹೇಗೆಹೇಗೊ; ಅಂತೂ; ಎಂತೂ; ಅಂತು ಇಂತು. **A'nything** (ಸ. ನಾ., ನಾ.) ಯಾವುದಾದರೂ (ಸರಿಯೆ); ಏನೋ ಒಂದು. **A'nyway** (ಕ್ರಿ. ವಿ., ಸಂ. ಅವ್ಯ.) ಹೇಗಾದರೂ. **A'nywhere** (ಕ್ರಿ. ವಿ.) ಎಲ್ಲಾದರೂ. **A'nywise** (ಕ್ರಿ. ವಿ.) ಹೇಗಾದರೂ.

A'orist ಏಯೊರಿಸ್ಟ್ (ಗು., ನಾ.) (ವ್ಯಾ.) ಅನಿಶ್ಚಿತ ಭೂತ ಕಾಲ(ದ): ಲುಙ್. **Aorístic** (ಗು.) ಅನಿಶ್ಚಿತ ಭೂತಕಾಲದ; ಅನಿಶ್ಚಿತ.

Aórta ಏಯಾರ್ಟ (ನಾ.) ಎಡ ಹೃತ್ಕುಕ್ಷಿಯಿಂದ ಹೊರಡುವ ಪ್ರಥಮ ಶುದ್ಧರಕ್ತ ನಾಳ: ಮಹಾ ಅಪಧಮನಿ. **Aórtic** (ಗು.)

A outránce (F) ಆ ಊಟ್ರಾನ್ಸ್ (ಕ್ರಿ. ವಿ.) ಸಾಯುವ ವರೆಗೂ; ಕಡೆಯ ತನಕ.

Apáce ಅಪೇಸ್ (ಕ್ರಿ. ವಿ.) ಬೇಗನೆ; ಜಾಗ್ರತೆಯಾಗಿ; ತ್ವರಿತವಾಗಿ; ಶೀಘ್ರವಾಗಿ.

Apáche ಅಪ್ಯಾಷ್ (ನಾ.) ಬೀದಿಯ ಪುಂಡ.

A'p(p)anage, ಆ್ಯಪನೇಜ್ (ನಾ.) ರಾಜರ ಮತ್ತು ರಾಜ ಮನೆತನದವರ ಕಿರಿಯ ಮಕ್ಕಳ ಜೀವನಾಂಶಕ್ಕಾಗಿ (ಅವರಿಗೆ ಆಸ್ತಿಯಲ್ಲಿ ಪಾಲಿಲ್ಲದುದರಿಂದ) ಮಾಡುವ ಏರ್ಪಾಡು (ಜಹಗೀರು, ಉಂಬಳಿ, ಅಧಿಕಾರ, ಮೊ.). ಮೇಲು ವರಮಾನ. ಅಧೀನ ದೇಶ. ಸಹಜವಾಗಿ ಸಂಗತ ಅಥವಾ ಅನುಗತವಾದದ್ದು.

Apárt ಅಪಾರ್ಟ್ (ಕ್ರಿ. ವಿ.) ಬೇರೆಯಾಗಿ; ಬಿಡಿಯಾಗಿ; ಪ್ರತ್ಯೇಕವಾಗಿ; ಸ್ವತಂತ್ರವಾಗಿ; ಬಿಟ್ಟು; ಉಳಿದು. Set apart ತೆಗೆದಿಡು; ಮೀಸಲಾಗಿಡು.

Apártment ಅಪಾರ್ಟ್‌ಮೆಂಟ್ (ನಾ.) ಕೋಣೆ; ಕೊಟಡಿ; ಮನೆಯ ಒಂದು ಭಾಗ.

A'pathy ಆ್ಯಪತಿ (ನಾ.) ನಿರಾಸಕ್ತಿ; ಜಡತೆ; ನಿರುತ್ಸಾಹ; ನಿರ್ಲಕ್ಷ್ಯ; ಔದಾಸೀನ್ಯ. ವೇದನೆಗೆ ಲಕ್ಷ್ಯಕೊಡದಿರುವುದು; ವೇದನೆಯ ಅಭಾವ. **Apathétic(al)** — ತೆಟಿಕಲ್ (ಗು.) ಜಡ; ಉದಾಸೀನವುಳ್ಳ; ನಿರುತ್ಸಾಹದ. **Apathétically** (ಕ್ರಿ. ವಿ.)

Ape ಏಪ್ (ನಾ.) ಬಾಲವಿಲ್ಲದ ಕೋತಿ (ಗೊರಿಲ್ಲ, ಚಿಂಪಂಸ್ಸೀ, ಒರಾಂಗೊಟಾಂಗ್, ಗಿಬ್ಬನ್, ಮೊ. ಕಪಿಜಾತಿ): ವಾನರ. ಅನುಕಾರಿ; ಅಣಕಿಸುವವನು. (ಕ್ರಿ. ಸಕ.) (ಹಾಸ್ಯಾಸ್ಪದವಾಗುವಂತೆ) ಅನುಕರಿಸು; ಅಣಕಿಸು. **A'pery** — ಪರಿ (ನಾ.) ಅಣಕ; ಕಪಿಚೇಷ್ಟೆ. ಕೋತಿಯ ಮನೆ. ಕಪಿ ಸಂಕುಲ. **A'pish** (ಗು.) ಕೋತಿಯಂಥ; ಕಪಿ ಸ್ವಭಾವದ; ವಿವೇಕವಿಲ್ಲದ. **A'pishly** (ಕ್ರಿ. ವಿ.); **A'pishness** (ನಾ.)

Apépsy ಅಪೆಪ್ಸಿ (ನಾ.) (ವೈ. ಶಾ.) ಜೀರ್ಣಶಕ್ತಿಯಿಲ್ಲದಿರುವುದು; ಅಗ್ನಿಮಾಂದ್ಯ.

Apercú (F) ಅಪೆರ್ಸೂ (ನಾ.) ಸ್ಥೂಲ ವಿವರಣೆ; ಗೋಪ್ಯಾರೆ.

Apérient ಅಪೀಱ್ರಿಯೆಂಟ್ (ಗು., ನಾ.) (ವೈ. ಶಾ.) ಮಲಬಂಧ ಪರಿಹಾರಕ; ಸುಖ ವಿರೇಚಕ. **Apéritive** ಅಪೆರಿಟಿವ್ (ಗು. ನಾ.) = Aperient.

A'perture ಆ್ಯಪರ್‌ಟ್ಯುರ್, — ಚರ್ (ನಾ.) ಕಂಡಿ; ತೂತು; ರಂಧ್ರ; ಛಿದ್ರ. (ಭೌ. ವಿ.) ದೃಗ್ಯಂತ್ರಗಳಲ್ಲಿ ಬೆಳಕು ಹಾದು ಹೋಗುವ ದ್ವಾರ: ತೇಜೋದ್ವಾರ; ಬೆಳಕುಕಂಡಿ. Aperture of a lens or mirror ದೃಗ್ಯಂತ್ರಗಳಲ್ಲಿ ಉಪಯೋಗಿಸುವ ಲೆನ್ಸಿನ (ಯವದ) ಅಥವಾ ದರ್ಪಣದ ದೃಶ್ಯಭಾಗದ ವ್ಯಾಸ: ಯವ ರಂಧ್ರ; ದರ್ಪಣ ರಂಧ್ರ.

Apétalous ಅಪೆಟಲಸ್ (ಗು.) ಹೂವಿನ ರೇಕುಗಳಿಲ್ಲದ; ಅದಳ; ದಳ ಹೀನ.

A'pex ಏಪೆಕ್ಸ್ (ನಾ.; ಬ. ವ. Apices ಏ(ಆ್ಯ)ಪಿಸೀಸ್, Apexes) ತುದಿ; ಮೊನೆ; ಅಗ್ರ; ಶಿಖರ; ಶೃಂಗ. (ಜ್ಯಾ.) (ತ್ರಿಕೋನದ ಅಥವಾ ಶಂಕುವಿನ) ಕೋಟಿ (ಅಗ್ರಭಾಗ). **A'pical** ಆ್ಯ(ಏ)ಪಿಕಲ್ (ಗು.) ಅಗ್ರಕ್ಕೆ ಸಂಬಂಧಪಟ್ಟ; ಅಗ್ರಸ್ಥ. **A'pically** (ಕ್ರಿ. ವಿ.)

Aphásia ಅಫೇಸಿಯ (ನಾ.) ಮಿದುಳಿನ ರೋಗದಿಂದುಂಟಾದ ಮೂಕತನ: ವಾಕ್‌ಸ್ತಂಭ. **Aphásic** ಅಫ್ಯಾಸಿಕ್ (ಗು., ನಾ.) ವಾಕ್‌ಸ್ತಂಭ ರೋಗದ; — ರೋಗಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Aphélion ಅಫೀಲಿಯನ್ (ನಾ.) (ಗ್ರಹದ ಅಥವಾ ಧೂಮಕೇತುವಿನ ಪಥದಲ್ಲಿ) ಸೂರ್ಯನಿಗೆ ಅತ್ಯಂತ ದೂರದಲ್ಲಿರುವ ಬಿಂದು ; ಮಂದೋಚ್ಚ.

Apheliotrópic ಅಫೀಲಿಯೊಟ್ರಾಪಿಕ್ (ಗು.) (ಸ. ವಿ.) ಸೂರ್ಯನಿಗೆ ಬೆನ್ನು ತಿರುಗಿಸುವ; ಸೂರ್ಯಾಪವರ್ತಿ.

A'phesis ಆ್ಯಫಿಸಿಸ್ (ನಾ.) ಒಂದು ಸ್ವರಾದಿ ಶಬ್ದದ ಆದಿ ಸ್ವರವು ಕ್ರಮೇಣ ಉಚ್ಚಾರಣೆಯಾಗದೆ ಬಿದ್ದುಹೋಗುವುದು : (ಉದಾ.—ಅನಂತರ, ನಂತರ) : ಆದಿಸ್ವರ ಲೋಪ. **Aphétic** (ಗು.) ; **A'phetize** (ಕ್ರಿ. ಸಕ.)

A'phis ಆ್ಯ(ಏ)ಫಿಸ್ (ನಾ. ; ಬ. ವ. Aphides ಆ್ಯಫಿಡೀಸ್) ಒಂದು ಜಾತಿಯ ಹುಳಕ್ಕೆ ಆಹಾರವಾಗಿಯೂ, ಇರುವೆಗಳಿಗೆ ಮಕರಂದ ಕೊಡುವುವಾಗಿಯೂ, ಆದುದರಿಂದ ಇರುವೆಗಳ ರಕ್ಷಣೆಗೆ ಒಳಪಟ್ಟುವಾಗಿಯೂ ಇರುವ ಸಸ್ಯ ನಾಶಕ ಕೀಟ ಜಾತಿ : ಗಿಡಹೇನು. **Aphídian** ಅಫಿಡಿಯನ್ (ಗು.)

Aphónia, A'phony ಅಫೋನಿಯ, ಆ್ಯಫೊನಿ (ನಾ.) ಮಾತು ನಿಂತು ಹೋಗುವುದು ; ಕಂಠಧ್ವನಿ ನಾಶ. **A'phonous** ಆ್ಯ— (ಗು.)

A'phorism ಆ್ಯಫೊರಿಸ್ಮ್ (ನಾ.) ಸೂತ್ರ ; ಸೂಕ್ತಿ ; ಸಾರೋಕ್ತಿ. **Aphorísmic** (ಗು.) ; **A'phorist** (ನಾ.) ಸೂಕ್ತಿಕಾರ ; ಸೂತ್ರಕಾರ. **Aphorístic** (ಗು.) ; **Aphorístically** (ಕ್ರಿ. ವಿ.)

Aphrodísiac ಆ್ಯಫ್ರೊಡಿಸಿಆ್ಯಕ್ (ಗು., ನಾ.) ಕಾಮೋದ್ದೀಪಕ (ವಸ್ತು) ; ವಾಜೀಕರ.

Aphrodíte[1] ಆ್ಯಫ್ರೊಡೈಟಿ (ನಾ.) ಗ್ರೀಕರ ಸೌಂದರ್ಯಾಧಿದೇವತೆ (ವೀನಸ್). (ಪ್ರಾ. ವಿ.) ಸಮುದ್ರ ಮೂಷಕವೆಂದು ಕರೆಯಬಹುದಾದ ಒಂದು ಸಮುದ್ರ ಕೀಟ ಜಾತಿ.

A'phrodite[2] ಆ್ಯಫ್ರೊಡೈಟ್ (ನಾ.) (ಖನಿಜ) ಒಂದು ಮೃದುವಾದ ಹಾಲುಬಿಳುಪಿನ ಅಪಾರದರ್ಶಕ ಖನಿಜ.

Aphýllous ಅಫಿಲಸ್ (ಗು.) (ಸ. ವಿ.) ಸ್ವಾಭಾವಿಕವಾಗಿ ಎಲೆಯಿಲ್ಲದ ; ಅಪರ್ಣ.

A'piary ಏಪಿಯರಿ (ನಾ.) ಜೇನುಹುಳುಗಳನ್ನಿಟ್ಟು ಸಾಕುವ ಸ್ಥಳ : ಜೇನುಮನೆ. **Apiárian** —ಏರಿಯನ್ (ಗು.) ಜೇನು ಗೂಡಿಗೆ ಅಥವಾ ಜೇನು ಕೃಷಿಗೆ ಸಂಬಂಧಪಟ್ಟ. **A'piarist** —ಅರಿಸ್ಟ್ (ನಾ.) ಜೇನು ಕೃಷಿಕ. **A'piculture** (ನಾ.) ಜೇನು ಕೃಷಿ.

A'pical. Apex ನೋಡಿ.

Apiéce ಅಪೀಸ್ (ಕ್ರಿ. ವಿ.) ಒಂದೊಂದಕ್ಕೆ ; ಒಬ್ಬೊಬ್ಬನಿಗೆ ; ತಲೆಯೊಂದಕ್ಕೆ ; ತಲಾ.

A'pish. Ape ನೋಡಿ.

Aplanátic ಆ್ಯಪ್ಲನ್ಯಾಟಿಕ್ (ಗು.) ಗೋಲಾಕೃತಿಯಿಂದುಂಟಾಗುವ ಕಿರಣ ಅಕೇಂದ್ರತೆ ಇಲ್ಲದಿರುವ (ಸಂಯುಕ್ತ ಲೆನ್ಸಿನಲ್ಲಿರುವ ಹಾಗೆ) : ಕಿರಣಾಪಸರಣ ರಹಿತ. **Aplánatism** ಅಪ್ಲ್ಯಾನಟಿಸ್ಮ್ (ನಾ.). **A'planat** ಆ್ಯಪ್ಲನ್ಯಾಟ್ (ನಾ.) (ಛಾಯಾಚಿತ್ರ) : ವರ್ಣರಚನೆಯೂ, ಸಾಮಾನ್ಯವಾಗಿ ಗೋಳಾಪಸರಣವೂ ಇಲ್ಲದಿರುವ ಸಮಸೂತ್ರವಾದ ಜೋಡಿ ಲೆನ್ಸು.

Aplómb (F) ಆಪ್ಲೊಜ್ (ನಾ.) ಲಂಬ ; ಲಂಬತೆ. ಧೈರ್ಯ ; ಸ್ಥೈರ್ಯ.

Apnoéa ಆ್ಯಪ್ನೀಯ (ನಾ.) ಉಸಿರು ಕಟ್ಟಿಹೋಗುವುದು ; ಶ್ವಾಸ ಬಂಧನ.

Apócalypse ಅಪಾಕಲಿಪ್ಸ್ (ನಾ.) (ಬೈಬಲ್ಲಿನಲ್ಲಿರುವ) ಭವಿಷ್ಯದ್ದರ್ಶನ ; ಈ ವಿಷಯವನ್ನು ಬರೆದಿರುವ ಗ್ರಂಥ. ಭವಿಷ್ಯದ್ದರ್ಶನ ಅಥವಾ ಪ್ರಕಾಶನ ; ಕಾಲಜ್ಞಾನ. **Apócalýptic(al)** (ಗು.) ; **Apócalýptically** (ಕ್ರಿ. ವಿ.)

Apochromátic ಅಪೊಕ್ರೊಮ್ಯಾಟಿಕ್ (ಗು.) (ಸೂಕ್ಷ್ಮದರ್ಶಕ ಮತ್ತು ಛಾಯಾಗ್ರಾಹಕಗಳಲ್ಲಿಯ ವಸ್ತುರೂಪ ರಚನಾ ಲೆನ್ಸುಗಳ ವಿಷಯದಲ್ಲಿ) ವರ್ಣಾಪಸರಣ ರಹಿತ. **A'pochromat** ಆ್ಯಪೊ— (ನಾ.) ಈ ವಿಧವಾದ ಲೆನ್ಸು. **Apochrómatism** —ಕ್ರೋಮಟಿಸ್ಮ್ (ನಾ.)

Apócope ಅಪಾಕೊಪಿ (ನಾ.) ಅಂತ್ಯಾಕ್ಷರ ಲೋಪ.

Apócrypha ಅಪಾಕ್ರಿಫ (ನಾ.) ಕ್ರೈಸ್ತರ ಹಳೆಯ ಒಡಂಬಡಿಕೆಯಲ್ಲಿ ಪ್ರಮಾಣ ಗ್ರಂಥವೆಂದು ನಂಬಿಕೆಗರ್ಹವಾಗದ, ಮತ್ತು ಕ್ರೈಸ್ತರ ಬೈಬಲ್ಲಿನಿಂದ ಬಿಟ್ಟುಬಿಟ್ಟ, ಗ್ರಂಥಭಾಗಗಳು. **Apócryphal** (ಗು.) ಹಳೆಯ ಒಡಂಬಡಿಕೆಯ ಸಂದಿಗ್ಧ ಭಾಗದ. ಸಂಶಯ ಪ್ರಮಾಣದ ; ಸಂದೇಹಾಸ್ಪದವಾದ. ಸುಳ್ಳು ; ಪೊಳ್ಳು.

A'pod(e) ಆ್ಯಪಾ(ಪೋ)ಡ್ (ಗು.) ಪಾದ ರಹಿತ ; ಅಪಾದ. (ನಾ.) ಪಾದಗಳು ಇಲ್ಲದ, ಅಥವಾ ತಕ್ಕಂತೆ ಬೆಳೆಯದ, ಪಕ್ಷಿ, ಸರೀಸೃಪ ; ಈಜುರೆಕ್ಕೆಗಳಿಲ್ಲದ, ಅಥವಾ ತಕ್ಕಂತೆ ಬೆಳೆಯದ, ಮೀನು. **A'podal** (ಗು.)

Apod(e)íctic ಆ್ಯಪೊಡಿ(ಡೈ)ಕ್ಟಿಕ್ (ಗು.) ನಿಸ್ಸಂದೇಹವಾಗಿ ಸ್ಥಾಪಿಸಿದ ; ಸ್ವತಃಸಿದ್ಧವಾದ.

A'pogee ಆ್ಯಪೊಜೀ (ನಾ.) ಚಂದ್ರನ ಅಥವಾ ಯಾವುದಾದರೂ ಗ್ರಹದ ಕಕ್ಷದಲ್ಲಿ ಭೂಮಿಗೆ ಪರಮಾವಧಿಯಲ್ಲಿರುವ ಬಿಂದು : ಮಂದೋಚ್ಚ. (ರೂಪ.) ಅತ್ಯಂತ ದೂರಪ್ರದೇಶ ; ಅತ್ಯುನ್ನತ ಸ್ಥಾನ ; ತುತ್ತ ತುದಿ ; ಪರಮಾವಧಿ.

Apólar ಅಪೋಲಾರ್ (ಗು.) (ಜೀ. ವಿ.) (ಕೆಲವು ನರಕಣಗಳಲ್ಲಿರುವಂತೆ) ಧ್ರುವಗಳಾಗಲಿ ತಂತುಕೇಸರಗಳಾಗಲಿ ಇಲ್ಲದಿರುವ.

Apolaústic ಆ್ಯಪೊಲಾಸ್ಟಿಕ್ (ಗು.) ಭೋಗ ಲಾಲಸ.

Apóllo ಅಪಾಲೊ (ನಾ.) ಗ್ರೀಕರ ಸೂರ್ಯದೇವತೆ. (ಕಾವ್ಯ) ಸೂರ್ಯ. ಪರಮ ಸುಂದರ ಪುರುಷ.

Apóllyon ಅಪಾಲಿಯನ್ (ನಾ.) ಕೊಲ್ಲುವವನು ; ಮಾರಕ ; ಸೈತಾನ್.

Apológia ಆ್ಯಪೊಲೋಜಿಯ (ನಾ.) ಸಮರ್ಥನ ; ಸಮಾಧಾನ.

A'pologue ಆ್ಯಪೊಲಾಗ್ (ನಾ.) (ಪಂಚತಂತ್ರದ ಕಥೆಗಳಂಥ) ನೀತಿ ಕಥೆ.

Apólogy ಅಪಾಲೊಜಿ (ನಾ.) ತಪ್ಪೊಪ್ಪಿಕೊಂಡು ಪಶ್ಚಾತ್ತಾಪ ಸೂಚಿಸುವುದು ; ಪಶ್ಚಾತ್ತಾಪ ; ಕ್ಷಮಾ ಯಾಚನ. ಮನಸ್ಸು ನೋಯಿಸುವ ಉದ್ದೇಶವಿರಲಿಲ್ಲವೆಂಬ ಭರವಸೆ. ಸಮರ್ಥನ ವಾದ ; ನೆಪ. He has an apology for a nose ಅವನಿಗೆ ಹೆಸರಿಗೆ ಮಾತ್ರ ಮೂಗಿದೆ. **Apologétic** (ಗು.) ಪಶ್ಚಾತ್ತಾಪಪಟ್ಟು ತಪ್ಪಿತವನ್ನು ಒಪ್ಪಿಕೊಳ್ಳುವ ; ಪಶ್ಚಾತ್ತಾಪ ಸೂಚಕ. ಸಮರ್ಥಿಸುವ ; ಸಾಧಿಸುವ. **Apologétics** (ನಾ.) (ಮು., ಕ್ರೈಸ್ತ ಧರ್ಮದ) ಸಕಾರಣ ವಾದ ಸಮರ್ಥನೆ ; ಸಮಾಧಾನ. **Apologétical** (ಗು.) ; **Apologétically** (ಕ್ರಿ. ವಿ.) ; **Apólogist** (ನಾ.) (ಮು., ಕ್ರೈಸ್ತ ಧರ್ಮದ) ಸಮರ್ಥಕ. **Apólogize** (ಕ್ರಿ. ಅಕ.) ತಪ್ಪೊಪ್ಪಿಕೊ ; ಕ್ಷಮಾಪಣೆ ಕೇಳು ; ಕ್ಷಮೆ ಬೇಡು. ಸಮರ್ಥಿಸು.

A'pophthegm, A'pothegm, A'pothem ಆ್ಯಪೊಥೆಮ್ (ನಾ.) ಸೂಕ್ತಿ ; ಸಾರವಚನ.

A'poplexy ಆ್ಯಪೊಪ್ಲೆಕ್ಸಿ (ನಾ.) ಮಿದುಳಿಗೆ ರಕ್ತ ಹೆಚ್ಚಾಗಿ ನುಗ್ಗುವುದರಿಂದ, ಅಥವಾ ಅಲ್ಲಿಯ ಧಮನಿಗಳು ಒಡೆದುಹೋಗುವುದರಿಂದ, ಇಂದ್ರಿಯ ವ್ಯಾಪಾರವೂ ಚಲನಶಕ್ತಿಯೂ ಸಾಮಾನ್ಯವಾಗಿ ಥಟ್ಟನೆ ನಿಂತುಹೋಗುವ ವ್ಯಾಧಿ : ತೀಕ್ಷ್ಣವಾಯು. **Apopléctic** (ಗು.)

Aposiopésis ಆ್ಯಪೊಸೈಯೊಪೀಸಿಸ್ (ನಾ.) (ಅಲಂ.) ಭಾಷಣ ಮಾಡುತ್ತಿರುವಾಗ ಮುಂದಕ್ಕೆ ಹೇಳಲು ಶಕ್ತಿಯಿಲ್ಲದಂತೆಯೊ ಅಥವಾ ಇಷ್ಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಲ್ಲದಂತೆಯೊ ತೋರುವಂತೆ ಭಾಷಣವನ್ನು ಥಟ್ಟನೆ ನಿಲ್ಲಿಸಿಬಿಡುವುದು : ಭಾಷಣ ಭಂಗ.

Apóstasy ಅಪಾಸ್ಟಸಿ (ನಾ.) ಸ್ವಧರ್ಮ, ಸ್ವಮತ, ಸ್ವಪಕ್ಷ, ಮೊ. ನ್ನು ತೊರೆಯುವುದು ; ಸ್ವಧರ್ಮ ಪರಿತ್ಯಾಗ. **Apóstate** — ಸ್ಟೇಟ್ (ನಾ., ಗು.) ಸ್ವಧರ್ಮ ಪರಿತ್ಯಾಗಿ (ಯಾದ) ; ಸ್ವಪಕ್ಷತ್ಯಾಗಿ (ಯಾದ) ; ಧರ್ಮಭ್ರಷ್ಟ ; ಪತಿತ **Apóstatize** — ಸ್ಟಟೈಸ್ (ಕ್ರಿ. ಅಕ.) ಸ್ವಧರ್ಮವನ್ನು ಬಿಟ್ಟು ಅನ್ಯಧರ್ಮವನ್ನವಲಂಬಿಸು ; ಒಂದು ತತ್ತ್ವವನ್ನೊ ಪಕ್ಷವನ್ನೊ ತೊರೆ.

A posterióri ಏ ಪಾಸ್ಟೆರಿಯೋರೈ, ಆ ಪಾಸ್ಟೆರಿಯೋರಿ (ಕ್ರಿ. ವಿ., ಗು.) ಕಾರ್ಯದಿಂದ ಕಾರಣವನ್ನು ತರ್ಕಿಸುವ ; ಅನುಭವಾತ್ಮಕವಾದ ; ಕಾರ್ಯಪೂರ್ವಕವಾಗಿ.

Apóstil(le) ಅಪಾಸ್ಟಿಲ್ (ನಾ.) ಪಾರ್ಶ್ವ ಟಿಪ್ಪಣಿ ; ಪಕ್ಕ ಟಿಪ್ಪಣಿ.

Apóstle ಅಪಾಸ್‌ಲ್ (ನಾ.) ದೂತ (ಮು., ಕ್ರಿಸ್ತನು ತನ್ನ ಧರ್ಮವನ್ನುಪದೇಶಮಾಡಲು ಕಳುಹಿಸಿದ ಹನ್ನೆರಡು ಮಂದಿ ಶಿಷ್ಯರಲ್ಲಿ ಯಾವನಾದರೂ ಒಬ್ಬನು) ; ಪ್ರವರ್ತನಾಚಾರ್ಯ. ಪ್ರವರ್ತಕ. **Apóstleship** (ನಾ.) = **Apóstolate,** — ಸ್ಟೊಲೇಟ್ (ನಾ.) (ಮು., ಮತ ಸಂಬಂಧವಾದ) ಒಂದು ಚಳವಳಿಯಲ್ಲಿ ಮುಂದಾಳುತನ. **Apostólic** ಆ್ಯಪೊಸ್ಟಾಲಿಕ್ (ಗು.) ಧರ್ಮಪ್ರವರ್ತಕ ಸಂಬಂಧವಾದ. (ರೋಮನ್‌ಕ್ಯಾತೊಲಿಕ್ ಪಂಗಡದ) ಕ್ರೈಸ್ತ ಜಗದ್ಗುರುವಿನ (ಪೋಪಿನ) ; ಆ ಮಠ ಸಂಬಂಧವಾದ. **Apostólical** (ಗು.) ; **Apostólically** (ಕ್ರಿ. ವಿ.)

Apóstrophe ಅಪಾಸ್ಟ್ರೊಫಿ (ನಾ.) (ಅಲಂ.) ಭಾಷಣದಲ್ಲಾಗಲಿ ಕವಿತೆಯಲ್ಲಾಗಲಿ (ಸಾ., ಸತ್ತುಹೋಗಿರುವವನನ್ನು ಅಥವಾ ಎದುರಿಗಿಲ್ಲದವನನ್ನು) ಸಂಬೋಧಿಸುವುದು : ಪ್ರತ್ಯಕ್ಷ ಭಾವನೆ. (ವ್ಯಾ.) ವರ್ಣ ಲೋಪ ಚಿಹ್ನೆ (ಉದಾ.—Can't) ; ಷಷ್ಠೀ ವಿಭಕ್ತಿಯ ಚಿಹ್ನೆ (ಉದಾ.—Boy's). **Apostróphic** ಆ್ಯಪೊಸ್ಟ್ರಾಫಿಕ್ (ಗು.) ; **Apóstrophize** ಅಪಾಸ್ಟ್ರೊ— (ಕ್ರಿ.)

Apóthecary ಅಪಾತಿಕರಿ (ನಾ.) ಔಷಧ ವ್ಯಾಪಾರಿ ; ಗಂದಿಗ (ವೈದ್ಯ)

A'pothegm, —them. **Apophthegm** ನೋಡಿ.

A'pothem ಆ್ಯಪೊತೆಮ್ (ನಾ.) (ಜ್ಯಾ.) ಸಮ ಬಹುಭುಜಾಕೃತಿಯಲ್ಲಿ ಕೇಂದ್ರದಿಂದ ಒಂದು ಭುಜದ ಮೇಲೆ ಎಳೆದ ಲಂಬರೇಖೆ. (ರ. ವಿ.) ಗಾಳಿಗೆಬಿಟ್ಟ ಕಷಾಯದ ತಳಗಡೆ ನಿಲ್ಲುವ ಗಸಿ.

Apothéosis, Apotheósis ಆ್ಯಪೊತೀಯೊಸಿಸ್, ಅಪಾತಿಯೋಸಿಸ್ (ನಾ.) ದೇವತ್ವಕ್ಕೆ ಏರಿಸುವುದು ; ದೇವತ್ವಾರೋಪಣ ; ದೇವತಾ ಪದವಿ. ಮನುಷ್ಯನನ್ನಾಗಲಿ ತತ್ತ್ವವನ್ನಾಗಲಿ ಪದ್ಧತಿಯನ್ನಾಗಲಿ ಸರ್ವೋತ್ಕೃಷ್ಟವೆಂದು ಹೇಳುವುದು. ದಿವ್ಯಪುರುಷ ವರ್ಗಕ್ಕೆ ಸೇರಿಸುವುದು. ಪರಮಪದಕ್ಕೇರುವುದು ; ಇಹ ಜನ್ಮ ವಿಮೋಚನೆ. ದಿವ್ಯ ಧ್ಯೇಯ. ಪುನರುತ್ಥಾನ. **Apótheosize** (ಕ್ರಿ. ಸಕ.)

Appál(l) ಅಪಾಲ್ (ಕ್ರಿ. ಸಕ.) ಎದೆಗುಂದಿಸು ; ಬಹು ಭಯಪಡಿಸು ; ಗುಂಡಿಗೆ ಹಾರಿಸು ; ಭೀತಿ ಹುಟ್ಟಿಸು ; ಗಾಬರಿಪಡಿಸು. **Appállingly** (ಕ್ರಿ. ವಿ.)

A'ppanage. **Apanage** ನೋಡಿ.

Apparátus ಆ್ಯಪರೇಟಸ್ (ನಾ. ; ಬ. ವ. — uses) ಯಂತ್ರ ಸಲಕರಣಗಳು ; ಉಪಕರಣಗಳು. ಸಲಕರಣೆ ; ಸಾಧನ ; ಉಪಕರಣ. (ಶ. ವಿ.) (ಒಂದು ಗೊತ್ತಾದ ಶರೀರಕಾರ್ಯವನ್ನು ನಡೆಯಿಸುವ) ಅಂಗ ವ್ಯೂಹ (ಉದಾ.—ಶ್ವಾಸಾಂಗ ವ್ಯೂಹ). Apparatus criticus ಒಂದು ಗ್ರಂಥವನ್ನು ಅಥವಾ ಲೇಖನವನ್ನು ವಿಮರ್ಶನ ದೃಷ್ಟಿಯಿಂದ ವಿಚಾರಮಾಡುವುದಕ್ಕೆ ಬೇಕಾಗುವ ಸಲಕರಣೆಗಳು : ವಿಮರ್ಶನೋಪಕರಣಗಳು.

Appárel ಅಪ್ಯಾರೆಲ್ (ನಾ.) ಬಟ್ಟೆಬರೆ ; ಉಡುಪು ; ಉಡಿಗೆ ತೊಡಿಗೆ. ಕ್ರೈಸ್ತ ವೈದಿಕರ ಕೆಲವು ಉಡಿಗೆಗಳ ಮೇಲೆ ಹಾಕಿರುವ ಕಸೂತಿಯ ಅಲಂಕಾರ. (ಕ್ರಿ. ಸಕ.) ಉಡುಪನ್ನು ತೊಡು, ತೊಡಿಸು ; ಹವಣಿಸು ; ಸಜ್ಜುಗೊಳಿಸು.

Appárent ಅಪೇ(ಪ್ಯಾ)ರೆಂಟ್ (ಗು.) ಕಣ್ಣಿಗೆ ಕಾಣುವ ; ಪ್ರತ್ಯಕ್ಷ ; ಸ್ಪಷ್ಟ ; ವ್ಯಕ್ತ. ಮೇಲೆಮೇಲೆ ತೋರುವ ; ತೋರಿಕೆಯ ; ಆಪಾತ ದೃಶ್ಯ. Heir apparent (ಹೆಚ್ಚುಹಕ್ಕು ಮತ್ತೆ ಯಾರಿಗೂ ಇಲ್ಲದಂಥ) ಉತ್ತರಾಧಿಕಾರಿ ; ಅಗ್ರ ಪಟ್ಟಾಧಿಕಾರಿ. **Appárently** (ಕ್ರಿ. ವಿ.)

Apparítion ಆ್ಯಪರಿಷನ್ (ನಾ.) ಕಾಣಿಸಿಕೊಳ್ಳುವುದು (ಮು., ಅತಿಮಾನುಷ ವ್ಯಕ್ತಿ) ; (ಅತಿಮಾನುಷ ವ್ಯಕ್ತಿಯ) ತೋರ್ಕೆ. ಭೂತ ; ಪ್ರೇತ ; ಪಿಶಾಚ ; ದೆವ್ವ. (ಖ. ವಿ.) ನಕ್ಷತ್ರ ಮೊ. ವು ಅಸ್ತವಾಗಿದ್ದು ಅಥವಾ ಮರೆಯಾಗಿದ್ದು, ಅನಂತರ ಕಾಣಿಸಿಕೊಳ್ಳುವುದು : ಉದಯ, ದರ್ಶನ.

Appáritor ಅಪ್ಯಾರಿಟರ್ (ನಾ.) ರೋಮನ್ ದಂಡನಾಯಕನ ಪರಿಚರ (ಸೇವಕ). ಲೌಕಿಕ ಅಥವಾ ವೈದಿಕ ನ್ಯಾಯಸ್ಥಾನದ ಅಧಿಕಾರಿ. ಘೋಷಕ ; ದೂತ ; ಹರಿಕಾರ.

Appeál ಅಪೀಲ್ (ಕ್ರಿ. ಅಕ.) ಕೆಳಗಿನ ನ್ಯಾಯಸ್ಥಾನದ ತೀರ್ಪನ್ನು ತಳ್ಳಿಹಾಕಲು ಮೇಲಣ ನ್ಯಾಯಸ್ಥಾನಕ್ಕೆ ಮನವೆ ಮಾಡಿಕೊ : ಮೇಲರ್ಜಿ ಕೊಡು ; 'ಅಪೀಲು' ಮಾಡು. ಬೇಡಿಕೊ ; ಕೇಳಿಕೊ. ಸಾಕ್ಷ್ಯ ಕೋರು. ಗಮನಕ್ಕೆ ತರು. ಮೊರೆಯಿಡು. ಹಿತವಾಗು ; ರುಚಿಸು ; ಇಷ್ಟವಾಗು ; ರಂಜಿಸು ; ಹಿಡಿ (Pictures appeal to the eye ಚಿತ್ರಗಳು ಕಣ್ಣಿಗೆ ರಂಜಿಸುತ್ತವೆ). (ನಾ.) 'ಅಪೀಲು' ಮಾಡುವುದು ; 'ಅಪೀಲು' ; ಮೇಲುಮನವೆ ; ಬೇಡಿಕೆ ; ಮೊರೆ. Court of appeal (ಕೆಳಗಿನ ನ್ಯಾಯಸ್ಥಾನದ ತೀರ್ಪನ್ನು ವಿಚಾರ ಮಾಡುವ) ಮೇಲ್ಮನವೆಯ ನ್ಯಾಯಸ್ಥಾನ. **Appeálable** (ಗು.) ಮನವೆ ಮಾಡಿಕೊಳ್ಳಬಹುದಾದ. **Appéllant** ಅಪೆಲಂಟ್ (ಗು., ನಾ.) (ನ್ಯಾ. ಶಾ.) ಮೇಲ್ಮನವೆ ಮಾಡುವ ; ಮೇಲ್ಮನವೆಗೆ ಸಂಬಂಧಪಟ್ಟ. ಮೇಲ್ಮನವೆಗಾರ. **Appéllate** ಅಪೆಲೆಟ್ (ಗು.) ಮೇಲ್ಮನವೆಯ ಮೊಕದ್ದಮೆಗಳನ್ನು ತೆಗೆದುಕೊಳ್ಳುವ ; ಮೇಲ್ಮನವೆಯ.

Appeár ಅಪಿಯರ್ (ಕ್ರಿ. ಅಕ.) ಕಾಣು ; ತೋರು ; ತೋರಿಸಿಕೊ ; ಕಾಣಿಸಿಕೊ ; ಬಹಿರಂಗವಾಗಿ ತೋರ್ಪಡಿಸಿಕೊ ; ಮೈದೋರು ; ಹಾಜರಾಗು ; ಗೋಚರವಾಗು ; ಪ್ರಕಟವಾಗು. **Appeárance** — ರನ್ಸ್ (ನಾ.) ಕಾಣಿಸಿಕೊಳ್ಳುವುದು ; ದರ್ಶನ ; ಉದಯ ; ತೋರ್ಕೆ ; ವೇಷ. ಚರ್ಯೆ ; ಚಹರೆ ; ಆಪಾತ ರೂಪ. ಅತಿಮಾನುಷ ದೃಶ್ಯ. To all appearance ಕಂಡಮಟ್ಟಿಗೆ. Keep up appearances (ಐಶ್ವರ್ಯ, ಸ್ನೇಹ, ಮೊ. ನ್ನು) ಹೊರ ನೋಟಕ್ಕೆ ತೋರಿಸಿಕೊ. Put in an appearance ಮುಖ ಹಾಕು ; ಮುಖ ತೋರು.

Appeáse ಅಪೀಸ್ (ಕ್ರಿ. ಸಕ.) ಶಮನ ಮಾಡು ; ಶಾಂತಗೊಳಿಸು ; ಸಮಾಧಾನಪಡಿಸು ; ತೃಪ್ತಿಪಡಿಸು ; ತಣಿಸು. **Appeásable** (ಗು.) ; **Appeásement** (ನಾ.)

Appéllant, **Appéllate** } **Appeal** ನೋಡಿ.

Appellátion ಆ್ಯಪೆಲೇಷನ್ (ನಾ.) ಹೆಸರು ; ನಾಮಧೇಯ ; ನಾಮಾಂಕಿತ ; ಅಭಿಧಾನ ; ಸಂಜ್ಞಾ ವಿಧಾನ. **Appéllative** ಅಪೆಲಟಿವ್ (ಗು., ನಾ.) (ಶಬ್ದಗಳ ವಿಷಯದಲ್ಲಿ) ಜಾತಿ ವಾಚಕ ; ರೂಢ ನಾಮ.

Appénd ಅಪೆಂಡ್ (ಕ್ರಿ. ಸಕ.) ತೂಗಹಾಕು ; ತಗುಲಹಾಕು ; ತಗುಲಿಸು ; ಸೇರಿಸು ; ಹಚ್ಚು ; ಅನುಬಂಧಿಸು. **Appéndage** ಅಪೆಂಡೆಜ್ (ನಾ.) ಸೇರಿಸಿದುದು ; ಜೊತೆಯಲ್ಲಿರುವುದು ; ಅನುಬಂಧ. **Appéndant, — ent,** — ಡಂಟ್ (ನಾ.) ಅನುಬಂಧ. (ಗು.) ಆನುಷಂಗಿಕ ; ಅಂಗಭೂತ. **Appéndix** (ನಾ. ; ಬ. ವ. —ices, — ixes) ಅನುಬಂಧ ; ಪರಿಶಿಷ್ಟ ; ಪುರವಣಿ. (ಶ. ವಿ.) ಒಂದು ಅಂಗದ ಮೇಲೆ ಬೆಳೆದ ಗಂತಿ, ಪುಚ್ಛ ; ಅಂಗಪುಚ್ಛ (ಮು., ದೊಡ್ಡ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರುಳಿನ ಅಂತ್ಯಭಾಗದಲ್ಲಿ ಬೆಳೆಯುವ ಕ್ರಿಮಿಯಾಕಾರದ ಪುಚ್ಛ) : ಕರುಳು ಬಾಲ ; ಅಂತ್ರಪುಚ್ಛ. **Appendicítis** — ಡಿಸೈಟಿಸ್ (ನಾ.) ಅಂತ್ರಪುಚ್ಛ ರೋಗ ; ಕರುಳುಬಾಲದ ರೋಗ.

Appercéption ಆ್ಯಪರ್ಸೆಪ್ಷನ್ (ನಾ.) (ಮ. ಶಾ.) ಮನಃಪ್ರಜ್ಞೆ; ಅನುಬೋಧೆ. **Apperceíve** (ಕ್ರಿ. ಸಕ.) ಯಾವುದಾದರೂ ಗೋಚರ ವಿಷಯವನ್ನು ಮನೋಗತ ವಿಷಯಗಳೊಡನೆ ಯೋಜಿಸಿ ಅನುಭವಕ್ಕೆ ತಂದುಕೊಂಡು ಅರ್ಥಮಾಡಿಕೊ : ಅನುಬೋಧೆಯಿಂದ ತಿಳಿ.

Appertaín ಆ್ಯಪರ್ಟೆಯ್‌ನ್ (ಕ್ರಿ. ಅಕ.) ಹಕ್ಕಾಗಿ ಅಥವಾ ಆಸ್ತಿಯಾಗಿ ಸೇರಿರು ; ಸಂಬಂಧಿಸಿರು ; ತಕ್ಕುದಾಗಿರು.

A'ppetence, — cy ಆ್ಯಪಿಟೆನ್ಸ್, — ಟೆನ್ಸಿ (ನಾ.) ಗೀಳು ; ಹಂಬಲು ; ಪ್ರಬಲೇಚ್ಛೆ. ಸಹಜ ಪ್ರವೃತ್ತಿ. **A'ppetent** (ಗು.) ; **A'ppetite** (ನಾ.) ಅಪೇಕ್ಷೆ ; ಒಲವು ; ಹಸಿವು ಮೊ. ಬಾಧೆಗಳನ್ನು ನಿವಾರಿಸಿಕೊಳ್ಳುವ ಇಚ್ಛೆ ; ಹಸಿವು ; ರುಚಿ. After one's appetite ಇಷ್ಟಬಂದ ಹಾಗೆ. **A'ppetitive** ಆ್ಯಪಿಟೈಟಿವ್, **Appétitive** ಅಪೆಟಿಟಿವ್ (ಗು.) ; **A'ppetize** ಆ್ಯಪಿಟೈಸ್ (ಕ್ರಿ. ಸಕ.) ಹಸಿವುಂಟು ಮಾಡು ; ರುಚಿ ಹುಟ್ಟಿಸು. **A'ppetizer** (ನಾ.) ರುಚಿಕಾರಕ ; ರುಚಿಜನಕ ; ಅರೋಚಕ ಪರಿಹಾರಕ.

A'ppetite. **Appetence** ನೋಡಿ.

Applaúd ಅಪ್ಲಾಡ್ (ಕ್ರಿ.) ಚಪ್ಪಾಳೆ ಹೊಡೆದು ಸಮ್ಮತಿಯನ್ನು ಸೂಚಿಸು ; ಉತ್ಸಾಹದಿಂದ ಅನುಮೋದಿಸು ; ಹೊಗಳು ; ಶ್ಲಾಘಿಸು ; ಮೆಚ್ಚು ; ಮೆಚ್ಚಿಗೆ ಕೊಡು ; ಪ್ರಶಂಸಿಸು ; ಅಭಿನಂದಿಸು. **Applaúse** —ಸ್ (ನಾ.) ಗಟ್ಟಿಯಾಗಿ ಸೂಚಿಸಿದ ಅನುಮೋದನ. ಮೆಚ್ಚಿಗೆ ; ಹೊಗಳಿಕೆ ; ಪ್ರಶಂಸೆ; ಶ್ಲಾಘನೆ. **Applaúsive** — ಸಿವ್ (ಗು.) ; **Applaúsively** (ಕ್ರಿ. ವಿ.)

A'pple ಆ್ಯಪ್‌ಲ್ (ನಾ.) ಸೇಬು. (ಸ. ವಿ.) ಸೇಬುಜಾತಿಯ ಹಣ್ಣು. Apple of discord ಕಲಹ ಬೀಜ ; ವೈಮನಸ್ಯ ಮೂಲ ; ಹಗೆಯ ಕಾರಣ. Apple of the eye ಕಣ್ಣುಪಾಪೆ ; ಕಣ್ಮಣಿ ; ಅಚ್ಚುಮೆಚ್ಚಾದ ವಸ್ತು. Apple green ಒಂದು ಹಸುರುಬಣ್ಣ. Adam's apple ಗಂಟಲ ಮಣಿ ; ಗೋಮಾಳೆ. Apple of Sodom, Dead Sea apple ಹೊರಕ್ಕೆ ಅಂದವಾಗಿದ್ದು ಮುಟ್ಟಿದೊಡನೆಯೇ ಬೂದಿಯಾಗುವ ಹಣ್ಣು. (ರೂಪ.) ಪೊಳ್ಳು. Upset a person's apple-cart ಒಬ್ಬನ ಎಣಿಕೆಯನ್ನು ಅಥವಾ ನಿರೀಕ್ಷಣೆಯನ್ನು ಹಾಳುಮಾಡು. Apple-pie order ಒಪ್ಪವಾಗಿರುವ ಸ್ಥಿತಿ ; ಅಣಿ.

Applý ಅಪ್ಲೈ (ಕ್ರಿ.) ಮೇಲಿಡು ; ಸವರು ; ಹಚ್ಚು ; ಲೇಪಿಸು ; ಪ್ರಯೋಗಿಸು. ನಿರತನಾಗು ; ಶ್ರದ್ಧೆ ವಹಿಸು ; ಮನಸ್ಸಿಡು ; ಗಮನಿಸು. ಅನ್ವಯಿಸು. ಸಂಬಂಧಿಸು. ಬೇಡು ; ಯಾಚಿಸು ; ಅರಿಕೆ ಮಾಡಿಕೊ. **Applíance** (ನಾ.) ಹಚ್ಚುವುದು ; ಬಳಸುವುದು ; ಉಪಯೋಗಿಸುವುದು. ಪ್ರಯೋಗ ; ಸಾಧನ ; ಸಾಮಗ್ರಿ ; ಪರಿಕರ ; ಉಪಕರಣ ; ಸಲಕರಣೆ ; ಉಪಾಯ. **A'pplicable** ಆ್ಯಪ್ಲಿಕಬ್‌ಲ್ (ಗು.) ಅನ್ವಯಿಸುವ ; ಸಂಬಂಧಿಸಬಹುದಾದ ; ತಕ್ಕ ; ಯುಕ್ತ ; ಉಪಯೋಗ್ಯ ; ಸಮಂಜಸ ; ಸಂಗತ ; ಹೊಂದುವ ; ಹೊಂದಿಕೆಯಾದ ; ಸಂದರ್ಭಕ್ಕೆ ತಕ್ಕ. **Applicabílity** (ನಾ.) ; **A'pplicant** — ಕಂಟ್ (ನಾ.) ಬೇಡುವವನು ; ಕೇಳಿಕೊಳ್ಳುವವನು ; ಮನವೆಗಾರ ; ಅರ್ಜಿದಾರ ; ದರಖಾಸ್ತುದಾರ. **Applicátion** (ನಾ.) ಮೇಲಿಡುವುದು ; ಆರೋಪ ; ಹಚ್ಚುವುದು ; ಲೇಪನ ; ಯೋಜನೆ ; ಉಪಯೋಗಿಸುವುದು ; ಪ್ರಯೋಗಿಸುವುದು. ಉಪಯೋಗ ; ಪ್ರಯೋಗ ; ವಿನಿಯೋಗ ; ಅನ್ವಯ. ಅನ್ವಯಿಸುವುದು ; ಔಚಿತ್ಯ. ಉದ್ಯೋಗ ; ವ್ಯವಸಾಯ ; ಅಧ್ಯವಸಾಯ. ಆಸಕ್ತಿ ; ಶ್ರದ್ಧೆ. ಬೇಡಿಕೆ ; ಬಿನ್ನಹ ; ಮನವೆ ; ಅರ್ಜಿ ; ದರಖಾಸ್ತು.

Appoínt ಅಪಾಯ್‌ಂಟ್ (ಕ್ರಿ. ಸಕ.) ಗೊತ್ತುಮಾಡು ; ನಿಯಮಿಸು ; ನಿಯೋಜಿಸು ; ವಿಹಿತಮಾಡು. (ನ್ಯಾ. ಶಾ.) (ಆಸ್ತಿಯ) ವಿನಿಯೋಗವನ್ನು ಗೊತ್ತುಮಾಡು. **Appoínted** (ಗು.) ; **Appointeé** (ನಾ.) ನಿಯಮಿತನಾದವನು. **Appoínter** (ನಾ.) ; **Appoíntment** (ನಾ.) (ಕ್ರಿಯಾರ್ಥಗಳಲ್ಲಿ). ನಿರ್ಣಯ ; ವಿಧಿ ; ಶಾಸನ ; ಹುದ್ದೆ ; ಅಧಿಕಾರ ; ನೌಕರಿ ; ಕೆಲಸ ; ಕಾರ್ಯನಿಶ್ಚಯ ; (ಯಾವುದಾದರೂ ಕೆಲಸ ನಡೆಯಿಸುವುದಕ್ಕಾಗಿ) ಒಟ್ಟುಸೇರಲು ಏರ್ಪಾಡು. Keep, break, an appointment ಕಾರ್ಯನಿಶ್ಚಯಕ್ಕನುಸಾರವಾಗಿ ನಡೆ, ತಪ್ಪು. **Appoíntments** ಸಾಮಾನು ಸರಂಜಾಮು ; ಉಪಕರಣ ; ಸಜ್ಜು. **Appointór** — ಟಾರ್ (ನಾ.) (ನ್ಯಾ. ಶಾ.) ನಿಯಾಮಕ ಮಾಡುವ ಅಧಿಕಾರವುಳ್ಳವನು ; ನಿಯಮನಾಧಿಕಾರಿ.

Appórtion ಅಪೋರ್ಷನ್ (ಕ್ರಿ. ಸಕ.) ಹಂಚು ; ಪಾಲು ಮಾಡಿಕೊಡು ; ವಿಭಾಗ ಮಾಡಿಕೊಡು ; ಹಿಸ್ಸೆ ಮಾಡಿಕೊಡು. **Appórtionment** (ನಾ.)

A'pposite ಆ್ಯಪೊಸಿಟ್ (ಗು.) ತಕ್ಕಂತೆ ಯೋಜಿಸಿದ ; ಉಚಿತ ; ಸಮಂಜಸ ; ಯುಕ್ತ ; ತಕ್ಕ. **A'ppositely** (ಕ್ರಿ. ವಿ.) ; **A'ppositeness** (ನಾ.) ; **Apposítion** (ನಾ.) (ಮುದ್ರೆ, ಮೊ. ನ್ನು) ಹಾಕುವುದು. ಪದಾರ್ಥಗಳನ್ನು ಪಕ್ಕಪಕ್ಕದಲ್ಲಿಡುವುದು, ಇಟ್ಟಿರುವುದು ; ಜೋಡಣೆ. (ವ್ಯಾ.) ಒಂದು ಶಬ್ದವನ್ನು ಅಥವಾ ವಾಕ್ಯಭಾಗವನ್ನು ಮತ್ತೊಂದು ಶಬ್ದದೊಡನೆ (ನಾಮಪದ ಅಥವಾ ಸರ್ವನಾಮದೊಡನೆ) ಏಕಾನ್ವಯವಾಗುವಂತೆ ಇಡುವುದು ; ಸಮಾನಾಧಿಕರಣ ; ಏಕಾನ್ವಯ. **Apposítional** (ಗು.)

Appraíse ಅಪ್ರೆಯ್‌ಸ್ (ಕ್ರಿ. ಸಕ.) ಬೆಲೆಕಟ್ಟು (ಮು., ವಿಹಿತಾಧಿಕಾರಿಯಿಂದ) ; ಅಂದಾಜು ಮಾಡು ; ಗುಣವಿಮರ್ಶೆ ಮಾಡು. **Appraísal** (ನಾ.) ; **Appraísement** (ನಾ.) ; **Appraísable** (ಗು.) ; **Appraíser** (ನಾ.) ಬೆಲೆ ಕಟ್ಟುವವನು (ಮು., ಆ ಅಧಿಕಾರ ಪಡೆದಿರುವವನು)

Appréciate ಅಪ್ರೀಷಿಯೇಟ್ (ಕ್ರಿ.) ಬೆಲೆಕಟ್ಟು ; ಯೋಗ್ಯತೆ ಗೊತ್ತುಮಾಡು. ಸ್ವಾರಸ್ಯವನ್ನು ಗ್ರಹಿಸು. ಶ್ಲಾಘಿಸು ; ಮೆಚ್ಚು ; ಹೆಚ್ಚು ಬೆಲೆ (ಯೋಗ್ಯತೆ) ಕೊಡು ; ಬೆಲೆಯೇರು ; ಬೆಲೆಯೇರಿಸು. **Appreciátion** (ನಾ.) ಬೆಲೆಕಟ್ಟುವುದು ; ಮೆಚ್ಚಿಗೆ ; ಪ್ರಶಂಸೆ ; ಗುಣಗ್ರಹಣ ; ಪರಿಜ್ಞಾನ ; ಬೆಲೆಯೇರಿಕೆ. **Appréciative** — ಯೆಟಿವ್ (ಗು.) = **Appréciatory** — ಯಟರಿ (ಗು.) ; **Appréciatively** (ಕ್ರಿ. ವಿ.) ; **Appréciable** (ಗು.) ಬೆಲೆ ಕಟ್ಟಲಾಗುವ. ಗೋಚರಕ್ಕೆ ಬರುವ ; ಗಣನಾರ್ಹ ; ಗ್ರಾಹ್ಯವಾಗುವ ; ತಕ್ಕಮಟ್ಟಿನ. **Appréciably** (ಕ್ರಿ. ವಿ.)

Apprehénd ಆ್ಯಪ್ರಿಹೆಂಡ್ (ಕ್ರಿ. ಸಕ.) ಹಿಡಿ ; (ನ್ಯಾಯವಿಧಿಗನುಸಾರವಾಗಿ) ಹಿಡಿದು ನಿಲ್ಲಿಸು ; ಬಂಧಿಸು ; 'ದಸ್ತಗಿರಿ' ಮಾಡು. (ಇಂದ್ರಿಯಗಳಿಂದಾಗಲಿ ಬುದ್ಧಿಯಿಂದಾಗಲಿ) ಗ್ರಹಿಸು ; ತಿಳಿ. ಭಯಪಡು ; ಹೆದರು ; ಶಂಕೆಪಡು. **Apprehénsible** (ಗು.) (ಇಂದ್ರಿಯಗಳಿಂದಾಗಲಿ ಬುದ್ಧಿಯಿಂದಾಗಲಿ) ಗ್ರಹಿಸಲಾಗುವ ; ಗ್ರಾಹ್ಯ. **Apprehensibílity** (ನಾ.) ; **Apprehénsion** (ನಾ.) ; **Apprehénsive** (ಗು.) ; **Apprehénsively** (ಕ್ರಿ. ವಿ.) ; **Apprehénsiveness** (ನಾ.)

Appréntice ಅಪ್ರೆಂಟಿಸ್ (ನಾ.) ಒಪ್ಪಂದ ಮಾಡಿಕೊಂಡು ಕೆಲಸ ಕಲಿಯುತ್ತಿರುವವನು ; ಅಭ್ಯಾಸಿ ; ಉಮೇದುವಾರ. ಕೆಲಸದಲ್ಲಿ ಪರಿಶ್ರಮವಿಲ್ಲದವನು ; ಅನನುಭವಿ. **Apprénticeship** (ನಾ.) ; **Appréntice** (ಕ್ರಿ. ಸಕ.) ಉಮೇದುವಾರನನ್ನಾಗಿ ಸೇರಿಸು.

Appríse ಅಪ್ರೈಸ್ (ಕ್ರಿ. ಸಕ.) ತಿಳಿಸು ; ತಿಳಿಯಪಡಿಸು ; ತಿಳಿದಿರು.

Appríze ಅಪ್ರೈಸ್ (ಕ್ರಿ. ಸಕ.) = Appraise ಬೆಲೆಕಟ್ಟು.

A'ppro. ಆ್ಯಪ್ರೊ (ಸಂಕ್ಷಿಪ್ತ) : On appro. (= on approval or approbation) ಸಾಮಾನನ್ನು, ಒಪ್ಪಿಗೆಯಾಗದಿದ್ದರೆ, ಹಿಂದಕ್ಕೆ ಕಳುಹಿಸುವ ಕರಾರಿನ ಮೇರೆಗೆ ; 'ಅಜಮಾಯಿಷಿ' ಗಾಗಿ ; 'ಅಮಾನತ್ತಿ'ನಲ್ಲಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Approách ಅಪ್ರೋಚ್ (ಕ್ರಿ.) ಹತ್ತಿರಕ್ಕೆ ಬರು ; ಬಳಿಸಾರು ; ಹೊದ್ದು ; ಸಮೀಪಿಸು. ನಡತೆ ಮೊ. ವಿಷಯಗಳಲ್ಲಿ ಸರಿಸುಮಾರಾಗಿ ಹೋಲು. (ವ್ಯಾಪಾರ) ಪ್ರಸ್ತಾವ ಮಾಡು. (ಸೇನೆ) ಹತ್ತಿರಕ್ಕೆ ಹೋಗಲು ಹಾದಿ ತೋಡು. ಕಂದಕ ಮಾಡು. **Approachabílity** (ನಾ.) ಸೌಲಭ್ಯ. **Approáchable** (ಗು.) ; **Approách** (ನಾ.) ಹತ್ತಿರ ಸಾರುವುದು ; ಸಮೀಪ ಸೇರುವುದು ; ಆಗಮನ. (ನಡತೆ ಮೊ. ಗಳಲ್ಲಿ) ಸಮೀಪಿಸುವುದು. ಹಾದಿ ; ಮಾರ್ಗ (ರೂಪ. ಸಹ). (ಸೇನೆ) ತೋಡುದಾರಿ. **Approáches** (ನಾ.) ಸ್ನೇಹ ಸನ್ನಾಹಗಳು.

A'pprobate ಆ್ಯಪ್ರೊಬೇಟ್ (ಕ್ರಿ. ಸಕ.) ಯಥಾವಿಧಿಯಾಗಿ ಒಪ್ಪು ; ಸಮ್ಮತಿಸು ; ಅನುಮತಿಸು ; ಅಂಗೀಕರಿಸು ; 'ಮಂಜೂರು' ಮಾಡು. **Approbátion** (ನಾ.) ಅನುಮೋದನ ; ಅಂಗೀಕಾರ ; ಒಪ್ಪಿಗೆ ; ಮೆಚ್ಚಿಗೆ. **A'pprobatory** (ಗು.)

Apprópriate ಅಪ್ರೋಪ್ರಿಯೆಟ್ (ಗು.) ತಕ್ಕ ; ಉಚಿತ ; ಯೋಗ್ಯ ; ಸಂಬಂಧಿಸಿದ ; ಸೇರಿದ. **Apprópriately** (ಕ್ರಿ. ವಿ.) ; **Apprópriateness** (ನಾ.) ; **Apprópriative** (ಗು.) ; **Apprópriate** — ಯೇಟ್ (ಕ್ರಿ. ಸಕ.) ವಶ, ಸ್ವಾಧೀನ, ಪಡಿಸಿಕೊ ; ಬಳಸಿಕೊ ; ಸ್ವಂತಕ್ಕುಪಯೋಗಿಸಿಕೊ. ತೆಗೆದಿಡು ; ವಿನಿಯೋಗಿಸು. **Appropriátion** (ನಾ.) ; **Apprópriator** (ನಾ.)

Appróve ಅಪ್ರೂವ್ (ಕ್ರಿ.) ಒಪ್ಪು ; ಅನುಮತಿಸು ; 'ಮಂಜೂರು' ಮಾಡು. ಮೆಚ್ಚು. ತೋರಿಸು ; ತೋರ್ಪಡಿಸು ; ವ್ಯಕ್ತಪಡು ; ಸಿದ್ಧಿಸು (His account approves him a man of thought ಅವನ ವೃತ್ತಾಂತದಿಂದ ಅವನು ವಿಚಾರಪರನೆಂದು ಸಿದ್ಧವಾಗುತ್ತದೆ). **Appróved** (ಗು.) ; **Appróval** (ನಾ.) ; **Appróver** (ನಾ.) ಸಮ್ಮತಿ ಕೊಡುವವನು. (ತನ್ನ ತಪ್ಪನ್ನು ಒಪ್ಪಿಕೊಂಡು) ಸರ್ಕಾರದ ಪಕ್ಷವಾಗಿ ಸಾಕ್ಷ್ಯಕೊಡಲು ನಿಲ್ಲುವ ಅಪರಾಧಿ : 'ಮಾಫೀ' ಸಾಕ್ಷಿ.

Appróximate ಅಪ್ರಾಕ್ಸಿಮೆಟ್ (ಗು.) ಸರಿಸುಮಾರಾದ ; ಹತ್ತಿರ ಹತ್ತಿರದ ; ಬಹುಮಟ್ಟಿಗೆ ಹೋಲುವ. (ಕ್ರಿ.) (— ಮೇಟ್) ಹತ್ತಿರಕ್ಕೆ ತರು, ಬರು ; ಸಮೀಪಿಸು. **Appróximately** (ಕ್ರಿ. ವಿ.) ; **Approximátion** (ನಾ.) ಹತ್ತಿರಕ್ಕೆ ತರುವುದು, ಬರುವುದು ; ಸಾಮೀಪ್ಯ. (ಗಣಿತ) ಪ್ರಶ್ನೆಗಳನ್ನು ಬಿಡಿಸುವುದರಲ್ಲಿ ನಿಷ್ಕೃಷ್ಟ ಪರಿಮಾಣಕ್ಕೆ ಕ್ರಮೇಣ ಹತ್ತಿರ ಹತ್ತಿರ ಬರುವುದು : ಉಪಸಮ. **Appróximative** — ಮೆಟಿವ್ (ಗು.) ; **Appróximatively** (ಕ್ರಿ. ವಿ.)

Appuí ಅಪೂಯಿ, ಅಪ್ವೀ (ನಾ.) (ಸೇನೆ) ರಕ್ಷಣಾಧಾರ (ರೂಪ. ಸಹ). Point of appui (F, Point d'appui) ಸೇನೆಗಳು ಸಾಲುಗಟ್ಟಿ ನಿಲ್ಲುವುದಕ್ಕೆ ಆರಂಭಿಸಲು ಗೊತ್ತುಮಾಡಿರುವ ಗುರುತು.

Appúrtenance ಅಪರ್ಟಿನನ್ಸ್ (ನಾ.) ಸಂಬಂಧಿಸಿದುದು ; ಸೇರಿದುದು ; ಉಪಬಂಧ ; ಉಪಕರಣ. **Appúrtenances** (ನಾ.) ಸಲಕರಣೆ. **Appúrtenant** (ಗು., ನಾ.) ಸೇರಿದ ; ಸಂಬಂಧಿಸಿದ. ಉಚಿತ (ವಸ್ತು, ಉಪಕರಣ)

A'pricot ಏಪ್ರಿಕಾಟ್ (ನಾ.) ಕಿತ್ತಳೆಯ ಬಣ್ಣದ್ದಾಗಿ ಓಟೆಯಿರುವ ಒಂದು ಜಾತಿಯ ಹಣ್ಣು.

A'pril ಏಪ್ರಿಲ್ (ನಾ.) ಇಂಗ್ಲಿಷ್ ವರ್ಷದ ನಾಲ್ಕನೆಯ ತಿಂಗಳು.

A prióri ಏ ಪ್ರಿಯೋರೈ (ಗು., ಕ್ರಿ. ವಿ.) ಕಾರಣ ಹಿಡಿದು ಕಾರ್ಯವನ್ನು ತರ್ಕಿಸುವ ; ಬುದ್ಧಿರೂಢ ; ಕಾರಣ ಪೂರ್ವಕ (ತರ್ಕ). (A posteriori ನೋಡಿ). **Apriórity** — ಯಾರಿಟಿ (ನಾ.)

A'pron ಏಪ್ರನ್, ಏಪರನ್ (ನಾ.) ಉಡುಪು ಕೊಳೆಯಾಗದಂತೆ ಮುಂದಕ್ಕೆ ಕಟ್ಟಿಕೊಳ್ಳುವ ಉಡಿಗೆ : ಮುಂಗವಚ ; ದೂಳುಪಾವುಡ. ಕ್ರೈಸ್ತ ಪಾದ್ರಿಗಳು ಮೊ. ವರ ಅಧಿಕಾರದ ಉಡುಪು. ನಾಟಕದಲ್ಲಿ ಮುಂದೆರೆಯ ಮುಂದುಗಡೆ ನಟನೆಗೆ ಅವಕಾಶವಿರುವಂತೆ ಅಳವಡಿಸಿರುವ ಭಾಗ : ರಂಗಾಗ್ರ. Apron-string ದೂಳುಪಾವುಡವನ್ನು ಕಟ್ಟುವ ದಾರ. Tied to the apron-strings (of mother, wife, etc.) ತಾಯಿ, ಹೆಂಡತಿ, ಮೊ. ರಿಗೆ ವಶವರ್ತಿಯಾದ. **A'proned** (ಗು.) ; **A'pronful** (ನಾ.) ಮಡಿಲುತುಂಬ.

Apropós ಆಪ್ರೊಪೋ (ಕ್ರಿ. ವಿ., ಗು., ನಾ.) ಪ್ರಕೃತ ವಿಷಯಕ್ಕೆ ತಕ್ಕ ; ಪ್ರಸಂಗೋಚಿತ ; ವಿಷಯವನ್ನು ಕುರಿತು.

A'psis ಆ್ಯಪ್ಸಿಸ್ (ನಾ. ; ಬ. ವ. Apsides, ಆ್ಯಪ್ಸೈಡೀಸ್) (ಖ. ವಿ.) ಉಚ್ಚಸ್ಥಾನ (ಶೀಘ್ರೋಚ್ಚ, ಮಂದೋಚ್ಚ) ; ಉಚ್ಚ ನೀಚ ಬಿಂದುಗಳು. Line of apsides ಮಂದ ಶೀಘ್ರೋಚ್ಚ ರೇಖೆ ; ಬೃಹದ್ವ್ಯಾಸ. **A'psidal** (ಗು.)

Apt ಆ್ಯಪ್ಟ್ (ಗು.) ಸರಿಯಾದ ; ಹೊಂದುವ ; ತಕ್ಕ ; ಉಚಿತ ; ಯೋಗ್ಯ ; ಯುಕ್ತ. (ಆ ವಿಧವಾದ) ಪ್ರವೃತ್ತಿಯುಳ್ಳ ; ಚುರುಕಾದ ; ತೀಕ್ಷ್ಣ ಬುದ್ಧಿಯುಳ್ಳ. **A'ptly** (ಕ್ರಿ. ವಿ.) ; **A'ptness** (ನಾ.) ; **A'ptitude** (ನಾ.) ಯೋಗ್ಯತೆ ; ಔಚಿತ್ಯ ; ಸಾಮರ್ಥ್ಯ ; ಸಹಜ ಪ್ರವೃತ್ತಿ.

A'pterous ಆ್ಯಪ್ಟರಸ್ (ಗು.) (ಪ್ರಾ. ವಿ.) ರೆಕ್ಕೆಯಿಲ್ಲದ ; ಪಕ್ಷ ರಹಿತ. (ಸ. ವಿ.) (ಬೀಜಗಳ ವಿಷಯದಲ್ಲಿ) ಹೊರಪೊರೆ ಚಾಚಿಕೊಂಡಿರದ : ಪಕ್ಷ ರಹಿತ.

A'pteryx ಆ್ಯಪ್ಟೆರಿಕ್ಸ್ (ನಾ.) ತೋಕೆಯಿಲ್ಲದೆ ಪಕ್ಷಮೂಲಗಳು ಮಾತ್ರವಿರುವ ನ್ಯೂಸೀಲೆಂಡಿನ ಒಂದು ಪಕ್ಷಿಜಾತಿ.

A'qua ಆ್ಯ(ಏ)ಕ್ವ (ನಾ.) (ರ. ವಿ.) ನೀರು ; ದ್ರವ ; ದ್ರಾವಣ. Aqua fortis ನೈಟ್ರಿಕಾಮ್ಲ. Aqua regia ನೈಟ್ರಿಕ್ ಮತ್ತು ಹೈಡ್ರೊಕ್ಲೋರಿಕ್ ಆಮ್ಲಗಳ ಮಿಶ್ರಣ (ಚಿನ್ನವನ್ನೂ 'ಪ್ಲಾಟಿನಂ' ಲೋಹವನ್ನೂ ಲೀನಮಾಡಿಕೊಳ್ಳುವ ಗುಣವುಳ್ಳದ್ದು) : ರಾಜಾಮ್ಲ. **Aquárium** ಅಕ್ವೇರಿಯಂ (ನಾ. ; ಬ. ವ. — iums, — ia) ಜಲಸಸ್ಯಗಳನ್ನೂ ಜಲಚರಗಳನ್ನೂ ಇಡುವುದಕ್ಕಾಗಿ ಮಾಡಿದ ತೊಟ್ಟಿ ಅಥವಾ ಕೊಳ : ಮೀನು ತೊಟ್ಟಿ. ಇವುಗಳನ್ನು ಪ್ರದರ್ಶನಕ್ಕಾಗಿಟ್ಟಿರುವ ಸ್ಥಳ. **Aquárius** (ನಾ.) (ಖ. ವಿ.) ಕುಂಭ (ರಾಶಿ). **Aquátic** ಅಕ್ವ್ಯಾಟಿಕ್ (ಗು., ನಾ.) ನೀರಿನಲ್ಲಿ ಅಥವಾ ನೀರಿನ ಬಳಿಯಲ್ಲಿ ಬೆಳೆಯುವ, ಜೀವಿಸುವ (ಸಸ್ಯ ಅಥವಾ ಪ್ರಾಣಿ) : ಜಲೋದ್ಭವ ; ಜಲಚರ. ನೀರಿನಲ್ಲಾಡುವ (ಆಟ, ಕ್ರೀಡೆ) : ನೀರಾಟ ; ಜಲಕ್ರೀಡೆ. **A'quatint** ಆ್ಯಕ್ವಟಿನ್ಟ್ (ನಾ.) ರಾಳವನ್ನೊಳಕೊಂಡಿರುವ ದ್ರಾವಣವನ್ನು ತಾಮ್ರದ ಮೇಲೆ ಬಳಿದು, ಅದರ ಮೇಲೆ ನೈಟ್ರಿಕಾಮ್ಲದ ಸಹಾಯದಿಂದ ಚಿತ್ರ (ಲಿಪಿ) ಕೊರೆಯುವುದು. **Aqua-vítae** ಏಕ್ವಾವೈಟೀ (ನಾ.) ತೀವ್ರಾಸವ (ಮು., ಮೊದಲನೆಯ ಬಟ್ಟಿಯದು). **A'queduct** ಆ್ಯಕ್ವಿಡಕ್ಟ್ (ನಾ.) ನೀರನ್ನು ಸಾಗಿಸುವುದಕ್ಕಾಗಿ ಕಲ್ಲಿನಿಂದ ಎತ್ತರದಲ್ಲಿ ಮಾಡಿದ ಕಾಲುವೆ : ಮೇಲುಕಾಲುವೆ. (ಶ. ವಿ.) (ಮು., ಸಸ್ತನಿಗಳ ತಲೆಯಲ್ಲಿರುವ) ಒಂದು ಸಣ್ಣ ನಾಳ. **A'queous** ಏಕ್ವಿಯಸ್ (ಗು.) ನೀರಿನ ; ಜಲರೂಪದ. ಜಲಮಯ. (ಭೂ. ವಿ.) ನೀರಿನಿಂದಾದ (Aqueous rocsk ಜಲ ಶಿಲೆ). **Aquíferous** ಅಕ್ವಿಫೆರಸ್ (ಗು.) ಜಲವಾಹಕ ; ಜಲದಾಯಕ. **A'quiform** ಏಕ್ವಿಫಾರ್ಮ್ (ಗು.) ಜಲರೂಪ ; ದ್ರವ. **Aquósity** ಅಕ್ವಾಸಿಟಿ (ನಾ.) ನೀರು ತುಂಬಿರುವುದು ; ಜಲಮಯತೆ ; ತೇವ.

Aquamaríne ಏಕ್ವಮರೀನ್ (ನಾ., ಗು.) ನೀಲಛಾಯೆಯುಳ್ಳ ಪಚ್ಚೆ. ನೀಲಛಾಯೆಯಿಂದ ಕೂಡಿದ ಹಸುರುಬಣ್ಣ : ನೀಲಹಸುರು ; ಸಮುದ್ರ ವರ್ಣ.

A'quiline ಆ್ಯಕ್ವಿಲಿ(ಲೈ)ನ್ (ಗು.) ಹದ್ದಿನ ; ಗರುಡನ ; ಹದ್ದಿನಂಥ ; ಗರುಡನಂಥ. Aquiline nose ಗರುಡ ಮೂಗು.

A'rab ಆ್ಯರಬ್ (ನಾ., ಗು.) ಅರೇಬಿಯಾ ದೇಶಸ್ಥ ; ಅರಬ್ಬಿಯ(ವನು) ; ಅರಬ್ಬೀ ಕುದುರೆ. (Street Arab ಬೀದಿಪ್ಪೋರ ; ಭಿಕಾರಿ ಮಗು ; ದಿಕ್ಕಿಲ್ಲದ ಮಗು). **Arabésque** ಆ್ಯರಬೆಸ್ಕ್ (ಗು.) ಅರೇಬಿಯಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಬಂಧವಾದ ; ಅರಬಿ. ಚಿತ್ರ ವಿಚಿತ್ರವಾದ ; ವಿಲಕ್ಷಣವಾದ. (ನಾ.) ಒಂದು ವಿಧದ ವರ್ಣಲತಾ ಚಿತ್ರ. **Arábian** ಅರೇಬಿಯನ್ (ಗು.) ಅರೇಬಿಯಕ್ಕೆ ಸಂಬಂಧಪಟ್ಟ. (ನಾ.) ಅರೇಬಿಯಾ ದೇಶಸ್ಥ. Arabian Nights ಈ ಹೆಸರಿನ ಕಲ್ಪಿತ ಕಥಾಸಂಗ್ರಹ (' ಯವನ ಯಾಮಿನೀ ವಿನೋದಗಳು '). **A'rabic** ಆ್ಯರಬಿಕ್ (ಗು.) ಅರೇಬಿಯಾಕ್ಕೆ ಅಥವಾ ಆ ದೇಶದ ಭಾಷೆಗೆ ಸಂಬಂಧಿಸಿದ. (ನಾ.) ಅರಬ್ಬೀ ಭಾಷೆ. Arabic numerals : 1, 2, 3 ಮೊ. ರೂಪದ ಅಂಕಗಳು ; (I, II, III ಮೊ. ವು ರೋಮನ್ ಅಂಕಗಳು). Gum arabic ಜಾಲಜಾತಿಯ ಮರದ ಗೋಂದು. **A'rabist** (ನಾ.) ಅರಬ್ಬೀ ಭಾಷಾ ವ್ಯಾಸಂಗಿ.

A'rable ಆ್ಯರಬಲ್ (ಗು., ನಾ.) ವ್ಯವಸಾಯ ಯೋಗ್ಯವಾದ (ಜಮಿನು) ; ಸಾಗಾಗಬಲ್ಲ (ನೆಲ)

A'rachis ಆ್ಯರಕಿಸ್ (ನಾ.) (ಸ. ವಿ.) ನೆಲಗಡಲೆಯ ಜಾತಿಯ ಸಸ್ಯ ವರ್ಗ.

Aráchnid ಅರ್ಯಾಕ್ನಿಡ್ (ನಾ.) (ಪ್ರಾ. ವಿ.) ಜೇಡರ ಹುಳು, ಚೇಳು, ಮೊ. ಪ್ರಾಣಿಗಳು ಸೇರಿದ ವರ್ಗದ ಜಂತು. **Aráchnoid** (ಗು.) (ಸ. ವಿ.) ಜೇಡನ ಬಲೆಯಲ್ಲಿರುವಂತೆ ಉದ್ದವಾದ ದಾರಗಳಿಂದ ತುಂಬಿದ. (ನಾ.) (ಪ್ರಾ. ವಿ.) ಮಿದುಳು ಮತ್ತು ಮಿದುಳುಬಳ್ಳಿಯನ್ನು ಆವರಿಸಿಕೊಂಡಿರುವ ರಸಾರ್ದ್ರವಾದ ಪೊರೆ.

Aramáic ಆ್ಯರಮೇಯಿಕ್ (ಗು., ನಾ.) ಆರಂ ಅಥವಾ ಸಿರಿಯಾದೇಶದ (ಭಾಷೆ). ಸಿರಿಯಾಕ್ ಮತ್ತು ಕ್ಯಾಲ್ಡೀ ಭಾಷೆಗಳು ಸೇರಿದ ಸೆಮಿಟಿಕ್ ಭಾಷಾವರ್ಗದ ಉತ್ತರ ಶಾಖೆ.

Aranéidan ಆ್ಯರನೀಯಿಡನ್ (ಗು., ನಾ.) ಜೇಡನ ವರ್ಗದ (ಪ್ರಾಣಿ)

A'rbalest, — list, A'rblast ಆರ್ಬಲೆಸ್ಟ್, — ಲಸ್ಟ್, ಆರ್ ಬ್ಲಾಸ್ಟ್ (ನಾ.) ಒಂದು ಜಾತಿಯ ಉಕ್ಕಿನ ಬಿಲ್ಲು.

A'rbiter ಆರ್ಬಿಟರ್ (ನಾ.) ನ್ಯಾಯ ವಿಮರ್ಶಕ ; ನ್ಯಾಯ ನಿರ್ಣಾಯಕ ; ನಿರ್ಣಯಕಾರ ; ವ್ಯಾಜ್ಯ ತೀರ್ಮಾನಕ್ಕಾಗಿ ಇಬ್ಬರು ಕಕ್ಷಿಗಳಿಂದಲೂ ನಿಯಮಿತನಾದವನು : ಮಧ್ಯಸ್ಥಗಾರ. **A'rbitrage** — ಟ್ರೆಜ್ (ನಾ.) ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಬೆಲೆಯಿರುವ ಸಂದರ್ಭದಲ್ಲಿ, ಲಾಭಕ್ಕಾಗಿ ಮಾಡುವ ಹುಂಡಿ ಮೊ. ಗಳ ವ್ಯಾಪಾರ. **A'rbitral** (ಗು.) ಮಧ್ಯಸ್ಥಿಕೆಗೆ ಸಂಬಂಧಪಟ್ಟ. **Arbítrament, — ement** (ನಾ.) ಮಧ್ಯಸ್ಥನ ಮೂಲಕ ವ್ಯಾಜ್ಯ ತೀರ್ಮಾನ ; ಮಧ್ಯಸ್ಥಗಾರನ ತೀರ್ಪು. Arbitrament of war ಯುದ್ಧದ ಮೂಲಕ ವ್ಯಾಜ್ಯ ತೀರ್ಮಾನ. **A'rbitrary** (ಗು.) ಪ್ರಮಾಣವಿಲ್ಲದೆ ಬರಿಯ ಅಭಿಪ್ರಾಯದಿಂದ ಹುಟ್ಟಿದ ; ಅವಿಚಾರಕ ; ಸ್ವೇಚ್ಛಾನುಸಾರವಾದ ; ನಿರಂಕುಶ ; ನಿಷ್ಪ್ರಮಾಣವಾದ. (ನ್ಯಾ. ಶಾ.) ವರ್ತನ ಸ್ವಾತಂತ್ರ್ಯಪೂರ್ಣ ; ಅನಿಯಂತ್ರಿತ. **A'rbitrarily** (ಕ್ರಿ. ವಿ.) ; **A'rbitrariness** (ನಾ.) ; **A'rbitrate** (ಕ್ರಿ.) ಮಧ್ಯಸ್ಥ ಮಾಡಿ ತೀರ್ಮಾನಿಸು. **Arbitrátion** (ನಾ.) ವ್ಯಾಜ್ಯವನ್ನು ಮಧ್ಯಸ್ಥನ ಮೂಲಕ ತೀರ್ಮಾನ ಮಾಡಿಕೊಳ್ಳುವುದು ; ಪಂಚಾಯಿತಿ. Arbitration of exchange ನಾಣ್ಯ ಚಲಾವಣೆಯ ವಿನಿಮಯದ ದರವನ್ನು ಮಧ್ಯಸ್ಥರ ಮೂಲಕ ಗೊತ್ತುಮಾಡುವುದು. **A'rbitrator** (ನಾ.) Arbiter ಎಂಬ ಪದಕ್ಕೆ ಈಗಿನ ನ್ಯಾಯಶಾಸ್ತ್ರ ವ್ಯವಹಾರದಲ್ಲಿಯ ಪದ. **A'rbitratorship** (ನಾ.) ; **A'rbitress** (ನಾ.) ಮಧ್ಯಸ್ಥಗಾತಿ ; ನಿರ್ಣಯಗಾತಿ.

A'rbor ಆರ್ಬರ್ (ನಾ.) ಒಂದು ಯಂತ್ರದ ಮುಖ್ಯಾಧಾರ. ಚಕ್ರ ತಿರುಗುವ ಇರಸು ಅಥವಾ ಅಚ್ಚು.

A'rbour, A'rbor ಆರ್ಬರ್ (ನಾ.) ಲತಾಗೃಹ ; ಬಳ್ಳಿಮಾಡ. Arbor Day (ಅಮೆ. ಸಂ., ಆಸ್ಟ್ರೇಲಿಯ, ಮೊ. ದೇಶಗಳಲ್ಲಿ) ವರ್ಷಂಪ್ರತಿ ಸಾರ್ವಜನಿಕವಾಗಿ ಮರಗಳನ್ನು ನೆಡಲು ಗೊತ್ತುಮಾಡಿಟ್ಟಿರುವ ದಿನ. **A'rboured** (ಗು.) ; **Arboráceous** ಆರ್ಬೊರೇಷಸ್ (ಗು.) ಮರದಂತಿರುವ ; ಮರಗಳಿಂದ ಕೂಡಿದ. **Arbóreal** ಆರ್ಬೋರಿಯಲ್ (ಗು.) ಮರದ ; ಮರದ ಸಂಬಂಧವಾದ ; ಮರದಲ್ಲಿ ವಾಸಿಸುವ. **Arbóreous** (ಗು.) ಮರಗಳು ತುಂಬಿರುವ ; (= Arboreal, Arborescent). **Arboréscent** ಆರ್ಬೊರೆಸೆಂಟ್ (ಗು.) (ನೋಟದಲ್ಲಿ, ಗಾತ್ರದಲ್ಲಿ, ಅಥವಾ ಬೆಳವಣಿಗೆಯಲ್ಲಿ) ಮರದ ಹಾಗಿರುವ. ಕಾಂಡವು ದಾರುಮಯವಾದ. (ವಾ. ಶಾ.) ಮರದಂತೆ ಕವಲೊಡೆದಿರುವ. **Arboréscently** (ಕ್ರಿ. ವಿ.) ; **Arboréscence** (ನಾ.) ; **Arborétum** ಆರ್ಬೊರೀಟಂ (ನಾ.) ಅಪೂರ್ವ ವೃಕ್ಷಗಳನ್ನು ಬೆಳೆಯುವುದಕ್ಕೂ ಅವುಗಳ ಪ್ರದರ್ಶನಕ್ಕೂ ಏರ್ಪಟ್ಟಿರುವ ಸ್ಥಳ ; ವೃಕ್ಷವಾಟಿ. **A'rboriculture** — ರಿಕಲ್ಚರ್ (ನಾ.) ಗಿಡ ಮರಗಳ ಕೃಷಿ ; ವೃಕ್ಷ ವ್ಯವಸಾಯ. **Arboricúltural** (ಗು.) ; **Arboricúlturist** (ನಾ.) ; **Arborizátion** — ರೈಜೇಷನ್ (ನಾ.) (ರ. ವಿ.) ಸ್ಫಟಿಕ ವಸ್ತುಗಳಲ್ಲಿ ವೃಕ್ಷದಂತೆ ಕಾಣುವ ದೃಶ್ಯ. (ಶ. ವಿ.) ರಕ್ತ ಲೋಮನಾಳಗಳು ರಕ್ತಾಧಿಕ್ಯದಿಂದ ಊದಿ ಅವುಗಳ ಪ್ರಸಾರಣವು ವ್ಯಕ್ತವಾಗಿ ವೃಕ್ಷದಂತೆ ಕಾಣುವ ದೃಶ್ಯ. **A'rbor vítae** ಆರ್ಬರ್ ವೈಟೀ (ನಾ.) ಹಲವು ನಿತ್ಯಹಸುರು ಗಿಡಗಳ ಹೆಸರು. **A'rbutus** ಆರ್ಬ್ಯೂಟಸ್ (ನಾ.) ನಿತ್ಯಹಸುರು ಗಿಡಗಳ ಒಂದು ಜಾತಿ.

Arc ಆರ್ಕ್ (ನಾ.) ವೃತ್ತಪರಿಧಿಯ ಅಥವಾ ಇತರ ವಕ್ರರೇಖೆಯ ಭಾಗ ; ಚಾಪ. [(ಖ. ವಿ.) Diurnal arc ಒಂದು ಆಕಾಶಸ್ಥ ವಸ್ತು ಉದಯದಿಂದ ಅಸ್ತದ ವರೆಗೆ ಕ್ಷಿತಿಜದ ಮೇಲ್ಭಾಗದಲ್ಲಿ ಸಂಚರಿಸುವಂತೆ ಕಾಣುವ ವೃತ್ತಖಂಡ : ಅಹಶ್ಚಾಪ. Nocturnal arc ಕ್ಷಿತಿಜದ ತಳ ಭಾಗದಲ್ಲಿ ಸಂಚರಿಸುವಂತೆ ಕಾಣುವ ವೃತ್ತಖಂಡ ; ನಿಶಾ ಚಾಪ.] ಎರಡು ಸಮಾನಾಂತರ ವಕ್ರರೇಖೆಗಳ ಮಧ್ಯೇ ಇರುವ ಪ್ರದೇಶ. (ವಿದ್ಯುತ್) ಎರಡು ಪ್ರತ್ಯೇಕವಾದ ಇಂಗಾಲದಂಡ ಧ್ರುವಗಳ ಮಧ್ಯೆ ಹಬ್ಬಿರುವ ಜ್ಯೋತಿಸ್ಸ್ರೋತು : ವಿದ್ಯುಚ್ಚಾಪ. Arc lamp, Arc light ವಿದ್ಯುಚ್ಚಾಪ ದೀಪ. **Arcáde** (ನಾ.) ಕಮಾನಿನ ಮೇಲ್ಛಾವಣಿಯಿರುವ ದಾರಿ : ಕಮಾನು ದಾರಿ. ಮೇಲ್ಮುಚ್ಚಿರುವ ಹಾದಿ. (ವಾ. ಶಾ.) ಕಮಾನುಸಾಲು. **Arcáded** (ಗು.)

Arcádian ಆರ್ಕೇಡಿಯನ್ (ಗು., ನಾ.) ಆದರ್ಶವಾದ ಹಳ್ಳಿಯ(ವನು) ; **A'rcady** ಆರ್ಕಡಿ, — **ádia** ಆರ್ಕೇಡಿಯ (ನಾ.) (ಕಾವ್ಯ) ಸ್ವರ್ಗಪ್ರಾಯವಾದ ಹಳ್ಳಿ.

Arcánum ಆರ್ಕೇನಂ (ನಾ. ; ಬ. ವ. — na) (ಸಾ., ಬ. ವ. ದಲ್ಲಿ) ರಹಸ್ಯ ; ಗುಟ್ಟು ; ಮರ್ಮ.

Arch ಆರ್ಚ್ (ನಾ.) ಕಮಾನು ; ಬಿಲ್ಲು ; ಬಿಲ್ಲುಬಾಗು ; ವೃತ್ತಖಂಡ ; ಧನುಸ್ಸು ; ಚಾಪ. **A'rchway** (ನಾ.) ಕಮಾನು ಹಾದಿ. **A'rchwise** (ಕ್ರಿ. ವಿ.) ಕಮಾನಿನಂತೆ ; ಬಿಲ್ಲಿನಾಕಾರವಾಗಿ. **Arch** (ಕ್ರಿ.) ಕಮಾನು ಕಟ್ಟು ; ಕಮಾನಿಡು ; ಕಮಾನು ಬಗ್ಗಿಸು ; ಕಮಾನಾಗು. (ಗು.) ಮುಖ್ಯ ; ಪ್ರಧಾನ ; ಅಗ್ರ. ಮುಗ್ಧ ; ಚತುರ ; ಕುಶಲ. ತಂತ್ರಪರ ; ಕುಚೋದ್ಯದ ; ವ್ಯಂಗ್ಯ ; ಕೊಂಕು. **A'rchly** (ಕ್ರಿ. ವಿ.) ; **A'rchness** (ನಾ.)

Archaéan ಆರ್ಕೀಯನ್ (ಗು.) (ಭೂ. ವಿ.) ಪ್ರಥಮ ಯುಗದ.

Archaeólogy ಆರ್ಕಿಯಾಲೊಜಿ (ನಾ.) ಪ್ರಾಚೀನ ಶೋಧನ (ಶಾಸ್ತ್ರ). **Archaeólogic(al)** — ಯೊಲಾ — (ಗು.) ; **Archaeológically** (ಕ್ರಿ. ವಿ.) ; **Archaeólogist** — ಯಾಲೊ — (ನಾ.) ಪ್ರಾಚೀನ ಶೋಧಕ.

Archaeópteryx ಆರ್ಕಿಯಾಪ್ಟರಿಕ್ಸ್ (ನಾ.) (ಹಳೆಯುಳಿಕೆಗಳಲ್ಲಿ ಕಾಣುವ) ಉದ್ದವಾದ ಬೆನ್ನೆಲುಬಿನ ಬಾಲವೂ ಹಲ್ಲುಗಳೂ ಉಳ್ಳ ಅತ್ಯಂತ ಪೂರ್ವಕಾಲದ ಒಂದು ಪಕ್ಷಿ. (ಪಕ್ಷಿಗಳಿಗೂ ಸರೀಸೃಪಗಳಿಗೂ ಸಂಬಂಧ ವಿದೆಯೆಂದು ತೋರಿಸಲಾಗುವ ಒಂದು ಆಧಾರ)

Archáic ಆರ್ಕೇಯಿಕ್ (ಗು.) ಪ್ರಾಚೀನ ; ಹಳೆಯ ; ಬಹಳ ಪೂರ್ವದ. (ಭಾಷಾ ವಿಷಯದಲ್ಲಿ) ವಿಶೇಷ ವಿಷಯಗಳಿಗೆ ವಿನಾ ಈಗ ಬಳಕೆಯಲ್ಲಿಲ್ಲದ ; ಆರ್ಷೇಯ ; ರೂಢಿಚ್ಯುತ. **Archáically** (ಕ್ರಿ. ವಿ.) ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

A'rchaism —ಸ್ಟ್‌ಮ್ (ನಾ.) ಪುರಾತನದ ಅಥವಾ ರೂಢಿಯಲ್ಲಿಲ್ಲದುದರ ಬಳಕೆ ಅಥವಾ ಅನುಕರಣ (ಮು., ಭಾಷೆಯಲ್ಲಿಯೂ ಕಲೆಯಲ್ಲಿಯೂ); ಪ್ರಾಚೀನ ಪ್ರಯೋಗ; ಆರ್ಷೇಯ. **A'rchaist** (ನಾ.); **Archaístic** (ಗು.); **A'rchaize** —ಐಸ್ (ಕ್ರಿ.) ಅಪ್ರಚಲಿತವಾದುದನ್ನು ಅನುಕರಿಸು, ನಟಿಸು. ಪ್ರಾಚೀನ ರೂಪವನ್ನು ಕೊಡು.

A'rchangel ಆರ್ಕೇಂಜೆಲ್ (ನಾ.) ಪ್ರಧಾನ ದೇವದೂತ. (ರೂಪ. ಸಹ). (ಸ. ವಿ.) ತುರಚೆಯ ಜಾತಿಯ ಗಿಡ. (ಪ್ರಾ. ವಿ.) ಒಂದು ವಿಧದ ಪಾರಿವಾಳದ ಹಕ್ಕಿ.

A'rchbíshop ಆರ್ಚ್‌ಬಿಷಪ್ (ನಾ.) (ಒಂದು ಪಂಗಡದ) ಕ್ರೈಸ್ತರ ಪ್ರಧಾನ ಮಠಾಧಿಪತಿ. **Archbíshopric** (ನಾ.) ಈ ಪ್ರಧಾನ ಮಠಾಧಿಪತಿಯ ಸಂಸ್ಥಾನ, ಅಧಿಕಾರ, ಪದವಿ; ಅಗ್ರಮಠಾಧಿಪತ್ಯ.

Archdeácon ಆರ್ಚ್‌ಡೀಕನ್ (ನಾ.) ಬಿಷಪ್ಪಿನ ಕೆಳಗಣ ಅಧಿಕಾರಿ. **Archdeáconship** (ನಾ.); **Archdeáconry** (ನಾ.) ಈತನ ಅಧಿಕಾರ, ಪದವಿ, ವಾಸಸ್ಥಳ. **Archidiáconal** ಆರ್ಕಿಡೈಆ್ಯಕೊನಲ್ (ಗು.) ಆರ್ಚ್‌ಡೀಕನ್ನಿಗೆ ಸಂಬಂಧಪಟ್ಟ.

Archdíocese ಆರ್ಚ್‌ಡೈಒಸೀಸ್ (ನಾ.) ಆರ್ಚ್‌ಬಿಷಪ್ಪಿನ ಆಧಿಪತ್ಯ.

A'rchduke ಆರ್ಚ್‌ಡ್ಯೂಕ್ (ನಾ.) ಆಸ್ಟ್ರಿಯಾ ಚಕ್ರವರ್ತಿಯ ಮಗ. **Archdúcal** (ಗು.); **A'rchduchy** —ಡಚಿ (ನಾ.) ಆರ್ಚ್‌ಡ್ಯೂಕಿನ ಅಧಿಕಾರಕ್ಕೆ ಒಳಪಟ್ಟ ದೇಶ. **A'rchduchess** (ನಾ.) ಆರ್ಚ್‌ಡ್ಯೂಕಿನ ಹೆಂಡತಿ; ಆಸ್ಟ್ರಿಯಾ ಚಕ್ರವರ್ತಿಯ ಮಗಳು.

A'rch-énemy ಆರ್ಚ್ ಎನಿಮಿ (ನಾ.) ಮುಖ್ಯ ಶತ್ರು; ಪರಮ ಶತ್ರು; ಸೈತಾನ.

A'rcher ಆರ್ಚರ್ (ನಾ.) ಬಿಲ್ಲಾಳು; ಬಿಲ್ಲುಗಾರ. (ಖ. ವಿ.) ಧನುಸ್ಸು (ರಾಶಿ). **A'rchery** (ನಾ.) ಬಿಲ್ಲುವಿದ್ಯೆ; ಧನುರ್ವಿದ್ಯೆ; ಧನುರ್ವೇದ.

A'rchetype ಆರ್ಕಿಟೈಪ್ (ನಾ.) ಮೊದಲನ ಮಾದರಿ; ಮೂಲ ಪ್ರತಿ; ಅಸಲು ಪ್ರತಿ. **A'rchetypal** (ಗು.); **A'rchetypally** (ಕ್ರಿ. ವಿ.)

Arch-fiénd ಆರ್ಚ್ ಫೀನ್ಡ್ (ನಾ.) ಅಗ್ರ ಪಿಶಾಚಿ; ಸೈತಾನ.

A'rchie, —ibald ಆರ್ಕಿ, —ಬಾರ್ಡ್ (ನಾ.) (ಅಸಂ.) ವ್ಯೋಮಯಾನದ ಮೇಲೆ ಪ್ರಯೋಗಿಸುವ ಫಿರಂಗಿ.

Archiepíscopal ಆರ್ಕಿಯಿಪಿಸ್ಕೊಪಲ್ (ಗು.) ಆರ್ಚ್‌ಬಿಷಪ್ಪಿಗೆ ಸಂಬಂಧಪಟ್ಟ.

A'rchil ಆರ್ಚ(ಕಿ)ಲ್ (ಗು.) ಅನೇಕ ತೆರದ ಕಲ್ಲುಹೂವುಗಳು. ಇವುಗಳಿಂದ ತೆಗೆದ ಊದಾಬಣ್ಣ.

Archimédean ಆರ್ಕಿಮಿಡಿಯನ್, **Archimedéan** —ಮಿಡೀಯನ್ (ಗು.) (ಗ್ರೀಸ್ ದೇಶದ ಗಣಿತವಿಶಾರದನೂ ಭೌತವೈಜ್ಞಾನಿಕನೂ ಆದ) ಆರ್ಕಿಮಿಡೀಸಿನ. Archimedean screw ಒಂದು ಸ್ತಂಭಾಕೃತಿಯ (ಸಿಲಿಂಡರಿನ) ಸುತ್ತಲೂ ಮರಸುತ್ತಿನಂತೆ ಸುತ್ತಿರುವ ಕೊಳವೆಯ ಮೂಲಕ ನೀರೆತ್ತುವ ಯಂತ್ರ.

Archipélago ಆರ್ಕಿಪೆಲಗೋ (ನಾ.) ಗ್ರೀಸಿಗೂ ಏಷ್ಯಾಮೈನರಿಗೂ ಮಧ್ಯೇ ಇರುವ ಈಜಿಯನ್ ಸಮುದ್ರ. ಅನೇಕ ದ್ವೀಪಗಳುಳ್ಳ ಸಮುದ್ರ. ದ್ವೀಪಸ್ತೋಮ.

A'rchitect ಆರ್ಕಿಟೆಕ್ಟ್ (ನಾ.) ಕಟ್ಟಡಗಳ ನಕ್ಷೆಯನ್ನು ತಯಾರು ಮಾಡಿ ಕಟ್ಟಡಗಳನ್ನು ಕಟ್ಟಿಸುವ ಕಲಾಪಂಡಿತ: ವಾಸ್ತುಶಿಲ್ಪಿ; ಶಿಲ್ಪಶಾಸ್ತ್ರಜ್ಞ. ಸೃಷ್ಟಿಕರ್ತ. (ರೂಪ.) ಕರ್ತ (Architect of his own fortunes ತನ್ನ ಭಾಗ್ಯಕ್ಕೆ ತಾನೇ ಕರ್ತ). **A'rchitective** (ಗು.); **Architectónic** —ಟಾನಿಕ್ (ಗು.) ವಾಸ್ತುಶಿಲ್ಪದ; ಶಿಲ್ಪಶಾಸ್ತ್ರಜ್ಞರ. ರಚನಾತ್ಮಕ; ನಿಯಂತ್ರಕ. ವಿಷಯ ಕ್ರೋಢೀಕರಣಕ್ಕೆ ಸಂಬಂಧಪಟ್ಟ. **Architectónics** (ನಾ.) ರಚನಾ ಚಾತುರ್ಯ. **Architectónical** (ಗು.); **A'rchitecture** ಆರ್ಕಿಟೆಕ್ಚರ್ (ನಾ.) ಶಿಲ್ಪವಿದ್ಯೆ; ವಾಸ್ತುಶಿಲ್ಪ; ವಾಸ್ತುಶಾಸ್ತ್ರ. ಕಟ್ಟಡ; ಕಟ್ಟಡದ ರೀತಿ, ಶೈಲಿ; ರಚನೆ. **Architéctural** (ಗು.); **Architécturally** (ಕ್ರಿ. ವಿ.)

A'rchitrave ಆರ್ಕಿಟ್ರೇವ್ (ನಾ.) ಕಂಬದ ಬೋದಿಗೆಯ ಮೇಲೆ ಕುಳಿತಿರುವ ಸರ, ತೊಲೆ. ಬಾಗಿಲಿನ ಅಥವಾ ಕಿಟಕಿಯ ಸುತ್ತಲಂಕಾರ. ಕಟ್ಟಡದ ಕಮಾನಿನ ಸುತ್ತಲೂ ಹೊರಗಡೆಯಲ್ಲಿ ಮಾಡಿರುವ ಚಿತ್ರಗೆಲಸ.

A'rchive ಆರ್ಕೈ(ಕಿ)ವ್ (ನಾ.) (ಸಾ., ಬ. ವ. ದಲ್ಲಿ) ಸಾರ್ವಜನಿಕವಾದ ಕಾಗದಪತ್ರಗಳನ್ನಿಟ್ಟಿರುವ ಸ್ಥಳ: ಪತ್ರಾಗಾರ. ಹೀಗಿಟ್ಟಿರುವ ಕಾಗದಪತ್ರಗಳು. **A'rchivist** (ನಾ.) —ಪಾಲಕ.

A'rchivolt ಆರ್ಕಿವೋಲ್ಟ್ (ನಾ.) ಕಟ್ಟಡದ ಕಮಾನಿನ ಕೆಳಬಾಗು; ಇದಕ್ಕೆ ಮಾಡಿರುವ ಚಿತ್ರಗೆಲಸ.

A'rchon ಆರ್ಕನ್ (ನಾ.) ಅಥೆನ್ಸಿನ ಮುಖ್ಯ ದಂಡನಾಯಕ. ಪ್ರಭು; ಅಧಿಪತಿ. **A'rchonship** (ನಾ.)

A'rciform ಆರ್ಸಿಫಾರ್ಮ್ (ಗು.) ಬಿಲ್ಲಿನಂತೆ ಬಗ್ಗಿರುವ; ಧನುರಾಕಾರದ.

A'rctic ಆರ್ಕ್‌ಟಿಕ್ (ಗು.) ಉತ್ತರ ಧ್ರುವದ; ಉತ್ತರ ಧ್ರುವ ಪ್ರದೇಶದ. ಉತ್ತರದ. (ರೂಪ.) ಅತ್ಯಂತ ಶೀತದ. Arctic circle (of the Earth) ಉತ್ತರ ಸಮಶೀತೋಷ್ಣ ವಲಯಕ್ಕೂ ಉತ್ತರ ಶೀತವಲಯಕ್ಕೂ ಮಧ್ಯೇ ಇರುವ ೬೬° ೩೨′ ನ ಉತ್ತರಧ್ರುವ ವೃತ್ತ.

Arctúrus ಆರ್ಕ್‌ಟ್ಯೂರಸ್ (ನಾ.) ಸ್ವಾತೀಪುಂಜದಲ್ಲಿಯ ಅತ್ಯಂತ ಪ್ರಕಾಶಮಾನವಾದ ನಕ್ಷತ್ರ; ಸ್ವಾತಿ.

A'rcuate(d) ಆರ್ಕ್ಯುಏಟ್, —ಏಟೆಡ್ (ಗು.) ಬಿಲ್ಲಿನಂತೆ ಬಗ್ಗಿದ; ಕಮಾನಿನ ಆಕಾರದ. **Arcuátion** (ನಾ.) ಕಮಾನಿನಂತೆ ಬಗ್ಗಿರುವುದು.

A'rdent ಆರ್ಡೆಂಟ್ (ಗು.) ಉರಿಯುವ; ಸುಡುವ; ದಹಿಸುವ; ಕೆಂಪಗೆ ಕಾಯ್ದ; ಉಜ್ವಲ. (Ardent spirits ತೀಕ್ಷ್ಣ ಮದ್ಯ). (ರೂಪ.) ಉತ್ಸಾಹಪೂರಿತ; ಉತ್ಸುಕ; ಉದ್ರಿಕ್ತ; ಚುರುಕಾದ; ಹುರುಪುಳ್ಳ. **A'rdency** (ನಾ.); **A'rdently** (ಕ್ರಿ. ವಿ.); **A'rdour, A'rdor** ಆರ್ಡರ್ (ನಾ.) ಉಗ್ರ ತಾಪ; ಉಜ್ವಲತೆ; ತೀಕ್ಷ್ಣತೆ. ಉತ್ಸಾಹ; ಔತ್ಸುಕ್ಯ; ಹುರುಪು; ಕಟ್ಟಕ್ಕರೆ.

A'rduous ಆರ್ಡ್ಯುಅಸ್ (ಗು.) ಎತ್ತರವಾದ; ಕಡಿದಾದ; ದುರ್ಗಮ; ದುಷ್ಕರ; ಕಷ್ಟಸಾಧ್ಯ; ಪ್ರಯಾಸಕರ. **A'rduously** (ಕ್ರಿ. ವಿ.); **A'rduousness** (ನಾ.)

Are[1] ಆರ್ (ನಾ.) ಫ್ರೆಂಚರ ಚದರಳತೆಯ ಮಾನ; ಹತ್ತು ಮೀಟರಿನ ಪಾರ್ಶ್ವವುಳ್ಳ ಚತುರಶ್ರ ಅಥವಾ ಚೌಕ (=೧೧೯.೬ ಚದರ ಗಜ)

Are[2]. **Be** ನೋಡಿ.

A'rea ಏರಿಯ (ನಾ.) ಮೈದಾನ; ಕ್ಷೇತ್ರ; ಹರವು; ನಿಟ್ಟು; ಸಮಪ್ರದೇಶ. ಅಂಗಳ; ಪ್ರದೇಶ. ಚದರಳತೆ; ಕ್ಷೇತ್ರಫಲ; ವಿಸ್ತೀರ್ಣ. (ರೂಪ.) ಅವಕಾಶ; ವಿಸ್ತಾರ; ವ್ಯಾಪನೆ.

A'reca ಆ್ಯರಿಕ (ನಾ.) ಅಡಕೆಯ ಮರ; ಅಡಕೆ. Areca-nut ಅಡಕೆ.

Aréna ಅರೀನ (ನಾ.) ಮಲ್ಲರಂಗ; ಕಳ; ಅಖಾಡ. (ರೂಪ.) ಯುದ್ಧರಂಗ; ರಣರಂಗ. ಕಾರ್ಯಕ್ಷೇತ್ರ.

Arenáceous ಆ್ಯರಿನೇಷಸ್ (ಗು.) ಮರಳಿನಂತಿರುವ; ಮರಳಿನ. ಮರಳಿನ ಕಣಗಳುಳ್ಳ. (ರೂಪ. ಸಹ). **Arenátion** (ನಾ.) (ವೈ. ಶಾ.) ಕಾಯಿಸಿದ ಮರಳಿನಿಂದ ಮೈಗೆ ಶಾಖ ಕೊಡುವುದು; ಮರಳು ಶಾಖ. **Arenóse** (ಗು.) ಮರಳಿನ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Aréola ಅರೀಯೊಲ (ನಾ. ; ಬ. ವ. — ae) ಬಹಳ ಸಣ್ಣ ಪ್ರದೇಶ. ಎಲೆಯ ನರಗಳ ನಡುವಣ, ಅಥವಾ ಒಂದು ಕೀಟದ ರೆಕ್ಕೆಯ ಮೇಲಿನ ನರಗಳ ನಡುವಣ ಬಹಳ ಸಣ್ಣ ಪ್ರದೇಶ. ದೇಹದ ಅಂಗಾಂಶಗಳಲ್ಲಿಯ ಅಂತರವಕಾಶ. ದುಂಡು ಕಲೆ, ಮಚ್ಚೆ ; ಮೊಲೆ ತೊಟ್ಟಿನ ಸುತ್ತಲಿರುವ ಕಲೆ. (ಜೀ. ವಿ.) ಸಸ್ಯ ಜೀವಾಣುಗಳಲ್ಲಿಯ ನಾಭಿ (Nucleus). **Aréolar** (ಗು.) ; **Aréolate** (ಗು.) ; **Areolátion** ಏರಿಯೊಲೇಷನ್ (ನಾ.)

Areópagus ಆ್ಯರಿಯಾಪಗಸ್ (ನಾ.) (ಗ್ರೀಸ್‌ದೇಶದ ಮುಖ್ಯಪಟ್ಟಣವಾದ) ಆಥೆನ್ಸಿನಲ್ಲಿ ಪ್ರಧಾನ ನ್ಯಾಯಸ್ಥಾನ ಕೂಡುತ್ತಿದ್ದ ಒಂದು ಗುಡ್ಡ. ಆ ನ್ಯಾಯಸ್ಥಾನ. ಶ್ರೇಷ್ಠ ನ್ಯಾಯಸ್ಥಾನ. **Areópagite** — ಗೈಟ್ (ನಾ.) 'ಆ್ಯರಿಯಾಪಗಸ್' ನ್ಯಾಯಸ್ಥಾನದ ಸದಸ್ಯ. **Areopagític,** — ಜಿ(ಗಿ)ಟಿಕ್ (ಗು.)

Aréte ಅರೇಟ್ (ನಾ.) ಬೆಟ್ಟದ ಕಡಿದಾದ ಏಣು, ಅಂಚು : ಪರ್ವತ ಕಟಕ.

A'rgala ಆರ್ಗಲ (ನಾ.) ಇಂಡಿಯಾದೇಶದ ಬಕಜಾತಿಯ ಒಂದು ಬಹು ದೊಡ್ಡ ಪಕ್ಷಿ.

A'rgali ಆರ್ಗಲಿ (ನಾ.) ಏಷ್ಯಾ ಖಂಡದ ಒಂದು ಜಾತಿಯ ಕಾಡುಕುರಿ.

A'rgand ಆರ್‌ಗ್ಯಾಂಡ್ (ನಾ.) ಉರಿಯ ಹೊರಗೂ ಒಳಗೂ ಗಾಳಿ ಸಂಚರಿಸುವಂತೆ ದುಂಡಗೆ ಬಗ್ಗಿಸಿರುವ ಬತ್ತಿಯುಳ್ಳ ಒಂದು ತೆರದ ದೀಪ ; ಇದೇ ತೆರದ ಅನಿಲದೀಪ. (ಇದನ್ನು ಮೊದಲು ನಿರ್ಮಿಸಿದವನ ಹೆಸರಿನಿಂದ)

A'rgent ಆರ್ಜೆಂಟ್ (ನಾ., ಗು.) ಬೆಳ್ಳಿ ; ರಜತ. ಬಿರುದಿನ ಕವಚದ ಮೇಲಿನ ಚಿತ್ರದ ಬೆಳ್ಳಿ ಅಥವಾ ಬಿಳಿಯ ಬಣ್ಣ. **Argentíferous** (ಗು.) ಬೆಳ್ಳಿಯ ಲೋಹವನ್ನೊಳಕೊಂಡಿರುವ **A'rgentine**—ಟೈನ್ (ಗು.) ಬೆಳ್ಳಿಯ ; ಬೆಳ್ಳಿಯಂತಿರುವ. (ನಾ.) ಕೃತಕ ರಜತ. ಕೃತಕ ವಾದ ಮುತ್ತನ್ನು ಮಾಡುವುದಕ್ಕೆ ಉಪಯೋಗಿಸುವ ಮೀನಿನ ಸಿಪ್ಪೆಯ ಮೇಲಿನ ಪೊರೆ. (ಪ್ರಾ. ವಿ.) ಒಂದು ಸಣ್ಣ ಮೀನಜಾತಿ. (ಖನಿಜ) ಬೆಳ್ಳಗಿರುವ ಸ್ಲೇಟುಜಾತಿಯ ಸುಣ್ಣಕಲ್ಲು.

A'rgil ಆರ್ಜಿಲ್ (ನಾ.) (ಕುಂಬಾರನ) ಜೇಡಿಮಣ್ಣು. **Argilláceous** —ಲೇಷಸ್ (ಗು.) ಜೇಡಿಮಣ್ಣಿನ ಸ್ವಭಾವದ; ಹೆಚ್ಚಾಗಿ ಜೇಡಿಮಣ್ಣಿನಿಂದ ಕೂಡಿದ ; ಜೇಡಾದ ; ಜೇಡು.

A'rgle-bargle ಆರ್‌ಗ್‌ಲ್ ಬಾರ್‌ಗ್‌ಲ್ (ನಾ., ಕ್ರಿ. ಅಕ.) (ಹಾಸ್ಯ ಪ್ರಯೋಗ) : ವಾಗ್ವಾದ (ಮಾಡು) ; ವಾಕ್ಕಲಹ (ಮಾಡು)

A'rgol[1] ಆರ್ಗಲ್ (ನಾ.) ಪೀಪಾಯಿಯಲ್ಲಿ ತುಂಬಿದ ದ್ರಾಕ್ಷಾರಸ ಹುಳಿಯುತ್ತಿರುವಾಗ ಪೀಪಾಯಿಯ ಒಳಮೈಗೆ ಹತ್ತಿಕೊಳ್ಳುವ ಆ ರಸದ ಒಂಡು.

A'rgol[2], — al ಆರ್ಗಲ್ (ನಾ.) ಬೆರಣಿ ; (ತಾರ್ತರಿ ದೇಶದ ಮಾತು)

A'rgon ಆರ್ಗಾನ್ (ನಾ.) (ರ. ವಿ.) ವಾಯುಮಂಡಲದಲ್ಲಿರುವ ಒಂದು ಜಡಾನಿಲ : 'ಆರ್ಗಾನ್.'

A'rgonaut ಆರ್ಗೊನಾಟ್ (ನಾ.) (ಚಿನ್ನದ ತುಪ್ಪಟಕ್ಕಾಗಿ ಜೇಸನ್ ಎಂಬ ಗ್ರೀಕ್‌ವೀರನೊಡನೆ 'ಆರ್ಗೊ' ಎಂಬ ಹಡಗಿನಲ್ಲಿ ಪ್ರಯಾಣಮಾಡಿದ) ಗ್ರೀಕ್ ಪೌರಾಣಿಕ ವೀರರಲ್ಲೊಬ್ಬನು. (ಪ್ರಾ. ವಿ.) ಚಿಪ್ಪಿನ ಪ್ರಾಣಿಗಳ ಒಂದು ಜಾತಿ. **Argonaútic** (ಗು.)

A'rgosy ಆರ್ಗೊಸಿ (ನಾ.) (ಮು., ರಗೂಸ ಮತ್ತು ವೆನಿಸ್ ಪಟ್ಟಣಗಳ) ಅತ್ಯಂತ ದೊಡ್ಡ ವ್ಯಾಪಾರದ ಹಡಗು. (ಕಾವ್ಯ) ಹಡಗು.

A'rgot ಆರ್ಗೊ (ನಾ.) ಅರ್ಥವಾಗದ ಭಾಷೆ ; (ಮು., ಕಳ್ಳರ) ಸಂಕೇತ ಭಾಷೆ.

A'rgue ಆರ್ಗ್ಯೂ (ಕ್ರಿ.) ವಾದಿಸಿ ತೋರಿಸು ; ವ್ಯಕ್ತಗೊಳಿಸು (It argues him a rogue ಅವನು ಠಕ್ಕನೆಂದು ವ್ಯಕ್ತವಾಗುತ್ತದೆ). ಸಕಾರಣವಾಗಿ ಸಾಧಿಸು ; ಸಮರ್ಥಿಸು ; ಸಿದ್ಧಿಸು ; ತರ್ಕಿಸು ; ವಾದಿಸು ; ಚರ್ಚಿಸು. Argue it away ವಾದದಲ್ಲೇ ತೇಲಿಸಿಬಿಡು. Argue a person with reason ವಾದದಿಂದ ಒಬ್ಬನನ್ನು ನ್ಯಾಯಕ್ಕೆ ಒಪ್ಪಿಸು.

A'rguable (ಗು.) ವಾದಿಸಲಾಗುವ ; ಚರ್ಚಾಸ್ಪದ ; ವಾದ ಯೋಗ್ಯ.

A'rgument ಆರ್ಗ್ಯುಮೆಂಟ್ (ನಾ.) ಪ್ರಮಾಣ. (ಯಾವುದಾದರೂ ಒಂದು ಪ್ರಮೇಯದ ಅಥವಾ ಮಾರ್ಗದ ಪಕ್ಷವಾಗಿ, ಅಥವಾ ಅದಕ್ಕೆ ವ್ಯತಿರಿಕ್ತವಾಗಿ) ಕೊಟ್ಟ ಕಾರಣ ; ಯುಕ್ತಿ. ತರ್ಕಮಾಡುವ ವಿಧಾನ. ವಾದ ; ತರ್ಕ ; ಚರ್ಚೆ. (ಒಂದು ಗ್ರಂಥದ) ಸಾರಾಂಶ. Argumentum ad crumenam ಎದುರಾಳಿಯ ದುರಾಶೆಯನ್ನುಪಯೋಗಿಸಿಕೊಂಡು ಮಾಡುವ ತರ್ಕ ಅಥವಾ ವಾದ. Argumentum ad hominem ಎದುರಾಳಿಯ ಗುಣವನ್ನಾಗಲಿ ಸ್ಥಿತಿಯನ್ನಾಗಲಿ ಉಪಯೋಗಿಸಿಕೊಂಡು ಅವನನ್ನು ಸಿಕ್ಕಿಸುವ ತರ್ಕ ಅಥವಾ ವಾದ. Argumentum ad ignorantium ಎದುರಾಳಿಯ ಅಜ್ಞತೆಯನ್ನುಪಯೋಗಿಸಿಕೊಂಡು ಮಾಡುವ ತರ್ಕ ಅಥವಾ ವಾದ. Argumentum baculinum ಮುಷ್ಟಿವಾದ. **Argumentátion** (ನಾ.) ನಿಯಮಾನುಸಾರವಾಗಿ ಮಾಡುವ ತರ್ಕ ; ವಾದಸರಣಿ ; ವಾದಾನುವಾದ. **Arguméntative** —ಟಟಿವ್ (ಗು.) ತಾರ್ಕಿಕ ಅಥವಾ ವಾದರೀತಿಯ ; ವಾದಶೀಲ ; ವಾದಿಸುವ ಶಕ್ತಿಯುಳ್ಳ. **Arguméntatively** (ಕ್ರಿ. ವಿ.) ; **Arguméntativeness** (ನಾ.)

A'rgus ಆರ್ಗಸ್ (ನಾ.) (ಗ್ರೀಕ್ ಪುರಾಣದಲ್ಲಿ ಹೇಳಿರುವ) ಶತಾಕ್ಷ ; ಕಣ್ಣಲ್ಲಿ ಕಣ್ಣಿಟ್ಟು ಕಾಯುವವನು. (Argus-eyed ಮೈಯಲ್ಲಿ ಕಣ್ಣುಳ್ಳ ; ಬಹಳ ಜಾಗರೂಕನಾದ). ಏಷ್ಯಾಖಂಡದ ಒಂದು ಪಕ್ಷಿಜಾತಿ. ಒಂದು ಜಾತಿಯ ಪತಂಗದ ಹುಳು ಅಥವಾ ಚಿಟ್ಟೆ.

Argúte ಆರ್‌ಗ್ಯೂಟ್ (ಗು.) ಚುರುಕಾದ ; ತೀಕ್ಷ್ಣಬುದ್ಧಿಯುಳ್ಳ ; ಚಟುವಟಿಕೆಯಾದ. (ಶಬ್ದ ವಿಷಯದಲ್ಲಿ) ಕರ್ಕಶ, ಪರುಷ, ಕೀಚು. **Argútely** (ಕ್ರಿ. ವಿ.) ; **Argúteness** (ನಾ.)

Argyr —, **Argyro** —, ಆರ್ಜಿರ್ —, ಆರ್ಜಿರೊ — (ಸಮಾಸ ಪದಗಳಲ್ಲಿ ಪೂರ್ವಪದ). **Argýria** (ನಾ.) ಬೆಳ್ಳಿಸೇರಿರುವ ಔಷಧವನ್ನು ಬಹು ಕಾಲ ಸೇವಿಸುವುದರಿಂದ ಚರ್ಮವು ಸಾರ್ವಕಾಲಿಕವಾಗಿ ಕಪ್ಪಾಗಿರುಗಿರುವುದು : ರಜತವಿಷ ವಿಕಾರ. **Argyránthous** — ರ್ಯಾನ್ಥಸ್ (ಗು.) ಬೆಳ್ಳಿಯಂಥ ಬಿಳಿಯ ಹೂವಿರುವ : ರಜತ ಪುಷ್ಪಿ. **Argyrophýllus** — ಫಿಲಸ್ (ಗು.) ಬೆಳ್ಳಿಯ ಬಣ್ಣದ ಎಲೆಗಳುಳ್ಳ : ರಜತ ಪರ್ಣಿ.

A'ria (It.) ಆರಿಯ (ನಾ.) (ಸಂ.) ರಾಗ. **A'riose** (ಗು.) ಕಿವಿಗಿಂಪಾದ ; ಹಾಡಿನಂತಿರುವ.

A'rid ಆ್ಯರಿಡ್ (ಗು.) ಒಣಗಿದ ; ಬತ್ತಿಹೋದ ; ಬೆಂದುಹೋದ ; ನೀರಸ ; ನಿರಾರ್ದ್ರ ; ಶುಷ್ಕ (ರೂಪ. ಸಹ). (ಜಮೀನು) ಬಂಜರು ; ಬೀಳು ; ಬತ್ತಲು; ಒಣಕಲು; ಸಸ್ಯಶೂನ್ಯ ; ಬೆಂಗಾಡು. **A'ridly** (ಕ್ರಿ. ವಿ.) ; **A'ridness** (ನಾ.) ; **Arídity** ಅರಿಡಿಟಿ (ನಾ.) ಬತ್ತಿಹೋಗಿರುವಿಕೆ ; ಶುಷ್ಕಸ್ಥಿತಿ. (ವ್ಯೆ. ಶಾ.) ದೇಹ ಶುಷ್ಕವಾಗಿರುವುದು.

A'riel ಏರಿಎಲ್ (ನಾ.) (ಪಶ್ಚಿಮ ಏಷ್ಯದಲ್ಲಿಯೂ ಆಫ್ರಿಕದಲ್ಲಿಯೂ ಇರುವ) ಒಂದು ಜಿಂಕೆಯ ಜಾತಿ.

A'ries ಏರಿಈಸ್ (ನಾ.) ಟಗರು. (ಖ. ವಿ.) ಮೇಷ (ರಾಶಿ)

Aríght ಅರೈಟ್ (ಕ್ರಿ. ವಿ.) ಸರಿಯಾಗಿ ; ತಕ್ಕಂತೆ ; ಯುಕ್ತವಾಗಿ.

Aríse ಅರೈಸ್ (ಕ್ರಿ. ಅಕ. ; ಭೂತ. Arose ; ಭೂ. ಕೃ. Arisen — ರಿಸ್‌ನ್) (ಪ್ರಾಚೀ. ಪ್ರ.) ಏಳು, ಎದ್ದೇಳು. (ದನಿ) ಕೇಳಬರು. (ಕಾವ್ಯ) ಸತ್ತಿದ್ದು ಮತ್ತೆ ಏಳು. ಮೂಡು ; ಉದಯಿಸು ; ಉದ್ಭವಿಸು ; ಹುಟ್ಟು. ಗಮನಕ್ಕೆ ಬರು ; ದೃಷ್ಟಿಗೆ ಬೀಳು ; ಕಾಣಿಸಿಕೊ. ಸಂಭವಿಸು ; ಉಂಟಾಗು.

Arísta ಅರಿಸ್ಟ (ನಾ.) (ಧಾನ್ಯದ, ಹುಲ್ಲಿನ) ಊಬು. **Arístate** (ಗು.) ಊಬುಳ್ಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Aristócracy ಆ್ಯರಿಸ್ಟಾಕ್ರಸಿ (ನಾ.) ಉತ್ತಮ ಕುಲದವರ ಪ್ರಭುತ್ವ ; ಶ್ರೀಮಂತ ಪ್ರಭುತ್ವ ; ಅಂಥ ಪ್ರಭುತ್ವವುಳ್ಳ ರಾಜ್ಯ ; ಪ್ರಭುತ್ವ ಮಾಡುವ ಶ್ರೀಮಂತ ವರ್ಗ. ಶ್ರೀಮಂತರು. ಉತ್ತಮರು ; ಶ್ರೇಷ್ಠರು. **A'ristocrat, Arístocrat** ಆ್ಯ(ಅ)ರಿಸ್ಟೊಕ್ರ್ಯಾಟ್ (ನಾ.) ಶ್ರೀಮಂತ ಪ್ರಭುವರ್ಗದವನು ; ಶ್ರೀಮಂತ. **Aristocrátism** (ನಾ.) ಡಾಂಭಿಕತೆ ; ಗರ್ವ ; ಅಹಂಕಾರ. **Aristocrátic** (ಗು.) ಶ್ರೀಮಂತ ಪ್ರಭುತ್ವದ ; ಶ್ರೀಮಂತ ಯೋಗ್ಯವಾದ. ಮಹತ್ತಾದ. ಠೀವಿಯ ; ಆಡಂಬರವುಳ್ಳ. **Aristocrátical** (ಗು.) ; **Aristocrátically** (ಕ್ರಿ. ವಿ.)

Aristólogy ಆ್ಯರಿಸ್ಟಾಲೊಜಿ (ನಾ.) ಭೋಜನ ಶಾಸ್ತ್ರ, — ಕಲೆ. **Aristológical** — ಸ್ಟೊಲಾಜಿಕಲ್ (ಗು.) ; **Aristólogist** — ಸ್ಟಾಲೊಜಿಸ್ಟ್ (ನಾ.)

Aristotélian, — lean ಆ್ಯರಿಸ್ಟೊಟೀಲಿಯನ್ (ಗು., ನಾ.) (ಗ್ರೀಕ್ ತತ್ತ್ವಜ್ಞನಾದ) ಅರಿಸ್ಟಾಟಲಿನ ; ಆತನ ತತ್ತ್ವದ. (ನಾ.) ಅರಿಸ್ಟಾಟಲಿನ ತತ್ತ್ವಾನುಯಾಯಿ ; ಆ ಮತದ ತತ್ತ್ವಜ್ಞ.

A'rithmancy ಆ್ಯರಿತ್‌ಮ್ಯಾನ್ಸಿ (ನಾ.) ಸಂಖ್ಯಾ ಶಕುನ.

Aríthmetic ಅರಿತ್ಮಿಟಿಕ್ (ನಾ.) ಅಂಕ ಗಣಿತ ; ಸಂಖ್ಯಾ ಶಾಸ್ತ್ರ ; ಅಂಕಗಣಿತ ಜ್ಞಾನ. **Arithmétical** ಆ್ಯರಿತ್‌ಮೆಟಿಕಲ್ (ಗು.) : Arithmetical Progression ಗಣಿತದಲ್ಲಿ ಒಂದು ಪದದ ಮತ್ತು ಅದರ ಮುಂದಣ ಪದದ ವ್ಯವಕಲನ ಫಲವು ಸಮಾನ ಸಂಖ್ಯೆಯಾಗಿರುವ ಸಂಖ್ಯಾಶ್ರೇಣಿ : ಕಲನಶ್ರೇಣಿ ; ಗಣಿತಶ್ರೇಣಿ (ಉದಾ.—೨, ೪, ೬, ೮ . . . ; ೧೨, ೯, ೬, ೩ . . .). **Arithmétically** (ಕ್ರಿ. ವಿ.) ; **Arithmetícian** ಅ(ಆ್ಯ)ರಿತ್‌ಮಿಟಿಷನ್ (ನಾ.) ಅಂಕಗಣಿತಜ್ಞ. **Arithmómeter** — ಮಾಮಿಟರ್ (ನಾ.) ಗಣನ ಯಂತ್ರ.

Ark ಆರ್ಕ್ (ನಾ.) ಪೆಟ್ಟಿಗೆ ; ಪೆಠಾರಿ ; ಸಂದೂಕು. ಯೆಹೂದ್ಯರ ಧರ್ಮಶಾಸ್ತ್ರ ಪತ್ರಗಳನ್ನಿಟ್ಟಿರುವ ಮರದ ಪೆಟ್ಟಿಗೆ (=Ark of the Covenant, Ark of Testimony). ಪ್ರಳಯದಲ್ಲಿ 'ನೋವ' ಎಂಬವನನ್ನು ಕೊಚ್ಚಿಹೋಗದಂತೆ ರಕ್ಷಿಸಿದ, ಮುಚ್ಚಿದ ದೊಡ್ಡ ತೇಲು ಬುಟ್ಟಿ. (ರೂಪ.) ರಕ್ಷಣಸ್ಥಾನ.

Arm[1] ಆರ್ಮ್ (ನಾ.) ತೋಳು ; ರಟ್ಟೆ ; ಬಾಹು ; ಭುಜ. (Forearm ಮುಂದೋಳು). ಪ್ರಾಣಿಯ ಮುಂಗಾಲು. ಮರದ ದೊಡ್ಡ ರೆಂಬೆ, ಕೊಂಬೆ, ಶಾಖೆ. ಅಂಗಿಯ ತೋಳು ; ತೋಳನ್ನು ಹೋಲುವ ವಸ್ತು. Arm of a balance ತಕ್ಕಡಿಯ ಭುಜ. Arm of the sea ಸಮುದ್ರ ಬಾಹು. Arm-hole in a garment ಉಡುಪಿನಲ್ಲಿ ತೋಳುಗಂಡಿ. Arm-in-arm ತೋಳಿನಲ್ಲಿ ತೋಳು ಹಾಕಿಕೊಂಡು. Infant in arms ಕೈಗೂಸು. With open arms ಆದರದಿಂದ. Keep at arm's length (ಸಲಿಗೆಮಾಡಿಕೊಂಡು ಬರದಂತೆ) ದೂರದಲ್ಲಿಟ್ಟಿರು ; (ಸಲಿಗೆಮಾಡಿಕೊಂಡು ಹೋಗದೆ) ದೂರದಲ್ಲಿರು. Secular arm ಲೌಕಿಕಾಧಿಕಾರ ; ರಾಜಕೀಯ ಶಕ್ತಿ. **A'rmful** (ಗು.) ತೋಳುತುಂಬ ; ತೆಕ್ಕೆ ; ತಬ್ಬು. **A'rmless** (ಗು.) ; **A'rmlet** (ನಾ.) ತೋಳ್ಬಂದಿ ; ಬಾಹುಪುರಿ; ಬಾಹುರಕ್ಷೆ. **A'rmpit** (ನಾ.) ಕಂಕುಳು ; ಬಗಲು ; ಕಕ್ಷ.

Arm[2] ಆರ್ಮ್ (ನಾ. ; ಸಾ., ಬ. ವ. ದಲ್ಲಿ) ಆಯುಧ(ಗಳು) ; ಕೈದು(ಗಳು) ; ಯುದ್ಧಶಸ್ತ್ರ(ಗಳು). ಕಾಲಾಳು, ಕುದುರೆಯ ಸೈನ್ಯ, ಮೊ.; ಸೈನಿಕ ವೃತ್ತಿ. Fire-arms ಬಂದೂಕು ಮೊ. ಅಗ್ನಿಶಸ್ತ್ರಗಳು.. Small-arms (ಬಂಡಿ ಮೊ. ಗಳ ಸಹಾಯವಿಲ್ಲದೆ ತೆಗೆದುಕೊಂಡುಹೋಗಬಹುದಾದ) ಸಣ್ಣ ಆಯುಧಗಳು. Stand of arms ಒಬ್ಬ ಸಿಪಾಯಿಗೆ ಬೇಕಾಗುವಷ್ಟು ಆಯುಧಗಳು. Bear arms ಸೈನಿಕನಾಗು. In arms ಕೈದು ಹಿಡಿದು ; ಆಯುಧ ಪಾಣಿಯಾಗಿ. Lay down arms (ಕೈದು ಬಿಟ್ಟು) ಯುದ್ಧ ನಿಲ್ಲಿಸು ; ಅಧೀನನಾಗು. Take up arms ಶಸ್ತ್ರ ಸನ್ನದ್ಧನಾಗು ; ಆಯುಧ ಪಾಣಿಯಾಗು ; ಕೈದು ತೊಡು ; ಕತ್ತಿ ಕಟ್ಟು (ರೂಪ. ಸಹ). Under arms ಯುದ್ಧ ಸನ್ನದ್ಧನಾಗಿ ; ಸಶಸ್ತ್ರನಾಗಿ. Up in arms ದಂಗೆಯೆದ್ದು (ರೂಪ. ಸಹ). Coat of arms ಸೈನ್ಯದ, ವೀರನ, ಕುಲೀನನ, ಅಥವಾ ಒಂದು ಮನೆತನದ, ಬಿರುದಾವಳಿಗಳ ಲಾಂಛನ, ಫಲಕ, ಕವಚ. King of arms ಪ್ರಧಾನ ವಂದಿ. **A'rmless** (ಗು.). ; **A'rmory** ಆರ್ಮರಿ (ನಾ.) ಶ್ರೀಮಂತರ ಬಿರುದಿನ ಲಾಂಛನ ವಿದ್ಯೆ. **Armórial** (ಗು., ನಾ.) ಶ್ರೀಮಂತರ ಬಿರುದಿನ ಲಾಂಛನಗಳ ವಿಷಯವಾದ (ಪುಸ್ತಕ). **A'rmorist** (ನಾ.)

Arm (ಕ್ರಿ.) ಕೈದು ತೊಡು (ತೊಡಿಸು) ; ಸಶಸ್ತ್ರನಾಗು (ಆಗಿಸು). (Armed neutrality ಯುದ್ಧಕ್ಕೆ ಸನ್ನದ್ಧವಾಗಿದ್ದು ಸದ್ಯಕ್ಕೆ ತಾಟಸ್ಥ್ಯದಿಂದಿರುವುದು : ಸಶಸ್ತ್ರ ತಾಟಸ್ಥ್ಯ). ಆಯುಧಗಳನ್ನು ಅಥವಾ ಇತರ ಸಾಧನಗಳನ್ನು ಒದಗಿಸು, ಒದಗಿಸಿಕೊ. ಯಾವುದಾದರೂ ಒಂದು ವಸ್ತುವಿನ ಮೇಲ್ಮೆಯ್ಯ ರಕ್ಷಣೆಗಾಗಿ ಅಥವಾ ಅಂದಕ್ಕಾಗಿ ಆಚ್ಛಾದನವನ್ನು ರಚಿಸು. (ಒಂದು ಲೋಹಕಾಂತಕ್ಕೆ) ರಕ್ಷಾಪಟ್ಟಿಕೆಯನ್ನು ಅಳವಡಿಸು. **A'rmed** (ಗು.)

Armáda ಆರ್ಮೇಡ (ನಾ.) ಯುದ್ಧನೌಕಾ ವ್ಯೂಹ (ಮು., ಸ್ಪೈಯ್‌ನ್ ದೇಶದ ಎರಡನೆಯ ಫಿಲಿಪ್‌ದೊರೆ ಇಂಗ್ಲೆಂಡಿನ ಮೇಲೆ ೧೫೮೮ನೆಯ ಇಸವಿಯಲ್ಲಿ ಕಳುಹಿಸಿದ 'ಅಜೇಯ' ನೌಕಾ ವ್ಯೂಹ)

Armadíllo ಆರ್ಮಡಿಲೊ (ನಾ.) ಅಸ್ಥಿ ಕವಚವುಳ್ಳ, ಹಿಡಿದರೆ ಚೆಂಡಿನಂತೆ ಉಂಡೆಯಾಗಬಲ್ಲ, ಹೆಗ್ಗಣದಂತೆ ಬಿಲಕೊರೆಯುವ ಸ್ವಭಾವದ, ದಕ್ಷಿಣ ಅಮೆರಿಕಾಖಂಡ ವಾಸಿಯಾದ ಒಂದು ಪ್ರಾಣಿ. ಇದೇ ಸ್ವಭಾವವುಳ್ಳ ಮತ್ತು ಮರಹೇನಿಗೆ ಸಂಬಂಧಪಟ್ಟ ವಲ್ಕವಂತ ಪ್ರಾಣಿಜಾತಿ.

Armagéddon ಆರ್ಮಗೆಡನ್ (ನಾ.) ಮಹಾಪ್ರಳಯ ಯುದ್ಧ ; ಆ ಯುದ್ಧರಂಗ.

A'rmament ಆರ್ಮಮೆಂಟ್ (ನಾ.) ಯುದ್ಧಸೈನ್ಯ (ಸಾ., ನೌಕಾಬಲ). ಯುದ್ಧದ ಜಹಜಿನಲ್ಲಿಯ ದೊಡ್ಡ ಫಿರಂಗಿ ಮೊ. ಯುದ್ಧ ಸಾಧನಗಳು. ಯುದ್ಧ ಸನ್ನಾಹ.

A'rmature ಆರ್ಮಟ್ಯು(ಚ)ರ್ (ನಾ.) ಯುದ್ಧದ ಕೈದುಗಳು ; ಯುದ್ಧ ಕವಚ. (ಪ್ರಾಣಿಗಳ ಮತ್ತು ಸಸ್ಯಗಳ) ರಕ್ಷಾವರಣ. ಲೋಹಕಾಂತಗಳ ಶಕ್ತಿ ಕುಂದದಂತೆ ಅವುಗಳ ಕೊನೆಯಲ್ಲಿಟ್ಟಿರುವ ಮೆತುಕಬ್ಬಿಣದ ಪಟ್ಟಿಗಳು : ಲೋಹಕಾಂತ ರಕ್ಷಕ. 'ಡೈನಮೊ' ಎಂಬ ವಿದ್ಯುದುತ್ಪಾದಕ ಯಂತ್ರದಲ್ಲಿ ವಿದ್ಯುತ್‌ಸಂಗ್ರಹಮಾಡುವ ಮುಖ್ಯಭಾಗ.

Arme blánche (F) ಆರ್ಮ್ ಬ್ಲಾನ್ಷ್ (ನಾ.) ಕಡಿಯುವ ಅಥವಾ ಚುಚ್ಚುವ ಯುದ್ಧಾಯುಧ (ಕತ್ತಿ, ಭರ್ಜಿ, ಭಲ್ಲೆಯ, ಮೊ.)

Arménian ಆರ್ಮೀನಿಯನ್ (ಗು., ನಾ.) ಆರ್ಮೀನಿಯಾ ದೇಶದ ; ಆ ದೇಶಸ್ಥರ. ಆರ್ಮೀನಿಯಾ ದೇಶಸ್ಥ. ಆರ್ಮೀನಿಯಾ (ಕ್ರೈಸ್ತ) ಮತದ ಅನುಯಾಯಿ. Armenian bole ಔಷಧವಾಗಿ ಉಪಯೋಗಿಸುವ ಆರ್ಮೀನಿಯಾ ಕೆಮ್ಮಣ್ಣು. Armenian stone ನೀಲಿಯ ಬಣ್ಣದ, ತಾಮ್ರದ 'ಕಾರ್ಬೋನೇಟ್' (ಇಂಗಾಲಾಮ್ಲ ಲವಣ)

Armíllary ಆರ್ಮಿಲರಿ (ಗು.) ತೋಳ್ಬಂದಿಯ. ವಲಯಾಕಾರದ. Armillary sphere (ವಿಷುವ ವೃತ್ತ, ಕ್ರಾಂತಿ ವೃತ್ತ, ಮೊ. ನ್ನು ತೋರಿಸಲು ಲೋಹ ವಲಯಗಳಿಂದ ಮಾಡಿದ) ಖಗೋಳಾಕೃತಿ.

Armínian ಆರ್ಮಿನಿಯನ್ (ಗು., ನಾ.) ಡಚ್ ದೇಶಸ್ಥನಾದ 'ಆರ್ಮಿನಿಯಸ್' ಎಂಬ 'ಪ್ರಾಟೆಸ್ಟೆಂಟು' ಮತ ಸಿದ್ಧಾಂತಿಯ, ಅವನ ಸಿದ್ಧಾಂತದ, (ಅನುಯಾಯಿ). **Armínianism** (ನಾ.)

A'rmistice ಆರ್ಮಿಸ್ಟಿಸ್ (ನಾ.) ಯುದ್ಧ ನಿಲ್ಲಿಸಿರುವುದು ; ಯುದ್ಧ ವಿಶ್ರಾಂತಿ ; ಶಸ್ತ್ರ ವಿರಾಮ. (ರೂಪ. ಸಹ). Armistice Day (೧೯೧೪ನೆಯ ಇಸವಿಯಲ್ಲಿ ಆರಂಭವಾದ ಯೂರೋಪಿನ ಮಹಾಯುದ್ಧವು ೧೯೧೮ನೆಯ ಇಸವಿಯ ನವೆಂಬರು ೧೧ನೆಯ ತಾರೀಖಿನಲ್ಲಿ ಒಪ್ಪಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡಿಕೊಂಡು ಪಡೆದ ವಿಶ್ರಾಂತಿಯಿಂದ ಕೊನೆಗಂಡ ಕಾರಣ, ಅದರ ಜ್ಞಾಪಕಾರ್ಥವಾಗಿ ಪ್ರತಿ ವರ್ಷವೂ ಆಚರಿಸುವ) ಯುದ್ಧವಿಶ್ರಾಂತಿ ದಿನ.

A'rmory. Arm[2] ನೋಡಿ.

A'rmour ಆರ್ಮರ್ (ನಾ.) ಯುದ್ಧ ಕವಚ; ತನುತ್ರಾಣ; ಮೈ ಜೋಡು. ಯುದ್ಧದ ಹಡಗಿನ ಲೋಹ ಕವಚ. ನೀರಿನಲ್ಲಿ ಮುಳುಗುವವನ ನೀರಿಳಿಯದ ಉಡುಪು. (ಜೀ. ವಿ.) ಸಸ್ಯಗಳ ಅಥವಾ ಪ್ರಾಣಿಗಳ ರಕ್ಷಾ ಕವಚ. ಶ್ರೀಮಂತರ ಬಿರುದಿನ ಲಾಂಛನ. Armour-bearer ಯೋಧನ ಕವಚವನ್ನು ಹೊತ್ತುಕೊಂಡುಬರುವವನು: ಯೋಧ ಕವಚ ವಾಹಿ. Armour-clad ಕವಚ ರಕ್ಷಿತ. Armour-plate (ಯುದ್ಧಾಯುಧಗಳಿಗೆ ಅಭೇದ್ಯವಾಗಿರಬೇಕೆಂಬ ಉದ್ದೇಶದಿಂದ) ಯುದ್ಧದ ಹಡಗು ಮೊ. ಗಳ ಮೈಗೆ ತೊಡಿಸುವ ಉಕ್ಕಿನ ಅಥವಾ ಕಬ್ಬಿಣದ ದಪ್ಪ ತಗಡು: ರಕ್ಷಾ ಕವಚ. Armour-proof ಯುದ್ಧಕವಚದಂತೆ ಅಭೇದ್ಯವಾಗಿರುವ ಅಥವಾ ಆಯುಧಗಳಿಗೆ ಅಭೇದ್ಯವಾಗಿರುವ. **A'rmour** (ಕ್ರಿ. ಸಕ.) ರಕ್ಷಾಕವಚವನ್ನು ಅಳವಡಿಸು. **A'rmoured** (ಗು.); **A'rmourless** (ಗು.); **A'rmourer** (ನಾ.) ಯುದ್ಧದ ಕೈದುಗಳನ್ನು ತಯಾರಿಸುವವನು: ಶಸ್ತ್ರಕಾರ. ಯುದ್ಧಾಯುಧಗಳ ರಕ್ಷಣಾಧಿಕಾರಿ; ಶಸ್ತ್ರಶಾಲಾಧಿಕಾರಿ. **A'rmo(u)ry** (ನಾ.) ಯುದ್ಧಾಯುಧಗಳನ್ನಿಟ್ಟಿರುವ ಸ್ಥಳ: ಶಸ್ತ್ರ ಶಾಲೆ; ಆಯುಧ ಶಾಲೆ. (ಅಮೆ. ಸಂ.) ಯುದ್ಧಾಯುಧಗಳನ್ನು ತಯಾರಿಸುವವನ ಕಾರ್ಯಾಲಯ: ಶಸ್ತ್ರಕಾರ್ಯಾಲಯ.

A'rmy ಆರ್ಮಿ (ನಾ.) ಸೇನೆ; ದಂಡು; ಪಡೆ; ಬಲ; ದಳ; ಫೌಜು. (ರೂಪ.) ಒಂದು ದೊಡ್ಡ ಗುಂಪು; ಯಾವುದಾದರೂ ಒಂದು ಗೊತ್ತಾದ ಉದ್ದೇಶಕ್ಕಾಗಿ ಕ್ರಮಯೋಜಿತವಾದ ಜನ ಸಮುದಾಯ (ಉದಾ.—Salvation Army ಮುಕ್ತಿ ಫೌಜು). The army ಸೇನಾವೃತ್ತಿ. Army-corps ಯುದ್ಧಭೂಮಿಯಲ್ಲಿರುವ ಸೇನೆಯ ಪ್ರಧಾನ ಭಾಗ. Army-worm ಹತ್ತಿಯಚಿಟ್ಟೆಯ ಮರಿಹುಳು. Standing army ಸಿದ್ಧ ಸೈನ್ಯ.

A'rnica ಆರ್ನಿಕ (ನಾ.) 'ಬೆಟ್ಟದ ಹೊಗೆಯಸೊಪ್ಪು' ಎಂಬ ವರ್ಗಕ್ಕೆ ಸೇರಿದ ಸಸ್ಯಜಾತಿ; ಇದರಿಂದ ತಯಾರಿಸಿದ ಔಷಧ.

Aroínt, —oýnt ಅರಾಯ್ಂಟ್ (ಭಾವ. ಅವ್ಯ., ಕ್ರಿ.) (ಪ್ರಾಚೀ. ಪ್ರ.) ತೊಲಗು! ತೊಲಗಿ ಹೋಗು! (Aroint thee). ಶಪಿಸಿ ಅಟ್ಟಿಬಿಡು.

Aróma ಅರೋಮ (ನಾ.) ಸುವಾಸನೆ; ಸುಗಂಧ; ಪರಿಮಳ; ನರುಗಂಪು. ಸಂಬಾರವಸ್ತು ಮೊ. ಗಳ ಸುವಾಸನೆ. (ರೂಪ.) ಸೂಕ್ಷ್ಮ ವ್ಯಾಪಕ ಗುಣ. **Aromátic** ಆ್ಯರೊಮ್ಯಾಟಿಕ್ (ಗು.)

Aróse ಅರೋಸ್. **Arise** ಧಾತುವಿನ ಭೂತ ರೂಪ.

Aroúnd ಅರೌಂಡ್ (ಕ್ರಿ. ವಿ., ಉಪ.) ಸುತ್ತ; ಸುತ್ತುಮುತ್ತ; ಸುತ್ತಲೂ; ಎಲ್ಲ ಕಡೆ; ಸರ್ವತೋಮುಖವಾಗಿ; ಸುತ್ತಿಕೊಂಡು; ಬಳಸಿ; ಆವರಿಸಿಕೊಂಡು. (ಅಮೆ. ಸಂ.) ಇಲ್ಲಿಲ್ಲೇ; ಎಲ್ಲೆಲ್ಲೂ; ಮನಬಂದೆಡೆಯಲ್ಲಿ (Fool around ಇಲ್ಲಿಲ್ಲೇ ಅಲೆದಾಡು)

Aroúse ಅರೌಸ್ (ಕ್ರಿ. ಸಕ.) ಎಬ್ಬಿಸು; ಎಚ್ಚರಿಸು; ಹುರಿದುಂಬಿಸು; ಚೇತನಗೊಳಿಸು; ಉತ್ತೇಜಿಸು; ಜಾಗೃತಿಗೊಳಿಸು. ಕೆರಳಿಸು; ಉದ್ರೇಕಿಸು.

A'rquebus, Hárquebus ಆರ್ಕ್ವಿಬಸ್, ಹಾರ್— (ನಾ.) (ತ್ರಿಪಾದಿ ಮೊ. ದ) ನಿಲವಿನ ಮೇಲಿಟ್ಟು ಹಾರಿಸುವ ಹಳೆಯ ತೆರದ ಬಂದೂಕು.

A'rrack ಆ್ಯರಕ್, **Arráck** ಅರ್ರ್ಯಾಕ್ (ನಾ.) ಕಾಕಂಬಿ, ಬೆಲ್ಲ, ತಾಳೆಬೆಲ್ಲ, ಹೆಂಡ, ಅಕ್ಕಿ, ಮೊ. ಗಳಿಂದ ಬಟ್ಟಿಯಿಳಿಸಿ ತಯಾರಿಸಿದ ಮದ್ಯ: ಸಾರಾಯಿ.

Arraígn ಅರೆಯ್ನ್ (ಕ್ರಿ. ಸಕ.) ನ್ಯಾಯಸ್ಥಾನದಲ್ಲಿ ನ್ಯಾಯಾಧಿಪತಿಯ ಮುಂದೆ ಅಪರಾಧವನ್ನು ಆರೋಪಿಸು; ದೋಷಾರೋಪಣೆ ಮಾಡು; ತಪ್ಪು ಹೊರಿಸು; ತಪ್ಪು ಹಿಡಿ; ಆಕ್ಷೇಪಿಸು. **Arraígnment** (ನಾ.)

Arránge ಅರೇಂಜ್ (ಕ್ರಿ.) ಅಣಿಮಾಡು; ಓರಣವಾಗಿರಿಸು; ಕ್ರಮದಲ್ಲಿಡು; ಅಳವಡಿಸು; ಏರ್ಪಡಿಸು; ಸಿದ್ಧಪಡಿಸು; ಸಿದ್ಧನಾಗಿರು; ವ್ಯೂಹರಚನೆ ಮಾಡು; ಸೇನೆಯನ್ನೊಡ್ಡು. (ಸಂ.) ಹೊಸ ಸಂದರ್ಭಕ್ಕೆ ತಕ್ಕಂತೆ ಗೀತವನ್ನು ಹೊಂದಿಸು. (ವ್ಯಾಜ್ಯ ಮೊ. ನ್ನು) ಬಗೆಹರಿಸು; ತೀರ್ಮಾನಿಸು. (ಕ್ರಮ, ರೀತಿ, ಮೊ. ನ್ನು) ಮೊದಲೇ ನಿರ್ಣಯಿಸು, ವ್ಯವಸ್ಥೆ ಮಾಡು. ಒಪ್ಪಂದ ಮಾಡಿಕೊ; ಗೊತ್ತು ಮಾಡಿಕೊ. **Arrángement** (ನಾ.)

A'rrant ಆ್ಯರಂಟ್ (ಗು.) ಅಪಖ್ಯಾತ; ತೀರ ಕೆಟ್ಟ. ಪೂರಾ; ಪಕ್ಕಾ (Arrant knave ಶುದ್ಧ ಠಕ್ಕ; ಪಕ್ಕಾ ಕಳ್ಳ). **A'rrantly** (ಕ್ರಿ. ವಿ.)

A'rras ಆ್ಯರಸ್ (ನಾ.) ಚಿತ್ರಗಳನ್ನು ನೆಯ್ದು ಬಹು ಬೆಲೆಯುಳ್ಳ ಬಟ್ಟೆ; ಈ ಬಟ್ಟೆಯ ತೆರೆ: ಚಿತ್ರ ಯವನಿಕೆ. **A'rrased** (ಗು.)

Arraý ಅರೇ (ಕ್ರಿ. ಸಕ.) ವ್ಯೂಹ ರಚನೆ ಮಾಡು; ಸೇನೆಯೊಡ್ಡು. (ನ್ಯಾ. ಶಾ.) (ನ್ಯಾಯದರ್ಶಿಗಳನ್ನು) ಏರ್ಪಡಿಸು, ನಿಯಮಿಸು, ಪಟ್ಟಿಯಲ್ಲಿ ಸೇರಿಸು. ಉಡಿಗೆ ತೊಡಿಗೆಗಳನ್ನು ಅಲಂಕಾರಕ್ಕಾಗಿ ಧರಿಸು. ಅಲಂಕರಿಸು; ಅಲಂಕರಿಸಿಕೊ. (ನಾ.) ರಚನೆ; ಅಣಿ; ವ್ಯೂಹ ರಚನೆ; ವಿನ್ಯಾಸ. ಸೈನ್ಯ. (ಜನಗಳ ಅಥವಾ ವಸ್ತುಗಳ) ವೈಭವ ಶ್ರೇಣಿ. ನ್ಯಾಯದರ್ಶಿಗಳನ್ನು ನಿಯಮಿಸುವ ಕ್ರಮ; ನ್ಯಾಯದರ್ಶಿಗಳ ಪಟ್ಟಿ. (ಕಾವ್ಯ) ಉಡಿಗೆ ತೊಡಿಗೆ; ಪೋಷಾಕು.

Arreár ಅರೀಯರ್ (ನಾ.) (ಪ್ರಾಚೀ. ಪ್ರ.) ಮೆರೆವಣಿಗೆ ಮೊ. ಗಳ ಹಿಂಭಾಗ. **Arreárs** (ನಾ.) ಬಾಕಿಯುಳಿದಿರುವ ಸಾಲ; ಋಣಶೇಷ; ಉಳಿಕೆ. In arrears or arrear ಉಳಿದಿರುವ; ಬಾಕಿ ನಿಂತಿರುವ (ಮು., ಸಾಲ). In arrear of ಹಿಂದೆ. **Arreárage** — ರೆಜ್ (ನಾ.) ಸಾಲದ ಬಾಕಿ. **Arreárages** ಸಾಲಗಳು; ಕಡಗಳು; ಋಣಗಳು.

Arréct ಅರೆಕ್ಟ್ (ಗು.) (ಕುದುರೆಯ ಕಿವಿಗಳಂತೆ) ಮೇಲಕ್ಕೆತ್ತಿದ; ನೆಟ್ಟಗೆ ನಿಲ್ಲಿಸಿದ; ನಿಮಿರಿಸಿದ; (ರೂಪ.) ಆಲಿಸುತ್ತಿರುವ; ಎಚ್ಚರಿಕೆಯಿಂದಿರುವ.

Arrést ಅರೆಸ್ಟ್ (ಕ್ರಿ. ಸಕ.) ತಡೆ; ನಿಲ್ಲಿಸು; ನಿರೋಧಿಸು; ಬಂಧಿಸು. (ನ್ಯಾ. ಶಾ.: Arrest judgment ನ್ಯಾಯಸ್ಥಾನದ ತೀರ್ಪನ್ನು, ಅದರಲ್ಲಿ ತಪ್ಪಿರುವುದೆಂಬ ಕಾರಣದಿಂದ, ಜಾರಿಗೆ ತರದೆ ತಡೆ). ಮನುಷ್ಯನನ್ನು (ಮು., ನ್ಯಾಯಸ್ಥಾನದ ಅಧಿಕಾರಬಲದಿಂದ) ಹಿಡಿ, ಬಂಧಿಸು, ಹಿಡಿದು ನಿಲ್ಲಿಸು; 'ದಸ್ತಗಿರಿ' ಮಾಡು. (ಗಮನವನ್ನು) ಸೆಳೆ. **Arréstive** (ಗು.); **Arréstment** (ನಾ.); **Arrést** (ನಾ.) ತಡೆ; ನಿರೋಧ; ಬಂಧನ; ಸೆರೆ; ಕೈದು; ದಸ್ತಗಿರಿ. Under arrest ಕಾನೂನಿನ ಮೇರೆಗೆ ಬಂಧನದಲ್ಲಿರುವ; 'ದಸ್ತಗಿರಿ'ಯಾಗಿರುವ.

A'rrha ಆ್ಯರ (ನಾ.; ಬ. ವ. —ae) (ವ್ಯಾಪಾರ ನಿಷ್ಕರ್ಷೆಗಾಗಿ ಕೊಡುವ) ಸಂಚಕಾರ. (ರೂಪ.) ಓಲು.

Ar(r)hízal ಅರೈಜಲ್ (ಗು.) (ಸ. ವಿ.) ಬೇರಿಲ್ಲದ.

Ar(r)hýthmic(al) ಅರಿತ್ಮಿಕ್, — ಕಲ್ (ಗು.) ತಾಳನಿಯಮವಿಲ್ಲದ (ಮು., ನಾಡಿಯಲ್ಲಿ ಗತಿಕ್ರಮವಿಲ್ಲದ). **Arrhýthmically** (ಕ್ರಿ. ವಿ.)

Arriere-penseé (F) ಆರ್ಯೆರ್ ಪಾನ್ಸೇ (ನಾ.) ಮರ್ಮಾಶಯ; ಅಂತರಂಗದ ಮರೆಮಾಚಿಕೆ.

A'rris ಆ್ಯರಿಸ್ (ನಾ.) ಎರಡು ಅಂಚುಗಳು ಸೇರಿ ಆದ ಮೂಲೆಯ ಏಣು. Arris-gutter ಸೂರಿನ V-ಆಕಾರದ ದೋಣಿ. Arris-wise ಏಣು ಕಾಣುವಂತೆ.

Arríve ಅರೈವ್ (ಕ್ರಿ.) ಬರು; (ಉದ್ದೇಶಿಸಿದ ಸ್ಥಳಕ್ಕೆ) ಬಂದು ಸೇರು, ತಲಪು, ಆಗಮಿಸು. (ಹೋಗಿ, ಬಂದು) ಇಳಿ. (ಪ್ರಯತ್ನದ ಫಲವಾಗಿ) ಒಂದು ಗೊತ್ತಿಗೆ ಬರು. ಹೊಂದು; ಸಾಧಿಸು; ಪ್ರಾಪ್ತವಾಗು; ಸಂಭವಿಸು; ಕಾಲಕ್ರಮೇಣ ಅಥವಾ ಬೆಳವಣಿಗೆಯಿಂದ ಸಪ್ಪದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಥಿತಿಗೆ ಬರು. **Arrival** (ನಾ.) (ಕ್ರಿಯಾರ್ಥಗಳಲ್ಲಿ). ಬಂದಿರುವ ಮನುಷ್ಯ ಅಥವಾ ವಸ್ತು. (ಬಳ. ಮಾ.) ಈಗ ಹುಟ್ಟಿದ ಮಗು.

A'rrogance ಆ್ಯರೊಗನ್ಸ್ (ನಾ.) ದುರಹಂಕಾರ ; ದುರಭಿಮಾನ ; ತಲೆಕೊಬ್ಬು ; ಸೊಕ್ಕು ; ಹಮ್ಮು. **A'rrogancy** (ನಾ.) ; **A'rrogant** (ಗು.) ; **A'rrogantly** (ಕ್ರಿ. ವಿ.)

A'rrogate ಆ್ಯರೊಗೇಟ್ (ಕ್ರಿ. ಸಕ.) (ತನಗೆ ಸಲ್ಲದ್ದನ್ನು ಅಥವಾ ಯೋಗ್ಯತೆಯಿಲ್ಲದ್ದನ್ನು ನ್ಯಾಯವಿಲ್ಲದೆ ಅಹಂಕಾರದಿಂದ ಅಥವಾ ಸೊಕ್ಕಿನಿಂದ) ತನ್ನದಾಗಿ ಭಾವಿಸು. ಆಕ್ರಮಿಸಿಕೊ. ತಕ್ಕಷ್ಟು ಆಧಾರವಿಲ್ಲದೆ ಆರೋಪಿಸು. **Arrogátion** (ನಾ.)

A'rrow ಆ್ಯರೋ (ನಾ.) ಅಂಬು ; ಕಣೆ ; ಬಾಣ ; ಶರ. ಅಂಬಿನ ರೂಪದ ಸೂಜಿ, ಒಡವೆ ; ಅಂಬಿನ ಗುರುತು ; ಶರಚಿಹ್ನೆ. (ಖ. ವಿ.) ಧನುಸ್ಸು (ರಾಶಿ). ಗಿಡದಿಂದಾಗಲಿ ಮರದಿಂದಾಗಲಿ ಹೊರಟ ಮುಖ್ಯವಾದ ಹೊಡೆ. Arrow-head ಅಂಬಿನ ತಲೆ (ಮು., ಚಕಮುಕಿ ಕಲ್ಲು ಮೊ. ಗಳಿಂದ ಮಾಡಿದುದು). Broad arrow-head ಬ್ರಿಟಿಷ್ ಸರ್ಕಾರದ ಗೋಲಂದಾಜು (ಗುಂಡು, ಮದ್ದು, ಮೊ. ಯುದ್ಧದ ಸಾಮಾನಿನ) ಇಲಾಖೆಯವರು ತಮ್ಮ ಉಗ್ರಾಣವನ್ನು ಗುರುತಿಸುವುದಕ್ಕಾಗಿ ಉಪಯೋಗಿಸುವ ಅಗಲವಾದ ಅಂಬಿನತಲೆಯ ಚಿಹ್ನೆ. Arrow-headed characters ಪರ್ಷಿಯ, ಅಸ್ಸಿರಿಯ, ಮೊ. ದೇಶಗಳಲ್ಲಿ ದೊರೆಯುವ ಪುರಾತನ ಶಾಸನಗಳ ಬೆಣೆಯಾಕಾರದ ಲಿಪಿ : ಶರಲಿಪಿ. Arrow-root ಪುಷ್ಟಿಕರವಾದ ಪಿಷ್ಟಾಹಾರ ಪದಾರ್ಥ ದೊರೆಯುವ ಒಂದು ಜಾತಿಯ ಗೆಣಸು (ಗಿಡ) ; ಇದರಿಂದ ತಯಾರಿಸಿದ ಪಿಷ್ಟಾಹಾರ. **A'rrow** (ಕ್ರಿ.) (ಕಬ್ಬಿನ ಸೂನಂಗಿಯಂತೆ) ಹೂವಿನ ಹೊಡೆ ಹೊರಡು. **A'rrowed** (ಗು.) (ಕಾವ್ಯ) ಅಂಬಾಗಿ ಮಾಡಿದ ; ಅಂಬಿನಿಂದ ಅಥವಾ ಅಂಬುಗಳಿಂದ ಕೂಡಿದ. **A'rrowy** ಆ್ಯರೋಯಿ (ಗು.) ಅಂಬುಗಳುಳ್ಳ. (ಆಕಾರದಲ್ಲಾಗಲಿ ಚಲನೆಯಲ್ಲಾಗಲಿ) ಅಂಬಿನಂತಿರುವ.

Arse ಆರ್ಸ್ (ನಾ.) ಅಂಡು ; ಕುಂಡಿ ; ತಿಕ.

A'rsenal ಆರ್ಸಿನಲ್ (ನಾ.) ಯುದ್ಧಸಾಮಗ್ರಿಗಳನ್ನು ತಯಾರಿಸಲು ಅಥವಾ ಸಂಗ್ರಹಿಸಲು ಏರ್ಪಡಿಸಿರುವ ಇಲಾಖೆ : ತೋಫ್‌ಖಾನೆ ; ಯುದ್ಧಾಯುಧ ಶಾಲೆ.

A'rsenic ಆರ್ಸ್ನಿಕ್ (ನಾ.) (ರ. ವಿ.) (ಒಂದು ಮೂಲ ವಸ್ತು) : ಭಿದುರತೆ, ನಸುಹಸಿರು ಬಣ್ಣ, ಸ್ಫಟಿಕತೆ, ಕಾಯಿಸಿದರೆ ಕರಗದೆ ಬೆಳ್ಳುಳ್ಳಿಯ ವಾಸನೆಯ ಹಬೆಯಾಗಿ ಹೋಗುವುದು — ಈ ಗುಣಗಳುಳ್ಳ ಲೋಹಪ್ರಾಯ ಮೂಲವಸ್ತು : ಆರ್ಸಿನಿಕ್. (ರೂಢಿಯಲ್ಲಿ) ಗೌರೀ ಪಾಷಾಣ, ಶಂಖ ಪಾಷಾಣ, ಇಲಿ ಪಾಷಾಣ ಎಂಬ ಬಿಳಿಯ ಖನಿಜ ವಸ್ತು (=White arsenic ಆರ್ಸಿನಿಕ್ಕಿನ ಭಸ್ಮ : ಇದು ತೀಕ್ಷ್ಣ ವಿಷ ಪದಾರ್ಥ). Yellow arsenic ಹರಿದಳ. Red arsenic or Realgar ಕೆಂಪು ಹರಿದಳ ; ಮನಃಶಿಲೆ ; ಮಣಿಶಿಲೆ. (ಈ ಎರಡು ಪದಾರ್ಥಗಳೂ ಆರ್ಸಿನಿಕ್ ಮತ್ತು ಗಂಧಕದ ಸಂಯುಕ್ತಗಳು). **Arsénic(al)** ಆರ್ಸೆನಿಕಲ್ (ಗು.) ; **Arsénious** ಆರ್ಸೀನಿಯಸ್ (ಗು.)

A'rsis ಆರ್ಸಿಸ್ (ನಾ.) (ಇಂಗ್ಲಿಷ್ ಛಂ.) ಸ್ವರದ ಒತ್ತುಳ್ಳ ಅಕ್ಷರ.

A'rson ಆರ್ಸನ್ (ನಾ.) (ಇತರರ ಮನೆಗಾಗಲಿ, ಆಸ್ತಿಗಾಗಲಿ) ಮಾತ್ಸರ್ಯದಿಂದ ಕಿಚ್ಚಿಡುವುದು. (ವಿಮೆ ಮಾಡಿರುವ ತನ್ನ ಸ್ವಂತ ಆಸ್ತಿಗೆ ವಿಮೆಯ ಸಂಸ್ಥೆಯನ್ನು ಮೋಸಮಾಡಬೇಕೆಂಬ) ದುರುದ್ದೇಶದಿಂದ ಬೆಂಕಿ ಹಚ್ಚುವುದು.

A'rsy-vérsy ಆರ್ಸಿ ವಾರ್ಸಿ (ಕ್ರಿ. ವಿ.) (ನಾಗರಿಕ ರೂಢಿಯಲ್ಲಿಲ್ಲ). ಹಿಂದು ಮುಂದಾಗಿ ; ತಲೆ ಕೆಳಗಾಗಿ ; ಕುಟಿಲವಾಗಿ ; ವಕ್ರವಾಗಿ. (ಗು.) ವಿಪರೀತ ; ವಿಪರ್ಯಸ್ತ.

Art[1] ಆರ್ಟ್. **Be** ನೋಡಿ.

Art[2] ಆರ್ಟ್ (ನಾ.) ಕೌಶಲ ; ಚತುರತೆ. ಕಲೆ ; ಶಿಲ್ಪ ; ವಿದ್ಯೆ. ಕಲಾಕೌಶಲ ; ವೈಜ್ಞಾನಿಕ ತತ್ತ್ವವನ್ನು ಮನುಷ್ಯನ ಸೌಕರ್ಯಕ್ಕಾಗಿ ಉಪಯೋಗಿಸಿಕೊಳ್ಳುವ ಕಲೆ. ಕೈಕಸಬು. ಶಿಲ್ಪಗಾರರ ಸಂಸ್ಥೆ. ಚಾತುರ್ಯ ; ತಂತ್ರ ; ಕೃತ್ರಿಮ. Art and part ಹೂಟ ಮಾಟಗಳು ; ಕಲ್ಪನೆ ಮತ್ತು ಕ್ರಿಯೆ. **Arts** (ನಾ.) ಕುಶಲ ವಿದ್ಯೆಗಳು ; ಕಲೆಗಳು. Fine arts ಲಲಿತ ಕಲೆಗಳು. Bachelor of Arts ಕಲಾ ಪ್ರವಿಷ್ಟ. Master of Arts ಕಲಾ ಪ್ರವೀಣ. **A'rtful** (ಗು.) ತಂತ್ರದ ; ಕೃತ್ರಿಮದ ; ಮೋಸದ. **A'rtfully** (ಕ್ರಿ. ವಿ.) ; **A'rtfulness** (ನಾ.) ; **A'rtless** (ಗು.) ಕುಶಲತೆಯಿಲ್ಲದ ; ಅಸಂಸ್ಕೃತ ; ಅನಭಿಜ್ಞ ; ಮಡ್ಡಿ. ಕೃತ್ರಿಮವಿಲ್ಲದ ; ನಿಷ್ಕಪಟ ; ನೈಜಸ್ವಭಾವದ ; ಸಹಜ ; ಸರಳ ; ಋಜು. **A'rtlessly** (ಕ್ರಿ. ವಿ.) ; **A'rtlessness** (ನಾ.)

A'rtefact, A'rti — ಆರ್ಟಿಫ್ಯಾಕ್ಟ್ (ನಾ.) ಮನುಷ್ಯನಿರ್ಮಿತ ವಸ್ತು. (ಪ್ರಾಚೀ. ಶಾ.) ಸ್ವಾಭಾವಿಕ ಜನ್ಯವಲ್ಲದೆ ಚರಿತ್ರಪೂರ್ವ ಜನರು ಕೌಶಲದಿಂದ ನಿರ್ಮಿಸಿದ ವಸ್ತು.

A'rtery ಆರ್ಟರಿ (ನಾ.) ರಕ್ತಕೋಶದ ಕಡೆಯಿಂದ ದೇಹದ ಇತರ ಭಾಗಕ್ಕೆ ರಕ್ತವನ್ನು ಸಾಗಿಸುವ ರಕ್ತನಾಳ : ಅಪಧಮನಿ (Vein = ಅಭಿಧಮನಿ). **Artérial** ಆರ್ಟೀರಿಯಲ್ (ಗು.) ಅಪಧಮನಿಯ : (Arterial blood ಶುದ್ಧ ರಕ್ತ). ಶಾಖೆಗಳನ್ನೊಳಕೊಂಡ ಮುಖ್ಯವಾದ ಭಾಟಾಮಾರ್ಗಗಳ : (Arterial railway ಶಾಖೆಗಳನ್ನೊಳಕೊಂಡ ಪ್ರಧಾನ ರೈಲುಮಾರ್ಗ). **Artérialize** (ಕ್ರಿ. ಸಕ.) (ಮಲಿನ ರಕ್ತವನ್ನು ಶ್ವಾಸಕೋಶದೊಳಗೆ ಆಮ್ಲಜನಕಕ್ಕೊಡ್ಡಿ) ಶುದ್ಧ ರಕ್ತವನ್ನಾಗಿಸು. **Artérialization** (ನಾ.) ; **Artériole** ಆರ್ಟೀರಿಯೋಲ್ (ನಾ.) ಸಣ್ಣ ಅಥವಾ ಕೊನೆಯ ಅಪಧಮನಿ. **Arteriosclerósis** ಆರ್ಟೀರಿಯೊಸ್ಕ್ಲೆರೋಸಿಸ್ (ನಾ.) ಅಪಧಮನಿಗಳು ಮೆತುಗೆಟ್ಟು ಹೋಗುವುದು (ಮು., ಮುದಿತನದಿಂದ) : ಅಪಧಮನೀ ಮಾಂದ್ಯ. **Arteriótomy** ಆರ್ಟೀರಿಯಾಟೊಮಿ (ನಾ.) ರಕ್ತವನ್ನು ಹೊರಸೂಸುವುದಕ್ಕಾಗಿ ಅಪಧಮನಿಯನ್ನು ತೆರೆಯುವುದು ; ಅಪಧಮನೀ ಶಸ್ತ್ರಚಿಕಿತ್ಸೆ. **Arterítis** ಆರ್ಟರೈಟಿಸ್ (ನಾ.) (ವೈ. ಶಾ.) ಅಪಧಮನಿಯ ಊತ.

Artésian ಆರ್ಟೀಷಿಯನ್ (ಗು.) ಆರ್ಟ್ವಾ ಪ್ರಾಂತದ, ಅಥವಾ ಮೊದಲು ಅಲ್ಲಿ ತೋಡಿದ, ಬಾವಿಗಳಂತೆ ಇರುವ. Artesian well ನೆಲದಲ್ಲಿ ತಳಗಡೆ ಹರಿಯುತ್ತಿರುವ ಜಲಪ್ರವಾಹದಿಂದ ನೀರು ಮೇಲಕ್ಕೆ ಉಕ್ಕಿ ಸಂತತವಾಗಿ ಬರುವಂತೆ ಅಲ್ಲಿಯ ವರೆಗೂ ಕೊರೆದು ಮಾಡಿದ ಕೊಳವೆಯ ಬಾವಿ : ಬುಗ್ಗೆಯ ಬಾವಿ.

Arthrítis ಆರ್ಥ್ರೈಟಿಸ್ (ನಾ.) ದೇಹದ ಕೀಲುಗಳ ಊತ ; ಸಂಧಿವಾತ ; ವಾತರೋಗ. **Arthrític(al) —** ತ್ರಿಟಿಕಲ್ (ಗು.) ; **Arthrópathy** ಆರ್ಥ್ರಾಪತಿ (ನಾ.) ದೇಹದ ಕೀಲುಗಳಲ್ಲಿ ನೋವಾಗುವ ರೋಗ ; ಕೀಲುರೋಗ. **Arthrósis** ಆರ್ಥ್ರೋಸಿಸ್ (ನಾ.) ಎರಡು ಎಲುಬುಗಳ ಕೊನೆಗಳು ಸಂಧಿಸಿ ಆದ ಕೀಲು.

Arthrópoda ಆರ್ಥ್ರಾಪೊಡ (ನಾ., ಬ. ವ. ; ಏ. ವ. Arthropod ಆರ್ಥ್ರೊಪಾಡ್) (ಪ್ರಾ. ವಿ.) ಕೀಲುಗಳುಳ್ಳ ಪಾದಗಳಿಂದ ಕೂಡಿದ ಪ್ರಾಣಿಗಳು : ಹುಳುಗಳು, ಜೇಡರಹುಳು, ನಳ್ಳಿ ಜಾತಿಯ ಪ್ರಾಣಿ, ಜರಿ, ಮೊ. ದ ಜಾತಿಗಳಿಗೆ ಸೇರಿದ ಪ್ರಾಣಿವರ್ಗ : ಸಂಧಿಪದಿಗಳು.

A'rtichoke ಆರ್ಟಿಚೋಕ್ (ನಾ.) ಹೂವಿನಲ್ಲಿ ತಿನ್ನಬಹುದಾದ ಭಾಗಗಳುಳ್ಳ, ಬಾರ್ಬರಿ ದೇಶದ ತವರಿನ, ಒಂದು ಮುಳ್ಳುಗಿಡ. Jerusalem artichoke ಆಹಾರದ ಗೆಣಸು ಬಿಡುವ ಒಂದು ಜಾತಿಯ ಸೂರ್ಯಕಾಂತ ಗಿಡ.

A'rticle ಆರ್ಟಿಕಲ್ (ನಾ.) ಲಿಖಿತವಾದ ಕಾನೂನು, ಒಪ್ಪಂದ, ತತ್ತ್ವ, ಮೊ. ಗಳ ಪ್ರತ್ಯೇಕ ಭಾಗ ಅಥವಾ ವಿಭಾಗ. ವರ್ತಮಾನ ಪತ್ರಿಕೆ, ನಿಯತಕಾಲಿಕ ಪತ್ರಿಕೆ, ಮೊ. ಗಳಿಗಾಗಿ ಬರೆದು ಕಳುಹಿಸಿದ ಲೇಖನ. ವಿಷಯ. ಪದಾರ್ಥ ; ಸರಕು. (ವ್ಯಾ.) Definite article : 'The' ಎಂಬ ನಿರ್ದೇಶಕ ಗುಣವಾಚಿ. Indefinite article :

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'A, An' ಎಂಬ ಅನಿರ್ದೇಶಕ ಗುಣವಾಚಿ. Leading article ವರ್ತಮಾನ ಪತ್ರಿಕೆಯ ಅಗ್ರಲೇಖನ, ಸಂಪಾದಕ ಲೇಖನ. Articles of Association ಒಂದು ಸಂಘದ ಸ್ಥಾಪನೆಯ ಕಟ್ಟಲೆಗಳು. **A'rticle** (ಕ್ರಿ. ಸಕ.) ಪ್ರಕರಣಗಳಾಗಿ ಬರೆ. ತಪ್ಪು ಹೊರಿಸು. ಅಭ್ಯಾಸಿಯನ್ನು ಕಟ್ಟಲೆಗಳಿಗೊಳಪಡಿಸು: (He was articled to an advocate ಅವನು ಅಡ್ವೊಕೇಟಿನ ಬಳಿ ಕಟ್ಟಲೆಗಳಿಗೊಳಪಟ್ಟು ಅಭ್ಯಾಸಿಯಾಗಿ ಸೇರಿಸಲ್ಪಟ್ಟನು)

Artícular ಆರ್ಟಿಕ್ಯುಲರ್ (ಗು.) ಶರೀರದ ಕೀಲುಗಳಿಗೆ ಸಂಬಂಧಪಟ್ಟ; ಸಂಧಿ ಸಂಬಂಧವಾದ. **Artículate** — ಲೆಟ್ (ಗು., ನಾ.) ಕೀಲಿನಿಂದ ಅಥವಾ ಕೀಲುಗಳಿಂದ ಕೂಡಿಸಿದ; ಕೀಲುಗಳಿಂದ ಕೂಡಿಸಿದ ಭಾಗಗಳುಳ್ಳ. (ಶಬ್ದ) ಸ್ಫುಟವಾಗಿಯೂ ಅರ್ಥವುಳ್ಳದ್ದಾಗಿಯೂ ಇರುವ ಭಾಗಗಳುಳ್ಳ; ಸ್ಫುಟೋಚ್ಚರಿತ: (Articulate speech ಸ್ಪಷ್ಟವಾದ ಮಾತು). ಸ್ಪಷ್ಟವಾದ; ಸ್ಫುಟವಾದ. (ಜೀ. ವಿ.) ಅರೀಢಕ (ಎಂದರೆ, ಬೆನ್ನುಮೂಳೆಯಿಲ್ಲದ) ಸಂಧಿದೇಹಿಗಳ ವರ್ಗಕ್ಕೆ ಸೇರಿದ ಪ್ರಾಣಿ. **Articuláta** — ಲೇಟ (ನಾ.) ವಲಯಾಕಾರದ ಅನೇಕ ಭಾಗಗಳು ಒಂದಕ್ಕೊಂದು ಸೇರಿ ಆಗಿರುವ ಶರೀರವೂ, ಬೆನ್ನೆಲುಬಿಲ್ಲದ ಹೊರ ಅಸ್ಥಿಪಂಜರವೂ ಉಳ್ಳ ಪ್ರಾಣಿವರ್ಗ: ಅರೀಢಕ ಸಂಧಿದೇಹಿಗಳು (ಉದಾ.—ಹುಳುಗಳು, ವಲ್ಕವಂತಗಳು, ಮೊ.). **Artículately** (ಕ್ರಿ. ವಿ.); **Artículateness** (ನಾ.); **Artículate** — ಲೇಟ್ (ಕ್ರಿ.) ಕೀಲಿನಿಂದ ಜೋಡಿಸು; ಕೀಲುಗಳಿಂದ ಕೂಡಿಸಿರುವಹಾಗೆ ತೋರು. ಸ್ಪಷ್ಟವಾಗಿ ಉಚ್ಚರಿಸು; ಮಾತುಗಳಲ್ಲಿ ವ್ಯಕ್ತಪಡಿಸು. **Articulátion** (ನಾ.) ಕೀಲುಗೂಡಿಸುವುದು; ಕೀಲುಗೂಡಿಸಿರುವ, ಕೀಲುಗೂಡಿಸುವ ರೀತಿ; ಸಂಧಿಬಂಧನ. ಕೀಲು; ಸಂಧಿ. ವ್ಯಂಜನೋಚ್ಚಾರಣೆ; ಸ್ಫುಟೋಚ್ಚಾರಣೆ. ಮಾತು; ನುಡಿ. (ಸ. ವಿ.) ಎಲೆ, ಮೊ. ಭಾಗಗಳು ಸಸ್ಯದಿಂದ ಹೊರಡುವ ಸ್ಥಳ: ಗಿಣ್ಣು; ಪರ್ವ. **Artículator** (ನಾ.) ಎಲುಬುಗಳನ್ನು ಜೋಡಿಸಿ ಅಸ್ಥಿಪಂಜರವನ್ನು ತಯಾರಿಸುವವನು. ಮಾತನ್ನು ಸ್ಫುಟವಾಗಿ ಉಚ್ಚರಿಸುವವನು. **Artículatory** (ಗು.)

A'rtifact. **Artefact** ನೋಡಿ.

A'rtifice ಆರ್ಟಿಫಿಸ್ (ನಾ.) (ಮನುಷ್ಯನ) ಯುಕ್ತಿ, ಚಾತುರ್ಯ, ತಂತ್ರ, ಸಂಚು, ಹೂಟ. **Artíficer** (ನಾ.) ಶಿಲ್ಪಿ; ಕುಶಲ ಕರ್ಮಿ. ಉಪಾಯಜ್ಞ; ಯುಕ್ತಿಶಾಲಿ. ನಿರ್ಮಾಪಕ. **Artifícial** — ಷಲ್ (ಗು.) ಕೃತಕ; ನಿರ್ಮಿತ; ಅಸ್ವಾಭಾವಿಕ. **Artifícially** (ಕ್ರಿ. ವಿ.); **Artifícialness** (ನಾ.); **Artifícialize** (ಕ್ರಿ. ಸಕ.); **Artificiálity** — ಷಿಯೆಲ್ಯಾಲಿಟಿ (ನಾ.)

Artíllery ಆರ್ಟಿಲೆರಿ (ನಾ.) ಗುಂಡು ಮೊ. ನ್ನು ಬಿರುಸಾಗಿ ಎಸೆಯಲು ಉಪಯೋಗಿಸುವ ಯಂತ್ರಸಾಧನ: ಫಿರಂಗಿ. ಫಿರಂಗಿಹಾರಿಸುವ ಕೆಲಸದ ಸೈನ್ಯದ ಭಾಗ: ಫಿರಂಗಿ ದಳ; ಗೋಲಂದಾಜರು. ಫಿರಂಗಿ ವಿದ್ಯೆ. Artillery-train ಫಿರಂಗಿಗಳನ್ನು ಹೇರಿ ಯುದ್ಧಪ್ರಯಾಣಕ್ಕೆ ಸಿದ್ಧವಾಗಿರುವ ಬಂಡಿಸಾಲು. Heaven's artillery ಗುಡುಗೂ ಮಿಂಚೂ. **Artíllerist** (ನಾ.) ಫಿರಂಗಿವಿದ್ಯೆ ಬಲ್ಲವನು; ಗೋಲಂದಾಜ. **Artílleryman** ಗೋಲಂದಾಜ; ಗೋಲಂದಾಜು ಇಲಾಖೆಗೆ ಸೇರಿದವನು.

Artiodáctyl(e) ಆರ್ಟಿಯೊಡ್ಯಾಕ್ಟಿಲ್ (ಗು.) (ಪ್ರಾ. ವಿ.) ಸಮ ಸಂಖ್ಯೆಯ ಕಾಲ್ಬೆರಳುಗಳುಳ್ಳ.

Artisán ಆರ್ಟಿಸ್ಯಾನ್ (ನಾ.) ಕೈಗೆಲಸಗಾರ; ಕೈವಾಡದವನು; ಕಸಬುದಾರ; ಕಾರೇಗಾರ; ಶಿಲ್ಪಕಾರ; ಶಿಲ್ಪಿ.

A'rtist ಆರ್ಟಿಸ್ಟ್ (ನಾ.) ಕಲಾ ಕುಶಲಿ (ಮು., ಚಿತ್ರಗಾರ); ಕಲಾಭಿಜ್ಞ; ಕಲೋಪಾಸಕ. ತಾನು ಮಾಡುವ ಕೆಲಸವನ್ನು ಕಲಾದೃಷ್ಟಿಯಿಂದ ಮಾಡುವವನು: ಕುಶಲ ಕರ್ಮಿ. **Artístic(al)** (ಗು.) ಕಲಾಸೌಂದರ್ಯವುಳ್ಳ. **Artístically** (ಕ್ರಿ. ವಿ.) ಕುಶಲತೆ ತೋರುವಂತೆ; ಕುಶಲತೆಯ ದೃಷ್ಟಿಯಿಂದ. **A'rtistry** (ನಾ.) ಕಲಾಕೌಶಲ; ಕಲಾವಸ್ತು ಸಂಗ್ರಹ.

Artíste ಆರ್ಟೀಸ್ಟ್ (ನಾ.) ಸಂಗೀತ, ನಾಟ್ಯ, ಮೊ. ವಿದ್ಯೆಗಳಲ್ಲಿ ನಿಪುಣ, ಪ್ರವೀಣ, ನುರಿತವನು.

A'rty ಆರ್ಟಿ (ಗು.) (ಬಳ. ಮಾ.) ಶಿಲ್ಪ ಚಮತ್ಕಾರಾಡಂಬರದ; ಕಲಾನೈಪುಣ್ಯದ ಬಾಹ್ಯಾನುಕರಣ ಮಾಡುವ; ಬರಿ ನಾಜೂಕಿನ. Arty and crafty (ಹಾಸ್ಯವಾಗಿ, ಮನೆಯ ಸಾಮಾನುಗಳ ವಿಷಯದಲ್ಲಿ) ನಾಜೂಕಿನ ಆಡಂಬರ ಹೊರತು ಉಪಯೋಗಕ್ಕಾಗಲಿ ಸೌಖ್ಯಕ್ಕಾಗಲಿ ಒದಗದ.

A'rval ಆರ್ವಲ್ (ಗು.) ಉತ್ತ ನೆಲದ.

A'ryan, A'rian ಆರ್ಯನ್ (ಗು., ನಾ.) ಸಂಸ್ಕೃತ, ಜೆಂದ್, ಪಾರಸಿ, ಗ್ರೀಕ್, ಲ್ಯಾಟಿನ್, ಟ್ಯುಟಾನಿಕ್, ಸ್ಲೆವಾನಿಕ್, ಮೊ. ಭಾಷೆಗಳನ್ನೊಳಕೊಂಡ ಭಾಷಾವರ್ಗಕ್ಕೆ ಸೇರಿದ; (ಕೆಲವರ ಅಭಿಪ್ರಾಯದಲ್ಲಿ) ಇವುಗಳಲ್ಲಿ ಏಷ್ಯಾಖಂಡದವಕ್ಕೆ ಮಾತ್ರ ಸಂಬಂಧಪಟ್ಟ ಭಾಷಾವರ್ಗದ; ಆರ್ಯ. ಆರ್ಯವರ್ಗಕ್ಕೆ ಸೇರಿದವನು, ಸೇರಿದುದು.

As[1] ಆ್ಯಸ್, ಆ್ಯಸ್, ಅಸ್ (ಕ್ರಿ. ವಿ., ಸಂ. ಅವ್ಯ., ಸಂಬಂಧ ಸ. ನಾ.) ಅಂತೆ; ಹಾಗೆ; ಪ್ರಕಾರ; ರೀತಿಯಾಗಿ (Do as you like ನಿನ್ನ ಇಷ್ಟಬಂದಂತೆ ಮಾಡು). ಎಂದು (He considers pleasure as the object of his life ಭೋಗವೇ ತನ್ನ ಜೀವನದ ಧ್ಯೇಯವೆಂದು ಅವನು ಎಣಿಸುತ್ತಾನೆ). ಆದರೂ (Fair as she is ಅವಳು ಸುಂದರಿಯಾಗಿದ್ದರೂ). ಆಗ (It struck me as I was speaking ನಾನು ಮಾತನಾಡುತ್ತಿದ್ದಾಗ ಅದು ಹೊಳೆಯಿತು). ಆದುದರಿಂದ, ಆದಕಾರಣ (As you are not ready ನೀನು ಸಿದ್ಧವಾಗಿಲ್ಲದುದರಿಂದ). ಅಂಥ (Give us such things as you please ನಿನಗೆ ಇಷ್ಟಬಂದಂಥ ಪದಾರ್ಥಗಳನ್ನು ನಮಗೆ ಕೊಡು). ಉದಾಹರಣೆಗಾಗಿ (Coastal cities as Karachi ತೀರಪಟ್ಟಣಗಳು: ಉದಾ.—ಕರಾಚಿ). ಆ ಸ್ಥಿತಿಯಲ್ಲಿ (As a king he is great ದೊರೆಯೆಂಬುದನ್ನು ಪರಿಗಣಿಸಿದರೆ ಆತನು ಘನವಂತನು). ಅಷ್ಟು, ಅಂತೆ, ಹಾಗೆ (As heavy as lead ಸೀಸದಷ್ಟು ಭಾರ). ಹೇಗೋ ಹಾಗೆ (In work as in play ಆಟದಲ್ಲಿ ಹೇಗೋ ಕೆಲಸದಲ್ಲಿಯೂ ಹಾಗೆಯೇ). As . . . as ಎಷ್ಟು . . . ಅಷ್ಟು (I came as soon as I could ಎಷ್ಟು ಬೇಗ ಬರಬಹುದೊ ಅಷ್ಟು ಬೇಗ ಬಂದೆನು). So as ಅಂತೆ (So as not to wound him ಅವನನ್ನು ನೋಯಿಸದಂತೆ). Such as ಅಂಥ (Such countries as Spain ಸ್ಪೈನಿನಂಥ ದೇಶಗಳು). As far as ವರೆಗೆ, ಮಟ್ಟಿಗೆ. As for ಆದರೋ, ಅಂತೂ, ವಿಚಾರವಾಗಿ (As for me ನನಗಾದರೋ, ನನಗಂತೂ. As for this ಈ ವಿಚಾರವಾಗಿ). As from ಇಂದ (As from the 1st of March ಮಾರ್ಚಿ ಮೊದಲನೆಯ ತಾರೀಖಿನಿಂದ ಎಣಿಸಿ). As good as ಅಂತೆ (He is as good as his word ಅವನು ತನ್ನ ಮಾತಿನಂತೆ ನಡೆಯುವವನು). As if ಎಂಬಂತೆ (As if nothing had happened ಏನೂ ನಡೆದಿಲ್ಲವೆಂಬಂತೆ). As long as ವರೆಗೂ (As long as you are here ನೀನು ಇಲ್ಲಿರುವ ವರೆಗೂ). As much ಹಾಗೆಯೇ; ಅದನ್ನೇ (I thought as much ನಾನು ಹಾಗೆಯೇ ಯೋಚಿಸಿದೆನು). As regards, As to ಕುರಿತು, ವಿಷಯವಾಗಿ (As to when he would come ಅವನು ಯಾವಾಗ ಬರುವನೆಂಬ ವಿಷಯವಾಗಿ). As well as ಮತ್ತು; ಕೂಡ; ಸಹ; — ಊ. As yet ಇನ್ನೂ; ಈ ವರೆಗೆ.

As[2] ಆ್ಯಸ್ (ನಾ.) ರೋಮ್ ದೇಶದ ಒಂದು ತಾಮ್ರದ ನಾಣ್ಯ.

Asafoétida ಆ್ಯಸಫಟಿಡ (ನಾ.) ಹಿಂಗು; ರಾಮಠ.

Asbéstos, — tus ಆ್ಯಸ್‌ಬೆಸ್ಟಸ್ (ನಾ.) ಬೆಂಕಿಯಲ್ಲಿ ಸುಡದಿರುವ, ಬಟ್ಟೆಯನ್ನು ನೇಯ್ಯಲಾಗುವ, ನಾರುನಾರಾದ ಒಂದು ಪದಾರ್ಥ:

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಲ್ನಾರು. **Asbéstic** (ಗು.) ಕಲ್ನಾರಿನ ಸ್ವಭಾವದ. **Asbéstine** — ಟಿನ್ (ಗು.) ಕಲ್ನಾರಿನ ; ಕಲ್ನಾರಿನ ಗುಣವುಳ್ಳ. ಬೆಂಕಿಯಲ್ಲಿ ಸುಡದ ; ಅದಾಹ್ಯ. **Asbéstoid** (ಗು.) ಕಲ್ನಾರಿನಂತಿರುವ.

Ascárides ಅಸ್‌ಕ್ಯಾರಿಡೀಸ್ (ನಾ., ಬ. ವ.) ಕರುಳಿನಲ್ಲಿರುವ ಒಂದು ಜಂತುಜಾತಿ : ತಂತುಜಂತು.

Ascénd ಅಸೆಂಡ್ (ಕ್ರಿ.) ಏರು ; ಹತ್ತು ; ಮೇಲಕ್ಕೆ ಹೋಗು. ಚಡಾವಾಗಿರು ; ಏರಾಗಿರು. (ಗ್ರಹಗತಿಯಲ್ಲಿ) ಕ್ಷಿತಿಜದ ಮೇಲಕ್ಕೆ ಬರು ; ಉದಯಿಸು. ಪ್ರಾಬಲ್ಯಕ್ಕೆ, ಅಭ್ಯುದಯಕ್ಕೆ, ಬರು. ಕಾಲದಲ್ಲಿ ಹಿಂದಕ್ಕೆ ಹೋಗು (Inheritance may not lineally ascend ಆಸ್ತಿಯ ಉತ್ತರಾಧಿಕಾರವು ಹಿಂದಿನ ತಲೆಗೆ ಹೋಗಲಾರದು). (Ascend a river ನದಿಯ ಪ್ರವಾಹಕ್ಕೆ ಎದುರಾಗಿ ಹೋಗು). **Ascéndance, — ence ; Ascéndancy, — ency,** — ಡೆನ್ಸಿ (ನಾ.) ಔನ್ನತ್ಯ ; ಏರಿಕೆ ; ಏಳಿಗೆ ; ಉಚ್ಛ್ರಾಯ ; ಪ್ರಾಬಲ್ಯ ; ಅಭ್ಯುದಯ. ಅಧಿಕಾರ ; ಆಧಿಪತ್ಯ. **Ascéndant, — ent** — ಡೆಂಟ್ (ಗು.) ಏರುವ ; ಹತ್ತುವ ; ಉಚ್ಚ ; ಪ್ರಧಾನ ; ಪ್ರಬಲ. (ಖ. ವಿ.) ಖಮಧ್ಯಕ್ಕೇರುತ್ತಿರುವ. (ಜ್ಯೋ.) ಪೂರ್ವಕ್ಷಿತಿಜದಿಂದ ಕೊಂಚ ಮೇಲಿರುವ. ಪ್ರಬಲವಾದ. (ನಾ.) ಉಚ್ಚತೆ ; ಉಚ್ಛ್ರಾಯ ; ಆಧಿಪತ್ಯ. ಜಾತಕ. ಪೂರ್ವಜ ; ಪಿತೃ. House of the ascendant ಉಚ್ಚಸ್ಥಾನ ; ಲಗ್ನ. Lord of the ascendant ಉಚ್ಚಾಧಿಪ ; ಲಗ್ನಾಧಿಪತಿ. In the ascendant ಉಚ್ಚದಲ್ಲಿ ; ಪ್ರಬಲ ಸ್ಥಿತಿಯಲ್ಲಿ ; ಏರಿಕೆಯಲ್ಲಿ. **Ascénsion** (ನಾ.) ಏರಿಕೆ ; ಆರೋಹಣ. ಕ್ರಿಸ್ತನ ಸ್ವರ್ಗಾರೋಹಣ. (ಖ. ವಿ.) ಉದಯ. Ascension Day ಕ್ರಿಸ್ತನ ಸ್ವರ್ಗಾರೋಹಣದ ಜ್ಞಾಪಕಾರ್ಥವಾಗಿ ಆಚರಿಸುವ ಉತ್ಸವದ ದಿನ (ಪವಿತ್ರ ಗುರುವಾರ). Right ascension ಖಗೋಳ ರೇಖಾಂಶ ; ಲಂಕೋದಯಾಂತರ ; ವಿಷುವಾಂಶ. **Ascénsional** (ಗು.) ; **Ascénsive** (ಗು.) ಏರುವ ; ಬೆಳೆಯುವ ; ವರ್ಧಿಸುವ. (ವ್ಯಾ.) ಆಧಿಕ್ಯಾರ್ಥದ. **Ascént** (ನಾ.) ಏರುವುದು ; ಏರಿಕೆ ; ಹತ್ತುವುದು ; ಆರೋಹಣ (ರೂಪ. ಸಹ). ಹತ್ತುವ ಮಾರ್ಗ ; ಏರುದಿಣ್ಣೆ ; ಮೆಟ್ಟಿಲು ; ಸೋಪಾನ.

Ascertaín ಆ್ಯಸರ್‌ಟೆಯ್‌ನ್ (ಕ್ರಿ. ಸಕ.) ಗೊತ್ತುಮಾಡು ; ಕಂಡುಹಿಡಿ ; ವಿಚಾರಿಸು. **Ascertaínable** (ಗು.) ; **Ascertaínment** (ನಾ.)

Ascétic ಅಸೆಟಿಕ್ (ಗು., ನಾ.) ದೇಹವನ್ನು ದಂಡಿಸುವ ; ತಪಸ್ಸು ಮಾಡುವ ; ವೈರಾಗ್ಯವುಳ್ಳ. ತಪಸ್ವಿ ; ವಿರಕ್ತ ; ಸಂನ್ಯಾಸಿ. **Ascétical** (ಗು.) ; **Ascétically** (ಕ್ರಿ. ವಿ.) ; **Ascéticism** (ನಾ.) ತಪಶ್ಚರ್ಯ ; ಸಂನ್ಯಾಸ (ಆಶ್ರಮ ಧರ್ಮ)

Ascítes ಅಸೈಟೀಸ್ (ನಾ.) (ವೈ. ಶಾ.) ಮಹೋದರ ; ಜಲೋದರ.

A'scot ಆ್ಯಸ್ಕಾಟ್ (ನಾ.) ಇಂಗ್ಲೆಂಡಿನ ಬರ್‌ಕ್‌ಷಯರ್ ಡಿಸ್ಟ್ರಿಕ್ಟಿನಲ್ಲಿರುವ ಆಸ್ಕಾಟ್ ಎಂಬ ಮೈದಾನದಲ್ಲಿ ಕುದುರೆಯ ಜೂಜಿಗಾಗಿ ಏರ್ಪಡಿಸಿರುವ ಪ್ರದೇಶ. ಈ ಜೂಜಿಗಾಗಿ ಸೇರುವ ಸಭೆ.

Ascríbe ಅಸ್‌ಕ್ರೈಬ್ (ಕ್ರಿ. ಸಕ.) ಸೇರಿದುದೆಂದು ಎಣಿಸು, ತಿಳಿ, ಹೇಳು ; ಆಪಾದಿಸು ; ಆರೋಪಿಸು. **Ascríbable** (ಗು.) ; **Ascríption** (ನಾ.) ಸೇರಿದುದೆಂದು ತಿಳಿಸುವುದು ; ಆಪಾದನೆ ; ಆರೋಪಣೆ. ಕ್ರೈಸ್ತೋಪದೇಶಕರ ಉಪದೇಶಾಂತ್ಯದಲ್ಲಿ ಹೇಳುವ ದೇವತಾಸ್ತೋತ್ರ.

Aséity ಅ(ಏ)ಸೀಯಿಟಿ (ನಾ.) (ತತ್ತ್ವಶಾಸ್ತ್ರ) ಸೃಷ್ಟಿಸಂಬಂಧವಿಲ್ಲದ, ಸ್ವಾಯತ್ತವಾದ, ಅಸ್ತಿತ್ವ ; ಅಸೃಷ್ಟ ; ನಿರುತ್ಪನ್ನ ಭಾವ.

Asépsis ಅಸೆಪ್ಸಿಸ್ (ನಾ.) ಕೊಳೆಯುವಂತೆ ಮಾಡುವ ಪದಾರ್ಥವಾಗಲಿ ವಿಷಾಣುಗಳಾಗಲಿ ಇಲ್ಲದಿರುವುದು ; ಪೂತಿ ರಾಹಿತ್ಯ. ಶಸ್ತ್ರಚಿಕಿತ್ಸೆಯಲ್ಲಿ ವಿಷಾಣು ಸಂಬಂಧವಿಲ್ಲದಂತೆ ಮಾಡುವ ವಿಧಾನ : ಅಪೂತಿ ಚಿಕಿತ್ಸೆ. **Aséptic** (ಗು.) ಕೊಳೆಯದ ; ವಿಷಾಣು ರಹಿತ ; ಕೊಳೆತವುಂಟಾಗದಂತೆ ಮಾಡಿದ. ಗಾಯ, ಶಸ್ತ್ರಗಳು, ಇತರ ಪರಿಕರಗಳು —ಇವನ್ನು ವಿಷಾಣು ರಹಿತವನ್ನಾಗಿ ಮಾಡಿದ : ನಿರ್ವಿಷೀಕೃತ. (ನಾ.) ಕೊಳೆಯದಂತೆ ಮಾಡುವ ಪದಾರ್ಥ.

Aséxual ಅಸೆಕ್‌ಷ್ಯುಅಲ್ (ಗು.) (ಜೀ. ವಿ.) ಪುಂಸ್ತ್ರೀತ್ವ ರಹಿತ ; ಲಿಂಗರಹಿತ ; ನಿರ್ಲಿಂಗ. **Asexuálity** (ನಾ.)

Ash[1] ಆ್ಯಷ್ (ನಾ.) ಒಂದು ಜಾತಿಯ ಮರ (ಮರದ ಎಳೆಗಳು ಹತ್ತಿರ ಹತ್ತಿರ ವಿರುವ, ಗಡುಸಾದ, ಒಂದು ಜಾತಿಯ ಕಾಡುಮರ) ; ಈ ಮರದ ನಾಟ. Ash-key ಈ ಮರದಲ್ಲಿ ಬಿಡುವ ರೆಕ್ಕೆಗಳುಳ್ಳ ಬೀಜ. Ash-leaf ಆ್ಯಷ್ ಮರದ ಎಲೆಯಂತೆ ಎಲೆಗಳುಳ್ಳ, ಬೇಗ ಬೆಳೆಯಾಗುವ, ಆಲೂಗೆಡ್ಡೆ. **A'shen** (ಗು.) ಆ್ಯಷ್‌ಮರಕ್ಕೆ ಸಂಬಂಧಪಟ್ಟ ; ಆ್ಯಷ್ ಕಟ್ಟಿಗೆಯಿಂದ ಮಾಡಿದ.

Ash[2] ಆ್ಯಷ್ (ನಾ.) (ಸಾ., ಬ. ವ. ದಲ್ಲಿ) ಬೂದಿ ; ಭಸ್ಮ ; ದೂಳು. (ಹೆಣ ಸುಟ್ಟ) ಬೂದಿ (ರೂಪ. ಸಹ.). (ಕಾವ್ಯ) ಹೆಣ. ಸತ್ತಂತೆ ತೋರುವ ವೈವರ್ಣ್ಯ (ಬಿಳಿಚು). ಬೂದಿಬಣ್ಣ. ವ್ಯಸನದ ಅಥವಾ ಪಶ್ಚಾತ್ತಾಪದ ಚಿಹ್ನೆ (Sack cloth and ashes ಗೋಣಿಪಟ್ಟೆ ಮತ್ತು ಬೂದಿ). To lay in ashes ಬುಡಮುಟ್ಟ ಸುಟ್ಟುಬಿಡುವುದು ; ನಾಶಮಾಡುವುದು (Whole kingdoms laid in ashes ಅನೇಕ ರಾಜ್ಯಗಳು ಬುಡಮುಟ್ಟ ನಾಶವಾಗಿ). Bring back the ashes (ಕ್ರಿಕೆಟ್ ಆಟದಲ್ಲಿ) ಸೋತಿದ್ದವರು ಗೆದ್ದುಕೊಂಡು ಬರು. Ash-fire (ರಸಾಯನ ಕಾರ್ಯದಲ್ಲುಪಯೋಗಿಸುವ) ಸಣ್ಣ ಉರಿ, ಬೆಂಬೂದಿ. Ash-furnace (ಗಾಜನ್ನು ತಯಾರಿಸುವಲ್ಲಿ ಉಪಯೋಗಿಸುವ) ಕುಲುಮೆ. Ash-Wednesday ಬೂದಿಬುಧವಾರ ; ಕ್ರೈಸ್ತರ ಉಪವಾಸ ವ್ರತ ದಿನಗಳ ಮೊದಲನೆಯ ದಿನ (ಆ ದಿನ ಪಶ್ಚಾತ್ತಾಪಿಗಳ ತಲೆಯಮೇಲೆ ಬೂದಿಯನ್ನೆರಚುವ ಪದ್ಧತಿ ರೋಮನ್‌ಕ್ಯಾತೊಲಿಕರಲ್ಲಿದೆ). **A'shen** (ಗು.) ಬೂದಿಯ ; ಬೂದಿಬಣ್ಣದ ; ವಿವರ್ಣವಾದ (ಬಿಳಿಚಾದ). **A'shy** (ಗು.) ಬೂದಿಯ ; ಬೂದಿ ಮುಚ್ಚಿದ ; ಬೂದಿ ಬಣ್ಣದ ; ಅತಿ ಬಿಳಿಚಾದ.

Ashámed ಅಷೇಮ್ಡ್ (ಗು.) ನಾಚಿದ ; ಲಜ್ಜಿತ ; (ಮಾಡಿದ ತಪ್ಪು ತಿಳಿದು) ಲಜ್ಜೆಗೊಂಡ, ತಲೆತಗ್ಗಿಸಿದ. ಹೀನಾಯಪಟ್ಟ ; ಅವಮಾನಪಟ್ಟ.

A'shlar ಆ್ಯಷ್ಲರ್ (ನಾ.) (ಕಟ್ಟಡಕ್ಕಾಗಲಿ ಹಾಸುವುದಕ್ಕಾಗಲಿ ಉಪಯೋಗಿಸಲು) ಚದರವಾಗಿ ಸೀಳಿ ತೆಗೆದ ಕಲ್ಲು. ಚದರ ಕಲ್ಲಿನಿಂದ ಕಟ್ಟಿದ ಕಟ್ಟಡ. ತುಂಡುಕಲ್ಲುಗಳ ಕಟ್ಟಡದ, ಇಟ್ಟಿಗೆಯ ಕಟ್ಟಡದ, ಹೊರಮೈಯ ರಕ್ಷಣೆಗಾಗಿ (ಸಾ., ತೆಳುವು ಚಪ್ಪಡಿಯಿಂದ) ಕಟ್ಟಿದ ಮುಖಾವರಣ. **A'shlaring** (ನಾ.) ಮನೆಯ ಅಟ್ಟದ ಮೇಲಕ್ಕೆ ಹಾಕಿರುವ ತೀರುಗಳು ನೆಲದ ವರೆಗೂ ಬಂದು ವಿಕಾರವಾಗಿ ಕಾಣುವುದನ್ನು ತಪ್ಪಿಸುವುದಕ್ಕಾಗಿ ನೆಟ್ಟಗೆ ನೆಟ್ಟ ತುಂಡುಹಲಗೆಗಳು. ಚದರ ಕಲ್ಲಿನ ಕಟ್ಟಡ.

Ashóre ಅಷೋರ್ (ಕ್ರಿ. ವಿ.) ದಡಕ್ಕೆ ; ದಡದ ಕಡೆಗೆ ; ದಡದ ಮೇಲೆ ; ಕರೆಗೆ ; ತೀರಕ್ಕೆ.

Asiátic ಏಷಿಆ್ಯಟಿಕ್ (ಗು., ನಾ.) ಏಷ್ಯಾಖಂಡಕ್ಕೆ ಅಥವಾ ಅದರ ಜನಕ್ಕೆ ಸಂಬಂಧಪಟ್ಟ. ಏಷ್ಯಾಖಂಡದವನು.

Asíde ಅಸೈಡ್ (ಕ್ರಿ. ವಿ., ನಾ.) ಪಕ್ಕಕ್ಕೆ ; ಪಾರ್ಶ್ವಕ್ಕೆ ; ಬದಿಗೆ ; ಪಕ್ಕದಲ್ಲಿ ; ಪಾರ್ಶ್ವದಲ್ಲಿ ; ಬದಿಯಲ್ಲಿ. ಆಚೆಗೆ ; ದಾರಿಬಿಟ್ಟು. (Set aside (ತೀರ್ಪನ್ನು) ರದ್ದುಮಾಡು. Speak aside ಬೇರೆ, ಗುಟ್ಟಾಗಿ, ಏಕಾಂತವಾಗಿ, ರಹಸ್ಯವಾಗಿ, ಮಾತನಾಡು). ಹತ್ತಿರಿರುವವರಿಗೆ ಕೇಳದಂತೆ ಅಥವಾ ಕೇಳಬಾರದೆಂಬ ಅಭಿಪ್ರಾಯದಿಂದ ಆಡಿದ ಮಾತು : ಏಕಾಂತ ಭಾಷಣ. (ನಾಟಕದಲ್ಲಿ) ಜನಾಂತಿಕಂ ; ಅಪವಾರಿತಂ. ಪರೋಕ್ಷ ಪ್ರಯತ್ನ ; ಪ್ರಾಸಂಗಿಕ ಪ್ರಯತ್ನ.

A'sinine. **Ass** ನೋಡಿ.

Ask ಆ್ಯಸ್ಕ್ (ಕ್ರಿ.) ಕೇಳು ; ವಿಚಾರಿಸು ; ಬೆಸಗೊಳ್ಳು ; ಪ್ರಶ್ನೆಮಾಡು. ಕೋರು ; ಕೇಳಿಕೊ ; ಬೇಡು. (ಔತಣ ಮೊ. ಕ್ಕೆ) ಬರಹೇಳು, ಕರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಳು. Ask the banns ವಿವಾಹಕ್ಕೆ ಸಮ್ಮತಿ ಕೇಳು. Ask for it (ಅಸಂ.) ಕೇಡನ್ನು ತಾನಾಗಿ ತಂದುಕೊ. **A'sking** (ನಾ.)

Askánce, — ant ಅಸ್ಕಾನ್ಸ್, ಅಸ್ಕಾಂಟ್ (ಕ್ರಿ. ವಿ.) ಓರೆಯಾಗಿ; ಓರೆಗಣ್ಣಿನಿಂದ; ವಕ್ರವಾಗಿ; ವ್ಯಂಗ್ಯವಾಗಿ; ಸಂಶಯದಿಂದ. To look askance at ಅಸಡ್ಡೆಯಿಂದ, ತಿರಸ್ಕಾರದಿಂದ, ಮತ್ಸರದಿಂದ, ಅಪನಂಬಿಕೆಯಿಂದ, ನೋಡುವುದು; ಕಡೆಗಣಿಸುವುದು.

Askew ಅಸ್‌ಕ್ಯೂ (ಕ್ರಿ. ವಿ.) ಓರೆಯಾಗಿ; ವಕ್ರವಾಗಿ; ಮುಖಕೊಡದೆ. (ಗು.) ವಕ್ರವಾಗಿರುವ; ಸೊಟ್ಟನಾಗಿ ಮಾಡಿದ ಅಥವಾ ನಿಂತಿರುವ: (Askew arches, bridges —ಕಮಾನುಗಳು, ಸೇತುವೆಗಳು.)

Aslánt ಅಸ್ಲಾಂಟ್ (ಕ್ರಿ. ವಿ., ಉಪ.) ಓರೆಯಾಗಿ; ಓಲಿಕೊಂಡು; ಅಡ್ಡರಾಗಿ.

Asleép ಅಸ್ಲೀಪ್ (ಕ್ರಿ. ವಿ., ಗು.) ನಿದ್ದೆಹೋಗುತ್ತ; ನಿದ್ದೆಯಲ್ಲಿ. (ರೂಪ.) ನಿಶ್ಚೇಷ್ಟನಾಗಿ; ಜಡವಾಗಿ; ಸತ್ತು. (ಕೈಕಾಲುಗಳು) ಜೋವುಹಿಡಿದು. (ಬುಗುರಿ) ಚಲನ ಕಾಣದಷ್ಟು ವೇಗವಾಗಿ ಸುತ್ತುತ್ತ; ನಿದ್ರಿಸುತ್ತ.

Aslópe ಅಸ್ಲೋಪ್ (ಕ್ರಿ. ವಿ., ಗು.) ಓಲಿ; ಇಳಿಜಾರಾಗಿ; ಅಡ್ಡರಾಗಿ.

Asp[1] ಆ್ಯಸ್ಪ್ (ನಾ.) ಅಲುಗುತ್ತಿರುವ ಎಲೆಗಳುಳ್ಳ ಒಂದು ಜಾತಿಯ ಮರ; ಈ ಮರದ ದಾರು. **A'spen** (ಗು.) ಆ್ಯಸ್ಪ್‌ಮರದ; ಆ್ಯಸ್ಪ್‌ಮರದಂಥ. ಅದಿರುತ್ತಿರುವ; ಕಂಪಿಸುತ್ತಿರುವ. (ನಾ.) ಆ್ಯಸ್ಪ್‌ಮರ.

Asp[2] ಆ್ಯಸ್ಪ್ (ನಾ.) (ಪ್ರಾ. ವಿ.) ಈಜಿಪ್ಟ್ ಮತ್ತು ಲಿಬಿಯಾ ದೇಶಗಳಲ್ಲಿರುವ ಹೆಡೆಯುಳ್ಳ ಒಂದು ಜಾತಿಯ ಸಣ್ಣ ವಿಷಸರ್ಪ. (ಕಾವ್ಯ) ವಿಷಸರ್ಪ.

Aspáragus ಅಸ್‌ಪ್ಯಾರಗಸ್ (ನಾ.) ತಿನ್ನುವುದಕ್ಕೆ ರುಚಿಯಾಗಿರುವ ಚಿಗುರುಳ್ಳ ಒಂದು ಜಾತಿಯ ಸಸ್ಯ. (ಸ. ವಿ.) ಈ ಸಸ್ಯವಂಶವನ್ನೊಳಕೊಂಡ ಸಸ್ಯಜಾತಿ.

A'spect ಆ್ಯಸ್ಪೆಕ್ಟ್ (ನಾ.) ನೋಟ; ದೃಷ್ಟಿ; ತೋರ್ಕೆ; ದರ್ಶನ; ಮುಖಮುದ್ರೆ; ಮುಖ; ರೂಪ; ಆಕಾರ. ಸ್ಥಿತಿ; ಸಂಬಂಧ. (ಜ್ಯೋ.) ದೃಷ್ಟಿ.

Aspergíllum ಆ್ಯಸ್ಪರ್ಜಿಲಂ (ನಾ.) (ರೋಮನ್ ಕ್ಯಾತೊಲಿಕರಲ್ಲಿ) ತೀರ್ಥವನ್ನು ಪ್ರೋಕ್ಷಿಸುವುದಕ್ಕಾಗಿ ಉಪಯೋಗಿಸುವ ಕೂರ್ಚ: ತೀರ್ಥೋದಕ ಮಾರ್ಜನ ಕೂರ್ಚ.

Aspérity ಅಸ್ಪೆರಿಟಿ (ನಾ.) ಒರಟು; ತರಕಲು. ಉಗ್ರತೆ; ತೀಕ್ಷ್ಣತೆ; ತೀವ್ರತೆ. (ಮನೋವೃತ್ತಿ) ಕಾಠಿನ್ಯ; ನಿಷ್ಠುರತೆ.

Aspérmous ಅಸ್ಪರ್ಮಸ್ (ಗು.) (ಸ. ವಿ., ಶ. ವಿ.) ಅಬೀಜ; ಬೀಜರಹಿತ; ಬೀಜಶೂನ್ಯ. **Aspérmatous** — ಮಟಸ್ (= Aspermous) (ಗು.); **Aspérmatism** — ಮಟಿಸ್ಮ್ (ನಾ.) ಬೀಜಶೂನ್ಯತೆ. ದೌರ್ಬಲ್ಯ; ವೀರ್ಯಾಭಾವ; ನಪುಂಸಕತೆ.

Aspérse ಅಸ್ಪರ್ಸ್ (ಕ್ರಿ. ಸಕ.) ಚಿಮುಕಿಸು; ಎರಚು. (ಗುಣ ಶೀಲಗಳ ಮೇಲೆ) ಮಸಿ ಚೆಲ್ಲು; ಕಳಂಕ ಹಚ್ಚು; ಹಳಿ; ದೂಷಿಸು; ದೋಷಾರೋಪಣೆ ಮಾಡು. **Aspérsion** — ಷನ್ (ನಾ.)

Aspersórium ಆ್ಯಸ್ಪರ್ಸೋರಿಯಂ (ನಾ.) ತೀರ್ಥಕಲಶ; ತೀರ್ಥಪಾತ್ರೆ.

A'sphalt ಆ್ಯಸ್‌ಫ್ಯಾಲ್ಟ್ (ನಾ.) ನುಣುಪಾಗಿಯೂ ಗಟ್ಟಿಯಾಗಿಯೂ ಒಡೆಯುವ ಸ್ವಭಾವವುಳ್ಳದ್ದಾಗಿಯೂ ಇರುವ ಕಪ್ಪನೆಯ ಒಂದು ರಾಳ ಪದಾರ್ಥ: ಕಲ್ಲರಗು; ಕಪ್ಪುರಾಳ. ರಸ್ತೆ ಮೊ. ವು ಗಟ್ಟಿಯಾಗಿಯೂ ನುಣುಪಾಗಿಯೂ ಇರುವುದಕ್ಕಾಗಿ ಅವುಗಳ ಮೇಲೆ ಹರಡುವ ಕಪ್ಪುರಾಳ, ಮರಳು, ಕೀಲೆಣ್ಣೆ, ಮೊ. ಗಳಿಂದ ಮಾಡಿದ ಮಿಶ್ರಣ: ಕಲ್ಲರಗಿನ ಜಲ್ಲಿ. (ಕ್ರಿ. ಸಕ.) (ರಸ್ತೆಗೆ) ಕಲ್ಲರಗನ್ನು ಅಥವಾ ಕಲ್ಲರಗಿನ ಜಲ್ಲಿಯನ್ನು ಹಾಕು. **Ashpháltic** (ಗು.)

A'sphodel ಆ್ಯಸ್ಫೊಡೆಲ್ (ನಾ.) ಒಂದು ಬಗೆಯ ನೆಯ್ದಿಲೆಯ ಜಾತಿ. (ಕಾವ್ಯ) ಸ್ವರ್ಗದಲ್ಲಿಯ ಬಾಡದ ಹೂವು.

Asphýxia, — xy ಆ್ಯಸ್‌ಫಿಕ್ಸಿಯ, — ಫಿಕ್ಸಿ (ನಾ.) ರಕ್ತದಲ್ಲಿ ಆಮ್ಲಜನಕದ ಅಭಾವದಿಂದುಂಟಾದ ಪ್ರಾಣನಿರೋಧ; ಉಸಿರು ಹಿಡಿತ; ಶ್ವಾಸಬಂಧನ. **Asphýxial** (ಗು.); **Asphýxiate** — ಯೇಟ್ (ಕ್ರಿ. ಸಕ.) ಉಸಿರುಕಟ್ಟುವಂತೆ ಮಾಡು; ಶ್ವಾಸಬಂಧನೆ ಮಾಡು. **Asphyxiátion** (ನಾ.); **Asphýxiator** (ನಾ.) ಶ್ವಾಸಬಂಧಕ. ಇಂಗಾಲಾಮ್ಲದ ಸಹಾಯದಿಂದ ಬೆಂಕಿಯ ಜ್ವಾಲೆಯನ್ನು ನಂದಿಸುವ ಸಲಕರಣೆ.

A'spic[1] ಆ್ಯಸ್ಪಿಕ್ (ನಾ.) ಲ್ಯಾವೆಂಡರ್ ಎಂಬ ಜಾತಿಯ ಸುವಾಸನಾ ಸಸ್ಯ. (ಕಾವ್ಯ) = Asp[2].

A'spic[2] ಆ್ಯಸ್ಪಿಕ್ (ನಾ.) ಒಂದು ವಿಧವಾದ ಮಾಂಸಭಕ್ಷ್ಯ.

Aspíre ಅಸ್ಪಯ್ರ್ (ಕ್ರಿ. ಅಕ.) ಹಾರೈಸು; ಮೇಲನ್ನು ಬಯಸು; ಉತ್ಕಾಂಕ್ಷಿಸು. ಮೇಲೇರು (ಸಾ., ರೂಪ.); ಹೆಗ್ಗುರಿಯಿಡು. **Aspírant** — ಯ್ರಂಟ್, **A'spirant** ಆ್ಯಸ್ಪಿರಂಟ್ (ನಾ.) ಹಾರೈಸುವವನು; ಉತ್ಕಾಂಕ್ಷಿ; ಉತ್ತಮಾರ್ಥಿ; ಶುಭಾರ್ಥಿ. **A'spirate** ಆ್ಯಸ್ಪಿರೇಟ್ (ಕ್ರಿ. ಸಕ.) ಮಹಾಪ್ರಾಣವಾಗುಚ್ಚರಿಸು. ಪಾತ್ರೆಯಿಂದ (ಅನಿಲವನ್ನು ಅಥವಾ ಹಬೆಯನ್ನು) ಹೊರಸೆಳೆ. **A'spirate** — ರೆಟ್ (ಗು., ನಾ.) ಮಹಾಪ್ರಾಣವಾಗುಚ್ಚರಿಸಿದ; ಮಹಾಪ್ರಾಣ. **Aspirátion** (ನಾ.) ಉಸಿರೆಳೆದುಕೊಳ್ಳುವುದು; ಉಸಿರೆಳೆತ; ವಾಯುಸೆಳೆತ. ಮಹಾಪ್ರಾಣೋಚ್ಚಾರಣೆ. ಹಾರೈಕೆ; ಮೇಲ್ಬಯಕೆ; ಹೆಗ್ಗುರಿ; ಉತ್ಕಾಂಕ್ಷೆ. **A'spirator** — ಟರ್ (ನಾ.) ಒಂದು ಕೊಳವೆಯ ಮೂಲಕ ವಾಯುವನ್ನು ಅಥವಾ ಅನಿಲವನ್ನು ಒಳಕ್ಕೆ ಸೇದಿಕೊಳ್ಳುವ ಸಲಕರಣೆ: ವಾಯುಚೋಷಕ. (ವೈ. ಶಾ.) ಕುರುವಿನೊಳಗಿನ ಕೀವನ್ನು ಗಾಳಿತೆಗೆದಿರುವ ಕೊಳವೆಯ ಮೂಲಕ ಹೊರಸೆಳೆಯುವ ಸಲಕರಣೆ: ಪೂಯಚೋಷಕ. (ಧಾನ್ಯ, ಮೊ.) ತೂರುವ ಯಂತ್ರ.

A'spirin ಆ್ಯಸ್ಪಿರಿನ್ (ನಾ.) ನೋವು ತೆಗೆಯುವ, ಜ್ವರವನ್ನು ನಿಲ್ಲಿಸುವ, ಒಂದು ಔಷಧ: ಆಸ್ಪಿರಿನ್.

Asquínt ಅಸ್‌ಕ್ವಿಂಟ್ (ಕ್ರಿ ವಿ., ಗು.) ಓರೆಗಣ್ಣಿನಿಂದ; ಕಡೆಗಣ್ಣಲ್ಲಿ; ಸೊಟ್ಟನೋಟದಿಂದ; ಮೆಳ್ಳೆಗಣ್ಣಿನಿಂದ.

Ass ಆ್ಯಸ್ (ನಾ.) ಕತ್ತೆ. ಮಡ್ಡಿ; ದಡ್ಡ; ಮೂರ್ಖ. **A'sinine** ಆ್ಯಸಿನೈನ್ (ಗು.) ಕತ್ತೆಯ; ಕತ್ತೆಯ ಗುಣವುಳ್ಳ; (ರೂಪ.) ಮಡ್ಡಿ; ದಡ್ಡ; ಮೂರ್ಖ. **Asinínity** ಆ್ಯಸಿನಿನಿಟಿ (ನಾ.) ಮಡ್ಡಿತನ; ದಡ್ಡತನ; ಮೂರ್ಖತನ. To make an ass of ಅಯೋಗ್ಯತೆಯನ್ನು ತೋರಿಸು, — ತೋರಿಸಿಕೊ. Asses' bridge ಯೂಕ್ಲಿಡ್ಡಿನ ಜ್ಯಾಮಿತಿಯ ಮೊದಲನೆಯ ಪುಸ್ತಕದ ೫ನೆಯ ಪ್ರತಿಜ್ಞೆ.

Assaíl ಅಸೇಯ್ಲ್ (ಕ್ರಿ. ಸಕ.) ಮೇಲೆಬೀಳು (ರೂಪ. ಸಹ); ಕೈಮಾಡು; ಆಕ್ರಮಣ ಮಾಡು; ದಾಳಿಯಿಡು; ಕವಿ; ಮುತ್ತು. (ಒಂದು ಕೆಲಸವನ್ನು) ಪಟ್ಟುಹಿಡಿದು ಮಾಡು. (ಪ್ರಶ್ನೆಹಾಕುವುದು, ಮೊ. ಗಳಿಂದ) ಘಾತಿಸು. **Assaílable** (ಗು.) ಆಕ್ರಮಣ ಸಾಧ್ಯ; ಟೀಕಿಸಲು ಎಡೆಯಿರುವ. **Assaílant** — ಲನ್ಟ್ (ನಾ.) ಮೇಲೆ ಬೀಳುವವನು.

Assássin ಅಸ್ಯಾಸಿನ್ (ನಾ.) ಘಾತಕ; ಕೊಲೆಪಾತಕ. **Assássinate** (ಕ್ರಿ. ಸಕ.) ಮೋಸದಿಂದ ಕೊಲ್ಲು; ಕೊಲೆಪಾತಕ ಮಾಡು. **Assassinátion** (ನಾ.); **Assássinator** (ನಾ.)

Assaúlt ಅಸಾಲ್ಟ್ (ನಾ.) ಮೇಲೆಬೀಳುವುದು (ರೂಪ. ಸಹ); ಆಘಾತ; ಮುತ್ತಿಗೆ. (Assault at arms ಕತ್ತಿಯ ಸಾಧನೆಯಲ್ಲಿ ಮೇಲೆನುಗ್ಗುವುದು; ಕತ್ತಿಯ ವರಿಸೆ. ಯುದ್ಧಕ್ರೀಡೆಯ ಪ್ರದರ್ಶನ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕೋಟೆಯ) ಹಲ್ಲಾ ; ದಾಳಿ. (ನ್ಯಾ. ಶಾ.) ದುಂಡಾವರ್ತಿಯಿಂದ ಹೆದರಿಸಿ ಮಾತನಾಡುವುದು ಅಥವಾ ಮೇಲೆಬೀಳುವುದು. **Assaúlt** (ಕ್ರಿ. ಸಕ.) ; **Assaúltable** (ಗು.)

Assaý ಅಸೇ (ನಾ. ಕ್ರಿ.) ಒಂದು ಖನಿಜದಲ್ಲಾಗಲಿ ಲೋಹಮಿಶ್ರಣದಲ್ಲಾಗಲಿ ಇರುವ ಒಂದು ಲೋಹದ ಮೊತ್ತವನ್ನು ನಿಷ್ಕರ್ಷಿಸುವುದು ; ಲೋಹ ಪರೀಕ್ಷೆ (ಮು., ಲೋಹದ ಗಟ್ಟಿಯ ಮತ್ತು ನಾಣ್ಯದ ಚೊಕ್ಕತನವನ್ನು ಕಂಡುಹಿಡಿಯುವುದು). (ಪ್ರಾಚೀ. ಪ್ರ.) ಪ್ರಯತ್ನ. (ಕ್ರಿ.) (ಬೆಲೆಯುಳ್ಳ ಲೋಹಗಳ) ಶುದ್ಧತೆಯನ್ನು ಪರೀಕ್ಷಿಸು ; ಒರೆಯಿಟ್ಟು ನೋಡು (ರೂಪ. ಸಹ). (ಕಷ್ಟಸಾಧ್ಯವಾದ ಕೆಲಸವನ್ನು) ಮಾಡಲು ಯತ್ನಿಸು. **Assaýable** (ಗು.) ; **Assaýing** (ನಾ.) ; **Assáyer** (ನಾ.) ಪರೀಕ್ಷಕ ; ಪರೀಕ್ಷೆಮಾಡಿ ನಿಷ್ಕರ್ಷಿಸುವವನು ; ಲೋಹ ಪರೀಕ್ಷಕ. ದೊರೆಯ ಅಥವಾ ಶ್ರೀಮಂತನ ಭೋಜನಪದಾರ್ಥಗಳನ್ನು ಮೊದಲೇ ರುಚಿನೋಡಿ ಪರೀಕ್ಷಿಸುವ ಅಧಿಕಾರಿ : ರುಚಿ ಪರೀಕ್ಷಕ.

Assémble ಅಸೆಂಬ್‌ಲ್ (ಕ್ರಿ.) ಒಟ್ಟುಗೂಡಿಸು ; ಸಭೆ ಸೇರಿಸು ; ಸಭೆ ಸೇರು ; ಒಟ್ಟುಗೂಡು ; ನೆರೆ. (ಒಂದು ಯಂತ್ರದ ಅಥವಾ ಕಟ್ಟಡದ ಭಾಗಗಳನ್ನು) ಜೋಡಿಸು. **Assémblage** (ನಾ.) ಜನಸಮೂಹ ; ಜನರ ಗುಂಪು ; ನೆರವಿ ; ತಂಡ ; ಗುಂಪು ; ಒಟ್ಟು. ಒಟ್ಟುಗೂಡಿಸುವುದು ; ಒಟ್ಟುಗೂಡುವುದು ; ಒಟ್ಟುಗೂಡಿದ ಸ್ಥಿತಿ. **Assémbly** (ನಾ.) ಒಟ್ಟುಸೇರುವುದು ; ನೆರವಿ ; ಸಭೆ (ಮು., ಪ್ರಜಾಪ್ರತಿನಿಧಿ ಸಭೆ. Indian Legislative Assembly ಭಾರತೀಯ ಶಾಸನ ಸಭೆ). ನಗಾರಿ, ಕಹಳೆ, ಮೊ. ಗಳ ಶಬ್ದದಿಂದ ಸೈನಿಕರನ್ನು ಕರೆದು ಸೇರಿಸುವುದು.

Assént ಅಸೆಂಟ್ (ಕ್ರಿ. ಅಕ., ನಾ.) ಒಪ್ಪು ; ಸಮ್ಮತಿಕೊಡು. ಒಪ್ಪಿಗೆ ; ಸಮ್ಮತಿ ; ಅಧಿಕಾರ ಸಮ್ಮತಿ (Royal assent ಪಾರ್ಲಿಮೆಂಟಿನಲ್ಲಿ ತೀರ್ಮಾನವಾದ ಕಾನೂನಿನ ಮಸೂದೆಗೆ ರಾಜನ ಅಂಗೀಕಾರ). **Asséntor** — ಟಾರ್ (ನಾ.) ; **Assentátion** (ನಾ.) ಹೇಳಿದ್ದಕ್ಕೆಲ್ಲ ದಾಸಾನುದಾಸನಂತೆ ಹೂಗುಟ್ಟುವುದು. **Asséntient** ಅಸೆನ್‌ಷೆಂಟ್ (ಗು., ನಾ.) ಅನುಮತಿ ಕೊಡುವ(ವನು)

Assért ಅಸರ್ಟ್ (ಕ್ರಿ. ಸಕ.) ಸಾಧಿಸಿ ಹೇಳು ; ಪ್ರತಿಪಾದಿಸು ; ಕಂಠೋಕ್ತವಾಗಿ ಹೇಳು ; ದೃಢವಾಗಿ ಹೇಳು ; ಒತ್ತಿ ಹೇಳು. Assert oneself ತನ್ನ ಪಕ್ಷವನ್ನು ಒತ್ತಿಹೇಳು. **Assértable** (ಗು.) ; **Assértive** (ಗು.) ; **Assértively** (ಕ್ರಿ. ವಿ.) ; **Assértiveness** (ನಾ.) ; **Assértion** ಅಸರ್ಷನ್ (ನಾ.) ಕಂಠೋಕ್ತವಾದ ಹೇಳಿಕೆ ; ದೃಢ ವಚನ ; ಪ್ರತಿಪಾದನೆ. Self-assertion ಆತ್ಮ ಪ್ರತಿಷ್ಠಾಪನೆ. **Assértor** (ನಾ.) ಕಂಠೋಕ್ತವಾಗಿ, ದೃಢವಾಗಿ, ಹೇಳುವವನು ; ಒಂದು ಪಕ್ಷ ಹಿಡಿದು ವಾದಿಸುವವನು.

Asséss ಅಸೆಸ್ (ಕ್ರಿ. ಸಕ.) (ದಂಡ, ತೆರಿಗೆ, ಮೊ. ಗಳ) ಮೊತ್ತವನ್ನು ಗೊತ್ತುಮಾಡು ; ದಂಡ ಹಾಕು ; ತೆರಿಗೆ ಹಾಕು ; ಕಂದಾಯ ಹಾಕು ; (ತೆರಿಗೆ ಹಾಕಲು ಆಸ್ತಿಯನ್ನು) ಬೆಲೆಕಟ್ಟು. **Asséssable** (ಗು.) ; **Asséssably** (ಕ್ರಿ. ವಿ.) ; **Asséssment** (ನಾ.) ದಂಡ, ತೆರಿಗೆ, ಕಂದಾಯ, ಮೊ. ನ್ನು ಹಾಕುವುದು; ಕಂದಾಯ ಹಾಕುವುದಕ್ಕಾಗಿ ಆಸ್ತಿಯನ್ನು ಬೆಲೆಕಟ್ಟುವುದು. ಕಂದಾಯ ; ತೆರಿಗೆ. (ರೂಪ.) ಅಂದಾಜು. **Asséssor** (ನಾ.) — ಬೆಲೆಕಟ್ಟುವವನು ; ಕರ ನಿರ್ಧಾರಕ. ನ್ಯಾಯನಿರ್ಣಯ ಕಾರ್ಯದಲ್ಲಿ ನ್ಯಾಯಾಧಿಪತಿಗೆ ಸಹಾಯಕನಾಗಿರುವವನು ; ನ್ಯಾಯದರ್ಶಿ (ಪಂಚಾಯತ)

A'ssets ಆ್ಯಸೆಟ್ಸ್ (ನಾ., ಬ. ವ.) (ನ್ಯಾ. ಶಾ.) ಅಂತಿಮ ಇಷ್ಟಪತ್ರವನ್ನು (ವಿಲ್ಲನ್ನು) ಬರೆದಿಟ್ಟಿರುವವನ ಸಾಲಸೋಲಗಳನ್ನು ಅವನ ಹಕ್ಕುದಾರನು ತೀರಿಸಲು ಸಾಕಾಗುವ ಆಸ್ತಿ ; ಸಾಲಕ್ಕೆ ಹೊಣೆಯಾಗಬಹುದಾದ ಆಸ್ತಿ. ದಿವಾಳಿಯಾದ ಸಾಲಗಾರನ ಉಳಿದಿರುವ ಆಸ್ತಿ. **A'sset** (ಲೇಣೆದೇಣೆಯ ತಃಖ್ತೆಯಲ್ಲಿ) ಲೇಣೆ. ಯಾವುದಾದರೂ ಆಸ್ತಿ. (ರೂಪ. ಸಹ)

Assévérate ಅಸೆವೆರೇಟ್ (ಕ್ರಿ. ಸಕ.) ತ್ರಿಕರಣ ಪೂರ್ವಕವಾಗಿ ಹೇಳು ; ಪ್ರತಿಜ್ಞಾ ಪೂರ್ವಕವಾಗಿ ಹೇಳು. **Asseverátion** (ನಾ.)

Assíbilate ಅಸಿಬಿಲೇಟ್ (ಕ್ರಿ. ಸಕ.) ಶ, ಷ, ಸ — ಇವುಗಳಲ್ಲೊಂದರ ಧ್ವನಿ ಬರುವಂತೆ ಉಚ್ಚರಿಸು : ಊಷ್ಮೋಚ್ಚಾರಣೆ ಮಾಡು. **Assibilátion** (ನಾ.)

Assidúity ಆ್ಯಸಿಡ್ಯೂಯಿಟಿ (ನಾ.) (ಕಾರ್ಯಕ್ಕೆ) ಪೂರ್ಣಗಮನ ಕೊಡುವುದು ; ತತ್ಪರತೆ ; ನಿಷ್ಠತೆ ; ಉದ್ಯಮ ; ವ್ಯವಸಾಯ ; ಶ್ರದ್ಧೆ. **Assidúities** (ನಾ.) ಅತಿ ಶ್ರದ್ಧೆಯಿಂದ ಮಾಡುವ ಉಪಚಾರ. **Assíduous** ಅಸಿಡ್ಯುಅಸ್ (ಗು.) ತತ್ಪರ ; ನಿಷ್ಠ. **Assíduously** (ಕ್ರಿ. ವಿ.) ; **Assíduousness** (ನಾ.)

Assígn ಅಸ್ಸೈನ್ (ಕ್ರಿ. ಸಕ.) ಹಂಚಿಕೊಡು ; ತೆಗೆದಿಡು ; ಕೊಟ್ಟುಬಿಡು ; ವರ್ಗ ಕೊಡು ; ವಹಿಸಿಬಿಡು (ಮು., ಚರಸ್ವತ್ತನ್ನು) ; ನೇಮಿಸು ; (ಕೆಲಸ) ಒಪ್ಪಿಸು. (ಸ್ಥಾನ, ಮೊ. ನ್ನು) ಗೊತ್ತುಮಾಡು ; ಏರ್ಪಡಿಸು ; ನಿರ್ದೇಶಿಸು ; (ಕಾರಣ) ಕೊಡು. (ನಾ.) (ಆಸ್ತಿ, ಹಕ್ಕು, ಮೊ. ನ್ನು ಕಾನೂನಿಗನುಸಾರವಾಗಿ) ವರ್ಗಪಡೆದವನು. **Assígnable** (ಗು.) ; **Assignátion** ಆ್ಯಸಿಗ್ನೇಷನ್ (ನಾ.) ಹಂಚಿಕೆ ; ವಿಧಿಪೂರ್ವಕವಾಗಿ ವರ್ಗಾಯಿಸುವುದು. ಸೇರತಕ್ಕ ಕಾಲ, ಸ್ಥಾನ — ಇವುಗಳನ್ನು ಗೊತ್ತುಮಾಡುವುದು : ಸ್ಥಾನಸಂಕೇತ ; ಕಾಲಸಂಕೇತ. ಮೂಲ ನಿರ್ದೇಶ ; ಕಾರಣ ನಿರ್ದೇಶ. **Assigneé** ಆ್ಯಸಿನೀ (ನಾ.) ನಿಯೋಗಿ ; ಪ್ರತಿನಿಧಿ ; ವರ್ಗಪಡೆದವನು (Assignees in bankruptcy ದಿವಾಳಿಯಾದವನ ಆಸ್ತಿಯ ಆಡಳಿತವನ್ನು ನಡೆಯಿಸುವುದಕ್ಕೆ ನಿಯಮಿಸಲ್ಪಟ್ಟವರು). **Assígnment** ಅಸ್ಸೈನ್‌ಮೆಂಟ್ (ನಾ.) ಹಂಚಿಕೆ. ಕಾನೂನಿಗನುಸಾರವಾದ ವರ್ಗ ; ವರ್ಗಪತ್ರ. ನಿರ್ದೇಶ. ಕಾರಣ ನಿರೂಪಣ. ಒಬ್ಬನಿಗೆ ನೇಮಿಸಿದ ಕೆಲಸ (ಮು., ವರ್ತಮಾನ ಪತ್ರಿಕೆಗೆ ಸಮಾಚಾರ ಒದಗಿಸುವವನಿಗೆ). **Assignór** ಆ್ಯಸಿನಾರ್ (ನಾ.) (ನ್ಯಾ. ಶಾ.) (ಹಕ್ಕನ್ನಾಗಲಿ ಆಸ್ತಿಯನ್ನಾಗಲಿ) ವರ್ಗಕೊಡುವವನು.

A'ssignat ಆ್ಯಸಿಗ್ನ್ಯಾಟ್, **Assignát** ಆಸಿನ್ಯಾ (ನಾ.) ಫ್ರಾನ್ಸ್ ದೇಶದ ಕ್ರಾಂತಿಸರ್ಕಾರದವರು ಹೊರಡಿಸಿದ ಕಾಗದದ ನಾಣ್ಯ.

Assímilate ಅಸಿಮಿಲೇಟ್ (ಕ್ರಿ.) ಸಮರೂಪುಗೊಳಿಸು ; ಸಮರೂಪಾಗು ; ಸಮೀಕರಿಸು ; ಹೋಲುವಂತೆ ಮಾಡು ; ಹೋಲು ; ಹೋಲಿಸು. (ರೂಪ.) ರಕ್ತಗತವಾಗು ; ಹೊಂದಿಸಿಕೊ ; ಜೀರ್ಣಿಸಿಕೊ ; ಹೀರಿಕೊ. (ಶ. ವಿ.) ದೇಹಗತ ಮಾಡಿಕೊ ; ದೇಹಗತವಾಗು. **Assimilabílity** (ನಾ.) ; **Assimilátion, — ulátion** (ನಾ.) ; **Assímilator** (ನಾ.) ; **Assimilable** (ಗು.) ; **Assímilatory** (ಗು.) ; **Assímilative** (ಗು.)

Assíst ಅಸಿಸ್ಟ್ (ಕ್ರಿ.) ಸಹಾಯ ಮಾಡು ; ನೆರವಾಗು ; ಸಹಾಯವಾಗು ; ಭಾಗ ವಹಿಸು. **Assístant** — ಸ್ಟಂಟ್ (ಗು., ನಾ.) ಸಹಾಯಕ. **Assístance** (ನಾ.)

Assíze ಅಸ್ಸೈಜ್ (ನಾ.) ಕಾನೂನಿನ ಮೇರೆಗೆ ಗೊತ್ತಾದ (ಅನ್ನ ಪಾನಗಳ) ಬೆಲೆ. ಪ್ರಮಾಣ ಮಾಡಿದ ನ್ಯಾಯದರ್ಶಿಗಳು ವ್ಯಾಜ್ಯಕಾರಣದ ನಿಶ್ಚಯಾಂಶಗಳನ್ನು ಹಿಡಿದು ತೀರ್ಪುಕೊಡುವ ವಿಚಾರಣೆ : ನ್ಯಾಯದರ್ಶಿ ಸಮಕ್ಷ ವಿಚಾರಣೆ. Great Assize (ಕ್ರೈಸ್ತ ಮತದಲ್ಲಿ, ದೇವರು ಕೊಡುವ) ಕಟ್ಟಕಡೆಯ ತೀರ್ಪು ; ಅಂತಿಮ ಮಹಾ ವಿಚಾರಣೆ.

Assóciate ಅಸೋಷಿಯೇಟ್ (ಕ್ರಿ.) ಜೊತೆಗೂಡಿಸು ; ಸಂಯೋಜಿಸು ; ಸಂಬಂಧಿಸು ; ಭಾಗಿಯಾಗು ; ಪಾಲುಗಾರನಾಗು ; ಜೊತೆಗೂಡು ; ಒಡಗೂಡು ; ಸೇರು ; ಬೆರೆ ; ಕಲೆ ; ಸಹವಾಸ ಮಾಡು ; ಸವ್ಯವಹಾರ ಮಾಡು. **Assóciative** (ಗು.) ಸಂಯೋಜನದ. **Assóciatory** (ಗು.) ಸಂಯೋಗ ಅಥವಾ ಸಂಯೋಜನ ಗುಣಪೂರ್ಣ. **Assóciator** (ನಾ.) ; **Assóciate** — ಷಿಯೆಟ್ (ಗು.) ಜೊತೆಗೂಡಿದ ; ಜೊತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೇರಿದ; ಸಂಬಂಧಿಸಿದ. (ನಾ.) ಪಾಲುದಾರ; ಸಹಚರ; ಸಹವಾಸಿ; ಸಂಗಾತಿ; ಸಂಗಡಿಗ; ಒಡನಾಡಿ; ಸಹೋದ್ಯೋಗಿ. ಒಂದು ಸಂಸ್ಥೆಯ ಗೌಣಸದಸ್ಯ ಅಥವಾ ಅಂಗ. ಸಂಬದ್ಧ ವಸ್ತು; ಸಂಯೋಜಿತ ವಸ್ತು. **Assóciateship** (ನಾ.); **Associátion** — ಷಿ(ಸಿ)ಯೇಷನ್. (ನಾ.) (ಕ್ರಿಯಾರ್ಥಗಳಲ್ಲಿ). ಸಂಘ; ಸಹವಾಸ; ಕೂಟ; ಜೊತೆ; ಒಡನಾಟ. Deed of Association ಒಂದು ಸಂಘದ ನಿಬಂಧನಪತ್ರ, ನಿರ್ಮಾಣ ಪತ್ರ. Association of ideas ಒಂದು ವಿಷಯಕ್ಕೂ ಅದಕ್ಕೆ ಸಂಬಂಧಪಟ್ಟ ಭಾವಗಳಿಗೂ ಇರುವ ಮಾನಸಿಕ ಸಂಬಂಧ: ಭಾವ ಸಾಹಚರ್ಯ.

Assoíl ಅಸಾಯ್‍ಲ್ (ಕ್ರಿ. ಸಕ.) (ಪ್ರಾಚೀ. ಪ್ರ.) ಪಾಪ ವಿಮೋಚನೆ ಮಾಡು; ನಿರ್ದೋಷಿಯೆಂದು ಹೇಳು; ಕ್ಷಮಿಸು; ಬಿಡುಗಡೆ ಮಾಡು; ಪ್ರಾಯಶ್ಚಿತ್ತ ಮಾಡಿಕೊ.

A'ssonance ಆ್ಯಸೊನನ್ಸ್ (ನಾ.) ಶಬ್ದಗಳಿಗೆ ಅಥವಾ ಅಕ್ಷರಗಳಿಗೆ ಇರುವ ಧ್ವನಿಸಾಮ್ಯ; ಸ್ವರಪ್ರಾಸ (ಉದಾ. — Sonnet, Porridge). ಸ್ಥೂಲ ಸಾಮ್ಯ. **A'ssonant** (ಗು.)

Assórt ಅಸಾರ್ಟ್ (ಕ್ರಿ.) ವಿಂಗಡಿಸು; ವರ್ಗೀಕರಿಸು; ಪಂಗಡಕ್ಕೆ ಸೇರಿಸು. (ಅಂಗಡಿಗೆ, ಮಳಿಗೆಗೆ) ತೆರತೆರದ ಸಾಮಾನುಗಳನ್ನು ಒದಗಿಸು. ಜೊತೆಗೆ ಸೇರು (To assort with bad characters ಕೆಟ್ಟಚಾಳಿಯವರ ಜೊತೆಗೆ ಸೇರುವುದು); ಒಂದು ಪಂಗಡಕ್ಕೆ ಸೇರು. (ಒಂದರೊಡನೆ) ಸರಿಹೋಗು, ಸರಿಹೋಗದಿರು. **Assórtment** (ನಾ.) ವಿಂಗಡಿಕೆ. ವಿಂಗಡಿಸಿದ ತೆರತೆರದ ಸಾಮಾನುಗಳು.

Assuáge ಅಸ್ವೇಜ್ (ಕ್ರಿ. ಸಕ.) (ಮನುಷ್ಯನನ್ನು, ಮನೋವೈಕಲ್ಯಗಳನ್ನು, ನೋವನ್ನು) ಶಮನಗೊಳಿಸು, ಶಾಂತಿಗೊಳಿಸು, ಉಪಶಮನ ಮಾಡು. ಹಸಿವು ಮೊ. ನ್ನು, ಕಾಂಕ್ಷೆಯನ್ನು, ತೀರಿಸು, ಅಡಗಿಸು, ತಣಿಸು. **Assuágement** (ನಾ.)

Assúme ಅಸ್ಯೂಂ (ಕ್ರಿ. ಸಕ.) ತಾಳು; ಹೊಂದು; ಪಡೆ; ಧರಿಸು; ಸ್ವೀಕರಿಸು; ಕೈಕೊಳ್ಳು; (ಅಧಿಕಾರ, ಮೊ. ನ್ನು) ವಹಿಸು. ಆಕ್ರಮಿಸು. (ಉಳ್ಳವನಂತೆ) ನಟಿಸು; ಮೆರೆ; ಭಾವಿಸಿಕೊ; ಪ್ರಮಾಣವಿಲ್ಲದೆ ಅಂಗೀಕರಿಸು. **Assúmable** (ಗು.); **Assúmably** (ಕ್ರಿ. ವಿ.); **Assúming** (ಗು.) ಹೆಮ್ಮೆಪಡುವ; ಪ್ರತಿಷ್ಠೆಯ; ಮೆರೆಯುವ; ಅಧಿಕಪ್ರಸಂಗದ. **Assúmption** ಅಸಮ್‌ಷನ್ (ನಾ.) (ಕ್ರಿಯಾರ್ಥಗಳಲ್ಲಿ). ಬೈಬಲ್ಲಿನಲ್ಲಿ ಹೇಳಿರುವಂತೆ ಮೇರೀಕನ್ಯಕೆಯ ಸ್ವರ್ಗಾರೋಹಣ; ಈ ಸಂಬಂಧವಾಗಿ ಆಚರಿಸುವ ಉತ್ಸವ. **Assúmptive** ಅಸಮ್‌ಟಿವ್ (ಗು.) ಇರಬಹುದೆಂದು ಭಾವಿಸಿಕೊಂಡ. ಹೆಮ್ಮೆಯ; ಪ್ರತಿಷ್ಠೆಯ; ಅಹಂಕಾರದ.

Assúrance ಅಷ್ಯೂರನ್ಸ್ (ನಾ.) ಭರವಸೆ; ದೃಢತೆ; ನೆಚ್ಚಿಕೆ; ಖಂಡಿತ; ಅಭಯ. (Make assurance double sure ಭರವಸೆಯನ್ನು ಇಮ್ಮಡಿ ನಿಶ್ಚಯ ಮಾಡಿಕೊ). (ನ್ಯಾ. ಶಾ.) ಹಕ್ಕನ್ನು ಭದ್ರಪಡಿಸಿಕೊಡುವ ದಸ್ತೈವಜು. ಆಸ್ತಿ ನಷ್ಟವಾದ ಸಂದರ್ಭದಲ್ಲಾಗಲಿ ಮನುಷ್ಯನು ಸತ್ತುಹೋದ ಸಂದರ್ಭದಲ್ಲಾಗಲಿ ಒಂದು ಗೊತ್ತಾದ ಮೊತ್ತವನ್ನು ಪರಿಹಾರವಾಗಿ ಕೊಡುವಂತೆ ಮಾಡಿಕೊಂಡ ಕರಾರು: ಭೀಮಾ; ವಿಮೆ (ಸಾ., ಜೀವವಿಮೆ, ಅಗ್ನಿ ವಿಮೆ, ಕಡಲ ವಿಮೆ). ಆತ್ಮವಿಶ್ವಾಸ; ಸ್ವಾವಲಂಬನ. ಧಾರ್ಷ್ಟ್ಯ; ಪ್ರತಿಷ್ಠೆ; ಕೊಬ್ಬು. **Assúre** (ಕ್ರಿ. ಸಕ.) ನಿರ್ಭಯ ಮಾಡು; ಅಭಯ ಕೊಡು. (Assure life ಜೀವವಿಮೆ ಮಾಡು). ಖಂಡಿತಮಾಡು; ದೃಢಪಡಿಸು; ಸ್ಥಿರಪಡಿಸು; ಭರವಸೆ ಕೊಡು; ನೆಚ್ಚಿಗೆ ಕೊಡು; ನಂಬಿಕೆ ಹುಟ್ಟುವಂತೆ ಹೇಳು. **Assúred** (ಗು.); **Assúredly** — ರೆಡ್ಲಿ (ಕ್ರಿ. ವಿ.); **Assúredness** — ರೆಡ್ನೆಸ್ (ನಾ.)

Assúrgent ಅಸರ್ಜೆಂಟ್ (ಗು.) ಉಕ್ಕುವ; ಏಳುವ; ಮೇಲಕ್ಕೇರುವ. (ಸ. ವಿ.) ಓರೆಯಾಗಿ ಏಳುವ, ಹೊರಡುವ. ಮೇಲೆ ಬೀಳುವ; ಆಕ್ರಮಿಸುವ.

Assýrian ಅಸಿರಿಯನ್ (ಗು., ನಾ.) ಅಸಿರಿಯಾ ದೇಶದ; ಅಸಿರಿಯಾ ಭಾಷೆ; ಅಸಿರಿಯಾ ದೇಶಸ್ಥ. **Assyriólogy** — ಯಾಲೊಜಿ (ನಾ.) ಅಸಿರಿಯಾ ದೇಶದ ಭಾಷೆ, ಚರಿತ್ರೆ, ಪ್ರಾಚೀನ ವಸ್ತು, ಮೊ. ಗಳಿಗೆ ಸಂಬಂಧಪಟ್ಟ ವಿದ್ಯೆ. **Assyriólogist** (ನಾ.)

Astátic ಅಸ್ಟ್ಯಾಟಿಕ್ (ಗು.) ಸ್ಥಿರಸ್ಥಾನದಲ್ಲಿರದ; ಅಸ್ಥಾಯಿ. Astatic needle ಭೂಮಿಯ ಕಾಂತಾಕರ್ಷಕ ಶಕ್ತಿಗೊಳಗಾಗದ ಕಾಂತ ಸೂಚಿ: ಅಸ್ಥಾಯಿ ಕಾಂತಸೂಚಿ.

A'ster ಆ್ಯಸ್ಟರ್ (ನಾ., ಕ್ರಿ. ಸಕ.) ನಕ್ಷತ್ರಕಿರಣಗಳಂತೆ ತೋರುವ ಎಸಳುಗಳುಳ್ಳ ಒಂದು ಹೂವಿನ ಸಸ್ಯಜಾತಿ; ಸೇವಂತಿಗೆಯ ಹೂವಿನ ಸಸ್ಯಜಾತಿ. **A'sterisk** ಆ್ಯಸ್ಟೆರಿಸ್ಕ್ (ನಾ.) ನಕ್ಷತ್ರಚಿಹ್ನೆ (*): ಟಿಪ್ಪಣಿ ಮೊ. ಗಳ ಸೂಚನೆಗೂ, ಬಿಟ್ಟಿರುವ ಭಾಗವನ್ನು ಸೂಚಿಸುವುದಕ್ಕೂ ಉಪಯೋಗಿಸುವ ಗುರುತು. (ಕ್ರಿ.) ನಕ್ಷತ್ರಚಿಹ್ನೆ ಹಾಕು. **A'sterism** — ರಿಸ್ಮ್ (ನಾ.) ನಕ್ಷತ್ರ ಪುಂಜ; ಗಮನ ಸೆಳೆಯುವುದಕ್ಕಾಗಿ ಹಾಕುವ ಮೂರುನಕ್ಷತ್ರ ಚಿಹ್ನೆ (⁂). **A'steroid** — ರಾಯ್ಡ್ (ಗು.) ನಕ್ಷತ್ರ ರೂಪದ; ನಕ್ಷತ್ರಾಕೃತಿಯ. (ನಾ.) ಅಂಗಾರಕ ಮತ್ತು ಬೃಹಸ್ಪತಿಯ ಪಥಗಳ ನಡುವೆ ಸೂರ್ಯನ ಸುತ್ತಲೂ ಸುತ್ತುತ್ತಿರುವ ಬಹು ಸಣ್ಣ (ಕ್ಷುದ್ರ) ಗ್ರಹಗಳಲ್ಲೊಂದು. ಒಂದು ತೆರದ ಬಾಣಬಿರುಸು: ತಾರಾಮಂಡಲ. **Asteroídal** (ಗು.); **A'stral** ಆ್ಯಸ್ಟ್ರಲ್ (ಗು.) ನಕ್ಷತ್ರಗಳ. Astral spirits (ನಕ್ಷತ್ರಗಳಲ್ಲಿ ವಾಸಮಾಡುತ್ತಿವೆಯೆಂದು ಊಹಿಸುವ) ಪ್ರೇತಗಳು: ನಕ್ಷತ್ರವಾಸಿ ಪ್ರೇತಗಳು; ಗ್ರಹದೇವತೆಗಳು; ಆಕಾಶ ಗಣಗಳು. Astral body ಸೂಕ್ಷ್ಮಶರೀರ; ದಿವ್ಯಶರೀರ. Astral lamp ಕೆಳಗೆ ನೆರಳುಬೀಳದ ದೀಪ.

— **aster** ಹೀನಾರ್ಥ ಸೂಚಕ ಪ್ರತ್ಯಯ (ಉದಾ.— Poetaster ಕ್ಷುದ್ರ ಕವಿ)

Astérn ಅಸ್ಟರ್ನ್ (ಕ್ರಿ. ವಿ.) (ಹಡಗಿನ, ದೋಣಿಯ) ಹಿಂದುಗಡೆ, ಹಿಂಭಾಗದಲ್ಲಿ. ಬಹಳ ಹಿಂದುಗಡೆ; ಹಿಂದಕ್ಕೆ.

Astérnal ಅಸ್ಟರ್ನಲ್ (ಗು.) ಎದೆಯೆಲುಬಿಗೆ ಸೇರಿಕೊಂಡಿರದ.

A'steroid. **Aster** ನೋಡಿ.

A'sthma ಆ್ಯಸ್ತ್ಮ, ಆ್ಯಸ್ಮ (ನಾ.) ಉಬ್ಬಸ; ಶ್ವಾಸಕಾಸ; ಗೂರಲು; ದಮ್ಮು (ರೋಗ). **Asthmátic** ಆ್ಯಸ್ತ್ಮ್ಯಾಟಿಕ್ (ಗು.) ಉಬ್ಬಸದ; ಗೂರಲಿನ; ಶ್ವಾಸಕಾಸ ಸಂಬಂಧವಾದ; ಕಾಸಘ್ನ. (ನಾ.) ಗೂರಲು ರೋಗಿ. **Asthmátical** (ಗು.); **Asthmátically** (ಕ್ರಿ. ವಿ.)

Astígmatism ಅಸ್ಟಿಗ್ಮಟಿಸ್ಮ್ (ನಾ.) ಕಣ್ಣುಗುಡ್ಡೆಯ ರಚನೆಯ (ಅಥವಾ ಒಂದು ಲೆನ್ಸಿನ) ವಿಕಾರದಿಂದ ಜ್ಯೋತಿಷ್ಕಿರಣಗಳು ಏಕ ಕೇಂದ್ರಕ್ಕೆ ಬಾರದಿರುವ ದೋಷ: ಅಸಮ ದೃಷ್ಟಿ. **Astigmátic** ಆ್ಯಸ್ಟಿಗ್‌ಮ್ಯಾಟಿಕ್ (ಗು.)

Astír ಅಸ್ಟರ್ (ಕ್ರಿ. ವಿ.) ಚಲಿಸುತ್ತ; ಚರಿಸುತ್ತ; ಚಟುವಟಿಕೆಯಿಂದ ಕೂಡಿ; ಹಾಸಿಗೆಯಿಂದೆದ್ದು. ಸಂಭ್ರಮಗೊಂಡು.

Astónish ಅಸ್ಟಾನಿಷ್ (ಕ್ರಿ. ಸಕ.) ಅಚ್ಚರಿಗೊಳಿಸು; ಬೆರಗು ಮಾಡು; ವಿಸ್ಮಯಗೊಳಿಸು; ಚಕಿತನನ್ನಾಗಿ ಮಾಡು. **Astónishment** (ನಾ.)

Astoúnd ಅಸ್ಟೌಂಡ್ (ಕ್ರಿ. ಸಕ.) ದಿಗ್ಭ್ರಮೆ ಹಿಡಿಸು; ಸ್ತಬ್ಧನನ್ನಾಗಿ ಮಾಡು.

Astráddle ಅಸ್ಟ್ರ್ಯಾಡ್‌ಲ್ (ಕ್ರಿ. ವಿ.) ಕಾಲು ಹಿಗ್ಗಲಿಸಿಕೊಂಡು.

A'stragal ಆ್ಯಸ್ಟ್ರಗಲ್ (ನಾ). ಗುಲ್ಫಸಂಧಿಯಲ್ಲಿಯ (ಕಾಲುಹರಡಿನ) ಮೂಳೆ: ಗುಲ್ಫಾಸ್ಥಿ. (ಶಿಲ್ಪ) ಕಂಬದ ತುದಿಯ ಅಥವಾ ಬುಡದ ಸುತ್ತಲೂ ಮಾಡಿರುವ ಸಣ್ಣ ದಿಂಡು. ಫಿರಂಗಿಯ ಬಾಯ ಹತ್ತಿರದ ಬಳೆ. **Astrágalus** ಅಸ್ಟ್ರ್ಯಾಗಲಸ್ (ನಾ.) ಗುಲ್ಫಾಸ್ಥಿ. (ಸ. ವಿ.) ದ್ವಿಪುಟಫಲ ಸಸ್ಯಗಳ (Leguminous plants) ಒಂದು ಜಾತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Astrakhán ಆ್ಯಸ್ಟ್ರಕ್ಯಾನ್ (ನಾ.) ಮೃದು ರೋಮವುಳ್ಳ (ಆಸ್ಟ್ರಖಾನಿನ) ಕುರಿಮರಿಯ ಚರ್ಮ.

A'stral. **Aster** ನೋಡಿ.

Astraý ಅಸ್ಟ್ರೇ (ಕ್ರಿ. ವಿ.) ದಾರಿಬಿಟ್ಟು ; ದಾರಿತಪ್ಪಿ ; (ರೂಪ. ಸಹ)

Astríct ಅಸ್ಟ್ರಿಕ್ಟ್ (ಕ್ರಿ. ಸಕ.) (ವಿರಳ ಪ್ರಯೋಗ). ಬಂಧಿಸು ; ಒತ್ತಿ ಕಟ್ಟು ; (ನ್ಯಾಯಕ್ಕೆ, ಧರ್ಮಕ್ಕೆ) ಕಟ್ಟಿಹಾಕು. ಮಲಬದ್ಧ ಮಾಡು. **Astríction** (ನಾ.) ; **Astríctive** (ಗು.)

Astríde ಅಸ್ಟ್ರೈಡ್ (ಕ್ರಿ. ವಿ., ಉಪ.) ಕಾಲು ಹಿಗ್ಗಲಿಸಿಕೊಂಡು. (ರೂಪ. ಸಹ)

Astríngent ಅಸ್ಟ್ರಿಂಜೆಂಟ್ (ಗು.) ಬಂಧಿಸುವ ; (ಗಾಯದಿಂದ ಸೋರುವ ರಕ್ತವನ್ನು) ತಡೆಯುವ ; ಸಂಕುಚಿಸುವ. (ರೂಪ.) ಕಠಿನ ; ಬಿರುಸಾದ. (ನಾ.) ಬಂಧಕ (ಔಷಧ). **Astríngently** (ಕ್ರಿ. ವಿ.) ; **Astríngency** (ನಾ.) ; **Astrínge** ಅಸ್ಟ್ರಿಂಜ್ (ಕ್ರಿ. ಸಕ.) ಬಂಧಿಸು ; ಸಂಕುಚಿಸು ; ಕೂಡಿಸಿ ಕಟ್ಟು. ಮಲಬದ್ಧ ಮಾಡು ; ಹೊಟ್ಟೆ ಕಟ್ಟು.

Astro —, ಆ್ಯಸ್ಟ್ರೊ— (ಸಮಾಸದಲ್ಲಿ ಪೂರ್ವಪದ) : ನಕ್ಷತ್ರ —. **Astrólatry** ಅಸ್ಟ್ರಾಲಟ್ರಿ (ನಾ.) ನಕ್ಷತ್ರ ಪೂಜೆ.

A'strolabe ಆ್ಯಸ್ಟ್ರೊಲೇಬ್ (ನಾ.) (ಗ್ರಹ, ಮೊ. ಗಳ) ಉನ್ನತಿಯನ್ನು ಅಳೆಯುವುದಕ್ಕಾಗಿ ಹಿಂದಿನ ಕಾಲದಲ್ಲಿ ಉಪಯೋಗಿಸುತ್ತಿದ್ದ ಯಂತ್ರಸಾಧನ : ಗ್ರಹೋನ್ನತಿ ಮಾಪಕ.

Astrólogy ಅಸ್ಟ್ರಾಲೊಜಿ (ನಾ.) ಜ್ಯೋತಿಷ ; ಜ್ಯೋತಿಶ್ಶಾಸ್ತ್ರ ; ಹೋರಾಶಾಸ್ತ್ರ. Judicial astrology ಮನುಷ್ಯನ ವ್ಯಾಪಾರಗಳಮೇಲೆ ನಕ್ಷತ್ರಗಳ ಗೂಢ ಪ್ರಭಾವವನ್ನು ತಿಳಿಯಲು ಯತ್ನಿಸುವ ವಿದ್ಯೆ : ಫಲಜ್ಯೋತಿಷ. Natural astrology (ಹಿಂದಿನ ಕಾಲದಲ್ಲಿ) ದೃಗ್ಗಣಿತ ಜ್ಯೋತಿಶ್ಶಾಸ್ತ್ರ. **Astrólogerr** — ಜರ್ (ನಾ.) ಜೋಯಿಸ ; ಮೌಹೂರ್ತಿಕ. **Astrológic(al)** ಆ್ಯಸ್ಟ್ರೊಲಾಜಿಕಲ್ (ಗು.) ; **Astrológically** (ಕ್ರಿ. ವಿ.) ; **Astrólogize** ಅಸ್ಟ್ರಾಲೊಜೈಸ್ (ಕ್ರಿ. ಸಕ.) ಜ್ಯೋತಿಷ ರೀತಿಯಲ್ಲಿ ಪರೀಕ್ಷಿಸು ; ಜ್ಯೋತಿಷ ಅನ್ವಯಿಸು.

Astro-meteorólogy ಆ್ಯಸ್ಟ್ರೊ ಮೀಟಿಯೊರಾಲೊಜಿ (ನಾ.) ವಾಯುಗುಣ, ಹವ, ಮೊ. ಗಳಿಗೂ ಗ್ರಹಾದಿಗಳಿಗೂ (ಎಂದರೆ, ಸೂರ್ಯಕಲಂಕ, ಧೂಮಕೇತು, ಗ್ರಹ ಸಂಯೋಗ, ಮೊ. ಗೂ) ಇರಬಹುದಾದ ಸಂಬಂಧವನ್ನು ವಿಚಾರಮಾಡುವ ಶಾಸ್ತ್ರ : ಜ್ಯೋತಿಃಪವನ ಶಾಸ್ತ್ರ.

Astrómeter ಅಸ್ಟ್ರಾಮಿಟರ್ (ನಾ.) ನಕ್ಷತ್ರಗಳ ಪರಿಮಾಣದ ಪರಸ್ಪರ ತಾರತಮ್ಯವನ್ನು ಅಳೆಯುವ ಸಾಧನ ; ನಕ್ಷತ್ರ ಮಾಪಕ.

Astrónomy ಅಸ್ಟ್ರಾನೊಮಿ (ನಾ.) ಖಗೋಳ ವಿಜ್ಞಾನ ; ಜ್ಯೋತಿರ್ವಿಜ್ಞಾನ ; ಜ್ಯೋತಿಶ್ಶಾಸ್ತ್ರ. **Astrónomer** — ನೊಮರ್ (ನಾ.) ಜ್ಯೋತಿಷ್ಕ. **Astronómic(al)** ಆ್ಯಸ್ಟ್ರೊನಾಮಿಕಲ್ (ಗು.) : Astronomical figures, distances (ಜ್ಯೋತಿಷ್ಕರಿಗೆ ರೂಢಿಯಲ್ಲಿರುವ) ಬೃಹತ್ಸಂಖ್ಯೆಗಳು, ಬೃಹದಂತರಗಳು : ಜ್ಯೋತಿಷ್ಯ ಸಂಖ್ಯೆ ; ಜ್ಯೋತಿಷ್ಯಾಂತರ ; ಜ್ಯೋತಿಷ ಮೂಲಾಂಕಗಳು. **Astronómically** (ಕ್ರಿ. ವಿ.)

Astrophýsics ಆ್ಯಸ್ಟ್ರೊಫಿಸಿಕ್ಸ್ (ನಾ.) ಆಕಾಶಸ್ಥ ಕಾಯಗಳ ಭೌತ ಗುಣಗಳನ್ನೂ ರಾಸಾಯನಿಕ ರಚನೆಯನ್ನೂ ಪ್ರತಿಪಾದಿಸುವ ಜ್ಯೋತಿರ್ವಿಜ್ಞಾನ ಭಾಗ : ಜ್ಯೋತಿರ್ಭೌತ ವಿಜ್ಞಾನ.

Astúte ಅಸ್ಟ್ಯೂಟ್ (ಗು.) ಚತುರನಾದ ; ಚುರುಕುಬುದ್ಧಿಯುಳ್ಳ. ತಂತ್ರಗಾರನಾದ. **Astútely** (ಕ್ರಿ. ವಿ.) ; **Astúteness** (ನಾ.)

Asúnder ಅಸಂಡರ್ (ಕ್ರಿ. ವಿ.) ಬೇರೆಬೇರೆಯಾಗಿ ; ದೂರದೂರವಾಗಿ ; ಭಾಗಗಳಾಗಿ ; ಸೀಳಾಗಿ ; ತುಂಡಾಗಿ. Tear asunder ಹರಿದುಹಾಕು.

Asýlum ಅಸೈಲಂ (ನಾ.) (ಮರೆಹೊಗಲು) ಆಲಯ ; ಆಶ್ರಯ ; ಆಧಾರ ; ಗತಿ ; ಶರಣಾಲಯ (ಮು., ಅಪರಾಧಿಗಳನ್ನೂ ಸಾಲಗಾರರನ್ನೂ ಅಲ್ಲಿ ಹಿಡಿಯಬಾರದೆಂದು ರೂಢಿಯಿರುವ ಸ್ಥಳ). (ಹುಚ್ಚರು, ರೋಗಿಗಳು, ನಿರ್ಗತಿಕರು — ಇವರಿಗೆ) ಅನ್ನ ಬಟ್ಟೆಗಳನ್ನೂ ನೆಲೆಯನ್ನೂ ರಕ್ಷಣೆಯನ್ನೂ ಕೊಡಲು ಏರ್ಪಟ್ಟಿರುವ ಆಶ್ರಮ : ರಕ್ಷಣಾಲಯ ; ಅನಾಥಾಲಯ. Lunatic asylum ಹುಚ್ಚರ ಆಸ್ಪತ್ರೆ.

Asýmmetry ಅಸಿಮೆಟ್ರಿ (ನಾ.) ಅಸಮ ಸೂತ್ರತೆ ; ಅಸಮ ಪ್ರಮಾಣ ; ವಿಷಮ ಪಾರ್ಶ್ವತೆ.

A'symptote ಆ್ಯಸಿಮ್‌ಟೋಟ್ (ನಾ.) (ಗಣಿತ) ಒಂದು ವಕ್ರರೇಖೆಯ ಹತ್ತಿರಹತ್ತಿರಕ್ಕೆ ಕ್ರಮೇಣ ಬರುತ್ತಿರುವಂತೆ ನಿರಂತರವಾಗಿ ತೋರುತ್ತಿದ್ದರೂ ಆ ರೇಖೆಯನ್ನು ಪರಿಮಿತ ದೂರದಲ್ಲಿ ಮುಟ್ಟದ ರೇಖೆ : ಅಸಂಪಾತ ರೇಖೆ.

Asýndeton ಅಸಿಂಡಿಟನ್ (ನಾ.) ಸಮುಚ್ಚಯಗಳನ್ನುಪಯೋಗಿಸದೆ ಹೇಳುವ ವಾಕ್ಯಾಲಂಕಾರ : ನಿಸ್ಸಮುಚ್ಚಯ : (ಉದಾ. — ಹೋದ, ಕೊಂದ, ತಂದ)

At ಆ್ಯಟ್, ಅಟ್ (ಅವ್ಯ.) (ಗೊತ್ತಾದ, ಸರಿಸುಮಾರಾದ ಅಥವಾ ಅನಿಯತವಾದ ಸ್ಥಳನಿರ್ದೇಶ, ಕಾಲನಿರ್ದೇಶ) : ಅಲ್ಲಿ ; — ಕ್ಕೆ ; — ಗೆ ; ಕಡೆ ; ಕಡೆಗೆ ; ಮೇರೆಗೆ ; ಅಂತೆ ; ಇಂದ. Aim at — ಕ್ಕೆ ಗುರಿಯಿಡು. Annoyed at finding ಕಂಡು ರೇಗಿದ. Arrive at a place ಒಂದು ಸ್ಥಳಕ್ಕೆ ಬಂದು ಸೇರು. At all ಏನಾದರೂ ; ಒಂದುವೇಳೆ ; ಎಷ್ಟುಮಾತ್ರವೂ. At all events ಏನೇ ಆಗಲಿ. Not at all ಇಲ್ಲವೇಇಲ್ಲ. At arm's length ದೂರದಲ್ಲಿ. At best ಎಷ್ಟು ಹೆಚ್ಚೆಂದರೂ. A child at the breast ಮೊಲೆ ಕುಡಿಯುವ ಮಗು. At his command ಅವನ ಅಪ್ಪಣೆಯ ಮೇರೆಗೆ. At daggers drawn ಕತ್ತಿ ಹಿಡಿದು ನಿಂತು ; ಕತ್ತಿ ಕಟ್ಟಿ. At ease ಹಾಯಾಗಿ. Out at elbows ತೋಳು ಹರಿದು ; ಹರಿಕಲಾಗಿ ; ದರಿದ್ರವಾಗಿ. It is at an end ಅದು ತೀರಿತು. • Play at fighting ಯುದ್ಧದ ಆಟವನ್ನಾಡು. At hand ಹತ್ತಿರ. At your hands ನಿಮ್ಮಿಂದ. At large ಕಟ್ಟುನಿಟ್ಟಿಲ್ಲದೆ ; ಸ್ವೇಚ್ಛೆಯಾಗಿ. At last, At length ಕೊನೆಗೆ ; ಕಡೆಗೆ ; ಕಟ್ಟಕಡೆಗೆ. At least ಕನಿಷ್ಠಪಕ್ಷ. At leisure ಬಿಡುವಾಗಿ ; ತೀರಿಕೆಯಾಗಿ. I am at a loss to know ನನಗೆ ಏನೊಂದೂ ತೋರದಿದೆ. At this news ಈ ಸುದ್ದಿ ಕೇಳಿ. At once ಕೂಡಲೆ. All at once ಇದ್ದಕ್ಕಿದ್ದಹಾಗೆ. At one ಏಕೀಭವಿಸಿ ; ಒಮ್ಮನಸ್ಸಾಗಿ. At pleasure ಇಷ್ಟವಿದ್ದಂತೆ ; ಖುಷಿ ಬಂದಹಾಗೆ. At random ಗೊತ್ತುಗುರಿ ಯಿಲ್ಲದೆ. At any rate ಹೇಗಾದರೂ. At sea ದಿಕ್ಕು ತೋರದೆ ; ನೆರೆ ತಪ್ಪಿ. At sight ನೋಡಿದೊಡನೆಯೇ. At that ಅದರಂತೆ ; ಅದರಲ್ಲೂ. At this ಇದನ್ನು ಕಂಡು. At times ಆಗಾಗ. At variance ಭಿನ್ನಾಭಿಪ್ರಾಯವುಳ್ಳವನಾಗಿ. He got in at the window ಕಿಟಕಿಯಿಂದ ಒಳಹೊಕ್ಕನು. At one's wits' end ಬುದ್ಧಿಯೋಡದೆ ; ಏನೂ ತೋಚದೆ. At worst ಎಷ್ಟು ಕೇಡೆಂದರೂ. Frightened at ಕಂಡು ಭಯಪಟ್ಟು. Get at ಪಡೆ ; ಹೊಂದು. Knock at the door ಬಾಗಿಲು ತಟ್ಟು. Laugh at ನೋಡಿ ನಗು ; ಹಾಸ್ಯಮಾಡು. What are you at ? ಏನುಮಾಡುತ್ತಿರುವೆ ? ನಿನ್ನ ಉದ್ದೇಶವೇನು ? **At home** ಆ್ಯಟ್ ಹೋಂ (ಕ್ರಿ. ವಿ.) (ತನ್ನ) ಮನೆಯಲ್ಲಿ ; ಅಭ್ಯಾಗತರನ್ನು ನೋಡಲು ಸಿದ್ಧನಾಗಿ. ಹತ್ತಿರದಲ್ಲೇ ; ಸ್ವದೇಶದಲ್ಲೇ. (ಸ್ವಂತ ಮನೆಯಲ್ಲಿದ್ದಂತೆಯೇ) ನಿರಾತಂಕವಾಗಿ ; ನಿಸ್ಸಂಕೋಚವಾಗಿ. (ರೂಪ.) ಪರಿಶ್ರಮವುಳ್ಳವನಾಗಿ ; ಪ್ರವೀಣನಾಗಿ. **At-hóme** (ನಾ.) ನಿರ್ದಿಷ್ಟ ಕಾಲಗಳಲ್ಲಿ ಆತಿಥ್ಯಕಾರನು (ಆತಿಥೇಯನು) ಮನೆಯಲ್ಲಿದ್ದು ಅತಿಥಿಗಳನ್ನು ಬರಮಾಡಿಕೊಂಡು ಸತ್ಕರಿಸುವುದು : ಮಿತ್ರ ಕೂಟ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

A'taraxy, — áxia ಅ್ಯಟರ್ಯಾಕ್ಸಿ, — ಕ್ಸಿಯ (ನಾ.) ಚಿತ್ತಕ್ಷೋಭೆಯಿಲ್ಲದಿರುವುದು. ಪರಮೌದಾಸೀನ್ಯ ; ನಿರ್ಲಿಪ್ತತೆ.

A'tavism ಅ್ಯಟವಿಸ್ಮ್ (ನಾ.) ತಂದೆತಾಯಿಗಳನ್ನು ಹೋಲದೆ ಇನ್ನೂ ಬಹಳ ಹಿಂದಿನ ಪಿತೃಗಳನ್ನು ಹೋಲುವುದು. (ಜೀ. ವಿ.) ಪೂರ್ವಪಿತೃ ರೂಪದ ಪುನರಾವೃತ್ತಿ. (ರೋಗ) ಕೆಲವು ತಲೆಮಾರುಗಳು ಕಳೆದನಂತರ ರೋಗ ಮರಳಿ ಕಾಣಿಸಿಕೊಳ್ಳುವುದು : ಪೂರ್ವಪಿತೃರೋಗ ಪುನರಾವರ್ತನ. **Atavístic** (ಗು.)

Atáxy, A'taxy ಅಟ್ಯಾಕ್ಸಿ, ಅ್ಯಟ್ಯಕ್ಸಿ (ನಾ.) (ರೋಗ) ದೇಹ ವ್ಯಾಪಾರಗಳ ಅಥವಾ ರೋಗ ಚಿಹ್ನೆಗಳ ಕ್ರಮಭಂಗ. Locomotor ataxy ಕೈಕಾಲುಗಳನ್ನು ಉಪಯೋಗಿಸುವುದರಲ್ಲಿ ಹುಟ್ಟುನಡುಕ ; ಅಂಗಭ್ರಮಣೆ. **Atáxic** (ಗು.) : Ataxic fever ಉಗ್ರ ವಿಷಮಶೀತ ಜ್ವರ.

Ate[1] ಏಟ್. **Eat** ಧಾತುವಿನ ಭೂತ ರೂಪ.

A'te[2] ಏಟಿ (ನಾ.) ಅತಿ ವ್ಯಾಮೋಹ ; ವಿವೇಕವಿಲ್ಲದ ರಾಗೋದ್ರೇಕ. ಕಾಡುವ ಮತ್ತು ಅವಿಚಾರವಾಗಿ ನಾಶಗೊಳಿಸುವ ಒಂದು ಗ್ರೀಕ್ ದೇವತೆ.

A'telier, Ateliér (F) ಆಟೆಲ್ಯೇ, ಆಟ್‌ಲ್ಯೆ (ನಾ.) (ಕರ್ಮಕಾರನ) ಕಾರ್ಯಾಲಯ ; ಕಲಾ ಕಾರ್ಯಶಾಲೆ.

A'theism ಏಥಿಇಸ್ಮ್ (ನಾ.) ದೇವರಿರುವನೆಂದು ನಂಬದಿರುವುದು ; ನಾಸ್ತಿಕತೆ ; ನಾಸ್ತಿಕ್ಯ ; ನಿರೀಶ್ವರ ವಾದ. **A'theist** (ನಾ.) ನಾಸ್ತಿಕ : ನಿರೀಶ್ವರ ವಾದಿ. **Atheístic** (ಗು.) ; **Atheístically** (ಕ್ರಿ. ವಿ.)

Athenaéum ಅ್ಯಥಿನೀಯಂ (ನಾ.) ಸಾಹಿತ್ಯದ ಅಥವಾ ವಿಜ್ಞಾನದ ಸಂಸ್ಥೆ (ಮು., ಲಂಡನ್ನಿನಲ್ಲಿರುವ ಈ ಹೆಸರಿನ ಸಂಸ್ಥೆ). ವಾಚನಾಲಯ ; ಪುಸ್ತಕ ಭಂಡಾರ. ('ಅಥೇನೆ' ಎಂಬ ಗ್ರೀಕ್ ವಿದ್ಯಾದೇವತೆಯ ಹೆಸರಿನಿಂದ)

Athérmanous ಅಥರ್ಮನಸ್ (ಗು.) (ಭೌ. ವಿ.) ಉಷ್ಣ ಪ್ರವಾಹ ಹರಿಯಲಾರದ ; ಉಷ್ಣಾಭೇದ್ಯ. **Athérmancy** — ಮನ್ಸಿ (ನಾ.)

Athírst ಅಥರ್ಸ್ಟ್ (ಗು.) ಬಾಯಾರಿದ ; ತೃಷ್ಣೆಯುಳ್ಳ. (ರೂಪ.) ಆತುರತೆಯುಳ್ಳ.

A'thlete ಅ್ಯಥ್ಲೀಟ್ (ನಾ.) ಅಂಗಸಾಧನೆಗಳಲ್ಲಿ ಸ್ಪರ್ಧಿಸುವವನು ; ಜಟ್ಟಿ ; ಮಲ್ಲ. ದೇಹಶಕ್ತಿಯನ್ನು ಅಭ್ಯಾಸದಿಂದ ವೃದ್ಧಿಪಡಿಸಿಕೊಂಡಿರುವವನು ; ಬಲಿಷ್ಠ. **Athlétic** ಅ್ಯಥ್ಲೆಟಿಕ್ (ಗು.) ಜಟ್ಟಿಗಳ ಸಂಬಂಧವಾದ ; ಮಿಗಿಲಾದ ದೇಹಶಕ್ತಿಯುಳ್ಳ. **Athlétics** (ನಾ.) ವ್ಯಾಯಾಮ ; ಅಂಗಸಾಧನೆ. **Athlétically** (ಕ್ರಿ. ವಿ.) ; **Athléticism** (ನಾ.) ವ್ಯಾಯಾಮ ಸಾಧನೆಗಳಲ್ಲಿ ಆಸಕ್ತಿ ಅಥವಾ ಅಭ್ಯಾಸ ; ಮಲ್ಲಶಿಕ್ಷಣ.

Athwárt ಅತ್ವಾರ್ಟ್ (ಕ್ರಿ. ವಿ., ಉಪ.) ಅಡ್ಡವಾಗಿ ; ಅಡ್ಡಡ್ಡಲಾಗಿ (ಸೂಚ್ಯಗೆ). (ನೌಕ) ಹಡಗಿನ ಒಂದು ಪಕ್ಕದಿಂದ ಮತ್ತೊಂದು ಪಕ್ಕಕ್ಕೆ. (ರೂಪ.) ವಿಪರೀತವಾಗಿ ; ವ್ಯತ್ಯಸ್ತವಾಗಿ ; ವ್ಯತಿರಿಕ್ತವಾಗಿ ; ವಕ್ರವಾಗಿ ; ಪ್ರತಿಯಾಗಿ.

A-tílt ಅಟಿಲ್ಟ್ (ಕ್ರಿ. ವಿ.) ಬಿದ್ದುಹೋಗುವಷ್ಟು ಓರೆಯಾಗಿ. (ರೂಪ. ಸಹ). To (run or) ride a-tilt ಸವಾರಿ ಮಾಡುತ್ತ ಎದುರಾಳಿಯನ್ನು ತಿವಿಯಲು ಭರ್ಜಿಯನ್ನು ಚಾಚಿ (ಸಾ., ರೂಪ.)

Atlántes ಅ್ಯಟ್‌ಲ್ಯಾಂಟೀಸ್ (ನಾ., ಬ. ವ.) (ಶಿಲ್ಪ) ಪುರುಷಾಕಾರ ಸ್ತಂಭ.

Atlántic ಅ್ಯಟ್‌ಲ್ಯಾಂಟಿಕ್ (ಗು.) ಲಿಬಿಯಾ ದೇಶದಲ್ಲಿರುವ ಅಟ್ಲಾಸ್ ಪರ್ವತಕ್ಕೆ ಸಂಬಂಧಿಸಿದ. (ನಾ.) ಆಫ್ರಿಕಾ ಖಂಡದ ಪಶ್ಚಿಮ ಕಡೆಗಿರುವ ಸಮುದ್ರಕ್ಕೆ ಮೊದಲು ಹೆಸರಾಗಿದ್ದು, ಆಮೇಲೆ ಪೂರ್ವಕ್ಕೆ ಯೂರೋಪ್ ಮತ್ತು ಆಫ್ರಿಕಾ ಖಂಡವೂ, ಪಶ್ಚಿಮಕ್ಕೆ ಅಮೆರಿಕಾ ಖಂಡವೂ ಇರುವ ಸಮುದ್ರಭಾಗಕ್ಕೆಲ್ಲ ಕೊಟ್ಟಿರುವ ಹೆಸರು : ಅಟ್ಲಾಂಟಿಕ್ ಸಾಗರ.

Atlántosaúrus ಅ್ಯಟ್ಲ್ಯಾಂಟೊಸಾರಸ್ (ನಾ.) ಬಹಳ ಪ್ರಾಚೀನ ಕಾಲದ ಶಿಲೀಭೂತ ಸರೀಸೃಪ ಜಾತಿಯ ಒಂದು ಅದ್ಭುತದೇಹದ ಪ್ರಾಣಿ.

A'tlas ಅ್ಯಟ್ಲಸ್ (ನಾ.) ಭೂಪಟಗಳ ಪುಸ್ತಕ ; ಯಾವುದಾದರೂ ವಿಷಯ ವಿವರಣೆಗಾಗಿ ಅಳವಡಿಸಿದ ಚಿತ್ರಪಟಗಳ ಪುಸ್ತಕ (ಉದಾ.— Anatomical atlas ಶರೀರ ರಚನೆಯ ಚಿತ್ರಪಟಗಳ ವಹಿ.) ನಕ್ಷೆಬರೆಯುವ ದೊಡ್ಡಳತೆಯ ಕಾಗದ. (ಶ. ವಿ.) ತಲೆಗೆ ಆಧಾರವಾಗಿರುವ ಕತ್ತಿನಲ್ಲಿಯ ಬೆನ್ನೆಲುಬಿನ ಒಂದು ಮೂಳೆ. ಕಶೇರುವಿನ ಅಗ್ರಾಸ್ಥಿ. ಪ್ರಪಂಚಕ್ಕೆ ಆಧಾರವಾಗಿರುವ ಕಂಬಗಳನ್ನು ಹೊತ್ತುಕೊಂಡಿರುವನೆಂದು ಪೂರ್ವದ ಗ್ರೀಕರು ನಂಬಿದ್ದ ದೇವತೆ. ಆಕಾಶವನ್ನು ಹೊತ್ತುಕೊಂಡಿರುವುದೆಂಬ ಐತಿಹ್ಯವಿರುವ ಲಿಬಿಯಾದೇಶದ ಒಂದು ಪರ್ವತ. (ರೂಪ.) ಅತ್ಯಂತ ದೊಡ್ಡ ಭಾರವನ್ನು ಹೊರಬಲ್ಲವನು. ಮುಖ್ಯಾಧಾರ.

Atmólogy ಅ್ಯಟ್ಮಾಲೊಜಿ (ನಾ.) (ಭೌ.ವಿ.) ನೀರಿನ ಆವಿಯ ವಿಷಯದ ಗೋಚರಾನುಭವಗಳನ್ನೂ ನಿಯಮಗಳನ್ನೂ ಪ್ರತಿಪಾದಿಸುವ ವಿದ್ಯೆ : ನೀರಾವಿಯ ವಿದ್ಯೆ ; ಜಲಬಾಷ್ಪ ವಿದ್ಯೆ. **Atmólogist** (ನಾ.)

Atmólysis ಅ್ಯಟ್ಮಾಲಿಸಿಸ್ (ನಾ.) (ಭೌ. ವಿ.) ಅಸಮ ಪ್ರಸಾರಣವುಳ್ಳ ಅನಿಲಗಳ ಅಸಮಗ್ರ ಪೃಥಕ್ಕರಣ : ಅನಿಲ ಪೃಥಕ್ಕರಣ.

Atmómeter ಅ್ಯಟ್ಮಾಮಿಟರ್ (ನಾ.) ಒಂದು ಆರ್ದ್ರ ಪ್ರದೇಶದಿಂದ ಹೊರಡುವ ಆವಿಯನ್ನು ಅಳೆಯುವ ಸಾಧನ : ಬಾಷ್ಪಮಾಪಕ.

A'tmosphere ಅ್ಯಟ್ಮೊಸ್ಫಿಯರ್ (ನಾ.) ಯಾವುದಾದರೂ ಆಕಾಶಸ್ಥಕಾಯದ ಸುತ್ತಲೂ ಆವರಿಸಿಕೊಂಡಿರುವ ಅನಿಲಮಂಡಲ (ಮು., ಭೂಖಂಡದ ಸುತ್ತಲೂ ಇರುವ ವಾಯುಮಂಡಲ). ವಾಯುಮಂಡಲ ; ವಾತಾವರಣ. ಯಾವ ಪದಾರ್ಥವನ್ನಾದರೂ ಸುತ್ತಲೂ ಆವರಿಸಿಕೊಂಡಿರುವ ಅನಿಲಾವರಣ. (ಯಾವ ಪ್ರದೇಶದಲ್ಲಾದರೂ ಇರುವ) ವಾಯು. ಆವರಣ ; ಸನ್ನಿವೇಶ. ಮಾನಸಿಕ ಅಥವಾ ನೈತಿಕ ಪರಿಸ್ಥಿತಿ. **A'tmospheres** ಭೂಮಿಯ ಮೇಲ್ಭಾಗದ ಪ್ರತಿ ಚದರಂಗುಲದ ಮೇಲೆಯೂ ಸುಮಾರು ೧೫ ಪೌಂಡು ತೂಕದಂತೆ ಅಮುಕುತ್ತಿರುವ ವಾಯುಮಂಡಲದ ಒತ್ತಡ : ವಾಯುಭಾರ. **Atmosphéric(al)** (ಗು.) ; Atmospheric railway ಸಂಕುಚಿತ ವಾಯುವಿನಿಂದ ಅಥವಾ ವಾಯುಶೋಷಣದಿಂದ ಮೊದಲುಮೊದಲು ನಡೆಯುತ್ತಿದ್ದ ರೈಲ್‌ಬಂಡಿ : ವಾಯುಚಾಲಿತ ರೈಲ್‌ಬಂಡಿ. **Atmosphérics** (ನಾ., ಬ. ವ.) ವಾಯುಮಂಡಲದಲ್ಲಿ ವಿದ್ಯುತ್‌ಕ್ಷೋಭೆಯಿಂದ ನಿಸ್ತಂತುವಾರ್ತಾ ಶಬ್ದಗಳಲ್ಲುಂಟಾಗುವ ಗಲಿಬಿಲಿ : ವಾಯುಕ್ಷೋಭೆ. **Atmosphérically** (ಕ್ರಿ. ವಿ.)

Atóll ಅಟಾಲ್, **A'toll** ಅ್ಯಟಾಲ್ (ನಾ.) ಸಮುದ್ರದಲ್ಲಿ ಸುತ್ತಲೂ ಚಕ್ರಾಕಾರವಾಗಿ ಬೆಳೆದು ಮಧ್ಯೇ ಆಳವಿಲ್ಲದ ನೀರನ್ನೊಳಕೊಂಡ ಹವಳದ ದಿಬ್ಬ : ಅಡಲು.

A'tom ಅ್ಯಟಂ (ನಾ.) ವಿಭಜಿಸಲು ಸಾಧ್ಯವಲ್ಲದಷ್ಟು ಸೂಕ್ಷ್ಮಪರಿಮಾಣದ ಪದಾರ್ಥ. Physical atom ಪರಮಾಣು. Chemical atoms ಮೂಲವಸ್ತುಗಳು ತಾವಾಗಿಯೊ ಅಥವಾ ಒಂದರೊಡನೊಂದೊ, (ರಾಸಾಯನಿಕ) ಸಂಯೋಗಹೊಂದುವ ಲಘುತಮ ಕಣಗಳು : ರಾಸಾಯನಿಕ ಪರಮಾಣುಗಳು. ಅತ್ಯಲ್ಪ ಭಾಗ ; ಬಹಳ ಸಣ್ಣದು ; ಲವ ; ಲೇಶ. **Atómic** ಅಟಾಮಿಕ್ (ಗು.) : Atomic philosophy ಗುರುತ್ವವೂ ಚಲನೆಯೂ ಉಳ್ಳ ಅಚ್ಛೇದ್ಯ ಪರಮಾಣುಗಳಿಂದ ಎಲ್ಲ ವಸ್ತುಗಳೂ ರಚನೆಯಾಗಿವೆ ಎಂಬ ವಾದ : ಪರಮಾಣು ವಾದ. Chemical atomic theory ಮೂಲವಸ್ತುಗಳು ನಿಯತವಾದ ಗುರುತ್ವವುಳ್ಳ ಪರಮಾಣುಗಳಿಂದ ಕೂಡಿರುವುವೆಂದೂ ಬೇರೆಬೇರೆ ಮೂಲವಸ್ತುಗಳ ಪರಮಾಣುಗಳು ಒಂದರೊಡನೊಂದು, ಗೊತ್ತಾದ ಪ್ರಮಾಣದಲ್ಲಿ, (ರಾಸಾಯನಿಕ) ಸಂಯೋಗಹೊಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವುವೆಂದೂ ಪ್ರತಿಪಾದಿಸುವ ವಾದ : ರಾಸಾಯನಿಕ ಪರಮಾಣು ವಾದ. Atomic weight ಪರಮಾಣು ಭಾರ. Unit of atomic weight ಪರಮಾಣು ಭಾರಮಾನ (ಜಲಜನಕದ ಒಂದು ಪರಮಾಣುವಿನ ತೂಕ). **Atómical** (ಗು.) ; **Atómically** (ಕ್ರಿ. ವಿ.) ; **Atomícity** ಆ್ಯಟೊಮಿಸಿಟಿ (ನಾ.) (ಒಂದು ಮೂಲವಸ್ತುವಿನ ಅಣುವಿನಲ್ಲಿರುವ) ಪರಮಾಣು ಸಂಖ್ಯೆ. **A'tomism** (ನಾ.) ಪರಮಾಣು ವಾದ. ಪ್ರತ್ಯೇಕ ಪರಮಾಣುಕ್ರಿಯಾ ವಾದ. **A'tomist** (ನಾ.) ಪರಮಾಣು ವಾದಿ. **A'tomistic** (ಗು.) ; **A'tomize** (ಕ್ರಿ. ಸಕ.) ಪರಮಾಣುಗಳಾಗಿ ಮಾಡು. ತೃಣೀಕರಿಸು. **Atomizátion** (ನಾ.) ; **A'tomizer** (ನಾ.) (ವೈ. ಶಾ.) ದ್ರವಗಳನ್ನು ಸೂಕ್ಷ್ಮವಾದ ತುಂತುರಾಗಿ ವಿಭಜಿಸುವ ಯಂತ್ರಸಾಧನ : ತುಂತುರು ಯಂತ್ರ **A'tomy**[1] ಆ್ಯಟೊಮಿ (ನಾ.) ಪರಮಾಣು. ಅಣುಪ್ರಾಣಿ.

A'tomy[2] ಆ್ಯಟೊಮಿ (ನಾ.) ಅಸ್ಥಿಪಂಜರ. ಬಡಕಲು ಮೈ

Atóne ಅಟೋನ್ (ಕ್ರಿ.) (ಜಗಳವನ್ನು) ಸಮಾಧಾನ ಮಾಡು. ಪರಿಹಾರ ಕೊಡು ; ಪ್ರಾಯಶ್ಚಿತ್ತ ಮಾಡಿಕೊ. **Atónement** (ನಾ.)

Atónic ಅಟಾನಿಕ್ (ಗು.) ಸ್ವರ ಹಾಕದ ; ಒತ್ತಿ ನುಡಿಯದ. (ರೋಗ) ದೇಹದಲ್ಲಿ ಬಿಗುವಿಲ್ಲದ, ಸತ್ವವಿಲ್ಲದ ; ದೇಹಪಾಟವ ಕುಗ್ಗಿದ. (ನಾ.) ಸ್ವರಹಾಕದ ಶಬ್ದ.

Atóp ಅಟಾಪ್ (ಕ್ರಿ. ವಿ., ಉಪ.) ನೆತ್ತಿಯ ಮೇಲೆ ; ತುದಿಯಲ್ಲಿ.

Atrabílious ಆ್ಯಟ್ರಬಿಲಿಯಸ್ (ಗು.) ಕೃಷ್ಣಪಿತ್ತ ರೋಗದಿಂದ ನರಳುವ. ಜೋಲು ಮೋರೆಯ ; ವಿಷಣ್ಣ ; ಸಿಡುಕಿನ. **Atrabíliousness** (ನಾ.)

A'trium ಏಟ್ರಿಯಂ (ನಾ.; ಬ. ವ., — ia, — iums) ರೋಮನರ ಮನೆಯ ಮಧ್ಯಾಂಗಣ, ತೊಟ್ಟಿ, ಹಜಾರ. ಛಾವಣಿಯಿರುವ ಮುಖ ಮಂಟಪ (ಮು., ಕ್ರೈಸ್ತ ದೇವಾಲಯದ ಬಾಗಿಲ ಮುಂದಿನದು)

Atrócity ಅಟ್ರಾಸಿಟಿ (ನಾ.) ಘೋರ ಕೃತ್ಯ ; ಪರಮ ನೀಚತನ. ಸಭ್ಯ ವರ್ತನೆ, ಮರ್ಯಾದೆ, ಮೊ. ಗಳ ಉಲ್ಲಂಘನೆ. **Atrócious** ಅಟ್ರೋಷಸ್ (ಗು.) ಹೇಯ ; ಘೋರ ; ಪರಮ ನೀಚ. **Atróciously** (ಕ್ರಿ. ವಿ.) ; **Atróciousness** (ನಾ.)

A'trophy ಆ್ಯಟ್ರೊಫಿ (ನಾ., ಕ್ರಿ.) ತಕ್ಕ ಪೋಷಣೆಯಿಲ್ಲದೆ ಕ್ಷೀಣಿಸಿಹೋಗುವುದು ; ಶೋಷಣೆ ; ಕ್ಷಯಿಸಿಹೋಗುವುದು ; ಬತ್ತಿಹೋಗುವುದು ; ಕ್ಷೀಣತೆ. (ರೂಪ. ಸಹ). (ಕ್ರಿ.) ಕ್ಷಯಿಸು ; ಕ್ಷೀಣಿಸು ; ಬತ್ತಿಹೋಗು ; ಬತ್ತಿಸು.

A'tropine ಆ್ಯಟ್ರೊಪೈನ್, — ಪೀ(ಪಿ)ನ್ (ನಾ.) (ವೈ. ಶಾ., ರ. ವಿ.) ಉಮ್ಮತ್ತಿಯ ಬೀಜದಲ್ಲೂ, ಇದೇ ವರ್ಗಕ್ಕೆ ಸೇರಿದ ಕೆಲವು ಉಗ್ರ ವಿಷಸಸ್ಯಗಳಲ್ಲೂ ದೊರೆಯುವ ಒಂದು ಸಸಾರಜನಕ ವಿಷಪದಾರ್ಥ : ದುತ್ತೂರ ವಿಷ. **Atropinísm** (ನಾ.), **A'tropism** (ನಾ.) ಈ ಪದಾರ್ಥದ ವಿಷ ಹತ್ತುವುದು.

A'tta ಆ್ಯಟ (ನಾ.) ಗೋಧಿಯ ಹಿಟ್ಟು : ಆಟ (ಉತ್ತರ ಹಿಂದೂಸ್ಥಾನದ ಮಾತು)

Attách ಅಟ್ಯಾಚ್ (ಕ್ರಿ.) (ಒಂದು ವಸ್ತುವನ್ನು ಮತ್ತೊಂದಕ್ಕೆ) ಅಂಟಿಸು, ಸೇರಿಸು, ಬಂಧಿಸು, ಕೂಡಿಸು, ಜೋಡಿಸು. (ಇತರರೊಡನೆ, ಸ್ನೇಹಿತರೊಡನೆ, ಗುಂಪಿನೊಡನೆ, ಯಾತ್ರೆಯೊಡನೆ) ಸೇರಿಕೊ. ಅನುರಕ್ತನಾಗು ; ಆಸಕ್ತನಾಗು ; ಅನುರಕ್ತನನ್ನಾಗಿ ಮಾಡಿಕೊ ; ಒಲಿಸಿಕೊ. (ಅಮೂರ್ತ ವಸ್ತು, ಹೆಸರು, ಋಣ, ಮೊ. ನ್ನು) ಸೇರಿಸು. (ಗುಣ, ಮೊ. ನ್ನು) ಅನ್ವಯಿಸು, ಆರೋಪಿಸು. (ನ್ಯಾ. ಶಾ.) ಕಾನೂನಿನ ಆಧಾರದ ಮೇಲೆ (ಮನುಷ್ಯನನ್ನು ಅಥವಾ ಆಸ್ತಿಯನ್ನು) ಹಿಡಿ ; 'ಜಪ್ತಿ' ಮಾಡು. ಅಂಟು ; ಹತ್ತು ; ತಗುಲು (No blame attaches to this ಇದಕ್ಕೆ ಯಾವ ದೋಷವೂ ಹತ್ತುವುದಿಲ್ಲ). **Attáchable** — ಚಬ್‌ಲ್ (ಗು.) ; **Attáched** (ಗು.) ; **Attáchment** (ನಾ.) ಸೇರಿಕೆ ; ಜೋಡಣೆ ; ಸೇರಿದ್ದು ; ಸೇರಿಸಿದ್ದು ; ಜೋಡಿಸಿದ್ದು. ಸೇರಿಸುವ ಸಾಧನ. ಆಸಕ್ತಿ ; ಪ್ರೀತಿ ; ಮಮತೆ ; ಒಲವು ; ಹತ್ತುಗೆ ; ಅನುರಾಗ. 'ದಸ್ತಗಿರಿ' ; 'ಜಪ್ತಿ'.

Attáche ಅಟ್ಯಾಷೇ (ನಾ.) ರಾಯಭಾರಿಯ ಪರಿವಾರದಲ್ಲಿ ಸೇರಿದವನು. ಪರ ರಾಜ್ಯದಲ್ಲಿ ತನ್ನ ಸರ್ಕಾರದ ಪರವಾಗಿ ಸೇನೆಯ ಅಥವಾ ನಾವೆಯ ಪ್ರತಿನಿಧಿಯಾಗಿರುವ ಅಧಿಕಾರಿ. Attache case ಕಾಗದ ಪತ್ರಗಳನ್ನಿಟ್ಟು ಕೈಯಲ್ಲಿ ಹಿಡಿದುಕೊಂಡುಹೋಗುವ ಸಣ್ಣ ತೊಗಲಿನ ಪೆಟ್ಟಿಗೆ : ಕೈಪೆಟ್ಟಿಗೆ.

Attáck ಅಟ್ಯಾಕ್ (ಕ್ರಿ. ಸಕ., ನಾ.) ಮೇಲೆ ಬೀಳು ; ಆಕ್ರಮಣ ಮಾಡು ; ತಾಗು (ರೂಪ ಸಹ). (ರೋಗ, ಮೊ.) ತಗುಲು. ಕಷ್ಟಕಾರ್ಯವನ್ನು ಸಾಧಿಸಲು ತೊಡಗು.

Attaín ಅಟೇಯ್‌ನ್ (ಕ್ರಿ.) ಬಂದುಸೇರು ; ತಲಪು. ಹೊಂದು ; ಪಡೆ ; ಸಂಪಾದಿಸು ; ಸಾಧಿಸು ; ನೆರವೇರಿಸು ; ಎಯ್ದು. **Attainabílity** (ನಾ.) ; **Attaínable** (ಗು.) ಲಭ್ಯ ; ಪ್ರಾಪ್ಯ ; ಸಾಧ್ಯ. **Attaínableness** (ನಾ.) ; **Attaínment** (ನಾ.) ಪ್ರಯತ್ನದಿಂದ ಪಡೆಯುವುದು, ಸೇರುವುದು ; ಪಡೆದದ್ದು ಅಥವಾ ಸಾಧಿಸಿದ್ದು (ಮು., ಪಾಂಡಿತ್ಯ, ಮೊ.) ; ಸಿದ್ಧಿ ; ಸಾಧನೆ.

Attaínder ಅಟೇಯ್‌ಂಡರ್ (ನಾ.) ರಾಜದ್ರೋಹ, ಮೊ. ಮಹಾಪರಾಧಕ್ಕಾಗಿ ಆದ ಮರಣದಂಡನೆಯ, ಅಥವಾ ನ್ಯಾಯಬಹಿಷ್ಕೃತಿಯ (ಭ್ರಷ್ಟತೆಯ) ಪರಿಣಾಮ (ಸ್ವಂತ ಆಸ್ತಿಯನ್ನೆಲ್ಲ ದಂಡತೆರುವುದು, ಪೌರಸ್ವಾಮ್ಯವನ್ನು ಕಳೆದುಕೊಳ್ಳುವುದು, ತನಗಾಗಲಿ ತನ್ನ ಸಂತತಿಗಾಗಲಿ ಯಾವ ಆಸ್ತಿಯ ಹಕ್ಕೂ ಇಲ್ಲದೆಹೋಗುವುದು, ಇತ್ಯಾದಿ) : ಸರ್ವನಾಶ. **Attaínt** ಅಟೇಯ್‌ಂಟ್ (ಕ್ರಿ. ಸಕ.) ಸರ್ವನಾಶಕ್ಕೆ ಗುರಿಪಡಿಸು. (ರೋಗ, ಮೊ. ಗಳ ವಿಷಯದಲ್ಲಿ) ತಗುಲು, ಅಂಟು, ಹೊಡೆ ; ಸೋಂಕು ತಗುಲು. (ರೂಪ.) ಮಲಿನಗೊಳಿಸು ; ಕಳಂಕಿಸು.

A'ttar ಆ್ಯಟರ್ (ನಾ.) ಗುಲಾಬಿಹೂವಿನ ಎಸಳುಗಳಿಂದ ತೆಗೆದ ಸುವಾಸನಾ ತೈಲ : ಗುಲಾಬಿಅತ್ತರು ; ಅತ್ತರು.

Attémper ಅಟೆಂಪರ್ (ಕ್ರಿ. ಸಕ.) ಮಿಶ್ರಣಮಾಡುವುದರಿಂದ ಹದಗೊಳಿಸು, ಮಾರ್ಪಡಿಸು ಅಥವಾ ತಗ್ಗಿಸು. ಶಾಖವನ್ನು ಮಾರ್ಪಡಿಸು. ಶಮನ ಮಾಡು ; ಸಮಾಧಾನ ಮಾಡು. ಸರಿಹೊಂದು ; ಹೊಂದಿಸು ; ಹೊಂದಿಸಿಕೊ. (ಲೋಹಕ್ಕೆ) ಹದಕೊಡು. **Attémperment** (ನಾ.)

Attémpt ಅಟೆಮ್ಟ್ (ಕ್ರಿ. ಸಕ., ನಾ.) ಯತ್ನಿಸು ; ಪ್ರಯತ್ನಮಾಡು ; (ಕಷ್ಟಸಾಧ್ಯವಾದ ಕೆಲಸವನ್ನು) ಸಾಧಿಸಲುಜ್ಜುಗಿಸು ; ಪ್ರವರ್ತಿಸು. (ಶತ್ರುವನ್ನು, ಕೋಟೆಯನ್ನು) ಗೆಲ್ಲಲು ಪ್ರಯತ್ನಿಸು. (ನಾ.) ಯತ್ನ ; ಪ್ರಯತ್ನ. Attempt the life of a person ಒಬ್ಬನನ್ನು ಕೊಲ್ಲಲು ಯತ್ನಿಸು. **Attémptable** (ಗು.)

Atténd ಅಟೆಂಡ್ (ಕ್ರಿ.) ಮನಸ್ಸುಕೊಡು ; ಗಮನಿಸು ; ಲಕ್ಷ್ಯಕೊಡು ; ನೋಡಿಕೊ. ನಿರತನಾಗು. ಹಾಜರಿರು ; ಸಹಚರಿಸು ; ಸಂಗಡ ಇರು ; (ಮರ್ಯಾದೆಗಾಗಿ) ಜೊತೆಯಲ್ಲಿ ಹೋಗು ; ಹಿಂದೆ ಕಾದಿರು ; ಉಪಚರಿಸು. **Atténdance** — ಡನ್ಸ್ (ನಾ.) (ಕ್ರಿಯಾರ್ಥಗಳೆಲ್ಲ). ಹಾಜರಿ (ಸಂಖ್ಯೆ). Dance attendance on a person ಅನುಸರಣೆಮಾಡು ; ಒಬ್ಬನ ಮರ್ಜಿಯನ್ನನುಸರಿಸಿ ನಡೆ ; ಹಿಂದೆ ಮುಂದೆ ಸುತ್ತಾಡು. **Atténdant** — ಡಂಟ್ (ಗು.) ಒಬ್ಬನ ಬಳಿ (ಕಾದಿರುವ) ; ಒಡನಿರುವ ; ಜೊತೆಯಲ್ಲಿರುವ ; ಸಹಚರ ; ಹಾಜರಿರುವ. (ನಾ.) ಸೇವಕ ; ಅನುಚರ. **Atténder** (ನಾ.) ಗಮನ ಕೊಡುವವನು ; ನೋಡಿಕೊಳ್ಳುವವನು ; ಸೇವಕ. **Atténtion** — ಷನ್ (ನಾ.) ಗಮನ ; ಅವಧಾನ ; ಲಕ್ಷ್ಯ ; ಎಚ್ಚರಿಕೆ. **Atténtions** (ನಾ.) ಮರ್ಯಾದೆಗಾಗಿ ತೋರಿಸುವ ಉಪಚಾರ ; ಆದರ ; ಪುರಸ್ಕಾರ. **Atténtion** (ಭಾವ. ಅವ್ಯ.) (ಸೇನೆ) (ಯಾವುದಾದರೂ ಸೇನಾಕಾರ್ಯದಲ್ಲಿ ತೊಡಗಲು ಸಿದ್ಧವಾಗಿರು ಎಂಬ ಎಚ್ಚರಿಕೆಯ ಮಾತು) : ಎಚ್ಚರಿಕೆ ! ಗಮನವಿರಲಿ ! ಹುಷಾರ್ ! **Atténtive** (ಗು.) ಗಮನಕೊಡುವ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಕ್ಷ್ಯವಿಟ್ಟು ನೋಡುವ : ಮರ್ಯಾದೆ ತೋರಿಸುವ ; ಆಸಕ್ತಿಯುಳ್ಳ ; ನಿರತ. **Atténtively** (ಕ್ರಿ. ವಿ.) ; **Atténtiveness** (ನಾ.)

Atténuate ಅಟೆನ್ಯುಯೇಟ್ (ಕ್ರಿ. ಸಕ.) ತೆಳ್ಳಗೆ ಮಾಡು ; ಕೃಶ ಮಾಡು ; ವಿರಳ ಮಾಡು ; ಅಳ್ಳಕ ಮಾಡು ; ಬಲ ತಗ್ಗಿಸು. ದೆರೆಗುಂದಿಸು. **Attenuátion** (ನಾ.). **Atténuate** — ಎಟ್ (ಗು.) ತೆಳ್ಳಗಿರುವ ; ಕೃಶಮಾಡಿದ ; ವಿರಳಮಾಡಿದ.

Attést ಅಟೆಸ್ಟ್ (ಕ್ರಿ.) (ನಿಜವೆಂದು) ಸಾಕ್ಷ್ಯಕೊಡು ; ದೃಢೀಕರಿಸು ; ಸಾಕ್ಷಿಯಾಗಿರು ; ಒಪ್ಪಿ ರುಜು ಹಾಕು ; ಸಾಕ್ಷಿ ಹಾಕು. ಪ್ರಮಾಣ ಮಾಡಿಸು. ಸೈನ್ಯೋದ್ಯೋಗಕ್ಕೆ ಸೇರು, — ಸೇರಿಸು. **Attéstant** — ಟಂಟ್ (ಗು.) ಸಾಕ್ಷ್ಯ ಕೊಡುವ, ಹಾಕುವ. (ನಾ.) (ದೃಢೀಕರಿಸಿ) ರುಜುಹಾಕುವವನು. **Attéstor** (ನಾ.) ; **Attestátion** ಆ್ಯಟೆಸ್ಟೇಷನ್ (ನಾ.) ಸಾಕ್ಷ್ಯಕೊಡುವುದು ; ಸಾಕ್ಷ್ಯ ; ಪ್ರಮಾಣ ; ರುಜುವಾತು. ಪ್ರಮಾಣ, ರುಜು, ಮೊ. ಗಳಿಂದ ವಿಹಿತ ರೀತಿಯಲ್ಲಿ ದೃಢೀಕರಿಸುವುದು ; ಒಪ್ಪಿ ರುಜುಹಾಕುವುದು.

A'ttic[1] ಆ್ಯಟಿಕ್ (ಗು.) ಅಥೆನ್ಸಿನ ಅಥವಾ 'ಅಟಿಕ'ದ. Attic (dialect) ಅಥೀನಿಯನ್ನರು ಆಡುತ್ತಿದ್ದ ಗ್ರೀಕ್‌ಭಾಷಾ ಭೇದ. Attic wit, salt ನಯವಾದ, ಮನನಾಟುವ, ಮಾತಿನ ಚಾತುರ್ಯ. (ಭಾಷೆ, ಶೈಲಿ, ಮೊ. ಗಳಲ್ಲಿ) ವಿಶುದ್ಧ, ಪ್ರೌಢ. **A'tticism** — ಸಿಸ್ಮ್ (ನಾ.) ಅಥೆನ್ಸಿನ ಶೈಲಿ, ಭಾಷಾಮರ್ಯಾದೆ ; ಅಚ್ಚುಕಟ್ಟು ನುಡಿ ; ಪರಿಶುದ್ಧ ಲಲಿತ ಶೈಲಿ. ಅಥೆನ್ಸ್‌ಮೇಲಿನ ಅಭಿಮಾನ. **A'tticize** (ಕ್ರಿ. ಅಕ.) ಅಥೆನ್ಸಿನ ಪಕ್ಷವಹಿಸು ; ಅಥೆನ್ಸಿನ ಪದ್ಧತಿ, ಭಾಷಾಶೈಲಿ, ಮೊ. ನ್ನು ಅನುಕರಿಸು.

A'ttic[2] ಆ್ಯಟಿಕ್ (ನಾ.) ಎತ್ತರವಾದ ಕಂಬಸಾಲಿನ ಮೇಲಿನ ಸಣ್ಣ ಕಂಬಸಾಲಿನ ಕಟ್ಟಡ. ಮನೆಯ ಅತ್ಯಂತ ಮೇಲ್ಗಡೆಯ ಅಟ್ಟ : ಮೇಲಟ್ಟ ; ಮೇಲಟ್ಟದ ಕೋಣೆ.

Attíre ಅಟೈರ್ (ಕ್ರಿ. ಸಕ.) ಉಡುಪು ತೊಡು ; ಉಡಿಗೆ ತೊಡಿಗೆಗಳಿಂದ ಸುಸಜ್ಜಿತನಾಗು, ಮಾಡು. (ನಾ.) ಉಡುಪು ; ಉಡಿಗೆ ತೊಡಿಗೆ ; ವೇಷಭೂಷಣ.

A'ttitude ಆ್ಯಟಿಟ್ಯೂಡ್ (ನಾ.) ಭಾವ ; ಭಂಗಿ ; ಶರೀರ ವಿನ್ಯಾಸ (Strike an attitude ಭಾವ ಹಾಕಿಕೊ ; ಭಂಗಿ ತಾಳು). Attitude of mind ನಿಷ್ಕೃಷ್ಟ ಮನೋಭಾವ. **Attitúdinize** (ಕ್ರಿ. ಅಕ.) ಅತ್ಯಭಿನಯ ಮಾಡು. (ಮಾತು, ಬರೆವಣಿಗೆ, ಮೊ. ಗಳಲ್ಲಿ) ಕೃತಕ ಭಾವ ತೋರಿಸು.

Attórn ಅಟರ್ನ್ (ಕ್ರಿ.) (ನ್ಯಾ. ಶಾ.) ವರ್ಗಾಯಿಸು. ಜಮೀನು ವರ್ಗವಾಗಿ ಬಂದ ಹೊಸ ದಣಿಯನ್ನು ಕಾನೂನನುಸರಿಸಿ ಅಂಗೀಕರಿಸು. **Attórnment** (ನಾ.)

Attórney ಅಟರ್ನಿ (ನಾ.) ವ್ಯಾಪಾರದಲ್ಲಿ ಅಥವಾ ನ್ಯಾಯಸಂಬಂಧದಲ್ಲಿ ಮತ್ತೊಬ್ಬನಿಗಾಗಿ ಕಾರ್ಯನಿರ್ವಹಿಸಲು ನಿಯಮಿತನಾದವನು : ವ್ಯವಹಾರ ಪ್ರತಿನಿಧಿ ; ವಕೀಲ. Attorney-at-law (or, Public attorney) ಸಂಪ್ರದಾಯ ನ್ಯಾಯದ ವಿಚಾರಣೆಯ ನ್ಯಾಯಸ್ಥಾನಗಳಲ್ಲಿ ವಕೀಲ ಕೆಲಸ ಮಾಡಲು ತಕ್ಕ ಯೋಗ್ಯತೆಯುಳ್ಳವನು. Attorney-General ಸರ್ಕಾರದ ಪರವಾಗಿ ವಾದಿಸಲು ನಿಯಮಿತನಾದ ವಕೀಲ ; ಸರ್ಕಾರಿ ವಕೀಲ. Letter of Attorney (ತನಗಾಗಿ ಕಾರ್ಯನಡೆಯಿಸಲು ಮತ್ತೊಬ್ಬನನ್ನು ನಿಯಮಿಸುವ) ಅಧಿಕಾರಪತ್ರ : 'ಮುಖ್ತ್ಯಾರು ನಾಮೆ' ; ವಕಾಲತ್ತು ನಾಮೆ. Power of Attorney ಹೀಗೆ ಕೊಟ್ಟ ಅಧಿಕಾರ, ವಕಾಲತ್ತು. **Attórneyship** (ನಾ.)

Attráct ಅಟ್ರಾಕ್ಟ್ (ಕ್ರಿ. ಸಕ.) ಸೆಳೆ ; ಎಳೆದುಕೊ ; ಆಕರ್ಷಿಸು ; ಮನಸ್ಸನ್ನು ಸೆಳೆ ; ಮೋಹಗೊಳಿಸು ; ಕಂಗೊಳಿಸು. **Attráctable** (ಗು.) ; **Attractability** (ನಾ.) ; **Attráction** (ನಾ.) ಸೆಳೆತ ; ಆಕರ್ಷಣೆ (ರೂಪ. ಸಹ) ; ಎಳಕುಳಿ ; ಆಕರ್ಷಕತ್ವ ; ಆಕರ್ಷಕ ಶಕ್ತಿ ; ಸೆಳೆದುಕೊಳ್ಳುವ ಶಕ್ತಿ. ಆಕರ್ಷಿಸುವ ವಸ್ತು (ರೂಪ.). Attraction of gravity, or Gravitation ವಿಶ್ವದಲ್ಲಿಯ ಸಮಸ್ತ ವಸ್ತುಗಳಿಗೂ ಇರುವ ಪರಸ್ಪರ ಆಕರ್ಷಣಶಕ್ತಿ : (ಈ ಶಕ್ತಿಯು ವಸ್ತುಗಳ ದ್ರವ್ಯದ ಮೊತ್ತಕ್ಕನುಗುಣವಾಗಿಯೂ, ಅವುಗಳ ಪರಸ್ಪರ ದೂರಕ್ಕೆ ಆ ದೂರದ ವರ್ಗದಷ್ಟು ವಿಪರೀತವಾಗಿಯೂ ವರ್ತಿಸುತ್ತದೆ ; ಉದಾಹರಣೆ : 2 ಮತ್ತು 5 ಪೌಂಡುಗಳ ದ್ರವ್ಯವುಳ್ಳ ಎರಡು ಕಾಯಗಳು ಪರಸ್ಪರ 10 ಅಡಿಗಳ ದೂರದಲ್ಲಿರುವುದಾದರೆ, ಅವುಗಳ ಪರಸ್ಪರ ಆಕರ್ಷಣವು $\frac{2\times5}{10^2}=\frac{1}{10}$ ಪೌಂಡು ತೂಕ) ; ಗುರುತ್ವಾಕರ್ಷಣ. Magnetic attraction ಕಬ್ಬಿಣದ ಮೇಲೆ ಅಯಸ್ಕಾಂತದ ಆಕರ್ಷಣೆ : ಕಾಂತಾಕರ್ಷಣೆ. Molecular attraction ಒಂದು ವಸ್ತುವಿನಲ್ಲಿಯ ಅತ್ಯಂತ ಸಮೀಪ ಅಣುಗಳ ಪರಸ್ಪರ ಆಕರ್ಷಣೆ : ಅಣ್ವಾಕರ್ಷಣೆ. Capillary attraction ಲೋಮನಾಳಾಕರ್ಷಣೆ (ಕೂದಲಿನಂತೆ ಸೂಕ್ಷ್ಮವಾಗಿರುವ ನಾಳದಲ್ಲಿ ದ್ರವವೇರುವುದು). Attraction of cohesion ಸಂಸಕ್ತ್ಯಾಕರ್ಷಣೆ. Attraction of adhesion ಅನುಸಕ್ತ್ಯಾಕರ್ಷಣೆ. Chemical attraction ರಾಸಾಯನಿಕ ಆಕರ್ಷಣೆ. Personal attractions ವ್ಯಕ್ತಿನಿಷ್ಠ ಆಕರ್ಷಣೆ. **Attráctive** (ಗು.) ಆಕರ್ಷಕ (ರೂಪ.) ; ಚಿತ್ತಾಕರ್ಷಕ ; ಮನೋಹರ. **Attráctively** (ಕ್ರಿ. ವಿ.) ; **Attráctiveness** (ನಾ.)

A'ttribute ಆ್ಯಟ್ರಿಬ್ಯೂಟ್ (ನಾ.) ಲಕ್ಷಣ ; ಗುಣ ; ಸಹಜ ಧರ್ಮ ; ವಿಶೇಷಣ ; ಉಪಾಧಿ ; ಗುರುತು ; ಚಿಹ್ನೆ ; ಲಾಂಛನ (The club is an attribute of Hercules ಗದೆ ಹರ್ಕ್ಯುಲೀಸನ ಲಾಂಛನ). (ವ್ಯಾ.) ವಿಶೇಷಣ. **Attríbute** ಅಟ್ರಿಬ್ಯೂಟ್ (ಕ್ರಿ. ಸಕ.) ಆರೋಪಿಸು ; (ತಕ್ಕದ್ದೆಂದು, ಸೇರಿದ್ದೆಂದು) ಅಧ್ಯಾರೋಪಿಸು ; ಸೇರಿದ್ದೆಂದು ಹೇಳು; ಕಾರಣ ಹೇಳು. **Attribútion** ಆ್ಯಟ್ರಿಬ್ಯೂಷನ್ (ನಾ.) ಆರೋಪಣೆ ; ಆರೋಪಿಸಿದ್ದು. (ದೊರೆ, ರಾಯಭಾರಿ, ಮೊ. ಗೆ) ಕೊಟ್ಟ ಅಧಿಕಾರ (Trials for homicide were only a small part of its attributions ನರಹತ್ಯಾಪರಾಧದ ವಿಚಾರಣೆಮಾಡುವುದು ಅದರ ಅಧಿಕಾರಗಳಲ್ಲಿ ಸ್ವಲ್ಪಭಾಗ). **Attríbutive** (ಗು.) (ತರ್ಕ, ವ್ಯಾ.) ವಿಶೇಷಕ. (ನಾ.) ಲಕ್ಷಣ, ಗುಣ, ಧರ್ಮ, — ವಾಚಿ ; ವಿಶೇಷಣ. **Attríbutively** (ಕ್ರಿ. ವಿ.)

Attrítion ಅಟ್ರಿಷನ್ (ನಾ.) ಘರ್ಷಣೆ ; ತಿಕ್ಕಾಟ ; ಉಜ್ಜಾಟ ; ಸವೆತ. ಘರ್ಷಣಕ್ಷಯ ; ತೇಮಾನ. (ಕ್ರೈಸ್ತ ಪರಿಭಾಷೆ) ಪಾಪಿಯು ದೈವಭಕ್ತಿಯಿಂದಲ್ಲದೆ ಕೇವಲ ದಂಡಭಯದಿಂದ ಪಡುವ ಪಶ್ಚಾತ್ತಾಪ, ಪರಿತಾಪ. **Attríted** ಅಟ್ರೈಟೆಡ್ (ಗು.) ಘರ್ಷಣೆಯಿಂದ ಸವೆದುಹೋದ ; ಉಜ್ಜಿ ಸವೆದ.

Attúne ಅಟ್ಯೂನ್ (ಕ್ರಿ. ಸಕ.) ಸ್ವರಮೇಳನ ಮಾಡು ; ಶ್ರುತಿಮಾಡು ; ಅನುಗೊಳಿಸು. (ರೂಪ. ಸಹ). The mind attuned to grace ಈಶ್ವರಾನುಗ್ರಹಕ್ಕೆ ಅನುಗೊಳಿಸಿದ ಮನಸ್ಸು.

Atýpical ಏಟಿಪಿಕಲ್ (ಗು.) ಮಾದರಿಗೆ ಸರಿಹೊಂದದ.

Aubáde (F) ಒಬಾಡ್ (ನಾ.) ಉದಯ ರಾಗ ; ಉಷಾ ಗಾನ ; ಸುಪ್ರಭಾತ ಗೀತ.

Aúburn ಆಬರ್ನ್ (ಗು.) ಕನಕ ಪಿಶಂಗ ವರ್ಣದ ; ಎಣ್ಣೆಗೆಂಪಿನ (ಸಾ., ತಲೆಗೂದಲು)

Au couránt (F) ಓ ಕುರಾನ್ (ಗು.) ಏನು ನಡೆಯುತ್ತಿದೆಯೆಂಬುದನ್ನು ಅರಿತಿರುವ ; ವಿಷಯ ಪರಿಚಯವುಳ್ಳ.

Aúction ಆಕ್‌ಷನ್ (ನಾ., ಕ್ರಿ. ಸಕ.) ಹರಾಜು (ಹಾಕು). Dutch auction ಪದಾರ್ಥಕ್ಕೆ ಗಿರಾಕಿ ದೊರೆಯುವ ವರೆಗೂ ಅದರ ಬೆಲೆಯನ್ನು ತಗ್ಗಿಸುತ್ತಹೋಗುವ ಹರಾಜು : ಇಳಿಹರಾಜು. Auction bridge ಚಡ ದರಖಾಸ್ತುಳ್ಳ ಒಂದು ಬಗೆಯ ಇಸ್ಪೀಟಾಟ. **Auctioneér** ಆಕ್‌ಷನೀಯರ್ (ನಾ.) ಹರಾಜು ಹಾಕುವವನು ; ಹರಾಜುಗಾರ. (ಕ್ರಿ. ಅಕ.) ಹರಾಜು ನಡೆಯಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Audácious ಆಡೇಷಸ್ (ಗು.) ಸಾಹಸವುಳ್ಳ ; ಅತಿ ಧೈರ್ಯಶಾಲಿಯಾದ ; ಎಂಟೆದೆಯುಳ್ಳ ; ಕೆಚ್ಚೆದೆಯ. ಉದ್ಧತ ; ಧೃಷ್ಟ ; ದುರ್ವಿನೀತ ; ನಿರ್ಲಕ್ಷ್ಯನಾದ ; ನಿರ್ಲಜ್ಜನಾದ. **Audáciously** (ಕ್ರಿ. ವಿ.) **Audáciousness** (ನಾ.) ; **Audácity** ಆಡ್ಯಾಸಿಟಿ (ನಾ.)

Aúdible ಆಡಿಬ್‌ಲ್ (ಗು.) ಕಿವಿಗೆ ಕೇಳುವ ; ಕೇಳ ಬರುವ ; ಕರ್ಣಗೋಚರ ; ಶ್ರವ್ಯ. **Aúdibly** (ಕ್ರಿ. ವಿ.) ; **Audibílity** (ನಾ.) ; **Aúdibleness** (ನಾ.) ; **Aúdience** — ಯೆನ್ಸ್ (ನಾ.) (ಕಿವಿಯಿಂದ) ಕೇಳುವುದು ; ಕೇಳಿಕೆ ; ಶ್ರವಣ (Give audience ಕಿವಿಗೊಡು). ಸಂದರ್ಶನ ; ಭೇಟಿ. ಆಲಿಸಲಾಗುವಷ್ಟು ದೂರದಲ್ಲಿರುವ ಜನರು ; ಶ್ರೋತೃವೃಂದ ; ಸಭಾಸದರು. ಸಭೆ ; ಓಲಗ ; ಆಸ್ಥಾನ. (ಒಂದು ಪುಸ್ತಕದ) ಪಾಠಕರು. **Audiómeter** — ಯಾಮಿಟರ್ (ನಾ.) ಶ್ರವಣಶಕ್ತಿ ಮಾಪಕ. **Aúdiphone** — ಫೋನ್ (ನಾ.) ಮೇಲ್ದವಡೆಯ ಹಲ್ಲುಗಳಿಗೆ ಒತ್ತಿಹಿಡಿದುಕೊಂಡರೆ ಕಿವುಡರು ಧ್ವನಿ ಕೇಳಲಾಗುವ ಸಲಕರಣೆ : ಬಧಿರಶ್ರಾವಕ. **Audítion** — ಷನ್ (ನಾ.) (ಕಿವಿ) ಕೇಳುವುದು ; ಶ್ರವಣ ಶಕ್ತಿ. ಪರೀಕ್ಷಾರ್ಥವಾಗಿ ಉಮೇದುವಾರನಿಂದ ಹಾಡಿಸುವ ಗಾಯನ **Aúditive** — ಟಿವ್ (ಗು.) ಶ್ರವಣಸಂಬಂಧವಾದ. **Aúditor** (ನಾ.) (ಕಿವಿಯಿಂದ) ಕೇಳುವವನು ; ಶ್ರೋತೃ. **Auditórium** — ಟೋರಿಯಂ (ನಾ.) ಸಾರ್ವಜನಿಕ ನಾಟಕಶಾಲೆ ಮೊ. ಗಳಲ್ಲಿ ಶ್ರೋತೃವೃಂದಕ್ಕಾಗಿ ಏರ್ಪಡಿಸಿರುವ ಪ್ರದೇಶ : ಶ್ರವಣಶಾಲೆ. ಶ್ರೋತೃಸ್ಥಳ ; ಪ್ರೇಕ್ಷಾಗೃಹ ; ಸಭಾಂಗಣ. ಮಠದ ದಿವಾನ್‌ಖಾನೆ. **Aúditory** — ಟರಿ (ಗು.) ಶ್ರೋತೃಸಂಬಂಧವಾದ ; ಕಿವಿಗೆ ತಾಕುವ. (ನಾ.) ಶ್ರೋತೃವೃಂದ ; ಸಭೆ ; ಆಲಿಸುವ ಸ್ಥಳ.

Aúdience. **Aúdible** ನೋಡಿ.

Aúdile ಆಡಿಲ್ (ಗು., ನಾ.) (ಸಾ., ಅಸಾಧಾರಣ ಗೋಚರಾನುಭವಗಳ ವಿಷಯದಲ್ಲಿ) ಶ್ರವಣೇಂದ್ರಿಯ ಗೋಚರವಾದ ; ಅಸಾಧಾರಣ ಶ್ರವಣ ಶಕ್ತಿಯುಳ್ಳ (ವನು).

Audiómeter } **Aúdiphone** } **Aúdible** ನೋಡಿ.

Aúdit ಆಡಿಟ್ (ನಾ. ಕ್ರಿ. ಸಕ.) (ನಿಯಮಾನುಸಾರವಾಗಿ ಮಾಡುವ) ಲೆಕ್ಕದ ಪರೀಕ್ಷೆ, ಶೋಧನೆ. ಸೂಕ್ಷ್ಮವಿಚಾರಣೆ (ಮು., ಮಹಾವಿಚಾರಣೆಯ ದಿನ). ಜಮೀನ್ದಾರನಿಗೂ ಅವನ ರೈತರಿಗೂ ಕಾಲಕಾಲಕ್ಕೆ ನಡೆಯುವ ಲೆಕ್ಕದ ತೀರ್ಕೆ (ಫೈಸಲಾತಿ). ಆಯ ; ವರಮಾನ. (ಕ್ರಿ.) (ನಿಯಮಾನುಸಾರವಾಗಿ) ಲೆಕ್ಕಪರೀಕ್ಷೆ ಮಾಡು ; ಲೆಕ್ಕ ಸರಿನೋಡು ; ಲೆಕ್ಕ ತನಿಖೆಮಾಡು. **Aúdited** (ಗು.) ; **Aúditor** — ಟರ್ (ನಾ.) ಲೆಕ್ಕಪರೀಕ್ಷಕ. **Aúditorship** (ನಾ.) ; **Aúditress** (ನಾ.) ; **Auditórial** — ಟೋರಿಯಲ್ (ಗು.) ಲೆಕ್ಕಪರೀಕ್ಷೆಗೆ ಸಂಬಂಧಪಟ್ಟ.

Audítion, etc. **Aúdible** ನೋಡಿ.

Aúditor. **Aúdible, Aúdit** ನೋಡಿ.

Auditórium. **Aúdible** ನೋಡಿ.

Au faít (F) ಓ ಫೇ (ಗು.) ತಿಳಿದ ; ನುರಿತ ; ಸುಶಿಕ್ಷಿತ. Put a person au fait of (ವಿಷಯವನ್ನು) ಚೆನ್ನಾಗಿ ತಿಳಿಸು.

Au fónd (F) ಓ ಫಾಂ (ಕ್ರಿ. ವಿ.) ತಳದಲ್ಲಿ.

Augéan ಆಜೀಯನ್ (ಗು.) (ಆಜಿಯಸ್ ಎಂಬವನ ಲಾಯದಂತೆ) ಅತಿ ಕೊಳಕಾದ, ಹೊಲಸಾದ. Augean stables (ರೂಪ.) ಬಹುಕಾಲದ ಕಶ್ಮಲ ತುಂಬಿದ ಸ್ಥಳ.

Aúger ಆಗರ್ (ನಾ.) ಬೈರಿಗೆ ; ಆಗರ. ಭೂಮಿಯಲ್ಲಿ ಕಂಡಿಕೊರೆಯುವುದಕ್ಕಾಗಿ ಉದ್ದಬೆಳಸಿಕೊಂಡುಹೋಗುತ್ತ ಉಪಯೋಗಿಸುವ ಸಾಧನ : ನೆಲಬೈರಿಗೆ.

Aught ಆಟ್ (ನಾ., ಕ್ರಿ. ವಿ.) ಏನಾದರೂ ; ಯಾವುದಾದರೂ ; ಸ್ವಲ್ಪ.

Augmént ಆಗ್ಮೆಂಟ್ (ಕ್ರಿ.) ಹೆಚ್ಚಿಸು ; ವೃದ್ಧಿಪಡಿಸು ; ವೃದ್ಧಿಯಾಗು. (ವ್ಯಾ.) ಆಗಮ ವರ್ಣವನ್ನು ಸೇರಿಸು. **Augmentátion** (ನಾ.) ದೊಡ್ಡದು ಮಾಡುವುದು ; ವೃದ್ಧಿ ; ವರ್ಧನ ; ಅಭಿವೃದ್ಧಿ ; ಬೆಳೆಯುವುದು ; ಬೆಳಸುವುದು ; ಸೇರಿಸುವುದು ; ಸೇರಿಸಿದ್ದು. (ಸಂ.) ಸ್ವರವನ್ನು ಎರಡರಷ್ಟೊ ನಾಲ್ಕರಷ್ಟೊ ಎತ್ತರಿಸಿ ಹೇಳುವುದು. **Augmén-tative** — ಟಟಿವ್ (ಗು., ನಾ.) ಹೆಚ್ಚುವ ; ಹೆಚ್ಚಿಸುವ ಸ್ವಭಾವವುಳ್ಳ. (ವ್ಯಾ.) ಮೂಲ ಪದದ ಅರ್ಥಭಾವಗಳನ್ನು ಬಲಪಡಿಸುವ ; ಅಧಿಕ್ಯಾರ್ಥದ (ಪದ).

Aúgment (ನಾ.) ಪ್ರಾಚೀನ ಆರ್ಯನ್ ಭಾಷೆಗಳಲ್ಲಿ (ಸಂಸ್ಕೃತ, ಗ್ರೀಕ್, ಮೊ. ಭಾಷೆಗಳಲ್ಲಿ) ಭೂತ ಕಾಲವನ್ನು ಸೂಚಿಸುವುದಕ್ಕಾಗಿ ಶಬ್ದದ ಹಿಂದೆ ಸೇರಿಸುವ ಸ್ವರಪ್ರತ್ಯಯ ; ಆಗಮ.

Aúgur ಆಗರ್ (ಕ್ರಿ., ನಾ.) ಭವಿಷ್ಯ ಹೇಳು ; ಮುನ್ ಸೂಚಿಸು ; ಮುನ್ನರುಹು ; ಕಣಿ ಹೇಳು ; ಶಕುನ ಹೇಳು. ನಿರೀಕ್ಷಿಸು. [It augurs well (or ill) ಶುಭ (ಅಥವಾ ಅಶುಭ) ಸೂಚನೆಯಾಗಿ ಕಾಣುತ್ತದೆ]. ಹಕ್ಕಿಗಳ ಚರ್ಯೆ, ಗ್ರಹಗತಿ, ಮೊ. ಗಳಿಂದ ಶಕುನ ನೋಡಿ ಮುಂದಿನ ಫಲಾಫಲಗಳನ್ನು ಹೇಳುತ್ತಿದ್ದ ರೋಮನ್ ಶಕುನಿಗ ; ದೈವಜ್ಞ ; ನೈಮಿತ್ತಿಕ ; ಶಕುನ (ಪ್ರಶ್ನೆ) ಹೇಳುವವನು ; ಕಣಿ ಹೇಳುವವನು (ವಳು). **Aúgural** ಆಗ್ಯುರಲ್ (ಗು.) ದೈವಜ್ಞ ಸಂಬಂಧವಾದ ; ಶಕುನ ಸಂಬಂಧವಾದ ; ಭವಿಷ್ಯತ್ ಸೂಚಕ. **Aúgury** ಆಗ್ಯುರಿ (ನಾ.) ಶಕುನ ನೋಡುವುದು, ಹೇಳುವುದು ; ಶಕುನ ಶಾಸ್ತ್ರ ; ಶಕುನ ಹೇಳುವುದಕ್ಕೆ ಪೂರ್ವಭಾವಿಯಾಗಿ ಮಾಡುವ ಪೂಜೆ ಪುರಸ್ಕಾರ. ಶಕುನ ; ಮುನ್ನರಿಕೆ ; ನಿರೀಕ್ಷಣೆ.

Augúst ಆಗಸ್ಟ್ (ಗು., ನಾ.) ಮಹಾ ; ಮಹನೀಯ ; ಮಹಿಮಾನ್ವಿತ ; ಮಹಾನುಭಾವ ; ಘನ ; ಗಂಭೀರ. ಇಂಗ್ಲಿಷ್ ವರ್ಷದ ಎಂಟನೆಯ ತಿಂಗಳು (ಅಗಸ್ಟಸ್ ಸೀಸರ್ ಎಂಬ ರೋಮನ್ ಚಕ್ರವರ್ತಿಯ ಹೆಸರಿನಿಂದ). **Augústly** (ಕ್ರಿ. ವಿ.) ; **Augústness** (ನಾ.). **Augústan** ಆಗಸ್ಟನ್ (ಗು., ನಾ.) ಅಗಸ್ಟಸ್ ಸೀಸರ್ ಎಂಬ ಚಕ್ರವರ್ತಿಯ ಆಳಿಕೆಗೆ ಸಂಬಂಧಪಟ್ಟ. (ಯಾವ ಭಾಷೆಯದಾದರೂ ಸಾಹಿತ್ಯದ) ಉಚ್ಛ್ರಾಯ, ಉತ್ಕರ್ಷ. [Augustan age ಲ್ಯಾಟಿನ್ ಭಾಷಾ (ಅಥವಾ ಇತರ ಭಾಷಾ) ಸಾಹಿತ್ಯದ ಉತ್ಕರ್ಷ ಕಾಲ]. ಸಾಹಿತ್ಯದ ಉತ್ಕರ್ಷ ಕಾಲದಲ್ಲಿಯ ಲೇಖಕ.

Augústin(e), Aúgustin(e) ಆಗಸ್ಟಿನ್ (ನಾ.) ಆಗಸ್ಟಿನಿಯನ್ ಪಂಗಡದ ಕ್ರೈಸ್ತ ಸಂನ್ಯಾಸಿ. **Augustínian** — ನಿಯನ್ (ಗು.) 'ಸೇಯಿಂಟ್ ಆಗಸ್ಟಿನ್' ಎಂಬ ಕ್ರೈಸ್ತ ಗುರುವಿನ ಅಥವಾ ಆತನ ಮತತತ್ತ್ವ ಸಂಬಂಧವಾದ. (ನಾ.) ಆಗಸ್ಟಿನ್ ಮತತತ್ತ್ವಾನುಯಾಯಿ.

Auh ಆಹ್ (ಭಾವ. ಅವ್ಯ.) ಅಸಹ್ಯ ಸೂಚಕ : ಆಹ್ ; ಥೂ.

Auk ಆಕ್ (ನಾ.) ಉತ್ತರ ಧ್ರುವಭಾಗದ ಒಂದು ಸಮುದ್ರ ಪಕ್ಷಿಜಾತಿ.

Aúlic ಆಲಿಕ್ (ಗು.) ಆಸ್ಥಾನದ ; ಆಸ್ಥಾನ ಯೋಗ್ಯ.

Au naturél (F) ಓ ನ್ಯಾಟ್ಯುರೆಲ್ (ಕ್ರಿ. ವಿ., ಗು.) ಸುಲಭ ರೀತಿಯಲ್ಲಿ ಅಥವಾ ಸ್ವಾಭಾವಿಕ ರೀತಿಯಲ್ಲಿ (ಅಡಿಗೆ ಮಾಡಿದ)

Aunt ಆಂಟ್ (ನಾ.) ದೊಡ್ಡಮ್ಮ ; ಚಿಕ್ಕಮ್ಮ ; ಸೋದರತ್ತೆ. (ಅಮೆ. ಸಂ.) ಧರ್ಮಾತ್ಮಳಾದ ಅಥವಾ ಸಾಮಾನ್ಯವಾಗಿ ಸಹಾಯಪರಳಾದ ಸ್ತ್ರೀ. Aunt Sally ಒಂದು ಬಗೆಯ ಆಟ : (ಒಂದು ಹೆಣ್ಣು ಬೊಂಬೆಯ ಬಾಯಲ್ಲಿಟ್ಟಿರುವ ಚುಂಗಾಣಿಯನ್ನು, ಒಂದು ಗೊತ್ತಾದ ದೂರದಲ್ಲಿ ನಿಂತು ಕೋಲೆಸೆಯುವುದರಿಂದ, ಒಡೆದುಹಾಕಲು ಯತ್ನಿಸುವುದು). **Aúntie, Aúnty** ಆಂಟಿ (ನಾ.) Aunt ಎಂಬ ಮಾತಿನ ಸಲಿಗೆಯ ರೂಪ. (ಅಮೆ. ಸಂ.) ವಯಸ್ಸಾದ ಸ್ತ್ರೀಯರನ್ನು ಸಂಬೋಧಿಸುವಾಗ ಉಪಯೋಗಿಸುವ ಮಾತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Au paír (F) ಓ ಪೇರ್ (ಗು.) (ಎರಡು ಪಂಗಡದವರೂ ಮಾಡಿಕೊಂಡ ಒಪ್ಪಂದದಮೇರೆ) ಒಬ್ಬರ ಕೆಲಸವನ್ನು ಮತ್ತೊಬ್ಬರು ಮಾಡಿ (ಹಣದ ಪ್ರಸ್ತಾವವಿಲ್ಲದೆ) ಕೂಲಿ ತೀರಿಸುವ ; ಕಾರ್ಯ ವಿನಿಮಯದ.

Au piéd de la léttre (F) ಓ ಪ್ಯೇ ಡ ಲಾ ಲೆಟ್ರ್ (ಕ್ರಿ ವಿ.) ಅಕ್ಷರಶಃ.

Aúra ಆರ (ನಾ.) ದಿವ್ಯಪ್ರಭೆ ; ತೇಜೋಮಂಡಲ ; ಒಬ್ಬ ಮನುಷ್ಯನಿಂದ ಹೊರಟು ಸುತ್ತಲೂ ವ್ಯಾಪಿಸುವ, ಅಥವಾ ಅವನನ್ನನುಸರಿಸಿ ಕೊಂಡು ಹೋಗುವ ಪ್ರಭೆ, ಪ್ರಭಾವ. (ವಿದ್ಯುತ್) ಮೊನಚಾದ ವಿದ್ಯುದ್ವಾಹಕದ ಸೂಕ್ಷ್ಮಬಿಂದುವಿನಿಂದ ವಿದ್ಯುತ್ತು ಹೊರಕ್ಕೆ ಹರಿದು ಹೋಗುವುದರಿಂದುಂಟಾದ ವಾಯುಪ್ರವಾಹ : ವಿದ್ಯುದ್ವಾಯು ಪ್ರವಾಹ. (ರೋಗ) (ಅಪಸ್ಮಾರ ರೋಗವೂ ಸೆಳವುಜಾಡ್ಯವೂ ಬರುವದಕ್ಕೆ ಮುನ್ಸೂಚನೆಯಾಗಿ) ದೇಹದ ಒಂದು ಭಾಗದಿಂದ ಶೀತವಾಯು ಪ್ರವಾಹವು ತಲೆಗೇರುತ್ತಿರುವಂತೆ ಮನಸ್ಸಿಗೆ ತೋರುವುದು. **Aúral**[1] (ಗು.)

Aúral[2] ಆರಲ್ (ಗು.) ಶ್ರೋತ್ರೇಂದ್ರಿಯಕ್ಕೆ ಸಂಬಂಧಪಟ್ಟ ; ಕಿವಿಗೆ ಕೇಳಿದ ; ಶ್ರವಣ ಗೋಚರ.

Aurélia ಆರೀಲಿಯ, (ನಾ.) (ಪ್ರಾಚೀನ) (ಮು., ಪತಂಗದ) ಗೂಡು ಹುಳು. (ಪ್ರಾ. ವಿ.) ಬೆಳಗುವ ಸಮುದ್ರಪ್ರಾಣಿಯ ಒಂದು ಜಾತಿ. **Aurélian** (ಗು.) ಬೆಳಗುವ ಸಮುದ್ರಪ್ರಾಣಿಗೆ ಸಂಬಂಧಪಟ್ಟ. ಚಿನ್ನದಂಥ. (ನಾ.) ಕೀಟಗಳನ್ನು ಕೂಡಹಾಕಿ ಬೆಳಸುವವನು.

Auréola ಆರೀಯೊಲ (ನಾ.) (ಕಾಮಕ್ರೋಧಾದಿಗಳನ್ನೂ ವಿಷಯಗಳನ್ನೂ ದುಷ್ಪ್ರೇರಣೆಗಳನ್ನೂ ಜಯಿಸಿ ಧರ್ಮಾಚರಣೆಗಾಗಿ ಪ್ರಾಣತೆತ್ತವನು, ಕನ್ಯಕೆ ಅಥವಾ ಪಂಡಿತ — ಇವರು ಪರಲೋಕದಲ್ಲಿ ಪಡೆಯುವ) ದಿವ್ಯ ಕಿರೀಟ. **Aúreole** (ನಾ.) = Aureola. ಪ್ರಾಚೀನ ಚಿತ್ರಗಳಲ್ಲಿ ತಲೆಯ ಸುತ್ತಲೂ ತೋರಿಸಿರುವ ಕನಕಮಂಡಲ ಅಥವಾ ಪ್ರಭಾವಳಿ ; ದಿವ್ಯ ಪ್ರಭೆ. (ಖ. ವಿ.) ಪರಿವೇಷ (ಮು., ಗ್ರಹಣಗಳಲ್ಲಿ ಕಾಣುವದು)

Au revoír (F) ಓ ರವ್ವಾರ್ (ಕ್ರಿ. ವಿ.) ಮರಳಿ, ನಾವು ಸಂಧಿಸುವ ವರೆಗೂ (ದೇವರದಯೆ ನಿಮ್ಮಮೇಲಿರಲಿ : ಸ್ವಸ್ತಿ)

Aúric ಆರಿಕ್ (ಗು.) ಸ್ವರ್ಣಸಂಬಂಧವಾದ. (ರ. ವಿ.) ಸ್ವರ್ಣ ಸಂಯುಕ್ತ ಪದಾರ್ಥಗಳಲ್ಲಿ ಸ್ವರ್ಣವು ತ್ರಿಃ ಪರಮಾಣುಯುಕ್ತವಾಗಿ ಸೇರಿರುವ : ಸ್ವರ್ಣಿಕ. **Auríferous** (ಗು.) ಚಿನ್ನವನ್ನೊಳಕೊಂಡಿರುವ ; ಸ್ವರ್ಣಗರ್ಭ. **Aúrous** ಆರಸ್ (ಗು.) ಸ್ವರ್ಣ ಸಂಯುಕ್ತ ವಸ್ತುಗಳಲ್ಲಿ ಸ್ವರ್ಣವು ಏಕಪರಮಾಣುವಾಗಿ ಸೇರಿರುವ: ಸ್ವರ್ಣೀಯ. **Aúrum** (ನಾ.) ಚಿನ್ನ. Aurum mosaicum, or musivum ತವರವೂ ಗಂಧಕವೂ ಸಂಯುಕ್ತವಾದ ಒಂದು ಪದಾರ್ಥ ; ಸುನೇರಿ ; ಸುನೇರಿ ದೂಳು. Aurum potabile ಪೇಯ ಸುವರ್ಣ ; ಸೂಕ್ಷ್ಮತಮ ಸುವರ್ಣ ಕಣಗಳುಳ್ಳ ಬಲಕಾರಿ ದ್ರವ.

Aúricle ಆರಿಕ್‌ರ್ (ನಾ.) (ಪ್ರಾಣಿಗಳ) ಹೊರಗಿವಿ. (ಕಿವಿಯ) ಹಾಲೆಯಾಕಾರದ ಚಾಚು. ರಕ್ತಕೋಶದ ಮೇಲ್ಭಾಗದಲ್ಲಿಯ ಕುಹರಗಳಲ್ಲೊಂದು : ಹೃತ್ಕರ್ಣ. **Aúricled** (ಗು.) ; **Aurícular** — ಕ್ಯುಲರ್ (ಗು.) ಕಿವಿಯ ; ಕಿವಿಗೆ ಸಂಬಂಧಪಟ್ಟ ; ಕಿವಿಯಾಕಾರದ ; ಹೃತ್ಕರ್ಣಕ್ಕೆ ಸಂಬಂಧಪಟ್ಟ. ಗುಟ್ಟಾಗಿ ಕಿವಿಯಲ್ಲಿ ಹೇಳಿದ: Auricular confession (ಕ್ರೈಸ್ತಗುರುವಿನ) ಕಿವಿಯಲ್ಲಿ ಹೇಳಿದ ಪಾಪ ನಿವೇದನ. Auricular witness (ಕಿವಿಯಿಂದ) ಕೇಳಿದುದನ್ನು ಹೇಳುವ ಸಾಕ್ಷಿ. **Aurícularly** (ಕ್ರಿ. ವಿ.) ; **Aurículate** — ಕ್ಯುಲೆಟ್ (ಗು.) ಕಿವಿಯುಳ್ಳ ; ಕಿವಿಯಾಕಾರದ ಚಾಚುಗಳುಳ್ಳ. **Aúriform** — ಫಾರ್ಮ್ (ಗು.) ಕಿವಿಯಾಕಾರದ ; ಕರ್ಣಾಕೃತಿಯ. **Aúrilave** — ಲೇವ್ (ನಾ.) ಕಿವಿಯನ್ನು ತೊಳೆಯುವ ಒಂದು ಉಪಕರಣ : ಕರ್ಣಧಾವಕ. **Aúriscope** — ಸ್ಕೋಪ್ (ನಾ.) ಕಿವಿಯನ್ನು ಪರೀಕ್ಷಿಸುವುದಕ್ಕಾಗಿ ಉಪಯೋಗಿಸುವ ಸಾಧನ : ಕರ್ಣದರ್ಶಕ. **Aúrist** ಆರಿಸ್ಟ್ (ನಾ.) ಕರ್ಣವೈದ್ಯ.

Auríga ಆರೈಗ (ನಾ.) ಉತ್ತರ ದಿಕ್ಕಿನಲ್ಲಿ ಕಾಣಿಸುವ 'ಸಾರಥಿ' ಎಂಬ ನಕ್ಷತ್ರ ಪುಂಜ ; 'ಬ್ರಹ್ಮ ಹೃದಯ'.

Auróra ಆರೋರ (ನಾ.) ಭೂಮಿಯ ಉತ್ತರ ಅಥವಾ ದಕ್ಷಿಣ ಕಾಂತ ಧ್ರುವಗಳಿಂದ ಕಿರಣಪ್ರಸಾರವಾಗುವ (ವಿದ್ಯುತ್ಸಂಬಂಧವಿರಬಹುದಾದ) ವಾಯುಮಂಡಲ ಪ್ರಭೆ : ಭೂಕಾಂತ ಧ್ರುವ ಪ್ರಭೆ. (Aurora borealis ಉತ್ತರ ಭೂಕಾಂತ ಧ್ರುವ ಪ್ರಭೆ. Aurora australis ದಕ್ಷಿಣ ಭೂಕಾಂತ ಧ್ರುವ ಪ್ರಭೆ). ಮುಂಬೆಳಗು ; ಅರುಣೋದಯ ; ಸೂರ್ಯನು ಹುಟ್ಟುವಾಗ ಆಕಾಶದ ಬಣ್ಣ. ರೋಮನರ ಉಷಾದೇವಿ. ಒಂದು ಜಾತಿಯ ಕೋತಿ. **Auróral** (ಗು.)

Aúrous, **Aúrum** } **Aúric** ನೋಡಿ.

Auscultátion ಆಸ್ಕಲ್ಟೇಷನ್ (ನಾ.) ಆಕರ್ಣನ ; ಆಲಿಸಿ ಕೇಳುವುದು (ಮು., ವೈದ್ಯದಲ್ಲಿ : ರಕ್ತಕೋಶ, ಶ್ವಾಸಕೋಶ, ಮೊ. ಗಳ ತುಡಿತದ ಶಬ್ದಗಳನ್ನು). **Aúscultate** (ಕ್ರಿ.) ; **Aúscultator** (ನಾ.) (ವೈ. ಶಾ.) ಆಕರ್ಣಕ (ವೈದ್ಯ, ಉಪಕರಣ) ; **Auscúltatory** (ಗು.)

Aúspice ಆಸ್ಪಿಸ್ (ನಾ., ಈಗ ಸಾ., ಬ. ವ. ದಲ್ಲಿ Auspices — ಸೆಸ್) ಶಕುನಕ್ಕಾಗಿ ಹಕ್ಕಿಗಳನ್ನು ನೋಡುವುದು : ಪಕ್ಷಿವೀಕ್ಷಣೆ. ಶಕುನ. ಆಶ್ರಯ ; ಉದಾರಾಶ್ರಯ ; ಅನುಗ್ರಹ ; ನೇತೃತ್ವ. **Auspícious** — ಷಸ್ (ಗು.) ಶುಭ ಶಕುನವುಳ್ಳ ; ಶುಭ ಸೂಚಕ ; ಮಂಗಳಕರ ; ಶ್ರೇಯಸ್ಕರ. ಅನುಕೂಲವಾದ. **Auspíciously** (ಕ್ರಿ. ವಿ.) ; **Auspíciousness** (ನಾ.) ; **Aúspicate** (ಕ್ರಿ.) ಅಂಕುರಾರ್ಪಣ ಮಾಡು ; ಪ್ರಾರಂಭೋತ್ಸವ ಮಾಡು ; ಶುಭ (ಅಶುಭ) ಸೂಚನೆ ತೋರು.

Austére ಆಸ್ಟೀಯರ್ (ಗು.) ಪರುಷ ; ಉಗ್ರ ; ದೃಢ ; ಕಠಿನ ; ವ್ರತಶೀಲ ; ಕಠಿನ ನಿಯಮ(ನೀತಿ) ಬದ್ಧ ; ಕಟ್ಟುನಿಟ್ಟು. ತಪಸ್ವಿಯಾದ ; ವಿರಕ್ತ ; ಶುದ್ಧ ; ಸರಳ. ಕಟು(ತೀಕ್ಷ್ಣ) ರುಚಿಯುಳ್ಳ. **Austérely** (ಕ್ರಿ. ವಿ.) ; **Austéreness** (ನಾ.) ; **Austérity** ಆಸ್ಟೆರಿಟಿ (ನಾ.)

Aústral ಆಸ್ಟ್ರಲ್ (ಗು.) ದಕ್ಷಿಣ ದಿಕ್ಕಿನ ; ತೆಂಕಣ.

Australásian ಆಸ್ಟ್ರಲೇಷ್ಯನ್ (ಗು., ನಾ.) ಆಸ್ಟ್ರಲೇಷ್ಯದ (ಆಸ್ಟ್ರೇಲಿಯಾ ಮತ್ತು ಅದರ ಸುತ್ತುಮುತ್ತಲಿನ ದ್ವೀಪಗಳ) ಮೂಲ ನಿವಾಸಿ.

Austrálian ಆಸ್ಟ್ರೇಲಿಯನ್ (ಗು., ನಾ.) ಆಸ್ಟ್ರೇಲಿಯಾ ಖಂಡದ ; ಆಸ್ಟ್ರೇಲಿಯದ ಮೂಲ ನಿವಾಸಿ ; ಹೊರಗಿನಿಂದ ಬಂದು ಆಸ್ಟ್ರೇಲಿಯದಲ್ಲಿ ನೆಲಸಿರುವವನು, ಅಥವಾ ಅಲ್ಲಿ ವಾಸವಾಗಿರುವವನು.

Authéntic ಆಥೆನ್ಟಿಕ್ (ಗು.) ಸಪ್ರಮಾಣವಾದ ; ನಂಬಬಹುದಾದ ; ನಂಬಿಕೆಗೆ ಅರ್ಹವಾದ ; ವಿಶ್ವಾಸಾರ್ಹವಾದ ; ಯಥಾರ್ಥವಾದ ; ಸಂಶಯಾಸ್ಪದವಲ್ಲದ. **Authéntically** (ಕ್ರಿ. ವಿ.) ; **Authentícity** —ಸಿಟಿ (ನಾ.) ಯಥಾರ್ಥತೆ ; ವಿಶ್ವಾಸಾರ್ಹತೆ ; ಪ್ರಾಮಾಣ್ಯ. **Authénticate** — ಕೇಟ್ (ಕ್ರಿ. ಸಕ.) ನಿಜತ್ವವನ್ನು, ಕರ್ತೃತ್ವವನ್ನು, ಸ್ಥಾಪಿಸು ; ಅಧಿಕಾರಯುಕ್ತವಾಗಿ ಮಾಡು ; ಅಂಗೀಕಾರಾರ್ಹವಾಗಿ ಮಾಡು ; ನಂಬಿಕೆಗೆ ಅರ್ಹವಾದದ್ದೆಂದು ದೃಢೀಕರಿಸು. **Authenticátion** (ನಾ.) ; **Authénticator** (ನಾ.)

Aúthor ಆಥರ್ (ನಾ.) ಕರ್ತ ; ಕರ್ತೃ ; ನಿಯಮಿಸುವವನು ; ರಚಿಸುವವನು ; ಸ್ಥಾಪಿಸುವವನು. ಜನಕ ; ಪಿತೃ. ಗ್ರಂಥಕರ್ತ. (ಶಿಥಿಲವಾಗಿ) ಗ್ರಂಥಕರ್ತನ ಗ್ರಂಥಗಳು. **Aúthoress** (ನಾ.) ಗ್ರಂಥಕರ್ತ್ರಿ. **Authórial** ಆಥೋರಿಯಲ್ (ಗು.) ಗ್ರಂಥಕರ್ತೃವಿಗೆ ಸಂಬಂಧಪಟ್ಟ **Aúthorship** (ನಾ.) ಗ್ರಂಥ ಬರೆಯುವ ಉದ್ಯೋಗ. ಕರ್ತೃತ್ವ ; ಮೂಲ.

Authórity ಆಥಾರಿಟಿ (ನಾ.) ಅಧಿಕಾರ ; ವಿಧಾಯಕ ಶಕ್ತಿ ; ಪ್ರಭುಶಕ್ತಿ ; ನಿಯೋಜಿತ ಅಧಿಕಾರ. ಅಧಿಕಾರ ಪತ್ರ. ಅಧಿಕಾರವುಳ್ಳವನು ; ಅಧಿಕಾರಿ. ಪ್ರಭಾವ. ಆಧಾರ ; ಪ್ರಮಾಣ ಗ್ರಂಥ, ವಾಕ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Aúthorize (ಕ್ರಿ. ಸಕ.) ಅಧಿಕಾರ ಕೊಡು ; ಅಧಿಕಾರಯುಕ್ತನನ್ನಾಗಿ ಮಾಡು ; ಪ್ರಮಾಣೀಕರಿಸು. **Aúthorized Version** (ಸಂಕ್ಷಿಪ್ತ : **A. V.**) ಬೈಬಲ್ಲಿನ ಪ್ರಮಾಣೀಕೃತ ಇಂಗ್ಲಿಷ್ ಭಾಷಾಂತರ (೧೬೧೧ನೆಯ ಇಸವಿಯಲ್ಲಿ ಪ್ರಕಟವಾದದ್ದು). **Aúthorizable** (ಗು.) ; **Authorizátion** (ನಾ.) ; **Authóritative** ಆಥಾರಿಟೇಟಿವ್ (ಗು.) ಅಧಿಕಾರಯುಕ್ತ ; ವಿಧಿ ಸಿದ್ಧ ; ವಿಧಿ ಸಹಿತ ; ಸಪ್ರಮಾಣ ; ಆಧಾರ ಪೂರ್ವಕ. **Authóritatively** (ಕ್ರಿ. ವಿ.) ; **Authóritativeness** (ನಾ.)

Auto —, ಆಟೊ — (ಸಮಾಸದಲ್ಲ ಪೂರ್ವಪದ) ಆತ್ಮ ; ಸ್ವ — ; ಸ್ವತಃ — ; ಸ್ವಯಂ — ; ತಾನಾಗಿ — ; ತಾನು ಮಾತ್ರ — . **Auto-cárpous** — ಕಾರ್ಪಸ್ (ಗು.) (ಸ. ವಿ.) ಫಲಕೋಶ ಮಾತ್ರವುಳ್ಳ (ಹಣ್ಣು). **Auto-céphalous** — ಸೆಫಲಸ್ (ಗು.) (ಸಾಮಾನ್ಯಾರ್ಥ) ಸ್ವಂತ ಯಜಮಾನನುಳ್ಳ. (ಕ್ರೈಸ್ತ ಮುಖ್ಯಾಧಿಕಾರಿಯ) ಅಧಿಕಾರಕ್ಕೊಳಪಡದೆ ಸ್ವತಂತ್ರವಾಗಿರುವ : ಸ್ವಯಂ ಪ್ರಧಾನ ; ಸ್ವಯಮಾಚಾರ್ಯ. **Aúto-chrome** — ಕ್ರೋಂ (ನಾ.) (ಲ್ಯೂಮಿಯರ್ ಎಂಬಾತನ) ಸಹಜವರ್ಣಯುಕ್ತ ಛಾಯಾಚಿತ್ರ ಪ್ರಕ್ರಿಯೆಯಲ್ಲಿ ಉಪಯೋಗಿಸುವ ಫಲಕ. **Aúto-clave** — ಕ್ಲೇವ್ (ನಾ.) ಆವಿ ಹೊರಕ್ಕೆ ಹೋಗದಂಥ ಮುಚ್ಚಳವುಳ್ಳ ಬೇಯಿಸುವ ಪಾತ್ರೆ : ಉಸಿರು ಪಾತ್ರೆ. **Aúto-didact** — ಡೈಡ್ಯಾಕ್ಟ್ (ನಾ.) ತಾನಾಗಿಯೇ ವಿದ್ಯೆಕಲಿತುಕೊಳ್ಳುವವನು : ಸ್ವಯಂ ಶಿಕ್ಷಕ. **Auto-dynámic** — ಡೈ(ಡಿ)ನ್ಯಾಮಿಕ್ (ಗು.) (ಭೌ. ವಿ.) ಸ್ವಶಕ್ತಿಯಿಂದ ನಡೆಯುವ ; ಸ್ವಯಂ ವೇಗಿ. **Autógamy** ಆಟಾಗಮಿ (ನಾ.) (ಸ. ವಿ.) ಸ್ವಯಂ ಗರ್ಭಾಧಾನ. **Autógenous** — ಜಿನಸ್ (ಗು.) ಸ್ವಯಂ ಜಾತ. **Autógeny** — ಜಿನಿ, — **gony**, — ಗೊನಿ (ನಾ.) ಸ್ವಯಂ ಜನನ. **Autólatry** — ಲಟ್ರಿ (ನಾ.) ಸ್ವಾರಾಧನ. **Autólogy** — ಲೊಜಿ (ನಾ.) ಸ್ವಜ್ಞಾನ ವಿದ್ಯೆ. **Autómetry** — ಮೆಟ್ರಿ (ನಾ.) ಸ್ವಮಾಪನ ; ಸ್ವಗಣನ. **Automórphism** ಆಟೊಮಾರ್ಫಿಸ್‌ಮ್ (ನಾ.) ಸ್ವಗುಣಾರೋಪಣ. **Aútonym** — ನಿಮ್ (ನಾ.) ಗ್ರಂಥಕರ್ತನ ನಿಜ ನಾಮದಲ್ಲಿ ಪ್ರಕಟವಾದ ಪುಸ್ತಕ ; ಸ್ವನಾಮಕ : **Auto-páthic** — ಪ್ಯಾಥಿಕ್ (ಗು.) ಆತ್ಮಜನಿತ ವ್ಯಾಧಿಗೆ ಸಂಬಂಧಪಟ್ಟ. **Autóphagy** ಆಟಾಫಜಿ (ನಾ.) ಸ್ವಯಂಭಕ್ಷಣ (ಉಪವಾಸದಲ್ಲಿ ದೇಹ ರಚನಾ ಪದಾರ್ಥಗಳ ಜೀರ್ಣತೆ). **Aúto-plasty** ಆಟೊಪ್ಲಾಸ್ಟಿ (ನಾ.) ಸ್ವದೇಹದಿಂದ ತೆಗೆದ ಅಂಗರಚನಾ ಪದಾರ್ಥದಿಂದ ಗಾಯಗಳನ್ನು ವಾಸಿಮಾಡುವುದು. **Aúto-scope**, — ಸ್ಕೋಪ್ (ನಾ.) ತನ್ನ ಕಣ್ಣನ್ನು ತಾನಾಗಿಯೇ ಪರೀಕ್ಷಿಸಿಕೊಳ್ಳಲಾಗುವ ಸಾಧನ: ಸ್ವಾಕ್ಷಿದರ್ಶಕ. **Auto-suggéstion**, — ಸಜೆಸ್ಚನ್ (ನಾ.) ಸ್ವಯಂ ಪ್ರೇರಣೆ ; ಸ್ವಯಂ ಚೋದನೆ.

Autobiógraphy ಆಟೊಬಯಾಗ್ರಫಿ (ನಾ.) ತನ್ನ ಜೀವನ ಚರಿತ್ರೆಯನ್ನು ತಾನೇ ಬರೆಯುವುದು : ಆತ್ಮಕಥನ ; ಹಾಗೆ ಬರೆದ ಜೀವನ ಚರಿತ್ರೆ. **Autobiógrapher** (ನಾ.) ಸ್ವಚರಿತ್ರ ಲೇಖಕ ; ಆತ್ಮ ಕಥಕ. **Autobiográphic(al)** — ಬಯೊಗ್ರ್ಯಾಫಿಕಲ್ (ಗು.) ಆತ್ಮಚರಿತ್ರೆಗೆ ಸಂಬಂಧಪಟ್ಟ, ಅಥವಾ ಆತ್ಮಚರಿತ್ರೆಯನ್ನು ರಚಿಸುವುದರಲ್ಲಿ ತೊಡಗಿರುವ. **Autobiográphically** (ಕ್ರಿ. ವಿ.)

Aútocar ಆಟೋಕಾರ್ (ನಾ.) ಯಂತ್ರಶಕ್ತಿಯಿಂದ ನಡೆಯುವ ಬಂಡಿ ; ಸ್ವಯಂ ಯಾನ.

Autóchthon ಆಟಾಕ್ತನ್, — ಕ್ಥೋನ್ (ನಾ. ; ಸಾ., ಬ. ವ. ದಲ್ಲಿ, — ons, — ones, — ಕ್ಥೊನೀಸ್) ತಿಳಿದ ಮಟ್ಟಿಗೆ ಆದಿಯಿಂದಲೂ ಇರುವ ನಿವಾಸಿಗಳು : ಆದಿ ನಿವಾಸಿಗಳು ; ಮೂಲ ನಿವಾಸಿಗಳು. **Autóchthonal** (ಗು.) ; **Autócthonism** (ನಾ.) ; **Autóchthony** (ನಾ.) ಮೂಲ ನಿವಾಸಿತ್ವ.

Autócracy ಆಟಾಕ್ರಸಿ (ನಾ.) ಸ್ವಯಂ ಪ್ರಭುತ್ವ ; ಸ್ವಾಯತ್ತಾಧಿಪತ್ಯ ; ಸ್ವೇಚ್ಛಾ ರಾಜ್ಯ ; ನಿರಂಕುಶ ಪ್ರಭುತ್ವ. (ವೈ. ಶಾ.) ವ್ಯಾಧಿಯ ಮೇಲೆ ಜೀವಶಕ್ತಿಗಿರುವ ಪ್ರಾಬಲ್ಯ. **Aútocrat**, ಆಟೊಕ್ರ್ಯಾಟ್ (ನಾ.) ಸ್ವಯಂ ಪ್ರಭು ; ನಿರಂಕುಶ ಪ್ರಭು. **Autocrátic(al)** (ಗು.) ; **Autocrátically** (ಕ್ರಿ. ವಿ.) ; **Autócratrix**, ಆಟಾಕ್ರಟ್ರಿಕ್ಸ್ (ನಾ.) ನಿರಂಕುಶಾಧಿಕಾರಿಣಿ.

Aúto-da-fé, — **de-fé** ಆಟೊ ಡ ಫೇ, — ಡೆ ಫೇ (ನಾ. ; ಬ. ವ. Autos-da-fe) ರೋಮನ್ ಕ್ಯಾತೊಲಿಕ್ ಮತದಿಂದ ಬಹಿಷ್ಕೃತರಾದವರಿಗೆ ಆ ಸಂಬಂಧವಾದ ನ್ಯಾಯವಿಚಾರಣೆ ಮಾಡುವ ಅಧಿಕಾರಿ ವರ್ಗದವರು ಕೊಡುವ ಶಿಕ್ಷೆ ; ಈ ಶಿಕ್ಷೆಯನ್ನು ನೆರವೇರಿಸುವುದು (ಮು., ಬಹಿಷ್ಕೃತರನ್ನು ಸಜೀವ ದಹನಮಾಡುವುದು). ಧರ್ಮಭ್ರಷ್ಟರ ದಹನ.

Aútograph ಆಟೊಗ್ರಾಫ್ (ನಾ.) ಗ್ರಂಥಕರ್ತನ ಸ್ವಹಸ್ತ ಪ್ರತಿ ; ಸ್ವಹಸ್ತಾಕ್ಷರ (ಮು., ಸಹಿ, ರುಜು). ಕಲ್ಲಚ್ಚಿನಿಂದ ತೆಗೆದ ಪ್ರತಿ. **Autográphic(al)** — ಗ್ರ್ಯಾಫ್ — (ಗು.) ; **Autográphically** (ಕ್ರಿ. ವಿ.); **Aútograph** (ಕ್ರಿ.) ಸ್ವಂತವಾಗಿ ಬರೆ. ಕಲ್ಲಚ್ಚಿನಿಂದ ಪ್ರತಿಯೆತ್ತು. ರುಜು ಹಾಕು ; ಸಹಿ ಮಾಡು. **Autógraphy** ಆಟಾಗ್ರಫಿ (ನಾ.) ತನ್ನ ಕೈಯಿಂದ ಬರೆಯುವುದು ; ಗ್ರಂಥಕರ್ತನ ಸ್ವಹಸ್ತಾಕ್ಷರ. ಕಲ್ಲಚ್ಚಿನಿಂದ ಅಕ್ಷರದ ಅಥವಾ ನಕ್ಷೆಯ ಪ್ರತಿಯನ್ನು ತೆಗೆಯುವುದು.

Autogýro ಆಟೊಜೈರೋ (ನಾ.) ನೆಟ್ಟಗೆ ಕೆಳಕ್ಕಿಳಿಯುವಂತೆ ಯಂತ್ರ ಸಾಧನದಿಂದ ಅಳವಡಿಸಿರುವ ಒಂದು ಬಗೆಯ ಫಲಕ ವಿಮಾನ.

Autólysis ಆಟಾಲಿಸಿಸ್ (ನಾ.) ದೇಹದ ಜೀವಾಣುಗಳು ಅವುಗಳಲ್ಲಿಯೇ ಉತ್ಪತ್ತಿಯಾಗುವ ವಿಕರಣಸಾರದ ಪ್ರಭಾವದಿಂದಲೇ ನಾಶಹೊಂದುವುದು : ಸ್ವಯಂ ಜೀರಣ.

Automátic ಆಟೊಮ್ಯಾಟಿಕ್ (ಗು., ನಾ.) ತನ್ನಷ್ಟಕ್ಕೆ ತಾನೇ ನಡೆಯುವ (ಚಲಿಸುವ) : ಸ್ವಯಂ ಚಲಿ. (ಪ್ರಾಣಿಗಳ ವಿಚಾರವಾಗಿ) ಇಚ್ಛೆ ಅಥವಾ ಪ್ರಜ್ಞೆ ಇಲ್ಲದೆ ನಡೆಯುವ ; ಯಂತ್ರಸದೃಶ ; ಕೇವಲ ಅಭ್ಯಾಸಗತವಾದ ; ಅಪ್ರಯತ್ನವಾಗಿ ನಡೆಯುವ ; ವಿಚಾರಾಪೇಕ್ಷೆಯಿಲ್ಲದ. **Automátic** (ನಾ.) = Automatic pistol ಸ್ವಯಂಚಲ ಪಿಸ್ತೂಲು. **Automátical** (ಗು.) ; **Automátically** (ಕ್ರಿ. ವಿ.) ; **Automatícity** ಆಟಾಮಟಿಸಿಟಿ (ನಾ.) ಸ್ವಯಂ ಚಲಿತ್ವ. **Autómatism** — ಟಿಸ್‌ಮ್ (ನಾ.) ಸಂಕಲ್ಪವಿಲ್ಲದೆ ನಡೆಯುವ ವ್ಯಾಪಾರ ; ಬುದ್ಧಿಗಮನವಿಲ್ಲದೆ ತಾನಾಗಿ ನಡೆಯುವ ರಾಢಿಯ ಕೆಲಸ. ಪ್ರಚೋದನ ಶಕ್ತಿ ; ಸ್ವಯಂಚಲನ ಶಕ್ತಿ ಪ್ರಕೃತಿಚೋದಿತ ಕ್ರಿಯೆ ; ಪ್ರಕೃತಿ ಚೋದನೆ. ಪಶುಪ್ರಾಣಿಗಳು ಕೇವಲ ಪ್ರಕೃತಿಚೋದಿತಗಳೆಂದು ಹೇಳುವ ವಾದ. **Autómatist** (ನಾ.) ಈ ವಾದಿ ; **Autómaton** (ನಾ.; ಬ. ವ. — ta, — tons) (ನಾ.) ಸ್ವಯಂಚಲನ ಶಕ್ತಿಯುಳ್ಳದ್ದು ; ಸ್ವತಶ್ಚಲಿ. ಯಂತ್ರದ ಗೊಂಬೆ, **Autómatous** — ಟಸ್ (ಗು.)

Automnésia ಆಟೊಮ್ನೀಸಿಯ (ನಾ.) (ಮ. ಶಾ.) ಹಿಂದಣ ಜೀವನ ಸ್ಥಿತಿಯ ಜ್ಞಾಪಕವು ಥಟ್ಟನೆ ತಾನಾಗಿ ಹೊಳೆಯುವುದು ; ಪೂರ್ವಸ್ಥಿತಿ ಸ್ಫುರಣ.

Automóbile, **Automobíle** (F) ಆಟೊಮೋಬಿಲ್, — ಮೊಬೀಲ್ (ನಾ.) = Autocar ತಾನಾಗಿ ನಡೆಯುವ ಬಂಡಿ : ಸ್ವಯಂಯಾನ.

Autónomy ಆಟಾನೊಮಿ (ನಾ.) ಸ್ವಯಮಾಧಿಪತ್ಯ ; ಸ್ವರಾಜ್ಯ ; ಸ್ವಾತಂತ್ರ್ಯ ; ಸ್ವರಾಜ್ಯಾಧಿಕಾರದ ಹಕ್ಕು. ವ್ಯಕ್ತಿ ಸ್ವಾತಂತ್ರ್ಯ. (ಕ್ಯಾಂಟ್ ಎಂಬ ತತ್ತ್ವಜ್ಞನ ಮತದಲ್ಲಿ) ಚಿತ್ತ ಸ್ವಾತಂತ್ರ್ಯ. ಸ್ವತಂತ್ರ ಜನಪದ. **Autonómic** ಆಟೊನಾಮಿಕ್ (ಗು.) ; **Autónomist** ಆಟಾನೊಮಿಸ್ಟ್ (ನಾ.) ಸ್ವಯಮಧಿಕಾರ ವಾದಿ ; ಸ್ವತಂತ್ರಾಧಿಕಾರ ಪಕ್ಷೀಯ. **Autónomous** — ನೊಮಸ್ (ಗು.) ಸ್ವಯಮಧಿಕಾರವುಳ್ಳ ; ಸ್ವತಂತ್ರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Autópsy ಆಟಾಪ್ಸಿ (ನಾ.) ಸ್ವಯಂ ಪರೀಕ್ಷಣ. (ಎಚ್ಛೇದನ ಪೂರ್ವಕ) ಶವ ಪರೀಕ್ಷಣ. (ರೂಪ.) ಸವಿಮರ್ಶ ಖಂಡನೆ. **Atóptic(al)** (ಗು.)

Autotóxin ಆಟೊಟಾಕ್ಸಿನ್ (ನಾ.) ದೇಹದಲ್ಲುಂಟಾಗುವ ವ್ಯತ್ಯಾಸ ಗಳಿಂದ ಹುಟ್ಟುವ ವಿಷಪದಾರ್ಥ. **Autotóxic** (ಗು.). **Autotoxicátion** (ನಾ.) ದೇಹದಲ್ಲಿಯೇ ಉತ್ಪನ್ನವಾಗುವ ವಿಷವಸ್ತು ವಿನಿಂದ ನಂಜೇರುವುದು.

Aútotype ಆಟೊಟೈಪ್ (ನಾ., ಕ್ರಿ. ಸಕ.) ಪಡಿಯಚ್ಚು. ಏಕವರ್ಣ ಪ್ರತಿಚಿತ್ರದ ರಚನೆಗಾಗಿ ಉಪಯೋಗಪಡುವ ಶಾಶ್ವತ ಛಾಯಾಚಿತ್ರ ಮುದ್ರಣ ವಿಧಾನ ; ಈ ರೀತಿ ತೆಗೆದ ಪ್ರತಿ.

Aútumn ಆಟಂ (ನಾ.) (ಇಂಗ್ಲೆಂಡಿನಲ್ಲಿ) ಆಗಸ್ಟು, ಸೆಪ್ಟೆಂಬರು ಮತ್ತು ಅಕ್ಟೋಬರು ತಿಂಗಳುಗಳ ಕಾಲ; ಶರತ್ಕಾಲ; ಮಾಗುವ ಕಾಲ; ಹಣ್ಣಾಗುವ ಕಾಲ. (ಖ. ವಿ.) ಸೆಪ್ಟೆಂಬರು ೨೧ನೆಯ ತಾರೀಖಿ ನಿಂದ ಡಿಸೆಂಬರು ೨೧ನೆಯ ತಾರೀಖಿನ ವರೆಗಿನ ಕಾಲ. (ರೂಪ.) ಅವನತಿಯ ಆರಂಭಕಾಲ ; ಇಳಿಗಾಲದ ಪ್ರಾರಂಭ. **Autúmnal** — ಮ್ನಲ್ (ಗು.) ಶರತ್ಕಾಲದ ; ಪಕ್ವಕ್ಕೆ ಬಂದ. (ರೂಪ.) ಪ್ರಾಯ ಮೀರಿದ ; ಅಪರ ವಯಸ್ಸಿನ. Autumnal equinox ಸೂರ್ಯನು ದಕ್ಷಿಣಕ್ಕೆ ಹೋಗುವಾಗ ವಿಷುವದ್ರೇಖೆಯನ್ನು ದಾಟುವ ಕಾಲ (ಸೆಪ್ಟೆಂಬರು ೨೩ನೆಯ ತಾರೀಖು) : ತುಲಾ ಸಂಕ್ರಾಂತಿ.

Auxanómeter ಆಕ್ಸನಾಮಿಟರ್ (ನಾ.) ಸಸ್ಯಗಳ ಬೆಳವಣಿಗೆಯನ್ನು ಅಳೆಯುವ ಸಲಕರಣೆ : ಸಸ್ಯವರ್ಧನ ಮಾಪಕ.

Auxíliary ಆಗ್ಸಿಲಿಯರಿ (ಗು.) ಸಹಾಯಕ ; ಉಪಕರಣಭೂತ. (ನಾ.) ನೆರವು ; ಬೆಂಬಲ. Auxiliary troop, Auxiliaries ಸೈನ್ಯದಲ್ಲಿ ಸಹಾಯಕ್ಕಾಗಿರುವ ವಿದೇಶೀಯ ಅಥವಾ ಮಿತ್ರರಾಜ್ಯದ ದಳಗಳು ; ಸಹಾಯಕ ದಳಗಳು. (ವ್ಯಾ.) Auxiliary verb ಸಹಾಯಕ ಕ್ರಿಯಾಪದ.

Avaíl ಅವೇಯ್ಲ್ (ಕ್ರಿ., ನಾ.) ಸಹಾಯವಾಗು ; ಸಹಾಯ ಪಡೆ ; ಉಪಯೋಗವಾಗು ; ಫಲಕಾರಿಯಾಗು ; ಪ್ರಯೋಜನವಾಗು. (Avail oneself of ಪ್ರಯೋಜನ ಹೊಂದು ; ಉಪಯೋಗಪಡಿಸಿಕೊ). ಉಪಯೋಗ ; ಲಾಭ ; ಪ್ರಯೋಜನ (ವಾಕ್ಯಭಾಗಗಳಲ್ಲಿ ಮಾತ್ರ ಪ್ರಯೋಗ : ಉದಾ. — It was of no avail ಅದರಿಂದ ಉಪ ಯೋಗವಾಗಲಿಲ್ಲ ; without avail ; to little avail). **Available** — ಲಬ್ಲ್ (ಗು.) ದೊರೆಯುವ ; ಸಿಕ್ಕುವ ; ಲಭ್ಯ ; ಉಪ ಯೋಗಿಸಿಕೊಳ್ಳಬಹುದಾದ. **Availabílity** (ನಾ.) ; **Avaílableness** (ನಾ.) ; **Avaílably** (ಕ್ರಿ. ವಿ.)

A'valanche ಆ್ಯವಲಾನ್ಷ್ (ನಾ.) ಬೆಟ್ಟದಿಂದ ವೇಗವಾಗಿ ಉರುಳಿ ಕೊಂಡು ಬರುತ್ತಿರುವ ಮಂಜು, ನೀರ್ಗಲ್ಲು ಮತ್ತು ಕಲ್ಲುಮಣ್ಣು ಗಳ ಸಮುದಾಯ : ಉರುಳು ನೀರ್ಗಲ್ಲು ; ಹಿಮಘನ ಪ್ರಪಾತ. (ರೂಪ. ಸಹ : ಉದಾ.— An avalanche of forgeries ಸೃಷ್ಟನೆ ಗಳ ಹುಚ್ಚುಪ್ರವಾಹ)

Avánt coúrier (F) ಅವಾಂಟ್ ಕೂರಿಯರ್ (ನಾ.) ಮುಂದುಗಡೆ ಯಲ್ಲಿ ಓಡುವವನು, ಅಥವಾ ಸವಾರಿಮಾಡಿಕೊಂಡು ಹೋಗುವವನು : ಅಗ್ರಚರ. (ಮು., ಬ. ವ. ದಲ್ಲಿ) ಅಗ್ರಗಾಮಿ ದಳ ; ಮುಂದಳ.

A'varice ಆ್ಯವರಿಸ್ (ನಾ.) ಧನಲೋಭ ; ಅತ್ಯಾಶೆ ; ದುರಾಶೆ. **Avarícious** — ಷಸ್ (ಗು.) ; **Avaríciously** (ಕ್ರಿ. ವಿ.)

Avatár, A'vatar ಅವತಾರ್, ಆ್ಯವತಾರ್ (ನಾ.) (ಭಾರತೀಯ ಪುರಾಣದಲ್ಲಿ) ಭಗವಂತನು ಭೂಲೋಕಕ್ಕೆ ಮನುಷ್ಯ ಅಥವಾ ಪ್ರಾಣಿ ರೂಪದಿಂದ ಇಳಿಯುವುದು. ಪ್ರಪಂಚದಲ್ಲಿ ಪ್ರಥುಶಕ್ತಿಯೆಂದಾಗಲಿ ಪೂಜ್ಯವಸ್ತುವೆಂದಾಗಲಿ ವ್ಯಕ್ತವಾದದ್ದು : ಅವತಾರ. The avatar of Mathematics ಗಣಿತಶಾಸ್ತ್ರದ ಅಪರಾವತಾರ.

Avaúnt ಅವಾಂಟ್ (ಉಪ.) ಹೊರಡು ! ನಡೆ ! ತೊಲಗು !

A've ಏವಿ (ಉಪ., ನಾ.) ಜಯ ! ಜಯವಾಗಲಿ ! ದೇವರು ರಕ್ಷಿಸಲಿ ! ಸೌಖ್ಯವೇ ! ಬಂದಿರಾ ! ಹೋಗಿಬರುವಿರಾ ! ಸ್ವಾಗತ ; ಬೀಳ್ಕೊಡು ವುದು. Ave Maria (ಮೇರೀ ಕನ್ಯೆಯ ಮೇಲಣ) ಭಕ್ತಿಗೀತ, ಸ್ತೋತ್ರ. Ave bell ಈ ಸ್ತೋತ್ರ ಹೇಳುವಾಗ ಮಾಡುವ ಘಂಟಾನಾದ.

Avénge ಅವೆಂಜ್ (ಕ್ರಿ. ಸಕ.) ಹಗೆ, ಸೇಡು, ಮತ್ಸರ — ಇವನ್ನು ತೀರಿಸಿಕೊ ; ಪ್ರತಿವೈರ ಸಾಧಿಸು. (ಒಬ್ಬನ ಪರವಾಗಾಗಲಿ, ಹಕ್ಕು ಮೊ. ಗಳ ಅತಿಕ್ರಮಕ್ಕಾಗಲಿ) ಪರಿಹಾರ ಪಡೆ.

A'venue ಆ್ಯವಿನ್ಯೂ (ನಾ.) ಹಾದಿ ; ದಾರಿ ; ಮಾರ್ಗ ; ಪ್ರವೇಶ ಪಥ (ಸಾ., ರೂಪ.). ಸಾಲುಮರ ; ಸಾಲುಮರದ ದಾರಿ, ಬೀದಿ. (ಅಮೆ. ಸಂ.) ವಿಸ್ತಾರವಾದ ಬೀದಿ.

Avér ಅವರ್ (ಕ್ರಿ. ಸಕ.) ದೃಢವಾಗಿ ಹೇಳು ; ಕಂಠೋಕ್ತವಾಗಿ ಹೇಳು. (ನ್ಯಾ. ಶಾ.) ಸಮರ್ಥಿಸು ; ದೃಢೀಕರಿಸು. **Avérrable** (ಗು.) ; **Avérment** (ನಾ.)

A'verage ಆ್ಯವರೆಜ್ (ನಾ., ಗು.) ಸರಾಸರಿ ; ಸಾಮಾನ್ಯ ; ಸಾಧಾ ರಣ. ಸರಾಸರಿ ಹಿಡಿದು ಅಂದಾಜುಮಾಡಿದ ; ಸಾಮಾನ್ಯ ಪ್ರಮಾ ಣದ ; ಸಾಧಾರಣವಾದ. **A'veragely** (ಕ್ರಿ. ವಿ.)

A'verage (ಕ್ರಿ. ಸಕ.) ಸರಾಸರಿ ಕಂಡುಹಿಡಿ ; ಸಾಮಾನ್ಯ ಪ್ರಮಾಣವನ್ನು ಅಂದಾಜುಮಾಡು. ಸರಾಸರಿ (ಇಷ್ಟುವೊತ್ತು) . . ಆಗು.

Avérse ಅವರ್ಸ್ (ಗು.) ವಿಮುಖ ; ಆಗದ ; ಸೇರದ ; ವಿರೋಧವಾದ ; ದ್ವೇಷಿಸುವ ; ಇಷ್ಟವಿಲ್ಲದ. **Avérseness** (ನಾ.) ; **Avérsion** — ಷನ್ (ನಾ.) ವಿಮುಖತೆ ; ಇಷ್ಟವಿಲ್ಲದಿರುವಿಕೆ ; ಅಸಹ್ಯತೆ ; ವಿರೋಧ ; ದ್ವೇಷ ; ಜುಗುಪ್ಸೆ ; ಹೇವರಿಕೆ. ಅಸಹ್ಯ ವಸ್ತು ; ಬೇಡದ್ದು ; ಸೇರದ್ದು. **Avért** (ಕ್ರಿ. ಸಕ.) (ದೃಷ್ಟಿಯನ್ನಾಗಲಿ ಮನಸ್ಸನ್ನಾಗಲಿ) ಬೇರೆಕಡೆಗೆ ತಿರುಗಿಸು ; ವಿಮುಖನಾಗು ; ಮುಖದಿರುಹು. ತೊಲ ಗಿಸು ; ನಿವಾರಿಸು ; ತಪ್ಪಿಸು. **Avértible, — able** (ಗು.)

A'vian ಏವಿಯನ್ (ಗು.) ಪಕ್ಷಿಸಂಬಂಧವಾದ. **A'viary** ಏವಿಯರಿ (ನಾ.) ಹಕ್ಕಿಗಳನ್ನು ಇಟ್ಟಿರುವ ಸ್ಥಳ : ಪಕ್ಷಿ ಗೃಹ. **A'vifauna** — ಫಾನಾ (ನಾ.) ಒಂದು ಪ್ರಾಂತದ ಪಕ್ಷಿ ಕೋಟಿ.

A'viate ಏವಿಯೇಟ್ (ಕ್ರಿ. ಅಕ.) ವಿಮಾನ, ಆಕಾಶ ನಾವೆ, ಹಾರು ಯಂತ್ರ, ಮೊ. ವನ್ನು ನಡೆಯಿಸು ; ಅವುಗಳಲ್ಲಿ ಪ್ರಯಾಣಮಾಡು. **Aviátion** (ನಾ.) ; **A'viator** (ನಾ.) ಆಕಾಶಯಾನ ಗಾಮಿ, ಚಾಲಕ.

Aviatík (G) ಅವಿಯಾಟಿಕ್ (ನಾ.) ಜರ್ಮನರ ಒಂದು ಬಗೆಯ ಯುದ್ಧ ಫಲಕವ್ಯೋಮಯಾನ.

Avídity ಅವಿಡಿಟಿ (ನಾ.) ಅತಿ ಆಶೆ ; ತೃಷ್ಣೆ ; ಲೋಲುಪತೆ ; ಲೋಭ ; ಹೆಬ್ಬಯಕೆ. **A'vid** ಆ್ಯವಿಡ್ (ಗು.) ; **A'vidly** (ಕ್ರಿ. ವಿ.)

Aviétte ಏವಿಯೆಟ್ (ನಾ.) ಯಂತ್ರಸಾಧನವಿಲ್ಲದೆ ಮನುಷ್ಯಬಲದಿಂದ ನಡೆಯಿಸುವ ಫಲಕ ವ್ಯೋಮಯಾನ.

Avión (F) ಆವ್ಯಾನ್ (ನಾ.) ಯುದ್ಧ ಫಲಕವ್ಯೋಮಯಾನ.

Avíso ಅವೈ(ವೀ)ಸೋ (ನಾ.) ಸಮಾಚಾರದ ದೋಣಿ.

Avocado ಅವೊಕಾಡೊ (ನಾ.) ವೆಸ್ಟ್ ಇಂಡಿಯಾ ದ್ವೀಪಗಳ ಒಂದು ಜಾತಿಯ ಗಿಡದ ಹಣ್ಣು.

Avocátion ಆ್ಯವೊಕೇಷನ್ (ನಾ.) ಅನ್ಯತ್ರಾಕರ್ಷಣೆ ; ಮನಸ್ಸನ್ನು (ಗಮನವನ್ನು) ಬೇರೆ ಕಡೆಗೆ ಸೆಳೆಯುವುದು. ವೃತ್ತಿ ; ಉಪವೃತ್ತಿ ; ಉದ್ಯೋಗ ; ಜೀವನೋಪಾಯ ; ಕಸುಬು. **A'vocate** (ಕ್ರಿ. ಸಕ.) ಹಿಂದಕ್ಕೆ ತೆಗೆದುಕೊ ; ಹಿಂದಕ್ಕೆ ಕರೆ. (ನ್ಯಾ. ಶಾ.) ವ್ಯವಹಾರ ವನ್ನು ಮೇಲಿನ ನ್ಯಾಯಸ್ಥಾನಕ್ಕೆ ವರ್ಗಾಯಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Avoíd ಅವಾಯ್ಡ್ (ಕ್ರಿ. ಸಕ.) ತೊರೆ ; ಬಿಟ್ಟುಬಿಡು ; ತಪ್ಪಿಸಿಕೊ ; ದೂರವಾಗಿರು ; ಸಿಕ್ಕದಿರು ; ಹೊದ್ದದಿರು. (ನ್ಯಾ. ಶಾ.) (ವಾದವನ್ನು) ನಿರರ್ಥಕ ಮಾಡು ; (ತೀರ್ಪನ್ನು) ತಳ್ಳಿಹಾಕು. **Avoídable** (ಗು.) ; **Avoídance** — ಡನ್ಸ್ (ನಾ.) ತಪ್ಪಿಸಿಕೊಳ್ಳುವುದು. (ಯಾವುದಾದರೂ ಅಧಿಕಾರಸ್ಥಾನದ, ಲಾಭಸ್ಥಾನದ) ತೆರವು, ಖಾಲಿ.

A'voirdupoís ಆ್ಯವರ್ಡಪಾಯ್ಸ್ (ಗು., ನಾ.) ಗ್ರೇಟ್‌ಬ್ರಿಟನ್ನಿನಲ್ಲಿ ರೂಢಿಯಲ್ಲಿರುವ ಒಂದು ತೂಕದ ಪದ್ಧತಿ (ಈ ತೂಕವು ಔಷಧ, ಹೆಚ್ಚು ಬೆಲೆಯುಳ್ಳ ಲೋಹ ಮತ್ತು ರತ್ನ — ಇವು ಹೊರತು ಇತರ ವಸ್ತುಗಳನ್ನು ತೂಕಮಾಡುವುದರಲ್ಲಿ ಉಪಯೋಗ. ಇದರ 'ಪೌಂಡ್' ಎಂಬ ಮಾನವು ೭,೦೦೦ ಗ್ರೆಯ್ನುಗಳ ತೂಕವುಳ್ಳದ್ದು). (ಅಮೆ. ಸಂ.) ತೂಕ ; ಭಾರ.

Avoúch ಅವೌಚ್ (ಕ್ರಿ.) ಭರವಸೆ ಕೊಡು ; ನೆಚ್ಚಿಗೆ ಹೇಳು ; ದೃಢವಾಗಿ ಹೇಳು ; ನಿಜ ಹೇಳು. ಒಪ್ಪಿಕೊ. **Avoúchment** (ನಾ.)

Avoẃ ಅವೌ (ಕ್ರಿ. ಸಕ.) ಒಪ್ಪಿಕೊ ; ಅಂಗೀಕರಿಸು ; ಕಂಠೋಕ್ತವಾಗಿ ಹೇಳು ; ತಾನೇ ಎಂದು ಒಪ್ಪಿಕೊ. The avowed author ಕರ್ತೃ ತಾನೇ ಎಂದು ಒಪ್ಪಿಕೊಂಡವನು ; ಸ್ವೀಕೃತ ಕರ್ತೃ. **Avoẃable** (ಗು.) ; **Avoẃal** (ನಾ.) ; **Avoẃedly** (ಕ್ರಿ. ವಿ.) ಕಂಠೋಕ್ತವಾಗಿ ಒಪ್ಪಿಕೊಂಡಿರುವಂತೆ.

A'vro ಆ್ಯವ್ರೊ (ನಾ.) ಒಂದು ತೆರದ ಬ್ರಿಟಿಷ್ ಆಕಾಶ ಫಲಕಯಾನ. (A. V. Roe ಎಂಬಾತನ ರಚನೆಯದು)

Avúlsion ಅವಲ್ಷನ್ (ನಾ.) ಬಲವಂತದಿಂದ ಕಿತ್ತುಹಾಕುವುದು, ಹರಿದುಹಾಕುವುದು ; ಬಲಾತ್ಕಾರ ವಿಚ್ಛೇದ. ಹರಿದುಬಂದ ಭಾಗ. (ನ್ಯಾ. ಶಾ.) ನದಿಯ ಪಾತ್ರ ಭೇದವಾಗುವುದರಿಂದಾಗಲಿ ಪ್ರವಾಹ ಬರುವುದರಿಂದಾಗಲಿ, ಒಬ್ಬನಿಗಿದ್ದ ಜಮೀನು ಕೊಚ್ಚಿಹೋಗಿ ಮತ್ತೊಬ್ಬನ ಜಮೀನಿಗೆ ಥಟ್ಟನೆ ಕೂಡಿಬರುವುದು.

Avúncular ಅವನ್‌ಕ್ಯುಲರ್ (ಗು.) ಚಿಕ್ಕಪ್ಪನ, ದೊಡ್ಡಪ್ಪನ, ಸೋದರಮಾವನ ; ಇವರನ್ನು ಹೋಲುವ.

Awaít ಅವೇಯ್ಟ್ (ಕ್ರಿ. ಸಕ.) ಕಾದಿರು ; ನಿರೀಕ್ಷಿಸು ; ಎದುರುನೋಡು ; ಸಿದ್ಧವಾಗಿರು. A reward awaits him ಅವನಿಗೆ ಒಂದು ಬಹುಮಾನ ಕಾದಿದೆ.

Awáke ಅವೇಕ್ (ಕ್ರಿ. ; ಭೂತ. Awoke ; ಭೂ. ಕೃ. Awoke, Awaked) ಎಚ್ಚರಗೊಳ್ಳು ; ನಿದ್ದೆಯಿಂದೇಳು. (ರೂಪ.) ಕಾರ್ಯಪರನಾಗು. (Awake to ಸಂದರ್ಭ ತಿಳಿದುಕೊ ; ಎಚ್ಚತ್ತುಕೊ). ನಿದ್ದೆಯಿಂದೆಬ್ಬಿಸು ; ಎಚ್ಚರಗೊಳಿಸು ; ಎಚ್ಚರಿಸು (ರೂಪ. ಸಹ). (ಗು.) ನಿದ್ದೆಯಿಂದೆಬ್ಬಿಸಲ್ಪಟ್ಟ ; ಎಚ್ಚತ್ತಿರುವ ; ಜಾಗರೂಕನಾಗಿರುವ. **Awáken** (ಕ್ರಿ.) ಎದ್ದೇಳು ; ಎಬ್ಬಿಸು ; ಎಚ್ಚರಿಸು (ರೂಪ. ಸಹ)

Awárd ಅವಾರ್ಡ್ (ಕ್ರಿ. ಸಕ., ನಾ.) ತೀರ್ಪುಕೊಡು ; ಇತ್ಯರ್ಥಮಾಡು ; ನಿರ್ಣಯ ಹೇಳು. ಸಲಿಸು ; ಕೊಡು ; ಗೊತ್ತುಮಾಡಿಡು. (ನಾ.) ನ್ಯಾಯನಿರ್ಣಯ ; ತೀರ್ಪು ; ವಿಧಿಸಿ ಕೊಡಿಸಿದ್ದು ; ವಿಧಿಸಿದ ದಂಡ.

Awáre ಅವೇರ್ (ಕ್ರಿ. ವಿ.) ತಿಳಿದು ; ಬಲ್ಲವನಾಗಿ ; ಅರಿತು. **Awáreness** (ನಾ.) (ವಿಷಯವನ್ನು, ವಸ್ತುಸ್ಥಿತಿಯನ್ನು) ಅರಿತಿರುವ ಸ್ಥಿತಿ ; ಅರಿವು.

Awásh ಅವಾಷ್ (ಗು.) ತೆರೆಯ ಮಟ್ಟದಲ್ಲಿರುವ ; ತೆರೆಗಳಿಂದ ತೊಳೆಯಲ್ಪಟ್ಟ.

Awaý ಅವೇ (ಕ್ರಿ. ವಿ.) ದೂರಕ್ಕೆ ; ದೂರದಲ್ಲಿ ; ಪೂರ್ತಿಯಾಗಿ ; (ರೂಪ. ಸಹ). Do away with ಪರಿಹರಿಸು. Explain away ಸಬಬು ಹೇಳಿಬಿಡು ; ಕುಂಟುಯುಕ್ತಿಯಿಂದ ದಾಟಿಸಿಬಿಡು. Fall away from ಕೈಬಿಡು ; ಬಿಟ್ಟೋಡು. Fire away ಲಗಾಯಿಸಿಬಿಡು. Fool away ಅವಿವೇಕದಿಂದ ಹಾಳುಮಾಡಿಬಿಡು ; ನೀಗರಾಡು. Give away ಕೊಟ್ಟುಬಿಡು. Go away ಹೊರಟುಹೋಗು ; ತೊಲಗು. He is away ಅವನು ಎಲ್ಲೋ ಹೋಗಿದ್ದಾನೆ. Make away with ಅಪಹರಿಸಿಕೊಂಡು ಹೋಗು ; ನಾಶಮಾಡು. Once and away ಯಾವಾಗಲೋ ಒಂದು ಬಾರಿ. Out and away ಎಣೆಯಿಲ್ಲದೆ. Throw away ಎಸೆದುಬಿಡು. Waste away ನಶಿಸಿಹೋಗು. Work away ಎಡೆಬಿಡದೆ ಕೆಲಸ ಮಾಡು.

Awe[1] ಆ (ನಾ., ಕ್ರಿ. ಸಕ.) ಭಯಭಕ್ತಿ (ಹುಟ್ಟಿಸು) ; ಗಂಭೀರ ಭೀಷಣ. Awe-struck ಭಯಚಕಿತನಾಗಿ. Hold or keep in awe ಭಯಭಕ್ತಿಯಲ್ಲಿರಿಸು. Stand in awe ಭಯಭಕ್ತಿಯಿಂದಿರು. **Aẃful** (ಗು.) ಭಯಭಕ್ತಿ ಹುಟ್ಟಿಸುವ ; ಅತ್ಯಂತ ಗೌರವಾರ್ಹವಾದ ; ಗಂಭೀರವಾದ. (ಅಸಂ.) ಅತಿರೇಕ. Awful bore ಅತಿಬೇಸರ ಹಿಡಿಸುವವನು. Awful scrawl ಘೋರವಾದ ಗೀಚಲುಬರವಣಿಗೆ. Something awful ಘೋರ. **Aẃfully** (ಕ್ರಿ. ವಿ.) ; **Aẃfulness** (ನಾ.) ; **Awéless** (ಗು.) ; **Awésome** (ಗು.)

Awe[2] ಆ (ನಾ.) ಜಲಪ್ರೇರಣದಿಂದ ಸುತ್ತುವ ಜಲಚಕ್ರದ ಒಂದು ತೇಲುಹಲಗೆ.

Awhíle ಅಹ್ವೈಲ್ (ಕ್ರಿ. ವಿ.) ಸ್ವಲ್ಪ ಹೊತ್ತು.

Aẃkward ಆಕ್ವರ್ಡ್ (ಗು.) ಕೆಲಸಕ್ಕೆ ಒದಗದ ; ನಯವಿಲ್ಲದ ; ಎಡವಟ್ಟಾದ ; ವಕ್ರ ; ವಿಕಾರ. ಅಚತುರ. ತೊಡಕಾದ ; ಕಷ್ಟವಾದ ; ಅಪಾಯಕರವಾದ. **Aẃkwardish** (ಗು.) ; **Aẃkwardly** (ಕ್ರಿ. ವಿ.) ; **Aẃkwardness** (ನಾ.)

Awl ಆಲ್ (ನಾ.) ದಬ್ಬಳ (ಮು., ಮೋಚಿಯದು)

Awn ಆನ್ (ನಾ.) (ಗೋಧಿ, ಮೊ. ಧಾನ್ಯದ ಕಾಳುಗಳ) ಊಬು ; ಧಾನ್ಯಶೂಕ. **Awned** (ಗು.) ಊಬುಳ್ಳ. **Aẃnless** (ಗು.) ಊಬಿಲ್ಲದ.

Aẃning ಆನಿಙ್ಗ್ (ನಾ.) ದಪ್ಪಬಟ್ಟೆಯಿಂದ ಮಾಡಿದ ಥಾವಣಿ (ಮು., ಹಡಗಿನ ಮೇಲ್ಭಾಗದಲ್ಲಿ). (ರೂಪ.) ಮರೆ ; ಆಶ್ರಯ. **Awned** (ಗು.)

Awrý ಅರ್ರೈ (ಕ್ರಿ. ವಿ., ಗು.) ಸೊಟ್ಟನೆ ; ವಕ್ರವಾಗಿ (Look awry ವಕ್ರವಾಗಿ ನೋಡು, ಕಾಣು). (ರೂಪ. ಸಹ). ತಪ್ಪಿಹೋಗಿ ; ಅಕ್ರಮವಾಗಿ (Go awry ತಪ್ಪಿಹೋಗು). ವಕ್ರವಾದ (ರೂಪ. ಸಹ)

Ax(e) ಆ್ಯಕ್ಸ್ (ನಾ.) ಕೊಡಲಿ ; ಕುಠಾರ (Put the axe in the helve ಕಾವಿಗೆ ಕೊಡಲ ಜೋಡಿಸು ; ಒಗಟು ಬಿಡಿಸು. He has an axe to grind ಅವನಿಗೆ ಸಾಧಿಸಿಕೊಳ್ಳಬೇಕಾದ ಸ್ವಾರ್ಥವಿದೆ). (ಪ್ರಾಚೀ. ಶಾ.) ಎರಡು ಕಡೆಯೂ ಚೂಪಾದ ಏಣುಳ್ಳ, ಅಥವಾ ಬೆಣೆಯಾಕಾರದ, ಕಲ್ಲಿನ ಆಯುಧ. The axe ಸಾರ್ವಜನಿಕವಾದ ವ್ಯಯದ ಬಾಬುಗಳಲ್ಲಿ ವೆಚ್ಚವನ್ನು ಕೋತಮಾಡುವುದು ; ಇದಕ್ಕಾಗಿ ನಿಯಮಿತವಾದ ಸಮಿತಿ. Apply the axe ಕೊಡಲಿ ಹಾಕು ; ಕತ್ತರಿಸು ; ಕಡಮೆಮಾಡು ; ಕೋತಮಾಡು. **Axed** ಆ್ಯಕ್ಸ್ಟ್ (ಗು.) ಕೊಡಲಿಯಿಂದ ಕೆತ್ತಿ ಸರಿಮಾಡಿದ ; ಕೊಡಲಿಯುಳ್ಳ.

Ax(e) (ಕ್ರಿ.) ಕೊಡಲಿಯಿಂದ ಕತ್ತರಿಸಿ ಸರಿಮಾಡು, ಸವರು. (ವೆಚ್ಚ, ನೌಕರಿಗಳು, ಮೊ. ನ್ನು) ಕಡಮೆಮಾಡು, ಕೋತಮಾಡು.

A'xil ಆ್ಯಕ್ಸಿಲ್ (ನಾ.) (ಸ. ವಿ.) ಎಲೆಗೂ ಅದು ಹೊರಡುವ ಕಾಂಡಕ್ಕೂ ನಡುವೆಯಾಗಲಿ, ರೆಂಬೆಗೂ ಅದು ಹೊರಡುವ ಬುಡಕ್ಕೂ ನಡುವೆಯಾಗಲಿ, ಇರುವ ಮೇಲ್ಗಡೆಯ ಕೋನ : ಪರ್ವಕೋನ. **A'xillary** ಆ್ಯಕ್ಸಿಲರಿ (ಗು.) ಕಂಕುಳಿಗೆ ಸಂಬಂಧಪಟ್ಟ ; ಕಕ್ಷಸ್ಥ. (ಸ. ವಿ.) ಸಸ್ಯ ಪರ್ವಸ್ಥಾನದಲ್ಲಿಯ ; ಪರ್ವಸ್ಥಾನದಿಂದ ಬೆಳೆಯುವ.

A'xile. **Axis** ನೋಡಿ.

A'xiom ಆ್ಯಕ್ಸಿಯಂ (ನಾ.) ಸ್ವತಸ್ಸಿದ್ಧ ಪ್ರಮಾಣ ; ಆಧಾರ ಸೂತ್ರ ; ಸಿದ್ಧ ನಿಯಮ ; ಸೂತ್ರ. **Axiomátic(al)** — ಯೊಮ್ಯಾಟಿ — (ಗು.) ಸ್ವತಸ್ಸಿದ್ಧ ; ಸ್ವತಃ ಪ್ರಮಾಣವಾದ ; ಸೂತ್ರ ರೂಪದ. **Axiomátically** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

A'xis ಆ್ಯಕ್ಸಿಸ್ (ನಾ. ; ಬ. ವ. Axes ಆ್ಯಕ್ಸೀಸ್) ಒಂದು ಕಾಯವು (ಬುಗುರಿಯಂತೆ) ಗಿರ್ರನೆ ಸುತ್ತುತ್ತಿರುವಾಗ ಯಾವ ರೇಖೆಯ ಸುತ್ತಲೂ ಅದು ಸುತ್ತುತ್ತಿರುವುದೆಂದು ಊಹಿಸಬಹುದೋ ಆ ರೇಖೆ : ಅಕ್ಷ ; ಅಕ್ಷರೇಖೆ. ಒಂದು ಸಮರೂಪಾಕೃತಿಯನ್ನು ಸಮರೂಪ ಭಾಗಗಳಾಗಿ ಮಾಡುವ ರೇಖೆ. ಒಂದು ವಸ್ತುವಿನ ಒಂದು ಕೊನೆಯಿಂದ ಮತ್ತೊಂದು ಕೊನೆಗೆ ಹಾಯ್ದು ಹೋಗುವ ಸರಳರೇಖೆ. (ದೃ. ವಿ.) ಕಣ್ಣಿನ ಅಥವಾ ಲೆನ್ಸಿನ ಕೇಂದ್ರದ ಮೂಲಕ ಹಾಯುವ, ಅಥವಾ ಅವುಗಳ ಮೇಲೆ ಲಂಬವಾಗಿ ಬೀಳುವ, ಕಿರಣ. (ಶ. ವಿ.) ಒಂದು ಅಂಗದ ಅಥವಾ ಜೀವಿಯ ಅಕ್ಷಪ್ರದೇಶ. (ಸ. ವಿ.) ಪುಷ್ಪಗುಚ್ಛದ ಅಥವಾ ಬೆಳೆಯುತ್ತಿರುವ ಸಸ್ಯಭಾಗದ ಅಕ್ಷಸ್ತಂಭ. A. of reference ನಿರ್ದೇಶಕ ಅಕ್ಷ. A. of rotation ಪರಿಭ್ರಮಣ ಅಕ್ಷ. A. of symmetry ಸಮಸೂತ್ರ ಅಕ್ಷ. **A'xal, A'xial** ಆ್ಯಕ್ಸಲ್, ಆ್ಯಕ್ಸಿಯಲ್ (ಗು.) ಅಕ್ಷವಾಗಿರುವ; ಅಕ್ಷದಂಥ ; ಅಕ್ಷದ ; ಅಕ್ಷಕ್ಕೆ ಸಂಬಂಧಪಟ್ಟ ; ಅಕ್ಷದ ಸುತ್ತಲೂ. **Axiálity** (ನಾ.) ; **A'xially** (ಕ್ರಿ. ವಿ.) ; **A'xile** ಆ್ಯಕ್‌ಸೈಲ್ (ಗು.) (ಸ. ವಿ., ಶ. ವಿ.) ಅಕ್ಷರೇಖೆಗೆ ಸಂಬಂಧಪಟ್ಟ.

A'xle ಆ್ಯಕ್ಸ್‌ಲ್ (ನಾ.) ಚಕ್ರ ಸುತ್ತುವ ಅಚ್ಚು. (ಬಂಡಿ, ಮೊ. ಗಳಲ್ಲಿ) ಇರಚಿಯ ತುದಿ ; ಇರಸು ; ಇರಚು (= A.-tree). A.-box ಇರಚಿಯ ತುದಿಗಳು ತಿರುಗುವ ಕೋಶ : ಅಕ್ಷಪುಟ. A.-nail, -pin ಕಡಾಣಿ. Wheel and axle ಗಾಲಿ ಮತ್ತು ಅಚ್ಚು (ಎಂಬ ಒಂದು ಯಂತ್ರಸಾಧನ). **A'xled** (ಗು.) ಅಚ್ಚುಹಾಕಿರುವ.

A'xminster ಆ್ಯಕ್ಸ್‌ಮಿನ್‌ಸ್ಟರ್ (ನಾ.) (ಈ ಹೆಸರಿನ ಪಟ್ಟಣದಲ್ಲಿ ಹಿಂದೆ ತಯಾರಾಗುತ್ತಿದ್ದ, ಈಗ ವಿಲ್ಟನ್ ಪಟ್ಟಣದಲ್ಲಿ ತಯಾರಾಗುವ) ರತ್ನಗಂಬಳಿ.

Ay ಐ (ಭಾವ. ಅವ್ಯ., ನಾ. ; ಬ. ವ. Ayes) ಅಹುದು ! (ನಾ.) ಅಹುದೆನ್ನುವ ಉತ್ತರ (The ayes have it ಅಹುದೆನ್ನುವವರದೇ ಬಹುಮತ : ಅಹುದೆನ್ನುವವರೇ ಗೆದ್ದರು)

A'yah ಆಯ (ನಾ.) ಆಯ ; ದಾದಿ.

Aye ಏ (ಕ್ರಿ. ವಿ.) ಸದಾ ; ಸರ್ವದಾ ; ಯಾವಾಗಲೂ ; ಎಲ್ಲಾ ಸಂದರ್ಭಗಳಲ್ಲಿಯೂ. For aye ಎಂದೆಂದಿಗೂ.

Azílian ಅಸಿಲಿಯನ್ (ಗು.) ಪೂರ್ವ ಶಿಲಾಯುಗಕ್ಕೂ ನವೀನ ಶಿಲಾಯುಗಕ್ಕೂ ಮಧ್ಯದ ಸಂಕ್ರಮಣ ಕಾಲದ : ಮಧ್ಯಶಿಲಾ ಯುಗದ. (ಫ್ರಾನ್ಸಿನ ಪಿರಿನೀಸ್ ಬೆಟ್ಟದಲ್ಲಿರುವ Mas D' Azil ಎಂಬ ಪ್ರದೇಶದಲ್ಲಿ ದೊರೆತ ಅವಶಿಷ್ಟಗಳಿಂದ)

A'zimuth ಆ್ಯಸಿಮತ್ (ನಾ.) ಖಮಧ್ಯದಿಂದ ಕ್ಷಿತಿಜದವರೆಗೆ, ಕ್ಷಿತಿಜಕ್ಕೆ ಲಂಬಮಾನವಾಗಿ, ವ್ಯಾಪಿಸಿರುವ ಆಕಾಶಧನುಸ್ಸು (ವೃತ್ತಭಾಗ) : ದಿಗಂಶ. A.-circle ಖಮಧ್ಯಬಿಂದುವನ್ನೂ ಅಧೋಬಿಂದುವನ್ನೂ ಹಾಯ್ದು ಕ್ಷಿತಿಜಕ್ಕೆ ಲಂಬಮಾನವಾಗಿರುವ ವೃತ್ತ : ದಿಗಂಶ ವೃತ್ತ. **Azimúthal** — ಮ್ಯೂತಲ್ (ಗು.) ; **Azimúthally** (ಕ್ರಿ. ವಿ.)

Azóic ಅಸೋಯಿಕ್ (ಗು.) ಜೀವಸೂಚನೆಯೇ ಇಲ್ಲದ ; ಅಜೀವ. (ಭೂ. ವಿ.) ಜೀವ್ಯವಶಿಷ್ಟ ರಹಿತ.

Azóte ಆ್ಯಸೋಟ್ (ನಾ.) ಸಾರಜನಕ ಅನಿಲದ ಹಿಂದಿನ ಹೆಸರು. **Azótic** ಅಸಾಟಿಕ್ (ಗು.) ; **A'zotize** ಆ್ಯಸೊಟೈಸ್ (ಕ್ರಿ. ಸಕ.) ಸಾರಜನಕ ಪೂರ್ಣವನ್ನಾಗಿ ಮಾಡು ; ಆಮ್ಲಜನಕವಿಲ್ಲದಂತೆ ಮಾಡು. ಜೀವವನ್ನು ಕಳೆ.

A'ztec ಆ್ಯಸ್‌ಟೆಕ್ (ಗು., ನಾ.) ಮೆಕ್ಸಿಕೊ ದೇಶಕ್ಕೆ ಸ್ಪ್ಯಾನಿಷರು ದಂಡೆತ್ತಿಹೋದಾಗ ಅಲ್ಲಿ ಆಳುತ್ತಿದ್ದ ಜನಾಂಗದ(ವನು)

A'zure ಆ್ಯ(ಏ)ಷರ್, (ನಾ., ಗು., ಕ್ರಿ. ಸಕ.) ಆಕಾಶ ನೀಲಿ ; ಬಾನ್ನೀಲಿ ; ನೀಲಿ ; ಉಜ್ಜ್ವಲ ನೀಲವರ್ಣದ್ರವ್ಯ. ನಿರ್ಮಲಾಕಾಶ. 'ಲೇಪಿಸ್ ಲಸೂಲಿ' ಎಂಬ ಹೆಸರಿನ ಒಂದು ಜಾತಿಯ ಉಜ್ಜ್ವಲ ನೀಲವರ್ಣದ ಕಲ್ಲು. (ಗು.) ಬಾನ್ನೀಲಿಯ. (ರೂಪ.) ಮೋಘ ರಹಿತ ; ನಿರಭ್ರ ; ಸ್ವಚ್ಛ ; ಪ್ರಶಾಂತ. (ಕ್ರಿ.) ನೀಲಿಬಣ್ಣ ಹಾಕು ; ನೀಲ ವರ್ಣವಾಗಿ ಮಾಡು.

A'zygos, -ous ಆ್ಯಸಿಗಸ್ (ಗು., ನಾ.) (ಶ. ವಿ.) ಅಯುಗ್ಮ ; ಜೋಡಿಯಾಗಿಲ್ಲದ ; ಅಯುಗ್ಮಾಂಗ.

A'zymous ಆ್ಯಸಿಮಸ್ (ಗು.) ಹುಳಿ (ಹುದುಗು) ಸೇರಿಸಿಲ್ಲದ ; ಹುಳಿ ತಿರುಗಿಲ್ಲದ.

B

B ಬೀ. ಇಂಗ್ಲಿಷ್ ವರ್ಣಮಾಲೆಯ ಎರಡನೆಯ ಅಕ್ಷರ. ಇಂಗ್ಲಿಷ್ ಸಂಗೀತದ ಸ್ವರಕ್ರಮದಲ್ಲಿ ಏಳನೆಯ ಸ್ವರ. [B flat (ಹಾಸ್ಯವಾಗಿ) ತಗಣಿ]. (ವಾದದಲ್ಲಿ) ಎರಡನೆಯವನನ್ನು ಅಥವಾ ಎರಡನೆಯದನ್ನು ಸೂಚಿಸುವ ಸಂಕೇತ. (ಬೀಜಗಣಿತ) ನಿರ್ದಿಷ್ಟ ಪರಿಮಾಣ ಸೂಚಕವಾದ ಎರಡನೆಯ ಪದ. ಸಂಕ್ಷಿಪ್ತಗಳು : **B.A.** (Bachelor of Arts) ವಿಶ್ವವಿದ್ಯಾನಿಲಯದ ಕಲಾಶಾಖೆಯಲ್ಲಿ ಮೊದಲನೆಯ ಪದವಿಯನ್ನು ಪಡೆದವನು : ಕಲಾ ಪ್ರವಿಷ್ಟ. **B.D.** (Bachelor of Divinity) ದೇವತಾಶಾಸ್ತ್ರ ಪ್ರವಿಷ್ಟ. **B.E.** (Bachelor of Engineering) ಶಿಲ್ಪವಿದ್ಯಾ ಪ್ರವಿಷ್ಟ. **B.Sc.** (Bachelor of Science) ವಿಜ್ಞಾನ ಪ್ರವಿಷ್ಟ. **B.C.** (Before Christ) ಕ್ರಿಸ್ತ ಪೂರ್ವ. **B., BB., BBB.** (Black, double black, treble black, in pencils) ಸೀಸದ ಕಡ್ಡಿಯ ಮೇಲೆ ಅದರ ಕಪ್ಪಿನ ಪರಿಮಾಣವನ್ನು ತೋರಿಸುವುದಕ್ಕಾಗಿ ಹಾಕಿರುವ ಗುರುತು. **Bart., Bt.** (Baronet) ಇಂಗ್ಲೆಂಡಿನಲ್ಲಿ ವಂಶಪಾರಂಪರ್ಯವಾಗಿ ಕೊಡುವ ಒಂದು ಘನತೆಯ ಬಿರುದು. **Bros.** (Brothers) ಸೋದರರು. **B.A.** (British Academy) ಬ್ರಿಟಿಷ್ ಕಲಾಸಂಸ್ಥೆ. **B.B.C.** (British Broadcasting Corporation) ಬ್ರಿಟಿಷ್ ವಾರ್ತಾ ವಿಕಿರಣ ಸಂಸ್ಥೆ. **B.E.** (British Empire) ಬ್ರಿಟಿಷ್ ಚಕ್ರಾಧಿಪತ್ಯ (ಬಿರುದಿನಲ್ಲಿ). **B.P.** (British Pharmacopœia) ಬ್ರಿಟಿಷ್ ಔಷಧ ಪ್ರಮಾಣ ಗ್ರಂಥ. **Bp.** (Bishop) ಬಿಷಪ್. **b.** (Born) ಹುಟ್ಟಿದ್ದು.

Baa ಬಾ (ನಾ., ಕ್ರಿ. ಅಕ.) ಕುರಿಯ ಕೂಗು ; ಬ್ಯಾ (ಎನ್ನು). Baa-lamb (ಮಕ್ಕಳ ಮಾತಿನಲ್ಲಿ) ಕುರಿಮರಿ.

Báal ಬೇಅಲ್ (ನಾ. ; ಬ. ವ. Baalim ಬೇಅಲಿಂ) ಫಿನಿಷಿಯನ್ನರ ದೇವರು ; ಸುಳ್ಳುದೇವತೆ ; ಮಿಥ್ಯಾದೈವ. **Báalism** (ನಾ.) ಬೇಅಲ್ ದೇವತಾರಾಧನೆ ; ವಿಗ್ರಹಾರಾಧನೆ. **Báalist, Báalite** (ನಾ.) ಬೇಅಲ್ ಆರಾಧಕ.

Baas ಬಾಸ್ (ನಾ.) (ದ. ಆಫ್ರಿಕದಲ್ಲಿ) ದಣಿ ; ಒಡೆಯ ; ಸ್ವಾಮಿ ; ಯಜಮಾನ.

Bábacoote ಬಾಬಾಕೂಟ್ (ನಾ.) (ಮಡಗಾಸ್ಕರ್ ದ್ವೀಪದ) ಕಾಡು ಪಾಪ ಎಂಬ ಮೃಗದ ಜಾತಿ.

Bábbit-metal ಬ್ಯಾಬಿಟ್ ಮೆಟಲ್ (ನಾ.) ತವರ, ಆಂಟಿಮೊನಿ, ತಾಮ್ರ — ಇವುಗಳ ಮಿಶ್ರಣದ ಮೆತುವಾದ ಲೋಹ : ಬ್ಯಾಬಿಟ್ ಲೋಹ. (ಇದನ್ನು ಮೊದಲು ತಯಾರಿಸಿದ Babbit ಎಂಬಾತನ ಹೆಸರಿನಿಂದ)

Bábbit(t)ry ಬ್ಯಾಬಿಟ್ರಿ (ನಾ.) (ಅಮೆ. ಸಂ.) ಸಾಮಾನ್ಯವಾಗಿ ಪೇಟೆಯಲ್ಲಿ ರೂಢಿಯಾಗಿರುವ ನೀತಿ ನಡತೆಗಳು ; ಸಮಾಜದ ಒಂದು ಗುಂಪಿನ ಜಾತಿಬುದ್ಧಿ, ರೀತಿ ನೀತಿಗಳು (ನಿಕೃಷ್ಟ ಭಾವನೆಯಲ್ಲೇ ಪ್ರಯೋಗ). (Sinclair Lewis ಎಂಬಾತನು ಬರೆದಿರುವ Babbitt ಎಂಬ ಕಾದಂಬರಿಯಿಂದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bábble ಬ್ಯಾಬ್'ಲ್ (ಕ್ರಿ., ನಾ.) ತೊದಲುತ್ತ, ಅಸಂಬದ್ಧವಾಗಿ, ಅತಿಯಾಗಿ, ಮಾತನಾಡು ; (ನದಿ, ಮೊ.) ಮರ್ಮರಗುಟ್ಟು. ಅವಿವೇಕವಾಗಿ ಹರಟು ; ಗಳಹು. (ಗುಟ್ಟನ್ನು) ಹೊರಗೆಡಹು. (ನಾ.) ತೊದಲು ನುಡಿ ; ಗೊಡ್ಡು ಹರಟೆ ; (ಹರಿಯುವ ನೀರು, ಮೊ. ಗಳ) ಮರ್ಮರ ಧ್ವನಿ. **Bábbler** (ನಾ.) ಹರಟೆಮಲ್ಲ ; ಗುಟ್ಟನ್ನು ಹೊರಗೆಡಹುವವನು ; ಒಡಕು ಬಾಯಿಯವನು. ಉದ್ದವಾದ ಕಾಲುಳ್ಳ ಒಂದು ಪಕ್ಷಿಜಾತಿ. **Bábblement** (ನಾ.)

Babe ಬೇಬ್ (ನಾ.) (ಕಾವ್ಯ) ಮಗು ; ಕೂಸು ; ಹಸುಳೆ ; ಯಾವ ಅನುಭವವೂ ಇಲ್ಲದವನು ; ಮೋಸವರಿಯದವನು ; ನಿಷ್ಕಪಟಿ ; ಅನನುಭವಿ.

Bábel ಬೇಬೆಲ್ (ನಾ.) (ಬೈಬಲ್ಲಿನಲ್ಲಿ ಹೇಳಿರುವಂತೆ) ಬೇರೆ ಬೇರೆ ಭಾಷೆ ಗಳನ್ನಾಡುವ ಕಾರೇಗಾರರು ಗೋಪುರಕಟ್ಟುವಾಗ ಗಲಿಬಿಲಿ ಯುಂಟಾದ ಪಟ್ಟಣ ಮತ್ತು ಅದರ ಗೋಪುರ. ಯಾವುದಾದರೂ ಎತ್ತರವಾದ ಕಟ್ಟಡ. ಗಾಳಿಗೋಪುರ ; ಅಸಾಧ್ಯ ಕಲ್ಪನೆ. ಗಲಿಬಿಲಿ ; ಗೊಂದಲ ; ಅಸಂಬದ್ಧ ಪ್ರಲಾಪ ; ಗೊಂದಲದ ಸಭೆ.

Báboo ಬಾಬೂ (ನಾ.) (ಬಂಗಾಳಿ ಪದ) (ಉತ್ತರ ಹಿಂದೂಸ್ಥಾನ ದಲ್ಲಿ ಗೌರವದ ಹೆಸರು) ಗೌರವಸ್ಥ : ಬಾಬೂ ; ಇಂಗ್ಲಿಷ್ ಭಾಷೆ ಯರಿತ ಹಿಂದೂ ಗುಮಾಸ್ತೆ. (ಹೀಯಾಳಿಕೆಯಲ್ಲಿ) ಅರ್ಧ ಆಂಗ್ಲೇಯ ನಾದ ಹಿಂದೂ.

Baboón ಬಬೂನ್ (ನಾ.) ಆಫ್ರಿಕದ ಮತ್ತು ದ. ಏಷ್ಯದ ಒಂದು ಜಾತಿಯ ದೊಡ್ಡ ಕೋತಿ.

Baboúche ಬಬೂಷ್ (ನಾ.) (ಪೌರ್ವಾತ್ಯ) ಪಾಪಾಸು.

Babúl ಬಾಬೂಲ್ (ನಾ.) (ಇಂಡಿಯಾ ಮತ್ತು ಅರೇಬಿಯದಲ್ಲಿಯ) ಗೊಬ್ಬಳಿ ಮರ, ಜಾಲಿಮರ.

Báby ಬೇಬಿ (ನಾ.) ಎಳೆಯ ಮಗು ; ಹಸುಗೂಸು ; ಮಗುವಿನಂತೆ ಆಡು ವವನು. ಯಾವುದಾದರೂ ವಸ್ತುವಿನ ವರ್ಗದಲ್ಲಿ ಕೇವಲ ಸಣ್ಣದು. (Baby car ಸಣ್ಣ ಮೋಟಾರುಬಂಡಿ). (ಅಮೆ. ಸಂ., ಅಸಂ.) ಹುಡುಗಿ ; ನಲ್ಲೆ ; ಪ್ರಿಯೆ. Baby-farmer ಎಳೆಗೂಸುಗಳನ್ನಿಟ್ಟುಕೊಂಡು ಸಂರಕ್ಷಣೆ ಮಾಡಲು ಗೊತ್ತುಮಾಡಿಕೊಳ್ಳುವವನು. **Bábyhood** (ನಾ.) ಬಾಲ್ಯ ; ಶೈಶವ ; ಮಗುತನ ; (ಒಟ್ಟಿನಲ್ಲಿ) ಕೂಸುಗಳು ; ವಿವೇಕ ವಿಲ್ಲದೆ ಕೂಸಿನಂತಾಡುವುದು. **Bábyish** (ಗು.) ; **Bábyishness** (ನಾ.) ; **Bábyism** (ನಾ.)

Bábylon ಬ್ಯಾಬಿಲನ್ (ನಾ.) ಕಾಲ್ಡಿಯನ್ ಸಾಮ್ರಾಜ್ಯದ ರಾಜಧಾನಿ. (ಯಾವುದಾದರೂ) ದೊಡ್ಡ ಸಾಮ್ರಾಜ್ಯ. (ಯಾವುದಾದರೂ) ಪ್ರವರ್ಧ ಮಾನವಾದ, ಭೋಗ್ಯವಸ್ತುಪೂರ್ಣವಾದ, ಅಥವಾ ದುರ್ನೀತಿಯ, ದೊಡ್ಡ ಪಟ್ಟಣ (ರೋಮ್, ಲಂಡನ್, ಮೊ. ವು). ಪೋಪ್‌ಗುರುವಿನ ಅಧಿಕಾರಸ್ಥಾನ. **Babylónian** — ಲೋನಿಯನ್ (ಗು., ನಾ.) ಬ್ಯಾಬಿಲೋನಿನ(ವನು). (ರೂಪ.) (೧) ಅತಿ ವಿಸ್ತಾರವಾದ ; (೨) ಜ್ಯೋತಿಷ್ಕ.

Baccalaúreate ಬ್ಯಾಕಲಾರಿಯೆಟ್ (ನಾ.) ವಿಶ್ವವಿದ್ಯಾನಿಲಯದ ಪ್ರಥಮ ಪದವಿ (B.A.). ಅವಿವಾಹಿತ ; ಬ್ರಹ್ಮಚಾರಿ.

Báccara,-at (F) ಬಕರಾ (ನಾ.) ಎಷ್ಟು ಮಂದಿಯಾದರೂ ಸೇರಿ ದುಡ್ಡಿಟ್ಟು ಆಡಬಹುದಾದ (ಒಂದು ಬಗೆಯ) ಇಸ್ಪೀಟಾಟ.

Báccate ಬ್ಯಾಕೇಟ್ (ಗು.) (ಸ. ವಿ.) ಕಾಯಿಬಿಡುವ ; ಕಾಯಿಯಾಕಾ ರದ. **Baccíferous** ಬ್ಯಾಕಿಫೆರಸ್ (ಗು.) ಕಾಯಿಬಿಡುವ. **Bácciform** ಬ್ಯಾಕ್ಸಿಫಾರ್'ಮ್ (ಗು.) ಕಾಯಿಯಾಕಾರದ. **Baccívorous** ಬ್ಯಾಕ್ಸಿವೊರಸ್ (ಗು.) ಕಾಯಿತಿನ್ನುವ.

Bácchanal ಬ್ಯಾಕನಲ್ (ಗು., ನಾ.) ಬ್ಯಾಕಸ್ ಎಂಬ ಗ್ರೀಕ್ ಮದ್ಯ ದೇವತೆಯ ; ಆ ದೇವತೆಯಂಥ ; ಆ ದೇವತೆಯ ಉಪಾಸನೆಯ. ಮದ್ಯ ಕುಡಿದು ಗಲಾಟೆಮಾಡುವ. (ನಾ.) ಬ್ಯಾಕಸ್ಸಿನ ಅರ್ಚಕ, ಅರ್ಚಕಿ, ಭಕ್ತ ; ಮದ್ಯ ಕುಡಿದು ಮೈಮರೆತು ಮೆರೆಯುವವನು : ಮದಿರೋನ್ಮತ್ತ. ಬ್ಯಾಕಸ್ಸಿನ ಪೂಜಾರೂಪವಾದ ಕುಣಿತ ಅಥವಾ ಗಾಯನ. **Bacchanália** — ನೇಲಿಯ (ನಾ., ಬ. ವ.) ಬ್ಯಾಕಸ್ ದೇವತೆಯ ಹಬ್ಬ ; ಮದ್ಯ ಕುಡಿದು ಮಾಡುವ ಗಲಾಟೆಯ ಉತ್ಸವ ; ಮದ್ಯಕೇಳಿ. **Bacchanálian** (ಗು., ನಾ.) ಬ್ಯಾಕಸ್ ಹಬ್ಬದ ; ಕುಡಿದು ಆಲುವ ; ಗಲಭೆ ಮಾಡುವ. ಬ್ಯಾಕಸ್ಸಿನ ಭಕ್ತ ; ಅತಿ ಕುಡುಕ. **Bácchant** ಬ್ಯಾಕಂಟ್ (ಗು., ನಾ.) ಬ್ಯಾಕಸ್ ಉಪಾಸಕ ; ಮದ್ಯಪ್ರಿಯ. ಬ್ಯಾಕಸ್ಸಿನ ಅರ್ಚಕ, ಅರ್ಚಕಿ, ಉಪಾಸಕ, ಉಪಾಸಿಕೆ. **Bacchánte** ಬಕಾಂಟ್, ಬಕ್ಯಾಂಟಿ, **Bácchante** ಬ್ಯಾಕಂಟ್ (ನಾ., ಸ್ತ್ರೀ) ; **Bacchántic** ಬಕ್ಯಾಂಟಿಕ್ (ಗು.) ; **Bácchic** ಬ್ಯಾಕಿಕ್ (ಗು.) = Bacchanal. **Bácchus** ಬ್ಯಾಕಸ್ (ನಾ.) ಗ್ರೀಕ್ ಮದ್ಯದೇವತೆ ; ಮದ್ಯ.

Baccíferous. Baccate ನೋಡಿ.

Báccy ಬ್ಯಾಕಿ (ನಾ.) (ಬಳ. ಮಾ.) ತಂಬಾಕು ; ಹೊಗೆಯ ಸೊಪ್ಪು. (Tobacco ಎಂಬುದರ ಸಂಕ್ಷಿಪ್ತ ರೂಪ)

Báchelor ಬ್ಯಾಚೆಲರ್ (ನಾ.) ಮದುವೆಯಾಗಿಲ್ಲದವನು ; ಅವಿವಾ ಹಿತ ; ಬ್ರಹ್ಮಚಾರಿ. ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ಪದವಿಯನ್ನು ಪಡೆದವನು (ವಳು). (ಚರಿತ್ರೆ) ಮತ್ತೊಬ್ಬ ವೀರನ ಆಶ್ರಯದಲ್ಲಿರುವ ವೀರಯುವಕ. Knight Bachelor ಯಾವ ವಿಶೇಷ ಸಂಸ್ಥೆಗೂ ಸೇರಿರದ ಸಾಮಾನ್ಯ ವೀರ. Bachelor girl ಮದುವೆಯಾಗದೆ ಸ್ವತಂತ್ರ ಜೀವನ ಮಾಡಿಕೊಂಡಿರುವ ಕನ್ಯೆ. **Báchelorhood** (ನಾ.) — ಗುಣ ಅಥವಾ ಸ್ಥಿತಿ. **Báchelorship** (ನಾ.) ಅವಿವಾಹಿತ ಸ್ಥಿತಿ ; ವಿಶ್ವವಿದ್ಯಾನಿಲಯದ ಪ್ರಥಮ ಪದವೀಧರನ ಸ್ಥಾನ ಮಾನ. **Báchelorism** (ನಾ.) — ವೈಶಿಷ್ಟ್ಯ.

Bacíllus (L) ಬಸಿಲಸ್ (ನಾ. ; ಬ. ವ. — illi, — ಲೈ) (ಜೀ. ವಿ.) ಕ್ಷಯರೋಗ, ಮೊ. ವ್ಯಾಧಿಗಳಲ್ಲಿ ರೋಗಗ್ರಸ್ತ ಅಂಗಾಂಶಗಳಲ್ಲಿ ದೊರೆಯುವ ದಂಡಾಕಾರದ, ಸೂಕ್ಷ್ಮದರ್ಶಕ ಗೋಚರವಾದ, ಸಸ್ಯ ವರ್ಗದ ಅಣುಜೀವಿ : ದಂಡಾಣುಜೀವಿ. **Bácillary** ಬ್ಯಾಸಿಲರಿ (ಗು.) ಸೂಕ್ಷ್ಮದಂಡಾಕಾರದ ; (ರೋಗ, ಸಂಶೋಧನೆ — ಇವುಗಳಲ್ಲಿ) ದಂಡಾಣುಜೀವಿ ಸಂಬಂಧವಾದ. **Bacílliform** ಬಸಿಲಿಫಾರ್'ಮ್ (ಗು.) ದಂಡಾಕಾರದ.

Back[1] ಬ್ಯಾಕ್ (ನಾ., ಗು.) ಬೆನ್ನು ; ಹಿಂಭಾಗ ; ಹಿಂದೆ ; ಹಿಂದುಗಡೆ. ಬೆನ್ನಿನ ; ಹಿಂದಿನ ; ಹಿಂಭಾಗದ (B. slums ಹಿಂಭಾಗದ ಕೊಳಕು ಗಲ್ಲಿಗಳು). ಪೂರ್ವದ ; ದೂರದ (B. settlement ದೂರದ ವಸತಿ). ಹೀನ ; ಅಪ್ರಸಿದ್ಧ (Take a b. seat ಹಿಂದೆ ಕೂಡು, ಹಿಂದಕ್ಕೆ ಸರಿದಿರು). ಹಿಂದಿರುಗಿದ ; ಹಿಮ್ಮರಳಿದ (B. smoke ಹಿಂದಿರುಗಿದ ಹೊಗೆ. B. current ಹಿಮ್ಮರಳಿದ ಪ್ರವಾಹ). At the b. of ಬೆಂಬಲವಾಗಿ ; ಬೆನ್ನ ಹಿಂದೆ ; ಬೆನ್ನಟ್ಟಿ ; ಮರೆಯಲ್ಲಿ. B. and belly ಹೊಟ್ಟೆ ಬಟ್ಟೆ ; ಅನ್ನ ವಸ್ತ್ರ. Behind one's b. ಬೆನ್ನ ಹಿಂದೆ ; ಮರೆ ಯಾಗಿ ; ಪರೋಕ್ಷದಲ್ಲಿ. Break one's b. ಬೆನ್ನು ಮುರಿಯುವಂತೆ ಹೊರೆ ಹೇರು. Full b., three-quarter b., half b. (ಕಾಲ್ಚೆಂಡಾಟದಲ್ಲಿ) ಪೂರಾ ಹಿಂದೆ, ಮುಕ್ಕಾಲು ಹಿಂದೆ, ಅರ್ಧ ಹಿಂದೆ, ನಿಲ್ಲಿಸಲ್ಪಟ್ಟಿರುವವರು. Give or make a b. ಕಪ್ಪೆಕುಪ್ಪಳು ಆಟದಲ್ಲಿ ಬೆನ್ನು ಬಗ್ಗಿಸು. Have on one's b. ಭಾರ ಹೊತ್ತಿರು. On one's b. ಮಲಗಿ. On the b. of ಇದರ ಜೊತೆಗೆ ; ಮತ್ತೂ. Put, get, set, a person's b. up ರೇಗಿಸು. Turn one's b. upon ಬೆಂಗೊಡು ; ಬಿಟ್ಟೋಡು ; ಪರಾಙ್ಮುಖನಾಗು. With one's b. to the wall ಇಕ್ಕಟ್ಟಿನಲ್ಲಿ ಸಿಕ್ಕಿ ; ಹಿಮ್ಮೆಟ್ಟದೆ ನಿಂತು. **Báckband** ಬೆನ್ನು ಪಟ್ಟಿ. **B.-bench** (ಪ್ರಜಾಪ್ರತಿನಿಧಿ ಸಭೆ, ಮೊ. ಗಳಲ್ಲಿ ಮುಂದಿನ ಸಾಲಿಗೆ ಹಕ್ಕಿಲ್ಲದವರು ಕೂಡುವ) ಹಿಂದಿನ ಸಾಲು. **B.-bencher** ಹಿಂದಿನ ಸಾಲಿನವ ; ಅಪ್ರಮುಖ. **B.-blocks** (ಆಸ್ಟ್ರೇಲಿಯದಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೂರವಾದ, ಜನ ಕಡಮೆಯಾಗಿರುವ ಒಳಪ್ರಾಂತಗಳಲ್ಲಿಯ ಜಮೀನು. **Báckboard** ಬೆನ್ನುಹಲಗೆ. **Báckbóne** ಬೆನ್ನೆಲುಬು; ಬೆನ್ನು ಮೂಳೆ. ಮೂಲಾಧಾರ; ಮಧ್ಯ ಸೂತ್ರ. ಮುಖ್ಯ ಬಲ. ಸ್ಥೈರ್ಯ; ದೃಢ ವರ್ತನೆ. ಪಕ್ಕ ಪಕ್ಕದಲ್ಲಿರುವ ಎರಡು ಜಲಾಶಯಗಳ ಕಡೆಗೆ ಪ್ರತ್ಯೇಕ ಪ್ರತ್ಯೇಕವಾಗಿ ನೀರುಹರಿಯುವ ಪ್ರದೇಶಗಳ ಎಲ್ಲೆ: ಜಲವಿಭಾಗ ಸ್ಥಾನ. (To the backbone ಸಂಪೂರ್ಣವಾಗಿ. **Báckboned** ಬೆನ್ನೆಲುಬುಳ್ಳ. **Báckboneless** ಸ್ಥೈರ್ಯವಿಲ್ಲದ). **B.-chat** (ಅಸಂ.) ಬದಲುಹೇಳುವುದು; ಮರುಮಾತು; ಬೈಗುಳು. **B.-cloth** (ನಾಟಕ ರಂಗದ) ಹಿಂದುಗಡೆಯ ಚಿತ್ರಪರದೆ. **Báckdoor** (ನಾ., ಗು.) ಹಿಂಬಾಗಿಲು; ಹಿತ್ತಿಲ ಬಾಗಿಲು; ಕಳ್ಳ ದಾರಿ; ಗುಪ್ತ ಮಾರ್ಗ (ರೂಪ. ಸಹ). ಅವಿಹಿತವಾಗಿ ಗುಟ್ಟಿನಲ್ಲಿ ಮಾಡಿದ; ಮೋಸ ದಿಂದಾದ. **Báckfall** ಕುಸ್ತಿಯಲ್ಲಿ ಬೆನ್ನು ನೆಲಕ್ಕೆ ಬೀಳುವುದು; ಚಿತ್ತು; ಪೀಟು. **B.-fire** (ನಾ., ಕ್ರಿ.) ಅಂತರ್ದಾಹಕ ಚಾಲನ ಯಂತ್ರದಲ್ಲಿಯ ಸಿಲಿಂಡರಿನಲ್ಲಿ ಜ್ವಲನಾನಿಲವು ನಿರ್ದಿಷ್ಟ ಕಾಲಕ್ಕೆ ಮೊದಲೇ ಹೊತ್ತಿಕೊಳ್ಳುವುದು; ಮುನ್ ಸಿಡಿತ. ಮುನ್ ಸಿಡಿ. **B. formation** ಅಸಂಭವವಾದ ಊಹಿತಮೂಲರೂಪದ ನಿರ್ಮಾಣ [ಉದಾ. — Lazy ಮತ್ತು Banting ಪದಗಳಿಂದ Laze ಮತ್ತು Bant ಎಂಬ ಇಲ್ಲದಿದ್ದ ಪದಗಳನ್ನು ನಿರ್ಮಿಸುವುದು. (ಕನ್ನಡದಲ್ಲಿ 'ಕಳ್' ಧಾತುವಿನಿಂದಾದ 'ಕದ್ದ' ಎಂಬ ರೂಪದಿಂದ 'ಕದಿ' ಎಂಬ ಹೊಸ ಧಾತುವಾಗಿರುವಂತೆ)]. **Báckground** ಮುಂದುಗಡೆ ಇರುವ ಮುಖ್ಯ ವ್ಯಕ್ತಿಗಳಿಗೆ ಅಥವಾ ವಸ್ತುಗಳಿಗೆ ಪ್ರಾಧಾನ್ಯ ಕೊಡುವಂಥ ದೃಶ್ಯ, ಚಿತ್ರ ಅಥವಾ ವರ್ಣನೆ; ಹಿನ್ನೆಲೆ; ಭಿತ್ತಿ. ಮರೆ; ಅಪ್ರಸಿದ್ಧಿ. **Báckhand(ed)** ಹಿಂಗಯ್ಯ; ರೂಢಿಗೆ ವ್ಯತಿರಿಕ್ತವಾದ; ಋಜು ವಲ್ಲದ; ಅನಿರೀಕ್ಷಿತ. **Báckhander** ಹಿಂಗಯ್ಯ ಏಟು; ಮುಂದೆ ಬರದೆ ವಕ್ರಗತಿಯಿಂದ ಮೇಲೆಬೀಳುವುದು. **Báckmost** ಅತ್ಯಂತ ಹಿಂದೆ. **B. number** ಹಿಂದಿನ ಸಂಚಿಕೆ; ಹಿಂದೆಬಿದ್ದವನು, ಹಳತಾಗಿ ಹೋದದ್ದು. (ಅಸಂ.) ಕಾಲಕ್ಕೆ ತಗದ ನಡೆವಳಿ ಅಥವಾ ಮನುಷ್ಯ. **Báckset** ಪ್ರತಿಬಂಧಕ; ತಡೆ; ಪ್ರತಿಪ್ರವಾಹ. **Báckside** ಹಿಂದುಗಡೆ; ಬೆನ್ನುಕಡೆ; ಬೆನ್ನು; ಹಿಂಭಾಗ; ಹಿತ್ತಿಲು; ಪಾಯಖಾನೆ. **Báckstair** (ಗು.) (=Backdoor). **Báckstairs** (ನಾ; ಗು.) ಮನೆಯ ಹಿಂಭಾಗದ ಮೆಟ್ಟಲು; ಉಪ ಸೋಪಾನ; ಅಂತಸ್ಸೋಪಾನ (ರೂಪ. ಸಹ). (ರಾಜಾಸ್ಥಾನದಲ್ಲಿ) ಒಳಸಂಚಿನ; ಗುಪ್ತ. **Báckstay** ಬೆನ್ನಿಗೆ ಆಧಾರ; ಬೆನ್ನುಪಟ್ಟಿ. **Báckstays** ಹಡಗಿನ ಧ್ವಜಸ್ತಂಭದ ಮೇಲಿನಿಂದ ಓಲಿಕೊಂಡು ಅದರ ತಳಗಡೆಗೆ ಕಟ್ಟಿರುವ ಹಗ್ಗಗಳು. **Báckstroke** ಹಿಂದಿರುಗಿಸಿದ ಅಥವಾ ಹಿಂದು ಗಡೆಯ ಹೊಡೆತ. **Báck-sword** ಒಂದೇಣಿನ ಕತ್ತಿ. **Báckwash** ಹಿಂದಕ್ಕೆ ಸಾಗುವ ಅಲೆಯ ಚಲನೆ; ಮರಳ್ದರೆ; ಹಿಂದಕ್ಕೆ ಸಾರುವ ಪ್ರವಾಹ (ರೂಪ. ಸಹ). **Báckwater** ಕಟ್ಟೆಹಾಕಿ ಹಿಂದೆ ನಿಲ್ಲಿಸಿದ ನೀರು; ಹೊಳೆಯ ಪಕ್ಕದಲ್ಲಿಯ ನಿಂತ ನೀರು; ಹಿಮ್ಮರಳಿದ ನೀರು; ಸಮುದ್ರದಿಂದ ಬೇರ್ಪಟ್ಟು, ಮಧ್ಯೆ ಕಿರಿದಾದ ಭೂಪ್ರದೇಶವಿದ್ದು, ಸಮುದ್ರದೊಡನೆ ಸಂಸರ್ಗವಾಗಬಹುದಾದ ಸಮುದ್ರಭಾಗ; (ಸಮುದ್ರದ) ಹಿನ್ನೀರು. ಯಾವ ಚಟುವಟಿಕೆಯೂ ಇಲ್ಲದೆ ನಿಂತಂತೆ ಇರುವ ಸ್ಥಿತಿ; ಜಡತೆ. **Báckwáy** ಅಡ್ಡದಾರಿ (ರೂಪ. ಸಹ). **Báckwoóds** ದೂರದ ಕಗ್ಗಾಡುಪ್ರದೇಶ.

Back (ಕ್ರಿ.) ಹಿಂದಿಡು; ಹಿಂದಕ್ಕೆ ಬಗ್ಗಿಸು; ಹಿಂದಕ್ಕೆ ನಡೆಯಿಸು; ಹಿಂದುವರಿಸು [B. a car ಬಂಡಿಯನ್ನು ಹಿಂದುವರಿಸು. B. down ಕೆಳಗಿಳಿ (ರೂಪ. ಸಹ). B. out ಹಿಮ್ಮೆಟ್ಟು (ರೂಪ. ಸಹ)]. ಬೆನ್ನುಪಟ್ಟಿ ಹಾಕು (B. a book ಪುಸ್ತಕಕ್ಕೆ ಬೆನ್ನುಕಟ್ಟು). (ಬೆನ್ನಿನಂತೆ) ಹಿಂದಿರು (The chalk cliffs b. the beach ಸುಣ್ಣದ ಕೋಡು ಗಲ್ಲುಗಳು ಸಮುದ್ರದ ಕರೆಗೆ ಬೆನ್ನಿನಹಾಗಿವೆ). ಹಿನ್ನೆಲೆಯಾಗಿರು; ಆಶ್ರಯ, ಆಧಾರ, ಕೊಡು; ಬೆಂಬಲವಾಗಿರು; ಪಕ್ಷ ವಹಿಸು (B. a rope ಒಂದು ಹಗ್ಗಕ್ಕೆ ಮತ್ತೊಂದನ್ನು ಆಶ್ರಯಕೊಡು. B. a horse ಕುದುರೆಯ ಜೂಜಿನಲ್ಲಿ ಒಂದು ಗೊತ್ತಾದ ಕುದುರೆಯ ಮೇಲೆ ಪಂದ್ಯ ಕಟ್ಟು. B. up ಬೆಂಬಲ ಕೊಡು). (ಬೇಟೆನಾಯಿಯ ವಿಷಯದಲ್ಲಿ) ನೆಲೆದೋರಿಸುವ ನಾಯಿಯನ್ನು ಬೆಂಬತ್ತಿಹೋಗು. (ಹುಂಡಿ ಮೊ. ಗಳ ವಿಷಯದಲ್ಲಿ) ಹಿಂಭಾಗದಲ್ಲಿ ಬರೆ. (ಪುಸ್ತಕ ಮೊ. ಗಳ) ಬೆನ್ನ ಮೇಲೆ ಮುದ್ರಿಸು. (ಕುದುರೆ ಮೊ. ನ್ನು) ಹತ್ತು; ಸವಾರಿ ಮಾಡು.

Back (ಕ್ರಿ. ವಿ.) ಹಿಂದಕ್ಕೆ; ಹಿಂದುಗಡೆಗೆ (Force b. that bolt ಆ ಅಗುಳಿಯನ್ನು ಹಿಂದಕ್ಕೆ ತಳ್ಳು. Go b. upon one's word ವಾಗ್ದಾನ ದಿಂದ ಹಿಮ್ಮೆಟ್ಟು; ಮಾತಿಗೆ ತಪ್ಪು. B. to the days of Solomon ಸಾಲೊಮನ್ನಿನ ಕಾಲದಷ್ಟು ಹಿಂದಕ್ಕೆ). ಪ್ರತಿಯಾಗಿ (Answer b. ಪ್ರತಿಹೇಳು; ಪ್ರತಿಯಾಗಿ ಕೊಡು. Pay b. ಹಿಂದಕ್ಕೆ ಸಲ್ಲಿಸು; ಹಿಂದಿರು ಗಿಸು). ಹಿಂದೆ; ದೂರದಲ್ಲಿ (B. from the road ರಸ್ತೆಗೆ ದೂರದಲ್ಲಿ). ಬಿಗಿಹಿಡಿದು; ತಡೆದು (He has been kept b. from promotion ಮುಂದಕ್ಕೆ ಏರಿಸದೆ ಅವನನ್ನು ತಡೆದಿದ್ದಾರೆ). Back and forth ಹಿಂದಕ್ಕೆ ಮುಂದಕ್ಕೆ. **Báckbite** ಹಿಂದೆ ದೂರು; ಚಾಡಿ ಹೇಳು. **Báckbiter** ಚಾಡಿಕೋರ; ಪಿಸುಣ. **Bácklash(ing)** ಯಂತ್ರದ ಚಕ್ರಗಳು ಥಟ್ಟನೆ ಉಂಟಾದ ತಡೆಯಿಂದ, ಅಥವಾ ಇತರ ನ್ಯೂನತೆ ಯಿಂದ, ಹಿಂದಕ್ಕೆ ಚಲಿಸುವುದು; ಹಿಂಚಲನೆ. **Báckpedal** (ಯಂತ್ರದ ಕಾಲೊತ್ತನ್ನು) ಹಿಂದಕ್ಕೆ ತುಳಿ. **Báckslide** (ಕ್ರಿ. ಅಕ.) ಪಾಪಕ್ಕೆ ಮತ್ತೆ ಬೀಳು. **Backslíder** (ನಾ.); **Backslíding** (ನಾ.); **Báckstitch** (ನಾ., ಕ್ರಿ.) ಒತ್ತುಹೊಲಿಗೆ (ಹಾಕು)

Bácking (ನಾ.) (ಕ್ರಿಯಾರ್ಥಗಳಲ್ಲಿ). ಬೆಂಬಲ. ಒಂದು ವಸ್ತು ವಿನ ಬೆನ್ನಿಗಾಗಲಿ ಅದರ ಆಧಾರಕ್ಕಾಗಲಿ ಉಪಯೋಗಿಸುವ ಪದಾರ್ಥ; ಆಧಾರ. **Báckward** (ಗು., ಕ್ರಿ. ವಿ.) ಹಿಂದಿರುಗಿದ; ಹಿಮ್ಮುಖನಾದ; ವಿಮುಖ; ಮನಸ್ಸಿಲ್ಲದ; ಮುಖಹೇಡಿಯಾದ; ಹಿಂದೆ ಬಿದ್ದ; ಮಂದ ಬುದ್ಧಿಯ. Backward and forward ಹಿಂದಕ್ಕೆ ಮುಂದಕ್ಕೆ (ರೂಪ. ಸಹ). **Báckwardness** (ನಾ.); **Báckwards** (ಕ್ರಿ. ವಿ.) ಹಿಂದೆ; ಹಿಂದಕ್ಕೆ; ಹಿಂದುಗಡೆಗೆ; ಹಿಂದುಮುಂದಾಗಿ; ಹೀನ ಸ್ಥಿತಿಗೆ; ಹಿಂದಿನ ಕಾಲಕ್ಕೆ. **Backwardátion** (ನಾ.) (ಪತ್ರ ವ್ಯಾಪಾರದಲ್ಲಿ) ಅಡಮಾನ ಸಾಲಪತ್ರಗಳನ್ನೂ ಬಂಡವಾಳದ ಪತ್ರ ಗಳನ್ನೂ ಮಾರುವವನು ಅವನ್ನು ಕೊಳ್ಳುವವನ ವಶಮಾಡುವುದಕ್ಕೆ ಕಾಲಾವಧಿಯನ್ನು ಪಡೆಯುವ ರಿಯಾಯತಿಗಾಗಿ ಕೊಡುವ ವಟ್ಟ (ಪರಿಹಾರದ್ರವ್ಯ): ತಡವು ವಟ್ಟ.

Back[2] ಬ್ಯಾಕ್ (ನಾ.) (ಮದ್ಯವನ್ನು ತಯಾರುಮಾಡುವುದರಲ್ಲಿಯೂ ಬಣ್ಣ ಹಾಕುವುದರಲ್ಲಿಯೂ, ಇಂಥ ಇತರ ಕೆಲಸಗಳಲ್ಲಿಯೂ ಉಪಯೋಗಿಸುವ) ಆಳವಿಲ್ಲದ ದೊಡ್ಡ ತೊಟ್ಟಿ. **Bácket** ಬ್ಯಾಕೆಟ್ (ನಾ.) ಆಳವಿಲ್ಲದ ಮರದ ತೊಟ್ಟಿ.

Backgámmon ಬ್ಯಾಕ್‌ಗ್ಯಾಮನ್ (ನಾ.) ಜೊತೆಗೂಡಿಸಿದ ಎರಡು ಹಾಸುಮಣೆಗಳ ಮೇಲೆ ಕಾಯಿಗಳನ್ನಿಟ್ಟುಕೊಂಡು ದಾಳಗಳಿಂದ ಇಬ್ಬರು ಆಡುವ ಅದೃಷ್ಟದ ಆಟ; ಈ ಆಟದಲ್ಲಿ ಸಂಪೂರ್ಣ ಜಯ.

Bácon ಬೇಕನ್ (ನಾ.) ಉಪ್ಪುಹಾಕಿ (ಹೊಗೆಯಲ್ಲಿ) ಒಣಗಿಸಿದ ಹಂದಿಯ ಮಾಂಸ. Save one's b. ಸಾವಿನಿಂದಲೊ ಅಪಾಯದಿಂದಲೊ ತಪ್ಪಿಸಿಕೊ. **Bácony** ಬೇಕನಿ (ಗು.) ಹಂದಿಯ ಮಾಂಸದಂತಿರುವ (ಮು., Bacony liver ಯಕೃತ್ತಿನ ಕೊಬ್ಬುಗೂಡಿದ ರೋಗ)

Bacónian ಬೇಕೋನಿಯನ್ (ಗು., ನಾ.) ಫ್ರಾನ್ಸಿಸ್ ಬೇಕನ್ ಎಂಬ ತತ್ತ್ವಜ್ಞನ, ಅಥವಾ ಆತನ ತತ್ತ್ವದ (B. method ತರ್ಕದಲ್ಲಿ ಅನು ಮಾನಿಕ ಪದ್ಧತಿ). ಬೇಕನ್ನಿನ ಮತದವನು. ಷೇಕ್ಸ್‌ಪಿಯರ್ ನಾಟಕ ಗಳನ್ನು ರಚಿಸಿದವನು ಬೇಕನ್ ಎಂದು ನಂಬುವವನು.

Bactérium ಬ್ಯಾಕ್ಟೀರಿಯಂ (ನಾ.; ಬ. ವ. — ria, — ರಿಯ) ಕೊಳೆ ಯುವ ಸಸ್ಯಜನ್ಯ ಅಥವಾ ಪ್ರಾಣಿಜನ್ಯ ದ್ರವಗಳಲ್ಲಿ ಉತ್ಪತ್ತಿಯಾಗಿ, ರೋಗಜನಕವೂ ಜೀವಿಸಹಾಯಕವೂ ಆಗಿ ಸೂಕ್ಷ್ಮದರ್ಶಕೀಯವೂ ವಿವಿಧಾಕಾರವೂ ಆದ ಏಕಾಣುಜೀವಿಗಳ ಜಾತಿಯಲ್ಲಿ ಒಂದು:

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏಕಾಣುಜೀವಿ. **Bactérial** (ಗು.) ; **Bactericídal** — ಸೈಡಲ್ (ಗು.) ಏಕಾಣುಜೀವಿ ನಾಶಕ. **Bacteriólogy** —ಯಾಲೊಜಿ (ನಾ.) ಏಕಾಣುಜೀವಿ ಶಾಸ್ತ್ರ. **Bacteriólogist** (ನಾ.) ; **Bacteriólysis** — ಯಾಲಿಸಿಸ್ (ನಾ.) ದ್ರವರೂಪದಲ್ಲಿರುವ ಮಲವನ್ನು ಈ ಏಕಾಣು ಜೀವಿಗಳ ಮೂಲಕ ದ್ರವೀಕರಣ ಮಾಡುವುದು. ಒಂದು ಸೀರಮ್ಮಿನ (ಎಂದರೆ, ಸಂಸ್ಕಾರಿತ ರಕ್ತದ್ರವದ) ಮೂಲಕ ಏಕಾಣುಜೀವಿಗಳನ್ನು ನಾಶಗೊಳಿಸುವುದು. **Bacteriolýtic** — ಯೊಲಿಟಿಕ್ (ಗು.) ಏಕಾಣುಜೀವಿ ನಾಶಕ.

Báculine ಬ್ಯಾಕ್ಯುಲೈನ್ (ಗು.) ಬೆತ್ತದ (ಚೆಡಿಯ) ಏಟಿನ (ಮು., B. argument ದೊಣ್ಣೆಯ ನ್ಯಾಯ)

Bad ಬ್ಯಾಡ್ (ಗು.) ಕೆಟ್ಟ ; ಕೆಡುಕಾದ ; ದುಷ್ಟ ; ಅಪ್ರಯೋಜಕ ; ಚೆನ್ನಾಗಿಲ್ಲದ ; ಹೀನ ; ನೀಚ ; ಕೀಳು ; ಊನ ; ಕುತ್ಸಿತ ; ಅಸಾರ ; ಅಸಾಧು ; ಅಹಿತ ; ಅಸ್ವಸ್ಥ ; ಹೊಲ್ಲ ; ಗುಣ ರಹಿತ ; ನಿಷಿದ್ಧ ; ನೋವು ಕೊಡುವ. B. air ಮಲಿನ ವಾಯು. B. blood ಮನಸ್ತಾಪ ; ವೈಮನಸ್ಯ. B. coin ಸಲ್ಲದ (ಹಿಡಿಯದ) ನಾಣ್ಯ. B. debt ಹಿಂದಕ್ಕೆ ಬಾರದ ಸಾಲ ; ಸತ್ತ ಸಾಲ ; ಕರಡು ಸಾಲ. B. egg, B. hat (ಅಸಂ.) ದುರ್ನಡತೆಯವನು ; ಪೋಲಿ ; ಪೋಕರಿ. B. food ದೇಹಪೋಷಕವಲ್ಲದ ಆಹಾರ. B. for ಬಾಧಕ ; ಹಾನಿಕರ. B. form ಅಸಭ್ಯತೆ ; ಅವಿನಯ. B. headache ಅತಿಯಾದ ತಲೆನೋವು. B. lands ಬಂಜರು ಭೂಮಿ ; ಬೀಳು ನೆಲ ; ಪಾಳು ಭೂಮಿ. B. law ಊರ್ಜಿತವಾಗದ ನ್ಯಾಯ. B. leg ನೋಯುವ ಕಾಲು. B. shot ತಪ್ಪುಊಹೆ. Go b. ಕೆಟ್ಟುಹೋಗು. In a b. sense ಕೆಟ್ಟರ್ಥದಲ್ಲಿ ; ಪ್ರತಿಕೂಲವಾಗಿ. She is b. to-day ಆಕೆಯ ಸ್ಥಿತಿ ಈ ದಿನ ಸರಿಯಾಗಿಲ್ಲ. With b. grace ಮನಸ್ಸಿಲ್ಲದೆ ; ಅಸಮಾಧಾನದಿಂದ. **Báddish** (ಗು.) ಸಾಮಾನ್ಯವಾಗಿ ಕೇಡಾಗಿಯೇ ಇರುವ. **Bádly** (ಕ್ರಿ. ವಿ.) ತಪ್ಪಾಗಿ ; ಅತೃಪ್ತಿಕರವಾಗಿ ; ಕೆಡುಕಾಗಿ ; ನೀಚವಾಗಿ ; ನಿಕೃಷ್ಟವಾಗಿ ; ಕ್ರೂರವಾಗಿ ; ಅಪಾಯಕರವಾಗಿ. He was beaten badly ಅವನಿಗೆ ಹೆಚ್ಚಾಗಿ ಪೆಟ್ಟುಬಿದ್ದಿತು, ಪೂರ್ತಿ ಸೋಲಾಯಿತು. I want that badly ಅದು ನನಗೆ ಆವಶ್ಯಕವಾಗಿ ಬೇಕು. **Bádness** (ನಾ.)

Bad (ನಾ.) ಕೇಡು ; ನಷ್ಟ ; ನಾಶ. Go to the b. ಹಾಳಾಗಿ (ನಾಶವಾಗಿ) ಹೋಗು. Take the b. with the good ಒಳ್ಳೆಯದನ್ನೂ ಕೆಟ್ಟದ್ದನ್ನೂ (ಸುಖ ದುಃಖಗಳನ್ನು) ಒಟ್ಟಿಗೆ ತೆಗೆದುಕೊ. A thousand rupees to the b. ಲೆಕ್ಕದಲ್ಲಿ ಸಾವಿರ ರೂಪಾಯಿ ನಷ್ಟದ ಕಡೆಗೆ.

Bade. Bid ಧಾತುವಿನ ಭೂತ ರೂಪ.

Badge ಬ್ಯಾಜ್ (ನಾ.) ಲಾಂಛನ ; ಚಿಹ್ನೆ ; ಮುದ್ರೆ ; ಗುರುತು ; ಲಕ್ಷಣ ; ಬಿಲ್ಲೆ. ಒಂದು ಅಧಿಕಾರದ, ಉದ್ಯೋಗದ, ಅಥವಾ ಸಂಸ್ಥೆಯ, ಗುರುತಾಗಿ ಧರಿಸುವ ಲಾಂಛನ. ಗುಣವನ್ನಾಗಲಿ ಸ್ಥಿತಿಯನ್ನಾಗಲಿ ಸೂಚಿಸುವ ಚಿಹ್ನೆ.

Bádger[1] ಬ್ಯಾಜರ್ (ನಾ.) ಸಾಮಾನುಗಳನ್ನು ಒಟ್ಟಿಗೆ ಕೊಂಡುಕೊಂಡು ಚಿಲ್ಲರೆಯಾಗಿ ಊರೂರಲ್ಲಿ, ಕೇರಿಕೇರಿಯಲ್ಲಿ, ಮಾರುವವನು : ಬೀದಿವ್ಯಾಪಾರಿ.

Bádger[2] ಬ್ಯಾಜರ್ (ನಾ., ಕ್ರಿ. ಸಕ.) ಕರಡಿಯ ಜಾತಿಗೆ ಸೇರಿದ, ಬಲವಾದ ದವಡೆಗಳುಳ್ಳ, ಬೂದುಬಣ್ಣದ, ಬಿಲವಾಸಿಯಾದ, ರಾತ್ರಿಸಂಚಾರದ, ಚಳಿಗಾಲದಲ್ಲಿ ದೀರ್ಘನಿದ್ರೆ ಮಾಡುವ, ಹಿಮ್ಮಡಿ ನಡಗೆಯ, ಒಂದು ಚತುಷ್ಪಾದಿ. (B.-legged ಅಸಮವಾದ ಕಾಲುಗಳುಳ್ಳ). ಈ ಮೃಗದ ಕೂದಲಿನಿಂದ ಮಾಡಿದ ಕೂರ್ಚ, ಕೃತಕ ನೊಣ. (ಕ್ರಿ.) ಬ್ಯಾಜರ್ ಮೃಗದಂತೆ ಹಿಂಸಿಸು, ಪೀಡಿಸು, ಕಾಡು.

Badígeon ಬಡಿಜನ್ (ನಾ.) ಕಲ್ಲುಗೆಲಸ, ಮರಗೆಲಸ, ಮೊ. ನ್ನು ಮಾಡುವವರು ಕೆಲಸದಲ್ಲಿಯ ಹುಳುಕು ಮುಚ್ಚುವುದಕ್ಕಾಗಿ ಉಪಯೋಗಿಸುವ ಲೆಪ್ಪ : ಕಲ್ಲುಲೆಪ್ಪ, ಮರಲೆಪ್ಪ.

Badináge ಬಾಡಿನಾಜ್, **Bádinage** ಬ್ಯಾಡಿನೆಜ್ (ನಾ.) ಪರಿಹಾಸ್ಯ ; ವಿನೋದ ; ತಮಾಷೆ.

Badmásh, Bud-, ಬಡ್ಮಾಷ್ (ನಾ.) ಪಟಿಂಗ ; ಬದ್ಮಾಷ್.

Bádminton ಬ್ಯಾಡ್ಮಿಂಟನ್ (ನಾ.) ಬಲೆಕಟ್ಟಿಕೊಂಡು ಹಗುರವಾದ ಚೆಂಡನ್ನು ದಾಂಡಿನಿಂದ ಹೊಡೆಯುವ ಆಟ ; ಬ್ಯಾಡ್ಮಿಂಟನ್ ಆಟ. ಬಿಸಿಲುಕಾಲದಲ್ಲಿ ಕುಡಿಯುವ ಒಂದು ಪಾನವಿಶೇಷ.

Baédeker ಬೇಡೆಕರ್ (ನಾ.) ದೇಶಸಂಚಾರಕರು ನೋಡತಕ್ಕ ಸ್ಥಳ ಮೊ. ವಿವರಣೆಗಳನ್ನು ತಿಳಿಸುವ ಕೈಪಿಡಿ : ದೇಶ ಸಂಚಾರಿಯ ಕೈಪಿಡಿ. (ಇದನ್ನು ಮೊದಲು ರಚಿಸಿದ Karl Baedeker ಎಂಬಾತನ ಹೆಸರಿನಿಂದ)

Báel ಬೇಲ್ (ನಾ.) ಬಿಲ್ವಪತ್ರೆಯ ಮರ.

Báffle ಬ್ಯಾಫ್ಲ್ (ಕ್ರಿ.) ಭಗ್ನಮಾಡು ; ಸಾಗದಂತೆ ಮಾಡು ; ವ್ಯರ್ಥ ಮಾಡು ; ದಿಗ್ಭ್ರಮೆಹಿಡಿಸು ; ಕಕ್ಕಾಬಿಕ್ಕಿ ಮಾಡು. (ಮನುಷ್ಯನನ್ನು, ಕುತೂಹಲವನ್ನು, ಶಕ್ತಿವಿಶೇಷವನ್ನು, ಪ್ರಯತ್ನವನ್ನು, ಹಡಗನ್ನು) ಮುಂದುವರಿಸದೆ ತಡೆ. ಸಾರ್ಥಕ್ಯವಿಲ್ಲದೆ ಒದ್ದಾಡು. Baffling winds ನೇರವಾದ ಮಾರ್ಗವನ್ನು ಹಿಡಿಯಲು ಸಾಧ್ಯವಾಗದಂತೆ ದಿಕ್ಕು ಬದಲಾಯಿಸಿ ಬೀಸುವ ಗಾಳಿ. **Báffle, Báffle-plate, Báffler** (ನಾ.) ಹೊರಕ್ಕಾಗಲಿ ಒಳಕ್ಕಾಗಲಿ ನೀರುಹರಿಯುವುದನ್ನು ತಡೆಯುವ, ಅಥವಾ ತಕ್ಕಂತೆ ವ್ಯವಸ್ಥೆಮಾಡುವ, ತಗಡು ಅಥವಾ ತಡೆ : ಗತಿ ನಿಯಂತ್ರಕ.

Baft ಬಾಫ್ಟ್ (ನಾ.) (ಆಫ್ರಿಕಾಕ್ಕೆ ರಫ್ತುಮಾಡುವುದಕ್ಕಾಗಿ) ಸಾ., ನೂಲಿನಿಂದ ನೆಯ್ದ ಅಗ್ಗವಾದ ಒರಟುಬಟ್ಟೆ.

Bag ಬ್ಯಾಗ್ (ನಾ.) ಚೀಲ ; ಸಂಚಿ ; ದುಡ್ಡಿನ ಚೀಲ ; ಶಿಕಾರಿಯ ಚೀಲ. ಕೆಚ್ಚಲು. Mail-b. ಅಂಚೆಯ ಚೀಲ. Money-b. ಹಣದ ಚೀಲ. Travelling-b. ಪ್ರಯಾಣದ ಚೀಲ. B. and baggage ಗಂಟು ಮೂಟೆ ಯೊಡನೆ. B. of bones ಬರಿಯ ಎಮಕೆ ; ನರಪೇತ ; ಕಡಿರುಕಡ್ಡಿ. Whole b. of tricks ಎಲ್ಲಾಉಪಾಯಗಳೂ. In bottom of b. ಕಡೆಯ ಆಧಾರವಾಗಿ. Give (one) the b. to hold ತಪ್ಪಿಸಿಕೊಂಡು ಹೋಗುತ್ತಿರುವವನನ್ನು ಉಪಾಯಾಂತರದಿಂದ ನಿಲ್ಲಿಸಿಕೊ ; ಸಹಾಯ ದೊರೆಯದೆ ದಿಕ್ಕುತೋರದಂತೆ ಸಿಕ್ಕಿಸಿಬಿಡು. Let the cat out of the b. ಗುಟ್ಟನ್ನು ಹೊರಗೆ ಬಿಡು. **Bags** (ನಾ.) (ಅಸಂ.) ಷರಾಯಿ ; (ರೂಪ.) ಸಡಿಲವಾಗಿ ನೇತಾಡುತ್ತಿರುವ ಉಡಿಗೆ. Game bags ಶಿಕಾರಿಯು ಹೊಡೆದಿರುವ ಅಥವಾ ಹಿಡಿದಿರುವ ಒಟ್ಟು ಶಿಕಾರಿ. **Bágging** (ನಾ.) ಚೀಲದ ಬಟ್ಟೆ. **Bággy** (ಗು.) ಉಬ್ಬಿಕೊಂಡ ; ಸಡಿಲವಾಗಿ ನೇತಾಡುವ. (ರೂಪ.) ವಾಗಾಡಂಬರದ. **Bágginess** (ನಾ.) ; **Bágman** ಬ್ಯಾಗ್‌ಮ್ಯನ್ (ನಾ.) ಚೀಲ ಹೊರುವವನು. ಸರಕುಗಳ ಮಾದರಿಯನ್ನು ತೋರಿಸಿ ತನ್ನ ಯಜಮಾನನಿಗೆ ಗಿರಾಕಿ ಒದಗಿಸುವುದಕ್ಕಾಗಿ ಸಂಚಾರಮಾಡುವ ವ್ಯಾಪಾರಿ : ತಿರುಗುದಳ್ಳಾಳಿ.

Bag (ಕ್ರಿ.) ಚೀಲಕ್ಕೆ ಸೇರಿಸು. (ಶಿಕಾರಿಯನ್ನು) ಹೊಡೆ, ವಶಪಡಿಸಿಕೊ. (ಬಳ. ಮಾ.) ಕಳವುಮಾಡು. ಊದು ; ಉಬ್ಬು ; ದಪ್ಪನಾಗು ; ಉಬ್ಬಿಕೊಳ್ಳುವಂತೆ ಮಾಡು. (ಬಟ್ಟೆಬರೆ) ಸಡಿಲವಾಗಿ ನೇತಾಡು. (ಧಾನ್ಯ ಮೊ. ನ್ನು) ಕುಡುಗೋಲಿನಿಂದ ಕೊಯ್ಯಿ.

Bagásse ಬಗ್ಯಾಸ್ (ನಾ.) ಕಬ್ಬಿನ ಹಿಪ್ಪೆ.

Bagatélle ಬ್ಯಾಗಟೆಲ್ (ನಾ.) ಅಲ್ಪ ; ಲವ ; ಲೇಶ ; ಅಲ್ಪ ವಿಷಯ, ವಸ್ತು ; ಲೆಕ್ಕಕ್ಕೆ ಬಾರದಷ್ಟು. ಲಘುಗಾನ. 'ಬಿಲಿಯರ್ಡ್ಸ್' ಆಟದ ಮಾದರಿಯ ಒಂದು ಸಣ್ಣ ಆಟ.

Bággage ಬ್ಯಾಗೆಜ್ (ನಾ.) (ಪ್ರಯಾಣದ) ಸಾಮಾನು ಸರಂಜಾಮು ; ಗಂಟುಮೂಟೆ. ಸುಲಭವಾಗಿ ಸಾಗಿಸಬಹುದಾದ ಸೈನ್ಯಸನ್ನಾಹ. (ಹಾಸ್ಯ) ಕೆಲಸಕ್ಕೆಬಾರದ ಹೆಂಗಸು. ದಿಟ್ಟ ಹುಡುಗಿ ; ಗುಡುಸೆಟ್ಟಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bágnio ಬ್ಯಾನ್ಯೊ (ನಾ.) ಸ್ನಾನದ ಮನೆ. (ಪೂರ್ವದೇಶಗಳಲ್ಲಿ ಗುಲಾಮರನ್ನಿಡುವ) ಬಂದೀಖಾನೆ. ಗುಡುಸೆಟ್ಟಿಯ ಮನೆ; ವೇಶ್ಯಾ ವಾಟಿ.

Bágpipe ಬ್ಯಾಗ್‌ಪೈಪ್ (ನಾ.) ತಿದಿಯಂತಿರುವ ಗಾಳಿಚೀಲದಿಂದ ಅದಕ್ಕೆ ಸೇರಿಸಿರುವ ಒಂದು ಅಥವಾ ಹೆಚ್ಚಾದ ಕೊಳಲುಗಳಿಗೆ, ಗಾಳಿಯನ್ನು ಒತ್ತುವುದರಿಂದ ನಾದಹೊರಡುವ ಸ್ವರವಾದ್ಯ : ತಿದಿಗೊಳಲು (ಈಗ ಸಾ. ಬ. ವ. ದಲ್ಲಿ). (ರೂಪ.) ಅತಿಮಾತಿನವನು ; ಮಾತಾಳಿ; ಶಬ್ದಾಡಂಬರದವನು.

Bah ಬಾ (ಭಾವ. ಅವ್ಯ.) ತಿರಸ್ಕಾರ ಸೂಚಕ.

Bahádur ಬಹಾದುರ್ (ನಾ.) ಇಂಡಿಯಾ ದೇಶದಲ್ಲಿ, ಒಬ್ಬನ ಹೆಸರಿನ ಜೊತೆಗೆ ಸೇರಿಸುವ ಗೌರವಸೂಚಕವಾದ ಒಂದು ಬಿರುದಿನ ಮಾತು. (ಹಿಂದೂ ಆಂಗ್ಲೇಯರ ಅಸಂ.) ಸೊಕ್ಕಿನ ಅಧಿಕಾರಿ.

Bail[1] ಬೇಯ್‌ಲ್ (ನಾ., ಕ್ರಿ. ಸಕ.) ಜಾಮೀನು ; ಹೊಣೆ. ಜಾಮೀನುದಾರ ; ಹೊಣೆಗಾರ. [Give leg b. (ಹಾಸ್ಯವಾಗಿ) ಕಾಲಿಗೆ ಬುದ್ಧಿಹೇಳು ; ಓಡಿಹೋಗು ; ಪರಾರಿಯಾಗು. Go b. for (ಯಾವುದಾದರೂ ಒಂದು ವಿಷಯವು) ನಿಶ್ಚಯ ಎಂಬುದಕ್ಕೆ ಹೊಣೆಯಾಗು]. (ಕ್ರಿ.) (ಒಪ್ಪಿಗೆಯ ಪ್ರಕಾರ ವಿಲೆಮಾಡುವುದಕ್ಕಾಗಿ ನಂಬಿಕೆಯಮೇಲೆ ಸ್ವತ್ತನ್ನು) ವಶಮಾಡು ; ಜಾಮೀನಾಗು ; ಜಾಮೀನುಮೇಲೆ ಬಿಡು. B. out ಜಾಮೀನಾಗಿ ಸರೆಯಿಂದ ಬಿಡಿಸು. **Báilable** (ಗು.) ಜಾಮೀನಿನ ಮೇಲೆ ಬಿಡಬಹುದಾದ (ತಪ್ಪಿತ). **Baileé** ಬೇಯ್ಲೀ (ನಾ.) ಒಪ್ಪಿಗೆಯ ಪ್ರಕಾರ ವಿಲೆಮಾಡುವುದಕ್ಕಾಗಿ ಸ್ವತ್ತನ್ನು ವಶಕ್ಕೆ ತೆಗೆದುಕೊಂಡವನು. **Báilment** (ನಾ.) ಕೈದಿಗೆ ಜಾಮೀನಾಗುವುದು ; ಈ ವಿಷಯವನ್ನು ಬರೆದಿಟ್ಟ ದಾಖಲೆ ; ಜಾಮೀನು ದಾಖಲೆ. ಒಪ್ಪಿಗೆಯ ಪ್ರಕಾರ ವಿಲೆಮಾಡುವುದಕ್ಕಾಗಿ ಸ್ವತ್ತನ್ನು ವಶಕ್ಕೆ ಕೊಡುವುದು. **Bailór** ಬೇಯ್ಲಾರ್ (ನಾ.) ಒಂದು ಗೊತ್ತಾದ ಉದ್ದೇಶಕ್ಕಾಗಿ ಸ್ವತ್ತನ್ನು ಮತ್ತೊಬ್ಬನ ಅಧೀನಕ್ಕೆ ಒಪ್ಪಿಸುವವನು. **Báilsman** ಬೇಯ್‌ಲ್ಸ್‌ಮ್ಯನ್ (ನಾ.) ಮತ್ತೊಬ್ಬನಿಗಾಗಿ ಜಾಮೀನಾಗುವವನು ; ಜಾಮೀನುದಾರ.

Bail[2] ಬೇಯ್‌ಲ್ (ನಾ., ಕ್ರಿ.) (ಪೀಪಾಯಿಗೆ ಹಾಕುವಂಥ) ದುಂಡು ಕಟ್ಟು ; ಬೇಲು. ಬಂಡಿಯ ಥಾವಣಿಗೆ ಹಾಕಿ ಬಿಗಿಯುವ ಅರ್ಧಚಂದ್ರಾಕೃತಿಯ ಕಟ್ಟು. ಬಿಸಿನೀರಿನ ಪಾತ್ರೆಯ ಅರ್ಧಚಂದ್ರಾಕೃತಿಯ ಹಿಡಿ. (ಆಸ್ಟ್ರೇಲಿಯದಲ್ಲಿ) ಹಾಲು ಕರೆಯುವಾಗ ಹಸುವಿನ ತಲೆಯನ್ನು ಹಿಡಿದುಕೊಂಡಿರುವ ಚೌಕಟ್ಟು. (ಕ್ರಿ.) ಸೆರೆಯಲ್ಲಿಡು (ಪ್ರಾಚೀ. ಪ್ರ.). (ಹಸುವಿಗೆ) ಅಟ್ಟಣೆ (ಅಡ್ಡಣೆ) ಹಾಕು. (ದರೋಡೆಕೋರರಿಗೆ ಸಿಕ್ಕಿದವನನ್ನು ಸುಲಿದುಕೊಳ್ಳುವುದಕ್ಕಾಗಿ) ಕೈಗಳನ್ನು ಮೇಲಕ್ಕೆತ್ತಿ ಹಿಡಿದುಕೊಳ್ಳುವಂತೆ ಮಾಡು. (ಹಾಗೆ ಸಿಕ್ಕಿದವನು) ಕೈಗಳನ್ನು ಮೇಲಕ್ಕೆತ್ತಿ ಹಿಡಿದುಕೊ.

Bail[3] ಬೇಯ್‌ಲ್ (ನಾ.) ತಡೆಗಳಿಲ್ಲದಿರುವ ದೊಡ್ಡ ಲಾಯದಲ್ಲಿ ಕುದುರೆಗಳನ್ನು ಬೇರೆ ಬೇರೆ ನಿಲ್ಲಿಸುವುದಕ್ಕಾಗಿ ಹಾಕಿರುವ ಅಡ್ಡಮರ ಅಥವಾ ಕಂಬಿ. (ಚರಿತ್ರೆ) ದಸಿಗಳನ್ನು ನೆಟ್ಟು ಮಾಡಿರುವ ಕೋಟೆಯ ಹೊರಗಿನ ರಕ್ಷಣಾವರಣ ; ದುರ್ಗದ ಅಂಗಳದ ಸುತ್ತುಗೋಡೆ ; ದುರ್ಗದ ಅಂಗಳ. (ಕ್ರಿಕೆಟ್ ಆಟದಲ್ಲಿ) ನಿಲ್ಲಿಸಿರುವ ಗುರಿಕೋಲುಗಳ ಮೇಲಿನ ಅಡ್ಡಪಟ್ಟಿ : ಬೇಲು. **Báiler** (ನಾ.) ಕ್ರಿಕೆಟ್ ಆಟದಲ್ಲಿ ಬೇಲನ್ನು ಹಾರಿಸುವ ಚೆಂಡು.

Bail,[4] **Bale** ಬೇಯ್‌ಲ್ (ಕ್ರಿ. ಸಕ.) ದೋಣಿಯಲ್ಲಿಯ ನೀರನ್ನು ಮೊಗೆದುಹಾಕು. **Báiler** (ನಾ.) ನೀರೆತ್ತಿ ಹೊರಗೆ ಚೆಲ್ಲುವವನು ಅಥವಾ ಚೆಲ್ಲುವದು (ಮು., ಯಂತ್ರಸಲಕರಣೆ)

Báiley ಬೇಯ್ಲಿ (ನಾ.) ದುರ್ಗದ ಹೊರಪ್ರಾಕಾರ ಮತ್ತು ಅದರ ಒಳಗಿನ ರಕ್ಷಣ ವಲಯಗಳು, ಅಥವಾ ಇವುಗಳ ಮಧ್ಯೇ ಇರುವ ಅಂಗಳಗಳು. Old B. ಲಂಡನ್ನಿನ ಪುರಾತನದ ಕೋಟೆಯಲ್ಲಿರುವ ಅಪರಾಧ (ತಕ್ಸೀರು) ವಿಚಾರಣೆಯ ಕೇಂದ್ರ ನ್ಯಾಯಸ್ಥಾನ.

Báilie ಬೇಯ್ಲಿ (ನಾ.) (ಇಂಗ್ಲೆಂಡಿನಲ್ಲಿ ' ಆಲ್ಡರ್‌ಮನ್ ' ಎಂದು ಕರೆಯುವ) ಸ್ಕಾಟ್ಲೆಂಡಿನ ಪೌರಸಭಾ ನ್ಯಾಯಾಧಿಕಾರಿ.

Báiliff ಬೇಯ್ಲಿಫ್ (ನಾ.) ಒಂದು ಡಿಸ್ಟ್ರಿಕ್ಟಿನ ಮುಖ್ಯಾಧಿಕಾರಿ, ಮುಖ್ಯ ನ್ಯಾಯಾಧಿಕಾರಿ, ದಂಡಾಧಿಕಾರಿ. ನ್ಯಾಯಸ್ಥಾನದ ಅನುಜ್ಞೆಗಳನ್ನು ಜಾರಿಮಾಡುವ, ಸ್ವತ್ತನ್ನು ಜಫ್ತಿಮಾಡುವ, ತಕ್ಸೀರುದಾರನನ್ನು ಹಿಡಿಯುವ, ಅಧಿಕಾರವುಳ್ಳವನು : (ಕೋರ್ಟಿನ) ಅಮೀನ. ಜಮೀನ್ದಾರನ ಕಂದಾಯ ಕವಳಿಗೆಗಳನ್ನು ವಸೂಲ್ಮಾಡುವ ಕಾರ್ಯಭಾರಿ ; ಜಮೀನ್ದಾರನ ಭೂಸ್ಥಿತಿಯ ವಿಚಾರಣಕರ್ತ. **Báiliwick** ಬೇಯ್ಲಿವಿಕ್ (ನಾ.) ' ಬೇಯ್ಲಿ ' ಅಥವಾ ' ಬೇಯ್ಲಿಫ್ 'ನ ಅಧಿಕಾರ, ಅಧಿಕಾರಕ್ಕೊಳಪಟ್ಟ ಪ್ರಾಂತ.

Bairám ಬಯ್‌ರಾಮ್, **Baíram** — ರಮ್ (ನಾ.) (ರಂಜಾನ್ ಉಪವಾಸ ಮುಗಿದಕೂಡಲೆ ಒಂದು ಬಾರಿ, ಎಪ್ಪತ್ತು ದಿನಗಳ ಮೇಲೆ ಒಂದು ಬಾರಿ — ಹೀಗೆ ವರ್ಷಕ್ಕೆ ಎರಡು ಬಾರಿ ಬರುವ) ಮುಸಲ್ಮಾನರ ಹಬ್ಬ.

Bairn ಬೇರ್‌ನ್ (ನಾ.) ಹಸುಳೆ ; ಮಗು ; ಮಗ ; ಮಗಳು.

Bait ಬೇಟ್ (ಕ್ರಿ., ನಾ.) ಸರಪಳಿಯಿಂದ ಕಟ್ಟಿಹಾಕಿದ, ಅಥವಾ ಸೆರೆಯಿಟ್ಟಿರುವ, ಪ್ರಾಣಿಯನ್ನು ಹಿಂಸಿಸುವುದಕ್ಕಾಗಿ ಅದರ ಮೇಲೆ ನಾಯಿಯನ್ನು ಛೂಬಿಡು. (ಕಚ್ಚುವುದಕ್ಕಾಗಲಿ ಸಿಗಿದುಹಾಕುವುದಕ್ಕಾಗಲಿ ಪ್ರಯತ್ನಪಟ್ಟು) ಮೇಲೆ ಬೀಳು, ಎರಗು. (ರೂಪ.) ಸುಮ್ಮನೆ ಆಗಾಗ ಮೇಲೆ ಬಿದ್ದು ಗೋಳುಗುಟ್ಟಿಸು, ಕಾಡು. (ಪ್ರಯಾಣದಲ್ಲಿ ಕುದುರೆ ಮೊ. ಗಳಿಗೆ) ಮೇವು ಮತ್ತು ನೀರನ್ನು ಕೊಡು. (ಪ್ರಯಾಣದಲ್ಲಿ ಕುದುರೆಗಳು) ಮೇವನ್ನು ತಿನ್ನು. (ಪ್ರಯಾಣಿಕರು) ಸತ್ರದಲ್ಲಿ ಇಳಿದುಕೊ. ಸ್ವಲ್ಪ ಕಾಲ ಉಳಿದುಕೊ ; ತಂಗು. ಮೀನುಹಿಡಿಯುವುದಕ್ಕಾಗಿ ಗಾಳದಲ್ಲಿ (ನಿಜವಾದ ಅಥವಾ ಕೃತ್ರಿಮದ) ಆಹಾರವನ್ನಿಡು ; ಗಾಳಹಾಕು ; ಆಸೆತೋರಿಸು. (ನಾ.) (ಹಿಡಿಯಬೇಕಾದ ಮೀನು, ಮೃಗ, ಮೊ. ನ್ನು ಆಕರ್ಷಿಸುವುದಕ್ಕಾಗಿ) ಗಾಳದಲ್ಲಿ ಅಥವಾ ಬೋನಿನಲ್ಲಿ ಇಡುವ ಆಹಾರ; ಎರೆ (Live bait ಎರೆಯಾಗಿಡುವ ಸಣ್ಣ ಮೀನು). (ರೂಪ.) ಆಸೆ ; ಆಕರ್ಷಕ ವಸ್ತು ; ಆಕರ್ಷಣೆ. ಪ್ರಯಾಣಮಾಡುವಾಗ (ಆಹಾರ ವಿಶ್ರಾಂತಿಗಳಿಗಾಗಿ) ತಂಗುವುದು. (ಪ್ರಯಾಣದಲ್ಲಿ) ಮೇವು, ಆಹಾರ, ಬುತ್ತಿ. ನಾಯಿಯನ್ನು ಛೂಬಿಡುವುದು.

Baize ಬೇಜ್ (ನಾ.) (ಮೇಜು ಮೊ. ಗಳ ಮೇಲೆ ಹಾಸುವುದಕ್ಕಾಗಿ ಉಪಯೋಗಿಸುವ) ಉಣ್ಣೆಯ ಒರಟುಬಟ್ಟೆ.

Bájri ಬ (ಬಾ) ಜ್ರೀ (ನಾ.) ಸಜ್ಜೆ ; ಕಂಬು.

Bake ಬೇಕ್ (ಕ್ರಿ.) (ನೇರವಾಗಿ ಕೆಂಡದಮೇಲಿಡದೆ ಪಾತ್ರೆಯಲ್ಲಾಗಲಿ ಕಾವಲಿಯಮೇಲಾಗಲಿ ಇಟ್ಟು ಕಾವಿನಿಂದ) ಅಡು, ಸುಡು ; ಕಾವಿನಿಂದ ಗಟ್ಟಿಯಾಗಿ ಮಾಡು. (ಹಣ್ಣು, ಮೊ.) ಬಿಸಿಲಿನಲ್ಲಿ ಮಾಗು, ಮಾಗಿಸು. (ಬಿಸಿಲಿನಲ್ಲಿ) ಚರ್ಮ ಕಂದು, ಕಂದಿಸು. ಕಾವಿನಿಂದ ಬೇಯಿ, ಗಟ್ಟಿಯಾಗು, ಕಂದುಬಣ್ಣಕ್ಕೆ ತಿರುಗು. B.-house ರೊಟ್ಟಿಯನ್ನಾಗಲಿ ಉಂಡೆಸಕ್ಕರೆಯನ್ನಾಗಲಿ ತಯಾರಿಸುವ ಮನೆ ಅಥವಾ ಕೋಣೆ. B.-stone (ಕಬ್ಬಿಣದ, ಕಲ್ಲಿನ ಅಥವಾ ಸ್ಲೇಟಿನ) ಕಾವಲಿ, ಹೆಂಚು. **Báker** (ನಾ.) ರೊಟ್ಟಿಮಾಡುವ ಉದ್ಯೋಗದವನು ; ರೊಟ್ಟಿಗಾರ. (ಮೀನುಹಿಡಿಯುವುದರಲ್ಲಿ) ಕೃತ್ರಿಮದ ನೊಣ. Pull devil, pull baker ಉಭಯ ಪಕ್ಷದವರಿಗೂ ಪ್ರೋತ್ಸಾಹ ಕೊಡು. Baker's dozen ಹದಿಮೂರು (ಹದಿಮೂರನೆಯದು ಕೊಸರು). Baker-legged ತೊಡರುಗಾಲಿನ. **Bákeress** (ನಾ.) ; **Bákery** (ನಾ.) ರೊಟ್ಟಿಯ ಗಡಂಗು. **Báking** (ನಾ.) ರೊಟ್ಟಿಸುಡುವುದು ; ಒಂದೊಬ್ಬೆಯ ರೊಟ್ಟಿ. Baking-powder ರೊಟ್ಟಿ ಉಬ್ಬುವುದಕ್ಕಾಗಿ ಉಪಯೋಗಿಸುವ ಪುಡಿ : ಒದಗಿನ ಪುಡಿ.

Bákelite ಬೇ (ಬ್ಯಾ) ಕೆಲೈಟ್ (ನಾ.) ಹೆಚ್ಚಾದ ವಿದ್ಯುನ್ನಿರೋಧಕ ಶಕ್ತಿಯೂ ರಾಸಾಯನಿಕ ಕಾರ್ಯನಿರೋಧಕ ಶಕ್ತಿಯೂ ಉಳ್ಳ ಒಂದು ಪದಾರ್ಥ (ಇದು ಬಾಚಣಿಗೆ, ಬೊಂಬೆ, ಮೊ. ಅನೇಕ ಸಣ್ಣ ಪದಾರ್ಥಗಳನ್ನು ಮಾಡುವುದರಲ್ಲಿ ' ಸೆಲ್ಯುಲಾಯ್ಡ್ ' ಎಂಬ ಪದಾರ್ಥಕ್ಕೆ ಬದಲಾಗಿ ಈಗ ಹೆಚ್ಚು ಉಪಯೋಗದಲ್ಲಿದೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Báksheesh, Bákhshish ಬ್ಯಾಕ್‌ಷೀಷ್ (ನಾ.) (ಪರ್ಷಿಯನ್ ಭಾಷೆಯಲ್ಲಿ) ಬಹುಮಾನವಾಗಿ ಕೊಟ್ಟದ್ದು; ಇನಾಮು. (ವೇತನ ಪಡೆಯುವವನು ತಾನು ಮಾಡಬೇಕಾದ ಕೆಲಸವನ್ನು ಚೆನ್ನಾಗಿ ಮಾಡಿದ್ದಕ್ಕಾಗಿ ವೇತನದ ಜೊತೆಗೆ ಕೊಡುವ) ಇನಾಮು; ಬಕ್ಷೀಸು.

Bálaam ಬೆಯ್ಲ್ಯಂ (ನಾ.) ಆಶಾಭಂಗ ಮಾಡುವ ಕಾಲಜ್ಞಾನಿ ಅಥವಾ ಮಿತ್ರ. ವೃತ್ತಪತ್ರಿಕೆಯ ಮುದ್ರಣದಲ್ಲಿ ಅಲ್ಲಲ್ಲಿ ಬಿಡುವುಬಿಟ್ಟಿರುವ ಸ್ಥಳಗಳನ್ನು ತುಂಬುವುದಕ್ಕಾಗಿ ಶೇಖರಿಸಿ ಇಟ್ಟುಕೊಂಡಿರುವ ವಿಷಯ: ಭರ್ತಿವಿಷಯ. B.-box ಭರ್ತಿವಿಷಯದ ಪೆಟ್ಟಿಗೆ. **Bálaamite** (ನಾ.) ಸ್ವಾರ್ಥಕ್ಕಾಗಿ ಮತಧರ್ಮಾನುಸರಣೆ ಮಾಡುವವನು.

Balaclàva ಬ್ಯಾಲಕ್‌ಲಾವಾ (ನಾ.) ಕ್ರಿಮಿಯನ್ ಯುದ್ಧ ನಡೆದ ಸ್ಥಳ. B. helmet ಯುದ್ಧೋದ್ಯೋಗದಲ್ಲಿರುವಾಗ ಸಿಪಾಯಿಗಳು ತಲೆಗಿಟ್ಟುಕೊಳ್ಳುವ, ಭುಜಮುಚ್ಚುವ ಉಣ್ಣೆಯ ಕುಲಾವಿ.

Bálance ಬ್ಯಾಲನ್ಸ್ (ನಾ.) ತಕ್ಕಡಿ; ತ್ರಾಸು; ಚಿಂತಾಲು; ಸ್ಪ್ರಿಂಗ್ ಅಥವಾ ಸನ್ನೆಕೋಲನ್ನು ಉಪಯೋಗಿಸಿ ಮಾಡಿರುವ ತೂಕದ ಸಾಧನ: ತೋಲನ ಯಂತ್ರ. ಗಡಿಯಾರದಲ್ಲಿ ಚಲನವ್ಯವಸ್ಥೆ ಮಾಡುವ ಯಂತ್ರಸಾಧನ; (ಗಡಿಯಾರದ) ಗತಿ ನಿಯಂತ್ರಕ (B.-wheel ಗಡಿಯಾರದಲ್ಲಿಯ ಗತಿ ನಿಯಂತ್ರಕ ಚಕ್ರ). ತುಲಾ (ರಾಶಿ). (ಕಾರ್ಯ, ಅಭಿಪ್ರಾಯ, ಮೊ. ಗಳ) ತುಲನೆ, ವಿವೇಚನೆ; ಅನಿಶ್ಚಿತ ಸ್ಥಿತಿ; ಅದೃಷ್ಟ. ನಿರ್ಣಯಾಧಿಕಾರ. (Hold the b. even ಉಭಯ ಪಕ್ಷದವರಿಗೂ ಸಮಾನವಾಗಿ ವರ್ತಿಸು). ಸಮತೂಕ; ಸಮಕಟ್ಟು (B. of power ಎಲ್ಲ ರಾಷ್ಟ್ರಗಳೂ ಸಮಬಲವಾಗಿರುವ ಸ್ಥಿತಿ: ಸಮಾನ ಬಲತೆ). (ಕಲೆಯಲ್ಲಿ) ವಿನ್ಯಾಸದಲ್ಲಿಯೂ ಪ್ರಮಾಣದಲ್ಲಿಯೂ ಸಮತೆ. ಸಮತೆ; ಸ್ಥಿರತೆ (Lose one's b. ಪವಣುತಪ್ಪು; ಮನಸ್ಸಿನ ಸಮತೆಯನ್ನು ಕಳೆದುಕೊ). ಹೆಚ್ಚುತೂಕ (The b. of advantage lies with him ಅನುಕೂಲ್ಯದ ಒಲವು ಆತನ ಕಡೆಗಿದೆ). (ಲೆಕ್ಕಾಚಾರದಲ್ಲಿ) ಆಯ ವ್ಯಯಗಳಿಗಿರುವ ವ್ಯತ್ಯಾಸ; ಸಿಲ್ಕು (Strike a b. ಆಯ ವ್ಯಯಗಳ ವ್ಯತ್ಯಾಸವನ್ನು ನಿರ್ಧರಿಸು: ಸಿಲ್ಕುತೇಲಿಸು). B.-sheet ಜಮಾಖರ್ಚು ಪಟ್ಟಿ; ಆಯ ವ್ಯಯಗಳ ತಃಖ್ತೆ. B. of trade ಆಮದು ರಫ್ತುಗಳ ಅಂತರ (ವ್ಯತ್ಯಾಸ). B. in hand ಕೈಸಿಲ್ಕು. B. due ಬಾಕಿ. (ಅಸಂ.) ಉಳಿತಾಯ; ಉಳಿಕೆ.

Bálance (ಕ್ರಿ.) ಸರಿದೂಗು; (ಎರಡು ಅಭಿಪ್ರಾಯಗಳಲ್ಲಿ ಒಂದರೊಡನೊಂದನ್ನು) ತೂಗು, ತುಲನಮಾಡು. (ಒಂದು ವಸ್ತುವನ್ನು ಮತ್ತೊಂದಕ್ಕೆ ಹೋಲಿಸಿ) ಸರಿದೂಗು. ಆಯ ವ್ಯಯದ ಲೆಕ್ಕಗಳನ್ನು ಸರಿದೂಗಿಸು. ಸಮತೂಕವಾಗಿ ಮಾಡು; ದಡೆಕಟ್ಟು; ನೆಟ್ಟಗೆ ನಿಲ್ಲಿಸು. ತೂಗಾಡು; ಓಲಾಡು; ಆಂದೋಲನ ಮಾಡು. ಬಾಕಿ ಕೊಟ್ಟು ಬಿಟ್ಟು ಲೆಕ್ಕ ತೀರ್ಮಾನ ಮಾಡು. **Bálancer** (ನಾ.) ದೊಂಬರಾಟದವನು. ಸಮತೂಕದಲ್ಲಿಟ್ಟಿರುವುದಕ್ಕೆ ಸಹಾಯಕವಾಗಿರುವದು: ಸಮತೂಕ.

Balaústa ಬಲಾಸ್ಟ (ನಾ.) (ಸ. ವಿ.) ದಾಳಿಂಬೆಯ ಹಣ್ಣು. **Balaústine** ಬಲಾಸ್ಟಿನ್, **-in, -ian** (ನಾ.) ಕಾಡುದಾಳಿಂಬೆಯ ಹೂವು.

Bálcony ಬ್ಯಾಲ್ಕೊನಿ (ನಾ.) ಉಪ್ಪರಿಗೆಯ ಮೊಗಸಾಲೆ. **Bálconied** (ಗು.)

Bald ಬಾಲ್ಡ್ (ಗು.) ಬೋಳಾದ; ಬೋಳು; ಬಕ್ಕ; ಪಟ್ಟೆತಲೆಯ. (ಪ್ರಾಣಿ ಮೊ. ಗಳ ವಿಷಯದಲ್ಲಿ) ಕೂದಲಿಲ್ಲದ, ಪುಕ್ಕವಿಲ್ಲದ, ಗಿಡಮರಗಳಿಲ್ಲದ, ಎಲೆಯಿಲ್ಲದ. (ಕುದುರೆಗಳ ವಿಷಯದಲ್ಲಿ, ಮು., ಮುಖದಲ್ಲಿ) ಬಿಳಿಯ ಮಚ್ಚೆಯುಳ್ಳ. (ಶೈಲಿಯ ವಿಷಯದಲ್ಲಿ) ಅಲಂಕಾರ ರಹಿತ, ನೀರಸ, ಪೇಲವ, ಸಪ್ಪೆ. (ದುರ್ಗುಣಗಳ ವಿಚಾರದಲ್ಲಿ) ಮುಚ್ಚುಮರೆಯಿಲ್ಲದ, ಅನಾವೃತ, ಸ್ಪಷ್ಟ. B.-headed, B.-pated ಬಕ್ಕ ತಲೆಯ. **Báldly** (ಕ್ರಿ. ವಿ.); **Báldness** (ನಾ.). **Báld-coot, Báldicoot** (ನಾ.) (ಕೂದಲಿಲ್ಲದ ಬಿಳಿಯ ಹಣೆಯುಳ್ಳ) ಒಂದು ಬ್ರಿಟಿಷ್ ಪಕ್ಷಿಜಾತಿ. ಪಟ್ಟೆತಲೆಯವನು.

Báldachin, -quin ಬ್ಯಾಲ್ಡಕಿನ್ (ನಾ.) (ಹಿಂದಿನ ಕಾಲದಲ್ಲಿ) ಹಾಸು ರೇಷ್ಮೆಯಿಂದಲೂ ಹೊಕ್ಕು ಜರತಾರಿಯಿಂದಲೂ ನೆಯ್ಯುತ್ತಿದ್ದ ಬೆಲೆಯುಳ್ಳ ಬಟ್ಟೆ: ಕಿನ್‌ಕಾಬು. (ಈಗಿನ ಅರ್ಥ) (ಸಿಂಹಾಸನ, ಬಲಿಪೀಠ, ಮೊ. ಗಳ ಮೇಲೆ ಕಟ್ಟಿರುವ) ಮೇಲ್ಕಟ್ಟು; ವಿತಾನ (ಇವನ್ನು ಪೂರ್ವಕಾಲದಲ್ಲಿ ಕಿನ್‌ಕಾಬಿನ ಬಟ್ಟೆಯಿಂದಲೇ ರಚಿಸುತ್ತಿದ್ದರು)

Bálderdash ಬಾಲ್ಡರ್‌ಡ್ಯಾಷ್ (ನಾ.) (ಹಿಂದಿನ ಅರ್ಥ) ನೊರೆಗೂಡಿದ ದ್ರವ ವಸ್ತು; ಪಾನೀಯಗಳ ಮಿಶ್ರಣ. (ಈಗಿನ ಅರ್ಥ) ಬರಿಯ ಮಾತುಗಳ ಜೋಡಣೆ; ಪೊಳ್ಳು ಮಾತು; ವಿವೇಕವಿಲ್ಲದ ಮಾತು; ಗೊಡ್ಡು ಹರಟೆ; ಅಸಂಬದ್ಧ ಪ್ರಲಾಪ; ಅಶ್ಲೀಲ ಭಾಷೆ; ದುರ್ಭಾಷೆ.

Báldric ಬಾಲ್‌ಡ್ರಿಕ್ (ನಾ.) (ಕತ್ತಿ, ತುತ್ತೂರಿ, ಮೊ. ನ್ನು ತೂಗಹಾಕಲು ಉಪಯೋಗಿಸುವ) ದವಾಲಿಯಂಥ ಎದೆಪಟ್ಟಿ. (ರೂಪ.) ಜ್ಯೋತಿಶ್ಚಕ್ರ; ರಾಶಿಮಂಡಲ. **Báldric-wise** (ಕ್ರಿ. ವಿ.) ಎದೆಪಟ್ಟಿಯಂತೆ.

Bale[1] ಬೇಲ್ (ನಾ.) ಕೇಡು; ಕೆಡುಕು; ನಾಶ; ವ್ಯಥೆ; ನೋವು; ಉಪದ್ರವ. **Báleful** (ಗು.); **Bálefully** (ಕ್ರಿ. ವಿ.)

Bale[2] ಬೇಲ್ (ನಾ.) ಗೋಣಿಪಟ್ಟೆಯಲ್ಲಿ ಕಟ್ಟಿ ಹಗ್ಗ, ತಗಡು, ಮೊ. ಗಳಿಂದ ಬಿಗಿದಿರುವ ವ್ಯಾಪಾರದ ಸರಕಿನ ಮೂಟೆ; ಪಿಂಡಿ; ಗಟ್ಟು.

Bale[3] ಬೇಲ್ (ಕ್ರಿ. ಸಕ.) **Bail**[4] ನೋಡಿ.

Baleén ಬಲೀನ್ (ನಾ.) ಒಂದು ಜಾತಿಯ ತಿಮಿಂಗಿಲದ ಮೇಲ್ದವಡೆಯಲ್ಲಿ ಪದರ ಪದರದ ಹಲಗೆಗಳಾಗಿ ಹತ್ತಿಕೊಂಡಿರುವ ಕೊಂಬಿನಂಥ ಪದಾರ್ಥ.

Bálefire ಬೇಲ್‌ಫ್ಹೈಯ್‌ರ್ (ನಾ.) ಬಯಲಿನಲ್ಲಿಯ ದೊಡ್ಡ ಬೆಂಕಿಯ ಉರಿ; ಚಿತಾಗ್ನಿ; (ಸಮಾಚಾರ ತಿಳಿಸುವುದಕ್ಕಾಗಿ ಎತ್ತರದಲ್ಲಿ ಉರಿಸುವ) ಸಂಕೇತಜ್ವಾಲೆ; ಸುದ್ದಿ ಬೆಂಕಿ; ಸಂತೋಷಸೂಚಕ ಜ್ವಾಲೆ.

Balistrária ಬ್ಯಾಲಿಸ್ಟ್ರೇರಿಯ (ನಾ.) (ಶಿಲ್ಪ) ಅಂಬನ್ನು ಎಸೆಯುವುದಕ್ಕಾಗಿ ಕೋಟೆಯ ಗೋಡೆಯಲ್ಲಿ ಮಾಡಿರುವ ಶಿಲುಬೆಯಾಕಾರದ ಕಂಡಿ: ಅಂಬುಗಂಡಿ.

Balk, Baulk ಬಾಕ್ (ನಾ., ಕ್ರಿ.) (ಭೂಮಿಯಲ್ಲಿ) ಉಳದೆ ಬಿಟ್ಟ ದಿಂಡು; ಬದು; ತೆವರು. ತಡೆ. ದಿಮ್ಮಿ; ದೂಲ; ತೊಲೆ; ಅಡ್ಡ ತೊಲೆ; (ತಕ್ಕಡಿಯ) ದಂಡಿಗೆ; ತುಲಾ ದಂಡ. ಮಾನಿನ ಬಲೆಯ ಹೆದ್ದಾರ. (To make balk ತಪ್ಪುಮಾಡುವುದು). (ಕ್ರಿ.) ಹಿಂದೆಗೆ; ತಪ್ಪು; ಅಲಕ್ಷ್ಯ ಮಾಡು; ತಿರಸ್ಕರಿಸು; ತಪ್ಪಿಸಿಕೊ; ಅನುಕೂಲ ಕಳೆದುಕೊ. ಮುಂದೆ ಹೋಗದೆ ಥಟ್ಟನೆ ನಿಲ್ಲು, ಥಟ್ಟನೆ ತಿರುಗು (ಮು., ಕುದುರೆಯ ವಿಷಯದಲ್ಲಿ). ತಡೆಮಾಡು; ಅಡ್ಡಿಪಡಿಸು; ಪ್ರತಿಬಂಧಿಸು. (ಮಾತು ತಪ್ಪಿ) ನಿರೀಕ್ಷಣೆಗೆಡಿಸು; ಆಶಾಭಂಗ ಮಾಡು; ನಿರಾಶೆಗೊಳಿಸು; ಅಧೈರ್ಯಗೊಳಿಸು; ಬೆಚ್ಚುಬೀಳಿಸು; ಚಕಿತನನ್ನಾಗಿ ಮಾಡು.

Bálkan ಬಾಲ್ಕನ್ (ಗು.) ಬಾಲ್ಕನ್ ದೇಶದ, ಜನರ. **Bálkanize** (ಕ್ರಿ. ಸಕ.) (ಒಂದು ಪ್ರದೇಶವನ್ನು) ಪರಸ್ಪರ ವಿರೋಧವುಳ್ಳ ಸಣ್ಣಸಣ್ಣ ರಾಜ್ಯಗಳಾಗಿ ವಿಭಾಗಿಸು, ಒಡೆ.

Ball[1] ಬಾಲ್ (ನಾ.) ಚೆಂಡು; ಗುಂಡು; ಗೋಲಿ; ಗೋಳ; ಉಂಡೆ; ಪಿಂಡ. ಆಕಾಶಸ್ಥ ಕಾಯ. (ಕ್ರಿಕೆಟ್ ಆಟದಲ್ಲಿ) ಚೆಂಡಿನ ಒಂದು ಎಸೆತ, ಎಸುಗೆ. ಫಿರಂಗಿ, ಬಂದೂಕು ಮೊ. ಗಳಿಂದ ಎಸೆಯುವ (ಆಕಾರದಲ್ಲಿ ಯಾವಾಗಲೂ ಗುಂಡಾಗಿಯೇ ಇರದ) ಗುಂಡು; ಫಿರಂಗಿ ಗುಂಡು. B.-bearings ಯಂತ್ರಗಳಲ್ಲಿ ಚಲಿಸುವ ಎರಡು ಭಾಗಗಳು ಒಂದಕ್ಕೊಂದು ಉಜ್ಜುವಾಗ ಆಗುವ ಘರ್ಷಣೆಯನ್ನು ಕಡಮೆಮಾಡುವುದಕ್ಕಾಗಿ ಆ ಭಾಗಗಳ ನಡುವೆ ಸೇರಿಸುವ ಉಕ್ಕಿನ ಗೋಲಿಗಳು; ಗುಂಡು ಹೊರಳು. B. of the eye ಕಣ್ಣುಗುಡ್ಡೆ. B.-firing (ತೋಟಾಯಿಟ್ಟು) ಗುಂಡು ಹಾರಿಸುವುದು. B.-proof ಫಿರಂಗಿ ಮೊ. ಗಳ ಗುಂಡುಗಳು ನುಗ್ಗಿಕೊಂಡು ಹೋಗಲಾರದ. B. and socket joint ಎಲ್ಲ ಕಡೆಗಳಲ್ಲಿಯೂ ಚಲನೆಗೆ ಅವಕಾಶಕೊಡುವ ಕೀಲು; ಒರಳುಗುಂಡಿನಂಥ ಕೀಲು. The b. is with you ಈಗ ನಿನ್ನ ಸರದಿ. Catch or take the b. before the bound ಚೆಂಡು ಹಾರುವುದಕ್ಕೆ ಮೊದಲೇ ಪುಟ ಹಿಡಿಯಲು ಹೊರಡು; ಒದಗುವುದಕ್ಕೆ ಮೊದಲೇ ಫಲವನ್ನು ಕಲ್ಪಿಸಿಕೊ. Have the b. at

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

one's feet ಗೆಲ್ಲುವ ಸ್ಥಿತಿಯಲ್ಲಿರು ; ಅಧೀನದಲ್ಲಿಟ್ಟುಕೊ. Keep the b. up or rolling ಸಂಭಾಷಣೆ, ಮೊ. ನಿಂತುಹೋಗದ ಹಾಗೆ ನಡೆಯಿಸುತ್ತಿರು. Strike the b. under the line ಗುರಿತಪ್ಪು ; ಜಯಶೀಲನಾಗದಿರು. Take up the b. ಸಂಭಾಷಣೆ, ಮೊ. ಗಳಲ್ಲಿ ಸರದಿ ವಹಿಸು.

Ball (ಕ್ರಿ.) ಚೆಂಡಾಗಿ ಸುತ್ತು ; ಉಂಡೆಯಾಗಿ ಮಾಡು ; ಮುದ್ದೆ (ಗಳು) ಆಗು.

Ball[2] ಬಾಲ್ (ನಾ.) ನರ್ತನ ಗೋಷ್ಠಿ. Open the b. ಮೊದಲನೆಯ ನರ್ತನವನ್ನಾರಂಭಿಸು ; (ರೂಪ.) ಕಾರ್ಯಾರಂಭ ಮಾಡು. **B.-room** ನರ್ತನ ಶಾಲೆ.

Bállad ಬ್ಯಾಲಡ್ (ನಾ.) ಲಾವಣಿ ; ಪದ ; ನಾಡು ಪದ (ಮು., ಒಂದೇ ಧಾಟಿಯ ಅನೇಕ ಪದ್ಯಗಳನ್ನುಳ್ಳದ್ದಾಗಿಯೂ ರಾಗ ರಸ ಭರಿತವಾಗಿಯೂ ಇರುವದು) ಜನರಂಜಕವಾದ ಯಾವುದಾದರೂ ಒಂದು ಕಥೆಯನ್ನು ಮನಮುಟ್ಟುವಂತೆ ಹೇಳುವ ಸಣ್ಣ ಸಣ್ಣ ಪದ್ಯಗಳಿಂದ ಕೂಡಿದ ಲಘುಕಾವ್ಯ. **Bállad-monger** (ನಾ.) ಲಾವಣಿಗಳನ್ನು ಮಾರುವವನು ; (ನಿಕೃಷ್ಟಾರ್ಥ) ಲಾವಣಿ ಕಟ್ಟುವವನು. **Bálladry** (ನಾ.) ಲಾವಣಿಯ ಮಾದರಿಯಲ್ಲಿ ಬರೆದ ಕವಿತೆ.

Balláde ಬಲಾಡ್ (ನಾ.) (ಫ್ರೆಂಚ್ ಮೊ. ಭಾಷೆಗಳಲ್ಲಿ) ಪ್ರತಿ ಪದ್ಯದಲ್ಲಿಯೂ ಏಳು ಅಥವಾ ಎಂಟು ಪಾದಗಳುಳ್ಳ ಪದ್ಯತ್ರಯ, ಅಥವಾ ಅನೇಕ ಪದ್ಯತ್ರಯಗಳು. B. royal ಹತ್ತು ಅಕ್ಷರದ ಪಾದಗಳುಳ್ಳ ಸಪ್ತಪದಿ ಅಥವಾ ಅಷ್ಟಪದಿ.

Bállast ಬ್ಯಾಲಸ್ಟ್ (ನಾ., ಕ್ರಿ. ಸಕ.) ಹಡಗು ತೂಗಾಡದೆ ಸ್ಥಿರವಾಗಿರುವುದಕ್ಕಾಗಿ ಅದರ ತಳಭಾಗದಲ್ಲಿ ಹಾಕುವ ಭಾರವಸ್ತು : ನಿಲುಭಾರ. ರೈಲು ರಸ್ತೆಯ ಅಥವಾ ಸಾಮಾನ್ಯ ರಸ್ತೆಯ ತಳಭಾಗದಲ್ಲಿ, ಭದ್ರವಾಗಿರುವುದಕ್ಕಾಗಿ ಹಾಕುವ ಜಲ್ಲಿ, ಮರಳು, ಮೊ. [In ballast (ಹಡಗು) ಸರಕಿಲ್ಲದೆ ನಿಲುಭಾರ ಮಾತ್ರವುಳ್ಳ (ರೂಪ. ಸಹ)]. (ರೂಪ.) (ನೀತಿ, ರಾಜ್ಯ ವಿಚಾರಗಳು, ಮೊ. ಗಳಲ್ಲಿ) ಸ್ತಿಮಿತ ಕೊಡತಕ್ಕದ್ದು ; ಸ್ಥೈರ್ಯದಾಯಕ. (ಕ್ರಿ.) ನಿಲುಭಾರ ಹಾಕು ; ನಿಲುಭಾರದಿಂದ ಸ್ಥಿರವಾಗಿ ಮಾಡು (ರೂಪ. ಸಹ). (ರೈಲುರಸ್ತೆಯ ಕೆಳಭಾಗಕ್ಕೆ) ಜಲ್ಲಿಹಾಕು. **Bállasting** (ನಾ.)

Ballerína (It.) ಬಾಲ್ಲೆರೀನಾ (ನಾ.) ನರ್ತಕಿ ; ಕುಣಿತಗಾತಿ.

Bállet ಬಾಲೆ, ಬ್ಯಾಲೆಟ್ (ನಾ.) ನಾಟ್ಯ ; ಮೂಕಾಭಿನಯ ; ನರ್ತನ.

Ballísta ಬಲಿಸ್ಟ (ನಾ.) ದೊಡ್ಡ ದೊಡ್ಡ ಕಲ್ಲು, ಮೊ. ನ್ನು ಎಸೆಯುವುದಕ್ಕಾಗಿ ಪೂರ್ವಕಾಲದಲ್ಲಿ ಉಪಯೋಗಿಸುತ್ತಿದ್ದ ಯುದ್ಧಯಂತ್ರ : ದಂಡು ಕವಣೆ. **Ballístic** (ಗು.) ಕಲ್ಲು, ಮೊ. ನ್ನು ಬಿರುಸಾಗಿ ಎಸೆಯುವ ; ಬಿರುಸಾಗಿ ಎಸೆದ ಅಥವಾ ಹಾರಿಸಿದ ; ಉತ್ಕ್ಷೇಪ ಸಂಬಂಧವಾದ. B. pendulum ಫಿರಂಗಿ ಮೊ. ಗಳಿಂದ ಎಸೆದ ಗುಂಡಿನ ವೇಗವನ್ನು (ಇದರಿಂದ, ಆ ಗುಂಡನ್ನು ಹಾರಿಸಿದ ಮದ್ದಿನ ಶಕ್ತಿಯನ್ನು) ಅಳೆಯುವ ಒಂದು ಸಾಧನ. (ಈ ಸಾಧನದ ತೂಗುಗುಂಡು ತನ್ನಲ್ಲಿಗೆ ಎಸೆದ ಗುಂಡನ್ನು ಒಳಕೊಂಡು ತೂಗಾಡುವುದು. ಈ ತೂಗಾಟದ ಪರಿಮಿತಿಯಿಂದ ಆ ಗುಂಡಿನ ವೇಗವನ್ನು ಅಳೆಯುವುದಕ್ಕೆ ಆಗುವಂತೆ ಏರ್ಪಡಿಸಿರುವುದು) : ಉತ್ಕ್ಷೇಪ ವೇಗಮಾಪಕ. **Ballístics** ಉತ್ಕ್ಷೇಪ ವಿದ್ಯೆ.

Ballon d'essai (F) ಬಾಲಾನ್ ಡೆ ಸೆ (ನಾ.) ದೇಶೀಯರ ಅಥವಾ ಪರಕೀಯರ ಮನೋಗತವನ್ನು ತಿಳಿದುಕೊಳ್ಳುವ ಉದ್ದೇಶದಿಂದ ಮಾಡುವ ಪ್ರಕಟನೆ ಮೊ. ಪರೀಕ್ಷಾ ಕಾರ್ಯ : ಇಂಗಿತ ಪರೀಕ್ಷೆ.

Bállonet ಬ್ಯಾಲೊನೆಟ್ (ನಾ.) ಆಕಾಶ ನಾವೆಯ ಒಳಭಾಗದಲ್ಲಿರುವ ಅನಿಲ ಕೋಶಗಳಲ್ಲೊಂದು.

Balloón ಬಲೂನ್ (ನಾ., ಕ್ರಿ.) ಸರಿಸುಮಾರು ಗುಂಡಾಗಿರುವ, ಗಾಳಿ ತೂರದ ಪಟ್ಟೆಯಚೀಲದಲ್ಲಿ ವಾಯುವಿಗಿಂತಲೂ ಹಗುರವಾದ ಅನಿಲವನ್ನು ತುಂಬಿ, ತಾನಾಗಿ ಮೇಲಕ್ಕೇರುವಂತೆ ಮಾಡಿರುವ ಸಾಧನ : ಆಕಾಶಬುಟ್ಟಿ. (ಶಿಲ್ಪ) ಸ್ತಂಭ, ಗೋಪುರ, ಮೊ. ಗಳ ಮೇಲ್ಭಾಗದಲ್ಲಿ ಮಾಡಿಟ್ಟಿರುವ ಗುಂಡು. (ರ. ವಿ.) ಬಟ್ಟಿಯಿಳಿಸುವುದರಲ್ಲಿ ಉಪಯೋಗಿಸುವ ಗಾಜಿನ ದೊಡ್ಡ ಗೋಳಪಾತ್ರೆ. ಪೊಳ್ಳಾಗಿದ್ದು ಉಬ್ಬಿರುವ ಯಾವುದಾದರೂ ವಸ್ತು ; ಬುರುಡೆ ; ತರು ಗುಲ್ಮ ಲತೆಗಳನ್ನು ಬೆಳಸಿರುವ ಗೋಳಾಕೃತಿ. (B.-jumping ಮನುಷ್ಯನ ತೂಕಕ್ಕೆ ಸರಿಸುಮಾರಾಗಿರುವಂತೆ ಮೇಲಕ್ಕೆ ತೂಗುವ ಆಕಾಶಬುಟ್ಟಿಯ ಸಹಾಯದಿಂದ ನೆಲಕ್ಕೆ ದುಮುಕುವುದು. B. tire ಕಡಮೆ ಒತ್ತಡದ, ಹೆಚ್ಚು ಅಗಲದ, ಮೋಟಾರುಪಟ್ಟೆ). (ಕ್ರಿ.) ಆಕಾಶ ಬುಟ್ಟಿಯಲ್ಲಿ ಮೇಲಕ್ಕೇರು ; ಆಕಾಶ ಬುಟ್ಟಿಯಂತೆ ಊದು, ಉಬ್ಬು. **Ballooner, Balloónist** (ನಾ.) ವೈಮಾನಿಕ ; ಆಕಾಶಬುಟ್ಟಿಗ.

Bállot[1] ಬ್ಯಾಲಟ್ (ನಾ., ಕ್ರಿ. ಅಕ.) ಗುಪ್ತವಾಗಿ ಅಭಿಮತಕೊಡಲು ಉಪಯೋಗಿಸುವ ಗೋಲಿ, ಚೀಟಿ, ಮೊ. ; ಹಾಗೆ ಅಭಿಮತಕೊಡುವುದು ; ಕೊಟ್ಟ ಅಭಿಮತಗಳು (ವೋಟುಗಳು). (ಪ್ರತ್ಯಕ್ಷವಾಗಿ ನೋಡದೆ) ಚೀಟಿಹಾಕಿ ಆಯುವುದು. (Ballot-box ಚೀಟಿ ಹಾಕಿ ಆಯುವ ಅಥವಾ ಅಭಿಮತದ ಚೀಟಿಗಳನ್ನು ಸಂಗ್ರಹಿಸುವ ಪೆಟ್ಟಿಗೆ : ವೋಟಿನ ಪೆಟ್ಟಿಗೆ. B.-paper ಅಭಿಮತ ಕೊಡುವುದಕ್ಕಾಗಿ ಉಪಯೋಗಿಸುವ ಚೀಟಿ : ವೋಟಿನ ಚೀಟಿ). (ಕ್ರಿ.) ಗುಪ್ತವಾಗಿ ಅಭಿಮತ ಕೊಡು. B. for ಗುಪ್ತ ಅಭಿಮತ ಕ್ರಮದಿಂದ (ಅಧಿಕಾರಿಗಳು, ಮೊ. ನ್ನು) ಚುನಾಯಿಸು ; ಚೀಟಿಹಾಕಿ ಆಯಿ.

Bállot[2] ಬ್ಯಾಲಟ್ (ನಾ.) (೭೦ ರಿಂದ ೧೨೦ ಪೌಂಡು ತೂಕವುಳ್ಳ) ಸರಕಿನ ಸಣ್ಣ ಮೂಟೆ.

Ballóttement ಬಲಾಟ್ಮೆಂಟ್ (ನಾ.) (ವೈ. ಶಾ.) ಗರ್ಭಧಾರಣ ಪರೀಕ್ಷೆಯ ಒಂದು ರೀತಿ.

Bálly ಬ್ಯಾಲಿ (ಗು., ಕ್ರಿ. ವಿ.) (ಅಸಂ.) ಮಾತಾಡುವವನ ಅಸಹ್ಯತೆಯನ್ನೊ ಸಮಾಧಾನವನ್ನೊ ಸೂಚಿಸುವ ಪದ (Stung by a bally wasp ಒಂದು ಹಾಳು ಕಣಜ ಕಚ್ಚಿತು. Won the bally lot ಆ ಒಟ್ಟು ಗುಂಪನ್ನೇ ಗೆದ್ದನು)

Ballyhoó ಬ್ಯಾಲಿಹೂ (ನಾ.) ಅಸಭ್ಯವಾದ ಅಥವಾ ತಪ್ಪುಅಭಿಪ್ರಾಯ ಕೊಡುವ ರೀತಿಯ ಮುನ್ಪ್ರಕಟನೆ. ಅಂಗಡಿ, ಹರಾಜು, ಮೊ. ಗಳಲ್ಲಿ ಗಿರಾಕಿಕೂಗುವವನ ಕೂಗು.

Bállyrag ಬ್ಯಾಲಿರ್‍ಯಾಗ್ (ಕ್ರಿ.) (ಅಸಂ.) (ನೂಕುವುದರಿಂದಾಗಲಿ ಬಯ್ಯುವುದರಿಂದಾಗಲಿ ಕುಚೇಷ್ಟೆಯಿಂದಾಗಲಿ) ಕಾಡು, ಗೋಳು ಗುಟ್ಟಿಸು ; ಕುಚೇಷ್ಟೆ ಮಾಡು. **Bállyragging** (ನಾ.)

Balm ಬಾಮ್ (ನಾ.) ಕೆಲವು ಜಾತಿಯ ಮರಗಳಿಂದ ಸ್ರವಿಸುವ ಸುವಾಸನೆಯ ಮತ್ತು ಔಷಧೋಪಯೋಗವಾದ ಹಾಲು ; ಗುಗ್ಗುಲ ; ಗುಗ್ಗುಲದ ಮರ. ಗಿಡದ ಮೇಣ. ಮುಲಾಮು ; ಲೇಪನ. ಸುಗಂಧ ; ಸುವಾಸನೆ. (ರೂಪ.) ಉಪಶಾಂತಿ ಕಾರಕ ; ಶಾಂತಿ ದಾಯಕ ; ಉಪಶಾಂತಿ ; ಅಪ್ಯಾಯನ. **Bálmy** (ಗು.) ಗುಗ್ಗುಲ ಕೊಡುವ ; ಸುವಾಸನೆಯುಳ್ಳ. ಹಿತಕರ ; ಉಪಶಾಮಕ ; (ಗಾಯ, ವ್ಯಾಧಿ, ಮೊ. ನ್ನು) ವಾಸಿಮಾಡುವ. **Bálmily** (ಕ್ರಿ. ವಿ.) ; **Bálminess** (ನಾ.)

Balmóral ಬ್ಯಾಲ್ಮಾರಲ್ (ನಾ.) ವಿಕ್ಟೋರಿಯಾ ಮಹಾರಾಣಿಯ ಸ್ಕಾಟ್ಲೆಂಡಿನಲ್ಲಿಯ ಅರಮನೆ. ದಾರದಿಂದ ಬಿಗಿಯುವ ಒಂದು ತೆರದ ಬೂಟುಗಳು (ಕಾಲ್ಜೋಡುಗಳು). ಹೆಂಗಸರು ತೊಟ್ಟುಕೊಳ್ಳುವ ಜುಬ್ಬ ; ರವಿಕೆ. ಸ್ಕಾಚ್ ಕುಲಾವಿ.

Bálsam ಬಾಲ್ಸಮ್ (ನಾ.) ಗುಗ್ಗುಲ. ಮುಲಾಮು. (ರ. ವಿ.) ರಾಳಗಳೂ ಚಂಚಲ (ಆರಿಹೋಗುವ) ತೈಲಗಳೂ (volatile oils) ಸೇರಿ ಆದ, ನೀರಿನಲ್ಲಿ ಲೀನವಾಗದ ಸಂಯುಕ್ತಗಳು. (ರೂಪ.) ಉಪಶಾಮಕ. ಗುಗ್ಗುಲದ ಮರ. ಕರ್ಣಕುಂಡಲದ ಗಿಡ, ಹೂವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Balsámic ಬಾ(ಬ್ಯಾ)ಲ್‌ಸ್ಯಾಮಿಕ್ (ಗು.) ; **Balsámically** (ಕ್ರಿ. ವಿ.) ; **Balsamíferous** — ಸಮಿಫರಸ್ (ಗು.) ; **Bálsamy** ಬಾಲ್ಸಮಿ (ಗು.)

Báluster ಬ್ಯಾಲಸ್ಟರ್ (ನಾ.) ಮೇಲ್ಭಾಗದಲ್ಲಿ ತೆಳ್ಳಗಿರುವ, ತಳಭಾಗದಲ್ಲಿ ಉಬ್ಬಿಕೊಂಡಂತಿರುವ, ಸಣ್ಣ ಕಂಬ : ಹೂಜಿಯಾಕಾರದ ಕಂಬ : ಹೂಜಿಗಂಬ. ಒಂದು ಉದ್ದವಾದ ಕಂಬಿಗೆ ಆಧಾರವಾಗಿರುವ ಕಂಬ. **Balustráde** (ನಾ.) ಬಲಿಪೀಠ, ಮಹಡಿಯ ತಾಳ್ವಾರ, ಮೆಟ್ಟಲು, ಮೊ. ನ್ನು ಸುತ್ತುವರಿದಿರುವ ಕಂಬಿಗೆ ಆಧಾರವಾಗಿರುವ ಸಣ್ಣಸಣ್ಣ ಕಂಬಗಳ ಸಾಲು : ಕಟಾಂಜನ ; ಕಟಕಟೆ. **Balustráded** (ಗು.)

Bamboó ಬ್ಯಾಂಬೂ (ನಾ.) ಬಿದಿರು ; ಬಂಬು.

Bamboózle ಬ್ಯಾಂಬೂಸ್‌ಲ್ (ಕ್ರಿ. ಸಕ.) (ಅಸಂ.) ಮೋಸ ಮಾಡು ; ವಂಚಿಸು ; ದಿಗ್ಭ್ರಮೆಗೊಳಿಸು ; ಕಣ್ಣಿಗೆ ಮಣ್ಣೆರಚು. **Bamboózlement** (ನಾ.)

Ban ಬ್ಯಾನ್ (ಕ್ರಿ., ನಾ.) ನಿರೋಧಿಸು ; ನಿಷೇಧಿಸು ; ಬಹಿಷ್ಕರಿಸು ; ಹೊರಹಾಕು. (ಪ್ರಾಚೀ. ಪ್ರ.) ಶಪಿಸು. (ಮತದ) ಶಾಪ, ಬಹಿಷ್ಕಾರ. ನಿರೋಧ ; ನಿಷೇಧ ; ರಾಜರಕ್ಷಣೆಯಿಂದ ಬಹಿಷ್ಕಾರ (ಮು., ರೋಮನ್ ಧರ್ಮಸಾಮ್ರಾಜ್ಯ ಸಂಬಂಧವಾದದ್ದು). ಸಮಾಜ ಬಹಿಷ್ಕಾರ. **Bánal** ಬೇ(ಬ್ಯಾ)ನಲ್ (ಗು.) ವಿಶೇಷವಿಲ್ಲದ ; ಅತಿ ಸಾಮಾನ್ಯ ; ನಿಸ್ಸಾರ. **Banálity** ಬನ್ಯಾಲಿಟಿ (ನಾ.)

Banána ಬನಾನ (ನಾ.) (ಒಂದು ಜಾತಿಯ) ಬಾಳೆಯ ಹಣ್ಣು, — ಗಿಡ.

Banc, Bánco ಬ್ಯಾಂಕ್, ಬ್ಯಾಂಕೊ (ನಾ.) (ನ್ಯಾ. ಶಾ.) ಪೀಠ. In banc (or banco) ನ್ಯಾಯಾಧೀಶ ಪೀಠದಲ್ಲಿ (ಉಚ್ಚ ನ್ಯಾಯಸ್ಥಾನದ ಸಮಗ್ರ ಅಧಿವೇಶನದಲ್ಲಿ)

Band ಬ್ಯಾಂಡ್ (ನಾ.) ಕಟ್ಟು ; ಬಂಧನ. (ಯಂತ್ರದಲ್ಲಿ, ಚಕ್ರಗಳನ್ನು ಒಂದೊಂದಕ್ಕೆ ಸಂಬಂಧಪಡಿಸಿ ತಿರುಗುವಂತೆ ಮಾಡುವುದಕ್ಕಾಗಿ ಉಪಯೋಗಿಸುವ) ಪಟ್ಟಿ. ಪಟ್ಟೆ. (ಭೂ. ವಿ.) ಅಡ್ಡಕೊಯ್ಲಿನಲ್ಲಿ ಪಟ್ಟೆಯಂತೆ ಕಾಣುವ ಭೂಮಿಯ ಪದರ. ತಂಡ ; ಸಮೂಹ ; ಒಂದು ಕಟ್ಟಿಗೊಳಪಟ್ಟ ಆಯುಧ ಪಾಣಿಗಳ ತಂಡ. (ಯಾವುದಾದರೂ ಒಂದು ನಿಯತ ಉದ್ದೇಶವುಳ್ಳ) ಸಂಘ, ಗುಂಪು, ಕೂಟ, ಪಡೆ, ದಳ. (B. of hope ಮದ್ಯನಿಷೇಧ ಸಂಸ್ಥೆ). ವಾದ್ಯಗಾರರು. **Bándbox** (ಕೊರಲ ಪಟ್ಟಿ, ಮೊ. ಉಡುಪಿನ ವಸ್ತುಗಳನ್ನಿಡುವ) ರಟ್ಟಿನ ಸಣ್ಣ ಪೆಟ್ಟಿಗೆ (He looks as if he came out of a bandbox ಶುಭ್ರವಾಗಿಯೂ ಸುಕ್ಕಾಗದೆಯೂ ಇರುವ ಉಡುಪಿನಿಂದ ಅವನು ಠೀಕಾಗಿ ಕಾಣುತ್ತಾನೆ). **Bándmaster** ವಾದ್ಯನಾಯಕ. **B.-saw** ಚಕ್ರಗಳ ಮೇಲೆ ಸುತ್ತುತ್ತಿರುವ, ಕೊನೆಯಿಲ್ಲದ ಉಕ್ಕಿನಪಟ್ಟಿಯ ಏಣಿನಲ್ಲಿ ಹಲ್ಲುಗಳನ್ನು ಕೊಯ್ದಿರುವ ಗರಗಸ : ಪಟ್ಟಿಗರಗಸ. **Bándsman** ಒಂದು ತಂಡಕ್ಕೆ ಸೇರಿದವನು ; ಒಂದು ಕೂಟದವನು. **Bándstand** ವಾದ್ಯರಂಗ. **B.-wheel** ತನ್ನ ಮೇಲೆ ನಿರಂತರವಾಗಿ ಹಾಯ್ದುಹೋಗುವ ಪಟ್ಟಿ ಸುತ್ತುವುದರಿಂದ ನಡೆಯುವ ಚಕ್ರ : ಪಟ್ಟಿಚಕ್ರ.

Band (ಕ್ರಿ. ಸಕ.) ಕಟ್ಟು ಹಾಕು ; ಪಟ್ಟಿ ಹಾಕಿ ಬಂಧಿಸು. ಪಟ್ಟೆಗಳನ್ನು ತೊಡೆ, ಬಳಿ. ಕೂಟ ಏರ್ಪಡಿಸಿಕೊ. **Bándage** ಬ್ಯಾಂಡೇಜ್ (ನಾ., ಕ್ರಿ. ಸಕ.) (ಅಂಗ, ಗಾಯ, ಮೊ. ಕ್ಕಾಗಲ, ಕಣ್ಣುಕಟ್ಟುವುದಕ್ಕಾಗಲ ಉಪಯೋಗಿಸುವ) ಪಟ್ಟಿ ; ಬಂಧನ ; ಕಟ್ಟು. (ಕ್ರಿ.) ಪಟ್ಟಿ ಕಟ್ಟು. **Bándaging** (ನಾ.)

Bandán(n)a, ಬ್ಯಾಂಡ್ಯಾನ (ನಾ.) ಹಳದಿ ಅಥವಾ ಬಿಳಿಯ ಚುಕ್ಕೆಗಳಿರುವ ಉಜ್ಜ್ವಲ ವರ್ಣದ ಕರವಸ್ತ್ರ.

Bandeaú ಬ್ಯಾಂಡೋ (ನಾ.) ಸ್ತ್ರೀಯರ ತಲೆಗೂದಲನ್ನು ಕಟ್ಟುವುದಕ್ಕಾಗಿ ಉಪಯೋಗಿಸುವ ಪಟ್ಟಿ : ಕೂದಲು ಪಟ್ಟಿ ; ಕೇಶಬಂಧನ. ಕಣ್ಣುಪಟ್ಟಿ.

Bánderol(e), Bándrol, Bánnerol ಬ್ಯಾಂಡರೋ(ಲ)ಲ್, ಬ್ಯಾನರೋ(ಲ)ಲ್ (ನಾ.) ಕಿರಿದಾಗಿಯೂ ಉದ್ದವಾಗಿಯೂ, ಹಾರುವ ಕೊನೆಯಲ್ಲಿ ಎರಡು ಚುಂಗುಳ್ಳದ್ದಾಗಿಯೂ ಇರುವ ಬಾವುಟ. ವೀರನ ಥಲ್ಲೆಯದಲ್ಲಿ ಚಲಿಸುತ್ತಿರುವ ಪತಾಕೆ. ಬರೆವಣಿಗೆಯುಳ್ಳ, ಕಿರಿಯಗಲದ ಪಟ್ಟಿ. ಪ್ರಸಿದ್ಧ ಪುರುಷರ ಅಪರಸಂಸ್ಕಾರ ಕಾಲದಲ್ಲಿ ಹಿಡಿಯುವ ಮತ್ತು ಅವರ ಸಮಾಧಿಯಮೇಲೆ ನೆಡುವ ಪತಾಕೆ.

Bándicoot ಬ್ಯಾಂಡಿಕೂಟ್ (ನಾ.) (ತೆಲುಗು 'ಪಂದಿಕೊಕ್ಕು' ಎಂಬುದರ ಅಪಭ್ರಂಶ ರೂಪ) ಹೆಗ್ಗಣ (ಹಂದಿಹೆಗ್ಗಣ). (ಆಸ್ಟ್ರೇಲಿಯದಲ್ಲಿ) ಹುಳುಗಳನ್ನು ತಿನ್ನುವ, ಹೊಟ್ಟೆಯ ಚೀಲವುಳ್ಳ ಒಂದು ಪ್ರಾಣಿ.

Bándit ಬ್ಯಾಂಡಿಟ್ (ನಾ. ; ಬ. ವ. Banditti, Bandits) ನ್ಯಾಯರಕ್ಷಣ ಬಹಿಷ್ಕೃತ ; ದಾರಿಗಳ್ಳ ; ಡಕಾಯತ ; ದರೋಡೆಕೋರ. A banditti ಡಕಾಯಿತರ ತಂಡ.

Bándog ಬ್ಯಾನ್‌ಡಾಗ್ (ನಾ.) ಕಟ್ಟಿಹಾಕಿದ ನಾಯಿ ; ದೊಡ್ಡ ಮೈಕಟ್ಟಿನ ಒಂದು ನಾಯಿ ಜಾತಿ ; ಸೂಕ್ಷ್ಮವಾಸನಾ ಶಕ್ತಿಯುಳ್ಳ ನಾಯಿ ಜಾತಿ ; ನೆತ್ತರ ನಾಯಿ ; ಬೇಟೆ ನಾಯಿ.

Bandoleér, —iér ಬ್ಯಾಂಡೊಲೀಯರ್ (ನಾ.) ತೋಟಾಗಳನ್ನಿಡುವ ಕುಣಿಕೆಗಳುಳ್ಳ ಸಿಪಾಯಿಯ ಎದೆಪಟ್ಟಿ : ತೋಟಾ ದವಾಲಿ.

Bándoline ಬ್ಯಾಂಡೊಲಿನ್ (ನಾ.) ಕೂದಲನ್ನೂ ಮೀಸೆಯನ್ನೂ ಅಂಟಿಸುವುದಕ್ಕಾಗಿ ಉಪಯೋಗಿಸುವ ಅಂಟು : ಕೂದಲಂಟು.

Bándy[1] ಬ್ಯಾಂಡಿ (ಕ್ರಿ. ಸಕ., ನಾ., ಗು.) ಎಸೆ ; ಹೊಡೆ ; ಎಸೆದಾಡು. ಚರ್ಚಿಸು. (ಏಟು, ಮೊ. ನ್ನು) ಕೊಟ್ಟು ತೆಗೆದುಕೊ. ಹೋರಾಡು. ವಿನಿಮಯ ಮಾಡು ; ಮಾರುವೆ ಮಾಡು. (ನಾ.) 'ಹಾಕಿ' ಎಂಬ ಚೆಂಡಾಟ ; ಈ ಆಟದಲ್ಲಿ ಉಪಯೋಗಿಸುವ ಕೊನೆಕೊಕ್ಕಿನ ದಾಂಡು: 'ಹಾಕಿ'ದಾಂಡು. (ಗು.) ಮೊಣಕಾಲಿನ ಬಳಿ ಕಾಲುಗಳು ಅಗಲಿಕೊಂಡಿರುವ. **B.-legged** (ಗು.) ಕಿಸುಗಾಲಿನ.

Bándy[2] ಬ್ಯಾಂಡಿ (ನಾ.) ಬಂಡಿ.

Bane ಬೇನ್ (ನಾ.) ಪ್ರಾಣನಾಶಕ (ಮು., ವಿಷ) : (ಈಗ ಸಮಾಸ ಪದಗಳಲ್ಲಿ ಮಾತ್ರ : ಉದಾ.— Rat's-b. ಇಲಿ ಪಾಷಾಣ). ನಾಶಕಾರಕ ; ನಾಶ ; ಕೇಡು ; ವ್ಯಥೆ. ಕುರಿಗಳ ಕೊಳೆರೋಗ. **Báneful** (ಗು.) ; **Bánefully** (ಕ್ರಿ. ವಿ.) ; **Bánefulness** (ನಾ.)

Bang ಬ್ಯಾಂಗ್ (ಕ್ರಿ., ನಾ., ಕ್ರಿ. ವಿ.) ರಪ ರಪನೆ ಹೊಡೆ ; ಘಟೀರೆಂದು ಹೊಡೆ ; ಚೆನ್ನಾಗಿ ಚಚ್ಚು ; ಅಪ್ಪಳಿಸು ; ಧಡೀರೆಂದು (ದೊಪ್ಪೆಂದು) ಬಾಗಿಲು ಹಾಕು. ಸಿಡಿತದ ಶಬ್ದವಾಗು, ಮಾಡು. (ಅಸಂ.) ಮೀರು; ತಲೆಮೆಟ್ಟು. (ಮುಂಗೂದಲನ್ನು ಹಣೆಗೆ ಅಡ್ಡವಾಗಿ) ನೆಟ್ಟಗೆ ಕತ್ತರಿಸು. (ನಾ.) ಹಾಗೆ ಕತ್ತರಿಸಿದ ಮೊಂಡುಮುಂಗುರುಳು. ಶಬ್ದದಿಂದ ಕೂಡಿದ ಹೊಡೆತ ; ಹೊಡೆತದ ಶಬ್ದ. (ಕ್ರಿ. ವಿ.) ರಪ ರಪನೆ ; ಪಟ ಪಟನೆ ; ಧಡಮ್ಮನೆ. Go b. ಸಿಡಿದುಹೋಗು. B.-tail ಕೂದಲನ್ನು ಮೊಂಡಾಗಿ ಕತ್ತರಿಸಿದ ಕುದುರೆಯ ಬಾಲ ; ಮೊಂಡುಬಾಲದ ಕುದುರೆ.

Bángle ಬ್ಯಾಂಗ್‌ಲ್ (ನಾ.) (ತೊಡುವ) ಬಳೆ ; ಕಂಕಣ ; ಕಡಗ ; ಕಾಪು ; ಅಂದುಗೆ. **Bángled** (ಗು.) ಬಳೆ ತೊಟ್ಟ.

Bánian, Bányan ಬ್ಯಾನಿಯನ್ (ನಾ.) ಹಿಂದೂ (ಮು., ಗುಜರಾತಿ) ವ್ಯಾಪಾರಿ : ಬನಿಯ. (ಬಂಗಾಳದಲ್ಲಿ) ಐರೋಪ್ಯ ವ್ಯಾಪಾರಸಂಸ್ಥೆಯ ದೇಶೀಯ ದಳ್ಳಾಳಿ. (ಹಿಂದೂ) ಉಣ್ಣೆಯ ಜುಬ್ಬ ; ಬನೀನು. B., or B.-tree ಆಲದ ಮರ. B.-day (ನಾವೆ) ಮಾಂಸಾಹಾರ ಕೊಡದ ದಿನ. B.-hospital (ಹಿಂದೂ) ಪಶು ವೈದ್ಯಶಾಲೆ.

Bánish ಬ್ಯಾನಿಷ್ (ಕ್ರಿ. ಸಕ.) ದೇಶಭ್ರಷ್ಟನನ್ನಾಗಿ ಮಾಡು ; ಗಡೀಪಾರು ಮಾಡು ; ಬಹಿಷ್ಕರಿಸು ; ಹೊರ ಅಟ್ಟು. (ಎದುರಿನಿಂದ ಅಥವಾ ಮನಸ್ಸಿನಿಂದ) ತೊಲಗಿಸು, ದೂರೀಕರಿಸು. **Bánishment** (ನಾ.)

Bánister, Bánnister ಬ್ಯಾನಿಸ್ಟರ್ (ನಾ. ; ಸಾ., ಬ. ವ.) ಮೆಟ್ಟಲಿನ ಕಟಕಟೆಯ ಕಂಬಗಳು. (ಬ. ವ. ದಲ್ಲಿ) ಕಂಬಗಳೂ ಕಂಬಿಯೂ ಸೇರಿದ ಕಟಕಟೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bánjo ಬ್ಯಾಂಜೊ, **Bánjore, Bánjer** (ನಾ.) ಪಿಟೀಲಿನಂತೆ ತಲೆಯೂ ಕತ್ತೂ ಉಳ್ಳ ಒಂದು ವಿಧದ ಮಿಡಿಯುವ ತಂತೀವಾದ್ಯ. **Bánjoist** — ಜೋಯಿಸ್ಟ್ (ನಾ.)

Bank[1] ಬ್ಯಾಂಕ್ (ನಾ., ಕ್ರಿ.) ಕರೆ; ದಡ; ತಟ; ತೀರ; ದಂಡೆ. ದಿಣ್ಣೆ; ದಿಬ್ಬ; ತಿಟ್ಟು; ಇಳಿಜಾರು. ಸಮುದ್ರ ಅಥವಾ ನದಿಯ ತಳದ ಏರುನೆಲ. ಮಾಡಿದ ಏರುನೆಲ. ಚಪ್ಪಟೆಯಾದ ಮೇಲ್ಭಾಗವುಳ್ಳ ಮೋಡ, ಹಿಮ, ಮೊ. ಗಳ ಒಡ್ಡು. ದೋಣಿ ನಡಸುವವನ ಆಸನ. ದೋಣಿಯಲ್ಲಿಟ್ಟಿರುವ ಹುಟ್ಟುಗಳ ಸಾಲು. 'ಆರ್ಗನ್' ಎಂಬ ಸಂಗೀತವಾದ್ಯದ ಕಿವಿ(ಬಿರಡೆ)ಗಳ ಸಾಲು. (ಕೆಲವು ಕೈಗಾರಿಕೆಗಳಲ್ಲಿ) ಕೆಲಸದ ಮೇಜು. (ಕ್ರಿ.) ಸುತ್ತುಗಟ್ಟು; ದಿಣ್ಣೆಕಟ್ಟು; ಏರಿಹಾಕು. (ಬಂಡಿಯಲ್ಲಿ ಪ್ರಯಾಣ ಮಾಡುವಾಗ) ಒಂದು ಪಕ್ಕದಲ್ಲಿ ಎತ್ತರವಾಗಿಯೂ ಇನ್ನೊಂದು ಪಕ್ಕದಲ್ಲಿ ತಗ್ಗಾಗಿಯೂ ಹೋಗು: ಓಲಿಕೊಂಡು ಹೋಗು. (ಬೆಂಕಿ ಸಾವಕಾಶವಾಗಿ ಉರಿಯುವಂತೆ, ಸೌದೆಯನ್ನು) ಅಡಕು; ರಾಶಿಹಾಕು; ಒಡ್ಡುಗೂಡು (=B. up). **Bánker**[1] (ನಾ.) (ಪೂರ್ವ ದೇಶಗಳಲ್ಲಿ) ಕಾಮಾಟಿಯವನು. (ಬೇಟೆಯಲ್ಲಿ) ಎತ್ತರದ ದಿಣ್ಣೆಗಳನ್ನು ಹತ್ತಿ ದುಮುಕುವ ಕುದುರೆ. ಇಟ್ಟಿಗೆಗಳನ್ನು ಅಥವಾ ಕಲ್ಲುಗಳನ್ನು ಕೆತ್ತಿ ಸರಿಪಡಿಸುವುದಕ್ಕಾಗಿ ಉಪಯೋಗಿಸುವ ಮರದ ಅಥವಾ ಕಲ್ಲಿನ ಬೆಂಚು. Banker-mark (ನಯಮಾಡಿದ ಕಲ್ಲಿನಮೇಲೆ, ಹಿಂದೆ, ಗುರುತುಮಾಡುತ್ತಿದ್ದ) ಶಿಲ್ಪಿಯ ಹಸ್ತಾಕ್ಷರ.

Bank[2] ಬ್ಯಾಂಕ್ (ನಾ.) ಹಣವನ್ನು ಭದ್ರವಾಗಿ ಇಟ್ಟುಕೊಂಡಿರುವುದಕ್ಕೂ, ಬೇಕಾದಾಗ ಕೊಡುವುದಕ್ಕೂ ಏರ್ಪಾಡುಳ್ಳ ಸಂಸ್ಥೆ: ದ್ರವ್ಯ ವ್ಯವಹಾರ ಸಂಸ್ಥೆ; ಬ್ಯಾಂಕು; ಧನಕೋಠಿ. (ಜೂಜಾಟದಲ್ಲಿ) ಜೂಜಿಗಾಗಿ ನಿಧಿಯಿಟ್ಟರುವ ಹಣ. **B.-bill** ಒಂದು ಬ್ಯಾಂಕು ಮತ್ತೊಂದು ಬ್ಯಾಂಕಿನ ಮೇಲೆ ಕೊಡುವ ಹುಂಡಿ: ಬ್ಯಾಂಕು ಹುಂಡಿ. **B.-book** ಒಬ್ಬನು ಒಂದು ಬ್ಯಾಂಕಿನೊಡನೆ ಮಾಡುವ ದ್ರವ್ಯ ವ್ಯವಹಾರವೆಲ್ಲವನ್ನೂ ಬರೆದಿರುವ ಸ್ವಂತ ಪುಸ್ತಕ: ಬ್ಯಾಂಕುಪುಸ್ತಕ. **B.-credit** ಬ್ಯಾಂಕಿನ ಗಿರಾಕಿಯು ಬ್ಯಾಂಕಿನಲ್ಲಿ ತಾನಿಟ್ಟಿರುವ ಹಣದಿಂದಾಗಲಿ, ಅದು ತೀರಿಹೋದಮೇಲೆ, ಆ ಬ್ಯಾಂಕಿಗೆ ತಾನು ಕೊಟ್ಟಿರುವ ಆಧಾರದಮೇಲಾಗಲಿ ಹಣ ಪಡೆಯಬಹುದಾದ ವ್ಯವಸ್ಥೆ. **B. holiday** ಬ್ಯಾಂಕಿನ ರಜಾ ದಿನ. **B.-note** ಕೇಳಿದಾಗ ಹಣ ಕೊಡುವಂತೆ ಒಪ್ಪಿಗೆ ಬರೆದಿರುವ (ಹಣದಂತೆಯೇ ಚಲಾವಣೆಯಿರುವ) ಬ್ಯಾಂಕಿನ ಹುಂಡಿ. **B.-rate** ಹುಂಡಿಗಳಿಗೆ ಹಣ ಕೊಡಲು ಬ್ಯಾಂಕಿನವರು ಗೊತ್ತುಮಾಡಿರುವ ವಟ್ಟದ ದರ.

Bank (ಕ್ರಿ.) ಬ್ಯಾಂಕನ್ನಿಡು; ಬ್ಯಾಂಕು ನಡಸು; ಲೇವಾದೇವಿ ಮಾಡು; ಬ್ಯಾಂಕಿನಲ್ಲಿ ಹಣವಿಡು, ಠೇವಣಿಯಿಡು. ದ್ರವ್ಯ ರೂಪಕ್ಕೆ ತಿರುಗಿಸು. (ಜೂಜಾಟದಲ್ಲಿ) ಜೂಜಿನ ಹಣವನ್ನು ಇಟ್ಟುಕೊಂಡಿರು. Bank on, upon ಆಸೆಯಿಟ್ಟುಕೊಂಡಿರು; ನೆಚ್ಚಿಕೊಂಡಿರು; ಆಧಾರವೆಂದು ನಂಬಿರು. **Bánkable** (ಗು.) ಬ್ಯಾಂಕಿನಲ್ಲಿ ಪರಿಗ್ರಹಿಸಬಹುದಾದ; ಬ್ಯಾಂಕ್ ವ್ಯವಹಾರಯೋಗ್ಯವಾದ (ಆಧಾರಪತ್ರಗಳು, ಮೊ.). **Bánker**[2] (ನಾ.) ಖಾಸಾ ಬ್ಯಾಂಕಿನ ಧನಿ, ಪಾಲುಗಾರ. ಕೂಡುಬಂಡವಾಳದ ಬ್ಯಾಂಕಿನ ಆಡಳಿತಗಾರ, ಚಾಲಕ. (ಜೂಜಿನಲ್ಲಿ) ಜೂಜಿನ ನಿಧಿಯನ್ನು ಇಟ್ಟುಕೊಂಡಿರುವವನು. ಅದೃಷ್ಟದ ಆಟಗಳಲ್ಲಿ ಹಂಚಿಕೆ ಮಾಡುವವನು. **Bánking** (ನಾ.)

Bánket ಬ್ಯಾಂಕೆಟ್ (ನಾ.) ಹಲವು ಪುಡಿಗಲ್ಲುಚೂರುಗಳು ಒಟ್ಟುಗೂಡಿಆಗಿರುವ, ಮತ್ತು ಅದರಲ್ಲಿ ಚಿನ್ನ ದೊರೆಯುವ, ಬಂಡೆ.

Bánkrupt ಬ್ಯಾಂಕ್‌ರಪ್ಟ್ (ನಾ., ಕ್ರಿ. ಸಕ., ಗು.) (ನ್ಯಾ. ಶಾ.) ಸಾಲ ತೀರಿಸಲು ಅಶಕ್ತನೆಂದು ತಾನೇಯೋ ಸಾಲಗಾರರೋ ನ್ಯಾಯಸ್ಥಾನಕ್ಕೆ ಅರ್ಜಿಹಾಕಿ, ಉಳಿದಿರುವ ಆಸ್ತಿಯನ್ನು ಸಾಲಗಾರರಿಗೆ ಹಂಚಿಕೆಯಾಗುವಂತೆ ವ್ಯವಸ್ಥೆಯಾದ ನಿರ್ಗತಿಕ; ದಿವಾಳಿ. (ಕ್ರಿ.) ದಿವಾಳಿಯೆಬ್ಬಿಸು; ದಿವಾಳಿ ಮಾಡು. (ಗು.) ದಿವಾಳಿಯೆದ್ದುದ್ದರಿಂದ ನ್ಯಾಯಸ್ಥಾನದ ವ್ಯವಹಾರಕ್ಕೆ ಒಳಪಟ್ಟಿರುವ; ದಿವಾಳಿಯೆದ್ದ. (ಯಾವುದಾದರೂ ಯೋಗ್ಯತೆ, ಮೊ.) ಇಲ್ಲದಿರುವ; ರಹಿತ. **Bánkruptcy** — ರಪ್ಸಿ (ನಾ.) ದಿವಾಳಿತನ. (ಯೋಗ್ಯತೆ, ಮೊ. ಗಳ) ಪೂರ್ಣ ನಾಶ; ಶೂನ್ಯತೆ; ದಾರಿದ್ರ್ಯ.

Bánksman ಬ್ಯಾಂಕ್ಸ್‌ಮನ್ (ನಾ.) ಕಲ್ಲಿದ್ದಲುಗಣಿಯ ಮೇಲ್ಭಾಗದಲ್ಲಿದ್ದುಕೊಂಡು ವಿಚಾರಣೆ ನೋಡಿಕೊಳ್ಳುವವನು.

Bánner ಬ್ಯಾನರ್ (ನಾ.) ಬಾವುಟ; ಧ್ವಜ; ಕೇತು; ಪತಾಕೆ; (ಕಾವ್ಯ) ಗುಡಿ; ಟೆಕ್ಕೆ; ನಿಶಾನಿ; ಝೂಂಡ. (ಒಂದು ದೇಶಕ್ಕೆ, ವೀರನಿಗೆ, ಸಂಸ್ಥೆಗೆ, ತತ್ತ್ವಕ್ಕೆ, ಗುರುತಾದ) ಧ್ವಜಪಟ, ಲಾಂಛನ, ಚಿಹ್ನೆ. Join or follow the banner of ಸೇರು; ಅನುಸರಿಸಿ ಹೋಗು; ಅನುಯಾಯಿಯಾಗು. **Bánnered** (ಗು.); **Bánneret** — ನೆರೆಟ್ (ನಾ.) ತನ್ನ ಅಧೀನದಲ್ಲಿ ಭಟರನ್ನುಳ್ಳ ವೀರ. ಯುದ್ಧರಂಗದಲ್ಲಿ ಪರಾಕ್ರಮಕ್ಕಾಗಿ ಕೊಟ್ಟ ಬಿರುದು; ಹಾಗೆ ಬಿರುದನ್ನು ಪಡೆದವನು. **Bannerétte, Bannerét** (ನಾ.) ಸಣ್ಣ ಪತಾಕೆ. **Bánnerol** ಬ್ಯಾನೆರೊ(ೞ)ಲ್ (ನಾ.) = Banderole.

Bánnock ಬ್ಯಾನಕ್ (ನಾ.) (ಸ್ಕಾಟ್ಲೆಂಡಿನಲ್ಲಿಯೂ, ಉತ್ತರ ಇಂಗ್ಲೆಂಡಿನಲ್ಲಿಯೂ) ಮನೆಯಲ್ಲಿ ಮಾಡುವ ರೊಟ್ಟಿ.

Banns ಬ್ಯಾನ್ಸ್ (ನಾ., ಬ. ವ.) ಕ್ರೈಸ್ತರಲ್ಲಿ, ಮದುವೆಯಾಗತಕ್ಕವರು ತಮ್ಮ ಈ ಅಭಿಪ್ರಾಯವನ್ನು ಕ್ರೈಸ್ತದೇವಾಲಯದಲ್ಲಿ ಪ್ರಕಟನೆಗಾಗಿ, ಅಭ್ಯಂತರ ಯಾರಿಗಾದರೂ ಇದ್ದಲ್ಲಿ ಅಡ್ಡಿಮಾಡಬಹುದೆಂಬ ಅವಕಾಶ ಕಲ್ಪಿಸುವ ಉದ್ದೇಶದಿಂದ, ಮೂರು ಸಲ ಓದಿಹೇಳಿಸುವ ತಿಳಿವಳಿಕೆ: ವಿವಾಹ ಘೋಷಣ; ಮದುವೆಯ ಅರಿಕೆ; ನಿಶ್ಚಿತಾರ್ಥ ಪ್ರಕಟನೆ. Publish the banns ನಿಶ್ಚಿತಾರ್ಥ ಪ್ರಕಟನೆ ಮಾಡು.

Bánquet ಬ್ಯಾಂಕ್ವೆಟ್ (ನಾ., ಕ್ರಿ.) ಔತಣದ ಊಟ; ಯಾವುದಾದರೂ ಉತ್ಸವದ ಸಂಬಂಧದಲ್ಲಾಗಲಿ, ಉದ್ದೇಶ ಸಾಧನೆಗಾಗಲಿ, ಭಾಷಣಗಳಿಂದ ಕೂಡಿದುದಾಗಿ ಏರ್ಪಡಿಸಿದ ಔತಣದ ಊಟ: ಭೋಜನ ಸಮಾರಂಭ; ಉತ್ಸವದ ಊಟ. (ಕ್ರಿ.) ಔತಣದ ಊಟದಿಂದ ತುಷ್ಟಿಗೊಳಿಸು; ಔತಣ ಮಾಡು; ಉತ್ಸವದ ಊಟದಲ್ಲಿ ತಿಂದು, ಕುಡಿದು, ಮೆರೆ. **Bánqueter** (ನಾ.) ಔತಣದ ಅತಿಥಿ.

Banquétte ಬಾಂಕೆಟ್ (ನಾ.) ಕೋಟೆಯ ಆಳ್ವೇರಿ, ಮೊ. ಗಳ ಹಿಂದುಗಡೆ ಸಿಪಾಯಿಗಳು ನಿಂತು ಗುಂಡುಹಾರಿಸುವುದಕ್ಕಾಗಿ ಮಾಡಿರುವ ದಿಣ್ಣೆ: ತೋಪಿನ ದಿಣ್ಣೆ. ರಸ್ತೆಯ ಪಕ್ಕದಲ್ಲಿ ಎತ್ತರಿಸಿ ಮಾಡಿರುವ ಕಾಲುದಾರಿ.

Bánshee ಬ್ಯಾನ್ಷೀ (ನಾ.) ಮನೆಯಲ್ಲಿ ಸಾವುಸೂಚಿಸಿ ಅಳುವ ದೆವ್ವ.

Bant. **Banting** ನೋಡಿ.

Bántam ಬ್ಯಾಂಟಂ (ನಾ.) ಒಂದು ಜಾತಿಯ ಸಣ್ಣ ಕೋಳಿ (ಈ ಜಾತಿಯ ಹುಂಜವು ಉದ್ರೇಕದಿಂದ ಕಾಳಗಮಾಡುವುದು): ಬಂಟಂ ಕೋಳಿ. (ರೂಪ.) ಸಣ್ಣವನಾದರೂ ಕೆಚ್ಚೆದೆಯುಳ್ಳವನು: ಕುಳ್ಳ ಜಟ್ಟಿ. (ಜಾವಾ ದ್ವೀಪದ ಬ್ಯಾಂಟಂ ಎಂಬ ಸ್ಥಳದಿಂದ). **B.-weight** ಮುಷ್ಟಿಯುದ್ಧದ ಜಟ್ಟಿಗಳಲ್ಲಿ ಒಂದು ಗೊತ್ತಾದ ಕಡಮೆಯ ತೂಕದವನು.

Bánter ಬ್ಯಾಂಟರ್ (ನಾ., ಕ್ರಿ.) ಪರಿಹಾಸ್ಯ; ಕುಚೋದ್ಯ; ಲೇವಡಿ; ಗೇಲಿ. (ಈಗ, ಸಾ.) ವಿನೋದದ ಹಾಸ್ಯ, ತಮಾಷೆ. (ಕ್ರಿ.) — ಮಾಡು.

Bánting ಬ್ಯಾಂಟಿಂಗ್ (ನಾ.) ಬೊಜ್ಜು ಕರಗಿಸುವುದಕ್ಕೆ ಸಕ್ಕರೆ, ಪಿಷ್ಟ, ಜಿಡ್ಡು—ಇವುಗಳನ್ನು ತ್ಯಜಿಸುವ ಪಥ್ಯ ('ಬ್ಯಾಂಟಿಂಗ್' ಎಂಬಾತನ ಚಿಕಿತ್ಸಾಕ್ರಮದಿಂದ). **Bant** (ಕ್ರಿ. ಅಕ.) ಬ್ಯಾಂಟಿಂಗ್ ಚಿಕಿತ್ಸೆ ಮಾಡಿಕೊ.

Bántling ಬ್ಯಾಂಟ್ಲಿಂಗ್ (ನಾ.) ಮಗು; ಕೂಸು; ಪಿಳ್ಳೆ.

Bantú ಬಾಂಟೂ (ನಾ., ಗು.) ಬಾಂಟೂ ಭಾಷೆ; ಬಾಂಟೂ ಕುಲ; ಪರಸ್ಪರ ಸಂಬಂಧವಿರುವ ದ. ಆಫ್ರಿಕದ ಅನೇಕ ಭಾಷೆಗಳ, ಜನಾಂಗಗಳ (ಹೆಸರು)

Bányan. **Banian** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Báobab ಬಾ(ಬೇ)ಒಬ್ಯಾಬ್ (ನಾ.) ಅತಿ ದಪ್ಪವಾದ ಬುಡವುಳ್ಳ ಆಫ್ರಿಕಾ ಖಂಡದ ಒಂದು ಜಾತಿಯ ಮರ (ಇಂಡಿಯಾ ದೇಶದಲ್ಲೂ ಬಹು ಕಾಲ ದಿಂದ ಬೆಳೆಯುತ್ತಿದೆ)

Báptism ಬ್ಯಾಪ್ಟಿಸ್ಮ್ (ನಾ.) (ಕ್ರೈಸ್ತರ) ಶುದ್ಧಿಸಂಸ್ಕಾರದಲ್ಲಿ, ಅಥವಾ ಮತಕ್ಕೆ ಸೇರಿಸಿ ಕೊಂಡು ನಾಮಕರಣ ಮಾಡುವಾಗ, ಮಾಡಿಸುವ ಸ್ನಾನ, ಸಂಪ್ರೋಕ್ಷಣೆ: ದೀಕ್ಷಾಸ್ನಾನ; ಜ್ಞಾನಸ್ನಾನ. (ರೂಪ.) B. of blood ಧರ್ಮಕ್ಕಾಗಿ ದೇಹತ್ಯಾಗ ಮಾಡುವುದು: ರಕ್ತಸ್ನಾನ; ಧರ್ಮ ಬಲ. B. of fire ಯೋಧನ ಮೊದಲನೆಯ ಕದನ: ಅಗ್ನಿಸ್ನಾನ. **Baptísmal** ಬ್ಯಾಪ್ಟಿಸ್ಮಲ್ (ಗು.); **Baptísmally** (ಕ್ರಿ. ವಿ.); **Báptist** ಬ್ಯಾ— (ನಾ.) ಜ್ಞಾನಸ್ನಾನ ಮಾಡಿಸುವವನು (ಮು., 'ಜಾನ್ ದಿ ಬ್ಯಾಪ್ಟಿಸ್ಟ್' ಎಂಬಾತನು). ಜ್ಞಾನಸ್ನಾನವನ್ನು ಕೇವಲ ಶಿಶುಗಳಿಗೆ ಮಾಡಿಸಕೂಡದೆಂದೂ, ನಂಬಿಕೆಯುಳ್ಳವರಿಗೆ ಮಾತ್ರ ಮಾಡಿಸ ತಕ್ಕುದೆಂದೂ, ಇದು ನಿಮಜ್ಜನದಿಂದಲೇ ನಡೆಯಿಸತಕ್ಕುದೆಂದೂ ಅಭಿ ಪ್ರಾಯವುಳ್ಳ ಪಂಗಡದವನು; (ಈ ಪಂಗಡದವರನ್ನು ಇವರ ವಿರೋಧಿಗಳು ಹಿಂದಕ್ಕೆ Anabaptists ಎಂದು ಕರೆಯುತ್ತಿದ್ದರು). **Báptist(e)ry** ಬ್ಯಾಪ್ಟಿಸ್ಟರಿ, ಬ್ಯಾಪ್ಟಿಸ್ಟ್ರಿ (ನಾ.) ಜ್ಞಾನಸ್ನಾನ ಕರ್ಮವನ್ನು ನಡೆಯಿಸುವ ಕ್ರೈಸ್ತ ದೇವಾಲಯದ ಭಾಗ: ಜ್ಞಾನಸ್ನಾನ ಶಾಲೆ. ಈ ದೇವಾಲಯದಲ್ಲಿ ಈ ಕರ್ಮಕ್ಕಾಗಿ ಉಪಯೋಗಿಸುವ ನೀರುತುಂಬಿದ ಪಾತ್ರೆ: ಜ್ಞಾನಸ್ನಾನ ಪಾತ್ರೆ. **Baptíze** ಬ್ಯಾಪ್ಟೈಸ್ (ಕ್ರಿ. ಸಕ.) (ಮು., ಕ್ರೈಸ್ತಧರ್ಮ ಸ್ವೀಕಾರಮಾಡಲು) ಶುದ್ಧ್ಯರ್ಥವಾಗಿ ಮಜ್ಜನ ಮಾಡಿಸು, ಅಥವಾ ಸಂಪ್ರೋಕ್ಷಣೆ ಮಾಡು; ಜ್ಞಾನಸ್ನಾನ ಮಾಡಿಸು; ಕ್ರೈಸ್ತನನ್ನಾಗಿ ಮಾಡು. (ರೂಪ.) ಶುದ್ಧಿಗೊಳಿಸು; ಪವಿತ್ರಮಾಡು; ಪುನೀತನನ್ನಾಗಿ ಮಾಡು. ನಾಮಕರಣ ಮಾಡು; ಅಡ್ಡಹೆಸರಿಡು.

Báquet ಬಾಕೆ (ನಾ.) ಚಿಕ್ಕ ತೊಟ್ಟಿ; ಬಕೆಟ್ಟು.

Bar ಬಾರ್ (ನಾ.) ಗಟ್ಟಿಯೂ ಉದ್ದವೂ ಆದ (ಲೋಹ, ಮರ, ಸಾಬೂನು, ಮೊ.) ಪದಾರ್ಥದ ತುಂಡು; ಕಂಬಿ; ದಬ್ಬೆ; ಸಲಾಕಿ. ತಾಪಾಳ; ಅಗುಳಿ; ರಾಳವಿಂಡಿಗೆ. ಬಿರುದಿನ ಬೆಳ್ಳಿಯ ಪಟ್ಟಿ. ರೇಖೆ; ಗೆರೆ; ಪಟ್ಟಿ; ಪಟ್ಟೆ. (ಕಿಟಕಿ, ಬಾಗಿಲು, ಮೊ. ಗಳಲ್ಲಿ) ತಡೆಗಾಗಿ ಉಪಯೋಗಿಸುವ ದಬ್ಬೆ, ಕಂಬಿ, ಸಲಾಕಿ. ತಡೆ; ಅಡ್ಡಗಟ್ಟು; ಕಟಕಟೆ; ಬೇಲಿ; ಊರು ಹೊಗದಂತೆ ಕಟ್ಟಿದ ತಡೆ; ಊರ ಬಾಗಿಲು. ಹಡಗು, ದೋಣಿ, ಮೊ. ವು ಹೋಗುವುದಕ್ಕಾಗದಂತೆ ತಡೆಯುವ ಮರಳುದಿಬ್ಬ. ಪ್ರತಿಬಂಧಕ. (ನ್ಯಾ. ಶಾ.) ಜಾರಿಯನ್ನಾಗಲಿ ಹಕ್ಕನ್ನಾಗಲಿ ತಡೆಮಾಡಲು ನೆಪ; ತಕರಾರು. ನೀತಿದೃಷ್ಟಿಯಿಂದ ತಡೆ. (ರೂಪ.) ನ್ಯಾಯಸ್ಥಾನ. [The b. ನ್ಯಾಯವಾದಿ ವರ್ಗ; ನ್ಯಾಯವಾದಿಯ ವೃತ್ತಿ. Be called to the b. ನ್ಯಾಯವಾದಿಯಾಗಿ (ಮು., ಬ್ಯಾರಿಸ್ಟರಾಗಿ) ಕರೆಯಲ್ಪಡು, ನೇಮಿಸಲ್ಪಡು. Be called within the b. ಸರ್ಕಾರದ ಪಕ್ಷದ ನ್ಯಾಯವಾದಿಯಾಗಿ ನಿಯಮಿತ ನಾಗು. B. of conscience ಮನಸ್ಸಾಕ್ಷಿಯ ನ್ಯಾಯಸ್ಥಾನ]. (ಶಾಸನಸಭೆ, ಮೊ. ಗಳಲ್ಲಿ ಕಾರ್ಯಾರ್ಥವಾಗಿ ಬಂದು ನಿಲ್ಲಬಹುದಾದ) ಸ್ಥಳವನ್ನು ಪ್ರತ್ಯೇಕಿಸುವ ಕಂಬಿ. (ಉಪಾಹಾರ ಗೃಹ, ಮೊ. ಗಳಲ್ಲಿ) ಆಹಾರವಸ್ತುಗಳನ್ನು ಕೊಡುವುದಕ್ಕಾಗಿ ಉಪಯೋಗಿಸುವ ಮೇಜು; ಇದರ ಹಿಂದಕ್ಕಿರುವ ಸ್ಥಳ, ಅಥವಾ ಈ ಮೇಜಿರುವ ಕೋಣೆ: ಪಾನಶಾಲೆ. **B.-keeper** ಪಾನಶಾಲೆ ಇಟ್ಟಿರುವವನು. ತಡೆಗಟ್ಟಿನ ಬಳಿ ಕಾವಲಿರುವವನು. **Bárman, Bármaid** (ನಾ.) ಆಹಾರ ಪಾನೀಯಗಳ ಮೇಜಿನ ಬಳಿ ಸರಬರಾಯಿ ಮಾಡುವುದಕ್ಕಾಗಿ ನಿಂತಿರುವ ಸೇವಕ, ಸೇವಕಿ: ಪಾನ ಪರಿಚಾರಕ, ಪರಿಚಾರಕಿ. **B.-silver** ಕಂಬಿಯಾಕಾರವಾಗಿ ಮಾಡಿರುವ ಬೆಳ್ಳಿ: ಗಟ್ಟಿ ಬೆಳ್ಳಿ. **B. sinister** ಜಾರಜ ಚಿಹ್ನೆ. **Bárrage** ಬಾರೆಜ್ (ನಾ.) ಅಡ್ಡಗಟ್ಟು ಕಟ್ಟುವುದು; ಅಣೆಕಟ್ಟು. (ಯುದ್ಧ) ಒಂದು ಗೊತ್ತಾದ ಪ್ರದೇಶಕ್ಕೆ ಪ್ರವೇಶ ಅಸಾಧ್ಯವಾಗುವಂತೆ ಗುಂಡಿನ ಮಳೆ ಸುರಿಸುವುದು; ಪ್ರವೇಶ ತಡೆಯುವ ಗುಂಡಿನ ಸುರಿಮಳೆ. **Barred** (ಗು.) ಪಟ್ಟಿಗಳಿಂದ ಭದ್ರಪಡಿಸಿದ ಅಥವಾ ಮುಚ್ಚಿದ. ತಡೆ ಅಥವಾ ತಡೆಗಳಿಂದ ಕೂಡಿದ; ಅಗುಳಿ ಹಾಕಿದ; ಕಂಬಿ ಹಾಕಿದ. ಪಟ್ಟೆಗಳಿಂದ ಅಲಂಕರಿಸಿದ. (ರೇವಿನಲ್ಲಿ) ಮರಳುದಿಬ್ಬದಿಂದ ಅಡಚಣೆಯಾದ.

Bar (ಕ್ರಿ. ಸಕ., ಉಪ.) ಅಗುಳಿ, ತಾಪಾಳ, ರಾಳವಿಂಡಿಗೆ, ಮೊ. ನ್ನು ಹಾಕು; ಕಂಬಿಹಾಕಿ ಭದ್ರಪಡಿಸು; ಅಡ್ಡಗಟ್ಟು ಹಾಕು; ತಡೆಗಟ್ಟು; ಪ್ರತಿಬಂಧಿಸು; ನಿರೋಧಿಸು; ಅಡ್ಡಿಪಡಿಸು; 'ನಿರಾಕರಿಸು; ನಿಷೇಧಿಸು; ಗಣನೆಗೆ ತಾರದಿರು; ಉಳಿ; ಬಿಡು. ಪಟ್ಟೆಯೆಳೆ. ಕಂಬಿಗಳನ್ನಾಗಿ ಮಾಡು. (ಉಪ.) ಹೊರತು; ಬಿಟ್ಟು; ವಿನಾ.

Bárathrum ಬ್ಯಾರತ್ರಂ (ನಾ.) ಅಥೆನ್ಸಿನಲ್ಲಿ ಮರಣದಂಡನೆಗೆ ಗುರಿಯಾದವರನ್ನು ತಳ್ಳುತ್ತಿದ್ದ ಒಂದು ಗುಂಡಿ; ಪಾತಾಳ; ನರಕ.

Barb[1] ಬಾರ್ಬ್ (ನಾ., ಕ್ರಿ. ಸಕ.) ಕೆಲವು ಮೀನುಗಳಿಗೆ ದಾಡಿಗಳಂತಿರುವ ಸ್ಪರ್ಶಾಂಗಗಳು. ಹಕ್ಕಿಯ ಗರಿಯ ಅಡ್ಡ ಎಳೆಗಳು. (ಅಂಬು, ಗಾಳ, ಮೊ. ಗಳ) ಕೊಕ್ಕೆ. (ರೂಪ.) ಕುಟುಕು; ಮುಳ್ಳು. (ಕ್ರಿ.) ಅಂಬಿಗೆ ಕೊಕ್ಕೆಹಾಕು; ಕೊಕ್ಕೆಯಿಂದ ಚುಚ್ಚು. Barbed wire (ಬೇಲಿಗಾಗಿಯೂ ಯುದ್ಧದಲ್ಲಿ ತಡೆಗಾಗಿಯೂ ಉಪಯೋಗಿಸುವ) ಮುಳ್ಳು ತಂತಿ. **Bárbal** (ಗು.) ದಾಡಿಯ.

Barb[2] ಬಾರ್ಬ್ (ನಾ.) ಬಾರ್ಬರಿ ದೇಶದಿಂದ ತರಿಸಿದ ಕುದುರೆಯ ಮತ್ತು ಪಾರಿವಾಳದ ಹಕ್ಕಿಯ ತಳಿಗಳು.

Bárbara ಬಾರ್ಬರ (ನಾ.) (ಪಾಶ್ಚಾತ್ಯ) ತರ್ಕಶಾಸ್ತ್ರದಲ್ಲಿ ಸೂತ್ರಪ್ರಾಯವಾದ ಒಂದು ಸಂಕೇತಶಬ್ದ.

Barbarésque ಬಾರ್ಬರೆಸ್ಕ್ (ಗು., ನಾ.) ಬಾರ್ಬರಿಯ. ಶೈಲಿಯಲ್ಲಿ ನಾಜೂಕಿಲ್ಲದ, ಒರಟಾದ (ಮು., ಲಲಿತ ಕಲೆಯಲ್ಲಿ). ಬಾರ್ಬರಿ ದೇಶಸ್ಥ.

Barbárian ಬಾರ್ಬೇರಿಯನ್ (ಗು., ನಾ.) ಬರ್ಬರ; ಪರದೇಶದ (ವನು). ವೇಷ, ಭಾಷೆ, ರೀತಿ, ರುಚಿ, ಕಲೆ — ಇವುಗಳಲ್ಲಿ ತನ್ನಂತೆ ಇಲ್ಲದವನು. (ಚರಿತ್ರೆ) ಗ್ರೀಕೇತರ, ರೋಮನೇತರ, ಕ್ರೈಸ್ತೇತರ. ಒರಟು; ಅನಾಗರಿಕ; ಅಸಂಸ್ಕಾರಿ (ಮನುಷ್ಯ). **Barbáric** ಬಾರ್ಬ್ಯಾರಿಕ್ (ಗು.) ಒರಟು; ಅನಾಗರಿಕ; ಅಸಂಸ್ಕೃತ. **Barbárically** (ಕ್ರಿ. ವಿ.); **Bárbarism** — ಬರಿಸ್ಮ್ (ನಾ.) ಭಾಷೆಯಲ್ಲಿ ಅಶುದ್ಧ, ಅನಾಗರಿಕ, ಅಸಂಸ್ಕೃತ, ಪ್ರಯೋಗ. ಅಂಥ ಭಾಷೆ. ಅಸಂಸ್ಕೃತತ್ವ; ಒರಟುತನ. **Barbárity** — ಬ್ಯಾರಿಟಿ (ನಾ.) ಅಮಾನುಷ ಕ್ರೌರ್ಯ; ಕಾಡುತನ. (ರುಚಿ, ರೀತಿ, ಶೈಲಿ, ಮೊ. ಗಳಲ್ಲಿ) ಅನಾಗರಿಕತೆ. **Bárbarize** — ಬರೈಸ್ (ಕ್ರಿ.) ಅನಾಗರಿಕ, ಅಸಂಸ್ಕಾರಿ, ಮೊ. ಆಗು, ಮಾಡು. (ಭಾಷೆಯನ್ನು) ಕುಲಗೆಡಿಸು. **Bárbarizátion** (ನಾ.); **Bárbarous** (ಗು.) ಗ್ರೀಕ್ ಭಾಷೆಯಲ್ಲದ; ಗ್ರೀಕಾಗಲಿ ಲ್ಯಾಟಿನ್ ಆಗಲಿ ಅಲ್ಲದ; ಶುದ್ಧ ಭಾಷೆಯಲ್ಲದ; ಓದುಬರಹ ತಿಳಿಯದ. ಗ್ರೀಕರಲ್ಲದ, ರೋಮನರಲ್ಲದ, ಕ್ರೈಸ್ತರಲ್ಲದ; ವಿದೇಶೀಯ; ಅನಾಗರಿಕ. ಕ್ರೂರ; ಒರಟು. **Bárbarously** (ಕ್ರಿ. ವಿ.); **Bárbarousness** (ನಾ.)

Bárbary ape ಬಾರ್ಬರಿ ಏಪ್ (ನಾ.) ಉ. ಆಫ್ರಿಕ ಮತ್ತು ಜಿಬ್ರಾಲ್ಟರ್ ಪ್ರಾಂತಗಳಲ್ಲಿಯ ಬಾಲವಿಲ್ಲದ ಒಂದು ಜಾತಿಯ ದೊಡ್ಡ ಕೋತಿ: ಬಾರ್ಬರಿ ವಾನರ.

Bárbate ಬಾರ್ಬೇಟ್ (ಗು.) (ಸ. ವಿ., ಪ್ರಾ. ವಿ.) ದಾಡಿಯುಳ್ಳ; ಸಣ್ಣ ಜುಟ್ಟು ಅಥವಾ ಜುಟ್ಟುಗಳುಳ್ಳ.

Bárber ಬಾರ್ಬರ್ (ನಾ.) ಕ್ಷೌರಿಕ; ಕೆಲಸಿಗ; ನಾಯಿಂದ; ನಾಪಿತ; ಹಜಾಮ. B.'s itch ಕ್ಷೌರದ ಕಜ್ಜಿ.

Bárbican ಬಾರ್ಬಿಕ್ಯನ್ (ನಾ.) ಪಟ್ಟಣದ ಅಥವಾ ದುರ್ಗದ ಹೊರ ರಕ್ಷಣೆ (ಮು., ಕೋಟೆಯ ಬಾಗಿಲ ಮೇಲೆ ಅಥವಾ ಸೇತುವೆಯ ಮೇಲೆ ಕಟ್ಟಿರುವ ದೊಡ್ಡ ಗೋಪುರ)

Bárcarol(l)e ಬಾರ್ಕರೋಲ್ (ನಾ.) ದೋಣಿಯ ಹಾಡು.

Bard[1] ಬಾರ್ಡ್ (ನಾ.) ಕವಿತ್ವಮಾಡಿ ಹಾಡುವ ಚಾರಣ: ಹಾಡುಕವಿ **Bárdling** (ನಾ.) ಅನುಭವವಿಲ್ಲದ ಕವಿ; ಕುಕವಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bard[2] ಬಾರ್ಡ್ (ನಾ.) ಯುದ್ಧದ ಕುದುರೆಯ ಎದೆ ಮತ್ತು ಪಕ್ಕಗಳ ಕವಚ: ಅಶ್ವ ಉರಸ್ತ್ರಾಣ. **Bárded** (ಗು.)

Bare ಬೇರ್ (ಗು.) ಬತ್ತಲೆಯಾದ ; ಬೋಳಾದ ; ನಿರ್ವಾಣವಾದ ; ನಗ್ನ ; ಅನಾವೃತ ; ನಿರಲಂಕೃತ. ಅರಕ್ಷಿತ. ಜೀರ್ಣ ; ಜಾಳಾದ. ತಕ್ಕಷ್ಟು ದೊರೆಯದ ; ಸ್ವಲ್ಪ ; ಪೊಳ್ಳಾದ. ರಿಕ್ತ ; ಬರಿಯ ; ಕೇವಲ ; ಮಾತ್ರ. **Báreback, -backed** — ಬ್ಯಾಕ್ಟ್ (ಗು., ಕ್ರಿ. ವಿ.) ಬೆನ್ನು ಬಿಟ್ಟುಕೊಂಡು ; ಜೀನು (ತಡಿ) ಇಲ್ಲದ, — ಇಲ್ಲದೆ. **Báre-faced** — ಫೇಸ್ಟ್ (ಗು.) ಗಡ್ಡ, ಮೊ. ಇಲ್ಲದ ; ಮುಖವಾಡವಿಲ್ಲದ ; ವೇಷವಿಲ್ಲದ. ಮುಚ್ಚುಮರೆಯಿಲ್ಲದ ; ನಾಚಿಕೆಯಿಲ್ಲದ ; ಧೂರ್ತ. **Barefácedly** — ಸೆಡ್ಲಿ (ಕ್ರಿ. ವಿ.) ; **Barefácedness** (ನಾ.) ; **Bárefoot** (ಗು., ಕ್ರಿ. ವಿ.), **-footed** (ಗು.) ಕಾಲಿಗೆ ಜೋಡು ಅಥವಾ ಕಾಲ್ಚೀಲವಿಲ್ಲದ ; ಬರಿಯ ಕಾಲಿನಲ್ಲಿ. **Báre-headed** (ಕ್ರಿ. ವಿ., ಗು.) ಬರಿದಲೆಯ(ಲ್ಲಿ) (ಮು., ಮರ್ಯಾದೆ ತೋರಿಸುವುದಕ್ಕಾಗಿ) ; ಬೋಳುದಲೆಯ(ಲ್ಲಿ). **Bárely** (ಕ್ರಿ. ವಿ.) ಮುಚ್ಚುಮರೆಯಿಲ್ಲದೆ ; ಪ್ರಕಟವಾಗಿ ; ಸ್ಪಷ್ಟವಾಗಿ. ಸುಮ್ಮನೆ ; ಬರಿ ; ಕೇವಲ ; ಮಾತ್ರ ; ಸಾಕೂಸಾಲದೆ. **Báreness** (ನಾ.) ಬತ್ತಲೆ ; ಬರಿದು ; ಅನಲಂಕಾರ ಸ್ಥಿತಿ. **Bárish** ಬೇರಿಷ್ (ಗು.) ಸರಿ ಸುಮಾರು ಬತ್ತಲೆಯಾಗಿ.

Bare (ಕ್ರಿ. ಸಕ.) ಮರೆದೆಗೆ ; ಮುಸುಕು ತೆಗೆ ; ತೆರೆದಿಡು ; ಬಿಚ್ಚಿ ತೋರಿಸು ; ಬಹಿರಂಗ ಮಾಡು ; ಬತ್ತಲೆ ಮಾಡು ; ಸುಲಿ.

Báresark ಬೇರ್‌ಸಾರ್ಕ್ (ನಾ., ಕ್ರಿ. ವಿ.) ನಾರ್ವೆದೇಶದ ಒರಟು ಯೋಧ. ಮೈಜೋಡಿಲ್ಲದೆ.

Bárgain ಬಾರ್ಗಿನ್ (ನಾ.) ವ್ಯಾಪಾರದ ಒಪ್ಪಂದ, ಕರಾರು ; ವ್ಯಾಪಾರ ; ವ್ಯಾಪಾರ ಮಾಡಿ ಪಡೆದ ಸರಕು. ಲಾಭದ ವ್ಯಾಪಾರ. A b. ಅಗ್ಗವಾಗಿ ಕೊಂಡ ಅಥವಾ ಮಾರಿದ ಸರಕು. Good, bad, b. ಲಾಭದ, ನಷ್ಟದ, ವ್ಯಾಪಾರ. Dutch b., Wet b. ಕುಡಿತದಿಂದ ಮುಕ್ತಾಯವಾಗುವ ವ್ಯಾಪಾರ. Into the b. ಗೊತ್ತುಮಾಡಿಕೊಂಡದ್ದಕ್ಕಿಂತಲೂ ಹೆಚ್ಚಾಗಿ ; ಮತ್ತೂ ; ಜೊತೆಗೆ ; ಮೇಲಾಗಿ ; ಅಲ್ಲದೆ. Strike a b. ಒಂದು ಗೊತ್ತಿಗೆ (ಒಪ್ಪಂದಕ್ಕೆ) ಬರು. Make the best of a bad b. ಕೆಟ್ಟದ್ದರಲ್ಲಿ ಮಧ್ಯಸ್ಥಮಾಡಿಕೊ.

Bárgain (ಕ್ರಿ.) ಚೌಕಾಯಿಷಿ ಮಾಡು ; ಕೊಸರಾಡು ; ಒಪ್ಪಂದಕ್ಕೆ ಬರು. B. for (ಅನುಭವಿಸಲು) ಸಿದ್ಧನಾಗಿರು, ತಯಾರಾಗಿರು ; ನಿರೀಕ್ಷಿಸುತ್ತಿರು. B. away ಮಾರಿಬಿಡು. **Bárgainer** (ನಾ.)

Barge ಬಾರ್ಜ್ (ನಾ., ಕ್ರಿ. ಅಕ.) ನದಿಗಳಲ್ಲಿಯೂ ಕಾಲುವೆಗಳಲ್ಲಿಯೂ ಸಂಚರಿಸುವ ಚಪ್ಪಟೆಯತಳದ ಸಾಮಾನಿನ ದೋಣಿ (ಪಟಗಳು ಇರಬಹುದು, ಇಲ್ಲದಿರಬಹುದು) ; ಹರಿಗೋಲು ; ಓಡ. ಯುದ್ಧನೌಕೆಯಲ್ಲಿ ಮುಖ್ಯಾಧಿಕಾರಿಗಳ ಉಪಯೋಗಕ್ಕಾಗಿರುವ ದೋಣಿ. ರಾಷ್ಟ್ರ ಉತ್ಸವಗಳಲ್ಲಿ ಹುಟ್ಟುಹಾಕಿ ನಡೆಯಿಸುವ, ಅಲಂಕಾರ ಮಾಡಿದ, ದೊಡ್ಡ ದೋಣಿ : ಉತ್ಸವ ನೌಕ. (ಕ್ರಿ.) ದೋಣಿಯಲ್ಲಿ ಸಾಗಿಸು. (ಅಸಂ.) ರಭಸದಿಂದ ನುಗ್ಗು. B. in (ಅಸಂ.) ಅತಿಕ್ರಮ ಪ್ರವೇಶ ಮಾಡು. **Bargeé** ಬಾರ್ಜೀ (ನಾ.) = **Bárgeman** ಬಾರ್ಜ್‌ಮನ್ (ನಾ.) ಹರಿಗೋಲಿನ ಅಧಿಕಾರಿ. Swear like a bargee ತಡೆಬಡೆಯಿಲ್ಲದೆ, ನಿರರ್ಗಳವಾಗಿ, ಆಣೆಯಿಟ್ಟು ಬಯ್ಯು. Lucky bargee (ಬಳ. ಮಾ.) ಅದೃಷ್ಟವಂತ ; ದಶಾವಂತ.

Báric[1]. **Barium** ನೋಡಿ.

Báric[2] ಬ್ಯಾರಿಕ್ (ಗು.) ಭಾರದ (ಮು., ವಾಯು ಭಾರದ) = Barometric.

Báritone. **Barytone** ನೋಡಿ.

Bárium ಬೇರಿಯಂ (ನಾ.) (ರ. ವಿ.) ಬೆಳ್ಳನೆಯ ಒಂದು ಮೂಲ ಲೋಹ : ಬೇರಿಯಂ ('ಬರ್‍ರೈಟ' ಎಂಬ ಚವುಳುಮಣ್ಣಿನಲ್ಲಿಯ ಮೂಲ ವಸ್ತು). **Báric** (ಗು.) ಬೇರಿಯಮ್ಮಿನ ; ಬೇರಿಯಂ ಸಂಯುಕ್ತದ.

Bark[1] ಬಾರ್ಕ್ (ನಾ.) ತೊಗಟೆ ; ತಿಗುಡು ; ಚಕ್ಕೆ ; ಪಟ್ಟೆ ; ಸುಲಿದ ತೊಗಟೆ (ಮು., ಚರ್ಮ ಹದಮಾಡಲು ಉಪಯೋಗಿಸುವುದು). ಕ್ವೈನ ಎಂಬ ಔಷಧವಸ್ತುವನ್ನು ತಯಾರಿಸುವ ಸಿಂಕೋನ ಎಂಬ ಮರದ ತೊಗಟೆ (Also, Peruvian or Jesuit's b.). (ಅಸಂ.) ಚರ್ಮ ; ತೊಗಲು. **B.-bed** ಶಾಖಕ್ಕಾಗಿ ತಿಗುಡುತುಂಬಿದ ಪಾತಿ. **B.-bound** ಬಿಗಿಯಾದ ತೊಗಟೆಯಿಂದ ಬೆಳೆವಣಿಗೆಗೆ ಕುಂದಕವಾದ. **B.-pit** ಚರ್ಮ ಹದಮಾಡುವುದಕ್ಕಾಗಿ ತಿಗುಡನ್ನೂ ನೀರನ್ನೂ ಹಾಕಿರುವ ಗುಂಡಿ. **B.-tree** ಸಿಂಕೋನ.

Bark (ಕ್ರಿ. ಸಕ.) ತೊಗಟೆಯೆಬ್ಬಿಸು, — ಸುಲಿ ; ಸುತ್ತಲೂ ತೊಗಟೆಯನ್ನು ಕತ್ತರಿಸಿಹಾಕಿ ಗಿಡವನ್ನು ಕೊಲ್ಲು. (ಚರ್ಮ ಹದಮಾಡಲು) ತಿಗುಡನ್ನುಪಯೋಗಿಸು. ಚರ್ಮ ಹೆರೆ (ಮು., ಕಣಕಾಲಿನಿಂದಲೂ ಕೀಲುಗಳಿಂದಲೂ). ತೊಗಟೆ ಬೆಳೆ ; ತೊಗಟೆ ಹೊದಿಸು.

Bark[2], **Barque** ಬಾರ್ಕ್ (ನಾ.) ಮುಕ್ಕೂವೆಯ ಒಂದು ಬಗೆಯ ಹಡಗು (ಸಾ., Barque) ; (ಕಾವ್ಯ) ಹಡಗು ಅಥವಾ ದೋಣಿ.

Bark[3] ಬಾರ್ಕ್ (ನಾ., ಕ್ರಿ.) ನಾಯಿ, ನರಿ, ಮೊ. ಗಳ ಕೂಗು ; ಬಗುಳಾಟ ; ಊಳು. (ರೂಪ.) ಕೆಮ್ಮಿನ ಶಬ್ದ ; ಫಿರಂಗಿಯ ಶಬ್ದ. (His b. is worse than his bite ಅವನ ಬಾಯಿ ಕೆಟ್ಟದ್ದಾದರೂ ಹೃದಯ ಒಳ್ಳೆಯದು). (ಕ್ರಿ.) (ನಾಯಿ, ಮೊ. ಗಳು) ಬಗುಳು. (ಒರಟಾಗಿ, ಕೋಪದಿಂದ) ಒದರಿ ಹೇಳು. (B. at ತೆಗಳು ; ಬಯ್ಯು. B. out ಬಗುಳು ; ಒದರು. B. up the wrong tree ಒಬ್ಬನ ತಪ್ಪಿಗೆ ಮತ್ತೊಬ್ಬನನ್ನು ದೂರು). (ಅಸಂ.) ಕೆಮ್ಮು. **Bárker** (ನಾ.) ಬಗುಳುವದು ; ನಾಯಿ ; ಬಗುಳುಮನುಷ್ಯ. ವ್ಯಾಪಾರದಲ್ಲಿ ಅಥವಾ ಹರಾಜಿನಲ್ಲಿ ಗಿರಾಕಿಯನ್ನು ಕುದುರಿಸುವವನು. (ಅಸಂ.) ಬಂದೂಕು ; ಫಿರಂಗಿ.

Bárley ಬಾರ್ಲಿ (ನಾ.) ಯವೆ ; ಜವೆ ; ಬಾರ್ಲಿ. Pearl-b. ಯವೆಯ ನುಚ್ಚು. **B.-broth** ಒಂದು ತೆರದ ತೀವ್ರಮದ್ಯ : ಯವ ಸುರೆ. **Bárleycorn** ಯವೆಯ ಕಾಳು ; ಇದರ ಉದ್ದವು ಅಳತೆಯ ಮಾನ (⅓ ಅಂಗುಲ). **B.-mow** ಯವೆಯ ಮೆದೆ. **B. sugar** ಒಂದು ತೆರದ ಸಕ್ಕರೆಕಡ್ಡಿ. **B.-water** ಬಾರ್ಲಿಗಂಜಿ (ರೋಗಿಗಳಿಗೆ ತಂಪಾದ ಆಹಾರ)

Barm ಬಾರ್ಮ್ (ನಾ.) (ಸಾರಾಯಿ ಮಾಡುವುದಕ್ಕಾಗಿ ಉಪಯೋಗಿಸುವ) ಮೊಳೆತ ಯವೆ ಹಾಕಿಟ್ಟ ನೀರಿನಮೇಲೆ ಹುಟ್ಟುವ ನೊರೆ (ಈ ನೊರೆ ಇತರ ಪಾನೀಯಗಳು ಹುಳಿಯುವುದಕ್ಕೂ ರೊಟ್ಟಿಮಾಡುವ ಹಿಟ್ಟು ಉಬ್ಬುವುದಕ್ಕೂ ಉಪಯೋಗ) : ಒದಗು ರಸ. **Bármy** (ಗು.) ಹುಳಿನೊರೆ ತುಂಬಿರುವ. Barmy on the crumpet (ಅಸಂ.) ಮಿದುಳು ಕೆಟ್ಟ.

Bármaid
Bárman } **Bar** ನೋಡಿ.

Bármecide ಬಾರ್ಮಿಸೈಡ್ (ನಾ., ಗು.) ತಿರುಳಿಲ್ಲದ, ಆಶಾಭಂಗ ಮಾಡುವ, ಬರಿ ಕಲ್ಪನೆಯ ಫಲಕೊಡುವವನು. ('ಅರೇಬಿಯನ್ ನೈಟ್ಸ್' ಕಥೆಯಲ್ಲಿಯ ಒಬ್ಬ ರಾಜನ ಹೆಸರಿನಿಂದ)

Barn ಬಾರ್ನ್ (ನಾ.) ಕಣಜ ; ಧಾನ್ಯಾಗಾರ. (ತುಚ್ಛವಾಗಿ) ಅಂದ ಕಾಣದ ಮನೆ. **B.-door** ಕಣಜದ ಬಾಗಿಲು ; (ರೂಪ.) ತಪ್ಪಲಾಗದಷ್ಟು ದೊಡ್ಡ ಗುರಿ (ಹಲಗೆ). **B.-owl** ಕಿರಿಚುವ ಬಿಳಿಯ ಗೂಬೆ. **B.-yard** ಬೇಸಾಯಗಾರನ ಅಂಗಳ, ಹಟ್ಟಿ.

Bárnacle[1] ಬಾರ್ನಕ್‌ಲ್ (ನಾ. ; ಸಾ., ಬ. ವ. ದಲ್ಲಿ) (ಲಾಳ ಕಟ್ಟುವಾಗ ತೊಂದರೆಮಾಡದಂತೆ ಕುದುರೆಯ ಮುಸುಡಿಯಮೇಲೆ ತೊಡಿಸುವ) ಒಂದು ತೆರದ ಕಡಿವಾಣ ಅಥವಾ ಇಕ್ಕುಳ : ಬಾಯಿಕ್ಕುಳ. (ಅಸಂ., ಬ. ವ. ದಲ್ಲಿ) ಕನ್ನಡಕ.

Bárnacle[2] ಬಾರ್ನಕ್‌ಲ್ (ನಾ.) ಶೀತಕಾಲದಲ್ಲಿ ಬ್ರಿಟನ್ನಿಗೆ ಬರುವ ಉತ್ತರ ಶೀತವಲಯದ ಒಂದು ಜಾತಿಯ ಬಾತು. ಹಡಗಿನ ತಳಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭದ್ರವಾಗಿ ಅಂಟಿಕೊಳ್ಳುವ ಒಂದು ಜಾತಿಯ ಚಿಪ್ಪಿನ ಪ್ರಾಣಿ. ಬಿಡ ಲಾಗದಂತೆ ಅಂಟಿಕೊಂಡಿರುವವನು ; ಜಿಗಣೆಯಂಥ ಮನುಷ್ಯ. **Bárnacled** (ಗು.) ಚಿಪ್ಪಿನ ಪ್ರಾಣಿಗಳು ಹತ್ತಿಕೊಂಡಿರುವ. (ಬಳ. ಮಾ.) ಕನ್ನಡಕ ಹಾಕಿಕೊಂಡಿರುವ.

Bárograph ಬ್ಯಾರೊಗ್ರಾಫ್ (ನಾ.) ವಾಯುಭಾರದ ಏರಿಳಿತಗಳನ್ನು ತಾನಾಗಿ ಚಿತ್ರಿಸಿಕೊಂಡುಹೋಗುವ ನಿರಾರ್ದ್ರ ವಾಯುಭಾರ ಮಾಪಕ : ವಾಯುಭಾರ ಲೇಖಕ.

Barólogy ಬರಾಲೊಜಿ (ನಾ.) ಭಾರ ಪರಿಮಾಣ ಶಾಸ್ತ್ರ.

Barómeter ಬರಾಮಿಟರ್ (ನಾ.) (ವಾಯುಸ್ಥಿತಿಯನ್ನು ಮುಂದೆಯೇ ತಿಳಿಯುವುದಕ್ಕೂ ಒಂದು ಸ್ಥಳವು ಸಮುದ್ರಮಟ್ಟದಮೇಲೆ ಎಷ್ಟು ಎತ್ತರ ಕ್ಕಿರುವುದೆಂಬುದನ್ನು ಕಂಡುಹಿಡಿಯುವುದಕ್ಕೂ ಉಪಯೋಗಿಸುವ) ವಾಯು ಭಾರ ಮಾಪಕ. (ರೂಪ.) B. of opinion ಅಭಿಪ್ರಾಯ ಸೂಚಕ. **Barómetry** — ಮೆಟ್ರಿ (ನಾ.) ವಾಯುಭಾರ ಮಾಪನ. **Barométric(al)** ಬ್ಯಾರೊಮೆಟ್ರಿ — (ಗು.) ; **Barométrically** (ಕ್ರಿ. ವಿ.)

Báron ಬ್ಯಾರನ್ (ನಾ.) ಬ್ರಿಟಿಷ್ ಪಾರ್ಲಿಮೆಂಟಿನ ಶ್ರೀಮಂತಸಭೆಯ ಸದಸ್ಯ. ರಾಜಮಾನ್ಯ ಶ್ರೀಮಂತರಲ್ಲಿ ಕಡೆಯ ದರ್ಜೆಗೆ ಸೇರಿದ ವನು : ಬ್ಯಾರನ್. (ಚರಿತ್ರೆ) ಯುದ್ಧ, ಮೊ. ಗಳಲ್ಲಿ ಘನವಾದ ಸೇವೆ ಮಾಡಿ ರಾಜನಿಂದ ಮಾನ್ಯಪಡೆದವನು. (ಅಮೆ. ಸಂ.) ಯಾವುದಾ ದರೂ ಒಂದು ಗೊತ್ತಾದ ಸರಕಿನ ಭಾರಿವ್ಯಾಪಾರಿ (Beef, Beer, b.). **Báronage** ಬ್ಯಾರೊನೆಜ್ (ನಾ.) ಬ್ಯಾರನ್ ಶ್ರೀಮಂತ ವರ್ಗ. ಬ್ಯಾರನ್ ವರ್ಗದ ಪಟ್ಟಿಯೂ ಅವರ ವಿಷಯದ ಟಿಪ್ಪಣಿ ಗಳೂ ಇರುವ ಪುಸ್ತಕ. **Bároness** (ನಾ.) ಬ್ಯಾರನ್ನಿನ ಹೆಂಡತಿ ; ತನ್ನ ಹಕ್ಕಾಗಿಯೇ ಬ್ಯಾರನ್ ಪದವಿ ಪಡೆದವಳು. **Báronet** (ನಾ., ಕ್ರಿ. ಸಕ.) ವಂಶಪಾರಂಪರ್ಯವಾಗಿ ನಡೆದುಬರುವ ಘನತೆಯ ಬಿರುದುಗಳಲ್ಲಿ ಕೊನೆಯ, ಮತ್ತು ಬ್ಯಾರನ್‌ದರ್ಜೆಯ ಕೆಳಗಿನ, ದರ್ಜೆಯವನು : ಬ್ಯಾರೊನೆಟ್. (ಕ್ರಿ.) ಬ್ಯಾರೊನೆಟ್ ದರ್ಜೆಗೆ ಏರಿಸು. **Báronetage** — ಟೆಜ್ (ನಾ.) ಬ್ಯಾರೊನೆಟ್ಟುಗಳ ವರ್ಗ, ದರ್ಜೆ. ಈ ವರ್ಗದವರ ಪಟ್ಟಿಯೂ ಟಿಪ್ಪಣಿಗಳೂ ಇರುವ ಪುಸ್ತಕ. **Báronetcy** — ನೆಟ್ಸಿ (ನಾ.) ಬ್ಯಾರೊನೆಟ್ಟಿನ ಪದವಿ. **Barónial** ಬರೋನಿಯಲ್ (ಗು.) ಬ್ಯಾರನ್ನುಗಳ ; ಅವರ ಯೋಗ್ಯತೆಗೆ ತಕ್ಕ. **Bárony** ಬ್ಯಾರೊನಿ (ನಾ.) ಬ್ಯಾರನ್ನಿನ ಜಹಗೀರು, ಪದವಿ, ಆಧಿಪತ್ಯ. (ಐರ್ಲೆಂಡಿನಲ್ಲಿ) ಒಂದು ಕೌಂಟಿಯ (ಡಿಸ್ಟ್ರಿಕ್ಟಿನ) ಭಾಗ ; (ಸ್ಕಾಟ್ಲೆಂಡಿನಲ್ಲಿ) ದೊಡ್ಡ ಮಾನ್ಯದ ಜಮೀನು.

Baróque ಬರಾ(ರೋ)ಕ್ (ಗು., ನಾ.) ಅಸಮ ರೂಪವುಳ್ಳ ; ವಕ್ರ ; ವಿಕೃತ (ಮು., ಶಿಲ್ಪದ ಶೈಲಿ ಅಥವಾ ಅಲಂಕಾರದಲ್ಲಿ)

Bároscope ಬ್ಯಾರೊಸ್ಕೋಪ್ (ನಾ.) ವಾಯುವಿನಲ್ಲಿರುವ ವಸ್ತುಗಳು ತಮ್ಮ ನಿಜವಾದ ತೂಕಕ್ಕಿಂತ ತಾವು ಆಕ್ರಮಿಸಿಕೊಂಡಿರುವ ವಾಯು ವಿನ ಘನಪರಿಮಾಣವಷ್ಟರ ತೂಕ ಕಡಮೆಯುಳ್ಳವಾಗಿರುವುವು ಎಂಬ ತತ್ತ್ವವನ್ನು ನಿದರ್ಶನ ಮಾಡುವ ಸಲಕರಣೆ : ವಾಯುಭಾರ ದರ್ಶಕ.

Baroúche ಬರೂಷ್ (ನಾ.) (ನಾಲ್ಕು ಮಂದಿ ಸವಾರಿಗರೂ ಬಂಡಿಯ ವನೂ ಕುಳಿತುಕೊಳ್ಳಲಾಗುವ, ಮತ್ತು ಮುಚ್ಚಬಹುದಾದ ಛಾವಣಿಯುಳ್ಳ) ಒಂದು ತೆರದ ನಾಲ್ಕುಚಕ್ರದ ಬಗ್ಗಿ.

Bárque. **Bark**[2] ನೋಡಿ.

Bárrack ಬ್ಯಾರಕ್ (ನಾ., ಕ್ರಿ.) ಸಿಪಾಯಿಗಳ ವಾಸಕ್ಕಾಗಿ ಕಟ್ಟಿದ ಸ್ಥಿರವಾದ ಕಟ್ಟಡಗಳು (ಸಾ., ಬ. ವ. ದಲ್ಲಿ) ; ಸಿಪಾಯಿಗಳ ವಾಸ ಸ್ಥಾನ ; ದಂಡಿನ ಪಾಳೆಯ. ಇತರರನ್ನು ಸಹ ಹೀಗೆ ಗುಂಪು ಗುಂಪಾಗಿ ಸೇರಿಸಿ ಅವರು ವಾಸಮಾಡುವುದಕ್ಕೆ ಏರ್ಪಡಿಸಿದ ಕಟ್ಟಡ. ಅಂದವಿಲ್ಲದೆ ಜೋಳಿಗಾಗಿ ಕಟ್ಟಿದ ಕಟ್ಟಡ. (ಕ್ರಿ.) ಇಂಥ ಕಟ್ಟಡದಲ್ಲಿ ಇಡು, ವಾಸಮಾಡು. (ಕ್ರಿಕೆಟ್‌ಪಂದ್ಯ, ಮೊ. ಗಳಲ್ಲಿ ಆಟಗಾರರನ್ನು) ಗೇಲಿಮಾಡು, ಕಕ್ಕಾಬಿಕ್ಕಿಯಾಗುವಂತೆ ಕೂಗಾಟದಿಂದ ಪರಿಹಾಸ್ಯ ಮಾಡು.

Barracoón ಬ್ಯಾರಕೂನ್ (ನಾ.) ಗುಲಾಮರು, ಕೈದಿಗಳು, ಮೊ. ವರನ್ನಿಡಲು ಕಟ್ಟಿರುವ ಗುಡಿಸಿಲುಗಳು : ಗುಲಾಮರ ದೊಡ್ಡಿ.

Bárrage. **Bar** ನೋಡಿ.

Bárrator,-er ಬ್ಯಾರಟರ್ (ನಾ.) ಮಠದ ಉದ್ಯೋಗಗಳನ್ನಾಗಲಿ ಸರ್ಕಾರದ ಹುದ್ದೆಗಳನ್ನಾಗಲಿ ಮಾರುವವನು ಅಥವಾ ಕೊಳ್ಳುವವನು. ಲಂಚಕೋರ ನ್ಯಾಯಾಧೀಶ. (ನ್ಯಾ. ಶಾ.) ಕಾಡಿ ತೊಂದರೆ ಕೊಡುವ ಕೋರ್ಟುವ್ಯಾಜ್ಯಗಾರ. ದುರಭಿಪ್ರಾಯದಿಂದ ಮನಸ್ತಾಪ ತಂದು ಹಾಕುವವನು ; ಜಗಳಗಂಟಿ. (ನೌಕಾ ನ್ಯಾಯ) ಹಡಗಿನ ಮಾಲೀಕ ರನ್ನು ಮೋಸಪಡಿಸುವ, ಅಥವಾ ಕೇವಲ ಅಸಡ್ಡೆಯಿಂದ ಅವರು ನಷ್ಟಪಡುವಂತೆ ಮಾಡುವ, ಹಡಗಿನ ಮುಖ್ಯಾಧಿಕಾರಿ. **Bárratry** (ನಾ.) ; **Bárratrous** (ಗು.)

Bárrel ಬ್ಯಾರೆಲ್ (ನಾ.) (ಮರದ ಪಟ್ಟಿಗಳನ್ನು ಸೇರಿಸಿ ದುಂಡಾಗಿ ಮಾಡಿ, ಕಬ್ಬಿಣದ ಪಟ್ಟಿಗಳಿಂದ ಭದ್ರಪಡಿಸಿ, ಕೊನೆಗಳೆರಡೂ ಚಪ್ಪಟೆಯಾಗಿರುವಂತೆ ಮಾಡಿದ, ದ್ರವ ಅಥವಾ ಘನಪದಾರ್ಥವನ್ನು ತುಂಬುವುದಕ್ಕಾಗಿ ಉಪ ಯೋಗಿಸುವ) ಪೀಪಾಯಿ. ಒಂದು ಅಳತೆಯ ಮಾನ (B.-bulk ಐದು ಘನಅಡಿಗಳು). ಗಡಿಯಾರ, ಮೊ. ಯಂತ್ರಸಾಧನಗಳಲ್ಲಿ ಸುತ್ತುತ್ತಿರುವ ಉರುಳೆ (cylinder). ಕುದುರೆ, ಮೊ. ಗಳ ಹೊಟ್ಟೆ ಮತ್ತು ಸೊಂಟ. ಬಂದೂಕಿನ ಕೋವಿ, ನಳಿಕೆ. **B.-drain** ಉರುಳೆ ಯಾಕಾರದ ಚರಂಡಿ. **B.-vault** ಅರ್ಧ ಉರುಳೆಯಾಕಾರದ ಒಳಮಾಳಿಗೆ. **Bárrel** (ಕ್ರಿ. ಸಕ.) ಪೀಪಾಯಿಗಳಲ್ಲಿ ತುಂಬು, ಕೂಡಿಡು, ಸಂಗ್ರಹಿಸು. **Bárrelled** (ಗು.)

Bárren ಬ್ಯಾರೆನ್ (ಗು., ನಾ.) ಗೊಡ್ಡು ; ಬಂಜೆ ; ಬರಡು ; ಫಲಬಿಡದ ; ಬಂಜರು ; (ಗಣಿಯ ವಿಷಯದಲ್ಲಿ) ಫಲದೊರೆಯದ. ಬೆಳೆಯಾಗದ ನೆಲ. (ರೂಪ.) ಶುಷ್ಕ ; ನಿಸ್ಸಾರ ; ನೀರಸ ; ನಿಷ್ಫಲ. ಜಡ ; ಮಂದ. **Bárrenly** (ಕ್ರಿ. ವಿ.) ; **Bárrenness** (ನಾ.)

Bárret ಬ್ಯಾರೆಟ್ (ನಾ.) ಒಂದು ತೆರದ ಚಪ್ಪಟೆಯ ಟೋಪಿ (ಮು., ರೋ. ಕ್ಯಾ. ಪಾದ್ರಿಗಳು ಧರಿಸುವ ಚದರಟೋಪಿ)

Barricáde, -cádo ಬ್ಯಾರಿಕೇಡ್, — ಕೇಡೊ (ನಾ., ಕ್ರಿ. ಸಕ.) ರಸ್ತೆ ಮೊ. ಗಳಲ್ಲಿ ರಕ್ಷಣೆಗಾಗಿ ಪೀಪಾಯಿ, ಬಂಡಿ, ಕಲ್ಲುಗುಂಡು, ಸಿಕ್ಕಿ ಸಿಕ್ಕಿದ ಸಾಮಾನು — ಇವುಗಳಿಂದ ಅವಸರವಸರವಾಗಿ ತಡೆಗಟ್ಟಿ ಮಾಡಿದ ಅಳ್ವೇರಿ : ಅವಸರದ ಅಡ್ಡಗಟ್ಟು ; ತಡೆಗಟ್ಟು ; ಪ್ರತಿಬಂಧಕ (ರೂಪ. ಸಹ). ಹಡಗಿನಮೇಲಿನ ಮರದ ಕಟಕಟೆ. (ಕ್ರಿ.) ಅಡ್ಡಗಟ್ಟು ಹಾಕು ; (ಮನುಷ್ಯನನ್ನಾಗಲಿ ಸ್ಥಳವನ್ನಾಗಲಿ) ಅಡ್ಡಗಟ್ಟು ಹಾಕಿ ರಕ್ಷಿಸು.

Bárrier ಬ್ಯಾರಿಯರ್ (ನಾ., ಕ್ರಿ. ಸಕ.) ಮುಂದೆ ಹೋಗದಂತೆ, ಒಳಹೊಗಲು ಆಸ್ಪದವಿಲ್ಲದಂತೆ, ತಡೆಯುವ ಅಡ್ಡಗಟ್ಟು. (ಹಿಂದಿನ ಕಾಲದಲ್ಲಿ) ಊರುಬಾಗಿಲ ರಕ್ಷಣೆಗಾಗಿ ಅದರ ಮುಂದೆ ದಸಿಗಳನ್ನು ನೆಟ್ಟು ಮಾಡಿದ ಅಡ್ಡಗಟ್ಟು. ಗಡಿದುರ್ಗ. (ರೂಪ.) ತಡೆ ; ಪ್ರತಿ ಬಂಧಕ ; ಅಡ್ಡಿ ; ಅಡಚಣೆ. ಸುಂಕದ ಕಟ್ಟೆ ; ಉಕ್ಕಡ. ಎಲ್ಲೆ ; ಮೇರೆ ; ಸರಹದ್ದು. (ಕ್ರಿ.) ತಡೆಗಟ್ಟು ; ಪ್ರತಿಬಂಧಿಸು. **B.-gate** ತಡೆಗಟ್ಟಿನ ಬಾಗಿಲು. **B.-reef** ಸಮುದ್ರದಲ್ಲಿ, ಆಳವಾದ ನೀರಿ ನಿಂದೆದ್ದು, ಒಂದು ದ್ವೀಪದ ಸುತ್ತಲೂ ಅಥವಾ ದಡಕ್ಕೆ ಸಮಾಂತರ ದಲ್ಲಿಯೂ ಹಬ್ಬಿರುವ ಹವಳದ ದಿಬ್ಬ. **B.-treaty** (ರಾಜ್ಯಗಳ) ಎಲ್ಲೆ ಗೊತ್ತುಮಾಡಿರುವ ಕರಾರು ; ಎಲ್ಲೆಯ ಕರಾರು.

Bárring ಬಾರಿಂಗ್ (ಉಪ.) ಹೊರತು ; ಬಿಟ್ಟು ; ಉಳಿದು ; ವಿನಾ.

Bárrister ಬ್ಯಾರಿಸ್ಟರ್ (ನಾ.) ಮೇಲಿನ ಕೋರ್ಟುಗಳಲ್ಲಿ ವಕೀಲಿ ಮಾಡುವ ಅಧಿಕಾರ ಪಡೆದ ನ್ಯಾಯಶಾಸ್ತ್ರಜ್ಞ (ಪೂರ್ತಿಯಾದ ಮಾತು : Barrister-at-law) : ಬ್ಯಾರಿಸ್ಟರ್. Revising-b. ಬ್ರಿಟಿಷ್ ಪಾರ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೆಂಟಿನ ಚುನಾವಣೆಯಲ್ಲಿ ಅಭಿಮತ (ವೋಟು) ಕೊಡುವ ಹಕ್ಕುಳ್ಳವರ ಪಟ್ಟಿಗಳನ್ನು ಸರಿನೋಡಿ ಪರಿಷ್ಕರಿಸುವುದಕ್ಕಾಗಿ ನಿಯಾಮಕನಾದವನು.

Bárrow[1] ಬ್ಯಾರೋ (ನಾ.) ಬೆಟ್ಟ ; ಗುಡ್ಡ ; ದಿಣ್ಣೆ (ಬೆಟ್ಟ ಗುಡ್ಡ ಗಳ ಹೆಸರುಗಳಲ್ಲಿ : ಉದಾ. — ಇಂಗ್ಲೆಂಡಿನ ಲ್ಯಾಂಕಾಷಯರಿನಲ್ಲಿ, Whitbarrow). (ಪ್ರಾಚೀ. ಶಾ.) ಗೋರಿಯ ಗುಡ್ಡೆ.

Bárrow[2] ಬ್ಯಾರೋ (ನಾ.) ಕೈಬಂಡಿ (Hand-b.) ; ಒಂದು ಕೈಬಂಡಿ ತುಂಬು, — ಥರ್ಟಿ. ಭಾರ ಹೊರುವುದಕ್ಕಾಗಿ ಉಪಯೋಗಿಸುವ ಹಿಡಿಗಳುಳ್ಳ ಮರದ ಚೌಕಟ್ಟು (ಇದಕ್ಕೆ ನಾಲ್ಕು ಕಾಲುಗಳೂ ಇರಬಹುದು). (ಅಶಕ್ತನನ್ನು ಮಲಗಿಸಿ ಎತ್ತಿಕೊಂಡುಹೋಗುವ) ಕೈಮಂಚ. ಚಟ್ಟ. Wheel-b. ಒಂದು ಚಕ್ರವೂ ಹಿಡಿಗಳೂ ಉಳ್ಳದ್ದಾಗಿ, ಸಾಮಾನು, ಮಣ್ಣು, ಮೊ. ನ್ನು ತುಂಬಿ, ಒಬ್ಬನು ತಳ್ಳಿಕೊಂಡುಹೋಗಬಹುದಾದ, ಮುಚ್ಚಳವಿಲ್ಲದ ಪೆಟ್ಟಿಗೆಯಂಥ ಕೈಬಂಡಿ : ಒಂದುಚಕ್ರದ ಕೈಬಂಡಿ. Coster's b. ಎರಡು ಚಕ್ರದ ಕೈಬಂಡಿ.

Bárrow[3] ಬ್ಯಾರೋ (ನಾ.) ಕೂಸಿನ, ತೋಳಿಲ್ಲದ ಉದ್ದವಾದ ಉಣ್ಣೆಯ ಅಂಗಿ.

Bart. Baronet ಎಂಬ ಪದದ ಸಂಕ್ಷಿಪ್ತ. (ಆ ಘನತೆ ಪಡೆದಿರುವವನ ಹೆಸರಿನ ಮುಂದೆ ಬರೆಯುವ ರೂಪ)

Bárter ಬಾರ್ಟರ್ (ಕ್ರಿ., ನಾ.) ಯಾವುದಾದರೂ ಬೇಕಾದ ಪದಾರ್ಥ ವನ್ನು ವ್ಯಾಪಾರಮಾಡುವಲ್ಲಿ (ಅದಕ್ಕೆ ಹಣಕೊಡದೆ) ಅದೇ ಬೆಲೆ ಯಾಗುವ ಮತ್ತೊಂದು ಪದಾರ್ಥವನ್ನು ವಿನಿಮಯವಾಗಿ ಕೊಡು : ಮಾರುವೆ ಮಾಡು. (ರೂಪ.) (ಸಾ., B. away) ವಿನಿಮಯ ಮಾಡು ; ಅದಲುಬದಲು ಮಾಡು. (ಸಾ., ಯೋಗ್ಯವಲ್ಲದ) ಪ್ರತಿಫಲಕ್ಕಾಗಿ ಕೊಟ್ಟುಬಿಡು, ಮಾರಿಬಿಡು. ವಸ್ತು ವಿನಿಮಯ ವ್ಯಾಪಾರ ಮಾಡು. (ನಾ.) ವಿನಿಮಯ ವ್ಯಾಪಾರ ; ಅದಲುಬದಲು ವ್ಯಾಪಾರ (ರೂಪ. ಸಹ). ಬದಲಾಗಿ ಕೊಡುವ ಪದಾರ್ಥ. (ಗಣಿತ) ವಿಧ ವಿಧದ ಪದಾರ್ಥಗಳ ಪರಸ್ಪರ ಮೂಲ್ಯಪರಿಮಾಣಗಳನ್ನು ಗಣಿಸುವುದು : ವಿನಿಮಯ ಗಣನೆ ; ಈ ಗಣನೆಯ ವಿಧಾನ. **Bárterer** (ನಾ.)

Bartisán, -zán ಬಾರ್ಟಿಸ್ಯಾನ್ (ನಾ.) ದುರ್ಗದ ಅಥವಾ ಕ್ರೈಸ್ತ ದೇವಾಲಯದ ಮೇಲ್ಛಾಗದಲ್ಲಿ, ಬಿಡುಗಂಡಿಗಳೊಡನೆಕೂಡಿದ ಕೈಪಿಡಿಗೋಡೆ, ಅಥವಾ ಮೂಲೆಗಳಲ್ಲಿ ಚಾಚಿಕೊಂಡಿರುವ ಬುರುಜು.

Bárton ಬಾರ್ಟನ್ (ನಾ.) ಬೇಸಾಯಗಾರನ ಮನೆ, ಕೊಟ್ಟಿಗೆ, ಕಣಜ, ಮೊ. ಗಳು ಸುತ್ತಲೂ ಇರುವ ಅಂಗಳ : ಬೇಸಾಯಗಾರನ ಅಂಗಳ. ಸ್ವಂತಬೇಸಾಯದ ಜಮೀನು.

Barycéntric ಬ್ಯಾರಿಸೆಂಟ್ರಿಕ್ (ಗು.) ಗುರುತ್ವ ಕೇಂದ್ರದ ; ಭಾರ ಕೇಂದ್ರೀಯ.

Barýphony ಬ್ಯರಿಫೊನಿ (ನಾ.) (ವೈ. ಶಾ.) ಮಾತನಾಡುವುದಕ್ಕೆ ಕಷ್ಟವಾಗುವುದು : ಕಷ್ಟಧ್ವನಿ.

Barýta ಬರೈಟ (ನಾ.) ಬೇರಿಯಂ ಮತ್ತು ಆಮ್ಲಜನಕ ಸಂಯೋಗ ದಿಂದಾದ ಒಂದು ಸಂಯುಕ್ತ : ಬೇರಿಯಂ ಪ್ರೋಟಾಕ್ಸೈಡ್. ಬಹಳ ಭಾರವಾದ ಒಂದು ಜಾತಿಯ ಚವುಳುಮಣ್ಣು. **Barýtic** (ಗು.)

Barýtes ಬರೈಟೀಸ್ (ನಾ.) ಬೇರಿಯಂ, ಗಂಧಕ, ಆಮ್ಲಜನಕ — ಇವು ಮೂರೂ ಸೇರಿ ಸಂಯುಕ್ತವಾದ ಸ್ಥಿತಿಯಲ್ಲಿ ಸ್ವಾಭಾವಿಕವಾಗಿ ದೊರೆಯುವ ಪದಾರ್ಥ : ಬರೈಟೀಸ್ (ಇದಕ್ಕೆ Heavy spar ಎಂದೂ ಹೆಸರು. ಇದನ್ನು ಬಿಳಿಯ ಬಣ್ಣಕ್ಕಾಗಿ ಉಪಯೋಗಿಸುತ್ತಾರೆ)

Bárytone, -itone ಬ್ಯಾರಿಟೋನ್ (ಗು., ನಾ.) (ಸಂಗೀತದಲ್ಲಿ) ಪುರುಷರ ತಾರ ಸ್ವರಕ್ಕೂ ಮಂದ್ರ ಸ್ವರಕ್ಕೂ ಮಧ್ಯವರ್ತಿಯಾದ (ಸ್ವರ) : ಮಧ್ಯಮ (ಸ್ವರ) ; ಇಂಥ ಧ್ವನಿಯುಳ್ಳ (ಸಂಗೀತಗಾರ). ಮಂದ್ರ ಧ್ವನಿಯುಳ್ಳ (ವಾದ್ಯ). (ಗ್ರೀಕ್ ವ್ಯಾ.) ಕೊನೆಯ ಅಕ್ಷರದ ಮೇಲೆ ಉದಾತ್ತ ಸ್ವರ ಬೀಳದ (ಪದ)

Básal. **Base** ನೋಡಿ.

Básalt, Basált ಬ್ಯಾಸಾಲ್ಟ್, ಬಸಾಲ್ಟ್ (ನಾ.) ಕಪ್ಪು, ಹಸಿರು ಅಥವಾ ಕಂದು ಬಣ್ಣದ ಅಗ್ನಿಶಿಲೆ (ಎಂದರೆ, ಶಿಲಾ ನಿರ್ಮಾಣದಲ್ಲಿ, ಉಷ್ಣದಿಂದ ಕರಗಿ ಆದ ಕಲ್ಲು. ಈ ಕಲ್ಲು ಅನೇಕ ವೇಳೆ ಕಂಬದಂಥ ಪದರ ಗಳಾಗಿ ಭೂಮಿಯಲ್ಲಿ ದೊರೆಯುವುದು). (Wedgewood ಎಂಬಾತನು ಮೊದಲು ತಯಾರಿಸಿದ) ಕಪ್ಪು ಪಿಂಗಾಣಿಮಣ್ಣು. **Basáltic** (ಗು.) ; **Basáltiform** (ಗು.)

Básanite ಬ್ಯಾಸನೈಟ್ (ನಾ.) ಚಿನ್ನ, ಮೊ. ನ್ನು ಉಜ್ಜಿ ಅವುಗಳ ಬಣ್ಣವನ್ನು ಪರೀಕ್ಷೆಮಾಡುವುದಕ್ಕಾಗಿ ಉಪಯೋಗಿಸುವ ಬೆಣಚುಕಲ್ಲಿನ ಜಾತಿಯ ಕಪ್ಪುಕಲ್ಲು : ಒರೆಗಲ್ಲು ; ನಿಕಷ.

Bas bleu (F) ಬಾ ಬ್ಲ (ನಾ.) ವಿದ್ಯಾವತಿ ; ಹಾಗೆ ತೋರಿಸಿಕೊಳ್ಳುವವಳು.

Báscule ಬ್ಯಾಸ್‌ಕ್ಯೂಲ್ (ನಾ.) (ಒಂದು ವಿಧದ ಎತ್ತುಸೇತುವೆಯಲ್ಲಿ ಉಪಯೋಗಿಸುವ) ಸನ್ನೆಯ ಸಲಕರಣೆ. **B.-bridge** ಮೇಲಕ್ಕೆತ್ತಿ ನಿಲ್ಲಿಸುವುದಕ್ಕೂ ತಳಹಾಸುವುದಕ್ಕೂ ಅಳವಡಿಸಿರುವ ಒಂದು ತೆರದ ಎತ್ತುಸೇತುವೆ.

Base ಬೇಸ್ (ನಾ.) ತಳ ; ತಳಹದಿ ; ಅಡಿ ; ಪಾದ ; ಆಧಾರ ; ಆಸರೆ ; ಮೂಲ ; ಅಸ್ತಿವಾರ ; ಪಾಯ. [B.-ball ಅಮೆ. ಸಂ. ಜನರ ಒಂದು ತೆರದ ಚೆಂಡಾಟ ; ಈ ಆಟದಲ್ಲುಪಯೋಗಿಸುವ ಚೆಂಡು. (ಚೆಂಡನ್ನು ಹೊಡೆದಮೇಲೆ ಪ್ರತಿ ಆಟಗಾರನೂ ಸಾಮಾನ್ಯವಾಗಿ ಹದ್ದಿನ ನಾಲ್ಕು ನೆಲೆಗಳನ್ನು ಸುತ್ತಬೇಕಾಗಿರುವುದರಿಂದ ಈ ಹೆಸರು ಬಂದಿದೆ)]. (ವಿಗ್ರಹ, ಕಂಬ, ಮೊ. ಗಳ) ಪೀಠ. (ಸ. ವಿ., ಪ್ರಾ. ವಿ.) ಒಂದು ಅಂಗ ಅಥವಾ ಭಾಗವು ಪ್ರಧಾನ ಭಾಗಕ್ಕೆ ಸೇರಿರುವ ಕೊನೆ : ಮೂಲ (ಉದಾ.— ಬಾಹು ಮೂಲ). (ಶಿಲ್ಪ) ಪೀಠಕ್ಕೂ ಸ್ತಂಭದಂಡಕ್ಕೂ ಮಧ್ಯೆ ಇರುವ ಸ್ತಂಭಭಾಗ ; ಸುಣ್ಣ ಪಾದ. (ಜ್ಯಾ.) ಯಾವು ದಾದರೂ ಸಮಕ್ಷೇತ್ರಾಕೃತಿಯಾಗಲಿ ಘನಾಕೃತಿಯಾಗಲಿ ನಿಂತಿರುವ ರೇಖೆ, ಕ್ಷೇತ್ರ : ಆಧಾರ ರೇಖೆ, ಆಧಾರ ಕ್ಷೇತ್ರ. (ರ. ವಿ.) ಆಮ್ಲ ದೊಡನೆ ಸಂಯುಕ್ತವಾಗುವುದರಿಂದ ಲವಣಹುಟ್ಟುವಂತೆ ಮಾಡುವ ಒಂದು ಸಂಯುಕ್ತ ಪದಾರ್ಥ : ಆಮ್ಲ ಪ್ರತಿವಸ್ತು ; ಪ್ರತ್ಯಾಮ್ಲ ; ಕ್ಷಾರ. ಸೇನೆಗೆ ಬೇಕಾದ ಎಲ್ಲ ಸಾಮಗ್ರಿಗಳೂ ವೈದ್ಯಶಾಲೆಗಳೂ ಇರುವ ಪಟ್ಟಣ ಅಥವಾ ಪ್ರದೇಶ ; ಸೈನ್ಯಸನ್ನಾಹಕ್ಕೆ ಆಧಾರ ಸ್ಥಾನ. (ಸರ್ವೇ) ಜ್ಯಾಮಿತೀಯ ಆಧಾರರೇಖೆಯಾಗಿ ಉಪಯೋ ಗಿಸುವ ಗೊತ್ತಾದ ಒಂದು ರೇಖೆ. (ಗಣಿತ) ಸಂಖ್ಯಾನಿರ್ದೇಶ ಪದ್ಧತಿಯಲ್ಲಿ, (ಎಂದರೆ, ಸಂಖ್ಯೆಗಳನ್ನು ಹೇಳುವ ಅಥವಾ ಬರೆಯುವ ಪದ್ಧತಿಯಲ್ಲಿ) ಅಥವಾ 'ಲಾಗರಿತಮ್ಸ್' ಎಂಬ ಗಣನಾ ಸೌಲಭ್ಯ ಪದ್ಧತಿಯಲ್ಲಿ, ಆಧಾರಸಂಖ್ಯೆ (ಉದಾ. — ದಶಮಾಂಶ ಗಣನೆಯಲ್ಲಿಯೂ 'ಲಾಗರಿತಮ್ಸ್'ನ ಒಂದು ಪದ್ಧತಿಯಲ್ಲಿಯೂ, ೧೦ ಎಂಬುದು ಆಧಾರ ಸಂಖ್ಯೆ). (ವ್ಯಾ.) ಧಾತು ; ಪ್ರಕೃತಿ. (ಬಣ್ಣ ಅದ್ದುವುದರಲ್ಲಿ) ಬಣ್ಣ ಮಾಸಿಹೋಗದೆ ಗಟ್ಟಿಯಾಗಿ ಹಿಡಿದುಕೊಳ್ಳುವುದಕ್ಕಾಗಿ ಉಪಯೋಗಿ ಸುವ ಪದಾರ್ಥ : ಬಣ್ಣಗಚ್ಚು. **Básal** (ಗು.) ಆಧಾರವಾದ ; ಮೂಲದ ; ಮೂಲದಲ್ಲಿಯ ; ತಳದ. **Báseless** (ಗು.) ಆಧಾರ ವಿಲ್ಲದ ; ನಿರಾಧಾರವಾದ. **Báselessness** (ನಾ.) ; **Básement** (ನಾ.) ಕಟ್ಟಡದ ತಳಹದಿ ; ಮೇಲ್ಛಾಯ ; ನೆಲದ ಮಟ್ಟಕ್ಕೆ ತಳಗಡೆ ಇರುವ ಮನೆಯ ವಾಸದ ಭಾಗ : ತಳಮನೆ. **Básic** (ಗು.) (= Basal). (ರ. ವಿ.) Basic salts ಕ್ಷಾರಭಾಗವು ಆಮ್ಲಭಾಗ ಕ್ಕಿಂತಲೂ ಅಧಿಕವಾಗಿರುವ ಲವಣಗಳು : ಕ್ಷಾರೀಯ ಲವಣಗಳು. Basic slag ಉಕ್ಕಿನ ತಯಾರಿಯಲ್ಲಿ ಉಪವಸ್ತುವಾಗಿ ದೊರೆಯುವ, ಗೊಬ್ಬರ ಕ್ಕಾಗಿ ಉಪಯೋಗಿಸುವ, ರಂಜಕ ಲವಣಗಳನ್ನೊಳಕೊಂಡ ಒಂದು ಪದಾರ್ಥ. **Basícity** (ನಾ.) ಪ್ರತ್ಯಾಮ್ಲದ ಒಂದು ಅಥವಾ ಹೆಚ್ಚಾದ ತುಲ್ಯಪರಿಮಾಣಗಳೊಡನೆ ಸಂಯುಕ್ತವಾಗಲು ಆಮ್ಲಕ್ಕಿರುವ ಶಕ್ತಿ : ಕ್ಷಾರ ಸಂಯೋಗ ಶಕ್ತಿ.

Base (ಗು.) ನೀಚ ; ತುಚ್ಛ ; ಅಲ್ಪ ; ಹೀನ ; ಅಯೋಗ್ಯ ; ನಿಕೃಷ್ಟ. (ಸ. ವಿ.) ಕುರುಚಾದ, **B.-born** ಕೀಳು ಹುಟ್ಟಿನ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಕುಲೀನ ; ನೀಚ ಮೂಲವುಳ್ಳ ಅಥವಾ ನೀಚ ಸ್ವಭಾವವುಳ್ಳ. ಜಾರಜ. **B. coin** ಖೋಟಾ ನಾಣ್ಯ : ಕಳ್ಳ ನಾಣ್ಯ. **B.-court** ಶ್ರೀಮಂತ ಗೃಹದಲ್ಲಿ ಅಥವಾ ದುರ್ಗದಲ್ಲಿ ಸೇವಕರು ವಾಸವಾಗಿರುವ ಕೆಳಗಿನ ಅಥವಾ ಹೊರಗಿನ ಅಂಗಳ. ಬೇಸಾಯಗಾರನ ಮನೆಯ ಹಿಂದಿನ ಅಂಗಳ. ದಾಖಲೆಯಿಡದ ನ್ಯಾಯಸ್ಥಾನ. **B. metal** ಕ್ಷುದ್ರ ಲೋಹ. **Básely** (ಕ್ರಿ. ವಿ.) ; **Báseness** (ನಾ.)

Base (ಕ್ರಿ. ಸಕ.) ಸ್ಥಾಪಿಸು ; ಆಧಾರವಾಗಿಟ್ಟುಕೊ.

Bash ಬ್ಯಾಷ್ (ಕ್ರಿ. ಸಕ.) ಚೂರುಚೂರಾಗುವಂತೆ ಅಪ್ಪಳಿಸಿ ಹೊಡೆ.

Bashaẃ ಬಷಾ (ನಾ.) Pasha ಎಂಬುದರ ಪ್ರಾಚೀನ ರೂಪ.

Báshful ಬ್ಯಾಷ್‌ಫುಲ್ (ಗು.) ಲಜ್ಜೆಯಿಂದ ಕೂಡಿದ ; ನಾಚುವ ; ಮುಖಹೇಡಿಯಾದ ; ಸಂಕೋಚ ಪ್ರಕೃತಿಯ ; ಸಿಗ್ಗಾಳಿ. **Báshfully** (ಕ್ರಿ. ವಿ.) ; **Báshfulness** (ನಾ.)

Bashi-bazoúk ಬ್ಯಾಷಿ ಬಝೂಕ್ (ನಾ.) (ಪದದ ಅರ್ಥ : ತಲೆ ತಿರುಗಿದ ಮನುಷ್ಯ). (ತುರ್ಕಿಯವರ ಅಕ್ಲುಪ್ತ ಸೈನ್ಯದಲ್ಲಿ) ಕೊಳ್ಳೆಹೊಡೆಯುವುದರಲ್ಲಿಯೂ ಕ್ರೌರ್ಯದಲ್ಲಿಯೂ ಪ್ರಸಿದ್ಧನಾದ ಕೂಲಿಸಿಪಾಯಿ.

Básial ಬೇಸಿಯಲ್ (ಗು.) ಮುತ್ತಿಟ್ಟುಕೊಳ್ಳುವುದರ ; ಚುಂಬನದ.

Básic. **Base** ನೋಡಿ.

Básil ಬ್ಯಾಸಿಲ್ (ನಾ.) ತುಲಸಿ, ಮೊ. ವು ಸೇರಿದ ಒಂದು ಸಸ್ಯಜಾತಿ.

Básilar ಬ್ಯಾಸಿಲರ್ (ಗು.) ಮೂಲದ ; ಮೂಲಸ್ಥ (ಮು., ಕಪಾಲ ಮೂಲದಲ್ಲಿಯ). **Básilary** (ಗು.)

Basílic(al) ಬಸಿಲಿಕ್, —ಕಲ್ (ಗು.) (ಶ. ವಿ.) Basilical vein ಮೊಣಕೈಯಿಂದ ಹೊರಡುವ ತೋಳಿನ ದೊಡ್ಡ ಅಭಿಧಮನಿ.

Basílica ಬಸಿಲಿಕ (ನಾ.) (ಮೊದಲನ ಅರ್ಥ : ಅರಮನೆ). ನ್ಯಾಯಾಸ್ಥಾನವಾಗಿಯೂ ಸಭಾಂಗಣವಾಗಿಯೂ ಉಪಯೋಗಿಸುವ ಎರಡು ಕಂಬಸಾಲುಗಳುಳ್ಳ ದೊಡ್ಡ ಮಂದಿರ ; ಈ ತೆರದ ಕ್ರೈಸ್ತ ದೇವಾಲಯ. ರೋಮಿನಲ್ಲಿ ಕಾನ್‌ಸ್ಟನ್‌ಟೈನ್ ಚಕ್ರವರ್ತಿಯು ಸ್ಥಾಪಿಸಿದ ಏಳು ಕ್ರೈಸ್ತ ದೇವಾಲಯಗಳಲ್ಲೊಂದು.

Basílicon, -cum ಬಸಿಲಿಕಾನ್, —ಕಂ (ನಾ.) (ರಾಜೌಷಧಗಳೆಂದು ನಂಬಿಕೆಯುಳ್ಳ) ಕೆಲವು ಮುಲಾಮುಗಳು.

Básilisk ಬ್ಯಾಸಿ(ಸಿ)ಲಿಸ್ಕ್ (ನಾ.) ಒಂದು ಐತಿಹಾಸಿಕ ಸರೀಸೃಪ ಪ್ರಾಣಿ : (ಇದನ್ನು ಹುಂಜದ ತತ್ತಿಯಿಂದ ಒಂದು ಹಾವು ಮರಿಮಾಡುವುದೆಂದೂ, ಈ ಸರೀಸೃಪ ಪ್ರಾಣಿಯು ತನ್ನ ಉಸಿರಿನಿಂದಲೂ ನೋಟದಿಂದಲೂ ತನ್ನ ಮುಂದಿರುವುದನ್ನು ಸುಟ್ಟು ನಾಶಮಾಡಬಲ್ಲುದೆಂದೂ ಐತಿಹ್ಯ). (ರೂಪ.) (B. glance, etc. ಕೆಡುಕು ನೋಟ ; ಮಾರಕ ದೃಷ್ಟಿ. ಹೆಸರುವಾಸಿ, ಮೊ. ನ್ನು ನಾಶಮಾಡುವ ಮನುಷ್ಯ ಅಥವಾ ವಸ್ತು). (ಪ್ರಾ. ವಿ.) ಅಮೆರಿಕದ ಒಂದು ಸಣ್ಣ ಹಲ್ಲಿಜಾತಿ. (೨೦೦ ಪೌಂಡು ತೂಕದ ಗುಂಡನ್ನೆಸೆಯುವ) ಹಿತ್ತಾಳೆಯ ಒಂದು ದೊಡ್ಡ ಫಿರಂಗಿ.

Básin ಬೇಸಿನ್ (ನಾ.) ನೀರು, ಮೊ. ನ್ನು ತುಂಬುವುದಕ್ಕಾಗಿ ಉಪಯೋಗಿಸುವ ಬಾಯಗಲವಾದ, ಆಳವಿಲ್ಲದ, ಲೋಹದ ಅಥವಾ ಮಣ್ಣಿನ ಪಾತ್ರೆ : ಬೋಗುಣಿ ; ಅರಕಿನ ಚಟ್ಟಿ ; ಬಾನೆ. ಸುತ್ತಲಿನ ನೆಲಕ್ಕಿಂತಲೂ ತಗ್ಗಾಗಿರುವ ಪ್ರದೇಶ ; ಖಾತ ; ಕುಂಟೆ ; ಹೊಂಡ ; ಮಡು. (ಯಾವಾಗಲೂ ಒಂದೇ ಮಟ್ಟಕ್ಕೆ ನೀರಿರುವಂತೆ ಜಲದ್ವಾರಗಳ ಮೂಲಕ ನದಿಯಲ್ಲಾಗಲಿ ಸಮುದ್ರದಲ್ಲಾಗಲಿ ಹಡಗು ಅಥವಾ ದೋಣಿ ನಿಂತು ಸಾಮಾನುಸಾಗಿಸುವುದಕ್ಕಾಗಿ ಮಾಡಿರುವ) ಹಡಗುಕಟ್ಟೆ. ನೆಲಬಳಸಿರುವ ರೇವು. (ನದಿ ಉಪನದಿಗಳ) ಜಲಾನಯನ ಭೂಮಿ. ವೃತ್ತ ಅಥವಾ ದೀರ್ಘವೃತ್ತಾಕಾರದ ಕಣಿವೆ. (ಭೂ. ವಿ.) ಕೇಂದ್ರಮುಖವಾಗಿ ಬಗ್ಗಿರುವ ಭೂಪದರಗಳ ರಚನೆ ; ಇಂಥ ತಗ್ಗುಪ್ರದೇಶದಲ್ಲಿ ದೊರೆಯುವ (ಕಲ್ಲಿದ್ದಲು, ಮೊ.) ಪದಾರ್ಥಸಂಗ್ರಹ. **Básinful** (ನಾ.) ಬೋಗುಣಿತುಂಬು.

Básinet, Básnet ಬ್ಯಾಸಿನೆಟ್, ಬ್ಯಾಸ್ನೆಟ್ (ನಾ.) ಹಗುರವಾದ ಉಕ್ಕಿನ ಟೊಪ್ಪಿಗೆ ; ಸೀಸಕ.

Básis ಬೇಸಿಸ್ (ನಾ. ; ಬ. ವ. Bases ಬೇಸೀಸ್) ಮೂಲವಸ್ತು ; ಆಧಾರ ; ಬುಡ ; ಆದಿ ; ತಳಹದಿ. ಒಪ್ಪಂದ, ಮೊ. ಕ್ಕೆ ಆವಶ್ಯಕವಾದ ಉಭಯಸಮ್ಮತ ವಿಷಯಗಳು. ಸೇನೆಯ ಆಧಾರಶಿಬಿರ.

Bask ಬಾಸ್ಕ್ (ಕ್ರಿ. ಅಕ.) (ಬಿಸಿಲು, ಬೆಂಕಿ) ಕಾಯಿಸಿಕೊ. (ರೂಪ.) ಬೆಚ್ಚಗಿರು ; ಸುಖವಾಗಿರು ; ಹಾಯಾಗಿರು.

Básket ಬಾಸ್ಕೆಟ್ (ನಾ.) ಮಂಕರಿ ; ಗೂಡೆ ; ಕುಕ್ಕೆ ; ಬುಟ್ಟಿ (Pick of the b. ರಾಶಿಯಲ್ಲಿ ಉತ್ತಮವಾದದ್ದು ; ಆಯ್ದದ್ದು). ಬುಟ್ಟಿ ತುಂಬು. ಕತ್ತಿಯ ಹಿಡಿಗೆ ಹೆಣೆದ ಬೆತ್ತದ ಕಾಪು. **B.-ball** ಗಾಳಿತುಂಬಿದ ದೊಡ್ಡ ಚೆಂಡನ್ನು ಎತ್ತರದಲ್ಲಿ ಕಟ್ಟಿರುವ ಕುಕ್ಕೆಗೆ ಹಾಕಲು ಯತ್ನಿಸುವ ಒಂದು ಆಟ : ಕುಕ್ಕೆಚೆಂಡು. **B.-boat** ಬುಟ್ಟಿ ಹರಿಗೋಲು. **B.-work** ಮೇದರ ಕೆಲಸ ; ಬೆತ್ತದ ಕೆಲಸ. **Básketful** (ನಾ.) ಬುಟ್ಟಿತುಂಬು. **Básketry** (ನಾ.)

Básket (ಕ್ರಿ. ಸಕ.) ಬುಟ್ಟಿಗೆ ಹಾಕು ; ಕಸದ ಬುಟ್ಟಿಗೆ ಹಾಕು. (ರೂಪ. ಸಹ)

Báson[1] ಬೇಸ್‌ನ್ (ನಾ.) = Basin.

Báson[2] ಬೇಸ್‌ನ್ (ನಾ., ಕ್ರಿ. ಸಕ.) ಟೋಪಿ ಮಾಡುವುದಕ್ಕೆ ಉಪಯೋಗಿಸುವ ಉಣ್ಣೆ, ಮೊ. ವನ್ನು ತಟ್ಟಿ (ಶಾಖ ಕೊಟ್ಟು) ರಟ್ಟು ಮಾಡುವುದಕ್ಕೆ ಉಪಯೋಗಿಸುವ ಕಾಲುಮಣೆ. (ಕ್ರಿ.) ಮೇಲೆ ಹೇಳಿದಂತೆ ತಟ್ಟಿ ರಟ್ಟು ಮಾಡು.

Bas-reliéf, Bass-reliéf ಬಾಸ್‌ರಿಲೀಫ್, ಬಾರಿಲೀಫ್ (ನಾ.) ಹಿನ್ನೆಲೆಯಿಂದ ಸ್ವಲ್ಪ ಉಬ್ಬು ತೋರುವಂತೆ (ಸಹಜವಾಗಿರಬೇಕಾದುದಕ್ಕಂತಲೂ ಅರ್ಧಕ್ಕೆ ಕಡಮೆಯಾಗಿ) ಕೊರೆದ ಅಥವಾ ಕೆತ್ತಿದ ಚಿತ್ರ : ಅರೆಯುಬ್ಬು ಚಿತ್ರ ; ಅಂಥ ಕೆತ್ತನೆ.

Bass[1] ಬಾಸ್ (ನಾ.) (ಚಾಪೆ, ಕುಕ್ಕೆ, ಮೊ. ನ್ನು ಮಾಡುವುದಕ್ಕಾಗಿ ಉಪಯೋಗಿಸುವ) ನಿಂಬೆಯ ಜಾತಿಯ ಒಂದು ಮರದ ಒಳಪಟ್ಟೆ. (ಹಗ್ಗ, ಪೊರಕೆ, ಮೊ. ನ್ನು ಮಾಡುವುದಕ್ಕಾಗಿ ಉಪಯೋಗಿಸುವ) ತಾಳೆಯ ಜಾತಿಯ ಕೆಲವು ಮರಗಳಿಂದ ತೆಗೆದ ನಾರು ; ಈ ಪದಾರ್ಥದಿಂದ ಮಾಡಿದ ಕುಕ್ಕೆ, ಚೀಲ, ಮೊ.

Bass[2] ಬಾಸ್ (ನಾ.) (ಸಸ್ಯಜನ್ಯ ಪದಾರ್ಥ ಸೇರಿ ವಿವರ್ಣವಾದ) ಒಂದು ಜಾತಿಯ ಬಳಪದ ಕಲ್ಲು.

Bass[3] ಬೇಯ್ಸ್ (ಗು., ನಾ.) ಮಂದ್ರ(ಸ್ವರ). ಸ್ವರಶ್ರೇಣಿಯಲ್ಲಿ ಮಂದ್ರ. ಗಂಡಸಿನ ಮಂದ್ರಸ್ವರ. ಮಂದ್ರಸ್ವರದಲ್ಲಿ ಗಾನಮಾಡುವವನು. ವಾದ್ಯದಲ್ಲಿ ಮಂದ್ರಸ್ವರ ನುಡಿಯುವ ತಂತಿ.

Básset ಬ್ಯಾಸೆಟ್ (ನಾ., ಕ್ರಿ. ಅಕ.) ಮೋಟುಕಾಲಿನ ಒಂದು ನಾಯಿಜಾತಿ. (ಈಗ ರೂಢಿಯಲ್ಲಿಲ್ಲದ) ಒಂದು ತೆರದ ಇಸ್ಪೀಟಾಟ. (ಭೂ. ವಿ.) ಭೂಮಿಯ ಮೇಲೆ ಎದ್ದು ಕಾಣುತ್ತಿರುವ ಭೂಪದರದ ಏಣು. (ಕ್ರಿ.) ಭೂಪದರ ಮೇಲಕ್ಕೇಳು.

Básset-horn ಬ್ಯಾಸೆಟ್ ಹಾರ್ನ್ (ನಾ.) ಒಂದು ತೆರದ ಕಹಳೆ.

Bassinét, Basinétte ಬ್ಯಾಸಿನೆಟ್ (ನಾ.) ಒಂದು ಕೊನೆಯಲ್ಲಿ ಅರೆಛಾವಣಿಯಿರುವ ಬೆತ್ತದ ತೊಟ್ಟಿಲು, ಅಥವಾ ಮಕ್ಕಳ ತಳ್ಳುಬಂಡಿ.

Bassoón ಬಸೂನ್ (ನಾ.) ಮರದಿಂದ ಮಾಡಿದ ಊದುವ ಒಂದು ವಾದ್ಯವಿಶೇಷ. **Bassoónist** (ನಾ.)

Básso-reliévo, -riliévo (It.) ಬಾಸ್ಸೊರಿಲ್ಯೇವೊ (ನಾ. ; ಬ. ವ. —os) = Bass-relief

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bast ಬಾಸ್ಟ್ (ನಾ.) ನಿಂಬೆಯ ಜಾತಿಯ ಒಂದು ಮರದ ಒಳತೊಗಟೆ. ಇತರ ಮೆತುವಾದ ನಾರಿನ ತೊಗಟೆಗಳು, ಪಟ್ಟೆಗಳು. ಈ ತೊಗಟೆಯಿಂದ ಮಾಡಿದ ಚಾಪೆ, ಹಗ್ಗ, ಮೊ.

Bástard ಬಾಸ್ಟರ್ಡ್ (ಗು., ನಾ.) ಅವಿವಾಹಿತ ಸಂಬಂಧದಿಂದ ಹುಟ್ಟಿದ (ಮಗು); ಜಾರಜ. (ವಸ್ತುಗಳ ವಿಷಯದಲ್ಲಿ) ನ್ಯಾಯ ವಿರುದ್ಧ; ಇಬ್ಬಂದಿ; ಕೃತಕ; ಖೋಟ. ಅಸಾಧಾರಣ ಆಕೃತಿಯ ಅಥವಾ ಗಾತ್ರದ (ಮು., ದೊಡ್ಡ). [(ಮುದ್ರಣ) B. title ಪುಸ್ತಕದ ಮುಖ್ಯ ಮುಖಪತ್ರದ ಹಿಂದಿನ ಹಾಳೆಯಲ್ಲಿ ಹಾಕಿರುವ ಪುಸ್ತಕದ ಸಂಕ್ಷಿಪ್ತ ನಾಮ; B. type ನಿಯತವಾದ ಗಾತ್ರಕ್ಕಿಂತ ಹೆಚ್ಚಿನ ಅಥವಾ ಕಡಮೆಯ ಗಾತ್ರವುಳ್ಳ ಅಕ್ಷರವನ್ನು ಎರಕಹೊಯ್ದು ಅಚ್ಚಿನ ಮೊಳೆ]. (ಸ. ವಿ.) ಮತ್ತೊಂದು ಜಾತಿಯನ್ನು ಸರಿಸುಮಾರಾಗಿ ಹೋಲುವ. ಸೀಮಾಡಿದ ಮದ್ಯ. (ಸಕ್ಕರೆಯನ್ನು ಶುದ್ಧಿಮಾಡುವುದರಲ್ಲಿ) ಹಳೆಯ ಪಾಕದ ಮಷ್ಟಿನಿಂದ ತಯಾರಿಸಿದ ಕಂದುಸಕ್ಕರೆ. **Bástardize** (ಕ್ರಿ. ಸಕ.) ಜಾರಜನೆಂದು ನಿರ್ಣಯಿಸು, ದೃಢೀಕರಿಸಿ ಹೇಳು. **Bástardizátion** (ನಾ.); **Bástardy** (ನಾ.) ಜಾರಜತ್ವ. Bastardy order ಜಾರತ್ವದಿಂದ ಹುಟ್ಟಿದ ಮಗುವನ್ನು ಅದರ ಊಹಿತ ಜನಕನು ಸಲಹಬೇಕೆಂಬ ಆಜ್ಞೆ.

Baste[1] ಬೇಸ್ಟ್ (ನಾ.) ಒಂದು ತೆರದ ಇಸ್ಪೀಟಾಟ: 'ಬೇಸ್ತು' ಆಟ.

Baste[2] ಬೇಸ್ಟ್ (ಕ್ರಿ. ಸಕ.) ದಾಟುಹೊಲಿಗೆ ಹಾಕು; ಟಾಕು ಹಾಕು. (ರೂಪ. ಸಹ). B. up a story hastily ಅವಸರವಸರವಾಗಿ ಒಂದು ಕಥೆಯನ್ನು ಹೊಸೆ.

Baste[3] ಬೇಸ್ಟ್ (ಕ್ರಿ. ಸಕ.) ಸುಡುತ್ತಿರುವ ಮಾಂಸ ಹೆಚ್ಚು ಸುಡದಂತೆ ಕೊಬ್ಬಿನಿಂದ ನೆನಸು. (ಮೋಂಬತ್ತಿಗಳನ್ನು ಮಾಡುವುದರಲ್ಲಿ, ದಾರದ ಬತ್ತಿಯಮೇಲೆ) ಕರಗಿಸಿದ ಮೇಣ, ಮೊ. ನ್ನು ಸುರಿ. (ಕುರಿಗಳಿಗೆ) ಕೀರೆಣ್ಣೆಯಿಂದ ಗುರುತುಮಾಡು.

Baste[4] ಬೇಸ್ಟ್ (ಕ್ರಿ. ಸಕ.) ಸದೆಬಡಿ; ಚೆಡಿಯೇಟು ಕೊಡು; ಬಡಿ; ಚಚ್ಚು; ಅಪ್ಪಳಿಸು.

Bástel-house ಬ್ಯಾಸ್ಟೆಲ್ ಹೌಸ್ (ನಾ.) ಕೋಟೆಯಿಂದ ಭದ್ರಪಡಿಸಿರುವ ಮನೆ.

Bastíl(l)e ಬಾಸ್ಟೀಲ್ (ನಾ.) ದುರ್ಗ. (೧೭೮೯ನೆಯ ಇಸವಿಯಲ್ಲಿ ನಾಶವಾದ) ಫ್ರಾನ್ಸಿನ ದುರ್ಗಕಾರಾಗೃಹ. ಸೆರೆಮನೆ; ಕಾರಾಗೃಹ.

Bastíllion ಬ್ಯಾಸ್ಟಿಲ್ಯನ್ (ನಾ.) ಸಣ್ಣ ದುರ್ಗ; ಕೋಟೆ ಕೊತ್ತಲಗಳಿಂದ ರಕ್ಷಿತವಾದ ಶ್ರೀಮಂತ ಗೃಹ.

Bastinádo ಬ್ಯಾಸ್ಟಿನೇಡೊ (ನಾ., ಕ್ರಿ. ಸಕ.) ಅಂಗಾಲಮೇಲೆ ದೆತ್ತದೇಟು (ಹೊಡೆ)

Bástion ಬ್ಯಾಸ್ಟಿಯನ್ (ನಾ.) ಬುರುಜು; ಕೊತ್ತಲ. **Bástioned** (ಗು.)

Básyl(e) ಬೇ(ಬ್ಯಾ)ಸಿಲ್ (ನಾ.) (ರ. ವಿ.) ಆಮ್ಲಜನಕದೊಡನೆ ಸಂಯೋಗಹೊಂದಿ ಕ್ಷಾರೀಯ ಪದಾರ್ಥವಾಗುವ ವಸ್ತು; ಕ್ಷಾರಾಧಾರ ವಸ್ತು.

Bat[1] ಬ್ಯಾಟ್ (ನಾ.) ಬಾವಲಿ; ಕಪಟ; ಕಣ್ಣಪಟ; ಚಕ್ಕಳದ ಹಕ್ಕಿ (ಕಾಲ್ಬೆರಳುಗಳು ಚರ್ಮದ ರೆಕ್ಕೆಗಳಿಗೆ ಆಸರೆಯಾಗಿರುವಂತೆ ವಿಸ್ತೃತವಾಗಿರುವ, ಇಲಿಯ ರೂಪಿನ, ರಾತ್ರಿಸಂಚಾರದ, ಒಂದು ಸಸ್ತನಿ ಚತುಷ್ಪಾದಿ). Have bats in the belfry ಹುಚ್ಚುಹಿಡಿದಿರು; ವಿಲಕ್ಷಣವಾದ ನಡೆವಳಿಯುಳ್ಳವನಾಗಿರು.

Bat[2] ಬ್ಯಾಟ್ (ನಾ.) ಕ್ರಿಕೆಟ್‌ಆಟದ ದಾಂಡು; ಚಪ್ಪಟೆ ದಾಂಡು; ಬ್ಯಾಟು. ದಾಂಡುಗಾರ. Carry one's b. ಆಟದಲ್ಲಿ ಕೊನೆಯವರೆಗೂ ದಾಂಡು ಬಿಡದೆ ಇರು (ಆಟ ಕಳೆದುಕೊಳ್ಳದೆ ಇರು). Off one's own b. ಇತರರ ಸಹಾಯವಿಲ್ಲದೆ (ಒಬ್ಬನೇ). **Bátsman** (ನಾ.) (ಕ್ರಿಕೆಟ್ ಆಟದಲ್ಲಿ) ಚೆಂಡು ಹೊಡೆಯುವವನು: ದಾಂಡುಗಾರ.

Bat (ಕ್ರಿ. ಅಕ.) (ಕ್ರಿಕೆಟ್) ದಾಂಡನ್ನು ಉಪಯೋಗಿಸು; ಚೆಂಡು ಹೊಡೆ. ದೊಣ್ಣೆಯಿಂದ ಹೊಡೆ, ಚಚ್ಚು. **Bátting** (ನಾ.) (ಕ್ರಿಯಾರ್ಥಗಳಲ್ಲಿ). ರಜಾಯಿ (ಹಾಸಿಗೆ) ಮೊ. ಗಳಿಗಾಗಿ ಹಾಳೆಗಳಾಗಿ ತಯಾರಿಸಿದ ಹತ್ತಿ.

Bat[3] ಬ್ಯಾಟ್ (ನಾ.) (ಅಸಂ.) ನಡೆಯ ದಾಪು. He went off at a rare b. ಅಸಾಧಾರಣವಾದ ದಾಪುನಡಗೆಯಿಂದ ಹೊರಟುಹೋದನು.

Bat[4] ಬ್ಯಾಟ್ (ಕ್ರಿ. ಸಕ.) ರೆಪ್ಪೆ ಹೊಡೆ; ಕಣ್ಣುಮಿಟುಕಿಸು. Never batted an eyelid ಸ್ವಲ್ಪವೂ ರೆಪ್ಪೆ ಮುಚ್ಚಲಿಲ್ಲ.

Bat— (ಸಮಾಸದಲ್ಲಿ ಪೂರ್ವಪದ) ಬಾ—, ಬಾ(ಬ್ಯಾ)ಟ್— **B.-horse** ಸಾಮಾನು ಹೊರುವ ಕುದುರೆ: ಹೊರೆಗುದುರೆ. **B.-man** ಕುದುರೆಯ ಆಳು. **B.-money** ಯುದ್ಧಭೂಮಿಯಲ್ಲಿ ಸಾಮಾನು ಸಾಗಿಸಿಕೊಂಡುಹೋಗಲು ಕೊಡುವ ಭತ್ಯ, ವೇತನ.

Batáta ಬಟಾ(ಟೇ)ಟ (ನಾ.) ಗೆಣಸು.

Batávian ಬಟೇವಿಯನ್ (ಗು., ನಾ.) (ರ್ಹೈನ್ ಮತ್ತು ವಾಲ್ ನದಿಗಳ ಮಧ್ಯೇ ಇರುವ) ಪ್ರಾಚೀನ ಬಟೇವಿಯದ ಅಥವಾ ಆಧುನಿಕ ಹಾಲೆಂಡಿನ (ಪ್ರಜೆ). ಡಚ್ (ಮನುಷ್ಯ). ಜಾವಾ ದ್ವೀಪದಲ್ಲಿಯ ಬಟೇವಿಯದ (ನಿವಾಸಿ)

Batch ಬ್ಯಾಚ್ (ನಾ.) ಒಂದಡಿಗೆಯ ರೊಟ್ಟಿಗಳು; ಒಂದು ಒಬ್ಬೆ. ಒಂದು ತಂಡ, ಗುಂಪು, ಪಂಗಡ.

Bate[1] ಬೇಯ್ಟ್ (ಕ್ರಿ.) ಕುಗ್ಗಿಸು; ತಗ್ಗಿಸು; ಕಡಮೆಮಾಡು; ಮಟ್ಟುಮಾಡು; ಮಟ್ಟಾಗು; ಎದೆಗುಂದಿಸು; ಮಾಂದ್ಯ ಹೊಂದು; ಮಾಂದ್ಯಗೊಳಿಸು; ಶಕ್ತಿಗುಂದು; ಶಕ್ತಿಗುಂದಿಸು. B. one's breath ಉಸಿರು ಹಿಡಿ. **Báting** (ಉಪ.) ಉಳಿದು; ಬಿಟ್ಟು; ಹೊರತು; ವಿನಾ.

Bate[2] ಬೇಯ್ಟ್ (ನಾ.; ಕ್ರಿ. ಸಕ.) ಚರ್ಮವನ್ನು ಮೆತುಮಾಡುವುದಕ್ಕೆ ಉಪಯೋಗಿಸುವ ಕ್ಷಾರೋದಕ; ಈ ಕ್ಷಾರೋದಕದ ತೊಟ್ಟಿ; ಇದರಲ್ಲಿ ನೆನೆಯಹಾಕುವ ವಿಧಾನ. (ಕ್ರಿ.) ಕ್ಷಾರೋದಕದಲ್ಲಿ ನೆನೆಯಹಾಕು.

Bate[3], **Bait** ಬೇಯ್ಟ್ (ನಾ.) (ಅಸಂ.) ಹುಚ್ಚು ಕೋಪ. He was in an awful b. ಅವನು ಪ್ರಚಂಡ ಕೋಪದಲ್ಲಿದ್ದನು.

Bath ಬಾತ್ (ನಾ.) ಮಿಾಹ; ಮಜ್ಜನ; ಸ್ನಾನ; ಎರೆತ (B. of blood ರಕ್ತಸ್ನಾನ; ಕೊಲೆ). ಸ್ನಾನಕ್ಕೆ ನೀರು. ಮಾರ್ಜಕ ದ್ರಾವಣ. ಸ್ನಾನ ಮಾಡಿದಂತೆ ಗುಣಕೊಡುವ ಯಾವುದಾದರೂ ಪದಾರ್ಥದ ಆವರಣ. ಸ್ನಾನಪಾತ್ರೆ; ಸ್ನಾನಗೃಹ; ಸ್ನಾನ, ಮೊ. ಗಳಿಂದ ಚಿಕಿತ್ಸೆಪಡೆಯುವ ಸ್ಥಳ. (ರ. ವಿ.) ಒಂದೇ ಸಮವಾದ ಶಾಖ ಕೊಡುವುದಕ್ಕಾಗಿ ಉಪಯೋಗಿಸುವ ಸಲಕರಣೆ (Sand-b. ಮರಳುಶಾಖದ ಪಾತ್ರೆ. Water-b. ನೀರುಶಾಖದ ಪಾತ್ರೆ). ಛಾಯಾಚಿತ್ರಫಲಕ ಮೊ. ನ್ನು ಚಿತ್ರಸ್ಪುಟೀಕರಣಕ್ಕಾಗಿ ತೋಯಿಸುವ ದ್ರಾವಣ; ಇದನ್ನುಳ್ಳ ತಟ್ಟೆ. ಸ್ನಾನದ ಮೂಲಕ ಚಿಕಿತ್ಸೆಪಡೆಯುವುದಕ್ಕಾಗಿ ಜನರು ಹೋಗುವ ಇಂಗ್ಲೆಂಡಿನ 'ಸಮರ್ಸೆಟ್' ಎಂಬ ಡಿಸ್ಟ್ರಿಕ್ಟಿನಲ್ಲಿ 'ಬಾತ್' ಎಂಬ ಪಟ್ಟಣ (ಅಲ್ಲಿರುವ ಉಷ್ಣೋದಕದ ಊಟೆಗಳಿಂದ). **Air-b.** ಗಾಳಿಸ್ನಾನ. **Hip-b.** ಸೊಂಟವನ್ನು ನೀರಿನಲ್ಲಿಟ್ಟುಕೊಳ್ಳುವ ಚಿಕಿತ್ಸೆ: ಕಟಿಸ್ನಾನ ಚಿಕಿತ್ಸೆ; ಇದಕ್ಕಾಗಿ ಉಪಯೋಗಿಸುವ ತೊಟ್ಟಿ. **Mud-b.** (ವಾತರೋಗ ಪರಿಹಾರಕ್ಕಾಗಿ) ಮೃತ್ತಿಕಾ ಸ್ನಾನ. **Sun-b.** ಬಿಸಿಲು ಸ್ನಾನ. **B.-brick** ಲೋಹ, ಮೊ. ನ್ನು ಉಜ್ಜಿ ಶುದ್ಧಿಮಾಡುವುದಕ್ಕಾಗಿ ತಯಾರಿಸಿದ ಒಂದು ಪದಾರ್ಥ: ಲೋಹಮಾರ್ಜಕ. **B.-chair** ರೋಗಿಗಳನ್ನು ಇಲ್ಲಿಂದಲ್ಲಿಗೆ ಕರೆದುಕೊಂಡುಹೋಗುವುದಕ್ಕಾಗಿ ಉಪಯೋಗಿಸುವ ಗಾಲಿಗಳುಳ್ಳ ಕುರ್ಚಿ: ಗಾಲಿಕುರ್ಚಿ. **B.-metal** ಸತುವು ಮತ್ತು ತಾಮ್ರವನ್ನು ಸೇರಿಸಿ ಮಾಡಿದ ಒಂದು ಮಿಶ್ರಲೋಹ. **B.-room** ಸ್ನಾನದ ಮನೆ; ನೀರುಮನೆ. Order of the Bath ಒಂದು ದೊಡ್ಡ ಘನತೆಯ ಬಿರುದು (ಈ ಬಿರುದನ್ನು ಕೊಡುವ ಸಮಾರಂಭಕ್ಕೆ ಮೊದಲು, ಮಾಡಿಸುವ ಸ್ನಾನದಿಂದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bath (ಕ್ರಿ. ಸಕ.) ತೊಟ್ಟಿಯಲ್ಲಿ ಸ್ನಾನಮಾಡಿಸು.

Bathe ಬೇದ್ (ಕ್ರಿ., ನಾ.) ಸ್ನಾನ ಮಾಡು, ಮಾಡಿಸು ; ನೀರು, ಗಾಳಿ, ಬಿಸಿಲು, ಬೆಳಕು — ಇವುಗಳಲ್ಲಿ ಮುಳುಗು, ಮುಳುಗಿಸು. ತೊಳೆ ; ನೆನೆಯಿಸು ; ತೋಯಿಸು ; ಆವರಿಸು. [Bathing-machine (ಸಮುದ್ರಸ್ನಾನಕ್ಕಾಗಿ ನೀರಿನೊಳಕ್ಕೆ ಎಳೆದುಕೊಂಡುಹೋಗ ಬಹುದಾದ) ಸ್ನಾನದ ಬಂಡಿ]. (ನಾ.) ಸ್ನಾನಮಾಡುವುದು (ಮು., ನದಿ, ಸಮುದ್ರ, ಈಜುತೊಟ್ಟಿ, ಮೊ. ಗಳಲ್ಲಿ). **Báther** (ನಾ.)

Bathétic. **Bathos** ನೋಡಿ.

Bathómeter ಬತಾಮಿಟರ್ (ನಾ.) ನೀರಿನ ಆಳವನ್ನು ಕಂಡುಹಿಡಿಯುವುದಕ್ಕಾಗಿ ಉಪಯೋಗಿಸುವ ಒಂದು ತೆರದ ಎಗುರುಪಟ್ಟಿಯ (ಸ್ಪ್ರಿಂಗ್) ತಕ್ಕಡಿ : ಪಾತ ಮಾಪಕ. **Bathýmetry** ಬತಿಮಿಟ್ರಿ (ನಾ.) ಸಮುದ್ರದ ಆಳವನ್ನಳೆಯುವ ವಿದ್ಯೆ. **Bathymétric(al)** ಬ್ಯಾತಿಮೆಟ್ರಿ — (ಗು.) ಸಮುದ್ರದ ಆಳದ ಅಳತೆಯ (ಮು., ಸಮುದ್ರದಲ್ಲಿ ಮೇಲಿನಿಂದ ತಳದ ವರೆಗೂ ಸಸ್ಯಜಾತಿ, ಪ್ರಾಣಿಜಾತಿಗಳ ಹಂಚಿಕೆಯ ವಿಚಾರವಾಗಿ ಮಾಡಿದುದು). **Bathymétrically** (ಕ್ರಿ. ವಿ.)

Báthos ಬೇತಾಸ್ (ನಾ.) ಆಳ ; ತಳ. (ಅಲಂ.) ಮಹತ್ತಾದ ಭಾವದಿಂದ ಕೇವಲ ಹಾಸ್ಯಾಸ್ಪದವಾದ ಭಾವಕ್ಕೆ ಇಳಿಯುವುದು : ಇಳಿಮಾತು ; ಉತ್ಕರ್ಷಭಂಗ. ಸಂದರ್ಭಕ್ಕೆ ತಕ್ಕಂತಲ್ಲದೆ ಬೀಳಾಗಿ ನಡೆಯುವುದು. **Bathétic** ಬತೆಟಿಕ (ಗು.) ಉತ್ಕರ್ಷಭಂಗದ.

Báton ಬ್ಯಾಟನ್, ಬಾಟಾನ್ (ನಾ., ಕ್ರಿ. ಸಕ.) ಅಧಿಕಾರ ದಂಡ ; ಪೋಲೀಸಿನವರ ಮೋಟುದೊಣ್ಣೆ ; ಲಾಠಿ (ಏಟುಕೊಡು). ವಾದ್ಯಗಾರರ ಚಾಲಕನು ತಾಳಸೂಚಿಸಲು ಉಪಯೋಗಿಸುವ ದಂಡ : ತಾಳದಂಡ.

Batráchia ಬಟ್ರೇಕಿಯ (ನಾ., ಬ. ವ.) (ಪ್ರಾ. ವಿ.) ಕಪ್ಪೆಯ ಜಾತಿಯ ಪ್ರಾಣಿಗಳು (ಎಂದರೆ, ಜಲಚರಗಳಿಗಿರುವಂಥ ಶ್ವಾಸಾಂಗಗಳೂ ಬಾಲವೂ ಮೊದಲು ಇದ್ದು, ಕ್ರಮೇಣ ಅವು ಅಳಿದುಹೋಗುವಂಥವು). **Batráchian** (ಗು., ನಾ.) ಕಪ್ಪೆಯ ಜಾತಿಯ (ಪ್ರಾಣಿ)

Bátta[1] ಬ್ಯಾಟ (ನಾ.) (ಹಿಂದಿನ ಅರ್ಥ : ಜೀವನಕ್ಕಾಗಿ ಕೊಡುವ ಹಣ). ಯುದ್ಧಸಂದರ್ಭದಲ್ಲಿ ಕೊಡುವ ಹೆಚ್ಚುಸಂಬಳ. (ನಿಯತವಾದ) ಸಂಬಳದ ಜೊತೆಗೆ ಕೊಡುವ ವೇತನ : ಭತ್ಯ.

Bátta[2] ಬ್ಯಾಟ (ನಾ.) ಚಲಾವಣೆಯಲ್ಲಿಲ್ಲದ ಅಥವಾ ತೂಕ ಕಡಮೆಯಾದ ನಾಣ್ಯಗಳಮೇಲೆ ಕೊಡಬೇಕಾದ ವಟ್ಟ. (ಒಂದು ತೆರದ ನಾಣ್ಯಕ್ಕೆ ಮತ್ತೊಂದು ತೆರದ ನಾಣ್ಯ ಕೊಡುವುದಕ್ಕಾಗಿ ಹಾಕುವ) ವಟ್ಟ.

Battálion ಬಟ್ಯಾಲಿಯನ್ (ನಾ.) ಪಡೆ ; ದಳ ; ಚಮು ; ಸೇನೆಯ ಒಂದು ದೊಡ್ಡ ಭಾಗ : ಪಟಾಲಂ ; ಅನೇಕ ತಂಡಗಳುಳ್ಳ ಕಾಲ್ಬಲ. God is for the big battalions ದೊಡ್ಡ ದಂಡಿನ ಕಡೆ ದೇವರು.

Bátten[1] ಬ್ಯಾಟ್‌ನ್ (ನಾ., ಕ್ರಿ. ಸಕ.) ನೆಲಕ್ಕೆ ಹಾಸುವ ಹಲಗೆ. ಕದ, ಮೊ. ಕ್ಕೆ ಹಾಕುವ ಗಂದವಟ್ಟಿಗೆ ; (ಮರದ) ಪಟ್ಟಿ. (ಕ್ರಿ.) ಪಟ್ಟಿ ಹೊಡೆ.

Bátten[2] ಬ್ಯಾಟ್‌ನ್ (ನಾ.) ರೇಷ್ಮೆಯ ಮಗ್ಗದಲ್ಲಿ ಹೊಕ್ಕನ್ನು ಸೇರಿಸುವುದಕ್ಕಾಗಿ ಚಲಿಸುವ ಮರದ ಪಟ್ಟಿ.

Bátten[3] ಬ್ಯಾಟ್‌ನ್ (ಕ್ರಿ. ಅಕ.) ಹೊಟ್ಟೆಬಾಕನಂತೆ ತಿನ್ನು ; ತಿಂದು ಕೊಬ್ಬು, ಸೊಕ್ಕು ; (ಮತ್ತೊಬ್ಬನಿಗಿಲ್ಲದಂತೆ) ತಿಂದು ತೇಗು. (ನೆಲ) ಫಲವತ್ತಾಗು ; (ಸಸ್ಯ) ಹುಲುಸಾಗಿ ಬೆಳೆ.

Bátter[1] ಬ್ಯಾಟರ್ (ಕ್ರಿ.) ಒಡೆದುಹೋಗುವಂತೆ ಎಡೆಬಿಡದೆ ಅಪ್ಪಳಿಸು ; ಇಡಿ ; ಜಡಿ ; ಕುಟ್ಟು ; ಜಜ್ಜು. (ರೂಪ.) ಎಡೆಬಿಡದೆ ಮೇಲೆಬಿದ್ದು ಮರ್ದನ ಮಾಡು ; ರೂಪುಗೆಡುವಂತೆ ಹೊಡೆ ; ಕಚ್ಚು ಮಾಡು ; ಕಚ್ಚಾಗು. (ಕೋಟೆಯ ಗೋಡೆ, ಮೊ. ನ್ನು) ಫಿರಂಗಿಯಿಂದ ಹೊಡೆದು ಕೆಡಹು. (ಮುದ್ರಣದ ಮೊಳೆಗಳನ್ನು) ಉಪಯೋಗ ಮಾಡಿ ಮಾಡಿ ಸವೆಯಿಸು, ಸವೆದುಹೋಗು. Battering-charge ಫಿರಂಗಿಗೆ ಭರ್ತಿಯಾಗುವಂತೆ ಹಾಕುವ ಮದ್ದು. Battering-ram ಕೋಟೆಯ ಗೋಡೆಯನ್ನು ಒಡೆಯುವುದಕ್ಕಾಗಿ ಹಿಂದೆ ಉಪಯೋಗಿಸುತ್ತಿದ್ದ (ಟಗರಿನ ಮುಖದ) ತೂಗುದಿಮ್ಮಿ : ಟಗರುದಿಮ್ಮಿ. Battering-train ಕೋಟೆಯ ಮುತ್ತಿಗೆಯಲ್ಲಿ ಉಪಯೋಗಿಸುವ ಫಿರಂಗಿಯ ಸಾಲು.

Bátter (ನಾ.) ಅಡುವುದಕ್ಕಾಗಿ ನೀರು, ಮೊ. ನ್ನು ಹಾಕಿ ಕಲಸಿ ಸಿದ್ಧಮಾಡಿದ ಆಹಾರವಸ್ತುಗಳ ಹಿಟ್ಟಿನ ಮಿಶ್ರಣ : ಕಲಸಿದ ಹಿಟ್ಟು ; ಕಣಕ. (ಮುದ್ರಣದಲ್ಲಿ) ಮೊಳೆ ಮೊ. ಗಳ ಸವೆತ, ಜಜ್ಜು.

Bátter[2] ಬ್ಯಾಟರ್ (ನಾ., ಕ್ರಿ. ಅಕ.) ಮೇಲಕ್ಕೆ ಹೋಗುತ್ತ ಹೋಗುತ್ತ ದಪ್ಪ ಕಡಮೆಯಾಗುವ ಗೋಡೆಯ ಓರೆ. (ಕ್ರಿ.) — ಓರೆಯಾಗಿರು.

Báttery ಬ್ಯಾಟರಿ (ನಾ.) ಹೊಡೆತ ; ಪ್ರಹಾರ. (ನ್ಯಾ. ಶಾ.) ಒಬ್ಬನನ್ನು ಹೊಡೆಯುವುದರಿಂದಾಗಲಿ, ಹೊಡೆಯುವಂತೆ ಹೆದರಿಸಿ ಅವನನ್ನೊ ಅವನ ಉಡುಪನ್ನೊ ಮುಟ್ಟುವುದರಿಂದಾಗಲಿ ಮಾಡುವ ಅಪರಾಧ (ಮು., Assault and b. ಎಂಬಲ್ಲಿ). (ಸೇನೆ) ಒಟ್ಟಿಗೆ ಉಪಯೋಗಿಸುವುದಕ್ಕಾಗಿ ಸಿದ್ಧಪಡಿಸಿರುವ ತುಪಾಕಿಯ ಸಾಲು (ಅವನ್ನು ಹಾರಿಸುವ ಸೈನ್ಯದೊಡನೆ) ; ತುಪಾಕಿಗಳನ್ನಿಟ್ಟಿರುವ ಜಗಲಿ ಅಥವಾ ರಕ್ಷಿತ ಪ್ರದೇಶ : ಬತೇರಿ. (ರೂಪ.) Turn a man's b. against himself ಒಬ್ಬನ ವಾದವನ್ನು ಅವನ ಮೇಲೆಯೇ ತಿರುಗಿಸು. (ವಿಜ್ಞಾನ ಮತ್ತು ಕಲೆಗಳಲ್ಲಿ) ಒಂದೇ ರೂಪಿನ ಅನೇಕ ಸಲಕರಣೆಗಳ ಸಮುದಾಯ ; (ಒಂದಕ್ಕೊಂದು ತಕ್ಕಂತೆ ಸೇರಿಸಿರುವ) ಕೋಶಶ್ರೇಣಿ ಅಥವಾ ಸಾಧನ ಶ್ರೇಣಿ (ವಿದ್ಯುತ್ಕೋಶಗಳು, ಮೊ.). ತಟ್ಟಿಮಾಡಿದ ಲೋಹದ ತಗಡು ; ಆ ತಗಡಿನಿಂದ ಮಾಡಿದ ಪಾತ್ರೆಗಳು.

Báttle ಬ್ಯಾಟ್‌ಲ್ (ನಾ.) ಕದನ ; ಕಾಳಗ ; ಹೋರಾಟ ; ಯುದ್ಧ ; ರಣ ; ಸಂಗ್ರಾಮ ; ಸಮರ. ಜಯ ; ಗೆಲುವು (The b. is to the strong ಬಲಿಷ್ಠರಿಗೇ ಜಯ). **B. ax(e)** ಪೂರ್ವ ಕಾಲದಲ್ಲಿ ಯುದ್ಧಗಳಲ್ಲಿ ಉಪಯೋಗಿಸುತ್ತಿದ್ದ ಗಂಡುಗೊಡಲಿ. **B.-cruiser** (ದೊಡ್ಡ ಫಿರಂಗಿಗಳನ್ನಳವಡಿಸಿದ, ಭಾರ ಕಡಮೆಯಾದ ಕವಚವುಳ್ಳ, ಹೆಚ್ಚು ವೇಗದಿಂದ ಹೋಗುವ) ಯುದ್ಧದ ಹಡಗು. **B.-cry, -word** ಯುದ್ಧದಲ್ಲಿ ವೀರಾವೇಶದ ಕೂಗು : ರಣ ಗರ್ಜನೆ. **B.-field, -ground** ಯುದ್ಧ ರಂಗ, — ಭೂಮಿ ; ಕಳ. **B.-piece** ಒಂದು ಕಾಳಗದ ಚಿತ್ರಪಟ ಅಥವಾ ವರ್ಣನೆ : ಯುದ್ಧ ಚಿತ್ರ. **B.-plane** ಯುದ್ಧದ ದೊಡ್ಡ ಫಲಕವಿಮಾನ. **B. royal** ಅನೇಕ ಎದುರಾಳಿಗಳು, ಅಥವಾ ದೊರೆಯುವ ಸೈನ್ಯವೆಲ್ಲ, ನಿಂತು ಮಾಡುವ ಯುದ್ಧ ; ಘೋರ ಯುದ್ಧ ; ತುಮುಲ ಯುದ್ಧ. **B.-ship** (ದಪ್ಪವಾದ ಕವಚವೂ ಬಲವಾದ ಫಿರಂಗಿಗಳೂ ಉಳ್ಳ) ದೊಡ್ಡ ಯುದ್ಧದ ಹಡಗು. **B.-wise** (ಕ್ರಿ. ವಿ.) ಕಾಳಗದ ರೀತಿಯಲ್ಲಿ ಅಥವಾ ಕ್ರಮದಲ್ಲಿ. General's b. (ಸೇನಾಪತಿಗಳು ವ್ಯೂಹಯುಕ್ತಿಯಿಂದ ನಡಸುವ) ಕುಶಲ ಯುದ್ಧ. Pitched b. (ಎರಡು ಪಕ್ಷದವರೂ ಪಟ್ಟನಿಂದ ಮಾಡುವ) ಥಲ ಯುದ್ಧ. Soldier's b. (ಸಿಪಾಯಿಗಳು ಶಕ್ತಿಸಾಹಸಗಳಿಂದ ನಡಸುವ) ವೀರ ಯುದ್ಧ. Give b. ಯುದ್ಧ ಕೊಡು ; ಮೇಲೆ ಬೀಳು. Join b. ಪ್ರತಿಭಟಿಸು. Line of b. ಯುದ್ಧಮಾಡಲು ಸಿದ್ಧಗೊಳಿಸಿದ ಯೋಧ ಪಂಕ್ತಿ ಅಥವಾ ನೌಕಾ ಪಂಕ್ತಿ. Trial by b. ಒಂದು ವ್ಯಾಜ್ಯವನ್ನು ದ್ವಂದ್ವ ಯುದ್ಧದಿಂದ ನ್ಯಾಯತೀರ್ಮಾನ ಮಾಡುವುದು : ದ್ವಂದ್ವಯುದ್ಧ ಪರೀಕ್ಷೆ.

Báttle (ಕ್ರಿ. ಅಕ.) ಯುದ್ಧಮಾಡು. (ರೂಪ.) ಹೋರಾಡು ; ಸೆಣಸು ; ಹೆಣಗು.

Báttledore ಬ್ಯಾಟ್‌ಲ್‌ಡೋರ್ (ನಾ.) ಬಟ್ಟೆ ಒಗೆಯುವುದು, ಮೊ. ಗಳಲ್ಲಿ ಗಟ್ಟಿಸುವುದಕ್ಕಾಗಿ ಉಪಯೋಗಿಸುವ, ಹಿಡಿಯುಳ್ಳ, ಅಂಗೈದಾಂಡಿನಂಥ ಮರದ ಪಟ್ಟಿ. ಒಂದು ತೆರದ ಚೆಂಡಾಟದಲ್ಲಿ ಉಪಯೋಗಿಸುವ ಹಿಡಿಯುಳ್ಳ ಅಂಗೈದಾಂಡು ; ಅಂಗೈದಾಂಡಿನಿಂದ ಆಡುವ ಚೆಂಡಾಟ. (ರೊಟ್ಟಿ ಮೊ. ನ್ನು ಕಾವಲಿಯಮೇಲೆ ಸುಡುವಾಗ ಉಪಯೋಗಿಸುವ) ಮಗುಚುವ ಕೈ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Báttlement ಬ್ಯಾಟ್‌ಲ್‌ಮೆಂಟ್ (ನಾ. ; ಸಾ., ಬ. ವ. ದಲ್ಲಿ) ಕೋಟೆಯ ಗೋಡೆಯ ಮೇಲ್ಭಾಗದಲ್ಲಿರುವ, ಕಂಡಿಗಳುಳ್ಳ ಕೈಪಿಡಿಗೋಡೆ ; ಕೋಟೆಯ ತೆನೆ ; ಕೈಪಿಡಿಗೋಡೆ ಮತ್ತು ಅದು ಸುತ್ತುವರಿದಿರುವ ಮಾಳಿಗೆ. **Báttlemented** (ಗು.)

Battólogy ಬ್ಯಾಟಾಲೊಜಿ (ನಾ.) ಭಾಷಣದಲ್ಲಾಗಲಿ ಬರಹದಲ್ಲಾಗಲಿ ನಿರುಪಯೋಗವಾದ ಪುನರುಕ್ತಿ ; ಗೊಡ್ಡು ಹರಟೆ.

Battué (F) ಬಾಟ್ಯೂ (ನಾ.) ಬೇಟೆಯನ್ನು ಅದರ ಇಕ್ಕೆಯಿಂದ ಬೇಟೆಗಾರರಿರುವ ಸ್ಥಳಕ್ಕೆ ಓಡಿಸುವುದು : ಸೋಹುವುದು ; ಈ ತೆರದ ಬೇಟೆ, ಬೇಟೆಗಾರರ ತಂಡ. (ಮು., ಅಸಹಾಯರಾದ ಜನರ ಗುಂಪಿನ) ಹೆಗ್ಗೊಲೆ.

Baúble ಬಾಬ್‌ರ್ (ನಾ.) ಥಳಕುಪಳಕಿನ ಆಟದ ವಸ್ತು. ಆಸ್ಥಾನದ ಹಾಸ್ಯಗಾರನ ಬೆತ್ತ (ಕತ್ತೆಯ ತಲೆಯ ಕೋಲು). ಆಟದ ಸಾಮಾನು. ಅಲ್ಪ ವಸ್ತು, ವಿಷಯ.

Baúxite ಬಾಕ್ಸೈಟ್ (ನಾ.) (ಖನಿಜ) (ಅಲ್ಯೂಮಿನಿಯಂ ಲೋಹವನ್ನು ತೆಗೆಯಲು ಉಪಯೋಗಿಸುವ, ಅಲ್ಯೂಮಿನಿಯಂ ಭಸ್ಮವುಳ್ಳ) ಒಂದು ಜಾತಿಯ ಜೇಡಿಮಣ್ಣು.

Baulk. **Balk** ನೋಡಿ.

Bawbee ಬಾಬೀ (ನಾ.) ಅರ್ಧ ಪೆನಿಯ ಬೆಲೆಯ ಒಂದು ನಾಣ್ಯ.

Bawd ಬಾಡ್ (ನಾ.) ತಲೆಹಿಡುಕಿ ; ಕುಂಟಣಿ. ಪೋಲಿಯ ಮಾತು ; ಥಂಡ ಮಾತು. **Bawdy** (ಗು., ನಾ.) ಪೋಲಿಯ (ಮಾತು) ; ಥಂಡ (ಮಾತು) ; ಅಶ್ಲೀಲ (ಭಾಷೆ). Bawdy-house ಹಾದರದ ಮನೆ ; ಸೂಳೆಯ ಮನೆ. **Bawdiness** (ನಾ.)

Bawl ಬಾಲ್ (ಕ್ರಿ., ನಾ.) ಕೂಗು ; ಅರಚು ; ಕಿರಿಚು ; ಅಬ್ಬರ(ಮಾಡು) ; ಬೊಬ್ಬೆ(ಹಾಕು). **Bawler** (ನಾ.) ; **Bawling** (ನಾ.)

Bawn ಬಾನ್ (ನಾ.) ದುರ್ಗದ ಅಂಗಳ ; ಕೋಟೆಯಿಂದ ರಕ್ಷಿತವಾದ ದುರ್ಗದ ಪ್ರಾಕಾರ. ದನದ ಹಟ್ಟಿ, ಕೊಟ್ಟಿಗೆ.

Bay[1] ಬೇ (ನಾ.) B.-tree or B. Laurel ಎಂಬ ಗಿಡ. ಯುದ್ಧದಲ್ಲಿ ಜಯಶಾಲಿಗಳಾದ ವೀರರೂ ಪ್ರಸಿದ್ಧರಾದ ಕವಿಗಳೂ ಧರಿಸುವ 'ಬೇ' ಎಲೆಯ ಮಾಲೆ (ಸಾ., ಬ. ವ. ದಲ್ಲಿ) ; ಜಯಮಾಲೆ. ಪ್ರಸಿದ್ಧರಾದ ಯೋಧರ ಅಥವಾ ಕವಿಗಳ ಯಶಸ್ಸು. B. rum ಬೇ ಎಲೆಗಳಿಂದ ಬಟ್ಟಿಯಿಳಿಸಿ ತೆಗೆದ ಒಂದು ಸುಗಂಧ ದ್ರವ.

Bay[2] ಬೇ (ನಾ.) ಭೂಮಿಯೊಳಕ್ಕೆ ನುಗ್ಗಿರುವ ಸಮುದ್ರದ ದೊಡ್ಡ ಭಾಗ : ಕೊಲ್ಲಿ. (B. salt ಸಾವಕಾಶವಾಗಿ ನೀರು ಆವಿಯಾಗಿ ಹೋಗುವುದರಿಂದ ತಯಾರಾಗುವ ದೊಡ್ಡ ಹರಳಿನ ಉಪ್ಪು). ಒಂದು ಪರ್ವತ ಶ್ರೇಣಿಯಲ್ಲಿ ಒಳಕ್ಕೆ ಚಾಚಿಕೊಂಡಿರುವ ಭೂಭಾಗ : ನಡುತಪ್ಪಲು. ಕಂಬಗಳು, ತೊಲೆಗಳು, ಮೊ. ಗಳಿಂದ ಪ್ರತ್ಯೇಕಿಸಲ್ಪಟ್ಟ ಕಟ್ಟಡದ ಭಾಗ. ಕಿಟಕಿಗಳನ್ನಿಡುವುದಕ್ಕಾಗಿ ಮನೆಯ ಮುಂಭಾಗದ ಗೋಡೆಯನ್ನು ಮುಂದಕ್ಕೆ ಚಾಚುವುದರಿಂದಾದ ಪ್ರದೇಶ (B. window ಈ ಚಾಚುಭಾಗದಲ್ಲಿಯ ಕಿಟಕಿ). Horse-b. ಕುದುರೆಯ ಲಾಯ. Sick-b. ಹಡಗಿನ ಮುಖ್ಯ ಅಂತಸ್ತಿನಲ್ಲಿ ವೈದ್ಯಶಾಲೆಗಾಗಿ ಉಪಯೋಗಿಸುವ ಮುಂಭಾಗ.

Bay[3] ಬೇ (ನಾ., ಕ್ರಿ.) ಬೇಟೆಯ ನಾಯಿಯ ಬಗುಳಿಕೆ (ಮು., ಅಂಥ ನಾಯಿಗಳು ಬೇಟೆಯ ಹತ್ತಿರ ಹತ್ತಿರಕ್ಕೆ ಬರುವಾಗ ಎಲ್ಲವೂ ಒಟ್ಟಿಗೆ ಬಗುಳುವ ಬಗುಳು). ಬೇಟೆಯು ತಪ್ಪಿಸಿಕೊಳ್ಳಲಾಗದ ಸಂದರ್ಭದಲ್ಲಿ ಜೀವದ ಹಂಗು ತೊರೆದು ಹಿಂದಿರುಗಿ ಎದುರಿಸಿ ನಿಲ್ಲುವ ಸ್ಥಿತಿ. [Stand at b. ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದ್ದರಿಂದ ಹಿಂದಿರುಗಿ ಎದುರಿಸಿ ನಿಲ್ಲು. Drive to b. ಬೇಟೆಯು ತಪ್ಪಿಸಿಕೊಳ್ಳಲಾಗದೆ ಹಿಂದಿರುಗಿ ಮೇಲೆಬೀಳುವಂತೆ ಮಾಡು. (ರೂಪ. ಸಹ). Hold or keep at b. ಮೇಲೆ ಬೀಳದಂತೆ ತಡೆ]. (ಕ್ರಿ.) (ದೊಡ್ಡ ನಾಯಿಗಳು) ಬಗುಳು ; ಬಗುಳುತ್ತ ಅಟ್ಟಿಕೊಂಡು ಹೋಗು ; ತಪ್ಪಿಸಿಕೊಳ್ಳಲು ಯತ್ನವಿಲ್ಲದೆ ತಿರುಗಿಬೀಳುವಂತೆ ಮಾಡು ; ತಿರುಗಿ ಬೀಳು. B. the moon (ರೂಪ.) ನಿರರ್ಥಕವಾಗಿ ಬಗುಳು.

Bay[4] ಬೇ (ಗು., ನಾ.) ಕಪಿಲ (ಪಿಂಗಲ) ವರ್ಣದ (ಕುದುರೆ)

Baýard[1] ಬೇಯರ್ಡ್ (ನಾ.) (=Bay[4]) ; ಹುಚ್ಚುಧೈರ್ಯವುಳ್ಳ ಮಡ್ಡಿ ಮನುಷ್ಯ.

Baýard[2] ಬೇಯರ್ಡ್ (ಗು., ನಾ.) ಧೀರೋದಾತ್ತ.

Baýonet ಬೇಯೊನೆಟ್ (ನಾ., ಕ್ರಿ. ಸಕ.) ಬಂದೂಕಿನ ಕೋವಿಗೆ ತೊಡಿಸುವ ತಿವಿಯುವ ಅಲಗು : ಸನೀನು. ಯುದ್ಧಸೈನ್ಯ. (ಬ. ವ.) ಸನೀನು ಹಿಡಿದಿರುವ ಸಿಪಾಯಿಗಳು (The b., Bayonets). (ಕ್ರಿ.) ಸನೀನಿಂದ ತಿವಿ. B. into ಸೈನ್ಯಬಲದಿಂದ ಬಲಾತ್ಕರಿಸು. (ರೂಪ.) ಬಲಪ್ರಯೋಗದಿಂದ ಕೆಲಸಮಾಡಿಸು.

Bazaár, Bazár ಬಝಾರ್ (ನಾ.) (ಪೌರಸ್ತ್ಯ ದೇಶಗಳ) ವ್ಯಾಪಾರ ಸ್ಥಳ ಅಥವಾ ಪೇಟೆ ; ಅಂಗಡಿಬೀದಿ ; ಯಾವುದಾದರೂ ಧರ್ಮಕೆಲಸದ ಸಹಾಯಕ್ಕಾಗಿ ಮಾರಾಟಮಾಡುವ ಸಂತೆ.

Bdéllium ಡೆಲಿಯಂ (ನಾ.) ಗುಗ್ಗುಲದ ಗಿಡ ; ಗುಗ್ಗುಲ.

Be ಬೀ (ಕ್ರಿ. ಅಕ.) [Be ಧಾತುವಿನ ವರ್ತಮಾನ ಕಾಲದ ಉತ್ತಮ ಪುರುಷ ಏ. ವ. Am ; ಮಧ್ಯಮ ಪುರುಷ ಏ. ವ. Art ; ಪ್ರಥಮ ಪುರುಷ ಏ. ವ. Is ; ಎಲ್ಲ ಪುರುಷಗಳ ಬ. ವ. Are ; ಭೂತ ಕಾಲದ ಉತ್ತಮ ಪುರುಷ ಮತ್ತು ಪ್ರಥಮ ಪುರುಷ ಏ. ವ. Was ; ಮಧ್ಯಮ ಪುರುಷ ಏ. ವ. Wert ; ಎಲ್ಲ ಪುರುಷಗಳ ಬ. ವ. Were. ವರ್ತಮಾನ ಕೃದ್ವಾಚಿ Being ; ಭೂ. ಕೃ. Been] ಇರು ; ಆಗಿರು ; ಆಗು. Let it be ಇರಲಿ ; ಅದು ಹಾಗಿರಲಿ. Do not be long ಲಂಬಿಸಬೇಡ ; ಬಹಳ ಹೊತ್ತು ಮಾಡಬೇಡ. May be ಪ್ರಾಯಶಃ ; ಬಹುಶಃ. The to-be ಮುಂದೆ ನಡೆಯತಕ್ಕದ್ದು ; ಮುಂದಿನದು ; ಭವಿಷ್ಯ. Would-be ಆಗಲು ಅಪೇಕ್ಷಿಸುವ ; ಆಗುವೆನೆಂದು ತಿಳಿದುಕೊಂಡಿರುವ. Be-all ಸರ್ವಸ್ವ ; ಸಾರಾಂಶ ; ಹುರುಳು ; ತಿರುಳು. Might-have-beens ಆಗಿದ್ದಿರಬಹುದಾದವು. For the time being ಸದ್ಯಕ್ಕೆ ; ಈಗಿನ ಮಟ್ಟಿಗೆ. Woe is me ನನಗೆಂಥ ವಿಪತ್ತು ಬಂದಿತು ! What are you at ? ನಿನ್ನ ಗುರಿ, ಉದ್ದೇಶ, ಏನು ? I am for excusing him ಅವನನ್ನು ಮನ್ನಿಸಬೇಕೆಂಬುದು ನನ್ನ ಅಭಿಪ್ರಾಯ. I am for London ನಾನು ಲಂಡನ್ನಿಗೆ ಹೊರಟಿದ್ದೇನೆ.

Beach ಬೀಚ್ (ನಾ.) ಸಮುದ್ರದ ಕರೆ, ದಡ, ತೀರ (ಮು., ಉಬ್ಬರದ ನೀರಿನ ಅಂಚಿಗೂ ಇಳಿತದ ನೀರಿನ ಅಂಚಿಗೂ ಮಧ್ಯೇ ಇರುವ ಪ್ರದೇಶ). ನೀರಿನ ಹೊಡೆತದಿಂದ ನುಣುಪಾದ ಸಣ್ಣ ಕಲ್ಲುಗಳು. (ಭೂ. ವಿ.) ಪೂರ್ವಕಾಲದಲ್ಲಿದ್ದ ಸಮುದ್ರದ ಅಂಚು. **B.-comber** ಸಮುದ್ರದ ಕಡೆಯಿಂದ ಉರುಳಿಕೊಂಡು ಬರುವ ದೊಡ್ಡ ಅಲೆ. ಮುತ್ತಿನ ಚಿಪ್ಪುಗಳನ್ನೂ ಹಡಗುಗಳಿಂದ ಎಸೆದುಬಂದ ಸಾಮಾನುಗಳನ್ನೂ ಸಂಗ್ರಹಿಸುವ ವೃತ್ತಿಯ, ಅಥವಾ ಗೊತ್ತಾದ ಕೆಲಸವಿಲ್ಲದೆ ಸಮುದ್ರತೀರದಲ್ಲಿಯೊ ಹಡಗಿನಿಂದ ಸಾಮಾನುಗಳನ್ನಿಳಿಸುವ ಸ್ಥಳದಲ್ಲಿಯೊ ಅಲೆದಾಡುವ ಪೆಸಿಫಿಕ್‌ದ್ವೀಪಗಳ (ಬಿಳಿಯ) ನಿವಾಸಿ. **B.-man** ಸಮುದ್ರ ದಡದಲ್ಲಿ ಜೀವನ ಸಂಪಾದಿಸಿಕೊಳ್ಳುವವನು. **B.-master** ಸೇನೆಯ ದಳಗಳು ಹಡಗಿನಿಂದ ಇಳಿಯುವುದನ್ನು ಮೇಲ್ವಿಚಾರಣೆ ಮಾಡುವ ಅಧಿಕಾರಿ. **Beachy** (ಗು.) ನುಣುಪಾದ ಸಣ್ಣ ಕಲ್ಲುಗಳಿಂದ ತುಂಬಿದ.
Beach (ಕ್ರಿ. ಸಕ.) (ಹಡಗನ್ನೂ ದೋಣಿಯನ್ನೂ) ದಡಕ್ಕೆ ತಳ್ಳು, ಬಿಡು.

Beácon ಬೀಕನ್ (ನಾ., ಕ್ರಿ. ಸಕ.) ಹೆಗ್ಗುರುತು ; ಸಂಜ್ಞಾಜ್ಯೋತಿ ; (ಕಂಬದ ಮೇಲೆಯೊ ಗುಡ್ಡದ ಮೇಲೆಯೊ ಉರಿಸುವ) ಗುರುತಿನ ಬೆಳಕು, ಉರಿ ; ಬೆಳಕುಮನೆ. ಸಂಜ್ಞಾಸ್ಥಾನ. ಕಾವಲುಗೋಪುರ. (ರೂಪ.) ಮಾರ್ಗದರ್ಶಕ ; ಎಚ್ಚರಿಕೆ. (ಕ್ರಿ.) ಬೆಳಗು ; ದಾರಿ ತೋರಿಸು (ರೂಪ. ಸಹ). (ಒಂದು ಪ್ರದೇಶಕ್ಕೆ) ಸಂಜ್ಞಾಜ್ಯೋತಿಗಳನ್ನು ಒದಗಿಸು. **Beáconage** — ನೆಜ್ (ನಾ.) ಸಂಜ್ಞಾಜ್ಯೋತಿಗಳ ಪಾಲನೆಗಾಗಿ ಕೊಡಬೇಕಾದ ಸುಂಕ. ಸಂಜ್ಞಾದೀಪ ಸರಣಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bead ಬೀಡ್ (ನಾ.) (ಮೊದಲಿನ ಅರ್ಥ: ಜಪ). (ಜಪಸರದ) ಮಣಿ (Tell one's beads ಜಪಸರ ಹಿಡಿದು ಜಪಮಾಡು). (ಗಾಜು, ಮರ, ಬೀಜ, ಮೊ. ಗಳಿಂದ ಮಾಡಿದ) ಮಣಿ. (ದ್ರವದ) ಹನಿ, ಬಿಂದು; ನೀರ್ಗುಳ್ಳೆ. ಬಂದೂಕಿನಲ್ಲಿ ಗುರಿತೋರಿಸುವ ಮಣಿ (Draw a b. on ಗುರಿಯಿಡು.) (ವಾ. ಶಾ.) ಮಣಿಸರದಂತೆ ಮಾಡಿದ ಕೆತ್ತನೆ ಅಥವಾ ಶಿಲ್ಪ. **Beádsman** ಬೀಡ್ಸ್‌ಮ್ಯನ್ (ನಾ.) ತನಗೆ ಉಪಕಾರಿಯಾದವನಿಗೆ ಫಲಪ್ರಾಪ್ತಿಗಾಗಿ ಜಪಮಾಡಲು ನಿಯಮಿತನಾದ ಸಂಬಳದವನು; ದಾತನಿಗಾಗಿ ಜಪಮಾಡುವವನು; ದಾತನ ಶ್ರೇಯಃಪ್ರಾರ್ಥಿ; ಜಪಕಾರ. ಧರ್ಮಶಾಲೆಯ ನಿವಾಸಿ; ಭಿಕ್ಷುಕ. **B.-roll** ಜಪ ಸರ. ಹೆಸರುಗಳ ಪಟ್ಟಿ, ಮಾಲೆ. ಅಂಕಮಾಲೆ.

Bead (ಕ್ರಿ.) ಮಣಿಗಳನ್ನು ಹವಣಿಸು; ಮಣಿ ಪೋಣಿಸು; ಸರ ಪೋಣಿಸು. ಬಿಂದುಗಳಾಗು; ಹನಿಯಾಗು. **Beáding** (ನಾ.) (ಕ್ರಿಯಾರ್ಥಗಳಲ್ಲಿ). (ವಾ. ಶಾ.) ಮಣಿಗೆಲಸ. **Beády** (ಗು.) ಮಣಿಯಂತಿರುವ. (ಕಣ್ಣುಗಳ ವಿಷಯದಲ್ಲಿ) ಸಣ್ಣದಾಗಿಯೂ ದುಂಡಗೂ ಹೊಳೆಯುತ್ತಲೂ ಇರುವ. ಹನಿಗಳಿಂದ, ಬಿಂದುಗಳಿಂದ, ಕೂಡಿದ.

Beádle ಬೀಡ್‌ಲ್ (ನಾ.) ವ್ಯಾಪಾರ ಮಂಡಲಿಯ ಚಾರ, ಹರಿಕಾರ. ಕ್ರೈಸ್ತ ದೇವಾಲಯಗಳಲ್ಲಿ ಸದ್ದು, ತಂಟೆ, ಮೊ. ವು ಆಗದಂತೆ ನೋಡಿಕೊಳ್ಳುವ, ಮತ್ತು ಇತರ ಚಿಲ್ಲರೆಕೆಲಸಗಳನ್ನು ಮಾಡುವ ಕೆಳ ದರ್ಜೆಯ ಅಧಿಕಾರಿ. **Beádleship** (ನಾ.); **Beádledom** (ನಾ.) ಅಧಿಕಪ್ರಸಂಗಿತನ.

Beágle ಬೀಗ್‌ಲ್ (ನಾ., ಕ್ರಿ. ಅಕ.) ಮೊಲದ ಬೇಟೆಯಾಡುವುದರಲ್ಲಿ ಉಪಯೋಗಿಸುವ ಕೇವಲ ಸಣ್ಣ ಇಂಗ್ಲಿಷ್ ಬೇಟೆಯನಾಯಿ: ಮೊಲದ ಬೇಟೆನಾಯಿ. ಗೂಢಚಾರ; ಬೇಹುಕಾರ. (ಕ್ರಿ.) ಮೊಲದ ಬೇಟೆನಾಯಿಗಳ ಸಹಾಯದಿಂದ ಬೇಟೆಯಾಡು.

Beak ಬೀಕ್ (ನಾ.) ಹಕ್ಕಿಗಳ ಕೊಕ್ಕು (ಮು., ಕ್ರೂರ ಪಕ್ಷಿಗಳದು, ಬಲವಾಗಿಯೂ ಬಗ್ಗಿಕೊಂಡೂ ಇರುವದು). (ಆಮೆ, ಮೊ. ಪ್ರಾಣಿಗಳ) ಕೊಕ್ಕಿನಂಥ ಮೂತಿ; ಗರುಡ ಮೂಗು; ಗಿಣಿಮೂಗು. ಪೂರ್ವಕಾಲದ ಯುದ್ಧದ ಹಡಗಿನ ಮುಂಭಾಗದ ಮೂತಿ. (ಪಾತ್ರೆ, ಮೊ. ಗಳ) ಮೂತಿ. (ಹಾಸ್ಯವಾಗಿ) ಮನುಷ್ಯನ ಮೂಗು. (ಅಸಂ.) ದಂಡಾಧಿಕಾರಿ. **Beaked** (ಗು.); **Beáker** (ನಾ.) ಕುಡಿಯುವ ದೊಡ್ಡ ಬಟ್ಟಲು; ವೈಜ್ಞಾನಿಕ ಪ್ರಯೋಗಗಳಲ್ಲಿ ಉಪಯೋಗಿಸುವ ಮೂತಿಯ ಗಾಜುಪಂಚಪಾತ್ರೆ; ಕೊಕ್ಕುಪಾತ್ರೆ.

Beam ಬೀಮ್ (ನಾ.) ತೊಲೆ; ದೂಲ; ಮಗ್ಗದಮೇಲಿನ ಹಾಸು ನೂಲನ್ನಾಗಲಿ ಬಟ್ಟೆಯನ್ನಾಗಲಿ ಸುತ್ತುವುದಕ್ಕಾಗಿ ಉಪಯೋಗಿಸುವ ದುಂಡುಕೊರಡು. ನೇಗಿಲಿನ ಈಚು. ತ್ರಾಸಿನ ದಂಡಿಗೆ; ತುಲಾ ದಂಡ [Kick or strike the b. ತಕ್ಕಡಿಯ ತಟ್ಟೆ ಮೇಲಕ್ಕೇಳು, ಹಗುರವಾಗು. (ರೂಪ.) ಸೋತುಹೋಗು]. ಲಂಗರಿನ ದಂಡ. ಆವಿಯಂತ್ರ ಮೊ. ಗಳಲ್ಲಿ 'ಪಿಸ್ಟನ್' ಎಂಬ ಚಾಲಕ ದಂಡವನ್ನೂ 'ಕ್ರ್ಯಾಂಕ್' ಎಂಬ ಚಾಲಿತ ವಕ್ರದಂಡವನ್ನೂ ಸೇರಿಸುವ ಸನ್ನೆಕೋಲು. ಹಡಗಿನ ಅಡ್ಡತೊಲೆ; ಹಡಗಿನ ಅಗಲ [On her b.-ends ಹಡಗು ತನ್ನ ಒಂದು ಪಕ್ಕಕ್ಕೆ ಓಲಿಕೊಂಡು ತಲೆಕೆಳಗಾಗಬಹುದಾದ ಸ್ಥಿತಿಯಲ್ಲಿ. (ರೂಪ.) ಅಪಾಯ ಸ್ಥಿತಿಯಲ್ಲಿ]. ಜ್ಯೋತಿಷ್ಕಿರಣ; ವಿದ್ಯುತ್ಕಿರಣ; —ಕಿರಣಜಾಲ (B. system ನಿಸ್ತಂತು ವಾರ್ತಾಪ್ರಸರಣದಲ್ಲಿ, ತಕ್ಕ ಗೋಲದರ್ಪಣವನ್ನು ಉಪಯೋಗಿಸುವುದರಿಂದ ಒಂದು ಸೂಕ್ಷ್ಮ ತರಂಗದ ಕಿರಣಜಾಲವು ಚೆದರಿಹೋಗದೆ ನೇರವಾಗಿ ಪ್ರವಹಿಸುವಂತೆ ಮಾಡಿರುವ ವಿಧಾನ: ಕಿರಣದಂಡ ವಿಧಾನ). ಪ್ರಭೆ; ಜ್ಯೋತಿ; ಮುಖದ ಕಳೆ; ಮುಗುಳು ನಗೆ.

Beam (ಕ್ರಿ.) (ಕಾಂತಿ, ಪ್ರೀತಿ, ಮೊ. ನ್ನು) ಸೂಸು; ಬೆಳಗು; ಪ್ರಕಾಶಿಸು; ಹಸನ್ಮುಖನಾಗು. **Beáming** (ಗು.); **Beámy** (ಗು.) ಕಳೆ ಸೂಸುವ; ಉಜ್ಜ್ವಲವಾದ (ಅಪೂರ್ವ ಪ್ರಯೋಗ). (ಕಾವ್ಯ) (ಈಟಿ, ಮೊ. ಗಳು) ಬಹಳ ದೊಡ್ಡ. (ಹಡಗು) ಅಗಲವಾದ.

Bean ಬೀನ್ (ನಾ.) ಅವರೆಯ ಕಾಯಿ, ತಿಂಗಳ ಹುರುಳಿ, ಮೊ. ಗಳ ಬೀಜ, ಗಿಡ; ಹೀಗೆ ಕಾಣುವ ಇತರ ಕಾಯಿಗಳ ಬೀಜ, ಗಿಡ; ಈ ಬೀಜದಂತೆ ಕಾಣುವ ಇತರ ಬೀಜ (Coffee b.). Full of beans, B.-fed ಬಹಳ ಉತ್ಸಾಹದಿಂದ ಕೂಡಿ, ಗೆಲುವಾಗಿ. Give one beans (ಅಸಂ.) ದಂಡಿಸು; ಬಯ್ಯು. B.-feast, Beano (ಅಸಂ.) ದಣಿಯಾದವನು ಜೀತಗಾರರಿಗೆ ವರ್ಷಕ್ಕೊಂದು ದಿನ ಹಾಕುವ ಔತಣದ ಊಟ; ಉತ್ಸವ; ಸಂತೋಷ ಕೂಟ.

Bear[1] ಬೇರ್ (ನಾ.) ಕರಡಿ. (ರೂಪ.) ಮರ್ಯಾದೆಯಿಲ್ಲದ ಒರಟು ವಿಕಾರ ಮನುಷ್ಯ. Great Bear, Little Bear ಸಪ್ತರ್ಷಿ, ಲಘು ಸಪ್ತರ್ಷಿ (ನಕ್ಷತ್ರ ಪುಂಜಗಳು). **Beárish** (ಗು.) ಕರಡಿಯಂಥ; ಒರಟು; ಸಿಡುಕಿನ. **Beárishness** (ನಾ.); **B.-garden** (ರೂಪ.) ಗೊಂದಲದ ನೆಲೆ. **B.-leader** ವಿದ್ಯಾಭ್ಯಾಸ ಮಾಡಿಸುವುದಕ್ಕಾಗಿ ಸ್ಥಳದಿಂದ ಸ್ಥಳಕ್ಕೆ ಸಂಚರಿಸುವ ಉಪಾಧ್ಯಾಯ; ಚರ ಶಿಕ್ಷಕ. **Beárskin** ಕರಡಿಯ ಚರ್ಮದ ಹೊದಿಕೆ; ಮೇಲಂಗಿಗಾಗಿ ಉಪಯೋಗಿಸುವ ಒರಟು ಉಣ್ಣೆಯ ಬಟ್ಟೆ.

Bear (ನಾ., ಕ್ರಿ.) (ಪತ್ರವ್ಯಾಪಾರ) ಪತ್ರಗಳ ಬೆಲೆ ಮುಂದೆ ತಗ್ಗಬಹುದೆಂದೂ, ಅವನ್ನು ಆ ಸಂದರ್ಭದಲ್ಲಿ ಕಡಮೆಯ ಬೆಲೆಗೆ ಕೊಳ್ಳಬಹುದೆಂದೂ ಊಹಿಸಿ, ಅವನ್ನು ಮುಂದೆ ವಶಮಾಡುವ ಕರಾರಿನಮೇಲೆ ಮತ್ತೊಬ್ಬನಿಗೆ ಈಗಲೇ ಮಾರಿ, ಆ ಉಪಾಯದಿಂದ ಬೆಲೆ ತಗ್ಗಿಸಲು ಯತ್ನಿಸುವವನು. (ಕ್ರಿ.) ಬೆಲೆ ಇಳಿಯುವುದೆಂಬ ಆಸೆಯಿಂದ ಜೂಜು ವ್ಯಾಪಾರ ಮಾಡು; ಬೆಲೆ ಬೀಳುವಂತೆ ಮಾಡು. ('ಕರಡಿಯನ್ನು ಕೊಲ್ಲುವುದಕ್ಕೆ ಮೊದಲೇ ಅದರ ಚರ್ಮವನ್ನು ಮಾರಿದರು' ಎಂಬ ಗಾದೆಯಿಂದ ಇರಬಹುದು)

Bear[2] ಬೇರ್ (ಕ್ರಿ.; ಭೂತ. Bore; ಭೂ. ಕೃ. Borne, Born) ಹೊರು; ವಹಿಸು; ಒಯ್ಯು; ಹೊತ್ತು ತೆಗೆದುಕೊಂಡುಹೋಗು. ತಾಳು; ತಡೆದುಕೊ; ಸಹಿಸಿಕೊ. ನಡೆದುಕೊ; ವರ್ತಿಸು. ಪಡೆ; ಹೊಂದು. (ಅಧಿಕಾರ, ಮೊ. ನ್ನು) ನಡಸು. ಹೆರು; ಹಡೆ; ಈಯಿ; ಫಲಬಿಡು. B. arms ಆಯುಧ ಧರಿಸು. B. away the prize ಬಹುಮಾನವನ್ನು ಗೆಲ್ಲು. B. down ಉರುಳಿಸು; ಸೋಲಿಸು. B. a grudge ಹಗೆಯಿಡು; ಮತ್ಸರವಿಡು. B. a hand ಸಹಾಯ ಮಾಡು; ನೆರವಾಗು. B. hard upon ತೊಂದರೆಪಡಿಸು; ಪೀಡಿಸು; ತುಳಿ. B. in mind ಮನಸ್ಸಿನಲ್ಲಿಡು. B. out ದೃಢೀಕರಿಸು; ಸ್ಥಿರಪಡಿಸು; ಸಮರ್ಥಿಸು. B. a part in ಭಾಗ ವಹಿಸು. B. up (ಹಡಗನ್ನು ಗಾಳಿಬೀಸುವ ಕಡೆಗೆ) ತಿರುಗಿಸು. ಎತ್ತಿಹಿಡಿ; ನಿರಾಶೆಗೊಳಬೇಡ. B. upon ಅನ್ವಯಿಸು; ಸಂಬಂಧಿಸು. B. witness ಸಾಕ್ಷ್ಯಕೊಡು; ಸಾಕ್ಷಿಯಾಗಿರು. B. yourself well ಯೋಗ್ಯವಾಗಿ ನಡೆದುಕೊ. Bring to b. ಪರಿಣಾಮವಾಗುವಂತೆ ಮಾಡು; ಪ್ರಯೋಗಿಸು. I cannot b. him ಅವನ ಚರ್ಯೆಯನ್ನು ಸಹಿಸಲಾರೆ. His language will not b. repetition ಅವನ ದುರ್ಭಾಷೆ ಹೇಳಲಾಗದು. He was born in that year ಅವನು ಆ ವರ್ಷದಲ್ಲಿ ಹುಟ್ಟಿದನು. Be borne away ಹೊರಗಿನ ಅಥವಾ ಮನಸ್ಸಿನ ಪ್ರೇರಣೆಗೆ ಅಧೀನನಾಗು, ಸೆಳೆತಕ್ಕೆ ಸಿಕ್ಕು. Is borne in upon me ನನಗೆ ಚೆನ್ನಾಗಿ ಮನದಟ್ಟಾಗಿದೆ. Borne on the books of that company ಆ ಸಂಘದಿಂದ ಪಾವತಿಯಾದ. She has borne a child ಆಕೆ ಮಗುವನ್ನು ಹೆತ್ತಿದ್ದಾಳೆ. **Beárable** (ಗು.) ಹೊರಲು ಸಾಧ್ಯವಾದ; ತಡೆದುಕೊಳ್ಳಬಹುದಾದ. **Beárer** (ನಾ.) ಹೊತ್ತಿರುವವನು; ಹೊರುವವನು; ಹೊತ್ತಿರುವದು; ಹೊರುವದು; ಧಾರಕ; ವಾಹಕ; ಚಟ್ಟ ಹೊರುವವನು. (ಇಂಡಿಯಾದಲ್ಲಿ) ಪಲ್ಲಕ್ಕಿ, ಅಂದಳ, ಡೋಲಿ, ಮೊ. ನ್ನು ಹೊರುವವನು; ಬೋಯಿ. ಅಂಗಸೇವಕ. ಕಾಗದ, ಸಮಾಚಾರ ಮೊ. ನ್ನು ತರುವವನು; ಚಾರ. ಹುಂಡಿ, ಮೊ. ನ್ನು ಬ್ಯಾಂಕಿಗೆ ಕೊಟ್ಟು ಹಣಪಡೆಯುವವನು. (ಸ. ವಿ.) A good bearer ಚೆನ್ನಾಗಿ ಫಲಬಿಡುವದು; ಸುಫಲ. Bearer

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

company (ಸೈನ್ಯ) (ಯುದ್ಧದಲ್ಲ ಗಾಯಪಟ್ಟವರನ್ನು ಉಪಚರಿಸಿ ಸಾಗಿಸಿ ಕೊಂಡುಬರುವ) ವಾಹಕ ದಳ. **Beáring** (ನಾ.) (ಕ್ರಿಯಾರ್ಥಗಳಲ್ಲಿ). ನಡತೆ ; ವರ್ತನೆ ; ರೀತಿ ; ಸಂಬಂಧ. (Consider it in all its bearings ಅದನ್ನು ಎಲ್ಲಾ ದೃಷ್ಟಿಗಳಿಂದಲೂ ವಿವೇಚಿಸು. What is the bearing of this on the argument? ಈ ವಾದಕ್ಕೂ ಇದಕ್ಕೂ ಸಂಬಂಧವೇನು ?). ಒಂದು ಸ್ಥಳ, ಮೊ. ವು ಇರುವ ದಿಕ್ಕು, ನೆಲೆ ; ಸುತ್ತುಮುತ್ತಲಿರುವ ವಸ್ತುಗಳ ಪರಸ್ಪರ ಸ್ಥಾನ (I have lost my bearings ನನಗೆ ದಿಕ್ಕುತೋರದೆ ಇದೆ ; ನಾನು ದೆಸೆಗೆಟ್ಟಿದ್ದೇನೆ). (ಸ. ವಿ.) ಬೆಳೆ (Two bearings a year). **Beárings** (ನಾ.) ಘರ್ಷಣೆಯಾಗುವ ಯಂತ್ರಭಾಗಗಳು ; ಅಚ್ಚು ಯಾವ ಭಾಗಕ್ಕೆ ಉಜ್ಜಿಕೊಂಡು ತಿರುಗುತ್ತದೆಯೊ ಆ ಭಾಗ, ಅಥವಾ ಆ ಪ್ರದೇಶದಲ್ಲಿರುವ ಅಚ್ಚಿನ ಭಾಗ.

Beard ಬಿಯರ್ಡ್ (ನಾ.) (ಮನುಷ್ಯನ ಅಥವಾ ಇತರ ಪ್ರಾಣಿಗಳ) ಗಡ್ಡ, ದಾಡಿ. (ಪ್ರಾ. ವಿ.) ಕೆಲವು ಮೀನುಗಳ ಬಾಯಿಗೆ ಸೇರಿರುವ ಅನುಬಂಧನ, ಚುಂಗು ; ಕೆಲವು ಚಿಪ್ಪುಪ್ರಾಣಿಗಳ ಶ್ವಾಸಾಂಗಗಳು ; ಕೆಲವು ಹಕ್ಕಿಗಳ ಕೊಕ್ಕಿನ ಮೂಲದಲ್ಲಿಯ ಬಿರುಗೂದಲು. (ಸ. ವಿ.) ಹುಲ್ಲಿನ ಊಬು. (ಮುದ್ರಣ) ಅಚ್ಚಿನ ಮೊಳೆಯ ಅಕ್ಷರದ ಮೇಲೂ ಕೆಳಗೂ ಬರಿದಾಗಿರುವ ಭಾಗ. To one's b. ಅವನ ಎದುರಿಗೇ ; ಮುಚ್ಚುಮರೆಯಿಲ್ಲದೆ. **Beárded** (ಗು.) ; **Beárdless** (ಗು.) ; **Beárdlessness** (ನಾ.)

Beard (ಕ್ರಿ. ಸಕ.) ಎಲ್ಲರೆದುರಿಗೂ ಎದುರಿಸು ; ಪ್ರತಿಭಟಿಸು ; ನಿರ್ಲಕ್ಷ್ಯವಾಗಿ ನೋಡು. B. the lion in his den ಸಿಂಹವನ್ನು ಅದರ ಗವಿಯಲ್ಲಿಯೇ ಕೆಣಕು ; (ರೂಪ.) ಕೇವಲ ಶತ್ರುವನ್ನು, ಅವನು ಎಲ್ಲಾ ಅನುಕೂಲ್ಯಗಳನ್ನೂ ಪಡೆದಿರುವಾಗಲೇ, ಪ್ರತಿಭಟಿಸು.

Beast ಬೀಸ್ಟ್ (ನಾ.) ಪ್ರಾಣಿ ; ಮೃಗ ; ಪಶು ; ದನ ; ಸವಾರಿ ಮಾಡುವುದಕ್ಕಾಗಲಿ ಬಂಡಿ ಮೊ. ನ್ನು ಎಳೆಯುವುದಕ್ಕಾಗಲಿ ಉಪಯೋಗಿಸುವ ಪ್ರಾಣಿ. (ರೂಪ.) ದಯಾದಾಕ್ಷಿಣ್ಯವಿಲ್ಲದವನು ; ಅನಾಗರಿಕ ; ಅಸಹ್ಯ ಮನುಷ್ಯ. The B. ಪ್ರತಿಕ್ರಿಸ್ತ ; ಕ್ರಿಸ್ತವೈರಿ. The b. (ಮನುಷ್ಯನ) ಪಶುಸ್ವಭಾವ. **Beástly** (ಗು., ಕ್ರಿ. ವಿ.) ಪಶುಪ್ರಾಯವಾದ ; ಪಾಶವ. ಮನುಷ್ಯನ ಉಪಯೋಗಕ್ಕೆ ಸಲ್ಲದ ; ಕೊಳಕು ; ಸಹಿಸಲಾಗದಂಥ (Beastly cold ವಿಪರೀತ ಚಳಿ). ಮಲಿನ. (ಅಸಂ., ಕೆಟ್ಟಾರ್ಥದಲ್ಲ) ಅತಿಯಾಗಿ ; ವಿಪರೀತವಾಗಿ ; **Beástliness** (ನಾ.) ಪಶುತ್ವ ; ಹೊಟ್ಟೆಬಾಕತನ ; ಕುಡುಕತನ ; ನಾಚಿಕೆಗೇಡಿತನ ; ಅಶ್ಲೀಲತೆ. ಅಸಹ್ಯವಾದ ಆಹಾರ ಅಥವಾ ಪಾನೀಯ.

Beat ಬೀಟ್ (ಕ್ರಿ. ; ಭೂತ. Beat ; ಭೂ. ಕೃ. Beaten, Beat) ಹೊಡೆ ; ಬಡಿ ; ಇಡಿ ; ಕುಟ್ಟು ; ತಟ್ಟು ; ಜಡಿ ; ಬಾರಿಸು ; ಸೋಲಿಸು ; ಮೀರು. ತಾಳಗತಿಯಲ್ಲಿ ಚಲಿಸು ; ತುಡಿ ; ಸ್ಪಂದಿಸು. (ಮಳೆ, ಮೊ.) ಬಿರುಸಾಗಿ ಬೀಳು, ಸುರಿ. B. about (ನಾಕ) ಗಾಳಿಗೆದುರಾಗಿ ಹೆಣಗಾಡು. ನಾನಾ ರೀತಿಗಳಲ್ಲಿ ಹುಡುಕಾಡು. B. about the bush (ರೂಪ.) ಗುರಿಬಿಟ್ಟು ಬಳಸುಮಾತಾಡು. B. the air ಗಾಳಿ ಗುದ್ದಿ ಮೈನೋಯಿಸಿಕೊ. B. away ಹೊಡೆಯುತ್ತ ಹೋಗು ; ಹೊಡೆದೋಡಿಸು. B. back ಹಿಂದಕ್ಕೆ ಅಟ್ಟು ; ಪುಟ ನೆಗೆಯಿಸು. B. black and blue ಮೈ ನೀಲಿಗಟ್ಟುವಹಾಗೆ ಬಡಿ. B. the bounds ಕ್ರೈಸ್ತಪಾದ್ರಿಯ ಮತವಿಚಾರಣೆಗೆ ಸೇರಿದ ಗ್ರಾಮದ ಎಲ್ಲೆಯನ್ನು ಬಡಿಯುತ್ತಹೋಗಿ ಗುರುತಿಸು. B. one's brains ಸರಿಯಾದ ಆಲೋಚನೆ ಹೊಳೆಯುವುದಕ್ಕಾಗಿ ತಿಣುಕಾಡು, ತಲೆ ಚಚ್ಚಿಕೊ. B. the breast (ದುಃಖ ಸೂಚಕವಾಗಿ) ಎದೆಬಡಿದುಕೊ. B. the carpet ಜಮಖಾನದ ದೂಳುಹೊಡೆ. B. at door ಬಾಗಿಲು ಬಡಿ. B. down ತಗ್ಗಿಸು ; ಇಳಿಸು. ಜಜ್ಜಿಬಿಡು. (ರೂಪ.) (ಸಂಸ್ಥೆ, ಅಭಿಪ್ರಾಯ, ಮೊ. ನ್ನು) ಉರುಳಿಸಿಬಿಡು. ಕೊಸರಾಡಿ (ಬೆಲೆ) ತಗ್ಗಿಸು. B. (a thing) into one's head, mind ತಲೆಗೆ (ಮನಸ್ಸಿಗೆ) ಹತ್ತುವಂತೆ ಮಾಡು. B. hollow ಸುಲಭವಾಗಿ ಬಡಿದು ಹಾಕು ; ಸಂಪೂರ್ಣವಾಗಿ ಸೋಲಿಸು. B. in ಹೊಡೆದು ಕೆಳಕ್ಕಿಳಿಸು ; ಹೊಡೆದು ಹೊಡೆದು ಚೂರು ಚೂರು ಮಾಡು ; ತಲೆಗೆ ಹೊಗಿಸು ; ತಿಳಿದುಕೊಳ್ಳುವಂತೆ ಮಾಡು. B. it (ಅಮೆ. ಸಂ., ಬಳ. ಮಾ.) ಹೊರಡು ; ತೊಲಗು. B. off ಹೊಡೆದೋಡಿಸು. B. out ಹೊಸ ದಾರಿ ಮಾಡು ; ನಡೆದು ನಡೆದು ಜಾಡುಮಾಡು. ಹೊಡೆದು ಹೊಡೆದು ವಿಸ್ತರಿಸು, ಆಕಾರಕ್ಕೆ ತರು. ಹೊಡೆದೋಡಿಸು. (ಹುಲ್ಲು, ಮೊ. ನ್ನು) ಬಡಿದು ಕಾಳುಮಾಡು. (ಪ್ರಯಾಸದಿಂದ ಒಂದು ವಿಷಯವನ್ನು) ಬುಡಮುಟ್ಟ ಶೋಧಿಸು. B. a parley ಸಂಧಿಗಾಗಿ ಹೇಳಿಕಳುಹಿಸು. B. a path or track (ಅದೇ ಮಾರ್ಗದಲ್ಲಿ) ಹೆಚ್ಚಾಗಿ ತಿರುಗಾಡಿ ಜಾಡುಮಾಡು. (ರೂಪ.) ಹೊಸ ಮಾರ್ಗವನ್ನು ಕಲ್ಪಿಸು. B. a retreat (ಸೈನ್ಯ) (ರಣಭೇರಿ ಬಾರಿಸುವುದರಿಂದ) ಹಿಮ್ಮೆಟ್ಟುವ ಸೂಚನೆ ಕೊಡು ; ಹಿಮ್ಮೆಟ್ಟು. B. the streets ಬೀದಿಯಲ್ಲಿ ಅಲೆದಾಡು. B. time ತಾಳ ಹಾಕು. (ರೂಪ.) ಕಾಲ ತಪ್ಪದೆ ಅನುಸರಿಸಿ ಹೋಗು ; ಹಿಂದೆ ಬೀಳದಿರು. B. up (ಕಡೆಗೋಲಿನಿಂದ) ಕಡೆದು ಒಂದೇ ಮಂದಕ್ಕೆ ತರು. B. up the quarters of (ಬಳ. ಮಾ.) ದುಡುಂಪ್ರವೇಶ ಮಾಡು ; (ಒಬ್ಬರ ಭೇಟಿಗಾಗಿ ಹೋಗಿ) ತಿಳಿಸದೆ ನುಗ್ಗು. B. up for recruits ಸೈನ್ಯಕ್ಕೆ ಸೇರಿಸುವುದಕ್ಕಾಗಿ ಮಂದಿಯನ್ನು ಹುಡುಕು. B. up recruits ಸೈನ್ಯಕ್ಕೆ ಮಂದಿಯನ್ನು ಸೇರಿಸು. **Beáten** ಬೀಟ್ನ್ (ಗು.) (ಕ್ರಿಯಾರ್ಥಗಳಲ್ಲಿ). ನಡೆದು ನಡೆದು ಗಟ್ಟಿಯಾಗಿ ಸವೆದ (Beaten track ತುಳಿದ ದಾರಿ) ; ಬಳಕೆಯಾದ. ಸುತ್ತಿಗೆಯಿಂದ ಬಡಿದು ಆಕಾರಮಾಡಿದ ; ಬಡಿದ ; ತಟ್ಟಿದ. ಸೋತುಹೋದ ; ಖಿನ್ನನಾದ. **Beáter** (ನಾ.) (ಕ್ರಿಯಾರ್ಥಗಳಲ್ಲಿ). ಬಡಿಗೆ ; ಕೊಡತಿ ; ದಮ್ಮಸು ; ಕಡೆಗೋಲು. ಬೇಟೆಯ ಮೃಗಗಳನ್ನು ಎಬ್ಬಿಸುವುದಕ್ಕಾಗಿ ನಿಯಮಿತನಾದವನು : ಸೋಹುಗಾರ. ಚಪ್ಪಟೆ ಬಡಿಯುವ ಸುತ್ತಿಗೆ. **Beáting** (ನಾ.) ಹೊಡೆತ ; ತುಡಿತ ; ಸ್ಪಂದನ ; ತಾಡನ ; ದಂಡನೆ ; ಸೋಲು.

Beat (ನಾ.) (ಭೇರಿ, ಮೊ. ವಾದ್ಯದಮೇಲೆ) ಹೊಡೆತ, ಏಟು ; ಹೀಗೆ ಕೊಟ್ಟ ಸಾಂಕೇತಿಕ ಸಂಜ್ಞೆ ; ವಾದ್ಯಗಾರರ ಚಾಲಕನ ಬೆತ್ತದ (ಅಥವಾ ಕೈಯ) ತಾಳಸೂಚಕ ಚಲನೆ ; ತಾಳ. ಸ್ಪಂದನ ; ತುಡಿತ ; ಬಡಿತ. (Heart-b. ರಕ್ತಕೋಶದ ತಾಳಗತಿಯ ಚಲನೆ ; ಹೃದಯದ ತುಡಿತ). ಪಹರೆಯವನ ಅಥವಾ ಊರುಗಾವಲಿನವನ ಗೊತ್ತಾದ ಸುತ್ತು : ಗಸ್ತು ; ಒಬ್ಬನು ಸಾಧಾರಣವಾಗಿ ಸುತ್ತುವ ಸುತ್ತು. ಬೇಟೆಗಾರನ ಸರಹದ್ದು.

Beatífic(al) ಬೀಯಟಿಫಿಕ್, —ಕಲ್ (ಗು.) ಬ್ರಹ್ಮಾನಂದಕರ ; ದಿವ್ಯಾನಂದಕರ. Beatific vision ಸ್ವರ್ಗವೈಭವ ದರ್ಶನ. **Beátify** — ಫೈ — (ಕ್ರಿ. ಸಕ.) ಪರಮಸುಖಾನುಭವಿಯನ್ನಾಗಿ ಮಾಡು. (ರೋ. ಕ್ಯಾ. ಧರ್ಮದಲ್ಲ) ಭಗವತ್ಪಾದನಾದನೆಂದು ಹೇಳು. **Beátification** (ನಾ.) ದಿವ್ಯಪದ ಪ್ರಾಪ್ತಿ ; ದಿವ್ಯಪದ ಪ್ರತಿಷ್ಠಾಪನೆ. (ರೋ. ಕ್ಯಾ. ಧರ್ಮದಲ್ಲಿ) ಸತ್ತುಹೋದ ಮಹನೀಯನೊಬ್ಬನು ಸ್ವರ್ಗಸುಖಾನುಭವದಲ್ಲಿರುವನೆಂದೂ ಅವನು ಒಂದು ಪೂಜಾಕ್ರಮ ಪಡೆಯಲು ಅರ್ಹನೆಂದೂ ತಿಳಿಯಹೇಳುವ ಪೋಪ್‌ಗುರುವಿನ ಅನುಜ್ಞೆ (ಭಗವತ್ಪಾದನನ್ನಾಗಿ ಪರಿಗಣಿಸುವುದಕ್ಕೆ ಮೊದಲನೆಯ ಮೆಟ್ಟಲು). **Beátitude** (ನಾ.) ಪರಮ (ಸ್ವರ್ಗ) ಸುಖ ; ದಿವ್ಯಾನಂದ. **Beátitudes** (ನಾ.) (ಬೈಬಲ್ಲಿನಲ್ಲಿ) ಕ್ರಿಸ್ತನು ನುಡಿದ ಧನ್ಯವಾಕ್ಯಗಳು.

Beau ಬೋ (ನಾ. ; ಬ. ವ. Beaux ಬೋಸ್) ಸೊಗಸುಗಾರ ; ಬೆಡಗುಗಾರ ; ಒಲಪುಗಾರ.

Beau géste (F) ಬೋ ಝೆಸ್ಟ್ (ನಾ.) ಔದಾರ್ಯ ಪ್ರದರ್ಶನ.

Beau idéal ಬೋ ಐಡೀಯಲ್ (ನಾ.) (ಒಬ್ಬನ ಅಭಿಪ್ರಾಯದಲ್ಲಿ) ಉತ್ಕೃಷ್ಟತೆಯ ಅಥವಾ ಸೌಂದರ್ಯದ ಪಾರಮ್ಯ, ಪರಾಕಾಷ್ಠತೆ.

Beau mónde (F) ಬೋ ಮಾಂಡ್ (ನಾ.) ನಾಜೂಕುಗಾರರ ಪ್ರಪಂಚ, ಸಮಾಜ : ಭೋಗಿಪ್ರಪಂಚ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Beaúty ಬ್ಯೂಟಿ (ನಾ.) ಸೌಂದರ್ಯ ; ಸೊಗಸು ; ಅಂದ ; ಚೆಂದ ; ಚೆಲ್ವು ; ಲಾವಣ್ಯ ; ಗಾಡಿ ; ರಮ್ಯತೆ ; ರಮಣೀಯತೆ ; ಮನೋಹರತೆ ; ಮನೋಜ್ಞತೆ (ಪುರುಷನ ಅಥವಾ ಸ್ತ್ರೀಯ ಮುಖದಲ್ಲಿಯೊ ರೂಪಿನಲ್ಲಿಯೊ, ಅಥವಾ ಯಾವುದಾದರೂ ಇತರ ವಸ್ತುವಿನಲ್ಲಿಯೊ, ಆಕಾರ, ಅಂಗಾಂಗ ಅನುರೂಪತೆ, ವರ್ಣ—ಇವೇ ಮೊ. ಗುಣಗಳ ಹೊಂದಿಕೆಯಿಂದ ನೋಟಕ್ಕೆ ಮನೋಹರವಾಗಿರುವಂಥ ಸ್ಥಿತಿ). ಸುಂದರಿ(ಯರು) ; ಚೆಲುವೆ(ಯರು). A b. ಸುಂದರ ವಸ್ತು ಅಥವಾ ವ್ಯಕ್ತಿ (ಸಾ., ವ್ಯಂಗ್ಯಾರ್ಥದಲ್ಲಿ). B. is but skin deep ಚೆಲುವೆಲ್ಲ ಚರ್ಮದಲ್ಲಿ ; (ರೂಪ.) ಹೊರಗಿನ ರೂಪದಿಂದ ನಿಜಾಂಶವನ್ನು ತಿಳಿಯಲಾಗುವುದಿಲ್ಲ. Here is a b. ಇದೊಂದು ಅತ್ಯುತ್ತಮವಾದ ಮಾದರಿ. That is the b. of it ಅದೇ ಅದರ ಸೊಗಸು, ಸ್ವಾರಸ್ಯ. B. parlour ಮುಖವನ್ನು ಅಂದಗೊಳಿಸುವುದಕ್ಕಾಗಿ ಲೇಪ, ಮೊ. ನ್ನು ಉಜ್ಜಿ ನೀವುವ ಅಂಗಡಿ : ಸೌಂದರ್ಯ ಶಾಲೆ. B.-sleep ಸರಿಹೊತ್ತಿಗೆ ಮೊದಲನ ನಿದ್ದೆ. B.-spot ದೃಷ್ಟಿಬಟ್ಟು ; ರಮ್ಯಪ್ರದೇಶ ; ಚೆಲುವುನಿಟ್ಟು. **Beaúteous** —ಅಸ್[6] (ಗು.)=**Beaútiful** (ಗು.) ; **Beaútifully** (ಕ್ರಿ. ವಿ.) ; **Beaútify** (ಕ್ರಿ. ಸಕ.) ಅಂದಗೊಳಿಸು ; ಸುಂದರವಾಗಿ ಮಾಡು ; ರಮ್ಯವಾಗಿ ಮಾಡು ; ಅಲಂಕರಿಸು. **Beautificátion** (ನಾ.) ; **Beaútifier** (ನಾ.)

Beaux yeúx (F) ಬೋ ಝ್ಯ (ನಾ.) ಚೆಲುವುಗಣ್ಣು ; ಸುಂದರ ಮುಖ ; ಅಂದಚೆಂದ ; ಚೆಲುವು ; ಸೊಗಸು ; ಸೌಂದರ್ಯ.

Beáver[1] ಬೀವರ್[6] (ನಾ.) ನೀರಿನಲ್ಲಿಯೂ ನೆಲದಮೇಲೆಯೂ ವಾಸಿಸಬಲ್ಲ, ಅಗಲವಾದ ಬಾಲವೂ ಮೃದುವಾದ ಕೂದಲೂ ಉಳ್ಳ, ತನ್ನ ವಾಸಕ್ಕೆ ಮನೆಯನ್ನೂ ನೀರಿಗೆ ಅಡ್ಡಕಟ್ಟನ್ನೂ ಕಟ್ಟಬಲ್ಲ, ಇಲಿಯಂತೆ ಪದಾರ್ಥಗಳನ್ನು ಅಗಿದು ಜೀರ್ಣ ಮಾಡಬಲ್ಲ, ಒಂದು ಪ್ರಾಣಿಜಾತಿ : ಬೀವರ್[6] ; ಈ ಪ್ರಾಣಿಯ ಮೃದುವಾದ ಒತ್ತುಕೂದಲಿನ ಚರ್ಮ ; ಈ ಚರ್ಮದಿಂದ ಮಾಡಿದ ಟೋಪಿ. **Beáverteen** (ನಾ.) ಮಖಮಲ್ಲಿನಂತೆ ಮಾಡಿದ ಒಂದು ತೆರದ ಹತ್ತಿಯ ಬಟ್ಟೆ.

Beáver[2] ಬೀವರ್[6] (ನಾ.) ಸೀಸಕಕ್ಕೆ ಜೋಡಿಸುವ ಕೆಳಮುಖ ರಕ್ಷೆ. (ಅರೂಢಿ, ಅಸಂ.) ಗಡ್ಡದಯ್ಯ.

Becáll ಬಿಕಾಲ್[6] (ಕ್ರಿ. ಸಕ.) (ಪ್ರಾಚೀ. ಪ್ರ., ಗ್ರಾಮ್ಯ) ಬಯ್ಯಿ.

Becálm ಬಿಕಾಮ್[6] (ಕ್ರಿ. ಸಕ.) (ಸಮುದ್ರ, ಮೊ. ನ್ನು) ಶಾಂತಗೊಳಿಸು. (ರೂಪ.) ಶಮನ ಮಾಡು ; ಸಮಾಧಾನಗೊಳಿಸು. (ಹಡಗಿನ ವಿಷಯದಲ್ಲಿ) ಗಾಳಿಯಿಲ್ಲದಂತಾಗು ; ಗಾಳಿಯಿಂದ ಮರೆಮಾಡು. The ship was becalmed ಗಾಳಿಯಿಲ್ಲದೆ ಹಡಗು ನಿಂತಿತು.

Becáme. **Become** ಧಾತುವಿನ ಭೂತ ರೂಪ.

Becaúse ಬಿಕಾಸ್[6] (ಕ್ರಿ. ವಿ., ಸಂ. ಅವ್ಯ.) ಆದುದರಿಂದ ; ಆದಕಾರಣ ; ಏಕೆಂದರೆ.

Beck[1] ಬೆಕ[6] (ನಾ.) ತೊರೆ ; (ನೀರು) ಹಳ್ಳ ; ಝರಿ ; ಅಬ್ಬಿ.

Beck[2] ಬೆಕ[6] (ನಾ., ಕ್ರಿ.) ಸನ್ನೆ ; ಸಂಜ್ಞೆ ; ಸಂಜ್ಞೆಯಿಂದ ಸೂಚಿಸಿದ ಅಪ್ಪಣೆ. (ಅನುಮತಿ, ಅಪ್ಪಣೆ, ಮೊ. ನ್ನು ಸೂಚಿಸುವ) ಸಂಜ್ಞೆ. (Be at a person's b. and call ಒಬ್ಬನ ಅಪ್ಪಣೆಯನ್ನು ಕಾಯುತ್ತಿರು ; ಒಬ್ಬನ ಆಜ್ಞಾವರ್ತಿಯಾಗಿರು. Have at one's b. ಆಜ್ಞಾವರ್ತಿಯಾಗಿಟ್ಟುಕೊ). (ಕ್ರಿ.) (ಮಾತನಾಡದೆ) ಸನ್ನೆಮಾಡಿ ತಿಳಿಸು, ಸಂಜ್ಞೆಮಾಡು. **Béckon** ಬೆಕ[6]ನ್ (ಕ್ರಿ.) ಸನ್ನೆಮಾಡಿ ಕರೆ ; ಗಮನ ಸೆಳೆ. (ಮಾತನಾಡದೆ, ಒಬ್ಬನಿಗೆ) ಸಂಜ್ಞೆಮಾಡು.

Bécket ಬೆಕೆಟ್[6] (ನಾ.) (ನೌಕ) ಹಗ್ಗ, ದೂಲ, ಹುಟ್ಟು, ಮೊ. ನ್ನು ಬಿದ್ದುಹೋಗದಂತೆ ಹಿಡಿದಿರುವ ಸಲಕರಣೆ (ಕುಣಿಕೆ, ದೊಡ್ಡ ಕೊಂಡಿ, ಬಂಕ, ಮೊ.)

Becloúd ಬಿಕ್ಲೌಡ್[6] (ಕ್ರಿ. ಸಕ.) ಮೋಡಗವಿಸು ; ಮಬ್ಬುಗವಿಸು ; ಮಸುಳಿಸು ; ಕಾಣದಂತೆ ಮಾಡು.

Becóme ಬಿಕಂ (ಕ್ರಿ. ; ಭೂತ. Became ; ಭೂ. ಕೃ. Become) ಆಗು ; ಉಂಟಾಗು ; ಸಂಭವಿಸು. ಹೊಂದು ; ಹೊಂದಿಕೊ ; ಯೋಗ್ಯವಾಗು ; ತಕ್ಕಂತಿರು ; ಒಪ್ಪು ; ಶೋಭಿಸು. **Becóming** (ಗು.) ; **Becómingly** (ಕ್ರಿ. ವಿ.) ; **Becómingness** (ನಾ.)

Bécquerel's rays ಬೆಕ್ರೆಲ್ಸ್ ರೇಸ್ (ನಾ., ಬ. ವ.) ಕಿರಣಗಳನ್ನು ಸೂಸುವ ಸ್ವಭಾವವುಳ್ಳ ಕೆಲವು ವಸ್ತುಗಳಿಂದ (ರೇಡಿಯಂ, ಮೊ. ಗಳಿಂದ) ಹೊರಚೆಲ್ಲುವ, ಪಾರದರ್ಶಕವಲ್ಲದ ತಡೆಯನ್ನು ತೂರಿಹೋಗುವ ಶಕ್ತಿಯುಳ್ಳ, ಮತ್ತು ಬೆಳಕಿನ ಕಿರಣಗಳಂತೆ ಬಾಗುವ, ಒಂದು ತೆರದ ಕಿರಣಗಳು. (ಬೆಕ್ರೆಲ್ ಎಂಬ ವೈಜ್ಞಾನಿಕನ ಹೆಸರಿನಿಂದ)

Bed ಬೆಡ್[6] (ನಾ.) ಹಾಸಿಗೆ ; ಸುಪ್ಪತ್ತಿಗೆ ; ಮೆತ್ತೆ ; ಮಂಚ ; ದಂಪತಿಗಳ ಸೆಜ್ಜೆ. (B.-clothes ಮಗ್ಗುಲುಹಾಸಿಗೆ, ದಿಂಬು, ಮೊ.). ಪ್ರಾಣಿ ಮಲಗುವ ಸ್ಥಳ ; ಹಕ್ಕಿ ; ಕುದುರೆ, ಮೊ. ಗಳಿಗೆ ಹಾಸಿಗೆಗಾಗಿ ಉಪಯೋಗಿಸುವ ಹುಲ್ಲು ಮೊ. ಮೆತ್ತಗಿರುವ ಪದಾರ್ಥ. (ಗಿಡಗಳ) ಮಡಿ, ಪಾತಿ, ಪಟ. (ಹೊಳೆಯ, ಕೆರೆಯ ಅಥವಾ ಸಮುದ್ರದ) ತಳ. ಅಡಿ ; ಆಧಾರ ; ಪೀಠ. (ಮುದ್ರಣ ಯಂತ್ರದಲ್ಲಿ) ಜೋಡಿಸಿದ ಮೊಳೆಗಳ ಪುಟವನ್ನಿಡುವ ಸಮತಲದ ನೆಲೆ. (ಭೂ. ವಿ.) ಪದರ ; ಸ್ತರ ; ಪ್ರಸ್ತರ. (ವಾ. ಶಾ.) ತಳಹದಿ. (ಯಂತ್ರ, ಮೊ. ಗಳ ಸ್ಥಾಪನೆಗಾಗಿ ಭದ್ರಪಡಿಸಿದ) ತಳಹದಿ. ಫಿರಂಗಿಬಂಡಿಯ ಮಧ್ಯಪ್ರದೇಶ. B. and board ಊಟ ಮತ್ತು ವಾಸ. B. of down, flowers, roses ಹಂಸತೂಲಿಕಾ ತಲ್ಪ ; ತುಪ್ಪುಳುಹಾಸಿಗೆ ; ಹೂವಿನ ಹಾಸಿಗೆ ; ಸುಖಶಯ್ಯೆ. (ರೂಪ.) ಸುಖಕೊಡುವ ಸ್ಥಿತಿ. B. of sickness ರೋಗದಿಂದ ನರಳುತ್ತಿರುವ ಸ್ಥಿತಿ ; ರೋಗಶಯ್ಯೆ. Bring to b. ಹೆರು (ರೂಪ. ಸಹ). Die in one's b. ತನ್ನ ಮನೆಯಲ್ಲೇ ಸಾಯಿ ; ಸಹಜವಾದ ಸಾವನ್ನು ಸಾಯಿ. Go to b. (ರಾತ್ರಿ) ಹೋಗಿ ಮಲಗಿಕೊ ; (ಅಸಂ.) ಮಾತು ನಿಲ್ಲಿಸು, ಸಾಕುಮಾಡು. Got out of b. on the wrong side ಎಡಮಗ್ಗುಲಲ್ಲಿ ಎದ್ದಿದ್ದಾನೆ ; ಈ ದಿನ ಏನೋ ಸಿಡಿಗುಟ್ಟುತ್ತಿದ್ದಾನೆ. Keep one's b. ಹಾಸಿಗೆ ಹತ್ತಿರು. Leave one's b. ರೋಗವಾಸಿಯಾಗಿ ಮೇಲಕ್ಕೇಳು ; ಗುಣಹೊಂದು. Lie in the b. one has made ಹಾಸಿಕೊಂಡ ಹಾಸಿಗೆಯಲ್ಲಿ ಮಲಗು ; ಮಾಡಿದುದರ ಫಲವನ್ನನುಭವಿಸು ; ಮಾಡಿದ್ದುಣ್ಣು. Make the b. ಹಾಸಿಗೆ ಹಾಸು. Make up a b. ಹೇಗೋ ಒಂದು ಹಾಸಿಗೆ ಮಾಡಿಕೊ. Narrow b. ಗೋರಿ ; ಸಮಾಧಿ. Take to one's b. ಹಾಸಿಗೆ ಹತ್ತಿ ಮಲಗು. **Bédder** ಬೆಡರ್[6] (ನಾ.) ಹಾಸಿಗೆಯಲ್ಲಿ ಮಲಗಿಸುವವನು ; ದನಗಳಿಗೆ ಹಾಸಿಕೊಡತಕ್ಕವನು. ಪಾತಿಯಲ್ಲಿ ನೆಡಲು ತಕ್ಕ ಗಿಡ. (ವಿಶ್ವವಿದ್ಯಾನಿಲಯದ ಅಸಂ.) ಮಲಗುವ ಕೋಣೆ. **Bédding** ಬೆಡಿಂಗ್ (ನಾ.) ಹಾಸಿಗೆಯ ಸಾಮಾನುಗಳು (ಮೆತ್ತೆ, ದಿಂಬು, ಹೊದಿಕೆ, ಮೊ.) ; ದನಗಳ ಹಾಸು. ತಳಗಿನ ಪದರ. (ಭೂ. ವಿ.) (ನೀರಿನ ಕಾರ್ಯದಿಂದ) ಮಣ್ಣು ಮೊ. ವು ಪದರ ಪದರಗಳಾಗಿ ಸ್ಥಾಪಿತವಾಗುವುದು ; ಪ್ರಸ್ತರೀಕರಣ. ಮಡಿಗಳಲ್ಲಿ ಹೂವಿನ ಗಿಡಗಳನ್ನು ನೆಡುವುದು. **Bédchamber** ಮಲಗುವ ಕೋಣೆ. **Bédfellow** ತನ್ನೊಡನೆ ಒಂದೇ ಹಾಸಿಗೆಯಲ್ಲಿ ಮಲಗುವವನು(ವಳು) ; ಸಂಗಾತಿ ; ಪ್ರಿಯಸ್ನೇಹಿತ. **Bédgown** (ಹೆಂಗಸು) ರಾತ್ರಿ ಮಲಗುವಾಗ ಹಾಕಿಕೊಳ್ಳುವ ಮೇಲಂಗಿ. **B.-key** ಮಂಚದ ಪಟ್ಟಿ, ಮೊ. ನ್ನು ಕಳಚುವುದಕ್ಕಾಗಲಿ ಬಿಗಿಸುವುದಕ್ಕಾಗಲಿ ಉಪಯೋಗಿಸುವ ಕಬ್ಬಿಣದ ತಿರುಪು : ಮಂಚದ ತಿರುಪು, ಕೈ. **B.-lift** ಮಲಗಿರುವ ರೋಗಿಯನ್ನು ಹಾಸಿಗೆಯಲ್ಲಿ ಕುಳಿತುಕೊಳ್ಳುವಂತೆ ಎಬ್ಬಿಸುವ ಸಲಕರಣೆ. **Bédmaker** ಹಾಸಿಗೆ (ಮೆತ್ತೆ) ಮಾಡುವವನು. **B.-pan** ಹಾಸಿಗೆಯಲ್ಲಿಯೇ ಮಲಮೂತ್ರ ವಿಸರ್ಜನೆಗೆ ಅನುಕೂಲಿಸುವ ಪಾತ್ರೆ : ಹಾಸಿಗೆಯ ಮಲಪಾತ್ರೆ. **B.-plate** ಒಂದು ಯಂತ್ರದ ತಳದಲ್ಲಿ ಆಧಾರವಾಗಿ ಜೋಡಿಸಿರುವ ಲೋಹದ ತಗಡು : ಹಾಸುತಗಡು ; ಆಧಾರಫಲಕ. **Bédpost** ಮಂಚದ ಕಾಲು (Between you and me and the bedpost ಗುಟ್ಟಾಗಿ ; ಅಂತರ್ಯವಾಗಿ ; ಏಕಾಂತವಾಗಿ). **Bédrid(den)** (ರೋಗ, ನಿಶ್ಶಕ್ತಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊ. ಗಳಿಂದ) ಹಾಸಿಗೆ ಹಿಡಿದಿರುವ. **B.-rock** ಹುಸಿಮಣ್ಣಿನ ತಳದಲ್ಲಿರುವ ತಳಬಂಡೆ; ಆಧಾರ ಶಿಲೆ. (ರೂಪ.) ತಳ; ಅತ್ಯಂತ ತಳಗಿನ ಮಟ್ಟ. (ಒಂದು ಸಿದ್ಧಾಂತ, ವಾದ, ಮೊ. ಗಳ) ಮೂಲಾಧಾರಗಳು. **Bédroom** ಮಲಗುವ ಮನೆ, ಕೋಣೆ; ಸೆಜ್ಜೆಮನೆ. **Bédside** (ರೋಗಿಯ) ಹಾಸಿಗೆಯ ಬಳಿ; ರೋಗಿಯ ಬಳಿ (Good bedside manner ರೋಗಿಯ ಬಳಿ ವೈದ್ಯನು ತೋರಬೇಕಾದ ನಯದ ನಡತೆ). **Bédsore** ಯಾವಾಗಲೂ ಮಲಗಿಯೇ ಇರುವುದರಿಂದ ಆದ ಹುಣ್ಣು: ಹಾಸಿಗೆಹುಣ್ಣು. **B.-spread** ಮುಗ್ಗುಲು ಹಾಸಿಗೆ. **Bédstead** ಮಂಚ. **B.-stone** ಕಟ್ಟಡದಲ್ಲಿ ದೊಡ್ಡ ಸರ, ದೂಲ, ಮೊ. ಗಳ ತಳಗಡೆಯ ಆಧಾರವಾಗಿಡುವ ಭಾರದ ಕಲ್ಲು; ಅಡಿಗಲ್ಲು. **Bédstraw** ಒಂದು ಸಸ್ಯಜಾತಿ. **Bédtick** ಹಾಸಿಗೆಯ ಚೀಲ. **Bédtime** ಮಲಗುವ ಹೊತ್ತು. **B.-way** ಗಟ್ಟಿಬಂಡೆಯಲ್ಲಿ ಪದರಗಳ ಗುರುತು. **B.-winch, B.-wrench** = B.-key.

Bed (ಕ್ರಿ.) (ಕಾವ್ಯ; ಪ್ರಾಚೀ. ಪ್ರ.) ಹಾಸಿಗೆ ಹಾಸಿ ಮಲಗಿಸು, ಮಲಗು. ನಾಟಿ ಹಾಕು (B. out); ಭದ್ರವಾಗಿ ನೆಡು; ಆಧಾರದ ಮೇಲೆ ನಿಂತಿರು; (ಕಟ್ಟಡದಲ್ಲಿ ಇಟ್ಟಿಗೆ, ಮೊ. ನ್ನು) ಗಾರೆ, ಕೆಸರು, ಮೊ. ಗಳಲ್ಲಿ ಕೂರಿಸು. ಒಂದು ಕಲ್ಲಿನ ಮುಖವನ್ನು ಕೆತ್ತಿ ಸಮ ಮಾಡು. (ಮುತ್ತಿನ ಚಿಪ್ಪು, ಮೊ.) ಪದರವಾಗಿ ಇಡು, ಇರು.

Bedábble ಬಿಡ್ಯಾಬ್‌ಲ್ (ಕ್ರಿ.) ಕೊಳಕುನೀರು, ರಕ್ತ, ಮೊ. ನ್ನು ಎರಚು; ಕೊಳೆಮಾಡು.

Bedád ಬಿಡ್ಯಾಡ್ (ಭಾವ. ಅವ್ಯ.) ದೇವರಾಣೆ! (ಹೇಳಿದುದನ್ನು ದೃಢಪಡಿಸುವುದಕ್ಕಾಗಿ ಉಪಯೋಗಿಸುವ ಮಾತು)

Bedaúb ಬಿಡಾಬ್ (ಕ್ರಿ. ಸಕ.) ಬಣ್ಣ, ಮೊ. ನ್ನು ಬಳಿ; ಪೂಸು; ಲೇಪಿಸು; ಹಚ್ಚು; ಮೆತ್ತು. ಚಿತ್ರ ವಿಚಿತ್ರವಾಗಿ, ಹುಚ್ಚು ಹುಚ್ಚಾಗಿ, ಅಲಂಕಾರ ಮಾಡು.

Bedéck ಬಿಡೆಕ್ (ಕ್ರಿ. ಸಕ.) ಅಲಂಕರಿಸು; ಸಿಂಗರಿಸು.

Bedévil ಬಿಡೆವ್‌ಲ್ (ಕ್ರಿ. ಸಕ.) ಅತ್ಯಂತ ಕ್ರೌರ್ಯವರ್ತನೆಯಿಂದಲೂ ಬೈಗುಳಿನಿಂದಲೂ ಗೋಳುಗುಟ್ಟಿಸು; ಚಿತ್ರಹಿಂಸೆ ಕೊಡು; ಪೀಡಿಸು; ಕಾಡು; ಪೈಶಾಚವರ್ತನೆ ತೋರಿಸು. ದೆವ್ವ ಹಿಡಿ; ದೆವ್ವ ಹಿಡಿದಂತೆ ಆಡು. ಹಾಳುಮಾಡು. ದೆವ್ವವೆಂದು ಕರೆ. **Bedévilment** (ನಾ.) ದೆವ್ವ ಹಿಡಿದಿರುವುದು; ಹುಚ್ಚುಹಿಡಿಸುವಂಥ ಸಂಕಟ, ಕಷ್ಟ; ದಿಕ್ಕುತೋರದಿರುವಿಕೆ.

Bedéw ಬಿಡ್ಯೂ (ಕ್ರಿ. ಸಕ.) ಮಂಜಿನ ಹನಿಗಳಿಂದ, ಅಥವಾ ಅವುಗಳಿಂದ ಹೇಗೋ ಹಾಗೆ, ನೆನಸು; ಚಿಮುಕಿಸು; ಹನಿಸು.

Bedíght ಬಿಡೈಟ್ (ಕ್ರಿ. ಸಕ.) (ಪ್ರಾಚೀ. ಪ್ರ., ಕಾವ್ಯ) ಸಜ್ಜುಗೊಳಿಸು; ಅಲಂಕರಿಸು.

Bedím ಬಿಡಿಮ್ (ಕ್ರಿ. ಸಕ.) (ಕಣ್ಣು, ಮನಸ್ಸು) ಮಂಜುಗವಿಸು, ಮಸುಳಿಸು, ಮಬ್ಬುಮಾಡು.

Bedízen ಬಿಡೈ(ಡಿ)ಜ಼್‌ನ್ (ಕ್ರಿ. ಸಕ.) ಬೆಡಗು ತೋರುವಂತೆ ಸಿಂಗರಿಸು; ಉಡಿಗೆ ತೊಡಿಗೆಗಳನ್ನು ಅನಾಗರಿಕವಾಗಿ ಅಲಂಕರಿಸು; ಚಿತ್ರ ವಿಚಿತ್ರವಾಗಿ ಸಿಂಗರಿಸು.

Bédlam ಬೆಡ್ಲಮ್ (ನಾ.) ಹುಚ್ಚರ ಆಸ್ಪತ್ರೆ (ಮೊದಲು, ಲಂಡನ್ನಿನಲ್ಲಿ 'ಬೆತ್ಲೆಹೆಮ್ಮಿನ ಸೆಯ್‌ಂಟ್ ಮೇರಿ'ಯ ಹೆಸರಿನ ಸಾಮಾನ್ಯ ಆಸ್ಪತ್ರೆ). ಹುಚ್ಚುಕೂಗು, ಗಲಾಟೆ, ಆಗುತ್ತಿರುವ ಸ್ಥಳ; ಹುಚ್ಚರ ಸಂತೆ. **Bédlamite** (ನಾ., ಗು.) ಹುಚ್ಚ(ನಾದ)

Bédouin ಬೆಡುಯಿನ್ (ಗು., ನಾ.) ಮರಳುಕಾಡಿನ (ಅರಬ್ಬಿಯವನು); (ಒಂದು ಸ್ಥಳದಲ್ಲಿ ನೆಲಸಿರದೆ) ಅಲೆದಾಡುವ(ವನು); ಜಿಪ್ಸಿ.

Bedrábbled ಬಿಡ್ರ್ಯಾಬ್‌ಲ್ಡ್ (ಗು.) ಮಳೆಯ ಕೆಸರಿನಿಂದ ಕೊಳಕಾದ; ಕೆಸರಾದ.

Bedrággle ಬಿಡ್ರ್ಯಾಗ್‌ಲ್ (ಕ್ರಿ. ಸಕ.) (ಉಡುಪು, ಮೊ. ನ್ನು) ನೆಲದ ಮೇಲೆ ಎಳೆದಾಡಿ ಕೊಳೆಮಾಡು, ನೆನಸು.

Bee ಬೀ (ನಾ.) ಜೇನುಹುಳು. ಕವಿ. (ಜೇನುಹುಳುವಿನಂತೆ) ಚಟುವಟಿಕೆಯಿಂದ ಕೆಲಸಮಾಡುತ್ತಿರುವವನು. ಒಟ್ಟಾಗಿ ಕೆಲಸಮಾಡುವುದಕ್ಕಾಗಲಿ ವಿನೋದಕ್ಕಾಗಲಿ ಸೇರುವ ಕೂಟ (ಮು., ಅಮೆ. ಸಂ. ಗಳಲ್ಲಿ). Have a b. in one's bonnet ಯಾವುದಾದರೂ ಒಂದು ವಿಚಾರದಲ್ಲಿ ಮಿತಿಮೀರಿದ ಆಸಕ್ತಿವಹಿಸು. ಹುಚ್ಚುಹಿಡಿದಿರು. **B.-bread** ಜೇನುಹುಳುಗಳ ಆಹಾರ; ಜೇನುತಿಂಡಿ (ಜೇನುತುಪ್ಪ ಮತ್ತು ಪುಷ್ಪಪರಾಗ). **B.-cell** ಜೇನುಹುಟ್ಟಿಯಲ್ಲಿಯ ಒಂದು ಅಂಕಣ. **B.-eater** ಒಂದು ಪಕ್ಷಿಜಾತಿ. **B.-glue** (ಜೇನುಹುಟ್ಟಿಯಲ್ಲಿ ಸಂದುಗಳನ್ನು ತುಂಬುವುದಕ್ಕೂ ಗೂಡಿನ ಅಂಕಣಗಳನ್ನು ಅಂಟಿಸುವುದಕ್ಕೂ ಜೇನುಹುಳು ಉಪಯೋಗಿಸುವ) ಜೇನಂಟು. **Beéhive** ಜೇನುಗೂಡು. **B.-line** ಎರಡು ಸ್ಥಳಗಳಿಗೆ ಮಧ್ಯೇ ಇರುವ ಅತ್ಯಂತ ಕಡಮೆಯಾದ ದೂರ; ನೇರದ ಹಾದಿ. **B.-master, B.-mistress** ಜೇನು ಸಾಕುವವನು(ವಳು). **B. orchis** — ಆರ್ಕಿಸ್ (ನಾ.) ದುಂಬಿಯಾಕಾರದ ಹೂವು ಬಿಡುವ ಗಿಡ. **B.-skep** ಹುಲ್ಲಿನ ಜೇನುಗೂಡು. **Beés-wax** ಬೀಜ಼್‌ವ್ಯಾಕ್ಸ್ (ನಾ., ಕ್ರಿ. ಸಕ.) ಜೇನುಮೇಣ; ಜೇನುಮೇಣದ ಮೆರುಗುಕೊಡು. **B.-wine** ಮಕರಂದ; ಬಂಡು.

Beech ಬೀಚ್ (ನಾ.) ನುಣುಪಾದ ತೊಗಟೆಯುಳ್ಳ, ಹೊಳೆಯುವ ಎಲೆಗಳಿಂದ ಕೂಡಿದ, ಯೂರೋಪ್ ಮತ್ತು ಪ. ಏಷ್ಯಾದಲ್ಲಿ ಬೆಳೆಯುವ ಒಂದು ಕಾಡುಮರದ ಜಾತಿ; ಇದರ ದಾರು. **Beéchmast** ಬೀಚ್ ಮರದ ಕಾಯಿ. **Beéchen** (ಗು.) ಬೀಚ್ ಮರದ.

Beef ಬೀಫ್ (ನಾ.; ಬ. ವ. Beeves ಬೀವ್ಸ್) ದನದ ಮಾಂಸ; ಗೋಮಾಂಸ. ಎತ್ತು ಅಥವಾ ದನ (ಮು., ಬಲಿಸಿದ ದನ, ದನದ ಶವ). (ಮನುಷ್ಯರಲ್ಲಿ) ಆಕಾರ, ತುಂಬು. **Beéfeater** ಗೋಮಾಂಸ ಭಕ್ಷಕ. (ಇಂಗ್ಲೆಂಡಿನಲ್ಲಿ) ದೊರೆಯ ಅಂಗರಕ್ಷಕ ದಳದವನು. Tower of London ಎಂಬ ಕಟ್ಟಡಗಳ ಸಮುದಾಯದ ರಕ್ಷಕರಲ್ಲೊಬ್ಬನು. **Beéfsteak** — ಸ್ಟೇಕ್ (ನಾ.) ಗೋಮಾಂಸದ ತುಂಡು. **B. tea** (ರೋಗಿಗಳಿಗೆ ಕೊಡುವ) ಗೋಮಾಂಸ ಬೇಯಿಸಿದ ಸಾರ. **B.-witted** ಬುದ್ಧಿ ಮಂದವಾದ; ದಡ್ಡ. **B.-wood** ಆಸ್ಟ್ರೇಲಿಯದ (ಕ್ಯಾಸರೀನ ಎಂಬ) ಕೆಂಪು ಬಣ್ಣದ ಒಂದು ಜಾತಿಯ ಮರ; ಇತರ ಜಾತಿಯ ಕೆಂಪುಮರ. **Beéfy** (ಗು.) ಗೋಮಾಂಸದಂಥ; ಗೋಮಾಂಸ ತುಂಬಿರುವ; ಮಾಂಸಲ. ಮಂದಬುದ್ಧಿಯುಳ್ಳ. **Beéfiness** (ನಾ.)

Beélzebub ಬಿಯೆಲ್‌ಜ಼ಿಬಬ್ (ನಾ.) ಸೈತಾನ; ದೆವ್ವ; ಪಿಶಾಚಿ.

Been ಬೀನ್. **Be** ಧಾತುವಿನ ಭೂ. ಕೃ.

Beer[1] ಬಿಯರ್ (ನಾ.) ಯವ ಸುರೆ (ಮೊಳೆತ ಯವೆಯಿಂದ ತಯಾರಿಸಿ, ರುಚಿಗಾಗಿಯೂ ಕೆಟ್ಟುಹೋಗದಂತಿರುವುದಕ್ಕಾಗಿಯೂ 'ಹಾಪ್' ಎಂಬ ಒಂದು ಜಾತಿ ಬಳ್ಳಿಯ ಕಹಿಹೂವುಗಳನ್ನೂ ಇತರ ಕಹಿಪದಾರ್ಥಗಳನ್ನೂ ಸೇರಿಸಿ ಮಾಡಿದ ಮದ್ಯ); ಬಿಯರ್. ಇತರ ಮದ್ಯಜಾತಿಗಳು. Small b. ಸಾರ ಕಡಮೆಯಾದ ಮದ್ಯ; (ರೂಪ.) ಕ್ಷುಲ್ಲಕ ವಿಷಯಗಳು (Think no small b. of ಅಲ್ಪವಾಗೆಣಿಸದಿರು). **B.-engine** ದೂರದಲ್ಲಿ ತುಂಬಿಟ್ಟಿರುವ ಪೀಪಾಯಿಯಿಂದ ಬಿಯರನ್ನು ಎಳೆದು ತೆಗೆಯುವ ಸಲಕರಣೆ. **B.-house** ಬಿಯರನ್ನು ಮಾರುವುದಕ್ಕೆ ಮಾತ್ರ ಅಪ್ಪಣೆಚೀಟಿ ಕೊಟ್ಟಿರುವ ಮದ್ಯದ ಅಂಗಡಿ. **B.-money** ಸೇವಕನಿಗೆ ಬಿಯರಿಗೆ ಬದಲಾಗಿ ಕೊಡುವ ಭತ್ಯ. **B.-pull** ಬಿಯರ್‌ಎಂಜಿನ್ನಿನ ಹಿಡಿ. **Beéry** (ಗು.) ಬಿಯರಿನಂಥ; ಬಿಯರಿನ ಪ್ರಭಾವ ತೋರಿಸುತ್ತಿರುವ.

Beer[2] ಬಿಯರ್ (ನಾ.) (ನೇಯ್ಗೆಯ) ಹಾಸಿನಲ್ಲಿ ವಿಂಗಡಿಸಿರುವ ಎಳೆಗಳ ಅಡಕುಗಳಲ್ಲಿ ಒಂದು ಅಡಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Beéstings ಬೀಸ್ಟಿಂಗ್ಸ್ (ನಾ., ಬ. ವ.) (ಆಕಳು, ಮೊ. ಪು) ಕರು ಹಾಕಿದ ಮೇಲೆ ಮೊಟ್ಟಮೊದಲು ಕರೆಯುವ (ಗಿಣ್ಣು) ಹಾಲು.

Beet ಬೀಟ್ (ನಾ.) ರಸತುಂಬಿದ ಗೆಡ್ಡೆಗಳುಳ್ಳ ಎರಡು ತೆರದ ಸಸ್ಯ ಜಾತಿ : (ಕೆಂಪನೆಯದು ಪಚ್ಚಡಿಮಾಡಿ ತಿನ್ನುವುದಕ್ಕೂ, ಬಿಳಿಯದು ಸಕ್ಕರೆ ಮಾಡುವುದಕ್ಕೂ ಉಪಯೋಗ). **Beétroot** ಬೀಟ್‌ಗೆಣಸು.

Beétle[1] ಬೀಟ್‌ಲ್ (ನಾ., ಕ್ರಿ. ಸಕ.) (ಇಡಿಯುವುದಕ್ಕೂ ಒಡೆದು ಪುಡಿ ಮಾಡುವುದಕ್ಕೂ ಗಟ್ಟಿಸುವುದಕ್ಕೂ ಸಮಮಾಡುವುದಕ್ಕೂ ಉಪಯೋಗಿಸುವ) ಭಾರವಾದ ತಲೆಯ ಕೊಡತಿ ; ಚಮ್ಮಟಿಗೆ. (ಕ್ರಿ.) ಚಮ್ಮಟಿಗೆಯಿಂದ ಇಡಿ, ಕುಟ್ಟು, ಗಟ್ಟಿಸು. **B.-brain** ಬುದ್ಧಿಮಾಂದ್ಯದವನು ; ದಡ್ಡ.

Beétle[2] ಬೀಟ್‌ಲ್ (ನಾ.) ಮೇಲುರೆಕ್ಕೆಗಳು ಗಡುಸಾದ ಪಕ್ಷರಕ್ಷೆಯಾಗಿ ಏರ್ಪಟ್ಟಿರುವ ಒಂದು ಕೀಟಜಾತಿ ; ಜೀರುಂಡೆ. ಹತ್ತಿರದ ದೃಷ್ಟಿಯುಳ್ಳವನು ; ಒಂದು ತೆರದ ಕುರುಡು (B.-eyed, Blind as a b.). B.-crusher ದೊಡ್ಡ ಜೋಡು ಅಥವಾ ಪಾದ.

Beétle[3] ಬೀಟ್‌ಲ್ (ಗು., ಕ್ರಿ. ಅಕ.) ಚಾಚಿಕೊಂಡಿರುವ. ಒರಟು ಕೂದಲುಳ್ಳ. ಹುಬ್ಬು ಗಂಟಿಕ್ಕಿದ (B.-browed ಉಬ್ಬುಹುಬ್ಬುಳ್ಳ). (ಕ್ರಿ.) (ಹುಬ್ಬು, ಕಡಿದುಬಂಡೆ, ಮೊ. ಗಳು) ಮೇಲೆ ಕವಿದಿರು. (ಅದೃಷ್ಟ, ಮೊ.) ಭಯಗೊಳಿಸುತ್ತ ಕವಿದಿರು.

Beeves. **Beef** ಪದದ ಬ. ವ.

Befáll ಬಿಫಾಲ್ (ಕ್ರಿ.) ಆಗು ; ಉಂಟಾಗು ; ಸಂಭವಿಸು ; ಘಟಿಸು ; ಒದಗು ; ಅಡಸು.

Béfit ಬಿಫಿಟ್ (ಕ್ರಿ. ಸಕ.) ಹೊಂದು ; ತಕ್ಕದ್ದಾಗಿರು ; ಯೋಗ್ಯ (ಯುಕ್ತ) ವಾಗಿರು ; ಒಪ್ಪು ; ಸರಿಹೋಗು ; ಸಲ್ಲು. **Befítting** (ಗು.); **Befíttingly** (ಕ್ರಿ. ವಿ.)

Befóg ಬಿಫಾಗ್ (ಕ್ರಿ. ಸಕ.) ಮಂಜು, ಕಾವಳ, ಕವಿಸು ; ಮಸುಳಿಸು.

Befoól ಬಿಫೂಲ್ (ಕ್ರಿ. ಸಕ.) ಮೋಸಗೊಳಿಸು ; ಮರುಳುಮಾಡು ; ಹುಚ್ಚನನ್ನಾಗಿ ಮಾಡು ; ಕಣ್ಣಿಗೆ ಮಣ್ಣೆರಚು.

Befóre ಬಿಫೋರ್ (ಕ್ರಿ. ವಿ., ಉಪ., ಸಂ. ಅವ್ಯ.) ಮುಂದೆ ; ಮುಂದಾಗಿ ; ಮುಂದುಗಡೆ ; ಮೊದಲು ; ಮುಂಚೆ ; ಎದುರಿಗೆ ; ಸಮಕ್ಷ. (ಕಾಲದಲ್ಲಿ) ಹಿಂದೆ ; ಪೂರ್ವದಲ್ಲಿ. (Would die before I lied ಪ್ರಾಣವನ್ನಾದರೂ ಬಿಟ್ಟೇನು, ಸುಳ್ಳುಹೇಳಲಾರೆ). **Befórehand** (ಕ್ರಿ. ವಿ.) ಮೊದಲೇ ; ಮುಂಚಿತವಾಗಿಯೇ ; ಸಿದ್ಧವಾಗಿ (Be beforehand with ಮೊದಲೇ ಅರಿತಿರು ; ಮುಂಚೆಯೇ ನಿರೀಕ್ಷಿಸಿರು ; ಮೊದಲೇ ತಿಳಿದು ಸಿದ್ಧವಾಗಿರು ; ನೆರವೇರಿಸಿಬಿಟ್ಟಿರು. Be beforehand with the world ಕೈಯಲ್ಲಿ ಹಣವಿಟ್ಟುಕೊಂಡಿರು). **Befóresaid** = Aforesaid ಹಿಂದೆ ಹೇಳಿದ ; ಪೂರ್ವೋಕ್ತ.

Befoúl ಬಿಫೌಲ್ (ಕ್ರಿ. ಸಕ.) ಕೊಳಕು ಮಾಡು ; ಕೆಡಿಸು ; ಮಲಿನಗೊಳಿಸು ; ಹೊಲೆಗಲಸು ; ಕಲುಷಿಸು ; ದೂಷಿತವಾಗಿ ಮಾಡು. (ರೂಪ. ಸಹ). B. one's own nest ಸ್ವಂತ ಗೂಡನ್ನೇ ಹೊಲೆಗಲಸು. (ರೂಪ.) ತಾನೇ ತನ್ನ ಮನೆಯನ್ನು ದೂರು.

Befriénd ಬಿಫ್ರೆಂಡ್ (ಕ್ರಿ. ಸಕ.) ಸ್ನೇಹಿತನಾಗು ; ನೆರವಾಗು ; ಸಹಾಯಕನಾಗು ; ಉಪಕಾರ ಮಾಡು ; ಆದರಿಸು.

Beg ಬೆಗ್ (ಕ್ರಿ.) ಬೇಡು. ; ಕೇಳಿಕೊ ; ಪ್ರಾರ್ಥಿಸು ; ತಿರಿ ; ಯಾಚಿಸು ; ಭಿಕ್ಷೆ ಬೇಡು ; ತಿರುಪೆಜೀವನ ಮಾಡು ; ತಿರಿದುಣ್ಣು. B. leave ಅಪ್ಪಣೆ ಕೇಳು. B. off (ದಂಡ, ಶಿಕ್ಷೆ, ಮೊ. ಗಳಿಂದ) ಬೇಡಿ ಬಿಡಿಸಿಕೊ. B. pardon ಕ್ಷಮೆ ಕೇಳು. B. the question ಸಾಧಿಸಬೇಕಾದ ವಿಷಯವನ್ನೇ ಸಿದ್ಧವೆಂದಿಟ್ಟುಕೊ. I b. to differ ಭಿನ್ನಾಭಿಪ್ರಾಯಪಡಲು ಅಪ್ಪಣೆತೆಗೆದುಕೊಳ್ಳುತ್ತೇನೆ. Go (a-) begging (ಉದ್ಯೋಗ, ಮೊ. ಗಳ ವಿಷಯದಲ್ಲಿ) ಬೇಕೆನ್ನುವವರಿಲ್ಲದೆ ಹೋಗು ; ಒಬ್ಬರೂ ಒಲ್ಲದೆ ಹೋಗು. **Béggar** ಬೆಗರ್ (ನಾ., ಕ್ರಿ. ಸಕ.) ತಿರುಕ ; ಭಿಕ್ಷುಕ ; ಯಾಚಕ ; ಬಡವ ; ದರಿದ್ರ ; ನಿರ್ಗತಿಕ ; ಭಿಕಾರಿ. ಅಧಮ ; ನೀಚ ; (ಒಬ್ಬನನ್ನು ಕುರಿತು ಅಲಕ್ಷ್ಯವಾಗಿ, ಅಸಡ್ಡೆಯಿಂದ, ಹೇಳುವಾಗ ಉಪಯೋಗಿಸುವ ಮಾತು). [Little beggar (ವಿನೋದವಾಗಿ) ಹುಡುಗ ; ಹೈದ. A good beggar ಧರ್ಮಕಾರ್ಯಗಳಿಗಾಗಿ ಹಣ ಶೇಖರಿಸುವುದರಲ್ಲಿ ನಿಪುಣ]. (ಕ್ರಿ.) ದರಿದ್ರಾವಸ್ಥೆಗೆ ತರು ; ಬಡತನಕ್ಕಿಳಿಸು ; ತಿರುಕನನ್ನಾಗಿ ಮಾಡು. ಮೀರಿಸು ; ಅತೀತವಾಗು. ಮೂಕನನ್ನಾಗಿ ಮಾಡು (It beggars description ವರ್ಣಿಸಲು ಮಾತು ಸಾಲದು ; ವರ್ಣನಾತೀತವಾಗಿದೆ). Beg-my-neighbour ಒಂದು ಬಗೆಯ ಇಸ್ಪೀಟಾಟ. **Béggarly** (ಗು.) ತಿರುಪೆಯ ; ಬಡತನದ ; ನಿರ್ಗತಿಕ ; ರಿಕ್ತ ; ದರಿದ್ರ ; ನಿಸ್ಸತ್ವ ; ಹೀನ ; ನೀಚ. **Béggarliness** (ನಾ.) ; **Béggary** (ನಾ.) ಕಡು ಬಡತನ ; ಅತಿ ದಾರಿದ್ರ್ಯ ; ರಿಕ್ತತೆ.

Begád ಬಿಗ್ಯಾಡ್ (ಭಾವ. ಅವ್ಯ.) ದೇವರಾಣೆ ! (ಸಲಿಗೆಯಾಗಿ ಮಾತನಾಡುತ್ತಿರುವಾಗ ಉಪಯೋಗಿಸುವ ಮಾತು)

Begán. **Begin** ಧಾತುವಿನ ಭೂತ ರೂಪ.

Begét ಬಿಗೆಟ್ (ಕ್ರಿ. ಸಕ. ; ಭೂತ. Begot ; ಭೂ. ಕೃ. Begotten) (ಮಗುವನ್ನು) ಹುಟ್ಟಿಸು ; ಜನ್ಮಕೊಡು ; ಪಡೆ. ಆಸ್ಪದ ಕೊಡು ; ಉಂಟುಮಾಡು. **Begétter** (ನಾ.) ಜನಕ. **Begótten** ಬಿಗಾಟ್‌ನ್ (ಗು.) ಹುಟ್ಟಿಸಿದ ; ಹುಟ್ಟಿದ.

Begín ಬಿಗಿನ್ (ಕ್ರಿ. ; ಭೂತ. Began ಬಿಗ್ಯಾನ್ ; ಭೂ. ಕೃ. Begun ಬಗನ್) ಮೊದಲುಮಾಡು ; ಮೊದಲಾಗು ; ಆರಂಭಿಸು ; ಪ್ರಾರಂಭಿಸು ; ಪ್ರಾರಂಭವಾಗು ; ತೊಡಗು ; ಕೈಕೊಳ್ಳು. To b. with ಮೊಟ್ಟಮೊದಲು ; ಪ್ರಥಮತಃ. B. the world ಪ್ರಪಂಚಕ್ಕೆ ಕಾಲಿಡು ; ಸಂಸಾರ ಹೂಡು. **Begínner** (ನಾ.) ಮೊದಲುಮಾಡುವವನು ; ನುರಿಯದವನು ; ಹೊಸಬ ; ಆರಂಭಿಗ. **Begínning** (ನಾ.) ಪ್ರಾರಂಭ ; ಉಪಕ್ರಮ ; ಮೊದಲು ; ಮೂಲ ; ಆರಂಭ ಕಾಲ. The beginning of the end ಅಂತ್ಯಪರಿಣಾಮದ ಮೊದಲ ಸ್ಪಷ್ಟ ಸೂಚನೆ ; ಕೊನೆಯ ಮೊದಲು.

Begírd ಬಿಗರ್ಡ್ (ಕ್ರಿ. ಸಕ.) ಸುತ್ತು ; ಸುತ್ತುಗಟ್ಟು ; ಪರಿವೇಷ್ಟಿಸು.

Begóne ಬಿಗಾನ್ (ಕ್ರಿ. ವಿಧಿರೂಪ) ತೊಲಗಿಹೋಗು.

Begónia ಬಿಗೋನಿಯ (ನಾ.) ಪುಷ್ಪಪಾತ್ರವಿಲ್ಲದೆಯೂ ಒಂದೇ ದಳವುಳ್ಳದ್ದಾಗಿಯೂ ಇರುವ ಬಣ್ಣದ ಹೂವನ್ನು ಬಿಡುವ ಗಿಡಗಳ ಜಾತಿ : ಬಿಗೋನಿಯ.

Begót(ten). **Beget** ನೋಡಿ.

Begríme ಬಿಗ್ರೈಂ (ಕ್ರಿ. ಸಕ.) ಮಸಿಹಚ್ಚು ; ಮಲಿನಮಾಡು ; ಕಲುಷಿಸು.

Begrúdge ಬಿಗ್ರಜ್ (ಕ್ರಿ. ಸಕ.) ಅಸಮಾಧಾನ ಪಡು, — ತೋರಿಸು ; ಅಸಹನೆ ಪಡು, — ತೋರಿಸು ; ಅಸೂಯೆಪಡು.

Beguíle ಬಿಗೈಲ್ (ಕ್ರಿ. ಸಕ.) ತಪ್ಪುದಾರಿಗೆ ಸೆಳೆ ; ಮೋಸಪಡಿಸು ; ಭ್ರಮೆಗೊಳಿಸು ; ಮುಗ್ಧನನ್ನಾಗಿ ಮಾಡು ; ಮಂಕುಬೂದಿಯೆರಚು. ವಿನೋದಗೊಳಿಸು ; (ಶ್ರಮ, ಮೊ. ತೋರದಂತೆ) ಮನಸ್ಸನ್ನು ಬೇರೆ ಕಡೆಗೆ ತಿರುಗಿಸು. **Beguíler** (ನಾ.) ; **Beguílement** (ನಾ.)

Bégum ಬೀಗಂ (ನಾ.) (ಹಿಂದೂಸ್ಥಾನದಲ್ಲಿ) ಮುಸಲ್ಮಾನ್ ರಾಣಿ ಅಥವಾ ಶ್ರೀಮಂತೆ : ಬೇಗಂ.

Begún. **Begin** ಧಾತುವಿನ ಭೂ. ಕೃ.

Behálf ಬಿಹಾಫ್ (ನಾ.) (ವಾಕ್ಯಭಾಗಗಳಲ್ಲಿ ಮಾತ್ರ) On one's b. ಒಬ್ಬನ ಪರವಾಗಿ, ಒಬ್ಬನಿಗಾಗಿ ; ಒಬ್ಬನಿಗೋಸುಗ. In one's b. ಒಬ್ಬನ ಪ್ರಯೋಜನಕ್ಕಾಗಿ. In this or that b. ಈ (ಆ) ವಿಷಯದಲ್ಲಿ, — ವಾಗಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Beháve ಬಿಹೇವ್ (ಕ್ರಿ. ಅಕ.) ನಡೆದುಕೊ; ಮರ್ಯಾದೆಯಿಂದ, ಯೋಗ್ಯವಾಗಿ, ವರ್ತಿಸು; ಸರಿಯಾಗಿ ನಡೆದುಕೊ. (ಯಂತ್ರ, ಮೊ.) (ಸರಿಯಾಗಿ, ಸರಿಯಿಲ್ಲದೆ) ನಡೆ, ಕೆಲಸ ಮಾಡು. Well- (ill-) behaved ಒಳ್ಳೆಯ (ಕೆಟ್ಟ) ನಡತೆಯುಳ್ಳ. **Beháviour** — ವಿಯರ್ (ನಾ.) ನಡತೆ; ನಡೆವಳಿ; ಚರ್ಯೆ; ವರ್ತನೆ. (ಯಂತ್ರ, ಮೊ. ಗಳ) ಕಾರ್ಯರೀತಿ, ವರ್ತನೆ.

Behávourism ಬಿಹೇವ್ಯರಿಸ್ಮ್ (ನಾ.) (ಮ. ಶಾ.) ಮನುಷ್ಯನ ಎಲ್ಲ ವ್ಯಾಪಾರಗಳನ್ನೂ ಪ್ರಚೋದನೆ ಪ್ರತಿವರ್ತನೆಗಳೆಂದು ಎರಡು ಮೂಲಾಂಶಗಳಾಗಿ ವಿಭಾಗಿಸಬಹುದೆಂದೂ, ಅದರಲ್ಲಿ ಎಂಥ ಪ್ರಚೋದನೆಯಿಂದ ಎಂಥ ಪ್ರತಿವರ್ತನೆಯುಂಟಾಗುವುದೆಂಬುದನ್ನು ಮನುಷ್ಯನ ಬಹುಕಾಲದ ಚರ್ಯೆಯ ಪರೀಕ್ಷೆಯಿಂದ ತಿಳಿಯಬಹುದೆಂದೂ ವಾದಿಸುವ ತತ್ತ್ವ: ಚರ್ಯಾಮೂಲ ತತ್ತ್ವ.

Beheád ಬಿಹೆಡ್ (ಕ್ರಿ. ಸಕ.) ತಲೆಹೊಡೆ; ತಲೆಹೊಯ್ಯಿ; ತಲೆತೆಗೆ; ಶಿರಶ್ಛೇದನ ಮಾಡು.

Behéld. **Behold** ಧಾತುವಿನ ಭೂತ ರೂಪ.

Behémoth ಬಿಹೀಮ(ಮಾ)ತ್, (ನಾ.) ಬಹು ದೊಡ್ಡ ದೇಹವುಳ್ಳ ಪ್ರಾಣಿ (ಪ್ರಾಯಶಃ, 'ಹಿಪೊಪಾಟಮಸ್' ಎಂಬ ನೀರ್ಗುದುರೆ). ಸಾ., ಅತ್ಯಂತ ದೊಡ್ಡ ದೇಹವೂ ಅಸಾಧಾರಣ ಶಕ್ತಿಯೂ ಉಳ್ಳ ಪ್ರಾಣಿ: ಬೃಹದ್ದೇಹಿ.

Behést ಬಿಹೆಸ್ಟ್ (ನಾ.) ಆಜ್ಞೆ; ಅಪ್ಪಣೆ; ಆಣತಿ; ಬೆಸ (ಗ್ರಾಂ.)

Behínd ಬಿಹೈಂಡ್ (ಕ್ರಿ. ವಿ., ಉಪ., ನಾ.) ಹಿಂದೆ; ಹಿಂದುಗಡೆ; ಬೆನ್ನಿನ ಹಿಂದೆ; ಮರೆಯಲ್ಲಿ; — ಇಂತಲೂ ಹಿಂದೆ (ಕಾಲದಲ್ಲ ಅಥವಾ ಸ್ಥಳದಲ್ಲ); ಹಿಂದಕ್ಕೆ; ಹಿಂದುಳಿದು; ಹಿಂದೆಬಿದ್ದು. ಕೈಗಾವಲಾಗಿ; ದಾಸ್ತಾನಾಗಿ. ಬೆಂಬಲವಾಗಿ; ಆಶ್ರಯದಲ್ಲಿ; (ಒಬ್ಬನ) ಹೆಜ್ಜೆ ಹಿಡಿದು. ಬಾಕಿ ಬಿದ್ದು. (ನಾ.) ಹಿಂಭಾಗ; ಬೆನ್ನ ಕಡೆ. B. one's back ಬೆನ್ನ ಹಿಂದೆ; (ಅವನಿಗೆ) ತಿಳಿಯದಂತೆ; ಪರೋಕ್ಷದಲ್ಲಿ. B. the scenes ತೆರೆಯ ಹಿಂದೆ; ಒಳಗೆ; ಗುಟ್ಟಿನಲ್ಲಿ; ಏಕಾಂತವಾಗಿ. B. the time (ಗೊತ್ತಾದ) ಕಾಲ ಮೀರಿ; ತಡವಾಗಿ. B. the times ಕಾಲಕ್ಕೆ ತಕ್ಕಂತಿಲ್ಲದೆ; ಹಿಂದುಳಿದವನಾಗಿ. Fall b. ಹಿಂದೆ ಬೀಳು. Go b. one's words ಮಾತಿಗೆ ಹಿಂದಿರಬಹುದಾದ ರಹಸ್ಯವನ್ನು ತಿಳಿಯಲು ಯತ್ನಿಸು. ಮಾತಿನ ಮರ್ಮವನ್ನು ಕಂಡುಹಿಡಿ. Leave b. ಬಿಟ್ಟು ಹೋಗು; ಬಿಟ್ಟು ಸಾಯಿ. Put b. one ಹಿಂದಿಟ್ಟುಬಿಡು; ಪರಿಗಣಿಸದಿರು. **Behíndhand** (ಕ್ರಿ. ವಿ., ಗು.) (ಹಣಪಾವತಿ, ಮೊ. ದ ವಿಷಯಗಳಲ್ಲಿ) ಬಾಕಿ ನಿಲ್ಲಿಸಿಕೊಂಡು; ಬಾಕಿ ಬಿದ್ದು; ಸಾಲ ಹೊತ್ತು. ಕಾಲಕ್ಕೆ ತಕ್ಕಂತಿಲ್ಲದೆ; ಹಿಂದುಳಿದು; ಅಸಿದ್ಧನಾಗಿ.

Behóld ಬಿಹೋಲ್ಡ್ (ಕ್ರಿ. ಸಕ.; ಭೂತ. Beheld) ನೋಡು. Lo! behold! ಅಗೋ ನೋಡು! ಗಮನಿಸು! **Behólder** (ನಾ.); **Behólden** (ಗು.) ಉಪಕೃತ; ಋಣಿಯಾಗಿರುವ.

Behoóf ಬಿಹೂಫ್ (ನಾ.) (ವಾಕ್ಯಭಾಗಗಳಲ್ಲ ಮಾತ್ರ) ಉಪಯೋಗ; ಪ್ರಯೋಜನ (To, for, on, the behoof of)

Behóve, Behoóve ಬಿಹೋವ್, ಬಿಹೂವ್ (ಕ್ರಿ. ಸಕ.) (ಒಬ್ಬನು ಒಂದು ಕೆಲಸ ಮಾಡಲು) ಅಗತ್ಯವಿರು, ಅವಶ್ಯವಾಗಿರು; ಕರ್ತವ್ಯವಾಗಿರು; ತಕ್ಕದ್ದಾಗಿರು; ಯೋಗ್ಯವಾಗಿರು. It behooves the more weakly to be more cautious ಹೆಚ್ಚು ದುರ್ಬಲರಾದವರು ಹೆಚ್ಚು ಎಚ್ಚರಿಕೆಯಿಂದಿರಬೇಕಾದುದು ಆವಶ್ಯಕ.

Béing ಬೀಇಂಗ್ (ನಾ.) (Be ಪದದ ಕ್ರಿಯಾರ್ಥಗಳಲ್ಲಿ). ಇರವು; ಅಸ್ತಿತ್ವ; ಜೀವ; ಜೀವನ; ಜೀವಿ; ವ್ಯಕ್ತಿ. ವಸ್ತು. ಸ್ಥಿತಿ; ಸ್ವರೂಪ; ಜೀವಾಳ; ಸತ್ವ. The Supreme B. ಪರಮಾತ್ಮ; ಪರವಸ್ತು. For the time b. ಸದ್ಯಕ್ಕೆ; ತತ್ಕಾಲಕ್ಕೆ. That b. the case ಅದು ಹಾಗಿರಲಾಗಿ; ಆ ರೀತಿಯಾಗಿರುವುದರಿಂದ.

Belábour ಬಿಲೇಬರ್ (ಕ್ರಿ. ಸಕ.) ನದೆಬಡಿ; ಚಚ್ಚಿಹಾಕು. (ರೂಪ. ಸಹ)

Beláted ಬಿಲೇಟೆಡ್ (ಗು.) ಕಾಲಮೀರಿ ಬಂದ; ವಿಳಂಬವಾದ; ತಡವಾದ. ಕತ್ತಲೆ ಮೂಡಿದ; ಇರುಳು ಕವಿದ.

Belaúd ಬಿಲಾಡ್ (ಕ್ರಿ. ಸಕ.) ಅತಿಶಯವಾಗಿ ಸ್ತೋತ್ರಮಾಡು.

Belaý ಬಿಲೇ (ಕ್ರಿ. ಸಕ.) (ನಾವೆ) (ಸರಿದುಹೋಗುವ ಹಗ್ಗವನ್ನು) ಭದ್ರಪಡಿಸುವುದಕ್ಕಾಗಿ ಗೂಟಕ್ಕೆ ಸುತ್ತು. (ನಾವಿಕರ ಅಸಂ.) ನಿಲ್ಲು! ಸಾಕು! Belaying-pin ಹಗ್ಗವನ್ನು ಭದ್ರಪಡಿಸುವ ಬೆಣೆ, ಗೂಟ, ಮೊಳೆ.

Belch ಬೆಲ್ಚ್, ಬೆಲ್ಷ್ (ಕ್ರಿ.) ತೇಗು; ಕುಡಿದವನಂತೆ ಕೂಗುತ್ತ ದುರ್ಭಾಷೆಯಾಡು. (ಫಿರಂಗಿ, ಜ್ವಾಲಾಮುಖಿ—ಇವುಗಳ ವಿಷಯದಲ್ಲಿ) ಹೊರಹೊರಡಿಸು, ಚಿಮ್ಮು, ಕಕ್ಕು, ಕಾರು. (ನಾ.) ತೇಗು. ಫಿರಂಗಿಯ, ಜ್ವಾಲಾಮುಖಿಯ, ಶಬ್ದ; ಭಗ್ಗನೆ ಏಳುವ ಜ್ವಾಲೆ.

Bélcher ಬೆಲ್ಚರ್ (ನಾ.) ಕೊರಳಿಗೆ ಸುತ್ತಿಕೊಳ್ಳುವ ಇಬ್ಬಣ್ಣದ (ಮು., ನೀಲಿಯ ಒಡಲನಮೇಲೆ ಬಿಳಿಯ ಚುಕ್ಕೆಗಳುಳ್ಳ) ಕರವಸ್ತ್ರ, ಕೈಚೌಕ. (Jim Belcher ಎಂಬಾತನ ಹೆಸರಿನಿಂದ)

Béldam(e) ಬೆಲ್ಡಮ್ (ನಾ.) ಮುದುಕಿ; ಮುದಿಗೂಬೆ (ಲಕ್ಷಣಾರ್ಥ). ಗಂಡುಬೀರಿ.

Beleáguer ಬಿಲೀಗರ್ (ಕ್ರಿ. ಸಕ.) ಮುತ್ತಿಗೆ ಹಾಕು. (ರೂಪ. ಸಹ)

Bélemnite ಬೆಲೆಮ್ನೈಟ್ (ನಾ.) ಬಹಳ ಪೂರ್ವಕಾಲದಲ್ಲಿದ್ದು ನಷ್ಟವಾಗಿಹೋದ ಒಂದು ಜಾತಿಯ ಚಿಪ್ಪುಪ್ರಾಣಿಯ ಮೊನಚಾದ ಕೊನೆಯುಳ್ಳ ಎಲುಬಿನ ಪಳೆಯುಳಿಕೆ: ಬೆಲೆಮ್ನೈಟ್.

Bel esprít (F) ಬೆಲೆಸ್ಪ್ರೀ (ನಾ.; ಬ. ವ Beaux esprits ಬೋಸ್ಪ್ರೀ) ಮೇಧಾವಿ; ವಾಕ್ಚತುರ; ಚಮತ್ಕಾರ ಭಾಷಿ.

Bélfry ಬೆಲ್ಫ್ರಿ (ನಾ.) (ಸಾ., ಕ್ರೈಸ್ತ ದೇವಾಲಯಕ್ಕೆ ಅಥವಾ ಇತರ ಕಟ್ಟಡಕ್ಕೆ ಸೇರಿಸಿಯಾಗಲ, ಪ್ರತ್ಯೇಕವಾಗಿಯಾಗಲ, ಕಟ್ಟಿದ) ಘಂಟಾಗೋಪುರ; ಕ್ರೈಸ್ತ ದೇವಾಲಯದ ಗೋಪುರದಲ್ಲಿ ಗಂಟೆಹಾಕುವ ಸ್ಥಳ. **Bélfried** — ಫ್ರೀಡ್ (ಗು.)

Bélgian ಬೆಲ್ಜಿಯನ್ (ಗು., ನಾ.) ಬೆಲ್ಜಿಯಂ ದೇಶದ(ವನು). **Bélgic** (ಗು.) ನೆದರ್ಲೆಂಡ್ಸ್ (ಹಾಲೆಂಡು) ಪ್ರಾಂತದ.

Belgrávia ಬೆಲ್ಗ್ರೇವಿಯ (ನಾ.) Belgrave Square ಎಂಬ ಭಾಗವಿರುವ ನವನಾಗರಿಕರ ನಿವಾಸಸ್ಥಾನವಾದ ಲಂಡನ್ನಿನ ಪ್ರದೇಶ. **Belgrávian** (ಗು., ನಾ.)

Bélial ಬೀಲಿಯಲ್ (ನಾ.) ಸೈತಾನ್; ಪಾಪ ಮೂರ್ತಿ. Man of B. ಪಾಪಕರ್ಮಿ; ಭ್ರಷ್ಟ.

Belié ಬಿಲೈ (ಕ್ರಿ. ಸಕ.) ತಪ್ಪುತಿಳಿವಳಿಕೆಯನ್ನುಂಟುಮಾಡು; ಸುಳ್ಳು ಹೇಳು; ಹೆಸರು ಕೆಡಿಸು. (ವಾಗ್ದಾನ, ಮೊ. ಗಳನ್ನು) ನಡೆಯಿಸದೆ ಹೋಗು, ತಪ್ಪು; ನಂಬಿಕೆಗೆಡಿಸು; ಆಶಾಭಂಗ ಮಾಡು; ಸುಳ್ಳು ಮಾಡು.

Beliéf ಬಿಲೀಫ್ (ನಾ.) ನಂಬಿಕೆ; ವಿಶ್ವಾಸ; ಭಾವನೆ; ಮತಶ್ರದ್ಧೆ. ನಂಬಿದುದು. ಧರ್ಮ; ಮತ; ಅಭಿಪ್ರಾಯ. To the best of my b. ನನಗೆ ತಿಳಿದಮಟ್ಟಿಗೆ. The B. ಕ್ರೈಸ್ತಧರ್ಮದ ಪ್ರವರ್ತನಾಚಾರ್ಯರ (Apostles) ಮತ. **Beliéve** (ಕ್ರಿ.) ನಂಬು; ನೆಚ್ಚು; ನಂಬಿಕೆಯಿಡು; ವಿಶ್ವಾಸವಿಡು. ಅಭಿಪ್ರಾಯಪಡು; ಎಣಿಸು. Make believe ನಟನೆ ಮಾಡು; Make-believe (ನಾ.) ನಟ; ನಟನೆ. **Beliévable** (ಗು.); **Beliéver** (ನಾ.); **Beliéving** (ಗು., ನಾ.); **Beliévingly** (ಕ್ರಿ. ವಿ.)

Belíke ಬಿಲೈಕ್ (ಕ್ರಿ. ವಿ.) (ಪ್ರಾಚೀ. ಪ್ರ.) ಬಹುಶಃ; ಪ್ರಾಯಶಃ; ಒಂದು ವೇಳೆ (ಬಹಳವಾಗಿ ವ್ಯಂಗ್ಯಾರ್ಥದಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Belíttle ಬಿಲಿಟ್‌ಲ್ (ಕ್ರಿ. ಸಕ.) ಕೀಳ್ಮಾಡು ; ಇಳಿಕೈ ; ಜರೆ ; ತೃಣೀಕರಿಸು ; ಅಲ್ಪವಾಗೆಣಿಸು ; ಅಲಕ್ಷ್ಯಮಾಡು.

Bell[1] ಬೆಲ್ (ನಾ.) ಗಂಟೆ ; ಗಂಟೆಯಾಕಾರದ ವಸ್ತು (ಪುಷ್ಪಪಾತ್ರ, ಮೊ.). Bear the b. ಮುಂದಾಳಾಗು ; ಅಗ್ರಸ್ಥಾನ ಪಡೆ. Bear, or carry away the b. ಮೊದಲನೆಯವನಾಗು ; ಜಯಶಾಲಿಯಾಗು ; ಗೆಲ್ಲು ; ಅಗ್ರಬಹುಮಾನ ಪಡೆ. Bell, book and candle ಕ್ರೈಸ್ತರಲ್ಲಿ ಬಹಿಷ್ಕಾರಸೂಚಕ ಪದಗಳು : (ಕ್ರೈಸ್ತ ಮತಾಧಿಕಾರಿಯು ಬಹಿಷ್ಕಾರ ದಂಡನೆಯನ್ನು ಉಚ್ಚರಿಸಿದ ಬಳಿಕ ಒಂದು ಸಾರಿ ಗಂಟೆ ಬಡಿದು, ಬೈಬಲ್ಲನ್ನು ಮುಚ್ಚಿ, ದೀಪವನ್ನು ನಂದಿಸುವುದು ಸಂಪ್ರದಾಯ). Clear as a b. ಘಂಟಾನಾದದಷ್ಟು ಸ್ಫುಟವಾಗಿ. **B.-buoy** ಸಮುದ್ರದಲ್ಲಿ ಅಲೆಗಳ ಹೊಡೆತದಿಂದ ಗಂಟೆಹೊಡೆದು ಅಪಾಯವಿರುವ ಸ್ಥಳವನ್ನು ಸೂಚಿಸುವ ತೇಲುಬುರುಡೆ : ಗಂಟೆತೇಲುವೆ. **B.-flower** ಗಂಟೆಯಾಕಾರದ ಒಂದು ಜಾತಿಯ ಹೂವು, ಅದರ ಗಿಡ. **B.-founder, -founding, -foundry** ಗಂಟೆಗಳನ್ನು ಎರಕಹೊಯ್ಯುವವನು, ಈ ಎರಕಹೊಯ್ಯುವ ಕೆಲಸ, ಈ ಕೆಲಸದ ಕಾರ್ಖಾನೆ. **B.-glass** (ಸಸಿಗಳ ಮೇಲೆ ಮುಚ್ಚುವುದಕ್ಕಾಗಿ ಉಪಯೋಗಿಸುವ) ಗಂಟೆಯಾಕಾರದ ಗಾಜಿನ ಪಾತ್ರೆ. **B.-hanger** ಗಂಟೆಗಳನ್ನೂ ಅವಕ್ಕೆ ಸಂಬಂಧಿಸಿದ ತಂತಿ, ಮೊ. ನ್ನೂ ಹಾಕುವ ಕೆಲಸದವನು. **B.-hop** (ಅಮೆ. ಸಂ., ಅಸಂ.) ತಿಂಡಿಯಂಗಡಿಯ (ಹೋಟಲಿನ) ಸೇವಕ. **B.-jar** ವೈಜ್ಞಾನಿಕ ಪ್ರಯೋಗಗಳಲ್ಲಿ ಉಪಯೋಗಿಸುವ ಘಂಟಾಕಾರದ ಗಾಜಿನ ಪಾತ್ರೆ. **B.-metal** ತಾಮ್ರವೂ ತವರವೂ ಸೇರಿ ಆದ ಮಿಶ್ರ ಲೋಹ : ಕಂಚು. **B.-pull** ಗಂಟೆಹೊಡೆಯಲು ಹಾಕಿರುವ ಹಗ್ಗ ಅಥವಾ ಹಿಡಿ. **B.-ringer** ಕ್ರೈಸ್ತ ದೇವಾಲಯದ ಗಂಟೆಯನ್ನಾಗಲಿ ಊರಿನ ಗಂಟೆಯನ್ನಾಗಲಿ ಬಾರಿಸಲು ನಿಯಾಮಕನಾದವನು : ಗಂಟೆ ಬಾರಿಸುವವನು. **B.-wether** ಕುರಿಮಂದೆಯಲ್ಲಿ ಮುಂದು ಕುರಿ (ಕತ್ತಿಗೆ ಗಂಟೆ ಕಟ್ಟಿರುವದು). (ತಿರಸ್ಕಾರ ಸೂಚಕವಾಗಿ) ಮುಂದಾಳು.

Bell (ಕ್ರಿ. ಸಕ.) ಗಂಟೆ ಕಟ್ಟು, ಹಾಕು. B. the cat ಬೆಕ್ಕಿನ ಕೊರಳಿಗೆ ಗಂಟೆಕಟ್ಟು (ಇಲಿಗಳು ಮತ್ತು ಬೆಕ್ಕಿನ ಕಟ್ಟುಕಥೆಯಿಂದ) ; (ರೂಪ.) ಸಂಘದ ಸೌಖ್ಯಕ್ಕಾಗಿ ಅಪಾಯ ಕಾರ್ಯದಲ್ಲಿ ತೊಡಗು.

Bell[2] ಬೆಲ್ (ನಾ., ಕ್ರಿ. ಅಕ.) ಬೆದೆಹತ್ತಿದ ಗಂಡುಜಿಂಕೆಯ ಕೂಗು. ಅರಚು ; ಕಿರಿಚು.

Belladónna ಬೆಲಡಾನ (ನಾ.) (ಸ. ವಿ.) ಬದನೆಯ ವರ್ಗಕ್ಕೆ ಸೇರಿದ ಒಂದು ಜಾತಿಯ ಪ್ರಾಣನಾಶಕ ವಿಷಸಸ್ಯ. (ವೈ. ಶಾ.) ಈ ಸಸ್ಯದಿಂದ ತಯಾರಿಸಿದ ಔಷಧವಸ್ತು.

Belle ಬೆಲ್ (ನಾ.) ಚೆಲುವೆ ; ರೂಪವತಿ ; ಸುಂದರಿ ; ಸುಂದರೀ ಮಣಿ (ಒಂದು ಊರಿನ ಚೆಲುವೆಯರಲ್ಲಿ ಅಗ್ರಗಣ್ಯಳು)

Belles-léttres (F) ಬೆಲ್ ಲೆಟ್ರ್ (ನಾ., ಬ. ವ.) ಕಾವ್ಯ ವ್ಯಾಸಂಗ ; ಶುದ್ಧ ಸಾಹಿತ್ಯ ; ಲಲಿತ ಸಾಹಿತ್ಯ (ಕಾವ್ಯ, ಅಲಂಕಾರ, ಚರಿತ್ರೆ, ವಿಮರ್ಶೆ, ಮೊ. ಪೂ-ಭಾಷೆಯೂ ಸೇರಿದುದು). **Bellétrist** (ನಾ.) ; **Belletrístic** (ಗು.)

Béllicose ಬೆಲಿಕೋಸ್ (ಗು.) ಕಲಹಪರ ; ಯುದ್ಧಾಸಕ್ತ ; ಕ್ಷಾತ್ರಭಾವವುಳ್ಳ. **Bellicósity** — ಕಾ — (ನಾ.)

Bellígerent ಬೆಲಿಜೆರೆಂಟ್ (ಗು., ನಾ.) (ಜನಾಂಗಗಳ ನ್ಯಾಯದ ಅನುಸಾರವಾಗಿ) ಯುದ್ಧ ಹೂಡಿರುವ (ಜನಾಂಗ, ಪಂಗಡ, ಮನುಷ್ಯ) ; ಅಂಥ ಜನಾಂಗ ಮೊ.ಗಳ. ಯುದ್ಧದಲ್ಲಿ ತೊಡಗಿರುವ(ವನು). **Bellígerency, — ancy** (ನಾ.) ಯುದ್ಧಾವಸ್ಥೆ.

Bellóna ಬೆಲೋನ (ನಾ.) ಯುದ್ಧ ದೇವತೆ ; ಗಂಭೀರಾಕೃತಿಯ ಹೆಂಗಸು. ಸೂಕ್ಷ್ಮಗ್ರಹಗಳಲ್ಲೊಂದು.

Béllow ಬೆಲೋ (ಕ್ರಿ., ನಾ.) ಗೂಳಿಯಂತೆ ಗುಟುರುಹಾಕು ; ಅರಚು ; ಕಿರಿಚು ; (ನೋವಿನಿಂದ) ಕಿರಿಚಿಕೊ ; (ಕೋಪದಿಂದ) ಗರ್ಜಿಸು ; ಆರ್ಭಟಿಸು ; ಬೊಬ್ಬೆಯಿಡು. (ಗುಡುಗು, ಫಿರಂಗಿ, ಮೊ.) ಮರುದನಿಕೊಡು ; ಮೊರೆ ; ಭೋರ್ಗರೆ. (ನಾ.) ಗುಟುರು ; ಬೊಬ್ಬೆ ; ಗರ್ಜನೆ.

Béllows ಬೆಲೋಸ್, ಬೆಲಸ್ (ನಾ., ಬ. ವ.) ಬೆಂಕಿಗೆ ಅಥವಾ ಗಾಳಿವಾದ್ಯಗಳಿಗೆ ಗಾಳಿಯನ್ನೂದುವ ಸಲಕರಣೆ : ತಿದಿ ; ತಿತ್ತಿ. (ರೂಪ.) ರಾಗೋದ್ರೇಕಕಾರಿ. ಶ್ವಾಸಕೋಶಗಳು. ಛಾಯಾಗ್ರಾಹಿ ಪೆಟ್ಟಿಗೆಯ ವಿಸ್ತಾರ್ಯ ಭಾಗ.

Bélly ಬೆಲಿ (ನಾ.) ಜಠರ, ಕರುಳು, ಯಕೃತ್, ಮೊ. ಅಂಗಗಳುಳ್ಳದ್ದಾಗಿ, ವಪೆಯ ಕೆಳಗಿರುವ ಮುಂಡದ ಭಾಗ : ಹೊಟ್ಟೆ ; ಉದರ ; ಬಸಿರು ; ಗರ್ಭ. ಹಸಿವು ; ಹೊಟ್ಟೆಬಾಕತನ. ಗೂಡು ; ಕುಹರ. ಉಬ್ಬು ; ಉಬ್ಬುಹಳ್ಳ. ಮುಂದಿನ, ಒಳಗಿನ ಅಥವಾ ಕೆಳಗಿನ ಮೈ. **B.-ache** ಹೊಟ್ಟೆಶೂಲೆ. **B.-band** ಕುದುರೆಯ ಹೊಟ್ಟೆಪಟ್ಟಿ. **B.-bound** (ಗು.) ಹೊಟ್ಟೆ ಕಟ್ಟಿದ ; ಮಲಬದ್ಧ. **B.-god** ಹೊಟ್ಟೆಬಾಕ. **B.-pinched** ಹೊಟ್ಟೆ ತಾಳಹಾಕುತ್ತ ; ಹೊಟ್ಟೆಗಿಲ್ಲದೆ. **B.-timber** ಅನ್ನ ; ತಿಂಡಿ ; ಆಹಾರ. **B.-worship** ಉದರಪೂಜೆ ; ಹೊಟ್ಟೆಬಾಕತನ. **Béllied** ಬೆಲಿಡ್ (ಗು.) ; **Béllyfull** (ನಾ.) ಹೊಟ್ಟೆತುಂಬ. ತೃಪ್ತಿಯಾಗುವಷ್ಟು (ಮು., ಕಾದಾಟದಲ್ಲಿ, ಕಾಳಗದಲ್ಲಿ)

Bélly (ಕ್ರಿ.) ಉಬ್ಬು ; ಉಬ್ಬಿಕೊ ; ಉಬ್ಬಿಸು (ಸಾ., B. out ; ಧ್ವಜಪಟಗಳ ವಿಷಯದಲ್ಲಿ)

Belóng ಬಿಲಾಂಗ್ (ಕ್ರಿ. ಅಕ.) ಸೇರಿರು ; ಸಂಬಂಧಿಸಿರು ; ತಕ್ಕದ್ದಾಗಿರು ; ಯೋಗ್ಯವಾಗಿರು. B. here ಇಲ್ಲಿ ವಾಸವಾಗಿರು ; ಈ ಶಿರೋನಾಮದಲ್ಲಿ ಸೇರಿಸತಕ್ಕದ್ದಾಗಿರು. B. under or in ನ್ಯಾಯವಾಗಿ (ಆ ತರಗತಿಯಲ್ಲಿ) ಸೇರತಕ್ಕದ್ದಾಗಿರು. **Belóngings** (ನಾ., ಬ. ವ.) ಒಬ್ಬನ ಆಸ್ತಿ, ನೆಂಟರು, ಅಥವಾ ಸಾಮಾನು ; ಸೇರಿದುದು ; ಒಂದು ವಿಷಯಕ್ಕೆ ಸಂಬಂಧಪಟ್ಟುದೆಲ್ಲ.

Belóved ಬಿಲವೆಡ್ (ಗು., ನಾ.) ; (ಭೂ. ಕೃ., ಬಿಲವ್ಡ್) ಪ್ರೇಮದ ; ಮಮತೆಯಿಂದ ಪ್ರೀತಿಸುವ ; ಪ್ರೀತಿಪಾತ್ರವಾದ ; ಒಲವಿನ ; ಒಲುಮೆಯ ; ಅಕ್ಕರೆಯ. (ನಾ.) ಪ್ರಿಯ ; ಪ್ರಿಯೆ ; ಇನಿಯ(ಳು) ; ಓಪ(ಳು) (ಗ್ರಾಂ.)

Belów ಬಿಲೋ (ಕ್ರಿ. ವಿ., ಉಪ.) ಕೆಳಗೆ ; ಕೆಳಗಡೆ ; ಕೆಳಭಾಗದಲ್ಲಿ ; ಭೂಮಿಯಲ್ಲಿ ; ಈ ಪ್ರಪಂಚದಲ್ಲಿ ; ಇಹಲೋಕದಲ್ಲಿ. ನರಕ (ಪಾತಾಳ) ದಲ್ಲಿ. ಕೆಳ ಅಂತಸ್ತಿನಲ್ಲಿ, — ಗೆ (ಮು., ಹಡಗಿನ ವಿಷಯದಲ್ಲಿ). ಹೊಳೆಯ ಇಳಿವಿನಲ್ಲಿ. ದರ್ಜೆಯಲ್ಲಿ ಕೆಳಗೆ (Judgment of the court b. ಕೆಳಕೋರ್ಟಿನ ತೀರ್ಮಾನ). ಪುಟದ ಅಡಿಯಲ್ಲಿ, ಅಥವಾ ಪುಸ್ತಕದಲ್ಲಿ ಇನ್ನೂ ಮುಂದೆ. (ಮೊತ್ತದಲ್ಲಿ ಅಥವಾ ಮಟ್ಟದಲ್ಲಿ) ಕಡಮೆಯಾಗಿ (B. one's breath ಸಾಮಾನ್ಯ ದನಿಗಿಂತಲೂ ಕಡಮೆಯ ದನಿಯಲ್ಲಿ : ಕುಗ್ಗುದನಿಯಲ್ಲಿ. B. par ಗೊತ್ತಾದ ಮೊತ್ತಕ್ಕೆ, ಇರಬೇಕಾದ ಸ್ಥಿತಿಗೆ, ಕಡಮೆಯಾಗಿ). ಅಯೋಗ್ಯವಾಗಿ.

Belt ಬೆಲ್ಟ್ (ನಾ.) (ಚರ್ಮ, ಮೊ. ಗಳಿಂದ ಮಾಡಿದ) ಪಟ್ಟಿ ; ನಡುಕಟ್ಟು ; ಡಾಬು ; ಒಡ್ಯಾಣ ; ಎದೆಪಟ್ಟಿ ; ದವಾಲಿ. (Hit below the b. ನಡುವಿನ ಕೆಳಗೆ ಹೊಡೆ ; ಧರ್ಮವಿರುದ್ಧವಾಗಿ ಹೊಡೆ, ಹೋರಾಡು). ಬಣ್ಣದ ಪಟ್ಟೆ. (ಯಂತ್ರದಲ್ಲಿ) ತಿರುಗುವ ಚಕ್ರಗಳನ್ನು ಸಂಬಂಧಿಸಿ ಸುತ್ತುವರಿದಿರುವ ತುದಿಯಿಲ್ಲದ ಪಟ್ಟಿ. ಅಗಲಕಡಮೆಯಾಗಿಯೂ ಉದ್ದವಾಗಿಯೂ ಇರುವ ಭೂಪ್ರದೇಶ ; ನೆಲದ ಪಟ್ಟೆ. ಮಂಡಲ ; ವಲಯ ; ಪ್ರದೇಶ (Cotton b. ಹತ್ತಿ ಬೆಳೆಯುವ ಪ್ರದೇಶ). ನೀರಿನ ಮಟ್ಟದ ತಳಕ್ಕಿರುವ ಹಡಗಿನ ಭಾಗದ ರಕ್ಷಾಕವಚದ ಪಟ್ಟಿಗಳ ಸಾಲು. Great B., Little B. ಬಾಲ್ಟಿಕ್ ಸಮುದ್ರದ ಈ ಹೆಸರಿನ ಕಡಲು ಪಟ್ಟಿಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Belt (ಕ್ರಿ. ಸಕ.) ಪಟ್ಟಿಯಿಂದ, ಪಟ್ಟಿಯಂತೆ, ಸುತ್ತುಗಟ್ಟು; ಪಟ್ಟಿಬಿಗಿ; ಪಟ್ಟಿಯಿಂದ ಹೊಡೆ, ತಾಡಿಸು. ಬಣ್ಣದ ಪಟ್ಟೆಗಳನ್ನೆಳೆ.

Bélvedere ಬೆಲ್ವಿಡೀಯರ್ (ನಾ.) ಸುತ್ತಲಿನ ನೋಟ ಚೆನ್ನಾಗಿ ಕಾಣುವಂತೆ ದಿಣ್ಣೆಯಮೇಲೆ ಕಟ್ಟಿದ ಉಪ್ಪರಿಗೆ ಮನೆಯ ಶಿಖರ.

Béma ಬೀಮ (ನಾ.) ಪ್ರಾಚೀನ ಅಥೆನ್ಸಿನ ಸಾರ್ವಜನಿಕ ಸಭಾ ಮಂದಿರದಲ್ಲಿ ಭಾಷಣಕಾರರು ನಿಂತು ಭಾಷಣಮಾಡುತ್ತಿದ್ದ ವೇದಿಕೆ. (ಕ್ರೈಸ್ತ) ಪೂರ್ವಕಾಲದ ಕ್ರೈಸ್ತ ದೇವಾಲಯಗಳಲ್ಲಿ ಆರಾಧನ ವೇದಿಕೆ.

Bemíre ಬಿಮಯ‘ರ್ (ಕ್ರಿ. ಸಕ.) ಕೆಸರು ಬಳಿ; ಕೆಸರಿನಿಂದ ಮಲಿನ ಮಾಡು. (ಕರ್ಮಣಿ) ಕೆಸರಿನಲ್ಲಿ ಹೂಳಿಕೊ; ಮಣ್ಣಿನಲ್ಲಿ ಹೂತು ಹೋಗು. (ರೂಪ. ಸಹ)

Bemoán ಬಿಮೋನ್ (ಕ್ರಿ. ಸಕ.) ಅಳು; ಪ್ರಲಾಪಿಸು; ಪಳಯಿಸು (ಗ್ರಾಂ.); ದುಃಖಪಡು; ವ್ಯಸನಪಡು; ಗೋಳಾಡು; ಹಲುಬು.

Bemúse ಬಿಮ್ಯೂಸ್ (ಕ್ರಿ. ಸಕ.) ಮಂಕುಹಿಡಿಸು; ಮರುಳು ಮಾಡು; ಭ್ರಾಂತಿಗೊಳಿಸು.

Bench ಬೆಂಚ್ (ನಾ.) ಮರದಿಂದಾಗಲಿ ಕಲ್ಲಿನಿಂದಾಗಲಿ ಮಾಡಿದ ಉದ್ದವಾದ ಕಾಲ್ಮಣೆ; ಬೆಂಚು. ನ್ಯಾಯಾಧಿಪತಿಯ ಆಸನ: ನ್ಯಾಯಪೀಠ; ನ್ಯಾಯಾಧೀಶನ ಉದ್ಯೋಗ; ನ್ಯಾಯಾಧಿಪತಿತ್ವ; ನ್ಯಾಯಸ್ಥಾನ; (ಸಮುದಾಯದಲ್ಲಿ) ನ್ಯಾಯಾಧೀಶರು; ದಂಡಾಧಿಕಾರಿಗಳು. (Be raised to the b. ನ್ಯಾಯಾಧಿಪತಿಯಾಗಿ, ಅಥವಾ 'ಬಿಷಪ್' ಎಂಬ ಕ್ರೈಸ್ತ ಮಠಾಧಿಪತಿಯಾಗಿ, ನಿಯಮಿತನಾಗು. Be on the b. ನ್ಯಾಯಾಧೀಶನಾಗಿರು, 'ಬಿಷಪ್' ಆಗಿರು. B.-warrant ನ್ಯಾಯಾಧೀಶನಿಂದ ಹೊರಟ ದಸ್ತಗಿರಿಯ ಆಜ್ಞಾಪತ್ರ). (ಶಾಸನ ಸಭೆಗಳಲ್ಲಿ) ಕೆಲಕೆಲವು ಪಂಗಡಗಳವರಿಗೆ ಗೊತ್ತುಮಾಡಿರುವ ಆಸನಗಳು (Treasury benches, Front benches, ಮೊ.). (ಬಡಗಿ, ಮೊ. ವರ) ಕೆಲಸದ ಮೇಜು. ಹಣವ್ಯಾಪಾರಿಯ ಮೇಜು. (ಕಲ್ಲುಕೆಲಸದಲ್ಲಾಗಲಿ ಮಣ್ಣುಕೆಲಸದಲ್ಲಾಗಲಿ) ಮುಂದಕ್ಕೆ ಚಾಚಿಕೊಂಡಿರುವ ಲೋವೆ. ದಿಬ್ಬ (A b. of coal ಕಲ್ಲಿದ್ದಲಿನ ಚಪ್ಪಟೆಯ ದಿಬ್ಬ). **B.-mark** (ಭೂಮಟ್ಟ, ಮೊ. ನ್ನು ಅಳತೆಮಾಡುವಲ್ಲಿ ಮೋಜಣಿದಾರರು ಬಂಡೆ, ಮೊ. ಗಳ ಮೇಲೆ ಮಾಡುವ) ಮಟ್ಟದ ಗುರುತು. **Béncher** (ನಾ.) ಲಂಡನ್ನಿನಲ್ಲಿ Inn of Court ಎಂಬ ನ್ಯಾಯವಾದಿಗಳ ಸಂಘದ ಹಿರಿಯ ಸದಸ್ಯ.

Bench (ಕ್ರಿ. ಸಕ.) ಬೆಂಚುಗಳನ್ನು ಹಾಕು; ಬೆಂಚಿನ ಮೇಲೆ ಕುಳ್ಳಿರಿಸು. (ನಾಯಿಗಳ) ಪ್ರದರ್ಶನ ಮಾಡು.

Bend ಬೆಂಡ್ (ನಾ., ಕ್ರಿ.; ಭೂತ., ಭೂ. ಕೃ. Bent) ತಿರುವು; ಮುರಿವು; ಬಾಗು; ವಕ್ರತೆ; (ಯಾವುದಾದರೂ ವಸ್ತುವಿನ) ಬಗ್ಗಿದ ಭಾಗ. (ನಾವೆ) (ಅನೇಕ ತರದ) ಕುಣಿಕೆ ಅಥವಾ ಗಂಟು. (ಕ್ರಿ.) ಬಗ್ಗಿಸು; ಬಗ್ಗು; ಬಾಗು; ಮಣಿ; ತಿರುಗು; ಕೊಂಕು; ಕೊಂಕಿಸು (To b. the brows ಹುಬ್ಬು ಗಂಟಿಕ್ಕುವುದು). ಬಿಗಿಸು (To b. the cable ಹೊರಜಿಯನ್ನು ಲಂಗರಿನ ಬಳೆಗೆ ಬಿಗಿಯುವುದು. To b. a sail ಧ್ವಜಪಟವನ್ನು ಅದರ ನೆರೆಗೆ ಬಿಗಿಸುವುದು). ಅದುಮು. (ಕರ್ಮಣಿ) ನಿರ್ಧರಿಸಿಕೊಂಡಿರು. (ನಾವೆ) ಕುಣಿಕೆ ಹಾಕು; ಗಂಟು ಹಾಕು. (ಹೆಜ್ಜೆ, ಕಣ್ಣು, ಮೊ. ನ್ನು) ಬೇರೆ ಮಾರ್ಗಕ್ಕೆ ತಿರುಗಿಸು, ತಿರುಗು. ಓಲು; ಓಲಿಸು. ಅಧೀನನಾಗು; ಬಲವಂತದಿಂದ ಅಧೀನಕ್ಕೆ ತರು. **Bénder** (ನಾ.) (ಮು., ಅಸಂ.) ಆರು ಪೆನಿಯ ನಾಣ್ಯ.

Beneáped ಬಿನೀಪ್ಟ್ (ಗು.) (ಹಡಗು) ಸಮುದ್ರದ ನೀರಿಳಿತದಿಂದ ತಳ ಹತ್ತಿ ಕುಳಿತ.

Beneáth ಬಿನೀತ್ (ಕ್ರಿ. ವಿ., ಉಪ.) ಕೆಳಗೆ; ತಳದಲ್ಲಿ; ಅಡಿಯಲ್ಲಿ. B. contempt ತಿರಸ್ಕಾರಕ್ಕೂ ಅನರ್ಹ. B. one ತಗದ; ಯೋಗ್ಯವಲ್ಲದ.

Benedícite ಬೆನಿಡೈಸಿಟಿ (ನಾ., ಭಾವ. ಅವ್ಯ.) ಸ್ವಸ್ತಿ. ದೇವರು ರಕ್ಷಿಸಲಿ! (ಮು., ಊಟಕ್ಕೆ ಕುಳಿತುಕೊಳ್ಳುವಾಗ ಕ್ರೈಸ್ತರು ಮಾಡುವ ದೈವ ಪ್ರಾರ್ಥನೆ). The B. (ಕ್ರೈಸ್ತ) ಸಣ್ಣ ಕೀರ್ತನಾ ರೂಪವಾದ ದೈವಸ್ತೋತ್ರ.

Bénedick, Bénedict ಬೆನಿಡಿಕ್, — ಡಿಕ್ಟ್ (ನಾ.) ಹೊಸದಾಗಿ ಮದುವೆಯಾದವನು (ಮು., ಅವಿವಾಹ ದೀಕ್ಷೆ ವಹಿಸಿದ್ದು ಮದುವೆ ಆದವನು)

Benedíctine ಬೆನಿಡಿಕ್ಟಿನ್ (ಗು., ನಾ.) St. Benedict ಎಂಬಾತನು ಸ್ಥಾಪಿಸಿದ ಸಂನ್ಯಾಸಿಪಂಥದವನು. ಒಂದು ಮದ್ಯವಿಶೇಷ.

Benedíction ಬೆನಿಡಿಕ್‘ಷನ್ (ನಾ.) ಸ್ವಸ್ತಿವಾಚನ (ಮು., ಕ್ರೈಸ್ತರು ಊಟಕ್ಕೆ ಕುಳಿತುಕೊಳ್ಳುವಾಗ, ಕ್ರೈಸ್ತದೇವಾಲಯದಲ್ಲಿ ಪ್ರಾರ್ಥನೆ ಮುಗಿದ ಮೇಲೆ, ಅಥವಾ ವಿಶೇಷ ಸಂದರ್ಭಗಳಲ್ಲಿ); ಹರಕೆ; ಆಶೀರ್ವಚನ; ದೈವಾನುಗ್ರಹ; ಕಲ್ಯಾಣ; ಶ್ರೇಯಸ್ಸು. **Benedíctory** (ಗು.)

Benedíctus ಬೆನಿಡಿಕ್ಟಸ್ (ನಾ.) (ಕ್ರೈಸ್ತ) ಪವಿತ್ರಗೀತಗಳಲ್ಲೊಂದು.

Benefáction ಬೆನಿಫ್ಯಾಕ್‘ಷನ್ (ನಾ.) ಒಳ್ಳೆಯದನ್ನು ಮಾಡುವುದು; ಉಪಕಾರ; ಧರ್ಮಕಾರ್ಯಗಳಿಗಾಗಿ ಕೊಡುಗೆ; ದತ್ತಿ; ದಾನ; ಧರ್ಮ. **Bénefactor** (ನಾ.) ಉಪಕಾರಿ; ಆಶ್ರಯ ದಾತ; ಯಾವುದಾದರೂ ಸತ್ಕಾರ್ಯಕ್ಕಾಗಲಿ ಧರ್ಮಕಾರ್ಯಕ್ಕಾಗಲಿ ಹಣ ಕೊಡುವವನು; ದಾತ. **Bénefactress** (ನಾ.)

Bénefice ಬೆನಿಫಿಸ್ (ನಾ.) ಕ್ರೈಸ್ತ ಮಠದ ಜೀವನಾದಾಯ, ಧರ್ಮಾದಾಯ. ಕ್ರೈಸ್ತ ಮಠದಲ್ಲಿ ಆರಾಧನೆ ನಡೆಯಲು ಕೊಟ್ಟ ದತ್ತಿ, ಮಾನ್ಯ, ಬರುವ ವರುಮಾನ; ಮಠವೃತ್ತಿ. **Béneficed** (ಗು.)

Benéficence ಬಿನೆಫಿಸೆನ್ಸ್ (ನಾ.) ಉಪಕಾರ ಮಾಡುವುದು; ಹಿತ ಮಾಡುವುದು. ಉಪಕಾರ; ಉಪಕೃತಿ. **Benéficent** (ಗು.); **Benéficently** (ಕ್ರಿ. ವಿ.); **Benefícial** ಬೆನಿಫಿಷಲ್ (ಗು.) ಲಾಭಕರ; ಅನುಕೂಲ; ಪ್ರಯೋಜನಕರ; ಹಿತಕರ. (ನ್ಯಾ. ಶಾ.) (ಆಸ್ತಿಯನ್ನು ಪರಾಧೀನಮಾಡುವ ಹಕ್ಕಿಲ್ಲದೆ) ಫಲಾನುಭವದ ಹಕ್ಕುಳ್ಳ. **Benefícially** (ಕ್ರಿ. ವಿ.)

Beneficiaíre (F) ಬೆನೆಫೀಸ್ಯೇರ್ (ನಾ.) ಸಹಾಯದ್ರವ್ಯ ಪಡೆಯುವವನು (ನಟ, ಕ್ರಿಕೆಟ್ ಪ್ರವೀಣ, ಮೊ.)

Benefíciary ಬೆನಿಫಿಷರಿ (ಗು., ನಾ.) (ನ್ಯಾ. ಶಾ.) ಯುದ್ಧಸಮಯದಲ್ಲಿ ಸಹಾಯಮಾಡುವ ಷರತ್ತಿನಮೇಲೆ ಪಡೆದ, ಕೊಟ್ಟ (ಮಾನ್ಯ); ಅಂಥ ಹಿಡುವಳಿದಾರ. ಒಂದು ಮಾನ್ಯದ ಹಿಡುವಳಿದಾರ. ಪ್ರಯೋಜನದಾರ; ಫಲಾನುಭವಿ.

Bénefit ಬೆನಿಫಿಟ್ (ನಾ.) ಪ್ರಯೋಜನ; ಫಲ; ಲಾಭ; ಹಿತ. (The b. of the doubt ಅಪಾದನೆಯ ವಿಷಯದಲ್ಲಿ ಸಂಶಯಬಂದ ಕಾರಣದಿಂದ ಅಪಾದಿತನನ್ನು ಬಿಟ್ಟುಬಿಡುವುದು). ಉಪಕಾರಿಸಂಘಗಳು, ಮೊ. ಗಳ ಸದಸ್ಯತ್ವದಿಂದ ದೊರೆಯುವ ಭತ್ಯ, ವೇತನ. ಸಾಮಾನ್ಯ ನ್ಯಾಯಸ್ಥಾನಗಳಿಗೆ ಸಾಕ್ಷ್ಯ, ಮೊ. ನ್ನು ಕೊಡಲು ಬರಬೇಕಾದ ನಿರ್ಬಂಧದ ವಿಷಯವಾಗಿ ಕೆಲವು ಗೌರವ ವೃತ್ತಿಗಳಲ್ಲಿ ಅಥವಾ ಸ್ಥಾನಗಳಲ್ಲಿ ಇರುವವರಿಗೆ ತೋರಿಸುವ ವಿನಾಯಿತಿ (ಉದಾ.— ಮಠಾಧಿಪತಿಗಳು, ಶ್ರೀಮಂತರು, ಮೊ.). ಒಬ್ಬನಿಗೆ ಅಥವಾ ಒಂದು ಸಂಘಕ್ಕೆ ದ್ರವ್ಯಸಹಾಯ ಮಾಡುವುದಕ್ಕಾಗಿ ಆಡುವ ನಾಟಕ, ಪಂದ್ಯದ ಆಟ, ಮೊ: ಸಹಾಯಾರ್ಥಕ (ನಾಟಕ, ಪಂದ್ಯ, ಮೊ. B.-match, B.-night). B.-club, B.-society ರೋಗ, ಮುಪ್ಪು — ಈ ಸ್ಥಿತಿಗಳಲ್ಲಿ ಅನುಕೂಲ್ಯ ಪಡೆಯಲು ಏರ್ಪಡಿಸಿಕೊಂಡ ಸಹಕಾರ ಸಂಘ.

Bénefit (ಕ್ರಿ.) ಉಪಕಾರ ಮಾಡು; ಪ್ರಯೋಜನ ಕೊಡು; ಆದಾಯಕರವಾಗಿರು; ಆದಾಯ ಪಡೆ; ಪ್ರಯೋಜನ ಹೊಂದು; ಲಾಭ ಹೊಂದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Benét ಬಿನೆಟ್ (ಕ್ರಿ., ಸಕ.) ಬಲೆ ಬೀಸು ; ಬಲೆಹಾಕಿ ಹಿಡಿ (ಸಾ., ರೂಪಕ)

Benévolence ಬಿನೆವೊಲೆನ್ಸ್ (ನಾ.) ಉಪಕಾರ ಬುದ್ಧಿ ; ಧರ್ಮಬುದ್ಧಿ ; ದಯಾಪರತೆ ; ಉಪಕಾರ ; ದಾನ ; ಧರ್ಮ. (ಚರಿತ್ರೆ) ಇಂಗ್ಲಿಷ್‌ದೊರೆಗಳು ನ್ಯಾಯಸಮ್ಮತವಿಲ್ಲದೆ ತಮ್ಮ ಪ್ರಜೆಗಳಿಂದ ಹಿಂದಿನ ಕಾಲದಲ್ಲಿ ತೆಗೆಯುತ್ತಿದ್ದ ಬಲವಂತದ ಸಾಲ ; ನ್ಯಾಯಸಮ್ಮತವಲ್ಲದ ತೆರಿಗೆ. **Benévolent** (ಗು.) ಉಪಕಾರ ಬುದ್ಧಿಯುಳ್ಳ ; ಧರ್ಮಶೀಲನಾದ. **Benévolently** (ಕ್ರಿ. ವಿ.)

Bengál ಬೆಂಗಾಲ್ (ನಾ.) ವಂಗ ದೇಶ ; ಬಂಗಾಳ. B. light ಸಂಕೇತದ ಮತಾಪು. B. stripes ಪಟ್ಟೆಪಟ್ಟೆಯ ಒಂದು ತೆರದ ಬಟ್ಟೆ (ಮೊದಲು ಬಂಗಾಳದಲ್ಲಿ ತಯಾರಾಗಿ ಹೊರಕ್ಕೆ ಹೋಗುತ್ತಿದ್ದದ್ದು). B. tiger ಬಂಗಾಳ ಹುಲಿ. **Bengáli, -álee** (ಗು., ನಾ.) ಬಂಗಾಳ (ವಂಗ)ದ ದೇಶಭಾಷೆ ; ಬಂಗಾಳ(ವಂಗ)ದೇಶಸ್ಥ ; ವಂಗೀಯ.

Beníghted ಬಿನೈಟೆಡ್ (ಗು.) ಕತ್ತಲೆಗೆ ಸಿಕ್ಕಿದ. (ರೂಪ.) ಅಜ್ಞಾನ ಕವಿದ. (ನೀತಿ, ಬುದ್ಧಿ, ನಾಗರಿಕತೆ, ಮೊ.) ಶೂನ್ಯ.

Benígn ಬಿನೈನ್ (ಗು.) ದಯಾಮಯ ; ಕೃಪಾಕರ ; ಕರುಣಾಳು. ಶುಭಕರ ; ಹಿತಕರ ; ಸುಖಾವಹ. (ವ್ಯಾಧಿ) ಶಾಂತ ; ತೀವ್ರವಲ್ಲದ. **Benígnly** (ಕ್ರಿ. ವಿ.) ; **Benígnant** ಬಿನಿಗ್ನಂಟ್ (ಗು.) ; **Benígnancy** (ನಾ.) ; **Benígnantly** (ಕ್ರಿ. ವಿ.) ; **Benígnity** (ನಾ.)

Bénison ಬೆನಿಸನ್ (ನಾ.) (ಪ್ರಾಚೀ. ಪ್ರ., ಕಾವ್ಯ) ಹರಕೆ ; ಆಶೀರ್ವಾದ. ಸ್ವರ್ಗಸುಖ.

Bénjamin[1] ಬೆಂಜಮಿನ್ (ನಾ.) ಕಡೆಯ ಕೂಸು ; ಕಿರಿಗೂಸು ; ಮುದ್ದುಮಗು. B.'s mess ಹೆಚ್ಚು ಪಾಲು.

Bénjamin[2] ಬೆಂಜಮಿನ್ (ನಾ.) (= Benzoin) ಸಾಂಬ್ರಾಣಿ. B. tree ಸಾಂಬ್ರಾಣಿಯ ಮರ ; ಸುವಾಸನೆಯ ತಿಗುಡುಳ್ಳ ಉ. ಅಮೆರಿಕದ ಒಂದು ಜಾತಿಯ ಗಿಡ.

Bénnet ಬೆನೆಟ್ (ನಾ.) **Bent**[1] ನೋಡಿ.

Bent[1] ಬೆಂಟ್ (ನಾ.) ಅಪಿನಂಥ ಹಲವು ಹುಲ್ಲುಜಾತಿಗಳು ; ಹುಲ್ಲುಗಿಡದ ಹೂದೆನೆಯ ಗಟ್ಟಿ ಕಾಂಡ (=Bennet). ಬಂಜರುಭೂಮಿ ; ಹುಲ್ಲುಗಾವಲು.

Bent[2] ಬೆಂಟ್ (ನಾ.) ತಿರುಪು ; ಬಾಗು ; ಒಲು ; ಓರೆ. (ರೂಪ.) ಮನೋಭಾವ ; ಪಕ್ಷಪಾತ ; ಒಲವು. To the top of one's b. ಮನಸ್ತೃಪ್ತಿಯಾಗಿ ; ಇಷ್ಟಪೂರ್ತಿಯಾಗಿ.

Bent[3] ಬೆಂಟ್. Bend ಧಾತುವಿನ ಭೂತ., ಭೂ. ಕೃ.

Bénthamism ಬೆಂತಮಿಸ್ಸ್‌ಮ್ (ನಾ.) ಕೂಡಿದ ಮಟ್ಟಿಗೂ ಬಹುಹೆಚ್ಚು ಮಂದಿಗೆ ಬಹುಹೆಚ್ಚು ಸುಖವಾಗಬೇಕೆಂಬುದೇ ಧರ್ಮಶಾಸ್ತ್ರದ ಮೂಲಸೂತ್ರವಾಗಿರಬೇಕೆಂಬ ಮತ : ಬೆಂತಂ ತತ್ತ್ವ. ('ಜರಿಮಿ ಬೆಂತಂ' ಎಂಬ ತತ್ತ್ವಜ್ಞಾನಿಯ ಹೆಸರಿನಿಂದ). **Bénthamite** (ನಾ.) ಬೆಂತಮಿನ ಅನುಯಾಯಿ.

Ben trováto (It.) ಬೆನ್ ಟ್ರೊವಾಟೊ (ಗು.) ಚೆನ್ನಾಗಿ ಕಲ್ಪಿಸಿದ ; (ನಿಜವಲ್ಲದೆ ಹೋದರೂ) ಸಹಜವೆಂದು ತೋರುವ.

Benúmb ಬಿನಂ (ಕ್ರಿ. ಸಕ.) ಜೋವು ಹಿಡಿಸು ; ಜಡವಾಗಿಸು ; ಮರವಡಿಸು (ಸಾ. ಚಳಿಯಿಂದ). (ಮನಸ್ಸು, ಇಂದ್ರಿಯಗಳು. ಮೊ. ನ್ನು) ನಿಶ್ಚೇಷ್ಟವಾಗಿಸು, ಸ್ತಂಭಿಸು.

Bénzene ಬೆನ್‌ಜೀನ್ (ನಾ.) ಟಾರಿನಿಂದ ತೆಗೆದ ಒಂದು ಸುವಾಸನಾ ದ್ರವ (ಜಲಜನಕ ಇಂಗಾಲ ಸಂಯುಕ್ತ) ; (ವ್ಯಾಪಾರದ ಹೆಸರು : Benzol)

Bénzine ಬೆನ್‌ಜೀನ್ (ನಾ.) ಖನಿಜತೈಲಗಳಿಂದ ತೆಗೆದ ಜಲಜನಕ ಇಂಗಾಲ ಸಂಯುಕ್ತ ದ್ರವಗಳ ಮಿಶ್ರಣ ; ಎಣ್ಣೆಯ ಕಲೆಗಳನ್ನು ತೊಡೆದುಹಾಕಲು ಉಪಯೋಗಿಸುವ ಪದಾರ್ಥ (ವ್ಯಾಪಾರದ ಹೆಸರು : Benzoline or Benzene)

Bénzoin ಬೆನ್ಜೋಯಿನ್, ಬೆನ್ಜಾಯ್‌ನ್ (ನಾ.) ಜಾವಾ ದೇಶದಲ್ಲಿ ಬೆಳೆಯುವ ಒಂದು ಜಾತಿಯ ಮರದ ಸುವಾಸನೆಯ ಧೂಪ : ಸಾಂಬ್ರಾಣಿ. **Benzóic** (ಗು.)

Bénzol, -ole ಬೆನ್ಜಾಲ್, ಬೆನ್ಜೋಲ್ (ನಾ.) = Benzene.

Bénzoline ಬೆನ್ಜೊಲಿ(ಲೀ)ನ್ (ನಾ.) = Benzine.

Bequeáth ಬಿಕ್ವೀದ್ (ಕ್ರಿ. ಸಕ.) ಅಂತಿಮ ಇಷ್ಟಪತ್ರದ (ವಿಲ್ಲಿನ) ಮೂಲಕ (ಸ್ವಾರ್ಜಿತ ಆಸ್ತಿಯನ್ನು ಒಬ್ಬನಿಗೆ) ಬಿಡು. (ಆದರ್ಶ, ಮೊ. ನ್ನು) ಸಂತತಿಯ (ಎಂದರೆ, ಮುಂದೆ ಬರತಕ್ಕವರ) ಅನುಸರಣೆಗೆ ಬಿಟ್ಟುಹೋಗು. **Bequést** ಬಿಕ್ವೆಸ್ಟ್ (ನಾ.) ಅಂತಿಮ ಇಷ್ಟಪತ್ರದ ಮೂಲಕ ಬಿಟ್ಟುಹೋಗುವುದು ; ಹಾಗೆ ಬಿಟ್ಟುಹೋದದ್ದು.

Beráte ಬಿರೇಟ್ (ಕ್ರಿ. ಸಕ.) ಬೈದುಕೆಡವು (ಮು., ಅಮೆ. ಸಂ.)

Bérber ಬರ್ಬರ್ (ಗು., ನಾ.) ಬಾರ್ಬರಿ ದೇಶದ ಮೂಲನಿವಾಸಿಗಳನ್ನೊಳಕೊಂಡ, ಉ. ಆಫ್ರಿಕದ ಬುಡಕಟ್ಟಿಗೆ ಸೇರಿದ(ವನು, ಭಾಷೆ)

Bereáve ಬಿರೀವ್ (ಕ್ರಿ. ಸಕ.) ದೋಚು ; ಕಳೆ ; ಕಸಿ ; ಸೆಳೆ ; ಎಳಕೊಳ್ಳು ; ಕವರು ; ಈಳು ; ಅಪಹರಿಸು (ಸಾ. ಅಮೂರ್ತ ವಸ್ತುಗಳನ್ನು : ಎಂದರೆ, ಜೀವ, ಆಶೆ, ಮೊ. ನ್ನು. ಈ ಅರ್ಥದಲ್ಲಿ Bereft ಎಂಬ ಭೂತ ರೂಪವು ಸಾ., ಉಪಯೋಗ). ಅನಾಥನನ್ನಾಗಿ ಬಿಟ್ಟುಹೋಗು ; ತೊರೆದುಹೋಗು ; ತಬ್ಬಲಿ ಮಾಡು (ಈ ಅರ್ಥದಲ್ಲಿ Bereaved ಎಂಬ ಭೂತ ರೂಪವು ಸಾ., ಉಪಯೋಗ). (ಹೆಂಡತಿ, ಮೊ. ಸಂಬಂಧಿಯ) ವಿಯೋಗವನ್ನುಂಟುಮಾಡು. **Bereávement** (ನಾ.) ವಿಯೋಗ ; ನಷ್ಟ ; (ಸಾವಿನಿಂದಾದ) ಅಗಲಿಕೆ ; ಬಿರಿವು.

Berg ಬರ್ಗ್ (ನಾ.) = Iceberg.

Bérgamot[1] ಬರ್ಗಮಾಟ್ (ನಾ.) ನಿಂಬೆಯ ಜಾತಿಯ ಒಂದು ಮರ (ಇದರ ಹಣ್ಣಿನ ಸಿಪ್ಪೆಯಿಂದ Essence of Bergamot ಎಂಬ ಸುಗಂಧ ತೈಲವನ್ನು ತಯಾರಿಸುತ್ತಾರೆ) ; ಇದರ ಸುಗಂಧತೈಲ. (ಇಟಲಿ ದೇಶದ Bergamo ಎಂಬ ಪಟ್ಟಣದ ಹೆಸರಿನಿಂದ)

Bérgamot[2] ಬರ್ಗಮೊಟ್ (ನಾ.) ಒಂದು ಒಳ್ಳೆಯ ಜಾತಿಯ 'ಪೇರು' (ಅಥವಾ ಮರಸೇಬು) ಹಣ್ಣು.

Berhýme, Beríme ಬಿರೈಂ (ಕ್ರಿ. ಸಕ.) (ಯಾವುದಾದರೂ ಒಂದು ವಿಷಯವಾಗಿ) ಕವನ ಮಾಡು ; ವಿಡಂಬನ ಪದ್ಯ ಬರೆ ; ಪದ್ಯ ಕಟ್ಟು, ಹೆಣೆ.

Béribéri ಬೆರಿಬೆರಿ (ನಾ.) ಇಂಡಿಯಾದೇಶದಲ್ಲಿ ಹಬ್ಬಿರುವ ಜಲೋದರದಂಥ ಒಂದು ರೋಗ (ಬತ್ತವನ್ನು ಯಂತ್ರಸಲಕರಣೆಗೆ ಹಾಕಿ ಮಾಡಿದ ಬೆಳ್ಳನೆಯ ಅಕ್ಕಿಯನ್ನೇ ಆಹಾರವಾಗಿ ಉಪಯೋಗಿಸುವುದರಿಂದ ಬರುವುದೆಂದು ವೈದ್ಯಪರೀಕ್ಷೆಗಳಿಂದ ಗೊತ್ತಾಗಿರುವ ರೋಗ). (ಸಿಂಹಳ ಭಾಷೆಯಲ್ಲಿ Beri ಎಂದರೆ ನಿಶ್ಶಕ್ತಿ ; Beriberi ಎಂಬುದು ದ್ವಿರುಕ್ತಿ)

Berkeleían ಬರ್ಕ್ಲೀಯನ್ (ಗು., ನಾ.) (ಭೌತಪ್ರಪಂಚದ ಅಸ್ತಿತ್ವವನ್ನು ಒಪ್ಪದ) 'ಬರ್ಕ್ಲಿ' ಎಂಬ ತತ್ತ್ವಜ್ಞಾನಿಯ, ಅಥವಾ ಅವನ ಮತದ (ಅನುಯಾಯಿ)

Berm ಬರ್ಮ್ (ನಾ.) ಕೋಟೆಯ ಅಗಳಿಗೂ ಕೋಟೆಗೋಡೆಯ ತಳಕ್ಕೂ ಮಧ್ಯೇ ಇರುವ ಚಾಚು.

Bérry ಬೆರಿ (ನಾ., ಕ್ರಿ. ಅಕ.) ಓಟೆಯಿಲ್ಲದೆ ತಿರುಳುಳ್ಳ ಯಾವುದಾದರೂ ಸಣ್ಣ ಹಣ್ಣು, ಕಾಯಿ. (ಶಿಥಿಲವಾಗಿ) ಕಾಫಿಬೀಜ. ಮೀನಿನ (ಅಂಡಾಶಯದ ಪೊರೆಯಲ್ಲಿಯ) ಮೊಟ್ಟೆಗಳು. ಸಮುದ್ರದ ನಳ್ಳಿಯ ಮೊಟ್ಟೆಗಳು. (ಕ್ರಿ.) ಹಣ್ಣುಬಿಡು ; ಹಣ್ಣಿಗೆ ಬರು. ಹಣ್ಣು ಆಯು, ಕೀಳು. **Bérried** (ಗು.)

Bérserk(er) ಬರ್ಸರ್ಕ್, —ರ್ಕರ್ (ನಾ.) ಹುಚ್ಚು ಆವೇಶದಿಂದ ಕಾದುವ ನಾರ್ವೆಯ ಒರಟುಯೋಧ. (ರೂಪ.) ರಣೋನ್ಮತ್ತ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Berth ಬರ್ಥ್ (ನಾ., ಕ್ರಿ. ಸಕ.) ಹಡಗು ನಿಲ್ಲಲು ಸಮುದ್ರದಲ್ಲಿ ಅನುಕೂಲ ಸ್ಥಳ; ಹಡಗು ತಿರುಗಲು ತಕ್ಕಷ್ಟು ಅವಕಾಶ. (ರೂಪ.) ಯಾವುದಕ್ಕಾದರೂ ಗೊತ್ತಾದ ಸ್ಥಳ [Give a wide b. to (ಒಬ್ಬನ)ಹತ್ತಿರ ಹೋಗದಿರು; (ಒಬ್ಬನನ್ನು) ದೂರದಲ್ಲಿಟ್ಟಿರು]. ಹಡಗಿನಲ್ಲಿ ಮಲಗುವ ಸ್ಥಳ; ರೈಲುಬಂಡಿ ಮತ್ತು ಹಡಗಿನಲ್ಲಿ ಮಲಗುವುದಕ್ಕಾಗಿ ಮಾಡಿರುವ ಮಂಚ. (ರೂಪ.) ಉದ್ಯೋಗ; ನೌಕರಿ (ಸಾ., ಸುಖವಾದದ್ದು). (ಕ್ರಿ.) ಹಡಗನ್ನು ತಕ್ಕ ಸ್ಥಳದಲ್ಲಿ ಲಂಗರುಹಾಕಿ, ಕಟ್ಟಿಹಾಕಿ, ನಿಲ್ಲಿಸು. ಮಲಗುವ ಸ್ಥಳವನ್ನು ಒದಗಿಸು. ಒಂದು ಉದ್ಯೋಗವನ್ನು ಒದಗಿಸಿಕೊಡು.

Bertillón system ಬೆರ್ಟೀಯಾನ್, ಬರ್ಟಿಲಾನ್, ಸಿಸ್ಟಂ (ನಾ.) ಅಳತೆಗಳ ಮೂಲಕ ಅಪರಾಧಿಗಳನ್ನು ಗುರುತಿಸುವ ವಿಧಾನ. (ಫ್ರಾನ್ಸ್ ದೇಶದ Bertillon ಎಂಬ ಮಾನವಶಾಸ್ತ್ರಜ್ಞನ ಹೆಸರಿನಿಂದ)

Béryl ಬೆರಿಲ್ (ನಾ.) ಎಳೆಹಸಿರು, ನಸುನೀಲಿ, ಹಳದಿ, ಬಿಳುಪು — ಈ ಬಣ್ಣಗಳ ಛಾಯೆಯನ್ನುಳ್ಳ ಪಾರದರ್ಶಕ ರತ್ನವಿಶೇಷ; (ಪಚ್ಚೆಯೂ ಇದೇ ಜಾತಿಗೆ ಸೇರಿದುದು)

Berýllium ಬೆರಿಲಿಯಂ (ನಾ.) ಒಂದು ಮೂಲಲೋಹ: ಬೆರಿಲಿಯಂ (= Glucinum)

Beseéch ಬಿಸೀಚ್ (ಕ್ರಿ. ಸಕ.; ಭೂತ., ಭೂ. ಕೃ. Besought ಬಿಸಾಟ್) ಕೇಳಿಕೊ; ಬೇಡಿಕೊ; ಪ್ರಾರ್ಥಿಸಿಕೊ. **Beseéching** (ಗು.); **Beseéchingly** (ಕ್ರಿ. ವಿ.)

Beseém ಬಿಸೀಮ್ (ಕ್ರಿ. ಸಕ.) ತಕ್ಕದ್ದಾಗಿರು; ಯೋಗ್ಯವಾಗಿರು; ಒಪ್ಪು; ಶೋಭಿಸು. **Beseémingly** (ಕ್ರಿ. ವಿ.)

Besét ಬಿಸೆಟ್ (ಕ್ರಿ. ಸಕ.) (ಒಬ್ಬನನ್ನು) ದುರುದ್ದೇಶದಿಂದ ಸುತ್ತುಗಟ್ಟು, ಆವರಿಸು, ಮುತ್ತು, ಮೇಲೆ ಬೀಳು, ಅಮರಿಕೊ. (ಸ್ಥಳವನ್ನು) ಮುತ್ತಿಗೆ ಹಾಕು; (ಮಾರ್ಗ, ಹಾದಿ, ಮೊ. ನ್ನು) ಆಕ್ರಮಿಸು. **Besétment** (ನಾ.) ಆಕ್ರಮಣ; ಸುತ್ತಿಕೊಳ್ಳುವ ಪಾಪ.

Beshréw ಬಿಷ್ರೂ (ಕ್ರಿ. ಸಕ.) B. thee! (ಶಾಪದ ಮಾತು, ವಿಧಿರೂಪ) ದೊಡ್ಡರೋಗ ಬರ! ಹಾಳಾಗಿ ಹೋಗ! ಹಾಳಾಗ! (ಅನೇಕ ವೇಳೆ ಹುಡುಗಾಟಿಕೆಯಾಗಿ ಪ್ರಯೋಗ)

Beside ಬಿಸೈಡ್ (ಉಪ.) ಹತ್ತಿರ; ಪಕ್ಕದಲ್ಲಿ; ಬಳಿಯಲ್ಲಿ; ಜೊತೆಯಲ್ಲಿ; ಸರಿಸಮನಾಗಿ; ಹೋಲಿಸಿನೋಡಿದರೆ. ಸಂಬಂಧವೇ ಇಲ್ಲದೆ; ಗುರಿಬಿಟ್ಟು (B. the question ವಿಷಯಕ್ಕೆ ಸಂಬಂಧವೇ ಇಲ್ಲದೆ; ಅಸಂಬದ್ಧವಾಗಿ). B. oneself ಬುದ್ಧಿಭ್ರಮಣೆಯಾಗಿ; ಮತಿಗೆಟ್ಟು; ಜ್ಞಾನ ನೆಟ್ಟಗಿಲ್ಲದೆ. **Besídes** —ಡ್ಸ್ (ಕ್ರಿ. ವಿ., ಉಪ.) ಮತ್ತು; ಇನ್ನೂ; ಅಲ್ಲದೆ; ಮೇಲಾಗಿ; ಬೇರೆ; ವಿನಾ; ಹೊರತು; ಬಿಟ್ಟು; ಉಳಿದು.

Besiége ಬಿಸೀಜ್ (ಕ್ರಿ. ಸಕ.) ಮುತ್ತಿಗೆ ಹಾಕು; ಸುತ್ತುಗಟ್ಟು; ಆವರಿಸು. **Besiéger** (ನಾ.)

Besláver ಬಿಸ್ಲಾವರ್ (ಕ್ರಿ. ಸಕ.) ಉಗುಳು ಹಾರಿಸು. ಮಿತಿಮೀರಿ ಹೊಗಳು; ಅಸಹ್ಯವಾಗುವಂತೆ ಹೊಗಳು.

Beslóbber ಬಿಸ್ಲಾಬರ್ (ಕ್ರಿ. ಸಕ.) (= Beslaver). ಅತಿಯಾಗಿ ಮುತ್ತಿಡು.

Beslúbber ಬಿಸ್ಲಬರ್ (ಕ್ರಿ. ಸಕ.) ಬಳಿ; ಹಚ್ಚು; ಲೇಪಿಸು.

Besmeár ಬಿಸ್ಮಿಯರ್ (ಕ್ರಿ. ಸಕ.) ಜಿಡ್ಡು ಅಥವಾ ಅಂಟುಪದಾರ್ಥವನ್ನು ಬಳಿ, ಲೇಪಿಸು. (ರೂಪ. ಸಹ)

Besmírch ಬಿಸ್ಮರ್ಚ್ (ಕ್ರಿ. ಸಕ.) ಕೊಳೆಮಾಡು; ಮಾಸು; ಬಣ್ಣಗೆಡಿಸು; ಕಳೆಗುಂದಿಸು; ಮಲಿನಗೊಳಿಸು. (ರೂಪ. ಸಹ)

Bésom ಬೀಸ಼ಂ (ನಾ., ಕ್ರಿ. ಸಕ.) ಬರಲು; ಪೊರಕೆ. ಬರಲಿನಿಂದ ಗುಡಿಸು; ಗುಡಿಸಿಬಿಡು; ಗುಡಿಸಿ ಹಾಕು.

Besót ಬಿಸಾಟ್ (ಕ್ರಿ. ಸಕ.) ಭ್ರಾಂತಿ ಹಿಡಿಸು; ಅಮಲೇರಿಸು; ಜಡ ಮಾಡು.

Besoúght. **Beseech** ಧಾತುವಿನ ಭೂತ., ಭೂ. ಕೃ.

Bespángle ಬಿಸ್ಪ್ಯಾಂಗ್‌ಲ್ (ಕ್ರಿ. ಸಕ.) ಥಳುಕುಬಟ್ಟುಗಳಿಂದ ಅಲಂಕರಿಸು; ಥಳುಕುಗಳನ್ನು ಅಲ್ಲಲ್ಲಿ ಸೇರಿಸು.

Bespátter ಬಿಸ್ಪ್ಯಾಟರ್ (ಕ್ರಿ. ಸಕ.) ಚಿಮುಕಿಸು; ಸಿಡಿಸು; ಸಿಂಪಿಸು; ಎರಚು; ಬೈಗುಳಿಂದ ಅಥವಾ ಹೊಗಳಿಕೆಯಿಂದ ತುಂಬಿಸು; ದೂರು.

Bespeák ಬಿಸ್ಪೀಕ್ (ಕ್ರಿ. ಸಕ.; ಭೂತ. Bespoke; ಭೂ. ಕೃ. Bespoke, Bespoken) ಮೊದಲೇ ನಿಗದಿಮಾಡಿಕೊ, ನಿಷ್ಕರ್ಷೆ ಮಾಡಿಕೊ, ಗೊತ್ತುಮಾಡಿಕೊ. (ಬೇಕಾದ ಸಾಮಾನನ್ನು) ಬೆಲೆಗೆ ಒದಗಿಸಲು ಹೇಳು. (ಕಾವ್ಯ) ಸಂಬೋಧಿಸು; ಮಾತಾಡಿಸು. ಸೂಚಿಸು; ತೋರು. B. a lodging ತಂಗುವುದಕ್ಕೆ ಸ್ಥಳ ಗೊತ್ತುಮಾಡಿಕೊ. Circumstances that b. war ಯುದ್ಧದ ಸೂಚನೆಕೊಡುವ ಸಂದರ್ಭಗಳು. Bespoke dressmaker ಅಪ್ಪಣೆಯಂತೆ ಉಡುಪು ತಯಾರಿಸಿ ಕೊಡುವ ದರ್ಜಿ.

Besprént ಬಿಸ್ಪ್ರೆಂಟ್ (ಭೂ. ಕೃ.) (ಕಾವ್ಯ) ಚಿಮುಕಿಸಿದ; ಕೆದರಿದ; ಚೆಲ್ಲಾಡಿದ.

Besprínkle ಬಿಸ್ಪ್ರಿಂಕ್‌ಲ್ (ಕ್ರಿ. ಸಕ.) ಚಿಮುಕಿಸು; ಸಿಂಪಿಸು; ತಳಿ; ಪ್ರೋಕ್ಷಿಸು. (ರೂಪ. ಸಹ)

Béssemer ಬೆಸಿಮರ್ (ಗು., ನಾ.) B. process ಮುದ್ದೆಕಬ್ಬಿಣವನ್ನು ಕರಗಿಸಿ ಅದರಲ್ಲಿ ಗಾಳಿಯನ್ನು ಬಿರುಸಾಗಿ ಊದಿ, ಈ ಮೂಲಕ ಅದರಲ್ಲಿರುವ ಇಂಗಾಲವನ್ನೂ ಸಿಕತಜನಕ ಮೂಲವಸ್ತುವನ್ನೂ ಹಾರಿಹೋಗುವಂತೆ ಮಾಡಿ ಕಬ್ಬಿಣವನ್ನು ಶುದ್ಧಿಮಾಡುವ ವಿಧಾನ: ಬೆಸಿಮರ್ ವಿಧಾನ. B. steel or B. ಈ ವಿಧಾನದಿಂದ ತಯಾರಿಸಿದ ಉಕ್ಕು. (ಈ ವಿಧಾನವನ್ನು ಕಂಡುಹಿಡಿದ Bessemer ಎಂಬಾತನ ಹೆಸರಿನಿಂದ)

Best ಬೆಸ್ಟ್ (ಗು., ಕ್ರಿ. ವಿ.; Good, Well ಎಂಬ ಗುಣವಾಚಕಗಳ ತಮ ಭಾವ) ಅತ್ಯುತ್ತಮ; ಸರ್ವೋತ್ಕೃಷ್ಟ; ಸರ್ವೋತ್ತಮ; ಶ್ರೇಷ್ಠ; ಪರಮ. You had b. keep quiet ನೀನು ಸುಮ್ಮನಿರುವುದು ಉತ್ತಮ. At b. ಎಷ್ಟು ಉತ್ತಮವಾಗೆಣಿಸಿದರೂ; ಬಹಳ ಹೆಚ್ಚೆಂದರೆ. Bad is the b. ಅನುಕೂಲ ಪರಿಸ್ಥಿತಿ ಅಸಾಧ್ಯ. Be at one's b. ಅತ್ಯುತ್ತಮ ಸ್ಥಿತಿಯಲ್ಲಿರು. B. man ಮದುವೆಯಲ್ಲಿ ಮದುವಣಿಗನ ಜೊತೆಯಲ್ಲಿರುವ ಗೆಳೆಯ: ಗಿಳಿಯ. B. part of my life ನನ್ನ ಜೀವಮಾನದ ಹೆಚ್ಚುಭಾಗ. B. seller (ಅಸಂ.) ಜನಪ್ರಿಯವಾದ ಕಾದಂಬರಿ, ಮೊ.; ಗಿರಾಕಿ ಪುಸ್ತಕ. Do one's b. ಕೈಯಲ್ಲಾಗುವಷ್ಟೆಲ್ಲ ಮಾಡು; ಶಕ್ತಿಮೀರಿ ನಡೆ. For the b. ಒಳ್ಳೆಯದಕ್ಕಾಗಿ; ಸತ್ಫಲಕ್ಕಾಗಿ; ಸದುದ್ದೇಶದಿಂದ. Have the b. of it (ವಾದ, ಪಂದ್ಯ, ವ್ಯಾಪಾರ. ಮೊ. ಗಳಲ್ಲಿ) ಜಯಶಾಲಿಯಾಗು. Make the b. of one's way ಸಾಧ್ಯವಾದಷ್ಟು ಬೇಗನೆ ನಡೆ. Make the b. of things ಇದ್ದದ್ದನ್ನೇ ಚೆನ್ನಾಗಿ ಅನುಭವಿಸಿ ತೃಪ್ತಿಪಡು. One's b., or Sunday b. ಹಬ್ಬದುಡಿಗೆ. One's b. girl (ಅಸಂ.) ಹೃದಯೇಶ್ವರಿ; ಪ್ರೇಯಸಿ; ನಲ್ಲೆ. Put one's b. leg (or foot) foremost ಆಗುವಷ್ಟು ಬೇಗನೆ ನಡೆ. ಮುಂದಕ್ಕೆ ಬರಲು ಸಾಧ್ಯವಾದದ್ದೆಲ್ಲ ಮಾಡು. The b. is the enemy of the good ಯೋಗ್ಯತೆ ಮೀರಿ ನಡೆಯುವುದು ಶ್ರೇಯಸ್ಸಿಗೆ ಕುಂದಕ; ಅತಿ ಆಶೆ ಗತಿಕೆಡಿಸಿತು; ಆಕಾಶ ಹಿಡಿಯುವುದಕ್ಕೆ ಹೋಗಿ ಭೂಮಿ ಕಳೆದುಕೊಳ್ಳುವುದು. To the b. of one's power ಕೈಯಲ್ಲಾಗುವಷ್ಟು; ಶಕ್ತಿ ಮೀರಿ.

Best (ಕ್ರಿ. ಸಕ.) (ಬಳ. ಮಾ.) ಮೇಲಾಗು; ಮೀರಿಸು; ಸೋಲಿಸು.

Besteád ಬಿಸ್ಟೆಡ್ (ಕ್ರಿ.) ಸಹಾಯ ಮಾಡು, —ವಾಗು; ನೆರವಾಗು; ಅನುಕೂಲಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bestéd ಬಿಸ್ಟೆಡ್ (ಭೂ. ಕೃ.) — ಪರಿಸ್ಥಿತಿಯಲ್ಲಿರುವ; — ದಶೆಯಲ್ಲಿರುವ (Ill, hard, sore ಮೊ. ಗಳೊಡನೆ: Ill b. ದುರ್ದಶೆಯಲ್ಲಿರುವ)

Béstial ಬೆಸ್ಟಿಯಲ್ (ಗು.) ಮೃಗದ; ಮೃಗಗಳ; ಮೃಗದಂಥ; ಪಶುಪ್ರಾಯ; ಪಾಶವ; ನಯ ನಾಗರಿಕತೆಗಳಿಲ್ಲದ; ವಿಷಯ ಲಂಪಟ; ಅಶ್ಲೀಲ. **Béstially** (ಕ್ರಿ. ವಿ.); **Béstialize** (ಕ್ರಿ. ಸಕ.); **Bestiálity** — ಟ್ಯ — (ನಾ.)

Béstiary ಬೆಸ್ಟಿಯರಿ (ನಾ.) (ಯೂರೋಪಿನ ಚರಿತ್ರೆಯ ಮಧ್ಯಮ ಕಾಲದಲ್ಲಿ ಬರೆದ) ನೀತಿಬೋಧೆಯನ್ನೊಳಕೊಂಡ ಮೃಗವಿಷಯ ಗ್ರಂಥ.

Bestír ಬಿಸ್ಟರ್ (ಕ್ರಿ.) ಚಟುವಟಿಕೆಯಿಂದ ಕೆಲಸಮಾಡು; ತವಕಪಡು; ಉತ್ತೇಜನಗೊಳ್ಳು.

Bestow ಬಿಸ್ಟೋ (ಕ್ರಿ. ಸಕ.) (ಪ್ರಾಚೀ. ಪ್ರ.) ಇಡು. ನೀಡು; ಕೊಡು; (ಇಳಿದುಕೊಳ್ಳಲು) ಸ್ಥಳಮಾಡಿಕೊಡು. ದಾನಮಾಡು; ಅನುಗ್ರಹಿಸು; ದಯಪಾಲಿಸು. **Bestowal** (ನಾ.) ಕೊಡುಗೆ; ದಾನ.

Bestrew ಬಿಸ್ಟ್ರೂ (ಕ್ರಿ. ಸಕ.; ಭೂ. ಕೃ. -ewed, -ewn, -own) ಎರಚು; ಹರಡು; ಚೆಲ್ಲಾಡು; ಇಟ್ಟಾಡು. ಚೆಲ್ಲಾಪಿಲ್ಲಿಯಾಗಿ ಬಿದ್ದಿರು; ಕೆದರಿಬಿದ್ದಿರು.

Bestríde ಬಿಸ್ಟ್ರೈಡ್ (ಕ್ರಿ. ಸಕ.; ಭೂತ. -rode, ಭೂ. ಕೃ. -rid(den), -rode) (ಕುದುರೆಯ) ಸವಾರಿ ಮಾಡು; ಯಾವುದಾದರೂ ಪೀಠದಮೇಲೆ ಕಿಸಿಗಾಲು ಹಾಕಿ ಕುಳಿತುಕೊ. (ಯಾವುದಾದರೂ ಸ್ಥಳದಮೇಲೆ, ಬಿದ್ದ ಸ್ನೇಹಿತನ ಮೇಲೆ, ಅಥವಾ ಶತ್ರುವಿನ ಮೇಲೆ) ದಾಟುಗಾಲು ಹಾಕಿ ನಿಂತುಕೊ. (ರೂಪ. ನಹ)

Bet ಬೆಟ್ (ನಾ., ಕ್ರಿ.) (ಯಾವುದಾದರೂ ಒಂದು ಕಾರ್ಯದ ಪರಿಣಾಮವು ಸಂಶಯವಾಗಿರುವ ಸಂದರ್ಭದಲ್ಲಿ, ಆ ವಿಷಯವಾಗಿ ಹಣವನ್ನಿಟ್ಟೋ ಮತ್ತೆ ಬೇರೆ ವಿಧದಲ್ಲಿಯೊ) ಪಂದ್ಯಕಟ್ಟುವುದು; ಪಂದ್ಯ; ಪಣ; ಜೂಜು; ಬಾಜಿ [An even b. (ರೂಪ.) ಹೀಗಾದರೂ ಆಗಬಹುದು, ಹಾಗಾದರೂ ಆಗಬಹುದು: ನಮ ಪಂದ್ಯ]. (ಕ್ರಿ.) ಪಂದ್ಯಗಟ್ಟು; ಪಣವೊಡ್ಡು. (ಅಸಂ.) You b. ನಿಸ್ಸಂಶಯವೆಂದು ತಿಳಿ. **Bétter, -or** ಬೆಟರ್ (ನಾ.) ಪಣವೊಡ್ಡುವವನು; ಜೂದಾಳಿ.

Béta ಬೀಟ (ನಾ.) ಗ್ರೀಕ್ ವರ್ಣಮಾಲೆಯ ಎರಡನೆಯ ಅಕ್ಷರ (β). ಯಾವುದಾದರೂ ನಕ್ಷತ್ರಪುಂಜದ (ಪ್ರಕಾಶದಲ್ಲಿ) ಎರಡನೆಯ ನಕ್ಷತ್ರವನ್ನು ಸೂಚಿಸುವ ಸಂಕೇತ. ಹೀಗೆಯೇ ಕೆಲವು ಇತರ ವಿಷಯಗಳಲ್ಲಿಯೂ ಎರಡನೆಯದನ್ನು ಸೂಚಿಸುವ ಸಂಕೇತ. **B. rays** ಕಿರಣಗಳನ್ನು ಸೂಸುವ ಸ್ವಭಾವವುಳ್ಳ ಪದಾರ್ಥಗಳು ಸೂಸುವ ಮೂರು ತೆರದ ಕಿರಣಗಳಲ್ಲಿ, ಹೆಚ್ಚು ಭೇದಕಶಕ್ತಿಯುಳ್ಳ ಎರಡನೆಯ ತೆರದ ಕಿರಣಗಳು: ಬೀಟ ಕಿರಣಗಳು.

Betáke ಬಿಟೇಕ್ (ಕ್ರಿ.; ಭೂತ. Betook; ಭೂ. ಕೃ. Betaken) ಮಾರ್ಗಹಿಡಿ; ಅನುಸರಿಸು; ಅವಲಂಬಿಸು; (ಒಂದು ಸ್ಥಳಕ್ಕೆ, ಒಬ್ಬನ ಬಳಿಗೆ) ಹೋಗು.

Bétel ಬೀಟ್ಲ್ (ನಾ.) ವೀಳ್ಯದೆಲೆ. **B.-nut** ಅಡಕೆ.

Bete noíre (F) ಬೇಟ್ ನ್ವಾರ್ (ನಾ.) ಅಸಹ್ಯಕರವಾದ ಮನುಷ್ಯ ಅಥವಾ ವಸ್ತು; ಪೀಡೆ; ಅನಿಷ್ಟ; ಶನಿ.

Béthel ಬೆಥೆಲ್ (ನಾ.) ದೇವರ ಮನೆ; ಪವಿತ್ರ ಸ್ಥಳ; (ಕ್ರೈಸ್ತರ ಒಂದು ಪಂಗಡದ) ದೇವಾಲಯ.

Bethínk ಬಿಥಿಂಕ್ (ಕ್ರಿ.; ಭೂತ. Bethought ಬಿಥಾಟ್) ಆಲೋಚಿಸಿಕೊ; ನೆನಪು ಮಾಡಿಕೊ; ನೆನೆ. ಮನಸ್ಸುಮಾಡಿಕೊ.

Betíde ಬಿಟೈಡ್ (ಕ್ರಿ.) ಸಂಭವಿಸು; ಘಟಿಸು; ಆಗು; ಬರು; ಉಂಟಾಗು. Woe b. him ಅವನಿಗೆ ಕೇಡಾಗ! ಆಪತ್ತು ಬರ!

Betímes ಬಿಟೈಮ್ಸ್ (ಕ್ರಿ. ವಿ.) ಹೊತ್ತಿಗೆ ಮುಂಚೆ; (ದಿನ, ವರ್ಷ, ಜೀವಮಾನ, ಮೊ. ವಿಷಯದಲ್ಲಿ) ಬೇಗಲೇ; ಮುಂಚೆಯೇ; ಸಕಾಲದಲ್ಲಿಯೇ; ಸಾವಕಾಶ ಮಾಡದೆ.

Betíse (F) ಬೇಟೀಸ್ (ನಾ.) ಅವಿವೇಕವಾದ, ಅನುಚಿತವಾದ, ಟೀಕೆ ಅಥವಾ ಕಾರ್ಯ.

Betóken ಬಿಟೋಕ್'ನ್ (ಕ್ರಿ. ಸಕ.) ಸೂಚಿಸು; ಸೂಚನೆ ತೋರು.

Betoók. **Betake** ಧಾತುವಿನ ಭೂತ ರೂಪ.

Betraý ಬಿಟ್ರೇ (ಕ್ರಿ. ಸಕ.) (ಮನುಷ್ಯನನ್ನಾಗಲಿ ವಸ್ತುವನ್ನಾಗಲಿ) ಮೋಸದಿಂದ, ಧರ್ಮತಪ್ಪಿ, ವಶಪಡಿಸು, ಬಿಟ್ಟುಕೊಡು. ವಿಶ್ವಾಸಘಾತಕನಾಗು; ದ್ರೋಹ ಮಾಡು; ಅಡ್ಡದಾರಿಗೆ ಒಯ್ಯಿ; ಧರ್ಮತಪ್ಪಿ ಗುಟ್ಟನ್ನು ಹೊರಗೆಡಹು; ಉದ್ದೇಶವಿಲ್ಲದೆ ರಟ್ಟಾಗುವಂತೆ ಮಾಡು. ಲಕ್ಷಣ, ಕುರುಹು, ತೋರು. **Betraýal** (ನಾ.); **Betraýer** (ನಾ.)

Betróth ಬಿಟ್ರೋದ್, — ಟ್ರಾಥ್ (ಕ್ರಿ. ಸಕ.) ವಿವಾಹವಾಗ್ದಾನ ಮಾಡು; (ವಿವಾಹ) ವಾಙ್ನಿಶ್ಚಯ ಮಾಡು. **Betróthal** (ನಾ.) ನಿಶ್ಚಿತಾರ್ಥ. **Betróthed** (ಗು., ನಾ.)

Bétter[1] ಬೆಟರ್ (ಗು., ಕ್ರಿ. ವಿ., ನಾ.; Good, Well ಎಂಬ ಗುಣವಾಚಕಗಳ ತರ ರೂಪ) — ಇಂತ ಒಳ್ಳೆಯ, ಮೇಲಾದ, ಲೇಸಾದ. (ಕ್ರಿ. ವಿ.) — ಇಂತ ಮೇಲಾಗಿ, ಚೆನ್ನಾಗಿ (I talk b. than I sing ನಾನು ಹಾಡುವುದಕ್ಕಿಂತಲೂ ಚೆನ್ನಾಗಿ ಮಾತನಾಡುತ್ತೇನೆ). (ನಾ.) — ಇಂತ ಮೇಲಾದುದು, ಮೇಲಾದವನು (His b. does not breathe upon the earth ಅವನಿಗಿಂತ ಮೇಲಾದವನು ಭೂಮಿಯ ಮೇಲೆಯೇ ಇಲ್ಲ). Be b. ಗುಣಹೊಂದಿರು; ಆರೋಗ್ಯ ಹೊಂದಿರು. B. off ಐಶ್ವರ್ಯವಂತನಾಗಿ; ನೆಮ್ಮದಿಯಾಗಿ; ಅನುಕೂಲಸ್ಥನಾಗಿ; ಸೌಖ್ಯವಾಗಿ. B. part ಹೆಚ್ಚುಪಾಲು (Discretion is the b. part of valour ವಿವೇಚನೆಯು ಪರಾಕ್ರಮದ ಉತ್ತಮಾಂಶ). B. than one's word ಕೊಟ್ಟ ಮಾತಿಗಿಂತ ಅತಿಶಯವಾಗಿ. Change for the b. ಮೇಲಾಗು. For b., for worse ಕಷ್ಟ ಸುಖಗಳೆರಡರಲ್ಲಿಯೂ; ಯಾವ ಸ್ಥಿತಿ ಬಂದರೂ (ಕ್ರೈಸ್ತ ವಿವಾಹ ಸಂಸ್ಕಾರದಲ್ಲಿ ಹೇಳುವ ಮಾತುಗಳು). Get b. ಗುಣ ಹೊಂದು; ಆರೋಗ್ಯ ಹೊಂದು. ಬುದ್ಧಿ ತಂದುಕೊ; ತಿದ್ದಿಕೊ. Get the b. of ಮೇಲಾಗು; ಸೋಲಿಸು. Had b. ಮೇಲು; ಸೂಕ್ತ. I know b. ನನಗೆಲ್ಲ ಗೊತ್ತು; ಹೇಳಿದುದನ್ನೆಲ್ಲ ಸುಮ್ಮನೆ ನಂಬತಕ್ಕವನಲ್ಲ; (ಆ ಕೆಲಸ ಮಾಡಲು) ಅಷ್ಟು ಹುಚ್ಚನಲ್ಲ. No b. than ವಾಸ್ತವವಾಗಿ. No b. than one should be ಅಯೋಗ್ಯನಾಗಿ. One's b. —ಇಂತಲೂ ಹೆಚ್ಚುಯೋಗ್ಯತೆಯುಳ್ಳವನು. One's betters ದೊಡ್ಡವರು; ಹಿರಿಯರು; ಗುರುಜನರು; ಮೇಲನವರು. One's b. feelings ಉದಾತ್ತ ಭಾವ. One's b. half ಅರ್ಧಾಂಗಿ; ಹೆಂಡತಿ. Think b. of ಮರಳಿ ಯೋಚಿಸಿ ಸರಿಯಾದ ಅಭಿಪ್ರಾಯ ಹೊಂದು; (ಮನುಷ್ಯನ ವಿಷಯದಲ್ಲಿ) ಮೇಲಾದ ಅಭಿಪ್ರಾಯಪಡು. Until nine and b. ಒಂಬತ್ತರ ವರೆಗೂ ಅದರ ಮೇಲೂ.

Bétter (ಕ್ರಿ.) ತಿದ್ದುಪಡಿ ಮಾಡು; ಪರಿಷ್ಕರಿಸು; ಉತ್ತಮಗೊಳಿಸು. ಮೀರು; ಮೇಲಾಗು; ಅಭಿವೃದ್ಧಿಗೊಳ್ಳು. B. oneself ಇರುವುದಕ್ಕಿಂತಲೂ ಮೇಲಾದ ಸ್ಥಾನವನ್ನೊ ವರುಮಾನವನ್ನೊ ಪಡೆ; ಅಭಿವೃದ್ಧಿ ಹೊಂದು. **Bétterment** (ನಾ.) ಮೇಲ್ಮೆ; ಪುರೋವೃದ್ಧಿ; ಅಭಿವೃದ್ಧಿ (ಮು., ಆಸ್ತಿಯದು). (ಉತ್ತಮಗೊಂಡ ಕಾರಣದಿಂದ) ಆಸ್ತಿಯ ಏರಿದ ಬೆಲೆ.

Bétter[2], **-or.** **Bet** ನೋಡಿ.

Betweén ಬಿಟ್ವೀನ್ (ಉಪ., ಕ್ರಿ. ವಿ.) (ಎರಡರ ಅಥವಾ ಇಬ್ಬರ) ನಡುವೆ, ಮಧ್ಯೆ, ಅಂತರದಲ್ಲಿ. (ಸಂಬಂಧ ವಿಷಯದಲ್ಲಿ) — ಊ, — ಅಲ್ಲಿ, — ಒಳಗೆ (An alliance was formed b. the two houses ಎರಡು ಮನೆತನದವರಿಗೂ ಸಂಬಂಧ ಬೆಳೆಯಿತು. There is many

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

a slip b: the cup and the lip ಕೈಗೂ ಬಾಯಿಗೂ ಮಧ್ಯೆ ಎಷ್ಟೋ ವಿಘ್ನಗಳು. ಕೈಗೆ ಬಂದ ತುತ್ತು ಬಾಯಿಗಿಲ್ಲ. B. the devil and the deep sea ಇತ್ತ ಹುಲಿ, ಅತ್ತ ದರಿ; ಉಭಯ ಸಂಕಟಕ್ಕೆ ಸಿಕ್ಕಿ ತಪ್ಪಿಸಿಕೊಳ್ಳಲು ಮಾರ್ಗವಿಲ್ಲದೆ). B. ourselves, B. you and me ನಮ್ಮನಮ್ಮಲ್ಲೆ; ಗುಟ್ಟಾಗಿ; ಅಂತರ್ಯದಲ್ಲಿ. B. whiles ಆಗಾಗ್ಗೆ; ಮಧ್ಯೇ ಮಧ್ಯೇ; ಏತನ್ಮಧ್ಯೆ. B. wind and water ಅಪಾಯಸ್ಥಾನದಲ್ಲಿ. Betwixt and b. ಹೀಗೂ ಸರಿ, ಹಾಗೂ ಸರಿ; ಅಂತರಾಳದಲ್ಲಿ. Choose b. the two ಎರಡರಲ್ಲಿ ಒಂದನ್ನು ಆಯ್ದುಕೊ. Far b. ಬಹಳ ಅಂತರ ಬಿಟ್ಟು; ದೂರ ದೂರವಾಗಿ. Go-b. ಮಧ್ಯೆ ಓಡಾಡುವವನು, —ವಳು; ತರೆಹಿಡುಕ, —ಹಿಡುಕಿ. Share b. you ಇಬ್ಬರೂ ಹಂಚಿಕೊಳ್ಳಿ. Stand b. ಮಧ್ಯೆ ನಿಲ್ಲು; ಮಧ್ಯಸ್ಥನಾಗು; ರಕ್ಷಕನಾಗಿರು. B.-maid (ಈಗ Tweeny) ಇಬ್ಬರು ಪರಿಚಾರಕರಿಗೆ ಸಹಾಯಕಳು.

Betwíxt ಬಿಟ್ವಿಕ್ಸ್ಟ್ (ಉಪ., ಕ್ರಿ. ವಿ.) (ಕಾವ್ಯ, ಪ್ರಾಚೀ. ಪ್ರ.) = Between.

Bével ಬೆವೆಲ್ (ನಾ., ಕ್ರಿ.) ಮರಗೆಲಸದವನೂ ಕಲ್ಲುಗೆಲಸದವನೂ ಕೋನಮಾಡಲು ಉಪಯೋಗಿಸುವ ಆಯುಧ: ಕೋನಮಟ್ಟ. ಕ್ಷಿತಿಜ ತಲದಿಂದ ಅಥವಾ ಲಂಬತಲದಿಂದ ಓಟ, ಓರೆ; ಹೀಗೆ ಓಟವಾಗಿರುವ ಮೇಲ್ಮೈ. [B. edge (ಉಳಿಯಲ್ಲಿರುವಂತೆ) ಓಟದ ಏಣು]. (ಕ್ರಿ.) ಚದರಏಣನ್ನು ಓಟಮಾಡು; ಓಟವಾಗಿರು. **Bévelled** (ಗು.)

Béverage ಬೆವೆರೆಜ್ (ನಾ.) ಪಾನೀಯ (ಮು., ರೂಢಿಯಲ್ಲಿರುವದು: ಸೋಡಾ, ಲೆಮೊನೇಡ್, ಮೊ.)

Bévy ಬೆವಿ (ನಾ.) (ಮಹಿಳೆಯರ, ಜಿಂಕೆಗಳ, ಲಾವಗೆಗಳ, ಕೋಗಿಲೆಗಳ) ತಂಡ, ವೃಂದ.

Bewaíl ಬಿವೆಯ್‌ಲ್ (ಕ್ರಿ.) ಅಳು; ಗೋಳಾಡು; ದುಃಖಪಡು; ಪ್ರಲಾಪಿಸು.

Bewáre ಬಿವೇರ್ (ಕ್ರಿ.) ಎಚ್ಚರಿಕೆಯಿಂದಿರು; ಜೋಕೆಯಾಗಿರು; ಜಾಗ್ರತನಾಗಿರು; ಹುಷಾರಾಗಿರು; ಗಮನಿಸು; ಗಮನ ಕೊಡು.

Bewílder ಬಿವಿಲ್ಡರ್ (ಕ್ರಿ. ಸಕ.) ದಾರಿ ತಪ್ಪಿಸು; ದಿಗ್ಭ್ರಮೆ ಹಿಡಿಸು; ತಬ್ಬಿಬ್ಬುಮಾಡು; ದಿಕ್ಕುತೋರದಂತೆ ಮಾಡು; ಕಕ್ಕಾಬಿಕ್ಕಿ ಮಾಡು. **Bewílderingly** (ಕ್ರಿ. ವಿ.); **Bewílderment** (ನಾ.)

Bewítch ಬಿವಿಚ್ (ಕ್ರಿ. ಸಕ.) ಮಾಟ ಮಾಡು; ಮಂತ್ರಹಾಕಿ ಮರುಳು ಮಾಡು; ಮೋಹಗೊಳಿಸು; ಮುಗ್ಧನನ್ನಾಗಿ ಮಾಡು. ಪರಮಾನಂದ ವುಂಟುಮಾಡು. **Bewítching** (ಗು.); **Bewítchingly** (ಕ್ರಿ. ವಿ.); **Bewítchment** (ನಾ.)

Bewraý ಬಿರೇ (ಕ್ರಿ. ಸಕ.) ಹೊರಗೆಡವು; ರಟ್ಟುಮಾಡು (ಮು., ಅನೈಚ್ಛಿಕವಾಗಿ); ತುಬ್ಬು (ಗ್ರಾಂ.)

Bey ಬೇ (ನಾ.) ಟರ್ಕಿದೇಶದಲ್ಲಿ ಒಂದು ಪ್ರಾಂತದ ಆಡಳಿತ ನಡೆಯಿಸುವ ಮುಖ್ಯಾಧಿಕಾರಿಯ ಹೆಸರು; ದೊಡ್ಡ ಬಿರುದಿನ ಹೆಸರು. **Beýlic** (ನಾ.) ಬೇ ಎಂಬ ಅಧಿಕಾರಿಯ ಪ್ರಾಂತ.

Beyónd ಬಿಯಾಂಡ್ (ಕ್ರಿ. ವಿ., ಉಪ., ನಾ.) ಆಚೆ; ಆಚೆಯ ಕಡೆಗೆ; ದೂರದಲ್ಲಿ; ಹಿಂದಕ್ಕೆ. ಹೆಚ್ಚಾಗಿ; ಮೀರಿ; ನಿಲುಕದೆ; ಅತೀತವಾಗಿ. ಬಿಟ್ಟು; ಉಳಿದು; ಹೊರತು. (ನಾ.) The b. (ನಮಗೆ ತಿಳಿಯದ) ಭವಿಷ್ಯ; ಪರ; ಮುಂದಿನ ಜನ್ಮ; ಪರಲೋಕ. The back of b. ಪ್ರಪಂಚದ ಕೊನೆಯ ಮೂಲೆ. Look b. ಇಲ್ಲದ ಅರ್ಥವನ್ನು ಕಲ್ಪಿಸು; ತಪ್ಪಾಗಿ ತಿಳಿದುಕೊ. B. measure ಮಿತಿ ಮೀರಿ; ಅಳವು ಮೀರಿ; ಅಪರಿಮಿತವಾಗಿ.

Bézel ಬೆಸೆಲ್ (ನಾ.) ಉಳಿ, ಮೊ. ಗಳ ಓಟದ ಏಣು. ಪಟ್ಟೆ ಕೆತ್ತಿದ ರತ್ನದ ಓಟದ ಮುಖ, ಅಥವಾ ಪಟ್ಟೆ. (ಗಡಿಯಾರದ ಗಾಜನ್ನೊ ರತ್ನವನ್ನೊ ಕೂಡಿಸುವುದಕ್ಕಾಗಿ ಮಾಡಿರುವ) ಗಾಡಿ, ಗೂಡು.

Bézoar ಬೀಸ್ಟೋರ್, ಬೆಸ್ಟೋಆರ್ (ನಾ.) ಕೆಲವು ಪ್ರಾಣಿಗಳ (ಮು., ಮೆಲುಕುಹಾಕುವವುಗಳ) ಆಹಾರಕೋಶದಲ್ಲಿ ಕ್ರಮೇಣ ಸ್ಥಾಪನೆಯಾಗಿ ದೊರೆಯುವ, ಪ್ರತಿವಿಷವೆಂದು ಹಿಂದೆ ನಂಬಿದ್ದ, ಒಂದು ಪದಾರ್ಥ: ಗೋರೋಚನ; ಪಶು ಪಾಷಾಣ.

Bhang, Bang ಬ್ಯಾಂಗ್ (ನಾ.) ಸೊಪ್ಪು, ಕಾಯಿಯ ಸಿಪ್ಪೆ — ಇವನ್ನು ಹೊಗೆಸೇದುವುದರಿಂದಲೊ, ಅಗಿದು ತಿನ್ನುವುದರಿಂದಲೊ, ಕಷಾಯಮಾಡಿ ಕುಡಿಯುವುದರಿಂದಲೊ, ಅಮಲೇರುವಂತೆ, ಮತ್ತುಬರುವಂತೆ, ಮಾಡುವ ಒಂದು ಗಿಡ: ಭಂಗಿ; ಗಾಂಜಾ.

Bías ಬಯಸ್ (ನಾ., ಕ್ರಿ. ಸಕ.) ('ಬೌಲ್ಸ್' ಎಂಬ ಆಟದಲ್ಲಿ ಉಪಯೋಗಿಸುವ ಗಟ್ಟಿಮರದ ಚೆಂಡಿನ ಒಂದು ಪಕ್ಕವನ್ನು ಹೆಚ್ಚುತೂಕವುಳ್ಳದ್ದಾಗಿ ಮಾಡಿರುವುದರಿಂದ ಅದು ನೆಟ್ಟಗೆ ಹೋಗದೆ ವಕ್ರವಾಗಿ ಹೋಗುವುದು); ಇಂಥ ಚೆಂಡಿನ ತೂಕವಾದ ಪಕ್ಕ; ಇದರ ವಕ್ರಗತಿ; ಇದಕ್ಕೆ ಕಾರಣವಾದ ತೂಕ. (ರೂಪ.) ಒಲವು; ಬಾಗು; ಪ್ರೇರಣೆ; ಪಕ್ಷಪಾತ. (ಉಡುಪು, ಮೊ. ಗಳಲ್ಲಿ: Cut on the b. ನೇಯ್ಗೆಯ ಎಳೆಗೆ ಅಡ್ಡವಾಗಿ ಮೂಲೆಯಮೇಲೆ ಕತ್ತರಿಸಿದ; ಕೋರೆಯಾಗಿ ಕತ್ತರಿಸಿದ. B. band ಹಾಗೆ ಕೋರೆಯಾಗಿ ಕತ್ತರಿಸಿದ ಪಟ್ಟಿ). (ಕ್ರಿ.) ಓಲು (ಒಲವು) ಕೊಡು; ಪ್ರೇರಿಸು (ಸಾ., ಅನ್ಯಾಯವಾಗಿ); (ಒಬ್ಬನ ವಿಷಯದಲ್ಲಿ) ಮನಸ್ಸು ಕೆಡಿಸು. **Bías(s)ed** (ಗು.)

Biáxial ಬೈಆ್ಯಕ್ಸಿಯಲ್ (ಗು.) (ದ್ಯ. ವಿ.) ಎರಡು ಅಕ್ಷಗಳುಳ್ಳ; ದ್ವ್ಯಕ್ಷಕ.

Bib[1] ಬಿಬ್ (ಕ್ರಿ. ಅಕ.) ಅತಿಯಾಗಿ, ಮಿತಿ ಮೀರಿ, ಕುಡಿ. **Bíbber** (ನಾ.) ಅತಿ ಕುಡುಕ (Wine-bibber). **Bíbbing** (ನಾ., ಗು.)

Bib[2] ಬಿಬ್ (ನಾ.) ಮಗುವಿನ ಉಡುಪು ಮಾಸಿಹೋಗದಂತೆ ಗಲ್ಲದ ಕೆಳಗಡೆ ಕಟ್ಟಿರುವ ಪಟ್ಟಿ; ಗಲ್ಲಪಟ್ಟಿ; ದೊಡ್ಡವರು ತಮ್ಮ ಉಡುಪು ಮಾಸದಂತೆ ಹಾಕಿಕೊಳ್ಳುವ ಗವಸಿನ ಮೇಲ್ಭಾಗ.

Bib[3] ಬಿಬ್ (ನಾ.) ಒಂದು ಜಾತಿಯ ಮೀನು.

Bibásic ಬೈಬೇಸಿಕ್ (ಗು.) (ರ. ವಿ.) ಎರಡು ಪ್ರತ್ಯಾಮ್ಲಗಳುಳ್ಳ; ದ್ವಿಕ್ಷಾರಕ.

Bíbble ಬಿಬ್‌ಲ್ (ಕ್ರಿ.) (ಶಬ್ದಮಾಡಿಕೊಂಡು) ಗಳಗಳನೆ ಕುಡಿ. B.-babble ಗೊಡ್ಡು ಹರಟೆ.

Bíble ಬೈಬ್‌ಲ್ (ನಾ.) ಕ್ರೈಸ್ತವೇದ (ಹಳೆಯ ಮತ್ತು ಹೊಸ ಒಡಂಬಡಿಕೆಗಳಿಂದ ಕೂಡಿದ್ದು); ಇದರ ಪ್ರತಿ. ಪ್ರಮಾಣಗ್ರಂಥ; ಪವಿತ್ರಗ್ರಂಥ. B.-oath ಬೈಬಲ್ಲಿನ ಮೇಲೆ ಮಾಡಿದ ಪ್ರಮಾಣ. **Bíblical** ಬಿಬ್ಲಿಕಲ್ (ಗು.) ಬೈಬಲ್ಲಿನ; ಬೈಬಲ್ಲಿನಲ್ಲಿರುವ.

Bibliógraphy ಬಿಬ್ಲಿಯಾಗ್ರಫಿ (ನಾ.) ಪುಸ್ತಕಗಳ ಚರಿತ್ರೆ ಮತ್ತು ವಿವರಣೆ (ಎಂದರೆ, ಕರ್ತೃತ್ವ, ಮುದ್ರಣ, ಪ್ರಕಟನೆ, ಆವೃತ್ತಿಗಳು, ಮೊ. ವಿಷಯಗಳನ್ನುಳ್ಳದ್ದು); ಇಂಥ ವಿವರಣೆಗಳನ್ನು ಬರೆದಿರುವ ಪುಸ್ತಕ. (ಯಾವನಾದರೂ ಗ್ರಂಥಕರ್ತನ, ಮುದ್ರಣಕಾರನ, ದೇಶದ, ವಿಷಯದ, ಮೇಲಿನ) ಪುಸ್ತಕಗಳ ಪಟ್ಟಿ: ಗ್ರಂಥವಿವರಣ ಪಟ್ಟಿ. **Bibliógrapher** (ನಾ.) ಪುಸ್ತಕಗಳ ಚರಿತ್ರೆಯನ್ನು ವಿವರಿಸಿ ಬರೆಯುವವನು. **Bibliográphic** —ಯೊಗ್ರಾಫಿಕ್— (ಗು.)

Bibliólatry ಬಿಬ್ಲಿಯಾಲಟ್ರಿ (ನಾ.) ಪುಸ್ತಕಾರಾಧನೆ; ಗ್ರಂಥೋಪಾಸನೆ. **Bibliólater** (ನಾ.); **Bibliólatrous** (ಗು.)

Bíbliomancy ಬಿಬ್ಲಿಯೊಮ್ಯಾನ್ಸಿ (ನಾ.) ಪವಿತ್ರಗ್ರಂಥದ ಸಹಾಯದಿಂದ ಪ್ರಶ್ನೆಹೇಳುವುದು (ಎಂದರೆ, ಹಠಾತ್ತಾಗಿ ತೆಗೆದ ಪುಸ್ತಕಭಾಗದಲ್ಲಿಯ ಅಭಿಪ್ರಾಯವನ್ನು ಹಿಡಿದು ಪ್ರಶ್ನೆಯ ವಿಷಯವಾಗಿ ಫಲಹೇಳುವುದು): ಗ್ರಂಥಪ್ರಶ್ನೆ ಹೇಳುವುದು.

Bibliománia ಬಿಬ್ಲಿಯೊಮೇನಿಯ (ನಾ.) ಪುಸ್ತಕ ಕೂಡಹಾಕುವ ಹುಚ್ಚು; ಗ್ರಂಥಸಂಗ್ರಹ ವ್ಯಾಮೋಹ. **Bibliomániac** (ನಾ.) ಗ್ರಂಥಸಂಗ್ರಹೋನ್ಮತ್ತ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bíbliophil(e) ಬಿಬ್ಲಿಯೊಫಿಲ್ (ನಾ.) ಪುಸ್ತಕಪ್ರೇಮಿ; ಗ್ರಂಥಾಸಕ್ತ. **Bibliόphilism** — ಯಾ — (ನಾ.); **Bibliόphilist** (ನಾ.)

Bíbliopole ಬಿಬ್ಲಿಯೊಪೋಲ್ (ನಾ.) ಪುಸ್ತಕಗಳ (ಮು., ಅಪೂರ್ವ ಪುಸ್ತಕಗಳ) ವ್ಯಾಪಾರಿ. **Bibliόpoly** — ಯಾಪೊಲಿ (ನಾ.) ಪುಸ್ತಕ ವ್ಯಾಪಾರ.

Bibliothéca ಬಿಬ್ಲಿಯೊಥೀಕ (ನಾ.) (ಹಳೆಯ ಇಂಗ್ಲಿಷಿನಲ್ಲಿ) ಕ್ರೈಸ್ತ ವೇದ; ಬೈಬಲ್. (ಈಗ) ಪುಸ್ತಕ ಸಂಗ್ರಹ; ಗ್ರಂಥಮಾಲೆ; ಪುಸ್ತಕಾಲಯ; ಪುಸ್ತಕ ವಿವರಣ ಪಟ್ಟಿ. **Biblióthec** — ಯಾತೆಕ್ (ಗು.) ಪುಸ್ತಕ ಶಾಲೆಗೆ ಅಥವಾ ಪುಸ್ತಕ ಶಾಲಾಧಿಕಾರಿಗೆ ಸಂಬಂಧಪಟ್ಟ. (ನಾ.) ಪುಸ್ತಕ ಶಾಲಾಧಿಕಾರಿ. **Bibliothéque** (F) — ಯೊತೆಕ್ = Bibliotheca.

Bíbulous ಬಿಬ್ಯುಲಸ್ (ಗು.) ತೇವ ಹೀರುವ. (ಈಗಿನ ಅರ್ಥ) ಕುಡಿತಕ್ಕೆ ಬಿದ್ದ; ಪಾನಾಸಕ್ತ. **Bíbulously** (ಕ್ರಿ. ವಿ.)

Bicámeral ಬೈಕ್ಯಾಮೆರಲ್ (ಗು.) ಎರಡು ಶಾಸನ ಸಭೆಗಳುಳ್ಳ; ದ್ವಿಸಭಾ.

Bicárbonate ಬೈಕಾರ್ಬೊನೇಟ್ (ನಾ.) ಅಪ್ಪಟ ಲವಣವಾಗುವುದಕ್ಕೆ ಬೇಕಾಗುವ ಎರಡರಷ್ಟು ಕಾರ್ಬಾನಿಕ್ ಆಮ್ಲವುಳ್ಳ ಲವಣ; ದ್ವಿಕಾರ್ಬೊನೇಟ್; ಆಮ್ಲೀಯ ಕಾರ್ಬೊನೇಟ್.

Bicéntenary ಬೈಸೆಂಟಿನರಿ, **Bicenténary** — ಟೀ — (ಗು., ನಾ.) ಇನ್ನೂರನೆಯ, ದ್ವಿಶತ, (ವಾರ್ಷಿಕೋತ್ಸವ)

Bicenténnial ಬೈಸೆಂಟೆನಿಯಲ್ (ಗು., ನಾ.) ಇನ್ನೂರು ವರ್ಷಕ್ಕೊಮ್ಮೆ ಬರುವ (ಘಟನೆ); ಇನ್ನೂರು ವರ್ಷ ನಡೆಯುವ, ಬಾಳುವ. (ನಾ.) = Bicentenary.

Bicéphalous ಬೈಸೆಫಲಸ್ (ಗು.) ಎರಡು ತಲೆಗಳುಳ್ಳ; ಇರ್ತಲೆಯ; ದ್ವಿಶೀರ್ಷಿ.

Bíceps ಬೈಸೆಪ್ಸ್ (ನಾ.) ಎರಡು ಮೇಲ್ತುದಿಗಳು ಅಥವಾ ಸೇರಿಕೆಗಳುಳ್ಳ ಸ್ನಾಯು (ಮು., ತೋಳಿನ ನಮನಸ್ನಾಯು). ಮಾಂಸಲತ್ವ.

Bícker ಬಿಕರ್ (ಕ್ರಿ. ಅಕ.) ಜಗಳವಾಡು; ಕಾದಾಡು. (ನದಿ, ಮಳೆ, ಮೊ.) ಮೊರೆ; ಪಟಪಟ ಶಬ್ದಮಾಡು. (ಜ್ವಾಲೆ, ಬೆಳಕು, ಮೊ.) ಮಿಂಚು; ಮಿನುಗು; ಥಳಥಳಿಸು. **Bíckering** (ನಾ.)

Bicúspid ಬೈಕಸ್ಪಿಡ್ (ಗು., ನಾ.) ಎರಡು ಮೊನೆಗಳುಳ್ಳ (ಹಲ್ಲು); ದ್ವ್ಯಗ್ರ (ದಂತ). ಮನುಷ್ಯನ ದವಡೆಹಲ್ಲುಗಳ ಪಕ್ಕದ ಹಲ್ಲು. B. valve ಎಡಭಾಗದ ಹೃತ್ಕರ್ಣಕ್ಕೂ ಹೃತ್ಕುಕ್ಷಿಗೂ ಮಧ್ಯೇ ಇರುವ ದ್ವ್ಯಗ್ರ ಕವಾಟ.

Bícycle ಬೈಸಿಕ್ಲ್ (ನಾ., ಕ್ರಿ. ಅಕ.) ಕಾಲೊತ್ತಿನಿಂದ ನಡೆಯಿಸಲಾಗುವ ಎರಡುಚಕ್ರಗಳ ವಾಹನ; ಇಗ್ಗಾಲಿ; ಕಾಲ್ಗಾಡಿ; ಬೈಸಿಕಲ್. (ಕ್ರಿ.) ಕಾಲ್ಗಾಡಿಯಮೇಲೆ ಸವಾರಿ ಮಾಡು. **Bícyclist** (ನಾ.)

Bid ಬಿಡ್ (ಕ್ರಿ.; ಭೂತ. Bad, Bade, Bid; ಭೂ. ಕೃ. Bidden, Bid) ಆಜ್ಞೆಮಾಡು; ಅಪ್ಪಣೆಕೊಡು; ಬೆಸನು (Do as you are b. ಅಪ್ಪಣೆಯಂತೆ ನಡೆ). ಕರೆ; ಆಹ್ವಾನಿಸು; ಆಮಂತ್ರಣ ಕೊಡು (Bidden guest ಕರೆದ ಅತಿಥಿ). ಹೇಳು; ಬಯಸು (B. welcome ಸ್ವಾಗತ ಹೇಳು. B. farewell ಹೋಗಿಬಾ, ಸುಖದಿಂದಿರು ಎಂದು ಹೇಳಿ ಬೀಳ್ಕೊಡು). ಇಷ್ಟು ಬೆಲೆ ಕೊಡುವೆನೆಂದು ಹೇಳು; ಸವಾಲು ಮಾಡು; (ಹರಾಜಿನಲ್ಲಿ) ಬೆಲೆಕೂಗು. (ಮದುವೆಯ ನಿಶ್ಚಿತಾರ್ಥ, ಮೊ. ನ್ನು) ಸಾರು. B. fair to do ಮಾಡುವ ಶುಭಸೂಚನೆ ತೋರು. **Bíddable** (ಗು.) ಅಪ್ಪಣೆಯಂತೆ ನಡೆಯಲು ಸಿದ್ಧವಾಗಿರುವ; ವಿಧೇಯ; ಆಜ್ಞಾಧಾರಕ; ಆಜ್ಞಾನುವರ್ತಿ. **Bídder** (ನಾ.); **Bídding** (ನಾ.)

Bid (ನಾ.) ಕೇಳಿದ ಬೆಲೆ; ಹರಾಜಿನಲ್ಲಿ ಕೂಗಿದ ಬೆಲೆ; ಸವಾಲು (My b. is two rupees for this article ಈ ಪದಾರ್ಥಕ್ಕೆ ನನ್ನ ಸವಾಲು ಎರಡು ರೂಪಾಯಿ). Make a b. for (ರೂಪ.) (ದಯೆ, ಬಹುಮಾನ, ಮೊ. ನ್ನು) ಪಡೆಯಲು ಪ್ರಯತ್ನಪಡು.

Bide ಬೈಡ್ (ಕ್ರಿ.) (ಪ್ರಾಚೀ. ಪ್ರ., ಕಾವ್ಯ; ಈಗ ಸಾ. Abide) ನಿರೀಕ್ಷಣೆಯಿಂದಿರು (B. one's time ಸಮಯ ಕಾಯುತ್ತಿರು). **Bíding** (ಗು.)

Biénnial ಬೈಯೆನಿಯಲ್ (ಗು., ನಾ.) ಎರಡು ವರ್ಷಕ್ಕೊಮ್ಮೆ ನಡೆಯುವ, ಬರುವ, ಆಗುವ; ಎರಡು ವರ್ಷವಿರುವ. (ಸ. ವಿ.) ಒಂದು ವರ್ಷ ಹುಟ್ಟಿ ಬೆಳೆದು, ಮಾರನೆಯ ವರ್ಷ ಹೂವೂ ಕಾಯೂ ಬಿಟ್ಟು ಸತ್ತುಹೋಗುವ ಸಸ್ಯ; ದ್ವಿವಾರ್ಷಿಕ (ಸಸ್ಯ). **Biénnially** (ಕ್ರಿ. ವಿ.)

Bienseánce (F) ಬಿಏನ್‌ಸೆಆನ್ಸ್ (ನಾ.) ಔಚಿತ್ಯ; ವಿನಯ; ಸಭ್ಯಾಚಾರ.

Bier ಬಿಯರ್ (ನಾ.) (ಹೆಣಹೊತ್ತುಕೊಂಡು ಹೋಗುವ) ಚಟ್ಟ.

Bíffin ಬಿಫಿನ್ (ನಾ.) ಪಲ್ಯಕ್ಕಾಗಿ ಉಪಯೋಗಿಸುವ ಕಡುಗೆಂಪಿನ ಸೇಬುಜಾತಿ: ಅಡಿಗೆಸೇಬು.

Bífid ಬೈ(ಬಿ)ಫಿಡ್ (ಗು.) ಆಳವಾದ ಬಿರುಕಿನಿಂದ ಎರಡು ಭಾಗಗಳಾಗಿ ವಿಂಗಡವಾಗಿರುವ.

Bifílar ಬೈಫೈಲರ್ (ಗು.) ಎರಡು ತಂತುಗಳು ಹಾಕಿರುವ (ಮು., ಸೂಕ್ಷ್ಮವಾದ ಕೋನ, ಬಲ, ಮೊ. ನ್ನು ಅಳೆಯುವುದಕ್ಕಾಗಿ ಉಪಯೋಗಿಸುವ ಯಂತ್ರಸಲಕರಣೆಯಲ್ಲಿ); ದ್ವಿತಂತ್ರಿ; ದ್ವಿಸೂತ್ರಿ.

Biflórous ಬೈಫ್ಲೋರಸ್ (ಗು.) ಎರಡು ಹೂವು ಬಿಡುವ; ದ್ವಿಪುಷ್ಪಿ; ದ್ವಿಪುಷ್ಪಕ.

Bifócal ಬೈಫೋಕಲ್ (ಗು.) ಎರಡು ಕಿರಣಕೇಂದ್ರಗಳುಳ್ಳ (ಮು., ಕನ್ನಡಕದ ಗಾಜಿನ ಭಾಗಗಳಲ್ಲಿ: ಒಂದು ದೂರದೃಷ್ಟಿಗೂ ಮತ್ತೊಂದು ಹತ್ತಿರದ ದೃಷ್ಟಿಗೂ); ದ್ವಿನಾಭಿಕ.

Bifóliate ಬೈಫೋಲಿಯೆಟ್ (ಗು.) ಜೋಡೆಲೆಯ; ದ್ವಿಪತ್ರಿ.

Bífurcate ಬೈಫರ್ಕೇಟ್ (ಕ್ರಿ.) ಎರಡು ಶಾಖೆಗಳಾಗಿ ಒಡೆ; ಕವಲೊಡೆ. (ಗು., ಬೈಫರ್ಕೆಟ್) ಕವಲೊಡೆದ (ಮು., ಸ. ವಿ. ದಲ್ಲಿ). **Bifurcátion** (ನಾ.) ಎರಡು ಶಾಖೆಗಳಾಗಿ ಒಡೆಯುವುದು; ಕವಲೊಡೆಯುವ ಸಂಧಿ; ಕವಲು.

Big ಬಿಗ್ (ಗು., ಕ್ರಿ. ವಿ.) ದೊಡ್ಡ; [B. Ben ಲಂಡನ್ನಿನಲ್ಲಿ ಪಾರ್ಲಿಮೆಂಟ್ ಭವನದ ಮೇಲ್ಗಡೆ ಹಾಕಿರುವ ಗಡಿಯಾರದ ದೊಡ್ಡ ಗಂಟೆ. B. business ಭಾರಿ ವ್ಯಾಪಾರ (ಸಾ., ವ್ಯಂಗ್ಯಾರ್ಥದಲ್ಲಿ). B. noise (ಅಸಂ.) ಸ್ಥಳೀಯ ದೊಡ್ಡಮನುಷ್ಯ. B. stick ಬಲಪ್ರದರ್ಶನ. 'ಜಬರ್‌ದಸ್ತ್']. ಬೆಳೆದ; ಬಲಿತ. ಬಸಿರಾಗಿ; ಬಸಿರೇರಿ (B. with child. B. with fate, news ಅದೃಷ್ಟ, ವೃತ್ತಾಂತ, ಗರ್ಭಿತ). ಮುಖ್ಯ; ಪ್ರಮುಖ (A b. man). ಜಂಬದ; ಬಡಾಯಿಯ (B. words. Talk b. ಬಡಾಯಿ ಮಾತಾಡು). The b. three ಮೂವರು ಮುಖಂಡರು (ಮು., ವರಿಷ್ಠ ಮಂತ್ರಿಸಭೆಯಲ್ಲಿ). B.-horn ರಾಕೀಬೆಟ್ಟಗಳ ಒಂದು ಕುರಿಯಜಾತಿ. Bigwig ಜರಿಯ ರುಮಾಲು; ದೊಡ್ಡಮನುಷ್ಯ; ಗಣ್ಯ; ಪ್ರಮುಖ. Get (grow) too b. for one's boots (ಅಸಂ.) ಅಹಂಕಾರಿಯಾಗು; ಪ್ರತಿಷ್ಠೆ ತೋರಿಸು; (ಗರ್ವದಿಂದ) ಮೆರೆ. **Bígness** (ನಾ.)

Bígamy ಬಿಗಮಿ (ನಾ.) ಇಬ್ಬರು ಹೆಂಡಿರು, ಅಥವಾ ಇಬ್ಬರು ಗಂಡಂದಿರು, ಏಕಕಾಲದಲ್ಲಿ ಇರುವ ಸ್ಥಿತಿ: ದ್ವಿಪತಿತ್ವ; ದ್ವಿಪತ್ನೀತ್ವ. **Bígamist** (ನಾ.) — ಮನು (ಳು); ದ್ವಿಪತ್ನೀಕ; ದ್ವಿಭರ್ತೃಕೆ. **Bígamous** (ಗು.) ಇಬ್ಬರು ಹೆಂಡಿರು ಅಥವಾ ಇಬ್ಬರು ಗಂಡಂದಿರು ಉಳ್ಳ; ಈ ತಪ್ಪಿತದ, 'ತಕಶೀರಿನ.'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bigéminal ಬೈಜೆಮಿನಲ್ (ಗು.) ಜೋಡಿ ಜೋಡಿಯಾಗಿರುವ ; ಎರಡು ಜೋಡಿಗಳಲ್ಲಿರುವ.

Bight ಬೈಟ್ (ನಾ.) ಹಗ್ಗದ ಸುತ್ತು ; ಕೊಂಕು ; ಬಾಗು. (ದಡ, ನದಿ, ಮೊ. ಗಳ) ಒಳಚಾಚು. (ಸಮುದ್ರದ) ಕೊಲ್ಲಿ.

Bígot ಬಿಗಟ್ (ನಾ.) ಮತವಿಚಾರ ಮೊ. ಗಳಲ್ಲಿ, ವಿವೇಚನೆ ಮಾಡದೆ ಕುರುಡು ಅಭಿಮಾನವುಳ್ಳವನು : ಅಂಧಾಭಿಮಾನಿ ; ಮತಭ್ರಾಂತ. **Bígoted** (ಗು.) ; **Bígotry** (ನಾ.) ಅಂಧಾಭಿಮಾನ ; ಮತಾಂಧತೆ ; ವಿವೇಚನೆಯಿಲ್ಲದ ನಡತೆ, ಕೃತ್ಯ.

Bíjou (F) ಬೀಝೂ (ನಾ., ಬ. ವ. Bijoux ಬೀಝೂ) ಒಡವೆ ; ಥಳಕು ಬೆಳಕಿನ ಆಭರಣ. (ಗು.) ಪುಟ್ಟ ಮತ್ತು ಅಂದವಾದ ; ಮುದ್ದಾದ. **Bijoúterie** (ನಾ.) ಒಡವೆ ವಸ್ತು ; ಥಳಕಿನ ಸಾಮಾನು.

Bike ಬೈಕ್ (ನಾ., ಕ್ರಿ. ಅಕ.) Bicycle ಪದದ ಸಂಕ್ಷಿಪ್ತ. (ಸಾ., ಬಳ. ಮಾ.)

Biláteral ಬೈಲ್ಯಾಟೆರಲ್ (ಗು.) ಎರಡು ಪಕ್ಕದ ; ಎರಡು ಪಕ್ಕಗಳುಳ್ಳ. ಒಂದು ಅಕ್ಷದ ಇಕ್ಕಡೆಗಳಲ್ಲಿಯೂ ಅಳವಟ್ಟಿರುವ ; ದ್ವಿಪಾರ್ಶ್ವಕ. (ನ್ಯಾ. ಶಾ.) ಎರಡು ಪಕ್ಷಗಳ, ಉಭಯ ಪಕ್ಷದ. **Biláterally** (ಕ್ರಿ. ವಿ.)

Bílbo ಬಿಲ್ಬೋ (ನಾ.) ಕತ್ತಿ (ಅಲಗಿನ ಹದಕ್ಕಾಗಿ ಪ್ರಸಿದ್ಧವಾದುದು)

Bílboes ಬಿಲ್ಬೋಸ್ (ನಾ., ಬ. ವ.) ಬಂದೀವಾನನ ಬೇಡಿ (ಬಂದೀವಾನೆಯ ನೆಲಕ್ಕೆ ಸೇರಿಸಿ ಬೀಗಹಾಕಬಹುದಾದ ಕೊನೆಯುಳ್ಳ ಉದ್ದವಾದ ಕಬ್ಬಿಣದ ಪಟ್ಟಿಯುಳ್ಳದ್ದು) ; ನೆಲಬೇಡಿ.

Bile ಬೈಲ್ (ನಾ.) ಆಹಾರ ಜೀರ್ಣಕ್ಕಾಗಿ ಯಕೃತ್ತು ಸ್ರವಿಸುವ ಕಹಿಯಾದ ಹಳದಿಯಹಸಿರು ರಸ : ಪಿತ್ತರಸ. ಪಿತ್ತವಿಕಾರ ; ಪೈತ್ಯ. (ರೂಪ.) ಸಿಡುಕು ; ರೇಗು. **B.-stone** ಪಿತ್ತಕೋಶದಲ್ಲಿ ರಚನೆಯಾಗುವ ಕಲ್ಲಿನಂಥ ಗಟ್ಟಿಯುಂಡೆಗಳು : ಪಿತ್ತಾಶ್ಮ. **Bíliary** ಬಿಲಿಯರಿ (ಗು.) ಪಿತ್ತರಸದ. **Bílious** (ಗು.) ಪಿತ್ತವೇರಿದ ; ಪಿತ್ತವಿಕಾರದ ; ಪಿತ್ತಜನ್ಯ. (ರೂಪ.) ಸಿಡುಕುವ ; ರೇಗುವ. **Bíliously** (ಕ್ರಿ. ವಿ.) ; **Bíliousness** (ನಾ)

Bilge ಬಿಲ್ಜ್ (ನಾ., ಕ್ರಿ.) (ಸುಮಾರು ಚಪ್ಪಟೆಯಾಗಿರುವ) ಹಡಗಿನ (ಹೊರಗಿನ ಅಥವಾ ಒಳಗಿನ) ತಳಭಾಗ. ಈ ಒಳಭಾಗದಲ್ಲಿ ಸೇರುವ ಕೊಳೆ (B.-water ಹಡಗಿನ ತಳಭಾಗದಲ್ಲಿ ಸೇರಿದ ನಾರುವ ನೀರು.) ಪೀಪಾಯಿಯ ಹೊಟ್ಟೆ. (ಕ್ರಿ.) ಹಡಗಿನ ತಳದಲ್ಲಿ ತೂತು ಮಾಡು, — ತೂತು ಬೀಳು. ಊದು ; ಉಬ್ಬಿಕೊ ; ಉಬ್ಬಿಸು.

Bilhárzia ಬಿಲ್‌ಹಾರ್ಸ್ಜಿಯ (ನಾ.) ಉಷ್ಣದೇಶ ವಾಸಿಗಳ (ಮು., ಇಜಿಪ್ಟನರ) ರಕ್ತದಲ್ಲಿಯೂ ಮೂತ್ರಕೋಶದಲ್ಲಿಯೂ ಪರೋಪಜೀವಿಯಾಗಿ ಬೆಳೆಯುವ ಒಂದು ಚಪ್ಪಟೆಯ ಜಂತು. **Bilharziásis** — ಆ್ಯಸಿಸ್ (ನಾ.) ಈ ಜಂತುಗಳಿರುವುದರಿಂದುಂಟಾದ ದೀರ್ಘರೋಗ : ಬಿಲ್‌ಹಾರ್ಸ್ ರೋಗ. (ಇದನ್ನು ಕಂಡುಹಿಡಿದ Bilharz ಎಂಬಾತನ ಹೆಸರಿನಿಂದ)

Bilímbi ಬಿಲಿಂಬಿ (ನಾ.) ಬಿಲಿಂಬಿ ಗಿಡ, ಹಣ್ಣು (ಇದರ ರಸ ಚರ್ಮರೋಗಗಳಿಗೆ ಔಷಧ)

Bilíngual ಬೈಲಿಂಗ್ವಲ್ (ಗು.) ಎರಡು ಭಾಷೆಗಳುಳ್ಳ ; ಎರಡು ಭಾಷೆಯಾಡುವ ; ಎರಡು ಭಾಷೆಗಳಲ್ಲಿ ಬರೆದ ; ದ್ವಿಭಾಷೆಯ.

Bilk ಬಿಲ್ಕ್ (ಕ್ರಿ. ಸಕ.) (ಕೊಡಬೇಕಾದ ಹಣ ಕೊಡದೆ ಸಾಲಗಾರನಿಂದ) ತಪ್ಪಿಸಿಕೊ ; ಮೋಸ ಮಾಡು ; ವಂಚಿಸು.

Bill[1] ಬಿಲ್ (ನಾ.) ಬಳಕೆಯಲ್ಲಿಲ್ಲದ (ಕುಡುಗೋಲನಂಥ) ಒಂದು ಆಯುಧ ; ಕುಡುಗೋಲು ; ಮಚ್ಚುಕತ್ತಿ.

Bill[2] (ನಾ.) ಹಕ್ಕಿಯ ಕೊಕ್ಕು (ಮು., ತೆಳ್ಳನೆಯದು ಅಥವಾ ಬಲಹೀನವಾದದ್ದು) ; ಚಂಚು ; ತುಂಡ. ಅಗಲ ಕಿರಿದಾದ ಭೂಶಿರ. (ನಾವೆ) ಲಂಗರಿನ ಕೊಕ್ಕಿನ ತುದಿ. **Billed** (ಗು.)

Bill (ಕ್ರಿ. ಅಕ.) (ಪಾರಿವಾಳ ಮೊ. ಗಳಂತೆ) ಕೊಕ್ಕಿಗೆ ಕೊಕ್ಕು ಸೇರಿಸಿ ಮುದ್ದಾಡು (B. and coo)

Bill[3] ಬಿಲ್ (ನಾ.) ಕಾನೂನಿನ ಮಸೂದೆ. (ನ್ಯಾ. ಶಾ.) ಮೊಕದ್ದಮೆಯ ವಿಷಯವಾಗಿ (ಮು., ವಾದಿ) ಬರೆದುಕೊಟ್ಟ ಹೇಳಿಕೆ. (ವ್ಯಾಪಾರ) ಸಲ್ಲಿಸಿದ ಸಾಮಾನುಗಳ, ಅಥವಾ ಮಾಡಿರುವ ಕೆಲಸದ, ಬೆಲೆ ತೋರಿಸುವ ಪಟ್ಟಿ : ಬೆಲೆಪಟ್ಟಿ. ಹುಂಡಿ (Also b. of exchange). (ನಾಟಕ, ಹರಾಜು, ಮೊ. ವಿಷಯವನ್ನು ಪ್ರಕಟಪಡಿಸುವುದಕ್ಕಾಗಿ) ಗೋಡೆ, ಮೊ. ಗಳ ಮೇಲೆ ಅಂಟಿಸಿದ, ಅಥವಾ ಎಲ್ಲರಿಗೂ ಸ್ಪಷ್ಟವಾಗಿ ಕಾಣುವಂತೆ ಇಟ್ಟ, ಪಟ : ಪ್ರಕಟನ ಪಟ. B.-broker ಹುಂಡಿದಳ್ಳಾಳಿ. B. of fare ಭೋಜನಕ್ಕೆ ಸಿದ್ಧಪಡಿಸಿರುವ ಭಕ್ಷ್ಯ, ಮೊ. ಗಳ ಪಟ್ಟಿ. (ರೂಪ.) ಕಾರ್ಯಕ್ರಮದ ಪಟ್ಟಿ. B. of health ಹಡಗು ಹೊರಡುವಾಗ, ಹೊರಡುವ ಬಂದರಿನಲ್ಲಾಗಲಿ ಹಡಗಿನಲ್ಲಾಗಲಿ ಅಂಟುರೋಗವುಂಟೇ ಎಂಬ ವಿಷಯದಲ್ಲಿ ಕೊಡುವ ದೃಢಪತ್ರಿಕೆ : ಆರೋಗ್ಯ ಪತ್ರ. Clean b. of health ನೀರೋಗ ಪತ್ರ. B. of lading ಹಡಗಿನ ಯಜಮಾನನು ಸಾಮಾನು ಕಳುಹಿಸುವವನಿಗೆ ಕೊಡುವ ತಪಶೀಲುರಸೀತಿ : ರಫ್ತುಪಟ್ಟಿ ; ಭರಾವಣಿ ಚೀಟಿ. B.-poster, -sticker ಪ್ರಕಟನೆಯ ಪಟಗಳನ್ನು ಅಂಟಿಸುವವನು. B. of quantities ಒಂದು ಕಟ್ಟಡವನ್ನು ಕಟ್ಟುವುದರಲ್ಲಿ ಗಮನಿಸಬೇಕಾಗುವ ಸಾಮಾನು, ಅಳತೆ, ಬೆಲೆ, ಮೊ. ಗಳ ವಿವರಪಟ್ಟಿ. B. of sale ಒಬ್ಬನ ಸ್ವಂತ ಆಸ್ತಿಯನ್ನು ಮತ್ತೊಬ್ಬನಿಗೆ ಮಾರಿ ವರ್ಗಾಯಿಸಿದ ಪತ್ರ : ಮಾರಿಕೆಯ ಪತ್ರ. ಸಾಲಗಾರನು ಹಣಕೊಡದೆಹೋದಲ್ಲಿ ಅವನ ಸ್ವಂತ ಆಸ್ತಿಯನ್ನು ಸಾಲ ಕೊಟ್ಟಿರುವವನು ಹಿಡಿಯಬಹುದೆಂದು ಕೊಟ್ಟ ಅಧಿಕಾರಪತ್ರ.

Bill (ಕ್ರಿ. ಸಕ.) ಪ್ರಕಟಿಸು ; ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸು ; ಪ್ರಕಟನೆಯ ಪಟಗಳನ್ನು ಅಂಟಿಸು. Billed to appear ಬರುವುದೆಂದು (ಮೊದಲೇ) ಪ್ರಕಟಗೊಳಿಸಿದ.

Billet[1] ಬಿಲೆಟ್ (ನಾ., ಕ್ರಿ. ಸಕ.) (ಸೈನ್ಯ) ಕಾಗದ ತರುವ ಸಿಪಾಯಿಗೆ ಅನ್ನವಸತಿಗಳನ್ನು ಒದಗಿಸಿಕೊಡಬೇಕೆಂದು ವಿಧಿಸುವ ಆಜ್ಞೆ; ಅನ್ನವಸತಿಯ ಚೀಟಿ. ಸೇನೆಯ ಬೀಡು ; ನೆಲೆ ; ಸ್ಥಾನ ; ಉದ್ಯೋಗ. (Every bullet has its b. ಪ್ರತಿ ಗುಂಡಿಗೂ ವಿಧಿಯು ಒಂದು ಗುರಿ ಇಟ್ಟೇ ಇರುತ್ತದೆ : ಎಂದರೆ, ಅದೃಷ್ಟದಂತೆಯೇ ಕಾರ್ಯ ನಡೆಯುತ್ತದೆ). (ಕ್ರಿ.) ವಸತಿ ಮಾಡಿಕೊಡು (ಮು., ಸಿಪಾಯಿಗಳಿಗೆ ಖಾಸಗಿ ಮನೆಗಳಲ್ಲಿ)

Billet[2] ಬಿಲೆಟ್ (ನಾ.) (ಸೌದೆ) ಕೊರಡು. ಲೋಹದ ಸಣ್ಣ ಸರಳು, ಕಂಬಿ, ಪಟ್ಟಿ.

Billet-doúx (F) ಬಿಲೆ(ಲಿ)ಡೂ (ನಾ.) ಪ್ರಣಯ ಪತ್ರ (ಈಗ ಹಾಸ್ಯವಾಗಿ)

Bill-hook ಬಿಲ್‌ಹುಕ್ (ನಾ.) (ಗಿಡದ ಸಣ್ಣ ಸಣ್ಣ ರೆಂಬೆಗಳನ್ನು ಕತ್ತರಿಸುವುದು, ಮೊ. ಕ್ಕಾಗಿ ಉಪಯೋಗಿಸುವ) ಕುಡುಗೋಲು.

Billiards ಬಿಲ್ಯರ್ಡ್ಸ್ (ನಾ., ಬ. ವ.) ಬನಾತು ಅಂಟಿಸಿರುವ ಮೇಜಿನ ಮೇಲೆ ಜಂತದ ಗುಂಡುಗಳನ್ನು ಉದ್ದವಾದ ಚೂಪುಕೋಲಿನಿಂದ ತಿವಿದು ಆಡುವ ಆಟ : ಮೇಜುಗೋಲಿ ; ಬಿಲಿಯರ್ಡ್ಸ್. B.-marker ಈ ಆಟಗಾರರ ಗೆಲವುಸಂಖ್ಯೆಯ ಗುರುತುಗಾರ.

Billingsgate ಬಿಲಿಂಗ್ಸ್‌ಗೇಟ್ (ನಾ.) ಬೈಗುಳು ; ಕೇಳುವುದಕ್ಕೆ ಅಸಹ್ಯವಾದ ಥಂಡ ಬೈಗುಳು. (ಲಂಡನ್ನಿನಲ್ಲಿ ಈ ಹೆಸರಿನ ಊರು ಬಾಗಿಲ ಬಳಿ ಇರುವ ಮೀನುಮಾರುವ ಕಟ್ಟೆಯ ವ್ಯಾಪಾರಿಹೆಂಗಸರ ದುರ್ಭಾಷೆಗಳಿಂದ)

Billion ಬಿಲ್ಯನ್ (ನಾ.) ಒಂದು ಲಕ್ಷಕೋಟಿ. (ಅಮೆ. ಸಂ.) ಶತ ಕೋಟಿ.

Billow ಬಿಲೋ (ನಾ., ಕ್ರಿ. ಅಕ.) ದೊಡ್ಡ ಅಲೆ ; ಕಲ್ಲೋಲ. (ಕಾವ್ಯ.) ಸಮುದ್ರ. (ರೂಪ.) ರಭಸದಿಂದ ಹೋಗುವ ಶಬ್ದ, ಸೈನ್ಯ, ಮೊ. (ಕ್ರಿ.) ಅಲೆಯೇಳು ; ಅಲೆಗಳಾಗಿ ಚಲಿಸು. **Billowy** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bílly ಬಿಲಿ (ನಾ.) (ಆಸ್ಟ್ರೇಲಿಯದಲ್ಲಿ) ಪ್ರಯಾಣದಲ್ಲಿ ನೀರುಕಾಯಿಸು ವುದಕ್ಕೆ ಉಪಯೋಗಿಸುವ ಟಿನ್ನಿನ ಡಬ್ಬಿ.

Bíllyboy ಬಿಲಿಬಾಯ್ (ನಾ.) ಒಂದೇ ಪಟಸ್ತಂಭವುಳ್ಳ ವ್ಯಾಪಾರದ ಹಡಗು : ಒಕ್ಕೂವೆಯ ಹಡಗು.

Bílly-goat ಬಿಲಿ ಗೋಟ್ (ನಾ.) ಹೋತ ; ಗಂಡು ಮೇಕೆ.

Bilóbate ಬೈಲೋಬೇಟ್ (ಗು.) ಸ್ವಲ್ಪ ಚಪ್ಪಟೆಯಾಗಿಯೂ ಸ್ವಲ್ಪ ಗುಂಡಾಗಿಯೂ ಇರುವ ಎರಡು ಭಾಗಗಳುಳ್ಳ ; ದ್ವಿಪಾಲಿ.

Bímana ಬಿ(ಬೈ)ಮನ (ನಾ., ಬ. ವ.) (ಪ್ರಾ. ವಿ.) ಇಕ್ಕೈ ಪ್ರಾಣಿಗಳು ; ದ್ವಿಹಸ್ತಕಗಳು [ಸಸ್ತನಿ ಜಾತಿ (genus) ಗಳಲ್ಲಿಯ ಒಂದು ವಂಶ (species) : ಮನುಷ್ಯವಂಶವೊಂದೇ]. **Bímanal** (ಗು.) ; **Bímanous** (ಗು.) ; **Bímane** ಬೈಮೇನ್ (ನಾ.) ಇಕ್ಕೈಪ್ರಾಣಿ.

Biménsal ಬೈಮೆನ್ಸಲ್ (ಗು.) ಎರಡು ತಿಂಗಳಿಗೊಂದಾವೃತ್ತಿ ಬರುವ, ಸಂಭವಿಸುವ : ದ್ವೈಮಾಸಿಕ.

Bimétallism ಬೈಮೆಟಲಿಸ್ಮ್ (ನಾ.) ಎರಡು ಲೋಹಗಳ (ಚಿನ್ನ, ಬೆಳ್ಳಿಯ) ಬೆಲೆಯ ಪರಸ್ಪರ ಸಂಬಂಧವನ್ನು ಕಾನೂನಿನಿಂದ ನಿಗದಿ ಮಾಡಿ, ಎರಡರಿಂದಲೂ ಮಾಡಿದ ನಾಣ್ಯಗಳನ್ನು ಚಲಾವಣೆ ಮಾಡುವ ಪದ್ಧತಿ : ದ್ವಿಲೋಹ ಚಲಾವಣೆ. **Bimetállic** — ಮಿಟ್ಯಾಲಿಕ್ (ಗು.) ದ್ವಿಲೋಹ ಚಲಾವಣೆಗೆ ಸಂಬಂಧಪಟ್ಟ. **Bimétallist** — ಮೆಟಲಿಸ್ಟ್ (ನಾ.) ದ್ವಿಲೋಹ ವಾದಿ.

Bimónthly ಬೈಮಂತ್ಲಿ (ಗು.) ಎರಡು ತಿಂಗಳಿಗೊಂದಾವೃತ್ತಿ ಬರುವ : ದ್ವೈಮಾಸಿಕ.

Bin ಬಿನ್ (ನಾ.) (ಧಾನ್ಯ, ಸತ್ತೆ, ಮೊ. ನ್ನು ಹಾಕಿಡುವುದಕ್ಕೆ ಸಾ., ಒಂದು ಸ್ಥಳದಲ್ಲಿ ನೆಟ್ಟಿರುವ) ಪಾತ್ರೆ ; ತೊಟ್ಟಿ ; ಗಳಗೆ ; ಕಡಿಕೆ ; ಓಡೆ.

Bínary ಬೈನರಿ (ಗು., ನಾ.) ಯುಗ್ಮ ; ಯುಗಳ ; ಜೋಡಿ ; ದ್ವಿ ; ದ್ವಯ. (ಖ. ವಿ.) ಯುಗ್ಮ ತಾರೆ. B. system ಏಕ ಕೇಂದ್ರದ ಸುತ್ತಲೂ ಸುತ್ತುತ್ತಿರುವ, ಅಥವಾ ಒಂದರ ಸುತ್ತಲೂ ಮತ್ತೊಂದು ಸುತ್ತುತ್ತಿರುವ, ಎರಡು ನಕ್ಷತ್ರಗಳು ; ಯುಗ್ಮತಾರೆ. (ರ. ವಿ.) B. compound ಎರಡು ಮೂಲಧಾತುಗಳ ಸಂಯುಕ್ತ. B. scale (ಸಂಖ್ಯಾಗಣನೆಯಲ್ಲಿ ಅಂಕಗಳ ಸ್ಥಾನಮೂಲ್ಯವನ್ನು ನಿರ್ದೇಶಿಸುವುದಕ್ಕೆ ರೂಢಿಯಲ್ಲಿರುವ ದಶಮಾನಕ್ಕೆ ಬದರಾಗಿ ಉಪಯೋಗಿಸುವ) ದ್ವಿಮಾನ : [ಉದಾ. — ಈ ಮಾನದ ಲ್ಲಿರುವುದು ಎರಡೇ ಅಂಕಗಳು : ೦ ಮತ್ತು ೧. ಈ ಪದ್ಧತಿಯ ಮೇರೆಗೆ, ೧ರ ಪಕ್ಕದಲ್ಲಿ ಸೊನ್ನೆಯನ್ನಿಟ್ಟರೆ, ದಶಮಾನದಲ್ಲಾಗುವಂತೆ, 'ಹತ್ತು' ಆಗುವುದಿಲ್ಲ, 'ಎರಡು' ಆಗುವುದು. ಏಕೆಂದರೆ, ಇಲ್ಲಿ ಏಕಸ್ಥಾನದಲ್ಲಿ ಸೊನ್ನೆ, ದ್ವಿತೀಯ ಸ್ಥಾನದಲ್ಲಿರುವ ೧ಕ್ಕೆ ಬೆಲೆ ೨. ಹಾಗೆಯೇ, ೧೧=೧+೧×೨ =೩. ೧೦೦೦ ಎಂಬ ಅಂಕಿಯಲ್ಲಿ ನಾಲ್ಕು ಸ್ಥಾನಗಳಿರುವುದರಿಂದ, ಎರಡು ಎರಡಲ ಎರಡಲು = ೮ ; ೧೦೦೦೦ = ಎರಡು ಎರಡಲ, ಎರಡಲ, ಎರಡಲು =೧೬ ; ೧೧೧ = ೧+೧×೨+೧×೨×೨=೭ ; ೧೧೧೧=೧+ ೧×೨+೧×೨×೨+೧×೨×೨×೨=೧೫, ಹೀಗೆ ; ಎಂದರೆ, ನಮಗೆ ರೂಢಿಯಲ್ಲಿರುವಂತೆ ಸ್ಥಾನದ ಬೆಲೆ ಹತ್ತುಹತ್ತರಷ್ಟು ಹೆಚ್ಚುವುದಕ್ಕೆ ಬದ ರಾಗಿ ಎರಡುಎರಡರಷ್ಟು ಹೆಚ್ಚುತ್ತಹೋಗುತ್ತದೆ]. B. theory ಎಲ್ಲಾ ಆಮ್ಲಗಳೂ ಜಲಜನಕ ಸಂಯುಕ್ತಗಳೆಂದೂ, ಎಲ್ಲಾ ಲವಣಗಳೂ ಆಮ್ಲದಲ್ಲಿಯ ಜಲಜನಕ ಸ್ಥಾನದಲ್ಲಿ ಲೋಹವಿರುವ ಸಂಯುಕ್ತಗಳೆಂದೂ ಪ್ರತಿಪಾದಿಸುವ ತತ್ತ್ವ.

Bínate ಬೈನೇಟ್ (ಗು.) ಎರಡೆರಡಾದ ; ಜೊತೆಜೊತೆಯಾದ ; ಯುಗ್ಮ ; ಯುಗಳ.

Binaúral ಬಿ(ಬೈ)ನಾರಲ್ (ಗು.) ಎರಡೂ ಕಿವಿಗಳ ; ಎರಡು ಕಿವಿಗಳಿಂ ದಲೂ ಕೇಳುವ ; ದ್ವಿಕರ್ಣ (B. stethoscope ಹೃದಯದ ಮತ್ತು ಶ್ವಾಸಕೋಶಗಳ ಶಬ್ದಗಳನ್ನು ಎರಡೂ ಕಿವಿಗಳಿಂದ ಪರೀಕ್ಷಿಸುವ ವೈದ್ಯ ಸಲಕರಣೆ)

Bind ಬೈಂಡ್ (ಕ್ರಿ. ; ಭೂತ. Bound ; ಭೂ. ಕೃ. Bound, Bounden) ಕಟ್ಟು ; ಬಿಗಿ ; ಬಿಗಿಸು ; ಬಂಧಿಸು ; ಸೇರಿಸಿ ಕಟ್ಟು. ನಿರ್ಬಂಧದಲ್ಲಿಡು ; ಸೆರೆಯಲ್ಲಿಡು. ಗಟ್ಟಿಯಾಗು ; ಬಿಗಿದುಕೊ. (ಕರ್ಮಣಿ) ಬದ್ಧವಾಗಿರು. ಅಧಿಕಾರ ಚಲಾಯಿಸು ; (ಒಬ್ಬನನ್ನು) ನಿರ್ಬಂಧಕ್ಕೆ ಒಳಪಡಿಸು. (ಯಾವುದಾದರೂ ಒಂದು ಗೊತ್ತಾದ ಕೆಲಸ ಮಾಡುವಂತೆ) ಕಟ್ಟುಮಾಡು. ಕಾನೂನಿನ ನಿರ್ಬಂಧಕ್ಕೆ ಗುರಿಮಾಡು (B. over for good behaviour ಒಳ್ಳೆಯ ನಡತೆಯಲ್ಲಿರುವಂತೆ ಬದ್ಧಪಡಿಸು). ಉಮೇದುವಾರ (ಕಲಿಕೆಯವ)ನಾಗಿರುವಂತೆ ಕರಾರು ಮಾಡಿಕೊ. ದೃಢಪಡಿಸು (B. the bargain ವ್ಯಾಪಾರವನ್ನು ದೃಢಪಡಿಸು). ಮಲಬದ್ಧ ಮಾಡು. ಪಟ್ಟಿಗಟ್ಟು (ಸಾ., B. up). (ಪುಸ್ತಕಕ್ಕೆ) ರಟ್ಟುಗಟ್ಟು. B. up ಒಟ್ಟಾಗಿ ಸೇರಿಸಿ ರಟ್ಟುಹಾಕು. **Bínder** (ನಾ.) ಬಂಧಕ ; ಕಟ್ಟು. ಪುಸ್ತಕಗಳಿಗೆ ರಟ್ಟುಕಟ್ಟುವವನು. ಜೋಡಣೆಯ ತೊಲೆ. ಗೋಡೆಯ ಅಗಲಕ್ಕೂ ಹಾಕುವ ಬಂಧನದ ಕಲ್ಲು : ಬಾಂಡುಕಲ್ಲು. ವೃತ್ತ ಪತ್ರ ಮೊ. ದ ಬಿಡಿಕಾಗದಗಳನ್ನಿಡಲು ಮಾಡಿರುವ ಬರಿಯ ರಟ್ಟು : ರಕ್ಷಾಪುಟ. **Bínding** (ಗು., ನಾ.) ಬಂಧಕ (It is b. on me ಅದಕ್ಕೆ ನಾನು ಬದ್ಧನಾಗಿದ್ದೇನೆ). (ನಾ.) ಬಂಧನ ; ಪುಸ್ತಕದ ರಟ್ಟು ; ಬಟ್ಟೆಗಳ ಅಂಚಿನಲ್ಲಿ ಕಟ್ಟುವ ಕರೆ.

Bind (ನಾ.) ಬಂಧಕ ; ಕಟ್ಟು. ಕಲ್ಲಿದ್ದಲಿನ ಪದರಗಳ ಮಧ್ಯೇ ಇರುವ ಗಟ್ಟಿಜೇಡು.

Bine ಬೈನ್ (ನಾ.) ಬಗ್ಗಿಸಲಾಗುವ ಸಸಿಯ ರೆಂಬೆ ; ಸೆಳೆ ; ಬಳ್ಳಿ ; ಹಂಬು (ಮು., 'ಹಾಪ್' ಬಳ್ಳಿ)

Bínnacle ಬಿನಕ'ಲ್ (ನಾ.) ಹಡಗಿನ ಒಂದು ಅಟ್ಟದಲ್ಲಿಟ್ಟಿರುವ ದಿಗ್ದರ್ಶಕದ ರಕ್ಷಾಪೇಟಿಕೆ.

Binócular ಬಿ(ಬೈ)ನಾಕ್ಯುಲರ್ (ಗು., ನಾ.) ಎರಡು ಕಣ್ಣಿಗೂ ಇಟ್ಟುಕೊಂಡು ನೋಡಲಾಗುವ ದೂರದರ್ಶಕ ; ನೋಟದ ದುರ್ಬೀನು ; ಇಕ್ಕಣ್ಣ ದುರ್ಬೀನು.

Binómial ಬೈನೋಮಿಯಲ್ (ಗು., ನಾ.) (ಗಣಿತ) (೧) ಎರಡು ಪದ ಗಳುಳ್ಳ : ದ್ವಿಪದ. [B. theorem ಒಂದು ದ್ವಿಪದದ ಯಾವ ಘಾತ (power)ವನ್ನಾಗಲಿ ಗುಣಾಕಾರ ಮಾಡದೆಯೇ ಸುಲಭವಾಗಿ ಕಂಡು ಹಿಡಿಯಲಾಗುವ ಸೂತ್ರ : ದ್ವಿಪದ ಸೂತ್ರ]. (೨) ಧನಚಿಹ್ನೆ ಅಥವಾ ಋಣಚಿಹ್ನೆಯಿಂದ ಸೇರಿಸಿರುವ ಬೀಜಗಣಿತದ ಎರಡು ಪದಗಳು : ದ್ವಿಪದ (ಉದಾ. ax^2+bx^3)

Binóminal ಬೈನಾಮಿನಲ್ (ಗು.) ಎರಡು ಹೆಸರಿನ [ಮು., B. system ದ್ವಿನಾಮಕ ಪದ್ಧತಿ : ಎಂದರೆ, ಜೀವವಿಜ್ಞಾನದಲ್ಲಿ ಜಾತಿ (Genus) ಮತ್ತು ವಂಶ (Species) ಎಂಬ ವರ್ಗವಿಭಾಗದ ಹೆಸರು ಗಳೆರಡನ್ನೂ ಉಳ್ಳ : ಉದಾ. *Solanum Melongena* ಬದನೆಯ ಗಿಡ]

Biocéntric ಬಯೊಸೆಂಟ್ರಿಕ್ (ಗು.) ಜೀವವನ್ನು ಮೂಲವಿಷಯವನ್ನಾಗಿ ಪರಿಗಣಿಸುವ : ಜೀವ ಕೇಂದ್ರಕ.

Biochémical ಬಯೊಕೆಮಿಕಲ್ (ಗು.) ಜೀವವಿಷಯದ ರಾಸಾಯನಿಕ ವಿಜ್ಞಾನಕ್ಕೆ ಸಂಬಂಧಪಟ್ಟ : ಜೀವ ರಾಸಾಯನಿಕ. **Biochémistry** (ನಾ.) ಸಸ್ಯಗಳ ಮತ್ತು ಪ್ರಾಣಿಗಳ ಜೀವಚೈತನ್ಯದ ರಾಸಾಯನಿಕ ಅಥವಾ ಭೌತ ರಾಸಾಯನಿಕ ಕ್ರಿಯೆಗಳ ಮತ್ತು ವಸ್ತುಗಳ ವಿಚಾರ ಮಾಡುವ ಶಾಸ್ತ್ರ : ಜೀವ ರಸಾಯನ ವಿಜ್ಞಾನ.

Biodynámics ಬಯೊಡ್ಯೆ(ಡಿ)ನ್ಯಾಮಿಕ್ಸ್ (ನಾ.) ಜೀವಚೈತನ್ಯ ತತ್ತ್ವ ; ಜೀವಗತಿ ತತ್ತ್ವ.

Biogénesis ಬಯೊಜೆನೆಸಿಸ್ (ನಾ.) ಜೀವ ವಸ್ತು ಯಾವಾಗಲೂ ಜೀವ ವಸ್ತುವಿನಿಂದಲೇ ಹುಟ್ಟುವುದು ಎಂಬ ತತ್ತ್ವ : ಜೀವಾಜ್ಜೀವ ತತ್ತ್ವ. **Biógeny** ಬಯಾಜಿನಿ (ನಾ.) (೧) ಜೀವಿಗಳು ಕ್ರಮೇಣ ಹೇಗೆ ವಿಕಾಸಹೊಂದುತ್ತಬಂದುವೆಂದು ತಿಳಿಸುವ ಚರಿತ್ರೆ : ಜೀವಿ ವಿಕಾಸ ಚರಿತ್ರೆ. (೨) = Biogenesis. **Biogenétic** ಬಯೊಜಿನೆಟಿಕ್ (ಗು.) ; **Biógenist** ಬಯಾಜಿನಿಸ್ಟ್ (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bíograph ಬಯೊಗ್ರಾಫ್ (ನಾ.) (Cinematograph ಎಂಬುದರ ಪೂರ್ವರೂಪ) ಚಲಚ್ಚಿತ್ರದರ್ಶಕ. (ಅಪೂರ್ವವಾಗಿ) ಜೀವನ ಚರಿತ್ರ ಲೇಖನ.

Biógraphy ಬಯಾಗ್ರಫಿ (ನಾ.) ಜೀವನ ಚರಿತ್ರೆ. ಜೀವನ ಚರಿತ್ರೆಗಳ ವಿಷಯದ ಸಾಹಿತ್ಯಭಾಗ. ಯಾವುದಾದರೂ ಪ್ರಾಣಿಯ ಜೀವನ ಪಥ. **Biógrapheé** —ಫೀ (ನಾ.) ಯಾವನ ಜೀವನಚರಿತ್ರೆ ಬರೆದಿದೆಯೊ ಅವನು : ಜೀವನ ಚರಿತ್ರ ನಾಯಕ. **Biógrapher** (ನಾ.); **Biográphic(al)** ಬಯೊಗ್ರಾಫಿ —(ಗು.); **Biográphically** (ಕ್ರಿ. ವಿ.)

Biokinétics ಬಯೊಕಿನೆಟಿಕ್ಸ್ (ನಾ.) ಜೀವಿಗಳು ವಿಕಾಸವಾಗುವುದರಲ್ಲಿ ಕ್ರಮೇಣ ಹೊಂದುವ ಪರಿಣಾಮಗಳ ತತ್ತ್ವ : ಜೀವಿ ಪರಿಣಾಮ ತತ್ತ್ವ.

Biólogy ಬಯಾಲೊಜಿ (ನಾ.) [ಜೀವಿಗಳ (ಸಸ್ಯಗಳ ಮತ್ತು ಪ್ರಾಣಿಗಳ) ಅಂಗರಚನೆಯನ್ನೂ ಕಾರ್ಯಕ್ರಮವನ್ನೂ, ಭೂಮಿಯಮೇಲೆ ಅವುಗಳ ಹಂಚಿಕೆಯನ್ನೂ ವಿವರಿಸುವ] ಜೀವವಿಜ್ಞಾನ. **Biólogist** (ನಾ.); **Biológic(al)** ಬಯೊಲಾಜಿ —(ಗು.); **Biológically** (ಕ್ರಿ. ವಿ.)

Biolýtic ಬಯೊಲಿಟಿಕ್ (ಗು.) ಜೀವ ನಾಶಕ.

Biomágnetism ಬಯೊಮ್ಯಾಗ್ನೆಟಿಸ್ಮ್ (ನಾ.) ಜೀವ ಕಾಂತ ಶಕ್ತಿ.

Biómetry ಬಯಾಮೆಟ್ರಿ (ನಾ.) ಜೀವಿಯ ಸರಾಸರಿ ಆಯುಃಪ್ರಮಾಣದ ಗಣನೆ : ಆಯುರ್ದಾಯ. **Biométrics** ಬಯೊಮೆಟ್ರಿಕ್ಸ್ (ನಾ., ಬ. ವ.) ಜೀವ ಸಂಬಂಧವಾದ ಸಂಗತಿಗಳಲ್ಲಿ ಲೆಕ್ಕಾಚಾರದ ಪದ್ಧತಿಯನ್ನುಪಯೋಗಿಸುವ ಶಾಸ್ತ್ರ : ಜೀವ ಸಂಗತಿ ಗಣಿತ.

Bionómics ಬಯೊನಾಮಿಕ್ಸ್ (ನಾ.) ಜೀವಿಗಳು ತಮ್ಮ ಸ್ವಾಭಾವಿಕ ಆವರಣದಲ್ಲಿ ಹೇಗೆ ವರ್ತಿಸುವುವು, ಬೇರೆ ಬೇರೆ ಜೀವಿಗಳಿಗಿರುವ ಪರಸ್ಪರ ಸಂಬಂಧವೇನು —ಇವೇ ಮೊ. ವಿಚಾರಗಳನ್ನು ಮಾಡುವ ಜೀವವಿಜ್ಞಾನದ ಭಾಗ : ಜೀವಾವರಣ ವಿಜ್ಞಾನ.

Biophýsics ಬಯೊಫಿಸಿಕ್ಸ್ (ನಾ., ಬ. ವ.) ಜೀವವಿಜ್ಞಾನ ವಿಷಯಗಳಿಗೆ ಭೌತ ತತ್ತ್ವಗಳನ್ನು ಅನ್ವಯಿಸುವ ಶಾಸ್ತ್ರ : ಜೀವ ಭೌತ ವಿಜ್ಞಾನ. **Biophýsicist** (ನಾ.)

Bíoplasm ಬಯೊಪ್ಲ್ಯಾಸ್ಮ್ (ನಾ.) (ಜೀ. ವಿ.) ಜೀವ ಮೂಲದ್ರವ್ಯ. **Bíoplast** ಬಯೊಪ್ಲ್ಯಾಸ್ಟ್ (ನಾ.) (ಜೀ. ವಿ.) ಜೀವ ಮೂಲದ್ರವ್ಯದ ಕಣ (ಸಾ., ಒಂದು ಅಂಗುಲದ ಸಾವಿರ ಪಾಲಿನಲ್ಲಿ ಒಂದು ಪಾಲಿಗಿಂತಲೂ ಕಡಮೆಯಾದ ವ್ಯಾಸವುಳ್ಳದ್ದು)

Bíoscope ಬಯೊಸ್ಕೋಪ್ (ನಾ.) = Biograph.

Bipártite ಬೈಪಾರ್ಟೈಟ್ (ಗು.) (ಸ. ವಿ.) (ಎಲೆಗಳ ವಿಷಯದಲ್ಲಿ) ಸರಿಸುಮಾರು, ಬುಡದವರೆಗೂ, ಎರಡು ಭಾಗವಾಗಿ ಒಡೆದಿರುವ, ಎರಡು ಭಾಗಗಳಾಗಿರುವ. ಎರಡು ಭಾಗಗಳಲ್ಲಿರುವ : ದ್ವಿಭಾಗಿ. (ನ್ಯಾ. ಶಾ.) (ಕರಾರು, ಒಪ್ಪಂದ, ಮೊ.) ಪ್ರತಿ ಪಕ್ಷದವನಿಗೂ ಒಂದೊಂದರಂತೆ ಎರಡಾಗಿ ಬರೆದ : ದ್ವಿಪ್ರತಿಯ.

Bíped ಬೈಪೆಡ್ (ಗು., ನಾ.) ಎರಡು ಕಾಲಿನ (ಪ್ರಾಣಿ); ದ್ವಿಪಾದಿ (ಪ್ರಾಣಿ). **Bípedal** (ಗು.)

Bíplane ಬೈಪ್ಲೇನ್ (ನಾ.) ಒಂದರಮೇಲೊಂದರಂತೆ ಎರಡು ಆಧಾರ ಫಲಕಗಳುಳ್ಳ ಫಲಕ ವಿಮಾನ : ದ್ವಿಫಲಕಿ.

Bipólar ಬೈಪೋಲರ್ (ಗು.) ಎರಡು ಕೊನೆಗಳು ಅಥವಾ ಎರಡು ಧ್ರುವಗಳು, ಉಳ್ಳ : ದ್ವಿಧ್ರುವ.

Biquadrátic ಬೈಕ್ವಾಡ್ರ್ಯಾಟಿಕ್ (ಗು., ನಾ.) (ಗಣಿತ) ಚತುರ್ಘಾತ (ಸಂಖ್ಯೆ); ವರ್ಗದ ವರ್ಗ. B. equation ಅನಿಶ್ಚಿತ ಪದವು ಚತುರ್ಘಾತವಾಗುಳ್ಳ ಸಮೀಕರಣ : ಚತುರ್ಘಾತ ಸಮೀಕರಣ.

Birch ಬರ್ಚ್ (ನಾ., ಕ್ರಿ. ಸಕ.) ನುಣುಪಾದ ತೊಗಟೆಯೂ ಸೆಳೆ ಕೊಂಬುಗಳೂ ಉಳ್ಳ ಒಂದು ಜಾತಿಯ ಕಾಡುಮರ : ಭೂರ್ಜ. ಶಾಲೆಯ ಹುಡುಗರನ್ನು ಹೊಡೆಯುವುದಕ್ಕೆ ಹಿಂದೆ ಉಪಯೋಗಿಸುತ್ತಿದ್ದ 'ಬರ್ಚ್' ಕಡ್ಡಿಗಳ ಕಟ್ಟು (also, B.-rod). (ಕ್ರಿ.) ಬರ್ಚ್‌ಕಡ್ಡಿಗಳಿಂದ ಹೊಡೆ. **Bírchen** (ಗು.)

Bird ಬರ್ಡ್ (ನಾ.) ಹಕ್ಕಿ ; ಪಕ್ಷಿ. (ಅಸಂ.) ಹುಡುಗಿ. B. of Jove ರಣಹದ್ದು. B. of Juno ನವಿಲು. B. of paradise ಸುಂದರವಾದ ಗರಿಗಳುಳ್ಳ ನ್ಯೂಗಿನಿಯ ಒಂದು ಪಕ್ಷಿಜಾತಿ : ದಿವ್ಯ ಪಕ್ಷಿ. B. of passage ದಾರಿಹೋಕ ಹಕ್ಕಿ ; ತನೆಯಮೇಲಿನ ಹಕ್ಕಿ. (ರೂಪ.) ಸ್ಥಾಯಿಯಾಗಿ ನೆಲಸದವನು ; ಪ್ರವಾಸಿ. B. of prey ಹಿಂಸ್ರ ಪಕ್ಷಿ (ಡೇಗೆ, ರಣಹದ್ದು, ಗೂಬೆ, ಮೊ.) ; ಭರೆಯ ಹಕ್ಕಿ. Old b. ಜೋಕೆಯಿಂದಿರುವವನು ; 'ಹುಷಾರಿ' ಮನುಷ್ಯ. Bird's-eye view ಎತ್ತರದಿಂದ ಊರು, ಮೊ. ಗಳ ವಿಶಾಲವಾದ ನೋಟ : ಹಕ್ಕಿನೋಟ. (ರೂಪ.) ಸೂಕ್ಷ್ಮ ನಿರೂಪಣ ; ಒಟ್ಟದಕ. B.-fancier ಹಕ್ಕಿಗಳ ವಿಚಾರವನ್ನು ತಿಳಿದವನಾಗಿ, ಅವನ್ನು ಸಂಗ್ರಹಿಸಿ, ಸಾಕಿ, ವ್ಯಾಪಾರಮಾಡುವವನು. B.-lime ಹಕ್ಕಿಹಿಡಿಯುವುದಕ್ಕಾಗಿ ರೆಂಬೆಗಳಮೇಲೆ ಬಳಿಯುವ ಒಂದು ತೆರದ ಅಂಟು : ಹಕ್ಕಿಯಂಟು. The b. is flown ಹಕ್ಕಿ ಹಾರಿಹೋಯಿತು (ಕಳ್ಳ, ಕೈದಿ, ಮೊ. ಓಡಿಹೋದನು). A b. in the hand is worth two in the bush ಪೊದೆಯಲ್ಲಿಯ ಎರಡು ಹಕ್ಕಿಗಳಿಗಿಂತ ಕೈಗೆ ಸಿಕ್ಕಿದ ಒಂದು ಹಕ್ಕಿ ಲೇಸು ; ಕನ್ನಡಿಯ ಗಂಟಿಗಿಂತ ಕೈಯ ದಂಟು ಮೇಲು. A little b. has whispered a secret to me ಒಂದು ಪುಟ್ಟ ಹಕ್ಕಿ (ಯಾರೋ ಒಬ್ಬನು) ನನ್ನ ಕಿವಿಯಲ್ಲಿ ಒಂದು ಗುಟ್ಟು ಹೇಳಿತು. Birds of a feather flock together ಒಂದೇ ಪುಕ್ಕದ ಹಕ್ಕಿಗಳು ಒಟ್ಟಿಗೆ ಸೇರುತ್ತವೆ (ಎಂದರೆ, ಒಂದೇ ಸ್ವಭಾವದವರು ಒಟ್ಟು ಗೂಡುತ್ತಾರೆ). Give one the b., get the b. (ಅಸಂ.) ಗೇಲಿ ಮಾಡು, ಮಾಡಿಸಿಕೊ. Kill two birds with one stone ಒಂದು ಕಲ್ಲಿನಿಂದ ಎರಡು ಹಕ್ಕಿಗಳನ್ನು (ಕಾಯನ್ನು) ಕೆಡವು (ಎಂದರೆ, ಒಂದೇ ಪ್ರಯತ್ನಕ್ಕೆ ಎರಡು ಫಲ ಪಡೆ). One beats the bush, another takes the b. (ರೂಪ.) ಕಷ್ಟವೊಬ್ಬನಿಗೆ, ಫಲವೊಬ್ಬನಿಗೆ.

Bird (ಕ್ರಿ. ಅಕ.) ಹಕ್ಕಿ ಹಿಡಿ, ಹೊಡೆ.

Birth ಬರ್ತ್ (ನಾ.) ಹುಟ್ಟು ; ಜನನ ; ಜನ್ಮ ; ಹೆರಿಗೆ (Give b. to ಹೆರು, ಹಡೆ. New b. ಹೊಸ ಹುಟ್ಟು ; ಪುನರ್ಜನ್ಮ ; ಪುನರುಜ್ಜೀವನ). ಮೂಲ ; ಉತ್ಪತ್ತಿ ; ಆದಿ. ವಂಶ ; ಕುಲ ; ಗೋತ್ರ ; ಜಾತಿ. ದೊಡ್ಡ ವಂಶ ; ಕುಲೀನತೆ ; ದೊಡ್ಡ ಮನೆತನದವನು ; ಕುಲೀನ. B.-control ಮಕ್ಕಳಾಗಬಾರದೆಂಬ ಅಪೇಕ್ಷೆಯಿಂದ ಗರ್ಭತಡೆಯುವ ಉಪಾಯಗಳು : ಸಂತಾನ ನಿರೋಧ ; ಹುಟ್ಟು ತಡೆ ; ಸಂತಾನ ನಿರೋಧದ ಆಚರಣೆ, ಪ್ರಚಾರ. Birthday ಹುಟ್ಟಿದ ದಿನ ; ಜನ್ಮ ದಿನ ; ವರ್ಧಂತಿ ; Birthday honours ದೊರೆ ತನ್ನ ವರ್ಧಂತಿಯ ದಿನ ಕೊಡುವ ಬಿರುದುಗಳು. Birthday suit (ಹಾಸ್ಯವಾಗಿ) ಮೈಚರ್ಮ. B.-rate (ಸಾವಿರಕ್ಕೆ ಇಷ್ಟೊಂದು ಗಣಿಸುವ) ಜನನ ಸಂಖ್ಯಾ ಪ್ರಮಾಣ. Birthright ಒಂದು ಕುಟುಂಬದಲ್ಲಿ ಜ್ಯೇಷ್ಠನಾಗಿ ಹುಟ್ಟಿದುದರಿಂದ, ಅಥವಾ ಒಂದು ಪದವಿಯಲ್ಲಿ ಅಥವಾ ದೇಶದಲ್ಲಿ ಹುಟ್ಟಿದುದರಿಂದ, ಅಥವಾ ಮನುಷ್ಯನಾಗಿ ಹುಟ್ಟಿದುದರಿಂದ, ಬಂದ ಹಕ್ಕು ; ಜನ್ಮಸಿದ್ಧವಾದ ಹಕ್ಕು ; ಹುಟ್ಟುಹಕ್ಕು.

Bírthwort ಬರ್ತ್‌ವರ್ಟ್ (ನಾ.) Indian b. ಈಶ್ವರೀ ಬೇರು, ಬಳ್ಳಿ.

Bis ಬಿಸ್ (ನಾ.) (ಸಂಗೀತ) ಮತ್ತೊಂದು ಸಲ ; ಎರಡನೆಯಾವೃತ್ತಿ. ಎರಡು ಸಲ [ಒಂದು ಸಂಖ್ಯೆ, ಮಾತು, ಮೊ. ಎರಡು ಸಲ ಬಂದಿದೆಯೆಂದು ಸೂಚಿಸಲು ಉಪಯೋಗಿಸುವ ಪದ : ಉದಾ. 'p. 175 (bis)']

Bíscuit ಬಿಸ್ಕೆಟ್ (ನಾ., ಗು.) ಗೋಧಿ, ಮೊ. ಧಾನ್ಯಗಳ ಹಿಟ್ಟಿನಿಂದ, ಉದುಗು ಹಾಕದೆ, ತೆಳ್ಳನೆಯ ಸಣ್ಣ ಬಿಲ್ಲೆಗಳಾಗಿ ಮಾಡಿದ, ದೃಢವಾಗಿಯೂ ಲಘುವಾಗಿಯೂ ಇರುವ, ರೊಟ್ಟಿ : ಬಿಸ್ಕತ್ತು. ಆವಿಗೆಯಲ್ಲಿ ಬೆಂದಮೇಲೆ ಮೆರುಗುಕೊಡುವುದಕ್ಕೆ ಮೊದಲಿನ ಸ್ಥಿತಿಯಲ್ಲಿಯ ಪಿಂಗಾಣಿ. ನಸು ಕಂದುಬಣ್ಣ. B.-throw (ನಾವೆ) ಸ್ವಲ್ಪ ದೂರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bis dat qui cíto dat (L) ಬಿಸ್ ಡಾಟ್ ಕ್ವೈ ಸಿಟೋ ಡ್ಯಾಟ್ (ವಾಕ್ಯ) ಕೂಡಲೆ ಕೊಡುವವನು ಎರಡು ಬಾರಿ ಕೊಟ್ಟಂತೆ (ದಾನ ಬೇಡುವವರ ಪ್ರಕಟನೆಯಲ್ಲಿ ಹಾಕುವ ಸೂತ್ರ)

Biséct ಬೈಸೆಕ್ಟ್ (ಕ್ರಿ. ಸಕ.) ಎರಡಾಗಿ (ಸಾ., ಸಮಭಾಗವಾಗಿ) ಕತ್ತರಿಸು, ಭಾಗಿಸು ; ಅರ್ಧಿಸು ; ಸಮಭಾಗಿಸು. **Biséction** (ನಾ.) ; **Biséctor** — ಕ್ಟರ್ (ನಾ.) ಎರಡು ಭಾಗ (ಸಾ., ಸಮಭಾಗ) ಮಾಡುವ ರೇಖೆ ; ಸಮ ಭಾಜಕ.

Biséxual ಬೈಸೆಕ್ಸ್ಯು(ಕ್‌ಷ್ಯು)ಅಲ್ (ಗು.) ಎರಡು ಲಿಂಗಗಳೂ ಒಂದೇ ವ್ಯಕ್ತಿಯಲ್ಲಿರುವ ; ಉಭಯ ಲಿಂಗಿ ; ಸ್ತ್ರೀಪುಂಸಕ.

Bíshop ಬಿಷಪ್ (ನಾ.) ಒಂದು ಗೊತ್ತಾದ ಪ್ರಾಂತಕ್ಕೆ ಧರ್ಮಾಧಿಪತಿಯಾಗಿ ಪಟ್ಟಕಟ್ಟಲ್ಪಟ್ಟ ಕ್ರೈಸ್ತಗುರು : ಬಿಷಪ್. ಚದುರಂಗದ ಆಟದಲ್ಲಿ ಬಿಷಪ್ಪಿನ ಟೋಪಿಯಾಕಾರದ ಕಾಯಿ. ವಾಸನೆ ಕಟ್ಟಿದ ಮದ್ಯ. Bishop's-weed ಓಮದ ಗಿಡ. **Bíshopric** (ನಾ.) ಬಿಷಪ್ಪಿನ ಅಧಿಕಾರ, ಪದವಿ, ಆಧಿಪತ್ಯ.

Bísmuth ಬಿಸ್(ಸ್)ಮತ್ (ನಾ.) ನಸುಗೆಂಪು ಕೂಡಿದ ಬಿಳಿಯ ಬಣ್ಣವುಳ್ಳ ಒಂದು ಮೂಲಲೋಹ : ಬಿಸ್ಮತ್.

Bíson ಬೈಸನ್, ಬಿಸನ್, ಬಿಸ್ಸನ್ (ನಾ.) ಕಾಡುಕೋಣ ; ಕಾಡೆಮ್ಮೆ.

Bisque[1] ಬಿಸ್ಕ್ (ನಾ.) (ಸಣ್ಣ ಪ್ರತಿಮೆಗಳನ್ನು ಮಾಡುವುದಕ್ಕಾಗಿ ಉಪಯೋಗಿಸುವ) ನುಣುಪುಮಾಡಿದ ಬಿಳಿಯ ಪಿಂಗಾಣಿ.

Bisque[2] ಬಿಸ್ಕ್ (ನಾ.) (ಟೆನಿಸ್ ಆಟದಲ್ಲಿ) ಒಟ್ಟು ಆಟದಲ್ಲಿ ಗೆಲುವಿನ ಒಂದು ಅಂಕವನ್ನು ಗೆಲ್ಲದೆಯೇ ಲೆಕ್ಕಕ್ಕೆ ಸೇರಿಸಿಕೊಳ್ಳುವ ಹಕ್ಕು. ('ಕ್ರೋಕೆ' ಆಟದಲ್ಲಿ) ಮತ್ತೊಂದು ಸರದಿ ಆಡುವ ಹಕ್ಕು.

Bisséxtile ಬಿಸೆಕ್ಸ್ಟಿಲ್ (ಗು., ನಾ.) ಫೆಬ್ರವರಿ ೨೯ನೆಯ ತಾರೀಖು ಎರಡಾಗುಳ್ಳ (ವರ್ಷ). ೩೬೬ ದಿನಗಳುಳ್ಳ ವರ್ಷ. ದಿನಾಧಿಕ ವರ್ಷ(ದ)

Bístoury ಬಿಸ್ಟರಿ, ಬಿಸ್ಟುರಿ (ನಾ.) ಶಸ್ತ್ರಚಿಕಿತ್ಸೆಯಲ್ಲಿ ಉಪಯೋಗಿಸುವ ಸಣ್ಣ ಚೂರಿ.

Bístre ಬಿಸ್ಟರ್ (ನಾ., ಗು.) ಇಲ್ಲಣದಿಂದ ಮಾಡಿದ ಒಂದು ಬಗೆಯ ಕಂದುಬಣ್ಣ. ಇಂಥ ರಂಗು, ರಂಗಿನ.

Bit[1] ಬಿಟ್ (ನಾ., ಕ್ರಿ. ಸಕ.) ತಿಂಡಿ. ಬೈರಿಗೆಯ ಅಲಗು ; ತೋಬಡದ ಉಳಿಯಲಗು ; ಪಟಕಾರು, ಮೊ. ಗಳ ಕೊನೆಗತ್ತರಿ. ಕಡಿವಾಣ. (ರೂಪ.) ಹತೋಟಿ ; ನಿರ್ಬಂಧ ; ಅಧೀನ. (ಕ್ರಿ.) (ಕುದುರೆಗೆ) ಕಡಿವಾಣ ಹಾಕು ; ಕಡಿವಾಣಕ್ಕೆ ಬಗ್ಗಿಸು ; ಬಿಗಿಹಿಡಿ.

Bit[2] ಬಿಟ್ (ನಾ.) ತುತ್ತು ; ಕವಳ. ಚೂರು ; ತುಣುಕು. ಪ್ರಕೃತಿಯ ಚಿತ್ರ (ನಿಜವಾದದ್ದು ಅಥವಾ ಚಿತ್ರಿಸಿದ್ದು). ಪುಸ್ತಕ, ಮೊ. ಗಳಲ್ಲಿಯ ಸಣ್ಣ ಪ್ರಕರಣ. ಸಣ್ಣ ನಾಣ್ಯ (Three-pie bit ಮೂರುಕಾಸಿನ ಬಿಲ್ಲೆ). B. by b. ಕೊಂಚಕೊಂಚವಾಗಿ ; ಕ್ರಮೇಣ. Tit-b. ರಸ ತಿಂಡಿ ; ತುಣುಕು ಮಿಣುಕು. A b. of a coward ಸ್ವಲ್ಪ ಹೇಡಿ ತಾನೆ. Do one's b. (ಒಂದು ಕಾರ್ಯಕ್ಕೆ ದ್ರವ್ಯರೂಪದಿಂದಾಗಲ ಕಾರ್ಯರೂಪದಿಂದಾಗಲ) ಯಥಾಶಕ್ತಿ ಸಹಾಯಮಾಡು. Give a b. of one's mind ಸ್ಪಷ್ಟವಾಗಿ ಹೇಳಿಬಿಡು ; ಬಿಚ್ಚಿ ಹೇಳು. Not a b. of it ಇಲ್ಲವೇ ಇಲ್ಲ. Wait a b. ಸ್ವಲ್ಪ ತಾಳು.

Bitch ಬಿಚ್ (ನಾ.) ಹೆಣ್ಣು ನಾಯಿ, ನರಿ, ತೋಳ (ಸಾ., B. fox, B. wolf). ಹಾದರಗಿತ್ತಿ.

Bite ಬೈಟ್ (ಕ್ರಿ. ; ಭೂತ Bit ; ಭೂ. ಕೃ. Bitten, Bit) ಕಡಿ ; ಕಡಿದುಹಾಕು ; ಕಚ್ಚು ; (ಸೊಳ್ಳೆ, ಚಿಕಟ, ಮೊ.) ಚುಚ್ಚಿ ರಕ್ತಹೀರು. (ಮೀನು) ಗಾಳವನ್ನು ಕಚ್ಚು (ರೂಪ. ಸಹ). (ಕತ್ತಿ, ಮೊ.) ಚುಚ್ಚು, ತಿವಿ, ಇರಿ. ಉರಿಯುವಂತೆ ಮಾಡು ; ನೋವು ಮಾಡು. ತುಕ್ಕು ಹಿಡಿ. (ಚಕ್ರ, ಲಂಗರು, ಮೊ.) ಕಚ್ಚಿಕೊ. ಮೋಸ ಮಾಡು (Were you bitten ? ಮೋಸಹೋದೆಯೊ ?). B. the dust or ground ನೆಲ ಕಚ್ಚು ; ಬಿದ್ದು ಸಾಯಿ. B. one's lips ತುಟಿ ಕಚ್ಚು ; ಕೋಪ, ಮೊ. ನ್ನು ತಾಳಿಕೊ. B. off more than one can chew ನುಂಗಲಾಗದ ತುತ್ತನ್ನು ಬಾಯಿಗೆ ಹಾಕಿಕೊ (ಎಂದರೆ, ಶಕ್ತಿಮೀರಿದ ಕಾರ್ಯಕ್ಕೆ ಕೈಹಾಕು). Bitten with enthusiasm ಉತ್ಸಾಹಗ್ರಸ್ತನಾಗಿ. **Bíter** (ನಾ.) (ಕ್ರಿಯಾರ್ಥಗಳಲ್ಲಿ) ; ಮೋಸಗಾರ ('The biter bit ಮೋಸಗಾರನೇ ಮೋಸಹೋದನು' ಎಂಬಲ್ಲಿ ಮಾತ್ರ). **Bíting** (ಗು.) (ಕ್ರಿಯಾರ್ಥಗಳಲ್ಲಿ) ; ಖಾರವಾದ ; ಕಟುವಾದ ; ಚುಚ್ಚುವ ; ಕೊರೆಯುವ ; ತೀಕ್ಷ್ಣ ; ಮರ್ಮೋದ್ಘಾಟಕ. **Bítingly** (ಕ್ರಿ. ವಿ.)

Bite (ನಾ.) ಕಡಿತ ; ಕಚ್ಚುಗಾಯ ; ಕಚ್ಚಿ ತೆಗೆದ ಭಾಗ. ತಿಂಡಿ. (ಮೀನು) ಗಾಳ ನುಂಗುವುದು. ಹಿಡಿತ (ರೂಪ. ಸಹ)

Bítter ಬಿಟರ್ (ಗು., ಕ್ರಿ. ವಿ., ನಾ.) ಕಹಿ ; ಕಟು ; ತಿಕ್ತ. ಮನಸ್ಸಿಗೆ ಹಿತವಿಲ್ಲದ ; ಮನಸ್ಸು ಕೊರೆಯುವ ; ವ್ಯಥೆ ತುಂಬಿರುವ ; ಕಠೋರ ; ಉಗ್ರ ; ನಿಷ್ಠುರ ; ಮನೋವೇಧಕ. ಕೊರೆಯುವ ಚಳಿಯ (= B. cold). B. sweet ಕೊನೆಗೆ ಕಹಿತೋರುವ ಸಿಹಿ ; ಕಹಿ ಸಿಹಿ (ರೂಪ. ಸಹ). B. end ಕಟ್ಟಕಡೆಯ ವರೆಗೂ ; ಪ್ರಾಣಾಂತವಾಗಿ. **Bítterish** (ಗು.) ; **Bítterly** (ಕ್ರಿ. ವಿ.) ; **Bítterness** (ನಾ.) ಕಯ್ಪು ; ಕಡುಪು. **Bítters** (ನಾ.) ಜಠರ ಮಾಂದ್ಯಕ್ಕೆ ಔಷಧವಾಗಿ ಕೆಲವು ಕಹಿ ಪದಾರ್ಥಗಳನ್ನು ಊರಿಟ್ಟ ಮದ್ಯ. (ಕ್ವೈನಾದಂಥ) ಕಹಿಯೌಷಧಗಳು.

Bíttern[1] ಬಿಟರ್ನ್ (ನಾ.) ಜೌಗುಪ್ರದೇಶದಲ್ಲಿ ವಾಸಮಾಡುವ ಒಂದು ಪಕ್ಷಿಜಾತಿ.

Bíttern[2] ಬಿಟರ್ನ್ (ನಾ.) ಪಾತಿಯಲ್ಲಿಯ ಸಮುದ್ರದ ನೀರಿನಲ್ಲಿ ಉಪ್ಪು ಹರಳುಗಳಾದಮೇಲೆ ಉಳಿಯುವ ದ್ರವ.

Bíttock ಬಿಟಕ್ (ನಾ.) ಸಣ್ಣ ಚೂರು ; ತುಣುಕು.

Bitulíthic ಬಿಟ್ಯುಲಿತಿಕ್ (ಗು., ನಾ.) ಕಲ್ಲುಜಲ್ಲಿ ಮತ್ತು ಕಲ್ಲರಗನ್ನು ಸೇರಿಸಿ ಮಾಡಿದ (ನೆಲಗಟ್ಟು). (ವ್ಯಾಪಾರದ ಹೆಸರು)

Bítumen, Bitúmen ಬಿಟ್ಯು(ಟ್ಯೂ)ಮೆನ್ (ನಾ.) ಶಾಖಕ್ಕೆ ಕರಗುವ, ಗಚ್ಚಾಗಿ ಉಪಯೋಗಿಸಲಾಗುವ, ಕಪ್ಪುಬಣ್ಣದ ಒಂದು ಖನಿಜ : ಬಿಟ್ಯೂಮೆನ್. ಪ್ರಕೃತಿಯಲ್ಲಿ ದೊರೆಯುವ 'ನ್ಯಾಫ್ತ', 'ಪೆಟ್ರೋಲಿಯಂ, ಮೊ. ಜಲಜನಕ ಇಂಗಾಲ ಸಂಯುಕ್ತ (Hydrocarbons). **Bitúminíferous** — ಟ್ಯೂಮಿನಿ — (ಗು.) ; **Bitúminous** (ಗು.) ; **Bitúminize** (ಕ್ರಿ. ಸಕ.) ಬಿಟ್ಯೂಮೆನ್ನಾಗಿ ಮಾಡು ; ಬಿಟ್ಯೂಮೆನ್ನನ್ನು ಗರ್ಭೀಕರಿಸು ; ಬಿಟ್ಯೂಮೆನ್ನಿನಿಂದ ಮೆರುಗು ಹಚ್ಚು. **Bitúminizátion** (ನಾ.)

Bívalent ಬಿವಲೆಂಟ್ (ಗು.) = Divalent.

Bívalve ಬೈವ್ಯಾಲ್ವ್ (ಗು., ನಾ.) (ಪ್ರಾ. ವಿ.) ಮಧ್ಯೆ ಕೀಲಿರುವ ಎರಡು ಚಿಪ್ಪುಗಳುಳ್ಳ (ಪ್ರಾಣಿ). ಅಂಥ ಚಿಪ್ಪುಗಳು. ಮುತ್ತಿನ ಪ್ರಾಣಿ, ಮೊ. ದ ಚಿಪ್ಪಿನ ಪ್ರಾಣಿ. (ಸ. ವಿ.) ಎರಡು ಕವಾಟಗಳುಳ್ಳ. **Bívalved** (ಗು.) ; **Biválvular** — ವ್ಯುಲರ್ (ಗು.)

Bívouac ಬಿವ್ವ್ಯಾಕ್, ಬಿವುಆ್ಯಕ್ (ಕ್ರಿ. ಅಕ., ನಾ.) (ಸೇನೆ., ಹಿಂದಿನ ಪ್ರಯೋಗ) ಶತ್ರುಗಳು ಥಟ್ಟನೆ ಮೇರೆಬೀಳುವುದನ್ನು ತಪ್ಪಿಸುವುದಕ್ಕಾಗಿ ಸೇನೆಯೆಲ್ಲವೂ ಸಶಸ್ತ್ರವಾಗಿ ರಾತ್ರಿಯೆಲ್ಲ ಕಾದಿರು(ವುದು) : ರಣ ಜಾಗರ (ಮಾಡು). (ಈಗ) ರಣರಂಗದಲ್ಲಿ ಡೇರೆ, ಮೊ. ಇಲ್ಲದೆಯೇ ಸೇನೆ ತಾತ್ಕಾಲಿಕವಾಗಿ ಬೀಡು ಬಿಡು(ವುದು). ಬಯಲು ಬೀಡು ಬಿಡು(ವುದು)

Bizárre ಬಿಝಾರ್ (ಗು.) ವಿಲಕ್ಷಣ ; ವಿಕಾರ ; ವಿಜಾತೀಯ ; ವಿಪರೀತ ; ವಕ್ರವಕ್ರ. ಬೇರೆಬೇರೆ ರೀತಿಗಳನ್ನು ಒಟ್ಟುಗಲಸಿದ ; ಅಸಂಸ್ಕೃತ ರೀತಿಯೂ ಸೇರಿದ. **Bizarrerié** ಬೀಝಾರರೀ (ನಾ.) ವಿಲಕ್ಷಣತೆ, ಮೊ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Blab ಬ್ಲ್ಯಾಬ್ (ಕ್ರಿ., ನಾ.) ಅವಿವೇಕವಾಗಿ ಅಥವಾ ಅಚಾತುರ್ಯವಾಗಿ ಮಾತನಾಡು, ಹೇಳು (ವವನು) ; ಗಳಹು(ವವನು). (ಗುಟ್ಟು ಮೊ. ನ್ನು) ರಟ್ಟುಮಾಡು, ಹೊರಗೆಡವು, ಬಯಲುಮಾಡು (ವವನು) ; ಹರಟೆಯ ಮಲ್ಲ. **Blábber** (ನಾ.)

Black ಬ್ಲ್ಯಾಕ್ (ಗು.) ಕಪ್ಪು ; ಕರಿಯ ; ಕಾಳ ; ಕೃಷ್ಣ (B. in the face ಕೋಪದಿಂದ ಅಥವಾ ಉಸಿರುಕಟ್ಟುವುದರಿಂದ ಮುಖ ಕಪ್ಪಾಗಿ, ನೀಲಿಗಟ್ಟಿ). ಕರಿಯ ಮೆಯ್ಯ ; ಶ್ಯಾಮಲ ವರ್ಣದ ; ಕರಿಯ ಉಡುಪಿನ ; ಕೊಳಕಾದ. ದುಷ್ಟ ; ನೀಚ ; ದಾರುಣ ; ಅಸಹ್ಯ ; ನಿಂದ್ಯ ; ಘೋರ ; ಕರಾಳ (Crimes of blackest dye ಅತಿ ಘೋರತಮ ದುಷ್ಕೃತ್ಯಗಳು). ಕೋಪದಿಂದ ಕೂಡಿದ ; ರೇಗುವ (B.-browed ಹುಬ್ಬು ಗಂಟುಹಾಕಿಕೊಂಡಿರುವ). ಅಪಮಾನ ಸೂಚಕ (B. mark ಮಾಡಿದ ತಪ್ಪಿತಕ್ಕಾಗಿ ಆಕ್ಷೇಪಣೆಯ ಅಥವಾ ಅಪಮಾನ ಸೂಚಕವಾದ ಗುರುತು ; ಕಳಂಕ. B. book, list, ತುಂಟರು, ಗುಮಾನಿಗಳು, ನ್ಯಾಯ ಬಹಿಷ್ಕೃತರು — ಇವರ ಹೆಸರುಗಳ ಪಟ್ಟಿ ; ಗುಮಾನಿ ಪಟ್ಟಿ. Deep in one's b. books ಒಬ್ಬನ ಅಭಿಮಾನವನ್ನು ಪೂರ್ತಿಯಾಗಿ ಕಳೆದುಕೊಂಡು). B. and blue ಬಾಸುಂಡೆಗಳಿಂದ ಮೈ ನೀಲಿಗಟ್ಟಿ. B. and white ಬರಹ ; ಅಕ್ಷರ ; ಮಸಿಯಿಂದ ಬರೆದ ಚಿತ್ರ (Down in b. and white ಬರಹದಲ್ಲಿ ಅಥವಾ ಅಚ್ಚಕ್ಷರದಲ್ಲಿ ಇರುವ). **Bláckamoor** (ನಾ., ಗು.) ಅಚ್ಚಕಪ್ಪು ಬಣ್ಣದ ಮನುಷ್ಯ ; ನೀಗ್ರೊ. (ಗು.) ಕಗ್ಗಪ್ಪಿನ. **B. art** ಮಾಟ ; ಶೂನ್ಯ ; ಮೋಡಿ ; ಅಭಿಚಾರ. **Blácka-vised** (ಗು.) (ಪ್ರಾಚೀ. ಪ್ರ.) ಕಪ್ಪು ಮೋರೆಯ. **B.-ball** ಸಾಮಾಜಿಕ ಸಂಸ್ಥೆ, ಮೊ. ಗಳಲ್ಲಿ ಸದಸ್ಯನಾಗಬೇಕೆನ್ನುವವನ ದರಖಾಸ್ತಿನ ವಿಷಯದಲ್ಲಿ ಆ ಸಂಸ್ಥೆಯ ಸದಸ್ಯರು (ಗುಪ್ತವಾಗಿ ಅಭಿಮತ ಕೊಡುವಾಗ) ಒಪ್ಪದೆಯಿರುವವರು ಉಪಯೋಗಿಸುವ ಕಪ್ಪುಗೋಲಿ ; ಗುಪ್ತವಾಗಿ ಕೊಡುವ ವಿರುದ್ಧಮತ. **Bláckball** (ಕ್ರಿ. ಸಕ.) ವಿರುದ್ಧ ಮತ ಕೊಡು. **B.-beetle** ಜಿರಲೆ. **Bláckberry** ಮುಳ್ಳಿರುವ ಒಂದು ಜಾತಿಯ ಹಣ್ಣುಗಿಡ ; ಅದರ ಹಣ್ಣು. **Bláckbird** ಯೂರೋಪಿನ ಒಂದು ಹಾಡುಹಕ್ಕಿ. ಗುಲಾಮರ ವ್ಯಾಪಾರದ ಹಡಗಿನಲ್ಲಿರುವ ಕದ್ದುತಂದ ನೀಗ್ರೋಮನುಷ್ಯ. **Bláckbirding** ಕದ್ದು ತಂದ ನೀಗ್ರೋ ಗುಲಾಮರ ವ್ಯಾಪಾರ. **B.-board** (ಪಾಠಶಾಲೆಯಲ್ಲಿ ವಿಷಯಗಳನ್ನು ಸೀಮೆಸುಣ್ಣದಿಂದ ಬರೆದು ತೋರಿಸುವುದಕ್ಕಾಗಿ ಉಪಯೋಗಿಸುವ) ಕಪ್ಪುಹಲಗೆ. **B. bottom** ಅಮೆರಿಕನರ ಒಂದು ತೆರದ ಕುಣಿತ. **B. cap** (ಜಡ್ಜಿಗಳು ಮರಣದಂಡನೆ ವಿಧಿಸುವಾಗ ಇಟ್ಟುಕೊಳ್ಳುವ) ಕಪ್ಪು ಟೋಪಿ. **Bláckcap** ಕಪ್ಪುಟೋಪಿ ಇಟ್ಟುಕೊಂಡಿರುವವನು. ತಲೆಯ ಮೇಲ್ಭಾಗ ಕಪ್ಪಗಿರುವ ಒಂದು ಪಕ್ಷಿಜಾತಿ. **B. cattle** (ಬಣ್ಣವೇನೇ ಇರಲಿ) ದನ, ಹಸು, ಎತ್ತು, ಹೋರಿ. B.-coat worker ಗುಮಾಸ್ತ, ಮೊ. (ಕೈಗೆಲಸದವರಲ್ಲ). **B.-cock** (opposed to *Grey-hen*) ಹುಂಜ. **B. coffee** (ಹಾಲು ಹಾಕದೆ ತೀಕ್ಷ್ಣವಾಗಿ ಮಾಡಿದ) ಕರಿ ಕಾಫಿ. **B. Country** (ಇಂಗ್ಲೆಂಡಿನಲ್ಲಿ) ಹೊಗೆ ಹೆಚ್ಚಾಗಿರುವ ಪ್ರಾಂತಗಳು. **B. death** ಬಹಳ ಉಗ್ರವಾದ ಪ್ಲೇಗುವ್ಯಾಧಿ. **B. dog** (ರೂಪ.) ನಿರುತ್ಸಾಹ ; ಅಸಮಾಧಾನ ; ದುಮ್ಮಾನ. **B. draught** ಭೇದಿಯೌಷಧ ; ಸುಖ ವಿರೇಚಕ. **B. eye** ಪೆಟ್ಟಿನಿಂದ ಕಪ್ಪುಗಟ್ಟಿದ ಕಣ್ಣು. **B.-eyed** ಕಪ್ಪುಕಣ್ಣುಳ್ಳ. **B.-face** ಕಪ್ಪುಮೋರೆಯ ಕುರಿ. **B. fellow** ಆಸ್ಟ್ರೇಲಿಯದ ಮೂಲನಿವಾಸಿ. **B. flag** ಕರಿಯ ಬಾವುಟ (ಕರುಣೆತೋರುವುದಿಲ್ಲವೆಂಬ ಸೂಚನೆಗಾಗಿ ಕಡಲುಕಳ್ಳರು ಉಪಯೋಗಿಸುವ ಗುರುತು ; ಮರಣದಂಡನೆ ಮುಗಿದ ಸೂಚನೆಗಾಗಿ ಉಪಯೋಗಿಸುವ ಗುರುತು). **Bláckfoot** (ಬ. ವ. — feet) ಉ. ಅಮೆರಿಕದ ಇಂಡಿಯನರ ಒಂದು ಪೀಳಿಗೆಯವನು. **B. friar** ಸೆಯಿಂಟ್ ಡಾಮಿನಿಕ್ ಎಂಬ ರೋ. ಕ್ಯಾ. ಮತಪ್ರಚಾರಕನು ಏರ್ಪಡಿಸಿದ ಒಂದು ಸಂನ್ಯಾಸಿ ಸಂಸ್ಥೆಯ ಸಂನ್ಯಾಸಿ (ಆ ಸಂನ್ಯಾಸಿಯ ಉಡುಪಿನ ಬಣ್ಣದಿಂದ). **Bláckguard** ಬ್ಲ್ಯಾಗಾರ್ಡ್ (ನಾ., ಗು., ಕ್ರಿ. ಸಕ.) ಹೊಲಸು ಬಾಯಿಯ ; ದುರ್ನೀತಿಯ ; ನೀಚತನದ ; — ಮನುಷ್ಯ ; ಪಟಿಂಗ. (ಕ್ರಿ.) ನೀಚನೆಂದು ಬಯ್ಯು ; ಭಂಡಮಾತಿನಿಂದ ಬಯ್ಯು. **Bláckguardly** (ಕ್ರಿ. ವಿ.) ; **Bláckguardism** (ನಾ.) ; **B.-head** ಒಂದು ಪಕ್ಷಿಜಾತಿ. ಚರ್ಮದ ಮೇಲಿನ ಒಂದು ತೆರದ ಮೊಡವೆ. **B. hole** ಸೈನಿಕರ ನಿವಾಸಸ್ಥಾನದಲ್ಲಿಯ ಸೆರೆಕೋಣೆ. **B. Jack** ಕಡಲುಕಳ್ಳರ ಕಪ್ಪು ಬಾವುಟ. ನೀರಿನಲ್ಲಿ ಬಿದ್ದರೆ ತೇಲಿಸುವುದಕ್ಕಾಗಿ ಮಾಡಿರುವ, ಮುದುರಲಾಗುವ ಸಲಕರಣೆ. **B.-lead** ಬರೆಯುವ ಸೀಸದಕಡ್ಡಿಯಲ್ಲಿಯ 'ಪ್ಲಂಬೇಗೊ' ಎಂಬ ಕಪ್ಪುಪದಾರ್ಥ (ಇಂಗಾಲದ ಒಂದು ರೂಪ). **Bláckleg** ಮೋಸಗಾರ ; ವಂಚಕ (ಮು., ಕುದುರೆಯ ಜೂಜಿನಲ್ಲಿ). ತನ್ನ ಯಜಮಾನನ ಇತರ ಕೂಲಿಗಾರರು ಮುಷ್ಕರ ಹಿಡಿದು ಕೆಲಸಮಾಡದೆ ನಿಂತುಬಿಟ್ಟಿರುವಾಗ, ಯಜಮಾನನಿಗಾಗಿ ಕೆಲಸಮಾಡುವವನು ; ಸ್ವಪಕ್ಷ ದ್ರೋಹಿ ; (ಕ್ರಿ. ಸಹ). **Bláckleg**s, **B. quarter** ದನ ಕುರಿಗಳಿಗೆ ಬರುವ ಒಂದು ಜಾಡ್ಯ (ಈ ಜಾಡ್ಯದಲ್ಲಿ ಕಾಲು ಬಿದ್ದುಹೋಗುವುದು) : ಚಪ್ಪೆರೋಗ. **B. letter** ಜರ್ಮನ್ ಅಕ್ಷರಗಳಂಥ ಹಳೆಯ ತೆರದ ಅಚ್ಚಿನ ಅಕ್ಷರ. **Bláckmail** (ಕ್ರಿ. ಸಕ., ನಾ.) ಹಿಂದೆ ದರೋಡೆಕೋರರು, ತಾವು ತೊಂದರೆಕೊಡದೆ ಇರುವುದಕ್ಕಾಗಿ ಜನರಿಂದ ವಸೂಲುಮಾಡುತ್ತಿದ್ದ ತೆರಿಗೆ. (ಅಪಮಾನಕ್ಕೊಳಪಡಿಸುವ ಆಂತರ್ಯಗಳನ್ನು ಬಹಿರಂಗಮಾಡದಿರುವುದಕ್ಕಾಗಿ) ಬೆದರಿಸಿ ದುಡ್ಡುಕೀಳು(ವುದು). **Blackmaíler** (ನಾ.) ; **B. Maria** ಬಂದೀವಾನರನ್ನು ಜೈಲಿನಿಂದಲೂ ಜೈಲಿಗೂ ಕರೆದುಕೊಂಡು ಹೋಗುವುದಕ್ಕಾಗಿ ಉಪಯೋಗಿಸುವ ಬಂಡಿ. (ಸೈನ್ಯದ ಅಸಂ.) ಹೆಚ್ಚು ಹೊಗೆ ಹೊರಡಿಸಿ ಸಿಡಿಯುವ ದೊಡ್ಡ ಸಿಡಿಗುಂಡು. **B. Rod** ಶ್ರೀಮಂತ ಸಭೆ, ಮೊ. ಗಳಲ್ಲಿಯ ಗೌರವಾಧಿಕಾರಿಗಳನ್ನು ಗೌರವಿಸಿ ಕರೆದುಕೊಂಡುಹೋಗುವ ಅಧಿಕಾರವುಳ್ಳ ದೊಡ್ಡಮನುಷ್ಯ. **B. sheep** ಭ್ರಷ್ಟ ; ನೀತಿಬಾಹಿರ ; ವಂಚಕ ; ದ್ರೋಹಿ. **B.-shirts** ಇಟಲಿಯ 'ಫ್ಯಾಸಿಸ್ಟ್' ಎಂಬ ರಾಜಕೀಯ ಪಂಗಡ (ಆ ಪಂಗಡದವರ ಚಿಹ್ನೆಯಾಗಿ ಧರಿಸುವ ಕರಿಯ ಉಡುಪಿನಿಂದ). **Bláacksmith** ಕಮ್ಮಾರ. **B. Watch** ಸ್ಕಾಟ್ಲೆಂಡಿನ ಹೈಲೆಂಡ್ ಸೈನಿಕರ ಒಂದು ತಂಡ. B.-water fever ಮೂತ್ರದಲ್ಲಿ ರಕ್ತ ಹೋಗುವುದು, ಮೊ. ಚಿಹ್ನೆಗಳುಳ್ಳ ಪ. ಆಫ್ರಿಕದ ಒಂದು ವ್ಯಾಧಿ. **Bláckish** (ಗು.) ನಸುಗಪ್ಪಾದ ; ಮಾಸಲು ಕಪ್ಪಾದ. **Bláckness** (ನಾ.)

Black (ನಾ., ಕ್ರಿ. ಸಕ.) ಕಪ್ಪು ; ಕಪ್ಪುಬಣ್ಣ ; ಕಪ್ಪುಚುಕ್ಕೆ ; (ಗೋಧಿ, ಮೊ. ಗಳಲ್ಲಿ) ಕಪ್ಪು ಬೂಷ್ಟು ; ಕಾಡಿಗೆ ರೋಗ. ಇಲ್ಲಣ. ಕಪ್ಪುಬಟ್ಟೆ. ನೀಗ್ರೊ ಮನುಷ್ಯ. (ಕ್ರಿ.) ಕಪ್ಪುಮಾಡು ; ಕಪ್ಪುಬಣ್ಣ ಹಾಕು ; ಮಸಿ ಬಳಿ (B. out ಅಳಿಸು ; ತೊಡೆದುಹಾಕು). **Bláck-ing** (ನಾ.) ಕಪ್ಪುಮಾಡುವುದು ; ಕಪ್ಪು ಬಣ್ಣ ಕೊಡುವುದಕ್ಕಾಗಿ ತಯಾರಿಸಿದ ಪದಾರ್ಥ (ಮು., ಬೂಟ್ಸಿಗೆ ಕಪ್ಪು ಮೆರುಗು ಕೊಡಲು ಉಪಯೋಗಿಸುವ ಪದಾರ್ಥ). **Blácky** (ನಾ.) ಕಪ್ಪು ಮನುಷ್ಯ ; ನೀಗ್ರೊ ಮನುಷ್ಯ. **Blácken** (ಕ್ರಿ.) ಕಪ್ಪಾಗು ; ಕಪ್ಪುಮಾಡು ; ಮಸಿ ಬಳಿ. (ಒಬ್ಬನ ನಡತೆಯ ವಿಷಯವಾಗಿ) ದೂಷಣೆ ಮಾಡು ; ಕಳಂಕ ಹಚ್ಚು ; ಹೆಸರು ಕೆಡಿಸು.

Bládder ಬ್ಲ್ಯಾಡರ್ (ನಾ.) ಮನುಷ್ಯ, ಮೊ. ಪ್ರಾಣಿಗಳ ದೇಹದಲ್ಲಿರುವ ಒಳಚರ್ಮದ ಚೀಲ (ಮು., ಮೂತ್ರ, ಪಿತ್ತ, ಗಾಳಿ, ಈಜು — ಚೀಲ). ಅನೇಕ ಕೆಲಸಗಳಿಗೆ ಉಪಯೋಗಿಸುವುದಕ್ಕಾಗಿ ಸಂಸ್ಕಾರ ಮಾಡಿದ ಈ ಚೀಲ ಅಥವಾ ಇದರ ಭಾಗ. (ರೂಪ.) ಗಾಳಿ ತುಂಬಿ ಟೊಳ್ಳಾಗಿರುವ ಪದಾರ್ಥ ; ಬುರುಡೆ. ಹರಟೆಯ ಮಲ್ಲ. (ಸಸ್ಯಗಳಲ್ಲಿಯೂ ಸಮುದ್ರ ಪಾಚಿಯಲ್ಲಿಯೂ) ಉಬ್ಬಿಕೊಂಡಿರುವ ಬೀಜಕೋಶ. ಗಾಳಿಗುಳ್ಳೆ. **Bládderly** (ಗು.)

Blade ಬ್ಲೇಡ್ (ನಾ.) ಎಲೆ ; ದಳ ; ಎಸಳು ; (ಹುಲ್ಲು, ಮೊ. ಗಳ) ಗರಿ ; (ತೆನೆ ಬಿಡುವುದಕ್ಕೆ ಮೊದಲಿನ) ಧಾನ್ಯದ ಸಸಿ, ಪೈರು. (ಸ. ವಿ.) ಅಗಲವಾಗಿಯೂ ವಿಸ್ತರಿಸಿಕೊಂಡೂ ಇರುವ ಎಲೆಯ ಅಥವಾ ದಳದ ತೆಳ್ಳನೆಯ ಭಾಗ. (ಹುಟ್ಟು, ದಾಂಡು, ಗುದ್ದಲಿ, ಮೊ. ಗಳ) ಚಪ್ಪಟೆಯ ಭಾಗ. (ಕತ್ತಿ, ಉಳಿ, ಮೊ. ಚೂಪು ಆಯುಧಗಳ) ಅಲಗು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕತ್ತಿ. ಚಪ್ಪಟೆಯ ಎಲುಬು (The b., B.-bone, Shoulder-b. ಭುಜದಲ್ಲಿಯ ಚಪ್ಪಟೆಯಾದ ಎಲುಬು : ಸ್ಕಂಧ ಫಲಕ). ಉಲ್ಲಾಸಶೀಲ; ಸೊಗಸುಗಾರ ; ಬಡಾಯಿಕೋರ ; ನಿರ್ಲಕ್ಷ್ಯವಾಗಿ ನಡೆಯುವವನು. **Bláded** (ಗು.)

Blague (F) ಬ್ಲಾಗ್ (ನಾ., ಕ್ರಿ. ಅಕ.) ಪ್ರತಿಷ್ಠೆ; ಠಕ್ಕು. ಸುಳ್ಳು ಹೇಳು.

Blain ಬ್ಲೇಯ್‌ನ್ (ನಾ.) ಕುರು ; ಬೊಬ್ಬೆ ; ಗುಳ್ಳೆ ; ಸ್ಫೋಟ.

Blame ಬ್ಲೇಮ್ (ಕ್ರಿ. ಸಕ.) ತಪ್ಪುಹಿಡಿ ; ತಪ್ಪುಹೊರಿಸು ; ಆಕ್ಷೇಪಿಸು ; ದೂಷಿಸು ; ನಿಂದಿಸು ; ದೂರು ; ತೆಗಳು ; ಹೊಣೆ ಮಾಡು. I am to b. ತಪ್ಪು ನನ್ನದು. **Blámable** (ಗು.) ; **Blámably** (ಕ್ರಿ. ವಿ.)

Blame (ನಾ.) ನಿಂದೆ ; ದೂರು ; ಪಳಿ ; ಆಕ್ಷೇಪಣೆ ; ಅಪವಾದ ; ತಪ್ಪಿಗೆ ಹೊಣೆ (Lay the b. on ತಪ್ಪು ಹೊರಿಸು. Bear the b. ತಪ್ಪು ಹೊತ್ತುಕೊ). **Bláméful** (ಗು.) ದೂರುವ ; ನಿಂದಾರ್ಹ ; ದೂಷ್ಯ. **Bláméless** (ಗು.) ನಿರ್ದೋಷಿ ; ಅನಿಂದ್ಯ. **Bláme-lessly** (ಕ್ರಿ. ವಿ.) ; **Blámelessness** (ನಾ.) ; **Bláméworthy** (ಗು.) ನಿಂದಾರ್ಹ ; ನಿಂದ್ಯ ; ದೂಷ್ಯ. **Bláméworthiness** (ನಾ.)

Blanch ಬ್ಲಾನ್ಷ್ (ಕ್ರಿ.) ಬಣ್ಣಗುಂದಿಸಿ ಬೆಳ್ಳಗೆ ಮಾಡು ; (ಬಾದಾಮಿಯ) ಸಿಪ್ಪೆ ಸುಲಿದು ಬೆಳ್ಳಗೆ ಮಾಡು ; (ಸಸ್ಯಗಳನ್ನು) ಬೆಳಕಿಲ್ಲದಂತೆ ಮಾಡಿ ಬಿಳುಪೇರಿಸು. (ಭಯ, ಚಳಿ, ಮೊ. ಗಳಿಂದ) ಬಿಳುಪೇರು, ಬಿಳಿಚಿಕೊ, ನಿಸ್ತೇಜನಾಗು, ಬಿಳುಪೇರಿಸು, ಕಳೆಗುಂದಿಸು. Blanch over ದೋಷ ಮುಚ್ಚುವಂತೆ ಬಣ್ಣಹಾಕು (ರೂಪ.)

Blancmánge ಬ್ಲಮಾನ್ಷ್, **-mánger** — ಷೇ (ನಾ.) 'ಐಸಿಂಗ್ಲಾಸ್', 'ಜೆಲಟೀನ್' ಎಂಬ ಸಸಾರಜನಕ ಪದಾರ್ಥಗಳಲ್ಲೊಂದನ್ನೊ ಅಥವಾ ಜೋಳದ ಹಿಟ್ಟನ್ನೊ ಹಾಲು, ಮೊ. ಪದಾರ್ಥಗಳೊಡನೆ ಬೇಯಿಸಿ ಮಾಡಿದ ಬಿಳಿಯ ಹಲ್ವ.

Bland ಬ್ಲ್ಯಾಂಡ್ (ಗು.) (ನಡತೆಯಲ್ಲಿ) ನಯವುಳ್ಳ, ವಿನಯವುಳ್ಳ. ಮೆಲ್ಪಿನ ; ಹಿತಕರವಾದ ; ಸೌಮ್ಯ ; ಉಪಶಾಮಕ ; ಖಾರವಿಲ್ಲದ. **Blándly** (ಕ್ರಿ. ವಿ.) ; **Blándness** (ನಾ.)

Blándish ಬ್ಲ್ಯಾಂಡಿಷ್ (ಕ್ರಿ. ಸಕ.) ಮುಖಸ್ತುತಿ ಮಾಡು ; ನಯವಾಗಿ ಮಾತನಾಡು ; ಉಬ್ಬಿಸು ; ಪುಸಲಾಯಿಸು. **Blándishment** (ನಾ. ; ಸಾ., ಬ. ವ. ದಲ್ಲಿ) (ಕ್ರಿಯಾರ್ಥಗಳಲ್ಲಿ) ; ಆಕರ್ಷಣೆ.

Blank ಬ್ಲ್ಯಾಂಕ್ (ಗು.) (ಕಾಗದದ ವಿಷಯದಲ್ಲಿ) ಏನೂ ಬರೆದಿರದ, ಬರಿಯ, ಖಾಲಿ. (ದಸ್ತ್ರವೇಜುಗಳಲ್ಲಿ) ಸಹಿಗಾಗಲಿ ತಪಶೀಲಿಗಾಗಲಿ ಸ್ಥಳಬಿಟ್ಟಿರುವ (B. cheque ಹಣದ ಮೊತ್ತ ಮಾತ್ರ ಹಾಕದೆ ಪಾವತಿ ಪಡೆಯುವವನು ತುಂಬುವುದಕ್ಕಾಗಿ ಸ್ಥಳಬಿಟ್ಟ ಹುಂಡಿ. (ರೂಪ.) ಸಂಪೂರ್ಣಾಧಿಕಾರ. Drawn in b. ಸಹಿ, ಮೊ. ಕ್ಕಾಗಿ ಅಲ್ಲಲ್ಲಿ ಸ್ಥಳಬಿಟ್ಟು ಬರೆದಿರುವ). ಬರಿದಾದ ; ಏನೂ ತುಂಬಿರದ ; ಖಾಲಿ (B. cartridge ಗುಂಡು ಹಾಕಿರದ ಬಂದೂಕಿನ ತೋಟ ; ಹುಸಿ ತೋಟ). (ಸ್ವಾರಸ್ಯ, ವಿಶೇಷ, ಫಲ, ಮೊ.) ಇಲ್ಲದ ; ಶೂನ್ಯ (Look b. ಕಣ್ಣುಕಣ್ಣು ಬಿಡು ; ಬುದ್ಧಿಶೂನ್ಯವಾದಂತೆ ಕಾಣು). ಪ್ರಾಸರಹಿತ (B. verse ಅಂತ್ಯಪ್ರಾಸರಹಿತ ಪದ್ಯ ; ನರಳ ರಗಳೆ). **Blánkly** (ಕ್ರಿ. ವಿ.) ಶೂನ್ಯದೃಷ್ಟಿಯಿಂದ ; ಏನೂ ತೋರದೆ. ಖಂಡಿತವಾಗಿ ; ನಿಸ್ಸಂಕೋಚವಾಗಿ (Deny blankly ನಿಸ್ಸಂಕೋಚವಾಗಿ ಇಲ್ಲವೆನ್ನು). **Blánkness** (ನಾ.)

Blank (ನಾ.) ಇನಾಮು ಬಾರದ ಲಾಟರಿಚೀಟಿ (ಅದೃಷ್ಟದ ಚೀಟಿ) ; ಖಾಲಿ ಚೀಟಿ. ಪತ್ರಗಳಲ್ಲಿ ಮುಂದೆ ತುಂಬುವುದಕ್ಕಾಗಿ ಬಿಟ್ಟಿರುವ ಸ್ಥಳ. ಶೂನ್ಯ (My memory is a b. ನನ್ನ ಜ್ಞಾಪಕ ಶೂನ್ಯವಾಗಿದೆ). ಪಾರ್ಲಿಮೆಂಟಿನ ಮಸೂದೆಗಳಲ್ಲಿ ಓರೆಯಕ್ಷರದಲ್ಲಿ ಮುದ್ರಿಸಿರುವ ಪದಗಳು. ಯಾವ ವಿಶೇಷ ಸಂಗತಿಯೂ ನಡೆಯದೆಹೋದ ಕಾಲ : ಘಟನಾ ಶೂನ್ಯ ಕಾಲ ; ವಿರಾಮ. ಅರ್ಥವಿಲ್ಲದ ವಿಷಯ. ಮುದ್ರೆಯೊತ್ತುವುದಕ್ಕೆ ಸಿದ್ಧವಾಗಿರುವ ನಾಣ್ಯದ ಬಿಲ್ಲೆ. (ಬಂದೂಕಿನ) ಹುಸಿ ತೋಟ. ಪದ ಅಥವಾ ಅಕ್ಷರಕ್ಕೆ ಬದಲಾಗಿ ಹಾಕಿದ ಗೀಟು. ಗುರಿ ಹಲಗೆಯ ಮಧ್ಯದ ಬಿಳಿಯ ಬಟ್ಟು.

Blánket ಬ್ಲ್ಯಾಂಕೆಟ್ (ನಾ.) ಕಂಬಳಿ ; ನಯಗಂಬಳಿ ; ಹಾಸುಗಂಬಳಿ. Wet b. ಉತ್ಸಾಹಶೂನ್ಯ ಮಾಡುವ ಮನುಷ್ಯ ಅಥವಾ ವಸ್ತು ; ಉತ್ಸಾಹಭಂಜಕ. ನಡೆಯುತ್ತಿರುವ ಸಂಭಾಷಣೆ ಮುಂದುವರಿಯದಂತೆ ಮಾಡುವವನು. Born on the wrong side of the b. ಧರ್ಮವಿರುದ್ಧವಾಗಿ ಹುಟ್ಟಿದ ; ಜಾರಜ.

Blánket (ಕ್ರಿ. ಸಕ.) ಕಂಬಳಿ ಹೊದಿಸು, ಕವಿಚು ; ಕವುದಿ ಹಾಕು. (ಅಪವಾದ, ಪ್ರಶ್ನೆ, ಮೊ. ನ್ನು) ಅಡಗಿಸು ; ತಲೆಯೆತ್ತದಂತೆ ಮಾಡು. (ದಂಡನೆಗಾಗಿ) ಕಂಬಳಿಯಲ್ಲಿ ಹಾಕಿ ಎಸೆದಾಡು. ಗಾಳಿಗೆ ಅಡ್ಡವಾಗಿ ಬಂದು ಮತ್ತೊಂದು ಹಡಗಿಗೆ ಗಾಳಿದೊರೆಯದಂತೆ ಮಾಡು.

Blare ಬ್ಲೇರ್ (ಕ್ರಿ., ನಾ.) ತುತ್ತೂರಿ ಊದು ; ಗಟ್ಟಿಯಾಗಿ ಹೇಳು ; ಅರಚು ; ಗರ್ಜಿಸು. ತುತ್ತೂರಿಯ ಮೊಳಗು ; ಗರ್ಜನೆ.

Blárney ಬ್ಲಾರ್ನಿ (ನಾ., ಕ್ರಿ.) ಪುಸಲಾಯಿಕೆಯ ಮಾತು (ಆಡು) ; ಉಬ್ಬಿಸುವ ಮಾತು (ಆಡು)

Blàse (F) ಬ್ಲಾಸ್ಲೇ (ಗು.) ಸುಖದಿಂದ ತಣಿದ ; ಸುಖಾನುಭವದಿಂದ ಬೇಸತ್ತ, ವೆಗಟಾದ.

Blasphéme ಬ್ಲಾಸ್‌ಫೀಮ್ (ಕ್ರಿ.) ದೇವದೂಷಣೆ ಮಾಡು ; ಪಾಷಂಡ ಮಾತಾಡು ; ಪವಿತ್ರ ವಸ್ತುಗಳನ್ನು ಹೀನಯಿಸಿ ಮಾತಾಡು. ಹಳಿ ; ದೂಷಿಸು ; ನಿಂದಿಸು ; ತೆಗಳು. **Blasphémer** (ನಾ.) ; **Blásphemy** — ಫಿಮಿ (ನಾ.) ; **Blásphemous** (ಗು.) ; **Blásphemously** (ಕ್ರಿ. ವಿ.)

Blast ಬ್ಲಾಸ್ಟ್ (ನಾ., ಕ್ರಿ. ಸಕ.) ಬಿರುಸಾದ ಗಾಳಿ. ಗಾಳಿವಾದ್ಯದ ಶಬ್ದ. (ಲೋಹಗಳನ್ನು ಕರಗಿಸುವಲ್ಲಿ ಉಪಯೋಗಿಸುವ) ಬಿರುಸು ಗಾಳಿ. (Furnace in b., out of b. ಕೆಲಸ ನಡೆಯುತ್ತಿರುವ, ನಡೆಯದೆ ಇರುವ, ಕುಲುಮೆ. B.-furnace ಒತ್ತರಿಸಿದ ಉಷ್ಣವಾಯುವನ್ನು ಯಂತ್ರಸಹಾಯದಿಂದ ನುಗ್ಗಿಸುವುದರ ಮೂಲಕ ಕೆಲಸ ನಡೆಯುವ ಲೋಹ ಕರಗಿಸುವ ಕುಲುಮೆ : ಊದುಕುಲುಮೆ). ಸಿಡಿತ. ಬಂಡೆಗಳನ್ನೊಡೆಯುವುದರಲ್ಲಿ ಒಂದು ಸಲಕ್ಕೆ ಉಪಯೋಗಿಸುವ ಸಿಡಿಮದ್ದಿನ ಪರಿಮಾಣ. ಥಟ್ಟನೆ ಹತ್ತುವ (ವ್ಯಾಧಿಯ) ಸೋಂಕು. ಸಸ್ಯವಿನಾಶಕ ರೋಗ ; ಈ ರೋಗಕ್ಕೆ ಕಾರಣವಾದ ಹುಳು ; ಕುರಿಗಳ ವಾತರೋಗ. (ರೂಪ.) ಉಪದ್ರವ ; ವಿಪತ್ತು ; ಶಾಪ. (ಕ್ರಿ.) (ಬಂಡೆ, ಮೊ. ನ್ನು) ಸಿಡಿಮದ್ದಿನಿಂದ ಒಡೆದುಹಾಕು ; ಸುರಂಗ ಹಾಕಿ ಒಡೆ. (ಸಸ್ಯ, ಅಂಗ, ಶೀಲ, ಏಳಿಗೆ, ಮೊ. ನ್ನು) ಬಾಡಿಸು, ಬತ್ತಿಸು, ನಾಶಮಾಡು, ಭಗ್ನಮಾಡು, ಧ್ವಂಸಮಾಡು. **Blásted** (ಗು.)

Blástoderm ಬ್ಲಾಸ್ಟೊಡರ್ಮ್ (ನಾ.) ಭ್ರೂಣದ ಆದ್ಯವಸ್ಥೆಯಲ್ಲಿ ಅದನ್ನು ಆವರಿಸಿಕೊಂಡಿರುವ ಪೊರೆ.

Blátant ಬ್ಲೇಟಂಟ್ (ಗು.) ಕೂಗಾಟದ ; ಗದ್ದಲದ ; ಗಲಭೆಯ ; ಅರಚುವ ; ಕಿರಿಚುವ. **Blátantly** (ಕ್ರಿ. ವಿ.) ; **Blátancy** (ನಾ.)

Bláther(skite). **Blether** ನೋಡಿ.

Blaze¹ ಬ್ಲೇಯ್ಸ್ (ನಾ.) ಧಗಧಗಿಸುವ ಉರಿ, ಜ್ವಾಲೆ (In a b. ಉರಿ ಹೊತ್ತಿಕೊಂಡು). ಉದ್ರೇಕ ; ಆವೇಶ ; ಕೆರಳುವುದು (B. of wrath ಕೋಪಾವೇಶ). ಬಣ್ಣದ ಹೊಳಪು ; ಪ್ರಭೆ ; ತೇಜಸ್ಸು (B. of publicity ಪ್ರಕಟನೆಯ ರಭಸ). (ಬ. ವ. ದಲ್ಲಿ) (ಅಸಂ.) ನರಕ (Go to blazes ನಾಶವಾಗಿ ಹೋಗು ; ಉರಿದು ಬಿದ್ದುಹೋಗು)

Blaze (ಕ್ರಿ. ಅಕ.) ಧಗಧಗಿಸು ; ಪ್ರಜ್ವಲಿಸು ; ಹೊತ್ತಿಕೊಂಡು ಉರಿ. ರಾಗೋದ್ರೇಕದಿಂದ ತಪ್ತನಾಗು (B. up ಕೋಪದಿಂದ ಉರಿದುಬೀಳು). ಹೊಳಪು ಬಣ್ಣಗಳಿಂದ ಬೆಳಗು ; ಬೆಳಗು ; ಹೊಳೆ. B. away ಎಡೆಬಿಡದೆ ಗುಂಡು ಹಾರಿಸುತ್ತಿರು. ಯಾವುದಾದರೂ ಕೆಲಸ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನು ಕೇವಲ ಉತ್ಸಾಹದಿಂದ ಮಾಡು. Blazing indiscretion ಕಣ್ಣಿಗೆ ಹೊಡೆಯುವ ಅಚಾತುರ್ಯ. Blazing scent (ಬೇಟೆಯಲ್ಲಿ) ಕಟು ವಾಸನೆ ; ಕಡುಗಂಪು.

Blaze[2] ಬ್ಲೇಯ್ಸ್ (ನಾ., ಕ್ರಿ. ಸಕ.) ಕುದುರೆಯ ಅಥವಾ ಎತ್ತಿನ ಮುಖದ ಮೇಲಿನ ಬಿಳಿಯ ಗುರುತು (ಮು., ನೆತ್ತಿಯಿಂದ ಮೂಗಿನ ವರೆಗೂ ಇರುವ ಬಿಳಿಯ ಪಟ್ಟೆ). ದಾರಿ ತೋರಿಸುವುದಕ್ಕಾಗಿ ತೊಗಟೆಯನ್ನು ಕೆತ್ತಿಹಾಕಿ ಮರದಮೇಲೆ ಮಾಡಿದ ಬಿಳಿಯ ಗುರುತು ; ಹೀಗೆ ಗುರುತುಮಾಡಿದ ಹಾದಿ. (ಕ್ರಿ.) ಮರದ ತೊಗಟೆಯನ್ನು ಕೆತ್ತಿ ಹಾಕಿ ಹಾದಿಯನ್ನು ಗುರುತುಮಾಡು.

Blaze[3] ಬ್ಲೇಯ್ಸ್ (ಕ್ರಿ. ಸಕ.) (ತುತ್ತೂರಿ ಊದಿ ಸಾರಿದಂತೆ) ಸಾರು. B. abroad ವರ್ತಮಾನವನ್ನು ಎಲ್ಲೆಲ್ಲಿಯೂ ಹರಡು.

Blázer ಬ್ಲೇಯ್ಸರ್ (ನಾ.) ದೋಣಿ ನಡೆಸುವಾಗ, ಗಾಲ್ಫ್, ಮೊ. ಆಟವಾಡುವಾಗ, ತೊಟ್ಟುಕೊಳ್ಳುವ ಬಣ್ಣದ ಅಂಗಿ. (ಅಸಂ.) ಶುದ್ಧ ಸುಳ್ಳು.

Blázon ಬ್ಲೇಯ್ಸ್‌ನ್ (ನಾ., ಕ್ರಿ. ಸಕ.) ಪಾಶ್ಚಾತ್ಯ ದೇಶಗಳಲ್ಲಿ ಶ್ರೀಮಂತರ ಅಥವಾ ಪ್ರಸಿದ್ಧ ಯೋಧವಂಶೀಯರ ಲಾಂಛನ ಕೆತ್ತಿರುವ ಗುರಾಣಿ, ಕವಚ, ಧ್ವಜ, ಮೊ. ; ಈ ಲಾಂಛನಗಳ ಸರಿಯಾದ ವಿವರಣೆ. (ಮು., ಸದ್ಗುಣ, ಮೊ. ಗಳ) ವರ್ಣನೆ, ಉಲ್ಲೇಖನ. (ಕ್ರಿ.) (ಪ್ರಸಿದ್ಧ ವಂಶೀಯರ) ಲಾಂಛನಗಳನ್ನು ವಿವರಿಸು ಅಥವಾ ಚಿತ್ರಿಸು ; (ಯಾವುದಾದರೂ ವಸ್ತುವಿನಮೇಲೆ) ಲಾಂಛನ, ಹೆಸರು, ಮೊ. ನ್ನು ಬಣ್ಣಗಳಿಂದ ಅಂದವಾಗಿ ಚಿತ್ರಿಸು, ಕೆತ್ತು. ಕಳೆದುಂಬಿಸು ; ಹೊಳಪು ಕೊಡು. ತಕ್ಕ ಮಾತುಗಳಿಂದ ವರ್ಣಿಸು, ಸಾರು. **Blázonment** (ನಾ.); **Blázonry** (ನಾ.) ವಂಶ ಲಾಂಛನ ; ವಂಶ ಲಾಂಛನಗಳನ್ನು ಚಿತ್ರಿಸುವ ಅಥವಾ ವರ್ಣಿಸುವ ಕಲೆ. ಅಂದವಾದ ಅಥವಾ ಉಜ್ಜ್ವಲವಾದ ಪ್ರದರ್ಶನ.

Bleach ಬ್ಲೀಚ್ (ಕ್ರಿ.) (ಬಿಸಿಲಿಗೆ ಹಾಕುವುದರಿಂದಾಗಲಿ ರಾಸಾಯನಿಕ ಪ್ರಕ್ರಿಯೆಯಿಂದಾಗಲಿ) ಬಣ್ಣ ಕಳೆ, ಬಿಳಿದು ಮಾಡು ; ಚಲುವೆ ಮಾಡು ; ಬಣ್ಣ ಹೋಗು ; ಬಿಳಿದಾಗು. **Bleácher** (ನಾ.) (ಮು., ಬಟ್ಟೆಗಳನ್ನು) ಬೆಳ್ಳಗೆ ಮಾಡುವವನು ; ಚಲುವೆ ಮಾಡುವವನು ; ಅವನು ಉಪಯೋಗಿಸುವ ಪಾತ್ರೆ, ರಾಸಾಯನಿಕ ಪದಾರ್ಥ (ಧಾವಕ ವಸ್ತು). (ಅಮೆ. ಸಂ ; ಸಾ., ಬ. ವ.) ಆಟದ ಮೈದಾನದಲ್ಲಿ ಪ್ರೇಕ್ಷಕರು ಕುಳ್ಳಿರಲು ಹಾಕಿರುವ ಹಲಗೆಗಳು. **Bleaching-powder** ಚಲುವೆ ಪುಡಿ (ಸುಣ್ಣ ಮತ್ತು ಪೀತಾನಿಲದ ಸಂಯುಕ್ತ)

Bleak[1] ಬ್ಲೀಕ್ (ನಾ.) ನದಿಗಳಲ್ಲಿಯೂ ಸಮುದ್ರದಲ್ಲಿಯೂ ದೊರೆಯುವ ಅನೇಕ ಮೀನ ಜಾತಿ.

Bleak[2] ಬ್ಲೀಕ್ (ಗು.) ನಿರ್ವರ್ಣ ; ವಿವರ್ಣ. ಬೋಳಾದ ; ಅನಾವೃತ ; ಗಾಳಿ, ಬಿಸಿಲು, ಮಳೆ—ಇವಕ್ಕೆ ಸಿಕ್ಕಿ ನಿಂತಿರುವ. ಚಳಿಯಿಂದ ಕೊರೆಯುವ ; ಅತಿ ಶೀತವಾದ. ಉತ್ಸಾಹ ಶೂನ್ಯ ; ಅಪ್ರಸನ್ನ.

Blear ಬ್ಲಿಯರ್ (ಗು., ಕ್ರಿ. ಸಕ.) (ದೃಷ್ಟಿ, ಮನಸ್ಸು) ಮಬ್ಬಾದ, ಮಂಜಾದ, ಮಸಕಾದ, ಮಂದವಾದ. ಮಬ್ಬುಗೊಳಿಸು ; ಮಂಜುಗೊಳಿಸು. ಆಕಾರ ಅಸ್ಪಷ್ಟಮಾಡು. **B.-eyed** ಮಂದ ದೃಷ್ಟಿಯುಳ್ಳ ; ಮಂದಬುದ್ಧಿಯ ; ದೂರದೃಷ್ಟಿಯಿಲ್ಲದ.

Bleat ಬ್ಲೀಟ್ (ಕ್ರಿ., ನಾ.) (ಕುರಿ, ಆಡು, ಕರು — ಇವು) ಅರಚು ; ಬ್ಯಾ ಎನ್ನು ; (ಇವುಗಳ) ಕೂಗು. (ಮನುಷ್ಯನ ವಿಷಯದಲ್ಲಿ ತಿರಸ್ಕಾರ ಸೂಚನೆಯಾಗಿ ಪ್ರಯೋಗ). B. out ಒದರು.

Bleb ಬ್ಲೆಬ್ (ನಾ.) ಬೊಬ್ಬೆ ; ಹೊಪ್ಪಳ ; ಗುಳ್ಳೆ ; ನೀರ್ಗುಳ್ಳೆ ; ಗಾಜಿನಲ್ಲಿಯ ಗುಳ್ಳೆ.

Bleed ಬ್ಲೀಡ್ (ಕ್ರಿ. ; ಭೂತ., ಭೂ. ಕೃ. Bled) ರಕ್ತ ಸುರಿ (Heart bleeds ಹೃದಯ ರಕ್ತಸುರಿಸುತ್ತಿದೆ ; ಬಹು ಸಂಕಟವಾಗುತ್ತಿದೆ). ಗಾಯಗೊಳ್ಳು ; ರಕ್ತ ಬಸಿದು ಸಾಯಿ. (ಸಸ್ಯಗಳ ವಿಷಯವಾಗಿ) ರಸ ಸುರಿ, ಹಾಲು ಬಸಿ. ಹಣ ಕಳೆದುಕೊ ; ದುಂದುವೆಚ್ಚ ಮಾಡು ; ಸುಲಿಗೆಗೆ ಸಿಕ್ಕು. ಹಣ ಕೀಳು ; ಸುಲಿಗೆ ಮಾಡು. (ಶಸ್ತ್ರ ಚಿಕಿತ್ಸೆಯಲ್ಲಿ) ರಕ್ತ ತೆಗೆ. Bleeding heart ಕೆಲವು ಗಿಡಗಳ ಬಳಕೆಯ ಹೆಸರು. **Bleéder** (ನಾ.) ಸ್ವಲ್ಪ ಗಾಯವಾದರೂ, ಹೊರಟ ರಕ್ತಸ್ರಾವ ನಿಲ್ಲದೆಯಿರುವ ಪ್ರಕೃತಿಯುಳ್ಳವನು : ರಕ್ತಸ್ರಾವಿ.

Blémish ಬ್ಲೆಮಿಷ್ (ನಾ., ಕ್ರಿ. ಸಕ.) (ದೈಹಿಕ, ನೈತಿಕ) ಕಳಂಕ, ಕುಂದು, ಕೊರತೆ ; ದೋಷ ; ಕರೆ ; ಕಲೆ ; ನ್ಯೂನತೆ. ಅಂದಗೆಡಿಸು ; ರೂಪುಗೆಡಿಸು ; ಕಳಂಕಿಸು ; ಮಲಿನಗೊಳಿಸು.

Blench ಬ್ಲೆನ್ಷ್ (ಕ್ರಿ.) ಬೇರೆ ಕಡೆಗೆ ತಿರುಗು ; ವಿಮುಖನಾಗು ; ಹಿಂಜರಿ ; ಹಿಮ್ಮೆಟ್ಟು ; ಹಿಂದೇಟು ಹೊಡೆ ; ಹೆದರು ; ಬೆದರು. (ಕಾಣದಿರಲೆಂದು ಉದ್ದೇಶಿಸಿ) ಕಣ್ಣು ಮುಚ್ಚಿಕೊ.

Blend ಬ್ಲೆಂಡ್ (ಕ್ರಿ. ; ಭೂತ., ಭೂ. ಕೃ. Blended or Blent ; ನಾ.) ಬೆರಸು ; ಬೆರಕೆ ಮಾಡು ; ಮಿಶ್ರಣ ಮಾಡು (ಮು., ಬೇರೆಬೇರೆ ತೆರದ ತೇಎಲೆ, ಹೊಗೆಯಸೊಪ್ಪು, ಮದ್ಯಗಳು, ಮೊ. ನ್ನು) ; ಒಂದುಗೂಡಿಸು ; ಒಂದಿಸು ; ಒಂದುಮಾಡು ; ಸಂಯೋಜನೆ ಮಾಡು. ಒಂದಾಗು ; ಒಟ್ಟಾಗು ; ಸಂಮಿಳಿತವಾಗು. (ಮು., ಬಣ್ಣಗಳು ಒಂದರಿಂದೊಂದು) ಬೇರೆಬೇರೆಯಾಗಿ ತಿಳಿಯದಂತೆ ಬೆರೆತುಹೋಗು. (ನಾ.) (ಅನೇಕ ತೆರದ ತೇಎಲೆ, ಹೊಗೆಯಸೊಪ್ಪು, ಮದ್ಯ, ಮೊ. ಗಳ) ಮಿಶ್ರಣ.

Blende ಬ್ಲೆಂಡ್ (ನಾ.) ಸತುಲೋಹ ಮತ್ತು ಗಂಧಕದ ಸಂಯುಕ್ತ ಖನಿಜ : 'ಸಿಂಕ್ ಸಲ್ಫೈಡ್' ಖನಿಜ.

Blénheim ಬ್ಲೆನೆ(ನಿ)ಮ್ (ನಾ., ಗು.) ಒಂದು ಜಾತಿಯ ನಾಯಿ. **B. orange** ಹೊಂಬಣ್ಣದ ಸೇಬು (Duke of Marlborough ಎಂಬ ಶ್ರೀಮಂತನ 'ಬ್ಲೆನಮ್' ಎಂಬ ವಾಸಸ್ಥಾನದಿಂದ)

Blent. **Blend** ನೋಡಿ.

Bless ಬ್ಲೆಸ್ (ಕ್ರಿ. ಸಕ. ; ಭೂತ., ಭೂ. ಕೃ. Blessed, Blest) ಪವಿತ್ರಗೊಳಿಸು (ಮು., ಬಡಿಸಿರುವ ಆಹಾರವನ್ನು). [Not a penny to b. myself with ನನ್ನಲ್ಲಿ ಒಂದು ಪೆನಿಯೂ ಇಲ್ಲ (ಇಂಗ್ಲಿಷ್ ಪೆನಿ ನಾಣ್ಯದಮೇಲೆ ಹಿಂದೆ ಕೆತ್ತಿರುತ್ತಿದ್ದ ಕ್ರಿಸ್ತ ಪವಿತ್ರಚಿಹ್ನೆಯಾದ ಶಿಲುಬೆಯ ಚಿತ್ರದಿಂದ) ; ವಿಷ ತೆಗೆದುಕೊಳ್ಳುವುದಕ್ಕೂ ಒಂದು ಕಾಸಿಲ್ಲ]. (ದೇವರನ್ನು) ಅರ್ಚಿಸು, ಭಜಿಸು. ಒಳ್ಳೆಯ ಅದೃಷ್ಟವೆಂದುಕೊ ; ಧನ್ಯನೆಂದುಕೊ. (ತಂದೆ, ಮೊ. ದೊಡ್ಡವರು, ವೈದಿಕರು, ಮೊ.) ಹರಸು, ಆಶೀರ್ವದಿಸು, ಸ್ವಸ್ತಿವಾಚನ ಮಾಡು ; ಶ್ರೇಯಃಪ್ರಾರ್ಥನೆ ಮಾಡು ; ಧನ್ಯನನ್ನಾಗಿ, ಕೃತಕೃತ್ಯನನ್ನಾಗಿ, ಮಾಡು. (God b. me, B. me, God b. you, B. you, B. the boy, B. my soul, I'm blest — ಇವೆಲ್ಲವೂ ಆಶ್ಚರ್ಯಸೂಚಕ ಅಥವಾ ಕೋಪಸೂಚಕವಾದ ಮಾತುಗಳು). (ವ್ಯಂಗ್ಯ) ಶಪಿಸು. **Bléssed** ಬ್ಲೆಸೆಡ್, **Blest** ಬ್ಲೆಸ್ಟ್ (ಗು.) (Blessed ಪದದ ಉಚ್ಚಾರಣೆ ಸಾ., 'ಬ್ಲೆಸ್‌ಡ್' ; ಗುಣವಾಚಕದಲ್ಲಿ ಮಾತ್ರ 'ಬ್ಲೆಸೆಡ್'. Blest ಪದವು ಕಾವ್ಯದಲ್ಲಿ ಮಾತ್ರ ಪ್ರಯೋಗ). ಪವಿತ್ರಗೊಳಿಸಿದ ; ಪವಿತ್ರ ; ಪೂಜ್ಯ. ಅದೃಷ್ಟಶಾಲಿ ; ಪುಣ್ಯಶಾಲಿ ; ಧನ್ಯ ; ಸ್ವರ್ಗೀಯ ; ದಿವ್ಯ (The blessed ಸ್ವರ್ಗ ಸುಖಾನುಭವಿಗಳು). ಸುಖದಾಯಕ ; ಆನಂದಕರ. (Blessed ignorance ಧನ್ಯ ಅಜ್ಞತೆ ; ಅಜ್ಞಾನ ಸೌಖ್ಯ). (ವ್ಯಂಗ್ಯ) ಹಾಳಾದ. **Bléssedness** ಬ್ಲೆಸೆಡ್‌ನೆಸ್ (ನಾ.) ದಿವ್ಯಾನಂದ ; ಧನ್ಯತೆ ; ಕಲ್ಯಾಣ. Single blessedness (ಹಾಸ್ಯವಾಗಿ) ಅವಿವಾಹಿತ ಸ್ಥಿತಿ. **Bléssing** (ನಾ.) ಆಶೀರ್ವಾದ ; ಅನುಗ್ರಹ ; ಪ್ರಸಾದ. ಊಟಕ್ಕೆ ಮೊದಲು ಅಥವಾ ಊಟವಾದಮೇಲೆ ಹೇಳುವ ಮಂತ್ರ, ಹರಕೆ. ದೇವರ ಅಥವಾ ಪ್ರಕೃತಿಯ ವರಪ್ರಸಾದ. ಸಂತೋಷ ವಿಷಯ. Blessing in disguise ಸದ್ಯಕ್ಕೆ ಅಹಿತವಾದರೂ ಪರಿಣಾಮದಲ್ಲಿ ಶ್ರೇಯಸ್ಕರ ; ಪ್ರಚ್ಛನ್ನ ಹಿತ.

Bléther ಬ್ಲೆದರ್, **Bláther** ಬ್ಲ್ಯಾದರ್ (ನಾ., ಕ್ರಿ. ಅಕ.) ಅಸಮಂಜಸವಾದ ಹರಟೆ (ಹೊಡೆ). **Blétherskate, Blátherskite** (ನಾ.) (ಪ್ರಾಂತಿಕ ಭಾಷೆ) ಹರಟೆಯ ಮಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Blétonism ಬ್ಲೆಟನಿಸ್ಮ್ (ನಾ.) ಭೂಮಿಯೊಳಗಿರುವ ಊಟೆಗಳನ್ನೂ ಜಲಪ್ರವಾಹಗಳನ್ನೂ ವೇದನಾನುಭವದ ಮೂಲಕ ತಿಳಿಯುವ ಶಕ್ತಿ (Bleton ಎಂಬಾತನ ಹೆಸರಿನಿಂದ)

Blew. Blow ಧಾತುವಿನ ಭೂತ ರೂಪ.

Blight ಬ್ಲೈಟ್ (ನಾ., ಕ್ರಿ. ಸಕ.) ವಾತಾವರಣ ಜನ್ಯವಾದ, ಅಥವಾ ಕಾರಣ ತಿಳಿಯದ, ಸಸ್ಯವ್ಯಾಧಿ. ಬೂಷ್ಟು ಜಾತಿಯ ಪರೋಪಜೀವಿಗಳಿಂದುಂಟಾದ ಸಸ್ಯವ್ಯಾಧಿ (ಜೋಳದ ಕಾಡಿಗೆರೋಗ, ಮೊ.). (ಹಣ್ಣು ಗಿಡಗಳನ್ನು ನಾಶಮಾಡುವ) ಗಿಡಹೇನು. (ಆಸ, ಏಳಿಗೆಗಳ) ವಿನಾಶ ಕಾರಣ; ಹಾನಿ; ಕೇಡು; ವಿಘಾತ; ಉಪದ್ರವ. ಮಸಕಾದ ಮತ್ತು ಉಬ್ಬಸವನ್ನುಂಟುಮಾಡುವ ವಾತಾವರಣ. (ಕ್ರಿ.) ಕೇಡು ಮಾಡು; ಕ್ಷಯಿಸು; ನಾಶ ಮಾಡು; ಬತ್ತಿಸು; ಬೆಳೆಯುವುದಕ್ಕೆ ಮೊದಲೇ ಚಿವುಟಿಹಾಕು. **Blíghter** (ನಾ.) (ಮು., ಅಸಂ.) ತೊಂದರೆಯ ಮನುಷ್ಯ; ಪೀಡೆ; ತುಚ್ಛ; ಅಲ್ಪ; ತುಂಟ.

Blíghty ಬ್ಲೈಟಿ (ನಾ.) (ಇಂಗ್ಲಿಷ್ ಸೈನಿಕರ ಅಸಂ.) ಇಂಗ್ಲೆಂಡು; ಸ್ವದೇಶ. ('ವಿಲಾಯತಿ' ಎಂಬ ಮಾತಿನ ಅಪಭ್ರಂಶ). A B. one ಇಂಗ್ಲೆಂಡಿಗೆ ಹಿಂದಿರುಗಲು ಅಪ್ಪಣೆ ದೊರಕಿಸುವ ಯುದ್ಧದ ಗಾಯ.

Blind ಬ್ಲೈಂಡ್ (ಗು.) ಕುರುಡು; ಕಣ್ಣುಕಾಣದ; ಅಂಧ; ದೃಷ್ಟಿಹೀನ (Turn one's b. eye to ನೋಡದವನಂತೆ ನಟಿಸು). ದೂರದೃಷ್ಟಿಯಿಲ್ಲದ; ವಿವೇಚನೆಯಿಲ್ಲದ; ನೀತಿ, ಪರಿಜ್ಞಾನ, ಇಲ್ಲದ. (B. to ಗ್ರಹಿಸಲು ಶಕ್ತಿಯಿಲ್ಲದೆ; ಲಕ್ಷ್ಯಕೊಡದೆ. One's b. side ಅರಕ್ಷಿತ ಪಾರ್ಶ್ವ; ಅಲಕ್ಷ್ಯದಿಂದಿರುವ ಕಡೆ). ನಿರ್ಲಕ್ಷ್ಯವಾದ; ಯಂತ್ರದಂತೆ ವರ್ತಿಸುವ; ಗೊತ್ತುಗುರಿಯಿಲ್ಲದ (B. forces ಕುರುಡು ಶಕ್ತಿಗಳು). ಗುರುತಿಸಲು ಕಷ್ಟವಾದ (B. track ಗೊತ್ತಾಗದ ಹಾದಿ. B. letter ವಿಳಾಸ ಸ್ಪಷ್ಟವಾಗಿ ಬರೆದಿಲ್ಲದ ಕಾಗದ; ಕುರುಡು ಕಾಗದ. B. man, reader ಕುರುಡುಕಾಗದಗಳ ವ್ಯವಸ್ಥೆಮಾಡುವ ಅಂಚೆಯ ಅಧಿಕಾರಿ). ಮರೆಯಾಗಿರುವ; ಕಣ್ಣಿಗೆ ಕಾಣದಂತಿರುವ [B. ditch ಕಾಣದ ಗುಂಡಿ; ಗುಪ್ತ ಕೂಪ. B. stitch (ನಾ., ಕ್ರಿ. ಸಕ.) ಒಂದು ಕಡೆ ಮಾತ್ರ ಕಾಣುವ ಹೊಲಿಗೆ (ಹಾಕು)]. (ಅಸಂ.) ಕುಡಿದ (B. drunk, B. to the world ಮಿತಿಮೀರಿ ಕುಡಿದ). **B.-alley** ಮುಂದಕ್ಕೆ ಹಾದಿಯಿಲ್ಲದ ಓಣಿ; ಮೂಗೋಣಿ; ಕುರುಡು ಗಲ್ಲಿ. B.-alley occupations ಮುಂದೆ ಅಭಿವೃದ್ಧಿಗೆ ಮಾರ್ಗವಿಲ್ಲದ ಉದ್ಯೋಗಗಳು. **B. coal** ಉರಿಯೇಳದೆ ಕೆಂಡವಾಗುವ ಕಲ್ಲಿದ್ದಲು; ಕನಲು ಕಲ್ಲಿದ್ದಲು; 'ಆಂಥ್ರಸೈಟ್' ಕಲ್ಲಿದ್ದಲು. **B. door** (ಗೋಡೆ ಹಾಕಿದ) ತೋರ್ಕೆಯ ಬಾಗಿಲು. **B. hazard** ಒಂದು ತೆರದ ಇಸ್ಪೀಟಾಟ. **B. hookey** ಒಂದು ತೆರದ ಇಸ್ಪೀಟಾಟ. B.-man's-buff ಕಣ್ಣುಮುಚ್ಚಾಲೆಯಾಟ. B. man's holiday ದೀಪ ಹಚ್ಚುವುದಕ್ಕೆ ಮೊದಲನ ಕಾಲ. **B. shell** ಮದ್ದಿಲ್ಲದ ಸಿಡಿಗುಂಡು, ಅಥವಾ ಸಿಡಿಯದೆ ಹೋದ ಸಿಡಿಗುಂಡು; ಹುಸಿ ಗುಂಡು. **B. spot** ಕಣ್ಣಿನೊಳಗಿನ ದೃಷ್ಟಿಪಟದಮೇಲೆ ಬೆಳಕನ್ನು ಗ್ರಹಿಸದ ಒಂದು ಪ್ರದೇಶ: ಕುರುಡು ಚುಕ್ಕೆ. **B. stamping, B. tooling** ಪುಸ್ತಕದ ರಟ್ಟಿನಮೇಲೆ ಮಸಿಯನ್ನಾಗಲಿ ಚಿನ್ನದ ರೇಕನ್ನಾಗಲಿ ಉಪಯೋಗಿಸದೆ ಅಚ್ಚೊತ್ತುವುದು. **B.-story** ಕ್ರೈಸ್ತ ದೇವಾಲಯದಲ್ಲಿ ಬೆಳಕುಬೀಳದ ಅಟ್ಟ. **B.-worm** (= Slow worm) ಹಾವಿಗೂ ಹಲ್ಲಿಗೂ ಮಧ್ಯಸ್ಥವಾದ, ಹುಳುವಿನಂತಿರುವ, ಕೆಡುಕು ಮಾಡದ, ಒಂದು ಸಣ್ಣ ಸರೀಸೃಪ ಪ್ರಾಣಿ (ಇದರ ಕಣ್ಣುಗಳು ಬಹಳ ಸೂಕ್ಷ್ಮವಾಗಿರುವುದರಿಂದ ಕುರುಡು ಹುಳುವೆಂದು ಎಣಿಸಿದ್ದರು)

Blind (ಕ್ರಿ., ನಾ.) (ತಾತ್ಕಾಲಿಕವಾಗಿಯಾಗಲಿ ಶಾಶ್ವತವಾಗಿಯಾಗಲಿ) ಕುರುಡುಮಾಡು; ದೃಷ್ಟಿ ಕಳೆ. ವಿವೇಚನಾ ಶಕ್ತಿಯನ್ನು ನಾಶಗೊಳಿಸು; ಬುದ್ಧಿ ಕೆಡಿಸು; ವಂಚಿಸು; ಮೋಸ ಮಾಡು. (ಕ್ರಿ. ಅಕ.) (ಅಸಂ.) ಕಣ್ಣು ಮುಚ್ಚಿಕೊಂಡು, ಲಕ್ಷ್ಯವಿಲ್ಲದೆ, ನುಗ್ಗು (ಮು., ಲಕ್ಷ್ಯವಿಲ್ಲದೆ ಓಡಿಸುವ ಮೋಟಾರುಬಂಡಿಯವನ ವಿಷಯದಲ್ಲಿ). (ನಾ.) ದೃಷ್ಟಿಗೆ ಅಥವಾ ಬೆಳಕಿಗೆ ಮರೆ, ತಡೆ; ಕಿಟಕಿಗಳಿಗೆ ತೆರೆ. (ಕುದುರೆಯ ಕಣ್ಣಿಗೆ ಕಟ್ಟುವ) ಕಣ್ಣುತಡೆ. ಮನೋಭಿಪ್ರಾಯವನ್ನು ಮರೆಮಾಚಲು ಹೂಡುವ ಸೋಗು; ನೆಪ; ಮರಸು; ಛದ್ಮ. ಶತ್ರುಗಳ ಗುಂಡಿನೇಟನ್ನು ತಪ್ಪಿಸಿಕೊಳ್ಳಲು ಕಟ್ಟಿದ ರಕ್ಷಣೆ, ತಡೆಗಟ್ಟು (= **Blíndage**). **Blíndfold** (ಕ್ರಿ. ಸಕ.) ಕಣ್ಣು ಕಟ್ಟು (ರೂಪ. ಸಹ). (ಗು., ಕ್ರಿ. ವಿ.) ಕಣ್ಣು ಮುಚ್ಚಿಕೊಂಡು; ನೋಡದೆ; ತಡವರಿಸುತ್ತ. ಹಿಂದುಮುಂದು ಯೋಚಿಸದೆ; ನಿರ್ಲಕ್ಷ್ಯವಾಗಿ. **Blíndly** (ಕ್ರಿ. ವಿ.); **Blíndness** (ನಾ.) ಕುರುಡು; ದೃಷ್ಟಿ ಹೀನತೆ; ಅಂಧತೆ. ಅಜ್ಞಾನ; ಅವಿವೇಕ; ನಿರ್ಲಕ್ಷ್ಯತೆ; ನೀತಿಪರಿಜ್ಞಾನ ಶೂನ್ಯತೆ; ತಿಳಿಗೇಡಿತನ. **Blínding** (ನಾ.) ಹೊಸದಾಗಿ ಮಾಡಿದ ರಸ್ತೆಯಲ್ಲಿಯ ಸಂದುಗಳನ್ನು ನವಿರುಪದಾರ್ಥದಿಂದ ಮುಚ್ಚುವುದು; ಹೀಗೆ ಮುಚ್ಚುವುದಕ್ಕಾಗಿ ಉಪಯೋಗಿಸುವ ಪದಾರ್ಥ.

Blink ಬ್ಲಿಂಕ್ (ಕ್ರಿ., ನಾ.) ಎವೆಯಿಕ್ಕು; ಕಣ್ಣು ಮಿಟುಕಿಸು; ಮಿಟಿಮಿಟಿ ನೋಡು; ಕಣ್ಣುಕಣ್ಣು ಬಿಡು. ಮಿಣುಗುಟ್ಟು; ಮಿಂಚು. ಗಣನೆಗೆ ತರದೆ ಕಣ್ಣು ಮುಚ್ಚಿಕೊ; ಕಡೆಗಣಿಸು; ಉಪೇಕ್ಷಿಸು. (ನಾ.) ಕ್ಷಣಮಾತ್ರದ ಹೊಳಪು; ಮಿನುಗು; ಕ್ಷಣವೀಕ್ಷಣ. ದೂರದಲ್ಲಿಯ ನೀರ್ಗಲ್ಲುಪ್ರದೇಶದ ಪ್ರತಿಫಲನದಿಂದ ಕ್ಷಿತಿಜದಲ್ಲಿ ತೋರಿಬರುವ ಧವಳಪ್ರಭೆ (= Ice-b.). (ಶಿಥಿಲವಾಗಿ) ದೊಡ್ಡ ನೀರ್ಗಲ್ಲು ಪ್ರದೇಶ. **Blínkard** (ನಾ.) ಕಣ್ಣು ಮಿಟುಕಿಸುವ ಸ್ವಭಾವದವನು: ಕಣ್ಮಿಡುಕ. (ರೂಪ.) ಬುದ್ಧಿಯಿಲ್ಲದವನು; ಮಂಕ; ದಡ್ಡ. **Blínker** (ನಾ.); **Blínkers** (ಕುದುರೆಗೆ ಪಕ್ಕನೋಟಕ್ಕವಕಾಶವಿಲ್ಲದಂತೆ ಕಟ್ಟುವ) ಕಣ್ಕಾಪು. ಕಣ್ಣಿನ ರಕ್ಷಣೆಗಾಗಲಿ, ಮೆಳ್ಳೆಗಣ್ಣನ್ನು ನೇರ್ಪಡಿಸಲು ದೃಷ್ಟಿ ಒಂದೇ ಕಡೆಗೆ ಹರಿಯುವಂತೆ ಮಾಡುವುದಕ್ಕಾಗಲಿ, ಹಾಕುವ ಕನ್ನಡಕ: ಮೆಳ್ಳೆ ಕನ್ನಡಕ.

Bliss ಬ್ಲಿಸ್ (ನಾ.) ಆನಂದ; ಪರಮ ಸುಖ; ಸ್ವರ್ಗ ಸುಖ. **Blíssful** (ಗು.); **Blíssfully** (ಕ್ರಿ. ವಿ.); **Blíssfulness** (ನಾ.)

Blíster ಬ್ಲಿಸ್ಟರ್ (ನಾ., ಕ್ರಿ.) ಬೊಬ್ಬೆ; ಉಜ್ಜುಬೊಬ್ಬೆ; ಹೊಪ್ಪಳೆ. (ವೈ. ಶಾ.) ಬೊಬ್ಬೆಯೆಬ್ಬಿಸಲು ಹಾಕುವ ಪದಾರ್ಥ; 'ಅಗ್ನಿಪ್ಲಾಸ್ತ್ರಿ' (ಕ್ರಿ.) ಬೊಬ್ಬೆಯೆಬ್ಬಿಸು; ಬೊಬ್ಬೆಯೇಳು. (ಅಸಂ.) ಬೇಸರ ಹಿಡಿಸು; ಕಾಲ ಕಳೆ.

Blithe ಬ್ಲೈದ್ (ಗು.) (ಮು., ಕಾವ್ಯ) ಸಂತೋಷದಿಂದ ಕೂಡಿದ; ಉಲ್ಲಾಸವುಳ್ಳ; ಹರ್ಷವುಳ್ಳ; ಪ್ರಸನ್ನ; ಗೆಲವಿನ. **Blíthely** (ಕ್ರಿ. ವಿ.); **Blíthesome** (ಗು.)

Blíthering ಬ್ಲಿದರಿಂಗ್ (ಗು.) (ಬಳ. ಮಾ.) ಅವಿವೇಕವಾಗಿ ಹರಟುವ; ಗಳಹುವ. ಶುದ್ಧ; ತೇರಿದ; ಪಕ್ಕಾ (B. idiot ಶುದ್ಧ ದಡ್ಡ). ನೀಚ; ತುಚ್ಛ; ಅಲ್ಪ.

Blízzard ಬ್ಲಿಸರ್ಡ್ (ನಾ.) ದಟ್ಟವಾಗಿ ಮಂಜುಗರೆಯುವ ಬಿರುಗಾಳಿ; ಹಿಮವಾತ.

Bloat[1] ಬ್ಲೋಟ್ (ಕ್ರಿ.) ಉಬ್ಬು; ಉಬ್ಬಿಸು; ಊದು; ಊದಿಸು; ಬೀಗು. **Bloáted** (ಗು.) (ಹೆಚ್ಚಾಗಿ ತಿಂದು) ಊದಿದ; ಮಿತಿಮೀರಿ ಬೆಳೆದ. ಕೊಬ್ಬಿದ; ಸೊಕ್ಕಿದ (B. aristocrat ಕೊಬ್ಬಿದ ಶ್ರೀಮಂತ. B. armaments ಮಿತಿಮೀರಿ ಬೆಳೆದ ಶಸ್ತ್ರಬಲ)

Bloat[2] ಬ್ಲೋಟ್ (ಕ್ರಿ. ಸಕ.) 'ಹೆರಿಂಗ್' ಎಂಬ ಜಾತಿಯ ಮೀನನ್ನು ಕೆಡದಂತಿಟ್ಟರಲು ಉಪ್ಪುಹಾಕಿ ಹೊಗೆಯಾಡಿಸು. Bloated herring or **bloáter** ಹೀಗೆ ಮಾಡಿಟ್ಟ ಹೆರಿಂಗ್ ಮೀನು; ಹೆರಿಂಗ್ ಬಾಳಕ.

Blob ಬ್ಲಾಬ್ (ನಾ.) ನೀರ್ಗುಳ್ಳೆ; ಬಿಂದು; ಹನಿ; ತೊಟ್ಟು; ಗುಳ್ಳೆ. ಬಣ್ಣದ ಚುಕ್ಕೆ; ಉಬ್ಬುಬಟ್ಟು.

Blóbber ಬ್ಲಾಬರ್ (ಗು.) (ತುಟಿಯ ವಿಷಯವಾಗಿ) ದಪ್ಪವಾದ; ಊದಿದ; ಚಾಚಿಕೊಂಡಿರುವ. **B.-lipped** (ಗು.) ಹೆಬ್ಬುಟಿಯ; ಲಂಬೋಷ್ಠ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bloc ಬ್ಲಾಕ್ (ನಾ.) ಸರ್ಕಾರಕ್ಕೆ ಬೆಂಬಲಕೊಡುವ ಪಂಗಡಗಳ ಕೂಟ, ಗುಂಪು ; ಪಕ್ಷ. (ಯಾವುದಾದರೂ ಒಂದು ಅರ್ಥಸಾಧನೆಗಾಗಿ, ಜನಾಂಗಗಳು, ಪಂಗಡಗಳು, ಮೊ. ಗಳ) ಕೂಟ.

Block ಬ್ಲಾಕ್ (ನಾ.) ಮರದ ದಿಮ್ಮಿ ; ಮರದ ಮೊಂಡು [Chip of the old b. ಹಳೆಯ ತುಂಡಿನ ತುಣುಕು (ರೂಪ.) ; (ಮು., ಗುಣದಲ್ಲಿ) ತಂದೆಯಂಥ ಮಗ. Cut blocks with razor ಕತ್ತಿಯಿಂದ ಕೊಂಟು ಕಡಿ ; (ರೂಪ.) ಬುದ್ಧಿ, ಚಾತುರ್ಯ, ಮೊ. ನ್ನು ಅಪವ್ಯಯ ಮಾಡು, ವ್ಯರ್ಥಮಾಡು]. ಸೌದೆ, ಮೊ. ನ್ನು ಕತ್ತರಿಸುವುದಕ್ಕಾಗಲಿ, ಯಾವುದಾದರೂ ವಸ್ತುವನ್ನು ಬಡಿಯುವುದಕ್ಕಾಗಲಿ, ತಳದಲ್ಲಿಟ್ಟುಕೊಳ್ಳುವ ಮರದ ಕೊರಡು : ಅಡಿಗೊರಡು. (The b. ಶಿರಶ್ಛೇದನ). ಕುದುರೆ ಹತ್ತಲು ಉಪಯೋಗಿಸುವ ಮರದ ಕೊರಡು. ಟೋಪಿಗಳಿಗೆ ಆಕಾರಕೊಡುವುದಕ್ಕಾಗಿ ಹಜಾಮರು ಉಪಯೋಗಿಸುವ ಅಚ್ಚು (Barber's b. ಬೋಳುತಲೆಗೆ ಕೂದಲಿನ ಆವರಣವನ್ನು ಅಳವಡಿಸುವುದಕ್ಕಾಗಿ ಹಜಾಮರು ಉಪಯೋಗಿಸುವ ಮರದ ತಲೆ). ರಾಟೆ ; ಕಟ್ಟುಹಾಕಿ ಅಳವಡಿಸಿರುವ ರಾಟೆಗಳ ವ್ಯೂಹ : ಕಪ್ಪಿ. ಮುದ್ರಣಕ್ಕಾಗಿ ಚಿತ್ರಕೆತ್ತಿರುವ ಮರದ ತುಂಡು : ಪಡಿಯಚ್ಚು. ಯಾವುದಾದರೂ ದೊಡ್ಡತುಂಡು ಅಥವಾ ದಿಮ್ಮಿ. ಕಲ್ಲುಬಂಡೆ ; ಕಟ್ಟಡಕ್ಕೆ ಸಿದ್ಧಪಡಿಸಿರುವ ಕಲ್ಲುದಿಮ್ಮಿ. ಒಟ್ಟಾಗಿ ಪರಿಗಣಿಸಿದ ಒಂದು ಗುಂಪು, ತಂಡ, ತಾಕು (In b. ಒಟ್ಟಂಡವಾಗಿ). ಬೀದಿಗಳು ಸುತ್ತುವರಿದಿರುವ ಕಟ್ಟಡಗಳ ಗುಂಪು ; ವಠಾರ. ಕಲ್ಲೆದೆಯ ಮನುಷ್ಯ. ತಡೆ (Stumbling b. ತಡೆ ; ಅಡ್ಡಿ ; ಪ್ರತಿಬಂಧಕ). (ಪಾರ್ಲಿಮೆಂಟಿನ ಮುಂದೆ ಬರುವ) ಯಾವುದಾದರೂ ಮಸೂದೆಯನ್ನು ವಿರೋಧಿಸಲಾಗುವುದೆಂದು ಮೊದಲೇ ತಿಳಿಸಿ, ಅದರ ಚರ್ಚೆಗೆ ಗೊತ್ತುಮಾಡಿರುವ ಕಾಲದಲ್ಲಿ ಅದು ಚರ್ಚೆಯಾಗದಂತೆ ಮಾಡಿ, ಸಾ., ಅದನ್ನು ಅಳಿಸಿಬಿಡುವ ತಡೆಗಡೆ. (ಮಾರ್ಗಸಂಚಾರದಲ್ಲಿ) ಅನೇಕ ಬಂಡಿ, ಮೊ. ವು ಒಟ್ಟುಗೂಡಿ ಮುಂದಕ್ಕೆ ಹೋಗುವುದಕ್ಕೆ ತಡೆಯಾಗುವ ಸ್ಥಿತಿ. (B. System ರೈಲುಮಾರ್ಗದಲ್ಲಿ ಒಂದು ಬಂಡಿಯ ಸಾಲು ಒಂದು ಗೊತ್ತಾದ ಪ್ರದೇಶವನ್ನು ಬಿಟ್ಟು ಮುಂದೆ ಹೋಗುವ ವರೆಗೂ ಮತ್ತೊಂದು ಸಾಲು ಆ ಪ್ರದೇಶವನ್ನು ಪ್ರವೇಶಿಸಲಾಗದಂತೆ ಮಾಡಿರುವ ಏರ್ಪಾಡು : ತಡೆಗಡೆ ಪದ್ಧತಿ). (ಕ್ರಿಕೆಟ್ ಆಟ) (ದಾಂಡುಗಾರನು ಚೆಂಡನ್ನು ದಾಂಡಿನಿಂದ ತಡೆಯುವ, ಮತ್ತು ಅದನ್ನು ಹೊಡೆಯುವುದಕ್ಕೆ ಮೊದಲು) ದಾಂಡನ್ನು ಊರುವ ಸ್ಥಳ. **B.-chain** ಕಾಲುಬಂಡಿ (ಬೈಸಿಕಲ್) ಮೊ. ಗಳಲ್ಲಿ ಉಪಯೋಗಿಸುವ ತುದಿಯಿಲ್ಲದ ಸರಪಣಿ. **Blóckhead** ಮೊದ್ದು ತಲೆ ; ದಡ್ಡ ; ಹೆಡ್ಡ. **Blóckheaded** (ಗು.) ; **Blóckhouse** ಪ್ರತ್ಯೇಕವಾಗಿರುವ ತಡೆಗೋಟೆ. ಮರದ ಚದರ ದಿಮ್ಮಿಗಳಿಂದ ಕಟ್ಟಿದ ಮನೆ. **B. letters, B. writing** ಅಚ್ಚಕ್ಷರಗಳಂತೆ (ಸಾ., ದೊಡ್ಡಕ್ಷರಗಳಲ್ಲಿ) ಬಿಡಿಸಿ ಬರೆದ ಅಕ್ಷರಗಳು, ಬರವಣಿಗೆ : ಅಚ್ಚು ಬರಹ.

Block (ಕ್ರಿ. ಸಕ.) (ಹಾದಿ, ಮೊ. ನ್ನು) ತಡೆಗಟ್ಟು, ಅಡ್ಡಮಾಡು. (ಅಭಿವೃದ್ಧಿ, ಮೊ. ಕ್ಕೆ) ಅಡಚಣೆಯೊಡ್ಡು (B. up, B. in ಸರೆ ಹಾಕು, ತಡೆಗಟ್ಟು). ಪಾರ್ಲಿಮೆಂಟಿನ ಮಸೂದೆಗೆ ತಡೆಯೊಡ್ಡು. (ಕ್ರಿಕೆಟ್ ಆಟದಲ್ಲಿ) ಚೆಂಡನ್ನು ದಾಂಡಿನಿಂದ ತಡೆ. (ಟೋಪಿಗೆ) ಆಕಾರ ಕೊಡು. (ಪುಸ್ತಕದ ರಟ್ಟಿನಮೇಲೆ) ಉಬ್ಬಚ್ಚು ಮಾಡು. B. out, B. in (ಮಾಡತಕ್ಕ ಕೆಲಸವನ್ನು) ಹೆಗ್ಗುರುತು ಮಾಡು.

Blockáde ಬ್ಲಾಕೇಡ್ (ನಾ., ಕ್ರಿ. ಸಕ.) ಶತ್ರುಪಕ್ಷದವರು ತಿಂಡಿಗಿಲ್ಲದೆ ಶರಣುಹೊಗುವಂತೆ ಮಾಡುವುದಕ್ಕಾಗಿ ಹೊರಕ್ಕಾಗಲಿ ಒಳಕ್ಕಾಗಲಿ ಹೋಗಲು ಸಾಧ್ಯವಿಲ್ಲದಂತೆ ಅವರನ್ನು ಸ್ಥಲಪ್ರದೇಶದಲ್ಲಾಗಲಿ ಜಲಪ್ರದೇಶದಲ್ಲಾಗಲಿ ಬಂಧಿಸುವುದು ; ತಡೆಗಟ್ಟು. (Paper b. ಹೀಗೆ ನಿರ್ಬಂಧಿಸುವಂತೆ ಗೊತ್ತುಮಾಡಿ, ಕಾರ್ಯಭಾಗ ನಡೆಯದೆ ಇರುವ ತಡೆಗಡೆ. Raise b. ತಡೆ ತೆಗೆ ; ಮುತ್ತಿಗೆಯೆತ್ತು. ತಡೆಗಟ್ಟಿರುವ ಸೈನ್ಯವನ್ನು ಎದ್ದುಹೋಗುವಂತೆ ಮಾಡು ; ತಡೆತೆಗೆಯಿಸು ; ಮುತ್ತಿಗೆಯಬ್ಬಿಸು. Run b. ತಡೆಗಟ್ಟುವ ಸೈನ್ಯವನ್ನು ತಪ್ಪಿಸಿಕೊಂಡುಹೋಗು. B.-runner ಈ ಕೆಲಸ ಮಾಡುವ ನೌಕೆ, ನೌಕಾಧಿಪತಿ, ಮೊ.). ನೀರ್ಗಲ್ಲು, ಮೊ. ಗಳಿಂದುಂಟಾದ ಬಂಧನ. (ಕ್ರಿ.) ಮುತ್ತಿಗೆ ಹಾಕು ; ತಡೆಗಟ್ಟು. **Blockáder** (ನಾ.)

Bloke ಬ್ಲೋಕ್ (ನಾ.) (ಬಳ. ಮಾ.) ಮನುಷ್ಯ ; ಆಳು ; 'ಆಸಾಮಿ'. ದಡ್ಡ ; ಎಗ್ಗ ; ಗಾವಿಲ (ಗ್ರಾಂ.). The b. (ನಾವಿಕ ಅಸಂ.) ನೌಕಾಧಿಪತಿ.

Blond(e) ಬ್ಲಾಂಡ್ (ಗು., ನಾ.) (ಕೂದಲು) ನಸು ಹೊಂಬಣ್ಣದ. (ಮೈಬಣ್ಣ) ಅಂದವಾದ. (ನಾ.) ಅಂಥ ಕೂದಲೂ ಮೈಬಣ್ಣವೂ ಉಳ್ಳ ವ್ಯಕ್ತಿ (ಮು., ಹೆಂಗಸು = Blonde). ಹುರಿಮಾಡಿದ ಎರಡೆಳೆಯ ರೇಷ್ಮೆಯ ದಾರದ ಜರತಾರಿ (ಆರು ಮೂಲೆಯ ಮನೆಗಳುಳ್ಳದ್ದು = Blonde lace)

Blood ಬ್ಲಡ್ (ನಾ.) ರಕ್ತ ; ನೆತ್ತರು [ಮನುಷ್ಯ ಮೊ. ಉತ್ತಮ ವರ್ಗದ ಪ್ರಾಣಿಗಳ ದೇಹದಲ್ಲಿಯೂ ಕೀಳುವರ್ಗದ ಪ್ರಾಣಿಗಳ ದೇಹದಲ್ಲಿಯೂ ಜೀವನಾಧಾರವಾಗಿ ಸಂಚಲಿಸುವ ದ್ರವ (ಉತ್ತಮ ವರ್ಗದ ಪ್ರಾಣಿಗಳಲ್ಲಿ ಕೆಂಬಣ್ಣವುಳ್ಳದ್ದು)]. (Flesh and b. ಪ್ರಾಣಿ ಸ್ವಭಾವ ; ಮನುಷ್ಯತ್ವ ; ಸಶರೀರ. Let b. ಶಸ್ತ್ರ ಚಿಕಿತ್ಸೆ ಮಾಡಿ ರಕ್ತ ಹೊರಡಿಸು, ರಕ್ತ ತೆಗೆ). (ರೂಪ.) ಜೀವರಸ, ಸಸ್ಯರಸ, ದ್ರಾಕ್ಷಾರಸ, ಮೊ. ವು. ಕೊಲೆ ; ಕೊಲೆಪಾತಕ ; ಖೂನಿ (B. and iron ಕರುಣೆ ತೋರದೆ ಸದೆಬಡಿಯುವುದು : ಕೊಲೆಗಡಿತ). ರಕ್ತಪಾತ ದೋಷ. ಬಲಿ. ಮನೋವೃತ್ತಿ ; ಸ್ವಭಾವ. ಆವೇಶ (Bad b. ಮನಸ್ತಾಪ ; ಮತ್ಸರ ; ಹಗೆತನ. His b. is up ಅವನು ಆವೇಶಗೊಂಡಿದ್ದಾನೆ ; ಅವನಿಗೆ ಕೋಪ ಕೆರಳಿದೆ. B. out of a stone ಪಾಷಾಣಹೃದಯನಿಂದ ಕರುಣೆ ; ಕಲ್ಲು ಕರಗುವುದು. In cold b. ರೋಷಾವೇಶವಿಲ್ಲದೆ ; ಮೊದಲೇ ಯೋಚಿಸಿಕೊಂಡು ; ಉದ್ದೇಶಪೂರ್ವಕವಾಗಿ). ಜಾತಿ ; ಕುಲ ; ವಂಶ ; ಗೋತ್ರ ; ಸಂತತಿ ; ಪೀಳಿಗೆ [Blue b. ಉತ್ತಮ ಕುಲ ; ಕುಲೀನತೆ ; ಸದ್ವಂಶ ; ಆಭಿಜಾತ್ಯ. Fresh b. ಹೊಸ ರಕ್ತ ; (ಕುಟುಂಬ, ಸಂಘ, ಸಂಸ್ಥೆ, ಮೊ. ಕ್ಕೆ ಸೇರಿಸಿದ) ಹೊಸಬರು. B. royal ರಾಜವಂಶ. Runs in the b. ವಂಶಾನುಗತವಾಗಿದೆ ; ಆ ಮನೆತನದ ಲಕ್ಷಣವಾಗಿದೆ]. ರಕ್ತಸಂಬಂಧ ; ರಕ್ತಸಂಬಂಧಿಗಳು (Own flesh and b. ಸ್ವಂತ ರಕ್ತ, ಕರುಳು. B. is thicker than water ರಕ್ತಸಂಬಂಧವು ಇತರ ಸಂಬಂಧಗಳಿಗಿಂತ ಪ್ರಬಲವಾದುದು ; ಕೆಳೆಗಿಂತ ಕರುಳು ಹೆಚ್ಚು. Whole b. ತಂದೆ ತಾಯಿಗಳಿಬ್ಬರೂ ಒಂದೇ ಕುಲಜರಾದ ವಂಶ. Half-b. ತಂದೆಯೊಂದು ಕುಲ, ತಾಯಿಯೊಂದು ಕುಲವಾದ ವಂಶ ; ಅರೆ ಬೆರಕೆಯ ವಂಶ). ಉತ್ತಮ ಕುಲ (B. horse ಉತ್ತಮ ಜಾತಿಯ ಕುದುರೆ ; ಜಾತ್ಯಶ್ವ). ಸೊಗಸುಗಾರ ; 'ಷೋಕಿ' (Young b. ಷೋಕಿ ಮನುಷ್ಯ. ಸಂಘದಲ್ಲಿ, ಗುಂಪಿನಲ್ಲಿ, ಚಿಕ್ಕವನು, ತರುಣ). **B. ally** ಕೆಂಪು ಗೀರುಗಳುಳ್ಳ ಜಾತಿಗೋಲಿ. **B. feud** ರಕ್ತಪಾತ ಕಾರಣದಿಂದ ಹುಟ್ಟಿದ ಕುಲವೈರ. **Bloódguilty** (ಗು.) ಕೊಲೆಪಾತಕಕ್ಕಾಗಲಿ, ಹತ್ಯಾಪರಾಧಕ್ಕಾಗಲಿ ಹೊಣೆಯಾದ, ಜವಾಬ್ದಾರಿಯುಳ್ಳ ; ರಕ್ತಕಳಂಕಿತ. **Bloódguiltiness** (ನಾ.) ; **B.-heat** ಆರೋಗ್ಯದಲ್ಲಿಯ (ಮನುಷ್ಯನ) ರಕ್ತಶಾಖ (98.4° F). **Bloódhound** ಮನುಷ್ಯನನ್ನಾಗಲಿ, ದನ, ಮೊ. ವನ್ನಾಗಲಿ ವಾಸನೆಯಿಂದ ಕಂಡುಹಿಡಿಯುವ ಜಾತಿಯ ನಾಯಿ : ನೆತ್ತರುನಾಯಿ ; ಬೇಟೆನಾಯಿ. ಪತ್ತೇದಾರ ; ಗೂಢಚಾರ ; ಬೇಹುಕಾರ. **B.-letting** ಶಸ್ತ್ರಚಿಕಿತ್ಸೆಯಿಂದ ರೋಗಿಯ ರಕ್ತವನ್ನು ಸ್ವಲ್ಪ ಹೊರಡಿಸುವುದು. (ಹಾಸ್ಯ) ರಕ್ತಪಾತ. **B.-money** ಒಬ್ಬನಿಗೆ ಮರಣದಂಡನೆಯಾಗಲು ಸಹಾಯಮಾಡುವ ಸಾಕ್ಷಿಗಾರನಿಗೆ ಕೊಡುವ ಪ್ರತಿಫಲ, ಮೌಲ್ಯ : ರಕ್ತಮೌಲ್ಯ. ಹತ್ಯಾದೋಷ ಪರಿಹಾರಕ್ಕೆಂದು ಹತನ ಸಂಬಂಧಿಗೆ ತೆರುವ ಮೌಲ್ಯ : ರಕ್ತದಂಡ. **B. orange** ಕೆಂಪು ರಸದ ಕಿತ್ತಿಳೆ. **B.-poisoning** ದೇಹದಲ್ಲಿಯ ರಕ್ತಕ್ಕೆ (ಮು., ಗಾಯದ ಮೂಲಕ) ಕೊಳೆತ ಪದಾರ್ಥ ಅಥವಾ ವಿಷಪದಾರ್ಥ ಸೇರುವುದರಿಂದುಂಟಾಗುವ ರೋಗಸ್ಥಿತಿ : ನೆತ್ತರ ನಂಜು ; ರಕ್ತವಿಷ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

B.-red ರಕ್ತಗೆಂಪು. **B.-relation** ರಕ್ತಸಂಬಂಧಿ (ಮದುವೆಯಿಂದಲ್ಲ). **Bloódshed** ರಕ್ತಪಾತ; ಕೊಲೆ. **Bloódshot** (ಕಣ್ಣು) ರಕ್ತದಿಂದ ಕೆಂಪೇರಿದ, ಕೆರಳಿದ; ಆರಕ್ತ (See things bloodshot ಎಲ್ಲೆಲ್ಲೂ ಕೊಲೆಗೆ ಪ್ರೇರಣೆಯನ್ನೇ ಕಾಣು, ರಕ್ತಕಲೆಯನ್ನೇ ಕಾಣು). **B.-stained** ರಕ್ತದ ಕಲೆಯುಳ್ಳ; ಕೊಲೆಪಾತಕದಿಂದ ದೂಷಿತನಾದ; ರಕ್ತಕಲುಷಿತ. **Bloódstock** ಜಾತ್ಯಶ್ವಗಳು; ಜಾತಿ ಕುದುರೆಗಳು. **Bloódstone** ಕೆಂಪು ಮಚ್ಚೆಗಳಿಂದ ಅಥವಾ ಗೆರೆಗಳಿಂದ ಕೂಡಿದ ಒಂದು ಪ್ರಶಸ್ತ ಶಿಲೆ: ರಕ್ತಶಿಲೆ. **B.-sucker** ಜಿಗಣೆ. ರಕ್ತ ಹೀರುವವನು; ಸುಲಿಗೆ ಕೋರ, ಗಾರ. **B.-thirsty** ಕೊಲೆ ಮಾಡುವ ಗೀಳುಳ್ಳ; ರಕ್ತಾಶ. **Bloódthirstiness** (ನಾ.); **B.-vessel** ರಕ್ತನಾಳ; ಧಮನಿ (ಅಪಧಮನಿ, ಅಭಿಧಮನಿ). **Bloódworm** (ಮೀನು ಹಿಡಿಯಲು ಉಪಯೋಗಿಸುವ) ಎರೆಹುಳು. **B.-wort** ಕೆಂಪು ಬೇರು ಅಥವಾ ಕೆಂಪು ಎಲೆ ಉಳ್ಳ ಸಸ್ಯಜಾತಿ. **Bloódless** (ಗು.) ರಕ್ತವಿಲ್ಲದ; ರಕ್ತಹೀನ; ಬಿಳಿಚಿಕೊಂಡ; ನಿಸ್ಸತ್ವ. ರಕ್ತಪಾತವಿಲ್ಲದ. ಕರುಣೆಯಿಲ್ಲದ; ನಿರ್ದಯ. **Bloódlessly** (ಕ್ರಿ. ವಿ.); **Bloódy** (ಗು., ಕ್ರಿ. ವಿ., ಕ್ರಿ. ಸಕ.) ರಕ್ತದ; ರಕ್ತದಂತಿರುವ; ರಕ್ತ ಸುರಿಯುತ್ತಿರುವ; ರಕ್ತದ ಕಲೆಗಳುಳ್ಳ (B. nose ರಕ್ತ ಸುರಿಯುತ್ತಿರುವ, ಬೆದರಿದ, ಮೂಗು. B. flux ರಕ್ತ ಭೇದಿ; ಆಮಶಂಕೆ). ಕೆಂಪಾದ (B. hand 'ಬ್ಯಾರೊನೆಟ್' ಪದವಿಯ ಶ್ರೀಮಂತನ ಕವಚ, ಮೊ. ಗಳಲ್ಲಿಯ ಲಾಂಛನ). ರಕ್ತಪಾತವುಳ್ಳ; ರಕ್ತಪಾತಾಭಿಲಾಷೆಯುಳ್ಳ; ರಕ್ತಪಾತದಿಂದುಂಟಾದ; ರಕ್ತಮಯ. ಕ್ರೌರ್ಯದ; ಕ್ರೌರ್ಯ ಸ್ವಭಾವದ (B.-minded). (ಬೈಗುಳು) ಹಾಳಾದ. (ಕ್ರಿ. ವಿ.) ಅತಿಯಾಗಿ; ವಿಪರೀತವಾಗಿ. (ಕ್ರಿ.) ರಕ್ತ ಮಾಡು; ರಕ್ತ ಕಲುಷಿತ ಮಾಡು. **Bloódily** (ಕ್ರಿ. ವಿ.); **Bloódiness** (ನಾ.)

Blood (ಕ್ರಿ. ಸಕ.) (ಶಸ್ತ್ರವೈದ್ಯ) (ಸ್ವಲ್ಪ) ರಕ್ತ ತೆಗೆ. (ಬೇಟೆಯ ನಾಯಿಗೆ) ರಕ್ತದ ರುಚಿ ತೋರಿಸು. (ರೂಪ.) (ಮನುಷ್ಯನನ್ನು) ರೇಗಿಸು; ಕೆರಳಿಸು.

Bloom[1] ಬ್ಲೂಮ್ (ನಾ., ಕ್ರಿ. ಅಕ.) ಹೂವು (ಮು., ಆ ಹೂವುಗಳಿಗಾಗಿ ಬೆಳೆಯಿಸಿದ ಅಥವಾ ಅಂದವಾದ ಹೂವುಗಳುಳ್ಳ ಗಿಡಗಳವು); ಅಲರು; ಅರಳು (In b. ಹೂವು ಬಿಟ್ಟು). ಪ್ರಾಯ; ಪರಿಪೂರ್ಣತೆ; ಉಚ್ಛ್ರಾಯ ಸ್ಥಿತಿ; ಪರಿಪಕ್ವ ಸ್ಥಿತಿ. ಕೆನ್ನೆಗೆಂಪು; ಕಳೆ; ಮುಖ ಕಾಂತಿ; ಲಾವಣ್ಯ. ದ್ರಾಕ್ಷಿ, ಮೊ. ಹಣ್ಣುಗಳಮೇಲಿನ ಹುಡಿ. ಹೊಸತಿನ ಹೊಳಪು, ಕಳೆ (Take the b. off ಕಳೆಗುಂದಿಸು; ಕಾಂತಿಗೆಡಿಸು; ಹಳತು ಮಾಡು). ಒಂದು ಜಾತಿಯ ದ್ವಿಪದ್ರಾಕ್ಷಿ. (ಕ್ರಿ.) ಹೂವು ಬಿಡು; ಪುಷ್ಪಿತವಾಗು; ಹೂವು ಬಿಟ್ಟಿರು; ಅರಳು; ವಿಕಸಿಸು. ಕಾಂತಿಯುಕ್ಕು; ಅಂದವೇರು; ಕಳೆ ತುಂಬು; ನಳನಳಿಸು. ಪರಿಪೂರ್ಣವಾಗು; ಉಚ್ಛ್ರಾಯ ಸ್ಥಿತಿಗೆ ಏರು. **Blooming** (ಗು.) (ಕ್ರಿಯಾರ್ಥಗಳಲ್ಲಿ). (ಅಸಂ., ಗ್ರಾಮ್ಯವಾಗಿ ಉಪಯೋಗಿಸುವ Bloody ಎಂಬ ಪದದ ನಯನುಡಿ)

Bloom[2] ಬ್ಲೂಮ್ (ನಾ., ಕ್ರಿ. ಸಕ.) ದಿಮ್ಮಿಗಳಾಗಿ ಮಾಡಿದ ಮುದ್ದೆ ಕಬ್ಬಿಣ. (ಕ್ರಿ.) ಮುದ್ದೆಕಬ್ಬಿಣವನ್ನು ದಿಮ್ಮಿಗಳನ್ನಾಗಿ ಮಾಡು. (ಕಬ್ಬಿಣದ ಅದುರಿನಿಂದ ಅಥವಾ ಮುದ್ದೆಕಬ್ಬಿಣದಿಂದ) ಕಬ್ಬಿಣದ ದಿಮ್ಮಿಗಳನ್ನು ತಯಾರಿಸುವ ಕಮ್ಮಾರಸಾಲೆ.

Bloómer[1] ಬ್ಲೂಮರ್ (ನಾ., ಗು.; ನಾ., ಸಾ., ಬ. ವ. ದಲ್ಲಿ) ಲಂಗ ಮತ್ತು ಪಾಯಿಜಾಮ ಸೇರಿದ (ಒಂದು ತೆರದ ಹೆಣ್ಣುಡುಪು). (ಇದನ್ನು ಮೊದಲು ರಚಿಸಿದ ಅಮೆರಿಕಾಂಗನೆಯ ಹೆಸರಿನಿಂದ)

Bloómer[2] ಬ್ಲೂಮರ್ (ನಾ.) (ಅಸಂ.) ತಪ್ಪು; ಅವಿವೇಕ.

Bloómsbury ಬ್ಲೂಮ್ಸ್‌ಬರಿ (ನಾ.) British Museum ಎಂಬ ಸಕಲ ವಸ್ತುಸಂಗ್ರಹ ಶಾಲೆಯಿರುವ ಲಂಡನ್ನಿನ ಭಾಗ (ಇದು ಹಿಂದಕ್ಕೆ ನೀಟುಗಾರರು ವಾಸಮಾಡುತ್ತಿದ್ದ, ಈಗ ಸಾಹಿತ್ಯ ಪ್ರೇಮಿಗಳ, ಸ್ಥಳ)

Blóssom ಬ್ಲಾಸಂ (ನಾ.) ಹೂವು (ಮು., ಕಾಯಿ ಬಿಡುವ ಹೂವು). ಹಣ್ಣುಗಿಡ ಮೊ. ಗಳಲ್ಲಿ ಬಿಟ್ಟಿರುವ ಹೂಗೊಂಚಲು, ಪುಷ್ಪಮಂಜರಿ (In b. ಹೂವು ಬಿಟ್ಟು). ಎಳಮೆ. ಪ್ರವರ್ಧಮಾನ ಸ್ಥಿತಿ. B.-faced, -nosed ಉಬ್ಬಿದ ಕೆಂಪು ಮುಖದ, ಉಬ್ಬಿದ ಕೆಂಪು ಮೂಗಿನ. **Blóssomy** (ಗು.); **Blóssomless** (ಗು.)

Blóssom (ಕ್ರಿ. ಅಕ.) (ಹೂವು) ಅರಳು; ಹೂವು ಬಿಡು. ಹೊರ ಹೊಮ್ಮು; ವಿಕಸಿಸು. (ರೂಪ. ಸಹ): B. out into a statesman ರಾಜತಂತ್ರಜ್ಞನಾಗಿ ಅರಳು, ಪರಿಣತಿ ಹೊಂದು.

Blot[1] ಬ್ಲಾಟ್ (ನಾ., ಕ್ರಿ.) ಮಸಿಚುಕ್ಕೆ, ಮೊ.; ಕರೆ; ಕಲೆ; ರೂಪ ವಿಕಾರ; ಮಾಲಿನ್ಯ; ಕಳಂಕ; ಕುಂದು; ದೋಷ; ಸದ್ಗುಣಗಳುಳ್ಳವನಲ್ಲಿ ಅಪಮಾನ ತರುವ ನಡತೆ, ಗುಣ. (ಕ್ರಿ.) ಮಸಿ ಬಳಿ, ಹಾಕು, ಚೆಲ್ಲು. (ಲೇಖನಿ, ಮಸಿ) ಚಿತ್ತುಮಾಡು. ನಿರರ್ಥಕವಾದ ಬರೆವಣಿಗೆ ತುಂಬು. ಕೊಳೆ ಮಾಡು; ಮಲಿನ ಮಾಡು; (ಯಶಸ್ಸನ್ನು) ಕೆಡಿಸು; ಹೆಸರುಗೆಡಿಸು. (B. out ಅಳಿಸಿಬಿಡು; ತೊಡೆದುಹಾಕು; ನಿರ್ಮೂಲ ಮಾಡು; ನಾಶಗೊಳಿಸು). ಹಸಿಯ ಕಾಗದದಿಂದ ಒತ್ತು (ಆರಿಸು). Blotting paper (ಮಸಿಯಾರಿಸುವ) ಹಸಿಯ, ಒತ್ತುವ, ಕಾಗದ. **Blótter** (ನಾ.) ಒತ್ತುವದು; ಆರಿಸುವದು; ಚಿತ್ತುಚಿತ್ತಾಗಿ ಬರೆಯುವವನು. ಮಸಿಯ ಬರೆವಣಿಗೆಯನ್ನು ಆರಿಸುವುದಕ್ಕೆ ಉಪಯೋಗಿಸುವ ಸಲಕರಣೆ. (ವ್ಯಾಪಾರ) ಕಚ್ಚಾ ಪುಸ್ತಕ; ಕರಡು ಪುಸ್ತಕ; ಬರೆದ ಕಾಗದದ ಕಚ್ಚಾ ಪ್ರತಿ.

Blot[2] ಬ್ಲಾಟ್ (ನಾ.) Backgammon ಎಂಬ ಆಟದಲ್ಲಿ, ರಕ್ಷಣೆಯಿಲ್ಲದ ಕಾಯಿ. (ರೂಪ.) (ಯುದ್ಧತಂತ್ರ, ಮೊ. ಗಳಲ್ಲಿ) ನ್ಯೂನತೆಯಿರುವ ಭಾಗ, ಛಿದ್ರ, ದುರ್ಬಲ ಸ್ಥಾನ.

Blotch ಬ್ಲಾಚ್ (ನಾ.) ಚರ್ಮದಮೇಲಿನ ಬೊಬ್ಬೆ, ಹೊಪ್ಪಳೆ, ಬಣ್ಣಗೆಟ್ಟ ಭಾಗ, ಕುರು, ಮೊ. ವು. ಮಸಿಯ ಅಥವಾ ಬಣ್ಣದ ಬಳಿತ, ಕರೆ, ಚಿತ್ತು. (ಶಾಲಾ ಅಸಂ.) ಒತ್ತುವ ಕಾಗದ. **Blotched, Blótchy** (ಗು.)

Blottésque ಬ್ಲಾಟೆಸ್ಕ್ (ಗು., ನಾ.) ಮೆತ್ತುಬಣ್ಣದ (ಚಿತ್ರ)

Blouse ಬ್ಲೌಸ್ (ನಾ.) ಕೆಲಸಗಾರನ ಸಡಿಲವಾದ ಮೇಲ್ಭಾಗದ ತೊಡಿಗೆ (ಸಾ., ಸೊಂಟಕ್ಕೆ ಪಟ್ಟಿಹಾಕಿರುವುದು; ಮು., ಫ್ರೆಂಚರದು). ಹೆಂಗಸಿನ ಸಡಿಲವಾದ ಮತ್ತು ಹಗುರವಾದ ರವಿಕೆ (ಸೊಂಟದ ವರೆಗೆ ಮಾತ್ರ ಕಾಣಬಂದು, ಅಲ್ಲಿ ಪಟ್ಟಿಹಾಕಿರುವದು)

Blow[1] ಬ್ಲೋ (ಕ್ರಿ.; ಭೂತ. Blew; ಭೂ. ಕೃ. Blown, Blowed) (ಗಾಳಿ) ಬೀಸು; ತೀಡು (B. great guns ಗಾಳಿ ಬಿರುಸಾಗಿ ಬೀಸು). ಊದು (B. hot and cold with the same breath ಪೂರ್ವಾಪರ ವಿರುದ್ಧವಾಗಿ, ನಿಷ್ಕರ್ಷೆಯಿಲ್ಲದೆ ಮಾತನಾಡು). (ನೀರ್ಗುಳ್ಳೆಯನ್ನಾಗಲಿ ಗಾಜಿನ ಗುಳ್ಳೆಯನ್ನಾಗಲಿ) ಊದಿ ಆಕಾರಕೊಡು. (ತಿಮಿಂಗಿಲ) ಗಾಳಿಯನ್ನೂ ನೀರನ್ನೂ ಬಿರುಸಾಗಿ ಚಿಮ್ಮು. ತಿದಿಯೊತ್ತು. ಏದು; ಏದುವಂತೆ ಮಾಡು; ಉಸಿರಿಲ್ಲದೆಹೋಗು (ಕರ್ಮಣಿ). ಊದಿಬಿಡು; ಊದಿ ಹೊರಡಿಸಿಬಿಡು [B. off steam ಎಂಜಿನ್ನಿನಲ್ಲಿಯ ಹೆಚ್ಚುಆವಿಯನ್ನು ಹೊರಡಿಸಿಬಿಡು; (ರೂಪ.) ಮಿತಿಮೀರಿರುವ ಶಕ್ತಿಯನ್ನು ಒದರಿಬಿಡು. B. one's nose (ಸಿಂಬಳ) ಸೀದು]. ಊದುವುದರಿಂದ ಹೊಡೆದುಕೊಂಡುಹೋಗು (B. over ಕಳೆದು ಹೋಗು; ತೇಲಹೋಗು; ತಪ್ಪಗಾಗು). ಗಾಳಿವಾದ್ಯವನ್ನು ಊದು (B. one's own trumpet ತನ್ನನ್ನು ತಾನೇ ಹೊಗಳಿಕೊ; ಆತ್ಮಪ್ರಶಂಸೆ ಮಾಡಿಕೊ; ಬಡಾಯಿ ಕೊಚ್ಚಿಕೊ). ಸಿಡಿ; ಸಿಡಿಸು; (B. out one's brains ಗುಂಡಿನಿಂದ ಹೊಡೆದುಕೊಂಡು ಸಾಯಿ; ಗುಂಡಿನಿಂದ ಹೊಡೆದು ಕೊಲ್ಲು; ಬುರುಡೆ ಹಾರಿಸು, ಎಗುರಿಸು). (ನೊಣ) ತತ್ತಿಯಿಡು. (ಅಸಂ.) (೧) ವಿಶ್ವಾಸಘಾತಕ ಮಾಡು; ನಂಬಿಸಿ ದ್ರೋಹಮಾಡು. (೨) ಹಾಳಾಗು (I 'll be blowed if that does not happen ಅದು ನಡೆಯದೆಹೋದರೆ ನನ್ನನ್ನು ಗುಂಡಿಗಿಡಿ). (೩) ದುರ್ವ್ಯಯ ಮಾಡು; ಲಕ್ಷ್ಯವಿಲ್ಲದೆ (ದುಂದು)ವೆಚ್ಚ ಮಾಡು (= B. the expense). (ಕ್ರಿ. ಅಕ.) [ವಿದ್ಯುತ್ತಿನ ರಕ್ಷಾತಂತಿ (ಫ್ಯೂಸ್)] ಮಿತಿ ಮೀರಿದ ವಿದ್ಯುತ್ಪ್ರವಾಹದಿಂದ ಕರಗಿಹೋಗು. Blow in (ಅಸಂ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೂಚನೆಯಿಲ್ಲದೆ ಥಟ್ಟನೆ ಒಳಹೊಗು. B. out a fire ಬೆಂಕಿಯನ್ನು ಊದಿ ಆರಿಸಿಬಿಡು. B. up ಊದು ; ಉಬ್ಬಿಸು. ಸಿಡಿ ; ಸಿಡಿಸು. ತಪ್ಪನ್ನು ಎತ್ತಿಹಾಕು ; ಆಕ್ಷೇಪಿಸು. B. upon ಹಳಸುವಂತೆ ಮಾಡು. ಹೆಸರು ಕೆಡಿಸು ; ನಂಬಿಕೆಗೆಡಿಸು ; ಚಾಡಿ ಹೇಳು. **Blowfly** ಮಾಂಸದಲ್ಲಿ ತತ್ತಿಯಿಡುವ ಒಂದು ಜಾತಿಯ ನೊಣ. **Blowhole** ತಿಮಿಂಗಿಲ, ಮೊ. ಗಳ ಮೂಗಿನ ಸೊಳೆ, ಹೊಳ್ಳೆ. ಗಾಳಿ, ಹೊಗೆ ಮೊ. ಹೋಗುವುದಕ್ಕೆ ಮಾಡಿರುವ ದಾರಿ : ಗಾಳಿಕಂಡಿ ; ಗಾಳಿದಾರಿ. **Blowpipe** ಊದುಗೊಳವಿ (ಉರಿಯ, ಜ್ವಾಲೆಯ, ಶಾಖವನ್ನು ಹೆಚ್ಚಿಸುವುದಕ್ಕಾಗಿ ಗಾಳಿಯನ್ನೊ ಇತರ ಅನಿಲವನ್ನೊ ಊದುವ ಕೊಳವಿ) ; ಶಾಖದಿಂದ ಮೆತುವಾಗಿಸಲ್ಪಟ್ಟ ಗಾಜುಪದಾರ್ಥದಿಂದ ಪಾತ್ರೆ, ಮೊ. ವನ್ನು ಮಾಡಲು ಉಪಯೋಗಿಸುವ ಊದುಗೊಳವಿ. **Blower** (ನಾ.) (ಕ್ರಿಯಾರ್ಥಗಳಲ್ಲಿ). (ಗಾಳಿನುಗ್ಗುವಂತೆ ಮಾಡಿ) ಉರಿಯ ಶಾಖವನ್ನು ಹೆಚ್ಚಿಸುವ ಸಾಧನ. ಕಲ್ಲಿದ್ದಲಿನ ಗಣಿಯಲ್ಲಿಯ ಅನಿಲವು ಹೊರಗೆ ಹೊರಟುಹೋಗುವ ಬಿರುಕು ; ಆ ಅನಿಲವು ಹೊರಟುಹೋಗುವುದು. **Blowing** (ಗು.) ; **Blowy** (ಗು.) ಗಾಳಿ ಬೀಸುವ ; ಗಾಳಿಯ ಹೊಡೆತಕ್ಕೆ ಸಿಕ್ಕಿದ.

Blow (ನಾ.) ಊದುವುದು ; ಬೀಸುವುದು. ನಿರ್ಮಲ ವಾಯು ಸೇವನೆ (To get a b. ನಿರ್ಮಲ ವಾಯುವಿಗೆ ಮೈಯೊಡ್ಡುವುದು). (ಸಿಂಬಳ) ಸೀದುವುದು. (ಕೊಳಲು, ಮೊ. ನ್ನು) ಊದುವುದು. B.-out ಗಾಡಿಯ ಚಕ್ರದ ಗಾಳಿಪಟ್ಟೆಯ ಒಡೆತ. ವಿದ್ಯುತ್ ರಕ್ಷಾತಂತಿ ಕರಗಿ ಹೋಗುವುದು. (ಅಸಂ.) ಯಥೇಷ್ಟವಾದ ತಿಂಡಿ ಅಥವಾ ಊಟ.

Blow[2] ಬ್ಲೋ (ನಾ., ಕ್ರಿ. ಅಕ.) ಹೂವು ಬಿಡುವುದು (In full b. ತುಂಬ ಹೂವು ಬಿಟ್ಟು). ಹೂವು ಬಿಡು ; ಅರಳು ; ಬಿರಿ. **Blower** (ನಾ.) ಹೂವು ಬಿಡುವ ಗಿಡ. **Blowing** (ಗು.)

Blow[3] ಬ್ಲೋ (ನಾ.) ಹೊಡೆತ ; ಏಟು ; ಗುದ್ದು ; ದೆಬ್ಬೆ ; ಪೆಟ್ಟು. (ರೂಪ.) ಕೇಡು ; ಧಕ್ಕೆ ; ವಿಪತ್ತು. At one b. ಒಂದೇ ಹೊಡೆತದಲ್ಲಿ ; ಒಂದೇ ಏಟಿಗೆ. Come to blows, Exchange blows ಗುದ್ದಾಡು ; ಬಡಿದಾಡು ; ಹೊಡೆದಾಡು ; ಕೈಕೈ ಹತ್ತು ; ಮಾರಾಮಾರಿಯಾಗು. Strike a b. against ಒಬ್ಬನನ್ನು ಎದುರಿಸು. Strike a b. for ಒಬ್ಬನಿಗೆ ನೆರವಾಗಿ (ಒಂದು ಉದ್ದೇಶಕ್ಕಾಗಿ) ಹೋರಾಡು.

Blowzed, Blowzy ಬ್ಲೌಸ್ಡ್, ಬ್ಲೌಸಿ (ಗು.) ಕೆಂಪು ಮೋರೆಯ, ಮುಖದ ; ಒರಟೊರಟಾಗಿ ಕಾಣುವ ; ನಯ ನಾಗರಿಕತೆಯಿಲ್ಲದ ; ತಲೆ ಕೆದರಿಕೊಂಡಿರುವ.

Blub ಬ್ಲಬ್ (ಕ್ರಿ. ಅಕ.) (ಶಾಲಾ ಅಸಂ.) ಕಣ್ಣೀರಿಡು ; ಕಣ್ಣೀರು ಸುರಿಸು. (Blubber ಪದದ ಸಂಕ್ಷಿಪ್ತ ರೂಪ)

Blúbber ಬ್ಲಬರ್ (ನಾ., ಗು., ಕ್ರಿ.) ತಿಮಿಂಗಿಲದ ಕೊಬ್ಬು ; ತಿಮಿ ಮೇದಸ್ಸು. Jellyfish ಎಂಬ ಒಂದು ಜಾತಿಯ ಸಮುದ್ರಪ್ರಾಣಿ. ಅಳು ; ಗೋಳುಕರೆ. (ಗು.) ಉಬ್ಬಿದ ; ಊದಿದ. (ತುಟಿ) ಮುಂದಕ್ಕೆ ಚಾಚಿಕೊಂಡಿರುವ. (ಕ್ರಿ.) ಬಿಕ್ಕಿಬಿಕ್ಕಿ ಹೇಳು, ಅಳು ; ಗಟ್ಟಿಯಾಗಿ ಅಳು. (ಮುಖ) ಅತ್ತತ್ತು ತೋಯಿಸು, ಅಂದಗೆಡಿಸು, ಊದಿಸು.

Blúdgeon ಬ್ಲಡ್ಜನ್ (ನಾ., ಕ್ರಿ. ಸಕ.) ಭಾರದ ತಲೆಯುಳ್ಳ ದೊಣ್ಣೆ ; ಗದೆ ; ಲಾಠಿ. ಇಂಥ ಆಯುಧದಿಂದ ಸದೆಬಡಿ.

Blue ಬ್ಲೂ, ಬ್ಲೂಯಿ (ಗು.) ನೀಲ ; ನೀಲಿ ; (ಆಕಾಶದ, ಆಳವಾದ ಸಮುದ್ರದ) ನೀಲಿ. [B.-black ನೀಲಗಪ್ಪು. Deep b. ಗಾಢ ನೀಲ. Drink till all's b. ದೃಷ್ಟಿ ಮಂಜಾಗುವವರೆಗೂ ಕುಡಿ. Look b. ಗಾಬರಿಬಿದ್ದಂತೆ, ಎದೆಗುಂದಿದಂತೆ, ಬೇಸರಗೊಂಡವನಂತೆ, ಉತ್ಸಾಹ ಶೂನ್ಯನಂತೆ, ಕಾಣು (Things looked b. ಪರಿಸ್ಥಿತಿಯು ನಿರಾಶಾ ಜನಕವಾಗಿ ತೋರಿತು). The B. (Squadron) (ನೀಲಿಯ ಉಡುಪು ತೊಟ್ಟಿರುವ) ನೌಕಾಸೈನ್ಯದ ಒಂದು ದಳ. True b. ನಂಬಿಕೆಯ ; ನಚ್ಚಿನ ; ಸಾಚಾ]. ಒಂದು ಗೊತ್ತಾದ ರಾಜಕೀಯ ಪಂಗಡಕ್ಕೆ ಸೇರಿದ (ಆ ಪಂಗಡದ ಚಿಹ್ನೆ, ನೀಲಿ) ; ಇಂಗ್ಲೆಂಡಿನಲ್ಲಿ, ಸಾ., ಸಂಪ್ರದಾಯ ಪಕ್ಷಕ್ಕೆ (Conservatives) ಸೇರಿದ. (ಹೆಂಗಸರ ವಿಷಯದಲ್ಲಿ Bluestocking ನೋಡಿ). (ಮಾತು, ಮೊ. ಗಳಲ್ಲಿ) ಹೊಲಸಾದ ; ಭಂಡ (ಹೊಲಸು) ಮಾತಿನ. **Bluébell** (ಸ್ಕಾಟ್ಲೆಂಡಿನಲ್ಲೂ ಇಂಗ್ಲೆಂಡಿನಲ್ಲೂ ದೊರೆಯುವ) ನಸುನೀಲಿಯ ಹೂವು ಬಿಡುವ ಒಂದು ಜಾತಿಯ ಗಿಡ. **B. blood** ಶ್ರೀಮಂತ ವಂಶ ; ಉತ್ತಮ ಕುಲ. **B.-book** (ಬ್ರಿಟನ್ನಿನ) ಪಾರ್ಲಿಮೆಂಟಿನ ಅಥವಾ ಪ್ರಿವಿಕೌನ್ಸಿಲಿನ ವರದಿ ; ಸಾ., ಸರ್ಕಾರದ ವರದಿ. **Bluébottle** ಮಾಂಸದಲ್ಲಿ ತತ್ತಿಯಿಡುವ ಒಂದು ಜಾತಿಯ ನೊಣ. ನೀಲಿ ಹೂವು ಬಿಡುವ ಒಂದು ಜಾತಿಯ ಗಿಡ. ಪೋಲೀಸಿನವನ, ಕೋರ್ಟು ಅಥವಾ ಕ್ರೈಸ್ತ ದೇವಾಲಯದ ಆಳಿನ, ಅಡ್ಡಹೆಸರು. **B.-coat** (ನೀಲಿಯಂಗಿ ಹಾಕಿಕೊಳ್ಳುವ) ಪೋಲೀಸಿನವನು, ಸಿಪಾಯಿ, ನಾವಿಕ, ಭಿಕ್ಷುಕ, ಆಳು, ಮೊ. ರು. ಧರ್ಮ ಪಾಠಶಾಲೆಯ ವಿದ್ಯಾರ್ಥಿ (= B.-coat boy). **B. devils** ದೆವ್ವಬಡಿದಂತಿರುವುದು ; ಖಿನ್ನತೆ ; ಮ್ಲಾನತೆ ; ವಿಷಣ್ಣತೆ. **B. funk** ಅತಿ ಗಾಬರಿ ; ತಡೆಯಲಾಗದ ಭೀತಿ. **B. gum** 'ಯೂಕಲಿಪ್ಟಸ್' ಎಂಬ ಮರದ ಜಾತಿಗೆ ಸೇರಿದ ಒಂದು ಮರ. **Bluéjacket** ನೌಕಾಸೈನ್ಯದ ನಾವಿಕ, ಕಲಾಸಿ. **B. laws** ಕೇವಲ ಕಠಿನ ನಿಯಮಗಳು. **B. light** ಸಂಕೇತಕ್ಕಾಗಿ ಉಪಯೋಗಿಸುವ ನೀಲಿಯ ಮತಾಪು. Once in a **b. moon** ಅಪೂರ್ವವಾಗಿ ; ಅಪರೂಪವಾಗಿ. **B. Peter** ಹಡಗು ಪ್ರಯಾಣಹೊರಡುವುದಕ್ಕೆ ಮೊದಲು ಏರಿಸುವ ಬಿಳಿಯ ಚೌಕವುಳ್ಳ ನೀಲಿಯ ಬಾವುಟ. **B. pill** ಪಿತ್ತಹರವಾದ, ರಸ ಮಿಶ್ರಿತ, ಔಷಧದ ಮಾತ್ರೆ. **B.-print** (ಕಾಗದ, ಮೊ. ಗಳ) ನೀಲಿಯ ಮೈಮೇಲೆ ಬಿಳಿಯ ಗೆರೆಗಳಿರುವ, ಅಥವಾ ಈ ಕ್ರಮ ವ್ಯತ್ಯಸ್ತವಾಗಿರುವ, ಛಾಯಾಮುದ್ರಣ : ನೀಲಿ ಪ್ರತಿ. **B. ribbon** ಯಾವ ಕ್ಷೇತ್ರದಲ್ಲಿಯೇ ಆಗಲಿ ಅತಿಶಯವಾದ ಗೌರವವನ್ನು ತೋರಿಸುವುದಕ್ಕಾಗಿ ಕೊಡುವ ಮರ್ಯಾದೆ (ಸಾ., ನೀಲಿಯ ಪಟ್ಟಿ) ; ಉತ್ತಮ ಸ್ಥಾನ ; ಶ್ರೇಷ್ಠ ಬಹುಮಾನ. ಮದ್ಯನಿಷೇಧದ ಚಿಹ್ನೆ. **B. rock** ಒಂದು ಜಾತಿಯ ಪಾರಿವಾಳದ ಹಕ್ಕಿ. **B. rum** ಕೆಟ್ಟ ಮದ್ಯ. **Bluéstocking** ವಿದ್ಯಾವತಿಯಾದ, ಸಾಹಿತ್ಯ ಪ್ರೇಮಿಯಾದ, ಅಥವಾ ಅಂಥ ಪ್ರೇಮವುಳ್ಳಂತೆ ನಟಿಸುವ, ಹೆಂಗಸು. **Blué-stone** ಮೈಲುತುತ್ತ. **B. water** ಮಧ್ಯಸಮುದ್ರ ; ನಡುಗಡಲು. (B.-water school ಬ್ರಿಟನ್ನಿಗೆ ನೌಕಾಬಲವೇ ಸಾಕಾದಷ್ಟು ರಕ್ಷಣೆಯೆಂದು ವಾದಿಸುವ ಪಕ್ಷದವರು). **Blúish** (ಗು.) ; **Blueness** (ನಾ.)

Blue (ನಾ.) ನೀಲಿಯ ಬಣ್ಣ (Oxford b., Cambridge b. ಈ ವಿಶ್ವವಿದ್ಯಾನಿಲಯಗಳವರ ಚಿಹ್ನೆಯಾದ ನೀಲಿಯ ಬಣ್ಣಗಳು) ; ನೀಲಿಯ ವರ್ಣದ್ರವ್ಯ ; ಅಗಸರು ಉಪಯೋಗಿಸುವ ನೀಲಿಯ ಪುಡಿ : ಅಗಸರ ನೀಲಿ. ನೀಲಿಯ ಬಟ್ಟೆ, ಉಡುಪು. (The blue) ಆಕಾಶ (Bolt from the b. — Bolt ನೋಡಿ) ; ಸಮುದ್ರ. (ಬ. ವ.) (೧) ನೀಲವರ್ಣದ ಉಡುಪು ಹಾಕಿಕೊಂಡಿರುವ ಸೈನ್ಯದಳಗಳು. (೨) ವಿಷಣ್ಣತೆ ; ಮಂಕು. ಒಂದು ಪಂಗಡದ ಅಥವಾ ಒಂದು ರಾಜಕೀಯ ಪಕ್ಷದ ಚಿಹ್ನೆಯಾದ ಬಣ್ಣ ; ಆ ಪಕ್ಷದ ಸದಸ್ಯ. ವಿದ್ಯಾವತಿ (= Bluestocking). The Blues or Blues trot ಒಂದು ತರದ ಕುಣಿತ.

Blue (ಕ್ರಿ. ಸಕ.) ನೀಲಿ ಮಾಡು ; (ಬಟ್ಟೆಗೆ) ನೀಲಿ ಹಾಕು. (ಅಸಂ.) (ಹಣ) ದುಂದು ಮಾಡು, ಪೋಲು ಮಾಡು.

Bluébeard ಬ್ಲೂಬಿಯರ್ಡ್ (ನಾ.) ಹಲವು ಹೆಂಡಿರ ಗಂಡ : ಬಹು ಪತ್ನೀಕ (ಒಂದು ದಂತಕಥೆಯ ನಾಯಕನ ಹೆಸರಿನಿಂದ : ಇವನು ಒಬ್ಬ ಹೆಂಡತಿಯನ್ನು ಕೊಂದು ಮತ್ತೊಬ್ಬಳನ್ನು ವರಿಸಯಾಗಿ ಮದುವೆಯಾಗುತ್ತಿದ್ದನೆಂಬ ಕಥೆಯಿಂದ ಬಂದ ಮಾತು)

Bluff[1] ಬ್ಲಫ್ (ಗು.) (ಹಡಗಿನ ಪಕ್ಕಗಳ, ದೊಡ್ಡ ಬಂಡೆಯ, ವಿಷಯವಾಗಿ) ವಿಸ್ತಾರವಾಗಿಯೂ ಕಡಿದಾಗಿಯೂ ಇರುವ ಮುಮ್ಮೈಯುಳ್ಳ. (ಮನುಷ್ಯನ, ರೀತಿಯ, ವಿಷಯವಾಗಿ) ದುಡುಕಿನ, ಒರಟಾದ, ನಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಲ್ಲದ, ನಿರ್ದಾಕ್ಷಿಣ್ಯವಾದ, ಸರಳ, ಬಿಚ್ಚಿದೆಯ. **Blúffly** (ಕ್ರಿ. ವಿ.) ; **Blúffness** (ನಾ.)

Bluff (ನಾ.) ವಿಸ್ತಾರವಾಗಿಯೂ ಕಡಿದಾಗಿಯೂ ಇರುವ ಮುಮ್ಮೈಯುಳ್ಳ ದಿಣ್ಣೆ. (ರೂಪ.) ಸೊಕ್ಕಿನ ನಡತೆ; ಗೊಡ್ಡು ಬೆದರಿಕೆ.

Bluff[2] ಬ್ಲಫ್ (ಕ್ರಿ.) (ಇಸ್ಪೀಟಾಟದಲ್ಲಿ) ಎದುರಾಳನ್ನು ಮೋಸಗೊಳಿಸಿ ಅವನು ತನ್ನ ಎಲೆಗಳನ್ನು ಕೆಳಗೆ ಹಾಕಿಬಿಡುವಂತೆ ಮಾಡು. (ರಾಜಕೀಯ ವಿಪಕ್ಷೀಯರನ್ನಾಗಲಿ ವಿಪಕ್ಷ ರಾಷ್ಟ್ರಗಳನ್ನಾಗಲಿ) ಗೊಡ್ಡು ಬೆದರಿಕೆಯಿಂದ ಮೋಸಗೊಳಿಸು.

Blúnder ಬ್ಲಂಡರ್ (ಕ್ರಿ., ನಾ.) ದೊಡ್ಡದಾಗಿ ತಪ್ಪುಮಾಡು ; ಪ್ರಮಾದ ಮಾಡು ; ಅವಿವೇಕ ಮಾಡು. (ಯಾವುದಾದರೂ ಕಾರ್ಯ ಮೊ. ನ್ನು) ವ್ಯವಸ್ಥೆ ಕೆಡಿಸು. ತಿಳಿಗೇಡಿತನದಿಂದ ಭ್ರಾಂತಿಗೊಳ್ಳು ; ಕಣ್ಣು ಮುಚ್ಚಿಕೊಂಡು ನುಗ್ಗು ; ಯೋಚನೆ ಮಾಡದೆ ಮುಂದುವರಿ ; ಎಡವಿ ಬೀಳು ; ಮುಗ್ಗರಿಸು. (B. away ಅವಿವೇಕವಾದ ಆಡಳಿತದಿಂದ ಹಾಳುಮಾಡು. B. out ವಿವೇಚನೆಯಿಲ್ಲದೆ ಮಾತನಾಡಿಬಿಡು. B. upon ಅದೃಷ್ಟವಶದಿಂದ ಕಣ್ಣಿಗೆ ಬೀಳು, ಹೊಂದು). (ನಾ.) ತಿಳಿಗೇಡಿತನದಿಂದ ಅಥವಾ ಅಲಕ್ಷ್ಯದಿಂದ ಮಾಡಿದ ತಪ್ಪು ; ಪ್ರಮಾದ ; ಅವಿವೇಕ. **Blúnderer** (ನಾ.) ; **Blúnderingly** (ಕ್ರಿ. ವಿ.)

Blúnderbuss ಬ್ಲಂಡರ್‌ಬಸ್ (ನಾ.) ಅನೇಕ ಗುಂಡುಗಳನ್ನು ಹಾರಿಸುವ ದೊಡ್ಡ ಬಾಯಿಯ, ಹಿಂದಿನ ಕಾಲದ, ಸಣ್ಣ ಬಂದೂಕು. ತಪ್ಪುಮಾಡುವ ದಡ್ಡ.

Blúnderhead ಬ್ಲಂಡರ್‌ಹೆಡ್ (ನಾ.) ತಪ್ಪುಮಾಡುವ ದಡ್ಡ (= Dunderhead)

Blunge ಬ್ಲಂಜ್ (ಕ್ರಿ. ಸಕ.) (ಕುಂಬಾರ ಕೆಲಸದಲ್ಲಿ) ಜೇಡಿಮಣ್ಣು, ಕಲ್ಲುಪುಡಿ, ಮೊ. ನ್ನು ನೀರಿನೊಡನೆ ತಿರುಗುಯಂತ್ರದಲ್ಲಿ ಕಲಸು.

Blunt ಬ್ಲಂಟ್ (ಗು., ನಾ., ಕ್ರಿ. ಸಕ.) ಮಂದ ; ಚುರುಕಿಲ್ಲದ ; ಮೊಂಡಾದ ; ಹರಿತವಿಲ್ಲದ ; (ಆಯುಧ) ಬಾಯಿಲ್ಲದ, ಮೊನೆಯಿಲ್ಲದ, ಮಸೆಗೆಟ್ಟ. ಇದ್ದದ್ದಿದ್ದಂತೆ ಮಾತನಾಡುವ ; ಒರಟು ; ಖಂಡಿತವಾದ ; ನಿರ್ದಾಕ್ಷಿಣ್ಯ ಪ್ರಕೃತಿಯ. (ನಾ.) ದಪ್ಪವಾದ ಗಿಡ್ಡಸೂಜಿ ; ಬುಡ್ಡಸೂಜಿ. (ಅಸಂ.) ನಗದು ಹಣ. (ಕ್ರಿ.) ಮೊಂಡುಮಾಡು ; ಮಾಂದ್ಯಗೊಳಿಸು. **Blúntish** (ಗು.) ; **Blúntly** (ಕ್ರಿ. ವಿ.) ; **Blúntness** (ನಾ.)

Blur ಬ್ಲರ್ (ನಾ., ಕ್ರಿ.) ಮಸಿ, ಮೊ. ಗಳ ಕರೆ ; ಚಿತ್ತು ; ಮಾಸಲು ; ಮಸಕು ; ಮಬ್ಬು ; ಅಸ್ಪಷ್ಟತೆ. (ರೂಪ.) ಕಳಂಕ ; ದೋಷ. (ಕ್ರಿ.) ಬರಹವನ್ನು ಮಸಿಬಳಿದು ಅಸ್ಪಷ್ಟಮಾಡು, ಚಿತ್ತುಮಾಡು. ಮಲಿನಗೊಳಿಸು ; ರೂಪುಗೆಡಿಸು ; ಅಂದಗೆಡಿಸು. ಚಿತ್ತಾಗು ; ಕಲಸಿಕೊ. (ಗ್ರಹಣಶಕ್ತಿ, ಮೊ. ನ್ನು) ಮಬ್ಬುಗೊಳಿಸು, ಮಸಕುಮಾಡು.

Blurb ಬ್ಲರ್ಬ್ (ನಾ.) (ಅಮೆ. ಸಂ., ಅಸಂ.) ಪ್ರಕಟನಕರ್ತನು ಮಾಡುವ ಗ್ರಂಥಪ್ರಶಂಸೆ.

Blurt ಬ್ಲರ್ಟ್ (ಕ್ರಿ. ಸಕ.) (ಯೋಚನೆ ಮಾಡದೆ) ಥಟ್ಟನೆ ಹೇಳಿಬಿಡು ; ಬಾಯಿಗೆ ಬಂದಂತೆ ಆಡಿಬಿಡು.

Blush ಬ್ಲಷ್ (ಕ್ರಿ. ಅಕ., ನಾ.) (ಅವಮಾನ, ನಾಚಿಕೆ, ಸಂಕೋಚ, ಸಂತೋಷ, ಮೊ. ಭಾವಗಳಿಂದ) ಮುಖ ಕೆಂಪೇರು, ವಿವರ್ಣವಾಗು. ನಾಚು. ಕೆಂಪೇರು ; ನಸುಗೆಂಪಾಗು. (ನಾ.) (ನಾಚಿಕೆ, ಮೊ. ಗಳಿಂದ) ಮುಖ ಕೆಂಪೇರುವುದು ; ಕೆನ್ನೆಗೆಂಪು (Put to the b. ಮುಖ ಕೆಂಪೇರುವಂತೆ ಮಾಡು ; ನಾಚಿಸು). ಗುಲಾಬಿ ರಂಗಿನ ಹೊಳಪು ; ಹೊಳಪು. ಕುಡಿನೋಟ ; ಕ್ಷಣವೀಕ್ಷಣ. (At the first b. ನೋಡಿದೊಡನೆಯೇ ; ಪ್ರಥಮ ದರ್ಶನದಲ್ಲಿಯೇ ; ಆರಂಭದಲ್ಲಿಯೇ). **Blúshingly** (ಕ್ರಿ. ವಿ.)

Blúster ಬ್ಲಸ್ಟರ್ (ಕ್ರಿ., ನಾ.) (ಮನುಷ್ಯ, ಗಾಳಿ, ಅಲೆ — ಇವುಗಳ ವಿಷಯದಲ್ಲಿ) ಮಸೆ, ಭೋರ್ಗರೆ, ಅಬ್ಬರಿಸು, ಒದರು (B. out, B. forth ಸೊಕ್ಕಿನಿಂದ ಮಾತಾಡು ; ಅಬ್ಬರಿಸಿ ಹೇಳು). ರೇಗಿಬೀಳು. (ನಾ.) ಭೋರ್ಗರೆತ ; ರಭಸ ; ಅಹಂಕಾರದಿಂದಾಡುವ ಅಬ್ಬರದ ಮಾತು ; ಬೆದರಿಕೆ. **Blústerer** (ನಾ.) ; **Blústeringly** (ಕ್ರಿ. ವಿ.) ; **Blústerous** (ಗು.) ; **Blústery** (ಗು.)

Bo, Boh ಬೋ (ಭಾವ. ಅವ್ಯ.) ಬೆದರಿಸುವುದಕ್ಕೆ ಉಪಯೋಗಿಸುವ ಮಾತು. He can't say bo to a goose ಕೋಳಿಯನ್ನು ಬೆದರಿಸಲೂ ಹೆದರುತ್ತಾನೆ ; ಬಾಯಿ ಬಿಡುವುದಕ್ಕೇ ಹೆದರುತ್ತಾನೆ (ಅಂಜುಬುರುಕ, ಮುಖಹೇಡಿ — ಇವರ ವಿಷಯದಲ್ಲಿ)

Bóa ಬೋಅ (ನಾ.) ಆಹಾರಪ್ರಾಣಿಯನ್ನು ಸುತ್ತಿಕೊಂಡು ಅವುಕಿ ಕೊಲ್ಲುವ ವಿಷರಹಿತವಾದ ದ. ಅಮೆರಿಕದ ಒಂದು ಹೆಬ್ಬಾವು. ಪಾಶ್ಚಾತ್ಯ ಮಹಿಳೆಯರು ಧರಿಸುವ ಮೃದುರೋಮದ ಅಥವಾ ಹಕ್ಕಿಯ ತುಪ್ಪುಳಿನ ಉದ್ದವಾದ ಕೊರಳುಸುತ್ತು. **B. constrictor** ಬ್ರೆಸಿಲ್ ದೇಶದ ಬೋಅ ಜಾತಿಯ ಒಂದು ಹೆಬ್ಬಾವು. (ಬಳ. ಮಾ.) ಮೇಲೆ ಹೇಳಿದ ಹಾವುಗಳ ಚರ್ಯೆಯುಳ್ಳ ಯಾವುದಾದರೂ ದೊಡ್ಡ ಹಾವು.

Bóanérges ಬೋಅನರ್‌ಜೀಸ್ (ನಾ.) ದೊಡ್ಡ ಗಂಟಲಿನ ಉಪದೇಶಕ, ಉಪನ್ಯಾಸಕ.

Boar ಬೋರ್ (ನಾ.) ಬೀಜ ಒಡೆಯದ ಹಂದಿ ; ಆ ಹಂದಿಯ ಮಾಂಸ. Wild b. ಕಾಡು ಹಂದಿ. **Boárish** (ಗು.) ಹಂದಿಯಂಥ ; ವಿಷಯಲಂಪಟನಾದ.

Board ಬೋರ್ಡ್ (ನಾ.) ಹಲಗೆ ; ಆಟಪಾಟಗಳಲ್ಲಿ ಪ್ರಕಟನೆಗಳನ್ನು ಅಂಟಿಸುವುದಕ್ಕೂ, ಅಕ್ಷರ ಅಥವಾ ಚಿತ್ರ ಬರೆಯುವುದಕ್ಕೂ, ಇನ್ನೂ ಇತರ ಕೆಲಸಗಳಿಗೂ ಉಪಯೋಗಿಸುವ ಬರಿಯ, ಅಥವಾ ಚರ್ಮ, ಬನಾತು, ಮೊ. ಗಳನ್ನು ಹತ್ತಿಸಿರುವ, ಹಲಗೆ, ಮಣೆ. (ಬ. ವ. ದಲ್ಲಿ) ನಾಟಕ ರಂಗ (On the boards ನಟನಾಗಿ ; ರಂಗದಲ್ಲಿ). ರಟ್ಟು ಕಾಗದ (In boards ರಟ್ಟುಕಾಗದ ಹಾಕಿ. In cloth boards ಬಟ್ಟೆ ರಟ್ಟು ಹಾಕಿ). ಮೇಜು (ವಿಶೇಷಾರ್ಥಗಳಲ್ಲಿ ಮಾತ್ರ). (Above b. ಮುಚ್ಚುಮರೆಯಿಲ್ಲದೆ ; ನಿರಾಕ್ಷೇಪಣೀಯವಾಗಿ. Sweep the b. ಇಸ್ಪೀಟಾಟದಲ್ಲಿ ಎಲ್ಲಾ ಎಲೆಗಳನ್ನೂ ಅಥವಾ ಎಲ್ಲಾ ಪಣವನ್ನೂ ಬಾಚಿಕೊ). ಊಟದ ಮೇಜು (Bed and b. ಅಶನ ಶಯನ. ದಾಂಪತ್ಯ ಸಂಬಂಧ. Groaning b. ಯಥೇಷ್ಟ ಭೋಜನ ; ಪುಷ್ಕಲವಾದ ಊಟ). ಬಡಿಸಿದ ಊಟ ; ನಿಷ್ಕರ್ಷೆಮಾಡಿಕೊಂಡ ಬೆಲೆಗಾಗಲಿ, ಮಾಡುವ ಕೆಲಸಕಾರ್ಯಗಳಿಗಾಗಲಿ, ಹಾಕುವ ಊಟ [B.-money, B.-wages ಊಟಕ್ಕೆ (ಮತ್ತು ವಸತಿಗೆ) ಬದಲಾಗಿ ಕೊಡುವ ಆಳಿನ ಸಂಬಳ. B. and lodging ಊಟ ವಸತಿಗಳು]. ಮಂತ್ರಾಲೋಚನೆಯ ಸ್ಥಾನ. ಸಭೆ ; ಸಮಿತಿ ; ಮಂಡಲಿ ; ಸದಸ್ಯರು ; ಸಭಾಸದರು [B. of Agriculture ವ್ಯವಸಾಯ ಸಮಿತಿ. B. of Trade ವ್ಯಾಪಾರ ಸಮಿತಿ. B. of Education ಶಿಕ್ಷಣ ಸಮಿತಿ. Local Government B. ಸ್ಥಳೀಯ ಸರ್ಕಾರ ಸಮಿತಿ. Road B. ರಸ್ತೆಗಳನ್ನು ಮಾಡುವುದಕ್ಕೂ ದುರಸ್ತುಮಾಡುವುದಕ್ಕೂ ಗೊತ್ತಾದ ಸಮಿತಿ : ಮಾರ್ಗ ಸಮಿತಿ. B.-School ಶಾಸನ ವಿಹಿತವಾದ ಒಂದು ಸಮಿತಿಯ ಆಡಳಿತದಲ್ಲಿರುವ ಪಾಠಶಾಲೆ]. ಹಡಗಿನ ಪಕ್ಕ (ಕೆಲವು ಗೊತ್ತಾದ ಮಾತುಗಳಲ್ಲಿ ಮಾತ್ರ). Go by the b. (ಪಟಸ್ತಂಭ, ಮೊ. ವು) ಹಡಗಿನ ಮೇಲಿನಿಂದ ಬೀಳು. Overboard ಹಡಗಿನ ಪಕ್ಕದ ಮೇಲ್ಗಡೆಯಿಂದ ; ಹಡಗಿನಿಂದ [Thrown overboard ಹಡಗಿನಿಂದ ಸಮುದ್ರಕ್ಕೆ ಎಸೆದುಬಿಟ್ಟ ; (ರೂಪ.) ತ್ಯಜಿಸಿಬಿಟ್ಟ ; ಬಿಟ್ಟುಬಿಟ್ಟ ; ವಿಶ್ವಾಸಘಾತಕ ಮಾಡಿಬಿಟ್ಟ]. On b. ಹಡಗಿನಲ್ಲಿ ; ಹಡಗಿನೊಳಕ್ಕೆ ; ಹಡಗು ಹತ್ತಿ. ರೈಲ್‌ಬಂಡಿ, ಬಗ್ಗಿ, ಮೊ. ಗಳಲ್ಲಿ, ಮೊ. ಗಳೊಳಕ್ಕೆ.

Board (ಕ್ರಿ.) ಹಲಗೆಸೇರುವೆ ಮಾಡು ; ಹಲಗೆ ಹಾಸು. (ಗೊತ್ತಾದ ಹಣಕ್ಕೆ) ಊಟ ಹಾಕು ; (ಹಣ ಕೊಟ್ಟು) ಊಟಮಾಡು. (ಹಡಗು, ಸಾ., ಮೇಲೆ ಬೀಳುವುದಕ್ಕಾಗಿ) ಪಕ್ಕದಲ್ಲಿ ಬರು. ಬಲಾತ್ಕಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿಂದ ನುಗ್ಗಿ ಒಳಹೊಗು. ಹಡಗು ಹತ್ತು. **Boárder** (ನಾ.) ಹಣ ಕೊಟ್ಟು ಮತ್ತೊಬ್ಬರ ಮನೆಯಲ್ಲಿ ಊಟಮಾಡಿಕೊಂಡಿರುವವನು (ಮು., ಹಣಕ್ಕೆ ಊಟ ಹಾಕಿ ಪಾಠ ಕಲಿಸುವ ಶಾಲೆಯಲ್ಲಿಯ ಹುಡುಗ). **Boárding** (ನಾ.) ಹಲಗೆಸೇರುವೆ ಮಾಡುವುದು ; (ನಮುದಾಯದಲ್ಲಿ) ಹಲಗೆಗಳು ; ಹಲಗೆಗಳಿಂದ ಮಾಡಿದ ಕಟ್ಟಡ: ಹಲಗೆಕಟ್ಟಡ. B.-house ಹಣಕ್ಕೆ ಊಟಹಾಕುವ ಮನೆ. B.-out ಮನೆಯಲ್ಲಲ್ಲದೆ ಇತರ ಕಡೆ ಊಟಮಾಡುವುದು ; (ಅನಾಥರಾದ ಹುಡುಗರನ್ನು) ಸಂಸಾರ ಗೃಹ ಗಳಲ್ಲಿರಿಸುವುದು. B.-school ಹಣಕ್ಕೆ ಊಟಹಾಕಿ ವಿದ್ಯೆ ಕಲಿಸುವ ಪಾಠ ಶಾಲೆ. B.-ship ನಿಷೇಧಿಸಿರುವ ವಸ್ತುಗಳನ್ನು ತಟಸ್ಥಪಕ್ಷದ ಹಡಗುಗಳು ಪ್ರತಿಪಕ್ಷೀಯರಿಗೆ ಒದಗಿಸುತ್ತಿರುವುವೇ ಎಂಬುದನ್ನು ಪರೀಕ್ಷಿಸುವ ಹಡಗು.

Boast ಬೋಸ್ಟ್ (ಕ್ರಿ. ನಾ.) ಹೊಗಳಿಕೊ ; ಬಡಾಯಿ ಕೊಚ್ಚು ; ಜಂಬ ಹೊಡೆ ; ಹೆಮ್ಮೆಪಡು ; ಹೆಮ್ಮೆಪಡಬಹುದಾದುದನ್ನು ಪಡೆದಿರು. (ನಾ.) ಜಂಬ ; ಬಡಾಯಿ ; ಹೆಮ್ಮೆ ; ಗರ್ವ ಅಥವಾ ಅಹಂಕಾರದ ಮಾತು ; ಆತ್ಮಸ್ತುತಿ. ಹೆಮ್ಮೆಪಡುವ ವಿಷಯ. Make b. of ಹೆಮ್ಮೆಯಿಂದ ತಿಳಿಯಪಡಿಸು. **Boáster** (ನಾ.) ; **Boástful** (ಗು.) ; **Boástfully** (ಕ್ರಿ. ವಿ.) ; **Boástfulness** (ನಾ.)

Boat ಬೋಟ್ (ನಾ.) ದೋಣಿ ; ಓಡ ; ಹಡಗು ; ಟಪಾಲು ಹಡಗು ; ಸಣ್ಣ ಜಹಜು [Take b. ಹಡಗೇರು. Have oar in everyone's b. ಎಲ್ಲದರಲ್ಲೂ ಕೈಹಾಕು. In the same b. ಒಂದೇ ಅವಸ್ಥೆಯಲ್ಲಿ. To sail in the same b. ಒಟ್ಟುಗೂಡಿ ನಡೆಯುವುದು. Ship's b. ಹಡಗಿನಲ್ಲಿಯ ದೋಣಿ]. (ಪಾಶ್ಚಾತ್ಯರಲ್ಲಿ ಊಟದ ಮೇಜಿನ ಮೇಲೆ ಚಟ್ನಿ, ಮೊ. ನ್ನು ಇಡಲು ಉಪಯೋಗಿಸುವ) ದೋಣಿಯಾಕಾರದ ಪಾತ್ರೆ. **Boátage** ದೋಣಿಯಲ್ಲಿ ಒಯ್ಯುವುದು ; ಹಾಗೆ ಒಯ್ಯುವು ದಕ್ಕಾಗಿ ಕೊಡಬೇಕಾದ ಬಾಡಿಗೆ : ದೋಣಿಬಾಡಿಗೆ. **Boátful** ದೋಣಿ ತುಂಬುವಷ್ಟು (ಸಂಖ್ಯೆ ಅಥವಾ ಮೊತ್ತ). **B.-bill** ದ. ಅಮೆರಿಕದ ಒಂದು ಜಾತಿಯ ಉದ್ದಗಾಲಿನ ಹಕ್ಕಿ. **B.-hook** ದೋಣಿಯನ್ನು ಹತ್ತಿರಕ್ಕೆ ಎಳೆದುಕೊಳ್ಳುವುದಕ್ಕೂ ದೂರಕ್ಕೆ ತಳ್ಳುವು ದಕ್ಕೂ ಉಪಯೋಗಿಸುವ, ಕಬ್ಬಿಣದ ಕೊಂಡಿಯೂ ದಸಿಯೂ ಉಳ್ಳ, ಉದ್ದವಾದ ಜಳವೆ, ಗಳೆ. **B.-house** ದೋಣಿಯನ್ನಿಡಲು ನೀರಿನ ಅಂಚಿನಲ್ಲಿ ಹಾಕಿರುವ ಗುಡಿಸಿಲು : ದೋಣಿಮನೆ. **Boátman** ದೋಣಿಯನ್ನು ಬಾಡಿಗೆಗೆ ಕೊಡುವವನು, ಬಾಡಿಗೆ ತೆಗೆದುಕೊಂಡು ನಡಸುವವನು ; ದೋಣಿಗ ; ಅಂಬಿಗ ; ನಾವಿಕ. **Boátrace** ದೋಣಿಪಂದ್ಯ. **Boátswain** ಬೋಟ್‌ಸ್ವೆಯ್ನ್, ಬೋಸ್ನ್ (ನಾ.) ಹಡಗಿನ ಪಟಗಳು, ಮೊ. ಗಳ ವಿಚಾರಣೆ ನೋಡಿಕೊಳ್ಳುವ ಮತ್ತು ಹಡಗಿನ ಚಾಕರರನ್ನು ಸಿಳ್ಳುಹಾಕಿ ಕೆಲಸದಮೇಲೆ ಬಂದು ನಿಲ್ಲುವಂತೆ ಮಾಡುವ ಅಧಿಕಾರವುಳ್ಳ ಹಡಗಿನ ಹುದ್ದೇದಾರ : ಹಡಗು ಮೇಸ್ತ್ರಿ. **B. train** ಟಪಾಲು ಜಹಜು ಹೊರಡುವ ಮತ್ತು ಬರುವ ಕಾಲವನ್ನನುಸರಿಸಿ ಅಲ್ಲಿಗೆ ಸೇರುವಂತೆ ಏರ್ಪಡಿಸಿರುವ ರೈಲು ಬಂಡಿ : ಅಂಚೆಯ ಜಹಜಿನ ರೈಲು ಬಂಡಿ.

Boat (ಕ್ರಿ.) ದೋಣಿಯಲ್ಲಿ ಹೋಗು ; ದೋಣಿವಿಹಾರ ಮಾಡು. ದೋಣಿಯಲ್ಲಿ ಇಡು, ಸಾಗಿಸು. Boating man ದೋಣಿಯಲ್ಲಿ ವಿನೋದಾರ್ಥವಾಗಿ ಹೋಗುವವನು.

Bob[1] ಬಾಬ್ (ನಾ., ಕ್ರಿ. ಸಕ.) ಗಡಿಯಾರದ ದೋಲಕ, ತೂಗುಗುಂಡು, ಗಾಳಿಪಟದ ಬಾಲ — ಇವಕ್ಕೆ ಹೊಂದಿಸಿರುವ ತೂಕದಗುಂಡು. ಕೂದಲ ಗಂಟು. ಗೊಂಡೆಯ ಆಕಾರದ ಗುಂಗುರು ಕೂದಲು (B.-wig, Bob ಮೊಟಕಾಗಿರುವ ಗುಂಗುರುಕೂದಲುಳ್ಳ ಟೋಪಿ). ಕುದುರೆಯ ಮೊಂಡುಬಾಲ. (ಛಂ.) ಪದ್ಯದ ಕೊನೆಯಲ್ಲಿಯ ಸಣ್ಣ ಪಾದ. (ಕ್ರಿ.) (ಹೆಂಗಸಿನ ಕೂದಲನ್ನು) ಭುಜಕ್ಕೆ ಸೋಕದಹಾಗೆ ಜೋಲಾಡುವಂತೆ ಕತ್ತರಿಸು (Wear it bobbed ಹಾಗೆ ಕತ್ತರಿಸಿದ ಕೂದಲುಳ್ಳವಳಾಗಿರು). (ನಾ.) ಹಾಗೆ ಕತ್ತರಿಸಿದ ಕೂದಲು.

Bob[2] ಬಾಬ್ (ಕ್ರಿ. ಅಕ.) ಎರೆಹುಳುಗಳ ಗೊಂಚಲಿನಿಂದ ಹಾವುಮೀನು ಗಳನ್ನು ಹಿಡಿ.

Bob[3] ಬಾಬ್ (ಕ್ರಿ. ನಾ.) ಕೆಳಕ್ಕೂ ಮೇಲಕ್ಕೂ ತೂಗಾಡು ; ಕುಣಿ ದಾಡು ; ಪುಟ ನೆಗೆ (B. up like a cork ಬೆಂಡಿನಂತೆ ಬುಡಕ್ಕನೆ ಮೇಲಕ್ಕೇಳು : ಎಂದರೆ, ಸೋತರೂ ಮೀಸೆ ಹುರಿಮಾಡಿಕೊಂಡು ಓಡಾಡು). (ತೂಗಾಡುತ್ತಿರುವ ಅಥವಾ ತೇಲಾಡುತ್ತಿರುವ ಹಣ್ಣಿನ ಗೊಂಚಲಿಗೆ) ಬಾಯಿ ಹಾಕು. (ಗೌರವಕ್ಕಾಗಿ) ತಲೆ ತಗ್ಗಿಸು. ತಟ್ಟು ; ಥಟ್ಟನೆ ಜರುಗಿಸು. (ನಾ.) ಥಟ್ಟನೆ ಮಾಡುವ ಚಲನ, ಚಾಲನ ; ಪುಟ ನೆಗೆತ. (ವಂದನೆಗಾಗಿ) ತಲೆ ತಗ್ಗಿಸುವುದು. (ಗಂಟೆ ಬಾರಿಸುವುದರಲ್ಲಿ) ಘಂಟಾ ನಾದ ಭೇದಗಳು.

Bob[4] ಬಾಬ್ (ನಾ.) Dry-b., Wet-b. ಕ್ರಿಕೆಟ್ ಆಟ, ದೋಣಿಯಾಟ, ಆಡುವ ಇಂಗ್ಲೆಂಡಿನ 'ಈಟನ್' ವಿದ್ಯಾಶಾಲೆಯ ಹುಡುಗ. Light-b. ಲಘು ಪದಾತಿ ಸೈನ್ಯದ ಸಿಪಾಯಿ.

Bob[5] ಬಾಬ್ (ನಾ.) (ಅಸಂ.) 'ಷಿಲಿಂಗ್' ಎಂಬ ಇಂಗ್ಲಿಷ್ ನಾಣ್ಯ.

Bóbadil ಬಾಬಡಿಲ್ (ನಾ.) ಬಡಾಯಿಕೋರ ; ಜಂಬಗಾರ.

Bóbbery ಬಾಬರಿ (ನಾ.) ಗಲಾಟೆ ; ಗದ್ದಲ ; ಗೊಂದಲ ; ಬೊಬ್ಬೆ.

Bóbbin ಬಾಬಿನ್ (ನಾ.) ದಾರ, ತಂತಿ, ಮೊ. ನ್ನು ಸುತ್ತಿಡುವುದಕ್ಕಾಗಿ ಉಪಯೋಗಿಸುವ ಉರುಳೆ. ಬಾಗಿಲ ಅಗುಳಿಯನ್ನು ಎತ್ತುವುದ ಕ್ಕಾಗಿ ಉಪಯೋಗಿಸುವ ಸಣ್ಣ ಕಂಬಿ ಮತ್ತು ಹುರಿ.

Bóbbinet ಬಾಬಿನೆಟ್ (ನಾ.) ಕಸೂತಿಯಂತೆ ಕಾಣಿಸುವಹಾಗೆ ಯಂತ್ರ ದಿಂದ ತಯಾರಿಸಿದ ದಾರದ ಬಲೆ.

Bóbbish ಬಾಬಿಷ್ (ಗು.) (ಅಸಂ.) ಚಟುವಟಿಕೆಯಾದ ; ಗೆಲುವಾದ ; ಲವಲವಿಕೆಯುಳ್ಳ ; ಉತ್ಸಾಹದಿಂದ ಕೂಡಿದ.

Bóbby ಬಾಬಿ (ನಾ.) (ಅಸಂ.) ಪೋಲೀಸಿನವನು.

Bóbtail ಬಾಬ್‌ಟೆಯ್ಲ್ (ನಾ., ಗು.) ಮೊಂಡುಬಾಲ(ವುಳ್ಳ) ; ಮೊಂಡುಬಾಲದ ಕುದುರೆ ಅಥವಾ ನಾಯಿ. Tag-rag and b. ದೊಂಬಿಯ ಜನ ; ಕ್ಷುಲ್ಲಕ ಜನ.

Bocárdo ಬೊಕಾರ್ಡೊ (ನಾ.) ಪಾಶ್ಚಾತ್ಯ ತರ್ಕಶಾಸ್ತ್ರದಲ್ಲಿ ಸೂತ್ರ ಪ್ರಾಯವಾದ ಒಂದು ಸಂಕೇತಶಬ್ದ.

Boche ಬಾಷ್ (ನಾ., ಗು.) (ಅಸಂ.) ಜರ್ಮನಿಯ(ವನು) (ಫ್ರೆಂಚ್ ಸಿಪಾಯಿಗಳು ತುಚ್ಛವಾಗಿ ಆಡುವ ಮಾತು)

Bode ಬೋಡ್ (ಕ್ರಿ.) ಮುಂಗಾಣು ; ಮುಂದು ಸೂಚಿಸು ; ಮುನ್ನರುಹು ; ಮುಂಗಾಣಿಸು (ಮು., ಕೇಡನ್ನು). ಅನುಕೂಲಿಸು ವಂತೆಯೂ ಪ್ರತಿಕೂಲಿಸುವಂತೆಯೂ ತೋರು. **Bódeful** (ಗು.) ಸಾ., ಅಪಶಕುನದ ಮುಂದುಸೂಚನೆಗಳಿರುವ ; ಅಪಶಕುನವುಳ್ಳ ; ಅಶುಭ ಸೂಚಕ. **Bódingly** (ಕ್ರಿ. ವಿ.) ; **Bódement** (ನಾ.) ಶಕುನ ; ಭವಿಷ್ಯ ಸೂಚನೆ ; ನಿಮಿತ್ತ.

Bódice ಬಾಡಿಸ್ (ನಾ.) ರವಿಕೆ ; ಕುಪ್ಪಸ ; ಕಂಚುಕ.

Bódkin ಬಾಡ್ಕಿನ್ (ನಾ.) ದೊಡ್ಡ ಕಣ್ಣಿನ, ಮೊನೆಯಿಲ್ಲದ, ದಪ್ಪಸೂಜಿ ಅಥವಾ ದಬ್ಬಳ : ಮೊಂಡು ದಬ್ಬಳ. ತಲೆಗೂದಲನ್ನು ಬಂಧಿಸಲು ಉಪಯೋಗಿಸುವ ಉದ್ದವಾದ, ಬಗ್ಗಿಸಿದ, ಸೂಜಿ : ತುರುಬು ಸೂಜಿ. ಇಬ್ಬರ ಮಧ್ಯೆ ಇರಿಕಿನಲ್ಲಿ ಸಿಕ್ಕಿರುವವನು (Ride b., Sit b.)

Bodleían ಬಾಡ್ಲೀಯನ್ **Bódleian** ಬಾಡ್ಲಿಯನ್ (ಗು., ನಾ.) The B. (library) 'ಆಕ್ಸ್‌ಫರ್ಡ್' ವಿಶ್ವವಿದ್ಯಾನಿಲಯದಲ್ಲಿ Sir Thomas Bodley ಎಂಬಾತನು ಸ್ಥಾಪಿಸಿದ ಪುಸ್ತಕ ಭಂಡಾರ.

Bódy ಬಾಡಿ (ನಾ.) ದೇಹ ; ಶರೀರ ; ಕಾಯ ; ಮೈ ; ಒಡಲು. (Keep b. and soul together ಅಹನ್ಯಹನಿ ಕಾಲಕ್ಷೇಪ ಮಾಡು ; ಜೀವ ಧಾರಣೆ ಮಾಡು). ಹೆಣ ; ಶವ (B.-snatcher ಶಸ್ತ್ರಪರೀಕ್ಷೆ ಗಾಗಿ ಹೆಣಗಳನ್ನು ಗೋರಿಗಳಿಂದ ಕಿತ್ತುತೆಗೆಯುವವನು). ಬುಡ ; ಮುಂಡ ; ಪ್ರಧಾನ ಭಾಗ (ಮರದ ಬುಡ, ಹಡಗಿನ ಒಡಲು, ಕ್ರೈಸ್ತ ದೇವಾಲಯದ ಪಕ್ಕಹಜಾರಗಳ ನಡುವೆ ಇರುವ ಭಾಗ, ಮೊ.).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ತೋಳು, ಕೊರಳುಪಟ್ಟಿ — ಇವನ್ನು ಬಿಟ್ಟು ಉಳಿದ) ಅಂಗಿಯ (ರವಿಕೆಯ) ಭಾಗ. ತೋಳಿಲ್ಲದ ರವಿಕೆ. (ಪೀಠಿಕೆ, ಪ್ರಸ್ತಾವನೆ, ಮೊ. ನ್ನುಳಿದ) ಪತ್ರದ ಅಥವಾ ಲೇಖನದ ಪ್ರಧಾನ ಭಾಗ. ಬಹುಭಾಗ ; ಅಧಿಕ ಭಾಗ ; ಹೆಚ್ಚಿನ ಭಾಗ. ಮನುಷ್ಯ ; ವ್ಯಕ್ತಿ (Heir of one's b. ಒಬ್ಬನ ನೇರವಾದ ಸಂತತಿಗೆ ಸೇರಿದ ಉತ್ತರಾಧಿಕಾರಿ : ಔರಸ ಸಂತಾನದವನು. Anybody ಯಾವನಾದರೂ). ಒಟ್ಟು ; ಮೊತ್ತ ; ಸಮೂಹ ; ಸಮುದಾಯ ; ಸಂಚಯ (In a b. ಒಟ್ಟಾಗಿ ; ಸಮುದಾಯಗೂಡಿ. B. politic ರಾಷ್ಟ್ರಶರೀರ ; ಜನಾಂಗ ; ಜನತೆ ; ಸಂಸ್ಥಾನ). ಸಂಘ ; ಸಂಸ್ಥೆ ; ಮಂಡಲ ; ಸಮಾಜ. ಸೇನೆ ; ಬಲ ; ದಂಡು. ಪದಾರ್ಥ ; ವಸ್ತು. ಪರಿಮಾಣ. ದೃಢತೆ ; ಸಾರ ; ಸತ್ವ (B.-colour ದಟ್ಟ ಬಣ್ಣ. Wine of good b. ಸಾರವತ್ತಾದ ದ್ರಾಕ್ಷಾಮದ್ಯ). ಇಂದ್ರಿಯಗೋಚರ ವಸ್ತು. B. of Christ ಕ್ರೈಸ್ತ ಸಂಸ್ಕಾರ ಮಾಡಿದ ರೊಟ್ಟಿ. Heavenly b. ಆಕಾಶಸ್ಥ ಕಾಯ ; ಸೂರ್ಯ, ನಕ್ಷತ್ರ, ಮೊ. **B.-guard** ಮೈಗಾವಲು ; ಅಂಗರಕ್ಷಕ ; ಪರಿವಾರ. **B.-louse** ಕೂರೆ. **B.-servant** ಪರಿಚರ ; ಅನುಚರ ; ಆಳು. **Bódied** ಬಾಡಿಡ್ (ಗು.) ಮೈಯುಳ್ಳ ; ದೇಹವುಳ್ಳ ; ಸಶರೀರ (Able-b. ಗಟ್ಟಿಮೈಯುಳ್ಳ ; ದೃಢ ಕಾಯ. Full-b. ತುಂಬಿದ ಮೈಯುಳ್ಳ). **Bódiless** (ಗು.) ದೇಹವಿಲ್ಲದ ; ಅಶರೀರ ; ನಿರಾಕಾರ ; ಅಮೂರ್ತ. ದೇಹದಿಂದ ಬೇರ್ಪಡಿಸಿದ ; ಮುಂಡವಿಲ್ಲದ. **Bódily** (ಗು., ಕ್ರಿ. ವಿ.) ಮನುಷ್ಯದೇಹದ ; ಶಾರೀರಕ ; ದೈಹಿಕ ; ಕಾಯಿಕ (B. fear ದೇಹಭಯ). ದೇಹದೊಡನೆ ; ಸಶರೀರವಾಗಿ ; ಸಾಕಾರವಾಗಿ ; ಸಾಕ್ಷಾತ್ತಾಗಿ. ಒಟ್ಟಾಗಿ ; ಒಟ್ಟಿಗೆ.

Bódy (ಕ್ರಿ. ಸಕ.) ರೂಪಿಸು (ಸಾ., B. forth) ; ಆಕಾರ ಕೊಡು ; ಆಕಾರದಲ್ಲಿ ತೋರಿಸು.

Boeótian ಬಿಯೋಷನ್ (ಗು., ನಾ.) ಮಡ್ಡಿ ; ದಡ್ಡ ; ಮಂದ. (ಬಿಯೋಷಿಯಾ ಪ್ರಾಂತದ ಜನರಿಂದ)

Bóer ಬೂ(ಬೋ)ಅರ್ (ನಾ., ಗು.) ಡಚ್ ಸಂತತಿಗೆ ಸೇರಿದ ದ. ಆಫ್ರಿಕಸ್ಥ(ರ)

Bog[1] ಬಾಗ್ (ನಾ.) ಜೌಗು ಪ್ರದೇಶ ; ಬದಿ ನೆಲ ; ಹೂಳು ; ಉಸುಬು. **B. butter** ಐರ್ಲೆಂಡಿನಲ್ಲಿ, ಕೊಳೆತು ದಟ್ಟವಾಗಿ ಸೇರಿದ ಕಸಕಡ್ಡಿಯುಳ್ಳ ಜೌಗುಪ್ರದೇಶಗಳಲ್ಲಿ ದೊರೆಯುವ ಒಂದು ತೆರದ ಮೇದೋವಸ್ತು (ಜಿಡ್ಡುಪದಾರ್ಥ). **B.-trotter** ಐರ್ಲೆಂಡ್ ದೇಶಸ್ಥ. **Bóggy** (ಗು.) ; **Bógginess** (ನಾ.)

Bog (ಕ್ರಿ. ಸಕ.) ಉಸುಬಿನಲ್ಲಿ ಹೂತುಹೋಗು (ಕರ್ಮಣಿ ಪ್ರಯೋಗ)

Bog[2] (ನಾ.) (ಗ್ರಾಮ್ಯದ) ಪಾಯಖಾನೆ ; 'ಕಕ್ಕುಸು'.

Bógey ಬೋಗಿ (ನಾ.) (= Colonel B.) ದಕ್ಷನಾದ ಗಾಲ್ಫ್ ಆಟಗಾರನು ಗೆಲ್ಲಬೇಕಾದ ಅಂಕಗಳು.

Bóggle ಬಾಗ್‌ಲ್ (ಕ್ರಿ. ಅಕ.) ಭಯದಿಂದ ಬೆದರು ; ಬೆಚ್ಚಿಬೀಳು ; ಹಿಂದೇಟು ಹೊಡೆ ; ಶಂಕಿಸು (B. at, above). ವಂಚನೆಯ ಮಾತಾಡು. ತಡಕಾಡು.

Bógie ಬೋಗಿ (ನಾ.) ಎರಡು ಅಥವಾ ಹೆಚ್ಚು ಜೋಡಿಗಾಲಿಗಳುಳ್ಳ ಮತ್ತು ಸುತ್ತುವುದಕ್ಕಾಗುವಂತೆ ತಿರುಗುಗೂಟ ಹಾಕಿರುವ, (ರೈಲು ಬಂಡಿಯ) ತಳ, ಚೌಕಟ್ಟು. **B.-car** ಇಂಥ ಚೌಕಟ್ಟಿನಮೇಲೆ ಅಳವಡಿಸಿರುವ ರೈಲ್ವೆ ಪ್ರಯಾಣದ ಗಾಡಿ ; ಬೋಗಿ ಗಾಡಿ.

Bógle ಬೋಗ್‌ಲ್ (ನಾ.) ದೆವ್ವ ; ಗಾಳಿ ; ಪಿಶಾಚ ; ಗುಮ್ಮ ; ಬೆದರು ಬೊಂಬೆ ; ಬೆರ್ಚು.

Bógus ಬೋಗಸ್ (ಗು.) ಮೋಸದ ; ಠಕ್ಕಿನ ; ಖೋಟಾ.

Bógy, —gey ಬೋಗಿ (ನಾ. ; ಬ. ವ. — ies, — eys) ಸೈತಾನ ; ದೆವ್ವ ; ಪಿಶಾಚ ; ಗುಮ್ಮ.

Boheá ಬೊಹೀ (ನಾ.) (ಕಡೆಯ ಬೆಳೆಯ) ಕೀಳ್ತರದ ಕಪ್ಪು ತೇಯೆಲೆ.

Bohémian ಬೊಹೀಮಿಯನ್ (ಗು., ನಾ.) ಬೊಹೀಮಿಯಾ ದೇಶದ(ವನು). ಸಮಾಜದ ರೀತಿ ನೀತಿಗಳನ್ನು ಗಣನೆಗೆ ತಾರದ(ವನು) ; ಸಂಪ್ರದಾಯಾತೀತ. ಕಟ್ಟಿಲ್ಲದ, ಸಲೀಸಾದ, ಪದ್ಧತಿ, ನಡೆವಳಿ, ನೀತಿ — ಉಳ್ಳ(ವನು) ; ಸ್ವೇಚ್ಛಾಚಾರಿ (ಮು., ಕಲಾವಿದರ ವಿಷಯದಲ್ಲಿ). **Bohémianism** (ನಾ.) ; **Bohémianize** (ಕ್ರಿ. ಅಕ.)

Boil[1] ಬಾಯ್‌ಲ್ (ನಾ.) ಕುರು ; ಸ್ಫೋಟ.

Boil[2] ಬಾಯ್‌ಲ್ (ಕ್ರಿ.) ಕುದಿ ; ಮರಳು (B. over ಕುದಿಯಿಂದ ಉಕ್ಕಿ ಸುರಿದುಹೋಗು ; ಕುದಿದು ಉಕ್ಕಿಹೋಗು). (ಸಮುದ್ರ ಮೊ., ಮನಸ್ಸು, ಭಾವೋದ್ರೇಕವುಳ್ಳವನು) ಕ್ಷುಬ್ಧವಾಗು ; ಕ್ಷೋಭೆಗೊಳ್ಳು. [Blood boils (ಕೋಪದಿಂದ, ರೋಷದಿಂದ) ಮೈಯುರಿಯುತ್ತದೆ]. ಕುದಿಸು ; ಮರಳಿಸು ; ಬೇಯಿಸು ; ಬೇಯಿ. B. away ಆವಿಯಾಗಿ ಹಾರಿಹೋಗುವಂತೆ ಕುದಿಸು ; ಆವಿಯಾಗಿ ಹಾರಿಹೋಗು ; ಇಂಗಿಹೋಗು. B. down ಕುದಿಸಿ ಕಡಮೆಮಾಡು ; ಇಂಗಿಸು ; ಇಳಿಸು ; (ರೂಪ.) ಸಂಗ್ರಹ ಮಾಡು. Boiling hot ಕುದಿಬಿಸಿಯ. Boiled shirt (ಅಮೆ. ಸಂ., ಅಸಂ.) ಮುಂಭಾಗಕ್ಕೆ ಗಂಜಿಹಾಕಿದ ಷರಟು. Keep the pot boiling ಜೀವನಕ್ಕೆ ಹವಣಿಸಿಕೊ ; ಕಾಲಹಾಕು ; ತಳ್ಳಿಕೊಂಡುಹೋಗು. **Boíler** (ನಾ.) ಕುದಿಸುವವನು ; ಕುದಿಸುವ ಪಾತ್ರೆ ; ಕುದಿಪಾತ್ರೆ (ಮು., ಎಂಜಿನ್ನುಗಳಲ್ಲಿ ಆವಿಮಾಡುವುದಕ್ಕಾಗಿ ಕಬ್ಬಿಣದ ತಗಡುಗಳನ್ನು ಮಡಾಯಿಸಿ ಮಾಡಿದ ದೊಡ್ಡ ಪಾತ್ರೆ) ; ಹಂಡೆ ; ಕಡಾಯಿ ; ಕೊಪ್ಪರಿಗೆ ; ಉಬ್ಬೆಯ ಪಾತ್ರೆ. ಬೇಯಿಸಲಾಗುವ ತರಕಾರಿ, ಮೊ. ವು. (B.-iron, B.-plate ಕಾಲಂಗುಲದಿಂದ ಅರ್ಧಂಗುಲದ ವರೆಗಿನ ಮಂದದ ಗಟ್ಟಿಸಿದ ಕಬ್ಬಿಣದ ತಗಡು. B.-tube ಕುದಿಪಾತ್ರೆಯೊಳಕ್ಕೆ ಶಾಖವನ್ನು ಒಯ್ಯುವ ನಾಳ : ಕುದಿಕೊಳವೆ). **Boílery** (ನಾ.) ಕುದಿಸುವ ಸ್ಥಳ (Sugar-b. ಆಲೆಯ ಮನೆ). **Boíling** (ನಾ.) (ಕ್ರಿಯಾರ್ಥಗಳಲ್ಲಿ) ; ಕುದಿಸಿದ್ದು ; ಕುದಿಸುತ್ತಿರುವುದು. ಕಷಾಯ. ಒಂದು ಸಲ ಕುದಿಸಿದ ಮೊತ್ತ ; ಅಡಿಗೆ. The whole b. (ಅಸಂ.) ಒಟ್ಟೆಲ್ಲ. B.-point ಯಾವುದಾದರೂ ಪದಾರ್ಥವು ಕುದಿಯುವ ಶಾಖ : ಕುದಿಕಾವು (ಸಮುದ್ರ ಮಟ್ಟದಲ್ಲಿ ನೀರಿನ ಕುದಿಕಾವು 212° F ಅಥವಾ 100° C). ಅತಿ ಉದ್ವೇಗ ; ಆವೇಶ.

Boísterous ಬಾಯ್ಸ್ಟರಸ್. (ಗು.) (ಗಾಳಿ, ಸಮುದ್ರ, ನಡತೆ, ಭಾಷಣ, ವ್ಯಕ್ತಿಗಳು — ಇವುಗಳ ವಿಷಯದಲ್ಲಿ) ಅಬ್ಬರಿಸುವ, ಭೋರ್ಗರೆಯುವ ; ಕ್ಷುಬ್ಧ ; ಪ್ರಚಂಡ ; ಉಗ್ರ ; ಉಲ್ಲೋಲ ಕಲ್ಲೋಲ. ಕೇಕೆ ಹಾಕಿಕೊಂಡು ನಗುವ. **Boísterously** (ಕ್ರಿ. ವಿ.)

Bóko ಬೋಕೋ (ನಾ.) (ಅಸಂ.) ಮೂಗು.

Bold ಬೋಲ್ಡ್ (ಗು.) ಕೆಚ್ಚೆದೆಯ ; ಧೀರನಾದ ; ಧೈರ್ಯಶಾಲಿಯಾದ ; ದಿಟ್ಟ ; ಧಾತಿಯುಳ್ಳ ; ಸಾಹಸದ ; ವೀರ್ಯವತ್ತಾದ. ಮುಂದುಬಿದ್ದುಹೋಗುವ ; ವಿನಯವಿಲ್ಲದ ; ಲಜ್ಜೆಯಿಲ್ಲದ. ತಡೆಯಿಲ್ಲದ. ಸ್ಥೂಲಾಕಾರದ ; ಸ್ಫುಟ ; ಸ್ಪಷ್ಟ ; ಎದ್ದುಕಾಣುವ (ಭಾವನೆ, ರೇಖಾರಚನೆ, ಚಿತ್ರ, ವರ್ಣನೆ, ಆಕಾರ, ಮೊ. ಗಳ ವಿಷಯದಲ್ಲಿ). **Bóldly** (ಕ್ರಿ. ವಿ.) ; **Bóldness** (ನಾ.)

Bole ಬೋಲ್ (ನಾ.) (ಮರದ) ಬುಡ ; ಕಾಂಡ ; ಸ್ಕಂಧ.

Bólide ಬಾಲೈಡ್ (ನಾ.) ದೊಡ್ಡ ಉಲ್ಕೆ ; ಅಗ್ನಿಗೋಳ.

Boll ಬೋಲ್ (ನಾ.) (ಹತ್ತಿಯ ಕಾಯಂತಿರುವ) ಗುಂಡನೆಯ ಬೀಜಕೋಶ. **B.-weevil** ಹತ್ತಿಯ ಗಿಡದಲ್ಲಿ ಸೇರಿ ಹತ್ತಿಯನ್ನು ನಾಶಮಾಡುವ ಹುಳು : ಹತ್ತಿಹುಳು. **Bolled** (ಗು.)

Bóllard ಬಾಲರ್ಡ್ (ನಾ.) ಹಗ್ಗಗಳನ್ನು ಬಿಗಿಯುವುದಕ್ಕಾಗಿ ಹಡಗಿನ ಮೇಲೆ ಅಥವಾ ಬಂದರುಕಟ್ಟೆಯ ಮೇಲೆ ಇರುವ ಕಬ್ಬಿಣದ ಅಥವಾ ಮರದ ಕಂಬ.

Bolómeter ಬೊಲಾಮಿಟರ್ (ನಾ.) ಸೂಸಿದ ಶಾಖಕಿರಣಗಳ ಶಕ್ತಿಯನ್ನು ಅಳೆಯುವ ಬಹಳ ಸೂಕ್ಷ್ಮರಚನೆಯ ವಿದ್ಯುದ್ಯಂತ್ರ : ವಿಸರ್ಜಿತತಾಪ ಮಾಪಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bólshevik ಬಾಲ್ಷವಿಕ್ (ನಾ.) ರಷ್ಯಾದೇಶದಲ್ಲಿ ಕೂಲಿಗಾರರೂ ಸಿಪಾಯಿಗಳೂ ಚುನಾಯಿಸಿದ 'ಸೋವಿಯಟ್ಸ್' ಎಂಬ ಮಂಡಲಿಗಳ ಮೂಲಕ ಜನಸಾಮಾನ್ಯದ ಅಧಿಕಾರವು ರಾಜ್ಯಭಾರದಲ್ಲಿ ನಡೆಯಬೇಕೆಂದು ವಾದಿಸುವವನು : ಬಾಲ್ಷವಿಕ್. (ಜನಭಾಷೆಯಲ್ಲಿ) ಕ್ರಾಂತಿಕಾರ. **Bólshevism** (ನಾ.) ; **Bólshevist** (ನಾ., ಗು.) ; **Bólshy** (ನಾ., ಗು.) (ಅಸಂ.)

Bólster ಬೋಲ್ಸ್ಟರ್ (ನಾ., ಕ್ರಿ.) ಹಾಸಿಗೆಯ ಉದ್ದವಾದ ಮೆತ್ತನೆಯ ತಲೆದಿಂಬು (ಮು., ತಳದ್ದು). ಅನೇಕ ಯಂತ್ರಗಳಲ್ಲಿಯೂ ಉಪಕರಣಗಳಲ್ಲಿಯೂ ಇರುವ ಮೆತ್ತೆ ಅಥವಾ ಆಧಾರ. (ಕ್ರಿ. ; ಸಾ., *up* ಉಪ. ಜೊಡನೆ) ದಿಂಬನ್ನು ಆಧಾರವಾಗಿ ಕೊಡು ; (ರೂಪ.) ಬೆಂಬಲ ಕೊಡು ; ಸಹಾಯ ಮಾಡು ; ಪ್ರೋತ್ಸಾಹ ಕೊಡು ; ಎತ್ತಿ ಹಿಡಿ ; ವಿನಾಶಾರ್ಹನಾದವನನ್ನು, — ವಾದದ್ದನ್ನು, ಕಾಪಾಡು. ಮೆತ್ತೆ ತುಂಬು ; ಭರತಿ ಮಾಡು. ದಿಂಬಿನಿಂದ ಚಚ್ಚು, ಸದೆಬಡಿ. ದಿಂಬುಗಳಿಂದ ಹೊಡೆದಾಡುವ ಆಟವಾದು.

Bolt[1] ಬೋಲ್ಟ್ (ನಾ.) ಅಂಬು (ಮು., ಅಡ್ಡಬಿಲ್ಲಿನ ಭಾರವಾದ ಸಣ್ಣ ಅಂಬು) (Fool's b. soon shot ಅವಿವೇಕಿ ಮಾತನಾಡುವುದೂ ಬೇಗನೆ,. ಬಾಯಿಮುಚ್ಚುವುದೂ ಬೇಗನೆ). ಸಿಡಿಲು (B. from the blue ಬರಸಿಡಿಲು ಬಿದ್ದಂತೆ ಅಕಸ್ಮಾತ್ತಾಗಿ ಸಂಭವಿಸುವ ಆಪತ್ತು, ಘಟನೆ). (ಬಾಗಿಲಿನ) ಅಗುಳಿ, ತಾಪಾಳು. ಗುಬ್ಬಿ ಮೊಳೆ. (ಒಂದು ಗೊತ್ತಾದ ಪ್ರಮಾಣದ) ಕಟ್ಟು (ಬೆತ್ತ, ಆಪು, ಮೊ.). (ಒಂದು ಗೊತ್ತಾದ ಅಳತೆಯ) ಬಟ್ಟೆಯ ಸುರುಳಿ. **B.-rope** ಹಡಗಿನ ಪಟ ಹರಿದುಹೋಗದಂತೆ ಅದರ ಅಂಚಿನಲ್ಲಿ ಸೇರಿಸಿ ಹೊಲಿದಿರುವ ಹಗ್ಗ : ಉರುಟು ಹಗ್ಗ. **B. upright** (ಕ್ರಿ. ವಿ.) ಅಲುಗದೆ ನೆಟ್ಟಗೆ.

Bolt[2] ಬೋಲ್ಟ್ (ಕ್ರಿ.) ಥಟ್ಟನೆ ಓಡಿಹೋಗು ; ಕಂಬಿಕೀಳು ; (ಕುದುರೆ) ಹತೋಟಿ ಮೀರಿ ಓಡಿಹೋಗು. ಅಗುಳಿ ಹಾಕು. (B. in or out ಬಾಗಿಲಿನ ಅಗುಳಿಹಾಕಿ, ಒಳಗೆ ಕೂಡು, ಅಥವಾ ಒಳಹೊಗದಂತೆ ಮಾಡು). ಅಗಿಯದೆ ಆತುರವಾಗಿ ನುಂಗಿಬಿಡು. **Bólter** (ನಾ.) (ಕ್ರಿಯಾರ್ಥಗಳಲ್ಲಿ) ; ಥಟ್ಟನೆ ಓಡಿಹೋಗುವ ಕುದುರೆ.

Bolt[3], **Boult** ಬೋಲ್ಟ್ (ಕ್ರಿ. ಸಕ.) ಶೋಧಿಸು ; ಸೋಸು. ವಿಮರ್ಶೆ ಮಾಡು. **Bó(u)lter** (ನಾ.) ಜರಡಿ ; ಜಾಲಿಸುವ ಯಂತ್ರ. ಹಿಟ್ಟು, ಮೊ. ನ್ನು ಸೋಸುವವನು (ರೂಪ. ಸಹ). ಸೋಸುವ ಬಟ್ಟೆ.

Bólus ಬೋಲಸ್ (ನಾ.) ದೊಡ್ಡ ಗುಳಿಗೆ ; ದೊಡ್ಡ ಉಂಡೆ.

Bomb ಬಾಮ್ (ನಾ., ಕ್ರಿ.) (ಫಿರಂಗಿಯಿಂದ ಹೊಡೆಯುವ, ಅಥವಾ ಈಗ, ಸಾಮಾನ್ಯವಾಗಿ ಕೈಯಿಂದ ಎಸೆದು ಸಿಡಿಸುವ) ಸಿಡಿಮದ್ದು ತುಂಬಿದ ಕಬ್ಬಿಣದ ಗುಂಡು: ಸಿಡಿಗುಂಡು ; ಬಾಂಬು. (ಕ್ರಿ.) (ಧ್ವಂಸಮಾಡುವುದಕ್ಕಾಗಿ) ಸಿಡಿಗುಂಡುಗಳನ್ನು ಎಸೆ, ಹಾಕು. **B.-proof** ಸಿಡಿಗುಂಡುಗಳನ್ನು ತಡೆಯುವ ಶಕ್ತಿಯುಳ್ಳ. **B.-shell** ಸಿಡಿಗುಂಡು (Fell like a b.-shell). **Bómber** ಬಾಮರ್ (ನಾ.) ಸಿಡಿಗುಂಡುಗಳನ್ನೆಸೆಯುವ ಸಿಪಾಯಿ, ಅಥವಾ ಆಕಾಶ ಯಾನ.

Bombárd ಬಂಬಾರ್ಡ್ (ಕ್ರಿ. ಸಕ.) ಗುಂಡಿನಿಂದಲೂ ಸಿಡಿಗುಂಡಿನಿಂದಲೂ ಸಂತತವಾಗಿ ಹೊಡೆ (ಮು., ಯುದ್ಧದ ಹಡಗುಗಳು ಒಂದು ಪಟ್ಟಣಕ್ಕೆ ಮುತ್ತಿಗೆಹಾಕಿದಾಗ) ; ಗುಂಡಿನ ಮಳೆ ಸುರಿಸು. (ರೂಪ.) ಬೈಗುಳು, ವಾದ — ಇವುಗಳನ್ನು ಎಡೆಬಿಡದೆ ಸುರಿಸು. (ಭಾ. ವಿ.) ಒಂದು ಪದಾರ್ಥವನ್ನು ಸಣ್ಣ ಅಣುಗಳ, ಅಥವಾ ಕಿರಣಗಳ, ಸಂತತವಾದ ಹೊಡೆತಕ್ಕೆ ಗುರಿಮಾಡು. **Bombárdment** (ನಾ.) ; **Bombardiér** ಬಾಂ(ಬಂ)ಬರ್ಡಿಯರ್ (ನಾ.) ಫಿರಂಗಿಸೈನ್ಯದ ಸಾಮಾನ್ಯ ಹುದ್ದೆಯ ಅಧಿಕಾರಿ ; ಗೋಲಂದಾಜ.

Bómbast ಬಾಮ್‌ಬಸ್ಟ್ (ನಾ.) ಆಡಂಬರದ ಮಾತು ; ವಾಗಾಡಂಬರ ; ಬಡಾಯಿ ಮಾತು. **Bombástic** (ಗು.) ; **Bombástically** (ಕ್ರಿ. ವಿ.)

Bómbax ಬಾಂಬ್ಯಾಕ್ಸ್ (ನಾ.) ಬೂರುಗದ ಜಾತಿಯ ಮರ.

Bómbyx ಬಾಂಬಿಕ್ಸ್ (ನಾ.) ರೇಷ್ಮೆಯ ಹುಳು. (ಪ್ರಾ. ವಿ.) ರೇಷ್ಮೆಯ ಹುಳುವನ್ನೊಳಕೊಂಡ ಪತಂಗಜಾತಿ. **Bómbic** (ಗು.) ರೇಷ್ಮೆಯ ಹುಳುವಿನ ; ರೇಷ್ಮೆಯ ಹುಳುವಿನ ಸಂಬಂಧವಾದ (B. acid ರೇಷ್ಮೆಯ ಹುಳು ಸ್ರವಿಸುವ ಒಂದು ಆಮ್ಲ)

Bon, Bonne (F) ಬೊನ್ (ಗು.) ಒಳ್ಳೆಯ. **Bón-bón** ಬೊನ್ ಬೊನ್, ಬಾನ್ ಬಾನ್ (ನಾ.) ಸಕ್ಕರೆಮಿಠಾಯಿ. **Bonhom(m)ié** ಬೊನೊಮಿ (ನಾ.) ಒಳ್ಳೆಯತನ ; ಸೌಜನ್ಯ ; ಸರಸತೆ. **Bon mót** ಬೊನ್ ಮೊ (ಬ. ವ. Bons mots ಬೊನ್ ಮೋಸ್) ಚತುರೋಕ್ತಿ ; ಸರಸೋಕ್ತಿ. **Bon-tón** ಬೊನ್ ಟೊನ್ (ನಾ.) ಸುಶಿಕ್ಷಣ ; ಸುಸಂಸ್ಕಾರ ; ನಯನಾಗರಿಕ ಪ್ರಪಂಚ. **Bon-vivánt** ಬೊನ್ ವಿವಾನ್ (ನಾ.) ಭೋಗಾಪೇಕ್ಷೆಯುಳ್ಳವನು ; ಭೋಜನ ಪ್ರಿಯ ; ತಿಂಡಿಪೋತ ; ಹೊಟ್ಟೆಬಾಕ. **Bonne boúche** ಬೊನ್ ಬೂಷ್ (ನಾ.) ರಸ ಕವಳ ; ಬಾಯೊಗ್ಗರಣೆ. **Bonnes fortúnes** ಬೊನ್ ಫಾರ್ಟ್ಯೂನ್ (ನಾ.) (ಹೆಮ್ಮೆಪಡತಕ್ಕದ್ದಾಗಿ ಭಾವಿಸುವ) ಸ್ತ್ರೀ ಕಟಾಕ್ಷ.

Bonne ಬೊನ್ (ನಾ.) (ಫ್ರೆಂಚ್) ದಾದಿ ; ದಾಸಿ.

Bona fíde (L) ಬೋನ ಫೈಡಿ (ಗು., ಕ್ರಿ. ವಿ.) ಅಕೃತ್ರಿಮ ; ನಿಷ್ಕಪಟ ; ವಿಶ್ವಾಸ ಯೋಗ್ಯ ; ಪ್ರಾಮಾಣಿಕ ; ನಿಜವಾದ ; ನಿಜವಾಗಿ. **Bona fídes** — ಫೈಡೀಸ್ (ನಾ.) (ನ್ಯಾ. ಶಾ.) ನಿಷ್ಕಾಪಟ್ಯ ; ಸದ್ಭಾವ ; ಪ್ರಾಮಾಣಿಕತೆ ; ಸದುದ್ದೇಶ.

Bonánza ಬೊನ್ಯಾನ್ಜ (ನಾ., ಗು.) ಏಳಿಗೆ ; ಅಭಿವೃದ್ಧಿ ; ಒಳ್ಳೆಯ ಅದೃಷ್ಟ ; (ಜನಭಾಷೆಯಲ್ಲಿ) ವಿಶೇಷಾಭಿವೃದ್ಧಿ ; ಉಚ್ಛ್ರಾಯ ಸ್ಥಿತಿ. (ಮು., ಗಣಿಗಳ) ಹೆಚ್ಚು ಉತ್ಪತ್ತಿ. ಉತ್ತಮ ಸಾಧನಗಳನ್ನು ಉಪಯೋಗಿಸಿ ಕೆಲಸಮಾಡುತ್ತಿರುವ (A b. farm). ಒಳ್ಳೆಯ ಅದೃಷ್ಟದ ಹೊಡೆತ (In b.)

Bón-bón. **Bon** ನೋಡಿ.

Bonce ಬಾನ್ಸ್ (ನಾ.) ಆಡುವ ದೊಡ್ಡಗೋಲಿ ; ಹೆಗ್ಗೋಲಿ ; ಇಂಥ ಗೋಲಿಯ ಆಟ.

Bond[1] ಬಾಂಡ್ (ನಾ.) ಕಟ್ಟು ; ಪಾಶ ; ಬಂಧನ ; ತೊಡರು (In bonds ಬೇಡಿಯಲ್ಲಿ ; ಸಂಕೋಲೆಯಲ್ಲಿ ; ಬಂಧನದಲ್ಲಿ ; ಸೆರೆಯಲ್ಲಿ). (ಸೌದೆ ಕಟ್ಟುವ) ಕಟ್ಟು. ಬಂಧನ ಶಕ್ತಿ. ಕಟ್ಟುಪಾಡು ; ಒಡಂಬಡಿಕೆ ; ಕರಾರು ಪತ್ರ. (ಸರ್ಕಾರದ ಅಥವಾ ಇತರ) ಸಾಲಪತ್ರ (Bondholder ಪತ್ರದಾರ). (ಸುಂಕ) (In b. ಸುಂಕ ತೀರಿಸುವವರೆಗೂ ಸುಂಕದ ಚಾವಡಿಯಲ್ಲಿಟ್ಟುಕೊಂಡಿರುವ. Take out of b. ಸುಂಕ ತೀರಿಸಿ ತೆಗೆದುಕೊಂಡುಹೋಗು). (ಇಟ್ಟಿಗೆಯ ಕಟ್ಟಡದಲ್ಲಿ ಭದ್ರವಾಗಿರುವುದಕ್ಕಾಗಿ ಉಪಯೋಗಿಸುವ ಬಗೆಬಗೆಯ) ಬಂಧ. **B. (paper)** (ದಸ್ತೈವಜುಗಳನ್ನು ಬರೆಯುವುದಕ್ಕೆ ಅನುಕೂಲವಾಗಿರುವ) ಒಂದು ಉತ್ತಮ ತೆರದ ಕಾಗದ. **B.-stone** (ಗೋಡೆಯ ಅಗಲಕ್ಕೂ ಹಾಕುವ) ಬಂಧನ ಕಲ್ಲು, ಹಿಡಿಗಲ್ಲು. **Bóndage** ಬಾಂಡೆಜ್ (ನಾ.) ಗುಲಾಮಗಿರಿ ; ದಾಸ್ಯ ; ಸೆರೆ ; ನಿರ್ಬಂಧ.

Bond (ಕ್ರಿ. ಸಕ.) (ಇಟ್ಟಿಗೆ, ಮೊ. ನ್ನು ಒಂದರಮೇಲೊಂದರಂತೆ ಜೋಡಿಸಿ ಭದ್ರವಾಗಿರುವಹಾಗೆ) ಬಂಧಿಸು. ಸುಂಕ ತೀರಿಸಬೇಕಾದ ಸರಕನ್ನು ಬಂಧದಲ್ಲಿಡು. (ಸಾಲಕ್ಕೆ) ಈಡು ಮಾಡು, ಆಧಾರ ಮಾಡು. **Bónded** (ಗು.) (ಸರಕು) ಬಂಧದಲ್ಲಿಟ್ಟಿರುವ. (ಗಡಂಗು) ಸುಂಕ ತೀರಿಸುವ ವರೆಗೂ ಸರಕು ಇಟ್ಟಿರುವ, ಇಡುವ. (ಸಾಲ) ಪತ್ರಗಳ ಆಧಾರವಿರುವ. **Bónder** (ನಾ.) (ಸುಂಕಕ್ಕಾಗಿ) ಸರಕನ್ನು ಬಂಧದಲ್ಲಿಡುವವನು. ಬಂಧಿಸುವ ಕಲ್ಲು ಅಥವಾ ಇಟ್ಟಿಗೆ.

Bond (ಗು.) ಗುಲಾಮಗಿರಿಯಲ್ಲಿರುವ ; ಅಸ್ವತಂತ್ರ ; ಬದ್ಧ (ಪ್ರಾಚೀ. ಪ್ರ.). **Bóndman** (ನಾ.) ; **Bóndmaid** (ನಾ.) ; **Bóndservant** (ನಾ.) ; **Bóndservice** (ನಾ.) ; **Bóndslave**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ನಾ.) ; **Bóndsman** (ನಾ.) ಗುಲಾಮ. ಜಾಮೀನುಪತ್ರ ಬರೆದು ಕೊಟ್ಟವನು ; ಹೊಣೆಗಾರ.

Bond² ಬಾಂಡ್ (ನಾ.) (ಸಮಾನೋದ್ದೇಶ ಬದ್ಧ) ಸಂಸ್ಥೆ, ಸಂಘ.

Bond Street ಬಾಂಡ್ ಸ್ಟ್ರೀಟ್ (ನಾ.) ಆರಾಮವಿರುವ ನೀಟುಗಾರರು ವಿಹಾರಕ್ಕಾಗಿ ಹೋಗುವ ಲಂಡನ್ನಿನ ಒಂದು ಪೇಟೆ.

Bónduc ಬಾಂಡಕ್ (ನಾ.) ಗಜ್ಜಿಗದ ಜಾತಿಯ ಗಿಡ.

Bone¹ ಬೋನ್ (ನಾ.) ಮೂಳೆ ; ಎಲುಬು ; ಅಸ್ಥಿ. ಅಸ್ಥಿದ್ರವ್ಯ. ಎಲುಬಿನಂಥ ಪದಾರ್ಥ (ಆನೆಯ ದಂತ, ಹಲ್ಲು, ತಿಮಿಂಗಿಲದ ಮೇಲ್ದವಡೆಯಲ್ಲಿಯ ಕೊಂಬಿನ ಪದಾರ್ಥ, ಮೊ.). ಎಲುಬಿನಿಂದ ಮಾಡಿದ ವಸ್ತು. ಎಲುಬಿನಿಂದ ಕೂಡಿದ ಮಾಂಸದ ತುಂಡು. (ಬ. ವ.) ದಾಳಗಳು, ಮೊ. ವು. ದೇಹ (My old bones ನನ್ನ ಜೀರ್ಣವಾದ ದೇಹ) ; ಕಳೇಬರ (His bones were laid at rest ಅವನ ಕಳೇಬರವನ್ನು ಸಮಾಧಿಮಾಡಿದರು). B. of contention ವ್ಯಾಜ್ಯಕಾರಣ ; ಕಲಹ ಬೀಜ. B. to pick with some one ಜಗಳ ಹೂಡಲು ಕಾರಣ. Bred in the b. ಅಸ್ಥಿಗತವಾದ ; ತಿದ್ದಲು ಸಾಧ್ಯವಿಲ್ಲದ. Feel in ones bones ದೃಢವಾಗಿರು ; ಯಾವ ಸಂಶಯವೂ ಇಲ್ಲದಿರು. Horse with plenty of b. ಒಳ್ಳೆಯ ಮೈಕಟ್ಟುಳ್ಳ ಕುದುರೆ. Make dead bones live ಜೀವಕಳೆ ತುಂಬು ; ಚೇತನಗೊಳಿಸು. Make no bones of, about, to ಹಿಂಜರಿಯದಿರು ; ಮುಚ್ಚುಮರೆ ಮಾಡದಿರು. Skin and b. ಅಸ್ಥಿ ಚರ್ಮ ; ಬರಿಯ ಮೂಳೆ. To the b. (ಚಳಿ, ಗಾಯ, ಮೊ.) ಮೂಳೆ ಮುಟ್ಟುವಂತೆ (ಎಂದರೆ, ಕೊರೆಯುವಂತೆ, ಆಳವಾಗಿ). Will never make old bones ಮೂಳೆ ಮುಪ್ಪಾಗದು ; ಬಹುಕಾಲ ಬದುಕಿರುವುದಿಲ್ಲ. **B.-ash, B.-earth** ಎಲುಬಿನ ಬೂದಿ (ಮು., ಸುಣ್ಣವೂ ಭಾಸ್ವರವೂ ಸಂಯುಕ್ತವಾದ ಲವಣದಿಂದ ಕೂಡಿದುದು). **B.-black** ಮೂಳೆಯಿದ್ದಲು. **B.-dry** ತೇವವಿಲ್ಲದ (ಪ್ರಾಂತ, ಮೊ.). ಮದ್ಯಪಾನ ಮಾಡದ. **B.-dust** (ಗೊಬ್ಬರಕ್ಕಾಗಿ ಉಪಯೋಗಿಸುವ) ಎಲುಬಿನ ಪುಡಿ. **B.-manure** ಮೂಳೆ ಗೊಬ್ಬರ. **B.-setter** ಮುರಿದ ಅಥವಾ ಸ್ಥಳತಪ್ಪಿದ ಎಲುಬನ್ನು ಕೂಡಿಸುವವನು (ಸಾ., ಶಾಸ್ತ್ರಚಿಕಿತ್ಸಕನಲ್ಲದವನು). **B.-shaker** ಮೂಳೆ ಕುಲುಕ ; ರಬ್ಬರಿನಪಟ್ಟೆಯಿಲ್ಲದ ಕಾಲುಬಂಡಿ (ಬೈಸಿಕಲ್ಲು). **B.-spavin** ಕುದುರೆಯ ಕಾಲಿನಮೇಲೆ ಬೆಳೆದು ಮೂಳೆಯಷ್ಟು ಗಟ್ಟಿಯಾಗುವ ಜಡ್ಡು. **Bóny** (ಗು.) ಎಲುಬಿನ ; ಎಲುಬಿನಂಥ ; ಎಲುಬಿನಿಂದ ಮಾಡಿದ ; ದೊಡ್ಡ ಎಲುಬುಗಳುಳ್ಳ.

Bone (ಕ್ರಿ. ಸಕ.) (ಮಾಂಸ, ಮೀನು — ಇವುಗಳಲ್ಲಿಯ) ಎಲುಬನ್ನು ತೆಗೆದುಬಿಡು. (ಅಸಂ.) ಕಳ್ಳತನ ಮಾಡು ; ಕದಿ.

Bone² (ಕ್ರಿ. ಸಕ.) ('ಸರ್ವೇ' ಮಾಡುವುದರಲ್ಲಿ) ಮಟ್ಟ ತೆಗೆದುಕೊ, ಮಟ್ಟ ಸರಿನೋಡು. Boning rod ಮಟ್ಟದ ಕೆಲಸಗಳಲ್ಲಿ ಉಪಯೋಗಿಸುವ ಮರದ ಕೋಲು : ಮಟ್ಟಗೋಲು.

Bónfire ಬಾನ್‌ಫೈಯರ್ (ನಾ.) ಯಾವುದಾದರೂ ಉತ್ಸವವನ್ನೊ ಜಯವನ್ನೊ ಪ್ರದರ್ಶಿಸುವುದಕ್ಕಾಗಿ (ಎತ್ತರದ) ಮೈದಾನದಲ್ಲಿ ಉರಿಸುವ ದೊಡ್ಡ ಬೆಂಕಿ : ಉತ್ಸವಾಗ್ನಿ. ಕಸ ಸುಡುವುದಕ್ಕಾಗಿ ಉರಿಸುವ ಬೆಂಕಿ (Make a b. of ಸುಟ್ಟುಹಾಕು ; ನಾಶ ಮಾಡು)

Bonhom(m)ié. **Bon** ನೋಡಿ.

Bóniface ಬಾನಿಫೇಸ್ (ನಾ.) ಊಟ ವಸತಿಗಳ ಅಂಗಡಿಯವನು.

Bónism ಬಾನಿಸ್ಮ್ (ನಾ.) 'ಪ್ರಪಂಚವೇನೊ ಒಳ್ಳೆಯದು, ಆದರೆ ಅತ್ಯುತ್ತಮವಾದುದಲ್ಲ' ಎಂಬ ವಾದ. **Bónist** (ನಾ.)

Bon mót, **Bonne**, **Bonne boúche**, **Bonnes fortúnes** } **Bon** ನೋಡಿ.

Bónnet ಬಾನೆಟ್ (ನಾ.) (ಗಂಡಸಿನ) ಸ್ಕಾಚ್ ಟೋಪಿ ; (ಹೆಂಗಸಿನ) ಚಾಚಂಚು ಇಲ್ಲದ ಟೋಪಿ. ಹೊಗೆಕೊಳವಿಯ ಟೋಪಿ. ಯಂತ್ರ ಭಾಗಗಳಲ್ಲಿ ಮೇಲ್ಮುಚ್ಚಳ ; ಮೋಟಾರುಬಂಡಿಯ ಚಾಲಕ ಯಂತ್ರದ ಮೇಲಿನ ಕೀಲುಮುಚ್ಚಳ. (ಜೂಜಾಟ, ಹರಾಜು, ಮೊ. ಗಳಲ್ಲಿ) 'ಷಾಮಿಲಾದ್ದಾರ.' ಇತರರನ್ನು ಪುಸಲಾಯಿಸಿ ಟೋಪಿಹಾಕುವವನು. (To have a bee in one's b. — Bee ನೋಡಿ). **Bónneted** (ಗು.)

Bónnet (ಕ್ರಿ. ಸಕ.) ಒಬ್ಬನಿಗೆ ಟೋಪಿಯಿಡು ; ಒಬ್ಬನ ಟೋಪಿಯನ್ನು ಅವನ ಕಣ್ಣು ಕವಿಯುವಂತೆ ಅದುಮಿಬಿಡು.

Bónny ಬಾನಿ (ಗು.) ಚೆಲ್ವಿನ ; ಅಂದವಾದ ; ಸುಂದರವಾದ ; ಕಳೆದುಂಬಿದ. **Bónnily** (ಕ್ರಿ. ವಿ.)

Bon-tón. **Bon** ನೋಡಿ.

Bónus ಬೋನಸ್ (ನಾ.) (ವೇತನದ ಜೊತೆಗೆ ಕೊಡುವ) ಉಚಿತಾರ್ಥ. ನಿಯತವಾಗಿ ಕೊಡುವ ಮೂಲ್ಯದ ಜೊತೆಗೆ ಕೊಡುವ ಹೆಚ್ಚು ಹಣ (ಮು., ಒಂದು ವ್ಯಾಪಾರಸಂಸ್ಥೆಯ ಪಾಲುದಾರರಿಗೆ ಕೊಡತಕ್ಕ ಹಂಚಿಕೆಯ ಹಣದ ಜೊತೆಗೆ ಕೊಡುವ ಉಚಿತಾರ್ಥ ; ಜೀವವಿಮೆಯ ಚಂದಾದಾರರಿಗೆ ಹಂಚುವ ಲಾಭಾಂಶ)

Bon vivánt. **Bon** ನೋಡಿ.

Bonze ಬಾನ್ಸ್ (ನಾ.) (ಜಪಾನಿನ ಅಥವಾ ಚೀನಾ ದೇಶದ) ಬೌದ್ಧ ಭಿಕ್ಷು, ಬೌದ್ಧ ಸಂನ್ಯಾಸಿ.

Boo, Booh ಬೂ (ಭಾವ. ಅವ್ಯ., ನಾ., ಕ್ರಿ.) ಅಸಮಾಧಾನ ಸೂಚಕ ಅಥವಾ ಅಲಕ್ಷ್ಯಸೂಚಕ ಧ್ವನಿ (ಮಾಡು) : ಬೂ ಎನ್ನು. (ಮಾತಾಡುತ್ತಿರುವವನನ್ನು, ಪ್ರಕಟನೆ, ಮೊ. ನ್ನು) ಪರಿಹಾಸ್ಯ ಮಾಡು.

Boóby ಬೂಬಿ (ನಾ.) ತಿಳಿಗೇಡಿ ; ದಡ್ಡ ; ಮೊದ್ದ ; ಎಗ್ಗ ; ಗುಗ್ಗು. ಒಂದು ಜಾತಿಯ ನೀರುಹಕ್ಕಿ. **Boóbyish** (ಗು.)

Boódle ಬೂಡ್ಲ್ (ನಾ.) ಗುಂಪು ; ಹಿಂಡು ; ತಂಡ (The whole b. or caboodle ಹಿಂಡೆಲ್ಲ ; ಹಿಂಡಿಗೆ ಹಿಂಡೇ). ರಾಜಕೀಯ ಲಂಚ ಮೊ. ಕ್ಕಾಗಿ ಹಣ. ಒಂದು ತೆರದ ಇಸ್ಪೀಟಾಟ. (ಅಮೆ. ಸಂ.) ಬಂಡವಾಳ ; ವ್ಯಾಪಾರದ ಸರಕು.

Boohoó ಬೂಹೂ (ನಾ., ಕ್ರಿ. ಅಕ.) ಗಟ್ಟಿ ಅಳು. ಗಟ್ಟಿಯಾಗಿ ಅಳು ; ಗೋಳಾಡು.

Book ಬುಕ್ (ನಾ.) ಪುಸ್ತಕ ; ವಹಿ ; ಗ್ರಂಥ. (ರೂಪ.) ತಿಳಿವಳಿಕೆ ಕೊಡುವ ಯಾವುದಾದರೂ ವಸ್ತು [B. of fate ದೈವಲಿಖಿತ. B. of life (ಕ್ರೈಸ್ತ) ಪರಮಪದಕ್ಕೆ ಅಥವಾ ಉದ್ಧಾರಕ್ಕೆ ಅರ್ಹರಾದವರ ಪಟ್ಟಿ]. ಕ್ರೈಸ್ತವೇದ, ಬೈಬಲ್ (Swear on the b. ಬೈಬಲ್ಲನ್ನು ಮುಟ್ಟಿ ಪ್ರಮಾಣಮಾಡು). (ಗ್ರಂಥದ, ಕಾವ್ಯದ, ಅಥವಾ ಬೈಬಲ್ಲಿನ) ಒಂದು ಪ್ರಧಾನ ಭಾಗ : (Book I, etc., Book of Genesis). (ಕುದುರೆಯ ಜೂಜಿನಲ್ಲಿ) ಒಬ್ಬನು ಇಡುವ ಪಣ. B. of reference ಯಾವುದಾದರೂ ವಿಷಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ಆಗಾಗ ನೋಡುವ ಪುಸ್ತಕ : ನಿದರ್ಶನ ಗ್ರಂಥ ; ಪರಾಮರ್ಶ ಗ್ರಂಥ. Speak like a b. ಗ್ರಾಂಥಿಕ ಭಾಷೆಯಲ್ಲಿ ಮಾತನಾಡು. By the b. ನಿಶ್ಚಿತ ಜ್ಞಾನದಿಂದ ; ಸಪ್ರಮಾಣವಾಗಿ ; ಸಾಧಾರವಾಗಿ. Take a leaf out of one's b. ಒಬ್ಬನನ್ನು ಅನುಕರಿಸು ; ಒಬ್ಬನು ನಡೆದಂತೆ ನಡೆ. Without b. ಆಧಾರವಿಲ್ಲದೆ ; ಜ್ಞಾಪಕದಿಂದ. On the books ಸದಸ್ಯರ ಪಟ್ಟಿ, ಮೊ. ಗಳಲ್ಲಿ ಸೇರಿ (Take one's name off the books ಸದಸ್ಯತ್ವವನ್ನು ತೆಗೆದುಹಾಕು). In one's bad or black books ಒಬ್ಬನ ಕೆಟ್ಟ ಅಭಿಪ್ರಾಯಕ್ಕೆ ಅಥವಾ ಅಸಮಾಧಾನಕ್ಕೆ ಗುರಿಯಾಗಿ. In one's good books ಒಬ್ಬನ ಒಳ್ಳೆಯ ಅಭಿಪ್ರಾಯಕ್ಕೆ ಅಥವಾ ಅಭಿಮಾನಕ್ಕೆ ಪಾತ್ರನಾಗಿ. Bring to b. ವಿಚಾರಣೆಗೆ ಗುರಿಪಡಿಸು ; ತಪ್ಪು ಹೊರಿಸು ; ದೋಷಾರೋಪಣೆ ಮಾಡು. **Boókbinder,**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Boókbinding ಪುಸ್ತಕಕ್ಕೆ ರಟ್ಟುಕಟ್ಟುವವನು, ರಟ್ಟುಕಟ್ಟುವುದು. **Boókcase** ಪುಸ್ತಕದ ಬೀರು. **Boókful** (ನಾ.) ಪುಸ್ತಕ ತುಂಬು ವಷ್ಟು. **Boókie** (ನಾ.) ಜೂಜಾಟಗಳ ವ್ಯಾಪಾರದವನು. **Boókish** (ಗು.) ಪುಸ್ತಕದ (ಗಳ); ಪುಸ್ತಕಕ್ಕೆ (ಗಳಿಗೆ) ಸಂಬಂಧ ಪಟ್ಟ; ವ್ಯಾಸಂಗ ನಿರತ. (ಅನುಭವವಿಲ್ಲದೆ) ಪುಸ್ತಕಜ್ಞಾನ ಮಾತ್ರ ವಿರುವ. **Boókishly** (ಕ್ರಿ. ವಿ.); **Boókishness** (ನಾ.). **B. ends** ನಿಲ್ಲಿಸಿಟ್ಟಿರುವ ಪುಸ್ತಕಗಳ ಸಾಲಿನ ಇಕ್ಕಡೆಯ ಅಂದವಾದ ತಡೆಪಟ್ಟಿಗಳು: ಪುಸ್ತಕಗಳ ಪಕ್ಕನಿಲುವು. **B.-keeper** ವ್ಯಾಪಾರ ಸ್ಥರ, ಅಥವಾ ಕಚೇರಿ ಮೊ. ಗಳ, ಲೆಕ್ಕಪತ್ರಗಳನ್ನಿಡುವವನು: ಲೆಕ್ಕದ ಗುಮಾಸ್ತೆ. **B.-keeping** ಜಮಾಖರ್ಚು ಲೆಕ್ಕ ಇಡುವುದು; ಲೆಕ್ಕವಿಡುವ ವಿದ್ಯೆ. **B.-learned** ಪುಸ್ತಕ ಪಾಂಡಿತ್ಯದ. **B.-learning, B.-lore** (ನಾ., ಜೀವನದ ಅನುಭವವಿಲ್ಲದ) ಪುಸ್ತಕ ಪಾಂಡಿತ್ಯ. **Boóklet** ಸಣ್ಣ ಪುಸ್ತಕ; ಕಿರು ಹೊತ್ತಗೆ. **B.-maker** ಪುಸ್ತಕ ಗಳನ್ನು ರಚಿಸುವವನು (ಮು., ಆದಾಯದ ದೃಷ್ಟಿಯಿಂದ). ಜೂಜಾಟ ಗಳ ವ್ಯಾಪಾರದವನು. **B.-making.** **Boókman** ಸಾಹಿತಿ; ವಿದ್ವಾಂಸ; ಪಂಡಿತ. **B.-mark(er)** ಪುಸ್ತಕದಲ್ಲಿ ಓದುವ ಸ್ಥಳ ನಿರ್ದೇಶಕ್ಕಾಗಿ ಇಡುವ ಗುರುತು: ಓದುಗುರುತು. **B.-muslin** ಪುಸ್ತಕದ ಆಕಾರದಲ್ಲಿ ಮಡಿಸಿ ಮಾರುವ ಬಹಳ ನಯವಾದ 'ಮಸ್ಲಿನ್' ಬಟ್ಟೆ. **B.-plate** ಪುಸ್ತಕದಲ್ಲಿ ಅಂಟಿಸುವುದಕ್ಕಾಗಿ ಮಾಡುವ ಪುಸ್ತಕದ ಒಡೆಯನ ಹೆಸರು, ಲಾಂಛನ, ಮೊ.ವಿರುವ ಚೀಟಿ. **B.-rest** ಪುಸ್ತಕದ ನಿಲವು. **Boókseller** ಪುಸ್ತಕ ವ್ಯಾಪಾರಿ. **B.-slide** ಪುಸ್ತಕಗಳ ಹಿಗ್ಗುನಿಲವು. **Boókstall** ಪುಸ್ತಕದ ಅಂಗಡಿ. **B.-value** ಒಂದು ವ್ಯಾಪಾರದ ಕೋಠಿಯ ಲೆಕ್ಕಪುಸ್ತಕಗಳಲ್ಲಿ ಬರೆ ದಿರುವ ಒಂದು ಸರಕಿನ ಬೆಲೆ: ಪುಸ್ತಕ ಬೆಲೆ (ವ್ಯಾಪಾರದ ಬೆಲೆಯಲ್ಲ). **B.-work** ಪುಸ್ತಕ ಪಾಠ; ಗ್ರಂಥ ಪಾಠ (ವಿಷಯಜ್ಞಾನದಿಂದ ಲೆಕ್ಕಗ ಳನ್ನು ಮಾಡುವುದು, ವಸ್ತುಪರೀಕ್ಷೆ ಮಾಡುವುದು — ಇವು ಅಲ್ಲ). **Boókworm** ಪುಸ್ತಕ ಕ್ರಿಮಿ; ಪುಸ್ತಕ ಪಿಶಾಚಿ; ಓದುಕುಳಿ; ಗ್ರಂಥ ವ್ಯಸನಿ.

Book (ಕ್ರಿ. ಸಕ.) ಪುಸ್ತಕದಲ್ಲಿ ಅಥವಾ ಪಟ್ಟಿಯಲ್ಲಿ ಬರೆ, ಸೇರಿಸು. ಮೊದಲೇ ಹಣಕೊಟ್ಟು (ಸ್ಥಳ, ಮೊ.ನ್ನು) ಗೊತ್ತು ಮಾಡಿಕೊ. (ಅತಿಥಿ, ಅನುಮೋದಕ, ಮೊ. ನ್ನು) ಸಂದರ್ಭಕ್ಕೆ ಒದಗು ವಂತೆ ಗೊತ್ತುಮಾಡಿಕೊ. ರೈಲುಪ್ರಯಾಣದ ಚೀಟಿಯನ್ನು (ಟಿಕೆ ಟ್ಟನ್ನು) ಕೊಡು, ಕೊಂಡುಕೊ. ಸ್ಥಳಾಂತರಕ್ಕೆ ಕಳುಹಿಸಬೇಕಾದ ಸರಕುಗಳ ವಿಳಾಸವನ್ನು ಕೊಡು, ಬರೆದುಕೊ. I am booked ಸಿಕ್ಕಿಬಿದ್ದೆ; ತಪ್ಪಿಸಿಕೊಳ್ಳಲಾರೆ. Booking-clerk, -office ಟಿಕೆಟ್ಟು ಗಳನ್ನು ಮಾರುವ ಗುಮಾಸ್ತೆ, ಕಚೇರಿ.

Boom[1] ಬೂಮ್ (ನಾ.) ಹಡಗಿನ ಪಟದ ತಳಕ್ಕೆ ಸೇರಿಸಿ, ಅದನ್ನು ಚಾಚುವುದಕ್ಕಾಗಿ ಉಪಯೋಗಿಸುವ ಉದ್ದವಾದ ಮರದ ದಿಮ್ಮಿ: ಪಟದ ದಿಮ್ಮಿ. (ನದಿಗೆ ಅಡ್ಡವಾಗಿ ಅಥವಾ ಬಂದರಿನ ಮುಖದಲ್ಲಿ ಹಾಕಿರುವ) ತೇಲುದಿಮ್ಮಿಗಳ ತಡೆಗಟ್ಟು.

Boom[2] ಬೂಮ್ (ಕ್ರಿ. ಅಕ., ನಾ.) ಮೊಳಗು; ಝೇಂಕಾರ (ಮಾಡು). 'ಬಿಟರ್ನ್' ಎಂಬ ಹಕ್ಕಿಯ 'ಬೂಮ್' ಎಂಬ ಧ್ವನಿ (ಮಾಡು)

Boom[3] ಬೂಮ್ (ಕ್ರಿ., ನಾ.) (ಮು., ವ್ಯಾಪಾರೋದ್ಯಮಗಳು, ಬೆಲೆ ಗಳು, ಮೊ.ಗಳ) ಥಟ್ಟನೆಯ ಏರಿಕೆ, ಉಚ್ಛ್ರಾಯ, ಉತ್ಕರ್ಷ. (ವ್ಯಾಪಾರೋದ್ಯಮಗಳು, ಬೆಲೆ, ಮೊ. ಗಳು) ಏರು, ಏರಿಸು. (ಒಂದು ನವೀನ ರಚನೆಗಾಗಲಿ ಉದ್ಯಮಕ್ಕಾಗಲಿ) ಹೆಚ್ಚಾಗಿ ಪ್ರಕಟ ಪಡಿಸುವುದು, ಮೊ. ಗಳಿಂದ ಥಟ್ಟನೆ ಉಂಟಾದ ಜನಮೆಚ್ಚುಗೆ (ಯನ್ನು ಪಡೆ). ಮೊಳಗಿ ಮೇಲೆತ್ತು.

Boómerang ಬೂಮರ್‍ಯಾಂಗ್ (ನಾ.) ಗಟ್ಟಿಮರದಿಂದ ಬಿಲ್ಲಿನಂತೆ ಬಾಗಿರುವಹಾಗೆ ಮಾಡಿದ, (ಎಸೆದವನ ಬಳಿಗೆ ಹಿಂದಿರುಗಿ ಬರುವ), ಆಸ್ಟ್ರೇಲಿಯದ ಒಂದು ಎಸೆಯುವ ಆಯುಧ: ಬೂಮರಾಂಗ್. (ರೂಪ.) ತನ್ನಮೇಲೆಯೇ ತಿರುಗಿಬೀಳುವ ವಾದ ಅಥವಾ ಸಲಹೆ.

Boon ಬೂನ್ (ನಾ., ಗು.) ವರ; ಪ್ರಸಾದ; ಅನುಗ್ರಹ; ಬೇಡಿಕೆ; ಕೊಡುಗೆ; ದಾನ; ಹಿತ; ಅನುಕೂಲ್ಯ. (ಗು.) ಉದಾರ; ಪ್ರಸನ್ನ; ಹಿತಕರ (ಕಾವ್ಯ: ಪ್ರಕೃತಿ, ವಾಯು, ಜೀವನ, ಮೊ. ಗಳ ವಿಷಯದಲ್ಲಿ). ಸರಸಿಯಾದ; ಉಲ್ಲಾಸಿಯಾದ (B. companion ಇಷ್ಟಮಿತ್ರ; ಕ್ರೀಡಾಮಿತ್ರ; ಗೆಣೆಯ)

Boor ಬೂಅರ್ (ನಾ.) ಹಳ್ಳಿ ಮುಕ್ಕ; ಗಾವಿಲ (ಗ್ರಾಂ.); ಒರಟ; ನಯವಿಲ್ಲದವನು; ಅಸಂಸ್ಕಾರಿ; ಗಗ್ಗ. **Boórish** (ಗು.); **Boórishly** (ಕ್ರಿ. ವಿ.); **Boórishness** (ನಾ.)

Boose, Bouse = **Booze.**

Boost (ಕ್ರಿ. ಸಕ., ನಾ.) (ಅಸಂ.) ಮುಂದಕ್ಕೆ ತಳ್ಳು; ಮೇಲೆತ್ತು; ಎತ್ತಿಹಿಡಿ. (ವಿದ್ಯುತ್ಪ್ರವಾಹದಲ್ಲಿ, ವಿದ್ಯುತ್ಕೋಶದಲ್ಲಿ) ವಿದ್ಯುದ್ಬಲವನ್ನು ಏರಿಸು. (ಮನುಷ್ಯ, ರೀತಿ, ಸರಕು, ಮೊ. ನ್ನು) ಅತಿಶಯವಾಗಿ ಹೊಗಳು. (ನಾ.) (ಮಾಲಿನ ಪ್ರಾಶಸ್ತ್ಯವನ್ನು ಹೆಚ್ಚುಮಾಡಿ ತೋರಿಸುವ) ಪ್ರಕಟನೆ; ಇದರಿಂದಾದ ಬೆಲೆಯೇರಿಕೆ. **Boóster** (ನಾ.) ವಿದ್ಯುದ್ಬಲ ವರ್ಧಕ.

Boot[1] ಬೂಟ್ (ನಾ.) ಹರಡಿನಮೇಲಕ್ಕೆ ಬಂದು ಪಾದವನ್ನೆಲ್ಲ ಮುಚ್ಚುವ, ಪೂರ್ತಿಯಾಗಿ ಅಥವಾ ಬಹುಭಾಗ ಚರ್ಮದಿಂದ ಮಾಡಿದ, ಪಾದ ರಕ್ಷೆ: ಮೋಜ; ಬೂಟು. (ಚರಿತ್ರೆ) ಚಿತ್ರಹಿಂಸೆ ಪಡಿಸುವ ಒಂದು ಸಲಕರಣೆ. ಬಂಡಿಯಲ್ಲಿ ಬಂಡಿಹೊಡೆಯುವವನ ಅಥವಾ ಬಂಡಿ ಕಾವಲಿನವನ ಪೀಠದ ತಳಗಡೆ ಮಾಡಿರುವ ಸಾಮಾನಿನ ಪೆಟ್ಟಿಗೆ. B. and saddle ಸೈನ್ಯದ ಸವಾರರಿಗೆ ಕುದುರೆಹತ್ತಬೇಕೆಂಬ ಸಂಜ್ಞೆ. Die in one's boots ಚಾಕರಿ ಮಾಡುತ್ತಿರುವಾಗಲೇ ಸಾಯಿ (ವಿಶ್ರಾಂತಿಯಲ್ಲಲ್ಲ). Get the b. (ಅಸಂ.) ಕೆಲಸದಿಂದ ತಳ್ಳಿಸಿಕೊ. Give the b. (ಅಸಂ.) ಕೆಲಸದಿಂದ ತೆಗೆದುಹಾಕು, ತಳ್ಳಿಬಿಡು. Heart in one's boots ಜೀವವನ್ನು ಎಡಗೈಯಲ್ಲಿ ಹಿಡಿದುಕೊಂಡು; ಅತಿ ಭೀತಿಯಿಂದ. Like old boots (ಅಸಂ.) ಅತಿಶಯವಾಗಿ; ವಿಪರೀತ ವಾಗಿ; ಬಹು ಜೋರಾಗಿ. Over shoes over boots ಆದದ್ದಾಗ ಲೆಂದು ಹೆಚ್ಚಾಗಿಯೇ ನುಗ್ಗು. The b. is on the other leg ವಿದ್ಯ ಮಾನ ಬೇರೆಯಾಗಿದೆ. ನಿಜಾಂಶ ಅಥವಾ ಜವಾಬ್ದಾರಿಯು ಪ್ರತಿಪಕ್ಷದಲ್ಲದೆ. **Boótjack** ಕಾಲಿನಿಂದ ಮೋಜಾಗಳನ್ನು ಎಳೆದುಹಾಕುವ ಉಪ ಕರಣ. **Boótlace** ಮೋಜಾಗಳನ್ನು ಕಾಲಿಗೆ ತೊಟ್ಟಬಳಿಕ ಅವನ್ನು ಬಿಗಿಯುವ ದಾರ; ಮೋಜಾದ ದಾರ. **Boótlegger** (ಅಮೆ. ನಂ.) ತೆರಿಗೆ ಕೊಡದೆ ಕಳ್ಳತನದಿಂದ ಮದ್ಯವನ್ನು ಸಾಗಿಸುವವನು. **Boótlicker** ಮರ್ಯಾದೆ ಬಿಟ್ಟು ಅನುಸರಣೆ ಮಾಡುವವನು; ಹೆಚ್ಚಾಗಿ ಮುಖಸ್ತುತಿ ಮಾಡುವವನು. **Boótmaker** ಮೋಜಾ ಹೊಲಿಯು ವವನು. **B.-tree** ಮೋಜಾಕ್ಕೆ ಆಕಾರಕೊಡುವುದಕ್ಕಾಗಿ ಉಪ ಯೋಗಿಸುವ ಅಚ್ಚು: ಮೋಜಾ ಅಚ್ಚು. **Boóted** (ಗು.); **Boots** (ನಾ.) ಹೋಟಲಿನಲ್ಲಿ ಮೋಜಾಗಳನ್ನು ಒರಸಿ ಚೊಕ್ಕಟಮಾಡುವುದು, ಸಾಮಾನು ಮೊ. ನ್ನು ಹೊತ್ತುಕೊಂಡುಬರುವುದು — ಇವೇ ಮೊ. ಕೆಲಸಗಳನ್ನು ಮಾಡುವ ಹೋಟಲ ಆಳು.

Boot (ಕ್ರಿ. ಸಕ.) (ಅಸಂ.) ಒದ್ದೋಡಿಸು. ಮೋಜಾ ತೊಡು, ತೊಡಿಸು. (ಸೈನ್ಯದ ಅಸಂ.) ಮೋಜಾದಿಂದ (ಈಗ, ನಡುಕಟ್ಟಿನಿಂದ) ಹೊಡೆ. ಯಾತನೆ ಕೊಡುವ ಒಂದು ಬಗೆಯ ಕಾಲುಕೋಳ ಹಾಕು.

Boot[2] ಬೂಟ್ (ನಾ., ಕ್ರಿ. ಸಕ.) ಲಾಭ (To b. ಕೂಡ; ಜೊತೆಗೆ; ಲಾಭ ವಾಗಿ; ಹೆಚ್ಚಾಗಿ). (ಕ್ರಿ.) ಪ್ರಯೋಜನವಾಗು; ಕೆಲಸಕ್ಕೆ ಒದಗು (What boots it to me? ಅದರಿಂದ ನನಗೇನು ಪ್ರಯೋಜನ?). **Boótless** (ಗು.) ಉಪಯೋಗವಾಗದ; ಕೆಲಸಕ್ಕೆ ಬಾರದ.

Booteé ಬೂಟೀ (ನಾ.) ಹೆಂಗಸಿನ ಒಂದು ತೆರದ ಮೋಜ; ಎಳೆಮಗು ವಿನ ಉಣ್ಣೆಯ ಮೋಜ.

Boótes ಬೊಓಟೀಸ್ (ನಾ.) (ಖ. ವಿ.) ಸ್ವಾತೀನಕ್ಷತ್ರ (ಸಪ್ತರ್ಷಿ ನಕ್ಷತ್ರಮಂಡಲದ ಪುಚ್ಛದಲ್ಲಿರುವ ಪುಂಜ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Booth ಬೂಥ್ (ನಾ.) ಚಪ್ಪರ ; ಗುಡಾರ ; ವ್ಯಾಪಾರದ ಕಟ್ಟೆಯಲ್ಲಿ ಥಾವಣಿಯಿರುವ ಅಂಗಡಿ ; ಸಂತೆಯಲ್ಲಿ ಗುಡಾರ, ಮೊ. ; ಮಳಿಗೆ. Polling-b. ಸಾರ್ವಜನಿಕ ಸಂಸ್ಥೆಗಳು, ಮೊ. ಕ್ಕೆ ಸದಸ್ಯರನ್ನು ಚುನಾಯಿಸಲು ಗೊತ್ತುಮಾಡಿರುವ ಸ್ಥಳ ; ಚುನಾವಣೆಯ ಜಾಗ.

Bóoty ಬೂಟಿ (ನಾ.) (ಯುದ್ಧ, ಕಳ್ಳತನ, ಮೊ. ಗಳಲ್ಲಿ ಒಟ್ಟಿಗೆ ಪಡೆದು, ತರುವಾಯ ಹಂಚಿಕೊಳ್ಳುವ) ಕೊಳ್ಳೆ, ಲೂಟಿ, ಸೂರೆ. ಆದಾಯ ; ಲಾಭ ; ಫಲ. Play b. ತನ್ನ ಪಾಮಿಲ್ದಾರನಿಗಾಗಿ ಇತರರಿಗೆ ಆಸೆ ತೋರಿಸಿ ಅವರನ್ನು ಮೋಸಗೊಳಿಸು ; ಒಳಸಂಚು ಮಾಡು.

Booze ಬೂಜ಼್ (ಕ್ರಿ. ಅಕ., ನಾ.) ಮಿತಿಮೀರಿ ಕುಡಿ ; ಕುಡಿಯುತ್ತಲೇ ಹೋಗು. (ನಾ.) ಕುಡಿತ ; ಕುಡಿತದ ಪೈಪೋಟಿ. **Bóozy** (ಗು.) ಕುಡಿತದ ಚಟವುಳ್ಳ ; ಪಾನಾಸಕ್ತ ; ಕುಡಿದು ಮತ್ತೇರಿದ.

Bo-peép ಬೋ ಪೀಪ್ (ನಾ.) ಕಣ್ಣುಮುಚ್ಚಾಲೆಯ ಆಟ. Play b. (ರಾಜನೀತಿಜ್ಞರು, ವಾದ ಮಾಡುವವರು, ಮೊ.) ಸಿಕ್ಕಿಕೊಳ್ಳದಂತೆ, ಅಥವಾ ಹೀಗೆಂದು ಸ್ಪಷ್ಟವಾಗಿ ಅಂತರ್ಯ ಗೊತ್ತಾಗದಂತೆ, ವರ್ತಿಸು, ತೋರು. ಕಣ್ಣುಮುಚ್ಚಾಲೆಯಾಡು (ರೂಪ.)

Bórax ಬೋರ್ಯಾಕ್ಸ್ (ನಾ.) ಬಿಳಿಗಾರ (ಖನಿಜ ಲವಣ) ; ಟಂಕಣ. **Borácic** ಬೊರ್ಯಾಸಿಕ್ (ಗು.) ಬಿಳಿಗಾರದ.

Bordeaúx ಬಾರ್ಡೋ (ನಾ.) ದ. ಫ್ರಾನ್ಸಿನಲ್ಲಿರುವ ಒಂದು ಪಟ್ಟಣ. ಆ ಪ್ರಾಂತದಲ್ಲಿ ತಯಾರಾಗುವ ಒಂದು ಬಗೆಯ ಮದ್ಯ : ಕ್ಲ್ಯಾರೆಟ್ ಮದ್ಯ. B. mixture ಮೈಲುತುತ್ತದ ದ್ರಾವಣವನ್ನೂ ಸುಣ್ಣದ ನೀರನ್ನೂ ಬೆರಸಿ ಮಾಡಿದ ಸಸ್ಯಕೀಟ ನಾಶಕ ದ್ರವ : ಬಾರ್ಡೋ ದ್ರಾವಣ.

Bórder ಬಾರ್ಡರ್ (ನಾ., ಗು.) ಅಂಚು ; ಅರುಗು ; ಸೆರಗು ; ಕರೆ ; ಮೇರೆ ; ಗಡಿ ; ಸರಹದ್ದು. (ಬ. ವ.) ಗಡಿನಾಡು (within the borders, out of borders). [The B. ಇಂಗ್ಲೆಂಡಿಗೂ ಸ್ಕಾಟ್ಲೆಂಡಿಗೂ ಮಧ್ಯೆ ಇರುವ ಗಡಿನಾಡು ಮತ್ತು ಅಕ್ಕ ಪಕ್ಕದ ಪ್ರಾಂತಗಳು. (ಅಮೆ. ಸಂ.) ನಾಗರಿಕತೆಯ ಎಲ್ಲೆ]. **Bórderland** ಗಡಿನಾಡು. (ರೂಪ.) ಮಧ್ಯಮ ಸ್ಥಿತಿ (ಉದಾ., ನಿದ್ದೆಗೂ ಎಚ್ಚರಕ್ಕೂ) ; ಸಂದಿಗ್ಧ ಸ್ಥಿತಿ ; ವಾದಾಸ್ಪದ ಸ್ಥಿತಿ.

Bórder (ಕ್ರಿ.) ಅಂಚು ಕಟ್ಟು ; ಕರೆ ಕಟ್ಟು ; ಅಂಚಿನಲ್ಲಿರು. Border on, upon ಹೆಚ್ಚಾಗಿ ಹೋಲು. **Bórderer** (ನಾ.) ಗಡಿ (ನಾಡಿನ) ನಿವಾಸಿ (ಮು., ಇಂಗ್ಲೆಂಡು ಮತ್ತು ಸ್ಕಾಟ್ಲೆಂಡು ಗಡಿನಾಡಿನ). ನೆರೆಯವನು. **Bórdering** (ನಾ.)

Bore[1] ಬೋರ್ (ಕ್ರಿ., ನಾ.) ಕೊರೆ ; ಕಂಡಿ ಮಾಡು ; ತೂತು ಮಾಡು ; ವೆಜ್ಜ ಮಾಡು ; ಕೊಳವಿ ಕೊರೆ (ಸಾ., ಬೈರಿಗೆಯಿಂದ) ; ಬೈರಿಗೆ ಹಿಡಿ ; ಸುರಂಗ ಕೊರೆ ; ಸುರಂಗದ ಹಾದಿ ಮಾಡು. (ಕುದುರೆಯ ವಿಷಯದಲ್ಲಿ) ತಲೆ ಚಾಚು. (ಜೂಜಿನಲ್ಲಿ) (ಮತ್ತೊಬ್ಬನನ್ನು, ಮತ್ತೊಂದನ್ನು) ಹಾದಿಯಿಂದ ತಳ್ಳು. ಬಂದೂಕಿನ ಕೋವಿಯ ನಾಳ ; ನಾಳವ್ಯಾಸ. ನೀರು, ಮೊ. ವನ್ನು ಕಂಡುಹಿಡಿಯುವುದಕ್ಕಾಗಿ ನೆಲದಲ್ಲಿ ಕೊರೆದ ಕೊಳವಿಗಂಡಿ. Bore-well ಕೊರೆದ ಬಾವಿ. **Bórer** (ನಾ.) ಕಂಡಿಕೊರೆಯುವ ಮನುಷ್ಯ, ವಸ್ತು, ಆಯುಧ (ಬೈರಿಗೆ), ಹುಳು. **Bóring** (ನಾ.)

Bore[2] ಬೋರ್ (ನಾ., ಕ್ರಿ. ಸಕ.) ಅಸಹ್ಯ ; ಬೇಸರ ; ಬೇಸರ ಹಿಡಿಸುವವನು ; ತಲೆ ಚಿಟ್ಟುಗಟ್ಟಿಸುವವನು ; ಹರಟೆಯ ಮಲ್ಲ. (ಕ್ರಿ.) ನೀರಸವಾದ ಹರಟೆಯಿಂದ ಬೇಸರಹಿಡಿಸು. **Bóredom** (ನಾ.) ಬೇಸರ.

Bore[3] ಬೋರ್ (ನಾ.) ಕೆಲವು ನದೀಮುಖಗಳಲ್ಲಿ ರಭಸದಿಂದ ನುಗ್ಗಿ ಮುಂದುವರಿಯುವ ಸಮುದ್ರದ ಏರುತೆರೆ.

Bore[4] ಬೋರ್. **Bear** ಧಾತುವಿನ ಭೂತ ರೂಪ.

Bóreal ಬೋರಿಯಲ್ (ಗು.) ಉತ್ತರ ದಿಕ್ಕಿನ ; ಬಡಗಣ ; ಬಡಗಣ ಗಾಳಿಯ ; ಉತ್ತರ ಮಾರುತದ. **Bóreas** — ಆ್ಯಸ್ (ನಾ.) ಉತ್ತರ ಮಾರುತ(ದ ಅಧಿದೇವತೆ)

Bóric. **Boron**ನ್ನುನೋಡಿ.

Born ಬಾರ್ನ್ (Bear ಧಾತುವಿನ ಭೂ. ಕೃ. ; ಗು.) ಹುಟ್ಟಿದ ; ಆದ ; ಉಂಟಾದ ; ಸಂಭವಿಸಿದ. B. again ಮತ್ತೆ ಹುಟ್ಟಿದ ; ಪುನರ್ಜನ್ಮವೆತ್ತಿದ. B. idiot ಶುದ್ಧ ದಡ್ಡ ; ಹುಟ್ಟು ದಡ್ಡ. B. orator, poet ಹುಟ್ಟು ವಾಗ್ಮಿ, ಹುಟ್ಟು ಕವಿ. B. with silver spoon in mouth ಆಗರ್ಭ ಶ್ರೀಮಂತನಾದ. B. under a lucky star ಒಳ್ಳೆಯ ನಕ್ಷತ್ರದಲ್ಲಿ ಹುಟ್ಟಿದ ; ಅದೃಷ್ಟಶಾಲಿಯಾದ. In all my b. days ನನ್ನ ಜೀವಮಾನದಲ್ಲೆಲ್ಲ.

Borne ಬೋರ್ನ್. **Bear** ಧಾತುವಿನ ಭೂ. ಕೃ.

Borné (F) ಬಾರ್ನೇ (ಗು.) ಸಂಕುಚಿತ ; ಸಂಕುಚಿತ ಅಭಿಪ್ರಾಯವುಳ್ಳ ; ಸಂಕುಚಿತ ಮನಸ್ಸಿನ.

Bóron ಬೋರಾನ್ (ನಾ.) ಒಂದು ಅಲೋಹ ಮೂಲಧಾತು : ಬೋರಾನ್. **Bóric** (ಗು.) ಬೋರಾನಿನ. Boric acid ಬೋರಿಕಾಮ್ಲ (ಜೈವಿಕ ವಸ್ತುಗಳನ್ನು ಕೊಳೆಯದಂತೆ ಇಟ್ಟರಲು ಉಪಯೋಗಿಸುವ ಪದಾರ್ಥ)

Bórough ಬರೋ(ನ) (ನಾ.) ಪೌರಸಂಸ್ಥೆಯುಳ್ಳ ಊರು. ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟಿಗೆ ಸದಸ್ಯನ(ರ)ನ್ನು ಕಳುಹಿಸುವ ಅಧಿಕಾರವುಳ್ಳ ಊರು. (ಚರಿತ್ರೆ) Own a b., Buy a b. ಪಾರ್ಲಿಮೆಂಟಿನ ಚುನಾವಣೆಯ ಸೂತ್ರಗಳನ್ನು (ಆ ಪ್ರಾಂತದಲ್ಲಿ) ಕೈವಶ ಮಾಡಿಕೊ. Close b., Pocket b. ಮೇಲೆ ಹೇಳಿದ ರೀತಿಯಲ್ಲಿ ವಶವಾದ ಊರು. Rotten b. ತಕ್ಕಷ್ಟು ಚುನಾವಣೆದಾರರಿಲ್ಲದ ಊರು. B.-English ಇಂಗ್ಲೆಂಡಿನ ಕೆಲವು ಪ್ರಾಂತಗಳಲ್ಲಿ ತಂದೆಯ ಸ್ಥಿರಸ್ವತ್ತಿಗೆ ಕಡೆಯ ಮಗನೇ ಹಕ್ಕುದಾರನೆಂದೆಣಿಸುವ ಪದ್ಧತಿ : ಕನಿಷ್ಠಾಧಿಕಾರ.

Bórrow ಬಾರೋ (ಕ್ರಿ.) ಸಾಲ ತೆಗೆ ; ಕಡ ಮಾಡು ; ಎರವು ತೆಗೆದುಕೊ. (ತನ್ನದಲ್ಲದೆ ಮತ್ತೊಬ್ಬನದನ್ನು) ಉಪಯೋಗ ಮಾಡಿಕೊ ; ಮತ್ತೊಬ್ಬನಿಂದ ಹೊಂದು ; ಹೊರಗಿನಿಂದ ತಂದುಕೊ. (ಗಾಲ್ಫ್ ಆಟದಲ್ಲಿ) ಚೆಂಡು ಹಿಂದಕ್ಕೆ ಉರುಳಿಬರುವಂತೆ ಏರುದಿಣ್ಣೆಯಮೇಲಕ್ಕೆ ಹೊಡೆ. B.-pit (ರಸ್ತೆದುರಸ್ತು, ಕಟ್ಟೆಕಟ್ಟುವುದು, ಮೊ. ಕೆಲಸಗಳಿಗಾಗಿ) ಮಣ್ಣು ತೆಗೆದುಕೊಂಡ ಗುಂಡಿ ; ಮಟ್ಟದ ಗುಂಡಿ. Borrowed light ಒಳಗಿನ ಕಿಟಕಿ. Borrowed plumes ಎರವಲು ಒಡವೆ (ರೂಪ. ಸಹ). **Bórrower** (ನಾ.) ; **Bórrowing** (ನಾ.)

Bórstal ಬಾರ್‌ಸ್ಟಲ್ (ನಾ.) ಇಂಗ್ಲೆಂಡಿನ ಕೆಂಟ್ ಜಿಲ್ಲೆಯಲ್ಲಿಯ ಒಂದು ಪಟ್ಟಣ (ಅಲ್ಲಿ ಯುವಕ ಅಪರಾಧಿಗಳನ್ನು ಸನ್ಮಾರ್ಗಕ್ಕೆ ತರಲು ಒಂದು ಶಿಕ್ಷಣಪದ್ಧತಿಯನ್ನು ಮೊದಲು ಸ್ಥಾಪನೆ ಮಾಡಿದರು). B. system ತರುಣ ಅಪರಾಧಿಗಳನ್ನು ಬಂಧನದಲ್ಲಿಟ್ಟು ಅವರಿಗೆ ತಕ್ಕ ಶಿಕ್ಷಣ ಕೊಡುವ ಪದ್ಧತಿ : ಬಾರ್‌ಸ್ಟಲ್ ಪದ್ಧತಿ. B. Association ಬಾರ್‌ಸ್ಟಲ್ ಅಪರಾಧಿಗಳಿಗೆ, ಅವರು ಬಿಡುಗಡೆಯಾದನಂತರ, ಸಹಾಯಮಾಡುವುದಕ್ಕಾಗಿ ಏರ್ಪಟ್ಟಿರುವ ಸಂಸ್ಥೆ. B. Institution ಬಾರ್‌ಸ್ಟಲ್ ಶಿಕ್ಷಣಶಾಲೆ.

Bort ಬಾರ್ಟ್ (ನಾ.) ಒರಟು ವಜ್ರಗಳು. ಒಳ್ಳೆಯ ವಜ್ರಗಳನ್ನು ಸಾಣೆ ಹಿಡಿಯುವಾಗ ಬರುವ ವಜ್ರದ ರವೆಗಳು (ಇವು ಸಾಣೆಹಿಡಿಯುವುದಕ್ಕೆ ಉಪಯೋಗ)

Bos, Boss ಬಾಸ್ (ನಾ., ಕ್ರಿ.) (ಅಸಂ.) ತಪ್ಪು ಗುರಿ ; ತಪ್ಪು ಊಹೆ ; ಗುರಿ ತಪ್ಪುವುದು. ತೊಡಕು ; ಗೋಜು. (ಕ್ರಿ.) ಗುರಿ ತಪ್ಪು. ಗೋಜು ಮಾಡು ; ತೊಡಕು ಮಾಡು.

Bóscage, -kage ಬಾಸ್ಕಿಜ್ (ನಾ.) ಮರ ಗಿಡಗಳ ಗುಂಪು ; ಪೊದೆ.

Bosh ಬಾಷ್ (ನಾ., ಭಾವ. ಅವ್ಯ., ಕ್ರಿ. ಸಕ.) (ಅಸಂ.) ಪೊಳ್ಳು ಹರಟೆ ; ಬುರುಡೆ ; ಬಗುಳೆ ; ಅವಿವೇಕದ ಮಾತು ; ಅವಿವೇಕ. (ಕ್ರಿ.) ಗೇಲಿ ಮಾಡು ; ಗೋಳುಗುಟ್ಟಿಸು.

Bosk, Bósket, -quet ಬಾಸ್ಕ್, ಬಾಸ್ಕೆಟ್ (ನಾ.) ಪೊದೆ ; ಬೆಳೆಸಿದ ಮರಗಳ ತೋಪು. **Bósky** (ಗು.) ಮರಗಳಿಂದ ತುಂಬಿದ ; ಪೊದೆಗಳಿಂದ ಕೂಡಿದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bósom ಬೂಸಂ (ನಾ.) ಎದೆ ; ವಕ್ಷಸ್ಥಲ. ತೆಕ್ಕೆ ; ತಬ್ಬು. ಕವಚದ ಎದೆಯ ಭಾಗ. ಎದೆಗೂ ಎದೆಮುಚ್ಚುವ ಕವಚಕ್ಕೂ ಮಧ್ಯೇ ಇರುವ ಸ್ಥಳ (ಜೇಬಿನಂತೆ ಭಾವಿಸಬಹುದಾದುದು) ; ಮಡಿಲು (Put in one's b. ಜೇಬಿನಲ್ಲಿ, ಮಡಿಲನಲ್ಲಿ, ಇಟ್ಟುಕೊ). (ಸರೋವರ, ನೆಲ, ಮೊ. ಗಳ) ಮೇಲ್ಮೈ, ವಕ್ಷಸ್ಥಲ. ಮಧ್ಯಭಾಗ (In the b. of one's family ಕುಟುಂಬದೊಳಗೆ). ಹೃದಯ ; ಅಂತರ್ಯ (ಆಲೋಚನೆಗಳು, ಬಯಕೆಗಳು, ಮೊ. Come home to one's b. ಮನದಟ್ಟಾಗು. B.-friend ಪ್ರಾಣಸ್ನೇಹಿತ ; ಆಪ್ತಮಿತ್ರ)

Boss[1] ಬಾಸ್ (ನಾ.) ಗುಬುಟು ; ಉಬ್ಬು ; ಗುರಾಣಿಯ ಮಧ್ಯೆ ಅಥವಾ ಕೆತ್ತನೆಯ ಕೆಲಸದ ಮಧ್ಯೆ ಇರುವ, ಲೋಹದ ಗುಂಡು ಗುಬುಟು. **Bossed** ಬಾಸ್ಟ್ (ಗು.) ; **Bóssy** (ಗು.)

Boss[2] ಬಾಸ್ (ನಾ., ಕ್ರಿ. ಸಕ.) (ಅಸಂ.) ಒಡೆಯ ; ದಣಿ ; ಯಜಮಾನ ; ಮೇಲಧಿಕಾರಿ. (ಅಮೆ. ಸಂ.) ಒಂದು ರಾಜಕೀಯ ಸಂಘದ ಆಡಳಿತಗಾರ. ಅಗ್ರಗಣ್ಯ (ಮನುಷ್ಯ, ವಸ್ತು). (ಕ್ರಿ.) ಯಜಮಾನಿಕೆ ಮಾಡು ; ಯಾಜಮಾನ್ಯ ಮಾಡು (B. the show ಆಡಳಿತ ನಡಸು)

Bóswell ಬಾಸ್ವೆಲ್ (ನಾ.) 'ಡಾಕ್ಟರ್ ಜಾನ್ಸನ್' ಎಂಬ ಪ್ರಸಿದ್ಧ ಇಂಗ್ಲಿಷ್ ವಿದ್ವಾಂಸನ ಜೀವನಚರಿತ್ರೆಯನ್ನು ಬರೆದವನ ಹೆಸರು. 'ಬಾಸ್ವೆಲ್ಲಿ'ನಂಥ ಜೀವನ ಚರಿತ್ರಲೇಖಕ. **Boswéllian** (ಗು.) ; **Bóswellism** (ನಾ.) ; **Bóswellize** (ಕ್ರಿ. ಅಕ.)

Bot, Bott ಬಾಟ್ (ನಾ.) ಒಂದು ಜಾತಿಯ ಪರೋಪಜೀವಿ ಹುಳು. The botts ಇಂಥ ಹುಳುಗಳಿಂದುಂಟಾದ ಕುದುರೆಯ ರೋಗ.

Bótany ಬಾಟನಿ (ನಾ.) ಸಸ್ಯ ವಿಜ್ಞಾನ. **Botánical** ಬೊಟ್ಯಾನಿಕಲ್ (ಗು.) ; **Botánically** (ಕ್ರಿ. ವಿ.) ; **Bótanist** ಬಾಟನಿಸ್ಟ್ (ನಾ.) ಸಸ್ಯ ವೈಜ್ಞಾನಿಕ ; ಸಸ್ಯ ಶಾಸ್ತ್ರಜ್ಞ. **Bótanize** (ಕ್ರಿ. ಅಕ.) (ಮು., ಸಸ್ಯಗಳ ಬೆಳವಣಿಗೆಯನ್ನು ನಿರೀಕ್ಷಿಸುತ್ತ) ಸಸ್ಯ ಶಾಸ್ತ್ರಾಭ್ಯಾಸ ಮಾಡು.

Botch ಬಾಚ್ (ನಾ., ಕ್ರಿ.) ಒರಟು ತೇಪೆ (ಹಾಕು) ; ಕುಲಗೆಡಿಸು. ಕುಲಗೆಡಿಸಿದ, ಒಡ್ಡೊಡ್ಡಾಗಿ ಮಾಡಿದ, ಕೆಲಸ. **Bótcher** (ನಾ.)

Both ಬೋತ್ (ಗು., ಸ. ನಾ., ಕ್ರಿ. ವಿ.) ಎರಡೂ ; ಇಬ್ಬರೂ ; ಉಭಯ. She is both dead and buried ಅವಳು ಸತ್ತದ್ದೂ ಹೂಳಿದ್ದೂ ಎರಡೂ ಆಯಿತು (ಇಲ್ಲಿ, both ಎಂಬುದು ಕ್ರಿ. ವಿ.)

Bóther ಬಾದರ್ (ಕ್ರಿ., ನಾ.) ಕಾಡು ; ಪೀಡಿಸು ; ಗೋಳು ಹೊಯ್ದುಕೊ ; ತೊಂದರೆ ಕೊಡು, ಪಡು, ಪಟ್ಟುಕೊ ; ಕ್ಲೇಶಪಡು ; ಪೇಚಾಡು. ನಾಶವಾಗಿ ಹೋಗ ! (ನಾ.) ಕ್ಲೇಶ ; ತೊಂದರೆ ; ಕಾಟ ; ಗಲಾಟೆ ; ಗಡಿಬಿಡಿ. **Botherátion** (ನಾ., ಭಾವ. ಅವ್ಯ.) ಕ್ಲೇಶ, ಮೊ. ; ಹಾಳು ! ನಾಶ ! **Bóthersome** (ಗು.) ಕ್ಲೇಶ ಪಡಿಸುವ ; ತೊಂದರೆ ಕೊಡುವ.

Bóthy, -ie ಬಾಥಿ (ನಾ.) ಗುಡಿಸಿಲು ; ಕುಟೀರ ; ಕೂಲಿಗಳ ವಾಸಕ್ಕಾಗಿ ಕಟ್ಟಿದ ಒಕ್ಕೋಣೆಯ ಮನೆ.

Bó-tree ಬೋ ಟ್ರೀ (ನಾ.) ಬೋಧಿ ವೃಕ್ಷ (ಪೂರ್ಣ ಜ್ಞಾನ ಕೊಡುವ ಮರ : ಇದೊಂದು ಅರಳಿಯ ಮರ ; ಇದರ ಕೆಳಗೆ ಗೌತಮನು ತಪಸ್ಸುಮಾಡಿ ಬುದ್ಧನಾದನು)

Bóttle[1] ಬಾಟ್ಲ್ (ನಾ.) ಸೀಸೆ ; ಬುಡ್ಡಿ ; ಬುದ್ದಲಿ. ಸೀಸೆಯ ಅಳತೆ. The b. ಕುಡಿತ ; ಮದ್ಯಪಾನ. Over a b. ಕುಡಿಯುತ್ತಿರುವಾಗ ; ಮದ್ಯಪಾನ ಮಾಡುತ್ತಿರುವ ಸಂದರ್ಭದಲ್ಲಿ. Bring up on the b. ಬುಡ್ಡಿಯ ಹಾಲಿನಿಂದ ಕೂಸನ್ನು ಬೆಳೆಯಿಸು (ಎದೆಹಾಲಿನಿಂದಲ್ಲ). **B.-brush** ಸೀಸೆಗಳನ್ನು ಚೊಕ್ಕಟಮಾಡುವುದಕ್ಕಾಗಿ ಉಪಯೋಗಿಸುವ ಕುಂಚ : ಸೀಸೆ ಕುಂಚ. ಕೆಲವು ಜಾತಿಯ ಸಸ್ಯಗಳ ಹೆಸರು. **B.-glass** ದಟ್ಟ ಹಸಿರು ಬಣ್ಣದ ಒರಟುಗಾಜು. **B.-green** ದಟ್ಟ ಹಸಿರು. **B.-holder** ಕಾಳಗದ ಜಟ್ಟಿಯ ಪರಿಚರ. (ರೂಪ.) ಸಹಾಯಕ. **B.-neck** (ರಸ್ತೆಗಳಲ್ಲಿ) ಇಕ್ಕಟ್ಟು ದಾರಿ. **B.-nose** ಉಬ್ಬಿದ ಮೂಗು ; ಬುರುಡೆ ಮೂಗು. **B.-washer** (ದಣಿಯ ಕೆಲಸಗಳನ್ನೆಲ್ಲ ನಿರ್ವಹಿಸುವ) ಮುಖ್ಯ ಸೇವಕ.

Bóttle (ಕ್ರಿ. ಸಕ.) ಸೀಸೆಗಳಲ್ಲಿ ತುಂಬಿಡು. (ಅಸಂ.) ಅಪರಾಧಿ, ಕೆಲಸಕ್ಕೆ ಆಳು, ಮೊ. ನ್ನು ಹಿಡಿ. B.-up (ಕೋಪ ಮೊ. ನ್ನು) ಅಡಗಿಸಿಕೊ, ನುಂಗಿಕೊ.

Bóttle[2] ಬಾಟ್ಲ್ (ನಾ.) ಹುಲ್ಲಿನ ಹೊರೆ (Look for needle in a b. of hay ಹುಲ್ಲಿನ ಹೊರೆಯಲ್ಲಿ ಸೂಜಿಯನ್ನು ಹುಡುಕು ; ವೃಥಾ ಶ್ರಮಪಡು)

Bóttle[3] ಬಾಟ್ಲ್ (ನಾ.) (Bluebottle, Whitebottle, etc.) ಕೆಲವು ಸಸ್ಯಜಾತಿಯ ಹೆಸರುಗಳು.

Bóttom ಬಾಟಮ್ (ನಾ., ಗು.) ಅಡಿ ; ಬುಡ ; ತಳ ; ಕೆಳಭಾಗ (Stand on own b. ಸ್ವತಂತ್ರವಾಗಿರು. B. up ತಲೆಕೆಳಗಾಗಿ). ಪಿರ್ರೆ ; ಅಂಡು ; ಪೃಷ್ಠ. (Go to the b. ಮುಳುಗಿ ಹೋಗು. Touch the b. ತಳ ಮುಟ್ಟು ; ದೃಢವಾದ ಆಧಾರದಮೇಲೆ ನಿಲ್ಲು. From the b. of my heart ಹೃತ್ಪೂರ್ವಕವಾಗಿ). ನದಿಯ ಜಲಾನಯನ ಪ್ರದೇಶ, ಮೊ. ; ತಗ್ಗು ಪ್ರದೇಶ. ಕನಿಷ್ಠ ಸ್ಥಾನ ; ಕನಿಷ್ಠ ಸ್ಥಾನದಲ್ಲಿರುವವನು. ಅತ್ಯಂತ ದೂರ ಪ್ರದೇಶ, ಅಥವಾ ಅತ್ಯಂತ ಒಳಪ್ರದೇಶ. ಹಡಗಿನ ತಳ. ಹಡಗು (ಮು., ಸಾಮಾನು ಸಾಗಿಸುವ ಹಡಗು : British bottoms). ತಳಹದಿ ; ಮೂಲಾಧಾರ ; ಮೂಲ ; ಬುಡ (Be at the b. of ಮೂಲ ಕಾರಣನಾಗಿರು). ಮೂಲಸ್ವರೂಪ ; ನಿಜಸ್ಥಿತಿ ; ವಸ್ತುಸ್ಥಿತಿ (Get to the b. of ಬುಡ ಮುಟ್ಟ ಶೋಧಿಸು ; ನಿಜಸ್ಥಿತಿಯನ್ನು ಕಂಡುಹಿಡಿ. At b. ಮೂಲತಃ ; ವಾಸ್ತವವಾಗಿ). ಸತ್ವ ; ಸ್ಥೈರ್ಯ. (ಗು.) ತಟ್ಟತಳದ ; ಕಟ್ಟಕಡೆಯ [Bet your b. dollar ನಿನ್ನ ಕೊನೆಯ ಕಾಸನ್ನೂ (ಸರ್ವಸ್ವವನ್ನೂ) ಒಡ್ಡಿಬಿಡು]. ಮೂಲಾಧಾರವಾದ. **Bóttomless** (ಗು.) ತಳವಿಲ್ಲದ ; ನಿರಾಧಾರವಾದ. ಆಳ ಕಾಣಲಾಗದ ; ಅಗಾಧ. **Bóttommost** (ಗು.)

Bóttom (ಕ್ರಿ.) (ಕುರ್ಚಿ, ತಪ್ಪಲೆ, ಮೊ. ಕ್ಕೆ) ತಳ ಕಟ್ಟು. (ವಾದ, ಮೊ. ನ್ನು) ಆಧಾರದಮೇಲೆ ಹೇಳು ; ಅವಲಂಬಿಸು. ತಳ ಮುಟ್ಟು. ವಿಸ್ತಾರವನ್ನು, ಆಳವನ್ನು, ವಸ್ತುಸ್ಥಿತಿಯನ್ನು, ಕಂಡುಹಿಡಿ.

Bóttomry ಬಾಟಮ್ರಿ (ನಾ., ಕ್ರಿ. ಸಕ.) ಹಡಗಿನ ಆಧಾರದಮೇಲೆ, ಅದರ ಒಡೆಯನಿಗೆ, ಹಡಗು ನಷ್ಟವಾಗಿಹೋದಲ್ಲಿ ಸಾಲಕೊಟ್ಟ ಹಣವೂ ನಷ್ಟವಾಗಿಹೋಗುವುದೆಂಬ ಕರಾರಿನಮೇಲೆ, ಹಡಗಿನ ಪ್ರಯಾಣಕ್ಕಾಗಿ ಸಾಲಕೊಡುವ ಪದ್ಧತಿ ; ನೌಕಾಧಾರದ ಸಾಲ. (ಕ್ರಿ.) ಹಡಗನ್ನು ಆಧಾರಮಾಡಿ ಸಾಲ ತೆಗೆದುಕೊ.

Bótulism ಬಾಟ್ಯುಲಿಸ್ಮ್ (ನಾ.) (ವೈ. ಶಾ.) ಊರಿಟ್ಟ, ಮಾಂಸ, ಶಾಕ, ಹಣ್ಣುಹಂಪಲು, ಮೊ. ಗಳಲ್ಲಿ ಹುಟ್ಟಬಹುದಾದ ವಿಷಕ್ರಿಮಿಗಳಿಂದ, ಅಂಥವನ್ನು ತಿನ್ನುವವರಿಗೆ ಬರುವ ವಿಷರೋಗ.

Boúdoir ಬೂಡ್ವಾರ್ (ನಾ.) ಹೆಂಗಸರ ಸಣ್ಣ ಒಳಕೋಣೆ ; ಏಕಾಂತ ಗೃಹ.

Boúgainvillaéa, -vília ಬೂಗೆಯ್ನವಿಲಿ(ೀ)ಯ (ನಾ.) ಮು., ಕೆಂಪು ಮತ್ತು ನೀಲಿಗೆಂಪು ಬಣ್ಣದ ಪುಷ್ಪಚ್ಛದವುಳ್ಳ ಹೂವುಬಿಡುವ ಅಂದವಾದ ಒಂದು ಜಾತಿಯ ಪೊದರುಬಳ್ಳಿ ; 'ಬೂಗನ್‌ವಿಲಿಯ' ('ಬೂಗೆಯ್ನವಿಲ' ಎಂಬ ಫ್ರೆಂಚ್ ನಾವಿಕನ ಹೆಸರಿನಿಂದ)

Bough ಬೌ (ನಾ.) ಕೊಂಬೆ ; ರೆಂಬೆ ; ಟೊಂಗೆ ; ಶಾಖೆ.

Bought ಬಾಟ್. **Buy** ಧಾತುವಿನ ಭೂತ., ಭೂ. ಕೃ.

Boúgie(F) ಬೂಷೀ (ನಾ.) ಮೇಣದ ಬತ್ತಿ ; ಮೋಂಬತ್ತಿ. (ವೈ. ಶಾ.) ಶರೀರದ್ವಾರಗಳನ್ನು ಪರೀಕ್ಷಿಸುವುದು, ಹಿಗ್ಗಲಿಸುವುದು, ಔಷಧ ಹಾಕುವುದು — ಇವೇ ಮೊ. ಕಾರ್ಯಗಳಿಗೆ ಉಪಯೋಗಿಸುವ ತೆಳ್ಳನೆಯ ಬಳುಕುವ ಸಲಕರಣೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bouillí(F) ಬೂಯಿಾ (ನಾ.) ಬೇಯಿಸಿದ ಮಾಂಸ (ಮು., ಗೋಮಾಂಸ)

Boúillon (F) ಬೂಯೊನ್ (ನಾ.) ಮಾಂಸದ ಸಾರು ; ಮಾಂಸ ರಸ. (ಉಡುಪು) ಉಬ್ಬಿದ ಮಡಿಕೆ.

Boúlder, Bowlder ಬೋಲ್ಡರ್ (ನಾ.) (= Boulder-stone) (ನೀರಿನ ಹೊಡೆತದಿಂದ ಸವೆದ) ಕಲ್ಲುಗುಂಡು. (ಭೂ. ವಿ.) (ಗಾಳಿ ಮಳೆಯಲ್ಲಿ ಸವೆದು ಮೊದಲದ್ದ ಸ್ಥಳದಿಂದ ದೂರಕ್ಕೆಸೆದುಬಿದ್ದಿರುವ) ದೊಡ್ಡ ಬಂಡೆ. ಯಾವುದಾದರೂ ಪದಾರ್ಥದ ಮುದ್ದೆ. **B.-clay** ನೀರ್ಗಲ್ಲಿನ ಯುಗದ, ಕಲ್ಲು ಗುಂಡುಗಳಿಂದ ಕೂಡಿದ, ಜೇಡಿಯ ಮಣ್ಣಿನ ಸ್ತರ. **B.-formation** ನೀರ್ಗಲ್ಲಿನ ಯುಗದ, ಕಲ್ಲು ಗುಂಡುಗಳಿಂದ ಕೂಡಿದ ಮಣ್ಣು, ಜೇಡಿಯಮಣ್ಣು, ಮೊ. ಗಳ ರಚನೆ. **B.-period** ಈ ರಚನೆಯಾಗುತ್ತಿದ್ದ ನೀರ್ಗಲ್ಲಿನ ಯುಗ.

Boúlevard (F) ಬೂಲವಾರ್, ಬೂಲ್ವಾರ್ (ನಾ.) ಸಾಲು ಮರಗಳುಳ್ಳ ವಿಶಾಲವಾದ ಬೀದಿ.

Boulevérsement (F) ಬುಲ್‌ವರ್ಸ್‌ಮೆಂಟ್, **Bouleversemént** ಬೂಲ್‌ವೆರ್ಸ್‌ಮಾನ್ (ನಾ.) ತಲೆಕೆಳಗು ಮಾಡುವುದು ; ಶುದ್ಧ ಅವ್ಯವಸ್ಥೆ ಹಿಡಿಸುವುದು.

Boúlter ಬೋಲ್ಟರ್ (ನಾ.) ಅನೇಕ ಕೊಕ್ಕೆಗಳಿರುವ ಉದ್ದವಾದ ಮಿನುಗಾಳದ ದಾರ.

Bounce ಬೌನ್ಸ್ (ಕ್ರಿ., ನಾ.) ಪುಟ ನೆಗೆ ; ನೆಗೆದಾಡು ; ಗಲಭೆ ಮಾಡುತ್ತ, ರಭಸದಿಂದ, ಕೋಪದಿಂದ, ನುಗ್ಗು (B. into, out of, in, or out). ಬಡಾಯಿಮಾತಾಡು. ಗೊಡ್ಡು ಬೆದರಿಕೆ ಯಿಂದ ಅಥವಾ ದರ್ಪದಿಂದ ಕೆಲಸಮಾಡಿಸು, ಅಥವಾ ಮಾಡುತ್ತಿದ್ದ ಕೆಲಸವನ್ನು ಬಿಡಿಸು. (ನಾ.) ಪುಟ ; ಪುಟ ನೆಗೆತ. ಬಡಾಯಿ ; ಡಂಭ ; ಬುರುಡೆ ; ಅತ್ಯುಕ್ತಿ. **Boúncer** (ನಾ.) (ಕ್ರಿಯಾರ್ಥಗಳಲ್ಲಿ). ನಾಚಿಕೆಗೆಟ್ಟ ಸುಳ್ಳು(ಗಾರ). ತನ್ನ ಜಾತಿಯಲ್ಲಿ ದೊಡ್ಡ ವಸ್ತು. **Boúncing** (ಗು.) ಚಾಕಚಕ್ಯವುಳ್ಳ ; ಬಲವುಳ್ಳ ; ಕಾಯಪುಷ್ಟಿಯುಳ್ಳ. ಅತಿಯಾದ ; ದೊಡ್ಡ ; ಉಲ್ಲಾಸ ಯುಕ್ತ. ಹಾರಾಟದ ; ಗಡಿಬಿಡಿಯ ; ಗಲಾಟೆಯ.

Bounce (ಕ್ರಿ. ವಿ.) ಥಟ್ಟನೆ ; ರಭಸದಿಂದ (Come b. against ಥಟ್ಟನೆ ರಭಸದಿಂದ ತಾಗು)

Bound[1] ಬೌಂಡ್ (ನಾ., ಕ್ರಿ. ಸಕ.) (ದೇಶದ ಅಥವಾ ಭೂಸ್ಥಿತಿಯ) ಎಲ್ಲೆ, ಮೇರೆ, ಗಡಿ. (ಸಾ., ಬ. ವ. ದಲ್ಲಿ) ಹದ್ದುಬಸ್ತು ; ಮಿತಿ ; ನಿರ್ಬಂಧ (Out of bounds ಹದ್ದುಮೀರಿ ; ಎಲ್ಲೆಮೀರಿ. Put bounds to ಮಿತಿ ಕಲ್ಪಿಸು ; ಮೇರೆ ಹಾಕು ; ಹದ್ದಿನಲ್ಲಿಡು). (ಕ್ರಿ.) ಎಲ್ಲೆ ಹಾಕು ; ಮೇರೆ ಹಾಕು ; ಮಿತಿಯಿಡು ; ಎಲ್ಲೆಯಾಗಿರು. **Boúnder** (ನಾ.) ; **Boúndary** (ನಾ.) ಎಲ್ಲೆಯ ಗೆರೆ ; ಎಲ್ಲೆ ; ಮೇರೆ ; ಸರಹದ್ದು ; ಎಲ್ಲೆಯಾಗಿರುವ ವಸ್ತು ; ಬಾಂದು. **Boúndless** (ಗು.) ಮಿತಿ ಯಿಲ್ಲದ. **Boúndlessly** (ಕ್ರಿ. ವಿ.) ; **Boúndlessness** (ನಾ.)

Bound[2] ಬೌಂಡ್ (ಕ್ರಿ. ಅಕ., ನಾ.) (ಚೆಂಡು, ಮೊ.) ಪುಟ ನೆಗೆ. (ಪ್ರಾಣಿ, ಅಲೆ, ಮೊ.) ನೆಗೆ, ಹಾರು, ನೆಗೆಯುತ್ತ ಮುಂಬರಿ. (ನಾ.) (ಮೇಲಕ್ಕೊ ಮುಂದಕ್ಕೊ) ಪುಟನೆಗೆಯುವುದು ; ಪುಟ ; ನೆಗೆತ. Advance by leaps and bounds ಹಾರಿಹಾರಿಕೊಂಡು ಮುಂದಕ್ಕೆ ಹೋಗು (ರೂಪ. ಸಹ). **Boúnder** (ನಾ.) (ಕ್ರಿಯಾರ್ಥಗಳಲ್ಲಿ). (ಅಸಂ.) ಸಮಾಜದ ಕಟ್ಟಿಗೊಳಗಾಗದ, ಆದಕಾರಣ ಸಮಾಜದಿಂದ ದೂರದಲ್ಲಿಟ್ಟಿರುವ, ಗಲಾಟೆಯ ಮನುಷ್ಯ ; ಪಟಿಂಗ ; ಹದ್ದುಮೀರಿ ದವನು ; ಉದ್ಧತ.

Bound[3] (ಗು.) ಪ್ರಯಾಣಕ್ಕೆ ಸಿದ್ಧವಾದ ; ಪ್ರಯಾಣ ಹೊರಟ (Homeward bound ಸ್ವದೇಶಕ್ಕೆ ಹೊರಟ)

Bound[4] ಬೌಂಡ್ (Bind ಧಾತುವಿನ ಭೂ. ಕೃ.) (ಕ್ರಿಯಾರ್ಥಗಳಲ್ಲಿ). B. up with ಸಮಾನೋದ್ದೇಶವುಳ್ಳ ; ಗಾಢ ಸಂಬಂಧವುಳ್ಳ. B. to win ನಿಸ್ಸಂಶಯವಾಗಿ ಗೆಲ್ಲುವ. **Boúnden** (ಗು.) (Bind ಧಾತುವಿನ ಭೂ. ಕೃ.) (ಪ್ರಾಚೀ. ಪ್ರ.) Bounden duty ಅವಶ್ಯ ಕರ್ತವ್ಯ.

Boúndary. Bound[1] ನೋಡಿ.

Boúnty ಬೌಂಟಿ (ನಾ.) ಔದಾರ್ಯ ; ದಾನ ; ದತ್ತಿ ; ಕೊಡುಗೆ. ಸಂಪದಭಿವೃದ್ಧಿ ಕಾರ್ಯಗಳಿಗಾಗಿ ಸರ್ಕಾರದವರು ಕೊಡುವ ಪ್ರೋತ್ಸಾಹ ದ್ರವ್ಯ (B.-fed products ಸರ್ಕಾರದ ಪ್ರೋತ್ಸಾಹದ್ರವ್ಯ ಪಡೆದ ಉತ್ಪನ್ನಗಳು). ಸೈನಿಕರು, ನಾವಿಕರು, ಮೊ. ರಿಗೆ ಚಾಕರಿಗೆ ಸೇರಿದಾಗ ಕೊಡುವ ಪ್ರೋತ್ಸಾಹ ದ್ರವ್ಯ. King's, Queen's B. ಮೂವರು ಮಕ್ಕಳನ್ನು ಒಟ್ಟಿಗೆ ಹೆತ್ತವಳಿಗೆ ಕೊಡುವ ರಾಜ ಪಾರಿ ತೋಷಕ. **Boúnteous** (ಗು.) ಉದಾರ ; ಕೊಡುಗೈಯ ; ಸಮೃದ್ಧ. **Boúnteously** (ಕ್ರಿ. ವಿ.) ; **Boúnteousness** (ನಾ.) ; **Boúntiful** (ಗು.) (= Bounteous ; Lady Bountiful ಒಂದು ಸ್ಥಳದ ಉದಾರ ಮಹಿಳೆ). ಯಥೇಷ್ಟ. **Boúntifully** (ಕ್ರಿ. ವಿ.)

Boúquet ಬುಕೇ (ನಾ.) ಹೂಗೊಂಚಲು ; ಹೂಗೊಂಡೆ ; ತುರಾಯಿ. (ದ್ರಾಕ್ಷಾ)ಮದ್ಯದ ಪರಿಮಳ.

Boúrgeois[1] (F) ಬೂರ್ಷ್ವಾ (ನಾ., ಗು.) ಮಧ್ಯಮ ತರಗತಿಯ ವ್ಯಾಪಾರಿವರ್ಗದ(ವನು). ಮಧ್ಯಮ ತರಗತಿಯ ಸಾಮಾನ್ಯಾಭಿ ಪ್ರಾಯಗಳುಳ್ಳ (ಮನುಷ್ಯ). **Bourgeoisié** ಬೂರ್ಷ್ವಾಸೀ (ನಾ.) ಮಧ್ಯಮ ತರಗತಿಯ ಪ್ರಜಾವರ್ಗ.

Bourgeoís[2] ಬರ್ಜಾಯ್ಸ್ (ನಾ., ಗು.) ಒಂದು ತೆರದ ಮುದ್ರಣದ ಮೊಳೆ.

Boúrgeon. Burgeon ನೋಡಿ.

Bourn(e)[1] ಬೋರ್ನ್ (ನಾ.) ಸಣ್ಣ ಹೊಳೆ.

Bourn(e)[2] ಬೋರ್ನ್ (ನಾ.) ಎಲ್ಲೆ ; ಮೇರೆ ; ಮಿತಿ ; ಗುರಿ ; ಲಕ್ಷ್ಯ.

Bourse (F) ಬೂ(ಅ)ರ್ಸ್ (ನಾ.) ಬಂಡವಾಳಪತ್ರ, ಮೊ. ಗಳ ವ್ಯವ ಹಾರ ಮಾಡುವ ಪರದೇಶದ (ಮು., ಪ್ಯಾರಿಸ್ಸಿನ) ವ್ಯಾಪಾರ ಕಟ್ಟೆ.

Bout ಬೌಟ್ (ನಾ.) (ಕೆಲಸಮಾಡುವುದರಲ್ಲಿ ಅಥವಾ ವ್ಯಾಯಾಮದಲ್ಲಿ) ಸೂಳು, ಸರದಿ, ಸುತ್ತು, ಸಲ, ಬಾರಿ, ಆವೃತ್ತಿ. ಕುಡಿತದ ಆವೇಶ. ರೋಗದ ಕೆರಳು. ಬಲ ಪರೀಕ್ಷೆ. ಕಾಳಗದ ಸೂಳು. This b. ಈ ಸಲ ; ಈ ಬಾರಿ.

Bouts rimés (F) ಬೂ ರೀಮೇ (ನಾ., ಬ. ವ.) ಅಂತ್ಯಪ್ರಾಸಗಳು ; ಕೊಟ್ಟ ಅಂತ್ಯಪ್ರಾಸಗಳಿಗೆ ಪದ್ಯ ಜೋಡಿಸುವುದು. ಅಂತ್ಯಪ್ರಾಸ ಸಮಸ್ಯೆ.

Bóvine ಬೋವೈನ್ (ಗು.) ದನದ ; ದನದಂಥ ; ಗೋ ಜಾತಿಯ ; ಗವ್ಯ. (ರೂಪ.) ಮಂದ ; ಮೊದ್ದ ; ದಡ್ಡ ; ಜಡ. ಕೋಣ (ರೂಪ.)

Bóvril ಬಾವ್ರಿಲ್ (ನಾ.) ಒಂದು ಬಗೆಯ ಮಾಂಸ ಸಾರ. (ವ್ಯಾಪಾರದ ಹೆಸರು)

Bow[1] ಬೋ (ನಾ.) ಬಾಗು ; ಕೊಂಕು ; ಕಮಾನು. ಬಿಲ್ಲು ; ಚಾಪ ; ಧನುಸ್ಸು. ಕಾಮನ ಬಿಲ್ಲು ; ಇಂದ್ರಚಾಪ. (Two strings to one's b. ಒಂದು ಕಾರ್ಯಕ್ಕೆ ಎರಡು ಸಾಧನಗಳು. Draw the long b. ಇರುವುದಕ್ಕಿಂತಲೂ ಹೆಚ್ಚುಮಾಡಿ ಹೇಳು). ಜೀನಿನ ಮುಂಭಾಗ ದಲ್ಲಿಯ ಕಮಾನುಭಾಗ. (ಪಿಟೀಲು, ಮೊ. ನ್ನು ನುಡಿಸುವ) ಕಮಾನು : ಪಿಟೀಲು ಕಮಾನು. ಪಿಟೀಲಿನ ತಂತಿಗಳಮೇಲೆ ಕಮಾನಿನ ಒಂದು ಎಳೆತ. ಪಾತ್ರೆ, ಮೊ. ಗಳ ಕಮಾನಿನಾಕಾರದ ಹಿಡಿ. ಮನೆಯ ಮುಂಭಾಗದ ಕಮಾನಿನಾಕಾರದ ಗೋಡೆಯಲ್ಲಿಟ್ಟಿರುವ ಕಿಟಕಿ (= B.-window). ಕುಣಿಕೆ. ಕುಣಿಕೆ ಹಾಕಿರುವ ಪಟ್ಟಿ, ಮೊ. B.-backed ಬಾಗಿದ ಬೆನ್ನಿನ. **B.-boy** ಕಾಮದೇವ ; ಮನ್ಮಥ. **Bows, Bow-compass(es)** ಕೀಲುಹಾಕಿ ಅಳವಡಿಸಿರುವ ತೋಳುಗ ಳುಳ್ಳ ಕೈವಾರ ; ಬಿಲ್ಲುಕೈವಾರ ; ನಳ್ಳಿಕೈವಾರ. **B.-head** ಗ್ರೀನ್ಲೆಂಡಿನ ತಿಮಿಂಗಿಲ. B.-legged ಹೊರಬಾಗಿದ ಕಾಲುಗಳುಳ್ಳ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಿಚ್ಚುಮಂಡಿಯು. **Bowman** ಬೋಮ್ಯನ್ (ನಾ. ; ಬ. ವ. -men) ಬಿಲ್ಲುಗಾರ ; ಧನುರ್ಧಾರಿ. **B.-saw** ಬಿಲ್ಲಿನ ಹೆದೆಯಂತೆ ಚಾಚಿರುವ, ಕಿರಿಯಗಲದ ಗರಗಸ: ಬಿಲ್ಲು ಗರಗಸ. **Bowshot** ಅಂಬೆಸೆತದ ದೂರ: ಅಂಬೆಸೆ. **B.-string** ಬಿಲ್ಲಿನ ಹೆದೆ ; ನಾರಿ ; ಜ್ಯಾ. ಬಿಲ್ಲಿನ ಹೆದೆಯಿಂದ ಉರುಲುಹಾಕಿ ಕೊಲ್ಲುವ (ತುರ್ಕೀದೇಶದ) ಪ್ರಾಣಾಂತ ಶಿಕ್ಷೆ(ಮಾಡು). **B.-window** (ಮೇಲೆ ನೋಡಿ). (ಅಸಂ.) ದೊಡ್ಡ ಹೊಟ್ಟೆ. **B.-windowed** (ಗು.) ; **Bowyer** ಬೋಇಯರ್ (ನಾ.) ಬಿಲ್ಲುಗಳನ್ನು ಮಾಡುವವನು, ಮಾರುವವನು ; ಬಿಲ್ಲಿಗ ; ಬಿಲ್ಲುಗಾರ.

Bow (ಕ್ರಿ. ಸಕ.) ಕಮಾನಿನಿಂದ (ಪಿಟೀಲು, ಮೊ. ನ್ನು) ನುಡಿಸು.

Bow² ಬೌ (ಕ್ರಿ.) ಬಗ್ಗು ; ಮಣಿ ; ವಿನತನಾಗು ; ನಮ್ರನಾಗು ; ತಲೆ ತಗ್ಗಿಸು ; ತಲೆ ಬಗ್ಗಿಸು ; ನಮಸ್ಕರಿಸು ; (ಮರ್ಯಾದೆ, ಒಪ್ಪಿಗೆ, ಮೊ. ನ್ನು ತೋರಿಸುವುದಕ್ಕಾಗಿ) ತಲೆವಾಗು ; ಬಗ್ಗುವಂತೆ ಮಾಡು (ರೂಪ. ಸಹ). Bowing acquaintance ನಮಸ್ಕಾರ ಪರಿಚಯ ; ಲಘು ಪರಿಚಯ. Bow down ಅದುಮಿಬಿಡು ; ಕುಗ್ಗಿಹೋಗುವಂತೆ ಮಾಡು (Bowed down by care ಚಿಂತೆಯಿಂದ ಕುಗ್ಗಿಹೋಗಿ)

Bow (ನಾ.) (ನಮಸ್ಕಾರ ಮಾಡುವುದು, ಮರ್ಯಾದೆ ತೋರಿಸುವುದು, ಅಂಗೀಕಾರ ಸೂಚನೆ, ಮೊ. ಕ್ಕಾಗಿ) ಬಗ್ಗುವುದು, ತಲೆವಾಗುವುದು. Make one's b. ಅಪ್ಪಣೆ ತೆಗೆದುಕೊ ; ಹೊರಟುಹೋಗು.

Bow³ ಬೌ (ನಾ.) (ಸಾ., ಬ. ವ. ದಲ್ಲಿ) ದೋಣಿಯ ಅಥವಾ ಹಡಗಿನ ಮೂತಿ (On the b. ಹಡಗಿನ ಮೂತಿಗೆ ನೇರವಾಗಿರುವ ಬಿಂದುವಿಗೆ 45° ಕೋನದೊಳಗೆ). ಹಡಗಿನ (ದೋಣಿಯ) ಮೂತಿಯ ಬಳಿ ; ಆ ಮೂತಿಗೆ ಬಹಳ ಹತ್ತಿರದಲ್ಲಿರುವ ನಾವಿಕ (= Bowman ; ಬ. ವ. -men) ; B.-oar ಅಂಥ ನಾವಿಕನ ಹುಟ್ಟು, ಅಥವಾ ಆ ನಾವಿಕ.

Bow bells ಬೋ ಬೆಲ್ಸ್ (ನಾ.) ಲಂಡನ್ನಿನ ಸುಮಾರು ಮಧ್ಯಭಾಗದಲ್ಲಿರುವ 'ಬೋ ಚರ್ಚ್' ಎಂಬ ಕ್ರೈಸ್ತದೇವಾಲಯದ ಗಂಟೆಗಳು. Within the sound of b. ಲಂಡನ್ ಪಟ್ಟಣದಲ್ಲಿ.

Bowdlerize ಬೌಡ್ಲರೈಸ್ (ಕ್ರಿ. ಸಕ.) ಅಶ್ಲೀಲವೆಂದು ಅಥವಾ ಅಸಾಧುವೆಂದು ತೋರುವ ಭಾಗಗಳನ್ನು (ಒಂದು ಗ್ರಂಥ, ಮೊ. ಗಳಿಂದ) ತೆಗೆದುಹಾಕು, ತಿದ್ದು (ಷೇಕ್ಸ್‌ಪಿಯರ್ ಮಹಾಕವಿಯ ಕಾವ್ಯಗಳನ್ನು ಈ ರೀತಿಯಾಗಿ ಪರಿಷ್ಕರಿಸಿದ 'ಬೌಡ್ಲರ್' ಎಂಬಾತನ ಹೆಸರಿನಿಂದ). **Bowdlerism** (ನಾ.) ; **Bowdlerization** (ನಾ.)

Bowel ಬೌಎಲ್ (ನಾ.) ಕರುಳು ; ಅಂತ್ರ (ಏ. ವ. ರೂಪವು ವೈ. ಶಾ. ದಲ್ಲಿ ಮಾತ್ರ). **Bowels** (ನಾ.) ಕರುಳು ; ದೇಹದ ಒಳಭಾಗ. ಕರುಣೆ ; ಮಾರ್ದವ ; ಮೃದುಭಾವ ; ಹೆಂಗರುಳು. ಯಾವುದಾದರೂ ವಸ್ತುವಿನ ಒಳಭಾಗ, ಗರ್ಭ.

Bower¹ ಬೌಅರ್ (ನಾ.) (ಕಾವ್ಯ) ಗೃಹ ; ಕುಟಿ ; ವಾಸಸ್ಥಾನ ; ಒಳಕೋಣೆ ; ಹೆಂಗಸರ ಕೋಣೆ. ಕುಂಜ ; ಲತಾಗೃಹ ; ಬಳ್ಳಿಮಾಡ ; ವಸಂತ ಮಂದಿರ. **B.-bird** ಅಂದವಾದ ವಿಹಾರ ಕುಂಜವನ್ನು ಕಟ್ಟುವ ಆಸ್ಟ್ರೇಲಿಯದ ಒಂದು ಜಾತಿಯ ಪಕ್ಷಿ: ಕುಂಜ ಪಕ್ಷಿ. **Bowery** (ಗು.)

Bower² ಬೌಅರ್ (ನಾ.) ಹಡಗಿನ ಮುಖಭಾಗದಲ್ಲಿರುವ ಎರಡು ಲಂಗರುಗಳಲ್ಲೊಂದು, ಅಥವಾ ಅವುಗಳಿಗೆ ಕಟ್ಟಿರುವ ಹೊರಜಿಗಳಲ್ಲೊಂದು (= B.-anchor, B.-cable)

Bower³ ಬೌಅರ್ (ನಾ.) 'ಯೂಕರ್' ಎಂಬ ಇಸ್ಪೀಟಾಟದಲ್ಲಿ ತುರುಫಿನ ಗುಲಾಮ (Right b.), ಅಥವಾ ಅದೇ ಬಣ್ಣದ ಬೇರೆ ಗುಲಾಮ (Left b.)

Bowie-knife ಬೋಇ ನೈಫ್ (ನಾ.) (ಅಮೆ. ಸಂ. ದ ಕಾಡುಪ್ರದೇಶಗಳಲ್ಲಿ ಸಂಚಾರಮಾಡುವಾಗ ಆಯುಧವಾಗಿ ತೆಗೆದುಕೊಂಡುಹೋಗುವ) ಉದ್ದವಾದ ಅಲಗಿನ ದೊಡ್ಡ ಚೂರಿ. (Col. J. Bowie ಎಂಬಾತನ ಹೆಸರಿನಿಂದ)

Bowl¹ ಬೋಲ್ (ನಾ.) ನೀರು, ಮೊ. ದ್ರವವಸ್ತುಗಳಿಗಾಗಿ ಉಪಯೋಗಿಸುವ (ಸಾ., ವರ್ತುಲಾಕಾರದ) ಪಾತ್ರೆ ; ಬೋಗುಣಿ ; ಕುಡಿಯುವ ಬಟ್ಟಲು ; ಮದ್ಯದ ಬಟ್ಟಲು (The b. ಉತ್ಸವಭೋಜನದಲ್ಲಿಯ ಉಲ್ಲಾಸ, ಸಂಭ್ರಮ ; ಪಾನೋತ್ಸವ). ಒಂದು ಬಟ್ಟಲುತುಂಬು. (ಚುಂಗಾಣಿ, ಉದ್ಧರಣೆ, ತಕ್ಕಡಿ, ಮೊ. ಗಳಲ್ಲಿಯ) ಬಟ್ಟಲಿನ ಆಕಾರದ ಭಾಗ. **Bowlful** (ನಾ.)

Bowl² ಬೋಲ್ (ನಾ.) ಪೂರ್ತಿ ಗುಂಡಾಗಿರದೆ ಒಂದು ಕಡೆಯ ಉಬ್ಬು ಕಡಮೆಯಾಗಿಯೂ ಮತ್ತೊಂದು ಕಡೆಯದು ಹೆಚ್ಚಾಗಿಯೂ ಇದ್ದು, ಒಂದು ಭಾಗದಲ್ಲಿ ಹೆಚ್ಚುತೂಕವಿಟ್ಟಿರುಪುದರಿಂದ, ನೇರವಾಗಿ ಉರುಳದೆ ವಕ್ರವಾಗಿ ಹೋಗುವ, ಗಟ್ಟಿಮರದ ಚೆಂಡು, ಗುಂಡು. 'ಸ್ಕಿಟಲ್ಸ್' ಎಂಬ ಆಟದಲ್ಲಿ ಉಪಯೋಗಿಸುವ ಸುಮಾರು ಇದೇ ತೆರದ ಮರದ ಚೆಂಡು. **Bowls** ಇಂಥ ಚೆಂಡುಗಳಿಂದ ಹುಲ್ಲು ಮೈದಾನದ ಮೇಲೆ ಆಡುವ 'ಬೋಲ್ಸ್' ಆಟ, ಅಥವಾ ಗುಂಡು ಚೆಂಡುಗಳಿಂದ ಮನೆಯೊಳಗಡೆ ಆಡುವ 'ಸ್ಕಿಟಲ್ಸ್' ಆಟ.

Bowl (ಕ್ರಿ.) ಬೋಲ್ಸ್ ಆಟವಾಡು. (ಚೆಂಡು, ಗುಂಡು, ಪಟ್ಟಿ, ಮೊ. ನ್ನು) ಉರುಳಿಸಿಕೊಂಡುಹೋಗು (B. along ಸಲೀಸಾಗಿಯೂ ವೇಗವಾಗಿಯೂ ಉರುಳಿಕೊಂಡು ಹೋಗು. (ಕ್ರಿಕೆಟ್ ಆಟ) ಹೊಡೆಯುವುದಕ್ಕಾಗಿ (ದಾಂಡಿನ ಕಡೆಗೆ) ಚೆಂಡೆಸೆ ; (ಚೆಂಡಿನಿಂದ) ಗುರಿಕೋಲುಗಳನ್ನು, ಅಥವಾ ಅವುಗಳ ಮೇಲಿನ ಅಡ್ಡಪಟ್ಟಿಗಳನ್ನು, ಉರುಳಿಸಿಬಿಡು ; (ಹೀಗೆ ಮಾಡಿ) ದಾಂಡುಗಾರನ ಆಟ ಕಳೆ (= B. out). B. over ಉರುಳಿಸಿಬಿಡು ; (ರೂಪ.) ಕಂಗೆಡಿಸು ; ಅಸಹಾಯನನ್ನಾಗಿ, ದಿಕ್ಕುತೋರದವನನ್ನಾಗಿ, ಮಾಡು. **Bowler** (ನಾ.) (ಕ್ರಿಯಾರ್ಥಗಳಲ್ಲಿ). ಗಟ್ಟಿಸಿದ ರೋಮಪದಾರ್ಥದಿಂದ ಮಾಡಿದ ಗಿಡ್ಡನೆಯ ಒಂದು ತೆರದ ಗುಂಡುಟೋಪಿ. **Bowling** (ನಾ.) (ಕ್ರಿಯಾರ್ಥಗಳಲ್ಲಿ). **B.-crease** ದಾಂಡಿಗೆ ಚೆಂಡೆಸೆಯುವವನು ನಿಲ್ಲಬೇಕಾದ ಸ್ಥಳದ ಮುಂದಣ ಮಿತಿಯನ್ನು ಗೊತ್ತುಮಾಡುವ ಗೆರೆ: ಎಸೆಗೆರೆ. **B.-alley** ಸ್ಕಿಟಲ್ಸ್ ಆಟದ ಉದ್ದವಾದ ಆವರಣ. **B.-green** ಬೋಲ್ಸ್ ಆಟದ ಹುಲ್ಲು ಮೈದಾನ.

Bowsprit ಬೋಸ್ಪ್ರಿಟ್ (ನಾ.) ಹಡಗಿನ ಮುಂಭಾಗದಿಂದ ಹೊರಚಾಚಿಕೊಂಡಿರುವ ದೊಡ್ಡ ದಿಮ್ಮಿ: ಹಡಗಿನ ಮೂಕಿಮರ.

Bow-street ಬೋಸ್ಟ್ರೀಟ್ (ನಾ., ಗು.) ಲಂಡನ್ನಿನ 'ಕಾವೆಂಟ್ ಗಾರ್ಡನ್' ಎಂಬ ಪ್ರದೇಶದ ಬಳಿಯಲ್ಲಿ, ಪ್ರಧಾನ ಪೊಲೀಸು ಕೋರ್ಟು ಇರುವ ಬೀದಿ. **B.-runner, B.-officer** ಪೊಲೀಸು ಅಧಿಕಾರಿಗಳ ಹಿಂದಿನ ಹೆಸರು.

Bow-wow ಬೌ ವೌ (ಭಾವ. ಅವ್ಯ., ನಾ.) ನಾಯ ಬಗುಳು ; (ಮಕ್ಕಳ ಮಾತಿನಲ್ಲಿ) ನಾಯಿ. The (big) b. style ಭಾಷಣದಲ್ಲಿ ಅಥವಾ ಬರವಣಿಗೆಯಲ್ಲಿ, ಆಡಂಬರದ ಶೈಲಿ; ಆಟೋಪ ಶೈಲಿ.

Box¹ ಬಾಕ್ಸ್ (ನಾ.) ಪೆಟ್ಟಿಗೆ ; ಪೆಠಾರಿ ; ಸಂದೂಕು ; ಸಂಪುಟ ; ಭರಣಿ ; ಕರಡಿಗೆ ; ಕರಂಡ ; ಡಬ್ಬಿ (In the same b. ಒಂದೇ ಅವಸ್ಥೆಯಲ್ಲಿ). ಬಂಡಿಹೊಡೆಯುವವನ ಪೀಠ. ಪೆಟ್ಟಿಗೆಯ ತುಂಬು. ಹಣದ ಪೆಟ್ಟಿಗೆ. (ನಾಟಕ ಶಾಲೆ, ಪಾನ ಭೋಜನಗಳ ಅಂಗಡಿ, ಮೊ. ಗಳಲ್ಲಿ) ಕುಳಿತುಕೊಳ್ಳಲು ಪ್ರತ್ಯೇಕವಾದ ಆಸನಗಳುಳ್ಳ ಸ್ಥಳ. ಲಾಯದಲ್ಲಿ, ರೈಲುಬಂಡಿಯಲ್ಲಿ, (ಕುದುರೆಗೆ) ಪ್ರತ್ಯೇಕ ಸ್ಥಳ. (Loose b. ಕುದುರೆ ಸುತ್ತಾಡುವುದಕ್ಕೆ ಅವಕಾಶವಿರುವ ಇಂಥ ಪೆಟ್ಟಿಗೆ, ಡಬ್ಬಿ. Jury-b., Witness-b. ಕೋರ್ಟಿನಲ್ಲಿ ನ್ಯಾಯದರ್ಶಿಗಳಿಗಾಗಿ, ಸಾಕ್ಷಿಗಳಿಗಾಗಿ, ಏರ್ಪಡಿಸಿರುವ ಪ್ರತ್ಯೇಕ ಸ್ಥಾನ). ಕಾವಲುಗಾರನ ಅಥವಾ (ರೈಲ್ವೆ, ಮೊ. ಗಳಲ್ಲಿಯ) ಸಂಕೇತ ಸೂಚಕನ, ಗೂಡು. (Fishing-b., Shooting-b., etc. ಮೀನು ಹಿಡಿಯುವ, ಬಂದೂಕು ಹಾರಿಸುವ, ಮೊ. ತಾತ್ಕಾಲಿಕ ಸಂದರ್ಭಗಳಲ್ಲಿ ಹಾಕುವ ಜೋಪಡಿ). ಯಂತ್ರಭಾಗಗಳ ರಕ್ಷಾಸಂಪುಟ. In the wrong b. ಇಕ್ಕಟ್ಟಿನಲ್ಲಿ ; ತೊಡಕಿನಲ್ಲಿ. **B.-cloth** ಒತ್ತಾಗಿ ನೆಯ್ದ ಬಟ್ಟೆ. **B.-coat** (ಸವಾರಿ ಹೋಗುವಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಕಿಕೊಳ್ಳುವ) ಭಾರವಾದ ಮೇಲಂಗಿ : ಸವಾರಿ ಕವಚ. **B.-drain** ಪೆಟ್ಟಿಗೆಯಾಕಾರದ ಚರಂಡಿ: ಚದರ ಚರಂಡಿ. **B.-iron** ಇಸ್ತ್ರಿ ಪೆಟ್ಟಿಗೆ. **B.-keeper** ನಾಟಕಶಾಲೆಯಲ್ಲಿ ಪ್ರತ್ಯೇಕವಾಗಿ ಹಾಕಿರುವ ಆಸನಗಳ ಬಳಿ ಕಾವಲಿರುವ ಸೇವಕ. **B.-kite** ವಿಜ್ಞಾನ ಪ್ರಯೋಗಗಳಿಗಾಗಿ, ಹಗುರವಾದ ಎರಡು ಪೆಟ್ಟಿಗೆಗಳ ಆಕಾರದಲ್ಲಿ ಕಟ್ಟಿ, ಪಕ್ಕ ಪಕ್ಕದಲ್ಲಿ ಒಟ್ಟಿಗೆ ಸೇರಿಸಿರುವ ಹಾರುಪಟ : ಪೆಟ್ಟಿಗೆಪಟ. **B.-office** ನಾಟಕ ಶಾಲೆಯಲ್ಲಿಯ ಟಿಕೆಟ್‌ಕಟ್ಟೆ. **Bóxful** (ನಾ.)

Box (ಕ್ರಿ. ಸಕ.) ಪೆಟ್ಟಿಗೆ ಹವಣಿಸು ; ಪೆಟ್ಟಿಗೆಯಲ್ಲಿಡು (B. up ತೊಂದರೆಯಾಗುವಂತೆ ಒತ್ತರಿಸಿ ತುಂಬು, ಗಿಡುಗು). (ದಸ್ತ್ರವಜನ್ನು) ಕೋರ್ಟಿನಲ್ಲಿ ಇಡು, ದಾಖಲ್ಮಾಡು. ಇತರ ಕೋಣೆಗಳಿಂದ ಪ್ರತ್ಯೇಕಿಸು. (ಅಸಂ.) B. the watch ಕಾವಲುಗಾರನನ್ನು ಅವನ ಗೂಡಿನಲ್ಲಿ ಉರುಳಿಸಿಬಿಡು. B. the compass (ನೌಕ) ದಿಗ್ದರ್ಶಕದ ಮೂವತ್ತೆರಡು ದಿಕ್ಕುಗಳ ಹೆಸರನ್ನೂ ಕ್ರಮದಲ್ಲಿ ಹೇಳು ; (ರೂಪ.) ಸಂಪೂರ್ಣ ಪ್ರದಕ್ಷಿಣೆ ಮಾಡಿ ಹೊರಟ ಸ್ಥಾನಕ್ಕೇ (ಸ್ಥಿತಿಗೇ) ಬರು (ರಾಜ್ಯನೀತಿ, ವಾದ, ಮೊ. ಗಳಲ್ಲಿ). **Bóxing-day** ಕ್ರಿಸ್‌ಮಸ್ ತರುವಾಯ, ಭಾನುವಾರವಲ್ಲದ ಮೊದಲನೆಯ ದಿನ (ಅಂಚೆಯ ಜವಾನರು, ಮೊ. ರು ಇನಾಮನ್ನು ನಿರೀಕ್ಷಿಸುವ ರಜಾದಿನ)

Box[2] ಬಾಕ್ಸ್ (ನಾ., ಕ್ರಿ.) ಕಪಾಳಕ್ಕೆ ಹೊಡೆ(ತ). ಮುಷ್ಟಿಕಾಳಗ ಮಾಡು (ಸಾ., ಅಭ್ಯಾಸಕ್ಕಾಗಿ). Boxing-gloves ಮುಷ್ಟಿಕಾಳಗದಲ್ಲಿ ಹಾಕಿಕೊಳ್ಳುವ ಕೈಚೀಲ. **Bóxer** (ನಾ.) ಮುಷ್ಟಿಕಾಳಗದ ಜಟ್ಟಿ. (ಅಸಂ.) ಉದ್ದವಾದ ರೇಷ್ಮೆಯ ಟೋಪಿ. ಚೀನಾದೇಶದಲ್ಲಿ ವಿದೇಶೀ ದ್ವೇಷಕ ರಹಸ್ಯಸಂಘದ ಸದಸ್ಯ.

Box[3] ಬಾಕ್ಸ್ (ನಾ.) ನಿತ್ಯಹಸುರಿನ ಒಂದು ಸಸ್ಯಜಾತಿ. **Bóxwood** ಬಾಕ್ಸ್‌ಮರದ ದಾರು (ಕಡೆತದ ಕೆಲಸಕ್ಕೂ ಚಿತ್ರಕೊರೆಯುವ ಕೆಲಸಕ್ಕೂ ಉಪಯೋಗ)

Boy ಬಾಯ್ (ನಾ.) ಹುಡುಗ ; ಬಾಲಕ ; ಹೈದ. (The boys ಒಂದು ಕುಟುಂಬದ ಎಲ್ಲಾ ವಯಸ್ಸಿನ ಗಂಡುಮಕ್ಕಳು). ಹುಡುಗುಮನುಷ್ಯ (ಹುಡುಗನ ರೀತಿಯನ್ನೂ ಶೀಲಸ್ವಭಾವಗಳನ್ನೂ ಉಳ್ಳವನು). ಸೇವಕ ; ಆಳು ; ಗುಲಾಮ. (ಸಲಿಗೆಯಲ್ಲಿ) old b., my b. ಹಳೆಯ ಹುಡುಗ, ನನ್ನ ಹುಡುಗ. **B.-child** ಗಂಡು ಮಗು. **B.-husband** ಹುಡುಗು ಗಂಡ. **Boy scout** ಬಾಲಚಮೂ ಚಾರ. **Boýhood** (ನಾ.) ಬಾಲ್ಯ ; ಬಾಲಕರು. **Boýish** (ಗು.) ಬಾಲ್ಯದ ; ಹುಡುಗತನದ ; ಹುಡುಗನಂಥ ; ಹುಡುಗಾಟಿಕೆಯ ; ಬಾಲಿಶ. ಸಾರವಿಲ್ಲದ. ಹುರಿದುಂಬಿದ. **Boýishly** (ಕ್ರಿ. ವಿ.) ; **Boýishness** (ನಾ.)

Boýcott ಬಾಯ್ಕಾಟ್ (ಕ್ರಿ. ಸಕ., ನಾ.) (ಮನುಷ್ಯ, ವರ್ಗ, ಜನಾಂಗ — ಇವನ್ನು) ವ್ಯವಹಾರ ಬಹಿಷ್ಕೃತ ಮಾಡಿ ದಂಡಿಸು ; ಬಹಿಷ್ಕರಿಸು. ಬಹಿಷ್ಕಾರ. (ಹೀಗೆ ಬಹಿಷ್ಕೃತನಾದ Capt. Boycott ಎಂಬಾತನ ಹೆಸರಿನಿಂದ)

Boyúna ಬೊಯೂನ (ನಾ.) ಬಾಧೆಮಾಡದ ಸಿಲೋನಿನ ಒಂದು ಜಾತಿಯ ಹಾವು.

Brab ಬ್ರ್ಯಾಬ್ (ನಾ.) ತಾಳೆಯ ಮರ.

Brace ಬ್ರೇಸ್ (ನಾ., ಕ್ರಿ. ಸಕ.) ಬಿಗಿಮಾಡಿ, ಒಟ್ಟುಗೂಡಿಸಿ, ಬಂಧಿಸುವ ಕಟ್ಟು. (ಬ. ವ. ದಲ್ಲಿ) ಷರಾಯನ್ನು ಮೇಲೆತ್ತಿ ಹಿಡಿದುಕೊಳ್ಳುವ ಪಟ್ಟಿ. ಡೋಲನ್ನು ಶ್ರುತಿಮಾಡುವ ತೊಗಲುಪಟ್ಟಿ. (ಬರವಣಿಗೆಯಲ್ಲಿ, ಮುದ್ರಣದಲ್ಲಿ) ಸಂಯೋಜಕ ಚಿಹ್ನೆ ({). ಒಂದು ಜೊತೆ ; ಜೋಡಿ. (ಕಟ್ಟಡದಲ್ಲಿ, ಮರದ ಅಥವಾ ಕಬ್ಬಿಣದ) ಬಿಗಿಪಟ್ಟಿ. [B. and bit (ಕಂಡಿಕೊರೆಯುವುದಕ್ಕೂ ತಿರುಪುಮೊಳೆಯನ್ನು ತಿರುಗಿಸುವುದಕ್ಕೂ ಉಪಯೋಗಿಸುವ) ಸುತ್ತುಬೈರಿಗೆ]. (ಕ್ರಿ.) ಎಳೆದು ಕಟ್ಟು ; ಬಿಗಿಮಾಡು ; ಹುರಿಮಾಡು ; ದೃಢವಾಗಿಸು (B. oneself up ಹುರಿಗೊಳ್ಳು ; ಹುರಿದುಂಬು. Bracing air ಹುರಿದುಂಬಿಸುವ ಹವ). ಆಧಾರಕೊಡು ; ಜೊತೆಗೂಡಿಸು. **Brácer** (ನಾ.) ಬಿಲ್ಗಾರಿಕೆಯಲ್ಲೂ ಮುಷ್ಟಿಕಾಳಗದಲ್ಲೂ ತೊಡುವ ಮಣಿಕಟ್ಟು ಕಾಪು. (ಅಮೆ. ಸಂ., ಅಸಂ.) ಪುಷ್ಟಿದಾಯಕ. **Brácelet** (ನಾ.) ಕೈಬಳೆ ; ಕಡಗ ; ಕಂಕಣ ; ತೋಳ್ಬಂದಿ. ಕೈಬೇಡಿ ; ಕೈಕೋಳ. **Bráceleted** (ಗು.)

Brach ಬ್ರ್ಯಾಚ್ (ನಾ.) (ವಾಸನೆ ಹಿಡಿಯುವ) ಹೆಣ್ಣು ಬೇಟೆನಾಯಿ. (ರೂಪ.) ಒಂದು ಬೈಗುಳು.

Bráchial ಬ್ರ್ಯಾ(ಬ್ರೇ)ಕಿಯಲ್ (ಗು.) ತೋಳಿನ ; ತೋಳಿನಂಥ ; ಬಾಹುಸದೃಶ. **Bráchiate** ಬ್ರ್ಯಾಕಿಯೇಟ್, ಬ್ರೇಕಿಯೆಟ್ (ಗು.) (ಸ. ವಿ.) ಕಾಂಡಕ್ಕೆ ಸಮಕೋನದಲ್ಲಿ ಹೊರಟ ಜೋಡುಕೊಂಬೆಗಳುಳ್ಳದ್ದಾಗಿ, ಪ್ರತಿ ಜೋಡಿಯೂ ಹಿಂದಿನದಕ್ಕೆ ಸಮಕೋನದಲ್ಲಿರುವ : ಬಾಹು ಶಾಖೀಯ. **Brachíferous** ಬ್ರ್ಯಕಿಫರಸ್ (ಗು.) (ಪ್ರಾ. ವಿ.) ತೋಳುಳ್ಳ.

Brachycephálic ಬ್ರ್ಯಾಕಿಸಿಫ್ಯಾಲಿಕ್ (ಗು.) ಮೋಟುತಲೆಯ ; ಹ್ರಸ್ವಶೀರ್ಷ (ಮನುಷ್ಯನ ತಲೆಬುರುಡೆಯ ಅಗಲವು ಅದರ ಎತ್ತರದ $\frac{4}{5}$ರಷ್ಟು ಆದರೂ ಇರುವ) ; ಅಂಥ ತಲೆಬುರುಡೆಯುಳ್ಳ ಮನುಷ್ಯನ ಅಥವಾ ಜನಾಂಗದ.

Brachýlogy ಬ್ರ್ಯಕಿಲೊಜಿ (ನಾ.) ಹ್ರಸ್ವ ಭಾಷಣ ; ಸಂಕ್ಷಿಪ್ತ ವಚನ ; ಅಡಕ ಮಾತು. (ಅತಿಸಂಕೋಚ ಮಾಡುವುದರಿಂದಾಗುವ) ವಾಗ್ದೋಷ.

Brácken ಬ್ರ್ಯಾಕ್‌ನ್ (ನಾ.) ಒಂದು ಬಗೆಯ ಜರಿಗಿಡ (Fern) ; ಯಾವುದಾದರೂ ದೊಡ್ಡ ಜರಿಗಿಡ. (ಸಮೂಹ ವಾಚಕ) ಜರಿಗಿಡಗಳು.

Brácket ಬ್ರ್ಯಾಕೆಟ್ (ನಾ., ಕ್ರಿ. ಸಕ.) ವಿಗ್ರಹ, ಮೊ. ನ್ನು ಇಡುವುದಕ್ಕಾಗಲಿ, ಕಮಾನಿನ ಆಸರೆಗಾಗಲಿ, ಗೋಡೆಯಿಂದ ಮುಂದಕ್ಕೆ ಚಾಚಿಕೊಂಡಿರುವ ಸಮತಲದ ಮೇಲ್ಮೈಯುಳ್ಳ ಭಾಗ : ಚಾಚುಪೀಠ ; (ಗೋಡೆಗೆ ತಗುಲಹಾಕುವ, ತಳಗಡೆ ಆಧಾರವುಳ್ಳ) ಗುಜ್ಜುಬಂಕ. ಆವರಣ ಚಿಹ್ನೆ ; ಕಂಸ. (ಕ್ರಿ.) ಆವರಣದಲ್ಲಿ ಹಾಕು ; ಕಂಸದಲ್ಲಿಡು. (ಹೆಸರುಗಳು ಮೊ. ನ್ನು) ಒಟ್ಟಿಗೆ ಸೇರಿಸು, ಜೊತೆಗೂಡಿಸು (ಅವೆಲ್ಲವೂ ಸಮಾನ ಸ್ಥಾನವುಳ್ಳವೆಂದು ಅಥವಾ ಸಂಬಂಧವುಳ್ಳವೆಂದು ತೋರಿಸುವುದಕ್ಕಾಗಿ). **Brácketed** (ಗು.) ಸಮಾನವಾದ.

Bráckish ಬ್ರ್ಯಾಕಿಷ್ (ಗು.) (ನೀರು) ಉಪ್ಪುಪ್ಪಾಗಿರುವ, ಚೌಳಾದ.

Bract ಬ್ರ್ಯಾಕ್ಟ್ (ನಾ.) ಹೂವಿನ ಹೊದಿಕೆಯ ತಳದಲ್ಲಿರುವ ಸಣ್ಣ ಪತ್ರ ; ತೊಟ್ಟಿನ ಎಲೆ ; ಪುಷ್ಪಪಾತ್ರಪುಚ್ಛ ; (ಪುಷ್ಪ) ಉಪಪತ್ರ. **Brácteal** — ಕ್ಟಿಯಲ್ (ಗು.) ; **Brácteate** — ಯೆಟ್ (ಗು.)

Brad ಬ್ರ್ಯಾಡ್ (ನಾ.) ಸಣ್ಣ ಚಾಚುತಲೆಯುಳ್ಳ, ತೆಳುವಾದ, ಒಂದೇ ದಪ್ಪದ, ಚಪ್ಪಟೆಯ ಮೊಳೆ. (ಬ. ವ.) ಅರ್ಧಪೆನಿಯ ನಾಣ್ಯ(ಗಳು) ; (ಅಸಂ.) ದುಡ್ಡು.

Brádawl ಬ್ರ್ಯಾಡಾಲ್ (ನಾ.) ಕಂಡಿ ಕೊರೆಯುವ, ತಿರುಪಿಲ್ಲದ, ಸಣ್ಣ ಬೈರಿಗೆ ; ಚುಚ್ಚುಬೈರಿಗೆ.

Brádshaw ಬ್ರ್ಯಾಡ್‌ಷಾ (ನಾ.) ಗ್ರೇಟ್‌ಬ್ರಿಟನ್ನಿನಲ್ಲಿ ಪ್ರಯಾಣಿಕರ ಸೌಕರ್ಯಕ್ಕಾಗಿ ರೈಲುಪ್ರಯಾಣದ ವಿಚಾರಗಳನ್ನು ತಿಳಿಸುವ ಮಾರ್ಗಸೂಚಿ. (ಇದನ್ನು ಮೊದಲು ಪ್ರಕಟಿಸಿದಾತನ ಹೆಸರಿನಿಂದ)

Brae ಬ್ರೇ (ನಾ.) ಕಡಿದಾದ ತಟಪ್ರದೇಶ ; ಗುಡ್ಡದ ಕಡಿದಾದ ಪಕ್ಕ ; ಬೆಟ್ಟದ ಇಳುಕಲು.

Brag ಬ್ರ್ಯಾಗ್ (ನಾ., ಕ್ರಿ.) ಜಂಬ(ಕೊಚ್ಚಿಕೊ) ; ಬಡಾಯಿ (ಹೇಳಿಕೊ) ; ಹೆಮ್ಮೆಯ ಮಾತು (ಆಡು). ಬಡಾಯಿಕೋರ ; ಡಂಭಗಾರ. ಒಂದು ಬಗೆಯ ಇಸ್ಪೀಟಾಟ. **Braggadócio** ಬ್ರ್ಯಾಗಡೋಷಿಯೊ (ನಾ.) ಬರಿಯ ಜಂಬದ ಮಾತು ; ಬರಿಯ ಜಂಬಗಾರ **Brággart** ಬ್ರ್ಯಾಗರ್ಟ್ (ನಾ., ಗು.) ಬಡಾಯಿಕೋರ ; ಜಂಬಗಾರ. ಬಡಾಯಿ ಕೊಚ್ಚುವ ; ಜಂಬಕೊಚ್ಚುವ.

Brahm, Bráhma ಬ್ರಾಂ, ಬ್ರಾಮ (ನಾ.) ಬ್ರಹ್ಮ ; ಪರಮೇಶ್ವರ **Bráhmahood** (ನಾ.) ಬ್ರಹ್ಮತ್ವ ; ಸಾಯುಜ್ಯ.

Bráhman. **Brahmin** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bráhmic ಬ್ರಾಮಿಕ್ (ಗು.) 'ಬ್ರಹ್ಮಸಭಾ' ಎಂಬ ಪೂರ್ವದ ಸಂಸ್ಥೆಗೆ, ಅಥವಾ 'ಬ್ರಹ್ಮ ಸಮಾಜ' ಎಂಬ ಈಚಿನ ಸಂಸ್ಥೆಗೆ, ಸಂಬಂಧಪಟ್ಟ. **Bráhmism** (ನಾ.) ಆ ಸಂಸ್ಥೆಯ(ಗಳ) ಮತ ಸಿದ್ಧಾಂತ(ಗಳು)

Bráhmin, -man ಬ್ರಾಮಿನ್, — ಮನ್ (ನಾ.) ಬ್ರಾಹ್ಮಣ (ರೂಪ. ಸಹ). **Brahmineé** (ನಾ.) ಬ್ರಾಹ್ಮಣ ಸ್ತ್ರೀ ; ಬ್ರಾಹ್ಮಣೀ. **Bráhminee** (ಗು.) ಬ್ರಾಹ್ಮಣ ಜಾತಿಯ ; ಬ್ರಾಹ್ಮಣಜಾತಿಗೆ ಸಂಬಂಧಪಟ್ಟ (B. bull, ox ಹಿಂದೂಗಳು ಪೂಜಿಸುವ, ಹಿಳಿಲುಳ್ಳ ಗೂಳಿ. B. fig-tree ಅಶ್ವತ್ಥದ ಮರ. B. kite ಗರುಡ ಪಕ್ಷಿ.). **Brahmínic(al), -mánic(al)** (ಗು.) ; **Bráhminism, -manism** (ನಾ.) ಬ್ರಾಹ್ಮಣ್ಯ ; ವೈದಿಕ ಅಥವಾ ಬ್ರಾಹ್ಮಣ ಮತ.

Braid ಬ್ರೆಯ್ಡ್ (ನಾ., ಕ್ರಿ. ಸಕ.) ಜಡೆ ; ಜಡೆಯ ಪಟ್ಟಿ ; ಹೆಣೆದ ರೇಷ್ಮೆ, ದಾರ, ಮೊ. ಗಳ ಪಟ್ಟಿ. ಜಡೆಹಾಕು ; ಹೆಣೆ ; ಹೆಣೆದು ಅಂಚುಕಟ್ಟು. **Braíding** (ನಾ.)

Braídism ಬ್ರೆಯ್ಡಿಸ್ಮ್ (ನಾ.) ಒಬ್ಬನಿಗೆ ನಿದ್ರಾವಸ್ಥೆಯನ್ನುಂಟು ಮಾಡಿ, ತನ್ನ ಮನಶ್ಶಕ್ತಿಯಿಂದ ಅವನನ್ನು ತಾನು ಹೇಳುವಂತೆ ನಡೆಯುವ ಹಾಗೆ ಪ್ರೇರಿಸುವ ಶಕ್ತಿ, ರೀತಿ ; ಮೂರ್ಛೀಕರಣ ; ಮೂರ್ಛನ ಶಾಸ್ತ್ರ. (ಇದರ ವಿಚಾರವನ್ನು ಶಾಸ್ತ್ರೀಯ ರೀತಿಯಲ್ಲಿ ಮೊದಲು ವಿವರಿಸಿದ Dr. J. Braid ಎಂಬಾತನ ಹೆಸರಿನಿಂದ)

Braille ಬ್ರೇಲ್ (ನಾ.) ಕುರುಡರು ಕೈ ಆಡಿಸಿ ಓದುವುದಕ್ಕೆ ಅನುಕೂಲಿಸುವಂತೆ ರಚಿಸಿದ ಉಬ್ಬುಬರೆವಣಿಗೆ ಅಥವಾ ಮುದ್ರಣ : ಬ್ರೇಲ್ ಲೇಖನ, ಮುದ್ರಣ. (ಈ ಉಪಾಯವನ್ನು ಕಂಡುಹಿಡಿದಾತನ ಹೆಸರಿನಿಂದ)

Brain ಬ್ರೆಯ್ನ್ (ನಾ., ಕ್ರಿ. ಸಕ.) ಮನುಷ್ಯನ ಮತ್ತು ಇತರ ಕಶೇರುಕ ಪ್ರಾಣಿಗಳ ತಲೆಬುರುಡೆಯೊಳಗೆ ಸುತ್ತುಸುತ್ತಾಗಿ ಬಳಸಿಕೊಂಡಿರುವ ನರಪದಾರ್ಥ : ಮಿದುಳು ; ಮಸ್ತಿಷ್ಕ. (ಬ. ವ. ದಲ್ಲಿ) ಮಿದುಳು ಪದಾರ್ಥ. (Blow out one's brains ಗುಂಡುಹಾರಿಸಿ ತಲೆಯೊಡೆ. Beat, cudgel, one's brains ತಲೆಚಚ್ಚಿಕೊಂಡು ಯೋಚಿಸು). ಜ್ಞಾನ ಕೇಂದ್ರ. ಅರಿವು ; ಬುದ್ಧಿ. Have something on the b. ಯಾವುದಾದರೂ ವಿಷಯವಾಗಿ ಹುಚ್ಚುಹಿಡಿದಿರು, ಅದೇ ಗೀಳಾಗಿರು. Suck, pick, one's b. ಒಬ್ಬನ ಭಾವಗಳನ್ನು ಹೀರಿಕೊ, ಗ್ರಹಿಸಿ ಉಪಯೋಗಮಾಡಿಕೊ. Turn one's b. ತಲೆ ತಿರುಗಿಸು ; ಅಹಂಕಾರದಿಂದ ಮೆರೆಯುವಂತೆ ಮಾಡು. **B.-box, -case, -pan** ತಲೆಬುರುಡೆ ; ತಲೆಯೋಡು ; ಕಪಾಲ. **B.-cell** ಮಿದುಳಿನ ಅಣು. **B.-fag** ಬುದ್ಧಿನಿತ್ರಾಣ ; ಮಿದುಳುಸೋಲು. **B. fever** ಮಿದುಳಿನ ಊತ, ಜ್ವರ. **B. sauce** ಬುದ್ಧಿ ; ಪ್ರಜ್ಞೆ. **B.-sick** ಮಿದುಳು ಕೆಟ್ಟ ; ಹುಚ್ಚುಹಿಡಿದ. **B.-tunic** ಮಿದುಳಿನ ಪೊರೆ. **B. wave** (ಬಳ. ಮಾ.) ಥಟ್ಟನೆ ಹೊಳೆಯುವ ಭಾವ, ಕಲ್ಪನೆ, ಬೋಧೆ ; ಸ್ಫೂರ್ತಿ. **B.-worm** ಮಿದುಳಿನ ಹುಳು. (ರೂಪ.) ಪಟ್ಟಿಗೆ ಸಿಕ್ಕದಂತೆ (ನುಣಿಚಿಕೊಂಡು) ವಾದಮಾಡುವವನು. **Braínless** (ಗು.) ಮಿದುಳಿಲ್ಲದ ; ಬುದ್ಧಿಶೂನ್ಯ. **Braíny** (ಗು.) ಮಿದುಳುಳ್ಳ ; ತೀಕ್ಷ್ಣಬುದ್ಧಿಯುಳ್ಳ ; ಚಾತುರ್ಯವುಳ್ಳ.

Brain (ಕ್ರಿ. ಸಕ.) ಬುರುಡೆ ಹಾರಿಸು.

Braird ಬ್ರೇರ್ಡ್ (ನಾ., ಕ್ರಿ. ಅಕ.) (ಹುಲ್ಲು, ಧಾನ್ಯ, ಮೊ. ಗಳ) ಹೊಸ ಮೊಳಕೆ, ಕುಡಿ (ಹೊರಡು) ; ಮೊಳೆ.

Braise ಬ್ರೇಸ್ (ಕ್ರಿ. ಸಕ.) ಮುಚ್ಚಿದ ಪಾತ್ರೆಯಲ್ಲಿಟ್ಟು (ಸಾ., ಕೆಳಗೂ ಮೇಲೂ ಕೆಂಡ ಹಾಕಿ) ಬೇಯಿಸು.

Brake[1] ಬ್ರೇಕ್ (ನಾ.) = Bracken. ಪೊದೆ ; ಮೆಳೆ ; ಹಿಂಡಿಲು ; ಕುರುಚಲು ಗಿಡಗಳ ಗುಂಪು ; ದಟ್ಟವಾದ ಹೊದರು.

Brake[2] ಬ್ರೇಕ್ (ನಾ., ಕ್ರಿ. ಸಕ.) ಸಣಬು, ಪುಂಡಿ, ಮೊ. ಗಳ ನಾರನ್ನು ಬಿಡಿಸುವುದಕ್ಕಾಗಿ ಉಪಯೋಗಿಸುವ ಹಲ್ಲುಗಳುಳ್ಳ ಸಲಕರಣೆ : ನಾರುಹಣಿಗೆ. ಹೆಂಟೆಯೊಡೆಯುವ ಹೆಗ್ಗುಂಟೆ (= B.-harrow). ರೊಟ್ಟಿಮಾಡುವ ಹಿಟ್ಟನ್ನು ನಾದುವ ಯಂತ್ರ. (ಬುಟ್ಟಿ, ಮೊ. ನ್ನು ಮಾಡುವುದಕ್ಕಾಗಿ ಉಪಯೋಗಿಸುವ) 'ವಿಲೋ' ಎಂಬ ಕಡ್ಡಿಗಳ ತೊಗಟೆಯನ್ನು ಸುಲಿಯುವ ಆಯುಧ. (ಕ್ರಿ.) ಸಣಬು, ಪುಂಡಿ, ಮೊ. ನ್ನು ಬಡಿದು ಜಜ್ಜು. ಹೆಗ್ಗುಂಟೆಯಿಂದ ಹೆಂಟೆಯೊಡೆ. ಹಿಟ್ಟು ನಾದು.

Brake[3] ಬ್ರೇಕ್ (ನಾ., ಕ್ರಿ. ಸಕ.) ಚಕ್ರದ ಚಲನೆಯನ್ನು ತಡೆಯಲು ಉಪಯೋಗಿಸುವ ಸಲಕರಣೆ ; ಬಿರಿ ; ತಡೆ. ರೈಲ್‌ಬಂಡಿಯ ಸಾಲಿನಲ್ಲಿ ಬಿರಿಯನ್ನಿಟ್ಟಿರುವ ಬಂಡಿ : ಬಿರಿಗಾಡಿ. ರೈಲ್‌ಬಂಡಿಯಲ್ಲಿ ರಕ್ಷಕನ ಕೋಣೆ (= B.-van). ಎಳೆಯ ಕುದುರೆಗಳನ್ನು ಪಳಗಿಸುವುದಕ್ಕಾಗಿ ಉಪಯೋಗಿಸುವ ಒಡಲಿಲ್ಲದ ಗಾಡಿ. ನಾಲ್ಕು ಚಕ್ರಗಳುಳ್ಳ ಮುಸುಕಿಲ್ಲದ ಸವಾರಿಗಾಡಿ. (ಕ್ರಿ.) ಬಿರಿಹಾಕು. **Brákeless** (ಗು.) ; **Brákesman** — ಮ್ಯಾನ್ (ನಾ.) ಬಿರಿಹಾಕುವವನು.

Brámah ಬ್ರಾ(ಬ್ರಾ)ಮ (ಗು.) Bramah ಎಂಬಾತನಿಂದ ಕಲ್ಪಿತವಾದ (ಬೀಗ, ಪೇನ, ಒತ್ತಡದ ಯಂತ್ರ, ಮೊ.). **B. press** ಅತಿಶಯವಾದ ಒತ್ತಡವನ್ನು ನೀರಿನ ಮೂಲಕ ಪ್ರಯೋಗಿಸಲಾಗುವಂತೆ ರಚಿಸಿರುವ ಒತ್ತುಯಂತ್ರ.

Brámble ಬ್ರ್ಯಾಂಬ್ಲ್ (ನಾ.) ಒಂದು ಬಗೆಯ ಮುಳ್ಳುಪೊದೆ. **Brámbly** (ಗು.)

Bran ಬ್ರ್ಯಾನ್ (ನಾ.) ಹೊಟ್ಟು ; ಉಯ್ಯಿ.

Bráncard ಬ್ರ್ಯಾಂಕರ್ಡ್ (ನಾ.) ಕುದುರೆಕಟ್ಟುವ ಮೇನ.

Branch ಬ್ರಾಂಚ್ (ನಾ.) ಕೊಂಬೆ ; ರೆಂಬೆ ; ಟೊಂಗೆ ; ಕವಲು ; ಶಾಖೆ. Root-and-branch (ಗು.) ಆಮೂಲಾಗ್ರ. Root and b. (ಕ್ರಿ. ವಿ.) ಆಮೂಲಾಗ್ರವಾಗಿ. Root-and-b. reform ಬುಡಮುಟ್ಟ ನಾಶಮಾಡುವ ಸುಧಾರಣೆ. To destroy root and b. ನಿರ್ಮೂಲ ಮಾಡುವುದು. **Branched** (ಗು.) ; **Bránchless** (ಗು.) ; **Bránchlet** (ನಾ.) ಸಣ್ಣ ಕೊಂಬೆ. **Bránchy** (ಗು.) ಕೊಂಬೆ ಕೊಂಬೆಯಾಗಿರುವ.

Branch (ಕ್ರಿ. ಅಕ.) ಕೊಂಬೆಯೊಡೆ ; ಕವಲೊಡೆ. ಹೊರಹೊರಡು ; ಹರಡಿಕೊ ; ಹಬ್ಬು ; ಪ್ರಸರಿಸು ; ವಿಸ್ತರಿಸು ; ಬಿಟ್ಟುಹೊರಡು (*out, forth, into, off, away,* ಒಡನೆ)

Bránchia(e) ಬ್ರ್ಯಾಂಕಿಯ(ಯಿ) (ನಾ., ಬ. ವ.) ಮೀನು, ಮೊ. ಗಳ ಶ್ವಾಸಾಂಗಗಳು ; ಜಲಶ್ವಾಸಾಂಗಗಳು. **Bránchial** (ಗು.) ; **Bránchiate** (ಗು.) ಜಲಶ್ವಾಸಾಂಗಗಳುಳ್ಳ. **Branchíferous** (ಗು.) ಜಲಶ್ವಾಸಾಂಗ ಧಾರಿ. **Bránchiform** (ಗು.) ಜಲಶ್ವಾಸಾಂಗಾಕಾರದ. **Bránchiopod** — ಯೊಪಾಡ್ (ನಾ.) ಜಲಶ್ವಾಸಾಂಗಗಳನ್ನು ಕಾಲಿನಲ್ಲುಳ್ಳ ಒಂದು ಜಾತಿಯ ವಲ್ಕವಂತಪ್ರಾಣಿ : ಜಲಪುಪ್ಪುಸ ಪಾದಿ.

Brand ಬ್ರ್ಯಾಂಡ್ (ನಾ., ಕ್ರಿ. ಸಕ.) ಉರಿಯುತ್ತಿರುವ ಅಥವಾ ಸುಟ್ಟ ಕಟ್ಟಿಗೆ : ಕೊಳ್ಳಿ (B. from the burning ಕಷ್ಟದಿಂದ ರಕ್ಷಿಸಲ್ಪಟ್ಟವನು ; ಮತಾಂತರಕ್ಕೆ ತಿರುಗಿಸಲ್ಪಟ್ಟವನು). (ಕಾವ್ಯ) ಪಂಜು. ಬರೆ ; ಕಾದ ಕಬ್ಬಿಣದಿಂದ ಒತ್ತಿ ಮಾಡಿದ ಮುದ್ರೆ ; ಸೂಡು ; ಅಂಕನ. ಕಲೆ ; ಕಳಂಕ ; ದೋಷ ; ನಿಂದೆ (The b. of Cain ಹತ್ಯದೋಷ ; ಕೊಲೆಪಾತಕ). ವ್ಯಾಪಾರದ ಗುರುತು, ಮುದ್ರೆ. ಒಂದು ಗೊತ್ತಾದ ತೆರದ ಸರಕು. ಗುರುತು ಸುಡುವ ಕಬ್ಬಿಣದ ಮುದ್ರೆ : ಸುಡುಮುದ್ರೆ. (ಎಲೆ, ಮೊ. ಸುಟ್ಟಂತೆ ತೋರುವ) ಒಂದು ವಿಧದ ಸಸ್ಯವ್ಯಾಧಿ. (ಕಾವ್ಯ) (ಝಳಪಿಸುವ) ಕತ್ತಿ. (ಕ್ರಿ.) (ಚಿಕಿತ್ಸೆಗಾಗಲಿ ತಪ್ಪಿತಕ್ಕಾಗಲಿ ಗುಣತೋರ್ಕೆಗಾಗಲಿ ಸ್ವಾಮ್ಯಸೂಚನೆಗಾಗಲಿ) ಬರೆಹಾಕು, ಮುದ್ರೆ ಸುಡು. ಮನಸ್ಸಿಗೆ ನಾಟುವಂತೆ ಮಾಡು. ಕಳಂಕ ಹಚ್ಚು. **B.-new, Brán-new** ಕೇವಲ ಹೊಸ ; ಹೊಚ್ಚ ಹೊಸ.

Brándish ಬ್ರ್ಯಾಂಡಿಷ್ (ಕ್ರಿ. ಸಕ.) ಪ್ರದರ್ಶನಕ್ಕಾಗಲಿ ಕಾರ್ಯಾರಂಭ ಸೂಚನೆಗಾಗಲಿ (ಆಯುಧ, ಮೊ. ನ್ನು) ಬೀಸು, ತಿರುಗಿಸು, ಆಡಿಸು, ಝಳಪಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Brándling ಬ್ರ್ಯಾಂಡ್ಲಿಂಗ್ (ನಾ.) (ಮೀನಿನ ಗಾಳಕ್ಕೆ ಉಪಯೋಗಿಸುವ) ಹೊಳಪು ಉಂಗುರಗಳುಳ್ಳ ಕೆಂಪು ಎರೆಹುಳು.

Brándreth ಬ್ರ್ಯಾಂಡ್ರೆತ್ (ನಾ.) ಪೀಪಾಯಿಗೆ ಮರದ ನಿಲವು. ಹುಲ್ಲಿನ ಮೆದೆ, ಮೊ. ಗಳ ಮರದ ಅಟ್ಟ.

Brándy ಬ್ರ್ಯಾಂಡಿ (ನಾ.) (ದ್ರಾಕ್ಷಾಮದ್ಯದಿಂದ ಬಟ್ಟಯಿಳಿಸಿ ತೆಗೆದ) ತೀಕ್ಷ್ಣ ಮದ್ಯ: ಬ್ರಾಂದಿ. **B.-ball** ಒಂದು ತೆರದ ಮಿಠಾಯಿ. **B.-bottle** ಬ್ರಾಂದಿ ಬುಡ್ಡಿ (ರೂಪ. ಸಹ). (ಸ. ವಿ.) ಒಂದು ಜಾತಿಯ ಹಳದಿಯ ಬಣ್ಣದ ನೀರುಹೂವು. **B. pawnee** ಬ್ರಾಂದಿ ಮತ್ತು ನೀರು. **B.-snap** ತೆಳ್ಳನೆಯ ಒಂದು ತೆರದ ಪಾಕದರೊಟ್ಟಿ.

Brán-new. **Brand** ನೋಡಿ.

Brash ಬ್ರ್ಯಾಷ್ (ನಾ.) (ಕಲ್ಲು, ನೀರ್ಗಲ್ಲು, ಮೊ. ಗಳ ಚೂರುಗಳ) ರಾಶಿ, ಗುಡ್ಡೆ. (ಬೇಲಿಕತ್ತರಿಸಿದಾಗ ಬೀಳುವ ರೆಂಬೆಯ ಚೂರುಗಳು, ಕಸ, ಮೊ. ಗಳ) ಕುಪ್ಪೆ.

Brass ಬ್ರಾಸ್ (ನಾ., ಗು.) ಹಿತ್ತಾಳೆ (೨ ಭಾಗ ತಾಮ್ರ, ೧ ಭಾಗ ಸತ್ತು ಸೇರಿ ಆದ ಮಿಶ್ರಲೋಹ). (ಸತ್ತುವರ ಜ್ಞಾಪಕಾರ್ಥವಾಗಿ ಗೋರಿಯ ಮೇಲೆ ಹಾಕುವ, ಅಕ್ಷರ, ಚಿತ್ರ, ಮೊ. ನ್ನು ಕೆತ್ತಿದ) ಹಿತ್ತಾಳೆಯ ಹಲಗೆ; ಸ್ಮಾರಕ ಪಟ್ಟಿ. ಮೇಳದವರ ಹಿತ್ತಾಳೆಯ ವಾದ್ಯಗಳು (= The b.). (ಅಸಂ.) ಹಣ. (ರೂಪ.) ನಾಚಿಕೆಗೇಡಿತನ; ಧಾರ್ಷ್ಟ್ಯ; ಧೃಷ್ಟತನ. (ಗು.) ಹಿತ್ತಾಳೆಯಿಂದ ಮಾಡಿದ. **B. band** ಹಿತ್ತಾಳೆಯ ವಾದ್ಯಗಳನ್ನು ಬಾಜಿಸುವ ವಾದ್ಯಗಾರರ ತಂಡ. **B. farthing** ಕೇವಲ ಕನಿಷ್ಠ ನಾಣ್ಯ; ಚಿಕ್ಕಕಾಸು (Don't care a b. farthing ಕಾಸಿಗೆ ಕಡೆಯಾಗಿ ನೋಡು; ಕೇವಲ ಅಲಕ್ಷ್ಯವಾಗಿ ಕಾಣು). **B. hat** (ಸ್ಯೆನ್ಯದ ಅಸಂ.) ದೊಡ್ಡ ಹುದ್ದೇದಾರ. **B. plate** (ಬಾಗಿಲು, ಹೆಬ್ಬಾಗಿಲು, ಕಿಟಕಿ, ಮೊ. ಗಳಮೇಲೆ ಹಾಕಿರುವ) ಹೆಸರು, ಉದ್ಯೋಗ, ಮೊ. ನ್ನು ಬರೆದಿರುವ ಹಿತ್ತಾಳೆಯ ಹಲಗೆ: ಹೆಸರುಹಲಗೆ. Get down to b. tacks ಕೆಲಸಕ್ಕಿಳಿ. **Brássy** (ಗು., ನಾ.) (ಬಣ್ಣ, ನಾದ, ರುಚಿ — ಇವುಗಳಲ್ಲಿ) ಹಿತ್ತಾಳೆಯಂತಿರುವ. ಧೃಷ್ಟ; ನಿರ್ಲಜ್ಜ; ಉದ್ಧಟ; ಡಾಂಭಿಕ; ದುರಭಿಮಾನದ. ಹಿತ್ತಾಳೆಯ ಅಣಹುಳ್ಳ ಗಾಲ್ಫ್ ಆಟದ ದಾಂಡು. **Brássily** (ಕ್ರಿ. ವಿ.); **Brássiness** (ನಾ.)

Brass (ಕ್ರಿ. ಸಕ.) ಕೊಟ್ಟುಬಿಡು; ತೀರಿಸಿಬಿಡು (= B. up)

Brássage ಬ್ರ್ಯಾಸೆಜ್ (ನಾ.) (ಲೋಹದಿಂದ) ನಾಣ್ಯ ಮಾಡಿಕೊಡುವುದಕ್ಕಾಗಿ ಟಂಕಸಾಲೆಗೆ ಕೊಡಬೇಕಾದ ರುಸುಮು: ಟಂಕ ಶುಲ್ಕ.

Brassárd ಬ್ರಸಾರ್ಡ್ (ನಾ.) ತೋಳಿಗೆ ಹಾಕಿಕೊಳ್ಳುವ ಲಾಂಛನ, ಕುರುಹು, ಬಿಲ್ಲೆ: ತೋಳ್ಬಿಲ್ಲೆ.

Brássica ಬ್ರ್ಯಾಸಿಕ (ನಾ.) ಕೋಸು, ಸಾಸವೆ, ಮೂಲಂಗಿ, ಮೊ. ಗಿಡಗಳನ್ನೊಳಕೊಂಡ ಸಸ್ಯಜಾತಿ.

Brat ಬ್ರ್ಯಾಟ್ (ನಾ.) ಮಗು (ಎಂಬ ಅರ್ಥದಲ್ಲಿ ತುಚ್ಛವಾಗಿ); ಚಿಳ್ಳೆ.

Bráttice ಬ್ರ್ಯಾಟಿಸ್, **Brátticing** ಬ್ರ್ಯಾಟಿಸಿಂಗ್ (ನಾ.) (ಕಲ್ಲಿದ್ದಲು ಗಣಿಯಲ್ಲಿ) ಇಳಿಗಂಡಿಯನ್ನು ಎರಡು ಭಾಗವಾಗಿ ಪ್ರತ್ಯೇಕಿಸುವ, ಅಥವಾ ಪಕ್ಕಗಳಿಗೆ ಹದ್ದಿಸಿದ, ತಡಿಕೆ.

Braváda ಬ್ರವೇ(ವಾ)ಡೊ (ನಾ.; ಬ. ವ. -oes, -os) ಧೈರ್ಯ ಅಥವಾ ಎದೆಗಾರಿಕೆಯನ್ನು ಡಂಭದಿಂದ ತೋರಿಸಿಕೊಳ್ಳುವುದು: ಶೌರ್ಯಾಟೋಪ.

Brave ಬ್ರೇವ್ (ಗು., ನಾ.) ಧೀರ(ನಾದ); ಧೈರ್ಯಶಾಲಿ(ಯಾದ); ಕೆಚ್ಚೆದೆ(ಯ). (The b. ಧೀರರು). (ಪ್ರಾಚೀ. ಪ್ರ., ಕಾವ್ಯ) ಸೊಗಸಾದ; ಮೆರೆಯುವ; ಯೋಗ್ಯತೆಯುಳ್ಳ; ಘನ; ಶ್ಲಾಘ್ಯ; ಪ್ರಾಮಾಣಿಕ. (ನಾ.) 'ರೆಡ್ ಇಂಡಿಯನ್' ಯೋಧ. **Brávely** (ಕ್ರಿ. ವಿ.); **Brávery** -ವೆರಿ (ನಾ.) ಧೈರ್ಯ; ಎದೆ; ಗುಂಡಿಗೆ; ಕೆಚ್ಚು; ಕಲಿತನ. ತೇಜಸ್ಸು; ಪ್ರಭೆ; ಪ್ರತಾಪ. ಸೊಗಸು; ಮೆರೆತ; ಆಟೋಪ.

Brave (ಕ್ರಿ. ಸಕ.) ಎದುರಿಸು; ಲಕ್ಷ್ಯಮಾಡದಿರು; ತಿರಸ್ಕಾರದಿಂದ ನೋಡು. B. it out ನಿಂದೆ ಅಪನಂಬಿಕೆಗಳಿಗೆ ಲಕ್ಷ್ಯಕೊಡದೆ ಆದದ್ದಾಗಲೆಂದು ಸಾಧಿಸು.

Brávo[1] ಬ್ರಾವೊ (ನಾ., ಬ. ವ. -oes, -os) ಕೂಲಿಯ ಕೊಲೆಗಡಿಕ; ಕೊಲೆಪಾತಕ; ಘಾತಕ; ಜೀವದ ಹಂಗು ತೊರೆದ ದುಷ್ಟ; ಯಾವುದಕ್ಕೂ ಹೇಸದವನು.

Brávo[2] ಬ್ರಾವೊ (ಭಾವ. ಅವ್ಯ., ನಾ.) ಭೇಷ್! ಭಲಾ! (ನಟರು, ಮೊ. ನ್ನು ಕುರಿತು ಹೇಳುವ) ಪ್ರೋತ್ಸಾಹದ ಮಾತು.

Bravúra (It.) ಬ್ರಾವೂರ (ನಾ.) ಸಾಹಸ ಪ್ರದರ್ಶನ. ಉಜ್ಜೃಂಭಣೆ; ಆಟೋಪ. ಅಸಾಧಾರಣ ಕೌಶಲದಿಂದ ಹಾಡಬೇಕಾದ ಕ್ಲಿಷ್ಟವಾದ ಹಾಡು: ಘನ ಕೀರ್ತನೆ.

Brawl ಬ್ರಾಲ್ (ನಾ., ಕ್ರಿ. ಅಕ.) ಕಾದಾಟ; ಕಾದಾಡು; ಬೀದಿಯ ಜಗಳ(ವಾಡು); ರಂಪು (ಎಬ್ಬಿಸು). (ಹೊಳೆ) ಗುಳುಗುಳುಧ್ವನಿ (ಮಾಡು); ಗುಳುಗುಳನೆ ಹರಿ. **Bráwler** (ನಾ.)

Brawn ಬ್ರಾನ್ (ನಾ.) ಮಾಂಸ ಖಂಡ; ಸ್ನಾಯು (ಮು., ತೋಳು, ತೊಡೆ, ಹೆಬ್ಬೆರಳು — ಇವುಗಳದು). ಊರಿಟ್ಟ ಅಥವಾ ಮಡಕೆಯಲ್ಲಿ ತುಂಬಿಟ್ಟ ಹಂದಿಯ ಮಾಂಸ. **Bráwny** (ಗು.) ಬಲವಾದ; ತುಂಬಿದ ಮೈಯುಳ್ಳ; ಮಾಂಸಲ. **Bráwniness** (ನಾ.)

Bráxy ಬ್ರ್ಯಾಕ್ಸಿ (ನಾ., ಗು.) ಕುರಿಗಳಿಗೆ ತಗುಲುವ ಒಂದು ತೆರದ (ಪ್ಲೀಹ) ಗುಲ್ಮ ರೋಗ. ಈ ರೋಗದಿಂದ ನರಳುತ್ತಿರುವ; ಈ ರೋಗದ ಕುರಿಯ (ಮಾಂಸ).

Bray[1] ಬ್ರೇ (ನಾ., ಕ್ರಿ.) ಕತ್ತೆಯ, ತುತೂರಿಯ, ಅಥವಾ ಅವುಗಳಂಥ, ದನಿ. ಹೀಗೆ ಅರಚು, ಕಿರಿಚು. B. out ಕಿರಿಚಿಕೊ; ಅರಚಿಕೊ; ಒದರು.

Bray[2] ಬ್ರೇ (ಕ್ರಿ. ಸಕ.) ಕುಟ್ಟು; ಪುಡಿಮಾಡು; ಅರೆ (ಮು., ಒರಳಿನಲ್ಲಿ)

Braze ಬ್ರೇಯ್ಸ್ (ಕ್ರಿ. ಸಕ.) ಹಿತ್ತಾಳೆಯ ಬಣ್ಣ ಕೊಡು, ಹಾಕು. (ಹಿತ್ತಾಳೆ ಮತ್ತು ಸತ್ತುವಿನ ಬೆಸುಗೆಯಿಂದ) ಬೆಸೆ. **Brázen** ಬ್ರೇಯ್ಸ್ನ್ (ಗು., ಕ್ರಿ. ಸಕ.) ಹಿತ್ತಾಳೆಯಿಂದ ಮಾಡಿದ; (ಹಿತ್ತಾಳೆಯಂತೆ) ಗಟ್ಟಿಯಾದ; ಹಳದಿಯ ಬಣ್ಣದ; ಬಿರು ದನಿಯುಳ್ಳ. (ರೂಪ.) ನಾಚಿಕೆಗೆಟ್ಟ; ಥಂಡ (= B.-faced). [B. age ಹಿತ್ತಾಳೆಯ ಯುಗ. ಮನುಷ್ಯನ ಇಳಿಗತಿಯಲ್ಲಿ (ಚಿನ್ನ, ಬೆಳ್ಳಿ, ಹಿತ್ತಾಳೆ, ಕಬ್ಬಿಣ ಎಂಬ ನಾಲ್ಕು ಯುಗಗಳಲ್ಲಿ) ಮೂರನೆಯ ಯುಗ. B. face ಲಜ್ಜೆ ತೋರದ ಮುಖ; B.-face ನಾಚಿಕೆಗೆಟ್ಟವನು; ಧೃಷ್ಟ]. (ಕ್ರಿ., *out* ಉಪ. ಜೊತೆ) ನಿರ್ಲಕ್ಷ್ಯವಾಗಿ ನಡೆಯಿಸಿಬಿಡು; ಸಾಧಿಸಿಬಿಡು; ದಬಾಯಿಸಿಬಿಡು. ಧೃಷ್ಟನಾಗಿರು; ನಿರ್ಲಜ್ಜನನ್ನಾಗಿ ಮಾಡು. **Brázenly** (ಕ್ರಿ. ವಿ.); **Brázier**[1] ಬ್ರೇಸಿ(ಷಿ)ಯರ್ (ನಾ.) ಹಿತ್ತಾಳೆಯ ಕೆಲಸದವನು. **Bráziery** (ನಾ.) ಹಿತ್ತಾಳೆಗಾರನ ಕೆಲಸ; ಹಿತ್ತಾಳೆಯ ಕೆಲಸ.

Brázier[2] ಬ್ರೇಸಿ(ಷಿ)ಯರ್ (ನಾ). ಕೆಂಡ ಇಡುವ ತಟ್ಟೆ; ಅಗ್ಗಿಷ್ಟಿಗೆ.

Brazíl ಬ್ರಸಿಲ್ (ನಾ., ಗು.) ದ. ಅಮೆರಿಕದಲ್ಲಿಯ ಒಂದು ದೇಶ. ವರ್ಣದ್ರವ್ಯಗಳನ್ನು ಕೊಡುವ ದ. ಅಮೆರಿಕದ ಹಲವು ಬಗೆಯ ಗಟ್ಟಿಮರಗಳು (= B.-wood). **B.-nut** ರುಚಿಯಾದ ಬಿತ್ತವಿರುವ ಮುಮ್ಮೂಲೆಯ ಒಂದು ಕರಟಕಾಯಿ. **Brazílian** (ಗು., ನಾ.); **Brázilin** ಬ್ರ್ಯಾಸಿಲಿನ್ (ನಾ) ಬ್ರಸಿಲ್‌ಮರದ ಕೆಂಪು ವರ್ಣದ್ರವ್ಯ.

Breach ಬ್ರೀಚ್ (ನಾ., ಕ್ರಿ.) (ನೌಕ) ಅಲೆಗಳು ದಡಕ್ಕೊ ಹಡಗಿಗೊ ಹೊಡೆದು ಚೆದರುವುದು: ತರಂಗ ಭಂಗ (Clear b. ಅಲೆಗಳು ಒಡೆಯದೆ ಉರುಳಿಹೋಗುವುದು. Clean b. ಹಡಗಿನ ಪಟಗಳನ್ನೂ ಹಡಗಿನ ಮೇಲ್ಗಲದಲ್ಲಿರುವ ಎಲ್ಲ ಪದಾರ್ಥಗಳನ್ನೂ ಹೊಡೆದುಕೊಂಡುಹೋಗುವುದು). (ನಿಯಮ, ಕರ್ತವ್ಯ, ಒಪ್ಪಂದ, ಹಕ್ಕುಬಾಧ್ಯತೆ, ವಾಗ್ದಾನ — ಇವುಗಳ) ಉಲ್ಲಂಘನೆ, ಭಂಗ, ಅತಿಕ್ರಮ, ಮುರಿತ, ತಪ್ಪುವುದು, ಮೀರುವುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(B. of close ಅತಿಕ್ರಮಣ ; ಅಕ್ರಮಪ್ರವೇಶ. B. of the peace ಶಾಂತಿ ಭಂಗ ; ದೊಂಬಿಯ ಜಗಳ ; ಬಡಿದಾಟ). ಸಂಬಂಧದ ತೊರೆಹ ; ಬೇರೆಯಾಗುವುದು ; ಭೇದ ; ಮನಸ್ತಾಪ ; ಜಗಳ. ಕಂಡಿ ; ಒಡಕು ; ಛಿದ್ರ ; ಸಂದು (ಮು., ಕೋಟೆಯ ಗೋಡೆಯಲ್ಲಿ ಫಿರಂಗಿಯಿಂದಾದದ್ದು. Stand in the b. ದಾಳಿಗೆ, ವಿಪತ್ತಿಗೆ, ಎದೆಯೊಡ್ಡು). ನೀರುಬಿಟ್ಟು ಹೊರಕ್ಕೆ ಎಗುರುವ ತಿಮಿಂಗಿಲದ ನೆಗೆತ. (ಕ್ರಿ.) ಭೇದಿಸಿ ನುಗ್ಗು. ಸಂದು ಮಾಡು, — ಕೆಡಹು. (ತಿಮಿಂಗಿಲದ ವಿಷಯದಲ್ಲಿ) ನೀರಿನಿಂದ ಹೊರಕ್ಕೆ ಎಗುರು, ನೆಗೆ.

Bread ಬ್ರೆಡ್ (ನಾ.) (ಧಾನ್ಯದ ಹಿಟ್ಟನ್ನು ಕಲಸಿ, ನಾದಿ, ಸಾ., ಉದುಗು ಹಾಕಿ, ಒಲೆಯಲ್ಲಿಟ್ಟು ಸುಟ್ಟ) ರೊಟ್ಟಿ (White b. ತವುಡನ್ನು ಪೂರ್ತಿಯಾಗಿ ತೆಗೆದುಹಾಕಿ ಮಾಡಿದ ಬಿಳಿಯ ರೊಟ್ಟಿ. Brown b. ನವಿರಾದ ತವುಡನ್ನು ಉಳಿಸಿ ಮಾಡಿದ ಕಂದುಬಣ್ಣದ ರೊಟ್ಟಿ. Black b. ರೈ, ಮೊ. ಕೀಳ್ತರದ ಧಾನ್ಯಗಳಿಂದ ಮಾಡಿದ ಒರಟು ಕರಿಯ ರೊಟ್ಟಿ. Daily b. ಅನ್ನ ; ಜೀವಿಕೆ ; ಜೀವನಾಧಾರ ; ಹೊಟ್ಟೆಯ ಪಾಡು. Ship's b. (ನೌಕ) ಗಟ್ಟಿರೊಟ್ಟಿ. Standard b. ನಿಯಮಾನುಸಾರವಾಗಿ ಹಿಟ್ಟುಗಳನ್ನು ಬೆರಸಿ ಮಾಡಿದ ಗೋಧಿಯ ರೊಟ್ಟಿ). (ರೂಪ.) ಅನ್ನ ; ಆಹಾರ ; ಜೀವನಾಧಾರ. B. and butter ಬೆಣ್ಣೆಬಳಿದ ರೊಟ್ಟಿಯ ಹೋಳುಗಳು ; ಅನ್ನ ; ಊಟ ; ಜೀವನಾಧಾರ. B. and butter miss ಪಾಠಶಾಲೆಯ ಹುಡುಗಿ. B. and cheese ರೊಟ್ಟಿ ಮತ್ತು 'ಚೀಸ್'; (ರೂಪ.) ತಿಳಿಯೂಟ ; ಸಾಮಾನ್ಯರ ಊಟ ; ಜೀವನಾಧಾರ. B. and milk ರೊಟ್ಟಿಯ ಚೂರುಗಳನ್ನು ಹಾಲಿನಲ್ಲಿ ಬೇಯಿಸಿ ಮಾಡಿದ ಆಹಾರ. B. and scrape ನೆಪಕ್ಕೆ ಬೆಣ್ಣೆ ಹಚ್ಚಿದ ರೊಟ್ಟಿ. B. and wine ಕ್ರೈಸ್ತರು ಆಚರಿಸುವ Lord's Supper ಎಂಬ ಸ್ಮಾರಕ ಭೋಜನ : ಪ್ರಭುಭೋಜನ. B. of life ಏಸುಕ್ರಿಸ್ತ ; ಅಧ್ಯಾತ್ಮ ಬೋಧೆ ಮಾಡುವವನು ; ಅಂಥ ಬೋಧೆ. B. buttered on both sides ಸುಖ ಜೀವಿಕೆ ; ನಿಶ್ಚಿಂತೆಯಾದ ಜೀವನ ; ಅನಾಯಾಸವಾಗಿ ಬಂದ ಏಳಿಗೆ ; ಒಳ್ಳೆಯ ಅದೃಷ್ಟ ; ಭಾಗ್ಯೋದಯ. Break b. ಆಹಾರ ತೆಗೆದುಕೊ ; ಊಟಮಾಡು. (ಕ್ರೈಸ್ತ) ಪ್ರಭುಭೋಜನ ಸಂಸ್ಕಾರವನ್ನು ನಡೆಯಿಸು, ಅಥವಾ ಅದರಲ್ಲಿ ಭಾಗಿಯಾಗು. Eat the b. of idleness, affliction ಸೋಮಾರಿಯಾಗಿರು ; ನಿರುದ್ಯೋಗಿಯಾಗಿರು. ಕೊರಗು ; ಸಂಕಟಪಡು. Know which side of one's b. is buttered ಯಾವುದು ಅನುಕೂಲವೊ (ಮೇಲೊ) ಅದನ್ನು ಅರಿತುಕೊ ; ಸ್ವಹಿತಕ್ಕೆ ಲಕ್ಷ್ಯ ಕೊಡು. Make one's b. ಅನ್ನ ಸಂಪಾದಿಸಿಕೊ ; ಹೊಟ್ಟೆ ಹೊರೆದುಕೊ. Take the b. out of one's mouth (ಸ್ವಾರ್ಥತೆಯಿಂದ) ಒಬ್ಬನ ಅನ್ನಕ್ಕೆ ಕಲ್ಲುಹಾಕು ; ಒಬ್ಬನ ಅನ್ನವನ್ನು ಕಿತ್ತುಕೊ. **B.-basket** ರೊಟ್ಟಿಯ ಬುಟ್ಟಿ. (ಅಸಂ.) ತುತ್ತಿನ ಚೀಲ ; ಹೊಟ್ಟೆ. **B.-crumb** ರೊಟ್ಟಿಯ ಚೂರು ; ರೊಟ್ಟಿಯೊಳಗಿನ ಮೆತ್ತನೆಯ ಭಾಗ. (ಸಾ., ಬ. ವ. ದಲ್ಲಿ) ಮೀನು, ಮೊ. ಅಡಿಗೆಯ ಪದಾರ್ಥಗಳೊಡನೆ ಸೇರಿಸುವ ರೊಟ್ಟಿಯ ಚೂರು. **B.-fruit** 'ಸೌತ್ ಸೀ' ಪ್ರದೇಶದಲ್ಲಿಯ, ಹಲಸಿನ ಜಾತಿಯ, ಹಿಟ್ಟಿನಂತಿರುವ ತಿರುಳುಳ್ಳ, ಕಾಯಿ, ಹಣ್ಣು : ದ್ವೀಪದ ಹಲಸು. **B.-stuffs** ಧಾನ್ಯ ; ಕಾಳು ; ಹಿಟ್ಟು. **B.-ticket** ಆಹಾರದ ಚೀಟಿ ; ಹಿಟ್ಟಿನ ಚೀಟಿ. **B.-winner** ಕುಟುಂಬಪೋಷಣೆಗಾಗಿ ದುಡಿಯುವವನು ; ಅನ್ನ ತಂದುಹಾಕುವವನು ; ಕುಟುಂಬ ಜೀವನ ಸಾಧನ (ಕಲೆ, ವ್ಯಾಪಾರ, ಉದ್ಯೋಗ, ಉಪಕರಣ). **Breádless** (ಗು.) ಆಹಾರವಿಲ್ಲದ. **Breádlessness** (ನಾ.)

Breadth ಬ್ರೆಡ್ತ್ (ನಾ.) ಅಗಲ ; ಅಡ್ಡಗಲ (To a hair's b. ಕೂದಲೆಳೆಯಷ್ಟೂ ವ್ಯತ್ಯಾಸವಿಲ್ಲದೆ ; ಸರಿಯಾಗಿ). (ಬಟ್ಟೆ, ಮೊ.) ಪನ್ನ ; ಪೂರಾ ಪನ್ನದ ಥಾನು. ವಿಸ್ತಾರ ; ಅವಕಾಶ ; ದೂರ. (ಮನಸ್ಸು, ಭಾವ, ನೋಟ, ಮೊ.) ವೈಶಾಲ್ಯ ; ಔದಾರ್ಯ ; ಸರ್ವ ಸಮತೆ. ವ್ಯಾಪನೆ ; ಪ್ರಭಾವ. **Breádthways, -wise** — ಸ್ (ಕ್ರಿ. ವಿ.) ಅಡ್ಡಡ್ಡಲಾಗಿ.

Break ಬ್ರೇಕ್ [ಕ್ರಿ. ; ಭೂತ. Broke, (ಬೈಬಲ್ಲಿನಲ್ಲಿ) Brake ; ಭೂ. ಕೃ. Broken, Broke] ಮುರಿ ; ಒಡೆ ; ಪ್ರತ್ಯೇಕಿಸು ; ಬೇರ್ಪಡಿಸು ; ಬೇರ್ಪಡು ; ಚೂರುಚೂರು ಮಾಡು, ಆಗು ; ಮುರಿದು ಹೋಗು ; ಒಡೆದುಹೋಗು ; ಶಿಥಿಲವಾಗು. ತಡೆ ; ತಡೆಗಟ್ಟು ; ನಿಲ್ಲಿಸು (B. blow ಪೆಟ್ಟು ಹೆಚ್ಚಾಗಿ ತಾಕದಂತೆ ತಡೆ. B. fall ಬೀಳುತ್ತಿರುವಾಗ ತಡೆಗಟ್ಟು). ಮೀರು ; ಅತಿಕ್ರಮಿಸು (B. the law ಕಾನೂನನ್ನತಿಕ್ರಮಿಸು). Ball breaks ಚೆಂಡು ಮಾರ್ಗಬಿಟ್ಟು ಹೊರಳುತ್ತದೆ. B. away from ತಪ್ಪಿಸಿಕೊಂಡುಹೋಗು ; ಬಿಡಿಸಿಕೊಂಡು ಹೋಗು ; ಅಗಲಿಹೋಗು. B. bread with ಒಬ್ಬನ ಜೊತೆಯಲ್ಲಿ (ಮನೆಯಲ್ಲಿ) ಊಟಮಾಡು. B. bulk ಸಾಮಾನನ್ನು ಇಳಿಸಲು ಆರಂಭ ಮಾಡು. B. butterfly on wheel ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿಯೇಟು ಹಾಕು ; ಗುಬ್ಬಿಯಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸು ; ಅನವಶ್ಯವಾಗಿ ಶಕ್ತಿವ್ಯಯ ಮಾಡು. B. contract ಒಪ್ಪಂದವನ್ನು ತಪ್ಪು, ಮುರಿ. B. down ಕೆಡವು ; ಉರುಳಿಸು ; ಧ್ವಂಸಮಾಡು. ಕುಗ್ಗಿಹೋಗು ; ಕುಸಿದುಬೀಳು ; ತ್ರಾಣಗುಂದು ; ಮುರಿದುಬೀಳು ; ನೆಲಮಟ್ಟವಾಗು ; ನಾಶವಾಗು. B. one's fast ಉಪವಾಸ ಮುಗಿಸು ; ಪಾರಣೆ ಮಾಡು ; ಮೊದಲೂಟ ಮಾಡು. B. forth ಮುಂದೆ ನುಗ್ಗು ; ಹೊರಬೀಳು. B. free, B. loose (ಸೆರೆ, ಮೊ. ಬಂಧನದಿಂದ) ತಪ್ಪಿಸಿಕೊ ; ಕಟ್ಟು ಹರಿದುಕೊಂಡುಹೋಗು. B. ground ಉಳು. ಮುತ್ತಿಗೆಯನ್ನಾರಂಭಿಸು ; (ರೂಪ.) ಕಾರ್ಯಾರಂಭಮಾಡು. B. the heart ಎದೆಯೊಡೆ. B. a horse (to the rein) ಕುದುರೆಯನ್ನು (ಕಡಿವಾಣಕ್ಕೆ) ಪಳಗಿಸು. B. the ice ಚಳಿ ಮುರಿ ; (ಸಂಕೋಚದಿಂದ ಮೌನವಾಗಿರುವ ಸಂದರ್ಭದಲ್ಲಿ) ಮಾತಿಗೆ ಮೊದಲುಮಾಡು ; ಸಿಗ್ಗುಬಿಡಿಸು ; ಆರಂಭಮಾಡು. B. in ಒಳನುಗ್ಗು ; ಅಡ್ಡಬರು ; ಮಧ್ಯೆ ತಲೆಹಾಕು. B. in child ಮಗುವನ್ನು ಅಂಕೆಯಲ್ಲಿಡು, ತಿದ್ದು. B. into house ಮನೆಗೆ ನುಗ್ಗು. B. journey (ಪ್ರಯಾಣದಲ್ಲಿ) ತಂಗು. B. a lance with ದಂಡಾದಂಡಿಯಾಗಿ ನಿಲ್ಲು ; ವಾದಕ್ಕೆ ಪ್ರತಿಭಟಿಸಿ ನಿಲ್ಲು. B. news ಸಮಾಚಾರ ತಿಳಿಯಪಡಿಸು. B. off ಕೊನೆಗಾಣಿಸು ; ಕೊನೆಗಾಣು ; ಹರಿದುಬಿಡು ; ಹರಿದುಹೋಗು ; ನಿಂತುಹೋಗು. B. an officer ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕು, ನಿವೃತ್ತಿಮಾಡು, ವಜಾಮಾಡು. B. open ಒಡೆದು ತೆರೆ. B. out (ಯುದ್ಧ, ವ್ಯಾಧಿ, ಮೊ.) ತಲೆದೋರು, ಹೊರಹೊಮ್ಮು, ಹರಡು, ಹಬ್ಬಿಕೊಳ್ಳು. ಕೂಗಿಕೊ ; ಒದರು. (ನಾವೆ) ಸಾಮಾನಿನ ಕಟ್ಟನ್ನು ಒಡೆ, ಬಿಚ್ಚು. B. out of prison ಸೆರೆಯಿಂದ ತಪ್ಪಿಸಿಕೊಂಡುಹೋಗು. B. person on wheel (ಪೂರ್ವಕಾಲದಲ್ಲಿ, ಚಕ್ರದಮೇಲೆ ಕೆಡವಿ) ಪ್ರಾಣಾಂತ ಶಿಕ್ಷೆ ಮಾಡು. B. Priscian's head ವ್ಯಾಕರಣ ನಿಯಮಗಳನ್ನುಲ್ಲಂಘಿಸು ; ವ್ಯಾಕರಣಶುದ್ಧಿಯಿಲ್ಲದೆ ಮಾತನಾಡು, ಬರೆ. B. promise ಮಾತಿಗೆ ತಪ್ಪು. B. the ranks ವ್ಯೂಹಬಿಟ್ಟು ಚೆದರಿಹೋಗು ; ಮೊನೆಯೊಡೆ. B. a rebellion ದಂಗೆ ಮುರಿ ; ದಂಗೆಯನ್ನಡಗಿಸು. B. a set ಒಟ್ಟಾಗಿರತಕ್ಕ ಭಾಗಗಳನ್ನು ಬೇರೆಬೇರೆಯಾಗಿ ಮಾಡು. B. silence ಮೌನ ತಪ್ಪಿಸುವುದಕ್ಕಾಗಿ ಮಾತನ್ನಾರಂಭಿಸು. B. spell ಮಂತ್ರದ ಕಟ್ಟು ಬಿಡಿಸು ; ಮಾಯೆ, ಭ್ರಾಂತಿ, ತಪ್ಪಿಸು. B. one's spirit ಉತ್ಸಾಹ ಮುರಿ ; ಉಕ್ಕು ಮುರಿ. B. through ಭೇದಿಸಿಕೊಂಡು ನುಗ್ಗು. B. to ಪಳಗಿಸು. B. up (ನೆರವಿ) ಚೆದರಿಸು, ಚೆದರಿಹೋಗು, ಕೊನೆಗಾಣು, — ಗಾಣಿಸು ; ಕುಗ್ಗಿಹೋಗು ; ಶಿಥಿಲವಾಗು. B. a way ದಾರಿಮಾಡಿಕೊಂಡು ಹೋಗು. B. wind ವಾಯು ಸಡಿಲಿಸು ; ಹೂಸು ಬಿಡು. B. with ಸ್ನೇಹ ಬಿಡು ; ಜಗಳಕಾಯಿ. B. one's word ಮಾತು ತಪ್ಪು. Clouds b. ಮೋಡ ತೆಗೆಯುತ್ತದೆ. Day breaks ಬೆಳಕು ಹರಿಯುತ್ತದೆ. Heart breaks ಎದೆಯೊಡೆಯುತ್ತದೆ ; ಗುಂಡಿಗೆ ಬಿರಿಯುತ್ತದೆ. Merchant breaks ವರ್ತಕನು ದಿವಾಳಿಯೇಳುತ್ತಾನೆ. Troops b. ಸೇನೆ ಚೆದರಿಹೋಗುತ್ತದೆ. Voice breaks ದನಿ ಒಡೆಯುತ್ತದೆ ; (ಮನಸ್ಸಿನ ಆವೇಗದಿಂದ) ದನಿ ಗದ್ಗದವಾಗುತ್ತದೆ. **Breákable** (ಗು.) ; **Breákables** (ನಾ.) ಸುಲಭವಾಗಿ ಒಡೆದುಹೋಗುವ ವಸ್ತುಗಳು. **Breákage** ಬ್ರೇಕೆಜ್ (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಡೆದು ಹೋಗುವುದು ; ಒಡೆದುಹೋದದ್ದು ; ಒಡೆತ ; ಒಡಕು ; (ಒಡೆತದಿಂದಾದ) ನಷ್ಟ. **Breákdown** (ನಾ.) ಕುಗ್ಗುವುದು ; ಕುಸಿತ ; ನಿಂತುಹೋಗುವುದು. (ಆರೋಗ್ಯ, ಶಕ್ತಿ, ಮೊ. ಗಳ) ಭಂಗ. ಒಂದು ಬಗೆಯ ನೀಗ್ರೊ ನೃತ್ಯ. **Breáker**[1] (ನಾ.) (ಕ್ರಿಯಾರ್ಥಗಳಲ್ಲಿ). (ಮು., ಸಮಾಸ ಪದಗಳಲ್ಲಿ : Horse-b. ಕುದುರೆ ಪಳಗಿಸುವವನು ; ಅಶ್ವಶಿಕ್ಷಕ). (ದಡಕ್ಕೆ ಅಥವಾ ಬಂಡೆಗೆ ಬಡಿಯುವ) ಹೆದ್ದೆರೆ, ಹೊರಳುತೆರೆ. **Breákneck** (ಗು.) ಗೋಣು ಮುರಿಯುವ ; ಅಪಾಯಕರ. **Breák-up** (ನಾ.) ಚೆದರಿಹೋಗುವುದು ; ಪುಡಿಪುಡಿಯಾಗಿ ಹೋಗುವುದು ; ಶಿಥಿಲವಾಗಿ ಹೋಗುವುದು ; ಕುಸಿದುಬೀಳುವುದು ; ಭಂಗ. **Breák-water** (ನಾ.) ಅಲೆಗಳ ಹೊಡೆತವನ್ನು ತಡೆಯಲು ಕಟ್ಟಿದ ಒಡ್ಡು ; ಅಲೆ ತಡೆ.

Break (ನಾ.) ಮುರಿಯುವುದು ; ಒಡೆಯುವುದು ; ಮುರಿತ ; ಒಡೆತ (B. of day ಬೆಳಕುಹರಿಯುವ ಹೊತ್ತು ; ಅರುಣೋದಯ). (ಕ್ರಿಕೆಟ್ ಆಟದಲ್ಲಿ) ಪುಟನೆಗೆದ ಚೆಂಡಿನ ಹೊರಳು. (ಬಿಲಿಯರ್ಡ್ಸ್ ಆಟದಲ್ಲಿ) ತೆರಪಿಲ್ಲದೆ ಒಂದೇ ಸಮವಾಗಿ ಗೆದ್ದ ಅಂಕಗಳು. ಒಡಕು ; ಛಿದ್ರ ; ಬಿರುಕು ; ವಿರಾಮ ; ವಿಚ್ಛೇದ. (ಪಾಠಗಳ ಮಧ್ಯೆ ಆಟಕ್ಕಾಗಿ) ಬಿಡುವು. (ಸಂ.) ಧ್ವನಿವ್ಯತ್ಯಾಸ. ಅಕ್ರಮ. ಕುದುರೆಯನ್ನು ಪಳಗಿಸುವ ಗಾಡಿ: ನಾಲ್ಕು ಚಕ್ರದ ಸವಾರಿಗಾಡಿ (= Brake[3]). A bad b. ಅನುಚಿತವಾದ ನುಡಿ, ಕಾರ್ಯ.

Breáker[2] ಬ್ರೇಕರ್ (ನಾ.) (ನೌಕ) ಸಣ್ಣ ಪೀಪಾಯಿ.

Breákfast ಬ್ರೆಕ್‌ಫಸ್ಟ್ (ನಾ., ಕ್ರಿ.) ಮೊದಲೂಟ, ಹೊತ್ತರೂಟ, (ಮಾಡು, ಮಾಡಿಸು). **Breákfastless** (ಗು.)

Breákwater. **Break** ನೋಡಿ.

Bream[1] ಬ್ರೀಮ್ (ನಾ.) ಸೀನೀರಿನಲ್ಲಿ ವಾಸಮಾಡುವ ಹಳದಿಯ ಬಣ್ಣದ ಒಂದು ಜಾತಿಯ ಮೀನು. ಈ ಜಾತಿಯ ಸಮುದ್ರದ ಮೀನು (= Sea-b.)

Bream[2] ಬ್ರೀಮ್ (ಕ್ರಿ. ಸಕ.) (ಹಡಗಿನ ತಳಕ್ಕೆ ಹತ್ತಿಕೊಂಡಿರುವ ಕಪ್ಪೆಚಿಪ್ಪು, ಮೊ. ಕಸವನ್ನು ಹಂಗರುಕಡ್ಡಿ ಹಾಕಿ) ಸುಟ್ಟು ಶುದ್ಧಿಮಾಡು.

Breast ಬ್ರೆಸ್ಟ್ (ನಾ.) ಎದೆ ; ಮೊಲೆ ; ಸ್ತನ ; ಕೆಚ್ಚಲು. (ರೂಪ.) ಪೋಷಣಾಧಾರ. ಅಂಗಿ, ಉಡುಪು, ಮೊ. ಗಳ ಎದೆಯ ಭಾಗ. ಹೃದಯ ; ಅಂತರಂಗ ; ಅಂತಃಕರಣ; ಆಲೋಚನೆಗಳು ; ಮನೋಭಾವಗಳು (Make clean b. of ಮನಬಿಚ್ಚಿ ಎಲ್ಲವನ್ನೂ ಹೇಳಿಬಿಡು). **B.-band** ಎದೆಪಟ್ಟಿ. **B.-board** ಮಣ್ಣು ಮಗುಚುವ ನೇಗಿಲಿನ ಹಲಗೆ. **Breástbone** (ಪಕ್ಕೆಲುಬುಗಳು ಸೇರಿರುವ) ಎದೆಯೆಲುಬು. **B.-drill** ಎದೆಗೆ ಒತ್ತಿಕೊಂಡು ಕೆಲಸಮಾಡುವ ಬೈರಿಗೆ: ಎದೆ ಬೈರಿಗೆ. **B.-high** ಎದೆಮಟ್ಟದ ; ಎದೆಮಟ್ಟಕ್ಕೆ. (ಬೇಟೆಯಲ್ಲಿ) ನಾಯಿಗಳು ತಲೆಯೆತ್ತಿ ಅಟ್ಟಿಕೊಂಡು ಓಡುವಷ್ಟು ಕಟುವಾದ (ವಾಸನೆ). **B.-pain** (ಕುದುರೆಗಳ) ಎದೆನೋವು. **B.-pang** ಪ್ರಾಣಾಪಾಯದ ಒಂದು ತೆರದ ಎದೆಶೂಲೆ. **B.-pin** ಕೊರಳು ಪಟ್ಟಿ, ಮೊ. ಗಳಲ್ಲಿ ಆಭರಣದಂತಾಗಲಿ ಬಂಧಿಸುವುದಕ್ಕಾಗಲಿ ಧರಿಸುವ ಸೂಜಿ : ಎದೆಸೂಜಿ. **Breástplate** ಉರಸ್ತ್ರಾಣ ; ಎದೆಕಾಪು. ಆಮೆ, ಮೊ. ಪ್ರಾಣಿಗಳ ಎದೆಚಿಪ್ಪು. ಶವಸಂಪುಟದಮೇಲಿನ ಬರಹದ ತಗಡು. **B.-pump** ಎದೆಹಾಲನ್ನು ತೆಗೆಯುವ ಸಲಕರಣೆ : ಸ್ತನ್ಯರೇಚಕ. **B.-wall** (ಮಣ್ಣುದಿಬ್ಬ ಜಾರಿಬರದಂತೆ ಹಾಕುವ) ತಡೆಗೋಡೆ. **B.-wheel** (ನೀರನ್ನು ಚಕ್ರದ ಮಧ್ಯಭಾಗಕ್ಕೆ ಹೊಗಿಸಿ, ಚಕ್ರವನ್ನು ತಿರುಗುವಂತೆ ಮಾಡುವ) ನೀರುಸುತ್ತಿನ ಚಕ್ರ. **Breást-work** ರಕ್ಷಣೆಗಾಗಿ ಎದೆಮಟ್ಟಕ್ಕೆ ಕಟ್ಟಿರುವ ಹಂಗಾಮಿ ಕೋಟೆಗೋಡೆ. **Breásted** (ಗು.)

Breast (ಕ್ರಿ. ಸಕ.) ಎದೆಗೊಟ್ಟು ನಿಲ್ಲು ; ಎದುರಿಸು ; ಹೋರಾಡು ; ಹೆಣಗು. ಎದೆಯೊಡು.

Breástsummer, Bréssummer ಬ್ರೆಸಮರ್ (ನಾ.) ಅಗಲವಾದ ಅಂತರದಲ್ಲಿ ಮೇಲ್ಕಟ್ಟಡವನ್ನು ಹೊರುವಂತೆ ಅಡ್ಡವಾಗಿ ಹಾಕುವ ದೊಡ್ಡ ದೂಲ, ಸರ : ಉದ್ದಸರ.

Breath ಬ್ರೆತ್ (ನಾ.) ಉಸಿರು ; ಕಾಯಿಸಿದ ವಸ್ತುಗಳಿಂದ ಹೊರಡುವ ಉಗಿ ; ಆವಿ ; ಹೊಗೆ ; ಗಂಧ ; ಉಚ್ಛ್ವಾಸ ನಿಶ್ವಾಸಗಳು ; ಉಸಿರಾಟ ; ಪರಿಮಳದ, ಗಾಳಿಯ, ಸುಳಿವು, ಹರವು ; ಮಂದಾನಿಲ. ಪಿಸುಮಾತು. Below or under one's b. ಪಿಸುಮಾತಿನಲ್ಲಿ. B. of life, of nostrils ಜೀವದುಸಿರು ; ಆವಶ್ಯಕತೆ. Catch or hold one's b. (ಭಯದಿಂದ ಅಥವಾ ಭಾವೋದ್ರೇಕದಿಂದ) ಉಸಿರನ್ನು ತಡೆದುಕೊ, ಬಿಗಿಹಿಡಿ. Draw b. ಉಸಿರಾಡು; ಜೀವಿಸು. In one b., In the same b. ಒಂದೇ ಉಸಿರಿನಲ್ಲಿ. Keep b. to cool porridge ಮಾತಾಡದಿರು. Out of b. ಉಸಿರು ಕಟ್ಟಿಕೊಂಡು ; ಉಸಿರು ಹತ್ತಿ ; ಏದುತ್ತ. Spend, waste, b. ವ್ಯರ್ಥವಾಗಿ ಮಾತನಾಡು. Take b. ಉಸಿರು ತೆಗೆದುಕೊ ; ಸುಧಾರಿಸಿಕೊ ; ವಿಶ್ರಮಿಸಿಕೊ. Take away one's b. ಆಶ್ಚರ್ಯಚಕಿತನನ್ನಾಗಿ ಮಾಡು ; ಬೆರಗುಗೊಳಿಸು. **Breáthless** ಬ್ರೆತ್‌ಲೆಸ್ (ಗು.) ಉಸಿರಿಲ್ಲದ ; ಜೀವವಿಲ್ಲದ ; ಏದುತ್ತಿರುವ ; ಉಸಿರು ಕಟ್ಟಿಕೊಂಡಿರುವ ; (ಗಾಳಿಯಿಲ್ಲದುದರಿಂದ) ನಿಶ್ಚಲ, ಸ್ತಬ್ಧ. **Breáthlessly** (ಕ್ರಿ. ವಿ.) ; **Breáthy** ಬ್ರೆಥಿ (ಗು.) (ಹಾಡುಗಾರನ ಕಂಠದ ವಿಷಯವಾಗಿ) ದನಿಗೂಡಿರದ. **Breáthiness** (ನಾ.)

Breathe ಬ್ರೀದ್ (ಕ್ರಿ.) ಉಸಿರಾಡು ; ಶ್ವಾಸವಾಡು ; ಜೀವಂತನಾಗಿರು ; ಉಸಿರು ತೆಗೆದುಕೊ ; ಸುಧಾರಿಸಿಕೊ ; ವಿಶ್ರಮಿಸಿಕೊ. ಕಿವಿಯಲ್ಲಿ ಉಸಿರು. ಗಾಳಿಯೂದು ; (ಗಾಳಿವಾದ್ಯವನ್ನು) ಊದು. (ಗಾಳಿ) ಮೆಲ್ಲಗೆ ಬೀಸು. ಉಸಿರು ತೆಗೆದುಕೊಳ್ಳಲು ಅವಕಾಶಕೊಡು ; ವಿರಾಮಕೊಡು. ಉಸಿರುಕಟ್ಟಿಸು ; ಬಳಲಿಸು ; ದಣಿಸು. B. fragrance ಪರಿಮಳ ಸೂಸು. B. again freely (ಭಯ ಮೊ. ನ್ನು ನೀಗಿದು) ಆತಂಕವಿಲ್ಲದಿರು. B. new life into ಹೊಸಜೀವ ತುಂಬು. B. one's last or last breath ಉಸಿರುದುಗಿಹೋಗು; ಸಾಯಿ. B. simplicity ಸರಳತೆಯನ್ನು, ನಿಷ್ಕಾಪಟ್ಯವನ್ನು, ತೋರು. B. strife ಜಗಳ ಹಚ್ಚು. B. upon ಕಳಂಕಿಸು; ಸೋಂಕು ಹಚ್ಚು ; ದೋಷ ಹಚ್ಚು. **Breáther** (ನಾ.) (ಕ್ರಿಯಾರ್ಥಗಳಲ್ಲಿ) ; (ಮು.) ಶ್ವಾಸೋತ್ತೇಜನಕ್ಕಾಗಿ ಮಾಡುವ ಸಾಧನೆ: ಶ್ವಾಸ ಸಾಧನೆ ; ಉಸಿರುಕಟ್ಟಿಸುವ ಸಾಧನೆ. **Breáthing** (ನಾ.) (ಕ್ರಿಯಾರ್ಥಗಳಲ್ಲಿ). (ಗು.) ಜೀವಕಳೆ ಸೂಸುವ (ವಿಗ್ರಹ, ಮೊ. ಗಳ ವಿಷಯದಲ್ಲಿ). B.-space ಉಸಿರಾಡಲು ಅವಕಾಶ ; ವಿರಾಮ.

Bréccia ಬ್ರೆಚ್ಚ, ಬ್ರೆಚಿಯ (ನಾ.) ಚೂರುಕಲ್ಲು, ಮೊ. ವು ಸುಣ್ಣ, ಮೊ. ದ ಬಂಧನದಿಂದ ಒಟ್ಟುಗೂಡಿ ಆದ ಬಂಡೆ.

Bred. **Breed** ಧಾತುವಿನ ಭೂತ., ಭೂ. ಕೃ.

Breech ಬ್ರೀಚ್ (ನಾ., ಕ್ರಿ. ಸಕ.), **Breéches** ಬ್ರಿಚೆಸ್ (ಬ. ವ.) (or, A pair of breeches) ಮೊಣಕಾಲಿನ ಕೆಳಗಿನ ವರೆಗೆ ಮಾತ್ರ ಬರುವ ಷರಾಯಿ. (ಶಿಥಿಲವಾಗಿ) ಷರಾಯಿ ; ಇಜಾರು ; ಚಲ್ಲಣ ; ಚಡ್ಡಿ (To wear the breeches ಗಂಡನನ್ನು ಹೆಂಡತಿ ಅಧೀನದಲ್ಲಿಟ್ಟುಕೊಂಡಿರುವುದು). (ಏ. ವ. ; ಪ್ರಾಚೀ. ಪ್ರ.) ಪಿರ್ರೆ. (ಗೋಲಂದಾಜಿನಲ್ಲಿ) ಫಿರಂಗಿಯ ಅಥವಾ ಬಂದೂಕಿನ ಹಿಂಭಾಗ. (ಕ್ರಿ. ಸಕ., ಪ್ರಾಚೀ. ಪ್ರ.) ಚಡ್ಡಿ ತೊಡಿಸು. **B.-loader** ಕೋವಿಯ ಹಿಂಭಾಗದಲ್ಲಿ ಮದ್ದು ಗುಂಡುಗಳನ್ನು ತುಂಬುವ ಏರ್ಪಾಡುಳ್ಳ ಫಿರಂಗಿ, ಬಂದೂಕು. **B.-loading** ಹೀಗೆ ಮದ್ದುಗುಂಡುಗಳನ್ನು ತುಂಬುವುದು. **Breeched** (ಗು.) ; **Breéching** (ನಾ.) ಗಾಡಿಯನ್ನು ಹಿಂದಕ್ಕೆ ತಳ್ಳಿಹಿಡಿಯುವುದಕ್ಕಾಗಿ ಕುದುರೆಯ ಪಿರ್ರೆಗಳಮೇಲೆ ಬರುವಂತೆ ಕಟ್ಟಿರುವ ಚರ್ಮದ ಪಟ್ಟಿ : ಪಿರ್ರೆ ಪಟ್ಟಿ. ಗುಂಡು ಹಾರಿಸಿದಾಗ ಫಿರಂಗಿ ಹೆಚ್ಚಾಗಿ ಹಿಂದಕ್ಕೆ ಒದೆಯದಂತೆ ಅದನ್ನು ಹಡಗಿನ ಪಕ್ಕಕ್ಕೆ ಬಿಗಿಯುವ ಹಗ್ಗ. ಕುರಿಯ ಪೃಷ್ಠದಮೇಲಿನ ಒರಟು ತುಪಟ. **Breéchless** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Breed ಬ್ರೀಡ್ (ಕ್ರಿ. ; ಭೂತ., ಭೂ. ಕೃ. Bred) ಹೆರು ; ಹಡೆ; ಪ್ರಸವಿಸು ; ಈಯಿ ; ಮರಿಹಾಕು ; ಮರಿಮಾಡು ; ಸಂತಾನವೃದ್ಧಿ ಮಾಡು ; ಹುಟ್ಟಿಸು ; ಗರ್ಭಧರಿಸು ; ಗಬ್ಬವಾಗು. ಫಲಕೊಡು ; ಫಲವಾಗು ; ಬೆಳೆಯಾಗು. (ದನಗಳನ್ನು) ಬೆಳಸು, ವೃದ್ಧಿಮಾಡು. ಪೋಷಿಸು ; ಸಾಕು ; ಶಿಕ್ಷಣ ಕೊಡು ; ತಯಾರುಮಾಡು ; ತರಬೇತುಮಾಡು (B. him a lawyer, B. him to the law ಅವನನ್ನು ವಕೀಲಗೆ ತರಬೇತುಮಾಡು. B. a bullock to the plough ಎತ್ತನ್ನು ನೇಗಿಲಗೆ ಪಳಗಿಸು). (ಕ್ರಿ. ಅಕ.) ಹುಟ್ಟು. ಹರಡು. B. in and in ಮತ್ತೆಮತ್ತೆ ಹತ್ತಿರಸಂಬಂಧದಲ್ಲಿಯೇ ಮದುವೆಮಾಡು, ಮದುವೆಯಾಗು. What is bred in the bone ಅಸ್ಥಿಗತವಾದದ್ದು ; ಹುಟ್ಟುಗುಣ ; ವಂಶಾನುಗತವಾದ ಗುಣಗಳು. **Breéder** (ನಾ.)

Breed (ನಾ.) ಹುಟ್ಟು ; ಕುಲ ; ಜಾತಿ ; ಅನ್ವಯ ; ಸಂತತಿ ; ಗೋತ್ರ ; ವಂಶ ; ಪೀಳಿಗೆ ; ಬಳಿ ; ತಳಿ. ವಂಶಾನುಗತವಾಗಿ ಬಂದ ಗುಣಗಳುಳ್ಳ ಕುಟುಂಬ. **Breéding** (ನಾ.) (ಕ್ರಿಯಾರ್ಥಗಳಲ್ಲಿ). ಶಿಕ್ಷಣದ ಫಲ ; ನಡತೆ ; ಸೌಜನ್ಯ ; ವಿನಯ.

Breeze[1] ಬ್ರೀಸ್ (ನಾ.) ನಸು ಗಾಳಿ ; ಮಂದ ಮಾರುತ ; (ಗೊತ್ತಾದ ವೇಳೆಗಳಲ್ಲಿ ಬೀಸುವ) ಕಡಲು ಗಾಳಿ, ನೆಲದ ಗಾಳಿ. (ಅಸಂ.) ಜಗಳ ; ಕಲಹ ; ವಾಕ್ಕಲಹ ; ತಿಕ್ಕಾಟ. ಪಿಸುಮಾತು ; ಗಾಳಿಸುದ್ದಿ. **Breézeless** (ಗು.) ; **Breézy** (ಗು.) ಗಾಳಿಯಾಡುವ ; ಗಾಳಿ ಬೀಸುವ. ಲವಲವಿಕೆಯ ; ಗೆಲವಿನ ; ಉತ್ಸಾಹದ; ಉಲ್ಲಾಸವುಳ್ಳ. **Breézily** (ಕ್ರಿ. ವಿ.) ; **Breéziness** (ನಾ.)

Breeze[2] ಬ್ರೀಸ್ (ನಾ.) ತೊಣಚಿ ; ಗೋಮಕ್ಷಿಕ.

Breeze[3] ಬ್ರೀಸ್ (ನಾ.) (ಇಟ್ಟಿಗೆಮಾಡುವವರು ಉಪಯೋಗಿಸುವ) ಕರಿಕು, ಸುಟ್ಟ ಕಲ್ಲಿದ್ದಲಿನ ಚೂರು, ಪುಡಿ, ಮೊ.

Brer ಬ್ರೆರ್ (ನಾ.) (ಅಮೆ. ಸಂ. ನೀಗ್ರೊ ಪ್ರಾಂತಿಕ ಭಾಷೆಯಲ್ಲಿ Brother ಎಂಬ ಪದದ ಸಂಕ್ಷಿಪ್ತರೂಪ ; ಮು., ಕಟ್ಟುಕಥೆಗಳಲ್ಲಿ ಮೃಗಗಳ ವಿಷಯವಾಗಿ ಉಪಯೋಗಿಸುವ ಪದ : ಉದಾ., Brer Fox, Brer Rabbit)

Bréssummer. **Breastsummer** ನೋಡಿ.

Bréthren. **Brother** ನೋಡಿ.

Bréton ಬ್ರೆಟನ್ (ಗು., ನಾ.) ಫ್ರಾನ್ಸ್‌ದೇಶದ ಬ್ರಿಟನಿ ಪ್ರಾಂತದ (ವನು)

Breve ಬ್ರೀವ್ (ನಾ.) (ಚರಿತ್ರೆ) (ದೊರೆಯಾಗಲಿ, ಪೋಪ್‌ಗುರುವಾಗಲಿ ಕೊಟ್ಟ) ಅಧಿಕಾರಪತ್ರ. (ಮುದ್ರಣ) ಹ್ರಸ್ವವೆಂದು ತೋರಿಸುವುದಕ್ಕಾಗಿ ಇಂಗ್ಲಿಷಿನಲ್ಲಿ ಸ್ವರದಮೇಲ್ಗಡೆ ಹಾಕುವ ಚಿಹ್ನೆ (˘) ; ಲಘುಚಿಹ್ನೆ.

Brévet ಬ್ರೆವೆಟ್ (ನಾ., ಕ್ರಿ. ಸಕ.) (ದೊರೆಯಿಂದಾಗಲಿ ಸರ್ಕಾರದಿಂದಾಗಲಿ ದೊರೆತ) ಗೌರವಾಧಿಕಾರ ಪತ್ರ : (ಮು., ಸೇನೆಯಲ್ಲಿ ಸ್ಥಾನಕ್ಕೆ ಸಲ್ಲುವ ವೇತನವಿಲ್ಲದ ಹುದ್ದೆಯದು : B. rank, B. officer). ಗೌರವಾರ್ಥಕ, ನಾಮಮಾತ್ರದ ಸ್ಥಾನ. (ಕ್ರಿ.) ಅಂಥ ಹುದ್ದೆ ಕೊಡು.

Bréviary ಬ್ರೀ(ಬ್ರೆ)ವಿಯರಿ (ನಾ.) (ರೋ. ಕ್ಯಾ. ಚರ್ಚಿನಲ್ಲಿ ಉಪಯೋಗಿಸುವ) ದಿನಚರಿಯ ಪಾರಾಯಣ ಪುಸ್ತಕ (ದೀಕ್ಷೆಪಡೆದಿರುವವರು ಅವಶ್ಯವಾಗಿ ಪಾರಾಯಣ ಮಾಡಬೇಕಾದುದು)

Breviér ಬ್ರಿ(ಬ್ರೆ)ವಿಯರ್ (ನಾ.) ಒಂದು ಗೊತ್ತಾದ ಪ್ರಮಾಣದ ಅಚ್ಚಿನ ಮೊಳೆ.

Brévity ಬ್ರೆವಿಟಿ (ನಾ.) (ಹೇಳುವ ಅಥವಾ ಬರೆಯುವ ಮಾತಿನಲ್ಲಿ) ಸಂಗ್ರಹ, ಅಡಕ. (ಆಯುಷ್ಯದ) ಅಲ್ಪಾವಧಿ.

Brew ಬ್ರೂ (ಕ್ರಿ.) (ನೆನೆಹಾಕಿ, ಕುದಿಸಿ, ಹುಳಿಸಿ) ಸಾರಾಯಿ ಮಾಡು, ಸಾರಾಯಿಯಾಗು (Drink as you have brewed ಮಾಡಿದ್ದುಣ್ಣೊ ಮಹಾರಾಯ ; ಕರ್ಮಫಲವನ್ನನುಭವಿಸು). (ಟೀ, ಮೊ. ಪಾನಗಳನ್ನು) ಕಷಾಯಯಿಳಿಸು, — ಇಳಿ ; ದ್ರವ್ಯಗಳನ್ನು ಬೆರಸಿ ತಯಾರಿಸು, — ತಯಾರಾಗು. ಹದಕ್ಕೆ ತರು, ಬರು. ಆಗಿಸು. ಮಾಗು ; ಪಕ್ವವಾಗು. ಹಳಸಿಕೊ. ಬಲಗೊಡುತ್ತಹೋಗು (ಸಾ., ದುಷ್ಪರಿಣಾಮಗಳು). Mischief is brewing ಒಳಸಂಚು ನಡೆಯುತ್ತಿದೆ. **B.-house, Brewéry** (ನಾ.) ಸಾರಾಯಿಮಾಡುವ ಮನೆ. **Brewér** (ನಾ.)

Brew (ನಾ.) (ಹುಳಿಸುವುದು, ಮೊ. ಗಳಿಂದ) ಸಾರಾಯಿ ಮಾಡುವುದು. ಒಂದು ಸಲಕ್ಕೆ ಮಾಡಿದ ಸಾರಾಯಿ. ಹೀಗೆ ಮಾಡಿದ ಸಾರಾಯಿಯಹದ, ಗುಣ. **Brewáge** (ನಾ.) ಹದಕ್ಕೆ ಇಳಿಸಿದ ಪಾನ ; ಕಷಾಯ. ಹೀಗೆ ತಯಾರಿಸುವುದು, ತಯಾರಿಸಿದ್ದು (ರೂಪ. ಸಹ)

Bríar. **Brier** ನೋಡಿ.

Briáreus ಬ್ರೈಏರಿಯಸ್, **Bríareus** ಬ್ರೈಅರಿಯೂಸ್ (ನಾ.) (ಗ್ರೀಕ್ ಪುರಾಣದಲ್ಲಿ) ನೂರು ಕೈಗಳುಳ್ಳ ಒಬ್ಬ ರಾಕ್ಷಸ : ಶತಬಾಹು ; ಬಹುಬಾಹು.

Bribe ಬ್ರೈಬ್ (ನಾ., ಕ್ರಿ. ಸಕ.) (ಸಾ., ನ್ಯಾಯವಿರುದ್ಧವಾದ) ಕಾರ್ಯವನ್ನು ಸಾಧಿಸುವುದಕ್ಕಾಗಿ ಕೊಡುವ ಹಣ, ಮೊ. ; ಲಂಚ ; 'ರುಷವತ್ತು'. (ಕ್ರಿ.) ಲಂಚ ಕೊಡು ; (ಲಂಚ ಕೊಟ್ಟು) ವಶಪಡಿಸಿಕೊ. **Bríbable** (ಗು.) ; **Bribabílity** (ನಾ.) ಲಂಚ ಸಾಧ್ಯತೆ. **Bribeé** (ನಾ.) ಲಂಚ ತೆಗೆದುಕೊಳ್ಳುವವನು ; ಲಂಚಕೋರ. **Bríbery** (ನಾ.) ಲಂಚಗಾರಿಕೆ.

Bríc-a-brac ಬ್ರಿಕಬ್ರ್ಯಾಕ್ (ನಾ.) ಹಳೆಯ ಗೃಹೋಪಕರಣಗಳು, ಗಾಜಿನ ಸಾಮಾನುಗಳು, ಒಡವೆ ವಸ್ತು — ಇವೇ ಮೊ. ಅಪರೂಪದ ವಸ್ತುಗಳು.

Brick ಬ್ರಿಕ್ (ನಾ., ಗು.) ಇಟ್ಟಿಗೆ(ಯ) ; ಇಟ್ಟಿಗೆಯಾಕಾರದ (ಗಟ್ಟಿ) (Like a hundred of bricks ಹಿಸುಕಿಹಾಕುವಷ್ಟು, ನರುಕಿಹೋಗುವಷ್ಟು, ಭಾರದಿಂದ ಅಥವಾ ಬಲದಿಂದ). (ಅಸಂ.) ಒಳ್ಳೆಯ ಮನುಷ್ಯ ; ದಯಾಳು ; ಉದಾರಿ. Drop a brick (ಅಸಂ.) ಅವಿವೇಕ ಕೆಲಸ ಮಾಡು. Make bricks without straw ಸಾಧನವಿಲ್ಲದೆ ಕಾರ್ಯಮಾಡು. **B.-bat** (ಎಸೆಯುವುದಕ್ಕಾಗಿ ಉಪಯೋಗಿಸುವ) ಇಟ್ಟಿಗೆಯ ಚೂರು. **B.-dust** ಇಟ್ಟಿಗೆಯ ಪುಡಿ ; ಇಟ್ಟಿಗೆಯ ಪುಡಿಯಂಥ ಬಣ್ಣ. **B.-field** ಇಟ್ಟಿಗೆಮಾಡುವ ಪಠಾರ, ಅಂಗಳ. **B.-kiln** ಇಟ್ಟಿಗೆ (ಸುಡುವ) ಗೂಡು. **Brícklayer** ಇಟ್ಟಿಗೆ ಕಟ್ಟುವವನು. **Bríck-work** ಇಟ್ಟಿಗೆ ಕಟ್ಟುವ ಕೆಲಸ ; ಇಟ್ಟಿಗೆಯ ಕಟ್ಟಡ. **Brícky** (ಗು.) ಇಟ್ಟಿಗೆಯಿಂದ ಮಾಡಿದ, ಕಟ್ಟಿದ ; ಇಟ್ಟಿಗೆ ತುಂಬಿರುವ ; ಇಟ್ಟಿಗೆಗಳಂತೆ ಕಾಣುವ ; ಇಟ್ಟಿಗೆ ಕೆಂಪಿನ.

Brick (ಕ್ರಿ. ಸಕ.). B. up (ಕಿಟಕಿ, ಮೊ. ನ್ನು) ಇಟ್ಟಿಗೆ ಕಟ್ಟಿ ಮುಚ್ಚಿಬಿಡು.

Bride[1] ಬ್ರೈಡ್ (ನಾ.) ಮದವಣಿಗಿತ್ತಿ ; ಮದುವೆಯ ಹೆಣ್ಣು ; ವಧು. **Brídal** (ನಾ., ಗು.) ವಿವಾಹೋತ್ಸವ; ಮದುವೆ. ಮದುವೆಯ ; ಮದವಣಿಗಿತ್ತಿಯ (B. veil ಮದವಣಿಗಿತ್ತಿಯ ಮುಖಾವರಣ, ಅವಕುಂಠನ. B. cheer ಮದುವೆಯ ಭೋಜನ ಪಾನಾದಿಗಳು). **Brídally** (ಕ್ರಿ. ವಿ.) ; **Brídecake** (ನಾ.) ಮದುವೆಯಲ್ಲಿ ಬಂಧು ಬಳಗಕ್ಕೂ ಸ್ನೇಹಿತರಿಗೂ ಹಂಚುವ ರಸವತ್ತಾದ ಭಕ್ಷ್ಯ : ಮದುವೆಯ ಭಕ್ಷ್ಯ. **Brídegroom** (ನಾ.) ಮದವಣಿಗ ; ಮದುವೆಯ ಗಂಡು ; ಮದುಮಗ ; ವರ. **Brídesmaid** (ನಾ.) (ಕ್ರೈಸ್ತರ) ಮದುವೆಯಲ್ಲಿ ಮದವಣಿಗಿತ್ತಿಯೊಡನಿರುವ ಕನ್ಯಾಸಖಿಯರಲ್ಲೊಬ್ಬಳು : ಒತ್ತು ಮದವಣಿಗಿತ್ತಿ ; ವಧೂಸಖಿ ; ವಧುವಿನ ಗೆಳತಿ. **Brídesman** (ನಾ.) ಮದುವೆಯಲ್ಲಿ ವರನೊಡನಿರುವ ಸ್ನೇಹಿತ ; ಒತ್ತು ಮದವಣಿಗ ; ವರನ ಗೆಳೆಯ.

Bride[2] ಬ್ರೈಡ್ (ನಾ.) ಜರತಾರಿಯಲ್ಲಿಯ ನಮೂನೆಯ ಚಿತ್ರಗಳನ್ನು ಸೇರಿಸುವ ನಯವಾದ ಸೂತ್ರಜಾಲ, ಜಾಳಿಗೆ. ಚೋಪಿಕಟ್ಟುವ ದಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Brídewell ಬ್ರೈಡ್‌ವೆಲ್ (ನಾ.) ತಪ್ಪಿತ ಮಾಡಿದವರನ್ನು ಶಿಕ್ಷಿಸುವ ಮನೆ; ಸೆರೆಮನೆ; ಕಾರಾಗೃಹ. (ಲಂಡನ್ನಿನಲ್ಲಿಯ St. Bride's Well ಎಂಬ ಸ್ಥಳದ ಹೆಸರಿನಿಂದ)

Bridge[1] ಬ್ರಿಜ್ (ನಾ.) ಸೇತುವೆ (B. of boats ನೀರಿನಲ್ಲಿ ದೋಣಿಗಳ ಸಾಲಿನಿಂದ ಮಾಡಿದ ಸೇತುವೆ: ದೋಣಿಸೇತುವೆ. B. of gold, A gold or silver b., Golden b. ಸೋತುಹೋದ ಶತ್ರುಗಳ ಸೈನ್ಯವು ತಪ್ಪಿಸಿಕೊಂಡು ಸುಲಭವಾಗಿ ಹಿಂದಕ್ಕೆಹೋಗಲು ಏರ್ಪಡಿಸಿರುವ ಹಾದಿ). (ನೌಕ) ಹಡಗಿನ ಮಧ್ಯಪ್ರದೇಶದಲ್ಲಿ ನೌಕಾಧಿಪತಿಗಾಗಿ ಮಾಡಿರುವ ವೇದಿಕೆ. ಮೂಗಿನ ಮೂಲದ ಅಸ್ಥಿಭಾಗ. ಪಿಟೀಲಿನ ತಂತಿಗಳ ತಳವನ್ನು ಮುಟ್ಟುತ್ತ ಕೆಳಕ್ಕೂ ಮೇಲಕ್ಕೂ ಜರುಗಿಸಲಾಗುವ ಚಕ್ಕೆ: ಪಿಟೀಲು ಕುದುರೆ; ವೀಣೆಯ ಮೆಟ್ಟಲು. (ಬಿಲಿಯರ್ಡ್ಸ್ ಆಟದಲ್ಲಿ) ಚೆಂಡುಹೊಡೆಯಲು ದಾಂಡಿಡುವುದಕ್ಕೆ ಎಡಗೈಯ ಆಧಾರ. Electric b. ವಿದ್ಯುತ್ಪ್ರವಾಹ ರೋಧ ಮಾಪಕ: ವಿದ್ಯುತ್ ಸೇತು. **B.-head** ಶತ್ರುರಾಜ್ಯಕ್ಕೆ ಹೋಗಲು ಅವಕಾಶಕೊಡುವಂತೆ ಗಡಿ ಹೊಳೆಯಮೇಲಿನ ಸೇತುವೆಯ ಆಚೆಯ ಕಡೆಯಲ್ಲಿ ಕಟ್ಟಿರುವ ದುರ್ಗ: ಗಡಿ ಸೇತುದುರ್ಗ. **B.-train** ತೇಲುಸೇತುವೆಗಳನ್ನು ಕಟ್ಟುವ ಸಾಮಾನುಗಳೊಡನೆ ಹೊರಡುವ ಸೇನೆಯ ಯಂತ್ರಶಿಲ್ಪಜ್ಞರು (Military Engineers). **Brídgeless** (ಗು.)

Bridge (ಕ್ರಿ. ಸಕ.) ಸೇತುವೆ ಕಟ್ಟು; ಸೇತುವೆಯಂತೆ ಹಾಯಿ.

Bridge[2] ಬ್ರಿಜ್ (ನಾ.) ಒಂದು ತೆರದ ಇಸ್ಪೀಟಾಟ.

Bridle ಬ್ರೈಡ್‌ಲ್ (ನಾ.) ಲಗಾಮು; ಕಡಿವಾಣ; ಕೀಳ್ (ಗ್ರಾಂ.); ವಾಘೆ (ಗ್ರಾಂ.). (Give horse the b., Lay b. on his neck ಲಗಾಮು ಸಡಿಲಿಸು; ಹಿಡಿತ ಬಿಡು. Horse going well up to b. ಲಗಾಮಿಗೆ ಸಲೀಸಾಗಿ ಹೋಗುವ ಕುದುರೆ). ತಡೆ; ಕಟ್ಟು; ಅಂಕೆ; ನಿರ್ಬಂಧ; ಆತಂಕ. (ನೌಕ) (ಹಡಗನ್ನು) ಕಟ್ಟಿಹಾಕುವ ಹೊರಜಿ. (ಶ. ವಿ.) ಒಂದು ಅಂಗಭಾಗದ ಚಲನೆಯನ್ನು ತಡೆಯುವ ಮೃದ್ವಸ್ಥಿ ರಜ್ಜು; ನಿರೋಧಕ ಅಸ್ಥಿರಜ್ಜು. **B.-bridge, -path, -road** ಕುದುರೆಯ ಸವಾರರ ಉಪಯೋಗಕ್ಕೆ ಮಾತ್ರ ತಕ್ಕ ಸೇತುವೆ, ಹಾದಿ, ರಸ್ತೆ (ಬಂಡಿಗಳಿಗಲ್ಲ): ಸವಾರಿ ಸೇತುವೆ; ಸವಾರಿ ಹಾದಿ.

Bridle (ಕ್ರಿ.) (ಕುದುರೆ, ಮೊ. ಕ್ಕೆ) ಕಡಿವಾಣ ಹಾಕು. ಕಟ್ಟಿ ನಲ್ಲಿಟ್ಟಿರು; ಹತೋಟಿಯಲ್ಲಿಟ್ಟಿರು; ಹತೋಟಿಗೆ ತೆಗೆದುಕೊ; ನಿಗ್ರಹಿಸು; ಅಡಗಿಸು; ಬಿಗಿಹಿಡಿ. (ಅಸಮಾಧಾನ, ಜಂಬ, ಮೊ. ನ್ನು ಸೂಚಿಸುವುದಕ್ಕಾಗಿ) ತಲೆ ಎತ್ತಿಹಾಕಿ ಗಲ್ಲವನ್ನು ಎಳೆದುಕೊ (= B. up); ತಲೆ ಎತ್ತಿಹಾಕು.

Brief[1] ಬ್ರೀಫ್ (ನಾ.) ಮತ ನಿಯಮಾಚರಣೆಯ ವಿಷಯವಾಗಿ ಪೋಪ್ ಗುರು ಮತದ ಶಿಷ್ಯನಿಗಾಗಲಿ ಮತಕ್ಕೆ ಸೇರಿದ ಒಂದು ಪಂಗಡಕ್ಕಾಗಲಿ ಕೊಟ್ಟ ಆಜ್ಞಾಪತ್ರ: ಪೋಪಿನ ನಿರೂಪ. (ನ್ಯಾ. ಶಾ.) ಒಂದು ವ್ಯವಹಾರಕ್ಕೆ ಸಂಬಂಧಪಟ್ಟ ವಿಷಯಗಳನ್ನೂ ಅದಕ್ಕೆ ಕಾನೂನಿನ ಆಧಾರಗಳನ್ನೂ ವಕೀಲನ ಅನುಕೂಲ್ಯಕ್ಕಾಗಿ ಬರೆದು ಕೊಟ್ಟ ಗೋಷ್ವಾರೆ, ಸಾರಾಂಶ: ವ್ಯಾಜ್ಯವಿಷಯದ ಟಿಪ್ಪಣಿ; ಅಡಕಪತ್ರ [Hold b. for ವಕಾಲತ್ತು ವಹಿಸು; ಪರವಾಗಿ ವಾದಿಸು. Watching-b. ಸಾಕ್ಷಾತ್ತಾಗಿ ತಾನು ಒಂದು ವ್ಯವಹಾರಕ್ಕೆ ಸೇರದಿದ್ದರೂ ತನಗೆ ಸಂಬಂಧವಿರುವುದರಿಂದ ತನ್ನ ಪರವಾಗಿ ನೋಡಿಕೊಳ್ಳುವುದಕ್ಕಾಗಿ ಒಬ್ಬ ವಕೀಲನಿಗೆ ಕೊಟ್ಟ ವಕಾಲತ್ತು: ನೋಡಿಕೊಳ್ಳುವ ವಕಾಲತ್ತು. A brief ವಕಾಲತ್ತು. **B.-bag** ತೊಗಲಿನ ಕೈಸಂಚಿಗೆ. **Briefless** (ಗು.) ಕಕ್ಷಿಗಾರರಿಲ್ಲದ; ನಿರುದ್ಯೋಗಿಯಾದ]. ಒಂದು ಗೊತ್ತಾದ ಚಿಕ್ಕಳತೆಯ, ಬರೆಯುವ ಕಾಗದ, ಬರೆವಣಿಗೆಯ ಯಂತ್ರ, ಮೊ.

Brief (ಕ್ರಿ. ಸಕ.) (ನ್ಯಾ. ಶಾ.) (ವ್ಯವಹಾರವಿಷಯಗಳು, ಮೊ. ಗಳ) ಸಾರಾಂಶ ಮಾಡು, ಅಡಕಪತ್ರ ತಯಾರಿಸು. (ವಕೀಲನಿಗೆ) ವ್ಯವಹಾರವನ್ನು ಒಪ್ಪಿಸು; ವಕೀಲನನ್ನು ಗೊತ್ತುಮಾಡಿಕೊ.

Brief[2] ಬ್ರೀಫ್ (ಗು., ನಾ.) ಸ್ವಲ್ಪ ಕಾಲದ; ಅಲ್ಪ ಕಾಲಿಕ; ಸಂಕ್ಷಿಪ್ತ; ಸಂಕ್ಷೇಪ; ಸಂಗ್ರಹ; ಹ್ರಸ್ವ; ಕಿರಿದು; ಅಡಕ. Be b. ಸಂಕ್ಷೇಪ ಮಾಡು; ಸಂಕ್ಷೇಪವಾಗಿ ಹೇಳು; ಅಡಕವಾಗಿ ಹೇಳು; ಸ್ವಲ್ಪದಲ್ಲಿ ಹೇಳು; ಕಿರಿದಾಗಿ ಹೇಳು. In b. ಸಂಕ್ಷೇಪವಾಗಿ. **Briéfly** (ಕ್ರಿ. ವಿ.); **Briéfness** (ನಾ.)

Bríer[1], **Bríar** ಬ್ರೈಅರ್ (**Brere** ಬ್ರಿಯರ್: ಪ್ರಾಚೀ. ಪ್ರ.) (ನಾ.) ಮುಳ್ಳುಪೊದೆ, ಹೊದರು (ಮು. ಕಾಡುಗುಲಾಬಿಯದು). Sweet B. ಸುವಾಸನೆಯ ಎಲೆಗಳೂ ಹೂವೂ ಉಳ್ಳ ಕಾಡುಗುಲಾಬಿಯ ಗಿಡ. B.-rose ಒಂದು ಜಾತಿಯ ಕಾಡುಗುಲಾಬಿ. (ಬ. ವ. ದಲ್ಲಿ) ಇರಿವ ಮುಳ್ಳು (ರೂಪ.): ಮನಸ್ಸಿಗೆ ತೊಂದರೆಕೊಡುವ ವಿಚಾರಗಳು; ಅಸಮಾಧಾನ ವಿಚಾರಗಳು. **Briéry, -ary** (ಗು.)

Brier[2], **Bríar** ಬ್ರೈಅರ್ (ನಾ.) ಒಂದು ಜಾತಿಯ ಕುರುಚಲು ಗಿಡ (ಇದರ ಬೇರುಗಳಿಂದ ಚುಂಗಾಣಿಗಳನ್ನು ತಯಾರಿಸುತ್ತಾರೆ); ಇದರಿಂದ ಮಾಡಿದ ಚುಂಗಾಣಿ.

Brig[1] ಬ್ರಿಗ್ (ನಾ.) ಒಂದು ಬಗೆಯ ಇಕ್ಕೂವೆಯ ಹಡಗು.

Brig[2] ಬ್ರಿಗ್ (ನಾ.) Bridge ಎಂಬ ಪದದ ಮತ್ತೊಂದು ರೂಪ (ಬ್ರಿಟನ್ನಿನ ಉ. ಪ್ರಾಂತದವರ ಪ್ರಯೋಗ)

Brigáde ಬ್ರಿಗೇಡ್ (ನಾ., ಕ್ರಿ. ಸಕ.) (ಕಾಲ ದೇಶಗಳಿಗನುಸಾರವಾಗಿ ರಚನೆಯ ವ್ಯತ್ಯಾಸವುಳ್ಳ) ಸೇನೆಯ ದಳ. (ಯಾವುದಾದರೂ ಕಾರ್ಯ ಮಾಡುವುದಕ್ಕಾಗಿ, ಒಂದು ವ್ಯವಸ್ಥೆಗೊಳಗಾದ, ಅಥವಾ ಒಂದೇ ತೆರದ ಉಡುಪುಳ್ಳ) ಜನರ ತಂಡ, ದಳ (Boys' B., Church B., etc.). (ಕ್ರಿ.) ದಳವೇರ್ಪಡಿಸು; ದಳಗಳಾಗಿ ವಿಂಗಡಿಸು. (ಶಿಥಿಲವಾಗಿ) (ಜನರನ್ನು) ದಳಗೂಡಿಸು. **Brigadiér** ಬ್ರಿಗಡಿಯರ್ (ನಾ.) (ಪೂರ್ಣ ರೂಪ: B.-General) ದಳಪತಿ.

Brígand ಬ್ರಿಗಂಡ್ (ನಾ.) ದರೋಡೆಕೋರ; ಡಕಾಯಿತ. **Brígandage** (ನಾ.); **Brígandism** (ನಾ.); **Brígandish** (ಗು.)

Brígandine, -tine[1] ಬ್ರಿಗಂಡೀನ್, —ಟೀನ್ (ನಾ.) ಯೋಧರ ಒಂದು ತೆರದ ಮೈಜೋಡು, ಕವಚ.

Brígantine[2] ಬ್ರಿಗಂಟೀನ್ (ನಾ.) (ಚರಿತ್ರ) ಹಡಗುಕಳ್ಳತನ, ಮೊ. ಕ್ಕೆ ಉಪಯೋಗಿಸುತ್ತಿದ್ದ ಒಂದು ತೆರದ ಸಣ್ಣ ಹಡಗು; (ಈಗ) ಒಂದು ತೆರದ ಇಕ್ಕೂವೆಯ ಹಡಗು.

Bright ಬ್ರೈಟ್ (ಗು.) ಹೊಳೆಯುವ; ತೊಳಗುವ; ಬೆಳಗುವ; ಪ್ರಕಾಶಮಾನವಾದ. ಗೆಲವುಳ್ಳ; ಗೆಲವಾದ. (ಭರವಸ, ಸಂತೋಷ, ಮೊ. ಗಳಿಂದ) ಕಳೆಗೊಂಡ. ಉಜ್ಜ್ವಲ (B. red, etc.). ಸ್ಪಷ್ಟ; ವ್ಯಕ್ತ. ಉಲ್ಲಾಸದ; ವರ್ಚಸ್ಸುಳ್ಳ; ಸುಪ್ರಸಿದ್ಧ; ಹುರುಪುಳ್ಳ; ಪ್ರತಿಭೆಯುಳ್ಳ (ಕೆಲವು ಸಂದರ್ಭಗಳಲ್ಲಿ ವ್ಯಂಗ್ಯವಾಗಿ). **Bríghten** (ಕ್ರಿ.); **Bríghtish** (ಗು.); **Bríghtly** (ಕ್ರಿ. ವಿ.); **Bríghtness** (ನಾ.)

Bright (ಕ್ರಿ. ವಿ.) (= Brightly: Shine bright, Bright-beaming, etc.) ಪ್ರಕಾಶಮಾನವಾಗಿ.

Bríght's disease ಬ್ರೈಟ್ಸ್ ಡಿಸೀಸ್ (ನಾ.) ಮೂತ್ರಪಿಂಡಗಳ ತೀವ್ರವಾದ ಒಂದು ತೆರದ ದೀರ್ಘವ್ಯಾಧಿ (ಈ ವ್ಯಾಧಿಯಲ್ಲಿ ಸಣ್ಣಸಣ್ಣ ಗುಳ್ಳೆಗಳಿಂದ ಕೂಡಿದ ಮೂತ್ರ ಪಿಂಡಗಳ ಊತವೂ, ಮೂತ್ರದಲ್ಲಿ 'ಆಲ್ಬ್ಯುಮೆನ್' ಪದಾರ್ಥ ಹೋಗುವುದೂ ಲಕ್ಷಣಗಳು). (ಈ ವ್ಯಾಧಿಯನ್ನು ಮೊದಲು ವಿವರಿಸಿದ Dr. R. Bright ಎಂಬಾತನ ಹೆಸರಿನಿಂದ)

Brílliant ಬ್ರಿಲ್ಯಂಟ್ (ಗು., ನಾ.) ಹೊಳೆಯುವ; ತೊಳಗುವ; ಬೆಳಗುವ; ಕಾಂತಿಯುಳ್ಳ; ಪ್ರಕಾಶಮಾನವಾದ; ಉಜ್ಜ್ವಲ; ಪ್ರಜ್ವಲಿಸುವ; ತೇಜೋಮಯವಾದ; ಥಳಥಳಿಸುವ. ಯಶಸ್ವಿಯಾದ; ತೇಜಸ್ವಿಯಾದ; ತೀಕ್ಷ್ಣಬುದ್ಧಿಯುಳ್ಳ. (ನಾ.) ಅತ್ಯುತ್ತಮವಾಗಿ ಕೆತ್ತಿದ ಬಹಳ ಪ್ರಕಾಶಮಾನವಾದ ವಜ್ರ: ಹೊಳಪು ವಜ್ರ. ಒಂದು ಗೊತ್ತಾದ ಗಾತ್ರದ ಅಚ್ಚಿನಮೊಳೆ. **Brílliance** (ನಾ.); **Brílliancy** (ನಾ.); **Brílliantly** (ಕ್ರಿ. ವಿ.); **Brílliantine** —ಟೀನ್ (ನಾ.) ತಲೆಗೂದಲನ್ನು ಅಂದಗೊಳಿಸುವುದಕ್ಕಾಗಿ ತಯಾರಿಸಿದ ಒಂದು ಜಿಗುಟುಪದಾರ್ಥ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Brim ಬ್ರಿಮ್ (ನಾ., ಕ್ರಿ.) (ಬಟ್ಟಲು, ದೋಗುಣಿ, ಬಾವಿ, ಹಳ್ಳ, ಮೊ. ಗಳ) ಅಂಚು, ಅರುಗು, ಏಣು. ಪರಂಗಿಟೋಪಿಯ ಚಾಚುಏಣು. (ಕ್ರಿ.) ತುಳುಕುವಂತೆ ತುಂಬು ; ತುಂಬಿ ತುಳುಕು (ರೂಪ. ಸಹ). B. over ತುಂಬಿ ಹರಿ ; **Brímful, Brím-fúll** (ಗು.) ತುಂಬಿ ತುಳುಕುವ ; ಕಂಠ ಪೂರ್ಣ. **Brímless** (ಗು.) ; **Brimmed** (ಗು.) ; **Brímmer** (ನಾ.) ತುಂಬು ಬಟ್ಟಲು.

Brímstone ಬ್ರಿಮ್‌ಸ್ಟನ್ (ನಾ.) ಗಂಧಕ (Sulphur ಎಂಬುದಕ್ಕೆ ಹಿಂದಿನ ಹೆಸರು. B. and treacle ಮಕ್ಕಳಿಗೆ ಕೊಡುವ ಒಂದು ಔಷಧ). ನರಕದ ಬೆಂಕಿ ಉರಿಯಲು ಮೂಲವಾದ ಪದಾರ್ಥ. ಗಂಡುಬೀರಿ ; ಉರಿಮುಖದವಳು. B. butterfly ಗಂಧಕವರ್ಣದ ಚಿಟ್ಟೆ. **Brímstony** (ಗು.)

Bríndled ಬ್ರಿಂಡ್‌ಲ್ಡ್, **Bríndle** ಬ್ರಿಂಡ್‌ಲ್ (ಗು.) ಕಂದು ಅಥವಾ ಪಿಶಂಗ ವರ್ಣವೂ ಇತರ ವರ್ಣದ ಗೀರುಗಳೂ ಉಳ್ಳ. ಪಟ್ಟೆಗಳುಳ್ಳ ; ಚುಕ್ಕೆಗಳುಳ್ಳ.

Brine ಬ್ರೈನ್ (ನಾ., ಕ್ರಿ. ಸಕ.) ಹೆಚ್ಚಾದ ಉಪ್ಪು ಕರಗಿರುವ ನೀರು : ಸಮುದ್ರದ ನೀರು. ಸಮುದ್ರ. (ಕಾವ್ಯ) ಕಣ್ಣೀರು. (ಕ್ರಿ.) ಉಪ್ಪು ಕರಗಿಸಿದ ನೀರಿನಲ್ಲಿ ಅದ್ದಿಡು, ನೆನೆಯಿಸು, ಊರಹಾಕು. **B.-pan** ಉಪ್ಪಿನನೀರಿನಲ್ಲಿಯ ನೀರನ್ನು ಆವಿಯಾಗಿಸಿ ಉಪ್ಪನ್ನು ಪಡೆಯುವುದಕ್ಕಾಗಿ, ಮಾಡಿದ ಪಾತಿ, ಅಥವಾ ಉಪಯೋಗಿಸುವ ಕಬ್ಬಿಣದ ಓಡು : ಉಪ್ಪಿನ ಪಾತಿ, ತೊಟ್ಟಿ. **Bríny** (ಗು.) The b. (ಅಸಂ.) ಸಮುದ್ರ.

Bring ಬ್ರಿಂಗ್ (ಕ್ರಿ. ; ಭೂತ., ಭೂ. ಕೃ. brought ಬ್ರಾಟ್) ತಾ ; ತರು ; ತೆಗೆದುಕೊಂಡು ಬಾ ; ಕರೆದುಕೊಂಡು ಬಾ ; ಬರಿಸು ; ತರಿಸು. B. about ಆಗಿಸು ; ಉಂಟುಮಾಡು ; ನೆರವೇರಿಸು. (ಹಡಗನ್ನು) ಹಿಂದುಮುಂದಾಗಿ ತಿರುಗಿಸು. (ರೂಪ.) ಬೇರೆಯ ಮತಕ್ಕೆ, ಅಭಿಪ್ರಾಯಕ್ಕೆ, ತಿರುಗಿಸು. = B. round. B. back ನೆನಪಿಗೆ ತರು ; ಜ್ಞಾಪಿಸು ; ಜ್ಞಾಪಿಸಿಕೊ. B. down ಕೆಳಕ್ಕೆ ಕೆಡವು. (ಹಾರುತ್ತಿರುವ ಹಕ್ಕಿ, ಮೊ. ನ್ನು) ಗಾಯಗೊಳಿಸಿ, ಕೊಂದು, ಕೆಳಕ್ಕೆ ಕೆಡವು. (ಶಿಕ್ಷೆ, ಮೊ.) ಒಬ್ಬನಮೇಲೆ ಬೀಳುವಂತೆ ಮಾಡು. (ಬೆಲೆಯನ್ನು) ತಗ್ಗಿಸು, ಇಳಿಸು. (ರೂಪ.) ತಗ್ಗುವಂತೆ ಮಾಡು. (ಚರಿತ್ರಾಂಶಗಳನ್ನು) ಒಂದು ಗೊತ್ತಾದ ಕಾಲದ ವರೆಗೂ ತರು. B. down the house ಮನೆ ಕಿತ್ತು ಹಾರಿ ಹೋಗುವಹಾಗೆ ಸಭೆ ಹೊಗಳಿ ಚಪ್ಪಾಳೆಹೊಡೆಯುವಂತೆ ಮಾಡು. B. forth ಹೆರು ; ಹಡೆ ; ಈಯಿ. ಬಿಡು ; ಕೊಡು ; ಆಗಿಸು. B. forward (ಹಿಂದಿನ ಹಾಳೆಯ ಲೆಕ್ಕದ ಮೊತ್ತವನ್ನು) ಮುಂದಕ್ಕೆ ಎತ್ತಿಕೊ. B. home to ಮನಗಾಣಿಸು ; (ತಪ್ಪನ್ನು) ಮನವರಿಕೆ ಮಾಡು. B. in (ಪದ್ಧತಿಗಳು, ಮೊ. ನ್ನು) ಆಚರಣೆಗೆ ತರು. ಲಾಭ ತರು. (ಕಾನೂನಿನ ಮಸೂದೆ ಮೊ. ನ್ನು) ತೀರ್ಮಾನಕ್ಕಿಡು. (ಆಲೋಚನೆಗಾಗಿ) ಮುಂದಿಡು. ಉದಾಹರಿಸು. (ಪಂಚಾಯಿತದಾರರು) ತಪ್ಪಿತಸ್ಥನೆಂದು ಅಥವಾ ಅಲ್ಲವೆಂದು ತೀರ್ಮಾನಿಸಿ ಹೇಳು. B. into play ನಡೆಯುವಂತೆ ಮಾಡು. B. into the world ಹೆರು ; ಹಡೆ. B. off ನಾಶವಾಗಿ ಹೋಗುತ್ತಿದ್ದುದನ್ನು ಸುರಕ್ಷಿತವಾಗಿ ತರು ; ಉದ್ಧಾರಮಾಡು. (ಒಂದು ಕಾರ್ಯವನ್ನು) ಈಡೇರಿಸು. B. on (ಕಾಯಿಲೆ, ಮೊ. ನ್ನು) ಉಂಟುಮಾಡು, ತರು. (ಯಾವುದಾದರೂ ವಿಷಯವನ್ನು) ಪ್ರಸ್ತಾಪಕ್ಕೆ ತರು. ಒಟ್ಟಿಗೆ ಸೇರಿಸು ; ಬೆಸೆ. B. out ಸ್ಪಷ್ಟಪಡಿಸು ; ಸ್ಪಷ್ಟವಾಗಿ ಹೇಳು ; ಬಯಲಿಗೆ ತರು ; ಪ್ರಕಟಗೊಳಿಸು. (ಹುಡುಗಿಯನ್ನು) ಸಮಾಜಕ್ಕೆ ಪ್ರವೇಶಗೊಳಿಸು. B. over ಬೇರೆ ಅಭಿಪ್ರಾಯಕ್ಕೆ ತಿರುಗಿಸು ; ತನ್ನ ಕಡೆಗೆ, ತನ್ನ ಅಭಿಪ್ರಾಯಕ್ಕೆ, ತರು ; ಒಲಿಸಿಕೊ. B. round ಮೂರ್ಛೆ ತಿಳಿಸು ; ಆರೋಗ್ಯಸ್ಥಿತಿಗೆ ತರು. B. through (ರೋಗಿಯನ್ನು) ಸರಿಯಾದ ಆರೈಕೆಯಿಂದ ಉಳಿಸು. B. to ಚಲನೆ ತಡೆ ; ನಿಂತುಹೋಗು ; ಪ್ರಜ್ಞೆ ಬರುವಂತೆ ಮಾಡು ; ಆರೋಗ್ಯಸ್ಥಿತಿಗೆ ತರು. B. to bear (ಅಧಿಕಾರ, ಶಕ್ತಿ, ಮೊ. ನ್ನು) ಪ್ರಯೋಗಿಸು, ಅನ್ವಯಿಸು. B. to book (ತಪ್ಪಿತಸ್ಥನನ್ನು) ವಿಚಾರಣೆಗೆ ಗುರಿಪಡಿಸು, ತಪ್ಪುಹೊರುವಂತೆ ಮಾಡು. B. to mind ಜ್ಞಾಪಿಸು ; ಜ್ಞಾಪಿಸಿಕೊ. B. to pass ನಡೆಯುವಂತೆ ಮಾಡು. B. under ಅಧೀನಪಡಿಸು ; ವಶಪಡಿಸು ; ನಿಗ್ರಹಿಸು. B. up ಶಿಕ್ಷಣ ಕೊಡು ; ಬೆಳೆಯಿಸು ; ಸಾಕು ; ಪೋಷಿಸು. ಕೋರ್ಟಿನಲ್ಲಿ ದಾವಾಮಾಡು. (ಹಡಗನ್ನು) ಲಂಗರುಹಾಕಿ ನಿಲ್ಲಿಸು. ನಿಂತುಬಿಡು. ಮರಳಿ ಗಮನಕ್ಕೆ ತರು. (ಲೆಕ್ಕ, ಮೊ. ನ್ನು) ಮುಂದಕ್ಕೆ ಬರೆ. B. up the rear ಕೊನೆಯಲ್ಲಿ ಬರು.

Brínjal, -jaul ಬ್ರಿಂಜಾಲ್ (ನಾ.) ಬದನೆಯ ಕಾಯಿ.

Brinjárry ಬ್ರಿಂಜಾರಿ (ನಾ.) ದಖ್ಖನಿನ ಧಾನ್ಯದ ಮತ್ತು ಉಪ್ಪಿನ ತಿರುಗುವರ್ತಕ.

Brink ಬ್ರಿಂಕ್ (ನಾ.) (ಕಡಿದಾದ ಪ್ರದೇಶದ, ಅಥವಾ ಆಳವಾದ ಹಳ್ಳದ) ಅಂಚು, ಅರುಗು, ಕರೆ (on b. of grave ಸಾಯುವ ಸ್ಥಿತಿಯಲ್ಲಿ). ನೀರಿನ ಅಂಚು (ಮು., ಅದು ಕಡಿದಾಗಿರುವಾಗ) (shiver on the b. ಅಂಚಿನಲ್ಲಿ ನಿಂತು ಮುಳುಗುವುದಕ್ಕೆ ಹಿಂದುಮುಂದು ನೋಡುತ್ತಿರು). (ಯಾವುದಾದರೂ ಸ್ಥಿತಿ, ಕಾಲ, ಘಟನೆ, ಕಾರ್ಯ — ಇವುಗಳ) ಸಾಮೀಪ್ಯ.

Brío (It.) ಬ್ರೀಯೋ (ನಾ.) ಉತ್ಸಾಹ ; ಉಲ್ಲಾಸ ; ಗೆಲವು ; ಹುರುಪು ; ಲವಲವಿಕೆ.

Briquétte, Bríquet ಬ್ರಿಕೆಟ್ (ನಾ.) ಕಲ್ಲಿದ್ದಲ ಪುಡಿಯನ್ನು ಒತ್ತಡದಿಂದ ಗಟ್ಟಿಸಿ ಮಾಡಿದ ಪಾಳ ; ಕಲ್ಲಿದ್ದಲ ಪುಡಿಯ ಇಟ್ಟಿಗೆ.

Bríse-bíse ಬ್ರೀಸ್ ಬೀಸ್ (ನಾ.) ಕಿಟಕಿಯ ತಳಭಾಗದ ತೆರೆ.

Brisk ಬ್ರಿಸ್ಕ್ (ಗು.) ಚಟುವಟಿಕೆಯುಳ್ಳ ; ಚುರುಕಾದ ; ತೀವ್ರ ; ಜೋರಾದ ; ಕಡುಪಾದ ; ಬಿರುವಾದ ; ಥರಾಟಿಯ. (B. pace, trade ಚುರುಕಾದ ನಡೆ, ವ್ಯಾಪಾರ. B. wind ಜೋರಾದ ಗಾಳಿ). ಉಲ್ಲಾಸಕರವಾದ ; ಹುರಿದುಂಬಿಸುವ (B. air). **Brískly** (ಕ್ರಿ. ವಿ.) ; **Briskness** (ನಾ.)

Brisk (ಕ್ರಿ.) ಚುರುಕುಗೊಳಿಸು ; ಚುರುಕಾಗು (ಸಾ., B. up)

Brísket ಬ್ರಿಸ್ಕೆಟ್ (ನಾ.) (ಆಹಾರಕ್ಕಾಗಿ ಉಪಯೋಗಿಸುವ) ಪಶುಗಳ ಎದೆಯ ಭಾಗ.

Brístle ಬ್ರಿಸ್‌ಲ್ (ನಾ.) ಕಾಡುಹಂದಿಯ ಮೈಮೇಲಿನ ಒರಟು ಕೂದಲು ; ಬಿರುಗೂದಲು ; ಇತರ ಮೃಗಗಳ, ಮನುಷ್ಯನ ಗಡ್ಡದಲ್ಲಿಯ, ಒರಟಾದ ಮೋಟುಕೂದಲು. ಗಿಡಗಳಲ್ಲಿಯ ಸಣ್ಣ ಮುಳ್ಳು. Set up one's, another's, bristles ರೇಗು, ರೇಗಿಸು. **Brístly** ಬ್ರಿಸ್ಲಿ (ಗು.) ; **Brístled** (ಗು.)

Brístle (ಕ್ರಿ.) (ಕೂದಲು, ಮೊ.) ನೆಟ್ಟಗೆ ನಿಲ್ಲುವಂತೆ ಮಾಡು ; ರೋಮಾಂಚ ಮಾಡು ; ರೋಮಾಂಚವಾಗು. ಬಿರುಗೂದಲಿನಂತೆ ಎಬ್ಬಿಸು, ಏಳು ; ಮುಳ್ಳುಮುಳ್ಳಾಗು, — ಆಗಿಸು (ಸಾ., B. up). ಕೂದಲು ಒತ್ತಾಗಿರು. ರೇಗು ; ಕಾದಾಟಕ್ಕೆ ನಿಲ್ಲು. ತೊಂದರೆಗಳಿಂದ ಇಡಿಕಿರಿದಿರು.

Brítain ಬ್ರಿಟನ್ (ನಾ.) (Also, Great Britain) ಇಂಗ್ಲೆಂಡ್, ವೇಲ್ಸ್ ಮತ್ತು ಸ್ಕಾಟ್ಲೆಂಡ್ ಸೇರಿದ ದೇಶ ; ಬ್ರಿಟಿಷ್ ಚಕ್ರಾಧಿಪತ್ಯ North B. ಸ್ಕಾಟ್ಲೆಂಡ್. Greater B ಗ್ರೇಟ್‌ಬ್ರಿಟನ್ ಮತ್ತು ಅದಕ್ಕೆ ಸೇರಿದ ಅಧಿಪತ್ಯಗಳೂ ನೆಲಸುನಾಡುಗಳೂ. **Británnic** ಬ್ರಿಟ್ಯಾನಿಕ್ (ಗು.) ಬ್ರಿಟನ್ನಿನ (ಮು., His B. Majesty ಎಂಬಂಥ ವಾಕ್ಯಭಾಗಗಳಲ್ಲಿ). **Británnia** ಬ್ರಿಟ್ಯಾನಿಯ (ನಾ.) ಬ್ರಿಟನ್ ಮಾತೆ. Britannia metal ಬೆಳ್ಳಿಯಂತೆ ಕಾಣುವ, ತವರ ಮತ್ತು ಸುರುಮಾ ಲೋಹಗಳ ಮಿಶ್ರಲೋಹ. **Brítish** (ಗು.) ಪುರಾತನ ಬ್ರಿಟನ್ನರ ; ಗ್ರೇಟ್‌ಬ್ರಿಟನ್ನಿನ ಅಥವಾ ಅದರ ಜನಗಳ. The B. ಬ್ರಿಟಿಷ್ ಜನರು, — ಸಿಪಾಯಿಗಳು, ಮೊ. B. Academy ನೀತಿಶಾಸ್ತ್ರವನ್ನೂ ರಾಜನೀತಿಶಾಸ್ತ್ರವನ್ನೂ ಅಭಿವೃದ್ಧಿಗೊಳಿಸಲು ಬ್ರಿಟನ್ನಿನಲ್ಲಿ ಏರ್ಪಟ್ಟಿರುವ ನೂರುಮಂದಿ ವಿದ್ವಾಂಸರ, ರಾಜಶಾಸನಪಡೆದ ಪರಿಷತ್ತು : ಬ್ರಿಟಿಷ್ ಪರಿಷತ್ತು. B. Association ವಿಜ್ಞಾನಾಭಿವೃದ್ಧಿಗಾಗಿ ಬ್ರಿಟನ್ನಿನಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏರ್ಪಟ್ಟಿರುವ ವೈಜ್ಞಾನಿಕ ಸಂಘ. B. Museum ಪ್ರಾಚೀನ ವಸ್ತುಗಳು, ಗ್ರಂಥಗಳು, ಮೊ. ನ್ನು ಸಂಗ್ರಹಿಸಿ ಇಟ್ಟಿರುವ ಲಂಡನ್ನಿನ ದೇಶೀಯ ವಸ್ತುಸಂಗ್ರಹ ಶಾಲೆ. B. warm ಸೈನಿಕರು ಹಾಕಿಕೊಳ್ಳುವ ಒಂದು ತೆರದ ಸಣ್ಣ ಮೇಲಂಗಿ. **Brítisher** (ನಾ.) (ಅಮೆ. ಸಂ.) ಬ್ರಿಟಿಷ್ ಸಂತತಿಯ ಬ್ರಿಟಿಷ್‌ಪ್ರಜೆ. **Brítishism** (= **Bríticism**) (ನಾ.) ಗ್ರೇಟ್‌ಬ್ರಿಟನ್ನಿನಲ್ಲಿ ಇಂಗ್ಲಿಷರ ವಾಡಿಕೆಯಲ್ಲಿರುವ ಮಾತು ಅಥವಾ ಭಾಷಾ ಮರ್ಯಾದೆ (ಅಮೆ. ಸಂ. ಮೊ. ಪ್ರಾಂತಗಳಲ್ಲಲ್ಲ). **Bríton** ಬ್ರಿಟನ್, ಬ್ರಿಟ್‌ನ್ (ನಾ.) ರೋಮನರು ಬಂದಾಗ ದ. ಇಂಗ್ಲೆಂಡಿನಲ್ಲಿದ್ದ ಒಂದು ಬುಡಕಟ್ಟಿನ ಜನ. (ಕಾವ್ಯ, ಮೊ.) ಗ್ರೇಟ್‌ಬ್ರಿಟನ್ನಿನ ಅಥವಾ ಬ್ರಿಟಿಷ್ ಸಾಮ್ರಾಜ್ಯದ ದೇಶಸ್ಥ. North B. ಸ್ಕಾಟ್ಲೆಂಡ್ ದೇಶಸ್ಥ.

Bríttle ಬ್ರಿಟ್‌ಲ್ (ಗು.) ಒಡೆದು ಚೂರಾಗುವ ಸ್ವಭಾವವುಳ್ಳ; ಭಿದುರ; ಭಂಗುರ. **Bríttleness** (ನಾ.) ಭಿದುರತೆ.

Brize ಬ್ರೀಸ್ (ನಾ.) (= Breeze[2]) ತೊಣಚಿ.

Broach[1] ಬ್ರೋಚ್ (ನಾ., ಕ್ರಿ. ಸಕ.) ಮಾಂಸ ಸುಡುವ ಲೋಹದ ಸಲಾಕೆ. ಕ್ರೈಸ್ತದೇವಾಲಯದ ಗೋಪುರದಮೇಲಿನ ಶಂಕುಶಿಖರ. ತೂತುಕೊರೆಯುವ ದಬ್ಬಳ; ಬೈರಿಗೆಯ ಮೊಳೆ, ದಸಿ, ಶೂಲ, ಮೊ. ಪು. (ಕ್ರಿ.) ತೂತುಕೊರೆ; (ಪಾನದ್ರವವನ್ನು ತೆಗೆಯುವುದಕ್ಕಾಗಿ) ಪೀಪಾಯಿಯನ್ನು ಕೊರೆ. (ಸರಕಿನ ಪಿಂಡಿ, ಪೆಟ್ಟಿಗೆ, ಮೊ. ನ್ನು) ಬಿಚ್ಚಿ ಉಪಯೋಗಿಸು. (ಯಾವುದಾದರೂ ವಿಷಯವನ್ನು) ಚರ್ಚೆಗಾರಂಭಿಸು, ಪ್ರಸ್ತಾಪಿಸು; ಮಾತು ತೆಗೆ; ಮಾತೆತ್ತು.

Broach[2] ಬ್ರೋಚ್ (ಕ್ರಿ.; ಸಾ., B. to) (ಹಡಗು) ಗಾಳಿಗೂ ಅಲೆಗಳಿಗೂ ಮೈಯೊಡ್ಡುವಂತೆ ತಿರುಗು, ತಿರುಗಿಸು.

Broad ಬ್ರಾಡ್ (ಗು., ನಾ., ಕ್ರಿ. ವಿ.) ಅಗಲವಾದ; ವಿಶಾಲವಾದ; ಕಿರಿದಲ್ಲದ. ಅಗಲವಾದ ಭಾಗ (The b. of the back). ಪೂರ್ತಿಯಾಗಿ; ಸ್ಥೂಲವಾಗಿ (Speak b. ನಿಸ್ಸಂಕೋಚವಾಗಿ ಮಾತನಾಡು. B. awake ತೀರ ಎಚ್ಚತ್ತು). ವಿಸ್ತಾರವಾದ (B. lands ವಿಸ್ತಾರವಾದ ಜಮಾನು). ತುಂಬಿದ; ಪೂರ್ಣವಾದ (B. daylight ತುಂಬಿದ ಬೆಳಕು; ನಡುಹಗಲು). ಸ್ಪಷ್ಟವಾದ (B. facts ಸ್ಪಷ್ಟ ವಿಷಯಗಳು. B. hint ಸ್ಪಷ್ಟವಾದ ಸೂಚನೆ). ಸ್ಥೂಲ (B. distinction ಸ್ಥೂಲ ಭೇದ). ಅಶ್ಲೀಲ; ಅಸಭ್ಯ (B. story ಅಶ್ಲೀಲವಾದ ಕಥೆ). ಉಚ್ಚಾರಣೆಯಲ್ಲಿ ಸ್ಪಷ್ಟವಾದ ವಿಶಿಷ್ಟತೆ ತೋರುವ (B. Scotch). ಸರ್ವಸಾಮಾನ್ಯವಾದ (B. rule). ಔದಾರ್ಯವುಳ್ಳ; ಸಹನೆಯುಳ್ಳ (B. Church ತಮ್ಮ ಮತತತ್ತ್ವಗಳಲ್ಲಿ ನಂಬಿಕೆಯಿಡಬೇಕೆಂದು ಬಲವಂತಪಡಿಸದೆ ಅವರವರ ತಿಳಿವಳಿಕೆಗಾಗಿ ಬಿಟ್ಟುಬಿಡುವ ಮತಬೋಧಕರು). As b. as it is long ಹೇಗಿದ್ದರೂ ಸರಿಯೆ; ಎಲ್ಲಾ ಒಂದೇ. B. arrow (Arrow ನೋಡಿ). B.-blown ಪೂರಾ ಅರಳಿ. Broadcloth ನಯವಾದ, ಸಾದಾ ನೆಯ್ಗೆಯ, ಜೋಡಿ ಪನ್ನವುಳ್ಳ, ಕಪ್ಪು ಬಣ್ಣದ ಬಟ್ಟೆ (ಗುಣಮುಖ್ಯವೇ ಹೊರತು ಅಗಲವಲ್ಲ): ಬನಾತು. B. gauge ದೊಡ್ಡಳತೆಯ ರೈಲ್‌ಮಾರ್ಗ; ಇದರ ಅಗಲ. B.-glass ಕಿಟಕಿಯ ಗಾಜು. Broadmindedness ಉದಾರ ಮನಸ್ಕತೆ; ಹೃದಯ ವೈಶಾಲ್ಯ. Broadsheet ಒಂದೇ ಕಡೆ ಮುದ್ರಣ ಮಾಡಿರುವ ದೊಡ್ಡ ಕಾಗದದ ಹಾಳೆ. Broadside ಹಡಗಿನ ಪಾರ್ಶ್ವದ ಮುಂಭಾಗ (Broadside on, to ಈ ಭಾಗ ಒಡ್ಡಿ). ಹಡಗಿನ ಈ ಭಾಗದಲ್ಲಿಟ್ಟಿರುವ ಫಿರಂಗಿಗಳ ಸಾಲು; ಈ ಫಿರಂಗಿಗಳನ್ನು ಒಟ್ಟಿಗೆ ಹಾರಿಸುವುದು. B.-silk, B.-weaver ಪಟ್ಟಿಗಳಾಗಿ ನೆಯ್ಯದೆ ಅಗಲವಾಗಿ ನೆಯ್ದ ರೇಷ್ಮೆಯ ಬಟ್ಟೆ; ಇದನ್ನು ನೆಯ್ಯುವವನು. Broadsword ಅಗಲವಾದ ಅಲಗಿನ ಕತ್ತಿ; ಅಗಲಗತ್ತಿ. **Broáden** (ಕ್ರಿ.); **Broádly** (ಕ್ರಿ. ವಿ.); **Broádness** (ನಾ.) (ಈ ಪದಕ್ಕೆ ಬದಲಾಗಿ, ಈಗ Breadth ಎಂಬ ಪದವೇ ಪ್ರಯೋಗ). (ಮಾತಿನಲ್ಲಿ) ಅಶ್ಲೀಲತೆ. **Broádways, Broádwise** (ಕ್ರಿ. ವಿ.)

Broádcast ಬ್ರಾಡ್‌ಕಾಸ್ಟ್ (ಗು., ಕ್ರಿ. ವಿ., ಕ್ರಿ.; ಭೂತ. -casted; ಭೂ. ಕೃ. -cast; ನಾ.) (ಬೀಜದ ವಿಷಯದಲ್ಲಿ) ಸಾಲುಗಟ್ಟಿ ಹಾಕದೆ, ಅಥವಾ ಕೂರಿಗೆಯಲ್ಲಿ ಹಾಕದೆ, ಚೆಲ್ಲಿದ, ಎರಚಿದ. (ಕ್ರಿ.) ಹೀಗೆ ಎರಚು, ಚೆಲ್ಲು. ಹರಡು (ರೂಪ.); ಪ್ರಸಾರ ಮಾಡು, — ವಾಗು (ಸಮಾಚಾರ, ಪ್ರಚಾರ, ಮೊ.). (ನಿಸ್ತಂತುವಿನಲ್ಲಿ) ಸಮಾಚಾರ, ಸಂಗೀತ, ಮೊ. ನ್ನು ಗ್ರಾಹಕ ಸಾಧನವನ್ನುಳ್ಳವರಿಗೆ ನಿಸ್ತಂತುವಿನ ಮೂಲಕ ಕಳುಹು, ಹರಡು. ಹೀಗೆ ಕಳುಹಿಸುವುದಕ್ಕಾಗಿ ಮಾತನಾಡು, ಹಾಡು. (ನಾ.) ನಿಸ್ತಂತು ವಾರ್ತಾಪ್ರಸರಣ (To-day's b. programme ಈ ದಿನದ ನಿಸ್ತಂತು ವಾರ್ತಾಪ್ರಸರಣದ ವಿಷಯ ಪಟ್ಟಿಕೆ)

Bróbdingnag ಬ್ರಾಬ್ಡಿಂಗ್‌ನ್ಯಾಗ್ (ನಾ.) ದೈತ್ಯಾಕಾರಿಗಳ, ಬೃಹದ್ದೇಹಿಗಳ, ದೇಶ. **Brobdingnágian** (ಗು., ನಾ.) ದೈತ್ಯಾಕಾರದ; ದೈತ್ಯಾಕಾರಿ; ಬೃಹದ್ದೇಹಿ.

Brocáde ಬ್ರೊಕೇಡ್ (ನಾ., ಕ್ರಿ. ಸಕ.) ಉಬ್ಬುಚಿತ್ರದ ನಮೂನೆಗಳನ್ನು ನೆಯ್ದಿರುವ ವಸ್ತ್ರ: ಕಿನ್‌ಕಾಪು. (ಇಂಡಿಯದ) ಜರತಾರಿ ಬಟ್ಟೆ. (ಕ್ರಿ.) ಕಿನ್‌ಕಾಪು ಕೆಲಸ ಮಾಡು.

Bróchure (F) ಬ್ರೊಷೂರ್ (ನಾ.) ಮುದ್ರಣಮಾಡಿದ ಕೆಲವು ಹಾಳೆಗಳುಳ್ಳ ಹೊಲಿದಿರುವ ಚಿಕ್ಕ ಪುಸ್ತಕ.

Brock ಬ್ರಾಕ್ (ನಾ.) = Badger[2]; ನಾರುವ ಮೈಯ ಕೊಳಕು ಮನುಷ್ಯ.

Brócket ಬ್ರಾಕೆಟ್ (ನಾ.) ನೆಟ್ಟನೆಯ ಕೊಂಬುಳ್ಳ ಎರಡುವರ್ಷ ವಯಸ್ಸಿನ ಗಂಡು ಜಿಂಕೆ.

Brogue ಬ್ರೋಗ್ (ನಾ.) ಹದಮಾಡದ ತೊಗಲಿನಿಂದ ಮಾಡಿದ ಒರಟು ಜೋಡು. ಪ್ರಾಂತಿಕ (ಮು., ಐರಿಷರ) ಉಚ್ಚಾರಣೆ.

Broíder ಬ್ರಾಯ್ಡರ್ (ಕ್ರಿ. ಸಕ.), **Broídery** (ನಾ.) [Embroider(y) ಎಂಬುದಕ್ಕೆ ಕಾವ್ಯ ಮತ್ತು ಪ್ರಾಚೀ. ಪ್ರ. ದಲ್ಲಿಯ ರೂಪ]

Broil[1] ಬ್ರಾಯ್‌ಲ್ (ನಾ.) ಜಗಳ; ಗಲಭೆ; ಹುಯಿಲು.

Broil[2] ಬ್ರಾಯ್‌ಲ್ (ಕ್ರಿ., ನಾ.) ಕೆಂಡದಮೇಲೆ ಅಥವಾ ಕಬ್ಬಿಣದ ಅಡ್ಡಣಿಗೆಯಮೇಲೆ (ಮಾಂಸ) ಸುಡು, ಅಡು. ಸುಟ್ಟು ಕಮರಿಹೋಗುವಂತೆ ಮಾಡು; ಕಮರಿಹೋಗು; ಬೆಂದುಹೋಗು; ತಪಿಸು. (ನಾ.) ಸುಟ್ಟ ಮಾಂಸ.

Broke[1] ಬ್ರೋಕ್ [Break ಧಾತುವಿನ ಭೂತ ಮತ್ತು ಭೂ. ಕೃ. ರೂಪ; ಭೂ. ಕೃ. (ಕಾವ್ಯದಲ್ಲಿ)]. **Bróken** (ಗು.) (Break ಪದದ ಕ್ರಿಯಾರ್ಥಗಳಲ್ಲಿ); B. English ಹರುಕುಮುರುಕಾಗಿ ಆಡುವ ಇಂಗ್ಲಿಷ್ ಮಾತು. B. ground ಸಮವಿಲ್ಲದ ನೆಲ. B.-hearted ಎದೆಯೊಡೆದ; ಭಗ್ನಹೃದಯ. B. man ಎದೆಗುಂದಿದವನು; ಹತಾಶ. B. meat ತಿಂದುಳಿದ ಮಾಂಸ. B. money ಚಿಲ್ಲರೆ ನಾಣ್ಯ. B. numbers ಅಪೂರ್ಣಾಂಕಗಳು. B. sleep ಆಗಾಗ ಎಚ್ಚರವಾಗುವ ನಿದ್ದೆ. B. tea ಪುಡಿ ತೇಯೆಲೆ. B. time (ಒಂದು ಗೊತ್ತಾದ ಕೆಲಸಮಾಡುವಲ್ಲಿ) ಕೆಲಸಮಾಡದೆ ಕಳೆದ ಹೊತ್ತು. B. water ತರಂಗಗಳು ಒಡೆದು ಚೆದರಿದ ನೀರು. B. weather ಒಂದೇ ಸಮವಿಲ್ಲದ ವಾಯುಸ್ಥಿತಿ. B.-winded (ಕುದುರೆ) ನಿತ್ರಾಣವಾದ, ಕಷ್ಟಕೆಲಸಕ್ಕೆ ಒದಗದ. **Brókenly** (ಕ್ರಿ. ವಿ.) ಬಿಟ್ಟು ಬಿಟ್ಟು; ತಡೆದು ತಡೆದು.

Broke[2] ಬ್ರೋಕ್ (ನಾ.) ಉಣ್ಣೆಯ ಚರ್ಮದಮೇಲೆ ಅಲ್ಲಲ್ಲಿ ಕಾಣುವ ಮೋಟುತುಪ್ಪಟ.

Bróker ಬ್ರೋಕರ್ (ನಾ.) ಹಳೆಯ ಸಾಮಾನುಗಳ ವ್ಯಾಪಾರಿ. ವ್ಯಾಪಾರದಲ್ಲಿ ಮಧ್ಯಸ್ಥಗಾರ; ದಳ್ಳಾಳಿ. ಒಬ್ಬನ ಪರವಾಗಿ ಅಧಿಕಾರ ಪಡೆದು ವ್ಯಾಪಾರಮಾಡುವವನು. ಜಪ್ತಿಮಾಡಿದ ವಸ್ತುಗಳ ಬೆಲೆಕಟ್ಟಲು, ಅಥವಾ ಅವನ್ನು ಮಾರಲು, ಅಧಿಕಾರ ಪಡೆದವನು. **Brókerage** — ರೆಜ್ (ನಾ.) ದಳ್ಳಾಳಿಯ ರುಸುಮು; ದಳ್ಳಾಳಿ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತರಗು. ದಳ್ಳಾಳಿ ವ್ಯಾಪಾರ. **Bróking** (ನಾ.) ದಳ್ಳಾಳಿಯ ವ್ಯಾಪಾರ; ದಳ್ಳಾಳಿಕೆಲಸ ಮಾಡುವುದು.

Brólly ಬ್ರಾಲಿ (ನಾ.) (ಅಸಂ.) ಕೊಡೆ ; ಛತ್ರಿ.

Brómal
Brómic } **Bromine** ನೋಡಿ.
Brómide

Brómine ಬ್ರೋಮಿನ್ (ನಾ.) ಬಹಳ ಕಟುವಾದ ವಾಸನೆಯುಳ್ಳ, ದಟ್ಟಕೆಂಪು ಬಣ್ಣದ, ದ್ರವರೂಪದ, ಕ್ಲೋರೀನ್ ಅನಿಲವನ್ನು ಹೋಲುವ, ಅಲೋಹ ವಿಷ ಮೂಲಧಾತು (ಕೆಲವು ಔಷಧಗಳಲ್ಲಿ ಶಾಮಕ ಪದಾರ್ಥವಾಗಿ ಉಪಯೋಗ): 'ಬ್ರೋಮಿನ್'. **Brómal** (ನಾ.) ಬ್ರೋಮಿನ್ ಅಥವಾ ಬ್ರೋಮೈಡ್ ಪದಾರ್ಥವು ಆಲ್ಕೊಹಾಲಿನೊಡನೆ ಸಂಯೋಗಹೊಂದಿ ಆದ ಪದಾರ್ಥ. **Brómate** (ನಾ.) ಬ್ರೋಮಿಕಾಮ್ಲದ ಲವಣ. **Brómic** (ಗು.) ಬ್ರೋಮಿನ್ ಧಾತು ಸಂಯುಕ್ತವಾಗಿ ಸೇರಿರುವ. **Brómide** (ನಾ.) ಬ್ರೋಮಿನ್ ಸಂಯುಕ್ತ ಪದಾರ್ಥ (ಮು., ಪೊಟ್ಯಾಸಿಯಂ ಬ್ರೋಮೈಡ್). B. paper ಛಾಯಾಚಿತ್ರದ ಪ್ರತಿ ತೆಗೆಯುವ, ಬೆಳ್ಳಿಯ ಬ್ರೋಮೈಡ್ ದ್ರಾವಣ ಬಳಿದ ಕಾಗದ. **Brómism** (ನಾ.) ; **Brómize** (ಕ್ರಿ. ಸಕ.)

Brónchi ಬ್ರಾಂಕೈ (ನಾ., ಬ. ವ. ; Bronchus ಏ. ವ.) ಶ್ವಾಸನಾಳದ ಎರಡು ಮುಖ್ಯ ಕವಲುಗಳು. **Brónchia** — ಕಿಯ (ನಾ.) ಶ್ವಾಸಕೋಶಗಳಲ್ಲಿ ಈ ಶಾಖೆಗಳ ಶಾಖೋಪಶಾಖೆಗಳು. **Brónchial** (ಗು.) ; **Brónchiole** — ಯೋಲ್ (ನಾ.) ಸೂಕ್ಷ್ಮ ಶ್ವಾಸನಾಳ. **Bronchítis** — ಕೈಟಿಸ್ (ನಾ.) ಶ್ವಾಸನಾಳಗಳ ಒಳಚರ್ಮದ ಊತ. **Bronchític** (ಗು.) ; **Brónchocele** ಬ್ರಾಂಕೊಸೀಲ್ (ನಾ.) ಗಂಟಲಲ್ಲಿರುವ 'ಥೈರಾಯ್ಡ್ ಗ್ಲ್ಯಾಂಡ್' ಎಂಬ ಗ್ರಂಥಿಯ ಊತ, ಶೋಭೆ ; ಕಂಠಗ್ರಂಥಿ ಶೋಭೆ ; ಗಳಗಂಡ.

Brónco ಬ್ರಾಂಕೊ (ನಾ.) ಕ್ಯಾಲಿಫೋರ್ನಿಯ, ಮೊ. ದೇಶಗಳ ಅರೆಪಳಗಿಸಿದ ಕುದುರೆ, ಅಥವಾ ಕಾಡುಕುದುರೆ.

Brontosaúrus ಬ್ರಾಂಟೊಸಾರಸ್ (ನಾ.) ಚರಿತ್ರಪೂರ್ವದ, ಬಹು ದೊಡ್ಡದೇಹವುಳ್ಳ ಒಂದು ಸರೀಸೃಪ ಜಾತಿ.

Bronze ಬ್ರಾನ್ಜ್ (ನಾ., ಗು., ಕ್ರಿ.) ೮ ಭಾಗ ತಾಮ್ರ, ೧ ಭಾಗ ತವರ ಸೇರಿ ಆದ ಕಂದುಬಣ್ಣದ ಮಿಶ್ರಲೋಹ: ಕಂದುಕಂಚು (B. age ಕಂದುಕಂಚಿನ ಆಯುಧಗಳನ್ನು ಉಪಯೋಗಿಸುತ್ತಿದ್ದ ಯುಗ). ಈ ಲೋಹದಿಂದ ಮಾಡಿದ ವಿಗ್ರಹ, ಮೊ. ಶಿಲ್ಪವಸ್ತುಗಳು. ಕಂದು ಕಂಚಿನ ಬಣ್ಣ. (ಕ್ರಿ.) ಕಂದುಕಂಚಿನಂತೆ ಕಾಣುವಹಾಗೆ ಮಾಡು ; ಕಂದುಬಣ್ಣ ಕೊಡು ; ಕಂದುಬಣ್ಣಕ್ಕೆ ತಿರುಗು. **Brónzy** (ಗು.)

Brooch ಬ್ರೋಚ್ (ನಾ.) ಪಾಶ್ಚಾತ್ಯ ಹೆಂಗಸರ ಉಡುಪಿನ ಒಂದು ಭಾಗವನ್ನು (ಮು., ಕತ್ತಿನಲ್ಲಿಯ ಭಾಗವನ್ನು) ಭದ್ರಪಡಿಸುವುದಕ್ಕಾಗಿ ಉಪಯೋಗಿಸುವ ಚಿಲುಕುಸೂಜಿಯುಳ್ಳ ಒಂದು ಆಭರಣ ; ಪದಕ ಸೂಜಿ.

Brood ಬ್ರೂಡ್ (ನಾ., ಕ್ರಿ. ಅಕ.) ಪಕ್ಷಿಗಳ ಅಥವಾ ಇತರ ಅಂಡಜ ಪ್ರಾಣಿಗಳ ಮರಿಗಳು. ಸಂತಾನ. (ತಿರಸ್ಕಾರ ಸೂಚಕವಾಗಿ) ಮನುಷ್ಯ ಸಂತಾನ ; ಮಕ್ಕಳುಮರಿ. ಹಿಂಡು ; ತಂಡ ; ಗುಂಪು ; ರಾಶಿ. (B. mare ಸಂತಾನವೃದ್ಧಿಗಾಗಿ ಇಟ್ಟುಕೊಂಡಿರುವ ಒಳ್ಳೆಯ ತಳಿಯ ಹೆಣ್ಣು ಕುದುರೆ : ತಳಿಗುದುರೆ). (ಕ್ರಿ.) (ಮರಿಮಾಡುವುದಕ್ಕಾಗಿ, ಕೋಳಿಯಂತೆ ಮೊಟ್ಟೆಯಮೇಲೆ) ಕಾವಿಗೆ ಕುಳಿತುಕೊ. ಕೋಳಿಯಂತೆ ಎಳೆಯ ಮರಿಗಳನ್ನು ರೆಕ್ಕೆಯ ಮರೆಯಲ್ಲಿ ಕಾಪಾಡು. (ರಾತ್ರಿ, ನಿಶ್ಶಬ್ದ, ಮಂಜು, ಮೋಡ, ಮೊ.) ಕವಿದಿರು. (ಅಪಮಾನ, ದುರಾಲೋಚನೆ, ಮೊ. ವಿಷಯವಾಗಿ) ಚಿಂತಿಸು ; ಚಿಂತಾಕುಲನಾಗಿರು ; ಒಳಗೆಯೇ ಕುದಿದುಕೊ ; ಕೊರಗು ; ಮರುಗು ; ಅದೇ ಯೋಚನೆಯಲ್ಲಿರು. ಹೂಟ ಹೂಡು. **Broódy** (ಗು.) (ಹೆಣ್ಣುಕೋಳಿಯ ವಿಷಯದಲ್ಲಿ) ಕಾವಿಗೆ ಕುಳಿತುಕೊಳ್ಳುವ ಇಚ್ಛೆಯುಳ್ಳ. **Broódiness** (ನಾ.)

Brook[1] ಬ್ರುಕ್ (ನಾ.) ಸಣ್ಣ ಹೊಳೆ ; ತೊರೆ ; ಹಳ್ಳ. **Broóklet** (ನಾ.) ಬಹಳ ಸಣ್ಣ ಹೊಳೆ. **Broóklime** ಹಳ್ಳಕೊಳ್ಳಗಳಲ್ಲಿ ಬೆಳೆಯುವ ಒಂದು ಜಾತಿಯ ಗಿಡ.

Brook[2] ಬ್ರುಕ್ (ಕ್ರಿ. ಸಕ.) ಸಹಿಸು ; ತಾಳು ; ಸ್ಥೈರಿಸು. (ನಿಷೇಧದಲ್ಲಿ ಮಾತ್ರ ಪ್ರಯೋಗ : ಉದಾ. I will not b. it)

Broom ಬ್ರೂಮ್ (ನಾ., ಕ್ರಿ. ಸಕ.) ಮರಳುದಿಣ್ಣೆಗಳಮೇಲೆ ಬೆಳೆಯುವ, ಹಳದಿಯ ಬಣ್ಣದ ಹೂವುಬಿಡುವ, ಒಂದು ಕುರುಚಲುಗಿಡ. ಈ ಗಿಡದ ಜಾತಿ. ಪೊರಕೆ ; ಬರಲು. (ಕ್ರಿ.) ಪೊರಕೆಯಿಂದ ಗುಡಿಸು. (New b. ಲೋಪಗಳನ್ನೆಲ್ಲ ಸರಿಪಡಿಸಬೇಕೆಂಬ ಉತ್ಸಾಹವುಳ್ಳ ಹೊಸ ಅಧಿಕಾರಿ. New b. sweeps clean ಹೊಸದರಲ್ಲಿ ಅಗಸ ಗೋಣಿ ಎತ್ತೆತ್ತಿ ಒಗೆದ). **B.-stick** ಪೊರಕೆಯ ಹಿಡಿ.

Broth ಬ್ರಾಥ್ (ನಾ.) ಮಾಂಸದ ಸಾರು. B. of a boy ಒಳ್ಳೆಯ ಹುಡುಗ.

Bróthel ಬ್ರಾಥಲ್ (ನಾ.) ವ್ಯಭಿಚಾರದ ಮನೆ.

Bróther ಬ್ರದರ್ (ನಾ. ; ಬ. ವ. Brothers, Brethren ಬ್ರೆದ್ರೆನ್) ಒಡಹುಟ್ಟಿದವನು ; ಸೋದರ ; ಭ್ರಾತೃ (Elder b. ಅಣ್ಣ ; Younger b. ತಮ್ಮ). [ವ್ಯಾಪಾರಿಗಳ ಹೆಸರಿನಲ್ಲಿ, ಬ. ವ. ದ ಸಂಕ್ಷಿಪ್ತರೂಪ : Bros. (Smith Bros. & Co.)]. ಆಪ್ತಸ್ನೇಹಿತ. ಒಂದೇ ಊರಿನವನು ; ಒಂದೇ ದೇಶದವನು. ಸಮಾನ. ಒಂದು ಮತಸಂಸ್ಥೆಯ ಸಹಸದಸ್ಯ, ಸಧರ್ಮಿ ; ಸಹೋದ್ಯೋಗಿ (ಬ. ವ. Brethren). Brothers consanguinean ತಂದೆಯೊಬ್ಬನೇ ಆದ ಭ್ರಾತೃಗಳು : ಭಿನ್ನೋದರರು. Brothers german ಒಂದೇ ತಂದೆತಾಯಿಗಳಿಗೆ ಹುಟ್ಟಿದ ಸೋದರರು. Brothers uterine ತಾಯಿ ಮಾತ್ರ ಒಬ್ಬಳೇ ಆದ ಸೋದರರು : ಸಮಾನೋದರರು. B.-in-law ಗಂಡನ ಸೋದರ ; ಹೆಂಡತಿಯ ಸೋದರ ; ಸೋದರಿಯ ಗಂಡ ; ಭಾವ ; ಮೈದುನ. ಹೆಂಡತಿಯ ಸೋದರಿಯ ಗಂಡ : ಷಡ್ಡಕ. **Brótherless** (ಗು.) ; **Brótherlike** (ಗು., ಕ್ರಿ. ವಿ.) ; **Brótherly** (ಗು., ಕ್ರಿ. ವಿ.) ; **Brótherliness** (ನಾ.) ; **Brótherhood** (ನಾ.) ಸೌದರ್ಯ ; ಸೌಭ್ರಾತ್ರ ; ಭ್ರಾತೃತ್ವ ; ಸಹೋದರತ್ವ ; ಬಂಧುಭಾವ ; ಸಹವಾಸ ; ಭ್ರಾತೃೈಕ್ಯ. ಸಹಕಾರ ಸಂಘ, ಮೊ. ವು. ; ಇಂಥ ಸಂಘದ ಸದಸ್ಯರು.

Brougham ಬ್ರೂಮ್, **Broúgham** ಬ್ರೂಅಂ, ಬ್ರೋಅಂ (ನಾ.) ಒಂದು ಕುದುರೆ ಕಟ್ಟಿದ (ಅಥವಾ ವಿದ್ಯುಚ್ಚಲಿತ) ಪೆಟ್ಟಿಗೆಯ ಬಂಡಿ : ಬ್ರೂಅಂ ಬಂಡಿ (Lord Brougham ಎಂಬಾತನ ಹೆಸರಿನಿಂದ)

Brought. **Bring** ಧಾತುವಿನ ಭೂತ., ಭೂ. ಕೃ.

Brow ಬ್ರೌ (ನಾ.) ಹುಬ್ಬು ; ಭ್ರೂ (ಸಾ., ಬ. ವ. ದಲ್ಲಿ ಪ್ರಯೋಗ). (Knit, bend, one's brows ಹುಬ್ಬು ಗಂಟಿಕ್ಕು). ಹಣೆ (B.-ague ಅರೆದಲೆ ನೋವು). ಕಡಿದುಬಂಡೆಯ ಚಾಚು ; ಶೈಲ ಕಟಕ. ಏರುಹಾದಿಯ ನೆತ್ತಿ (ಉನ್ನತ ಪ್ರದೇಶ). **Browed** (ಗು.) ; **Browbeat** (ಕ್ರಿ. ಸಕ.) (ಮುಖಮುದ್ರೆಯಿಂದಲೂ ಮಾತಿನಿಂದಲೂ) ಬೆದರಿಸು, ಗದರಿಸು ; ಬಾಯಿಬಿಡಿ.

Brown ಬ್ರೌನ್ (ಗು.) ಕಂದುಬಣ್ಣದ. (ಕೆಲವು ಪ್ರಾಣಿಗಳ, ಸಸ್ಯಗಳ, ವಸ್ತುಗಳ, ಜಾತಿವಿಶೇಷಣ : B. bear, B. willow, B. coal, B. paper, B. bread, B. sugar). (ಮನುಷ್ಯನ ಬಣ್ಣ) ಕಂದು ಬಣ್ಣದ, ಕಂದು ತಿರುಗಿದ. (ಅಸಂ.) Do b. ಮೋಸಗೊಳಿಸು. B. Bess ಹಿಂದಿನ ಕಾಲದ ಒಂದು ತೆರದ ಬಂದೂಕು. B. study ಅನ್ಯಮನಸ್ಕತೆ ; ಶೂನ್ಯ ಮನಸ್ಕತೆ ; ಅಡ್ಡಗೀಳು. **Brównish** (ಗು.) ; **Brównness** (ನಾ.) ; **Brówny** (ಗು.)

Brown (ನಾ., ಕ್ರಿ.) ಕಂದು ಬಣ್ಣ ; ಕಪಿಶವರ್ಣದ್ರವ್ಯ. ಕಂದು ಚಿಟ್ಟೆ ; ಮೀನುಹಿಡಿಯುವ ಕಂದುಬಣ್ಣದ ನೊಣ. ಕಂದುಬಣ್ಣದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಟ್ಟೆಗಳು. (ಅಸಂ.) ತಾಮ್ರದ ನಾಣ್ಯ. (ಕ್ರಿ.) ಸುಡುವುದರಿಂದ, ಬಿಸಿಲಿನ ಝಳದಿಂದ, ಕಂದುತಿರುಗಿಸು, ಕಂದುತಿರುಗು. ರಸಾಯನ ಪ್ರಕ್ರಿಯೆಯಿಂದ (ಬಂದೂಕಿನ ಕೋವಿ, ಮೊ.) ಕಂದು ತಿರುಗು, ತಿರುಗಿಸು.

Brównian movement (ನಾ.) ತಿಳಿಯಾದ ದ್ರವದಲ್ಲಿ ಓಲಾಡುತ್ತಿರುವ ಸೂಕ್ಷ್ಮದರ್ಶನೀಯ ಕಣಗಳ ಅನಿಯತ ಕಂಪನ (ಇದನ್ನು ಮೊದಲು ವಿವರಿಸಿದ Robert Brown ಎಂಬಾತನ ಹೆಸರಿನಿಂದ)

Brównie ಬ್ರೌನಿ (ನಾ.) ರಾತ್ರಿ ಮನೆಯವರೆಲ್ಲರೂ ಮಲಗಿ ನಿದ್ದೆ ಹೋಗುತ್ತಿರುವಾಗ ಮನೆಯ ಕೆಲಸಕಾರ್ಯಗಳನ್ನು ಮಾಡುವ ದಯಾಳುವಾದ ಗೃಹಪಿಶಾಚಿ. ಸೇವಿಕಾ ದಳದ ಚಿಕ್ಕ ವಯಸ್ಸಿನ ಹುಡುಗಿ. (ಛಾಯಾ ಚಿತ್ರ) ಒಂದು ತೆರದ ಛಾಯಾಗ್ರಾಹಿ ಪೆಟ್ಟಿಗೆ.

Brówning ಬ್ರೌನಿಂಗ್ (ನಾ.) ಈಗಿನ ಮಾದರಿಯ ಸ್ವಯಂಚಲನ ಪಿಸ್ತೂಲು.

Browse ಬ್ರೌಸ್ (ನಾ., ಕ್ರಿ.) ದನಗಳ ಮೇವಾದ ಸೊಪ್ಪುಸೆದೆ, ಹುಲ್ಲು ಕಡ್ಡಿ, ಮೊ.ವು. (ದನ) ಮೇಯುವುದು, ಮೇಯಿಸುವುದು. (ಕ್ರಿ.) (ಸೊಪ್ಪುಸದೆ, ಹುಲ್ಲು ಕಡ್ಡಿ, ಮೊ. ನ್ನು) ಮೇಯಿ; ಮೇಯಿಸು. (ರೂಪ.) ಅಭಿರುಚಿಗೆ ತಕ್ಕಹಾಗೆ ಅಲ್ಲಿಷ್ಟು ಇಲ್ಲಿಷ್ಟು ಓದು. ಸ್ವೇಛ್ಛಾ ವಾಚನ ಮಾಡು.

Brúin ಬ್ರೂಇನ್ (ನಾ.) ಕರಡಿ (ಮನುಷ್ಯತ್ವಾರೋಪಣೆಯ ಹೆಸರು)

Bruise ಬ್ರೂಸ್ (ನಾ., ಕ್ರಿ.) (ದೇಹ, ಹಣ್ಣು, ಮೊ.) ಕಾಯಕ್ಕೆ ಹುಣ್ಣಾಗದೆ ಚರ್ಮ ವಿವರ್ಣವಾಗುವ ಪೆಟ್ಟು; ಜಜ್ಜುಗಾಯ; ಮೂಗುಗಾಯ. (ಕ್ರಿ.) ಗುದ್ದು; ಜಜ್ಜುಗಾಯ ಮಾಡು; ಮೂಗುಗಾಯ ಮಾಡು. (ಮರ, ಲೋಹ — ಇವನ್ನು) ತಟ್ಟು, ಬಡಿ. ಕುಟ್ಟು; ಬೀಸು; ಅರೆ. (ಬೇಟೆ) (ಜೀವದ ಹಂಗಿಲ್ಲದೆ) ನಿರ್ಲಕ್ಷ್ಯವಾಗಿ ಸವಾರಿ ಮಾಡು. (ರೂಪ.) ಅಶಕ್ತನನ್ನಾಗಿ ಮಾಡು. **Bruíser** (ನಾ.) (ಕ್ರಿಯಾರ್ಥಗಳಲ್ಲಿ). ಪಣಕ್ಕಾಗಿ ಮುಷ್ಟಿಯುದ್ಧ ಮಾಡುವವನು.

Bruit ಬ್ರೂಟ್ (ನಾ., ಕ್ರಿ. ಸಕ.; ಪ್ರಾಚೀ. ಪ್ರ.) ಸುದ್ದಿ; ಸಮಾಚಾರ; ವದಂತಿ; ಜನಪ್ರವಾದ. (ಕ್ರಿ.) ಸುದ್ದಿ, ಮೊ. ನ್ನು ಹರಡು; ಪ್ರಸಿದ್ಧಿಗೊಳಿಸು.

Brúmal ಬ್ರೂಮಲ್ (ಗು.) ಚಳಿಗಾಲದ; ಮಾಗಿಯ ಕಾಲದ. **Brúmous** (ಗು.) ಮಾಗಿಯ; ಮಂಜು ಕವಿದ.

Brunch ಬ್ರಂಚ್ (ನಾ.) (ಅಸಂ.) ಬೆಳಗಿನ ಮತ್ತು ಮಧ್ಯಾಹ್ನದ ಊಟಗಳ ಬದಲಾಗಿ ಒಂದೇ ಊಟ.

Brunétte ಬ್ರೂನೆಟ್ (ನಾ., ಗು.) ಮನಕು ಬಣ್ಣದ, ಕಂದು ಕೂದಲಿನ (ಹೆಂಗಸು)

Brunt ಬ್ರಂಟ್ (ನಾ.) (ಆಕ್ರಮಣ, ಮೊ. ಗಳಲ್ಲಿ) ಮುಖ್ಯಭಾರ. ಏಟಿನ ಮೊನೆ; ಹೊಡೆತದ ಬಿರುಸು (Bear the b. of)

Brush ಬ್ರಷ್ (ನಾ.) ಕುರುಚಲು ಗಿಡ; ಪೊದೆ; ಇವುಗಳನ್ನು ಕತ್ತರಿಸಿ ಕಟ್ಟಿದ ಕಂತೆ (ಪ್ರಾಚೀ. ಪ್ರ.; ಅಮೆ. ಸಂ., ಕ್ಯಾನಡ, ಆಸ್ಟ್ರೇಲಿಯ — ಈ ಪ್ರಾಂತಗಳ ಪ್ರಯೋಗ). (ಬಿರುಗೂದಲಿನಿಂದ, ಸಣ್ಣ ತಂತಿ, ಮೊ. ಗಳಿಂದ, ಮಾಡಿದ) ವರಾಹಕಟ್ಟು; ದೂಳ್ತೊಡಪ. ಕುಚ್ಚುಮಟ್ಟೆ. ಬಣ್ಣ ಬಳಿಯುವುದಕ್ಕಾಗಿ, ಚಿತ್ರಕೆಲಸಕ್ಕಾಗಿ, ಉಪಯೋಗಿಸುವ ಕುಂಚ; ಕುಂಚಿಗೆ. (The b. ಚಿತ್ರಕಲೆ). ಚಿತ್ರಕಾರನ ಶೈಲಿ; ಚಿತ್ರಕಾರ (From the same b. ಅದೇ ಚಿತ್ರಕಾರನಿಂದ). ಕುಚ್ಚಿನಾಕಾರದ ವಸ್ತು (ಮು., ನರಿಯ ಬಾಲ). (ವಿದ್ಯುತ್) ಕೂರ್ಚದಂತೆ ಹೊರಡುವ ವಿದ್ಯುತ್ಕಿರಣ ಪುಂಜ: ವಿದ್ಯುತ್ಕೂರ್ಚ. ಅನ್ಯೋನ್ಯ ಲೋಹಸಂಸರ್ಗವುಂಟಾಗುವಂತೆ ಜೋಡಿಸಿದ ತಂತುಸಮುದಾಯ ಅಥವಾ (ತಾಮ್ರದ) ಬಳುಕುತಗಡಿನ ಪಟ್ಟಿಗಳ ಕಟ್ಟು: ವಿದ್ಯುತ್ಕೂರ್ಚ. (ದೃ. ವಿ.) ಅಸ್ಪಷ್ಟವಾದ ಎಲ್ಲೆಯುಳ್ಳ ಬೆಳಕಿನ ಅಥವಾ ನೆರಳಿನ ಆಕೃತಿ. ಉಜ್ಜುವುದು; ಒರಸುವುದು; ಉಜ್ಜಿಕೊಂಡು ಹೋಗುವುದು. ಲಟಾಪಟಿ; ತಿಕ್ಕಾಟ; ಸಣ್ಣ ಕದನ. **B.-pencil** ಚಿತ್ರಕಾರನ ಕುಂಚ. **Brúshwood** ಕುರುಚಲು ಗಿಡ; ಪೊದೆ. **B.-work** ಚಿತ್ರಕಾರನು ಚಿತ್ರಿಸುವ ರೀತಿ. **Brúshy** (ಗು.) ಪೊದೆಯಾಗಿರುವ; ಪೊದೆ ಬೆಳೆದಿರುವ; ಕುಂಚದಂತಿರುವ; ಬಿರುಗೂದಲುಳ್ಳ.

Brush (ಕ್ರಿ.) ಉಜ್ಜಿಕೊಂಡು, ಒರಸಿಕೊಂಡು, ವೇಗದಿಂದ ಹೋಗು (ಮು. *by, through, against* ಉಪ. ದೊಡನೆ). ಉಜ್ಜಿಗಾಯಮಾಡು; ಕೂರ್ಚದಿಂದ ಚೊಕ್ಕಟವಾಗಿ ಗುಡಿಸು, ಉಜ್ಜು, ಒರಸು, ತೀಡು; ಕೂರ್ಚ ಹೊಡೆ. B. up ಮೆರುಗಿಡು; (ರೂಪ.) ಜ್ಞಾಪಿಸಿಕೊ. B. over ತೆಳುವಾಗಿ ಬಣ್ಣಹಚ್ಚು (ರೂಪ. ಸಹ). B. aside, B. away (ರೂಪ.) ತಳ್ಳಿಹಾಕು; ಕಡೆಗಣಿಸು; ಉಪೇಕ್ಷಿಸು.

Brusque ಬ್ರಸ್ಕ್, ಬ್ರುಸ್ಕ್ (ಗು.) (ನಡತೆಯಲ್ಲಿ, ಮಾತಿನಲ್ಲಿ) ಕೊಂಚ ಒರಟಾದ; ನಯವಿಲ್ಲದ; ಮೊರಟು; ದುಡುಕಿನ. **Brúsquely** (ಕ್ರಿ. ವಿ.); **Brúsqueness** (ನಾ.); **Brusquerié** ಬ್ರುಸ್ಕರೀ (ನಾ.) ನಯವಿಲ್ಲದ ನಡತೆ; ಒರಟುತನ.

Brute ಬ್ರೂಟ್ (ನಾ., ಗು.) ಪಶು; ಮೃಗ. ಪಾಶವ; ಪಶುಪ್ರಾಯ. ಮಂದಬುದ್ಧಿಯುಳ್ಳ; ವಿಷಯಾಸಕ್ತ; ನಿಷ್ಕರುಣ; ಕ್ರೂರ (ಮನುಷ್ಯ, ಕ್ರಿಯೆ, ಅಭಿಪ್ರಾಯ, ಮೊ.). ಅಚೇತನ, ಜಡ. (B. fact ಹಿತವಲ್ಲದಿದ್ದರೂ ನಿಶ್ಚಯವಾದ ಸಂಗತಿ. B. force ಪಶುಬಲ; ಬರಿಯ ಬಲಾತ್ಕಾರ. B. matter ಜಡ ವಸ್ತು). (ಮನುಷ್ಯನ) ಕೀಳುಸ್ವಭಾವ; ಪಾಶವ ವೃತ್ತಿ. **Brútehood** (ನಾ.); **Brútish** (ಗು.); **Brútishly** (ಕ್ರಿ. ವಿ.); **Brútishness** (ನಾ.); **Brútify** (ಕ್ರಿ. ಸಕ.); **Brutificátion** (ನಾ.); **Brútal** (ಗು.) ಪಾಶವ; (ಕಾಡುಮೃಗದಂತೆ) ವಿಷಯಾಸಕ್ತಿಯ; ಒರಟಾದ; ನಯವಿಲ್ಲದ; ಅತಿ ಕ್ರೌರ್ಯದ. **Brútalism** (ನಾ.); **Brutálity** ಬ್ರುಟ್ಯಾಲಟಿ (ನಾ.); **Brútally** ಬ್ರೂಟಲಿ (ಕ್ರಿ. ವಿ.); **Brútalize** (ಕ್ರಿ.) ಪಶುಪ್ರಾಯನಾಗು, —ನಾಗಿಮಾಡು. **Brutalizátion** (ನಾ.)

Brútum fúlmen (L) ಬ್ರೂಟಂ ಫುಲ್‌ಮೆನ್ (ನಾ.) ಗೊಡ್ಡು ಬೆದರಿಕೆ. ತುಪಾಕಿಯ ಹುಸಿತೋಟ (ರೂಪ.)

Bryólogist, -logy ಬ್ರಯಾಲೊಜಿಸ್ಟ್, — ಲೊಜಿ (ನಾ.) ಶೈವಲ ಶಾಸ್ತ್ರಜ್ಞ; ಶೈವಲಶಾಸ್ತ್ರ.

Búbble ಬಬ್ಲ್ (ನಾ., ಕ್ರಿ.) ನೀರ್ಗುಳ್ಳೆ; ಬುದ್ಬುದ. ಗಾಜು, ಅಂಬರ್, ಮೊ. ಘನೀಭೂತ ಪದಾರ್ಥಗಳೊಳಗಿರುವ ಗಾಳಿಗುಳ್ಳೆ. ಕ್ಷಣಭಂಗುರವಾದದ್ದು. ತಿರುಳಿಲ್ಲದ, ಕೇವಲ ಭ್ರಾಂತಿಜನಿತ, ಉದ್ಯಮ, ವ್ಯಾಪಾರ (Prick the b. ತಿರುಳಿಲ್ಲವೆಂಬುದನ್ನು, ಅಸಂಭವವೆಂಬುದನ್ನು ತೋರಿಸು). ಕುದಿ; ಕುದಿಯುವ ಶಬ್ದ (ಕುತಕುತ). (ಕ್ರಿ.) ಕುತಕುತ ಕುದಿ; ಕುದಿಯೇಳು; (ರೂಪ. ಸಹ: B., or b. over, with wrath ಕೋಪದಿಂದ ಕುದಿ). ಮರುಳುಗೊಳಿಸು; ಮೋಸಮಾಡು. (ಹರಿಯುವ ನೀರು) ಗುಳುಗುಳು ಶಬ್ದಮಾಡು. **Búbbly** (ಗು.)

Búbo ಬ್ಯೂಬೊ (ನಾ.; ಬ. ವ. -oes) ದೇಹದ ಗ್ರಂಥಿಗಳಿರುವ ಪ್ರದೇಶದಲ್ಲಿ (ಮು., ಕಂಕುಳಲ್ಲಿಯೂ ತೊಡೆಯ ಸಂದಿಯಲ್ಲಿಯೂ) ಏಳುವ ಗೆಡ್ಡೆ; ತೊಡೆವಾಳ; ಉಡುಚು. **Bubónic** ಬ್ಯುಬಾನಿಕ್ (ಗು.) ಗೆಡ್ಡೆಯೇಳುವ; ಉಡುಚೇಳುವ. **Bubónocele** ಬ್ಯೂಬಾನೊಸೀಲ್ (ನಾ.) ತೊಡೆಸಂದಿಯಲ್ಲಿ ಕಾಣಿಸಿಕೊಳ್ಳುವ ಅಂತ್ರವ್ಯಾಧಿ.

Búccal ಬಕಲ್ (ಗು.) ಕೆನ್ನೆಯ; ಗಲ್ಲದ.

Buccaneér ಬಕನಿಯರ್ (ನಾ., ಕ್ರಿ. ಅಕ.) ಕಡಲುಗಳ್ಳ(ನಾಗು); ಹಡಗು ದರೋಡೆಕೋರ(ನಾಗು). ದುಡುಕುಸಾಹಸಿ. **Buccaneérish** (ಗು.)

Búccinator ಬಕ್ಸಿನೇಟರ್ (ನಾ.) ಚಪ್ಪಟೆಯಾಗಿಯೂ ತೆಳುವಾಗಿಯೂ ಇರುವ ಕೆನ್ನೆಯ ಸ್ನಾಯು: ಕಪೋಲ ಸ್ನಾಯು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bucéphalus ಬ್ಯೂಸೆಫಲಸ್ (ನಾ.) (ಮ್ಯಾಸಿಡನ್ನಿನ ಅಲೆಗ್ಸಾಂಡರ್ ಚಕ್ರವರ್ತಿಯ ಯುದ್ಧಾಶ್ವ). (ಹಾಸ್ಯವಾಗಿ) ಸವಾರಿಯ ಕುದುರೆ.

Buck[1] ಬಕ್ (ನಾ.) ಗಂಡು ಜಿಂಕೆ ; ಗಂಡು ಮೊಲ. ಸೊಗಸುಗಾರ. ಗಂಡಸು (B. nigger ಕರಿಯ). **B.-shot** ಜಿಂಕೆ, ಮೊ. ನ್ನು ಹೊಡೆಯುವುದಕ್ಕಾಗಿ ಉಪಯೋಗಿಸುವ ಬಂದೂಕಿನ ಗುಂಡು. **Búckskin** ಜಿಂಕೆಯ ಚರ್ಮ ; ಕೃಷ್ಣಾಜಿನ ; ಇದನ್ನು (ಅಥವಾ ಕುರಿಯ ಚರ್ಮವನ್ನು) ಹದಮಾಡಿದ ತೊಗಲು. (ಬ. ವ.) ಜಿಂಕೆಯ ತೊಗಲಿನಿಂದ ಮಾಡಿದ ಚಲ್ಲಣ. **B.-stall** ಜಿಂಕೆಗಳನ್ನು ಹಿಡಿಯುವ ಬಲೆ. **B.-tooth** ಉಬ್ಬುಹಲ್ಲು. **Búckish** (ಗು.) ಹೋತನಂಥ. ಕಾಮುಕ ; ಸೊಗಸುಗಾರನಾದ. **Búckishly** (ಕ್ರಿ. ವಿ.)

Buck[2] ಬಕ್ (ನಾ.) ಹಾವುಮೀನುಗಳನ್ನು ಹಿಡಿಯುವ ಬಲೆ, ಬುಟ್ಟಿ.

Buck[3] ಬಕ್ (ನಾ.) ಗಾಡಿಯ ಒಡಲು (ಮು., ಸಮಾಸ ಪದಗಳಲ್ಲಿ : ಉದಾ. B.-board ಒಡಲುಮಾತ್ರವಿರುವ ನಾಲ್ಕು ಚಕ್ರದ ಒಂದು ತೆರದ ಗಾಡಿ)

Buck[4] ಬಕ್ (ಕ್ರಿ.) (ಕುದುರೆ) ಬೆನ್ನನ್ನು ಕಮಾನಿನಂತೆ ಬಗ್ಗಿಸಿ, ಕಾಲುಗಳನ್ನು ಕೂಡಿಸಿ ನೆಗೆ, ಕುಪ್ಪಳಿಸು [(= B.-jump). **Búckjumper** (ನಾ.)]. Buck off ಹೀಗೆ ಕುಪ್ಪಳಿಸಿ (ಸವಾರನನ್ನು) ಕೆಡವಿಬಿಡು. **Búcker** (ನಾ.) ಕುಪ್ಪಳಿಸುವ ಕುದುರೆ.

Buck[5] ಬಕ್ (ಕ್ರಿ.) (ಅಸಂ., *up* ಉಪ. ಜೊಡನೆ) ತ್ವರೆಮಾಡು ; ಬೇಗ ಏಳು ; ಚುರುಕಾಗು ; ಚುರುಕುಗೊಳಿಸು. ಗೆಲುವಾಗು ; ಗೆಲುವಾಗಿಸು.

Búcket ಬಕೆಟ್ (ನಾ.) ನೀರುಸೇದುವುದಕ್ಕೆ ಅಥವಾ ನೀರನ್ನು ತೆಗೆದುಕೊಂಡುಹೋಗುವುದಕ್ಕೆ ಉಪಯೋಗಿಸುವ ಮರದ ಅಥವಾ ಲೋಹದ ಪಾತ್ರೆ ; ತೊಟ್ಟಿ ; ಬಾನೆ ; 'ಬಕೆಟ್ಟು.' ನೀರೆತ್ತುವ ಯಂತ್ರದ (ಪಂಪಿನ) ಆಡುಬೆಣೆ (ಪಿಸ್ಟನ್). ನೀರೊತ್ತಿನ ಗಾಲಿಯ ಪರಿಧಿಯಲ್ಲಿಯ ಒಂದು ಬಟ್ಟಲು. ಹೂಳೆತ್ತುವ ಅಥವಾ ಧಾನ್ಯವೆತ್ತುವ ಯಂತ್ರದ ಮೊಗೆಪಾತ್ರೆ. ಚಾವಟಿ, ಬಂದೂಕು, ಮೊ. ವನ್ನಿಡುವ ತೊಗಲಿನ ಹಿಡಿಕೆ. Kick the b. ಕಂತೆಯೊಗೆ ; ಸಾಯಿ. **B.-shop** (ಮು., ಅಮೆ. ಸಂ. ಗಳಲ್ಲಿ) ಸಟ್ಟಾವ್ಯಾಪಾರದ ಕಾರ್ಯಾಲಯ. **Búcketful** (ನಾ.)

Búcket (ಕ್ರಿ.) ನೀರನ್ನು ಬಕೆಟ್ಟಿನಿಂದ (ಬಾನೆಯಿಂದ) ಎತ್ತು ; ನೀರಿನ ಬಕೆಟ್ಟುಗಳನ್ನು ಸುರಿ. (ಅಸಂ.) ಮೋಸಗೊಳಿಸು. (ಕುದುರೆಯನ್ನು) ಸವಾರಿಮಾಡಿ ದಣಿಸು ; ದೌಡೋಡಿಸು. (ದೋಣಿನಡೆಯುಸುವುದರಲ್ಲಿ) ಹುಟ್ಟನ್ನು ಬೇಗ ಬೇಗ ಹಾಕು.

Búckingham Pálace ಬಕಿಂಗಂ ಪ್ಯಾಲೆಸ್ (ನಾ.) ಇಂಗ್ಲೆಂಡಿನ ದೊರೆಯ ಲಂಡನ್ನಿನ ಅರಮನೆ.

Búckle ಬಕ್‌ಲ್ (ನಾ., ಕ್ರಿ.) ಬಿಗಿಪಟ್ಟಿಯನ್ನು ಬಿಗಿಸುವ ಲೋಹದ ಕೊಕ್ಕೆ : ಚಿಲುಕುಕಟ್ಟು ; 'ಬಕ್‌ಲ್'. (ಕ್ರಿ.) ಚಿಲುಕುಕಟ್ಟಿನಿಂದ ಬಿಗಿ (ಸಾ., *up*, *on* ಉಪ. ಜೊಡನೆ). ಬಗ್ಗಿಹೋಗು ; ಮುರಿದುಹೋಗು ; (ಒತ್ತಡದಿಂದ) ಮುದುರಿಹೋಗು, — ಹೋಗಿಸು. B. to ಸಿದ್ಧಪಡಿಸಿಕೊ ; ಸಿದ್ಧವಾಗು ; ಆರಂಭಮಾಡು ; ಚುರುಕಾಗಿ ಆರಂಭಿಸು.

Búckler ಬಕ್ಲರ್ (ನಾ., ಕ್ರಿ. ಸಕ.) ಗುರಾಣಿ ; ಡಾಲು. ರಕ್ಷಣೆ ; ರಕ್ಷಕ ; ಕಾಪು. (ಕ್ರಿ.) ರಕ್ಷಿಸು.

Búckram ಬಕ್ರಂ (ನಾ., ಗು.) ಗೋಂದು ಅಥವಾ ಸರಿಯನ್ನು ಬಳಿದು ಬಿರುಸುಮಾಡಿದ ಒರಟಾದ ನಾರುಬಟ್ಟೆ ಅಥವಾ ನೂಲುಬಟ್ಟೆ : ಬಿರುಸು ಬಟ್ಟೆ. ಸೆಡೆತ ; ಬಿಗುಮಾನ ; ಬಿಂಕ. ಬಿಗಿತುಕೊಂಡ ; ಬಿರುಸಾದ. ಬಲವಾದ. ಬಲ (ತೋರ್ಕೆಯಲ್ಲಿ ಮಾತ್ರ). Men in b., B. men ಕಾಲ್ಪನಿಕ ವ್ಯಕ್ತಿಗಳು.

Búckwheat ಬಕ್‌ವ್ಹೀಟ್ (ನಾ.) ಕುದುರೆಗಳಿಗೂ ಕೋಳಿಗಳಿಗೂ ಮೇವಾಗಿಯೂ, ಅಮೆ. ಸಂ. ಗಳಲ್ಲಿ ರೊಟ್ಟಿಗಾಗಿಯೂ, ಉಪಯೋಗಿಸುವ ಒಂದು ಧಾನ್ಯ.

Bucólic ಬ್ಯೂಕಾಲಿಕ್ (ಗು., ನಾ.) ಕುರುಬರ ; ಗೊಲ್ಲರ ; ಹಳ್ಳಿಗಾಡಿನ. (ಸಾ., ಬ. ವ. ದಲ್ಲಿ) ಹಳ್ಳಿಯ ಹಾಡುಗಳು ; ಗೊಲ್ಲರ ಹಾಡುಗಳು ; ನಾಡು ಕವನಗಳು (The Bucolics ವರ್ಜಿಲ್ ಕವಿಯ ಗೊಲ್ಲ ಗೀತೆಗಳು). **Bucólically** (ಕ್ರಿ. ವಿ.)

Bud ಬಡ್ (ನಾ.) ಎಲೆಮೊಗ್ಗು ; ಕುಡಿ ; ಕಣ್ಣು ; ಹೂವುಮೊಗ್ಗು ; ಮುಗುಳು ; ಅಂಕುರ ; ಮೊಳಕೆ. (ಜೀ. ವಿ.) ಅಂಕುರ ರೂಪವಾಗಿ ತಾಯಿಂದ ಹುಟ್ಟುವ ಪ್ರಾಣಿ : ಅಂಕುರ ಪ್ರಾಣಿ. ಇನ್ನೂ ಪೂರ್ತಿಯಾಗಿ ವಿಕಸಿತವಾಗಿಲ್ಲದ್ದು. (In b. ಮೊಗ್ಗುಬಿಟ್ಟು. Nip in the b. ಮೊಳಕೆಯಲ್ಲಿಯೇ ಚಿವುಟಿಹಾಕು ; ಆರಂಭದಲ್ಲಿಯೇ ನಿರ್ಮೂಲಮಾಡು). **Búdless** (ಗು.) ; **Búdlet** (ನಾ.) ಉಪಾಂಕುರ.

Bud (ಕ್ರಿ.) ಮೊಗ್ಗುಬಿಡು ; ಕುಡಿಯೊಡೆ ; ಚಿಗುರು ; ಅಂಕುರಿಸು ; ಬೆಳೆ ; ಅಭಿವೃದ್ಧಿಯಾಗು (Budding lawyer ಪ್ರವರ್ಧಮಾನಕ್ಕೆ ಬರುತ್ತಿರುವ ನ್ಯಾಯವಾದಿ). (ಜೀ. ವಿ.) ಅಂಕುರರೂಪದಿಂದ ಹುಟ್ಟು, ಹುಟ್ಟಿಸು ; ಅಂಕುರಿಸು. (ತೋಟದ ಕೆಲಸದಲ್ಲಿ) ಒಂದು ಗಿಡದ ಎಲೆಮೊಗ್ಗನ್ನು ಮತ್ತೊಂದು ಗಿಡಕ್ಕೆ ಹಚ್ಚು : ಕಣ್ಣು ಹಾಕು. **Búdded** (ಭೂ. ಕೃ.) (ಕ್ರಿಯಾರ್ಥಗಳಲ್ಲಿ) ; ಮೊಗ್ಗು ಬಿಟ್ಟಿರುವ.

Búddha ಬುದ್ಧ (ನಾ.) ಬುದ್ಧ ; ಜ್ಞಾನಿ (ಮು., ಶಾಕ್ಯಮುನಿ, ಸಿದ್ಧಾರ್ಥ, ಗೌತಮ). **Búddhism** (ನಾ.) ಬೌದ್ಧಮತ. **Búddhist** (ನಾ.) ಬೌದ್ಧಮತೀಯ ; ಬೌದ್ಧ. **Buddhístic(al)** (ಗು.)

Budge ಬಜ್ (ಕ್ರಿ.) ಕದಲು ; ಅಲುಗು ; ಕದಲಿಸು ; ಅಲುಗಿಸು (ನಿಷೇಧಾರ್ಥಕ ವಾಕ್ಯಗಳಲ್ಲಿ)

Búdget ಬಜೆಟ್ (ನಾ., ಕ್ರಿ. ಅಕ.) ಸಂಚಿ ; ಚೀಲ ; ಮೂಟೆ ; ಇವುಗಳಲ್ಲಿರುವ ವಸ್ತುಗಳು (ಮು., ರೂಪ. B. of news ಸಮಾಚಾರ ಸಂಗ್ರಹ). ವಾರ್ಷಿಕ ಆಯವ್ಯಯದ ಅಂದಾಜುಪಟ್ಟಿ. B. for ಆಯವ್ಯಯದ ಅಂದಾಜುಪಟ್ಟಿಯಲ್ಲಿ ಸೇರಿಸು. **Búdgetary** (ಗು.) ಆಯವ್ಯಯದ ಅಂದಾಜುಪಟ್ಟಿಗೆ ಸಂಬಂಧಪಟ್ಟ.

Buff ಬಫ್ (ನಾ., ಗು., ಕ್ರಿ. ಸಕ.) ಮುಖಮಲ್ಲಿನಂತೆ ನಯವಾಗಿರುವ, ಮಾಸಲುಹಳದಿಯ ಬಣ್ಣದ, ಎಮ್ಮೆಯ ಅಥವಾ ಎತ್ತಿನ (ಹದಮಾಡಿದ) ದಪ್ಪ ತೊಗಲು. ಮನುಷ್ಯನ ಚರ್ಮ (In b. ಬತ್ತಲೆಯಾಗಿ). ಮಾಸಲುಹಳದಿಯ ಬಣ್ಣ. (ವೈ. ಶಾ.) ಜ್ವರರೋಗಿಗಳಿಂದ ತೆಗೆದ ರಕ್ತದಮೇಲೆ ಕಟ್ಟುವ ಹೆಪ್ಪು. (ಕ್ರಿ.) (ಯಾವುದಾದರೂ ಲೋಹಕ್ಕೆ) ಬಫ್‌ತೊಗಲಿನಿಂದ ಮೆರುಗುಕೊಡು. (ತೊಗಲನ್ನು) ಬಫ್‌ತೊಗಲಿನಂತೆ ನಯಮಾಡು. **Búffy** (ಗು.)

Búffalo ಬಫಲೊ (ನಾ. ; ಬ. ವ. - oes) ಎಮ್ಮೆ ; ಕೋಣ ; ಮಹಿಷ.

Búffer[1] ಬಫರ್ (ನಾ.) (ಮು., ರೈಲುಬಂಡಿಗಳಲ್ಲಿ) ಸಂಘಟ್ಟನದಿಂದುಂಟಾಗುವ ಪೆಟ್ಟನ್ನು ಎಗುರುಪಟ್ಟಿ (ಸ್ಪ್ರಿಂಗ್) ಗಳಿಂದಾಗಲಿ ಮೆತ್ತೆಗಳಿಂದಾಗಲಿ ತೂಗುದಿಮ್ಮಿಗಳಿಂದಾಗಲಿ ಕುಂದಿಸುವ ಸಲಕರಣೆ : ಕಾಪುತಡೆ. B. State ಎರಡು ಪ್ರಬಲರಾಜ್ಯಗಳ ಮಧ್ಯೇ ಇದ್ದು ಒಬ್ಬೊಬ್ಬರಿಗೆ ಕಾದಾಟದ ಸಂಭವವನ್ನು ಕಡಮೆಮಾಡುವ ಸಣ್ಣ ರಾಜ್ಯ : ತಡೆರಾಜ್ಯ.

Búffer[2] ಬಫರ್ (ನಾ.) (ಅಸಂ. ; ಸಾ., old b.) ಹಳೆಯ ಕಂದಾಚಾರದ ಅಥವಾ ಅಶಕ್ತನಾದ ಮನುಷ್ಯ ; ಮುದಿಗೊಡ್ಡು.

Búffet[1] ಬಫೆಟ್ (ನಾ., ಕ್ರಿ.) ಕೈಪೆಟ್ಟು (ಹಾಕು) ; ಅಪ್ಪಳಿಸು ; ಅಪ್ಪಳಿಕೆ ; ಹೊಡೆ(ತ). (ವಿಧಿ, ಮೊ.) ಬಡಿ, ಪೀಡಿಸು, ಕಾಡು. (ಸಮುದ್ರದಲ್ಲಿ ಅಲೆಗಳೊಡನೆ) ಬಡಿದಾಡು, ಹೆಣಗು, ಹೋರಾಡು.

Búffet[2] ಬಫೆಟ್ (ನಾ.) (ಊಟದ ಮನೆಯಲ್ಲಿ ಪಿಂಗಾಣಿ, ತಟ್ಟೆ, ಮೊ. ವನ್ನಿಡುವ) ಪಕ್ಕಮೇಜು, ಗಡಗಂಚಿ, ಬಡು, ಗೋಡೆಯ ಅಲಮಾರು. ಉಪಾಹಾರದ ಅಂಗಡಿ (ಉಚ್ಚಾರಣೆ : ಬುಫೇ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Búffo (It.) ಬೂಫ್ಫೊ (ನಾ., ಗು.) ಪ್ರಹಸನದ, ಹಾಸ್ಯದ, ವಿನೋದದ, ವಿಡಂಬನದ (ನಟ)

Buffóon ಬಫೂನ್ (ನಾ., ಕ್ರಿ. ಅಕ.) ಹಾಸ್ಯಗಾರ ; ವಿದೂಷಕ ; ನಕಲಿ ; ವಿಕಟ ಕವಿ. ಹಾಸ್ಯಪ್ರದರ್ಶನ ಮಾಡು ; ನಕಲಿ ಮಾಡು ; ಗೇಲಿ ಮಾಡು. **Buffoónery** (ನಾ.) ನಕಲಿ ; ಹಾಸ್ಯ.

Bug ಬಗ್ (ನಾ.) ತಗಣೆ. (ಶಿಥಿಲವಾಗಿ) ಸಣ್ಣ ಹುಳು (ಸಾ., ವಿವರಣ ಪದದೊಡನೆ : Harvest-b., May-b.). B.-hunter ಕೀಟ ಶಾಸ್ತ್ರಜ್ಞ. Big b. (ಅಸಂ.) ಪ್ರಮುಖನಾದವನು ; ಗಣ್ಯ. **Búggy** (ಗು.) ಹುಳು ಸೇರಿ ನಾಶಮಾಡುತ್ತಿರುವ.

Búgaboo ಬಗಬೂ, **Búgbear** ಬಗ್‌ಬೇರ್ (ನಾ.) ಭಯಹುಟ್ಟಿಸುವ ಮನಃಕಲ್ಪಿತ ವಸ್ತು ; ಗುಮ್ಮ ; ಗೊಗ್ಗಯ್ಯ ; ಭೂತ. ಭಯಹುಟ್ಟಿಸಲು ಅಥವಾ ತೊಟ್ಟ ಕಾರ್ಯದಿಂದ ವಿಮುಖನನ್ನಾಗಿಮಾಡಲು ಹೂಡುವ ನಿರಾಧಾರವಾದ ಭಯ : ಗೊಡ್ಡುಹೆದರಿಕೆ.

Búggy ಬಗಿ (ನಾ.) ಒಬ್ಬನು ಅಥವಾ ಇಬ್ಬರು ಸವಾರಿ ಮಾಡಬಹುದಾದ ಹಗುರವಾದ ಗಾಡಿ : ಬಗ್ಗಿ.

Búgle[1] ಬ್ಯೂಗ್‌ಲ್ (ನಾ., ಕ್ರಿ.) ಸೈನಿಕ ಸಂಕೇತಗಳಿಗಾಗಿ ಉಪಯೋಗಿಸುವ ಹಿತ್ತಾಳೆಯ ಕಹಳೆ, ಕೊಂಬು. (ಕ್ರಿ.) ಕಹಳೆಯೂದು ; ಕಹಳೆ ಯೂದಿ ಕರೆ. **Búgler** (ನಾ.) ; **Búglet** (ನಾ.) ಕಾಲುಬಂಡಿಯ (ಬೈಸಿಕಲ್ಲಿನ) ಸಣ್ಣ ಕಹಳೆ.

Búgle[2] ಬ್ಯೂಗ್‌ಲ್ (ನಾ.) ಸಸ್ಯಜಾತಿ ವಿಶೇಷ.

Búgle[3] ಬ್ಯೂಗ್‌ಲ್ (ನಾ.) ಉಡುಪು, ಮೊ. ಗಳ ಮೇಲೆ ಅಂದಕ್ಕಾಗಿ ಹೊಲಿಯುವ ಕೊಳವಿಯಾಕಾರದ ಗಾಜಿನ ಮಣಿ.

Buhl ಬೂಲ್ (ನಾ., ಗು.) ಕೆತ್ತನೆಯ ಕೆಲಸದಲ್ಲಿ ಸೇರಿಸುವುದಕ್ಕಾಗಿ ಚಿತ್ರಗಳಾಗಿ ಕತ್ತರಿಸಿದ ಹಿತ್ತಾಳೆ, ಆಮೆಯ ಚಿಪ್ಪು, ಮೊ. ವು ; ಇವುಗಳಿಂದ ಕೆತ್ತಿದ. (Buhl ಎಂಬ ನಕಾಸೆಗಾರನ ಹೆಸರಿನಿಂದ)

Build ಬಿಲ್ಡ್ (ಕ್ರಿ. ; ಭೂತ., ಭೂ. ಕೃ. Built ; ನಾ.) (ಮನೆ, ಹಡಗು, ಬಂಡಿ, ಎಂಜಿನು, ಗೂಡು, ಮೊ. ವನ್ನು) ಕಟ್ಟು. (ಪದ್ಧತಿ, ಯೋಗ್ಯತೆ, ಹೆಸರುವಾಸಿ, ರಾಷ್ಟ್ರ, ಮೊ. ನ್ನು) ಕ್ರಮೇಣ ನಿರ್ಮಿಸು, ಸ್ಥಾಪಿಸು (ಸಾ., *up* ಉಪ. ದೊಡನೆ). (ನಂಬಿಕೆ, ಭರವಸ, ಮೊ. ನ್ನು) ಇಡು. (ನಾ.) ಕಟ್ಟಡದ ಶೈಲಿ, ರೀತಿ. ಕಟ್ಟಡ ; ಬಂಧ ; ಮೈಕಟ್ಟು (of sturdy b. ದೃಢವಾದ ಮೈಕಟ್ಟನ). **Buílder** (ನಾ.) (ಕ್ರಿಯಾರ್ಥಗಳಲ್ಲಿ). ವಾಸ್ತುಶಿಲ್ಪಿ ; ಮನೆಕಟ್ಟುವ ಗುತ್ತಿಗೆದಾರ. **Buílding** (ನಾ.) (ಕ್ರಿಯಾರ್ಥಗಳಲ್ಲಿ) ; ಮನೆ ; ಕಟ್ಟಡ ; ಭವನ. **B.-lease** ನಿವೇಶನದಲ್ಲಿ ಮನೆ ಕಟ್ಟಿಕೊಳ್ಳಲು ಮಾಡಿಕೊಂಡ ಕರಾರು : ಕಟ್ಟಡದ ಕರಾರು. **B.-society** ಮನೆಕಟ್ಟುವುದಕ್ಕೆ ಸಹಾಯಮಾಡಲು ನಿಧಿಸೇರಿಸಿ ಸಾಲಕೊಡುವ ಸಂಘ : ಕಟ್ಟಡದ ಸಂಘ.

Búkshi, -shee ಬಕ್‌ಷೀ (ನಾ.) ಇಂಡಿಯಾ ದೇಶೀಯ ಸಂಸ್ಥಾನಗಳಲ್ಲಿ ಸೈನ್ಯದ ಬಟವಾಡೆ ಇಲಾಖೆಯ ಮುಖ್ಯಾಧಿಕಾರಿ : ಸೈನ್ಯದ ಖಜಾನೆ ಬಕ್ಷಿ.

Bulb ಬಲ್ಬ್ (ನಾ., ಕ್ರಿ. ಅಕ.) ನೆಲದಲ್ಲಿ ಬಿಡುವ ಗೆಡ್ಡೆ (ಉಳ್ಳಿಯ ಗೆಡ್ಡೆ, ಮೊ.). (ಅಂ. ರ. ಶಾ.) ಯಾವುದಾದರೂ ದಂಡಾಕೃತಿಯ ಅಂಗದ ಗೆಡ್ಡೆಯಾಕಾರದ ಭಾಗ (ಉದಾ. ಕೂದಲನ ಬುಡ). ಗಾಜಿನ ಕೊಳವಿಯ ಉಬ್ಬಿದ ದುಂಡನೆಯ ಭಾಗ, ಬುರುಡೆ ; ವಿದ್ಯುದ್ದೀಪದ ಬುರುಡೆ. (ಕ್ರಿ.) ಗೆಡ್ಡೆಯಾಗು ; ಬುರುಡೆಯಾಗಿ ಉಬ್ಬು. **Bulbed** (ಗು.) ; **Bulbíferous** (ಗು.) ಗೆಡ್ಡೆಬಿಡುವ. **Búlbiform** (ಗು.) ಗೆಡ್ಡೆಯಾಕಾರದ ; ಬುರುಡೆಯಾಕಾರದ. **Búlbous** (ಗು.) ಗೆಡ್ಡೆಯ ; ಗೆಡ್ಡೆಯುಳ್ಳ ; ಗೆಡ್ಡೆಯಾಕಾರದ ; ಗೆಡ್ಡೆಯಿಂದ ಹೊರಟ.

Búlbul ಬುಲ್‌ಬುಲ್ (ನಾ.) ಪೂರ್ವದೇಶಗಳ ಒಂದು ಜಾತಿಯ ಹಾಡುಹಕ್ಕಿ ; ಬುಲ್‌ಬುಲ್. ಗಾಯಕ ; ಕವಿ.

Bulge ಬಲ್ಜ್ (ನಾ., ಕ್ರಿ.) ಉಬ್ಬು ; ಊತ. (= Bilge). (ಕ್ರಿ.) ಉಬ್ಬು ; ಉಬ್ಬಿಸು ; ಊದು. **Búlgy** (ಗು.) ; **Búlginess** (ನಾ.)

Búlimy ಬ್ಯೂಲಿಮಿ, **Bulímia** ಬ್ಯೂಲೈಮಿಯ (ನಾ.) (ವೈ. ಶಾ.) ಹಸಿವುರೋಗ ; ಕ್ಷುದ್ರೋಗ. (ರೂಪ.) (ಪುಸ್ತಕ, ಮೊ. ಗಳಿಗಾಗಿ) ಅತ್ಯಾಶೆ.

Bulk ಬಲ್ಕ್ (ನಾ., ಕ್ರಿ.) ಹಡಗಿನ ಸರಕು [Break b. ಹಡಗಿನಿಂದ ಸರಕಿಳಿಸಲು ಆರಂಭಿಸು. B. not equal to sample ಒಟ್ಟು ಸರಕು ಮಾದರಿಯಂತಿಲ್ಲ. In b. (ತುಂಬಡದೆ, ಕಟ್ಟಡದೆ) ರಾಶಿಯಾಗಿ, ಗುಡ್ಡೆಯಾಗಿ. Load in b. ಧಾನ್ಯ, ಮೊ. ನ್ನು ಚೀಲ, ಮೊ. ಗಳಲ್ಲಿ ತುಂಬದೆ ಹಾಗೆಯೇ ಭರ್ತಿಮಾಡು : ರಾಶಿಯಾಗಿ ತುಂಬು. Sell in b. ಸರಕನ್ನು ಒಟ್ಟುಗಟ್ಟಲೆ ಮಾರು]. ಗಾತ್ರ ; ಅಳವು ; ಪ್ರಮಾಣ ; ಸ್ಥೂಲತ್ವ ; ದೊಡ್ಡ ಆಕೃತಿ ; ಹೆಚ್ಚುಭಾಗ ; ಬಹುಭಾಗ. (ಕ್ರಿ.) ಗಾತ್ರವಾಗಿ ಕಾಣು ; ದೊಡ್ಡದಾಗಿ ಕಾಣು ; ಪ್ರಧಾನವಾಗಿ ಕಾಣು (=B. large). (ಮೀನು, ಮೊ. ನ್ನು) ಗುಡ್ಡೆಗಳಾಗಿ ಹಾಕು. (ಸುಂಕ) ತೇಯೆಲೆ, ಮೊ. ನ್ನು ಪೆಟ್ಟಿಗೆಯಿಂದ ಸುರಿದು ತೂಕ ಗೊತ್ತು ಮಾಡು. B. up ಮೊತ್ತವಾಗು ; ದೊಡ್ಡ ಮೊತ್ತವಾಗು. **Búlky** (ಗು.) ದಪ್ಪವಾದ ; ಸ್ಥೂಲವಾದ ; ಅತಿ ದೊಡ್ಡದಾದ. **Búlkiness** (ನಾ.)

Búlkhead ಬಲ್ಕ್‌ಹೆಡ್ (ನಾ.) ಹಡಗಿನಲ್ಲಿಯ ಕೋಣೆಗಳನ್ನಾಗಲಿ, ನೀರು ಸೋರಿಹೋಗದಂತೆ ಕಟ್ಟಿರುವ ಕೋಷ್ಠಗಳನ್ನಾಗಲಿ ಪ್ರತ್ಯೇಕಿಸುವ ಹಲಗೆಯ ತಡಿಕೆ. ಕೋಣೆ ; ಮಳಿಗೆ.

Bull[1] ಬುಲ್ (ನಾ., ಗು.) ಹೋರಿ (B. in china shop ಗಾಜಿನ ಅಂಗಡಿಗೆ ನುಗ್ಗಿದ ಗೂಳಿ ; ಲಕ್ಷ್ಯವಿಲ್ಲದೆ ಯದ್ವಾತದ್ವವಾಗಿ ನಾಶಮಾಡುವವನು. Take the b. by the horns ಎದುರಿಗೆ ಹಿಮ್ಮೆಟ್ಟದೆ ಎದೆಗೊಟ್ಟು ನಿಲ್ಲು). ತಿಮಿಂಗಿಲ, ಆನೆ, ಮೊ. ಗಳ ಗಂಡು (B. elephant, Elephant-b., etc.). ವೃಷಭ(ರಾಶಿ). (ಪತ್ರವ್ಯಾಪಾರ) ಬೆಲೆಯೇರಿಸಲು ಪ್ರಯತ್ನಿಸುವವನು. (ಗು.) ಹೋರಿಯಂಥ (B. voice ಗೂಳಿಗಂಟಲು). **B.-calf** ಹೋರಿಗರು ; ಏನೂ ಅರಿಯದವನು ; ತಿಳಿಗೇಡಿ ; ದಡ್ಡ. **Búlldog** ದೊಡ್ಡ ತಲೆಯ, ಮೆತು ಕೂದಲನ, ಬಹು ಧೈರ್ಯವುಳ್ಳ, ಬಲವಾದ ನಾಯಿಜಾತಿ : ಗೂಳಿನಾಯಿ. ಪಟ್ಟುಹಿಡಿತದ, ಧೈರ್ಯಶಾಲಿಯಾದ, ಮನುಷ್ಯ. ಒಂದು ಮಾದರಿಯ ಬಂದೂಕು ಅಥವಾ ಪಿಸ್ತೂಲು. **Búlldoze** (ಕ್ರಿ. ಸಕ.) (ಅಮೆ. ಸಂ., ಅಸಂ.) ಹೆದರಿಸು ; ಪೀಡಿಸು ; ಬಲಾತ್ಕರಿಸು ; ಸದೆಬಡಿ. **Búllfight** ಗೂಳಿಯೊಡನೆ ಮಾಡುವ ಕಾಳಗ : ಗೂಳಿಕಾಳಗ. **Búllfinch** ಬಲವಾದ ಕೊಕ್ಕಿನ, ಅಂದವಾದ ಪುಕ್ಕವುಳ್ಳ, ಒಂದು ಜಾತಿಯ ಹಾಡುಹಕ್ಕಿ. ಹಾರಲಾಗದ ಎತ್ತರವಾದ ಬೇಲಿ. **Búllfrog** ದೊಡ್ಡ ಮೈಯ ಒಂದು ಜಾತಿಯ ಕಪ್ಪೆ : ಗೂಳಿ ಕಪ್ಪೆ. **Búllhead** ದೊಡ್ಡತಲೆಯ ಸಣ್ಣ ಮೀನ ಜಾತಿ. ಮೀನ ರೂಪದ ಕಪ್ಪೆಯ ಮರಿ. **B.-headed** ಹಠಮಾರಿ ; ದುಡುಕುವ ; ಹಿಂದುಮುಂದು ನೋಡದೆ ನುಗ್ಗುವ. **B.-puncher** ಎತ್ತು ಹೊಡೆಯುವವನು. **B.-pup** ಗೂಳಿನಾಯಿಯ ಮರಿ. **Búllring** ಗೂಳಿಕಾಳಗದ ಕಣ. **Búll-roarer** ದೊಡ್ಡ ಶಬ್ದ ಮಾಡುವ ಒಂದು ಆಟದ ಸಾಮಾನು. **Búll's-eye** ಅರ್ಧಗೋಳಾಕೃತಿಯ ಗಾಜಿನ ಲೆನ್ಸು ; ಇಂಥ ಲೆನ್ಸು ಹಾಕಿರುವ ಲಾಂದ್ರ. ಸಣ್ಣ ಗುಂಡುಕಿಟಕಿ. (ಬಂದೂಕು ಹೊಡೆಯುವ) ಗುರಿಯ ಕಣ್ಣು ; ಲಕ್ಷ್ಯಭಾಗ. ಒಂದು ತೆರದ ಮಿಠಾಯಿ. **Búllock** (ನಾ.) ಬೀಜ ಒಡೆದ ಹೋರಿ : ಎತ್ತು.

Bull (ಕ್ರಿ.) (ಪತ್ರವ್ಯಾಪಾರ) ಬೆಲೆಯೇರಿಸಲು ಪ್ರಯತ್ನಿಸು.

Bull[2] ಬುಲ್ (ನಾ.) ಪೋಪ್ ಗುರುವಿನ ಆಜ್ಞೆ, ಶಾಸನ.

Bull[3] ಬುಲ್ (ನಾ.) (ಸಾ., Irish b.) ಒಂದು ವಾಕ್ಯದಲ್ಲಿಯ ಅಥವಾ ವಾಕ್ಯಭಾಗದಲ್ಲಿಯ ಪದಗಳಿಗೆ ಪರಸ್ಪರ ವಿರೋಧವಿರುವುದು, ಅಥವಾ ಹಾಸ್ಯಾಸ್ಪದವಾಗುವಂಥ ಅಸಂಬದ್ಧತೆಯಿರುವುದು (ಸಾ., ಅರ್ಥ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗರ್ಭಿತವಾದ ವಚನವನ್ನು ಸಂಕ್ಷಿಪ್ತಮಾಡಿ ಹೇಳುವುದರಿಂದಾಗಬಹುದಾದ ಆಭಾಸ): ಅಸಂಬದ್ಧೋಕ್ತಿ ; ಆಭಾಸೋಕ್ತಿ [ಉದಾ. (1) Are you dead? No, I am speechless. (2) It is impossible that I could have been in two places at once unless I were a bird]

Bull[4] ಬುಲ್ (ನಾ.) ಸಾರಾಯಿ ಹಾಕಿದ್ದ ಪೀಪಾಯಿಯಲ್ಲಿ ಹಾಕಿ ವಾಸನೆಗಟ್ಟಿದ ಕುಡಿತದ ನೀರು.

Bull[5] ಬುಲ್ (ನಾ.) = John B. ಇಂಗ್ಲಿಷ್ ಜನರನ್ನು ವಿನೋದವಾಗಿ ಕರೆಯುವ ಮಾತು.

Búllate ಬು(ಬ)ಲೇಟ್ (ಗು.) (ಸ. ವಿ.) (ಎಲೆಗಳ ವಿಷಯವಾಗಿ) ಗುಳ್ಳೆಗಳುಳ್ಳ ; ಉಬ್ಬುಗಳುಳ್ಳ. (ಶ. ವಿ.) ಗುಳ್ಳೆಗಳುಳ್ಳ.

Búllet ಬುಲೆಟ್ (ನಾ.) (ಬಂದೂಕಿನಲ್ಲುಪಯೋಗಿಸುವ) ಗೋಳಾಕಾರದ ಅಥವಾ ಶಂಕುವಿನಾಕಾರದ ಸೀಸದ ಗುಂಡು. ಗುಂಡು ; ಗೋಲಿ. **B.-drawer** ಗಾಯದೊಳಗಿನಿಂದ ಗುಂಡನ್ನು ಹೊರದೆಗೆಯುವ ಸಲಕರಣೆ. **B.-head** ಗುಂಡುತಲೆ ; ಗುಂಡುತಲೆಯುಳ್ಳವನು. (ರೂಪ.) ಮೊದ್ದುತಲೆಯವನು. **B.-proof** (ಬಂದೂಕಿನ) ಗುಂಡು ತೂರದ.

Búlletin ಬುಲೆಟಿನ್ (ನಾ.) ಸಾರ್ವಜನಿಕವಾದ ಒಂದು ಸಮಾಚಾರವನ್ನೊ ಒಬ್ಬ ರೋಗಿಯ ದೇಹಸ್ಥಿತಿಯನ್ನೊ ಅಧಿಕಾರಸ್ಥಾನದಿಂದ ತಿಳಿಯಪಡಿಸುವ ಸಣ್ಣ ಪ್ರಕಟನೆ : ಲಘುಪ್ರಕಟನೆ.

Búllion ಬುಲಿಯನ್ (ನಾ., ಗು.) ಚಿನ್ನದ ಅಥವಾ ಬೆಳ್ಳಿಯ ಗಟ್ಟಿ ; ಅಚ್ಚ ಬಂಗಾರ, ಅಚ್ಚ ಬೆಳ್ಳಿ ; ಇದರಿಂದ ಮಾಡಿದ. (ಚಿನ್ನದ ಅಥವಾ ಬೆಳ್ಳಿಯ) ಸರಿಗೆಯ ಅಂಚು ; ಜರತಾರಿಯ ಅಂಚು. **Búllionist** (ನಾ.) ಲೋಹನಾಣ್ಯ ಚಲಾವಣೆಯ ವಾದಿ.

Búllock. **Bull**[1] ನೋಡಿ.

Búlly[1] ಬುಲಿ (ನಾ., ಕ್ರಿ. ಸಕ.) ಬಾಯಿಬಡಕ ; ಹಿಂಸಕ ; ಕಾಡುವವನು ; ಗೋಳುಗುಟ್ಟಿಸುವವನು (ಮು., ಹುಡುಗರಲ್ಲಿ) ; ಹೇಡಿಯಾದ ಹಿಂಸಕ. (ಗತ ಪ್ರಯೋಗ) ಪ್ರಿಯ ; ಸೊಗಸುಗಾರ. (ಕ್ರಿ.) ಪೀಡಿಸು ; ಹಿಂಸಿಸು ; ಕಾಡು ; ಗೋಳುಗುಟ್ಟಿಸು ; ಭಯಪಡಿಸು ; ಹೆದರಿಸು.

Búlly[2] ಬುಲಿ (ಗು., ಭಾವ. ಅವ್ಯ.) (ಮು., ಅಮೆ. ಸಂ., ಮೊ.) ಭಲಾ ! ಭೇಷ್ ! (B. for you ಶಹಬಾಸ್ !)

Búlly[3] ಬುಲಿ (ನಾ.) (Also, B. beef) ಡಬ್ಬಿಯಲ್ಲಿ ತುಂಬಿಟ್ಟಿರುವ ದನದ ಮಾಂಸ.

Búlly[4] ಬುಲಿ (ನಾ.) ಕಾಲ್ಚೆಂಡಾಟದಲ್ಲಿ ಆಟಗಾರರು ಚೆಂಡಿಗಾಗಿ ಒಬ್ಬರಮೇಲೊಬ್ಬರು ಬೀಳುವುದು ; ನೂಕುನುಗ್ಗಲು.

Búllyrag ಬುಲಿರ್‍ಯಾಗ್ = Ballyrag.

Búlrush ಬುಲ್‌ರಷ್ (ನಾ.) ಉದ್ದವಾದ ಜೊಂಡು (ಅಪು) ಜಾತಿ.

Búlwark ಬುಲ್‌ವರ್ಕ್ (ನಾ.) ಶತ್ರುವಿನಿಂದ (ಗುಂಡುಗಳಿಂದ) ರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ಸುತ್ತಲೂ ಹಾಕಿದ ಮಣ್ಣುದಿಬ್ಬ ; ಕೊತ್ತಳ ; ಬುರುಜು ; ಆಳುವೇರಿ. ಅಲೆಗಳ ಹೊಡೆತವನ್ನು ತಡೆಯುವುದಕ್ಕಾಗಿ ಸಮುದ್ರದಲ್ಲಿ ಹಾಕಿದ ಕಟ್ಟೆ : ಅಲೆಕಟ್ಟೆ. ಹಡಗಿನ ಮೇಲ್ಮೈಲದ ಸುತ್ತಲೂ ಪಕ್ಕಗಳಲ್ಲಿ ಹಾಕಿರುವ ಹಲಗೆಯ ಕಟಕಟೆ. ರಕ್ಷೆ ; ರಕ್ಷಕ ; ದೆಂಬಲ.

Bum ಬಮ್ (ನಾ.) ಹಿಂಭಾಗ ; ಪೃಷ್ಠಭಾಗ ; ಪಿರ್ರೆಗಳು. ಸಾಲಗಾರರನ್ನು ಹಿಡಿಯಲು ಅಧಿಕಾರ ಪಡೆದ ಅಮೀನ (= B. bailiff). **B.-boat** ಹಡಗಿಗೆ ಹೊಸ ಆಹಾರಪದಾರ್ಥಗಳನ್ನು ತೆಗೆದುಕೊಂಡು ಹೋಗುವ ದೋಣಿ.

Búmble ಬಂಬ್ಲ್ (ನಾ.) ಪ್ರತಿಷ್ಠೆ ತೋರಿಸುವ ಕೀಳಧಿಕಾರಿ. ಮುಟ್ಟು ಹಾಳ. **Búmbledom** (ನಾ.) ಜಂಬ ; ಆಡಂಬರ.

Búmble-bee ಬಂಬ್ಲ್ ಬೀ (ನಾ.) ಹೆಜ್ಜೇನು.

Búmmer ಬಮರ್ (ನಾ.) (ಅಮೆ. ಸಂ., ಅಸಂ.) ಸೋಮಾರಿ ; ಬೀದಿ ಅಲೆಯುವವನು.

Bump[1] ಬಂಪ್ (ಕ್ರಿ., ಕ್ರಿ. ವಿ., ನಾ.) ನೂಕು ; ದಬ್ಬು ; ತಳ್ಳು ; ಉರುಳಿಸು ; ಡಿಕ್ಕಿಹೊಡೆ ; (*against, on* ಉಪ. ಜೊಡನೆ). (ಒಬ್ಬನನ್ನು ಕೈಕಾಲು ಹಿಡಿದು ಎತ್ತಿ) ಅಪ್ಪಳಿಸು, ಒಗೆ. (ದೋಣಿಜೂಜಿನಲ್ಲಿ) ಮುಂದಿನವನನ್ನು ಹಿಂದುಬೀಳಿಸು. (ಕ್ರಿಕೆಟ್ ಚೆಂಡು) ಕೆಳಗೆ ಬಿದ್ದು ಥಟ್ಟನೆ ಪುಟನೆಗೆ : ಬಿದ್ದೇಳು. (ಕ್ರಿ. ವಿ.) ಡಿಕ್ಕಿಹೊಡೆದು ; ಪುಟನೆಗೆದು ; ಥಟ್ಟನೆ ; ಒತ್ತರವಾಗಿ ; ರಭಸವಾಗಿ ; ಜೋರಾಗಿ (Go. b. ಥಟ್ಟನೆ ಜೋರಾಗಿ ಹೋಗಿ ಬೀಳು). (ನಾ.) ದಬ ದಬನೆ ಹಾಕುವ ಗುದ್ದು ; ಡಿಕ್ಕಿ ; ಅಪ್ಪಳಿಕೆ. ಗುದ್ದಿನಿಂದಾದ ಊತ. (ಸಾಮುದ್ರಿಕ) ತಲೆಬುರುಡೆಯ ಮೇಲಿನ ಉಬ್ಬು ; ಈ ಉಬ್ಬಿನಿಂದ ಸೂಚಿತವಾಗುವ ಬುದ್ಧಿಶಕ್ತಿ. (ದೋಣಿಜೂಜಿನಲ್ಲಿ) ಹಿಂದಿನ ದೋಣಿ ತನ್ನ ಮುಂದಿನದನ್ನು ತಾಕುವುದು. ಹಿಂದಿನ ದೋಣಿಗೆ ಗೆಲವು. **Búmper** (ನಾ.) (ಕ್ರಿಯಾರ್ಥಗಳಲ್ಲಿ). ತುಂಬಿ ತುಳುಕುವ ದ್ರಾಕ್ಷಾಮದ್ಯ ಪಾತ್ರೆ. (ಅಸಂ.) ಅಸಾಮಾನ್ಯವಾದ ಆಧಿಕ್ಯ, ಹೆಚ್ಚಿಗೆ, ಹುಲುಸು (ಬೆಳೆ, ನಾಟಕಶಾಲೆಯಲ್ಲಿಯ ಪ್ರೇಕ್ಷಕರು, ಮೊ.) ; ಸಮೃದ್ಧಿ ; ತುಂಬು ; ಅತಿಶಯ. (ಮೋಟಾರು ಬಂಡಿಯಲ್ಲಿ) ಡಿಕ್ಕಿಯ ಹೊಡೆತವನ್ನು ಕಡಮೆ ಮಾಡುವ ಎಗುರುತಡೆ. **Búmpy** (ಗು.) ಉಬ್ಬುಗಳುಳ್ಳ ; ಕುಲುಕಿಸುವ ; ಎತ್ತಿತ್ತಿ ಹಾಕುವ ; ಪುಟ ನೆಗೆಯಿಸುವ. **Búmpiness** (ನಾ.)

Bump[2] ಬಂಪ್ (ನಾ., ಕ್ರಿ. ಅಕ.) 'ಬಿಟರ್ನ್' ಎಂಬ ನೀರುಹಕ್ಕಿಯ ಕೂಗು ; ಈ ಹಕ್ಕಿಯಂತೆ ಕೂಗು.

Bumpkin ಬಂಪ್‌ಕಿನ್ (ನಾ.) ಹಳ್ಳಿ ಗಮಾರ ; ಗಾಂಪ (ಗ್ರಾಂ.) ; ಮಡೆಯ ; ದಡ್ಡ ; ಮಡ್ಡಿ.

Búmptious ಬಂಪ್‌ಷಸ್ (ಗು.) ಸ್ವಪ್ರತಿಷ್ಠೆಯ ; ದುರಹಂಕಾರದ. **Búmptiously** (ಕ್ರಿ. ವಿ.) ; **Búmptiousness** (ನಾ.)

Bun[1] ಬನ್ (ನಾ.) ಮೃದುವಾದ ಸಣ್ಣ ಸೀರೊಟ್ಟಿ (Hot cross b. ಶಿಲುಬೆಯ ಗುರುತು ಒತ್ತಿರುವ, ಗುಡ್‌ಫ್ರೈಡೆಯ ದಿನ ತಿನ್ನುವ, ಸೀರೊಟ್ಟಿ). ಈ ಆಕಾರದ ತುರುಬು.

Bun[2] ಬನ್ (ನಾ.) ಅಳಿಲು. ಮೊಲ. (ಇವುಗಳಿಗೆ ವ್ಯಕ್ತಿತ್ವವನ್ನು ಕಲ್ಪಿಸಿ ಕೊಟ್ಟ ಹೆಸರು)

Bunch ಬಂಚ್ (ನಾ., ಕ್ರಿ.) (ಹೂವು, ದ್ರಾಕ್ಷಿ, ಬೀಗದ ಕೈ, ಮೊ. ಗಳ) ಗೊಂಚಲು, ಗೊನೆ, ಗುತ್ತಿ, ಗುಚ್ಛ, ಮಂಜರಿ. ಗುಂಪು ; ತಂಡ [Best of the b. ಆ ತಂಡದಲ್ಲಿ ಉತ್ತಮವಾದದ್ದು. B. of fives (ಅಸಂ.) ಮುಷ್ಟಿ ; ಹಿಡಿ ; ಕೈ]. (ಕ್ರಿ.) ಗೊಂಚಲುಗೊಂಚಲಾಗಿ ಕಟ್ಟು ; ಗೊಂಚಲಾಗು. (ಉಡುಪನ್ನು) ನಿರಿ(ನೆರಿಗೆ)ಹಿಡಿ. ಒಟ್ಟುಗೂಡು. (ಅಮೆ. ಸಂ.) (ದನಗಳನ್ನು) ಗುಂಪುಕೂಡಿಸು, ಮಂದೆಗೂಡಿಸು ; ಮಂದೆಗೂಡು. **Búnchy** (ಗು.)

Búncombe. **Bunkum** ನೋಡಿ.

Bund ಬಂಡ್ (ನಾ.) ಏರಿ ; ಕಟ್ಟೆ ; ಬದು ; ಎತ್ತರವಾಗಿ ಕಟ್ಟಿದ ದಾರಿ. ಘಟ್ಟ.

Búndle ಬಂಡ್ಲ್ (ನಾ., ಕ್ರಿ.) ಗಂಟು ; ಮೂಟೆ ; ಕಂತೆ ; ಕಟ್ಟು ; ಪಿಂಡಿ ; ಸಮುದಾಯ. (ಕ್ರಿ.) ಗಂಟು ಕಟ್ಟು ; ಮೂಟೆ ಕಟ್ಟು ; ಕಂತೆ ಕಟ್ಟು ; ವಸ್ತುಗಳನ್ನು ಅಡ್ಡಾದಿಡ್ಡಿಯಾಗಿ ತುಂಬು. (ಒಬ್ಬನನ್ನು) ಅವಸರದಲ್ಲಿ, ಮರ್ಯಾದೆಯನ್ನು ಲಕ್ಷಿಸದೆ, ಹೊರಡಿಸಿ ಬಿಡು (*off, out, away* ಉಪ. ಜೊಡನೆ)

Bung ಬಂಗ್ (ನಾ., ಕ್ರಿ. ಸಕ.) ದೊಡ್ಡ ಬಿರಡೆ (ಮು., ಪೀಪಾಯಿಯಲ್ಲಿಯ ತೂತನ್ನು ಮುಚ್ಚುವ ದೊಡ್ಡ ಕಾರ್ಕನದು) ; ಗಟ್ಟ. ಪೀಪಾಯಿಯ ಬಾಯಿ (= B.-hole). (ಅಸಂ.) ಸುಳ್ಳು ; ಬುರುಡೆ. (ಕ್ರಿ.) ಪೀಪಾಯಿಗೆ ಬಿರಡೆಹಾಕು ; ಮುಚ್ಚು (Eyes bunged up ಪೆಟ್ಟಿನಿಂದಾದ ಊತದಿಂದಾಗಲಿ ಪಿಸುರಿನಿಂದಾಗಲಿ ಕಣ್ಣು ಮುಚ್ಚಿಹೋಗಿ). (ಅಸಂ.) (ಕಲ್ಲನ್ನು) ಎಸೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Búngalow ಬಂಗಲೋ (ನಾ.) ಲಘುವಾಗಿ ಕಟ್ಟಿದ ಒಂದುಅಂತಸ್ತಿನ ಮನೆ ; ಹಂಗಾಮಿ ಮನೆ ; ಬಂಗಲೆ.

Búngle ಬಂಗ್‌ಲ್ (ಕ್ರಿ., ನಾ.) ಅಡ್ಡಾದಿಡ್ಡಿಯ, ನಾಜೂಕಿಲ್ಲದ, ಕೆಲಸ (ಮಾಡು) ; ಗಲಿಬಿಲಿ (ಮಾಡು) ; ಅತಂತ್ರ (ಮಾಡು) ; ಹೊಲಬುಗೆಡಿಸು ; ತಪ್ಪುತಪ್ಪಾಗಿ ಮಾಡು ; (ಕೆಲಸವನ್ನು) ಅವ್ಯವಸ್ಥೆ ಮಾಡು. **Búngler** (ನಾ.)

Búnion ಬನ್ಯನ್ (ನಾ.) ಪಾದದ ಮೇಲಿನ ರಕ್ತಕುರು.

Bunk[1] ಬಂಕ್ (ನಾ.) ಪೆಟ್ಟಿಗೆ ಮೊ. ಗಳ ಮೇಲೆ ಮಲಗುವ ಇರುಕಲು ಜಾಗ.

Bunk[2] ಬಂಕ್ (ಕ್ರಿ. ಅಕ., ನಾ.) (ಅಸಂ.) (ತಪ್ಪಿಸಿಕೊಂಡು) ಓಡಿಹೋಗು ; ಪರಾರಿಯಾಗು (= Do a b.)

Búnker ಬಂಕರ್ (ನಾ., ಕ್ರಿ. ಸಕ.) ಹಡಗಿನ ಕಲ್ಲಿದ್ದಲ ತೊಟ್ಟಿ. (ರೂಪ.) ತೊಂದರೆಗೆ ಸಿಕ್ಕಿಸು ; ಕಷ್ಟಕ್ಕೆ ತರು.

Búnkum, Búncombe ಬಂಕಂ (ನಾ.) ಬೂಟಾಟಿಕೆ ; ರಕ್ಕು ; ಒಣ ಮಾತು ; ಪೊಳ್ಳು ಮಾತು.

Búnny ಬನಿ (ನಾ.) ಮೊಲ (ಮುದ್ದಿನ ಹೆಸರು). **B.-hug** ಅಮೆರಿಕದ ಒಂದು ತೆರದ ಕುಣಿತ.

Búnsen ಬು(ಬ)ನ್‌ಸೆನ್ (ಗು.) ಹೈಡೆಲ್‌ಬರ್ಗಿನ ಬನ್ಸನ್ ಎಂಬ ವೈಜ್ಞಾನಿಕನು ಕಂಡುಹಿಡಿದ (B. burner, lamp ಪರೀಕ್ಷೆಗಾಗಿ ಖನಿಜ, ಭಸ್ಮ, ಮೊ. ನ್ನು ಕರಗಿಸುವ ಅಥವಾ ಕಾಯಿಸುವ ಕೆಲಸಕ್ಕಾಗಿ, ಉರಿವ ಅನಿಲದೊಡನೆ ವಾಯುವನ್ನು ಸೇರಿಸಿದ ಮಿಶ್ರಣವನ್ನು ಉರಿಸುವ ದೀಪ : ಬನ್ಸನ್ ದೀಪ). **B. battery** ಬನ್ಸನ್ನಿನ ವಿದ್ಯುತ್ಕೋಶ ವ್ಯೂಹ. **B. cell** ಬನ್ಸನ್ನಿನ ವಿದ್ಯುತ್ಕೋಶ.

Bunt[1] ಬಂಟ್ (ನಾ.) ಗೋಧಿಗೆ ತಗುಲುವ ಕಾಡಿಗೆರೋಗ (= Smut-ball)

Bunt[2] ಬಂಟ್ (ನಾ.) ಮೀನಿನ ಬಲೆಯಲ್ಲಿ ಮೀನು ಬೀಳುವುದಕ್ಕಾಗಿ ಮಾಡಿರುವ ಚೀಲದಂತಿರುವ ಭಾಗ. ಹಡಗಿನ ಪಟದ ಉಬ್ಬಿಕೊಳ್ಳುವ ಮಧ್ಯಭಾಗ.

Búnting[1] ಬಂಟಿಂಗ್ (ನಾ.) ಒಂದು ಪಕ್ಷಿಜಾತಿ.

Búnting[2] ಬಂಟಿಂಗ್ (ನಾ.) ಬಾವುಟಗಳನ್ನು ಮಾಡಲು ಉಪಯೋಗಿಸುವ ಒಂದು ತೆರದ ಬಟ್ಟೆ. ಬಾವುಟ ; ತೋರಣ ಬಾವುಟಗಳು.

Buoy ಬಾಯ್, ಬ್ವಾಯ್ (ನಾ., ಕ್ರಿ. ಸಕ.) ಹಡಗಿಗೆ ಮಾರ್ಗತೋರಿಸುವ, ಅಥವಾ ಮುಳುಗಿರುವ ಬಂಡೆ ಮೊ. ನ್ನು ಸೂಚಿಸುವ, ಲಂಗರು ಹಾಕಿ ನಿಲ್ಲಿಸಿದ, ತೇಲುಬುರುಡೆ : ತೇಲುವೆ. ನೀರಿನಲ್ಲಿ ಬಿದ್ದ ಮನುಷ್ಯನನ್ನು ಮುಳುಗದಂತೆ ತೇಲಿಸುವ ಉಪಕರಣ : ಪ್ಲವಕ (= Life-b.) (ರೂಪ. ಸಹ). (ಕ್ರಿ.) ತೇಲಿಸು ; ತೇಂಕಾಡಿಸು ; ನೀರಿನಮೇಲಕ್ಕೆ ತರು (ಸಾ., *up* ಉಪ. ದೊಡನೆ) ; (ಮನುಷ್ಯ, ಧೈರ್ಯ, ಮೊ. ನ್ನು) ಉತ್ತೇಜಿಸು, ಹುರಿಗೊಳಿಸು ; ಮೇಲೆತ್ತು. (= B. out) ತೇಲುವೆಗಳಿಂದ ಗುರುತಿಸು ; ತೇಲುವೆ ಯಿಡು. **Buoýage** —ಯೆಜ್ (ನಾ.) ತೇಲುವೆಯ ಏರ್ಪಾಡು. **Buoýancy** —ಅನ್ಸಿ (ನಾ.) (ಘನವಸ್ತುವಿನ) ತೇಲುವ ಶಕ್ತಿ, (ದ್ರವವಸ್ತುವಿನ) ತೇಲಿಸುವ ಶಕ್ತಿ : ಪ್ಲವನತೆ ; ಪ್ಲವನ ಶಕ್ತಿ ; ತೇಲ್ಮೆ ; ತೇಂಕಾಟ. (ಭೌ. ವಿ.) ದ್ರವ ಪದಾರ್ಥದಲ್ಲಿ ಮುಳುಗಿರುವುದರಿಂದಾದ ಭಾರನಷ್ಟ ; ಮಗ್ನಲಾಘವ. (ಮನೋವೃತ್ತಿ, ಬೆಲೆಗಳು, ಮೊ. ಗಳ) ಸ್ಥಿತಿಸ್ಥಾಪಕತೆ, ಪುನಶ್ಚೈತನ್ಯ. ಉಲ್ಲಾಸ. **Buoýant** —ಅಂಟ್ (ಗು.) ತೇಲುವ ; ಲಘು ; ಹಗುರ ; ಮೇಲೇಳುವ ; ಸ್ಥಿತಿಸ್ಥಾಪಕ ಸ್ವಭಾವವುಳ್ಳ. ಉಲ್ಲಾಸಶೀಲ. **Buoýantly** (ಕ್ರಿ. ವಿ.)

Bur(r) ಬರ್ (ನಾ.) ಮೈಗೆ ಅಥವಾ ಬಟ್ಟೆಗೆ ಹತ್ತಿಕೊಳ್ಳುವ ಬೀಜ ಅಥವಾ ಹೂವು ; ಇಂಥ ಬೀಜ ಅಥವಾ ಹೂವುಗಳಿರುವ ಸಸ್ಯ ; ಅಂಟುಪುರುಳೆ ; ಅಂಟುಪುರಳೆಯಂಥ ಗಿಡ. ಜಿಗುಣೆ (ರೂಪ.). ಹಿಡಿದರೆ ಬಿಡಿಸಿಕೊಳ್ಳಲಾಗದ ಮನುಷ್ಯ.

Búrberry ಬರ್ಬರಿ (ನಾ.) ನೀರಿಳಿಯದ ಒಂದು ತೆರದ ಬಟ್ಟೆ ; ಈ ಬಟ್ಟೆಯಿಂದ ಮಾಡಿದ ಉಡುಪು, ಮೊ. (ಇವನ್ನು ತಯಾರಿಸುವ ವ್ಯಾಪಾರಸಂಘದ ಹೆಸರಿನಿಂದ)

Búrble ಬರ್‌ಬ್‌ಲ್ (ಕ್ರಿ. ಅಕ.) (ಕೋಪದಿಂದ, ಉಲ್ಲಾಸದಿಂದ) ತಳಮಳಿಸು, ಕುದಿ, ಉಕ್ಕು, ಕುಣಿದಾಡು.

Búrden, -then ಬರ್ಡ್‌ನ್, —ದ್‌ನ್ (ನಾ., ಕ್ರಿ. ಸಕ.) ಹೊರೆ ; ಭಾರ ; ಜಿಣ್ಣು (ಗ್ರಾಂ.). (ರೂಪ. ಸಹ). (B. of proof ರುಜುವಾತಿನ ಭಾರ). ಮಾಡಲೇಬೇಕಾದ ಪೆಚ್ಚ ; ಪೆಚ್ಚದ ಹೊರೆ, ಭಾರ. ಹಡಗಿನ ಭಾರವಾಹಕ ಶಕ್ತಿ, ವಹನ ಶಕ್ತಿ (Beast of b. ಹೊರೆ ಹೊರುವ ಪ್ರಾಣಿ, ಕಾಲ್ನಡೆ. Ship of b. ಸರಕಿನ ಹಡಗು ; ವ್ಯಾಪಾರದ ಹಡಗು). (ಬೈಬಲ್) ದೇವ ವಾಣಿ ; ಕ್ರೂರ ವಿಧಿ ; ದುರ್ಗತಿ. (ಹಾಡಿನ) ಪಲ್ಲವಿ. ಕವನ, ಗ್ರಂಥ, ಭಾಷಣ, ಮೊ. ಗಳ ಸಾರಾಂಶ, ಪ್ರಧಾನ ವಿಷಯ. (ಕ್ರಿ.) ಹೊರೆ ಹೇರು ; ಭಾರ ಹೊರಿಸು (ರೂಪ. ಸಹ). ಪ್ರತಿಬಂಧಿಸು ; ಪೀಡಿಸು ; ಕಾಡು. ತೆರಿಗೆ (ಕರ) ಹೊರಿಸು. **Búrdensome** (ಗು.) ಹೊರೆಯಾದ ; ಪೀಡಿಸುವ ; ಕುಗ್ಗಿಸುವ ; ದುಸ್ಸಹ. **Búrdensomeness** (ನಾ.)

Bureaú ಬ್ಯೂರೋ (ನಾ. ; ಬ. ವ. -x, -s, — ರೋಸ್) ಎಳೆಯುವ ಖಾನೆಗಳುಳ್ಳ ಬರೆಯುವ ಮೇಜು. ಕಾರ್ಯಶಾಲೆ ; ಕಚೇರಿ ; ಇಲಾಖೆ ; ಖಾತೆ. **Bureaúcracy** — ರೋ(ರಾ)ಕ್ರಸಿ (ನಾ.) ಬೇರೆ ಬೇರೆ ಇಲಾಖೆಗಳ ಮೂಲಕ ನಡೆಯುವ ಕೇಂದ್ರೀಕೃತ ಪ್ರಭುತ್ವ ; ಕಚೇರಿ ಸರ್ಕಾರ ; ಇಲಾಖೆಗಳ ಸರ್ಕಾರ ; ಅಧಿಕಾರಿಗಳ ಆಡಳಿತ ; ಅಧಿಕಾರಿ ವರ್ಗ ; ಅಧಿಕಾರ ಧೋರಣೆ, ದರ್ಪ. **Búreaucrat** ಬ್ಯೂರೊಕ್ರ್ಯಾಟ್ (ನಾ.) ಇಲಾಖಾಧಿಕಾರಿ ; ದಬ್ಬಾಳಿಕೆಯ ಅಧಿಕಾರಿ. **Bureaucrátic** (ಗು.) ; **Bureaucrátically** (ಕ್ರಿ. ವಿ.) ; **Bureaúcratism** — ರೋ(ರಾ)ಕ್ರಟಿಸ್ಮ್ (ನಾ.) ; **Bureaúcratist** (ನಾ.)

Burétte ಬ್ಯೂರೆಟ್ (ನಾ.) ದ್ರವ ವಸ್ತುಗಳನ್ನು ಸ್ವಲ್ಪ ಪ್ರಮಾಣಗಳಲ್ಲಿ ಅಳೆಯಲು ಅನುಕೂಲಿಸುವಂತೆ ಅಂಶಾಂಕಗಳನ್ನು ಗುರುತುಮಾಡಿರುವ ಗಾಜಿನ ಕೊಳವೆ ; ದ್ರವಮಾಪಕ ನಳಿಗೆ

Búrgeon, Boúrgeon ಬರ್ಜನ್ (ನಾ., ಕ್ರಿ. ಅಕ.) ಮೊಳಕೆ ; ಕುಡಿ ; ಚಿಗುರು ; ಅಂಕುರ ; ಮೊಳೆ. (ಕ್ರಿ.) ಕುಡಿಯಿಡು ; ಚಿಗುರು ; ಅಂಕುರಿಸು ; ಬೆಳೆಯಲಾರಂಭಿಸು.

Búrgess ಬರ್ಜೆಸ್ (ನಾ.) ನಗರ ನಿವಾಸಿ ; ಪಟ್ಟಣಿಗ ; ಪೌರ. (ಚರಿತ್ರೆ) ಪೌರಸಂಸ್ಥೆಯುಳ್ಳ ನಗರದ ಅಥವಾ ವಿಶ್ವವಿದ್ಯಾನಿಲಯದ ಪರವಾಗಿ ಬಂದ ಪಾರ್ಲಿಮೆಂಟಿನ ಸದಸ್ಯ.

Búrgh ಬರ, ಬರೊ, ಬರ್ಗ (ನಾ.) ಪಟ್ಟಣದ ಹಕ್ಕುಬಾಧ್ಯತೆಗಳ ಸನ್ನದುಪಡೆದ ಸ್ಕಾಟ್ಲೆಂಡಿನ ಪಟ್ಟಣ (= Borough)

Búrgher ಬರ್ಗರ್ (ನಾ.) (ಪ್ರಾಚೀ. ಪ್ರ.) ಪಟ್ಟಣಿಗ.

Búrglar ಬರ್ಗ್ಲರ್ (ನಾ.) ಕಳ್ಳತನ ಮಾಡುವುದಕ್ಕಾಗಿ ರಾತ್ರಿ ಕನ್ನ ಹಾಕಿ ಮನೆನುಗ್ಗುವವನು ; ಇರುಳುಗಳ್ಳ ; ಕನ್ನಗಳ್ಳ. **Búrglary** (ನಾ.) ; **Burglárious** ಬರ್ಗ್ಲೇರಿಯಸ್ (ಗು.) ಕನ್ನಗಳ್ಳತನದ ; ಕನ್ನಗಳ್ಳನಂಥ. **Búrgle** (ಕ್ರಿ.) ಕನ್ನಗಳ್ಳತನ ಮಾಡು ; ಕನ್ನ ಹಾಕು.

Búrgomaster ಬರ್ಗೊಮಾಸ್ಟರ್ (ನಾ.) (ಡಚ್ ಅಥವಾ ಫ್ಲೆಮಿಷ್ ಪಟ್ಟಣದ) ಪೌರಾಧ್ಯಕ್ಷ.

Búrgonet ಬರ್ಗೊನೆಟ್ (ನಾ.) (ಚರಿತ್ರೆ) ಉಕ್ಕಿನ ಟೋಪಿ ; ಒಂದು ತೆರದ ಸೀಸಕ.

Búrgundy ಬರ್ಗಂಡಿ (ನಾ.) ಬರ್ಗಂಡಿ ಪ್ರಾಂತದ (ಸಾ., ಕೆಂಪು ಬಣ್ಣದ) ದ್ರಾಕ್ಷಾ ಮದ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Búrial. **Bury** ನೋಡಿ.

Búrin ಬ್ಯೂರಿನ್ (ನಾ.) ತಾಮ್ರದಮೇಲೆ ಕೊರೆಯುವುದಕ್ಕೆ ಉಪಯೋಗಿಸುವ ಆಯುಧ. ತಾಮ್ರರೇಖಕ ; ಕೆತ್ತುಮೊಳೆ ; ಕೊರೆಯುಳಿ. **Búrinist** (ನಾ.)

Burke ಬರ್ಕ್ (ಕ್ರಿ. ಸಕ.) (ಪ್ರಕಟನೆ, ವಿಚಾರಣೆ — ಇವನ್ನು) ತಪ್ಪಿಸಿಕೊ, ಅಡಗಿಸು. (ಗಾಳಿಸಮಾಚಾರವನ್ನು, ವದಂತಿಯನ್ನು) ತಲೆಯೆತ್ತದಂತೆ ಮಾಡು, ಅಡಗಿಸಿಬಿಡು. (ಪುಸ್ತಕವನ್ನು) ಹೊರಬೀಳದಂತೆ ಅಡಗಿಸು. (Burke ಎಂಬ ಕೊಲೆಗಡಿಕನ ಹೆಸರಿನಿಂದ)

Burl ಬರ್ಲ್ (ನಾ., ಕ್ರಿ. ಸಕ.) (ಉಣ್ಣೆಯಲ್ಲಿ ಅಥವಾ ಬಟ್ಟೆಯಲ್ಲಿ) ಗಂಟು. (ಕ್ರಿ.) ಈ ಗಂಟುಗಳನ್ನು ಬಿಡಿಸು.

Búrlap ಬರ್ಲ್ಯಾಪ್ (ನಾ.) ಚೀಲಗಳನ್ನು ಮಾಡುವ ಗೋಣಿಪಟ್ಟೆ.

Burlésque ಬರ್ಲೆಸ್ಕ್ (ಗು., ನಾ., ಕ್ರಿ. ಸಕ.) (ಹಾಸ್ಯಕ್ಕೆ ಗುರಿಮಾಡುವುದಕ್ಕಾಗಲಿ, ನಕಲಿಗಾಗಲಿ) ಅನುಕರಿಸುವ ; — ಅನುಕರಿಸು. ಪರಿಹಾಸ ; ವಿಡಂಬನ ; ವಿಕಟಾನುಕರಣ ; ಅಣಕ ; ಪ್ರಹಸನ ; ನಕಲಿ. ವಿಕಟ ಕವಿತೆ (ಮು., ನಾಟಕ, ಸಾಹಿತ್ಯ, ಗ್ರಂಥಗಳ ಅಣಕಕ್ಕಾಗಿ)

Búrlington House ಬರ್ಲಿಂಗ್‌ಟನ್ ಹೌಸ್ (ನಾ.) ಲಂಡನ್ನಿನಲ್ಲಿ ಬ್ರಿಟಿಷ್ ಸಾಹಿತ್ಯ, ವಿಜ್ಞಾನ — ಇವುಗಳ ಸಂಬಂಧವಾದ ಪ್ರಧಾನ ಪರಿಷತ್ತುಗಳ ಮುಖ್ಯ ನೆಲೆಯಾದ ಕಟ್ಟಡ.

Búrly ಬರ್ಲಿ (ಗು.) ಗಟ್ಟಿಮುಟ್ಟಾದ ; ದೃಢ ಕಾಯನಾದ ; ಸ್ಥೂಲ ದೇಹವುಳ್ಳ ; ತೊಣೆಯನಾದ ; ದಾಂಡಿಗನಾದ. **Búrliness** (ನಾ.)

Burmése ಬರ್ಮೀಸ್ (ಗು., ನಾ.) ಬರ್ಮಾದೇಶದ(ವನು) ; ಬರ್ಮಾ ಭಾಷೆ. **Búrman** ಬರ್ಮನ್ (ಗು., ನಾ.) ಬರ್ಮಾದೇಶದ(ವನು)

Burn[1] ಬರ್ನ್ (ನಾ.) (ಕಾವ್ಯ) ಸಣ್ಣ ಹೊಳೆ ; ತೊರೆ ; ಹಳ್ಳ.

Burn[2] ಬರ್ನ್ (ಕ್ರಿ. ; ಭೂತ., ಭೂ. ಕೃ. Burnt or Burned) ಸುಡು ; ಸುಟ್ಟುಹಾಕು ; ಸುಟ್ಟುಹೋಗು ; ದಹಿಸು ; ತಪಿಸು ; ಉರಿ ; ಉರಿಸು ; ಜ್ವಲಿಸು ; ಬೆಳಗು ; ಬೆಳಗಿಸು. ತಳ ಹೊತ್ತು ; ತಳ ಹೊತ್ತಿಸು ; ಸೀದುಹೋಗು ; ಸೀಯಿಸು ; ಬರೆಹಾಕು ; ಚುಟಿಕೆಹಾಕು. (ರೂಪ.) ಕೆರಳು ; ಕೆರಳಿಸು ; ರೇಗು ; ರೇಗಿಸು ; ತವಕಪಡು ; ತವಕಿಸು. B. away, out, up ಸುಟ್ಟುಹಾಕಿಬಿಡು ; ಸುಟ್ಟುಹೋಗು. B. in, into ಎಂದಿಗೂ ಮರೆಯದಂತೆ ನಾಟು. (ದ್ರಾವಕ, ಮೊ.) ತಿಂದುಹಾಕು, ಕೊರೆ. B. candle at both ends ದುಂದು ವ್ಯಯ ಮಾಡು. B. daylight ಹಗಲನಲ್ಲಿ ಪಂಜು ಉರಿಸು ; ವೃಥಾ ಹೊತ್ತು ಕಳೆ. B. one's boats ಹಿಮ್ಮೆಟ್ಟಲು ಸ್ವಲ್ಪವೂ ಅವಕಾಶವಿಲ್ಲದಂತೆ ಮಾಡಿಕೊ. B. one's fingers ಕೈಸುಟ್ಟುಕೊ ; ದುಡುಕಿ ಮಾಡಿದ ಕೆಲಸಕ್ಕೆ ಕಷ್ಟ ಅಥವಾ ನಷ್ಟ ಅನುಭವಿಸು. B. metals together ಲೋಹವಸ್ತುಗಳ ಏಣುಗಳನ್ನು ಕರಗಿಸಿ ಒಟ್ಟುಗೂಡಿಸು, ಬೆಸೆ. B. the midnight oil ಸರಿಹೊತ್ತಿನಲ್ಲಿ ಕೆಲಸಮಾಡು ; ನಿದ್ದೆಕಟ್ಟಿ ಕೆಲಸಮಾಡು. Ears b. ತನ್ನ ವಿಷಯವಾಗಿ ಇತರರು ಮಾತನಾಡಿಕೊಳ್ಳುತ್ತಿರುವುದರ ಸೂಚನೆ. Money burns hole in one's pocket ಜೇಬಿನಲ್ಲಿಯ ಹಣ ವೆಚ್ಚವಾಗುವ ವರೆಗೂ ಮನಸ್ಸು ನಿಲ್ಲುವುದಿಲ್ಲ. Burning-glass ಮೇಲೆ ಬಿದ್ದ ಸೂರ್ಯಕಿರಣಗಳನ್ನು ಬಗ್ಗಿಸಿ ಒಂದೇ ಕೇಂದ್ರದಲ್ಲಿ ಸೇರುವಂತೆ ಮಾಡಿ ಅಲ್ಲಿಟ್ಟ ಪದಾರ್ಥವನ್ನು ಸುಡುವ ಹೊರಉಬ್ಬಿನ ಲೆನ್ಸು, ಅಥವಾ ಅಂಥ ಕಿರಣಗಳನ್ನು ಪ್ರತಿಫಲಿಸಿ ಒಂದೇ ಕೇಂದ್ರದಲ್ಲಿ ಸೇರುವಂತೆ ಮಾಡಿ ಅಲ್ಲಿಟ್ಟ ಪದಾರ್ಥವನ್ನು ಸುಡುವ ಒಳಉಬ್ಬಿನ ಕನ್ನಡಿ (ಹಳ್ಳಗನ್ನಡಿ) : ಸುಡುಗಾಜು. Burnt offering ಹೋಮ ; ಹೋಮ ದ್ರವ್ಯ ; ಹವಿಸ್ಸು. **Búrner** (ನಾ.) (ಕ್ರಿಯಾರ್ಥಗಳಲ್ಲಿ). (ಸಮಾಸ ಪದಗಳಲ್ಲಿ : Brick-b. ಇಟ್ಟಿಗೆ ಸುಡುವವನು). ಸೀಮೆಯೆಣ್ಣೆಯ ಅಥವಾ ಉರಿಯುವ ಅನಿಲದ ದೀವಿಗೆಯಲ್ಲಿ ದೀಪಜ್ವಾಲೆಗೆ ಆಕಾರ ಕೊಡುವ ಭಾಗ : ಜ್ವಾಲಕ. **Búrning** (ಗು.) (ಕ್ರಿಯಾರ್ಥಗಳಲ್ಲಿ). B. disgrace ತೀಕ್ಷ್ಣವಾದ ಅಪಮಾನ. B. question ಉಗ್ರವಾಗಿ ಚರ್ಚೆ ನಡೆಯುತ್ತಿರುವ ವಿಷಯ. B. scent (ಬೇಟೆಯಲ್ಲಿ) ಕಟು ವಾಸನೆ.

Burn (ನಾ.) ಸುಡುತ ; ಉರಿತ ; ಸುಟ್ಟ ಗಾಯ ; ಬರೆ.

Búrnish ಬರ್ನಿಷ್ (ಕ್ರಿ.) ಉಜ್ಜಿ ಮೆರುಗುಕೊಡು ; ಒಪ್ಪವಿಡು ; ಹೊಳಪುಕೊಡು ; ಬೆಳಗಿಸು ; ಬೆಳಗು ; ಮಿರುಗು ; ಹೊಳೆ ; ಮೆರುಗು ಪಡೆ. (ರೂಪ. ಸಹ). **Búrnisher** (ನಾ.)

Burr ಬರ್ (ನಾ., ಕ್ರಿ.) ಚಂದ್ರನ ಅಥವಾ ನಕ್ಷತ್ರದ ಸುತ್ತಲೂ ಕಾಣುವ ಅಸ್ಪಷ್ಟ ಕಾಂತಿಮಂಡಲ. (ಕತ್ತರಿಸಿದ ಅಥವಾ ಕಂಡಿಕೊರೆದ ಲೋಹ, ಕಾಗದ, ರಟ್ಟು — ಇವುಗಳಲ್ಲುಂಟಾಗುವ) ತರಕಲು ಏಣು. ಬೀಸುವ ಕಲ್ಲಿಗಾಗಿ ಉಪಯೋಗಿಸುವ ಗಟ್ಟಿ ಕಲ್ಲು, ಕುರಂಗದ ಕಲ್ಲು ; ಮಸೆಗಲ್ಲು ; ಸಾಣೆಯ ಕಲ್ಲು. ಸುಣ್ಣಕಲ್ಲು ಜಾತಿಗಳು. ಇಂಗ್ಲೆಂಡಿನ 'ನಾರ್ದಂಬರ್‌ಲೆಂಡ್' ಪ್ರಾಂತದಲ್ಲಿ ರೇಫವನ್ನು ಒತ್ತಿ ಉಚ್ಚರಿಸುವ ರೀತಿ (ಬರ್ರ್) ; ಈ ರೀತಿಯಾದ ರೇಫೋಚ್ಚಾರಣೆ. (Bur ಪದದ ಅರ್ಥಗಳು ಸಹ). (ಕ್ರಿ.) ರೇಫವನ್ನು ಒತ್ತಿ ಉಚ್ಚರಿಸು ; ಅಸ್ಪಷ್ಟವಾಗಿ ಮಾತನಾಡು.

Búrrow ಬರೋ (ನಾ., ಕ್ರಿ.) (ನರಿ, ಮೊಲ, ಮೊ. ವು ತಮ್ಮ ವಾಸಕ್ಕಾಗಿ ನೆಲದಲ್ಲಿ ತೋಡಿದ) ಬಿಲ. (ಕ್ರಿ.) ಬಿಲ ತೋಡು ; ಬಿಲದಲ್ಲಿ ವಾಸವಾಗಿರು ; ತೋಡಿಕೊಂಡು ಹೋಗು ; ಕೊರೆದು ದಾರಿಮಾಡು. ಅವಿತುಕೊ ; ಹುದುಗಿಕೊ ; ಕಣ್ಮರೆಯಾಗು. (ರೂಪ.) ಗುಟ್ಟನ್ನು, ರಹಸ್ಯವನ್ನು ಕಂಡುಹಿಡಿಯಲು ಯತ್ನಿಸು. **Búrrower** (ನಾ.)

Búrsar ಬರ್ಸರ್ (ನಾ.) (ಮು., ಪ್ರೌಢ ವಿದ್ಯಾಶಾಲೆಯ) ಕೋಶಾಧ್ಯಕ್ಷ, ಭಂಡಾರಿ ; ಖಜಾಂಚಿ. (ಸ್ಕಾಚ್ ವಿಶ್ವವಿದ್ಯಾನಿಲಯಗಳಲ್ಲಿ, ಪಾಠಶಾಲೆಗಳಲ್ಲಿ) ವೇತನ ಪಡೆಯುವ ವಿದ್ಯಾರ್ಥಿ. **Búrsary** (ನಾ.) (ವಿದ್ಯಾಶಾಲೆ, ಮೊ. ಗಳ) ಖಜಾನೆ, ಭಂಡಾರ, ಧನಾಗಾರ, ಕೋಶಾಧ್ಯಕ್ಷನ ಕೋಣೆ. ವಿದ್ಯಾರ್ಥಿವೇತನ. **Bursárial** ಬರ್ಸೇರಿಯಲ್ (ಗು.)

Burst ಬರ್ಸ್ಟ್ (ಕ್ರಿ. ; ಭೂತ., ಭೂ. ಕೃ. Burst) ಸಿಡಿ ; ಸಿಡಿಸು ; ಒಡೆ ; ಒಡೆದುಹಾಕು ; ಬಿರಿ ; ಬಿರಿಸು ; ಭೇದಿಸು ; ಭೇದಿಸಿಕೊಂಡು ಹೋಗು ; ರಭಸದಿಂದ ನುಗ್ಗು, ತಳ್ಳು. B. in ರಭಸದಿಂದ ಒಳನುಗ್ಗು. ಮಧ್ಯೆ ಬಾಯಿಹಾಕು. B. into flame ಧಗ್ಗನೆ ಹೊತ್ತಿಕೊ. B. into tears ತಟತಟನೆ ಕಣ್ಣೀರು ಸುರಿಸು. B. open the door ಒದ್ದು ಬಾಗಿಲು ತೆರೆ. B. out ಕೂಗಿಹೇಳು ; ಅರಚಿಕೊ ; ಬೊಬ್ಬೆಯಿಡು. B. out laughing ಫಕ್ಕನೆ ನಗು. B. up ಸಿಡಿದುಹೋಗು ; ನಿರ್ಮೂಲವಾಗು ; ಧ್ವಂಸಮಾಡು. B. with food, emotion ಹೊಟ್ಟೆಬಿರಿ ; ಎದೆಯೊಡೆ ; ಎದೆಬಿರಿ. B. with joy ಸಂತೋಷದಿಂದ ಹಿಗ್ಗು. B. (one's sides) with laughing ನಕ್ಕು ನಕ್ಕು ಅಳ್ಳೆ ಬಿರಿ ; — ಹೊಟ್ಟೆ ಹುಣ್ಣಾಗು. Clouds b. ಮಳೆ ಸುರಿಯುತ್ತದೆ. Disease bursts out ವ್ಯಾಧಿ ಥಟ್ಟನೆ ತಲೆದೋರುತ್ತದೆ. Granary bursts ಕಣಜ ತುಂಬಿ ಬಿರಿಯುತ್ತದೆ. River bursts its banks ನದಿ ದಡ ಒಡೆದುಕೊಂಡು ನುಗ್ಗುತ್ತದೆ.

Burst (ನಾ.) ಸಿಡಿತ ; ಒಡೆತ ; ಬಿರಿತ. ಒಡಕು ; ಬಿರುಕು (B.-up ಧ್ವಂಸ). ಥಟ್ಟನೆ ಹೊರಹೊಮ್ಮುವುದು (B. of flame ಜ್ವಾಲೆ ಥಟ್ಟನೆ ಏಳುವುದು ; ಥಟ್ಟನೆ ಎದ್ದ ಜ್ವಾಲೆ). (ರೂಪ. ಸಹ). ದೌಡಾದೌಡಿಯ ನಾಗಾಲೋಟ ; ದೌಡು. (ಅಮಲು, ಮೊ. ಗಳ) ಆವೇಶ.

Búrthen. **Burden** ನೋಡಿ.

Búry ಬೆರಿ (ಕ್ರಿ. ಸಕ.) ಹೂಳು ; ಹುಗಿ ; (ಹಣ, ಮೊ. ನ್ನು) ಹೂತಿಡು ; ಹೆಣಹೂಳು ; ಮಣ್ಣುಮಾಡು ; ಗೋರಿಮಾಡು ; ಸಮಾಧಿಮಾಡು ; ಶವಸಂಸ್ಕಾರ ಮಾಡು. ಬಯ್ತಿಡು ; ಬಚ್ಚಿಡು ; ಮರೆತುಬಿಡು ; ಮರಸು. B. the hatchet ದ್ವೇಷವನ್ನು ಮರೆತುಬಿಡು. **Búried** (ಭೂ. ಕೃ.) ಮಗ್ನ. **Búrying-ground, -place** ಶ್ಮಶಾನ ; ಮಸಣ ; ಸುಡುಗಾಡು ; ಪ್ರೇತಭೂಮಿ. **Búrial** ಬೆರಿಯಲ್ (ನಾ.) ನೆಲದಲ್ಲಿ ಹೂಳುವುದು ; ಹುಗಿತ ; ಹೆಣಹೂಳುವುದು ; (ಹೆಣವನ್ನು) ಮಣ್ಣುಮಾಡುವುದು ; ಶವಸಂಸ್ಕಾರ. **B.-ground** = Burying-ground. **B.-service** ಅಪರ ಕರ್ಮ ; ಉತ್ತರಕ್ರಿಯೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bus, 'bus ಬಸ್ (ನಾ. ; ಬ. ವ. -es ; ಕ್ರಿ. ಅಕ. Omnibus ಪದದ ಸಂಕ್ಷಿಪ್ತ ರೂಪ). (ಅನೇಕ ಮಂದಿ ಕುಳಿತುಕೊಳ್ಳುವಂತೆ ಅಳವಡಿಸಿರುವ) ಬಾಡಿಗೆಯ ಸವಾರಿಬಂಡಿ : 'ಬಸ್'. (ಕ್ರಿ.) ಬಸ್ಸಿನಲ್ಲಿ ಹೋಗು. (ಅಸಂ.) ಮೋಟಾರುಬಂಡಿ ; ಮೋಟಾರು ಕಾಲ್ಬಂಡಿ ; ವಾಯು ಫಲಕ ಯಾನ. To miss the bus (ಅಸಂ.) ತಕ್ಕ ಸಮಯವನ್ನು ಕಳೆದುಕೊ ; ಹಿಡಿದ ಕೆಲಸ ಕೈಗೂಡದಿರು. **Búsman** ಬಸ್ಸನ್ನು ನಡಸು ವವನು. Busman's holiday ಪ್ರಯಾಣದಲ್ಲ ಕಳೆದ ರಜ.

Bush[1] ಬುಷ್ (ನಾ.) ಪೊದೆ ; ಹೊದರು ; ಮೆಳೆ ; ಹಿಂಡಿಲು ; ಗುಲ್ಮ. (ಪೂರ್ವಕಾಲದಲ್ಲ ಮದ್ಯದಂಗಡಿಗೆ ಗುರುತಾದ) 'ಐವಿ' ಎಂಬ ಬಳ್ಳಿಯ ಗೊಂಚಲು (Good wine needs no b. ಪ್ರಶಸ್ತ ಪದಾರ್ಥಕ್ಕೆ ಪ್ರಕಟನೆಯೇ ಬೇಡ). ಪೊದೆಗೂದಲು (ಮೀಸ, ಮೊ.). ಮರಗಾಡು ; ಕಾಡುಭೂಮಿ ; ಪಾಳುಭೂಮಿ. Take to the b. ಪೊದೆಗಾಡಿನ ದರೋಡೆಕೋರನಾಗು. Beat about the b. (Beat ನೋಡಿ). **B.-fighter, B.-fighting** ಪೊದೆಯಲ್ಲಿ ಅವಿತುಕೊಂಡು ಕಾದಾಡು ವವನು, — ವುದು. **Búshman**— ಮನ್ (ನಾ.) ದ. ಆಫ್ರಿಕದಲ್ಲಿಯ ಒಂದು ಬುಡಕಟ್ಟಿನ ಕಾಡುಮನುಷ್ಯ ; ಆಸ್ಟ್ರೇಲಿಯದ ಪೊದೆಗಾಡಿ ನಲ್ಲಿಯ ನಿವಾಸಿ, ರೈತ, ಪ್ರಯಾಣಿಕ. **Búshmanship** (ನಾ.); **B.-ranger** (ನಾ., ಸೆರೆಯಿಂದ ತಪ್ಪಿಸಿಕೊಂಡುಬಂದು) ಆಸ್ಟ್ರೇಲಿಯದ ಪೊದೆಗಾಡಿನಲ್ಲಿ ವಾಸಿಸುವ ದರೋಡೆಕೋರ. **Búshy** (ಗು.) ಪೊದೆ ತುಂಬಿರುವ ; ಪೊದೆಯಾಗಿ ಬೆಳೆದ. **Búshiness** (ನಾ.)

Bush (ಕ್ರಿ. ಸಕ.) ಪೊದರು, ಮೆಳೆ, ಮೊ. ನ್ನು ಬೆಳಸು.

Bush[2] ಬುಷ್ (ನಾ., ಕ್ರಿ. ಸಕ.) ಅಚ್ಚುಗಂಡಿಯ ಬಳೆ ; ಉಳಿಬಳೆ (ತೊಡಿಸು) ; ತೂತುಕೊರೆದ ಬೆಣೆ(ಹಾಕು)

Búshel ಬುಷೆಲ್ (ನಾ.) ಧಾನ್ಯ, ಮೊ. ಗಳ ಅಳತೆಯ ಮಾನ (೮ ಗ್ಯಾಲನ್ನುಗಳು) : ಬುಷೆಲ್. Not hide light under a b. ಪ್ರಸಿದ್ಧಿಗೆ ಬಾರದಂತೆ ಮರೆಯಲ್ಲಿರಬೇಡ ; ಗುಣಗಳನ್ನು ಮುಚ್ಚಿಟ್ಟುಕೊಳ್ಳ ಬೇಡ ; ಆದರ್ಶನಾಗು. Measure others' corn by one's own b. ತನ್ನ ಅಳತೆಯಿಂದ ಇತರರನ್ನು ಅಳತೆಮಾಡು. **Búshelful** (ನಾ.)

Bushído ಬೂಷೀಡೋ (ನಾ.) ಜಪಾನಿನ ಸಾಮುರೈ ಎಂಬ ಯೋಧ ಕುಲದವರ ಸತ್ಸಂಪ್ರದಾಯ.

Búsiness ಬಿಸ್‌ನೆಸ್ (ನಾ.) ಕೆಲಸ ; ಕಾರ್ಯ ; ವ್ಯಾಪಾರ ; ಉದ್ಯೋಗ ; ವ್ಯವಹಾರ ; ಕಸಬು ; ಆಡಳಿತ ; ಕರ್ತವ್ಯ (Make it one's b. to ಕರ್ತವ್ಯವೆಂದೆಣಿಸು ; ಕೈಕೊಳ್ಳು). ವಿಚಾರ ; ವಿಷಯ ; ಪ್ರಮೇಯ ; ಸಂಗತಿ. (ನಾಟಕ) (ಮಾತಿಲ್ಲದ) ನಟನೆ, ಅಭಿನಯ. B. as usual (ಅಡಚಣೆಗಳು ಬಂದರೂ) ಕೆಲಸಕಾರ್ಯಗಳು ಎಂದಿ ನಂತೆಯೇ. B. end ಆಯುಧದ ಮೊನೆ, ಬಾಯಿ, ಮೊ. B. man ಕೆಲಸಕಾರ್ಯಗಳನ್ನರಿತು ಜನರಲ್ಲ ಓಡಾಡುವವನು ; ವ್ಯವಹಾರಗಾರ ; ವ್ಯಾಪಾರಿ. Do one's b. for one ಕೆಲಸ ಮುಗಿಸಿಬಿಡು ; ತೀರಿಸಿ ಬಿಡು ; ಕೊಂದುಬಿಡು. Go about your b., Mind your own b. ನಿನ್ನ ಕೆಲಸ ನೀನು ನೋಡಿಕೊ ; ನಿನ್ನಷ್ಟಕ್ಕೆ ನೀನಿರು. Good b.! ಭಲಾ ! ಶಹಬಾಸ್ ! Man of b. ಕಾರ್ಯಭಾರಿ ; ಪ್ರತಿಹಸ್ತ. On b. ಕಾರ್ಯಾರ್ಥವಾಗಿ ; ಕೆಲಸದ ಮೇಲೆ. Send him about his b. ಆಚೆಗೆ ಕಳುಹಿಸು. To mean b. ಕಾರ್ಯದ ಉದ್ದೇಶವುಳ್ಳವ ನಾಗು ; ಶ್ರದ್ಧೆಯುಳ್ಳವನಾಗು. What a b. it is! ಎಷ್ಟು ಕಷ್ಟದ ಕೆಲಸ ! What is your b.? ನೀನು ಬಂದ ಕೆಲಸವೇನು ? You had no b. to do it ನೀನು ಅದನ್ನು ಮಾಡಿದ್ದು ತಪ್ಪು. **Búsiness-like** (ಗು.) ಅಣಿಕಟ್ಟಾದ ; ಸುವ್ಯವಸ್ಥಿತ ; ಕಾರ್ಯಸಾಧಕ ; ನಡೆಯಿಸ ಬಹುದಾದ ; ಕ್ಷಿಪ್ರ.

Búsy (ಗು.) ಕೆಲಸಮಾಡುತ್ತಿರುವ ; ಕಾರ್ಯಮಗ್ನ ; ಉದ್ಯೋಗ ನಿರತ ; ಕಾರ್ಯೋದ್ಯುಕ್ತ (*in, with, at* ಉಪ. ಜೊಡನೆ ಸಹ) ; ಅವಿಶ್ರಾಂತ ; ಚಟುವಟಿಕೆಯುಳ್ಳ (B. as a bee). ಇತರರ ಕೆಲಸ ದಲ್ಲಿ ಕೈಯಿಡುವ, ಪ್ರವರ್ತಿಸುವ ; ಚೇಷ್ಟೆಯ ; ಅಧಿಕಪ್ರಸಂಗಿ ತನದ. B. idleness ಬರಿಯ ಓಡಾಟ. **Búsybody** ಗಲಾಟೆಯ ಮನುಷ್ಯ ; ಅಧಿಕಪ್ರಸಂಗಿ. **Búsily** (ಕ್ರಿ. ವಿ.)

Búsy (ಕ್ರಿ. ಸಕ.) ಕಾರ್ಯದಲ್ಲಿ ತೊಡಗಿರು ; (ಕೈ, ಕಣ್ಣು, ಮೊ. ಕ್ಕೆ) ಕೆಲಸ ಕೊಡು (*with, in, at, about* ಉಪ. ಜೊಡನೆ ಸಹ). **Búsyness** (ಆಧುನಿಕ ರೂಪ) ಬಿಸಿನೆಸ್ (ನಾ.) ಕಾರ್ಯದಲ್ಲಿ ತೊಡ ಗಿರುವ ಸ್ಥಿತಿ, ರೀತಿ.

Búskin ಬಸ್ಕಿನ್ (ನಾ.) ಕಣಕಾಲಿನ ಮೇಲೆ ಅಥವಾ ಮೊಣಕಾಲಿನ ವರೆಗೂ ಬರುವ ಮೋಜ. ಆಥೆನ್ಸಿನ ರುದ್ರನಾಟಕದ (ದುರಂತ ನಾಟಕದ) ನಟರು ತೊಡುತ್ತಿದ್ದ ದಪ್ಪ ಅಟ್ಟೆಯ ಮೋಜ. ರುದ್ರನಾಟ ಕದ ಧಾಟಿ ; ರುದ್ರನಾಟಕ (Put on the b. ರುದ್ರನಾಟಕ ಬರೆ ಅಥವಾ ಆಡು). **Búskined** (ಗು.)

Buss ಬಸ್ (ನಾ., ಕ್ರಿ. ಸಕ. ; ಪ್ರಾಚೀ. ಪ್ರ.) ಮುತ್ತು (ಕೊಡು) ; ಮುತ್ತಿಡು ; ಚುಂಬನ ; ಚುಂಬಿಸು.

Bust[1] ಬಸ್ಟ್ (ನಾ.) ಮನುಷ್ಯನ ತಲೆ ಮತ್ತು ಎದೆಯ ಭಾಗದ ಪ್ರತಿಮೆ ; ಎದೆ ವಿಗ್ರಹ. ನಡುವಿನ ಮೇಲ್ಭಾಗ ; ಎದೆ (ಮು., ಹೆಂಗ ಸಿನದು)

Bust[2] ಬಸ್ಟ್ (ನಾ.) Burst ಪದದ ಗ್ರಾಮ್ಯೋಚ್ಚಾರಣೆ.

Bústle ಬಸ್ಲ್ (ನಾ., ಕ್ರಿ.) ಗಲಭೆ ; ಗದ್ದಲ ; ಗಲಿಬಿಲಿ ; ಗಡಿಬಿಡಿ ; ಗೊಂದಲ ; ಗಲಾಟೆ ; ಹುಯಿಲು ; ಸಂಭ್ರಮ ; ಕೋಲಾಹಲ. (ಕ್ರಿ.) (ಸಂಭ್ರಮದಿಂದ) ಓಡಾಡು ; ಗಡಿಬಿಡಿ ಮಾಡು ; ಚಟುವಟಿಕೆ ತೋರು ; (ಇತರರನ್ನು) ಜಾಗ್ರತೆಮಾಡುವಂತೆ ಅಥವಾ ಕಷ್ಟಪಟ್ಟು ಕೆಲಸ ಮಾಡುವಂತೆ ಮಾಡು.

Búsy. Business ನೋಡಿ.

But ಬಟ್ (ಸಂ. ಅವ್ಯ., ಉಪ., ಕ್ರಿ. ವಿ.) ಆದರೆ ; ಆದರೂ ; ಪರಂತು ; ಬಿಟ್ಟು ; ಹೊರತು ; ವಿನಾ ; ಅಲ್ಲದೆ. B. for this ಇದಕ್ಕಲ್ಲದಿದ್ದರೆ. B. now ಈಗತಾನೆ. B. then ಹಾಗಾದರೆ ; ಹಾಗಿರುವುದಾದರೆ. He all b. did it ಅವನು ಇನ್ನೇನು ಮಾಡಿಬಿಟ್ಟಿದ್ದ ! I cannot b. do it ಅದನ್ನು ನಾನು ಮಾಡದಿರಲಾರೆ. It never rains b. it pours ಮಳೆ ಬಂತು ಎಂದರೆ ಸುರಿಯೋದೆ ! Not b. that he believed it himself ಅದನ್ನು ಅವನೇ ನಂಬಲಿಲ್ಲವೆಂದಲ್ಲ. Nothing would content him b. I must come ನಾನು ಬಂದಹೊರತು ಅವನಿಗೆ ತೃಪ್ತಿಯಾಗದು. Not such a fool b. he can see that ಅವನು ಅದನ್ನರಿಯದಷ್ಟು ದಡ್ಡನಲ್ಲ. There is no one b. knows that ಅದನ್ನರಿಯದವನು ಯಾವನೂ ಇಲ್ಲ. They are all wrong b. him ಅವನು ಹೊರತು ಮಿಕ್ಕವರೆಲ್ಲರೂ ತಪ್ಪು.

But (ನಾ., ಕ್ರಿ. ಸಕ.) ಅಡ್ಡಿ ; ಪ್ರತಿಬಂಧಕ; ಆಕ್ಷೇಪಣೆ (B. me no buts ನಾನು ಹೇಳಿದ್ದಕ್ಕೆ ಅಡ್ಡಿ ಹೇಳಬೇಡ ; 'ಆದರೆ' ಎನ್ನಬೇಡ)

Bútcher ಬುಚರ್ (ನಾ.) ಆಹಾರಕ್ಕಾಗಿ ದನ, ಮೊ. ದ ಪ್ರಾಣಿಗಳನ್ನು ಕತ್ತರಿಸುವವನು : ಕಟುಕ ; ಕಸಾಯಿ ; ಮಾಂಸ ವ್ಯಾಪಾರಿ. ಒಂದು ಜಾತಿಯ ನೊಣ. B.'s bill ಯುದ್ಧದಲ್ಲ ಕೊಲೆಯಾದವರ ಪಟ್ಟಿ. B.-bird ಒಂದು ಪಕ್ಷಿಜಾತಿ. B.'s-broom ಒಂದು ಸಸ್ಯವಿಶೇಷ. B.'s meat ಕೋಳಿ, ಹಕ್ಕಿ, (ಉಪ್ಪುಹಾಕಿ ಹೊಗೆಯಾಡಿಸಿದ) ಹಂದಿಯ ಮಾಂಸ — ಇವು ಹೊರತು ಉಳಿದ ಆಹಾರಮಾಂಸ. **Bútcherly** (ಗು.) ಕಟುಕನಂಥ ; ಒರಟಾದ ; ಕೊಲೆಗಡಿಕತನದ. **Bútchery** (ನಾ.) ದನ, ಮೊ. ನ್ನು ಆಹಾರಕ್ಕಾಗಿ ಕತ್ತರಿಸುವ ಮನೆ ; ಕಸಾಯಿ ಖಾನೆ. ಕಸಾಯಿಯ ವ್ಯಾಪಾರ. (ಅನವಶ್ಯಕವಾಗಿ, ಕರುಣೆಯಿಲ್ಲದೆ, ಮಾಡುವ) ಜನರ ಕೊಲೆ.

Bútcher (ಕ್ರಿ. ಸಕ.) ನಿಷ್ಕಾರಣವಾಗಿ ಅಥವಾ ಕರುಣೆಯಿಲ್ಲದೆ (ಜನರನ್ನು) ಕಡಿ. ಗ್ರಂಥವನ್ನು ಅವಿವೇಕವಾಗಿ ಓದುವುದರಿಂದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥವಾ ಆಭಾಸವಾಗಿ ತಿದ್ದಿ ಮುದ್ರಿಸುವುದರಿಂದ, ಹಾಳುಮಾಡು. ಕಠಿನ ವಿಮರ್ಶೆಯಿಂದ ಖಂಡಿಸು.

Bútler ಬಟ್ಲರ್ (ನಾ.) ಮದ್ಯದ ಉಗ್ರಾಣ, ಭೋಜನ ಪಾತ್ರೆಗಳು, ಮೊ. ಗಳ ಪಾರುಪತ್ಯವುಳ್ಳ ಸೇವಕ; ಮುಖ್ಯ ಸೇವಕ.

Butt[1] ಬಟ್ (ನಾ.) (ಮದ್ಯದ) ಪೀಪಾಯಿ.

Butt[2] ಬಟ್ (ನಾ.) ಆಯುಧದ ದಪ್ಪ ತುದಿ (= B.-end). ಮರದ ಬುಡ; ಎಲೆಯ ತಾಳಿನ ಬುಡ. ಮೀನ ಜಾತಿವಿಶೇಷ. ಆಯವಾಗಿ ಕತ್ತರಿಸಿದ ದನದ ಒಡಲ ಚರ್ಮ; ಬಹಳ ದಪ್ಪ ತೊಗಲು. (ಹಲಗೆಸೇರುವೆಯಲ್ಲಿ) ಚದರವಾದ ಸೇರುವೆಯ ತುದಿ (= B.-end)

Butt[3] ಬಟ್ (ನಾ.) ಗುರಿಹಲಗೆಯ ಹಿಂದಿನ ಮಣ್ಣುದಿಬ್ಬ: ಗುರಿದಿಬ್ಬ. (ಬ. ವ. ದಲ್ಲಿ) ಗುಂಡುಹಾರಿಸುವ ದೂರಾವಧಿ. ಗುರಿಯಾದ ವ್ಯಕ್ತಿ; (ಬೈಗುಳಿಗೆ, ಹಾಸ್ಯಕ್ಕೆ, ಕುಚೋದ್ಯಕ್ಕೆ) ಪಾತ್ರ.

Butt[4] ಬಟ್ (ಕ್ರಿ., ನಾ.) ಹಾಯಿ; ಈಡಿರಿ (ಗ್ರಾಂ.); ಹಾಯುವುದು [Come full b. against ಒಡಬಂದು ಡಿಕ್ಕಿಹೊಡೆ. B. in (ರೂಪ.) ಅಡ್ಡಬರು; ತಲೆಹಾಕು]. ಕೊನೆ ಕೊನೆ ಸೇರು. (ತೊಲೆ, ಮೊ. ಗಳ ತುದಿ) ಗೋಡೆಗೆ ಒದ್ದುಕೊಂಡಿರು, — ವಂತೆ ಇಡು; ಅನು; ಆನಿಸು (B. against, upon)

Bútter ಬಟರ್ (ನಾ.) ಬೆಣ್ಣೆ; ಬೆಣ್ಣೆಯಂಥ ಪದಾರ್ಥ (B. of almonds ಬಾದಾಮಿಯ ಬೆಣ್ಣೆ). (ರೂಪ.) ಅತಿ ಹೊಗಳಿಕೆ; ಮುಖಸ್ತುತಿ. **B.-bean** ಒಂದು ಜಾತಿಯ ಚಪ್ಪರದವರೆಯ ಕಾಯಿ. **B.-boat** ತುಪ್ಪದ, ಚಟ್ನಿಯ, ಬಟ್ಟಲು. **Búttercup** ಹಳದಿಯ ಹೂವು ಬಿಡುವ ಒಂದು ಸಸ್ಯಜಾತಿ. **B.-and-eggs** ಹಳದಿಯ ಹೂವು ಬಿಡುವ ಒಂದು ಸಸ್ಯಜಾತಿ. **B.-factor** ಬೆಣ್ಣೆಯನ್ನು ಸಂಗ್ರಹಿಸಿ ಒಟ್ಟು ವ್ಯಾಪಾರ ಮಾಡುವವನು. **B.-fingered** ವಸ್ತುಗಳನ್ನು ಕೈಯಲ್ಲಿ ಹಿಡಿದುಕೊಳ್ಳಲು ಶಕ್ತಿಯಿಲ್ಲದ (ಮು., ಕ್ರಿಕೆಟ್ ಆಟದಲ್ಲಿ, ಹಾರಿ ಬರುವ ಚೆಂಡನ್ನು); ಬೆಣ್ಣೆಬೆರಳಿನ; ಜಾರುಕೈಯ. **B.-knife** ಬೆಣ್ಣೆ ಚೂರಿ. **Búttermilk** ಮಜ್ಜಿಗೆ. **B.-print** ಬೆಣ್ಣೆಯಮೇಲೆ ಒತ್ತುವುದಕ್ಕಾಗಿ ಉಪಯೋಗಿಸುವ ಮರದ ಮುದ್ರೆ: ಬೆಣ್ಣೆಮುದ್ರೆ. **Bútterwort** ಜವುಗುನೆಲದಲ್ಲಿ ಬೆಳೆಯುವ ಒಂದು ಸಸ್ಯಜಾತಿ. **Búttery** (ಗು., ನಾ.) ಬೆಣ್ಣೆಯಂಥ; ಬೆಣ್ಣೆ ಹಾಕಿರುವ, ಹಚ್ಚಿರುವ. (ರೂಪ.) ಅತಿಸ್ತುತಿ ಮಾಡುವ ಸ್ವಭಾವದ. (ನಾ.) ಪಾಶ್ಚಾತ್ಯ ಪ್ರೌಢ ವಿದ್ಯಾಶಾಲೆ, ಮೊ. ಗಳಲ್ಲಿ ರೊಟ್ಟಿ, ಬೆಣ್ಣೆ, ಮದ್ಯ, ಮೊ. ನ್ನು ಇಟ್ಟಿರುವ ಸ್ಥಳ; ಉಗ್ರಾಣ. **Bútteriness** (ನಾ.); **Bútterine** ಬಟರೀನ್ (ನಾ.) ಒಂದು ತೆರದ ಕೃತಕ ಬೆಣ್ಣೆ.

Bútter (ಕ್ರಿ. ಸಕ.) ಬೆಣ್ಣೆ ಹಚ್ಚು, ಹಾಕು, ಬೆರಸು (Fine words b. no parsnips ನಯವಾದ ಬರಿಯ ಮಾತುಗಳಿಂದ ಫಲವಿಲ್ಲ). ಮುಖಸ್ತುತಿ ಮಾಡು (= B. up)

Bútterfly ಬಟರ್‌ಫ್ಲೈ (ನಾ., ಗು.) ಪತಂಗದ ಹುಳು; ಬಣ್ಣದ ಚಿಟ್ಟೆ. (ರೂಪ.) ಸೊಗಸುಗಾರ; ಡಂಭಗಾರ. **B.-nut, -screw** (ಯಂತ್ರಶಾಸ್ತ್ರ) ಹೆಬ್ಬೆಟ್ಟಿನಿಂದಲೂ ತರ್ಜನಿಯಿಂದಲೂ ತಿರುಗಿಸಲಾಗುವ, ರೆಕ್ಕೆಯಂಥ ತಲೆಯುಳ್ಳ, ಮರಸುತ್ತು: ಚಿಟ್ಟೆ ಮರಸುತ್ತು.

Bútteris ಬಟೆರಿಸ್ (ನಾ.) ಗೊರಸಿನ ಮೇಲ್ಭಾಗವನ್ನು ಕೆರೆದುಹಾಕುವುದಕ್ಕೆ ಉಪಯೋಗಿಸುವ ಲಾಳಕಟ್ಟುವವನ ಆಯುಧ: ಗೊರಸುಗತ್ತಿ.

Búttock ಬಟಕ್ (ನಾ., ಕ್ರಿ. ಸಕ.) ಪಿರ್ರೆ; ಕುಂಡಿ; ಅಂಡು; ನಿತಂಬ (ಸಾ., ಬ. ವ. ದಲ್ಲಿ). ಕುಸ್ತಿಯಲ್ಲಿ ಒಂದು ಪಟ್ಟು, ವರಿಸೆ: ಪಿರ್ರೆ ವರಿಸೆ. (ಕ್ರಿ.) ಕುಸ್ತಿಯಲ್ಲಿ ಪಿರ್ರೆವರಿಸೆಯನ್ನುಪಯೋಗಿಸಿ ಕೆಡವಿಬಿಡು.

Bútton ಬಟನ್ (ನಾ.) (ಉಡುಪಿನ ಭಾಗಗಳನ್ನು ಸಿಕ್ಕಿಸುವುದಕ್ಕಾಗಿ ಉಪಯೋಗಿಸುವ) ಗುಂಡಿ (Boy in buttons ದೊಡ್ಡಮನುಷ್ಯರ ಚಾರ. Take by the b. ಹಿಡಿದು ನಿಲ್ಲಿಸು; ತಡೆ). ಮೊಗ್ಗು; ಅಣಬೆಯ ಮೊಗ್ಗು. (ಕೆಲವು ಸಸ್ಯಗಳ ಹೆಸರಿನಲ್ಲಿ: Bachelor's b., etc.). (ವಿದ್ಯುದ್‌ಘಂಟೆಯಲ್ಲಿರುವಂತೆ) ಗುಂಡಿ, ಗುಬುಟು, ಹಿಡಿ [Touch the b. (ವಿದ್ಯುದ್ಯಂತ್ರಗಳಲ್ಲಿ ಒಂದು ಗುಂಡಿಯನ್ನು ಅಮುಕುವುದರಿಂದ ವಿದ್ಯುತ್ಪ್ರವಾಹ ಹರಿದು ಅನೇಕ ಕಾರ್ಯಗಳನ್ನು ಮಾಡುವಂತೆ) ಒಂದು ಸಾಮಾನ್ಯ ಕ್ರಿಯೆಯಿಂದ ಘನವಾದ ಪರಿಣಾಮವನ್ನುಂಟುಮಾಡು]. ಅಗುಳಿ. ಗುಂಡನೆಯ ಸಣ್ಣ ವಸ್ತು. ಮೊಂಡುಕತ್ತಿಯ ಮೊನೆಯಲ್ಲಿಯ ಗುಂಡು; ಅಲಂಕಾರದ ಗುಂಡು, ಗುಬುಟು. **B.-boot** ಗುಂಡಿಹಾಕಿದ ಮೋಜ. **Búttonhole** (ನಾ., ಕ್ರಿ.) ಗುಂಡಿಮನೆ; ಕಾಜ. (ರೂಪ.) ಕಿರು ಬಾಯಿ. ಗುಂಡಿಮನೆಯ ಹೂವು. ಕಾಜಾ ಮಾಡು. ಅಂಗಿಯ ಗುಂಡಿ ಹಿಡಿದು ನಿಲ್ಲಿಸು. (ಕೇಳಲು ಮನಸ್ಸಿಲ್ಲದವನನ್ನು) ತಡೆದು ನಿಲ್ಲಿಸು (= Take by the button). **Búttonholer** (ನಾ.) ಕಾಜಾ ಮಾಡುವವನು; ಗುಂಡಿ ಹಿಡಿದು ನಿಲ್ಲಿಸುವವನು. **Búttonhook** ಗುಂಡಿಯೆಳೆಯುವ ಕೊಕ್ಕೆ. **B.-stick** ಸಿಪಾಯಿಯ ಗುಂಡಿಯನ್ನು ಮೆರುಗುಮಾಡುವುದಕ್ಕೆ ಉಪಯೋಗಿಸುವ ಸಲಕರಣೆ. **Búttoned** (ಗು.); **Búttonless** (ಗು.); **Búttons** (ನಾ.) ಪೋಷಾಕು ತೊಟ್ಟಿರುವ ಚಾರ. **Búttony** (ಗು) ಅನೇಕ ಗುಂಡಿಗಳುಳ್ಳ.

Bútton (ಕ್ರಿ.) ಗುಂಡಿ ಹಾಕು, ಹಾಕಿಕೊ (ಸಾ., *B. up*)

Búttress ಬಟ್ರೆಸ್ (ನಾ., ಕ್ರಿ. ಸಕ.) ಗೋಡೆ, ಮೊ. ಕ್ಕೆ ಆಸರೆಯಾಗಿ ಕಟ್ಟಿದ ಊರೆ, ಆನಿಕೆ; ಒತ್ತುಗೋಡೆ; ಮುಟ್ಟುಗೋಡೆ. ಆಧಾರ; ಆಶ್ರಯ; ಅವಲಂಬನ. (ರೂಪ. ಸಹ). ಗುಡ್ಡದ ಮುಂಚಾಚು. (ಕ್ರಿ.) ಊರೆ ಕೊಡು; ಆಧಾರ ಕೊಡು (ರೂಪ. ಸಹ; ಸಾ., *B. up*)

Butyr-, Butyro- (ಸಮಾಸ ಪದಗಳಲ್ಲಿ) ಬೆಣ್ಣೆಯ —; ನವನೀತ — ಉದಾ., **Butyráceous** ಬ್ಯೂಟಿರೇಷಸ್ (ಗು.) ಬೆಣ್ಣೆಯಂಥ; ಬೆಣ್ಣೆಯ ಗುಣವುಳ್ಳ; ಬೆಣ್ಣೆಯನ್ನು ಕೊಡುವ. **Butyrómeter** ಬ್ಯೂಟಿರಾಮಿಟರ್ (ನಾ.) ಹಾಲಿನಲ್ಲಿರುವ ಬೆಣ್ಣೆಯ ಪರಿಮಾಣವನ್ನು ಅಳೆಯುವ ಸಲಕರಣೆ: ನವನೀತ ಮಾಪಕ.

Búxom ಬಕ್ಸಮ್ (ಗು.) ತುಂಬು ಮೈಯುಳ್ಳ; ಸುರೂಪವುಳ್ಳ; ಅಂದವಾದ; ಗೆಲವಿನ; ಉಲ್ಲಾಸದ (ಮು., ಹೆಂಗಸರ ವಿಷಯದಲ್ಲಿ). **Búxomness** (ನಾ.)

Buy ಬೈ (ಕ್ರಿ. ಸಕ.; ಭೂತ., ಭೂ. ಕೃ. Bought ಬಾಟ್) ಕೊಂಡುಕೊ; ಕೊಳ್ಳು; ಕ್ರಯಕ್ಕೆ ಪಡೆ. (ಲಂಚ, ಮೊ. ನ್ನು ಕೊಟ್ಟು) ವಶಪಡಿಸಿಕೊ. B. in ಕೊಂಡುಕೊಂಡು ಕೂಡಹಾಕು. (ತನ್ನ ವಸ್ತುವಿಗೆ ಹರಾಜಿನಲ್ಲಿ ಯಾರೂ ಹೆಚ್ಚುಬೆಲೆ ಕೂಗದಿರುವಾಗ) ತಾನೇ ಹೆಚ್ಚು ಬೆಲೆ ಕೂಗಿ ಉಳಿಸಿಕೊ. B. in, into ಒಂದು ನಿಧಿಯ ಅಥವಾ ಕಂಪೆನಿಯ ಬಂಡವಾಳದ ಪತ್ರಗಳನ್ನು ಅಥವಾ ಪಾಲುಗಳನ್ನು ಕೊಂಡುಕೊ. B. off (ಹಕ್ಕಿಗೆ, ಹಕ್ಕುದಾರನಿಗೆ, ದರೋಡೆಕೋರನಿಗೆ) ಹಣಕೊಟ್ಟು ಕಾಟತಪ್ಪಿಸಿಕೊ. ಹಣಕೊಟ್ಟು (ಸಿಪಾಯಿಯನ್ನು ಸೈನ್ಯದಿಂದ) ಬಿಡಿಸು. B. out ಹಣಕೊಟ್ಟು ಒಬ್ಬನು ತನ್ನ ಅಧಿಕಾರ, ಹಕ್ಕು, ಮೊ. ನ್ನು ಬಿಟ್ಟುಕೊಡುವಂತೆ ಮಾಡಿ, ಕೊಂಡುಕೊ. B. over ಲಂಚಕೊಟ್ಟು ವಶಪಡಿಸಿಕೊ. B. up ಕೊಂಡುಕೊಂಡುಬಿಡು. B. pig in poke ವಿವೇಕವಿಲ್ಲದೆ, ಆಲೋಚನೆ ಮಾಡದೆ, ಸಿಕ್ಕಿಹಾಕಿಕೊ. **Buýable** (ಗು.); **Buýer** (ನಾ.) (ಕ್ರಿಯಾರ್ಥಗಳಲ್ಲಿ). ದೊಡ್ಡ ಅಂಗಡಿಯ ಪರವಾಗಿ ಸರಕನ್ನು ಹುಡುಕಿ ಕೊಂಡುಕೊಳ್ಳುವವನು.

Buy (ನಾ.) ಕೊಂಡುಕೊಳ್ಳುವುದು; ಕೊಂಡದ್ದು. A good b. ಒಳ್ಳೆಯ ವ್ಯಾಪಾರ.

Buzz[1] ಬಸ್ (ಕ್ರಿ., ನಾ.) ಝೇಂಕರಿಸು; ಜೀರುಂಡೆಯಂತೆ, ಬೇಸರ ಹುಟ್ಟಿಸುವ ಹಾಗೆ, ಮುತ್ತಿ ಸುತ್ತಾಡು. ಗಲಭೆ ಮಾಡು. (ಗಾಳಿಸುದ್ದಿ, ಮೊ.) ಹರಡು. (ಎಲ್ಲರೂ) ಒಟ್ಟಿಗೆ ಮಾತನಾಡು (B. applause). ಬಿರುಸಾಗಿ ಎಸೆ (B. stones). (ಅಸಂ.) ಥಟ್ಟೆಂದು ಹೊರಟುಹೋಗು. (ನಾ.) ತುಂಬಿ, ಮೊ. ಗಳ ಝೇಂಕಾರ; ಕಲಕಲ; ಗಲಭೆ; ಗಲಾಟೆ. ಒಂದು ಬಗೆಯ ಜೀರುಂಡೆ. ಮೀನುಹಿಡಿಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವುದಕ್ಕಾಗಿ ಉಪಯೋಗಿಸುವ ಒಂದು ಜಾತಿಯ ನೊಣ. **Búzzer** (ನಾ.) (ಕ್ರಿಯಾರ್ಥಗಳಲ್ಲಿ). (ನೀರಾವಿಯ ಬಲದಿಂದ ಕೂಗುವ) ಸಿಳ್ಳು. (ಸಂಕೇತಗಳನ್ನು ಕಳುಹಿಸುವುದಕ್ಕಾಗಿ ಉಪಯೋಗಿಸುವ) ಝೇಂಕಾರದ ವಿದ್ಯುದ್ಯಂತ್ರ. (ಸೇನೆಯ ಅಸಂ.) ಸಂಕೇತ ಸಂಜ್ಞಾಕಾರಿ.

Buzz[2] ಬಸ್ (ಕ್ರಿ. ಸಕ.) (ಸಾರಾಯಿಬುಡ್ಡಿಯನ್ನು) ತೀರಿಸಿಬಿಡು.

Búzzard ಬಸರ್ಡ್ (ನಾ.) ಡೇಗೆಯ ಜಾತಿಯ ಒಂದು ಪಕ್ಷಿ.

By ಬೈ (ಉಪ., ಕ್ರಿ. ವಿ.) ಇಂದ ; ಮೂಲಕ ; ಆ ಕಾರಣದಿಂದ ; ದೆಸೆಯಿಂದ. ಹತ್ತಿರ ; ಪಕ್ಕದಲ್ಲಿ ; ಸಮೀಪದಲ್ಲಿ ; ಬಳಿಯಲ್ಲಿ ; ವಶದಲ್ಲಿ ; ಪ್ರಾಂತದಲ್ಲಿ ; ಜೊತೆಯಲ್ಲಿ. ಆ ರೀತಿಯಲ್ಲಿ ; ಆ ಮೇರೆಗೆ. ಮಾರ್ಗವಾಗಿ ; ದ್ವಾರಾ ; ಮುಖಾಂತರ. ಬಿಟ್ಟು ; ಹಾದು ; ಮೀರಿ. ಸ್ವಲ್ಪ ಓಲ (North by East ಉತ್ತರದಿಂದ ಈಶಾನ್ಯದ ಕಡೆಗೆ 11¼° ಓಲ). Abide by ಒಪ್ಪು ; ನಡಸು. By all means ಅಗತ್ಯವಾಗಿ. By day and night ಹಗಲೂ ಇರುಳೂ. By degrees ಕ್ರಮೇಣ. By God ದೇವರಾಣೆ. By hundreds ನೂರುಗಟ್ಟಲೆ. By next week ಮುಂದಿನ ವಾರದ ಹೊತ್ತಿಗೆ. By oneself ಇತರರ ಸಹಾಯವಿಲ್ಲದೆ ; ಒಬ್ಬನೇ. By the by ಅದು ಸರಿ ! ಅದಿರಲಿ ! ಇನ್ನೊಂದು ಮಾತು ! ಪ್ರಾಸಂಗಿಕವಾಗಿ. By the way ಹೋಗುತ್ತ ಹೋಗುತ್ತ ; ಮಾತನಾಡುತ್ತಿರುವ ವಿಷಯವನ್ನು ಬಿಟ್ಟು ; ಪ್ರಾಸಂಗಿಕವಾಗಿ. Come by ಪಡೆ ; ಹೊಂದು. Come here by me ನನ್ನ ಬಳಿಗೆ ಬಾ. Do your duty by me ನನ್ನ ವಿಷಯದಲ್ಲಿ ನಿನ್ನ ಕರ್ತವ್ಯವನ್ನು ನಡಸು. Jones by name ಜೋನ್ಸ್ ಎಂಬ ಹೆಸರಿನ. Know by heart ಉರು ಹಚ್ಚಿರು ; ಬಾಯಿಪಾಠವಾಗಿರು. Lay by ಕೂಡಿಡು. Lead by the hand ಕೈಹಿಡಿದು ನಡಸು. Live by bread ರೊಟ್ಟಿ (ಅನ್ನ) ತಿಂದು ಜೀವಿಸು. Missed by a foot ಒಂದು ಅಡಿಯಷ್ಟು ತಪ್ಪಿಹೋಯಿತು. One by one ಒಬ್ಬೊಬ್ಬರಾಗಿ. Pass by him ಅವನನ್ನು ಹಾದುಹೋಗು. Put by ಹಿಂದಕ್ಕಿಡು ; ಬಿಟ್ಟುಬಿಡು. Set by the ears ಜಗಳ (ವ್ಯಾಜ್ಯ) ಹಚ್ಚು. Stand by ಸುಮ್ಮನಿರು ; ಸಿದ್ಧನಾಗಿರು. Stand by me ನನಗೆ ಸಹಾಯವಾಗಿರು, ಬೆಂಬಲವಾಗಿ ನಿಲ್ಲು ; ನಂಬಿಕೆಯಿಂದ ನಡೆದುಕೊ. They marched by ಅವರು ಮುಂದಕ್ಕೆ ಹೊರಟುಹೋದರು. Three feet by five feet ಮೂರಡಿಯಗಲ, ಐದಡಿ ಉದ್ದ.

By, Bye (ಗು.) ಅಮುಖ್ಯ ; ಗೌಣ ; ಪ್ರಾಸಂಗಿಕ ; ಅಡ್ಡ ; ಉಪ — ; ಪ್ರಸಕ್ತವಲ್ಲದ ; ಗುಟ್ಟಾದ [By(e) road ಪಕ್ಕದ ಹಾದಿ ; ಅಡ್ಡಮಾರ್ಗ. The by(e) effects ಉಪ ಫಲ. By-election ಉಪ ಚುನಾವಣೆ]. **Bý and bý** (ಕ್ರಿ. ವಿ., ನಾ.) ಸದ್ಯದಲ್ಲೆ ; ಇಷ್ಟರಲ್ಲೆ. (ನಾ.) ಮುಂದೆ (ಮುಂದಿನ ಕಾಲ). **Bý-blow** (ನಾ.) ಏಟು ಬೀಳಬೇಕಾದವನಿಗೆ ಬೀಳದೆ ಪಕ್ಕದವನಿಗೆ ಬಿದ್ದ ಏಟು : ತಪ್ಪೇಟು. ಜಾರತ್ವದಿಂದ ಹುಟ್ಟಿದ ಮಗು : ಜಾರ ಶಿಶು. **Bye** ಬೈ (ನಾ.) ಗೌಣ, ಅಪ್ರಧಾನ, ಪ್ರಾಸಂಗಿಕ, ವಿಷಯ. By the by(e) ಪ್ರಾಸಂಗಿಕವಾಗಿ. **Bye-byé** (ಭಾವ. ಅವ್ಯ.) ದೇವರು ರಕ್ಷಿಸಲಿ ! (ಹೋಗಿಬಾ). **Bý-end** (ನಾ.) ಉಪೋದ್ದೇಶ ; ಬೇರೆ ಉದ್ದೇಶ ; ಗೂಢೋದ್ದೇಶ. **Býgone** (ಗು., ನಾ.) ಕಳೆದುಹೋದ ; ಹಿಂದುಳಿದ ; ಹಳೆಯ ಕಂದಾಚಾರದ. **Býgones** ಕಳೆದುಹೋದದ್ದು ; ಗತ ವಿಷಯ ; ಹಿಂದಿನ ತಪ್ಪುಗಳು (Let bygones be bygones ಹಿಂದಿನದನ್ನೆಲ್ಲ ಮರೆತುಬಿಡು, ಮರೆತುಬಿಡೋಣ). **Bý-lane** ಅಡ್ಡ ಓಣಿ. **Bý-law, Byé-law** ಒಂದು ಸಂಸ್ಥೆಯ ಉಪನಿಯಮ, ಒಳ ನಿಬಂಧನೆ. **Bý-name** ಅಡ್ಡಹೆಸರು ; ಉಪನಾಮ. **Bý-pass** (ಉಗಿದೀಪದಲ್ಲಿ ಮುಖ್ಯದೀಪ ಆರಿಹೋದರೂ ಉರಿಯುತ್ತಿರುವ) ಉಪ ದೀಪ. (ಸಂಚಾರ ಹೆಚ್ಚಾಗಿರುವ ರಸ್ತೆಯ ಭಾಗದ) ಉಪ ರಸ್ತೆ. **Býpast** ಕಳೆದುಹೋದ ; ಗತ. **Býpath** ಅಡ್ಡಹಾದಿ ; ಸೀಳುದಾರಿ ; ಒಳದಾರಿ ; ಗೂಢ ಮಾರ್ಗ ; ಹೆಚ್ಚು ತಿರುಗಾಡದ ಹಾದಿ ; ರೂಢಿಯಿಲ್ಲದ ಹಾದಿ. (ರೂಪ.) Bypaths of history ಗೂಢ ಚರಿತ್ರಾಂಶಗಳು. **Býplay** ಉಪ ನಾಟಕ (ಮು., ಮೂಕಾಭಿನಯ) (ರೂಪ. ಸಹ). **Bý-product** (ಕೈಗಾರಿಕೆಯ ಕಾರ್ಖಾನೆಯಲ್ಲಿ ಮುಖ್ಯಪದಾರ್ಥದ ಜೊತೆಗೆ ಉತ್ಪತ್ತಿಯಾಗುವ) ಉಪ ಪದಾರ್ಥ. **Bý-road** ಬಳಕೆಯಲ್ಲಿಲ್ಲದ ಹಾದಿ ; ಉಪ ಮಾರ್ಗ. **Býstander** ನೋಡುತ್ತ ನಿಂತಿರುವವನು ; ಪ್ರೇಕ್ಷಕ. **Bý-way** ಅಡ್ಡಹಾದಿ ; ಓಣಿ ; ಹತ್ತಿರದ ಮಾರ್ಗ. ಹೆಚ್ಚು ತಿಳಿಯದ ವಿಷಯ. **Býword** ಪರ್ಯಾಯ ಶಬ್ದ ; ನಾಮಾಂತರ ; ಗಾದೆ ; ಸಾಮತಿ ; ನಾಣ್ನುಡಿ. (ಸಾ., ಕೆಟ್ಟಗುಣದ ವಿಷಯದಲ್ಲಿ) ಮಾದರಿಯಾಗಿ ತೆಗೆದುಕೊಂಡ ವ್ಯಕ್ತಿ, ಸ್ಥಳ, ಮೊ. (It is a byword for iniquity ಅದು ಅನ್ಯಾಯಕ್ಕೆ ಅಡ್ಡಹೆಸರು). **Bý-work** ವಿರಾಮ ದೊರೆತಾಗ ಮಾಡಿದ ಕೆಲಸ : ಬಿಡುಹೊತ್ತಿನ ಕೆಲಸ.

Byre ಬಯ್ರ್ (ನಾ.) ದನದ ಕೊಟ್ಟಿಗೆ ; ಗೋಶಾಲೆ.

Býssus ಬಿಸಸ್ (ನಾ.) ಹಿಂದಿನ ಕಾಲದಲ್ಲಿ ನೆಯ್ಯುವುದಕ್ಕೆ ಉಪಯೋಗಿಸುತ್ತಿದ್ದ ನಯವಾದ ನಾರು, ಅದರಿಂದ ಮಾಡಿದ ಬಟ್ಟೆ : ನವಿರು ನಾರಿನ ಬಟ್ಟೆ. (ಜೀ. ವಿ.) ಕೆಲವು ಚಿಪ್ಪಿನಪ್ರಾಣಿಗಳು ಬಂಡೆಗೆ ಹತ್ತಿಕೊಳ್ಳುವುದಕ್ಕಾಗಿ ಏರ್ಪಟ್ಟಿರುವ ಚಿಪ್ಪಿನಮೇಲಿನ ರೇಷ್ಮೆಯಂಥ ನವಿರುಪುಂಜ : ಪಟ್ಟೆ ನವಿರು. **Býssal** (ಗು.)

Byzántine ಬಿ(ಬೈ)ಜ್ಯಾನ್‌ಟೈನ್ (ಗು., ನಾ.) ಬೈಜ್ಯಾಂಟಿಯಂ ಅಥವಾ ಕಾನ್‌ಸ್ಟಾಂಟಿನೋಪಲ್ಲಿನ (ಪ್ರಜೆ). ರೋಮನ್ ಸಾಮ್ರಾಜ್ಯದ ಪೂರ್ವಭಾಗದಲ್ಲಿ ಅಭಿವೃದ್ಧಿಪಡೆದ (ವಾಸ್ತುಶಿಲ್ಪ, ಮೊ. ಗಳ) ರೀತಿಯ. **Byzántinism** (ನಾ.)

C

C (ಸೀ) ಇಂಗ್ಲಿಷ್ ವರ್ಣಮಾಲೆಯ ಮೂರನೆಯ ಅಕ್ಷರ. (ಸಂ.) ಸಪ್ತ ಸ್ವರಗಳಲ್ಲಿ ಮೊದಲನೆಯದು : 'ಸ'. (ವಾದದಲ್ಲಿ) ಮೂರನೆಯವನು ಅಥವಾ ಮೂರನೆಯದು. (ಬೀಜಗಣಿತ) ಬೆಲೆತಿಳಿದ ಮೂರನೆಯ ಪದ.

ಸಂಕ್ಷಿಪ್ತಗಳು : **C** = centum ಶತ ; ನೂರು ; **CI** = 101 ; **CV** = 105 ; **CX** = 110 (**X** = 10) ; **CL** = 150 (**L** = 50) ; **XC** = 90 ; **DC** = 600 (**D** = 500) ; **CD** = 400 ; **CM** = 900 (**M** = 1000) ; **MC** = 1100. **C.** = Cash ನಗದು ; ಹಣ ; **C. O. D.** = Cash on delivery ಪದಾರ್ಥ ಸಂದ ಕೂಡಲೆ ಹಣಪಾವತಿ. **C.** = Centigrade ಶತಾಂಶ ; 'ಸೆಂಟಿಗ್ರೇಡು' (ಮನುಷ್ಯದೇಹದ ಶಾಖ ೩೭°C.). **C., cm.** = Centimetre ಸೆಂಟಿಮೀಟರ್. **C. G. S.** = Centimetre, gramme, second 'ಸೆಂಟಿಮೀಟರ್, ಗ್ರ್ಯಾಮ್, ಸೆಕೆಂಡ್' ಪದ್ಧತಿ. **C. A.** = Chartered Accountant ಸನ್ನದು ಪಡೆದ ಲೆಕ್ಕಿಗ. **C. J.** = Chief Justice ಮುಖ್ಯ ನ್ಯಾಯಾಧಿಪತಿ. **C. E.** = Civil Engineer ವಾಸ್ತು ಶಿಲ್ಪಜ್ಞ. **C. in C.** = Commander-in-Chief ಪ್ರಧಾನ ಸೇನಾಪತಿ. **C. I. D.** = Criminal investigation department ಅಪರಾಧಾನ್ವೇಷಣ ಶಾಖೆ. **c.-p.** = Candle-power, — ಮೇಣದ ಬತ್ತಿ ಬೆಳಕಿನ ಪ್ರಕಾಶ (16 c.-p. ಹದಿನಾರು ಮೇಣದಬತ್ತಿಯ ಪ್ರಕಾಶ). **c/o** = Care of, — ನೋಡಿ, — ದ್ವಾರಾ. **cap.** = Capital letter ದೊಡ್ಡಕ್ಷರ ; = Chapter ಪ್ರಕರಣ ; ಅಧ್ಯಾಯ. **Co.** = Company (ವ್ಯಾಪಾರ) ಮಂಡಲಿ. **Col.** = Colonel ಕರ್ನಲ್. **cp.** = Compare ಹೋಲಿಸಿ ನೋಡು. **Cr.** = Creditor ಆದಾಯದ ಕಡೆ ; ಸಾಲ ಕೊಟ್ಟಿರುವವನು. **cwt.** = Hundredweight ಹಂಡ್ರೆಡ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೆಯ್ಟ್ ತೂಕ (= ೧೧೨ ಪೌಂಡುಗಳು). **Capt.** = Captain ಸೇನೆಯ ಒಬ್ಬ ಅಧಿಕಾರಿ.

Cáaba ಕಾಅಬ (ನಾ.) ಮಕ್ಕಾಪಟ್ಟಣದಲ್ಲಿಯ ಮುಸಲ್ಮಾನರ ಪವಿತ್ರ ಮಂದಿರ ; ಗೇಬ್ರಿಯಲ್ ದೇವದೂತನು ಏಬ್ರಹಾಮನಿಗೆ ಅನುಗ್ರಹಿಸಿದ ಪ್ರಸಿದ್ಧವಾದ ಕಪ್ಪುಶಿಲೆಯಿರುವ ಮಹಮ್ಮದೀಯರ ಪವಿತ್ರ ಮಂದಿರ ; ಕಾಬ.

Cab[1] ಕ್ಯಾಬ್ (ನಾ., ಕ್ರಿ. ಅಕ.) ಒಂದು ತೆರದ ಬಾಡಿಗೆಯ ಸವಾರಿ ಬಂಡಿ : ಕ್ಯಾಬ್. ಕ್ಯಾಬ್ ಬಂಡಿಯಲ್ಲಿ ಪ್ರಯಾಣಮಾಡು. **Cábman** ಕ್ಯಾಬ್‌ಬಂಡಿ ನಡಸುವವನು. **C.-rank** ಕ್ಯಾಬ್‌ಬಂಡಿಗಳು ನಿಲ್ಲುವ ಸ್ಥಳದಲ್ಲಿ ಆ ಬಂಡಿಗಳ ಸಾಲು. **C.-runner, -tout** ಕ್ಯಾಬ್‌ಬಂಡಿಯಿಂದ ಸಾಮಾನು ಇಳಿಸಿ ಹೊತ್ತುಕೊಂಡುಬರುವ ಕೂಲಿಯಾಳು. **Cábstand** ಕ್ಯಾಬ್‌ಬಂಡಿಗಳು ನಿಲ್ಲುವ ಸ್ಥಳ. **Cábless** (ಗು.)

Cab[2] ಕ್ಯಾಬ್ (ನಾ., ಕ್ರಿ. ಅಕ.) (ಅಸಂ.) ವಿದ್ಯಾರ್ಥಿಗಳು ಪಾಠ ಕಲಿಯುವುದಕ್ಕಾಗಿ ಗುಟ್ಟಾಗಿ ಉಪಯೋಗ ಮಾಡಿಕೊಳ್ಳುವ ಪರಿವರ್ತನೆ, ಸಂಗ್ರಹ, ಗೋಷ್ವಾರೆ, ಮೊ. ಕಳ್ಳ ಟಿಪ್ಪಣಿಗಳು. ಇಂಥ ಕಳ್ಳ ಟಿಪ್ಪಣಿಗಳನ್ನು ಗುಟ್ಟಾಗಿ ಉಪಯೋಗಿಸು.

Cabál ಕಬ್ಯಾಲ್ (ನಾ., ಕ್ರಿ. ಅಕ.) ಪಿತೂರಿ (ಮಾಡು) ; ಒಳಸಂಚು (ನಡಸು) ; ಒಳಕೂಟ ; ಗುಪ್ತ ಸಭೆ. **Cabáller** (ನಾ.)

Cábaret (F) ಕ್ಯಾಬರೇ (ನಾ.) (ಫ್ರೆಂಚ್) ಮದ್ಯದಂಗಡಿ. (ಇಂಗ್ಲೆಂಡ್, ಅಮೆ. ಸಂ., ಮೊ. ಗಳಲ್ಲಿ) ತಿಂಡಿತೀರ್ಥದ ಅಂಗಡಿಗಳಲ್ಲಿ ಆಶ್ರಯದಾತರ ಸಂತೋಷಕ್ಕಾಗಿ ಏರ್ಪಡಿಸಿದ ಗಾನವಿನೋದ, ಮೊ.

Cábbage ಕ್ಯಾಬೆಜ್ (ನಾ.) ಕೋಸು (ಎಂಬ ತರಕಾರಿ). **C.-head** (ರೂಪ.) ಮಡ್ಡಿ ; ದಡ್ಡ. **C.-net** ಕೋಸನ್ನು ಬೇಯಿಸಲು ಉಪಯೋಗಿಸುವ ಸಣ್ಣ ಬಲೆ. **C.-palm, -tree** ಕೋಸ್ ತಾಳೆಯಮರ (ಇಂಥ ಮರದ ಅಗ್ರದಲ್ಲಿ ತಿನ್ನುವುದಕ್ಕುಪಯೋಗವಾಗುವ ಕೋಸಿನಂಥ ಎಲೆಸುಳಿ ಇರುವುದು). **C.-rose** ಕೋಸಿನ ಆಕಾರದ, ಒತ್ತೆಸಳುಳ್ಳ, ದೊಡ್ಡ ಹೂವು ಬಿಡುವ, ಗುಲಾಬಿ ಜಾತಿ : ಕೋಸುಗುಲಾಬಿ.

Cáb(b)ala ಕ್ಯಾಬಲ (ನಾ.) ಕರ್ಣಪರಂಪರೆಯಾಗಿ ಬಂದ ಯೆಹೂದ್ಯರ ಅಭಿಪ್ರಾಯಗಳು, ಮತತತ್ತ್ವಗಳು, ಸಂಪ್ರದಾಯಗಳು, ಮೊ. ವು. ರಹಸ್ಯಾರ್ಥ ; ಗೂಢಾರ್ಥ ; ನಿಗೂಢ ತತ್ತ್ವ ; ರಹಸ್ಯ ವಿದ್ಯೆ ; ಗುಪ್ತ ವಿದ್ಯೆ. **Cáb(b)alism** (ನಾ.) ; **Cáb(b)alist** (ನಾ.) ; **Cab(b)alístic** (ಗು.) ; **Cab(b)alístically** (ಕ್ರಿ. ವಿ.)

Cábby ಕ್ಯಾಬಿ (ನಾ.) (ಬಳ. ಮಾ.) ಕ್ಯಾಬ್‌ಬಂಡಿ ಹೊಡೆಯುವವನು.

Cábin ಕ್ಯಾಬಿನ್ (ನಾ., ಕ್ರಿ. ಸಕ.) ಜೋಪಡಿ ; ಗುಡಿಸಿಲು ; ಕುಟೀರ. ಹಡಗಿನಲ್ಲಿ ಊಟದ ಅಥವಾ ಮಲಗುವ ಕೋಣೆ. (ಹಡಗಿನ) ಪ್ರಯಾಣಿಕನ, ಅಧಿಕಾರಿಯ, ಕೋಣೆ. (C.-boy ಹಡಗಿನ ಪ್ರಯಾಣಿಕರ ಅಥವಾ ಅಧಿಕಾರಿಗಳ ಚಾಕರಿಮಾಡಲು ನಿಯಮಿತನಾದ ಸೇವಕ, ಪರಿಚಾರಕ). (ಕ್ರಿ. ; ಧೂ. ಕ್ರಿ. ಪ್ರಯೋಗ) ಇಕ್ಕಟ್ಟಿನಲ್ಲಿ ಸೇರಿಸು ; ಕೈಕಾಲಾಡುವುದಕ್ಕಾಗದಂತೆ ಕೂಡು. **Cábined** (ಗು.) ಗುಡಿಸಿಲಿನಂತೆ ಮಾಡಿದ ; ಸಣ್ಣ ಕೋಣೆಯುಳ್ಳ ; ಇಕ್ಕಟ್ಟಿನಲ್ಲಿ ಸೇರಿಸಿದ ; ಇಕ್ಕಟ್ಟಿಗೆ ಸಿಕ್ಕಿದ (ರೂಪ. ಸಹ)

Cábinet ಕ್ಯಾಬಿನೆಟ್ (ನಾ., ಗು.) ಸಣ್ಣ ಒಳಕೋಣೆ ; ಖಾಸಾ ಕೋಣೆ. ಒಡವೆ ವಸ್ತುಗಳನ್ನಿಡುವ ಖಾನೆಗಳುಳ್ಳ ಅಲಮಾರು, ಬೀರು. (ರಾಜ್ಯಶಾಸ್ತ್ರ) ರಾಜ್ಯದ ಮಂತ್ರಿಮಂಡಲದವರು ಸಭೆಸೇರುವ ಮಂದಿರ ; ಮಂತ್ರಾಲೋಚನಗೃಹ ; ಮಂತ್ರಣ ಶಾಲೆ. ಮಂತ್ರಿಮಂಡಲ. C. Council ಮಂತ್ರಿಮಂಡಲದ ಅಧಿವೇಶನ, ಸಭೆ. C. Counsellor, C. Minister ; ಮಂತ್ರಿಮಂಡಲದ ಸದಸ್ಯ ; ಮಂತ್ರಿಗಳಲ್ಲೊಬ್ಬನು. C. crisis ರಾಜ್ಯಾಡಳಿತದ ಬದಲಾವಣೆಯ, ಅಥವಾ ಮಂತ್ರಿಮಂಡಲದ ಸದಸ್ಯರು ಕೆಲವರು ರಾಜೀನಾಮೆ ಕೊಡುವುದರಿಂದಾಗುವ, ವಿಷಮ ಸಂದರ್ಭ, ಸ್ಥಿತಿ. Shadow C. ಮುಂದೆ ರಾಜ್ಯಾಡಳಿತದ ಶಾಖೆಗಳ ಅಧಿಕಾರಸೂತ್ರಗಳನ್ನು ವಹಿಸಬಹುದೆಂದು ತೋರುವವರನ್ನು ಸೇರಿಸಿ ಪ್ರತಿಪಕ್ಷದ ಮುಂದಾಳುಗಳು ಮಾಡಿದ ಮಂಡಲಿ : ಛಾಯಾ ಮಂತ್ರಿಮಂಡಲ. C. edition ಮಧ್ಯಮ ಪ್ರಮಾಣದ ಬೆಲೆ ಮೊ. ಗಳುಳ್ಳ ಪುಸ್ತಕದ ಪ್ರತಿ : ಮಧ್ಯಮ ಪ್ರತಿ. C.-maker ಪೆಟ್ಟಿಗೆ, ಅಲಮಾರು, ಮೊ. ಮರದ ಸಾಮಾನುಗಳನ್ನು ಮಾಡುವವನು. (ಹಾಸ್ಯವಾಗಿ) ಮಂತ್ರಿಮಂಡಲವನ್ನು ಹೊಸದಾಗಿ ಕಟ್ಟುವ ಮುಖ್ಯಮಂತ್ರಿ. C. photograph ಮಧ್ಯಮ ಪ್ರಮಾಣದ ಛಾಯಾಚಿತ್ರ ಪ್ರತಿ.

Cáble ಕೇಬ್ಲ್ (ನಾ., ಕ್ರಿ.) (೧೦ ಅಂಗುಲಕ್ಕೆ ಕಡಮೆಯಿಲ್ಲದ ಸುತ್ತಳತೆಯುಳ್ಳ, ಸಣಬು ಮೊ.ದ ಪದಾರ್ಥಗಳಿಂದ ಅಥವಾ ತಂತಿಯ ಎಳೆಗಳಿಂದ ಮಾಡಿದ) ಹೊರಜಿ. (ನಾವೆ) ಲಂಗರಿನ ಹೊರಜಿ ಅಥವಾ ಸರಪಣಿ (ಅಳತೆ) ನೂರು ಮಾರು (೬೦೦ ಅಡಿ). (ತಂತಿಯ ಸಮಾಚಾರ ಕಳುಹಿಸಲು) ನೀರಿನಲ್ಲಿ ಅಥವಾ ನೆಲದಡಿಯಲ್ಲಿ ಹಾಕಿರುವ, ಪರಸ್ಪರ ವಿದ್ಯುತ್ ಸಂಪರ್ಕವಾಗದಂತೆ ಮಾಡಿರುವ, ತಂತಿಗಳ ಹೊರಜಿ. ಕಡಲ ತಂತಿ ಸಮಾಚಾರ (= **Cáblegram**). (ವಾ. ಶಾ., ಮತ್ತು ಅಕ್ಕಸಾಲೆಯ ಕೆಲಸ) ಹಗ್ಗದ ರೂಪಿನ ಒಂದು ಶಿಲ್ಪಚಿತ್ರ ಅಥವಾ ಆಭರಣ. (C.-laid rope ಮುಪ್ಪುರಿಯ ಮೂರು ವರಿಸ ಹೊಸೆದ ಹಗ್ಗ). (ಕ್ರಿ.) ಹೊರಜಿ ಹಾಕು, ಬಿಗಿ. ಕಡಲತಂತಿ ಕಳುಹಿಸು. **Cáblet** ಕೇಬ್ಲೆಟ್ (ನಾ.) (೧೦ ಅಂಗುಲದ ಸುತ್ತಳತೆಗೆ ಕಡಮೆಯಾದ) ಮುಪ್ಪುರಿಯ ಮೂರು ವರಿಸೆಯ ಹಗ್ಗ.

Cabriolét ಕಾಬ್ರಿಯೊಲೇ (ನಾ.) ಎರಡು ಚಕ್ರದ, ಒಂಟಿ ಕುದುರೆಯ, ಹೆಡೆಯಿರುವ, ಹಗುರವಾದ ಸವಾರಿ ಬಂಡಿ.

Cacáo ಕಕೇ(ಕಾ)ಓ (ನಾ., ಗು.) 'ಕೋಕೋ' ಮತ್ತು 'ಚಾಕೊಲೆಟ್' ಎಂಬ ಆಹಾರಪದಾರ್ಥಗಳಿಗೆ ಮೂಲವಾದ ಬೀಜಗಳನ್ನು ಕೊಡುವ ಅಮೆರಿಕದ ಉಷ್ಣವಲಯದ ಒಂದು ಮರ (C.-tree), ಅದರ ಬೀಜ : ಕಕೇವೊ ಬೀಜ ; — ಮರ. **C.-butter** ಕಕೇವೊ ಬೆಣ್ಣೆ (ಕೇಶಾನುಲೇಪ, ಮೇಣದ ಬತ್ತಿ, ಮೊ. ಕ್ಕೆ ಉಪಯೋಗ)

Cache ಕಾಷ್ (ನಾ., ಕ್ರಿ. ಸಕ.) ಅನ್ವೇಷಕರು ಹಣ, ಸಾಮಾನು, ಯುದ್ಧಸಾಮಗ್ರಿ, ಮೊ. ನ್ನು ಬಚ್ಚಿಡುವ ಸ್ಥಳ ; ಹೀಗೆ ಬಚ್ಚಿಡುವುದು ; ಗೋಪನ ; ಹೀಗೆ ಬಚ್ಚಿಟ್ಟ ಸಾಮಗ್ರಿ. (ಕ್ರಿ.) — ಬಚ್ಚಿಡು ; ನೆಲದಲ್ಲಿ ಹೂತಿಡು.

Cáchet ಕಾಷೆ (ನಾ.) ಮುದ್ರೆ ; (ರೂಪ.) ಕುರುಹು ; ಗುರುತು ; ವೈಶಿಷ್ಟ್ಯ ; ಅಂತರ ಪ್ರಮಾಣ. (ವೈದ್ಯ) 'ಜೆಲಟೀನ್' ಮೊ. ಪದಾರ್ಥದಿಂದ ಮಾಡಿ (ಅಸಹ್ಯವಾದ) ಔಷಧದ ಒಂದು ಗುಟುಕನ್ನೊಳಕೊಂಡಿರುವ ಸಣ್ಣ ಗುಳಿಗೆ. Lettre de cachet ರಾಜಮುದ್ರೆಯ ಪತ್ರ.

Cachéxy ಕಕೆಕ್ಸಿ (ನಾ.) (ದೇಹದ ಅಥವಾ ಮನಸ್ಸಿನ) ದುಃಸ್ಥಿತಿ, ಅಸ್ವಾಸ್ಥ್ಯ. **Cachéctic(al)** (ಗು.) — ಸಂಬಂಧವಾದ ; — ಇಂದ ನರಳುತ್ತಿರುವ.

Cáchinnate ಕ್ಯಾಕಿನೇಟ್ (ಕ್ರಿ. ಅಕ.) ಗಹಗಹಿಸಿ ನಗು. **Cachinnátion** (ನಾ.) ; **Cáchinnatory** (ಗು.)

Cáchou ಕಾಷೂ (ನಾ.) (= Catechu) ಕಾಚು. ಚುಟ್ಟ ಸೇದುವವರು ತಮ್ಮ ಉಸಿರನ್ನು ಸುವಾಸನೆ ಮಾಡುವುದಕ್ಕಾಗಿ ಉಪಯೋಗಿಸುವ, ಗೋಡಂಬಿ, ಮೊ. ಪದಾರ್ಥಗಳಿಂದ ಮಾಡಿದ, ಮಿಠಾಯಿ ಗುಳಿಗೆ.

Cáckle ಕ್ಯಾಕ್ಲ್ (ನಾ., ಕ್ರಿ.) ಹೆಣ್ಣುಕೋಳಿ ಮೊಟ್ಟೆಯಿಟ್ಟ ಮೇಲೆ ಹಾಕುವ ಕೇಕೆ ; ಇಂಥ ಕೇಕೆ ಹಾಕು. ಗೊಡ್ಡು ಹರಟೆ (ಹೊಡೆ) ; ಜಂಭ (ಹೊಡೆ). ಒಳನಗು (ನಗು). **Cáckler** (ನಾ.)

Cacodémon, -daémon ಕ್ಯಾಕೊಡೀಮನ್ (ನಾ.) ದೆವ್ವ ; ಪಿಶಾಚಿ ; ಭೂತ. ಮತ್ಸರಗ್ರಸ್ತ ; ಕೆಡುಕ ; ದೀರ್ಘದ್ವೇಷಿ. (ಜ್ಯೋ.) ಗ್ರಹಕುಂಡಲಿಯಲ್ಲಿ (ಕೇಡನ್ನು ಸೂಚಿಸುವ) ಹನ್ನೆರಡನೆಯ ಮನೆ ; ದ್ವಾದಶ ಸ್ಥಾನ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cácodyl ಕ್ಯಾಕೊಡಿಲ್ (ನಾ.) ಶಂಖಪಾಷಾಣ ಮತ್ತು 'ಮೆಥಿಲ್' ಎಂಬ ಪದಾರ್ಥಗಳು ಸಂಯೋಗಹೊಂದಿ ಆದ, ದುರ್ಗಂಧವುಳ್ಳ, ವಿಷಪದಾರ್ಥ. **Cacodýlic** (ಗು.)

Cácoepy, Cacóepy ಕ್ಯಾಕೊಇಪಿ, ಕಕೋ — (ನಾ.) ತಪ್ಪು ಉಚ್ಚಾರಣೆ.

Cacógraphy ಕಕಾಗ್ರಫಿ (ನಾ.) ವಿಕಾರವಾದ ಬರೆವಣಿಗೆ; ತಪ್ಪು ಅಕ್ಷರ ಸಂಯೋಜನ. **Cacógrapher** (ನಾ.); **Cacográphic(al)** ಕ್ಯಾಕೊಗ್ರಾಫಿಕ್ — (ಗು.)

Cacólogy ಕಕಾಲೊಜಿ (ನಾ.) ಅಪಶಬ್ದ ಪ್ರಯೋಗ; ಅಶುದ್ಧೋಚ್ಚಾರಣೆ.

Cacoón ಕಕೂನ್ (ನಾ.) ಉಷ್ಣವಲಯದಲ್ಲಿ ಬೆಳೆಯುವ (೬ ರಿಂದ ೮ ಅಡಿಯ ವರೆಗೆ ಉದ್ದವಿರುವ ಕಾಯಿಬಿಡುವ) ಒಂದು ಜಾತಿಯ ಬಳ್ಳಿ ಗಿಡದ ನುಣುಪಾದ, ಚಪ್ಪಟೆಯ ಬೀಜ.

Cacóphony ಕ್ಯಕಾಫೊನಿ (ನಾ.) ಅಪಸ್ವರ; ವಿಕಾರ ಸ್ವರ; ಸ್ವರ ವೈಷಮ್ಯ. (ರೂಪ.) ವೈಷಮ್ಯ. **Cacóphonous** (ಗು.) ಅಪಸ್ವರದ.

Cáctus ಕ್ಯಾಕ್ಟಸ್ (ನಾ.) ಸಾ., ಎಲೆಗಳಿಲ್ಲದೆ ದಟ್ಟವಾಗಿ ಮುಳ್ಳುಗಳುಳ್ಳ ಕಳ್ಳಿಯ ಜಾತಿಯ ಗಿಡ: ಮೊಂಡುಗಳ್ಳಿ, ಪಾಪಾಸು ಕಳ್ಳಿ, ಮೊ. **Cactáceous** — ಕ್ಟೇಷಸ್ (ಗು.); **Cáctal** (ಗು.); **Cáctoid** (ಗು.)

Cad ಕ್ಯಾಡ್ (ನಾ.) ಬಸ್‌ಬಂಡಿಯ ಚಾಲಕ. ವಿದ್ಯಾರ್ಥಿಗಳು ಆಡುವ ಆಟಗಳಲ್ಲಿ ಸಹಾಯಮಾಡಲು ವಿದ್ಯಾಶಾಲೆಯಲ್ಲಿ ಓಡಾಡಿಕೊಂಡಿರುವವನು. ಕೀಳು ಪಂಗಡದವನು; ಮರ್ಯಾದೆ ತಿಳಿಯದವನು; ಅಸಭ್ಯ ವರ್ತನೆಯವನು; ನೀಚ; 'ಹಲ್ಕಾ'. **Cáddish** (ಗು.)

Cadástral ಕಡಾಸ್ಟ್ರಲ್ (ಗು.) (ಕಂದಾಯ ಹಾಕುವುದಕ್ಕಾಗಿ) ಜಮೀನಿನ ವಿಸ್ತೀರ್ಣ, ಬೆಲೆ, ವಾರಸು, ಮೊ. ಗಳ; ಇವನ್ನು ತೋರಿಸುವ.

Cadáver ಕಡೇವರ್ (ನಾ.) ಕಳೇಬರ; (ಮು., ಪ್ರಯೋಗ ಪರೀಕ್ಷೆಗಾಗಿ ಉಪಯೋಗಿಸುವ) ಹೆಣ. ಅಸ್ಥಿಪಂಜರ. **Cadavéric** ಕ್ಯಾಡವೆರಿಕ್, **Cadáveric** ಕಡ್ಯಾವೆರಿಕ್ (ಗು.) (ಶ. ವಿ., ವೈ. ಶಾ.) ಶವಲಕ್ಷಣಗಳುಳ್ಳ. **Cadáverous** ಕಡ್ಯಾವೆರಸ್ (ಗು.) ಹೆಣದಂಥ; (ಹೆಣದಂತೆ) ಬಿಳಿಚಿಕೊಂಡ; ನೀರಕ್ತ.

Cáddie, Cádie ಕ್ಯಾಡಿ (ನಾ.) ಗಾಲ್ಫ್ ಆಟಗಾರನ ಪರಿಚರ. ಯಾವುದಾದರೂ ಕೆಲಸ ಹುಡುಕುತ್ತ ಕಾದಿರುವವನು. (ಸಲಗೆಯಾಗಿ) ಹುಡುಗ; ಹೈದ.

Cáddy ಕ್ಯಾಡಿ (ನಾ.) ತೇ ಎಲೆಯನ್ನು ಹಾಕಿಡುವ ಸಣ್ಣ ಪೆಟ್ಟಿಗೆ, ಡಬ್ಬಿ. (ಅಮೆ. ಸಂ.) ನೀರು, ಮೊ. ನ್ನು ಇಡುವುದಕ್ಕಾಗಿ ಉಪಯೋಗಿಸುವ ಮುಚ್ಚಳದ ಡಬ್ಬ. ದೆವ್ವ; ಗುಮ್ಮ; ಗೊಗ್ಗಯ್ಯ.

Cádence ಕೇಡೆನ್ಸ್ (ನಾ.) ಏರಿಳಿತ. (ಸಂ.) ಸ್ವರ ಗತಿ; ಲಯ; ಸ್ವರಾವರೋಹಣ (ಮು., ಪರ್ಯಾಪ್ತಿಯಲ್ಲಿ)

Cádency ಕೇಡೆನ್ಸಿ (ನಾ.) ಮುಖ್ಯವಂಶದಿಂದ ಹೊರಟ ಕನಿಷ್ಠ ಶಾಖೆಯ ಸಂತತಿ.

Cadénza (It.) ಕಡೆಂಟ್‌ಸ, ಕಡೆನ್ಸ (ನಾ.) (ಸಂ.) ಮುಕ್ತಾಯದಲ್ಲಿ ಮಾಡುವ ಗಾನದ, ವಾದ್ಯದ, ಆಡಂಬರ ಸ್ವನ, ವೈಖರಿ.

Cadét ಕಡೆಟ್ (ನಾ.) ಕಿರಿಯ ಮಗ; ಕಡೆಯ ಮಗ; ತಮ್ಮ. ವಂಶದ ಕನಿಷ್ಠ ಶಾಖೆ; ಆ ಶಾಖೆಯವನು. ನಾವಿಕ ಅಥವಾ ಸೈನಿಕ ವಿದ್ಯಾಶಾಲೆಯ ವಿದ್ಯಾರ್ಥಿ. ಯುದ್ಧವಿದ್ಯೆಯನ್ನು ಕಲಿಯುವುದಕ್ಕ ತಾನಾಗಿ ಸೈನ್ಯವನ್ನು ಸೇರಿದ ದೊಡ್ಡಮನುಷ್ಯ. C. corps ಪ್ರಾಥಮಿಕ ಸೈನ್ಯ ಶಿಕ್ಷಣ ಪಡೆಯುತ್ತಿರುವ ಪಾಠಶಾಲಾ ವಿದ್ಯಾರ್ಥಿಗಣ. **Cadétship** (ನಾ.)

Cádet (F) ಕಾಡೆಟ್ (ನಾ.) (ವ್ಯಕ್ತಿವ್ಯತಾಸ ತೋರಿಸುವುದಕ್ಕಾಗಿ ತಮ್ಮನ ಕುಟುಂಬನಾಮದ ಕೊನೆಯಲ್ಲ ಸೇರಿಸುವ ಪದ) ಕಿರಿಯವನು.

Cadge ಕ್ಯಾಜ್ (ಕ್ರಿ.) ಸಾಮಾನು ಮಾರಿಕೆಗಾಗಿ ಬೀದಿಬೀದಿ ಅಲೆ. ಭಿಕ್ಷಬೇಡುವುದಕ್ಕಾಗಿ ಸುತ್ತಾಡು; ತಿರುಪ ಎತ್ತು. **Cádger** ಕ್ಯಾಜ್‌ಜರ್ (ನಾ.) ಊರೂರಿನಲ್ಲೂ ಬೀದಿಬೀದಿಯಲ್ಲೂ ಅಲೆಯುವ ಚಿಲ್ಲರೆ ವ್ಯಾಪಾರಿ: ತಿರುಗುವ್ಯಾಪಾರಿ. ತಿರುಪಗಾರ; ಪೋಲಿ.

Cádi ಕಾಡಿ, ಕೇಡಿ (ನಾ.) ತುರ್ಕಿ, ಅರಬ್ಬಿ, ಪರ್ಷಿಯನ್—ಈ ಜನಾಂಗಗಳಲ್ಲಿ ಮುಲ್ಕಿನ್ಯಾಯಾಧಿಪತಿ; ಕಾಜಿ.

Cádjan ಕಾಜ್‌ಜನ್ (ನಾ.) ತಾಳೆಯ ಗರಿ, ಪಟ್ಟೆ, ಓಲೆ; ತಾಳೆಯೋಲೆಯ ಪತ್ರ. ಛಾವಣಿಗಾಗಿ ಉಪಯೋಗಿಸುವ ಹೆಣೆದ ತಾಳೆಯ ಗರಿ.

Cádmium ಕ್ಯಾಡ್ಮಿಯಂ (ನಾ.) ತವರವನ್ನು ಹೋಲುವ, ನೀಲಿ ಬಿಳುಪಿನ, ಒಂದು ಮೂಲಲೋಹ: 'ಕ್ಯಾಡ್ಮಿಯಂ'. C.-yellow ದಟ್ಟಹಳದಿಯ ವರ್ಣದ್ರವ್ಯ.

Cádre ಕಾಡ್‌ರ್ (ನಾ.) ಚೌಕಟ್ಟು; ಕ್ಲುಪ್ತ. (ಸೈನ್ಯ) ಮೂಲ ಬಲ (ಆವಶ್ಯಕ ಬಿದ್ದಾಗ ವೃದ್ಧಿಮಾಡಬಹುದಾದದ್ದು)

Cadúcity ಕಡ್ಯೂಸಿಟಿ (ನಾ.) ಭಂಗುರತೆ; ಕ್ಷಣಿಕತೆ; ಅಸ್ಥಿರತೆ. (ಪ್ರಾ. ವಿ., ಸ. ವಿ.) (ಅಂಗಭಾಗಗಳು) ತಮ್ಮ ಕಾರ್ಯಭಾಗ ಮುಗಿದ ಮೇಲೆ ಬಿದ್ದುಹೋಗುವುದು: ಅಂಗ ಪಾತ. **Cadúcous** (ಗು.)

Caécum ಸೀಕಮ್ (ನಾ.; ಬ. ವ. -ca) ಸಸ್ತನಿ, ಮೊ. ಪ್ರಾಣಿಗಳಲ್ಲಿ ದೊಡ್ಡಕರುಳಿನ ಕುರುಡು ಆದಿಭಾಗ: ಅಂಧಾಂತ್ರ. ಒಂದು ತುದಿ ಮುಚ್ಚಿದ ಕೊಳವೆ. **Caécal** (ಗು.); **Caécally** (ಕ್ರಿ. ವಿ.); **Caéciform** ಸೀಸಿಫಾರ್‌ಮ್ (ಗು.); **Caecítis** ಸೀಸೈಟಿಸ್ (ನಾ.) ಅಂಧಾಂತ್ರ ವ್ಯಾಧಿ.

Caésar ಸೀಸರ್ (ನಾ.) ಆದ್ಯ ರೋಮನ್ ಚಕ್ರವರ್ತಿಗಳ ಅಧಿಕಾರ ನಾಮ; (ಈಚಿನ) ರೋಮನ್ ಯುವರಾಜ. (ಶಿಥಿಲವಾಗಿ) ಯಾವನಾದರೂ ರೋಮನ್ ಚಕ್ರವರ್ತಿ. ನಿರಂಕುಶ ಪ್ರಭು. ಲೌಕಿಕ ಪ್ರಭುತ್ವ. C.'s wife ಅಪವಾದಕ್ಕೆ ಅವಕಾಶ ಕೊಡದಂತೆ ವರ್ತಿಸಬೇಕಾದ ವ್ಯಕ್ತಿ. **Caesárean, -ian** ಸಿಸೇರಿಯನ್ (ಗು. ನಾ.) ಸೀಸರಿನ; ಸೀಸರುಗಳ. ಸಾಮ್ರಾಜ್ಯದ. [C. birth, operation ಹೊಟ್ಟೆ ಸೀಳಿ ಹೆರಿಗೆಮಾಡಿಸುವುದು (ಜೂಲಿಯಸ್ ಸೀಸರನು ಹುಟ್ಟಿದಾಗ ಮಾಡಿದಂತೆ)]. (ನಾ.) ಸೀಸರಿನ ಅನುಯಾಯಿ; ನಿರಂಕುಶ ಪ್ರಭುತ್ವ ಪಕ್ಷಪಾತಿ. **Caésarism, -rist** ಸೀಸರಿಸ್‌ಮ್, -ರಿಸ್ಟ್ (ನಾ.) ನಿರಂಕುಶ ಪ್ರಭುತ್ವ; — ವಾದಿ.

Caésius ಸೀಸಿಯಸ್ (ಗು.) (ಸ. ವಿ.) ನೀಲಿಹಸುರು; ಬೂದುಹಸುರು.

Caésium ಸೀಸಿಯಂ (ನಾ.) (ರ. ವಿ.) ಒಂದು ಕ್ಷಾರೀಯ ಮೂಲ ಲೋಹ: 'ಸೀಸಿಯಂ.'

Caesúra ಸಿಸ್ಯೂ(ಸ್ಯೂ)ರ (ನಾ.) (ಛಂ.) ಯತಿ; ವಿರಾಮ. **Caesúral** (ಗು.)

Cáfe ಕಾಫೆ (ನಾ.) ಕಾಫಿಯಂಗಡಿ; ಉಪಾಹಾರದಂಗಡಿ. **Cafféic** ಕ್ಯಫೀಯಿಕ್ (ಗು.) (ರ. ವಿ.) ಕಾಫಿಯ (ಮು., C. acid ಕಾಫಿಯಾಮ್ಲ). **Cáffeine** ಕ್ಯಾಫಿಈನ್ (ನಾ.) ಕಾಫಿ ಮತ್ತು ಟೀ ಸಸ್ಯಗಳಲ್ಲಿರುವ ಸಸ್ಯಕ್ಷಾರ.

Cáfe (F) ಕಾಫೇ (ನಾ.) ಕಾಫಿ.

Cáffre. **Kafir** ನೋಡಿ.

Cáftan, Caftán ಕ್ಯಾಫ್ಟನ್ ಕಾಫ್ಟಾನ್, (ನಾ.) ತುರ್ಕಿ, ಮೊ. ಪೂರ್ವದೇಶಗಳಲ್ಲಿ ತೊಟ್ಟುಕೊಳ್ಳುವ, ನಡುಪಟ್ಟಿಯುಳ್ಳ, ಉದ್ದವಾದ ದಗಲೆ. **Cáftaned** (ಗು.)

Cage ಕೇಜ್ (ನಾ., ಕ್ರಿ. ಸಕ.) ಪಂಜರ; ಬೋನು (ಮು., ಪಕ್ಷಿಗಳಿಗೆ, ಮೃಗಗಳಿಗೆ); ಗೂಡು. ಸೆರೆಮನೆ; ಸೆರೆ (ರೂಪ. ಸಹ). (ಗಣಿ) ಕೆಳಕ್ಕಿಳಿಸುವುದಕ್ಕೂ ಮೇಲೆತ್ತುವುದಕ್ಕೂ ಉಪಯೋಗಿಸುವ ಗೂಡಿನ ಚೌಕಟ್ಟು; ಗೂಡಿನ ಅಥವಾ ಪಂಜರದ ಆಕಾರದ ಪಾತ್ರೆ. (ಕ್ರಿ.) ಪಂಜರದಲ್ಲಿ ಹಾಕು; ಬೋನಿನಲ್ಲಿ ಕೂಡು; ಸೆರೆಯಲ್ಲಿಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cain, Kain ಕೆಯ್‌ನ್ (ನಾ.) ಭ್ರಾತೃಘಾತಕ ; ಕೊಲೆಪಾತಕ. Raise C. ಗಲಾಟೆ, ಗಲಭೆ, ಗೊಂದಲ, ಮಾಡು.

Cainozóic ಕೆಯ್ನೊಝೋಯಿಕ್ (ಗು.) (ಭೂ. ವಿ.) ಮೂರನೆಯ ಭೂಯುಗದ.

Cairn ಕೇರ್‌ನ್ (ನಾ.) (ಜ್ಞಾಪಕಾರ್ಥವಾಗಿ, ಸಮಾಧಿಯಾಗಿ, ಪ್ರದೇಶದ ಗುರುತಿಗಾಗಿ, ಎಲ್ಲೆಯಾಗಿ, ಹಾಕಿದ) ಒರಟುಕಲ್ಲುಗಳ ದಿಬ್ಬ. ಕಲ್ಲು ಗುಡ್ಡೆ. ಸಣ್ಣ ಕುರುಚುಗಾಲಿನ, ನಿಡುಮೆಯ್ಯ, ದಟ್ಟವಾದ ಒರಟು ಕೂದಲಿನ, ನಾಯಿಜಾತಿ (= C. terrier)

Caísson ಕೆಯ್ಸನ್, **Caissoón** ಕೆಸೂನ್ (ನಾ.) ಮದ್ದುಗುಂಡಿನ ಪೆಟ್ಟಿಗೆ ಅಥವಾ ಬಂಡಿ. ನೀರಿನ ತಳದಲ್ಲಿ ತಳಹದಿಹಾಕಲು ಉಪಯೋಗಿಸುವ ನೀರಿಳಿಯದ ದೊಡ್ಡ ಪೆಟ್ಟಿಗೆ: ಹದಿಗೂಡು. ಬಂದರಿನಲ್ಲಿ ಹಡಗಿನ ನಿಲುಕಟ್ಟೆಯ ಬಾಗಿಲಾಗಿ ಉಪಯೋಗಿಸುವ ದೋಣಿ.

Caítiff ಕೆಯ್‌ಟಿಫ್ (ನಾ., ಗು.) (ಕಾವ್ಯ, ಪ್ರಾಚೀ. ಪ್ರ.) ನೀಚ ; ಅಧಮ; ಹೇಡಿ.

Cajóle ಕಜೋಲ್ (ಕ್ರಿ. ಸಕ.) ಮುಖಸ್ತುತಿ, ಮೋಸ, ಮೊ. ಗಳಿಂದ ಒಪ್ಪಿಸು, ಸಮಾಧಾನ ಮಾಡು. ಪುಸಲಾಯಿಸು. (C. a person *into* doing, *out of* something. C. something *out of* a person). **Cajólement** (ನಾ.) ಪುಸಲಾಯಿಕೆ ; ಅನುನಯ. **Cajóler** (ನಾ.) ; **Cajólery** (ನಾ.) ; **Cajólingly** (ಕ್ರಿ. ವಿ.)

Cake ಕೇಕ್ (ನಾ.) ದೋಸೆ ; ರೊಟ್ಟಿ ; ಹೋಳಿಗೆ ; ಒಬ್ಬಟ್ಟು ; ಕಜ್ಜಾಯ ; ಇಡ್ಡಲಿ. ಬಿಲ್ಲೆ [C. of soap ಸಬ್ಬು (ಸಾಬೂನು) ಬಿಲ್ಲೆ]. Cakes and ale ತಿಂದು ಕುಡಿದು ಮೆರೆಯುವುದು. C.-walk ಒಂದು ಬಗೆಯ ಕುಣಿತ. Take the c. ಬಹುಮಾನವನ್ನು ಗೆದ್ದುಕೊ. You cannot eat your c. and have it (ಅಕ್ಕಿಯ ಮೇಲನ ಆಸೆ ನೆಂಟರ ಮೇಲಿನ ಪ್ರೀತಿ) ; ಪರಸ್ಪರ ವಿರುದ್ಧವಾದ ಎರಡು ಕೆಲಸಗಳನ್ನು ಒಟ್ಟಿಗೆಮಾಡಲು ಸಾಧ್ಯವಿಲ್ಲ. **Cáky** (ಗು.)

Cake (ಕ್ರಿ.) ಕೂಡಿಕೊಂಡ, ಅಡಕವಾದ, ಬಿಲ್ಲೆಯಾಗು, ಬಿಲ್ಲೆಮಾಡು.

Cálabash ಕ್ಯಾಲಬ್ಯಾಷ್ (ನಾ.) (ಬುರುಡೆಯಾಗತಕ್ಕ) ಗಟ್ಟಿಸಿಪ್ಪೆಯುಳ್ಳ ಕಾಯಿಗಳು (ಸೋರೆ, ಕುಂಬಳ, ಮೊ.) ; ಸೋರೆ ಬುರುಡೆ, ಮೊ.

Cálaber, -ar ಕ್ಯಾಲಬರ್ (ನಾ.) ಬೂದುಅಳಿಲಿನ ತುಪ್ಪುಳುತೊವಲು.

Calamánder ಕ್ಯಾಲಮ್ಯಾಂಡರ್ (ನಾ.) ಸಿಲೋನಿನಲ್ಲೂ ಇಂಡಿಯಾ ದಲ್ಲೂ ಬೆಳೆಯುವ ಒಂದುಜಾತಿಯ ಗಟ್ಟಿಮರ (ಪೆಟ್ಟಿಗೆ, ಮೊ. ಸಾಮಾನು ಮಾಡುವುದಕ್ಕೆ ಉಪಯೋಗ)

Cálamine ಕ್ಯಾಲಮೈನ್ (ನಾ.) ಇಂಗ್ಲೆಂಡಿನಲ್ಲಿ ದೊರೆಯುವ ಒಂದು ಬಗೆಯ ಸತುವಿನ ಅದುರು (ಸತು, ಇಂಗಾಲ ಮತ್ತು ಆಮ್ಲಜನಕ ಸಂಯುಕ್ತ) : 'ಕ್ಯಾಲಮೈನ್'.

Calámity ಕಲ್ಯಾಮಿಟಿ (ನಾ.) ಆಪತ್ತು ; ವಿಪತ್ತು ; ಕೇಡು ; ಅನರ್ಥ. **Calámitous** (ಗು.) ; **Calámitously** (ಕ್ರಿ. ವಿ.)

Calcáreous, -ious ಕ್ಯಾಲ್ಕೇರಿಯಸ್ (ಗು.) ಇಂಗಾಲ ಮತ್ತು ಆಮ್ಲಜನಕ ಸಂಯುಕ್ತವಾದ ಸುಣ್ಣದ ; ಸುಣ್ಣ ಅಥವಾ ಸುಣ್ಣಕಲ್ಲು ಸೇರಿರುವ ; — ಇಂದ ಮಾಡಿದ.

Cálcimine ಕ್ಯಾಲ್ಸಿಮೈನ್ (ನಾ., ಕ್ರಿ. ಸಕ.) ಗೋಡೆಗಳಿಗೂ ಒಳ ಮಾಳಿಗೆಗೂ ತೊಡೆಯುವ ಬಿಳಿಯ ಅಥವಾ ಬಣ್ಣ ಸೇರಿಸಿದ ಸುಣ್ಣದ ತೊಡೆತ. (ಕ್ರಿ.) — ತೊಡೆ.

Cálcium ಕ್ಯಾಲ್ಸಿಯಂ (ನಾ.) (ರ. ವಿ.) ಸುಣ್ಣಕ್ಕೆ ಮೂಲಾಧಾರ ವಸ್ತುವಾದ ಹಳದಿಯಬಣ್ಣದ ಮೂಲಧಾತು : 'ಕ್ಯಾಲ್ಸಿಯಂ'. **Cálcic** (ಗು.) ಕ್ಯಾಲ್ಸಿಯಮ್ಮಿನ. **Calcíferous** (ಗು.) ಸುಣ್ಣ ಅಥವಾ ಸುಣ್ಣಕಲ್ಲುಳ್ಳ. **Cálcify** (ಕ್ರಿ.) ಸುಣ್ಣವಾಗಿಸು ; ಸುಣ್ಣವಾಗು ; ಸುಣ್ಣದ ಲವಣಗಳು ಸೇರುವುದರಿಂದ ಗಡುಸಾಗು ; ಕಲ್ಲಾಗು. **Calcífic** (ಗು.) ಸುಣ್ಣವಾಗುವ ; ಸುಣ್ಣ ಮಾಡುವ. **Calcificátion** (ನಾ.) ; **Cálcine** — ಸೈನ್ (ಕ್ರಿ.) ಸುಡುವುದರಿಂದ ಖಾರದ ಸುಣ್ಣವನ್ನಾಗಿ ಅಥವಾ ಪುಡಿಪುಡಿಯಾಗುವ ಪದಾರ್ಥವನ್ನಾಗಿ ಇಳಿಸು. ಜಲಾಂಶ ಹೋಗುವಂತೆ ಸುಡು. ಮಡ್ಡಿಭಾಗವನ್ನು ಸುಟ್ಟುಹಾಕಿ ಚೊಕ್ಕಮಾಡು. ಸುಟ್ಟು ಬೂದಿಮಾಡು ; ಭಸ್ಮಮಾಡು ; — ಆಗು. **Calcinátion** — ಸಿನೇಷನ್ (ನಾ.) ; **Cálciner** — ಸೈ —, — ಸಿ — (ನಾ.) ಈ ರೀತಿ ಸುಡುವವನು, ಸುಡುವದು (ಮು., ಅದುರನ್ನು ಸುಡುವ ಒಲೆ). **Cálcite** — ಸೈಟ್ (ನಾ.) ನೆಲದಲ್ಲಿ ದೊರೆಯುವ ಸುಣ್ಣಕಲ್ಲುಪದಾರ್ಥ (ಸುಣ್ಣದ ಕಾರ್ಬೊನೇಟು)

Cálculate ಕ್ಯಾಲ್ಕ್ಯುಲೇಟ್ (ಕ್ರಿ.) ಗಣಿಸು ; ಲೆಕ್ಕಮಾಡು. (ಘಟನೆ, ತೇದಿ, ಮೊ. ನ್ನು) ಮೊದಲೇ ಲೆಕ್ಕಾಚಾರದಿಂದ ಕಂಡುಹಿಡಿ, ಗೊತ್ತುಮಾಡು, ಗುಣಿಸು. ಎಣಿಕೆ ಮಾಡು ; ಗುಣಾಕಾರ ಹಾಕು. ಮೊದಲೇ ಎಣಿಕೆ ಹಾಕಿಕೊಂಡಿರು. ಹೊಂದಿಸು ; ಅಳವಡಿಸು ; ಯೋಜಿಸು (ಸಾ., ಕರ್ಮಣಿಯಲ್ಲಿ). ಎಣಿಸಿಕೊಂಡಿರು ; ನಂಬಿಕೊಂಡಿರು ; ನೆಚ್ಚಿಕೊಂಡಿರು ; ಭರವಸೆಯಿಂದಿರು. (ಅಮೆ. ಸಂ.) ಊಹಿಸು ; ಭಾವಿಸು ; ನಂಬು. **Cálculated** (ಗು.) ಎಣಿಸಿದ ; ಅಂದಾಜು ಮಾಡಿದ ; ಯೋಚಿಸಿದ. ಯುಕ್ತ ; ತಕ್ಕ ; ಉದ್ದೇಶಪೂರ್ವಕವಾದ. **Cálculating** (ಗು.) (ಕ್ರಿಯಾರ್ಥಗಳಲ್ಲಿ). ಸಂಧಾನ ಮಾಡುವ. (Calculating-machine ಗಣಕ ಯಂತ್ರ). **Cálculative** (ಗು.) ಲೆಕ್ಕಾಚಾರದ ; ಲೆಕ್ಕಾಚಾರಸ್ವಭಾವದ. **Calculátion** (ನಾ.) ಲೆಕ್ಕಾಚಾರ ; ಗಣನೆ ; ಎಣಿಕೆ. **Cálculator** (ನಾ.) (ಕ್ರಿಯಾರ್ಥಗಳಲ್ಲಿ) ; ಲೆಕ್ಕಮಾಡುವುದರಲ್ಲಿ ಉಪಯೋಗಿಸುವ ಕೋಷ್ಟಕಗಳು ; ಗಣಕ ಯಂತ್ರ. **Cálculable** (ಗು.) ಗುಣಿಸಬಹುದಾದ ; ಗುಣಿಸಲಾಗುವ ; ಎಣಿಸಲಾಗುವ ; ಲೆಕ್ಕಾಚಾರ ಮಾಡಲಾಗುವ ; ಅಳೆಯಲಾಗುವ. ನಂಬಲಾಗುವ ; ನೆಚ್ಚಲಾಗುವ ; ಊಹ್ಯ. **Cálculabílity** (ನಾ.)

Cálculous ಕ್ಯಾಲ್ಕ್ಯುಲಸ್ (ಗು.) (ಮೂತ್ರಕೋಶದಲ್ಲಿಯ) ಕಲ್ಲಿನಿಂದ ನರಳುತ್ತಿರುವ : ಅಶ್ಮರೀ ರೋಗದ.

Cálculus ಕ್ಯಾಲ್ಕ್ಯುಲಸ್ (ನಾ. ; ಬ. ವ. -li, -luses) (ವೈ. ಶಾ.) (ಮೂತ್ರನಾಳ, ಮೂತ್ರಕೋಶ, ಮೊ. ದೇಹಭಾಗಗಳಲ್ಲಿ ಕ್ರಮೇಣ ಸೇರಿದ) ಘನೀಭೂತ ಪಿಂಡ ; ಕಲ್ಲು ; ಅಶ್ಮರಿ. (ಗಣಿತ) ಒಂದು ಗೊತ್ತಾದ ಪದ್ಧತಿಯ ಗಣನೆ : ಕಲನ (ಉದಾ., Differential c. ಚಲನ ಕಲನ ; Integral c. ಸಮಾನ ಕಲನ)

Caldárium ಕ್ಯಾಲ್ಡೇರಿಯಂ (ನಾ.) (ಪ್ರಾಚೀ. ಶಾ.) ರೋಮನರ ಉಷ್ಣಸ್ನಾನದ ಮನೆ.

Cáldron. **Cauldron** ನೋಡಿ.

Caledónian ಕ್ಯಾಲಿಡೋನಿಯನ್ (ಗು., ನಾ.) ಪ್ರಾಚೀನ ಸ್ಕಾಟ್ಲೆಂಡಿನ (ವನು). (ಈಗಲೂ, ಸಂಘ, ಮೊ. ಗಳ ಹೆಸರಿನಲ್ಲಿ ಉಪಯೋಗ). (ಹಾಸ್ಯವಾಗಿ) ಸ್ಕಾಟ್ಲೆಂಡಿನ(ವನು)

Calefácient ಕ್ಯಾಲಿಫೇಷಂಟ್ (ಗು., ನಾ.) (ವೈ. ಶಾ.) ಬಿಸಿ ಹುಟ್ಟಿಸುವ (ಸಾಧನ) ; ಶಾಖಜನಕ. **Calefáction** — ಫ್ಯಾಕ್‌ಷನ್ (ನಾ.) ; **Cálefactive** (ಗು.) ; **Calefáctory** (ಗು., ನಾ.) = Calefacient ; ವಿರಕ್ತ ಮಠದಲ್ಲಿಯ ಬೆಚ್ಚನೆಯ ಕೋಣೆ.

Cálendar ಕ್ಯಾಲೆಂಡರ್ (ನಾ., ಕ್ರಿ. ಸಕ.) ಪಂಚಾಂಗ ; ಕಾರ್ಯಕಾಲ ನಿರ್ದೇಶಕ ಪಟ್ಟಿ (Gardener's c. ತೋಟಗಾರನ ಪಂಚಾಂಗ). (ಅರ್ಚನೀಯರನ್ನಾಗಿ ಮಾಡಿದ ಸಂತರ ಹೆಸರುಗಳು, ವಿಚಾರಣೆಮಾಡಬೇಕಾದ ಕೈದಿಗಳ ಹೆಸರುಗಳು, ಗೋಪ್ಯಾರೆ ಹಾಕಿ ಕಾಲಕ್ರಮವಾಗಿ ಜೋಡಿಸಿದ ದಸ್ತೈವಜುಗಳು — ಇವೇ, ಮೊ. ವನ್ನುಳ್ಳ) ದಾಖಲೆಯ ಪುಸ್ತಕ, ಪಟ್ಟಿ. (ಕ್ರಿ.) ದಾಖಲೆ ಮಾಡು ; ಪಟ್ಟಿಯಲ್ಲಿ ಸೇರಿಸು. (ದಸ್ತೈವಜುಗಳನ್ನು, ಪ್ರಮಾಣ ಪತ್ರಗಳನ್ನು) ವಿಂಗಡಿಸಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರಮದಲ್ಲಿ ಜೋಡಿಸಿ, ಸೂಚೀಪಟ್ಟಿ ಮಾಡು ; ವಿವರಣಪಟ್ಟಿ ಕೊಡು. **Cálendarer** (ನಾ.)

Cálender[1] ಕ್ಯಾಲೆಂಡರ್ (ಕ್ರಿ. ಸಕ., ನಾ.) (ಬಟ್ಟೆ, ಕಾಗದ, ಮೊ. ನ್ನು ನುಣುಪುಗೊಳಿಸುವುದಕ್ಕಾಗಿ) ಉರುಳುಯಂತ್ರದ ಒತ್ತಡಕ್ಕೆ ಕೊಡು ; ಇಂಥ ಯಂತ್ರ, ಆವಿಯಿಸ್ತ್ರಿ (ಮಾಡು). (ಪ್ರಾಚೀ. ಪ್ರ.) ಇಸ್ತ್ರಿಮಾಡುವವನು. **Cálendry** (ನಾ.) ಇಸ್ತ್ರಿಮಾಡುವ ಸ್ಥಳ.

Cálender[2] ಕ್ಯಾಲೆಂಡರ್ (ನಾ.) ತುರ್ಕಿಯಲ್ಲಿಯ, ಪರ್ಷಿಯದಲ್ಲಿಯ, ಭಿಕ್ಷುಕ ಸಾಧು.

Cálends, K- ಕ್ಯಾಲೆಂಡ್ಸ್ (ನಾ., ಬ. ವ.) ರೋಮನ್ ಪಂಚಾಂಗದಲ್ಲಿ ತಿಂಗಳ ಮೊದಲನೆಯ ದಿನ. On the Greek c. ಎಂದಿಗೂ ಇಲ್ಲ (ಗ್ರೀಕರಿಗೆ ಪಂಚಾಂಗವೇ ಇಲ್ಲ)

Caléndula ಕಲೆಂಡ್ಯುಲ (ನಾ.) ಚೆಂಡುಹೂವಿನ ಜಾತಿಯ ಸಸ್ಯಗಳ ಜಾತಿನಾಮ. (ವೈ. ಶಾ.) ರಕ್ತಸ್ರಾವ ನಿರೋಧಿಯಾಗಿ ಉಪಯೋಗಿಸುವ ಚೆಂಡುಹೂವಿನ ಧೃತಿ.

Calf[1] ಕಾಫ್ (ನಾ. ; ಬ. ವ. calves) ಕರು (ಮು., ಹಸುವಿನದು, ಒಂದು ವರ್ಷಕ್ಕೊಳಗಿನದು). [Cow in c., Cow with c. ಗಬ್ಬವಾದ ಹಸು. Slip her c. ಗರ್ಭಸ್ರಾವವಾಗು ; ಕಂದು ಹಾಕು. Golden c. (ಬೈಬಲ್) ಪೂಜೆಗಾಗಿ ಯೆಹೂದ್ಯರಿಗೆ ಏರನ್ನನು ಮಾಡಿಕೊಟ್ಟ ಚಿನ್ನದ ಕರು. ಐಶ್ವರ್ಯ; ಧನ]. ಮಂಕ ; ಮಡ್ಡಿ ; ದಡ್ಡ ; ಮೊದ್ದು ; ಎಮ್ಮೆ ತಮ್ಮಣ್ಣ. (Moon-c. ಹುಟ್ಟುದಡ್ಡ). ಕರುವಿನ ತೊಗಲು (= C.-leather, Calfskin : ಮು., ಪುಸ್ತಕಗಳಿಗೆ ರಟ್ಟುಕಟ್ಟುವುದರಲ್ಲಿಯೂ ಪಾದರಕ್ಷೆ ಮಾಡುವುದರಲ್ಲಿಯೂ ಉಪಯೋಗ. Box-c. 'ಕ್ರೋಮ್' ಹದಮಾಡಿದ ಕರುವಿನ ತೊಗಲು. Willow-c. ಬೂಟುಗಳಿಗಾಗಿ ಉಪಯೋಗಿಸುವ ಉತ್ತಮ ತೆರದ ಕಂದುಬಣ್ಣದ ತೊಗಲು). (ಜಿಂಕೆ, ಆನೆ, ತಿಮಿಂಗಿಲ, ಮೊ. ಮೃಗಗಳ) ಮರಿ. (ನಾವೆ) ತೇಲುತ್ತಿರುವ ನೀರ್ಗಲ್ಲಿನ ತುಂಡು. ದೊಡ್ಡದ್ವೀಪದ ಬಳಿಯಲ್ಲಿಯ ಸಣ್ಣದ್ವೀಪ. ಮಗು (C.-love ಹುಡುಗತನದ ಪ್ರಣಯ). C.-knee ತೊಡರು ಮಂಡಿ. Calf's teeth (ಎಳೆತನದ) ಹಾಲುಹಲ್ಲು. Sea-c. ಸೀಲ್ ಎಂಬ ಜಲಚರ. **Cálfhood** (ನಾ.) ಎಳಮೆ. **Cálfish** (ಗು.) ಕರುವಿನಂಥ ; ಅಪಕ್ವ ; ಹಸಿ ; ಎಳಸು ; ಅಶಿಕ್ಷಿತ.

Calf[2] ಕಾಫ್ (ನಾ. ; ಬ. ವ. Calves) ಮೀನ ಖಂಡ ; ಕಣಕಾಲಿನ ಹಿಂಭಾಗ. ಕಾಲ್ಚೀಲದ ಮೀನಖಂಡಭಾಗ. **Cálfless** (ಗು.)

Cáliban ಕ್ಯಾಲಿಬ್ಯಾನ್ (ನಾ.) ಪಶುಸ್ವಭಾವವುಳ್ಳ ಕೀಳ್ತರದ ಮನುಷ್ಯ : ಮಾನವ ಮೃಗ.

Cálibrate ಕ್ಯಾಲಿಬ್ರೇಟ್ (ಕ್ರಿ. ಸಕ.) ಒಳ ವ್ಯಾಸವನ್ನು ಕಂಡುಹಿಡಿ ; (ನಾಳ, ಅಳತೆಯ ಕಡ್ಡಿ, ಮೊ. ಗಳಿಗೆ) ಅಳತೆಯ ಗುರುತುಗಳನ್ನು ಹಾಕುವುದಕ್ಕೆ ಮೊದಲು (ಅವುಗಳಲ್ಲಿರಬಹುದಾದ) ಹೆಚ್ಚುಕಡಮೆಗಳನ್ನು ನಿರ್ಣಯಿಸು ; ನಿಷ್ಕೃಷ್ಟಾಂಕವನ್ನು, ಕ್ರಮಾಂಕವನ್ನು, ನಿರ್ಣಯ ಮಾಡು. **Calibrátion** (ನಾ.)

Cálibre Cáliber ಕ್ಯಾಲಿಬರ್, **Calíbre, Calíber** ಕಲೀಬ'ರ್ (ನಾ.) ಬಂದೂಕಿನ ಕೋವಿಯ, ಅಥವಾ ಇತರ ನಾಳದ, ಒಳ ವ್ಯಾಸ : ನಾಳಾಂತರ್ವ್ಯಾಸ. (ರೂಪ.) ಸತ್ವ ; ಯೋಗ್ಯತೆ ; ಶಕ್ತಿ ; ಸಾಮರ್ಥ್ಯ ; ಅಳವು. **Cálibred** (ಗು.)

Cálicle ಕ್ಯಾಲಿಕ್'ಲ್ (ನಾ.) (ಜೀ. ವಿ.) ಸಣ್ಣ ಬಟ್ಟಲನಂತಿರುವ ಅಂಗ, ಉಬ್ಬು. **Calícular** ಕಲಿಕ್ಯುಲರ್ (ಗು.)

Cálico ಕ್ಯಾಲಿಕೊ (ನಾ., ಗು.) ಚಿತ್ರಗಳಿಲ್ಲದ ಬೆಳ್ಳನೆಯ ಹತ್ತಿಯಬಟ್ಟೆ (ಯ) : 'ಕ್ಯಾಲಿಕೊ.' C.-printer ಕ್ಯಾಲಿಕೊ ಬಟ್ಟೆಯಮೇಲೆ ಬಣ್ಣದ ಚಿತ್ರಗಳನ್ನು ಮುದ್ರಿಸುವವನು : ಕ್ಯಾಲಿಕೊ ಮುದ್ರಕ. C.-printing — ಮುದ್ರಣ.

Cáliph, -if ಕ್ಯಾ(ಕೇ)ಲಿಫ್ (ನಾ.) ಮಹಮ್ಮದನ ತರುವಾಯ ಆ ಸ್ಥಾನಕ್ಕೆ ಬಂದವನು. ಮಹಮ್ಮದೀಯ ಲೌಕಿಕ ಮತ್ತು ಧಾರ್ಮಿಕ ಪ್ರಭು ; ಕಲೀಫ. **Cáliphat(e)** ಕ್ಯಾಲಿಫೇಟ್ (ನಾ.) ಕಲೀಫನ ದರ್ಜೆ, ಅಧಿಕಾರ, ಘನತೆ, ಅಧಿಕಾರ ಕಾಲ : ಕಲೀಫಗಿರಿ.

Cálix ಕ್ಯಾಲಿಕ್ಸ್ (ನಾ. ; ಬ. ವ. -ices, -ಸೀಸ್) ಬಟ್ಟಲು ; ಪುಟ. ಬಟ್ಟಲನಂಥ ಗುಳಿ, ಅಂಗ.

Calk[1] ಕಾಕ್ (ಕ್ರಿ. ಸಕ., ನಾ.) ಮೋಜ ಅಥವಾ ಲಾಳವು ಜಾರದಂತೆ ಹಾಕಿರುವ ಚೂಪುಮೊಳೆ (ಹಾಕು)

Calk[2] ಕಾಕ್, ಕ್ಯಾಲ್ಕ್ (ಕ್ರಿ. ಸಕ.) ಕಾಗದ, ಮೊ. ಗಳಮೇಲಿನ ಚಿತ್ರವನ್ನಾಗಲಿ ನಕ್ಷೆಯನ್ನಾಗಲಿ ಮತ್ತೊಂದರಮೇಲೆ ಪ್ರತಿ ಮಾಡುವುದಕ್ಕಾಗಿ ಅಸಲಿನ ಹಿಂದುಗಡೆಗೆ ಬಣ್ಣದ ಪದಾರ್ಥವನ್ನು ಹೆಚ್ಚಿ, ಅದನ್ನು ಪ್ರತಿ ಮಾಡಬೇಕಾದ ಹಾಳೆಯಮೇಲಿಟ್ಟು ಅಸಲಿನ ಚಿತ್ರದ ಗೆರೆಗಳನ್ನು ಮೊಳೆಯ ಮೊಂಡುಕೊನೆಯಿಂದ ಊರಿ ತಿದ್ದು.

Calk[3], **Caulk** ಕಾಕ್ (ಕ್ರಿ. ಸಕ.) (ಹಡಗಿನ ಅಥವಾ ದೋಣಿಯ) ಜೋಡಿಸಿದ ಹಲಗೆಗಳ ಮಧ್ಯೆ ಬಿಟ್ಟಿರುವ ಸಂದುಗಳನ್ನು ಕೀಲೆಣ್ಣೆಯಲ್ಲಿ ಅದ್ದಿದ ಹಸಿಯ ದಾರ, ಮೊ. ಗಳಿಂದ ಗಿಡಿಗಿ ತುಂಬಿ, ನೀರು ನುಗ್ಗದಂತೆ ಭದ್ರಪಡಿಸು ; ಸೋರದಂತೆ ಸಂದುಮುಚ್ಚಿ ಭದ್ರಪಡಿಸು.

Cálkin ಕಾಕಿನ್, ಕ್ಯಾಲ್ — (ನಾ.) (ಕುದುರೆಯ ಅಥವಾ ಎತ್ತಿನ ಲಾಳದಲ್ಲಿ) ಕೆಳಬಗ್ಗಿಸಿದ ಏಣು ; ಮೋಜ ಅಥವಾ ಜೋಡಿನ ತಳದಲ್ಲಿ ರಕ್ಷಣೆಗಾಗಿ ಹಾಕಿರುವ ಕಬ್ಬಿಣದ ತುಂಡುಗಳು.

Call ಕಾಲ್ (ಕ್ರಿ.) ಕರೆ ; ಕೂಗು ; ಬರಹೇಳು ; ಗಟ್ಟಿಯಾಗಿ ಕೂಗು. (ರೂಪ. ಸಹ). ಒಬ್ಬನ ಭೇಟಿಗಾಗಿ ಅವನಿರುವ ಸ್ಥಳಕ್ಕೆ ಹೋಗು (*at, in, on* ಉಪ. ದೊಡನೆ ಸಹ). ಕೂಗಿ ಹೇಳು. (ಹಾಜರಿರುವುದನ್ನು ತಿಳಿಯಲು) ಗಟ್ಟಿಯಾಗಿ ಓದಿಹೇಳು. ಹಾಜರಿ ಕೂಗು. ಸಾರು (ಸಾ., *out* ಉಪ. ದೊಡನೆ). (ಸಭೆ, ಮೊ.) ಸೇರುವಂತೆ ಕರೆ, ಆಹ್ವಾನಿಸು. ನಿದ್ದೆಯಿಂದೆಬ್ಬಿಸು. (ಇಸ್ಪೀಟಾಟದಲ್ಲಿ) ತುರುಪು ಇಳಿಯುವುದಕ್ಕೆ ಸೂಚಿಸು ; (ಕೆಳಗೆ ಹರಡಿರುವ ಎಲೆಯನ್ನು ಅಥವಾ ಇತರ ಎಲೆಯನ್ನು) ಆಡುವಂತೆ ಪ್ರತಿಪಕ್ಷದವನಿಗೆ ನಿಯಮಿಸು. C. to account ಸಮಜಾಯಿಷಿ ಕೇಳು ; ಆಕ್ಷೇಪಿಸು. C. at ಹೊಕ್ಕು ಹೋಗು (The ship called at Madras on her way to Calcutta). C. attention to ಗಮನ ಸೆಳೆ ; ಎಚ್ಚರಿಸು. C. away ಬೇರೆ ಕಡೆಗೆ ಸೆಳೆ, ತಿರುಗಿಸು. C. back ಹಿಂದಕ್ಕೆ ಕರೆ, ತರು ; ಹೇಳಿದುದನ್ನು ಹಿಂದಕ್ಕೆ ತೆಗೆದುಕೊ ; ರದ್ದುಮಾಡು. C. back to life ಉಸಿರೆರೆ ; ಜೀವ ಬರಿಸು. C. to the Bar (Bar ನೋಡಿ). C. into being ಹುಟ್ಟಿಸು ; ಸೃಷ್ಟಿಸು. C. over the coals ಆಕ್ಷೇಪಣೆ ಮಾಡು ; ವಾಗ್ದಂಡನೆ ಮಾಡು. C. cousins ಬಾಂಧವ್ಯ ಹೇಳಿಕೊ. C. down ಮೇಲಿಂದ ಕರೆ ; (ಆಕಾಶದಿಂದ) ಎರಗಲೆಂದು ಹಾರೈಸು. (ಅಮೆ. ಸಂ., ಬಳ. ಮಾ.) ಆಕ್ಷೇಪಣೆ ಮಾಡು ; ತಪ್ಪು ಹಿಡಿ. C. to (one's) feet, legs ಎದ್ದುನಿಂತು ಕೊಳ್ಳುವುದಕ್ಕೆ ಹೇಳು (ಮು., ಮಾತನಾಡಲು, ಹಾಡಲು). C. for ಕೇಳು ; ತರಹೇಳು ; ಅಪೇಕ್ಷಿಸು ; ಕೋರು ; ಕರೆತರು. C. forth ಹೊರಗೆ ಬರುವಂತೆ ಮಾಡು ; ಹೊರಡಿಸು ; ಕಾಣಿಸಿಕೊಳ್ಳುವಂತೆ ಮಾಡು ; (ಧೈರ್ಯ) ಎಬ್ಬಿಸು, ತರಿಸು. C. a halt ನಿಲ್ಲಿಸು. C. in (ಸಾಲ) ಹಿಂದಕ್ಕೆ ಕೊಡಲು ಕೇಳು. (ಪತ್ರ, ಮೊ. ನ್ನು) ಹಣಪಾವತಿಗಾಗಿ ಹಿಂದಕ್ಕೆ ಕೇಳು. (ನಾಣ್ಯ, ಮೊ.) ಚಲಾವಣೆಯಿಂದ ಹಿಂದಕ್ಕೆ ತೆಗೆದುಕೊ. (ವೈದ್ಯ, ಮೊ. ನ್ನು) ಸಲಹೆಗಾಗಿ ಕರೆ. C. to mind, memory ಜ್ಞಾಪಿಸಿಕೊ ; ನೆನಪಿಗೆ ತಂದುಕೊ. C. names ಬಯ್ಯು. C. off ಬಿಟ್ಟು ಬರುವಂತೆ ಹೇಳು ; (ಗಮನವನ್ನು) ಬೇರೆ ಕಡೆಗೆ ತಿರುಗಿಸು ; ಗೊತ್ತಾಗಿದ್ದಂತೆ ನಡೆದುಕೊಳ್ಳದೆಹೋಗು ; ಹಿಂದೆಗೆ. C. on, upon (ದೇವರು, ಮೊ. ನ್ನು) ಬೇಡಿಕೊ ; ಹೇಳಿಕೊ ; ಕೇಳಿಕೊ ; ಮೊರೆಯಿಡು. ಭೇಟಿಗಾಗಿ ಹೋಗು. C. out ಮುಂದಕ್ಕೆ ಬರಹೇಳು ; ಎಬ್ಬಿಸು ; ಹೊರಡಿಸು ; ಮೂಡುವಂತೆ ಮಾಡು (ರೂಪ.). ದ್ವಂದ್ವಯುದ್ಧಕ್ಕೆ ಕರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೇನೆಯನ್ನು (ಮು., ನಗರಾಧಿಕಾರಿಯ ಸಹಾಯಕ್ಕಾಗಿ) ಕರೆ. C. over (ಹೆಸರು ಪಟ್ಟಿಯನ್ನು) ಗಟ್ಟಿಯಾಗಿ ಓದಿಹೇಳು. C. into play ಕೆಲಸ ನಡೆಯುವಂತೆ ಮಾಡು; ಅವಕಾಶ ಕೊಡು. ಹೊಮ್ಮಿಸು; ಕುದುರಿಸು; ಪ್ರಯೋಗಿಸು. C. in question ಸಂದೇಹಿಸು; ತಪ್ಪುಹೊರಿಸು; ವಿಚಾರಣೆಗೆ ಗುರಿಮಾಡು. C. up ಭಾವಿಸು; ಜ್ಞಾಪಿಸಿಕೊ; ನೆನಪಿಗೆ ತರು. (ಮಾತನಾಡಲು) ದೂರವಾಣಿಯಲ್ಲಿ ಕರೆ. ಸೇನೆ, ಮೊ. ಗಳಲ್ಲಿ ಕಾರ್ಯವಹಿಸಲು ಆಹ್ವಾನಿಸು; ಅಧಿಕಾರಿಯ ಮುಂದೆ ಹಾಜರಾಗುವಂತೆ ಕರೆಕಳುಹಿಸು. ಹಿಂದಕ್ಕೆ ಕರೆ. ನಿದ್ದೆಯಿಂದೆಬ್ಬಿಸು. ಎದ್ದು ಮಾತನಾಡುವಂತೆ ಪ್ರೇರಿಸು. C. to witness ಸಾಕ್ಷಿ ಕೋರು, ಕರೆ.

Call (ನಾ.) ಕೂಗು; ಕರೆ; ಹಾಜರಿಯ ಕರೆ. ಪಕ್ಷಿ, ಮೊ. ಗಳ ಕೂಗು; ಇದರ ಅನುಕರಣ; ಇದನ್ನು ಅನುಕರಿಸುವ ವಾದ್ಯ. (ಕಹಳೆ, ಮೊ. ಗಳ ಮೂಲಕ) ಸಂಕೇತ ಸೂಚನೆ; (ಸಂಕೇತಸೂಚಕ) ಸಿಳ್ಳು. ಕೆಲಸಕ್ಕಾಗಿ (ಒಬ್ಬನನ್ನು) ನೋಡಲು ಹೋಗುವುದು; ಭೇಟಿ (Pay c. ಭೇಟಿಗೆ ಹೋಗು). ಕರೆ; ಆಹ್ವಾನ; ಆಮಂತ್ರಣ; ಸಂಬೋಧನ; ದೈವಪ್ರೇರಣೆ. ಕರ್ತವ್ಯ; ಆವಶ್ಯಕತೆ; ಸಂದರ್ಭ (No c. to blush ನಾಚಿಕೊಳ್ಳಬೇಕಾದ ಸಂದರ್ಭವಿಲ್ಲ). ಹಣ ಪಾವತಿ ಮಾಡಲು ತಗಾದೆ (ಮು., ಒಂದು ಸಂಘದ ಪಾಲುದಾರರಿಂದ ಬಾಕಿಯಿರುವ ಕಂತುಗಳಿಗಾಗಿ): ಹಣದ ಕರೆ. (ಪತ್ರವ್ಯಾಪಾರ) ಒಂದು ಗೊತ್ತಾದ ತಾರೀಖಿನಲ್ಲಿ ಪತ್ರಗಳನ್ನು ವಾಪಸು ಪಡೆಯುವ ಹಕ್ಕು. ('ಬ್ರಿಡ್ಜ್' ಆಟದಲ್ಲಿ) ಸವಾಲು ಮಾಡಲು ಆಟಗಾರನ ಹಕ್ಕು ಅಥವಾ ಸರದಿ. At c., within c. ಕೂಗಿದರೆ ಕೇಳುವಷ್ಟು ಹತ್ತಿರದಲ್ಲಿ; ಅಪ್ಪಣೆ ನಡಸಲು ಸಿದ್ಧನಾಗಿ. C.-boy ಬೇಕಾದಾಗ ನಟರನ್ನು ರಂಗಕ್ಕೆ ಕರೆಯುವ ಚಾರ: ಕರೆಯಾಳು. C.-loan, -money ಕೇಳಿದೊಡನೆಯೇ ತೀರಿಸಬೇಕಾದ ಸಾಲ: ಕರೆಸಾಲ. C.-over (ಜೂಜಾಟದಲ್ಲಿ) ಬೆಲೆಗಳ ಪಟ್ಟಿಯನ್ನು ಗಟ್ಟಿಯಾಗಿ ಓದುವುದು (ಜೂಜಾಟದ ವಿಹಾರಮಂದಿರ, ಮೊ. ಗಳಲ್ಲಿ). **Cáller** (ನಾ.) (ಕ್ರಿಯಾರ್ಥಗಳಲ್ಲಿ); ಭೇಟಿಗಾಗಿ ಬರುವವನು. **Cálling** (ನಾ.) (ಕ್ರಿಯಾರ್ಥಗಳಲ್ಲಿ). (ಮುಕ್ತಿಸಾಧನೆಗಾಗಿ ಅಥವಾ ಆತ್ಮೋದ್ಧಾರಕ್ಕಾಗಿ) ದೈವಪ್ರೇರಣೆ. ನ್ಯಾಯವಾದುದೆಂದು ಯಾವುದಾದರೂ ಕಾರ್ಯವನ್ನು ಮಾಡಲು ಚೋದನೆ: ಅಂತಃಪ್ರೇರಣೆ. ವೃತ್ತಿ; ಉದ್ಯೋಗ; ಕಸುಬು; ವ್ಯಾಪಾರ. ಒಂದು ಗೊತ್ತಾದ ಉದ್ಯೋಗವನ್ನವಲಂಬಿಸಿರುವವರು: ಒಂದು ವೃತ್ತಿಯವರು.

Callígraphy ಕ್ಯಲಿಗ್ರಫಿ (ನಾ.) ಅಂದವಾದ ಬರೆವಣಿಗೆ. **Cálligraph** ಕ್ಯಾಲಿಗ್ರಾಫ್ (ನಾ., ಕ್ರಿ. ಸಕ.) ಸುಂದರವಾದ ಅಕ್ಷರ (ಬರೆ); ಅಲಂಕಾರಾಕ್ಷರ (ಬರೆ); — ಬರೆಯುವವನು; ಲಿಪಿಗಾರ [= **Callígrapher** ಕ್ಯಲಿಗ್ರಫರ್ (ನಾ.); = **Callígraphist** (ನಾ.)]; **Calligráphic(al)** ಕ್ಯಾಲಿಗ್ರಾ — (ಗು.)

Cálliper, Caliper ಕ್ಯಾಲಿಪರ್ (ನಾ., ಗು., ಕ್ರಿ. ಸಕ.). C. Compasses or Cal(l)ipers ಉಬ್ಬುಮೈಯುಳ್ಳ ವಸ್ತುಗಳ ಹೊರವ್ಯಾಸವನ್ನಾಗಲಿ, ನಾಳಗಳ ಒಳವ್ಯಾಸವನ್ನಾಗಲಿ ಅಳೆಯಲು ತಕ್ಕಂತೆ ಅಳವಡಿಸಿರುವ (ಸಾ., ಬಗ್ಗಿದ ತೋಳುಗಳುಳ್ಳ) ಅಳತೆಯ ಸಲಕರಣೆ; ವ್ಯಾಸಮಾಪಕ: 'ಕ್ಯಾಲಿಪರ್ಸ್.' (ಕ್ರಿ.) ವ್ಯಾಸಮಾಪಕದಿಂದ ಅಳೆ.

Callisthénic Calis- ಕ್ಯಾಲಿಸ್ತೆನಿಕ್ (ಗು.) (ಮು., ಹೆಣ್ಣುಮಕ್ಕಳ ಅಂಗಸಾಧನೆಯ ವಿಷಯದಲ್ಲಿ) ಸೌಂದರ್ಯದೊಡನೆ ಶಕ್ತಿಯೂ ಬರುವಂತೆ ಮಾಡಲು ತಕ್ಕ: ಸೌಂದರ್ಯ ಬಲವರ್ಧಕ. **Callisthénics** (ನಾ.) (ಹೆಣ್ಣುಮಕ್ಕಳಿಗೆ ತಕ್ಕ) ಅಂಗಸಾಧನೆಗಳು; ದೇಹಸೌಷ್ಠವವನ್ನೂ ಅಂಗವಿನ್ಯಾಸವನ್ನೂ ವಿಕಾಸಗೊಳಿಸಲು ಕೊಡುವ ಶಿಕ್ಷಣ: ಸೌಂದರ್ಯವರ್ಧಕ ವ್ಯಾಯಾಮ.

Callósity ಕಲಾಸಿಟಿ (ನಾ.) ಚರ್ಮವು ವಿಪರೀತವಾಗಿ ದಪ್ಪ ಬೆಳೆದು ಗಡುಸಾಗುವುದು; ಗಡುಸಾಗಿ ಮರವಟ್ಟಿರುವ ಭಾಗ; ಜಡ್ಡು ಕಟ್ಟಿರುವ ಭಾಗ; ಜಡ್ಡು. **Cállous** ಕ್ಯಾಲಸ್ (ಗು.) (ಶ. ವಿ., ಪ್ರಾ. ವಿ.) (ಚರ್ಮ) ಗಡುಸಾದ, ಮರವಟ್ಟಿರುವ, ಜಡ್ಡುಗಟ್ಟಿರುವ. (ಮನುಷ್ಯ, ಹೃದಯ, ಮೊ. ಗಳ ವಿಷಯದಲ್ಲಿ) ಕಲ್ಲೆದೆಯ, ನಿರ್ದಯ, ಕಠಿನ.

Cállousness (ನಾ.); **Cállus** (ನಾ.) (ಶ. ವಿ., ಸ. ವಿ., ರೋಗ) ಚರ್ಮದ ಅಥವಾ ಮೃದು ಅಂಗಾಂಶದ ಜಡ್ಡುಗಟ್ಟಿದ ಭಾಗ. ಮುರಿದ ಎಲುಬಿನ ಭಾಗಗಳು ಮರಳಿ ಕೂಡಿಕೊಳ್ಳುವಾಗ ಅಲ್ಲಿ ಸೇರುವ ಎಲುಬುಪದಾರ್ಥ.

Cállow ಕ್ಯಾಲೊ (ಗು.) (ಹಕ್ಕಿ) ಗರಿಹುಟ್ಟದ; (ಹಕ್ಕಿಯ ಮರಿಗಳಂತೆ) ತುಪ್ಪುಳು ತುಂಬಿದ. ಹಸಿಯ; ಅಪಕ್ವ; ಎಳತು (ರೂಪ.); ಅನುಭವವಿಲ್ಲದ. (ಐರಿಷ್; ಗು., ನಾ.) ತಗ್ಗಿನಲ್ಲಿರುವ, ಸಾ., ನೀರು ನುಗ್ಗುವ ಹುಲ್ಲುಮೈದಾನ.

Cállus. Callosity ನೋಡಿ.

Calm ಕಾಮ್ (ನಾ., ಗು.) ಶಾಂತಿ; ಸ್ತಬ್ಧತೆ; ನಿಶ್ಶಬ್ದತೆ. (ವಾಯುಸ್ಥಿತಿ, ಗಾಳಿ, ಸಮುದ್ರ, ಮನಸ್ಸು, ಸಮಾಜ, ರಾಜ್ಯಸ್ಥಿತಿ — ಇವುಗಳ) ಪ್ರಶಾಂತಿ. (A calm ಗಾಳಿಬೀಸದ ಸಮಯ). (ಬಳ. ಮೊ.) ಅಧಿಕಪ್ರಸಂಗಿತನದ; ಧಾರ್ಷ್ಟ್ಯದ (Pretty c. of him ಅವನದು ಏನು ನಿಸ್ಸಂಕೋಚ! ನಿರ್ದಾಕ್ಷಿಣ್ಯ! ದಾಷ್ಟಿಕತನ!). ಶಾಂತ; ಸ್ತಬ್ಧ; ನಿಶ್ಶಬ್ದ; ನಿರ್ವಾತ; ನಿಶ್ಚಲ; (ರೂಪ. ಸಹ). **Cálmly** (ಕ್ರಿ. ವಿ); **Cálmness** (ನಾ.); **Cálmative** ಕ್ಯಾಲ್ಮಟಿವ್, ಕಾಮ — (ಗು., ನಾ.) (ವೈ. ಶಾ.) ಶಾಮಕ; ಶಮನಕಾರಿ (ಔಷಧ)

Calm (ಕ್ರಿ.) ಪ್ರಶಾಂತ ಮಾಡು; ಸಮಾಧಾನಗೊಳಿಸು; ಸಂತೈಸು; ಶಾಂತವಾಗು (ಅಕ., *down* ಉಪ. ದೊಡನೆ)

Cálomel ಕ್ಯಾಲೊಮೆಲ್ (ನಾ.) (ವೈ. ಶಾ.) (ಭೇದಿಯೌಷಧವಾಗಿ ಉಪಯೋಗಿಸುವ) ರಸಕರ್ಪೂರ (ರಸ ಪೀತವಾಯು ಸಂಯುಕ್ತ); ರಸ ವಿರೇಚಕ.

Caloréscence ಕ್ಯಾಲೊರೆಸೆನ್ಸ್ (ನಾ.) (ಭೌ. ವಿ.) ಉಷ್ಣ ಕಿರಣಗಳು ದೀಪಕಿರಣಗಳಾಗಿ ಮಾರ್ಪಡುವುದು: ಉಷ್ಣ ದೀಪ್ತಿ.

Calori- (ಸಮಾಸಪದಗಳಲ್ಲಿ ಪೂರ್ವಪದ) (ಭೌ. ವಿ., ಶ. ವಿ.): **Calórifácient** ಕಲಾರಿಫೇಷೆಂಟ್ (ಗು.) (ಭೌ. ವಿ.) ಉಷ್ಣಜನಕ. **Calorífic** ಕ್ಯಾಲೊರಿಫಿಕ್ (ಗು.) (ಭೌ. ವಿ.) ಉಷ್ಣಜನಕ. (ಶಿಥಿಲವಾಗಿ) ಉಷ್ಣಸಂಬಂಧಿ. C. value (ಒಂದು ಮಾನ ತೂಕದ ದಾಹ್ಯ ಪದಾರ್ಥವು ಸಂಪೂರ್ಣವಾಗಿ ಸುಡುವುದರಿಂದ ಉತ್ಪತ್ತಿಯಾಗುವ ಉಷ್ಣ; (ಇದು ಆ ಪದಾರ್ಥದ) ಉಷ್ಣಜನಕ ಶಕ್ತಿಯ ಬೆಲೆ. **Calórify** ಕಲಾರಿಫೈ (ಕ್ರಿ. ಸಕ.) ಕಾಯಿಸು; ಬಿಸಿ ಮಾಡು. **Calórificátion** (ನಾ.) ಉಷ್ಣ ಜನನ (ಮು., ಪ್ರಾಣಿದೇಹದಲ್ಲಿ). **Calorímeter** ಕ್ಯಾಲೊರಿಮಿಟರ್ (ನಾ.) ಉಷ್ಣಮಾಪಕ. **Calorímetry** (ನಾ.); **Calórimétric(al)** (ಗು.)

Calóric ಕಲಾರಿಕ್ (ನಾ.) (ಭೌ. ವಿ.) [ಉಷ್ಣವೆಂಬುದು ಸ್ಥಿತಿಸ್ಥಾಪಕತ್ವವುಳ್ಳ ಒಂದು ದ್ರವಪದಾರ್ಥವೆಂದು ತಿಳಿದು, ಪೂರ್ವದಲ್ಲಿ ಅದಕ್ಕೆ 'ಲಾವ್ವಾಸೇ' (Lavoisier) ಎಂಬ ಫ್ರೆಂಚ್ ವೈಜ್ಞಾನಿಕನು ಕೊಟ್ಟಿದ್ದ ಹೆಸರು. (ಈಗ ಈ ತತ್ತ್ವವು ಅರೂಢಿ)]. ಉಷ್ಣ. C. engine ಕಾಯ್ದ ವಾಯುವಿನಿಂದ ನಡೆಯಿಸುವ ಚಲನಯಂತ್ರ: ಉಷ್ಣವಾಯು ಯಂತ್ರ.

Cálorie, -ry ಕ್ಯಾಲೊರಿ (ನಾ.) (ಭೌ. ವಿ.) ಉಷ್ಣದ ಮಾನ: 'ಕ್ಯಾಲೊರಿ': [೪°C. ಶಾಖದಲ್ಲಿರುವ ಒಂದು ಗ್ರ್ಯಾಂ ತೂಕದ ನೀರನ್ನು ೧°C. ಶಾಖವೇರುವಂತೆ (ಎಂದರೆ, ೫°C. ಶಾಖಕ್ಕೇರುವಂತೆ) ಕಾಯಿಸುವುದಕ್ಕೆ ಬೇಕಾಗುವ ಉಷ್ಣ; ಇದು ಸಣ್ಣ ಕ್ಯಾಲೊರಿ. ಒಂದು 'ಕಿಲೊಗ್ರ್ಯಾಂ' (ಎಂದರೆ, ಸಾವಿರ ಗ್ರ್ಯಾಂ) ತೂಕದ ನೀರನ್ನು ೧°C. ಶಾಖವೇರುವಂತೆ ಕಾಯಿಸುವುದಕ್ಕೆ ಬೇಕಾಗುವ ಉಷ್ಣ; ಇದು ದೊಡ್ಡ ಕ್ಯಾಲೊರಿ]

Cáltrop, -trap ಕ್ಯಾಲ್‌ಟ್ರಾಪ್ (ನಾ.) ಅಶ್ವಸೈನ್ಯದ ಕುದುರೆಗಳು ಸಲೀಸಾಗಿ ಹೋಗಲಾಗದಂತೆ ನೆಲದಮೇಲೆ ಹಾಕಿರುವ, ನಾಲ್ಕು ಚೂಪು ದಸಿಗಳುಳ್ಳ ಕಬ್ಬಿಣದ ಗುಂಡು. ಒಂದು ಜಾತಿ ಮುಳ್ಳುಗಿಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cálumny ಕ್ಯಾಲಮ್ನಿ (ನಾ.) ನಿಂದೆ ; ಅಪವಾದ ; ಮಿಥ್ಯಾಪವಾದ ; ಚಾಡಿ ; ಜರೆತ ; ಹಳಿವು. **Calúmniate** ಕಲಮ್ನಿಯೇಟ್ (ಕ್ರಿ. ಸಕ.) ಹಳಿ ; ಅಪವಾದ ಹೊರಿಸು ; ಕಳಂಕ ಹಚ್ಚು. **Calumniátion** (ನಾ.) ; **Calúmniator** (ನಾ.) ; **Calúmniatory** (ಗು.) ; **Calúmnious** (ಗು.) ಅಪನಿಂದೆ ಮಾಡುವ ಸ್ವಭಾವದ ; ಅಪನಿಂದಕ ; ನಿಂದಾತ್ಮಕ. **Calúmniously** (ಕ್ರಿ. ವಿ.)

Cálvary ಕ್ಯಾಲ್ವರಿ (ನಾ) (ರೋ. ಕ್ಯಾ.) ಏಸುಕ್ರಿಸ್ತನನ್ನು ಶಿಲುಬೆಗೆ ಏರಿಸಿದ ಸ್ಥಳ ; ಹಾಗೆ ಏರಿಸಿದ ಚಿತ್ರ ; ಅದರ ಸ್ಮಾರಕ.

Calve ಕಾವ್ (ಕ್ರಿ.) ಕರುಹಾಕು ; ಈಯಿ. (ತೇಲುವ ನೀರ್ಗಲ್ಲಿನ ಗುಡ್ಡದ ವಿಷಯದಲ್ಲಿ) ನೀರ್ಗಲ್ಲಿನ ದಿಮ್ಮಿಯನ್ನು ಎಸೆ.

Cálvinism ಕ್ಯಾಲ್ವಿನಿಸ್ಮ್ (ನಾ.) ಫ್ರಾನ್ಸ್‌ದೇಶದ ದೈವಶಾಸ್ತ್ರಜ್ಞನೂ ಸುಧಾರಕನೂ ಆದ 'ಜಾನ್ ಕ್ಯಾಲ್ವಿನ್ನ'ನ ದೈವಜ್ಞಾನ ಮತ: ಕ್ಯಾಲ್ವಿನ್ ಮತ (ಅಭಯ ಪ್ರದಾನ ಮಾಡುವುದರಲ್ಲಿ ದೇವರಿಗೆ ಸರ್ವ ಸ್ವತಂತ್ರವಿರುವುದು ಎಂಬುದೇ ಈ ಮತದ ಪ್ರಧಾನ ತತ್ತ್ವ). **Cálvinist** (ನಾ.) ಈ ಮತದ ಅನುಯಾಯಿ. **Calvinístic(al)** (ಗು.) ; **Calvinístically** (ಕ್ರಿ. ವಿ.) ; **Cálvinize** (ಕ್ರಿ.) ಕ್ಯಾಲ್ವಿನ್ನಿನ ಅನುಯಾಯಿಯಾಗು ; ಕ್ಯಾಲ್ವಿನ್ ಮತವನ್ನು ಬೋಧಿಸು ; ಕ್ಯಾಲ್ವಿನ್ ಮತ ನಾಟುವಂತೆ ಮಾಡು.

Calx ಕ್ಯಾಲ್ಕ್ಸ್ (ನಾ. ; ಬ. ವ. Calces — ಸೀಸ್) ಒಂದು ಲೋಹ ವನ್ನಾಗಲಿ ಅದುರನ್ನಾಗಲಿ ಸುಟ್ಟಮೇಲೆ ಉಳಿಯುವ ಬಂಧನಗೆಟ್ಟ ಪದಾರ್ಥ ಅಥವಾ ಪುಡಿ ; ಭಸ್ಮ ; ಲೋಹ ಭಸ್ಮ.

Cálycle ಕ್ಯಾಲಿಕ್‌ಲ್ (ನಾ) (ಸ. ವಿ.) ಪುಷ್ಪಪಾತ್ರದ ಅಡಿಯಲ್ಲಿ ಸುತ್ತಲೂ ಇರುವ ಸಣ್ಣಸಣ್ಣ ದಳಗಳು : ಉಪ ಪುಷ್ಪಪಾತ್ರ. **Cálycled** (ಗು.) ; **Calýcular** ಕಲಿಕ್ಯುಲರ್ (ಗು.) ; **Calýculate** (ಗು.) ಉಪ ಪುಷ್ಪಪಾತ್ರವುಳ್ಳ.

Cályx ಕ್ಯಾ(ಕೇ)ಲಿಕ್ಸ್ (ನಾ. ; ಬ. ವ. -yces, — ಸೀಸ್, -yxes) (ಸ. ವಿ.) ಮೊಗ್ಗಿನ ಹೊರಮೆಯ್ಯ ಸುತ್ತಲೂ ಇರುವ ಹೊದಿಕೆ: ಪುಷ್ಪಪಾತ್ರ ; — ಪುಟ. (ಶ. ವಿ., ಜೀ. ವಿ.) = Calix.

Cam ಕ್ಯಾಮ್ (ನಾ.) (ಯಾವುದಾದರೂ ಯಂತ್ರದಲ್ಲಿಯ ಚಕ್ರದ ಅಥವಾ ಇತರ ಸುತ್ತುವಂಗದ) ಚಾಚುಭಾಗ. (ಈ ಚಕ್ರ, ಮೊ. ಸುತ್ತುವುದರಿಂದ ಯಂತ್ರದ ಮತ್ತೊಂದು ಭಾಗವು ಹಿಂದಕ್ಕೆ ಮುಂದಕ್ಕೆ ಆಡುವಂತೆಯೊ ಅಥವಾ ಅದರಲ್ಲಿ ಇತರ ವಿಧವಾದ ಚಲನೆಯುಂಟಾಗುವಂತೆಯೊ ಅಳವಡಿಸಿರುವುದು)

Camarádérié (F) ಕಾಮರಾಡರೀ (ನಾ.) ಜೊತೆಗಾರರಲ್ಲಿ ಪರಸ್ಪರ ವಾಗಿರುವ ಸಲಿಗೆ, ವಿಶ್ವಾಸ, ನಂಬಿಕೆ, ಮೈತ್ರಿ ; ಒಡನಾಡಿತನ.

Cámber ಕ್ಯಾಂಬರ್ (ನಾ., ಕ್ರಿ.) (ತೊಲೆ, ಹಡಗಿನ ಅಂತಸ್ತುಗಳ ನೆಲ, ರಸ್ತೆ, ಮೊ. ಗಳಲ್ಲಿ) ಕಮಾನಿನಂತೆ ಸ್ವಲ್ಪ ಮೇಲುಬ್ಬು, ಬಾಗು. ಕಮಾನಿನಂತೆ ಸ್ವಲ್ಪ ಬಾಗಿರುವ ತೊಲೆ (= C.-beam). (ಕ್ರಿ.) (ತೊಲೆ. ಮೊ.) ಬಾಗು ಕೊಡು, ಬಾಗಿರು.

Cámbist ಕ್ಯಾಂಬಿಸ್ಟ್ (ನಾ.) ಮಾರುವೆಯ ವ್ಯಾಪಾರದಲ್ಲಿ ನಿಪುಣ ; ಮಾರುವೆಯ ಹುಂಡಿಗಳ ವ್ಯಾಪಾರಿ ; ಮಾರುವೆಯ ವಿಚಾರಗಳ ಕೈಪಿಡಿ.

Cámbium ಕ್ಯಾಂಬಿಯಂ (ನಾ.) ಹೊರಬೆಳವಣಿಗೆಯುಳ್ಳ ಗಿಡಗಳ ತೊಗಟೆಯ ತಳಗಡೆಯಿರುವ ಕೋಶಮಯವಾದ ಅಂಗಾಂಶ: ವರ್ಧನ ಸ್ತರ.

Cámbrian ಕ್ಯಾಂಬ್ರಿಯನ್ (ಗು., ನಾ.) ವೇಲ್ಸಿನ(ವನು). (ಭೂ. ವಿ.) ವೇಲ್ಸ್ ಮತ್ತು ಕಂಬರ್ಲೆಂಡ್ ಪ್ರದೇಶಗಳಲ್ಲಿ 'ಸಿಲ್ಯೂರಿಯನ್' ಪದರದ ಬಂಡೆಗಳ ತಳದಲ್ಲಿರುವ ಪ್ರಾಚೀನ ಜೀವಿ ಯುಗದ ಶಿಲೆಗಳು (ಶಿಲೆಗಳ)

Cámbric ಕೇಂಬ್ರಿಕ್ (ಗು., ನಾ.) ನಯವಾದ ಬಿಳಿಯ ನಾರಿನ ಬಟ್ಟೆ(ಯ) ; ಕೇಂಬ್ರಿಕ್ ಬಟ್ಟೆ(ಯ). ಕೈಚೌಕ ಮಾಡುವ ಬಟ್ಟೆ. (ಇದನ್ನು ಮೊದಲು ತಯಾರಿಸಿದ 'ಕೇಂಬ್ರೇ' ಎಂಬ ಸ್ಥಳದ ಹೆಸರಿನಿಂದ)

Came. Come ಧಾತುವಿನ ಭೂತ ರೂಪ.

Cámel ಕ್ಯಾಮೆಲ್ (ನಾ.) ಒಂಟೆ. (ರೂಪ.) ನಂಬಲು ಅಥವಾ ಸಹಿಸಲು ಸಾಧ್ಯವಲ್ಲದ ವಿಷಯ. ನೀರು ಆಳವಿಲ್ಲದುದರಿಂದ ನೆಲಹತ್ತಿದ ಹಡಗನ್ನು ಮೇಲಕ್ಕೆತ್ತಿ ತೇಲಿಸುವ ಯಂತ್ರಸಲಕರಣೆ : ಪ್ಲಾವನ ಯಂತ್ರ : 'ಉಷ್ಟ್ರ'. ಒಂದು ತೆರದ ಆಕಾಶ ಫಲಕಯಾನ : 'ಉಷ್ಟ್ರ'. **C.-bird** ಉಷ್ಟ್ರಪಕ್ಷಿ. **C.-brown** ಒಂದು ಜಾತಿಯ ಗಾಳದ ನೊಣ. **C.'s-hair, C.-hair** (ಗು.) ಒಂಟೆಯ ಕೂದಲಿನಿಂದ ಅಥವಾ ಅಳಿಲಿನ ಬಾಲದ ಕೂದಲಿನಿಂದ ಮಾಡಿದ (ಬಣ್ಣದ ಕುಂಚಗಳು). **Cameleér** — ಲೀಯರ್ (ನಾ.) ಒಂಟೆ ನಡೆಸುವವನು ; ಒಂಟೆ ಸವಾರ. **Cámelry** (ನಾ.) ಒಂಟೆ ಸವಾರ ಸೈನ್ಯ : ಉಷ್ಟ್ರ ದಳ.

Cámelopard, Camélopard ಕ್ಯಾ(ಕ)ಮೆಲೊಪಾರ್ಡ್ (ನಾ.) ಜಿರಾಫೆ ಮೃಗ. (ಖ. ವಿ.) ಸಪ್ತರ್ಷಿ ನಕ್ಷತ್ರ ಮಂಡಲಕ್ಕೂ ಶರ್ಮಿಷ್ಠಾ ನಕ್ಷತ್ರ ಪುಂಜಕ್ಕೂ ಮಧ್ಯೇ ಇರುವ ಒಂದು ನಕ್ಷತ್ರಪುಂಜ : ಕರಭ.

Cámeo ಕ್ಯಾಮಿಯೊ (ನಾ.) (ಬೇರೆ ಬೇರೆ ಬಣ್ಣದ ಪದರಗಳುಳ್ಳ ಒಂದು ಪ್ರಶಸ್ತ ಶಿಲೆಯ ಮೇಲ್ಭಾಗದ ಪದರದಲ್ಲಿ ಉಬ್ಬುಚಿತ್ರ ಅಥವಾ ಉಬ್ಬು ವಿಗ್ರಹ ಕೆತ್ತಿ, ತಳಗಿನ ಪದರವನ್ನು ಹಿನ್ನೆಲೆಯಾಗಿ ಬಿಟ್ಟಿರುವ) ಉಬ್ಬು ಕೆತ್ತನೆ. ಅದೇ ರೀತಿಯಾಗಿ ಚಿತ್ರಕೆತ್ತಿದ ಪ್ರಾಣಿಗಳ ಚಿಪ್ಪು.

Cámera ಕ್ಯಾಮೆರ (ನಾ.) [In c. (L) ನ್ಯಾಯಾಧಿಪತಿಯ ಅಂತರ್ಗೃಹದ ಕೋಣೆಯಲ್ಲಿ (ಬಹಿರಂಗವಾದ ನ್ಯಾಯಸ್ಥಾನದಲ್ಲಲ್ಲ) ; ಗುಪ್ತವಾಗಿ ; ಏಕಾಂತದಲ್ಲಿ]. ಛಾಯಾಗ್ರಾಹಿ (ಪೆಟ್ಟಿಗೆ) [(C. obscura ಎಂಬುದರ ಸಂಕ್ಷಿಪ್ತ: ಪದಶಃ ಅರ್ಥ, ಕತ್ತಲಕೋಣೆ) ಒಂದು ವ್ಯಕ್ತಿಯ ಅಥವಾ ವಸ್ತುವಿನ ಮೇಲೆ ಬಿದ್ದ ಬೆಳಕು, ಮುಚ್ಚಿದ ಒಂದು ಕತ್ತಲುಪೆಟ್ಟಿಗೆಯ ಮುಂಭಾಗದಲ್ಲಿರುವ ಲೆನ್ಸಿನ ಮೂಲಕ ಪೆಟ್ಟಿಗೆಯೊಳಕ್ಕೆ ಹರಿದು, ಅದರ ಹಿಂಭಾಗದಲ್ಲಿಯ ಕಾಗದ ಅಥವಾ ಗಾಜಿನ ತೆರೆಯಮೇಲೆ ಪ್ರತಿಬಿಂಬ ಬೀಳುವಂತೆ ಅಳವಡಿಸಿರುವ ಸಲಕರಣೆ]. C. lucida (ಪದಶಃ ಅರ್ಥ, ಬೆಳಕುಕೋಣೆ) ಚಿತ್ರ ತೆಗೆಯಬೇಕಾದ ಒಂದು ವಸ್ತುವಿನಮೇಲೆ ಬಿದ್ದು ಹೊರಟ ಬೆಳಕಿನ ಕಿರಣಗಳು ಒಂದು ಪ್ರಿಸಮ್ಮಿನ (ಮುಪ್ಪಟ್ಟೆಯ ಗಾಜಿನ) ಮೂಲಕ ಪ್ರತಿಫಲಿತವಾಗಿ, ತಳಗಡೆ ಇಟ್ಟಿರುವ ಕಾಗದದಮೇಲೆ ಆ ಚಿತ್ರವು ರಚನೆಯಾಗುವಂತೆ ತೋರಿ, ಅದನ್ನು ಸೀಸದ ಕಡ್ಡಿಯ ಮೂಲಕ ತಿದ್ದಲು ಸಾಧ್ಯವಾಗುವಂತೆ ಅಳವಡಿಸಿರುವ ಸಲಕರಣೆ.

Cámouflage ಕ್ಯಾಮುಫ್ಲಾಷ್ (ನಾ., ಕ್ರಿ. ಸಕ.) (ಫಿರಂಗಿಗಳು, ಹಡಗುಗಳು, ಇತರ ಯುದ್ಧಸಾಮಗ್ರಿಗಳು, ಮೊ. ವು ಶತ್ರುವಿನ ದೃಷ್ಟಿಗೆ ಬೀಳದಂತೆ, ಬಣ್ಣದ ಪಟ್ಟೆಗಳು, ಹೊಗೆಯ ತೆರೆ, ಮೊ. ನ್ನು ಉಪಯೋಗಿಸಿ) ಮರೆಮಾಡು(ವುದು). (ನಿಜಸ್ಥಿತಿ ತಿಳಿಯದಂತೆ) ಭ್ರಮೆಹುಟ್ಟಿಸು(ವುದು) ; ಕಣ್ಣಿಗೆ ಮಣ್ಣೆರಚು(ವುದು). ಸುಳಿವು ತಿಳಿಯದಂತೆ ಹಾಕುವ ವೇಷ ; ಛದ್ಮ.

Camp ಕ್ಯಾಂಪ್ (ನಾ.) ಬೀಡು ; ಪಾಳೆಯ ; ಶಿಬಿರ ; ಠಾಣ್ಯ ; ದಂಡು ; ಯುದ್ಧದಲ್ಲಿ ತೊಡಗಿರುವ ಸೈನ್ಯ. ಸೇನಾ ವೃತ್ತಿ. (ಪ್ರಯಾಣಿಕರು, ಅಲೆಯುತ್ತಿರುವ ಸ್ವಭಾವದವರು, ಕೊರಚರು, ಮೊ. ವರ) ಬೀಡು. ಬೀಡು ಬಿಡುವುದು. ಬೀಡು ಬಿಟ್ಟಿರುವವರು. ಒಂದು ಸಿದ್ಧಾಂತದ ಅನುಯಾಯಿಗಳು ; ಪಕ್ಷ (Opposite c. ಎದುರು ಪಕ್ಷ). **C.-chair, C.-cot** (ಮಡಿಸಿ ಸುಲಭವಾಗಿ ಸಾಗಿಸಲಾಗುವ) ಬಿಡಾರದ ಕುರ್ಚಿ, ಮಂಚ. **C.-colour** ಶಿಬಿರದ ಎಲ್ಲೆಯನ್ನು ಗುರುತುಮಾಡಲು ಉಪಯೋಗಿಸುವ ಬಾವುಟ : ಬೀಡುಬಾವುಟ. **C.-fever** ಶಿಬಿರ ಜ್ವರ (ಮು., ಟೈಫಸ್). **C.-fire** ಶಿಬಿರದಲ್ಲಿ ಉರಿಸುವ ಬೆಂಕಿ ; ಶಿಬಿರಾಗ್ನಿ. ಸೈನಿಕರು, ಮೊ. ರ ದಳಗಳ ಸಂತೋಷ ಕೂಟ. **C.-follower** ಸೈನಿಕೋದ್ಯೋಗವಿಲ್ಲದೆ ಸೈನಿಕರನ್ನು ಅನುಸರಿಸಿ ಹೋಗುವವನು(ಳು) : ಸೇನಾನುಚರ. **C.-meeting** ಬಯಲಿನಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥವಾ ಡೇರೆಗಳಲ್ಲಿ ಅನೇಕ ದಿನಗಳು ನಡೆಯುವ ಅಮೆರಿಕನರ ಧರ್ಮ (ಮತ) ಸಭೆ.

Camp (ಕ್ರಿ.) ಬೀಡು ಬಿಡು ; ಬಿಡಾರದಲ್ಲಿ ಉಳಿದುಕೊ : ಬಯಲಿನಲ್ಲೊ ಡೇರೆಯಲ್ಲೊ ಇಳಿದುಕೊ (C. out) ; ಇಳಿದುಕೊ. (ಸೇನೆಯನ್ನು) ಬೀಡು ಬಿಡಿಸು ; ದಂಡಿಳಿಸು.

Campágna, -gnia ಕಾಂಪಾನ್ಯ (ನಾ.) The C. ಇಟಲಿಯಲ್ಲಿ ಟೈಬರ್ ನದಿಯ ಆಗ್ನೇಯಕ್ಕಿರುವ ಬಯಲು.

Campaígn ಕ್ಯಾಂಪೇನ್ (ನಾ., ಕ್ರಿ. ಅಕ.) ಒಂದು ಗೊತ್ತಾದ ಯುದ್ಧ ಪ್ರದೇಶದಲ್ಲಿ, ಅಥವಾ ಒಂದು ಗೊತ್ತಾದ ಉದ್ದೇಶದಿಂದ, ನಡೆಯಿಸುವ ಕದನ ಪರಂಪರೆ ; ದಂಡ ಯಾತ್ರೆ. (ಮು., ರಾಜ್ಯನೀತಿಯಲ್ಲಿ, ಒಂದು ನೀತಿಯ ಪಕ್ಷ ಹಿಡಿಯುವುದಕ್ಕಾಗಲಿ ಅದಕ್ಕೆ ವ್ಯತಿರಿಕ್ತವಾಗಾಗಲಿ ವ್ಯವಸ್ಥೆ ಮಾಡಿ ನಡೆಯಿಸಿದ ಕಾರ್ಯಸರಣಿ) : ಚಳವಳಿ. (ಕ್ರಿ.) ಕದನದಲ್ಲಿ, ಚಳವಳಿಯಲ್ಲಿ, ಭಾಗ ವಹಿಸು. **Campaígner** (ನಾ.) (Old c. ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವುದರಲ್ಲಿ ಪಳಗಿದವನು, ನುರಿತವನು)

Campaníle (It.) ಕಾಂಪಾನೀಲೆ, (F) ಕಾಂಪನೀಲ್, **Cámpanile** ಕ್ಯಾಂಪನಿಲ್, — ನೈಲ್ (ನಾ.) ಗಂಟೆಯ ಗೋಪುರ (ಮು., ಕ್ರೈಸ್ತ ದೇವಾಲಯಕ್ಕೆ ಸೇರಿರದಂತೆ ಪ್ರತ್ಯೇಕವಾಗಿ ಕಟ್ಟಿರುವದು). **Campanólogy** ಕ್ಯಾಂಪನಾಲೊಜಿ (ನಾ.) ಘಂಟಾ ವಿದ್ಯೆ (ಗಂಟೆಗಳನ್ನು ಎರಕ ಹೊಯ್ಯುವುದು, ಬಾರಿಸುವುದು, ಮೊ.). **Campanóloger** (ನಾ.) ; **Campanólogist** (ನಾ.)

Campánulate ಕ್ಯಾಂಪ್ಯಾನ್ಯುಲೆಟ್ (ಗು.) (ಜೀ. ವಿ., ಪ್ರಾ. ವಿ.) ಗಂಟೆಯಾಕಾರದ ; ಘಂಟಾಕಾರ.

Cámphor ಕ್ಯಾಂಫರ್ (ನಾ.) ಕರ್ಪೂರ. **Camphóric** — ಫಾರಿಕ್ (ಗು.) ಕರ್ಪೂರದ ; ಕರ್ಪೂರ ಸಂಯುಕ್ತ. **Cámphorate** ಕ್ಯಾಂಫೊರೆಟ್ (ನಾ.) (ರ. ವಿ.) ಕರ್ಪೂರಾಮ್ಲದ ಒಂದು ಲವಣ : ಕರ್ಪೂರ ಲವಣ. (ಕ್ರಿ. ಸಕ.) (ಕ್ಯಾಂಫೊರೇಟ್) ಕರ್ಪೂರ ಬೆರಸು ; ಕರ್ಪೂರ ಹಾಕಿ ಸಂಸ್ಕರಿಸು.

Cámpshot ಕ್ಯಾಂಪ್‌ಷಾಟ್, **-shedding, -sheeting** (ನಾ.) ನೀರಿನ ಹೊಡೆತಕ್ಕೆ ತಡೆಯಾಗಿ ನದಿಯ ದಡದಲ್ಲಿ ಹೂಳಿರುವ ದಸಿಗಳ ಸಾಲು, ಹಲಗೆಸಾಲು. **Cámpshed** (ಕ್ರಿ. ಸಕ.) — ಸಾಲು ಕಟ್ಟು.

Cámpus ಕ್ಯಾಂಪಸ್ (ನಾ.) (ಅಮೆ. ಸಂ.) ವಿದ್ಯಾಶಾಲೆಯ ಮೈದಾನ, ಬಯಲು.

Can[1] ಕ್ಯಾನ್ (ನಾ., ಕ್ರಿ. ಸಕ.) ನೀರು, ಎಣ್ಣೆ, ಮೊ. ದ್ರವಗಳನ್ನಿಡುವ ಪಾತ್ರೆ ; ಡಬ್ಬ (ಸಾ., ಟಿನ್ ತಗಡಿನದು ಅಥವಾ ಇತರ ಲೋಹದ್ದು). (ಮಾಂಸ, ಮೀನು, ಹಣ್ಣು, ಮೊ. ನ್ನು ಕೆಡದಂತೆ ಇಡುವುದಕ್ಕಾಗಿ ಗಾಳಿ ಹೊಗದಂತೆ ಬೆಸೆದಿರುವ) ಡಬ್ಬಿ. (ಕ್ರಿ.) ಇಂಥ ಡಬ್ಬಿಗಳಲ್ಲಿ ತುಂಬು. C.-buoy ಸಮುದ್ರದಲ್ಲಿ ಮರಳುದಿಬ್ಬ, ಮೊ. ನ್ನು ತೋರಿಸಲು ಇಟ್ಟಿರುವ ಶಂಕುವಿನ ಆಕಾರದ ತೇಲುವೆ. **Cánful** (ನಾ.) ; **Cánner** (ನಾ.) ; **Cánnery** ಮಾಂಸ, ಹಣ್ಣು, ಮೊ. ನ್ನು ಕೆಡದಂತೆ ಡಬ್ಬಿಗಳಲ್ಲಿ ತುಂಬಿ ಭದ್ರಪಡಿಸುವ ಕಾರ್ಖಾನೆ. **Canned** ಕ್ಯಾನ್ಡ್ (ಗು.) (ಅಸಂ.) ಕುಡಿತದಿಂದ ಅಮಲೇರಿದ ; ಕುಡಿದ.

Can[2] ಕ್ಯಾನ್ [ಸಹಾಯಕ ಕ್ರಿ. ; ಮಧ್ಯಮ ಪುರುಷ ಏ. ವ. Canst ; ಪ್ರಥಮ ಪುರುಷ ಏ. ವ. Can ; ನಿಷೇಧ ರೂಪ Cannot (ಕ್ಯಾನಟ್), Can't ; ಭೂತ, ಸಂಭಾವನಾ ರೂಪ Could (ಕುಡ್), Couldst, Couldest] — ಬಲ್, — ಆರ್ (ಉದಾ., ಮಾಡಬಲ್ಲೆ, ಮಾಡಲಾಪೆ). **Cánnot** — ಆರೆ (ಉದಾ., ಮಾಡಲಾರೆ)

Cánaan ಕೇನನ್, ಕೇನ್ಯನ್ (ನಾ.) (ಬೈಬಲ್) ಸರಿಸುಮಾರಾಗಿ ಈಗ ಪ್ಯಾಲೆಸ್ಟೈನ್ ಇರುವ ಭಾಗ. ಸ್ವರ್ಗ.

Canaílle (F) ಕಾನಾಯ್, ಕನೇಲ್ (ನಾ.) ಕೀಳು ಮಂದಿ ; ಬೀದಿಯ ಜನ ; ದೊಂಬಿ ; ಹಿಂಡು.

Canál ಕನ್ಯಾಲ್ (ನಾ., ಕ್ರಿ. ಸಕ.) (ಸಸ್ಯಗಳಲ್ಲಾಗಲಿ ಪ್ರಾಣಿಗಳಲ್ಲಾಗಲಿ ಆಹಾರ, ದ್ರವ, ವಾಯು, ಮೊ. ವು ಸಂಚರಿಸುವ) ನಾಳ. ಕಾಲುವೆ ; ನಾಲೆ (Canals of Mars ಅಂಗಾರಕ ಗ್ರಹದಮೇಲೆ ಕಾಲುವೆಗಳಂತೆ ಕಾಣುವ ಗುರುತುಗಳು). (ಪ್ರಾ. ವಿ.) ಚಿಪ್ಪಿನಪ್ರಾಣಿಗಳಲ್ಲಿ ಶ್ವಾಸನಾಳವನ್ನು ಚಾಚುವುದಕ್ಕಾಗಿ ಕಾಲುವೆ. (ಕ್ರಿ.) ಕಾಲುವೆ ಮಾಡು ; ನಾಲೆಗಳನ್ನು ಏರ್ಪಡಿಸು. **Cánalize** ಕ್ಯಾನಲೈಸ್ (ಕ್ರಿ. ಸಕ.) = Canal (vb.) ; (ಏರಿಹಾಕುವುದು, ಸುತ್ತುಸುತ್ತಿಲ್ಲದಂತೆ ನೇರವಾಗಿ ಹರಿಯುವಹಾಗೆ ಮಾಡುವುದು — ಇವೇ ಮೊ. ಉಪಾಯಗಳಿಂದ ನದಿಯನ್ನು) ನಾಲೆಯಾಗಿ ತಿರುಗಿಸು. ಕಾಲುವೆ ಹೊಡೆ. **Canalizátion** (ನಾ.)

Canalículate(d) ಕ್ಯಾನಲಿಕ್ಯುಲೆಟ್, — ಲೇಟೆಡ್ (ಗು.) (ಜೀ. ವಿ.) ಉದ್ದುದ್ದವಾದ ಹಳ್ಳಗೆರೆಗಳುಳ್ಳ ; ಕಾಲುವೆ ಗೆರೆಯ ; ಗೆರೆಗಳುಳ್ಳ ; ರೇಖಾಂಕಿತ.

Cánard (F) ಕಾನಾರ್, **Canárd** ಕನಾರ್ಡ್ (ನಾ.) ಸುಳ್ಳು ಸುದ್ದಿ ; ಠಕ್ಕು ; ಕಪಟ ; ತಂತ್ರ ; ಮೋಸ.

Canarése. **Kanarese** ನೋಡಿ.

Canáry ಕನೇರಿ (ಗು., ನಾ.) ಕನೇರಿ ದ್ವೀಪಗಳ. ಹಳದಿಯ ಪುಕ್ಕವುಳ್ಳ ಒಂದು ಜಾತಿಯ ಹಾಡುಹಕ್ಕಿ : ಕನೇರಿ ಹಕ್ಕಿ (= C. bird. ಅಡವಿಯ ಹಕ್ಕಿಗೆ ಪುಕ್ಕ ಹಸುರು). ಕನೇರಿ ಮದ್ಯ (= C. wine). ಹಳದಿಯ ಬಣ್ಣದ ಗಾಳದ ನೊಣ. C.-coloured ಹಚ್ಚ ಹಳದಿ.

Cáncel ಕ್ಯಾನ್ಸಲ್ (ಕ್ರಿ.) ಅಳಿಸಿಬಿಡು ; ಹೊಡೆದುಬಿಡು ; ತೊಡೆದುಹಾಕು ; ಅಡ್ಡಗೆರೆ ಎಳೆದುಬಿಡು ; ರದ್ದುಮಾಡು ; ಅನುಪಯೋಗ ಮಾಡು. ಹಿಂದಿನ ಅಪ್ಪಣೆಗೆ ಪ್ರತಿಯಾಗಿ ಅಪ್ಪಣೆಕೊಡು ; ಪರಿಹಾರ ಮಾಡು ; ಹೊಡೆ ; ಒಂದನ್ನೊಂದು ನಿಷ್ಫಲವಾಗಿ ಮಾಡು. ಸರಿದೂಗು ; ಸರಿದೂಗಿಸು. (ಗಣಿತ) ಅಪೂರ್ಣಾಂಕದ ಅಂಶ ಛೇದಗಳೆರಡನ್ನೂ, ಅಥವಾ ಒಂದು ಸಮೀಕರಣದ ಎರಡು ಕಡೆಗಳನ್ನೂ, ಸಮಾನ ಅಪವರ್ತನದಿಂದ ಹೊಡೆ. **Cancellátion** (ನಾ.)

Cáncel (ನಾ.) ಪ್ರತ್ಯಾಜ್ಞೆ ; ರದ್ದು. ಮುದ್ರಣ ಮಾಡಿದ ಹಾಳೆಯನ್ನು ರದ್ದುಮಾಡಿ ಬೇರೆ ಪುನರ್ಮುದ್ರಣ ಮಾಡುವುದು. ಹಾಗೆ ರದ್ದುಮಾಡಿದ ಹಾಳೆ ; ಹಾಗೆ ಪುನರ್ಮುದ್ರಣ ಮಾಡಿದ ಹಾಳೆ. (Pair of) cancels ಟಿಕೆಟ್ಟುಗಳನ್ನು ತೂತುಮಾಡುವ ಇಕ್ಕಳ.

Cáncellate(d) ಕ್ಯಾನ್ಸೆಲೆಟ್, — ಲೇಟೆಡ್ (ಗು.) (ಸ. ವಿ., ಪ್ರಾ. ವಿ.) ಅನೇಕ ಗೆರೆಗಳ ಮತ್ತು ಅಡ್ಡಗೆರೆಗಳ ಗುರುತಿರುವ : ಜಾಲರೇಖೆಯ. (ಎಲುಬು) ಹೆಣೆದುಕೊಂಡಿರುವ ಅಸ್ಥಿ ತಂತುಗಳಿಂದಲೂ ಅಸ್ಥಿ ಫಲಕಗಳಿಂದಲೂ ಕೂಡಿ, ಮಧ್ಯೇ ಮಧ್ಯೇ ಸಂದುಬಿಟ್ಟಿರುವ : ಸಚ್ಛಿದ್ರ ; ಸರಂಧ್ರ. **Cáncellous** (ಗು.) (ಎಲುಬಿನ ವಿಷಯವಾಗಿ) = Cancellated.

Cáncer ಕ್ಯಾನ್ಸರ್ (ನಾ.) ಕರ್ಕಾಟಕ (ರಾಶಿ). [Tropic of C. ಕರ್ಕಾಟಕ (ಸಂಕ್ರಾಂತಿ) ವೃತ್ತ]. ತಾನಿರುವ ದೇಹಭಾಗವನ್ನು ತಿಂದುಹಾಕಿ, ಮಿತಿಯಿಲ್ಲದೆ ಹರಡುತ್ತ, ತೆಗೆದುಹಾಕಿದಲ್ಲಿ ಮತ್ತೆ ಬೆಳೆಯುತ್ತ ಹೋಗುವ, ಕೆಟ್ಟ ಕುರು ; ಏಡಿ ಹುಣ್ಣು ; ಅರ್ಬುದ ರೋಗ. (ರೂಪ.) (ಸೋಮಾರಿತನ, ಲಂಚ, ಮೊ. ಗಳ) ಕೆಡುಕು, ಕೇಡು, ರೋಗ. **Cáncered** (ಗು.) ; **Cáncerous** - ಸ - (ಗು.) ; **Cáncroid** ಕ್ಯಾಂಕ್ರಾಯ್ಡ್, — ಕ್ರೊಯಿಡ್ (ಗು., ನಾ.) ಏಡಿಯಂಥ (ಪ್ರಾಣಿ) ; ಅರ್ಬುದ ರೋಗದಂಥ (ವ್ಯಾಧಿ).

Candelábrum ಕ್ಯಾಂಡಿಲೇಬ್ರಮ್ (ನಾ. ; ಬ. ವ. - bra ; ಏ. ವ. -bra ; ಬ. ವ. -bras) ಮೇಣದ ಬತ್ತಿಗಳನ್ನಿಡುವ ಅಥವಾ ದೀವಿಗೆಗಳನ್ನಿಡುವ, ಸಾ., ಕವಲೊಡೆದ, ದೊಡ್ಡ ದೀಪಸ್ತಂಭ ; ಕವಲು ದೀಪಸ್ತಂಭ.

Candéscent ಕ್ಯಾಂಡೆಸೆಂಟ್ (ಗು.) ಬೆಳ್ಳಗೆ ಕಾಯ್ದ ಶಾಖದಿಂದ (ಅಥವಾ ಅಂಥ ಶಾಖದಿಂದ ಹೇಗೊ ಹಾಗೆ) ಕನಲುತ್ತಿರುವ : ಬಿಳಿಗಾವಿನ. **Candéscence** (ನಾ.) ಬಿಳಿಗಾವು ; ದೀಪ್ತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cándid ಕ್ಯಾಂಡಿಡ್ (ಗು.) ಮುಚ್ಚುಮರೆಯಿಲ್ಲದ ; ಸರಳ ; ನಿಷ್ಪಕ್ಷಪಾತ ; ನಿಷ್ಕಪಟ ; ಯಥಾರ್ಥವಾದಿ. C. friend ಮರ್ಮೋದ್ಘಾಟನೆ ಮಾಡುವ ಚಾಳಿಯುಳ್ಳ ಸ್ನೇಹಿತ. **Cándidly** (ಕ್ರಿ. ವಿ.) ; **Cándidness** (ನಾ.) ; **Cándour** — ಡರ್ (ನಾ.) ನಿಷ್ಕಾಪಟ್ಯ ; ನಿಷ್ಪಕ್ಷಪಾತ ; ನಿರ್ಮಾತ್ಸರ್ಯ ; ಯಥಾರ್ಥತೆ ; ಸರಳತೆ.

Cándidate ಕ್ಯಾಂಡಿಡೇಟ್ (ನಾ.) ಒಂದು ಅಧಿಕಾರಕ್ಕಾಗಲಿ ಘನತೆಯ ಸ್ಥಾನಕ್ಕಾಗಲಿ ಉಮೇದುವಾರನಾಗಿ ನಿಲ್ಲುವವನು, ಅಥವಾ ಇತರರಿಂದ ನಿಲ್ಲಿಸಲ್ಪಡುವವನು ; ಉಮೇದುವಾರ ; ಸ್ಥಾನಾನ್ವೇಷಿ ; ಅಭ್ಯರ್ಥಿ. **Cándidature** —ಡೆಟ್ಯುರ್, — ಡೇಚರ್ (ನಾ.) ಚುನಾವಣೆಗೆ ನಿಂತಿರುವುದು ; ಉಮೇದುವಾರಿ.

Cándle ಕ್ಯಾಂಡ್‌ಲ್ (ನಾ.) ಮೇಣದ ಬತ್ತಿ : ಮೋಂಬತ್ತಿ. ಬೆಳಕನ್ನು ಅಳೆಯುವ ಮಾನ (= C.-power). He can't hold a c. to, He is not fit to hold a c. to ಅವನೊಡನೆ ಹೋಲಿಕೆಗೆ ನಿಲ್ಲಲಾರ. Bell book and candle (Bell ನೋಡಿ). The game is not worth the c. ಕಷ್ಟಕ್ಕೆ ತಕ್ಕ ಫಲವಿಲ್ಲ. Burn c. at both ends (Burn ನೋಡಿ). Hide c. under a bushel (Bushel ನೋಡಿ). C.-ends ಉರಿದು ಉಳಿದ ಮೋಂಬತ್ತಿಯ ತುಂಡುಗಳು ; (ರೂಪ.) ಜಿಪುಣರು ಕೂಡಹಾಕಿರುವ ಚಿಲ್ಲರೆಪಲ್ಲರೆ. **Cándlelight** ಮೋಂಬತ್ತಿಯ ಬೆಳಕು ; ಕೃತಕ ಬೆಳಕು ; ಸಂಜೆ (ದೀಪ ಹಚ್ಚುವ ಹೊತ್ತು). **Cándlestick** (ನಾ.) ಮೋಂಬತ್ತಿಯ ಕಂಬ.

Cándlemas ಕ್ಯಾಂಡ್‌ಲ್‌ಮ್ಯಸ್ (ನಾ.) ಕ್ರೈಸ್ತರ ಒಂದು ಹಬ್ಬ (ಮೇರೀ ಕನ್ಯಕೆಯ ಶುದ್ಧೀಕರಣದ ಹಬ್ಬ). (ಕಾಲ) ಫೆಬ್ರವರಿ ೨ನೆಯ ತಾರೀಖು.

Cándour. Candid ನೋಡಿ.

Cándy¹ ಕ್ಯಾಂಡಿ (ನಾ., ಕ್ರಿ.) ಕಲ್ಲುಸಕ್ಕರೆ (ಅನೇಕ ಬಾರಿ ಕಾಯಿಸಿ ಸಾವಕಾಶವಾಗಿ ಆರಿಸಿ ಹಳುಕುಗಳ ಗಟ್ಟಿಯಾಗಿ ಮಾಡಿದ ಸಕ್ಕರೆ = Sugar-c.) ; ಕಂಡಸಕ್ಕರೆ. (ಅಮೆ. ಸಂ.) (ಹಾಲಿನಿಂದಾದ ಆಹಾರ ಪದಾರ್ಥಗಳು, ಬಾದಾಮಿ, ವಾಸನಾ ದ್ರವ್ಯಗಳು — ಇವೇ ಮೊ. ನ್ನು ಸೇರಿಸಿ ಮಾಡಿದ) ಸಕ್ಕರೆಮಿಠಾಯಿ. (ಕ್ರಿ.) (ಸಕ್ಕರೆ ಪಾಕಕ್ಕೆ ಹಾಕಿ) ಮುರಬ್ಬ ಮಾಡು. ಹಳುಕುಗಳಾಗು ; ಹಳುಕುಗಳಾಗಿ ಮಾಡು. **Cándied** ಕ್ಯಾಂಡಿಡ್ (ಗು.) ಮಿನುಗುವ. (ಪ್ರಾಚೀ. ಪ್ರ.) ಜೇನಿನಂಥ ; ಸವಿಯಾದ ; (ರೂಪ.) ಉಬ್ಬಿಸುವ ; ಹೊಗಳಿಕೆಯ.

Cándy² ಕ್ಯಾಂಡಿ (ನಾ.) ಖಂಡಿ (ಇಂಡಿಯಾದಲ್ಲಿ ಉಪಯೋಗಿಸುವ, ಸುಮಾರು ೫೦೦ ಪೌಂಡು ತೂಕದ ಮಾನ).

Cane ಕೇನ್ (ನಾ.) ಬೆತ್ತ (C. chair ಬೆತ್ತದ ಕುರ್ಚಿ. C.-brake ಬೆತ್ತ ಬೆಳೆದಿರುವ ಪ್ರದೇಶ) ; ಗೆಣ್ಣುಗಳುಳ್ಳ, ಪೊಳ್ಳಾದ, ದೊಡ್ಡ, ಸಸ್ಯ ಕಾಂಡಗಳು (ಬಿದಿರು, ಕಬ್ಬು, ಮೊ.) ; ಗಳೆ ; ಜಲ್ಲೆ (C-sugar ಕಬ್ಬಿನಿಂದಾದ ಸಕ್ಕರೆ). ಕೈಕೋಲು ; ದಂಡ ; ವೇತ್ರ ; ಚೆಡಿ. (ಅರಗಿನ, ಗಂಧಕದ, ಗಾಜಿನ) ಕಡ್ಡಿ. **Cány** (ಗು.) ಬೆತ್ತದ ; ಬೆತ್ತದಂಥ ; ಬೆತ್ತಗಳಿಂದ ತುಂಬಿದ.

Cane (ಕ್ರಿ. ಸಕ.) ಬೆತ್ತದಿಂದ ಹೊಡೆ ; ಚೆಡಿಯೇಟು ಕೊಡು ; ಹೊಡೆದು ಪಾಠಕಲಿಸು. ಬೆತ್ತ ಹಣೆ.

Cánicide ಕ್ಯಾ(ಕೇ)ನಿಸೈಡ್ (ನಾ.) ನಾಯಿ ಕೊಲೆ ; ನಾಯಿ ಕೊಲ್ಲುವವನು (ಮು., ನಿರ್ಲಕ್ಷ್ಯವಾಗಿ ಬಿಡುವ ಮೋಟಾರಿನವನು, ಸವಾರ)

Caníne, Cánine ಕ(ಕ್ಯಾ)ನೈನ್ (ಗು., ನಾ.) ನಾಯಿಯ ; ನಾಯಿ ಸ್ವಭಾವದ. ಕೋರೆಹಲ್ಲು (= C. tooth). C. hunger ಅತಿ ಹಸಿವು.

Cánister ಕ್ಯಾನಿಸ್ಟರ್ (ನಾ.) (ತೇ ಎಲೆ, ಬಂದೂಕಿನ ಗುಂಡು, ಮೊ. ನ್ನು ಹಾಕಿಡುವ) ತಗಡಿನ ಡಬ್ಬಿ. (ರೊಟ್ಟಿ, ಹೂವು. ಮೊ. ನ್ನಿಡುವ) ಕುಕ್ಕೆ, ಪಾತ್ರೆ. ಬಂದೂಕಿನ ತೋಟಾಗಳ ಸಣ್ಣ ಗುಂಡುಗಳು (= C.-shot)

Cánker ಕ್ಯಾಂಕರ್ (ನಾ., ಕ್ರಿ. ಸಕ.) ಮನುಷ್ಯನ ಬಾಯಿಯ ವ್ರಣ ವ್ಯಾಧಿ ; ಬಾಯಿ ಹುಣ್ಣು. ಕುದುರೆಯ ಪಾದದ ಹುಣ್ಣು. ಹಣ್ಣು ಗಿಡಗಳ ತೊಗಟೆ, ದಾರು — ಇವನ್ನು ತಿಂದುಹಾಕುವ ಒಂದು ರೋಗ ; ಎಲೆ, ಮೊಗ್ಗು, ಮೊ.ನ್ನು ತಿಂದುಹಾಕುವ ಒಂದು ಹುಳು (= C.-worm). (ರೂಪ.) ಒಳಗೇ ತಿಂದು ಹಾಳುಮಾಡುವ ಉಪದ್ರವ ; ನಾಶ ಕಾರಕ. (C.-rash ಗಂಟಲಿನಲ್ಲಿ ವ್ರಣವಾಗಿ ಜ್ವರ ಬರುವ ಒಂದು ತರದ ರೋಗ). (ಕ್ರಿ.) ಕ್ಯಾಂಕರ್ ವ್ಯಾಧಿಯಿಂದ ನಾಶಗೊಳಿಸು. ತಿಂದುಹಾಕು ; ಕೆಡಿಸು ; ನಾಶಮಾಡು. **Cánkered** (ಗು.) (ರೂಪ.) ಮತ್ಸರ ಗ್ರಸ್ತ ; ವಿಷ ಕಾರುವ ; ಕೇಡು ಮಾಡುವ ; ಸಿಡುಕಿನ. **Cánkerous** (ಗು.)

Cánna ಕ್ಯಾನ (ನಾ.) ಕೆಂಪು, ಹಳದಿ, ಮೊ. ಬಣ್ಣಗಳ ಅಂದವಾದ ಹೂವನ್ನು ಬಿಡುವ, ಬಾಳೆಯೆಲೆಗಳಂಥ ಸಣ್ಣಸಣ್ಣ ಎಲೆಗಳುಳ್ಳ, ಒಂದು ಜಾತಿಯ ಹೂವಿನ ಗಿಡ ; 'ಕ್ಯಾನ'.

Cánnel ಕ್ಯಾನೆಲ್ (ನಾ.) ಕಲ್ಲಿದ್ದಲೆಣ್ಣೆಗಳು, ಉರಿವ ಅನಿಲ — ಇವನ್ನು ತಯಾರಿಸುವುದಕ್ಕಾಗುವ, ಪ್ರಕಾಶವಾಗಿ ಉರಿಯುವ, ಟಾರೆಣ್ಣೆಯುಳ್ಳ, ಒಂದು ಜಾತಿಯ ಕಲ್ಲಿದ್ದಲು (= C.-coal)

Cánnery. Can¹ ನೋಡಿ.

Cánnibal ಕ್ಯಾನಿಬಲ್ (ನಾ.) ಮನುಷ್ಯರನ್ನು ತಿನ್ನುವವನು : ನರ ಭಕ್ಷಕ ; ಸಜಾತಿ ಭಕ್ಷಕ (ಪ್ರಾಣಿ). **Cánnibalism** (ನಾ.) ; **Cannibalístic** (ಗು.) ಸಜಾತಿ ಭಕ್ಷಣ ಸ್ವಭಾವದ, ರೂಢಿಯ.

Cánnikin Cáni- ಕ್ಯಾನಿಕಿನ್ (ನಾ.) ಸಣ್ಣ ಕೊಳಗಪಾತ್ರೆ ; ಕುಡಿಯುವ ಪಾತ್ರೆ.

Cánnon ಕ್ಯಾನನ್ (ನಾ., ಕ್ರಿ. ಅಕ.) ಫಿರಂಗಿ ; ತೋಫು (ಸಮೂಹ ವಾಚಕವಾಗಿ ಸಹ). (C.-ball ಫಿರಂಗಿ ಗುಂಡು). (ಯಂತ್ರ) ಅಚ್ಚಿನ ಮೇಲೆ ಸ್ವತಂತ್ರವಾಗಿ ಸುತ್ತುವ ಪೊಳ್ಳುಸ್ತಂಭ. ಕೈಗಡಿಯಾರದ ಬೀಗದಕೈಯ ನಳಿಗೆ. ದುಂಡಾಗಿಯೂ ನಯವಾಗಿಯೂ ಇರುವ ಕುದುರೆಯ ಕಡಿವಾಣ : ದುಂಡು ಕಡಿವಾಣ (= C.-bit). (ಬಿಲಿಯರ್ಡ್ಸ್ ಆಟ) ಆಟಗಾರನ ಚೆಂಡು ಇತರ ಎರಡು ಚೆಂಡುಗಳನ್ನು ಒಂದಾದಮೇಲೊಂದರಂತೆ ಹೊಡೆಯುವುದು. (ಕ್ರಿ.) (ಬಿಲಿಯರ್ಡ್ಸ್ ಆಟದಲ್ಲಿ) 'ಕ್ಯಾನನ್' ಮಾಡು. ಡಿಕ್ಕಿ ಹೊಡೆ ; ಓರೆಯಾಗಿ ತಾಕಿ ಹೊಡೆ (*against, into, with* ಉಪ. ದೊಡನೆ). **Cannonáde** (ನಾ., ಕ್ರಿ.) ಎಡೆಬಿಡದ ಫಿರಂಗಿಯ ಹೊಡೆತ. ಎಡೆಬಿಡದೆ ಗುಂಡು ಹಾರಿಸು ; ಗುಂಡಿನ ಮಳೆ ಸುರಿಸು.

Cánnot. Can ನೋಡಿ.

Cánny ಕ್ಯಾನಿ (ಗು.) ಸೂಟಿ ; ಚೂಟಿ ; ಚತುರ ; ಕುಶಲ ; ವ್ಯವಹಾರ ಚತುರ. ಸಹಜ ; ತೊಂದರೆಯಾಗದೆ ವ್ಯವಹರಿಸಬಹುದಾದ (ಮು., ನಿಷೇಧಾರ್ಥದಲ್ಲಿ) ; ಅನಪಾಯಕರ. ಮಿತವ್ಯಯದ. ನಯವಾದ ; ಶಾಂತಸ್ವಭಾವದ. ದೂರದೃಷ್ಟಿಯುಳ್ಳ ; ಜಾಗರೂಕತೆಯುಳ್ಳ. ತಂತ್ರವುಳ್ಳ ; ಮೋಸದ. **Cánnily** (ಕ್ರಿ. ವಿ.) ; **Cánniness** (ನಾ.)

Canoé ಕನೂ (ನಾ., ಕ್ರಿ. ಅಕ.) ಉದ್ದವಾಗಿಯೂ ಅಗಲ ಕಡಮೆಯಾಗಿಯೂ ಹುಟ್ಟುಹಾಕಿ ನಡೆಯಿಸತಕ್ಕದ್ದಾಗಿಯೂ ಇರುವ ಬಹಳ ಹಳೆಯ ತರದ ಸಣ್ಣ ದೋಣಿ ; ತೋಡು ದೋಣಿ. ಇಂಥ ದೋಣಿಯಲ್ಲಿ ಹೋಗು ; — ಯನ್ನು ಹುಟ್ಟುಹಾಕಿ ನಡಸು. **Canoéist** (ನಾ.)

Cánon¹ ಕ್ಯಾನನ್ (ನಾ.) (ಕ್ರೈಸ್ತ) ಮತದ ಆಜ್ಞೆ, ವಿಧಿ, ನಿರ್ಣಯ, ನಿಯಮ. ಯಾವುದಾದರೂ ವಿಷಯವನ್ನು ವ್ಯವಸ್ಥೆ ಮಾಡುವುದಕ್ಕಾಗಿ ಏರ್ಪಡಿಸಿರುವ ಸಾಮಾನ್ಯ ನಿಯಮ. ನಿಯಮ ; ವಿಧಿ ; ಸೂತ್ರ ; ಧರ್ಮಶಾಸ್ತ್ರ ಪ್ರಮಾಣ. ಕ್ರೈಸ್ತಮತ ಅಂಗೀಕರಿಸಿರುವ ಬೈಬಲ್ ಪ್ರಕರಣಗಳು. ರೋ. ಕ್ಯಾ. ರ 'ಮ್ಯಾಸ್' ಎಂಬ ದೇವಪೂಜೆಯಲ್ಲಿ ಬರುವ ಪಾವನ ಮಂತ್ರಗಳು. (ರೂಪ.) ಅಂಗೀಕೃತ ಗ್ರಂಥ ಸಮುದಾಯ (Shakespeare C.). ಅತ್ಯಂತ ದೊಡ್ಡ ಮುದ್ರಣಾಕ್ಷರದ ಮೊಳೆ ('ಕ್ಯಾನನ್ ಟೈಪ್' ಎಂಬ ಹೆಸರುಳ್ಳದ್ದು). ಗಂಟೆಯನ್ನು ತಗುಲಹಾಕುವುದಕ್ಕಾಗಿ ಅದರ ಮೇಲ್ಭಾಗದಲ್ಲಿ ಮಾಡಿರುವ ಬಳೆ. ಕ್ರೈಸ್ತ ಮತಮಂಡಲಿಯ ಸದಸ್ಯ. **Canónic(al)** ಕನಾನಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರ್ (ಗು.) (ಪ್ರಾಚೀ. ಪ್ರ.) ಕ್ರೈಸ್ತಮತದ ನಿಯಮಕ್ಕನುಸಾರವಾಗಿ ಗೊತ್ತುಮಾಡಿದ (C. hours ದೈವ ಪ್ರಾರ್ಥನೆಗಾಗಲ, ವಿವಾಹ ಕರ್ಮ ನಡೆಯಿಸುವುದಕ್ಕಾಗಲ ಗೊತ್ತುಮಾಡಿರುವ ಕಾಲ : ಪ್ರಾತಃಕಾಲ ೮ ಗಂಟೆ ಯಿಂದ ಅಪರಾಹ್ಣ ೩ ಗಂಟೆಯ ವರೆಗೆ. C. dress ಕ್ರೈಸ್ತ ವೈದಿಕರ ಉಡುಪು). ಅಂಗೀಕೃತ ಕ್ರೈಸ್ತಧರ್ಮಶಾಸ್ತ್ರದಲ್ಲಿ ಸೇರಿರುವ. ಸಪ್ರ ಮಾಣ ; ಅಂಗೀಕೃತ. ಮುಖ್ಯ ಚರ್ಚಿನ ಮಂಡಲಿಯ ; ಆ ಮಂಡ ಲಿಯ ಸದಸ್ಯನ. **Canónicals** (ನಾ.) ಕ್ರೈಸ್ತ ಮತದವರ ಅಧಿ ಕಾರದ ಉಡುಪು. **Canónically** (ಕ್ರಿ. ವಿ.) ; **Canónicate** — ಕೆಟ್ (ನಾ.) = **Cánonry** ಕ್ಯಾನನ್ರಿ (ನಾ.) ಕ್ಯಾನನ್ನಿನ ಹುದ್ದೆ, ಅಧಿಕಾರ, ಜೀವನಾದಾಯ. **Canonícity** ಕ್ಯಾನೊನಿಸಿಟಿ (ನಾ.) (ಬೈಬಲ್ಲಿನ ವಿಧಿಗನುಸಾರವಾದುದೆಂಬ) ಪ್ರಾಮಾಣ್ಯ. **Cánonist** (ನಾ.) ಕ್ರೈಸ್ತ ಧರ್ಮಶಾಸ್ತ್ರಜ್ಞ. **Canonístic(al)** (ಗು.) ; **Cánonize** (ಕ್ರಿ. ಸಕ.) (ಕ್ರೈಸ್ತ) ಸಂತರ ಪಟ್ಟಿಗೆ ವಿಧಿಪೂರ್ವಕ ವಾಗಿ ಸೇರಿಸು ; ಸಂತನನ್ನಾಗಿ ಪರಿಗಣಿಸು. (ಕ್ರೈಸ್ತ) ಪ್ರಮಾಣ ಗ್ರಂಥವೆಂದು ಅಂಗೀಕರಿಸು. ಕ್ರೈಸ್ತಮಠಾಧಿಕಾರದಿಂದ ಮಂಜೂರು ಮಾಡು. **Cánonizátion** (ನಾ.)

Cánon[2]. **Canyon** ನೋಡಿ.

Canópus ಕನೋಪಸ್ (ನಾ.) (ಖ. ವಿ.) ಅಗಸ್ತ್ಯ (ನಕ್ಷತ್ರ)

Cánopy ಕ್ಯಾನೊಪಿ (ನಾ., ಕ್ರಿ. ಸಕ.) (ಸಿಂಹಾಸನ, ಹಾಸಿಗೆ, ಮನುಷ್ಯ, ಮೊ. ಗಳ ಮೇಲೆ ಕಟ್ಟಿರುವ ಅಥವಾ ಹಿಡಿದಿರುವ) ಮೇಲ್ಕಟ್ಟು ; ವಿತಾನ. (ರೂಪ.) ಮೇಲಿನ ಆವರಣ ; ಮೇಲ್ಚಪ್ಪರ. ಆಕಾಶ ; ಬಾನು. (ವಾ. ಶಾ.) (ಗೂಡು, ಬಾಗಿಲು, ಕಿಟಕಿ, ಗೋರಿ, ಮೊ. ಗಳಮೇಲೆ ಹಾಕುವ ಛಾವಣಿಯಂಥ) ಚಿತ್ರಕೆಲಸದ ಚಾಚುಭಾಗ. (ಕ್ರಿ.) — ಕಟ್ಟು, ಹಾಕು, ಆಗಿರು.

Canórous ಕನೋರಸ್ (ಗು.) ಕಿವಿಗಿಂಪಾದ ; ಸುಶ್ರಾವ್ಯ ; ಮಧುರ.

Cant[1] ಕ್ಯಾಂಟ್ (ನಾ., ಕ್ರಿ.) ಸ್ಫಟಿಕಾಕೃತಿ, ದಿಣ್ಣೆ, ಮೊ. ಗಳ ಓರೆ, ಓರೆಮುಖ. ಉರುಳಿಸಿಬಿಡುವಂಥ ಎಸೆದಾಟ, ನೂಕಾಟ, ಕುಲುಕಾಟ. ಓರೆ ; ಓರೆನಿಲವು (C.-board ಇಳಿಜಾರು ಹಲಗೆ). (ಕ್ರಿ.) ಏಣು ಸವರು ; ಮೂಲೆ ತಿರುವು ; ಬಾಗಿಸು ; ಮಗುಚು ; ತಲೆಕೆಳಗು ಮಾಡು ; ಪಕ್ಕಕ್ಕೆ ನೂಕು ; ಬಾಗಿ ನಿಲ್ಲು ; ಓರೆಯಾಗಿ ನಿಲ್ಲು. (ನಾವೆ) ಸುತ್ತು ತಿರುಗು.

Cant[2] ಕ್ಯಾಂಟ್ (ನಾ., ಗು., ಕ್ರಿ. ಅಕ.) (ಒಂದು ಗುಂಪಿನವರ, ಕಸಬು ನವರ, ಮತದವರ) ಸಂಕೇತ ಭಾಷೆ, ಪರಿಭಾಷೆ, ಗೂಢ ಭಾಷೆ. ಅರ್ಥವಾಗದ ಗುಜುಗುಜು ಭಾಷೆ. ತಾತ್ಕಾಲಿಕ ಆಕರ್ಷಕ ಪದಗಳು (C. phrase ಆಕರ್ಷಕ ವಚನ). ಅರ್ಥಕ್ಕೆ ಗಮನಕೊಡದೆ ಅಂದ ಚೆಂದಕ್ಕಾಗಿ ಆಡುವ ಮಾತು ; ಅರ್ಥವಿಲ್ಲದ ಮಾತು ; ಡಂಭಾಚಾರದ ಮಾತು. ದೈವಭಕ್ತಿಪರವಾದ ಮಾತುಗಳನ್ನು ಆ ಅಭಿಪ್ರಾಯವಿಲ್ಲದೆ ಆಡುವುದು ; ಕಪಟ ; ಡಂಭ ; ಬೂಟಾಟಿಕೆ. **Cánter** (ನಾ.)

Can't. **Can** ನೋಡಿ.

Cántab ಕ್ಯಾಂಟ್ಯಾಬ್ (ನಾ.), **Cantabrígian** ಕ್ಯಾಂಟಬ್ರಿಜಿಯನ್ (ನಾ., ಗು.) ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ (ಸದಸ್ಯ)

Cántaloup ಕ್ಯಾಂಟಲೂಪ್ (ನಾ.) ಕಲ್ಲಂಗಡಿಯ ಜಾತಿಯ ಒಂದು ಹಣ್ಣು.

Cantánkerous ಕ್ಯಾಂಟ್ಯಾಂಕರಸ್ (ಗು.) ಜಗಳಗಂಟಿಯಾದ ; ಕಿತ್ತಾಟದ ; ವಿಷಮ ಸ್ವಭಾವದ. **Cantánkerously** (ಕ್ರಿ. ವಿ.) ; **Cantánkerousness** (ನಾ.)

Cantáta ಕಂಟಾಟ (ನಾ.) (ಸಂ.) ಅಭಿನಯಕ್ಕಲ್ಲದೆ ಹಾಡುವುದಕ್ಕೆ ಹೊಂದಿಸಿದ ಭಾವಗೀತ ನಾಟಕ.

Cantatríce (It., F) ಕಾಂಟಾಟ್ರೀಚೆ, ಕಾಂಟಾಟ್ರೀಸ್ (ನಾ.) ಗಾಯಕ ವೃತ್ತಿಯವಳು ; ಗಾಯಕಿ.

Canteén ಕ್ಯಾಂಟೀನ್ (ನಾ.) ಸೈನ್ಯದ ಪಾಳೆಯದಲ್ಲಿ, ಸೈನಿಕರ ವಾಸ ಸ್ಥಾನದಲ್ಲಿ, ಜಾತ್ರೆಯ ಸ್ಥಳಗಳಲ್ಲಿ, ಮತ್ತು ಸಾರ್ವಜನಿಕ ಅಥವಾ ಸ್ವಾಮ್ಯದ ದೊಡ್ಡ ಸಂಸ್ಥೆಗಳಲ್ಲಿ, ಇಟ್ಟಿರುವ ತಿಂಡಿಯ ಸಾಮಾನಿನ ಮತ್ತು ಮದ್ಯದ ಅಂಗಡಿ (Dry c. ಮದ್ಯಮಾರದ ಅಂಗಡಿ ; Wet c. ಮು., ಮದ್ಯಮಾರುವ ಅಂಗಡಿ). ಪಾಳೆಯದಲ್ಲಿ ಉಪಯೋಗಿಸುವ ಅಡಿಗೆಯ ಪಾತ್ರೆಗಳ ಪೆಟ್ಟಿಗೆ ; ಸಿಪಾಯಿಯ ಊಟದ ಪಾತ್ರೆ. ಮನೆಯಲ್ಲುಪಯೋಗಿಸುವ ಊಟದ ತಟ್ಟೆ, ಚೂರಿ, ಮೊ. ಗಳ ಪೆಟ್ಟಿಗೆ. ಸಿಪಾಯಿ, ಪ್ರಯಾಣಿಕ, ಕೆಲಸಗಾರ, ಮೊ. ರು ತಮ್ಮೊಡನೆ ತೆಗೆದು ಕೊಂಡುಹೋಗುವ ಸಣ್ಣ ನೀರಿನ ಪಾತ್ರೆ (ಟಿನ್‌ತಗಡು, ಮರ, ತೊಗಲು, ಮೊ. ಗಳಿಂದ ಮಾಡಿದುದು)

Cánter ಕ್ಯಾಂಟರ್ (ನಾ., ಕ್ರಿ.) ಆಯಾಸವಿಲ್ಲದ ನಾಗಾಲೋಟ (Win in a c. ಅನಾಯಾಸವಾಗಿ ಗೆಲ್ಲು). (ಕುದುರೆ ಅಥವಾ ಸವಾರ) ಆಯಾಸವಿಲ್ಲದ ನಾಗಾಲೋಟದಲ್ಲಿ ಹೋಗು. ಕುದುರೆಯನ್ನು ಆಯಾಸವಾಗದ ನಾಗಾಲೋಟದಲ್ಲಿ ಬಿಡು.

Cánterbury ಕ್ಯಾಂಟರ್‌ಬೆ(ಬ)ರಿ (ನಾ.) ಇಂಗ್ಲೆಂಡಿನ ಕ್ರೈಸ್ತ ಪ್ರಧಾನ ಗುರುವಿನ (ಆರ್ಚ್ ಬಿಷಪ್ಪಿನ) ಮಠವಿರುವ ಪಟ್ಟಣ. ಸಂಗೀತದ ಹಾಳೆ, ಮೊ. ನ್ನು ಇಡಲು ಮಾಡಿರುವ ಖಾನೆಗಳುಳ್ಳ ನಿಲವು.

Canthárides ಕ್ಯಾಂತ್ಯಾರಿಡೀಸ್ (ನಾ., ಬ. ವ.) (ವೈ. ಶಾ.) ಒಣಗಿಸಿದ ಒಂದು ಜಾತಿಯ ಸ್ಪ್ಯಾನಿಷ್ ನೊಣ (ಚರ್ಮದ ಮೇಲೆ ಗುಳ್ಳೆಗಳೆಬ್ಬಿಸುವುದಕ್ಕೂ ಒಳಸೇವನೆಯಿಂದ ಮೂತ್ರವೃದ್ಧಿಗೂ ಉಪಯೋಗ)

Cánticle ಕ್ಯಾಂಟಿಕ್‌ಲ್ (ನಾ.) ಸಣ್ಣ ಹಾಡು ; ಪವಿತ್ರ ಗೀತ ; ಸ್ತೋತ್ರ. **Cánticles** (ನಾ.) ಸಾಲೊಮನ್ ಗೀತ.

Cántilever ಕ್ಯಾಂಟಿಲೀವರ್ (ನಾ.) (ವಾ. ಶಾ.) (ಉದ್ದವು ಅಗಲಕ್ಕಿಂತಲೂ ಬಹಳ ಹೆಚ್ಚಾಗಿಯೂ, ದಪ್ಪದ ಎರಡರಷ್ಟಕ್ಕಿಂತಲೂ ಹೆಚ್ಚಾಗಿಯೂ ಇದ್ದು, ಗೋಡೆಯಿಂದ ಚಾಚಿಕೊಂಡು ಮೇಲ್ಕಟ್ಟಡ, ಮೊ. ಕ್ಕೆ ಆಧಾರವಾಗಿರುವ) ಚಾಚು ತೊಲೆ. C. bridge ಆಧಾರಸ್ತಂಭಗಳುಳ್ಳದ್ದಾಗಿ, ಪ್ರತಿ ಸ್ತಂಭದ ಮೇಲೂ ಎರಡು ಚಾಚುತೊಲೆಗಳಿದ್ದು, ಪಕ್ಕಪಕ್ಕದಲ್ಲಿಯ ಸ್ತಂಭಗಳ ಚಾಚುತೊಲೆಗಳನ್ನು ಉದ್ದವಾದ ಸರಗಳಿಂದ ಸೇರಿಸಿ ಮಾಡಿದ ಸೇತುವೆ : ಚಾಚುತೊಲೆ ಸೇತುವೆ.

Cántle ಕ್ಯಾಂಟ್‌ಲ್ (ನಾ.) ಕತ್ತರಿಸಿದ ತುಂಡು ; ಹೋಳು. ಜೀನಿನ ಹಿಂಭಾಗದ ಕಮಾನು.

Cánto ಕ್ಯಾಂಟೊ (ನಾ. ; ಬ. ವ. - os) ಒಂದು ದೊಡ್ಡ ಕಾವ್ಯದ ಆಶ್ವಾಸ, ಸರ್ಗ, ಸಂಧಿ, ಅಧ್ಯಾಯ, ಪರಿಚ್ಛೇದ.

Cánton ಕ್ಯಾಂಟನ್, **Cantón** ಕ್ಯಾಂಟಾನ್ (ನಾ., ಕ್ರಿ. ಸಕ.) ದೇಶದ ಒಂದು ಭಾಗ ; ಮಂಡಲ ; ಜಿಲ್ಲೆ. ಸ್ವಿಟ್ಜರ್ಲೆಂಡ್ ಸಂಯುಕ್ತ ರಾಷ್ಟ್ರದ ಸಂಸ್ಥಾನ. (ಕ್ರಿ.) ಮಂಡಲಗಳನ್ನಾಗಿ ವಿಭಾಗಿಸು ; ತುಂಡುತುಂಡಾಗಿ ಮಾಡು. (ಸಿಪಾಯಿಗಳಿಗೆ) ಸ್ಥಳ ಮಾಡಿಕೊಡು ; (ಸಿಪಾಯಿಗಳನ್ನು) ಇಳಿಸು [ಉಚ್ಚಾರಣೆ: ಕ್ಯಾಂಟೂ(ಟಾ)ನ್]. **Cántonal** ಕ್ಯಾಂಟನಲ್ (ಗು.) ; **Cantónment** ಕ್ಯಾಂಟಾ(ಟೂ)ನ್ಮೆಂಟ್ (ನಾ.) ಸೇನೆಯ ದಳಗಳಿಗೆ ಗೊತ್ತುಮಾಡಿರುವ ವಾಸಸ್ಥಾನ ; ಸೈನ್ಯಾವಾಸ. (ಇಂಡಿಯಾದಲ್ಲಿ) ಸೈನ್ಯವನ್ನಿಟ್ಟಿರುವ ಪಟ್ಟಣ ಅಥವಾ ಪಟ್ಟಣದ ಭಾಗ : 'ಲಷ್ಕರ್' ; 'ದಂಡು'.

Cánvas ಕ್ಯಾನ್ವಸ್ (ನಾ.) (ಹಡಗಿನ ಪಟಗಳಿಗೂ ಗುಡಾರಗಳಿಗೂ ಚಿತ್ರಪಟಗಳಿಗೂ ಉಪಯೋಗಿಸುವ) ನಾರಿನ ರಟ್ಟುಬಟ್ಟೆ, ತಟ್ಟು ; ಒರಟು ಕಿತ್ತಾನಾರು ಬಟ್ಟೆ ; ಕಸೂತಿ ಬಟ್ಟೆ. ಹಡಗಿನ ಪಟ(ಗಳು) ; ಗುಡಾರ(ಗಳು) ; ಡೇರೆ(ಗಳು). ಜೂಜುದೋಣಿಯ ಕೊನೆಯನ್ನು (ನೀರು ನುಗ್ಗದಂತೆ) ಮುಚ್ಚುವ ಹೊದಿಕೆ ; ಹಾಗೆ ಮುಚ್ಚಿದ ಕೊನೆ. ಚಿತ್ರಪಟ ; ತೈಲ ಚಿತ್ರ. Under c. ಡೇರೆಯಲ್ಲಿ ; ಡೇರೆಗಳಲ್ಲಿ. ಹಡಗಿನ ಪಟಗಳನ್ನು ಹರಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cánvass ಕ್ಯಾನ್ವಸ್ (ಕ್ರಿ., ನಾ.) ಕೂಲಂಕಷವಾಗಿ, ಆಮೂಲಾಗ್ರವಾಗಿ, ಚರ್ಚಿಸು ; ವಿಮರ್ಶೆಮಾಡು ; ಪರಿಶೀಲಿಸು. (ಆಶ್ರಯ, ಅಭಿಮತಗಳು ಅಥವಾ ಓಟುಗಳು, ಗಿರಾಕಿ, ಸಹಾಯ ದ್ರವ್ಯ — ಇವೇ ಮೊ. ನ್ನು) ಬೇಡು, ಕೋರು, ಕೊಡುವಂತೆ ಕೇಳು. ಅಭಿಪ್ರಾಯ (ಭಾವ) ವೇನೆಂಬುದನ್ನು ಕಂಡುಹಿಡಿ. ಗಿರಾಕಿಗಾಗಿ ಬೇಡು. (ನಾ.) ಓಟುಗಳಿಗಾಗಿ ಬೇಡಿಕೆ. **Cánvasser** (ನಾ.)

Cányon, Cánon ಕ್ಯಾನ್ಯನ್ (ನಾ.) ತಳಗಡೆ ಹಳ್ಳಹರಿಯುತ್ತಿರುವ ಆಳವಾದ ಕಮ್ಮರಿ ; ಕಮ್ಮರಿಹಳ್ಳ.

Canzonét ಕ್ಯಾನ್ಜೊನೆಟ್ (ನಾ.) ಲಘು ಗೀತ ; ಸಣ್ಣ ಹಾಡು.

Caoútchouc ಕೌ(ಕೂ)ಚುಕ್ (ನಾ., ಗು.) ಇಂಡಿಯಾ ರಬ್ಬರ್; — ರಿನ.

Cap ಕ್ಯಾಪ್ (ನಾ.) ಟೋಪಿ ; ಕುಲಾವಿ (C. in hand ದೈನ್ಯವಾಗಿ ; ಭಿಕ್ಷುಕನಂತೆ). [If the c. fits ವಿಷಯ ಅಥವಾ ಮಾತು (ತನಗೆ) ಹೊಂದುವಂತಿದ್ದರೆ, ಅನ್ವಯಿಸುವಂತಿದ್ದರೆ. Set one's c. at ಒಲಿಯುವಂತೆ ಮಾಡು]. ಟೋಪಿಯಂಥ ಮುಚ್ಚಳ. (Knee-c. ಮಂಡಿಯ ಚಿಪ್ಪು. Percussion c. ಬಂದೂಕಿನ ತೋಟಾದಲ್ಲಿಯ ಸಿಡಿಮದ್ದನ್ನು ಘಟ್ಟನೆಯಿಂದುಂಟಾದ ಶಾಖದಿಂದ ಹೊತ್ತಿಸುವುದಕ್ಕಾಗಿ ಉಪಯೋಗಿಸುವ ಟೋಪಿಯಾಕಾರದ ವಸ್ತು : ಕೇಪು). (ನಾವೆ) ಪಟಸ್ತಂಭದ ಎತ್ತರವನ್ನು ಹೆಚ್ಚಿಸಬೇಕಾದಾಗ, ಅದರೊಡನೆ ಮತ್ತೊಂದು ಕಂಬವನ್ನು ಜೋಡಿಸಲು ಅನುಕೂಲಿಸುವಂತೆ ಎರಡು ತೂತು ಕೊರೆದಿರುವ ಕೊರಡು : ಸೇರುವೆ ಮರ. ಶಂಕುವಿನಾಕಾರದ ಚೀಲ, ಪೊಟ್ಟಣ. C. and bells (ನಾಟ್ಯರಂಗದಲ್ಲಿ ಹಾಸ್ಯಗಾರನ ಚಿಹ್ನೆಯಾದ) ಟೋಪಿಯೂ ಗೆಜ್ಜೆಗಳೂ. C. of liberty ಸ್ವಾತಂತ್ರ್ಯದ ಟೋಪಿ (ರೋಮನ್ ಗುಲಾಮರು ಗುಲಾಮಗಿರಿಯಿಂದ ಬಿಡುಗಡೆ ಹೊಂದಿದಾಗ ಅವರಿಗೆ ಕೊಡುತ್ತಿದ್ದ ಶಂಕುವಿನಾಕಾರದ್ದು) ; (ಈಗ) ಪ್ರಜಾ ಸ್ವಾತಂತ್ರ್ಯದ ಚಿಹ್ನೆ. C. of maintenance (ಪೂರ್ವಕಾಲದಲ್ಲಿ) ಅಧಿಕಾರ ಚಿಹ್ನೆಯ ಟೋಪಿ ; ಪಟ್ಟಾಭಿಷೇಕ ಕಾಲದಲ್ಲಿ ದೊರೆಯ ಮುಂದೆ ಹಿಡಿದುಕೊಂಡುಹೋಗುವ ಟೋಪಿ. **C.-paper** ಪೊಟ್ಟಣ ಕಟ್ಟುವ ಬೂದುಬಣ್ಣದ ಕಾಗದ ; 'ಫೂಲ್ಸ್‌ಕ್ಯಾಪ್' ಕಾಗದ. **C.-stone** ಮೇಲುವರಿಸೆಯ ಕಲ್ಲು ; ತಲೆಗಲ್ಲು. Fool's c. ನಾಟಕದ ಹಾಸ್ಯಗಾರನ ಟೋಪಿ ; ದಡ್ಡಹುಡುಗನಿಗಿಡುವ ಕಾಗದದ ಟೋಪಿ ; ಮಂಕು ಟೋಪಿ. Steel c. ಉಕ್ಕಿನ ಟೋಪಿ ; ಶಿರಸ್ತ್ರಾಣ ; ನೀಸಕ. **Cápful** (ನಾ.) ಟೋಪಿತುಂಬು. A c. of wind (ನೌಕ) ಥಟ್ಟನೆ ಬೀಸಿ ನಿಲ್ಲುವ ನಸುಗಾಳಿ.

Cap (ಕ್ರಿ.) ಟೋಪಿ ಇಡು, ಇಟ್ಟುಕೊ. (ಸ್ಕಾಚ್ ವಿಶ್ವವಿದ್ಯಾನಿಲಯದಲ್ಲಿ) ವಿದ್ಯಾಪದವಿ ಕೊಡು. ಬಂದೂಕಿನ ತೊಟ್ಟಿಗೆ ಕೇಪು ತೊಡಿಸು. (ದೂಲದ ಕೊನೆ, ಮೊ. ಕ್ಕೆ) ರಕ್ಷಣೆಗಾಗಿ ಲೋಹ, ಮೊ. ಗಳಿಂದ ಮಾಡಿದ ಆವರಣ ತೊಡಿಸು ; ಅಣಚು ಹಾಕು. ಮೇಲ್ಭಾಗದಲ್ಲಿರು ; ಶಿಖರವಾಗಿರು. ತಲೆ ಮೆಟ್ಟು ; ಮೇಲಾಗು ; ಅತಿಶಯಿಸು. (ಒಬ್ಬರನ್ನು ಕಂಡಾಗ, ಗೌರವಾರ್ಥವಾಗಿ) ಟೋಪಿಯನ್ನು ತೆಗೆ, ಮುಟ್ಟಿಕೊ. ಗಾಯ ಮಾಡು (Horse caps its hocks ಕುದುರೆ ತನ್ನ ಮಂಡಿಯನ್ನು ಗಾಯಮಾಡಿಕೊಳ್ಳುತ್ತದೆ). C. ancedote, quotation ಇನ್ನೂ ಉತ್ತಮವಾದ ಐತಿಹ್ಯವನ್ನೊ ಗ್ರಂಥಪಂಕ್ತಿಯನ್ನೊ ಹೇಳು. C. verses ಹಿಂದಿನವನು ಹೇಳಿದ ಶ್ಲೋಕದ ಕೊನೆಯ ಅಕ್ಷರವನ್ನು ಹಿಡಿದು ಅದರಿಂದ ಆರಂಭವಾಗುವ ಶ್ಲೋಕವನ್ನು ಹೇಳು : ಅಂತ್ಯಾಕ್ಷರಿ ಹೇಳು. **Cápping** (ನಾ.)

Cápable ಕೇಪಬ್‌ಲ್ (ಗು.) ತಕ್ಕ ; ಸಾಧ್ಯ ; ಸಮರ್ಥ ; ಶಕ್ತ ; ಯೋಗ್ಯ ; ಅರ್ಹ. **Capabílity** (ನಾ.) ಶಕ್ತಿ ; ಸಾಮರ್ಥ್ಯ ; ಅಳವು ; ಆಪು ; ಯೋಗ್ಯತೆ ; ಅರ್ಹತೆ ; ಸಾಧ್ಯತೆ. **Cápably** (ಕ್ರಿ. ವಿ.)

Capácious ಕಪೇಷಸ್ (ಗು.) ವಿಸ್ತಾರವಾದ ; ವಿಶಾಲವಾದ ; ಇಂಬಾದ. **Capáciousness** (ನಾ.)

Capácity ಕಪ್ಯಾಸಿಟಿ (ನಾ.) ಹಿಡಿಯುವ ಶಕ್ತಿ ; ಧಾರಣ ಶಕ್ತಿ ; ಗ್ರಹಣ ಶಕ್ತಿ. (Filled to c. ಪೂರ್ತಿ ತುಂಬಿ. C. house ಕಿಕ್ಕಿರಿದಿರುವ ನಾಟಕಶಾಲೆ, ಮೊ.). (ವಿದ್ಯುತ್) (ಒಂದು ಸಲಕರಣೆಯ) ನಿಶ್ಚಲ ವಿದ್ಯುತ್ತನ್ನು ಸಂಗ್ರಹಿಸಿಟ್ಟುಕೊಳ್ಳುವ ಶಕ್ತಿ : ಸಂಚಯನ ಶಕ್ತಿ. ಘನ ಅಳತೆ (ಪಾತ್ರೆಗಳದು ; ದ್ರವ, ಧಾನ್ಯ, ಮೊ. ಗಳದು). ಬುದ್ಧಿಶಕ್ತಿ ; ಶಕ್ತಿ ; ಸಾಮರ್ಥ್ಯ ; ಅಳವು ; ಆಪು ; ಅರ್ಹತೆ ; ಯೋಗ್ಯತೆ. ಸ್ಥಾನ ; ಅಧಿಕಾರ (In my c. as critic ನನ್ನ ವಿಮರ್ಶಕ ಸ್ಥಾನದಿಂದ). (ನ್ಯಾ. ಶಾ.) ವ್ಯವಹಾರ ಯೋಗ್ಯತೆ, ಅಧಿಕಾರ. **Capácitate** (ಕ್ರಿ. ಸಕ.) (ಒಂದು ಕೆಲಸಕ್ಕೆ) ಅರ್ಹನನ್ನಾಗಿ, ಅಧಿಕಾರವುಳ್ಳವನನ್ನಾಗಿ, ಮಾಡು.

Cap-a-pié ಕ್ಯಾಪಪೀ (ಕ್ರಿ. ವಿ.) ತಲೆಯಿಂದ ಕಾಲಿನ ವರೆಗೂ ; ಆಪಾದ ಮಸ್ತಕವಾಗಿ (ಯುದ್ಧದ ತೊಡಿಗೆ ತೊಟ್ಟು ಸನ್ನದ್ಧನಾಗಿ)

Capárison ಕಪ್ಯಾರಿಸ್(ಸ್)ನ್ (ನಾ., ಕ್ರಿ. ಸಕ.) ಕುದುರೆಯ ಜೀನು, ಮೊ. ಗಳ ಮೇಲೆ ಹಾಕುವ ಅಲಂಕಾರದ ಹೊದಿಕೆ, ಗವಸು. ಉಡಿಗೆ ತೊಡಿಗೆಗಳು. ಸಾಮಾನು ಸರಂಜಾಮು. (ಕ್ರಿ.) (ಕುದುರೆಗೆ) ಅಲಂಕಾರದ ಹೊದಿಕೆ ಹೊದಿಸು ; ಅಲಂಕರಿಸು ; ಸಜ್ಜುಮಾಡು ; ಮುಸ್ತೈದು ಮಾಡು.

Cape[1] ಕೇಪ್ (ನಾ.) ತೋಳಿಲ್ಲದ ಜುಬ್ಬ, ಮೇಲಂಗಿ. **Caped** (ಗು.)

Cape[2] ಕೇಪ್ (ನಾ., ಗು.) ಭೂಶಿರ. [The c. ಯಾವುದಾದರೂ ಗೊತ್ತಾದ ಭೂಶಿರ (ಮು., ಗುಡ್‌ಹೋಪ್ ಭೂಶಿರ) ; 'ಕೇಪ್ ಕಾಲೊನಿ' ಎಂಬ ದ. ಆಫ್ರಿಕದ ಪ್ರಾಂತ. C. boy ಕರಿಯರ ಮತ್ತು ಬಿಳಿಯರ ಸಂಬಂಧದಿಂದ ಹುಟ್ಟಿದ ದ. ಆಫ್ರಿಕದವನು. C. doctor ದ. ಆಫ್ರಿಕಕ್ಕೆ ವಿಶಿಷ್ಟವಾದ ಬಿರುಸು ಆಗ್ನೇಯಮಾರುತ. C. smoke ದ. ಆಫ್ರಿಕದ 'ಬ್ರಾಂದಿ' (ಮದ್ಯ)]. (ಗು.) 'ಗುಡ್‌ಹೋಪ್' ಭೂಶಿರದ ; ಕೇಪ್ ಕಾಲೊನಿಯ (C. wine, wool)

Capélla ಕಪೆಲ (ನಾ.) ಬ್ರಹ್ಮಹೃದಯ (ನಕ್ಷತ್ರ)

Cáper ಕೇಪರ್ (ನಾ., ಕ್ರಿ. ಅಕ.) ನೆಗೆತ ; ಕುಪ್ಪಳಿಕೆ ; (ರೂಪ.) ವಿಚಿತ್ರ ವರ್ತನೆ. (ಕ್ರಿ.) (ಆಟಕ್ಕಾಗಿ) ನೆಗೆ, ನೆಗೆದಾಡು, ಕುಪ್ಪಳಿಸು. Cut a c. or capers ವಕ್ರವಾಗಿ, ವಿಚಿತ್ರವಾಗಿ, ವರ್ತಿಸು ; ನೆಗೆದಾಡು ; ಕುಣಿದಾಡು. **Cáperer** (ನಾ.) (ಕ್ರಿಯಾರ್ಥಗಳಲ್ಲಿ). 'ಕ್ಯಾಡಿಸ್' ಎಂಬ ನೊಣ (ಅದರ ವಕ್ರವಾದ ಹಾರುವಿಕೆಯಿಂದ)

Cápias (L) ಕ್ಯಾಪಿಆ್ಯಸ್ (ನಾ.) ಕೈದು ಮಾಡುವಂತೆ, ದಸ್ತಗಿರಿ ಮಾಡುವಂತೆ, ಕೊಟ್ಟ ಆಜ್ಞಾಪತ್ರ : ಬಂಧನಾಜ್ಞೆ.

Capillárity ಕ್ಯಾಪಿಲಾರಿಟಿ (ನಾ.) ರೋಮನಾಳ ಕರ್ಷಣ (ಆಕರ್ಷಣ, ವಿಕರ್ಷಣ) ಶಕ್ತಿ. **Cápillary, Capíllary** ಕ್ಯಾ(ಕ)ಪಿಲರಿ (ಗು., ನಾ.) ಕೂದಲಿನ ; ಕೂದಲಿನಂಥ ; ಕೂದಲಿನಷ್ಟು ಸೂಕ್ಷ್ಮವಾದ (C. tube ರೋಮ ನಾಳ) ; ರೋಮ (ರಕ್ತ) ನಾಳ. C. attraction ರೋಮನಾಳಾಕರ್ಷಣ. C. repulsion ರೋಮನಾಳ ವಿಕರ್ಷಣ.

Cápital[1] ಕ್ಯಾಪಿಟಲ್ (ನಾ.) ಕಂಬದ ತಲೆ ; ಬೋದಿಗೆ ; ಸ್ತಂಭಾಗ್ರ.

Cápital[2] ಕ್ಯಾಪಿಟಲ್ (ಗು., ನಾ., ಭಾವ. ಅವ್ಯ.) ತಲೆಯ ; ತಲೆಗೆ ಸಂಬಂಧಪಟ್ಟ ; ಶಿರಃಪ್ರಾಯವಾದ. ತಲೆ ತೆಗೆಯುವ ; ಪ್ರಾಣ ಕಳೆಯುವ ; ಮರಣದಂಡನೆಗೆ ಗುರಿಯಾದ (C. offence, sentence ವಧಾರ್ಹವಾದ ಅಪರಾಧ ; ಮರಣ ದಂಡನೆ). ಅತ್ಯಂತ ಹಾನಿಕರವಾದ ; ವಿನಾಶಕರವಾದ ; ತಲೆ ಹೋಗುವ (C. error ತಲೆಹೋಗುವ ತಪ್ಪಿತ ; ದೊಡ್ಡ ತಪ್ಪು). ಮೊದಲಿನ ; ಆದಿಯ (C. letter, C. ಆದ್ಯಕ್ಷರ ; ದೊಡ್ಡಕ್ಷರ). ಮುಖ್ಯ ; ಪ್ರಧಾನ (C. town, city ; C. ಮುಖ್ಯಪಟ್ಟಣ ; ಪ್ರಧಾನ ನಗರ ; ರಾಜಧಾನಿ). ಪ್ರಶಸ್ತ ; ಉತ್ತಮ ತರಗತಿಯ (C. ship ಉತ್ತಮ ತರಗತಿಯ ಯುದ್ಧದ ಹಡಗು). (ಭಾವ. ಅವ್ಯ.) ಬಹಳ ಸೊಗಸು ! ಭೇಷ್ ! ಅಸಲು ; ಬಂಡವಾಳ (= C. fund); ಬಂಡವಾಳಗಾರರು ; ಹಣವಂತರು (C. and labour ಬಂಡವಾಳಗಾರರೂ ದುಡಿಯುವವರೂ). Fixed c. ಯಂತ್ರಸಾಧನ, ಮೊ. ಸ್ಥಿರ ಬಂಡವಾಳ. Circulating or floating c. ಸರಕು, ಹಣ, ಮೊ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚರ ಬಂಡವಾಳ. (ರೂಪ.) Make c. out of ಇತರರ ತಪ್ಪನ್ನು ಸ್ವಾನುಕೂಲಕ್ಕೆ ತಿರುಗಿಸಿಕೊ. **Cápitally** (ಕ್ರಿ. ವಿ.) ; **Cápitalism** (ನಾ.) ಬಂಡವಾಳ ಸ್ಥಿತಿ ; — ಪ್ರಾಬಲ್ಯ ; — ಪದ್ಧತಿ. (ರಾಜ್ಯನೀತಿ) ಬಂಡವಾಳಗಾರರ ಪ್ರಾಬಲ್ಯ. **Cápitalist** (ನಾ.) ಬಂಡವಾಳಗಾರ. **Capitalístic** (ಗು.) ; **Cápitalize** (ಕ್ರಿ. ಸಕ.) ಬಂಡವಾಳವಾಗಿ ತಿರುಗಿಸು, ಉಪಯೋಗಿಸು. (ಮುಂದೆ ಬರಬಹುದಾದ ಆದಾಯದ ಲೆಕ್ಕಾಚಾರದಮೇಲೆ) ಇಂದಿನ ಬೆಲೆಯನ್ನು ನಿಷ್ಕರ್ಷಿಸು, ಒದಗಿಸು, ಒದಗಿಸಿಕೊ. **Cápitalizátion** (ನಾ.)

Cápitate(d) ಕ್ಯಾಪಿಟೇಟ್, — ಟೆಡ್ (ಗು.) (ಜೀ. ವಿ.) ಸ್ಪಷ್ಟವಾದ ತಲೆಯುಳ್ಳ ; ಗೊಂಚಲು ಗೊಂಚಲಾದ ಹೂವುಗಳುಳ್ಳ.

Capitátion ಕ್ಯಾಪಿಟೇಷನ್ (ನಾ.) ತಲೆಗಂದಾಯ (ಹಾಕುವುದು). C. grant (ಯಾವುದಾದರೂ ಗೊತ್ತಾದ ಷರತ್ತುಗಳನ್ನು ಪಾಲಿಸುವವರಿಗೆ) ತಲೆಯ ಲೆಕ್ಕದಮೇಲೆ ಕೊಡುವ ದಾನ ; ತಲೆಕೊಡುಗೆ.

Cápitol ಕ್ಯಾಪಿಟಲ್ (ನಾ.) ರೋಮಿನ 'ಕ್ಯಾಪಿಟೊಲೈನ್' ಗುಡ್ಡದ ಮೇಲಿರುವ ಜ್ಯೂಪಿಟರಿನ ದೇವಸ್ಥಾನ ಈ ದೇವಸ್ಥಾನವೂ ಸುತ್ತು ಕೋಟೆಯೂ ಕೂಡಿದ ಒಟ್ಟುಗುಡ್ಡ. (ಈಚೆಗೆ) ರೋಮನ್ ಚಕ್ರಾಧಿಪತ್ಯದಲ್ಲಿಯ ಅನೇಕ ಪ್ರಾಂತಗಳ ನಗರಗಳಲ್ಲಿ ಸಾರ್ವಜನಿಕ ಸಭಾಂಗಣವಾಗಿ ಉಪಯೋಗಿಸುತ್ತಿದ್ದ ಅಂಥ ಕಟ್ಟಡ. (ಅಮೆ. ಸಂ.) ವಾಷಿಂಗ್‌ಟನ್ನಿನಲ್ಲಿ ಕಾಂಗ್ರೆಸ್ ಸಭೆ ಸೇರುವ ಕಟ್ಟಡ ; ಕಾಂಗ್ರೆಸ್ ಭವನ.

Capítular ಕಪಿಟ್ಯುಲರ್ (ಗು.) ಕ್ರೈಸ್ತ ಮುಖ್ಯ ದೇವಾಲಯದ ಸಭೆಯ. (ಶ. ವಿ.) ಎಲುಬಿನ ತಲೆಯ.

Capítulate ಕಪಿಟ್ಯುಲೇಟ್ (ಕ್ರಿ. ಅಕ.) ಕರಾರಿನಮೇಲೆ ಅಧೀನನಾಗು, ಬಿಟ್ಟುಕೊಡು. ಶರಣಾಗತಿಯ ಷರತ್ತುಗಳನ್ನು ಗೊತ್ತುಮಾಡಿಕೊ. **Capitulátion** (ನಾ.) ಕರಾರಿನಮೇಲೆ ಅಧೀನನಾಗುವುದು, ಬಿಟ್ಟುಕೊಡುವುದು ; ಈ ಕರಾರಿನ ಷರತ್ತುಗಳುಳ್ಳ ದಸ್ತೈವಜು : ಕರಾರುನಾಮೆ ; ಒಪ್ಪಂದ ; ಷರತ್ತುಗಳು (The capitulations ತುರ್ಕಿಯಲ್ಲಿಯ ಪರದೇಶದ ನಿವಾಸಿಗಳಿಗೆ ಸಂಬಂಧಪಟ್ಟ ಷರತ್ತುಗಳು). ವಿಷಯ ನಿರ್ದೇಶ.

Cápon ಕೇಪನ್ (ನಾ.) (ಆಹಾರಕ್ಕೆ ಮಾಂಸವು ಉತ್ತಮವಾಗುವಂತೆ, ಮರಿಯಾಗಿರುವಾಗಲೆ) ಬೀಜ ತೆಗೆದು ಬಲಿಸಿದ ಹುಂಜ. **Cáponize** (ಕ್ರಿ. ಸಕ.)

Caponiér ಕ್ಯಾಪೊನೀಯರ್ (ನಾ.) ಕೋಟೆಯ ಕಂದಕದಲ್ಲಿ ಅಡ್ಡವಾಗಿ ಮಾಡಿರುವ ಮುಚ್ಚುಹಾದಿ.

Capóte ಕಪೋಟ್ (ನಾ.) (ಸಿಪಾಯಿ, ಪ್ರಯಾಣಿಕ, ಮೊ. ರ) ಟೋಪಿ ಗೂಡಿದ ನಿಲುವಂಗಿ.

Cáppadine ಕ್ಯಾಪಡಿ(ಡೀ)ನ್ (ನಾ.) ರೇಷ್ಮೆಯ ಗೂಡಿನಿಂದ ದಾರವೆಲ್ಲ ತೆಗೆದು ಸುತ್ತಿದಮೇಲೆ ಉಳಿಯುವ ರೇಷ್ಮೆಯ ಕಳಪೆ ; ಜೂಟು.

Cápric ಕ್ಯಾಪ್ರಿಕ್ (ಗು.) (ರ. ವಿ.) C. acid ಬೆಣ್ಣೆ, ಕೊಬರಿಯೆಣ್ಣೆ, ಮೊ. ಗಳಿಂದ ತೆಗೆದ ಆಮ್ಲ ; 'ಕ್ಯಾಪ್ರಿಕಾಮ್ಲ'.

Capríce ಕಪ್ರೀಸ್ (ನಾ.) ಬುದ್ಧಿಯಲ್ಲಿ, ನಡತೆಯಲ್ಲಿ, ಕಾರಣ ತಿಳಿಯರಾಗದ ಬದಲಾವಣೆ. ಮನಬಂದ ಚರ್ಯೆ ; ವಿಚಿತ್ರ ವರ್ತನೆ. ಕಲೆ, ಮೊ. ಗಳಲ್ಲಿ ವಿಚಿತ್ರ ಕಲ್ಪನೆಯ ಕೆಲಸ. **Caprícious** ಕಾಪ್ರಿಷಸ್ (ಗು.) ಚಂಚಲ ; ಚಪಲ ; ಮನಬಂದಂತೆ ನಡೆಯುವ ; ಒಂದು ಗೊತ್ತಿಲ್ಲದ. **Capríciously** (ಕ್ರಿ. ವಿ.) ; **Capríciousness** (ನಾ.)

Cápricorn ಕ್ಯಾಪ್ರಿಕಾರ್ನ್ (ನಾ.) ಮಕರ(ರಾಶಿ). Tropic of C. ಮಕರ ಸಂಕ್ರಾಂತಿ ವೃತ್ತ.

Caprificátion ಕ್ಯಾಪ್ರಿಫಿಕೇಷನ್ (ನಾ.) ಅತ್ತಿಯ ಕಾಯಿಯ ಹುಳುಗಳು ಅಂಜೂರದ ಕಾಯನ್ನು ಕೊರೆಯುವಂತೆ ಮಾಡುವುದರಿಂದ, ಅಥವಾ ಬೇರೆ ವಿಧವಾಗಿ ಕೊರೆಯುವುದರಿಂದ, ಅದು ಬೇಗ ಹಣ್ಣಾಗುವಂತೆ ಮಾಡುವುದು.

Cáprine ಕ್ಯಾಪ್ರೈ(ಪ್ರಿ)ನ್ (ಗು.) ಆಡಿನ ; ಆಡಿನಂಥ.

Cápriole ಕ್ಯಾಪ್ರಿಯೋಲ್ (ನಾ., ಕ್ರಿ. ಅಕ.) ನೆಗೆತ ; ಕುಪ್ಪಳಿಕೆ (ಮು., ಕುದುರೆಸವಾರಿಯ ಶಿಕ್ಷಣಶಾಲೆಯಲ್ಲಿ ; ಕುದುರೆ ಮುಂದಕ್ಕೆ ನಡೆಯದೆ ಹಿಂಗಾಲೆತ್ತಿ ನೆಗೆದು ಒದೆಯುವುದು). ನೆಗೆ ; ಕುಪ್ಪಳಿಸು.

Capróic ಕಪ್ರೋಯಿಕ್ (ಗು.) (ರ. ವಿ.) C. acid ಬೆಣ್ಣೆ, ಮೊ. ಗಳಲ್ಲಿ 'ಕ್ಯಾಪ್ರಿಕ್' ಮತ್ತು 'ಬ್ಯೂಟೈರಿಕ್' ಆಮ್ಲಗಳ ಜೊತೆಯಲ್ಲಿ ದೊರೆಯುವ ಆಮ್ಲ : 'ಕಪ್ರೋಯಿಕಾಮ್ಲ'.

Caps. (Capitals ಪದದ ಸಂಕ್ಷಿಪ್ತ) ದೊಡ್ಡಕ್ಷರಗಳು. (ಮುದ್ರಣ ಕಾರ್ಯದಲ್ಲಿ ಸೂಚನೆಕೊಡಲು ಉಪಯೋಗಿಸುವ ಸಂಕೇತ)

Cápsicum ಕ್ಯಾಪ್ಸಿಕಂ (ನಾ.) ಮೆಣಸಿನ ಕಾಯಿ, ಗಿಡ.

Capsíze ಕ್ಯಪ್‌ಸೈಸ್ (ನಾ., ಕ್ರಿ.) (ಹಡಗು, ದೋಣಿ, ಮೊ.) ತಲೆಕೆಳಗಾಗು ; — ಮಾಡು ; ಮಗುಚು ; ಮಗುಚಿಕೊ ; ಬೋರಲಾಗು ; ಅಡಿ ಮೇಲಾಗು. (ನಾ.) — ವುದು. **Capsízal** (ನಾ.)

Cápstan ಕ್ಯಾಪ್‌ಸ್ಟನ್ (ನಾ.) ಹೊರಜಿಯನ್ನು ಸುತ್ತಿಕೊಳ್ಳುವುದಕ್ಕಾಗಲಿ, ಹಡಗಿನ ಭಾರವಾದ ಪಟಗಳನ್ನು ಹರಡುವುದಕ್ಕಾಗಲಿ, ಇಂಥ ಇತರ ಕೆಲಸಗಳಿಗಾಗಲಿ ಉಪಯೋಗಿಸುವ ಸ್ತಂಭಾಕೃತಿಯ ನಿಲುರಾಟೆ ; ಹಾಯಿ ರಾಟೆ.

Cápsule ಕ್ಯಾಪ್‌ಸ್ಯೂಲ್ (ನಾ.) (ಶ. ವಿ.) ಪೊರೆ ; ಪೊರೆಯ ಚೀಲ. (ಸ. ವಿ.) (ಪಕ್ವವಾದಮೇಲೆ ಬಾಯಿಬಿಟ್ಟುಕೊಳ್ಳುವ) ಒಣಗಿದ ಬೀಜಕೋಶ. (ರ. ವಿ.) ಒಂದು ದ್ರಾವಣದ ದ್ರವಭಾಗವನ್ನು ಆವಿಮಾಡಿ ಹೊರಡಿಸಲು ಉಪಯೋಗಿಸುವ ಚಪ್ಪಟೆಯ ಬಟ್ಟಲು. (ವೈ. ಶಾ.) ಔಷಧದ ಗುಳಿಗೆಯಮೇಲಿನ 'ಜೆಲಟೀನ್' ಕೋಶ. ಸೀಸೆಯ ಬಾಯಿಯ ಲೋಹದ ಮುಚ್ಚಳ. **Cápsular** (ಗು.) ; **Cápsuliform** (ಗು.)

Cáptain ಕ್ಯಾಪ್ಟನ್ (ನಾ.) ಮುಖಂಡ ; ನಾಯಕ ; ಮುಂದಾಳು. ದೊಡ್ಡ ಯೋಧ ; ಯುದ್ಧೋದ್ಯೋಗ ಕುಶಲ ; ಅನುಭವವುಳ್ಳ ಸೇನಾನಾಯಕ. (ಸೈನ್ಯ) ಮುಖ್ಯ ದಳಾಧಿಕಾರಿ ; ದಳವಾಯಿ. (ನೌಕ) ಯುದ್ಧನೌಕಾಧಿಪತಿ. (ವ್ಯಾಪಾರದ) ಹಡಗಿನ ಯಜಮಾನ. ಕಾರೇಗಾರರ ನಾಯಕ. (ಪಾಠಶಾಲೆಯ) ಹಿರಿಯ ಮಣಿ. (ಆಟಗಳಲ್ಲಿ) ಒಂದು ಪಕ್ಷದ ನಾಯಕ. **Cáptaincy** (ನಾ.) ; **Cáptainship** (ನಾ.) ; **Cáptainless** (ಗು.)

Cáptain (ಕ್ರಿ. ಸಕ.) ನಾಯಕನಾಗು ; ಮುಂದಾಳುತನ ವಹಿಸು.

Captátion ಕ್ಯಪ್ಟೇಷನ್ (ನಾ.) ಹೊಗಳಿಕೆಯಿಂದಾಗಲಿ ಬೇಡಿಕೆಯಿಂದಾಗಲಿ ಒಲಿಸಿಕೊಳ್ಳುವುದು ; ಅನುನಯ.

Cáption ಕ್ಯಾಪ್ಷನ್ (ನಾ.) (ನ್ಯಾಯಸ್ಥಾನದ) ಸೆರೆ ಹಿಡಿತ, ದಸ್ತಗಿರಿ. (ನ್ಯಾ. ಶಾ.) (ದಸ್ತೈವಜಿನಮೇಲೆ ಬರೆದ, ಅಥವಾ ಅದಕ್ಕೆ ಸೇರಿಸಿದ) ಪ್ರಮಾಣ ಲೇಖನ. (ಅಮೆ. ಸಂ.) (ಪ್ರಕರಣ, ಲೇಖನ, ಮೊ. ಗಳ) ಶಿರೋನಾಮ.

Cáptious ಕ್ಯಾಪ್ಷಸ್ (ಗು.) ಕುತರ್ಕದ ; ಕುಯುಕ್ತಿಯ ; ಆಕ್ಷೇಪಕ. (ಮಾತಿನಲ್ಲಿ) ಸಿಕ್ಕಿಸಿಕೊಳ್ಳುವ ಸ್ವಭಾವದ ; ತಪ್ಪು ಬೆದಕುವ. **Cáptiously** (ಕ್ರಿ. ವಿ.) ; **Cáptiousness** (ನಾ.)

Cáptivate ಕ್ಯಾಪ್ಟಿವೇಟ್ (ಕ್ರಿ. ಸಕ.) ಚಿತ್ತಾಕರ್ಷಣ ಮಾಡು ; ಮರುಳುಗೊಳಿಸು ; ಮುಗ್ಧಗೊಳಿಸು ; ಸೆರೆಗೊಳ್ಳು ; ಸೆಳೆ. **Captivátion** (ನಾ.)

Cáptive ಕ್ಯಾಪ್ಟಿವ್ (ಗು., ನಾ.) (ಮನುಷ್ಯ, ಮೃಗ) ಸೆರೆ, ಬಂದಿ. ಬಂಧನಕ್ಕೊಳಗಾದ ; ನಿರ್ಬಂಧದಲ್ಲಿರುವ ; ತಪ್ಪಿಸಿಕೊಳ್ಳಲಾಗದ. (C. balloon ಹಗ್ಗಗಳಿಂದ ನೆಲಕ್ಕೆ ಬಿಗಿದಿರುವ ಆಕಾಶಬುಟ್ಟಿ). ಸೆರೆಯ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೆರೆಯಾಳಿನ (C. state — ಸ್ಥಿತಿ. Take c. ಸೆರೆಹಿಡಿ. Hold c. ಬಂದಿಯಾಗಿಟ್ಟಿರು). **Captívity** (ನಾ.) ಸೆರೆ ; ಬಂಧನ. **Cáptor** (ನಾ.) ಸೆರೆಹಿಡಿಯುವವನು ; ಬಹುಮಾನ ಗೆದ್ದವನು. **Cáptress** (ನಾ., ಸ್ತ್ರೀ) ; **Cápture** — ಟ್ಯುರ್, — ಚರ್ (ನಾ., ಕ್ರಿ. ಸಕ.) ಆಕ್ರಮಣ ; ಸೆರೆಹಿಡಿಯುವುದು ; ಸ್ವಾಧೀನಪಡಿಸಿಕೊಳ್ಳುವುದು. ಸೆರೆ ; ಬಂದಿ ; ಸೆರೆಹಿಡಿದ ವಸ್ತು ; ಕೊಳ್ಳೆ ; ಲೂಟಿ. ಸೆರೆಹಿಡಿ ; ಬಹುಮಾನ ಗೆಲ್ಲು. **Cápturer** (ನಾ.)

Cápuchin ಕ್ಯಾಪ್ಯುಚಿ(ಷೀ)ನ್ (ನಾ., ಗು.) (ಹೊಸ ನಿಯಮದ ಅನುವರ್ತಿಯಾದ) 'ಫ್ರಾನ್ಸಿಸ್ಕನ್' ಪಂಗಡದ (ಭಿಕ್ಷು). ಹೆಂಗಸಿನ ಟೋಪಿ ಗೂಡಿದ ದಗಲೆ. C. monkey (ಭಿಕ್ಷುವಿನ ಟೋಪಿಯಂತೆ ಕಾಣುವ ತಲೆಗೂದಲುಳ್ಳ) ಅಮೆರಿಕದ ಒಂದು ಜಾತಿಯ ಕಪಿ. C. pigeon ತಲೆಯ ಹಿಂಭಾಗದಲ್ಲಿ ಭಿಕ್ಷುವಿನ ಟೋಪಿಯಂತೆ ಅಳವಟ್ಟಿರುವ ಜುಟ್ಟುಳ್ಳ ಪಾರಿವಾಳ.

Cáput mórtuum (L) ಕೇಪಟ್ ಮಾರ್ಟ್ಯುಅಂ (ನಾ.) ಕೆಲಸಕ್ಕೆ ಬಾರದ ಚರಟ ; ಗಸಿ.

Car ಕಾರ್ (ನಾ.) ರಥ ; ತೇರು (C. of the sun ಸೂರ್ಯ ರಥ. Triumphal c. ವಿಜಯ ರಥ). ಬಂಡಿ ; ಗಾಡಿ ; ಶಕಟ (Motor-c. ಮೋಟಾರು ಬಂಡಿ ; Tramway-c. ಟ್ರಾಂ ಬಂಡಿ ; Dining-c. ರೈಲಿನಲ್ಲಿ ಊಟದ ಬಂಡಿ). (ಅಮೆ. ಸಂ.) ರೈಲುಗಾಡಿ. (ವಿಮಾನ ಅಥವಾ ಆಕಾಶಬುಟ್ಟಿಗಳಲ್ಲಿ ಪ್ರಯಾಣಿಕರು ಕುಳಿತುಕೊಳ್ಳುವ) ತೂಗುದೊಟ್ಟಿಲು. **Cárman** -ಮ್ಯನ್ (ನಾ.) ಸಾರಥಿ ; ಬಂಡಿ ಹೊಡೆಯುವವನು ; ಬಾಡಿಗೆ ಬಂಡಿಯವನು. **Cárful** (ನಾ.) ಬಂಡಿತುಂಬು.

Carabineér, Carb- ಕ್ಯಾರಬಿನೀಯರ್, ಕಾರ್ಬಿನೀಯರ್ (ನಾ.) ಸಣ್ಣ ಬಂದೂಕಿನ ಸಿಪಾಯಿ.

Cáracol(e) ಕ್ಯಾರಕಾಲ್, — ಕೋಲ್ (ನಾ., ಕ್ರಿ. ಅಕ.) (ಕುದುರೆ ಅಥವಾ ಸವಾರನ ವಿಷಯದಲ್ಲಿ ಬಲಕ್ಕೊ ಎಡಕ್ಕೊ) ಅರ್ಧಸುತ್ತು (ಸುತ್ತು)

Caráfe ಕರಾಫ್ (ನಾ.) (ಊಟದ ಮೇಜಿನ) ನೀರಿನ ಸೀಸೆ.

Carambóla ಕ್ಯಾರಂಬೋಲ (ನಾ.) ಕಮರಕದ ಮರ, ಹಣ್ಣು.

Cáramel ಕ್ಯಾರಮೆಲ್ (ನಾ.) ಸುಟ್ಟ ಸಕ್ಕರೆ (ಮದ್ಯ, ಮೊ. ಕ್ಕೆ. ಕಂದು ಬಣ್ಣ ಕೊಡಲು ಉಪಯೋಗ) ; ಬೆಂದ ಸಕ್ಕರೆಯ ಪಾಕದ ಬಣ್ಣ : ಲಘು ಕಂದುಬಣ್ಣ. ಒಂದು ತೆರದ ಮಿಠಾಯಿ.

Cárapace ಕ್ಯಾರಪೇಸ್ (ನಾ.) ಆಮೆ, ಮೊ. ಚಿಪ್ಪಿನಪ್ರಾಣಿಗಳ ಮೇಲ್ಚಿಪ್ಪು.

Cárat ಕ್ಯಾರಟ್ (ನಾ.) ರತ್ನಗಳ ತೂಕದ ಮಾನ ($3\frac{1}{6}$ ಗ್ರೆಯ್ನ್‌ಗಳು) : 'ಕ್ಯಾರಟ್'. ಚಿನ್ನದ ಶುದ್ಧತೆಯ ಪರಿಮಾಣ (ಅಪರಂಜಿಯ ಬಣ್ಣ = ೨೪ ಕ್ಯಾರಟ್ಟುಗಳು)

Cáravan, Caraván ಕ್ಯಾರವ್ಯ(ವ್ಯಾ)ನ್ (ನಾ.) ಮು., ಮರಳು ಕಾಡಿನಲ್ಲಿ ಒಟ್ಟಿಗೆ ಪ್ರಯಾಣಮಾಡುವ ಪೂರ್ವದೇಶಗಳ ಅಥವಾ ಉ. ಆಫ್ರಿಕದ ವರ್ತಕರು, ಯಾತ್ರಿಕರು, ಮೊ. ರ ತಂಡ ; ಸಾರ್ಥ ; 'ಕಾರ್ವಾನ್'. ಚಾವಣಿಯ ಬಂಡಿ, ಗಾಡಿ ; (ಮು., ಕಾಡುಮೃಗಗಳನ್ನಿಟ್ಟಿರುವ) ಗಾಲಿಗಳ ಬೋನು.

Caravánserai, -sera, -sary ಕ್ಯಾರವ್ಯಾನ್ಸೆರಯ್, — ಸೆರ, — ಸರಿ (ನಾ.) (ಕಾರ್ವಾನರು ಇಳಿದುಕೊಳ್ಳುವ) ದೊಡ್ಡ ಸತ್ರ ; ಕಾರ್ವಾನ್ ಶಾಲೆ.

Cáraway ಕ್ಯಾರವೇ (ನಾ.) (ಜೀರಿಗೆ, ಧನಿಯ, ಮೊ. ಸಸ್ಯಜಾತಿಗಳ ವರ್ಗಕ್ಕೆ ಸೇರಿದ) ಸೋಪಿನ ಗಿಡ. C.-seeds ಸೋಪು ಬೀಜ.

Cárbide ಕಾರ್ಬೈಡ್ (ನಾ.) (ರ. ವಿ.) ಒಂದು ಅಲೋಹಧಾತುವಿನೊಡನಾಗಲಿ ಲೋಹದೊಡನಾಗಲಿ ಇಂಗಾಲವು ಸಂಯುಕ್ತವಾಗಿ ಆದ ಪದಾರ್ಥ : 'ಕಾರ್ಬೈಡ್'. (ಬಳ. ಮಾ.) ಬೆಳಕಿಗಾಗಿ ಉಪಯೋಗಿಸುವ 'ಅಸೆಟಿಲೀನ್' ಎಂಬ ಅನಿಲ ದೊರೆಯುವ 'ಕ್ಯಾಲ್ಸಿಯಂ ಕಾರ್ಬೈಡ್' ಎಂಬ ಸುಣ್ಣಪದಾರ್ಥ.

Cárbine ಕಾರ್ಬೈನ್, **Cára-** ಕ್ಯಾರಬೈನ್ (ನಾ.) ಅಶ್ವಸೈನಿಕರು ಉಪಯೋಗಿಸುವ ಸಣ್ಣ ಬಂದೂಕು.

Carbohýdrate ಕಾರ್ಬೊಹೈಡ್ರೇಟ್ (ನಾ.) (ರ. ವಿ.) ಜಲಜನಕ ಆಮ್ಲಜನಕಗಳು (ನೀರಿನಲ್ಲಿರುವ ಪ್ರಮಾಣದಂತೆಯೇ) ಇಂಗಾಲದೊಡನೆ ಸಂಯುಕ್ತವಾಗಿರುವ ಜೈವಿಕ ಪದಾರ್ಥ : ಶರ್ಕರ ಪಿಷ್ಟ.

Carbólic ಕಾರ್ಬಾಲಿಕ್ (ಗು.) (ರ. ವಿ.) C. acid ಕಾರ್ಬಾಲಿಕಾಮ್ಲ (ಪ್ರಬಲವಾದ ಪೂತಿನಾಶಕ ಮತ್ತು ಸೊಂಕುನಾಶಕ). **Cárbolize** ಕಾರ್ಬೊಲೈಸ್ (ಕ್ರಿ. ಸಕ.) ಕಾರ್ಬಾಲಿಕಾಮ್ಲದಿಂದ ನೆನಸು.

Cárbon ಕಾರ್ಬನ್ (ನಾ.) (ರ. ವಿ.) ಇಂಗಾಲ (ಎಂಬ ಒಂದು ಅಲೋಹ ಮೂಲಧಾತು. ಇದು ವಜ್ರ, ಬರೆಯುವ ಸೀಸ ಮತ್ತು ಇದ್ದಲಾಗಿ ದೊರೆಯುವುದಲ್ಲದೆ ಇಂಗಾಲಾಮ್ಲ, ಇಂಗಾಲಾಮ್ಲ ಸಂಯುಕ್ತಗಳು, ಜೈವಿಕ ಸಂಯುಕ್ತಗಳು, ಮೊ. ಗಳಲ್ಲಿಯೂ ಇರುವುದು). (ವಿದ್ಯುತ್) (ಒಂದು ತೆರದ ವಿದ್ಯುದ್ದೀಪದಲ್ಲಿ ಉಪಯೋಗಿಸುವ) ಇಂಗಾಲ ದಂಡ. **C. dioxide** ಒಂದು ಪ್ರಮಾಣದ ಇಂಗಾಲವೂ ಎರಡು ಪ್ರಮಾಣದ ಆಮ್ಲಜನಕವೂ ಕೂಡಿ ಆದ ಸಂಯುಕ್ತ ಅನಿಲ : 'ಕಾರ್ಬನ್ ಡೈ ಆಕ್ಸೈಡ್'. **C. monoxide** ಒಂದು ಪ್ರಮಾಣದ ಇಂಗಾಲವೂ ಒಂದು ಪ್ರಮಾಣದ ಆಮ್ಲಜನಕವೂ ಕೂಡಿ ಆದ ಸಂಯುಕ್ತ ಅನಿಲ : 'ಕಾರ್ಬನ್ ಮಾನಾಕ್ಸೈಡ್'. **C.-paper** (ಲೇಖನಗಳ ಪ್ರತಿಗಳನ್ನು ತೆಗೆಯುವುದಕ್ಕಾಗಿ ಉಪಯೋಗಿಸುವ) ಕಾಡಿಗೆ ಕಾಗದ. **C. printing, process** ಶಾಶ್ವತವಾಗಿ ನಿಲ್ಲುವ ಚಿತ್ರಗಳನ್ನು ಮುದ್ರಣ ಮಾಡುವ ಒಂದು ತೆರದ ಛಾಯಾಚಿತ್ರ ಪ್ರಕ್ರಿಯೆ : ಇಂಗಾಲ ಮುದ್ರಣ. **Carbonáceous** ಕಾರ್ಬೊನೇಷಸ್ (ಗು.) ಇಂಗಾಲದ ; ಇದ್ದಲಿನ ; ಇದ್ದಲಿನಂಥ ; ಇಂಗಾಲೀಯ ; ಇಂಗಾಲ ಯುಕ್ತ ; ಇಂಗಾಲ ವಿಶಿಷ್ಟ. **Cárbonate** (ನಾ., ಕ್ರಿ. ಸಕ.) (ರ. ವಿ.) ಇಂಗಾಲಾಮ್ಲ ಲವಣ (ವನ್ನಾಗಿ ಮಾಡು). ಇಂಗಾಲಾಮ್ಲ ವಾಯುವನ್ನು ಗರ್ಭೀಕರಿಸು. **Carbónic** ಕಾರ್ಬಾನಿಕ್ (ಗು.) (ರ. ವಿ.) ಇಂಗಾಲದ. **C. acid** (gas) ಇಂಗಾಲಾಮ್ಲ ವಾಯು (ಇಂಗಾಲ ಸುಡುವುದರಿಂದ ಉತ್ಪತ್ತಿಯಾಗುವ, ಪ್ರಾಣಿಗಳ ನಿಶ್ವಾಸ ವಾಯುವಿನಲ್ಲಿರುವ, ಹಗೇವು, ಗಣಿ, ಮೊ. ಗಳಲ್ಲಿ ಸೇರಿಕೊಂಡು ಉಸಿರುಕಟ್ಟಿಸುವ, ವಿಷಾನಿಲ). **Carboníferous** ಕಾರ್ಬನಿಫೆರಸ್ (ಗು.) ಕಲ್ಲಿದ್ದಲನ್ನು ಉತ್ಪತ್ತಿಮಾಡುವ ; ಕಲ್ಲಿದ್ದಲುಳ್ಳ ; ಇಂಗಾಲ ಗರ್ಭ. (ಭೂ. ವಿ.) C. strata ಕಲ್ಲಿದ್ದಲ ಪದರ ; ಇಂಗಾಲ ಸ್ತರ ; ಭೂಪದರಗಳಲ್ಲಿ ಹಳೆಯ ಕೆಮ್ಮರಳುಶಿಲೆಯಮೇಲಿನ ಇಂಗಾಲದ ಪದರ. C. age, era, period ಇಂಗಾಲದ ಪದರವು ಸ್ಥಾಪಿತವಾದ ಕಾಲಮಾನ : ಇಂಗಾಲದ ಕಲ್ಪ, ಯುಗ, ಕಾಲಮಾನ. **Cárbonize** (ಕ್ರಿ. ಸಕ.) ಇಂಗಾಲವಾಗಿ ಮಾರ್ಪಡಿಸು ; ಇದ್ದಲು ಮಾಡು. (ಪ್ರತಿ ತೆಗೆಯುವುದಕ್ಕಾಗಿ ಕಾಗದದಮೇಲೆ) ಇಂಗಾಲಲೇಪ ಮಾಡು. **Carbonizátion** (ನಾ.) ; **Cárburet** ಕಾರ್ಬ್ಯುರೆಟ್ (ಕ್ರಿ. ಸಕ.) ಯಾವುದಾದರೂ ಮೂಲಧಾತುವನ್ನು ಇಂಗಾಲದೊಡನೆ ರಾಸಾಯನಿಕ ಸಂಯುಕ್ತ ಮಾಡು : ಇಂಗಾಲಸಂಯೋಗ ಮಾಡು ; ಇಂಗಾಲ ತುಂಬು. **Carburéttor, -étter** (ನಾ.) ಮೋಟಾರುಎಂಜಿನ್ನುಗಳಲ್ಲಿ (ಸುಡುತಕ್ಕಾಗಿ) ಪೆಟ್ರೋಲ್‌ಹಬೆಯನ್ನು ವಾಯುವಿನೊಡನೆ ಸಮ್ಮಿಶ್ರಮಾಡುವ ಸಲಕರಣೆ. **Cárburize** (ಕ್ರಿ. ಸಕ.) ಇಂಗಾಲವನ್ನು ಅಥವಾ ಇಂಗಾಲ ಸಂಯುಕ್ತವನ್ನು ಸೇರಿಸು (ಮು., ಉಕ್ಕನ್ನು ತಯಾರಿಸುವಲ್ಲಿ, ಮೆತು ಕಬ್ಬಿಣದೊಡನೆ)

Carborúndum ಕಾರ್ಬೊರಂಡಂ (ನಾ.) (ಗಡಸುಪದಾರ್ಥಗಳ ಮೇಲ್ಮೈಯನ್ನು ಉಜ್ಜಿ ನಯಮಾಡುವುದಕ್ಕಾಗಿ ಉಪಯೋಗಿಸುವ) ಇಂಗಾಲ ಮತ್ತು 'ಸಿಲಿಕಾನ್' ಸಂಯುಕ್ತ : 'ಕಾರ್ಬೊರಂಡಂ'.

Cárboy ಕಾರ್ಬಾಯ್ (ನಾ.) (ಬೆತ್ತ, ಮೊ. ಗಳ ಹೆಣಿಗೆಯ ರಕ್ಷಾವರಣವುಳ್ಳ) ಬಣ್ಣದ ಗಾಜಿನ ದೊಡ್ಡ ಸೀಸೆ.

Cárbuncle ಕಾರ್ಬಂಕ್‌ಲ್ (ನಾ.) ಒಂದು ಕೆಂಪು ಪ್ರಶಸ್ತಶಿಲೆ ; ಕೆಂಬರಲು ; ಕೆಂಗಲ್ಲು (ಹಿಂದೆ, ಕೆಂಪು, ಮಾಣಿಕ್ಯ, 'ಗಾರ್ನೆಟ್,' ಮೊ. ; ಈಗ, ಸಾಣೆಹಿಡಿದ ಗಾರ್ನೆಟ್). (ವೈ. ಶಾ.) ಕೆಟ್ಟ ಕುರು ; ಬೆನ್ನುಫಣಿ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಜಹುಣ್ಣು ; ನೆರಡಿ ರೋಗ. (ಕುಡಿತದಿಂದ) ಮುಖದಮೇಲೆ ಅಥವಾ ಮೂಗಿನಮೇಲೆ ಏಳುವ ಮೊಡವೆ. **Cárbuncled** (ಗು.) ; **Carbúncular** (ಗು.)

Cárcass, -ase ಕಾರ್ಕಸ್ (ನಾ.) ಹೆಣ ; ಶವ ; (ಮನುಷ್ಯದೇಹದ ವಿಷಯವಾಗಿ ಹೇಳುವಲ್ಲಿ ತುಚ್ಛೀಕಾರ ಸೂಚಕ). (ಕಸಾಯಿಯವರ ಮಾತಿನಲ್ಲಿ) ತಲೆ, ಕಾಲು, ಮೊ. ಇಲ್ಲದ ಮುಂಡ : ಅಟ್ಟೆ. ಆಹಾರಕ್ಕೆ ಒದಗದ (ಮೃಗದ) ಭಾಗಗಳು. ಕಸ. ದೇಹ (ಬದುಕಿರುವುದು ಅಥವಾ ಸತ್ತದ್ದು) ; ಘಟ. (Save one's c. ಮಾನ, ಮೊ. ನ್ನು ಲಕ್ಷಿಸದೆ ತಲೆಯುಳಿಸಿಕೊ). (ಮನೆ, ಹಡಗು, ಮೊ. ಗಳ) ಆಧಾರ ರಚನಾ ಭಾಗ, ಚೌಕಟ್ಟು, ಆಕೃತಿ, ಒಡಲು. (ಸೈನ್ಯ) ಕಟ್ಟಡಗಳಿಗೆ ಬೆಂಕಿ ಹೊತ್ತಿಸಲು ಉಪಯೋಗಿಸುವ ಫಿರಂಗಿಯ ಉರಿಗುಂಡು.

Card[1] ಕಾರ್ಡ್ (ನಾ., ಕ್ರಿ. ಸಕ.) (ಉಣ್ಣೆ, ನಾರು, ಮೊ. ನ್ನು ನೆಯ್ಯುವುದಕ್ಕೆ ಅನುಕೂಲಿಸುವಂತೆ ಮಾಡಲು, ಅಥವಾ ವಸ್ತ್ರದಮೇಲೆ ಊರ್ಣವನ್ನೆಬ್ಬಿಸಲು, ಉಪಯೋಗಿಸುವ) ಹಲ್ಲುಹಣಿಗೆ. ತಂತಿಯಿಂದ ಮಾಡಿದ ಉಜ್ಜುಹಲಗೆ, ಮೊ. ವು. (ಕ್ರಿ.) (ಹಲ್ಲುಹಣಿಗೆಯಿಂದ ಉಣ್ಣೆ, ನಾರು, ಮೊ. ನ್ನು) ಸರಿಮಾಡು, ಎಕ್ಕು, ಹಿಕ್ಕು, ಬಾಚು, ಉಜ್ಜು. Carding-machine ಎಕ್ಕುವ ಯಂತ್ರ.

Card[2] ಕಾರ್ಡ್ (ನಾ.) ಇಸ್ಪೀಟುಎಲೆ ; ಇಸ್ಪೀಟು (= Playing-c.). (ಬ. ವ. ದಲ್ಲಿ) ಇಸ್ಪೀಟಾಟ. ರಟ್ಟುಕಾಗದ. ನಾವಿಕರ ದಿಕ್ಸೂಚಿಯ ಗುರುತುಗಳುಳ್ಳ ರಟ್ಟುಬಿಲ್ಲೆ; ದಿಕ್ಸೂಚಿ. (ಬರೆಯುವುದಕ್ಕೆ ಉಪಯೋಗಿಸುವ, ಸಾ., ಸಮಕೋನದ) ರಟ್ಟುಕಾಗದ. ಪ್ರವೇಶದ ಚೀಟಿ ; ಕರೆಚೀಟಿ ; ಭೇಟಿಯ ಚೀಟಿ (= Visiting-c.). (ಕುದುರೆಯ ಪಂದ್ಯ, ಮೊ. ಜೂಜಾಟಗಳಲ್ಲಿ ಮತ್ತು ಇತರ ಅಧಿವೇಶನಗಳಲ್ಲಿ ನಡೆಯುವ ಸಂಗತಿಗಳ) ಸೂಚೀಪಟ್ಟಿ. (ಕ್ರಿಕೆಟ್ ಆಟದಲ್ಲಿ) ಓಟದೆಣಿಕೆಯ ಪಟ್ಟಿ. ತಿಳಿವಳಿಕೆಗಳು, ನಿಬಂಧನೆಗಳು, ಮೊ. ನ್ನು ಪ್ರಕಟಿಸಲು ಗೋಡೆಯ ಮೇಲೆ ಅಥವಾ ಕಿಟಿಕಿಯಲ್ಲಿ ತಗುಲಹಾಕುವ ರಟ್ಟುಹಾಳೆ ; ಪ್ರಕಟನಪತ್ರ. C. up one's sleeve ಗುಟ್ಟಾಗಿಟ್ಟುಕೊಂಡಿರುವ ಉದ್ದೇಶ. Christmas c. ಕ್ರಿಸ್‌ಮಸ್ ಹಬ್ಬದಲ್ಲಿ ಬಂಧುಮಿತ್ರರಿಗೆ ಕಳುಹಿಸಿಕೊಡುವ ಶುಭವಾದನ ಪತ್ರ. Collecting-c. (ಧರ್ಮ ಕಾರ್ಯಕ್ಕಾಗಿ) ಚಂದಾಪಟ್ಟಿ. House of cards ಬುಡ ಭದ್ರವಿಲ್ಲದ ಯೋಚನೆ, ಏರ್ಪಾಡು. Knowing c. ಗುಟ್ಟು ತಿಳಿದವನು. Leave a c. on ಭೇಟಿಚೀಟಿ ಬಿಟ್ಟುಬರು. Make a c. ಆ (ಇಸ್ಪೀಟು) ಎಲೆಯಿಂದ ಒಂದು ಪಟ್ಟು ತೆಗೆದುಕೊ. On the cards ಸಂಭವಿಸಬಹುದಾದ ; ಸಾಧ್ಯ ; ಸಂಭಾವ್ಯ. Play cards, or at cards ಇಸ್ಪೀಟಾಡು. Play one's cards well, badly ಮಾಡತಕ್ಕ ಕೆಲಸವನ್ನು ವಿವೇಚನೆಯಿಂದ ಮಾಡು, ಅವಿವೇಕವಾಗಿ ಮಾಡು. Queer c. ವಿಚಿತ್ರ ಪುರುಷ. Show one's cards ಗುಟ್ಟು ಬಿಟ್ಟುಕೊಡು ; ಅಭಿಪ್ರಾಯವನ್ನು, ಮರ್ಮವನ್ನು, ಬಲವನ್ನು, ಹೊರಗೆಡವು. Speak by the c. ಯಥಾರ್ಥವಾಗಿ, ನಿಷ್ಕೃಷ್ಟವಾಗಿ, ಕರಾರುವಾಕ, ಮಾತನಾಡು. Sure c. ಖಂಡಿತವಾಗಿ ಗೆಲ್ಲುವ ಹೂಟ, ಮನುಷ್ಯ. The c. ಸರಿಯಾದದ್ದು ; ನಿರೀಕ್ಷಿಸಿದ್ದು. Throw up one's cards ಉದ್ದೇಶವನ್ನು, ಕೈಕೊಂಡುದನ್ನು, ಬಿಟ್ಟುಬಿಡು ; ಸೋಲನ್ನು ಒಪ್ಪಿಕೊ. Visiting-c. ಭೇಟಿಯ ಚೀಟಿ ; ಭೇಟಿ ಮಾಡಿಕೊಳ್ಳುವುದಕ್ಕೆ ಪ್ರತಿಯಾಗಿ ಕಳುಹಿಸುವ, ಅಥವಾ ಮನೆಯಲ್ಲಿ ಬಿಟ್ಟುಬರುವ, ಹೆಸರಿನ ಚೀಟಿ. Wedding c. ವಿವಾಹ ಲಗ್ನಪತ್ರಿಕೆ. **C.-basket, -rack** ಭೇಟಿಗೆ ಬರುವವರ ಹೆಸರಿನ ಚೀಟಿಗಳನ್ನು ಇಡುವ ಬುಟ್ಟಿ, ಗಡಗಂಚಿ : ಭೇಟಿಚೀಟಿಯ ಬುಟ್ಟಿ. **C.-case** ಭೇಟಿಚೀಟಿಗಳ ಸಂಪುಟ. **C.-catalogue** ಪ್ರತಿ ವಿಷಯದ ಹೆಸರನ್ನೂ ಬೇರೆ ಬೇರೆ ರಟ್ಟುಚೀಟಿಗಳಲ್ಲಿ ಬರೆದಿರುವ ಹೆಸರುಪಟ್ಟಿ. **C.-index** (ಪ್ರತಿ ವಿಷಯವನ್ನೂ ಬೇರೆ ಬೇರೆ ರಟ್ಟುಪತ್ರದಮೇಲೆ ಬರೆಯುವ) ರಟ್ಟು ಸೂಚಿಕೆ (ತಯಾರಿಸು) ; ರಟ್ಟು ಅಕಾರಾದಿ. **C.-sharper** ಇಸ್ಪೀಟಾಟದಲ್ಲಿ ಮೋಸಮಾಡುವವನು. **Cárdboard** ರಟ್ಟು.

Cárdamom ಕಾರ್ಡಮಮ್ (ನಾ.) ಏಲಕ್ಕಿ.

Cárdiac ಕಾರ್ಡಿಅ್ಯಕ್ (ಗು., ನಾ.) ಹೃದಯದ (ಮು., ರೋಗ ವಿಷಯದಲ್ಲಿ : C. symptoms ಹೃದ್ರೋಗ ಲಕ್ಷಣಗಳು). ಜಠರದ ಬಾಯಿಯ. (ನಾ.) ಹೃದ್ದೀಪಕ ; ಹೃದಯೋತ್ತೇಜಕ.

Cárdinal ಕಾರ್ಡಿನಲ್ (ಗು., ನಾ.) ಕೀಲಿನಂತಿರುವ ; ಅಡಿಗಲ್ಲಾದ ; ಮೂಲಾಧಾರ ; ಮೂಲ ; ಮುಖ್ಯ ; ಪ್ರಧಾನ. [C. church (ಚರಿತ್ರೆ) ರೋಮಿನಲ್ಲಿ ಪ್ರಧಾನ ಚರ್ಚುಗಳಲ್ಲೊಂದು. C. Legate ಪೋಪಿನಿಂದ ಕಳುಹಲ್ಪಟ್ಟ ಮುಖ್ಯ ರಾಯಭಾರಿ. C. numbers ಮೂಲಾಂಕಗಳು (ಒಂದು, ಎರಡು, ಮೂರು, ಮೊ.). C. points, winds ಪ್ರಧಾನ ದಿಕ್ಕುಗಳು, ಪ್ರಧಾನ ಮಾರುತಗಳು (ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ). C. virtues ನಾಲ್ಕು ಸಹಜವಾದ, ಮೂರು ಧಾರ್ಮಿಕವಾದ, ಗುಣಗಳು : ನ್ಯಾಯ, ವಿವೇಕ, ಮಿತಾಚರಣೆ, ಸ್ಥೈರ್ಯ, ಶ್ರದ್ಧೆ, ನಿರೀಕ್ಷೆ, ದಯೆ]. ಕಡುಗೆಂಪಿನ. (ಪ್ರಾ. ವಿ.) (ಎರಡುಚಿಪ್ಪಿನ ಪ್ರಾಣಿಯ) ಚಿಪ್ಪುಕೀಲನ. (ನಾ.) (ರೋ. ಕ್ಯಾ.) ಪೋಪ್‌ಗುರುವಿನ ಮಂತ್ರಿಮಂಡಲದ ೭೦ ಮಂದಿ ಧರ್ಮಾಧ್ಯಕ್ಷರಲ್ಲಿ ಒಬ್ಬನು. (ಹೆಂಗಸಿನ) ತಲೆಗೆ ಆವರಣವುಳ್ಳ (ಕೆಂಪು ಬಣ್ಣದಲ್ಲಿರುತ್ತಿದ್ದ) ಮೇಲಂಗಿ. ಕೆಂಬಣ್ಣದ ಒಂದು ಜಾತಿಯ ಸಣ್ಣ ಹಕ್ಕಿ. **Cárdinalate** (ನಾ.) ಕಾರ್ಡಿನಲ್ಲಿನ ಅಧಿಕಾರ, ಪದವಿ. **Cárdinalship** (ನಾ.) ಕಾರ್ಡಿನಲ್ಲಿನ ಸ್ಥಿತಿ ; ಅಧಿಕಾರ. **Cárdinally** (ಕ್ರಿ. ವಿ.)

Cardio- ಕಾರ್ಡಿಯೊ(ಯಾ)— (ಸಮಾಸದಲ್ಲಿ ಪೂರ್ವಪದ) ಹೃದಯದ, ಹೃತ್—. **Cárdiograph** (ನಾ.) ಹೃಚ್ಚಲನೆಯನ್ನು ಕಾಗದದಮೇಲೆ ವಕ್ರರೇಖೆಯಾಗಿ ಚಿತ್ರಿಸುವ ಸಲಕರಣೆ : ಹೃಚ್ಚಲನ ಲೇಖಕ. **Cardiógraphy** ಕಾರ್ಡಿಯಾಗ್ರಫಿ (ನಾ.) ಹೃಚ್ಚಲನ ಲೇಖನ. **Cardiólogy** (ನಾ.) ಹೃದಯ ವಿಜ್ಞಾನ. **Cardiómeter** (ನಾ.) ಹೃತ್ಕಾರ್ಯದ ಬಲವನ್ನು ಅಳೆಯುವ ಯಂತ್ರಸಾಧನ ; ಹೃದಯಮಾಪಕ. **Cardiómetry** (ನಾ.) ಎದೆಯನ್ನು ತಟ್ಟಿ ನೋಡುವುದರಿಂದಲೂ, ಹೃತ್‌ಶಬ್ದಗಳನ್ನು ಕಿವಿಯಿಟ್ಟು ಕೇಳುವುದರಿಂದಲೂ ಹೃದಯದ ಗಾತ್ರವನ್ನು ಅಳೆಯುವುದು : ಹೃದಯ ಮಾಪನ. **Cardiópathy** (ನಾ.) ಹೃದ್ರೋಗ.

Care ಕೇರ್ (ನಾ.) ಚಿಂತೆ ; ಯೋಚನೆ ; ಕೊರತೆ ; ಕಳವಳ ; ಪಾಡು ; ಮನೋಭಾರ. ಗಮನ ; ಎಚ್ಚರಿಕೆ ; ಜಾಗರೂಕತೆ ; ಅವಧಾನ ; ಶ್ರದ್ಧೆ ; ಕರ್ತವ್ಯ ಭಾರ ; ಪರಾಮರಿಕೆ. ವಶ ; ಪಾಲನೆ ; ರಕ್ಷಣೆ. That shall be my c. ಅದು ನನ್ನ ಕರ್ತವ್ಯ ಭಾರ. Cares of State ರಾಜ್ಯದ ಕರ್ತವ್ಯ ಭಾರಗಳು. Have a c., Take c. ಜೋಕೆಯಿಂದಿರು ; ಎಚ್ಚರಿಕೆಯಿಂದಿರು. A, care of B (ಕಾಗದದ ಮೇಲೆ ವಿಳಾಸ ಬರೆಯುವಲ್ಲಿ) B ದ್ವಾರಾ A ಗೆ. C.-laden, -worn ಚಿಂತೆಯಿಂದ ಸೊರಗಿದ, ಕುಗ್ಗಿದ ; ಚಿಂತಾಗ್ರಸ್ತ ; ಚಿಂತಾಕ್ರಾಂತ. C.-taker ಉಸ್ತುವಾರಿ ನೋಡಿಕೊಳ್ಳುವವನು (ಮು., ಯಜಮಾನನು ಇಲ್ಲದ ಕಾಲದಲ್ಲಿ, ಮನೆಯ ಉಸ್ತುವಾರಿ ನೋಡಿಕೊಳ್ಳಲು ನಿಯಮಿತನಾದವನು) ; ಕಾವಲುಗಾರ. **Cáreful** (ಗು.) ಲಕ್ಷ್ಯ ಕೊಡುವ ; ಶ್ರದ್ಧೆಯುಳ್ಳ ; ಆಸಕ್ತಿಯುಳ್ಳ ; ಜೋಕೆಯಿಂದಿರುವ ; ಎಚ್ಚರಿಕೆಗೂಡಿದ ; ಜಾಗರೂಕ ; ಮನಸ್ಸಿಟ್ಟು ಮಾಡಿದ. ಚಿಂತಾಕ್ರಾಂತ ; ಯೋಚನೆ ಹಚ್ಚಿಕೊಂಡ. **Cárefully** (ಕ್ರಿ. ವಿ.) ; **Cárefulness** (ನಾ.) ; **Cáreless** (ಗು.) ಮನಸ್ಸಿಗೆ ಹಚ್ಚಿಕೊಳ್ಳದ ; ಲಕ್ಷ್ಯವಿಡದ ; ಗಮನ ಕೊಡದ ; ನಿಶ್ಚಿಂತ ; ಉದಾಸೀನ ; ತಾತ್ಸಾರದ ; ನಿರ್ಲಕ್ಷ್ಯ ; ಅಸಡ್ಡೆಯ ; ಎಚ್ಚರಿಕೆಯಿಲ್ಲದ ; ಆಲೋಚನೆ ಮಾಡದ ; ಅವಿಚಾರದ. **Cárelessly** (ಕ್ರಿ. ವಿ.) ; **Cárelessness** (ನಾ.)

Care (ಕ್ರಿ. ಅಕ.) ಲಕ್ಷ್ಯಕೊಡು ; ಗಮನ ಕೊಡು ; ಗಣನೆಗೆ ತಂದುಕೊ. (I c. a pin, a damn, a farthing ಕಸಕ್ಕೆ, ಕವಡೆಗೆ, ಕಡೆಯಾಗಿ ಎಣಿಸುತ್ತೇನೆ). ಚಿಂತೆಪಡು ; ಯೋಚನೆ ಹಚ್ಚಿಕೊ. (ಮಕ್ಕಳು, ರೋಗಿಗಳು, ಮೊ. ನ್ನು) ನೋಡಿಕೊ, ಪೋಷಿಸು, ಆರೈಕೆ ಮಾಡು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಷ್ಟಪಡು ; ಮನಸ್ಸಿಡು (I should not c. to be seen with him ಅವನೊಂದಿಗೆ ಇತರರ ಕಣ್ಣಿಗೆ ಬೀಳುವುದು ನನಗೆ ಇಷ್ಟವಿಲ್ಲ)

Careér ಕರೀಯರ್ (ನಾ., ಕ್ರಿ. ಅಕ.) ರಭಸ ; ವೇಗ ; 'ಜೋರು' (In full c. ಬಹಳ ರಭಸದಲ್ಲಿ ; ಅತ್ಯಂತ ವೇಗದಿಂದ). ಪುರೋವೃದ್ಧಿ ; ಜೀವನ ಗತಿ ; ಜೀವ ಯಾತ್ರೆ ; (ಒಂದು ಪಂಗಡ, ತತ್ತ್ವ, ಜನಾಂಗ, ಮೊ. ಗಳ) ಗತಿ, ಅಭಿವೃದ್ಧಿ. ಜೀವನೋಪಾಯ. (ಕ್ರಿ.) ವೇಗದಿಂದ, ರಭಸದಿಂದ, ಜೋರಾಗಿ, ಓಡು (ಸಾ., C. *about*). **Careérist** (ನಾ.) ಕೇವಲ ಸ್ವಾರ್ಥ ಸಾಧನಪರ.

Caréss ಕರೆಸ್ (ನಾ., ಕ್ರಿ. ಸಕ.) ಮುದ್ದಾಡುವುದಕ್ಕಾಗಿ ಮೈಮುಟ್ಟುವುದು, ಸವರುವುದು ; ಪ್ರೀತಿಸ್ಪರ್ಶ ; ಮುತ್ತು (ಕೊಡುವುದು) ; ಮುದ್ದಾಡುವುದು. ಆದರಣೆ ; ಲಾಲನೆ ; (ಒಳ್ಳೆಯ ಮಾತಿನಿಂದ) ತಲೆ ಸವರುವುದು ; ಪುಸಲಾವಣೆ. (ಕ್ರಿ.) ಮೈದಡವು ; ಮುದ್ದಿಸು ; ಲಾಲನೆ ಮಾಡು ; ಪುಸಲಾಯಿಸು. **Caréssingly** (ಕ್ರಿ. ವಿ.)

Cáret ಕ್ಯಾರೆಟ್, ಕೇರೆಟ್ (ನಾ.) ಬರೆವಣಿಗೆಯಲ್ಲಿ ಅಕ್ಷರ, ಮೊ. ನ್ನು ಬಿಟ್ಟಿರುವ ಸ್ಥಳವನ್ನು ತೋರಿಸಲು ಪಂಕ್ತಿಯ ತಳಗಡೆ ಹಾಕುವ ಚಿಹ್ನೆ (‸) ; ಹಂಸಪಾದ.

Cárfax, -fox ಕಾರ್‌ಫ್ಯಾಕ್ಸ್, — ಫೊಕ್ಸ್ (ನಾ.) ನಾಲ್ಕು (ಅಥವಾ ಹೆಚ್ಚು) ದಾರಿಗಳು ಸೇರುವ ಸ್ಥಳ ; ಚೌಕ ; ಚತುಷ್ಪಥ ; ಚೌಪಥ.

Cárgo ಕಾರ್ಗೊ (ನಾ.) ಹಡಗಿನ ಸರಕು.

Cárib ಕ್ಯಾರಿಬ್ (ನಾ., ಗು.) ವೆಸ್ಟ್ ಇಂಡಿಯಾ ದ್ವೀಪಗಳ ದ. ಭಾಗದಲ್ಲಿಯ ಮೂಲನಿವಾಸಿ(ಯ). **Caribbéan** (ಗು., ನಾ.) ವೆಸ್ಟ್ ಇಂಡೀಸಿನ ಕೆಲವು ದ್ವೀಪಗಳ ; ಇವಕ್ಕೂ ಅಖಂಡ ಭೂಭಾಗಕ್ಕೂ ಮಧ್ಯೇ ಇರುವ ಸಮುದ್ರ(ದ)

Caricatúre ಕ್ಯಾರಿಕಟ್ಯೂರ್, — ಚರ್ (ನಾ., ಕ್ರಿ. ಸಕ.) (ಚಿತ್ರದಲ್ಲಾಗಲ ವರ್ಣನೆಯಲ್ಲಾಗಲ) ಒಬ್ಬ ಮನುಷ್ಯನ ಅಥವಾ ವಸ್ತುವಿನ ವಿಶೇಷ ಗುಣಗಳನ್ನು ಅತಿಮಾಡಿ ವಿಕೃತವಾಗಿ ತೋರಿಸುವ ಚಿತ್ರ : ವಿಕಟಚಿತ್ರ ; ಪ್ರಹಸನ ಚಿತ್ರ ; ವಿಡಂಬನ ಚಿತ್ರ ; ವ್ಯಂಗ್ಯ ಚಿತ್ರ ; ಅಣಕ ಚಿತ್ರ. (ಕ್ರಿ.) ವಿಕಟಚಿತ್ರ ಬರೆ ; — ಕೊಡು ; ಪ್ರಹಸನ ರೀತಿಯಲ್ಲಿ ಚಿತ್ರಿಸು ; ವಿಡಂಬನೆ ಮಾಡು. **Caricatúrist** (ನಾ.) ವಿಕಟ ಚಿತ್ರಕ. **Caricatúrable** (ಗು.) ವಿಕಟಚಿತ್ರ ಸಾಧ್ಯ.

Cáries (L) ಕೇರಿಯಾಸ್ (ನಾ.) (ಮೂಳೆ ಅಥವಾ ಹಲ್ಲುಗಳ) ಕ್ಷಯ ವ್ಯಾಧಿ. **Cárious** ಕೇರಿಯಸ್ (ಗು.) : C. tooth ಹುಳುಕು ಹಲ್ಲು ; ಕ್ರಿಮಿದಂತ.

Cárillon (F) ಕರಿಲ್ಯನ್, ಕರೀಯಾನ್ (ನಾ.) (ಕೈಯಿಂದಾಗಲ ಯಂತ್ರ ಸಹಾಯದಿಂದಾಗಲ ಬಾರಿಸಬಹುದಾದ) ಗಂಟೆಗಳ ತಂಡ ; ಘಂಟಾ ಸಮುದಾಯ ; ಘಂಟಾ ರಾಗ ; — ಸ್ವರ ; ಘಂಟಾ ಸಮುದಾಯದ ಧ್ವನಿಯನ್ನು ಅನುಕರಿಸುವ ವಾದ್ಯ ; 'ಆರ್ಗನ್' ಎಂಬ ವಾದ್ಯದ ಇಂಥ ಭಾಗ ; ಘಂಟಾರವ ವಾದ್ಯ.

Caríina (L) ಕರೈನ (ನಾ.) (ಪ್ರಾ. ವಿ., ಸ. ವಿ.) ಇಪ್ಪಾರಿನ ನೆತ್ತಿಯ ಏಣಿನ ರಚನೆ. **Carínal** (ಗು.) — ಸಂಬಂಧಪಟ್ಟ. **Cárinate** ಕ್ಯಾರಿನೇಟ್ (ಗು.) — ರಚನೆಯುಳ್ಳ.

Cárking ಕಾರ್ಕಿಂಗ್ (ಗು.) (ಚಿಂತೆ) ಹೊರೆಯಾದ ; ಚಿಂತಾ ಭಾರದ.

Cárlton Club ಕಾರ್ಲ್‌ಟನ್ ಕ್ಲಬ್ (ನಾ.) ಇಂಗ್ಲೆಂಡಿನ (ರಾಜಕೀಯ) ಸಂಪ್ರದಾಯ ಪಕ್ಷದವರ ಮುಖ್ಯ ಸಂಘಮಂದಿರ.

Carmagnóle (F) ಕಾರ್ಮಾನ್ಯೋಲ್ (ನಾ.) ಫ್ರಾನ್ಸಿನ ಕ್ರಾಂತಿಕಾರರ ಹಾಡು ಮತ್ತು ಕುಣಿತ.

Cárminative ಕಾರ್ಮಿನೇಟಿವ್ (ಗು., ನಾ.) ವಾತ ಹರ (ಔಷಧವಸ್ತು)

Cármine ಕಾರ್ಮಿನ್ (ನಾ., ಗು.) (ಕಾಚಿನೀಲ್ ಹುಳುವಿನ ದೇಹದಿಂದ ತಯಾರಿಸಿದ) ಕಡುಗೆಂಪು ಬಣ್ಣ(ದ) ; ಕಿರುಮಂಜಿ ಬಣ್ಣ(ದ)

Cárnage ಕಾರ್ನೆಜ್ (ನಾ.) (ಮು., ಮನುಷ್ಯರ) ಕಗ್ಗೊಲೆ ; ರಕ್ತದ ಕೋಡಿ.

Cárnal ಕಾರ್ನಲ್ (ಗು.) ಇಂದ್ರಿಯ ಸುಖದ ; ವಿಷಯ ಸಂಬಂಧದ ; ಕಾಮುಕ. ದೇಹದ ; ದೈಹಿಕ. ಅಧಾರ್ಮಿಕ ; ಪ್ರಾಪಂಚಿಕ ; ಐಹಿಕ. **Cárnalism** (ನಾ.) ವಿಷಯ ಲೋಲುಪತೆ. **Carnálity** ಕಾರ್ನ್ಯಾಲಿಟಿ (ನಾ.) ವಿಷಯಾಸಕ್ತಿ ; ಇಂದ್ರಿಯ ಲೋಲುಪತೆ ; ಅಧಾರ್ಮಿಕತೆ. **Cárnalize** ಕಾರ್ನಲೈಸ್ (ಕ್ರಿ. ಸಕ.) ಐಹಿಕವನ್ನಾಗಿ ಮಾಡು. **Cárnally** (ಕ್ರಿ. ವಿ.)

Carnátion ಕಾರ್ನೇಷನ್ (ನಾ., ಗು.) ಪಾಟಲ ವರ್ಣ(ದ) ; ಶ್ವೇತ ರಕ್ತ ವರ್ಣ(ದ). ಪಾಟಲ ವರ್ಣದ ಅಂದವಾದ ಹೂವು ಬಿಡುವ ಒಂದು ಜಾತಿಯ ಗಿಡ, ಅದರ ಹೂವು.

Carnélian ಕಾರ್ನೀಲಿಯನ್ (ನಾ.) ಶ್ವೇತರಕ್ತ ವರ್ಣದ ಅಥವಾ ಕಡುಗೆಂಪಿನ ಒಂದು ಪ್ರಶಸ್ತ ಶಿಲೆ.

Cárneous ಕಾರ್ನಿಯಸ್, **Cárnose** ಕಾರ್ನೋಸ್, **Cárnous** ಕಾರ್ನಸ್ (ಗು.) ಮಾಂಸಗೂಡಿದ ; ಮಾಂಸ ತುಂಬಿದ ; ಮಾಂಸಲ. (ಹಣ್ಣು, ಬೇರು, ಮೊ. ಗಳ ವಿಷಯದಲ್ಲಿ) ತಿರುಳು ತುಂಬಿದ.

Cárnify ಕಾರ್ನಿಫೈ (ಕ್ರಿ.) (ರೋಗ) ಮಾಂಸವಾಗಿ ಮಾರ್ಪಡಿಸು ; ಮಾಂಸದಂತಾಗು. **Cárnificátion** (ನಾ.)

Cárnival ಕಾರ್ನಿವಲ್ (ನಾ.) ಕ್ರೈಸ್ತರ 'ಲೆಂಟ್' ಎಂಬ ಉಪವಾಸ ವ್ರತ ದಿನಗಳಿಗೆ ಹಿಂದಿನ ಒಂದು ವಾರ ಅಥವಾ ಅರ್ಧ ವಾರ. ಈ ಸಮಯದಲ್ಲಿ ರೋ. ಕ್ಯಾ. ಮತಪ್ರಸಾರಣೆಯುಳ್ಳ ದೇಶಗಳಲ್ಲಿ ಆಚರಿಸುವ ಉತ್ಸವಗಳು. ಮಿತಿಮೀರಿ ಕೂಗಿ ಕುಣಿದಾಡುವ ಉತ್ಸವ ; ಸ್ವೇಚ್ಛಾ ವಿಹಾರೋತ್ಸವ. (ಯಾವುದಾದರೂ ಒಂದು ವಿಷಯದಲ್ಲಿ) ನಿರ್ಲಕ್ಷ್ಯವಾದ ಆಚರಣೆ, ಅತಿಲಾಲಸೆ.

Carnívora ಕಾರ್ನಿವೊರ (ನಾ.) (ಬೆಕ್ಕು, ನಾಯಿ, ಕರಡಿ, ಮೊ. ದ ಜಾತಿಗಳನ್ನೊಳಕೊಂಡ) ಮಾಂಸಾಹಾರಿ ಸಸ್ತನಿ ಮೃಗಗಳ ಒಂದು ದೊಡ್ಡ ವರ್ಗ : ಮಾಂಸಾಹಾರಿ ವರ್ಗ. **Cárnivore** — ವೋರ್ (ನಾ.) ಮಾಂಸಾಹಾರಿ ಪ್ರಾಣಿ ಅಥವಾ ಸಸ್ಯ. **Carnívorous** — ವೊರಸ್ (ಗು.) ಮಾಂಸಾಹಾರಿಯಾದ.

Cárnose
Cárnous } **Carneous** ನೋಡಿ.

Cárn(e)y ಕಾರ್ನಿ (ಕ್ರಿ. ಸಕ.) (ಬಳ. ಮಾ.) ಉಬ್ಬಿಸು ; ಪುಸಲಾಯಿಸು.

Cárol ಕ್ಯಾರೊ(ರ)ರ್ (ನಾ., ಕ್ರಿ.) ಆನಂದ ಗೀತ ; ಹರ್ಷ ಗೀತ (ಮನುಷ್ಯನದಾಗಲ, ಹಕ್ಕಿಯದಾಗಲ : ಮು., ಕ್ರಿಸ್ಮಸ್‌ಹಬ್ಬದ ಕೀರ್ತನೆ). (ಕ್ರಿ.) — ಹಾಡು ; ಕೀರ್ತನೆ ಮಾಡು. **Cároller** (ನಾ.)

Carótic ಕರಾಟಿಕ್ (ಗು.) (ಶ. ವಿ.) ಪ್ರಜ್ಞೆತಪ್ಪಿಸುವ ಶಕ್ತಿಯುಳ್ಳ ; ಸ್ತಂಭಕ ; ಸ್ತಂಭನ ಸ್ವಭಾವದ.

Carótid ಕರಾಟಿಡ್ (ಗು., ನಾ.) ತಲೆಗೆ ರಕ್ತವನ್ನು ಒಯ್ಯುವ ಎರಡು ಪ್ರಧಾನ ರಕ್ತನಾಳಗಳ ; ಅವುಗಳ ಬಳಿಯ. (ನಾ.) ಇವುಗಳಲ್ಲೊಂದು ರಕ್ತನಾಳ.

Caroúse ಕರೌಸ್ (ಕ್ರಿ. ಅಕ., ನಾ.) ಕುಡಿತದ ಕೂಟದಲ್ಲಿ ಸೇರು ; ಮಿತಿಮೀರಿ ಕುಡಿ. ಮಿತಿಮೀರಿದ ಕುಡಿತ. **Caroúsal** (ನಾ.) ಕುಡಿತದ ಆವೇಶ ; ಪಾನೋತ್ಸವ ; ಕುಡಿತದ ಗಲಭೆ.

Carp[1] ಕಾರ್ಪ್ (ನಾ.) ಸಿಹಿನೀರಿನಲ್ಲಿ ವಾಸಮಾಡುವ ಒಂದು ಜಾತಿಯ ಮೀನು (ಸಾ., ಇದನ್ನು ಕೊಳಗಳಲ್ಲಿ ಸಾಕುತ್ತಾರೆ)

Carp[2] ಕಾರ್ಪ್ (ಕ್ರಿ. ಅಕ.) ಗೊಣಗುಟ್ಟಿಕೊಂಡು, ಆಕ್ಷೇಪಣೆ ಮಾಡಿ, ನಿಂದಿಸಿ, ಮಾತನಾಡು ; ತಪ್ಪುಹಿಡಿ (ಸಾ., *at* ಉಪ. ದೊಡನೆ). Carping criticism ತಪ್ಪುಹಿಡಿಯುವ ಉದ್ದೇಶದಿಂದ ಮಾಡಿದ ವಿಮರ್ಶೆ: ಕ್ಷುದ್ರ, ಕ್ಷುಲ್ಲಕ, ಟೀಕೆ ; ಖಂಡನೆ. Carping tongue ನಿಂದೆಯಾಡುವ ಬಾಯಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cárpal. **Carpus** ನೋಡಿ.

Cárpel ಕಾರ್ಪೆಲ್ (ನಾ.) (ಸ. ವಿ.) (ಬೀಜವಾಗುವ ಹೂವಿನ) ಶಲಾಕೆಯ ಕೋಶ : ಶಲಾಕಾ ಕೋಶ ; ಹೂವಿನ ಅಂಡಕೋಶ. **Cárpellary** (ಗು.) ಶಲಾಕಾ ಕೋಶದ ; — ಕೋಶಗಳಾಗಿರುವ ; — ಕೋಶಗಳನ್ನೊಳಕೊಂಡ.

Cárpenter ಕಾರ್ಪೆಂಟರ್ (ನಾ., ಕ್ರಿ.) ಮರಗೆಲಸದವನು ; ಬಡಗಿ. (ಕ್ರಿ.) ಮರಗೆಲಸ ಮಾಡು. C.-ant, C.-bee ಮರಕೊರೆದು ಗೂಡು ಮಾಡಿಕೊಳ್ಳುವ ಇರುವೆ, ಜೇನುನೊಣ. The c.'s son ಏಸುಕ್ರಿಸ್ತ. **Cárpentry** (ನಾ.) ಮರಗೆಲಸ ; ಬಡಗಿಯ ಉದ್ಯೋಗ.

Cárpet ಕಾರ್ಪೆಟ್ (ನಾ.) ಜಮಖಾನ ; ರತ್ನಗಂಬಳಿ [ಮೇಜಿನಮೇಲೆ ಹಾಸುತ್ತಿದ್ದದ್ದು (On the c. ಚರ್ಚೆಯಲ್ಲಿರುವ ; ಪರ್ಯಾಲೋಚನೆಯಲ್ಲಿರುವ ; ಪ್ರಸಕ್ತ). ಶ್ರೀಮಂತಸ್ತ್ರೀಯರ ಕೋಣೆಯ ನೆಲಕ್ಕೆ ಹಾಸುತ್ತಿದ್ದದ್ದು : C.-knight ರಣರಂಗದಲ್ಲಲ್ಲದೆ ಶಾಂತಿಕಾಲದಲ್ಲಿ (ರತ್ನಗಂಬಳಿಯಮೇಲೆ ಮೊಣಕಾಲೂರಿ ಬಗ್ಗಿ) ದೊರೆಯ ವಿಶ್ವಾಸದಿಂದ 'ನೈಟ್' ಪದವಿಯನ್ನು ಪಡೆದವನು ; ಯುದ್ಧಕ್ಕೆ ಹೋಗದೆ ಮನೆಯಲ್ಲಿಯೇ ಉಳಿದು ಅಂತಃಪುರ ಲಾಲನನಾದ ಯೋಧ ; ವಿಷಯ ಲೋಲುಪನಾಗಿ ಕಾಲಕಳೆಯುವ ಸೋಮಾರಿ ; ಉತ್ತರ ಕುಮಾರ]. (ರತ್ನಗಂಬಳಿ ಹಾಸಿದಂತಿರುವ) ಹುಲ್ಲುಮೈದಾನ, ಮೊ. **C.-bag** ಪ್ರಯಾಣದ ಸಂಚಿ ; ರೈಲ್ ಸಂಚಿ (ಮೊದಲು, ಇದನ್ನು ಜಮಖಾನೆಯಿಂದ ಮಾಡುತ್ತಿದ್ದರು). **C.-bagger** ಹೊರಪ್ರಾಂತದಿಂದ ಬಂದು ರಾಜಕೀಯ ವಿಚಾರಗಳಲ್ಲಿ ಚಳವಳಿ ನಡಸುವವನು, ಚುನಾವಣೆಗೆ ಉಮೇದುವಾರನಾಗಿ ನಿಲ್ಲುವವನು : ಹೊರಗಿನ ಚಳವಳಿಗಾರ, ಉಮೇದುವಾರ. **C.-bed** ಸಣ್ಣ ಗಿಡಗಳನ್ನು ವಿವಿಧಾಕಾರ ರೇಖೆಗಳಲ್ಲಿ ಹಾಕಿ ಬೆಳಸಿದ ಪಾತಿ. **C.-dance** ಕೇವಲ ನಿಯಮಬದ್ಧವಲ್ಲದೆ ಏರ್ಪಡಿಸಿದ ನೃತ್ಯ. **C.-rods** ಮೆಟ್ಟಿಲಿನ ಮೇಲೆ ಹಾಸಿದ ಜಮಖಾನೆ ಜಾರಿಹೋಗದಂತೆ ಭದ್ರಪಡಿಸುವ ಕಂಬಿಗಳು : ಜಮಖಾನೆ ಕಂಬಿಗಳು **C.-snake** ಮೈಮೇಲೆ ಚಿತ್ರಗಳಿರುವ ಆಸ್ಟ್ರೇಲಿಯದ ಒಂದು ಜಾತಿಯ ಹಾವು. **Cárpetless** (ಗು.) ; **Cárpeting** (ನಾ.)

Cárpet (ಕ್ರಿ. ಸಕ.) ಜಮಖಾನೆ ಹಾಸು ; ಜಮಖಾನೆ ಹಾಸುವಂತೆ ಹಾಸು. (ಸೇವಕ, ಮೊ. ನ್ನು) ಆಕ್ಷೇಪಿಸುವುದಕ್ಕೆ ಕೋಣೆಗೆ ಕರೆ.

Carphólogy ಕಾರ್ಫಾಲೊಜಿ (ನಾ.) ಸನ್ನಿಯಿಂದ ನರಳುತ್ತಿರುವ ರೋಗಿಯು ಹಾಸಿಗೆಯ ಬಟ್ಟೆಗಳನ್ನು ತಡಕಾಡುವುದು : ತಡಕಾಟದ ಸನ್ನಿ ; ಕರಪಲ.

Cárpus ಕಾರ್ಪಸ್ (ನಾ.) (ಅಂ. ರ. ಶಾ.) ಹಸ್ತವನ್ನು ಮುಂಗೈಗೆ ಕೂಡಿಸುವ ಅಸ್ಥಿಭಾಗ (ಮನುಷ್ಯ, ಮೊ. ಮೇಲ್ತರಗತಿಯ ಕಶೇರುಕಗಳಲ್ಲಿ ಎಂಟು ಸಣ್ಣ ಮೂಳೆಗಳಿವೆ) : (ಮನುಷ್ಯನಲ್ಲಿ) ಮಣಿಕಟ್ಟು, ಮಣಿಬಂಧ ; (ಕುದುರೆಯಲ್ಲಿ) ಮೊಣಕಾಲು. **Cárpal** (ಗು.) ಮಣಿಬಂಧದ.

Cárriage ಕ್ಯಾರಿಜ್ (ನಾ.) ಸಾಗಿಸುವುದು ; ಒಯ್ಯುವುದು ; ವಾಹನ. ಹೊರೆ ; ಭಾರ. ಸಾಗಿಸುವ ಕೂಲಿ, ವೆಚ್ಚ, ಬಾಡಿಗೆ (C.-forward ಸಾಗುವೆಚ್ಚ ಆಮೇಲೆ ಸಲ್ಲಿಸತಕ್ಕದ್ದು. C.-free ಸಾಗುವೆಚ್ಚವಿಲ್ಲದ್ದು). (ಯಾವುದಾದರೂ ಕಾರ್ಯಭಾರ, ಮೊ. ಗಳ) ಆಡಳಿತ, ನಿರ್ವಹಣ. (ಪಾರ್ಲಿಮೆಂಟಿನಲ್ಲಿ, ಸೂಚನೆ ಮೊ. ಗಳ) ಅಂಗೀಕಾರ. (ತಲೆ, ದೇಹಭಾಗ, ಮೊ. ಗಳನ್ನು) ಇಟ್ಟುಕೊಂಡಿರುವ ರೀತಿ : ಶರೀರ ವಿನ್ಯಾಸ ; ಭಾವ ; ಭಂಗಿ ; ನಿಲವು. ವರ್ತನೆ ; ನಡತೆ. ಸವಾರಿಯಬಂಡಿ, ಗಾಡಿ (C. and pair ಜೋಡುಕುದುರೆಯ ಸವಾರಿಬಂಡಿ, ಸಾರೋಟು. C.-company, -folk ಸವಾರಿಬಂಡಿಗಳನ್ನಿಟ್ಟಿರುವ ಸಂಘ, ಜನರು). ಫಿರಂಗಿ ಗಾಡಿ (= Gun-c.). (ಒಡಲು ಬಿಟ್ಟು) ಗಾಡಿಯ ಚಕ್ರಗಳ ಚೌಕಟ್ಟು ; ಗಾಡಿಯ ತಳಕಟ್ಟು. (ಯಂತ್ರಗಳಲ್ಲಿಯ ಕೆಲವು ಭಾಗಗಳು ತಕ್ಕಂತೆ ಆಡಲು ಸಹಾಯಕವಾಗುವ) ಯಂತ್ರದ ಓಡುಭಾಗ : ಚಾಲಕ ಭಾಗ. C. candle ಕೊಳವಿಯಲ್ಲಿರುವ ಎಗುರುಕಂಬಿಯ ಸಹಾಯದಿಂದ ಕ್ರಮೇಣ ಮೇಲೆದ್ದು ಉರಿಯುವ ಗಟ್ಟಿ ಮೋಂಬತ್ತಿ. C. clock ಹೇಗಿಟ್ಟರೂ ಎಲ್ಲ ನೆಲೆಗಳಲ್ಲೂ ನಡೆಯುವ ಗಡಿಯಾರ. C. drive ಉದ್ಯಾನ, ಮೊ. ಗಳಲ್ಲಿ ವಾಹನಗಳ ಸಂಚಾರಕ್ಕಾಗಿ ಮಾಡಿರುವ ದಾರಿ : ಗಾಡಿ ದಾರಿ ; **Cárriageable** (ಗು.) (ರಸ್ತೆ) ಗಾಡಿಗಳ ಸಂಚಾರಕ್ಕೆ ಅನುಕೂಲವಾದ ; ವಾಹನ ಯೋಗ್ಯ ; **Cárriageful** (ನಾ.) ; **Cárriageless** (ಗು.)

Cárrier. **Carry** ನೋಡಿ.

Cárriole ಕ್ಯಾರಿಯೋಲ್ (ನಾ.) ಒಬ್ಬನು ಮಾತ್ರ ಕುಳಿತುಕೊಳ್ಳಲು ಅವಕಾಶವಿರುವ ಸಣ್ಣ ಬೋಳು ಸವಾರಿಬಂಡಿ : ಎಕ್ಕ. ಚಾವಣಿಯುಳ್ಳ ಹಗುರವಾದ ಸವಾರಿಬಂಡಿ. ಕೆನಡಾ ದೇಶದ ನೀರ್ಗಲ್ಲ ಜಾರುಬಂಡಿ (= Canadian sledge)

Cárrion ಕ್ಯಾರಿಯನ್ (ನಾ., ಗು.) ಕೊಳೆತ (ಮಾಂಸ). ಹೊಲಸಾದ(ದ್ದು) ; ಹೇಯವಾದ(ದ್ದು) ; ಕೊಳೆ ; ಹೊಲಸು (C.-crow ಕೊಳೆತ ಮಾಂಸ, ಮೊ. ನ್ನು ತಿನ್ನುವ ಕಾಗೆ : ಹೊಲೆ ಕಾಗೆ)

Cárron oil ಕ್ಯಾರನ್ ಆಯ್ಲ್ (ನಾ.) ಬೆಂಕಿಯಿಂದ ಅಥವಾ ಕುದಿಯುವ ನೀರು, ಮೊ. ಗಳಿಂದ ಸುಟ್ಟ ದೇಹಭಾಗಗಳಿಗೆ ಔಷಧವಾಗಿ ಬಳಿಯುವ ತೈಲ (ಅಗಸೆಯೆಣ್ಣೆಯನ್ನೂ ಸುಣ್ಣದ ತಿಳಿಯನ್ನೂ ಸಮಭಾಗದಲ್ಲಿ ಸೇರಿಸಿ ಮಾಡಿದುದು): 'ಕ್ಯಾರನ್' ಎಣ್ಣೆ. (ಸ್ಕಾಟ್ಲೆಂಡಿನ ಕ್ಯಾರನ್ ಕಬ್ಬಿಣದ ಕಾರ್ಖಾನೆಯಲ್ಲಿ ಹೆಚ್ಚಾಗಿ ಉಪಯೋಗಿಸುವದು)

Cárrot ಕ್ಯಾರಟ್ (ನಾ.) ಮೂಲಂಗಿಯ ಜಾತಿಗೆ ಸೇರಿದ, ಆಹಾರಕ್ಕೆ ಉಪಯೋಗವಾದ, ಕಿತ್ತಿಳೆಯ ಬಣ್ಣದ, ಬೇರುಗೆಡ್ಡೆಯುಳ್ಳ, ಒಂದು ಗಿಡ : ಕೆಂಪು ಮೂಲಂಗಿ. (ಬ. ವ. ದಲ್ಲಿ) ಕೆಂಗೂದಲು ; ಕೆಂಗೂದಲನವನು(ಳು). **Cárroty** (ಗು.) ಕೆಂಪಗಿರುವ ; ಕೆಂಗೂದಲಿನ.

Cárry ಕ್ಯಾರಿ (ಕ್ರಿ.) ಒಯ್ಯಿ ; ಹೊರು ; ಹೊತ್ತುಕೊಂಡು ಹೋಗು ; ಎತ್ತಿಕೊಂಡು ಹೋಗು ; ತೆಗೆದುಕೊಂಡು ಹೋಗು ; ಸಾಗಿಸು ; ವಹಿಸು ; ಧರಿಸು ; ಹರಿಸು ; ದಾಟಿಸು ; ಮುಂಬರಿಸು ; ಮುಟ್ಟಿಸು ; ನಡೆಯಿಸು. (C. into effect ನಡೆಯುವಂತೆ ಮಾಡು ; ಆಚರಣೆಗೆ ತರು. C. one back ಹಿಂದಿನ ನೆನಪು ಮೂಡುವಂತೆ ಮಾಡು). (ಫಿರಂಗಿ) ಹಾರಿಸು. (ಗುಂಡು) ಹಾರು. (ಗಣಿತ) ಸಂಕಲನ ಮಾಡುವಲ್ಲಿ ಅಂಕಿಯನ್ನು ಮುಂದಿನ ಸ್ಥಾನಕ್ಕೆ ಒಯ್ಯಿ. ಮುಂದುವರಿಸು ; ಮುಂದೆ ಸಾಗಿಸು (C. tower to 500 feet ಗೋಪುರವನ್ನು ೫೦೦ ಅಡಿಗಳ ವರೆಗೂ ಮುಂದುವರಿಸು). ಗೆಲ್ಲು ; ಜಯಶಾಲಿಯಾಗು ; ಸಾಧಿಸು ; ಕೈವಶ ಮಾಡಿಕೊ (He carried the day ಅವನು ಜಯಶಾಲಿಯಾದನು. C. fortress ಕೋಟೆಯನ್ನು ಹಿಡಿ, ಕೈವಶ ಮಾಡಿಕೊ). ಧರಿಸು ; ತಾಳು ; ಉಳ್ಳವನಾಗಿರು (C. weight, authority ತೂಕವುಳ್ಳವನಾಗಿರು ; ಅಧಿಕಾರಪಡೆದಿರು ; ಮಾತು ನಡೆಯುವಂತಿರು). C. about ಅತ್ತಿತ್ತ ಅಲೆದಾಡು ; ಸುತ್ತಾಡು. C. all before one ಜಯಶಾಲಿಯಾಗು. C. away ಪರವಶನನ್ನಾಗಿ ಮಾಡು ; ಮೈಮರಸು. C. conviction ತನ್ನ ಮನಸ್ಸಿಗೆ ದೃಢವಾದುದನ್ನು ಇತರರ ಮನಸ್ಸಿನಲ್ಲಿ ನೆಡು ; ಮನಗಾಣಿಸು. C. fire in one hand and water in the other ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಶರಣಾರ್ಥಿ. C. forward, over ಅಂಕಿಗಳನ್ನು (ಲೆಕ್ಕವನ್ನು) ಮುಂದಿನ ಪುಟಕ್ಕೆ (ಮುಂದಿನ ಲೆಕ್ಕಕ್ಕೆ) ಸಾಗಿಸು, ಮುಂದುವರಿಸು. C. hearers with one ಶ್ರೋತೃಗಳನ್ನು ತನ್ನ ಮಾರ್ಗಕ್ಕೆ ಸೆಳೆ, ಒಲಿಸಿಕೊ, ಒಪ್ಪಿಸು. C. it off well ಚೆನ್ನಾಗಿ ಮೆರೆಯಿಸು. C. modesty to excess ಅತಿವಿನಯ ತೋರಿಸು. C. a motion ಸಭೆಯಲ್ಲಿ ಒಂದು ನಿರ್ಣಯವನ್ನು ಅಂಗೀಕಾರ ಮಾಡಿಸು. C. off ಜೀವ ತೆಗೆ. (ಬಹುಮಾನ, ಮೊ. ನ್ನು) ಗೆಲ್ಲು ; ಸಾಗುವಂತೆ ಮಾಡು ; ಪಾರಗಾಣಿಸು. C. on (ಮಾಡುತ್ತಿರುವ ಕೆಲಸವನ್ನು) ಮುಂದುವರಿಸು ; ಮುಂಬರಿ ; ನಡಸಿಕೊಂಡುಹೋಗು ; (ಕಾರ್ಯಭಾರವನ್ನು) ನಿರ್ವಹಿಸು. (ಬಳ. ಮಾ.) ವಿಚಿತ್ರವಾಗಿ, ವಿಪರೀತವಾಗಿ, ವರ್ತಿಸು. ಪ್ರಣಯವಿಲಾಸ ನಡಸು. C. oneself ವರ್ತಿಸು ; ನಡೆ. C. one's point ತನ್ನ ಅಭಿಪ್ರಾಯವನ್ನು ಸಾಧಿಸು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಊರ್ಜಿತಗೊಳಿಸು. C. out (ತತ್ತ್ವಗಳು, ಅನುಜ್ಞೆಗಳು, ಮೊ. ನ್ನು) ಕಾರ್ಯರೂಪಕ್ಕೆ ತರು, ಆಚರಣೆಗೆ ತರು, ಸಾಧಿಸು. C. over (ಪತ್ರವ್ಯಾಪಾರ) ಮುಂದಿನ ಲೆಕ್ಕಾಚಾರದ ದಿನಕ್ಕೆ ಮುಂದುವರಿಸು. C. through ನಿರ್ವಹಿಸು ; ನಿಭಾಯಿಸು ; ಕಡೆಹಾಯಿಸು ; ನೆರವೇರಿಸು ; ಮುಗಿಸು ; ಕೊನೆಮುಟ್ಟಿಸು ; ತೊಂದರೆಗಳನ್ನೆಲ್ಲ ದಾಟಿಸಿ ಘಲಕ್ಕೆ ತರು. C. weight ಕುದುರೆಯ ಜೂಜಿನಲ್ಲಿ (ಕುದುರೆಯೂ ಸವಾರನೂ ಹಗುರವಾಗಿದ್ದಲ್ಲಿ) ಹೆಚ್ಚುಭಾರವನ್ನು ಹೊರು. (ರೂಪ.) ಪ್ರತಿಕೂಲ ಸ್ಥಿತಿಯಲ್ಲಿರು. C. with one ನೆನಪಿನಲ್ಲಿಟ್ಟಿರು. Fetch and carry ಊಳಿಗ ಮಾಡಿಕೊಂಡಿರು ; ಗುಲಾಮಗಿರಿಯಲ್ಲಿರು ; ಅಡಿಯಾಳಾಗಿರು. Loans c. interest ಸಾಲಗಳು ಬಡ್ಡಿ ದುಡಿಯುತ್ತವೆ. Principles c. consequences ತತ್ತ್ವಕ್ಕೆ ತಕ್ಕ ಪರಿಣಾಮವಿದ್ದೇ ಇರುತ್ತದೆ.

Cárry (ನಾ.) (ಸೈನ್ಯ) ಕತ್ತಿಯನ್ನು ಹಿಡಿದುಕೊಳ್ಳುವ ಒಂದು ರೀತಿ. (ಗಾಲ್ಫ್ ಆಟ) ಚೆಂಡು ನೆಲತಾಕುವುದಕ್ಕೆ ಮೊದಲು ಓಡಿದ ಓಟ. ಒಂದು ನದಿಯಿಂದ ಅಥವಾ ಇತರ ಜಲಮಾರ್ಗದಿಂದ ಮತ್ತೊಂದಕ್ಕೆ ಸಾಮಾನು, ಮೊ. ನ್ನು ಸಾಗಿಸುವುದು. ಫಿರಂಗಿಯ (ಗುಂಡಿನ) ವ್ಯಾಪನೆಯ ದೂರ, ಎಸೆ. C.-over (ಪತ್ರವ್ಯಾಪಾರ) ಲೆಕ್ಕಾಚಾರ ಮುಗಿಸದೆ ಮುಂದುವರಿಸುವುದು ; ಹಾಗೆ ಮುಂದುವರಿಸಿದ ಮೊತ್ತ.

Cárrier (ನಾ.) (ಕ್ರಿಯಾರ್ಥಗಳಲ್ಲಿ). ಮೂಟೆ ಹೊರುವವನು ; ಥಾಂಗಿ, ಮೂಟೆ, ಮೊ. ನ್ನು ಬಾಡಿಗೆಗೆ ಸಾಗಿಸಲು ಬಂಡಿಯನ್ನಿಟ್ಟುಕೊಂಡಿರುವವನು : ಹೊರೆಬಂಡಿಯವನು ; ಬಾಡಿಗೆಬಂಡಿಯವನು (Common c. ಈ ಕೆಲಸ ಮಾಡುವ ರೈಲ್ವೆ ಮತ್ತು ಜಹಜುಗಳ ಸಂಸ್ಥೆಗಳಿಗೂ ಅನ್ವಯಿಸುವ ನ್ಯಾಯಪರಿಭಾಷೆಯ ಪದ). ಬೈಸಿಕಲ್, ಮೊ. ಗಳಲ್ಲಿ ಸಾಮಾನುಹೇರುವ ಭಾಗ : ಹೊರಿಗೆ ; ವಾಹಕ. ತಾನು ಸೊಂಕುಗೊಂಡು ರೋಗವನ್ನನುಭವಿಸದೆ ರೋಗಾಣುಗಳನ್ನು ಇತರರಿಗೆ ಹರಡುವ ಮನುಷ್ಯ ಅಥವಾ ಇತರ ಪ್ರಾಣಿ : ಸೊಂಕು ವಾಹಕ. C.-nation ಇತರರಿಗಾಗಿ ಪರದೇಶಗಳಿಗೆ ಸಮುದ್ರವ್ಯಾಪಾರದ ಸರಕನ್ನು ಸಾಗಿಸುವ ಜನಾಂಗ : ವಾಹಕ ಜನಾಂಗ. C.-pigeon ಸಮಾಚಾರದ ಕಾಗದಗಳನ್ನು ತನ್ನ ವಾಸಸ್ಥಾನಕ್ಕೆ ಒಯ್ಯುವುದಕ್ಕಾಗಿ ತರಬೇತುಮಾಡಿರುವ ಪಾರಿವಾಳದ ಹಕ್ಕಿ : ಅಂಚೆ ಪಾರಿವಾಳ ; (ಸಮಾಚಾರ) ವಾಹಕ ಕಪೋತ.

Cart ಕಾರ್ಟ್ (ನಾ., ಕ್ರಿ.) ಸಾಮಾನು ಸಾಗಿಸುವ, ಬೇಸಾಯದಲ್ಲಿ ಉಪಯೋಗಿಸುವ, ಎರಡು ಚಕ್ರದ ಬಂಡಿ ; ಚಕಡ ಬಂಡಿ ; ಹೊರೆ ಬಂಡಿ. ಒಂದು ಕುದುರೆ ಕಟ್ಟುವ ಎರಡು ಚಕ್ರದ ಹಗುರವಾದ ಸವಾರಿ ಗಾಡಿ. [Dog-c. (ಹಿಂದೆ, ಬೇಟೆನಾಯಿಗಳನ್ನಿಡಲು ಅನುಕೂಲಿಸುವಂತೆ ಖಾನೆ ಇರುತ್ತಿದ್ದ) ಇಬ್ಬರುಮಾತ್ರ ಬೆನ್ನಿಗೆಬೆನ್ನಾಗಿ ಕುಳಿತುಕೊಳ್ಳಲಾಗುವ ಗಾಡಿ. Mail-c. ಟಪಾಲು ಗಾಡಿ. Spring-c. ಎಗುರುಪಟ್ಟಿ ಹಾಕಿರುವ ಗಾಡಿ]. ಒಂಟಿ ಕುದುರೆಯ ಬೋಳುಗಾಡಿ. [Put c. before the horse ಕ್ರಮವಿಪರ್ಯಾಯ ಮಾಡು ; ಹಿಂದು ಮುಂದು ಮಾಡು ; ತಲೆ ಕೆಳಗು ಮಾಡು ; ಕಾರ್ಯಕಾರಣ ವ್ಯತ್ಯಾಸ ಮಾಡು. In the c. (ಅಸಂ.) ಇಕ್ಕಟ್ಟಿನಲ್ಲಿ ; ದಿಕ್ಕುತೋರದಂತೆ ; ಸೋಲುವ ಸ್ಥಿತಿಯಲ್ಲಿ]. (ಕ್ರಿ.) ಬಂಡಿಯಲ್ಲಿ ಸಾಗಿಸು ; ಬಂಡಿಯುಪಯೋಗಿಸು. (ಅಸಂ.) (ಆಟ, ಮೊ. ಗಳಲ್ಲಿ) ಸುಲಭವಾಗಿ ಸೋಲಿಸು. **C.-horse** ಒರಟು ಕೆಲಸ ಮಾಡಲು ಬಲವಾದ ಮೈಕಟ್ಟುಳ್ಳ ಕುದುರೆ : ಚಕಡ ಕುದುರೆ. **C.-ladder** ಬಂಡಿಯ ಅಗಲವನ್ನಾಗಲಿ ಉದ್ದವನ್ನಾಗಲಿ ಹೆಚ್ಚಿಸಲು ಅನುಕೂಲಿಸುವಂತೆ ಏರ್ಪಡಿಸಿರುವ ಚೌಕಟ್ಟು. **C.-load** ಬಂಡಿ ತುಂಬು, ಭರ್ತಿ ; (ಯಾವುದಾದರೂ ಪದಾರ್ಥದ) ಹೆಚ್ಚು ರಾಶಿ. **C.-road** ಚಕಡ ಬಂಡಿ ಹೋಗುವ ರಸ್ತೆ ; ಒರಟು ರಸ್ತೆ. **C.-way** ಬಂಡಿ ಜಾಡು. **C.-wheel** ಬಂಡಿಯ ಚಕ್ರ. ಅಗಲವಾದ ನಾಣ್ಯ (ಇಂಗ್ಲಿಷ್ ಕ್ರೌನ್, ಮೊ.). (ಬೀದಿಪೋರರು ಹಾಕುವ) ಪಕ್ಕಪಲ್ಟಿ. **C.-whip** ಉದ್ದವಾಗಿಯೂ ಬಲವಾಗಿಯೂ ಇರುವ ಚಾವಟಿ ; ಬಾರುಗೋಲು. **C.-wright** ಬಂಡಿಗಳನ್ನು ಮಾಡುವವನು. **Cártage** ಕಾರ್ಟೇಜ್ (ನಾ.) ಬಂಡಿಯಲ್ಲಿ ಸಾಗಿಸುವುದು ; ಬಂಡಿ ಬಾಡಿಗೆ. **Cárter** (ನಾ.) ಬಂಡಿಯವನು. **Cártful** (ನಾ.) ಬಂಡಿ ತುಂಬು ; ಗಾಡಿಭರ್ತಿ.

Carte, Quarte ಕಾರ್ಟ್ (ನಾ.) ಕತ್ತಿಯ ವರಿಸೆ.

Carte blánche (F) ಕಾರ್ಟ್ ಬ್ಲಾನ್‌ಷ್ (ನಾ.) (ಬೇಕಾದ ಷರತ್ತುಗಳನ್ನು ಬರೆದುಕೊಳ್ಳಲೆಂದು) ಸಹಿಮಾಡಿ ಕೊಟ್ಟ ಬರಿಯ ಕಾಗದ. ಸಂಪೂರ್ಣಾಧಿಕಾರ.

Carte-de-visíte (F) ಕಾರ್ಟ್ ಡ ವಿಸೀಟ್ (ನಾ.) $3\frac{1}{2} \times 2\frac{1}{4}$ ಅಂಗುಲದ ಅಳತೆಯ ಛಾಯಾಚಿತ್ರ.

Cártel ಕಾರ್ಟೆಲ್ (ನಾ.) ದ್ವಂದ್ವಯುದ್ಧಕ್ಕೆ ಕೆಣಕಿ ಕರೆಯುವ ಪತ್ರ ; ಸೆಣಸು. ಸೆರೆಯಾಳುಗಳ ಮಾರುವೆ (ಮಾಡಿಕೊಳ್ಳಲು ಕರಾರು). ಬೆಲೆ ತಗ್ಗದಂತೆ ನೋಡಿಕೊಳ್ಳಲು ಕಾರ್ಖಾನೆಗಾರರು ಏರ್ಪಡಿಸಿಕೊಂಡ ಒಪ್ಪಂದ, ಸಂಸ್ಥೆ.

Cartésian ಕಾರ್ಟೀಸಿಯನ್, — ಷಿಯನ್ (ಗು., ನಾ.) 'ಡೇಕಾರ್ಟೆ' ಎಂಬ ಫ್ರೆಂಚ್ ತತ್ತ್ವಜ್ಞ ಮತ್ತು ಗಣಿತಜ್ಞನ (ಅನುಯಾಯಿ) ; ಆತನ ತತ್ತ್ವದ ಅಥವಾ ಗಣಿತವಿಧಾನಗಳ (ಅನುಯಾಯಿ). **Cartésianism** (ನಾ.)

Cártilage ಕಾರ್ಟಿಲೆಜ್ (ನಾ.) (ಕಶೇರುಕ ಪ್ರಾಣಿಗಳಲ್ಲಿ) ದೃಢತೆಯೂ ಪಾರದೀಪ್ತಿಯೂ ಸ್ಥಿತಿಸ್ಥಾಪಕತೆಯೂ ಉಳ್ಳ ಒಂದು ಅಂಗರಚನಾ ಸಾಮಗ್ರಿ : ಮೃದ್ವಸ್ಥಿ ; ಮೆತ್ತೆಲುಬು. Temporary c. ಎಳೆಯ ಪ್ರಾಣಿಗಳಲ್ಲಿ ಮೃದ್ವಸ್ಥಿಯಾಗಿದ್ದು ಮುಂದೆ ಗಡುಸಾಗಿ ಎಲುಬಾಗುವ ಪದಾರ್ಥ. **Cartiláginous** — ಲ್ಯಾಜಿನಸ್ (ಗು.) ಮೃದ್ವಸ್ಥಿಯ ; ಮೃದ್ವಸ್ಥಿಯಂಥ (C. fish ಮೃದ್ವಸ್ಥಿಪಂಜರವುಳ್ಳ ಮೀನು). **Cartiláginoid** (ಗು.) ಮೃದ್ವಸ್ಥಿಯನ್ನು ಹೋಲುವ.

Cartógraphy ಕಾರ್ಟಾಗ್ರಫಿ (ನಾ.) ನಕ್ಷೆ ಬರೆಯುವುದು ; ಭೂಪಟ ರೇಖನ. **Cartógrapher** (ನಾ.) ; **Cartográphic(al)** ಕಾರ್ಟೊಗ್ರ್ಯಾಫಿಕಲ್ (ಗು.)

Cártomancy ಕಾರ್ಟೊಮ್ಯಾನ್ಸಿ (ನಾ.) ಇಸ್ಪೀಟೆಲೆಗಳಿಂದ ಅದೃಷ್ಟವನ್ನು ಗುಣಿಸಿಹೇಳುವುದು, ಪ್ರಶ್ನೆಹೇಳುವುದು : ಇಸ್ಪೀಟು ಪ್ರಶ್ನೆ.

Cárton ಕಾರ್ಟನ್ (ನಾ.) ಗುರಿಹಲಗೆಯ ಕಣ್ಣಿನಲ್ಲಿರುವ ಬಿಳಿಯ ಬಟ್ಟು ; ಇದನ್ನು ತಾಕುವ ಬಂದೂಕುಗುಂಡು. ರಟ್ಟಿನಿಂದ ಮಾಡಿದ ಸಾಮಾನು ಪೆಟ್ಟಿಗೆ : ರಟ್ಟುಪೆಟ್ಟಿಗೆ ; ಇದಕ್ಕೆ ಉಪಯೋಗಿಸುವ ರಟ್ಟು.

Cartoón ಕಾರ್ಟೂನ್ (ನಾ., ಕ್ರಿ.) ವರ್ಣಚಿತ್ರ ರಚನೆಗಾಗಲಿ, ಪರದೆಗಳಮೇಲಿನ ಚಿತ್ರಗಳಿಗಾಗಲಿ, ಕೆತ್ತನೆಯ ಕೆಲಸಕ್ಕಾಗಲಿ, ಮಾದರಿಯಾಗುವಂತೆ ದಪ್ಪ ಕಾಗದದಮೇಲೆ ಬರೆದ ನಕ್ಷೆ : ಮಾದರಿ ನಕ್ಷೆ. (ಹಾಸ್ಯಪತ್ರಿಕೆಯಲ್ಲಿ, ಮು., ರಾಜಕೀಯ ವಿಚಾರಗಳನ್ನು ಟೀಕಿಸಿ ರಚಿಸಿದ ಪತ್ರಿಕೆಗಳಲ್ಲಿ) ಪೂರ್ಣಪುಟ ಚಿತ್ರ, ದೊಡ್ಡ ಚಿತ್ರ : ಟೀಕಾ ಚಿತ್ರ ; ಹಾಸ್ಯ ಚಿತ್ರ ; ನಗೆ ಚಿತ್ರ. (ಕ್ರಿ.) ವಿಡಂಬನ ಚಿತ್ರ ಬರೆ ; ಒಂದು ವ್ಯಕ್ತಿಯನ್ನು ವಿಡಂಬನ ರೀತಿಯಲ್ಲಿ ರೇಖಿಸು. **Cartoónist** (ನಾ.)

Cartoúche ಕಾರ್ಟೂಷ್ (ನಾ.) (ವಾ. ಶಾ.) ಕಂಬದ ಬೋದಿಗೆ, ಮೊ. ಗಳ ಸುರುಳಿಯ ಚಿತ್ರಾಲಂಕಾರ. (ಪ್ರಾಚೀ. ಶಾ.) ಇಜಿಪ್ಷನ್ ದೊರೆಗಳು, ಮೊ. ವರ ಹೆಸರು ಮತ್ತು ಬಿರುದುಗಳನ್ನು ಹೇಳಿರುವ ಚಿತ್ರಲಿಪಿಯ ಅಂಡಾಕಾರದ ಬಳೆ.

Cártridge ಕಾರ್ಟ್ರಿಜ್ (ನಾ.) ಅಗ್ನ್ಯಸ್ತ್ರಗಳಲ್ಲಾಗಲಿ, ಬಂಡೆಯೊಡೆಯುವಲ್ಲಾಗಲಿ, ಉಪಯೋಗಿಸುವ ಸಿಡಿಮದ್ದು, ಮೊ. ನ್ನು ಹಾಕಿದ (ಕಾಗದ, ಉಣ್ಣೆಯ ಬಟ್ಟೆ, ಲೋಹ, ಮೊ. ಗಳ) ಕೊಳವೆ : ತೋಟಾ (Small-arm ball c. ಗುಂಡುಗಳುಳ್ಳ ಬಂದೂಕುತೋಟಾ). Blank c. ಮದ್ದು ಮಾತ್ರವುಳ್ಳ ಹುಸಿತೋಟಾ. **C.-belt** ತೋಟಾಗಳನ್ನಿಡುವ ಜೇಬುಗಳುಳ್ಳ ನಡುಕಟ್ಟು : ತೋಟಾ ನಡುಕಟ್ಟು. **C.-paper** ಬಸ್ತುಗಳು, ಮೊ. ನ್ನು ಮಾಡಲು ಉಪಯೋಗಿಸುವ ದಪ್ಪವಾದ ಒರಟು ಕಾಗದ ; ಕತ್ತೆಕಾಗದ ; ಕರಡು ಕಾಗದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cártulary, Chártu- ಕಾರ್ಟ್ಯುಲರಿ (ನಾ.) ಕಾಗದಪತ್ರಗಳನ್ನು ಇಟ್ಟಿರುವ ಸ್ಥಳ : ದಫ್ತರಖಾನೆ ; ಪತ್ರಾಗಾರ. ಕಾಗದಪತ್ರಗಳು. ದಾಖಲೆಯ ಪುಸ್ತಕ (Register)

Carve ಕಾರ್ವ್ (ಕ್ರಿ. ; ಭೂತ. -ed, ಭೂ. ಕೃ. -ed, ಕೆಲವು ವೇಳೆ -en) (ಪದಾರ್ಥದಿಂದ, ಪದಾರ್ಥದಲ್ಲ, ಪದಾರ್ಥದಮೇಲೆ, ವಿಗ್ರಹ, ಭಾವಚಿತ್ರ, ಶಾಸನ, ಮೊ. ನ್ನು) ಕೆತ್ತು, ಕಂಡರಿಸು, ಕೊರೆ, ಬಿಡಿಸು, ರೂಪಿಸು. (ಯಾವುದಾದರೂ ಪದಾರ್ಥವನ್ನು ಒಂದು ರೂಪಕ್ಕೆ) ಕತ್ತರಿಸು. (ಊಟ ಮಾಡುವಾಗ, ಅಥವಾ ಊಟಕ್ಕೆ, ಮಾಂಸ, ಮೊ. ನ್ನು) ತುಂಡು ತುಂಡಾಗಿ ಕತ್ತರಿಸು, ತುಂಡರಿಸು (Carving-knife ಈ ಕೆಲಸಕ್ಕಾಗಿ ಮಾಡಿರುವ ದೊಡ್ಡ ಚೂರಿ). ವಿಭಾಗ ಮಾಡು (*up* ಉಪ. ದೊಡನೆ). [C. one's way ದಾರಿ ಮಾಡಿಕೊ ; ದಾರಿ ಬಿಡಿಸಿಕೊ. C. out ಅಖಂಡ ವಸ್ತುವಿನಿಂದ ಒಂದು ಭಾಗವನ್ನು ಬೇರ್ಪಡಿಸಿಕೊ, ಕತ್ತರಿಸಿ ತೆಗೆದುಕೊ ; (ಸಾ., ಬಾಹುಬಲದಿಂದ) ಸಂಪಾದಿಸಿಕೊ]. ಚಿತ್ರ ಕೊರೆ ; ಕೆತ್ತನೆಕೆಲಸ ಮಾಡು. **Cárving** (ನಾ.) ಚಿತ್ರ ಕೊರೆಯುವುದು ; ಕೆತ್ತನೆಕೆಲಸ (ಮಾಡುವುದು) ; ನಕಾಸೆ ಕೆಲಸ. **Cárver** (ನಾ.) (ಕ್ರಿಯಾರ್ಥಗಳಲ್ಲ). ಹೋಳು (ತುಂಡು) ಮಾಡುವ ಚೂರಿ. (ಬ.ವ. ದಲ್ಲ) ಕತ್ತರಿಸುವ ಚೂರಿ ಮತ್ತು ಮುಳ್ಳುಸೌಟು (Fork)

Caryátid ಕ್ಯಾರಿಆ್ಯಟಿಡ್ (ನಾ.) ಹೆಣ್ಣುಬೊಂಬೆಯ ಆಕಾರದ ಕಂಬ.

Cascáde ಕ್ಯಾಸ್ಕೇಡ್ (ನಾ., ಕ್ರಿ. ಅಕ.) ಜಲಪಾತ ; ಅನೇಕ ಭಾಗಗಳಾಗಿ ಒಡೆದಿರುವ ದೊಡ್ಡ ಜಲಪಾತದ ಒಂದು ಶಾಖೆ. ಜಲಪಾತದಂತೆ ದುಮುಕು ; ನೀರು ಬೀಳು. ಜರತಾರಿ, ಮೊ. ವು ತೆರೆತೆರೆಯಾಗಿ ಬೀಳು(ವುದು). (ಒರಟು ಮಾತು) ವಾಂತಿ ಮಾಡು.

Cascára sagráda ಕಾಸ್ಕಾರ ಸಗ್ರಾಡಾ (ನಾ.) ಒಂದು ಜಾತಿಯ ಮರದ ತೊಗಟೆಯಿಂದ ತಯಾರಿಸಿದ, ಮಲಬದ್ಧತೆಯನ್ನು ಪರಿಹರಿಸುವ ಗುಣವುಳ್ಳ, ಒಂದು ಔಷಧವಸ್ತು.

Case[1] ಕೇಸ್ (ನಾ.) ವಿಷಯ ; ಸಂಗತಿ ; ಪಕ್ಷ ; ಸ್ಥಿತಿ ; ಘಟನೆ ; ಪರಿಸ್ಥಿತಿ ; ವಿದ್ಯಮಾನ ; ಸಂದರ್ಭ ; ಅವಸ್ಥೆ ; ಗತಿ ; ಎಡೆ. (ವೈ. ಶಾ.) ರೋಗಸ್ಥಿತಿ ; ರೋಗ ವಿವರ. (ನ್ಯಾ. ಶಾ.) ವ್ಯವಹಾರ ; ವ್ಯಾಜ್ಯ ; ಮೊಕದ್ದಮೆ ; ವ್ಯಾಜ್ಯ ವಿಷಯ, ವಿವರ. ಉದಾಹರಿಸಬಹುದಾದ, ಹಿಂದೆ ತೀರ್ಮಾನವಾದ, ಮೊಕದ್ದಮೆ. ಒಂದು ಪಕ್ಷದ ವಾದ. (ವ್ಯಾ.) ವಿಭಕ್ತಿ. C. of conscience (ರೂಪ.) (ಪರಸ್ಪರ ವಿರುದ್ಧವಾದ ತತ್ತ್ವಗಳ ವಿಷಯದಲ್ಲಿ) ಆತ್ಮಸಾಕ್ಷಿಯೇ ನಿರ್ಧರಿಸಬೇಕಾದ ವಿಷಯ : ಆತ್ಮಸಾಕ್ಷಿ ವಿಚಾರ. C.-law ನ್ಯಾಯಸ್ಥಾನಗಳ ಹಿಂದಿನ ತೀರ್ಮಾನಗಳ ಮೇಲೆ ನಿರ್ಣಯವಾದ ನ್ಯಾಯವಿಧಿಗಳು : ತೀರ್ಪಿನ ನ್ಯಾಯ. In any c. ಏನೇ ಆಗಲಿ ; ಏನೇ ಇರಲಿ ; ಏನೇ ಸಂಭವಿಸಲಿ ; ಹೇಗಾದರೂ. In c., In c. of, —ರೆ ; ಆದರೆ ; ಸಂದರ್ಭ ಒದಗಿದರೆ. In the c. of (ಅ) ವಿಷಯದಲ್ಲ. In that c. ಹಾಗಿದ್ದಲ್ಲಿ ; ಆ ಪಕ್ಷದಲ್ಲಿ ; ಅದು ನಿಜವಾಗಿದ್ದಲ್ಲಿ ; ಹಾಗಾ(ಗುವುದಾ)ದರೆ. It is not the c. ಅದು ನಿಜಸ್ಥಿತಿಯಲ್ಲ. Leading c. ಮುಂದಿನ ತೀರ್ಪುಗಳಿಗೆ ಆಧಾರವಾಗಿರುವ ನಿರ್ಣೀತ ವ್ಯವಹಾರ ; ಆಧಾರ ತೀರ್ಪು. Make out one's c. ತನ್ನ ಪಕ್ಷವನ್ನು ಸ್ಥಾಪಿಸು. Put the c. that (ಹಾಗೆ) ಭಾವಿಸಿಕೊ ; ಇಟ್ಟುಕೊ.

Case[2] ಕೇಸ್ (ನಾ., ಕ್ರಿ. ಸಕ.) ಆವರಣ ; ಪೆಟ್ಟಿಗೆ ; ಸಂಪುಟ ; ಭರಣಿ ; ಕೋಶ ; ಗೂಡು ; ಚೀಲ ; ಒರೆ. ಗಿಡಬೆಳಸುವ ಚೌಕಟ್ಟು. (ಪುಸ್ತಕ, ಗಡಿಯಾರ, ಬೀಜ, ಮೊ. ಗಳ) ರಕ್ಷಾವರಣ. (ಮುದ್ರಣ) ಖಾನೆಗಳಾಗಿ ವಿಭಾಗ ಮಾಡಿ ಮುದ್ರಣದ ಮೊಳೆಗಳನ್ನುಳ್ಳ ಮರದ ಕೋಶ (Upper c. ದೊಡ್ಡಕ್ಷರಗಳು. Lower c. ಸಣ್ಣಕ್ಷರಗಳು). (ಕ್ರಿ.) ಆವರಣ ಕೊಡು ; ಸಂಪುಟದಲ್ಲಿಡು ; ಆಚ್ಛಾದಿಸು. **C.-bottle** ಕೋಶದಲ್ಲಿ ಒಂದರೊಡನೊಂದು ಹೊಂದಿಕೊಳ್ಳುವಂತೆ ಇಡಲಾಗುವ ಚೌಕದ ಸೀಸೆ : ಖಾನೆಯ ಸೀಸೆ. **Cáse-harden** (ಕ್ರಿ. ಸಕ.) ಮೇಲ್ಮೈಯನ್ನು ಗಡುಸಾಗಿ ಮಾಡು (ಮು., ಕಬ್ಬಿಣದ ಮೇಲ್ಮೈಗೆ ಹದಕೊಟ್ಟು ಉಕ್ಕನ್ನಾಗಿ ಮಾಡು). (ರೂಪ.) ಜಡ್ಡುಗಟ್ಟಿಸು ; ಕರಡುಕಟ್ಟು. **C.-knife** ಒರೆಯಲ್ಲಿಟ್ಟಿರುವ ಚೂರಿ. **C.-shot or C.** ಫಿರಂಗಿಯಿಂದ ಜಾವಿಗೆಬತ್ತಿಯಿಲ್ಲದೆ ಹಾರಿಸುವ ಗುಂಡುತುಂಬಿದ ಟಿನ್‌ಪೆಟ್ಟಿಗೆ. **Cásing** (ನಾ.) ಆವರಣ ಕೊಡುವುದು ; ಆಚ್ಛಾದಿಸುವುದು ; ಆಚ್ಛಾದನೆ ; ಆವರಣ ; ಹೊದಿಕೆ.

Cásein ಕೇಸಿಇನ್ (ನಾ.) (ಹಾಲಿನಲ್ಲಿರುವ) ಒಂದು ಸಸಾರಜನಕ ಪದಾರ್ಥ ('ಚೀಸ್' ಎಂಬ ಆಹಾರಪದಾರ್ಥದ ಮುಖ್ಯಭಾಗ). **Cáseous** (ಗು.) ಚೀಸ್‌ಪದಾರ್ಥದ ; ಚೀಸಿನಂಥ.

Cásemate ಕೇಸ್‌ಮೇಟ್ (ನಾ.) ಕೋಟೆಯ ಗೋಡೆಯಲ್ಲಿ, ಗುಂಡು ಹಾರಿಸಲು ಕಂಡಿಗಳುಳ್ಳ ಕಮಾನುಕೋಣೆ. **Cásemated** (ಗು.)

Cásement ಕೇಸ್(ಸ್)ಮೆಂಟ್ (ನಾ.) ಕೀಲುಗಳಮೇಲೆ ತಿರುಗುವ, ಗಾಜಿನ ಹಲಗೆಗಳುಳ್ಳ, ಕಿಟಕಿಯ ಚೌಕಟ್ಟು ಅಥವಾ ಅದರ ಭಾಗ (= C.-window) : ತಿರುಗಣಿ ಕಿಟಕಿ. (ಕಾವ್ಯ) ಕಿಟಕಿ. C. cloth ಪರದೆಗಳಿಗೂ ಉಡುಪು, ಮೊ. ಗಳಿಗೂ ಉಪಯೋಗಿಸುವ ಹತ್ತಿಯಬಟ್ಟೆ.

Cash[1] ಕ್ಯಾಷ್ (ನಾ. ; ಬ. ವ. ಇಲ್ಲ ; ಕ್ರಿ. ಸಕ.) ನಗದು ಹಣ ; ನಗದು. (ಬ್ಯಾಂಕುವ್ಯಾಪಾರ) ನಾಣ್ಯ ಅಥವಾ ಕಾಗದದ ಹಣ (ನೋಟುಗಳು). (ಕ್ರಿ.) (ಕಾಗದದ ಹಣ, ಹುಂಡಿ, ಮೊ. ಕ್ಕೆ) ನಗದು ಹಣ ಕೊಡು, ಪಡೆ. C.-account ನಗದು ಲೆಕ್ಕ ; ನಗದು ಲೇವಾದೇವಿ ; ರೊಕ್ಕದ ಖಾತೆ. C.-book ನಗದು ಲೆಕ್ಕದ ಪುಸ್ತಕ ; ನಗದಿ ಪುಸ್ತಕ ; ರೊಕ್ಕದ ಪುಸ್ತಕ. C. down ಕೈಮೇಲೆ ಹಣಕೊಟ್ಟು ; ಹಣ ಎಣಿಸಿ ; ನಗದು (ಕೊಟ್ಟು). C. in (ಬಳ. ಮೂ.) ಸಾಯಿ. C. on delivery (ಸಂಕ್ಷಿಪ್ತ : C. O. D.) ಸರಕು ಮುಟ್ಟಿದಕೂಡಲೆ ಹಣ ಕೊಡುವ ಕರಾರು. C. payment ನಗದು (ಹಣ) ಕೊಡುವುದು. C. price ನಗದು ಬೆಲೆ. C. register ನಗದು ಪುಸ್ತಕ. In c. ಹಣವಿದ್ದು. Out of c. ಹಣವಿಲ್ಲದೆ. **Cashiér**[1] ಕ್ಯಾಷೀಯರ್ (ನಾ.) ಬ್ಯಾಂಕಿನ ಅಥವಾ ವರ್ತಕನ ಹಣದ ಜವಾಬ್ದಾರಿಯುಳ್ಳವನು ; ನಗದಿ ಗುಮಾಸ್ತೆ. **Cáshless** (ಗು.)

Cash[2] ಕ್ಯಾಷ್ (ನಾ. ; ಬ. ವ. Cash) ಇಂಡಿಯಾ ಮತ್ತು ಚೀನಾ ದೇಶಗಳ ಒಂದು ಕೇವಲ ಸಣ್ಣ ನಾಣ್ಯ : ಕಾಸು (ಮು., ಪೋಣಿಸಲು ಅನುಕೂಲಿಸುವಂತೆ ಮಧ್ಯದಲ್ಲಿ ಕಂಡಿಕೊರೆದಿರುವ ಒಂದು ಚೀನಾ ನಾಣ್ಯ ; ಇಂಥ ಸಾವಿರ ನಾಣ್ಯಗಳು = ೧ ಟೇಲ್)

Cáshew ಕಷೂ (ನಾ.) ಗೋಡಂಬಿಯ ಮರ ; ಗೇರುಬೀಜದ ಮರ. **C.-nut** ಗೋಡಂಬಿ ; ಗೇರುಬೀಜ.

Cashiér[2] ಕಷೀಯರ್ (ಕ್ರಿ. ಸಕ.) ಕೆಲಸದಿಂದ ತೆಗೆದುಹಾಕು ; ಅಧಿಕಾರದಿಂದ ನಿವೃತ್ತಿಮಾಡು ; ವಿಸರ್ಜಿಸು.

Cáshmere ಕ್ಯಾಷ್ಮೀಯರ್ (ನಾ.) (ಕಾಶ್ಮೀರದ ಆಡಿನ ನಯವಾದ ಮತ್ತು ಮೃದುವಾದ ಉಣ್ಣೆಯಿಂದ ಮಾಡಿದ) ಶಾಲು (=C. shawl) ; ಈ ಶಾಲುಗಳನ್ನು ಮಾಡುವ ಉಣ್ಣೆ. ಕಾಶ್ಮೀರದ ಶಾಲುಗಳ ಹೋಲಿಕೆಯ (ಕೃತಕವಾದ) ಶಾಲು. **Cashmerétte** ಕ್ಯಾಷ್ಮಿರೆಟ್ (ನಾ.) ಕೃತಕ ಕಾಶ್ಮೀರದ ಶಾಲಿನ ಬಟ್ಟೆ.

Casíno ಕಸೀನೊ (ನಾ.) ಸಾರ್ವಜನಿಕ ಗಾಯನಶಾಲೆ, ನೃತ್ಯಾಗಾರ. ಒಂದು ತೆರದ ಇಸ್ಪೀಟಾಟ.

Cask ಕಾಸ್ಕ್ (ನಾ.) (ಮರದ) ಪೀಪಾಯಿ. ತುಂಬಿದ ದ್ರವಪದಾರ್ಥದಿಂದ ಕೂಡಿದ ಪೀಪಾಯಿ. ಒಂದು ಅಳತೆಯ ಪ್ರಮಾಣ.

Cásket ಕಾಸ್ಕೆಟ್ (ನಾ.) (ಒಡವೆ, ಪತ್ರ, ಶವ ದಹನವಾದಮೇಲೆ ಉಳಿದ ಬೂದಿ, ಮೊ.ನ್ನಿಡುವುದಕ್ಕಾಗಿ ಚಿನ್ನ, ಬೆಳ್ಳಿ, ಮೊ. ದ ಬೆಲೆಯುಳ್ಳ ಪದಾರ್ಥದಲ್ಲ ಚಿತ್ರಕೆಲಸ ಮಾಡಿದ) ಸಂಪುಟ.

Casque ಕಾಸ್ಕ್ (ನಾ.) (ಚರಿತ್ರೆ, ಕಾವ್ಯ) ಶಿರಸ್ತ್ರಾಣ ; ಸೀಸಕ.

Cassándra ಕಸ್ಯಾಂಡ್ರ (ನಾ.) ಕೇಡನ್ನು ಸೂಚಿಸುವ ಶಕುನಿಗ, ಭವಿಷ್ಯವಾದಿ ; ಜನರು ನಂಬದ ಭವಿಷ್ಯವಾದಿ. (ನಿಶ್ಚಯವಾಗಿ ಭವಿಷ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಳಿದರೂ ಯಾರೂ ನಂಬದಂತೆ ಶಾಪವಿದ್ದ ಟ್ರಾಯ್ ಪಟ್ಟಣದ ಒಬ್ಬ ಸ್ತ್ರೀಭವಿಷ್ಯವಾದಿಯ ಹೆಸರಿನಿಂದ)

Cassátion ಕ್ಯಾಸೇಷನ್ (ನಾ.) ರದ್ದುಮಾಡುವುದು ; ತೊಡೆದುಹಾಕುವುದು. Court of C. ಮೇಲ್ಮನವೆಯ ನ್ಯಾಯಸ್ಥಾನ (ಮು., ಫ್ರಾನ್ಸಿನದು)

Cassáva ಕ್ಯಸಾವ (ನಾ.) ವೆಸ್ಟ್ ಇಂಡೀಸ್, ಮೊ. ದೇಶಗಳಲ್ಲಿ ಬೆಳೆಯುವ ಒಂದು ಜಾತಿಯ ಮರಗೆಣಸು (ಮುಡಿಗೆಣಸು) ಗಿಡ; ಈ ಗೆಣಸಿನ ಪಿಷ್ಟ ಅಥವಾ ಹಿಟ್ಟು ; ಇದರಿಂದ ಮಾಡಿದ ರೊಟ್ಟಿ.

Cássia ಕ್ಯಾಸಿಯ, ಕ್ಯಾಷ (ನಾ.) ಕೀಳ್ತರದ ದಾಲ್ಚಿನ್ನಿ. ಆವರಿಕೆ (ತಂಗಡಿ) ಜಾತಿಯ ಗಿಡ. ಔಷಧದಲ್ಲಿ ಉಪಯೋಗಿಸುವ 'ಸೆನ್ನಾ' ಎಲೆಯನ್ನು (ಸೋನಾಮುಖಿಯನ್ನು) ಬಿಡುವ ಈ ಜಾತಿಯ ಅನೇಕ ವಂಶದ ಗಿಡಗಳು.

Cássock ಕ್ಯಾಸಕ್ (ನಾ.) ಕೆಲವರು ಆಂಗ್ಲಿಕನ್ ಪಾದ್ರಿಗಳು ತೊಟ್ಟುಕೊಳ್ಳುವ ಗುತ್ತನಾದ ನಿಲುವಂಗಿ. **Cássocked** (ಗು.)

Cassolétte ಕ್ಯಾಸೊಲೆಟ್ (ನಾ.) ಸುಗಂಧ ದ್ರವ್ಯಗಳನ್ನು ಹೊಗೆ ಹಾಕುವ ಪಾತ್ರೆ : ಧೂಪಪಾತ್ರೆ ; ರಂಧ್ರಗಳಿರುವ ಮುಚ್ಚಳವುಳ್ಳ ಸುಗಂಧದ್ರವ್ಯ ಸಂಪುಟ; ಪನ್ನೀರುದಾನಿ ; ಅತ್ತರುದಾನಿ.

Cássowary ಕ್ಯಾಸೊವೆರಿ (ನಾ.) ಉಷ್ಟ್ರಪಕ್ಷಿಯ ಜಾತಿಗೆ ಸೇರಿದ ಹಲವು ಓಡುಹಕ್ಕಿ ಜಾತಿಗಳು.

Cast ಕಾಸ್ಟ್ (ಕ್ರಿ.) ಎಸೆ ; ಬೀರು ; ಎರಚು ; ಚೆಲ್ಲು ; ಹಾಕು. (ನ್ಯಾಯವ್ಯವಹಾರದಲ್ಲಿ) ಸೋಲಿಸು ; ಉರುಳಿಸು ; ಬೀಳಿಸು. ಕಾಲಕ್ಕೆ ಮೊದಲೇ ಮರಿಹಾಕು (Cow casts calf); (ಹಣ್ಣು) ಕಾಲಕ್ಕೆ ಮೊದಲೇ ಉದಿರು (Tree casts fruit). (ಕೆಲಸದಿಂದ) ತೆಗೆದುಹಾಕು ; ನಿವೃತ್ತಿಮಾಡು ; ಉಪಯೋಗವಿಲ್ಲವೆಂದು ತಳ್ಳಿಬಿಡು (C. a soldier ; C. a horse). ಲೆಕ್ಕಮಾಡು ; ಗುಣಿಸು (C. accounts). ಕ್ರಮಪಡಿಸು ; ಓರಣಿಸು ; ಅಳವಡಿಸು. ಎರಕ ಹೊಯ್ಯಿ. ಎಣಿಕೆ ಹಾಕು ; ವಿಚಾರಮಾಡು ; ಆಲೋಚಿಸು. (ನಾಟಕ) ನಟರಿಗೆ ಪಾತ್ರಗಳನ್ನು ಗೊತ್ತುಮಾಡು ; ಪಾತ್ರಗಳಿಗೆ ನಟರನ್ನು ಗೊತ್ತುಮಾಡು : ಪಾತ್ರವ್ಯವಸ್ಥೆ ಮಾಡು. C. about ಅತ್ತಿತ್ತ ಸುತ್ತಾಡು ; ಹುಡುಕಾಡು ; ಉಪಾಯ ಹುಡುಕು. (ನಾವೆ) ಮಾರ್ಗ ಬದಲಾಯಿಸು. C. anchor ಲಂಗರು ಹಾಕು, ಬಿಡು. C. aside ಎಸೆದುಬಿಡು ; ಬೀಸಾಡು ; ನಿರಾಕರಿಸು. C. away ಹೊರದೂಡು ; ತಳ್ಳಿಬಿಡು ; ತ್ಯಜಿಸು ; ಬೀಸಾಡು ; ಹಾಳುಮಾಡು. (ನಾವೆ, ಕರ್ಮಣಿ) ಒಡೆದುಹೋಗು ; ಮುಂದೆ ಸಾಗದಂತೆ ನೆಲಹತ್ತು. C. back ಬಂದ ಮಾರ್ಗದಿಂದ ಹಿಂದಕ್ಕೆ ಹೋಗು ; ಹಿಂದಿರುಗು ; ಮರಳು. C. beyond the moon ಹುಚ್ಚುಆಲೋಚನೆಗಳನ್ನು ಮಾಡು; ಅಸಾಧ್ಯಕಲ್ಪನೆ ಮಾಡು. C. blame upon ದೂರು ; ದೂರು ಹೊರಿಸು ; ಆಕ್ಷೇಪಿಸು ; ತಪ್ಪುಹಾಕು. C. a column of figures ಅಂಕಿಯ ಸಾಲನ್ನು ಕೂಡು. C. dice ದಾಳ ಹಾಕು, ಬಿಡು. C. down ಕೆಡವಿಬಿಡು ; ಉರುಳಿಸು ; ನಾಶಗೊಳಿಸು ; ತಗ್ಗಿಸು ; (ಕಣ್ಣು, ಮೊ. ನ್ನು) ಕೆಳಕ್ಕಿಳಿಸು ; ಕುಗ್ಗು ; ಖಿನ್ನನಾಗು ; ಮುಖ ಜೋಲುಬೀಳು. C. an eye, glance, look ಕಣ್ಣುಹಾಕು ; ದೃಷ್ಟಿಸು ; ನೋಡು ; ದೃಷ್ಟಿ ತಿರುಗಿಸು. C. forth ಹೊರದೂಡು ; ಅಟ್ಟಿಬಿಡು. C. a horoscope ಜಾತಕ ಗುಣಿಸು, ಬರೆ. C. in ಸೇರಿಸು ; ಸೇರಿಸಿಕೊ [C. in one's lot among, with ಅವರಿಗೆ (ಅವನಿಗೆ) ಆದದ್ದು ತನಗೂ ಆಗಲೆಂದು ಜೊತೆಗೆ ಸೇರಿಕೊ ; ಸಹಭಾಗಿಯಾಗು]. C. light, shadow, on ಬೆಳಕು, ನೆರಳು, ಬೀಳಿಸು. C. loose ಬಲವಂತವಾಗಿ ಕಳಚು, ಕೀಳು ; ಕಳಚಿಕೊ. ಎಲ್ಲಿಂದರಲ್ಲಿ ಹೋಗಲೆಂದು ಬಿಟ್ಟುಬಿಡು. C. lots (ಅದೃಷ್ಟದ) ಚೀಟಿ ಹಾಕು. C. net ಬಲೆ ಬೀಸು, ಒಡ್ಡು. C. off (ಬಟ್ಟೆಬರೆ) ಎಸೆದುಬಿಡು ; ತೊರೆದುಬಿಡು ; ತ್ಯಜಿಸು ; ಬಿಟ್ಟುಬಿಡು. (ನಾವೆ) (ಹಗ್ಗ, ಮೊ. ನ್ನು) ಕಳಚಿ ಬೀಸು. (ಮುದ್ರಣ) ಒಂದು ಹಸ್ತಪ್ರತಿಯನ್ನು ಮುದ್ರಣಮಾಡಿದರೆ ಎಷ್ಟು ಸ್ಥಳ ತೆಗೆದುಕೊಳ್ಳುವುದೆಂಬುದನ್ನು ಅಂದಾಜುಮಾಡು. C. out ತಳ್ಳಿಬಿಡು ; ಅಟ್ಟಿಬಿಡು ; ಬಹಿಷ್ಕಾರ ಹಾಕು ; ಹೊರಗೆ ಹಾಕು. (ಮನೆ, ಸಮಾಜ, ಮೊ. ಗಳಿಂದ) ದಬ್ಬು ; ಹೊರದೂಡು. ವಾಂತಿಮಾಡು ; ಕಾರು. ಜಗಳವಾಡು. C. into prison ಸೆರೆಯಲ್ಲಿ ಹಾಕು ; ಸೆರೆಯಲ್ಲಿಡು. (Horse) c. a shoe (ಕುದುರೆಯ ಕಾಲಿನಿಂದ) ಲಾಳ ಬಿದ್ದುಹೋಯಿತು. (Snake) c. slough (ಹಾವು) ಪೊರೆ ಉಚ್ಚಿತು, ಬಿಟ್ಟಿತು. C. a spell ಮಂಕುಬೂದಿ ಎರಚು ; ಮಂತ್ರ ಹಾಕು ; ಮುಗ್ಧಮಾಡು. C. up ಮೇಲೆಸೆ ; (ತಲೆ, ಕಣ್ಣು, ಮೊ. ನ್ನು) ಥಟ್ಟನೆ ಮೇಲಕ್ಕೆತ್ತು. (ಗುದ್ದಲಿಯಿಂದ) ಎತ್ತಿ ಎಸೆ. ಪ್ರಸ್ತಾಪವೆತ್ತಿ ಮುಖದ ಮೇಲೆ ನೀರಿಳಿಸು. ಸಂಕಲನ ಮಾಡು ; ಕೂಡು ; ಲೆಕ್ಕ ಮಾಡು. ಬರು ; ಕಾಣಿಸಿಕೊ. C. a vote ಅಭಿಮತ ಕೊಡು ; 'ವೋಟು' ಕೊಡು. **Cástaway** ಕಾಸ್ಟವೇ (ನಾ., ಗು.) ತೊರೆಯಲ್ಪಟ್ಟವನು ; ಭ್ರಷ್ಟ ; ಬಹಿಷ್ಕೃತ; ಸಮಾಜ ಚ್ಯುತ; ಬಿಸುಟ(ದ್ದು). ಹಡಗು ಒಡೆದು ನಿರಾಶ್ರಯನಾದ(ವನು). **Cáster** (ಸೈನಿಕ, ಬಳ. ಮೊ.) ತೆಗೆದು ಹಾಕಿದ ಕುದುರೆ.

Cast (ನಾ.) (ಪ್ರಾಚೀ. ಪ್ರ.) ಎಸೆತ ; ಎಸೆಯುವುದು ; ಎಸೆದ ದೂರ. ದಾಳದ ಎಸೆತ ; ದಾಳದ ಸಂಖ್ಯೆ : ಗರ ; (ರೂಪ. ಸಹ). ಅದೃಷ್ಟದ ಹೊಡೆತ ; ಸುಯೋಗ ; ಅದೃಷ್ಟ. (ಬಲೆ, ಆಳದ ಗುಂಡು, ಮೀನಿನ ಗಾಳ — ಇವುಗಳ) ಎಸೆತ, ಬೀಸು ; ಇವನ್ನು ಬೀಸುವುದಕ್ಕೆ ತಕ್ಕ ಸ್ಥಳ. (ಸವಾರಿಬಂಡಿಯಲ್ಲಿ) ಅಕಸ್ಮಾತ್ತಾಗಿ ದೊರೆತ ಸವಾರಿ. (ಗಿಡುಗ, ಗೂಬೆ, ಮೊ. ಗಳ) ವಾಂತಿ. ಲೆಕ್ಕಮಾಡುವುದು ; ಕೂಡುವುದು; ಸಂಕಲನ. (ನಾಟಕದಲ್ಲಿ) ಪಾತ್ರವಹಿಸುವ ನಟರು ; ಪಾತ್ರವ್ಯವಸ್ಥೆ. (ಯಾವುದಾದರೂ ಕಾರ್ಯದ) ರೀತಿ, ರಚನೆ, ಅಚ್ಚುಕಟ್ಟು. ಎರಕ ಹೊಯ್ದು ಅಥವಾ ಅಚ್ಚಿನಲ್ಲಿ ಒತ್ತಿ ಮಾಡಿದ ಪ್ರತಿಮೆ ; ಎರಕ ; ಅಚ್ಚು ; ರೂಪು ; ಪ್ರತಿಮೆಯ ಅಚ್ಚು. ತಿರುವು ; ಮುರಿವು ; ಓರೆ (C. in eye ಸ್ವಲ್ಪ ಓರೆದೃಷ್ಟಿ ಅಥವಾ ವಕ್ರದೃಷ್ಟಿ). (ಬಣ್ಣದ) ಛಾಯೆ. ಮಾದರಿ ; ಭಾವ ; ಧಂಗಿ ; ರೀತಿ ; ಲಕ್ಷಣ (C. of features ಮುಖಭಾವ. C. of mind ಮನೋಭಾವ). **Cast iron** (ನಾ.) ಎರಕ ಹೊಯ್ದ ಕಬ್ಬಿಣ ; ತಾಂಡವಾಳ. **Cast-íron** (ಗು.) ತಾಂಡವಾಳದಿಂದ ಮಾಡಿದ ; (ರೂಪ.) ಗಡುಸಾದ ; ಪೆಡಸಾದ ; ಕಠಿನ. ಸಗ್ಗದ ; ಬಗ್ಗದ ; ದಣಿಯದ ; ಹೊಂದಿಕೊಳ್ಳದ.

Cásting (ನಾ., ಗು.) (ಕ್ರಿಯಾರ್ಥಗಳಲ್ಲಿ). ಅಚ್ಚಿನಲ್ಲಿ ಎರಕ ಹೊಯ್ದದ್ದು ; ಎರಕ. ಹುಳುಗಳು ಮೇಲಕ್ಕೆ ಎತ್ತಿಹಾಕಿದ ಮಣ್ಣು. ವಾಂತಿ (ಮು., ಗಿಡುಗ, ಗೂಬೆ, ಮೊ. ಗಳದು). (ಗು.) ನಿರ್ಧರಿಸತಕ್ಕ ; ನಿರ್ಧಾರಕ (C.-vote ಎರಡು ಪಕ್ಷಗಳಿಗೂ ಸಮಸಂಖ್ಯೆಯ ಅಭಿಮತಗಳು ಬಂದಾಗ, ತೀರ್ಮಾನಿಸುವುದಕ್ಕಾಗಿ ಕೊಡುವ ಅಭಿಮತ : ನಿರ್ಧಾರಕ ಅಭಿಮತ, ವೋಟು)

Cástanet, -anét ಕಾಸ್ಟನೆಟ್ (ನಾ. ; ಸಾ., ಬ. ವ. ದಲ್ಲಿ) (ಕುಣಿತಕ್ಕೆ ತಾಳಹಾಕುವ ಗಟ್ಟಿಮರದ ಅಥವಾ ದಂತದ) ಚಿಟಿಕೆಗಳು.

Caste ಕಾಸ್ಟ್ (ನಾ.) (ಇಂಡಿಯಾದಲ್ಲಿ) ಜಾತಿ ; ವರ್ಣ. (ಇತರ ಕಡೆಗಳಲ್ಲಿ) ಸಾ., ಇತರ ವರ್ಗಗಳೊಡನೆ ಸೇರದೆ ತಾವೇ ಬೇರೆಯಾಗಿರುವ ಪಂಗಡ, ಗುಂಪು. ಜಾತಿಪದ್ಧತಿ. Lose c. ಜಾತಿ ಕೆಡು ; ಸಮಾಜದಲ್ಲಿ ಕೆಳ ಅಂತಸ್ತಿಗಿಳಿ. **Cásteless** (ಗು.)

Cástellan, **Cástellated** } **Castle** ನೋಡಿ.

Cástigate ಕ್ಯಾಸ್ಟಿಗೇಟ್ (ಕ್ರಿ. ಸಕ.) (ಮಾತಿನಿಂದಾಗಲಿ ಏಟಿನಿಂದಾಗಲಿ) ದಂಡಿಸು ; ಛೀಪೆಟ್ಟು, ಛೀಮೋರೆ, ಹಾಕು. (ಪುಸ್ತಕ, ಮೊ. ನ್ನು) ತಿದ್ದಿ ಪರಿಷ್ಕರಿಸು. **Castigátion** (ನಾ.) ; **Cástigator** (ನಾ.) ; **Cástigatory** (ಗು.)

Castíle Soap ಕ್ಯಾಸ್ಟೀಲ್ ಸೋಪ್ (ನಾ.) 'ಆಲಿವ್' ಎಣ್ಣೆ ಮತ್ತು ಸೋಡಾ — ಇವುಗಳಿಂದ ಮಾಡಿದ ಸಾಬೂನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cástle ಕಾ(ಕ್ಯಾ)ಸ್‌ಲ್ (ನಾ., ಕ್ರಿ.) ಸುತ್ತಲೂ ಕೋಟೆಯಿರುವ ದೊಡ್ಡ ಕಟ್ಟಡ ಅಥವಾ ಅನೇಕ ಕಟ್ಟಡಗಳು; ದುರ್ಗ; ಕೋಟೆ; ಹಿಂದೆ ದುರ್ಗವಾಗಿದ್ದ ಶ್ರೀಮಂತಗೃಹ; ಕೋಟೆಮನೆ. (Castles in the air. Air ನೋಡಿ). (ಇಂಗ್ಲೆಂಡಿನಲ್ಲಿ) The C. ಸರ್ಕಾರ (Dublin castle ಎಂಬ ಕೋಟೆಮನೆಯಿಂದ). [Englishman's house is his c. ಇಂಗ್ಲಿಷನ ಮನೆ ಅವನ ದುರ್ಗ (ಯಾರೂ ಬಲವಂತದಿಂದ ನುಗ್ಗಲು ಆಗದು)]. (ಪಾಶ್ಚಾತ್ಯ ಚದುರಂಗ) ಕೊತ್ತಲಗಳ ಆಕಾರದ ಮೇಲ್ಭಾಗವುಳ್ಳ ಕಾಯಿ. (ಕ್ರಿ.) ದುರ್ಗದಲ್ಲಿಡು. **Cástled** (ಗು.); **Cástlewise** (ಕ್ರಿ. ವಿ.); **Cástellan** ಕಾಸ್ಟೆಲನ್ (ನಾ.) ಕಿಲ್ಲೇದಾರ; ದುರ್ಗಾಧಿಪತಿ; ದುರ್ಗಾಧ್ಯಕ್ಷ. **Cástellated** ಕ್ಯಾಸ್ಟೆಲೇಟೆಡ್ (ಗು.) ದುರ್ಗದಂಥ; ಕೊತ್ತಲಗಳುಳ್ಳ; ದುರ್ಗಗಳುಳ್ಳ; ದುರ್ಗದಲ್ಲಿಟ್ಟ.

Cástor[1] ಕಾಸ್ಟರ್ (ನಾ.) ಔಷಧಗಳಲ್ಲಿಯೂ ಸುಗಂಧ ದ್ರವ್ಯಗಳಲ್ಲಿಯೂ ಉಪಯೋಗಿಸುವ, 'ಬೀವರ್' ಎಂಬ ಪ್ರಾಣಿಯ ದೇಹದಿಂದ ತೆಗೆದ, ಪದಾರ್ಥ. (ಅಸಂ.) (ಪರಂಗಿ) ಟೋಪಿ.

Cástor[2], **-er** ಕಾಸ್ಟರ್ (ನಾ.) ಊಟದ ಮೇಜಿನ ಮೇಲಿಡುವ ಮೆಣಸಿನ ಪುಡಿ, ವೊ. ವ್ಯಂಜನ ಪದಾರ್ಥಗಳ ಸೀಸೆ; ಖಾರದ (ಪುಡಿ) ಡಬ್ಬಿ. (ಬ. ವ. ದಲ್ಲಿ) ಇದನ್ನಿಡುವ ಪೀಠ. (C. sugar ಬಿಳಿಯ ಪುಡಿ ಸಕ್ಕರೆ). (ಮೇಜು, ಕುರ್ಚಿ, ಮಂಚ, ವೊ. ಗಳ ಕಾಲಿಗೆ ಹಾಕಿರುವ) ತಿರುಗು ಗಾಲಿ.

Cástor[3] ಕಾಸ್ಟರ್ (ನಾ.) ಮಿಥುನ ರಾಶಿಯಲ್ಲಿ ಮೊದಲನೆಯ ನಕ್ಷತ್ರ; (ಎರಡನೆಯದು Pollux). ಬಿರುಸಾದ ಮಳೆಗಾಳಿ ಹೊಡೆಯುತ್ತಿರುವಾಗ ಹಡಗಿನ ಮೇಲೆ ಕೆಲವು ವೇಳೆ ಕಾಣುವ ಜ್ವಾಲೆಯ ಚೆಂಡು.

Cástor[4] ಕಾಸ್ಟರ್ (ನಾ.) ಕುದುರೆಯ ಕಾಲಿನ ಒಳ ಪಾರ್ಶ್ವದಲ್ಲಿರುವ ಕೊಂಬಿನ ಗೆಡ್ಡೆ, ಗಂತಿ.

Cástor[5] **oil** ಕಾಸ್ಟರ್ ಆಯ್‌ಲ್ (ನಾ.) ಹರಳೆಣ್ಣೆ; ಔಡಲೆಣ್ಣೆ; ಕೈಯೆಣ್ಣೆ (Cold-drawn c. o. ಹಸಿಯಾಗಿ ತೆಗೆದ ಹರಳೆಣ್ಣೆ)

Castrametátion ಕ್ಯಾಸ್ಟ್ರಮಿಟೇಷನ್ (ನಾ.) (ಪ್ರಾಚೀ. ಶಾ.) ಶಿಬಿರ ವಿನ್ಯಾಸ; ಈ ವಿದ್ಯೆ.

Castráte ಕ್ಯಾಸ್ಟ್ರೇಟ್ (ಕ್ರಿ. ಸಕ.) ಬೀಜ ಒಡೆ; ಹಿಡ ಮಾಡು; ಹಿಡ ಬಡಿ. ವೀರ್ಯಗುಂದಿಸು; ಶಕ್ತಿ ಕಳೆ. (ಗ್ರಂಥದಲ್ಲಿಯ ದೂಷ್ಯಭಾಗಗಳನ್ನು) ತೆಗೆದುಹಾಕು. **Castrátion** (ನಾ.)

Cásual ಕ್ಯಾಷು(ಸ್ಯು)ಅಲ್ (ಗು., ನಾ.) ಆಕಸ್ಮಿಕ; ಅನಿಯತ; ಅನಿಶ್ಚಿತ; ಅಕ್ರಮ; ಅನುದ್ದಿಷ್ಟ; ಅಚಿಂತಿತ; ಗೊತ್ತಿಲ್ಲದ; ಗುರಿಯಿಲ್ಲದ; ಸಮಯಕ್ಕೆ ತೋಚಿದ. C. labourer ಕೆಲಸ ದೊರೆತಾಗ ಕೂಲಿ ಮಾಡುವವನು: ಅನಿಯತ ಕೂಲಿಗಾರ. C. poor ಕೆಲವು ವೇಳೆ ದಾರಿದ್ರ್ಯ ಸಹಾಯವೇತನದ ಆವಶ್ಯಕತೆಯುಳ್ಳವರು. C. ward ದರಿದ್ರರ ಕೆಲಸದಮನೆಯಲ್ಲಿ ಇಂಥವರಿಗಾಗಿ ಇಟ್ಟಿರುವ ಭಾಗ. **Cásually** (ಕ್ರಿ. ವಿ.); **Cásualness** (ನಾ.); **Cásualty** ಕ್ಯಾಷು(ಸ್ಯು)ಅಲ್ಟಿ (ನಾ.) ಆಕಸ್ಮಾತ್ ಸಂಘಟನೆ; ದೈವ ಘಟನೆ; ದುರ್ಘಟನೆ; ಅನಾಹುತ; ವಿಪತ್ತು. (ಬ. ವ. ದಲ್ಲಿ) ಯುದ್ಧ, ವೊ. ಗಳಲ್ಲಿ ಹತರಾದವರ, ಗಾಯಪಟ್ಟವರ, ಅಶಕ್ತರಾದವರ, ಪಟ್ಟಿ ಅಥವಾ ಸಂಖ್ಯೆ: ನಷ್ಟಪಟ್ಟಿ. (ಏ. ವ. ದಲ್ಲಿ) ಗಾಯವಡೆದ, ಬಲಗುಂದಿದ, ಮನುಷ್ಯ.

Casuarína ಕ್ಯಾಸ್ಯುಅರೀನ (ನಾ.) ಎಲೆಗಳಿಲ್ಲದ, ಕೂಡುಭಾಗಗಳುಳ್ಳ ಕಡ್ಡಿಗಳಿರುವ, ವೇಗದಬೆಳೆಯುವ, ಆಸ್ಟ್ರೇಲಿಯ ಮತ್ತು ಈಸ್ಟ್ ಇಂಡಿಯಾ ಪ್ರಾಂತಗಳ, ಒಂದು ಬಗೆಯ ಮರಗಳ ಜಾತಿ: ಕ್ಯಾಸರೀನ; ಸರ್ವೆ ಮರ.

Cásuist ಕ್ಯಾಷು(ಸ್ಯು)ಇಸ್ಟ್ (ನಾ.) ಧರ್ಮಸೂಕ್ಷ್ಮಗಳನ್ನು ವಿವೇಚನೆ ಮಾಡುವವನು (ಮು., ದೈವಶಾಸ್ತ್ರಜ್ಞ); ಧರ್ಮಸೂಕ್ಷ್ಮ ವಿಮರ್ಶಕ. ನ್ಯಾಯವೆಂದು (ಇತರರಿಗೆ) ತೋರುವ ರೀತಿಯಲ್ಲಿ ತಪ್ಪು ವಾದ ಮಾಡುವವನು: ಕುತರ್ಕಿ. **Casuístic(al)** (ಗು.); **Casuístically** (ಕ್ರಿ ವಿ.); **Cásuistry** (ನಾ.) ಧರ್ಮಸೂಕ್ಷ್ಮ ವಿವೇಚನೆ; ಕುತರ್ಕ.

Cásus (L) ಕೇಸಸ್ (ನಾ.) (ಸಂ)ಘಟನೆ; ಸಂಭವ; ಸಂದರ್ಭ; ವಿಚಾರ. C. belli (— ಬೆಲೈ) ಯುದ್ಧಕ್ಕೆ ಕಾರಣವಾದ ಸಂದರ್ಭ. C. foederis (— ಫೀಡರಿಸ್) (ಸಂದರ್ಭವೊದಗಿದಾಗ ಎರಡು ಪಕ್ಷದವರೂ ನಡಸಬೇಕಾದ ಕಾರ್ಯಗಳನ್ನು ಕುರಿತು) ಕರಾರಿನಲ್ಲಿ ಹೇಳಿರುವ ಸಂದರ್ಭಗಳು.

Cat ಕ್ಯಾಟ್ (ನಾ.) ಬೆಕ್ಕು (Tom-c. ಗಂಡು ಬೆಕ್ಕು. Wild c. ಕಾಡು ಬೆಕ್ಕು). (ರೂಪ.) ಪರಚುವ ಕೂಸು; (ಮತ್ಸರಗ್ರಸ್ತಳಾದ) ಛಲ ಸಾಧಿಸುವ ಹೆಂಗಸು: ಛಲಗಾತಿ. (ಪ್ರಾ. ವಿ.) ಬೆಕ್ಕಿನ ವರ್ಗಕ್ಕೆ ಸೇರಿದ ಯಾವುದಾದರೂ ಪ್ರಾಣಿ (ಸಿಂಹ, ಹುಲಿ, ಚಿರತೆ, ವೊ.). ಇತರ ವಂಶಗಳಿಗೆ ಸೇರಿದ ಬೆಕ್ಕಿನಂಥ ಪ್ರಾಣಿ (ಪುನುಗುಬೆಕ್ಕು, ವೊ.); (Flying-c. ಗೂಬೆ). (ಚರಿತ್ರೆ) ಮುತ್ತಿಗೆಗಳಲ್ಲಿ ಹಾಕುತ್ತಿದ್ದ ಒಪ್ಪಾರು. (ಹಿಂದೆ, ಸಿಪಾಯಿಗಳನ್ನೂ ನಾವೆಯ ಚಾಕರರನ್ನೂ ಹೊಡೆಯುವುದಕ್ಕಾಗಿ ಉಪಯೋಗಿಸುತ್ತಿದ್ದ, ಈಗಲೂ ಕೆಲವು ವರ್ಗದ ತಪ್ಪಿತಸ್ಥರನ್ನು ಹೊಡೆಯಲು ನ್ಯಾಯಾಧಿಪತಿಗಳು ಆಜ್ಞೆ ಮಾಡುವ) ಗಂಟುಹಾಕಿದ ಒಂಬತ್ತು ಬಾರುಗಳನ್ನುಳ್ಳ ಚಾವಟಿ, ಕೋರಡೆ (= Cat-o'-nine-tails). (ಎರಡು ಕೊನೆಗಳನ್ನೂ ಚೂಪುಮಾಡಿರುವ) ಆಟದ ಚಿಣ್ಣಿ. Bell the c. Bell ನೋಡಿ. Care killed the c. ಚಿಂತೆ ಹತ್ತಿ ಚೀಲಿಯೂ ಸತ್ತಿತು (ಬೆಕ್ಕಿಗೆ ಒಂಬತ್ತು ಪ್ರಾಣಗಳಿರುವುವೆಂಬ ಹೇಳಿಕೆಯಿಂದ); ಚಿಂತೆ ಹಚ್ಚಿಕೊಳ್ಳಬೇಡ. C.-and-dog life ನಾಯಿ ಬೆಕ್ಕುಗಳಂತೆ ಕಾದಾಡುವ (ಗಂಡ ಹೆಂಡಿರ) ಜೀವನ: ನಾಯಿ ಬೆಕ್ಕಿನ ಬಾಳು. A c. may look at a king ಚೀಲಿಯೂ ದೊರೆಯನ್ನು ನೋಡಬಹುದು; ಎಷ್ಟೇ ಕೀಳುಮನುಷ್ಯನಾದರೂ ಅವನಿಗೂ ಒಂದು ಮಟ್ಟದ ಘನತೆಯುಂಟು. C.-and-mouse Act (ಅಸಂ.) ಅನ್ನ ಬಿಟ್ಟು ಮುಷ್ಕರಹಿಡಿದಿರುವ ಬಂದಿಗಳಿಗೆ ತಾತ್ಕಾಲಿಕವಾಗಿ ಬಿಡುಗಡೆಕೊಡುವ ಕಾನೂನು. Cult of the jumping c. ಗೆದ್ದ ಎತ್ತಿನ ಬಾಲಹಿಡಿಯುವ ನೀತಿ: ಜನಸಾಮಾನ್ಯದ ಅಭಿಪ್ರಾಯ ತಿಳಿದಹೊರತು ತನ್ನ ಅಭಿಪ್ರಾಯ ಹೇಳದ ರಾಜ್ಯತಂತ್ರಜ್ಞನ ಚರ್ಯೆ. See (watch) which way the c. jumps; Wait for the c. to jump ಸಂದರ್ಭಗಳು ಹೇಗೆ ತಿರುಗುವುವೆಂದು ನೋಡುತ್ತಿರು. Fight like Kilkenny cats ಕಾಡುಬೆಕ್ಕುಗಳಂತೆ ಕಾದಾಡು; ಪರಸ್ಪರ ನಾಶಹೊಂದುವವರೆಗೂ ಹೋರಾಡು. Let the c. out of the bag. Bag ನೋಡಿ. Not room to swing a c. ಕಾಲಾಡಿಸುವುದಕ್ಕೂ ಸ್ಥಳವಿಲ್ಲ. Rain cats and dogs ಹುಚ್ಚು (ಕಲ್ಲು) ಮಳೆ ಸುರಿ; ಕುಂಭದ್ರೋಣ ಸುರಿ. Turn c. in pan (ಸ್ವಾರ್ಥತೆಯಿಂದ, ಅನುಕೂಲಕ್ಕೆ ತಕ್ಕಂತೆ) ಪಕ್ಷ ಬದಲಾಯಿಸು. **Cátbird** ಅಮೆರಿಕದ ಒಂದು ಜಾತಿಯ ಪಕ್ಷಿ. **C. burglar** ಗೋಡೆ ಹತ್ತಿ ಒಳಹೊಗುವ ಕಳ್ಳ. **Cátcall** (ನಾ., ಕ್ರಿ.) (ನಾಟಕಶಾಲೆ, ವೊ. ಗಳಲ್ಲಿ ಅಸಮಾಧಾನ ಸೂಚಕವಾಗಿ ಮಾಡುವ) ಕೀಚು ಸಿಳ್ಳು (ಹಾಕು). **Cat's-cradle** ಮಕ್ಕಳ ಒಂದು ತೆರದ ಆಟ. **Cat's-eye** ಸಿಲೋನಿನಲ್ಲೂ ಮಲಬಾರಿನಲ್ಲೂ ದೊರೆಯುವ ಒಂದು ಜಾತಿಯ ಮಣಿ: ಬೆಕ್ಕಣ್ಣ ಮಣಿ. **C.-eyed** ಕತ್ತಲೆಯಲ್ಲಿ ನೋಡಬಲ್ಲ; ಬೆಕ್ಕುಗಣ್ಣಿನ. **Cátfish** ಕೆಲವು ಜಾತಿಯ ಮೀನುಗಳು. **C.-lap** (ಬೆಕ್ಕು ನೆಕ್ಕಲು ಯೋಗ್ಯವಾದ) ಸಪ್ಪೆ ಮದ್ಯ, ಟೀ, ವೊ. **C.-nap** ಕುಳಿತು ಮಾಡುವ ಸಣ್ಣನಿದ್ದೆ: ಬೆಕ್ಕು ನಿದ್ದೆ. **Cat's-paw** ಒಬ್ಬನ ಕೆಲಸಕ್ಕೆ ಸಾಧನವಾಗಿ ಉಪಯೋಗಿಸಿಕೊಳ್ಳಲ್ಪಟ್ಟವನು: ಕೈಗೊಂಬೆ. ನೀರಿನಮೇಲೆ ಕಿರುದೆರೆಗಳನ್ನು ಎಬ್ಬಿಸುವ ನಸುಗಾಳಿ. **C.-silver, -gold** (Cat's-gold) ಬೆಳ್ಳಿಯಂತೆ, ಚಿನ್ನದಂತೆ, ಕಾಣುವ ಅಭ್ರಕ. **Cat's-tail** ಕೆಲವು ಸಸ್ಯಜಾತಿಗಳು. **C.-whisker** ನಿಸ್ತಂತು ವಾರ್ತಾಗ್ರಾಹಕದಲ್ಲಿ, ಸೂಕ್ಷ್ಮವಾಗಿ ಅಳವಡಿಸಬಹುದಾದ ಮೆಲುತಂತಿ. **Cáthood** (ನಾ.); **Cátlike** (ಗು.); **Cátling** ಕ್ಯಾಟ್ಲಿಂಗ್ (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುಟ್ಟ ಬೆಕ್ಕು ; ಬೆಕ್ಕಿನ ಮರಿ. (ತಂತೀವಾದ್ಯಗಳ) ಸೂಕ್ಷ್ಮವಾದ ಕರುಳುಹುರಿ. ಶಸ್ತ್ರಚಿಕಿತ್ಸೆಯಲ್ಲಿ ಕತ್ತರಿಸುವುದಕ್ಕೆ ಉಪಯೋಗಿಸುವ ಹರಿತವಾದ ಎರಡೇಣಿನ ನೇರವಾದ ಕತ್ತಿ. **Cáttish, Cátty** (ಗು.) ಬೆಕ್ಕಿನಂಥ. (ರೂಪ.) ತಂತ್ರವುಳ್ಳ ; ಠಕ್ಕಿನ ; ಮತ್ಸರಗ್ರಸ್ತ.

Cat (ಕ್ರಿ.) (ಬಳ. ಮಾ.) ವಾಂತಿ ಮಾಡು ; ಕಾರು.

Cata-, Cat-, Cath- ಗ್ರೀಕ್ ಭಾಷೆಯಿಂದ ತೆಗೆದುಕೊಂಡ ಪದಗಳ ಮತ್ತು ಗ್ರೀಕ್ ಸಾಮ್ಯದಮೇಲೆ ರಚಿಸಿದ ಪದಗಳ ಪೂ. ಪ್ರ. (ಅರ್ಥ) ಕೆಳಗೆ, ದೂರವಾಗಿ. ತಪ್ಪಾಗಿ ; ಬಿಟ್ಟು. ಪೂರ್ತಿಯಾಗಿ. ಅನುಸಾರವಾಗಿ. ಪಕ್ಕಪಕ್ಕದಲ್ಲಿ.

Catabátic ಕ್ಯಾಟಬ್ಯಾಟಿಕ್ (ಗು.) (ವೈ. ಶಾ.) (ಜ್ವರದ ವಿಷಯದಲ್ಲಿ) ಕ್ರಮೇಣ ತಗ್ಗುವ.

Catachrésis ಕ್ಯಾಟಕ್ರೀಸಿಸ್ (ನಾ.) (ಶಬ್ದಗಳ) ಅಪಪ್ರಯೋಗ. **Catachréstic(al)** - ಕ್ರೀ - , - ಕ್ರೆ - (ಗು.) ; **Catachréstically** (ಕ್ರಿ. ವಿ.)

Cátaclasm ಕ್ಯಾಟಕ್ಲ್ಯಾಸ್ಮ್ (ನಾ.) ಬಿರುಸಿನಿಂದ ಒಡೆದುಹೋಗುವುದು ; ಸಿಡಿದುಹೋಗುವುದು ; ಒಡೆತ ; ಸಿಡಿತ.

Cátaclysm ಕ್ಯಾಟಕ್ಲಿಸ್ಮ್ (ನಾ.) ಪ್ರಳಯ : (ಜೀವಕೋಟಿ ಆಗಾಗ ಸಂಪೂರ್ಣವಾಗಿ ಅಳಿಸಿಹೋಗಿ ಪುನಃಪುನಃ ಸೃಷ್ಟಿಯಾಗುತ್ತದೆಂಬ ಮತವನ್ನು ಹಿಡಿದು ವಾದಿಸುತ್ತಿದ್ದವರ ಅಭಿಪ್ರಾಯದಂತೆ ಸಂಭವಿಸುವುದು). (ಭೂ. ವಿ.) ಭೂಮಿಯ ಮೇಲ್ಮೈಯಲ್ಲಿ ಥಟ್ಟನೆ ಬಹಳ ವ್ಯತ್ಯಾಸವನ್ನುಂಟುಮಾಡುವ ಕ್ಷೋಭೆ. ರಾಜ್ಯಕ್ರಾಂತಿ ; ಸಮಾಜಕ್ರಾಂತಿ ; ವಿಪ್ಲವ. **Cataclýsmal** (ಗು.) ; **Cataclýsmic** (ಗು.) ; **Cataclýsmist** (ನಾ.) (ಭೂ. ವಿ.) ಪ್ರಳಯ ವಾದಿ.

Cátacomb ಕ್ಯಾಟಕೋಮ್ (ನಾ.) ನೆಲದ ತಳಗಡೆಯಿರುವ ಸಮಾಧಿ ಸ್ಥಾನ ; ಸಮಾಧಿ ಗುಹೆ. (ಸಾ., ಬ. ವ. ದಲ್ಲಿ) ಪಕ್ಕದ ಗೋಡೆಗಳಲ್ಲಿ ಸಮಾಧಿಗಳಿಗಾಗಿ ಮಾಡಿರುವ ಗೂಡುಗಳುಳ್ಳ ರೋಮನ್ ಸುರಂಗಗಳು ; ಇತರ ಸ್ಥಳಗಳಲ್ಲಿರುವ ಇಂಥ ಸುರಂಗಗಳು : ಸಮಾಧಿ ಸುರಂಗಗಳು. ಮದ್ಯದ ನೆಲಮಾಳಿಗೆ.

Catádromous ಕಟ್ಯಾಡ್ರೊಮಸ್ (ಗು.) (ಪ್ರಾ. ವಿ.) (ಈಲ್ ಮೊ. ಮೀನ ಜಾತಿಗಳ ವಿಷಯದಲ್ಲಿ) ಮೊಟ್ಟೆಯಿಡುವುದಕ್ಕಾಗಿ ನದಿಯ ಇಳಿಮುಖಕ್ಕೆ ಅಥವಾ ಸಮುದ್ರಕ್ಕೆ ಚಲಿಸುವ.

Cátafalque ಕ್ಯಾಟಫ್ಯಾಲ್ಕ್ (ನಾ.) ಪ್ರಸಿದ್ಧ ಪುರುಷನ ಶವಸಂಸ್ಕಾರ ಕಾಲದಲ್ಲಿ ಶವದ ಪೆಟ್ಟಿಗೆಯನ್ನಾಗಲಿ ಅವನ ಆಕೃತಿಯನ್ನಾಗಲಿ ಇಡಲು ಅಲಂಕಾರಮಾಡಿರುವ ವೇದಿಕೆ. ತೆರೆದಿರುವ ಶವಯಾನ.

Cataléctic ಕ್ಯಾಟಲೆಕ್ಟಿಕ್ (ಗು.) (ಛಂ.) ಪದ್ಯಪಾದದ ಕಡೆಯ ಗಣದಲ್ಲಿ ಒಂದು ಅಕ್ಷರ ಸಾಲದಿರುವ : ನ್ಯೂನಾಕ್ಷರ.

Cátalepsy ಕ್ಯಾಟಲೆಪ್ಸಿ (ನಾ.) ಮೂರ್ಛೆರೋಗ ; ಅಪಸ್ಮಾರ. (ತತ್ತ್ವಶಾಸ್ತ್ರ) ಮನೋಗೋಚರ. **Cataléptic** (ಗು., ನಾ.) ಅಪಸ್ಮಾರ ರೋಗದ(ವನು). (ತತ್ತ್ವಶಾಸ್ತ್ರ) ಬುದ್ಧಿಗ್ರಹಣದ.

Cátalogue ಕ್ಯಾಟಲಾಗ್ (ನಾ., ಕ್ರಿ. ಸಕ.) (ಸಾ., ಅಕಾರಾದಿಯಾಗಿ ಅಥವಾ ವಿಷಯಾನುಕ್ರಮವಾಗಿ, ಕೆಲವು ಸಂದರ್ಭಗಳಲ್ಲಿ ಸ್ವಲ್ಪ ವಿವರಣೆಯನ್ನು ಸೇರಿಸಿ, ರಚಿಸಿದ) ಪೂರ್ಣ ಪಟ್ಟಿ : ಪುಸ್ತಕ ಪಟ್ಟಿ ; ವಿಷಯ ಪಟ್ಟಿ. (ಕ್ರಿ.) ಪಟ್ಟಿಮಾಡು ; ಪಟ್ಟಿಗೆ ಸೇರಿಸು. **C. raisonné** (ಕಾಟಾಲಾಗ್ ರೆಝಾನೇ) ವಿಷಯಾನುಕ್ರಮವಾಗಿ ರಚಿಸಿದ ವಿವರ ಪಟ್ಟಿ. **Cátaloguer** (ನಾ.) ವಿವರಪಟ್ಟಿಯನ್ನು ರಚಿಸುವವನು : ವಿವರ ಪಟ್ಟಿಕಾರ.

Catálysis ಕಟ್ಯಾಲಿಸಿಸ್ (ನಾ.) (ರ. ವಿ.) ತಾನು ಯಾವ ಬದಲಾವಣೆಯನ್ನೂ ಹೊಂದದೆ ಇದ್ದು ಇತರ ಪದಾರ್ಥಗಳಲ್ಲಿ ರಾಸಾಯನಿಕ ವ್ಯತ್ಯಾಸವುಂಟಾಗುವಂತೆ ಸಹಾಯಮಾಡುವ ಒಂದು ರಾಸಾಯನಿಕ ಪದಾರ್ಥದ ಕ್ರಿಯೆ : ಅನ್ಯ ಪರಿಣಾಮಕ ಕ್ರಿಯೆ.

Catamarán ಕ್ಯಾಟಮರ್ರ್ಯಾನ್ (ನಾ.) ಮರದ ದಿಮ್ಮಿಗಳನ್ನು ಒಂದರ ಪಕ್ಕದಲ್ಲೊಂದನ್ನೂ, ಮಧ್ಯದಲ್ಲಿ ಎಲ್ಲಕ್ಕಿಂತಲೂ ಉದ್ದವಾದುದನ್ನೂ, ಇಟ್ಟು ಸೇರಿಸಿಕಟ್ಟಿ, ದಡದಿಂದ ಬಹುದೂರ ಹೋಗದ, ಅಥವಾ ಹತ್ತಿರದ ಜಲಪ್ರಯಾಣಕ್ಕೆ ಉಪಯೋಗಿಸುವ, ತೆಪ್ಪ : ಕಟ್ಟುಮರ. ಎರಡು ದೋಣಿಗಳನ್ನು ಪಕ್ಕಪಕ್ಕದಲ್ಲಿಟ್ಟು ಒಟ್ಟಿಗೆ ಬಿಗಿದು ಮಾಡಿದ ತೆಪ್ಪ : ಜೋಡುದೋಣಿಯ ತೆಪ್ಪ. ಜಗಳಗಾತಿ.

Cataménia ಕ್ಯಾಟಮೀನಿಯ (ನಾ., ಬ. ವ.) ಋತುಸ್ರಾವ. **Cataménial** (ಗು.)

Cátamite ಕ್ಯಾಟಮೈಟ್ (ನಾ.) ಸಜಾತಿ ಮೈಥುನಕ್ಕಾಗಿ ಇಟ್ಟುಕೊಂಡಿರುವ ಹುಡುಗ.

Catamoúntain ಕ್ಯಾಟಮೌಂಟೆನ್, **Cat-o'-moúntain** ಕ್ಯಾಟೊ— (ನಾ.) ಚಿರತೆ. ಕಾಡು ಮನುಷ್ಯ ; ಒರಟು ಮನುಷ್ಯ ; ಜಗಳಗಂಟ.

Cátaplasm ಕ್ಯಾಟಪ್ಲಾಸ್ಮ್ (ನಾ.) (ವೈದ್ಯ) ' ಪೋಲ್ಟೀಸು ' ; ಹಿಟ್ಟುಕಟ್ಟು.

Cátapult ಕ್ಯಾಟಪಲ್ಟ್ (ನಾ., ಕ್ರಿ.) ಕಲ್ಲು, ಅಂಬು, ಮೊ. ನ್ನು ಎಸೆಯಲು ಸನ್ನೆ ಮತ್ತು ಹಗ್ಗಗಳಳವಡಿಸಿದ ಪೂರ್ವಕಾಲದ ಒಂದು ಯಂತ್ರ : ಕವಣೆಯಂತ್ರ. ಕವಣೆ. ಆಕಾಶ ಯಾನವನ್ನು ಅದು ಇರುವ ಹಡಗಿನ ನೆಲೆ, ಮೊ. ಗಳಿಂದ ನೂಕಿ ಹೊರಡಿಸಲು ಏರ್ಪಡಿಸಿರುವ ಯಂತ್ರಸಲಕರಣೆ : ವಿಮಾನ ಕವಣೆ. (ಕ್ರಿ.) (ಹಕ್ಕಿ, ಮೊ. ನ್ನು) ಕವಣೆಯಿಂದ ಹೊಡೆ ; ಕವಣೆ ಬೀರು.

Cátaract ಕ್ಯಾಟರ್ಯಾಕ್ಟ್ (ನಾ.) ಜಲಪಾತ ; ಅಬ್ಬಿ ; ಜಲಪ್ರವಾಹ ; ಬಿರುಮಳೆ ; ಸುರಿಮಳೆ. (ರೋಗ) (ದೃಷ್ಟಿಮಾಂದ್ಯ ಮಾಡುವ) ಕಣ್ಣಿನ ಪೊರೆ. (ಯಂತ್ರ ಶಿಲ್ಪ) ನೀರು ಹರಿಯುವುದರಿಂದ ಕೆಲಸಮಾಡುವ ಆವಿಯಂತ್ರ ನಿಯಂತ್ರಕ.

Catárrh ಕಟಾರ್ (ನಾ.) ಮೂಗಿನೊಳಗಿನ ಸೂಕ್ಷ್ಮಚರ್ಮ ಕೆರಳುವುದರಿಂದ ನೀರು ಸುರಿಯುವುದು ; ನೆಗಡಿ ; ಶೀತ. **Catárrhal** (ಗು.)

Catástrophe ಕಟ್ಯಾಸ್ಟ್ರೊಫಿ (ನಾ.) (ನಾಟಕದ) ನಿರ್ವಹಣ (ಸಂಧಿ). ದುರಂತ ; ದುಷ್ಪರಿಣಾಮ ; ವಿನಾಶ ; ವಿಪತ್ತು. ಸದ್ಯದ ಸ್ಥಿತಿಯನ್ನು ತಲೆಕೆಳಗು ಮಾಡುವ ಘಟನೆ (ಮು., ಭೂ. ವಿ. ದಲ್ಲಿ) ; ಪ್ರಳಯ ; ಉತ್ಪಾತ ; ಅನಾಹುತ. **Catástrophism** (ನಾ.) ; **Catástrophist** (ನಾ.) ; **Catastróphic(al)** ಕ್ಯಾಟಸ್ಟ್ರಾಫಿ — (ಗು.)

Cátboat ಕ್ಯಾಟ್‌ಬೋಟ್ (ನಾ.) ಒಂದೇ ಪಟದ ಒಕ್ಕೊವೆಯ ದೋಣಿ.

Catch ಕ್ಯಾಚ್ (ಕ್ರಿ. ; ಭೂತ, ಭೂ. ಕೃ. Caught ಕಾಟ್) ಹಿಡಿ ; ಹಿಡಿದುಕೊ (C. hold of) ; ಸಿಕ್ಕಿಸಿಕೊ (C. up). (ರೈಲು, ಮೊ. ಗಳಿಗೆ) ಹೊತ್ತಿಗೆ ಸರಿಯಾಗಿ ಸೇರು. (ಸೂಚನೆ ಕೊಡದಂತೆ) ಥಕ್ಕನೆ ಹಿಡಿ. (Caught him on the nose ಹೊಡೆದ ಏಟು ಮೂಗಿಗೆ ತಗುಲಿತು). (ಬೆಂಕಿ, ದಹ್ಯಗಳು) ಹೊತ್ತು ; ಹೊತ್ತಿಕೊ (C. fire). ಸಿಕ್ಕಿಕೊ ; ಸಿಕ್ಕುಬೀಳು ; ತಗುಲಿಕೊ ; ಹಿಡಿದುಕೊ ; ಕಚ್ಚಿಕೊ (Bolt catches ಅಗುಳಿ ತಗುಲಿಕೊಳ್ಳುತ್ತದೆ). C.-as-c.-can (' ಲ್ಯಾಂಕಷಯರಿ ' ನ) ಒಂದು ಕುಸ್ತಿಯ ವರಿಸೆ. C. at ಆತುರಪಟ್ಟು ಹಿಡಿದುಕೊ. C. ball ಚೆಂಡನ್ನು (ನೆಲಮುಟ್ಟುವುದಕ್ಕೆ ಮೊದಲು) ಹಿಡಿ, ಆತುಕೊ ; ಬುತ್ತಿ ಹಿಡಿ. C. one's breath ಉಸಿರು ಹಿಡಿ, ಕಟ್ಟು. C. a cold ನೆಗಡಿ ಹಿಡಿ. (Nail) catches dress (ಮೊಳೆ) ಉಡುಪನ್ನು ತಡೆಯುತ್ತದೆ. C.-'em-alive-o ನೊಣಗಳನ್ನು ಸಿಕ್ಕಿಸುವ ಅಂಟುಕಾಗದ. C. the fancy ಮನಸ್ಸನ್ನು ಸೆಳೆ. C. fever ಜ್ವರ ಬರು. C.-fly ಅಂಟುಕಾಂಡವುಳ್ಳ ಒಂದು ಸಸ್ಯಜಾತಿ. C. a glimpse of ಸ್ವಲ್ಪ ಕಣ್ಣಿಗೆಬೀಳು. C. a likeness ಒಂದು ರೂಪನ್ನು ಹಿಡಿದು (ಗ್ರಹಿಸಿ) ಚಿತ್ರಿಸು, ರೂಪಿಸು. C. the meaning ಅರ್ಥಗ್ರಹಿಸು (Don't c. on ಅರ್ಥ ಹಿಡಿಯದೆ ಹೋಗು). C. napping ಕರ್ತವ್ಯಮಾಡದೆ ಕಾಲಕಳೆಯುತ್ತಿರುವಾಗ ಹಿಡಿ ; ತೂಕಡಿಸುತ್ತಿರುವಾಗ ಹಿಡಿ. C. on (ಜನರ) ಮನಸ್ಸಿಗೆ ಹಿಡಿ ; (ಜನಕ್ಕೆ) ಒಪ್ಪಿಗೆಯಾಗು. C. out ಬುತ್ತಿ ಹಿಡಿದು ಆಟ ಕಳೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

C.-penny ಮಾರಾಟಕ್ಕಾಗಿ ಮಾಡಿದ; ಕಾಸಿಗೆಲೆಯುವ. C. the Speaker's eye (ಸಭಾಧ್ಯಕ್ಷನ ಕಣ್ಣಿಗೆ ಬೀಳು): ಪಾರ್ಲಮೆಂಟಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾತನಾಡಲು ಅವಕಾಶ ಪಡೆ. C. a tartar ತನ್ನ ಶಕ್ತಿಗೆ ಮೀರಿದವನನ್ನು ಎದುರಿಸು. C. up, away ಥಟ್ಟನೆ ಮೇಲಕ್ಕೆತ್ತು; ಥಕ್ಕನೆ ಎತ್ತಿಕೊ; ಸೆಳೆದುಕೊ; ಥಟ್ಟನೆ ಹಿಡಿ; ತಡೆಮಾಡು; ನಿಲ್ಲಿಸು. C. up habit ಅಭ್ಯಾಸ ಹಿಡಿ. C. up speaker ಭಾಷಣ ಮಾಡುತ್ತಿರುವವನಿಗೆ ಅಡ್ಡಬರು. **Cátchword** (ನಾ.) ಗಮನ ಸೆಳೆಯುವ ಪದ: ಹಿಡಿನುಡಿ. (ರಾಜ್ಯಶಾಸ್ತ್ರ, ಧರ್ಮಬೋಧೆ, ಮೊ. ಗಳಲ್ಲಿ ತಾತ್ಕಾಲಿಕವಾಗಿ ಉಪಯೋಗಿಸುವ) ಆಕರ್ಷಕ ಪದ. **Cátchable** (ಗು.); **-Cátcher** (ನಾ.); **Cátching** (ಗು.) (ಕ್ರಿಯಾರ್ಥಗಳಲ್ಲಿ). ಸೋಂಕು ತಗುಲುವ; ಗಮನ ಸೆಳೆಯುವ; ಆಕರ್ಷಕ. **Cátchy** (ಗು.) ಆಕರ್ಷಕ; ಮನ ಸೆಳೆಯುವ; ಮೋಹಕ; ಡಾಂಭಿಕ. ಸಿಕ್ಕಿಸಿಕೊಳ್ಳುವ; ಸುಲಭ ಗ್ರಾಹ್ಯ. ಕ್ಷಣಿಕ. **Cátchment** (ನಾ.): C.-area, C.-basin ಜಲಾನಯನ ಪ್ರದೇಶ (ನದಿಗೆ ಬರುವ ಮಳೆನೀರು ಬಿದ್ದ ಪ್ರದೇಶ): ಇಳಿಮೇಡು.

Catch (ನಾ.) ಹಿಡಿಯುವುದು; ಹಿಡಿತ. ಹಿಡಿದ ಮೀನಿನ ಮೊತ್ತ. (ಕ್ರಿಕೆಟ್) ಬುತ್ತಿ (ಹಿಡಿಯುವುದು) (A good c. ಬುತ್ತಿ ಹಿಡಿಯುವುದರಲ್ಲಿ ಗಟ್ಟಿಗ). ಸಿಕ್ಕಿಸಿಕೊಳ್ಳುವ ಪ್ರಶ್ನೆ. ಮೋಸ. (ಮುನ್ ಸೂಚನೆಯಿಲ್ಲದೆ ಸಂಭವಿಸುವ) ಘಟನೆ. (ಬಾಗಿಲು, ಮೊ. ಗಳ) ಚಲನೆಯನ್ನು ತಡೆಯುವ ಸಾಧನ: ಬಾಗಿಲುತಡೆ; ಕೊಕ್ಕೆ; ಕೊಂಡಿ. ಹಿಡಿದ ಅಥವಾ ಹಿಡಿಯಲು ಯೋಗ್ಯವಾದ ವಸ್ತು ಅಥವಾ ಮನುಷ್ಯ. ಲಾಭ; ಪ್ರಾಪ್ತಿ (No c. ನಷ್ಟವ್ಯಾಪಾರ; ಹಿತವೇನೂ ಅಲ್ಲದ ಪ್ರಾಪ್ತಿ)

Cátchpole, -poll ಕ್ಯಾಚ್‌ಪೋಲ್ (ನಾ.) ಥತ್ತಾಮಾನ.

Cate ಕೇಟ್ (ನಾ.; ಸಾ., ಬ. ವ. ದಲ್ಲಿ) ಸವಿಯೂಟ; ರಸಕವಳ; ಮೃಷ್ಟಾನ್ನ; ಉತ್ತಮ ಭಕ್ಷ್ಯಭೋಜ್ಯಗಳು.

Cátechism ಕ್ಯಾಟಿಕಿಸ್ಮ್ (ನಾ.) ಪ್ರಶ್ನೋತ್ತರ ರೂಪವಾದ ಬೋಧನೆ; ಪ್ರಶ್ನೋತ್ತರ ಪಾಠ; ಪ್ರಶ್ನೋತ್ತರ ರೂಪವಾಗಿ ಪ್ರಕಟಿಸುವ ಬೋಧೆ; ಪ್ರಶ್ನೋತ್ತರ ಶಿಕ್ಷೆ. (ಒಬ್ಬನಿಗೆ ಎಡೆಬಿಡದೆ ಹಾಕಿದ) ಪ್ರಶ್ನಮಾರೆ. **Catechísmal** (ಗು.); **Catechétic(al)** —ಕೆಟಿ—(ಗು.) ಪ್ರಶ್ನೋತ್ತರ ಬೋಧನೆಯ; ಚರ್ಚಿನ ಪ್ರಶ್ನೋತ್ತರ ರೂಪದ; —ರೂಪದಲ್ಲಿ ನಡೆಯುವ. **Catechétically** (ಕ್ರಿ. ವಿ.); **Cátechize** —ಕೈಜ಼್ (ಕ್ರಿ. ಸಕ.) ಪ್ರಶ್ನೋತ್ತರ ರೂಪದಲ್ಲಿ ಶಿಕ್ಷಣ ಕೊಡು, ಕಲಿಸು. ಚರ್ಚಿನ ಪ್ರಶ್ನೋತ್ತರ ಶಿಕ್ಷೆಯ ಮೂಲಕ ಕಲಿಸು. ಪ್ರಶ್ನೆಹಾಕು; ಪರೀಕ್ಷಿಸು. **Cátechist** (ನಾ.); **Cátechizer** (ನಾ.)

Cátechu ಕ್ಯಾಟಿಷೂ(ಚೂ) (ನಾ.) ಪೌರ್ವಾತ್ಯ ದೇಶಗಳ ಕೆಲವು ಗಿಡಗಳ ತೊಗಟೆ, ದಾರು, ಕಾಯಿ — ಇವುಗಳಿಂದ ತೆಗೆದ 'ಟ್ಯಾನಿನ್' ಎಂಬ ಒಗರು ಸತ್ವವಿರುವ ಒಂದು ಪದಾರ್ಥ: ಕಾಚು; ಕಯ್ರು; ಖದಿರ.

Catechúmen ಕ್ಯಾಟಿಕ್ಯೂಮೆನ್ (ನಾ.) ಕ್ರೈಸ್ತಮತಕ್ಕೆ ಸೇರಿ, ಜ್ಞಾನಸ್ನಾನಕ್ಕೆ ಮೊದಲು ಉಪದೇಶ ಪಡೆಯುತ್ತಿರುವವನು.

Cátegory ಕ್ಯಾಟಿಗೊರಿ (ನಾ.) ತರಗತಿ; ವರ್ಗ; ಜಾತಿ; ವಿಭಾಗ; ಪಂಗಡ; ಬಗೆ. (ತರ್ಕ) ಪ್ರಪಂಚದಲ್ಲಿಯ ಪದಾರ್ಥಗಳೆಲ್ಲವನ್ನೂ ಒಂದಲ್ಲದಿದ್ದರೆ ಮತ್ತೊಂದರಲ್ಲಿ ಸೇರಿಸಲಾಗುವಂತೆ ಏರ್ಪಡಿಸಿರುವ ವರ್ಗಗಳಲ್ಲೊಂದು: ಪದಾರ್ಥ; ತತ್ತ್ವ. ('ಅರಿಸ್ಟಾಟಲ'ನ ಈ ವರ್ಗಗಳು ಯಾವುವೆಂದರೆ: ದ್ರವ್ಯ, ಪರಿಮಾಣ, ಗುಣ, ಸಂಬಂಧ, ದೇಶ, ಕಾಲ, ಅವಸ್ಥೆ, ಸ್ವಾಧೀನ, ಕ್ರಿಯೆ, ನಿಷ್ಕ್ರಿಯೆ). **Categórical** — ಗಾರಿಕಲ್ (ಗು.) (ತರ್ಕ: ಒಂದು ಪ್ರತಿಜ್ಞೆಯ ವಿಷಯದಲ್ಲಿ) ನಿರುಪಾಧಿಕ; ನಿರಪೇಕ್ಷ; ಅನವಚ್ಛಿನ್ನ; ಕೇವಲ. ಸ್ಪಷ್ಟ; ಅಸಂದಿಗ್ಧ; ವ್ಯಕ್ತ; ಮುಚ್ಚುಮರೆಯಿಲ್ಲದ. C. imperative ಆತ್ಮಸಾಕ್ಷಿಯ ಆದೇಶವೇ ನೀತಿಯ ಪರಮ ಪ್ರಮಾಣ ಎಂಬ ತತ್ತ್ವ: ನಿರುಪಾಧಿಕ ವಿಧಿ. **Categórically** (ಕ್ರಿ. ವಿ.)

Caténa ಕಟೀನ (ನಾ.) ಮಾಲೆ; ಶ್ರೇಣಿ; ಪಂಕ್ತಿ; ಸಂಬದ್ಧಶ್ರೇಣಿ.

Caténary ಕಟೀನರಿ, **Catenárian** ಕ್ಯಾಟಿನೇರಿಯನ್ (ಗು., ನಾ.) ಒಂದೇ ಲಂಬರೇಖೆಯಲ್ಲಿರದ ಎರಡು ಬಿಂದುಗಳಿಂದ ತೂಗಬಿಟ್ಟ ಸಮಸೂತ್ರವಾದ ಸರಪಣಿಯ ಅಥವಾ ರಜ್ಜುವಿನ ವಕ್ರರೇಖೆ: ರಜ್ಜುರೇಖೆ(ಯಂತಿರುವ). C. bridge ಇಂಥ ಸರಪಣಿಗಳ ಆಸರೆಯುಳ್ಳ ತೂಗುಸೇತುವೆ: ತೂಗುಸರಪಣಿಯ ಸೇತುವೆ. **Cátenate** ಕ್ಯಾಟಿನೇಟ್ (ಕ್ರಿ. ಸಕ.) ಸರಪಣಿಯ ಕೊಂಡಿಗಳಂತೆ ಸೇರಿಸು. **Catenátion** (ನಾ.)

Cáter[1] ಕೇ(ಕ್ಯಾ)ಟರ್ (ನಾ.) ಇಸ್ಪೀಟಿನ ನಾಲ್ಕನೆಯ ಬಂದು; ಪಗಡೆಯ ನಾಲ್ಕರ ಗರ.

Cáter[2] ಕೇಟರ್ (ಕ್ರಿ. ಅಕ.) ಆಹಾರ ಹವಣಿಸು, ಒದಗಿಸು (ಸಾ., *for* ಉಪ. ದೊಡನೆ); ವಿನೋದ, ಮೊ. ನ್ನು ಒದಗಿಸು. **Cáterer** (ನಾ.)

Cáteran ಕ್ಯಾಟೆರನ್ (ನಾ.) (ಸ್ಕಾಟ್ಲೆಂಡು) ಹೈಲೆಂಡಿನ ಯೋಧ. ದರೋಡೆಕೋರ; ದಾರಿಗಳ್ಳ; ದನಗಳ್ಳ.

Cáter-cousin ಕೇಟರ್ ಕಜ಼್ನ್ (ನಾ.) ಆಪ್ತ. Be cater-cousins ಅನ್ಯೋನ್ಯವಾಗಿ ಇರಿ.

Cáterpillar ಕ್ಯಾಟರ್‌ಪಿಲರ್ (ನಾ.) ಪತಂಗದ ಅಥವಾ ಚಿಟ್ಟೆಯ ಮರಿಹುಳು; ಕಂಬಳಿ ಹುಳು. (ರೂಪ.) ಅತಿಯಾಸೆಯುಳ್ಳವನು; ಸುಲಿದು ತಿನ್ನುವವನು; ಕೊಳ್ಳೆ ಹೊಡೆಯುವವನು. (ಯಂತ್ರ) (ಉಳುಮೆಯ ಮೋಟಾರು, ಯುದ್ಧದ 'ಟ್ಯಾಂಕು', ಮೊ. ವು) ಒರಟು ನೆಲದಮೇಲೆ ಹೋಗುವುದಕ್ಕೆ ಅನುಕೂಲಿಸುವಂತೆ ಅದರ ಚಕ್ರಗಳ ಸುತ್ತಲೂ ಅಳವಡಿಸಿರುವ, ಕೊಂಡಿಗಳುಳ್ಳ ಮತ್ತು ಕೊನೆಯಿಲ್ಲದ ಉಕ್ಕಿನ ಪಟ್ಟಿ.

Cáterwaul ಕ್ಯಾಟರ್‌ವಾಲ್ (ಕ್ರಿ. ಅಕ., ನಾ.) ಬೆದೆಹತ್ತಿದ ಬೆಕ್ಕಿನ ಕೂಗು. ಬೆದೆಹತ್ತಿದ ಬೆಕ್ಕಿನಂತೆ ಕಿರುಚು; ಬೆಕ್ಕುಗಳಂತೆ ಕಾದಾಡು, ಕಚ್ಚಾಡು. ಬೆದೆಹತ್ತಿರು; ಕಾಮುಕ ವರ್ತನೆ ತೋರು.

Cátgut ಕ್ಯಾಟ್‌ಗಟ್ (ನಾ.) ಕುರಿ, ಕುದುರೆ, ಕತ್ತೆ — ಇವುಗಳ ಕರುಳಿನಿಂದ (ಬೆಕ್ಕಿನದಲ್ಲ) ತೆಗೆದು ಹುರಿಮಾಡಿ, ಪಿಟೀಲು, ಟೆನಿಸ್ ದಾಂಡು, ಮೊ. ಗಳಿಗೆ ಉಪಯೋಗಿಸುವ ಹುರಿ; ಕರುಳುಹುರಿ. ಪಿಟೀಲು; ತಂತಿವಾದ್ಯಗಳು.

Cathársis ಕಥಾರ್ಸಿಸ್ (ನಾ.) (ವೈ. ಶಾ.) ಭೇದಿ. ನಾಟಕ ದರ್ಶನದಿಂದಾಗುವ ಭಾವೋದ್ರೇಕ, ಅಥವಾ ಆ ಮೂಲಕ ಆಗಬಹುದಾದ ಭಾವಶುದ್ಧಿ. **Cathártic** (ಗು., ನಾ.) ಭೇದಿಮಾಡಿಸುವ ಔಷಧ; ವಿರೇಚಕ.

Catháy ಕಥೇ (ನಾ.) (ಪ್ರಾಚೀ. ಪ್ರ., ಕಾವ್ಯ) ಚೀನಾ ದೇಶ.

Cathédral ಕಥೀಡ್ರಲ್ (ಗು., ನಾ.) ಬಿಷಪ್ಪಿನ ಅಧಿಕಾರಪ್ರಾಂತದಲ್ಲಿ ಆತನ ಪೀಠವಿರುವ ಮುಖ್ಯ ಆರಾಧನಮಂದಿರ (= C. church). ಬಿಷಪ್ಪಿನ ಪೀಠಕ್ಕೆ ಅಥವಾ ಅಧಿಕಾರಪ್ರಾಂತಕ್ಕೆ ಸಂಬಂಧಪಟ್ಟ. C. utterance ಅಧಿಕಾರ ವಾಣಿ. Ex cathedra ಅಧಿಕಾರ ಧೋರಣೆಯಿಂದ; ಸ್ಥಾನಬಲದ.

Catherétic ಕ್ಯಾತೆರೆಟಿಕ್ (ಗು., ನಾ.) (ವೈ. ಶಾ.) ನಶಿಸಿಹೋಗುವಂತೆ, ತಗ್ಗುವಂತೆ, ಜೀರ್ಣವಾಗುವಂತೆ, ಮಾಡುವ ಶಕ್ತಿಯುಳ್ಳ (ದಾಹಕ ವಸ್ತು)

Cátherine-wheel ಕ್ಯಾತೆರಿನ್ ವ್ಹೀಲ್ (ನಾ.) ಅರೆಯಕಾಲುಗಳಂತಿರುವ ಕಂಬಿಗಳುಳ್ಳ ಗುಂಡುಕಿಟಕಿ, ಅಥವಾ ಕಿಟಕಿಯ ಅಂಥ ಭಾಗ. ಚಕ್ರಬಾಣ. ಅಡ್ಡಪಲ್ಟಿ.

Cátheter ಕ್ಯಾಥಿಟರ್ (ನಾ.) (ವೈ. ಶಾ.) ಮೂತ್ರವನ್ನು ಹೊರದೆಗೆಯಲು ಮೂತ್ರಕೋಶಕ್ಕೆ ಹೊಗಿಸುವ ನಳಿಕೆಯ ಸಲಕರಣೆ: ಮೂತ್ರಾಪಕರ್ಷಕ.

Cathetómeter ಕ್ಯಾಥಿಟಾಮಿಟರ್ (ನಾ.) (ಮು., ಒಂದು ನಾಳದಲ್ಲಿರುವ ದ್ರವದ) ಸೂಕ್ಷ್ಮ ಲಂಬಾಂತರಗಳನ್ನು ಅಳೆಯುವ ಸಲಕರಣೆ: ಲಂಬಾಂತರ ಮಾಪಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cáthode ಕ್ಯಾತೋಡ್ (ನಾ.) ವಿದ್ಯುತ್ಪ್ರವಾಹದ ಋಣಧ್ರುವ : ಋಣ ವಿದ್ಯುದ್‌ಧ್ರುವ.

Cátholic ಕ್ಯಾತೊಲಿಕ್ (ಗು., ನಾ.) ಎಲ್ಲರಿಗೂ ಸೇರಿದ ; ಎಲ್ಲವನ್ನೂ ಒಳಕೊಂಡ ; ಸಾರ್ವತ್ರಿಕ ; ಸರ್ವ ಸಾಮಾನ್ಯ. ವಿಶಾಲ ಹೃದಯದ, ದೃಷ್ಟಿಯ ; ಉದಾರ ಭಾವನೆಯ ; ಉದಾರ ; ಪರಮತ ಸಹಿಷ್ಣುತೆಯ. ಸರ್ವ ಕ್ರೈಸ್ತರ (C. church ಸರ್ವ ಕ್ರೈಸ್ತ ಮಂಡಲ ; ಕ್ರೈಸ್ತ ಪ್ರಪಂಚ. C. Epistles ಸಾರ್ವತ್ರಿಕ ಕ್ರೈಸ್ತಧರ್ಮ ಸಂದೇಶಪತ್ರಗಳು). (ಕ್ರೈಸ್ತ) ಕ್ಯಾತೊಲಿಕ್ ಮಠಕ್ಕೆ ಸೇರಿದ(ವನು) ; — ಮಠದ ; — ಮಠ ಸಮ್ಮತವಾದ ; — ಮಠ ಸಂಪ್ರದಾಯಾನುಸಾರವಾದ ; ರೋ. ಕ್ಯಾ. ಮಠದ(ವನು). **Cátholicly** (ಕ್ರಿ. ವಿ.) ; **Cathólically** ಕತಾಲಿಕಲಿ (ಕ್ರಿ. ವಿ.) ; **Cathólicism** (ನಾ.) ; **Cathólicize** (ಕ್ರಿ. ಸಕ.) ; **Catholícity** ಕ್ಯಾತೊಲಿಸಿಟಿ (ನಾ.) ಸರ್ವವ್ಯಾಪಕತೆ ; ಮನೋವೈಶಾಲ್ಯ ; ಮತ್ಸರ ರಾಹಿತ್ಯ. ಕ್ಯಾತೊಲಿಕ್ ಅಥವಾ ರೋ. ಕ್ಯಾ. ಮತತತ್ತ್ವಾಂಗೀಕಾರ ; ಕ್ರೈಸ್ತ ಮಠೀಯತ್ವ. ರೋ. ಕ್ಯಾ. ಮಠೀಯತ್ವ.

Cathólicon ಕತಾಲಿಕನ್ (ನಾ.) ಸರ್ವವ್ಯಾಧಿ ನಿವಾರಕ ; ಸರ್ವ ರೋಗ ನಿವಾರಿಣಿ. (ರೂಪ. ಸಹ)

Cátiline ಕ್ಯಾಟಿಲೈನ್ (ನಾ.) ಪುಂಡ ; ಪಿತೂರಿಗಾರ.

Cátling. **Cat** ನೋಡಿ.

Catóptric ಕ್ಯಾಟಾಪ್ಟ್ರಿಕ್ (ಗು.) ಕನ್ನಡಿಯ ; ಪ್ರತಿಫಲಕದ ; ಪ್ರತಿಫಲನದ. **Catóptrics** (ನಾ.) ದೃಗ್ವಿಜ್ಞಾನದ ಪ್ರತಿಫಲನ ಶಾಸ್ತ್ರಭಾಗ.

Cáttle ಕ್ಯಾಟ್‌ಲ್ (ನಾ.) ದನ ; ತುರು(ಗ್ರಾಂ.) ; ದನಕರು ; ಪಶು ; ರಾಸು ; ಜಾನುವಾರು. (ಅನಂ.) ಕುದುರೆಗಳು. ಅಯೋಗ್ಯರು ; ತುಚ್ಛರು. Black c. ಸ್ಕಾಚ್ ಮತ್ತು ವೆಲ್ಷ್ ಮೇಲ್ನಾಡಿನ ತಳಿಯ ದನ (ಹಿಂದಕ್ಕೆ ಕರಿಯಬಣ್ಣದುವಕ್ಕೆ ಮಾತ್ರ ಇದ್ದ ಹೆಸರು). C.-feeder ದನಗಳಿಗೆ ಆಹಾರಪ್ರಮಾಣವನ್ನು ಅಳವಡಿಸುವ ಯಂತ್ರ. C.-leader (ದನಗಳ) ಮೂಗು ಬಳೆ, ದಾರ. C.-lifter ದನಗಳ್ಳ. C.-pen ದನದ ರೊಪ್ಪ. C.-piece ದನದ ಚಿತ್ರಪಟ. C.-plague ದನಗಳ ಅಂಟುರೋಗ, ದೊಡ್ಡರೋಗ. C.-rustler (ಅಮೆ. ಸಂ.) ದನಗಳ್ಳ.

Caucásian ಕಾಕೇಷನ್ (ಗು., ನಾ.) ಕಾಕಸಸ್ ಪ್ರಾಂತದ(ವನು). ಬಿಳಿಯ ಬಣ್ಣದ ಮೈಯುಳ್ಳ ಮನುಷ್ಯವರ್ಗಕ್ಕೆ ಸೇರಿದ(ವನು). ಇಂಡೋ ಯೂರೋಪಿಯನ್ ವಂಶದ(ವನು) (ಕಾಕಸಸ್ ಪ್ರಾಂತವು ಈ ಕುಲದವರ ಜನ್ಮಭೂಮಿಯೆಂಬ ಊಹೆಯಿಂದ)

Caúcus ಕಾಕಸ್ (ನಾ., ಕ್ರಿ.) (ಅಮೆ. ಸಂ.) ಒಂದು ರಾಜಕೀಯ ಪಕ್ಷದ ಸದಸ್ಯರು ಅಧಿಕಾರಗಳಿಗೆ ಸದಸ್ಯರನ್ನು ಚುನಾಯಿಸುವುದಕ್ಕಾಗಲಿ ತಮ್ಮ ಪಕ್ಷದ ಲಾಭಕ್ಕಾಗಲಿ ಅಂತರಂಗವಾಗಿ ನಡಸುವ ಅಧಿವೇಶನ ; ಒಂದು ರಾಜಕೀಯ ಕಕ್ಷಿಯ ಮುಖ್ಯಸ್ಥರ ಕೂಟ ; ಗುಪ್ತ ಕೂಟ ; ತಂತು ಕೂಟ. (ಇಂಗ್ಲೆಂಡಿನಲ್ಲಿ) ಚುನಾವಣೆಗಾಗಿ ಹೋರಾಡುವುದು, ತಮ್ಮ ಪಕ್ಷದವರು ಅನುಸರಿಸಬೇಕಾದ ನೀತಿಯನ್ನು ನಿರ್ಧರಿಸುವುದು, ಮೊ. ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಏರ್ಪಟ್ಟ ಒಂದು ರಾಜಕೀಯ ಪಕ್ಷದ, ಸಾ., ಚುನಾವಣೆಯಾದ, ಮಂಡಲಿ (ಸಾ., ಪ್ರತಿಪಕ್ಷದವರ ಕೂಟದ ವಿಷಯದಲ್ಲಿ ಮಾತ್ರ). (The c. ರಾಜಕೀಯ ಶಕ್ತಿಯುಳ್ಳ ಗುಪ್ತಕೂಟ ಪದ್ಧತಿ). (ಕ್ರಿ.) ತಂತುಕೂಟ ಮಾಡು, ನಡಸು. ಇದರ ಮೂಲಕ ಕಟ್ಟುಪಾಟು ಮಾಡು, ವಿಧಿಸು, ಶಾಸನ ಮಾಡು. **Caúcusdom** (ನಾ.) ; **Caúcuser** (ನಾ.)

Caúdal ಕಾಡಲ್ (ಗು.) ಬಾಲದ ; ಬಾಲದಲ್ಲಿಯ ; ಬಾಲದ ಬಳಿಯ ; ಬಾಲದಂಥ. **Caúdally** (ಕ್ರಿ. ವಿ.) ; **Caúdate** — ಡೇಟ್ (ಗು.) ಬಾಲವುಳ್ಳ. (ಪ್ರಾ. ವಿ., ಸ. ವಿ.) ಬಾಲದಂಥ ಪುಚ್ಛವುಳ್ಳ.

Caúdle ಕಾಡ್‌ಲ್ (ನಾ.) ರೋಗಿಗಳಿಗೆ (ಮು., ಬಾಣಂತಿಯರಿಗೆ) ಕೊಡುವ ಬಿಸಿಗಂಜಿ (ಸುವಾಸನಾ ದ್ರವ್ಯಗಳು, ಸಕ್ಕರೆ, ದ್ರಾಕ್ಷಾಮದ್ಯ, ಇವನ್ನು ಸೇರಿಸಿದುದು)

Caught ಕಾಟ್. Catch ಧಾತುವಿನ ಭೂತ ಮತ್ತು ಭೂ. ಕೃ. ರೂಪ.

Caul ಕಾಲ್ (ನಾ.) ಹೆಂಗಸಿನ ಟೋಪಿಯ ಹಿಂದುಗಡೆಯ ಸಾದಾ ಭಾಗ. ಭ್ರೂಣವನ್ನು ಆವರಿಸಿಕೊಂಡಿರುವ ಪೊರೆ : ಭ್ರೂಣಾವರಣ ; ಕೆಲವು ವೇಳೆ ಕೂಸಿನ ತಲೆಯಮೇಲೆ, ಹುಟ್ಟುವಾಗ ಕಾಣಬರುವ, ಈ ಪೊರೆಯ ಭಾಗ (ಇದು ಒಳ್ಳೆಯ ಶಕುನವಂತೆ, ನೀರಿನಲ್ಲಿ ಮುಳುಗಿ ಸಾಯದಿರಲು ರಕ್ಷೆಯಂತೆ)

Caúldron, Cál- ಕಾಲ್ಡ್ರನ್ (ನಾ.) (ಸಾ., ಅರ್ಧ ಚಂದ್ರಾಕೃತಿಯ ಹಿಡಿಯೂ, ಎತ್ತಿಡಬಹುದಾದ ಮುಚ್ಚಳವೂ ಇರುವ) ನೀರುಕಾಯಿಸುವ ದೊಡ್ಡ ಕಡಾಯಿ.

Caulèscent ಕಾಲೆಸೆಂಟ್ (ಗು.) (ಸ. ವಿ.) ಸ್ಪಷ್ಟವಾದ ಕಾಂಡವುಳ್ಳ ; ಸ್ಪಷ್ಟ ಕಾಂಡ. **Caúline** ಕಾಲೈನ್ (ಗು.) (ಸ. ವಿ.) ಕಾಂಡದ ; ಕಾಂಡದಲ್ಲಿಯ.

Caúliflower ಕಾಲಿಫ್ಲವರ್ (ನಾ.) ದೊಡ್ಡ ಹೂವುತಲೆಯುಳ್ಳ ಒಂದು ಜಾತಿಯ ಕೋಸು : ಹೂವುಕೋಸು.

Caulk. **Calk**[3] ನೋಡಿ.

Cause ಕಾಸ್ (ನಾ.) ಕಾರಣ ; ಹೇತು ; ನಿಮಿತ್ತ ; ಕಾರಕ ; ಉತ್ಪಾದಕ ; ಕರ್ತ ; ಮೂಲ ; ಆದಿ ; ಉದ್ದೇಶ ; ಧ್ಯೇಯ ; ಗುರಿ. ಸಮರ್ಥನೆ. (ನ್ಯಾ. ಶಾ.) ವ್ಯಾಜ್ಯ ಕಾರಣ ; ವ್ಯಾಜ್ಯ ವಿಷಯ ; ವ್ಯಾಜ್ಯ ; ಮೊಕದ್ದಮೆ. ವ್ಯಾಜ್ಯದಲ್ಲಿ ಒಂದು ಕಡೆಯ ವಾದ (Plead a c. ಮೊಕದ್ದಮೆಯಲ್ಲಿ ಒಂದು ಪಕ್ಷ ಹಿಡಿದು ವಾದಿಸು. C.-list ವಿಚಾರಣೆಯಾಗಬೇಕಾಗಿರುವ ವ್ಯವಹಾರಗಳ ಪಟ್ಟಿ). ಹೋರಾಡುವ ಅಭಿಪ್ರಾಯದಿಂದ ಏರ್ಪಟ್ಟ ಒಂದು ಚಳವಳಿ. ಪ್ರಚಾರಣ ಕಾರ್ಯ. [ಒಂದು ವಸ್ತುವಿನ ಸೃಷ್ಟಿಕಾರ್ಯಕ್ಕೂ ವಿಕೃತಿಕಾರ್ಯಕ್ಕೂ 'ಅರಿಸ್ಟಾಟಲ್' ಎಂಬ ಗ್ರೀಕ್ ತತ್ತ್ವಜ್ಞನು ನಾಲ್ಕು ಕಾರಣಗಳನ್ನು ವಿವೇಚಿಸಿರುತ್ತಾನೆ : (೧) Efficient c, or moving c. ಕಾರ್ಯಸಾಧಕ ಕಾರಣ ; ನಿಮಿತ್ತ ಕಾರಣ (ಉದಾ., ಒಂದು ಕಟ್ಟಡ ಕಟ್ಟುವುದರಲ್ಲಿ ಉಪಯೋಗಿಸುವ ಶಕ್ತಿ). (೨) Material c. ಸಾಧನ ಸಂಪತ್ತಿ ; ಉಪಾದಾನ ಕಾರಣ (ಉದಾ., ಕಟ್ಟಡಕ್ಕೆ ಬೇಕಾಗುವ ಇಟ್ಟಿಗೆ, ತೊಲೆ, ಮೊ.). (೩) Formal c. ಭಾವ, ಲಕ್ಷಣ ; ಸಂಕಲ್ಪ ಕಾರಣ (ಉದಾ., ಕಟ್ಟಡದ ನಕ್ಷೆ). (೪) Final c. ಉದ್ದೇಶ ; ಪ್ರಯೋಜನ ಕಾರಣ (ಉದಾ., ಮನೆಯ ವಾಸ, ಮೊ.)]. First c. ಆದಿ ಕಾರಣ ; ಸೃಷ್ಟಿಕರ್ತ ; ಭಗವಂತ. Make common c. with ಪಕ್ಷಕ್ಕೆ ಸೇರು ; ಪಕ್ಷದಲ್ಲಿ ಏಕೀಭವಿಸು. **Caúsal** (ಗು., ನಾ.) ಕಾರಣದ ; ಕಾರಣ ರೂಪವಾದ ; ಕಾರಣಾತ್ಮಕವಾದ ; ಕಾರಣದಿಂದಾದ. ಕಾರ್ಯ ಕಾರಣ ಸಂಬಂಧದ. (ವ್ಯಾ., ತರ್ಕ) ಕಾರಣಾರ್ಥಕ ; ಕಾರಣ ಬೋಧಕ ; ಪ್ರೇರಣಾರ್ಥಕ. (ನಾ.) ಕಾರಣಾರ್ಥಕ ಸಮುಚ್ಚಯ. **Caúsally** (ಕ್ರಿ. ವಿ.) ; **Causálity** ಕಾಸ್ಯಾಲಿಟಿ (ನಾ.) ಕಾರಣವಾಗಿರುವುದು ; ಕಾರಣವಿರುವುದು ; ಕಾರಣವಾಗಿ ವರ್ತಿಸುವುದು ; ಕಾರಣತ್ವ. ಕಾರ್ಯಕಾರಣ ಸಂಬಂಧ. ಪ್ರತಿಯೊಂದಕ್ಕೂ ಕಾರಣ(ಗಳು) ಇದ್ದೇ ಇರುವುದೆಂಬ ವಾದ : ಹೇತು ವಾದ ; ನಿಮಿತ್ತ ವಾದ. **Causátion** ಕಾಸೇಷನ್ (ನಾ.) ಫಲವಾಗುವಂತೆ, ಫಲ ಹುಟ್ಟುವಂತೆ, ಮಾಡುವುದು ; ಉತ್ಪಾದನ ; ಕಾರಣ ವಿಧಾನ ; ಕಾರ್ಯಕಾರಣ ಸಂಬಂಧ. ಎಲ್ಲಕ್ಕೂ ಕಾರಣ(ಗಳು) ಇದ್ದೇ ಇರುವುದೆಂಬ ತತ್ತ್ವ : ಕಾರಣತಾ ವಾದ. **Causátionism** (ನಾ.) ಸೃಷ್ಟಿ ವಾದ. **Causátionist** (ನಾ.) ಸೃಷ್ಟಿ ವಾದಿ. **Caúsative** ಕಾಸಟಿವ್ (ಗು.) ಕಾರಣವಾಗಿರುವ ; ಉತ್ಪಾದಕ ; ಕಾರಕ. (ವ್ಯಾ.) ಕಾರಣಾರ್ಥಕ ; ಪ್ರೇರಣಾರ್ಥಕ. **Caúsatively** (ಕ್ರಿ. ವಿ.) ; **Caúse celébre** (F) ಕೋಸ್ ಸೆಲೆಬ್ರ್ [ನಾ. ; ಬ. ವ. Causes celebres ; (ಉಚ್ಚಾರಣೆ, ಏ. ವ. ದಂತೆ)] ಹೆಚ್ಚುಗಮನ ಸೆಳೆಯುವ ಮೊಕದ್ದಮೆ ; ಆಕರ್ಷಕ ಮೊಕದ್ದಮೆ. **Caúseless** (ಗು.) ಕಾರಣವಿಲ್ಲದ ; ಕಾರಣ ರಹಿತ ; ನಿಷ್ಕಾರಣ ; ನಿರ್ನಿಮಿತ್ತ ; ಆಕಸ್ಮಿಕ ; ನ್ಯಾಯವೆಂದು ಹೇಳಲಾಗದ ; ಆಧಾರ ರಹಿತ ; ನಿರಾಧಾರ. **Caúselessly** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cause (ಕ್ರಿ. ಸಕ.) ಆಗುವಂತೆ ಮಾಡು ; ಆಗಿಸು ; ಉಂಟು ಮಾಡು ; ಉತ್ಪತ್ತಿಮಾಡು ; ಮಾಡು ; ಪ್ರೇರಿಸು. **Caúser** (ನಾ.) ಕರ್ತೃ ; ಉತ್ಪಾದಕ.

Causerié (F) ಕೋಸ್ಸರೀ (ನಾ. ; ಬ. ವ. -s ; ಉಚ್ಚಾರಣೆ ಏ. ವ. ದಂತೆ) ಸಂಭಾಷಣ ರೂಪದ ; ಲಕ್ಷಣಬದ್ಧವಲ್ಲದ ; (ಮು., ಸಾಹಿತ್ಯ ವಿಷಯವಾದ) ವರ್ತಮಾನ ಪತ್ರಿಕೆಯ ಲೇಖನ, ಭಾಷಣ.

Caúseway ಕಾಸ್‌ವೇ, **Caúsey** ಕಾಸ್ಸೇ(ಸೇ) (ನಾ., ಕ್ರಿ. ಸಕ.) (ತಗ್ಗು, ಜೌಗು, ಅಥವಾ ನೀರುನಿಂತಿರುವ, ಪ್ರದೇಶದಲ್ಲಿ) ಎತ್ತರಿಸಿ ಮಾಡಿದ ರಸ್ತೆ. (ರಸ್ತೆಯ ಪಕ್ಕದಲ್ಲಿ) ಎತ್ತರಿಸಿ ಮಾಡಿರುವ ಕಾಲುದಾರಿ : ಒಡ್ಡುದಾರಿ. (ಕ್ರಿ.) ಇಂಥ ದಾರಿ ಮಾಡು.

Caústic ಕಾಸ್ಟಿಕ್ (ಗು., ನಾ.) ಜೈವಿಕ ಪದಾರ್ಥವನ್ನು ದಹಿಸುವ, ಕ್ಷಯಿಸುವ, ತಿಂದುಹಾಕುವ (ವಸ್ತು) : ದಾಹಕ. (Common or Lunar c. ಶಸ್ತ್ರಚಿಕಿತ್ಸೆಯಲ್ಲಿ ಉಪಯೋಗಿಸುವ 'ಸಿಲ್ವರ್ ನೈಟ್ರೇಟ್' ಎಂಬ ಬೆಳ್ಳಿ ಮತ್ತು ನೈಟ್ರಿಕಾಮ್ಲ ಸಂಯುಕ್ತ). (ರೂಪ.) ಚುಚ್ಚುವ ; ಮರ್ಮಭೇದಕ ; ವ್ಯಂಗ್ಯ ; ತೀಕ್ಷ್ಣ ; ತೀವ್ರ ; ಕಟು. (ನಾ.) (ಭೌ. ವಿ.) ವಕ್ರತಲದಿಂದ ಪ್ರತಿಫಲಿತವಾದ, ಅಥವಾ ವಕ್ರ ಕಾಚದಿಂದ ವಕ್ರೀಭೂತವಾದ, ಕಿರಣಗಳು ಪರಸ್ಪರ ಸಂಧಿಸುವುದರಿಂದಾದ ವಕ್ರರೇಖೆ, ವಕ್ರತಲ. C. curve ವಕ್ರಾಂಶು ರೇಖೆ. **Caústically** (ಕ್ರಿ. ವಿ.) ; **Caustícity** (ನಾ.)

Caúterize ಕಾಟೆರೈಸ್ (ಕ್ರಿ. ಸಕ.) (ವೈ. ಶಾ.) ಕಾಸಿದ ಕಬ್ಬಿಣದಿಂದ ಅಥವಾ ದಾಹಕ ವಸ್ತುವಿನಿಂದ ಸುಡು. ಚುಟಿಕೆ (ಸುಡಿಗೆ) ಹಾಕು. (ರೂಪ.) ಜಡ್ಡುಗಟ್ಟಿಸು ; ಕಲ್ಲುಮಾಡು. **Cauterizátion** (ನಾ.) ; **Caútery** (ನಾ.) (ವೈ. ಶಾ.) ಅಂಗಭಾಗವನ್ನು ಸುಡುವುದಕ್ಕಾಗಿ ಉಪಯೋಗಿಸುವ ಲೋಹದ ಆಯುಧ. (ಅಂಗಭಾಗವನ್ನು) ಸುಡುವುದು.

Caútion ಕಾಷನ್ (ನಾ., ಕ್ರಿ. ಸಕ.) ಎಚ್ಚರಿಕೆ ; ಜಾಗರೂಕತೆ ; ಜೋಕೆ ; ಸಾವಧಾನತೆ. [C. money ಚರ್ಯೆ (ನಡತೆ) ಸರಿಯಾಗಿರುವ ಉದ್ದೇಶದಿಂದ (ಮು., ವಿದ್ಯಾಶಾಲೆಯಲ್ಲಿ) ವಿದ್ಯಾರ್ಥಿಯು ಠೇವಣಿಯಿಡಬೇಕಾದ ಹಣ : ಎಚ್ಚರಿಕೆಯ ಹಣ]. (ಕವಾಯತಿನಲ್ಲಿ) 'ಜೋಕೆ' ಎಂಬ ಆಜ್ಞೆಯ ಮಾತು. ಆಕ್ಷೇಪಿಸಿ ಕೊಡುವ ಎಚ್ಚರಿಕೆ (Dismissed with a c. ಎಚ್ಚರಿಕೆ ಹೇಳಿ ಕಳುಹಿಸಿಬಿಟ್ಟರು). (ಅಸಂ.) ಅಸಾಧಾರಣವಾದದ್ದು ; ವಿಲಕ್ಷಣವಾದದ್ದು ; ವಿಜಾತೀಯವಾದ, ವಿಕಾರರೂಪಿನ, ಮನುಷ್ಯ ; ವಿಚಿತ್ರ ಪುರುಷ. (ಕ್ರಿ.) ಎಚ್ಚರಿಕೆ ಕೊಡು ; ಬುದ್ಧಿ ಹೇಳು ; ಆಕ್ಷೇಪಿಸಿ ಎಚ್ಚರಿಕೆ ಕೊಡು. **Caútious** (ಗು.) ಎಚ್ಚರಿಕೆಯುಳ್ಳ ; ಮುಂಜಾಗ್ರತೆಯುಳ್ಳ ; ಹುಷಾರಾದ. **Caútiously** (ಕ್ರಿ. ವಿ.) ; **Caútionary** (ಗು.)

Cavalcáde ಕ್ಯಾವಲ್ಕೇಡ್ (ನಾ.) ಕುದುರೆಸವಾರರ ತಂಡ ; ಕುದುರೆಯ ಮೇಲೆ ಕುಳಿತಿರುವವರ ಮೆರವಣಿಗೆ.

Cavaliér ಕ್ಯಾವಲಿಯರ್ (ನಾ., ಗು., ಕ್ರಿ. ಸಕ.) ಕುದುರೆಯ ಸವಾರ. ನಯವಾದ ನಡತೆಯುಳ್ಳ ದೊಡ್ಡಮನುಷ್ಯ : ನಯ ಪುರುಷ ; ಮಹಿಳೆಯರ ಬೆಂಗಾವಲಾಗಿ ಹೋಗುವವನು ; ಸ್ತ್ರೀವಿಲಾಸಿ. (ಇಂಗ್ಲೆಂಡಿನಲ್ಲಿ ೧೭ನೆಯ ಶತಮಾನದ) ರಾಜಪಕ್ಷೀಯ. (ಗು.) ಆಲೋಚಿಸದೆ ಥಟ್ಟನೆ ವರ್ತಿಸುವ ; ನಿರ್ಲಕ್ಷ್ಯದ ; ಅಹಂಕಾರದ ; ಗರ್ವದ. ರಾಜಪಕ್ಷದ. (ಕ್ರಿ.) ಕೇವಲ ನಯದಿಂದ ವರ್ತಿಸು. ಮಹಿಳೆಯರ ಬೆಂಗಾವಲಾಗಿ ಹೋಗು. **Cavaliérly** (ಕ್ರಿ. ವಿ.)

Cávalry ಕ್ಯಾವಲ್ರಿ (ನಾ.) ಕುದುರೆಯ ಸಿಪಾಯಿಗಳು ; ರಾವುತರು (ಸಾ., ಬ. ವ. ದ ಕ್ರಿಯಾಪದದೊಡನೆ) ; ಕುದುರೆಯ ದಂಡು ; ಅಶ್ವಸೈನ್ಯ.

Cave[1] ಕೇವ್ (ನಾ.) ಗವಿ ; ಗುಹೆ. (ರಾಜ್ಯತಂತ್ರ) ಯಾವುದಾದರೂ ವಿಷಯದಲ್ಲಿ ಸರಿಬೀಳದೆ ಒಂದು ಪಕ್ಷಕ್ಕೆ ಸೇರಿದ ಕೆಲವರು ಆ ಪಕ್ಷವನ್ನು ಬಿಟ್ಟುಹೋಗುವುದು : ಪಕ್ಷತ್ಯಾಗ ; ಹಾಗೆ ಪಕ್ಷತ್ಯಾಗ ಮಾಡಿದವರು : ಪಕ್ಷತ್ಯಾಗಿಗಳು. [C. of Adullam ಅದಲಂ ಗುಹೆ (ಅಲ್ಲಿ ಋಣಪೀಡಿತರೂ ಕಷ್ಟಕ್ಕೆ ಸಿಕ್ಕಿದವರೂ ಅಸಮಾಧಾನವುಳ್ಳವರೂ ಸೇರಿದ್ದರಂತೆ. ಈ ಕಥೆಯಿಂದ, ಯಾವುದಾದರೂ ಒಂದು ರಾಜಕೀಯ ಪಂಗಡವನ್ನು ಅಸಮಾಧಾನ ಕಾರಣದಿಂದ ತೊರೆದು ತಮ್ಮದೇ ಒಂದು ಗುಂಪನ್ನು ಏರ್ಪಡಿಸಿಕೊಂಡವರಿಗೆ Adullamites 'ಅದಲಂ ಗುಹೆಗೆ ಸೇರಿದವರು' ಎಂದು ಹೆಸರು)]. C.-bear ನಷ್ಟವಾಗಿ ಹೋದ, ಈಗ ಗುಹೆಗಳಲ್ಲಿ ಅವಶಿಷ್ಟವಾಗಿ ದೊರೆಯುವ, ಪೂರ್ವಯುಗದ ಕರಡಿ. C.-dweller (ಮು., ಪೂರ್ವಯುಗದ) ಗುಹಾವಾಸಿ ಮನುಷ್ಯ. C.-fish, ಗವಿಗಳಲ್ಲಿ ವಾಸಮಾಡುವ ಮೀನು. C.-man ಗುಹಾವಾಸಿ. (ರೂಪ.) ಅಸಂಸ್ಕೃತ ಭಾವ, ರಾಗ, ಚರ್ಯೆ ಮೊ. ಗಳನ್ನುಳ್ಳವನು. Idols of the c. (Idol ನೋಡಿ)

Cave (ಕ್ರಿ.) ಗವಿ ತೋಡು ; ಗುಹೆ ಮಾಡು ; ಗವಿಯಲ್ಲಿ ಹಾಕು. (ರಾಜ್ಯತಂತ್ರ) ತ್ಯಾಗಪಕ್ಷವನ್ನೇರ್ಪಡಿಸು. [C. in ಕುಸಿದು ಬೀಳು ; ಜರುಗಿ ಬೀಳು ; (ಗೋಡೆ) ಒಳಬಾಗು]. ಒತ್ತಿದರೆ ಒಳಹೋಗು. ಅಧೀನನಾಗು ; ಬಗ್ಗು ; ಸೋತುಹೋಗು ; ವಿರೋಧ ಬಿಡು. ಒಳಚೆಟ್ಟು (ಮು., ಒಬ್ಬನ ಪರಂಗಿಟೋಪಿಯನ್ನು, ತಲೆಯನ್ನು) ; ಆಕಾರ ಕೆಡಿಸು. (ಧಾನ್ಯ, ಮೊ. ಗಳಿಂದ) ಕಸಕಡ್ಡಿಯನ್ನು ಬೇರ್ಪಡಿಸು.

Cáve[2] ಕೇವಿ (ಭಾವ. ಅವ್ಯ.) (ವಿದ್ಯಾರ್ಥಿ ಅಸಂ.) ಹುಷಾರ್ ! (ಉಪಾಧ್ಯಾಯನ ಬರವಿನ ಸೂಚನೆ)

Cáveat ಕೇವಿಆಟ್ (ನಾ.) (ನ್ಯಾ. ಶಾ.) ಪ್ರತಿಪಕ್ಷದ ಹೇಳಿಕೆಯನ್ನು ಕೇಳಿದ ಹೊರತು ಮುಂದಿನ ಕ್ರಮ ಜರುಗಿಸಕೂಡದೆಂದು ಹಾಕುವ ಅರ್ಜಿ : ತಡೆ ಅರ್ಜಿ ; ಎಚ್ಚರಿಕೆಯ ಅರ್ಜಿ (Enter a c., Put in a c. ತಡೆಅರ್ಜಿ ಹಾಕು). (ರೂಪ.) ಎಚ್ಚರಿಕೆ. ಷರತ್ತು.

Cáveat-émptor (L) ಕೇವಿಆಟ್ ಎಂಪ್ಟಾರ್ (ವಾಕ್ಯ). ಕೊಳ್ಳುವವನು ಎಚ್ಚರಿಕೆಯಿಂದ ನೋಡಿಕೊಳ್ಳಲಿ (ಕೊಂಡವನು ಪಡಬಹುದಾದ ಅತೃಪ್ತಿಗೆ ಮಾರುವವನು ಜವಾಬ್ದಾರಿಯನ್ನು ವಹಿಸಿಕೊಳ್ಳದಿರುವುದು)

Cávendish ಕ್ಯಾವೆಂಡಿಷ್ (ನಾ.) ಮೆತುಮಾಡಿ, ರುಚಿಗಟ್ಟಿ, ಒತ್ತಿ, ಬಿಲ್ಲೆಯಂತೆ ಮಾಡಿದ ಹೊಗೆಯಸೊಪ್ಪು, ತಂಬಾಕು : ಗುಡಾಕು.

Cávern ಕ್ಯಾವರ್ನ್ (ನಾ.) ನೆಲದೊಳಗಿನ ಪೊಳ್ಳು ; ದೊಡ್ಡ ಬಿಲ ; ಕುಹರ (ಅಲಂ.). **Cáverned** (ಗು.) ಗವಿಯಂಥ ; ಗವಿಯಲ್ಲಿರುವ ; ಗವಿಯಿಂದ (ಗಳಿಂದ) ಕೂಡಿದ. **Cávernous** (ಗು.) ಗವಿಗಳಿಂದ ತುಂಬಿದ ; ಗವಿಯಲ್ಲಿನಂಥ ; ಗವಿಯಷ್ಟು ಆಳವಾದ, ವಿಸ್ತಾರವಾದ (C. darkness ಗವಿಗತ್ತಲೆ. C. eyes ಗುಳಿಬಿದ್ದ ಕಣ್ಣು. C. mouth ಗವಿಯಂಥ ಬಾಯಿ)

Cáves(s)on ಕ್ಯಾವೆಸನ್ (ನಾ.) (ತುಂಟ ಕುದುರೆಯನ್ನು ಪಳಗಿಸುವುದಕ್ಕೆ ಉಪಯೋಗಿಸುವ ಬಲವಾದ) ಮೂಗುಪಟ್ಟಿ.

Caviár, Caviáre ಕವಿಯಾ(ಯೇ)ರ್, ಕವ್ಯಾರ್ (ನಾ.) 'ಸ್ಟರ್ಜನ್' ಎಂಬ ಮೀನಿನ ತತ್ತಿಯ ತಂಡವನ್ನು ಒತ್ತಿ ಕೂಡಿಸಿ ಉಪ್ಪುಹಾಕಿ ಮಾಡಿದ ವ್ಯಂಜನ (ಇದು ತಿನ್ನುವುದಕ್ಕೆ ಬಹಳ ರುಚಿಯೆಂದು ಹೇಳುತ್ತಾರೆ). C. to the general ಅಜ್ಞರು ಅಲಕ್ಷ್ಯದಿಂದ ನೋಡುವ ಉತ್ತಮ ವಸ್ತು.

Cávil ಕ್ಯಾವಿಲ್ (ಕ್ರಿ. ಅಕ., ನಾ.) (ಯಾವುದಾದರೂ ವಿಷಯವಾಗಿ) ಕುತರ್ಕ (ಮಾಡು) ; ದುರಾಕ್ಷೇಪಣೆ (ಮಾಡು). **Cáviller** (ನಾ.)

Cávity ಕ್ಯಾವಿಟಿ (ನಾ.) (ಗಟ್ಟಿಪದಾರ್ಥದೊಳಗಿನ) ಪೊಳ್ಳುಭಾಗ ; ಪೊಳ್ಳು ; ಕುಳಿ ; ಬಿಲ.

Caw ಕಾ (ನಾ., ಭಾವ. ಅವ್ಯ., ಕ್ರಿ.) ಕಾಗೆಯ ಕೂಗು (ಕೂಗು) ; ಕರ್ ಎನ್ನು. C. out ಕಾ ಕಾ ಎಂದು ಕಿರುಚು.

Cáxton ಕ್ಯಾಕ್ಸ್‌ಟನ್ (ನಾ.) (ಆದಿ ಇಂಗ್ಲಿಷ್ ಮುದ್ರಣಕಾರನಾದ) ವಿಲಿಯಂ ಕ್ಯಾಕ್ಸ್‌ಟನ್ ಎಂಬವನು ಅಚ್ಚುಮಾಡಿದ ಪುಸ್ತಕ. ಈತನು ತಯಾರಿಸಿದ ಅಚ್ಚಿನ ಮೊಳೆಗಳನ್ನು ಹೋಲುವ ಅಚ್ಚಿನ ಮೊಳೆ.

Cay ಕೇ, ಕೀ (ನಾ.) ನೀರಿನ ಮಧ್ಯದಲ್ಲಿರುವ ತಗ್ಗಾದ ಮರಳುದಿಬ್ಬ, ಮಣ್ಣುದಿಬ್ಬ, ಕಲ್ಲುದಿಬ್ಬ, ಹವಳದ ದಿಬ್ಬ, ಮೊ. (= Quay)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cayénne ಕೇ(ಕ್ಕೈ)ಯೆನ್ (ನಾ.) ಮೆಣಸಿನಕಾಯಿ ಪುಡಿ (=C. pepper)

Cease ಸೀಸ್ (ಕ್ರಿ.) ತಡೆದಿರು ; ಮಾಡದೆ ನಿಲ್ಲು ; ನಿಲ್ಲಿಸು ; ಬಿಡು ; ವಿರಮಿಸು ; ಮಾಣು(ಗ್ರಾಂ.). (ಮನೋಭಾವಗಳು, ಕಾರ್ಯಗಳು) ಕೊನೆಗಾಣು ; ಕೊನೆಮುಟ್ಟು ; ನಿಂತುಹೋಗು ; ತೀರಿಹೋಗು ; ಮುಗಿ ; ಮುಗಿಸು. (ಹೋರಾಟ, ಪ್ರಯತ್ನ, ಮೊ. ನ್ನು) ಕೊನೆ ಗಾಣಿಸು ; ನಿಲ್ಲಿಸು. (ಸ್ಯೆನ್ಯ) C. fire ಗುಂಡುಹಾರಿಸುವುದನ್ನು ನಿಲ್ಲಿಸು. **Cessátion** ಸೆಸೇಷನ್ (ನಾ.) ನಿಲ್ಲುವುದು ; ನಿಂತುಹೋಗುವುದು ; ಕೊನೆಗಾಣುವುದು ; ಮುಗಿಯುವುದು ; ನಿಲುಕಡೆ ; ಬಿಡುವು ; ತೆರವು ; ವಿರಾಮ ; ವ್ಯವಧಾನ ; ಅವಸಾನ. **Césser** ಸೆಸರ್ (ನಾ.) (ನ್ಯಾ. ಶಾ.) (ಅವಧಿ, ಜವಾಬ್ದಾರಿ, ಮೊ. ಗಳ) ಕೊನೆಗಾಣಿಕೆ, ಸಮಾಪ್ತಿ, ಮುಕ್ತಾಯ.

Cease (ನಾ.) ನಿಲುಕಡೆ (Without c. ಎಂಬಲ್ಲ ಮಾತ್ರ : ಎಡೆ ಬಿಡದೆ ; ಸಂತತವಾಗಿ). **Ceáseless** (ಗು.) ತೆರಪಿಲ್ಲದ ; ಎಡೆಬಿಡದ ; ಸಂತತವಾದ. **Ceáselessly** (ಕ್ರಿ. ವಿ.) ; **Ceáselessness** (ನಾ.)

Cécity ಸೀಸಿಟಿ (ನಾ.) ಕುರುಡು ; ಅಂಧತೆ (ಸಾ., ರೂಪ.)

Cédar ಸೀಡರ್ (ನಾ.) ಹಲವು ಮರದ ಜಾತಿಗಳು ; 'ಸೀಡರ್' ಮರ ; ದೇವದಾರು ; ಸೀಡರ್ ಮರದಂತಿರುವ ಅನೇಕ ಇತರ ಮರಗಳು ; ಸೀಡರ್ ದಾರು. **Cédarn** (ಗು.) (ಕಾವ್ಯ) ಸೀಡರ್ ಮರದ, ದಾರುವಿನ.

Cede ಸೀಡ್ (ಕ್ರಿ. ಸಕ.) ಬಿಟ್ಟುಕೊಡು ; ತ್ಯಜಿಸು ; ಕೊಟ್ಟುಬಿಡು ; ಒಪ್ಪಿಸು ; ವಶಮಾಡು ; (ರಾಜ್ಯವನ್ನು) ಅಧೀನಮಾಡು, ಒಪ್ಪಿಸಿಬಿಡು ; ಒಪ್ಪಿಕೊ ; ಸಮ್ಮತಿಸು. **Céssion** ಸೆಷನ್ (ನಾ.) (ಹಕ್ಕು, ಆಸ್ತಿ, ಮೊ. ನ್ನು) ಬಿಟ್ಟುಕೊಡುವುದು, ಅಧೀನಮಾಡುವುದು, ಒಪ್ಪಿಸುವುದು. **Céssionary** (ನಾ.) (ಕಾನೂನಿಗನುಸಾರವಾಗಿ ಆಸ್ತಿ, ಹಕ್ಕು, ಮೊ. ನ್ನು) ವರ್ಗಪಡೆದವನು ; — ವರ್ಗದಾರ.

Cee, Ce ಸೀ (ನಾ.) C ಎಂಬ ಅಕ್ಷರ. Cee Spring, C-spring ಬಂಡಿಯ ಒಡಲನ್ನು ಹೊತ್ತಿರುವ C ಆಕಾರದ ಎಗುರುಪಟ್ಟಿ.

Ceil, Ciel ಸೀಲ್ (ಕ್ರಿ. ಸಕ.) (ಕೋಣೆಯ) ಮಾಳಿಗೆಯ ಒಳಮೈಗೆ ಮೆತ್ತಡ ಹಾಕು, ಸಾರಣೆ ಮಾಡು. **Ceíling** (ನಾ.) ಮಾಳಿಗೆಯ ಒಳಮೈ ; ಒಳ ಮಾಳಿಗೆ. ಫಲಕ ವಿಮಾನದ ಎತ್ತರದ ಪರಮಾವಧಿ ; ಒಂದು ಫಲಕ ವಿಮಾನವು ಏರಬಲ್ಲ ಎತ್ತರದ ಪರಮಾವಧಿ.

Celanése ಸೆಲನೀಸ್ (ನಾ.) ಒಂದು ತೆರದ ಕೃತಕ ರೇಷ್ಮೆ. (ಮೊದಲು ತಯಾರಿಸಿದವನು ಇಟ್ಟ ಹೆಸರು)

Célebrant ಸೆಲಬ್ರಂಟ್ (ನಾ.) (ಕರ್ಮಮಾಡಿಸುವ) ಪುರೋಹಿತ (ಮು., ಕ್ರೈಸ್ತ ಪ್ರಭುಭೋಜನ ಸಂಸ್ಕಾರದಲ್ಲಿ)

Célebrate ಸೆಲಬ್ರೇಟ್ (ಕ್ರಿ.) (ಮತಸಂಬಂಧವಾದ ಕರ್ಮಗಳನ್ನು ಅಥವಾ ಇತರ ಉತ್ಸವಗಳನ್ನು ವಿಧಿವತ್ತಾಗಿ, ಸಭೆಯಲ್ಲಿ) ಆಚರಿಸು, ನಡಸು, ಮಾಡು. (ಪ್ರಭುಭೋಜನ ಸಂಸ್ಕಾರದಲ್ಲಿ) ಪೌರೋಹಿತ್ಯ ಮಾಡು. (ಯಾವುದಾದರೂ ಹಬ್ಬವನ್ನೊ ಇತರ ಒಸಗೆಯನ್ನೊ) ಯಥಾವಿಧಿಯಾಗಿ ಆಚರಿಸು. ಪ್ರಸಿದ್ಧಿಗೊಳಿಸು ; ಸ್ತೋತ್ರಮಾಡು ; ಶ್ಲಾಘಿಸು ; ಪ್ರಶಂಸಿಸು ; ಕೊಂಡಾಡು ; ಹೊಗಳು. (ಭೂ. ಕೃ.) ಪ್ರಸಿದ್ಧ ; ಪ್ರಖ್ಯಾತ ; ಹೆಸರಾದ. **Celebrátion** (ನಾ.) ; **Celébrity** ಸಿಲೆಬ್ರಿಟಿ (ನಾ.) ಪ್ರಖ್ಯಾತಿ ; ಪ್ರಸಿದ್ಧಿ ; ಹೆಸರುವಾಸಿ. ಪ್ರಸಿದ್ಧಪುರುಷ ; ಹೆಸರಾದವನು.

Celérity ಸಿಲೆರಿಟಿ (ನಾ.) (ಜೀವವಿರುವ ವ್ಯಕ್ತಿಯ, ಚಲನೆಯ) ವೇಗ ; ಚುರುಕು ; ತ್ವರೆ.

Célery ಸೆಲೆರಿ (ನಾ.) ಒಂದು ಬಗೆಯ ಇಂಗ್ಲಿಷ್ ತರಕಾರಿಯ ಗಿಡ (ನಬ್ಬಸಿಗೆ, ಕೊತ್ತುಂಬರಿ, ಮೊ. ಸಸ್ಯವರ್ಗಕ್ಕೆ ಸೇರಿದುದು)

Celéste ಸಿಲೆಸ್ಟ್ (ನಾ., ಗು.) ಆಕಾಶನೀಲ ಬಣ್ಣ(ದ) ; ಬಾನ್ನೀಲ(ಯ). ಹಾರ್ಮೋನಿಯಂ ಮತ್ತು 'ಆರ್ಗನ್' ವಾದ್ಯಗಳ ಬಿರಡೆ (= Voix c.)

Celéstial ಸಿಲೆಸ್ಟಿಯಲ್ (ಗು., ನಾ.) ಆಕಾಶದ ; ಬಾನಿನ (C. globe ಖಗೋಳ). ಸ್ವರ್ಗದ ; ಸ್ವರ್ಗೀಯ ; ದಿವ್ಯ ; ಸ್ವರ್ಗಲೋಕದ(ವನು) ; ಸ್ವರ್ಗವಾಸಿ [C. Empire ಚೀನಾ ದೇಶ (ಆ ದೇಶದವರು ಕೊಟ್ಟಿರುವ ಹೆಸರಿನ ಅರ್ಥ)]. (ಹಾಸ್ಯವಾಗಿ) ಚೀನಾ ದೇಶದ(ವನು). **Celéstially** (ಕ್ರಿ. ವಿ.)

Célibate ಸೆಲಿಬೇಟ್ (ಗು., ನಾ.) ಅವಿವಾಹಿತ ; ಮದುವೆಯಿಲ್ಲದ (ವನು) ; ಬ್ರಹ್ಮಚಾರಿ ; ಮದುವೆಯಾಗುವುದಿಲ್ಲವೆಂದು ಸಂಕಲ್ಪ ಮಾಡಿದ(ವನು) ; ಮದುವೆ ಮಾಡಿಕೊಳ್ಳಕೂಡದ(ವನು). (ಜೀವನದಲ್ಲಿಯೂ ಸ್ವಭಾವದಲ್ಲಿಯೂ) ಬ್ರಹ್ಮಚಾರಿಯಂತಿರುವ(ವನು). **Célibacy** —ಬಸಿ (ನಾ.) ಬ್ರಹ್ಮಚರ್ಯ. **Celebatárian** — ಬಟೇರಿಯನ್ (ಗು., ನಾ.) ಬ್ರಹ್ಮಚರ್ಯದ. ಬ್ರಹ್ಮಚರ್ಯ ಪ್ರೋತ್ಸಾಹಕ ; ಬ್ರಹ್ಮಚಾರಿ.

Cell ಸೆಲ್ (ನಾ.) (ಚರಿತ್ರೆ) ಮತ್ತೊಂದು ಮಠದ ಆಶ್ರಯದಲ್ಲಿರುವ ಕ್ರೈಸ್ತ ಸಂನ್ಯಾಸಿಗಳ ಅಥವಾ ಸಂನ್ಯಾಸಿನಿಯರ ಮಠ. ಯತಿಯ ಒಕ್ಕೋಣೆಯ ಮನೆ. ಅರೆ ; ಗೂಡು ; ಕೋಶ. (ಕಾವ್ಯ) ಗುಡಿಸಿಲು ; ಕುಟೀರ. (ಕಾವ್ಯ) ಗೋರಿ ; ಸಮಾಧಿ. ಸಂನ್ಯಾಸಿಮಠದಲ್ಲಾಗಲಿ ಸೆರೆಮನೆಯಲ್ಲಾಗಲಿ ಒಬ್ಬನ ಸಣ್ಣ ಕೋಣೆ (Condemned c. ಮರಣಶಿಕ್ಷೆ ವಿಧಿಸಲ್ಪಟ್ಟವನನ್ನಿಟ್ಟಿರುವ ಕೋಣೆ). ಜೇನುಹುಟ್ಟಿಯಲ್ಲಿಯ ಒಂದು ಗೂಡು. (ವಿದ್ಯುತ್) ವಿದ್ಯುತ್ಕೋಶ. ಜೀವಿಯಲ್ಲಾಗಲಿ ಖನಿಜದಲ್ಲಾಗಲಿ ಸುತ್ತಲೂ ಆವರಣವುಳ್ಳ ಕುಹರ, ಗೂಡು (Cells of brain ಮಿದುಳಿನಲ್ಲಿ ಬೇರೆಬೇರೆ ಮನಶ್ಶಕ್ತಿಗೆ ಬೇರೆಬೇರೆಯಾಗಿ ಇರುವುವೆಂದು ಊಹಿಸಲ್ಪಟ್ಟಿರುವ ಕೋಶಗಳು). (ಜೀ. ವಿ.) ಸಾ., ಪೊರೆಯ ಆವರಣವುಳ್ಳ ಜೀವಪದಾರ್ಥದ ಕಣ. ಜೈವಿಕ ರಚನೆಯ ಮೂಲ ಧಾತು ; ಜೀವ ಕಣ. (ರೂಪ., ಮನುಷ್ಯರ ವಿಷಯದಲ್ಲಿ) (ಕ್ರಾಂತಿ) ಚಳವಳಿಯ ಕೇಂದ್ರ, ಗರ್ಭ. **-Celled** (ಗು.) ; **Celliform** (ಗು.) ಗೂಡಿನಾಕಾರದ. **Céllular** ಸೆಲ್ಯುಲರ್ (ಗು.) ಕೋಶಗಳ ; ಕೋಶಗಳುಳ್ಳ ; ಕೋಶ ಮಯ ; ಗೂಡುಗೂಡಾದ ; ಸಣ್ಣಸಣ್ಣ ಕೋಣೆಗಳುಳ್ಳ ; ಸರಂಧ್ರ (C. shirt ಬಲೆಯಂತೆ ನೆಯ್ದ ಜುಬ್ಬ). (ಶ. ವಿ.) ಜೀವ ಕಣಗಳುಳ್ಳ (C. tissue ಜೀವ ಕಣ ಸಮುದಾಯದಿಂದ ಕೂಡಿದ ಅಂಗಾಂಶ). C. plant ದಂಟು, ಎಲೆ, ಮೊ. ಭಾಗಗಳು ಸ್ಪಷ್ಟವಾಗಿಲ್ಲದ ಸಸ್ಯ. **Cellulárity** — ಲ್ಯಾರಿಟಿ (ನಾ.) — ಗುಣ ; — ಸ್ಥಿತಿ. **Céllule** ಸೆಲ್ಯೂಲ್ (ನಾ.) (ಅಂ. ರ. ಶಾ.) ಜೀವ ಕಣ. ಕುಹರ ; ಗೂಡು. **Céllulate** ಸೆಲ್ಯುಲೇಟ್ (ಗು.) ; **Céllulated** (ಗು.) ; **Cellulíferous** (ಗು.) ; **Céllulous** (ಗು.) ; **Cellulátion** (ನಾ.) ; **Céllulose** (ಗು., ನಾ.) ಗೂಡುಗಳುಳ್ಳ ; ಕೋಶಯುಕ್ತ ; ಕೋಶಾತ್ಮಕ ; ಸರಂಧ್ರ. ಜೀವಕಣಗಳಿಂದ ಕೂಡಿದ. (ನಾ.) (ರ. ವಿ.) ಸಸ್ಯಗಳ ಶರೀರಪಂಜರದಲ್ಲಿ ಗಟ್ಟಿಯಾಗಿರುವ ಭಾಗಕ್ಕೆ ಕಾರಣವಾದ ವಸ್ತು. (ಬಳ. ಮೊ.) ಲೋಹ, ಮರಗೆಲಸ, ಮೊ. ಕ್ಕೆ ಮೆರುಗು ಕೊಡುವುದಕ್ಕಾಗಿ ಉಪಯೋಗಿಸುವ 'ಸೆಲ್ಯುಲೋಸ್ ಆ್ಯಸಿಟೇಟ್' ಅಥವಾ 'ಸೆಲ್ಯುಲೋಸ್ ನೈಟ್ರೇಟ್' ಲವಣಗಳ ದ್ರಾವಣ. **Cellulósity**— ಲಾಸಿಟಿ (ನಾ.) ; **Célluloid** ಸೆಲ್ಯುಲಾಯ್ಡ್ (ನಾ.) ಮು., ಸಸ್ಯಗಳಲ್ಲಿಯ 'ಸೆಲ್ಯುಲೋಸ್' ಎಂಬ ಪದಾರ್ಥದಿಂದ ಮಾಡಿದ, ದಂತದಂತಿರುವ, ಪದಾರ್ಥ : 'ಸೆಲ್ಯುಲಾಯ್ಡ್'.

Céllar ಸೆಲರ್ (ನಾ., ಕ್ರಿ. ಸಕ.) ನೆಲಮಾಳಿಗೆ(ಯಲ್ಲಿಡು). ಸಾರಾಯಿಯನ್ನಿಡುವ ಕೋಣೆ (= Wine-c.) ; ಸಾರಾಯಿಯ ಉಗ್ರಾಣ. ಒಬ್ಬನ ಉಗ್ರಾಣದಲ್ಲಿರುವ ಒಟ್ಟುಸಾರಾಯಿ (He keeps a good c. ಅವನು ಒಳ್ಳೆಯ ಮದ್ಯದ ಉಗ್ರಾಣವನ್ನಿಟ್ಟಿದ್ದಾನೆ). **C.-book** ಮದ್ಯದ ಲೆಕ್ಕಪುಸ್ತಕ. **C.-flap** ನೆಲಬಾಗಿಲು. **C.-man** ಮದ್ಯದ ಉಗ್ರಾಣಾಧಿಕಾರಿ ; ಮದ್ಯದ ವ್ಯಾಪಾರಿ. **C.-plate** ಕಲ್ಲಿದ್ದಲಿನ ನೆಲಮಾಳಿಗೆಯ ಕಂಡಿಯ ಮುಚ್ಚಳ. **C.-way** ನೆಲಮಾಳಿಗೆಯ ದಾರಿ. **Céllarage** — ರೆಜ್ (ನಾ.) ನೆಲಮಾಳಿಗೆಯಲ್ಲಿರುವ ಅವಕಾಶ ; ನೆಲಮಾಳಿಗೆಗಳು. **Céllarer** (ಕ್ರೈಸ್ತ ಸಂನ್ಯಾಸಿಮಠಗಳಲ್ಲಿ ಮದ್ಯ ಮತ್ತು ಆಹಾರವಸ್ತುಗಳ) ಉಗ್ರಾಣಾಧಿಕಾರಿ. **Cellarét**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ನಾ.) ಊಟದ ಮನೆಯಲ್ಲಿ ಮದ್ಯದ ಸೀಸೆಗಳನ್ನಿಡುವ ಅಲಮಾರು ಅಥವಾ ಪಕ್ಕಮೇಜು.

'Céllo ಚೆಲೊ (ನಾ.) Violoncello ಎಂಬುದರ ಸಂಕ್ಷಿಪ್ತ. **'Céllist** (ನಾ.)

Céllophane ಸೆಲೊಫೇನ್ (ನಾ.) ವಸ್ತುಗಳಿಗೆ ಸುತ್ತುವುದಕ್ಕಾಗಿ ದಾರುವಿನ ಬಜ್ಜಿಯಿಂದ (ದಾರುಮಜ್ಜದಿಂದ) ಮಾಡಿದ ಪಾರದರ್ಶಕ ಪದಾರ್ಥ. (ಇದನ್ನು ಮೊದಲು ತಯಾರಿಸಿದವನು ಕೊಟ್ಟ ಹೆಸರು)

Célluloid, **Céllulose** } Cell ನೋಡಿ.

Celt[1] ಸೆಲ್ಟ್, **Kelt** ಕೆಲ್ಟ್ (ನಾ.) ಗ್ರೇಟ್‌ಬ್ರಿಟನ್ ಮತ್ತು ಐರ್ಲೆಂಡಿನ ಪೂರ್ವಿಕ 'ಗ್ಯಾಲ್ಕೆ' ಕುಲದವರಿಗೆ ಸಂಬಂಧಪಟ್ಟ ವರ್ಗಕ್ಕೆ ಸೇರಿದವನು : ಕೆಲ್ಟ್ ಕುಲದವನು. **Céltic, K** — (ಗು., ನಾ.) ಕೆಲ್ಟರ (ಭಾಷೆ). The C. fringe ಕೆಲ್ಟರ ಎಲ್ಲೆ : ಸ್ಕಾಚ್, ಐರಿಷ್, ವೆಲ್ಷ್ ಮತ್ತು ಕಾರ್ನಿಷ್ ಜನರಿರುವ ಎಲ್ಲೆ. **Célticallỳ** (ಗು.) ; **Célticism** (ನಾ.) ಕೆಲ್ಟರ ಸಂಪ್ರದಾಯ ಅಥವಾ ಭಾಷಾಮರ್ಯಾದೆ ; ಕೆಲ್ಟರ ಸಂಪ್ರದಾಯಾನುಸರಣೆ. **Célticize** (ಕ್ರಿ.) ಕೆಲ್ಟನನ್ನಾಗಿ ಮಾಡು ; ಕೆಲ್ಟ್‌ಭಾಷೆಯನ್ನೂ ಪದ್ಧತಿಗಳನ್ನೂ ಅನುಸರಿಸು.

Celt[2] ಸೆಲ್ಟ್ (ನಾ.) (ಪ್ರಾಚೀ. ಶಾ.) ಚರಿತ್ರಪೂರ್ವ ಕಾಲದಲ್ಲಿ ಉಪಯೋಗಿಸುತ್ತಿದ್ದ, ಉಳಿಯ ಏಣುಳ್ಳ, ಕಂಚಿನ ಅಥವಾ ಕಲ್ಲಿನ (ಅಥವಾ ಕಬ್ಬಿಣದ) ಆಯುಧ.

Cemént ಸಿಮೆಂಟ್ (ನಾ., ಕ್ರಿ. ಸಕ.) ಕಲ್ಲುಗಳನ್ನೂ ಇಟ್ಟಿಗೆಗಳನ್ನೂ ಬಂಧಿಸುವುದಕ್ಕಾಗಿಯೂ ಗಟ್ಟಿನೆಲ, ಗೋಡೆಯ ಮೈ, ಮೊ. ವನ್ನು ರಚಿಸುವುದಕ್ಕಾಗಿಯೂ ಉಪಯೋಗಿಸುವ ಕಲ್ಲುಗಾರೆ : 'ಸಿಮೆಂಟು' (ಸುಟ್ಟ ಸುಣ್ಣಕಲ್ಲನ್ನೂ ಜೇಡಿಮಣ್ಣನ್ನೂ ಬೆರಸಿ ಸಿಮೆಂಟನ್ನು ತಯಾರಿಸುತ್ತಾರೆ. ನೀರಿನಿಂದ ಕಲಸಿದ ಈ ಪದಾರ್ಥವು ಒಣಗಿದರೆ ಕಲ್ಲನಂತೆ ಗಟ್ಟಿಯಾಗುತ್ತದೆ). (Hydraulic c. ನೀರಿನ ತಳದಲ್ಲಿ ಕ್ರಮೇಣ ಕಲ್ಲನಂತೆ ಗಟ್ಟಿಯಾಗುವ ಕಲ್ಲುಗಾರೆ : ನೀರು ಸಿಮೆಂಟು). ವಸ್ತುಗಳನ್ನು ಒಟ್ಟಿಗೆ ಬಂಧಿಸುವುದಕ್ಕಾಗಿ ಉಪಯೋಗಿಸುವ ಅಂಟುಪದಾರ್ಥ ; ಬಂಧಕ (ರೂಪ. ಸಹ). ಹಲ್ಲಿನ ಕಂಡಿಗಳನ್ನು ಮುಚ್ಚುವುದಕ್ಕಾಗಿ ಉಪಯೋಗಿಸುವ ಪದಾರ್ಥ ; ಹಲ್ಲಿನ ಹೊರಮೈಯ ಗಡುಸು ಪದಾರ್ಥ : ಹಲ್ಲುಸಿಮೆಂಟು. (ಕ್ರಿ.) ಸಿಮೆಂಟಿನಿಂದ ಅಥವಾ ಸಿಮೆಂಟುಹಾಕಿದಂತೆ ಬಂಧಿಸು, ಕೂಡಿಸು. ಸಿಮೆಂಟು ಹಚ್ಚು, ಸಿಮೆಂಟು ಮಾಡು. **Cementátion** ಸೀ — (ನಾ.) ಬಂಧನ ಕ್ರಿಯೆ ; ಕೂಡಿಸುವುದು ; ಬದ್ಧಸ್ಥಿತಿ. (ರೂಪ. ಸಹ). ಒಂದು ಘನಪದಾರ್ಥವು ಮತ್ತೊಂದರೊಡನೆ ಹೆಚ್ಚುಕಾವಿನಲ್ಲಿ ಸಂಯುಕ್ತವಾಗಿ, ಯಾವ ಪದಾರ್ಥವೂ ದ್ರವರೂಪ ಹೊಂದದಂತಿದ್ದು, ಒಂದರ ಗುಣ ಬದಲಾಯಿಸುವಂತೆ ಮಾಡುವ ಪ್ರಕ್ರಿಯೆ (ಉದಾ., ಕಬ್ಬಿಣವು ಇಂಗಾಲವನ್ನು ಹೀರಿಕೊಂಡು ಉಕ್ಕಾಗುವುದು). ಸಿಮೆಂಟಿನ ಆವರಣ ಅಥವಾ ಲೇಪ ಕೊಡುವುದು.

Cémetery ಸೆಮಿಟೆರಿ (ನಾ.) (ಚರ್ಚಿನ ಅಂಗಳವಲ್ಲದ) ಹೆಣಹೂಳುವ ಸ್ಥಳ ; ಸಮಾಧಿ ಭೂಮಿ ; ಹೂಳುಗಾಡು ; ಶ್ಮಶಾನ.

Cénobite. **Coenobite** ನೋಡಿ.

Cénotaph ಸೆನೊಟಾಫ್ (ನಾ.) (ಮತ್ತೊಂದೆಡೆಯಲ್ಲಿ ಸಮಾಧಿಯಾಗಿರುವವನ ಜ್ಞಾಪಕಾರ್ಥವಾಗಿ ಕಟ್ಟಿದ) ಶೂನ್ಯ ಸಮಾಧಿ; ಸ್ಮಾರಕ ಸಮಾಧಿ. (The C. ಮಹಾಯುದ್ಧದಲ್ಲಿ ಮಡಿದವರ ಜ್ಞಾಪಕಾರ್ಥವಾಗಿ ಲಂಡನ್ನಿನ 'ವೈಟ್‌ಹಾಲ' ನಲ್ಲಿ ಕಟ್ಟಿರುವ ಸ್ಮಾರಕ ಸಮಾಧಿ). ಸಮಾಧಿಯಾದವನು ಮೇಲಕ್ಕೆದ್ದುಬಂದಿರುವ ಸಮಾಧಿ.

Cense ಸೆನ್ಸ್ (ಕ್ರಿ. ಸಕ.) (ಆರಾಧನೆಗಾಗಿ) ಧೂಪ ಹಾಕು. **Cénser** (ನಾ.) ಧೂಪ ಸುಡುವ ಪಾತ್ರೆ : ಧೂಪದಾನಿ ; ಧೂಪಾರ್ತಿ. ಧೂಪ ಹಾಕುವವನು.

Cénsor ಸೆನ್ಸರ್ (ನಾ., ಕ್ರಿ. ಸಕ.) ಪುರಾತನ ರೋಮಿನಲ್ಲಿ ಜನಗಣತಿಯನ್ನೂ ಜನರ ರೀತಿ ನೀತಿಗಳ ಮೇಲ್ವಿಚಾರಣೆಯನ್ನೂ ಮಾಡುತ್ತಿದ್ದ ಅಧಿಕಾರಿ ; ಇತರರ ರೀತಿ ನೀತಿಗಳ ವಿಷಯವಾಗಿ ಟೀಕಿಸುವವನು ; ಪರಾಮರ್ಶಕ. ಕಾಲಕ್ಕೆ ತಗದ, ಅಥವಾ ಸರ್ಕಾರದ ಮೇಲಿನ ದೂಷಣೆಯುಳ್ಳ ಪುಸ್ತಕಗಳು, ನಾಟಕಗಳು, ಸಮಾಚಾರಗಳು, ಸೇನಾ ವಿಚಾರಗಳು — ಇವನ್ನು ನೀತಿವಿರುದ್ಧವೆಂದು ಪ್ರಕಟವಾಗದಂತೆ ಅಡಗಿಸುವ, ಅಥವಾ ಪ್ರಕಟನೆಗೆ ಮೊದಲು ಅವನ್ನು ಪರಾಮರ್ಶಿಸಿ ದೋಷವಿಲ್ಲದಂತೆ ಮಾಡಿ ಪ್ರಕಟಿಸಲು ಅಪ್ಪಣೆಕೊಡುವ ಸರ್ಕಾರದ ಅಧಿಕಾರಿ : ದೋಷ ವಿಮರ್ಶಕ. ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಮೇಲ್ವಿಚಾರಣೆ ನೋಡಿಕೊಳ್ಳುವ ಅಧಿಕಾರಿ. (ಮ. ಶಾ.) ಅಗೋಚರಾನುಭವಗಳು ಗೋಚರಾನುಭವಕ್ಕೆ ಬಾರದಂತೆ ತಡೆಯುವ ಶಕ್ತಿ : ರೋಧಕ ಶಕ್ತಿ (= Censorship). (ಕ್ರಿ.) ಪ್ರಕಟನೆಗಾಗಿ ಬರುವ ಪುಸ್ತಕ, ಪತ್ರಿಕೆ, ಮೊ. ನ್ನು ಪರೀಕ್ಷಿಸಿ ಅವುಗಳಲ್ಲಿ ಬಿಟ್ಟುಬಿಡಬೇಕಾದ ಭಾಗಗಳನ್ನು ತೆಗೆದುಹಾಕಿ, ತಕ್ಕ ಇತರ ಬದಲಾವಣೆಗಳನ್ನು ಮಾಡುವ ಅಧಿಕಾರವನ್ನು ಚಲಾಯಿಸು ; ದೋಷ ತೋರಿಸು. **Cénsorship** (ನಾ.) ದೋಷ ವಿಮರ್ಶನಾಧಿಕಾರ. **Censórial** — ಸೋರಿಯಲ್ (ಗು.) ; **Censórious** (ಗು.) ತಪ್ಪುಹಿಡಿಯುವ ; ಹುಳುಕು ಹುಡುಕುವ ; ದೋಷ ದೃಷ್ಟಿಯ ; ರಂಧ್ರಾನ್ವೇಷಿ. **Censóriously** (ಕ್ರಿ. ವಿ.) ; **Censóriousness** (ನಾ.)

Cénsure ಸೆನ್ಷರ್, ಸೆನ್ಸ್ಯರ್ (ನಾ., ಕ್ರಿ. ಸಕ.) ಖಂಡನೆ ; ದೋಷಾರೋಪಣೆ ; ಆಕ್ಷೇಪಣೆ ; ವಾಗ್ದಂಡನೆ. (ಕ್ರಿ.) — ಮಾಡು. **Cénsurable** (ಗು.)

Cénsus ಸೆನ್ಸಸ್ (ನಾ.) (ಸಾ., ಹತ್ತುವರ್ಷಕ್ಕೊಂದಾವೃತ್ತಿ ತೆಗೆಯುವ, ಹಲವು ವಿವರಗಳೊಡನೆ ಕೂಡಿದ) ಜನಗಣತಿ ; ಖಾನೇಷುಮಾರಿ. C.-paper (ಮನೆಯವರ ಹೆಸರು, ವಯಸ್ಸು, ಮೊ. ವಿವರಗಳನ್ನು ತುಂಬುವುದಕ್ಕಾಗಿ ಮನೆಯಲ್ಲಿ ಬಿಟ್ಟುಹೋಗುವ) ಜನಗಣತಿಯ ನಮೂನೆ.

Cent ಸೆಂಟ್ (ನಾ.) ನೂರು (Per cent ಎಂಬಲ್ಲಿ ಮಾತ್ರ). [Per c. ಸೇಕಡ ; ಪ್ರತಿ ನೂರಕ್ಕೆ. Three per cents ಸೇಕಡ ಮೂರರಂತೆ ಬಡ್ಡಿ ದೊರೆಯುವ ಸರ್ಕಾರದ ಅಥವಾ ಖಾಸಗಿ ಆಧಾರ ಸಾಲಪತ್ರಗಳು. C. per c. ನೂರಕ್ಕೆ ನೂರು ; ಅಸಲನಷ್ಟು ಬಡ್ಡಿ ; ಸರಿಗೆ ಸರಿ ಬಡ್ಡಿ]. (ಅಮೆ. ಸಂ., ಮೊ.) 'ಡಾಲರ್' ಎಂಬ ನಾಣ್ಯದ ನೂರರಲ್ಲೊಂದು ಭಾಗ ; ಈ ಬೆಲೆಯ ಸಣ್ಣನಾಣ್ಯ : ಸೆಂಟು (Don't care a c. ಕಾಸಿಗೆ ಕಡೆ). **Céntal** (ನಾ.) (ಧಾನ್ಯದ ತೂಕಕ್ಕಾಗಿ ಉಪಯೋಗಿಸುವ) ನೂರು ಪೌಂಡು ತೂಕದ ಮಾನ. **Centésimal** ಸೆಂಟೆಸಿಮಲ್ (ಗು.) ಶತಾಂಶವಾಗಿ ಗಣಿಸಿದ, ಗಣಿಸುವ. **Centésimally** (ಕ್ರಿ. ವಿ.)

Céntaur ಸೆಂಟಾರ್ (ನಾ.) ಮೇಲ್ಭಾಗ ಮನುಷ್ಯಾಕಾರವಾಗಿಯೂ ಕೆಳಭಾಗ ಕುದುರೆಯ ಆಕಾರವಾಗಿಯೂ ಇರುವ ಪೌರಾಣಿಕ ಪ್ರಾಣಿ : ಕಿಂಪುರುಷ. (ರೂಪ.) ಇಜ್ಜಾತಿ ಸೃಷ್ಟಿ ; ದ್ವಿಸ್ವಭಾವವುಳ್ಳ ವ್ಯಕ್ತಿ. ನರಾಶ್ವ (ನಕ್ಷತ್ರಪುಂಜ). ನಿಸ್ಸೀಮನಾದ ಕುದುರೆಯ ಸವಾರ. **Céntauress** (ನಾ., ಸ್ತ್ರೀ)

Céntenary, Centénary ಸೆಂಟಿ(ೀ)ನರಿ (ಗು., ನಾ.) ನೂರು ವರ್ಷ(ದ) ; ಶತಮಾನ(ದ) ; ನೂರನೆಯ ವರ್ಧಂತಿ ; ಶತಮಾನೋತ್ಸವ ; ಶತವಾರ್ಷಿಕೋತ್ಸವ. **Centenárian** ಸೆಂಟಿನೇ — (ಗು., ನಾ.) ನೂರು ವರ್ಷದ ವಯಸ್ಸಿನ(ವನು) ; ಶತಾಯು ; ಶತ ವಾರ್ಷಿಕೋತ್ಸವದ. **Centénnial** ಸೆಂಟೆನಿಯಲ್ (ಗು., ನಾ.) ನೂರು ವರ್ಷದ : ನೂರು ವರ್ಷ ಜೀವಿಸಿದ, ಬಾಳಿದ ; ನೂರು ವರ್ಷ ತುಂಬುವ ; ಶತ ವಾರ್ಷಿಕೋತ್ಸವ(ದ)

Cénter. **Centre** ನೋಡಿ.

Centi- ಸೆಂಟಿ — (ಸಮಾಸ ಪೂರ್ವ ಪದ) ('ಮೆಟ್ರಿಕ್' ಮಾನದಲ್ಲಿ) ಶತಾಂಶ. **Céntigramme** — ಗ್ರ್ಯಾಮ್ (ನಾ.) ಗ್ರ್ಯಾಮಿನ ಶತಾಂಶ. **Céntilitre** — ಲೀಟರ್ (ನಾ.) 'ಲೀಟರಿ' ನ ಶತಾಂಶ. **Céntimetre** (ನಾ.) 'ಮೀಟರಿ' ನ ಶತಾಂಶ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Céntigrade ಸೆಂಟಿಗ್ರೇಡ್ (ಗು.) ನೂರು ಮೆಟ್ಟಲು (ಭಾಗ, ಅಂಶ, 'ಡಿಗ್ರಿ')ಗಳುಳ್ಳ. C. thermometer ನೀರ್ಗಲ್ಲು ಕರಗುವ ಶಾಖವನ್ನು ಆದಿಯಾಗಿಟ್ಟುಕೊಂಡು, ಅಲ್ಲಿಂದ (ಸಮುದ್ರಮಟ್ಟದಲ್ಲಿ) ನೀರು ಕುದಿಯುವ ಶಾಖದ ವರೆಗೆ ೧೦೦ ಅಂಶ(ಡಿಗ್ರಿ)ಗಳಾಗಿ ವಿಭಾಗಿಸಿ ಗುರುತು ಮಾಡಿದ ('ಸೆಲ್ಸಿಯಸ್' ಎಂಬಾತನ ರಚನೆಯ) ಶಾಖಮಾಪಕ: ಶತಾಂಶ ಶಾಖಮಾಪಕ.

Centíllion ಸೆಂಟಿಲ್ಯನ್ (ನಾ.) ದಶಲಕ್ಷವನ್ನು ಅದೇ ಸಂಖ್ಯೆಯಿಂದ ನೂರು ಸಲ ಗುಣಿಸಿದರೆ ಬರುವ ಸಂಖ್ಯೆ (೧ರ ಮುಂದೆ ೬೦೦ ಸೊನ್ನೆಗಳನ್ನಿಟ್ಟರೆ ಆಗುವ ಸಂಖ್ಯೆ)

Centíme ಸಾಂಟೀ(ತೀ)ಮ್ (ನಾ.) ಫ್ರೆಂಚರ 'ಫ್ರ್ಯಾಂಕ್' ಎಂಬ ನಾಣ್ಯದ ಶತಾಂಶದ ನಾಣ್ಯ.

Céntimetre. **Centi-** ನೋಡಿ.

Céntipede ಸೆಂಟಿಪೀಡ್ (ನಾ.) ಸಾವಿರಕಾಲು; ಜರಿ.

Cénto ಸೆಂಟೋ (ನಾ.; ಬ. ವ. Centos) ಇತರ ಗ್ರಂಥಗಳಿಂದ ತೆಗೆದ ಚೂರುಗಳನ್ನು ಜೋಡಿಸಿ ಮಾಡಿದ ಗ್ರಂಥ: ತೇಪೆಗ್ರಂಥ.

Céntre, Cénter ಸೆಂಟರ್ (ನಾ., ಗು.) ಕೇಂದ್ರ; ಮಧ್ಯಬಿಂದು; ಮಧ್ಯ; ಭೂಕೇಂದ್ರ. ಭೂಮಿ (ವಿಶ್ವದ ಮಧ್ಯವೆಂಬ ಅಭಿಪ್ರಾಯದಿಂದ). ಒಂದು ವಸ್ತು ಸುತ್ತುತ್ತಿರುಗುವ ಬಿಂದು, ಅಚ್ಚು, ಅಕ್ಷ; ಭ್ರಮಣ ಕೇಂದ್ರ; ಭ್ರಮಣಾಕ್ಷ ('ಲೇತ್' ಎಂಬ ಚರಕಿಯಂತ್ರದಲ್ಲಿ ಕೆತ್ತನೆಯಾಗಬೇಕಾದ ವಸ್ತುವನ್ನು ಹಿಡಿದಿಟ್ಟುಕೊಳ್ಳುವಂತೆ ಅಳವಡಿಸಲಾಗುವ ಶಂಕುವಿನಾಕಾರದ ಬಂಧನಿ). ಸತ್ವ ಕೇಂದ್ರ; ನಾಭಿ; ಗರ್ಭ; ಬೀಜ; ಮೂಲ. ಸಂಘಟಕ; ವ್ಯವಸ್ಥಾಪಕ; ಮುಂದಾಳು; ನಾಯಕ (Head-c.). (ಗುರಿಹಲಗೆಯಲ್ಲಿ) ಗೂಳಿಗಣ್ಣಿಗೂ ಹೊರಸುತ್ತಿಗೂ ಮಧ್ಯೇ ಇರುವ ಭಾಗ; ಈ ಭಾಗದಲ್ಲಿ ಬಿದ್ದ ಏಟು. (ವಾ. ಶಾ.) ಕಟ್ಟಡದಲ್ಲಿ ಕಮಾನನ್ನು ಅಥವಾ ಗುಮ್ಮಟವನ್ನು ಕಟ್ಟುವಾಗ ಉಪಯೋಗಿಸುವ ಮರದ ನಮೂನೆ: ಮಾಲು. (ಸ್ಯನ್ಯ) ಮಧ್ಯದಲ್ಲಿರುವ ಮುಖ್ಯದಳ; ಮಧ್ಯವ್ಯೂಹ; ನಡು ಪಡೆ. (ಕಾಲ್ಚೆಂಡಾಟ, ಹಾಕಿ ಆಟ) (ಚೆಂಡನ್ನು) ಪಕ್ಕದಿಂದ ಕೇಂದ್ರಕ್ಕೆ ಸಾಗಿಸುವ ಒದೆತ, ಹೊಡೆತ. (ರಾಜ್ಯತಂತ್ರ) The C. ಶಾಂತರೀತಿಯ ಅಭಿಪ್ರಾಯಗಳುಳ್ಳವರು; ಮಾಧ್ಯಮಿಕರು (Left-c., Left ಬುಡದಿಂದ ತಿದ್ದುಪಾಟಾಗಬೇಕೆಂಬ ಮತದವರು: ಕ್ರಾಂತಿ ಪಕ್ಷ. Right-c., Right ಬದಲಾವಣೆಗೆ ವಿರೋಧಿಗಳು: ಸ್ತಿಮಿತ ಪಕ್ಷ). (ಕಾಲ್ಚೆಂಡಾಟ) C. forward, C. ಮುಂದಿನ ಸಾಲಿನಲ್ಲಿ ನಡುವೆ ಆಡುವವನು. C. of attraction ಆಕರ್ಷಣ ಕೇಂದ್ರ; (ಭೌ. ವಿ.) ಗುರುತ್ವಾಕರ್ಷಣ ಕೇಂದ್ರ. (ರೂಪ.) ಎಲ್ಲರ ಗಮನವನ್ನೂ ಆಕರ್ಷಿಸುವ ವ್ಯಕ್ತಿ, ವಸ್ತು. C. of curvature ಒಂದು ವಕ್ರರೇಖೆಯ ನಿರ್ದಿಷ್ಟ ಭಾಗವನ್ನನುಸರಿಸಿ ಎಳೆದ ವೃತ್ತರೇಖೆಯ ಕೇಂದ್ರ: ವಕ್ರಕೇಂದ್ರ. C. of gyration ಯಾವ ಬಿಂದುವಿನಲ್ಲಿ ಭ್ರಮಣವಸ್ತುವಿನ ದ್ರವ್ಯವನ್ನೆಲ್ಲ ಅಡಗಿಸಿಟ್ಟರೆ ಭ್ರಮಣವು ಹಿಂದಿನಂತೆಯೇ ನಡೆಯುವುದೊ ಆ ಬಿಂದು: ಭ್ರಮಣ ಬಿಂದು. C. of inertia ಜಡತ್ವ ಕೇಂದ್ರ = C. of gravity ಗುರುತ್ವ ಕೇಂದ್ರ = C. of mass ದ್ರವ್ಯ ಕೇಂದ್ರ. C. of motion ಸುತ್ತುವ ವಸ್ತುವಿನಲ್ಲಿ ಯಾವ ಬಿಂದು ನಿಶ್ಚಲವಾಗಿದ್ದು ಆ ವಸ್ತುವಿನ ಇತರ ಭಾಗಗಳೆಲ್ಲವೂ ಆ ಬಿಂದುವಿನ ಸುತ್ತಲೂ ಸುತ್ತುತ್ತವೆಯೊ ಆ ಬಿಂದು: ಚಲನ ಕೇಂದ್ರ. C. of oscillation ಒಂದು ಅಕ್ಷದ ಸುತ್ತಲೂ ಆಂದೋಲನ ಮಾಡುತ್ತಿರುವ ವಸ್ತುವಿನ ದ್ರವ್ಯವೆಲ್ಲವನ್ನೂ ಯಾವ ಬಿಂದುವಿನಲ್ಲಿ ಅಡಗಿಸಿಟ್ಟರೆ ಆಗಲೂ ಒಂದು ಆಂದೋಲನಕ್ಕೆ ಹಿಡಿಯುವ ಕಾಲವು ಹಿಂದಿನಷ್ಟೇ ಇರುವುದೊ ಆ ಬಿಂದು: ಆಂದೋಲನ ಕೇಂದ್ರ. C. of percussion ಚಲಿಸುತ್ತಿರುವ ಒಂದು ವಸ್ತುವಿನ ಯಾವ ಬಿಂದುವಿನಲ್ಲಿ ಅದರ ಆಘಾತದ ಬಲವೆಲ್ಲವೂ ಕೇಂದ್ರೀಕರಿಸಿರುವಂತೆ ಅತ್ಯಂತ ಹೆಚ್ಚಾಗಿರುವುದೊ ಆ ಬಿಂದು: ಆಘಾತ ಕೇಂದ್ರ. C.-piece ಮೇಜಿನ ಮಧ್ಯದಲ್ಲಿಡುವ ಅಲಂಕಾರ ವಸ್ತು. C. of pressure ಯಾವ ಬಿಂದುವಿನಲ್ಲಿ ಒತ್ತಡದ ಮೊತ್ತವೆಲ್ಲವೂ ಇರುವಂತೆ ಭಾವಿಸಿದರೆ ಫಲವು ಹಿಂದಿನಂತೆಯೇ ಇರುವುದೊ ಆ ಬಿಂದು: ಒತ್ತಡದ ಕೇಂದ್ರ. C.-rail ಬೆಟ್ಟವನ್ನು ಹತ್ತುವಲ್ಲಿ ರೈಲು ಬಂಡಿಗಳು ಹಿಂದಕ್ಕೆ ಜಾರದಂತೆ ಅಳವಡಿಸಿರುವ ಹಲ್ಲಿನ ಚಕ್ರಗಳು ನಡೆಯುವ ಮಧ್ಯದ (ಮೂರನೆಯ) ರೈಲುಕಂಬಿ: ನಡುಗಂಬಿ. C.-second(s) ಗಡಿಯಾರದ ಕೇಂದ್ರದ ಅಚ್ಚಿಗೆ ಹಚ್ಚಿರುವ ಸೆಕಂಡು ಮುಳ್ಳು; ಇಂಥ ಮುಳ್ಳುಳ್ಳ ಗಡಿಯಾರ. **Céntral** (ಗು.) ಮಧ್ಯದ; ಮಧ್ಯದಲ್ಲಿಯ; ಮಧ್ಯದಿಂದ; ನಡುವಣ; ಕೇಂದ್ರದ; ಕೇಂದ್ರವುಳ್ಳ. ಮುಖ್ಯ; ಪ್ರಮುಖ; ಪ್ರಧಾನ [C. Empires, Powers ಕೇಂದ್ರ (ಪ್ರಬಲ) ಸಾಮ್ರಾಜ್ಯಗಳು: ಜರ್ಮನಿ ಮತ್ತು ಆಸ್ಟ್ರಿಯಾ ಹಂಗೆರಿ. C. heating ಒಂದು ಕಟ್ಟಡದ ಮಧ್ಯಪ್ರದೇಶದಿಂದ ಕಟ್ಟಡದ ಎಲ್ಲಾ ಭಾಗಗಳಿಗೂ ಬಿಸಿ ನೀರನ್ನು ಅಥವಾ ಆವಿಯನ್ನು ಕೊಳವೆಗಳ ಮೂಲಕ ಸಾಗಿಸಿ ಕಟ್ಟಡವನ್ನು ಶಾಖವಾಗಿಡುವ ವಿಧಾನ: ಕೇಂದ್ರ ತಪನ]. **Centrálity** — ಟ್ರ್ಯಾಲಿಟಿ (ನಾ.); **Céntrally** ಸೆಂಟ್ರಲಿ (ಕ್ರಿ. ವಿ); **Céntralness** (ನಾ.); **Céntralism** — ಲಿಸ್ಮ್ (ನಾ.) ಕೇಂದ್ರೀಕರಣ ಪದ್ಧತಿ. **Céntralist** (ನಾ.) ಕೇಂದ್ರಾಧಿಕಾರವಾದಿ. **Céntralize** (ಕ್ರಿ.) ಕೇಂದ್ರಕ್ಕೆ ಬರು, ತರು; (ಆಡಳಿತದ ಭಾರವನ್ನು) ಒಂದೇ ಕೇಂದ್ರದಲ್ಲಿಟ್ಟು ಒಟ್ಟುಗೂಡಿಸು; ಕೇಂದ್ರೀಕರಿಸು; (ರಾಜ್ಯ, ಮೊ. ಗಳಲ್ಲಿ) ಈ ಪದ್ಧತಿಯನ್ನು ಆಚರಣೆಗೆ ತರು. **Céntralizátion** (ನಾ.); **Céntreless** (ಗು.); **Céntric(al)** (ಗು., ನಾ.) ಕೇಂದ್ರದಲ್ಲಿಯ; ಕೇಂದ್ರದ; ಕೇಂದ್ರವಿರುವ. (ಶ. ವಿ.) ನರ ಕೇಂದ್ರ. ಭೂಮಿಯನ್ನು ಕೇಂದ್ರವಾಗುಳ್ಳ ವರ್ತುಲ ರೇಖೆ: ಭೂ ಕೇಂದ್ರ ವೃತ್ತ. **Céntrically** (ಕ್ರಿ. ವಿ.); **Centrícity** (ನಾ.) ಕೇಂದ್ರತೆ; ಕೇಂದ್ರಸಂಬಂಧ. **Céntremost** (ಗು.)

Céntre, Cénter (ಕ್ರಿ.) ಮಧ್ಯದಲ್ಲಿ, ಕೇಂದ್ರದಲ್ಲಿ, ಸೇರು, ಇಡು; ಕೇಂದ್ರೀಕೃತವಾಗು; ಕೇಂದ್ರವನ್ನು ಗುರುತಿಸು, ಕಂಡುಹಿಡಿ; ಕೇಂದ್ರಕ್ಕೆ ತರು; ಕೇಂದ್ರೀಕರಿಸು. (ಕಾಲ್ಚೆಂಡಾಟ, ಹಾಕಿ ಆಟ) (ಚೆಂಡನ್ನು) ಪಕ್ಕದಿಂದ ಕೇಂದ್ರಕ್ಕೆ ಒದೆ, ಹೊಡೆ. **Céntr(e)ing, Céntering** ಸೆಂಟ್ರಿಂಗ್, ಸೆಂಟರಿಂಗ್ (ನಾ.) (ಕ್ರಿಯಾರ್ಥಗಳಲ್ಲಿ). ಲೆನ್ಸುಗಳನ್ನು ಅವುಗಳ ಅಕ್ಷಗಳು ಒಂದೇ ರೇಖೆಯಲ್ಲಿರುವಂತೆ ಅಳವಡಿಸುವುದು. ಕಮಾನು, ಗುಮ್ಮಟ, ಮೊ. ನ್ನು ಕಟ್ಟುವಾಗ ಅವುಗಳಿಗೆ ತಾತ್ಕಾಲಿಕ ಆಧಾರವಾಗಿ ಉಪಯೋಗಿಸುವ ಚೌಕಟ್ಟು: ಊರೆಕಟ್ಟು.

Centrífugal ಸೆಂಟ್ರಿಫ್ಯೂಗಲ್ (ಗು.) ಕೇಂದ್ರದಿಂದ ಹೊರಕ್ಕೆ ಚಿಮ್ಮುವ: ಕೇಂದ್ರಾಪಗಾಮಿ. C. force ಕೇಂದ್ರದ ಸುತ್ತಲೂ ಸುತ್ತುತ್ತಿರುವ ವಸ್ತುವಿಗೆ ನೇರವಾಗಿ ಹಾರಿಹೋಗಲು ಇರುವ ಬಲ: ಕೇಂದ್ರಾಪಗಮನ ಬಲ. C. machine ಕೇಂದ್ರಾಪಗಮನ ಬಲವನ್ನುಪಯೋಗಿಸಿ ಕೆಲಸ ಮಾಡುವ ಯಂತ್ರಸಲಕರಣೆ: ಕೇಂದ್ರಾಪಗಮನ ಯಂತ್ರ. C. filter (ಕಾರ್ಖಾನೆಯಲ್ಲಿ) ಸಕ್ಕರೆ ಶೋಧಿಸುವಲ್ಲಿ, ವೇಗವಾಗಿ ಸುತ್ತುತ್ತಿರುವ ಒಂದು ಉರುಳೆಯ ಮೈಯಲ್ಲಿ ಕಂಡಿಗಳಿರುವುದರಿಂದ, ಅವುಗಳ ಮೂಲಕ ಒಳಗಿನ ಪದಾರ್ಥದಲ್ಲಿಯ ದ್ರವಾಂಶವು ಕೇಂದ್ರಾಪಗಮನ ಬಲದಿಂದ ಹೊರಬೀಳುವಂತೆ ಅಳವಡಿಸಿರುವ ಸೋಸುವ ಯಂತ್ರ: ಕೇಂದ್ರಾಪಗಮನ ಶೋಧಕ. (ಸ. ವಿ.) C. inflorescence ತುದಿಯ ಹೂವು ಮೊದಲೂ, ಪಕ್ಕದ ಹೂವುಗಳು ಒಂದಾದಮೇಲೊಂದೂ ಅರಳುವ ಹೂಗೊಂಚಲು. **Centrífugally** (ಕ್ರಿ. ವಿ.); **Centrifúge** — ಫ್ಯೂಜ್ (ನಾ.) ಬೇಗಬೇಗನೆ ಸುತ್ತುವುದರಿಂದ ಹಾಲಿನಲ್ಲಿಯ ಕೆನೆಯನ್ನು ಪ್ರತ್ಯೇಕಿಸಲಾಗುವ ಯಂತ್ರ.

Centrípetal ಸೆಂಟ್ರಿಪಿಟಲ್ (ಗು.) ಕೇಂದ್ರಾಭಿಗಾಮಿ. C. force, machine, etc. ಕೇಂದ್ರಾಭಿಗಮನ ಬಲ, ಯಂತ್ರ, ಮೊ. ವು. (ಸ. ವಿ.) C. inflorescence ಹೊರಗಿನಿಂದ ಕೇಂದ್ರದ ಕಡೆಗೆ ವಿಕಸಿಸುವ ಹೂಗೊಂಚಲು. (ಜೀ. ವಿ.) C. nerves ಹೊರಗಿನಿಂದ ಕೇಂದ್ರದ ಕಡೆಗೆ ಪ್ರಚೋದನೆಯನ್ನು ಸಾಗಿಸುವ ನರಗಳು: ಅಭಿವಾಹಿ ನರಗಳು. **Centrípetally** (ಕ್ರಿ. ವಿ.)

Céntroid ಸೆಂಟ್ರಾಯ್ಡ್ (ನಾ.) (ಗಣಿತ) ದ್ರವ್ಯಕೇಂದ್ರ; ಭಾರ ಕೇಂದ್ರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Céntuple ಸೆಂಟ್ಯೂಪ್‌ಲ್ (ಗು., ನಾ., ಕ್ರಿ. ಸಕ.) ನೂರರಷ್ಟು ; ನೂರ್ಮಡಿ. (ಕ್ರಿ.) ನೂರರಿಂದ ಗುಣಿಸು ; ನೂರ್ಮಡಿ ಮಾಡು. **Centúplicate** — ಕೆಟ್ (ಗು., ನಾ.), — ಕೇಟ್ (ಕ್ರಿ. ಸಕ.) ನೂರ್ಮಡಿ (ಮಾಡು)

Centúrion ಸೆಂಟ್ಯೂರಿಯನ್ (ನಾ.) ರೋಮನ್ ಸೈನ್ಯದಲ್ಲಿ ನೂರರ ನಾಯಕ : ಶತಕ ನಾಯಕ.

Céntury ಸೆಂಟ್ಯು(ಚು)ರಿ (ನಾ.) (ರೋಮನ್ ಚರಿತ್ರೆ) ಸೈನ್ಯದ ಒಂದು ದಳ (ಆದಿಯಲ್ಲಿ ನೂರು ಮಂದಿಯದು) ; ರಾಜಕೀಯ ವಿಷಯಗಳಲ್ಲಿ ಅಭಿಮತ (ವೋಟು) ಕೊಡಲು ಏರ್ಪಡಿಸಿದ ಭಾಗ ; ನೂರುಮಂದಿಯ ತಂಡ ; ನೂರು ; ಶತಕ (ಮು., ಕ್ರಿಕೆಟ್‌ಆಟದಲ್ಲಿ ನೂರು ಓಟ) ; ನೂರು ವರ್ಷಗಳ ಕಾಲ ; ಶತಮಾನ (ಮು., ಕ್ರಿಸ್ತನ ಜನನ ಕಾಲದಿಂದ : ಮೊದಲನೆಯ ಶತಮಾನ, ೧ರಿಂದ ೧೦೦ ; ಹತ್ತೊಂಬತ್ತನೆಯ ಶತಮಾನ, ೧೮೦೧ರಿಂದ ೧೯೦೦ — ಹೀಗೆ)

Cephálic ಸಿಫ್ಯಾಲಿಕ್ (ಗು.) ತಲೆಯ ; ತಲೆಯಲ್ಲಿಯ ; ಕಪಾಲದ.

Céphalopod ಸೆಫಲೊಪಾಡ್ (ನಾ.) ಸ್ಪರ್ಶತಂತುಗಳಿಂದ ಕೂಡಿದ ಸ್ಪಷ್ಟವಾದ ತಲೆಯುಳ್ಳ ಮೃದ್ವಂಗಿಜಾತಿಯ ಪ್ರಾಣಿ : ಶೀರ್ಷಪಾದಿ.

Cephalothórax ಸೆಫಲೊತೋರ್‍ಯಾಕ್ಸ್ (ನಾ.) ಜೇಡರ ಹುಳು, ಏಡಿ, ಮೊ. ವರ್ಗದ ಪ್ರಾಣಿಗಳಲ್ಲಿ ತಲೆಯೂ ಎದೆಯ ಭಾಗವೂ ಒಟ್ಟುಗೂಡಿರುವ ಅಂಗ : ಶಿರೋವಕ್ಷ.

- Céphalous ಸೆಫಲಸ್ (ಗು., ಸಮಾಸದ ಉತ್ತರಪದ) - ತಲೆಯುಳ್ಳ : Brachycephalous ಮೊಟಕು ತಲೆಯುಳ್ಳ.

Cerámic, Ker— ಸಿ(ಕಿ)ರ್‍ಯಾಮಿಕ್ (ಗು.) ಕುಂಭ ಕಲೆಯ. **Cerámics** (ನಾ.) ಕುಂಭ ಕಲೆ. **Cerámist** (ನಾ.) ಕುಂಭಕಲಾ ಕುಶಲಿ.

Cérberus ಸರ್ಬೆರಸ್ (ನಾ.) (ಗ್ರೀಕ್ ಪುರಾಣ) ಅಧೋಲೋಕದ ಬಾಗಿಲನ್ನು ಕಾಯುತ್ತಿರುವ ಮೂರುತಲೆಯ ನಾಯಿ (Sop to C. ಅಧಿಕಾರಿ, ಕಾವಲುಗಾರ, ಮೊ. ನ್ನು ಸುಮುಖರನ್ನಾಗಿ ಮಾಡಿಕೊಳ್ಳುವುದಕ್ಕಾಗಿ ಕೊಡುವ ಲಂಚ)

Céreal ಸೀರಿಯಲ್ (ಗು., ನಾ.) ಧಾನ್ಯದ ; ಆಹಾರದ ಕಾಳುಗಳ. (ನಾ. ; ಸಾ., ಬ. ವ. ದಲ್ಲಿ) ಮನುಷ್ಯರ ಆಹಾರಕ್ಕಾಗಿ ಉಪಯೋಗಿಸುವ ಧಾನ್ಯಗಳು. (ಅಮೆ. ಸಂ.) ಗೋಧಿ, ಜೋಳ, ಅಥವಾ ಇತರ ಧಾನ್ಯದಿಂದ ಮಾಡಿದ ತಿಂಡಿ.

Cerebéllum (L) ಸೆರಿಬೆಲಂ (ನಾ.) ಉಪ ಮಸ್ತಿಷ್ಕ ; ಹಿಮ್ಮಿದುಳು.

Cérebrum (L) ಸೆರಿಬ್ರಂ (ನಾ.) ಉಪಮಸ್ತಿಷ್ಕದ ಮುಂಭಾಗದಲ್ಲಿ ಮತ್ತು ಮೇಲ್ಭಾಗದಲ್ಲಿ ಇರುವ ಮಿದುಳು : ಪ್ರಧಾನ ಮಸ್ತಿಷ್ಕ. **Cérebral** (ಗು., ನಾ.) ಮಿದುಳಿನ. ನಾಲಗೆಯ ತುದಿಯನ್ನು ಅಂಗುಳಿಗೆ ತಾಕಿಸಿ ಉಚ್ಚಾರಮಾಡುವ ಅಕ್ಷರ : ಮೂರ್ಧನ್ಯ (= C. letter). **Cerebrátion** (ನಾ.) ಮಿದುಳಿನ ವ್ಯಾಪಾರ (ಮು., Unconscious c. ಅಗೋಚರವಾದ ಮಿದುಳುವ್ಯಾಪಾರ). **Cerebrospínal** (ಗು.) ಮಿದುಳು ಮತ್ತು ಮಿದುಳುಬಳ್ಳಿಯ.

Cérecloth ಸೀಯರ್‌ಕ್ಲಾತ್ (ನಾ.) ನೀರಿಳಿಯದಂತೆ ಮೇಣ, ಮೊ.ನ್ನು ಗರ್ಭೀಕರಿಸಿದ ಬಟ್ಟೆ (ವಸ್ತುಗಳ ಮೇಲೆ ನೀರಿಳಿಯದಂತೆ ಸುತ್ತುವುದಕ್ಕೂ ಹೆಣಕ್ಕೆ ಸುತ್ತುವುದಕ್ಕೂ ಉಪಯೋಗ) : ಮೇಣಗಪಟ.

Cérement ಸೀಯರ್‌ಮೆಂಟ್ (ನಾ. ; ಸಾ., ಬ. ವ. ದಲ್ಲಿ) ಹೆಣಕ್ಕೆ ಸುತ್ತುವ ಮೇಣದ ಬಟ್ಟೆ. (ಶಿಥಿಲವಾಗಿ) ಹೆಣಕ್ಕೆ ಸುತ್ತುವ ಬಟ್ಟೆಗಳು.

Céremony ಸೆರಿಮನಿ (ನಾ.) ಮತಸಂಬಂಧವಾದ ಆಚರಣೆ ; ಕರ್ಮ ; ವ್ರತಾಚರಣೆ. ಬಾಹ್ಯೋಪಚಾರ ; ಬರಿಯ ಮರ್ಯಾದೆ. ವೈಭವ. ಸಂಪ್ರದಾಯಗಳು ; ಮರ್ಯಾದೆಗಳು ; ಕ್ರಮಾಚರಣೆ. Stand upon c. ಸಂಪ್ರದಾಯಬದ್ಧನಾಗಿರು ; ನಿನ್ನ ಗಾಂಭೀರ್ಯದಲ್ಲಿ ನೀನಿರು. Without c. ವಿಹಿತ ಕ್ರಮವನ್ನು ಲಕ್ಷಿಸದೆ ; ಥಟಕ್ಕನೆ ; ಹಠಾತ್ತಾಗಿ ; ನಿಸ್ಸಂಕೋಚವಾಗಿ. Master of the Ceremonies ರಾಜ್ಯಸಂಬಂಧವಾದ ಅಥವಾ ಸಾರ್ವಜನಿಕ ಸಂಬಂಧವಾದ ಉತ್ಸವಗಳ ಮೇಲ್ವಿಚಾರಣಾ ಕರ್ತ : ಉತ್ಸವಾಧಿಕಾರಿ. **Ceremónial** — ಮೋನಿಯಲ್ (ಗು., ನಾ.) ಕರ್ಮಾಚರಣೆಯಿಂದ ಕೂಡಿದ ; ಕರ್ಮಾಚರಣೆಯ ; ಉತ್ಸವದಿಂದ ಕೂಡಿದ ; ಉತ್ಸವದ ; ವಿಧಿ ವಿಹಿತವಾದ ; ನಿಯಮಾನುಸಾರವಾದ ; ಸಂಪ್ರದಾಯದ ; ನಿಯಮಾಚರಣೆಯ. ವಿಧಿವಿಹಿತವಾದ ಕರ್ಮ ; ಸಂಪ್ರದಾಯ ಪಾಲನೆ ; ಶಿಷ್ಟಾಚಾರ. (ರೋ. ಕ್ಯಾ.) ಪ್ರಯೋಗ ಪುಸ್ತಕ. **Ceremónialism** (ನಾ.) (ಮತ ಧರ್ಮದಲ್ಲಿ) ಬಾಹ್ಯ ಕರ್ಮಾಚರಣೆಗೆ ಕಟ್ಟುಬಿದ್ದಿರುವುದು ; ಶಾಸ್ತ್ರೋಕ್ತ ಕರ್ಮಾನುಸರಣೆ. **Ceremónialist** (ನಾ.) ; **Ceremónially** (ಕ್ರಿ. ವಿ.) ; **Ceremónious** (ಗು.) ಸಂಪ್ರದಾಯ ಶರಣ ; ಸಂಪ್ರದಾಯಾನುಸರಣೆಯ ; ಕ್ರಮಾಚರಣೆಯ. ಆಡಂಬರದ. **Ceremóniously** (ಕ್ರಿ. ವಿ.) ; **Ceremóniousness** (ನಾ.)

Ceríse ಸೆರೀಸ್ (ಗು., ನಾ.) ಲಘು ತಿಳಿಗೆಂಪಿನ ; — ಗೆಂಪು.

Cérium ಸೀರಿಯಂ (ನಾ.) (ರ. ವಿ.) ಒಂದು (ಅಪರೂಪ) ಮೂಲ ಲೋಹ : ' ಸೀರಿಯಂ '. **Céric** (ಗು.) ; **Cérous** (ಗು.)

Cero-, ಸೀರೊ —, ಸೆರೋ — (ಸಮಾಸದಲ್ಲಿ ಪೂರ್ವ ಪದ) ಮೇಣ —. **Cérograph** (ನಾ.) ಮೇಣದಮೇಲಿನ ಬರೆವಣಿಗೆ. **Ceroplástic** (ಗು.) ಮೇಣದಲ್ಲಿ ರೂಪಿಸಿದ ; ಮೇಣದಲ್ಲಿ ಮಾದರಿಮಾಡಿದ. **Ceroplástics** (ನಾ.) ಮೇಣದಲ್ಲಿ ಮಾದರಿ ತಯಾರಿಸುವ ಕಲೆ ; ಮೇಣದ ಕೆಲಸ.

Cert ಸರ್ಟ್ (ನಾ.) (ಅಸಂ.) ಖಂಡಿತವಾಗಿ ಸಂಭವಿಸುವ ಘಟನೆ ಅಥವಾ ಫಲ. **Cértes** ಸರ್ಟಿಸ್ (ಕ್ರಿ. ವಿ.) (ಪ್ರಾಚೀ. ಪ್ರ.) ಖಂಡಿತವಾಗಿ ; ನಿಸ್ಸಂಶಯವಾಗಿ.

Cértain ಸರ್ಟೆನ್, ಸರ್ಟ್‌ನ್ (ಗು.) ನಿಶ್ಚಯವಾದ ; ದಿಟವಾದ ; ಖಂಡಿತವಾದ ; ನಿಜವಾದ ; ಗೊತ್ತಾದ ; ತಪ್ಪದ ; ನಿಯತ ; ನಿರ್ಧರವಾದ ; ನೆಚ್ಚಿಕೆಯಾದ ; ತಪ್ಪದೆ ಸಂಭವಿಸುವ ; ನಿರ್ವಿವಾದವಾದ ; ನಿಸ್ಸಂಶಯವಾದ ; ವಿಧಿ ನಿಯತವಾದ. ಒಬ್ಬಾನೊಬ್ಬ (A c. person ; A c. John Smith) ; ಒಂದಾನೊಂದು [of a c. age ಒಂದು (ಗೊತ್ತಾದ) ವಯಸ್ಸಿನ] . ಸ್ವಲ್ಪ ; ಕೊಂಚ (I felt a c. reluctance ನನ್ನ ಮನಸ್ಸು ಸ್ವಲ್ಪ ಹಿಂದೆಗೆಯಿತು). For c. ಖಂಡಿತವಾಗಿ ; ನಿಸ್ಸಂದೇಹವಾಗಿ. **Cértainly** (ಕ್ರಿ. ವಿ.) ನಿಸ್ಸಂದೇಹವಾಗಿ ; ತಪ್ಪದೆ ; ನೆಚ್ಚಿಕೆಯಾಗಿ ; (ಎಲ್ಲರೂ) ಒಪ್ಪುವಂತೆ. (ಉತ್ತರಗಳಲ್ಲಿ) ಅಹುದು ! ನಿಜ ! ಸರಿ ! **Cértainty** (ನಾ.) ನಿಸ್ಸಂದೇಹವಾದ ವಿಷಯ (Bet on a c. ಫಲದ ಗುಟ್ಟು ತಿಳಿದುಕೊಂಡಿದ್ದು ಮೋಸ ಮಾಡುವುದಕ್ಕಾಗಿ ಪಂದ್ಯ ಕಟ್ಟು). ನಿಸ್ಸಂದೇಹವಾದ ನಂಬಿಕೆ. To, for, a c. ಸಂಶಯಕ್ಕೆ ಕಾರಣವೇ ಇಲ್ಲದೆ. **Cértitude** ಸರ್ಟಿಟ್ಯೂಡ್ (ನಾ.) ಖಂಡಿತ ಭಾವನೆ ; ನಂಬಿಕೆ ; ನೆಚ್ಚಿಕೆ ; ನಿಶ್ಚಯ.

Certíficate ಸರ್ಟಿಫಿಕೆಟ್ (ನಾ.) — ಫಿಕೇಟ್ (ಕ್ರಿ. ಸಕ.) ಸಮರ್ಥನ ಪತ್ರ ; ಒಂದು ವಿಷಯ ಸತ್ಯವಾದುದೆಂದು ದೃಢವಾಗಿ ಹೇಳುವ ಪ್ರಮಾಣ ಪತ್ರ (ಮು., ಆ ಪತ್ರವನ್ನು ಪಡೆದಿರುವವನ ಗೌರವ, ಪಾಂಡಿತ್ಯ, ಯೋಗ್ಯತೆ, ಷರತ್ತುಗಳ ಪಾಲನೆ ; ಒಂದು ಸಂಘದ ಬಂಡವಾಳ ಪತ್ರಗಳ ಹಕ್ಕು — ಇವೇ ಮೊ. ವಿಷಯಗಳುಳ್ಳದ್ದು) ; ಯೋಗ್ಯತಾ ಪತ್ರ ; ದೃಢೀಕರಣ ಪತ್ರ ; ಅಧಿಕಾರ ಪತ್ರ ; ಅಪ್ಪಣೆಪತ್ರ (Bankrupt's c. ದಿವಾಳಿಯಾದವನು ಕಾನೂನಿನ ನಿಯಮಗಳನ್ನು ಪಾಲಿಸಿರುವನೆಂದೂ ತನ್ನ ಉದ್ಯೋಗವನ್ನು ಮರಳಿ ಪ್ರಾರಂಭಿಸಬಹುದೆಂದೂ ಕೊಡುವ ಅಪ್ಪಣೆಪತ್ರ : ದಿವಾಳಿ ಬಿಡುಗಡೆಯ ಪತ್ರ). (ಕ್ರಿ.) ಯೋಗ್ಯತಾ ಪತ್ರ, ಪ್ರಮಾಣ ಪತ್ರ, ಅಧಿಕಾರ ಪತ್ರ, ಮೊ. ನ್ನು ಕೊಡು ; ಪ್ರಮಾಣ ಪತ್ರದಿಂದ ದೃಢೀಕರಿಸು. **Certificátion** (ನಾ.) ಸಮರ್ಥನಾಧಿಕಾರ ಪ್ರಯೋಗ. **Cértify** (ಕ್ರಿ. ಸಕ.) ಸಮರ್ಥಿಸು ; ನಿಜವೆಂದು ಸಾಕ್ಷ್ಯಕೊಡು. ರುಜುಹಾಕು ; ದೃಢೀಕರಿಸು ; ಪ್ರಮಾಣ ಪತ್ರ, ಯೋಗ್ಯತಾ ಪತ್ರ, ಅಧಿಕಾರ ಪತ್ರ, ಮೊ. ನ್ನು ಕೊಡು. (ವ್ಯಾ. ಶಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಬ್ಬನು ಬುದ್ಧಿಸರಿಯಾಗಿಲ್ಲದವನೆಂದು (ಹುಚ್ಚನೆಂದು) ಅಧಿಕಾರಸ್ಥಾನದಿಂದ ಹೇಳು. ಭರವಸೆ ಹೇಳು ; — ಕೊಡು. **Cértifiable** (ಗು.); **Cértifier** (ನಾ.)

Certiorári (L) ಸರ್ಷಿಯೊರೇರೈ (ನಾ.) (ನ್ಯಾ. ಶಾ.) ಕೆಳಕೋರ್ಟಿನಲ್ಲಿ ವಿಚಾರಣೆಯಾದ ಮೊಕದ್ದಮೆಯ ಕಟ್ಟನ್ನು (ಎಂದರೆ, ಸಂಬಂಧಪಟ್ಟ ಕಾಗದಪತ್ರಗಳನ್ನು) ಕಳುಹಿಸಬೇಕೆಂದು ಮೇಲುಕೋರ್ಟಿನವರು ಕೊಡುವ ಅಜ್ಞಾಪತ್ರ: ಕಟ್ಟಿನ ಕರೆ.

Cértitude. Certain ನೋಡಿ.

Cerúlean ಸಿರೂಲಿಯನ್ (ಗು.) ಬಾನ್ನೀಲಿಯ.

Cerúmen ಸಿರೂಮೆನ್ (ನಾ.) ಗುಗ್ಗೆ ; ಕಿವಿಯ ಮೇಣ; ಕರ್ಣಮಲ. **Cerúminous** (ಗು.)

Céruse ಸೀರ್ಯ್‌ರೂಸ್, **Cerúse** ಸಿರೂಸ್ (ನಾ.) ಸೀಸದ ಕಾರ್ಬೊನೇಟ್ ಮತ್ತು ಹೈಡ್ರೇಟುಗಳಿಂದ ಮಾಡಿದ ಬಿಳಿಯಬಣ್ಣ (ಮು., ಮುಖಾಲಂಕಾರಕ್ಕಾಗಿ ಉಪಯೋಗಿಸುವದು): 'ಸಫೇದು.'

Cérvical ಸರ್ವಿಕಲ್, **Cervícal** ಸರ್ವೈಕಲ್ (ಗು.) (ಶ. ವಿ.) ಕತ್ತಿನ; ಕೊರಳಿನ ; ಕುತ್ತಿಗೆಯ ; ಕಂಠದ. **Cervico-** (ಸಮಾಸದಲ್ಲಿ ಪೂರ್ವಪದ) ಕಂಠ —. **Cervico-bráchial** ಸರ್ವೈಕೊ ಬ್ರ್ಯಾಕಿಯಲ್ (ಗು.) ಕತ್ತಿಗೂ ತೋಳಿಗೂ ಸಂಬಂಧಪಟ್ಟ.

Cérvine ಸರ್ವೈನ್ (ಗು.) ಜಿಂಕೆಯ ; ಜಿಂಕೆಯಂಥ.

Césare ಸೀಸ್‌ರಿ (ನಾ.) ಪಾಶ್ಚಾತ್ಯ ತರ್ಕಶಾಸ್ತ್ರದಲ್ಲಿ ಸೂತ್ರಪ್ರಾಯವಾದ ಒಂದು ಸಂಕೇತಶಬ್ದ.

Cesárevitch, -witch ಸಿಸ್ಸಾರೆವಿಚ್ (ನಾ.) ರಷ್ಯಾಚಕ್ರವರ್ತಿಯ (ಝಾರಿನ) ಹಿರಿಯ ಮಗ.

Cess ಸೆಸ್ (ನಾ.) ಮೇಲುತೆರಿಗೆ ; ಚಿಲ್ಲರೆತೆರಿಗೆ.

Cessátion } **Cease** ನೋಡಿ.
Césser }

Céssion, etc. Cede ನೋಡಿ.

Césspit ಸೆಸ್‌ಪಿಟ್ (ನಾ.) ಗೊಬ್ಬರದ ಗುಂಡಿ ; ತಿಪ್ಪೆ.

Césspool ಸೆಸ್‌ಪೂಲ್ (ನಾ.) ಬಚ್ಚಲು, ಚರಂಡಿ, ಪಾಯಖಾನೆ, ಮೊ. ಗಳಿಂದ ಬಂದ ರೊಚ್ಚಿನ ನೀರಿನಲ್ಲಿಯ ಘನಪದಾರ್ಥಗಳನ್ನು ತಡೆದಿಟ್ಟುಕೊಳ್ಳುವುದಕ್ಕಾಗಿ ಮಾಡಿದ ತೊಟ್ಟಿ : ರೊಚ್ಚುಗುಂಡಿ. (ರೂಪ.) C. of iniquity ಅನ್ಯಾಯದ ಕೂಪ.

Céstoid ಸೆಸ್ಟಾಯ್ಡ್ (ಗು., ನಾ.) (ಪ್ರಾ. ವಿ.) ಲಾಡಿಯಂತಿರುವ (ಕರುಳಿನಲ್ಲಿಯ ಜಂತು): ಲಾಡಿಜಂತು.

Cetácean ಸಿಟೇಷನ್ (ಗು., ನಾ.) ತಿಮಿಂಗಿಲದ ಜಾತಿಯನ್ನೊಳಕೊಂಡ ಸಮುದ್ರ ಸಸ್ತನಿವರ್ಗದ (ಪ್ರಾಣಿ): ತಿಮಿವರ್ಗ ಪ್ರಾಣಿ. **Cetáceous** (ಗು.)

Céteosaur, -saúrus ಸೀಟಿಯೊಸಾರ್, —ಸಾರಸ್ (ನಾ.) ಪಳೆಯುಳಿಕೆಯಾಗಿ ದೊರೆಯುವ ಹಲ್ಲಿಯ ವರ್ಗದ ಪ್ರಾಣಿ: ತಿಮಿ ಸರಟ.

Céteris páribus (L) ಸೆಟೆರಿಸ್ ಪ್ಯಾರಿಬಸ್ (ಕ್ರಿ. ವಿ.) ಉಳಿದ ವಿಷಯಗಳು ಸರಿಯಾಗಿದ್ದಲ್ಲಿ; ಇತರ ವಿಚಾರಗಳು ಸರಿಯಾಗಿರುವ ಪಕ್ಷದಲ್ಲಿ.

Chádband ಚ್ಯಾಡ್‌ಬ್ಯಾಂಡ್ (ನಾ.) ಸವಿಮಾತಿನ ಕಪಟಿ; ಬೂಟಾಟಿಗ; ಆಷಾಢಭೂತಿ. (Dickens ಎಂಬ ಇಂಗ್ಲಿಷ್ ಕಾದಂಬರಿಕಾರನ *Bleak House* ಎಂಬ ಗ್ರಂಥದ ಒಂದು ಪಾತ್ರದ ಹೆಸರಿನಿಂದ)

Chafe ಚೇಫ್ (ಕ್ರಿ., ನಾ.) (ಶಾಖಹುಟ್ಟಿಸುವುದಕ್ಕಾಗಿ ಮೈಚರ್ಮವನ್ನು) ಉಜ್ಜು, ತಿಕ್ಕು; ಉಜ್ಜಿ ಬೆಚ್ಚಗೆಮಾಡು; ಉಜ್ಜಿಉಜ್ಜಿ ಗಾಯಮಾಡು; — ವಾಗು; (ಮೃಗ, ನದಿ, ಮೊ. ವು ಬಂಡೆಗೆ, ತಡೆಗೆ) ತೀಡು, ತಿಕ್ಕಿಕೊ. ರೇಗಿಸು; ರೇಗು; ಕೋಪ ತೋರು; ಸಿಡುಗುಟ್ಟು; ಸಿಡಿಮಿಡಿಗೊಳ್ಳು. ಘರ್ಷಣ; ಮಸೆತ; ಉಜ್ಜುಗಾಯ. ಸಿಡಿಮಿಡಿ.

Cháfer, Cháffer ಚೇ(ಚ್ಯಾ)ಫರ್ (ನಾ.) ಒಂದು ಜಾತಿಯ ಜೀರುಂಡೆ.

Chaff ಚಾಫ್ (ನಾ., ಕ್ರಿ. ಸಕ.) ಹೊಟ್ಟು ; ಉಬ್ಬಲು ; ಸಿಪ್ಪೆ ; (ಮೇವಿಗಾಗಿ) ಚೂರುಚೂರಾಗಿ ಕತ್ತರಿಸಿದ ಹುಲ್ಲು. (ಸ. ವಿ.) ಹುಲ್ಲುಹೂವುಗಳ ವೃಂತಪುಚ್ಛ. (ರೂಪ.) ಕೆಲಸಕ್ಕೆ ಬಾರದ ವಸ್ತು ; ಅಸಾರ ವಸ್ತು ; ಕಸ. (Caught with c. ಸುಲಭವಾಗಿ ಮೋಸಹೋದ, ಸಿಕ್ಕಿಬಿದ್ದ. C.-cutter ಮೇವು ಕತ್ತರಿಸುವ ಯಂತ್ರ.) ಹುಲ್ಲು, ಮೊ. ನ್ನು ಕತ್ತರಿಸು. ಕುಹೋದ್ಯ, ಹಾಸ್ಯ, ವಿನೋದ, ತಮಾಷೆ (ಮಾಡು). **Cháffy** (ಗು.)

Cháffer ಚ್ಯಾಫರ್ (ಕ್ರಿ., ನಾ.) ಕೊಸರಾಡು(ವುದು) ; ಚೌಕಸಿ(ಮಾಡು). C. away ಕಳೆದುಬಿಡು. **Cháfferer** (ನಾ.)

Cháffinch ಚಾಫಿನ್ಚ್ (ನಾ.) ಬ್ರಿಟನ್ನಿನ ಒಂದು ಜಾತಿಯ ಸಣ್ಣಹಕ್ಕಿ.

Cháfing-dish ಚೇಫಿಂಗ್ ಡಿಷ್ (ನಾ.) (ಮೇಲಿಟ್ಟ ಪದಾರ್ಥವನ್ನು ಶಾಖವಾಗಿಟ್ಟಿರುವುದಕ್ಕಾಗಿ) ಕೆಂಡತುಂಬಿಟ್ಟ ಪಾತ್ರೆ; ಒಂದು ತೆರದ ಅಗ್ಗಿಷ್ಟಿಗೆ.

Chagrín ಷಗ್ರೀ(ಗ್ರಿ)ನ್ (ನಾ., ಕ್ರಿ. ಸಕ.) (ಆಶಾಭಂಗದಿಂದ, ಅವಮಾನದಿಂದ, ಉಂಟಾದ) ಉಮ್ಮಳ, ಉದ್ವೇಗ ; ಖೇದ ; ವ್ಯಥೆ ; ಕೊರಗು. (ಕ್ರಿ.) — ಗೊಳಿಸು ; — ಹಿಡಿಸು.

Chain ಚೇಯ್ನ್ (ನಾ., ಕ್ರಿ. ಸಕ.) ಸರಪಣಿ ; (ಬಿರುದಿನ) ತೊಡರು. ಸಂಕೋಲೆ ; ಬೇಡಿ. ಸರೆ ; ಬಂಧನ. ಸರ ; ಹಾರ. (ರೂಪ.) ಶ್ರೇಣಿ ; ಸರಣಿ ; ಓಳಿ (ಗ್ರಾಂ.) ; ಮಾಲೆ ; ಪರಂಪರೆ. (ಮೋಜಣಿ) ನೂರು ಕೊಂಡಿಗಳುಳ್ಳ, ೬೬ ಅಡಿ ಉದ್ದದ, ನೆಲವನ್ನಳೆಯುವ ಸರಪಣಿ: ಮೋಜಣಿ ಸರಪಣಿ; ಒಂದು ಸರಪಣಿಯುದ್ದ. ಯುದ್ಧದಲ್ಲಿ ಶತ್ರುನಾವೆಯ ಧ್ವಜಸ್ತಂಭ, ಮೊ. ನ್ನು ನಾಶಮಾಡುವುದಕ್ಕಾಗಿ ಉಪಯೋಗಿಸುವ, ಸರಪಣಿಗೂಡಿಸಿದ, ಎರಡು ಫಿರಂಗಿಗುಂಡುಗಳು ಅಥವಾ ಅರ್ಧ ಗುಂಡುಗಳು: ಸರಪಣಿಗುಂಡು (= C.-shot). (ಕ್ರಿ.) ಸರಪಣಿಯಿಂದ ಕಟ್ಟು, ಬಿಗಿ; ಬೇಡಿ, ಸಂಕೋಲೆ, ಹಾಕು (ರೂಪ. ಸಹ). ಸರಪಣಿಯಿಂದ ತಡೆಗಟ್ಟು. (ಮೋಜಣಿ) ಸರಪಣಿಯಿಂದ ಅಳೆ. **C. armour, mail** ಉಕ್ಕಿನ ಉಂಗುರಗಳಿಂದ ಹೆಣೆದ ಮೈಜೋಡು, ಯುದ್ಧಕವಚ. **C. bridge** ಸರಪಣಿಯ ತೂಗುಸೇತುವೆ. **C. coupling** ರೈಲುಗಾಡಿಗಳನ್ನು ಒಂದೊಂದಕ್ಕೆ ಬಿಗಿದಿರುವ (ತಿರುಪಿನ ಬಂಧನದ ಜೊತೆಗೆ ಹಾಕುವ) ಸರಪಣಿಯ ಬಂಧನ (ಅಪಾಯ ಸಂಭವದಲ್ಲಿ ರಕ್ಷಣೆಗಾಗಿ). **C.-gang** ಒಟ್ಟಿಗೆ ಸರಪಣಿಹಾಕಿ ಬಿಗಿದ, ಅಥವಾ ಈ ಸ್ಥಿತಿಯಲ್ಲಿ ಕೆಲಸಮಾಡುವಂತೆ ನಿರ್ಬಂಧಪಡಿಸಿದ ಖೈದಿಗಳು: ಸರಪಣಿ ಖೈದಿಗಳು. **C.-letter** ಪತ್ರ ತಲಪಿದ ಮನುಷ್ಯನು ಆ ಪತ್ರದಂತೆಯೇ ಕೆಲವು ಗೊತ್ತಾದ ಸಂಖ್ಯೆಯ ಪ್ರತಿಗಳನ್ನು ಮಾಡಿ ಅವನ್ನು ಬೇರೆ ಕೆಲವರಿಗೆ ಕಳುಹಿಸಬೇಕೆಂದೂ ಅವನ್ನು ಪಡೆಯುವ ಪ್ರತಿಯೊಬ್ಬರೂ ಈ ರೀತಿಯಾಗಿಯೇ ಪ್ರತಿಗಳನ್ನು ಇತರರಿಗೆ ಕಳುಹಿಸಬೇಕೆಂದೂ ಬರೆದು ಕಳುಹಿಸಿದ ಪತ್ರ: ಸರಪಣಿ ಪತ್ರ. **C. moulding** (ವಾ. ಶಾ.) ಸರಪಣಿಮಾದರಿಯ ಕೆತ್ತನೆ, ಅಲಂಕಾರ. **C.-pump** ನೀರೆತ್ತುವುದಕ್ಕಾಗಿ ಉಪಯೋಗಿಸುವ ತುದಿಯಿಲ್ಲದ ಸರಪಣಿ (ಈ ಸರಪಣಿಯ ಉದ್ದದಲ್ಲಿ, ತಗಡಿನ ತಟ್ಟೆಗಳಿದ್ದು, ಅವು ಸರಪಣಿ ಮೇಲಕ್ಕೇರುವ ಕೊಳವಿಯಲ್ಲಿ ಗುತ್ತನಾಗಿ ಅಳವಟ್ಟಿರುವುದರಿಂದ ತಳದ ನೀರು ಮೇಲಕ್ಕೆ ಏರುತ್ತಹೋಗುವುದು): ಸರಪಣಿ ಸೇದುಯಂತ್ರ. **C. rule** ಅಂಕಗಣಿತದಲ್ಲಿ, ಭಿನ್ನಜಾತಿಯ ಎರಡು ಮೊತ್ತಗಳಿಗೆ (ಬೆಲೆಯಲ್ಲಿ) ಸಂಬಂಧ ಕಲ್ಪಿಸಬೇಕಾದರೆ ಅವುಗಳ ಮಧ್ಯೆ ಇರುವ ಮೊತ್ತಗಳ ಪರಸ್ಪರ ಸಂಬಂಧದಿಂದ ಗುಣಿಸಿ ಕಂಡುಹಿಡಿಯುವ ನಿಯಮ (ಉದಾ., ೫ ಮೀಟರು ಕರಾಬತ್ತಿಗೆ ೧೭ ಫ್ರ್ಯಾಂಕ್ ಬೆಲೆಯಾದರೆ ೭ ಗಜಕ್ಕೆ ಎಷ್ಟು ರೂಪಾಯಿ ಬೆಲೆ? ಈ ಪ್ರಶ್ನೆಗೆ ಉತ್ತರ ಕೊಡಬೇಕಾದರೆ, ಮೀಟರಿಗೂ ಗಜಕ್ಕೂ, ಫ್ರ್ಯಾಂಕಿಗೂ ಷಿಲಿಂಗಿಗೂ, ಷಿಲಿಂಗಿಗೂ ರೂಪಾಯಿಗೂ ಕೊಟ್ಟಿರುವ ಸಂಬಂಧದಿಂದ ಗುಣಿಸಿ ಹೇಳಬಹುದು): ಸರಪಣಿ ನಿಯಮ. **C.-smoker** ಸೇದಿ ಮುಗಿಸಿದ ಹೊಗೆಸುತ್ತಿನಿಂದ ಹೊಸ ಹೊಗೆಸುತ್ತನ್ನು ಹೊತ್ತಿಸಿಕೊಂಡು ಸೇದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವವನು. **C.-stitch** ಸರಪಣಿಯಂತೆ ಕಾಣುವ ಅಲಂಕಾರದ ಹೊಲಿಗೆ: ಸರಪಣಿ ಹೊಲಿಗೆ. (ಹೊಲಿಗೆಯ ಯಂತ್ರದಲ್ಲ) ಸಾದಾ ಹೊಲಿಗೆ. **C.-store** (ಅಮೆ. ಸಂ.) ಒಂದೇ ವ್ಯಾಪಾರಸಂಸ್ಥೆಗೆ ಸೇರಿ ಒಂದೇ ತೆರದ ಸರಕುಗಳನ್ನು ಮಾರುವ ಅನೇಕ ಅಂಗಡಿಗಳ ಲ್ಲೊಂದು : ಸರಪಣಿ ಮಳಿಗೆ. **C.-wheel** ತನ್ನ ಸುತ್ತಲೂ ಸುತ್ತುತ್ತಿರುವ ಸರಪಣಿಯ ಮೂಲಕ ಶಕ್ತಿಯನ್ನು ಇತರ ಭಾಗಕ್ಕೆ ಒದಗಿಸುವ ಚಕ್ರ : ಸರಪಣಿಚಕ್ರ. **C.-work** ಸರಪಣಿಯಲಂಕಾರ ; ಸರಪಣಿ ಗೆಲಸ. ಒಂದುತೆರದ ಹೊಲಿಗೆಯ ಕೆಲಸ. **Chaínless** (ಗು.) ; **Chaínlet** (ನಾ.) ಪುಟ್ಟಸರಪಣಿ.

Chair ಚೇರ್ (ನಾ.) ಕುರ್ಚಿ. (ರೂಪ.) ಅಧಿಕಾರ ಪೀಠ ; ಗೌರವ — ; ವೈಧವ — ; ವಿದ್ವತ್ — ; ವ್ಯಾಖ್ಯಾನ — ; ಆಚಾರ್ಯ — ; ನ್ಯಾಯ — ; ಅಧ್ಯಕ್ಷ — ; ಸಿಂಹಾಸನ ; ಗದ್ದುಗೆ ; ಅಗ್ರಾಸನ. ವಿದ್ಯಾನಿಲಯದ ಅಧ್ಯಾಪಕತ್ವ. ಪೌರಸಭಾಧ್ಯಕ್ಷತೆ. ಸಭಾಧ್ಯಕ್ಷ ; ಸಭಾಪತಿ. [Address, appeal to, the c. ಸಭಾಧ್ಯಕ್ಷನನ್ನು ಕುರಿತು ಮಾತನಾಡು ; ಸಭಾಧ್ಯಕ್ಷನಿಗೆ ಮೊರೆಯಿಡು, ಹೇಳಿಕೊ. Chair ! Chair ! ಅಕ್ರಮವೆಂದು ತೋರಿಸುವುದಕ್ಕಾಗಿ ಸಭಾಧ್ಯಕ್ಷನ ಗಮನವನ್ನು ಸೆಳೆಯುವ ಕೂಗು. Take the c., Leave the c. (ಸಭಾಧ್ಯಕ್ಷ) ಕಾರ್ಯಾರಂಭ ಮಾಡು, ಮುಕ್ತಾಯ ಮಾಡು ; ಅಧ್ಯಕ್ಷಪೀಠವನ್ನು ಏರು, ಬಿಡು]. ರೈಲುಕಂಬಿಗಳನ್ನು ಅವುಗಳ ಸ್ಥಾನದಲ್ಲಿ ಭದ್ರವಾಗಿ ಹಿಡಿದುಕೊಳ್ಳಲು ಹಾಕುವ ಕಬ್ಬಿಣದ ಅಥವಾ ಉಕ್ಕಿನ ಆಧಾರ. ದೋಲಿ. (ಅಮೆ. ಸಂ., ಬಳ. ಮಾ.) (ವಿದ್ಯುತ್ಪ್ರವಾಹ ಹರಿಸಿ ಮನುಷ್ಯನ ಜೀವತೆಗೆಯುವ) ವಿದ್ಯುತ್ ಕುರ್ಚಿ. **C. bed** ಮಂಚವಾಗಿ ವಿಸ್ತರಿಸಲಾಗುವ ಕುರ್ಚಿ; ಕುರ್ಚಿಮಂಚ. **Chairman** —ಮ್ಯನ್ (ನಾ. ; ಬ. ವ. -men ; ಸ್ತ್ರೀಲಿಂಗ **Chaírwoman**) ಸಭಾಧ್ಯಕ್ಷ ; ಸಭಾಪತಿ ; ಅಗ್ರಾಸನಾಧಿಪತಿ ; (ಒಂದು ಸಂಸ್ಥೆಯ, ಮಂಡಲಿಯ) ಕಾಯಂ ಅಧ್ಯಕ್ಷ. ಗಾಲಿಕುರ್ಚಿಯನ್ನು ಬಾಡಿಗೆಗಾಗಿ ಇಟ್ಟುಕೊಂಡಿರುವವನು ; — ತಳ್ಳಿಕೊಂಡುಹೋಗುವವನು. ದೋಲಿ ಹೊರುವವನು ; ಬೋಯಿ. **Chaírmanship** (ನಾ.)

Chair (ಕ್ರಿ. ಸಕ.) ಅಧಿಕಾರಪೀಠದಲ್ಲಿ ಕುಳ್ಳಿರಿಸು, ಪ್ರತಿಷ್ಠಿಸು. (ಸಭೆಯ ಚುನಾವಣೆ, ಜಟ್ಟಿಕಾಳಗ, ಮೊ. ಗಳಲ್ಲಿ ಜಯಶೀಲನಾದವನನ್ನು) ಕುರ್ಚಿಯಲ್ಲಿ ಕುಳ್ಳಿರಿಸಿ ಮೆರೆವಣಿಗೆಮಾಡು.

Chaise ಷೇಸ್ (ನಾ.) ಸಾ., ಮಟ್ಟಸವಾದ, ನಾಲ್ಕು ಚಕ್ರಗಳುಳ್ಳ, ಒಂದು ಅಥವಾ ಎರಡು ಕುದುರೆ ಕಟ್ಟಿದ, ಛಾವಣಿಯಿಲ್ಲದ, ಪ್ರಯಾಣದ ಅಥವಾ ಸವಾರಿಯ ಗಾಡಿ ; ಬಾಡಿಗೆಯ ಮಜಲುಗಾಡಿ (= Post-c.)

Chálan ಚ್ಯಾಲನ್, ಚಲನ್ (ನಾ.) (ಆಂ. ಇಂ.) ಸಾಮಾನು, ಅದರ ಬೆಲೆ, ಮೊ. ವಿಷಯಗಳುಳ್ಳ, ಅಥವಾ ಸಲ್ಲಿಸತಕ್ಕ ಹಣದ ವಿಚಾರವುಳ್ಳ ಪತ್ರ ; ಖಜಾನೆಗೆ ಹಣ ಕಟ್ಟುವಾಗ ಬರೆದುಕೊಡುವ ಪಟ್ಟಿ : ಚಲನ್.

Chalcédony, Chálcedony, Cal- ಕ್ಯಾಲ್ಸೆ(ಲ್ಸ)ಡನಿ (ನಾ.) ಬೆರೆಯುಳ್ಳ ಒಂದು ಬಗೆಯ ಪ್ರಶಸ್ತಶಿಲೆ.

Chalcógraphy ಕ್ಯಾಲ್ಕಾಗ್ರಫಿ (ನಾ.) ತಾಮ್ರದಮೇಲೆ ಕೆತ್ತನೆ ಕೆಲಸ ಮಾಡುವ ಕಲೆ ; ತಾಮ್ರದ ನಕಾಸೆ ಕಲೆ. **Chalcógrapher** (ನಾ.)

Chalcopýrite ಕ್ಯಾಲ್ಕೊಪೈ(ಪಿ)ರೈಟ್ (ನಾ.) ಒಂದು ತಾಮ್ರದ ಅದುರು.

Chaldéan, Chaldeé ಕ್ಯಾಲ್ಡೀಯನ್, ಕ್ಯಾಲ್ಡೀ (ಗು., ನಾ.) ಕ್ಯಾಲ್ಡಿಯದ ಅಥವಾ ಬ್ಯಾಬಿಲನ್ನಿನ (ದೇಶೀಯ). ಕಣಿ ಹೇಳುವವನು ; ಶಕುನಿಗ ; ಜ್ಯೋತಿಷ್ಕ.

Cháldron ಚಾಲ್ಡ್ರನ್, ಚಾಡ್ರನ್ (ನಾ.) ಕಲ್ಲಿದ್ದಲಿನ ಒಂದು ಅಳತೆ (೩೬ ಬುಷಲುಗಳು)

Chálet ಷಾಲೇ (ನಾ.) ಸ್ವಿಟ್ಸರ್ಲೆಂಡಿನ ಪರ್ವತ ಪ್ರಾಂತಗಳಲ್ಲಿಯ ಹೈನದ (ದನ ಕರುಗಳ) ಕೊಟ್ಟಿಗೆ ; ಸ್ವಿಸ್‌ರೈತನ ಮರದ ಗುಡಿಸಿಲು, ದಾರುಕುಟಿ ; ಈ ಮಾದರಿಯ ಬಂಗಲೆ. ಬೀದಿ ಪಾಯಖಾನೆ ; ಮೂತ್ರಿ.

Chálice ಚ್ಯಾಲಿಸ್ (ನಾ.) ಪಾನಪಾತ್ರೆ ; (ಹಿಡಿಯಿಲ್ಲದ, ಕುಡಿಯುವ) ಬಟ್ಟಲು. (ಕ್ರೈಸ್ತ) ಪ್ರಭುಭೋಜನ ಸಂಸ್ಕಾರದಲ್ಲಿ ಉಪಯೋಗಿಸುವ ಮದ್ಯಪಾತ್ರೆ, ಮಧುಕಲಶ (Mixed c. ವಿಧಿಪೂರ್ವಕವಾಗಿ ನೀರು ಸೇರಿಸಿದ ಮದ್ಯದ ಬಟ್ಟಲು). (ಕಾವ್ಯ) ಹೂಬಟ್ಟಲು ; ಪುಷ್ಪಪಾತ್ರೆ. **Cháliced** (ಗು.)

Chalk ಚಾಕ್ (ನಾ., ಕ್ರಿ. ಸಕ.) ಹಲಗೆಯಮೇಲೆ ಬರೆಯುವುದಕ್ಕೂ ಸುಟ್ಟು ಖಾರದಸುಣ್ಣ ಮಾಡುವುದಕ್ಕೂ ಉಪಯೋಗವಾಗುವ ಮೆತುವಾದ ಬಿಳಿಯ ಸುಣ್ಣಕಲ್ಲು : ಸೀಮೆಸುಣ್ಣ. ನಕ್ಷೆ, ಚಿತ್ರ, ಮೊ. ನ್ನು ಬರೆಯುವುದಕ್ಕೆ ಉಪಯೋಗಿಸುವ, ಸೀಮೆಸುಣ್ಣದಂಥ ರಚನೆಯುಳ್ಳ, ಹಲವು ಬಣ್ಣಗಳ ಕೃತಕಪದಾರ್ಥ : ಬಣ್ಣದ ಬಳಪ ('ಕ್ರೇಯಾನ್'). (ಕ್ರಿ.) ಸೀಮೆಸುಣ್ಣದಿಂದ ಉಜ್ಜು, ಬಳಿ, ಗುರುತು ಮಾಡು, ಗೆರೆಗಳೆಳೆ, ಚಿತ್ರಬರೆ, ಬರೆ. C. out ಗುರುತು ಮಾಡು ; ಗುರುತಿಸು ; (ಮಾಡಬೇಕಾದ ಕೆಲಸವನ್ನು) ಅಂದಾಜುಮಾಡಿಕೊ. As like as c. and cheese ಸುಣ್ಣಬೆಣ್ಣೆಗಳಂತೆ ವಿರುದ್ಧಸ್ವಭಾವದ ; ಹೋಲಿಕೆ ಕಂಡುಬಂದರೂ ಪರಸ್ಪರ ಹೊಂದಿಕೆಯಿಲ್ಲದ. By (a) long chalk(s) ಬಹುಮಟ್ಟಿಗೆ ; ಬಹುದೂರ ; ವಿಶೇಷವಾಗಿ. **C.-bed** ಸೀಮೆಸುಣ್ಣದ ಸ್ತರ, ಪದರ. **C.-pit** ಸೀಮೆಸುಣ್ಣ ತೆಗೆಯುವ ಹಳ್ಳ. **C.-stone** ವಾತರೋಗದಲ್ಲಿ ಅಂಗಭಾಗಗಳಲ್ಲಿಯೂ ಕೀಲುಗಳಲ್ಲಿಯೂ (ಮು. ಹಸ್ತ ಪಾದಗಳಲ್ಲಿ) ಸೇರುವ ಸೀಮೆಸುಣ್ಣದಂಥ ಉಂಡೆಗಳು ; ವಾತಾಶ್ಮ. **Chálky** (ಗು.) ಸೀಮೆಸುಣ್ಣದಿಂದ ಕೂಡಿದ ; ಸೀಮೆಸುಣ್ಣವುಳ್ಳ ; ಸೀಮೆಸುಣ್ಣದಂತೆ ಬೆಳ್ಳಗಿರುವ. (ರೋಗ) ವಾತಾಶ್ಮದಂಥ ; ವಾತಾಶ್ಮಗಳಿರುವ. **Chálkiness** (ನಾ.)

Chállenge ಚ್ಯಾಲೆಂಜ್ (ನಾ., ಕ್ರಿ. ಸಕ.) ಸಮಾಧಾನ ಕೇಳು(ವುದು) ; ಗುರುತು ಕೇಳು(ವುದು) (Sentry's c. ಕಾವಲುಗಾರನ 'ಯಾರದು' ಎಂಬ ಪ್ರಶ್ನೆ). (ನ್ಯಾ. ಶಾ.) (ಮನುಷ್ಯನ ವಿಷಯದಲ್ಲಾಗಲಿ ವಸ್ತುವಿನ ವಿಷಯದಲ್ಲಾಗಲಿ ಮಾಡುವ) ನಿಷೇಧ, ಆಕ್ಷೇಪ (ಉದಾ., ಮೊಕದ್ದಮೆಯ ವಿಚಾರಣೆಯಲ್ಲಿ, ನ್ಯಾಯದರ್ಶಿಗಳನ್ನು ಗೊತ್ತುಮಾಡುವಲ್ಲಿ). ವಿವಾದಕ್ಕೆ, ದ್ವಂದ್ವಯುದ್ಧಕ್ಕೆ, ಕರೆಯುವುದು, ಆಹ್ವಾನ. ಪ್ರತಿಭಟನೆ ; ಎದುರಿಸುವುದು ; ಧಿಕ್ಕಾರ ; ಸಾಕ್ಷೇಪ ಪ್ರಶ್ನೆ. (ಕ್ರಿ.) ಸಮಾಧಾನ ಕೇಳು ; (ಕಾವಲುಗಾರ) ಸಂಕೇತ ಕೇಳು. (ಸಾಕ್ಷ್ಯ, ನ್ಯಾಯದರ್ಶಿಯ ಆಯ್ಕೆ — ಇವುಗಳ ವಿಷಯವಾಗಿ) ನಿಷೇಧಿಸು, ಆಕ್ಷೇಪ ಹೇಳು ; ಒಪ್ಪದಿರು ; ಪ್ರತಿಭಟಿಸು. (ಗಮನ, ಮೆಚ್ಚಿಕೆ, ಮೊ. ನ್ನು) ಸೆಳೆ, ಸಾಧಿಸು. ವಿವಾದಕ್ಕೆ, ಜೂಜಾಟಕ್ಕೆ, ದ್ವಂದ್ವಯುದ್ಧಕ್ಕೆ, ಕರೆ. ಧಿಕ್ಕರಿಸು. **Chállengeable** (ಗು.) ; **Chállenger** (ನಾ.)

Chalýbeate ಕಲಿಬಿಯೆಟ್ (ಗು.) (ಖನಿಜದ ಅಥವಾ ಚಿಲುಮೆಯನೀರಿನ ವಿಷಯದಲ್ಲಿ) ಕಬ್ಬಿಣ ಸೇರಿರುವ ; ಲೋಹವಿಶಿಷ್ಟ.

Cham ಕ್ಯಾಮ್ (ನಾ.) Great c. ತಾನೇತಾನಾಗಿರುವವನು ; ಸ್ವಯಂಪ್ರಭು ; ನಿರಂಕುಶ (ಪ್ರಬಲ ವಿಮರ್ಶಕ, ಮೊ. ರ ವಿಷಯದಲ್ಲಿ)

Chamáde ಷಾಮಾಡ್ (ನಾ.) (ಭೇರಿ ಅಥವಾ ಕಹಳೆಯಿಂದ ಸೂಚಿಸುವ) ಸಂಧಾನ ಸಂಕೇತ, ಹಿಮ್ಮೆಟ್ಟುವ ಸಂಕೇತ.

Chamár ಚಮಾರ್ (ನಾ.) (ಆಂ. ಇಂ.) ಇಂಡಿಯಾದಲ್ಲಿ ತೊಗಲುಕೆಲಸ ಮಾಡುವ ಅತ್ಯಂತ ಕೀಳುಜಾತಿಯವನು ; ಚಮ್ಮಾರ ; ಮೋಚಿ.

Chámber ಚೇಂಬರ್ (ನಾ.) ಕೋಣೆ ; ಕೊಟಡಿ (ಮು. ಮಲಗುವ ಕೋಣೆ). [C. music (ನಾಟಕಶಾಲೆಯಲ್ಲಾಗಲಿ ಚರ್ಚು, ಮೊ. ಗಳಲ್ಲಾಗಲಿ ನಡೆಯುವುದಲ್ಲದ) ಗೃಹಸಂಗೀತ. C. concert ಗೃಹ ಸಂಗೀತ ಮೇಳ]. ಮೂತ್ರಪಾತ್ರೆ (= C.-pot). [ಪ್ರಾಣಿಗಳ ದೇಹದೊಳಗಾಗಲಿ, ಸಸ್ಯಗಳೊಳಗಾಗಲಿ, ಯಂತ್ರಗಳಲ್ಲಾಗಲಿ (ಮು.,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಂದೂಕಿನಲ್ಲಿ) ಇರುವ] ಅರೆ, ಗೂಡು, ಕುಹರ. (ಬ. ವ.) ದೊಡ್ಡ ಕಟ್ಟಡದಲ್ಲಿ ಬಾಡಿಗೆಗೆ ಕೊಡುವ ಪ್ರತ್ಯೇಕ ಪ್ರತ್ಯೇಕವಾದ ಕೋಣೆಗಳ ತಂಡ (ಮು., ನ್ಯಾಯವಾದಿಸಂಸ್ಥೆಗಳ ಕಟ್ಟಡಗಳಲ್ಲಿ) ; (ಬಹಿರಂಗವಾಗಿ ವಿಚಾರಣೆಮಾಡುವ ಅವಶ್ಯತೆಯಿಲ್ಲದ ಮೊಕದ್ದಮೆಗಳನ್ನು ವಿಚಾರಣೆ ಮಾಡುವ) ನ್ಯಾಯಾಧಿಪತಿಯ ಕೋಣೆ. (ಮಂತ್ರಾಲೋಚನ ಸಭೆ, ಶಾಸನ ಸಭೆ, ಮೊ. ಗಳ) ಸಭಾಮಂದಿರ. ಶಾಸನಸಭೆಗಳಲ್ಲೊಂದು. C. of Agriculture, Commerce ಒಂದು ಪ್ರಾಂತದಲ್ಲಿ ವ್ಯವಸಾಯದ, ವಾಣಿಜ್ಯದ, ಅಭಿವೃದ್ಧಿಗಾಗಿ ನಿಯಮಿತವಾದ ಮಂಡಲಗಳು : ವ್ಯವಸಾಯ ಮಂಡಲ, ವಾಣಿಜ್ಯ ಮಂಡಲ. **C. counsel** ನ್ಯಾಯಸ್ಥಾನದಲ್ಲಿ ನಿಂತು ಕಾರ್ಯಮಾಡದೆ ಮನೆಯಲ್ಲೇ ಸಲಹೆಕೊಡುವ ನ್ಯಾಯವಾದಿ. **Chámbering** (ನಾ.) (ಪ್ರಾಚೀ. ಪ್ರ.) ವಿಷಯ ಲಂಪಟತೆ. **Chámbermaid** (ಮನೆಗಳಲ್ಲಿ ಅಥವಾ ತಿಂಡಿಯಂಗಡಿಗಳಲ್ಲಿ ಕೆಲಸ ಮಾಡುವ) ಪರಿಚಾರಿಕೆ. **-Chámbered** (ಗು.) — ಕೋಷ್ಠಯುತ.

Chámberlain ಚೇಂಬರ್ಲಿನ್ (ನಾ.) ರಾಜನ ಅಥವಾ ದೊಡ್ಡ ಶ್ರೀಮಂತನ ಮನೆಯ ಆಡಳಿತವನ್ನು ನೋಡಿಕೊಳ್ಳುವ ಅಧಿಕಾರಿ ; ಗೃಹ ಮಹತ್ತರ ; ಮನೆವಾರ್ತೆಗಾರ. ನಗರ ಕೋಶಾಧಿಕಾರಿ. Lord Great C. of England ದೊರೆಯ ವಿಷಯದಲ್ಲಿ ನಡೆಯಬೇಕಾದ ಎಲ್ಲ ಸಂಪ್ರದಾಯಗಳನ್ನೂ ಉತ್ಸವಗಳನ್ನೂ ಮೇಲ್ವಿಚಾರಣೆನೋಡಿಕೊಳ್ಳುವ, ವಂಶಪಾರಂಪರ್ಯವಾಗಿ ಈ ಅಧಿಕಾರವುಳ್ಳ, ಇಂಗ್ಲೆಂಡಿನ ಒಬ್ಬ ದೊಡ್ಡ ಅಧಿಕಾರಿ (ದರ್ಬಾರು ಬಕ್ಷಿ). Lord C. of the Household ಅರ ಮನೆಯ ಆಡಳಿತದ ಮೇಲ್ವಿಚಾರಣೆಯ ಮತ್ತು ನಾಟಕಪ್ರದರ್ಶನ ಮಾಡಲು ಅಪ್ಪಣೆಕೊಡುವ ಅಧಿಕಾರಿ. **Chámberlainship** (ನಾ.)

Chaméleon ಕಮಿಾಲಿಯನ್ (ನಾ.) ಹಿಡಿತವಿರುವ ಸಣ್ಣ ಬಾಲವುಳ್ಳ, ಉದ್ದವಾದ ನಾಲಗೆಯಿರುವ, ತಿಂಡಿಯಿಲ್ಲದೆ ಬಹುಕಾಲ ಜೀವಿಸಬಲ್ಲ, ಮೈಬಣ್ಣವನ್ನು ಬದಲಾಯಿಸಿಕೊಳ್ಳುವ ಶಕ್ತಿಯುಳ್ಳ, ಹಲ್ಲಿಜಾತಿಯ, ಒಂದು ಪ್ರಾಣಿ : ಓತಿ ; ಗೋಸುಂಬೆ ; ಊಸರವಳ್ಳಿ. (ರೂಪ.) ಒಂದು ಗೊತ್ತಿಲ್ಲದ ನಡತೆಯವನು ; ನೆಚ್ಚಿಕೆಯಿಲ್ಲದವನು ; ಚಂಚಲ. **Chameleónic**—ಯಾನಿಕ್ (ಗು.) ; **Chamélion-like** (ಗು., ಕ್ರಿ. ವಿ.)

Chámois ಷ್ಯಾಮಾಯ್, ಷ್ಯಾಮಿ, ಷಾಮ್ವಾ (ನಾ.) ಆಲ್ಪ್ಸ್, ಪಿರಿನೀಸ್, ಮೊ. ಪ್ರಾಂತಗಳಲ್ಲಿರುವ, ಮೇಕೆಯ ಎತ್ತರದ, ಬಹಳ ಚಟುವಟಿಕೆಯ, ಬೆಟ್ಟದ ಕಾಡುಜಿಂಕೆ : ಷ್ಯಾಮಿ. **C.-leather** ಹಿಂದೆ ಷ್ಯಾಮಿ ಜಿಂಕೆಯ ಚರ್ಮದಿಂದ ಮಾಡುತ್ತಿದ್ದ, ಈಗ ಇತರ ಜಿಂಕೆ, ಕುರಿ, ಮೇಕೆ, ಮೊ. ಗಳ ಚರ್ಮದಿಂದ ಮಾಡುವ, ಮೆತುವಾದ ತೊಗಲು : ಷ್ಯಾಮಿತೊಗಲು.

Champ[1] ಚ್ಯಾಂಪ್ (ಕ್ರಿ., ನಾ.) (ಮೇವನ್ನು) ಶಬ್ದಮಾಡಿಕೊಂಡು ಬಲವಾಗಿ ಅಗಿ. (ಕಡಿವಾಣವನ್ನು) ಹಲ್ಲಿನಿಂದ ಶಬ್ದಮಾಡಿಕೊಂಡು ಕಡಿ. ಶಬ್ದಮಾಡುತ್ತ ಕಡಿ, ಅಗಿ. (ನಾ.) ಅಗಿಯುವುದು ; ಅಗಿಯುವ ಶಬ್ದ.

Champ[2] ಚ್ಯಾಂಪ್ (ನಾ.) ಸಂಪಗೆಯ ಮರದ ದಾರು, ನಾಟ (= C.-wood)

Chámpac ಚ್ಯಾಂಪ್ಯಕ್, ಚಂಪಕ್ (ನಾ.) ಸಂಪಗೆ.

Champágne ಷ್ಯಾಂಪೆಯ್ನ್ (ನಾ.) ಫ್ರಾನ್ಸಿನ ಪೂರ್ವಪ್ರಾಂತಗಳಿಂದ ಬರುವ ಮದ್ಯಜಾತಿಗಳಲ್ಲೊಂದು (ಸಾ., ಶುಭ್ರವಾಗಿಯೂ ಥಳ ಥಳಿಸುವುದಾಗಿಯೂ ಇರುವದು)

Chámpaign ಚ್ಯಾಂಪೆಯ್ನ್ (ನಾ.) (ವಿಸ್ತಾರವಾದ) ಬಯಲು, ಮೈದಾನ.

Chámperty ಚ್ಯಾಂಪರ್ಟಿ (ನಾ.) (ನ್ಯಾ. ಶಾ.) ತನಗೆ ಯಾವ ಸಂಬಂಧವೂ ಇಲ್ಲದ ಒಂದು ವ್ಯಾಜ್ಯದಲ್ಲಿ ಒಂದು ಕಕ್ಷಿಯ ಪರ ವಹಿಸಿ, ವಾಜ್ಯ ಗೆದ್ದಲ್ಲಿ ತನಗೆ ಒಂದು ಭಾಗ ಆದಾಯ ಬರಬೇಕೆಂಬ ಷರತ್ತಿನ ಮೇಲೆ, ಸಹಾಯಮಾಡುವ ಒಪ್ಪಂದ (ಇಂಗ್ಲೆಂಡು, ಮೊ. ಕೆಲವು ದೇಶ ಗಳಲ್ಲಿ ಇದು ತಪ್ಪಿತ) ; ದಾವಾ ಮದ್ದತ್ತು. **Chámpertous** (ಗು.)

Chámpion ಚ್ಯಾಂಪಿಯನ್ (ನಾ., ಗು., ಕ್ರಿ. ಸಕ.) ಒಬ್ಬನಿಗಾಗಲಿ, ಒಂದು ಕಾರ್ಯಸಾಧನೆಗಾಗಲಿ, ವಾದಿಸುವವನು, ಹೋರಾಡುವವನು. ವೀರ ; ಮಲ್ಲ ; ಜಟ್ಟಿ ; ವೀರನಾಯಕ. (King's C., Queen's C., or C. of England ಪೂರ್ವ ಕಾಲದಲ್ಲಿ, ಇಂಗ್ಲೆಂಡಿನ ದೊರೆಯ ಪಟ್ಟಾಭಿಷೇಕಸಂದರ್ಭದಲ್ಲಿ, ದೊರೆಯ ಹಕ್ಕನ್ನು ಉದ್ಘೋಷಿಸುತ್ತಿದ್ದ ಅಧಿಕಾರಿ ; ಈಗ ಆ ಅಧಿಕಾರದ ಗೌರವ ಸ್ಥಾನವು ವಂಶಪಾರಂಪರ್ಯವಾಗಿ ನಿಂತಿದೆ). ಸ್ಪರ್ಧೆಗೆ ಬಂದವರೆಲ್ಲರನ್ನೂ, ಬಂದವುಗಳೆಲ್ಲವನ್ನೂ, ಗೆದ್ದ, ಮಿಾರಿಸಿದ, ಜಟ್ಟಿ, ಮೃಗ, ಸಸ್ಯ, ಮೊ. ; ಸರ್ವೋತ್ಕೃಷ್ಟ ; ಪಕ್ಕಾ (C. boxer ಜಟ್ಟಿಗಳ ಹಿರಿಯ ; ಮಲ್ಲಾಗ್ರಣಿ. C. turnip ಅತ್ಯುತ್ತಮವಾದ ಗಾಜಿನಗೆಡ್ಡೆ. C. idiot ಎಣೆಯಿಲ್ಲದ ಮುಟ್ಠಾಳ ; ಮೂಢಾಗ್ರೇಸರ. C. blunder ಮಿಗಿಲಿಲ್ಲದ ಪ್ರಮಾದ). (ಕ್ರಿ.) ಪಕ್ಷಸಮರ್ಥನೆ ಮಾಡು ; ಪಕ್ಷಹಿಡಿದು ಹೋರಾಡು. **Chámpionless** (ಗು.) ; **Chámpionship** (ನಾ.)

Chance ಚಾನ್ಸ್ (ನಾ., ಗು.) ಅದೃಷ್ಟ ; ಅಕಸ್ಮಾತ್ ಘಟನೆ ; ದೈವ ಘಟನೆ ; ಆಗುಹೋಗು ; ಅನಿರೀಕ್ಷಿತ. ಅವಕಾಶ ; ಸಂದರ್ಭ ; ಸಂಭವ. ಯೋಗ ; ದೆಸೆ. By c. ಅಕಸ್ಮಾತ್ತಾಗಿ ; ಅಪ್ರಯತ್ನವಾಗಿ ; ಅನಿರೀಕ್ಷಿತವಾಗಿ. On the c. ಕೈಗೂಡಬಹುದೆಂಬ ಭರವಸೆಯಿಂದ, ನೆಚ್ಚಿಗೆಯಿಂದ. Take one's c. ಏನಾಗುವುದೋ ನೋಡು ; ಬಂದದ್ದನ್ನನುಭವಿಸು ; ಸಂದರ್ಭವನ್ನು ಪಯೋಗಿಸಿಕೊ. The main c. ಅಭಿವೃದ್ಧಿ ಹೊಂದುವ, ಐಶ್ವರ್ಯ ಪಡೆಯುವ, ಮುಖ್ಯಾವಕಾಶ. Stand a good c. ಈಡೇರುವ, ಕೈಗೂಡುವ, ಸಂಭವವಿರು. C.-sown tree ಅಕಸ್ಮಾತ್ತಾಗಿ ಬೀಜಬಿದ್ದು ಬೆಳೆದ ಮರ. A c. companion ಅಕಸ್ಮಾತ್ತಾಗಿ ದೊರೆತ ಸಂಗಾತಿ. A c. meeting ಅನಿರೀಕ್ಷಿತ ಸಂಧಿ, ಭೇಟಿ. The chances are against it ಸಂದರ್ಭಗಳು ಅದಕ್ಕೆ ಪ್ರತಿಕೂಲವಾಗಿವೆ ; ಅದು ಆಗುವಹಾಗೆ ಕಾಣಲಿಲ್ಲ. **Cháncy** (ಗು.) ಸಂದಿಗ್ಧವಾದ ; ನೆಚ್ಚಿಕೆಯಿಲ್ಲದ ; ಅನಿಶ್ಚಿತ.

Chance (ಕ್ರಿ.) ಆಗು ; ಒದಗಿಬರು ; ಸಂಭವಿಸು [It chanced — ಸಂಭವಿಸಿತು. He chanced to do it ಅವನು ಮಾಡುವ ಸಂಭವವುಂಟಾಯಿತು. C. one's arm (ಬಳ. ಮಾ.) ಹೇಗಾದರೂ ಮಾಡಿ ಯಾವುದೋ ಒಂದು ತೆರದ ಅನುಕೂಲ್ಯವನ್ನು ಅಥವಾ ಆದಾಯವನ್ನು ಪಡೆಯುವ ನಂಬಿಕೆಯಿಂದ ಶ್ರಮಪಡು ; ಒಂದು ಕೈ ನೋಡು. C. upon ಅಕಸ್ಮಾತ್ತಾಗಿ ಕಾಣು, ಸಂಧಿಸು, ಪಡೆ]. (ಬಳ. ಮಾ.) ಆದದ್ದಾಗಲೆಂದು ಪ್ರವರ್ತಿಸು (C. it)

Cháncel ಚಾನ್ಸೆಲ್ (ನಾ.) ಕ್ರೈಸ್ತ ದೇವಾಲಯದಲ್ಲಿ ಪುರೋಹಿತರು, ಗಾಯಕರು, ಮೊ. ವರಿಗಾಗಿ ಪ್ರತ್ಯೇಕವಾಗಿಟ್ಟಿರುವ (ಸಾ., ಕಟಕಟೆ ಹಾಕಿರುವ) ಪೂರ್ವದಿಕ್ಕಿನ ಭಾಗ.

Cháncellor ಚಾನ್ಸೆಲರ್ (ನಾ.) ರಾಜ್ಯಸಂಬಂಧದ, ನ್ಯಾಯಸಂಬಂಧದ (ಅನೇಕ ತೆರದ) ಅಧಿಕಾರಿ. ಅಧ್ಯಕ್ಷ ; ಮುಖ್ಯಾಧಿಕಾರಿ [Lord C., C. of England, Lord High C. ಇಂಗ್ಲಿಷ್ ಪಾರ್ಲಿಮೆಂಟಿನ ಶ್ರೀಮಂತ ಸಭೆಯಲ್ಲಿಯೂ, ಪ್ರಧಾನ ನ್ಯಾಯಸ್ಥಾನದಲ್ಲಿಯೂ ಅಧ್ಯಕ್ಷತೆ ವಹಿಸುವ ಪ್ರಧಾನ ನ್ಯಾಯಾಧೀಶ. C. of Exchequer ಇಂಗ್ಲೆಂಡಿನ ಆರ್ಥಿಕ ಸಚಿವ. C. of Duchy of Lancaster ಇಂಗ್ಲೆಂಡಿನ ಸರ್ಕಾರದ (ರಾಜ ಪ್ರತಿನಿಧಿಯಾದ) ಸಚಿವ (ಸಾ., ಇಲಾಖೆಗಳ ಕಾರ್ಯಭಾರವನ್ನು ವಹಿಸಿಕೊಳ್ಳಲು ಇಷ್ಟವಿಲ್ಲದ ಸಚಿವ). C. of bishop or diocese ಬಿಷಪ್ಪಿನ ನ್ಯಾಯಾಧಿಕಾರಿ. C. of Garter or other order ಬಿರುದಾಂಕಿತರ ಬಿರುದುಗಳನ್ನು ಮುದ್ರೆಯೊತ್ತಿ ಸಹಿಮಾಡುವ ಅಧಿಕಾರಿ]. ವಿಶ್ವವಿದ್ಯಾನಿಲಯದ ಗೌರವಾಧ್ಯಕ್ಷ (Vice-C. ಅಧ್ಯಕ್ಷನಿಗಾಗಿ ಕಾರ್ಯಭಾರ ನಡಸುವ ಅಧಿಕಾರಿ : ಉಪಾಧ್ಯಕ್ಷ). (ಜರ್ಮನಿ, ಆಸ್ಟ್ರೋ ಹಂಗರಿ — ಈ ರಾಷ್ಟ್ರಗಳ) ಮುಖ್ಯ ಮಂತ್ರಿ, ಪ್ರಧಾನಿ. **Cháncellorship** (ನಾ.) ; **Cháncellery, -ory** ಚಾನ್ಸೆಲರಿ (ನಾ.) ಚಾನ್ಸಲರನ ಅಧಿಕಾರ, ಅಧಿಕಾರಿ ವರ್ಗ, ಇಲಾಖೆ, ಅಧಿಕಾರ ನಿವಾಸ. ರಾಯಭಾರಿಯ, ನಿಯೋಗಿಯ, ಕಚೇರಿ. **Cháncery**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ನಾ.) ಪ್ರಧಾನ ನ್ಯಾಯಾಧೀಶನ ನ್ಯಾಯಸ್ಥಾನ. (ಅಮೆ. ಸಂ., ಗ್ರಾಂ.) ಕೇವಲ ನ್ಯಾಯವಿಧಿಗಳನ್ನೇ ಅನುಸರಿಸಿಹೋಗದೆ ಧರ್ಮ ಸೂಕ್ಷ್ಮವನ್ನು ಗ್ರಹಿಸಿ ತೀರ್ಪುಕೊಡುವ ನ್ಯಾಯಸ್ಥಾನ: ಧರ್ಮ ಸೂಕ್ಷ್ಮ ನ್ಯಾಯಸ್ಥಾನ. ಸಾರ್ವಜನಿಕ ಪತ್ರಾಗಾರ; ದಫ್ತರ ಕಚೇರಿ. [(ಮುಷ್ಟಿಯುದ್ಧ) In c. ಪ್ರತಿಪಕ್ಷಿಯ ಕಂಕುಳಲ್ಲಿ (ಗುದ್ದುವುದಕ್ಕೆ ಅನುಕೂಲವಾಗುವಂತೆ) ತಲೆಸಿಕ್ಕಿಕೊಂಡು]. (ರೂಪ.) ವಿಷಮ ಸಂದರ್ಭ.

Chance-médley ಚಾನ್ಸ್ ಮೆಡ್ಲಿ (ನಾ.) (ನ್ಯಾ. ಶಾ.) ಉದ್ದೇಶ ಪೂರ್ವಕವಾಗಲ್ಲದಿದ್ದರೂ ತಪ್ಪಿನಿಂದ ಅಥವಾ ಬುದ್ಧಿಗೇಡಿತನದಿಂದ ನಡೆದ ಕೃತ್ಯ (ಮು., ಕೊಲೆ). ಎಚ್ಚರಗೇಡಿತನ; ಪ್ರಮಾದ.

Cháncery. **Chancellor** ನೋಡಿ.

Cháncre ಷ್ಯಾಂಕರ್ (ನಾ.) ರತಿರೋಗದ ಹುಣ್ಣು; ಮೇಹ ವ್ರಣ.

Cháncy. **Chance** ನೋಡಿ.

Chandeliér ಷ್ಯಾಂಡೆಲೀಯರ್ (ನಾ.) ಅನೇಕ ದೀಪಗಳುಳ್ಳ ಕವಲೊಡೆದ ತೂಗುದೀಪಾಧಾರ: ಗೊಂಚಲುದೀಪ.

Chándler ಚಾಂಡ್ಲರ್ (ನಾ.) ಮೇಣದ ಬತ್ತಿ ಮಾಡುವವನು, ಮಾರುವವನು; ಮೇಣದ ಬತ್ತಿ, ಎಣ್ಣೆ, ಸಬ್ಬು, ಬಣ್ಣ ಮತ್ತು ಗಂದಿಗೆ ಸಾಮಾನು — ಇವುಗಳ ವ್ಯಾಪಾರಿ; ಚಿಲ್ಲರೆ ವ್ಯಾಪಾರಿ (ಸಾ., ತಿರಸ್ಕಾರ ಸೂಚಕ). Corn-c. ಧಾನ್ಯ ವ್ಯಾಪಾರಿ. Ship-c. ಹಡಗಿಗೆ ಬೇಕಾದ ಹಗ್ಗದ ಸಾಮಾನು, ಪಟಗಳ ರಟ್ಟುಬಟ್ಟೆ, ಮೊ. ನ್ನು ಮಾರುವವನು. **Chándlery** (ನಾ.) ಮೇಣದ ಬತ್ತಿ, ಮೊ. ಇಟ್ಟಿರುವ ಸ್ಥಳ. ಚಿಲ್ಲರೆ ವ್ಯಾಪಾರ; ಚಿಲ್ಲರೆ ಸರಕು.

Chandoó, -dú ಚ್ಯಾಂಡೂ (ನಾ.) ಚೀನಾದೇಶದಲ್ಲಿ ಹೊಗೆಸೇದುವುದಕ್ಕಾಗಿ ಉಪಯೋಗಿಸುವ ಅಫೀಮಿನಿಂದ ಮಾಡಿದ ಪದಾರ್ಥ.

Change ಚೇಂಜ್ (ನಾ.) ಮಾರ್ಪು; ಮಾರ್ಪಾಟು; ಬದಲಾವಣೆ; ವ್ಯತ್ಯಾಸ; ಪರಿವರ್ತನೆ; ಹೊಸ ತೆರ; ಭಿನ್ನ ಸ್ಥಿತಿ, ರೂಪ, ರೀತಿ (For a c. ಬದಲಾವಣೆಗಾಗಿ. C. of clothes ಬದಲುಡುಪು). ವರ್ತಕರು ಸೇರುವ ಸ್ಥಳ; ಮಾರುವೆ ಕಟ್ಟೆ (ಈಗ ತಪ್ಪಾಗಿ 'Change. On C. ವ್ಯಾಪಾರದ ಕಟ್ಟೆಯಲ್ಲಿ, ಕೆಲಸದಮೇಲೆ). ಅಮಾವಾಸ್ಯೆಯ ಬಳಿಕ ಹೊಸದಾಗಿ ಕಾಣಿಸಿಕೊಳ್ಳುವ ಚಂದ್ರಕಳೆ. (ನಾಣ್ಯ) ಚಿಲ್ಲರೆ. [Take one's c. (or, the c.) out of ಸೇಡು ತೀರಿಸಿಕೊ, ಹಗೆ ತೀರಿಸಿಕೊ. Get no change out of (a person) (ವಾದ, ವ್ಯಾಪಾರ, ಮೊ. ಗಳಲ್ಲಿ) ಅವನನ್ನು ಮೀರಿಸುವುದಕ್ಕೆ ಸಾಧ್ಯವಿಲ್ಲದೆ ಹೋಗು. C.-over ಒಂದು ಕಾರ್ಯಕ್ರಮದಿಂದ ಮತ್ತೊಂದು ಕಾರ್ಯಕ್ರಮಕ್ಕೆ ಬದಲಾವಣೆ; (ವಸ್ತುಸ್ಥಿತಿ, ಅಭಿಪ್ರಾಯ, ಮೊ. ಗಳಲ್ಲಿ) ಮಾರ್ಪಾಟು, ಬದಲಾವಣೆ]. (ಗಂಟೆ ಬಾರಿಸುವುದರಲ್ಲಿ, ಸಾ., ಬ. ವ. ದಲ್ಲಿ) ಘಂಟಾಗುಚ್ಛವನ್ನು ನಾದಬದಲಾಯಿಸಿ ಬಾರಿಸುವ ಕ್ರಮ. Ring the changes (ರೂಪ.) ಹೇಳಬಹುದಾದ, ಮಾಡಬಹುದಾದ, ಎಲ್ಲಾ ವಿಧಾನಗಳನ್ನೂ ತೀರಿಸಿಬಿಡು.

Change (ಕ್ರಿ.) ಬದಲಾಯಿಸು; ಬದಲಿಸು; ಒಂದಕ್ಕೆ ಬದಲಾಗಿ ಮತ್ತೊಂದನ್ನು ತೆಗೆದುಕೊ; ಬಿಟ್ಟುಬಿಡು; ತೊಲಗಿಸಿಕೊ (*for* ಉಪ. ದೊಡನೆ). (ದೊಡ್ಡ ನಾಣ್ಯಕ್ಕೆ ಅಥವಾ ವಿದೇಶದ ನಾಣ್ಯಕ್ಕೆ) ಚಿಲ್ಲರೆ ಕೊಡು, ಪಡೆ; ಮುರಿ; ಮುರಿಸು. ಬೇರೆ ಬಟ್ಟೆ ಹಾಕಿಕೊ; ಉಡುಪು ಬದಲಾಯಿಸು. ಕೈಯಿಂದ ಕೈಗೆ ಹೋಗು; ಒಂದರಿಂದ ಮತ್ತೊಂದಕ್ಕೆ ಹೋಗು; ಕೊಟ್ಟು ತೆಗೆದುಕೊ; ಅದಲುಬದಲು ಮಾಡು; ವಿನಿಮಯ ಮಾಡು; ಮಾರುವೆ ಮಾಡು (C. places with ಸ್ಥಾನಗಳನ್ನು ಅದಲುಬದಲು ಮಾಡಿಕೊ). ಬೇರೆ ಮಾಡು; ಬೇರೆಯಾಗು; ಮಾರ್ಪಡು; ಮಾರ್ಪಡಿಸು; ವ್ಯತ್ಯಾಸವಾಗು; — ಮಾಡು (ಸಾ., *to, into, from* ಉಪ. ದೊಡನೆ). (ಚಂದ್ರ) ಅಮಾವಾಸ್ಯೆಯ ಬಳಿಕ ಹೊಸ ಕಳೆ ತೋರು. C. colour ಬಣ್ಣ ಬದಲಾಯಿಸು; ವಿವರ್ಣವಾಗು; ಮುಖ ಕೆಡು; ನಿಸ್ತೇಜವಾಗು. C. one's condition (ಸ್ಥಿತಿ ಬದಲಾಯಿಸು) ಮದುವೆಯಾಗು. C. one's feet (ಬಳ. ಮಾ.) ಬೇರೆ ಜೋಡು ಹಾಕಿಕೊ. C. front ವಾದ, ಮೊ. ಗಳಲ್ಲಿ ಹೊಸದಾರಿ ಹಿಡಿ. C. one's mind ಮನಸ್ಸು ಬದಲಾಯಿಸು; ಹೊಸ ವಿಧಾನವನ್ನು ಅಥವಾ ಅಭಿಪ್ರಾಯವನ್ನು ಹೂಡು. C. one's note or tune ರಾಗ ಬದಲಾಯಿಸು. (ಅಹಂಕಾರ ಬಿಟ್ಟು) ನಮ್ರನಾಗು, ವ್ಯಸನಪಡು. C. step, foot, feet (ಸೇನೆ) ಭೇರಿಯ ವಾದ್ಯಕ್ಕನುಸಾರವಾಗಿ ಹೆಜ್ಜೆಹಾಕು, ಹೆಜ್ಜೆ ಬದಲಾಯಿಸು. **Chángeable** ಚೇಂಜಬ್‌ಲ್ (ಗು.) ಕ್ರಮಾನುಸರಣೆಯಿಲ್ಲದ; ಚಂಚಲ; ಚಪಲ; ಮಾರ್ಪಡಿಸಲಾಗುವ; ಬದಲಾಯಿಸಲಾಗುವ; ವ್ಯತ್ಯಾಸ ಸಾಧ್ಯ. **Chángeability** (ನಾ.); **Chángeableness** (ನಾ.); **Chángeling** (ನಾ.) (ಕಳ್ಳತನದಿಂದ) ಬದಲಿಸಿದ ವಸ್ತು, ಮಗು (ಮು., ವನದೇವತೆ ಬದಲಿಸಿದ ಕೂಸು)

Chank ಚ್ಯಾಂಕ್ (ನಾ.) ಶಂಖ.

Chánnel ಚ್ಯಾನೆಲ್ (ನಾ., ಕ್ರಿ. ಸಕ.) ಕಾಲುವೆ; ನಾಲೆ; ಹಳ್ಳ; ನದೀ ಪಾತ್ರ. (ಭೂವಿವರಣೆ) (ಎರಡು ಸಮುದ್ರಗಳನ್ನು ಸೇರಿಸುವ) ಜಲಸಂಧಿಗಿಂತಲೂ ವಿಸ್ತಾರವಾದ ಸಮುದ್ರಭಾಗ; ಕಡಲುಕಾಲುವೆ (The C. ಇಂಗ್ಲಿಷ್ ಕಡಲ್ಗಾಲುವೆ). ದ್ರವ ಹರಿಯುವುದಕ್ಕಾಗಿ ಮಾಡಿರುವ ನಾಳಮಾರ್ಗ; ನೀರ್ಗೊಳವೆ; ಪ್ರವಾಹಮಾರ್ಗ. ಓಟ; ಹರಿವು; ಗಮನ ಪಥ; ದಾರಿ; ದಿಕ್ಕು. ವಾಹಕ; ವಹನ ಸಾಧನ; ಮಾರ್ಗ; ದ್ವಾರಾ. (ಕ್ರಿ.) ಕಾಲುವೆ ಮಾಡು; (ಹಾದಿ, ಮೊ. ನ್ನು) ತೋಡು.

Chant ಚ್ಯಾಂಟ್ (ನಾ., ಕ್ರಿ.) ಗಾನ; ಗೀತ; ಹಾಡು; ತಾಳಬದ್ಧವಾದ ಒಂದೇ ರಾಗದ ಹಾಡು. ರಾಗವೆಳೆದು ಮಾತನಾಡು(ವುದು); (ಮಂತ್ರ, ಮೊ. ಗಳ) ಪಠನ. C. the praises of ಸದಾ ಹೊಗಳುತ್ತಿರು; ಗುಣಗಾನ ಮಾಡು. C. horses ಕುದುರೆಗಳನ್ನು (ಹೊಗಳಿ ಹೊಗಳಿ) ಮೋಸದಿಂದ ಮಾರು. **Chánter** (ನಾ.) (ಕ್ರಿಯಾರ್ಥಗಳಲ್ಲಿ). ನಾಗಸ್ವರ; ಪಿಳ್ಳಂಗೋವಿ; ಕೊಳಲು; ಪುಂಗಿ; ಓಲಗ. ಮೋಸಗಾರನಾದ ಕುದುರೆಯ ವ್ಯಾಪಾರಿ (= Horse-c.). **Chántress** (ನಾ.) (ಪ್ರಾಚೀ. ಪ್ರ., ಕಾವ್ಯ) ಗಾಯಕಿ.

Chantáge, Chántage (F) ಷಾಂಟಾಷ್, ಚಾಂಟೆಜ್ (ನಾ.) ಬೆದರಿಸಿ ಹಣ ಕಸಿದುಕೊಳ್ಳುವುದು, ಸುಲಿಗೆ ಮಾಡುವುದು.

Chánticleer ಚಾಂಟಿಕ್ಲೀಯರ್ (ನಾ.) ಹುಂಜ (ಇಟ್ಟ ಹೆಸರು: Reynard the Fox ಎಂಬ ಕಥೆಯಲ್ಲಿ)

Chántry ಚಾಂಟ್ರಿ (ನಾ.) ಧರ್ಮಕರ್ತನ ಆತ್ಮಶಾಂತಿಗಾಗಿ ಸ್ತೋತ್ರಪಾಠ ಹಾಡಲು ಪುರೋಹಿತರಿಗಾಗಿ ಬಿಟ್ಟಿರುವ ದತ್ತಿ; ಹೀಗೆ ದತ್ತಿಪಡೆದಿರುವ ಪುರೋಹಿತರು, ದೇವಾಲಯ. (ಕ್ರೈಸ್ತ) ಬಲಿಪೀಠ.

Chánty ಷ್ಯಾಂಟಿ (ನಾ.) ನಾವಿಕರು ಹಡಗಿನಲ್ಲಿ ಭಾರವೆತ್ತುವ ಯಂತ್ರವನ್ನು ಸುತ್ತುವಾಗ ಅಥವಾ ಹಗ್ಗವೆಳೆಯುವಾಗ, ಆ ಕೆಲಸಕ್ಕೆ ಹೊಂದುವ ತಾಳಗತಿಯಿಂದ ಹಾಡುವ ಹಾಡು: ನಾವಿಕರ ಭಾರವೆಳೆಯುವ ಹಾಡು.

Cháos ಕೇಯಾಸ್ (ನಾ.) ಸೃಷ್ಟಿಪೂರ್ವದ ಭೂತಸಾಮಗ್ರಿಯ ಅವ್ಯವಸ್ಥಾ ಸ್ಥಿತಿ; ಅವ್ಯಕ್ತ; ಈ ಅವ್ಯವಸ್ಥಿತ ಸ್ಥಿತಿಯ ಮೂರ್ತ ಭಾವನೆ (ದೇವತೆ). (ರೂಪ.) ಅವ್ಯವಸ್ಥೆ. **Chaótic** (ಗು.); **Chaótically** (ಕ್ರಿ. ವಿ.)

Chap[1] ಚ್ಯಾಪ್ (ಕ್ರಿ., ನಾ.) ಬಿರುಕು(ಬಿಡು); ಬಿರಿ; ಒಡೆ (ಸಾ., ಚಳಿ, ಗಾಳಿ, ಮೊ. ಗಳಿಂದ ಚರ್ಮ ಒಡೆಯುವುದು; ಒಣಗಿದ ನೆಲವು ಬೀಟೆ, ಬಿರುಕು, ಬಿಡುವುದು). (ನಾ.; ಸಾ., ಬ. ವ. ದಲ್ಲಿ) ಬಿರುಕುಗಳು; ಬಿರಿತ. **Cháppy** (ಗು.)

Chap,[2] **Chop** ಚ್ಯಾಪ್, ಚಾಪ್ (ನಾ.) (ಬ. ವ. ದಲ್ಲಿ) ದವಡೆ (ಮು., ಮೃಗಗಳದು) (Lick one's chaps ರುಚಿಯಿಂದ, ನಿರೀಕ್ಷಣೆಯಿಂದ, ತುಟಿ ಸವರಿಕೊ). ಕೆನ್ನೆ; ಗಲ್ಲ (Fat-chops ತುಂಬುಗಲ್ಲದವನು). (ಏ. ವ. ದಲ್ಲಿ) ಕೆಳ ದವಡೆ (ಮು., ಆಹಾರವಾಗಿ ಉಪಯೋಗಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಂದಿಯ ದವಡೆಯ ಭಾಗ). C.-fallen ಜೋಲು ಮುಖದ ; ಉತ್ಸಾಹ ಕುಗ್ಗಿದ ; ವಿಷಣ್ಣ. Chops of the Channel ಅಟ್ಲಾಂಟಿಕ್ ಸಾಗರದಿಂದ ಇಂಗ್ಲಿಷ್ ಕಡಲ್ಗಾಲ್ವೆಗೆ ಪ್ರವೇಶಸ್ಥಳ.

Chap[3] ಚ್ಯಾಪ್ (ನಾ.) (ಬಳ. ಮಾ.) ಮನುಷ್ಯ ; ಹುಡುಗ ; ಹೈದ ; ಆಸಾಮಿ.

Cháp-book ಚ್ಯಾಪ್ ಬುಕ್ (ನಾ.) ಹಿಂದೆ, ತಿರುಗುವ್ಯಾಪಾರಿಗಳು ಮಾರಾಟಮಾಡುತ್ತಿದ್ದ ಜನಪದ ಸಾಹಿತ್ಯದ (ಸಾ., ಕಥೆಗಳು, ಲಾವಣಿಗಳು, ಇತರ ಸಣ್ಣ ಗ್ರಂಥಗಳು, ಮೊ. ಗಳ) ಪುಸ್ತಕ: ಬೀದಿ ಮಾರಾಟದ ಪುಸ್ತಕ.

Chape ಚೇಪ್ (ನಾ.) ಕತ್ತಿಯ ಒರೆಯ ತಲೆಯಲ್ಲಿಯ ಲೋಹದ ಟೊಪ್ಪಿಗೆ. (ಬಿಗುಪಟ್ಟಿಯ) ಬಂಧನಿಯ ಕೊಕ್ಕೆ ; ಸೊಂಟಪಟ್ಟಿಯಲ್ಲಿ ಅಥವಾ ಬಿಗುಪಟ್ಟಿಯಲ್ಲಿ ಉದ್ದವನ್ನು ಅಳವಡಿಸಲು ಹಿಂದಕ್ಕೂ ಮುಂದಕ್ಕೂ ಸರಿಯುವ ಚೌಕಕೊಂಡಿ.

Chápel ಚ್ಯಾಪೆಲ್ (ನಾ.) ಕ್ರೈಸ್ತರ ಆರಾಧನ (ಪ್ರಾರ್ಥನ) ಮಂದಿರ [ಮು., ವಾಸದ ಮನೆಯ ಅಥವಾ ಖಾಸಗಿ ಸಂಸ್ಥೆಯ ಉಪಯೋಗಕ್ಕಾಗಿ ಕಟ್ಟಿರುವದು (ಸಾರ್ವಜನಿಕ ಅಥವಾ ಮುಖ್ಯ ಆರಾಧನ ಮಂದಿರವಲ್ಲ). C. royal ಅರಮನೆಯ ಆರಾಧನ ಮಂದಿರ]. ಒಂದು ದೊಡ್ಡ ಕಟ್ಟಡ ದಲ್ಲಿಯ ಆರಾಧನ ಗೃಹ (ಬಲಿಪೀಠದೊಡನೆ ಕೂಡಿದುದು). ಮುಖ್ಯ ದೇವಾಲಯ, ಮೊ. ಗಳಲ್ಲಿ ಪ್ರತ್ಯೇಕ ಅಂಕಿತಮಾಡಿರುವ ಆರಾಧನ ಗೃಹ (Lady-c. ಮೇರೀಕನ್ಯಕೆಗೆ ಅಂಕಿತ). (C. of ease ದೂರದಲ್ಲಿರುವ ಭಕ್ತರ ಅನುಕೂಲಕ್ಕಾಗಿ ಮಾಡಿರುವ ಮಂದಿರ). ಕ್ರೈಸ್ತ ಆರಾಧನ ಮಂದಿರದಲ್ಲಿ ನಡೆಯುವ ಆರಾಧನೆ ; ಆ ಮಂದಿರದಲ್ಲಿ ಹಾಜರಿ (Keep a c. ಪ್ರೌಢ ವಿದ್ಯಾಶಾಲೆಗಳಲ್ಲಿಯ ಆರಾಧನ ಮಂದಿರದಲ್ಲಿ ಹಾಜರಿರು). ಮುದ್ರಣಶಾಲೆ ; ಅಚ್ಚಿನಮನೆ ; ಮುದ್ರಣ ಕೆಲಸದವರ ಸಂಘ, ಸಭೆ. **Chápelry** (ನಾ.) ಆರಾಧನ ಮಂದಿರದ ಆಡಳಿತಕ್ಕೆ ಒಳಪಟ್ಟ ಪ್ರಾಂತ.

Cháperon ಷ್ಯಾಪೆರಾನ್, — ರೋನ್ (ನಾ., ಕ್ರಿ. ಸಕ.) ಉತ್ಸವ ಸಮಾರಂಭಗಳಲ್ಲಿ ಒಬ್ಬ ಕನ್ಯೆಯನ್ನು ನೋಡಿಕೊಳ್ಳಲು ಜೊತೆಯಲ್ಲಿರುವ ಹಿರಿಯ ಹೆಂಗಸು. (ಕ್ರಿ.) — ಜೊತೆಗಿದ್ದು ನೋಡಿಕೊ. **Cháperonage** (ನಾ.)

Chápiter ಚ್ಯಾಪಿಟರ್ (ನಾ.) (ಬೈಬಲನಲ್ಲ) ಕಂಬದ ಬೋದಿಗೆ.

Cháplain ಚ್ಯಾಪ್ಲೆನ್ (ನಾ.) ಖಾಸಗಿ ದೊಡ್ಡಮನುಷ್ಯರ ಅಥವಾ ಸಂಸ್ಥೆಗಳ ಕ್ರೈಸ್ತ ಆರಾಧನ ಮಂದಿರಗಳಲ್ಲಿ, ಹಡಗಿನಲ್ಲಿ, ಸೈನ್ಯ, ಮೊ. ಗಳಲ್ಲಿ, ಪೌರೋಹಿತ್ಯ ಮಾಡಿಸುವ ಪುರೋಹಿತ ; ಪಾದ್ರಿ. ಕ್ರೈಸ್ತ ಸಂನ್ಯಾಸಿನಿಯರ ಮಠದಲ್ಲಿ ಸಾಧಾರಣವಾದ ಆರಾಧನ ಮಂತ್ರಗಳನ್ನು ಹೇಳುವ ಸಂನ್ಯಾಸಿನಿ. **Cháplaincy** (ನಾ.)

Cháplet ಚ್ಯಾಪ್ಲೆಟ್ (ನಾ.) (ಹೂವು, ಪತ್ರೆ, ಚಿನ್ನ, ರತ್ನ, ಮೊ. ಗಳಿಂದ ಮಾಡಿದ) ತಲೆಯಲ್ಲಿ ಧರಿಸುವ ದಂಡೆ, ಮಾಲೆ ; ಬಾಸಿಗ. (ಸಣ್ಣ) ಜಪಸರ ; ಕತ್ತಿನ ಮಣಿಸರ, ಹಾರ. ದೊಡ್ಡ ಒಡಲ ಕಪ್ಪೆಯಲ್ಲಿಯ ಮೊಟ್ಟೆಯ ಸಾಲು. (ವಾ. ಶಾ.) ಮಣಿಗೆತ್ತನೆ ; ಮಣಿಗೆಲಸ. **Chápleted** (ಗು.)

Chápman ಚ್ಯಾಪ್‌ಮ್ಯನ್ (ನಾ.) ತಿರುಗುವ್ಯಾಪಾರಿ ; ಬೀದಿವ್ಯಾಪಾರಿ.

Cháppie, -y ಚ್ಯಾಪಿ (ನಾ.) (ಬಳ. ಮಾ.) (Chap ಪದದ ಲಘ್ವರ್ಥದ ರೂಪ: ಪ್ರೀತಿಯ ಅಥವಾ ಹಾಸ್ಯದ ಮಾತು). ಆರಾಮಗಾರ ; ಸೊಗಸುಗಾರ.

Chaprási ಚಪ್ರಾಸಿ (ನಾ.) (ಆಂ. ಇಂ.) (ಮು., ಸರ್ಕಾರಿ ಕೆಲಸದಲ್ಲಿರುವ) ಅಧಿಕಾರದ ಉಡುಪುಳ್ಳ ಚಾರ ; ದವಾಲಿ ಜವಾನ ; ಡೇರೆ ಹಾಕುವ ಕೆಲಸನೋಡಿಕೊಳ್ಳುವ ಜವಾನ.

Chápter ಚ್ಯಾಪ್ಟರ್ (ನಾ.) ಪುಸ್ತಕದ ಮುಖ್ಯ ವಿಭಾಗ ; ಅಧ್ಯಾಯ ; ಪ್ರಕರಣ. (ಸಂಕ್ಷಿಪ್ತ ರೂಪ: Cap., Ch., C.). (ರೂಪ.) ಪ್ರಕರಣ ; (ಒಂದು ಗೊತ್ತಾದ) ವಿಷಯ. ದಾಖಲೆಗಾಗಿ ಸಂಖ್ಯೆಕೊಟ್ಟು ಗುರುತು ಮಾಡಿರುವ ಪಾರ್ಲಿಮೆಂಟಿನ ಕಾನೂನು. ಕ್ರೈಸ್ತ ಮಠ ಮಂಡಲಿಯ, ಕ್ರೈಸ್ತ ಸಂನ್ಯಾಸಿಗಳ, ಅಥವಾ ಬಿರುದಾಂಕಿತರ, ಸಾಮಾನ್ಯ ಸಭೆ, ಸಭೆಯ ಸದಸ್ಯರು (C.-house ಅಂಥ ಸಭೆ ಸೇರುವ ಮಂದಿರ). C. and verse ಅಧ್ಯಾಯ ಮತ್ತು ಶ್ಲೋಕ ; ಪಂಕ್ತಿ ; ನಿಷ್ಕೃಷ್ಟವಾದ ಆಧಾರ. To end of c. (ರೂಪ.) ಕೊನೆಯ ವರೆಗೂ ; ಎಂದೆಂದಿಗೂ. C. of accidents ಅನಿರೀಕ್ಷಿತ ಘಟನೆಗಳ ಪರಂಪರೆ.

Char ಚಾರ್ (ಕ್ರಿ.) ಇದ್ದಲಾಗುವಂತೆ ಸುಡು ; ಕರಿಕು ಮಾಡು ;—ಆಗು ; ಸೀಯಿಸು ; ಸೀದುಹೋಗು.

Chár-a-banc(s) ಷಾರಾಬಾನ್, ಷ್ಯಾರಬ್ಯಾಂಗ್ (ನಾ.) ಮುಂದು ಗಡೆಗೆ ನೋಡುವಂತೆ ಹಾಕಿರುವ ಅನೇಕ ಆಸನಗಳುಳ್ಳ, ಉದ್ದ ವಾಗಿಯೂ ಹಗುರವಾಗಿಯೂ ಇರುವ, ಪ್ರಯಾಣದ ಬಂಡಿ: ನೋಟದ ಬಸ್ಸು.

Cháracter ಕ್ಯಾರ್ಯಕ್ಟರ್ (ನಾ., ಕ್ರಿ. ಸಕ.) ವಿಶೇಷ ಚಿಹ್ನೆ ; ಕುರುಹು ; ಅಸಾಧಾರಣ ಲಕ್ಷಣ. (ಬ. ವ. ದಲ್ಲಿ) ಕೊರೆದ ಅಥವಾ ಕೆತ್ತಿದ ಅಕ್ಷರಗಳು, ಚಿತ್ರಗಳು ; ಲಿಪಿ (In the German c.). ಬರೆವಣಿಗೆ ; ಕೈಬರಹ. (ಪ್ರಾ. ಶಾ. ದಲ್ಲಿ ಪ್ರಾಣಿವಂಶ, ಮೊ. ಗಳ) ವೈಶಿಷ್ಟ್ಯ ; ವೈಯಕ್ತಿಕತೆ ; ವೈಲಕ್ಷಣ್ಯ ; ತೆರ ; ರೀತಿ. (ಬುದ್ಧಿ ಅಥವಾ ನೀತಿಯ) ಸ್ವಭಾವ ; ಶೀಲ ; ನಡತೆ ; ನೀತಿಬಲ ; ಸತ್ವ ; ಸ್ಥೈರ್ಯ. ಖ್ಯಾತಿ ; ಯಶಸ್ಸು ; ಕೀರ್ತಿ ; ಗೌರವ ; ಮರ್ಯಾದೆ ; ಹೆಸರುವಾಸಿ. ಒಬ್ಬನ ಶೀಲಸ್ವಭಾವ ವರ್ಣನೆ, ಗುಣ ವಿವರಣೆ ; ಯೋಗ್ಯತಾ ಪತ್ರ. ಅಂತಸ್ತು ; ಸ್ಥಾನ ; ದರ್ಜೆ ; ಪದವಿ. (ಜನಕ್ಕೆ) ತಿಳಿದವನು ; ಪ್ರಸಿದ್ಧ ಪುರುಷ (ಸಾ., Public c.). (ಕಾದಂಬರಿಕಾರನಾಗಲಿ ನಾಟಕಕಾರನಾಗಲಿ ಕಲ್ಪಿಸಿದ) ವ್ಯಕ್ತಿ, ಪಾತ್ರ ; ನಟನ ಪಾತ್ರ. [In c., out of c. ಪಾತ್ರೋಚಿತವಾಗಿ (ವೇಷಕ್ಕೆ ತಕ್ಕಂತೆ), ಪಾತ್ರೋಚಿತವಲ್ಲದೆ. ಒಬ್ಬನ ಗುಣಾನುಸಾರವಾದ ಅಥವಾ ಗುಣಾನುಸಾರವಲ್ಲದ (ಕಾರ್ಯಗಳು)]. ವಿಲಕ್ಷಣ ಪುರುಷ (C. actor ವಿಲಕ್ಷಣ ಪಾತ್ರಗಳನ್ನು ವಹಿಸುವ ನಟ). (ಕ್ರಿ. ; ಕಾವ್ಯ, ಪ್ರಾಚೀ. ಪ್ರ.) ಅಕ್ಷರ ಕೆತ್ತು, ಕೊರೆ, ಬರೆ ; ವರ್ಣಿಸು. **Characterístic** (ಗು., ನಾ.) ವಿಲಕ್ಷಣವಾದ ; ವೈಲಕ್ಷಣ್ಯ ; ವಿಶೇಷ ಗುಣ. (ಗಣಿತ) 'ಲಾಗರಿತಮ್ಮಿ'ನ ಸೂಚಿ. **Characterístically** (ಕ್ರಿ. ವಿ.) ; **Cháracterize** (ಕ್ರಿ. ಸಕ.) ಶೀಲಸ್ವಭಾವ ವರ್ಣನೆ ಮಾಡು ; ಗುಣವಿವರಣೆ ಮಾಡು ; .... ಎಂದು ವರ್ಣಿಸು. ವಿಶೇಷ ಲಕ್ಷಣವಾಗಿರು ; ವೈಲಕ್ಷಣ್ಯವಾಗಿರು ; ವೈಶಿಷ್ಟ್ಯ ಕೊಡು. **Cháracterizátion** (ನಾ.) ; **Cháracterless** (ಗು.) ಸಾಮಾನ್ಯ ; ಸಾಧಾರಣ ; ಅಪ್ರಸಿದ್ಧ ; ನಾಡಾಡಿ (ಗ್ರಾಂ.). ಯೋಗ್ಯತಾಪತ್ರವಿಲ್ಲದ ; ನಡತೆಯಿಲ್ಲದ.

Charáde ಷರಾಡ್ (ನಾ.) ಒಂದು ತೆರದ ಸಮಸ್ಯೆ, ಒಗಟೆ (ಒಂದು ಪದದ ಪ್ರತಿ ಅಕ್ಷರವನ್ನಾಗಲಿ, ಕೆಲವುವೇಳೆ ಒಟ್ಟುಪದವನ್ನಾಗಲಿ, ಒಗಟೆಯ ರೂಪದಲ್ಲಿಯೊ ನಟನೆಯ ಮೂಲಕವೊ ಸೂಚಿಸಿದಾಗ ಆ ಪದವನ್ನು ಊಹೆಯಿಂದ ಕಂಡುಹಿಡಿಯುವುದು): ಪದಸಮಸ್ಯೆ.

Chárcoal ಚಾರ್ಕೋಲ್ (ನಾ.) (ಮರ, ಎಲುಬು, ಮೊ. ಪದಾರ್ಥಗಳನ್ನು ಅರ್ಧ ಸುಡುವುದರಿಂದಾದ) ಇದ್ದಲು, ಕರಿ (ಇಂಗಾಲದ ಒಂದು ರೂಪ). **C.-burner** ಇದ್ದಲು ಸುಡುವವನು ; ಇದ್ದಲಿಗ.

Chare ಚೇರ್, **Char** ಚಾರ್ (ನಾ., ಸಾ., ಬ. ವ. ದಲ್ಲಿ ; ಕ್ರಿ. ಅಕ.) ಚಿಲ್ಲರೆಕೆಲಸ (ಮಾಡು) ; ಮನೆಗೆಲಸ (ಮಾಡು) ; ದಿನಗೂಲಿಗೆ ಮನೆ ಗುಡಿಸು (ವವಳು)

Charge ಚಾರ್ಜ್ (ನಾ.) ಹೊರೆ ; ಹೇರು ; ಭಾರ ; ಯಾವುದಾದರೂ ಒಂದಕ್ಕೆ ತುಂಬಬೇಕಾದ ಪದಾರ್ಥದ ನಿಯತವಾದ ಮೊತ್ತ (ಮು. ಬಂದೂಕಿಗೆ ತುಂಬುವ ಸಿಡಿಮದ್ದು ; ಬಂದೂಕಿನ ಬಾರು). (ರೂಪ.) (ತೊಂದರೆ, ಅನಾನುಕೂಲ, ಮೊ. ಗಳ) ಹೊರೆ. (ವಂಶ ಲಾಂಛನ) ಚಿಹ್ನೆ. ವೆಚ್ಚ ; ಖರ್ಚು ; ವ್ಯಯ (At his own c. ಸ್ವಂತ ವೆಚ್ಚದಿಂದ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆಲೆ ; ಮೂಲ್ಯ ; ಕೂಲಿ. ಕೆಲಸ ; ಕರ್ತವ್ಯ ; ಜವಾಬ್ದಾರಿ ; ಹೊಣೆ (C. on a property ಆಸ್ತಿಯಮೇಲೆ ಹೊತ್ತ ಹೊಣೆ). ಅಧಿಕಾರ ; ನಿಯೋಗ. ರಕ್ಷಣೆ ; ಮೇಲ್ವಿಚಾರಣೆ ; ವಶ ; ಅಧೀನ (Nurse in c. of child ಮಗುವಿನ ರಕ್ಷಣೆ ನೋಡಿಕೊಳ್ಳುವ ದಾದಿ. Give person in c. ಪೋಲೀಸಿಗೆ ಒಪ್ಪಿಸಿಬಿಡು ; ಪೋಲೀಸಿನವರ ವಶಮಾಡು). ಒಬ್ಬರ ವಶಕ್ಕೆ ಒಪ್ಪಿಸಿದ ವಸ್ತು ಅಥವಾ ವ್ಯಕ್ತಿ ; ನ್ಯಾಸ ; ಕೈಯೆಡೆ. ಮತಾ ಚಾರ್ಯನ ಶಿಷ್ಯವರ್ಗ. ಆಜ್ಞೆ; ಅಪ್ಪಣೆ; ಆದೇಶ; ಸಂದೇಶ (Judge's c. to the jury ನ್ಯಾಯದರ್ಶಿಗಳಿಗೆ ನ್ಯಾಯಾಧಿಪತಿಯ ಸಂದೇಶ). ಅಪಾದನೆ; ಆರೋಪಣೆ; ದೋಷಾರೋಪ; ತಪ್ಪು ಹೊರಿಸುವುದು (Lay to one's c. ತಪ್ಪುಹೊರಿಸು. C.-sheet ಪೋಲೀಸುಠಾಣಾದಲ್ಲಿ ಸಿದ್ಧಮಾಡಿದ ತಕ್ಸೀರುಪಟ್ಟಿ ; ಅಪಾದನೆಯ ಪಟ್ಟಿ). ಭರದಿಂದ, ರಭಸದಿಂದ, ಮೇಲೆಬೀಳುವುದು ; ದಾಳಿ ; ನುಗ್ಗುವುದು [Return to the c. ಮತ್ತೆ ಮೊದಲುಮಾಡು (ಮು., ವಾದದಲ್ಲಿ)]. (ಸೈನ್ಯ) ಶತ್ರುಸೈನ್ಯದಮೇಲೆ ಬೀಳಲು ಕೊಡುವ ಸಂಕೇತ : ಆಕ್ರಮಣ ಸಂಕೇತ. Take c. (ಬಳ. ಮಾ., ವಸ್ತುಗಳ ವಿಷಯದಲ್ಲಿ) ಹಿಡಿತ ತಪ್ಪಿಹೋಗು ; ಸ್ವಾಧೀನ ತಪ್ಪಿಹೋಗು (ಮು., ಪ್ರಮಾದ ಪರಿಣಾಮ ಹೊಂದುವಂತೆ)

Charge (ಕ್ರಿ.) ಹೊರೆ ಹೊರಿಸು ; ಹೇರು ; ಭರ್ತಿಮಾಡು ; (ಪಾತ್ರೆಗೆ, ಮದ್ದನ್ನು ಬಂದೂಕಿಗೆ) ತಕ್ಕಷ್ಟು ತುಂಬು (C. a gun ಬಂದೂಕು ಬಾರುಮಾಡು). (ವಾಯುವನ್ನು ಆವಿಯಿಂದ, ನೀರನ್ನು ರಾಸಾಯನಿಕ ದ್ರವ್ಯಗಳಿಂದ, ವಿದ್ಯುತ್ಸಂಗ್ರಹ ಕೋಶವನ್ನು ವಿದ್ಯುತ್ತಿನಿಂದ, ಮನಸ್ಸನ್ನು ವಿಷಯಗಳಿಂದ) ಪರಿಪೂರಣ ಮಾಡು. ಒಪ್ಪಿಸು ; ವಶ ಮಾಡು ; ನಿಯೋಜಿಸು (C. oneself with ಕೈಕೊಳ್ಳು). ಆಜ್ಞಾಪಿಸು ; ವಿಧಿಸು ; ಸಂದೇಶ ಕೊಡು (ಮು., ನ್ಯಾಯಾಧಿಪತಿ, ಬಿಷಪ್ಪು). ತಪ್ಪುಹೊರಿಸು ; ಅಪಾದಿಸು ; ದೋಷಾರೋಪಣೆ ಮಾಡು. ಖರ್ಚು ಹೊರಿಸು ; ಸಾಲ ಹೇರು ; ವೆಚ್ಚ ಹಾಕು ; ವೆಚ್ಚಕ್ಕೆ ಗುರಿಮಾಡು. ಬೆಲೆ, ಕೂಲಿ, ಕೇಳು. ರಭಸದಿಂದ ಮೇಲೆಬೀಳು, ನುಗ್ಗು ; ದಾಳಿ ಯಿಡು (ಮು., ಕುದುರೆಯಮೇಲಿನಿಂದ). (ಆಯುಧವನ್ನು) ಉಪ ಯೋಗಕ್ಕೆ ಸಿದ್ಧವಾಗಿಟ್ಟುಕೊಂಡಿರು (C. bayonets ಸವಾರರ ದಾಳಿಯನ್ನು ಎದುರಿಸಲು ಸನೀನನ್ನು ತಗ್ಗಿಸಿ ಹಿಡಿದುಕೊ). **Chárgeable** (ಗು.) (ಪ್ರಾಚೀ. ಪ್ರ.) ಹೆಚ್ಚು ವೆಚ್ಚ ತಗುಲುವ. ತಪ್ಪು ಹೊರಿಸಬಹುದಾದ ; ಅಪಾದನೀಯ ; ಆರೋಪಣೀಯ. ವೆಚ್ಚ ಹಾಕ ಬಹುದಾದ ; ಖರ್ಚಿಗೆ ಒಳಪಡಿಸಬಹುದಾದ (Chargeable to the Parish ಗ್ರಾಮದ ವೆಚ್ಚಕ್ಕೆ ಸೇರಬೇಕಾದ) ; ಮೇಲೆ ಹೊರಿಸ ಬಹುದಾದ ; (ಒಂದು) ಲೆಕ್ಕಕ್ಕೆ ನ್ಯಾಯವಾಗಿ ಸೇರಬೇಕಾದ. **Chárgeabílity** (ನಾ.) ; **Chárger**[1] (ನಾ.) (ಕ್ರಿಯಾರ್ಥಗಳಲ್ಲಿ). ಸೇನೆಯ ಮೇಲಧಿಕಾರಿಯ (ದಾಳಿಯ) ಕುದುರೆ.

Chárge (d'affaíres) (F) ಷಾರ್ಷೇಡಫೇರ್ (ನಾ. ; ಬ. ವ. -es d'-) ಉಪ ರಾಯಭಾರಿ ; ಸಾಮಾನ್ಯ ಆಸ್ಥಾನದಲ್ಲಿ ನಿಯೋಗಿ.

Chárger[2] ಚಾರ್ಜರ್ (ನಾ.) (ಪ್ರಾಚೀ. ಪ್ರ.) ಚಪ್ಪಟೆಯಾದ ದೊಡ್ಡ ತಟ್ಟೆ ; ಹರಿವಾಣ.

Cháriot ಚ್ಯಾರಿಯಟ್ (ನಾ., ಕ್ರಿ. ಸಕ.) ರಥ ; ತೇರು ; ವಿಜಯ ರಥ (ಕಾವ್ಯ, ರೂಪ. : ಸೂರ್ಯರಥ, ಮೊ.). (ಇಂಗ್ಲೆಂಡಿನಲ್ಲಿ ೧೮ನೆಯ ಶತಮಾನದಲ್ಲಿ) ಹಿಂಭಾಗದಲ್ಲಿ ಮಾತ್ರ ಆಸನಗಳುಳ್ಳ ನಾಲ್ಕುಚಕ್ರದ ಗಾಡಿ. (ಚರಿತ್ರೆ) ಜೂಜೋಟಕ್ಕೂ ಯುದ್ಧಕ್ಕೂ ಉಪಯೋಗಿಸುತ್ತಿದ್ದ ರಥ. (ಕ್ರಿ.) ರಥದಲ್ಲಿ, ಅಥವಾ ರಥದಲ್ಲಿ ಹೇಗೊ ಹಾಗೆ, ತೆಗೆದು ಕೊಂಡುಹೋಗು. **Charioteér** — ಟೀಯರ್ (ನಾ.) ಸಾರಥಿ.

Cһárity ಚ್ಯಾರಿಟಿ (ನಾ.) ಪ್ರೀತಿ ; ವಿಶ್ವಾಸ ; ಅನುಕಂಪ ; ಭೂತ ದಯೆ ; ಮಮತೆ (C. begins at home ಮೊದಲ ಕರ್ತವ್ಯ ಮನೆಯವರಿಗೆ. ಮೊದಲು ತನ್ನವರು, ಅಮೇಲೆ ನೆರೆಯವರು. ಮನೆ ಮೆಚ್ಚಿಸಿ ಮಂದಿಮೆಚ್ಚಿಸು). ಪರ ಸಹಿಷ್ಣುತೆ ; ಉದಾರತೆ ; ಔದಾರ್ಯ ; ಹೃದಯ ವೈಶಾಲ್ಯ ; ಸದ್ಭಾವನೆ. ಕೊಡುಗೈ ; ದಾನಶೀಲತೆ (Charities ಧರ್ಮಕಾರ್ಯಗಳು). ಭಿಕ್ಷ ; ದಾನ ; ಧರ್ಮ. ಅನಾ ಥಾಲಯ (C.-boy, C.-girl ಅನಾಥಾಲಯದ ಹುಡುಗ, ಹುಡುಗಿ). Brother, Sister, of C. ದರಿದ್ರರಿಗೆ ಸಹಾಯಮಾಡುವ ಉದ್ದೇಶ ವುಳ್ಳ ಧರ್ಮಸಂಸ್ಥೆಯ ಸದಸ್ಯ, ಸದಸ್ಯೆ : ಅನಾಥ ಸಂಸ್ಥೆಯ ಸದಸ್ಯ, ಸದಸ್ಯೆ. C. Commission(ers) ಧರ್ಮಕಾರ್ಯಗಳಿಗಾಗಿ ಹಾಕಿದ ಪುದುವಟ್ಟು, ಕೊಟ್ಟ ಮಾನ್ಯ, ಬಿಟ್ಟ ದತ್ತಿ, ಮೊ. ಗಳ ಆಡಳಿತ ನೋಡಿ ಕೊಳ್ಳುವುದಕ್ಕಾಗಿ ನಿಯಮಿತವಾದ ಸಮಿತಿ(ಯವರು) ; ಧರ್ಮದರ್ಶಿಗಳು. **Cháritable** (ಗು.) ದಾನಶೀಲ ; ಧರ್ಮಬುದ್ಧಿಯುಳ್ಳ ; ಕೊಡುಗೈಯ ; ಉದಾರ ; ಧರ್ಮಾರ್ಥವಾದ. (ಇತರರು, ಅವರ ಕಾರ್ಯಗಳು, ಅಭಿಪ್ರಾಯಗಳು — ಇವುಗಳ ವಿಷಯದಲ್ಲಿ) ಉದಾರ ಭಾವನೆಯುಳ್ಳ ; ಪರ ಸಹಿಷ್ಣುತೆಯುಳ್ಳ. **Cháritableness** (ನಾ.) ; **Cháritably** (ಕ್ರಿ. ವಿ.)

Chárivári ಷಾರಿವಾರಿ (ನಾ.) ಗೊಂದಲ ; ಗದ್ದಲ ; ಗಲಭೆ ; ಗಲಾಟೆ.

Chárka ಚರ್ಕ (ನಾ.) (ಹಿಂದಿ) (ಇಂಡಿಯದ) ನೂಲುವ ರಾಟೆ : ಚರಕ.

Chárlady ಚಾರ್‌ಲೇಡಿ (ನಾ.) (ಅಸಂ.) ಮನೆಗೆಲಸದವಳು.

Chárlatan ಷಾರ್ಲಟನ್, — ಟ್ಯಾನ್ (ನಾ., ಗು.) ಯೋಗ್ಯತೆಯಿಲ್ಲದೆ ವೈದ್ಯಮಾಡುವವನು ; ಅಳಲೆಕಾಯಿ ಪಂಡಿತ. ಜ್ಞಾನ, ಕೌಶಲ, ಇರುವಂತೆ ನಟಿಸುವ(ವನು) ; ಪಂಡಿತ ವೇಷಿ ; ಬೂಟಾಟಿಗ. **Chárlatanish** (ಗು.) ; **Chárlatanism** (ನಾ.) ; **Chárlatanry** (ನಾ.)

Charles's Wain ಚಾರ್ಲ್ಸ್‌ವೇನ್ (ನಾ.) ಸಪ್ತರ್ಷಿ ಮಂಡಲ ; ಈ ಮಂಡಲದ ಏಳು ನಕ್ಷತ್ರಗಳು.

Chárley ಚಾರ್ಲಿ (ನಾ.) (ಹಳೆಯ ಬಳ. ಮಾ.) ರಾತ್ರಿಕಾವಲುಗಾರ.

Charm ಚಾರ್‌ಮ್ (ನಾ., ಕ್ರಿ. ಸಕ.) ಗೂಢ ಅಥವಾ ದೈವಿಕ ಶಕ್ತಿಯುಳ್ಳ ರಕ್ಷೆಯೆಂದು ಹೇಳುವ ಶ್ಲೋಕ, ವಾಕ್ಯ, ಶಬ್ದ, ಕೃತ್ಯ, ವಸ್ತು ; ಮಂತ್ರ ; ಪೀಡಾ ನಿವಾರಕವಾಗಿ ಧರಿಸುವ ರಕ್ಷೆ, ತಾಯಿತಿ, ಯಂತ್ರ. ಗಡಿಯಾರದ ಸರಪಣಿ, ಮೊ. ಗಳಲ್ಲಿ ಹಾಕಿಕೊಳ್ಳುವ ಅಲಂಕಾರದ ಅಥವಾ ಥಳುಕಿನ ವಸ್ತು. ಪ್ರೇಮ ಅಥವಾ ಮೆಚ್ಚುಗೆಯನ್ನು ಹುಟ್ಟಿಸುವ ಗುಣ, ರೂಪು. (ಬ. ವ. ದಲ್ಲಿ) ಸೊಬಗು ; ಚೆಲುವು ; ಸೊಗಸು ; ಗಾಡಿ ; ಸ್ತ್ರೀಸೌಂದರ್ಯ. ಲಾವಣ್ಯ ; ರಮ್ಯತೆ ; ಸೌಂದರ್ಯ ; ಮೋಹಕ ಶಕ್ತಿ. (ಕ್ರಿ.) ಮಂತ್ರಹಾಕು ; ಮಾಟಮಾಡು ; ಮೋಹಗೊಳಿಸು ; ಗೂಢ ಅಥವಾ ದೈವಿಕ ಶಕ್ತಿಯನ್ನು ಕೊಡು (Bear a charmed life ಮಂತ್ರರಕ್ಷಿತವಾದ ಜೀವವುಳ್ಳವನಾಗಿರು). ಮೋಹ ಗೊಳಿಸು ; ಚಿತ್ತಾಕರ್ಷಣೆ ಮಾಡು ; ಆನಂದ ಉಂಟುಮಾಡು (Charmed with ಮೋಹಗೊಂಡು). **Chárming** (ನಾ., ಗು.) ಮಂತ್ರ ಮಾಟಗಳ ಪ್ರಯೋಗ. ಮನಮೋಹಿಸುವ ; ಮನಸ್ಸನ್ನು ಸೆಳೆಯುವ ; ಮಂತ್ರದಿಂದ ಮರುಳುಮಾಡುವ ; ಮನೋಹರ ; ರಮಣೀಯ ; ಹೃದಯಂಗಮ. **Chármingly** (ಕ್ರಿ. ವಿ.) ; **Chármer** (ನಾ.) (ಕ್ರಿಯಾರ್ಥಗಳಲ್ಲಿ) ; ಸುಂದರಿ ; ಮೋಹಿನಿ ; ಬೆಡಗುಗಾತಿ (ಈಗ ಹಾಸ್ಯವಾಗಿ ಅಥವಾ ಪ್ರಾಚೀ. ಪ್ರ.)

Chárnel-house ಚಾರ್ನಲ್ ಹೌಸ್ (ನಾ.) ಹೆಣಗಳನ್ನೂ ಎಲುಬು ಗಳನ್ನೂ ಒಟ್ಟಿರುವ ಮನೆ ಅಥವಾ ನೆಲಮಾಳಿಗೆ ; ಹೆಣಮಾಳಿಗೆ.

Cháron ಕೇರನ್ (ನಾ.) (ಗ್ರೀಕ್ ಪುರಾಣ) ಮೃತರ ಆತ್ಮಗಳನ್ನು 'ಸ್ಟಿಕ್ಸ್' ನದಿ ದಾಟಿಸಿ ಪ್ರೇತಲೋಕಕ್ಕೆ ಸಾಗಿಸುವ ನಾವಿಕ. (ಹಾಸ್ಯವಾಗಿ) ಅಂಬಿಗ. C.'s boat, ferry ಸಾಯುವ ಹೊತ್ತು ; ಅವಸಾನ ಕಾಲ.

Chárpoy ಚಾರ್ಪಾಯ್ (ನಾ.) ಇಂಡಿಯದ ಒಂದು ತರದ ಲಘುವಾದ ಮಂಚ ; ಚಾರ್ಪಾಯಿ ; ಹುರಿಮಂಚ.

Chart ಚಾರ್ಟ್ (ನಾ., ಕ್ರಿ. ಸಕ.) (ತೀರದ ರೇಖೆ, ಬಂಡೆಗಳು, ಆಳಸಾಲದ ಪ್ರದೇಶಗಳು, ಮೊ. ನ್ನು ಚಿತ್ರಿಸಿರುವ) ನಾವಿಕನ ಸಮುದ್ರಪಟ. (ವಾಯುಮಂಡಲದ ಶಾಖವ್ಯತ್ಯಾಸಗಳು, ಪದಾರ್ಥಗಳ ಬೆಲೆಯ ವ್ಯತ್ಯಾಸ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳು, ಮೊ. ವಿಶೇಷ ವಿಷಯಗಳನ್ನು) ರೇಖೆಯ ಮೂಲಕ ಚಿತ್ರಿಸುವ ನಕ್ಷೆ; ರೇಖಾಪಟ (Magnetic c. ಭೂಕಾಂತ ಸ್ಥಿತಿಯ ರೇಖಾಪಟ). ಯಾವುದಾದರೂ ಒಂದು ವಿಷಯವನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ಗ್ರಹಿಸಲಾಗುವ ಉದ್ದೇಶದಿಂದ ವಿಷಯ ವಿಭಾಗ ಮಾಡಿ ರಚಿಸಿರುವ ತಃಖ್ತೆ (ಪಟ್ಟಿ). (ಕ್ರಿ.) ನಕ್ಷೆ ಮಾಡು; ತಃಖ್ತೆ ಮಾಡು. **Chártless** (ಗು.)

Chárter ಚಾರ್ಟರ್ (ನಾ., ಕ್ರಿ. ಸಕ.) (ದೊರೆಯಿಂದ ಅಥವಾ ರಾಜ್ಯ ಶಾಸನ ಸಭೆಯಿಂದ ಕೊಡಲ್ಪಟ್ಟ ಹಕ್ಕುಬಾಧ್ಯತೆಗಳ) ಸನ್ನದು, ಶಾಸನ (ಮು., ಪಟ್ಟಣಕ್ಕೆ ಪೌರಸಭಾಧಿಕಾರ ಕೊಡುವುದು, ಸಂಘ ಸ್ಥಾಪನೆ, ವಿಶ್ವವಿದ್ಯಾನಿಲಯ ಸ್ಥಾಪನೆ, ಮೊ. ಗಳದು. Great C., Magna Charta ನೋಡಿ). ಭೂಸ್ವತ್ತಿನ ವರ್ಗಪತ್ರ. ವಿಶೇಷಾಧಿಕಾರ (ಕೊಡು); ಹಕ್ಕುಬಾಧ್ಯತೆ (ಕೊಡು); ಸನ್ನದು (ಕೊಡು). ಹಡಗು ಬಾಡಿಗೆಗೆ ಕರಾರು (ಮಾಡಿಕೊ). (ಬಳ. ಮಾ.) ಬಂಡಿ, ಮೊ. ನ್ನು ಬಾಡಿಗೆಗೆ ಗೊತ್ತುಮಾಡಿಕೊ. Chartered accountant ರಾಜಸನ್ನದು ಪಡೆದಿರುವ ಲೆಕ್ಕಿಗ ಸಂಘದ ಸದಸ್ಯ: ಸನ್ನದು ಲೆಕ್ಕಿಗ. Chartered company ರಾಜಸನ್ನದು ಪಡೆದ (ವ್ಯಾಪಾರ) ಸಂಘ. Chartered libertine ಸ್ವೇಚ್ಛಾಧಿಕಾರ ಪಡೆದವನು. **Chárterer** (ನಾ.)

Chárterhouse ಚಾರ್ಟರ್‌ಹೌಸ್ (ನಾ.) ವಯಸ್ಸಾದ ವಿಶ್ರಾಂತ ವೇತನಿಗಳಿಗಾಗಿ ಲಂಡನ್ನಿನಲ್ಲಿರುವ ಭಿಕ್ಷಾಗೃಹ. C. School ಆ ಸಂಬಂಧದ ಸಾರ್ವಜನಿಕ ವಿದ್ಯಾಶಾಲೆ.

Chárter-party ಚಾರ್ಟರ್‌ಪಾರ್ಟಿ (ನಾ.) (ಸಾಮಾನು ಸಾಗಿಸುವುದಕ್ಕಾಗಿ ಹಡಗನ್ನು ಬಾಡಿಗೆಗೆ ತೆಗೆದುಕೊಳ್ಳುವ ಸಂದರ್ಭದಲ್ಲಿ) ಹಡಗಿನ ಯಜಮಾನನೂ ಬಾಡಿಗೆದಾರನೂ ಮಾಡಿಕೊಳ್ಳುವ ಕರಾರುಪತ್ರ: ಹಡಗುಬಾಡಿಗೆ ಕರಾರು.

Chártism ಚಾರ್ಟಿಸ್ಸ್‌ಮ್ (ನಾ.) (ಇಂಗ್ಲಿಷ್ ಚರಿತ್ರೆ) ೧೮೩೭-೪೮ ರಲ್ಲಿ ಒಂದು ರಾಜ್ಯಸುಧಾರಣಾ ಪಂಗಡದವರು ಕೂಲಿಜನರ ಸಾಮಾಜಿಕ ಮತ್ತು ಔದ್ಯೋಗಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕಾಗಿ ಕೈಕೊಂಡ ಚಳವಳಿ ಮತ್ತು ಅದರ ತತ್ತ್ವಗಳು: ಚಾರ್ಟಿಸ್ಟ್ ತತ್ತ್ವ, ಚಳವಳಿ. **Chártist** (ನಾ.) ಈ ತತ್ತ್ವದ ಅನುಯಾಯಿ; ಈ ಪಂಗಡದವನು.

Chartógraphy. **Cartography** ನೋಡಿ.

Chartreúse ಷಾರ್ಟ್ರೂಸ್ (ನಾ.) ಕಾರ್ತೂಸಿಯನ್ ಸಂನ್ಯಾಸಿಗಳ ವಿಹಾರ. ಮದ್ಯವಿಶೇಷ (Green, Yellow, c.). ನಸು ಎಲೆ ಹಸುರು ಬಣ್ಣ.

Chártulary. **Cartulary** ನೋಡಿ.

Chárwoman ಚಾರ್‌ವುಮನ್ (ನಾ.) ದಿನಗೂಲಿಯ ಮನೆಗೆಲಸದವಳು.

Cháry ಚೇರಿ (ಗು.) ಜಾಗರೂಕತೆಯುಳ್ಳ; ಎಚ್ಚರಿಕೆಯುಳ್ಳ; ಜೋಕೆಯಿಂದಿರುವ. ಹಿಂದೆಗೆಯುವ; ಹಿಂಜರಿಯುವ; ಭೀರು; ಧೈರ್ಯ ಸಾಲದ; ಸಂಕೋಚ ಪ್ರಕೃತಿಯ. ಮಿತ ವ್ಯಯದ; ಹಾಳತದ; ಒಪ್ಪವಾದ; ಮಿತವಾದ; ಹಿಡಿತದ (C. of praise ಹೊಗಳಿಕೆಯಲ್ಲಿ ಬಿಗಿಹಿಡಿಯುವ). **Chárily** (ಕ್ರಿ. ವಿ.); **Cháriness** (ನಾ.)

Charýbdis ಕರಿಬ್ಡಿಸ್ (ನಾ.) ಇಟಲಿಯ ಕರೆಯಲ್ಲಿರುವ 'ಸಿಲ್ಲ' ಎಂಬ ಅರೆಬಂಡೆಗೆ ಎದುರಾಗಿ ಸಿಸಿಲಿ ದ್ವೀಪದ ದಡದ ಬಳಿಯಿರುವ ಅಪಾಯಕರವಾದ ಸಮುದ್ರದ ಸುಳಿ. (ಒಂದು ಅಪಾಯವನ್ನು ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟು ಮತ್ತೊಂದಕ್ಕೆ ಗುರಿಯಾಗುವ ಸ್ಥಿತಿಯನ್ನು ಹೇಳುವಲ್ಲಿ, Between Scylla and Charybdis ಎಂದು ಹೇಳುವುದುಂಟು. ನಮ್ಮಲ್ಲಿ, 'ಅತ್ತ ದರಿ, ಇತ್ತ ಹುಲಿ' ಎಂಬಂತೆ)

Chase[1] ಚೇಸ್ (ನಾ., ಕ್ರಿ. ಸಕ.) ಅಟ್ಟಿಕೊಂಡು ಹೋಗು(ವುದು); ಬೆನ್ನಟ್ಟಿ ಹೋಗು(ವುದು) (In c. of ಅಟ್ಟಿಕೊಂಡು ಹೋಗುತ್ತ. Give c. ಬೆನ್ನಟ್ಟಿ ಹೋಗು). ಬೇಟೆ (The c. ವಿನೋದದ ಬೇಟೆ: ಷಿಕಾರಿ). ಆವರಣವಿಲ್ಲದ ಬೇಟೆಯ ವನಭೂಮಿ (Also, **Chace**). ಬೇಟೆಯಲ್ಲಿ ಅಟ್ಟಿಕೊಂಡುಹೋದ ಮೃಗ: ಬೇಟೆ. ಬೆನ್ನಟ್ಟಲ್ಪಟ್ಟ ಹಡಗು; ಅಟ್ಟಿಕೊಂಡುಹೋಗುವುದಕ್ಕಾಗಿ, ಅಥವಾ ಅಟ್ಟಿಕೊಂಡು ಬರುವ ಹಡಗನ್ನು ಎದುರಿಸುವುದಕ್ಕಾಗಿ, ಹಡಗಿನಲ್ಲಿಟ್ಟಿರುವ ಫಿರಂಗಿಗಳು; ಹಡಗಿನಲ್ಲಿ ಈ ಫಿರಂಗಿ ಹಾರಿಸುವ ಕಂಡಿಗಳುಳ್ಳ ಭಾಗ. (ಟೆನಿಸ್ ಆಟ) ಒಂದು ತೆರದ ಹೊಡೆತ. (ಕ್ರಿ.) ಓಡಿಸಿಬಿಡು; ಓಡಿಸಿಕೊಂಡು ಹೋಗು.

Chase[2] ಚೇಸ್ (ಕ್ರಿ. ಸಕ.) (ಲೋಹದಮೇಲೆ ಉಬ್ಬುಚಿತ್ರ, ಅಕ್ಷರ — ಇವನ್ನು) ಕೆತ್ತು, ಕೊರೆ; ನಕಾಸಿಕೆಲಸ ಮಾಡು. (ರತ್ನ, ಮೊ. ನ್ನು) ಕೆತ್ತು.

Chase[3] ಚೇಸ್ (ನಾ.) ಬಂದೂಕಿನ ಕೋವಿಯ ಭಾಗ; ಕೊಳವೆ, ಮೊ. ನ್ನು ಕೂರಿಸುವುದಕ್ಕಾಗಿ ಮಾಡಿದ ಗಾಡಿ.

Chase[4] ಚೇಸ್ (ನಾ.) ಒಂದು ಹಾಳೆಯಲ್ಲಿ ಮುದ್ರಣ ಮಾಡುವುದಕ್ಕಾಗಿ ಜೋಡಿಸಿದ ಅಚ್ಚುಮೊಳೆಗಳನ್ನು ಬಿಗಿದಿಡುವ ಕಬ್ಬಿಣದ ಚೌಕಟ್ಟು.

Chásm ಕ್ಯಾಸ್ಸ್‌ಮ್ (ನಾ.) ಆಳವಾದ ದೊಡ್ಡ ಬಿರುಕು; ಬೀಟೆ; (ಅಗಲವಾಗಿಯೂ ಆಳವಾಗಿಯೂ ಇರುವ) ದೊಡ್ಡ ಹಳ್ಳ. (ರೂಪ.) (ವ್ಯಕ್ತಿಗಳಿಗಾಗಲಿ ಪಕ್ಷಗಳಿಗಾಗಲಿ ಭಾವನೆ, ಉದ್ದೇಶ, ಮೊ. ಗಳಲ್ಲಿರುವ) ದೊಡ್ಡ ಅಂತರ, ಭೇದ; ವಿಶೇಷ ವ್ಯತ್ಯಾಸ. ಬಿಡುವು; ತೆರಪು; ಅವಕಾಶ. ಶೂನ್ಯ. **Chásmy** (ಗು.) (ಕಾವ್ಯ)

Chássis ಷಾಸಿ (ನಾ., ಬ. ವ. ದಲ್ಲೂ ಇದೇ ರೂಪ) (ಫಿರಂಗಿ ಗಾಡಿ, ಮೋಟಾರು ಬಂಡಿ, ಮೊ. ಗಳ) ಆಧಾರದ ಚೌಕಟ್ಟು; ಅಡಿಗಟ್ಟು.

Chaste ಚೇಸ್ಟ್ (ಗು.) ನ್ಯಾಯವಿರುದ್ಧವಾದ, ಧರ್ಮವಿರುದ್ಧವಾದ ಸಂಭೋಗವನ್ನು ಮಾಡದಿರುವ; ಅವ್ಯಭಿಚಾರಿ; ಪಾತಿವ್ರತ್ಯವುಳ್ಳ; ಸಾಧ್ವಿ; ಬ್ರಹ್ಮಚರ್ಯದಲ್ಲಿರುವ; ಪುರುಷ ಸಂಪರ್ಕವಿಲ್ಲದ; ಕನ್ಯಾವಸ್ಥೆಯಲ್ಲಿರುವ; ಪರಿಶುದ್ಧ. (ಭಾಷಣದಲ್ಲಿ) ಶುದ್ಧ, ನಿರ್ದುಷ್ಟ; ಸಂಯಮವುಳ್ಳ; ವ್ರತನಿಷ್ಠ. (ಅಭಿರುಚಿಯಲ್ಲೂ ರೀತಿಯಲ್ಲೂ) ಸರಳ; ನಿರಾಡಂಬರ; ನಿರ್ಮಲ; ಶುಚಿ. ಸಹಜವಾದ. **Chástely** (ಕ್ರಿ. ವಿ.); **Chástity** ಚ್ಯಾಸ್ಟಿಟಿ (ನಾ.) ಮಿತ ಭೋಗಿತ್ವ; ಪತ್ನೀವ್ರತತ್ವ; ಪಾತಿವ್ರತ್ಯ; ಕನ್ಯಾತ್ವ; ಅವ್ಯಭಿಚಾರ; ಸಂಭೋಗವಿಲ್ಲದಿರುವುದು; ಬ್ರಹ್ಮಚರ್ಯ; ಜಿತೇಂದ್ರಿಯತ್ವ. (ಅಭಿರುಚಿಯಲ್ಲೂ ರೀತಿಯಲ್ಲೂ) ಸರಳತೆ.

Chásten ಚೇಸ್‌ನ್ (ಕ್ರಿ. ಸಕ.) ಶಿಕ್ಷೆಯಿಂದ ಶುದ್ಧಮಾಡು, ತಿದ್ದು; ಕಷ್ಟದಮೂಲಕ ತಿದ್ದು. (ಅದೃಷ್ಟ, ದೇವರು, ಕಷ್ಟ, ಮೊ.) ದಂಡಿಸು, ಶಿಕ್ಷಿಸು. (ಶೈಲಿ, ರೀತಿ, ಮೊ. ಗಳಲ್ಲಿ) ಶುದ್ಧಮಾಡು. ಪುಟಕ್ಕೆ ಹಾಕು (ರೂಪ.); ಹೆಮ್ಮೆ ತಗ್ಗಿಸು; ಹದಕ್ಕೆ ತರು (ಮು., ಭೂ. ಕೃ. ಪ್ರಯೋಗ). **Chástener** ಚೇಸ್‌ನರ್ (ನಾ.)

Chastíse ಚ್ಯಾಸ್ಟೈಸ್ (ಕ್ರಿ. ಸಕ.) ದಂಡಿಸು; ಶಿಕ್ಷೆಮಾಡು; ಹೊಡೆ. **Chastíser** (ನಾ.); **Chástisement** — ಸ್ಟಿಸ್ಮೆಂಟ್ (ನಾ.)

Chat ಚ್ಯಾಟ್ (ಕ್ರಿ. ಅಕ., ನಾ.) ಸಲಿಗೆಯ ಮಾತು (ಆಡು); ಹರಟೆ (ಹೊಡೆ). **Chátty** (ಗು.) ಹರಟುವ ಸ್ವಭಾವದ. **Cháttiness** (ನಾ.)

Cháteau (F) ಷಾಟೋ (ನಾ.; ಬ. ವ. -x, -ಸ್) ಕೋಟೆಮನೆ; ಪ್ರಾಸಾದ; ಹಳ್ಳಿಮನೆ.

Cháttel ಚ್ಯಾಟ್ಲ್ (ನಾ.) ಚರಾಸ್ತಿ (ಸಾ., ಬ. ವ. ದಲ್ಲಿ). Goods and chattels ಎಲ್ಲ ಬಗೆಯ ಚರಸ್ವತ್ತು; ಜಂಗಿ. C. mortgage (ಅಮೆ. ಸಂ.) (ಸಾಲಕ್ಕೆ) ಚರಾಸ್ತಿಯ ಆಧಾರ.

Chátter ಚ್ಯಾಟರ್ (ಕ್ರಿ. ಅಕ., ನಾ.) (ಪಕ್ಷಿಗಳ ವಿಷಯದಲ್ಲಿ) ಚಿಲಿಪಿಲಿಗುಟ್ಟು. (ಮನುಷ್ಯ) ಬೇಗಬೇಗ ಮಾತನಾಡು; ಗಳಹು; ಹರಟು; ವಟಗುಟ್ಟು; ಅವಿವೇಕವಾಗಿ ಅಥವಾ ಅಸಂದರ್ಭವಾಗಿ ಮಾತನಾಡು. (ಹಲ್ಲು, ಯಂತ್ರ) ಕಟಕಟಿಸು, ಕಿರುಗುಟ್ಟು. (ನಾ.) (ಹಕ್ಕಿಗಳ) ಚಿಲಿಪಿಲಿ, (ಕೋತಿಗಳ) ಕಿಚಕಿಚ, ಮೊ. **Chátterbox** (ನಾ.) ಹರಟೆಯ ಮಲ್ಲ, ಮಲ್ಲಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Chátty ಚಾಟಿ (ನಾ.) (ಆಂ. ಇಂ.) ನೀರಿನ ಮಡಕೆ; ಚಟ್ಟಿ.

Chaúffer ಚಾಫರ್ (ನಾ.) ಬೆಂಕಿಯಿಡುವ ಲೋಹದ ಕುಕ್ಕೆ; ಕುಂಪಟಿ; ಗಾಳಿಕಂಡಿಗಳುಳ್ಳ ಚರಕುಲುಮೆ.

Chaúffeur (F) ಷೋಫರ್, (ಬಳ. ಮಾ.) ಷವರ್ (ನಾ.) ಮೋಟಾರು ಬಂಡಿ ನಡೆಸುವವನು. **Chauffeúse** ಷೋಫರ್ಸ್ (ನಾ.) ಮೋಟಾರು ಬಂಡಿ ನಡೆಸುವವಳು.

Chaúkidar, Chó- ಚೋಕಿದಾರ್ (ನಾ.) (ಆಂ. ಇಂ.) (ರಾತ್ರಿ) ಕಾವಲುಗಾರ; ಚೌಕಿದಾರ.

Chaulmoógra ಚಾಲ್ಮೂಗ್ರ (ನಾ.) ಈಸ್ಟ್ಇಂಡಿಯದ ಒಂದು ಜಾತಿಯ ಮರ; **C. oil** ಇದರ ಬೀಜದಿಂದ ತೆಗೆದ ಎಣ್ಣೆ (ಕುಷ್ಠ ರೋಗಕ್ಕೆ ಔಷಧ)

Chaussúre (F) ಷೊಸೂರ್ (ನಾ.) ಪಾದರಕ್ಷೆ (ಬೂಟುಗಳು, ಮೊ.)

Chaúvinism ಷೋವಿನಿಸ್ಮ್ (ನಾ.) ಅನ್ಯಾಕ್ರಮಣಶೀಲವಾದ ಸ್ವದೇಶ ಪ್ರೇಮ. **Chaúvinist** (ನಾ., ಗು.); **Chauvinístic** (ಗು.)

Chaw ಚಾ (ಕ್ರಿ. ಸಕ., ನಾ.) (ಈಗ, ಗ್ರಾಮ್ಯ). ಅಗಿ. ಹೊಗೆಸೊಪ್ಪಿನ ಚೂರು. (ಅಮೆ. ಸಂ.) C. up ಸೋಲಿಸಿಬಿಡು. C.-bacon ಹಳ್ಳಿ ಗಮಾರ; ಮಡೆಯ; ದಡ್ಡ.

Chawl ಚಾಲ್ (ನಾ.) (ಆಂ. ಇಂ.) (ಇಂಡಿಯಾದೇಶದ ಪಟ್ಟಣಗಳಲ್ಲಿ, ಮು., ಮುಂಬಯಿಯಲ್ಲಿ) ಅನೇಕ ಸಂಸಾರಗಳು ಒಕ್ಕಲಿರುವ ದೊಡ್ಡ ಮನೆ; ಚಾಲ್.

Cheap ಚೀಪ್ (ಗು.) ಅಗ್ಗವಾದ (C. and nasty ಅಗ್ಗದ ಬೆಲೆ, ಮುಗ್ಗಿದ ಜೋಳ); ಕೊಟ್ಟ ಬೆಲೆಗಿಂತಲೂ ಹೆಚ್ಚುಬಾಳುವ; ಸುಲಭ ವಾಗಿ ದೊರೆಯುವ; ಅಗ್ಗದ; ಹುರುಳಿಲ್ಲದ; ಮುಗ್ಗಿಹೋದ. Dirt c. ಹೊರೆಯಗ್ಗ. Feel c. (ಅಸಂ.) ಸ್ವಸ್ಥವಿಲ್ಲದಿರು. Got it c. ಅಗ್ಗವಾಗಿ ಸಿಕ್ಕಿತು. Hold c. ಅಸಡ್ಡೆಯಾಗಿ ಕಾಣು; ಕಡೆಗಣಿಸು; ತುಚ್ಛೀಕರಿಸು. On the c. ಅಗ್ಗವಾಗಿ. C. Jack ಅಗ್ಗದ ತಿರುಗುವ್ಯಾಪಾರಿ. C. trip(per) ರೈಲು, ಮೊ. ಗಳಲ್ಲಿ ದರ ತಗ್ಗಿದಾಗ ಪ್ರಯಾಣ (ಮಾಡುವವನು): ಅಗ್ಗದ ಪ್ರಯಾಣ (ಮಾಡು ವವನು). **Cheáply** (ಕ್ರಿ. ವಿ.); **Cheápish** (ಗು.); **Cheápness** (ನಾ.); **Cheápen** ಚೀಪ್ನ್ (ಕ್ರಿ.) (ಪ್ರಾಚೀ. ಪ್ರ.) ಚೌಕಾಸಿ ಮಾಡು. ಅಗ್ಗ ಮಾಡು; ಅಗ್ಗವಾಗು; ಬೆಲೆ ತಗ್ಗು.

Cheat ಚೀಟ್ (ನಾ., ಕ್ರಿ.) ಮೋಸ; ಕಪಟ; ವಂಚನೆ; ದಗ. ಮೋಸಗಾರ; ವಂಚಕ; ಕಪಟಿ; ದಗಾಕೋರ. ತಿಳಿಯದಂತೆ ಮೋಸಮಾಡಲು ಅನುಮತಿಯಿರುವ ಒಂದು ತೆರದ ಇಸ್ಪೀಟಾಟ. (ಕ್ರಿ.) ಮೋಸಗೊಳಿಸು; ಮೋಸಮಾಡು; ವಂಚಿಸು; ಟೋಪಿಹಾಕು; ವಂಚಿಸಿ ಅಪಹರಿಸು; ವಂಚನೆಯಿಂದ ವರ್ತಿಸು; ವಂಚನೆ ಮಾಡು. (ಕಾಲವನ್ನು, ಆಯಾಸವನ್ನು) ಕಳೆ.

Check[1] ಚೆಕ್ (ನಾ., ಭಾವ. ಅವ್ಯ.) ಅಡ್ಡಿ; ಅಡಚಣೆ; ತಡೆ; ಪ್ರತಿ ಬಂಧ; ಅಧೀನ; ಅಂಕೆ; ನಿರೋಧ (Keep in c. ಅಂಕೆಯಲ್ಲಿಟ್ಟಿರು); ನಿಷೇಧ; ಸೋಲು. (ಚದುರಂಗ) ಶಹಾ! ಎದುರಾಳಿಯ ದೊರೆಗೆ ಶಹಾ (ಕೊಡುವುದು). ಚಲನೆಯನ್ನು ಥಟ್ಟನೆ ನಿಲ್ಲಿಸುವುದು. (ಬೇಟೆ) ವಾಸನೆ ಸಿಕ್ಕದೆಹೋಗುವುದು. ತಡೆಯುವ ವಸ್ತು ಅಥವಾ ವ್ಯಕ್ತಿ; ನಿರೋಧಕ; ಪ್ರತಿಬಂಧಕ. (ಲೆಕ್ಕ) ತಾಳೆ ನೋಡುವುದು, ಸರಿ ನೋಡುವುದು; ತಾಳೆಯ ಗುರುತು. (ಇಟ್ಟಿರುವ ಸಾಮಾನು, ಮೊ. ಕ್ಕೆ) ಗುರುತಿನ ಚೀಟಿ. Hand in one's checks (ಬಳ. ಮಾ.) ಸಾಯಿ. **C.-nut** ಮರಸುತ್ತು ಸಡಿಲವಾಗದಂತೆ ಅದರಮೇಲೆ ತಿರುಗಿಸುವ ಮತ್ತೊಂದು ಮರಸುತ್ತು: ತಡೆಸುತ್ತು. **C.-rein** ಒಂದು ಕುದುರೆಯ ಲಗಾಮನ್ನು ಮತ್ತೊಂದರ ಕಡಿವಾಣಕ್ಕೆ ಕೂಡಿಸುವ ಲಗಾಮು: ಕೂಡು ಲಗಾಮು; ಕುದುರೆ ತಲೆತಗ್ಗಿಸದಂತೆ ತಡೆಯುವ ಲಗಾಮು; ತಡೆ ಲಗಾಮು. **C.-string** ಬಂಡಿಯನ್ನು ನಿಲ್ಲಿಸದೇಕೆಂದು ಬಂಡಿ ನಡೆಸುವವನಿಗೆ ತಿಳಿಸುವುದಕ್ಕಾಗಿ ಕಟ್ಟಿರುವ ದಾರ: ತಡೆದಾರ. **C.-taker** ನಾಟಕಶಾಲೆ, ಮೊ. ಗಳಲ್ಲಿ ಪ್ರವೇಶಚೀಟಿಗಳನ್ನು ತೆಗೆದು ಕೊಂಡು ಪರೀಕ್ಷಿಸುವವನು.

Check (ಕ್ರಿ.) ಚಲನೆಯನ್ನು ಥಟ್ಟನೆ ನಿಲ್ಲಿಸು. ತಡೆ; ತಡೆಗಟ್ಟು; ತಡೆಮಾಡು; ಹದ್ದಿನಲ್ಲಿಡು; ಅಂಕೆಯಲ್ಲಿಡು. (ಚದುರಂಗದಲ್ಲಿ ಎದು ರಾಳಿಯ ದೊರೆಗೆ) ಶಹಾಕೊಡು. (ಬೇಟೆಯ ವಿಷಯದಲ್ಲಿ: ವಾಸನೆ ನಿಂತು ಹೋದುದರಿಂದ ಅಥವಾ ಅದನ್ನು ನಿರ್ಧರಿಸಿಕೊಳ್ಳುವುದಕ್ಕಾಗಿ, ನಾಯಿ) ನಿಂತುಬಿಡು. (ಸ್ವನ್ಯದ ಮೇಲಧಿಕಾರಿ) ತಪ್ಪುಹಿಡಿ; ಆಕ್ಷೇಪಿಸು; ಛೀಮೆಟ್ಟುಹಾಕು; ಗದರಿಸು. (ಪಟ್ಟಿ, ಲೆಕ್ಕ, ಅಂಕಿಗಳು, ಕೆಲಸಗಾರರು, ಮೊ. ನ್ನು) ತಾಳೆ ನೋಡು, ಸರಿ ನೋಡು, ಮೊಕಾಬಿಲೆ ಮಾಡು.

Check[2] ಚೆಕ್ (ನಾ.) ಉದ್ದವಾಗಿಯೂ ಅಡ್ಡವಾಗಿಯೂ ಗೆರೆಗಳೆಳೆ ದಿರುವ ನಮೂನೆ: ಚೌಕುಳಿ ನಮೂನೆ; ಚೌಕುಳಿ ನಮೂನೆಯಾಗಿ ನೆಯ್ದ ಅಥವಾ ಅಚ್ಚೊತ್ತಿದ ಬಟ್ಟೆ: ಚೌಕುಳಿ ಬಟ್ಟೆ; ಪಪ್ಪಳಿ ಬಟ್ಟೆ; ಚೆಕ್ಕು ಬಟ್ಟೆ. **Checked** (ಗು.)

Check[3] ಚೆಕ್ (ನಾ.) = Cheque.

Chécker. **Chequer** ನೋಡಿ.

Checkmáte ಚೆಕ್‌ಮೇಟ್ (ಭಾವ. ಅವ್ಯ., ನಾ., ಕ್ರಿ. ಸಕ.) ಶಹಾ! (ಚದುರಂಗದಲ್ಲಿ ಎದುರಾಳಿಯ ದೊರೆಯ ಚಲನೆಗೆ ಅವಕಾಶವಿಲ್ಲವೆಂದು ಹೇಳುವ ಮಾತು). (ಚದುರಂಗದಲ್ಲಾಗಲಿ ಮತ್ತೆ ಯಾವ ಉದ್ಯಮ ದಲ್ಲಾಗಲಿ) ಪೂರಾ ಸೋಲು, ತಲೆಯೆತ್ತದ ಸೋಲು: ಪ್ಯಾದೆಮಾತು. (ಕ್ರಿ.) (ಚದುರಂಗ) ಕಟ್ಟು; ಪ್ಯಾದೆಮಾತು ಮಾಡು. ಸೋಲಿಸು; ಸಾಗದಂತೆ ಮಾಡು.

Chéddar ಚೆಡರ್ (ನಾ.) ಹಾಲಿನಿಂದ ಮಾಡಿದ ಒಂದು ತೆರದ 'ಚೀಸ್' ಎಂಬ ಪದಾರ್ಥ. (ಊರಿನ ಹೆಸರು)

Cheek ಚೀಕ್ (ನಾ., ಕ್ರಿ. ಸಕ.) ಗಲ್ಲ; ಕೆನ್ನೆ; ಕದಪು (ಗ್ರಾಂ.); ಗಂಡ; ಕಪೋಲ [C.-tooth ದವಡೆಯ ಹಲ್ಲು. C.-bone (ಕಣ್ಣು ಕೆಳಗಿನ) ಕೆನ್ನೆಯೆಲುಬು. C. by jowl ಒಟ್ಟೊಟ್ಟಿಗೆ; ಅನ್ಯೋನ್ಯವಾಗಿ; ಕೇವಲ ಕೇವಲ; ಗಳಸ್ಯ ಕಂಠಸ್ಯ. To one's own c. ಇತರರಿಗೆ ಕೊಡದೆ; ತಾನೊಬ್ಬನೇ]. ಅಲಕ್ಷ್ಯದ, ದುರಹಂಕಾರದ, ಮಾತು (ಆಡು); ಧೃಷ್ಟತನ; ಧಾರ್ಷ್ಟ್ಯ (Have the c. to ಧಾರ್ಷ್ಟ್ಯವುಳ್ಳವ ನಾಗಿರು). (ಬಾಗಿಲು ಮೊ. ಗಳ) ಪಕ್ಕನಿಲವು. (ಬ. ವ. ದಲ್ಲಿ) ಹಿಡಿಗಲ್ಲಿನ ದವಡೆಗಳು; (ಜೋಡಿಜೋಡಿಯಾಗಿ ಅಳವಡಿಸಿರುವ ಯಂತ್ರಭಾಗಗಳ) ಪಕ್ಕ ಪಟ್ಟಿಗಳು. **Cheéky** (ಗು.) ಅಲಕ್ಷ್ಯವಾದ, ದುರಹಂಕಾರದ, ಧಾರ್ಷ್ಟ್ಯತನದ. **Cheékily** (ಕ್ರಿ. ವಿ.); **Cheékiness** (ನಾ.)

Cheep ಚೀಪ್ (ಕ್ರಿ. ಅಕ., ನಾ.) (ಎಳೆಯ ಹಕ್ಕಿಗಳ ಚಿಲಿಪಿಲಿಯಂತೆ) ಸೂಕ್ಷ್ಮವಾದ ಕೀಚುದನಿ (ಮಾಡು). **Cheéper** (ನಾ.)

Cheer ಚೀಯರ್ (ನಾ., ಕ್ರಿ.) ಮನೋಭಾವ; ಚಿತ್ತವೃತ್ತಿ (What c. ಹೇಗಿದ್ದೀಯೆ? ಸ್ವಸ್ಥವೇ? Be of good c. ಗೆಲವಾಗಿರು; ಧೈರ್ಯ ದಿಂದಿರು; ನಿರಾಶಪಡಬೇಡ). ಗೆಲವು; ಹರ್ಷ; ಉಲ್ಲಾಸ. ಅನ್ನಪಾನ; ಆಹಾರ; ತಿಂಡಿ; ಉಣಿಸು; ಭೋಜನ (Make good c. ಸುಭೋಜನ ಮಾಡು. The fewer the better c. ಜನ ಕಡಮೆಯಾದಷ್ಟೂ ತಿಂಡಿ ಹೆಚ್ಚು). ಜಯ ಘೋಷ; ಪ್ರೋತ್ಸಾಹಧ್ವನಿ (Three cheers ಒಬ್ಬ ವ್ಯಕ್ತಿಗಾಗಲಿ ಒಂದು ವಸ್ತುವಿಗಾಗಲಿ ಗೌರವ ತೋರುವ ಸಂದರ್ಭದಲ್ಲಿ ಜನಸಂದಣಿ ಮೂರುಸಲ ಮಾಡುವ ಜಯ ಘೋಷ: ಜೈ! ಜೈ! ಜೈ!). (ಕ್ರಿ.) ಉಲ್ಲಾಸಗೊಳಿಸು; ಸಂತಸ ಗೊಳಿಸು; ಧೈರ್ಯ ಹೇಳು; ಉತ್ತೇಜನ ಕೊಡು; ಹುರಿದುಂಬಿಸು (ಮು., ಘೋಷಣೆಯಿಂದ); ಜಯಘೋಷ ಮಾಡು; ಶ್ಲಾಘಿಸು; ಪ್ರಶಂಸೆ ಮಾಡು; ಸಂತೋಷ ಸೂಚಕ ಧ್ವನಿ ಮಾಡು. C. up ಧೈರ್ಯ ಕೊಡು; ಧೈರ್ಯ ತಂದುಕೊ. **Cheérful** (ಗು.) ಹಸನ್ಮುಖದ; ನಗುಮುಖದ; ಸಂತುಷ್ಟ; ಸಂತೃಪ್ತ; ಹರ್ಷ ಚಿತ್ತ; ಉತ್ಸಾಹ ಪೂರ್ಣ; ಉಲ್ಲಾಸ ಕರ; ಸಂತೋಷಯುಕ್ತ; ಪ್ರಸನ್ನ; ಮನಸ್ಸುಳ್ಳ; ಅನಿಚ್ಛೆಯಿಲ್ಲದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cheérfully (ಕ್ರಿ. ವಿ.); **Cheérfulness** (ನಾ.); **Cheérless** (ಗು.) ಗೆಲವಿಲ್ಲದ ; ನಲಿವಿಲ್ಲದ ; ಉಲ್ಲಾಸ ರಹಿತ ; ವಿಷಣ್ಣ ; ನಿಸ್ತೇಜ ; ಮಂದ. **Cheérlessly** (ಕ್ರಿ. ವಿ.); **Cheérlessness** (ನಾ.); **Cheérly** (ಕ್ರಿ. ವಿ.) (ನಾವೆ) ಉಲ್ಲಾಸದಿಂದ ; ಮನಃಪೂರ್ವಕವಾಗಿ. **Cheéry** (ಗು.) ಉಲ್ಲಾಸಯುಕ್ತ ; ಗೆಲವಿನ ; ನಗುಮುಖದ. **Cheérily** (ಕ್ರಿ. ವಿ.); **Cheériness** (ನಾ.); **Cheério** (ಭಾವ. ಅವ್ಯ.) (ಅಸಂ.) (ಹುರಿದುಂಬಿಸುವ ಮಾತು ; ಸ್ನೇಹಿತರನ್ನು ಸಂಧಿಸುವಾಗ, ಬೀಳ್ಕೊಡುವಾಗ, ಹೇಳುವ ಉತ್ಸಾಹ ಸೂಚಕವಾದ ಮಾತು)

Cheese[1] ಚೀಸ್ (ನಾ.) ಮೊಸರನ್ನು ಒತ್ತಿ ನೀರನ್ನು ತೆಗೆದು ಗಟ್ಟಿಸಿದ ಆಹಾರಪದಾರ್ಥ : 'ಚೀಸ್'. 'ಸ್ಕಿಟ್‌ಲ್ಸ್' ಎಂಬ ಆಟದಲ್ಲಿ ಉಪಯೋಗಿಸುವ ಭಾರವಾದ ಚಪ್ಪಟೆಯ ಮರದ ಚೆಂಡು. Green c. ಇನ್ನೂ ಪಕ್ವವಾಗದಿರುವ, ಆರದಿರುವ, 'ಚೀಸ್.' Guava c. 'ಚೀಸ್' ಪದಾರ್ಥದ ಮಂದಕ್ಕೆ ಗಟ್ಟಿಸಿಮಾಡಿದ ಸೀಬೆಯಹಣ್ಣಿನ ಮುರಬ್ಬ. **C.-cutter** ಅಗಲವಾದ, ಬಗ್ಗಿರುವ, ಅಲಗುಳ್ಳ ಚೂರಿ. **C.-hopper** ಚೀಸ್‌ನೊಣದ ಮರಿಹುಳು. **Cheésemonger** ಚೀಸ್, ಬೆಣ್ಣೆ, ಮೊ. ನ್ನು ಮಾರುವವನು. **C.-paring** ಜಿಪುಣನಾದ ; ಜಿಪುಣತನ ; ಕಾಸಿಗೆ ಕಾಸು ಗಂಟುಹಾಕುವ. (ಬ. ವ. ದಲ್ಲಿ) ಕೆಲಸಕ್ಕೆ ಬಾರದ ಹರುಕುಮುರುಕುಗಳು ; ಚೂರುಪಾರು. **Cheésy** (ಗು.) ಚೀಸಿನಂಥ ; ಚೀಸಿನ ರುಚಿಯುಳ್ಳ. (ಅಸಂ.) ನೀಟಾದ ; ಸೊಗಸಿನ. **Cheésiness** (ನಾ.)

Cheese[2] ಚೀಸ್ (ನಾ.) The c. ಸರಿಯಾದದ್ದು ; ತಕ್ಕದ್ದು.

Cheese[3] ಚೀಸ್ (ಕ್ರಿ. ಸಕ.) (ಅಸಂ.) C. it ನಿಲ್ಲಿಸು ; ಬಿಡು ; ಬಿಟ್ಟುಬಿಡು (ವಿಧ್ಯರ್ಥದಲ್ಲಿ ಮಾತ್ರ)

Cheétah ಚೀಟ (ನಾ.) (ಸಾ., ಪಳಗಿಸಿ ಜಿಂಕೆಯನ್ನು ಬೇಟೆಯಾಡಲು ತರಬೇತು ಮಾಡಿದ) ಒಂದು ಜಾತಿಯ ಚಿರತೆ.

Chef (F) ಷೆಫ್ (ನಾ.) ಅಡಿಗೆಯ ಮುಖಂಡ ; ಮುಖ್ಯ ಬಾಣಸಿಗ.

Chef-d'oeúvre (F) ಷೆಡವ್ರ್, ಷೆಡವ್ರ್ (ನಾ. ; ಬ. ವ. Chefs- ; ಉಚ್ಚಾರಣೆ ಒಂದೇ) (ಕಲೆ, ಸಾಹಿತ್ಯ, ಮೊ. ಗಳಲ್ಲಿ) ಶ್ರೇಷ್ಠ ಕೃತಿ ; ಒಬ್ಬನ ಅತ್ಯುತ್ತಮ ಕೃತಿ.

Cheir(o)- (ಸಮಾಸದಲ್ಲಿ ಪೂರ್ವಪದ) = **Chir(o)-**, ಕೈ —.

Chéla[1] ಚೇಲ (ನಾ.) (ಸಂಸ್ಕೃತ) ಶಿಷ್ಯ ; ಚೇಲ.

Chéla[2] ಕೀಲ (ನಾ.) ನಳ್ಳಿಯ, ಚೇಳಿನ, ಕೊಂಡಿ.

Chelónian ಕಿಲೋನಿಯನ್ (ಗು.) (ಪ್ರಾ. ವಿ.) ದೇಹಕ್ಕೆ ಎರಡು ಚಿಪ್ಪುಗಳ ಆವರಣವುಳ್ಳ ಸರೀಸೃಪ ವರ್ಗದ 'ಕಿಲೋನಿಯ' ಎಂಬ (ಆಮೆ, ಮೊ. ಪ್ರಾಣಿಗಳುಳ್ಳ) ಗುಂಪಿನ.

Chemíse ಷಿಮೀಸ್ (ನಾ.) ಒಳಕುಪ್ಪಸ.

Chémistry ಕೆಮಿಸ್ಟ್ರಿ (ನಾ.) ಮೂಲಧಾತುಗಳು, ಅವು ಸಂಯೋಗವಾಗುವ ನಿಯಮಗಳು, ಮತ್ತು ಅವು ಬೇರೆಬೇರೆ ಸ್ಥಿತಿಗಳಲ್ಲಿ ತೋರಿಸುವ ಚರ್ಯೆಗಳು, ಮೊ. ವಿಷಯಗಳನ್ನು ವಿಚಾರ ಮಾಡುವ ಶಾಸ್ತ್ರ : ರಸಾಯನ ವಿಜ್ಞಾನ. (Applied or Practical c. ಪ್ರಾಯೋಗಿಕ ರಸಾಯನ ವಿಜ್ಞಾನ). (ರೂಪ.) ಗೂಢವಾದ, ಅಗೋಚರವಾದ, ಬದಲಾವಣೆ ಅಥವಾ ಕ್ರಿಯೆ : ಗೂಢ ಪರಿಣಾಮ. **Chémical** (ಗು., ನಾ.) ರಸಾಯನ ವಿಜ್ಞಾನದ ; ರಾಸಾಯನಿಕ (C. combination ರಾಸಾಯನಿಕ ಸಂಯೋಗ). (ಸಾ., ಬ. ವ. ದಲ್ಲಿ) ರಾಸಾಯನಿಕ ಪ್ರಕ್ರಿಯೆಯಲ್ಲಿ ದೊರೆಯುವ ಅಥವಾ ಉಪಯೋಗಿಸುವ ಪದಾರ್ಥಗಳು : ರಾಸಾಯನಿಕ ದ್ರವ್ಯ. Heavy chemicals ವ್ಯವಸಾಯದಲ್ಲೂ ಕೈಗಾರಿಕೆಗಳಲ್ಲೂ ಹೆಚ್ಚುಮೊತ್ತದಲ್ಲಿ ಉಪಯೋಗಿಸುವ ರಾಸಾಯನಿಕ ಪದಾರ್ಥಗಳು. **Chémically** (ಕ್ರಿ. ವಿ.); **Chémist** ಕೆ(ಕಿ)ಮಿಸ್ಟ್ (ನಾ.) ರಸಾಯನ ವಿಜ್ಞಾನಿ. ಔಷಧವಸ್ತು ವ್ಯಾಪಾರಿ.

Chémitype ಕೆಮಿಟೈಪ್ (ನಾ.) ಕೊರೆದ ಚಿತ್ರದಿಂದ ರಾಸಾಯನಿಕ ಕ್ರಿಯೆಯ ಮೂಲಕ ಅಚ್ಚನ್ನು ತಯಾರಿಸುವ ಪ್ರಕ್ರಿಯೆ.

Cheque, Check ಚೆಕ್ (ನಾ.) (ಹುಂಡಿಯಲ್ಲಿ ಬರೆದಿರುವವನಿಗೆ, ಅಥವಾ ಆ ಹುಂಡಿಯನ್ನು ತರುವವನಿಗೆ, ಅದರಲ್ಲಿ ನಮೂದಿಸಿರುವ ಹಣವನ್ನು ತನ್ನ ಲೆಕ್ಕದಿಂದ ಕೊಡಬೇಕೆಂದು ಬರೆದಿರುವ) ಹಣದ ಚೀಟಿ : ದರ್ಶನ ಹುಂಡಿ ; 'ಚೆಕ್ಕು'. Blank c. (Blank ನೋಡಿ). Crossed c. (Cross ನೋಡಿ). **C.-book** (ಒಂದು ಬ್ಯಾಂಕಿನಿಂದ ಹಣ ಪಡೆಯುವುದಕ್ಕಾಗಿ ಆ ಬ್ಯಾಂಕಿನವರು ತಕ್ಕಂತೆ ಮುದ್ರಿಸಿರುವ) ಹುಂಡಿಯ ನಮೂನೆಯ ಹಾಳೆಗಳುಳ್ಳ ಪುಸ್ತಕ : ಚೆಕ್ಕು ಪುಸ್ತಕ.

Chéquer, Chécker ಚೆಕರ್ (ನಾ., ಕ್ರಿ. ಸಕ.) (ಬ. ವ. ದಲ್ಲಿ) ತಿಂಡಿಯಂಗಡಿಯ ಗುರುತಿಗಾಗಿ ಉಪಯೋಗಿಸುವ ಚದುರಂಗದ ಮಣೆಯ ನಮೂನೆ ; ತಿಂಡಿತೀರ್ಥದ ಅಂಗಡಿ. ಚೌಕುಳಿಯಾಗಿ ಅಥವಾ ಪಕ್ಕಪಕ್ಕದಲ್ಲಿ ಬೇರೆಬೇರೆ ಬಣ್ಣಗಳು ಬರುವಂತೆ ಅಳವಡಿಸಿದ ನಮೂನೆ : ಚೌಕುಳಿ ನಮೂನೆ, ಪಪ್ಪಳಿ ನಮೂನೆ. (ಕ್ರಿ.) ಇಂಥ ನಮೂನೆಯಾಗಿ ಗುರುತುಮಾಡು ; ವಿವಿಧ ವರ್ಣಗಳುಳ್ಳದ್ದನ್ನಾಗಿ ಮಾಡು ; ಏಕರೂಪತೆಯನ್ನು ಮುರಿ ; ವೈವಿಧ್ಯವನ್ನುಂಟುಮಾಡು. Chequered lot, fortunes ನಾನಾ ಅವಸ್ಥೆಗಳ ಅನುಭವ. **Chéckers** (ನಾ., ಬ. ವ.) (ಅಮೆ. ಸಂ.) (ಚದುರಂಗದಂಥ) ಒಂದು ಬಗೆಯ ಆಟ. **Chéquers** (ನಾ.) ಮುಖ್ಯಮಂತ್ರಿಯ ಅಧಿಕಾರ ಸಂಬಂಧದ ಹಳ್ಳಿಯಮನೆ. **Chéquer-wise** (ಕ್ರಿ. ವಿ.)

Chérish ಚೆರಿಷ್ (ಕ್ರಿ. ಸಕ.) ಪಾಲಿಸು ; ಪೋಷಿಸು ; ಸಲಹು ; ಬೆಳಸು ; ಆದರಿಸು ; ಲಾಲನ ಪಾಲನ ಮಾಡು ; ವಿಶ್ವಾಸವಿಡು. ಬೆಚ್ಚಗೆ ಇಟ್ಟಿರು ; ಹಿತವುಂಟುಮಾಡು. ಬೆಲೆಯುಳ್ಳದುದಾಗಿ ಎಣಿಸು. ಮನಸ್ಸಿಡು ; (ಮು., ಆಸೆ, ಭಾವ, ಮೊ. ನ್ನು) ಮನಸ್ಸಿನಲ್ಲಿಟ್ಟುಕೊಂಡಿರು ; ನೆಮ್ಮಿಕೊಂಡಿರು. ಭಜಿಸು ; ಧ್ಯಾನಿಸು.

Cheroót ಷಿ(ಚಿ)ರೂಟ್ (ನಾ.) ಎರಡು ತುದಿಯೂ ತೆರೆದಿರುವ ಒಂದು ಬಗೆಯ ಹೊಗೆಸುತ್ತು : ಚುಟ್ಟಾ.

Chérry ಚೆರಿ (ನಾ., ಗು.) ಓಟೆಯಿರುವ ಒಂದುಜಾತಿಯ ಸಣ್ಣ ಹಣ್ಣು ; ಚೆರಿಹಣ್ಣು ; ಚೆರಿಗಿಡ (= C.-tree) ; ಅದರ ದಾರು (= C.-wood). (Make two bites at a c. ಹಿಂದುಮುಂದು ನೋಡು ; ಹಿಂದೇಟು ಹೊಡೆ ; ಉತ್ಸಾಹದಿಂದ ಮುಂದುವರಿಯದಿರು ; ಕೇವಲ ವಿಧಿಗಾಗಿ ಆಚರಿಸು. C.-pie ಸೂರ್ಯಕಾಂತ ಗಿಡ). (ಗು.) ಕೆಂಪನೆಯ (C. lips ಚೆಂದುಟಿ ; ಬಿಂಬಾಧರ)

Chérsonese ಕರ್ಸೊನೀಸ್ (ನಾ.) ಪರ್ಯಾಯ ದ್ವೀಪ.

Chert ಚರ್ಟ್ (ನಾ.) ಚಕಮುಕಿಯ ಕಲ್ಲಿನಂಥ ಬೆಣಚುಕಲ್ಲು.

Chérub ಚೆರಬ್ (ನಾ. ; ಬ. ವ. -s, -im) ದೇವತೆ ; ದೇವಪುರುಷ. (ಕಲೆ) ರೆಕ್ಕೆಗಳುಳ್ಳ ಮಗು(ವಿನ ತಲೆ) ; ಮುದ್ದುಮಗು ; ಹಸುಗೂಸು. **Cherúbic** ಚೆರೂಬಿಕ್ (ಗು.)

Chéshire ಚೆಷರ್ (ನಾ.) ಇಂಗ್ಲೆಂಡಿನ ಒಂದು ಜಿಲ್ಲೆಯ ಹೆಸರು. (ಗು.) C. cheese ಚೆಷರಿನಲ್ಲಿ ಮಾಡಿದ ಚೀಸು. C. cat ಹಲ್ಲುಕಿರಿದು ನಗುವವನು (Grin like a C. cat)

Chess ಚೆಸ್ (ನಾ.) ಇಬ್ಬರು ಆಟಗಾರರು ೩೨ ಕಾಯಿಗಳಿಂದ ೬೪ ಪಪ್ಪಳಿಯ ಮನೆಗಳಿರುವ ಮಣೆಯಮೇಲೆ ಆಡುವ ಆಟ : ಚದುರಂಗ(ದ ಆಟ). **C.-board** ಚದುರಂಗದ ಮಣೆ. **C.-men** ಚದುರಂಗದ ಕಾಯಿಗಳು.

Chest ಚೆಸ್ಟ್ (ನಾ.) ಭದ್ರವಾದ ದೊಡ್ಡ ಪೆಟ್ಟಿಗೆ ; ಪೆಠಾರಿ ; ನಾವಿಕನ ಸಾಮಾನಿನ ಪೆಟ್ಟಿಗೆ. (ಕೆಲಸದ ಸಾಮಾನುಗಳುಳ್ಳ) ಬಡಗಿಯ ಪೆಟ್ಟಿಗೆ. ಔಷಧದ ಪೆಟ್ಟಿಗೆ. (ಒಂದು ಸಂಸ್ಥೆಯ) ಖಜಾನೆ, ಕೋಶ, ಭಂಡಾರ (ಸಾ., ರೂಪ : ಖಜಾನೆಯಲ್ಲಿಯ ಹಣ). ಯಾವುದಾದರೂ ಸರಕಿನ (ಮು., ತೇಯೆಲೆಯ) ಪೆಟ್ಟಿಗೆ ; (ಇದರಿಂದ, ನಿಷ್ಕೃಷ್ಟವಲ್ಲದ) ಒಂದು ಅಳತೆ. (C. of drawers ಬಟ್ಟೆಗಳಿನ್ನಿಡುವುದಕ್ಕಾಗಿ ಉಪಯೋಗಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಳೆಬಾನೆಗಳುಳ್ಳ ಪೆಠಾರಿ : ಸಳೆಬಾನೆಯ ಪೆಠಾರಿ). (ಮನುಷ್ಯನ ಅಥವಾ ಇತರ ಪ್ರಾಣಿಯ) ಎದೆ. Get thing off one's c. (ಅಸಂ.) ಹೇಳಿಬಿಟ್ಟು ಮುಗಿಸಿಬಿಡು ; ಎದೆಭಾರವನ್ನಿಳಿಸಿಕೊ. **C.-note, -voice** ಮಾತಿನ ಅಥವಾ ಹಾಡಿನ ಅತ್ಯಂತ ಮೆಲುದನಿ. **C.-protector** ಎದೆ ಬೆಚ್ಚಗಿರುವುದಕ್ಕಾಗಿ ಹಾಕಿಕೊಳ್ಳುವ ಉಣ್ಣೆಯಬಟ್ಟೆ ; ಎದೆ ಗಾಪು. **C.-trouble** ಬೇರೂರಿರುವ ಶ್ವಾಸ(ಕೋಶಗಳ) ರೋಗ. **Chésted** (ಗು.)

Chésterfield ಚೆಸ್ಟರ್‌ಫ್ಹೀಲ್ಡ್ (ನಾ.) ಒಂದು ತೆರದ ಮೇಲಂಗಿ (೧೮ನೆಯ ಶತಮಾನದಲ್ಲಿದ್ದ ಒಬ್ಬ Earl of C. ನ ಹೆಸರಿನಿಂದ). ಮೆತ್ತೆಯ ಪದಾರ್ಥವನ್ನು ಹೆಚ್ಚಾಗಿ ತುಂಬಿರುವ ಒಂದು ತೆರದ ಮಂಚ (ಸೋಫಾ)

Chéstnut ಚೆಸ್‌ನಟ್ (ನಾ., ಗು.) ಒಂದು ಜಾತಿಯ ಮರ (Also, C.-tree, Spanish c., or Sweet c.); ಇದರ ಹಣ್ಣು ; ಇದರ ದಾರು (= C.-wood); ಕಾಡು ಚೆಸ್‌ನಟ್ (= Horse-c.). ಕುದುರೆಯ ಕಾಲಿನ ಒಳಪಾರ್ಶ್ವದಲ್ಲಿರುವ ಕೊಂಬಿನ ಗಂತಿ. ಕೇಳಿ ಕೇಳಿ ಹಳದಾದ ಐತಿಹ್ಯ : ಹಳಸಲು ಕಥೆ. ಚೆಸ್‌ನಟ್ (ದಟ್ಟ ಕೆಂಗಂದು) ಬಣ್ಣ(ದ) ; ಈ ಬಣ್ಣದ ಕುದುರೆ.

Chevál-glass ಷವಾರ್ ಗ್ಲಾಸ್ (ನಾ.) ನಿಲವುಗಳಮೇಲೆ ತೂಗ ಕಟ್ಟಿರುವ ಎತ್ತರವಾದ ಕನ್ನಡಿ: (ಎತ್ತರವಾದ) ತೂಗು ನಿಲುಗನ್ನಡಿ.

Chevaliér ಷೆವಲೀಯರ್ (ನಾ.) 'ನೈಟ್' ಪದವಿಯ ಕೆಲವು ಸಂಸ್ಥೆಗಳು, 'ಫ್ರೆಂಚ್ ಲೀಜನ್ ಆಫ್ ಆನರ್' ಎಂಬ ಫ್ರಾನ್ಸ್ ದೇಶದ ಒಂದು ಘನತೆಯ ಮಂಡಲಿ, ಮೊ. ಗಳ ಸದಸ್ಯ. ವೀರ. (ಪ್ರಾಚೀ. ಪ್ರ.) ಸವಾರ. ಸೈನಿಕ ಶಿಕ್ಷಣ ಪಡೆಯುತ್ತಿರುವ (ಕನಿಷ್ಠ) ಪುತ್ರ. C. of industry (C. d'industrie) ಸಾಹಸಿಗ ; ಮೋಸಗಾರ.

Chéviot ಚೀ(ಚೆ)ವಿಯಟ್ (ನಾ., ಗು.) (ಸ್ಕಾಟ್ಲೆಂಡಿನಲ್ಲಿಯ ಒಂದು ಬೆಟ್ಟದಸಾಲಿನ ಹೆಸರು). ಚೆವಿಯಟ್‌ಬೆಟ್ಟಗಳ ಕುರಿಯ (ಉಣ್ಣೆ, ಉಣ್ಣೆಯ ಬಟ್ಟೆ)

Chévy, Chívy ಚೆವಿ, ಚಿವಿ (ನಾ., ಕ್ರಿ.) ಬೇಟೆ(ಯಾಡು) ; ಬೆನ್ನಟ್ಟು(ವುದು) ; ಅವಸರದ ಓಟ (ಓಡು) ; (ಆಟದ ಮಕ್ಕಳಂತೆ, ಬೆದರಿದ ಪ್ರಾಣಿಯಂತೆ) ಓಡು. 'Prisoners' base' ಎಂಬ ಒಂದು ಆಟ.

Chew ಚ್ಯೂ, ಚೂ (ಕ್ರಿ., ನಾ.) (ಹಲ್ಲಿನಿಂದ) ಅಗಿ ; ನುಣ್ಣಗೆ ಅಗಿ ; ಕಚ್ಚು ಕಚ್ಚಾಗಿ ಮಾಡು ; (ಎಲೆಅಡಕೆಯನ್ನು, ಹೊಗೆಸೊಪ್ಪನ್ನು) ಅಗಿ. (ರೂಪ.) ಮನಸ್ಸಿನಲ್ಲಿಯೇ ತಿರುವಿಹಾಕುತ್ತಿರು ; ಚಿಂತನೆ ಮಾಡು ; ಧ್ಯಾನಿಸುತ್ತಿರು. [C. the cud ಮೆಲುಕು ಹಾಕು ; ಅರೆಜೀರ್ಣವಾದ ಆಹಾರಪದಾರ್ಥವನ್ನು ಮರಳಿ ಬಾಯಿಗೆ ತಂದುಕೊಂಡು ಅಗಿ. (ರೂಪ.) ಮರಳಿ ಮರಳಿ ಆಲೋಚನೆ ಮಾಡು ; ಮಥನ ಮಾಡು]. (ನಾ.) ಅಗಿತ. ಅಗಿತದ ಹೊಗೆಸೊಪ್ಪು ; ಹೊಗೆಸೊಪ್ಪಿನ ಚೂರು. Chewing gum ಬಹಳ ಹೊತ್ತು ಅಗಿಯಲು ಅನುಕೂಲಿಸುವಂತೆ ಕೆಲವು ಗೋಂದುಪದಾರ್ಥಗಳಿಗೆ ಸೀಯನ್ನೂ ಸುವಾಸನಾ ದ್ರವ್ಯಗಳನ್ನೂ ಸೇರಿಸಿ ಮಾಡಿದ ಪದಾರ್ಥ. **Chewer** (ನಾ.)

Chiaroscúro ಕ್ಯಾರೊಸ್‌ಕೂರೊ (ನಾ., ಗು.) ಚಿತ್ರಬರೆಯುವುದರಲ್ಲಿ ಬರಿಯ ಬೆಳಕು ನೆರಳುಗಳ ವಿನ್ಯಾಸ ; ಪ್ರಕೃತಿಯಲ್ಲಿ ಬೆಳಕು ನೆರಳುಗಳ ವಿನ್ಯಾಸ ; ಬಿಳಿಯ ಮತ್ತು ಕಪ್ಪು ಬಣ್ಣಗಳಿಂದ ಚಿತ್ರ ರಚನೆ. (ಸಾಹಿತ್ಯ, ಮೊ. ಗಳಲ್ಲಿ) ವಿಷಮ ಭಾವಗಳ ಸಾಮರಸ್ಯ ; ವೈವಿಧ್ಯ ; ಭಾವ ಶಬಲತೆ. (ಗು.) (ನಾಮವಾಚಕದ ಅರ್ಥಗಳಲ್ಲಿ). ಅರೆ ಕಾಣುವ ; ಅರೆ ಮರೆಯ.

Chiásmus ಕೈಆಕ್ಸ್‌ಮಸ್ (ನಾ.) (ವ್ಯಾ.) ಒಂದು ವಾಕ್ಯದ ಮೊದಲಿನ ಭಾಗದಲ್ಲಿಯ ಪದಕ್ರಮವನ್ನು ಎರಡನೆಯ ಭಾಗದಲ್ಲಿ ಹಿಂದು ಮುಂದು ಮಾಡುವುದು : ಕ್ರಮವ್ಯತ್ಯಯ (ಅಲಂಕಾರ) (ಉದಾ. I cannot dig, to beg I am ashamed)

Chiboúk, -que ಚಿಬೂಕ್ (ನಾ.) ತುರ್ಕಿಯವರ ಉದ್ದವಾದ ಹುಕ್ಕ.

Chic ಷಿಕ್ (ನಾ., ಗು.) ಚಾತುರ್ಯ. ಠೀವಿ ; ಒಯ್ಯಾರ ; ಮೇಲ್ಮೆಯ ಲಕ್ಷಣ. (ಗು.) ನೀಟುತನವುಳ್ಳ ; ನೀಟುಗಾರಿಕೆಯ.

Chicánery ಷಿಕೇನರಿ (ನಾ.) ಕಾನೂನು ಕುಯುಕ್ತಿ ; ಅನ್ಯಾಯದ ವಾದ. ಸಣ್ಣ ಪುಟ್ಟ ಅಂಶಗಳನ್ನೇ ದೊಡ್ಡದಾಗಿ ಮಾಡಿ ವಾದಿಸುವುದು. (ನ್ಯಾಯ ತೋರುವಂತೆ ಮಾಡುವ) ಮಿಥ್ಯಾ ವಿವಾದ ; ಕುತರ್ಕ ; ಕುವಾದ. **Chicáne** (ಕ್ರಿ., ನಾ.) ಮಿಥ್ಯಾ ವಿವಾದ ಮಾಡು ; ಕುಯುಕ್ತಿ ಹೂಡು ; ಕುತರ್ಕ ಮಾಡು ; ಅನ್ಯಾಯವನ್ನು ನ್ಯಾಯದಂತೆ ತೋರುವಹಾಗೆ ವಾದಿಸು. ಮೋಸಗೊಳಿಸು ; ವಂಚಿಸು. (ನಾ.) = Chicanery. ಬ್ರಿಡ್ಜ್ ಎಂಬ ಇಸ್ಪೀಟಾಟದಲ್ಲಿ ತುರುಫಿಲ್ಲದ ಕೈ.

Chick[1] ಚಿಕ್ (ನಾ. ; Chicken ಪದದ ಸಂಕ್ಷಿಪ್ತ) (ಮೊಟ್ಟೆಯೊಡೆದಮೇಲಿನ, ಅಥವಾ ಅದಕ್ಕೆ ಮೊದಲಿನ) ಹಕ್ಕಿಯ ಮರಿ ; ಮೊಟ್ಟೆಯ ಮರಿ ; ಕೋಳಿಯ ಮರಿ. The chicks ಒಂದು ಕುಟುಂಬದ ಮಕ್ಕಳುಮರಿ. [Chickabiddy (ಚಿಕಬಿಡಿ) ಪ್ರೀತಿಸೂಚಕವಾಗಿ ಹೇಳುವ ಮಗುವಿನ ಹೆಸರು : ಮುದ್ದುಕಂದ ; ಕಂದಮ್ಮ]. **C.-weed** ಒಂದು ಜಾತಿಯ ಸಣ್ಣ ಗಿಡ.

Chi(c)k[2] (ನಾ.) (ಆಂ. ಇಂ.) ತೆಳುವಾಗಿ ಸೀಳಿದ ಬಿದಿರುಕಡ್ಡಿಗಳಿಂದ, ದಾರಹೆಣೆದು ಮಾಡಿದ ತೆರೆ, ಫರದೆ : ಬಿದಿರು ತೆರೆ.

Chícken[1] ಚಿಕೆನ್ (ನಾ. ; ಬ. ವ. Chicken, Chickens) ಹಕ್ಕಿಯ ಮರಿ (ಮು., ಕೋಳಿಯ ಮರಿ) ; ಕೋಳಿಯ ಮರಿಯ ಮಾಂಸ. ಹುಡುಗ ; ಅನನುಭವಿ (ಉದಾ., He is no c.). Mother Cary's c. (ನಾವೆ) ಬಿರುಗಾಳಿಯ ಮಳೆಯಲ್ಲಿ ಕಾಣಿಸಿಕೊಳ್ಳುವ ಒಂದು ಜಾತಿಯ ಸಮುದ್ರಪಕ್ಷಿ. Count one's chickens before they are hatched ಕೂಸು ಹುಟ್ಟುವುದಕ್ಕೆಮೊದಲೇ ಕುಲಾವಿ ಹೊಲಿಸು ; ಅತಿ ಭರವಸೆಯಿಂದಿರು ; ಅತಿನಂಬಿಕೆಯಿಡು ; ದುಡುಂಪ್ರವೇಶ ಮಾಡು. C.-breast(ed) ವಿಕಾರವಾದ ಉಬ್ಬು ಎದೆಯೆಲುಬು (ಉಳ್ಳ). C. hazard ಒಂದು ಬಗೆಯ ಪಗಡೆಯಾಟ. C.-heart(ed) ಪುಕ್ಕಲೆದೆ(ಯ) ; ಅಂಜುಬುರುಕ(ನಾದ) ; ಅಂಜುಕುಳಿ. C.-pox ಸೀತಾಳೆ ಸಿಡುಬು.

Chícken[2], **Chíkan** ಚಿಕೆನ್ (ನಾ.) (ಆಂ. ಇಂ.) ಕಸೂತಿ ಕೆಲಸ ; C.-wallah ಕಸೂತಿ ಸಾಮಾನುಗಳ ತಿರುಗುವ್ಯಾಪಾರಿ.

Chíck-pea ಚಿಕ್‌ಪೀ (ನಾ.) ಕಡಲೆ.

Chícory ಚಿಕೊರಿ (ನಾ.) (ಬೇರಿಗಾಗಿ ಬೆಳಸುವ, ನೀಲಹೂವು ಬಿಡುವ) ಒಂದು ಜಾತಿಯ ಗಿಡ ; ಇದರ ಬೇರಿನ ಪುಡಿ : 'ಚಿಕೊರಿ' (ಈ ಪುಡಿಯನ್ನು ಕಾಫಿಪುಡಿಗೆ ಬದಲಾಗಿ ಅಥವಾ ಅದರೊಡನೆ ಬೆರಸುವುದಕ್ಕಾಗಿ ಉಪಯೋಗಿಸುತ್ತಾರೆ)

Chide ಚೈಡ್ (ಕ್ರಿ. ; ಭೂತ. Chid, ಭೂ. ಕೃ. Chidden, Chid) ಚೀಪೆಟ್ಟು ಹಾಕು ; ಅಟ್ಟಿಕೊ ; ಬಯ್ಯಿ ; ಜಡಿ (ಗ್ರಾಂ.)

Chief ಚೀಫ್ (ನಾ.) ನಾಯಕ ; ಮುಂದಾಳು ; ಆಳುವವನು ; ದೊರೆ. (ಒಂದು ಜಾತಿ, ಕುಲ, ಮೊ. ಗಳ) ಮುಖ್ಯಸ್ಥ, ಮುಖಂಡ ; ಯಜಮಾನ ; ಹೆಗ್ಗಡೆ. ಒಂದು ಇಲಾಖೆಯ ಮುಖ್ಯಾಧಿಕಾರಿ ; ಪ್ರಧಾನಾಧಿಕಾರಿ. (ವಂಶ ಲಾಂಛನ) ಗುರಾಣಿಯ ಮೇಲಿನ ಮೂರನೆಯ ಒಂದು ಭಾಗ. In c. ಮುಖ್ಯವಾಗಿ ; ವಿಶೇಷವಾಗಿ ; ಹೆಚ್ಚಾಗಿ. -in-c. ಪ್ರಧಾನ ; ಮುಖ್ಯ (Commander-in-c. ಪ್ರಧಾನ ಸೇನಾಪತಿ). **Chiéfess** (ನಾ.) ನಾಯಕಿ ; ಹೆಗ್ಗಡಿತಿ. **Chiéfdom** (ನಾ.) ಒಬ್ಬ ನಾಯಕನ, ರಾಜನ, ಸ್ಥಾನ, ಆಸ್ತಿ, ಆಧಿಪತ್ಯ. **Chiéfship** (ನಾ.) ಒಬ್ಬ ನಾಯಕನ ಕಾರ್ಯಭಾರ, ನಾಯಕತನ, ಅಧಿಕಾರ. **Chiéfless** (ಗು.) ; **Chiéfly** (ಗು.) ನಾಯಕನಿಗೆ ಯೋಗ್ಯವಾದ. **Chiéftain** — ಟೆನ್ (ನಾ.) (ಕಾವ್ಯ) ಸೇನಾ ನಾಯಕ ; ದಳವಾಯಿ ; ದರೋಡೆಕೋರರ ಮುಖಂಡ ; (ಹೈಲೆಂಡ್ ಕುಲದ, ಅಥವಾ ಅನಾಗರಿಕ ಪಂಗಡದ) ಮುಖ್ಯಸ್ಥ. **Chiéftaincy** (ನಾ.) ಮುಖ್ಯಸ್ಥನ ಅಧಿಕಾರ, ಕಾರ್ಯಭಾರ. **Chiéftainess** (ನಾ.) ಮುಖ್ಯಾಧಿಕಾರಿಣಿ ; ಹೆಗ್ಗಡಿತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Chiéftainry (ನಾ.) ಒಬ್ಬ ನಾಯಕನ ಪದವಿ, ಅಧಿಕಾರ, ಆಳಿಕೆ, ದೇಶ. (ಸಮುದಾಯದಲ್ಲಿ) ಮುಖ್ಯಸ್ಥರು. **Chiéftainship** (ನಾ.) ನಾಯಕ ಪದವಿ.

Chief [ಗು. (ತರ ತಮಗಳು -er, -est : ಈಗ ರೂಢಿಯಲ್ಲಿಲ್ಲ), ಕ್ರಿ. ವಿ.] ಮೊದಲನೆಯ ; ಪ್ರಧಾನ (C. Justice ಪ್ರಧಾನ ನ್ಯಾಯಾಧೀಶ) ; ಪ್ರಮುಖ ; ಮುಖ್ಯ ; ಮುಖಂಡ. (ಕ್ರಿ. ವಿ.) ಮುಖ್ಯವಾಗಿ ; ವಿಶೇಷವಾಗಿ. **Chiéfly** (ಕ್ರಿ. ವಿ.) = Chief (ಕ್ರಿ. ವಿ.) ; ಎಲ್ಲಕ್ಕೂ ಮೇಲಾಗಿ.

Chíff-chaff ಚಿಫ್ ಚಾಫ್ (ನಾ.) ಒಂದು ಪಕ್ಷಿಜಾತಿ. (ಅದರ ಧ್ವನಿಯ ಅನುಕರಣ ಶಬ್ದ)

Chíffon (F) ಷಿಫಾನ್ (ನಾ. ; ಸಾ., ಬ. ವ. ದಲ್ಲಿ) ಹೆಂಗಸಿನ ಉಡುಪಿನ ಅಲಂಕಾರಸಾಮಗ್ರಿ. (ಏ. ವ. ದಲ್ಲಿ) ನವಿರಾದ ಒಂದು ಬಗೆಯ ಜಾಲರಿಬಟ್ಟೆ.

Chignón (F) ಷೀನ್ಯಾನ್ (ನಾ.) ತಲೆಗಂಟು ; ತುರುಬು.

Chílblain ಚಿಲ್‌ಬ್ಲೆಯ್‌ನ್ (ನಾ.) ಶೀತಕ್ಕೆ ಒಡ್ಡುವುದರಿಂದ ಕೈ ಕಾಲು ಮೊ. ಗಳಮೇಲೆ ಆಗುವ ನವೆಯ ಹುಣ್ಣು : ಶೀತದ ಹುಣ್ಣು. **Chílblained** (ಗು.) ; **Chílblainy** (ಗು.)

Child ಚೈಲ್ಡ್ (ನಾ. ; ಬ. ವ. Children ಚಿಲ್ಡ್ರನ್) (ಇನ್ನೂ ಹುಟ್ಟದಿರುವ, ಅಥವಾ ಹೊಸದಾಗಿ ಹುಟ್ಟಿದ) ಕೂಸು ; ಶಿಶು ; ಹಸುಳೆ ; ಮಗು. ಹುಡುಗ ; ಹುಡುಗಿ. ಹುಡುಗು ಮನುಷ್ಯ. (ಯಾವ ವಯಸ್ಸಿನಲ್ಲೇ ಆಗಲಿ) ಮಗ, ಮಗಳು. ಸಂತಾನ ; ವಂಶಸ್ಥ. ಶ್ರೀಮಂತ ತರುಣ (ಪ್ರಾಚೀನ ರೂಪ. Childe). (ರೂಪ.) ಅನುಯಾಯಿ ; ಅವಲಂಬಿ ; ಶಿಷ್ಯ (Children of Izaak Walton ಮೀನು ಹಿಡಿಯುವವರು ; ಬೆಸ್ತರು. C. of nature ಪ್ರಕೃತಿಯ ಮಗು ; ನೈಜವಾದ ಮನುಷ್ಯ). ಫಲ ; ಪರಿಣಾಮ. With c. ಬಸಿರಾಗಿ ; ಗರ್ಭ ಧರಿಸಿ. **C.'s-play** ಮಕ್ಕಳಾಟ (ರೂಪ.) ; ಬಹಳ ಸುಲಭವಾದ ಕೆಲಸ. **Chíldbed, Chíld-birth** ಹಡೆಯುವುದು ; ಹೆರುವುದು ; ಹೆರಿಗೆ ; ಪ್ರಸವ. **C. wife** ಹುಡುಗಿ ಹೆಂಡತಿ. **Chíldless** (ಗು.) ; **Chíldlessness** (ನಾ.) ; **Chíldhood** (ನಾ.) ಬಾಲ್ಯ ; ಶೈಶವ ; ಚಿಕ್ಕಂದು ; ಮಗುತನ ; ಬಾಲ್ಯಾವಸ್ಥೆ. ಹುಟ್ಟಿದಂದಿನಿಂದ ಪ್ರಾಯದ ವರೆಗಿನ ಕಾಲ. Second c. ಅರುಳು ಮರುಳು ; ಮುಪ್ಪು. **Chíldish** (ಗು.) ಮಗುವಿನ ; ಮಗುವಿಗೆ ತಕ್ಕ ; ಶಿಶುಸಹಜ ; ಬಾಲೋಚಿತ ; ಬಾಲಿಶ ; ಮಕ್ಕಳಾಟಿಕೆಯ ; ಹುಡುಗುತನದ ; ಹುಡುಗಾಟದ. **Chíldishly** (ಕ್ರಿ. ವಿ.) ; **Chíldishness** (ನಾ.) ; **Chíldlike** (ಗು.) (ಸಹಜತೆ, ಸರಳತೆ, ಅಕೃತ್ರಿಮತೆ — ಈ ಗುಣಗಳಲ್ಲಿ) ಮಗುವಿನಂಥ ; ಸರಳ ಸ್ವಭಾವದ ; ನಿಷ್ಕಪಟ. **Chíldly** (ಗು., ಕ್ರಿ. ವಿ.) ಶಿಶುಸಹಜ(ವಾಗಿ) ಮಗುವಿನಂತೆ. ;

Chíldermas ಚಿಲ್ಡರ್‌ಮ್ಯಾಸ್ (ನಾ.) (ಡಿಸಂಬರು ೨೮ನೆಯ ತಾರೀಖಿನ ದಿನ ಆಚರಿಸುವ) ಕ್ರೈಸ್ತರ ಒಂದು ಹಬ್ಬ.

Chíliad ಕಿಲಿಯಡ್ (ನಾ.) ಸಾವಿರ ; ಸಹಸ್ರ ; ಸಾವಿರ ವರ್ಷ. **Chíliasm** —ಅ್ಯಸ್ಮ್ (ನಾ.) (ಕ್ರೈಸ್ತ) ಸುಯುಗ ವಾದ ; ಕ್ರಿಸ್ತನು ಸಶರೀರಿಯಾಗಿ ಭೂಮಿಯಮೇಲೆ ಮುಂದೆ ಸಾವಿರ ವರ್ಷ ರಾಜ್ಯಭಾರ ಮಾಡುವನೆಂಬ ಮತ. **Chíliast** (ನಾ.) ಈ ಮತದ ಅನುಯಾಯಿ. **Chiliástic** (ಗು.)

Chill ಚಿಲ್ (ನಾ., ಗು., ಕ್ರಿ.) ಚಳಿ ; ಕುಳಿರು (ಗ್ರಾಂ.) ; ದೇಹದ ಶೀತ ಸ್ಥಿತಿ ; ಶಾಖ ನ್ಯೂನತೆ ; ಜ್ವರದ ಚಳಿ (Catch a c. ಶೀತವಾಗು). ದೇಹಕ್ಕೆ ಅಹಿತವಾಗಿರುವ (ನೀರು, ವಾಯು, ಮೊ. ಗಳ) ಶೈತ್ಯ ; ತಂಡಿ ; ಕೊರೆತ (Take c. off water ನೀರಿನ ಚಳಿ ಮುರಿ ; ನೀರನ್ನು ಬೆಚ್ಚಗೆ ಮಾಡು). ಉತ್ಸಾಹ ಕುಗ್ಗಿಸುವ ವಸ್ತು, ವಿಷಯ ; ನಿರುತ್ಸಾಹ ಜನಕ ; ಉತ್ಸಾಹ ಘಾತಕ (Cast a c. over ನಿರುತ್ಸಾಹಗೊಳಿಸು). ಔದಾಸೀನ್ಯ ; ಸೆಡೆತ. (ಗು.) ಅಹಿತವಾಗುವಷ್ಟು ಚಳಿಯ ; ತಂಡಿಯ ; ಚಳಿಯಾಗುವ ; ಕೊರೆಯುವ ; ಶೀತಲ. ಉದಾಸೀನ ಭಾವದ ; ನಿರುತ್ಸಾಹಕರವಾದ ; ಅನಾದರದ. (ಕ್ರಿ.) ಚಳಿಯಾಗು ; ಚಳಿಯಾಗಿಸು ; ಶೈತ್ಯವಾಗು ; ಶೈತ್ಯಮಾಡು ; ತಣ್ಣಗಾಗು ; ತಣ್ಣಗೆ ಮಾಡು ; ಚಳಿಯಿಂದ ಜಡಮಾಡು. ಉತ್ಸಾಹ ಕುಗ್ಗಿಸು ; ನಿರುತ್ಸಾಹಗೊಳಿಸು ; ಧೈರ್ಯಗೆಡಿಸು. (ಕರಗಿದ ಕಬ್ಬಿಣವನ್ನು ತಣ್ಣನೆಯ ಕಬ್ಬಿಣದ ಸಂಪರ್ಕದಿಂದ) ಗಟ್ಟಿಯಾಗಿಸು. (ಬಳ. ಮಾ.) (ದ್ರವದ) ಚಳಿ ಮುರಿ. **Chílly** (ಗು.) ಚಳಿಯಾದ ; ಚಳಿಚಳಿಯಾಗುವ ; ಚಳಿ ತಡೆಯದ ; ಶೀತ ಸಹಿಸದ. ಉಲ್ಲಾಸವಿಲ್ಲದ ; ಉದಾಸೀನವಾದ (ಕ್ರಿ. ವಿ.) (ಅಪೂರ್ವ ಪ್ರಯೋಗ) ಶೀತಸ್ಥಿತಿಯಲ್ಲಿ. (ರೂಪ.) ಉದಾಸೀನವಾಗಿ. **Chílliness** (ನಾ.)

Chílli, -y ಚಿಲಿ (ನಾ.) ಒಣ ಮೆಣಸಿನ ಕಾಯಿ.

Chime[1] ಚೈಮ್ (ನಾ., ಕ್ರಿ.) ಶ್ರುತಿಗೂಡಿಸಿದ ಗಂಟೆಗಳ ತಂಡ ; ಈ ಗಂಟೆಗಳಿಂದ ಹೊರಡುವ ನಾದಮಾಲೆ ; ಘಂಟಾಮೇಳ ; ಸ್ವರಮೇಳ. ಹೊಂದಿಕೆ ; ಮೇಳನ ; ಅನುಗುಣ್ಯ. (ಕ್ರಿ.) ಗಂಟೆ ಬಾಜಿಸು ; (ಗಂಟೆ ಬಾಜಿಸಿ) ನಾದಮಾಲೆಯನ್ನುಂಟುಮಾಡು. (ಹೊತ್ತು ತೋರಿಸುವ) ಗಂಟೆ ಹೊಡೆ ; ಗಂಟೆ ಹೊಡೆದು ಕರೆ. ಒಂದೇ ರಾಗದಲ್ಲಿ ಹೇಳು. ಪ್ರಾಸಗೂಡು ; —ಗೂಡಿಸು. C. together, with ಹೊಂದಿಕೊ ; ಮೇಳವಿಸು ; ಸಂಗತವಾಗು. C. in ಉತ್ಸಾಹದಿಂದ ಸಮ್ಮತಿ ಹೇಳು.

Chíme[2], **Chimb** ಚೈಮ್ (ನಾ.) ಪೀಪಾಯಿಯ ತುದಿಗಳಲ್ಲಿಯ ಚಾಚುವಿಣು.

Chiméra, -aéra ಕಿಮೀಯರ, ಕೈಮೀಯರ (ನಾ.) (ಪಾಶ್ಚಾತ್ಯಪುರಾಣ) ಸಿಂಹದ ತಲೆಯೂ ಆಡಿನ ಒಡಲೂ ಹಾವಿನ ಬಾಲವೂ ಉಳ್ಳ ಒಂದು ರಾಕ್ಷಸಾಕಾರದ (ಅದ್ಭುತ) ಪ್ರಾಣಿ. ಗುಮ್ಮ ; ಗೊಡ್ಡು ಬೆದರಿಕೆ. ಸಂಕೀರ್ಣ ಜಾತಿಯ ವಸ್ತು ; ಸಂಕರ ವಸ್ತು ; ಅಸಂಭವ ಕಲ್ಪನೆ ; ಭ್ರಾಂತು. **Chimérical** ಕಿಮೆರಿಕಲ್ (ಗು.) ; **Chimérically** (ಕ್ರಿ. ವಿ.)

Chímney ಚಿಮ್ನಿ (ನಾ.) ಒಲೆ, ಕುಲುಮೆ, ಎಂಜಿನ್ನು, ಮೊ. ಗಳಿಂದ ಹೊಗೆ ಅಥವಾ ಆವಿಯನ್ನು ಹೊರಸಾಗಿಸುವ ಕೊಳವಿ : ಹೊಗೆಕೊಳವಿ ; ಛಾವಣಿಯಮೇಲೆ ಎದ್ದು ಕಾಣುವ ಹೊಗೆಕೊಳವಿಯ ಭಾಗ (Also, C.-stalk, -top). ದೀಪ ಉರಿಯುವುದಕ್ಕೆ ಹೊರಗಾಳಿಯನ್ನು ಕ್ರಮವಾಗಿ ಒದಗಿಸುವ ಗಾಜಿನ ಕೊಳವಿ : 'ಚಿಮ್ನಿ'. ಪ್ರಕೃತಿಸಿದ್ಧವಾದ ಬಿರುಕು (ಉದಾ., ಅಗ್ನಿಪರ್ವತದ್ದು). ಕಡಿದಾದ ಬೆಟ್ಟದ ಶಿಖರವನ್ನು ಹತ್ತಲು ಅನುಕೂಲಿಸುವ ಕಿರಿದಾದ ಬಿರುಕು. **C.-corner** ಹಳೆಯ ಕಾಲದ ಶಾಖದ ಒಲೆಯ ಕೋಣೆಯಲ್ಲಿ ಬೆಚ್ಚನೆಯ ಸ್ಥಳ ; ಬೆಚ್ಚನೆಯ ಮೂಲೆ. **C.-piece** ಶಾಖದ ಒಲೆಯ ಮೇಲ್ಭಾಗದಲ್ಲಿ ಮಾಡಿರುವ ಅಲಂಕಾರದ ಕೆಲಸ ; ಅಲ್ಲಿಯ ಕಿರಿದಾದ ಆಸರೆಯ ಪೀಠ ಅಥವಾ ಕಲ್ಲುಹಲಗೆ. **C.-pot** ಹೊಗೆಕೊಳವಿಯ ಮೇಲ್ಭಾಗಕ್ಕೆ ಜೋಡಿಸಿರುವ ಮಣ್ಣಿನ ಅಥವಾ ಲೋಹದ ಕೊಳವಿ (C.-pot hat ನಿಡಿದಾದ ರೇಷ್ಮೆಯ ಪರಂಗಿಟೋಪಿ). **C.-stack** ಒಟ್ಟುಗೂಡಿಸಿದ ಹೊಗೆಕೊಳವಿಗಳ ತಂಡ. **C.-stalk** (ಮೇಲೆ ನೋಡಿ) ; ಒಂದು ಕಾರ್ಖಾನೆಯ ಎತ್ತರವಾದ ಹೊಗೆಕೊಳವಿ. **C.-sweep** ಹೊಗೆಕೊಳವಿಗಳನ್ನು ಗುಡಿಸಿ ಚೊಕ್ಕಟಮಾಡುವವನು. **C.-sweeper** = C. sweep ; ಹೊಗೆಕೊಳವಿಗಳನ್ನು ಗುಡಿಸುವುದಕ್ಕಾಗಿ ಉದ್ದ ಬೆಳಸಿಕೊಳ್ಳುವಂತೆ ಮಾಡಿರುವ ಪೊರಕೆ : ಚಿಮ್ನಿಯ ಪೊರಕೆ.

Chimpánzee, Chimpanzeé ಚಿಂಪ್ಯಾನ್ಜಿ, ಚಿಂಪ್ಯನ್ಜೀ (ನಾ.) ಮನುಷ್ಯನನ್ನು ಹೋಲುವ ಆಫ್ರಿಕದ ಒಂದು ವಾನರ ಜಾತಿ.

Chin ಚಿನ್ (ನಾ) ತಳದವಡೆಯ ಮುಂಭಾಗ ; ಗದ್ದ ; ಗಲ್ಲ. Up to the c., C.-deep ಆಳವಾಗಿ ಮುಳುಗಿ ; ಇಳಿಯ ಮುಳುಗಿ **-Chinned** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Chína ಚೈನ (ಗು.) (೧) ಚೀನಾದೇಶದ [**C. aster** ಚೀನಾದೇಶದ ಒಂದು ಹೂವಿನ ಜಾತಿ. **C. orange** ಸಾಮಾನ್ಯ ಕಿತ್ತಿಳೆ (ಪೂರ್ವದಲ್ಲಿ ಚೀನಾದೇಶದಿಂದ ಬಂದದ್ದು). **Chínaman** ಚೀನಾದೇಶಸ್ಥ]. (೨) (ನಾ., ಗು.) ಅರ್ಧ ಪಾರದರ್ಶಕವಾದ ಒಂದುತೆರದ ಮಣ್ಣಿನ ಸಾಮಾನು ; ಪಿಂಗಾಣಿ ; ಪಿಂಗಾಣಿಯ ಸಾಮಾನುಗಳು. **C.-closet** ಪಿಂಗಾಣಿಯ ಸಾಮಾನನ್ನಿಡುವ ಅಥವಾ ಪ್ರದರ್ಶಿಸುವ ಕೋಣೆ. **C.-clay** ಪಿಂಗಾಣಿಯ ಮಣ್ಣು : 'ಕೆಯೊಲಿನ್.' **Chinamánia(c)** ಪೂರ್ವಕಾಲದ ಪಿಂಗಾಣಿಯ ಸಾಮಾನುಗಳನ್ನು ಕೂಡಹಾಕುವ ಹುಚ್ಚು : ಪಿಂಗಾಣಿಯ ಹುಚ್ಚು ; — ಹುಚ್ಚ. **Chínatown** ಚೀನಿಗರು ಒಟ್ಟಿಗೆ ವಾಸಮಾಡುವ ಒಂದು ಪಟ್ಟಣದ (ಮು., ರೇವುಪಟ್ಟಣದ) ಭಾಗ : ಚೀನಿಗರ ಪಾಳೆಯ. **Chínaware** ಪಿಂಗಾಣಿಯ ಸಾಮಾನು. **Chineé** ಚೈನೀ (ನಾ.) (ಅಸಂ.) ಚೀನಾ ದೇಶಸ್ಥ. The heathen C. (ಹಾಸ್ಯವಾಗಿ) ಅಚ್ಚ ಚೀನಿಯವ. **Chinése** (ಗು., ನಾ. ; ಬ. ವ. Chinese) ಚೀನಾ ದೇಶದವನು ; ಚೀನಾ ಭಾಷೆ. C. lantern ದೀಪೋತ್ಸವಗಳಲ್ಲಿ ಉಪಯೋಗಿಸುವ ಮುದುರಬಹುದಾದ ಕಾಗದದ ಲಾಂದ್ರ : ಚೀನಾ ಲಾಂದ್ರ. C. white ಒಂದು ಬಿಳಿಯ ಬಣ್ಣ (ಬಿಳಿಯ 'ಜಿಂಕ್ ಆಕ್ಸೈಡ್' ಪದಾರ್ಥ)

Chine[1] ಚೈನ್ (ನಾ.) ಮೆತುಬಂಡೆಯಮೇಲೆ ನೀರು ಹರಿದ ಘರ್ಷಣದಿಂದ, ಆಳವಾಗಿಯೂ ಇಕ್ಕಟ್ಟಾಗಿಯೂ ಆದ ಕೊರಕಲು.

Chine[2] ಚೈನ್ (ನಾ.) ಬೆನ್ನೆಲುಬು ; (ಅಡಿಗೆಯಲ್ಲಿ) ಪ್ರಾಣಿಯ ಬೆನ್ನೆಲುಬು ಅಥವಾ ಅದರ ತುಂಡು. ಏರುದಿಣ್ಣೆಯ ಬೆನ್ನೇಣು.

Chink[1] ಚಿಂಕ್ (ನಾ.) ಬಿರುಕು ; ಉದ್ದವಾಗಿಯೂ ಕಿರಿದಾಗಿಯೂ ಇರುವ ಒಡಕು ; ಬೀಟೆ ; ಸೀಳು ; ರಂಧ್ರ ; ಸಂದು ; ಇಣಿಕುಗಂಡಿ.

Chink[2] ಚಿಂಕ್ (ನಾ., ಕ್ರಿ.) ಗಾಜಿನ ಪಾತ್ರೆಗಳು ಅಥವಾ ನಾಣ್ಯಗಳು ಒಂದಕ್ಕೊಂದು ಹೊಡೆದು ಆಗುವ ಶಬ್ದ : ಝಣ ಝಣ. (ಅಸಂ.) ನಗದು ಹಣ ; ರೊಕ್ಕ. (ಕ್ರಿ.) ಝಣ ಝಣ ಶಬ್ದವಾಗು, ಶಬ್ದಮಾಡು. ನಾಣ್ಯ, ಮೊ. ನ್ನು ಠಣಗುಟ್ಟಿಸು.

Chink[3] ಚಿಂಕ್ (ನಾ.) (ಅಸಂ.) ಚೀನಿಗ.

Chintz ಚಿಂಟ್ಸ್ (ನಾ., ಗು. ; ಬ. ವ. Chintzes ಚಿಂಟ್ಸಿಸ್, ಚಿಂಟ್ಸೆಸ್) ಬಣ್ಣಬಣ್ಣಗಳ ಚಿತ್ರದ ನಮೂನೆಗಳಿಂದ ಬಣ್ಣಕಚ್ಚುವಂತೆ ಛಾಪಿಸಿ, ಸಾ., ಗಾಜುಮೆರುಗು ಕೊಟ್ಟು ತಯಾರಿಸಿದ ಹತ್ತಿಯ ದಾರದ ಬಟ್ಟೆ(ಯ) : ಚೀಟಿ ಬಟ್ಟೆ(ಯ)

Chip[1] ಚಿಪ್ (ನಾ.) ಚಕ್ಕೆ ; ಚೂರು (ಮರದ್ದು, ಕಲ್ಲಿನದು, ಮೊ.). ಉರುಳುಗೆಡ್ಡೆ, ಹಣ್ಣು, ಮೊ. ಗಳ ತೆಳ್ಳನೆಯ ಬಿಲ್ಲೆ, ಸೀಳು, ಹಲ್ಲೆ. (ಬಳ. ಮಾ., ಬ. ವ. ದಲ್ಲಿ) ಕರಿದ ಉರುಳುಗೆಡ್ಡೆ, ಮೊ. ಗಳ ತೆಳ್ಳನೆಯ ಬಿಲ್ಲೆಗಳು : ಉಪ್ಪೇರಿ. (ಪರಂಗಿಟೋಪಿ, ಮೊ. ನ್ನು ಮಾಡುವುದಕ್ಕಾಗಿ ಉಪಯೋಗಿಸಲು) ತೆಳ್ಳಗೆ ಸೀಳಿದ ಮರದ ದಬ್ಬೆ, ಸೀಬು, ಸಿಗುರು (C. basket). (ಅಸಂ.) (ಆಟಗಳಲ್ಲಿ) ಎಣಿಕೆಗಾಗಿ ಉಪಯೋಗಿಸುವ 'ಕಾಯಿ' ಗಳು ; ಎಣಿಕೆ ಕಾಯಿಗಳು. ನಾಣ್ಯದ ಬಿಲ್ಲೆ. C. of the old block (Block ನೋಡಿ). Dry as a c. ರುಚಿಯಿಲ್ಲದ ; ಸ್ವಾರಸ್ಯವಿಲ್ಲದ ; ನಿಸ್ಸಾರವಾದ. **Chíppy** ಚಿಪಿ (ಗು.) (ಅಸಂ.) ಶುಷ್ಕ ; ನೀರಸ ; ಅಸ್ವಾರಸ್ಯ. (ಕುಡಿತ, ಮೊ. ಗಳನಂತರ) ಬಾಯೊಣಗಿ ಹೊಟ್ಟೆ ತೊಳಸುವ. ರೇಗುವ ; ಸಿಡಿಮಿಡಿಗೊಳ್ಳುವ. **Chíppiness** (ನಾ.)

Chip (ಕ್ರಿ.) (ಮರ, ಕಲ್ಲು, ಮೊ. ನ್ನು) ಚಕ್ಕೆಯೆಬ್ಬಿಸು, ಕೆತ್ತು, ಸವರು ; ಹೀಗೆ ಮಾಡುವುದರಿಂದ ತಕ್ಕ ಆಕಾರ ಕೊಡು. ಏಣಿನಲ್ಲಿ ಚಕ್ಕೆಯೇಳುವಂತೆ ಇರು. (ಶಾಸನ) ಕೊರೆ. (ಕೋಳಿಯ ಮೊಟ್ಟೆಯ ಚಿಪ್ಪನ್ನು) ಒಡೆ. (ಬಳ. ಮಾ.) (ಒಬ್ಬನನ್ನು) ಕುಚೋದ್ಯ ಮಾಡು ; ಲೇವಡಿ ಮಾಡು ; ತಮಾಷೆ ಮಾಡು. (ಅಸಂ.) C. in ಅಡ್ಡ ಬರು.

Chip[2] ಚಿಪ್ (ನಾ., ಕ್ರಿ. ಸಕ.) ಕುಸ್ತಿಯ ವರಿಸೆ, ಪಟ್ಟು. (ಕ್ರಿ.) ತೊಡರುಗಾಲು ಹಾಕಿ ಕೆಡವು.

Chípmuck, -unk ಚಿಪ್‌ಮಕ್, — ಮಂಕ್ (ನಾ.) ಒಂದು ಜಾತಿಯ ಅಳಿಲು (ಉ. ಅಮೆರಿಕದ್ದು)

Chíppendale ಚಿಪೆಂಡೇಲ್ (ನಾ.) ದಿವಾನ್‌ಖಾನೆಯಲ್ಲಿ ಹಾಕುವ ಹಗುರವಾಗಿಯೂ ಅಂದವಾಗಿಯೂ ಇರುವ ಆಸನಗಳು, ಮೊ. ಸಾಮಗ್ರಿ. (೧೮ನೆಯ ಶತಮಾನದ ಒಬ್ಬ ಮರಗೆಲಸದವನ ಹೆಸರು)

Chips ಚಿಪ್ಸ್ (ನಾ.) (ನೌಕ) ಹಡಗಿನ ಬಡಗಿ.

Chirógnomy ಕೈರಾಗ್ನೊಮಿ (ನಾ.) ಸಾಮುದ್ರಿಕ ಶಾಸ್ತ್ರ. **Chirognómic** — ಗ್ನಾಮಿಕ್ (ಗು.)

Chírograph ಕೈರೊಗ್ರಾಫ್ (ನಾ.) ನಿಯಮಾನುಸಾರವಾಗಿ ಬರೆದ ಅಥವಾ ಸಹಿಮಾಡಿದ (ಹಲವು ಬಗೆಯ) ಪತ್ರ : ಕೈಬರಹದ ಪತ್ರ. **Chirógrapher** ಕೈರಾಗ್ರಫರ್ (ನಾ.) ಬರೆವಣಿಗೆಯ ಉಪಾಧ್ಯಾಯ ; ನಕಲುಮಾಡುವ ಗುಮಾಸ್ತೆ. **Chirógraphy** (ನಾ.) ಕೈಬರಹ ; ಬರೆವಣಿಗೆಯ ರೀತಿ.

Chíromancy ಕೈರೊಮ್ಯಾನ್ಸಿ (ನಾ.) = Chirognomy.

Chíropod, -ped ಕೈರೊಪಾಡ್, — ಪೆಡ್ (ನಾ.) (ಪ್ರಾ. ವಿ.) (ಕಾಲುಗಳು ಕ್ರಮೇಣ ಕೈಗಳಾಗಿ ಮಾರ್ಪಟ್ಟ) ಕೈಗಳುಳ್ಳ ಸಸ್ತನಿ ವರ್ಗದ ಪ್ರಾಣಿಗಳ ಹೆಸರು [ದ್ವಿಹಸ್ತಿಗಳೂ (ಮನುಷ್ಯ), ಚತುರ್ಹಸ್ತಿಗಳೂ (ಕಪಿ) ಸಹ] : ಕರ ಪಾದಿಗಳು.

Chirópodist ಕೈರಾಪೊಡಿಸ್ಟ್ (ನಾ.) ಕೈ, ಕಾಲು, ಉಗುರು, ಕಾಲ್ಬೆರಳಿನ ಜಡ್ಡು, ಊತ, ಮೊ. ಗಳಿಗೆ ಚಿಕಿತ್ಸೆಮಾಡುವವನು : ಕರಪಾದ ಚಿಕಿತ್ಸಕ. **Chirópody** (ನಾ.) — ಚಿಕಿತ್ಸೆ.

Chiropráctic ಕೈರೊಪ್ರ್ಯಾಕ್ಟಿಕ್ (ನಾ.) ಬೆನ್ನುಹುರಿಯನ್ನು ನೀವುವುದರಿಂದ ರೋಗ ವಾಸಿಮಾಡುವ ಒಂದು ಚಿಕಿತ್ಸೆ : ಕಶೇರು ಮರ್ದನ (ಚಿಕಿತ್ಸೆ). **Chiropráctor** (ನಾ.) ಕಶೇರು ಮರ್ದಕ (ಚಿಕಿತ್ಸಕ)

Chiróptera ಕೈರಾಪ್ಟರ (ನಾ., ಬ. ವ.) (ಪ್ರಾ. ವಿ.) ಬೆರಳಿನ ಎಲುಬುಗಳು ಉದ್ದವಾಗಿ ಬೆಳೆದು, ಹಿಂಗಾಲುಗಳಿಗೂ ದೇಹದ ಪಕ್ಕಗಳಿಗೂ ಅಂಟಿಕೊಂಡಿರುವ ಚರ್ಮವನ್ನು ವಹಿಸಿ, ಪ್ರಾಣಿ ಹಾರಾಡುವುದಕ್ಕೆ ಅನುಕೂಲವಾಗುವಂಥ ರಚನೆಯುಳ್ಳ ಸಸ್ತನಿ ವರ್ಗದ ಪ್ರಾಣಿಗಳ ಒಂದು ಗುಂಪು : ಬಾವಲಿಯ ಗುಂಪು : ಕರ ಪಕ್ಷಿಗಳು. **Chirópteran** (ನಾ.) ಈ ಜಾತಿಯ ಪ್ರಾಣಿ : ಕರಪಕ್ಷಿ ; ಬಾವಲಿ. **Chirópterous** (ಗು.)

Chirp ಚರ್ಪ್ (ಕ್ರಿ., ನಾ.) ಸಣ್ಣಹಕ್ಕಿಗಳಂತೆ ಹ್ರಸ್ವವಾದ ಕೀಚುದನಿ (ಮಾಡು) ; ಚಿಲಿಪಿಲಿಗುಟ್ಟು ; ಗಾನ (ಮಾಡು) ; ಹಾಡು. (ಸಂತೋಷ, ಮೊ. ನ್ನು) ದನಿಯಿಂದ ವ್ಯಕ್ತಪಡಿಸು ; ಕೆಲೆ ; ಉಲ್ಲಾಸದಿಂದ ಮಾತನಾಡು ; ಮೆಲ್ನುಡಿಯಲ್ಲಿ ಮಾತನಾಡು. **Chírpy** (ಗು.) ಉಲ್ಲಾಸದ ; ಗೆಲವಿನ. **Chírpiness** (ನಾ.)

Chirr ಚರ್, ಚರ್ರ್ (ಕ್ರಿ. ಅಕ., ನಾ.) ಜೀರುಹುಳುವಿನಂತೆ ಎಡೆಬಿಡದೆ ಚಿರ್ ಎಂಬ ನಿಡುದನಿ (ಮಾಡು) ; ಜೀರುಗುಟ್ಟು.

Chírrup ಚಿರಪ್ (ಕ್ರಿ. ಅಕ., ನಾ.) 'ಚಿರಪ್', 'ಚಿರಪ್' ಎನ್ನು. (ಕೂಸು, ಮೊ. ನ್ನು ಉಲ್ಲಾಸಗೊಳಿಸುವುದಕ್ಕಾಗಿ) 'ಚಿರಪ್', 'ಚಿರಪ್' ಎಂಬ ಅನುಕರಣ ಧ್ವನಿ(ಮಾಡು). (ಅಸಂ.) ನಾಟಕ ಶಾಲೆ, ಮೊ. ಗಳಲ್ಲಿ ಕೂಲಿಯ ಹೊಗಳುಭಟ್ಟನಾಗಿರು. **Chírruper** (ನಾ.)

Chísel ಚಿಸ್ಲ್‌ರ್ (ನಾ., ಕ್ರಿ. ಸಕ.) (ಮರ, ಕಲ್ಲು, ಲೋಹ — ಇವನ್ನು ಕೆತ್ತಿ ಆಕಾರಕೊಡಲು ಉಪಯೋಗಿಸುವ ಉಕ್ಕಿನ ಬಾಯಿಯ) ಉಳಿ, ಚಾಣ. [Cold c. ಕಾಯಿಸದ ಕಬ್ಬಿಣಕ್ಕೆ ಆಕಾರಕೊಡಲು ಉಪಯೋಗಿಸುವ ಉಕ್ಕಿನ ಅಥವಾ ಕಬ್ಬಿಣದ ಚಾಣ : ತಂಪುಳಿ. Chiselled features ಮಾಟವಾಗಿ ಕೆತ್ತಿದಂತಿರುವ ಮುಖಭಾವ. The c. ಶಿಲ್ಪಿಯ ಉಳಿ ; ಶಿಲ್ಪ (ಕಲೆ)]. ಉಳಿಯಿಂದ ಕೆತ್ತು ; ಉಳಿಗೆಲಸ ಮಾಡು ; (ಅಸಂ.) ವಂಚಿಸು(ವುದು) ; ಮೋಸಗೊಳಿಸು(ವುದು). ಅನುಚಿತವಾದ ನಡೆವಳಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Chit[1] ಚಿಟ್ (ನಾ.) ಎಳೆಯ ಮಗು ; ಪೋರ ; ಪೋರಿ. ಚಿಕ್ಕ ವಯಸ್ಸಿನ, ಸಣ್ಣ ಅಥವಾ ತೆಳ್ಳನೆಯ ಒಡಲಿನ, ಹೆಂಗಸು. (ತಿರಸ್ಕಾರ ಸೂಚಕ ವಾಗಿ : C. of a girl)

Chit[2] ಚಿಟ್, **Chítty** ಚಿಟಿ (ನಾ.) ಚೀಟಿ ; ಬರೆದ ಕಾಗದ (ಮು., ಆಳಿಗೆ ಕೊಡುವ ಯೋಗ್ಯತಾಪತ್ರ). C.-System ನಗದುಹಣ ಕೊಡುವುದಕ್ಕೆ ಬದಲಾಗಿ ಭರವಸೆಯ ಚೀಟಿ ಕೊಡುವ ಪದ್ಧತಿ : ಹಣಚೀಟಿಯ ಪದ್ಧತಿ.

Chítal ಚಿಟಲ್ (ನಾ.) (ಹಿಂದಿ) ಇಂಡಿಯಾ ದೇಶದ ಮಚ್ಚೆಜಿಂಕೆ ; ಸಾರಂಗ.

Chít-chat ಚಿಟ್ ಚ್ಯಾಟ್ (ನಾ.) ಮಾತು ಕತೆ ; ಹರಟೆ.

Chítin ಕೈಟಿನ್ (ನಾ.) (ಪ್ರಾ. ವಿ.) ಜೀರುಂಡೆಗಳ ಮತ್ತು ವಲ್ಕವಂತಗಳ (ಏಡಿ, ಮೊ. ಪ್ರಾಣಿಗಳ) ಹೊರ ಕವಚದಲ್ಲಿಯ ಕೊಂಬುಪದಾರ್ಥ : 'ಕೈಟಿನ್'. **Chítinous** (ಗು.)

Chítterling ಚಿಟರ್ಲಿಂಗ್ (ನಾ. ; ಸಾ., ಬ. ವ. ದಲ್ಲಿ) ಮೃಗಗಳ ಸಣ್ಣ ಕರುಳು (ಮು. ಆಹಾರಕ್ಕಾಗಿ ಅಡಿಗೆಮಾಡಿದುದು)

Chítty. Chit[2] ನೋಡಿ.

Chívalry ಷಿ(ಚಿ)ವಲ್ರಿ (ನಾ.) (ಪ್ರಾಚೀ. ಪ್ರ.) ಕುದುರೆಯ ಸವಾರರು ; ಅಶ್ವಸೈನ್ಯ. ವೀರ ಪುರುಷರು ; ದೀನ ರಕ್ಷಕರು. (ಪ್ರಾಚೀ. ಪ್ರ.) ವೀರ ಕೌಶಲ ; ಶೌರ್ಯ. (ಯೂರೋಪಿನಲ್ಲಿ) ಮಧ್ಯಯುಗದ ವೀರ ಸಂಸ್ಥೆ (ಧರ್ಮ, ನೀತಿ, ಸಾಮಾಜಿಕ, ನಿಯಮಗಳಿಂದ ಕೂಡಿದುದು). ಆದರ್ಶ ವೀರಪುರುಷನ ಲಕ್ಷಣಗಳು. ಅಬಲೆಯರಿಗೆ ಸಹಾಯ ಮಾಡುವುದರಲ್ಲಿ ಶ್ರದ್ಧೆ ; ಮಹಿಳಾ ಗೌರವ ; ದುರ್ಬಲರಕ್ಷಣ ಶ್ರದ್ಧೆ. Flower of c. ಮಾದರಿಯ ವೀರ, ವೀರಶ್ರೇಷ್ಠ. ಒಂದು ಜನಾಂಗದ ಸೈನಿಕರಲ್ಲಿ ಆಯ್ದ ವೀರರು, ವೀರಶ್ರೇಷ್ಠರು. **Chívalrous** ಷಿ(ಚಿ) ವಲ್ರಸ್ (ಕಾವ್ಯ, ಮೊ.) ; **Chívalric,** — ರಿಕ್ (ಗು.) ವೀರಯುಗದ ; ಸಾಹಸ ಕೃತ್ಯಗಳ ಕಾಲದ ; ವೀರಯುಗಕ್ಕೆ ಒಪ್ಪುವಂಥ. ಆದರ್ಶ ವೀರನ ; ಆದರ್ಶ ವೀರನಿಗೆ ಯೋಗ್ಯವಾದ ; ಧೀರನಾದ ; ಶೂರ ನಾದ ; ಘನತೆವಂತನಾದ ; ಮರ್ಯಾದೆವಂತನಾದ ; ವಿನಯಶೀಲ ; ಅಸ್ವಾರ್ಥಪರನಾದ ; ಉದಾರ ಭಾವದ ; ಧರ್ಮದ ಹುಚ್ಚುಳ್ಳ ; ವಿಚಿತ್ರ ವರ್ತನೆಯ. **Chívalrously** (ಕ್ರಿ. ವಿ.)

Chívy. Chevy ನೋಡಿ.

Chlóral ಕ್ಲೋರಲ್ (ನಾ.) ಪ್ರಜ್ಞೆ ತಪ್ಪಿಸುವ ಮತ್ತು ಮರವಡಿಸುವ ಒಂದು ವಸ್ತು : 'ಕ್ಲೋರಲ್' (=C. hydrate). **Chlóralism** (ನಾ.) (ವೈ. ಶಾ.) ಕ್ಲೋರಲ್ ಪದಾರ್ಥವನ್ನು ಬಹುಕಾಲ ಉಪ ಯೋಗಿಸಿದುದರಿಂದಾದ ರೋಗಾವಸ್ಥೆ. **Chlóralize** (ಕ್ರಿ. ಸಕ.) ಕ್ಲೋರಲ್ ಪ್ರಭಾವಕ್ಕೆ ಒಳಪಡಿಸು.

Chlórine ಕ್ಲೋರಿ(ರೈ)ನ್ (ನಾ.) (ರ. ವಿ.) ಭಾರವಾದ, ಹಳದಿ ಹಸುರು ಬಣ್ಣದ, ಕಟುವಾದ ವಾಸನೆಯ, ಒಂದು ಅಲೋಹ ಅನಿಲ ಮೂಲ ಧಾತು : 'ಕ್ಲೋರೀನ್'. **Chlórate** ಕ್ಲೋರೇಟ್ (ನಾ.) ಕ್ಲೋರಿಕ್ ಆಮ್ಲದ ಒಂದು ಲವಣ. **Chlóric** (ಗು.) ಕ್ಲೋರೀನಿನ. **Chlóride** — ರಿಡ್, — ರೈಡ್ (ನಾ.) (ಆಮ್ಲಜನಕ ರಹಿತವಾದ) ಕ್ಲೋರೀನ್ ಸಂಯುಕ್ತ. (ಜನಭಾಷೆಯಲ್ಲಿ) ತೆರ ತೆರದ ಚಲುವೆಯ ಪುಡಿಗಳು (ನಿಜವಾದ ಕ್ಲೋರೈಡುಗಳಲ್ಲ). **Chlórite** (ನಾ.) ಕ್ಲೋರಸ್ ಆಮ್ಲದ ಒಂದು ಲವಣ. **Chlórous** (ಗು.) ಕ್ಲೋರೀನ್ ತುಂಬಿರುವ ; ಕ್ಲೋರೀನ್ ಗುಣದ, ಸ್ವಭಾವದ. **Chlórinate** ಕ್ಲೋರಿನೇಟ್ (ಕ್ರಿ. ಸಕ.) ಕ್ಲೋರೀನ್ ಅನಿಲವನ್ನು ಗರ್ಭೀಕರಿಸು. **Chlorinátion** (ನಾ.) (ಮು., ಕೆಲವು ಅದುರುಗಳಿಂದ ಚಿನ್ನವನ್ನು ತೆಗೆಯುವಲ್ಲಿ ಉಪಯೋ ಗಿಸುವ) ಕ್ಲೋರೀನ್ ಪ್ರಯೋಗ.

Chlórodyne ಕ್ಲೋರೊಡೈನ್ (ನಾ.) ಮತ್ತನ್ನುಂಟುಮಾಡುವ, ನೋವು ತೋರದಂತೆ ಮಾಡುವ (ತಯಾರಿಯ ಸನ್ನದು ಪಡೆದ), ಒಂದು ಔಷಧ : 'ಕ್ಲೋರೊಡೈನ್'.

Chlóroform ಕ್ಲೋರೊಫಾರ್ಮ್ (ನಾ., ಕ್ರಿ. ಸಕ.) ಹಬೆಯನ್ನು ಮೂಗಿನೊಳಕ್ಕೆ ಸೇದಿಕೊಂಡರೆ ಪ್ರಜ್ಞೆತಪ್ಪಿಸುವ, ಮತ್ತು ನೋವು ತೋರದಂತೆ ಮಾಡುವ, ಬಣ್ಣವಿಲ್ಲದ, ತೆಳ್ಳನೆಯ, ಒಂದು ದ್ರವ ; 'ಕ್ಲೋರೊಫಾರಂ'. (ಕ್ರಿ.) ಒಬ್ಬನನ್ನು ಕ್ಲೋರೊಫಾರಂ ಪ್ರಭಾವಕ್ಕೆ ಗುರಿಪಡಿಸಿ ಪ್ರಜ್ಞೆತಪ್ಪಿಸು : ಕ್ಲೋರೊಫಾರಂ ಕೊಡು ; ಒಂದು ವಸ್ತು ವನ್ನು ಕ್ಲೋರೊಫಾರಮ್ಮಿನಲ್ಲಿ ತೋಯಿಸು. **Chlóroformist** (ನಾ.) (ರೋಗಿಗೆ) ಕ್ಲೋರೊಫಾರಂ ಕೊಡುವವನು.

Chlórophyll ಕ್ಲೋರೊಫಿಲ್ (ನಾ.) ಸಸ್ಯಗಳಿಗೆ ಹಸುರು ಬಣ್ಣ ಕೊಡುವ ವರ್ಣಧಾತು : ಪತ್ರಹರಿತ್ತು.

Chlorósis ಕ್ಲೋರೋಸಿಸ್ (ನಾ.) ಪ್ರಾಯದ ಹುಡುಗಿಯರಿಗೆ ಬರುವ ನಸುಹಸುರು ಛಾಯೆಯ, ರಕ್ತಹೀನತೆಯ ರೋಗ : ಹರಿತ ರೋಗ. (ಸ. ವಿ.) ಸಸ್ಯಗಳ ಹಸುರುಭಾಗಗಳು ಬಿಳಿಚಿಕೊಳ್ಳುವುದು, ಹೂವಿನ ಇತರ ಬಣ್ಣದ ಎಸಳುಗಳು ಹಸುರೇರುವುದು, ಮೊ. ಸಸ್ಯವ್ಯಾಧಿ : ಹರಿತ ರೋಗ. **Chlorótic** — ರಾಟಿಕ್ (ಗು.)

Chock ಚಾಕ್ (ನಾ., ಕ್ರಿ. ಸಕ., ಕ್ರಿ. ವಿ.) ಮರದ ತುಂಡು (ಮು., ಪೀಪಾಯಿ ಅಥವಾ ಚಕ್ರ ಉರುಳುವುದನ್ನು ತಡೆಯುವುದಕ್ಕಾಗಿ ಉಪ ಯೋಗಿಸುವ ತಡೆಮರ. ದೋಣಿಯು ಹಡಗಿನ ಮೇಲಂತಸ್ತಿನ ನೆಲದ ಮೇಲೆ ಕದಲದೆ ಇರುವುದಕ್ಕಾಗಿ ಅದರ ಕೆಳಗೆ ಇಡುವ ಬೆಣೆಗಳು). = Chuck[4]. (ಕ್ರಿ.) ಬೆಣೆಗಳಿಂದ ಭದ್ರಪಡಿಸು (C. up ಕದಲದಂತೆ ಬೆಣೆಹೊಡೆ. ಕೋಣೆ, ಮೊ. ಗಳಲ್ಲಿ ಆಸನಾದಿಗಳನ್ನು, ಪೀಠೋಪಸ್ಕರ ಗಳನ್ನು, ಅವಕಾಶವಿಲ್ಲದಹಾಗೆ ಅಡಕು. C.-a-block ಸಂಮರ್ದವಾದ ; ಇಡಿಕಿರಿದ ; ಗಿಡಿಗಿದಂತೆ ತುಂಬಿದ). (ಕ್ರಿ. ವಿ.) ಒತ್ತಾಗಿ ; ನಿಬಿಡವಾಗಿ ; ಎಡೆಯಿಲ್ಲದಂತೆ ; ಭರ್ತಿಯಾಗಿ. C.-full ಗಿಡಿಗಿ ತುಂಬಿದ.

Chócolate ಚಾಕೊಲೇಟ್ (ನಾ., ಗು.) ಕಕೇವೊ ಬೀಜದ ಕಲಸುಹಿಟ್ಟಿನ (ಬಿಲ್ಲೆ) : 'ಚಾಕೊರೆಟ್' ; ಬಿಸಿ ಹಾಲಿನಲ್ಲಾಗಲಿ ನೀರಿನಲ್ಲಾಗಲಿ ಇದನ್ನು ಬೆರಸಿ ಮಾಡಿದ ಪಾನ : ಚಾಕೊಲೇಟ್ ಪಾನ. ದಟ್ಟ ಕಂದು ಬಣ್ಣ(ದ). C. cream ಚಾಕೊರೆಟ್ ಮಿಠಾಯಿ.

Choice ಚಾಯ್ಸ್ (ನಾ., ಗು.) ಆಯ್ದುಕೊಳ್ಳುವುದು ; ಆಯ್ಕೆ ; ಆರಿಸಿದ್ದು (Make c. of ಆಯ್ದುಕೊ, ಆಯಿ. Take one's c. ಬೇಕಾದುದನ್ನು ಆಯ್ದುಕೊ, ನಿರ್ಣಯಿಸು. The girl of one's c. ತಾನು ಮೆಚ್ಚಿದ ಹೆಣ್ಣು). ಆಯುವ ಅಧಿಕಾರ, ಹಕ್ಕು, ಶಕ್ತಿ, ಇಷ್ಟ (At c. ಇಷ್ಟ ಬಂದಂತೆ ; ಮನಸ್ಸಿಗೆ ತೋರಿದಂತೆ. Have one's c. ತನಗೆ ಬೇಕಾ ದುದನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ಪಡೆದಿರು. I have no c. ನನಗೆ ಯಾವುದಾದರೂ ಸರಿಯೆ ; ನಾನು ಆಯುವಹಾಗಿಲ್ಲ. Hobson's c. ಕೊಟ್ಟದ್ದನ್ನು ಒಪ್ಪಿ ತೆಗೆದುಕೊಳ್ಳುವ ಅಥವಾ ಬಿಡುವ ಸ್ವಾತಂತ್ರ್ಯ ಮಾತ್ರ ; ಬೇಕಾದರೆ ತೆಗೆದುಕೊ, ಬೇಡದಿದ್ದರೆ ಬಿಡು). ಉತ್ತಮ ; ಶ್ರೇಷ್ಠ. ಆಯ್ದುಕೊಳ್ಳುವುದಕ್ಕಿರುವ ವಿವಿಧ ವಸ್ತುಗಳು. ಆಯ್ದು ತೆಗೆದ ಮನುಷ್ಯ ಅಥವಾ ವಸ್ತು ; ಆಯ್ದದ್ದು. ಬೇರೆ ದಾರಿ ; ಗತ್ಯಂತರ (Have no c. but ಅದಲ್ಲದೆ ಬೇರೆ ಮಾರ್ಗವಿಲ್ಲ ; ಅದು ಬಿಟ್ಟರೆ ಗತಿಯಿಲ್ಲ). (ಗು.) ಆಯ್ದ ಗುಣಗಳುಳ್ಳ ; ಆಯಪಾಣಿ ; ಅತ್ಯುತ್ತಮವಾದ ; (ಬಹಳ ಜೋಕೆಯಿಂದ) ಆಯ್ದ ; ಉತ್ಕೃಷ್ಟ ; ಉಚಿತ. **Choícely** (ಕ್ರಿ. ವಿ.) ; **Choíceness** (ನಾ.). **Choose** ಚೂಸ್ (ಕ್ರಿ. ; ಭೂತ Chose ಚೋಸ್, ಭೂ. ಕೃ. Chosen) ಆಯಿ ; ಆರಿಸು ; ಆಯ್ದುಕೊ ; ವರಿಸು. (ದೇವತಾ ಶಾಸ್ತ್ರದಲ್ಲಿ, ಮು., Chosen) ಮೋಕ್ಷಪಡೆಯಲು ಭಗವಂತನಿಂದ ಆಯ್ಕೆಯಾದ. ಮಾಡಲು ಇಷ್ಟಪಡು ; ಮಾಡಲೇ ಬೇಕೆಂದು ನಿಶ್ಚಯಿಸು. Cannot c. but (ಪ್ರಾಚೀ. ಪ್ರ.) ಮಾಡಲೇ ಬೇಕು ; ಮಾಡದಿದ್ದರೆ ವಿಧಿಯಿಲ್ಲ. Pick and c. ಜೋಕೆಯಿಂದ ಆಯಿ ; ಆಯ್ಕೆಯಲ್ಲಿ (ಸುಲಭವಾಗಿ ಒಪ್ಪದೆ) ನಸನಸೆ ಪಡು. Nothing to c. between them ಆಯುವಂತಿಲ್ಲ (ಹೆಚ್ಚುಕಡಮೆಯಾಗಿ ಒಂದೇಸಮನಾದ ವಸ್ತುಗಳಲ್ಲಿ). **Chóoser** (ನಾ.)

Choir, Quire ಕ್ವೈಯರ್ (ನಾ., ಕ್ರಿ.) ಕ್ರೈಸ್ತ ದೇವಾಲಯದಲ್ಲಿ ಆರಾಧನ ಕಾಲದಲ್ಲಿ ಹಾಡುವ ಗಾಯಕವೃಂದ. ಈ ಗಾಯಕರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಾಗಿ ಪ್ರತ್ಯೇಕಿಸಿಟ್ಟಿರುವ ಸ್ಥಳ. ಹಾಡುಗಾರರ ತಂಡ ; ಗಾಯಕ ಸಂಘ (ಪಕ್ಷಿ, ದೇವತೆಗಳು, ಮೊ. ದವರದು) ; ಮೇಳದವರು. ನರ್ತಕ ವೃಂದ. (ಕ್ರಿ.) ಒಟ್ಟಾಗಿ ಹಾಡು ; ಮೇಳಯಿಸಿ ಹಾಡು. **Chóral** ಕೋರರ್ (ಗು.) ಕ್ರೈಸ್ತ ದೇವಾಲಯದ ಗಾಯಕ ವೃಂದದ ; ಅವರು ಹಾಡುವ (C. service ಪವಿತ್ರ ಗೀತ, ಮೊ. ನ್ನು ಹಾಡಿ ಮಾಡುವ ಆರಾಧನೆ) ; ಮೇಳಯಿಸಿ ಹಾಡುವ ; ಮೇಳದ. **Chórally** (ಕ್ರಿ. ವಿ.) ; **Chóral(e)** ಕೋರರ್, **Chorál(e)** ಕೊರಾಲ್ (ನಾ.) ಸ್ತೋತ್ರ ಗೀತೆಯನ್ನು ಸರಳ ರಾಗದಲ್ಲಿ, ಸಾ., ಮೇಳಯಿಸಿ, ಹಾಡುವ ಗೀತ. **Chóralist** ಕೋರಲಿಸ್ಟ್ (ನಾ.) ಮೇಳ ಗಾಯಕ. **Chórister** ಕಾರಿಸ್ಟರ್ (ನಾ.) ಪವಿತ್ರಗಾನದ ಗಾಯಕತಂಡದವರಲ್ಲೊಬ್ಬನು (ಮು., ಹುಡುಗ) ; ಮೇಳ ಗಾಯಕ (ದೇವತೆಗಳು, ಪಕ್ಷಿಗಳು, ಮೊ. ಗಳ ವಿಷಯದಲ್ಲಿ ಸಹ)

Choke¹ ಚೋಕ್ (ಕ್ರಿ., ನಾ.) ಉಸಿರು ಕಟ್ಟಿಸು ; (ಕತ್ತು ಹಿಸುಕುವುದ ರಿಂದರೂ ಗಂಟಲನಲ್ಲಿ ಅವಕಾಶವಿಲ್ಲದಂತೆ ಮಾಡುವುದರಿಂದರೂ ನೀರು, ಹೊಗೆ, ಮೊದಲಾದುವುಗಳಿಂದರೂ ಸ್ವಲ್ಪ ಹೊತ್ತು ಅಥವಾ ಮರಳಿ ಉಸಿರಾಡದಂತೆಯೊ) ಶ್ವಾಸ ಕಟ್ಟಿಸು. (ರೂಪ.) (ಮನೋಭಾವಗಳು) ಸ್ತಂಭಿಸು, ಅದುಮು. [C.-pear ಮದ್ಯ ಮಾಡುವುದಕ್ಕಾಗಿ ಉಪ ಯೋಗಿಸುವ ರುಚಿಯಿಲ್ಲದ ಕಹಿಜಾತಿಯ ಪೇರ್‌ಹಣ್ಣು ; (ರೂಪ.) ನಹಿಸ ಲಾಗದ ವಿಷಯ ; ತಡೆದುಕೊಳ್ಳಲಾಗದ ಆಕ್ಷೇಪಣೆ, ವಾಗ್ದಂಡ]. ಉಸಿರು ಕಟ್ಟಿಕೊ ; ಕೋಪ, ಮೊ. ಗಳಿಂದ ಮಾತು ಹೊರಡದಿರು ; ಸೆರೆ ಬಿಗಿ. (ಗಾಳಿಯಿಲ್ಲದಂತೆ ಮಾಡಿ ಬೆಂಕಿಯನ್ನೂ, ಬೆಳಕಿಲ್ಲದಂತೆ ಮಾಡಿ ಸಸ್ಯವನ್ನೂ) ತಲೆಯೆತ್ತದಂತೆ ಮಾಡು, ಕೊಲ್ಲು. (ಮನೋಭಾವಗಳನ್ನು) ಅಡಗಿಸು, ಅದುಮು. (ಕೊಳವಿಯ ಒಂದು ಭಾಗವನ್ನು ಕಿರಿದಾಗಿ ಮಾಡಿ) ದ್ರವ ಅಥವಾ ವಾಯು ಸಲೀಸಾಗಿ ಅಥವಾ ಪೂರ್ತಿಯಾಗಿ ಇಳಿಯ ದಂತೆ ಮಾಡು : (ನಾಳವನ್ನು) ಅಡಚು. ಮರಳು, ಕಲ್ಲು, ಮೊ. ಸೇರಿ ನಾಲೆ ಅಡಚಿಕೊ ; ಗಿಡಿಗಿ ತುಂಬು. [C. down (ಆಹಾರವನ್ನು) ಕಷ್ಟ ಪಟ್ಟು ನುಂಗು ; (ಮನೋಭಾವಗಳನ್ನು) ಕಷ್ಟಪಟ್ಟು ಅದುಮಿ ಹಿಡಿ. C. off ಒಬ್ಬನು ಕೈಕೊಂಡ ಪ್ರಯತ್ನವನ್ನು ಬಿಟ್ಟುಬಿಡುವಂತೆ ಮಾಡು ; ತೊಲ ಗಿಸು]. (ನಾ.) ಉಸಿರುಕಟ್ಟು ; ಸೆರೆಬಿಗಿತ. ಕೊಳವಿಯ ಅಡಚಿದ ಭಾಗ. (ವಿದ್ಯುತ್) ಪರ್ಯಾಯ ಪ್ರವಾಹ ಪಥದಲ್ಲಿ ಪ್ರವಾಹವನ್ನು ಅಡಚಣೆಮಾಡುವುದಕ್ಕಾಗಿ ಸೇರಿಸುವ, ವಿದ್ಯುನ್ನಿರೋಧಕಶಕ್ತಿ ಕಡಮೆ ಯಾದ, ತಂತಿಸುರುಳಿ : ಪ್ರತಿರೋಧಕ ಕುಂಡಲಿ. **C.-bore** ಬಾಯ ಕಡೆಗೆ ಕಿರಿದಾಗುತ್ತಹೋಗುವ ಬಂದೂಕಿನ ಕೋವಿ. **C.-damp** ಬಾವಿ, ಗಣಿ, ಮೊ. ಗಳಲ್ಲಿ ಸೇರಿರುವ ಇಂಗಾರಾಮ್ಲ ವಾಯು. **Chóker** ಚೋಕರ್ (ನಾ.) (ಕ್ರಿಯಾರ್ಥಗಳಲ್ಲಿ). ಪಾದ್ರಿಗಳು ಹಾಕಿ ಕೊಳ್ಳುವ ಒಂದು ತೆರದ ಕತ್ತುಪಟ್ಟಿ. (ಅಸಂ.) ಕತ್ತಿಗೆ ಮೇಲಿನ ವರೆಗೂ ಸುತ್ತಿಕೊಳ್ಳುವ ದೊಡ್ಡವಸ್ತ್ರ. White c. ಬಿಳಿಯ ಕತ್ತುಪಟ್ಟಿ.

Choke² ಚೋಕ್ (ನಾ.) 'ಆರ್ಟಿಚೋಕ್' ಎಂಬ ಸಸ್ಯದ ಮಧ್ಯಭಾಗ.

Chókidar. **Chaukidar** ನೋಡಿ.

Chókra ಚೋಕ್ರ (ನಾ.) (ಆಂ. ಇಂ.) ಹುಡುಗ ; ಚೋಕ್ರ (ಮು., ಮನೆ ಗೆಲಸದ ಆಳು)

Chóky ಚೋಕಿ (ನಾ.) (ಆಂ. ಇಂ., ಅಸಂ.) ಸೆರೆಮನೆ ; ಬಂದೀಖಾನೆ.

Chóler ಕಾಲರ್ (ನಾ.) (ಚರಿತ್ರೆ) ಶರೀರದ ಧಾತುಗಳು ನಾಲ್ಕರಲ್ಲಿ ಒಂದು ; ಪಿತ್ತ. (ಕಾವ್ಯ, ಪ್ರಾಚೀ. ಪ್ರ.) ಸಿಟ್ಟು ; ಕೋಪ ; ರೇಗು. **Chóleric** ಕಾಲೆರಿಕ್ (ಗು.) ಪಿತ್ತ ಪ್ರಕೃತಿಯ ; ರೇಗುವ ಸ್ವಭಾವದ ; ಸಿಡುಕಿನ ; ಸಿಟ್ಟಾಗುವ.

Chólera ಕಾಲೆರ (ನಾ.) ಬಿಸಿಲು ಕಾಲದಲ್ಲೂ ಶರತ್ಕಾಲದಲ್ಲೂ ವಾಂತಿ ಭೇದಿಯಾಗುವ ಪಿತ್ತವ್ಯಾಧಿ (English, bilious, summer, c.). ಪಿತ್ತವಿಕಾರವಿಲ್ಲದೆ, ಸಾ., ಪ್ರಾಣಹಾನಿ ಮಾಡುವ, ವಾಂತಿಭೇದಿ ರೋಗ : ಕಾಲರ ; ವಿಷೂಚಿ (Asiatic, epidemic, malignant, c.). Chicken c. ಕೋಳಿಗಳಿಗೆ ಬರುವ ಒಂದು ಸೊಂಕುರೋಗ : ಕೋಳಿ ಕಾಲರ. C.-belt ಕಾಲರಾಕ್ಕೆ ತಡೆಯಾಗಿ ಕಿಬ್ಬೊಟ್ಟೆಯಮೇಲೆ ಧರಿಸುವ ಉಣ್ಣೆಯ ಅಥವಾ ರೇಷ್ಮೆಯ ಪಟ್ಟಿ : ಕಾಲರ ಪಟ್ಟಿ. **Choleráic** ಕಾಲೆರೇಯಿಕ್ (ಗು.) ಕಾಲರಾಕ್ಕೆ ಸಂಬಂಧಪಟ್ಟ ; ಕಾಲರಾದಿಂ ದಾದ ; ಕಾಲರಾವನ್ನು ಹೋಲುವ. **Chólerine** ಕಾಲೆರೈನ್, —ರೀನ್ (ನಾ.) ಬೇಸಗೆಯ ಕಾಲರ. ಕಾಲರ ಹರಡಿರುವಾಗ ಅನೇಕ ವೇಳೆ ತಲೆದೋರುವ ಸಾಧಾರಣ ಭೇದಿರೋಗ.

Choose. **Choice** ನೋಡಿ.

Chop¹ ಚಾಪ್ (ಕ್ರಿ.) ಒಂದೇ ಏಟಿಗೆ ಕಡಿ, ಕತ್ತರಿಸು, ಕೊಚ್ಚು (ಸಾ., ಕೊಡಲಿಯಿಂದ, ಮಚ್ಚಿನಿಂದ). [C. up ಸಣ್ಣನಣ್ಣ ತುಂಡುಗಳಾಗಿ ಕತ್ತರಿಸು (*off*, *away*, *down*, ಉಪ. ದೊಡನೆ ಸಹ)]. ಕತ್ತರಿಸು ವಂಥ ಏಟು ಹೊಡೆ ; ಕತ್ತರಿಸಿಕೊಂಡು ನುಗ್ಗು ; ತುಂಡು ತುಂಡಾಗಿ ಕತ್ತರಿಸು (ಮು., ಭೂ. ಕೃ. ನಲ್ಲಿ). (ರೂಪ.) (ಮಾತು, ಮೊ. ನ್ನು) ತಡೆತಡೆದು ಥಟ್ಟನೆ ಉಚ್ಚರಿಸು : ಕಚ್ಚುಕಚ್ಚಾಗಿ ಮಾತನಾಡು. [C. in (ಇತರರ) ಮಾತಿನಲ್ಲಿ ಬಾಯಿಹಾಕು ; ಮಾತಿಗೆ ಅಡ್ಡಬರು. C. back ಹೋಗುವ ಮಾರ್ಗದಿಂದ ಥಟ್ಟನೆ ಹಿಂದಕ್ಕೆ ತಿರುಗು. Chopping sea ಎದ್ದು ಬೀಳುವ ಕಡಲು. (ಸ್ತರ, ಮೊ. ಗಳ ವಿಷಯದಲ್ಲಿ) C. up, out ನೆಲದಮೇಲೆ ಎದ್ದುಕಾಣಿಸಿಕೊ]. **Chópper** (ನಾ.) ಕತ್ತರಿಸುವವನು. ಅಗಲವಾದ ಅಲಗಿನ ತುಂಡುಕೊಡಲಿ ; ಕಟುಕನ ಕಡಿಗತ್ತಿ ; ಮಚ್ಚುಕತ್ತಿ.

Chop (ನಾ.) ಕೊಡಲಿ, ಮೊ. ಗಳಿಂದ ತುಂಡಿಸುವ ಏಟು ; ಕಡಿತ. (ಮು., ಕುರಿಯ ಅಥವಾ ಹಂದಿಯ, ಸಾ., ಪಕ್ಕೆಲುಬಿನ ಚೂರು ಗಳಿರುವ) ಮಾಂಸದ ದಪ್ಪತುಂಡು. (C.-house ಅಗ್ಗದ ಊಟದಂಗಡಿ). ಕಡಲಿನ ಏಳುಬೀಳುವ ಚಲನ.

Chop². **Chap**² ನೋಡಿ.

Chop³ ಚಾಪ್ (ಕ್ರಿ., ನಾ.) C. and change (Change ಎಂಬುದರ ಅರ್ಥವನ್ನು ಮತ್ತಷ್ಟು ಒತ್ತಿಹೇಳುವುದು ; ಸಾ., ಅಕ.) ನಿರ್ಧರವಿಲ್ಲದೆ ತೂಗಾಡುತ್ತಿರು ; ಒಂದು ಗೊತ್ತಿಲ್ಲದಿರು. Chops and changes ಬದಲಾವಣೆಗಳು. C. round, about (ಮು., ಗಾಳಿಯ ವಿಷಯದಲ್ಲಿ) ದಿಕ್ಕನ್ನು ಥಟ್ಟನೆ ಬದಲಾಯಿಸು. C. logic ವಾದದಲ್ಲಿ ಮಾತಿಗೆ ಮಾತು ಜೋಡಿಸು. **Chóppy** (ಗು.) ಗಾಳಿಯಂತೆ ಬದಲಾಯಿಸುವ ಸ್ವಭಾವದ ; ಚಂಚಲವಾದ. (ಕಡಲು) ತುಂಡು ಅಲೆಗಳು ಏಳು ತ್ತಿರುವ ; ಕೊಚ್ಚುತ್ತಿರುವ.

Chop⁴ ಚಾಪ್ (ನಾ.) (ಇಂಡಿಯ, ಚೀನ) ಛಾಪಾ ; ಮುದ್ರೆ ; ಅಪ್ಪಣೆ ಪತ್ರ ; ರಹದಾರಿ. (ಚೀನ) ವ್ಯಾಪಾರದ ಗುರುತು ; ಸರಕುಮುದ್ರೆ ; ಒಂದು ನಮೂನೆಗೆ ಸೇರಿದ ಸರಕು. (ಆಂ. ಇಂ, ಬಳ. ಮಾ.) ತರಗತಿ, ದರ್ಜೆ (First-c., Second-c.)

Chóp-chóp ಚಾಪ್ ಚಾಪ್ (ಕ್ರಿ. ವಿ., ಭಾವ. ಅವ್ಯ.) (ಬೆರಕೆಯ ಇಂಗ್ಲಿಷ್ ಭಾಷೆ) ಬೇಗಬೇಗನೆ ; ಚಟ್ ಚಟ್ !

Chópstick ಚಾಪ್‌ಸ್ಟಿಕ್ (ನಾ.) (ಚೀನಾ ಮತ್ತು ಜಪಾನ್ ದೇಶಸ್ಥರು ಅನ್ನವನ್ನು ಎತ್ತಿ ತೆಗೆದುಕೊಂಡು ಬಾಯಲ್ಲಿಟ್ಟುಕೊಳ್ಳುವುದಕ್ಕಾಗಿ ಉಪ ಯೋಗಿಸುವ) ಮರ, ದಂತ, ಮೊ. ಪದಾರ್ಥಗಳಿಂದ ಮಾಡಿದ (ಎರಡು) ಕಡ್ಡಿಗಳಲ್ಲೊಂದು : ಊಟದ ಕಡ್ಡಿ.

Chóral ಕೋರರ್ (ಗು.) **Choir** ನೋಡಿ.

Chord¹ ಕಾರ್ಡ್ (ನಾ.) ಪಿಟೀಲು, ಮೊ. ವಾದ್ಯಗಳ ಹುರಿ ; ಬೀವು ; ತಂತಿ. [Touch the right c. ಸರಿಯಾದ ತಂತಿ ಮಿಡಿ (ರೂಪ.) : ಮನಮುಟ್ಟುವಂತೆ ಚತುರತೆಯಿಂದ ಮಾಡು, ಹೇಳು]. (ಶ. ವಿ.) ದಾರ ದಂತಿರುವ ಅಂಗರಚನೆ : ತಂತು ; ಹುರಿ (Vocal c. ಧ್ವನಿ ತಂತು ; Spinal c. ಬೆನ್ನುಹುರಿ). (ಜ್ಯಾ.) ವೃತ್ತರೇಖಾ ಭಾಗದ ಎರಡು ತುದಿಗಳನ್ನೂ ಸೇರಿಸುವ ಸರಳ ರೇಖೆ : ಜ್ಯಾ. **Chórdal**¹ (ಗು.)

Chord² ಕಾರ್ಡ್ (ನಾ.) (ಸಂ.) ಸಮರಸದ ನಿಯಮಕ್ಕನುಸಾರವಾಗಿ ಕೂಡಿನುಡಿಸುವ ಮೂರು ಅಥವಾ ಹೆಚ್ಚು (ಅಪೂರ್ವವಾಗಿ ಎರಡು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಗಗಳು : ಸ್ವರ ಮೇಳ (Break or spread c. ರಾಗಮಾಲೆಯ ರಾಗಗಳನ್ನು ಒಂದಾದಮೇಲೊಂದರಂತೆ ಕ್ರಮದಲ್ಲ ಬಾಜಿಸು). ಬಣ್ಣಗಳ ಸಮರಸ ಮೇಳನ : ವರ್ಣ ಸಾಮರಸ್ಯ. **Chórdal**[2] (ಗು.)

Chore ಚೋರ್ (ನಾ., ಕ್ರಿ. ಅಕ.) (ಅಮೆ. ಸಂ.) = Chare.

Choréa (L) ಕೊರೀಯ (ನಾ.) ದೇಹದ ಸ್ನಾಯುಗಳು ಅನೈಚ್ಛಿಕವಾಗಿ ಒಂದು ಕ್ರಮವಿಲ್ಲದೆ ಸಂಕುಚಿತವಾಗುತ್ತಹೋಗುವ ಸೆಳವುರೋಗ (ಈ ರೋಗ ಕುದುರೆಗಳಿಗೂ ಬರುವುದು) : ಕಂಪ ವಾತ. **Choréic**[1] (ಗು.) ಈ ಸೆಳವುರೋಗದ ; ಈ ರೋಗವುಳ್ಳ.

Choreé ಕೊರೀ (ನಾ.) ಗ್ರೀಕ್ ಛಂದಸ್ಸಿನಲ್ಲಿ, —∪ ಗಣ. **Choréic**[2] (ಗು.)

Chóreograph ಕಾರಿಯೊಗ್ರಾಫ್ (ನಾ.) (ನಾಟ್ಯರಂಗದಲ್ಲಿ) ನರ್ತನ ಏರ್ಪಡಿಸುವವನು (= **Choreógrapher** —ಯಾಗ್ರಫರ್) **Choreógraphy** (ನಾ.) ; **Choreográphic** ಕಾರಿಯೊಗ್ರ್ಯಾಫಿಕ್ (ಗು.)

Chóriamb ಕೋ(ಕಾ)ರಿಯ್ಯಾಂಬ್, **Choriámbus** —ಅ್ಯಾಂಬಸ್ (ನಾ.) ಗ್ರೀಕ್ ಛಂದಸ್ಸಿನಲ್ಲಿ, —∪∪— ಗಣ. **Choriámbic** (ಗು.)

Chóric. **Chorus** ನೋಡಿ.

Chórion ಕೋರಿಯನ್ (ನಾ.) ಭ್ರೂಣದ ಹೊರ ಪೊರೆ : ಉಲ್ಬ. **Chóroid** ಕೋರಾಯ್ಡ್ (ಗು., ನಾ.) (ಆಕಾರದಲ್ಲಿ ಅಥವಾ ರಕ್ತನಾಳ ಪ್ರಸಾರಣದಲ್ಲಿ) ಉಲ್ಬದಂತಿರುವ. ಕಣ್ಣುಗುಡ್ಡೆಯನ್ನು ಸುತ್ತು ವರಿದಿರುವ ಚರ್ಮದ ಪೊರೆ : ಕಣ್ಣುಗುಡ್ಡೆಯ ಪೊರೆ (= C. coat)

Chórister. **Choir** ನೋಡಿ.

Chorógraphy ಕೊರಾಗ್ರಫಿ (ನಾ.) ಕೆಲವು ಗೊತ್ತಾದ ಪ್ರಾಂತಗಳನ್ನು, ಡಿಸ್ಟ್ರಿಕ್ಟುಗಳನ್ನು, ಭೂಪಟದಮೇಲೆ ರೇಖಿಸುವ ಅಥವಾ ವಿವರಣೆ ಮಾಡುವ ಕಲೆ : ಪ್ರಾಂತ ವಿವರಣೆ. **Chorógrapher** —ಗ್ರಫರ್ (ನಾ.) ; **Chorográphic(al)** ಕೋರೊಗ್ರ್ಯಾ— (ಗು.) ; **Chorográphically** (ಕ್ರಿ. ವಿ.)

Chóroid. **Chorion** ನೋಡಿ.

Chorólogy ಕೊರಾಲೊಜಿ (ನಾ.) ಪ್ರಾಣಿವಂಶಗಳು, ಮೊ. ಗಳ ಸ್ಥಳೀಯ ಹಂಚಿಕೆ. **Chorológical** ಕೋರೊಲಾಜಿಕಲ್ (ಗು.)

Chórtle ಚಾರ್ಟ್‌ಲ್ (ಕ್ರಿ. ಅಕ.) ಕೇಕೆ ಹಾಕಿಕೊಂಡು ನಗು.

Chórus ಕೋರಸ್ (ನಾ. ; ಬ. ವ.-ses ; ಕ್ರಿ.) (ಗ್ರೀಕ್ ಪುರಾತನ ಚರಿತ್ರೆ) ಮತಸಂಬಂಧವಾದ ನೃತ್ಯಗಳಲ್ಲಿಯೂ ನಾಟ್ಯಪ್ರದರ್ಶನಗಳಲ್ಲಿಯೂ ನರ್ತಕ ತಂಡ ಮತ್ತು ಗಾಯಕ ತಂಡ ; ಮೇಳ ; ಮೇಳದವರು. ಅವರ ನುಡಿಗಳಲ್ಲೊಂದು. ಗಾಯಕ ತಂಡ. ಅನೇಕ ಮಂದಿ ಸೇರಿ ಒಟ್ಟಾಗಿ ಹಾಡುವ ಗೀತ : ಮೇಳ ಗೀತ. 'ಎಲಿಸ ಬೆತನ್' ನಾಟಕಗಳಲ್ಲಿ ಉಪಕ್ರಮ ಭಾಷಣ ಮಾಡಿ ನಾಟಕದ ವಿಷಯವನ್ನು ವಿವರಿಸುವ ಪಾತ್ರ : ಸೂತ್ರಧಾರ. ಅನೇಕ ಮಂದಿ ಒಟ್ಟಾಗಿ ಹೇಳಿದುದು (In c. ಏಕ ಕಂಠದಿಂದ, ಎಲ್ಲರೂ ಒಟ್ಟಿಗೆ ಮಾತನಾಡುತ್ತ, ಮೊ. ಗಿ). (ಸಂ.) ಅನೇಕ ರಾಗಗಳಲ್ಲಿ (ಸಾ., ನಾಲ್ಕು ರಾಗಗಳಲ್ಲ) ರಚಿಸಿ, ಪ್ರತಿ ರಾಗವನ್ನೂ ಅನೇಕ ಮಂದಿ ಒಟ್ಟಿಗೆ ಹಾಡುವಂತೆ ಅಳವಡಿಸಿರುವ ಗೀತ. ಶ್ರೋತೃಗಳೂ ಸೇರಿ ಹಾಡುವ ಪಲ್ಲವಿ. (ಕ್ರಿ.) ಒಟ್ಟಾಗಿ, ಮೇಳಯಿಸಿ, ಹಾಡು, ಮಾತನಾಡು, ಹೇಳು. **Chóric** ಕೋ(ಕಾ)ರಿಕ್ (ಗು.) (ಗ್ರೀಕ್ ನಾಟಕದಲ್ಲಿಯ) ಮೇಳದ, ಮೇಳದಂಥ.

Chose, Chósen. **Choice** ನೋಡಿ.

Chótaház(i)ri ಚೋಟ ಹಾಸ್ರಿ (ನಾ.) (ಆಂ. ಇಂ.) ಲಘುವಾದ ಹೊತ್ತರೂಟ.

Chough ಚಫ್ (ನಾ.) ಕೆಂಪು ಕಾಲಿನ ಕಾಗೆ.

Choúltry ಚೌಲ್ಟ್ರಿ, **Chóltry** (ನಾ.) (ಆಂ. ಇಂ. ; 'ಚಾವಡಿ' ಪದದ ಅಪಭ್ರಂಶ) ಸತ್ರ. ದೇವಾಲಯದ ಕಂಬಸಾಲು.

Chouse ಚೌಸ್ (ಕ್ರಿ. ಸಕ., ನಾ.) ಮೋಸ(ಮಾಡು) ; ವಂಚಿಸು ; ವಂಚನೆ.

Chow ಚೌ (ಗು., ನಾ.) (ಅಸಂ., ಆಸ್ಟ್ರೇಲಿಯ) ಚೀನದ ; ಚೀನಿಗ(ನ). ಚೀನಾ ತಳಿಯ ಒಂದು ನಾಯಿಜಾತಿ : ಚೀನಿ ನಾಯಿ.

Chow-chow ಚೌ ಚೌ (ನಾ., ಗು.) ಕಿತ್ತಿಳೆಯ ಸಿಪ್ಪೆ, ಶುಂಠಿ, ಮೊ. ವು ಊರಹಾಕಿದ ಚೀನಿಗರ ಮುರಬ್ಬ ; (ನಾಟಕದ ವಿಷಯದಲ್ಲ) ಬೇರೆ ಬೇರೆ ನಾಟಕಗಳ ಕೆಲ ಕೆಲವು ದೃಶ್ಯಗಳ ಪ್ರದರ್ಶನ. ಚೌ ಚೌ. (ಗು.) ನಾನಾ ತೆರದ ವಸ್ತುಗಳು ಸೇರಿದ ; ಬೆರಕೆಯ ; ವಿಧ ವಿಧವಾದ. (ನೀರಿನ ವಿಷಯದಲ್ಲ) ಚೆದರಿದ.

Chrematístic ಕ್ರೀಮಟಿಸ್ಟಿಕ್ (ಗು.) ಹಣ ಮಾಡುವ ; ಧನಾರ್ಜನೆಯ. **Chrematístics** (ನಾ.) ಅರ್ಥಶಾಸ್ತ್ರ.

Chrestómathy ಕ್ರೆಸ್ಟಾಮತಿ (ನಾ.) ಆಯ್ದು ತೆಗೆದ (ಉತ್ತಮವಾದ) ಗ್ರಂಥಭಾಗಗಳ ಗುಚ್ಛ ; ಕಾವ್ಯ ಸಂಗ್ರಹ (ಮು., ಭಾಷೆ ಕಲಿಯುವುದಕ್ಕಾಗಿ ಉಪಯೋಗ)

Chrism ಕ್ರಿಸ್‌ಮ್ (ನಾ.) (ಮು., ಪವಿತ್ರ ಕರ್ಮಗಳಲ್ಲ ಉಪಯೋಗಿಸುವ) ಪವಿತ್ರಮಾಡಿದ ಎಣ್ಣೆ, ಲೇಪ : ಪೂತ ತೈಲ ; ಪವಿತ್ರಾಭ್ಯಂಜನ.

Christ ಕ್ರೈಸ್ಟ್ (ನಾ.) ಯೆಹೂದ್ಯರ ಭವಿಷ್ಯ ಪುರಾಣಗಳಲ್ಲಿ ಹೇಳಿರುವ ದೇವಾಭಿಷಿಕ್ತ : 'ಮೆಸಯ್ಯ' ; (ಈ ಪ್ರವಾದಕ್ಕನುಸಾರವಾಗಿ ಅವತರಿಸಿದನೆಂಬ ನಂಬಿಕೆಯಿಂದ) ಏಸುಕ್ರಿಸ್ತ. ದಿವ್ಯರಾಜ. ರಕ್ಷಕ ; ಉದ್ಧಾರಕ ; ಪ್ರಚೋದಕ (ಮು., The C. or a C.). (The C.-child ಬಾಲ ಕ್ರಿಸ್ತ). **Chrísthood** (ನಾ.) ; **Chrístless** (ಗು.) ಕ್ರಿಸ್ತನಿಲ್ಲದ ; ಕ್ರೈಸ್ತೋಚಿತವಲ್ಲದ. **Chrístlessness** (ನಾ.) ; **Chrístlike** (ಗು.) ; **Chrístlikeness** (ನಾ.) ; **Chrístly** (ಗು.) ; **Chrístward(s)** (ಕ್ರಿ. ವಿ.) ಕ್ರಿಸ್ತನ ಕಡೆಗೆ. **Chrísten** ಕ್ರಿಸ್‌ನ್ (ಕ್ರಿ.) ಜ್ಞಾನಸ್ನಾನ ಮಾಡಿಸಿ ಕ್ರೈಸ್ತನನ್ನಾಗಿ ಮಾಡು ; ಜ್ಞಾನಸ್ನಾನ ಮಾಡಿಸು ; (ಜ್ಞಾನಸ್ನಾನ ಕಾಲದಲ್ಲ ಅಥವಾ ಅಡ್ಡಹೆಸರಾಗಿ) ಹೆಸರುಕೊಡು. (ಹೀಗೆಯೇ, ಹಡಗು, ಗಂಟೆಗಳು, ಮೊ. ಕ್ಕೆ ಈ ತೆರದ ವಿಧಿಯನ್ನಾಚರಿಸಿ ಹೆಸರುಕೊಡು). **Chrístendom** (ನಾ.) ಕ್ರೈಸ್ತರು ; ಕ್ರೈಸ್ತಪ್ರಪಂಚ ; ಕ್ರೈಸ್ತ ರಾಜ್ಯಗಳು. **Chrístian** ಕ್ರಿಸ್ಟ್ಯ(ಶ್ಚ)ನ್ (ಗು., ನಾ.) ಕ್ರೈಸ್ತ ಮತದಲ್ಲಿ ನಂಬಿಕೆಯುಳ್ಳ(ವನು) ; ಕ್ರೈಸ್ತ ಮತಾನುಯಾಯಿಯಾದ(ವನು) ; ಕ್ರೈಸ್ತ ; ಕ್ರಿಸ್ತನ ; ಕ್ರಿಸ್ತನಂಥ ; ಕ್ರಿಸ್ತ ಮತದ ; ಕ್ರಿಸ್ತನ ಉಪದೇಶಕ್ಕನುಸಾರವಾದ ನಡತೆಯುಳ್ಳ(ವನು). ಅಕೃತ್ರಿಮ ಭಕ್ತಿಯುಳ್ಳ(ವನು) ; ಸದ್ಧರ್ಮನಿಷ್ಠ. ಮಾನವ ; ಮನುಷ್ಯ (ಮೃಗವಲ್ಲ). (ಅಸಂ.) ನಾಗರಿಕತೆಯುಳ್ಳ(ವನು) ; ಯೋಗ್ಯ ; ಗೌರವಸ್ಥ. C. burial ಕ್ರೈಸ್ತ ಸಂಸ್ಕಾರದಿಂದ ಕೂಡಿದ ಶವಸಂಸ್ಥಾಪನೆ. C. era ಕ್ರಿಸ್ತ ಶಕ (ಕ್ರಿಸ್ತನು ಹುಟ್ಟಿದ ಕಾಲವೆಂದು ಪರಿಗಣಿಸುವ ಕಾಲದಿಂದ ಗುಣಿಸಿದುದು). C. name ಜ್ಞಾನಸ್ನಾನ ಕಾಲದಲ್ಲಿಟ್ಟ ಹೆಸರು : ಕ್ರೈಸ್ತ ನಾಮ. C. science, scientist ರೋಗಿಗೆ ತನ್ನ (ಕ್ರೈಸ್ತ)ಮತದಲ್ಲ ಅಕೃತ್ರಿಮವಾದ ನಂಬಿಕೆಯಿರುವ ಸಂದರ್ಭದಲ್ಲಿ ಯಾವ ವೈದ್ಯ ಚಿಕಿತ್ಸೆಯೂ ಇಲ್ಲದೆ ಬರಿಯ ಮನೋಬಲದಿಂದಲೇ ರೋಗ, ಮೊ. ನ್ನು ವಾಸಿಮಾಡಲು ಯತ್ನಿಸುವ ಪದ್ಧತಿ(ಯ ಅನುಯಾಯಿ) : (ಕ್ರೈಸ್ತ) ಶ್ರದ್ಧಾ ಚಿಕಿತ್ಸೆ, ಶ್ರದ್ಧಾ ಚಿಕಿತ್ಸಕ. **Chrístianize** (ಕ್ರಿ.) ; **Chrístianizátion** (ನಾ.) ; **Chrístianlike** (ಗು.) ; **Chrístianly** (ಗು., ಕ್ರಿ. ವಿ.) ; **Christiánity** ಕ್ರಿಸ್ಟಿ(ಶ್ಚಿ)ಅ್ಯಾನಿಟಿ (ನಾ.) ಕ್ರೈಸ್ತ ಮತ, ಧರ್ಮ. ಕ್ರಿಸ್ತನ ಮತ್ತು ಅವನ ಶಿಷ್ಯರ ಉಪದೇಶಗಳು, ಮತ ಸಿದ್ಧಾಂತಗಳು. ಕ್ರೈಸ್ತತ್ವ ; ಕ್ರೈಸ್ತ ಭಾವ ; ಕ್ರೈಸ್ತೋಚಿತವಾದ ನಡತೆ. **Chrístmas** ಕ್ರಿಸ್ಮಸ್ (ನಾ. ; ಸಂಕ್ಷಿಪ್ತ. Xmas) ಕ್ರಿಸ್ತ ಜಯಂತಿ (= C.-day) ; ಕ್ರಿಸ್ಮಸ್ ಹಬ್ಬ (ಡಿಸೆಂಬರು ೨೫ ನೆಯ ತಾರೀಖಿನಲ್ಲ ಆಚರಿಸುವದು ; ಕುಟುಂಬಕ್ಕೆ ಸೇರಿದವರೆಲ್ಲ ಒಟ್ಟುಗೂಡಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಊಟ ವಿನೋದಗಳಿಂದ ಸಂತೋಷವಾಗಿರುವ ದಿನ. Father C. ಈ ಕುಟುಂಬೋತ್ಸವವನ್ನು ಮೂರ್ತೀಕರಿಸಿದ ವ್ಯಕ್ತಿ : ಕ್ರಿಸ್ಮಸ್ ತಾತ). ಡಿಸೆಂಬರು ೨೪ನೆಯ ತಾರೀಖು ಮೊದಲ್ಗೊಂಡು ಒಂದು ವಾರ ಅಥವಾ ಹೆಚ್ಚಾದ ಕಾಲ (=C.-tide): ಕ್ರಿಸ್ಮಸ್ ಕಾಲ. (ಗು.) ಕ್ರಿಸ್ಮಸ್ಸಿನ; ಕ್ರಿಸ್ಮಸ್ಸಿಗೆ ತಕ್ಕ, ಒಪ್ಪುವ, ಉಚಿತ, ಯೋಗ್ಯ. **C.-box** ಅಂಚೆಯವರು ಮೊ. ರಿಗೆ ಮರ್ಯಾದಾರ್ಥವಾಗಿ ಕೊಡುವ ಕ್ರಿಸ್ಮಸ್ ಇನಾಮು. **C. card** ಇಷ್ಟ ಮಿತ್ರರಿಗೆ ಕ್ರಿಸ್‌ಮಸ್ಸಿನಲ್ಲಿ ಕಳುಹಿಸುವ ಶುಭವಾದನ ಪತ್ರ. **C. eve** ಕ್ರಿಸ್ಮಸ್ ಹಬ್ಬದ ಹಿಂದಿನ ದಿನ (೨೪ನೆಯ ಡಿಸಂಬರು). **C. rose** ಡಿಸೆಂಬರಿನಿಂದ ಫೆಬ್ರವರಿ ವರೆಗಿನ ಕಾಲದಲ್ಲ ಬಿಳಿಯಹೂವು ಬಿಡುವ ಒಂದು ಜಾತಿಯ ಹೂವಿನ ಗಿಡ. **C.-tree** (ಕ್ರಿಸ್ಮಸ್ ದಿನ ಮನೆಯ ಕೋಣೆಯಲ್ಲಿ ನೆಟ್ಟ ಸಣ್ಣ ಗಿಡದಮೇಲೆ ಮೇಣದ ಬತ್ತಿಯ ದೀಪಗಳು, ತೆರತೆರದ ಇನಾಮುವಸ್ತುಗಳು, ಮೊ. ವನ್ನು ತೂಗ ಕಟ್ಟಿದ) ಕ್ರಿಸ್ಮಸ್ ಮರ. **Chrístmasy** (ಗು.) (ಬಳ. ಮಾ.) ಕ್ರಿಸ್ಮಸ್ಸಿಗೆ ಸಹಜವಾದ; ಕ್ರಿಸ್ಮಸ್ ಲಕ್ಷಣದ. **Christólatry** ಕ್ರಿಸ್ಟಾಲಟ್ರಿ (ನಾ.) ಕ್ರಿಸ್ತನನ್ನು ದೇವರೆಂದು ಪೂಜಿಸುವುದು ; ಕ್ರಿಸ್ತಾರಾಧನೆ. **Christólogy** (ನಾ.) ಕ್ರಿಸ್ತವಿಚಾರ ಮಾಡುವ ದೇವತಾ ಶಾಸ್ತ್ರದ ಭಾಗ; ಕ್ರಿಸ್ತನ ವಿಷಯವಾದ ಮತ ತತ್ತ್ವ, ವಾದ: ಕ್ರಿಸ್ತಶಾಸ್ತ್ರ.

Chríst-cross-row, Críss- ಕ್ರಿಸ್ ಕ್ರಾಸ್ ರೋ (ನಾ.) (ಪ್ರಾಚೀ. ಪ್ರ.) ವರ್ಣಮಾಲೆ (ಕ್ರಿಸ್ತನ ಶಿಲುಬೆಯ ಚಿತ್ರದಿಂದ ಕೂಡಿದ್ದ ಕಾರಣ)

Chrístie's ಕ್ರಿಸ್ಟೀಸ್ (ನಾ.) ಲಂಡನ್ನಿನಲ್ಲಿ ಭಾರಿ ಹರಾಜು ವ್ಯಾಪಾರದ ಒಂದು ಅಂಗಡಿ (ಮು., ಕಲಾವಸ್ತುಗಳದು)

Chrísty mínstrels ಕ್ರಿಸ್ಟಿ ಮಿನ್ಸ್ಟ್ರಲ್ಸ್ (ನಾ., ಬ. ವ.) ಕಪ್ಪುಬಳಿದು ಕೊಂಡ ಮುಖಗಳುಳ್ಳ ನೀಗ್ರೋಸಂಗೀತದ ಗಾಯಕತಂಡ. (Christy ಎಂಬಾತನ ಹೆಸರಿನಿಂದ)

Chromátic ಕ್ರೊಮ್ಯಾಟಿಕ್ (ಗು.) ಬಣ್ಣದ; ಬಣ್ಣದಿಂದಾದ; ಉಜ್ಜ್ವಲ ವರ್ಣದ. C. printing ಚಿತ್ರಕೊರೆದಿರುವ ಅಚ್ಚಿನಮೇಲೆ ಬಣ್ಣಬಣ್ಣದ ಮಸಿಗಳನ್ನು ಹಚ್ಚಿ ಮುದ್ರಣಮಾಡುವುದು : ವರ್ಣ ಮುದ್ರಣ. **Chromátics** (ನಾ.) ವರ್ಣಶಾಸ್ತ್ರ. **Chromátically** (ಕ್ರಿ. ವಿ.)

Chrómatin ಕ್ರೋಮಟಿನ್ (ನಾ.) (ಜೀ. ವಿ.) (ಜೀವಕಣಗಳ ಆಧಾರ ಬಿಂದುವಿನಲ್ಲ) ಬಣ್ಣ ಹೀರಿಕೊಳ್ಳುವ ಜೀವಪದಾರ್ಥ: ವರ್ಣಗ್ರಾಹಿ.

Chromatógraphy ಕ್ರೋಮಟಾಗ್ರಫಿ (ನಾ.) ವರ್ಣ ವಿವರಣೆ.

Chromatólogy ಕ್ರೋಮಟಾಲೊಜಿ (ನಾ.) ವರ್ಣಶಾಸ್ತ್ರ.

Chromatópsy ಕ್ರೋಮಟಾಪ್ಸಿ (ನಾ.) ಅಸಹಜ ವರ್ಣ ದೃಷ್ಟಿ.

Chrome ಕ್ರೋಮ್ (ನಾ.) ಸೀಸದ ಕ್ರೋಮೇಟ್ ಪದಾರ್ಥದಿಂದ ಪಡೆದ ಹಳದಿಯ ಬಣ್ಣ, ವರ್ಣದ್ರವ್ಯ (Also, C.-yellow). C. green, orange, red ಕ್ರೋಮಿಯಂ ಧಾತುವಿನ ಇತರ ಸಂಯುಕ್ತ ಗಳಿಂದ ಪಡೆದ ಹಸುರು, ಕಿತ್ತಿಳೆ, ಕೆಂಪು, ಬಣ್ಣ.

Chrómium ಕ್ರೋಮಿಯಂ (ನಾ.) (ರ. ವಿ.) ಒಂದು ಲೋಹ ಮೂಲ ಧಾತು : 'ಕ್ರೋಮಿಯಂ'. **Chrómate** (ನಾ.) ಕ್ರೋಮಿಕ್ ಆಮ್ಲದಿಂದಾದ ಲವಣ. **Chrómic** (ಗು.) ಕ್ರೋಮಿಯಮ್ಮಿನ.

Chrómograph ಕ್ರೋಮೊಗ್ರಾಫ್ (ನಾ., ಕ್ರಿ. ಸಕ.) ಶಾಯಿಗೆ ಬದಲಾಗಿ 'ಆ್ಯನಿಲೈನ್' ಬಣ್ಣಗಳನ್ನುಪಯೋಗಿಸಿ ಚಿತ್ರದ ಅಥವಾ ಬರೆವಣಿಗೆಯ ಪ್ರತಿಗಳನ್ನು ತೆಗೆಯುವ, 'ಜೆಲೆಟಿನ್' ಎಂಬ ಪದಾರ್ಥದಿಂದ ಮಾಡಿದ, ಮೆತುವಾದ ಮುದ್ರಣದ ಹಲಗೆ : ವರ್ಣ ಮುದ್ರಕ. (ಕ್ರಿ.) ಇದರಿಂದ ಪ್ರತಿಯೆತ್ತು.

Chromolíthograph, Chrómo ಕ್ರೋಮೊಲಿಥೊಗ್ರಾಫ್, ಕ್ರೋಮೊ (ನಾ. ; Chromo ಪದದ ಬ. ವ. -os) ಕಲ್ಲಚ್ಚಿನಿಂದ ತೆಗೆದ ವರ್ಣಚಿತ್ರ. **Chromolithógrapher** -ಲಿಥಾಗ್ರಫರ್ (ನಾ.); **Chromolithógrapny** (ನಾ.); **Chrómolithográphic** -ಲಿಥೊಗ್ರ್ಯಾಫಿಕ್ (ಗು.)

Chromophótograph ಕ್ರೋಮೊಫೋಟೊಗ್ರಾಫ್ (ನಾ.) ಸಹಜವರ್ಣ ಗಳಿಂದ ಕೂಡಿದ ಛಾಯಾಚಿತ್ರ : ವರ್ಣಛಾಯಾಚಿತ್ರ. **Chromophotógraphy** -ಫೊಟಾಗ್ರಫಿ (ನಾ.)

Chrómosome ಕ್ರೋಮೊಸೋಮ್ (ನಾ.) (ಜೀ. ವಿ.) ಜೀವಕಣವು ತನ್ನ ಸಂತಾನಾಭಿವೃದ್ಧಿಗಾಗಿ ಒಡೆಯುವುದಕ್ಕೆ ಮೊದಲು ಅದರ ಆಧಾರಬಿಂದುವಿನಲ್ಲಿಯ ವರ್ಣಗ್ರಾಹಿಯು, ಮಾರ್ಪಾಡುಹೊಂದುವ ಸೂಕ್ಷ್ಮತಂತು ಅಥವಾ ಸೂಕ್ಷ್ಮದಂಡ : ವರ್ಣ ತಂತು.

Chrómosphere ಕ್ರೋಮೊಸ್ಫಿಯರ್ (ನಾ.) (ಖ. ವಿ.) ಸೂರ್ಯನ ಪ್ರಭಾಮಂಡಲದ ಹೊರಗಿರುವ ಕೆಂಪು ಬಣ್ಣದ ಅನಿಲಾವರಣ. (ಸೂರ್ಯನ) ವರ್ಣಮಂಡಲ.

Chrónic ಕ್ರಾನಿಕ್ (ಗು.) (ರೋಗ ವಿಷಯದಲ್ಲಿ) ಎಳೆಯುತ್ತಿರುವ; ಬಹು ಕಾಲದ; ಹಳೆಯ; ಬೇರೂರಿದ; ಅಸ್ಥಿಗತ (C. invalid ಹಳೆಯ ರೋಗಿ. C. complaint ದೀರ್ಘ ವ್ಯಾಧಿ. C. doubt ನಿತ್ಯ ಸಂಶಯ). (ಗ್ರಾಮ್ಯ) ಕೆಟ್ಟ; ಕಠಿನ; ತೀವ್ರ. **Chrónically** (ಕ್ರಿ. ವಿ.); **Chronícity** ಕ್ರೊನಿಸಿಟಿ (ನಾ.) (ವ್ಯಾಧಿಯ) ಬೇರೂರಿರುವ ಲಕ್ಷಣ, ಸ್ಥಿತಿ.

Chrónicle ಕ್ರಾನಿಕ್‌ಲ್ (ನಾ., ಕ್ರಿ. ಸಕ.) ನಡೆದ ಘಟನೆಗಳನ್ನು ಕಾಲಾನುಕ್ರಮವಾಗಿ ಬರೆದಿಟ್ಟಿರುವ ಪಟ್ಟಿ, ಪುಸ್ತಕ : ಕಾಲಾನು ಕ್ರಮಣಿ. (ಬ. ವ. ದಲ್ಲಿ) (ಬೈಬಲ್ಲಿನ) ಹಳೆಯ ಒಡಂಬಡಿಕೆಯ ಈ ಹೆಸರಿನ ಎರಡು ಪ್ರಕರಣಗಳು. ಚರಿತ್ರೆ; ವೃತ್ತಾಂತ. **Chrónicler** (ನಾ.)

Chrónogram ಕ್ರಾನೊಗ್ರ್ಯಾಮ್ (ನಾ.) ಯಾವುದಾದರೂ ನಿರ್ದಿಷ್ಟ (ಕ್ರಿಸ್ತ) ಸಂವತ್ಸರವನ್ನು ಗುಪ್ತವಾಗಿ ಸೂಚಿಸಲು ತಕ್ಕ ರೋಮನ್ ಅಂಕಿಗಳ ಸಂಕೇತಾಕ್ಷರಗಳಿಂದ ಕೂಡಿದ ವಾಕ್ಯ, ಮೊ. (ಉದಾ., LorD haVe MerCIe Vpon Vs $= 50 + 500 + 5 + 1000 + 100 + 1 + 5 + 5 = 1666$) : ಕಾಲ ಲೇಖನ; ಕಾಲ ಶ್ಲೇಷೆ. **Chronogrammátic** — ಗ್ರಮ್ಯಾಟಿಕ್ (ಗು.)

Chrónograph ಕ್ರಾನೊಗ್ರಾಫ್ (ನಾ.) ಕಾಲವನ್ನು ಅತ್ಯಂತ ನಿಷ್ಕರ್ಷೆ ಯಾಗಿ ತೋರಿಸುವ ಕಾಲಯಂತ್ರ : ಸೂಕ್ಷ್ಮಕಾಲ ಸೂಚಿ; ಕಾಲ ಲೇಖಕ; (ಕಾಲವನ್ನು ನಿಷ್ಕೃಷ್ಟವಾಗಿ ಗೊತ್ತುಮಾಡಲು) ಥಟ್ಟನೆ ನಿಲ್ಲುವಂತೆಯೂ ಮತ್ತು ಥಟ್ಟನೆ ನಡೆಯಲಾರಂಭಿಸುವಂತೆಯೂ ಮಾಡಲಾಗುವ ಗಡಿಯಾರ : ನಿಲ್‌ಗಡಿಯಾರ. **Chronográphic** —ಗ್ರ್ಯಾಫಿಕ್ (ಗು.)

Chronólogy ಕ್ರೊನಾಲೊಜಿ (ನಾ.) ಕಾಲಗಣನ ಶಾಸ್ತ್ರ; ಆಯಾ ಘಟನೆಯ ಕಾಲವನ್ನು ನಿರ್ದೇಶಿಸಿ ತೋರಿಸುವ ಕ್ರಮ; ಇದನ್ನು ತೋರಿಸುವ ಪಟ್ಟಿ, ಗ್ರಂಥ; ಘಟನ ಕಾಲ ಸೂಚಿ. **Chronóloger** (ನಾ.) = **Chronólogist** (ನಾ.); **Chronólogize** (ಕ್ರಿ. ಸಕ.) ಕಾಲಗಣನ ಶಾಸ್ತ್ರವನ್ನು ಪ್ರಯೋಗಿಸು; ಕಾಲಕ್ರಮವಾಗಿ ವಿಂಗಡಿಸು. **Chronológical** ಕ್ರಾನೊಲಾಜಿಕಲ್ (ಗು.); **Chronológically** (ಕ್ರಿ. ವಿ.)

Chronómeter ಕ್ರೊ(ಕ್ರಾ)ನಾಮಿಟರ್ (ನಾ.) ಕಾಲ ಮಾಪಕ (ಮು., ಶಾಖವ್ಯತ್ಯಾಸಗಳಿಂದ ಕಾಲವ್ಯತ್ಯಾಸ ತೋರದಂತೆ ರಚಿಸಿ, ಸಮುದ್ರ, ಮೊ. ಪ್ರದೇಶಗಳಲ್ಲಿ ರೇಖಾಂಶ ನಿರ್ದೇಶಕ್ಕಾಗಿ ಉಪಯೋಗಿಸುವದು). **Chronómetry** (ನಾ.) (ಶಾಸ್ತ್ರೀಯ) ಕಾಲ ಮಾಪನ. **Chronométric(al)** ಕ್ರಾನೊ — (ಗು.); **Chronométrically** (ಕ್ರಿ. ವಿ.)

Chrónopher ಕ್ರಾನೊಫರ್ (ನಾ.) ಕಾಲಸೂಚಕ ವಿದ್ಯುತ್‌ಸಂಕೇತ ಗಳನ್ನು ಹರಡುವ ಸಾಧನ : ಕಾಲ ವಿಕಿರಣ ಯಂತ್ರ.

Chrónoscope ಕ್ರಾನೊಸ್ಕೋಪ್ (ನಾ.) (ಬಹಳ ಸೂಕ್ಷ್ಮ ಕಾಲಪರಿಮಾಣ ವನ್ನು ಅಳೆಯುವಂತೆ ರಚಿಸಿರುವ) ಕಾಲ ದರ್ಶಕ (ಮು., ಉತ್‌ಕ್ಷಿಪ್ತ ವಸ್ತುಗಳ ವೇಗಮಾನವನ್ನು ಅಳೆಯುವದು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Chrýsalis ಕ್ರಿಸಲಿಸ್, **-lid** -ಲಿಡ್ (ನಾ.; ಬ. ವ. -ises, -ids, Chrysálides ಕ್ರಿಸ್ಯಾಲಿಡೀಸ್) ಒಂದು ಕೀಟವು ತನ್ನ ಆದ್ಯವಸ್ಥೆಯ ಮರಿಹುಳುವಿಗೂ ಅಂತ್ಯಾವಸ್ಥೆಯ ಪತಂಗಕ್ಕೂ ಮಧ್ಯೆ ನಿದ್ರಾವಸ್ಥೆಯಲ್ಲಿ ಬೆಳೆಯುವ ಪೊರೆಹುಳುವಿನ ರೂಪ: ಪೊರೆಹುಳು. ಪೊರೆಹುಳುವನ್ನು ಮುಚ್ಚಿಕೊಂಡಿರುವ ಗೂಡು. (ರೂಪ.) ಸಜ್ಜೀಕರಣ ಸ್ಥಿತಿ; ಅವಸ್ಥಾಂತರವಾಗುವ ಸ್ಥಿತಿ; ಸಂಧಿ ಕಾಲ.

Chrysánthemum ಕ್ರಿಸ್ಯಾಂತಿಮಮ್ (ನಾ.) (ಸ. ವಿ.) ಸೇವಂತಿಗೆಯ ಜಾತಿಯ ಸಸ್ಯ. (ತೋಟಗಾರಿಕೆ) ಜಪಾನಿನಿಂದ ತಂದು ಬೆಳೆಯಿಸಿದ ಸೇವಂತಿಗೆಯ ಜಾತಿಗಳು (ನವೆಂಬರು ಡಿಸೆಂಬರು ತಿಂಗಳುಗಳಲ್ಲಿ ಹೂವಿಗೆ ಬರತಕ್ಕವು): ಜಪಾನ್ ಸೇವಂತಿಗೆ. Land of the c. ಜಪಾನು.

Chryselephántine ಕ್ರಿಸ್ಎಲಿಫ್ಯಾಂಟಿನ್ (ಗು.) ಚಿನ್ನದ ಮತ್ತು ದಂತದ ತೊಡಪುಳ್ಳ. (ಪುರಾತನ ಗ್ರೀಕ್‌ಶಿಲ್ಪಿಗಳು ತಾವು ಮಾಡಿದ ವಿಗ್ರಹಗಳಿಗೆ ಇಂಥ ತೊಡಪನ್ನು ಹಾಕುತ್ತಿದ್ದರು)

Chrysobéryl ಕ್ರಿಸೊಬೆರಿಲ್ (ನಾ.) ಹಳದಿಯ ಛಾಯೆಯ ಹಸುರು ಬಣ್ಣದ ಒಂದು ಮಣಿ.

Chrýsolite ಕ್ರಿಸೊಲೈಟ್ (ನಾ.) (ಹಿಂದೆ) ಹಲವು ತೆರದ ಪಚ್ಚೆಮಣಿ; (ಈಗ) 'ಆಲಿವೈನ್' ಎಂಬ ಮಣಿ.

Chubb ಚಬ್ (ನಾ.) (C.-lock ಎಂಬುದರ ಸಂಕ್ಷಿಪ್ತ) ಒಂದು ತೆರದ ಬೀಗ. (ಮೊದಲು ರಚಿಸಿದವನ ಹೆಸರು)

Chúbby ಚಬಿ (ಗು.) ದುಂಡು ಮುಖದ; ತುಂಬು —; ದುಂಡು ದುಂಡಾದ. **Chúbbiness** (ನಾ.)

Chuck[1] ಚಕ್ (ಭಾವ. ಅವ್ಯ., ಕ್ರಿ. ಅಕ.) ಕೋಳಿ ಮಾಡುವ 'ಕ್ಲಕ್, ಕ್ಲಕ್' ಎಂಬ ಶಬ್ದ(ಮಾಡು). ಕೋಳಿಗಳನ್ನು ಕರೆಯುವಾಗ, ಕುದುರೆಯನ್ನು ಚಪ್ಪರಿಸುವಾಗ, ಮಾಡುವ ಶಬ್ದ: ಚಪ್ಪರಣೆ; ಚಪ್ಪರಿಸು.

Chuck[2] ಚಕ್ (ನಾ.) (ಮುದ್ದಿನ ಮಾತು). **Chúcky** (ಗು.)

Chuck[3] ಚಕ್ (ಕ್ರಿ. ಸಕ., ನಾ.) ಗಲ್ಲದ ತಳಗಡೆ ತಟ್ಟು(ವುದು); ಗಲ್ಲತಟ್ಟು(ವುದು). ಅಲಕ್ಷ್ಯದಿಂದ, ತಿರಸ್ಕಾರದಿಂದ, ಸುಲಭವಾಗಿ, ಎಸೆ, ಒಗೆ, ಬಿಸುಡು; — ವುದು. The c. (ಅಸಂ.) ಉದ್ಯೋಗದಿಂದ ಅಟ್ಟಿಬಿಡುವುದು, ಉಚ್ಚಾಟನೆ (Give one the c.). C. away ಹಾಳುಮಾಡಿಕೊ. (ಇರಬಹುದಾದ ಅವಕಾಶ, ಮೊ. ನ್ನು) ಕಳೆದುಕೊ. C. it (ಅಸಂ.) ತಡೆ; ನಿಲ್ಲಿಸು. C. out (ತೊಂದರೆ ಕೊಡುವವನನ್ನು ನಾಟ್ಯಶಾಲೆ, ಸಭಾಮಂದಿರ, ಮೊ. ಗಳಿಂದ) ಅಟ್ಟಿಬಿಡು, ಹೊರದೂಡು. C. up ಜುಗುಪ್ಸೆಯಿಂದ ಬಿಟ್ಟುಬಿಡು; ಎಸೆದುಬಿಡು; ತೊಲಗಿಸಿಬಿಡು. C. up the sponge ಎದುರಿಸುವುದನ್ನು, ಅಥವಾ ಪ್ರಯತ್ನವನ್ನು, ಬಿಟ್ಟುಬಿಡು; ಸೋಲೊಪ್ಪಿಕೊ. Chucker-out (ಗ್ರಾಮ್ಯ) ಜೂಜಿನ ಹೋಲೆಮನೆಯಿಂದ, ಕುಡಿತದ ಅಂಗಡಿಯಿಂದ, ಹಾದರದ ಮನೆಯಿಂದ, ದುಡ್ಡು ಕಸಿದುಕೊಳ್ಳಲ್ಪಟ್ಟವನನ್ನು ದೂಡಿಬಿಡುವ ದಾಂಡಿಗ. ಸಭೆ, ಮೊ. ಗಳಲ್ಲಿ ಎದುರುಬೀಳುವವರನ್ನು ಅಟ್ಟಿಬಿಡಲು ನಿಯಮಿತನಾದ ಒರಟು ಕೂಲಿಯಾಳು: ಹೊರದಬ್ಬುವವನು.

Chuck[4] ಚಕ್ (ನಾ., ಕ್ರಿ. ಸಕ.) (ಕಡೆತದ ಯಂತ್ರದಲ್ಲಿ) ಕಡೆಯಬೇಕಾದ ವಸ್ತುವನ್ನು ಭದ್ರವಾಗಿ ಹಿಡಿದುಕೊಳ್ಳುವ ಸಲಕರಣೆ: ಹಿಡಿಗೈ. (ಕ್ರಿ.) ಹಿಡಿಗೈಯಲ್ಲಿ ಮರ, ಮೊ. ನ್ನು ಬಿಗಿಸು.

Chuck[5] ಚಕ್ (ನಾ.) (ಅಸಂ.) ತಿಂಡಿ; ಆಹಾರ. Hard c. (ನಾವೆ) ಹಡಗಿನ ಬಿಸ್ಕತ್ತು. C.-wagon (ಅಮೆ. ಸಂ.) ಅನ್ವೇಷಕ ದಳ, ಮೊ. ಗಳೊಡನೆ ಹೋಗುವ ತಿಂಡಿಬಂಡಿ.

Chúckle ಚಕ್‌ಲ್ (ಕ್ರಿ. ಅಕ., ನಾ.) ಒಳಗೊಳಗೇ ನಗು; ತಡೆದ ನಗೆ (ನಗು); ಬಾಯಿ ಮುಚ್ಚಿಕೊಂಡು ನಗು(ವ ನಗೆ). ಹಿಗ್ಗು; ಹೆಮ್ಮೆಯ ಆನಂದ(ಪಡು). ಕೋಳಿಯ ಕರೆ (ಕರೆ)

Chúckle-head ಚಕ್‌ಲ್ ಹೆಡ್ (ನಾ.) ಹೆಡ್ಡ; ದಡ್ಡ; ಮಡ್ಡಿ. **Chúckle-headed** (ಗು.)

Chúcker ಚಕರ್ (ನಾ.) (ಪೋಲೊ ಆಟದಲ್ಲಿ) ಆಟದ ಸೂಳುಗಳಲ್ಲೊಂದು: ಚಕ್ಕರ್.

Chúddar ಚಡರ್ (ನಾ.) (ಆಂ. ಇಂ.) (ಇಂಡಿಯಾದಲ್ಲಿ ಹೆಂಗಸರು ತಲೆಯ ಮೇಲೂ ಮೈಮೇಲೂ ಶಾಲಿನಂತೆ ಹೊದೆದುಕೊಳ್ಳುವ) ದೊಡ್ಡ ದುಪಟಿ.

Chug ಚಗ್ (ನಾ.) ಮುಳುಗುವ ಅಥವಾ ಸಿಡಿಯುವ ಶಬ್ದ; 'ಚಗ್.' (ಕ್ರಿ. ಅಕ.) 'ಚಗ್' ಅನ್ನು.

Chum ಚಮ್ (ಕ್ರಿ. ಅಕ., ನಾ.) (ಮತ್ತೊಬ್ಬನೊಡನೆ) ಒಂದೇ ಕೋಣೆಯಲ್ಲಿ ವಾಸಿಸು(ವವನು); ಸಹವಾಸಿ; ಸಂಗಾತಿ; ಆಪ್ತಮಿತ್ರ; ಮೆಚ್ಚಿನ ಗೆಳೆಯ; ಅನ್ಯೋನ್ಯವಾಗಿರು(ವವನು) (ಮು., ಈಗ ಹುಡುಗರಲ್ಲಿ). C. up (ಬಳ. ಮಾ.) ಸ್ನೇಹ ಬೆಳಸು. (ಆಸ್ಟ್ರೇಲಿಯದಲ್ಲಿ) New c. ಹೊಸದಾಗಿ ವಲಸೆಬಂದವನು; ಇನ್ನೂ ಹೊಸಬ; ಚಾತುರ್ಯ ತಿಳಿಯದವನು; ದಡ್ಡ. **Chúmmery** (ನಾ.) ಅನ್ಯೋನ್ಯತೆ; ಸಲಿಗೆ.

Chump ಚಂಪ್ (ನಾ.) ಮರದ ಕೊರಡು; ಕೊಂಟು; ಮೊಂಡು ಕೊನೆ; ತಲೆ (ಮು., off one's c. ಎಂಬಲ್ಲಿ: ಸಂಭ್ರಮ, ಮೊ. ಗಳಿಂದ ತಲೆ ತಿರುಗಿಹೋಗಿ, ಆವೇಶಪರನಾಗಿ). (ಅಸಂ.) ಹೆಡ್ಡ; ದಡ್ಡ; ಮಂಕ; ಹುಚ್ಚ.

Chunk ಚಂಕ್ (ನಾ.) (ಮರ, ರೊಟ್ಟಿ, ಮೊ. ಗಳಿಂದ) ಕತ್ತರಿಸಿ ತೆಗೆದ ದಪ್ಪ ತುಂಡು, ಚೂರು.

Chupátty ಚಪಾಟಿ (ನಾ.) (ಆಂ. ಇಂ.) ಒದಗು ಹಾಕದೆ ಮಾಡಿದ ಚಪ್ಪಟೆಯ ಸಣ್ಣ ಒರಟುರೊಟ್ಟಿ: ಚಪಾತಿ.

Church ಚರ್ಚ್ (ನಾ.) ಕ್ರೈಸ್ತ ಸಾರ್ವಜನಿಕ ಆರಾಧನ ಮಂದಿರ, ಗುಡಿ; 'ಚರ್ಚ್' (ಮು., ಆ ರಾಜ್ಯದಲ್ಲಿ ಸ್ಥಾಪಿತವಾಗಿರುವ ಮತ ಧರ್ಮಕ್ಕನುಸಾರವಾದದ್ದು). ಕ್ರೈಸ್ತರು; ಕ್ರೈಸ್ತ ಲೋಕ; ಕ್ರೈಸ್ತ ಮಂಡಲ (C. militant ಪಾಪಭಂಜನೆಗಾಗಿ ಹೋರಾಡುವ ಕ್ರೈಸ್ತರು. Primitive C. ಆದ್ಯ ಕ್ರೈಸ್ತ ಮಂಡಲ. Reformed C. ಸುಧಾರಿತ ಕ್ರೈಸ್ತ ಮಂಡಲ. C. of England, English or Anglican C. ಮತಸುಧಾರಣೆಯಿಂದೀಚೆಗೆ, ಪೋಪ್‌ಗುರುವಿನ ಅಧಿಕಾರವನ್ನು ನಿರಾಕರಿಸಿದ ಪಶ್ಚಿಮ ಅಥವಾ ಲ್ಯಾಟಿನ್ ಕ್ರೈಸ್ತಮಂಡಲಿಯ ಆಂಗ್ಲ ಶಾಖೆ. Established C. ರಾಜ್ಯಾಂಗೀಕೃತ ಕ್ರೈಸ್ತ ಧರ್ಮ). ಒಂದು ಧರ್ಮಸಂಸ್ಥೆ, ಮತ; ಇದರ ವೈದಿಕರು ಮತ್ತು ಇತರ ಮತಾಧಿಕಾರಿಗಳು. ಮತೋದ್ಯೋಗ; ವೈದಿಕ ವೃತ್ತಿ (Go into the C. ಕ್ರೈಸ್ತ ಮತೋದ್ಯೋಗ ದೀಕ್ಷೆ ಪಡೆ). High, Low, Broad, C. ನಾನಾ ಮತಭೇದಗಳು, ಆಚಾರಗಳು, ಉಳ್ಳ ಕ್ರೈಸ್ತಮಂಡಲಿಗಳು; [- Churchman (ನಾ.); - Churchism (ನಾ.)]. ಸಾರ್ವಜನಿಕ ದೇವತಾರಾಧನೆ (Go to c., C.-time, C.-goer). Poor as a c. mouse ಏನೂ ಗತಿಯಿಲ್ಲದ. **C.-rate** ಗ್ರಾಮದ ಆರಾಧನ ಮಂದಿರ ನಡೆಯಲು ಹಾಕಿದ ತೆರಿಗೆ: ಚರ್ಚುತೆರಿಗೆ. **C. service** ಸಾರ್ವಜನಿಕ ಆರಾಧನೆ; ಸಾಮಾನ್ಯಾರಾಧನ ಸ್ತೋತ್ರ, ತಕ್ಕ ಬೋಧನೆಗಳು, ಮೊ. ಗಳನ್ನುಳ್ಳ ಪುಸ್ತಕ: ಆರಾಧನ ಪುಸ್ತಕ. **C.-text** ಕ್ರೈಸ್ತ ಸ್ಮಾರಕಶಾಸನಗಳಲ್ಲಿರುವ ಕಪ್ಪಕ್ಷರ. **Chúrchwarden** (ನಾ.) ಗ್ರಾಮದವರಿಂದ ಚುನಾಯಿತನಾದ ಮಠದ ಲೌಕಿಕ ಪ್ರತಿನಿಧಿ. (ಬಳ. ಮಾ.) ಜೇಡಿಯ ಮಣ್ಣಿನ ಉದ್ದವಾದ ಚುಂಗಾಣಿ. **Chúrchyard** (ನಾ.) (ಸಮಾಧಿಗಳಿಗಾಗಿ ಕೆಲವು ಸಂದರ್ಭಗಳಲ್ಲಿ ಉಪಯೋಗಿಸುವ) ಕ್ರೈಸ್ತ ಆರಾಧನ ಮಂದಿರದ ಸುತ್ತಲಿನ ಆವರಣ, ಅಂಗಳ; ಸಮಾಧಿ ಭೂಮಿ (C. cough ಮರಣಸೂಚಕವಾದ ಕೆಮ್ಮು. Fat c. ಬಹು ಸಾವುಗಳು). **Chúrchless** (ಗು.); **Chúrchman (ship)** ಒಂದು ಕ್ರೈಸ್ತ ಮಂಡಲಿಯ ಸದಸ್ಯ(ತನ), ವೈದಿಕ(ತನ). **Chúrchward(s)** (ಕ್ರಿ. ವಿ.); **Chúrchy** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Church (ಕ್ರಿ. ಸಕ.) ಸುಖಪ್ರಸವವಾದುದಕ್ಕೆ ದೇವರ ಸೇವೆ ಮಾಡಲು ಬಾಣಂತಿಯನ್ನು ಆರಾಧನ ಮಂದಿರಕ್ಕೆ ಕರೆತರು.

Churl ಚರ್ಲ್ (ನಾ.) ಕೀಳು ಹುಟ್ಟಿನವನು (Gentleman or C. ಕುಲೀನನೊ ಕುಲಹೀನನೊ). ಹಳ್ಳಿಗ ; ಗಾವಿಲ ; ಅಸಭ್ಯ; ಮರ್ಯಾದೆ ತಿಳಿಯದವನು ; ಅಶಿಕ್ಷಿತ ; ಒರಟ ; ವಕ್ರ ; ಜಿಪುಣ. **Chúrlish** (ಗು.) ; **Chúrlishly** (ಕ್ರಿ. ವಿ.) ; **Chúrlishness** (ನಾ.)

Churn ಚರ್ನ್ (ನಾ., ಕ್ರಿ.) (ಹಾಲು, ಮೊಸರು) ಕಡೆ, ಮಥಿಸು. ಬೆಣ್ಣೆ ತೆಗೆಯುವ, ಕಡೆಯುವ, ಯಂತ್ರ : ಮಂಥಕ. ಮಂಥಕವನ್ನು ನಡಸು. ಒಂದು ದ್ರವವನ್ನು ಕಲಕಿ ನೊರೆಹುಟ್ಟುವಂತೆ ಮಾಡು ; (ಸಮುದ್ರ, ಮೊ.) ಹಿಂದಕ್ಕೆ ಮುಂದಕ್ಕೆ ಕುಲುಕಾಡು, ಕ್ಷುಭಿತವಾಗು, ನೊರೆಗರೆ. ಕಡೆಯುವ ಯಂತ್ರದ ಆಕಾರದ ದೊಡ್ಡ ಹಾಲಿನ ಪಾತ್ರೆ. ಕಡೆತ; ಮಥನ. **C.-dash(er), -staff** ಕಡೆಗೋಲು ; ಮಂತು. A churning ಒಂದು ಸಲಕ್ಕೆ ತೆಗೆದ, ಒಂದು ಕಡೆತದ, ಬೆಣ್ಣೆ.

Churr ಚರ್ (ಕ್ರಿ. ಅಕ., ನಾ.) ಕೆಲವು ಹಕ್ಕಿಗಳ ದನಿ(ಯಂತೆ ಚಿರುಗುಟ್ಟು)

Chut ಚಟ್ (ಭಾವ. ಅವ್ಯ.) (ಅಸಹನ, ಅಸಮಾಧಾನ, ಸೂಚಕ ಪದ), ಚಟ್.

Chute ಷೂಟ್, **Shute** (ನಾ.) ಇಳಿಜಾರಿನಲ್ಲಿ ನೀರು ಗಲಭೆಯಿಲ್ಲದೆ ವೇಗವಾಗಿ ಹರಿಯುವುದು : ಇಳಿಹೊನಲು. (ಪದಾರ್ಥಗಳನ್ನು ಕೆಳ ಮಟ್ಟಕ್ಕೆ ಸಾಗಿಸಲು ಅನುಕೂಲಿಸುವ, ನೀರುಳ್ಳ ಅಥವಾ ನೀರಿಲ್ಲದ) ಇಳಿ ಗಾಲುವೆ (= shoot). ಕಸವನ್ನು ವೇಗವಾಗಿ ಕೆಳಕ್ಕೆ ಸಾಗಿಸುವ ಇಳಿಜಾರು. 'ಸ್ಲೆಡ್ಜ್' ಎಂಬ ಜಾರುಬಂಡಿಯನ್ನು ಕೆಳಕ್ಕೆ ಒಯ್ಯುವ ಹಿಮಸೇರಿದ ಜಾರುಮಾರ್ಗ.

Chyle ಕೈಲ್ (ನಾ.) ಜೀರ್ಣಕೋಶದಲ್ಲಿ ಅರ್ಧಜೀರ್ಣವಾದ ಆಹಾರ ಪದಾರ್ಥದೊಡನೆ ಮೇದೋಜೀರಕ ರಸವೂ ಪಿತ್ತರಸವೂ ಸೇರಿ ನಡೆಯುವ ಜೀರಕ ಕಾರ್ಯದಿಂದ ಆದ ಹಾಲಿನಂಥ ಬಿಳಿಯ ದ್ರವ : ಅನ್ನ ಕ್ಷೀರ.

Chyme ಕೈಮ್ (ನಾ.) ಜಠರ ರಸ ಸೇರಿ ಆಮ್ಲೀಕೃತವಾಗಿ, ದೋಸೆಯ ಹಿಟ್ಟಿನಂತಾದ ಆಹಾರಪದಾರ್ಥ : ಆಮ ರಸ.

Chýmist ಕಿಮಿಸ್ಟ್ (ನಾ.) = Chemist.

Cícatrice ಸಿಕಟ್ರಿಸ್, **Cicátrix** ಸಿಕೇಟ್ರಿಕ್ಸ್, **Cícatrix** ಸಿಕಟ್ರಿಕ್ಸ್ (ನಾ. ; -ix ಗೆ ಬ. ವ. -ices -ಟ್ರೈಸೀಸ್) ಗಾಯದ ಕಲೆ ; ಮಚ್ಚೆ ; ಮರದ ತೊಗಟೆಯಮೇಲಿನ ಗಾಯದ ಗುರುತು. (ಸ. ವಿ.) ಎಲೆ, ಮೊ. ವು ಉದುರಿಹೋಗಿ ನಿಂತ ಕಲೆ, ಗುರುತು. ಬೀಜವು ಬೀಜ ಕೋಶಕ್ಕೆ ಅಂಟಿಕೊಂಡಿದ್ದ ಭಾಗ. **Cicatrícial** ಸಿಕಟ್ರಿಷಲ್ (ಗು.) ಗಾಯದ ಕಲೆಯ. **Cicátricose** ಸಿಕ್ಯಾಟ್ರಿಕೋಸ್ (ಗು.) (ಸ. ವಿ.) ಕಲೆಗಳಿಂದ ಗುರುತಾದ. **Cicátricle, -cule** -ಕ್ಲ್, -ಕ್ಯೂಲ್ (ನಾ.) (ಜೀ. ವಿ.) ಹಕ್ಕಿಯ ಭ್ರೂಣದ ಅಂಕುರ ; ಮೊಟ್ಟೆಯ ಹಳದಿ ಬಂಡಾರದಮೇಲಿನ ದುಂಡನೆಯ ಬಿಳಿಯ ಚುಕ್ಕೆ ; (ಸ. ವಿ.) = Cicatrice. **Cícatrize** ಸಿಕಟ್ರೈಸ್ (ಕ್ರಿ.) (ಗಾಯ) ವಾಸಿ ಯಾಗು, ಮಾಯು, ವಾಸಿಮಾಡು ; ಸಿಪ್ಪೆ ಸುಲಿ. ಕಲೆಗಳಾಗು, ಆಗಿಸು. **Cicatrizátion** (ನಾ.)

Ciceróne ಚೀಚೆರೋನೆ, ಸಿಸೆರೋನಿ (ನಾ. ; ಬ. ವ. -roni, -ರೋನೀ ; ಕ್ರಿ. ಸಕ. — ರೋನ್) (ಸ್ಥಳದ ಪುರಾತನ ವಸ್ತುಗಳು, ಮೊ. ನ್ನು ಅರಿತವನಾಗಿ ಅವನ್ನು ತೋರಿಸಿ ವಿವರಿಸುವ) ಮಾರ್ಗದರ್ಶಿ ; ಪುರಾತನ ವಸ್ತುದರ್ಶಿ. (ಕ್ರಿ.) — ಆಗು.

Cicerónian ಸಿಸೆರೋನಿಯನ್ (ಗು., ನಾ.) (ಪ್ರಸಿದ್ಧ ರೋಮನ್ ವಾಗ್ಮಿ ಸಿಸಿರೋವಿನ ಶೈಲಿಯಂತೆ) ವಾಕ್ಚಾತುರ್ಯದ, ಪ್ರೌಢವಾದ, ಲಯಬದ್ಧವಾದ. ಸಿಸಿರೋವಿನ ಕೃತಿಗಳಲ್ಲಿ ಪಾಂಡಿತ್ಯ ಪಡೆದವನು ; ಸಿಸಿರೋ ಶ್ಲಾಘಕ. **Cicerónianism** (ನಾ.) ಲ್ಯಾಟಿನ್ ಭಾಷಾ ಶೈಲಿಯಲ್ಲಿಯೂ ವಾಕ್ಸರಣಿಯಲ್ಲಿಯೂ ಸಿಸಿರೋವಿನ ಅನುಕರಣೆ ; ಸಿಸಿರೋ ಶೈಲಿ.

Cíder ಸೈಡರ್ (ನಾ.) ಸೇಬುಹಣ್ಣಿನ ರಸವನ್ನು ಹುಳಿಸಿ ಅದರಿಂದ ತಯಾರಿಸಿದ ಮದ್ಯ : ಸೇಬುಮದ್ಯ. **C.-press** ಸೇಬುಹಣ್ಣಿನ ರಸ ತೆಗೆಯುವ ಗಾಣ : ಸೇಬಿನ ಗಾಣ.

Ci-devánt (F) ಸೀ ಡವಾನ್ (ಗು., ಕ್ರಿ. ವಿ.) ಹಿಂದಿನ ; ಹಳೆಯ ; ಹಿಂದಿದ್ದ (A ci-devant friend of mine ನನ್ನ ಒಬ್ಬ ಹಳೆಯ ಸ್ನೇಹಿತ)

Cigár ಸಿಗಾರ್ (ನಾ.) ಹೊಗೆಸುತ್ತು ; ಚುಟ್ಟಾ. C.-shaped ಚೂಪು ಕೊನೆ(ಗಳು) ಉಳ್ಳ ಉರುಳೆಯಾಕಾರದ. **C.-holder** ಹೊಗೆ ಸುತ್ತನ್ನು ಸಿಕ್ಕಿಸಿ ಬಾಯಲ್ಲಿಟ್ಟುಕೊಳ್ಳಲು ಅಳವಡಿಸಿರುವ ಸಾಧನ : ಚುಟ್ಟಾ ಹಿಡಿಕೆ. **Cigarétte** ಸಿಗರೆಟ್ (ನಾ.) ಹೊಗೆ ಸೇದುವುದಕ್ಕಾಗಿ ಹೊಗೆಸೊಪ್ಪಿನ ಚೂರುಗಳನ್ನು, ಮತ್ತನ್ನುಂಟುಮಾಡುವ ವಸ್ತುವನ್ನು, ಅಥವಾ ಔಷಧವಸ್ತುವನ್ನು, ಇಟ್ಟು ಸುತ್ತಿರುವ ಕಾಗದದ ಸಣ್ಣ ಸುರುಳಿ : 'ಸಿಗರೆಟ್ಟು.'

Cília (L) ಸಿಲಿಯ (ನಾ., ಬ. ವ. ; ಏ. ವ. Cilium) ಕಣ್ಣುರೆಪ್ಪೆಯ ಕೂದಲಿನ ಸಾಲು ; ಎವೆ. ಎಲೆ, ಕೀಟದ ರೆಕ್ಕೆ, ಮೊ. ಗಳಮೇಲೆ ಅಂಚುಗಟ್ಟಿರುವ ಕಣ್ಣೆವೆಯಂಥ ರಚನೆ. (ಶ. ವಿ.) ಪ್ರಾಣಿಗಳ ಮತ್ತು ಸಸ್ಯಗಳ ಕೆಲವು ಅಂಗಾಂಶಗಳಲ್ಲಿರುವ ಕೂದಲಿನಂಥ ಸ್ಪಂದನಶೀಲ ಅಂಗಗಳು : ಸ್ಪಂದನ ಲೋಮಾಂಗ (ಇವು ಅನೇಕ ಕೀಳ್ತರದ ಜಲಚರಗಳಿಗೆ ಹರಿದಾಡಲು ಸಾಧನಗಳಾಗಿವೆ). **Cíliary** (ಗು.) ಕಣ್ಣೆವೆಯ ; ಎವೆ ಗೂದಲಿನ ; ಸ್ಪಂದನ ಲೋಮಾಂಗಗಳ ; ಈ ಅಂಗಗಳಿಂದಾದ. **Cíliate(d)** ಸಿಲಿಯೇಟ್, — ಟೆಡ್ (ಗು.) ಸ್ಪಂದನ ಲೋಮಾಂಗಗಳಿಂದ ಅಂಚುಗಟ್ಟಿದ, ಸುತ್ತುವರಿದ ; ಈ ಅಂಗಗಳನ್ನುಳ್ಳ. **Ciliátion** (ನಾ.) ಈ ಸ್ಥಿತಿ.

Cílice ಸಿಲಿಸ್ (ನಾ.) ಕೂದಲಿನಿಂದ ಮಾಡಿದ ಬಟ್ಟೆ ; ಕೂದಲ ಬಟ್ಟೆ ; ಈ ಬಟ್ಟೆಯಿಂದ ಮಾಡಿದ ಉಡುಪು.

Cimmérian ಸಿಮೀರಿಯನ್ (ಗು.) (ಕತ್ತಲೆ, ರಾತ್ರಿ, ಮೊ.) ದಟ್ಟವಾದ, ಕಣ್ಣುಕಾಣದ ; ಕಗ್ಗತ್ತಲೆಯ ; ಗಾಢಾಂಧಕಾರದ.

Cinchóna ಸಿಂಕೋನ (ನಾ.) ಕ್ವೈನಾ ಔಷಧ ದೊರೆಯುವ ತೊಗಟೆಯುಳ್ಳ ಒಂದು ನಿತ್ಯಹಸುರು ಮರದ ಜಾತಿ : ಸಿಂಕೋನ ಮರ ; ಸಿಂಕೋನ ತೊಗಟೆ. ಇದರಿಂದ ತಯಾರಿಸಿದ ಜ್ವರಹಾರಿ ಮತ್ತು ಪುಷ್ಟಿದಾಯಕ ಔಷಧ. **Cinchonáceous** — ಕೋನೇಷಸ್ (ಗು.) ಸಿಂಕೋನ ಜಾತಿಯ. **Cínchonine** — ನಿ(ೀ)ನ್ (ನಾ.) (ರ. ವಿ.) ಜ್ವರಹಾರಿ ಗುಣವುಳ್ಳ, ಸಾ., ಅನೇಕ ಜಾತಿಯ ಸಿಂಕೋನಾ ತೊಗಟೆಗಳಲ್ಲಿ ದೊರೆಯುವ, ಒಂದು ಸಸ್ಯಕ್ಷಾರ. **Cínchonism** (ನಾ.) ಕ್ವೈನಾವನ್ನು ಹೆಚ್ಚಾಗಿ ಸೇವಿಸುವುದರಿಂದುಂಟಾಗುವ ರೋಗಸ್ಥಿತಿ : ಕ್ವೈನಾತಿರೇಕ. **Cínchonize** (ಕ್ರಿ. ಸಕ.) ಕ್ವೈನಾವನ್ನು ಪ್ರಯೋಗಿಸು. (ಸ್ಪೆಯಿನ್ ದೇಶದಲ್ಲಿ ಈ ಔಷಧವಸ್ತುವನ್ನು ಮೊದಲು ಬಳಕೆಗೆ ತಂದ Countess of Chinchon ಎಂಬಾಕೆಯ ಹೆಸರಿನಿಂದ)

Cincinnátus ಸಿನ್ಸಿನೇಟಸ್ (ನಾ.) ಕಷ್ಟಕಾಲದಲ್ಲಿ ನೆರವಾಗುವಂತೆ ಕರೆಯಬಹುದಾದ, ವಿಶ್ರಾಂತಿ ಸುಖವನ್ನನುಭವಿಸುತ್ತಿರುವ ಒಬ್ಬ ದೊಡ್ಡ ವ್ಯಕ್ತಿ. (ಆಪತ್ಪರಿಹಾರಕ್ಕಾಗಿ, ಉಳುಮೆಯ ಕೆಲಸದಿಂದ ರಾಜ್ಯದ ನಿರಂಕುಶಾಧಿಕಾರಕ್ಕೆ ಆರಿಸಲ್ಪಟ್ಟ ಒಬ್ಬ ರೋಮನ್ ಮಹಾಪುರುಷನ ಹೆಸರಿನಿಂದ)

Cíncture ಸಿಂಕ್‌ಟ್ಯು(ಚ)ರ್ (ನಾ., ಕ್ರಿ. ಸಕ.) ಸುತ್ತುಪಟ್ಟಿ ; ನಡುಕಟ್ಟು ; ಕಟ್ಟುದಾರ ; ಅಂಚು ; ಅರುಗು. (ಕ್ರಿ.) ಇವುಗಳಿಂದ, ಇವುಗಳಂತೆ, ಸುತ್ತು.

Cínder ಸಿಂಡರ್ (ನಾ.) ಲೋಹ ಕರಗಿಸುವ ಕುಲುಮೆಯಲ್ಲಿ ಕರಗದೆ ಗಟ್ಟಿ ಕಟ್ಟಿ ನಿಂತಿರುವ ಮಷ್ಟುಪದಾರ್ಥ : ಕಿಟ್ಟ. ಉರಿಯೇಳುವ ಪದಾರ್ಥವೆಲ್ಲ ಮುಗಿದುಹೋಗಿ, ಇನ್ನೂ ಸುಡುವ ಪದಾರ್ಥವಿರುವ ಕಲ್ಲಿದ್ದಲು, ಸೌದೆ, ಮೊ., ಗಳ ಉಳಿಕೆ ; ಕೆಂಡ. (ಶಿಥಿಲವಾಗಿ, ಬ. ವ. ದಲ್ಲಿ) ಬೂದಿ. C.-path ನಯವಾದ ಕಿಟ್ಟದ ಪುಡಿ ಹಾಸಿ ಮಾಡಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾದಿ : ಕಿಟ್ಟದ ಹಾದಿ. C.-sifter ಬೂದಿಯಿಂದ ಕಿಟ್ಟವನ್ನು ಬೇರ್ಪಡಿಸುವ ಜರಡಿ : ಕಿಟ್ಟದ ಜರಡಿ. **Cíndery** (ಗು.)

Cinderélla ಸಿಂಡರೆಲ (ನಾ.) (ತನ್ನ) ಯೋಗ್ಯತೆಯನ್ನೊ ಸೌಂದರ್ಯವನ್ನೊ (ಇತರರು) ಗಣನೆಗೆ ತಂದುಕೊಳ್ಳದೆ ಅನಾದರ ಸ್ಥಿತಿಯಲ್ಲಿರುವ ವ್ಯಕ್ತಿ. ರಾತ್ರಿ ಹನ್ನೆರಡು ಗಂಟೆಯ ಹೊತ್ತಿಗೆ ಸರಿಯಾಗಿ (ಸರಿಹೊತ್ತಿಗೆ) ಮುಗಿಯುವ ನೃತ್ಯ (= C. dance). (ಒಂದು ಕಟ್ಟುಕಥೆಯ ಪಾತ್ರದ ಹೆಸರಿನಿಂದ)

Cine-, ಸಿನಿ- (ಸಮಾಸದಲ್ಲಿ ಪೂರ್ವ ಪದ, Cinema ಪದದ ಸಂಧಿರೂಪ) C.-camera ಚಲಚ್ಚಿತ್ರ ಗ್ರಾಹಕ. C.-film ಚಲಚ್ಚಿತ್ರ ಪಟಾವಳಿ. C.-projector ಚಲಚ್ಚಿತ್ರ ಪ್ರಕ್ಷೇಪಕ. C.-variety ಚಲಚ್ಚಿತ್ರ ಪ್ರದರ್ಶನವೂ ಸೇರಿದ ವಿವಿಧ ವಿನೋದ ಪ್ರದರ್ಶನ.

Cínema ಸಿನಿಮ (ನಾ.) ಚಲನಚಿತ್ರ ಶಾಲೆ. The c. ಚಲನಚಿತ್ರ ಶಾಸ್ತ್ರ, ಕಲೆ, ವಿದ್ಯೆ. ಚಲನ ಚಿತ್ರ. **Cinemátograph** ಸಿನಿಮ್ಯಾಟೊಗ್ರಾಫ್ (ನಾ., ಕ್ರಿ.) ಚಲಚ್ಚಿತ್ರ ದರ್ಶಕ [ತನ್ನ ಎದುರಿಗಿರುವ ಬೆಳಕುಬಿದ್ದ ವಸ್ತುಗಳ ಛಾಯೆಯನ್ನು ಥಟ್ಟನೆ ಗ್ರಹಿಸಿ ಚಿತ್ರಿಸುವ ಶಕ್ತಿಯುಳ್ಳದ್ದಾಗಿ, ತಕ್ಕಷ್ಟು ವೇಗದಿಂದ ಚಲಿಸುತ್ತಿರುವ ಉದ್ದವಾದ ಪಟ್ಟೆಯಮೇಲೆ ಸಂತತವಾಗಿ ತೆಗೆದಿರುವ ವಸ್ತುಛಾಯಾಚಿತ್ರಗಳ ಪರಂಪರೆಯನ್ನು ಪ್ರಕಾಶಮಾನವಾದ ಬೆಳಕಿನಿಂದ ಬೆಳಗಿ, ಆ ಪಟ್ಟೆಯನ್ನು ತಕ್ಕಷ್ಟು ವೇಗವಾಗಿ ಸುತ್ತುವುದರಿಂದ ಎದುರುಗಿರುವ ಪರದೆಯಮೇಲೆ ಆ ಚಲನಚಿತ್ರಗಳ ಪ್ರಭೆ ಬಿದ್ದು ನೋಟಕರ ಕಣ್ಣಿಗೆ ವಸ್ತುವಿನ ಸಹಜ ಚಲನೆಯ ಭ್ರಮೆ ತೋರುವಂತೆ ಅಳವಡಿಸಿರುವ ಯಂತ್ರಸಾಧನ] ; = Cinema. (ಕ್ರಿ.) (ಒಂದು ದೃಶ್ಯದ) ಚಲನಚಿತ್ರ ತಯಾರಿಸು ; ಚಲಚ್ಚಿತ್ರ ಸಾಧನವನ್ನು ಉಪಯೋಗಿಸು. **Cinematográphic** (ಗು.) ; **Cinematográphically** (ಕ್ರಿ. ವಿ.) ; **Cinematógraphy** — ಮಟಾಗ್ರಫಿ (ನಾ.)

Cínerary ಸಿನೆರರಿ (ಗು.) ಬೂದಿಯ (ಮು., C. urn ಹೆಣಸುಟ್ಟ ಬೂದಿಯನ್ನಿಟ್ಟಿರುವ ಕಲಶ : ಶವಭಸ್ಮ ಕುಂಡ). **Cinerárium** — ರೇರಿಯಂ (ನಾ.) ಶವಭಸ್ಮ ಕುಂಡವನ್ನಿಡುವ ಗೂಡು ; ಶವಭಸ್ಮಾಗಾರ. **Ciné-reous** ಸಿನೀರಿಯಸ್ (ಗು.) ಬೂದಿಬಣ್ಣದ (ಮು., ಹಕ್ಕಿಗಳ, ಅವುಗಳ ಪುಕ್ಕಗಳ, ವಿಷಯದಲ್ಲಿ)

Cíngalése ಸಿಂಗಲೀಸ್ (ಗು., ನಾ.) ಸಿಲೋನಿನ(ವನು) ; ಸಿಲೋನಿನ ಭಾಷೆ ; ಸಿಂಹಳಿ (ಜನ, ಭಾಷೆ)

Cíngulum (L) ಸಿಂಗ್ಯುಲಂ (ನಾ.) ಕಟ್ಟು ; ಪಟ್ಟಿ ; ಬಂಧನಿ (ಶಸ್ತ್ರಚಿಕಿತ್ಸೆ, ಅಂ. ರ. ಶಾ., ಜೀ. ವಿ., ಮೊ. ಗಳಲ್ಲಿ ಪಾರಿಭಾಷಿಕ ಪದವಾಗಿ ಪ್ರಯೋಗ)

Cínnabar ಸಿನಬಾರ್ (ನಾ., ಗು.) ರಸ ಗಂಧಕ ; ರಸ ಸಿಂದೂರ.

Cínnamon ಸಿನಮನ್ (ನಾ., ಗು.) ದಾಲ್ಚಿನ್ನಿ (ಇಂಡಿಯಾ, ಮೊ. ಪ್ರಾಂತಗಳಲ್ಲಿ ಬೆಳೆಯುವ ಒಂದು ಜಾತಿಯ ಮರದ, ಸುವಾಸನೆಯ ಸಂಬಾರವಸ್ತುವಾದ, ಒಳತೊಗಟೆ) ; ಲವಂಗ ಪಟ್ಟೆ, ಚಕ್ಕೆ. ದಾಲ್ಚಿನ್ನಿ ಮರ. ದಾಲ್ಚಿನ್ನಿಯ ಬಣ್ಣ(ದ) ; ಹಳದಿ ಛಾಯೆಯ ಕಂದುಬಣ್ಣ(ದ). **C.-stone** ಕಂದು ಅಥವಾ ಹಳದಿಯ ಬಣ್ಣದ 'ಗಾರ್ನೆಟ್' ಎಂಬ ಪ್ರಶಸ್ತ ಶಿಲೆ. **Cínnamate** (ನಾ.) ಸಿನಾಮಿಕ್ ಅಮ್ಲದ ಒಂದು ಲವಣ. **Cinnamómic, Cinnamónic** (ಗು.) ದಾಲ್ಚಿನ್ನಿಯ ; ಲವಂಗಪಟ್ಟೆಯ.

Cinque, Cinq ಸಿಂಕ್ (ನಾ.) ಪಗಡೆಯಲ್ಲಿ ಐದರ ಗರ ; ಇಸ್ಪೀಟಿನಲ್ಲಿ ಐದನೆಯ ಬಂದು.

Cinque Ports ಸಿಂಕ್ ಪೋರ್ಟ್ಸ್ (ನಾ., ಬ. ವ.) ಇಂಗ್ಲೆಂಡಿನ ಕೆಂಟ್ ಮತ್ತು ಸಸೆಕ್ಸ್ ಪ್ರಾಂತಗಳ ಕೆಲವು ರೇವುಪಟ್ಟಣಗಳು. (ಇವಕ್ಕೆ ಕೆಲವು ಪ್ರಾಚೀನ ಹಕ್ಕುಗಳಿವೆ)

Cípher, Cý— ಸೈಫರ್ (ನಾ., ಕ್ರಿ.) (ಗಣಿತ) ಸೊನ್ನೆ (ಸ್ವತಃ ಬೆಲೆಯಿಲ್ಲದಿದ್ದರೂ ಒಂದು ಸಂಖ್ಯೆಯಲ್ಲಿ ತನ್ನ ಸ್ಥಾನದಿಂದ ಆ ಸಂಖ್ಯೆಗೆ ಬೆಲೆ ಕೊಡುವದು). ಲೆಕ್ಕಕ್ಕೆ, ಗಣನೆಗೆ, ಬಾರದ ವಸ್ತು, ಮನುಷ್ಯ ; ಅನಾಮಧೇಯ. ಅಂಕಿ ; ಸಂಖ್ಯೆ. ಗೂಢ ಸಂಕೇತ, ಲಿಪಿ ; ಗೂಢ ಲಿಪಿಯ ಬರೆವಣಿಗೆ ; ಇದರ ರಹಸ್ಯ, ಸೂಚಿ, ಕೀಲಿ. ಒಬ್ಬನ ಅಥವಾ ಒಂದು ಸಂಸ್ಥೆಯ ಹೆಸರಿನ ಆದ್ಯಕ್ಷರಗಳ ತೊಡಕುಚಿತ್ರ. (ಕಾಗದ, ಲಕೋಟೆ, ಮೊ. ಗಳಮೇಲೆ ಚಿತ್ರಿಸುವ) ಒಬ್ಬನ ಹೆಸರಿನ ಆದ್ಯಕ್ಷರಗಳ ಚಿತ್ರಸಂಕೇತ : ಸಂಕೇತ ಮುದ್ರೆ. ಆರ್ಗನ್ ವಾದ್ಯದಲ್ಲಿ ಒಂದು ಕವಾಟ ಕೆಟ್ಟುಹೋಗಿರುವುದರಿಂದ ಒಂದು ಸ್ವರವು ಸಂತತವಾಗಿ ನುಡಿಯುತ್ತಿರುವ ಸ್ಥಿತಿ. (ಕ್ರಿ.) ಅಂಕಗಣಿತ ಮಾಡು ; ಎಣಿಸು ; ಅಂಕಗಣಿತರೀತಿಯಲ್ಲಿ ಗುಣಿಸು ; ಲೆಕ್ಕಮಾಡು ; ಗೂಢ ಲಿಪಿಯಲ್ಲಿ ಬರೆ. (ಆರ್ಗನ್ ವಾದ್ಯ) ಕೀಲಿಯನ್ನು ಒತ್ತದಿದ್ದರೂ ಸ್ವರ ನುಡಿಯುತ್ತ ಹೋಗು.

Cípolin ಸಿಪೊಲಿನ್ (ನಾ.) ಪರ್ಯಾಯ ಕ್ರಮದಲ್ಲಿ ಬಿಳುಪು, ಹಸುರು, ಈ ಬಣ್ಣಗಳ ಪದರಗಳಿರುವ ಇಟಲೀದೇಶದ ಒಂದು ತೆರದ ಅಮೃತಶಿಲೆ.

Círca (L), ಸರ್ಕ, **Círciter** (L) ಸರ್ಸಿಟರ್ (ಉಪ.) (ಸಂಕ್ಷಿಪ್ತ : c. or circ.) ಸುಮಾರು (c. 1936 ಸುಮಾರು ೧೯೩೬ ನೆಯ ವರ್ಷ)

Círce ಸರ್ಸಿ (ನಾ.) (ಗ್ರೀಕ್ ಪುರಾಣ) ಈಯ ದ್ವೀಪ ವಾಸಿಯಾಗಿದ್ದು ತಾನು ಕೊಟ್ಟ ಪಾನೀಯವನ್ನು ಕುಡಿದವರನ್ನು ಹಂದಿಗಳಾಗಿ ಮಾರ್ಪಡಿಸುತ್ತಿದ್ದ ಒಬ್ಬ ಮೋಹಿನಿಯ ಹೆಸರು. ಮೋಹಿನಿ ; ಮಾಟಗಾತಿ. **Circéan** (ಗು.)

Círcinate ಸರ್ಸಿನೇಟ್ (ಗು.) (ಸ. ವಿ.) ಅನೇಕ ಜರಿಗಿಡಗಳಲ್ಲಿನಂತೆ ತುದಿಯಿಂದ ಬುಡದ ಕಡೆಗೆ ಸುರುಳಿಸುತ್ತಿಕೊಂಡಿರುವ (ಎಲೆಗಳುಳ್ಳ) ; ಆವರ್ತ(ಪತ್ರಿ)

Círcle ಸರ್ಕ್‌ಲ್ (ನಾ.) ವೃತ್ತ ; ವೃತ್ತ ರೇಖೆ ; [Square the c. ವೃತ್ತದ ಕ್ಷೇತ್ರಫಲಕ್ಕೆ ಸರಿಯಾಗುವ ವರ್ಗಾಕೃತಿಯನ್ನು ರಚಿಸು. (ರೂಪ.) ಅಸಾಧ್ಯವಾದುದನ್ನು ಮಾಡಲು ಯತ್ನಿಸು. Great c. ಒಂದು ಗೋಳದ ಸುತ್ತಲಿನ ವೃತ್ತರೇಖೆಯ ಕೇಂದ್ರವು ಗೋಳಕೇಂದ್ರವೇ ಆಗಿರುವ ವೃತ್ತ : ಮಹಾವೃತ್ತ. Small c. ಅಂಥ ರೇಖೆಯ ಕೇಂದ್ರವು ಗೋಳಕೇಂದ್ರವಾಗದೆಹೋಗುವ ವೃತ್ತ : ಲಘುವೃತ್ತ. Polar c. ಧ್ರುವವೃತ್ತ. Arctic c. ಉ. ಧ್ರುವ ವೃತ್ತ. Antartic c. ದ. ಧ್ರುವ ವೃತ್ತ]. (ಶಿಥಿಲವಾಗಿ) ಸರಿಸುಮಾರು ಗುಂಡಗಿರುವ ಆವರಣ. ಗ್ರಹ ಪಥ ; ಕಕ್ಷೆ ; ವಲಯ ; ಮಂಡಲ. ನಾಟಕಶಾಲೆ, ಮೊ. ಗಳಲ್ಲಿ ಗುಂಡಾಗಿ ಅಳವಡಿಸಿರುವ ಆಸನಗಳ ಅಂತಸ್ತು (ಹಂತ) (Dress c. ಹೆಚ್ಚು ಬೆಲೆಯ ಅಂತಸ್ತು. Upper c. ಕಡಮೆಯ ಬೆಲೆಯ ಅಂತಸ್ತು). (ಪ್ರಾಚೀ. ಶಾ.) Stonehenge ಎಂಬ ಪ್ರದೇಶದಲ್ಲಿರುವಂತೆ, ಶಿಲಾವೃತ್ತ. ಕಾಲ ಚಕ್ರ ; ಕಾಲ ಪರಿವೃತ್ತಿ. ಚಕ್ರ ; ಸುತ್ತು. (Come full c. ಪೂರಾ ಒಂದು ಸುತ್ತು ಸುತ್ತು ; ಹೊರಟ ಸ್ಥಾನಕ್ಕೆ ಬಂದು ಸೇರು). (ಅಂಗಸಾಧನೆಯಲ್ಲಿ) ಚಕ್ರವರಿಸೆ. ಸಮಗ್ರ ಶ್ರೇಣಿ. (ತರ್ಕ : ಸಾ., Vicious c.) ಒಂದು ಪ್ರತಿಜ್ಞೆಯನ್ನು, ಅದನ್ನವಲಂಬಿಸಿರುವ ಮತ್ತೊಂದು ಪ್ರತಿಜ್ಞೆಯಿಂದ ಸಮರ್ಥಿಸುವ ದೋಷ : ಅನ್ಯೋನ್ಯಾಶ್ರಯ ದೋಷ. ಒಂದನ್ನೊಂದು ತೀವ್ರಗೊಳಿಸುವ ಕ್ರಿಯೆ ಪ್ರತಿಕ್ರಿಯೆಗಳು (ಸಾ., Vicious c.). ಮಂಡಲ ; ನೆರವಿ ; ಗುಂಪು ; ಕೂಟ ; ಪಂಗಡ ; ತರಗತಿ (First, upper, circles ಉತ್ತಮ ತರಗತಿಗಳು, ಮೇಲ್ತರಗತಿಗಳು. Circles in which one moves ಒಬ್ಬನ ವ್ಯವಹಾರ ಮಂಡಲಗಳು). ಪ್ರಭಾವ ಕ್ಷೇತ್ರ ; ಕಾರ್ಯಕ್ಷೇತ್ರ ; ಆವರಣ. **Círclewise** (ಕ್ರಿ. ವಿ.) ವೃತ್ತಾಕೃತಿಯಲ್ಲಿ ; ಚಕ್ರಾಕಾರವಾಗಿ ; ದುಂಡಗೆ. **Círclet** (ನಾ.) ಸಣ್ಣ ವೃತ್ತ ; ವೃತ್ತಕ. ದುಂಡು ಪಟ್ಟಿ (ಮು., ತಲೆಯಲ್ಲಿ ಅಥವಾ ಇತರ ಭಾಗದಲ್ಲಿ ಧರಿಸುವ, ಚಿನ್ನ, ಮೊ. ಗಳಿಂದ ಮಾಡಿದ, ರತ್ನಖಚಿತವಾದ ಪಟ್ಟಿ)

Círcle (ಕ್ರಿ.) (ಕಾವ್ಯ) ಸುತ್ತುವರಿ ; ಸುತ್ತು ಬಳಸು ; ವೃತ್ತದಲ್ಲಿ ಸುತ್ತು. (ಅಂಗ ಸಾಧನೆ) ಕಂಬಿಯ ಸುತ್ತಲೂ ಬಗೆಬಗೆಯ ಚಕ್ರಸಾಮು ಮಾಡು. (ಮದ್ಯ, ಮೊ.) ಸುತ್ತಿಬರು. (ಭೂ. ಕ್ಷ್ಯ.) ಗುಂಡು ತಿರುಗಿದ ; ವೃತ್ತಗಳನ್ನೆರೆದಿರುವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Circs ಸರ್ಕ್ಸ್ (ನಾ., ಬ. ವ.) (ಬಳ. ಮಾ.) (Circumstances ಪದದ ಸಂಕ್ಷಿಪ್ತ)

Círcuit ಸರ್ಕಿಟ್ (ನಾ.) ಒಂದು ಕ್ಷೇತ್ರವನ್ನು ಸುತ್ತುವರಿದಿರುವ ರೇಖೆ : ಆವರಣ ರೇಖೆ ; ಪರಿಧಿ ; ಮಂಡಲ ; ಸುತ್ತಳತೆ. ಸುತ್ತುರೇಖೆಯೊಳಗಿನ ಕ್ಷೇತ್ರಫಲ. ಸುತ್ತುಬಳಸು ಪ್ರಯಾಣ. ಬದಲಾವಣೆ, ಕಾರ್ಯ, ಮೊ. ಗಳ ಆವರ್ತ. (ಮು., ನ್ಯಾಯಾಧಿಪತಿಯ ನ್ಯಾಯತೀರ್ಮಾನಕ್ಕಾಗಿ ಕೆಲವು ಗೊತ್ತಾದ ಪ್ರಾಂತಗಳಲ್ಲಿ ಕೋರ್ಟನ್ನು ಹೂಡುವುದಕ್ಕಾಗಿ ಮಾಡುವ) ಪ್ರಯಾಣ, ಸಂಚಾರ ; ಈ ಸಂಚಾರಪ್ರಾಂತ. ಸುತ್ತುತ್ತಿರುವ, ಸಂಚಾರೀ, ನ್ಯಾಯವಾದಿಗಳು. ಸುತ್ತುತ್ತಿರುವ ಅನೇಕ ಚರಉಪದೇಶಿಗಳುಳ್ಳ 'ಮೆಥಡಿಸ್ಟ್ ಚರ್ಚಿ'ನ ಸಂಚಾರ ಪ್ರಾಂತ. (ವಿದ್ಯುತ್) ಪ್ರವಾಹ ಮಾರ್ಗ (Short c. ನಿರೋಧಾವರಣದ ನ್ಯೂನತೆಯಿಂದ ಪ್ರವಾಹಮಾರ್ಗವು ಸಂಕುಚಿತವಾಗುವುದು ; ಮಾರ್ಗ ಸಂಕೋಚ). ಒಂದೇ ಆಡಳಿತದಲ್ಲಿರುವ ನಾಟಕ ಶಾಲೆ, ಚಲಚ್ಚಿತ್ರ ಶಾಲೆ, ಮೊ. ಗಳ ಶ್ರೇಣಿ. **C.-rider** (ಅಮೆ. ಸಂ.) ಒಂದು ಮಂಡಲದ ಕ್ರೈಸ್ತ ಚರೋಪದೇಶಕ. **Circúitous** ಸರ್ಕ್ಯೂಯಿಟಸ್ (ಗು.) ಬಳಸಾದ ; ನೇರವಲ್ಲದ. **Circúitously** (ಕ್ರಿ. ವಿ.) ; **Circúitousness** (ನಾ.)

Círcular ಸರ್ಕ್ಯುಲರ್ (ಗು., ನಾ.) ಗುಂಡಗಿರುವ ; ಬಟ್ಟ ; ವರ್ತುಲ ; ಚಕ್ರಾಕಾರದ ; ಮಂಡಲಾಕೃತಿಯ ; ವೃತ್ತದ ; ವೃತ್ತದಂತಿರುವ. ವೃತ್ತಾಕಾರದಲ್ಲಿ ಸುತ್ತುತ್ತಿರುವ [C. tour ಹೊರಟ ಸ್ಥಳಕ್ಕೇ ಬೇರೆ ಮಾರ್ಗದಿಂದ ಬಂದು ಸೇರುವ ಸುತ್ತುಪ್ರಯಾಣ. C. ticket ಸುತ್ತು ಪ್ರಯಾಣದ ಚೇಟೀಟಿ (ಟಿಕೆಟ್ಟು)]. (ತರ್ಕ) ಅನ್ಯೋನ್ಯಾಶ್ರಯ ದೋಷದ. ಜನ ತಂಡ, ಗಿರಾಕಿ, ಮೊ. ರಿಗೆ ತಿಳಿಸುವ, ಕಳುಹಿಸುವ (C. note ಒಬ್ಬ ಪ್ರಯಾಣಿಕನ ಪರವಾಗಿ ಒಬ್ಬ ಹಣವ್ಯಾಪಾರಿ ಹೊರಗಿನ ಇತರ ಹಣವ್ಯಾಪಾರಿಗಳಿಗೆ ಕೊಡುವ ಹಣಭರವಸೆಯ ಚೀಟಿ). ಅನೇಕ ಮಂದಿಗೆ ಹಂಚುವುದಕ್ಕಾಗಿ ಪ್ರತಿಮಾಡಿದ ತಿಳಿವಳಿಕೆ, ಪ್ರಕಟನೆ, ಮೊ. ಗಳ ಪತ್ರ : ಪ್ರಸಾರಣ ಪತ್ರ ; ಸುತ್ತೋಲೆ (= C. letter). C. saw ಯಂತ್ರಬಲದಿಂದ ಗಿರಗಿರನೆ ತಿರುಗಿ ಮರ, ಮೊ. ನ್ನು ಕೊಯ್ಯುವ ಮೊನೆಹಲ್ಲುಗಳ ಏಣುಳ್ಳ (ಉಕ್ಕಿನ) ದುಂಡು (ತಟ್ಟೆಯ, ತಗಡಿನ) ಗರಗಸ : ಬಟ್ಟಗರಗಸ. **Circulárity** — ಲ್ಯಾರಿಟಿ (ನಾ.) ; **Círcularly** — ಲರ್ಲಿ (ಕ್ರಿ. ವಿ.) ; **Círcularize** (ಕ್ರಿ. ಸಕ.) ಸುತ್ತೋಲೆಗಳನ್ನು ಕಳುಹಿಸು. **Círculate** — ಲೇಟ್ (ಕ್ರಿ.) ಸುತ್ತ ಸುತ್ತು ; ಪರಿಚಲಿಸು [Blood circulates through veins ಅಭಿಧಮನಿಗಳಲ್ಲಿ ರಕ್ತವು ಪರಿಚಲಿಸುತ್ತದೆ. Wine circulates on table ಮದ್ಯವು ಊಟದ ಮೇಜಿನಮೇಲೆ (ಊಟಮಾಡುತ್ತಿರುವವರಿಗೆ) ಸುತ್ತಿ ಬರುತ್ತದೆ]. (ದಶಮಾಂಶ) ಆವರ್ತಿಸು ; ಸುತ್ತಿಬರು. ಎಲ್ಲರಿಗೂ ಕಳುಹಿಸಿಕೊಡು ; ಪ್ರಚಾರ ಮಾಡು ; — ವಾಗು ; ಚಲಾವಣೆಯಾಗು. Circulating Library ಚಂದಾದಾರರು ಬೇಕಾದ ಪುಸ್ತಕವನ್ನು ತೆಗೆದುಕೊಂಡು ಓದಲು ಅನುಕೂಲಿಸುವಂತೆ ಸುತ್ತುತ್ತಿರುವ ಪುಸ್ತಕ ಭಂಡಾರ : ಚರ ಪುಸ್ತಕಭಂಡಾರ. Circulating medium ಮಾರುವೆಯಲ್ಲಿ ಉಪಯೋಗಿಸುವ ಕಾಗದದ ಹಣ, ನಾಣ್ಯ : ಚಲಾವಣೆಯ ಸಾಧನ. **Circulátion** (ನಾ.) ರಕ್ತ ಪರಿಚಲನೆ (ರಕ್ತಕೋಶದಿಂದ ಅಪಧಮನಿಗಳಲ್ಲಿ ಹೊರಟು ಮರಳಿ ಅಭಿಧಮನಿಗಳ ಮೂಲಕ ರಕ್ತಕೋಶವನ್ನು ಸೇರುವುದು) ; (ಸಸ್ಯಗಳಲ್ಲಿ ಇದೇ ರೀತಿಯ) ರಸ ಪರಿಚಲನೆ ; (ನೀರು, ವಾಯು, ಮೊ. ಗಳ) ಸುತ್ತುವಿಕೆ, ಪರಿಚಲನೆ. (ಸಮಾಚಾರ, ಪುಸ್ತಕ, ಮೊ. ಗಳ) ಪ್ರಚಾರ, ಪ್ರಸರಣ, ಹರವು, ಹಂಚಿಕೆ. (ಮು., ವೃತ್ತಪತ್ರಿಕೆಯ) ಎಷ್ಟು ಪ್ರತಿ ಖರ್ಚಾಗುತ್ತಿದೆಯೆಂಬ ಲೆಕ್ಕ : ಪ್ರಚಾರ ಸಂಖ್ಯೆ. ಚಲಾವಣೆ ; ನಾಣ್ಯ, ಮೊ. ವು. **Círculative** (ಗು.) ಪ್ರಚಾರದಲ್ಲಿರುವ ; ಚಲಾವಣೆಯಲ್ಲಿರುವ ; ಪ್ರಚಾರವನ್ನು, ಚಲಾವಣೆಯನ್ನು, ಪ್ರೋತ್ಸಾಹಿಸುವ, ಹೆಚ್ಚಿಸುವ. **Círculator** (ನಾ.) ಸಮಾಚಾರವನ್ನು, ನಾಣ್ಯ, ಮೊ. ಗಳನ್ನು, ಚಲಾವಣೆ ಮಾಡುವವನು ; ಪ್ರಸಾರಕ. **Círculatory** — ಲಟರಿ (ಗು.) (ರಕ್ತದ ಅಥವಾ ಸಸ್ಯರಸದ) ಪರಿಚಲನೆಯ.

Circumámbient ಸರ್ಕಂಆ್ಯಂಬಿಯೆಂಟ್ (ಗು.) (ಮು., ಗಾಳಿ ಅಥವಾ ದ್ರವ) ಸುತ್ತುಬಳಸಿರುವ. **Circumámbiency** (ನಾ.) ; **Circumámbulate** — ಲೇಟ್ (ಕ್ರಿ.) (ಒಂದು ಸ್ಥಳ, ಮೊ. ನ್ನು) ಸುತ್ತು, ಬಳಸು ; ಸುತ್ತಾಡು ; ಅಲೆದಾಡು. (ರೂಪ.) (ವಿಷಯ ಬಿಟ್ಟು) ಬಳಸುಮಾತಾಡು. **Circumambulátion** (ನಾ.) ಸುತ್ತುವುದು ; ಸುತ್ತಾಟ ; ಪರ್ಯಟನ ; ಪ್ರದಕ್ಷಿಣೆ. **Circumámbulatory** — ಲಟರಿ (ಗು.)

Circumbéndibus ಸರ್ಕಂಬೆಂಡಿಬಸ್ (ನಾ.) (ಹಾಸ್ಯ ಪ್ರಯೋಗ) ಸುತ್ತುಬಳಸು ಮಾರ್ಗ, ರೀತಿ, ವಿಧಾನ. ಬಳಸುಮಾತು (ಸ್ವಲ್ಪದಲ್ಲಿ ಹೇಳಬಹುದಾದುದನ್ನು ಬಳಸಿಹೇಳುವುದು)

Circumcísion ಸರ್ಕಂಸಿಷನ್ (ನಾ.) (ಗಂಡಸರ ಅಥವಾ ಹೆಂಗಸರ) ಜನನಾಂಗದ ಮುಂದೊಗಲ ಭಾಗವನ್ನು ಕತ್ತರಿಸಿಹಾಕುವ (ಯೆಹೂದ್ಯರ ಮತ್ತು ಮುಸಲ್ಮಾನರ) ಮತಸಂಸ್ಕಾರ : ಸುನತಿ ; ವೈದ್ಯದಲ್ಲಿ ಈ ಶಸ್ತ್ರಚಿಕಿತ್ಸೆ ; ಪರಿಕರ್ತನ. (ಬೈಬಲ್) (The c. ಯಹೂದ್ಯರು). (ಕ್ರೈಸ್ತಮತ) ಯೇಸುಕ್ರಿಸ್ತನ ಪರಿಕರ್ತನೋತ್ಸವದ ಜ್ಞಾಪಕಾರ್ಥವಾಗಿ ಜನವರಿ ಮೊದಲನೆಯ ತಾರೀಖಿನ ದಿನ ಆಚರಿಸುವ ಉತ್ಸವ. **Círcumcise** — ಸೈಸ್ (ಕ್ರಿ. ಸಕ.) ಸುನತಿ, ಪರಿಕರ್ತನ, ಮಾಡು. (ರೂಪ.) C. the heart, passions, etc. ಹೃದಯವನ್ನು, ಇಂದ್ರಿಯಗಳನ್ನು, ಪರಿಶುದ್ಧ ಮಾಡು.

Circumdúction ಸರ್ಕಮ್‌ಡಕ್‌ಷನ್ (ನಾ.) ಸುತ್ತುಬಳಸುವಂತೆ ಮಾಡುವುದು ; ಸುತ್ತ ತಿರುಗಿಸುವುದು. (ಶ. ವಿ.) ಕೈಯೊ, ಕಾಲೊ, ತನ್ನ ಒರಳುಗುಂಡು ಅಸ್ಥಿಸಂಧಿಯಲ್ಲಿ ಶಂಕುವಿನಾಕಾರದಿಂದ ಸುತ್ತುವುದು : ಶಂಕುಭ್ರಮಣ.

Circúmference ಸರ್ಕಂಫರೆನ್ಸ್ (ನಾ.) ಸುತ್ತುಗೆರೆ ; ಆವರಣ ರೇಖೆ ; ಪರಿಧಿ ; ಸುತ್ತಳತೆ. **Circumferéntial** — ಷಲ್ (ಗು.) ಪರಿಧಿಯ.

Círcumflex ಸರ್ಕಂಫ್ಲೆಕ್ಸ್ (ಗು., ನಾ., ಕ್ರಿ. ಸಕ.) (ಗ್ರೀಕ್ ಭಾಷೆಯಲ್ಲಿ) ಒಂದು ಸ್ವರಾಕ್ಷರದಮೇಲೆ ಹಾಕಿರುವ ಒಂದು ಬಗೆಯ ಸ್ವರವುಳ್ಳ ದೀರ್ಘ, (ಲ್ಯಾಟಿನ್, ಮೊ. ಭಾಷೆಗಳಲ್ಲಿ) ಸಂಕೋಚನೆ ಅಥವಾ ಇತರ ಬಗೆಯ ದೀರ್ಘಸ್ವರ —ಇವನ್ನು ಸೂಚಿಸುವ ಗುರುತು (⌒ ಗ್ರೀಕಿನಲ್ಲಿ, ^ ಇತರ ಕಡೆ) : ಸ್ವರಿತ ಚಿಹ್ನೆ. ಬರವಣಿಗೆಯಲ್ಲಿ ಎರಡು ಅಥವಾ ಹೆಚ್ಚಾದ ಪಂಕ್ತಿಗಳನ್ನು ಒಟ್ಟುಗೂಡಿಸಿ ತೋರಿಸುವ ಕಂಸ ಅಥವಾ ಬಾಗುಗೆರೆ. (ಕ್ರಿ.) ಸ್ವರಿತ ಚಿಹ್ನೆ ಹಾಕು ; ಸ್ವರಿತವಾಗಿ ಉಚ್ಚರಿಸು. (ಅಂ. ರ. ಶಾ.) (ಬಿಲ್ಲಿನಂತೆ) ಬಾಗಿರುವ ; ವಲಿತ ; ಮತ್ತೊಂದು ಅಂಗದ ಸುತ್ತಲೂ ಬಾಗಿರುವ.

Circúmfluent ಸರ್ಕಂಫ್ಲ್ಯುಯೆಂಟ್ (ಗು.) ಸುತ್ತಲೂ ಹರಿಯುವ ; (ದ್ರವದಂತೆ) ಸುತ್ತುವರಿದಿರುವ. **Circúmfluence** (ನಾ.) ; **Circúmfluous** — ಅಸ್ (ಗು.) = Circumfluent ; ನೀರಿನಿಂದ ಸುತ್ತುವರಿದ ; ಜಲಾವೃತ.

Circumfúse ಸರ್ಕಂಫ್ಯೂಸ್ (ಕ್ರಿ. ಸಕ.) (ಒಂದು ಪದಾರ್ಥದ) ಸುತ್ತಲೂ (ದ್ರವವನ್ನು) ಸುರಿ ; ಪರಿಷೇಚಿಸು ; (ದ್ರವ) ಸುತ್ತುಗಟ್ಟು ; (ದ್ರವದಲ್ಲಿ) ಅದ್ದು ; ತೋಯಿಸು. **Circumfúsion** — ಷನ್ (ನಾ.)

Círcumgyráte ಸರ್ಕಮ್‌ಜೈ(ಜಿ)ರೇಟ್ (ಕ್ರಿ. ಅಕ.) ಸುತ್ತ ತಿರುಗು ; ಸುತ್ತುಬಳಸು ; ಗರಗರನೆ ತಿರುಗು. **Circumgyrátion** (ನಾ.) ಪರಿಭ್ರಮಣೆ. **Circumgyrátory** (ಗು.)

Circumjácent ಸರ್ಕಮ್‌ಜೇಸೆಂಟ್ (ಗು.) ಸುತ್ತಲೂ ಇರುವ ; ಸುತ್ತ ಹೊದ್ದಿಕೊಂಡಿರುವ ; ಪರಿಸ್ಥಿತ.

Circumlíttoral ಸರ್ಕಂಲಿಟೊರಲ್ (ಗು.) (ಸಮುದ್ರ) ತೀರದ ಅಂಚಿನಲ್ಲಿರುವ ; ಕರೆಯಂಚಿನಲ್ಲಿರುವ.

Circumlocútion ಸರ್ಕಂಲೊಕ್ಯೂಷನ್ (ನಾ.) ಸ್ವಲ್ಪ ಮಾತುಗಳಲ್ಲಿ ಹೇಳಬಹುದಾದುದನ್ನು ಬಹು ಮಾತಿನಲ್ಲಿ ಬಳಸಿಹೇಳುವುದು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಂಬೋಕ್ತಿ ; ಬಳಸುಮಾತು ; (ಪ್ರಸಕ್ತ ವಿಷಯಕ್ಕೆ ಬಾರದ) ಜಾರು ಮಾತು, ದಾಟುಮಾತು. C. Office ಮಂದಗತಿಯ, ಆಲಸ್ಯದ, ಬರಿ ನಿಯಮಾನುಸರಣೆಯಲ್ಲಿಯೇ ಕಾಲಕಳೆಯುವ ಸರ್ಕಾರಿ ಕಚೇರಿ. **Circumlocútional** (ಗು.) ; **Circumlocútionary** (ಗು.) ; **Circumlocútionist** (ನಾ.) ; **Circumlócutory** (ಗು.) — ಲಾ — .

Circum-merídian ಸರ್ಕಂ ಮೆರಿಡಿಯನ್ (ಗು.) (ಖ. ವಿ.) ಮಧ್ಯಾಹ್ನ ರೇಖೆಯ ಬಳಿಯ (ಈ ಸ್ಥಾನಕ್ಕೆ ಬಂದಿರುವ ನಕ್ಷತ್ರ, ಮೊ. ಗಳ ನಿರೀಕ್ಷಣೆಯ ವಿಷಯದಲ್ಲಿ)

Circumnávigate ಸರ್ಕಮ್‌ನ್ಯಾವಿಗೇಟ್ (ಕ್ರಿ. ಸಕ.) ಹಡಗಿನಲ್ಲಿ ಭೂಪ್ರದಕ್ಷಿಣೆ ಮಾಡು. **Circumnávigator** (ನಾ.)

Circumnútate ಸರ್ಕಮ್‌ನ್ಯೂಟೇಟ್ (ಕ್ರಿ. ಅಕ.) (ಸಸ್ಯದ ಬೆಳೆಯುವ ಭಾಗಗಳು) ಎಲ್ಲ ದಿಕ್ಕುಗಳ ಕಡೆಗೂ ಸುತ್ತು. **Circumnutátion** (ನಾ.)

Circumócular ಸರ್ಕಂ ಆಕ್ಯುಲರ್ (ಗು.) ಕಣ್ಣನ್ನು ಸುತ್ತುವರಿದಿರುವ.

Circumóral ಸರ್ಕಂ ಓರಲ್ (ಗು.) (ಶ. ವಿ.) ಬಾಯ ಸುತ್ತಲಿರುವ.

Circumpólar ಸರ್ಕಂ ಪೋಲರ್ (ಗು.) (ಖ. ವಿ.) ಭೂಗೋಳದ ಅಥವಾ ಖಗೋಳದ ಧ್ರುವವನ್ನು ಸುತ್ತುವರಿದಿರುವ ಅಥವಾ ಅದರ ಬಳಿಯಿರುವ : ಪರಿಧ್ರುವ. C. star, motion ದೈನಂದಿನ ಚಲನೆಯಲ್ಲೆಲ್ಲ ಕ್ಷಿತಿಜದ ಮೇಲೆಯೇ ಕಾಣಿಸುತ್ತಿರುವ (ಸದೋದಿತ) ನಕ್ಷತ್ರ, (ಪರಿಧ್ರುವ) ಗತಿ.

Círcumscribe ಸರ್ಕಂಸ್ಕ್ರೈಬ್ (ಕ್ರಿ. ಸಕ.) ಸುತ್ತಲೂ ಗೆರೆಯೆಳೆ ; ಸುತ್ತುಗಟ್ಟು. (ಜ್ಯಾ.) ಒಂದು ಆಕೃತಿಯ ಸುತ್ತಲೂ ಮತ್ತೊಂದು ಆಕೃತಿಯನ್ನು, ಮೊದಲ ಆಕೃತಿಯ ಕೆಲವು ಬಿಂದುಗಳಲ್ಲಿ ತಾಕುವಂತೆ, ಆದರೆ ಆ ಆಕೃತಿಯನ್ನು ಕತ್ತರಿಸದಂತೆ, ರಚಿಸು : ಪರಿವೃತ್ತಿಸು. ಮೇರೆ, ಹದ್ದು, ಎಲ್ಲೆ, ಗೊತ್ತುಮಾಡು ; ಎಲ್ಲೆವಿಧಿಸು ; ಮಿತಿಗೊಳಪಡಿಸು ; ಹದ್ದಿನಲ್ಲಿಡು. (ತರ್ಕ) ಲಕ್ಷಣ ನಿರೂಪಿಸು. (ಒಂದು ಅರ್ಜಿಗೆ ರುಜುಮಾಡಿದುದರಲ್ಲಿ ಕ್ರಮ ತಿಳಿಯಲಾಗದಂತೆ) ವೃತ್ತಾಕಾರದಲ್ಲಿ ರುಜು ಹಾಕು : ಚಕ್ರರುಜು ಹಾಕು. **Circumscríber** (ನಾ.) ; **Circumscríption** (ನಾ.) ಮಿತಿ, ಮೇರೆ, ಹದ್ದು, ಎಲ್ಲೆ (ಕಲ್ಪಿಸುವುದು, ಗೊತ್ತುಮಾಡುವುದು). ಮೇರೆ ಗೊತ್ತುಮಾಡಿರುವ ಪ್ರಾಂತ. (ತರ್ಕ) ಲಕ್ಷಣ. (ನಾಣ್ಯ, ಮೊ. ಗಳಮೇಲೆ ಸುತ್ತುವರಿದಿರುವ) ಪರಿಚಿತ್ರ, ಪರಿಲೇಖನ.

Circumsólar ಸರ್ಕಂ ಸೋಲರ್ (ಗು.) ಸೂರ್ಯನ ಸುತ್ತಲೂ ಸುತ್ತುವ ; ಸೂರ್ಯನ ಸಮೀಪದಲ್ಲಿರುವ.

Círcumspect ಸರ್ಕಂಸ್ಪೆಕ್ಟ್ (ಗು.) ಎಚ್ಚರಿಕೆಯುಳ್ಳ ; ಜಾಗರೂಕ ; ಎಲ್ಲವನ್ನೂ ಜೋಕೆಯಿಂದ ಪರಿಶೀಲಿಸುವ. **Circumspéction** (ನಾ.) ; **Círcumspectness** (ನಾ.) ; **Circumspective** (ಗು.) ; **Círcumspectly** (ಕ್ರಿ. ವಿ.)

Círcumstance ಸರ್ಕಂಸ್ಟನ್ಸ್ (ನಾ.) (ಬ. ವ. ದಲ್ಲಿ) ಕಾಲ, ದೇಶ, ವರ್ತಮಾನ, ರೀತಿ, ಸಂದರ್ಭ, ಮೊ. ವು ; ಪರಿಸ್ಥಿತಿ (In, under, the circumstances ಈ ಪರಿಸ್ಥಿತಿಯಲ್ಲಿ. Under any circumstances ಯಾವ ಸಂದರ್ಭ ಒದಗಿದರೂ, ಏನೇ ಆದರೂ). ಸ್ಥಿತಿ ; ದಶೆ (In good circumstances ಅನುಕೂಲ ಸ್ಥಿತಿಯಲ್ಲಿ. In straitened circumstances ದರಿದ್ರ ಸ್ಥಿತಿಯಲ್ಲಿ ; ಇಕ್ಕಟ್ಟಿನ ಸ್ಥಿತಿಯಲ್ಲಿ). (ಏ. ವ. ದಲ್ಲಿ) ಸಂಪೂರ್ಣ ವಿವರ. ವಿಹಿತ ಕ್ರಮಾನುಸರಣೆ. ಗಡಿಬಿಡಿ ; ಆಡಂಬರ ; ಸಂಭ್ರಮ (Without c. ವಿಹಿತ ಕ್ರಮಾನುಸರಣೆಯಿಲ್ಲದೆ ; ಆಡಂಬರವಿಲ್ಲದೆ). ಘಟನೆ ; ಸಂದರ್ಭ ; ಸಂಗತಿ ; ವಿಷಯ. **Círcumstanced** (ಗು.) ; **Circumstántial** — ಸ್ಟ್ಯಾನ್ಷಲ್ (ಗು.) ಅಪ್ರಧಾನ ವಿಷಯವಿವರವನ್ನು ಆಶ್ರಯಿಸಿರುವ (C. evidence ಪ್ರಧಾನ ವಿಷಯವನ್ನು ನೇರವಾಗಿ ದೃಢಪಡಿಸಲು ಆಗದಿರುವಲ್ಲ, ತಿಳಿದ ಇತರ ಸಂದರ್ಭಗಳಿಂದ ಊಹಿಸಿ ಸಾಧಿಸುವ ಸಾಕ್ಷ್ಯ : ಸಂದರ್ಭ ಸಾಕ್ಷ್ಯ). ಪ್ರಾಸಂಗಿಕ. ಹೆಚ್ಚು ವಿವರಗಳುಳ್ಳ (C. story). **Circumstantiálity** — ಷಿಆ್ಯಲಿಟಿ (ನಾ.) ; **Circumstántially** — ಷಲಿ (ಕ್ರಿ. ವಿ.)

Círcumvágant ಸರ್ಕಂವೇಗಂಟ್ (ಗು.) ಸುತ್ತಲೂ, ಸುತ್ತಮುತ್ತ, ಅಲೆದಾಡುವ.

Círcumvallate ಸರ್ಕಂವ್ಯಾಲೇಟ್ (ಕ್ರಿ. ಸಕ.) ಸುತ್ತಲೂ ಕೋಟೆ ಕಟ್ಟು, ಅಗಳು ತೋಡು. **Circumvallátion** (ನಾ.)

Círcumvént ಸರ್ಕಂವೆಂಟ್ (ಕ್ರಿ. ಸಕ.) ಸಿಕ್ಕಿಸಿಕೊ ; ಉಪಾಯದಿಂದ ಹಳ್ಳಕ್ಕೆ ಕೆಡವು (ರೂಪ.) ; ಉಪಾಯದಲ್ಲಿ ತಪ್ಪಿಸಿಕೊ, ಮೀರು ; ಮೋಸಮಾಡು. **Circumvéntion** (ನಾ.)

Circumvolútion ಸರ್ಕಂವೊಲ್ಯೂಷನ್ (ನಾ.) ಉರುಳಾಡುವುದು ; ಉರುಳು ; ಪರಿಭ್ರಮಣ. ಸುರುಳಿ ; ಸುತ್ತು. ಸುತ್ತಿಸುತ್ತಿಕೊಂಡು ಹೋಗುವುದು.

Círcus ಸರ್ಕಸ್ (ನಾ.) (ಅಶ್ವಸಾಧನೆ, ಮೊ. ಪ್ರದರ್ಶನಗಳಿಗಾಗಿ) ವೃತ್ತಾಕಾರವಾಗಿ ಅಥವಾ ದೀರ್ಘವೃತ್ತಾಕಾರವಾಗಿ ಆಸನಗಳ ಅಂತಸ್ತುಗಳನ್ನು ಅಳವಡಿಸಿರುವ ಬೇಲನ ರಂಗ : ವೃತ್ತ ಕ್ರೀಡಾ ರಂಗ. ಸುತ್ತಲೂ ಬೆಟ್ಟದ ಸಾಲುಗಳು ಹಬ್ಬಿರುವ ಪ್ರದೇಶ. ನಾನಾ ದಿಕ್ಕುಗಳಿಂದ ಬೀದಿಗಳು ಬಂದು ಸೇರುವ ಮಧ್ಯದ ವೃತ್ತ. ಕುದುರೆಗಳು, ಸವಾರರು, ಮೊ. ವರ ಸಂಚಾರಿ ಬೇಲನ ಪ್ರದರ್ಶನ : 'ಸರ್ಕಸ್ಸು.'

Cirque ಸರ್ಕ್ (ನಾ.) ರಂಗ ; ರಂಗಸ್ಥಳ. ಸುತ್ತಲೂ ಅಂತಸ್ತು ಅಂತಸ್ತುಗಳಾಗಿ ಕಾಣುವ ಬೆಟ್ಟಸಾಲಿನಿಂದ ಬಳಸಿದ ಪ್ರದೇಶ : ಪ್ರಕೃತಿ ರಂಗ (ಮು., ಕಾವ್ಯ ಮತ್ತು ಅಲಂ.)

Cirrhósis ಸಿರೋಸಿಸ್ (ನಾ.) ಯಕೃತ್ತಿನ ರೋಗ.

Círriped(e) ಸಿರಿಪೆಡ್, — ಪೀಡ್ (ನಾ.) ಇತರ ವಸ್ತುಗಳಿಗೆ ಹತ್ತಿಕೊಂಡಿರುವ, ಕಾಲುಗಳು ಕುರುಳಿನ ಗುಚ್ಛದಂತಿರುವ, ಕೀಲುಳ್ಳ ಚಿಪ್ಪುಗಳೊಳಗೆ ದೇಹವಿರುವ, ಒಂದು ಸಮುದ್ರಪ್ರಾಣಿ : ಕುರುಳು ಪಾದಿ.

Círrus ಸಿರಸ್ (ನಾ. ; ಬ. ವ., -ri, — ರೈ) (ಸ. ವಿ.) ಲತಾ ತಂತು (ಯಾವುದಾದರೂ ಬಳ್ಳಿ ಹಬ್ಬಿಕೊಂಡುಹೋಗುವುದಕ್ಕಾಗಿ ಅದರಲ್ಲಿ ಹೊರಟು ಸುತ್ತಲಿನ ರೆಂಬೆ, ಮೊ. ವಸ್ತುಗಳಿಗೆ ಸುತ್ತಿಕೊಳ್ಳುವ ದಾರದಂಥ ತಂತಿ ಬಳ್ಳಿ). (ಪ್ರಾ. ವಿ.) ಸೂಕ್ಷ್ಮತಂತು (ಮೀನುಗಳ ದಾಡಿ, ಕುರುಳುಪಾದಿಗಳ ಕಾಲು, ಮೊ.). (ಪ. ಶಾ.) ಕೂದಲಿನಂತೆ, ಅಥವಾ ಉಣ್ಣೆಯ ಎಳೆಗಳಂತೆ, ಕೆದರಿಕೊಂಡಿರುವ ತಂತುಗಳುಳ್ಳ ಮೇಘದ ರೂಪು : ಕುಂತಲ ಮೇಘ. **Cirróse** ಸಿರೋಸ್ (ಗು.) (ಸ. ವಿ., ಪ್ರಾ. ವಿ.) ಕುಂತಲ ಗುಚ್ಛವನ್ನು, ಲತಾ ತಂತುವನ್ನು, ಧರಿಸಿರುವ (= **cirríferous**). (ಪ. ಶಾ.) ಕುಂತಲ ಮೇಘದಂಥ. **Círrous** ಸಿರಸ್ (ಗು) (ಸ. ವಿ., ಪ್ರಾ. ವಿ.) ಲತಾತಂತುವಿನಂಥ ; ಸೂಕ್ಷ್ಮ ತಂತುವಿನಂಥ ; ಇವನ್ನುಳ್ಳ. (ಪ. ಶಾ.) ಕುಂತಲ ಮೇಘಗಳ. **Círriform** (ಗು.) — ಆಕಾರದ.

Cis-, ಸಿಸ್- (ಪೂ. ಪ್ರ.) ಇತ್ತಕಡೆಯ ; ಈಚಿನ. **Cisálpine** ಸಿಸ್ಯಾಲ್ಪೈನ್, — ಲ್ಪಿನ್ (ಗು.) ಆಲ್ಪ್ಸ್‌ಬೆಟ್ಟಕ್ಕೆ ಇತ್ತಕಡೆಯ (ರೋಮಿನ ಕಡೆಯ). **Cis-Elizabéthan** — ಇಲಿಸಬೆತನ್ (ಗು.) ಎಲಿಸಬೆತ್ತಿನ ಕಾಲದಿಂದೀಚಿನ. **Cis-póntine** — ಪಾಂಟೈ(ಟಿ)ನ್ (ಗು.) ಸೇತುವೆಯ ಇತ್ತಕಡೆಯ (ಮು., ಲಂಡನ್ನಿನಲ್ಲ ಥೇಮ್ಸ್‌ನದಿಯ ಉತ್ತರ ಭಾಗದಲ್ಲಿಯ)

Císsy, Sí-, ಸಿಸಿ (ನಾ.) (ಅಮೆ. ಸಂ., ಅಸಂ.) ಹೆಣ್ಣಿಗ.

Cist ಸಿಸ್ಟ್ (ನಾ.) (ಪ್ರಾಚೀ. ಶಾ.) ಬಂಡೆಯಲ್ಲಿ ಅಥವಾ ಮರದ ದಿಮ್ಮಿಯಲ್ಲಿ ತೋಡಿ ಮಾಡಿದ ಚರಿತ್ರಪೂರ್ವ ಕಾಲದ ಹೆಣದ ಪೆಟ್ಟಿಗೆ : ಶವ ಸಂಪುಟ. ಗ್ರೀಕ್ ರಹಸ್ಯ ಮತಪ್ರಕ್ರಿಯೆಗಳಲ್ಲಿ ಉಪಯೋಗಿಸುತ್ತಿದ್ದ ಪವಿತ್ರ ಪಾತ್ರೆಗಳನ್ನು ಇಡುತ್ತಿದ್ದ ಪೆಟ್ಟಿಗೆ : ಪಾತ್ರ ಸಂಪುಟ.

Cístern ಸಿಸ್ಟರ್ನ್ (ನಾ.) ನೀರುತೊಟ್ಟಿ ; ತೊಟ್ಟಿ. (ರೂಪ.) ಕೊಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cítadel ಸಿಟಡೆಲ್ (ನಾ.) ಕೋಟೆ; ದುರ್ಗ (ಮು., ಪಟ್ಟಣಕ್ಕೆ ರಕ್ಷಣೆಯಾಗಿರುವದು, ಅಥವಾ ಪಟ್ಟಣವೆಲ್ಲ ದೃಷ್ಟಿಪಥದಲ್ಲಿರುವಂತೆ ಎತ್ತರವಾಗಿ ಕಟ್ಟಿರುವದು). (ತೊಂದರೆಗೆ ಸಿಕ್ಕಿದವನ, ನಂಬಿಕೆ ಮೊ. ಗಳ) ಕಟ್ಟಕಡೆಯ ಆಧಾರ, ಆಶ್ರಯ : ಕಡೆಗಾಪು.

Cite ಸೈಟ್ (ಕ್ರಿ. ಸಕ.) ನ್ಯಾಯಸ್ಥಾನಕ್ಕೆ ಹಾಜರಾಗಬೇಕೆಂದು ಅಧಿಕಾರದ ಕರೆ ಕೊಡು. (ಒಂದು ಸಂಗತಿ ಅಥವಾ ವಿಷಯವನ್ನು ಸಮರ್ಥನೆಮಾಡುವುದಕ್ಕಾಗಿ ಗ್ರಂಥಕಾರ, ಪುಸ್ತಕ, ಪಂಕ್ತಿ — ಇವನ್ನು) ಆಧಾರ ಕೊಡು, ಉದಾಹರಿಸು ; ಉದಾಹರಣೆ ಕೊಡು. **Cítable** ಸೈಟಬ್‌ಲ್ (ಗು.); **Citátion** (ನಾ.) (ಕ್ರಿಯಾರ್ಥಗಳಲ್ಲಿ). (ಅಮೆ. ಸಂ.) ಸರ್ಕಾರದ ಪತ್ರವ್ಯವಹಾರದಲ್ಲಿ ಪ್ರಸ್ತಾವಿಸಿರುವುದು ; — ನಮೂದು.

Císther(n) ಸಿತರ್, ಸಿತರ್ನ್, **Cíttern** ಸಿಟರ್ನ್ (ನಾ.) (ಪ್ರಾಚೀ. ಪ್ರ., ಕಾವ್ಯ) ವೀಣೆಯಂಥ ತಂತಿವಾದ್ಯ : ಸಿತಾರು.

Cítizen ಸಿಟಿಸ್ಸೆನ್ (ನಾ.) ಪುರದ, ನಗರದ, ಹಕ್ಕುಗಳನ್ನು ಪಡೆದಿರುವ ಸ್ವತಂತ್ರನಾದ ಪಟ್ಟಣಿಗ ; ಪೌರ ; ಪಟ್ಟಣ ವಾಸಿ ; ಸ್ಥಳಿಕ ; ನಿವಾಸಿ ; ಊರುಗ. (ಪೂರ್ವದ ಯೂರೋಪಿನಲ್ಲಿ, ಒಂದು ರಾಜ್ಯದ) ಪ್ರಜೆ ; ಪ್ರಜೆಯ ಹಕ್ಕನ್ನು ಪಡೆದಿರುವವನು ; ನಾಡಿಗ ; ರಾಷ್ಟ್ರಿಕ. (C. of the world ಲೋಕಪ್ರಜೆ ; ಜಗನ್ಮಿತ್ರ). **Cítizenhood** (ನಾ.) ಪೌರ ; ಪೌರರು ; ಪ್ರಜೆತನ. **Cítizenship** (ನಾ.) ಪಟ್ಟಣಿಗನ ಸ್ಥಾನ ಮಾನಗಳು ; ಪೌರತನ ; ಪ್ರಜೆತನ.

Cítron ಸಿಟ್ರನ್ (ನಾ.) ನಿಂಬೆಯ ಜಾತಿಯ, ಆಕಾರದಲ್ಲಿ ನಿಂಬೆಯ ಹಣ್ಣಿಗಿಂತಲೂ ದೊಡ್ಡದಾದ, ಹುಳಿ ಕಡಮೆಯ, ದಪ್ಪಸಿಪ್ಪೆಯ, ಹಣ್ಣು, ಹಣ್ಣಿನ ಗಿಡ : ಮಾದ(ವಾ)ಳ; ಮಾತುಲುಂಗ. ನಿಂಬೆಯಹಣ್ಣಿನ ಬಣ್ಣ. **Cítric** (ಗು.) ಮಾದಳದ ; ಜಂಬೀರದ. **C. acid** ಜಂಬೀರಾಮ್ಲ. **Cítrine** ಸಿಟ್ರಿನ್ (ಗು.) ನಿಂಬೆಯ ಹಣ್ಣಿನ ಬಣ್ಣದ. **Cítrate** (ನಾ.) ಜಂಬೀರ ಲವಣ.

Citronélla ಸಿಟ್ರನೆಲ (ನಾ.) ಉಷ್ಣದೇಶಗಳಲ್ಲಿ ಬೆಳೆಯುವ ಸುವಾಸನೆಯ ಒಂದು ಹುಲ್ಲುಜಾತಿಯಿಂದ ತೆಗೆದ ಸುವಾಸನಾ ಚಂಚಲತೈಲ (ಇದು ಸೊಳ್ಳೆಯ ಕಡಿತಕ್ಕೆ ಹೆಸರಾದ ಮದ್ದು) : ಕಾಮಂಚದ ಹುಲ್ಲು ; ನಿಂಬೆಯವಾಸನೆಯ ಹುಲ್ಲು.

Cítrus ಸಿಟ್ರಸ್ (ನಾ.) ಮಾದ(ವಾ)ಳ, ನಿಂಬೆ, ಕಿತ್ತಿಳೆ, ಹೇರಿಳೆ, ಚಕ್ಕೊತ್ತನೆ — ಈ ಗಿಡಗಳನ್ನೊಳಕೊಂಡ ವೃಕ್ಷಜಾತಿ : ಜಂಬೀರ ಜಾತಿ.

Cíty ಸಿಟಿ (ನಾ.) (ಶಿಥಿಲವಾಗಿ) ಮುಖ್ಯ, ಪ್ರಮುಖ, ಪಟ್ಟಣ ; ತಲೆಯೂರು ; ಪೊಳಲು ; ನಗರ. (ಯೂರೋಪಿನಲ್ಲಿ ನ್ಯಾಯವಾಗಿ, ಸರ್ಕಾರದ ಸನ್ನದಿನ ಮೂಲಕ 'ನಗರ'ವೆಂದು ನಿಗದಿಮಾಡಿದುದು). [C. of refuge ಶರಣಾಗತರಿಗೆ ಆಶ್ರಯಸ್ಥಾನ. Celestial C., Heavenly C., C. of God ಸ್ವರ್ಗ ; ದೇವ ನಗರ. Eternal C., City of the Seven Hills (ಶಾಶ್ವತ ನಗರ, ಸಪ್ತ ಪರ್ವತ ನಗರ) ರೋಮ್ ನಗರ. Holy C. ಜೆರೂಸಲೆಮ್ ; ಪುಣ್ಯ ನಗರ ; ಸ್ವರ್ಗ. The C. 'ಲಾರ್ಡ್ ಮೇಯರ್' ಎಂಬ ಪೌರಾಧ್ಯಕ್ಷನನ್ನುಳ್ಳ ಪೌರಸಭೆಯ ಅಧಿಕಾರಕ್ಕೊಳಪಟ್ಟ ಲಂಡನ್ನಿನ ಭಾಗ ; ಲಂಡನ್ನಿನ ಪೇಟೆ ; ವರ್ತಕ ಮಂಡಲಗಳು]. C. article ವ್ಯಾಪಾರ ವಿಚಾರಗಳು, ಲೇವಾದೇವಿ ವಿಚಾರಗಳು — ಇವುಗಳ ವಿಷಯವಾಗಿ ವಾರ್ತಾಪತ್ರಿಕೆಗಳಲ್ಲಿ ಬರುವ ಲೇಖನ : ಪೇಟೆವರ್ತಮಾನ. C. Company ಪುರಾತನ ವಾಣಿಜ್ಯಸಂಘಗಳ ಪ್ರತಿನಿಧಿಯಾದ ಪೌರಸಭೆ. C. father ನಗರಾಧಿಕಾರಿ ; ಪೌರಸಭಾ ಸದಸ್ಯ. C. man ಭಾರಿ ವ್ಯಾಪಾರಿ, ಸಾಹುಕಾರ. C.-state ಪೂರ್ಣಸ್ವಾತಂತ್ರ್ಯವುಳ್ಳ ಒಂದು ನಗರದ ಸ್ವತಂತ್ರಪ್ರಜೆಗಳಲ್ಲಿ ರಾಜ್ಯಾಧಿಕಾರವೆಲ್ಲವೂ ನೆಲಸಿದ್ದು ಆ ನಗರದ ಸಂಪೂರ್ಣಾಧಿಕಾರಕ್ಕೊಳಪಟ್ಟ ಎಲ್ಲ ಪ್ರಾಂತಗಳಿಗೂ ಆ ಅಧಿಕಾರ ವ್ಯಾಪಿಸಿರುವ, ರಾಷ್ಟ್ರ : ನಗರ ರಾಷ್ಟ್ರ (ಪ್ರಾಚೀನ ಸುಸಂಸ್ಕೃತ ಅಥೆನ್ಸ್ ಮತ್ತು ರೋಮ್ ನಗರಗಳಂತೆ). **Cítyless** (ಗು.) ನಗರ ರಹಿತ. **Cítyward(s)** (ಕ್ರಿ. ವಿ.)

Cívet ಸಿವೆಟ್ (ನಾ.) (Also, C.-cat) ಆಕಾರದಲ್ಲಿಯೂ ರೂಪಿನಲ್ಲಿಯೂ ನರಿಗೂ ಮುಂಗುಸಿಗೂ ಮಧ್ಯಸ್ಥವಾಗಿರುವ ಮಾಂಸಾಹಾರಿಯಾದ ಒಂದು ಚತುಷ್ಪಾದಿ : ಪುನಗಿನ ಬೆಕ್ಕು (ಇದರ ಗುದಪ್ರಾಂತದಲ್ಲಿರುವ ಗ್ರಂಥಿಗಳಲ್ಲಿ ಬಹಳ ಕಟುವಾದ, ಕಸ್ತೂರಿವಾಸನೆಯ, ಗಂಧದ್ರವ್ಯವು ದೊರೆಯುತ್ತದೆ) ; ಪುನಗು ; ಜವಾದಿ.

Cívic ಸಿವಿಕ್ (ಗು.) ಪೌರ ; ಪೌರಯೋಗ್ಯ (C. crown ಯುದ್ಧದಲ್ಲಿ ತನ್ನ ನಗರಸ್ಥನ ಜೀವವನ್ನುಳಿಸಿದವನಿಗೆ ರೋಮನರು ತಲೆಗಿಟ್ಟು ಗೌರವಿಸುತ್ತಿದ್ದ 'ಓಕ್'ಎಲೆಗಳ ಮಾಲೆ : ಪೌರ ಮುಡಿ). ನಗರದ ; ಪೌರ ಸಭೆಯ ; ಪ್ರಜಾ ಸಂಬಂಧವುಳ್ಳ (C. virtues ಪ್ರಜಾ ಗುಣಗಳು. C. activity ಪ್ರಜಾ ಕಾರ್ಯ). **Cívics** (ನಾ.) ಪ್ರಜೆಯ ಹಕ್ಕು ಬಾಧ್ಯತೆಗಳನ್ನೂ ಕರ್ತವ್ಯಗಳನ್ನೂ ಕುರಿತ ಶಾಸ್ತ್ರ : ಪ್ರಜಾ ಧರ್ಮ ; ಪ್ರಜಾ ನೀತಿ. **Cívically** (ಕ್ರಿ. ವಿ.)

Cívil ಸಿವಿಲ್ (ಗು.) ಒಟ್ಟಾಗಿ ವಾಸಿಸುವವರ ; ಪ್ರಜಾ ಜೀವನದ (C. society ಪ್ರಜಾ ಸಮಾಜ. C. life ಪ್ರಜಾ ಜೀವನ). ಪ್ರಜಾ ಸಮುದಾಯದ (C. institutions ಪ್ರಜಾ ಸಂಸ್ಥೆಗಳು. C. war ಪ್ರಜೆಗಳಲ್ಲಿಯೇ ಪ್ರತಿಕಕ್ಷಿಗಳಿಗೆ ಪರಸ್ಪರ ನಡೆಯುವ ಯುದ್ಧ : ರಾಷ್ಟ್ರಾಂತರ್ಯುದ್ಧ ; ಒಳಯುದ್ಧ). ಪ್ರಜೆಯ ; ನಗರಸ್ಥನ ; ನಾಗರಿಕ ಯೋಗ್ಯವಾದ ; ಪೌರ (C. liberty ಪ್ರಜಾ ಸ್ವಾತಂತ್ರ್ಯ. C. rights ಪ್ರಜೆಯ ಹಕ್ಕುಗಳು. C. spirit ರಾಷ್ಟ್ರಿಕ, ಪ್ರಜಾ, ಬುದ್ಧಿ). ಮರ್ಯಾದೆಗೂಡಿದ ; ವಿನಯಶೀಲ ; ದಾಕ್ಷಿಣ್ಯಪರ ; ಸಭ್ಯ. ಒರಟುತನವಿಲ್ಲದ. ನೌಕೆಗಾಗಲಿ ಸೇನೆಗಾಗಲಿ ಸೇರಿರದ : ಅಸೈನಿಕ (C. engineer ವಾಸ್ತು ಶಿಲ್ಪಜ್ಞ. C. Service ದೇಶದ ಸ್ವಸ್ಥಸ್ಥಿತಿಯ ಆಡಳಿತಗಳನ್ನು ನೋಡಿಕೊಳ್ಳುವುದಕ್ಕಾಗಿ ಸರ್ಕಾರದವರು ಏರ್ಪಡಿಸಿರುವ ಇಲಾಖೆ, ಅಧಿಕಾರಿ ವರ್ಗ. C. Servant ಈ ವರ್ಗದ ಅಧಿಕಾರಿ). ಮತ (ಧರ್ಮ) ಸಂಬಂಧವಲ್ಲದ ; ಲೌಕಿಕ (C. law ಲೌಕಿಕ ನ್ಯಾ. ಶಾ. ; ವ್ಯವಹಾರ ಧರ್ಮಶಾಸ್ತ್ರ. C. marriage ಮತಸಂಸ್ಕಾರವಿಲ್ಲದೆ, ಕೇವಲ ಒಪ್ಪಂದದ ಕಟ್ಟಳೆಯನ್ನನುಸರಿಸಿ ನಡಸಿದ ಮದುವೆ : ಶಾಸನಿಕ ವಿವಾಹ ; ಕಾನೂನು ಮದುವೆ). ದಂಡ್ಯಾಪರಾಧವಲ್ಲದ ; ತಕ್ಸೀರಲ್ಲದ. ಪ್ರಕೃತಿಸಿದ್ಧವಲ್ಲದ ; ಖ. ವಿ. ವನ್ನನುಸರಿಸದ [C. day, year (ಅನುಕೂಲ್ಯಕ್ಕಾಗಿ ಏರ್ಪಡಿಸಿಕೊಂಡ) ವ್ಯಾವಹಾರಿಕ ದಿನ, ವರ್ಷ]. C. disobedience (ಇಂಡಿಯಾದಲ್ಲಿ) ರಾಜಕೀಯ ಚಳವಳಿಗಾಗಿ ಕಂದಾಯ ಕೊಡದೆಯೂ ಕಾನೂನನ್ನು ಲಕ್ಷ್ಯಮಾಡದೆಯೂ ಇರುವ ಮುಷ್ಕರ ; 'ಸತ್ಯಾಗ್ರಹ.' C. Law ರೋಮನ್ ನ್ಯಾಯಶಾಸ್ತ್ರ (D. C. L. = Doctor of Civil Law 'ರೋಮನ್ ನ್ಯಾಯಶಾಸ್ತ್ರ ಪ್ರವೀಣ' ಎಂಬ ಬಿರುದು). C. list ದೊರೆಯ ಗೃಹಕೃತ್ಯಕ್ಕೂ ರಾಜಕುಟುಂಬಿಗಳು, ಮೊ. ವರ ವಿಶ್ರಾಂತಿ ವೇತನಗಳಿಗೂ ಪಾರ್ಲಿಮೆಂಟಿನಿಂದ ಕೊಡುವ ದ್ರವ್ಯ : ರಾಜಾಂಶ. (ಇಂಡಿಯಾದಲ್ಲಿ) ಸರ್ಕಾರದ ಅಧಿಕಾರಿಗಳ ವೇತನಪಟ್ಟಿ ಸಹ. **Civílian** ಸಿವಿಲಿಯನ್ — ಲ್ಯನ್ (ನಾ., ಗು.) ಯುದ್ಧೋದ್ಯೋಗಿಯಲ್ಲದ(ವನು) ; ಅಯೋಧ (Indian C. ಇಂಡಿಯಾ ಸರ್ಕಾರದ ಅಯೋಧ ವರ್ಗದ ಅಧಿಕಾರಿ). (ಪ್ರಾಚೀ. ಪ್ರ.) ವ್ಯವಹಾರ ನ್ಯಾಯ ಶಾಸ್ತ್ರ ಪಂಡಿತ. **Civílity** (ನಾ.) ಮರ್ಯಾದೆ ; ವಿನಯ ; ಸೌಜನ್ಯ ; ದಾಕ್ಷಿಣ್ಯ ; ಸಭ್ಯತೆ. (ಬ. ವ. ದಲ್ಲಿ) ಅನುಗ್ರಹ ; ದಯೆ ; ಉಪಕಾರ. **Cívilly** (ಕ್ರಿ. ವಿ.)

Cívilizátion ಸಿವಿಲಿ(ಲೈ)ಜೇಷನ್ (ನಾ.) ನಾಗರಿಕತೆ ; ಸಭ್ಯತೆ ; ನಾಗರಿಕತೆ ಪಡೆಯುವುದು ; ನಾಗರಿಕತೆಯನ್ನುಂಟುಮಾಡುವುದು. ಶಾಸ್ತ್ರ, ಕಲೆ, ಮೊ. ಗಳಲ್ಲಿ ಉನ್ನತಿಪಡೆದಿರುವ ಸಮಾಜಸ್ಥಿತಿ. ನಾಗರಿಕ ರಾಷ್ಟ್ರಗಳು. **Cívilize** (ಕ್ರಿ. ಸಕ.) ನಾಗರಿಕ ಮಾಡು ; ಸಂಸ್ಕೃತಿ ಕೊಡು ; ಸಂಸ್ಕರಿಸು ; ಮೇಲ್ಪಡಿಸು ; ಪರಿಷ್ಕಾರ ಮಾಡು. C. away (ಪಾಶವ ವೃತ್ತಿ, ದುರಾಚರಣೆ, ಮೊ. ನ್ನು) ತೊಲಗಿಸಿಬಿಡು. **Cívilizable** (ಗು.) ; **Cívilizer** (ನಾ.)

Clack ಕ್ಲ್ಯಾಕ್ (ನಾ., ಕ್ರಿ. ಅಕ.) ಮರದ ಹಲಗೆಗಳು ಒಂದೊಂದಕ್ಕೆ ಬಡಿದುಕೊಂಡಾಗ ಆಗುವ ಶಬ್ದ. ದ್ರವವೆತ್ತುವ ಯಂತ್ರ, ಮೊ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಲ್ಲಿ ('ಕ್ಲ್ಯಾಕ್' ಎಂದು ಶಬ್ದಮಾಡಿ ಮುಚ್ಚಿಕೊಳ್ಳುವ) ಫಲಕ ಕವಾಟ. (ಅನೇಕರ) ಮಾತಿನ ಗಲಿಬಿಲಿ. (ಕ್ರಿ.) ಲೊಟಲೊಟನೆ ಮಾತಾಡು; ಗಳಹು. ಪಾವು ಕೊರಡು (ಕೆಸರು ಕೊರಡು) ಹಾಕಿಕೊಂಡು ಕಲ್ಲು ಬಂಡೆಯಮೇಲೆ ನಡೆದ ಶಬ್ದಮಾಡು.

Clad. **Clothe** ನೋಡಿ.

Claim ಕ್ಲೆಯ್ಮ್ (ಕ್ರಿ. ಸಕ.) ತನ್ನದೆಂದು ಹೇಳಿಕೊ, ಸಾಧಿಸು; ಹಕ್ಕು ಹೇಳು, ಸಾಧಿಸು; ತನಗೆ ಸೇರಿದುದೆಂದು ವಾದಿಸು (C. the victory ಗೆಲವು ತನ್ನದೆಂದು ಹೇಳಿಕೊ. C. accuracy ಯಥಾರ್ಥವೆಂದು, ನಿಷ್ಕೃಷ್ಟವೆಂದು, ವಾದಿಸು). ಅಂಗೀಕಾರ ಕೊಡಬೇಕೆಂದು ಒತ್ತಿಹೇಳು. (ಅಮೆ. ಸಂ.) ಹೊಡೆದಾಡು (ರೂಪ.); ಸಾಧಿಸು. (ವಸ್ತುಗಳ ವಿಷಯದಲ್ಲಿ) ಅರ್ಹವಾಗಿರು (ಮು., ಗಮನಕ್ಕೆ); ಆಕರ್ಷಿಸು; ಸೆಳೆ; ಎಳೆ. **Claímable** (ಗು.); **Claímant** —ಮಂಟ್ (ನಾ.) ಹಕ್ಕುದಾರ; ವಾರಸುದಾರ.

Claim (ನಾ.) ಹಕ್ಕು; ಹಕ್ಕುಬಾಧ್ಯತೆ (Lay c. to ತನ್ನದೆಂದು ವಾದಿಸು; ಹಕ್ಕುಹೂಡು); ವಾರಸು. (ಗಣಿ, ಮೊ.) ಗೊತ್ತು, ಕರಾರು, ಮಾಡಿಕೊಟ್ಟ ಪ್ರದೇಶ, ನೆಲ. C.-jumper (ಅಮೆ. ಸಂ.) ಮತ್ತೊಬ್ಬನು ಆಗಲೇ ಪಡೆದಿರುವ ಗಣಿಯ ಹಕ್ಕನ್ನು ಅಪಹರಿಸುವವನು.

Clairaúdience ಕ್ಲೇರ್‌ಆಡಿಯೆನ್ಸ್ (ನಾ.) ಕಿವಿಗೆ ಕೇಳದ ವಿಷಯಗಳನ್ನು ಕೇಳಿದಂತೆ ಮನಸ್ಸಿನಲ್ಲಿ ಗ್ರಹಿಸುವುದು; ಅತೀಂದ್ರಿಯ ಶ್ರವಣ (ಶಕ್ತಿ). **Clairaúdient** (ಗು., ನಾ.) ಅತೀಂದ್ರಿಯ ಶ್ರವಣ ಶಕ್ತಿಯುಳ್ಳ(ವನು)

Clairvoýance ಕ್ಲೇರ್‌ವಾಯನ್ಸ್, —ವೊಯಾನ್ಸ್ (ನಾ.) ಕಣ್ಣಿಗೆ ಕಾಣದ ವಿಷಯಗಳನ್ನು ಪ್ರತ್ಯಕ್ಷವಾಗಿ ಕಂಡಂತೆ ಮನಸ್ಸಿನಲ್ಲಿ ಗ್ರಹಿಸುವುದು; ಅತೀಂದ್ರಿಯ ದೃಷ್ಟಿ(ಶಕ್ತಿ); ಕೇವಲ ಸೂಕ್ಷ್ಮ ದೃಷ್ಟಿ; ಅಸಾಧಾರಣ ಪ್ರಜ್ಞೆ. **Clairvoýant** (ನಾ., ಗು.; ಸ್ತ್ರೀ. -te) ಅತೀಂದ್ರಿಯ ದೃಷ್ಟಿಯುಳ್ಳ(ವನು); ಅಸಾಧಾರಣ ಪ್ರಜ್ಞೆಯುಳ್ಳ(ವನು)

Clam[1]. **Clamp**[1] ನೋಡಿ.

Clam[2] ಕ್ಲ್ಯಾಮ್ (ನಾ.) ಎರಡು ಚಿಪ್ಪುಗಳಿಂದ ಕೂಡಿದ (ಅನೇಕ ಜಾತಿಯ) ಚಿಪ್ಪುಮೀನು (ಮು., ಅಮೆರಿಕದ್ದು)

Clámant ಕ್ಲೇ(ಕ್ಲ್ಯಾ)ಮಂಟ್ (ಗು.) ಗದ್ದಲಮಾಡುವ; ಗಲಾಟೆಮಾಡುವ; ಗಡಿಬಿಡಿ ಮಾಡುವ; ನಿರ್ಬಂಧ ಮಾಡುವ; ಒತ್ತಾಯಪಡಿಸುವ; ಅವಸರದ; ಕೂಡಲೆ ಗಮನಿಸಬೇಕಾದ; ಜರೂರಿನ.

Clámber ಕ್ಲ್ಯಾಂಬರ್ (ಕ್ರಿ. ಅಕ., ನಾ.) ಕೈಕಾಲೂರಿಕೊಂಡು, ದೇಕಿಕೊಂಡು, ಹತ್ತು; ಕಷ್ಟಪಟ್ಟು, ಪ್ರಯಾಸದಿಂದ, ಹತ್ತು. (ಬಳ್ಳಿ) ಸೂಕ್ಷ್ಮತಂತುಗಳ ಹಿಡಿತದಿಂದ ಮೇಲೇರು, ಹಬ್ಬು, ಅಡರು.

Clámmy ಕ್ಲ್ಯಾಮಿ (ಗು.) ತೇವವುಳ್ಳದ್ದಾಗಿಯೂ ಸಾ., ತಣ್ಣಗೂ ಅಂಟಂಟಾಗಿಯೂ ಅಥವಾ ಲೋಳೆಯಾಗಿಯೂ ಇರುವ (ಕೈಯ ಮತ್ತು ಅಪಕ್ವವಾಗಿ ಸುಟ್ಟ ರೊಟ್ಟಿ, ಮೊ. ಗಳ ವಿಷಯದಲ್ಲಿ). **Clámmily** (ಕ್ರಿ. ವಿ.); **Clámminess** (ನಾ.)

Clámour, -or ಕ್ಲ್ಯಾಮರ್ (ನಾ., ಕ್ರಿ.) ಕೂಗಾಟ; ಕೂಗಾಡು; ಗದ್ದಲ(ಮಾಡು); ಗಟ್ಟಿಯಾಗಿ ಮೊರೆಯಿಡು(ವುದು); ದೂರು(ವುದು); ವರಾತ, ತಗಾದೆ, ಮಾಡು(ವುದು). ಗಲಿಬಿಲಿ(ಮಾಡು). C. down ಗಲಾಟೆಮಾಡಿ ಸುಮ್ಮನಾಗಿಸು. C. out of, into ಬಿಡುವಂತೆ, ಮಾಡುವಂತೆ, ಗದ್ದಲವೆಬ್ಬಿಸಿ ನಿರ್ಬಂಧಗೊಳಿಸು. **Clámorous** (ಗು.); **Clámorously** (ಕ್ರಿ. ವಿ.)

Clamp[1] ಕ್ಲ್ಯಾಂಪ್ (ನಾ., ಕ್ರಿ. ಸಕ.) (ಕೆಲವು ವೈಜ್ಞಾನಿಕ ಪ್ರಯೋಗಗಳಲ್ಲಿ Clam ಎಂಬ ನಾಮವಾಚಕ ರೂಪವುಂಟು) ಪದಾರ್ಥಗಳನ್ನು ಭದ್ರಪಡಿಸುವುದಕ್ಕಾಗಲಿ ಬಿಗಿಸುವುದಕ್ಕಾಗಲಿ ಒಟ್ಟುಗೂಡಿಸಿ ಕದಲದೆ ಹಿಡಿದುಕೊಳ್ಳುವುದಕ್ಕಾಗಲಿ ಉಪಯೋಗಿಸುವ, ಸಾ., ಕಬ್ಬಿಣದಿಂದ ಮಾಡಿದ, ಪಟ್ಟಿ, ಮೂಲೆಕಟ್ಟು, ಹಿಡಿಕಟ್ಟು; ಹಿಡಿಗೈ; ಬಂಧನಿ. ಪದಾರ್ಥಗಳನ್ನು ಬಿಗಿಯಾಗಿ ಹಿಡಿದುಕೊಳ್ಳುವುದಕ್ಕಾಗಲಿ ಸಂಕೋಚನ ಮಾಡುವುದಕ್ಕಾಗಲಿ ಎದುರುಬದುರಾಗಿ ಎರಡು ದವಡೆಗಳಿದ್ದು ತಿರುಪಿನಮೂಲಕ ಅವನ್ನು ಹತ್ತಿರಹತ್ತಿರಕ್ಕೆ ತರಲಾಗುವ ತೆರತೆರದ ಸಲಕರಣೆಗಳು, ಆಯುಧಗಳು. (ಕ್ರಿ.) ಭದ್ರಪಡಿಸು; ಹಿಡಿಗೈಯಲ್ಲಿ ಬಿಗಿಸು.

Clamp[2] ಕ್ಲ್ಯಾಂಪ್ (ನಾ., ಕ್ರಿ. ಸಕ.) ದಟ್ಟವಾಗಿ ಪೇರಿಸಿದ, ರಾಶಿಗೂಡಿಸಿದ, ಪದಾರ್ಥ; ಒಟ್ಟು; ರಾಶಿ: ಮು., (೧) ಸುಡುವುದಕ್ಕಾಗಿ ಒಟ್ಟಿರುವ ಇಟ್ಟಿಗೆಯ ಗೂಡು; (೨) ಚಳಿಯಿಂದ ಘನೀಭೂತವಾಗದಂತೆ ಹುಲ್ಲುಮಣ್ಣುಗಳಿಂದ ಮುಚ್ಚಿದ ಉರುಳುಗೆಡ್ಡೆ, ಮೊ. ಗಳ ರಾಶಿ; (೩) ಹುಲ್ಲು, ಹೆಪ್ಪು, ಉರಿಸುವ ಸೊಪ್ಪಿದ್ದಲ ಗಟ್ಟಿ (Peat), ತೋಟದ ಸೆತ್ತೆ, ಮೊ. ಗಳ ರಾಶಿ. (ಕ್ರಿ.) ಇಟ್ಟಿಗೆ, ಮೊ. ನ್ನು ಪೇರಿಸು, ರಾಶಿಗೂಡಿಸು.

Clan ಕ್ಲ್ಯಾನ್ (ನಾ.) ಒಬ್ಬನೇ ಮೂಲಪುರುಷನುಳ್ಳ ಬುಡಕಟ್ಟಿಗೆ ಸೇರಿದ (ಮು., ಕುಲಪತಿಯ ಆಧಿಪತ್ಯ ನಡೆಯುತ್ತಿದ್ದ ಕಾಲದ) ಸ್ಕಾಚ್ ಮಲೆನಾಡಿಗರ ಕುಲ (Clansman ಕುಲದವನು, ಸ್ವಕುಲದವನು). ಜಾತಿ; ವಂಶ; ವರ್ಗ; ಕುಲ; ಬುಡಕಟ್ಟು; ಬಣ; ಪಕ್ಷ; ಕೂಟ; ತಂಡ; ಗುಂಪು. ಒಟ್ಟಿಗಿರುವ ಕುಟುಂಬ. **Clánnish** (ಗು.) ಒಂದು ಕುಲದ; ಕುಲಸಹಜವಾದ ರಾಗದ್ವೇಷಗಳುಳ್ಳ; ಸ್ವಕುಲಾನುರಕ್ತ. **Clánnishly** (ಕ್ರಿ. ವಿ.); **Clánnishness** (ನಾ.); **Clánship** (ನಾ.) ಕುಲ, ಪಂಗಡ, ಮೊ. ಗಳಾಗಿರುವ ಪದ್ಧತಿ: ಬುಡಕಟ್ಟು ಪದ್ಧತಿ. ಪರಸ್ಪರ ಅಸಹನೆಯುಳ್ಳ ಪಂಗಡಗಳಾಗಿ ಒಡೆದಿರುವುದು. ಒಬ್ಬ ನಾಯಕನಲ್ಲಿ ಅನುರಕ್ತನಾಗಿರುವುದು; ಸ್ವಾಮಿಭಕ್ತಿ.

Clandéstine ಕ್ಲ್ಯಾಂಡೆಸ್ಟಿನ್ (ಗು.) ಕಳ್ಳತನದ; ಒಳಸಂಚಿನ; ಗೂಢವಾದ; ಗುಪ್ತ; ಗುಟ್ಟಿನ; ರಹಸ್ಯದ. **Clandéstinely** (ಕ್ರಿ. ವಿ.)

Clang ಕ್ಲ್ಯಾಂಗ್ (ನಾ., ಕ್ರಿ.) ಗಟ್ಟಿಯಾದ ಲೋಹಧ್ವನಿ; ಖಣಿಲು (ಮು., ತುತ್ತೂರಿ, ಯುದ್ಧಾಯುಧಗಳು, ದೊಡ್ಡ ಗಂಟೆಗಳು, ಕೆಲವು ಹಕ್ಕಿಗಳು — ಇವುಗಳದು). (ಕ್ರಿ.) ಖಣಿಲೆನ್ನು; ಖಣಿಲೆನ್ನಿಸು. **Clángour, -or** ಕ್ಲ್ಯಾಂಗರ್ (ನಾ.) (ಅನುರಣನದಿಂದ ಕೂಡಿದ ಗಟ್ಟಿಯಾದ) ಗಣಗಣ ಶಬ್ದ. **Clángorous** (ಗು.); **Clángorously** (ಕ್ರಿ. ವಿ.)

Clank ಕ್ಲ್ಯಾಂಕ್ (ನಾ., ಕ್ರಿ.) (ಭಾರವಾದ ಸರಪಣಿ, ಮೊ. ವು ಮಾಡುವ) ಝಣಝಣ ಶಬ್ದ. (ಸರಪಣಿ. ಮೊ.) ಝಣಝಣನೆ ಶಬ್ದ ಮಾಡು, ಮಾಡಿಸು.

Clap[1] ಕ್ಲ್ಯಾಪ್ (ನಾ., ಕ್ರಿ.) (ಗುಡುಗು, ಚಪ್ಪಾಳೆ, ಮೊ. ಗಳ) ಸಿಡಿತದ ಸದ್ದು; ಸಿಡಿಲು ಶಬ್ದ; ಚಪ್ಪಾಳೆಯ ಶಬ್ದ; ಕೈಪೆಟ್ಟು; ಕೈತಟ್ಟು; ಕರತಾಳ. (ಕ್ರಿ.) (ಮೆಚ್ಚುಗೆ ತೋರಿಸುವುದಕ್ಕಾಗಿ ಗಟ್ಟಿಯಾಗಿ) ಚಪ್ಪಾಳೆ ತಟ್ಟು (C. one's hands). (C. hands ಸಂಕೇತ, ಮೊ. ಕ್ಕಾಗಿ, ಬೆಚ್ಚಗೆ ಮಾಡಿಕೊಳ್ಳುವುದಕ್ಕಾಗಿ, ಚಪ್ಪಾಳೆ ತಟ್ಟು, ಕೈ ಹೊಯ್). (ರೆಕ್ಕೆಗಳನ್ನು) ರಪರಪನೆ ಬಡಿ. (C. on the back ಪ್ರೋತ್ಸಾಹಿಸುವುದಕ್ಕಾಗಿ, ಅಭಿನಂದಿಸುವುದಕ್ಕಾಗಿ, ಬೆನ್ನುತಟ್ಟು). ತ್ವರೆಯಿಂದ, ರಭಸದಿಂದ, ಇಡು, ಹಾಕು, ಜೋಡಿಸು, ತೊಡಿಸು, ಅಳವಡಿಸು [C. spurs to horse ಕುದುರೆಯ ಪಕ್ಕೆಗಳನ್ನು ಚುಚ್ಚಿ ಅದನ್ನು ಚೋದಿಸು. C. person in prison ಒಬ್ಬನನ್ನು ಜೈಲಿಗೆ ತಳ್ಳು. C. duty on goods ಸರಕಿನಮೇಲೆ ಸುಂಕ ಹಾಕು. C. on more sail ಹಡಗಿಗೆ ಹೆಚ್ಚು ಪಟಗಳನ್ನು ಹಚ್ಚು, ತೊಡಿಸು. C. up peace, bargain ಥಟ್ಟನೆ, ಹೆಚ್ಚು ಲಕ್ಷ್ಯಕೊಡದೆ, ಸಂಧಿಮಾಡಿಕೊ, ವ್ಯಾಪಾರ ತೀರಿಸು. C. eyes on (ಸಾ., ನಿಷೇಧಾರ್ಥದಲ್ಲಿ) ಕಣ್ಣುಹಾಕು]. C.-net ಹಕ್ಕಿ ಹಿಡಿಯುವವನ, ಕೀಟಶಾಸ್ತ್ರಜ್ಞನ, (ದಾರನರಿದು ಮುಚ್ಚಿಬಿಡಲಾಗುವ) ಬಲೆ. **Clápper** (ನಾ.) ಗಂಟೆಯ ನಾಲಗೆ, ಬಡಿಗೆ. ಹಕ್ಕಿಗಳನ್ನು ಹೆದರಿಸುವ ಗಲಗಲ, ಬಡಿಬಡಿ.

Clap[2] ಕ್ಲ್ಯಾಪ್ (ನಾ.) (ಸಂಭಾವಿತ ಪ್ರಯೋಗವಲ್ಲ) ರತಿರೋಗ; ಮೇಹ; ಬಿಳುಪುರೋಗ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Clápboard ಕ್ಲ್ಯಾಪ್‌ಬೋರ್ಡ್, ಕ್ಲ್ಯಾಬರ್ಡ್ (ನಾ.) (ಅಮೆ. ಸಂ.) = Weather-board.

Clápperclaw ಕ್ಲ್ಯಾಪರ್‌ಕ್ಲಾ (ಕ್ರಿ. ಸಕ.) ಪರಚು ; ಪರಚಿ ಹೊಡೆ. ಬಯ್ಯಿ ; ತಪ್ಪುಹಿಡಿ ; (ಮತ್ಸರದಿಂದ) ದೂಷಿಸು.

Cláptrap ಕ್ಲ್ಯಾಪ್‌ಟ್ರ್ಯಾಪ್ (ನಾ., ಗು.) ಜನರ ಮೆಚ್ಚುಗೆಯನ್ನು ಪಡೆಯುವ ಉದ್ದೇಶದಿಂದ ಆಡುವ ಜಳ್ಳುಮಾತು ; ಕೇವಲ ರಂಜನೆಯ (ಮಾತು)

Claque (F) ಕ್ಲ್ಯಾಕ್, **Cláquer, Claqueúr** (F) ಕ್ಲ್ಯಾಕರ್ (ನಾ.) ಕೂಲಿಯ ಹೊಗಳುಭಟ್ಟ(ರು)

Clárence ಕ್ಲ್ಯಾರೆನ್ಸ್ (ನಾ.) ಒಳಗೆ ನಾಲ್ವರಿಗೂ ಹೊರಗಿನ ಪೆಟ್ಟಿಗೆಯಮೇಲೆ ಇಬ್ಬರಿಗೂ ಕೂಡುವ ಆಸನಗಳುಳ್ಳ ನಾಲ್ಕು ಚಕ್ರದ, ಆವರಣವುಳ್ಳ, ಬಂಡಿ. [Duke of C. (William IV) ನ ಹೆಸರಿನಿಂದ]

Clárendon ಕ್ಲ್ಯಾರೆಂಡನ್ (ಗು., ನಾ.) (ಮುದ್ರಣ) (ನಾನಾ ಪ್ರಮಾಣಗಳ) ದಪ್ಪಕ್ಷರದ (ಅಚ್ಚಿನ ಮೊಳೆ)

Cláret ಕ್ಲ್ಯಾರೆಟ್ (ನಾ., ಗು.) ಬೋರ್ಡೋಕ್ಷೇತ್ರದಿಂದ ರಫ್ತಾಗುವ ತೆರತೆರದ ಕೆಂಪು ಫ್ರೆಂಚ್ ಮದ್ಯ : 'ಕ್ಲ್ಯಾರೆಟ್.' (ಅಸಂ.) ರಕ್ತ ; ನೆತ್ತರು (Tap one's c. ಮೂಗನ್ನು ಗುದ್ದಿ ರಕ್ತಸುರಿಯುವಂತೆ ಮಾಡು). ಕ್ಲ್ಯಾರೆಟ್ ಬಣ್ಣ(ದ) ; ರಕ್ತನೇರಳೆ ಬಣ್ಣ(ದ). 'ಸಾಮನ್' ಮೀನನ್ನು ಹಿಡಿಯುವುದಕ್ಕಾಗಿ ಉಪಯೋಗಿಸುವ ರಕ್ತನೇರಳೆಯ ಬಣ್ಣದ ಕೃತಕ ನೊಣ. C.-cup (Cup ನೋಡಿ)

Clárify ಕ್ಲ್ಯಾರಿಫೈ (ಕ್ರಿ.) (ಗೂಢ ವಿಷಯ, ಮನಸ್ಸು, ದೃಷ್ಟಿ —ಇವನ್ನು) ಸ್ವಚ್ಛಗೊಳಿಸು, ಸ್ಪಷ್ಟಮಾಡು, ವಿಶದಗೊಳಿಸು. (ಕಶ್ಮಲವನ್ನು, ಕಸಕಡ್ಡಿಯನ್ನು, ವಿಂಗಡಿಸಿಹಾಕಿ) ನಿರ್ಮಲಗೊಳಿಸು, ಶೋಧಿಸು, ಸ್ವಚ್ಛಮಾಡು, ಸೋಸು. (ದ್ರವ, ವಾಯು, ಮೊ. ನ್ನು) ತಿಳಿಗೊಳಿಸು ; ತಿಳಿಯಾಗು (ರೂಪ. ಸಹ : ಭಾಷಾಶೈಲಿ, ಮೊ. ಗಳ ವಿಷಯದಲ್ಲಿ). **Clarificátion** (ನಾ.) ; **Clárity** (ನಾ.) ಸ್ವಚ್ಛತೆ ; ವೈಶದ್ಯ ; ಸ್ಪಷ್ಟತೆ ; ಶುಭ್ರತೆ ; ಪ್ರಸನ್ನತೆ ; ನೈರ್ಮಲ್ಯ.

Clárinet, Clarinét ಕ್ಲ್ಯಾರಿನೆಟ್ (ನಾ.) ರಂಧ್ರಗಳು, ಕೀಲಿಗಳು —ಇವುಗಳ ಮೂಲಕ ನುಡಿಸುವ, ನಾದದ ಒಂದೇ ಏಣನ್ನುಳ್ಳ, ಮರದ ಕೊಳವಿ ; ಇದೇ ಗುಣವುಳ್ಳ ಆರ್ಗನ್‌ವಾದ್ಯದ ಕೊಳವಿ.

Clárion ಕ್ಲ್ಯಾರಿಯನ್ (ನಾ., ಗು.) (ಹಿಂದೆ, ಯುದ್ಧದಲ್ಲಿ ಉಪಯೋಗಿಸುತ್ತಿದ್ದ) ಕೀರಲುದನಿಯ ಕಿರಿಕೊಳವೆಯ ಕಹಳೆ. ಹೊಡೆದೆಬ್ಬಿಸುವ, ಹುರಿದುಂಬಿಸುವ, ಧ್ವನಿ. ಆರ್ಗನ್ ವಾದ್ಯದ, ಕ್ಲ್ಯಾರಿಯನ್ ಗುಣದ, ಪಿಳ್ಳಂಗೋವಿ. (ಗು.) ಸ್ಪಷ್ಟವಾಗಿಯೂ ಗಟ್ಟಿದನಿಯುಳ್ಳದ್ದಾಗಿಯೂ ಇರುವ ; ಕಹಳೆಯ ಧ್ವನಿಯಂಥ.

Clarionét ಕ್ಲ್ಯಾರಿಯೊನೆಟ್ (ನಾ.) = Clarinet.

Clárity. Clarify ನೋಡಿ.

Clash ಕ್ಲ್ಯಾಷ್ (ಕ್ರಿ., ನಾ.) (ಸಂಘಟ್ಟನೆ, ಯುದ್ಧಾಯುಧಗಳ ಹೊಡೆತ, ತಾಳಗಳ ಧ್ವನಿ, ಘಂಟಾನಮುದಾಯ ಧ್ವನಿ —ಇವುಗಳಂಥ) ತುಮುಲ ಧ್ವನಿ(ಮಾಡು). ಸಂಘಟ್ಟಿಸು ; ಸಂಘಟ್ಟನೆ ; ಮೇಲೆ ಬೀಳು(ವುದು) ; ತಾಗು(ವುದು) ; ಎದುರು ತಾಗು(ವುದು) ; ಹೋರಾಡು(ವುದು) ; ನುಗ್ಗಿ ಹೊಡೆ(ವುದು) ; ವಿರೋಧ ; ವಿರೋಧಿಸು ; ಏಕಮತವಿಲ್ಲದಿರು(ವುದು) ; ಅಭಿಪ್ರಾಯ ಭಿನ್ನವಾಗು(ವುದು). (Colours c. ಬಣ್ಣಗಳು ಹೊಂದುವುದಿಲ್ಲ ; ವರ್ಣಮೈತ್ರಿಯಿಲ್ಲ). ಗಂಟೆಗಳನ್ನು ಒಟ್ಟಿಗೆ ಬಾರಿಸು.

Clasp ಕ್ಲಾಸ್ಪ್ (ಕ್ರಿ., ನಾ.) ವಸ್ತುಗಳನ್ನು ಚಿಲುಕ, ಕೊಂಡಿ, ಮೊ. ಗಳಿಂದ ಭದ್ರಪಡಿಸುವುದಕ್ಕಾಗಿ ಉಪಯೋಗಿಸುವ, ಸಿಕ್ಕಿಸಿಕೊಳ್ಳುವ ಭಾಗಗಳುಳ್ಳ, ಸಲಕರಣೆ ; ಕೊಂಡಿ ; ಕೊಕ್ಕೆ ; ಬಂಧನಿ. ಪುಸ್ತಕದ ರಟ್ಟಿನ ಚಿಲುಕ. ಆಲಿಂಗನ ; ಅಪ್ಪು ; ತಬ್ಬು. ಎಟುಕಿಸಿಕೊಳ್ಳು(ವುದು) ; ಹಿಡಿತ ; ಹಿಡಿದುಕೊ ; ಕೈಕುಲುಕು(ವುದು). ಯುದ್ಧ ಪದಕದ ಪಟ್ಟೆಯ ನವಾರಿನಮೇಲಿನ, ಸಂದರ್ಭಾಕ್ಷರ ಕೆತ್ತಿರುವ, ಬೆಳ್ಳಿಯ ಪಟ್ಟಿ ; (ಶೌರ್ಯಸೂಚಕ) ಬೆಳ್ಳಿಯ ಬಿರುದುಪಟ್ಟಿ. [C.-knife (ತೆರೆದಾಗ ಹಿಡಿದುಕೊಳ್ಳುವ ತಡೆಯುಳ್ಳ) ಮಡಿಚುಕತ್ತಿ]. (ಕ್ರಿ.) ಕೊಕ್ಕೆ ಹಾಕಿ, ಕೊಕ್ಕೆ ಹಾಕಿದಂತೆ, ಭದ್ರಪಡಿಸು ; ಕೊಕ್ಕೆ ಹಾಕು. ಸುತ್ತುವರಿ, ಅಪ್ಪಿ ಹಿಡಿದುಕೊ ; ತೆಕ್ಕೆಯಲ್ಲಿ ಸಿಕ್ಕಿಸಿಕೊ ; ತಬ್ಬಿಕೊ ; ಆಲಿಂಗಿಸು. (ಮತ್ತೊಬ್ಬನ ಕೈಯನ್ನು) ಹಿಡಿದುಕೊ (C. hands ಭಾವೋದ್ರೇಕದಿಂದ ಕೈಹಿಡಿದು ಕುಲುಕಿಸು. ಒಂದುಗೂಡು ; ಒಂದಾಗು. C one's hands ಕೈಯನ್ನು ಬೆರಳುಬೆರಳು ಸೇರಿಸಿ ಹಿಡಿದುಕೊ). **Clásper** (ನಾ.) (ಕ್ರಿಯಾರ್ಥಗಳಲ್ಲಿ). (ಬ. ವ. ದಲ್ಲಿ) ಕೆಲವು ಮೀನುಗಳಲ್ಲಿಯೂ ಕೀಟಗಳಲ್ಲಿಯೂ ಹೆಣ್ಣನ್ನು ಹಿಡಿದು ತಬ್ಬಿಕೊಳ್ಳುವುದಕ್ಕಾಗಿ ಇರುವ ಅಂಗಭಾಗಗಳು : ಆಲಿಂಗನಾಂಗ.

Class ಕ್ಲಾಸ್ (ನಾ., ಕ್ರಿ. ಸಕ.) ಸಮಾಜದ ಶ್ರೇಣಿ, ಅಂತಸ್ತು, ವರ್ಗ, ತರಗತಿ, ದರ್ಜೆ [(Higher, upper, middle, lower, working classes). The classes ಧನಿಕರು ಮತ್ತು ವಿದ್ಯಾವಂತರು (ಇವರ ಪ್ರತಿಪಂಗಡ : The masses ಸಾಮಾನ್ಯ ಮಂದಿ ; ಮಂದಿ). C.-conscious(ness) ವರ್ಗಬುದ್ಧಿ(ಯುಳ್ಳ) : ಮು., ಕೂಲಿಕಾರರಿಗೂ ಇತರ ವರ್ಗಗಳವರಿಗೂ ನಡೆಯುವ ಕಲಹಗಳಲ್ಲಿ ಭಾಗವಹಿಸುವುದು]. ಜಾತಿ. ವಿದ್ಯಾರ್ಥಿಗಳ ತರಗತಿ, ವರ್ಗ, ಪಾಠಗಳು, ಪಾಠ ಕಾಲ. (ಅಮೆ. ಸಂ.) ಎಲ್ಲ ಪ್ರೌಢಶಾಲೆಗಳ ಒಂದೇ ದರ್ಜೆಯ ವಿದ್ಯಾರ್ಥಿಗಳು. (C.-fellow, C.-mate ಸಹಪಾಠಿ ; ಸಹಾಧ್ಯಾಯಿ. C.-book ತರಗತಿಯ ಪಾಠಪುಸ್ತಕ). ವೈಶಿಷ್ಟ್ಯ ; ಉತ್ಕೃಷ್ಟತೆ ; ಉತ್ತಮ ಗುಣ. ಒಂದು ವರ್ಷದಲ್ಲಿ ಸೇನೆಗೆ ಸೇರಿದ ಒಟ್ಟು ಮಂದಿ (The 1917 c.). ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳ ತರ ತಮ ದರ್ಜೆ, ವರ್ಗ, ತರಗತಿ [Take a c. ಉತ್ಕೃಷ್ಟ ತರಗತಿಯಲ್ಲಿ ತೇರ್ಗಡೆ ಹೊಂದು ; ಘನ ವರ್ಗ ಪಡೆ. Classman ಘನ ವರ್ಗ ಪಡೆದವನು (ಇದಕ್ಕೆ ಪ್ರತಿ : Passman ಬರಿ ತೇರ್ಗಡೆ ಹೊಂದಿದವನು). C.-list ತೇರ್ಗಡೆಯ ತರಗತಿಯ ಪಟ್ಟಿ]. ಗುಣಾನುಸಾರವಾದ ವಿಭಾಗ [High (ಉಚ್ಚ), low (ನೀಚ), first (ಅವ್ವಲ್), second (ದುಯ್ಯಂ) c. No c. (ಅಸಂ.) ಬಹು ಕೀಳು]. ಯಾವುದಾದರೂ ಸಮಾನ ಗುಣವುಳ್ಳದ್ದರಿಂದ ಒಂದೇ ಹೆಸರಿರುವ ವಸ್ತುಗಳು, ಪ್ರಾಣಿಗಳು. ಪ್ರಾಣಿಕೋಟಿ, ಸಸ್ಯಕೋಟಿ, ಖನಿಜಕೋಟಿ —ಇವುಗಳ ವಿಭಾಗದಲ್ಲಿ ಪ್ರಧಾನ ವಿಭಾಗ : 'ವರ್ಗ' ; (C. ವರ್ಗ ; Order ತರಗತಿ ; Family ಕುಲ ; Genus ಜಾತಿ ; Species ವಂಶ ; Variety ಪ್ರಭೇದ). (ಕ್ರಿ.) ಒಂದು ತರಗತಿ, ಕುಲ, ಮೊ. ಗಳಲ್ಲಿ ಇಡು, ಸೇರಿಸು ; ತರಗತಿಗಳಾಗಿ ವಿಂಗಡಿಸು. **Clássable** (ಗು.) ; **Clássify** (ಕ್ರಿ. ಸಕ.) ತರಗತಿಗಳಾಗಿ ವಿಂಗಡಿಸು ; ಒಂದುಗೊತ್ತಾದ ತರಗತಿಗೆ ಸೇರಿಸು ; ವರ್ಗೀಕರಿಸು. **Clássifiable** (ಗು.) ತರಗತಿಗಳಾಗಿ ವಿಂಗಡಿಸಲಾಗುವ. **Classificátion** (ನಾ.) ವಿಂಗಡಿಕೆ ; ವರ್ಗೀಕರಣ. **Clássificatory** (ಗು.) ತರಗತಿಗಳಾಗಿ ವಿಂಗಡವಾಗುವ ; ತರಗತಿಗಳ ವಿಂಗಡಕ್ಕೆ ಸಂಬಂಧಪಟ್ಟ ; ವಿಂಗಡಿಕೆಯ. **Clássy** (ಗು.) (ಅಸಂ.) ಮೇಲ್ತರದ ; ಉತ್ತಮವಾದ.

Clássic ಕ್ಲ್ಯಾಸಿಕ್ (ಗು., ನಾ.) ಉತ್ತಮ ತರಗತಿಯ, ವರ್ಗದ ; ಪ್ರಥಮ ಶ್ರೇಣಿಯ ; ಉತ್ಕೃಷ್ಟ ; ಮೇಲ್ತರದ ; ಮೇಲ್ದರ್ಜೆಯ ; ಸರ್ವಾಂಗೀಕೃತವಾದ ; ಉತ್ತಮವಾದ. ಪುರಾತನ ಲ್ಯಾಟಿನ್ ಮತ್ತು ಗ್ರೀಕ್ ಕವಿಗಳ ಕಲೆಯ ಅಥವಾ ಸಂಸ್ಕೃತಿಯ. ಲ್ಯಾಟಿನ್ ಮತ್ತು ಗ್ರೀಕ್ ಪುರಾತನ ಸಂಸ್ಕೃತಿಗೆ ಸಂಬಂಧಪಟ್ಟ. ಸರಳವಾಗಿಯೂ ಸಮ ರಸವಾಗಿಯೂ ಸಂದರ್ಭೌಚಿತ್ಯವುಳ್ಳದ್ದಾಗಿಯೂ ಪರಿಷ್ಕೃತವಾಗಿಯೂ ಇರುವ ಶೈಲಿಯ (Romantic ಪದದ ಅರ್ಥದೊಡನೆ ಹೋಲಿಸಿನೋಡಿ). ಪ್ರಾಚೀನ ಸಾಹಿತ್ಯ ಸಂಬಂಧವುಳ್ಳ (C. ground). (The c. races ಇಂಗ್ಲೆಂಡಿನ ಸುಪ್ರಸಿದ್ಧವಾದ ಐದು ಕುದುರೆಯ ಜೂಜುಗಳು). (ನಾ.) ಉತ್ತಮವೆಂದು ಅಂಗೀಕರಿಸಿದ ಕಾವ್ಯ, ಕವಿ, ಗ್ರಂಥ, ಗ್ರಂಥಕರ್ತ. ಶ್ರೇಷ್ಠ ಸಾಹಿತ್ಯ ; ಶ್ರೇಷ್ಠ ಸಾಹಿತಿ, ಕವಿ ; ಮಹಾ ಕವಿ. ಪ್ರಾಚೀನ ಗ್ರೀಕ್ ಅಥವಾ ಲ್ಯಾಟಿನ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲೇಖಕ, ಕವಿ ; ಪಂಡಿತ. ಉತ್ತಮ ತರಗತಿಯ ಪ್ರಾಚೀನ ಮಾದರಿಗಳ ಅನುಯಾಯಿ : ಮಹಾ ಸಂಪ್ರದಾಯಾನುಸಾರಿ (Romantic ಪದದ ಅರ್ಥದೊಡನೆ ಹೋಲಿಸಿನೋಡಿ). (ಬ. ವ. ದಲ್ಲಿ) ಪುರಾತನ ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯ. (ಒಂದು ಭಾಷೆಯ) ಶ್ರೇಷ್ಠ ಸಾಹಿತ್ಯ, ಸಾಹಿತಿಗಳು, ಕವಿಗಳು. **Clássical** (ಗು.) ಮಾದರಿಯಾದ ; ಪ್ರಥಮ ವರ್ಗದ ; ಮೇಲ್ತರದ ; ಶ್ರೇಷ್ಠ ; ಹೆಸರುಪಡೆದ (ಮು., ಸಾಹಿತ್ಯದಲ್ಲಿ). ಪ್ರಾಚೀನ ಗ್ರೀಕ್ ಅಥವಾ ಲ್ಯಾಟಿನ್ ಮಾದರಿಯ ಗ್ರಂಥಕಾರರ, ಕಲೆಯ ; ಇವುಗಳಲ್ಲಿ ಪಾಂಡಿತ್ಯ ಪಡೆದ ; ಇವುಗಳ ಅಸ್ತಿಭಾರವುಳ್ಳ (C. education ಪ್ರಾಚೀನ ಲ್ಯಾಟಿನ್ ಮತ್ತು ಗ್ರೀಕ್ ವಿದ್ಯೆಯ ಶಿಕ್ಷಣ). ನಿಯಮಬದ್ಧವಾದ, ಪ್ರೌಢ ಪ್ರಾಚೀನ (ಮಿತವೂ ಸರಳವೂ ಗಂಭೀರವೂ ಆದ, ಆಡಂಬರವಿಲ್ಲದ) ಶೈಲಿಯ. **Clássicalism** (ನಾ.) = Classicism. **Classicálity**—ಕ್ಯಾಲಿಟಿ (ನಾ.) ; **Clássically** — ಕಲಿ (ಕ್ರಿ. ವಿ.) ; **Clássicism** (ನಾ.) ಪ್ರಾಚೀನ ಸಾಹಿತ್ಯದ ಅಥವಾ ಕಲೆಯ ಮಾರ್ಗ, ಅನುಸರಣ ; ಅದರಲ್ಲಿ ಪ್ರೌಢಿಮೆ. ಈ ವಿದ್ಯಾಭ್ಯಾಸ ಮಾಡಿಸಬೇಕೆಂಬ ವಾದ. ಪ್ರಾಚೀನ ಪ್ರೌಢ ಪ್ರಯೋಗ, ಭಾಷಾ ಮರ್ಯಾದೆ, ಭಾಷಾ ರೂಢಿ. **Clássicist** (ನಾ.) ; **Clássicize** (ಕ್ರಿ.) ಅತ್ಯುತ್ಕೃಷ್ಟವನ್ನಾಗಿ ಮಾಡು ; ಪ್ರಾಚೀನ ಗಂಭೀರ ಶೈಲಿಯನ್ನನುಸರಿಸು. **Classicólatry** ಕ್ಲ್ಯಾಸಿಕಾಲಟ್ರಿ (ನಾ.) ಪ್ರಾಚೀನ ಪ್ರೌಢ ಸಾಹಿತ್ಯಾರಾಧನೆ ; ಅದರಲ್ಲಿ ಅತ್ಯಾಸಕ್ತಿ, ಶ್ರದ್ಧೆ.

Clássify
Clássy } **Class** ನೋಡಿ.

Clástic ಕ್ಲ್ಯಾಸ್ಟಿಕ್ (ಗು.) (ಭೂ. ವಿ.) ಪ್ರಾಚೀನ ಶಿಲೆಗಳ ಚೂರುಗಳುಳ್ಳ (C. rocks ಚೂರುಗಲ್ಲಿನ ಬಂಡೆಗಳು). (ಅಂ. ರ. ಶಾ.) (ಪ್ರತಿಮೆಯ ವಿಷಯದಲ್ಲಿ) ಬೇರೆಬೇರೆಯಾಗಿ ಕಳಚಲಾಗುವ ಭಾಗಗಳಿಂದ ಕೂಡಿದ ; ಈ ತೆರದ ಪ್ರತಿಮೆಗೆ ಸಂಬಂಧಪಟ್ಟ.

Clátter ಕ್ಲ್ಯಾಟರ್ (ಕ್ರಿ., ನಾ.) (ತಟ್ಟೆಗಳು, ಮೊ. ವನ್ನು ಬಡಿಯುವಾಗ ಆಗುವಂಥ) ಲಟಪಟ ಧ್ವನಿ(ಮಾಡು) ; ಧಣಧಣ ಧ್ವನಿ(ಮಾಡು) ; ದಡಬಡಲು(ಮಾಡು) ; ಗದ್ದಲದ ಮಾತು ; ಹರಟೆಯ ಗೊಂದಲ. C. along, down ಗದ್ದಲಮಾಡುತ್ತ ಹೋಗು, ಬೀಳು ; ದಡಬಡಿಸು.

Clause ಕ್ಲಾಸ್ (ನಾ.) ಲಘು ವಾಕ್ಯ ; ಉಪ ವಾಕ್ಯ ; ವಾಕ್ಯಾಂಶ. (ವ್ಯಾ.) ಕರ್ತೃ ಕ್ರಿಯಾ ಪದಗಳಿಂದ ಕೂಡಿದುದಾಗಿ, ನಾಮವಾಚಕ, ಗುಣವಾಚಕ ಅಥವಾ ಕ್ರಿ. ವಿ. ದ ಕೆಲಸಮಾಡುವ ಪದಸಮುದಾಯ. (ಕೌಲು, ಕಾನೂನು, ಕರಾರು — ಇವುಗಳಲ್ಲಿಯ) ಒಂದು ಅಂಶ, ಷರತ್ತು, ಕಲಂ, ಒಳಪ್ರಕರಣ.

Claústral ಕ್ಲಾಸ್ಟ್ರಲ್ (ಗು.) ಸಂನ್ಯಾಸಿ ಮಠದ ; — ಮಠದಂಥ ; ಸಂನ್ಯಾಸಿ ಸಂಸ್ಥೆಯ. ವಿಶಾಲವಲ್ಲದ. ವಿವಿಕ್ತ.

Claustrophóbia ಕ್ಲಾಸ್ಟ್ರೊಫೋಬಿಯ (ನಾ.) ಮುಚ್ಚಿರುವ ಮನೆ, ಮೊ. ಸ್ಥಳಗಳ ವಿಷಯದಲ್ಲಿ ಅತಿ ಭೀತಿಪಡುವ ವ್ಯಾಧಿ : ಮುಚ್ಚುಮನೆಯ ಭೀತಿ.

Clávate ಕ್ಲೇವೇಟ್ (ಗು.) (ಸ. ವಿ., ಪ್ರಾ. ವಿ.) ಗದೆಯಂತೆ ತಲೆಭಾಗದ ಕಡೆಗೆ ದಪ್ಪವಾಗಿರುವ ; ಗದೆಯಾಕಾರದ.

Clávichord ಕ್ಲ್ಯಾವಿಕಾರ್ಡ್ (ನಾ.) ನುಡಿಸುವ ಕೀಲಿಗಳುಳ್ಳ ತಂತಿವಾದ್ಯಗಳಲ್ಲಿ ಆದಿವಾದ್ಯ ; 'ಪಿಯಾನೊ' ಎಂಬ ಈಗಿನ ಇಂಥ (ಯಂತ್ರ)ವಾದ್ಯಕ್ಕೆ ಆದಿಯಾದದ್ದು.

Clávicle ಕ್ಲ್ಯಾವಿಕ್‌ಲ್ (ನಾ.) ಕೊರಳಿನ ಎಲುಬು ; ಗ್ರೀವಾಸ್ಥಿ ; ಜತ್ರು.

Claw ಕ್ಲಾ (ನಾ., ಕ್ರಿ.) ಮೃಗದ ಕಾಲಿನ ಮೊನೆಯುಗುರು (Pare, cut, the claws of ನಿರಾಯುಧವಾಗಿ ಮಾಡು ; ಸೊಕ್ಕು ಮುರಿ) ; ಪಂಜ. ಚಿಪ್ಪುಮೀನಿನ ಚಿಮುಟಾಗಂ. (ತಿರಸ್ಕಾರ ಸೂಚಕವಾಗಿ) ಕೈ. ಹಿಡಿದುಕೊಳ್ಳುವ, ಹಿಡಿತಕ್ಕೆ ಸಿಕ್ಕಿಸಿಕೊಳ್ಳುವ, ಸಾಧನ (C.-hammer ಪೆಟ್ಟಿಗೆ, ಮೊ. ಗಳಲ್ಲಿಯ ಮೊಳೆಗಳನ್ನು ಕೀಳುವುದಕ್ಕೆ ಉಪಯೋಗಿಸುವ, ಸೀಳಿದ ಬಾಗುಕೊನೆಯುಳ್ಳ, ಸುತ್ತಿಗೆ : ಇಕ್ಕುಳ ಸುತ್ತಿಗೆ). (ಕ್ರಿ.) ಉಗುರುಗಳಿಂದ, ಕೈಗಳಿಂದ, ಪರಚು, ಹರಿದು ಕೀಳು, ಹಿಡಿದುಕೊ, ಬಳಿಗೆ ಸೆಳೆದುಕೊ (C. me and I'll c. thee ನನ್ನನ್ನು ನೀನು ಹೊಗಳು, ನಿನ್ನನ್ನು ನಾನು ಹೊಗಳುತ್ತೇನೆ). (ನೌಕ) ದಡಬಿಟ್ಟು ಗಾಳಿಗೆದುರಾಗಿ ನಡೆಸು, ಸಾಗು (ಸಾ., C. off)

Clay ಕ್ಲೇ (ನಾ.) ಜೇಡಿಮಣ್ಣು (ಇಟ್ಟಿಗೆ, ಮಡಕೆ, ಕುಡಿಕೆ, ಮೊ. ನ್ನು ಮಾಡುವುದಕ್ಕಾಗಿ ಉಪಯೋಗಿಸುವ ಪದಾರ್ಥ). (ರೂಪ.) ಮನುಷ್ಯದೇಹ(ದ ಜಡದ್ರವ್ಯ) ; ಮಣ್ಣು. (Wet, moisten, one's c. ಕುಡಿ). ಜೇಡಿಮಣ್ಣಿನ ಚುಂಗಾಣಿ (= C. pipe). Yard of c. ಉದ್ದವಾದ ಚುಂಗಾಣಿ. C.-cold ಮಣ್ಣಿನ ತಣ್ಪಿನ (ಹೆಣದ ವಿಷಯದಲ್ಲಿ). **Cláyey** ಕ್ಲೇಯಿ (ಗು.) ಜೇಡಿಮಣ್ಣಿನ, — ನಿಂದ ಮಾಡಿದ.

Cláymore ಕ್ಲೇಮೋರ್ (ನಾ.) ಇಕ್ಕಡೆಯ ಧಾರೆಯುಳ್ಳ ಅಗಲವಾದ ಪುರಾತನ ಸ್ಕಾಟ್ಲೆಂಡಿನ ಕತ್ತಿ : ಇಬ್ಬಾಯ ಕತ್ತಿ. (ತಪ್ಪಾಗಿ) ಸಾ., ಒಂದೇ ಧಾರೆಯ, ಬೆತ್ತಹೆಣೆದ ಹಿಡಿಯುಳ್ಳ ಅಗಲವಾದ ಕತ್ತಿ (೧೬ನೆಯ ಶತಮಾನದ್ದು)

Clean ಕ್ಲೀನ್ (ಗು.) ಶುಚಿಯಾದ ; ಚೊಕ್ಕಟವಾದ ; ತಿಳಿಯಾದ ; ಕೊಳೆಯಿಲ್ಲದ ; ಶುಭ್ರ ; ನಿರ್ಮಲ ; ಸ್ವಚ್ಛ ; ಪರಿಶುದ್ಧ. (ಬೈಬಲ್) ಮೈಲಿಗೆ, ರೋಗ, ಮೊ. ಗಳಿಂದಾದ ಅಶುಚಿ ಇಲ್ಲದ ; ಮಡಿಯಾದ ; ಶುಚಿರ್ಭೂತವಾದ. (ಮೃಗ, ಮೊ. ಗಳ ವಿಷಯದಲ್ಲಿ) ಆಹಾರಯೋಗ್ಯವಾದ (ಮು., C. fish ಮೊಟ್ಟೆಯಿಡುವ ಅಥವಾ ಇಟ್ಟ ಕಾಲದ್ದಲ್ಲದ ಮೀನು). ಕೊಳೆ ನಸಿಸದ (C. servant). ಅಂದವಾದ ಆಕಾರವುಳ್ಳ ; ಅಂಗಸೌಷ್ಠವವುಳ್ಳ (C.-limbed). ಚುರುಕಾದ ; ಚತುರ ; ತಪ್ಪುಮಾಡದ (C. fielding ಚೆಂಡಾಟದಲ್ಲಿ ತಪ್ಪುಮಾಡದೆ ಚತುರತೆಯಿಂದ ಚೆಂಡನ್ನು ಹಿಡಿಯುವುದು). ಸಮನಾದ ; ನೇರವಾದ ; ತಡೆಯಿಲ್ಲದ ; (ಕತ್ತರಿಸಿದಂತೆ) ಖಚಿತವಾಗಿರುವ ; ಸ್ಪಷ್ಟ ; ಸಂಪೂರ್ಣ (C. sweep ಪೂರ್ತಿ ಉಚ್ಚಾಟನೆ. C. timber ಗಂಟುಗಳಿಲ್ಲದ ಮರದ ದಿಮ್ಮಿ). C. bill (Bill^{3} ನೋಡಿ). C. breast (Breast ನೋಡಿ). C.-bred ಶುದ್ಧ ತಳಿಯ ; ಉತ್ತಮ ಜಾತಿಯ. C.-fingered ಲಂಚಕ್ಕೆ ಕೈಯೊಡ್ಡದ. Show c. pair of heels ಕಾಲಿಗೆ ಬುದ್ಧಿ ಹೇಳು ; ಕಂಬಿ ಕೀಳು ; ವೇಗವಾಗಿ ಓಡಿ ತಪ್ಪಿಸಿಕೊ. C. land ಕಳೆಯಿಲ್ಲದ ಜಮೀನು. C. proof ತಿದ್ದುಪಡಿಗಳಿಲ್ಲದ ಕರಡಚ್ಚು. C. slate (ರೂಪ.) ಯಾವ ದೇಣೆಯೂ ಇಲ್ಲದ ನಿರ್ಬಾಧಿತ ಸ್ಥಿತಿ. C. tongue ಶುದ್ಧವಾದ ನಾಲಗೆ ; ಭಂಡಮಾತನಾಡದ ಬಾಯಿ. **Cleánness** (ನಾ.) ; **Cleánly** ಕ್ಲೆನ್ಲಿ (ಗು.) ಸಹಜವಾಗಿಯೇ ಶುಚಿಯಾಗಿರುವ ; ಚೊಕ್ಕಟವಾದ ; ನೈರ್ಮಲ್ಯಕ್ಕೆ ಹೆಚ್ಚು ಗಮನ ಕೊಡುವ. (ಕ್ರಿ. ವಿ.) (ಕ್ಲೀನ್ಲಿ) ಶುಚಿಯಾಗಿ ; ಪರಿಶುದ್ಧವಾಗಿ. **Cleánlily** ಕ್ಲೆನ್ಲಿಲಿ (ಕ್ರಿ. ವಿ.) ; **Cleánliness** (ನಾ.)

Clean (ಕ್ರಿ. ವಿ.) ಚೊಕ್ಕಟವಾಗಿ ; ಶುದ್ಧವಾಗಿ ; ಸರಿಯಾಗಿ ; ಪೂರ್ತಿಯಾಗಿ ; ನಿಶ್ಶೇಷವಾಗಿ ; ಬುಡಮುಟ್ಟ ; ನುಣ್ಣಗೆ. C. bowled (ಕ್ರಿಕೆಟ್ ಆಟದಲ್ಲಿ) ಗುರಿಕೋಲು ಬಿದ್ದುಹೋಗುವಂತೆ ಎಸೆದ. C.-cut ಶುದ್ಧವಾಗಿ ಕತ್ತರಿಸಿದ ; ಖಚಿತವಾಗಿ ಕಡೆದಂತಿರುವ ; ಮಾಟವಾದ ; ಸ್ಪಷ್ಟವಾದ. Cut c. through ಒಂದೇ ಏಟಿಗೆ ಕತ್ತರಿಸಿಹಾಕು. C. mad ಶುದ್ಧ ಹುಚ್ಚು. C. wrong ಶುದ್ಧ ತಪ್ಪು.

Clean (ಕ್ರಿ. ಸಕ.) (ಕಸ, ಕಡ್ಡಿ, ಮೊ. ನ್ನು ತೆಗೆದುಹಾಕಿ) ಚೊಕ್ಕಟಮಾಡು. (ಊಟದ ತಟ್ಟೆಯನ್ನು) ಬರಿದುಮಾಡು. ತೊಳೆ ; ಬೆಳಗು ; ಕೊಳೆ ತೊಳೆ(ದುಕೊ) ; ಶುದ್ಧಮಾಡಿಕೊ ; ಶುದ್ಧವಾಗು ; — ಮಾಡು ; ನಿರ್ಮಲವಾಗು ; — ಮಾಡು (Also, c. up). C. down ದೂಳು ಹೊಡೆದು, ಒರಸಿ, ಚೊಕ್ಕಟಮಾಡು. C. out ಬರಿದುಮಾಡು ; ಸುಲಿ [ಮು., (ಅಸಂ.) ಒಬ್ಬನ ಹಣವನ್ನು]. C. up ವಸ್ತುಗಳನ್ನು ಅಣಿಯಾಗಿಡು, ಓರಣವಾಗಿಡು ; ಅಣಿಗೊಳಿಸು. (ಬಳ. ಮಾ.) ಆದಾಯವಾಗಿ ಅಥವಾ ಲಾಭವಾಗಿ ಪಡೆ. **Cleánable** (ಗು.) ; **Cleáner** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Clean (ನಾ.) ಚೊಕ್ಕಟ ಮಾಡುವುದು (Give it a c. ಅದನ್ನು ಚೊಕ್ಕಟ ಮಾಡು)

Cleanse ಕ್ಲೆನ್ಸ್ (ಕ್ರಿ. ಸಕ.) ಚೊಕ್ಕಟ ಮಾಡು ; ಶುದ್ಧಗೊಳಿಸು ; ತೊಳೆ ; ಬೆಳಗು. (ಪಾಪ, ಮೊ. ಗಳಿಂದ) ಶುದ್ಧಮಾಡು ; ಪುನೀತನನ್ನಾಗಿ ಮಾಡು. (ಬೈಬಲ್ : ಕುಷ್ಠರೋಗಿಗಳು, ಮೊ. ನ್ನು) ವಾಸಿಮಾಡು.

Clear ಕ್ಲಿಯರ್ (ಗು., ಕ್ರಿ. ವಿ.) ಸ್ವಚ್ಛ ; ನಿರ್ಮಲ ; ಮಬ್ಬಿಲ್ಲದ ; ಮೋಡ ವಿಲ್ಲದ ; ನಿರಭ್ರ ; ಪಾರದರ್ಶಕ ; ತಿಳಿಯಾದ ; ಕದಡಿಲ್ಲದ ; ಕಾಂತಿ ಗೂಡಿದ ; ತೊಳಗುವ ; ಬೆಳಗುವ ; ನಿಷ್ಕಳಂಕ (C. conscience ತಾನು ತಪ್ಪಿತಸ್ಥನಲ್ಲವೆಂಬ ಮನೋಭಾವನೆ ; ಶುದ್ಧಾಂತರಂಗ). ಸ್ಪಷ್ಟ ; ನಿಸ್ಸಂದೇಹ ; ಸ್ಫುಟ ; ವ್ಯಕ್ತ ; ಸುಲಭವಾಗಿ ತಿಳಿಯಬರುವ ; ತೊಡ ಕಿಲ್ಲದ ; ಗೋಜಿಲ್ಲದ (In c. ಸಂಕೇತ ಭಾಷೆಯಲ್ಲಾಗಲ ಲಪಿಯಲ್ಲಾಗಲ ಇರದೆ ; ಸ್ಪಷ್ಟವಾಗಿ). ಸೂಕ್ಷ್ಮವಿವೇಚನೆಯುಳ್ಳ ; ಮರ್ಮಭೇದಕ ; ತೀಕ್ಷ್ಣ (C.-sighted ಸ್ಪಷ್ಟದೃಷ್ಟಿಯ ; ಸೂಕ್ಷ್ಮಗ್ರಹಣಶಕ್ತಿಯುಳ್ಳ). ಧಾರವಸೆಯುಳ್ಳ ; ಖಂಡಿತ ; ನಿಸ್ಸಂಶಯ. ಸ್ಪಷ್ಟವಾಗಿ ಕೇಳಿಸುವ. ಒಳಪಡಿಹಾಕಿಕೊಳ್ಳದ ; ಕಡಮೆಮಾಡದ ; ಬಟುವಾದ ; ನಿವ್ವಳ. ಪೂರ್ತಿ ; ಸಂಪೂರ್ಣವಾದ (Three c. days ಪೂರ್ತಿ ಮೂರು ದಿನಗಳು). ತೊಲಗಿಸಿಕೊಂಡ ; ತೆರೆದಿರುವ ; ತಡೆಯಿಲ್ಲದ ; ನಿರು ಪಾಧಿಕ (Coast is c. ನಲೀಸಾಗಿದೆ ; ನಿರುಪಾಧಿಕವಾಗಿದೆ ; ಯಾರೂ ತಡೆಮಾಡುವಂತಿಲ್ಲ). ತೊಡಕಿಲ್ಲದ ; ಸಾಲಸೋಲಗಳಿಲ್ಲದ ; ನಿರ್ಬಾಧಕ. (ಕ್ರಿ. ವಿ.) ಸ್ಪಷ್ಟವಾಗಿ ; ಸ್ಫುಟವಾಗಿ (Speak loud and c. ಗಟ್ಟಿಯಾಗಿಯೂ ಸ್ಫುಟವಾಗಿಯೂ ಮಾತನಾಡು. C.-cut ಸಂದೇಹಕ್ಕೆ ಕಾರಣವಿಲ್ಲದಂತಿರುವ ; ನಿಷ್ಕೃಷ್ಟ ; ಸ್ಫುಟ. Show c., Shine c. ಸ್ಫುಟವಾಗಿ ತೋರು, — ಹೊಳೆ). ಪ್ರತ್ಯೇಕವಾಗಿ ; ಸ್ಪರ್ಶವಿಲ್ಲದೆ ; ದೂರವಾಗಿ ; ಬಿಟ್ಟು (Stand c. ಪ್ರತ್ಯೇಕವಾಗಿ ನಿಲ್ಲು. Steer c. ಹಡಗನ್ನು ಅಡಚಣೆ ತಪ್ಪಿಸಿಕೊಂಡು, ಬಂಡೆ, ಮೊ. ಕ್ಕೆ ತಗುಲದಂತೆ, ನಡಸು). **Cleárly** (ಕ್ರಿ. ವಿ.) ; **Cleárness** (ನಾ.) ಸ್ವಚ್ಛತೆ ; ತಿಳಿಮೆ ; ಪಾರದರ್ಶಕತೆ ; ಸ್ಪಷ್ಟತೆ ; ವ್ಯಕ್ತತೆ ; ಅನಿರೋಧತೆ ; ತಡೆ ಯಿಲ್ಲದಿರುವುದು.

Clear (ಕ್ರಿ.) ತಿಳಿಗೊಳಿಸು ; ತಿಳಿಯಾಗು ; ನಿರ್ಮಲ ಮಾಡು ; — ವಾಗು ; ನಿಷ್ಕಲಂಕ ಮಾಡು ; — ವಾಗು [C. the air ಸಕೆ ಯಿಲ್ಲದಂತೆ ಮಾಡು. (ರೂಪ.) ಸಂಶಯ, ಭಯ, ನಿರ್ಬಂಧ, ಮೊ. ನ್ನು ಪರಿ ಹರಿಸು. C. one's throat (ಮೆಲ್ಲಗೆ ಕೆಮ್ಮಿ) ಗಂಟಲು ಸರಿಮಾಡಿಕೊ]. ನಿರಪರಾಧಿಯೆಂದು ಸ್ಪಷ್ಟಗೊಳಿಸು, ಪ್ರತಿಪಾದಿಸು. ಅಡಚಣೆಯನ್ನು, ಅಡಚಣೆಯಿಂದ, ಪರಿಹಾರ ಮಾಡು ; ನಿರುಪಾಧಿಕ ಮಾಡು ; ನಿರ್ಬಾಧಿತ ಮಾಡು. (C. the decks for action ಯುದ್ಧಕ್ಕೆ ಸಿದ್ಧವಾಗು ; ಕಾಳಗಕ್ಕೆ ಅಣಿಮಾಡು. C. land ಆರಂಬಕ್ಕೆ ಮೊದಲು, ಜಮೀನಿನ ಲ್ಲಿರುವ ಮರ, ಮೊ. ನ್ನು ಕಡಿದುಹಾಕು. C. out of the way ದಾರಿ ಬಿಡು ; ದಾರಿ ಬಿಡಿಸು). ಕರಗಿಹೋಗು ; ಮಾಯವಾಗು (ಅಸಂ., ವ್ಯಕ್ತಿ ಗಳ ವಿಷಯದಲ್ಲ ಸಹ). ಬರಿದು ಮಾಡು ; ಬರಿದಾಗು ; ಖಾಲಿ ಮಾಡು ; ಖಾಲಿಯಾಗು. ತಾಕದೆ ದಾಟಿಹೋಗು (ಮು., ಎಗುರುವುದರಲ್ಲಿ) ; ಹಾರು ; ನೆಗೆ ; ಎಗುರು (C. six feet ಆರು ಅಡಿ ಹಾರು). (ನೌಕ.) ಸುಂಕ, ಮೊ. ಬಾಕಿಗಳನ್ನು ತೀರಿಸಿಬಿಟ್ಟು ಹಡಗನ್ನು ಬಿಡಿಸು. (ಹಡಗು) ಬಂದರು ಬಿಡು. (ಮುಂದೆ ಕೊಡಬೇಕಾದ ಚೆಕ್ಕುಗಳನ್ನು) ಒಂದೇ ಗಂಟಿನಲ್ಲಿ ಕೊಟ್ಟುಬಿಡು ; ಸಾಲ ತೀರಿಸಿಬಿಡು ; (ಒಂದು ಮೊತ್ತವನ್ನು) ನಿವ್ವಳ ಆದಾಯವಾಗಿ ಸಂಪಾದಿಸು. C. away ತೊಲಗು ; ತೊಲಗಿಸು ; ಮೇಜಿನಿಂದ ಊಟದ ವಸ್ತುಗಳನ್ನು ತೆಗೆದುಬಿಡು. (ಕಾವಳ, ಮೊ.) ತೇಲಿಹೋಗು, ತಿಳಿಯಾಗು. C. off ತೊಲಗಿಸಿಕೊ ; ಮಾಯವಾಗು. (ಕರೆಯದೆ ಬಂದವರ ವಿಷಯದಲ್ಲಿ) ತೊಲಗು, ಹೊರಟು ಹೋಗು. C. out ಬರಿದುಮಾಡು ; ಖಾಲಿಮಾಡು ; ಅಪಹರಿಸಿಕೊಂಡು ಓಡಿಹೋಗು. C. up (ತೊಡಕು) ಬಿಡಿಸು ; ಚೊಕ್ಕಟಮಾಡು ; ಓರಣ ಗೊಳಿಸು. (ವಾಯುಸ್ಥಿತಿ, ಮೊ.) ಸ್ವಚ್ಛವಾಗು, ತಿಳಿಯಾಗು : ಪ್ರಸನ್ನ ವಾಗು. **Cleárance** ಕ್ಲಿಯರನ್ಸ್ (ನಾ.) ನಿರ್ಮಲಗೊಳಿಸುವುದು ; ಸ್ಫುಟಗೊಳಿಸುವುದು ; ನಿರ್ಮಲೀಕರಣ, ಅಡ್ಡಿ ಅಡಚಣೆಗಳನ್ನು ತಪ್ಪಿ ಸುವುದು ; ಪ್ರತಿಬಂಧಕವಿಲ್ಲದಂತೆ ಮಾಡುವುದು. ಹುಂಡಿತೀರಿಕೆಯ ವ್ಯಾಪಾರಗೃಹದಲ್ಲಿ ಹುಂಡಿಗಳ ಲೆಕ್ಕವನ್ನು ಬಗೆಹರಿಸುವುದು : ಹುಂಡಿ ತೀರಿಕೆ, ತೀರುವೆ. ಹಡಗಿನ ಸುಂಕ ತೀರಿಸುವುದು : ಸುಂಕ ತೀರಿಕೆ ; ಸುಂಕತೀರಿಕೆಯ ಚೀಟಿ. ಸರ್ಕಾರದ ಉದ್ಯೋಗವನ್ನು ಬಿಟ್ಟು ಹೋಗಲು ಅಪ್ಪಣೆ. (ಯಂತ್ರಶಾಸ್ತ್ರ) ಯಂತ್ರದ ಚಲಿಸುವ ಎರಡು ಭಾಗಗಳ ಮಧ್ಯೆ ಬಿಟ್ಟಿರುವ ಅವಕಾಶ ; ತೆರಪು. C. sale ಸರಕುತೀರಿಕೆಯ ಮಾರಾಟ. **Cleáring** (ನಾ.) (ಕ್ರಿಯಾರ್ಥಗಳಲ್ಲ). ಕಾಡು ಕಡಿದು ಆರಂಬಕ್ಕೆ ಸಿದ್ಧಮಾಡಿದ ಪ್ರದೇಶ. C. hospital (ಯುದ್ಧದಲ್ಲಿ ಗಾಯ ಪಡೆದವರನ್ನೂ ಕಾಯಿಲೆಬಿದ್ದವರನ್ನೂ ಹಂಗಾಮಿಯಾಗಿಟ್ಟುಕೊಂಡಿದ್ದು ಉಪಚರಿಸುವುದಕ್ಕಾಗಿ ಏರ್ಪಡಿಸಿರುವ) ಯುದ್ಧರಂಗದ ವೈದ್ಯಶಾಲೆ. C.-House (ಲಂಡನ್ನಿನಲ್ಲಿ) ಹಣವ್ಯಾಪಾರಿಗಳ ಒಂದು ಕೇಂದ್ರಸಂಸ್ಥೆ (ಇಲ್ಲಿ ಸಾಲದ ಹುಂಡಿಗಳು, ದರ್ಶನ ಹುಂಡಿಗಳು, ಮೊ. ನ್ನು ಮಾರುವೆ ಮಾಡಿ, ಬಾಕಿಯಾಗುವ ಮೊತ್ತವನ್ನು ಮಾತ್ರ ನಗದಾಗಿ ಕೊಡುವರು) : ತೀರುವೆ ಮನೆ.

Cleat ಕ್ಲೀಟ್ (ನಾ.) ಬೆಣೆ ; ಗೂಟ. (ನಾವೆ) ಹತ್ತಿಹೋಗುವುದಕ್ಕೆ ಅಥವಾ ಹಗ್ಗ ಸರಿದುಹೋಗದಂತೆ ಸುತ್ತುವುದಕ್ಕೆ ತೊಲೆ, ದಿಮ್ಮಿ, ಗೋಡೆ, ಮೊ. ಗಳಲ್ಲಿ ಹೊಡೆದು ಚಾಚಿಕೊಂಡಿರುವ ಮರದ ಅಥವಾ ಕಬ್ಬಿಣದ ಗೂಟ.

Cleave[1] ಕ್ಲೀವ್ (ಕ್ರಿ. ; ಭೂತ Clove or Cleft ಕ್ಲೋವ್, ಕ್ಲೆಫ್ಟ್ ; ಭೂ. ಕೃ. Cloven or Cleft) ಸೀಳು (ಸಾ., C. asunder, in two ಎರಡಾಗಿ ಸೀಳು) ; ಕತ್ತರಿಸು ; ಹೋಳುಮಾಡು ; ಒಡೆ ; ಬಿರಿ ; ಸೀಳಿ ಹೋಗು (ಮು., ಸೀಳುಗೆರೆಯಲ್ಲಿ ಅಥವಾ ಎಳೆಗಳ ಗೆರೆಯಲ್ಲಿ). [Cleft palate ಸೀಳಿದ ಅಂಗುಳು (ಇದು ಬಾಯಲ್ಲಿಯ ಒಂದು ವಿಕಾರ ರಚನೆ). In a cleft stick (ಮುಂದಕ್ಕೆ ಹೋಗುವುದಕ್ಕಾಗಲ ಹಿಂದಕ್ಕೆ ಸರಿಯು ವುದಕ್ಕಾಗಲ ಅವಕಾಶವಿಲ್ಲದ) ಇಕ್ಕಟ್ಟಿನಲ್ಲಿ, ಇರುಕಿನಲ್ಲಿ. Cloven hoof ಮೆಲುಕು ಹಾಕುವ ಮೃಗಗಳ ಸೀಳಿದ ಕಾಲ್ಗೊರಸು ; ಸೀಳುಗೊರಸು. 'ಪ್ಯಾನ್' ಎಂಬ ದೇವತೆಯ, ಸೈತಾನಿನ, ಸೀಳಿದ ಕಾಲ್ಗೊರಸು. Show the cloven hoof ದುಷ್ಟ, ನೀಚ, ಸ್ವಭಾವವನ್ನು ತೋರಿಸಿಕೊ]. (ನೀರು, ಗಾಳಿ, ಮೊ. ನ್ನು) ಭೇದಿಸಿಕೊಂಡು ನುಗ್ಗು ; ಭೇದಿಸು. **Cleávable** (ಗು.) ; **Cleávage** ಕ್ಲೀವೆಜ್ (ನಾ.) (ಖನಿಜಪದಾರ್ಥ, ಪಂಗಡ, ಅಭಿಪ್ರಾಯ, ರಾಷ್ಟ್ರ — ಇವು) ಸೀಳಿಹೋಗುವ, ಒಡೆದು ಹೋಗುವ, ಬೇರೆಯಾಗುವ, ರೀತಿ, ಮಾರ್ಗ ; ಒಡಕು ; ಭೇದ (Lines of c. ಸೀಳುಗೆರೆಗಳು. Planes of c. ಸೀಳುಪದರಗಳು). **Cleáver** (ನಾ.) (ಕ್ರಿಯಾರ್ಥಗಳಲ್ಲ). (ಕಟುಕರು ದನ, ಮೊ. ಗಳ ಅಟ್ಟೆಗಳನ್ನು ಕತ್ತರಿಸಲು ಉಪಯೋಗಿಸುವ) ಕಡಿಗತ್ತಿ.

Cleave[2] ಕ್ಲೀವ್ (ಕ್ರಿ. ಅಕ. ; ಭೂತ. Cleaved or Clave ಕ್ಲೇವ್ ; ಭೂ. ಕೃ. Cleaved) ಭದ್ರವಾಗಿ ಅಂಟಿಕೊ ; ಹತ್ತಿಕೊ ; ಕಚ್ಚಿ ಕೊಂಡಿರು. ('ನೆಚ್ಚಿಕೊಂಡಿರು' ಎಂಬ ರೂಪಕಾರ್ಥದಲ್ಲಿ ವಿನಾ, ಪ್ರಾಚೀ. ಪ್ರ.)

Cleávers ಕ್ಲೀವರ್ಸ್, **Clívers** ಕ್ಲಿವರ್ಸ್ (ನಾ., ಬ. ವ., ಅಥವಾ, ಏ. ವ.) ಸೂಕ್ಷ್ಮವಾದ ಕೊಕ್ಕೆಮುಳ್ಳುಗಳಿರುವ ಮೈಯುಳ್ಳ ಒಂದು ಜಾತಿಯ ಬಳ್ಳಿ (ಇದರ ಮುಳ್ಳು ಬೇಲಿಗೂ ಇತರ ಗಿಡಗಳಿಗೂ ಬಟ್ಟೆಗಳಿಗೂ ಸಿಕ್ಕಿಕೊಳ್ಳುತ್ತದೆ)

Cleek ಕ್ಲೀಕ್ (ನಾ.) ಕಬ್ಬಿಣದ ತಲೆಯ ಗಾಲ್ಫ್‌ದಾಂಡು.

Clef ಕ್ಲೆಫ್ (ನಾ.) ಗಾನಲೇಖನದಲ್ಲಿ ಸ್ವರಪರಿಮಾಣವನ್ನು ನಿರ್ದೇಶಿ ಸುವ ಮೂರು ಸಂಜ್ಞೆಗಳಲ್ಲಿ ಒಂದು.

Cleft[1] ಕ್ಲೆಫ್ಟ್ (ನಾ.) ಬಿರುಕು ; ಒಡಕು ; ಸೀಳು ; ಸಂದು.

Cleft[2] ಕ್ಲೆಫ್ಟ್ (ಕ್ರಿ.) Cleave[1] ಧಾತುವಿನ ಭೂತ., ಭೂ. ಕೃ.

Cleg ಕ್ಲೆಗ್ (ನಾ.) ಬೂದಿಬಣ್ಣದ ಒಂದು ಜಾತಿಯ ದೊಡ್ಡ ನೊಣ.

Cleistogámic ಕ್ಲೈಸ್ಟೊಗ್ಯಾಮಿಕ್ (ಗು.) (ಸ. ವಿ.) (ಕೆಲವು ಪುಷ್ಪಜಾತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಲ್ಲಿ) ಅರಳದೆಯೇ ಮುಚ್ಚಿಕೊಂಡಿದ್ದು, ಹೊರ ಸಂಪರ್ಕವಿಲ್ಲದೆಯೇ ತಾನಾಗಿ ಗರ್ಭಧಾರಣೆ ಮಾಡಿಕೊಳ್ಳುವ ; ಸ್ವಯಂ ಗರ್ಭಧಾನಿ.

Clem ಕ್ಲೆಂ, **Clam** ಕ್ಲ್ಯಾಂ (ಕ್ರಿ.) (ಪ್ರಾಂತಿಕ ಪ್ರಯೋಗ) ಹಸಿವು ಬಾಯಾರಿಕೆಗಳಿಂದ ಬಡವಾಗು, ಬಡವಾಗಿಸು ; ತಿಂಡಿ ತೀರ್ಥಗಳಿಲ್ಲದೆ ಬಳಲಿಹೋಗು, ಬಳಲಿಸು.

Clématis ಕ್ಲೆಮಟಿಸ್ (ನಾ.) ಹಬ್ಬುಪೊದೆಗಳ ಒಂದು ಜಾತಿ (ಬ್ರಿಟನ್ನಿನ ಒಂದು ಕಾಡುಜಾತಿ)

Clémency ಕ್ಲೆಮೆನ್ಸಿ (ನಾ.) ಮೃದು ಸ್ವಭಾವ. ವಾಯುಸ್ಥಿತಿಯ ಸೌಮ್ಯತೆ. ದಯೆ ; ಕೃಪೆ ; ಕ್ಷಮೆ ; ಪ್ರಸಾದ ; ಪ್ರಸನ್ನತೆ. **Clément** (ಗು.) ಶಾಂತ ; ಪ್ರಸನ್ನ ; ಮೃದು ; ಸೌಮ್ಯ ; ಕ್ಷಮಾಶೀಲ.

Clench ಕ್ಲೆನ್ಷ್, **Clinch** ಕ್ಲಿನ್ಷ್ (ಕ್ರಿ., ನಾ.) ಪೂರಾ ಹೊಡೆದ ಮೊಳೆಯ, ಅಥವಾ ಲೋಹಬಂಧನಿಯ, ಮೊನೆಯ ಭಾಗವನ್ನು ಪಕ್ಕಕ್ಕೆ ಬಗ್ಗಿಸಿ ಭದ್ರಪಡಿಸು : ಮೊನೆಮಡಿಚು. (೧) ಹಲ್ಲು ಕಚ್ಚು ; ಮುಷ್ಟಿ ಹಿಡಿ ; ಬಿಗಿಹಿಡಿ. (೨) ಭದ್ರವಾಗಿ ಹಿಡಿದುಕೊ (೧, ೨, Clench ಪದಕ್ಕೆ ಮಾತ್ರ). (೩) (ಜಟ್ಟಿಗಳ ವಿಷಯದಲ್ಲಿ) ಪೂರಾ ಕೈನೀಡಿ ಗುದ್ದಲಾಗದಷ್ಟು ಹತ್ತಿರಕ್ಕೆ ಬರು (೩ನೆಯದು Clinch ಪದಕ್ಕೆ ಮಾತ್ರ). (ನೌಕ.) (ಹಗ್ಗವನ್ನು) ಒಂದು ಬಗೆಯ ಕುಣಿಕೆ ಹಾಕಿ ಬಿಗಿಸು. (ವಾದವನ್ನು, ವ್ಯಾಪಾರವನ್ನು) ನಿಷ್ಕರ್ಷೆಯಾಗಿ ತೀರ್ಮಾನಿಸು.

Cléncher. Clincher ನೋಡಿ.

Cleopátra's neédle ಕ್ಲಿಯೊಪೇಟ್ರಸ್ ನೀಡ್‌ಲ್ (ನಾ.) ಇಂಗ್ಲೆಂಡಿನ ತೇಮ್ಸ್‌ನದಿಯ ಕಟ್ಟೆಯಮೇಲಿರುವ, ಈಜಿಪ್ಟಿನಿಂದ ತಂದ, ಚೌಮೂಲೆಯ ಸೂಚ್ಯಾಕಾರದ, ಸ್ಮಾರಕ ಸ್ತಂಭ. (ಇದಕ್ಕೂ 'ಕ್ಲಿಯೊಪೇಟ್ರ' ಎಂಬ ರಾಣಿಗೂ ಯಾವ ಸಂಬಂಧವೂ ಇಲ್ಲ)

Clépsydra ಕ್ಲೆಪ್ಸಿಡ್ರ (ನಾ.) ನೀರೋಟದಿಂದ ನಡೆಯುವ ಪುರಾತನ ಕಾಲದ ಒಂದು ಗಡಿಯಾರ : ನೀರ್ಗಡಿಯಾರ.

Clérestory ಕ್ಲಿಯರ್‌ಸ್ಟೋರಿ (ನಾ) ದೊಡ್ಡ ಕ್ರೈಸ್ತ ದೇವಾಲಯದ ಪಕ್ಕಪಡಸಾಲೆಗಳ ಛಾವಣಿಯಮೇಲೆ ಎದ್ದು ಒಳಹಜಾರಕ್ಕೆ ಬೆಳಕು ಬೀಳುವಂತೆ ಕಿಟಕಿಯ ಸಾಲುಳ್ಳ ಗೋಡೆಗಳಿರುವ ಭಾಗ.

Clérgy ಕ್ಲರ್ಜಿ (ನಾ.) ಕ್ರೈಸ್ತ ಪುರೋಹಿತ ವರ್ಗ ; ಪುರೋಹಿತ ವರ್ಗ ; ವೈದಿಕರು ; ಮತಸಂಸ್ಕಾರಗಳನ್ನು ನಡಸಲು ದೀಕ್ಷೆಹೊಂದಿದವರು ; ಪಾದ್ರಿಗಳು [The c. (ಕ್ರೈಸ್ತ) ಪುರೋಹಿತರು, ಪಾದ್ರಿಗಳು (ಇದಕ್ಕೆ ಸಾ., ಬ. ವ. ಕ್ರಿಯೆ). A c. ಒಂದು ದೇಶದ ಅಥವಾ ಮತದ ಕ್ರೈಸ್ತ ಪುರೋಹಿತರು, ಪಾದ್ರಿಗಳು (ಇದಕ್ಕೆ ಸಾ., ಏ. ವ. ಕ್ರಿಯೆ)]. (ಚರಿತ್ರೆ) ಕ್ರೈಸ್ತ ಪುರೋಹಿತ ಮಂಡಲಿಯ ಸದಸ್ಯತ್ವ ; ಈ ಮಂಡಲಿಯ ಯೋಗ್ಯತೆಗೆ ತಕ್ಕ ಪಾಂಡಿತ್ಯ, ಅರಿವು [Benefit of c. ಕ್ರೈಸ್ತ ಪುರೋಹಿತ ಮಂಡಲಿಗಿರುವ ವಿಶೇಷ ಹಕ್ಕುಗಳು (ಲೌಕಿಕ ನ್ಯಾಯಸ್ಥಾನಗಳ ವಿಚಾರಣೆಯಿಂದ ವಿನಾಯತಿ, ಮೊದಲನೆಯ ಅಪರಾಧಕ್ಕೆ ಶಿಕ್ಷೆ ಮಾಫಿ)]. **Clérgyman** — ಮ್ಯನ್ (ನಾ.) (ಮು., ರಾಜ್ಯಸ್ಥಾಪಿತ ಮತದ) ಸಂಸ್ಕಾರಪಡೆದ, ದೀಕ್ಷೆಹೊಂದಿದ, ಪುರೋಹಿತ. **Clérgywoman** (ನಾ.) ಪಾದ್ರಿಯ ಹೆಂಡತಿ, ಮಗಳು, ಮೊ.

Cléric ಕ್ಲೆರಿಕ್ [ಗು. (ಪ್ರಾಚೀ. ಪ್ರ.), ನಾ.] ಪಾದ್ರಿ(ಯ). **Clérical** (ಗು., ನಾ.) ಕ್ರೈಸ್ತ ಪುರೋಹಿತ ವರ್ಗದ ; ಪಾದ್ರಿಯ ; ಪಾದ್ರಿಗಳ ; ಗುಮಾಸ್ತನ(ರ) ; ಗುಮಾಸ್ತ(ರು) ಮಾಡಿದ (C. error ಬರವಣಿಗೆಯ ತಪ್ಪು ; ಕೈತಪ್ಪು. C. duties ಗುಮಾಸ್ತೆಯ ಕರ್ತವ್ಯಗಳು. C. staff ಗುಮಾಸ್ತ ವರ್ಗ ; ಗುಮಾಸ್ತರುಗಳು). (ನಾ.) (ಪಾರ್ಲಿಮೆಂಟ್, ಮೊ. ಗಳಲ್ಲಿ) ವೈದಿಕ ಪಕ್ಷದ ಸದಸ್ಯ. **Clericalism** (ನಾ.) ಪೌರೋಹಿತ ನಿಯಮಗಳು ; ಪುರೋಹಿತ ಪಕ್ಷಪಾತ. **Clericalist** (ನಾ.) ; **Clericalize** (ಕ್ರಿ. ಸಕ.) ; **Clericálity** — ಕ್ಯಾಲಿಟಿ (ನಾ.) — ಸ್ವಭಾವ ; — ಗುಣ ; — ಸ್ಥಿತಿ. **Clérically** (ಕ್ರಿ. ವಿ.)

Clerk ಕ್ಲಾರ್ಕ್, ಕ್ಲರ್ಕ್ (ನಾ.) ಪಾದ್ರಿ (= C. in holy orders) (ಪ್ರಾಚೀ. ಪ್ರ., ನ್ಯಾ. ಶಾ. : ಬರಹಗಾರನ ಸ್ಥಾನಮಾನವನ್ನು ತಿಳಿಸುವುದಕ್ಕಾಗಿ ಕೆಲವು ಸಂದರ್ಭಗಳಲ್ಲಿ ಸಹಿಯೊಡನೆ ಸೇರಿಸಿ ಬರೆಯುವ ಪದ). ಗ್ರಾಮದ ಕ್ರೈಸ್ತಮಂದಿರದಲ್ಲಿ ಬಗೆಬಗೆಯ ಕಾರ್ಯಗಳುಳ್ಳ ಲೌಕಿಕಾಧಿಕಾರಿ. ಪಂಡಿತ [No great c. ಅಷ್ಟೇನೂ ದೊಡ್ಡ ಪಂಡಿತನಲ್ಲ (ಪ್ರಾಚೀ. ಪ್ರ.)]. (ಒಂದು ಕಚೇರಿಯ) ದಫ್ತರದ ಅಧಿಕಾರಿ. (ಪೌರ ಸಂಸ್ಥೆ, ಮೊ. ಗಳ) ಕಾರ್ಯದರ್ಶಿ (Town c. ಸಾ., ಒಬ್ಬ ನ್ಯಾಯವಾದಿ). ಬ್ಯಾಂಕು, ಕಚೇರಿ, ಅಂಗಡಿ, ಮೊ. ಗಳಲ್ಲಿ ದಾಖಲೆ ಬರೆಯುವುದು, ಪತ್ರಗಳನ್ನು ನಕಲುಮಾಡುವುದು, ಲೆಕ್ಕ ಇಡುವುದು — ಇವೇ ಮೊ. ಕೆಲಸಗಳನ್ನು ಮಾಡಲು ನಿಯಮಿತನಾದವನು : ಗುಮಾಸ್ತೆ ; ಕಾರಕೂನ. [(ಕ್ಲರ್ಕ್) ಅಮೆ. ಸಂ., ಬಳ. ಮಾ.] ಅಂಗಡಿಯ ವ್ಯಾಪಾರ ಸಹಾಯಕ ಗುಮಾಸ್ತೆ. C. of the Weather ಮೂರ್ತೀಕೃತ ಪವನಶಾಸ್ತ್ರ. C. of the works ಗುತ್ತಿಗೆಗೆ ತೆಗೆದುಕೊಂಡು ಕಟ್ಟುವ ಕಟ್ಟಡಗಳಲ್ಲಿ ಸಾಮಾನು, ಮೊ. ನ್ನು ಮೇಲ್ವಿಚಾರಣೆ ನೋಡಿಕೊಳ್ಳುವ ನೌಕರ : ಕಟ್ಟಡದ ಸಾಮಾನು ಗುಮಾಸ್ತ. **Clérkdom** (ನಾ.) ಗುಮಾಸ್ತೆಯ ಸ್ಥಾನಮಾನ ಅಥವಾ ಕರ್ತವ್ಯಗಳು. (ಸಮುದಾಯದಲ್ಲಿ) ಗುಮಾಸ್ತರು. **Clérkess** ಗುಮಾಸ್ತಳು. **Clérkship** (ನಾ.) ಗುಮಾಸ್ತಗಿರಿ. ಪುಸ್ತಕ ಪಾಂಡಿತ್ಯ. **Clérkly** (ಗು.) ಗುಮಾಸ್ತಗಿರಿಯ, ಪುಸ್ತಕ ಪಾಂಡಿತ್ಯದ (ಪ್ರಾಚೀ. ಪ್ರ.). ಬರೆವಣಿಗೆಯಲ್ಲಿ ಚತುರನಾದ.

Cléver ಕ್ಲೆವರ್ (ಗು.) ಜಾಣತನದ ; ಚತುರತೆಯುಳ್ಳ ; ಚಾಕಚಕ್ಯವುಳ್ಳ ; ಚುರುಕಾದ ; ಚಟುವಟಿಕೆಯುಳ್ಳ ; ಕುಶಲ ; ದಕ್ಷ ; ನಿಪುಣ ; ಪ್ರವೀಣ ; ಯುಕ್ತಿವಂತನಾದ ; ಬುದ್ಧಿವಂತನಾದ. **Cléverish** (ಗು.) ಸ್ವಲ್ಪ ಬುದ್ಧಿವಂತನಾದ. **Cléverly** (ಕ್ರಿ. ವಿ.) ; **Cléverness** (ನಾ.)

Clew ಕ್ಲ್ಯೂ, ಕ್ಲೂ (ನಾ., ಕ್ರಿ. ಸಕ.) ದಾರದ ಉಂಡೆ. [(ಪುರಾಣದ ಕಥೆ) ಚಕ್ರವ್ಯೂಹದ ಕೋಟೆಯಂಥ ತೊಡಕುದಾರಿಯಲ್ಲಿ ಮಾರ್ಗತಿಳಿಯುವುದಕ್ಕಾಗಿ ಉಪಯೋಗಿಸುತ್ತಿದ್ದ ದಾರದ ಉಂಡೆ] : ಸುಳುದಾರ. = Clue. (ನೌಕ) ಮಲಗುವ ಉಯ್ಯಾಲೆಯನ್ನು ತೂಗಕಟ್ಟುವ ಸಣ್ಣ ಹುರಿಗಳು.

Clíche (F) ಕ್ಲಿ(ೀ)ಷೇ (ನಾ.) (ಮುದ್ರಣದ ಮೊಳೆಗಳನ್ನು ಜೋಡಿಸಿ ಮಾಡಿದ ಪುಟದ, ಅಥವಾ ಮರದಮೇಲೆ ಕೊರೆದುಮಾಡಿದ ಚಿತ್ರದ, ಪಡಿಯಚ್ಚನ್ನು ಬೇರೆತಗಡಿನಮೇಲೆ ವಿದ್ಯುತ್ತಿನಿಂದಾಗಲಿ ಇತರ ರೀತಿಯಿಂದಾಗಲಿ ತೆಗೆದು ಮುದ್ರಿಸಲು ಅನುಕೂಲಪಡಿಸಿದ) ಮುದ್ರಣದ ತಗಡು, ಅಚ್ಚಿನ ಹಲಗೆ. (ರೂಪ.) ಬಳಸಿ ಬಳಸಿ ಹಳೆಯದಾಗಿರುವ ಗ್ರಾಂಥಿಕ ವಾಕ್ಯ ; ಚರ್ವಿತ ಚರ್ವಣ ; ಹಳಸಲು ನುಡಿ.

Click[1] ಕ್ಲಿಕ್ (ನಾ., ಕ್ರಿ. ಅಕ.) (ಬಂದೂಕಿನ ಕುದುರೆ ಮಾಡುವ ಶಬ್ದದಂತೆ) ಥಟ್ಟನೆಯ ತೀಕ್ಷ್ಣ ಶಬ್ದ(ಮಾಡು) : 'ಕ್ಲಿಕ್'(ಎನ್ನು). ಯಂತ್ರ ಭಾಗಗಳಲ್ಲಿ 'ಕ್ಲಿಕ್' ಶಬ್ದ ಮಾಡುವ ಬಂಧನಿ. (ಕುದುರೆಯ ವಿಷಯದಲ್ಲಿ) ಹಿಂಗಾಲು ಮುಂಗಾಲುಗಳ ಲಾಳಗಳು ಒಂದಕ್ಕೊಂದು ತಗುಲು(ವುದು)

Click[2] ಕ್ಲಿಕ್ (ಕ್ರಿ. ಅಕ.) (ಅಸಂ.) ಅದೃಷ್ಟ ಖುಲಾಯಿಸು, ಒದಗಿಬರು ; ಉದ್ದೇಶ ಈಡೇರು ; ಕೆಲಸ ಕೈಗೂಡು. (ಅಸಂ.) (ಇಬ್ಬರ ವಿಷಯದಲ್ಲಿ) ಹೊಂದಿಕೊಂಡುಹೋಗು ; ಒಬ್ಬರಲ್ಲೊಬ್ಬರು ಪ್ರೇಮಗೊಳ್ಳು.

Clíent ಕ್ಲೈಎಂಟ್ (ನಾ.) (ರೋಮನ್ ಪ್ರಾಚೀನತೆ) ಶ್ರೀಮಂತನ ರಕ್ಷಣೆಯಲ್ಲಿರುವ ಸಾಮಾನ್ಯ ಪ್ರಜೆ. (ಪ್ರಾಚೀ. ಪ್ರ.) ಆಶ್ರಿತ ; ಅವಲಂಬಿ ; ಉಪಜೀವಿ. ನ್ಯಾಯವಾದಿಯನ್ನು ತನ್ನ ಸಹಾಯಕ್ಕಾಗಿ ನಿಯಮಿಸಿಕೊಳ್ಳುವವನು ; ಕಕ್ಷಿಗಾರ. ಯಾವ ಕಸಬುಗಾರನನ್ನಾಗಲಿ ತನ್ನ ಸಹಾಯಕ್ಕಾಗಿ ನಿಯಮಿಸಿಕೊಳ್ಳುವವನು ; ಗಿರಾಕಿ. **Clíentage** (ನಾ.) ಕಕ್ಷಿಗಾರರು ; ಗಿರಾಕಿಗಳು ; ಆಶ್ರಿತನಿಗೂ ಆಶ್ರಯದಾತನಿಗೂ ಇರುವ ಸಂಬಂಧ. **Clíentship** ಕಕ್ಷಿಗಾರತನ ; ಗಿರಾಕಿತನ. **Clíentless** (ಗು.) ; **Clíentele** — ಟೀಲ್, — ಟೆಲ್ (ನಾ.) ಆಶ್ರಿತರು ; ಅನುಯಾಯಿಗಳು ; ಅವಲಂಬಿಗಳು ; ಪರಿವಾರ ; ಕಕ್ಷಿಗಾರರು ; (ವೈದ್ಯರು, ಅಂಗಡಿ, ನಾಟಕ ಶಾಲೆ, ಮೊ. ಗಳ) ಪ್ರೋತ್ಸಾಹಕರು, ಪೋಷಕರು, ಅಭಿಮಾನಿಗಳು, ಗಿರಾಕಿಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cliff ಕ್ಲಿಫ್ (ನಾ.) (ನಾ., ಸಮುದ್ರದಮೇಲೆ ಬಗ್ಗಿರುವ) ಬಂಡೆಯ ಕಡಿದಾದ ಮುಖ; ಪ್ರಪಾತ. **Clíffsman** (ನಾ.) ಕಡಿದುಬಂಡೆ ಹತ್ತುವುದರಲ್ಲಿ ಚತುರ.

Climactéric ಕ್ಲೈಮ್ಯಾಕ್ಟೆರಿಕ್ (ಗು., ನಾ.) ವಿಷಮ ಸಂಧಿ(ಯ); ವಿಷಮ ಸ್ಥಿತಿ(ಯ); ಸಂಧಿಕಾಲ(ದ). (ಶ. ವಿ., ವೈದ್ಯ) ಇಳಿವಯಸ್ಸಿನಲ್ಲಿ (೪೫ ರಿಂದ ೬೦) ಒದಗುವ, ಸಂಧಿಸುವ. (ನಾ.) ಜೀವಮಾನದಲ್ಲಿ ಸಂಧಿಕಾಲ [೭ರ ಗುಣಸಂಖ್ಯೆಗಳು, ೭ರ ವಿಷಮ (ಬೆಸ) ಗುಣಸಂಖ್ಯೆಗಳು, ಮೊ. ವು]. Grand c. ಮಹಾ ಸಂಧಿಕಾಲ : ೬೩ನೆಯ ವರ್ಷ.

Clímate ಕ್ಲೈಮೆಟ್ (ನಾ.) (ಯಾವುದಾದರೂ ಪ್ರಾಂತದಲ್ಲಿ) ಕಾವು, ತೇವ, ಗಾಳಿ, ಬೆಳಕು — ಇವೇ ಮೊ. ಗಳ ಒಂದು ಗೊತ್ತಾದ ಸ್ಥಿತಿ: ವಾಯುಗುಣ; ಹವ. ಒಂದು ಗೊತ್ತಾದ ವಾಯುಗುಣವುಳ್ಳ ಪ್ರದೇಶ. **Climátic** — ಮ್ಯಾ — (ಗು.); **Climátically** (ಕ್ರಿ. ವಿ.); **Climatólogy** — ಮಟಾಲೊಜಿ (ನಾ.) ವಾಯುಗುಣ ಶಾಸ್ತ್ರ. **Clímatológical** ಕ್ಲೈಮಟೊಲಾಜಿಕಲ್ (ಗು.)

Clímax ಕ್ಲೈಮ್ಯಾಕ್ಸ್ (ನಾ., ಕ್ರಿ.) ಏರುತ್ತಹೋಗುವ ಸರಣಿ; (ಅಲಂ.) ಭಾವದ ಗುರುತ್ವವು ಕ್ರಮೇಣ ಏರುತ್ತಹೋಗುವಂತೆ ಅಳವಡಿಸಿದ ಶ್ರೇಣಿ; ಇಂಥ ಶ್ರೇಣಿಯಲ್ಲಿ ಕಟ್ಟಕಡೆಯ ಪದ; ಸಾರೋಕ್ತಿ; ಸಾರಾಲಂಕಾರ. ಪರಾಕಾಷ್ಠೆ; ತುತ್ತತುದಿ; ಶಿಖರ. (ಕ್ರಿ.) ಪರಾಕಾಷ್ಠೆಗೆ ಬರು, ತರು. **Climáctic** (ಗು.)

Climb ಕ್ಲೈಂ (ಕ್ರಿ.; ಭೂತ., ಭೂ. ಕೃ. Climbed; ಪ್ರಾಚೀ. ಪ್ರ. Clomb ಕ್ಲೋಮ್; ನಾ.) ಹತ್ತು; ಏರು; ಅಡರು (ಮು., ಕೈಗಳ ಸಹಾಯದಿಂದ) (C. down ಕೆಳಗಿಳಿ; ಹಂಜರಿ; ಬಿಟ್ಟುಕೊಡು). (ಸೂರ್ಯ, ಆಕಾಶಯಾನ, ಮೊ.) ನಿಧಾನವಾಗಿ ಮೇಲೇರು; (ಸಸ್ಯಗಳ ವಿಷಯದಲ್ಲಿ: ಮರ, ತಡಿಕೆ, ಮೊ. ಗಳ ಆಸರೆಯಿಂದಲೂ ಹಿಡಿಬಳ್ಳಿಗಳು ಹಿಡಿದುಕೊಳ್ಳುವುದರಿಂದಲೂ) ಮೇಲೇರು, ಹಬ್ಬು. ಏರುವೋರೆಯಾಗಿರು. (ಸಮಾಜಸ್ಥಾನ, ಬುದ್ಧಿಶಕ್ತಿ, ನೈತಿಕ ಶಕ್ತಿ, ಮೊ. ಗಳಲ್ಲಿ) ಸ್ವಪ್ರಯತ್ನದಿಂದ ಮೇಲೇರು. (Climbing-iron ಮರವನ್ನಾಗಲಿ ನೀರ್ಗಲ್ಲಿನ ಏರುವೋರೆಯನ್ನಾಗಲಿ ಹತ್ತಲು ಅನುಕೂಲಸುವಂತೆ ಪಾದರಕ್ಷೆಗಳಿಗೆ ತೊಡಿಸಲಾಗುವ ಮೊಳೆಗಳು). (ನಾ.) ಹತ್ತುವುದು; ಏರುವುದು; ಏರಿದುದು; ಏರು; ಏರಬೇಕಾದುದು (C. down ಗೊತ್ತುಮಾಡಿಕೊಂಡಿದ್ದ ಅಭಿಪ್ರಾಯದ ತ್ಯಾಗ; ಇಳಿತ). **Clímbable** (ಗು.); **Clímber** (ನಾ.) (ಕ್ರಿಯಾರ್ಥಗಳಲ್ಲಿ). ಮೇಲೆಹಬ್ಬುವ ಬಳ್ಳಿ: ಅಡರು ಬಳ್ಳಿ. ಒಂದು ಪಕ್ಷಿಜಾತಿ. ಸಮಾಜಶ್ರೇಣಿಯಲ್ಲಿ ಏರಿಬರುವವನು.

Clime ಕ್ಲೈಂ (ನಾ.) (ಕಾವ್ಯ) ಪ್ರದೇಶ; ದೇಶ; ನಾಡು.

Clinch. **Clench** ನೋಡಿ. **Clíncher, Cléncher** ಕ್ಲಿನ್ಚರ್, ಕ್ಲೆನ್ಚರ್ (ನಾ.) (ಕ್ರಿಯಾರ್ಥಗಳಲ್ಲಿ). ಒಂದು ಚರ್ಚೆಯ ವಿಷಯವನ್ನು, ಸಮಸ್ಯೆಯನ್ನು ತೀರ್ಮಾನಮಾಡುವ ಉಕ್ತಿ, ವಾದ; ನಿರ್ಣಾಯಕ; ನಿರ್ಧಾರಕ. [Clincher-built = Clinker-built (ಗು.) ಹಡಗು, ದೋಣಿ — ಇವುಗಳ ವಿಷಯದಲ್ಲಿ ಹೊರಮೈಯಲ್ಲಿಯ ಹಲಗೆಗಳು ಅವುಗಳ ತಳಗಡೆ ಒಂದರಮೇಲೊಂದು ಹಾಯ್ದುಕಳಿತು ತಾಮ್ರದ ಮೊಳೆಗಳಿಂದ ಭದ್ರಪಡಿಸಿರುವ]

Cling ಕ್ಲಿಂಗ್ (ಕ್ರಿ. ಅಕ.; ಭೂತ, ಭೂ. ಕೃ. Clung) (ಅಂಟಿನಿಂದಾಗಲಿ, ಗಾಳಿ ಹೀರಿದುದರಿಂದಾಗಲಿ, ಹಿಡಿದುಕೊಳ್ಳುವುದರಿಂದಾಗಲಿ, ತಬ್ಬಿಕೊಳ್ಳುವುದರಿಂದಾಗಲಿ) ಹತ್ತಿಕೊ, ಅಂಟಿಕೊ; ಕೂಡಿಕೊ; ಕಟ್ಟಿಕೊ (C. together ಒಟ್ಟಿಗೆ ಸೇರಿಕೊಂಡಿರು; ಒಂದಾಗಿರು; ಬೇರ್ಪಡಿಸಲಾಗದಿರು. Clinging garments ಮೈಗೆ ಹತ್ತಿಕೊಂಡು ಮೈಯ ಆಕಾರವನ್ನು ತೋರಿಸುವ ಉಡುಪು). (ಸ್ನೇಹಿತ, ಪದ್ಧತಿ, ಅಭಿಪ್ರಾಯ — ಇವನ್ನು) ನೆಚ್ಚಿಕೊಂಡಿರು, ಬಿಡದೆ ಅಂಟಿಕೊಂಡಿರು. **Clíngstone** (ನಾ.) ತಿರುಳು ಓಟೆಗೆ ಹತ್ತಿಕೊಂಡಿರುವ ಒಂದು ಜಾತಿಯ 'ಪೀಚ್' ಹಣ್ಣು.

Clínic ಕ್ಲಿನಿಕ್ (ನಾ.) ವೈದ್ಯಶಾಲೆಯ (ಆಸ್ಪತ್ರೆಯ) ರೋಗಿಗಳ ಸಮ್ಮುಖದಲ್ಲಿ ವೈದ್ಯಶಾಸ್ತ್ರದರ್ಲ್ಲಾಗಲಿ ಶಸ್ತ್ರಚಿಕಿತ್ಸೆಯಲ್ಲಾಗಲಿ ಶಿಷ್ಯರಿಗೆ ಶಿಕ್ಷಣಕೊಡುವುದು. (ವೈದ್ಯ) ಪ್ರಯೋಗ ಶಿಕ್ಷಣ; ಪ್ರಯೋಗ ಶಿಕ್ಷಣದ ತರಗತಿ, ಸಂಸ್ಥೆ. **Clínical** (ಗು.) (ವೈದ್ಯ) ರೋಗಿಯ ಪಕ್ಕದ; ರೋಗಶಯ್ಯೆಯ (ಮು., ಪಾಠಪ್ರವಚನಗಳ ವಿಷಯದಲ್ಲಿ). C. thermometer ರೋಗಿಯ ಜ್ವರಪರಿಮಾಣವನ್ನು ಅಳೆಯುವ ಶಾಖಮಾಪಕ: ಜ್ವರಮಾಪಕ. **Clínically** (ಕ್ರಿ. ವಿ.)

Clink[1] ಕ್ಲಿಂಕ್ (ನಾ., ಕ್ರಿ.) (ಗಾಜುಪಾತ್ರೆಗಳು, ಮೊ.) ತೀಕ್ಷ್ಣವಾದ ಘಂಟಾಶಬ್ದ (ಮಾಡು, ಆಗು); ಖಣಿಖಣಿಲೆನ್ನು. **Clínker**[1] (ನಾ.) (ಅಸಂ.) ಅತ್ಯುತ್ತಮ ತೆರದ್ದು. **Clínking** (ಗು., ಕ್ರಿ. ವಿ.) (ಅಸಂ.) ಅತ್ಯುತ್ತಮವಾದ; ಸೊಗಸಾದ (C. good race). **Clínkstone** (ನಾ.) ಒಂದು ಖನಿಜವಿಶೇಷ (ಹೊಡೆದರೆ ಆಗುವ ಖಣಿಲೆಂಬ ಶಬ್ದದಿಂದ)

Clink[2] ಕ್ಲಿಂಕ್ (ನಾ.) ಸೆರೆಮನೆ; ಬಂದೀಖಾನೆ; ಕಾರಾಗೃಹ (ಮು., (In c. ಎಂಬಲ್ಲಿ)

Clinker[2] ಕ್ಲಿಂಕರ್ (ನಾ.) ಹಾಲೆಂಡಿನ ಹಳದಿಯಬಣ್ಣದ ಬಹಳ ಗಟ್ಟಿಯಾದ ಇಟ್ಟಿಗೆ; ಬಹಳ ಕಾವನ್ನುಪಯೋಗಿಸಿ ಮೇಲ್ಮೈಯನ್ನು ಗಾಜಿನಂತೆ ಮಾಡಿರುವ ಇಟ್ಟಿಗೆ: ಗಾಜುಮೈ ಇಟ್ಟಿಗೆ. ಇಟ್ಟಿಗೆಗಳು, ಕುಲುಮೆಯ ಕರಗಿದ ಕಿಟ್ಟ, ಅಗ್ನಿಪರ್ವತದಿಂದ ಹರಿದುಬರುವ ಶಿಲಾದ್ರವ — ಇವುಗಳಲ್ಲಿ ಯಾವುದಾದರೂ ಬೆಸೆದುಕೊಂಡಾದ ಮುದ್ದೆ. **Clínker-built** (Clinch ನೋಡಿ)

Clinómeter ಕ್ಲೈನಾಮಿಟರ್ (ನಾ.) ಓರೆಯನ್ನು, ಬಾಗನ್ನು, ಅಳೆಯುವ ಸಲಕರಣೆ: ಪ್ರವಣ ಮಾಪಕ.

Clío ಕ್ಲಯೊ (ನಾ.) ಚರಿತ್ರೆ(ಯ ಅಧಿದೇವತೆ)

Clip[1] ಕ್ಲಿಪ್ (ಕ್ರಿ. ಸಕ., ನಾ.) ಎಡೆಯಿಲ್ಲದಂತೆ ಆವರಿಸು; ಪಟ್ಟಾಗಿ ಹಿಡಿ; ಅದುಮಿ ಹಿಡಿ; ತಬ್ಬು; ಆಲಿಂಗಿಸು. (ನಾ.) ವಸ್ತುಗಳನ್ನು ಒಟ್ಟಿಗೆ ಹಿಡಿದುಕೊಳ್ಳುವುದಕ್ಕಾಗಿ ಅಥವಾ ಗುರುತು ಹಿಡಿಯುವುದಕ್ಕಾಗಿ ಉಪಯೋಗಿಸುವ ಸಲಕರಣೆ: ಹಿಡಿಕೆ. (ಹೆಚ್ಚು ತೋಟಾಗಳನ್ನು, ಉಪಯೋಗಕ್ಕೆ ತಾವಾಗಿ ಬರುವಂತೆ, ದಾಸ್ತಾನಾಗಿಡಲು ಅಳವಡಿಸಿರುವ ಬಂದೂಕಿನ) ಕೂಡುತೋಟಾಗಳು.

Clip[2] ಕ್ಲಿಪ್ (ಕ್ರಿ. ಸಕ., ನಾ.) ತರಿ; (ಕತ್ತರಿಯಿಂದ) ಕತ್ತರಿಸು; ಕತ್ತರಿಸಿ ನಯಮಾಡು; ಸವರು. (ಕೂದಲು, ಉಣ್ಣೆ — ಇವನ್ನು) ಸ್ವಲ್ಪ ಮಟ್ಟಿಗೆ ಕತ್ತರಿಸಿಹಾಕು. [C. one's wings ರೆಕ್ಕೆ ಕತ್ತರಿಸು (ರೂಪ.): ತನ್ನ ಉದ್ದೇಶವನ್ನು ಸಾಧಿಸಲಾಗದಂತೆ ಶಕ್ತಿಗುಂದಿಸು]. (ನಾಣ್ಯದ) ಏಣುಹೆರೆದು ಬೆಲೆ ತಗ್ಗಿಸು. (ಮಾತಿನ) ಅಕ್ಷರಗಳನ್ನು ಉಚ್ಚರಿಸದೆ ಮೊಟಕುಮಾಡು, ನುಂಗಿಬಿಡು (He clips his g's); (ಅಕ್ಷರ, ಮೊ. ನ್ನು) ಬಿಟ್ಟುಬಿಡು, ಲುಪ್ತಮಾಡು. (ನಾ.) ತುಪ್ಪಟ ಕತ್ತರಿಸುವುದು; ಕೂದಲು ಕತ್ತರಿಸುವುದು; ಒಂದು ಸಲ ಕತ್ತರಿಸಿ ತೆಗೆದ ಉಣ್ಣೆಯ ಮೊತ್ತ. (ಥಟ್ಟನೆ ಕೊಡುವ) ಕೈಪೆಟ್ಟು, ಚಾವಟಿಯೇಟು, ಮೊ. **Clípper** (ನಾ.) (ಕ್ರಿಯಾರ್ಥಗಳಲ್ಲಿ). ಕೂದಲ ಕತ್ತರಿ. (ಕುದುರೆ ಅಥವಾ ಹಡಗಿನ ವಿಷಯದಲ್ಲಿ) ವೇಗವಾಗಿ ಹೋಗುವದು. (ಅಸಂ.) ತನ್ನ ಜಾತಿಯಲ್ಲಿ ಅತ್ಯುತ್ತಮವಾದದ್ದು. **Clípping** (ನಾ.) ಕತ್ತರಿಸಿ ಹಾಕಿದ ತುಂಡು, ಭಾಗ. (ಗು.) (ಅಸಂ.) ಅತ್ಯುತ್ತಮವಾದ.

Clique ಕ್ಲೀಕ್ (ನಾ.) (ಇತರರೊಡನೆ ಸೇರದ) ಸಣ್ಣ ಕೂಟ, ಸಣ್ಣ ಸಂಘ; ಒಳ ಬಳಗ; ಹೊರಚ್ಚಾದ ಗುಂಪು; ಸಂಚು ಕೂಟ; ಸ್ವಾಭಿಮಾನ ಸಂಘ. **Clíquish** (ಗು.) ಸಂಚುಕೂಟದಂತೆ ತೋರುವ. **Clíqu(e)y** (ಗು.) ಸಂಚುಕೂಟ ಸ್ವಭಾವದ; ಸಂಚುಕೂಟದ. **Clíquishness** (ನಾ.); **Clíquism** (ನಾ.) ಸಂಚುಕೂಟದ ಪ್ರಭಾವ, ತತ್ತ್ವಗಳು, ರೀತಿನೀತಿಗಳು: ಕೂಟ ನೀತಿ.

Clítoris ಕ್ಲೈಟಾರಿಸ್ (ನಾ.) (ಶ. ವಿ.) ಗಂಡಸಿನ ಶಿಶ್ನಕ್ಕೆ ಸರಿ ಹೋಲುವ ಹೆಂಗಸಿನ ಜನನೇಂದ್ರಿಯ ಭಾಗ; ಭಗಾಂಕುರ.

Clívers. **Cleavers** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cloáca (L) ಕ್ಲೊಯೇಕ (ನಾ. ; ಬ. ವ. - ae) ನೆಲದೊಳಗಿನ ಚರಂಡಿ, ರೊಚ್ಚು ಕಾಲುವೆ ; ಒಳ ಚರಂಡಿ ; ಪಾಯಖಾನೆ ಗುಂಡಿ. (ಹಕ್ಕಿ, ಸರೀಸೃಪ, ಮೊ. ಗಳ) (ಕರುಳಿನ ಕೊನೆಯಲ್ಲಿರುವ) ಮಲ ಕೂಪ. (ರೂಪ.) ಪಾಪ ಕೂಪ. **Cloácal** (ಗು.)

Cloak ಕ್ಲೋಕ್, (ಪ್ರಾಚೀ. ಪ್ರ.) **Cloke** (ನಾ., ಕ್ರಿ.) (ಹೊರಗೆ ಹೋಗುವಾಗ ಹಾಕಿಕೊಳ್ಳುವ ಸಡಿಲವಾದ, ಸಾ., ತೋಳಿಲ್ಲದ) ಮೇಲಂಗಿ, ದಗಲೆ. ಹೊದಿಕೆ ; ಕವುದಿ (C. of snow ಮಂಜಿನ ಹೊದಿಕೆ). ಮೋಸ ; ಛದ್ಮ ; ವ್ಯಾಜ ; ವೇಷ ; ಸೋಗು (Under the c. of ಆ ವ್ಯಾಜದಿಂದ ; ಅದರ ಸೋಗಿನಲ್ಲಿ, C.-room ಬಟ್ಟೆಬರೆಗಳನ್ನೂ ಸಾಮಾನನ್ನೂ ತೆಗೆದಿಟ್ಟಿರುವುದಕ್ಕಾಗಿ ಏರ್ಪಡಿಸಿರುವ ಕೋಣೆ: ಉಡಿಗೆಯ ಕೋಣೆ. (ಕ್ರಿ.) ದಗಲೆ ಹಾಕಿಕೊ, ಹಾಕು. ಮರೆಮಾಡು ; ಮುಚ್ಚಿಡು ; ಮರಸು.

Clock[1] ಕ್ಲಾಕ್ (ನಾ., ಕ್ರಿ. ಅಕ.) ಗಡಿಯಾರ (ಸಾ., ಗಂಟೆ ಹೊಡೆಯುವದು). (Six o' clock ಆರುಗಂಟೆ. What o' clock is it? ಈಗ ಎಷ್ಟು ಗಂಟೆ ?). ಕೆಲವು ಜಾತಿಯ ಗಿಡಗಳಲ್ಲಿ ತುಪ್ಪುಳಿನಂತಿರುವ ತಲೆಯ ಭಾಗ. (ವಿಶೇಷಣವಾಗಿ) ಕ್ರಮ ತಪ್ಪದ ; ಯಂತ್ರಕ್ರಮದಂಥ. (ಕ್ರಿ.) (ಕಾರ್ಖಾನೆಯ ಕೆಲಸಗಾರರು, ಮೊ. ರ ವಿಷಯವಾಗಿ) C. in, on, out, off ತಾನಾಗಿ ಚಲಿಸುವ ಯಂತ್ರದಮೂಲಕ ಕೆಲಸಗಾರನು ಒಳಕ್ಕೆ ಬರುವುದನ್ನೂ ಹೊರಕ್ಕೆ ಹೋಗುವುದನ್ನೂ ಗುರುತಿಸು. (ಆಟದ ಅಸಂ.) ನಿಲ್ಲಡಿಯಾರದ ಮೂಲಕ ಜೂಜಿನ ಓಟ, ಮೊ. ಗಳ ನಿಷ್ಕೃಷ್ಟವಾದ ಕಾಲವನ್ನು ಗುರುತಿಸು. **Clóckwise** ಗಡಿಯಾರದ ಮುಳ್ಳು ಸುತ್ತುವ ದಿಕ್ಕಿನಲ್ಲಿ: ಪ್ರದಕ್ಷಿಣವಾಗಿ. **Counter-clóckwise** ಅಪ್ರದಕ್ಷಿಣವಾಗಿ. **C.-work** ಗಡಿಯಾರದ ರಚನೆ(ಯಂಥ ರಚನೆ). (Like c.-work ಯಂತ್ರದಂತೆ ; ಕ್ರಮ ತಪ್ಪದೆ ; ತನಗೆ ತಾನೇ ; ಚೋದನೆಯಿಲ್ಲದಯೇ)

Clock[2] ಕ್ಲಾಕ್ (ನಾ. ; ಅಂಗಡಿಯವರ ಬ. ವ. Clox) ಕಾಲ್ಚೀಲದ ಪಕ್ಕದಲ್ಲಿ ರೇಷ್ಮೆಯಿಂದ ಹಾಕಿದ ಕಸೂತಿ.

Clócking ಕ್ಲಾಕಿಂಗ್ (ಗು.) C. hen ಮೊಟ್ಟೆಯಮೇಲೆ ಕಾವಿಗೆ ಕುಳಿತಿರುವ ಹೇಂಟೆ.

Clod ಕ್ಲಾಡ್ (ನಾ., ಕ್ರಿ. ಸಕ.) (ಮಣ್ಣು, ಮೊ. ಗಳ) ಮುದ್ದೆ ; ಹೆಂಟೆ; ಮಣ್ಣುಹೆಂಟೆ (ಬೀರು). ಎತ್ತಿನ ಕುತ್ತಿಗೆಯ ಒರಟುಭಾಗದ ಮಾಂಸ. The c. ನೆಲ ; ಭೂಮಿ ; ಮಣ್ಣು ; ಜಡ ವಸ್ತು. ಉತ್ತ ನೆಲದಮೇಲೆ ಓಡಾಡುವವನು ; ಉಳುಮೆಯವನು ; ದಡ್ಡ ; ಒರಟ ; ಹಳ್ಳಿಗ ; ಹಳ್ಳಿ ಗಮಾರ [= C.-hopper, C.-pole. C.-hopping (ಗು.) ಹೆಡ್ಡತನದ]. **Clóddish** (ಗು.) ; **Clóddishness** (ನಾ.)

Clog ಕ್ಲಾಗ್ (ನಾ., ಕ್ರಿ.) ನಡಗೆಯನ್ನು ತಡೆಯುವುದಕ್ಕಾಗಿ ಕಾಲಿಗೆ ಕಟ್ಟುವ ಮರದ ತುಂಡು ; ಕಾಲ ಕೊರಡು. ತಡೆ ; ಪ್ರತಿಬಂಧಕ ; ತೊಡರು ; ಅಡಚಣೆ ; ಹೊರೆ ; ಭಾರ. ಕೆಸರುನೆಲದಲ್ಲಿ ತಿರುಗಾಡುವುದಕ್ಕಾಗಿ (ಪಾಶ್ಚಾತ್ಯ) ಹೆಂಗಸರು ಹಾಕಿಕೊಳ್ಳುವ ಮರದ ಅಟ್ಟೆಯ ಜೋಡು (C.-dance ಮರದ ಅಟ್ಟೆಯ ಜೋಡು ಹಾಕಿಕೊಂಡು ಮಾಡುವ ನೃತ್ಯ). (ಕ್ರಿ.) ಕಾಲ ಕೊರಡು ಹಾಕು ; ಒಬ್ಬರಿಗೆ ಅಡಚಣೆಯಾಗಿರು ; ಭಾರವಾಗಿರು. ತಡೆಮಾಡು ; ತಡೆಯೊಡ್ಡು ; ಪ್ರತಿಬಂಧಿಸು ; ಅಡಚು ; ಅಂಟಿಕೊಂಡು ತಡೆಮಾಡು ; ಕಟ್ಟಿಕೊ ; ಕಸಕಡ್ಡಿ ಸೇರಿ (ನೀರು) ಹರಿಯದಂತೆ ಮಾಡು ; — ಆಗು ; ಬಂದಾಗು ; ಬಂದು ಮಾಡು. **Clóggy** (ಗು.) ಮುದ್ದೆಯಾದ ; ಗಂಟುಗಂಟಾದ ; ಅಂಟಿಕೊಳ್ಳುವ ; ಕಟ್ಟಿಕೊಳ್ಳುವ.

Cloíster ಕ್ಲಾಯ್ಸ್ಟರ್ (ನಾ., ಕ್ರಿ. ಸಕ.) ಸಂನ್ಯಾಸಿ ಗೃಹ ; ಸಂನ್ಯಾಸಿ ಮಠ. (The c. ಮಠದ ಏಕಾಂತ ವಾಸ). (ಮು., ಸಂನ್ಯಾಸಿ ಗೃಹ, ಪ್ರೌಢ ವಿದ್ಯಾಶಾಲೆ, ಪ್ರಧಾನ ದೇವಾಲಯ — ಈ ಕಟ್ಟಡಗಳ) ಮಧ್ಯಾಂಗಣದ ಸುತ್ತಲೂ ಮೇಲ್ಛಾವಣಿಯಿರುವ ಹಾದಿ. (ಕ್ರಿ.) ಮಠದಲ್ಲಿ ಕೂಡು ; ಒಳಗೆ ಕೂಡು. **Cloístered** (ಗು.) ; **Cloístral** (ಗು.) ಮಠಸಂಬಂಧವಾದ; ಮಠದಲ್ಲಿ ವಾಸಿಸುವ ; ಮಠದಂತಿರುವ.

Cloke. **Cloak** ನೋಡಿ.

Clónus ಕ್ಲೋನಸ್ (ನಾ.) (ರೋಗ) ಸ್ನಾಯುಗಳು ಎಡೆಬಿಡದೆ ಬಿರುಸಾಗಿ ಸೆಡೆಯುತ್ತಹೋಗುವುದು, ತರುವಾಯ ಸಡಿಲವಾಗುವುದು — ಈ ರೀತಿಯ ಸೆಳವುರೋಗ. **Clónic** ಕ್ಲಾನಿಕ್ (ಗು.)

Cloop ಕ್ಲೂಪ್ (ನಾ., ಕ್ರಿ. ಅಕ.) ಸೀಸೆಯ ಬಿರಡೆ ತೆಗೆದ ಶಬ್ದ(ವಾಗು)

Close ಕ್ಲೋಸ್ (ಗು., ಕ್ರಿ. ವಿ.) (೧) ಮುಚ್ಚಿದ ; (ಸ್ವರಗಳ ವಿಷಯದಲ್ಲಿ) ತುಟಿ ಅಥವಾ ಬಾಯನ್ನು ಸಂಕುಚಿಸಿ ಉಚ್ಚರಿಸಿದ ; ಸಂವೃತ. ಕಿರಿದಾದ ; ಇಕ್ಕಟ್ಟಾದ ; ಒತ್ತಾದ ; ಸಂಕುಚಿತ ; ಬಂಧಿಸಿದ ; ತೆರಪಿಲ್ಲದ ; ಉಸಿರುಕಟ್ಟಿಸುವ (C. air ಉಸಿರುಕಟ್ಟಿಸುವ ವಾಯು. C. prisoner ಬಂಧನದಲ್ಲಿರುವ ಸೆರೆಯಾಳು. C. siege ತೆರಪಿಲ್ಲದ ಮುತ್ತಿಗೆ). ಬಚ್ಚಿಟ್ಟ ; ಗುಪ್ತವಾದ ; ಗುಟ್ಟಿನ (Keep c., Lie c. ಮರೆಯಾಗಿರು ; ಅವಿತುಕೊಂಡಿರು. C.-stool ನಾಗಾಲಿನ ಪೀಠದಲ್ಲಿಯ ಕಂಡಿಯಲ್ಲಿ ಕೂರಿಸಿ ಮುಚ್ಚಳವಿಟ್ಟಿರುವ ಮೂತ್ರಪಾತ್ರೆ). ಜಿಪುಣನಾದ ; ಹಿಡಿತದ ; ಕೈಬಿಚ್ಚದ [**Clóse-fisted** (ಗು.) ; **Close-fístedness** (ನಾ.)]. ಎಲ್ಲರಿಗೂ ಪ್ರವೇಶವಿಲ್ಲದ ; ಪರಿಮಿತ [C. corporation ಪರಿಮಿತ ಸಂಸ್ಥೆ. C. scholarship ಸಾಮಾನ್ಯವಾಗಿ ಎಲ್ಲರಿಗೂ ದೊರೆಯದೆ ಗೊತ್ತಾದ ಕೆಲವರಿಗೆ ಮಾತ್ರ ದೊರೆಯುವ ವಿದ್ಯಾರ್ಥಿ ವೇತನ. C. borough (Borough ನೋಡಿ)]. ನಿಷಿದ್ಧ (C. season ಹಕ್ಕಿ, ಮೊ. ನ್ನು ಕೊಲ್ಲಕೂಡದೆಂದಾಗಲಿ, ಇತರ ಕೆಲವು ಕಾರ್ಯಗಳನ್ನು ಮಾಡಕೂಡದೆಂದಾಗಲಿ, ಗೊತ್ತುಮಾಡಿರುವ ನಿಷಿದ್ಧಕಾಲ). (೨) ಹತ್ತಿರದ ; ಬಳಿಯ ; ಸಮೀಪದ. ಒತ್ತಾದ ; ದಟ್ಟ ; ನಿಬಿಡ ; ಗಾಢ. [C. argument ಹುಳುಕಿಲ್ಲದ, ಹೊಂದಿಕೆಯುಳ್ಳ, ವಾದ. C. call (ಬಳ. ಮಾ.) ಹತ್ತಿರದ್ದು ; ಪ್ರಾಣಾಪಾಯಕರವೆಂದು ಹೇಳಬಹುದಾದದ್ದು. C. combat ಕೈಕೈ ಯುದ್ಧ. C. quarters ಬಹಳ ಸಾಮೀಪ್ಯ ; (ರೂಪ.) ಶತ್ರುವಿನೊಡನೆ ಕೈಕೈ ಸೇರುವುದು. C. texture ಒತ್ತುನೆಯ್ಗೆ. C. thicket ದಟ್ಟವಾದ -ಪೊದೆ. C. writing ಒತ್ತು ಬರವಣಿಗೆ. (ಕ್ರಿ. ವಿ.) : C.-grained ಎಳೆಗಳು ಹತ್ತಿರ ಹತ್ತಿರವಿರುವ ; Shut c. ಸ್ಥಳಬಿಡದಂತೆ ಮುಚ್ಚು ; Sit c. ಒತ್ತಾಗಿ ಕುಳಿತುಕೊ]. ತಾಕಿಕೊಂಡಿರುವ ಅಥವಾ ತಾಕಿಕೊಂಡಂತೆ ಇರುವ ; ಹೊದ್ದಿರುವ [A c. shave ಬುಡಮುಟ್ಟ, ನುಣ್ಣನೆಯ, ಕ್ಷೌರ ; (ರೂಪ.) ಆಗಲಿರುವ ಢಕ್ಕಾಮುಕ್ಕಿ, ಮೊ. ವು ಕೊಂಚದಲ್ಲಿ ತಪ್ಪುವುದು]. ಸರಿಯಾಗಿ ಹೊಂದುವ (C. cap ಗುತ್ತನಾದ ಟೋಪಿ. C. resemblance ಬಹುಹತ್ತಿರದ ಹೋಲಿಕೆ). ಹತ್ತಿರ ಸಂಬಂಧದ ; ಆಪ್ತ. ಸುಮಾರು ಸಮನಾದ (C. contest ಸುಮಾರು ಸಮನಾದ ಸ್ಪರ್ಧೆ). ಏಕಾಗ್ರತೆಯ (C. examination ಸೂಕ್ಷ್ಮ ರೀತಿಯಲ್ಲಿ ನಡಸಿದ ಪರೀಕ್ಷೆ). C.-up (ನಾ.) ಹತ್ತಿರದಿಂದ ಛಾಯಾಚಿತ್ರ ತೆಗೆದಕಾರಣ ಮನುಷ್ಯ, ಮೊ. ರ ಆಕಾರವು ತೆರೆಯಮೇಲೆ ಬಹಳ ದೊಡ್ಡದಾಗಿ ಕಾಣುವ ಚಲಚ್ಚಿತ್ರ ಪಟಲದ ಭಾಗ ; ಬೃಹದಾಕಾರ. **Clósely** (ಕ್ರಿ. ವಿ.) ; **Clóseness** (ನಾ.)

Close (ನಾ.) ಸುತ್ತುಗಟ್ಟಿರುವ ಪ್ರದೇಶ ; ಆವರಣ [Break one's c. (ನ್ಯಾ. ಶಾ.) ಒಬ್ಬನ ಜಮೀನಿನಮೇಲೆ ಅಕ್ರಮಪ್ರವೇಶ ಮಾಡು]. (ಕ್ರೈಸ್ತ) ದೇವಾಲಯದ ಆವರಣ; ಪಾಠಶಾಲೆಯ ಆಟದ ಬಯಲು, ಮೈದಾನ.

Close ಕ್ಲೋಸ್ (ಕ್ರಿ., ನಾ.) (ಮುಚ್ಚಳ, ಪೆಟ್ಟಿಗೆ, ಬಾಗಿಲು, ಕೋಣೆ, ಮನೆ) ಮುಚ್ಚು, ಮುಚ್ಚಿಕೊ [Closing-time ಅಂಗಡಿ, ಮೊ. ಮುಚ್ಚುವ ಹೊತ್ತು. C. upon (ಕೈ, ಪೆಟ್ಟಿಗೆ, ಮೊ.) ಹಿಡಿದುಕೊ ; ಬಂಧಿಸು ; (ಕಣ್ಣು) ಮುಚ್ಚಿ ಕಾಣದಂತಾಗು ; ಕಣ್ಣುಕವಿ]. ಎಲ್ಲೆಯಾಗಿರು. ಪೂರಯಿಸು ; ಮುಗಿ ; ಮುಗಿಸು ; ಮುಕ್ತಾಯವಾಗು ; ಮುಕ್ತಾಯ ಮಾಡು ; ತೀರಿಸು ; ಫೈಸಲುಮಾಡು (C. bargain ವ್ಯಾಪಾರ ಮುಗಿಸು. C. one's days ಸಾಯಿ). ಮಾತು ನಿಲ್ಲಿಸು. ತಾಕುವಂತೆ ತರು, ಬರು ; ಹತ್ತಿರಕ್ಕೆ ತರು, ಬರು ; ಒತ್ತುಗೂಡು ; ಒತ್ತುಗೂಡಿಸು (C. up ಒಟ್ಟಿಗೆ ತರು, ಬರು. C. electric current or circuit

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿದ್ಯುತ್ಪ್ರವಾಹವು ಸುತ್ತಿಹರಿಯುವಂತೆ ಯೋಜಿಸು). ಏಟುಹೊಡೆಯುವಷ್ಟು ಹತ್ತಿರಕ್ಕೆ ಬರು ; ಕೈಕೈ ಹತ್ತು. (ಆತುರದಿಂದ) ಒಪ್ಪಿಗೆ ಕೊಡು, ಒಡಂಬಡು, ಒಪ್ಪಂದಕ್ಕೆಬರು. [C. in ಆವರಣ ಹಾಕು ; ಸುತ್ತುಗಟ್ಟು ; ಸಮಾಪಿಸು. (ಹಗಲು) ಕ್ರಮೇಣ ಕಡಮೆಯಾಗುತ್ತಬರು. C. up ತಡೆಗಟ್ಟು ; ಮುಚ್ಚು ; ತುಂಬಿಬಿಡು ; ಒತ್ತುಗೂಡಿಸು ; ಒಂದಾಗು]. (ನಾ.) ಮುಕ್ತಾಯ ; ಉಪಸಂಹಾರ ; ಅಂತ್ಯ ; ಮುಗಿತ ; ಕೊನೆ. (ದ್ವಂದ್ವಯುದ್ಧ ಮಾಡುವವರ) ಮುಷ್ಟಾಮುಷ್ಟಿ.

Clósure ಕ್ಲೋಷರ್ (ನಾ., ಕ್ರಿ. ಸಕ.) ಮುಚ್ಚುವುದು ; ಮುಚ್ಚಿರುವುದು ; ಮುಚ್ಚಿಕೆ. (ಪಾರ್ಲಿಮೆಂಟ್, ಮೊ. ಗಳಲ್ಲಿ) ಚರ್ಚೆಯನ್ನು ಸಾಕುಮಾಡಿ ಪ್ರಶ್ನೆಯನ್ನು ಸಭೆಯ ಅಭಿಮತಕ್ಕಾಗಿ ಒಡ್ಡಬೇಕೆಂಬ ಸೂಚನೆ ; ಮುಕ್ತಾಯ. (ಕ್ರಿ.) (ವಿಷಯದ ಚರ್ಚೆ, ಭಾಷಣ, ಮೊ. ಕ್ಕೆ) ಮುಕ್ತಾಯ ಕೋರು.

Clóset ಕ್ಲಾಸೆಟ್ (ನಾ., ಕ್ರಿ. ಸಕ.) ಏಕಾಂತದ ಕೋಣೆ ; ಸಣ್ಣಕೋಣೆ (ಮು., ಏಕಾಂತವಾಗಿ ಮಾತನಾಡುವುದಕ್ಕೆ ಅಥವಾ ವ್ಯಾಸಂಗಕ್ಕೆ. Be closeted with, together ಆಲೋಚನೆಗಾಗಿ ಏಕಾಂತದಲ್ಲಿ ಸೇರಿರು). [C. play ಓದುನಾಟಕ (ಅಭಿನಯದ್ದಲ್ಲ). C. strategist (ಯುದ್ಧ, ಮೊ. ಕಾರ್ಯಗಳಲ್ಲಿ) ಕಾರ್ಯಪರನಲ್ಲದ, ಬರಿಯ ಮಾತಿನ, ಯುದ್ಧ ತಂತ್ರಜ್ಞ]. ಗೂಡು ; ಮಾಡ ; ಕಪಾಟು ; ಅರೆ (China-c. ಪಿಂಗಾಣಿಯಿಡುವ ಮಾಡ). (ಮಲವು ನೀರಿನಿಂದ ಕೊಚ್ಚಿಹೋಗುವಂತೆ ಮಾಡುವ ಏರ್ಪಾಡುಳ್ಳ) ಪಾಯಖಾನೆಯ ಮನೆ, ಶೌಚಾಗಾರ.

Clot ಕ್ಲಾಟ್ (ನಾ., ಕ್ರಿ.) ಮುದ್ದೆಗಟ್ಟಿದ ಪದಾರ್ಥ ; ಮುದ್ದೆ ; ಹೆಪ್ಪು. (ಹೆಪ್ಪುಗಟ್ಟಿದ ದ್ರವದ, ಮು., ರಕ್ತದ) ಗೆಡ್ಡೆ, ಗರಣೆ. (ಕ್ರಿ.) ಗೆಡ್ಡೆ ಕಟ್ಟು ; ಗರಣೆಯಾಗು ; ಹೆತ್ತುಕೊ (Clotted cream ಕಾಸಿದ ಹಾಲಿನಮೇಲೆ ಕಟ್ಟಿದ ಕೆನೆ. Clotted hair ಜೊಂತೆಗಟ್ಟಿದ ಕೂದಲು. Clotted nonsense ಶುದ್ಧ ಅಸಂಬದ್ಧ)

Cloth ಕ್ಲಾತ್ (ನಾ. ; ಬ. ವ. Cloths ಕ್ಲಾದ್ಸ್, ಕ್ಲಾತ್ಸ್ ; Clothes ಕ್ಲೋದ್ಸ್) ಬಟ್ಟೆ ; ವಸ್ತ್ರ ; ಅರಿವೆ ; ಊಟದ ಮೇಜಿನಮೇಲೆ ಹಾಸುವ ಬಟ್ಟೆ (= Table-c.). (Lay the c. ಊಟದ ಮೇಜನ್ನು ಸಿದ್ಧಮಾಡು). [C. of gold, silver ರೇಷ್ಮೆಯ ಅಥವಾ ಉಣ್ಣೆಯ ದಾರದೊಡನೆ ನೆಯ್ದಿರುವ (ಚಿನ್ನದ, ಬೆಳ್ಳಿಯ) ಸರಿಗೆಯ, ಕಲಾಬತಿನ, ಕಿಂಕಾಪಿನ, ವಸ್ತ್ರ. American c. ಗಾಜಿನ ಹೊಳಪಿನ ಬಣ್ಣದ ಲೇಪಹಾಕಿದ, ಹದ ಮಾಡಿದ ಚರ್ಮದಂತಿರುವ, ಬಟ್ಟೆ. Cut coat according to c. ಹಾಸಿಗೆಯಿದ್ದಷ್ಟು ಕಾಲುಚಾಚಿಕೊ ; ಆದಾಯವರಿತು ವೆಚ್ಚಮಾಡು]. ಹಡಗಿನ ಪಟದ ರಟ್ಟು. ದೂಳು ಒರಸುವ ಬಟ್ಟೆ. ಉಡುಪಿನಿಂದ ತೋರುವ ವೃತ್ತಿ, ಉದ್ಯೋಗ (ಮು., ಪಾದ್ರಿಗಳದು) (The c. ಪಾದ್ರಿಗಳು. Respect due to his c. ವೃತ್ತಿಗೆ ತಕ್ಕ ಗೌರವ). C.-binding (ಪುಸ್ತಕಕ್ಕೆ) ಬಟ್ಟೆಯ ರಟ್ಟು. (ಚರಿತ್ರೆ) C.-yard shaft ಒಂದು ಗಜ ಉದ್ದದ ಅಂಬು.

Clothe ಕ್ಲೋದ್ (ಕ್ರಿ. ಸಕ. ; ಭೂತ., ಭೂ. ಕೃ. Clothed, Clad ಕ್ಲ್ಯಾಡ್) ಉಡುಪನ್ನು ಕೊಡು, ತೊಡಿಸು, ತೊಡು. (ಬಟ್ಟೆಯಂತೆ ಅಥವಾ ಉಡುಪಿನಂತೆ) ಹೊದೆ, ಹೊದಿಸು, ಆಚ್ಛಾದಿಸು (Leaves c. trees ಎಲೆಗಳು ಮರವನ್ನು ಹೊದಿಸುತ್ತವೆ. Clothed with plantations ನೆಟ್ಟ ಮರಗಾಡುಗಳಿಂದ ಮುಚ್ಚಿ ; ಕಾಡು ಹೊದೆದು. Clothed with righteousness ಧರ್ಮವನ್ನು ಹೊದೆದು. Body clothes soul ದೇಹವು ಆತ್ಮವನ್ನು ಹೊದಿಸುತ್ತದೆ. C. face in smiles ಮುಖವನ್ನು ಮುಗುಳ್ನಗೆಯಿಂದ ಹೊದಿಸು. C. ideas in words ಭಾವಗಳನ್ನು ಮಾತುಗಳಿಂದ ರೂಪಿಸು). **Clóthing** (ನಾ.) ; **Clóthier** ಕ್ಲೋದಿಯರ್ (ನಾ.) ಬಟ್ಟೆಮಾಡುವವನು ; ಬಟ್ಟೆಗಾರ ; ಬಟ್ಟೆಯ ವ್ಯಾಪಾರಿ ; ಜವಳಿ ವ್ಯಾಪಾರಿ.

Clothes ಕ್ಲೋಸ್, ಕ್ಲೋದ್ಸ್ (ನಾ.) ಬಟ್ಟೆಬರೆ ; ಉಡುಪು ; ಹೊದಿಕೆ. ಹಾಸಿಗೆಯ ಬಟ್ಟೆಗಳು (= bed-c.). ಒಗೆಯುವ ಬಟ್ಟೆಗಳು (C.-bag, -basket ಒಗೆಯುವ ಬಟ್ಟೆಗಳನ್ನು ಹಾಕಿ ತೆಗೆದುಕೊಂಡುಹೋಗುವ ಚೀಲ, ಕುಕ್ಕೆ). **C.-brush** ಬಟ್ಟೆಗಳ ದೂಳು ತೊಡಪ. **C.-horse** ಬಟ್ಟೆಯ ನಿಲುವು. **C.-line, -peg, -prop** ಒಗೆದ ಬಟ್ಟೆಗಳನ್ನು ಒಣಗಹಾಕುವುದಕ್ಕಾಗಿ ಉಪಯೋಗಿಸುವ ಹಗ್ಗ, ಹಗ್ಗದಲ್ಲಿಯ (ಬಟ್ಟೆಗಳ) ಹಿಡಿಕೆ, ಹಗ್ಗಕ್ಕೆ ಆಧಾರ, **C.-moth** ನುಸಿ ಚಿಟ್ಟೆ. **C.-press** ಬಟ್ಟೆಗಳನ್ನಿಡುವುದಕ್ಕಾಗಿ ಮಾಡಿದ ಗಡಗಂಚಿಗಳುಳ್ಳ ಮಾಡ : ಬಟ್ಟೆ ಮಾಡ. **(Old-)c.-man** ಸಾ., ಹಳೆಯ ಬಟ್ಟೆಗಳ ವ್ಯಾಪಾರಿ.

Clou (F) ಕ್ಲೂ (ನಾ.) ಅತ್ಯಂತ ಸ್ವಾರಸ್ಯದ ಸಂದರ್ಭ ; ಮುಖ್ಯ ಆಕರ್ಷಣ ; ಪ್ರಧಾನ ವಿಷಯ.

Cloud ಕ್ಲೌಡ್ (ನಾ.) ಮೋಡ ; ಮುಗಿಲು ; ಮೇಘ. ಛಾಯಾಪ್ರಾಯವಾದ, ದೃಶ್ಯಮಾತ್ರವಾದ, ಅಥವಾ ಕ್ಷಣಿಕವಾದ, ವಸ್ತು. ಹೊಗೆ ಅಥವಾ ದೂಳಿನ ಒಡ್ಡು. ಒಂದು ದ್ರವದಲ್ಲಾಗಲಿ ಪಾರದರ್ಶಕ ವಸ್ತುವಿನಲ್ಲಾಗಲಿ ಅಲ್ಲಲ್ಲಿ ಕಾಣಬರುವ ಮಾಸಲುಛಾಯೆ. (ದಟ್ಟವಾಗಿ ಸಂಚರಿಸುತ್ತಿರುವ ಹಕ್ಕಿಗಳ, ಕೀಟಗಳ, ಕುದುರೆ ಸವಾರರ, ಬಾಣಗಳ) ಸಮೂಹ, ಗಡಣ. ಉಣ್ಣೆಯ ಲಘುವಾದ ಕಂಠವಸ್ತ್ರ. ಅಸ್ಪಷ್ಟತೆ ; ಮಬ್ಬು ; ಕಣ್ಣು ಕಾಣದಿರುವುದು (Under c. of night ಇರುಳು ಮಬ್ಬಿನಲ್ಲಿ. A c. of words ಮಾತುಗಳ ಮರೆ, ಮಬ್ಬು). ಮಂಕು ಕವಿದಿರುವ, (ಮನಸ್ಸಿನಲ್ಲಿ) ತೊಂದರೆಪಡುತ್ತಿರುವ, ಸಂಶಯಗ್ರಸ್ತ, ಚಿಂತಾಕ್ರಾಂತ, ಸ್ಥಿತಿ. (C. on brow ಮುಖದ ಮ್ಲಾನತೆ). In the clouds ಗೋಪ್ಯವಾದ ; ಮರೆಯಾದ ; ಅವಾಸ್ತವ ; ಊಹೆಯ. (ಮನುಷ್ಯನ ವಿಷಯದಲ್ಲಿ) ಅನ್ಯಮನಸ್ಕ ; ಅನವಧಾನ. Under a c. ಮೋಡ ಕವಿದು (ರೂಪ.) : ಕಷ್ಟಕ್ಕೆ ಸಿಕ್ಕಿ ; ವಿಶ್ವಾಸದಿಂದ ಹೊರಗಾಗಿ ; ಅಪವಾದಕ್ಕೊಳಗಾಗಿ. **C.-burst** (ಬಿರುಗಾಳಿಯಿಂದ ಕೂಡಿದ) ಬಿರು ಮಳೆ. **C.-capped** (ಶಿಖರ) ಮೋಡಕವಿದ ; ಮುಗಿಲು ಮುಟ್ಟಿದ. **C.-castle** ಮೇಘ ಮಂದಿರ. ಹಗಲುಗನಸು. **C.-compeller** ಹೊಗೆಸುತ್ತು ಸೇದುವವನು. (ಗ್ರೀಕ್) ಜ್ಯೂಸ್ ದೇವತೆಯ ಹೆಸರು. **C.-cuckoo-town, C.-land, C.-world** ಊಹಾ ಪ್ರಪಂಚ ; ಗಂಧರ್ವ ನಗರ. **C.-drift** ತೇಲುಮೋಡ ; ಚಲ ಮೇಘ. **C.-kissing** (ಬೆಟ್ಟ ಅಥವಾ ಎತ್ತರವಾದ ಕಟ್ಟಡದ ವಿಷಯದಲ್ಲಿ) ಮುಗಿಲುಮುಟ್ಟುತ್ತಿರುವ ; ಮೇಘಚುಂಬಿ. **C.-rack** ಒಡೆದ ಮೋಡಗಳ ಒಡ್ಡು. **C.-scape** ಮೋಡಗಳ ಚಿತ್ರ ; ಮೇಘ ಚಿತ್ರ ; ಮೋಡಗಳ ಅಂದವಾದ ವಿನ್ಯಾಸ. **Cloúdless** (ಗು.) ; **Cloúdlessly** (ಕ್ರಿ. ವಿ.) ; **Cloúdlessness** (ನಾ.) ; **Cloúdlet** (ನಾ.) ಸಣ್ಣ ಮೇಘ. **Cloúdy** (ಗು.) ; **Cloúdily** (ಕ್ರಿ. ವಿ.) ; **Cloúdiness** (ನಾ.) ; **Cloúd-ward(s)** (ಕ್ರಿ. ವಿ.)

Cloud (ಕ್ರಿ.) ಮೋಡಗವಿ ; ಮಬ್ಬು ಮುಸುಕು ; (ಮ್ಲಾನತೆಯಿಂದ, ವ್ಯಥೆಯಿಂದ) ಮಸುಳಿಸು ; ಮಂಕುಗವಿದಿರು (C. up, over) ; ಮುಸುಕು ಮುಸುಕಾಗಿ ಬಣ್ಣವೇರಿರು.

Clough ಕ್ಲಫ್, ಕ್ಲೌ (ನಾ.) (ನೀರಿನ ಹರಿತದಿಂದ ಆಳವೂ ಉದ್ದವೂ ಆಗಿರುವ) ದೊಡ್ಡ ಕೊರಕಲು ; (ತಳಗಡೆ ಹಳ್ಳಹರಿಯುತ್ತಿರುವ) ಕಡಿದಾದ ಕಣಿವೆ.

Clout ಕ್ಲೌಟ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ., ಪ್ರಾಂತಿಕ) ತೇಪೆ (ಹಾಕು). ಬಟ್ಟೆ ; ಚಿಂದಿಬಟ್ಟೆ ; (ದೂಳು ಒರಸುವುದು, ಮೊ.) ಕೀಳು ಕೆಲಸಗಳಿಗೆ ಉಪಯೋಗಿಸುವ ಬಟ್ಟೆ (Dish-c. ಪಾತ್ರೆಯೊರಸುವ ಬಟ್ಟೆ). ತಟ್ಟು(ವುದು) ; ಮೊಟ್ಟು(ವುದು) (ಮು., ತಲೆಯಮೇಲೆ ಕೈಗೆಣ್ಣುಗಳಿಂದ). (ಪಾದರಕ್ಷೆಗಳು ಸವೆಯದೆ ಇರುವುದಕ್ಕಾಗಿ ತಳಗಡೆ ಹಾಕುವ) ಕಬ್ಬಿಣದ ಬಿಲ್ಲೆ ; ಈ ಬಿಲ್ಲೆಯನ್ನು ಹಾಕುವುದಕ್ಕಾಗಿ ಉಪಯೋಗಿಸುವ ಅಗಲದ ತಲೆಯ ಮೊಳೆ (C.-nail). (ಚರಿತ್ರೆ) ಬಿಲ್ಲುಗಾರಿಕೆಯಲ್ಲಿ ಗುರಿಗಾಗಿ ಚೌಕಟ್ಟಿನಮೇಲೆ ಬಿಗಿದಿರುವ ರಟ್ಟುಬಟ್ಟೆ (In the c. ಗುರಿಹೊಡೆತ !)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Clove[1], **Clóven.** **Cleave** ನೋಡಿ.

Clove[2] ಕ್ಲೋವ್ (ನಾ.) ಬೆಳ್ಳುಳ್ಳಿ, ಮೊ. ಸಂಯುಕ್ತ ಗೆಡ್ಡೆಗಳಲ್ಲಿಯ ಒಂದು ಹಿಳುಕು, ಪಾಯಿ.

Clove[3] ಕ್ಲೋವ್ (ನಾ.) ಲವಂಗ. Oil of cloves ಲವಂಗದೆಣ್ಣೆ (ಔಷಧಿಗಾಗಿ ಉಪಯೋಗ)

Clóver ಕ್ಲೋವರ್ (ನಾ.) ಕುದುರೆ, ಮೊ. ಪ್ರಾಣಿಗಳ ಮೇವಿಗಾಗಿ ಉಪಯೋಗಿಸುವ ಮೂರೆಲೆಯ ದಳಗಳುಳ್ಳ ಸಸ್ಯಜಾತಿಗಳು. Be, live, in c. ಹಾಯಾಗಿ, ಭೋಗದಲ್ಲ, ಇರು, ಜೀವಿಸು.

Clown ಕ್ಲೌನ್ (ನಾ., ಕ್ರಿ. ಅಕ.) ಹಳ್ಳಿಗ; ದಡ್ಡ; ಒರಟ; ಗಮಾರ; ಎಗ್ಗ (ಗ್ರಾಂ.); ಗಾವಿಲ (ಗ್ರಾಂ.). ಹಾಸ್ಯಗಾರ; ನಕಲಿ; ಕೋಡಂಗಿ [ಮು., ಮೂಕಾಭಿನಯದಲ್ಲಿ, ಮೃಗಗಳನ್ನಾಡಿಸುವ ಆಟಗಳಲ್ಲಿ (' ಸರ್ಕಸ್ ' ಆಟದಲ್ಲಿ)]. (ಕ್ರಿ.) — ಅಂತೆ ನಟಿಸು, ಆಡು. **Clównish** (ಗು.) ಹಳ್ಳಿಗನ; ಹಳ್ಳಿಗನಂಥ; ಒರಟು; ನಯವಿಲ್ಲದ; ದಡ್ಡ; ಏನೂ ಅರಿಯದ. **Clównishly** (ಕ್ರಿ. ವಿ.); **Clównishness** (ನಾ.); **Clównery** (ನಾ.) ಮೂಕಾಭಿನಯ, ಮೊ. ಗಳಲ್ಲಿ ಹಾಸ್ಯಗಾರನ ನಟನೆ, ನಕಲಿ.

Clox. **Clock**[2] ನೋಡಿ.

Cloy ಕ್ಲಾಯ್ (ಕ್ರಿ. ಸಕ.) (ಆಹಾರದ ರಸ ಸಂಪತ್ತಿ, ಸುಖ ಸಮೃದ್ಧಿ, ಮಾಧುರ್ಯ, ಏಕ ರೀತಿ — ಇವುಗಳ ಅತಿಶಯಾನುಭವದಿಂದ) ಬೇಸರಿಕೆಯುಂಟುಮಾಡು; ಮೀರಿ ತಣಿಸು; ವೆಗಟಾಗು; ಕಟ್ಟಡಚು; ಕಂಠಪೂರ್ತಿಯಾಗು, ಮಾಡು. (ಸಾ., *with* ಉಪ. ದೊಡನೆ)

Club ಕ್ಲಬ್ (ನಾ.) ಗದೆ; ಲಟ್ಟ; ದೊಣ್ಣೆ (Indian clubs ಕಸರತ್ತು ಮಾಡುವ ಕರ್ರೆಲಗಳು. C.-law ದೊಣ್ಣೆಯ ನ್ಯಾಯ; ಬಲಾತ್ಕಾರದಿಂದ ನಡಸುವ ಆಡಳಿತ). (ಗಾಲ್ಫ್, ಮೊ. ಆಟಗಳಲ್ಲಿ ಉಪಯೋಗಿಸುವ) ದಾಂಡು. (ಸ. ವಿ.) ಒಂದು ಕೊನೆಯಲ್ಲಿ ಗುಬುಟು ಇರುವ ರಚನೆ, ಅಂಗ [C.-foot(ed) ಹುಟ್ಟಿದಂದಿನಿಂದಲೂ ಸೊಟ್ಟ ಪಾದ (ಉಳ್ಳ); ಅಜನ್ಮ ವಕ್ರಪಾದ, ಪಾದಿ. C.-moss ಒಂದು ತೆರದ ಪಾಚಿ. C.-root ಗಾಜಿನ ಗೆಡ್ಡೆ, ಮೊ. ಕ್ಕೆ ಬರುವ ಒಂದು ವ್ಯಾಧಿ]. ಇಸ್ಪೀಟಿನ ಕಳಾವರ್ ಎಲೆ (Clubs ಕಳಾವರು ರಂಗು). (ಒಂದು ಉದ್ದೇಶಕ್ಕಾಗಿ ಕರೆತ, ಎಲ್ಲ ಸದಸ್ಯರ ಹಿತಕ್ಕಾಗಿ, ಸಹಕಾರಕ್ಕಾಗಿ, ಆಗಾಗ ಸೇರುವ) ಸಂಘ, ಸಮಾಜ, ಕೂಟ (Golf c., Benefit c.); (ಸಾ., ಹೊಸಬರನ್ನು ಸೇರಿಸಲು ಸದಸ್ಯರೆಲ್ಲರೂ ಒಪ್ಪಿಗೆ ಕೊಡಬೇಕಾದ) ವಿಹಾರ ಸಂಘ (ಇಂಥ ಸಂಘಕ್ಕೆ ಒಂದು ಮನೆಯಿದ್ದು, ಅದರಲ್ಲಿ ತಿಂಡಿ ತೀರ್ಥಗಳಿಗೂ ಆಟಪಾಟಗಳಿಗೂ, ಸದಸ್ಯರ ತಾತ್ಕಾಲಿಕ ವಾಸಕ್ಕೂ, ಏರ್ಪಾಡಿರುವುದು). C.-house ಸಂಘಾಲಯ. **Clúbdom** (ನಾ.) ಸಂಘಸ್ಥಿತಿ; ಸಂಘಗಳು. **Clúbless** (ಗು.)

Club (ಕ್ರಿ.) ದೊಣ್ಣೆಯಿಂದ ಹೊಡೆ, ಬಡಿ, ಚೆಚ್ಚು. ಬಂದೂಕಿನ ತಲೆಯಿಂದ ಚೆಚ್ಚು. ಒಟ್ಟುಗೂಡು; — ಗೂಡಿಸು; ಒಂದಾಗು; ಒಂದುಗೂಡಿಸು. (ಒಟ್ಟಾಗಿ ಕೆಲಸಮಾಡುವುದಕ್ಕಾಗಿ) ಒಟ್ಟುಗೂಡು; ಸೇರು. ಸಂಘ ಸೇರು. (ಸೈನ್ಯ) ಜನರನ್ನು ಮಂದೆಗೂಡಿಸು. **Clúbbable** (ಗು.) ಸಂಘ ಯೋಗ್ಯ.

Cluck ಕ್ಲಕ್ (ನಾ., ಕ್ರಿ. ಅಕ.) ಹೇಂಟೆಯ ' ಕ್ಲಕ್ ' ಎಂಬ ಗಂಟಲ ಶಬ್ದ(ಮಾಡು). **Clúcky** (ಗು.) = Clocking.

Clue ಕ್ಲೂ, ಕ್ಲ್ಯೂ (ನಾ.) ಯಾವುದಾದರೂ ವಿಚಾರದಲ್ಲಿ ಮಾರ್ಗದರ್ಶಕವಾಗಿರುವ ಸಂಗತಿ ಅಥವಾ ತತ್ತ್ವ; ಸುಳು; ಸುಳಿವು; ಗುಟ್ಟು; ಸೂಚನೆ; ಸೂಕ್ಷ್ಮ; ಜಾಡು. ಕಥಾಸರಣಿ; ಆಲೋಚನಾ ಸರಣಿ. **Clueless** (ಗು.)

Clump ಕ್ಲಂಪ್ (ನಾ., ಕ್ರಿ.) ಪೊದೆ; ಮೆಳೆ; ಮರಗಳ ಗುಂಪು; ತೋಪು (ಸಾ., *of* ಉಪ. ದೊಡನೆ). ಪಾದರಕ್ಷೆಯ ಅಡಿಗೆ ಹೆಚ್ಚಾಗಿ ಸೇರಿಸಿದ ಅಟ್ಟೆ: ಹೆಚ್ಚಟ್ಟೆ (= C.-sole). (ಕ್ರಿ.) ದಟ್ಟಡಿಯಿಡು, ಒತ್ತಾಗಿ, ಗುಂಪಾಗಿ, ನೆಡು. ಪಾದರಕ್ಷೆಗೆ ಹೆಚ್ಚಟ್ಟೆ ಹಾಕು.

Clúmsy ಕ್ಲಂಸಿ(ಜಿ) (ಗು.) (ಚಲನೆಯಲ್ಲಾಗಲಿ ಆಕಾರದಲ್ಲಾಗಲಿ) ಒಡ್ಡೊಡ್ಡಾದ, ವಿಕಾರವಾದ, ಅಂದಗೇಡಾದ; ನಾಜೂಕಿಲ್ಲದ; ಅಚತುರ. **Clúmsily** (ಕ್ರಿ. ವಿ.); **Clúmsiness** (ನಾ.)

Clung. **Cling** ನೋಡಿ.

Clúster ಕ್ಲಸ್ಟರ್ (ನಾ., ಕ್ರಿ.) (ಸಾ., ಒಟ್ಟಾಗಿ ಬೆಳೆಯುವ) ವಸ್ತುಗಳ ಸಮುದಾಯ; ಗೊನೆ; ಗೊಂಚಲು; ಗುದಿ; ಗುತ್ತಿ; ಜೊಂಪೆ; ಗುಚ್ಛ; ಕುಚ್ಚು. (ಮನುಷ್ಯರು, ಪ್ರಾಣಿಗಳು, ಮೊ. ಗಳ) ಗುಂಪು, ನೆರವಿ, ಗಡಣ; ಹಿಂಡು; ಮಂದೆ. (ಕ್ರಿ.) ಗುಂಪುಗೂಡಿಸು; ಗುಂಪಾಗು; ಗುಂಪಿನಲ್ಲಿರು; ಗೊಂಚಲಾಗು.

Clutch[1] ಕ್ಲಚ್ (ಕ್ರಿ., ನಾ.) ತಟಕ್ಕನೆ, ಭದ್ರವಾಗಿ, ಬಿಗಿಯಾಗಿ, ಹಿಡಿದುಕೊ. (ನಾ.) ಬಿಗಿಹಿಡಿತ (C.-fist ಜಿಪುಣ). (ಬ. ವ. ದಲ್ಲಿ) ಬಿಗಿಮುಷ್ಟಿ; ಕ್ರೂರ ಮುಷ್ಟಿ. ಕೆಲಸಮಾಡುತ್ತಿರುವ ಯಂತ್ರಭಾಗಗಳನ್ನು ಚಲನೆ ನಿಲ್ಲಿಸುವಂತೆ ಅಥವಾ ಮರಳಿ ಕೆಲಸಕ್ಕಾರಂಭಿಸುವಂತೆ ಅಳವಡಿಸುವ ಸಲಕರಣೆ; ಹಿಡಿಕೆ. ಭಾರವೆತ್ತುವ ಯಂತ್ರದ ಬಿಗಿಹಿಡಿ.

Clutch[2] ಕ್ಲಚ್ (ನಾ.) ಮೊಟ್ಟೆಗಳ ತಂಡ; ಮೊಟ್ಟೆಯೊಡ್ಡು. ಕೋಳಿ ಪಿಳ್ಳೆಗಳ ಹಿಂಡು.

Clútter ಕ್ಲಟರ್ (ನಾ., ಕ್ರಿ.) ಗಲಿಬಿಲಿ; ಗೊಂದಲ; ಗಾಬರಿ; ಅಸ್ತವ್ಯಸ್ತತೆ. ಈ ಸ್ಥಿತಿಯಲ್ಲಿ ಇರು, ಓಡಾಡು. (ಓರಣವಿಲ್ಲದೆ ಅಡ್ಡಾದಿಡ್ಡಿಯಾಗಿ ಎಸೆದಿರುವ, ಬಿದ್ದಿರುವ, ವಸ್ತುಗಳ) ಗುಂಪು, ರಾಶಿ, ಗುಡ್ಡೆ; — ಹಾಕು.

Clýster ಕ್ಲಿಸ್ಟರ್ (ನಾ., ಕ್ರಿ. ಸಕ.) (ವೈದ್ಯ, ಈಗ ಅರೂಢಿ) ಮಲಧಾವಕ ಸಲಕರಣೆ; ವಸ್ತಿ. (ಕ್ರಿ.) ವಸ್ತಿಕೊಡು.

Coacervátion ಕೊಆ್ಯಸರ್ವೇಷನ್ (ನಾ.) ರಾಶಿ (ಹಾಕುವುದು); ಗುಡ್ಡೆ(ಹಾಕುವುದು)

Coach ಕೋಚ್ (ನಾ.) ರಾಜ ರಥ; (ಒಳಗೂ ಮೇಲಂತಸ್ತಿನಲ್ಲೂ ಆಸನಗಳಿರುವ, ಸಾ., ನಾಲ್ಕು ಕುದುರೆ ಕಟ್ಟಿದ, ಪ್ರಯಾಣಿಕರನ್ನು ಗೊತ್ತಾದ ಬಾಡಿಗೆಗೆ ಕರೆದುಕೊಂಡುಹೋಗುವ, ಅಲ್ಲಲ್ಲಿ ಊಟ ವಸತಿಗಳಿಗೆ ತಂಗಿ ಕುದುರೆಗಳನ್ನು ಬದಲಾಯಿಸುವ ಏರ್ಪಾಡುಳ್ಳ) ನಾಲ್ಕು ಚಕ್ರದ ದೊಡ್ಡ ಬಂಡಿ: ' ಕೋಚು 'ಬಂಡಿ. ರೈಲ್‌ಗಾಡಿ (ರೈಲ್ವೆ ಅಧಿಕಾರಿಗಳ ಮಾತು). (ನಾವೆ) ಯುದ್ಧದ ಹಡಗಿನ ಹಿಂಭಾಗದಲ್ಲಿಯ ಕೋಣೆ. ಮನೆಯ ಉಪಾಧ್ಯಾಯ. ವ್ಯಾಯಾಮ ಶಿಕ್ಷಕ. Drive c. and six through Act of Parliament ಪಾರ್ಲಿಮೆಂಟಿನ ಕಾನೂನನ್ನು ಅಸಾರ್ಥಕ ಮಾಡು, ನಿರರ್ಥಕಗೊಳಿಸು. C.-box ಬಂಡಿಯವನ ಪೀಠ. C.-dog ಬಂಡಿಯೊಡನೆ ಓಡಿಬರುವುದಕ್ಕಾಗಿ ಇಟ್ಟಿರುವ ಒಂದು ಜಾತಿಯ ನಾಯಿ. C.-house ಬಂಡಿಯ ಮನೆ; ಗಾಡಿಖಾನೆ. **Coách-man** (ನಾ.) ಬಂಡಿ ಹೊಡೆಯುವವನು; ಗಾಡಿಯವನು; ಸಾರಥಿ. **Coáchmanship** (ನಾ.) ಬಂಡಿ ಹೊಡೆಯುವ ಚಾತುರ್ಯ. **Coáchful** (ನಾ.)

Coach (ಕ್ರಿ.) ಮಜಲುಬಂಡಿಯಲ್ಲಿ ಪ್ರಯಾಣ ಮಾಡು, ಮಾಡಿಸು (ಈ ಏರ್ಪಾಡಿದ್ದ ಹಿಂದಿನ ದಿನಗಳಲ್ಲಿ). (ವಿದ್ಯಾರ್ಥಿಯನ್ನು ಪರೀಕ್ಷೆಗೆ, ದೋಣಿಯ ನಾವಿಕರನ್ನು ದೋಣಿಜೂಜಿಗೆ) ತಯಾರುಮಾಡು. ಶಿಕ್ಷಣ ಕೊಡು. ಸಲಹೆ ಕೊಡು; (ಹೇಳಬೇಕಾದ ವಿಷಯಗಳನ್ನು) ಗಟ್ಟಿ ಮಾಡಿಸು. ಮನೆಯ ಉಪಾಧ್ಯಾಯನಿಂದ ಪಾಠ ಹೇಳಿಸಿಕೊ.

Coádjutant ಕೊಆ್ಯಡ್‌ಜ್ಯುಟಂಟ್, **Coadjútant** ಕೋಅಡ್‌ಜ್ಯೂಟಂಟ್ (ಗು., ನಾ.) ಸಹಾಯಕ; ಸಹಕಾರಿ; ನೆರವಿಗ.

Coádjutor ಕೊಅಡ್‌ಜ್ಯೂಟರ್ (ನಾ.) ಗಳಿತನಾದ ಬಿಷಪ್ಪಿಗೆ (ಕ್ರೈಸ್ತ ಮಠಾಧಿಪತಿಗೆ, ಮುಂದೆ ಆ ಸ್ಥಾನಕ್ಕೆ ನಿಯಮಿತನಾಗಬಹುದಾದ) ಸಹಾಯಕ.

Coádunate ಕೊಆ್ಯಡ್ಯುನೆಟ್ (ಗು.) (ಶ. ವಿ., ಸ. ವಿ.) ಅಂಟಿಕೊಂಡು ಬೆಳೆದ; ಆಗರ್ಭ ಸಂಯುಕ್ತ.

पुस्तकालय गुरुकुल काँगड़ी

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Coágulate ಕೊಯ್ಯಾಗ್ಯುಲೇಟ್ (ಕ್ರಿ.) ದ್ರವರೂಪದಿಂದ ಸರಿಸುಮಾರು ಘನರೂಪಕ್ಕೆ ತಿರುಗು, ತಿರುಗಿಸು ; ಹೆಪ್ಪುಗಟ್ಟು, ಗಟ್ಟಿಸು ; ಹೆತ್ತುಕೊ ; ಹೆತ್ತುಕೊಳ್ಳುವಂತೆ ಮಾಡು ; ಗರಣೆಯಾಗು, — ಯಾಗಿಸು ; ಘನೀಕರಿಸು ; ಘನಿಸು. **Coagulátion** (ನಾ.) ; **Coágulator** (ನಾ.) ಹೆಪ್ಪುಗಟ್ಟಿಸುವ ಪದಾರ್ಥ = **Coágulant** — ಲಂಟ್ (ನಾ.)

Coal ಕೋಲ್ (ನಾ.) ಭೂಮಿಯ ತಳಗಡೆ ಸಸ್ಯಪದಾರ್ಥಗಳು ಇಂಗಾಲವಾಗಿ ಮಾರ್ಪಟ್ಟು, ಮೇಲಿನ ಒತ್ತಡದಿಂದ ಗಟ್ಟಿಯಾಗಿ, ಸರುವುಗಳಲ್ಲಿ ಅಥವಾ ಪದರಗಳಲ್ಲಿ ದೊರೆಯುವ, ಉರಿಸುವುದಕ್ಕೂ ಜ್ವಲನಾನಿಲ, ಟಾರು, ಮೊ. ಪದಾರ್ಥಗಳನ್ನು ತಯಾರಿಸುವುದಕ್ಕೂ ಉಪಯೋಗವಾಗುವ, ಅಚ್ಚಕಪ್ಪಿನ ಅಥವಾ ನಸು ಕಪ್ಪುಬಣ್ಣದ, ಕಲ್ಲಿನಂತೆ ಗಟ್ಟಿಯಾಗಿರುವ, ಅಪಾರದರ್ಶಕ ಖನಿಜ : ಕಲ್ಲಿದ್ದಲು. Coals ಕಲ್ಲಿದ್ದಲಿನ ಕೆಂಡ. Blow the coals ಉರಿಹೊತ್ತಿಸು ; ಉರುವು (ರೂಪ.) : ರಾಗೋದ್ರೇಕಗೊಳಿಸು ; ಕೆರಳಿಸು. Carry coals to Newcastle ಬೆಟ್ಟಕ್ಕೆ ಕಲ್ಲುಹೊರು (ರೂಪ.) : ಅನಾವಶ್ಯಕವಾದ ಕೆಲಸ ಮಾಡು. Haul, call, over the coals ಆಕ್ಷೇಪಿಸು ; ವಾಗ್ದಂಡನೆ ಮಾಡು. Heap coals of fire ಕೇಡುಕು ಮಾಡಿದುದಕ್ಕೆ ಪ್ರತಿಯಾಗಿ ಉಪಕಾರ ಮಾಡಿ ಪಶ್ಚಾತ್ತಾಪ ಹುಟ್ಟಿಸು ; ಅಪಕಾರಕ್ಕೆ ಉಪಕಾರ ಮಾಡು. **C.-bed, -seam** ಕಲ್ಲಿದ್ದಲಿನ ಸ್ತರ, ಸರುವು. **C.-black** ಅಚ್ಚ ಕಪ್ಪು; ಕಗ್ಗಪ್ಪು. **C.-box, -scuttle, -vase** ಕಲ್ಲಿದ್ದಲ ಪಾತ್ರೆ. **C.-box** (ಸೈನಿಕ ಆಸಂ.) ಕಪ್ಪುಹೊಗೆಯನ್ನು ಉಗುಳುವ ಜರ್ಮನರ ಸಿಡಿಗುಂಡು. **C.-bunker** ಹಡಗಿನ ಕಲ್ಲಿದ್ದಲ ತೊಟ್ಟಿ. **C.-dust** ಕಲ್ಲಿದ್ದಲ ಪುಡಿ, ದೂಳು. **C.-factor** ಕಲ್ಲಿದ್ದಲ ದಲ್ಲಾಳಿ. **C.-field** ಕಲ್ಲಿದ್ದಲ ಪ್ರದೇಶ. **C.-fish** 'ಕಾಡ್' ಎಂಬ ಜಾತಿಗೆ ಸೇರಿದ ಒಂದು ಕಪ್ಪು ಕಡಲ ಮೀನು. **C.-flap, -plate** ನೆಲದಲ್ಲಿ ತೆರೆಯುವ, ಕಲ್ಲಿದ್ದಲ ಹಗೇವಿನ ಮುಚ್ಚಳ. **C.-gas** ಕಲ್ಲಿದ್ದಲಿನಿಂದ ತೆಗೆದು ಬೆಳಕಿಗೂ ಉರಿಸುವುದಕ್ಕೂ ಉಪಯೋಗಿಸುವ ಅನಿಲಗಳ ಮಿಶ್ರಣ : ಕಲ್ಲಿದ್ದಲ ಅನಿಲ. **C.-heaver** ಕಲ್ಲಿದ್ದಲನ್ನು ಸಾಗಿಸುವ ಕೂಲಿಯಾಳು (= **Coálie**). **C.-hole** ಕಲ್ಲಿದ್ದಲಿನ ಸಣ್ಣ ಹಗೇವು. **C.-master, -owner** ಕಲ್ಲಿದ್ದಲ ಗಣಿಯ ಗೇಣಿದಾರ, ಒಡೆಯ. **C. measures** (ಭೂ. ವಿ.) ಕಲ್ಲಿದ್ದಲ ಸರುವುಗಳಿಂದಲೂ ಅವುಗಳ ಮಧ್ಯೇ ಮಧ್ಯೇ ಇರುವ ಇತರ ಸ್ತರಗಳಿಂದಲೂ ಆದ ಬಂಡೆಗಳ ಸಾಲು. **C.-mine, -pit** ಕಲ್ಲಿದ್ದಲ ಗಣಿ. **C.-screen** ಕಲ್ಲಿದ್ದಲ ಚೂರುಗಳನ್ನು ಪುಡಿಯಿಂದ ಪ್ರತ್ಯೇಕಿಸುವ ಜರಡಿ : ಕಲ್ಲಿದ್ದಲ ಜರಡಿ. **C.-tar** 'ಬಿಟ್ಯೂಮೆನ್' ಎಂಬ ಕಲ್ಲಿದ್ದಲಿನಿಂದ ತೆಗೆದ ಟಾರೆಣ್ಣೆ. **C.-tit** ಕಪ್ಪುಬಣ್ಣದ ಒಂದು ಸಣ್ಣ ಪಕ್ಷಿ. **C.-whipper** ಹಡಗಿನ ತಳದಿಂದ ಕಲ್ಲಿದ್ದಲೆತ್ತುವ ಮನುಷ್ಯ, ಯಂತ್ರ. **Coálless** (ಗು.) ; **Coály** (ಗು.) ಕಲ್ಲಿದ್ದಲು ತುಂಬಿದ ; ಕಲ್ಲಿದ್ದಲಿನಿಂದ ಅಥವಾ ಅದರ ಪುಡಿಯಿಂದ ಮುಚ್ಚಲ್ಪಟ್ಟಿರುವ ; ಇಂಗಾಲಾತ್ಮಕ ; ಕಲ್ಲಿದ್ದಲ ಕಪ್ಪಿನ.

Coal (ಕ್ರಿ.) (ಹಡಗು, ಮೊ. ಕ್ಕೆ) ಕಲ್ಲಿದ್ದಲನ್ನು ಹಾಕು, ಕಲ್ಲಿದ್ದಲು ತುಂಬಿಕೊ.

Coalésce ಕೋಅಲೆಸ್ (ಕ್ರಿ. ಅಕ.) (ಮೂರ್ತ ಅಥವಾ ಅಮೂರ್ತ ವಸ್ತುಗಳು) ಒಂದಾಗು ; ಒಂದುಗೂಡು ; ಕಲೆ. (ರಾಜನೀತಿಜ್ಞರು, ಪಂಗಡಗಳು) ಏಕೀಭವಿಸು ; ಮಿಳಿತವಾಗು ; ಒಕ್ಕೂಟವಾಗು. **Coaléscence** (ನಾ.) ; **Coaléscent** (ಗು.) ; **Coalítion** (ನಾ.) ಮಿಳನ ; ಮೇಳನ ; ಏಕೀಭಾವ ; ಸಂಯೋಜನ. (ರಾಜ್ಯನೀತಿ) ಪ್ರತ್ಯೇಕ ತತ್ತ್ವಾನುಯಾಯಿಗಳು ಒಂದು ನಿರ್ದಿಷ್ಟ ಲಕ್ಷ್ಯಸಾಧನೆಗೋಸುಗ ತಾತ್ಕಾಲಿಕವಾಗಿ ಒಂದುಗೂಡುವುದು. **Coalítionist** (ನಾ.)

Coarse ಕೋರ್ಸ್ (ಗು.) ಸಾಮಾನ್ಯ ; ಕೀಳು ; ಒರಟು (C. fare ಕೀಳು, ಒರಟು, ತಿಂಡಿ) ; ನಯವಿಲ್ಲದ ; ಒಡ್ಡೊಡ್ಡಾದ ; (ರಚನೆಯಲ್ಲಿ) ನಾಜೂಕಿಲ್ಲದ, ಒತ್ತಾಗಿಲ್ಲದ ; ಸ್ಥೂಲ ; ದಪ್ಪ ; (ಪ್ರಜ್ಞೆಯಲ್ಲಿ, ನಡೆವಳಿಯಲ್ಲಿ, ಅಭಿರುಚಿಯಲ್ಲಿ) ಸೂಕ್ಷ್ಮತೆಯಿಲ್ಲದ, ಲಾಲಿತ್ಯವಿಲ್ಲದ ; ಅಸಂಸ್ಕೃತ ; ಮರ್ಯಾದೆಯಿಲ್ಲದ ; ಅಸಭ್ಯ ; (ಮಾತಿನಲ್ಲಿ) ಅಶ್ಲೀಲ. C.-fibred, -grained ಒರಟು ಎಳೆಗಳುಳ್ಳ ; ಒರಟು ಕಣಗಳುಳ್ಳ ; ತರಕಲಾದ ; ತರಿತರಿಯಾದ. (ರೂಪ.) ನಯನಾಜೂಕುಗಳಿಲ್ಲದ. **Coársely** (ಕ್ರಿ. ವಿ.) ; **Coársen** (ಕ್ರಿ.) ಒರಟಾಗಿ ಮಾಡು ; ಒರಟಾಗು. **Coárseness** (ನಾ.) ; **Coársish** (ಗು.) ಕೊಂಚ ಒರಟಾದ.

Coast ಕೋಸ್ಟ್ (ನಾ., ಕ್ರಿ. ಅಕ.) ಸಮುದ್ರದ ದಡ, ತೀರ ; ಕಡಲಕರೆ ; ಕರಾವಳಿ (= Sea-c.). [Clear c. (Clear ನೋಡಿ)]. (ಅಮೆ. ಸಂ., ಕ್ಯಾನಡ) (ಜಾರುಬಂಡಿಯಲ್ಲಿ ಜಾರುವ ಆಟಕ್ಕಾಗಿ) ನೀರ್ಗಲ್ಲಿನ ಇಳುಕಲು ; ಕಾಲ್ಬಂಡಿಯಮೇಲೆ, ಕಾಲಾಡಿಸದೆ ಅಥವಾ ಕಾಲನ್ನು ಮೇಲಕ್ಕೆತ್ತಿಕೊಂಡು ಹೋಗುವ, ಇಳಿಜಾರು ಸವಾರಿ. [C.-guard (-sman) ಸಮುದ್ರಾಧಿಕಾರಿಗಳ ಪರವಾಗಿರುವ ಕರೆಯ ಕಾವಲು, ಕರೆಯ ಕಾವಲನವನು]. (ಕ್ರಿ.) ತೀರಮಾರ್ಗವಾಗಿ ಸಮುದ್ರಪ್ರಯಾಣ ಮಾಡು ; ತೀರಪ್ರಯಾಣ ಮಾಡು ; ಒಂದೇ ತೀರದಲ್ಲಿಯ ರೇವು ಪಟ್ಟಣಗಳೊಡನೆ ವ್ಯಾಪಾರ ನಡಸು : ತೀರವ್ಯಾಪಾರ ಮಾಡು. ನೀರ್ಗಲ್ಲಿನ ಇಳುಕಲಿನಲ್ಲಿ ಜಾರುಬಂಡಿಯಲ್ಲಿ ಜಾರು. ಕಾಲ್ಬಂಡಿಯಲ್ಲಿ ಕಾಲೊತ್ತದೆ ಇಳಿಜಾರಿನಲ್ಲಿ ಹೋಗು. **Coáster** (ನಾ.) ತೀರದಲ್ಲೇ ಸಂಚರಿಸುವವನು, — ವದು : ತೀರ ಸಂಚಾರಿ (ಹಡಗು, ಅದರ ಒಡೆಯ, ಅಥವಾ ಅದರ ಚಾಲಕ). ಊಟದ ಮೇಜಿನಮೇಲೆ ಮದ್ಯದ ಸೀಸೆಯಿಡುವ ಬೆಳ್ಳಿಯ ತಟ್ಟೆ. ಬೈಸಿಕಲ್ಲಿನ ಮುಂಭಾಗದಲ್ಲಿಯ ಕವಲುಕಂಬಿಯಮೇಲೆ ಕಾಲನ್ನಿರಿಸಿಕೊಳ್ಳುವುದಕ್ಕಿರುವ ಆಧಾರ. ಸಮುದ್ರತೀರ ವಾಸಿ. ಮದ್ಯ, ಮೊ. ನ್ನು ತುಂಬಿಡುವ ಗಾಜಿನ ಪಾತ್ರೆಯ, ತಗ್ಗಾದ, ದುಂಡನೆಯ, ಆಧಾರ ಪೀಠ. (ಅಮೆ. ಸಂ.) ನೀರ್ಗಲ್ಲಿನ ಜಾರುಬಂಡಿಯ ಆಟಗಾರ; ಈ ಆಟದ ಜಾರುಬಂಡಿ.

Coat ಕೋಟ್ (ನಾ., ಕ್ರಿ. ಸಕ.) (ತೋಳುಳ್ಳ) ಅಂಗಿ ; (ಬಟ್ಟೆಯ) ಕವಚ. (ಪಾಶ್ಚಾತ್ಯ) ಹೆಂಗಸಿನ ದೊಡ್ಡಗುಂಡಿಗಳ ಮೇಲಂಗಿ ; ಕುಪ್ಪಸ ; ಕಂಚುಕ. ವಂಶರಾಂಛನದ ಬಿರುದನ್ನು ಚಿತ್ರಿಸಿರುವ ಕವಚ. ಮೃಗ, ಸಸ್ಯ, ದೇಹಾಂಗ, ಮೊ. ಗಳಿಗೆ ಸ್ವಾಭಾವಿಕವಾಗಿರುವ ಹೊರಚರ್ಮ ; ಹೊದಿಕೆ ; ಆವರಣ ; ಪೊರೆ ; ಹೊಟ್ಟು ; ಸಿಪ್ಪೆ ; ತೊಗಟೆ ; ಪದರ. ಮೃಗದ ಕೂದಲು. ರೋಮ ಕವಚ. (ಯಾವುದಾದರೂ ವಸ್ತುವಿನ ಮೈಮೇಲೆ ಸೇರಿರುವ ಪದಾರ್ಥದ) ಮುಚ್ಚಿಕೆ. ಒಂದು ಬಾರಿ ಮೇಲೆ ಬಳಿದ ಬಣ್ಣ, ಮೊ. ; ತೊಡೆತ ; ಬಳಿತ ; ಲೇಪ. (ರೂಪ. ಸಹ). (ಕ್ರಿ.) (ಬಣ್ಣ, ಮೊ. ನ್ನು) ಬಳಿ, ತೊಡೆ ; (ಬಣ್ಣ, ಮೊ.) ತೊಡೆದಿರು, ಬಳಿದಿರು. (ಭೂ. ಕೃ.) ದೂಳು, ಮೊ. ಮುಚ್ಚಿದ. Dust one's c. ಒಬ್ಬನನ್ನು ಬಡಿ, ಚಚ್ಚು. Trail one's c.-tails ಜಗಳ ಹೂಡಲು ಹಾದಿ ಹುಡುಕು ; ಕಾಲು ಕೆರೆದುಕೊಂಡು ಹೋಗು. Turn one's c. ಪಕ್ಷ ಬದಲಾಯಿಸು, ಬಿಟ್ಟುಹೋಗು. Wear the king's c. ಸಿಪಾಯಿಕೆಲಸ ಮಾಡು. C. armour ಶ್ರೀಮಂತ ವರ್ಗದ ವಂಶರಾಂಛನ. C. of arms (Arm[2] ನೋಡಿ). C.-card (ಈಗ, Court-c.) ಕವಚತೊಟ್ಟ ವ್ಯಕ್ತಿಚಿತ್ರಗಳುಳ್ಳ ಇಸ್ಪೀಟೆಲೆ (ರಾಜ, ರಾಣಿ, ಗುಲಾಮ). C. of mail ಉಕ್ಕಿನ ಕವಚ. Dress-c. ಪಾಶ್ಚಾತ್ಯರ ಸಾಯಂಕಾಲದ ಉಡುಪಾದ ಒಂದು ತೆರದ ಚೂಪುಕೊನೆಗಳುಳ್ಳ ಕವಚ. Greatcoat, Top-c. ಹೊರಗೆ ಹೋಗುವಾಗ ಕೆಲವು ಸಂದರ್ಭಗಳಲ್ಲಿ ಉಡುಪಿನಮೇಲೆ ಹಾಕಿಕೊಳ್ಳುವ ನಿಲುವಂಗಿ ; ಉದ್ದಂಗಿ ; ಮೇಲಂಗಿ. Red c. ಬ್ರಿಟಿಷ್ ಸಿಪಾಯಿಯ ಸಾಂಪ್ರದಾಯಿಕ ಅಧಿಕಾರ ಕವಚ. Redcoat (ನಾ.) ಸಿಪಾಯಿ. **-Coáted** (ಗು.) ; **Coátless** (ಗು.) ; **Coáting** (ನಾ.) ಬಣ್ಣ, ಮೊ. ಗಳ ಬಳಿತ, ಲೇಪ, ತೊಡೆತ. ಹೊದಿಕೆ. ಅಂಗಿಯ ಬಟ್ಟೆ.

Coax ಕೋಕ್ಸ್ (ಕ್ರಿ.) ಉಪಾಯದಿಂದ ಒಪ್ಪಿಸು ; ಪುಸಲಾಯಿಸು ; ಉಬ್ಬಿಸು ; ಮರುಳುಮಾಡು. C. a thing out of a person (ಒಬ್ಬನನ್ನು) ಉಬ್ಬಿಸಿ ಸೆಳೆ, ಹೊರಹೊರಡಿಸು. C. fire to light ಬೆಂಕಿ ಹೊತ್ತಿಕೊಳ್ಳುವಂತೆ ಉಪಾಯ ಮಾಡು, ಉರುವು. C. key into lock ಬೀಗದಕೈಯನ್ನು ಉಪಾಯದಿಂದ ಬೀಗದೊಳಕ್ಕೆ ಹೊಗಿಸು. C. away, out ಪುಸಲಾಯಿಸಿ ಹೊರಹೊರಡಿಸು. **Coáxer** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Coáxal, -ial ಕೊಆ್ಯಕ್ಸಲ್, — ಆ್ಯಕ್ಸಿಯಲ್ (ಗು.) (ಗಣಿತ) ಸಮಾನಾಕ್ಷ ; ಏಕಾಕ್ಷಕ.

Cob[1] ಕಾಬ್ (ನಾ.) ಗಂಡು ಹಂಸಪಕ್ಷಿ ; ಗಿಡ್ಡಗಾಲಿನ, ದೊಡ್ಡ ಹೊಟ್ಟೆಯ, ಸವಾರಿಕುದುರೆ [**Cóbby** (ಗು.)]. ಕಲ್ಲಿದ್ದಲು, ಮೊ. ಗಳ ದುಂಡನೆಯ ಮುದ್ದೆ, ಉಂಡೆ. ದುಂಡುತಲೆಯ ಪರಂಗಿರೊಟ್ಟಿ. ಮುಸುಕಿನ ಜೋಳದ (ತೆನೆಯ) ದಿಂಡು (= Corn-c.)

Cob[2] ಕಾಬ್ (ನಾ.) ಗೋಡೆಕಟ್ಟಲು ಜೇಡು, ಕಲ್ಲುಮಣ್ಣು, ಹುಲ್ಲು — ಇವನ್ನು ಒಟ್ಟಿಗೆ ಕಲಸಿ ಮಾಡಿದ ಬಂಧಕ ಪದಾರ್ಥ.

Cóbalt ಕೋಬಾಲ್ಟ್ (ನಾ.) 'ನಿಕಲ್'ಲೋಹವನ್ನು ಬಲುಮಟ್ಟಿಗೆ ಹೋಲುವ, ನಸುಗೆಂಪು ಛಾಯೆಯ ಬೂದುಬಣ್ಣದ, ಒಂದು ಲೋಹ (ಮೂಲಧಾತು). 'ಕೋಬಾಲ್ಟ್'. ಇದರಿಂದ ಮಾಡಿದ ದಟ್ಟನೀಲಿಯ ವರ್ಣದ್ರವ್ಯ. **Cobáltic** (ಗು.) ; **Cóbaltíferous** (ಗು.) ; **Cobáltous** (ಗು.)

Cóbble[1] ಕಾಬ್‌ಲ್ (ನಾ., ಕ್ರಿ. ಸಕ.) ನೆಲಗಟ್ಟಿಗೆ ಹಾಸಲು ತಕ್ಕ ಗಾತ್ರವಿರುವ, ನೀರಿನ ಹರಿತದಿಂದ ದುಂಡಾಗಿ ಸವೆದ, ಕಲ್ಲುಗುಂಡು (= C.-stone). (ಬ. ವ. ದಲ್ಲಿ) ಈ ಗಾತ್ರದ ಕಲ್ಲಿದ್ದಲ ತುಂಡುಗಳು. (ಕ್ರಿ.) ಕಲ್ಲುಗುಂಡುಗಳನ್ನು ನೆಲಕ್ಕೆ ಹಾಸು.

Cóbble[2] ಕಾಬ್‌ಲ್ (ಕ್ರಿ. ಸಕ.) ಒರಟೊರಟಾಗಿ ಜೋಡಿಸು ; (ಹರಿದು ಹೋಗಿರುವುದನ್ನು) ಭದ್ರಮಾಡು ; (ಜೋಡನ್ನು) ತೇಪೆಹಾಕಿ, ಹೊಲಿಗೆ ಹಾಕಿ, ಸರಿಮಾಡು. **Cóbbler** (ನಾ.) ಜೋಡು ಹೊಲಿಯುವವನು ; ಮೋಚಿ ; ಚಮ್ಮಾರ. ಒರಟೊರಟಾಗಿ ಕೆಲಸಮಾಡುವವನು ; ಅಡ್ಡಾದಿಡ್ಡಿಯ ಕೆಲಸದವನು ; ಅಡ್ಡಕಸಬಿ. ದ್ರಾಕ್ಷಾಮದ್ಯ, ಸಕ್ಕರೆ, ನಿಂಬೆಯ ಹುಳಿ — ಇವನ್ನು ಸೇರಿಸಿ, ನೀರ್ಗಲ್ಲಿನಿಂದ ತಂಪಿಸಿ, ಪೊಳ್ಳುಕಡ್ಡಿಯ ಮೂಲಕ ಹೀರಿಕೊಳ್ಳುವ ಒಂದು ಪಾನಕ. C.'s wax ದಾರಕ್ಕೆ ತೀಡುವ ರಾಳಮಿಶ್ರಿತವಾದ ಮೇಣ : ಮೋಚಿ ಮೇಣ.

Cóbdenism ಕಾಬ್ಡನಿಸ್‌ಮ್ (ನಾ.) ನಿರುಪಾಧಿಕ ವ್ಯಾಪಾರ, ಅಂತರ್ರಾಷ್ಟ್ರೀಯ ಸಹಕಾರ, ಶಾಂತಿ — ಇವುಗಳನ್ನು ಅವಲಂಬಿಸಿದ ರಾಜ್ಯನೀತಿ : ಕಾಬ್ಡನ್ ನೀತಿ. **Cóbdenite** (ಗು., ನಾ.) ಕಾಬ್ಡನ್ ಪಕ್ಷೀಯ. (Richard Cobden ಎಂಬ ಇಂಗ್ಲಿಷ್ ರಾಜನೀತಿಜ್ಞ ಮತ್ತು ಅರ್ಥಶಾಸ್ತ್ರಜ್ಞನ ಹೆಸರಿನಿಂದ)

Cóbra (de Capéllo) ಕೋಬ್ರ (ಡಿ ಕಪೆಲೊ) (ನಾ.) ನಾಗರ ಹಾವು (ರೇಗಿದಾಗ ಹೆಡೆಬಿಡುವ ಇಂಡಿಯಾದೇಶದ ವಿಷಸರ್ಪ)

Co-bróther ಕೋಬ್ರದರ್ (ನಾ.) ತನ್ನ ಕಸಬಿನವನು ; ಏಕೋದ್ಯೋಗಿ.

Cóbweb ಕಾಬ್‌ವೆಬ್ (ನಾ., ಗು.) ಜೇಡನ ಬಲೆ : ಜೇಡನ ಬಲೆಯ ಎಳೆ. ಜಾಳುಪದಾರ್ಥ. [(ಗು.) ನವಿರಾದ ; ಜಾಳಾದ]. ಗೋಜು ; ಸಿಕ್ಕು ; ತೊಡಕು. ಅತಿಯುಕ್ತಿಯ ತರ್ಕ ; ತರ್ಕಜಾಲ. ನೆಲಬೆಗಟ್ಟಿದ ಪದಾರ್ಥ ; ನೆತ್ತ ; ಕಸ ; (ರೂಪ. Cobwebs of the law, of antiquity ನ್ಯಾಯಶಾಸ್ತ್ರದ, ಪ್ರಾಚೀನತೆಯ, ಗೋಜು. Blow away the cobwebs ಬೆಳಕಿಗೂ ಗಾಳಿಗೂ ಒಡ್ಡಿ ಕಸಕೊಡಹು). **Cóbwebbed** (ಗು.) ; **Cóbwebby** (ಗು.) ; **Cóbwebbery** (ನಾ.) ಜೇಡನಬಲೆಯ ಹೆಣಿಗೆ.

Cóca ಕೋಕ (ನಾ.) ಬೊಲಿವಿಯಾ ದೇಶದ ಒಂದು ಹೊದರುಗಿಡ, ಅದರ ಎಲೆ (ಈ ಎಲೆಗಳನ್ನು ನರಗಳ ಉತ್ತೇಜನಕ್ಕಾಗಿ ಅಗಿದುತಿನ್ನುತ್ತಾರೆ) : 'ಕೋಕ.'

Cocaíne ಕೋಕೆಅಯ್ನ್, ಕೊಕೆಯ್ನ್ (ನಾ.) ದೇಹಭಾಗದಲ್ಲಿ ವೇದನಶಕ್ತಿಯನ್ನು ತಾತ್ಕಾಲಿಕವಾಗಿ ನಾಶಮಾಡುವ, 'ಕೋಕ' ಮೂಲಕೆಯಿಂದ ತಯಾರಿಸಿದ, ಕಹಿಯಾದ, ಒಂದು ಸಸ್ಯಕ್ಷಾರ : 'ಕೊಕೆಯ್ನ್'. **Cocaínism** (ನಾ.) ಕೊಕೆಯ್ನನ್ನು ಹೆಚ್ಚಾಗಿ ಅಥವಾ ರೂಢಿಯಾಗಿ ಉಪಯೋಗಿಸುವುದರಿಂದುಂಟಾಗುವ ರೋಗಸ್ಥಿತಿ : ಕೊಕೆಯ್ನ್ ವಿಕಾರ. **Cocaínize** (ಕ್ರಿ. ಸಕ.) ಕೊಕೆಯ್ನನ್ನು ಪ್ರಯೋಗಿಸು. **Cocainizátion** (ನಾ.)

Cóccyx ಕಾಕ್ಸಿಕ್ಸ್ (ನಾ.) ಮನುಷ್ಯನ ಬೆನ್ನುಹುರಿಯ ತಳಭಾಗದಲ್ಲಿಯ (ವಿಕಾಸ ಹೊಂದದಿರುವ ನಾಲ್ಕು ಎಲುಬುಗಳ ಸಂಯೋಜನದಿಂದಾದ) ತ್ರಿಕೋನಾಕಾರದ ಸಣ್ಣ ಮೂಳೆ ; ಹಕ್ಕಿ, ಮೊ. ಪ್ರಾಣಿಗಳಲ್ಲಿ ಇದಕ್ಕೆ ಜವಾಬಾಗಿರುವ ಮೂಳೆ : 'ಕಾಕ್ಸಿಕ್ಸ್'. **Coccýgeal** — ಜಿಯಲ್ (ಗು.) ಕಾಕ್ಸಿಕ್ಸ್ ಮೂಳೆಯ.

Cóchineal ಕಾಚಿನೀಲ್ (ನಾ.) ಮೆಕ್ಸಿಕೊ, ಮೊ. ದೇಶಗಳಲ್ಲಿ ಪಾಪಾಸುಕಳ್ಳಿಯ ಜಾತಿಯ ಗಿಡಗಳಮೇಲೆ ಬೆಳೆಯಿಸಿ, ಕೆಂಪುಬಣ್ಣವನ್ನು ತಯಾರಿಸುವುದಕ್ಕಾಗಿ ಉಪಯೋಗಿಸುವ ಒಂದು ಹುಳುವಿನ ಒಣ ಒಡಲು : ಕಿರುಮಂಜಿ.

Cóchlea ಕಾಕ್ಲಿಯ (ನಾ. ; ಬ. ವ. -leae) ಒಳಗಿವಿಯಲ್ಲಿರುವ ಶಂಖಾಕಾರದ ತಿರುಪುನಾಳ : ಕರ್ಣಶಂಖ.

Cock[1] ಕಾಕ್ (ನಾ.) ಹುಂಜ ; ಗಂಡು (ಹಕ್ಕಿ) [C. sparrow ಗಂಡು ಗುಬ್ಬಚ್ಚಿ. (ರೂಪ.) ಹಠಹಿಡಿದು ಕೆಲಸಮಾಡುವ ಚಟುವಟಿಕೆಯ ಗಿಡ್ಡ ಮನುಷ್ಯ ; ಪಟ್ಟುಬಿಡದೆ ಜಗಳಮಾಡುವವನು. C. lobster ಗಂಡು ಏಡಿ. Peacock ಗಂಡು ನವಿಲು]. (Woodcock ಎಂದು ಕರೆಯುವ ಒಂದು ಪಕ್ಷಿಜಾತಿಯ ಹೆಸರಿನ ಸಂಕ್ಷಿಪ್ತರೂಪ). ಹುಂಜನ ಕೂಗು. ವಾಯುಸ್ಥಿತಿ ಸೂಚಿ (Weather-c.). ನೀರು ಅಥವಾ ಇತರ ದ್ರವ ತುಂಬಿದ ಪಾತ್ರೆಯಿಂದ ಅಥವಾ ನಾಳದಿಂದ, ಬೇಕಾದಾಗ ದ್ರವ ಹರಿಯುವಂತೆಯೂ, ಬೇಡದಿರುವಾಗ ತಡೆದಿರುವಂತೆಯೂ ಅನುಗೊಳಿಸುವ ಸಲಕರಣೆ : ತಿರುಪುಬಿರಡೆ. (ಅಶ್ಲೀಲ) ಶಿಶ್ನ. ಬಂದೂಕಿನ ಕುದುರೆ, ಚಾಪು. ತಕ್ಕಡಿಯ ಮುಳ್ಳು : ತುಲಾಸೂಚಿ. ನಿದ್ದೆ ಮಾಡುತ್ತಿರುವವರನ್ನು ಎಬ್ಬಿಸುವವನು (ಮು., ಪಾದ್ರಿ). ಮುಂದಾಳು ; ತಲೆಯಾಳು ; ಮುಖ್ಯಸ್ಥ ; ನಾಯಕ. Live like fighting cocks ರಸಭೋಜನದಿಂದ ಬೆಳೆ. That c. won't fight ಆ ಆಟ ನಡೆಯುವುದಿಲ್ಲ ; ಆ ನೆಪ, ಹೂಟ, ಸಾಗುವುದಿಲ್ಲ. C.-a-doodle-doo ಹುಂಜದ ಕೂಗು ; (ಮಕ್ಕಳ ಭಾಷೆಯಲ್ಲಿ) ಹುಂಜ. C.-and-bull story ಕಾಗೆ ಗುಬ್ಬಿ ಕಥೆ ; ಅಜ್ಜಮ್ಮನ ಕಥೆ ; ಸ್ವಪ್ನನೆಯ ಸಮಾಚಾರ ; ನಂಬಲಾಗದ ಕಥೆ. C.-crow, -crowing ಕೋಳಿಕೂಗು ; ಮುಂಜಾನೆ ; ಉಷಃಕಾಲ ; ಹೊತ್ತಾರೆ. C.-fighting ಹುಂಜದ ಕಾಳಗ (This beats c.-fighting ಇದು ಪರಮಾನಂದಕರವಾಗಿದೆ). C.-nest ಹಕ್ಕಿಯ ಗೂಡು. C. of the north ಒಂದು ಪಕ್ಷಿಜಾತಿ. Cocks-comb ಕೋಳಿಜುಟ್ಟು ; ಕೆಲವು ಸಸ್ಯಜಾತಿಗಳು. Cocksfoot ಒಂದು ಜಾತಿಯ ಮೇವಿನ ಹುಲ್ಲು. Cockshead ಮೂರೆಲೆಯ ದಳದ ಕೆಲವು ಸಸ್ಯಜಾತಿಗಳು. C. of the school (ಪಾಠಶಾಲೆಯ ಹುಡುಗರಲ್ಲಿ) ಹಿರಿಯ ಮಣಿ. C.-shot, -shy ದಾಂಡು, ಕಲ್ಲು, ಮೊ. ನ್ನು ಎಸೆಯುವ ಆಟದ ಗುರಿ ; ಲಗ್ಗೆ ; ಗುರಿಯೆಸತ. Cockspur ಹುಂಜದ ಕಾಲಿನ ಹರಡು ; ಈ ಹರಡಿಗೆ ಕಟ್ಟುವ ಉಕ್ಕಿನ ಮುಳ್ಳು. ಈ ಆಕಾರದ ಅನಿಲಜ್ವಾಲಕ. C. of the walk ತನ್ನ ಕ್ಷೇತ್ರದಲ್ಲಿ ಪ್ರತಿಷ್ಠಾಪುರುಷ ; ಜಂಬದ ಕೋಳಿ. C. of the wood ಒಂದು ಪಕ್ಷಿಜಾತಿ. (Gun at) full-c. ಹಾರಿಸಲು ಸಿದ್ಧವಾಗಿರುವ (ಬಂದೂಕು). Game-c. ಕಾಳಗದ ಹುಂಜ. Old-c. (ಸಲಿಗೆಯ ಸಂಬೋಧನೆ)

Cock[2] ಕಾಕ್ (ಕ್ರಿ.) ನಿಗುರು ; ನಿಗುರಿಸು ; ನಿಮಿರು ; ನಿಮಿರಿಸು ; (ಚಟುವಟಿಕೆಯಿಂದ ಅಥವಾ ನಿರ್ಲಕ್ಷ್ಯತೆಯಿಂದ) ನಿಗುರಿ ನಿಲ್ಲು. ಬಂದೂಕನ್ನು ಹಾರಿಸಲು ಅದರ ಕುದುರೆಯನ್ನು ಎಳೆದು ಹಿಡಿ. C. the ears ಕೇಳುವುದಕ್ಕೆ ಕಿವಿ ನೆಟ್ಟಗೆ ಮಾಡಿಕೊ. C. one's eye (ಸಂದರ್ಭ ತಿಳಿದು) ಕಣ್ಣು ತಿರುಗಿಸು, ಕಣ್ಣು ಮಿಟುಕಿಸು ; ಕಣ್ಣನ್ನೆಮಾಡು. C. one's hat ಪರಂಗಿಟೋಪಿಯನ್ನು ತಲೆಯಮೇಲೆ ಒಂದು ಕಡೆಗೆ ಓರೆಯಾಗಿಟ್ಟುಕೊ ; ಪರಂಗಿಟೋಪಿಯ ಅಂಚನ್ನು ಮೇಲಕ್ಕೆ ಬಗ್ಗಿಸು. C. one's nose (ತಿರಸ್ಕಾರ ಸೂಚಕವಾಗಿ) ಮೂಗು ಸೊಟ್ಟಮಾಡು. Cocked

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

hat (ಹಿಂದಿನ ಕಾಲದಲ್ಲಿ, ಮೇಲಕ್ಕೆ ಬಗ್ಗಿಸಿದ ಅಂಚಿರುತ್ತಿದ್ದ, ಈಗ) ಅಂಚಿಲ್ಲದ, ಹಿಂದೆ, ಮುಂದೆ ಮತ್ತು ಮೇಲ್ಭಾಗದಲ್ಲಿ ಚೂಪಾಗಿರುವ ತ್ರಿಕೋನಾಕಾರದ ಪರಂಗಿಟೋಪಿ. Knock into a cocked hat ಮೊದಲನ ರೂಪು, ಮೊ. ತಿಳಿಯಲಾಗದಂತೆ ಜಜ್ಜಿಬಿಡು, ರೂಪುಗೆಡಿಸು.

Cock³ ಕಾಕ್ (ನಾ.) (ಮೂಗು, ಮೊ. ಗಳ) ಮೇಲ್ಕೊಂಕು. ಅರ್ಥ ಸೂಚಕವಾದ (ಕಣ್ಣು)ತಿರುವು; ಓರೆನೋಟ. ಪರಂಗಿಟೋಪಿಯನ್ನು ಓರೆಯಾಗಿಟ್ಟುಕೊಳ್ಳುವುದು. ಬಂದೂಕಿನ ಕುದುರೆಯನ್ನೆಳೆದು ಸಿದ್ಧ ಮಾಡಿರುವುದು.

Cock⁴ ಕಾಕ್ (ನಾ., ಕ್ರಿ. ಸಕ.) (ಹೊಲದಲ್ಲಿ ಹುಲ್ಲನ್ನು, ಅಪೂರ್ವವಾಗಿ ಧಾನ್ಯವನ್ನು, ಮೇಲ್ಭಾಗದಲ್ಲಿ ಚೂಪಾಗಿರುವಂತೆ) ಮೆದೆ(ಹಾಕು), ರಾಶಿ (ಹಾಕು)

Cockáde ಕಾಕೇಡ್ (ನಾ.) ಅಧಿಕಾರಸೂಚಕವಾದ ಅಥವಾ ಒಂದು ಪಕ್ಷಸೂಚಕವಾದ (ಗುಲಾಬಿಯ) ಹೂವಿನಾಕಾರದ ಲಾಂಛನ (ಮು., ಇಂಗ್ಲೆಂಡಿನ ದೊರೆಯ ಆಸ್ಥಾನದ ಅಧಿಕಾರಿಗಳ ಸೇವಕರು ಧರಿಸುವದು). **Cockáded** (ಗು.)

Cóck-a-hoóp ಕಾಕ್ ಅ ಹೂಪ್ (ಗು., ಕ್ರಿ. ವಿ.) ಸಂಭ್ರಮದಿಂದ, ಜಂಬದೊಡನೆ, ಕೇಕೆ ಹಾಕುತ್ತ.

Cockaígne, -aýne ಕಾಕೆಯ್ನ್ (ನಾ.) ದುಡಿಯದೆ ಸೋಮಾರಿಯಾಗಿದ್ದು ಭೋಗಪಡಬಹುದಾದ ಒಂದು ಕಾಲ್ಪನಿಕ ಪ್ರದೇಶ; ಸೋಮಾರಿಯ ಸ್ವರ್ಗ. ('ಕಾಕ್ನಿ' ಎಂಬ ಪದದ ಹೋಲಿಕೆಯಿಂದ, ಹಾಸ್ಯವಾಗಿ) ಲಂಡನ್ ಪಟ್ಟಣ.

Cockalórum ಕಾಕಲೋರಂ (ನಾ.) (ಬಳ. ಮೂ.) ತಾನು ಬಹಳ ಗಣ್ಯನೆಂದು ಅಹಂಭಾವವಿರುವ ಅಲ್ಪಮನುಷ್ಯ. High c. ಕಪ್ಪೆಕುಪ್ಪಳು ಆಟದಂಥ ಹುಡುಗರ ಒಂದು ಆಟ.

Cockatoó ಕಾಕಟೂ (ನಾ.) ಚಲಿಸಲಾಗುವ ಜುಟ್ಟುಳ್ಳ ಗಿಣಿಯ ಜಾತಿ; ಜುಟ್ಟಿನ ಗಿಣಿ.

Cóckatrice ಕಾಕಟ್ರೈಸ್, —ಟ್ರಿಸ್ (ನಾ.) ಒಂದು ಪೌರಾಣಿಕ ಸರೀಸೃಪ (= Basilisk)

Cóckboat ಕಾಕ್‌ಬೋಟ್ (ನಾ.) ಹಡಗಿನ ಸಣ್ಣ ದೋಣಿ (ಮು., ನದಿಯಲ್ಲಿ ಮೇಲಕ್ಕೂ ತಳಕ್ಕೂ ಸಂಚರಿಸುತ್ತಿರುವ ಹಡಗಿನ ಹಿಂದಕ್ಕೆ ಹಗ್ಗದಿಂದ ಕಟ್ಟಿ ಚಲಿಸುತ್ತಿರುವದು)

Cóckchafer ಕಾಕ್‌ಚೇಫರ್ (ನಾ.) ನಸುಗೆಂಪು ಬೂದುಬಣ್ಣದ ಒಂದು ಜಾತಿಯ ಜೀರುಂಡೆ.

Cócker¹ ಕಾಕರ್ (ಕ್ರಿ. ಸಕ.) (ಮಗು, ರೋಗಿ, ಮೊ. ನ್ನು) ಅತಿಯಾಗಿ ಉಪಚರಿಸು; (ಅವರಿಗೆ) ತಿಂಡಿತೀರ್ಥಗಳನ್ನು ಯಥೇಚ್ಛವಾಗಿ ಕೊಡು. (ಅವರನ್ನು) ಅತಿಲಾಲನೆ ಮಾಡು.

Cócker² ಕಾಕರ್ (ನಾ.) According to C. ಕಾಕರ್ ಎಂಬಾತನ ಅಭಿಪ್ರಾಯದಂತೆ: ಹೆಚ್ಚುಕಡಮೆಯಿಲ್ಲದೆ; ತಪ್ಪಿಲ್ಲದೆ; ಸರಿಯಾಗಿ; ಕರಾರುವಾಕ. (Edward Cocker ಎಂಬ ಪ್ರಸಿದ್ಧ ಅಂಕಗಣಿತೋಪಾಧ್ಯಾಯನು ಬರೆದು, ಬಹುಕಾಲ ಜನಪ್ರಿಯವಾಗಿದ್ದು, ಪಾಠಶಾಲೆಗಳಲ್ಲಿ ಉಪಯೋಗಿಸುತ್ತಿದ್ದ ಗಣಿತ ಪುಸ್ತಕದಿಂದ)

Cócker³ ಕಾಕರ್ (ನಾ.) 'ಸ್ಪ್ಯಾನಿಯಲ್' ಜಾತಿಯ ನಾಯಿ.

Cóckerel ಕಾಕೆರೆಲ್ (ನಾ.) ಎಳೆಯ ಹುಂಜ. ಮೇರೆಬೀಳುವ ಸ್ವಭಾವದ ಯುವಕ.

Cóck-eyed ಕಾಕ್ ಅಯ್ಡ್ (ಗು.) (ಅಸಂ.) ಮೆಳ್ಳಗಣ್ಣಿನ; ಮಾಲುಗಣ್ಣಿನ. ಸೊಟ್ಟನಾದ; ಓರೆಯಾದ; ಕೊಂಕಿದ; ವಕ್ರ.

Cóck-horse ಕಾಕ್ ಹಾರ್ಸ್ (ನಾ., ಗು., ಕ್ರಿ. ವಿ.) ಮಗು ಸವಾರಿಮಾಡುವ ಮರದ ತೂಗುಕುದುರೆ. ಹತ್ತಿ(ಕುಳಿತಿರುವ); ಇಕ್ಕಡೆಯಲ್ಲೂ ಕಾಲುಹಾಕಿಕೊಂಡು (ಕುಳಿತಿರುವ) (A-c.-h., On a c.-h.)

Cóckle¹ ಕಾಕ್‌ಲ್ (ನಾ.) ಧಾನ್ಯದ (ಮು., ಗೋಧಿಯ) ಪಯಿರಿನ ಮಧ್ಯೆ ಬೆಳೆಯುವ, ನೇರಿಳೆಬಣ್ಣದ ಹೂವುಬಿಡುವ, ಒಂದು ಕಳೆ. (ಕಾಳನ್ನು ಕಪ್ಪುತಿರುಗಿಸುವ) ಗೋಧಿಯ ಒಂದು ರೋಗ: ಕಾಡಿಗೆ ರೋಗ.

Cóckle² ಕಾಕ್‌ಲ್ (ನಾ.) ಆಹಾರವಾಗಿ ಉಪಯೋಗಿಸುವ ಕೀಲುಚಿಪ್ಪಿನ ಪ್ರಾಣಿ; ಇದರ ಚಿಪ್ಪು (= C.-shell). ಸಣ್ಣ ಚಪ್ಪಟೆಯ ದೋಣಿ (= C.-boat, -shell). Cockles of the heart ಭಾವನೆ; ಮನಸ್ಸು; ಹೃದಯ (Delight, warm, the cockles ಮನಸ್ಸಂತೋಷಗೊಳಿಸು; ಉತ್ಸಾಹಗೊಳಿಸು)

Cóckle³ ಕಾಕ್‌ಲ್ (ಕ್ರಿ., ನಾ.) ಉಬ್ಬುವಂತೆ ಮಾಡು; ಸುರುಟಿಸು; ಸುರುಟಿಕೊ; ಸುಕ್ಕಾಗಿಸು; ಸುಕ್ಕಾಗು. (ನಾ.) (ಕಾಗದ, ಗಾಜು, ಮೊ. ಗಳಲ್ಲಿ) ಉಬ್ಬು, ಸುಕ್ಕು.

Cóckle⁴ ಕಾಕ್‌ಲ್ (ನಾ.) ಕೋಣೆಯನ್ನು ಬೆಚ್ಚಗೆಮಾಡುವುದಕ್ಕಾಗಿ ಉಪಯೋಗಿಸುವ ಅಗ್ಗಿಷ್ಟಿಗೆ.

Cóck-loft ಕಾಕ್ ಲಾಫ್ಟ್ (ನಾ.) ಸಣ್ಣ ಮೇಲಟ್ಟ.

Cóckney ಕಾಕ್ನಿ (ನಾ., ಗು.) ಲಂಡನ್ನಿನಲ್ಲಿ ಹುಟ್ಟಿ ಬೆಳೆದವನು; ಲಂಡನ್‌ಪಟ್ಟಣಿಗ(ನ ಲಕ್ಷಣದ) (ಸಾ., ತಿರಸ್ಕಾರ ಸೂಚಕವಾಗಿ; ಮು., C. accent ಲಂಡನ್‌ಪಟ್ಟಣಿಗನ ಉಚ್ಚಾರಣೆ). **Cóckneydom** (ನಾ.) ಕಾಕ್ನಿ ಪ್ರಪಂಚ; ಕಾಕ್ನಿಗಳು. **Cockneyése** —ಈಸ್(ಸ್) (ನಾ.) ಕಾಕ್ನಿ ಭಾಷೆ. **Cóckneyfy** (ಕ್ರಿ. ಸಕ.) ಕಾಕ್ನಿಯಾಗಿ ಮಾಡು; ಕಾಕ್ನಿಯಾಗು. **Cóckneyish** (ಗು.) ಕಾಕ್ನಿ ಸೂಚನೆಯುಳ್ಳ; ಕಾಕ್ನಿ ಗಂಧವುಳ್ಳ. **Cóckneyism** (ನಾ.) ಕಾಕ್ನಿತನ; ಕಾಕ್ನಿ ವೈಶಿಷ್ಟ್ಯ. **Cóckneyize** (ಕ್ರಿ.) ಕಾಕ್ನಿಯಾಗಿ ಮಾಡು; ಕಾಕ್ನಿಯಾಗಿ ವರ್ತಿಸು; ಕಾಕ್ನಿ ವೈಶಿಷ್ಟ್ಯಗಳನ್ನು ಪ್ರಯೋಗಿಸು.

Cóckpit ಕಾಕ್‌ಪಿಟ್ (ನಾ.) ಹುಂಜದ ಕಾಳಗದ ಅಖಾಡ. ಕಾಳಗದ ಕಣ. ಹಡಗಿನಲ್ಲಿ ಉಪ ಅಧಿಕಾರಿಗಳ ವಾಸಸ್ಥಾನ (ಯುದ್ಧದಲ್ಲಿ ಆಸ್ಪತ್ರೆಯಾಗಿ ಉಪಯೋಗಿಸುವದು). ಫಲಕ ವ್ಯೋಮಯಾನದ ಆಯ ಭಾಗದಲ್ಲಿ ಚಾಲಕ, ಮೊ. ರಿಗಾಗಿ ಮಾಡಿರುವ ಸ್ಥಳ.

Cóckroach ಕಾಕ್ರೋಚ್ (ನಾ.) ಅಡಿಗೆಯಮನೆಯ ಗೂಡುಗಳಲ್ಲಿ ಸೇರಿ ಆಹಾರಪದಾರ್ಥಗಳನ್ನು ತಿಂದು ಹೇಸಿಕೆಮಾಡುವ, ರಾತ್ರಿ ಸಂಚಾರದ, ಕೆಂಪುಗೂಡಿದ ಕಪ್ಪುಬಣ್ಣದ, ಜೀರುಂಡೆಯ ಜಾತಿ: ಜಿರಲೆ; ತೊಂಡಂಗಿ.

Cóck-súre ಕಾಕ್ ಷೂರ್ (ಗು.) ಖಂಡಿತ; ನಿಸ್ಸಂದೇಹ; ನಿಸ್ಸಂಶಯ; ಪೂರ್ಣಧೈರ್ಯವಸೆಯುಳ್ಳ. ಆತ್ಮವಿಶ್ವಾಸವುಳ್ಳ. **Cocksúreness** (ನಾ.)

Cócksy, Cóxy, Cóxiness = Cocky, etc.

Cócktail ಕಾಕ್‌ಟೆಯ್‌ಲ್ (ನಾ., ಗು.) (ಜೂಜುಕುದುರೆಯ ಲಕ್ಷಣಗಳುಳ್ಳ, ಆದರೆ ಶುದ್ಧಜಾತಿಯದಲ್ಲದ) ಮೊಂಡುಬಾಲದ (ಕುದುರೆ). ತನ್ನ ವಂಶ ಅಥವಾ ಶಿಕ್ಷಣಕ್ಕೆ ತಕ್ಕ ಪದವಿಗಿಂತಲೂ ಉತ್ತಮ ಪದವಿಗೆ ಏರಿಸಲ್ಪಟ್ಟ(ವನು). ಒಂದು ಬಗೆಯ ಜೀರುಂಡೆ. ಕೆಲವು ಕಹಿಪದಾರ್ಥಗಳು, ಸಕ್ಕರೆ, ಮೊ. ನ್ನು ಮದ್ಯಕ್ಕೆ ಹಾಕಿ ಮಾಡಿದ ಪಾನೀಯ. **Cóck-tailed** (ಗು.)

Cóck-up ಕಾಕ್ ಅಪ್ (ನಾ.) (ಮುದ್ರಣ) ಉಳಿದ ಅಕ್ಷರಗಳಿಗಿಂತ ದೊಡ್ಡದಾಗಿರುವ ಆದ್ಯಕ್ಷರ.

Cócky ಕಾಕಿ, **Cócksy, Cóxy** ಕಾಕ್ಸಿ (ಗು.) ಅಹಂಕಾರವುಳ್ಳ; ಅಹಂಭಾವದ; ಅಧಿಕಪ್ರಸಂಗದ; ಅತಿಪ್ರತಿಷ್ಠೆಯ; ಮೆರೆಯುವ. **Cóckily** (ಕ್ರಿ. ವಿ.); **Cóxily** (ಕ್ರಿ. ವಿ.); **Cóckiness** (ನಾ.); **Cóxiness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cóco, Cócoa[1] ಕೋಕೊ (ನಾ.), **Cóker** ಕೋಕರ್ (ನಾ.) ತೆಂಗು ; ತೆಂಗಿನ ಗಿಡ (C.-nut, C.-tree, C.-nut-tree). C.-nut ತೆಂಗಿನ ಕಾಯಿ (C.-nut milk ಎಳನೀರು. C.-nut butter ಕೊಬ್ಬರಿ ತುಪ್ಪ); (ಅಸಂ.) ಮನುಷ್ಯನ ತಲೆಕಾಯಿ. That accounts for the milk in the c.-nut (ಹಾಸ್ಯವಾಗಿ) ಈಗ ಎಲ್ಲ ತಿಳಿಯಿತು. C.-nut matting ತೆಂಗಿನ ನಾರಿನ ಹಾಸು, ತಟ್ಟು, ಪಟ್ಟೆ.

Cócoa[2] ಕೋಕೊ (ನಾ.) (ಸಾ., ಇತರ ಸಾಮಗ್ರಿಗಳೊಡನೆ ಸೇರಿಸಿದ) ಕಕೇವೊ ಬೀಜದ ಪುಡಿ ; ಇದರಿಂದ (ಅಥವಾ ಕಕೇವೊ ಬೀಜದಿಂದ) ಮಾಡಿದ ಪಾನೀಯ : 'ಕೋಕೊ.' C. bean ಕಕೇವೊ ಬೀಜ. C. nib ಕಕೇವೊ ಬೇಳೆ. C. powder ಒಂದು ತೆರದ ಬಂದೂಕಿನ ಮದ್ದು.

Cocoón ಕೊಕೂನ್ (ನಾ., ಕ್ರಿ.) ಒಂದು ಕ್ರಿಮಿಯ ಮರಿಹುಳು ತನ್ನ ಮುಂದಿನ (ಪೊರೆಹುಳುವಿನ) ಅವಸ್ಥೆಯ ನಿಶ್ಚಲಸ್ಥಿತಿಯಲ್ಲಿ ದೇಹ ರಕ್ಷಣೆಗಾಗಿ ತನ್ನ ಸುತ್ತಲೂ ಹೆಣೆದುಕೊಳ್ಳುವ ರೇಷ್ಮೆಯ ದಾರದ ಗೂಡು (ಮು., ರೇಷ್ಮೆಯ ಹುಳುವಿನದು); ರೇಷ್ಮೆಯ ಗೂಡು. ಇತರ ಜಾತಿಯ ಪ್ರಾಣಿಗಳು (ಉದಾ., ಜೇಡರ ಹುಳು, ಜಿಗಣೆ, ಎರೆಹುಳು, ಮೊ.) ತಮ್ಮ ಅಥವಾ ತಮ್ಮ ಮೊಟ್ಟೆಗಳ ರಕ್ಷಣೆಗಾಗಿ ರೇಷ್ಮೆಯಿಂದಲೊ ತಮ್ಮ ಜೊಲ್ಲಿನಿಂದಲೊ ಕಟ್ಟುವ ಗೂಡು. (ಕ್ರಿ.) — ಗೂಡುಕಟ್ಟು. **Cocoónery** — ನರಿ (ನಾ.) ರೇಷ್ಮೆಯ ಹುಳುವನ್ನು ಸಾಕುವ ಕೋಣೆ.

Cod[1] ಕಾಡ್ (ನಾ., ಕ್ರಿ.) ಒಂದು ಜಾತಿಯ ದೊಡ್ಡ ಕಡಲುಮೀನು (= C.-fish). [C.-bank ಕಾಡ್‌ಮೀನು ಹೆಚ್ಚಾಗಿ ಸೇರುವ ಸಮುದ್ರ ಪ್ರದೇಶ. C.-liver oil ಕಾಡ್‌ಜಾತಿಯ ಮೀನಿನ ಯಕೃತ್ತಿನಿಂದ ತೆಗೆದು ಔಷಧವಾಗಿ ಉಪಯೋಗಿಸುವ ಎಣ್ಣೆ : ಕಾಡ್ ಮೀನೆಣ್ಣೆ]. (ಕ್ರಿ.) ಕಾಡ್‌ಮೀನನ್ನು ಹಿಡಿ. **Códling** (ನಾ.) ಸಣ್ಣ ಕಾಡ್‌ಮೀನು.

Cod[2] ಕಾಡ್ (ಕ್ರಿ.) (ಅಸಂ.) ಕಣ್ಣಿಗೆ ಮಣ್ಣೆರಚು.

Cod[3] ಕಾಡ್ (ನಾ.) (ಸ್ಕಾಚ್ ಮತ್ತು ಪ್ರಾಂತಿಕ ಇಂಗ್ಲಿಷ್) ಮೆತ್ತೆ ; ದಿಂಬು. ಸಣ್ಣ ಚೀಲ ; ಸಂಚಿ. ಹೊಟ್ಟು ; (ಕಾಳಿನ) ಸಿಪ್ಪೆ ; ಬೀಜಕೋಶ. ವೃಷಣ (ನಭ್ಯಪ್ರಯೋಗವಲ್ಲ). (ತಿರುಗುವ) ಅಚ್ಚಿನ ಆಶ್ರಯ ಭಾಗಗಳಲ್ಲೊಂದು.

Códdle ಕಾಡ್‌ಲ್ (ಕ್ರಿ. ಸಕ., ನಾ.) ರೋಗಿಯಂತೆ ಉಪಚರಿಸು ; ಅತ್ಯುಪಚಾರ ಮಾಡು ; ಅತಿಯಾಗಿ ತಿನ್ನಿಸು ; ಚಳಿ ಸೇರದಂತೆಯೂ ದೇಹಶ್ರಮವಾಗದಂತೆಯೂ ನೋಡಿಕೊ. (ಮೊಟ್ಟೆ, ಹಣ್ಣು, ಮೊ. ನ್ನು) ನೀರಿನಲ್ಲಿ, ಹೆಚ್ಚು ಶಾಖಕೊಡದಂತೆ, ಸಾವಕಾಶವಾಗಿ ಬೇಯಿಸು. (ಪ್ರಾಂತಿಕ) (ಸೇಬು, ಮೊ. ನ್ನು) ಒಲೆಯಲ್ಲಿ ಸುಡು. (ನಾ.) ಅತ್ಯುಪಚಾರ ಮಾಡಿಕೊಳ್ಳುವವನು ; — ಮಾಡುವವನು.

Code ಕೋಡ್ (ನಾ.) ಕ್ರಮವನ್ನನುಸರಿಸಿ ಕೂಡಿಸಿದ ಕಾನೂನುಗಳ ಸಂಗ್ರಹ. ಕ್ರೋಡೀಕರಿಸಿದ ನ್ಯಾಯಸೂತ್ರಗಳು. [**Códify** ಕೋಡಿಫೈ, ಕಾ — (ಕ್ರಿ. ಸಕ.) (ನ್ಯಾಯನಿಯಮಗಳನ್ನು) ಕ್ರೋಡೀಕರಿಸು. **Códifier** (ನಾ.); **Codificátion** (ನಾ.)]. ಯಾವುದಾದರೂ ವಿಷಯದಲ್ಲಿ ರಚಿಸಿದ ನಿಯಮಸಂಗ್ರಹ; ನಿಯಮ ; ನಿಬಂಧನೆ. ಒಂದು ಸಮಾಜದ ಅಥವಾ ಪಂಗಡದ ಸಮುದಾಚಾರ, ನೀತಿ, ನಿಯಮ (ಮು., C. of honour ಸಂಭಾವಿತ ನೀತಿ ; ಸಮುದಾಚಾರ). ಸೈನಿಕ ಅಥವಾ ನಾವಿಕ ಸಂಕೇತ. (ತಂತಿವರ್ತಮಾನ) ಸಂಕ್ಷೇಪಕ್ಕಾಗಿ ಅಥವಾ ಗುಟ್ಟಿಗಾಗಿ, ಸಹಜಾರ್ಥವಿಲ್ಲದೆ ಸ್ವಚ್ಛಂದವಾಗಿ ಸೇರಿಸಿ ಮಾಡಿದ ಅಕ್ಷರಗಳ ಅಥವಾ ಅಂಕಿಗಳ ಗಣ : ಸಂಕೇತ ಭಾಷೆ ; ಸಂಕೇತ. (ಕ್ರಿ.) (ಸಮಾಚಾರವನ್ನು) ಸಂಕೇತದಲ್ಲಿ ಹಾಕು (= Codify)

Codeclinátion ಕೋಡೆಕ್ಲಿನೇಷನ್ (ನಾ.) (ಖ. ವಿ.) ಖಗೋಳ ವಿಷುವದ್ರೇಖೆಯಿಂದಿರುವ ಕೋನದೂರದ (ಅಥವಾ ಕ್ರಾಂತಿಯ) ಅನುಪೂರಕ ; ಕೋಟಿ ಕ್ರಾಂತಿ. (ಉತ್ತರ) ಧ್ರುವದೂರ.

Códeine ಕೋಡಿಇನ್ (ನಾ.) (ಮತ್ತನ್ನುಂಟುಮಾಡಲು ಪ್ರಯೋಗಿಸುವ) ಅಫೀಮಿನ ಸಸ್ಯಕ್ಷಾರ.

Códex ಕೋಡೆಕ್ಸ್ (ನಾ. ; ಬ. ವ. -dices, -ಡಿಸೀಸ್) ಹಸ್ತಾಕ್ಷರ ಗ್ರಂಥ (ಮು., ಪುರಾತನ ಬೈಬಲಿನದು ಅಥವಾ ಪುರಾತನ ಗ್ರೀಕ್, ಲ್ಯಾಟಿನ್ ಗ್ರಂಥಗಳದು)

Códger ಕಾಡ್‌ಜರ್ (ನಾ.) (ಬಳ. ಮಾ.) ಬಡ್ಡಿಯ ಮಗ (ಕೇವಲ ಸಲಿಗೆಯನ್ನೊ ಅಲಕ್ಷ್ಯತೆಯನ್ನೊ ಸೂಚಿಸುವ ಪದ). ಜಿಪುಣನಾದ, ನೀಚನಾದ, ವಕ್ರವಾದ, ಮುದಿಗೊಡ್ಡು ; ಮುದುಕ.

Códicil ಕಾಡಿಸಿಲ್ (ನಾ.) ಅನುಬಂಧ (ಮು., ಅಂತಿಮ ಇಷ್ಟಪತ್ರವನ್ನು ರದ್ದುಮಾಡುವಲ್ಲಿ ಅಥವಾ ಬದಲಾಯಿಸುವಲ್ಲಿ ಸೇರಿಸಿದುದು). **Codicíllary** (ಗು.)

Códling[1]. **Cod**[1] ನೋಡಿ.

Códlin(g)[2] ಕಾಡ್‌ಲಿನ್, — ಲಿಂಗ್ (ನಾ.) ಉದ್ದನೆಯ ಮಾಟದ ಸೇಬುಜಾತಿಗಳು.

Co-educátion ಕೋ ಎಡ್ಯುಕೇಷನ್ (ನಾ.) ಪಾಠಶಾಲೆ, ಮೊ. ಗಳಲ್ಲಿ ಹುಡುಗರಿಗೂ ಹುಡುಗಿಯರಿಗೂ ಒಟ್ಟಿಗೆ ವಿದ್ಯಾಭ್ಯಾಸ ಮಾಡಿಸುವುದು : ಸಹ ಶಿಕ್ಷಣ. **Co-educátional** (ಗು.); **Có-éd** ಕೋ ಎಡ್ (ನಾ.) (ಅಮೆ. ಸಂ., ಅಸಂ.) (ಮು., ಪ್ರೌಢ ವಿದ್ಯಾಶಾಲೆಯಲ್ಲಿಯು ಅಥವಾ ವಿಶ್ವವಿದ್ಯಾನಿಲಯದಲ್ಲಿಯು) ಸಹ ಶಿಕ್ಷಣ ವಿದ್ಯಾರ್ಥಿನಿ.

Coeffícient ಕೋಎಫಿಷೆಂಟ್ (ನಾ.) ಸಹ ಕಾರಕ ; ಸಹ ಕರ್ತೃ ; ಸಹ ಕಾರಣ. (ಬೀಜಗಣಿತ) ಒಂದು ಜ್ಞಾತ ಅಥವಾ ಅಜ್ಞಾತ ಮೊತ್ತದ ಹಿಂದೆ ಬರುವ, ಮತ್ತು ಆ ಮೊತ್ತವನ್ನು ಗುಣಿಸುವ, ಸಂಖ್ಯೆ : ಗುಣಾಂಕ (ಉದಾ., $4x^2 + 2ax$ ಎಂಬಲ್ಲಿ, x^2ನ ಗುಣಾಂಕ 4, x ನ ಗುಣಾಂಕ $2a$). (ಭೌ. ವಿ.) ಒಂದು ಭೌತಗುಣ ಸಂಪತ್ತಿಯನ್ನು (ಧರ್ಮವನ್ನು) ಅಳೆಯುವ ನಿಯತವಾದ ಗುಣಕ. C. of expansion ವಿಸ್ತರ ಗುಣಕ [ಉದಾ., ಉಕ್ಕಿನ ಕಂಬಿಯ ರೇಖಾವಿಸ್ತರಣ ಗುಣಕವು ·0000124 ಎಂದರೆ, ಒಂದು ಗಜವುದ್ದದ ಆ ಕಂಬಿಯನ್ನು ಒಂದು ಡಿಗ್ರೀ (ಸೆಂಟಿಗ್ರೇಡ್) ಶಾಖ (ನಿಕರವಾಗಿ 0°C. ಇಂದ 1°C. ಗೆ) ಏರುವಂತೆ ಕಾಯಿಸಿದರೆ ಅದರ ಉದ್ದವು 1·0000124 ಗಜವಾಗುವುದು]. C. of friction ಘರ್ಷಣ ಗುಣಕ. Differential c. ಒಂದು ಚಲಗುಣಿಯ ಒಂದು ನಿಯತ ಧರ್ಮದ ಚಲನ ಗತಿಯನ್ನು ಆ ಚಲಗುಣಿಗೆ ಸಂಬಂಧಿಸಿ ಅಳೆಯುವ ಮೊತ್ತ : ತಾತ್ಕಾಲಿಕ ಗುಣದರ್ಶಕ ಗುಣಕ ; ಅವಕಲನ ಗುಣಾಂಕ.

Coéliac ಸೀಲಿಆ್ಯಕ್ (ಗು.) (ಶ. ವಿ.) ಹೊಟ್ಟೆಯ ; ಉದರದ.

Coénobite ಸೀನೊಬೈಟ್, **Cénobite** ಸೆನೊಬೈಟ್ (ನಾ.) ಒಂದು ಸಂನ್ಯಾಸಿಸಂಸ್ಥೆಯ ಸದಸ್ಯ : ಸಂಘಸಂನ್ಯಾಸಿ. **Coénobitism** (ನಾ.); **Coenobític(al)** — ಬಿ — (ಗು.)

Coéqual ಕೊಈಕ್ವಲ್ (ಗು., ನಾ.) (ಪ್ರಾಚೀ. ಪ್ರ. ; ದೇವತಾ ಶಾಸ್ತ್ರ, ಒತ್ತಿಹೇಳುವುದು) ಸಮ, ಸಮಾನ ; ಸಮ ವ್ಯಾಪಿ. **Coequálity** (ನಾ.) ; **Coéqually** (ಕ್ರಿ. ವಿ.)

Coérce ಕೊಅರ್ಸ್ (ಕ್ರಿ.) [(ಒಬ್ಬನನ್ನು) ಸುಮ್ಮನಿರುವಂತೆ, ವಿಧೇಯನಾಗಿರುವಂತೆ, ಒಂದು ನಿಯತಮಾರ್ಗ ಹಿಡಿಯುವಂತೆ] ಬಲಾತ್ಕರಿಸು, ನಿರ್ಬಂಧಗೊಳಿಸು, ಒತ್ತಾಯ ಮಾಡು. ಬಲಪ್ರಯೋಗ ಮಾಡು (A coerced obedience ಬಲಾತ್ಕಾರದಿಂದಾದ ವಿಧೇಯತೆ). **Coércible** (ಗು.) ; **Coércion** ಕೊಅರ್ಷನ್ (ನಾ.) ಬಲಾತ್ಕಾರ ; ಬಲ ಪ್ರಯೋಗ ; ನಿರ್ಬಂಧ ; ಒತ್ತಾಯ ; ದಬ್ಬಾಳಿಕೆ. **Coércionary** (ಗು.) ; **Coércionist** (ನಾ., ಗು.) ದಬ್ಬಾಳಿಕೆಯ ಸರ್ಕಾರವನ್ನು ಸಮರ್ಥನ ಮಾಡುವವನು (ಮು., ಐರ್ಲೆಂಡಿನಲ್ಲಿ). **Coércive** ಕೊಅರ್ಸಿವ್ (ಗು.) ಬಲಾತ್ಕಾರದ ; ಬಲಾತ್ಕರಿಸಿ ನಡೆಯುವ ; ಬಲ ಪ್ರಯೋಗ ಮಾಡುವ. **Coércively** (ಕ್ರಿ. ವಿ.); **Coérciveness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Coesséntial ಕೋಎಸೆನ್ಷಲ್ (ಗು.) ಒಂದೇ ಪದಾರ್ಥದ; ಮೂಲತಃ ಒಂದೇ ಆದ: ಏಕಮೂಲ; ಸಹಭಾವಿ.

Coetáneous ಕೋಇಟೇನಿಯಸ್ (ಗು.) = Coeval.

Coetérnal ಕೋಈ(ಇ)ಟರ್ನಲ್ (ಗು.) ಸಮ ಶಾಶ್ವತ; ಸಹ ನಿತ್ಯ. **Coetérnally** (ಕ್ರಿ. ವಿ.)

Coéval ಕೋಈವಲ್ (ಗು., ನಾ.) ಜನ್ಮ ದಿನ, ವಯಸ್ಸು, ಜೀವನ ಕಾಲ, ನಡೆಗಾಲ — ಇವು ಒಂದೇ ಆದ (ವ್ಯಕ್ತಿ): ಸಮ ಕಾಲಿಕ; ಸಮ ವಯಸ್ಕ; ಏಕ ಕಾಲೀನ. **Coévally** (ಕ್ರಿ. ವಿ.); **Coeválity** ಕೋಇವ್ಯಾಲಿಟಿ (ನಾ.)

Co-exécutor ಕೋ ಎಕ್ಸೆಕ್ಯುಟರ್ (ನಾ.), **Co-exécutrix** —ಟ್ರಿಕ್ಸ್ (ನಾ., ಸ್ತ್ರೀ.) ಜೊತೆಯ ನಿರ್ವಹಣಾಧಿಕಾರಿ(ಣಿ)

Coexíst ಕೋಎಗ್ಸಿಸ್ಟ್ (ಕ್ರಿ. ಅಕ.) ಒಟ್ಟಿಗೆ ಇರು; ಒಡನಿರು; ಏಕ ಕಾಲದಲ್ಲಿ, ಒಂದೇ ಸ್ಥಳದಲ್ಲಿ, ಇರು; ಸಹಭಾವಿಯಾಗಿರು. **Coexístent** (ಗು.); **Coexístence** (ನಾ.)

Coexténsive ಕೋಎಕ್ಸ್ಟೆನ್ಸಿವ್ (ಗು.) ಒಂದೇ ಪ್ರದೇಶದಲ್ಲಿ, ಒಂದೇ ಕಾಲದಲ್ಲಿ, ವ್ಯಾಪಿಸಿರುವ: ಸಮ ವ್ಯಾಪಕ.

Cóffee ಕಾಫಿ (ನಾ.) ಕಾಫಿ ಗಿಡ; ಕಾಫಿ ಬೀಜ; ಬೂಂದು ಬೀಜ (ಹಸಿಯದು, ಹುರಿದದ್ದು); ಕಾಫಿ ಪುಡಿ. ಕಾಫಿಯ ಬೀಜವನ್ನು ಹುರಿದು ಪುಡಿಮಾಡಿ, ಆ ಪುಡಿಯನ್ನು ಹಾಕಿ ಮಾಡಿದ ಪಾನೀಯ: ಕಾಫಿ; ಕಾಫಿ ಮತ್ತು ಉಪಾಹಾರ. C.-bean ಕಾಫಿ ಬೀಜ. C.-cup (ಒಂದು ಗೊತ್ತಾದ ಆಕಾರದ, ಅಳತೆಯ) ಕಾಫಿ ಬಟ್ಟಲು. C.-grounds ಕಾಫಿಯ ಕಷಾಯದ ಚರಟ. C.-house, -palace ಕಾಫಿ ಮನೆ; ಉಪಾಹಾರದಂಗಡಿ; ಉಪಾಹಾರ ಮಂದಿರ. C.-mill ಕಾಫಿ ಪುಡಿ ಮಾಡುವ ಯಂತ್ರ: ಕಾಫಿ ಚೂರ್ಣಕ. C.-pot ಕಾಫಿ ಕಾಯಿಸುವ ಅಥವಾ ಹಂಡುವ ಪಾತ್ರೆ. C.-room ತಿಂಡಿಯಂಗಡಿಯ ಸಾರ್ವಜನಿಕ ಭೋಜನಶಾಲೆ. C.-tavern (ಮದ್ಯ ನಿರೋಧಕರ) ಉಪಾಹಾರದಂಗಡಿ.

Cóffer ಕಾಫರ್ (ನಾ., ಕ್ರಿ. ಸಕ.) ಪೆಠಾರಿ; ಸಂದೂಕು (ಮು., ಬೆಲೆಯುಳ್ಳ ವಸ್ತುಗಳಿಗಾಗಿ). (ಬ. ವ. ದಲ್ಲಿ) ಬೊಕ್ಕಸ; ಭಂಡಾರ; ಖಜಾನೆ. (C.-dam ಸೇತುವೆಕಟ್ಟುವುದು, ಮೊ. ಗಳಲ್ಲಿ ನೀರು ನುಗ್ಗದ ಹಾಗೆ ಮಾಡಿಕೊಳ್ಳುವ ಆವರಣ: ಹದಿಕಟ್ಟೆ). (ಕ್ರಿ.) ಬೊಕ್ಕಸಕ್ಕೆ ತುಂಬು.

Cóffin ಕಾಫಿನ್ (ನಾ., ಕ್ರಿ. ಸಕ.) ಹೆಣವಿಟ್ಟು ಹೂಳುವ ಪೆಟ್ಟಿಗೆ: ಹೆಣದ ಪೆಟ್ಟಿಗೆ; ಶವ ಸಂಪುಟ [Drive nail into one's c. (ರೂಪ.) (ತೊಂದರೆ, ಕುಡಿತ, ಮೊ. ಗಳಿಂದ) ಸಾವನ್ನು ಹತ್ತಿರಕ್ಕೆ ತರು]. ಪ್ರಯಾಣಕ್ಕೆ ಯೋಗ್ಯವಲ್ಲದ ಹಡಗು. ಕುದುರೆಯ ಗೊರಸು [C.-bone ಕುದುರೆಯ ಗೊರಸಿನಲ್ಲಿರುವ ಸ್ಪಂಜಿನಂಥ ಎಲುಬು. C.-joint ಕುದುರೆಯ ಗೊರಸಿನ ಮೇಲ್ಭಾಗದಲ್ಲಿಯ ಸಂಧಿ (ಕೀಲು): ಗೊರಸು ಕೀಲು]. (C.-plate ಸತ್ತವನ ಹೆಸರು, ಮೊ. ನ್ನು ಬರೆದು ಶವಸಂಪುಟದ ಮುಚ್ಚಳದಮೇಲೆ ಹಾಕುವ ಲೋಹದ ತಗಡು: ಶವಸಂಪುಟದ ಹೆಸರು ತಗಡು). (ಕ್ರಿ.) ಶವಸಂಪುಟದಲ್ಲಿಡು. (ಪುಸ್ತಕ, ಮೊ. ನ್ನು) ಇತರರಿಗೆ ಸಿಕ್ಕದಂತೆ ಬಚ್ಚಿಡು, ಭದ್ರಪಡಿಸು. **Cóffinless** (ಗು.)

Cóffle ಕಾಫ್‌ಲ್ (ನಾ.) ಸಾಲಾಗಿ ಕಟ್ಟಿದ (ಪಶುಗಳು, ಗುಲಾಮರು, ಮೊ. ರ) ತಂಡ: ದಾವಣಿಯ ತಂಡ.

Cog[1] ಕಾಗ್ (ನಾ.) (ಯಂತ್ರ) ತನ್ನೊಡನೆ ಹೊಂದಿಕೊಂಡಿರುವ ಮತ್ತೊಂದು ಅಂಗಕ್ಕೆ ಚಲನೆಕೊಡುವುದಕ್ಕಾಗಲಿ, ಅದರಿಂದ ಚಲನೆ ಪಡೆಯುವುದಕ್ಕಾಗಲಿ, ಒಂದು ಚಕ್ರದ ಪರಿಧಿಯಲ್ಲಿ, ಅಥವಾ ಒಂದು ದಂಡದ ಪಾರ್ಶ್ವದಲ್ಲಿ, ಮಾಡಿರುವ ಹಲ್ಲುಗಳಲ್ಲೊಂದು: ಚಾಲಕ ದಂತ. Hunting c. (ತಿರುಗುವ ಹಲ್ಲುಚಕ್ರ, ಮೊ. ಗಳ ಚಲನೆಯಲ್ಲಿ ಒಂದು ಗೊತ್ತಾದ ವ್ಯತ್ಯಾಸವನ್ನು ಪ್ರತಿ ಸುತ್ತಿನಲ್ಲೂ ಉಂಟುಮಾಡುವುದಕ್ಕಾಗಿ ಅವುಗಳಲ್ಲೊಂದರಮೇಲೆ ಹಾಕಿರುವ) ಹೆಚ್ಚುಹಲ್ಲು. C.-wheel ಹಲ್ಲುಚಕ್ರ. **Cógged** (ಗು.)

Cog[2] ಕಾಗ್ (ಕ್ರಿ. ಸಕ.) C. dice ದಾಳಗಳು ಬೀಳುವ ತೆರನನ್ನು ಮೋಸದಿಂದ ಅಧೀನಪಡಿಸಿಕೊ: ಕಳ್ಳ ಗರ ಬೀಳಿಸು. Cogged dice ಕಳ್ಳ ದಾಳ.

Cógent ಕೋಜೆಂಟ್ (ಗು.) (ವಾದ, ಮೊ. ಗಳಲ್ಲಿ) ಸಂಬದ್ಧ; ಬಲವತ್ತಾದ; ಸಮರ್ಥ; ಮನಗಾಣಿಸುವ; ಯುಕ್ತ; ಒಪ್ಪುವ. **Cógency** (ನಾ.); **Cógently** (ಕ್ರಿ. ವಿ.)

Cógitate ಕಾಜಿಟೇಟ್ (ಕ್ರಿ.) ಪರ್ಯಾಲೋಚಿಸು; ಚಿಂತನೆ ಮಾಡು; ಮನನ ಮಾಡು; ಮಥಿಸು; ಎಣಿಕೆ ಹಾಕು; ತರ್ಕಿಸು. (ತತ್ತ್ವಶಾಸ್ತ್ರ) ಭಾವನೆ ಮಾಡು; ಬಗೆದು ನೋಡು; ಆರಯ್ಯಿ (ಗ್ರಾಂ.). **Cógitable** (ಗು.) ಚಿಂತನೀಯ; ಊಹನೀಯ; ತರ್ಕ್ಯ. **Cogitátion** (ನಾ.) ಚಿಂತನೆ; ಆಲೋಚನೆ; ಮನನ; ತರ್ಕ. **Cógitative** (ಗು.) ಮನನ ಮಾಡಬಲ್ಲ; ಆಲೋಚಿಸಬಲ್ಲ; ಗ್ರಹಿಸಬಲ್ಲ; ಆಲೋಚಿಸುವ; ಮನನ ಮಾಡುವ ಸ್ವಭಾವದ. **Cógitatively** (ಕ್ರಿ. ವಿ.); **Cógitativeness** (ನಾ.)

Cógnac ಕೊನ್ಯಾಕ್ (ನಾ.) ಫ್ರೆಂಚ್ ಬ್ರಾಂದಿ (ನ್ಯಾಯವಾಗಿ, ಕೊನ್ಯಾಕ್ ದ್ರಾಕ್ಷಾಮದ್ಯದಿಂದ ಬಟ್ಟಿಯಿಳಿಸಿ ತೆಗೆದದ್ದು). (ಸ್ಥಳದ ಹೆಸರು)

Cógnate ಕಾಗ್ನೇಟ್ (ಗು., ನಾ.) ಒಬ್ಬನೇ ಮೂಲಪುರುಷನಿಂದ ಇಳಿದುಬಂದ (Agnate = ಜ್ಞಾತಿ; ದಾಯಾದಿ; ಸಗೋತ್ರ); ಒಂದೇ ಕುಲದ, ವಂಶದ, ಬುಡಕಟ್ಟಿನ; ಏಕ ವಂಶೋದ್ಭವ; ಏಕ ಮೂಲ; ಒಂದು ಹುಟ್ಟಿನ. (ಹುಟ್ಟು, ಸ್ವಭಾವ, ಗುಣ — ಇವುಗಳಲ್ಲಿ) ಸಜಾತೀಯ, ಸಂಬಂಧವುಳ್ಳ. (ನಾ.) ಸಜಾತಿ; ರಕ್ತ ಸಂಬಂಧಿ; ಬಂಧು; ನಂಟ. (ಭಾಷಾ ಶಾಸ್ತ್ರ) ಒಂದೇ ಭಾಷಾಕುಟುಂಬದ; ಒಂದೇ ಆದ್ಯ ಪದ ಸಂಬಂಧವುಳ್ಳ. (ಸಂಬಂಧವುಳ್ಳ ಬೇರೆಬೇರೆ ಭಾಷೆಗಳಲ್ಲಿ) ಸಮಾನ ವ್ಯುತ್ಪತ್ತಿಯ (Father ಪದವು ಲ್ಯಾಟಿನ್ Pater ಪದದ ಸಜಾತಿ; Paternal ಪದವು ಇದರ ಜನ್ಯಪದ). ಸಜಾತೀಯ ಪದ. (ವ್ಯಾ.) C. object or accusative ಕ್ರಿಯಾಪದದಲ್ಲಿ ಅಂತರ್ಗತವಾದ ಅರ್ಥವುಳ್ಳ ಕರ್ಮಪದ, ನಿಜವಾದ ಕರ್ಮಪದವಲ್ಲ: ಸಜಾತಿ ಕರ್ಮ; ಸ್ವಕರ್ಮ; ಅಕರ್ಮಕ ಕರ್ಮ (Die the death ಎಂಬಲ್ಲಿ death ಪದವು ಸಜಾತಿಕರ್ಮ. He slew death ಎಂಬಲ್ಲಿ death ಎಂಬುದು ಕರ್ಮಪದ). **Cógnateness** (ನಾ.); **Cognátion** (ನಾ.) ಸಜಾತೀಯ ಸಂಬಂಧ (ಈಗ, ಮು., ಭಾಷಾಶಾಸ್ತ್ರದಲ್ಲಿ)

Cognítion ಕಾಗ್ನಿಷನ್ (ನಾ.) (ತತ್ತ್ವ ಶಾಸ್ತ್ರ) ಪ್ರೇಕ್ಷೆ; ಜ್ಞಾನ; ವೇದನ; ಗ್ರಹಣ; ಅರಿವು. **Cognítional** (ಗು.); **Cógnitive** (ಗು.)

Cógnizance, -sance ಕಾಗ್ನಿಜನ್ಸ್, ಕಾನಿ— (ನಾ.) ಗಮನ; ತಿಳಿವಳಿಕೆ; ದೃಷ್ಟಿ; ಅವಲೋಕನ; ಅವಗಾಹನ [Have c. of ತಿಳಿದಿರು (ಮು., ವಿಹಿತ ರೀತಿಯಲ್ಲಿ ಅಥವಾ ಅಧಿಕಾರಸ್ಥಾನದ ಮೂಲಕ). Take c. of ಲಕ್ಷ್ಯಕೊಡು; ಗಮನಿಸಿ ಕ್ರಮ ನಡಸು. Fall within, be beyond, one's c. ವಿಚಾರಕ್ಕೆ ಸಂಬಂಧಪಡು, ಪಡದಿರು]. ಒಂದು ವಿಷಯದಲ್ಲಿ ನ್ಯಾಯಾನುಸಾರವಾಗಿ, ಕಾನೂನನುಸರಿಸಿ, ನಡೆಯುವುದು, ನಡೆಯುವ ಅಧಿಕಾರ; ವಿಚಾರಣೆ(ಯ ಅಧಿಕಾರ). (ವಂಶರಾಂಛನ, ಮೊ.) ಚಿಹ್ನೆ, ಗುರುತು. **Cógniz(s)able** ಕಾಗ್ನಿಜಬ್‌ಲ್, ಕಾನಿ —(ಗು.) ಗಮನಕ್ಕೆ ಬರಬಲ್ಲ; ಅರಿಯಬಹುದಾದ; ವೇದ್ಯ. ಒಂದು ನ್ಯಾಯಸ್ಥಾನದ ಅಧಿಕಾರಕ್ಕೊಳಪಟ್ಟ; ವಿಚಾರ್ಯ; ಹಿಡಿಯಬಹುದಾದ (C. offence ದಂಡಾಧಿಕಾರಿಯ ಅಪ್ಪಣೆಯಿಲ್ಲದೆಯೇ ಪೊಲೀಸಿನವರು ತಾವೇ ಹಿಡಿದು ಕ್ರಮ ನಡಸಬಹುದಾದ ತಪ್ಪಿತ). **Cógniz(s)ably** (ಕ್ರಿ. ವಿ.); **Cógniz(s)ant** ಕಾಗ್ನಿ(ನಿ)ಜಂಟ್ (ಗು.) ವಿಷಯ ತಿಳಿದಿರುವ; ಅರಿವುಳ್ಳ; ಜ್ಞಾನವುಳ್ಳ. **Cógniz(s)e** ಕಾಗ್ನೈಜ್ (ಕ್ರಿ. ಸಕ.) (ತತ್ತ್ವಶಾಸ್ತ್ರ) ಗ್ರಹಿಸು. **Cognóscible** ಕಾಗ್ನಾಸಿಬ್‌ಲ್ (ಗು.) ಅರಿಯಲಾಗುವ; ಜ್ಞೇಯ (ಮು., ತತ್ತ್ವಶಾಸ್ತ್ರದಲ್ಲಿ)

Cognómen ಕಾಗ್ನೋಮೆನ್ (ನಾ.) ಅಡ್ಡಹೆಸರು; ಮನೆಹೆಸರು; ಉಪನಾಮ; ಹೆಸರು.

Cognoscénte (It.) ಕೊನ್ಯೊಷೆಂಟೆ (ನಾ., ಬ. ವ. -ti) ವಿಷಯವನ್ನು ಸಂಪೂರ್ಣವಾಗಿ ತಿಳಿದವನು (= Connoisseur)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cognóscible. **Cognizance** ನೋಡಿ.

Cognóvit (L) ಕಾಗ್ನೋವಿಟ್ (ನಾ.) (ನ್ಯಾ. ಶಾ.) (ಕೋರ್ಟುವೆಚ್ಚ ಉಳಿಸಿಕೊಳ್ಳುವುದಕ್ಕಾಗಿ) ವಾದಿಯ ವ್ಯಾಜ್ಯಕಾರಣ ನ್ಯಾಯವಾದುದೆಂದು ಹೇಳುವ ಪ್ರತಿವಾದಿಯ ಹೇಳಿಕೆ ; ಸಮ್ಮತಿ.

Cohábit ಕೊಹ್ಯಾಬಿಟ್ (ಕ್ರಿ. ಅಕ.) ಜೊತೆಯಲ್ಲಿ ವಾಸಮಾಡು ; ಒಕ್ಕಲುತನ ಮಾಡು (ಮು., ಗಂಡಹೆಂಡಿರಂತೆ ; ಸಾ., ಮದುವೆಯಾಗದಿರುವವರ ವಿಷಯದಲ್ಲಿ). **Cohabitátion** (ನಾ.)

Coheír ಕೊಏರ್ (ನಾ.), **Coheíress** ಕೊಏರೆಸ್ (ನಾ., ಸ್ತ್ರೀ.) ಸಹ ಉತ್ತರಾಧಿಕಾರಿ(ಣಿ) ; ಸಮಾನ ಹಕ್ಕುದಾರ(ಳು) ; ಸಹ ದಾಯಾದಿ.

Cohére ಕೊಹೀಯರ್ (ಕ್ರಿ. ಅಕ.) ಅಂಟಿಕೊ ; ಸೇರಿಕೊ ; ಕೂಡಿಕೊಂಡಿರು ; ಸಂಸಕ್ತವಾಗಿರು ; ಸುಸಂಗತವಾಗಿರು. (ವಾದ, ಶೈಲಿ, ಮೊ. ಗಳಲ್ಲಿ) ಸುಬದ್ಧವಾಗಿರು ; ಹೊಂದಿಕೊಂಡಿರು. **Cohérent** (ಗು.) ; **Cohérence** (ನಾ.) ; **Cohérency** (ನಾ.) ; **Cohérently** (ಕ್ರಿ. ವಿ.) ; **Cohérer** (ನಾ.) ವಿದ್ಯುತ್ತರಂಗಗಳು ಒಂದು ಗಾಜಿನ ಕೊಳವೆಯಲ್ಲಿಯ ಲೋಹದ ಪುಡಿಯ ಮೇಲೆ ಬಿದ್ದಲ್ಲಿ, ಆ ಪುಡಿಯ ಕಣಗಳು ಒಂದಕ್ಕೊಂದು ಅಂಟಿಕೊಳ್ಳುವುದರ ಮೂಲಕ ಆ ತರಂಗಗಳನ್ನು ಕಂಡುಹಿಡಿಯುವ ಸಾಧನ : ತರಂಗ ಸೂಚಕ. **Cohésion** — ಝನ್ (ನಾ.) ಅಂಟಿಕೊಂಡಿರುವುದು ; ಅಂಟಿಕೆ ; ಸಂಬದ್ಧತೆ ; ಸಂಸಕ್ತಿ. **Cohésive** — ಸಿವ್ (ಗು.) ಅಂಟಿಕೊಳ್ಳುವ ಗುಣವುಳ್ಳ ; ಅಂಟಾದ ; ಅಂಟಿಕೊಂಡಿರುವ. **Cohésively** (ಕ್ರಿ. ವಿ.) ; **Cohésiveness** (ನಾ.)

Cohéritor ಕೋಹೆರಿಟರ್ = Coheir.

Cohésion. **Cohere** ನೋಡಿ.

Cóhort ಕೋಹಾರ್ಟ್ (ನಾ.) (ರೋಮನ್ ಸೈನ್ಯದ) ದಳ. ಯೋಧರ ಥಟ್ಟು. ಒಕ್ಕಟ್ಟಿನಿಂದ ನಡೆಯುವವರ ತಂಡ.

Coif ಕಾಯ್ಫ್ (ನಾ.) (ಚರಿತ್ರೆ) ತಲೆಯನ್ನು (ಮೇಲೆ, ಹಿಂದುಗಡೆ, ಪಕ್ಕಗಳಲ್ಲಿ) ಪೂರ್ತಿಯಾಗಿ ಮುಚ್ಚುವ ಟೋಪಿ ; ಕುಲಾವಿ ; ಶ್ರೇಷ್ಠ ಪದವಿಯ ನ್ಯಾಯವಾದಿಯ ಬಿಳಿಯ ಟೋಪಿ.

Coiffeúr (F) ಕ್ವಾಫರ್ (ನಾ.) ತಲೆಗೂದಲನ್ನು ಅಂದಗೊಳಿಸುವ (ಕಸಬಿನ)ವನು. **Coiffúre** (F) ಕ್ವಾಫ್ಯೂರ್ (ನಾ.) ತಲೆಗೂದಲನ್ನು ಅಂದಗೊಳಿಸುವ ರೀತಿ.

Coign ಕಾಯ್ನ್ (ನಾ.) C. of vantage ಯಾವುದನ್ನಾದರೂ ಚೆನ್ನಾಗಿ ನೋಡಲು ಅನುಕೂಲವಾದ ಸ್ಥಳ : ಅನುಕೂಲ ಸ್ಥಾನ.

Coil[1] ಕಾಯ್ಲ್ (ಕ್ರಿ., ನಾ.) (ಹಗ್ಗ, ಮೊ. ನ್ನು) ಸುರುಳಿ ಸುತ್ತು ; ಸಿಂಬಿ ಸುತ್ತು ; ಬಟ್ಟಸಿಂಬಿಯಾಗಿ ಅಥವಾ ನಿಡುಸಿಂಬಿಯಾಗಿ ಸುತ್ತು (ಸಾ., *up* ಉಪ. ದೊಡನೆ) ; ಸುತ್ತುಸುತ್ತಿಕೊಂಡು ಹೋಗು ; ವಕ್ರಗತಿಯಲ್ಲಿ ಚಲಿಸು. (ನಾ.) ಹಗ್ಗ, ಎಗುರುಪಟ್ಟಿ (ಎಗುರುಕಂಬಿ), ಮೊ. ಗಳ ಸುರುಳಿಸಿಂಬಿ ; ಸುರುಳಿಸುತ್ತಿಕೊಂಡಿರುವ ವಸ್ತುವಿನ ಒಂದು ಸುತ್ತು. ವಿದ್ಯುತ್ಪ್ರವಾಹದ ಚಲನೆಗಾಗಿ ಮಾಡಿರುವ ತಂತಿಯ ನಿಡುಸುರುಳಿ.

Coil[2] ಕಾಯ್ಲ್ (ನಾ.) (ಪ್ರಾಚೀ. ಪ್ರ., ಕಾವ್ಯ) ಗಲಭೆ ; ಗದ್ದಲ ; ಗೊಂದಲ ; ತೊಂದರೆ (This mortal c. ಜೀವನದ ಕೋಟಲೆ)

Coin ಕಾಯ್ನ್ (ನಾ.) ನಾಣ್ಯ ; ಹಣ. False c. ಕೀಳುಲೋಹದಲ್ಲಿ ಕಳ್ಳತನದಿಂದ ಮಾಡಿದ ನಾಣ್ಯ : ಖೋಟಾ ನಾಣ್ಯ. (ರೂಪ.) ಖೋಟಾ ; ಕೃತ್ರಿಮ. Pay one in his own c. ಮುಯ್ಯಿಗೆ ಮುಯ್ಯಿ ತೀರಿಸು ; ಮರ್ಯಾದೆ ತಿರುಗಿಸು. **Coínage** ಕಾಯ್ನಿಜ್ (ನಾ.) ನಾಣ್ಯ ಮಾಡುವುದು ; ನಾಣ್ಯ ; (ರೂಢಿಯಲ್ಲಿರುವ) ನಾಣ್ಯಪದ್ಧತಿ (Decimal c. ದಶಮಾನ ನಾಣ್ಯಪದ್ಧತಿ : ಇದರಲ್ಲಿ ಪ್ರತಿ ನಾಣ್ಯವೂ ಅದರ ಕೆಳಗಿನ ನಾಣ್ಯದ ಹತ್ತರಷ್ಟು ಬೆಲೆಯುಳ್ಳದ್ದಾಗಿರುವುದು). ಸೃಷ್ಟನೆ (The c. of one's brain ಮನಸ್ ಸೃಷ್ಟಿ ; ಸ್ವಕಪೋಲ ಕಲ್ಪನೆ) ; ನೂತನ ರಚನೆ ; ಹೊಸ ನಿರ್ಮಾಣದ ಪದ : ಸೃಷ್ಟ ಪದ. **Coínless** (ಗು.)

Coin (ಕ್ರಿ. ಸಕ.) ನಾಣ್ಯ ಮಾಡು ; ಟಂಕವೊತ್ತು (C. money ಬೇಗ ದುಡ್ಡುಮಾಡು) ; (ಬುದ್ಧಿ, ಮೊ. ನ್ನು ಉಪಯೋಗಿಸಿ) ಹಣಮಾಡು. ಹೊಸ ರಚನೆ ಮಾಡು ; ನಿರ್ಮಿಸು ; ಸೃಷ್ಟಿಸು (ಮು., ಹೊಸ ಮಾತನ್ನು). **Coíner** (ನಾ.) (ಕ್ರಿಯಾರ್ಥಗಳಲ್ಲಿ) ; (ಮು.,) ಖೋಟಾ ನಾಣ್ಯ ತಯಾರಿಸುವವನು.

Coincíde ಕೋಇನ್‌ಸೈಡ್ (ಕ್ರಿ. ಅಕ.) ಒಂದೇ (ಸಮಾನ) ಪ್ರದೇಶವನ್ನು ಆಕ್ರಮಿಸು ; ಸಮಪಾತವಾಗು ; ಏಕ ಕಾಲದಲ್ಲಿ ನಡೆ, ಸಂಭವಿಸು ; ಸರಿಬೀಳು ; ಸರಿಹೊಂದು ; ಸಾಮ್ಯಹೊಂದು ; ತಾಳೆಬೀಳು. **Coíncidence** — ಸಿಡೆನ್ಸ್ (ನಾ.) ಸಹ ಘಟನೆ ; ಸಮ ಪಾತ ; ಸರಿಹೊಂದಿಕೆ ; ತಾಳೆ ; ಸಾಮಾನ್ಯವಾಗಿ ಯಾವ ಸಂಬಂಧವೂ ಇಲ್ಲದಂತೆ ತೋರುವ ಘಟನೆಗಳು ಅಥವಾ ವಿಚಾರಗಳು ಆಶ್ಚರ್ಯವಾಗುವಂತೆ ಒಟ್ಟಿಗೆ ಸಂಭವಿಸುವುದು : ವಿಚಿತ್ರ ಸಂಘಟನೆ ; ದೈವ ಘಟನೆ ; ಕಾಕತಾಳೀಯತೆ. **Coíncident** (ಗು.) ಸಮಪಾತವಾಗುವ ; ಒಟ್ಟಿಗೆ ಸಂಭವಿಸುವ ; ಹೊಂದುವ. **Coincidéntal** (ಗು.) ; **Coincidéntally** (ಕ್ರಿ. ವಿ.) ; **Coíncidently** (ಕ್ರಿ. ವಿ.)

Coinstantáneous ಕೊಇನ್ಸ್ಟಂಟೇನಿಯಸ್ (ಗು.) ಒಟ್ಟಿಗೆ ಒಂದೇ ಕ್ಷಣದಲ್ಲಿ ನಡೆಯುವ ; ಸಮ ಕ್ಷಣಿಕ.

Coir ಕಾಯ್ರ್ (ನಾ.) ತೆಂಗಿನ ನಾರು.

Coítion ಕೊಯಿಷನ್ (ನಾ.) (ಸ್ತ್ರೀಪುರುಷರ) ಸಂಭೋಗ ; ಮೈಥುನ ; ಸುರತ ; ಸುಸಿಲು (ಗ್ರಾಂ.)

Coke ಕೋಕ್ (ನಾ., ಕ್ರಿ. ಸಕ.) ಗಾಳಿಗೆ ಒಡ್ಡದೆ ಕಾವುಕೊಟ್ಟ ಕಲ್ಲಿದ್ದಲಿನಿಂದ ಅನಿಲವಸ್ತುಗಳೆಲ್ಲ ಹಾರಿಹೋದಮೇಲೆ ಉಳಿಯುವ ಘನಪದಾರ್ಥ : ಕಲ್ಲಿದ್ದಲ ಕಿಟ್ಟ. (ಕ್ರಿ.) ಕಲ್ಲಿದ್ದಲನ್ನು ಕಿಟ್ಟವನ್ನಾಗಿ ಮಾಡು.

Cóker(nut). **Coco** ನೋಡಿ.

Col ಕೊಲ್, ಕಾಲ್ (ನಾ.) (ಬೆಟ್ಟದ ಸಾಲಿನಲ್ಲಿಯ) ನೆತ್ತಿಯ ಕಣಿವೆ, ಘಾಟಿ.

Cóla, Kóla ಕೋಲ (ನಾ.) ದ. ಆಫ್ರಿಕದ ಒಂದು ಜಾತಿಯ ಮರ (ಇದರ ಬೀಜಗಳು ಸಂಬಾರವಸ್ತುವಾಗಿಯೂ, ಪುಷ್ಟ್ಯೌಷಧವಾಗಿಯೂ, ಮದ್ಯಸಾರ ಪ್ರತಿವಿಷವಾಗಿಯೂ ಉಪಯೋಗ). C.-nut, -seed ಕೋಲದ ಕರಟಕಾಯಿ ; ಕೋಲದ ಬೀಜ.

Cólander, Cúllender ಕಲೆಂಡರ್ (ನಾ., ಕ್ರಿ. ಸಕ.) ಅಡಿಗೆಯ ಕೆಲಸದಲ್ಲಿ ಉಪಯೋಗಿಸುವ ಜರಡಿಪಾತ್ರೆ ; ಸಾಣಿಗೆ ; ಚಾಲನಿ ; ಬಸಿತಟ್ಟೆ ; ಚಿಬ್ಬಲು. [(ಕ್ರಿ.) ಇದರ ಮೂಲಕ ಬಸಿ, ಸೋಸು]. ಬಂದೂಕಿನ ಗುಂಡನ್ನು ಎರಕಹೊಯ್ಯಲು ಉಪಯೋಗಿಸುವ ಸಲಕರಣೆ ; ಗೋಲಿ ಜರಡಿ.

Co-látitude ಕೋ ಲ್ಯಾಟಿಟ್ಯೂಡ್ (ನಾ.) (ಖ. ವಿ.) ಅಕ್ಷಾಂಶಕ್ಕೂ ಸಮಕೋನಕ್ಕೂ ಇರುವ ಅಂತರ : ಅಕ್ಷಾಂಶ ಪೂರಕ.

Cold ಕೋಲ್ಡ್ (ಗು.) ಕಡಮೆಯ ಕಾವಿನ (ಮು., ಮನುಷ್ಯದೇಹದ ಕಾವಿಗಿಂತ, ಸುತ್ತಲಿನ ಶಾಖಕ್ಕಿಂತ) ; ತಣ್ಣನೆಯ ; ಚಳಿಯ ; ಶೀತಲ ; ಕಾಯಿಸದ ; ಆರಿದ ; ಚಳಿಯಾಗುವ (Ice c. ನೀರ್ಗಲ್ಲಿನಂತೆ ತಂಪಿನ ; ತಣ್ಣಗೆ ಕೊರೆಯುವ). (ಜೇಡುಭೂಮಿಯ ವಿಷಯದಲ್ಲಿ) ಬಿಸಿಯೇರದ, ಕಾವೇರದ. ನಿರುತ್ಸಾಹದ ; ಉದಾಸೀನ ಭಾವದ ; ಅನಾದರದ ; ವಿಶ್ವಾಸ ಹೀನ ; ಮನಗುಂದಿಸುವ; ನೀರಸ. [Idea leaves one c. (ಈ) ಅಭಿಪ್ರಾಯವು ಅವನಲ್ಲಿ ಉತ್ಸಾಹ ಹುಟ್ಟಿಸದು. Throw c. water on ಉತ್ಸಾಹಭಂಗ ಮಾಡು]. (ಬೇಟೆಯಲ್ಲಿ ವಾಸನೆ) ಸೂಕ್ಷ್ಮ, ಅಸ್ಫುಟ. C. blast ಕುಲುಮೆಗೆ ನುಗ್ಗಿಸಿದ ತಂಪುಗಾಳಿ. In c. blood (Blood ನೋಡಿ). C. chisel (Chisel ನೋಡಿ). C.-coil ರಕ್ತಗಟ್ಟಿ ಉರಿಯುತ್ತಿರುವ (ದೇಹ) ಭಾಗದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುತ್ತಲೂ ಸುತ್ತಿದ, ತಣ್ಣನೆಯ ನೀರು ಚಲಿಸುವ, ನಾಳ : ತಂಪು ಸಿಂಬಿ. C. colours ನೀಲ, ಬೂದು, ಮೊ. ವರ್ಣಗಳು (ಕೆಂಪು, ಹಳದಿ, ಮೊ. ಉಜ್ವಲ ವರ್ಣಗಳಿಗೆ ವ್ಯತಿರಿಕ್ತವಾದುವು) : ತಂಪು ಬಣ್ಣಗಳು. C. comfort, counsel, news ಉತ್ಸಾಹಶೂನ್ಯವಾದ ಸಹಾನುಭೂತಿ, ಬುದ್ಧಿವಾದ, ಸಮಾಚಾರ. C. cream (Cream ನೋಡಿ). C. in death or C. ಸತ್ತುಹೋದ. C. drawn castor oil (Castor oil ನೋಡಿ). C. feet (ಸೈನಿಕ ಅಸಂ.) ಯುದ್ಧಮಾಡಲು, ಯುದ್ಧಕ್ಕೆ ಹೋಗಲು, ಅಥವಾ ರಣರಂಗದಲ್ಲಿರಲು, ಹಿಂದೇಟುಹೊಡೆಯುವುದು. C.-hammer ಲೋಹವನ್ನು ಕಾಯಿಸದೆಯೇ ಬಡಿದು ಕೆಲಸಮಾಡು. C.-livered ಶೀತಲ ಪ್ರಕೃತಿಯ ; ಭಾವೋದ್ರೇಕ ಶೂನ್ಯ. C. meat (ಬೇಯಿಸಿ) ಆರಿದ ಮಾಂಸ [The c.-meat train (ಅಸಂ.) ಹೆಣ ಸಾಗಿಸುವ ವಾಹನ]. C. pig ನಿದ್ದೆಹೋಗುತ್ತಿರುವವನನ್ನು ಎಬ್ಬಿಸಲು ಅವನ ಮೇಲೆ ಎರಚುವ ತಣ್ಣೀರು. C.-pig (ಕ್ರಿ. ಸಕ.) ತಣ್ಣೀರೆರಚು. C. shoulder ಸುಟ್ಟು ಪಕ್ವಮಾಡಿ ತಣ್ಣಗಾದ ಕುರಿಯ ಭುಜದ ಮಾಂಸ (Give the c. shoulder to ಅನಾದರಣೆ ಮಾಡು ; ಔದಾಸೀನ್ಯದಿಂದ ನೋಡು ; ತಾತ್ಸಾರ ಮಾಡು). C. snap (ಅಮೆ. ಸಂ.) ಥಟ್ಟನೆ ಮೂಡುವ ತಂಡಿ ಹವ. Get (person) c. (ಒಬ್ಬನನ್ನು) ಹಿಡಿತದಲ್ಲಿಟ್ಟುಕೊ. C. steel ಕತ್ತಿ, ಸನೀನು, ಮೊ. ವು (ಬಂದೂಕು, ಮೊ. ಸುಡುವ ಆಯುಧಗಳಿಗೆ ವ್ಯತಿರಿಕ್ತವಾದುವು. Few inches of c. steel ಕತ್ತಿಯ ಇರಿತ). C. without ಸಕ್ಕರೆ ಹಾಕದೆ, ನೀರು ಬೆರಸಿದ, ತಣ್ಣನೆಯ ಮದ್ಯ. **Cóldblooded** (ಗು.) ಶೀತ ರಕ್ತದ (ಎಂದರೆ, ಹೊರಗಿನ ವಾಯು ಅಥವಾ ನೀರಿಗಿಂತಲೂ ಬೆಚ್ಚಗಿರದ ; ಮು., ಮೀನು, ಮೊ. ದ ಜಲಚರಗಳ ಮತ್ತು ಹಾವು, ಮೊ. ದ ಸರೀಸೃಪಗಳ ದೇಹದ ವಿಷಯದಲ್ಲಿ) ; (ರೂಪ) ಉತ್ಸಾಹಶೂನ್ಯ ; ಉದ್ರೇಕಗೊಳ್ಳದ ; ಕಾವೇರದ ; ಮನ ತಾಕದ ; ಮನಸ್ಸು ಜಡ್ಡುಗಟ್ಟಿದ ; ಕಠೋರ ; ಯೋಚಿಸಿ ಕ್ರೂರಕೆಲಸ ಮಾಡುವ. **Coldbloódedness** (ನಾ.) ; **Cóldhearted** (ಗು.) ಪ್ರೀತಿ ಶೂನ್ಯ ; ನಿರ್ದಯದ ; ನಿಷ್ಕರುಣೆಯ. **Coldheártedness** (ನಾ.) ; **Coldheártedly** (ಕ್ರಿ. ವಿ.) ; **Cóldish** (ಗು.) ಸ್ವಲ್ಪ ತಣ್ಣನೆಯ. **Cóldly** (ಕ್ರಿ. ವಿ.) ; **Cóldness** (ನಾ.)

Cold (ನಾ.) ಚಳಿ ; ಶೈತ್ಯ ; ಕುಳಿರು (ಗ್ರಾಂ.) (Left out in the c. ನೋಡಿಕೊಳ್ಳದೆ ; ವಿಚಾರಿಸಿಕೊಳ್ಳದೆ). ನೆಗಡಿ ; ಶೀತ (Catch c. ನೆಗಡಿ ಹಿಡಿ ; ಶೀತವಾಗು. C. in the head ನೆಗಡಿ). **Cóldproof** (ಗು.) ಶೈತ್ಯ ಸೇರದ ; ಶೈತ್ಯ ತಡೆಯುವ ; ಶೈತ್ಯ ನಿರೋಧಕ.

Coleópterous ಕಾಲಿಯಾಪ್ಟೆರಸ್ (ಗು.) (ನಾಲ್ಕು ರೆಕ್ಕೆಗಳಿದ್ದು, ಮುಂದಿನ ಎರಡು ರೆಕ್ಕೆಗಳೂ ಹಿಂದಿನವಕ್ಕೆ ರಕ್ಷಣೆಗಾಗಿ ಕೊಂಬಿನ ಪದಾರ್ಥದಿಂದ ಮಾಡಿ ಗಡುಸಾಗಿರುವ) ಜೀರುಂಡೆಯ ವರ್ಗದ.

Cólic ಕಾಲಿಕ್ (ನಾ.) ಹೊಟ್ಟೆಶೂಲೆ ; — ನುಲಿತ. **Cólicky** (ಗು.)

Colítis ಕೊಲೈಟಿಸ್ (ನಾ.) (ವೈದ್ಯ) ದೊಡ್ಡಕರುಳಿನ ಊತ.

Colláborate ಕಲ್ಯಾಬೊರೇಟ್ (ಕ್ರಿ. ಅಕ.) (ಮು., ಸಾಹಿತ್ಯ, ಕಲೆ, ಮೊ. ಗಳ ರಚನೆಯಲ್ಲಿ) ಜೊತೆಗೂಡಿ ಕೆಲಸಮಾಡು. **Collaborátion** (ನಾ.) ಸಹೋದ್ಯಮ ; ಸಹಕಾರ. **Colláborator** (ನಾ.) ಸಹೋದ್ಯಮಿ ; ಸಹಕಾರಿ. **Collaborateúr** (F) ಕೊಲಾಬೊರಾಟರ್ (ನಾ.) = Collaborator.

Collápse ಕಲ್ಯಾಪ್ಸ್ (ನಾ., ಕ್ರಿ. ಅಕ.) ಬಿದ್ದು ಹೋಗು(ವುದು) ; ಕುಸಿದು ಬೀಳು(ವುದು) ; ಕುಸಿತ ; ಥಟ್ಟನೆ ಮುದುಡಿಕೊಳ್ಳು(ವುದು) ; ನರಗಳು ಅಥವಾ ಸ್ನಾಯುಗಳು ನಿಶ್ಚೇತನವಾಗು(ವುದು) ; ಶಕ್ತಿಪಾತ ; ಬುದ್ಧಿಕ್ಷಯ(ವಾಗು) ; ಧೈರ್ಯಗುಂದು(ವುದು). **Collápsed** (ಗು.) ; **Collápsible, -able** (ಗು.) ಮಡಿಸಲಾಗುವ ; ಅದುಮಲಾಗುವ.

Cóllar ಕಾಲರ್ (ನಾ., ಕ್ರಿ. ಸಕ.) (ಅಂಗಿ, ಒಳ ಅಂಗಿ, ಮೊ. ಗಳ) ಕೊರಳಪಟ್ಟಿ, ಕತ್ತುಪಟ್ಟಿ. 'ನೈಟ್' ಪದವಿಯ ಚಿಹ್ನೆಯ ಸರ. ನಾಯಿಯ ಅಥವಾ ಬಂದೀವಾನನ ಕೊರಳಪಟ್ಟಿ. [C.-harness ಕುದುರೆ, ಮೊ. ಗಳ ಕತ್ತುಪಟ್ಟಿ (as opposed to breast-harness). C. -work ಕಷ್ಟದಿಂದ (ಬಂಡಿ) ಎಳೆಯುವ ಕೆಲಸ (ಮು., ಗುಡ್ಡದಮೇಲಕ್ಕೆ) ; (ರೂಪ.) ಗೋಣುಮುರಿಯುವ ಕೆಲಸ ; ಕಷ್ಟದ ಕೆಲಸ]. ಯಂತ್ರ, ಮೊ. ಗಳಲ್ಲಿ (ಚಲನ) ತಡೆಯುವ, ಅಥವಾ ಎರಡು ಭಾಗಗಳಿಗೆ ಸಂಬಂಧವುಂಟುಮಾಡುವ, ಪಟ್ಟಿ, ಬಳೆ, ಕೊಳವಿ ; ಕಂಠ ; ಯಾವುದಾದರೂ ಪ್ರಾಣಿಯ ಕತ್ತಿನಲ್ಲಿಯ ಬಣ್ಣದ ಪಟ್ಟಿ ; ಕಂಠಾಭರಣ. (C.-beam ಕತ್ತರಿ ತೀರುಗಳನ್ನು ಬಂಧಿಸುವ ಅಡ್ಡತೀರು. C.-bone = Clavicle). (ಕ್ರಿ.) (ಒಬ್ಬನ) ಕತ್ತುಹಿಡಿ ; ಕತ್ತಿಗೆ ಕೈಹಾಕು ; (ಒಬ್ಬನನ್ನು) ಹಿಡಿ, ಸ್ವಾಧೀನ ಪಡಿಸಿಕೊ. (ಕಾಲ್ಚೆಂಡು) (ಚೆಂಡು ಹಿಡಿದಿರುವ ಎದುರಾಳಿಯನ್ನು) ಹಿಡಿದುನಿಲ್ಲಿಸು. (ಅಸಂ.) ಸ್ವಂತಕ್ಕೆ ಬಳಸಿಕೊ. (ಮಾಂಸ ಮೊ. ನ್ನು) ಸುರುಳಿಮಾಡು. **Cóllarless** (ಗು.) ; **Collarét(te)** (ನಾ.) (ಚಿತ್ರವಸನ, ಲೋಮಚರ್ಮ, ಮೊ. ಗಳಿಂದ ಮಾಡಿದ) ಹೆಂಗಸಿನ ಕೊರಳಪಟ್ಟಿ.

Colláte ಕಲೇಟ್ (ಕ್ರಿ. ಸಕ.) (ಪತ್ರ, ದಸ್ತೈವಜು, ಇತರ ಲೇಖನ — ಇವುಗಳ ಪ್ರತಿಗಳು ಒಂದರೊಡನೊಂದನ್ನು, ವಿಶದವಾಗಿ, ಸೂಕ್ಷ್ಮದೃಷ್ಟಿಯಿಂದ) ತಾಳೆನೋಡು, ಸರಿನೋಡು. (ಪುಸ್ತಕದ ರಟ್ಟುಗಟ್ಟುವಲ್ಲಿ) ಹಾಳೆಗಳ ಕ್ರಮವನ್ನು ಸರಿನೋಡಿ ಸಹಿಮಾಡು ; ಕ್ರಮವಾಗಿ ಜೋಡಿಸು. (ಕ್ರೈಸ್ತ ವೈದಿಕನನ್ನು) ಮಠವೃತ್ತಿಗೆ ನಿಯಮಿಸು. **Collátion** (ನಾ.) (ಕ್ರಿಯಾರ್ಥಗಳಲ್ಲಿ). (ರೋ. ಕ್ಯಾ.) ಉಪವಾಸ ದಿನದ ಸಾಯಂಕಾಲದಲ್ಲಿ ತೆಗೆದುಕೊಳ್ಳುವ ಉಪಾಹಾರ. ಲಘು ಭೋಜನ (ಅನೇಕ ವೇಳೆ ಅಕಾಲದಲ್ಲಿ : ಸಾ., Cold c. ತಂಗಳೂಟ). **Collátor** (ನಾ.)

Colláteral ಕಲ್ಯಾಟೆರಲ್ (ಗು., ನಾ.) ಪಕ್ಕಪಕ್ಕದ ; ಸಮಾನ. (ಒಂದೇ ಮೂಲದ್ದಾದರೂ) ಗೌಣ, ಆನುಷಂಗಿಕ, ಅಪ್ರಧಾನ ; ಅಪ್ರತ್ಯಕ್ಷ ; ಪರೋಕ್ಷ. ಸಹಾಯಕ. (ಭಿನ್ನ ಶಾಖೆಯ) ಸಗೋತ್ರ. (ನಾ.) ಭಿನ್ನ ಶಾಖೆಯ ಅನುಬಂಧಿ (= C. kinsman). C. security or C. ಸಾಲತೀರಿಸುವುದಕ್ಕೆ ಜೊತೆಯಾಡಾಗಿ ಆಧಾರಮಾಡಿದ ಸೊತ್ತು [As opposed to personal security (= ಆಸಾಮಿಯ ಹೊಣೆ)]. **Collátearlly** (ಕ್ರಿ. ವಿ.)

Cólleague ಕಾಲೀಗ್ (ನಾ.) ಸಹೋದ್ಯೋಗಿ ; ಸಹಾಧಿಕಾರಿ.

Colléct[1] ಕಲೆಕ್ಟ್ (ಕ್ರಿ.) ಕೂಡಹಾಕು ; ಒಟ್ಟುಗೂಡು ; — ಗೂಡಿಸು ; ಸೇರು ; ಸೇರಿಸು ; ಸಂಗ್ರಹಿಸು ; ಶೇಖರಿಸು ; (ತೆರಿಗೆ, ಕೊಡುಗೆ, ಮೊ. ನ್ನು ಹಲವರಿಂದ) ವಸೂಲುಮಾಡು. (ಮಾದರಿಗಳು, ಪುಸ್ತಕಗಳು, ಮೊ. ನ್ನು) ಭಂಡಾರಕ್ಕೆ ಸೇರಿಸುವುದಕ್ಕಾಗಿ ಶೇಖರಿಸು. ಮನಸ್ಸನ್ನು ಸ್ತಿಮಿತಕ್ಕೆ ತಂದುಕೊ ; ಸಮಾಹಿತನಾಗು ; ಚೇತರಿಸಿಕೊ ; ಧೈರ್ಯ ತಂದುಕೊ ; ಚಿತ್ತೈಕಾಗ್ರತೆ ಹೊಂದು. (C. a horse ತುಂಟಾಟ ಮಾಡದಂತೆ ಕುದುರೆಯನ್ನು ಹತೋಟಿಯಲ್ಲಿಟ್ಟುಕೊ). ಊಹಿಸು ; ಅನುಮಾನ ಮಾಡು ; ಅಭಿಪ್ರಾಯಪಡು ; ತೀರ್ಮಾನಕ್ಕೆ ಬರು. **Colléctable, -ible** (ಗು.) ; **Collécted** (ಗು.) ಮನಃಕ್ಷೋಭೆಯಿಲ್ಲದ ; ಸಮಾಹಿತ ; ಸ್ಥಿರ ಚಿತ್ತವುಳ್ಳ ; ಶಾಂತ. **Colléctedly** (ಕ್ರಿ. ವಿ.) ; **Collectánea** (L) ಕಾಲೆಕ್ಟೇನಿಯ (ನಾ., ಬ. ವ.) ಗ್ರಂಥಭಾಗ ಸಂಕಲನ. **Colléction** ಕಲೆಕ್‌ಷನ್ (ನಾ.) ಒಟ್ಟುಗೂಡಿಸುವುದು ; ಒಡ್ಡು ; ಒಟ್ಟು ; ಸಂಗ್ರಹಣ ; ಸಂಗ್ರಹ ; ಸಂಕಲನ. (ಒಂದು ಸಭೆಯಲ್ಲಾಗಲಿ ಆರಾಧನ ಮಂದಿರದಲ್ಲಾಗಲಿ, ದಾನ ಧರ್ಮಕ್ಕೆ) ಹಣವೆತ್ತುವುದು ; ಹಾಗೆ ಕೂಡಿಸಿದ ಹಣ ; ವಸೂಲಿ. **Colléctive** (ಗು., ನಾ.) ಒಟ್ಟಿನ ; ಒಟ್ಟುಗೂಡಿಸಿದ ; ಒಟ್ಟುಗೂಡಿದ ; ಒಟ್ಟಾದ [C. fruit ಅನೇಕ ಹೂವುಗಳಿಂದಾದ ಹಣ್ಣು : ಸಮಷ್ಟಿ ಫಲ (ಉದಾ., ಉಪ್ಪುನೇರಳೆಯ ಹಣ್ಣು)]. ಸಾಮುದಾಯಿಕ ; ಸಾಮಾಜಿಕ [C. note ಅನೇಕ ರಾಷ್ಟ್ರಗಳು ಸಹಿಮಾಡಿದ ಪತ್ರ. C. ownership (ಜಮೀನು, ಉತ್ಪತ್ತಿ ಸಾಧನಗಳು, ಮೊ. ಗಳ) ಸಮಷ್ಟಿ ಸ್ವಾಮ್ಯ]. (ವ್ಯಾ.) C. noun ಸಮುದಾಯ ವಾಚಕ (ಅನೇಕ ವ್ಯಕ್ತಿಗಳನ್ನು ಹೇಳುವಲ್ಲಿ ಏ. ವ. ಪ್ರಯೋಗ : ಉದಾ., ಸೈನ್ಯ ಬಂದಿತು). **Colléctivism** ಕಾ— (ನಾ.) ಜಮೀನುಗಳೂ ಇತರ ಉತ್ಪತ್ತಿಸಾಧನಗಳೂ ಎಲ್ಲರ ಉಪಯೋಗಕ್ಕಾಗಿ ಜನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಮಾನ್ಯದ ಸ್ವಾಮ್ಯವಾಗಿರಬೇಕೆಂಬ ವಾದ : (ರಾಜ್ಯಶಾಸ್ತ್ರ, ಅರ್ಥ ಶಾಸ್ತ್ರ) ಸಮಷ್ಟಿ ವಾದ. **Colléctivist** (ನಾ.) ; **Collectívity** (ನಾ.) ಒಟ್ಟು ಗೂಡಿಕೆ ; ಸಮಷ್ಟಿ ; ಒಟ್ಟು ; ಸಮುದಾಯ ; ಸಮಷ್ಟಿಸ್ವಾಮ್ಯ. ರಾಷ್ಟ್ರ. **Colléctively** ಕಲೆ — (ಕ್ರಿ. ವಿ.) ; **Colléctor** (ನಾ.) (ಮಾದರಿಗಳು, ಅಪರೂಪ ವಸ್ತುಗಳು, ವಿಚಿತ್ರ ವಸ್ತುಗಳು, ರೈಲ್ವೆ ನಿಲ್ದಾಣ ದಲ್ಲಿ ಟಿಕೆಟ್ಟುಗಳು, ತೆರಿಗೆ, ಕಂದಾಯ, ಬಾಡಿಗೆ, ಚಂದಾಹಣ, ಮೊ. ನ್ನು) ಸಂಗ್ರಹಿಸುವವನು, ವಸೂಲು ಮಾಡುವವನು ; ಸಂಗ್ರಹಕಾರ ; ವಸೂಲಿಗಾರ. ಅನೇಕ ಯಂತ್ರಗಳಲ್ಲಿ ಸಂಗ್ರಹ ಸಲಕರಣೆ : ಸಂಗ್ರಾಹಕ. (ಇಂಡಿಯಾದಲ್ಲ ಕಂದಾಯ, ತೆರಿಗೆ, ಮೊ. ನ್ನು ವಸೂಲು ಮಾಡಿ, ನ್ಯಾಯಾಧಿಕಾರ ನಡಸುವ) ಜಿಲ್ಲಾ ಮುಖ್ಯಾಧಿಕಾರಿ. **Colléctorate** — ಕ್ಟೊರೆಟ್ (ನಾ.) ಜಿಲ್ಲಾ ಮುಖ್ಯಾಧಿಕಾರಿಯ ಆಡಳಿತ ಕ್ಕೊಳಪಟ್ಟ ಪ್ರಾಂತ : ಜಿಲ್ಲೆ. **Colléctorship** (ನಾ.) ಜಿಲ್ಲಾ ಮುಖ್ಯಾಧಿಕಾರ.

Cóllect[2] ಕಾಲೆಕ್ಟ್ (ನಾ.) ಕ್ರೈಸ್ತ ಪ್ರಾರ್ಥನಾ ಪುಸ್ತಕದಲ್ಲಿಯ ಸಂಕ್ಷೇಪ ಪ್ರಾರ್ಥನೆ (ಮು., ಪ್ರಾತಃಕಾಲದಲ್ಲೂ ಸಂಧ್ಯಾಕಾಲದಲ್ಲೂ ಪಠಿಸಲು ನಿಯಮಿಸಿರುವವು)

Collectánea, **Colléctivism, etc.** } Collect[1] ನೋಡಿ.

Colleén ಕಾಲೀನ್ (ನಾ.) ಹುಡುಗಿ.

Cóllege ಕಾಲೆಜ್ (ನಾ.) ಸಮಾನ ಕರ್ತವ್ಯಗಳೂ ಹಕ್ಕುಗಳೂ ಉಳ್ಳ ಸಹೋದ್ಯೋಗಿಗಳ ಸಂಘ, ಸಂಸ್ಥೆ (C. of cardinals ಪೋಪ್‌ಗುರು ವಿನ ಒಂಮಂದಿಯುಳ್ಳ ಮಂತ್ರಿಮಂಡಲಿ. C. of Physicians, Preceptors, etc. ವೈದ್ಯರು, ಅಧ್ಯಾಪಕರು, ಮೊ. ರ ಸಂಸ್ಥೆ). ಒಂದು ವಿಶ್ವವಿದ್ಯಾನಿಲಯದಲ್ಲಿಯ ವಿದ್ಯಾಸಂಸ್ಥೆ ; ಪ್ರೌಢ ವಿದ್ಯಾಶಾಲೆ ; ಮಹಾ ಪಾಠಶಾಲೆ. ಸಣ್ಣ ವಿಶ್ವವಿದ್ಯಾನಿಲಯ. (ಸೇನೆ, ನಾವೆ, ಭೂವ್ಯವ ಸಾಯ, ಮೊ.) ಕಸಬನ್ನು ಕಲಿಸುವ ವಿದ್ಯಾಶಾಲೆ : ವೃತ್ತಿ ಶಿಕ್ಷಣ ಶಾಲೆ ; ಯಾವುದಾದರೂ ದೊಡ್ಡ ವಿದ್ಯಾಶಾಲೆ ; ಖಾಸಗಿ ಪಾಠಶಾಲೆ (ಡಂಭದ ಹೆಸರು). C. living ಒಂದು ಪ್ರೌಢವಿದ್ಯಾಶಾಲೆಯ ದತ್ತಿ ವೇತನ. **Cólleger** (ನಾ.) ಇಂಗ್ಲೆಂಡಿನ ಈಟನ್ ಪ್ರೌಢವಿದ್ಯಾ ಶಾಲೆಯಲ್ಲಿ ವಿದ್ಯಾವೇತನ ಪಡೆಯುವ ಒಂಮಂದಿಯಲ್ಲೊಬ್ಬನು ; ದತ್ತಿ ವೇತನಿ. **Collégial** ಕಲೀಜಿಯಲ್ (ಗು.) ಪ್ರೌಢವಿದ್ಯಾ ಶಾಲೆಯ ; ಪ್ರೌಢವಿದ್ಯಾಶಾಲೆಯಾಗಿ ಸ್ಥಾಪಿಸಿದ. **Collégian** (ನಾ.) ಒಂದು ಪ್ರೌಢವಿದ್ಯಾಶಾಲೆಯ ಸದಸ್ಯ. (ಹಳೆಯ ಅಸಂ.) ಬಂದೀವಾನ. **Collégiate** — ಜಿಯೆಟ್ (ಗು.), — ಯೇಟ್ (ಕ್ರಿ. ಸಕ.) ಪ್ರೌಢವಿದ್ಯಾಶಾಲೆಗೆ, ಸಹೋದ್ಯೋಗಿ ಸಂಸ್ಥೆಗೆ, ಸಂಬಂಧ ಪಟ್ಟ. (C. school ದೊಡ್ಡ ಹೆಸರಿನ ಪಾಠಶಾಲೆ). (ಕ್ರಿ.) ಪ್ರೌಢವಿದ್ಯಾ ಶಾಲೆಯಾಗಿ, ಸಂಸ್ಥೆಯಾಗಿ, ಏರ್ಪಡಿಸು. **Collégiately** (ಕ್ರಿ. ವಿ.)

Cóllet ಕಾಲೆಟ್ (ನಾ.) ಸುತ್ತುಬಳೆ ; ಉಂಗುರ ; ಅಣಚು ; ಕಟ್ಟು ; ರತ್ನವನ್ನು ಹಿಡಿದುಕೊಂಡಿರುವ ಕಟ್ಟಡ, ಗೂಡು.

Collíde ಕಲೈಡ್ (ಕ್ರಿ. ಅಕ.) ತಾಗು ; ತಗುಲು ; ಡಿಕ್ಕಿಹೊಡೆ ; ಸಂಘಟ್ಟಿಸು ; ಅಡ್ಡ ಬರು ; ವಿರುದ್ಧವಾಗಿರು. **Collísion** ಕಾಲಿಷನ್ (ನಾ.) ತಾಗುವುದು ; ಡಿಕ್ಕಿಹೊಡೆಯುವುದು ; ಢಕ್ಕಾಮುಕ್ಕಿಯಾಗು ವುದು ; ಸಂಘಟ್ಟನೆ ; ಆಘಾತ ; ಬಡಿದಾಟ. (ರೂಪ.) (ವ್ಯಂಜನಗಳ) ಕರ್ಕಶ ಸಂಯೋಗ ; ಶ್ರುತಿಕಷ್ಟ ಸಂಧಿ. ವಿರುದ್ಧ ಪಕ್ಷಗಳ ಆಘಾತ, ವಿರೋಧ.

Cóllie, Cólly ಕಾಲಿ (ನಾ.) ಸ್ಕಾಟ್ಲೆಂಡಿನ ಕುರುಬರ ನಾಯಿ.

Cóllier ಕಾಲಿಯರ್ (ನಾ.) ಕಲ್ಲಿದ್ದಲ ಗಣಿಯ ಕೆಲಸದವನು ; ಕಲ್ಲಿದ್ದಲ ಹಡಗು ; ಕಲ್ಲಿದ್ದಲ ಹಡಗಿನ ನಾವಿಕ. **Cólliery** (ನಾ.) ಕಲ್ಲಿದ್ದಲ ಗಣಿ.

Cólligate ಕಾಲಿಗೇಟ್ (ಕ್ರಿ. ಸಕ.) (ಮು., ಬೇರೆಬೇರೆಯಾಗಿರುವ ವಿಷಯ ಗಳ ಸಮಾನ ಧರ್ಮವನ್ನು ಹಿಡಿದು) ಸಂಬಂಧ ಕಲ್ಪಿಸು : ಸಮಾವೇಶ ಮಾಡು. **Colligátion** (ನಾ.)

Cóllimate ಕಾಲಿಮೇಟ್ (ಕ್ರಿ. ಸಕ.) (ದೂರದರ್ಶಕ, ಮೊ. ಗಳ) ದೃಷ್ಟಿ ರೇಖೆಯನ್ನು ಸಮೀಕರಿಸು ; ಸಂಧಾನ ಮಾಡು. (ಕಿರಣಗಳನ್ನು) ಸಮಾಂತರ ಮಾಡು. **Collimátion** (ನಾ.) ; **Cóllimator** (ನಾ.) ಒಂದು ದೃಗ್ಯಂತ್ರದ ದೃಷ್ಟಿ ರೇಖೆಯನ್ನು ಸಮೀಕರಿಸುವುದಕ್ಕಾಗಿ ಆ ಯಂತ್ರದಲ್ಲಿ ಜೋಡಿಸಿರುವ ಲಘು ದೂರದರ್ಶಕ. ಪ್ರಿಸ್ಮಮಿನ (ಮುಪ್ಪಟ್ಟೆಯ ಗಾಜು, ಮೊ. ಗಳ) ಮೇಲೆ ಸಮಾನಾಂತರ ಕಿರಣಗಳನ್ನು ಬೀಳಿಸುವ ವರ್ಣಭೇದಕದ (ಸ್ಪೆಕ್ಟ್ರಸ್ಕೋಪಿನ) ನಳಿಕೆ : ಸಂಧಾಯಕ.

Collínear ಕಲಿನಿಯರ್ (ಗು.) ಒಂದೇ ಸರಳರೇಖೆಯಲ್ಲಿರುವ : ಏಕ ರೇಖಿಕ. **Collineárity** (ನಾ.)

Collísion. Collide ನೋಡಿ.

Cóllocate ಕಾಲೊಕೇಟ್ (ಕ್ರಿ. ಸಕ.) ಒಟ್ಟಿಗೆ ಇಡು ; ಜೋಡಿಸು ; ವರಿಸೆಯಾಗಿಡು. (ಒಂದು ಕಡೆ) ಇಡು. **Collocátion** (ನಾ.) — ವುದು ; ವರಿಸೆ ; ಜೋಡಣೆ ; ಒಟ್ಟುಸೇರಿಕೆ.

Cóllocutor ಕಾಲೊಕ್ಯೂಟರ್, **Collócutor** ಕಲಾಕ್ಯುಟರ್ (ನಾ.) ಸಂಭಾಷಣೆಯಲ್ಲಿ ಭಾಗ ವಹಿಸುವವನು ; ಸಂಭಾಷಕ.

Collódion ಕಲೋಡಿಯನ್ (ನಾ.) (ಛಾಯಾಚಿತ್ರ ರಚನೆಯಲ್ಲೂ ಶಸ್ತ್ರ ಚಿಕಿತ್ಸೆಯಲ್ಲೂ ಉಪಯೋಗಿಸುವ) ಈಥರ್‌ದ್ರವದಲ್ಲಿ ಲೀನವಾದ ಸಿಡಿ ಹತ್ತಿಯ (Gun cotton) ದ್ರವ : ' ಕಲೋಡಿಯನ್ '. **Collódioned** (ಗು.) ; **Collódionize** (ಕ್ರಿ. ಸಕ.)

Collógue ಕಲೋಗ್ (ಕ್ರಿ. ಅಕ.) ಒಬ್ಬನೊಡನೆ ಗುಟ್ಟಾಗಿ ಗೊತ್ತು ಮಾಡಿಕೊ ; ಒಳಸಂಚು ನಡಸು. ಗಳಹು ; ಹರಟು.

Cólloid ಕಾಲಾಯ್ಡ್ (ಗು., ನಾ.) ಅಂಟುವಜ್ರದಂಥ (ಪದಾರ್ಥ). (ರ. ವಿ.) ಸ್ಫಟಿಕಾಕೃತಿ ಸ್ವಭಾವಕ್ಕೆ ವಿರುದ್ಧವಾದ ಅಣುವಿನ್ಯಾಸವುಳ್ಳ (ಪದಾರ್ಥ) : ಅಸ್ಫಟಿಕ. (ರೋಗ) C. tissue ಒಂದೇ ಸಮನಾಗಿ ' ಜೆಲಟೀನ್ ' ಪದಾರ್ಥದ ಸ್ಥಿತಿಗೆ ಅವನತಿಹೊಂದಿದ ಅಂಗಾಂಶ. **Colloídal** (ಗು.)

Cóllop ಕಾಲಪ್ (ನಾ.) ಮಾಂಸದ ಚೂರು, ತುಂಡು. (ಬೈಬಲ್) ಸ್ಥೂಲಕಾಯದ ಮನುಷ್ಯನ ಅಥವಾ ಮೃಗದ ಚರ್ಮದ ಮಡಿಕೆ.

Collóquial ಕಲೋಕ್ವಿಯಲ್ (ಗು.) ಸಂಭಾಷಣೆಯ ; ಬಾಯಿಮಾತಿನ ; ಆಡುವ ಭಾಷೆಯ ; ಆಡುಮಾತಿನ ; ಬಳಕೆಯ ಮಾತಿನ. **Collóquialism** (ನಾ.) ಆಡುಮಾತಿನ ಶೈಲಿ, ರೀತಿ ; ಬಳಕೆಯ ಮಾತು. **Collóquialist** (ನಾ.) ಚೆನ್ನಾಗಿ ಮಾತನಾಡುವವನು ; ಮಾತು ಗಾರ ; ಆಡುಮಾತಿನ ರೂಪಗಳನ್ನು (ಸಾಹಿತ್ಯದಲ್ಲಿ) ಪ್ರಯೋಗಿಸು ವವನು. **Collóquially** (ಕ್ರಿ. ವಿ.) ; **Collóquium** (L) (ನಾ.) ಚರ್ಚಾ ಗೋಷ್ಠಿ. **Cólloquist** ಕಾಲೊಕ್ವಿಸ್ಟ್ (ನಾ.) = Collocutor. **Cólloquy** (ನಾ.) ಸಂಭಾಷಣೆ. (ಕ್ರೈಸ್ತ) ಪ್ರೆಸ್ಬಿಟೀರಿ ಯನ್ ಚರ್ಚಿನ ನ್ಯಾಯ ಮತ್ತು ಶಾಸನ ಸಂಸ್ಥೆ.

Cóllotype ಕಾಲೊಟೈಪ್ (ನಾ.) ಕ್ಷಿಪ್ರಗ್ರಾಫಿಯಾಗಿ ಮಾಡಿರುವ ತೆಳ್ಳನೆಯ ಜೆಲಟೀನ್ ರೇಕಿನಮೇಲೆ ರಾಸಾಯನಿಕ ಕಿರಣಗಳು ರೇಖಿ ಸಿರುದನ್ನು ಮುದ್ರಿಸಲಾಗುವಂತೆ ಮಾಡಿರುವ ಹಲಗೆ (= C. plate) ; ಕಾಲೊಟೈಪ್ ಮುದ್ರಣ (= C. process) ; ಹಾಗೆ ಮುದ್ರಿಸಿದ ಪ್ರತಿ.

Collúde ಕಲ್ಯೂ(ಲೂ)ಡ್ (ಕ್ರಿ. ಅಕ.) ಒಳಸಂಚು ಮಾಡು ; (ಇತರ ರೊಡನೆ) ಗುಟ್ಟಾಗಿ ಮೋಸದ ಯೋಚನೆ ಮಾಡು ; ತಂತ್ರಹೂಡು ; ಮೋಸಮಾಡು. ಬರಿ ನಟನೆಮಾಡು. **Collúsion** — ಷನ್ (ನಾ.) ಮೋಸದ ಒಳಸಂಚು (ಮು., ಕೋರ್ಟುವ್ಯವಹಾರದಲ್ಲಿ, ಹೊರಕ್ಕೆ ಮಾತ್ರ ಪ್ರತಿಪಕ್ಷಿಗಳಾಗಿ ಕಾಣುವವರು ಮಾಡುವುದು) : ಷರೀಕು ; ತಂತ್ರ ; ಹೂಟ. **Collúsive** — ಸಿವ್ (ಗು.) ; **Collúsively** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Collýrium ಕಲಿರಿಯಮ್ (ನಾ. ; ಬ. ವ. -ia) ಕಾಡಿಗೆ ; ಕಣ್ಕಪ್ಪು ; ಅಂಜನ ; ಕಣ್ಣೌಷಧ.

Cóllywobbles ಕಾಲಿವಾಬ್‌ಲ್ಸ್ (ನಾ., ಬ. ವ.) (ಬಳ. ಮಾ.) ಕರುಳಲ್ಲಾಗುವ ಗುಡುಗುಡು ಶಬ್ದ : ಹೊಟ್ಟೆ ಗುಡುಗು, ಕೂಗು.

Cólocynth ಕಾಲೊಸಿಂತ್ (ನಾ.) ಹಾವುಮೆಕ್ಕೆ ಬಳ್ಳಿ (ಕಹಿಯಾದ ತಿರುಳಿರುವ ಕಾಯಿಬಿಡುವುದು ; ಭೇದಿಯೌಷಧಕ್ಕೆ ಉಪಯೋಗ) ; ಹಾವುಮೆಕ್ಕೆ ಭೇದಿಯೌಷಧ.

Cólon[1] ಕೋಲನ್ (ನಾ.) (ಅಂ. ರ. ಶಾ.) (ಅಂಥಾಂತ್ರದಿಂದ ಗುದನಾಳದ ವರೆಗಿನ) ದೊಡ್ಡಕರುಳು. **Colonítis** ಕಾಲೊನೈಟಿಸ್ (ನಾ.) (ವೈದ್ಯ) ದೊಡ್ಡಕರುಳಿನ ಊತ.

Cólon[2] ಕೋಲನ್ (ನಾ.) ಉದಾಹರಣೆ, ವಿವರಣೆ, ಮೊ. ನ್ನು ಸೂಚಿಸುವುದಕ್ಕಾಗಿ ಉಪಯೋಗಿಸುವ ವಿರಾಮ ಚಿಹ್ನೆ (:) : ವಿವರಣ ವಿರಾಮ.

Cólonel ಕರ್ನಲ್ (ನಾ.) ಸೈನ್ಯದ ಒಂದು ಭಾಗದ ಮುಖ್ಯಾಧಿಕಾರಿ : ದಳಪತಿ ; 'ಕರ್ನಲ್'. **Cólonelcy** — ಸಿ (ನಾ.) ಕರ್ನಲಿನ ಹುದ್ದೆ, ಅಧಿಕಾರ, ಪದವಿ. **Cólonelship** (ನಾ.) ಕರ್ನಲ್‌ತನ.

Colónial, **Cólonist** } **Colony** ನೋಡಿ.

Colonnáde ಕಾಲೊನೇಡ್ (ನಾ.) (ಬೋದಿಗೆಗಳಿಂದ ಕೂಡಿದ) ಕಂಬಸಾಲು. ಮರಸಾಲು. **Colonnáded** (ಗು.)

Cólony ಕಾಲೊನಿ (ನಾ.) (ಗ್ರೀಕ್ ಚರಿತ್ರೆ) ವಲಸೆಹೊರಟವರು ಸ್ಥಾಪಿಸಿದ ಸ್ವತಂತ್ರ ನಗರ : ವಲಸೆ ನಗರ. (ರೋಮನ್ ಚರಿತ್ರೆ) (ಸಾ., ಜಯಿಸಿದ ರಾಜ್ಯದಲ್ಲ ಸೈನ್ಯವಾಗಿ ನಿಂತ ಖದೀಮ ಸೈನಿಕರ) ಪಾಳೆಯ. ಅಧಿನಿವೇಶ ; ಮಸಾಹತು ; ನೆಲಸುನಾಡು ; ನೆಲಸು ನಾಡಿಗರು. (ಮು., ಪ್ರತ್ಯೇಕ ಪ್ರದೇಶದಲ್ಲ ವಾಸವಾಗಿರುವ) ಒಂದು ದೇಶೀಯ ಅಥವಾ ಒಂದು ಕಸಬಿನ ಜನರು ; ಅವರ ವಾಸಸ್ಥಾನ, ಹಟ್ಟಿ (Labour c. ಕೂಲಿಯವರ ಹಟ್ಟಿ). ನೆರವಿ ; ಹಿಂಡು (C. of sparrows, etc.). (ಜೀ. ವಿ.) ಸಂಗಡಜೀವಿಗಳ ಸಮುದಾಯ (ಉದಾ., ಹವಳದಲ್ಲಿರುವಂತೆ). **Colónial** ಕಲೋನಿಯಲ್ (ಗು., ನಾ.) ನೆಲಸುನಾಡಿನ(ವನು). C. Office ನೆಲಸುನಾಡುಗಳ ವ್ಯವಹಾರದ ಇಲಾಖೆ : ನೆಲಸುನಾಡು ಖಾತೆ. **Colónialism** (ನಾ.) ನೆಲಸುನಾಡಿನ ಪದ್ಧತಿ, ಭಾಷಾ ಮರ್ಯಾದೆ, ರೀತಿ, ನೀತಿ. **Colónially** (ಕ್ರಿ. ವಿ.) ; **Cólonist** ಕಾಲೊನಿಸ್ಟ್ (ನಾ.) ಒಂದು ನೆಲಸುನಾಡಿನಲ್ಲಿ ನಿಂತವನು ; ನೆಲಸುನಾಡಿನ ನಿವಾಸಿ ; ನೆಲಸುನಾಡಿಗ ; ನೆಲಸುನಾಡಿನ ಸ್ಥಾಪನೆಯಲ್ಲಿ ಭಾಗವಹಿಸಿದವನು. **Cólonize** (ಕ್ರಿ.) ನೆಲಸುನಾಡನ್ನು ಸ್ಥಾಪಿಸು ; ನೆಲಸುನಾಡಿನಲ್ಲಿ ನೆಲಸು. **Cólonizátion** (ನಾ.) ; **Cólonizer** (ನಾ.)

Cólophon ಕಾಲೊಫನ್ (ನಾ.) ಪ್ರಾಚೀನ ಪುಸ್ತಕಗಳಲ್ಲಿ (ಕೊನೆಯಲ್ಲಿ, ಸಾ., ಚಿತ್ರಾಕ್ಷರಗಳಲ್ಲಿ ಹಾಕುತ್ತಿದ್ದ ಗ್ರಂಥದ ಮತ್ತು ಮುದ್ರಣಕಾರನ ಹೆಸರು, ಮುದ್ರಣಮಾಡಿದ ಸ್ಥಳ ಮತ್ತು ಕಾಲ — ಇವೇ ಮೊ. ನ್ನು ಒಳಕೊಂಡ) ಸಮಾಪ್ತಿ ವಚನ ; (ಈಗ, ಪುಸ್ತಕದ ಮುಖಪತ್ರದಲ್ಲಿ ಹಾಕುವ) ಮುದ್ರಾಂಕಿತ. From title page to c. ಮೊದಲಿನಿಂದ ಕೊನೆಯ ವರೆಗೂ ; ಆಮೂಲಾಗ್ರವಾಗಿ.

Cólophony ಕಾಲೊಫೋನಿ, **Colóphony** ಕಲಾಫೊನಿ (ನಾ.) ನೀರು ಗೂಡಿದ ಕರ್ಪೂರತೈಲದಿಂದ (Turpentine) ಬಟ್ಟಿಯಿಳಿಸಿ ತೆಗೆದ ಕಪ್ಪುಬಣ್ಣದ ರಾಳಪದಾರ್ಥ : 'ಕಾಲೊಫೊನಿ'. **Colóphonate** ಕೊರಾಫೊನೇಟ್ (ನಾ.) (ರ. ವಿ.) ಕಾಲೊಫೋನಿಕ್ ಆಮ್ಲದ ಲವಣ. (Colophon ಎಂಬ ಊರಿನ ಹೆಸರಿನಿಂದ)

Coloquíntida ಕಾಲೊಕ್ವಿಂಟಿಡ (ನಾ.) = Colocynth.

Colorádo beétle ಕಾಲೊರಾಡೊ ಬೀಟ್‌ಲ್ (ನಾ.) ಕಪ್ಪುಪಟ್ಟೆಗಳುಳ್ಳ ಹಳದಿಯ ಬಣ್ಣದ ಒಂದು ಜೀರುಂಡೆ (ಇದರ ಮರಿಹುಳು ಆಲೂಗೆಡ್ಡೆಯ ಪೈರಿನ ವಿನಾಶಕಾರಿ). (ಅಮೆ. ಸಂ. ಗಳಲ್ಲೊಂದಾದ Colorado ಎಂಬುದರ ಹೆಸರಿನಿಂದ)

Colo(u)rátion, **Colorífic**, **Colorímeter** } **Colour** ನೋಡಿ.

Colóssal. **Colossus** ನೋಡಿ.

Colóssus ಕೊಲಾಸಸ್ (ನಾ. ; ಬ. ವ. -i, -uses) ಸಹಜವಾದುದಕ್ಕಿಂತ ಅತಿದೊಡ್ಡದಾದ ವಿಗ್ರಹ : ಅದ್ಭುತ ವಿಗ್ರಹ ; ಬೃಹದ್ದೇಹಿ ; ಮಹಾ ಕಾಯ (C. of Rhodes ಏಷ್ಯಾಮೈನರಿನಲ್ಲಿರುವ ರೋಡ್ಸ್ ಬಂದರಿನಲ್ಲಿ ದಾಟುಗಾಲು ಹಾಕಿಕೊಂಡು ನಿಂತಿದ್ದಿತೆಂದು ಪ್ರತೀತಿಯಿರುವ ಅಪೋಲೊ ದೇವತೆಯ ವಿಗ್ರಹ). ಮೂರ್ತೀಕರಿಸಿದ ಸಾಮ್ರಾಜ್ಯ, ಮೊ. (ಮು., ರಾಷ್ಟ್ರಗಳಮೇಲೆ ದಾಟುಗಾಲು ಹಾಕಿಕೊಂಡು ನಿಂತಿರುವಂತೆ ರೂಪಿಸಿದುದು). **Colóssal** (ಗು.) ವಿಪರೀತ ದೊಡ್ಡ ; ಬೃಹದಾಕಾರದ. (ಬಳ. ಮಾ.) ಅಸಾಮಾನ್ಯ ; ಅದ್ಭುತ ; ಮಹಾ. **Colóssally** (ಕ್ರಿ. ವಿ.)

Colóstrum (L) ಕಲಾಸ್ಟ್ರಂ (ನಾ.) (ವೈದ್ಯ) ಪ್ರಸವವಾದಮೇಲೆ ಸಸ್ತನಿ ಪ್ರಾಣಿಗಳಲ್ಲಿ ಉತ್ಪತ್ತಿಯಾಗುವ ಹಸುರುಬಣ್ಣದ ಮೊದಲ ಮೊಲೆ ಹಾಲು : ಪ್ರಥಮ ಸ್ತನ್ಯ.

Colótomy ಕೊಲಾಟೊಮಿ (ನಾ.) (ಶಸ್ತ್ರ ವೈದ್ಯ) ಗುದನಾಳ ಕಟ್ಟಿಕೊಂಡ ಸಂದರ್ಭದಲ್ಲಿ, ಮಲಹೋಗಲು ಬೇರೆಮಾರ್ಗವನ್ನು ಕಲ್ಪಿಸುವುದಕ್ಕಾಗಿ ದೊಡ್ಡಕರುಳಿನಲ್ಲಿ ಸಂದು, ಬಾಯಿ, ಸೀಳುವುದು : ಬೃಹದಂತ್ರ ಭೇದನ.

Cólour ಕಲರ್ (ನಾ.) ಬಣ್ಣ ; ವರ್ಣ ; ರಂಗು. (ಕಲೆ) ವರ್ಣವಿನ್ಯಾಸ. ವರ್ಣದ್ರವ್ಯ: ಮುಖದ ಕೆಂಪು. (ಬ. ವ. ದಲ್ಲಿ) ಛಾಯೆ ; ಕಾಂತಿ. ಒಂದು ಪಕ್ಷ, ಒಂದು ಸಂಸ್ಥೆಯ ಸದಸ್ಯತ್ವ, ಮೊ. ಗಳ ಗುರುತಿಗಾಗಿ ಧರಿಸುವ ಬಣ್ಣದ ಪಟ್ಟಿ, ಉಡುಪು, ಮೊ. ವು. ಹಡಗಿನ ಬಾವುಟ, ಧ್ವಜ ; ರೇಷ್ಮೆಯ ಬಾವುಟದ ಜೋಡಿ. ಬಣ್ಣದ ಉಡುಪುಗಳು. (ರೂಪ.) ತೋರ್ಕೆ ; ಹೊರ ಭಾವ ; ವೇಷ ; ನೆಪ ; ವ್ಯಾಜ. (ಸಂ.) ಲಕ್ಷಣ ; ನಾದ ಗುಣ. ಲಕ್ಷಣ ; ರೀತಿ ; ಅರ್ಥಚ್ಛಾಯೆ. (ಸಾಹಿತ್ಯ) ಅಲಂಕಾರ. **C. bar** ಬಿಳಿಯ ಜನರು ನ್ಯಾಯವ್ಯವಹಾರದಲ್ಲಿಯೂ ಸಾಮಾಜಿಕ ಸಂಬಂಧದಲ್ಲಿಯೂ ಇತರರ ವಿಷಯದಲ್ಲಿ ತೋರಿಸುವ ಭೇದ : ವರ್ಣ ಪ್ರತಿಬಂಧಕ. **C.-blind** (ಗು.) ಕೆಲವು ಬಣ್ಣಗಳನ್ನು ಪ್ರತ್ಯೇಕಿಸಲಾಗದ ನೇತ್ರಸ್ಥಿತಿಯ ; ಬಣ್ಣಗುರುಡಿನ. **C.-blindness** ವರ್ಣಾಂಧತೆ ; ಬಣ್ಣಗುರುಡು. (ಅಮೆ. ಸಂ., ರೂಪ.) ಬಿಳಿಯರು ಕರಿಯರು ಎಂಬ ಪಕ್ಷಪಾತವಿಲ್ಲದಿರುವುದು : ವರ್ಣ ನಿಷ್ಪಕ್ಷಪಾತ. **C.-box** (ವರ್ಣಚಿತ್ರಕನ) ಬಣ್ಣಗಳ ಪೆಟ್ಟಿಗೆ. **C.-man** ಬಣ್ಣದ ವ್ಯಾಪಾರಿ. **C.-sergeant** ಸೇನೆಯ ಧ್ವಜಗಳನ್ನು ಕಾಯುವ ಪದಾತಿಸೈನ್ಯದ ಮೇಲಧಿಕಾರಿ. Accidental colours (Accidental ನೋಡಿ). Change c. (ಮುಖದ) ಬಣ್ಣ ಬದಲಾಯಿಸು ; ಬಣ್ಣಗೆಡು ; ವಿವರ್ಣವಾಗು. Come off with flying colours ಯಶಸ್ಸನ್ನು ಸಂಪಾದಿಸು ; ಪೂರ್ಣ ಜಯಶಾಲಿಯಾಗು ; ಜಯಭೇರಿ ಹೊಡೆ. Complementary c. ಆಯಾ ಬಣ್ಣದೊಡನೆ ಸೇರಿ ಬಿಳಿಯಬಣ್ಣವಾಗುವ ಬಣ್ಣ : ಪೂರಕ ವರ್ಣ. Fundamental, primary, simple, colours ಮೂಲ ವರ್ಣಗಳು : ಕೆಂಪು, ಹಸುರು ಮತ್ತು ನೇರಿಳೆ ; ಅಥವಾ (ವರ್ಣಚಿತ್ರಕನ) ಕೆಂಪು, ನೀಲ ಮತ್ತು ಹಳದಿ (ಈ ಬಣ್ಣಗಳ ತಕ್ಕ ಮಿಶ್ರಣದಿಂದ ಇತರ ಯಾವ ಬಣ್ಣವನ್ನಾದರೂ ರಚಿಸಬಹುದು). Get one's colours ವ್ಯಾಯಾಮ ದಳಕ್ಕೆ ಪ್ರವೇಶ ಪಡೆ. Give no c. for saying ಕಾರಣಕಲ್ಪನೆಗೆ ಅವಕಾಶಕೊಡಬೇಡ. Give one his colours ವ್ಯಾಯಾಮ ದಳಕ್ಕೆ ಸೇರಿಸಿಕೊ. Local c. ದೇಶದ, ಕಾಲದ, ಸ್ವರೂಪ, ಆಚಾರ, ಪದ್ಧತಿ, ಸನ್ನಿವೇಶ, ಮೊ. ಗಳ ಭಾವ ಕೊಡುವುದಕ್ಕೆ ಮಾಡುವ ವಿವರಣೆ : ಸನ್ನಿವೇಶ ಛಾಯೆ, ವರ್ಣನೆ. Lose c., Gain c.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಳಿಚಿಕೊ, ಕೆಂಪೇರು. Man, woman, etc., of colour ಬಿಳಿಯರಲ್ಲದ ಮನುಷ್ಯರ ವರ್ಗಕ್ಕೆ ಸೇರಿದವನು(ವಳು): ಬಣ್ಣದವನು (ವಳು) (ಮು., ನೀಗ್ರೊ). Nail one's colours to the mast ಪಟ್ಟು ಹಿಡಿ; ಕೆಳಕ್ಕಿಳಿಯದಿರು (ರೂಪ.). Paint in bright, dark, colours ಮೆರುಗಿಟ್ಟು, ಮಸಿಬಳಿದು, ವರ್ಣಿಸು. Put false colours upon ಇಲ್ಲದ ಬಣ್ಣಕೊಡು; ತಪ್ಪುಅಭಿಪ್ರಾಯ ಕೊಡು. Regimental c. ದಳಧ್ವಜ. Sail under false colours (ರೂಪ.) ಕಪಟ ವೇಷ ಹಾಕಿಕೊ. Secondary c. ಎರಡು ಮೂಲವರ್ಣಗಳ ಮಿಶ್ರಣದಿಂದಾದ ವರ್ಣ: ಜನ್ಯ ವರ್ಣ. See in its true colours ನಿಜಸ್ಥಿತಿಯಲ್ಲಿ ನೋಡು. See the c. of one's money ಕಾಸಿನ ಮುಖ ಕಂಡ ಹಾಗಾಗು. Show one's colours ತನ್ನ ಪಕ್ಷವನ್ನು ಅಥವಾ ಸ್ವರೂಪವನ್ನು ತೋರಿಸಿಕೊ. Take one's c. from ಛಾಯಾನು ವರ್ತಿಯಾಗು. Under c. of ಅದರ ಮರೆಯಲ್ಲಿ; ಈ ವ್ಯಾಜದಿಂದ. Water-colours (Water ನೋಡಿ). With the colours ಯುದ್ಧ ಸೈನ್ಯದಲ್ಲಿ ಸೇರಿ. **Cólourist** (ನಾ.) ಬಣ್ಣಕೊಡುವುದರಲ್ಲಿ ಚತುರ ನಾದ ಚಿತ್ರಕಾರ. **Colourístic** (ಗು.) ವರ್ಣಚಿತ್ರಕನ; ವರ್ಣ ಚಿತ್ರದ. **Cólourless** (ಗು.) ಬಣ್ಣವಿಲ್ಲದ; ವರ್ಣಹೀನ; ನಿರ್ವರ್ಣ; ವಿವರ್ಣ; ಮಾಸಲು. ವಿಶೇಷವಿಲ್ಲದ; ಅಸ್ಪಷ್ಟ; ಅನುಜ್ಜ್ವಲ. ನಿಷ್ಪಕ್ಷಪಾತ; ಉದಾಸೀನ. **Cólourlessly** (ಕ್ರಿ. ವಿ.); **Cólourlessness** (ನಾ.); **Cóloury** (ಗು.) (ವ್ಯಾಪಾರ) (ಕಾಫಿ, ಮೊ. ಪದಾರ್ಥಗಳ ವಿಷಯದಲ್ಲಿ) ನಾಣ್ಯವಾದ ಸರಕಿಗೆ ಇರಬೇಕಾದ ಬಣ್ಣವುಳ್ಳ; ಒಳ್ಳೆಯ ಬಣ್ಣದ. **Colorífic** ಕಾಲೊರಿಫಿಕ್, ಕಲರಿ — (ಗು.) ಬಣ್ಣವನ್ನುಂಟುಮಾಡುವ; ವರ್ಣಜನಕ; ವರ್ಣೋತ್ಪಾದಕ; ಹೆಚ್ಚಾಗಿ ರಂಗೇರಿದ. **Colorímeter** ಕಾಲೊರಿಮಿಟರ್, ಕಲರಿ — (ನಾ.) ರಂಗಿನ ತೀವ್ರತೆಯನ್ನು ಅಳೆಯುವ ಸಾಧನ: ವರ್ಣ ತೀವ್ರತಾ ಮಾಪಕ.

Cólour (ಕ್ರಿ.) ಬಣ್ಣ ಕೊಡು, ಹಚ್ಚು; ಬಳಿ, ಹಾಕು; ಮೆರುಗಿಡು. ಮರೆಮಾಡು; ವೇಷಾಂತರದಿಂದ ಮುಚ್ಚು; ನಿಜಸ್ಥಿತಿಯನ್ನು ಮಾರ್ಪಡಿಸಿ ಹೇಳು (Highly coloured details ಬಹಳ ಬಣ್ಣ ಕೊಟ್ಟ ವಿವರಣೆ). ಬಣ್ಣವೇರು; (ಮುಖ) ಕೆಂಪೇರು; ವಿವರ್ಣವಾಗು; ಲಜ್ಜೆಗೊಳ್ಳು. Coloured person ಪೂರ್ತಿಯಾಗಿ ಬಿಳಿಯರ ಸಂತತಿ ಯವನಲ್ಲದವನು: ಅರೆ ಬಿಳಿಯ. **Cólourable** (ಗು.) ನಿಜದ ತೋರ್ಕೆಯ; ನಂಬಬಹುದೆಂದು ತೋರುವ. ಕೃತಕ; ಕೃತ್ರಿಮ; ಖೋಟ. **Cólourably** (ಕ್ರಿ. ವಿ.); **Colo(u)rátion** ಕಾಲೊರೇಷನ್, ಕಲ — (ನಾ.) ಬಣ್ಣಹಾಕುವುದು; ವರ್ಣ ವಿನ್ಯಾಸ. ಜೀವಿಗಳ ಅಥವಾ ನಿರ್ಜೀವ ವಸ್ತುಗಳ ಸಹಜ (ಮು., ವಿಧವಿಧವಾದ, ವಿವಿಧ) ವರ್ಣ: ವರ್ಣ ವೈವಿಧ್ಯ. **Cólouring** (ನಾ.)

Colporteúr ಕೊಲ್ಪೋರ್ಟರ್, **Cólporteur** ಕಾಲ್ಪಾರ್ಟರ್ (ನಾ.) ಪುಸ್ತಕಗಳ ತಿರುಗುವ್ಯಾಪಾರಿ (ಮು., ಬೈಬಲ್ಲುಗಳನ್ನು ಹಂಚುವುದಕ್ಕಾಗಿ ನಿಯಮಿತನಾದವನು)

Colt[1] ಕೋಲ್ಟ್ (ನಾ., ಕ್ರಿ. ನಕ.) ಕುದುರೆಯ ಮರಿ (೪ ವರ್ಷ ವಯಸ್ಸಿನ ವರೆಗೆ). ಎಳಕು; ಅನನುಭವಿ (ಮು., ಕ್ರಿಕೆಟ್ ಆಟದಲ್ಲಿ). (ನಾವೆ) ಹೊಡೆಯುವ, ದಂಡಿಸುವ, ಹಗ್ಗ. (ಕ್ರಿ.) ಹಗ್ಗದಿಂದ ಹೊಡೆ. Coltsfoot ಒಂದು ಕಳೆಯ ಗಿಡ. C.'s tail ಜೂಲುಮೋಡ. **Cólthood** (ನಾ.); **Cóltish** (ಗು.) ಕುದುರೆಯ ಮರಿಯ; — ಯಂಥ. ಚೆಲ್ಲಾಟವಾಡುವ; ಕುಣಿದಾಡುವ.

Colt[2] ಕೋಲ್ಟ್ (ನಾ.) ಸ್ವಯಂಚಲ ಪಿಸ್ತೂಲು, ಬಂದೂಕು (= C. revolver). (ಇದನ್ನು ಮೊದಲು ರಚಿಸಿದವನ ಹೆಸರಿನಿಂದ)

Cólubrine ಕಾಲ್ಯುಬ್ರೈನ್ (ಗು.) ಹಾವಿನಂಥ (ಮು., ಕೆಡುಕುಮಾಡದ ಕಾಲ್ಯುಬರ್ ಎಂಬ ಹಾವಿನಂಥ)

Cólumn ಕಾಲಮ್ (ನಾ.) (ವಾ. ಶಾ.) ಕಂಬ; ಸ್ತಂಭ. (ರೂಪ.) ಆಧಾರ. ಸ್ತಂಭಾಕಾರದ ವಸ್ತು; (ಶ. ವಿ., ಸ. ವಿ., ಯಂತ್ರಭಾಗ, ಮೊ. ಗಳಲ್ಲಿ) ಸ್ತಂಭಾಕೃತಿಯ ಅಂಗ. (C. of water, mercury ನಾಳದಲ್ಲಿಯ, ನೀರಿನ, ಪಾದರಸದ, ಸ್ತಂಭ. C. of smoke ನೆಟ್ಟಗೆ ಮೇಲೇರುತ್ತಿರುವ ಹೊಗೆ: ಧೂಮ ಸ್ತಂಭ). ಪುಸ್ತಕ ಪುಟದಲ್ಲಿಯ ಅಥವಾ ವರ್ತಮಾನ ಪತ್ರಿಕೆಯ ಪುಟದಲ್ಲಿಯ ಉದ್ದಸಾಲು; ಅಂಕಣ. ವರ್ತಮಾನ ಪತ್ರಿಕೆಯಲ್ಲಿ ಯಾವುದಾದರೂ ಗೊತ್ತಾದ ವಿಷಯಗಳನ್ನು ಹಾಕುವುದಕ್ಕಾಗಿ ಇಟ್ಟಿರುವ ಭಾಗ (Advertisement columns ಪತ್ರಿಕೆಯ ಪ್ರಕಟನೆಯ ಅಂಕಣಗಳು). (ಸೈನ್ಯ) ದಂಡವ್ಯೂಹ. (ನಾವೆ) ಹಡಗುಗಳ ಸಾಲು (ಮು., ಒಂದರ ಹಿಂದೊಂದು ಹೋಗುತ್ತಿರುವ ಸಂದರ್ಭದಲ್ಲಿ). **Cólumned** (ಗು.) = **Colúmnar** ಕೊಲಮ್ನರ್ (ಗು.) ಕಂಬಸಾಲಿನ; ಕಂಬದ ರೀತಿಯ; ಕಂಬಗಳ ಮೇಲೆ ಎತ್ತಿರುವ; ಸ್ತಂಭಾಕೃತಿಯ (ರೂಪ. ಸಹ). ಕಲಮುಗಳಾಗಿ ಬರೆದ ಅಥವಾ ಮುದ್ರಿಸಿದ. **Colúmniform** (ಗು.)

Colúre ಕೊಲ್ಯೂರ್, **Cólure** ಕೋಲ್ಯುರ್ (ನಾ.) (ಖ. ವಿ.) ಅಯನ ವೃತ್ತ. Equinoctial c. ಕ್ರಾಂತಿಪಾತ ವೃತ್ತ. Solstitial c. ಅಯನಾಂಶ ವೃತ್ತ; ಯಾಮ್ಯೋತ್ತರ ವೃತ್ತ.

Cólza ಕಾಲ್ಜ (ನಾ.) ಸಾಸವೆಜಾತಿಯ ಬೀಜ. C.-oil ಈ ಬೀಜದಿಂದ ತೆಗೆದ ಉರಿಸುವ ಎಣ್ಣೆ.

Cóma[1] ಕೋಮ (ನಾ.) ಅಸಹಜವಾದ ಅತಿನಿದ್ರೆ; ಅತಿಸುಪ್ತಿ; ಮಯಕ; ಮಂಕು; ಅಲಸಿಕೆ; ಮಾಂದ್ಯ. **Cómatose** — ಟೋಸ್ (ಗು.) ಅತಿ ಸುಪ್ತ; ಮಯಕ ಹಿಡಿದ; ಮಂಕುಗವಿದ.

Cóma[2] ಕೋಮ (ನಾ.; ಬ. ವ. -ae) (ಸ. ವಿ.) (ಕೆಲವು) ಬೀಜದ ಕೊನೆ ಯಲ್ಲಿರುವ ರೇಷ್ಮೆಯಂಥ ಸೂಕ್ಷ್ಮತಂತುಗಳ ಗುಚ್ಛ; ಬೀಜದ ಜುಟ್ಟು. (ಖ. ವಿ.) ಧೂಮಕೇತುವಿನ ಗರ್ಭದ ಸುತ್ತಲೂ ಇರುವ (ಅಸ್ಪಷ್ಟ) ದೀಪ್ತಿಯ ಆವರಣ. **Comóse** (ಗು.) (ಬೀಜ) ಶಿಖೆಯುಳ್ಳ. ತುಪ್ಪುಳುಳ್ಳ; ಕೂದಲುಳ್ಳ.

Comb ಕೋಮ್ (ನಾ., ಕ್ರಿ.) (ಕೊಂಬು, ದಂತ, ಲೋಹ, ದಾರು, ಮೊ. ಗಳಿಂದ ಮಾಡಿದ) ಬಾಚಣಿಗೆ, ಹಣಿಗೆ, ಸಿಕ್ಕುಬಿಟ್ಟಿಗೆ. (ಮಾಲೀಸು ಮಾಡುವ) ಕರರಾರು. (ಯಂತ್ರಗಳಲ್ಲಿ, ಪ್ರಾಣಿಗಳ ಅಂಗರಚನೆಯಲ್ಲಿ) ಹಣಿಗೆಯ ರೂಪದ, ಕಾರ್ಯದ, ಭಾಗ (ಮು., ಉಣ್ಣೆಯನ್ನು ಎಕ್ಕುವುದರಲ್ಲಿ, ವಿದ್ಯುತ್ತನ್ನು ಸಂಗ್ರಹಿಸುವುದರಲ್ಲಿ). ಕೋಳಿಯ (ಮತ್ತು ಇತರ ಹಕ್ಕಿಗಳ) ಜುಟ್ಟು; ಶಿಖೆ [Cut the c. of ಜುಟ್ಟುಹಾರಿಸು (ರೂಪ.): ಅಹಂಕಾರ ಮುರಿ; ಮರ್ಯಾದೆ ಕಳೆ; ತೇಜೋವಧೆ ಮಾಡು]. ಬೆಟ್ಟದ ಅಥವಾ ಅಲೆಯ ನೆತ್ತಿ, ತುದಿ. ಜೇನು ಹುಟ್ಟು. (ಕ್ರಿ.) ಬಾಚು; ಬಾಚಿಕೊ; (ಕುದುರೆ) ಮಾಲೀಸುಮಾಡು. (ಉಣ್ಣೆ, ನಾರು, ಮೊ. ನ್ನು) ಹಣಿಗೆಯಿಂದ ಹಿಕ್ಕು. (ಅಲೆ) ಮೇಲುರುಳು. C. out (ಮು., ಸೈನ್ಯಕ್ಕೆ ಬೇಕಾದವರನ್ನು) ಆರಿಸಿ ತೆಗೆದುಕೊ, ತೆಗೆದುಹಾಕು. **Cómber** ಕೋಮರ್ (ನಾ.) (ಕ್ರಿಯಾರ್ಥಗಳಲ್ಲಿ). (ಉಣ್ಣೆಯನ್ನೂ ಹತ್ತಿಯನ್ನೂ ಬಹಳ ನವಿರಾಗಿ) ಹಿಕ್ಕುವ ಯಂತ್ರ. ದೊಡ್ಡ ಉರುಳಲೆ; ಬಡಿದೆರೆ; ಭಗ್ನ ತರಂಗ. **Cómbing** ಕೋಮಿಂಗ್ (ನಾ.) (ಕ್ರಿಯಾರ್ಥಗಳಲ್ಲಿ). (ಬ. ವ. ದಲ್ಲಿ) ಹಿಕ್ಕಿ, ಬಾಚಿ, ತೆಗೆದ ಕೂದಲು.

Cómbat ಕಾಂ(ಕಂ)ಬ್ಯಾಟ್ (ನಾ., ಕ್ರಿ.) ಯುದ್ಧ, ಕಾಳಗ (ಮಾಡು); ಹೋರಾಟ. (Single c. ದ್ವಂದ್ವಯುದ್ಧ). ಹೋರಾಡು; ಎದುರಿಸು. **Cómbatant** — ಬಟಂಟ್ (ಗು., ನಾ.) ಯುದ್ಧ, ಕದನ, ಮಾಡುವ; ಯುದ್ಧಮಾಡುವವನು; ಯೋಧ. **Cómbative** (ಗು.) ಹೋರಾಡುವ, ಮೇಲೆಬೀಳುವ, ಸ್ವಭಾವದ; ಜಗಳಗಂಟಿಯಾದ. **Cómbatively** (ಕ್ರಿ. ವಿ.); **Cómbativeness** (ನಾ.)

Combe. **Coomb** ನೋಡಿ.

Combinátion. **Combine** ನೋಡಿ.

Combíne ಕಂಬೈನ್ (ಕ್ರಿ., ನಾ.) (ವ್ಯಕ್ತಿಗಳು, ಮೂರ್ತ ಅಥವಾ ಅಮೂರ್ತ ವಸ್ತುಗಳು, ಮೊ.) ಒಟ್ಟಾಗು, ಒಟ್ಟುಗೂಡಿಸು; ಒಗ್ಗಟ್ಟಾಗು; ಒಂದಾಗು; ಸೇರು; ಸೇರಿಸು; ಕಲೆ; ಕಲಸು; ಮೇಳಿಸು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಯೋಜಿಸು. (ಸಾ., ಬೇರೆಬೇರೆಯಾಗಿರುವ ಗುಣಗಳನ್ನು) ಒಟ್ಟಿಗೆ ಹೊಂದಿರು, ಒಳಕೊಂಡಿರು. (ರ. ವಿ.) ಸಂಯುಕ್ತವಾಗು ; ಸಂಯುಕ್ತ ಮಾಡು. ಸಹಕರಿಸು ; ಏಕೀಭವಿಸು ; ಏಕೀಕರಿಸು. (ನಾ.) ಜನಗಳ ಏಕೀಭಾವ, ಒಗ್ಗಟ್ಟು, ಕೂಟ (ಮು., ಬೆಲೆಹೆಚ್ಚಿಸುವುದಕ್ಕೆ ಅಥವಾ ವ್ಯಾಪಾರದ ಗತಿಯನ್ನು ತಡೆಗಟ್ಟುವುದಕ್ಕೆ). **Combinátion** ಕಾಂಬಿನೇಷನ್ (ನಾ.) ಒಟ್ಟುಗೂಡುವುದು ; ಸೇರಿಕೆ ; ಸಂಯೋಗ ; ಸಂಯೋಜನ ; ಒಟ್ಟುಗೂಡಿದ ಸ್ಥಿತಿ. ಒಟ್ಟುಗೂಡಿದ, ಒಟ್ಟುಗೂಡಿಸಿದ, ವಸ್ತುಗಳು ಅಥವಾ ಜನರು ; ಸಂಘ ; ಕೂಟ. (ಗಣಿತ, ಬ. ವ. ದಲ್ಲಿ) ವ್ಯಕ್ತಿಗಳ (ಅಥವಾ ವಸ್ತುಗಳ) ಒಂದು ದತ್ತಸಂಖ್ಯೆಯಲ್ಲಿ, ಅದಕ್ಕಿಂತಲೂ ಒಂದು ನಿರ್ದಿಷ್ಟ ಸಣ್ಣಸಂಖ್ಯೆಯ ವ್ಯಕ್ತಿಗಳ (ಅಥವಾ ವಸ್ತುಗಳ) ಎಷ್ಟು ತಂಡಗಳನ್ನು ವಿಂಗಡಿಸಲು ಸಾಧ್ಯವೊ ಆ ವಿವಿಧ ತಂಡಗಳು : ಸಂಯೋಗ. (ರ. ವಿ.) ಎರಡು ಅಥವಾ ಹೆಚ್ಚು ಪದಾರ್ಥಗಳು ಸಂಯೋಗಹೊಂದಿ ಆದ ಪದಾರ್ಥದ ಗುಣವು ಅದರ ಮೂಲ ಪದಾರ್ಥಗಳ ಗುಣಗಳಿಗೆ ಭಿನ್ನವಾಗಿರುವ ಸ್ಥಿತಿಯ ಸಂಯೋಗ : ಸಂಯೋಜನ. ಒಟ್ಟಿಗೆ ಸೇರಿ ಕಾರ್ಯಮಾಡುವುದು ; ಒಗ್ಗಟ್ಟು ; ಸಹಕಾರ. (ಬ. ವ. ದಲ್ಲಿ) ಮೈಗೂ ಕಾಲಿಗೂ ಕೂಡ ತೊಡುವ ಒಂದೇ ಒಳಉಡುಪು. **Cómbinative** (ಗು.) ಒಟ್ಟುಗೂಡುವ ; ಒಟ್ಟುಕೂಡುವ ; ಒಟ್ಟಿನ.

Combústible. **Combustion** ನೋಡಿ.

Combústion ಕಾಂಬಸ್ಚಿಯನ್, —ಶ್ಚನ್ (ನಾ.) ಸುಡುವುದು ; ಸುಡುತ ; ದಹನ ; ಉರಿತ. (ರ. ವಿ.) ರಾಸಾಯನಿಕ ಸಂಯೋಗದಿಂದ ಶಾಖ, ಉರಿ, ಹುಟ್ಟುವುದು ; ಜೈವಿಕ ಅಂಗಾಂಶವು ಆಮ್ಲಜನಕದೊಡನೆ ಸಂಯೋಗಹೊಂದುವುದು. **Combústible** (ಗು., ನಾ.) ಉರಿಯುವ ಶಕ್ತಿಯುಳ್ಳ ಅಥವಾ ಉರಿಸಲಾಗುವ ; ದಾಹ್ಯ (ಪದಾರ್ಥ, ವಸ್ತು). ಕೆರಳುವ, ರೇಗುವ, ಸ್ವಭಾವದ. **Combustibílity** (ನಾ.)

Come ಕಮ್ (ಕ್ರಿ. ಅಕ. ; ಭೂತ. Came ಕೇಮ್ ; ಭೂ. ಕೃ. Come. ಬಾ ; ಬರು ; ಹೊರಟು ಬಾ. (ಬಂದು) ಸೇರು. ಆಗು ; ಸಂಭವಿಸು. The butter will not c. ಬೆಣ್ಣೆ ಕೂಡುವುದಿಲ್ಲ, ಬರುವುದಿಲ್ಲ. It came on my head ನನ್ನ ತಲೆಯಮೇಲೆ ಬಿದ್ದಿತು. C. about ಆಗು ; ನಡೆ ; ಸಂಭವಿಸು ; ತಿರುಗು. C. abroad (ಮರೆ ಬಿಟ್ಟು) ಹೊರಕ್ಕೆ ಬಾ. C. across ಸಂಧಿಸು. C. along (ಬಳ. ಮಾ.) ಜಾಗ್ರತೆಮಾಡು ; ಬೇಗೇಳು. C. and go ಬಂದುಹೋಗು ; ಬಂದು ಹೋಗುತ್ತಿರು ; ಹೋಗಿ ಬರುತ್ತಿರು ; ಬಂದು ನೋಡಿಕೊಂಡುಹೋಗು. ಸ್ಥಿರವಿಲ್ಲದಿರು. C. at ಸಂಪಾದಿಸು ; ಹೊಂದು ; ಪಡೆ ; ದೊರಕಿಸಿಕೊ ; ಕಂಡುಹಿಡಿ ; ಕಡೆಗೆ ಬರು ; ನುಗ್ಗು ; ಮೇಲೆ ಬೀಳು. C. away ಕಳಚಿಕೊಂಡು ಬರು ; ಬಿಟ್ಟು ಬಾ ; ಬಂದುಬಿಡು. C. back ಹಿಂದಕ್ಕೆ ಬಾ ; ನೆನಪಿಗೆ ಬರು ; ತಿರುಗಿ ಬರು. C. by ಪಡೆ ; ಹೊಂದು ; ಹಾದುಹೋಗು. C. down ಕೆಳಕ್ಕಿಳಿ ; ತಗ್ಗು ; ಪರಂಪರೆಯಾಗಿ ಬರು ; ನಡೆದುಕೊಂಡು ಬರು ; ಉರುಳು ; ಬೀಳು ; ದೈನ್ಯಹೊಂದು. C. down upon ಎರಗು ; ಆಕ್ಷೇಪಿಸು ; ದಂಡಿಸು ; ದಂಡ ತೆರಿಸು. C. down with ಸಲ್ಲಿಸಿಬಿಡು ; ಹಣ ಎಣಿಸಿಬಿಡು. C. forward ಮುಂದೆ ಬರು. C. home to ಮನಗಾಣು ; ಮನಸ್ಸಿಗೆ ನಾಟು ; ಮನವರಿಕೆಯಾಗು ; ಮನದಟ್ಟಾಗು. C. in ಮನೆ, ಕೋಣೆ, ಹೊಗು. ಜೂಜು, ಮೊ. ಗಳಲ್ಲಿ .....ನೆಯ ಸ್ಥಾನ ಪಡೆ (C. in third ಮೂರನೆಯ ಸ್ಥಾನ ಪಡೆ); ಚುನಾಯಿತನಾಗು ; ಅಧಿಕಾರಕ್ಕೆ ಬರು ; ಒದಗಿಬರು. C. in for ಪಡೆ ; ಪಕ್ಕಾಗು ; ಭಾಗಿಯಾಗು. C. in upon, on ಮನಸ್ಸಿಗೆ ನಾಟು. C. into ಪಡೆ ; ಸ್ವಾಧೀನಕ್ಕೆ ತೆಗೆದುಕೊ. C. into one's head ಮನಸ್ಸಿಗೆ ತೋರು ; ಬುದ್ಧಿಗೆ ಹೊಳೆ. C. into one's own ನ್ಯಾಯವಾದ ಹಕ್ಕು, ಮೊ. ನ್ನು ಸ್ವಾಧೀನಕ್ಕೆ ಪಡೆ. C. into sight ಕಣ್ಣಿಗೆ, ದೃಷ್ಟಿಗೆ, ಬೀಳು ; ಅರಿವಿಗೆ ಬರು. C. into world ಹುಟ್ಟು ; ಜನ್ಮವೆತ್ತು. C. in useful ಉಪಯೋಗಕ್ಕೆ ಬರು ; ಒದಗಿಬರು. C. near doing ಸ್ವಲ್ಪದಲ್ಲಿ ತಪ್ಪಿಹೋಗು. C. of a noble family ದೊಡ್ಡ ಮನೆತನದಲ್ಲಿ ಹುಟ್ಟಿದ. C. off ಬಿಟ್ಟು ಬರು ; ಬಂದುಬಿಡು ; ಕಳಚಿ ಬರು. ಆಗು ; ನಡೆ ; ನೆರವೇರು. C. on, upon ಬರುತ್ತಿರು ; ಮೇಲೆ ಬೀಳು ; ಅಭಿವೃದ್ಧಿಗೆ ಬರು ; ಏಳಿಗೆ ಹೊಂದು. ಚರ್ಚೆಗೆ ಬರು. ರಂಗದಮೇಲೆ ಬರು ; (ಕೆಲಸಕ್ಕೆ) ಪ್ರಾರಂಭಿಸು. ಸಂಧಿಸು. C. out ಹೊರಕ್ಕೆ ಬಾ ; ಬಯಲಿಗೆ ಬರು ; ಹೊರಬೀಳು ; ಕೆಲಸ ಬಿಟ್ಟು ಬರು ; ಮುಷ್ಕರ ಹಿಡಿ. ಪರೀಕ್ಷೆ, ಮೊ. ಗಳಲ್ಲಿ ಜಯಶಾಲಿಯಾಗಿ, ಆಗದೆ, ಬರು. ಮೋಡದಿಂದ ಹೊರಕ್ಕೆ ಬರು. ಪರ್ಯವಸಾನವಾಗು ; ಪರಿಣಾಮಗೊಳ್ಳು ; ತೊಡಕು ಬಿಡು. (ಛಾಯಾಚಿತ್ರ, ಸಿಡುಬು, ಧೃಷ್ಟತನ) ಸ್ಫುಟವಾಗು, ಹೊಮ್ಮು, ಕಾಣಿಸಿಕೊ, ಪ್ರಕಟವಾಗು (Comes out on Saturdays ಪ್ರತಿ ಶನಿವಾರ ಪ್ರಕಟವಾಗುತ್ತದೆ). ನಾಟಕ ರಂಗದ ಮೇಲೆ, ಸಮಾಜದಲ್ಲಿ, ಪ್ರಥಮ ಪ್ರವೇಶ ಮಾಡು, ಕಾಣಿಸಿಕೊ. C. out of that (ಅಸಂ.) ಹೊರಗೆ ಹೊರಡು ! ನಿಲ್ಲಿಸು ! ನಿಲ್ಲು ! C. out with ಹೊರಬಿಡು ; ಹೇಳಿಬಿಡು. C. over ಆಕ್ರಮಿಸು ; ಅಧೀನಪಡಿಸಿಕೊ ; ಮೇಲುಕೈಆಗು ; ಮೇಲೆಬರು. ದೂರದಿಂದ, ಅಥವಾ ತಡೆಯನ್ನು ದಾಟಿ, ಬರು. ಪಕ್ಷವನ್ನು ಅಥವಾ ಅಭಿಪ್ರಾಯವನ್ನು ಬದಲಾಯಿಸು. C. round ಬಳಸಿಕೊಂಡು ಬರು ; ಸುಮ್ಮನೆ ಭೇಟಿಗಾಗಿ ಬರು. (ಮೂರ್ಛೆ, ಮೊ. ಗಳಿಂದ) ಚೇತರಿಸಿಕೊ; (ಕೋಪ ಬಿಟ್ಟು) ಸಮಾಧಾನ ಹೊಂದು; ಸರಿಯಾಗು. C. short ಕೊರೆಯಾಗು ; ನಿರೀಕ್ಷಣೆಗೆ ಕಡಮೆಬೀಳು ; ಕರ್ತವ್ಯಮಾಡದೆ ತಪ್ಪು ; ತಕ್ಕಷ್ಟು ಅಭಿವೃದ್ಧಿ ತೋರದೆಹೋಗು. Things c. right ಸಂದರ್ಭಗಳು ಸರಿಬರುತ್ತವೆ. C. to ಉತ್ತರಾಧಿಕಾರಿಯಾಗು ; ಹಕ್ಕು ಬರು ; ಬಾಧ್ಯತೆ ಪಡೆ. (ಮೂರ್ಛೆತಿಳಿದು, ಅವಿವೇಕದ ನಡತೆ ಬಿಟ್ಟು) ಪ್ರಜ್ಞೆ ಬರು. ಚಲಿಸದೆ ನಿಂತುಬಿಡು ; ಸ್ತಬ್ಧನಾಗು. ಜೀವ ಬರು. I have c. to believe ನನಗೆ ಈ ನಂಬಿಕೆ ಬಂದಿದೆ. C. to blows ಗುದ್ದಾಡು ; ಹೊಡೆದಾಡು. C. to an end ಕೊನೆಗಾಣು ; ಕೊನೆ ಮುಟ್ಟು ; ಮುಕ್ತಾಯವಾಗು. C. to grief ತೊಂದರೆಗೆ ಗುರಿಯಾಗು. C. to hand (ಕಾಗದ, ಮೊ.) ಕೈ ಸೇರು, ತಲಪು. C. to harm ಹಾನಿಪಡೆ. C. to a head (ಹುಣ್ಣು) ಮೂತಿಯಾಗು ; ವಿಷಮಾವಸ್ಥೆಗೆ ಬರು. C. to light ಬೆಳಕಿಗೆ ಬರು ; ಹೊರಬೀಳು. C. to oneself (ಮೂರ್ಛೆಯಿಂದ) ಚೇತರಿಸಿಕೊ ; ಪ್ರಜ್ಞೆ ಬರು. C. to pass ಆಗು ; ನಡೆ ; ಸಂಭವಿಸು. C. to a point ಚೂಪಾಗು ; ಮೊನೆಗೂಡು. C. to the point ಪ್ರಸಕ್ತಾಂಶಕ್ಕೆ ಬಾ. C. to stay ನೆಲೆಯಾಗಿ ನಿಲ್ಲು. C. to terms ಒಪ್ಪಂದಕ್ಕೆ ಬರು ; ಸಂಧಿ ಮಾಡಿಕೊ. C. under ಆ ವರ್ಗದಲ್ಲಿ, ಆ ತರಗತಿಯಲ್ಲಿ, ಸೇರು. (ಒಂದು ಪ್ರಭಾವಕ್ಕೆ) ಒಳಗಾಗು ; ಅಧೀನನಾಗು. C. up ಮೇಲಕ್ಕೆ ಬರು. ವಿಶ್ವವಿದ್ಯಾನಿಲಯವನ್ನು ಸೇರು. ಮಾತನಾಡಲು ಒಬ್ಬನನ್ನು ಸಮೀಪಿಸು ; ಸಮಕ್ಕೆ ಬರು ; ಬಳಕೆಗೆ ಬರು ; ಪ್ರಸ್ತಾಪಕ್ಕೆ ಬರು. ಒಂದು ಮಟ್ಟಕ್ಕೆ ಬರು. (ಕುದುರೆಗೆ) ಬೇಗ ನಡೆ ! C. upon ಥಟ್ಟನೆ, ಸೂಚನೆಕೊಡದಂತೆ, ಮೇಲೆ ಬೀಳು. (ಮನಸ್ಸನ್ನು) ಹಿಡಿ ; (ಮನಸ್ಸಿನಮೇಲೆ) ಪರಿಣಾಮವುಂಟುಮಾಡು. ಹೊರೆಯಾಗಿರು ; ಭಾರವಾಗಿರು. ಅಕಸ್ಮಾತ್ ಸಂಧಿಸು. C. what may ಬಂದದ್ದು ಬರಲಿ ; ಏನೇ ಬರಲಿ. It comes to this ಇಷ್ಟಾಗುತ್ತದೆ ; ಇದರ ಪರಿಣಾಮ, ಸಾರಾಂಶ, ಇಷ್ಟು. Coming nineteen ಹತ್ತೊಂಬತ್ತನೆಯ ವರ್ಷದಲ್ಲಿ. For a year to c. ಇನ್ನು ಒಂದು ವರ್ಷದ ವರೆಗೂ How comes it that .... ? .... ಹೇಗೆ ಸಂಭವಿಸಿತು ? Ill luck comes to me ನನಗೆ ಕೇಡು ಒದಗಿ ಬರುತ್ತದೆ. Let 'em all c. ! (ಅಸಂ.) ಬರಲಿ ! ನಾವು ಸಿದ್ಧವಾಗಿದ್ದೇವೆ. Light c. light go ಸುಲಭವಾಗಿ ಬಂದದ್ದು ಸುಲಭವಾಗಿ ಹೋಗುತ್ತದೆ ; ಹೇಗೆ ಬಂದಿತೊ ಹಾಗೆ ಹೋಗುತ್ತದೆ. The to-come ಮುಂದೆ ಬರುವದು ; ಭವಿಷ್ಯ ; ಆಗಾಮಿ. Two years c. Christmas ಈಗಿನಿಂದ ಆಚೆಯ ವರ್ಷದ ಕ್ರಿಸ್ಮಸ್ ವರೆಗೆ. Where do I c. in ? ನನ್ನ ಸ್ಥಾನವೆಲ್ಲಿ ? ನನಗಾದ ಪ್ರಯೋಜನವೇನು ? Where does the joke c. in ? ಆ ಹಾಸ್ಯಕ್ಕೆ ಸಂದರ್ಭ ಯಾವುದು ? **Come-át-able** ಕಂಅ್ಯಾಟಬ್‌ಲ್ (ಗು.) ಸಾಧ್ಯ ; ಲಭ್ಯ ; ಸುಲಭ. **Cómer**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ನಾ.) ಬರುವವನು ; ಆಗಂತುಕ. First c. ಮೊದಲು ಬರುವವನು. All comers ಬರುವವರೆಲ್ಲ ; ಯಾವನೇ ಆಗಲಿ.

Come (ನಾ.) C.-and-go ಬರುವುದು ಹೋಗುವುದು ; ಯಾತಾಯಾತ. C.-down ಬೀಳು ; ಇಳಿತ ; ಅವನತಿ ; ಅಧಃಪತನ.

Comédian, etc. **Comedy** ನೋಡಿ.

Cómedy ಕಾಮಿಡಿ (ನಾ.) ಲಘುವಾಗಿಯೂ ವಿನೋದಕರವಾಗಿಯೂ, ಅನೇಕ ಸಂದರ್ಭಗಳಲ್ಲಿ ವಿಡಂಬನಾತ್ಮಕವಾಗಿಯೂ, ಮು., ಜನರ ನಿತ್ಯಜೀವನವನ್ನು ಚಿತ್ರಿಸುವುದಾಗಿಯೂ, ಹರ್ಷಾಂತವಾಗಿಯೂ, ಇರುವ ನಾಟಕ : ಹರ್ಷ ನಾಟಕ ; ಪ್ರಹಸನ ; ನಗೆಯಾಟ ; ಸಾಮಾನ್ಯ ಪಾತ್ರಗಳನ್ನುಳ್ಳದ್ದಾಗಿ ಬಳಕೆಯ ಭಾಷೆಯನ್ನುಪಯೋಗಿಸುವ ನಾಟಕ ಪ್ರಭೇದ. ಜೀವನದ ಅಥವಾ ಜೀವನದ ಒಂದು ವಿಚಾರದ ದೃಶ್ಯ. **Comédian** ಕೊಮೀಡಿಯನ್ (ನಾ.) ಹರ್ಷನಾಟಕ ಕರ್ತ ; —ನಟ. **Comediénne** (F) ಕೊಮೆಡಿಯೆನ್ (ನಾ.) ಹರ್ಷನಾಟಕ ನಟಿ. **Comediétta** (It.) ಕೊಮೀಡಿಯೆಟ (ನಾ.) ಸಣ್ಣ ಅಥವಾ ಲಘು ಹರ್ಷನಾಟಕ. **Cómedist** ಕಾಮೆಡಿಸ್ಟ್ (ನಾ.) ಹರ್ಷನಾಟಕಕಾರ.

Cómely ಕಮ್ಲಿ (ಗು.) ಅಂದವಾದ ; ಸೊಗಸಾದ ; ಮನೋಹರವಾದ [ಸಾ., ರೂಪು, (ಕೆಲವು ವೇಳೆ) ನಡತೆ, ಸ್ವಭಾವ]. ಯೋಗ್ಯ; ಉಚಿತ. **Cómeliness** (ನಾ.)

Coméstible ಕಮೆಸ್ಟಿಬ್‌ಲ್ (ನಾ. ; ಸಾ., ಬ. ವ. ದಲ್ಲಿ) ತಿಂಡಿ ; ಭಕ್ಷ್ಯ.

Cómet ಕಾಮೆಟ್ (ನಾ.) ನಕ್ಷತ್ರದಂತಿರುವ ಗರ್ಭವೂ ಜ್ಯೋತಿರ್ಮಯವಾದ ಪುಚ್ಛವೂ ಉಳ್ಳದ್ದಾಗಿ ಸೂರ್ಯನ ಸುತ್ತಲೂ, ದೀರ್ಘವೃತ್ತದಲ್ಲಿ ಸೂರ್ಯನ ಕಡೆಗೂ, ಪರವಲಯ(Parabola)ದಲ್ಲಿ ಸೂರ್ಯನಿಂದ ದೂರಕ್ಕೂ, ಸುತ್ತುವ ಆಕಾಶ ಕಾಯ : ಧೂಮಕೇತು ; ಬಾಲಚುಕ್ಕಿ ; ಪೊರಕೆ ಚುಕ್ಕೆ. C.-finder, -seeker ಧೂಮಕೇತುವನ್ನು ಕಂಡುಹಿಡಿಯುವುದಕ್ಕಾಗಿ ಉಪಯೋಗಿಸುವ, ಅಲ್ಪವರ್ಧನ ಶಕ್ತಿಯೂ ವಿಶಾಲದೃಷ್ಟಿಕ್ಷೇತ್ರವೂ ಉಳ್ಳ, ದೂರದರ್ಶಕ : ಕೇತುದರ್ಶಕ. C.-year ಪ್ರಶಸ್ತ ಧೂಮಕೇತು ಕಾಣಿಸಿಕೊಳ್ಳುವ ವರ್ಷ. C.-wine ಧೂಮಕೇತು ಕಾಣಿಸಿಕೊಂಡ ವರ್ಷ ಮಾಡಿದ ಮದ್ಯ (ಉತ್ತಮ ಗುಣವುಳ್ಳದ್ದೆಂದು ಪ್ರತೀತಿ). **Cómetary** (ಗು.) ಧೂಮಕೇತುವಿನ ; ಧೂಮಕೇತುವಿನಂಥ. **Cométic(al)** ಕೊ — (ಗು.) = Cometary ; (ರೂಪ.) ಬೆಳಗುವ ; ಪ್ರಜ್ವಲಿಸುವ. ಉತ್ಪಾತಸೂಚಕ. ಗೊತ್ತಾದ ಪಥವಿಲ್ಲದ ; ಭ್ರಮಣಶೀಲ.

Cómfit ಕಂಫ಼ಿಟ್ (ನಾ.) ಮಿಠಾಯಿ ; ಸಕ್ಕರೆಪಾಕದಲ್ಲಿ ಹಾಕಿಟ್ಟ ಹಣ್ಣು, ಕಾಯಿ, ಬೇರು, ಮೊ. : ಮುರಬ್ಬ.

Cómfort ಕಂಫ಼ರ್ಟ್ (ನಾ., ಕ್ರಿ. ಸಕ.) ದುಃಖೋಪಶಮನ (ಮಾಡು) ; ಸಮಾಧಾನ(ಮಾಡು) ; ಸಮಾಧಾನ ಮಾಡುವದು ; ದುಃಖೋಪಶಮನ ಮಾಡುವವನು ; ವ್ಯಥೆ ತಪ್ಪಿಸುವವನು ; ದುಃಖಶಾಮಕ. ಸ್ವಾಸ್ಥ್ಯ ; ಸುಖ ; ಸೌಖ್ಯ ; ಹಿತ ; ನೆಮ್ಮದಿ ; ತಂಪು ; ಆರಿಕೆ ; ಸುಖ ಸಾಧನ. (ಬ. ವ. ದಲ್ಲಿ) ಜೀವನ ಸೌಕರ್ಯಗಳು [Creature comforts ದೇಹ ಸೌಖ್ಯಗಳು, ಸೌಕರ್ಯಗಳು (ಒಳ್ಳೆಯ ಊಟ, ಬಟ್ಟೆ, ಮೊ.)]. (ಕ್ರಿ.) ವ್ಯಸನವನ್ನಾರಿಸು ; ಉಪಶಮನ ಮಾಡು ; ಸಂತೈಸು ; ಸೌಖ್ಯವಾಗಿರುವಂತೆ ಮಾಡು ; ಹಿತ ಕೊಡು. **Cómfortable** (ಗು.) ತೊಂದರೆ ತಪ್ಪಿಸುವ ; ವ್ಯಥೆ ಶಮನಮಾಡುವ ; ಸುಖಕರ ; ಹಿತಕರ ; ಸ್ವಸ್ಥ ; ಶಾಂತಿ ಕೊಡುವ ; ಹಾಯಾಗಿರುವ ; ನೆಮ್ಮದಿಯಾಗಿರುವ ; ಕಷ್ಟ, ಬಾಧೆ, ವ್ಯಥೆ —ಇಲ್ಲದಿರುವ ; ನಿರಾತಂಕ ; ನಿರಾಳ ; ಸಮಾಹಿತ ಮನವುಳ್ಳ. **Cómfortably** (ಕ್ರಿ. ವಿ.) ; **Cómforter** (ನಾ.) (ಕ್ರಿಯಾರ್ಥಗಳಲ್ಲಿ). [The C. (ಕ್ರೈಸ್ತ) ಪರಿಶುದ್ಧಾತ್ಮ. Job's c. ಸಮಾಧಾನ ಮಾಡುವುದಕ್ಕೆ ಬಂದು ನಿಜವಾಗಿ ವ್ಯಥೆಹೆಚ್ಚಿಸುವವನು]. ಉಣ್ಣೆಯ ಕೊರಳಪಟ್ಟಿ, ಕಂಠವಸ್ತ್ರ. ಕೂಸಿಗೆ ಚೀಪುವುದಕ್ಕಾಗಿ ಕೊಡುವ ಕೃತಕ ಮೊಲೆತೊಟ್ಟು : ಚೀಪುತೊಟ್ಟು. **Cómfortless** (ಗು.) ; **Cómfy** ಕಂಫ಼ಿ (ಗು.) (ಬಳ. ಮಾ.) (Comfortable ಪದದ ಸಂಕ್ಷಿಪ್ತ)

Cómfy. **Comfort** ನೋಡಿ.

Cómic ಕಾಮಿಕ್ (ಗು., ನಾ.) ಹರ್ಷನಾಟಕದ (C. opera ಹರ್ಷಾಂತ ನಿರೂಪಣವೂ ಹೆಚ್ಚು ಸಂಭಾಷಣೆಯೂ ಉಳ್ಳದ್ದಾಗಿಯೂ, ಕೆಲವು ಸಂದರ್ಭಗಳಲ್ಲಿ ಪರಿಹಾಸ್ಯವಿಷಯಕವಾಗಿಯೂ ಇರುವ ಸಂಗೀತಪ್ರಹಸನ). ಹಾಸ್ಯಮಯ ; ಹಾಸ್ಯಕರ ; ನಕಲಿಯ ; ನಗಿಸುವ ; ಪರಿಹಾಸದ ; ತಮಾಷೆಯ (C. song ನಗೆಯ ಹಾಡು. It has its c. side ಅದಕ್ಕೆ ಹಾಸ್ಯದ ಭಾಗವೂ ಉಂಟು. C. strip ಒಂದು ಪತ್ರಿಕೆಯಲ್ಲಿ ಕ್ರಮವಾಗಿ ಪ್ರಕಟವಾಗುತ್ತಹೋಗುವ, ಸಾ., ವಿನೋದಕರವಾದ, ಚಿತ್ರಗಳ ಸರಣಿ : ವಿಕಟ ಚಿತ್ರಾವಳಿ). (ನಾ.) (ಬಳ. ಮಾ.) ಸಂಗೀತಗೃಹದ ವಿದೂಷಕ. **Cómical** (ಗು.) ನಗಿಸುವ ; ನಗೆಗೀಡಾದ ; ಹಾಸ್ಯಾಸ್ಪದ ; ವಿಚಿತ್ರ ; ವಿಲಕ್ಷಣ. **Cómically** (ಕ್ರಿ. ವಿ.) ; **Comicálity** — ಕ್ಯಾ — (ನಾ.)

Cómity ಕಾಮಿಟಿ (ನಾ.) ಮರ್ಯಾದೆ ; ಅನುನಯ ; ಸೌಜನ್ಯ ; ಸೌಶೀಲ್ಯ ; ಸೌಹಾರ್ದ. C. of nations ಜನಾಂಗಗಳು ತಮ್ಮ ನಿಯಮಗಳನ್ನೂ ಪದ್ಧತಿಗಳನ್ನೂ ಸಾಧ್ಯವಾಗುವ ಮಟ್ಟಿಗೂ ಸ್ನೇಹಭಾವದೊಡನೆ ಪರಸ್ಪರ ಅಂಗೀಕರಿಸುವುದು : ಜನಾಂಗ ಸೌಹಾರ್ದ.

Cómma ಕಾಮ (ನಾ.) ಸೂಕ್ಷ್ಮ (ಅಲ್ಪ) ವಿರಾಮ (,). (ಸಂ.) ಒಂದು ಸ್ಥಾಯಿಸ್ವರಕ್ಕೂ ಮುಂದಿನ ಸ್ಥಾಯಿಸ್ವರಕ್ಕೂ ಇರುವ ನಿರ್ದಿಷ್ಟವಾದ ಅಂತರ. Inverted commas ಉದ್ಧೃತ ಭಾಗಗಳನ್ನು ತೋರಿಸುವುದಕ್ಕಾಗಿ ಆದಿಯಲ್ಲೂ ಅಂತ್ಯದಲ್ಲೂ ಮೇಲ್ಭಾಗದಲ್ಲಿ ಹಾಕುವ ಅಲ್ಪವಿರಾಮ ಚಿಹ್ನೆಗಳು (ಮೊದಲನೆಯದು ಅಥವಾ ಮೊದಲನೆಯ ಜೊತೆ ತಲೆಕೆಳಗಾಗಿ, ಎರಡನೆಯದು ಸಹಜವಾಗಿ : ಉದಾ., He said 'go', or "go") : ಅನುವಾದ ಚಿಹ್ನೆ. C. bacillus ಕಾಲರಾ ವ್ಯಾಧಿಗೆ ಕಾರಣವಾಗಿ ದೇಹದಲ್ಲಿ ಕಂಡುಬರುವ, ಅಲ್ಪವಿರಾಮ ಚಿಹ್ನೆಯಾಕಾರದ, ಜೀವಾಣು.

Commánd ಕಮಾಂಡ್ (ಕ್ರಿ., ನಾ.) ಅಪ್ಪಣೆ ಮಾಡು ; ಆಜ್ಞಾಪಿಸು ; ವಿಧಿಸು ; ಬೆಸಸು ; ಹುಕುಂ ಮಾಡು ; ಮೇಲೆ ಅಧಿಕಾರ ನಡಸು ; ಅಧೀನದಲ್ಲಿಟ್ಟುಕೊ ; ಅಧಿಪತಿಯಾಗಿರು ; ಆಳು. (ಸೈನ್ಯ, ಹಡಗು, ಮೊ. ಗಳ) ಆಧಿಪತ್ಯವುಳ್ಳವನಾಗಿರು (C. in chief ಮುಖ್ಯ ಸೇನಾಪತಿಯಾಗಿರು). (ರಾಗ ದ್ವೇಷಗಳನ್ನು) ಅಡಗಿಸು, ಅದುಮಿಡು, ದಮಿಸು, ನಿಗ್ರಹಿಸು. (ಹಣ, ಕೌಶಲ, ಜನ — ಇವನ್ನು) ವಶದಲ್ಲಿ ಅಥವಾ ದೊರೆಯುವಂತೆ ಇಟ್ಟುಕೊಂಡಿರು (Yours to c. ತಮ್ಮ ಆಜ್ಞಾಪಾಲಕ, ಆಜ್ಞಾನುವರ್ತಿ). (ಸಹಾನುಭೂತಿ, ಮೊ. ನ್ನು) ಅರ್ಹನಾಗಿ, ಪಾತ್ರನಾಗಿ, ಪಡೆ. ಉನ್ನತ ಪ್ರದೇಶದಿಂದ (ಸಮರಾನುಕೂಲ ಸ್ಥಾನವನ್ನು) ಅಧೀನದಲ್ಲಿಟ್ಟುಕೊಂಡಿರು ; ಅಧಿಷ್ಠಿಸು ; ಮೇಲಿನಿಂದ ಅಧ್ಯಕ್ಷಿಸು. (ನಾ.) ಆಜ್ಞೆ ; ಅಪ್ಪಣೆ ; ಬೆಸ [Word of c. ಕವಾಯತಿನಲ್ಲಿ ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಚಲಿಸುವುದಕ್ಕಾಗಿ ಕೊಡುವ ಆಜ್ಞೆ. At, by, one's c. ಒಬ್ಬನ ಆಜ್ಞೆಯಮೇರೆ. C. paper (ಸಂಕ್ಷಿಪ್ತ : Cd. or Cmd., with register number : as Cd. 675) ದೊರೆಯ ಆಜ್ಞೆಯಮೇರೆಗೆ ಪಾರ್ಲಮೆಂಟ್, ಮೊ. ಗಳ ಮುಂದೆ ಇಟ್ಟ ಪತ್ರ : ರಾಜಾದೇಶ ಪತ್ರ]. (ಮು., ನಾವೆಯ, ಸೈನ್ಯದ) ಆಧಿಪತ್ಯ (In c. of ಆಧಿಪತ್ಯವುಳ್ಳವನಾಗಿ. Under c. of ಆಧಿಪತ್ಯದಲ್ಲಿ). ಒಡೆತನ ; ಸ್ವಾಮಿತ್ವ ; ಪ್ರಭುತ್ವ ; ಅಧೀನ (Great c. of language ಭಾಷೆಯ ಮೇಲಿನ ಪೂರ್ಣಪ್ರಭುತ್ವ, ಹತೋಟಿ. At c. ಬೇಕಾದಾಗ ಉಪಯೋಗಿಸಿಕೊಳ್ಳಲು ಸಿದ್ಧವಾಗಿ ; ಅಧೀನದಲ್ಲಿ). C.-in-chief ಪ್ರಧಾನ ಸೇನಾಧಿಪತ್ಯ. C.-night ರಾಜಾಜ್ಞೆಯ ಮೇರೆಗೆ ಆಡಿದ ನಾಟಕ, ಮೊ. The higher c. (High ನೋಡಿ). **Commandánt** ಕಾಮಂಡಾಂಟ್ (ನಾ.) ಅಧಿಪತಿ (ಮು., ದುರ್ಗಾಧಿಪತಿ ; ಕಿಲ್ಲೇದಾರ). **Commandántship** (ನಾ.) ; **Commánder** ಕಮಾಂಡರ್ (ನಾ.) (ಕ್ರಿಯಾರ್ಥ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಲ್ಲಿ). [C. of the Faithful (ಕಲೀಫನ ಬಿರುದು). C., Lieut. C. ಸೇನೆಯ, ನೌಕೆಯ, ಅಧಿಕಾರಿಗಳು. Wing-C. ಆಕಾಶ ದಳಾಧಿಕಾರಿ]. 'ನೈಟ್‌ಹುಡ್' ಬಿರುದುಗಳ ಕೆಲವು ವರ್ಗಗಳಲ್ಲಿ ಉತ್ತಮ ತರಗತಿಯ ಸದಸ್ಯ. ಮರದ ದೊಡ್ಡ ಕೊಡತಿ. **C.-in-Chief** (ಸೈನ್ಯ) ರಾಷ್ಟ್ರದ ಸಮಸ್ತ ಭೂಸೈನ್ಯದ ಅಧಿಪತಿ; ಒಂದು ನೆಲಸು ನಾಡಿನಲ್ಲಿಟ್ಟಿರುವ ಸೈನ್ಯಭಾಗದ ಅಧಿಪತಿ; ಪರ ರಾಜ್ಯದಲ್ಲಿರುವ ಯುದ್ಧಸೈನ್ಯದ ಅಧಿಪತಿ; ಪ್ರಧಾನ ಸೇನಾಧಿಪತಿ. (ನಾವೆ) ಒಂದು ಪ್ರದೇಶದಲ್ಲಿಯ ಸಮಸ್ತ ನೌಕೆಗಳ ಅಧಿಪತಿ; ಪ್ರಧಾನ ನೌಕಾಧಿಪತಿ. **Commándership** (ನಾ.); **Commánding** (ಗು.) (ಕ್ರಿಯಾರ್ಥಗಳಲ್ಲಿ). (ಮನುಷ್ಯ, ಮುಖಭಾವ, ಸಾಮರ್ಥ್ಯ, ಮೊ. ಗಳ ವಿಷಯದಲ್ಲಿ) ಉನ್ನತ; ಉತ್ಕೃಷ್ಟ; ಪ್ರಶಸ್ತ; ಭವ್ಯ; ಗಂಭೀರ. (ಗುಡ್ಡ, ಸ್ಥಾನ) ದೂರ ನೋಟವುಳ್ಳ. **Commándment** (ನಾ.) ದೈವಾಜ್ಞೆ (The ten commandments ದೇವರು ಮೋಸೆಸ್ಸಿಗೆ ಸಿನೈಬೆಟ್ಟದ ಮೇಲೆ ಕೊಟ್ಟ ಹತ್ತು ಆಜ್ಞೆಗಳು, ಕಟ್ಟಳೆಗಳು. Eleventh c. ಇವುಗಳೊಡನೆ ಹಾಸ್ಯಕ್ಕಾಗಿ ಸೇರಿಸಿದ ಯಾವುದಾದರೂ ಆಜ್ಞೆ)

Commandeér ಕಾಮಂಡೀರ್ (ಕ್ರಿ. ಸಕ.) (ಯುದ್ಧೋದ್ಯೋಗಕ್ಕಾಗಿ ಜನರನ್ನು) ಬಲಾತ್ಕಾರದಿಂದ ಸೇರಿಸು; (ಯುದ್ಧಕಾರ್ಯಕ್ಕಾಗಿ ಸಾಮಗ್ರಿಯನ್ನು) ಆಕ್ರಮಣಮಾಡು, ಹಿಡಿ.

Commándo ಕಮಾಂಡೊ (ನಾ.) ಯುದ್ಧೋದ್ಯೋಗಕ್ಕಾಗಿ ಕರೆದ ಪಡೆ; ಸೈನ್ಯ ದಳ.

Comme il faút (F) ಕಾಮ್ ಈಲ್ ಫೋ (ಗು.) ಯೋಗ್ಯಶಿಕ್ಷಣ ಪಡೆದ. ತಕ್ಕ; ಉಚಿತ; ಯೋಗ್ಯ; ಸಹಜ.

Commémorate ಕಮೆಮೊರೇಟ್ (ಕ್ರಿ. ಸಕ.) (ಭಾಷಣದಿಂದಾಗಲಿ ಲೇಖನದಿಂದಾಗಲಿ) ಪ್ರಖ್ಯಾತ ಮಾಡು; ಸ್ಮಾರಕೋತ್ಸವ ನಡಸು; ಯಾವುದಾದರೂ ಆಚರಣೆಯಿಂದ ಜ್ಞಾಪಕದಲ್ಲಿರುವಂತೆ ಮಾಡು. (ವಸ್ತುಗಳ ವಿಷಯದಲ್ಲಿ) ಸ್ಮಾರಕವಾಗಿರು; ನೆನಪಾಗಿರು. **Commémorative** (ಗು.); **Commemorátion** (ನಾ.) (ಕ್ರಿಯಾರ್ಥಗಳಲ್ಲಿ). ಸ್ಮಾರಕೋತ್ಸವ; (ಕ್ರೈಸ್ತ) ಒಬ್ಬ ಸಂತನ ಅಥವಾ ಒಂದು ಪವಿತ್ರ ಸಂದರ್ಭದ ಜ್ಞಾಪಕಾರ್ಥವಾಗಿ ನಡಸುವ ದೇವತಾ ಪ್ರಾರ್ಥನೆ. (ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ) ಸ್ಥಾಪಕರ ಜ್ಞಾಪಕಾರ್ಥವಾಗಿ ಆಚರಿಸುವ ವಾರ್ಷಿಕೋತ್ಸವ.

Comménce ಕಮೆನ್ಸ್ (ಕ್ರಿ.) (ಕಾರ್ಯವನ್ನು, ಮಾಡಲು) ಆರಂಭಿಸು; ಉಪಕ್ರಮಿಸು; ತೊಡಗು; ಮೊದಲುಮಾಡು. (ಕಾರ್ಯ) ಆರಂಭವಾಗು. ವಿಶ್ವವಿದ್ಯಾನಿಲಯದ (M.A. ಮೊ. ಗಳ) ಪೂರ್ಣ ಪಟ್ಟವನ್ನು ಪಡೆ. **Comméncement** (ನಾ.) (ಕ್ರಿಯಾರ್ಥಗಳಲ್ಲಿ). ಕೇಂಬ್ರಿಡ್ಜ್, ಡಬ್ಲಿನ್ ಮತ್ತು ಅಮೆ. ಸಂ. ವಿಶ್ವವಿದ್ಯಾನಿಲಯಗಳಲ್ಲಿ 'ಮಾಸ್ಟರ್' ಮತ್ತು 'ಡಾಕ್ಟರ್' ಪಟ್ಟಗಳನ್ನು ಕೊಡುವಾಗ ನಡಸುವ ಉತ್ಸವ: ಪಟ್ಟಪ್ರದಾನೋತ್ಸವ.

Commend ಕಮೆಂಡ್ (ಕ್ರಿ. ಸಕ.) (ವಶಕ್ಕೆ) ಒಪ್ಪಿಸು; ಸಮರ್ಪಿಸು (ಮುಂದೆ ಕೊಡುವ ಉದಾಹರಣೆಗಳಲ್ಲಿ ವಿನಾ, ಪ್ರಾಚೀ. ಪ್ರ.: C. one's soul to God ಆತ್ಮವನ್ನು ಭಗವದರ್ಪಣೆ ಮಾಡು. C. thing to person's care ವಸ್ತುವನ್ನು ಆತನ ವಶಕ್ಕೆ ಒಪ್ಪಿಸು). ಪ್ರಶಂಸಿಸು; ಸ್ತೋತ್ರಮಾಡು; ಶ್ಲಾಘಿಸು; ಹೊಗಳು; ಮೆಚ್ಚು; ಶಿಫಾರಸು ಮಾಡು. C. me to ನನಗೆ ಬೇಕಾದದ್ದು ಅದು (ವ್ಯಂಗ್ಯ). (ಪ್ರಾಚೀ. ಪ್ರ.) C. me to my friend ನನ್ನ ಸ್ನೇಹಿತನಿಗೆ ನನ್ನ ನೆನಪು ಕೊಡು. His arguments do not c. themselves to me ಅವನ ವಾದಸರಣಿ ನನಗೆ ಒಪ್ಪಿಗೆಯಿಲ್ಲ. **Commendable** (ಗು.) ಶ್ಲಾಘ್ಯ; ಪ್ರಶಂಸನೀಯ; ಕೊಂಡಾಡತಕ್ಕ. **Commendableness** (ನಾ.); **Commendably** (ಕ್ರಿ. ವಿ.); **Commendátion** ಕಾ — (ನಾ.) ಶ್ಲಾಘನೆ; ಪ್ರಶಂಸೆ; ಹೊಗಳಿಕೆ. ಒಬ್ಬನನ್ನು ಮತ್ತೊಬ್ಬನ ಅಭಿಮಾನಕ್ಕೆ ಒಪ್ಪಿಸುವುದು, ಶಿಫಾರಸು ಮಾಡುವುದು. **Commendatory**[1] ಕಮೆಂಡಟರಿ (ಗು.) ಶ್ಲಾಘಾತ್ಮಕ; ಅರ್ಪಣಾತ್ಮಕ.

Commendam ಕಮೆಂಡ್ಯಾಮ್ (ನಾ.) (ಕ್ರೈಸ್ತಮಠ) ತಕ್ಕ ವಾರಸುದಾರನಿಲ್ಲದಿರುವಾಗ ಒಂದು ದತ್ತಿಯ ಅನುಭೋಗ. **Commendatory**[2] (ಗು.) ಒಂದು ದತ್ತಿಯ ಅನುಭೋಗವುಳ್ಳ.

Comménsal ಕಮೆನ್ಸಲ್ (ಗು., ನಾ.) ಸಹಪಂಕ್ತಿ ಭೋಜನ ಮಾಡುವವನು. ಮತ್ತೊಂದರೊಡನೆ ಸಹವಾಸಿಯಾಗಿದ್ದು ಅದರ ಆಹಾರದಲ್ಲಿಯೂ ಭಾಗಪಡೆಯುವ ಪ್ರಾಣಿ, ಸಸ್ಯ: ಸಹಜೀವಿ. **Comménsalism** (ನಾ.) = **Commensálity** (ನಾ.) ಸಹಜೀವಿತ್ವ.

Comménsurable ಕಮೆನ್ಸ್ಯುರಬ್‌ಲ್, — ನ್ಶು —, — ನ್ಸ —(ಗು.) ಒಂದೇ ಮಾನದಿಂದ ಅಳೆಯಲಾಗುವ (*with*, *to*, ಉಪ. ದೊಡನೆ). (ಸಂಖ್ಯೆಗಳ ವಿಷಯದಲ್ಲಿ) ಒಂದೇ ಮೊತ್ತದಿಂದ ಶೇಷವಿಲ್ಲದಂತೆ ಭಾಗಿಸಲಾಗುವ: ಸಾಪವರ್ತ; ಸಮ ಭಾಜ್ಯ; ಸಮ ಮಾಪ್ಯ. **Commensurabílity** (ನಾ.); **Comménsurableness** (ನಾ.); **Comménsurably** (ಕ್ರಿ. ವಿ.); **Comménsurate** — ರೆಟ್ (ಗು.) ಸಮವ್ಯಾಪಕ; ಸಮ ಪ್ರಮಾಣದ. ತಕ್ಕ; ಅನುಗುಣದ. **Comménsurately** (ಕ್ರಿ. ವಿ.); **Comménsurateness** (ನಾ.)

Comménsurate. **Commensurable** ನೋಡಿ.

Cómment ಕಾಮೆಂಟ್ (ನಾ.), **Cómment** ಕಾ —, **Commént** ಕ — (ಕ್ರಿ. ಅಕ.) ಟೀಕೆ (ಮಾಡು); ಟಿಪ್ಪಣಿ (ಬರೆ); ವ್ಯಾಖ್ಯೆ (ಮಾಡು); ಗುಣದೋಷ ವಿಮರ್ಶೆ (ಮಾಡು) (ಮು., ಆಕ್ಷೇಪಿಸಿ). **Cómmentary** (ನಾ.) ಭಾಷ್ಯ; ವ್ಯಾಖ್ಯಾನ; ಟೀಕೆ. **Commentátion** (ನಾ.) — ಮಾಡುವುದು. **Cómmentator** (ನಾ.) — ಕಾರ. ತಾನು ನೋಡಿದ ಯಾವುದಾದರೂ ಒಂದು ಆಟದ ಅಥವಾ ಉತ್ಸವ, ಮೊ. ಗಳ ವಿವರಣೆಯನ್ನು ನಿಸ್ತಂತುವಿನ ಮೂಲಕ ಹರಡುವ ಪ್ರೇಕ್ಷಕ.

Cómmerce ಕಾಮರ್ಸ್ (ನಾ.) ವಾಣಿಜ್ಯ; ವ್ಯಾಪಾರ [ಮು., ಭಾರಿಯಾದದ್ದು. Chamber of c. (Chamber ನೋಡಿ)]. ವ್ಯವಹಾರ; ಸಂಬಂಧ (ಮು., ಪ್ರಣಯ ವ್ಯಾಪಾರ). ಒಂದು ತೆರದ ಇಸ್ಪೀಟಾಟ. C.-destroyer ಶತ್ರುಪಕ್ಷದ ವ್ಯಾಪಾರದ ಹಡಗುಗಳನ್ನು ನಾಶಗೊಳಿಸುವ ಯುದ್ಧನೌಕ. **Commércial** ಕಮರ್ಷಲ್ (ಗು., ನಾ.) ವಾಣಿಜ್ಯದ; ವ್ಯಾಪಾರ ಮಾಡುವ. ವ್ಯಾಪಾರಿಯ, ಕಾರ್ಯಭಾರಿ, ತಿರುಗುದಲ್ಲಾಳಿ (= C. traveller). C. room ಅನ್ನಪಾನಾದಿಗಳ ಅಂಗಡಿಯಲ್ಲಿ ವ್ಯಾಪಾರಿಪ್ರತಿನಿಧಿಗಳ ಕೋಣೆ. **Commércialism** (ನಾ.); **Commércialist** (ನಾ.); **Commerciálity** — ಷಿಆ್ಯಲಿಟಿ (ನಾ.); **Commércialize** ಕಮರ್ಷಲೈಸ್ (ಕ್ರಿ. ಸಕ.); **Commércially** (ಕ್ರಿ. ವಿ.)

Comminátion ಕಾಮಿನೇಷನ್ (ನಾ.) ದೈವಾಗ್ರಹ; ದೈವಾಕ್ರೋಶ; ಭಯೋತ್ಪಾದನೆ. (ಕೆಲವು ವೇಳೆ) ಆ್ಯಂಗ್ಲಿಕನ್ ಆರಾಧನದಲ್ಲಿ ಪಾಪಿಗಳಿಗಾಗುವ ದೈವಾಗ್ರಹದ ಮಂತ್ರೋಚ್ಚಾರಣೆ ಮಾಡುವುದು: ದೈವಾಗ್ರಹ ವಾಚನ; ದೈವ ಶಾಪ. **Cómminatory** (ಗು.) ಭಯೋತ್ಪಾದಕ; ಅಭಿಶಾಪಕ.

Commíngle ಕಮಿಂಗ್‌ಲ್ (ಕ್ರಿ.) ಒಟ್ಟಿಗೆ ಕಲಸು, ಕಲೆ; ಒಟ್ಟಿಗೆ ಬೆರಸು, ಬೆರೆತುಹೋಗು; ಸಂಮಿಶ್ರಣಮಾಡು; — ವಾಗು.

Cómminute ಕಾಮಿನ್ಯೂಟ್ (ಕ್ರಿ. ಸಕ.) (ನುಣ್ಣನೆಯ) ಪುಡಿ ಮಾಡು; ಚೂರ್ಣಮಾಡು; ಅರೆ. (ಆಸ್ತಿಯನ್ನು) ಕೇವಲ ಸಣ್ಣಸಣ್ಣ ಭಾಗಗಳನ್ನಾಗಿ ಮಾಡು. **Comminútion** (ನಾ.)

Commíserate ಕಮಿಸರೇಟ್ (ಕ್ರಿ. ಸಕ.) ಮರುಗು; ಕರುಣೆ ತೋರು; ಕನಿಕರಪಡು; ಅನುಕಂಪಪಡು. **Commiserátion** (ನಾ.) ಒಬ್ಬನ ವ್ಯಸನವನ್ನು ಅಥವಾ ವ್ಯಥೆಯನ್ನು ನೋಡಿ ಮರುಕಗೊಳ್ಳುವುದು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮರುಕ ; ಕನಿಕರ ; ಅನುಕಂಪ. **Commíserative** (ಗು.) ; **Commíseratively** (ಕ್ರಿ. ವಿ.)

Commissár ಕಾಮಿಸಾರ್ (ನಾ.) ರಷ್ಯಾದೇಶದ ಕ್ರಾಂತಿಸರ್ಕಾರದಲ್ಲಿ ಒಂದು ಇಲಾಖೆಯ ಮುಖ್ಯಾಧಿಕಾರಿ.

Commissáriat. **Commissary** ನೋಡಿ.

Cómmissary ಕಾಮಿಸರಿ (ನಾ.) ಪ್ರತಿನಿಧಿ ; ನಿಯೋಗಿ. ಬಿಷಪ್ಪಿನ ಪ್ರತಿನಿಧಿ. ಸೈನಿಕರ ತಂಡಕ್ಕೆ ಆಹಾರಸಾಮಗ್ರಿ, ಮೊ. ನ್ನು ಸರಬರಾಯಿ ಮಾಡಲು ನಿಯಮಿತನಾದ ಅಧಿಕಾರಿ ; (ದಂಡಿನ) ಮೋತೀಖಾನೆ ಬಕ್ಷಿ. 'ಮೇಜರ್' ಅಥವಾ ಲೆಫ್ಟಿನೆಂಟ್ ದರ್ಜೆಯುಳ್ಳ ಒಂದು ಖಾತೆಯ ಮೇಲಧಿಕಾರಿ. C. general (ಮು., ಸೈನ್ಯ) ಮೋತೀಖಾನೆಯ ಮುಖ್ಯಾಧಿಕಾರಿ. **Cómmissaryship** (ನಾ.) ; **Commissárial** ಕಾಮಿಸೇರಿಯಲ್ (ಗು.) ; **Commissáriat** (ನಾ.) (ಮು., ಸೈನ್ಯ) ಮೋತೀಖಾನೆಯ ಇಲಾಖೆ.

Commíssion ಕಮಿಷನ್ (ನಾ., ಕ್ರಿ. ಸಕ.) (ಒಂದು ಗೊತ್ತಾದ ಮಾರ್ಗದಲ್ಲಿ, ರೀತಿಯಲ್ಲಿ, ನಡೆಯಬೇಕೆಂಬ ಅಧಿಕಾರಯುಕ್ತ) ಆದೇಶ, ಆಜ್ಞೆ; ನಿರೂಪ ; ನಿಯೋಗ. ಒಂದು ಗೊತ್ತಾದ ಕಾರ್ಯಮಾಡಲು ಅಧಿಕಾರ ಪಡೆದಿರುವ ಮಂದಿ ; ನಿಯೋಜಿತ ಮಂಡಲಿ (C. of the peace ಶಾಂತಿಪಾಲನೆಯ ನ್ಯಾಯಾಧಿಕಾರಿಗಳಿಗೆ ಕೊಟ್ಟ ನಿರೂಪ ; ಶಾಂತಿ ನ್ಯಾಯಾಧಿಕಾರಿಗಳು. On the c. ಈ ನಿರೂಪ ಪಡೆದು). (ಮು., ಸ್ಥಲ ಜಲ ಸೈನ್ಯಗಳಲ್ಲಿ 'ಲೆಫ್ಟಿನೆಂಟ್' ಮತ್ತು ಆ ಅಧಿಕಾರಕ್ಕೆ ಮೇಲ್ಪಟ್ಟ ದರ್ಜೆಯ, ಅಧಿಕಾರ ಕೊಡುವ) ಅಧಿಕಾರ ಪತ್ರ, ನಿರೂಪ. [In c. (ಮನುಷ್ಯರ ವಿಷಯದಲ್ಲಿ) ರಾಜ್ಯಶಾಸನಾನುಸಾರವಾಗಿ ಅಧಿಕಾರವಿರುವ ಆಡಳಿತಗಾರನಿಗೆ ಬದಲಾಗಿ ಒಂದು ಮಂಡಲಿಗೆ ನಿರೂಪದ ಮೂಲಕ ಒಪ್ಪಿಸಿದ : ನಿಯೋಜಿತಾಧಿಕಾರದ. (ಯುದ್ಧದ ಹಡಗಿನ ವಿಷಯದಲ್ಲಿ) ಸೇನೆಗೂಡಿಸಿ, ಆಯುಧಗಳನ್ನಳವಡಿಸಿ, ಪ್ರಯಾಣಕ್ಕೆ ಸಿದ್ಧವಾಗಿರುವ ; ಸನ್ನದ್ಧ ; ಸಜ್ಜಿತ]. ಅಧಿಕಾರ, ಮೊ. ನ್ನು ಒಬ್ಬನಿಗೆ ವಹಿಸುವುದು ; ನಿಯೋಜನೆ. ನೆರವೇರಿಸಲು ಒಬ್ಬನಿಗೆ ವಹಿಸಿದ ಕಾರ್ಯಭಾರ. ವ್ಯಾಪಾರದಲ್ಲಿ ಒಬ್ಬನಿಗೆ ಪ್ರತಿನಿಧಿಯಾಗಿ ವರ್ತಿಸಲು ಕೊಟ್ಟ ಅಧಿಕಾರ: ಪ್ರಾತಿನಿಧ್ಯ (Have goods on c. ಪ್ರತಿನಿಧಿಯಾಗಿ ಮಾರಲು ಸರಕನ್ನು ಪಡೆ). ಪ್ರತಿನಿಧಿ ವ್ಯಾಪಾರಿಗೆ ವ್ಯಾಪಾರದ ಮೂಲ್ಯದಮೇಲೆ ಕೊಡುವ ಸೇಕಡ ರುಸುಮು : ದಳ್ಳಾಳಿ. (ತಪ್ಪಿತ, ತಕ್ಸೀರು, ಮೊ. ನ್ನು) ಮಾಡುವುದು. (ಕ್ರಿ.) ಅಧಿಕಾರ ಕೊಡು ; ನಿಯೋಜಿಸು. (ಅಧಿಕಾರಿಗೆ) ನಾವೆಯ ಆಧಿಪತ್ಯ ಕೊಡು. (ಹಡಗಿಗೆ) ಯುದ್ಧಕ್ಕೆ ಹೊರಡಲು ನಿರೂಪ ಕೊಡು. (ಹಡಗಿನ) ಆಧಿಪತ್ಯ ವಹಿಸಿಕೊ. (ಕಲೆಗಾರ, ಮೊ. ರಿಗೆ) ಕೆಲಸ, ಕಾರ್ಯ, ವಹಿಸು. **Commíssioned** (ಗು.) ಅಧಿಕಾರ ಪಡೆದ ; ಅಧಿಕೃತ ; ನಿಯೋಜಿತ. (ಅಧಿಕಾರಿಗಳ ವಿಷಯದಲ್ಲಿ) ಸನ್ನದು ಪಡೆದ. (ಹಡಗುಗಳ ವಿಷಯದಲ್ಲಿ) ಅನುಗೊಳಿಸಿದ ; ಸನ್ನದ್ಧ ; ಸಜ್ಜಿತ. **Commíssioner** (ನಾ.) ಸನ್ನದಿನಿಂದ ನಿಯಮಿತನಾದವನು : ನಿಯೋಗಿ. (ಮು., ಸರ್ಕಾರದ) ನಿಯೋಜಿತ ಮಂಡಲಿಯ ಸದಸ್ಯ. (ಒಂದು ಪ್ರಾಂತದಲ್ಲಿ ಅಥವಾ ಒಂದು ಇಲಾಖೆಯಲ್ಲಿ) ಪೂರ್ಣಾಧಿಕಾರದ ಪ್ರತಿನಿಧಿ. **Commíssionership** (ನಾ.)

Commissionaíre ಕೊಮಿಷನೇರ್, — ಸಿಯೊ — (ನಾ.) ಲಂಡನ್ನಿನಲ್ಲಿ ಸಮಾಚಾರ, ಮೊ. ಗಳನ್ನು ತೆಗೆದುಕೊಂಡುಹೋಗುವುದಕ್ಕಾಗಿ ನಿಯಾಮಕವಾದ ವಿಶ್ರಾಂತ ಸೈನಿಕರ ಸಂಘದ ಸದಸ್ಯ. ಸಣ್ಣ ಪುಟ್ಟ ಕೆಲಸಗಳನ್ನು ಮಾಡಲು ನಿಯಮಿತನಾದವನು. ಸಮಾಚಾರಗಳನ್ನು, ಸಣ್ಣ ಸಾಮಾನುಗಳನ್ನು, ಒಯ್ಯುವವನು ; ದೂತ ; ಚಾರ.

Cómmissure ಕಾಮಿಸ್ಯು(ಸ್ಯೂ)ರ್, — ಷುರ್ (ನಾ.) ಒಟ್ಟಿಗೆ ಸೇರಿರುವುದು. ಎರಡು ವಸ್ತುಗಳು ಸೋಕಿಕೊಂಡಿರುವ ಅಥವಾ ಕೂಡಿಕೊಂಡಿರುವ ಸ್ಥಳ : ಸೇರುವೆ ; ಸಂಧಿ ; ಸಂಧಿಸ್ಥಾನ ; ಸಂಧಿ ರೇಖೆ ; ಎಲುಬು ಸೇರುವೆ ; ಅಸ್ಥಿ ಸಂಧಿ. ತುಟಿಗಳು, ರೆಪ್ಪೆಗಳು, ಸೇರುವ ಗೆರೆ. ಮಿದುಳಿನ ಗೋಳಾರ್ಧಗಳು, ಮಿದುಳುಬಳ್ಳಿಯ ಎರಡು ಪಕ್ಕಗಳು, ಮೊ. ನ್ನು ಸೇರಿಸುವ ನರಪದಾರ್ಥದ ಪಟ್ಟಿಗಳು : ನರಬಂಧನಿ. **Commissúral** ಕಮಿಷುರಲ್, ಕಾಮಿಸ್ಯೂರಲ್ (ಗು.)

Commít ಕಮಿಟ್ (ಕ್ರಿ. ಸಕ.) (ಒಬ್ಬನಿಗೆ, ಒಬ್ಬನ ರಕ್ಷಣೆಗೆ, ಅಭಿಪ್ರಾಯಕ್ಕೆ, ಬರವಣಿಗೆಗೆ, ಭೂಮಿಗೆ, ಬೆಂಕಿಗೆ) ಒಪ್ಪಿಸು, ಅರ್ಪಿಸು. (ಸೆರೆಮನೆಗೆ) ಸೇರಿಸು. ಅಧಿಕಾರದಿಂದ ಬಂಧನದಲ್ಲಿಡು. (ಕಾನೂನಿನ ಮಸೂದೆಯನ್ನು) ಒಂದು ಸಮಿತಿಯ ಅಭಿಪ್ರಾಯಕ್ಕೆ, ಪರ್ಯಾಲೋಚನೆಗೆ, ಒಪ್ಪಿಸು. ತಪ್ಪನ್ನು, ತಕ್ಸೀರನ್ನು, ನಡಸು, ಮಾಡು. (C. to earth ಹೂಳು. C. to the flames ಬೆಂಕಿಗೆ ಹಾಕು. C. to memory ಬಾಯಿಪಾಠ ಮಾಡು. C. to writing, paper ಬರೆದಿಡು). (ನಡತೆ, ಘನತೆ, ಮೊ. ವಿಷಯದಲ್ಲಿ, ಒಂದು ಮಾರ್ಗಕ್ಕೆ) ಕಟ್ಟು ಬೀಳು, ಬದ್ಧನಾಗು ; — ನಾಗಿಸು ; ಸಿಕ್ಕಿಕೊ ; ಸಿಕ್ಕಿಸು. **Commíttable** (ಗು.) ; **Commíttal** (ನಾ.) ಸೆರೆಹಾಕುವುದು ; ಸಮಿತಿಗೆ, ನ್ಯಾಯಸ್ಥಾನಕ್ಕೆ, ಒಪ್ಪಿಸುವುದು ; ತಾನಾಗಿ ಒಳಗಾಗುವುದು. **Commítment** (ನಾ.) (ಮು., ಕ್ರಿಯಾಸ್ವಾತಂತ್ರ್ಯಕ್ಕೆ ಅವಕಾಶವಿಲ್ಲದ) ಕಟ್ಟುಪಾಡು ; ಸಿಕ್ಕುಪಾಡು.

Commíttee ಕಮಿಟಿ (ನಾ.) [ಒಂದು ಸಂಘದಿಂದ ಒಂದು ನಿರ್ದಿಷ್ಟ ಕಾರ್ಯಕ್ಕಾಗಿ ಗೊತ್ತುಮಾಡಿದ, ಸಾ., ಆ ಸಂಘದ ಸದಸ್ಯರಿಂದ ಕೂಡಿದ, ಆ ಸಂಘಕ್ಕಿಂತಲೂ ಸಣ್ಣದಾದ] ಮಂಡಲಿ ; ಸಮಿತಿ. House resolves itself into a C., goes into C., is in C. ಒಟ್ಟು ಸಭೆ ಸಮಿತಿಯಾಗಿ ವರ್ತಿಸುತ್ತದೆ, ಸಮಿತಿಯಾಗುತ್ತದೆ (ಎಂದರೆ, ಕೇವಲ ಸಭಾನಿಯಮಗಳಿಗೆ ಬದ್ಧವಾಗಿರದೆ ವರ್ತಿಸುತ್ತದೆ). C. of the whole House ಪೂರ್ಣಸಭೆಯ ಸಮಿತಿ. Standing C. ಒಂದು ಸಂಘದಿಂದ ನಿಯಾಮಕವಾಗಿ ಆ ಸಂಘದ ಜೀವಮಾನದಲ್ಲಿ ಕಾರ್ಯಾಲೋಚನೆಗೆ ಸಿದ್ಧವಾಗಿರುವ ಸಮಿತಿ : ಸಿದ್ಧ ಸಮಿತಿ. Sub-c. ಉಪ ಸಮಿತಿ. Joint C. ಬೇರೆ ಬೇರೆ ಸಂಘದವರು ನಿಯಮಿಸಿದ ಸದಸ್ಯರುಗಳ ಮಂಡಲಿ : ಸಂಯುಕ್ತ ಸಮಿತಿ. C.-man ಸಮಿತಿಯ ಸದಸ್ಯ. **Committeé** ಕಾಮಿಟೀ (ನಾ.) (ನ್ಯಾ. ಶಾ.) ಒಂದು ಜವಾಬ್ದಾರಿ ವಹಿಸಲ್ಪಟ್ಟವನು [ಮು., ಬುದ್ಧಿಶೂನ್ಯನ (ಹುಚ್ಚುಹಿಡಿದವನ) ಜವಾಬ್ದಾರಿಯನ್ನು]

Commíx ಕಮಿಕ್ಸ್ (ಕ್ರಿ.) (ಪ್ರಾಚೀ. ಪ್ರ., ಕಾವ್ಯ) ಬೆರಸು ; ಬೆರೆ ; ಕಲಸು ; ಕಲೆ ; ಸಂಮಿಶ್ರ ಮಾಡು ; — ವಾಗು. **Commíxture** (ನಾ.)

Commóde ಕಮೋಡ್ (ನಾ.) ಸೆಳೆಖಾನೆಗಳ ಪೆಠಾರಿ ; ಗಡಗಂಟೆಗಳಿರುವ ಒಂದು ನಿಲವು. ಮುಚ್ಚಿದ ಪಾತ್ರೆಯುಳ್ಳ ನಾಗಾಲಿ, ಕಾಲುಮಣೆ (ಮು., Night-c. ಮಲಪಾತ್ರೆಯ ನಾಗಾಲಿ)

Commódious ಕಮೋಡಿಯಸ್ (ಗು.) ವಿಶಾಲವಾದ ; ವಿಸ್ತಾರವಾದ. (ಪ್ರಾಚೀ. ಪ್ರ.) ಅನುಕೂಲವಾದ ; ವಸತಿಯಾದ. **Commódiously** (ಕ್ರಿ. ವಿ.) ; **Commódiousness** (ನಾ.)

Commódity ಕಮಾಡಿಟಿ (ನಾ.) ಉಪಯುಕ್ತ ವಸ್ತು ; ವ್ಯಾಪಾರ ವಸ್ತು (Staple c.) ; ಸರಕು ; ದಿನಸಿ ; ಪದಾರ್ಥ. (ಪ್ರಾಚೀ. ಪ್ರ.) ಅನುಕೂಲತೆ.

Cómmodore ಕಾಮಡೋರ್ (ನಾ.) ಒಂದು ದರ್ಜೆಯ ನೌಕಾಧಿಕಾರಿ. (Air C. ಆಕಾಶದಳದ ಅಧಿಕಾರಿ). [ಮೂರು ಅಥವಾ ಹೆಚ್ಚು ಹಡಗುಗಳು ಒಟ್ಟಿಗೆ ಪ್ರಯಾಣಮಾಡುವಾಗ (ಔಪಚಾರಿಕವಾಗಿ)] ಉಚ್ಚ ನೌಕಾಧಿಪತಿ. ವಿಹಾರ ದೋಣಿಕೂಟದ ಅಧ್ಯಕ್ಷ. ನೌಕಾ ಚಾಲಕರ ಮುಖ್ಯಸ್ಥ. 'ಕಾಮಡೋರ್' ಅಧಿಕಾರಿಯ ಹಡಗು.

Cómmon ಕಾಮನ್ (ಗು. ; ತರ ತಮಗಳು, -er, -est) ಒಬ್ಬನಿಗಿಂತಲೂ ಹೆಚ್ಚುಮಂದಿಯಿಂದ ಬಂದ, ಹೆಚ್ಚುಮಂದಿ ಮಾಡಿದ ; ಎಲ್ಲರಿಗೂ ಸೇರಿದ ; ಸರ್ವಸಮವಾದ ; ಸಾರ್ವಜನಿಕ ; ಸಾಮಾನ್ಯಾನುಭವದ ; ಅಧಿಕಾರಸ್ಥಾನವಿಲ್ಲದ. ಸಾಮಾನ್ಯ ; ಸಾಧಾರಣ ; ಹುದು (ಗ್ರಾಂ.) ; ಸಾಮಾನ್ಯ ಗುಣಗಳುಳ್ಳ ; ಕೀಳು ಗುಣದ ; ಕೆಳಮಟ್ಟದ. (ವ್ಯಾ.) C. noun ರೂಢ ನಾಮ ; C. gender ಪುಂಸ್ತ್ರೀಲಿಂಗ ; ಉಭಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಂಗ. C. alehouse ಸಾರಾಯಂಗಡಿ ; ಪಡಖಾನೆ. C. cause ಸಮಾನೋದ್ದೇಶ. C. consent ಒಮ್ಮನಸ್ಸು ; ಸರ್ವಸಮ್ಮತಿ ; ಎಲ್ಲರ ಒಪ್ಪಿಕೆ. C. crier ಡಂಗುರ ಹೊಡೆಯುವವನು ; ಟುಮುಕಿ ಹಾಕುವವನು; ಸಾರುವವನು. C. experience ಸಾಮಾನ್ಯಾನುಭವ. (ಗಣಿತ) C. factor, multiple ಸಾಮಾನ್ಯ ಅಪವರ್ತನ, ಅಪವರ್ತ್ಯ. C. goal ಏಕೋದ್ದೇಶ ; ಒಂದುಗುರಿ. C. ground ಎರಡು ಕಡೆಯವರೂ ಒಪ್ಪಿದ್ದು ; ಉಭಯ ಸಾಮಾನ್ಯ ಪಕ್ಷ. C. honesty ಸಾಮಾನ್ಯ ಪ್ರಾಮಾಣಿಕತೆ. Our c. humanity ನಮ್ಮ ಸಾಮಾನ್ಯ ಮನುಷ್ಯತ್ವ. C. law ಇಂಗ್ಲೆಂಡಿನ ನ್ಯಾಯಸ್ಥಾನಗಳಲ್ಲಿ, ಬಹುಕಾಲದಿಂದ ನಡೆದುಬಂದಿರುವ ರೀತಿಯಲ್ಲಿ, ತೀರ್ಪುಕೊಡುವ, ಲಿಖಿತವಾಗಿಲ್ಲದ ವ್ಯವಹಾರನ್ಯಾಯ : ಸಂಪ್ರದಾಯ ನ್ಯಾಯ. No c. mind ಅಸಾಧಾರಣ ಪ್ರಜ್ಞೆ, ಬುದ್ಧಿ. The c. people ಜನಸಾಮಾನ್ಯ ; ಪಾಮರರು ; ಮಂದಿ ; ನೆರವಿ. C. Prayer (ಕ್ರೈಸ್ತ) ಸಾಮಾನ್ಯ ಪ್ರಾರ್ಥನೆ. C.-room ಎಲ್ಲರೂ ಬಳಸುವ ಕೋಣೆ ; ಸೇರುವ ಕೋಣೆ. (ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ) ಶಾಲಾ ಪಂಡಿತರು, ಮೊ. ರು ಭೋಜನವಾದಮೇಲೆ ವಿಶ್ರಾಂತಿಗಾಗಿ ಹೋಗಿ ಸೇರುವ ಕೋಣೆ. C. sense ಸಾಮಾನ್ಯ ಪರಿಜ್ಞಾನ, ತಿಳಿವಳಿಕೆ ; ವಿವೇಕ ; ವ್ಯವಹಾರ ಜ್ಞಾನ. (ಮನುಷ್ಯ ವರ್ಗದ ಅಥವಾ ಸಮಾಜದ) ಸಾಮಾನ್ಯಾನುಭವ. Philosophy of c. sense ಮನುಷ್ಯವರ್ಗದ ಆದ್ಯ ಸಾಮಾನ್ಯ ನಂಬಿಕೆಗಳನ್ನು ಪರಮ ಪ್ರಮಾಣವೆಂದು ಅಂಗೀಕರಿಸುವ ತತ್ತ್ವ. C. weal, Commonweal (ಪ್ರಾಚೀ. ಪ್ರ.) ಲೋಕ ಕಲ್ಯಾಣ ; ಸರ್ವಜನ ಹಿತ : ಪ್ರಜಾ ಕ್ಷೇಮ. **Cómmonness** (ನಾ.) ; **Cómmonable** (ಗು.) (ದನ, ಕುರಿ, ಮೊ. ಗಳ ವಿಷಯದಲ್ಲಿ) ಸಾರ್ವಜನಿಕ ಪ್ರದೇಶದಲ್ಲಿ (ಗೋಮಾಳದಲ್ಲಿ) ಮೇಯಿಸಬಹುದಾದ ; (ನೆಲದ ವಿಷಯದಲ್ಲಿ) ಒಟ್ಟಿಗೆ ಅನುಭವಿಸಬಹುದಾದ ; ಮದ್ದಕದ. **Cómmonage** ಕಾಮನೆಜ್ (ನಾ.) ಸಮಾನಾನುಭವದ ನೆಲದ ಹಕ್ಕು ; ಗೋಮಾಳದ ಹಕ್ಕು ; ಮದ್ದಕದ ಹಕ್ಕು. ಮದ್ದಕದಲ್ಲಿರುವ ನೆಲ ; ಸಮಾನಾನುಭವ. ಜನಸಾಮಾನ್ಯ. **Cómmonalty** — ನಲ್ಟಿ (ನಾ.) ಜನಸಾಮಾನ್ಯ ; ಲೋಗರು (ಗ್ರಾಂ.) ; ಜನ ಸಮುದಾಯ ; ಸಮಾಜ. **Cómmoner.** (ನಾ.) (ಇಂಗ್ಲೆಂಡಿನಲ್ಲಿ ಶ್ರೀಮಂತವರ್ಗಕ್ಕೆ ಸೇರದ) ಸಾಮಾನ್ಯ ಜನ, ಪ್ರಜೆ (ಅಪೂರ್ವ ಪ್ರಯೋಗ). ಇಂಗ್ಲೆಂಡಿನಲ್ಲಿ ಪ್ರಜಾ ಪ್ರತಿನಿಧಿ ಸಭೆಯ (House of Commons) ಸದಸ್ಯ. [First C. (ಇಂಗ್ಲೆಂಡಿನ) ಪ್ರಜಾ ಪ್ರತಿನಿಧಿ ಸಭೆಯ ಸಭಾಪತಿ]. (ಕೆಲವು ಇಂಗ್ಲಿಷ್ ಪ್ರೌಢವಿದ್ಯಾ ಶಾಲೆಗಳಲ್ಲಿ) ವೇತನಪಡೆಯದ ಸಾಮಾನ್ಯ ವಿದ್ಯಾರ್ಥಿ. ಮದ್ದಕದ ಹಕ್ಕುಳ್ಳವನು. **Cómmonly** (ಕ್ರಿ. ವಿ.) ಸಾಮಾನ್ಯವಾಗಿ ; ಸಾಧಾರಣವಾಗಿ ; ಪ್ರಾಯೇಣ. ಕೀಳಾಗಿ ; ಅಗ್ಗವಾಗಿ. **Cómmonplace** (ನಾ., ಗು., ಕ್ರಿ.) (ಒಂದು ಪುಸ್ತಕದಲ್ಲಿ ಉಪಯೋಗಕ್ಕಾಗಿ ಬರೆದಿಟ್ಟ) ಪ್ರಸಿದ್ಧ ವಚನ. ಸಾಮಾನ್ಯ ವಿಚಾರ; ದಿನಂಪ್ರತಿ ಆಡುವ ರೂಢಿಯ ಮಾತು ; ಪಳಕೆಮಾತು ; ನಾಡಾಡಿ (ಗ್ರಾಂ.). ಸರ್ವಸಾಧಾರಣವಾದದ್ದು. (ಗು.) ಹೊಸತಲ್ಲದ ; ಅತಿ ಪರಿಚಿತ ; ಬಹು ಬಳಕೆಯಾದ ; ಚರ್ವಿತ ಚರ್ವಣ. (ಕ್ರಿ.) ಪ್ರಸಿದ್ಧೋಕ್ತಿಗಳನ್ನು ಆಯಿಸಿ ತೆಗೆ ; ಪ್ರಸಿದ್ಧೋಕ್ತಿ ಪುಸ್ತಕದಲ್ಲಿ ಸೇರಿಸು. ರೂಢಿನುಡಿಗಳನ್ನಾಡು **Cómmonplaceness** (ನಾ.)

Cómmon (ನಾ.) ಊರೊಟ್ಟಿನ ಜಮೀನು (ಮು., ಆವರಣ ಹಾಕಿರದ ಬಂಜರು ಜಮೀನು : ಗೋಮಾಳ). (Right of) c. ಮತ್ತೊಬ್ಬನ ಜಮೀನಿನಮೇಲಿರುವ ಹಕ್ಕು. C. of pasturage ದನಮೇಯಿಸಿಕೊಳ್ಳುವ ಹಕ್ಕು. Out of the c. ಅಸಾಧಾರಣ. In c. ಒಟ್ಟಿಗೆ ; ಮದ್ದಕದಲ್ಲಿ ; ಸಮಷ್ಟಿಯ. In c. with ಒಡನೆ ; ಅದೇ ರೀತಿಯಲ್ಲಿ ; ಅಂತೆಯೇ. **Cómmons** (ನಾ., ಬ. ವ.) ಸಾಮಾನ್ಯ ಜನ ; ಇಂಗ್ಲೆಂಡಿನಲ್ಲಿ, ಅಥವಾ ಈ ರಾಜ್ಯಪದ್ಧತಿಯುಳ್ಳ ಇತರ ದೇಶಗಳಲ್ಲಿ, ಮೂರನೆಯ ರಾಜ್ಯಾಂಗ (House of C. ಪ್ರಜಾಪ್ರತಿನಿಧಿ ಸಭೆ). [(೧) ರಾಜ, (೨) ಶ್ರೀಮಂತ ಪ್ರಜೆ, (೩) ಸಾಮಾನ್ಯ ಪ್ರಜೆ, (೪) ಪತ್ರಿಕೆಗಳು (ಇವುಗಳ ಮೂಲಕ ಸೂಚಿತವಾಗುವ ಸಾರ್ವಜನಿಕ ಅಭಿಪ್ರಾಯ)]. ಒಟ್ಟಿಗೆ ಹಂಚಿಕೊಂಡ ಆಹಾರಸಾಮಗ್ರಿ. ಸಹಭೋಜನ. (ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್‌ಗಳ) ಒಂದು ಗೊತ್ತಾದ ಬೆಲೆಗೆ ಒದಗಿಸುವ ಆಹಾರ. ದಿನಚರಿಯ ಆಹಾರ ; ನಿತ್ಯದೂಟ ; ಕಟ್ಟಳೆಯ ತಿಂಡಿ . Short c. ಅರೆಹೊಟ್ಟೆಯೂಟ.

Cómmoney ಕಾಮನಿ (ನಾ.) ಕೀಳ್ತರದ ಆಟದ ಗೋಲಿ.

Cómmonwealth ಕಾಮನ್‌ವೆಲ್ತ್ (ನಾ.) ಪ್ರಜಾ ಸಮುದಾಯ ; ಜನತೆ. ಪ್ರಜಾ ಪ್ರಭುತ್ವ. ಸ್ವತಂತ್ರ ಸಂಸ್ಥೆ. (C. of learning ವಿದ್ವತ್ ಸಂಸ್ಥೆ). ಆಸ್ಟ್ರೇಲಿಯಾ ಸಂಯುಕ್ತ ಸಂಸ್ಥಾನ. ಆದಾಯ ಹಂಚಿಕೊಳ್ಳುವ ನಾಟಕಸಂಘದವರು. (ಪೂರ್ವ ಕಾಲದಲ್ಲಿ) ಪ್ರಜಾ ಕ್ಷೇಮ ; ಲೋಕ ಹಿತ ; ನಾಡೊಳ್ಳು.

Commótion ಕಮೋಷನ್ (ನಾ.) ಗಲಭೆ ; ಗಲಾಟೆ ; ಗದ್ದಲ ; ತುಮುಲ ; ಕೋಲಾಹಲ ; ಕಲಕಾಟ ; ಕ್ಷೋಭೆ ; ದಂಗೆ.

Commóve ಕಮೂವ್ (ಕ್ರಿ. ಸಕ.) ರಭಸದಿಂದ ಸುತ್ತಾಡು, ಚಲಿಸು (ರೂಪ. ಸಹ). ಕಲಕು ; ಕೆರಳಿಸು ; ರೇಗಿಸು.

Commúnal, Cómmunal ಕಮ್ಯೂನಲ್, ಕಾಮ್ಯು(ಮ್ಯೂ) — (ಗು.) ಪ್ರಾಂತೀಯ ; ಪ್ಯಾರಿಸ್ಸಿನ ಪ್ರಾಂತೀಯ. ಸಾಮಾನ್ಯ ಪ್ರಜೆಯ ; ಜನತೆಯ ; ಊರೊಟ್ಟಿನ ; ಸಮುದಾಯದ ; ಸಾಮುದಾಯಿಕ ; ಸಮಾನೋಪಯೋಗಕ್ಕಿರುವ. (ಇಂಡಿಯಾದಲ್ಲಿ) ಕೋಮುವಾರಿನ ; ಜಾತಿವಾರಿನ (C. election ಕೋಮುವಾರು ಚುನಾವಣೆ). **Commúnalism** (ನಾ.) ಸ್ಥಳೀಯಾಧಿಕಾರ ತತ್ತ್ವ ; ಕೋಮುವಾರು ಭಾವನೆ. **Commúnalist** (ನಾ.) ; **Communalístic** (ಗು.) ; **Commúnalize** (ಕ್ರಿ. ಸಕ.) ಸಮುದಾಯದ್ದನ್ನಾಗಿ ಮಾಡು. **Communalizátion** (ನಾ.)

Cómmune[1] ಕಾಮ್ಯೂನ್ (ನಾ.) ಫ್ರಾನ್ಸಿನಲ್ಲಿ ಆಡಳಿತಕ್ಕನುಕೂಲಿಸುವಂತೆ ಮಾಡಿದ ವಿಭಾಗಗಳಲ್ಲಿ ಅತ್ಯಂತ ಸಣ್ಣದು ; ಇತರ ದೇಶಗಳಲ್ಲಿ ಈ ತೆರದ ವಿಭಾಗ. **Cómmunism** (ನಾ.) ಎಲ್ಲಾ ಆಸ್ತಿಯೂ ಸಮುದಾಯಕ್ಕೆ ಸೇರಿದುದೆಂದೂ ಪ್ರತಿಯೊಬ್ಬನೂ ತನ್ನ ಶಕ್ತ್ಯನುಸಾರ ಕೆಲಸಮಾಡಿ ತನಗೆ ಆವಶ್ಯಕವಿದ್ದಷ್ಟು ಮಾತ್ರ ಆ ಆಸ್ತಿಯಿಂದ ಪ್ರತಿಫಲ ಪಡೆಯಬೇಕೆಂದೂ ಹೇಳುವ ತತ್ತ್ವ : ಪ್ರಜಾ ಸಮಸ್ತ ಸ್ವಾಮ್ಯ ವಾದ ; ಸಮಸ್ತ ಜನಸ್ವಾಮ್ಯ ವಾದ ; ಸಮತಾ ವಾದ (ಸಮಷ್ಟಿವಾದದ ಪ್ರಭೇದ). **Cómmunist** (ನಾ.) ; **Communístic** (ಗು.) ; **Cómmunize** (ಕ್ರಿ. ಸಕ.) (ನೆಲ, ಮೊ. ನ್ನು) ಸಮುದಾಯದ್ದನ್ನಾಗಿ, ಜನತೆಯದನ್ನಾಗಿ, ಮಾಡು. **Communizátion** (ನಾ.)

Cómmune[2] ಕಾಮ್ಯೂನ್, **Commúne** ಕಮ್ಯೂನ್ (ಕ್ರಿ. ಅಕ.) ಅನ್ಯೋನ್ಯ ಸಂಸರ್ಗವುಳ್ಳವನಾಗಿರು ; ಧ್ಯಾನಿಸು ; ಅಂತರಂಗ ಧ್ಯಾನ ಮಾಡು ; ಒಡ ನೆನೆ ; ಕೂಡಿ ಆಲೋಚಿಸು ; ಆಪ್ತ ಸಂಭಾಷಣೆ ಮಾಡು. (ಅಮೆ. ಸಂ.) (ಕ್ರೈಸ್ತ) ಪ್ರಭುಭೋಜನದಲ್ಲಿ ಭಾಗಿಯಾಗು.

Commúnicate ಕಮ್ಯೂನಿಕೇಟ್ (ಕ್ರಿ.) (ಉಷ್ಣ, ಚಲನೆ, ಭಾವ, ಸಮಾಚಾರ, ಮೊ. ನ್ನು) ಕೊಡು, ಸಾಗಿಸು, ಒಯ್ಯಿ, ತಿಳಿಸು, ಕಳುಹು, ಅರುಹು, ನಿವೇದಿಸು. (ರೋಗ) ಅಂಟಿಸು ; ಸೋಂಕಿಸು. (ಒಂದು ವಸ್ತುವನ್ನು) ಹಂಚಿಕೊ, ಸಹಭೋಗಿಸು. (ಕ್ರೈಸ್ತ) ಪ್ರಭುಭೋಜನ ಸಂಸ್ಕಾರವನ್ನು ಪಡೆ, ಕೊಡು. ಸಂಸರ್ಗ ಮಾಡು ; ವ್ಯವಹರಿಸು. (ಕೋಣೆ, ಮೊ. ಗಳ ವಿಷಯದಲ್ಲಿ) ಒಂದರಿಂದೊಂದಕ್ಕೆ ತೆರಪಿರು, ತೆರೆ. **Communicátion** (ನಾ.) (ಮು., ಸಮಾಚಾರವನ್ನು) ತಿಳಿಸುವುದು, ಸಾಗಿಸುವುದು ; ಸಂಚರಣೆ. ಸುದ್ದಿ ; ಸಮಾಚಾರ. ಸಂಸರ್ಗ ; ಸಂಬಂಧ. (ಬೇರೆಬೇರೆ ಸ್ಥಳಗಳಿಗಿರುವ) ಬಾಗಿಲು, ರಸ್ತೆ, ರೈಲು ಮಾರ್ಗ, ವಾರ್ತಾ ತಂತಿ, ಅಥವಾ ಇತರ ಸಂಬಂಧ. (ಸೇನೆ, ಬ. ವ. ದಲ್ಲಿ) ಮೂಲ ಸ್ಥಾನಕ್ಕೂ ಯುದ್ಧರಂಗಕ್ಕೂ ಇರುವ ಸಂಬಂಧ. **Commúnicative** — ಕೆಟಿವ್ (ಗು.) ಕೊಡಲು, ಹೇಳಲು, ತಿಳಿಸಲು, ಸಿದ್ಧವಾಗಿರುವ ; — ಸ್ವಭಾವದ ; ಮುಚ್ಚುಮರೆಯಿಲ್ಲದ ; ತೆರಪಿನ. ಗಳಹುವ ; ಹರಟುವ. **Commúnicatively** (ಕ್ರಿ. ವಿ.) ; **Commúnicativeness** (ನಾ.) ; **Commúnicator** — ಕೇಟರ್ (ನಾ.) ತಿಳಿಸುವವನು ; — ವಧು ; ಕಳುಹಿಸುವವನು ; — ವದು ; ಚಾರಕ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮಾಚಾರ ಕಳುಹಿಸಲು ಉಪಯೋಗಿಸುವ ದೂರಲೇಖದ (ಟೆಲಿಗ್ರಾಫ್) ಭಾಗ. ರೈಲ್‌ಬಂಡಿ ಸಾಲಿನ ರಕ್ಷಕನೊಡನಾಗಲಿ ಚಾಲಕನೊಡನಾಗಲಿ ವಾರ್ತಾಸಂಬಂಧ ಪಡೆಯಲು ಆ ಬಂಡಿಸಾಲಿನಲ್ಲಿರುವ ಸಲಕರಣೆ : ನಿವೇದಕ. **Commúnicable** — ಕಬ್‌ಲ್ (ಗು.) ತಿಳಿಸಲಾಗುವ; ಸಾಗಿಸಲಾಗುವ; ಕೊಡಲಾಗುವ; ಸೋಂಕಿಸಲಾಗುವ; = Communicative. **Communicabílity** (ನಾ.); **Commúnicableness** (ನಾ.); **Commúnicably** (ಕ್ರಿ. ವಿ.); **Commúnicant** (ನಾ.) (ಕ್ರೈಸ್ತ) ಪ್ರಭುಭೋಜನ ಸಂಸ್ಕಾರವನ್ನು (ನಿಯತವಾಗಿ) ಪಡೆಯುವವನು. ಸಮಾಚಾರ ತಿಳಿಸುವವನು, ಕೊಡುವವನು.

Commúnion ಕಮ್ಯೂನಿಯನ್, — ನ್ಯನ್ (ನಾ.) ಸಹಭಾಗಿತ್ವ; ಸಹ ಭೋಗ; ಸಂಯೋಗ; ಭಾವೈಕ್ಯ. (ಮು., ರೋ. ಕ್ಯಾ. ಧರ್ಮದ ಬೇರೆಬೇರೆ ಪಂಗಡಗಳ) ಸಾಹಚರ್ಯ. ಒಂದು ಮತದಲ್ಲಿ ನಂಬಿಕೆಯುಳ್ಳ ಪಂಗಡ, ಸಮಾಜ. ಸಂಸರ್ಗ; ಸಂಬಂಧ. (ಕ್ರೈಸ್ತ) ಪ್ರಭುಭೋಜನ ಸಂಸ್ಕಾರ(ದಲ್ಲಿ ಭಾಗ ವಹಿಸುವುದು) (= Holy C.). C.-cloth, C.-cup, C.-table (ಕ್ರೈಸ್ತ) ಪ್ರಭುಭೋಜನ ಸಂಸ್ಕಾರದಲ್ಲಿ ಉಪಯೋಗಿಸುವ ವಸ್ತ್ರ, ಪಾತ್ರೆ, ಪೀಠ. **Commúnionist** (ನಾ.)

Commúnique (F) ಕ(ಕೊ)ಮ್ಯೂನಿಕೆ(ೀ) (ನಾ.) ಅಧಿಕಾರಯುತ ಪ್ರಕಟನೆ.

Cómmunism. **Commune**[1] ನೋಡಿ.

Commúnity ಕಮ್ಯೂನಿಟಿ (ನಾ.) ಕೂಡು ಒಡೆತನ; ಸಹ ಸ್ವಾಮ್ಯ (C. of goods ಒಡವೆ ವಸ್ತುಗಳ ಕೂಡುಒಡೆತನ). ಗುಣ ಸಾಮ್ಯ; ಸಹಾನುವರ್ತನೆ; ಸಾಹಚರ್ಯ; ಸಾಮ್ಯ. (C. of interest ಸಹಾಸಕ್ತಿ; ಸಮಾನ ಪ್ರಯೋಜನ. C. singing ಸಮುದಾಯ ಗಾನ). ವ್ಯವಸ್ಥೆಗೊಂಡಿರುವ ರಾಜಕೀಯ, ಪೌರ, ಸಾಮಾಜಿಕ, ಸಂಘ, ಸಮಾಜ; ಸಮಾಜ ಭಾವ. ಒಂದೇ ಪ್ರದೇಶದಲ್ಲಿ ವಾಸಿಸುವ ಜನ ಸಮುದಾಯ. ಸಮಾನ ಧರ್ಮ, ಕರ್ಮ, ವೊ. ಗಳನ್ನುಳ್ಳ ಜನ ಸಮುದಾಯ (Mercantile c. ವ್ಯಾಪಾರಿ ಸಮಾಜ. The Jewish c. ಯೆಹೂದ್ಯ ಸಮಾಜ. The c. ಜನಸಾಮಾನ್ಯ). ಪಂಗಡ; ಜಾತಿ; ಕೋಮು.

Commúte ಕಮ್ಯೂಟ್ (ಕ್ರಿ. ಸಕ.) (ಎರಡು ವಸ್ತುಗಳನ್ನು) ಪರಿವರ್ತಿಸು, ವಿನಿಮಯ ಮಾಡು, ಅದಲುಬದಲು ಮಾಡು, ತಿರುಗಿಸು, ಮಾರುವೆ ಮಾಡು, ಬದಲಾಯಿಸು. ಒಂದು ಉಪಕಾರ ಭಾರವನ್ನು ಮತ್ತೊಂದರಿಂದ ತೀರಿಸು (*for*, *into* ಉಪ. ದೊಡನೆ). (ಒಂದು ದಂಡನೆಯನ್ನು ಅಷ್ಟು ಕಠಿನವಲ್ಲದ ಮತ್ತೊಂದು ದಂಡನೆಗೆ, ಒಂದು ತೆರದಲ್ಲಿ ತೆರಬೇಕಾದುದನ್ನು ಮತ್ತೊಂದು ತೆರಕ್ಕೆ) ಬದಲಾಯಿಸು. **Commútable** (ಗು.) ವಿನಿಮಯ ಮಾಡಲಾಗುವ; ಪರಿವರ್ತಿಸಲಾಗುವ; ಬದಲಾಯಿಸಲಾಗುವ; ಪರಿವರ್ತ್ಯ; ಪರಿವರ್ತನೀಯ; ಪರಿವರ್ತನ ಸಾಧ್ಯ. **Commutabílity** (ನಾ.); **Commutátion** ಕಾಮ್ಯುಟೇಷನ್ (ನಾ.) ಪರಿವರ್ತನೆ; ವಿನಿಮಯ; ಮಾರುವೆ; ವಿನಿಮಯ ದ್ರವ್ಯ. **Commútative** ಕಮ್ಯೂಟೆಟಿವ್, **Cómmutative** ಕಾಮ್ಯುಟೇಟಿವ್ (ಗು.) ವಿನಿಮಯ, ಪರಿವರ್ತನ, ಸಂಬಂಧದ. **Cómmutator** ಕಾಮ್ಯುಟೇಟರ್ (ನಾ.) ಪರಿವರ್ತಿಸುವ, ವಿನಿಮಯ ಮಾಡುವ, ಮಾರುವೆ ಮಾಡುವ, ಮನುಷ್ಯ, ವಸ್ತು : ವಿನಿಮಯಕಾರಿ. ವಿದ್ಯುತ್ ಪ್ರವಾಹದ ಗತಿಯನ್ನು ಬದಲಾಯಿಸುವ ಸಲಕರಣೆ : ಪರಿವರ್ತಕ.

Comóse. **Coma**[2] ನೋಡಿ.

Cómpact[1] ಕಾಂಪ್ಯಾಕ್ಟ್ (ನಾ.) ಒಪ್ಪಂದ; ಒಡಂಬಡಿಕೆ; ಕರಾರು. General c. ಸರ್ವಾನುಮತ; ಎಲ್ಲರ ಒಪ್ಪಿಗೆ.

Compáct[2] ಕಂಪ್ಯಾಕ್ಟ್ (ಗು., ಕ್ರಿ. ಸಕ.) ಒತ್ತಾಗಿ, ಅಚ್ಚುಕಟ್ಟಾಗಿ, ಸೇರಿಸಿದ, ಕೂಡಿಸಿದ; ಅಡಕವಾದ; ದಟ್ಟ; ಸಾಂದ್ರ; ನಿಬಿಡ. (ಶೈಲಿ) ಬಿಕ್ಕಟ್ಟಾದ; ಸಂಕ್ಷಿಪ್ತ. (ಕ್ರಿ.) ಭದ್ರವಾಗಿ ಒಟ್ಟುಗೂಡಿಸು; ಒತ್ತಾಗಿ ಜೋಡಿಸು; ಸಾಂದ್ರವಾಗಿಸು; ದಟ್ಟವಾಗಿಸು; ಘನೀಕರಿಸು.

Compáges ಕಾಂಪೇಜಿಸ್ (ನಾ.) ಅನೇಕ ಭಾಗಗಳು ಒಟ್ಟುಗೂಡಿ ಆದ ಬಂಧ, ರಚನೆ. ತೊಡಕಾದ ರಚನೆ; ಜಟಿಲ ಬಂಧ (ರೂಪ. ಸಹ). **Compáginate** ಕಂಪ್ಯಾಜಿನೇಟ್ (ಕ್ರಿ. ಸಕ.) ದೃಢವಾಗಿ ಬಂಧಿಸು (ರೂಪ. ಸಹ). **Compaginátion** (ನಾ.)

Compánion[1] ಕಂಪ್ಯಾನ್ಯನ್ (ನಾ., ಕ್ರಿ.) ಒಡನಾಡಿ; ಜೊತೆಗಾರ; ಸಂಗಾತಿ; ಸಂಗಡಿಗ; ಸಹವಾಸಿ (C.-in-arms ಸಹ ಯೋಧ). ಕೈಪಿಡಿ (Gardener's C. ತೋಟಗಾರನ ಕೈಪಿಡಿ). 'ನೈಟ್ ಹುಡ್' ಎಂಬ ಬಿರುದುಗಳ ಸರಣಿಯಲ್ಲಿ ಕಡೆಯ ಅಂತಸ್ತಿನ ಪದವಿ ಪಡೆದವನು (C. of the Bath, C. of Honour). ಮತ್ತೊಬ್ಬರೊಡನೆ ವಾಸವಾಗಿರಲು ವೇತನಕ್ಕಿರುವ ವ್ಯಕ್ತಿ (ಸಾ., ಹೆಂಗಸು). ಮತ್ತೊಂದು ವಸ್ತುವಿನೊಡನೆ ಸರಿಹೋಲುವುದು; ಜೊತೆಯದು (C. volume ಜೊತೆಯ ಸಂಪುಟ). (ಕ್ರಿ.) ಜೊತೆಯಲ್ಲಿರು; ಜೊತೆಯಲ್ಲಿ ಹೋಗು; ಜೊತೆಗೂಡು; ಸಹವಾಸ ಮಾಡು. **Compánionable** (ಗು.) ಸಹವಾಸ ಯೋಗ್ಯ; ಸ್ನೇಹಪರ. **Compánionably** (ಕ್ರಿ. ವಿ.); **Compánionableness** (ನಾ.); **Compánionship** (ನಾ.) ಜೊತೆ; ಸಂಗ; ಸಾಹಚರ್ಯ; ಸಹವಾಸ; ಸಖ್ಯ; ಒಡನಾಟ. (ಮುದ್ರಣ) ಒಟ್ಟಿಗೆ ಕೆಲಸಮಾಡುವ ಅಕ್ಷರಯೋಜಕರ ತಂಡ.

Compánion[2] ಕಂಪ್ಯಾನ್ಯನ್ (ನಾ.) (ನಾವೆ) ತಳಗಡೆ ಇರುವ ಕೋಣೆ ವೊ. ಗಳಿಗೆ ಬೆಳಕು ಬೀಳುವುದಕ್ಕಾಗಿ ಮಾಡಿರುವ ಎತ್ತರದ ಗವಾಕ್ಷಿ : ಬೆಳಕು ಮಾಳಿಗೆ. C. hatchway ನೌಕಾತಲದಲ್ಲಿ, ಕೋಣೆಗಳಿಗೆ ಹೋಗುವುದಕ್ಕಾಗಿ ಮಾಡಿರುವ ದ್ವಾರ. C.-ladder ನೌಕಾತಲದಿಂದ ಕೋಣೆಗಳಿಗೆ ಇಳಿಯುವ ಏಣಿ. C.-way ಕೋಣೆಗೆ ಇಳಿಯುವ ಮೆಟ್ಟಲಿನ ಸಾಲು.

Cómpany ಕಂಪನಿ (ನಾ., ಕ್ರಿ.) ಸಂಗ; ಸಹವಾಸ; ಸಾಹಚರ್ಯ; ಜೊತೆ; ಒಡನಾಟ; ಕೂಡಿರವು. ಗುಂಪುಸೇರಿದ, ಒಟ್ಟುಗೂಡಿದ, ಜನ; ಪಡೆ; ನೆರವಿ; ಸಹವಾಸಿಗಳು; ಸಂಗಾತಿಗಳು; ಜೊತೆಯವರು. ಸಮಾಜ ಕೂಟ. ಅತಿಥಿಗಳು. ಒಂದು ಸಮಾನೋದ್ದೇಶಕ್ಕಾಗಿ (ಮು., ವ್ಯಾಪಾರಕ್ಕಾಗಿ) ಜೊತೆಗೂಡಿದ ಜನತಂಡ; ಸಂಘ; ಮಂಡಲಿ. ವ್ಯಾಪಾರ ಸಂಸ್ಥೆಯ ಹೆಸರಿನಲ್ಲಿ ನಮೂದಿಸದ ಪಾಲುದಾರರು (Smith & Co. ಸ್ಮಿತ್ ಮತ್ತು ಇತರ ಪಾಲುದಾರರು). ಆಟಗಾರರ ತಂಡ, ದಳ. ಕ್ಯಾಪ್ಟನ್ನಿನ ಆಧಿಪತ್ಯದಲ್ಲಿರುವ ಪದಾತಿ ದಳ. (ಕ್ರಿ. ಸಕ., ಪ್ರಾಚೀ. ಪ್ರ.) ಜೊತೆಯಲ್ಲಿ ಹೋಗು; ಒಡನೆ ಹೋಗು. (ಕ್ರಿ. ಅಕ.) ಜೊತೆಗೂಡು; ಸಹವಾಸಿಯಾಗಿರು; (ಸ್ತ್ರೀ ಪುರುಷ) ಸಂಗ ಮಾಡು. Addicted to low c. ನೀಚ ಸಹವಾಸಕ್ಕೆ ಬದ್ಧ. Bear, keep, a person c. ಒಬ್ಬನ ಜೊತೆಯಲ್ಲಿರು; ಒಡನಿರು. C. manners ಹೊಸಬರ ಎದುರಿಗೆ ನಡೆದುಕೊಳ್ಳುವ ಮರ್ಯಾದೆ; ಗೋಷ್ಠಿ ಮರ್ಯಾದೆ; ಹೊರ ಮರ್ಯಾದೆ. C. officer ಕ್ಯಾಪ್ಟನ್ ದರ್ಜೆಯ ಅಥವಾ ಅದರ ಕೆಳಗಿನ ದರ್ಜೆಯ, ನಿರೂಪ ಪಡೆದ ದಳಾಧಿಕಾರಿ. C. sergeant-major ನಿರೂಪ ಪಡೆಯದ ಸೈನ್ಯದಳಾಧಿಕಾರಿಗಳಲ್ಲಿ ಉತ್ತಮ ದರ್ಜೆಯವನು. Get one's c. ಕ್ಯಾಪ್ಟನ್ ಹುದ್ದೆಗೆ ಬಡತಿಯಾಗು. He is good c., bad c. ಆತನು ಸರಸಿಯಾದ ಸಂಗಾತಿ, ಮೊದ್ದು ಸಂಗಾತಿ. In c. ಜೊತೆಯಲ್ಲಿ. John C. ಈಸ್ಟ್‌ಇಂಡಿಯಾ ಕಂಪನಿ. Joint Stock C. ಕೂಡುಬಂಡವಾಳದ ಸಂಘ. Keep c. (ಪ್ರಣಯಿಗಳಾಗಿ) ಸಂಗಮಾಡು, ಒಟ್ಟಿಗಿರು. Know a man by his c. ಕೆಳೆಯಿಂದ ಗುಣ ತಿಳಿ. Limited Liability C. ಪ್ರತಿ ಪಾಲುದಾರನ ಜವಾಬ್ದಾರಿಯೂ, ಸಾ., ಅವನು ಹಾಕಿರುವ ಬಂಡವಾಳದ ಮೊತ್ತದಷ್ಟು ಮಾತ್ರ ಇರುವ ಸಂಘ : ಮಿತ ಜವಾಬ್ದಾರಿಯ ಸಂಘ. Part c. (with) ಅಗಲಹೋಗು; ಜೊತೆ ಬಿಡು; ಒಡೆ; ಬಿರಿ. Ship's c. ಹಡಗಿನ ನೌಕರರ ಒಟ್ಟುತಂಡ; ಕಲಾಸಿ ಪಡೆ. I sin in good c. ನನ್ನದು ತಪ್ಪಾದರೆ ದೊಡ್ಡವರದೂ ತಪ್ಪೇ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Compáre ಕಂಪೇರ್ (ಕ್ರಿ., ನಾ.) ಹೋಲಿಸು ; ಹೋಲಿಸಿ ನೋಡು ; ತೂಗಿ ನೋಡು ; ತುಲನೆ ಮಾಡು ; ಸರಿ ನೋಡು ; ತಾಳೆ ನೋಡು [C. notes (ಅಭಿಪ್ರಾಯಗಳನ್ನು) ಹೋಲಿಸಿ ನೋಡು]. (ವ್ಯಾ.) (ಗು., ಕ್ರಿ. ವಿ. ಗಳ) ತರ ತಮ ರೂಪಗಳನ್ನು ನಡಸು. ಹೋಲು ; ಹೋಲಿಕೆಯಾಗು. (ನಾ.) ಹೋಲಿಕೆ. **Cómparable** ಕಾಂಪರಬ್‌ಲ್ (ಗು.) ಹೋಲಿಸಲಾಗುವ ; ಹೋಲಿಸತಕ್ಕ ; ಹೋಲಿಸಬಹುದಾದ ; ಎಣೆ ; ಸದೃಶ. **Comparabílity** (ನಾ.) ; **Compárative** ಕಂಪ್ಯಾರಟಿವ್ (ಗು., ನಾ.) ಹೋಲಿಕೆಯ ; ತುಲನಾತ್ಮಕ. ಬಹು ಮಟ್ಟಿನ ; ಹೆಚ್ಚು ಪಾಲು. [C. method (ಮು., ವಿಜ್ಞಾನದ) ತುಲನಾತ್ಮಕ ಪದ್ಧತಿ]. (ವ್ಯಾ.) (C. adjective, adverb ತರ ಭಾವದ ಗು., ಕ್ರಿ. ವಿ.). (ನಾ.) ತರ ಭಾವ, ರೂಪ. **Compáratively** (ಕ್ರಿ. ವಿ.) ; **Compárison** (ನಾ.) ಹೋಲಿಸುವುದು ; ಹೋಲಿಕೆ ; ಹೋಲಿಕೆ ನೋಟ ; ತಾರತಮ್ಯ ಪರೀಕ್ಷೆ ; ತುಲನೆ ; ತಾಳೆನೋಡುವುದು ; ಸರಿನೋಡುವುದು. ಉಪಮಾನ ; ಸಾದೃಶ್ಯ. In c. with ಹೋಲಿಕೆಯಲ್ಲಿ. Degrees of c. (ಗು., ಕ್ರಿ. ವಿ., ದ) ನೈಜ, ತರ, ತಮ, ಭಾವಗಳು.

Compártment ಕಂಪಾರ್ಟ್‌ಮೆಂಟ್ (ನಾ.) (ವಿಭಾಜಕಗಳಿಂದ ಪ್ರತ್ಯೇಕಿಸಲ್ಪಟ್ಟ) ಅಂಕಣ, ಅರೆ (ಮು., ರೈಲುಬಂಡಿಯದು). ಹಡಗಿನ ನೀರಿಳಿಯದ ಅರೆ. **Compárt** (ಕ್ರಿ. ಸಕ.) ಅರೆಗಳಾಗಿ ವಿಂಗಡಿಸು.

Cómpass ಕಂಪಸ್ (ನಾ.) (Pair of) compasses ಹಿಗ್ಗಲಿಸಲಾಗುವಂತೆ ಒಂದು ಕೊನೆಯಲ್ಲಿ ಕೀಲಿಸಿರುವ ಎರಡು ಬಾಹುಗಳುಳ್ಳ, ವೃತ್ತ ರೇಖೆಯನ್ನೆಳೆಯುವ, ಸಲಕರಣೆ : ವೃತ್ತ ರೇಖಕ ; ಕೈವಾರ. [Beam-compasses ಒಂದು ದಂಡದಮೇಲೆ, ಚೂಪುಕಾಲುಗಳುಳ್ಳ ಲೋಹದ ಎರಡು ಚದರಬಿಲ್ಲೆಗಳನ್ನು ಅಳವಡಿಸಿ, ಅವನ್ನು ಪರಸ್ಪರ ಹೆಚ್ಚು ಅಥವಾ ಕಡಮೆಯಾದ ಅಂತರವಿರುವಂತೆ ಜರುಗಿಸಲಾಗುವ, ಈ ಮೂಲಕ ದೊಡ್ಡ ವೃತ್ತಗಳನ್ನು ಎಳೆಯಬಹುದಾದ, ಸಲಕರಣೆ : ದಂಡ ಕೈವಾರ. Bow-compasses (Bow[1] ನೋಡಿ)]. ಕಾಂತಧ್ರುವ ಸೂಚಿ : ಉತ್ತರ ಮುಖಿ ; ದಿಕ್‌ಸೂಚಿ (Mariner's C, ದಿಕ್ಕನ್ನು ಸೂಚಿಸುವುದಕ್ಕಾಗಿ ಹಡಗಿನಲ್ಲಿ ಅಳವಡಿಸಿರುವ ಉತ್ತರಮುಖಿ : ನೌಕಾ ದಿಕ್‌ಸೂಚಿ). ಎಲ್ಲೆ ; ಪರಿಧಿ ; ಮಿತಿ ; ಮೇರೆ ; ಆವರಣ ; ವಿಸ್ತೀರ್ಣ ; ಅವಕಾಶ ; ಇಂಬು (ರೂಪ., Beyond my c. ನನ್ನಳವಿಗೆ ಮೀರಿ). ಒಂದು ಕಂಠವಾಗಲಿ ವಾದ್ಯವಾಗಲಿ ಹೋಗಬಲ್ಲ ನಾದದ ಪರಮಾವಧಿ. ಬಳಸು ಮಾರ್ಗ. Box the c. (Box[1] ನೋಡಿ). C.-plane ಕುಳಿ ಮೇಲ್ಮೈಗಳನ್ನು (Concave surfaces) ಹತ್ತರಿಹಿಡಿಯುವುದಕ್ಕಾಗಿ ಉಪಯೋಗಿಸುವ ಹೊರಉಬ್ಬಿನ (convex) ತೋಪಡ. C.-saw ವಕ್ರಾಕಾರಗಳನ್ನು ಕೊಯ್ಯಲು ಉಪಯೋಗಿಸುವ ಕಿರಿಯಲಗಿನ ಗರಗಸ : ಮುರಿವು ಗರಗಸ. C. window ಅರ್ಧವರ್ತುಲಾಕಾರದ ಚಾಚುಕಿಟಕಿ.

Cómpass (ಕ್ರಿ. ಸಕ.) ಸುತ್ತು ; ಬಳಸು ; ಪ್ರದಕ್ಷಿಣೆ ಮಾಡು ; ಸುತ್ತುಗಟ್ಟು ; ಆವರಿಸು. (ಬುದ್ಧಿಯಿಂದ) ಗ್ರಹಿಸು ; ಒಳಕೊಳ್ಳು. ಕಲ್ಪಿಸು ; ನಿರ್ಮಿಸು. ನೆರವೇರಿಸು ; ಸಾಧಿಸು ; ಘಟಿಸು ; ಸಂಘಟನೆ ಮಾಡು. **Cómpassable** (ಗು.)

Compássion ಕಂಪ್ಯಾಷನ್ (ನಾ., ಗು.) ಮರುಕ ; ಕನಿಕರ ; ಅನುಕಂಪ ; ಕರುಣೆ ; ದಯೆ. **Compássionate** — ನೆಟ್ (ಗು.), — ನೇಟ್ (ಕ್ರಿ. ಸಕ.) ಸಹಾನುಭೂತಿಯುಳ್ಳ ; ಮರುಗುವ ; ಅನುಕಂಪ ಪಡುವ ; ಕರುಣೆ ತೋರುವ. (ಕ್ರಿ.) ಮರುಗು ; ಕನಿಕರ ಪಡು. **Compássionately** (ಕ್ರಿ. ವಿ.) ; **Compássionateness** (ನಾ.)

Compátible ಕಂಪ್ಯಾಟಿಬ್‌ಲ್ (ಗು.) ಅನುರೂಪ ; ಅವಿರುದ್ಧ ; ಸಂಗತ ; ಯೋಗ್ಯ ; ತಕ್ಕ ; ಹೊಂದಿಕೆಯಾದ ; ಒಪ್ಪುವ ; ಸಹವರ್ತನ ಸಾಧ್ಯ. **Compatibílity** (ನಾ.) ; **Compátibly** (ಕ್ರಿ. ವಿ.)

Compátriot ಕಂಪೇ(ಪ್ಯಾ)ಟ್ರಿಯಟ್ (ನಾ.) ಸ್ವದೇಶಸ್ಥ ; ತಾಯ್ನಾಡಿಗ ; ತವರು ನಾಡಿಗ. **Compatriótic** —ಯಾ— (ಗು.) ಒಂದೇ ದೇಶದ.

Compeér ಕಂಪೀಯರ್ (ನಾ.) ಸಮಾನ ; ಸಮಾನಸ್ಕಂಧ ; ಸಮಾನ ಪದಸ್ಥ ; ಸಂಗಡಿಗ ; ಜೊತೆಯವನು ; ಎಣೆ ; ದೊರೆ (ಗ್ರಾಂ.)

Compél ಕಂಪೆಲ್ (ಕ್ರಿ. ಸಕ.) ಬಲವಂತ ಮಾಡು ; ಬಲಾತ್ಕರಿಸು ; ನಿರ್ಬಂಧಪಡಿಸು ; ಒತ್ತಾಯ ಮಾಡು ; ಕಡ್ಡಾಯ ಮಾಡು ; ಬಲವಂತದಿಂದ ಸಾಧಿಸು, ಮಾಡಿಸು (C. submission ವಶವರ್ತಿಯಾಗುವಂತೆ, ಶರಣಾಗತನಾಗುವಂತೆ, ನಿರ್ಬಂಧಪಡಿಸು). (ಕಾವ್ಯ) ಬಲದಿಂದ ತಳ್ಳು. **Compéllable** (ಗು.) ; **Compúlsion** ಕಂಪಲ್ಷನ್ (ನಾ.) ನಿರ್ಬಂಧ ; ಬಲವಂತ ; ಬಲಾತ್ಕಾರ ; ಒತ್ತಾಯ ; ಕಡ್ಡಾಯ. **Compúlsive** (ಗು.) ; **Compúlsively** (ಕ್ರಿ. ವಿ.) ; **Compúlsory** (ಗು.) ನಿರ್ಬಂಧದ ; ನಿರ್ಬಂಧ ಪಡಿಸುವ. **Compúlsorily** (ಕ್ರಿ. ವಿ.) ; **Compúlsoriness** (ನಾ.)

Cómpend ಕಾಂಪೆಂಡ್ (ನಾ.) = Compendium.

Compéndium ಕಂಪೆಂಡಿಯಂ (ನಾ. ; ಬ. ವ. -iums, -ia) ಸಂಗ್ರಹ ; ಸಂಹಿತೆ ; ಸಾರಾಂಶ ; ಅಡಕ. **Compéndious** (ಗು.) (ಗ್ರಂಥಗಳ ಮತ್ತು ಗ್ರಂಥಕರ್ತರ ವಿಷಯದಲ್ಲಿ) ಸಂಗ್ರಹವಾದ ; ಅಡಕವಾದ. **Compéndiously** (ಕ್ರಿ. ವಿ.) ; **Compéndiousness** (ನಾ.)

Cómpensate ಕಾಂಪೆನ್ಸೇಟ್, **Compénsate** ಕಂಪೆನ್ಸೇಟ್ (ಕ್ರಿ.) ಸರಿದೂಗು ; ಸರಿದೂಗಿಸು ; ಪ್ರತಿಭಾರ ಹಾಕು. ನಷ್ಟ ಕಟ್ಟಿಕೊಡು ; ನಷ್ಟ ಭರ್ತಿಮಾಡು ; ಪರಿಹಾರ ಕೊಡು. ಸಮ ಮಾಡು ; ಸಮವಾಗು. ಪ್ರತಿ ಕೊಡು ; ಈಡು ಕೊಡು ; ಪ್ರತಿಫಲ ಕೊಡು. (ಯಂತ್ರ) (ಗಡಿಯಾರದ ಲೋಲಕ, ಮೊ. ಕ್ಕೆ) ಸಮಕಾರಕವನ್ನೊದಗಿಸು. **Compénsative** (ಗು., ನಾ.) = **Compénsatory** ಕಾಂ —(ಗು.) ; **Cómpensator** (ನಾ.) ಸಮಕಾರಕ. **Compensátion** (ನಾ.) (ಕ್ರಿಯಾರ್ಥಗಳಲ್ಲಿ). ಪ್ರತಿಫಲ ; ಪರಿಹಾರ ; ಈಡು. C.-balance, C.-pendulum (of chronometer) (ವಾಯುಶಾಖ ವ್ಯತ್ಯಾಸದಿಂದ ಕಾಲವ್ಯತ್ಯಾಸ ತೋರಿಸುವುದನ್ನು ತಪ್ಪಿಸುವುದಕ್ಕಾಗಿ ಸೂಕ್ಷ್ಮ ಗಡಿಯಾರಗಳಲ್ಲಿ ಉಪಯೋಗಿಸುವ) ಸಮೀಕೃತ ತುಲಾಚಕ್ರ, ಸಮೀಕೃತ ಲೋಲಕ. **Compensátional** (ಗು.)

Compéte ಕಂಪೀಟ್ (ಕ್ರಿ. ಅಕ.) (ಒಂದು ಕೆಲಸ ಮಾಡುವುದರಲ್ಲಿ, ಒಂದು ವಸ್ತುಸಂಪಾದನೆಗಾಗಿ, ಒಂದು ಗುಣದಲ್ಲಿ, ಮತ್ತೊಬ್ಬನೊಡನೆ) ಸ್ಪರ್ಧಿಸು, ಹುರುಡಿಸು, ಮೇಲಾಡು. **Competítion** ಕಾಂಪಿಟಿಷನ್ (ನಾ.) ಸ್ಪರ್ಧೆ ; ಹುರುಡು ; ಮೇಲಾಟ ; ಪೈಪೋಟಿ ; ಪೋಟಾಪೋಟಿ (ಪರೀಕ್ಷೆಗಳಲ್ಲಿ, ವ್ಯಾಪಾರ, ಮೊ. ಗಳಲ್ಲಿ). **Compétitive** ಕಂಪೆಟಿಟಿವ್ (ಗು.) ಸ್ಪರ್ಧೆಯ ; ಮೇಲಾಟದ ; ಪೈಪೋಟಿಯ. **Compétitively** (ಕ್ರಿ. ವಿ.) ; **Compétitor** (ನಾ.) ಸ್ಪರ್ಧಿ ; ಮೇಲಾಡಿ ; ಹುರುಡಿಗ ; ಪ್ರತಿಸ್ಪರ್ಧಿ. **Compétitory** (ಗು.) ಸ್ಪರ್ಧೆಗೆ, ಸ್ಪರ್ಧಿಗಳಿಗೆ, ಸಂಬಂಧಪಟ್ಟ (= Competitive). **Compétitress** (ನಾ., ಸ್ತ್ರೀ.)

Cómpetent ಕಾಂಪಿಟೆಂಟ್ (ಗು.) ದಕ್ಷ ; ಯೋಗ್ಯ ; ಅರ್ಹ ; ಸಮರ್ಥ ; ತಕ್ಕ. (ನ್ಯಾಯಾಧಿಪತಿ, ನ್ಯಾಯಸ್ಥಾನ, ಸಾಕ್ಷಿ — ಇವರ ವಿಷಯದಲ್ಲಿ) ಅಧಿಕಾರವುಳ್ಳ. (ವಸ್ತುಗಳ ವಿಷಯದಲ್ಲಿ) ಸ್ವಾಧೀನದಲ್ಲಿರುವ ; ತನ್ನ ಹಕ್ಕಿಗೊಳಪಟ್ಟ ; ನ್ಯಾಯಸಮ್ಮತವಾದ. **Cómpetently** (ಕ್ರಿ. ವಿ.) ; **Cómpetence, -cy** (ನಾ.) ಜೀವನಕ್ಕೆ ಸಾಕಾಗುವಷ್ಟು ಉಪಪತ್ತಿ ; ವರಮಾನ ; ಅನುಕೂಲತೆ ; ನೆಮ್ಮದಿ. ಶಕ್ತಿ ; ಸಾಮರ್ಥ್ಯ ; ದಕ್ಷತೆ ; ಯೋಗ್ಯತೆ ; ಅರ್ಹತೆ. (ನ್ಯಾಯಸ್ಥಾನ, ದಂಡಾಧಿಕಾರಿ, ಮೊ. ವಿಷಯದಲ್ಲಿ) ಕಾನೂನಿಗನುಸಾರವಾದ ಅಧಿಕಾರ ; ವಿಚಾರಣಾಧಿಕಾರ.

Competítion, etc. **Compete** ನೋಡಿ.

Compíle ಕಂಪೈಲ್ (ಕ್ರಿ. ಸಕ.) ವಿಷಯಗಳನ್ನು ಶೇಖರಿಸಿ ಒಂದು ಸಂಪುಟ ಮಾಡು ; ಸಂಕಲಿಸು. (ಕ್ರಿಕೆಟ್ ಅಸಂ.) (ಅಷ್ಟು) ಓಟಗಳನ್ನು ಮಾಡು, ಲೆಕ್ಕಕ್ಕೆ ಸೇರಿಸು. **Compilátion** ಕಾಂಪಿಲೇಷನ್ (ನಾ.) ವಿಷಯ ಸಂಗ್ರಹಣ, ಸಂಕಲನ ; (ವಿಷಯ) ಸಂಗ್ರಹ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Complácent ಕಂಪ್ಲೇಸೆಂಟ್ (ಗು.) ಮನಸ್ಸು ತೃಪ್ತಿಹೊಂದಿದ; ಸಮಾಹಿತ; ಸಂತುಷ್ಟ; ಸಂತೃಪ್ತ; ಪ್ರಸನ್ನ. ದಾಕ್ಷಿಣ್ಯಪರನಾದ; ಉಪಚಾರ ಸ್ವಭಾವದ. **Complácently** (ಕ್ರಿ. ವಿ.); **Complácence, -cy** (ನಾ.) ನಿರಾತಂಕ; ನೆಮ್ಮದಿ. ಪ್ರಸನ್ನತೆ; ಮನಸ್ತೃಪ್ತಿ.

Complaín ಕಂಪ್ಲೆಯ್ನ್ (ಕ್ರಿ. ಅಕ.) ಅಸಮಾಧಾನ ಹೇಳು, ಸೂಚಿಸು; ಗೋಳಾಡು; ಗೊಣಗು; ಮೊರೆಯಿಡು; ರೋಗ ಹೇಳಿಕೊ; (ರೋಗ ದಿಂದ) ನರಳು. (ರೂಪ.) ಆರ್ತಧ್ವನಿ ಮಾಡು; (ಚಕ್ರ, ಮೊ.) ಕಿರುಗುಟ್ಟು. (ಅಧಿಕಾರಿಗೆ) ತೊಂದರೆ, ಕೆಡುಕು, ಕಷ್ಟ, ನಷ್ಟ, ಹೇಳಿಕೊ; ದೂರು; ದೋಷಾರೋಪಣೆ ಮಾಡು; ಆಕ್ಷೇಪಣೆ ಮಾಡು; ಆಪಾದಿಸು; ಫಿರ್ಯಾದು ಮಾಡು. **Complaínant** — ನಂಟ್ (ನಾ.) ದೂರು ಹೇಳುವವನು; ಆಪಾದಕ; ಫಿರ್ಯಾದಿ; ವಾದಿ. **Complaínt** (ನಾ.) ಕಷ್ಟ, ನಷ್ಟ, ಮೊ. ನ್ನು ಹೇಳಿಕೊಳ್ಳುವುದು; ಮೊರೆ; ಗೊಣಗಾಟ; ದೂರು; ಫಿರ್ಯಾದು; ದಾವೆ. ರೋಗ; ವ್ಯಾಧಿ; ಬೇನೆ. (ಅಮೆ. ಸಂ.) 'ಸಿವಿಲ್' ವ್ಯಾಜ್ಯದಲ್ಲಿ ವಾದಿಯ ಫಿರ್ಯಾದು. ವ್ಯಾಜ್ಯ ವಿಷಯ, ಕಾರಣ.

Cómplaisance, Complaisánce ಕಾಂಪ್ಲೆಝಾನ್ಸ್ (ನಾ.) ಉಪಚಾರ; ಆದರ; ದಾಕ್ಷಿಣ್ಯ; ಮರ್ಯಾದೆ. **Cómplaisant, Complaisánt** (ಗು.)

Cómplement ಕಾಂಪ್ಲಿಮೆಂಟ್ (ನಾ.) ಪೂರ್ತಿಮಾಡತಕ್ಕದ್ದು; ಪೂರಕ; ಪರಿಪೂರಕ; ಪೂರಣ; ಭರಣ; ತುಂಬು; ನೆರತೆ. (ವ್ಯಾ.) ಕ್ರಿಯಾರ್ಥ ಪೂರಕ. (ಹಡಗು, ಇತರ ಯಾನ, ಮೊ. ನ್ನು) ಭರ್ತಿ ಮಾಡಲು ಬೇಕಾಗುವ ಒಟ್ಟು ಮಂದಿ; ಭರ್ತಿ. (ಗಣಿತ) C. of an angle ಸಮಕೋನ ಪೂರಕ: ಅನುಪೂರಕ (Supplement of an angle ವೃತ್ತಾರ್ಧಕೋನ ಪೂರಕ: ಸಂಪೂರಕ). C. of an arc ಸಮಕೋನ ಧನುಃಪೂರಕ: ಕೋಟಿ. **Complementál** (ಗು.) ಪೂರಕದ (= Complementary). **Compleméntally** (ಕ್ರಿ. ವಿ.); **Compleméntary** (ಗು.) ಪೂರ್ತಿಮಾಡುವ; ಪೂರಕ; ಅನುಪೂರಕ.

Cómplement (ಕ್ರಿ. ಸಕ.) ಪೂರ್ತಿಮಾಡು; ಅನುಪೂರಕ ವಾಗಿರು.

Compléte ಕಂಪ್ಲೀಟ್ (ಗು.), ಕಾಂಪ್ಲೀಟ್ (ಕ್ರಿ. ಸಕ.) ಸಂಪೂರ್ಣವಾದ; ಸಮಗ್ರವಾದ; ಸಾಂಗವಾದ; ಪೂರ್ತಿಯಾದ; ಪೂರಯಿಸಿದ; ನೆರೆದ; ಕೊನೆಗಂಡ; ಮುಗಿದ; ಸಮಾಪ್ತ; ಪೂರ; ತೀರ. (ಮನುಷ್ಯರ ವಿಷಯದಲ್ಲಿ, ಪ್ರಾಚೀ. ಪ್ರ.) ಪ್ರವೀಣ (C. horseman ಪ್ರವೀಣ ಕುದುರೆಸವಾರ). (ಕ್ರಿ.) ಮುಗಿಸು; ತೀರಿಸು; ಪೂರ್ತಿಮಾಡು; ಪೂರಯಿಸು; ಪೂರ್ಣಗೊಳಿಸು; ಕೊನೆಮುಟ್ಟಿಸು; ಸಾಂಗವಾಗಿಸು; ನೆರವೇರಿಸು; ಸಾಧಿಸು. ಭರ್ತಿಮಾಡು. **Complétely** (ಕ್ರಿ. ವಿ.); **Compléteness** (ನಾ.); **Complétion** (ನಾ.); **Complétive** (ಗು.) ಮುಗಿಸುವ; ಪೂರ್ತಿಮಾಡುವ.

Cómplex ಕಾಂಪ್ಲೆಕ್ಸ್ (ಗು.) (ಅನೇಕ) ಭಾಗಗಳುಳ್ಳ; ಸಂಕೀರ್ಣ; ಸಂಮಿಶ್ರಿತ (C. sentence ಅಧೀನ ವಾಕ್ಯಭಾಗಗಳುಳ್ಳ ವಾಕ್ಯ: ಮಿಶ್ರ ವಾಕ್ಯ). ತೊಡಕಾದ; ಗೋಜಿನ; ತೊಡರಿಕೊಂಡ; ಜಟಿಲ. **Cómplexly** (ಕ್ರಿ. ವಿ.); **Compléxity** ಕಂ — (ನಾ.)

Cómplex (ನಾ.) ಸಂಬಂಧಿವಸ್ತುಗಳು ಅನೇಕ ಕೂಡಿ ಆದ ಒಟ್ಟು; ಸಂಕೀರ್ಣ; ಸಂಮಿಶ್ರಣ; ತೊಡರು (C. of causes ಕಾರಣ ಜಾಲ). (ಮ. ಶಾ.) ನಿರೋಧಿಸಲ್ಪಟ್ಟ ಮನಃಪ್ರವೃತ್ತಿಗಳಿಂದ, ಕೆಲವು ಅನುಭವಗಳಿಂದ, ಕೆರಳಿದ ಮನೋವಿಕಾರಗಳು: ಮಾನಸಿಕ ಗ್ರಂಥಿ. (ರೂಢಿಯಲ್ಲಿ) ಒಂದು ತೆರನಾದ ಮನಃಪ್ರವೃತ್ತಿ, ಮನಃಪೀಡನೆ. (Inferiority c. ಕೀಳ್ತರದವನೆಂಬ ಮನೋಭಾವನೆ: ನೈಚ್ಯ ಭಾವ)

Compléxion ಕಂಪ್ಲೆಕ್ಷನ್ (ನಾ.) (ದೇಹದ, ಮು., ಮುಖದ) ರೂಪು, ಬಣ್ಣ; ಮುಖಚ್ಛಾಯೆ. (ರೂಪ.) ಸ್ವರೂಪ; ಲಕ್ಷಣ; ಭಾವ; ತೋರ್ಕೆ (His conduct wears another c. ಅವನ ನಡತೆಯ ಬಣ್ಣ ಬದಲಾಯಿಸಿದೆ). **Compléxioned** (ಗು.); **Compléxionless** (ಗು.)

Complíance, etc. Comply ನೋಡಿ.

Cómplicate ಕಾಂಪ್ಲಿಕೇಟ್ (ಕ್ರಿ. ಸಕ.) (ಇತರ ವಸ್ತುಗಳೊಡನೆ) ಬೆರಸು, ಕಲಸು, ಸಂಮಿಶ್ರ ಮಾಡು, ಸಂಕೀರ್ಣ ಮಾಡು, ತೊಡಕಾಗಿಸು; ತೊಡರಿಸು; ಜಟಿಲ ಮಾಡು; ಸಿಕ್ಕುಬೀಳಿಸು; ಗೋಜು ಮಾಡು. **Complicátion** (ನಾ.) ತೊಡಕು; ಗೋಜು; ಸಿಕ್ಕು; ಜಟಿಲತೆ. **Cómplicacy** — ಕಸಿ (ನಾ.) ತೊಡಕು; ತೊಡಕಿನ ರಚನೆ.

Complícity ಕಂಪ್ಲಿಸಿಟಿ (ನಾ.) ಒಂದು ಅಕಾರ್ಯದಲ್ಲಿ ಭಾಗವಹಿಸುವುದು, ಭಾಗಿಯಾಗುವುದು, ಭಾಗಿತ್ವ.

Cómpliment ಕಾಂಪ್ಲಿಮೆಂಟ್ (ನಾ., ಕ್ರಿ. ಸಕ.) ಉಪಚಾರ ಹೇಳುವುದು; ಉಪಚಾರೋಕ್ತಿ; ಅಭಿನಂದನ; ಮೆಚ್ಚಿಕೆ; ಶ್ಲಾಘನೆ (Pay, make, a c. ಮೆಚ್ಚಿಗೆ ಕೊಡು, ಹೇಳು). (ಬ. ವ. ದಲ್ಲಿ) ವಂದನೆ; ನಮಸ್ಕಾರ; ವಿಶ್ವಾಸ; ಮರ್ಯಾದೆ (Make, pay, send, one's compliments ವಂದನೆ ಮಾಡು; ನಮಸ್ಕಾರ, ವಿಶ್ವಾಸ, ಹೇಳು, ಕಳುಹಿಸು). (ಪ್ರಾಚೀ. ಪ್ರ.) ಕೊಡುಗೆ; ಬಹುಮಾನ. (ಕ್ರಿ.) ಅಭಿನಂದಿಸು; ಮೆಚ್ಚಿಕೆ ಹೇಳು; ಶ್ಲಾಘಿಸು; ಗೌರವ ಕೊಡು; ಗೌರವಾರ್ಥವಾಗಿ ಕೊಡು. **Compliméntary** (ಗು.)

Complý ಕಂಪ್ಲೈ (ಕ್ರಿ. ಅಕ.) (ಅಭಿಪ್ರಾಯ, ಆಜ್ಞೆ, ಮೊ. ಗಳಂತೆ) ನಡೆ; ವರ್ತಿಸು; ಒಮ್ಮು (ಗ್ರಾಂ.); ಇಷ್ಟಪೂರ್ತಿ ಮಾಡು; ಕೋರಿಕೆಯನ್ನು ನೆರವೇರಿಸು, ತೀರಿಸು, ನಡಸು. **Complíance** — ಅನ್ಸ್ (ನಾ.) (ಕ್ರಿಯಾರ್ಥಗಳಲ್ಲಿ). ಅನುಸರಣೆ (In c. with ಅನುಸಾರವಾಗಿ, ಮೇರೆಗೆ). ತುಚ್ಛಾನುವರ್ತನೆ; ಅಡಿಯಾಳುತನ. **Complíant** (ಗು.) ಇಷ್ಟ ನಡಸುವ; ಅನುವರ್ತನಶೀಲ; ನಮ್ರ; ಆಜ್ಞಾನುವರ್ತಿ; ವಿನೇಯ. **Complíantly** (ಕ್ರಿ. ವಿ.)

Cómpo ಕಾಂಪೊ (ನಾ.; ಬ. ವ. -os; Composition ಪದದ ಸಂಕ್ಷಿಪ್ತ) (ಮು.,) ನಯಗಾರೆ; ಮೆತ್ತಿಗೆ; ಅಂಟುಪುಡಿ; ಅಂಟುಲೇಪ.

Compónent ಕಂಪೋನೆಂಟ್ (ಗು., ನಾ.) ಅಂಗಭೂತ; ಅಂಗ ಭಾಗ; ಅಂಗ; ಅಂಶ; ಅವಯವ; ಪಾಲು; ಘಟಕ.

Compórt ಕಂಪೋರ್ಟ್ (ಕ್ರಿ.) ನಡೆದುಕೊ; ವರ್ತಿಸು. C. with ಒಪ್ಪು; ಹೊಂದು; ತಕ್ಕದ್ದಾಗಿರು; ಉಚಿತವಾಗಿರು; ಸಂಗತವಾಗು; ಸರಿಬೀಳು.

Compóse ಕಂಪೋಸ್ (ಕ್ರಿ. ಸಕ.) (ಮೂಲ ಧಾತುಗಳು) ಸೇರಿರು, ಕೂಡಿರು, ಘಟಿತವಾಗಿರು; ಕೂಡಿ ಆಗಿರು; ರಚಿತವಾಗಿರು. (ಕಾವ್ಯ, ಮೊ. ನ್ನು) ರಚಿಸು; ಕಲ್ಪಿಸು; ನಿರ್ಮಿಸು; ಕಟ್ಟು. (ಸಂ.) ಹಾಡು ಕಟ್ಟು; (ಮಾತುಗಳನ್ನು) ಸಂಗೀತಕ್ಕೆ ತಿರುಗಿಸು. (ಮುದ್ರಣ) (ಮಾತುಗಳಾಗುವಂತೆ, ರೇಖನವಾಗುವಂತೆ) ಮೊಳೆಜೋಡಿಸು. ಅಂದವಾಗಿ ಜೋಡಿಸು, ಕೂಡಿಸು. (ವ್ಯಾಜ್ಯ, ಮೊ. ನ್ನು) ಬಗೆಹರಿಸು, ತೀರಿಸು, ಸರಿಪಡಿಸು, ಸಮಾಧಾನ ಮಾಡು. ಸಮಾಧಾನಕ್ಕೆ, ಸ್ತಿಮಿತಕ್ಕೆ, ತಂದುಕೊ; ಸಮಾಹಿತನಾಗು; ಅಳವಡಿಸಿಕೊ; ಸವರಿಸಿಕೊ; ತಿಳಿ; ತಣಿ (C. yourself). (C. your thoughts for action ಕಾರ್ಯ ನಡಸುವುದಕ್ಕೆ ಯೋಚನೆಯನ್ನು ಅಳವಡಿಸಿಕೊ). **Compósedly** — ಸ್ಡ್ಲಿ (ಕ್ರಿ. ವಿ.); **Compósedness** (ನಾ.); **Compóser** (ನಾ.) ರಚನಕಾರ (ಸಾ., ಸಂಗೀತ —). **Compósing** (ನಾ.) (ಕ್ರಿಯಾರ್ಥಗಳಲ್ಲಿ). C.-machine ಮುದ್ರಣದ ಮೊಳೆಜೋಡಿಸುವ ಯಂತ್ರ. C.-stick ಮುದ್ರಣದ ಮೊಳೆಜೋಡಿಸುವಲ್ಲಿ ಉಪಯೋಗಿಸುವ, ಅಗಲವನ್ನು ಅಳವಡಿಸಿಕೊಳ್ಳರಾಗುವ, ತಗಡಿನ ತಟ್ಟೆ: ಮೊಳೆ ಹಿಡಿಕೆ. **Cómposite** ಕಾಂಪೊಸಿ(ಸೈ)ಟ್ (ಗು., ನಾ.) ಅನೇಕ ಭಾಗಗಳು ಕೂಡಿ ಆದ (ವಸ್ತು); ಸಂಘಟಿತ (ವಸ್ತು); ಕಲಬೆರಕೆಯ (ವಸ್ತು). (ವಾ. ಶಾ.) ಅಯೋನಿಯನ್ ಮತ್ತು ಕೊರಿಂಥಿಯನ್ ಪದ್ಧತಿಗಳ ಸಂಕೀರ್ಣ. (ಸ. ವಿ.) ಚೆಂಡುಹೂವಿನ ವರ್ಗದ (ಇದರಲ್ಲಿ ಒಂದು ಹೂವೆಂಬುದು ಅನೇಕ ಹೂವುಗಳ ಗೊಂಡೆ); ಸಂಕೀರ್ಣ ಪುಷ್ಪಿ. (ನಾವೆ) ಮರವನ್ನೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಬ್ಬಿಣವನ್ನೂ ಸೇರಿಸಿ ಕಟ್ಟಿರುವ. C. (railway) carriage ಬೇರೆಬೇರೆ ತರಗತಿಗಳ ಕೋಣೆಗಳುಳ್ಳ ರೈಲುಗಾಡಿ. **Cómpositely** (ಕ್ರಿ. ವಿ.); **Cómpositeness** (ನಾ.); **Composítion** (ನಾ.) ರಚನೆ; ಸಂಯೋಜನ; ಸಂಯೋಗ; ಘಟನೆ. ಸಮಾಸ (ರಚನೆ); ವಾಕ್ಯ (ರಚನೆ); ಪ್ರಬಂಧ (ರಚನೆ); ಕಾವ್ಯ (ರಚನೆ); ಗ್ರಂಥ (ರಚನೆ); ಗೀತ (ರಚನೆ); ಹಾಡು (ಕಟ್ಟುವುದು). (ಮುದ್ರಣದ) ಮೊಳೆ ಜೋಡಿಸುವುದು. ಮನಃಪ್ರಕೃತಿ; ಸ್ವಭಾವ (A touch of madness in his c. ಅವನ ಪ್ರಕೃತಿಯಲ್ಲಿ ಸ್ವಲ್ಪ ಭ್ರಮಣೆ). ಮಿಶ್ರಣ. ರಾಜಿ; ಒಪ್ಪಿಗೆ; ಯುದ್ಧನಿಲ್ಲಿಸಲು ಮಾಡಿಕೊಂಡ ಒಪ್ಪಂದ, ಒಡಂಬಡಿಕೆ, ಸಂಧಿ. ನೈಜ ಪದಾರ್ಥಕ್ಕೆ ಬದಲಾಗಿ, ಅದೇ ಕೆಲಸವನ್ನು ನಡಸಲಾಗುವಂತೆ, ಇತರ ಪದಾರ್ಥಗಳ ಮಿಶ್ರಣದಿಂದ ಮಾಡಿದ ವಸ್ತು (C. billiard-balls ದಂತಕ್ಕೆ ಬದಲಾಗಿ ಇತರ ಪದಾರ್ಥಗಳ ಮಿಶ್ರಣದಿಂದ ಮಾಡಿದ ಬಿಲಿಯರ್ಡ್ಸ್ ಚೆಂಡುಗಳು). ಕೊಡಬೇಕಾದ ಹಣಕ್ಕಾಗಿ ಕಡಮೆ ಮೊತ್ತದ ಹಣವನ್ನು ಕೊಟ್ಟು, ಅಥವಾ ಇತರ ರಿಯಾಯಿತಿಯಿಂದ, ಮಾಡಿಕೊಂಡ ಒಪ್ಪಂದ: ರಿಯಾಯಿತಿ ಒಪ್ಪಂದ (Make a c. with creditors ನೋಡಿ ಬಡಿಸಿಕೊಂಡು ಸಾಲ ತೀರಿಸು). **Compósitive** ಕಂಪಾಸಿಟಿವ್ (ಗು.) ಒಟ್ಟುಗೂಡುವ; ಸಂಯೋಜನದ; ಸಂಮಿಶ್ರ; ಸಂಘಟಿತ. ಹಲವು ಪದಾರ್ಥಗಳನ್ನು ಸೇರಿಸಿ (ನೈಜ ಪದಾರ್ಥದಂತೆ) ಮಾಡಿದ. **Compósitor** (ನಾ.) ಮುದ್ರಣಾಕ್ಷರ ಯೋಜಕ; ಅಚ್ಚು ಮೊಳೆ ಜೋಡಿಸುವವನು. **Compósure** ಕಂಪೋಷರ್ (ನಾ.) ಶಾಂತಿ; ಶಾಂತತೆ; ಚಿತ್ತಸ್ವಾಸ್ಥ್ಯ; ಮನಸ್ಸಮಾಧಾನ. ತಿಳಿತ; ತಣ್ಪು; ತಣಿತ.

Cómpos (méntis) (L) ಕಾಂಪಾಸ್ (ಮೆಂಟಿಸ್) (ಗು.) ಸ್ವಸ್ಥ ಬುದ್ಧಿಯ; ಬುದ್ಧಿಸ್ವಾಧೀನವುಳ್ಳ. Non-c. ಬುದ್ಧಿಸ್ವಾಸ್ಥ್ಯವಿಲ್ಲದ.

Compóssible ಕಂಪಾಸಿಬ್ಲ್ (ಗು.) ಒಟ್ಟಿಗಿರಲು ಸಾಧ್ಯವಾದ.

Cómpost ಕಾಂಪಸ್ಟ್ (ನಾ., ಕ್ರಿ. ಸಕ.) ಮಿಶ್ರಣ; ಸಂಯುಕ್ತ ವಸ್ತು. ಪದಾರ್ಥಗಳ ಸಂಯೋಜನದಿಂದ ಮಾಡಿದ ಗೊಬ್ಬರ; (ತಕ್ಕ ಪದಾರ್ಥಗಳನ್ನು ಬೆರಸಿ ಮಾಡಿದ) ಕೃತಕ ಗೊಬ್ಬರ. (ಕ್ರಿ.) ಕೃತಕ ಗೊಬ್ಬರ ಮಾಡು; — ಹಾಕು.

Compósure. Compose ನೋಡಿ.

Compotátion ಕಾಂಪೊಟೇಷನ್ (ನಾ.) ಒಟ್ಟಿಗೆ ಮದ್ಯಕುಡಿಯುವುದು; ಸಹಪಾನ; ಜೊತೆಕುಡಿತ. **Cómpotator** (ನಾ.)

Cómpote ಕಾಂಪೋಟ್ (ನಾ.) ಸಕ್ಕರೆಪಾಕದಲ್ಲಿ (ಷರಬತ್ತಿನಲ್ಲಿ) ಹಾಕಿಟ್ಟ ಹಣ್ಣು; ಹಣ್ಣುಮುರಬ್ಬ.

Compoúnd[1] ಕಂಪೌಂಡ್ (ಕ್ರಿ.) ಬೆರಸು; ಮಿಶ್ರಣ ಮಾಡು; ಸಂಯುಕ್ತವಾಗಿಸು; ಸಂಯೋಗ ಮಾಡು (ರೂಪ. ಸಹ). ಪದಗಳನ್ನು ಜೋಡಿಸು; ಸಮಾಸ ಮಾಡು. ಒಟ್ಟುಸೇರಿಸಿ ತಯಾರಿಸು. (ಸಾಲವನ್ನು ಒಂದು ಭಾಗ ಕೊಟ್ಟು, ಕ್ಲುಪ್ತಕಾಲಗಳ ಚಂದಾಹಣವನ್ನು ಒಟ್ಟುಮೊತ್ತವಾಗಿ ಕೊಟ್ಟು, ಮೊ., ಗಿ) ಪರಸ್ಪರ ಒಪ್ಪಿಗೆಯಿಂದ ಬಗೆಹರಿಸು; ಒಡಂಬಡು; ಒಡಂಬಡಿಸು. (ತೆರಬೇಕಾದುದನ್ನು, ತಪ್ಪಿತವನ್ನು) ಹಣ, ಮೊ. ನ್ನು ಪಡೆದು, ಕೊಟ್ಟು, ಪರಿಹಾರ ಮಾಡು, ಮಾಡಿಕೊ (C. a felony ಪರಿಹಾರ ಪಡೆದು ತಕ್ಸೀರನ್ನು ಕ್ರಮಜರುಗಿನದೆ ಬಿಟ್ಟುಬಿಡು). (ಹಕ್ಕು, ಮೊ. ನ್ನು ತ್ಯಜಿಸಿಬಿಡುವುದಕ್ಕಾಗಿ, ದೋಷಮೋಚನೆಗಾಗಿ) ಒಪ್ಪಂದ ಮಾಡಿಕೊ, ಕರಾರು ಮಾಡಿಕೊ. **Compoúndable** (ಗು.)

Cómpound ಕಾಂಪೌಂಡ್ (ಗು., ನಾ.) ಅನೇಕ ಪದಾರ್ಥಗಳು ಕೂಡಿ ಆದ; ಅನೇಕ ಭಾಗಗಳುಳ್ಳ; ಒಟ್ಟುಗೂಡಿದ; ಒಟ್ಟಾದ; ಸಮಸ್ತ; ಸಂಯುಕ್ತ (C. fracture ಎಲುಬು ಮುರಿದಿರುವುದು ಮಾತ್ರವಲ್ಲದೆ ಇತರ ಅಂಗಭಾಗಗಳೂ ಹರಿದು ಗಾಯವಾಗಿರುವುದು). (ಪ್ರಾ. ವಿ., ಸ. ವಿ.) ಅನೇಕ ಸೂಕ್ಷ್ಮಜೀವಿಗಳ ಕೂಟವುಳ್ಳ; ಸಮಾನವಾದ ಅನೇಕ ಲಘುಭಾಗಗಳಿಂದ ಕೂಡಿದ; ಅನೇಕಾಂಗ ಘಟಿತ (C. animal, C. flower). (ನಾ.) ಮೂಲಧಾತುಗಳ ಸಂಯೋಜನ; ಸಂಯುಕ್ತ; ಸಂಯುಕ್ತ ವಸ್ತು. ಸಮಾಸ ಪದ. C. addition, subtraction ಮಿಶ್ರ ಸಂಕಲನ, ವ್ಯವಕಲನ. C. interest ಚಕ್ರಬಡ್ಡಿ. C. householder ತೆರಿಗೆ, ಮೊ. ನ್ನು ಸ್ವೊತ್ತುಕರ್ತನೇ ಸಲ್ಲಿಸುವುದಾಗಿ ಒಪ್ಪಂದ ಮಾಡಿಕೊಂಡು ತಕ್ಕ ಬಾಡಿಗೆಹಾಕಿರುವ ಮನೆಯ ಬಾಡಿಗೆದಾರ.

Cómpound[2] ಕಾಂಪೌಂಡ್ (ನಾ.) ಒಂದು ಕಟ್ಟಡದ ಸುತ್ತಲೂ ಇರುವ ಆವರಣ; ಬಯಲು. ಪೌಳಿ.

Compradór ಕಾಂಪ್ರಡೋರ್ (ನಾ.) (ಚೀನಾದಲ್ಲಿ) ಯೂರೋಪಿಯನ್ನರ ವ್ಯಾಪಾರದಂಗಡಿಗಳಲ್ಲಿಯ ದೇಶೀಯ ಮುಖ್ಯಸೇವಕ.

Comprehénd ಕಾಂಪ್ರಿಹೆಂಡ್ (ಕ್ರಿ. ಸಕ.) ಗ್ರಹಿಸು; ತಿಳಿ; ಮನಸ್ಸಿಗೆ ಹಿಡಿ; ಒಣರು (ಗ್ರಾಂ.). ಅಡಕಮಾಡಿಕೊ; ಸೇರಿಸಿಕೊ; ಒಳಕೊಳ್ಳು. **Comprehénsible** (ಗು.) ಗ್ರಹಿಸಬಹುದಾದ; ಗ್ರಾಹ್ಯ; ತಿಳಿಯಬಹುದಾದ; ಒಳಕೊಳ್ಳಬಹುದಾದ; ಅಡಗಿಸಿಕೊಳ್ಳಬಹುದಾದ. **Comprehensibílity** (ನಾ.); **Comprehénsibly** (ಕ್ರಿ. ವಿ.); **Comprehénsion** (ನಾ.) ಗ್ರಹಿಸುವುದು; ಗ್ರಹಣ; ಗ್ರಹಿಕೆ; ಒಳಕೊಳ್ಳುವ ಶಕ್ತಿ; ವ್ಯಾಪ್ತಿ (A term of wide c. ವಿಸ್ತಾರವ್ಯಾಪ್ತಿಯ ಪದ). (ಮು., ಮತವಿಷಯ) ಭಿನ್ನಾಭಿಪ್ರಾಯಗಳ ಸಹಿಷ್ಣುತೆ, ಸಹನೆ. **Comprehénsive** (ಗು.) ಗ್ರಹಿಸತಕ್ಕ, ಗ್ರಹಿಸಬಲ್ಲ; ಗ್ರಾಹಕ (C. faculty ಗ್ರಾಹಕ ಶಕ್ತಿ); ಹೆಚ್ಚು ಒಳಕೊಳ್ಳುವ; ವ್ಯಾಪಕ (C. term) (ರೂಪ. ಸಹ). **Comprehénsively** (ಕ್ರಿ. ವಿ.); **Comprehénsiveness** (ನಾ.)

Compréss ಕಂಪ್ರೆಸ್ (ಕ್ರಿ. ಸಕ.) ಒತ್ತಿ ಅಡಕಮಾಡು; ಒತ್ತಿಕ್ಕು; ಕುಗ್ಗಿಸು; ಸಂಕುಚಿಸು. **Compréssible** (ಗು.) ಕುಗ್ಗಿಸಲಾಗುವ. **Compressibílity** (ನಾ.) (ಭೌ. ವಿ.) ಒಂದು ಅನಿಲ ಮೊ. ಗಳ ಗಾತ್ರವನ್ನು ದ್ರವ್ಯಕಡಮೆಯಾಗದಂತೆ ಸಂಕುಚಿಸಲಾಗುವ ಗುಣ; ಸಂಕೋಚ್ಯತೆ. **Compréssive** (ಗು.) ಸಂಕೋಚಶೀಲ. **Compréssion** (ನಾ.) ಸಂಕೋಚನೆ; ಸಂಪೀಡನೆ; ಅಡಕ (ರೂಪ. ಸಹ). **Compréssor** (ನಾ.) ಸಂಕುಚಿಸುವವನು, — ವದು; ಸಂಕೋಚಕ. (ಅಂ. ರ. ಶಾ.) ಒಂದು ಅಂಗಭಾಗವನ್ನು ಸಂಕುಚಿಸುವ ಸ್ನಾಯು: ಸಂಕೋಚಕ ಸ್ನಾಯು. (ಶಸ್ತ್ರ ಚಿಕಿತ್ಸೆ) ನರ, ಅಪಧಮನಿ, ನಾಳಗಳು, ಮೊ. ನ್ನು ಸಂಕುಚಿಸಲು ಉಪಯೋಗಿಸುವ ಸಾಧನ. ವಾಯುವನ್ನು ಸಂಕುಚಿಸಲು ಉಪಯೋಗಿಸುವ ಯಂತ್ರ: ವಾಯು ಸಂಕೋಚಕ.

Cómpress ಕಾಂಪ್ರೆಸ್ (ನಾ.) ಅಪಧಮನಿ, ಮೊ. ನ್ನು ಸಂಕುಚಿಸುವುದಕ್ಕಾಗಿ ಉಪಯೋಗಿಸುವ ಬಟ್ಟೆಯ ಮೆತುವಾದ ಮೆತ್ತೆ: ಒತ್ತುಕಟ್ಟು. ಊತವನ್ನಿಳಿಸುವುದಕ್ಕಾಗಿ ಕಟ್ಟುವ ಒದ್ದೆಬಟ್ಟೆಯನ್ನೊಳಕೊಂಡ ನೀರಿಳಿಯದ ಆವರಣವುಳ್ಳ ಕಟ್ಟು: ಒದ್ದೆಕಟ್ಟು.

Comprīse ಕಂಪ್ರೈಸ್ (ಕ್ರಿ. ಸಕ.) ಒಳಕೊಳ್ಳು; ಅಡಕಮಾಡಿಕೊ; ಗರ್ಭೀಕರಿಸು; ಅಂತರ್ಗತ ಮಾಡಿಕೊ; ಉಳ್ಳದ್ದಾಗಿರು. **Comprísable** (ಗು.)

Cómpromise ಕಾಂಪ್ರೊಮೈಸ್ (ನಾ., ಕ್ರಿ.) ಪರಸ್ಪರ ಅಂಗೀಕಾರದಿಂದ ಒಂದು ವ್ಯವಹಾರವನ್ನು ಬಗೆಹರಿಸು(ವುದು). ಸಮಾಧಾನ ಮಾಡಿಕೊಳ್ಳು(ವುದು); ರಾಜಿಯಾಗು(ವುದು); ಒಪ್ಪಂದ; ರಾಜಿ. ಭಿನ್ನಾಭಿಪ್ರಾಯಗಳು, ಭಿನ್ನ ಮಾರ್ಗಗಳು, ಮೊ. ನ್ನು ತಕ್ಕಂತೆ ಮಾರ್ಪಡಿಸಿ ಏಕಮಾರ್ಗಕ್ಕೆ ತರು(ವುದು); ಹೊಂದಿಕೆ (ಮಾಡು); ಸಮನ್ವಯ (ಮಾಡು). ಅವಿವೇಕ ಕಾರ್ಯದಿಂದ ಸಂಶಯಕ್ಕೆ ಈಡಾಗಿಸು, ಈಡಾಗು; ಸಂಶಯಾಸ್ಪದನಾಗು, —ನಾಗಿಸು; ಭಂಗ ತರು.

Comprovíncial ಕಾಂಪ್ರೊವಿನ್ಷಲ್ (ಗು., ನಾ.) ಒಂದೇ ಪ್ರಾಂತದ (ವನು) (ಮು., ಬಿಷಪ್ ಗುರು)

Comptómeter ಕಾಂಪ್ಟಾಮಿಟರ್ (ನಾ.) ಗಣನ ಯಂತ್ರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Comptróller ಕಂಟ್ರೋಲರ್ (ನಾ.) (Controller ಪದದ ತಪ್ಪುರೂಪ. ಕೆಲವು ಸರ್ಕಾರಿ ಹುದ್ದೆಗಳ ಹೆಸರಿನಲ್ಲ ಈಗಲೂ ಉಪಯೋಗದಲ್ಲಿದೆ. ಉದಾ., C. of accounts)

Compúlsion, etc. **Compel** ನೋಡಿ.

Compúnction ಕಂಪಂಕ್‌ಷನ್ (ನಾ.) ಮನದಳುಕು ; ಮನದ ಕೊರೆತ ; ಪಶ್ಚಾತ್ತಾಪ ; ಅನುತಾಪ (Without c. ಅಳುಕದೆ). **Compúnctious** (ಗು.) ಅಳುಕುವ. **Compúnctiously** (ಕ್ರಿ. ವಿ.)

Compurgátion ಕಾಂಪರ್ಗೇಷನ್ (ನಾ.) ಒಂದು ಅಪಾದನೆಯಿಂದ ವಿಮೋಚನೆ ಪಡೆಯುವುದು : ದೋಷ ವಿಮೋಚನೆ. **Cómpurgator** — ಗೇಟರ್, **Compúrgator** ಕಂಪರ್ಗಟರ್ (ನಾ.) ಅಪಾದಿತನು ನಿರ್ದೋಷಿಯೆಂದು ಪ್ರಮಾಣಮಾಡುವ ಸಾಕ್ಷಿ. **Compúrgatory** (ಗು.)

Compúte ಕಂಪ್ಯೂಟ್ (ಕ್ರಿ. ಸಕ.) (ಸಂಖ್ಯೆ ಅಥವಾ ಮೊತ್ತವನ್ನು) ಗಣಿಸು, ಎಣಿಸು ; ಲೆಕ್ಕಮಾಡು ; ಲೆಕ್ಕಹಾಕು ; ಎಣಿಕೆ ಮಾಡು. **Compútable** ಕಂಪ್ಯೂಟಬ್‌ಲ್, **Cómputable** ಕಾಂಪ್ಯು — (ಗು.) ; **Compútative** ಕಂಪ್ಯೂ —, **Cóm—** ಕಾಂಪ್ಯುಟೇ — (ಗು.) ; **Computátion** (ನಾ.) ಗಣನೆ ; ಎಣಿಕೆ.

Cómrade ಕಾಮ್‌ರೆಡ್ (ನಾ.) ಸಹವಾಸಿ ; ಸಂಗಾತಿ ; ಸಂಗಡಿಗ ; ಜೊತೆಗಾರ ; ಒಡನಾಡಿ ; ಗೆಳೆಯ. **Cómradeship** (ನಾ.) ಸಹವಾಸಿತನ ; ಸಹವಾಸ ; ಗೆಳೆತನ.

Cómtism ಕಾಮ್(ನ್)ಟಿಸ್ಮ್ (ನಾ.) ಪ್ರತ್ಯಕ್ಷಾನುಭವಕ್ಕೆ ಗೋಚರವಾಗತಕ್ಕವುಗಳೇ ಸತ್ಯವೆಂದು ಹೇಳುವ ವಾದ : ಪ್ರತ್ಯಕ್ಷ ಸತ್ಯತಾವಾದ (= Positivism). **Cómtist** (ನಾ.). (Auguste Comte ಎಂಬ ತತ್ತ್ವಜ್ಞಾನಿಯ ಹೆಸರಿನಿಂದ)

Con¹ ಕಾನ್ (ಕ್ರಿ. ಸಕ.) ವ್ಯಾಸಂಗ ಮಾಡು ; ಅಧ್ಯಯನ ಮಾಡು ; ಬಾಯಿಪಾಠ ಮಾಡು.

Con², Conne, Cun ಕಾನ್, ಕನ್ (ಕ್ರಿ. ಸಕ.) ಹಡಗಿನ ನಡೆಯನ್ನು ನಿರ್ದೇಶಿಸು (ರೂಪ. ಸಹ). Conning-tower ಯುದ್ಧದ ಹಡಗಿನ ನಿಯಂತ್ರವಿನ ಗುಂಡುತೂರದ ಗೋಪುರ.

Con³ ಕಾನ್. **Contra** ನೋಡಿ.

Con⁴ ಕಾನ್ (ನಾ., ಕ್ರಿ. ಸಕ.) (ಅಮೆ. ಸಂ.) ನಂಬಿಕೆ (C. game ನಂಬಿಸಿ ಮೋಸಮಾಡುವುದು). (ಕ್ರಿ.) ಮೋಸಮಾಡು ; ವಂಚಿಸು.

Con amóre (It.) ಕಾನ್ ಅಮೋರಿ (ಕ್ರಿ. ವಿ.) ಉತ್ಸಾಹದೊಡನೆ ; ಸಂತೋಷದಿಂದ ; ಶ್ರದ್ಧೆಯಿಂದ.

Conátion ಕೊನೇಷನ್ (ನಾ.) (ತತ್ತ್ವಶಾಸ್ತ್ರ) ಇಚ್ಛಾಶಕ್ತಿ ; ಸಂಕಲ್ಪ ಶಕ್ತಿ. **Cónative** ಕೋ(ಕಾ)ನಟಿವ್ (ಗು.) ಸಂಕಲ್ಪಪೂರ್ವಕ ; ಪ್ರಾವೃತ್ತಿಕ ; ಪ್ರಯತ್ನಾತ್ಮಕ.

Concátenate ಕಾನ್‌ಕ್ಯಾಟಿನೇಟ್ (ಕ್ರಿ. ಸಕ.) ಒಟ್ಟಿಗೆ ಕೊಂಡಿಗೂಡಿಸು ; ಪೋಣಿಸು (ರೂಪ.). **Concatenátion** (ನಾ.) ಕೊಂಡಿಗೂಡಿದ ಸ್ಥಿತಿ ; ಕೊಂಡಿಗೂಡಿಸುವುದು. ಸರಪಣಿ ; ಶ್ರೇಣಿ. C. of causes ಕಾರಣ ಮಾಲೆ.

Cóncave ಕಾನ್‌ಕೇವ್ (ಗು., ನಾ.) ರೂಪ ರೇಖೆ ಅಥವಾ ಹೊರ ಮುಖವು ವರ್ತುಲ ರೇಖೆಯ ಅಥವಾ ವರ್ತುಲದ ಒಳಭಾಗದಂತಿರುವ : ಒಳಬಾಗಿನ ; ನಿಮ್ನಮಧ್ಯ ; ಪುಟಾಕಾರ. (ನಾ.) ಒಳಬಾಗು ತಳ (ಮು. ಬಾಂದಳ). **Cóncavely** (ಕ್ರಿ. ವಿ.) ; **Concávity** ಕನ್‌ಕ್ಯಾವಿಟಿ (ನಾ.) ಒಳಬಾಗು ; ಕುಳಿ ; ನಿಮ್ನ ಮಧ್ಯತೆ.

Concávo- ಕನ್‌ಕೇವೊ- (ಸಮಾಸ ಪೂರ್ವಪದ) : C.-concave ಉಭಯ ನಿಮ್ನಮಧ್ಯ (= Double concave). C.-convex ನಿಮ್ನ ಸ್ಫೀತ ಮಧ್ಯ ; ಒಳಬಾಗು ಹೊರಉಬ್ಬು.

Conceál ಕನ್ಸೀಲ್ (ಕ್ರಿ. ಸಕ.) ಗುಟ್ಟಾಗಿಡು ; ಗೋಪ್ಯವಾಗಿಡು ; ಗೋಪನ ಮಾಡು ; ಬಚ್ಚಿಡು ; ಮರಸು ; ಮರೆಮಾಚು, — ಮಾಡು ; ಅವಿಸು. **Conceálment** (ನಾ.)

Concéde ಕನ್ಸೀಡ್ (ಕ್ರಿ. ಸಕ.) ಒಪ್ಪಿಕೊ ; ಬಿಟ್ಟುಕೊಡು ; (ಹಕ್ಕು, ವಿಶೇಷಾಧಿಕಾರ, ಮೊ. ನ್ನು) ಕೊಡು. (ಕ್ರೀಡೆಯ ಅಸಂ.) ಆಟ, ಮೊ. ನ್ನು ಸೋಲು. **Concéssion** ಕನ್ಸೆಷನ್ (ನಾ.) ಬಿಟ್ಟುಕೊಡುವುದು ; ಬಿಟ್ಟುಕೊಟ್ಟದ್ದು ; ಪ್ರದಾನ ; ರಿಯಾಯಿತಿ ; ಒಪ್ಪಿಕೊಂಡದ್ದು. **Concéssionary** (ಗು.) ರಿಯಾಯಿತಿಯ. **Concéssive** (ಗು.) ರಿಯಾಯಿತಿಯ (ಸ್ವಭಾವದ). **Concession(n)aíre** (F) ಕನ್ಸೆಷನೇರ್ (ನಾ.) (ಮು., ಸರ್ಕಾರದವರು ವಿದೇಶೀಯನಿಗೆ ಕೊಡುವ ಏಕಸ್ವಾಮಿತ್ವದ) ರಿಯಾಯಿತಿ, ದತ್ತಿ, ಕೊಡುಗೆ, ಮೊ. ನ್ನು ಪಡೆದವನು.

Conceít ಕನ್ಸೀಟ್ (ನಾ., ಕ್ರಿ. ಸಕ.) ಅಹಂಕಾರ ; ಗರ್ವ ; ಪ್ರತಿಷ್ಠೆ ; ಹೆಮ್ಮೆ ; ಹಮ್ಮು ; ಜಂಬ. ವಿಚಿತ್ರ ಕಲ್ಪನೆ. (In one's own c. ಒಬ್ಬನ ಅಭಿಪ್ರಾಯದಲ್ಲಿ, ಕಲ್ಪನೆಯಲ್ಲಿ. Out of c. ಅತೃಪ್ತಿಯಿಂದ; ಅಸಮಾಧಾನದಿಂದ). (ಕ್ರಿ.) (ಪ್ರಾಚೀ. ಪ್ರ.) ಭಾವಿಸು ; ಕಲ್ಪಿಸಿಕೊ. **Conceíted** (ಗು.) ಅಹಂಕಾರದ ; ಪ್ರತಿಷ್ಠೆಯ (= Self-c.). **Conceítedly** (ಕ್ರಿ. ವಿ.)

Conceíve ಕನ್ಸೀವ್ (ಕ್ರಿ.) ಗರ್ಭ ತಾಳು, ಧರಿಸು ; ಬಸಿರಾಗು. ಮನಸ್ಸಿನಲ್ಲಿ ಊಹಿಸು ; ಗ್ರಹಿಸು ; ಭಾವಿಸು ; ರೂಪಿಸಿಕೊ ; ಕಲ್ಪಿಸಿಕೊ. ಎಣಿಸು ; ಚಿಂತಿಸು ; ಯೋಚಿಸು. **Conceívable** (ಗು.) ಊಹಿಸಲಾಗುವ ; ಗ್ರಹಿಸಲಾಗುವ ; ಸಂಭಾವ್ಯ. **Conceivabílity** (ನಾ.) ; **Conceívableness** (ನಾ.) ; **Conceívably** (ಕ್ರಿ. ವಿ.)

Cóncentrate, Concéntrate ಕಾ(ಕ)ನ್ಸೆಂಟ್ರೇಟ್ (ಕ್ರಿ.) (ಸೈನ್ಯದಳಗಳು, ಅಧಿಕಾರ, ಗಮನ — ಇವನ್ನು) ಕೇಂದ್ರೀಕರಿಸು ; ಒಂದು ಸ್ಥಾನದಲ್ಲಿ ಕೂಡಿಸು ; ಒಟ್ಟುಗೂಡಿಸು. ಏಕಾಗ್ರ ಮಾಡು ; ಮನ ನೆಡು. (ರ. ವಿ.) (ದ್ರವ, ಮೊ. ಗಳ ಗಾತ್ರಕುಗ್ಗಿಸಿ) ಸಾರಹೆಚ್ಚಿಸು ; ಬಲವರ್ಧಿಸು ; ಸಾಂದ್ರೀಕರಿಸು. (ತನ್ನ ಶಕ್ತಿಯನ್ನೆಲ್ಲ, ಗಮನವನ್ನೆಲ್ಲ, ಒಂದು ವಿಷಯದಮೇಲೆ) ಕೇಂದ್ರೀಕರಿಸು, ಮೊನೆಗೊಡಿಸು ; ಚಿತ್ತೈಕಾಗ್ರತೆ ಹೊಂದು ; ಅನನ್ಯ ಮನಸ್ಕನಾಗು. **Concentrátion** ಕಾನ್ — (ನಾ.) ಕೇಂದ್ರೀಕರಣ ; ಚಿತ್ತೈಕಾಗ್ರತೆ. ಸಾರೀಕರಣ. (C. camp ಒಟ್ಟಿಗೆ ಅನ್ನ ಹಾಕುವುದು, ಮೊ. ಕಾರ್ಯಗಳ ಸೌಕರ್ಯಕ್ಕಾಗಿ ಜನರನ್ನು ಒಟ್ಟುಗೂಡಿಸುವ ಪ್ರದೇಶ : ಕೂಟ ಶಿಬಿರ). **Cóncentrator** (ನಾ.) ; **Cóncentrative** ಕನ್ಸೆಂಟ್ರಟಿವ್ (ಗು.) ಒಟ್ಟುಗೂಡಿಸುವ ; ಏಕಾಗ್ರತೆಯ. **Cóncentrativeness** (ನಾ.)

Concéntric ಕನ್ಸೆಂಟ್ರಿಕ್ (ಗು., ನಾ.), **Concéntrical** — ಕಲ್ (ಗು.) ಏಕಕೇಂದ್ರ(ಕ) ; ಸಮಾನ ಕೇಂದ್ರ(ಕ). (ಸೈನ್ಯ) Concentric fire ಒಂದು ಮೊನೆಯಮೇಲೆ ಗುರಿಯಿಟ್ಟು ಬಂದೂಕು ಹಾರಿಸುವುದು. **Concéntrically** (ಕ್ರಿ. ವಿ.) ; **Concentrícity** (ನಾ.) ಸಮಾನ ಕೇಂದ್ರತೆ. **Concéntre** (ಕ್ರಿ.) ಸಮಾನ ಕೇಂದ್ರಕ್ಕೆ ತರು, ಬರು.

Cóncept ಕಾನ್ಸೆಪ್ಟ್ (ನಾ.) (ಸಾಮಾನ್ಯ) ಭಾವ ; ಚಿಂತನಾ ರೂಪ : ಭಾವ ರೂಪ ; ಸಾಮಾನ್ಯ ಜ್ಞಾನ. **Concéption** ಕನ್ಸೆಪ್‌ಷನ್ (ನಾ.) ಗರ್ಭಧಾರಣೆ ; ಗರ್ಭ. ಭಾವನೆ ; ಭಾವ ; ಕಲ್ಪನೆ. **Concéptional** (ಗು.) ; **Concéptive** (ಗು.) ಗರ್ಭಧರಿಸಬಲ್ಲ. ಮನೋಭಾವನೆಯ ; ಭಾವ ಪೂರ್ವಕ ; ಭಾವಾತ್ಮಕ ; ಭಾವನಾ ಶಕ್ತಿಯ. **Concéptual** — ಟ್ಯುಅಲ್ (ಗು.) ಭಾವ ರೂಪದ : ಭಾವನಾತ್ಮಕ ; ಕಲ್ಪನಾ ವಿಷಯಕ. **Concéptualism** — ಲಿಸ್ಮ್ (ನಾ.) ಭಾವ ವಾಚಿಗಳಿಗೆ ಅನುರೂಪವಾಗಿ ಮನಸ್ಸು ಭಾವರಚನೆ ಮಾಡಬಲ್ಲುದೆಂಬ ವಾದ : ಭಾವ ವಾದ. **Concéptualist** (ನಾ.)

Concérn ಕನ್ಸರ್ನ್ (ಕ್ರಿ. ಸಕ., ನಾ.) ಸಂಬಂಧಿಸು ; ಸಂಬಂಧಪಡು ; ಕುರಿತಿರು ; (ಪರಿಣಾಮ) ತಟ್ಟು, ತಾಕು. ಆಸಕ್ತಿ ವಹಿಸು ; ತಲೆಹಾಕು (Be concerned in ಭಾಗ ವಹಿಸು. I am not concerned

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನನಗೆ ಸಂಬಂಧಪಟ್ಟದ್ದಲ್ಲ). (ಭೂ. ಕೃ.) ವ್ಯಾಕುಲಿತ ; ಆತಂಕಗೊಂಡ ; ಚಿಂತೆಗೊಂಡ. (ನಾ.) ಸಂಬಂಧ (I have no c. with it ಅದಕ್ಕೂ ನನಗೂ ಸಂಬಂಧವಿಲ್ಲ. Have a c. in it ಅದರಲ್ಲಿ ಆಸಕ್ತಿ, ಭಾಗ, ಇರು). ಚಿಂತೆ, ಆಸಕ್ತಿ (Ask with deep c. ಬಹಳ ಆತಂಕದಿಂದ ಕೇಳು). ವಿಷಯ. (ಬ. ವ. ದಲ್ಲಿ) ವ್ಯಾಪಾರಗಳು ; ವ್ಯವಹಾರಗಳು ; ಕೆಲಸ ಕಾರ್ಯಗಳು (Do not meddle in my concerns ನನ್ನ ವ್ಯವಹಾರಗಳಲ್ಲಿ ಕೈಹಾಕಬೇಡ). ವ್ಯಾಪಾರ ; ವ್ಯಾಪಾರ ಸಂಸ್ಥೆ (Flourishing c. ಏಳಿಗೆಯ ವ್ಯಾಪಾರ). (ಬಳ. ಮಾ.) ವಸ್ತು ; ಪದಾರ್ಥ (He smashed the whole c. ಎಲ್ಲವನ್ನೂ ಧ್ವಂಸಮಾಡಿಬಿಟ್ಟನು). **Concérning** (ಉಪ.) ವಿಷಯವಾಗಿ ; ಸಂಬಂಧದಲ್ಲಿ ; ಕುರಿತು. **Concérnment** (ನಾ.) ಕೆಲಸ ; ಕಾರ್ಯ ; ವ್ಯಾಪಾರ. ಪ್ರಾಮುಖ್ಯತೆ ; ಗುರುತ್ವ (It is of vital c. ಅತ್ಯಂತ ಪ್ರಾಮುಖ್ಯ ವಿಷಯ). ಸಂಬಂಧ ; ಸಂಬಂಧವಿರುವುದು ; ಗೋಜು ; ಗೊಡವೆ. ಚಿಂತೆ ; ಔತ್ಸುಕ್ಯ ; ಉದ್ವೇಗ ; ವ್ಯಗ್ರತೆ.

Cóncert ಕಾನ್ಸರ್ಟ್ (ನಾ.) ಹೊಂದಿಕೆ ; ಸೇರಿಕೆ ; ಐಕ್ಯ [Work in c. (with) ಹೊಂದಿಕೆಯಿಂದ ಕೆಲಸಮಾಡು. The C. of Europe ಆಗಾಗ್ಗೆ ಹೊಂದಿಕೊಂಡು ಒಟ್ಟಿಗೆ ನಡೆಯುವ ಯೂರೋಪಿನ ಮುಖ್ಯ ರಾಷ್ಟ್ರಗಳು]. (ದನಿಗಳ ಅಥವಾ ಶಬ್ದಗಳ) ಮೇಳನ (Voices raised in c. ಏಕಾಭಿಪ್ರಾಯದಿಂದ ಒಟ್ಟಿಗೆ ಕೂಗಿದ ಕೂಗು : ಒಕ್ಕೊರಲ ದನಿ) ; ಮೇಳ ; ಗಾನಗೋಷ್ಠಿ (C. grand ಕೂಟಗಾನಕ್ಕೆ ಅನುಕೂಲಿಸುವ ಪ್ರಶಸ್ತ ನಾದವುಳ್ಳ ಶ್ರೇಷ್ಠ 'ಪಿಯಾನೊ' ವಾದ್ಯ)

Concért ಕನ್ಸರ್ಟ್ (ಕ್ರಿ. ಸಕ.) (ಪರಸ್ಪರ ಒಪ್ಪಿಗೆಯಿಂದ ಅಥವಾ ತಾನಾಗಿ) ಏರ್ಪಡಿಸು, ಗೊತ್ತುಮಾಡು ; ನಿಶ್ಚಯಿಸು ; ಕಲೆತು ಯೋಚಿಸು. **Concérted** (ಗು.) (ಕ್ರಿಯಾರ್ಥಗಳಲ್ಲಿ). (ಸಂ.) ಬೇರೆ ಬೇರೆ ದನಿಗಳಿಗಾಗಲಿ ವಾದ್ಯಗಳಿಗಾಗಲಿ ಅನುಕೂಲಿಸುವಂತೆ ಏರ್ಪಡಿಸಿದ.

Concertína ಕಾನ್ಸರ್ಟೀನ (ನಾ.) ಗಾಳಿವಾದ್ಯವಿಶೇಷ : ಒಂದು ತೆರದ ರಾಗಮಾಲಿಕೆ.

Concéssion.
Concession(n)aíre. } **Concede** ನೋಡಿ.

Concéttism ಕಂಚೆಟಿಸ್ಮ್ (ನಾ.) (ಸಾಹಿತ್ಯದಲ್ಲಿ) ವಿಚಿತ್ರಕಲ್ಪನಾ ಪ್ರಯೋಗ.

Conch ಕಾಂಕ್ (ನಾ.) ಚಿಪ್ಪುಮಿಾನು. ಒಂದು ಮೃದ್ವಂಗಿಯ ಹೊರ ಚಿಪ್ಪು ; ಶಂಖ [ಮು., (ರೋಮನ್ ಪುರಾಣ) ಸಮುದ್ರದೇವತೆಯೊಬ್ಬನ ತುತೂರಿ, ಕಹಳೆ]. (ವಾ. ಶಾ.) ಒಂದು ಕಟ್ಟಡದ ಅರ್ಧಗೋಳಾಕೃತಿಯ ಒಳಚಾಚಿನಮೇಲಿನ ಗುಮ್ಮಟ. ಹೊರಗಿವಿ ; ಹೊರಗಿವಿಯ ಮಧ್ಯದ ಕುಳಿ : ಕರ್ಣಕುಹರ (= **Cóncha**). (ನಾವಿಕ ಅಸಂ.) ಬಹಾಮಾ ದ್ವೀಪದವನು. **Conchíferous** ಕಾಂಕಿಫರಸ್ (ಗು.) (ಪ್ರಾ. ವಿ., ಭೂ. ವಿ.) ಚಿಪ್ಪುಳ್ಳ ; ಶಂಖಧಾರಿ. **Conchólogy** ಕಾಂಕಾಲೊಜಿ (ನಾ.) ಪ್ರಾಣಿಗಳ ಚಿಪ್ಪುಗಳ ಮತ್ತು ಚಿಪ್ಪುಮಿಾನುಗಳ ವಿಷಯವಾದ ಶಾಸ್ತ್ರ : ಶಂಖಶಾಸ್ತ್ರ. **Conchólogist** (ನಾ.) ಶಂಖಶಾಸ್ತ್ರಜ್ಞ. **Conchológical** ಕಾಂಕೊಲಾಜಿಕಲ್ (ಗು.)

Cónchy ಕಾನ್ಷಿ, ಕಾಂಚಿ (ನಾ.) (ಅಸಂ.) (ಯೂರೋಪಿನ ಮಹಾಯುದ್ಧದಲ್ಲಿ ಯುದ್ಧೋದ್ಯೋಗಕ್ಕೆ ನಿರ್ಬಂಧಪಡಿಸಿ ಜನರನ್ನು ಸೇರಿಸಿದುದಕ್ಕೆ) ಅಂತಃಪ್ರೇರಣೆಯಿಂದ ವಿರೋಧಿಯಾದವನು. (Conscientious objector ಎಂಬುದರ ಸಂಕ್ಷಿಪ್ತ)

Conciérge (F) ಕಾನ್‌ಸ್ಯೆರ್ಷ್ (ನಾ.) (ಫ್ರಾನ್ಸ್, ಮೊ. ದೇಶಗಳಲ್ಲಿ) ಬಾಗಿಲು ಕಾಯುವವನು ; ಪ್ರತೀಹಾರ ; ಪಡಿಯರ (ಗ್ರಾಂ.)

Concíliar ಕನ್ಸಿಲಿಯರ್ (ಗು.) (ಕ್ರೈಸ್ತ) ಧಾರ್ಮಿಕ ಮಂತ್ರಣಸಭೆಯ.

Concíliate ಕನ್ಸಿಲಿಯೇಟ್ (ಕ್ರಿ. ಸಕ.) ಗೌರವವನ್ನು, ದಯೆಯನ್ನು, ಸಂಪಾದಿಸು. ಸಮಾಧಾನಗೊಳಿಸು ; ಒಲಿಸಿಕೊ. (ಭಿನ್ನಾಭಿಪ್ರಾಯದ ತತ್ತ್ವಗಳನ್ನು) ಸಮನ್ವಯ ಮಾಡು, ಹೊಂದಿಕೆ ಮಾಡು. **Conciliátion** (ನಾ.) ಸಮಾಧಾನ (ಮಾಡುವುದು) ; ರಾಜಿ (ಮಾಡುವುದು) ; ಸಮನ್ವಯ. Court of c. (ಕಕ್ಷಿಗಳು) ತಾವಾಗಿ ರಾಜಿಮಾಡಿಕೊಳ್ಳಲು ಅನುಕೂಲಪಡಿಸುವ ನ್ಯಾಯಸ್ಥಾನ : ರಾಜಿ ನ್ಯಾಯಸ್ಥಾನ. **Concíliative** (ಗು.) ; **Concíliator** (ನಾ.) ; **Concíliatoriness** — ಟರಿನೆಸ್ (ನಾ.) ; **Concíliatory** (ಗು.)

Concínnity ಕನ್ಸಿನಿಟಿ (ನಾ.) ಭಾಷಾಶೈಲಿಯ ಸರಳತೆ, ಲಾಲಿತ್ಯ, ಸುಬಂಧ.

Concíse ಕನ್ಸೈಸ್ (ಗು.) (ನಿರೂಪಣದಲ್ಲಿ) ಸಂಕ್ಷಿಪ್ತ ; ಸಂಗ್ರಹ ; ಅಡಕ. **Concísely** (ಕ್ರಿ. ವಿ.) ; **Concíseness** (ನಾ.)

Concísion ಕನ್ಸಿಷನ್ (ನಾ.) ಅಂಗಚ್ಛೇದನ ; ಕೊಯ್ತ. (ತುಚ್ಛವಾಗಿ) ಸುನತಿ. ಸಂಗ್ರಹ ; ಸಂಕ್ಷೇಪ ; ಅಡಕ.

Cónclave ಕಾನ್‌ಕ್ಲೇವ್ (ನಾ.) ಪೋಪ್‌ಗುರುವಿನ ಚುನಾವಣೆಗಾಗಿ ರೋ. ಕ್ಯಾ. ಧರ್ಮಪ್ರಭುಗಳ ಸಭೆ, ಸಭಾಸ್ಥಾನ. ಏಕಾಂತ ಸಭೆ ; ಗೂಢ ಸಭೆ (In c. ಗೂಢ ಸಭೆಯಲ್ಲಿ)

Conclúde ಕನ್‌ಕ್ಲೂಡ್ (ಕ್ರಿ.) ಮುಗಿ(ಸು) ; ಕೊನೆಗಾಣು ; ಕೊನೆಗಾಣಿಸು ; ಮುಕ್ತಾಯವಾಗು ; —ಮಾಡು ; ಉಪಸಂಹಾರ ಮಾಡು ; ಪೂರಯಿಸು ; ಸಮಾಪ್ತಿಯಾಗು ; — ಮಾಡು. (ಪ್ರತಿಜ್ಞೆ, ಮೊ. ಗಳಿಂದ) ಅನುಮಾನಿಸು, ತರ್ಕಿಸು. ತೀರ್ಮಾನಿಸು ; ನಿರ್ಧರಿಸು ; ನಿರ್ಣಯಿಸು. (ಕರಾರು, ಮೊ. ನ್ನು) ಏರ್ಪಡಿಸು, ವ್ಯವಸ್ಥೆಮಾಡು. **Conclúsion** — ಷನ್ (ನಾ.) ಮುಕ್ತಾಯ ; ಸಮಾಪ್ತಿ ; ಉಪಸಂಹಾರ ; ಅಂತ್ಯ ; ಪರಿಣಾಮ ; ಸಿದ್ಧಾಂತ ; ಕೊನೆ (In c. ಕೊನೆಯದಾಗಿ ; ಕೊನೆಗೆ). ಅನುಮಾನ ; ಅನುಮಿತಿ. ನಿರ್ಣಯ ; ತೀರ್ಮಾನ ; ತೀರ್ಪು. (Try conclusions with ಒಬ್ಬನೊಡನೆ ಚಾತುರ್ಯ, ಮೊ. ಗಳ ಪರೀಕ್ಷೆಗೆ ನಿಲ್ಲು). (ಸಂಧಿ, ಮೊ. ನ್ನು) ನಿರ್ಧರಿಸುವುದು, ಏರ್ಪಡಿಸುವುದು. ಏರ್ಪಾಟು ; ಗೊತ್ತುವಳಿ. **Conclúsive** — ಸಿವ್ (ಗು.) ನಿಶ್ಚಾಯಕ ; ನಿರ್ಧಾರಕ ; ನಿರ್ಣಾಯಕ. **Conclúsively** (ಕ್ರಿ. ವಿ.) ; **Conclúsiveness** (ನಾ.)

Concóct ಕನ್‌ಕಾಕ್ಟ್ (ಕ್ರಿ. ಸಕ.) (ಪಾನ, ಕಥೆ, ಕಥಾವಸ್ತು, ಮೊ. ವಿಷಯದಲ್ಲಿ) ಪದಾರ್ಥಗಳನ್ನು ಬೆರಸಿ ಮಾಡು ; ಬೆರಸಿ ತಯಾರಿಸು. ಕಲ್ಪಿಸು ; ಸೃಷ್ಟಿಸು ; ಹುಟ್ಟಿಸಿಕೊಂಡು ಹೇಳು. **Concóction** (ನಾ.) ಅವಯವ ಪದಾರ್ಥಗಳನ್ನು ಬೆರಸಿ ತಯಾರಿಸುವುದು ; ಹೀಗೆ ತಯಾರಿಸಿದ ಪದಾರ್ಥ. ತಯಾರಿ. ಕಟ್ಟುಕಥೆ ; ಕಲ್ಪನೆ ; ಸೃಷ್ಟನೆ. **Concóctor** (ನಾ.) ; **Concóctive** (ಗು.) ಬೆರಕೆ ತಯಾರಿಯ. ಜೀರ್ಣಕಾರಿ.

Concólorous ಕನ್‌ಕಲೊರಸ್ (ಗು.) (ಜೀ. ವಿ.) ಒಂದೇಸಮವಾದ ಬಣ್ಣದ ; ಸಮವರ್ಣದ.

Concómitant ಕನ್‌ಕಾಮಿಟಂಟ್ (ಗು., ನಾ.) ಒಟ್ಟಿಗಿರುವ ; ಒಡನಿರುವ ; ಸಹಗಾಮಿ ; ಸಹವರ್ತಿ ; ಆನುಷಂಗಿಕ (C. circumstances ಆನುಷಂಗಿಕ ಸಂದರ್ಭಗಳು). **Concómitantly** (ಕ್ರಿ. ವಿ.) ; **Concómitance, -cy** (ನಾ.) ಒಡನಿರುವುದು ; ಸಹವರ್ತನ ; ಸಹಭಾವ ; ಅನುಷಂಗ [ಮು., (- ance) ಕ್ರೈಸ್ತ ಪ್ರಭುಭೋಜನ ಸಂಸ್ಕಾರದ ಪ್ರತಿ ವಸ್ತುವಿನಲ್ಲಿಯೂ ಕ್ರಿಸ್ತನ ದೇಹವೂ ರಕ್ತವೂ ಒಟ್ಟಿಗಿರುವುದು]

Cóncord ಕಾನ್‌ಕಾರ್ಡ್, ಕಾಂಕಾರ್ಡ್ (ನಾ.) (ಮನುಷ್ಯರಿಗಾಗಲಿ, ವಸ್ತುಗಳಿಗಾಗಲಿ) ಹೊಂದಿಕೆ ; ಮೈತ್ರಿ ; ಸಾಂಗತ್ಯ ; ಕೆಳೆ. ಸಂಧಿ ; ಕರಾರು ; ಒಪ್ಪಂದ. (ಸಂ.) ಸ್ವರ ಮೈತ್ರಿ. (ವ್ಯಾ.) ಲಿಂಗ, ವಚನ, ಮೊ. ಗಳಲ್ಲಿ ಪದಗಳಿಗೆ ಹೊಂದಿಕೆ : ಸಮಾನಾಧಿಕರಣ ; ಅನ್ವಯ. **Concórdance** ಕನ್‌ಕಾರ್ಡನ್ಸ್ (ನಾ.) ಹೊಂದಿಕೆ ; ಒಂದು ಗ್ರಂಥದಲ್ಲಿಯ (ಮು., ಬೈಬಲ್ಲಿನಲ್ಲಿಯ) ಮುಖ್ಯಪದಗಳ ಅಕಾರಾದಿ, ಅನುಕ್ರಮಣಿಕೆ (= Verbal c.), ಮುಖ್ಯ ವಿಷಯಗಳ ಅಕಾರಾದಿ (= Real c.). **Concórdant** (ಗು.) ಹೊಂದುವ ; ಹೊಂದಿಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯುಳ್ಳ ; ಸಂಗತ ; ಸಂವಾದಿ. ಸ್ವರ ಮೈತ್ರಿಯುಳ್ಳ. **Concórdantly** (ಕ್ರಿ. ವಿ.)

Concórdat ಕನ್‌ಕಾರ್ಡ್ಯಟ್ (ನಾ.) ಪೋಪ್‌ಗುರುವಿಗೂ ಪ್ರಭುತ್ವಕ್ಕೂ (ಸರ್ಕಾರಕ್ಕೂ) ಏರ್ಪಟ್ಟಿರುವ ಒಪ್ಪಂದ, ಕರಾರು.

Cóncourse ಕಾನ್(ಕಾಂ)ಕೋರ್ಸ್ (ನಾ.) ಗುಂಪು; ನೆರವಿ ; ಸಂದಣಿ ; ಸಮೂಹ. (ವಸ್ತುಗಳ) ಸಂಧಿ ; ಸಂಗಮ ; ಸಂಯೋಗ ; ಮೇಳ (Fortuitous c. of atoms ಪರಮಾಣುಗಳ ಆಕಸ್ಮಿಕ ಸಂಯೋಗ)

Concréscence ಕನ್‌ಕ್ರೆಸೆನ್ಸ್ (ನಾ.) (ಜೀ. ವಿ.) ಒಟ್ಟುಗೂಡಿಕೆ ; ಒಟ್ಟಿಗೆ ಬೆಳೆಯುವುದು.

Cóncrete ಕಾನ್‌ಕ್ರೀಟ್ (ಗು., ನಾ.) (ವ್ಯಾ.) ವಸ್ತುವಾಚಕ (ಭಾವ ವಾಚಕವಲ್ಲ). ಮೂರ್ತ ; ವಾಸ್ತವಿಕ (In the c. ವಾಸ್ತವಿಕವಾಗಿ). ಮೂರ್ತ ವಸ್ತು, ರೂಪ. ಕಟ್ಟಡದಲ್ಲಿ ಉಪಯೋಗಿಸುವ ಜಲ್ಲಿಕಲ್ಲು, ಸಿಮೆಂಟು, ಮೊ. ಗಳ ಸಂಮಿಶ್ರಣ : ಜಲ್ಲಿಗಾರೆ ; ಜಲ್ಲಿಗಾರೆಯಿಂದ ಮಾಡಿದ. **Cóncretely** (ಕ್ರಿ. ವಿ.)

Concréte ಕನ್ — (ಕ್ರಿ.) ಮುದ್ದೆಯಾಗಿ ಮಾಡು ; ಮುದ್ದೆಯಾಗು ; ಮುದ್ದೆಗೂಡು(ವಂತೆ ಮಾಡು). ಘನೀಕರಿಸು ; ಪಿಂಡೀಕರಿಸು ; ಗಟ್ಟಿಯಾಗಿಸು ; — ಆಗು. ಜಲ್ಲಿಗಾರೆ ಹಾಕು. **Concrétion** (ನಾ.) ಒಟ್ಟುಗೂಡುವುದು ; ಮುದ್ದೆಗೂಡುವುದು. ಮುದ್ದೆ ; ಗಟ್ಟಿ. (ರೋಗ) ದೇಹದಲ್ಲಿ ವಿಕೃತ ಪದಾರ್ಥ ರಚನೆ ; ಕಲ್ಲು ; ಅಶ್ಮರಿ. (ಭೂ. ವಿ.) ಘನಪದಾರ್ಥದ ಕಣಗಳು ಒಟ್ಟುಗೂಡಿ ಆದ ಮುದ್ದೆ. ಮೂರ್ತ ರೂಪ ; ಮೂರ್ತೀಭವನ. **Concrétionary** (ಗು.)

Cóncubine ಕಾಂಕ್ಯುಬೈನ್ (ನಾ.) ಸೂಳೆ ; ಇಟ್ಟುಕೊಂಡವಳು. (ಬಹುಪತ್ನೀಕ ಜನರಲ್ಲಿ) ಉಪ ಪತ್ನಿ. **Concúbinage** ಕನ್‌ಕ್ಯೂಬಿನೆಜ್ (ನಾ.) ಗಂಡಹೆಂಡಿರಲ್ಲದೆ ಸ್ತ್ರೀಪುರುಷರ ಸಂಯೋಗ ; ಸೂಳೆಯಿಟ್ಟುಕೊಂಡಿರುವುದು ; ಸೂಳೆಯಾಗಿರುವುದು ; ಸೂಳೆಗಾರಿಕೆ. **Concúbinary** (ಗು., ನಾ.) ಸೂಳೆಗಾರಿಕೆ ಮಾಡುವ(ವನು, ವಳು) ; ಸೂಳೆಗಾರಿಕೆಯ : ಸೂಳೆಗಾರಿಕೆಯಿಂದ ಹುಟ್ಟಿದ.

Concúpiscence ಕನ್‌ಕ್ಯೂಪಿಸೆನ್ಸ್ (ನಾ.) ಸಂಭೋಗಾಸಕ್ತಿ ; ಕಾಮ ವಿಕಾರ ; ವಿಷಯ ಲಂಪಟತೆ ; ಐಹಿಕ ಸುಖಾಪೇಕ್ಷೆ. **Concúpiscent** (ಗು.) ಕಾಮವಿಕಾರವುಳ್ಳ ; ಕಾಮುಕ ; ವಿಷಯಾಸಕ್ತ.

Concúr ಕನ್‌ಕರ್ (ಕ್ರಿ. ಅಕ.) ಒಟ್ಟಿಗೆ ಸಂಭವಿಸು ; ಒಟ್ಟಿಗೆ ಸೇರು ; ಸಂಗತವಾಗು ; ಏಕೀಭವಿಸು ; ಸಹಕರಿಸು. ಏಕಾಭಿಪ್ರಾಯ ಪಡು ; ಒಪ್ಪು ; ಸಮ್ಮತಿಸು. **Concúrrence** (ನಾ.) ; **Concúrrent** (ಗು., ನಾ.) ಒಟ್ಟಿಗೆ ಹೋಗುವ ; ಸಹಗಾಮಿ ; ಏಕಾಭಿಮುಖ ; ಒಟ್ಟಿಗಿರುವ ; ಸಹಕರಿಸುವ ; ಒಪ್ಪಿಗೆಯಿಂದಿರುವ. [C. lease ಹಿಂದಿನ ಗೇಣಿ ಮುಗಿಯುವುದಕ್ಕೆ ಮೊದಲೇ ಮಾಡಿಕೊಂಡ ಹೊಸ ಗೇಣಿ. C. fire insurance ಅನೇಕ ಅಗ್ನಿವಿಮೆಯ ಸಂಸ್ಥೆಗಳಿಗೆ ಒಂದು ಗೊತ್ತಾದ ದಾಮಾಷಾಮೇರೆಗೆ ಅಪಾಯನಷ್ಟದ ಹಂಚಿಕೆಯುಳ್ಳ ಅಗ್ನಿವಿಮೆ. (ನ್ಯಾ. ಶಾ.) C. jurisdiction ಸಮಾನ ಅಧಿಕಾರವ್ಯಾಪ್ತಿ]. (ಜ್ಯಾ.) ಒಂದು ಬಿಂದುವಿನ ಕಡೆಗೆ ಹಾಯುವ ; ಏಕಾಭಿಮುಖ. (ನಾ.) ಸಹಗಾಮಿ ಸಂದರ್ಭ ; ಸಂಗತ ಸನ್ನಿವೇಶ. **Concúrrently** (ಕ್ರಿ. ವಿ.)

Concússion ಕನ್‌ಕಷನ್ (ನಾ.) ರಭಸದ ಅಳ್ಲಾಟ ; ಸಂಕ್ಷೋಭೆ ; ಸಂಘಟ್ಟ. ವಿಕಂಪನೆ ; ಧಕ್ಕೆ. (ಶಸ್ತ್ರ ಚಿಕಿತ್ಸೆ) ಬಲವಾದ ಏಟು, ಮೊ. ಬಿದ್ದುದರಿಂದ ಮಿದುಳಿಗೆ ಉಂಟಾಗುವ ಆಘಾತ, ಅಹತಿ. C.-fuse ಸಿಡಿಗುಂಡಿನಲ್ಲಿ ಪೆಟ್ಟಿನಿಂದ ಹೊತ್ತಿಕೊಳ್ಳುವ ಜಾಮಿಗೆಬತ್ತಿ. **Concúss** (ಕ್ರಿ. ಸಕ.) ರಭಸದಿಂದ ಅಳ್ಲಾಡಿಸು, ಕಲಕು (ಸಾ., ರೂಪ.). ಹೆದರಿಸು ; ಬೆದರಿಸು.

Concýclic ಕನ್‌ಸೈ(ಸಿ)ಕ್ಲಿಕ್ (ಗು.) ವೃತ್ತ ಪರಿಧಿಸ್ಥ ; ಏಕ ವೃತ್ತಗತ.

Condémn ಕಂಡೆಮ್ (ಕ್ರಿ. ಸಕ.) ನಿಂದಿಸು ; ದೂಷಿಸು ; ತೆಗಳು ; ಖಂಡಿಸು ; ತಪ್ಪುಹೊರಿಸು ; ದೋಷಾರೋಪಣೆ ಮಾಡು. ವಿರುದ್ಧವಾಗಿ ತೀರ್ಪುಕೊಡು. ದಂಡನೆಗೆ ಗುರಿಮಾಡು. (ಮರಣ ದಂಡನೆಗೆ, ಕಷ್ಟಾನುಭವಕ್ಕೆ) ಪಕ್ಕಾಗಿಸು. (ಕಳ್ಳತನದಿಂದ ತಂದ ಸರಕು, ಮೊ. ನ್ನು) ಸ್ವಾಮ್ಯ ತಪ್ಪಿಸಿ ಸರ್ಕಾರದ ವಶವಾಯಿತೆಂದು ವಿಧಿಸು : ಮುಟ್ಟುಗೋಲು ಹಾಕು. ಉಪಯೋಗಕ್ಕೆ ಸಲ್ಲದ್ದೆಂದು, ವಾಸಿಯಾಗತಕ್ಕದ್ದಲ್ಲವೆಂದು, ಅಧಿಕಾರ ವಾಣಿಯಿಂದ ಹೇಳು ; ನಿಷೇಧಿಸು. **Condémnable** ಕಂಡೆಮ್ನಬ್‌ಲ್ (ಗು.) ; **Condemnátion** ಕಾಂ — (ನಾ.) ನಿಂದನೆ ; ದೂಷಣೆ ; ಖಂಡನೆ ; ದೋಷಾರೋಪಣೆ. ನ್ಯಾಯಸ್ಥಾನದ ದಂಡನೆ. ದಂಡನೆವಿಧಿಸಲು ಕಾರಣ : ದಂಡಕಾರಣ (His own conduct is his c. ಅವನ ನಡತೆಯೇ ಅವನ ಖಂಡನೆ). **Condémnatory** — ನಟರಿ (ಗು.) ದೋಷಾರೋಪಣೆ ಮಾಡುವ ; ನಿಂದಾತ್ಮಕ ; ದಂಡನಾತ್ಮಕ.

Condénse ಕಂಡೆನ್ಸ್ (ಕ್ರಿ.) ದಟ್ಟವಾಗಿಸು ; — ವಾಗು ; ಮಂದಯಿಸು ; — ವಾಗು ; ಸಾಂದ್ರೀಕರಿಸು ; ಘನೀಕರಿಸು ; ಗಟ್ಟಿಯಾಗು ; — ಮಾಡು ; ಒತ್ತಾಗು ; ಒತ್ತುಮಾಡು [Condensed milk ಮಂದಯಿಸಿದ, ಘನೀಭವಿಸಿದ, ಹಾಲು (ಕಾಯಿಸಿ, ದ್ರವಭಾಗವನ್ನು ಆವಿಯಾಗಿಸಿ ಓಡಿಸಿದ್ದರಿಂದ ಆದದ್ದು)]. (ಬೆಳಕಿನ ಕಿರಣಗಳನ್ನು) ಕೇಂದ್ರೀಕರಿಸು, ದಟ್ಟಯಿಸು. (ವಿದ್ಯುತ್ತಿನ) ಬಲವೃದ್ಧಿ ಮಾಡು. ಅನಿಲ ರೂಪದಿಂದ, ಹವೆಯ ರೂಪದಿಂದ, ದ್ರವ ರೂಪಕ್ಕೆ ಇಳಿಸು, ಇಳಿ ; ಹನಿಯಾಗು. (ಕೆಲವು ಮಾತುಗಳಲ್ಲಿ) ಸಂಕ್ಷೇಪಿಸು ; ಅಡಕ ಮಾಡು. **Condensabílity** (ನಾ.) ; **Condénsable** (ಗು.) ; **Condensátion** ಕಾಂಡೆನ್ಸೇಷನ್ (ನಾ.) ಘನೀಭವಿಸುವುದು ; ಮಂದಯಿಸುವುದು ; ಘನೀಕರಣ. ಘನೀಭೂತ ವಸ್ತು. **Condénser** ಕಂಡೆನ್ಸರ್ (ನಾ.) (ಕ್ರಿಯಾರ್ಥಗಳಲ್ಲಿ). ನೀರಾವಿಯ ಎಂಜಿನಿನ ಸ್ತಂಭನಾಳಿಯಿಂದ ಹೊರಟ ಆವಿಯು ದ್ರವೀಭವಿಸುವ ಎಂಜಿನಿನ ಕೋಷ್ಠ : ಸಾಂದ್ರಕಾರಿ ; ಶೀತಕ. ವಿದ್ಯುತ್ತನ್ನು ಸಂಗ್ರಹಿಸುವುದಕ್ಕಾಗಿರುವ ಸಲಕರಣೆ : ವಿದ್ಯುತ್ ಸಂಗ್ರಾಹಕ. ಬೆಳಕನ್ನು ಕೇಂದ್ರೀಕರಿಸುವ ಲೆನ್ಸು, ಲೆನ್ಸುಗಳ ತಂಡ.

Condescénd ಕಾಂಡಿಸೆಂಡ್ (ಕ್ರಿ. ಅಕ.) (ಗೌರವಸ್ಥನ ಅಥವಾ ಅಧಿಕಾರಿಯ ವಿಷಯದಲ್ಲಿ, ತನ್ನ ಅಂತಸ್ತನ್ನು ಬಿಟ್ಟು) ಇಳಿ, ತಗ್ಗಿನಡೆ ; ಅನುಗ್ರಹಿಸು. C. upon ನಿರ್ಧರಿಸು ; ಒಂದು ಗೊತ್ತಿಗೆ ಬರು ; ನಿರ್ದೇಶಿಸು. **Condescénding** (ಗು.) (ಮು., ಆಶ್ರಯದಾತನಂತೆ) ಅನುಗ್ರಹ ತೋರುವ. **Condescénsion** (ನಾ.) ತನಗಿಂತಲೂ ಕೆಳದರ್ಜೆಯವನೊಡನೆ ಸಲಿಗೆಯಿಂದಿರುವುದು. ಅನುಗ್ರಹ (ತೋರುವಂಥ ನಡತೆ)

Condígn ಕಂಡೈನ್ (ಗು.) ತಕ್ಕ ; ಸರಿಯಾದ ; ಯೋಗ್ಯ ; ಉಚಿತ ; ಅನುರೂಪ (C. punishment ತಕ್ಕ ಶಿಕ್ಷೆ). **Condígnly** (ಕ್ರಿ. ವಿ.)

Cóndiment ಕಾಂಡಿಮೆಂಟ್ (ನಾ.) ಆಹಾರಕ್ಕೆ ರುಚಿಕೊಡಲು ಸೇರಿಸುವ ವಸ್ತು : ಸಂಬಾರ ; ಮಸಾಲೆ. **Condiméntal** (ಗು.)

Condítion ಕಂಡಿಷನ್ (ನಾ.) ಗೊತ್ತುಪಾಡು ; ಷರತ್ತು ; ಕರಾರು ; ನಿಯಮ ; ಉಪಾಧಿ ; ಇರವು ; ಇರುಪಾಡು ; ನೆರೆ ; ಸ್ಥಿತಿ ; ಪರಿಸ್ಥಿತಿ ; ವಿದ್ಯಮಾನ ; ದಶೆ ; ಅವಸ್ಥೆ ; ಗುಣ ; ಧರ್ಮ. ಒಂದರ ನೆರವೇರಿಕೆಗೆ ಆಶ್ರಯವಾದ ಮತ್ತೊಂದು. (ವ್ಯಾ.) ಸಂಭಾವನಾ ವಾಕ್ಯ. C. precedent ಮೊದಲೇ ಇರಬೇಕಾದ ಪರಿಸ್ಥಿತಿಗಳು ; ಒಬ್ಬರಿಗಾಗಿ ಬಿಟ್ಟ ಆಸ್ತಿ, ಮೊ. ಗಳ ವಾರಸು, ಮೊ. ವು ಸ್ಥಿರಪಡಬೇಕಾದರೆ ಅದಕ್ಕೆ ಮೊದಲೇ ಅನುಸರಿಸಿರಬೇಕಾದ ನಿಯಮಗಳು : ಪೂರ್ವ ವಿಧಿ. On c. that ಹಾಗಾದರೆ ; ಹಾಗೆ ನಡೆಯುವುದಾದರೆ ; ಆ ಷರತ್ತಿನ ಮೇಲೆ. Conditions of equilibrium ಸಮತೋಲನಕ್ಕಿರಬೇಕಾದ ಪರಿಸ್ಥಿತಿಗಳು. Favourable conditions ಅನುಕೂಲ ಸ್ಥಿತಿ. In c. ಒಳ್ಳೆಯ ಸ್ಥಿತಿಯಲ್ಲಿ. Out of c. ಸ್ಥಿತಿಗೆಟ್ಟು. Change one's c. ಮದುವೆಮಾಡಿಕೊ.

Condítion (ಕ್ರಿ. ಸಕ.) (ಹೀಗೆಂದು) ಗೊತ್ತುಪಾಡು ಮಾಡು, ಮಾಡಿಕೊ. (ವ್ಯಾಪಾರ) (ಸರಕಿನ) ಸ್ಥಿತಿಯನ್ನು ಪರೀಕ್ಷೆಮಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಯಮಕ್ಕೆ, ಉಪಾಧಿಗೆ, ಒಳಪಡಿಸು (The size is conditioned by the requirements ಪರಿಮಾಣವು ಆವಶ್ಯಕತೆಯಮೇಲೆ ನಿರ್ಧಾರವಾಗುತ್ತದೆ. The two things c. each other ಇವೆರಡೂ ಒಂದನ್ನೊಂದು ಅವಲಂಬಿಸಿಕೊಂಡಿವೆ). ಉದ್ದಿಷ್ಟ, ತಕ್ಕ, ಸ್ಥಿತಿಗೆ ತರು. **Condítional** (ಗು., ನಾ.) ನಿಯಮಕ್ಕೊಳಪಟ್ಟ; ಅಧೀನ; ಸೋಪಾಧಿಕ (ನಿರುಪಾಧಿಕವಲ್ಲ). (ವ್ಯಾ.) ಸಂಭಾವನಾ ವಾಚಕ (ಪದ, ವಾಕ್ಯ, ಭಾವ). **Condítionalism** (ನಾ.) ಮರಣಾನಂತರ ವೈಯಕ್ತಿಕ ಅಸ್ತಿತ್ವವು ಋಜುವಾದ ನಂಬಿಕೆಯನ್ನು ಅವಲಂಬಿಸಿರುವುದೆಂಬ ವಾದ: ಸೋಪಾಧಿಕ ವಾದ. **Conditionálity** —ನ್ಯಾಲಿಟಿ (ನಾ.); **Condítionally** —ನಲಿ (ಕ್ರಿ. ವಿ.); **Condítioned** (ಗು.) (ಒಂದು ಗೊತ್ತಾದ) ಸ್ಥಿತಿ, ಅವಸ್ಥೆ, ಉಳ್ಳ (Ill-c., Well-c. ದುಃಸ್ಥಿತಿಯ, ಸುಸ್ಥಿತಿಯ). ನಿಯಮಾಧೀನ; ಕಟ್ಟುಪಾಡಿಗೊಳಪಟ್ಟ; ಸೋಪಾಧಿಕ.

Condóle ಕಂಡೋಲ್ (ಕ್ರಿ. ಅಕ.) (ಒಬ್ಬನಿಗುಂಟಾದ ವಿಯೋಗ, ನಷ್ಟ, ಮೊ. ಗಳಲ್ಲಿ) ಸಂತಾಪ ಸೂಚಿಸು; ಅನುಶೋಕಿಸು; ಒಡಮರುಗು. **Condólence** (ನಾ.) ಇತರರ ದುಃಖಕ್ಕೆ ಸಮಾಧಾನ ಹೇಳುವುದು: ಸಂತಾಪ; ಒಡಮರುಕ. **Condólatory** — ಲಟರಿ (ಗು.) ಸಂತಾಪ ಸೂಚಕ.

Condomínium ಕಾಂಡೊಮಿನಿಯಂ (ನಾ.) (ರಾಜ್ಯತಂತ್ರ) ಎರಡು ಅಥವಾ ಹೆಚ್ಚು ಪ್ರಭುತ್ವಗಳ ಸಹಾಧಿಕಾರಕ್ಕೊಳಪಟ್ಟ ರಾಜ್ಯ: ಸಹ ಪ್ರಭುತ್ವ; ಸಹಸ್ವಾಮ್ಯ.

Condóne ಕಂಡೋನ್ (ಕ್ರಿ. ಸಕ.) ಕ್ಷಮಿಸು; ಮನ್ನಿಸು; (ಅಪರಾಧವನ್ನು, ಮು., ದಾಂಪತ್ಯದಲ್ಲಿ ವಿಶ್ವಾಸಘಾತಕತನವನ್ನು) ಗಮನಕ್ಕೆ ತಂದುಕೊಳ್ಳದೆ ಬಿಡು. (ಮಾಡಿದ ಅಪರಾಧಕ್ಕೆ) ಪ್ರಾಯಶ್ಚಿತ್ತವಾಗು. **Condonátion** ಕಾಂಡೊನೇಷನ್ (ನಾ.) ಕ್ಷಮಾಪಣೆ; ಮಾಫಿ.

Cóndor ಕಾಂಡರ್ (ನಾ.) ದ. ಅಮೆರಿಕದ ದೊಡ್ಡ ರಣಹದ್ದು ಜಾತಿ.

Condúce ಕಂಡ್ಯೂಸ್ (ಕ್ರಿ. ಅಕ.) (ಘಟನೆಗಳ ವಿಷಯದಲ್ಲಿ) ಅನುಕೂಲವಾಗು, ನೆರವಾಗು, ಸಹಾಯವಾಗು. ಉಂಟುಮಾಡು; ತರು. **Condúcive** — ಸಿವ್ (ಗು.); **Condúciveness** (ನಾ.)

Cónduct ಕಾಂಡಕ್ಟ್ (ನಾ.) ನಡಸಿಕೊಂಡುಹೋಗುವುದು; ದಾರಿ ತೋರಿಸುವುದು; ಮಾರ್ಗದರ್ಶನ; ನಡಕೆ (C. -money ಸಾಕ್ಷಿಗೆ ಕೊಡುವ ಪ್ರಯಾಣದ ವೆಚ್ಚ). (ವ್ಯಾಪಾರ, ಮೊ. ನ್ನು) ನಡಸುವ ರೀತಿ; ನಿರ್ವಹಣ. (ಕಲೆ) ಪದ್ಧತಿ; ರೀತಿ. ನಡೆ; ನಡತೆ; ವರ್ತನೆ. ಮುಂದಾಳುತನ; ನೇತೃತ್ವ.

Condúct ಕಂಡಕ್ಟ್ (ಕ್ರಿ.) ನಡಸು; ಮಾರ್ಗ ತೋರಿಸು; ಜೊತೆಯಲ್ಲಿ ಹೋಗು. (ಹಾದಿಯ ವಿಷಯದಲ್ಲಿ) ಒಯ್ಯು, ಹೋಗು. (ಮೇಳವನ್ನು) ನಿಯಂತ್ರಿಸು. (ವ್ಯಾಪಾರ, ಮೊ. ನ್ನು) ನಿರ್ವಹಿಸು; ಮೇಲ್ವಿಚಾರಣೆ ನೋಡಿಕೊ. (ಭೌ. ವಿ.) (ಶಾಖ, ವಿದ್ಯುತ್, ಮೊ. ನ್ನು) ಸಾಗಿಸು, ವಹಿಸು. C. oneself ನಡೆದುಕೊ; ವರ್ತಿಸು. **Condúctible** (ಗು.) (ಶಾಖ, ಮೊ. ನ್ನು) ಸಾಗಿಸಲಾಗುವ; ವಾಹ್ಯ; ವಹನ ಸಮರ್ಥ. **Conductibílity** (ನಾ.); **Condúction** (ನಾ.) (ಶಾಖ, ಮೊ. ನ್ನು, ಸಂಪರ್ಕದಿಂದ) ಸಾಗಿಸುವುದು; ಸಾಗಣೆ; ವಹನ (C. of heat ಉಷ್ಣವಹನ); (ದ್ರವವು ನಾಳ, ಮೊ. ಗಳಮೂಲಕ, ಮು., ಸ್ವಭಾವಸಿದ್ಧ ಕಾರ್ಯಗಳಲ್ಲಿ) ಹರಿಯುವುದು, ಪ್ರವಹಿಸುವುದು. **Condúctive** (ಗು.); **Conductívity** (ನಾ.) ವಾಹಕತ್ವ. **Condúctor** (ನಾ.) ಹಾದಿ ತೋರಿಸುವವನು; ಮಾರ್ಗದರ್ಶಿ; ನೇತೃ; ನಡಸುವವನು; ನಿರ್ವಾಹಕ; ನಿಯಂತ್ರಕ. ಮೇಳ ನಿಯಂತ್ರಕ. (ಮೋಟಾರು, ಟ್ರಾಂ ಬಂಡಿ, ಮೊ. ಗಳಲ್ಲಿ, ಅಮೆ. ಸಂ. ರೈಲುಬಂಡಿಯಲ್ಲಿ) ಪ್ರಯಾಣಿಕರ ವಿಚಾರವನ್ನು ನೋಡಿಕೊಳ್ಳುವ ಅಧಿಕಾರಿ; ನಿಯಂತ. (ಮು., ಶಾಖ, ವಿದ್ಯುತ್, ಮೊ. ಗಳ) ವಾಹಕ (Good c. ಸುವಾಹಕ; Bad c. ದುರ್ವಾಹಕ; Non-c. ಅವಾಹಕ). Lightning-c. (ಆಕಾಶದಲ್ಲಿಯ ವಿದ್ಯುತ್ತನ್ನು ಸೆಳೆದು ಭೂಮಿಗೆ ಸಾಗಿಸುವುದಕ್ಕಾಗಿ ಕಟ್ಟಡದ ಮೇಲ್ಭಾಗದಲ್ಲಿ ಹಾಕಿರುವ ಚೂಪುಮೊನೆಯ ಲೋಹದ) ವಿದ್ಯುದ್ವಾಹಕ; ಮಿಂಚುಸೆಳೆ. **Condúctorship** (ನಾ.); **Condúctress** (ನಾ., ಸ್ತ್ರೀ.)

Cónduit ಕಂ(ಕಾಂ)ಡಿಟ್ (ನಾ.) ದ್ರವಗಳನ್ನು ಸಾಗಿಸುವ ದಾರಿ; ನಾಳ; ನಳಿಗೆ; ಕೊಳವೆ; ಕೊಳಾಯಿ; ನಾಲೆ. ರಕ್ಷಿತ ವಿದ್ಯುತ್ ತಂತಿಗಳ ಕಾಪುಕೊಳವೆ (C. system ವಿದ್ಯುದ್ವಹನದಲ್ಲಿ ವಿದ್ಯುತ್ ತಂತಿಗಳನ್ನು ನೆಲದಲ್ಲಿ ಹಾಕಿರುವ ಪದ್ಧತಿ. ವಿದ್ಯುದ್ದೀಪಗಳಿಗಾಗಿ ವಿದ್ಯುತ್ ತಂತಿಗಳನ್ನು ಸೀಸದ ಕೊಳವೆಗಳಲ್ಲಿ ಹಾಯಿಸುವ ಪದ್ಧತಿ). (ರೂಪ.) ಮಾರ್ಗ; ಸಾಧನ.

Condúplicate ಕಂಡ್ಯೂಪ್ಲಿಕೆಟ್ (ಗು.) (ಸ. ವಿ.) ಉದ್ದವಾಗಿ ಮಧ್ಯಕ್ಕೆ ಮಡಿಸಿದ; ಉದ್ದ ಮಡಿಕೆಯ.

Cóndyle ಕಾಂಡಿಲ್ (ನಾ.) (ಅಂ. ರ. ಶಾ.) ಎಲುಬುಗಳು ಒಂದರೊಡನೊಂದು ಕೀಲುಗೂಡುವ ಎಡೆಯಲ್ಲಿ ಗುಂಡಾಗಿರುವ ಅವುಗಳ ಚಾಚು ಭಾಗ: ಮೂಳೆತಲೆ. **Cóndyloid** — ಲಾಯ್ಡ್ (ಗು.) ಮೂಳೆ ತಲೆಯಂತಿರುವ.

Cóndy('s fluid) ಕಾಂಡಿ(ಸ್ ಫ್ಲೂಯಿಡ್) (ನಾ.) 'ಸೋಡಿಯಂ ಪರ್ಮ್ಯಾಂಗನೇಟ್' ಲವಣದ ದ್ರಾವಣ (ಇದು ಒಂದು ಸೊಂಕುತಡೆ). (Condy ಎಂಬಾತನ ಹೆಸರಿನಿಂದ)

Cone ಕೋನ್ (ನಾ., ಕ್ರಿ.) ವೃತ್ತಾಕಾರದ (ಅಥವಾ ಇತರ ವಕ್ರಾಕಾರದ) ಸಮತಳದ ಅಡಿಯುಳ್ಳದ್ದಾಗಿಯೂ, ಅಲ್ಲಿಂದ ಅಗ್ರಕ್ಕೆ ಕ್ರಮೇಣ ಚೂಪಾಗುತ್ತ ಹೋಗಿ ಅಗ್ರದಲ್ಲಿ ಬಿಂದುವಾಗಿಯೂ ಇರುವ ಘನರೂಪ [ಒಂದು ಸರಳರೇಖೆಯ ಒಂದು ತುದಿ ಸ್ಥಿರವಾಗಿದ್ದು, ಮತ್ತೊಂದು ತುದಿ ವೃತ್ತರೇಖೆಯನ್ನು (ಅಥವಾ ಇತರ ವಕ್ರರೇಖೆಯನ್ನು) ರೇಖಿಸಿ ಆದ ಘನರೂಪ]: ಶಂಕು. 'ಪೈನ್' ಅಥವಾ 'ಫರ್' ಮರದ ಕಾಯಿ. ಒಂದು ಜಾತಿಯ ಸಮುದ್ರಚಿಪ್ಪು. ಶಂಕುವಿನಾಕಾರದ ವಸ್ತು (ಮು., ಪವನಶಾಸ್ತ್ರದಲ್ಲಿ, ದುರ್ವಾಯುಸ್ಥಿತಿ ಸೂಚಕ ಚಿಹ್ನೆ). Cones ರೊಟ್ಟಿಗಾರರು ರೊಟ್ಟಿಮಾಡುವ ಪಾತ್ರೆಯಲ್ಲಿ ಸುತ್ತಲೂ ಉದುರಿಸುವ ನುಣ್ಣನೆಯ ಹಿಟ್ಟು. (ಕ್ರಿ.) ಶಂಕುವಿನಾಕಾರ ಕೊಡು, ಮಾಡು. 'ಪೈನ್', 'ಫರ್', ಕಾಯಿ ಬಿಡು. **Cónic** ಕಾನಿಕ್ (ಗು., ನಾ.) ಶಂಕುವಿನಾಕಾರದ; ಶಂಕುವಿನ (C. section ಶಂಕುಚ್ಛೇದ). (ನಾ., ಬ. ವ. ದಲ್ಲಿ) (ಜ್ಯಾ.) ಶಂಕುಚ್ಛೇದದ ಸಮಕ್ಷೇತ್ರ ಗಣಿತ. **Cónical** (ಗು.); **Cónically** (ಕ್ರಿ. ವಿ.); **Cónicalness** (ನಾ.); **Cónico-** ಕಾನಿಕೊ- (ಸಮಾಸದಲ್ಲಿ ಪೂರ್ವಪದ) ಶಂಕು — (C.-cylindrical ಶಂಕುಸ್ತಂಭಾಕಾರದ). **Cónoid** ಕೋನಾಯ್ಡ್ (ಗು., ನಾ.) ಶಂಕುವಿನಾಕಾರದ; ಶಂಕ್ವಾಭಾಸ; ಶಂಕುಕಲ್ಪ. (ನಾ.) ಒಂದು ಶಂಕುಚ್ಛೇದವು ತನ್ನ ಅಕ್ಷದ ಸುತ್ತಲೂ ಸುತ್ತುವುದರಿಂದಾಗುವ ಘನಾಕೃತಿ. ಸರಿಸುಮಾರು ಶಂಕುವಿನಾಕಾರವುಳ್ಳ ವಸ್ತು. **Conoídal** (ಗು.)

Cóney. **Cony** ನೋಡಿ.

Confáb ಕನ್‌ಫ್ಯಾಬ್ (ನಾ., ಕ್ರಿ. ಅಕ.) (ಬಳ. ಮಾ.; Confabulate or Confabulation ಪದದ ಸಂಕ್ಷಿಪ್ತ)

Confábulate ಕನ್‌ಫ್ಯಾಬ್ಯುಲೇಟ್ (ಕ್ರಿ. ಅಕ.) ಸಲ್ಲಾಪ ನಡಸು; ಹರಟೆ ಹೊಡೆ. **Confabulátion** (ನಾ.); **Confábulatory** — ಲಟರಿ (ಗು.)

Conféction ಕನ್‌ಫೆಕ್‌ಷನ್ (ನಾ., ಕ್ರಿ. ಸಕ.) ಬೆರಸುವುದು; ಕಲಸುವುದು; ಪದಾರ್ಥಗಳನ್ನು ಮಿಶ್ರಮಾಡಿ ತಯಾರಿಸುವುದು; ಮಿಶ್ರಣಮಾಡಿ ತಯಾರಿಸಿದ ವಸ್ತು: (ಮು.) ಉಪ್ಪಿನಕಾಯಿ, ಮುರಬ್ಬ, ಮಿಠಾಯಿ, ಮೊ. ವು. (ಸಾ., ಹೆಂಗಸು ಉಡಲು) ಸಿದ್ಧಮಾಡಿಟ್ಟಿರುವ ಉಡುಪು. (ಕ್ರಿ.) — ಮಾಡು; — ತಯಾರಿಸು. **Conféctionary** (ಗು.); **Conféctioner** (ನಾ.) ಮಿಠಾಯಿ, ಮುರಬ್ಬ, ಮೊ. ನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಯಾರಿಸುವವನು : ಮಿಠಾಯಿಗಾರ. **Conféctionery** (ನಾ.) ಮಿಠಾಯಿ, ಮುರಬ್ಬ, ಮೊ. ; ಮಿಠಾಯಿ ಕಸುಬು, ವ್ಯಾಪಾರ.

Conféderacy ಕನ್‌ಫೆಡೆರಸಿ (ನಾ.) (ರಾಜ್ಯ, ಸಂಸ್ಥೆ, ಜನ — ಇವುಗಳ) ಸಂಯೋಜನ. ಮೋಸಕೂಟ. **Conféderate** —ರೆಟ್ (ಗು., ನಾ.), — ರೇಟ್ (ಕ್ರಿ.) ಸಂಯುಕ್ತ ; ಜೊತೆಗೂಡಿದ. ಸಹಾಯಕ ; ಸಂಗಾತಿ ; ಜೊತೆಯವನು (ಮು. ಕೆಟ್ಟರ್ಥದಲ್ಲಿ). (ಕ್ರಿ.) ಒಕ್ಕೂಟ ವಾಗು, ಮಾಡು ; ಜೊತೆಗೂಡಿಸು ; ಜೊತೆಯಾಗು ; ಸಂಬಂಧ, ಮೈತ್ರಿ, ಬೆಳಸು. **Confederátion** (ನಾ.) ಜೊತೆಗೂಡುವುದು ; ಜೊತೆಗೂಡಿದ ಸ್ಥಿತಿ ; ಸಂಧಿ ಸಂಬಂಧ.

Confér ಕನ್‌ಫರ್ (ಕ್ರಿ.) (ಬಿರುದು, ವಿದ್ಯಾಪಟ್ಟ, ಉಪಕಾರ, ಮೊ. ನ್ನು) ಕೊಡು, ದಯೆಗೆಯ್ಯಿ, ಅನುಗ್ರಹಿಸು. ಕೂಡಿ ಮಾತಾಡು, ಆಲೋಚನೆ ಮಾಡು. (ಸಲಹೆಗಾಗಿ) ಪ್ರಸ್ತಾಪಮಾಡು. ತಾಳೆ ನೋಡು ; ಹೋಲಿಸಿ ನೋಡು (ಸಂಕ್ಷಿಪ್ತ cf.). **Conférment** (ನಾ.) ; **Conférrable** (ಗು.) ಪ್ರಸ್ತಾಪಿಸಬಹುದಾದ. **Cónference** ಕಾನ್‌ಫೆರೆನ್ಸ್ (ನಾ.) ಸಂಮೇಳನ ; ಸಹಾಲೋಚನೆ. **Conferéntial** — ರೆನ್ಷಲ್ (ಗು.)

Cónference. Confer ನೋಡಿ.

Conféss ಕನ್‌ಫೆಸ್ (ಕ್ರಿ.) (ತಪ್ಪನ್ನು, ಲೋಪವನ್ನು) ಒಪ್ಪಿಕೊ. (ಕ್ರೈಸ್ತ) ತಾನು ಮಾಡಿರುವ ಪಾಪಗಳನ್ನೆಲ್ಲ (ಗುರುವಿಗೆ) ನಿವೇದಿಸು : ಪಾಪ ನಿವೇದನೆ ಮಾಡು. (ಕ್ರೈಸ್ತಗುರುವಿನ ವಿಷಯದಲ್ಲಿ) (ಪಶ್ಚಾತ್ತಾಪಿಯ) ಪಾಪನಿವೇದನೆ ಕೇಳು. (ರೂಪ., ಕಾವ್ಯ) ನಿದರ್ಶನ ಮಾಡು ; ಸೂಚಿಸು ; ತೋರಿಸು ; ಸಮರ್ಥಿಸು. **Conféssant** (ನಾ.) ತಪ್ಪೊಪ್ಪಿಕೊಳ್ಳುವವನು ; (ಮು., ಗುರುವಿಗೆ) ಪಾಪನಿವೇದನೆ ಮಾಡುವವನು ; ಪಾಪ ನಿವೇದಕ. **Conféssedly** — ಸೆಡ್ಲಿ (ಕ್ರಿ. ವಿ.) ಒಪ್ಪಿಕೊಂಡಿರುವಂತೆ ; ನಿರ್ವಿವಾದವಾಗಿ ; ವ್ಯಕ್ತವಾಗಿ. **Conféssion** (ನಾ.) (ತಪ್ಪಿತ, ವಿಷಯ, ಮೊ. ಗಳ) ಒಪ್ಪಿಕೆ ; ತಪ್ಪೊಪ್ಪಿಕೆ. ಒಪ್ಪಿಕೊಳ್ಳುವುದು ; ಒಪ್ಪಿಕೊಂಡದ್ದು. (ಕ್ರೈಸ್ತಗುರುವಿಗೆ) ಪಾಪ ನಿವೇದನೆ (Auricular c. ಕಿವಿಯಲ್ಲಿ ಹೇಳಿದುದು). C. of faith ಧರ್ಮತತ್ತ್ವದ, ಮತದ, ನಿರೂಪಣೆ ; ಸ್ವಧರ್ಮ ಪ್ರಕಟನೆ. ಯಾವುದಾದರೂ ವಿಷಯದಲ್ಲ ತಾನು ಹಿಡಿದಿರುವ ಅಭಿಪ್ರಾಯಗಳನ್ನು ತಿಳಿಯಪಡಿಸುವುದು : ಸ್ವಾಭಿಪ್ರಾಯ ಪ್ರಕಟನೆ. **Conféssional** (ಗು., ನಾ.) ತಪ್ಪೊಪ್ಪಿತಕ್ಕೆ, ಪಾಪ ನಿವೇದನಕ್ಕೆ, ಸಂಬಂಧಪಟ್ಟ. (ನಾ.) (ಕ್ರೈಸ್ತ ಗುರು) ಪಾಪ ನಿವೇದನವನ್ನು ಕೇಳುವ ಸ್ಥಳ. **Conféssionary** (ಗು., ನಾ.) = Confessional. **Conféssionist** (ನಾ.) ಒಂದು (ಕ್ರೈಸ್ತ) ತತ್ತ್ವದ ಅನುಯಾಯಿ. **Conféssor** (ನಾ.) ಒಪ್ಪಿಕೊಳ್ಳುವವನು ; (ಕ್ರೈಸ್ತ) ಪಾಪನಿವೇದನೆ ಕೇಳಿ, ಪ್ರಾಯಶ್ಚಿತ್ತ ವಿಧಿಸಿ, ಪಾಪವಿಮೋಚನೆ ಕೊಡುವ ಪುರೋಹಿತ ; ಪಾಪನಿವೇದನೆ ಕೇಳುವ ಪುರೋಹಿತ. ಅಪಾಯಸಂಭವದಲ್ಲಿಯೂ ತನ್ನ ಮತತತ್ತ್ವವನ್ನು ಪ್ರತಿಪಾದಿಸುವವನು. The C. ೧೧ನೆಯ ಶತಮಾನದಲ್ಲಿ ಇಂಗ್ಲೆಂಡಿನ ದೊರೆಯಾಗಿದ್ದ ಎಡ್ವರ್ಡಿನ ಉಪನಾಮ.

Conféssion, etc. Confess ನೋಡಿ.

Conféttо ಕೊನ್ಫೆಟೊ (ನಾ. ; ಬ. ವ. -tti, — ಟಿ ; ಸಾ., ಬ. ವ. ದಲ್ಲಿ ಪ್ರಯೋಗ) ಬತ್ತಾಸು ; ಮಿಠಾಯಿ. (ಕ್ರೈಸ್ತರ) 'ಕಾರ್ನಿವಲ್' ಎಂಬ ಕಟ್ಟಿಲ್ಲದ ಸಂತೋಷೋತ್ಸವದಲ್ಲಿಯೂ, ಮದುವೆ, ಮೊ. ಗಳಲ್ಲಿಯೂ ವಿನೋದಕ್ಕಾಗಿ ಎಸೆದಾಡುವ ಬಿಳಿಯ ಮಣ್ಣಿನ ಬತ್ತಾಸುಗಳೂ ಬಣ್ಣಬಣ್ಣದ ಕಾಗದದ ಬಿಲ್ಲೆಗಳೂ.

Confidánt. Confide ನೋಡಿ.

Confíde ಕನ್‌ಫೈಡ್ (ಕ್ರಿ.) ನಂಬಿಕೆಯಿಡು ; ನಂಬಿಕೆಯಿರು ; ವಿಶ್ವಾಸವಿಡು ; ಭರವಸೆಯಿಡು ; ನಂಬಿ ಹೇಳು. (ಒಬ್ಬನಿಗೆ) ಅಂತರಂಗ ಹೇಳಿಕೊ. (ಜೋಕೆಯಿಂದಿರಬೇಕಾದ ಪದಾರ್ಥ, ಕೆಲಸ, ಮೊ. ನ್ನು ಒಬ್ಬನಿಗೆ) ನಂಬಿ ಒಪ್ಪಿಸು, ವಶಪಡಿಸು. **Confidánt** ಕಾನ್ಫಿಡಾಂಟ್ (ನಾ. ; ಸ್ತ್ರೀ. -dante, — ಡಾಂಟ್) ಅಂತರ್ಯ ವಿಚಾರಗಳನ್ನು (ಸಾ., ಪ್ರಣಯ ವಿಚಾರಗಳನ್ನು) ತಿಳಿಯಪಡಿಸಲು ನಂಬಿಕೆಗರ್ಹನಾದ ಆಪ್ತಸ್ನೇಹಿತ : ಅಂತರಂಗ ಮಿತ್ರ. **Cónfidence** ಕಾನ್ಫಿಡೆನ್ಸ್ (ನಾ.) ಪೂರ್ಣ ನಂಬಿಕೆ ; ನೆಚ್ಚಿಕೆ ; ದೃಢ ವಿಶ್ವಾಸ ; ಭರವಸೆ. ಆತ್ಮ ವಿಶ್ವಾಸ ; ಧೈರ್ಯ. ದಿಟ್ಟತನ ; ಧಾರ್ಷ್ಟ್ಯ. ಅಂತರಂಗ, ಗುಟ್ಟು (ತಿಳಿಯಪಡಿಸುವುದು). In one's c. ಒಬ್ಬನ ಅಂತರಂಗಕ್ಕೆ ಸೇರಿ. Told in c. ಗುಟ್ಟಾಗಿ ಹೇಳಿದ ; ಅಂತರಂಗದಲ್ಲಿ ಹೇಳಿದ. C. trick ನಂಬಿಕೆಯ ಗುರುತಾಗಿ ಒಬ್ಬನ ಒಡವೆವಸ್ತುಗಳನ್ನು ತನಗೆ ಒಪ್ಪಿಸುವಂತೆ ಪುಸಲಾಯಿಸುವ ಮೋಸ : ನಂಬಿಕೆಯ ಮೋಸ. **Cónfident** (ಗು., ನಾ.) ನಂಬುವ ; ನೆಚ್ಚಿಕೆಯ ; ಭರವಸೆಯ ; ಧೈರ್ಯವುಳ್ಳ ; ದಿಟ್ಟ ; ಧೃಷ್ಟ. ಅಂತರ್ಯವರಿತವನು ; ಅಂತರಂಗ ಮಿತ್ರ. **Cónfidently** (ಕ್ರಿ. ವಿ.) ಧೈರ್ಯವಾಗಿ ; ನಿರ್ಧರವಾಗಿ ; ನೆಚ್ಚಿಕೆಯಾಗಿ. **Confidéntial** — ಷಲ್ (ಗು.) ಅಂತರ್ಯದಲ್ಲಿ, ಗುಪ್ತವಾಗಿ, ಹೇಳಿದ, ಬರೆದ : ಅಂತರಂಗದ ; ಆಪ್ತ ; ಗುಟ್ಟಾದ ; ಗೋಪ್ಯವಾದ ; ರಹಸ್ಯವಾದ ; ಗುಪ್ತ ವಿಷಯಗಳನ್ನು ನಂಬಿಕೆಯಿಟ್ಟು ಒಪ್ಪಿಸಿರುವ. **Confidéntially** (ಕ್ರಿ. ವಿ.) ; **Confidéntialness** (ನಾ.) ; **Confidentiálity** — ಷಿಆ್ಯಲಿಟಿ (ನಾ.)

Configurátion ಕನ್ಫಿಗ್ಯುರೇಷನ್ (ನಾ.) ಆಳವಡಿಸಿರುವ ರೀತಿ ; ವಿನ್ಯಾಸ ; ರೂಪ ; ಆಕೃತಿ ; ಆಕಾರ. (ಖ. ವಿ.) ಗ್ರಹ, ಮೊ. ಗಳ ವಿನ್ಯಾಸ, ಸಾಪೇಕ್ಷ ಸ್ಥಾನ. **Confígure** — ಫಿಗ್ಯುರ್, — ಗರ್ (ಕ್ರಿ. ಸಕ.) ರೂಪ, ಆಕಾರ, ಕೊಡು ; ರೂಪಿಸು.

Cónfine[1] ಕಾನ್‌ಫೈನ್ (ನಾ. ; ಸಾ., ಬ. ವ. ದಲ್ಲಿ) ಎಲ್ಲೆ ; ಗಡಿ ; ಮೇರೆ ; ಮಿತಿ ; ಅಂಚು ; ಹದ್ದು (ಮು. ರೂಪ.)

Confíne[2] ಕನ್‌ಫೈನ್ (ಕ್ರಿ.) (ವ್ಯಕ್ತಿ, ವಸ್ತು, ಮೊ. ನ್ನು) ಹದ್ದಿನಲ್ಲಿಡು ; ಸೆರೆಹಾಕು ; ಬಂಧಿಸು ; ಮಿತಿ ಕಲ್ಪಿಸು ; ಒಳಗಿರು ; ಒಳಗಿರಿಸು. (ಕರ್ಮಣಿ) ಹಡೆ ; ಹೆರು ; ಪ್ರಸವಿಸು. (ವಿರಳವಾಗಿ) C. with ಪಕ್ಕದಲ್ಲಿರು ; ಅಂಚಿನಲ್ಲಿರು ; ಹತ್ತಿಕೊಂಡಿರು. **Confínement** (ನಾ.) ಸೆರೆ ; ಬಂಧನ. ಸೂಲು (ಗ್ರಾಂ.) ; ಹೆರಿಗೆ ; ಪ್ರಸವ. ಮಿತಿ ; ಮೇರೆ.

Confírm ಕನ್‌ಫರ್ಮ್ (ಕ್ರಿ. ಸಕ.) (ಅಧಿಕಾರ, ಅನುಭವದಾರ, ಸ್ವತ್ತು — ಇವುಗಳ ವಿಷಯದಲ್ಲಿ) ಸ್ಥಿರಪಡಿಸು, ದೃಢಪಡಿಸು ; ಬಲಪಡಿಸು ; ಸ್ಥಾಪಿಸು ; ಊರ್ಜಿತಪಡಿಸು ; ಕಾಯಂ ಮಾಡು. (ಹೇಳಿಕೆಯನ್ನು, ರುಜುವಾತನ್ನು) ಪುಷ್ಟೀಕರಿಸು. (A confirmed drunkard ಪಕ್ಕಾ ಕುಡುಕ. A confirmed disease ರೂಢಮೂಲವಾದ ವ್ಯಾಧಿ ; ಬೇರು ಬಿಟ್ಟ ರೋಗ). (ಕ್ರೈಸ್ತ) ಸ್ಥಿರೀಕರಣ ಸಂಸ್ಕಾರ ಕೊಡು. **Confirmánd** ಕಾನ್‌ಫರ್‌ಮ್ಯಾಂಡ್ (ನಾ.) (ಕ್ರೈಸ್ತ) ಸ್ಥಿರೀಕರಣ ಸಂಸ್ಕಾರ ಪಡೆಯಬೇಕೆಂದಿರುವವನು. **Confirmátion** (ನಾ.) ಸ್ಥಿರೀಕರಣ ; ದೃಢೀಕರಣ ; ಪುಷ್ಟೀಕರಣ ; ಕಾಯಂ(ಮಾಡುವುದು). (ಕ್ರೈಸ್ತ)ಜ್ಞಾನಸ್ನಾನವಾದವರಿಗೆ ಕೊಡುವ ಸ್ಥಿರೀಕರಣ ಸಂಸ್ಕಾರ. **Confírmative** ಕನ್‌ಫರ್‌ಮಟಿವ್ (ಗು.) ಸ್ಥಿರಪಡಿಸುವ. **Confírmatively** (ಕ್ರಿ. ವಿ.) ; **Confírmatory** (ಗು.) ; **Confirmeé** (ನಾ.) ಸ್ಥಿರೀಕರಣ ಪಡೆದವನು.

Cónfiscate ಕಾನ್‌ಫಿಸ್ಕೇಟ್ (ಕ್ರಿ. ಸಕ.) (ದಂಡಕ್ಕಾಗಿ) ಸರ್ಕಾರಕ್ಕೆ ಸೇರಿಸಿಕೊ ; ಮುಟ್ಟುಗೋಲು ಹಾಕು. ಅಧಿಕಾರದಿಂದ ಹಿಡಿ, ಕಿತ್ತುಕೊ, ವಶಪಡಿಸಿಕೊ. **Confiscátion** (ನಾ.) ಸರ್ಕಾರದ ವಶಪಡಿಸಿಕೊಳ್ಳುವುದು ; ಮುಟ್ಟುಗೋಲು. **Cónfiscator** (ನಾ.) ; **Confíscatory** (ಗು.) ; **Confíscable** ಕನ್ — (ಗು.)

Confíteor (L) ಕನ್‌ಫಿಟಿಯಾರ್ (ನಾ.) (ಕ್ರೈಸ್ತ ವೈದಿಕ) ಪಾಪನಿವೇದನ ಪೂರ್ವಕವಾದ ಪ್ರಾರ್ಥನೆ.

Conflagrátion ಕಾನ್‌ಫ್ಲಗ್ರೇಷನ್ (ನಾ.) (ನಾಶಕರವಾದ) ದೊಡ್ಡ ಕಿಚ್ಚು ; ದಳ್ಳುರಿ (ರೂಪ. ಸಹ). **Cónflagrate** (ಕ್ರಿ.) ಬೆಂಕಿ ಹೊತ್ತಿಕೊ ; ಉರಿಯೆಬ್ಬಿಸು ; ಸುಟ್ಟುಹಾಕು (ರೂಪ. ಸಹ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Conflátion ಕನ್‌ಫ್ಲೇಷನ್ (ನಾ.) ಬೆಸೆಯುವುದು ; ಬೆಸುಗೆ. (ಮು., ವ್ಯತ್ಯಾಸವುಳ್ಳ ಎರಡು ಪಾಠಾಂತರಗಳನ್ನು ಒಂದಾಗಿ) ಬೆರಸುವುದು : ಪಾಠ ಬೆರಕೆ. **Cónflate** ಕಾನ್‌ಫ್ಲೇಟ್ (ಗು.) ಎರಡು ಪಾಠಗಳು ಬೆರೆತ ; ಕಲಸಿದ. **Confláte** ಕನ್‌ಫ್ಲೇಟ್ (ಕ್ರಿ. ಸಕ.) ಒಟ್ಟಿಗೆ ಬೆಸೆ ; ಒಟ್ಟಿಗೆ ತರು ; ಬೆರಸು. ಎರಡು ಪಾಠಗಳನ್ನು ಒಂದಾಗಿ ಬೆರಸು (ಕರ್ಮಣಿಯಲ್ಲಿ)

Cónflict ಕಾನ್‌ಫ್ಲಿಕ್ಟ್ (ನಾ.) ಯುದ್ಧ ; ಹೋರಾಟ ; ಘರ್ಷಣ ; ಬಡಿದಾಟ ; ತಿಕ್ಕಾಟ. (ಪರಸ್ಪರ ವಿರುದ್ಧ ತತ್ತ್ವಗಳು, ಮೊ. ಗಳ) ಸಂಘಟ್ಟನೆ. C. of feelings ಒಳ ತೋಟ. In c. (with) ವಿರುದ್ಧವಾಗಿ. **Conflíct** ಕನ್‌ಫ್ಲಿಕ್ಟ್ (ಕ್ರಿ. ಅಕ.) ಹೋರಾಡು ; ವಿರೋಧಿಸು ; ಸಂಘಟ್ಟಿಸು ; ಘರ್ಷಿಸು ; ಅಸಂಗತವಾಗಿರು. **Conflíction** (ನಾ.)

Cónfluence ಕಾನ್‌ಫ್ಲುಎನ್ಸ್ (ನಾ.) ಒಟ್ಟಿಗೆ ಹರಿಯುವುದು. ಎರಡು ಅಥವಾ ಹೆಚ್ಚು ಹೊಳೆಗಳು, ಮೊ. ಗಳ ಸಂಧಿ, ಸೇರುವೆ ; ಸಂಗಮ ; ಕೂಡಲು (ರೂಪ. ಸಹ). ಒಟ್ಟುಗೂಡಿ ಆದ ಪ್ರವಾಹ : ಕೂಡುಪ್ರವಾಹ. ಒಟ್ಟುಗೂಡುವುದು ; ಸಮೂಹ. **Cónfluent** (ಗು., ನಾ.) ಒಟ್ಟಿಗೆ ಹರಿಯುವ, ಸೇರಿಕೊಳ್ಳುವ (ಹೊಳೆ, ರಸ್ತೆ, ಮೊ.) : ಕೂಡುಹೊಳೆ ; ಕೂಡುರಸ್ತೆ (ರೂಪ. ಸಹ). (C. smallpox ಗುಳ್ಳೆಗಳು ಒಟ್ಟಿಗೆ ಕರೆತುಹೋಗುವ ಸಿಡುಬು)

Cónflux ಕಾನ್‌ಫ್ಲಕ್ಸ್ (ನಾ.) = Confluence.

Confócal ಕನ್‌ಫೋಕಲ್ (ಗು.) (ಜ್ಯಾ.) ಸಮಾನ ನಾಭಿ(ಗಳು) ಉಳ್ಳ (C. hyperbolas ಸಮಾನ ನಾಭಿಯ ಅತಿಪರವಲಯಗಳು)

Confórm ಕನ್‌ಫಾರ್ಮ್ (ಕ್ರಿ.) ಒಂದು ಮಾದರಿಯಂತೆ ರಚಿಸು ; — ಅಂತೆ ಮಾಡು ; ಸರಿಹೋಲುವಂತೆ ಮಾಡು ; ಸರಿಹೊಂದಿಸು ; ಸರಿಹೊಂದು ; ಒಗ್ಗು ; ಒಪ್ಪು. (ಸಂದರ್ಭಕ್ಕೆ ತಕ್ಕಂತೆ) ಹೊಂದಿಕೊ. ಅನುಸರಿಸು ; ಅನುವರ್ತಿಸು. **Confórmable** (ಗು.) ಅನುರೂಪವಾದ ; ಅನುಗುಣವಾದ ; ಅನುವರ್ತಿಸುವ ; ಒಪ್ಪುವ ; ತಕ್ಕ ; ಹೊಂದುವ ; ಹೊಂದಿಕೊಳ್ಳುವ ; ಹೊಂದಿಸಿಕೊಳ್ಳಲಾಗುವ ; ನಡಸಲಾಗುವ ; ಒಳಪಟ್ಟು ನಡೆಯುವ. **Conformabílity** (ನಾ.) ; **Confórmably** (ಕ್ರಿ. ವಿ.) ; **Confórmance** — ಮನ್ಸ್ (ನಾ.) ; **Conformátion** ಕಾನ್‌ಫಾರ್ಮೇಷನ್ (ನಾ.) ಒಂದು ವಸ್ತು ರಚನೆಯಾಗುವ ರೀತಿ ; ರಚನೆ ; ಆಕೃತಿ ; ಆಕಾರ ; ರೂಪ ; ವಿನ್ಯಾಸ ; ಹೊಂದಿಕೆ ; ಅನುವರ್ತನೆ. **Confórmity** ಕನ್‌ಫಾರ್ಮಿಟಿ (ನಾ.) ಅನುರೂಪ್ಯ ; ಅನುಗುಣ್ಯ ; ಅನುಸರಣೆ ; ಅನುವರ್ತನೆ ; ಹೋಲಿಕೆ ; ಹೊಂದಿಕೆ. In c. with ಅನುಗುಣವಾಗಿ.

Confórmist ಕನ್‌ಫಾರ್ಮಿಸ್ಟ್ (ನಾ.) 'ಚರ್ಚ್ ಆಫ್ ಇಂಗ್ಲೆಂಡ್' ಮತಪದ್ಧತಿಗಳನ್ನು ಅನುಸರಿಸುವವನು ; — ಗಳ ಅನುವರ್ತಿ.

Confoúnd ಕನ್‌ಫೌಂಡ್ (ಕ್ರಿ. ಸಕ.) (ಉದ್ದೇಶವನ್ನು, ಪ್ರತೀಕ್ಷೆಯನ್ನು) ಮುರಿ, ಭಂಗಮಾಡು, ನಾಶಗೊಳಿಸು, ಹಾಳುಮಾಡು. (C. it ! C. you ! ಹಾಳಾಗಿಹೋಗಲಿ ! ನಾಶವಾಗಿ ಹೋಗು !). (ಬೈಬಲ್) ಅವಮಾನಗೊಳಿಸು ; ನಾಚಿಸು ; ದಿಕ್ಕುತೋರದಂತೆ ಮಾಡು ; ಗಾಬರಿ ಮಾಡು ; ಮಂಕು ಹಿಡಿಸು. (ವಸ್ತುಗಳನ್ನು) ಚೆಲ್ಲಾಪಿಲ್ಲಿಯಾಗಿ ಹಾಕು ; ದಿಕ್ಕಾಪಾಲಾಗಿ ಹಾಕು ; ಅಸ್ತವ್ಯಸ್ತ ಮಾಡು. (ಭಾವನೆಯಲ್ಲಿ) ದಿಗ್ಭ್ರಮೆಗೊಳಿಸು. **Confoúndedly** (ಕ್ರಿ. ವಿ.)

Confratérnity ಕಾನ್‌ಫ್ರಟರ್ನಿಟಿ (ನಾ.) (ಮು., ಧರ್ಮಸಂಸ್ಥೆಯ) ಭ್ರಾತೃವರ್ಗ ; ಸಂಘ ; ಕೂಟ.

Confrére (F) ಕೊ(ಕ)ನ್‌ಫ್ರೇರ್ (ನಾ.) ಸಹೋದ್ಯೋಗಿ ; ಸಹ ಸದಸ್ಯ (ವೈಜ್ಞಾನಿಕ ಮಂಡಲ, ಮೊ. ಗಳಲ್ಲಿ)

Confrónt ಕನ್‌ಫ್ರಂಟ್ (ಕ್ರಿ. ಸಕ.) ಎದುರುಬದುರಾಗಿ ಸಂಧಿಸು ; ಇದಿರು ನಿಲ್ಲು ; ಎದುರಿಗಿರು ; ಎದುರಿಸು ; ಮಾರೊಡ್ಡು ; ಮಾರಾಂತು ನಿಲ್ಲು (ಪ್ರತಿಕಕ್ಷಿಯಾಗಿ, ಲಕ್ಷ್ಯಮಾಡದೆ, ಧಿಕ್ಕರಿಸಿ). (ಒಬ್ಬನನ್ನು ಅವನ ಆಪಾದಕರು, ಮೊ. ರ) ಎದುರಿಗೆ ತಂದು ನಿಲ್ಲಿಸು ; ಮುಖಾಬಿಲೆ ಮಾಡು ; ಹೋಲಿಕೆ ನೋಡು ; ಹೋಲಿಸು ; ತುಲನೆ ಮಾಡು. **Confrontátion** (ನಾ.)

Confúcian ಕನ್‌ಫ್ಯೂಷಿಯನ್ (ಗು., ನಾ.) ಚೀನಾ ದೇಶದ ತತ್ತ್ವಜ್ಞಾನಿಯಾದ ಕನ್‌ಫ್ಯೂಷಿಯಸ್ಸಿನ (ಅನುಯಾಯಿ). **Confúcianism** (ನಾ.) ಕನ್‌ಫ್ಯೂಷಿಯಸ್ ಮತ.

Confúse ಕನ್‌ಫ್ಯೂಸ್ (ಕ್ರಿ. ಸಕ.) ಚೆಲ್ಲಾಪಿಲ್ಲಿಯಾಗಿ, ದಿಕ್ಕಾಪಾಲಾಗಿ, ಮಾಡು ; ಅಣಿಗೆಡಿಸು. ಭ್ರಾಂತಿಗೊಳಿಸು ; ಅಸ್ತವ್ಯಸ್ತ ಮಾಡು ; ದಿಕ್ಕುತೋರದಂತೆ ಮಾಡು ; ಗಾಬರಿ ಹಿಡಿಸು ; ಗಲಿಬಿಲಿ ಮಾಡು ; ಕಂಗೆಡಿಸು. **Confúsedly** — ಸೈಡ್ಲಿ (ಕ್ರಿ. ವಿ.) ; **Confúsedness** (ನಾ.) ; **Confúsion** — ಝನ್ (ನಾ.) ಅಸ್ತವ್ಯಸ್ತ ಮಾಡುವುದು ; ಅಸ್ತವ್ಯಸ್ತತೆ ; ಗಾಬರಿ ; ಗಲಭೆ ; ಗೊಂದಲ ; ಗೋಜು ; ತೊಡಕು.

Confúte ಕನ್‌ಫ್ಯೂಟ್ (ಕ್ರಿ. ಸಕ.) ತಪ್ಪನ್ನು ಮನಗಾಣಿಸು. (ವಾದವನ್ನು) ತಪ್ಪೆಂದು ತೋರಿಸು, ಖಂಡಿಸು ; ಪರಾಭವಿಸು ; ನಿರುತ್ತರನನ್ನಾಗಿ ಮಾಡು ; ಬಾಯಿ ಮುಚ್ಚಿಸು. **Confutátion** ಕಾನ್‌ಫ್ಯುಟೇಷನ್ (ನಾ.)

Congeál ಕಂಜೀಲ್ (ಕ್ರಿ.) (ತಂಪಿಸಿ) ಘನೀಭವಿಸು ; — ಕರಿಸು ; (ರಕ್ತ, ಮೊ.) ಗೆಡ್ಡೆ ಕಟ್ಟು, ಕಟ್ಟಿಸು ; ಹೆತ್ತುಕೊ ; ಗರಣೆ ಕಟ್ಟು, ಕಟ್ಟಿಸು (ರೂಪ. ಸಹ). **Congeálable** (ಗು.) ; **Congeálment** (ನಾ.) ; **Congelátion** ಕಾಂಜಿಲೇಷನ್ (ನಾ.) ಘನೀಕರಣ ; ಘನೀಭವನ ; ಘನೀಕೃತ ಸ್ಥಿತಿ ; ಘನೀಕೃತ ವಸ್ತು ; ಗೆಡ್ಡೆ ; ಗರಣೆ.

Cóngener ಕಾಂಜಿನರ್ (ನಾ., ಗು.) ಒಂದೇ ಜಾತಿಯ (ವಸ್ತು) ; ಸಜಾತೀಯ (ವಸ್ತು) ; ಸಂಬಂಧವುಳ್ಳ (ವಸ್ತು). **Congenéric** — ನೆರಿಕ್ (ಗು.) ಒಂದೇ ಜಾತಿಯ, ತೆರದ, ಕುಲದ ; ಸ್ವಭಾವದಲ್ಲಿ, ಹುಟ್ಟಿನಲ್ಲಿ, ಸಂಬಂಧವುಳ್ಳ. **Congénerous** ಕಂಜೆನೆರಸ್ (ಗು.) ಒಂದೇ ಜಾತಿಯ ; ಒಂದೇ ತೆರದ. (ಶಿಥಿಲವಾಗಿ) ಒಂದೇ ಬುಡಕಟ್ಟಿನ. C. muscles ಒಂದೇ ಕಾರ್ಯದಲ್ಲಿ ಸಹವರ್ತಿಯಾಗಿರುವ ಸ್ನಾಯುಗಳು : ಸಹ ಸ್ನಾಯುಗಳು.

Congénial ಕಂಜೀನಿಯಲ್ (ಗು.) (ಮನುಷ್ಯರು, ನಡತೆ, ಮೊ. ಗಳ ವಿಷಯದಲ್ಲಿ) ಸಜಾತೀಯ, ಒಂದೇ ಸ್ವಭಾವದ, ಅನುಗುಣವಾದ, ಸಹಾನುಭೂತಿಯುಳ್ಳ ; ಸಮರಸವಾದ ; ಹೊಂದಿಕೆಯುಳ್ಳ ; ಹೊಂದುವ ; ಸರಿಹೋಗುವ ; ಒಗ್ಗುವ ; ಹಿತಕರ. **Congeniálity** — ಆ್ಯಲಿಟಿ (ನಾ.) ; **Congénially** — ಅಲಿ (ಕ್ರಿ. ವಿ.)

Congénital ಕಂಜೆನಿಟಲ್ (ಗು.) ಹುಟ್ಟಿನಿಂದ ಬಂದ ; ಕೂಡ ಹುಟ್ಟಿದ ; ಆಜನ್ಮ ; ಸಹಜಾತ ; ಆಗರ್ಭ (ಮು., ರೋಗ, ಕುಂದು, ವಿಕಾರ, ಮೊ.). **Congénitally** (ಕ್ರಿ. ವಿ.)

Cónger ಕಾಂಗರ್ (ನಾ.) ಸಮುದ್ರದ ಒಂದು ದೊಡ್ಡ ಹಾವುಮೀನು (= C. eel)

Congéries ಕೊಂ(ಕಾಂ)ಜೀಯರಿಈಸ್ (ನಾ.) ರಾಶಿ ; ಸಮುದಾಯ ; ಒಟ್ಟು ; ಗುಂಪು.

Congéstion ಕಂಜೆಸ್ಚ್ಯನ್ (ನಾ.) ಯಾವುದಾದರೂ ಒಂದು ದೇಹಭಾಗದಲ್ಲಿ ರಕ್ತವು ವಿಪರೀತವಾಗಿ ಸೇರುವುದು : ರಕ್ತ ಸಂಚಯ ; ರಕ್ತ ಕಟ್ಟು. (ರೂಪ.) (ಜನಸಮುದಾಯ, ಬಂಡಿಗಳು, ಮೊ. ಗಳ) ಕಿಕ್ಕಿರಿತ ; ಸಂದಣಿ ; ನೆರೆತ ; ನಿಬಿಡತೆ. **Congést** (ಕ್ರಿ.) ವಿಪರೀತವಾಗಿ ಸೇರು ; ಕಿಕ್ಕಿರಿ ; ಇಡಿಕಿರಿ ; ಸಂದಣಿಸು ; ನೆರೆ ; ಅತಿ ಒತ್ತಾಗಿರು (ಮು., ಭೂ. ಕೃ. ಪ್ರಯೋಗ). ರಕ್ತ ಕಟ್ಟು. **Congésted** (ಗು.) ಕಿಕ್ಕಿರಿದ. ರಕ್ತ ಕಟ್ಟಿದ. **Congéstive** (ಗು.) ರಕ್ತ ಸಂಚಯದ ; ರಕ್ತ ಸಂಚಯದಿಂದಾದ.

Cónglobate ಕಾನ್‌ಗ್ಲೊಬೇಟ್ (ಕ್ರಿ., ಗು.) ಉಂಡೆಯಾಗು ; ಮುದ್ದೆಯಾಗು, ಮಾಡು ; ಗೋಳಾಕಾರವಾಗು, ಮಾಡು ; ಉಂಡೆಯಾದ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುದ್ದೆಗೂಡಿದ ; ಗೋಳಾಕಾರವಾದ. **Conglóbe** ಕನ್‌ಗ್ಲೋಬ್ (ಕ್ರಿ.) = Conglobate. **Conglobátion** (ನಾ.)

Conglómerate ಕಂಗ್ಲಾಮೆರೆಟ್ (ಗು., ನಾ.), — ಮೆರೇಟ್ (ಕ್ರಿ.) ಮುದ್ದೆಗಟ್ಟಿದ ; ಉಂಡೆಯಾದ ; ಪಿಂಡೀಕೃತ. (ಭೂ. ವಿ.) (ನೀರಿನ ಹೊಡೆತದಿಂದ ಸವೆದ ಕಲ್ಲುಚೂರುಗಳು) ಒಟ್ಟುಗೂಡಿ ಅಂಟಿಕೊಂಡಾದ ಮುದ್ದೆ : ಚೂರುಗಲ್ಲುಂಡೆ. (ಕ್ರಿ.) ಮುದ್ದೆಗಟ್ಟು ; — ಗೂಡಿಸು (ರೂಪ. ಸಹ). **Conglomerátion** (ನಾ.)

Conglútinate ಕಂಗ್ಲೂ (ಗ್ಲ್ಯೂ)ಟಿನೇಟ್ (ಕ್ರಿ., ಗು.) ಒಟ್ಟಿಗೆ ಅಂಟಿಕೊ ; — ಅಂಟಿಸು ; ಸಂಶ್ಲೇಷಿಸು. (ಗು.) (ಸ. ವಿ.) ಅಂಟಿಸಿದಂತೆ ಒಟ್ಟು ಗೂಡಿರುವ. **Conglutinátion** (ನಾ.)

Cóngo ಕಾಂಗೊ (ನಾ.) ಆಫ್ರಿಕದ ಪಶ್ಚಿಮ ತೀರದಲ್ಲಿಯ ಒಂದು ದೇಶದ ಹೆಸರು. ಕಾಂಗೊದೇಶದ ನೀಗ್ರೋಮನುಷ್ಯ. C. monkey ದ. ಅಮೆರಿಕದ ಒಂದು ಕಪ್ಪುಜಾತಿಯ ಕಪಿ. C. snake ನೀಲಿಕಪ್ಪು ಬಣ್ಣದ ಒಂದೆರಡು ಜಾತಿಯ ಉಭಯಜೀವಿಗಳ ಹೆಸರು.

Cóngou ಕಾಂಗು(ಗೊ), **Cóngo** (ನಾ.) ಚೀನಾ ದೇಶದಿಂದ ಆಮದು ಮಾಡಿದ ಒಂದು ತೆರದ ಕಪ್ಪು ತೇಯೆಲೆ.

Congrátulate ಕಂಗ್ರ್ಯಾಟ್ಯುಲೇಟ್ (ಕ್ರಿ. ಸಕ.) (ಒಬ್ಬನಿಗಾದ ಜಯ, ಮೊ. ಕ್ಕಾಗಿ) ಸಂತೋಷ ತಿಳುಹು, ನಲ್ಮೆ ಹೇಳು ; ಅಭಿನಂದಿಸು. C. oneself ಧನ್ಯನೆಂದು ಭಾವಿಸು. **Congrátulant** —ಲಂಟ್ (ಗು., ನಾ.) ಅಭಿನಂದಿಸುವ ; ಅಭಿನಂದಕ. **Congratulátion** — ಲೇಷನ್ (ನಾ.) ಅಭಿನಂದಿಸುವುದು ; (ಬ. ವ. ದಲ್ಲಿ) ಅಭಿನಂದನಗಳು ; ನಲವರಿಕೆ. **Congrátulative** — ಲಟಿವ್ (ಗು.) ; **Congrátulator** — ಲೇಟರ್ (ನಾ.) ; **Congrátulatory** — ಲಟರಿ, — ಲೇಟರಿ (ಗು.) ಅಭಿನಂದಕ.

Cóngregate ಕಾಂಗ್ರಿಗೇಟ್ (ಕ್ರಿ.) ನೆರೆ ; ಒಟ್ಟುಗೂಡು, ಗೂಡಿಸು ; ಗುಂಪು ಸೇರು, ಸೇರಿಸು ; ಮಂದಿಗೂಡು, ಗೂಡಿಸು. **Congregátion** (ನಾ.) ಒಟ್ಟುಗೂಡುವುದು, ಗೂಡಿಸುವುದು ; ಗುಂಪುಸೇರುವುದು, ಸೇರಿಸುವುದು. ನೆರವಿ ; ಗುಂಪು ; ಗೋಷ್ಠಿ ; ಸಮೂಹ ; ಸಭೆ ; ಪರಿಷತ್ತು ; ಪರಿಷೆ. ಒಂದು ವಿಶ್ವವಿದ್ಯಾನಿಲಯದ ಸದಸ್ಯರ ಸಾಮಾನ್ಯ ಸಭೆ.. ದೇವತಾರಾಧನೆಗಾಗಿ ಸೇರಿದ ಜನರ ತಂಡ. **Congregátional** (ಗು.) ಸಭೆಯ ; ಗೋಷ್ಠಿಯ ; ನೆರವಿಯ. (ಕ್ರೈಸ್ತ ಮತಸಂಬಂಧದ) ಸ್ಥಳೀಯ ಸಭಾಧಿಕಾರದ ; ಸ್ಥಳ ಸಭಾ ಪದ್ಧತಿಯ. **Congregátionalism** (ನಾ.) ಒಂದು ಪ್ರಾಂತದ (ಕ್ರೈಸ್ತ) ಮತಸಂಬಂಧದ ನ್ಯಾಯನಿರ್ಣಯ, ಶಾಸನಾಧಿಕಾರ, ದಂಡಾಧಿಕಾರ, ಮೊ. ಆಡಳಿತಗಳನ್ನು ಆಯಾ ಪ್ರಾಂತದ ಧರ್ಮಾಧಿಕಾರಿಮಂಡಲಿಗೇ ವಹಿಸಿರುವ ಪದ್ಧತಿ : ಸ್ಥಳಸಭಾ ಪದ್ಧತಿ. **Congregátionalist** (ನಾ.) ; **Congregátionalize** (ಕ್ರಿ. ಸಕ.)

Cóngress ಕಾಂಗ್ರೆಸ್ (ನಾ.) ಒಟ್ಟುಗೂಡಿಕೆ ; ಸಂಮೇಳನ ; (ಯಾವುದಾದರೂ ವಿಚಾರವನ್ನು) ಚರ್ಚೆಮಾಡಲು ಸೇರುವ ನಿಯೋಜಿತರ ವಿಧಿವಿಹಿತ ಸಂಮೇಳನ (Social Science C. ಸಾಮಾಜಿಕಶಾಸ್ತ್ರ ಸಂಮೇಳನ) ; ಪರಿಷತ್ತು ; ಸಭೆ ; 'ಕಾಂಗ್ರೆಸ್ಸು'. ಅಮೆ. ಸಂ. ಗಳ, ದಕ್ಷಿಣ ಮತ್ತು ಮಧ್ಯ ಅಮೆರಿಕದ ಪ್ರಜಾರಾಜ್ಯಗಳ, ಶಾಸನ ಸಭೆ; ಈ ಸಭೆಯ ಅಧಿವೇಶನ. ಇಂಡಿಯಾದೇಶದ ರಾಷ್ಟ್ರೀಯ ಸಭೆ. C.-man ಕಾಂಗ್ರೆಸ್ಸಿನ ಸದಸ್ಯ. **Congréssional** ಕನ್‌ಗ್ರೆಷನಲ್ (ಗು.)

Cóngreve ಕಾಂಗ್ರೀವ್ (ಗು., ನಾ.) C. (match) ಗೀರುವುದರಿಂದ ಹೊತ್ತಿಕೊಳ್ಳುವ ಒಂದು ತೆರದ ದೀಪದಕಡ್ಡಿ. C. (rocket) ಹಿಂದೆ ಯುದ್ಧದಲ್ಲಿ ಉಪಯೋಗಿಸುತ್ತಿದ್ದ ಒಂದು ತೆರದ ಅಗ್ನಿಬಾಣ. (Sir W. Congreve ಎಂಬಾತನ ಹೆಸರಿನಿಂದ)

Cóngruence, -cy ಕಾಂಗ್ರುಎನ್ಸ್, — ಎನ್ಸಿ (ನಾ.) ಹೊಂದಿಕೆ ; ಅನುರೂಪತೆ ; ಅನುಗುಣ್ಯ ; ಸಾಮಂಜಸ್ಯ. (ಗಣಿತ) ಒಂದು ನಿರ್ದಿಷ್ಟ ಸಂಖ್ಯೆಯಿಂದ ಭಾಗಮಾಡಿದರೆ ಸಮಾನ ಶೇಷ ಬರುವ ಗುಣ : ಸಮಾನ ಶೇಷತೆ. **Cóngruent** (ಗು.) ಹೊಂದಿಕೆಯುಳ್ಳ ; ಹೊಂದುವ ; ಸಮಂಜಸ ; ಸಂಗತ ; ಅನುಗುಣ. (ಗಣಿತ) ಸಮಾನ ಶೇಷವುಳ್ಳ. (ಜ್ಯಾ.) ಸಂಪೂರ್ಣವಾಗಿ ಆದಿಯಿಂದ ತುದಿಯ ವರೆಗೂ ಒಂದರಮೇಲೊಂದು ಹೊಂದಿಕೊಳ್ಳುವಂತೆ ಇಡಲಾಗುವ : ಆದ್ಯಂತ ಸಮ. **Cóngruous** — ಅಸ್ (ಗು.) ಹೊಂದಿಕೊಳ್ಳುವ ; ಸಮಂಜಸ ; ತಕ್ಕ ; ಯೋಗ್ಯ. **Cóngruously** (ಕ್ರಿ. ವಿ.) ; **Congrúity** ಕನ್‌ಗ್ರೂಯಿಟಿ (ನಾ.)

Cónic, etc. Cone ನೋಡಿ.

Cónifer ಕೋನಿಫರ್ (ನಾ.) ಶಂಕುವಿನಾಕಾರದ ಕಾಯಿ ಬಿಡುವ ಒಂದು ನಿತ್ಯಹಸುರು ಮರ. **Coníferous** ಕೊನಿಫೆರಸ್ (ಗು.) ಶಂಕುವಿನಾಕಾರದ ಕಾಯಿಬಿಡುವ. **Cóniform** ಕೋನಿಫಾರ್‌ಮ್ (ಗು.) ಶಂಕುವಿನಾಕಾರದ.

Cónine ಕೋನೈನ್, **Cóniine** ಕೋನಿಇನ್ (ನಾ.) 'ಹೆಮ್‌ಲಾಕ್' ಎಂಬ ವಿಷಸಸ್ಯದ ಸಾರದ್ರವ್ಯವಾದ ಒಂದು ಸಸ್ಯಕ್ಷಾರ.

Conjécture ಕಂಜೆಕ್ಚ್ಯುರ್, — ಕ್ಚರ್ (ನಾ., ಕ್ರಿ.) ತಕ್ಕಷ್ಟು ಆಧಾರವಿಲ್ಲದ ಕಲ್ಪನೆ, ಅಭಿಪ್ರಾಯ ; ಊಹೆ ; ಅನುಮಾನ (A c. ಒಂದು ಊಹೆ ; ಊಹಿಸಿದ ಪಾಠ). (ಕ್ರಿ.) ಊಹಿಸು ; ಅನುಮಾನಿಸು : ಪಾಠವನ್ನು ಊಹಿಸು. **Conjécturable** (ಗು.) ; **Conjécturably** (ಕ್ರಿ. ವಿ.) ; **Conjéctural** (ಗು.) ಊಹಾತ್ಮಕ ; ಅನುಮಾನಿಕ. **Conjécturally** (ಕ್ರಿ. ವಿ.)

Cónjee, Cóngee ಕಾಂಜಿ (ನಾ.) ಗಂಜಿ. C.-house ಸೈನಿಕರ ಸೆರೆಮನೆ (ಅಲ್ಲಿಯ ಸೆರೆಯಾಳುಗಳಿಗೆ ಆಹಾರವು ಗಂಜಿಯಾದುದರಿಂದ)

Conjoín ಕಂಜಾಯ್‌ನ್ (ಕ್ರಿ.) ಒಟ್ಟುಸೇರು, ಸೇರಿಸು ; ಒಟ್ಟುಗೂಡು, ಗೂಡಿಸು ; ಒಂದುಮಾಡು ; ಒಂದಾಗು. **Conjoínt** (ಗು.) ಒಟ್ಟುಗೂಡಿದ ; ಜೊತೆಸೇರಿದ ; ಸಂಯುಕ್ತ. **Conjoíntly** (ಕ್ರಿ. ವಿ.)

Cónjugal ಕಾಂಜುಗಲ್ (ಗು.) ಮದುವೆಯ ; ವೈವಾಹಿಕ ; ದಾಂಪತ್ಯದ ; ಗಂಡಹೆಂಡಿರ (C. rights ದಾಂಪತ್ಯದ ಹಕ್ಕುಬಾಧ್ಯತೆಗಳು. C. affection ದಾಂಪತ್ಯ ಪ್ರೇಮ). **Conjugálity** — ಗ್ಯಾಲಿಟಿ (ನಾ.) ದಾಂಪತ್ಯ. **Cónjugally** — ಗಲಿ (ಕ್ರಿ. ವಿ.)

Cónjugate ಕಾಂಜುಗೇಟ್ (ಕ್ರಿ.), — ಗೆಟ್ (ಗು., ನಾ.) (ವ್ಯಾ.) ಧಾತುರೂಪ ನಡಸು. ಕೂಡು ; ನೆರೆ ; ಸಂಭೋಗಿಸು. (ಜೀ. ವಿ.) ಒಂದುಗೂಡು ; ಸಂಯುಕ್ತವಾಗು. (ಗು.) ಒಟ್ಟುಗೂಡಿದ ; ಜೊತೆಗೂಡಿದ ; ಸಂಯುಕ್ತ ; ಸಂಬದ್ಧ ; ಯುಗ್ಮ. (ವ್ಯಾ.) ಒಂದೇ ಮೂಲದಿಂದ, ಪ್ರಕೃತಿಯಿಂದ, ಬಂದ. (ಸ. ವಿ.) (ಎಲೆ) ಜೋಡಿ ಜೋಡಿಯಾಗಿರುವ. (ಗಣಿತ, ಭೌ. ವಿ.) ಏಕ ಕಾಲದಲ್ಲಿದ್ದು ಗುಣದಲ್ಲಿ ಪರಸ್ಪರ ಸ್ಥಾನಭೇದ ಮಾಡಿಕೊಳ್ಳಲಾಗುವ (ಎರಡು ಮೊತ್ತಗಳು, ಬಿಂದುಗಳು, ರೇಖೆಗಳು, ಅಕ್ಷಗಳು, ವಕ್ರರೇಖೆಗಳು, ಮೊ.) : ಅನುಬದ್ಧ. (ನಾ.) ಸಮಾನ ವ್ಯುತ್ಪತ್ತಿಯ ಪದ ; ಪರಸ್ಪರ ಸ್ಥಾನಭೇದ ಮಾಡಿಕೊಳ್ಳಲಾಗುವ ವಸ್ತು : ಪರ್ಯಾಯ ವಸ್ತು. **Conjugátion** (ನಾ.) ಒಂದುಗೂಡುವುದು ; ಸಂಯೋಜನ ; ಸಂಯೋಗ. (ವ್ಯಾ.) ಧಾತುರೂಪ (ನಡಸುವುದು). (ಜೀ. ವಿ.) ಪುನರುತ್ಪತ್ತಿಗಾಗಿ ಗುಣಸಾಮ್ಯವುಳ್ಳ ಎರಡು ಜೀವಕಣಗಳ ಸಂಯೋಗ. **Conjugátional** (ಗು.) ಸಂಯೋಗದ. (ಶ. ವಿ.) ಎರಡು ಎಲುಬುಗಳ ಸಂಧಿಯಲ್ಲಿ ನೆಲಸಿರುವ : ಎಲುಬುಸೇರುವೆಯಲ್ಲಿಯ.

Conjúnction ಕಂಜಂಕ್‌ಷನ್ (ನಾ.) ಸೇರಿಕೆ ; ಕೂಟ ; ಸಂಯೋಗ ; ಸಂಗಮ ; ಸಂಮೇಳ ; ಸಂಧಿ (In c. ಒಟ್ಟಿಗೆ). (ಖ. ವಿ.) ಎರಡು ಆಕಾಶ ಕಾಯಗಳ ಸಮಾಗಮ. (ವ್ಯಾ.) ಸಂಬಂಧಾವ್ಯಯ ; ಸಮುಚ್ಚಯಾವ್ಯಯ. **Conjúnctional** (ಗು.) ; **Conjúnctionally** (ಕ್ರಿ. ವಿ.) ; **Conjúnct** (ಗು., ನಾ.) ಒಟ್ಟುಗೂಡಿಸಿದ, ಗೂಡಿದ ; ಸೇರಿಕೊಂಡ ; ಸಂಯೋಜಿತ ; ಸಂಯುಕ್ತ. (ನಾ.) ಸಂಯುಕ್ತ ವಸ್ತು ; ಸಂಗಾತಿ. **Conjúnctly** (ಕ್ರಿ. ವಿ.) ; **Conjúnctive**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಗು., ನಾ.) ಸಂಯೋಜಕ ; ಸಂಬಂಧಕ ; ಕೂಡಿಸುವ. (C. tissue ಸಂಯೋಜಕ ಅಂಗರಚನಾ ಸಾಮಗ್ರಿ). (ವ್ಯಾ.) ಸಮುಚ್ಚಯಾತ್ಮಕ ; ಸಂಯೋಜನಾರ್ಥಕ. **Conjúnctively** (ಕ್ರಿ. ವಿ.) ; **Conjúncture** ಕಂಜಂಕ್ಚ್ಯುರ್, —ಕ್ಚರ್ (ನಾ.) ಸಂದರ್ಭ; ಸನ್ನಿವೇಶ ; ಸಂಧಿ ಕಾಲ.

Conjunctíva ಕಾಂಜಂಕ್ಟೈವ (ನಾ.) ಕಣ್ಣುರೆಪ್ಪೆಯ ಒಳಮೈಯನ್ನೂ ಕಣ್ಣುಗುಡ್ಡೆಯನ್ನೂ ಆವರಿಸಿರುವ ಆರ್ದ್ರ ಚರ್ಮ. **Conjunctivítis** ಕಂಜಂಕ್ಟಿವೈಟಿಸ್ (ನಾ.) (ರೋಗ) ಕಣ್ಣಿನ ಆರ್ದ್ರಚರ್ಮದ ಊತ.

Cónjure ಕಂಜರ್, **Conjúre** ಕಂಜ್ಯೂರ್ (ಕ್ರಿ.) ೧. (ಕಂಜ್ಯೂರ್) ಗಂಭೀರ ಭಾವದಿಂದ ಕೇಳಿಕೊ ; ಆಣೆಯಿಟ್ಟು ಪ್ರಾರ್ಥಿಸು. ೨. (ಕಂಜರ್) ಭೂತವನ್ನು (ಮಂತ್ರ ಹಾಕಿ) ಎಬ್ಬಿಸು ; ಇಂದ್ರಜಾಲದಿಂದ ನಡಸು, ಹೊರದೆಗೆ, ಹೊರಸಾಗಿಸು. ಇಂದ್ರಜಾಲ ಮಾಡು ; ಸ್ವಾಭಾವಿಕ ವಸ್ತುಗಳ ಮೂಲಕ ಅದ್ಭುತ ಕ್ರಿಯಾಪ್ರದರ್ಶನ ಮಾಡು, ಅದ್ಭುತ ಕಾರ್ಯ ಮಾಡು (A name to c. with ವಿಶೇಷ ಮಹಿಮೆಯುಳ್ಳ ಹೆಸರು). C. up ಕಣ್ಣಿಗೆ (ಮನಸ್ಸಿಗೆ) ಕಟ್ಟುವಂತೆ ಮಾಡು. **Cónjurer, -or** ಕಂಜರರ್ (ನಾ.) ಇಂದ್ರಜಾಲ ಮಾಡುವವನು ; ಐಂದ್ರಜಾಲಿಕ ; ಮಾಟಗಾರ ; ಮಂತ್ರವಾದಿ ; ಗಾರುಡಿಗ (ರೂಪ. ಸಹ). ಅತಿ ಚತುರ. (ಕಂಜೂರರ್) ಇತರರೊಡನೆ, ಭಾಷೆಗೆ, ಆಣೆಗೆ, ಕಟ್ಟುಬಿದ್ದವನು ; ಗಂಭೀರ ಭಾವದಿಂದ ಪ್ರಾರ್ಥಿಸಿಕೊಳ್ಳುವವನು.

Conk[1] ಕಾಂಕ್ (ನಾ.) (ಅಸಂ.) ಮೂಗು. **Cónky** (ಗು., ನಾ.) ದೊಡ್ಡ ಮೂಗಿನ(ವನು)

Conk[2] ಕಾಂಕ್ (ಕ್ರಿ. ಅಕ.) (ಬಳ. ಮಾ.) (ಸಾ., ಯಂತ್ರ ಸಲಕರಣೆ, ವೊ. ಗಳಲ್ಲಿ) ಮುರಿದುಬೀಳು ; ಕೆಟ್ಟುಹೋಗು.

Cónnate ಕಾನೇಟ್ (ಗು.) ಒಡಹುಟ್ಟಿದ ; ಕೂಡಹುಟ್ಟಿದ ; ಹುಟ್ಟಿನಿಂದ ಬಂದ ; ಅಗರ್ಭ. (ಎರಡು ಅಥವಾ ಹೆಚ್ಚಾದ ಗುಣಗಳ ವಿಷಯವಾಗಿ) ಒಟ್ಟಿಗೆ ಹುಟ್ಟಿದ, ಸಹಜಾತ, ಸಮಾನ ಮೂಲ. (ಸ. ವಿ., ಪ್ರಾ. ವಿ.) (ಎಲೆಗಳು ತಮ್ಮ ಬುಡ, ವೊ. ಗಳಲ್ಲಿ) ಹುಟ್ಟಿನಿಂದ ಸೇರಿಕೊಂಡಿರುವ ; ಆಜನ್ಮ ಸಂಯುಕ್ತ. ಒಂದೇ ಸ್ವಭಾವದ ; ಸಜಾತೀಯ ; ಪ್ರಕೃತಿ ಸಾಮ್ಯವುಳ್ಳ, ಸಂಬಂಧವುಳ್ಳ. **Connátion** ಕನೇಷನ್ (ನಾ.) ಆಜನ್ಮ ಸಂಯುಕ್ತ ಸ್ಥಿತಿ. **Connátural** ಕನ್ಯಾಚ್ಯುರಲ್ (ಗು.) ಹುಟ್ಟಿನಿಂದ ಬಂದ ; ಸಹಜ ; ಸ್ವಭಾವ ಸಿದ್ಧ ; ಒಂದೇ ಸ್ವಭಾವದ. **Connáturally** (ಕ್ರಿ. ವಿ.)

Connéct ಕನೆಕ್ಟ್ (ಕ್ರಿ.) ಜೋಡಿಸು ; ಕೂಡಿಸು ; ಕೂಡು ; ಸೇರಿಸು ; ಸೇರು ; ಸಂಯೋಜಿಸು ; ಸಂಯೋಗವಾಗು. (ವಾದ, ಅನುವಾದ, ವೊ. ಗಳಲ್ಲಿ) ಹೊಂದಿಕೆ ಮಾಡು, ಹೊಂದಿಸು. ಸಂಬಂಧಿಸು. (ಕರ್ಮಣಿ) ಸಂಬಂಧವುಳ್ಳದ್ದಾಗಿರು ; ಸಂಬದ್ಧವಾಗಿರು ; (ಮನಸ್ಸಿನಲ್ಲಿ) ಸಂಬಂಧ ಕಲ್ಪಿಸು. (ಇತರರೊಡನೆ) ಸಂಬಂಧ ಬೆಳಸು (ಸಾ., ಕರ್ಮಣಿ, ಅಥವಾ ಸ್ವಾರ್ಥವಾಚಕ). **Connécter, -or** (ನಾ.) ; **Connéctible** (ಗು.) ; **Connécted** (ಗು.) (ಕ್ರಿಯಾರ್ಥಗಳಲ್ಲಿ). ಪರಂಪರೆಯಲ್ಲಿ, ಕ್ರಮ ಸರಣಿಯಲ್ಲಿ, ಸೇರಿದ ; ಸಮನ್ವಿತ ; ಹೊಂದಿಕೆಯುಳ್ಳ ; ನೆಂಟತನವುಳ್ಳ ; ಸಂಬಂಧವುಳ್ಳ (He is well c. ಅವನು ಒಳ್ಳೆಯ ನೆಂಟತನಕ್ಕೆ ಸೇರಿದವನು). **Connéctedly** (ಕ್ರಿ. ವಿ.) ; **Connéctedness** (ನಾ.) ; **Connéctive** (ಗು.) ಸೇರಿಸುವ ; ಕೂಡಿಸುವ : ಸೇರಿಸಲಾಗುವ ; ಸಂಬಂಧಕ. [C. tissue (of the body) (ದೇಹದ ಅಂಗಗಳನ್ನು ಸೇರಿಸಿ ಅವಕ್ಕೆ ಆಧಾರಕೊಡುವ ತಂತುಮಯವಾದ) ಸಂಯೋಜಕ ಅಂಗಾಂಶ]. **Connéction, -néxion** (ನಾ.) ಕೂಡಿಸುವುದು ; ಸೇರಿಸುವುದು ; ಕೂಡಿರುವ ಸ್ಥಿತಿ,ಸಂಬಂಧ ; ಸೇರಿಕೆ : ಸೇರುವೆ (Cut the c. ಸಂಬಂಧ ಹರಿ ; ಇನ್ನು ಅದರ ವಿಚಾರವನ್ನು ಹಚ್ಚಿಕೊಳ್ಳಬೇಡ). ಸಂದರ್ಭ (In this c. ಈ ಸಂದರ್ಭದಲ್ಲಿ). ಸೇರಿಸುವ ಭಾಗ ; ಸಂಬಂಧಕ (Hot water connections ಬಿಸಿ ನೀರನ್ನು ಹಾಯಿಸುವ ಸಂಬಂಧಕಗಳು). ವ್ಯಕ್ತಿಸಂಬಂಧ ; ಸಂಪರ್ಕ ; ಸಂಸರ್ಗ ; ಸ್ತ್ರೀಪುರುಷ ಸಂಬಂಧ ; ಸಂಗ [Criminal c. (ಸಂಕ್ಷಿಪ್ತ : Crim. Con.) ಅಕ್ರಮ ಸಂಗ]. ಕುಟುಂಬ ಸಂಬಂಧ ; ನೆಂಟ ; ಬಂಧು ; ಸಂಬಂಧಿ. ಮತಮಂಡಲಿ (Wesleyan c.). ಗಿರಾಕಿ, ವೊ. ರ ಮಂಡಲಿ (Business with a good c. ಒಳ್ಳೆಯ ಗಿರಾಕಿಗಳೊಡನೆ ವ್ಯಾಪಾರಸಂಬಂಧ). In c. with ಸಂಬಂಧವಿರುವ (ಮು., ಪ್ರಯಾಣಿಕರು ಒಂದರಿಂದಿಳಿದು ಮತ್ತೊಂದಕ್ಕೆ ಹತ್ತಲಾಗುವಂತೆ ಅನುಕೂಲಸಿರುವ ರೈಲುಬಂಡಿ, ಹಡಗು, ವೊ.)

Conníve ಕನೈವ್ (ಕ್ರಿ. ಅಕ.) (ಆಕ್ಷೇಪಿಸಬೇಕಾದ ವಿಚಾರವನ್ನು) ಕಂಡೂ ಕಾಣದಂತಿರು ; ತಪ್ಪಿತವನ್ನು ಒಳಹಾಕಿಕೊ. **Connívance** — ವೆನ್ಸ್ (ನಾ.) ಕಂಡೂ ಕಾಣದಂತಿರುವುದು ; ಪರೋಕ್ಷ ಸಮ್ಮತಿ (Done with his c.)

Connívent ಕನೈವೆಂಟ್ (ಗು.) (ಜೀ. ವಿ.) ಕ್ರಮೇಣ ಹತ್ತಿರಕ್ಕೆ ಬಂದು ತುದಿಗೂಡುವ ; ಅಗ್ರ ಸಂಗಮಿ (ಹೂವುಗಳಲ್ಲಿ ಕೇಸರಾಗ್ರ, ವೊ. ವು., ಕೆಲವು ಕೀಟಗಳಲ್ಲಿ ರೆಕ್ಕೆಗಳು)

Connoisseúr ಕೊನೆಸಾರ್, ಕಾನಿಸ್ಯೂರ್ (ನಾ.) (ಅಭಿರುಚಿಯಲ್ಲಿ, ರಸಿಕತೆಯಲ್ಲಿ) ನುರಿತ, ಪ್ರವೀಣ, ವಿಮರ್ಶಕ ; ರಸಜ್ಞ ; ಸಾರಜ್ಞ ; ಅಭಿಜ್ಞ ; ಪರಿಣತ. **Connoisseúrship** (ನಾ.)

Connóte ಕನೋಟ್ (ಕ್ರಿ. ಸಕ.) (ಪದಗಳ ವಿಷಯದಲ್ಲಿ) ಮೂಲಾರ್ಥದ ಜೊತೆಗೆ ಹೆಚ್ಚರ್ಥ ಕೊಡು ; ಪದದ ಒಳಅರ್ಥವನ್ನು ಸೂಚಿಸು. (ವಿಷಯ, ವೊ. ಗಳಲ್ಲಿ) ಅರ್ಥಾತ್ ಸಿದ್ಧವಾಗು. (ತರ್ಕ) ಲಕ್ಷಣ ಸೂಚಿಸು. (ಶಿಥಿಲವಾಗಿ) ಅರ್ಥವಾಗು, ಕೊಡು. **Connótative** — ಟಟಿವ್ (ಗು.) ; **Connótatively** (ಕ್ರಿ. ವಿ.) ; **Connotátion** ಕಾನೊಟೇಷನ್ (ನಾ.)

Connúbial ಕನ್ಯೂಬಿಯಲ್ (ಗು.) ಮದುವೆಯ ; ವೈವಾಹಿಕ ; ಗಂಡಹೆಂಡಿರ ; ದಾಂಪತ್ಯದ. **Connubiálity** — ಆ್ಯಲಿಟಿ (ನಾ.) ; **Connúbially** — ಯಲಿ (ಕ್ರಿ. ವಿ.)

Cónoid. **Cone** ನೋಡಿ.

Cónquer ಕಾಂಕರ್ (ಕ್ರಿ.) ಗೆಲ್ಲು ; ಗೆದ್ದುಕೊ ; ಜಯಿಸು ; ನಿಗ್ರಹಿಸು. (ಅಭ್ಯಾಸ, ರಾಗೋದ್ರೇಕ, ವೊ. ನ್ನು) ಒತ್ತು, ಅದುಮಿಡು, ದಮನ ಮಾಡು ; ಸಂಯಮಿಸು. (Stoop to c. ಕಾರ್ಯಸಾಧನೆಗಾಗಿ ತಗ್ಗಿ ನಡೆ). **Cónquerable** (ಗು.) ; **Cónqueror** (ನಾ.) ಗೆಲ್ಲುವವನು ; ಗೆದ್ದವನು ; ಜಯಶಾಲಿ ; ವಿಜಯಿ. (ಬಳ. ಮಾ.) Play the c. ತೀರ್ಮಾನದ ಆಟವಾಡು. **Cónquest** — ಕ್ವೆಸ್ಟ್ (ನಾ.) (ದೇಶ, ವೊ. ನ್ನು) ಅಧೀನ ಮಾಡಿಕೊಳ್ಳುವುದು ; ಗೆದ್ದ ರಾಜ್ಯ. ಗೆಲವು ; ಜಯ. ಯಾರ ಪ್ರೀತಿಯನ್ನು ಗೆದ್ದುಕೊಂಡಿದೆಯೋ ಅವನು(ಳು). Make a c. (of) ಒಬ್ಬನ(ಳ) ಪ್ರೀತಿಯನ್ನು ಗೆಲ್ಲು, ಸಂಪಾದಿಸು ; ಪ್ರೇಮ ಸಂಪಾದಿಸು ; ಒಲಿಸಿಕೊ.

Consanguíneous ಕಾನ್‌ಸ್ಯಾಂಗ್ವಿನಿಯಸ್ (ಗು.), **Consánguine** — ಗ್ವಿನ್ (ಗು.) ಒಂದೇ ರಕ್ತದ ; ರಕ್ತಸಂಬಂಧವುಳ್ಳ ; ಸಗೋತ್ರ. **Consanguínity** (ನಾ.) ರಕ್ತಸಂಬಂಧ (ರೂಪ. ಸಹ)

Cónscience ಕಾನ್ಷನ್ಸ್ (ನಾ.) ಒಪ್ಪುತಪ್ಪುಗಳ ಪ್ರಜ್ಞೆ ; ಸದಸದ್ವಿವೇಚನೆ ; ಮನಸ್ಸಾಕ್ಷಿ ; ಆತ್ಮಸಾಕ್ಷಿ ; ಅಂತಃಸಾಕ್ಷಿ ; ಧರ್ಮೇಂದ್ರಿಯ ; ಧರ್ಮ ಜ್ಞಾನ ;—ಬುದ್ಧಿ ; ಕರ್ತವ್ಯ ಜ್ಞಾನ ; —ಬುದ್ಧಿ ; ಒಳುಪಿನರಿವು ; ನಲ್ಲರಿವು. (Good or clear, bad or guilty, c. ತನ್ನ ನಡತೆ ಸರಿ, ಸರಿಯಲ್ಲ, ಎಂಬ ಆತ್ಮಸಾಕ್ಷಿ). Have on one's c. (ತಪ್ಪುಮಾಡಿದುದಕ್ಕೆ) ಮನಸ್ಸು ಕೊರೆಯುತ್ತಿರು ; ಮನೋಭಾರವುಳ್ಳವನಾಗಿರು. Have the c. to — ಕ್ಕೆ ಧಾರ್ಷ್ಟ್ಯವುಳ್ಳವನಾಗಿರು ; — ಕ್ಕೆ ಮನಸ್ಸೊಪ್ಪು. In all c., upon one's c. ನಿಜವಾಗಿ ; ಸತ್ಯವಾಗಿ ; ಆತ್ಮಸಾಕ್ಷಿಯಾಗಿ. For c. (c.') sake ಅಂತರಾತ್ಮ ತೃಪ್ತಿಗಾಗಿ ; ಮನಸ್ತೃಪ್ತಿಗಾಗಿ. C. clause ಕಾನೂನಿನಲ್ಲಿ ಯಾರಾದರೊಬ್ಬನ ಆತ್ಮಸಾಕ್ಷಿಗೆ ವಿರುದ್ಧವಾದ ಷರತ್ತಿಗೆ ವಿನಾಯಿತಿಮಾಡುವ ಕಲಮು : ಆತ್ಮಸಾಕ್ಷಿ ವಾಕ್ಯ. C. money (ಮು., ವರಮಾನದ ತೆರಿಗೆ ವೊ. ನ್ನು ಕೊಡದೆ ತಪ್ಪಿಸಿಕೊಂಡವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೋಪ್ಯದಲ್ಲಿ) ಆತ್ಮತೃಪ್ತಿಗಾಗಿ ಸಲ್ಲಿಸುವ ಹಣ. C.-proof ಆತ್ಮಸಾಕ್ಷಿ ಜಡವಾಗಿರುವ. C.-smitten ಮನಸ್ಸು ಕೊರೆಯುವ. **Cónscience-less** (ಗು.) ; **Consciéntious** ಕಾನ್ಷಿಯೆನ್ಷಸ್ (ಗು.) ಆತ್ಮಸಾಕ್ಷಿಯ ; ಅಂತಸ್ಸಾಕ್ಷಿಯಂತೆ ನಡೆಯುವ ; ಪಾಪಭೀರು ; ನ್ಯಾಯನಿಷ್ಠ ; (ಮನುಷ್ಯರ ವಿಷಯದಲ್ಲಿ ಅಥವಾ ನಡತೆಯ ವಿಷಯದಲ್ಲಿ) ಶುದ್ಧಾಂತಃಕರಣವುಳ್ಳ. C. objector ಕಾನೂನಿನ ವಿಷಯದಲ್ಲಿ ಆತ್ಮಸಾಕ್ಷಿಗೆ ವಿರುದ್ಧವೆಂದು ಪ್ರತಿಭಟಿಸುವವನು. ೧೯೧೪-೧೮ರ ಮಹಾಯುದ್ಧದಲ್ಲಿ ಭಾಗವಹಿಸುವುದು ತನ್ನ ಆತ್ಮಸಾಕ್ಷಿಗೆ ವಿರುದ್ಧವೆಂದು ಅದರಲ್ಲಿ ಸೇರುವುದಕ್ಕೆ ಒಪ್ಪದವನು. **Consciéntiously** (ಕ್ರಿ. ವಿ.) ; **Consciéntiousness** (ನಾ.)

Cónscious ಕಾನ್ಷಸ್ (ಗು.) ಅರಿತಿರುವ ; ತಿಳಿದಿರುವ ; ಗೊತ್ತಿರುವ ; ಪ್ರಜ್ಞೆಯಿರುವ ; ಎಚ್ಚತ್ತಿರುವ ; ಜಾಗ್ರತ ; (ತನ್ನ ಕಾರ್ಯ, ಭಾವ, ಮೊ. ಗಳ) ಅರಿವುಳ್ಳ, ತಿಳಿವುಳ್ಳ ; ಬುದ್ಧಿಪೂರ್ವಕ ; ಮನಃಪೂರ್ವಕ ; ಜ್ಞಾನತಃ ; ಸ್ವಪ್ರಜ್ಞೆಯುಳ್ಳ ; ತನ್ನರಿವುಳ್ಳ. **Cónsciously** (ಕ್ರಿ. ವಿ.) ; **Cónsciousness** (ನಾ.) ಎಚ್ಚರ ; ಜಾಗ್ರತಿ ; ಜಾಗ್ರದವಸ್ಥೆ ; ಪ್ರಜ್ಞೆ ; ಜ್ಞಾನ ; ತಿಳಿವು ; ತನ್ನರಿವು ; ಮನೋಭಾವ.

Conscríbe ಕನ್‌ಸ್ಕ್ರೈಬ್ (ಕ್ರಿ. ಸಕ.) ಒತ್ತಾಯದಿಂದ ಸೈನ್ಯಕ್ಕೆ ಸೇರಿಸಿಕೊ.

Cónscript ಕಾನ್‌ಸ್ಕ್ರಿಪ್ಟ್ (ಗು.. ನಾ.) ಒತ್ತಾಯದಿಂದ ಸೈನ್ಯಕ್ಕೆ ಸೇರಿಸಿಕೊಂಡ(ವನು). C. fathers ರೋಮಿನ ಶಾಸನಸಭಾ ಸದಸ್ಯರು. **Conscríption** ಕನ್‌ಸ್ಕ್ರಿಪ್ಷನ್ (ನಾ.) ಯುದ್ಧೋದ್ಯೋಗಕ್ಕೆ ಅಥವಾ ನಾವಿಕೋದ್ಯೋಗಕ್ಕೆ ಒತ್ತಾಯದಿಂದ ಸೇರಿಸಿಕೊಳ್ಳುವುದು (ಮು., ಚೀಟಿಹಾಕುವುದರಿಂದ) ; ಬಲಾತ್ಕಾರ ಸಂಗ್ರಹಣ. C. of wealth ಯುದ್ಧಕ್ಕೆ ಸೇರದವರಿಗೆ ಯುದ್ಧದ ವೆಚ್ಚಗಳಿಗಾಗಿ (ಬಲವಂತದಿಂದ ಸೇರಿಸಿಕೊಂಡವರ ತ್ಯಾಗಕ್ಕೆ ಸರಿದೂಗುವಂತೆ) ತೆರಿಗೆಹಾಕುವುದು, ಅಥವಾ ಆಸ್ತಿಯನ್ನು ಮುಟ್ಟುಗೋಲುಹಾಕುವುದು : ಯುದ್ಧವಿನಾಯಿತಿಯ ತೆರಿಗೆ, ದಂಡ.

Cónsecrate ಕಾನ್ಸಿಕ್ರೆಟ್ (ಗು.) —ಕ್ರೇಟ್ (ಕ್ರಿ. ಸಕ.) ಮೀಸಲಾಗಿಟ್ಟ ; ಅರ್ಪಿಸಿದ ; ಪವಿತ್ರ. ಅಭಿಷಿಕ್ತ. (ಕ್ರಿ.) ಮೀಸಲಾಗಿಡು ; ದೇವರಿಗೆ ಬಿಡು ; ಸಂಕಲ್ಪಿಸಿದ ಉದ್ದೇಶಕ್ಕಾಗಿ ವಿನಿಯೋಗಿಸು ; ನಿವೇದಿಸು. ಪವಿತ್ರಗೊಳಿಸು ; ಪ್ರತಿಷ್ಠೆಮಾಡು. **Cónsecrator** (ನಾ.) ; **Cónsecratory** (ಗು.) ; **Consecrátion** (ನಾ.) (ಕ್ರಿಯಾರ್ಥಗಳಲ್ಲಿ). (ಮು., ಕ್ರೈಸ್ತ ದೇವಾಲಯ, ದೇವಾಲಯದ ಅಂಗಳ, ಮೊ. ನ್ನು ಬಿಷಪ್ ಗುರು) ಪವಿತ್ರಗೊಳಿಸುವುದು ; ಪ್ರತಿಷ್ಠೆ(ಮಾಡುವುದು) ; ಸಂಶುದ್ಧಿ ; ಸಂಪ್ರೋಕ್ಷಣೆ. (ಪವಿತ್ರಸ್ಥಾನಕ್ಕೆ, ಮು. ಬಿಷಪ್ಪಿನ ಪದವಿಗೆ) ಪಟ್ಟಾಭಿಷೇಕ (ಮಾಡುವುದು). (ಒಂದು ಉದ್ದೇಶಕ್ಕಾಗಿ) ಅರ್ಪಣೆ, ಮೀಸಲು ; ಮುಡಿಪು.

Conséctary ಕನ್ಸೆಕ್ಟರಿ (ನಾ.) ಅನುಮಿತ ಫಲ ; ಉಪ ಸಿದ್ಧಾಂತ.

Consecútion ಕಾನ್ಸಿಕ್ಯೂಷನ್ (ನಾ.) ಅನುಕ್ರಮ ; ಆನುಪೂರ್ವಿ ; (ಘಟನಾ) ಪರಂಪರೆ. (ವ್ಯಾ.) ಅನ್ವಯ. **Consécutive** ಕನ್ಸೆಕ್ಯುಟಿವ್ (ಗು.) ಒಂದಾದಮೇಲೊಂದರಂತೆ ಬರುತ್ತಹೋಗುವ ; ಅನುಗೂಡಿ ಬರುವ ; ಕ್ರಮಾನುಗತ ; ಆನುಕ್ರಮಿಕ ; ಪರಂಪರಾಗತ. (ವ್ಯಾ.) ಪರಿಣಾಮ ಸೂಚಕ, ಫಲ ಸೂಚಕ (C. clause ಅನುಗತ ವಾಕ್ಯ). (ಸಂ.) C. intervals ಒಂದೇ ತೆರದ ಅಂತರಗಳು. **Consécutively** (ಕ್ರಿ. ವಿ.) ; **Consécutiveness** (ನಾ.)

Consenéscence ಕಾನ್ಸಿನೆಸೆನ್ಸ್ (ನಾ.) ಮುಪ್ಪಿನಿಂದ ಅಂಗಾಂಗಗಳು, ಸಾ., ಶಕ್ತಿಗುಂದುವುದು : ಮುಪ್ಪಿನ ಕುಗ್ಗು ; ಉಡುಗು.

Consénsus ಕನ್ಸೆನ್ಸಸ್ (ನಾ.) (ಅಭಿಪ್ರಾಯ, ಸಾಕ್ಷ್ಯ, ಮೊ. ಗಳ) ಹೊಂದಿಕೆ ; ಒಟ್ಟಭಿಪ್ರಾಯ ; ಒಪ್ಪಿಕೆ. (ಶ. ವಿ.) (ಕಾರ್ಯ ನಡಸುವಲ್ಲಿ) ಅಂಗಾಂಗಗಳ ಹೊಂದಿಕೆ, ಸಹಕಾರ. **Consénsual** ಕನ್ಸೆನ್ಸ್ಯು(ಷು)ಅಲ್ (ಗು.) (ಶ. ವಿ.) ಸಾನುಕಂಪ ಕ್ರಿಯೆಯಿಂಧಾದ.

Consént ಕನ್ಸೆಂಟ್ (ಕ್ರಿ. ಅಕ., ನಾ.) ಒಪ್ಪು ; ಸಮ್ಮತಿಸು ; ಅನುಮತಿಸು ; ಒಡಂಬಡು. (ನಾ.) ಒಪ್ಪಿಕೆ ; ಸಮ್ಮತಿ ; ಅನುಮತಿ ; ಒಡಂಬಡಿಕೆ. Age of c. ಸಮ್ಮತಿಯ ವಯಸ್ಸು (ಕೆಲವು ಕಾರ್ಯಗಳಲ್ಲಿ ಕಾನೂನಿನ ಮೇರೆಗೆ ಸಮ್ಮತಿಕೊಡುವುದಕ್ಕೆ ತಕ್ಕ ವಯಸ್ಸೆಂದು ವಿಧಾಯಕವಾಗಿರುವ ವಯಸ್ಸು). Silence gives c. ಸುಮ್ಮನಿದ್ದರೆ ಸಮ್ಮತಿಸಿದಂತೆಯೇ. With one c. ಸರ್ವಾನುಮತದಿಂದ ; ಏಕಮತವಾಗಿ.

Consentáneous ಕಾನ್ಸೆಂಟೇನಿಯಸ್ (ಗು.) ಹೊಂದುವ ; ಒಪ್ಪುವ ; ಯುಕ್ತ ; ತಕ್ಕ. ಸರ್ವಾನುಮತವುಳ್ಳ ; ಏಕಾಭಿಪ್ರಾಯವುಳ್ಳ. **Consentáneously** (ಕ್ರಿ. ವಿ.) ; **Consentáneousness** (ನಾ.) ; **Consentanéity** ಕನ್ಸೆಂಟನೀಯಿಟಿ (ನಾ.)

Conséntient ಕನ್ಸೆನ್‌ಷೆಂಟ್, — ಷಿಯೆಂಟ್ (ಗು.) ಏಕಾಭಿಪ್ರಾಯವುಳ್ಳ ; ಸರ್ವಾನುಮತದ ; ಒಪ್ಪುವ ; ಅನುಮತಿಸುವ.

Cónsequence ಕಾನ್ಸಿಕ್ವೆನ್ಸ್ (ನಾ.) ಫಲ ; ಪರಿಣಾಮ (Take the consequences ಬಂದ ಫಲವನ್ನನುಭವಿಸು. In c. ಅದರ ಫಲವಾಗಿ, ಪರಿಣಾಮವಾಗಿ). (ತರ್ಕ) ಅನುಮಿತ ; ಅನುಮಾನ. ಪ್ರಾಮುಖ್ಯತೆ ; ಗಣ್ಯತೆ ; ಗೌರವ ; ಮಹತ್ತ್ವ ; ಪ್ರಭಾವ. (A person of c., no c. ಗಣ್ಯ, ಗಣ್ಯನಲ್ಲದವನು). **Cónsequent** (ನಾ., ಗು.) ತರುವಾಯ ಬರುವ ಘಟನೆ. ಅನುಗತ ; ಅನುಗಾಮಿ ; ಫಲ. (ತರ್ಕ) ಸೋಪಾಧಿಕ ಪ್ರತಿಜ್ಞೆಯ ಉತ್ತರಭಾಗ ; ಉತ್ತರ ಪದ ; ಉತ್ತರ. ಫಲ. (ಗಣಿತ) ಒಂದು ಪ್ರಮಾಣದ ಎರಡು ಪದಗಳಲ್ಲಿ ಎರಡನೆಯದು : ಉತ್ತರ ಪದ ; ಅನುಪಾತದ ನಾಲ್ಕು ಪದಗಳಲ್ಲಿ ಎರಡನೆಯದು ಮತ್ತು ನಾಲ್ಕನೆಯದು. (ಗು.) ಪರಿಣಾಮವಾಗಿ, ಫಲವಾಗಿ, ಬರುವ, ಬಂದ ; ಅನುಗತ. (ತರ್ಕ) ಅನುಮಿತ. ಕ್ರಮಾಗತ ; ಕ್ರಮಬದ್ಧ ; ಪೂರ್ವಾಪರ ಸಂಬದ್ಧ. **Consequéntial** — ಷಲ್ (ಗು) ಫಲವಾಗಿ, ಪರಿಣಾಮವಾಗಿ, ಅನುಮಿತವಾಗಿ ಬಂದ ; ಅನುವರ್ತಿ ; ಆನುಷಂಗಿಕ ; ಅನುಗಾಮಿ. (C. damages ಒಂದು ಕಾರ್ಯದಿಂದ ನೇರವಾಗಲ್ಲದೆ ಪರೋಕ್ಷವಾಗಿ ಸಂಭವಿಸುವ ಕಷ್ಟನಷ್ಟಗಳು : ಅನುಗತ ಕಷ್ಟನಷ್ಟಗಳು). ಸ್ವಾಭಿಮಾನದ ; ಅಹಂಕಾರದ. **Consequentiálity** — ಷಿಆ್ಯಲಿಟಿ (ನಾ.) ; **Consequéntially** — ಷಲಿ (ಕ್ರಿ. ವಿ.) ; **Cónsequently** (ಕ್ರಿ. ವಿ., ಸಂ. ಅವ್ಯ.) ಫಲವಾಗಿ ; ಪರಿಣಾಮವಾಗಿ. ಆದಕಾರಣ ; ಆದುದರಿಂದ.

Consérvancy ಕನ್ಸರ್ವನ್ಸಿ (ನಾ.) ಒಂದು ಬಂದರಿನ ಮತ್ತು ನದಿಯ ಮತ್ಸ್ಯಸಂಗ್ರಹ, ನೌಚಾಲನ, ಮೊ. ಗಳಮೇಲೆ ಅಧಿಕಾರವಿರುವ ನಿಯುಕ್ತಮಂಡಲಿ ; ರಕ್ಷಕ ಮಂಡಲಿ ; ಪಾಲನ ಮಂಡಲಿ. (ವೃಕ್ಷ, ವನ, ಪ್ರಜಾರೋಗ್ಯ, ಮೊ. ಗಳ) ಪಾಲನೆ, ರಕ್ಷಣೆ. **Conservátion** ಕಾನ್ಸರ್ವೇಷನ್ (ನಾ.) ರಕ್ಷಣೆ ; ಪಾಲನೆ ; ಕಾಪಾಟ. C. of energy ಒಂದು ವಸ್ತುವ್ಯೂಹದಲ್ಲಿ (ಒಟ್ಟುವಿಶ್ವದಲ್ಲಿಯೂ) ಅಡಕವಾಗಿರುವ ಒಟ್ಟುಶಕ್ತಿಯ ಮೊತ್ತವು (ಆ ಶಕ್ತಿ ಎಷ್ಟು ಬಗೆಗಳಲ್ಲಿ ರೂಪಾಂತರ ಹೊಂದಿದರೂ) ಎಂದಿಗೂ ಹೆಚ್ಚುಕಡಮೆಯಾಗದೆ ಒಂದೇಸಮವಾಗಿರುವುದು (ಎಂಬ ತತ್ತ್ವ) : ಶಕ್ತಿಸ್ಥಾಯಿತ್ವ. **Consérvative** ಕನ್ಸರ್ವಟಿವ್ (ಗು., ನಾ.) ಕೆಟ್ಟುಹೋಗದಂತೆ ಕಾಪಾಡುವ (ಪದಾರ್ಥ) : ರಕ್ಷಕ ; ಪಾಲಕ. ಹಿಂದಿನ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರಬೇಕೆಂಬ ಅಭಿಪ್ರಾಯವುಳ್ಳ : ಪೂರ್ವಾಚಾರ ಪ್ರಿಯ ; ಸಂಪ್ರದಾಯ ಪಾಲಕ. (C. party ಇಂಗ್ಲಿಷ್ ರಾಜ್ಯತಂತ್ರದಲ್ಲಿ ಸಂಪ್ರದಾಯ ಪಕ್ಷ). (ಅಂದಾಜಿನ ವಿಷಯದಲ್ಲಿ) ಮಿತವಾದ ; ಹಿಡಿತದ ; ಉದ್ದೇಶಪೂರ್ವಕವಾಗಿ ಕಡಮೆ ಮಾಡಿದ. ಸಂಪ್ರದಾಯ ವಾದಿ. (ಇಂಗ್ಲಿಷ್ ರಾಜ್ಯತಂತ್ರ) ಸಂಪ್ರದಾಯ ಪಕ್ಷದವನು. **Consérvatism** (ನಾ.) ; **Cónservator** ಕಾನ್ಸರ್ವೇಟರ್ (ನಾ.) ರಕ್ಷಕ ; ಪಾಲಕ ; (ಸರ್ವವಸ್ತು ಸಂಗ್ರಹಶಾಲೆ ಮೊ. ಗಳ) ಪಾಲನಾಧಿಕಾರಿ. Conservators of the peace (ಇಂಗ್ಲೆಂಡಿನಲ್ಲಿ) ದೊರೆ ಮತ್ತು 'ಲಾರ್ಡ್ ಛಾನ್ಸೆಲರ್' ಎಂಬ ದೊಡ್ಡ ನ್ಯಾಯಾಧಿಕಾರಿ, ಮೊ. ರು. **Consérvatory** ಕನ್ಸರ್ವಟರಿ (ನಾ.) ಎಳೆಯ ಗಿಡಗಳಿಗಾಗಿ ಮಾಡಿರುವ ಹಸುರುಚಪ್ಪರದ ಮನೆ : ಸಸ್ಯರಕ್ಷಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೃಹ; = Conservatoire. **Consérve** (ನಾ. ; ಸಾ., ಬ. ವ. ದಲ್ಲಿ) ಮುರಬ್ಬ ; ಮಿಠಾಯಿ, ಉಪ್ಪಿನಕಾಯಿ, ಮೊ. ವು. (ಕ್ರಿ. ಸಕ.) (ನಷ್ಟವಾಗದಂತೆ, ಕೆಡದಂತೆ, ಕೆಡುಕಾಗದಂತೆ) ರಕ್ಷಿಸು, ಕಾಪಾಡು.

Conservatoíre ಕೊನ್ಸರ್ವಟ್ವಾರ್ (ನಾ.) ಸಂಗೀತವನ್ನೂ ಸಭಾ ಭಾಷಣವನ್ನೂ ಕಲಿಸುವ ಸಾರ್ವಜನಿಕ ಶಿಕ್ಷಣಶಾಲೆ.

Consíder ಕನ್ಸಿಡರ್ (ಕ್ರಿ.) ಯೋಚಿಸು ; ಪರ್ಯಾಲೋಚಿಸು ; ಅಭಿಪ್ರಾಯಪಡು ; ಆರಯ್ಯು (ಗ್ರಾಂ) ; ಬಗೆದು ನೋಡು ; ತಿಳಿ ; ಎಣಿಸು. (C. yourself under arrest ನೀನು ದಸ್ತಗಿರಿಯಾಗಿರುವೆಯೆಂದು ತಿಳಿ). **Consíderable** (ಗು.) ಪರ್ಯಾಲೋಚಿಸಬಹುದಾದ ; ಗಣನೀಯ. (ಮನುಷ್ಯರ ವಿಷಯದಲ್ಲಿ) ಗಣ್ಯ ; ಮಾನ್ಯ. (ಅಮೂರ್ತ ವಸ್ತು ವಿಷಯದಲ್ಲಿ) ಅಲ್ಪವಲ್ಲದ (ಕೇಡು, ತೊಂದರೆ, ಸಂತೋಷ). **Consíderably** (ಕ್ರಿ. ವಿ.) ; **Consíderate** — ರೆಟ್ (ಗು.) (ಇತರರ ವಿಷಯದಲ್ಲಿ) ಗಮನ ಕೊಡುವ ; ದಾಕ್ಷಿಣ್ಯಪರ ; ವಿಚಾರಪರ. (ಪ್ರಾಚೀ. ಪ್ರ.) ಜಾಗರೂಕ ; ಎಚ್ಚರಿಕೆಯ. **Consíderately** (ಕ್ರಿ. ವಿ.) ; **Consíderateness** (ನಾ.) ; **Considerátion** (ನಾ.) ಯೋಚನೆ ; ಆಲೋಚನೆ ; ಆರಯ್ವು ; ವಿಚಾರ ; ಪರಿಗಣನೆ ; ಎಣಿಕೆ (Take into c. ಪರಿಗಣಿಸು. Under c. ವಿಚಾರದಲ್ಲಿರುವ. In c. of ಪ್ರತಿಯಾಗಿ ; ಪ್ರತಿಫಲವಾಗಿ). ನಿಮಿತ್ತ ; ಕಾರಣ ; ಹೇತು (That is a c. ಅದೊಂದು ಗಣಿಸಬೇಕಾದ ಕಾರಣ. On no c. ಯಾವ ನಿಮಿತ್ತದಿಂದಾದರೂ ಇಲ್ಲ). (ನ್ಯಾ. ಶಾ.) ಪ್ರಯೋಜನ ; ಪ್ರತಿಫಲ. ದಾಕ್ಷಿಣ್ಯ ; ಗಣ್ಯತೆ ; ಪ್ರಾಮುಖ್ಯತೆ (ಈಗ ಅರೂಢಿ). **Consídering** (ಉಪ.) ಪರಿಗಣಿಸಿದರೆ ; ಗಣನೆಗೆ ತೆಗೆದುಕೊಂಡರೆ (It is excusable c. his age ಅವನ ವಯಸ್ಸನ್ನು ಗಣನೆಗೆ ತಂದುಕೊಂಡರೆ ಅದನ್ನು ಮನ್ನಿಸಬಹುದು)

Consígn ಕನ್ಸೈನ್ (ಕ್ರಿ. ಸಕ.) ಕೊಡು ; ವಹಿಸು ; ವಶಪಡಿಸು ; ಅರ್ಪಿಸು ; ಒಪ್ಪಿಸು. (ನೀರು, ಬೆಂಕಿ, ದುಃಖ, ಮೊ. ಗಳ) ಪಾಲು ಮಾಡು. ಕಳುಹಿಸು ; (ರೈಲು, ಮೊ. ಗಳ ಮೂಲಕ, ಒಬ್ಬನಿಗೆ) ರವಾನಿಸು. (ಹಣವನ್ನು ಬ್ಯಾಂಕಿನಲ್ಲಿ) ಠೇವಣಿಯಿಡು. **Consigneé** ಕಾನ್‌ಸೈ(ನಿ)ನೀ (ನಾ.) ಸರಕನ್ನು ಯಾರಿಗೆ ಕಳುಹಿಸುತ್ತೇವೆಯೋ ಅವನು : ಗ್ರಾಹಕ. **Consignór** ಕಾನ್ಸೈನಾರ್ (ನಾ.) ಸರಕನ್ನು ರವಾನಿಸುವವನು : ರವಾನೆದಾರ. **Consígnable** ಕನ್ಸೈನಬ್‌ಲ್ (ಗು.) ; **Consignátion** ಕಾನ್ಸಿಗ್ನೇಷನ್ (ನಾ.) (ಕಾನೂನಿಗನುಸಾರವಾಗಿ ನಿಯಮಿತನಾದವನಿಗೆ) ವಿಹಿತ ರೀತಿಯಲ್ಲಿ ಹಣ ಪಾವತಿಮಾಡುವುದು. ಸಾಮಾನು ಕಳುಹಿಸುವುದು ; ಸರಕು ರವಾನೆ. To the c. of ....ರ ಹೆಸರಿಗೆ, ವಿಳಾಸಕ್ಕೆ. **Consígnment** ಕನ್ಸೈನ್ಮೆಂಟ್ (ನಾ.) ಒಪ್ಪಿಸುವುದು ; ವಹಿಸುವುದು ; ವಶಪಡಿಸುವುದು; ಅರ್ಪಣೆ ; ರವಾನೆ. ರವಾನಿಸಿದ ಸರಕು, ಸಾಮಾನು.

Consílient ಕನ್ಸಿಲಿಯೆಂಟ್ (ಗು.) (ಅನುಮಿತ ಫಲಗಳ ವಿಷಯದಲ್ಲಿ) ಹೊಂದುವ ; ಸಂಗತವಾಗುವ. **Consílience** (ನಾ.)

Consíst ಕನ್ಸಿಸ್ಟ್ (ಕ್ರಿ. ಅಕ.) ಸೇರಿರು ; ಕೂಡಿರು ; ಆಗಿರು ; ಒಳಕೊಂಡಿರು. ಸಮರಸವಾಗು ; ಸಂಗತವಾಗು ; ಒಪ್ಪು ; ಹೊಂದಿಕೊ. (ಬೈಬಲ್) ಇರು. **Consístence, -cy** (ನಾ.) (ಮು., ಮಂದ ದ್ರವಗಳ ವಿಷಯದಲ್ಲಿ) ಮಂದ ; ಮಂದತೆ ; ಸಾಂದ್ರತೆ ; ದೃಢತೆ ; ಸ್ಥಾಯಿತ್ವ ; ಘನತ್ವ (ರೂಪ. ಸಹ). (-cy) (ಮು., ನಡೆ ನುಡಿಗಳಲ್ಲಿ) ಹೊಂದಿಕೆ ; ಸಾಮಂಜಸ್ಯ ; ನಿಷ್ಠೆ. **Consístent** (ಗು.) ಹೊಂದಿಕೆಯಿರುವ ; ಸುಸಂಗತ ; ಸಮಂಜಸ ; ಅವಿರುದ್ಧ. ನಿಷ್ಠ ; ಸ್ಥಿರ. **Consístently** (ಕ್ರಿ. ವಿ.)

Cónsistory ಕಾನ್ಸಿಸ್ಟರಿ, **Consístory** ಕನ್ಸಿಸ್ಟರಿ (ನಾ.) ಪೋಪ್ ಗುರುವೂ 'ಕಾರ್ಡಿನರ್ಸ್' ಎಂಬ ಆತನ ಕೆಳಗಿನ ಮಠೀಯ ಪ್ರಭುಗಳೂ ಸೇರಿ ಆದ ಸಭೆ: (ಕ್ರೈಸ್ತ) ಮತ ಸಭೆ. ಮಠೀಯ ವ್ಯವಹಾರಗಳನ್ನೂ ಅಪರಾಧಗಳನ್ನೂ ವಿಚಾರಣೆಮಾಡುವ ಬಿಷಪ್‌ಗುರುವಿನ ನ್ಯಾಯಸ್ಥಾನ (= C. Court). **Consistórial** ಕಾನ್ಸಿಸ್ಟೋರಿಯಲ್ (ಗು.)

Consóciate ಕನ್ಸೋಷಿಯೆಟ್ (ಗು., ನಾ.) ಜೊತೆಗೂಡಿದ ; ಜೊತೆಗಾರ ; ಸಹವಾಸಿ ; ಪಾಲುದಾರ ; ಭಾಗಿ. (ಕ್ರಿ., — ಯೇಟ್) ಜೊತೆಗೂಡು ; ಒಡಗೂಡು ; ಸಹವಾಸ ಮಾಡು ; ಸಹಭಾಗಿಯಾಗು. ಜೊತೆಗೂಡಿಸು ; ಒಡಗೂಡಿಸು ; ಮೇಳಿಸು. **Consociátion** ಕನ್ಸೋಷಿ(ಸಿ)ಯೇಷನ್ (ನಾ.)

Consolátion ಕಾನ್ಸೊಲೇಷನ್ (ನಾ.) ಸಂತೈಸುವುದು ; ಸಮಾಧಾನ ಮಾಡುವುದು ; ಸಮಾಧಾನ (ಮಾಡುವ ವಿಷಯ). C. race, prize, stakes (ಜಯಹೊಂದದವರಿಗಾಗಿ ಏರ್ಪಡಿಸಿದ) ಸಮಾಧಾನ ಸ್ಪರ್ಧೆ, ಬಹುಮಾನ, ಪಣ. **Consólatory** ಕನ್ಸಾಲಟರಿ (ಗು.) ಸಂತೈಸುವ ; ಸಮಾಧಾನಕಾರಕ. **Consólatorily** (ಕ್ರಿ. ವಿ.) ; **Consóle**[1] ಕನ್ಸೋಲ್ (ಕ್ರಿ. ಸಕ.) ಸಮಾಧಾನಗೊಳಿಸು ; ಸಂತಯಿ(ವಿ)ಸು ; ದುಃಖ ಆರಿಸು. **Consólable** (ಗು.)

Cónsole[2] ಕಾನ್ಸೋಲ್ (ನಾ.) (ವಾ. ಶಾ.) ಒಂದು ತೆರದ ಚಾಚು ಪೀಠ ; ಚಾಚು ಆಸರೆ. ಆರ್ಗನ್‌ವಾದ್ಯದ ಬಿರಡೆ, ಮೊ. ಗಳನ್ನೊಳಕೊಂಡಿರುವ ಪೆಟ್ಟಿಗೆ. C.-mirror ಚಾಚುಪೀಠದಮೇಲೆ ಗೋಡೆಗೆ ಒರಗಿಸಿರುವ ಕನ್ನಡಿ.

Consólidate ಕನ್ಸಾಲಿಡೇಟ್ (ಕ್ರಿ.) ಗಟ್ಟಿಸು ; ಗಟ್ಟಿಮಾಡು ; ಗಟ್ಟಿಯಾಗು ; ಘನೀಕರಿಸು ; ಘನೀಭವಿಸು. ಬಲಪಡಿಸು (ಸಾ., ರೂಪ. : ಅಧಿಕಾರ, ಮೊ. ನ್ನು). (ರಾಜ್ಯ, ಭೂಸ್ವತ್ತು, ಸಂಘ, ನ್ಯಾಯ ವಿಧಿ, ಸಾಲ — ಇವುಗಳ ವಿಷಯದಲ್ಲಿ) ಒಟ್ಟುಸೇರಿಸು ; ಮೊತ್ತಯಿಸು ; ಸಂಚಯಿಸು ; ಕ್ರೋಡೀಕರಿಸು. Consolidated annuities ಗ್ರೇಟ್‌ಬ್ರಿಟನ್ನಿನ ಸರ್ಕಾರದ ಎಲ್ಲ ಸಾಲಗಳನ್ನೂ ೧೭೫೧ನೆಯ ಇಸವಿಯಲ್ಲಿ ಒಟ್ಟುಗೂಡಿಸಿ, ನೇಕಡ ೩ರ ಮೇರೆಗೆ (ಈಗ ೨॥೦) ಬಡ್ಡಿಹಾಕಿ, ಒಂದೇ ಸಾಲವಾಗಿ ಮಾಡಿದುದು : ಸಂಚಿತ ಸಾಲಪತ್ರಗಳು (= **Consóls** ಕನ್ಸಾಲ್ಸ್). Consolidated Fund ಅನೇಕ ತೆರದ ತೆರಿಗೆಗಳು, ಮೊ. ನ್ನೆಲ್ಲ ಒಟ್ಟುಗೂಡಿಸಿ ರಾಜ್ಯಋಣ, ಮೊ. ಗಳಮೇಲೆ ಬಡ್ಡಿಕೊಡಲು ಏರ್ಪಡಿಸಿರುವ ನಿಧಿ : ಸಮುಚ್ಚಯ ನಿಧಿ. **Consolidátion** (ನಾ.) ಸಂಘಟನೆ. **Consólidator** (ನಾ.) ; **Consólidatory** (ಗು.)

Consóls. Consolidate ನೋಡಿ.

Cónsonance ಕಾನ್ಸೊನನ್ಸ್ (ನಾ.) ಪದಗಳಲ್ಲಿ ಒಂದೇ ಧ್ವನಿ ಅಥವಾ ಒಂದೇ ತೆರದ ಧ್ವನಿಗಳು ಆವೃತ್ತಿಯಾಗುವುದು ; ಧ್ವನಿ ಸಾಮ್ಯ ; ಸ್ವರ ಪ್ರಾಸ. (ಸಂ.) ಸ್ವರ ಮೇಳನ ; ಸ್ವರ ಸಾಮ್ಯ. (ರೂಪ.) ಹೊಂದಿಕೆ ; ಮೇಳ ; ಸಾಂಗತ್ಯ ; ಸಾಮರಸ್ಯ. **Cónsonant**[1] (ಗು.) ಹೊಂದುವ ; ಹೊಂದಿಕೊಳ್ಳುವ ; ಸಂಗತ ; ಸಮಂಜಸ ; ಸಮರಸ ; ಧ್ವನಿ ಸಾಮ್ಯವುಳ್ಳ ; ಸ್ವರ ಸಾಮ್ಯವುಳ್ಳ. (ಸಂ.) ಸ್ವರ ಮೇಳನವುಳ್ಳ. **Cónsonantly** (ಕ್ರಿ. ವಿ)

Cónsonant[2] ಕಾನ್ಸೊನಂಟ್ (ನಾ.) ವ್ಯಂಜನ (ಧ್ವನಿ, ಅಕ್ಷರ). **Consonántal** (ಗು.)

Cónsort ಕಾನ್ಸಾರ್ಟ್ (ನಾ.), **Consórt** ಕನ್ಸಾರ್ಟ್ (ಕ್ರಿ.) ಗಂಡ, ಹೆಂಡತಿ. (Queen c. ದೊರೆಯ ಹೆಂಡತಿ : ರಾಣಿ. King, Prince, c. ರಾಣಿಯ ಗಂಡ). ಮತ್ತೊಂದು ಹಡಗಿನೊಡನೆ ಪ್ರಯಾಣ ಮಾಡುವ ಹಡಗು : ಜೊತೆ ಹಡಗು. (ಕ್ರಿ.) ಒಂದು ತರಗತಿಯಲ್ಲಿ ಸೇರಿಸು ; ಒಂದುಗೂಡು ; ಒಂದುಗೂಡಿಸು ; ಒಡಗೂಡು ; ಜೊತೆ ಸೇರು ; ಹೊಂದು ; ಸಂಗತವಾಗು ; ಸಮರಸವಾಗು.

Conspecífic ಕಾನ್‌ಸ್ಪೆಸಿಫಿಕ್ (ಗು.) (ಸಸ್ಯ, ಪ್ರಾಣಿ) ಒಂದೇ ವಂಶಕ್ಕೆ ಸೇರಿದ.

Conspéctus ಕನ್‌ಸ್ಪೆಕ್ಟಸ್ (ನಾ.) ವಿಷಯ, ದೃಶ್ಯ, ಮೊ. ಗಳ ಸಾಮಾನ್ಯಾವಲೋಕನ; ಸಮಷ್ಟಿ ದೃಷ್ಟಿ; ಒಟ್ಟು ನೋಟ. ಮುಖ್ಯಾಂಶ ಸೂಚಿ ; ಸಂಗ್ರಹ.

Conspícuous ಕನ್ಸ್ಪಿಕ್ಯುಅಸ್ (ಗು.) ಎದ್ದು ಕಾಣುವ ; ಗಮನ ಸೆಳೆಯುವ ; ಕಣ್ಣಿಗೆ ಹೊಡೆಯುವ ; ಸ್ಪಷ್ಟ ; ಸುವ್ಯಕ್ತ. ಪ್ರಮುಖ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಸಿದ್ಧ (C. by its absence ಅದು ಇಲ್ಲದಿರುವುದರಿಂದ ಹೆಚ್ಚುಗಮನ ಸೆಳೆಯುತ್ತದೆ). **Conspicúity** ಕಾನ್‌ಸ್ಪಿಕ್ಯೂಇಟಿ (ನಾ.) = **Conspícuousness** ಕನ್— (ನಾ.); **Conspícuously** (ಕ್ರಿ. ವಿ.)

Conspíracy. **Conspire** ನೋಡಿ.

Conspíre ಕನ್ಸ್ಪಯ್‌ರ್ (ಕ್ರಿ.) ಅನ್ಯಾಯ ಕಾರ್ಯಗಳಿಗೆ (ಮು., ರಾಜದ್ರೋಹ, ರಾಜ್ಯವಿಪ್ಲವ, ಕೊಲೆ — ಇವುಗಳಿಗೆ) ಗುಟ್ಟಾಗಿ ಒಟ್ಟುಗೂಡು; ಪಿತೂರಿ ನಡಸು; ಒಳಸಂಚು ನಡಸು. ಜೊತೆಗೂಡು; ಏಕೀಭವಿಸು. ಹೂಟ ಹೂಡು. C. his ruin ಅವನ ನಾಶಕ್ಕೆ ಸಂಚುಮಾಡು. **Conspíracy** ಕನ್ಸ್ಪಿರಸಿ (ನಾ.) ಜೊತೆಗೂಡುವುದು; ಏಕೀಭವಿಸುವುದು. ಒಳಸಂಚು; — ಹೂಟ; ಕೂಟ; ಪಿತೂರಿ. **Conspírator** — ರಟರ್ (ನಾ.) ಒಳಸಂಚು ನಡಸುವವನು; ಪಿತೂರಿಗಾರ; ರಾಜದ್ರೋಹಿ. **Conspíratress** (ನಾ., ಸ್ತ್ರೀ)

Conspué ಕನ್‌ಸ್ಪ್ಯೂ (ಕ್ರಿ. ಸಕ.) ಜುಗುಪ್ಸೆ ತೋರಿಸು; ತಿರಸ್ಕಾರದಿಂದ ಕಾಣು; ಮುಖದಮೇಲೆ ಉಗುಳು. (ಮನುಷ್ಯ, ವ್ಯವಹಾರ ನೀತಿ, ಮೊ. ನ್ನು) ತೆಗೆದುಹಾಕಲು ಅಥವಾ ಬಿಟ್ಟುಬಿಡಲು ಗಲಾಟೆಮಾಡು.

Cónstable ಕ(ಕಾ)ನ್ಸ್ಟಬ್‌ಲ್ (ನಾ.) ಪೋಲೀಸಿನವನು; ಪೋಲೀಸು ಪ್ಯಾದೆ (= Police c.). Chief C. ಒಂದು ಪ್ರದೇಶದ ಪೋಲೀಸು ದಳದ ಮುಖ್ಯಾಧಿಕಾರಿ; ಪೋಲೀಸು ದಳಾಧಿಪತಿ. Special c. ಕೆಲವು ವಿಶೇಷ ಸಂದರ್ಭಗಳಲ್ಲಿ ಪೋಲೀಸುಪ್ಯಾದೆಯಾಗಿರಲು ಒಪ್ಪಿ ಭಾಷೆಕೊಟ್ಟಿರುವವನು. Outrun the c. ಸಾಲಕ್ಕೆ ಬೀಳು. C. of France ಆದ್ಯ ಫ್ರೆಂಚ್‌ದೊರೆಗಳ ಮನೆವಾರ್ತೆಯ ಮುಖ್ಯಾಧಿಕಾರಿ (ಈತನು, ದೊರೆ ಸ್ಥಳದಲ್ಲಿಲ್ಲದಿರುವಾಗ ಸೇನೆಯ ಮುಖ್ಯಾಧಿಕಾರಿ). C. of England, Lord High C. ಇಂಗ್ಲಿಷ್‌ದೊರೆಯ ಮನೆವಾರ್ತೆಯ ಮುಖ್ಯಾಧಿಕಾರಿ (ಈಗ ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಹಂಗಾಮಿಯಾಗಿ ನೇಮಕವಾಗುವ ಅಧಿಕಾರಿ). **Constábulary** ಕನ್‌ಸ್ಟಾಬ್ಯುಲರಿ (ಗು., ನಾ.) ಪೋಲೀಸಿನ (ದಳ)

Cónstant ಕಾನ್ಸ್ಟಂಟ್ (ಗು., ನಾ.) ಸ್ಥಿರ; ದೃಢ; ಅಚಲ; ನಿಯತ; ಸಂತತ; ತಪ್ಪದ; ನಂಬಿಕೆಯ; ನಚ್ಚಿನ; ನಿಷ್ಠೆಯ; ದೃಢ ಪ್ರತಿಜ್ಞೆಯ; ಬದಲಾಯಿಸದ; ಎಡೆಬಿಡದ. (ಗಣಿತ) ವ್ಯತ್ಯಾಸ ಹೊಂದದ ಅಂಕ, ಪದ: ನಿಯತ ಪದ; ನಿಯತಾಂಕ. (ಭೌ. ವಿ.) (ಸಂಬಂಧ, ಗುಣ, ಮೊ. ಗಳ ವಿಷಯದಲ್ಲಿ) ಒಂದು ವಸ್ತುವಿಗೆ ಒಂದು ನಿರ್ದಿಷ್ಟ ಸಂದರ್ಭದಲ್ಲಿ, ವ್ಯತ್ಯಾಸಹೊಂದದೆ ಸ್ಥಿರವಾಗಿರುವ ನಿರ್ದೇಶ-ಸಂಖ್ಯೆ (ಉದಾ., C. of friction ಘರ್ಷಣಾಂಕ). **Cónstancy** (ನಾ.) ಸ್ಥಿರತೆ; ಸ್ಥೈರ್ಯ; ದಾರ್ಢ್ಯ; ನಿಶ್ಚಲತೆ; ಸ್ಥಾಯಿತ್ವ; ನಿತ್ಯತೆ; ನಿಷ್ಠೆ; ದೃಢ ಭಕ್ತಿ. **Cónstantly** (ಕ್ರಿ. ವಿ.) ತಪ್ಪದೆ; ಯಾವಾಗಲೂ; ಸಂತತವಾಗಿ.

Constellátion ಕಾನ್ಸ್ಟೆಲೇಷನ್ (ನಾ.) ಒಂದು ಪರಿಮಿತ ಪ್ರದೇಶದಲ್ಲಿ ಒಟ್ಟುಗೂಡಿದಂತಿರುವ ಸ್ಥಿರನಕ್ಷತ್ರ ಪುಂಜ: ರಾಶಿ; ನಕ್ಷತ್ರ ಪುಂಜ (ರೂಪ. ಸಹ). **Cónstellate** ಕಾನ್ಸ್ಟೆಲೇಟ್, **Constéllate** ಕನ್ಸ್ಟೆಲೇಟ್ (ಕ್ರಿ.) ನಕ್ಷತ್ರಪುಂಜವಾಗು, ಮಾಡು.

Consternátion ಕಾನ್ಸ್ಟರ್‌ನೇಷನ್ (ನಾ.) ಗಾಬರಿ; ತಲ್ಲಣ; ಭಯ; ಪರವಶತೆ; ದಿಗ್ಭ್ರಾಂತಿ; ಭಯ ಭ್ರಾಂತಿ; ನಿಬ್ಬೆರಗು. **Cónsternate** — ನೇಟ್ (ಕ್ರಿ. ಸಕ.) ಗಾಬರಿಗೊಳಿಸು; ದಿಗಿಲು ಹುಟ್ಟಿಸು; ತಲ್ಲಣಗೊಳಿಸು.

Constipátion ಕಾನ್ಸ್ಟಿಪೇಷನ್ (ನಾ.) ಮಲಬದ್ಧತೆ; ಹೊಟ್ಟೆಕಟ್ಟು. **Cónstipate** (ಕ್ರಿ. ಸಕ.) ಹೊಟ್ಟೆಕಟ್ಟಿಸು; ಮಲಬದ್ಧ ಮಾಡು.

Constítuency ಕನ್ಸ್ಟಿಟ್ಯೂಎನ್ಸಿ (ನಾ.) ತಮ್ಮ ಪ್ರತಿನಿಧಿಯಾಗಿರಲು ಸದಸ್ಯನ(ರ)ನ್ನು ಚುನಾಯಿಸುವ ಹಕ್ಕುಳ್ಳ ಮತದಾರ ಮಂಡಲ; ಚುನಾವಣಾ ಕ್ಷೇತ್ರ. (ಶಿಥಿಲವಾಗಿ) ಮತದಾರರಿರುವ ಸ್ಥಳ; ಆ ಸ್ಥಳದಲ್ಲಿಯ ಒಟ್ಟುಪ್ರಜೆ. ಗಿರಾಕಿಗಳು, ಚಂದಾದಾರರು, ಮೊ. ರು. **Constítuent** (ಗು., ನಾ.) ಒಟ್ಟುಮಂಡಲಿಯ ಸದಸ್ಯ, ಅಂಗ (ಆದ). ಘಟಕ; ನಿಯೋಜಕ; ಚುನಾಯಿಸುವ. (ನಾ.) ಪ್ರತಿನಿಧಿಯನ್ನು ನಿಯಮಿಸುವವನು; ಚುನಾವಣೆದಾರ; ಮತದಾರ. ರಚನ ಭಾಗ, ಅಂಗ. C. assembly ರಾಜ್ಯ ವ್ಯವಸ್ಥಾ ಸಭೆ.

Cónstitute ಕಾನ್ಸ್ಟಿಟ್ಯೂಟ್ (ಕ್ರಿ. ಸಕ.) ಸಂಯೋಜಿಸು; ನಿಯೋಜಿಸು; ನಿಯಮಿಸು; ನೇಮಿಸು (C. him president ಆತನನ್ನು ಅಧ್ಯಕ್ಷನನ್ನಾಗಿ ನಿಯೋಜಿಸು). ಸ್ಥಾಪಿಸು; ಏರ್ಪಡಿಸು. (ಒಂದು ಸಂಘ ಮೊ. ನ್ನು) ವಿಧಿವಿಹಿತವಾಗಿ ಏರ್ಪಡಿಸು. [ಮು., ದೇಹದ ಅಥವಾ ಮನಸ್ಸಿನ ಪ್ರಕೃತಿಯ ವಿಷಯವಾಗಿ (ಕರ್ಮಣಿಯಲ್ಲಿ)] ರಚಿತವಾಗಿರು; ಘಟಿತವಾಗಿರು; ಆಗಿರು. ಅಂಗಭೂತವಾಗಿರು. **Constitútion** (ನಾ.) ವ್ಯವಸ್ಥೆ; ರಚನೆ; ಘಟನೆ; ನಿಯೋಜನೆ; ನಿರ್ಮಾಣ. (ಆರೋಗ್ಯ, ದಾರ್ಢ್ಯ, ಮೊ. ಗಳ ವಿಷಯದಲ್ಲಿ) ದೇಹಸ್ಥಿತಿ; ಪ್ರಕೃತಿ; ದೇಹ ಪ್ರಕೃತಿ; ಮೈಗುಣ; ಮನಃಪ್ರಕೃತಿ. ರಾಜ್ಯವ್ಯವಸ್ಥೆ; ರಾಜ್ಯ ಭಾರದ ಮೂಲ ತತ್ತ್ವಗಳು (Written c. ಲಿಖಿತ ರಾಜ್ಯವ್ಯವಸ್ಥೆ). (ಚರಿತ್ರೆ) ನಿಬಂಧನೆ; ಶಾಸನ. **Constitútional** (ಗು., ನಾ.) ದೇಹ ಪ್ರಕೃತಿಯ; ಮನಃ ಪ್ರಕೃತಿಯ; ಸ್ವಭಾವ ಜನ್ಯ; ಆವಶ್ಯಕ; ಮುಖ್ಯ; ಮುಖ್ಯಾಂಶವಾದ. ರಾಜ್ಯ ವ್ಯವಸ್ಥೆಯ; —ಗನುಸಾರವಾದ; — ವ್ಯವಸ್ಥಾ ಬದ್ಧವಾದ (C. sovereign ವ್ಯವಸ್ಥಾ ಬದ್ಧ ರಾಜ). (ನಾ.) ದೇಹಾರೋಗ್ಯಕ್ಕಾಗಿ ತಿರುಗುವ ತಿರುಗಾಟ; ಆರೋಗ್ಯ ಸಂಚಾರ. **Constitutionálity** — ನ್ಯಾಲಿಟಿ (ನಾ.) ವ್ಯವಸ್ಥಾ ಬದ್ಧತೆ. **Constitútionalism** — ನಲಿಸ್‌ಮ್ (ನಾ.) ವ್ಯವಸ್ಥಾ ಬದ್ಧ ಪ್ರಭುತ್ವ, ಸರ್ಕಾರ. ವ್ಯವಸ್ಥಾ ಬದ್ಧ ವರ್ತನೆ. **Constitútionalist** (ನಾ.) ರಾಜ್ಯವ್ಯವಸ್ಥೆಯ ಪಂಡಿತ; ವ್ಯವಸ್ಥಾನುವರ್ತಿ. **Constitútionalize** (ಕ್ರಿ.) ವ್ಯವಸ್ಥಾ ಬದ್ಧ ಮಾಡು. ಆರೋಗ್ಯ ಸಂಚಾರ ಮಾಡು. **Constitútionally** (ಕ್ರಿ. ವಿ.); **Cónstitutive** (ಗು.) ಕಾರಕ; ಘಟನಕಾರಿ; ಆವಶ್ಯಕ; ಮುಖ್ಯ. **Cónstitutively** (ಕ್ರಿ. ವಿ.); **Cónstitutor, -er** (ನಾ.) ರಚನಕಾರಿ; ಘಟನಕಾರಿ.

Constraín ಕನ್‌ಸ್ಟ್ರೇಯ್ನ್ (ಕ್ರಿ. ಸಕ.) ಬಲಾತ್ಕರಿಸು; ನಿರ್ಬಂಧಪಡಿಸು; ಒತ್ತಾಯ ಮಾಡು; ಒತ್ತಾಯದಿಂದ ಆಗಮಾಡಿಸು. ಬಲವಂತದಿಂದ ಬಂಧಿಸು; ಸೆರೆಹಾಕು (ರೂಪ. ಸಹ). (ಕರ್ಮಣಿ) ಬಲವಂತಕ್ಕೆ ಸಿಕ್ಕಿದ; ನಿರ್ಬಂಧಕ್ಕೊಳಪಟ್ಟ. **Constraínedly** — ನೆಡ್ಲಿ (ಕ್ರಿ. ವಿ.); **Constraínt** (ನಾ.) ಒತ್ತಾಯ; ಬಲಾತ್ಕಾರ; ನಿರ್ಬಂಧ; ಬಂಧನ; ಸೆರೆ. ಮನೋವೃತ್ತಿ ನಿರೋಧ.

Constríct ಕನ್ಸ್ಟ್ರಿಕ್ಟ್ (ಕ್ರಿ. ಸಕ.) ಕುಗ್ಗಿಸು; ಸಂಕೋಚಿಸು; ಸಂಪೀಡಿಸು. ಒತ್ತು; ಅದುಮು; ಅವುಕು. **Constríction** (ನಾ.) ಸಂಪೀಡನ; ಸಂಪೀಡನ ಸ್ಥಿತಿ; ಸಂಪೀಡನ ಪ್ರದೇಶ; ಸಂಪೀಡಕ. **Constríctive** (ಗು.) ಸಂಪೀಡಕ. **Constríctor** — ಕ್ಟರ್ (ನಾ.) ಸಂಪೀಡಕ ಸ್ನಾಯು; ಸಂಪೀಡಕ (ಶಸ್ತ್ರ). ತನ್ನ ಆಹಾರಪ್ರಾಣಿಯನ್ನು ಸುತ್ತಿಕೊಂಡು ಅವುಕಿ ಕೊಲ್ಲುವ ಹೆಬ್ಬಾವು; ಅಜಗರ (= Boa-c.)

Constrínge ಕನ್ಸ್ಟ್ರಿಂಜ್ (ಕ್ರಿ. ಸಕ.) = Constrict. **Constríngency** (ನಾ.); **Constríngent** (ಗು.)

Constrúct ಕನ್ಸ್ಟ್ರಕ್ಟ್ (ಕ್ರಿ. ಸಕ.) ಕಟ್ಟು; ರಚಿಸು; ಜೋಡಿಸು; ಹೊಂದಿಸು; ನಿರ್ಮಿಸು (ರೂಪ. ಸಹ). (ವ್ಯಾ.) (ವಾಕ್ಯ)ರಚನೆ ಮಾಡು. ರೇಖಿಸು (C. a triangle ತ್ರಿಕೋಣವನ್ನು ರೇಖಿಸು). **Constrúction** (ನಾ.) ಕಟ್ಟುವುದು; ರಚಿಸುವುದು; ರಚನಾ ಕ್ರಮ. ಕಟ್ಟಡ; ಬಂಧ; ರಚನೆ; ನಿರ್ಮಾಣ; ರೇಖನ. (ವ್ಯಾ.) ವಾಕ್ಯದಲ್ಲಿ ಪದಗಳಿಗಿರುವ ಅನ್ಯೋನ್ಯ ಸಂಬಂಧ: ಅನ್ವಯ. (ಪದಗಳ) ಅರ್ಥದ ಹೊಂದಿಕೆ. (ನಡತೆ, ಮೊ. ಗಳ) ಅರ್ಥಕಲ್ಪನೆ (Put a bad c. upon his refusal ಅವನು ನಿರಾಕರಿಸಿದುದಕ್ಕೆ ಅಪಾರ್ಥಮಾಡು). C. train ರೈಲ್‌ಮಾರ್ಗವನ್ನು ಕಟ್ಟುವುದಕ್ಕಾಗಲಿ ದುರಸ್ತುಮಾಡುವುದಕ್ಕಾಗಲಿ ಸಾಮಾನನ್ನು ಸಾಗಿಸುವ ರೈಲ್‌ಬಂಡಿಸಾಲು. **Constrúctional** (ಗು.) ರಚನೆಯ; ಕಟ್ಟಡದ; ಮೂಲ ಕಟ್ಟಡಕ್ಕೆ ಸೇರಿದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಬಂಧಿಸಿದ. **Constrúctionism** (ನಾ.) (ಮು., ನಾಟಕ ಶಾಲೆಯಲ್ಲಿ) ವಾಸ್ತುಶಿಲ್ಪದ ಅಥವಾ ಯಂತ್ರಶಿಲ್ಪದ ಮೂಲಕ ಕಲಾಪ್ರಕಟನೆ. **Constrúctive** (ಗು.) ಕಟ್ಟಡದ ; ರಚನೆಯ ; ರಚನಕಾರಿ (opposed *to destructive*. C. criticism ರಚನಕಾರಿ, ಸಹಾಯಕ, ವಿಮರ್ಶೆ). ಒಂದು ಕಟ್ಟಡದ ರಚನೆಗೆ ಸಂಬಂಧಿಸಿದ. ಊಹ್ಯ ; ಅನುಮೇಯ (ನೇರವಾಗಿ ಹೇಳದ) (A c. denial ಊಹ್ಯ ನಿರಾಕರಣ). **Constrúctively** (ಕ್ರಿ. ವಿ.) ; **Constrúctor** (ನಾ.) ಕಟ್ಟುವವನು ; ರಚಿಸುವವನು ; ನಿರ್ಮಾತೃ (ಮು., ಹಡಗು ಕಟ್ಟುವುದನ್ನು ವಿಚಾರಣೆತೆಗೆದುಕೊಳ್ಳುವವನು). **Constrúctorship** (ನಾ.)

Cónstrue ಕಾನ್‌ಸ್ಟ್ರೂ, **Construé** ಕನ್‌ಸ್ಟ್ರೂ (ಕ್ರಿ., ನಾ.) ವಾಕ್ಯದಲ್ಲಿ ಪದಗಳ ಪರಸ್ಪರ ವ್ಯಾಕರಣ ಸಂಬಂಧವನ್ನು ಗೊತ್ತುಮಾಡು ; ಅನ್ವಯ ಮಾಡು; — ವಾಗು ; ಪದಶಃ ಅರ್ಥಮಾಡು ; — ವಾಗು. ಪದಶಃ ಭಾಷಾಂತರ ಮಾಡು. (ಪದಗಳಿಗೆ, ಕಾರ್ಯಗಳಿಗೆ) ಅರ್ಥ ಕಟ್ಟು ; ಅರ್ಥಮಾಡು. (ನಾ.) (ಕಾನ್‌ಸ್ಟ್ರು) ಪದಶಃ ಭಾಷಾಂತರ ಮಾಡಬೇಕಾದ ಪ್ರಕರಣ.

Consubstántial ಕಾನ್‌ಸಬ್‌ಸ್ಟ್ಯಾನ್ಷಲ್ (ಗು.) ಒಂದೇ ಪದಾರ್ಥದ (ಮು., ಕ್ರೈಸ್ತ ದೇವತ್ವದಲ್ಲಿಯ ತ್ರಿಮೂರ್ತಿಗಳ ವಿಷಯದಲ್ಲಿ) ; ಏಕದ್ರವ್ಯ ಸಂಬಂಧಿ. **Consubstantiálity** —ಷ್ಯಿಆ್ಯಲಿಟಿ (ನಾ.); **Consubstántiate** — ಯೇಟ್ (ಕ್ರಿ.) ಒಂದೇ ಪದಾರ್ಥದಲ್ಲಿ, ಒಂದೇ ತತ್ತ್ವದಲ್ಲಿ, ಐಕ್ಯವಾಗು : — ಮಾಡು. **Consubstantiátion** (ನಾ.) (ಕ್ರೈಸ್ತ) ಪ್ರಭುಭೋಜನಸಂಸ್ಕಾರದಲ್ಲಿ ಉಪಯೋಗಿಸುವ ರೊಟ್ಟಿ ಮದ್ಯಗಳಲ್ಲಿ ಕ್ರಿಸ್ತನ ದೇಹವೂ ರಕ್ತವೂ ನಿಜರೂಪದಿಂದಲೇ ಇರುವುವೆಂಬ ವಾದ.

Cónsuetude ಕಾನ್ಸ್ವಿಟ್ಯೂಡ್ (ನಾ.) ರೂಢಿ; ಸಂಪ್ರದಾಯ; ವ್ಯವಹಾರ ; ಲೋಕ ನ್ಯಾಯ (ಮು. ವ್ಯಾವಹಾರಿಕ ನ್ಯಾಯದ ಆಧಾರವುಳ್ಳದ್ದು). **Consuetúdinary** (ಗು., ನಾ.) ಸಾಂಪ್ರದಾಯಿಕ (C. law). (ನಾ.) (ಮು., ಸಂನ್ಯಾಸಿ ಗೃಹ, ಕ್ರೈಸ್ತ ಆರಾಧನ ಮಂದಿರ, ವೊ. ಗಳ) ಸಂಪ್ರದಾಯಗಳ ವಿವರಣ ಗ್ರಂಥ ; ಸಂಪ್ರದಾಯ ಕೈಪಿಡಿ.

Cónsul ಕಾನ್ಸಲ್ (ನಾ.) (ಹಿಂದೆ) ರೋಮನ್ ಪ್ರಜಾಪ್ರಭುತ್ವದಲ್ಲಿ ವರ್ಷೇವರ್ಷೇ ಚುನಾಯಿತರಾಗಿ ಪರಮಾಧಿಕಾರವನ್ನು ನಡಸುತ್ತಿದ್ದ ಇಬ್ಬರು ದಂಡಾಧಿಕಾರಿಗಳ ಅಧಿಕಾರ ನಾಮ. ಫ್ರೆಂಚ್ ಪ್ರಜಾಪ್ರಭುತ್ವದಲ್ಲಿ (ಕ್ರಿ. ಶ. ೧೭೯೯-೧೮೦೪) ಪ್ರಧಾನ ದಂಡಾಧಿಕಾರಿಗಳು ಮೂವರ ಅಧಿಕಾರ ನಾಮ (First C. ನೆಪೋಲಿಯನ್). ಪರ ರಾಜ್ಯದಲ್ಲಿ ನೆಲಸಿರುವ ತನ್ನ ರಾಜ್ಯದ ಪ್ರಜೆಗಳ ಯೋಗಕ್ಷೇಮ ನೋಡಿಕೊಳ್ಳಲು ಅಲ್ಲೇ ವಾಸವಾಗಿರುವ ರಾಯಭಾರಿ : ಪರರಾಜ್ಯ ಪ್ರತಿನಿಧಿ. **Cónsulship** (ನಾ.) ; **Cónsular** ಕಾನ್ಸ್ಯುಲರ್ (ಗು., ನಾ.) ಕಾನ್ಸಲಿನ. (ರೋಮಿನ) ಕಾನ್ಸಲ್ ದರ್ಜೆಯ(ವನು). **Cónsulate** ಕಾನ್ಸ್ಯು(ನ್ಸ)ಲೆಟ್ (ನಾ.) ಕಾನ್ಸಲಿನ ಅಧಿಕಾರ, ಅಧಿಕಾರಸ್ಥಾನ, ಕಚೇರಿ, ಖಾತೆ. ಫ್ರಾನ್ಸಿನಲ್ಲಿ ಕಾನ್ಸಲ್ ಸರ್ಕಾರ(ದ ಆಡಳಿತದ ಕಾಲ)

Consúlt ಕನ್ಸಲ್ಟ್ (ಕ್ರಿ.) ಸಲಹೆಗಾಗಿ (ಒಬ್ಬನೊಡನೆ) ಆಲೋಚನೆ ಮಾಡು ; ಸಲಹೆ ಕೇಳು ; ವಿಚಾರಿಸು ; ಸಲಹೆಗಾಗಿ, ವಿಷಯ ಸಂಗ್ರಹಕ್ಕಾಗಿ, ಪುಸ್ತಕ ನೋಡು ; ಪರಾಮರ್ಶಿಸು ; ಅಭಿಪ್ರಾಯ ತೆಗೆದುಕೊ. (ಒಬ್ಬನ ಮನೋಭಾವಗಳನ್ನು, ಹಿತವನ್ನು) ಪರಿಗಣಿಸು ; ಲಕ್ಷ್ಯಕ್ಕೆ ತರು. C. one's pillow (ಹಾಸಿಗೆಯಲ್ಲಿ) ರಾತ್ರಿಯೆಲ್ಲ ಯೋಚಿಸು. Consulting physician ವಿಶೇಷ ಸಂದರ್ಭಗಳಲ್ಲಿ ಸಲಹೆಕೊಡಲು ಕರಸುವ ವೈದ್ಯ : ಸಲಹೆಯ ವೈದ್ಯ. **Consúltable** (ಗು.) ಸಲಹೆ ತೆಗೆದುಕೊಳ್ಳಬಹುದಾದ. **Consúltative** ಕಾನ್ಸಲ್ಟಟಿವ್ (ಗು.) ಸಲಹೆಯ; ಸಲಹೆ ಕೊಡುವ (ಅಧಿಕಾರವುಳ್ಳ, ಬಾಧ್ಯತೆಯುಳ್ಳ). **Consulteé** (ನಾ.) ಯಾರೊಡನೆ ಸಲಹೆಗಾಗಿ ಆಲೋಚಿಸುವೆವೊ ಅವನು : ಸಲಹೆಗಾರ. **Consúltant** ಕನ್ಸಲ್ಟಂಟ್ (ನಾ.) ಸಲಹೆ ಕೇಳುವವನು ; ಸಲಹೆಯ ವೈದ್ಯ. **Consultátion** ಕಾನ್ಸಲ್ಟೇಷನ್ (ನಾ.) ಕೂಡಿ ಮಾತಾಡುವುದು ; ಸಲಹೆ (ಕೇಳುವುದು). ಪರ್ಯಾಲೋಚನೆ (ಮಾಡುವುದು) ; (ಪುಸ್ತಕ) ನೋಡುವುದು ; ಪರಾಮರ್ಶೆ.

Consúme ಕನ್ಸ್ಯೂಮ್ (ಕ್ರಿ.) ಸುಟ್ಟುಹಾಕು ; ನಾಶಮಾಡು ; ತಿಂದುಬಿಡು ; ಕುಡಿದುಬಿಡು ; ವ್ಯಯಮಾಡು ; ಮುಗಿಸಿಬಿಡು ; ಉಪಯೋಗಿಸಿಬಿಡು. (ಕಾಲ, ಪಟ್ಟ ಕಷ್ಟ, ವೊ. ನ್ನು) ಕಳೆದುಬಿಡು ; ಹಾಳುಮಾಡು. ಕೃಶವಾಗಿಹೋಗು ; ಕ್ಷಯಿಸಿಹೋಗು. (ಭೂ. ಕೃ.) (ಈರ್ಷ್ಯೆ, ಮತ್ಸರ, ವೊ. ಗಳಿಂದ) ಕುದಿಯುವ, ಉರಿಯುವ. **Consúmable** (ಗು., ನಾ. ; ಸಾ., ಬ. ವ. ದಲ್ಲಿ) ಉಪಯೋಗಿಸುವುದಕ್ಕಾಗಿರುವ (ಪದಾರ್ಥ) (C. ledger ಇಂಥ ಪದಾರ್ಥಗಳ ಜಮೆಯನ್ನೂ ಉಪಯೋಗಕ್ಕಾಗಿ ವಿನಿಯೋಗಿಸಿದ ಮೊತ್ತವನ್ನೂ ತೋರಿಸುವ ದಾಖಲೆಯ ಪುಸ್ತಕ). **Consúmedly** — ಮೆಡ್ಲಿ (ಕ್ರಿ. ವಿ.) ಅತಿಯಾಗಿ, ವಿಪರೀತವಾಗಿ. **Consúmer** (ನಾ.) (ಕ್ರಿಯಾರ್ಥಗಳಲ್ಲಿ). (ಅರ್ಥಶಾಸ್ತ್ರ) ಅನುಭೋಗಿ ; ಉಪಯೋಗಿಸುವವನು ; ಭೋಕ್ತೃ (ಉತ್ಪಾದಕನಲ್ಲ). **Consúmption** ಕನ್ಸಮ್ಷನ್, ಕನ್ಸಂಪ್ಷನ್ (ನಾ.) ಅನುಭೋಗ ; ವ್ಯಯ (ಮಾಡುವುದು) ; ಬಳಸುವುದು ; ಬಳಕೆ. ವ್ಯಯಮಾಡಿದ ಮೊತ್ತ. ಕ್ಷಯ ; ನವೆತ ; ಕ್ಷಯರೋಗ (ಮು., ಶ್ವಾಸಕೋಶ ಕ್ಷಯ). **Consúmptive** (ಗು., ನಾ.) ವ್ಯಯಮಾಡುವ ; ಕ್ಷಯರೋಗ ಸಂಬಂಧವುಳ್ಳ ; ಕ್ಷಯರೋಗದಿಂದ ನರಳುತ್ತಿರುವ. (ನಾ.) ಕ್ಷಯ ರೋಗಿ. **Consúmptively** (ಕ್ರಿ. ವಿ.) ; **Consúmptiveness** (ನಾ.)

Cónsummate ಕಾನ್ಸಮೇಟ್, **Consúmmate** ಕನ್ಸ— (ಕ್ರಿ. ಸಕ.) ನೆರವೇರಿಸು ; ಪೂರ್ತಿಗೊಳಿಸು ; ಸಾಂಗಮಾಡು (ಮು., ಮದುವೆಯನ್ನು ನಿಷೇಕದಿಂದ). (ಗು.) (— ಮೆಟ್) ಸಂಪೂರ್ಣ ; ಪೂರ ; ಪಕ್ಕಾ ; ಪೂರ್ಣ ಪ್ರವೀಣತೆಯುಳ್ಳ. **Cónsummative** ಕಾನ್ಸಮೇಟಿವ್ (ಗು.) ಪೂರ್ತಿಗೊಳಿಸುವ. **Cónsummator** (ನಾ.) ; **Consummátion** (ನಾ.) ನೆರವೇರಿಕೆ ; ಪೂರ್ತೈಕೆ ; ಸಂಪೂರ್ಣತೆ (ಮು., ಮದುವೆಯದು) ; ನಿಷೇಕ ಪ್ರಸ್ತ. ಅಂತ್ಯ ಧ್ಯೇಯ ; ಲಕ್ಷ್ಯ. (ಕೊನೆಯ) ಗುರಿ. ಪರಿಣತಿ ; ಪರಿಪೂರ್ಣತೆ ; ಪರಾಕಾಷ್ಠೆ ; ಪರಿಪೂರ್ಣವಾದದ್ದು.

Contabéscence ಕಾಂಟಬೆಸೆನ್ಸ್ (ನಾ.) ನವೆದುಹೋಗುವುದು ; ನಶಿಸಿಹೋಗುವುದು ; ಕ್ಷಯಿಸುವುದು ; ಕ್ಷಯ ; ಶೋಷಣೆ. (ಸ. ವಿ.) ಪುಷ್ಪಪರಾಗ ಕೋಶಗಳಲ್ಲಿ ಪರಾಗ ರಚನೆಯಾಗದೆ ನಿಂತುಹೋಗುವುದು : ಪರಾಗ ಕ್ಷಯ. **Contabéscent** (ಗು.)

Cóntact ಕಾಂಟ್ಯಾಕ್ಟ್ (ನಾ.) ತಗುಲುವುದು ; ತಗುಲಿಕೆ ; ತಾಕು ; ಸೋಕು ; ಮುಟ್ಟು(ವುದು) ; ಸಂಸ್ಪರ್ಶ ; ಸಂಪರ್ಕ ; ಸಾಹಚರ್ಯ ; ಸೇರಿಕೆ. [(ರೂಪ.) Come into c. with ಸಂಧಿಸು ; ಒಡಗೂಡು ; ಒಡಸೇರು ; ಸಂಪರ್ಕಮಾಡು. Make, break, c. (ವಿದ್ಯುತ್) ಸಂಪರ್ಕ ಮಾಡಿಸು ; — ಬಿಡಿಸು (C.-maker, -breaker ಸಂಬಂಧ ಕಾರಕ ; —ಛೇದಕ)]. (ವೈದ್ಯ) ಅಂಟುರೋಗಿಯ ಸಂಪರ್ಕದಲ್ಲಿದ್ದುದರಿಂದ ಆ ಅಂಟುರೋಗವನ್ನು ಹರಡಬಹುದಾದವನು : ಸೋಂಕು ವಾಹಕ. (ಗಣಿತ) (ಋಜುರೇಖೆಯು ಮತ್ತು ವಕ್ರರೇಖೆಯು, ಎರಡು ವಕ್ರರೇಖೆಗಳ, ಎರಡು ಕ್ಷೇತ್ರಗಳ, ಪರಸ್ಪರ) ಸಂಸ್ಪರ್ಶ.

Contágion ಕಂಟೇಜನ್ (ನಾ.) (ದೇಹದಿಂದ ದೇಹಕ್ಕೆ) ರೋಗ ಸಂಪರ್ಕ ; ಸೋಂಕು ; ಸೋಂಕುರೋಗ ; ಅಂಟುಜಾಡ್ಯ. ನೀತಿಭ್ರಷ್ಟತೆ. ಸಂಸರ್ಗ ದೋಷ ; ಸಹವಾಸ ದೋಷ. **Contágionist** (ನಾ.) ಒಂದು ವ್ಯಾಧಿ (ಪ್ಲೇಗ್, ಕಾಲರ, ವೊ.) ಅಂಟುರೋಗವೆಂದು ಅಭಿಪ್ರಾಯಪಡುವವನು. **Contágious** — ಜಸ್ (ಗು.) (ಸಂಪರ್ಕದಿಂದ) ರೋಗವನ್ನು ಅಂಟಿಸುವ. (ಜಾಡ್ಯ) ಅಂಟುವ, ಸೋಂಕುವ. (ರೂಪ.) ವ್ಯಾಪಿಸುವ ; ಹರಡುವ. **Contágiously** (ಕ್ರಿ. ವಿ.) ; **Contágiousness** (ನಾ.) ; **Contágium** ಕಂಟೇಜಿಯಂ (ನಾ.) ಅಂಟುರೋಗ ಹರಡಲು ಕಾರಣವೆಂದು ಊಹಿಸುವ ಪದಾರ್ಥ : ಸೋಂಕುವಾಹಕ (ವಸ್ತು)

Contágium. **Contagion** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Contain ಕಂಟೇನ್ (ಕ್ರಿ. ಸಕ.) ಒಳಕೊಳ್ಳು ; ಒಳಕೊಂಡಿರು ; ಹಿಡಿ ; ಗರ್ಭೀಕರಿಸಿಕೊ ; ಅಂತರ್ಗತ ಮಾಡಿಕೊ ; ಅಡಗಿಸಿಕೊ. (ಕರ್ಮಣಿ) (ಒಂದು ಕ್ಷೇತ್ರದಲ್ಲಿ, ಒಂದು ಹದ್ದಿನಲ್ಲಿ) ಸೇರಿರು, ಅಡಗಿರು, ಒಳ ಕೊಂಡಿರು. (ಒಂದು ಸಂಖ್ಯೆಯಿಂದ) ನಿಶ್ಶೇಷವಾಗಿ ಭಾಗವಾಗು. ತಡೆದುಕೊ ; ನಿಗ್ರಹಿಸು (He could not c. his anger ಅವನು ಕೋಪವನ್ನು ತಡೆಯಲಾರದೆಹೋದನು). (ಸೈನ್ಯ) (ಶತ್ರುಸೈನ್ಯವನ್ನು) ಚಲಿಸದಂತೆ ತಡೆದಿರು (ಮು., ಇತರ ಕಡೆಗಳ ಉದ್ಯಮಕ್ಕಾಗಿ). **Containable** (ಗು.) ಒಳಕೊಂಡಿರಲಾಗುವ. **Container** (ನಾ.) ಯಾವುದಾದರೂ ವಸ್ತುವನ್ನು ಹಾಕಿಡುವುದಕ್ಕಾಗಿ ಮಾಡಿದ ಪಾತ್ರೆ, ಪೆಟ್ಟಿಗೆ, ಮೊ. : ಧಾರಕ.

Contáminate ಕಂಟ್ಯಾಮಿನೇಟ್ (ಕ್ರಿ. ಸಕ.) ಹೊಲೆಗಲಸು ; ಕೊಳೆ ಗೂಡಿಸು ; ಮಲಿನ ಮಾಡು ; ಮೈಲಿಗೆ ಮಾಡು ; ಕಳಂಕಿಸು ; ಕಲು ಷಿಸು ; ಅಪವಿತ್ರ ಮಾಡು. **Contaminátion** (ನಾ.) (ಕ್ರಿಯಾರ್ಥಗಳಲ್ಲಿ). (ಸಾಹಿತ್ಯ ವಿಮರ್ಶೆಯಲ್ಲಿ) ಎರಡು ನಾಟಕಗಳು, ಎರಡು ಕಥೆಗಳು, ಮೊ. ನ್ನು ಒಟ್ಟಿಗೆ ಬೆರಸುವುದು ; ಬೆರಕೆ.

Conte (F) ಕಾಂಟ್ (ನಾ.) ಸಣ್ಣಕತೆ (ಸಾಹಿತ್ಯದ ಒಂದು ರೂಪ)

Contémn (ಕಂಟೆಮ್) (ಕ್ರಿ. ಸಕ.) ಕಡೆಗಣಿಸು ; ಜರೆ ; ತಾತ್ಸಾರ ಮಾಡು ; ತಿರಸ್ಕಾರ ಭಾವದಿಂದ ನೋಡು ; ನಿಕೃಷ್ಟವಾಗಿ ಕಾಣು ; ಅಲಕ್ಷ್ಯಮಾಡು : ತುಚ್ಛೀಕರಿಸು. **Contémner** — ಮರ್, — ಮ್ನರ್ (ನಾ.)

Cóntemplate ಕಾಂಟೆಂಪ್ಲೇಟ್, **Contémplate** ಕಂ — (ಕ್ರಿ.) ದಿಟ್ಟಿಸಿ ನೋಡು ; ಅವಲೋಕಿಸು ; ಆಲೋಚಿಸು ; ಚಿಂತಿಸು ; ಧ್ಯಾನಿಸು ; ನಿರೀಕ್ಷಿಸು ; ನೆನೆ ; ಆರಯ್ಯಿ (ಗ್ರಾಂ.) ; ಉದ್ದೇಶಿಸು. **Contemplátion** ಕಾಂ — (ನಾ.) ; **Cóntemplator** (ನಾ.) ; **Contémplative** ಕಂಟೆಂಪ್ಲಟಿವ್ (ಗು.) ಯೋಚನಾಪರ ; ಧ್ಯಾನ ಪರ ; ವಿಚಾರಶೀಲ ; ದೈವ ಧ್ಯಾನಪರ. **Contémplatively** (ಕ್ರಿ. ವಿ.) ; **Contémplativeness** (ನಾ.)

Contémporary ಕಂಟೆಂಪೊರರಿ (ಗು., ನಾ.) ಒಂದೇ ಕಾಲದ(ವನು) ; ಸಮ ಕಾಲೀನ ; ಸಮ ವಯಸ್ಸಿನ(ವನು) ; ಸಮ ವಯಸ್ಕ. ಸಮ ಕಾಲಿಕ (ವೃತ್ತಪತ್ರಿಕೆ). **Contemporáneous** — ರೇನಿಯಸ್ (ಗು.) ಒಂದೇ ಕಾಲದಲ್ಲಿ ಇರುವ, ನಡೆಯುವ ; ಸಮ ಕಾಲಿಕ (*with* ಉಪ. ದೊಡನೆ) ; ಸಮಾನ ಕಾಲಾವಧಿಯುಳ್ಳ ; ಒಂದೇ ಕಾಲದ ; ಏಕ ಕಾಲಿಕ. **Contemporanéity** — ರನೀಯಿಟಿ (ನಾ.) = **Contemporáneousness** — ರೇನಿಯಸ್‌ನೆಸ್ (ನಾ.) ; **Contemporáneously** (ಕ್ರಿ. ವಿ.) ; **Contémporize** (ಕ್ರಿ. ಸಕ.) ಸಮಕಾಲಿಕವಾಗು ; — ವಾಗಿಸು.

Contémpt ಕಂಟೆಮ್ಪ್ಟ್, — ಟೆಂಪ್ಟ್ (ನಾ.) ಇಳಿಕೆ ; ತಿರಸ್ಕಾರ ; ಧಿಕ್ಕಾರ ; ಅವಜ್ಞೆ ; ಜರೆತ ; ತಾತ್ಸಾರ ; ಅಸಡ್ಡೆ ; ಅಲಕ್ಷ್ಯ ; ಕಡೆ ಗಣಿಕೆ (Hold in c. ತಿರಸ್ಕಾರದಿಂದ ಕಾಣು ; ಏಳಿಸು. Bring into c. ತಿರಸ್ಕಾರಕ್ಕೆ ತರು). (ನ್ಯಾ. ಶಾ.) (ದೊರೆಯ ಅಥವಾ ಇತರ ಅಧಿ ಕಾರಿಯ ನ್ಯಾಯಸಮ್ಮತವಾದ ಆಜ್ಞೆಯ) ಉಲ್ಲಂಘನೆ, ಅತಿಕ್ರಮ (ಮು., C. of court ನ್ಯಾಯಸ್ಥಾನಕ್ಕೆ ಅಗೌರವ ತೋರುವುದು, ಆಜ್ಞೋಲ್ಲಂಘನೆ ಮಾಡುವುದು). **Contémptible** (ಗು.) ತಿರಸ್ಕಾ ರಾರ್ಹವಾದ ; ತುಚ್ಛ ; ನೀಚ ; ಅಲ್ಪ ; ಹೇಯ ; ಕ್ಷುದ್ರ ; ನಿಕೃಷ್ಟ ; ಕುತ್ಸಿತ. **Contemptibílity** (ನಾ.) ; **Contémptibleness** (ನಾ.) ; **Contémptibly** (ಕ್ರಿ. ವಿ.) ; **Contémptuous** — ಟ್ಯುಅಸ್ (ಗು.) ಕಡೆಗಣಿಸುವ ; ತಿರಸ್ಕರಿಸುವ ; ತುಚ್ಛೀಕರಿಸುವ (*of* ಉಪ. ದೊಡನೆ). ಉದ್ಧತ ; ಮದಿಸಿದ ; ದುರಹಂಕಾರದ. **Contémptuously** (ಕ್ರಿ. ವಿ.) ; **Contémptuousness** (ನಾ.)

Contend ಕಂಟೆಂಡ್ (ಕ್ರಿ.) (ಒಬ್ಬನೊಡನೆ, ಒಂದು ವಸ್ತುವಿಗಾಗಿ) ಹೋರಾಡು ; ಹೊಡೆದಾಡು ; ಕಾದಾಡು. (ಮನೋಭಾವಗಳೊಡನೆ, ಪ್ರಕೃತಿ ಶಕ್ತಿಗಳೊಡನೆ) ಹೆಣಗಾಡು. ಸ್ಪರ್ಧಿಸು ; ಹುರುಡಿಸು ; ಮೇಲಾಡು ; ಪೈಪೋಟಿ ಮಾಡು (Contending passions ಹೋರಾಡುವ, ಎಳೆದಾಡುವ, ವಿರುದ್ಧವಾದ, ಮನೋಭಾವಗಳು). ವಿವಾದ ಮಾಡು (*with* ಉಪ. ದೊಡನೆ). (ಹೇಳಿದ್ದನ್ನು) ಸಾಧಿಸು.

Contént[1] ಕಂಟೆಂಟ್, **Cóntent** ಕಾಂ — (ನಾ. ; ಸಾ., ಬ. ವ. ದಲ್ಲಿ) (ಪಾತ್ರೆ ಮೊ. ಗಳಲ್ಲಿ, ಪುಸ್ತಕ, ದಸ್ತಾವೇಜು, ಮೊ. ಗಳಲ್ಲಿ) ಅಡಕವಾ ಗಿರುವದು, ಅಂತರ್ಗತವಾಗಿರುವದು, ಒಳಗಿರುವದು ; ಒಳ ವಿಷಯ ; ಒಳ ಹುರುಳು (= Contents of). ಪುಸ್ತಕದ ವಿಷಯ ಸೂಚಿಕೆ ; ವಿಷಯಾನುಕ್ರಮಣಿಕೆ ; ಪರಿವಿಡಿ ; ಒಳಹಿಡಿ (= Table of contents). (ಏ. ವ. ದಲ್ಲಿ) (ಪಾತ್ರೆಯ) ಹಿಡಿತ , ಅಳತೆ ; ಘನವಸ್ತು ವಿನ ಪರಿಮಾಣ ; ಘನ ಅಳತೆ. (ಪತ್ರ, ಮೊ. ಗಳ) ತಾತ್ಪರ್ಯ, ಅಭಿ ಪ್ರಾಯ, ಸಾರಾಂಶ ; ಒಳ ತಿರುಳು. (ಕಾಂಟೆಂಟ್) ಒಂದು ಭಾವನೆಯ ಘಟಕಾಂಶಗಳು. (ಕಲೆ, ಜ್ಞಾನ, ಮೊ. ಗಳ ಕೇವಲ ರೂಪದಿಂದ ಭಿನ್ನ ವಾದ) ವಸ್ತು , ವಾಸ್ತವ ಭಾಗ, ಅಂಶ. (ಒಂದು ಪದಾರ್ಥದಲ್ಲಿರುವ ನಿರ್ದಿಷ್ಟ) ವಸ್ತು ಪರಿಮಾಣ (The ester c. of an oil)

Contént[2] ಕಂಟೆಂಟ್ (ನಾ., ಗು., ಕ್ರಿ. ಸಕ.) ತೃಪ್ತಿ ; ತಣಿವು ; ಸಮಾಧಾನ (To one's heart's c. ಮನಸ್‌ತೃಪ್ತಿಯಾಗುವಷ್ಟು ; ಮನಸಾರ). (ಗು.) ತೃಪ್ತಿ ಹೊಂದಿದ ; ತೃಪ್ತ ; ತಣಿದ. (ಮಾಡಲು) ಮನಸ್ಸುಳ್ಳ. (Well c. ಸಂತುಷ್ಟ). (ಪಾರ್ಲಿಮೆಂಟಿನ ಶ್ರೀಮಂತ ಸಭೆಯಲ್ಲಿ ಒಪ್ಪಿಗೆಹೇಳುವಾಗ : C. = ಒಪ್ಪಿಗೆ ; Not c. = ಒಪ್ಪಿಗೆ ಯಿಲ್ಲ. ಪಾರ್ಲಿಮೆಂಟಿನ ಪ್ರಜಾಸಭೆಯಲ್ಲಿ ಒಪ್ಪಿಗೆಹೇಳುವಾಗ : Ay = ಒಪ್ಪಿಗೆ ; No = ಒಪ್ಪಿಗೆಯಿಲ್ಲ). (ನಾ., ಬ. ವ. ದಲ್ಲಿ) ಒಪ್ಪಿಗೆ ಹೇಳುವವರು. (ಕ್ರಿ.) ತೃಪ್ತಿಪಡಿಸು ; ತಣಿಸು. C. oneself ತೃಪ್ತಿ ಪಡೆ ; ತಣಿ ; ಸಂತುಷ್ಟನಾಗು. **Conténtedly** (ಕ್ರಿ. ವಿ.) ; **Conténtedness** (ನಾ.) ; **Conténtment** (ನಾ.)

Conténtion ಕಂಟೆನ್ಷನ್ (ನಾ.) ವ್ಯಾಜ್ಯ ; ಕಲಹ ; ಜಗಳ ; ವ್ಯವಹಾರ ; ಹೋರಾಟ ; ಹೆಣಗಾಟ ; ಕಿತ್ತಾಟ ; ವಾದ ವಿವಾದ ; ಸ್ಪರ್ಧೆ ; ಮೇಲಾಟ ; ಪೈಪೋಟಿ. ವಾದ ; ವಾದಾಂಶ ; ವಾದ ವಿಷಯ. **Conténtious** — ಷಸ್ (ಗು.) ಜಗಳಗಂಟ ; ಕಲಹಶೀಲ ; ಹೋರಾ ಡುವ ; ತಕರಾರಿನ ; ವಾದಾಸ್ಪದ ; ವಾದಗ್ರಸ್ತ. **Conténtiously** (ಕ್ರಿ. ವಿ.) ; **Conténtiousness** (ನಾ.)

Contérminal ಕಂಟರ್ಮಿನಲ್ (ಗು.) (ಎರಡಕ್ಕೂ) ಎಲ್ಲೆಯೊಂದಾದ ; ಸಮಾನ ಮೇರೆಯುಳ್ಳ. **Contérminous** (ಗು.) = Conterminal (*with, to,* ಉಪ. ದೊಡನೆ). (ಎರಡು ವಸ್ತುಗಳ ವಿಷಯದಲ್ಲಿ) ತುದಿ ಗಳಲ್ಲಿ ಸಂಧಿಸುವ, ಸೇರುವ. (ದೇಶ, ಕಾಲ, ಅರ್ಥ — ಇವುಗಳಲ್ಲಿ) ಸಹ ವ್ಯಾಪಕ, ಸಮಾನ ವ್ಯಾಪಿ, ಸಮಾನಾಂತ. **Contérminously** (ಕ್ರಿ. ವಿ.)

Cóntest ಕಾಂಟೆಸ್ಟ್ (ನಾ.), **Contést** ಕಂಟೆಸ್ಟ್ (ಕ್ರಿ.) ಚರ್ಚೆ ; ವಾದ ; ವಿವಾದ ; ವಾಗ್ಯುದ್ಧ ; ವ್ಯಾಜ್ಯ ; ಕಲಹ ; ಹೋರಾಟ ; ಸ್ಪರ್ಧೆ ; ಮೇಲಾಟ. (ಕ್ರಿ.) ಚರ್ಚಿಸು ; ವಿವಾದ ಮಾಡು ; (ವಿಷಯ, ಹೇಳಿಕೆ, ಮೊ. ನ್ನು) ವಿರೋಧಿಸು ; ತಕರಾರು ಹೂಡು. ಪ್ರತಿವಾದಿಸು (*with, against* ಉಪ. ದೊಡನೆ). ಹೆಣಗಾಡು ; ಆಯುಧಪಾಣಿ ಯಾಗಿ ಕಾದಾಡು. (ಪಾರ್ಲಿಮೆಂಟ್, ಮೊ. ಗಳಲ್ಲಿ ಸದಸ್ಯತ್ವಕ್ಕೆ) ಹೋರಾಡು, ಸ್ಪರ್ಧಿಸು. **Contéstable** (ಗು.) ; **Contéstant** (ನಾ.) ಪ್ರತಿವಾದಿ ; ಸ್ಪರ್ಧಿ. **Contestátion** ಕಾಂ — (ನಾ.) ವಾದ ವಿವಾದ ; ಹೋರಾಟ ; ಸ್ಪರ್ಧೆ. ವಾದ ವಿಷಯ ; ವಿವಾದಾಂಶ. In c. ವಿವಾದದಲ್ಲಿ.

Cóntext ಕಾಂಟೆಕ್ಸ್ಟ್ (ನಾ.) ಒಂದು ಗ್ರಂಥವಚನದ ಅರ್ಥವನ್ನು ಸ್ಪಷ್ಟಗೊಳಿಸುವ ಅದರ ಹಿಂದಿನ ಅಥವಾ ಮುಂದಿನ ಭಾಗಗಳು ; (ಹಿಂದುಮುಂದಿನ) ಸಂದರ್ಭ ; ಸನ್ನಿವೇಶ ; ಪ್ರಕರಣ ; ಪ್ರಸಂಗ. In this c. ಈ ಸಂದರ್ಭದಲ್ಲಿ ; ಈ ಪ್ರಸಂಗದಲ್ಲಿ. **Contéxtual** — ಟ್ಯುಅಲ್ (ಗು.) ಸನ್ನಿವೇಶದ ; ಸಂದರ್ಭ ಸಂಬಂಧವಾದ. **Contéxtually** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Contéxture ಕಂಟೆಕ್‌ಸ್ಚ್ಯರ್ (ನಾ.) ನೆಯ್ಯುವುದು ; ನೆಯ್ಗೆ ; ಹೆಣಿಗೆ. (ಭಾಷೆಯ) ಜೋಡಣೆ, ರಚನೆ ; ಬಂಧ ; ವಿನ್ಯಾಸ.

Contigúity ಕಾಂಟಿಗ್ಯೂಯಿಟಿ (ನಾ.) ಸಂಪರ್ಕ ; ಸಾಮಿಪ್ಯ ; ನಿಕಟತೆ ; ನೆರೆ ; ಹೊರೆ ; ಹೊದ್ದುಗೆ. (ಮ. ಶಾ.) ಭಾವಗಳ ಸಾಹಚರ್ಯ. **Contíguous** ಕಂಟಿಗ್ಯುಅಸ್ (ಗು.) ಮುಟ್ಟಿಕೊಂಡಿರುವ ; ಹೊದ್ದಿಕೊಂಡಿರುವ ; ಹತ್ತಿರವಿರುವ ; ಪಕ್ಕದಲ್ಲಿರುವ ; ಮಗ್ಗುಲಲ್ಲಿರುವ ; ನೆರೆಯಲ್ಲಿರುವ ; ಮುಂದಿನ. **Contíguously** (ಕ್ರಿ. ವಿ.)

Cóntinent[1] ಕಾಂಟಿನೆಂಟ್ (ಗು.) ಮಿತ ; ಮಿತ ಭೋಗಿ ; ಸಂಯಮಿ ; ಜಿತೇಂದ್ರಿಯ. **Cóntinence** (ನಾ.) ಇಂದ್ರಿಯ ನಿಗ್ರಹ ; ಸಂಯಮ. **Cóntinently** (ಕ್ರಿ. ವಿ.)

Cóntinent[2] ಕಾಂಟಿನೆಂಟ್ (ನಾ.) ಭೂಖಂಡ (ಏಷ್ಯ, ಯೂರೋಪ್, ಆಫ್ರಿಕ, ಉ. ಮತ್ತು ದ. ಅಮೆರಿಕ, ಆಸ್ಟ್ರೇಲಿಯ — ಈ ಭೂಖಂಡಗಳಲ್ಲೊಂದು). The C. (ಇಂಗ್ಲೆಂಡಿನ ದೃಷ್ಟಿಯಿಂದ) ಯೂರೋಪ್. **Continéntal** (ಗು., ನಾ.) ಭೂಖಂಡದ ; ಯೂರೋಪಿನ. (ನಾ.) = Continentalist. (ಅಮೆ. ಸಂ., ಅಸಂ.) ಹಿಂದೆ ಚಲಾವಣೆಗೆ ತಂದು ಬಲು ಬೇಗನೆ ಬೆಲೆಯಿಳಿದುಹೋದ ಒಂದು ಹಣಕಾಗದ (Currency note) (I dont care a c. ಕಾಸಿಗೆ ಕಡೆ). **Continéntalism** (ನಾ.) ಭೂಖಂಡದ (ಮು., ಯೂರೋಪಿನ) ವೈಶಿಷ್ಟ್ಯ. **Continéntalist** (ನಾ.) ಭೂಖಂಡದ (ಮು., ಯೂರೋಪಿನ) ನಿವಾಸಿ. **Continéntalize** (ಕ್ರಿ. ಸಕ.) (ಗುಣ, ಸಂಸ್ಕೃತಿ ಅಥವಾ ಉದ್ದೇಶಗಳಲ್ಲಿ) ಯೂರೋಪ್‌ಖಂಡದಂತೆ ಮಾಡು. **Continéntally** (ಕ್ರಿ. ವಿ.)

Contíngency ಕಂಟಿಂಜೆನ್ಸಿ (ನಾ.) ಅನಿಶ್ಚಯ (ಸಂದರ್ಭ) ; ಮುಂದೆ ನಡೆಯಬಹುದಾದದ್ದು ; ಸಂಭವ ; ಆನುಷಂಗಿಕ. ಚಿಲ್ಲರೆ ವೆಚ್ಚ ; ಸಾದಿಲ್ವಾರು. **Contíngent** (ಗು., ನಾ.) ಆಗಂತುಕ ; ಅವಲಂಬಕ ; ಸದ್ಯಃಸ್ಥಿತಿಯಲ್ಲಿ ಮಾತ್ರ ನಿಜವಾದ ; ಗೌಣ ; ಸೋಪಾಧಿಕ. (ನಾ.) ಆಕಸ್ಮಿಕ. (ಭಾಗಮಾಡಿದುದರಲ್ಲಿ) ಪಾಲಿಗೆ ಬಂದದ್ದು ; ಪಾಲು ; ತಕ್ಕ ಭಾಗ ; ಯೋಗ್ಯ ಪ್ರಮಾಣ. (ಒಟ್ಟುಗೂಡಿ ನಡಸುವ ಯುದ್ಧ, ಮೊ. ಗಳಲ್ಲಿ) ಒಟ್ಟುಸೈನ್ಯಕ್ಕೆ ಭಾಗವಾಗಿ ಕೊಟ್ಟ ದಳ. **Contíngently** (ಕ್ರಿ. ವಿ.)

Contínual, etc. **Continue** ನೋಡಿ.

Contínue ಕಂಟಿನ್ಯು (ಕ್ರಿ.) (ಕಾರ್ಯ, ಮೊ. ನ್ನು) ಮುಂದೆ ನಡಸು ; ನಡಸಿಕೊಂಡುಬರು. (ಒಬ್ಬನನ್ನು ಅಧಿಕಾರ ಮೊ. ಗಳಲ್ಲಿ) ಇಟ್ಟುಕೊಂಡಿರು. (ಕಥೆ, ಹೇಳಿಕೆ, ಮೊ.) ಮುಂಬರಿ ; ಮುಂದುವರಿಸು ; ಸಾಗಿಸು. (ನ್ಯಾ. ಶಾ.) ಮುಂದಕ್ಕಿಡು. ಜೀವದಿಂದಿರು. (ಒಂದು ಸ್ಥಳದಲ್ಲಿ, ಒಂದು ಸ್ಥಿತಿಯಲ್ಲಿ) ಇದ್ದುಕೊಂಡಿರು, ಇರು (If you c. obstinate ನೀನು ಇನ್ನೂ ಹಠಹಿಡಿದೇ ಇದ್ದರೆ). ಬಿಡದೆ ನಡೆ, ನಡಸು. **Contínuable** (ಗು.) ಮುಂದುವರಿಸಬಹುದಾದ. **Contínual** (ಗು.) ಯಾವಾಗಲೂ ನಡೆಯುತ್ತಿರುವ ; ಎಡೆಬಿಡದ ; ನಿರಂತರ ; ಸಂತತ ; ಅವಿಚ್ಛಿನ್ನ ; ಅಡಿಗಡಿಗೆ ಬರುವ. **Contínually** (ಕ್ರಿ. ವಿ.) ; **Contínuance** — ಅನ್ಸ್ (ನಾ.) ಎಡೆಬಿಡದ ನಡೆ ; ನಿರಂತರತೆ (Of long c. ಬಹು ಕಾಲ ನಡೆಯುವ). (ಸ್ಥಳ, ಸ್ಥಿತಿ, ಮೊ. ಗಳಲ್ಲಿ) ನೆಲಸಿರುವುದು, ನಿಂತಿರುವುದು. ಇಟ್ಟಿರುವುದು ; ಇರುವುದು ; ನೆಲೆ ; ನಿಲವು. **Contínuant** (ಗು., ನಾ.) ಧ್ವನಿ ತಡೆಯದೆ ಮುಂದುವರಿಸಬಹುದಾದ (ವ್ಯಂಜನ) (ಉದಾ. f, v, s, r). **Continuátion** (ನಾ.) (ಕಾರ್ಯ, ಮಾರ್ಗ, ಕಥೆ, ಪುಸ್ತಕ, ಮೊ. ಗಳ) ಮುಂಬರಿವು, ಮುನ್ನಡೆ ; ನಡಸಿಕೊಂಡುಹೋಗುವುದು ; ಸಾಗಿಸುವುದು. (ಪತ್ರ ವ್ಯಾಪಾರ) ಒಂದು ಲೆಕ್ಕವನ್ನು ಮುಂದಿನ ಸಾಗುದಿನಕ್ಕೆ ಮುಂದುವರಿಸುವುದು. ಮುಂಬರಿಸಿದ್ದು. ಸೇರಿಸಿದ ಭಾಗಗಳು. ಉಪಸರಣ. ಚಡ್ಡಿಯೊಂದಿಗೆ ಸೇರಿರುವ ಕಾಲ್ಪಟ್ಟಿ. (ಅಸಂ.) ಷರಾಯಿ. C. school ಪ್ರಾಥಮಿಕ ವಿದ್ಯಾಭ್ಯಾಸ ಹೊಂದಿ ಪಾಠಶಾಲೆಯನ್ನು ಬಿಟ್ಟವರಿಗಾಗಿ, ಅವರ ತೆರಪಿನ ಕಾಲದಲ್ಲಿ, ಅವರ ವಿದ್ಯಾಭ್ಯಾಸವನ್ನು ಮುಂದುವರಿಸುವ ಪಾಠಶಾಲೆ : ಅನುಬಂಧ ಪಾಠಶಾಲೆ. **Contínuative** — ಯೆಟಿವ್ (ಗು.) ಸಾಗಿಸುವ ; ಮುಂದುವರಿಸುವ ; ನಡಸಿಕೊಂಡು ಬರುವ. **Contínuator** — ಯೇಟರ್ (ನಾ.) ಮತ್ತೊಬ್ಬನ ಕೃತಿಯನ್ನು ಮುಂದುವರಿಸುವವನು ; ಕೃತಿಯ ಉತ್ತರಭಾಗ ಲೇಖಕ. **Continúity** ಕಾಂಟಿನ್ಯೂಯಿಟಿ (ನಾ.) ಎಡೆಬಿಡದಿರುವುದು ; ತೆರಪಿಲ್ಲದೆ ನಡೆಯುವುದು ; ಅವಿಚ್ಛಿನ್ನತೆ ; ನೈರಂತರ್ಯ. Law of c. ಪ್ರಕೃತಿಯಲ್ಲಿ ನಡೆಯುವ ಎಲ್ಲ ಪರಿವರ್ತನೆಗಳೂ ಅವಿಚ್ಛಿನ್ನವಾಗಿ ನಡೆಯುವುವೇ ವಿನಾ ಥಟ್ಟನೆ ಸಂಭವಿಸುವುದಿಲ್ಲವೆಂಬ ವಾದ : ಅವಿಚ್ಛಿನ್ನತಾ ನಿಯಮ. C. writer, clerk ಚಲಚ್ಚಿತ್ರದ ಕಥೆಯಲ್ಲಿ ಬೇರೆ ಬೇರೆ ಸಂದರ್ಭಗಳಿಗೆ ಸಂಬಂಧ ಕಲ್ಪಿಸಿ ಸರಣಿ ಸರಿಹೋಗುವಂತೆ ನಿರೂಪಣೆ ಬರೆಯುವವನು : ಸರಣಿ ಲೇಖಕ. **Contínuous** ಕಂಟಿನ್ಯುಅಸ್ (ಗು.) (ಮೂರ್ತ ವಸ್ತುಗಳ ವಿಷಯವಾಗಿ) ಕೂಡಿಕೊಂಡಿರುವ ; ಅಖಂಡ ; (ಕಾಲದಲ್ಲಾಗಲಿ, ಕ್ರಮದಲ್ಲಾಗಲಿ) ಎಡೆಬಿಡದ, ತೆರಪಿಲ್ಲದ ; ನಿರಂತರ ; ಅವಿಚ್ಛಿನ್ನ. C. brake of train ಒಂದೇ ಎಡೆಯಿಂದ ನಿಯಂತ್ರಿಸಲಾಗುವಂತೆ ಅಳವಡಿಸಿರುವ ರೈಲ್‌ಬಂಡಿ ಸಾಲಿನ ಬಂಡಿಬರಿಗಳ ಪರಂಪರೆ : ಸಾಲು ಬರಿ. **Contínuously** (ಕ್ರಿ. ವಿ.) ; **Contínuousness** (ನಾ.) ; **Contínuum** (ನಾ.) (ತತ್ತ್ವಶಾಸ್ತ್ರ) ಅಖಂಡ ದ್ರವ್ಯ ; ದ್ರವ್ಯ. ವೇದನೆ, ಘಟನೆ, ಮೊ. ಗಳ ಸಂತತ ಪ್ರವಾಹ, ಧಾರೆ.

Cónt-line ಕಾಂಟ್‌ಲೈ(ಲಿ)ನ್ (ನಾ.) ಹಗ್ಗದ ತಿರಿಗಳಲ್ಲಿ ಮಧ್ಯೇ ಇರುವ ಸುತ್ತುಗೆರೆ : ತಿರಿ ಗೆರೆ. ಪಕ್ಕಪಕ್ಕದಲ್ಲಿಟ್ಟಿರುವ ಪೀಪಾಯಿಗಳ ಮಧ್ಯೆ ಬಿಟ್ಟಿರುವ ಅಂತರ.

Contórt ಕಂಟಾರ್ಟ್ (ಕ್ರಿ. ಸಕ.) ತಿರಿಚು ; ಹುರಿಮಾಡು. **Contórtion** (ನಾ.) ತಿರಿಚು(ವುದು). (ಮು., ಮುಖ, ದೇಹ—ಇವುಗಳ) ತಿರಿಚಿದ ಸ್ಥಿತಿ, ತಿರಿಚು, ವಕ್ರತೆ. **Contórtionist** (ನಾ.) ತನ್ನ ಕೃತಿಯಲ್ಲಿ ವಕ್ರಾಕಾರಗಳನ್ನು ಚಿತ್ರಿಸುವ ಕಲಾ ಕುಶಲಿ ; ತನ್ನ ದೇಹವನ್ನು ವಕ್ರವಕ್ರವಾಗಿ ತಿರಿಚಬಲ್ಲ ವ್ಯಾಯಾಮಕಾರಿ : ಮೈತಿರಿಚುಗ.

Cóntour ಕಾಂಟೂರ್, **Contoúr** ಕಂ — (ನಾ., ಕ್ರಿ. ಸಕ.) ಹೊರ ಆಕಾರ ; ಬಾಹ್ಯ ರೇಖೆ ; ಆಕಾರ ರೇಖೆ ; ಹೊರ ಗೆರೆ ; ಸುತ್ತು ಗೆರೆ. ಒಂದು ರಚನೆಯ ವಿವಿಧ ವರ್ಣಭಾಗಗಳನ್ನು ಪ್ರತ್ಯೇಕಿಸುವ ರೇಖೆ. ಬಾಹ್ಯ ರೇಖೆಯ ಕಲಾ ಚಾತುರ್ಯ. ತೀರ, ಪರ್ವತ, ಮೊ. ಗಳ ರೇಖೆ, ಎಲ್ಲೆಕಟ್ಟು (C. line ಭೂಮಿಯ ಒಂದು ಗೊತ್ತಾದ ಮಟ್ಟದಲ್ಲಿ ಅದರ ಮೇಲ್ಮೈಯ ಕ್ಷಿತಿಜತಲದ ಮಟ್ಟರೇಖೆ. C. map ಮಟ್ಟರೇಖೆಯ ಭೂಪಟ ; ರೇಖಾ ಪಟ). (ಕ್ರಿ.) ಆಕಾರರೇಖೆಗಳೆಳೆದು ಗುರುತಿಸು. (ರಸ್ತೆಯನ್ನು) ಗುಡ್ಡದ ಆಕಾರರೇಖೆಯನ್ನನುಸರಿಸಿ ತೆಗೆದುಕೊಂಡು ಹೋಗು.

Cóntra ಕಾಂಟ್ರ (ಕ್ರಿ. ವಿ., ಉಪ., ನಾ.) Pro and c. (ಸಾ., con.) ಸಾಧಕ ಬಾಧಕ ; ಪರವಾಗಿ ಪ್ರತಿಯಾಗಿ. Pros and cons ಅನುಕೂಲ ಪ್ರತಿಕೂಲ ವಾದಗಳು. (ಲೆಕ್ಕವಿಡುವುದರಲ್ಲಿ) ಲೆಕ್ಕದ ಎದುರು ಪಾನು (ಮು., ಜಮಾ ಬಾಬಿನದು)

Cóntraband ಕಾಂಟ್ರಬ್ಯಾಂಡ್ (ನಾ., ಗು.) ನಿಷಿದ್ಧ ವ್ಯಾಪಾರ ; (ನಿಷಿದ್ಧ ಪದಾರ್ಥಗಳನ್ನು) ಕಳ್ಳತನದಿಂದ (ಸುಂಕ ಕೊಡದೆ) ನುಗ್ಗಿಸುವುದು ; ಕಳ್ಳತನದಿಂದ (ಸುಂಕ ಕೊಡದೆ) ಆಮದು ರಫ್ತು ಮಾಡಿದ ಸಾಮಾನು : ನುಸುಕು ವ್ಯಾಪಾರ ; ಕಳ್ಳ ವ್ಯಾಪಾರ. C. of war ಯುದ್ಧಮಾಡುತ್ತಿರುವ ಪಕ್ಷಗಳಿಗೆ ತಟಸ್ಥ ಪಕ್ಷದವರು ಒದಗಿಸಕೂಡದೆಂದು ನಿಯಮಮಾಡಿರುವ ಸರಕು : ನಿಷಿದ್ಧ ಯುದ್ಧಸಾಮಗ್ರಿ [Absolute c. ಯಾವ ಸಂದರ್ಭದಲ್ಲಿಯೂ ಶುದ್ಧಾಂಗವಾಗಿ ಒದಗಿಸಕೂಡದ ಪದಾರ್ಥಗಳು : ಶುದ್ಧಾಂಗ ನಿಷಿದ್ಧ (: ಯುದ್ಧಾಯುಧಗಳು). Conditional c. ಕೆಲವು ಸಂದರ್ಭಗಳಲ್ಲಿ ಮಾತ್ರ ಒದಗಿಸಬಹುದಾದವು (: ಹತ್ತಿ)]. (ಗು.) ಆಮದು ರಫ್ತು ಮಾಡಕೂಡದೆಂದು ವಿಧಿಸಿರುವ : ನಿಷಿದ್ಧ (C. goods). **Cóntrabandist** (ನಾ.) ಕಳ್ಳತನದಿಂದ (ಸುಂಕ ಕೊಡದೆ) ಸಾಮಾನು ನುಗ್ಗಿಸುವವನು : ನುಸುಕು ವ್ಯಾಪಾರಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Contracéptive ಕಾಂಟ್ರಸೆಪ್ಟಿವ್ (ಗು., ನಾ.) ಗರ್ಭ ನಿರೋಧಕ ; ಬಸಿರು ತಡೆ. **Contracéption** (ನಾ.) ಗರ್ಭನಿರೋಧಕಗಳನ್ನು ಉಪಯೋಗಿಸುವುದು ; ಬಸಿರಾಗದಂತೆ ತಡೆಯುವುದು ; ಗರ್ಭ ನಿರೋಧ.

Cóntract ಕಾಂಟ್ರ್ಯಾಕ್ಟ್ (ನಾ.), **Contráct** ಕಂ — (ಕ್ರಿ.) (ಪಕ್ಷಗಳು, ರಾಷ್ಟ್ರಗಳು, ಮೊ. ವು ಮಾಡಿಕೊಂಡ) ಒಪ್ಪಂದ, ಕರಾರು, ಮುಚ್ಚಳಿಕೆ, ಒಡಂಬಡಿಕೆ. ಒಂದು ಗೊತ್ತಾದ ದರದಮೇಲೆಗೆ ಸಾಮಾನು ಸರಬರಾಯಿಗಾಗಲಿ, ಒಂದು ಕೆಲಸ ಮಾಡಿಕೊಡುವುದಕ್ಕಾಗಲಿ, ಮಾಡಿಕೊಂಡ ಒಪ್ಪಂದ: ಗುತ್ತಿಗೆ. ಮದುವೆ ನಿಶ್ಚಿತಾರ್ಥ. ಸ್ವತ್ತನ್ನು ವರ್ಗಕೊಡುವುದು. (C. bridge ಒಂದು ತೆರದ ಇಸ್ಪೀಟಾಟ). (ಕ್ರಿ.) ಒಪ್ಪಂದ, ಕರಾರು, ಮಾಡಿಕೊ. [C. oneself out of, C. out of, C. out (ಕಾನೂನು, ಮೊ. ಗಳ) ನಿರ್ಬಂಧದಿಂದ ಬಿಡುಗಡೆಹೊಂದಲು ಕರಾರು ಮಾಡಿಕೊ. C. marriage ಮದುವೆ ಮಾಡಿಕೊ ; ವಿವಾಹ ಬೆಳಸು]. (ಸ್ನೇಹ, ಅಭ್ಯಾಸ, ಸಾಲ) ಮಾಡು, ಸಂಪಾದಿಸು. (ಸ್ನಾಯುಗಳು, ಹುಬ್ಬು, ಮೊ. ನ್ನು) ಸಂಕುಚಿಸು. ಕುಗ್ಗಿಸು ; ಚಿಕ್ಕದು ಮಾಡು ; ನಿರ್ಬಂಧಕ್ಕೊಳಪಡಿಸು (ರೂಪ. ಸಹ). (ವ್ಯಾ.) (ಒಂದು ಪದವನ್ನು ಸಂಯೋಜನೆಯಿಂದ ಅಥವಾ ಅಕ್ಷರ ಲೋಪದಿಂದ) ಹ್ರಸ್ವಮಾಡು, ಸಂಕ್ಷೇಪಿಸು. ಕುಗ್ಗು ; ಎಳೆದುಕೊಳ್ಳು ; ಚಿಕ್ಕದಾಗು. (ಭೂ. ಕೃ.) (ಭಾವನೆಗಳು, ಮೊ.) ಸಂಕುಚಿತ, ವಿಶಾಲವಲ್ಲದ ; ಸ್ವಾರ್ಥ. **Contractabílity** (ನಾ.) ಸಂಕೋಚ್ಯತೆ. **Contráctible** (ಗು.) ಸಂಕೋಚನೀಯ. **Contráctile** ಕಂಟ್ರ್ಯಾಕ್ಟೈಲ್, — ಟೈಲ್ (ಗು.) ಸಂಕೋಚನೀಯ ; ಸಂಕೋಚಕ (C. muscles). **Contractílity** ಕಾಂಟ್ರ್ಯಾಕ್ಟಿಲಿಟಿ (ನಾ.) ; **Contráction** ಕಂ — (ನಾ.) ಕುಗ್ಗುವುದು ; ಎಳೆದುಕೊಳ್ಳುವುದು ; ಸಂಕೋಚನ ; ಸಂಕ್ಷೇಪಣ ; ನಿರ್ಬಂಧ. (ವ್ಯಾ.) ಪದ ಸಂಕೋಚನ ; ಸಂಕುಚಿತ ಪದ ; ಸಂಕ್ಷಿಪ್ತ ರೂಪ. (ಸಾಲ, ಅಭ್ಯಾಸ — ಇವುಗಳನ್ನು) ಮಾಡುವುದು ; (ರೋಗ, ಮೊ. ಗಳ) ಅರ್ಜನೆ, ಸಂಪಾದನೆ. **Contráctive** (ಗು.) ಸಂಕೋಚನವುಂಟುಮಾಡುವ. **Contráctor** (ನಾ.) ಒಪ್ಪಂದಗಾರ ; ಗುತ್ತಿಗೆದಾರ. ಸಂಕೋಚಕ ಸ್ನಾಯು. **Contráctual** (ಗು.) ಕರಾರಿನ ; ಒಪ್ಪಂದದ ; ಗುತ್ತಿಗೆಯ.

Contradíct ಕಾಂಟ್ರಡಿಕ್ಟ್ (ಕ್ರಿ. ಸಕ.) (ಹೇಳಿಕೆಯನ್ನು) ವಿರೋಧಿಸು, ನಿಷೇಧಿಸು, ಪ್ರತಿಷೇಧ ಮಾಡು ; ಪ್ರತಿ ಹೇಳು ; ಎದುರು ನುಡಿ. (ಒಬ್ಬನ ಮಾತನ್ನು) ತಪ್ಪೆಂದು, ಸುಳ್ಳೆಂದು, ಹೇಳು. ವಿರುದ್ಧವಾಗಿರು (These rumours c. each other ಈ ವದಂತಿಗಳು ಪರಸ್ಪರ ವಿರುದ್ಧವಾಗಿವೆ). **Contradíctable** (ಗು.) ; **Contradíctor** (ನಾ.) ; **Contradíction** (ನಾ.) ಪ್ರತಿ ಹೇಳುವುದು ; ವಿರೋಧ ; ಪ್ರತಿಷೇಧ ; ಒಂದು ಹೇಳಿಕೆಗೆ ವಿರೋಧವಾದ ಹೇಳಿಕೆ ; ವಿರೋಧೋಕ್ತಿ ; ಅಸಮಂಜಸ ; ಅಸಂಬದ್ಧ ; ಅಸಂಗತಿ. C. in terms ಶಬ್ದ ವಿರೋಧ (Almost quite ready ಎಂಬುದು ಅಸಮಂಜಸ). **Contradíctious** (ಗು.) ವಿರೋಧ ಹೇಳುವ (ಸ್ವಭಾವದ) ; ಪ್ರತಿ ಹೇಳುವ (ಸ್ವಭಾವದ) ; ವಾದಿಸುವ (ಸ್ವಭಾವದ). **Contradíctiously** (ಕ್ರಿ. ವಿ.) ; **Contradíctiousness** (ನಾ.) ; **Contradíctory** (ಗು., ನಾ.) ವಿರೋಧಕ ; ವಿರೋಧಾತ್ಮಕ ; ಪರಸ್ಪರ ವಿರುದ್ಧ ; ಅಸಂಗತ ; ಅಸಂಬದ್ಧ. = Contradictious. (ನಾ.) ವಿರುದ್ಧ ವಚನ, ತತ್ತ್ವ. **Contradíctorily** (ಕ್ರಿ. ವಿ.) ; **Contradíctoriness** (ನಾ.)

Contradistínction ಕಾಂಟ್ರಡಿಸ್ಟಿಂಕ್‌ಷನ್ (ನಾ.) ವೈಲಕ್ಷಣ್ಯದಿಂದಾದ ವ್ಯತ್ಯಾಸ ; ವೈಲಕ್ಷಣ್ಯ ; ವೈದೃಶ್ಯ. **Contradistínguish** — ಡಿಸ್ಟಿಂಗ್ವಿಷ್ (ಕ್ರಿ. ಸಕ.) (ಒಂದರಿಂದೊಂದನ್ನು ಅವುಗಳ) ವೈಲಕ್ಷಣ್ಯದಿಂದ ಭೇದತೋರಿಸು ; ವ್ಯತ್ಯಾಸ ಮಾಡು.

Contra-indicátion ಕಾಂಟ್ರ ಇಂಡಿಕೇಷನ್ (ನಾ.) (ವೈ. ಶಾ.) ಒಂದು ಗೊತ್ತಾದ ಚಿಕಿತ್ಸೆ ಮಾಡುತ್ತಿರುವಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ತೋರಿಬರುವ ಚಿಹ್ನೆ : ವಿರುದ್ಧ ಚಿಹ್ನೆ. **Contra-índicate** (ಕ್ರಿ. ಸಕ.)

Contrálto ಕಂಟ್ರಾಲ್ಟೊ (ನಾ., ಗು.) ಹೆಂಗಸಿನ ಮಂದ್ರತಮ ಸ್ವರ(ದ) ; ಈ ದನಿಯ ಗಾಯಕ(ಕಿ)

Contraposítion ಕಾಂಟ್ರಪೊಸಿಷನ್ (ನಾ.) ವಿರೋಧ ನ್ಯಾಸ : ವೈಲಕ್ಷಣ್ಯ ; ವೈದೃಶ್ಯ. (ತರ್ಕ) ಒಂದು ತೆರದ ಪರಿವರ್ತನೆ ; ನಿಷೇಧ ರೂಪ ಪರಿವರ್ತನೆ. **Contrapósitive** — ಪಾಸಿಟಿವ್ (ಗು.)

Contráption ಕಂಟ್ರ್ಯಾಪ್ಷನ್ (ನಾ.) (ಅಸಂ.) ವಿಲಕ್ಷಣ ಯಂತ್ರ ; ತಾತ್ಕಾಲಿಕ ಸಾಧನ ; ಹೊಸ ಕಲ್ಪನೆ (ತಿರಸ್ಕಾರ ಸೂಚಕ)

Contrapúntal ಕಾಂಟ್ರಪಂಟಲ್ (ಗು.) (ಸಂ.) ಸ್ವರಸಂವಾದಕ್ಕೆ ಸಂಬಂಧಪಟ್ಟ.

Contráriant, etc. **Contrary** ನೋಡಿ.

Cóntrary ಕಾಂಟ್ರರಿ (ಗು., ನಾ., ಕ್ರಿ. ವಿ.) (ಸ್ವಭಾವ, ಪ್ರವೃತ್ತಿ, ಸ್ಥಾನ, ದಿಕ್ಕು, ಮೊ. ಗಳಲ್ಲಿ) ವಿರುದ್ಧ, ಪ್ರತಿ ; ಪ್ರತಿಕೂಲ ; ವಿಪರೀತ. (ಗಾಳಿಯ ವಿಷಯದಲ್ಲಿ) ಎದುರಾದ, ಪ್ರತಿಕೂಲ. (ಉಚ್ಚಾರಣೆ : ಕಂಟ್ರೇರಿ) ದುರಾಗ್ರಹಿ ; ಹಠಮಾರಿ ; ಸ್ವಚ್ಛಂದ ವರ್ತಿ ; ವಕ್ರ. (ಕ್ರಿ. ವಿ.) — ಆಗಿ. On the c. ಅದಕ್ಕೆ ಪ್ರತಿಯಾಗಿ ; ಹಾಗಿಲ್ಲದೆ. To the c. ವಿರುದ್ಧವಾಗಿ ; ಪ್ರತಿಪಕ್ಷವಾಗಿ ; ಪ್ರತಿಕೂಲವಾಗಿ. **Cóntrarily** (ಕ್ರಿ. ವಿ.) ; **Cóntrariness** ಕಾಂಟ್ರರಿನೆಸ್, **Contráriness** ಕಂಟ್ರೇರಿನೆಸ್ (ನಾ.) ; **Contráriant** ಕಂಟ್ರೇರಿಯಂಟ್ (ಗು.) ವಿರುದ್ಧ. **Contraríety** ಕಾಂಟ್ರರೈಎಟಿ (ನಾ.) (ಸ್ವಭಾವದಲ್ಲಿ, ಗುಣದಲ್ಲಿ, ಕಾರ್ಯದಲ್ಲಿ) (ಪರಸ್ಪರ) ವಿರೋಧ ; ಅಸಾಂಗತ್ಯ ; ಅಸಂಬದ್ಧತೆ ; ವಿಪ್ರತಿಪತ್ತಿ. **Contrárious** ಕಂಟ್ರೇರಿಯಸ್ (ಗು.) (ಪ್ರಾಚೀ. ಪ್ರ.) ವಿರುದ್ಧ ; ಪ್ರತಿಕೂಲ ; ವಿಪರೀತ ; ಮೂರ್ಖ. **Cóntrariwise** ಕಾಂಟ್ರರಿವೈಸ್, **Contráriwise** ಕಾಂಟ್ರೇರಿ —, ಕಾಂಟ್ರ್ಯಾರಿ — (ಕ್ರಿ. ವಿ.) ಪ್ರತಿಯಾಗಿ ; ವಿರುದ್ಧವಾಗಿ ; ಹಾಗಲ್ಲದೆ.

Contrást ಕಂಟ್ರಾಸ್ಟ್ (ಕ್ರಿ.), **Cóntrast** ಕಾಂಟ್ರಸ್ಟ್ (ನಾ.) ಪರಸ್ಪರ ವ್ಯತ್ಯಾಸ ತೋರಿಸುವುದಕ್ಕಾಗಿ (ಒಂದರೊಡನೊಂದನ್ನು) ವಿರುದ್ಧ ಭಾವದಲ್ಲಿಡು ; ವೈಲಕ್ಷಣ್ಯ, ವೈದೃಶ್ಯ, ತೋರಿಸು ; ವ್ಯತ್ಯಾಸ ತೋರಿಸು ; ಭೇದ ಕಾಣಿಸು ; ಸ್ಪಷ್ಟ ವ್ಯತ್ಯಾಸ ಕಾಣು. (ನಾ.) (ಮು., ರೂಪ, ವರ್ಣ, ಮೊ. ಗಳಲ್ಲಿ) ವೈಲಕ್ಷಣ್ಯ ; ಭಿನ್ನ ಭಾವ ; ವೈಪರೀತ್ಯ ; ವೈದೃಶ್ಯ ; ಎರವು (ಗ್ರಾಂ.) ; ಮಾರ್ನೆರೆ. **Contrásty** ಕಾಂಟ್ರಾಸ್ಟಿ (ಗು.) (ಮು., ಛಾಯಾ ಚಿತ್ರದ ಮೂಲಪ್ರತಿಯಲ್ಲಿ ಬೇರೆಬೇರೆ ಭಾಗಗಳಿಗೆ) ತೀವ್ರ ಕಾಂತಿಭೇದ ತೋರುವ.

Cóntrate ಕಾಂಟ್ರೇಟ್ (ಗು.) C. wheel ತನ್ನ ಸಮತಲಕ್ಕೆ ಲಂಬಮಾನವಾಗಿರುವ ಹಲ್ಲುಗಳುಳ್ಳ ಚಕ್ರ : ಅಡ್ಡಹಲ್ಲಿನ ಚಕ್ರ.

Contravallátion ಕಾಂಟ್ರವ್ಯಲೇಷನ್ (ನಾ.) ಒಂದು ಪಟ್ಟಣವನ್ನು ಮುತ್ತಿಗೆಹಾಕಿರುವ ಸೈನ್ಯವು ಅದರ ಶಿಬಿರಕ್ಕೂ ಪಟ್ಟಣಕ್ಕೂ ಮಧ್ಯೆ ಹಾಕುವ ಹಂಗಾಮಿ ಕೋಟೆ ಕೊತ್ತಲಗಳ ಸಾಲು : ತಡೆಗಟ್ಟು ಸಾಲು.

Contravéne ಕಾಂಟ್ರವೀನ್ (ಕ್ರಿ. ಸಕ.) (ಕಾನೂನನ್ನು) ಮೀರು, ಉಲ್ಲಂಘಿಸು, ಅತಿಕ್ರಮಿಸು. (ಹೇಳಿಕೆಯನ್ನು) ಪ್ರತಿವಾದಿಸು, ವಿರೋಧಿಸು ; ಪ್ರತಿರೋಧಿಸು ; ನಿಷೇಧಿಸು ; ಅಡ್ಡಿ ಹೇಳು. **Contravéntion** — ವೆನ್ಷನ್ (ನಾ.) ಉಲ್ಲಂಘನೆ ; ಅತಿಕ್ರಮ (In c. of ಉಲ್ಲಂಘಿಸಿ)

Cóntretemps (F) ಕೋಂಟ್ರ್‌ಟಾನ್, ಕಾಂಟ್ರಟಾನ್ (ನಾ.) ದುರ್ಘಟನೆ ; ಅಸಂಗತ ; ತೊಡರು.

Contríbute ಕಂಟ್ರಿಬ್ಯೂಟ್ (ಕ್ರಿ.) (ಸಂಸ್ಥೆಪ್ಪ, ನಿಧಿ, ಮೊ. ಕ್ಕೆ) ಕೊಡು, ಒದಗಿಸು ; ವೃತ್ತಪತ್ರಿಕೆ ಮೊ. ಕ್ಕೆ ಲೇಖನಗಳನ್ನು ಕೊಡು. C. to ನೆರವಾಗು ; ಸಹಾಯವಾಗು ; ಒದಗು. **Contribútion** ಕಾಂ — (ನಾ.) ಕೊಡುವುದು ; ಕೊಡುಗೆ ; ದತ್ತಾಂಶ ; ಸಹಾಯ ; ದಾನಾರ್ಥ. ವೃತ್ತಪತ್ರಿಕೆ, ಮೊ. ಗಳಿಗೆ ಕೊಟ್ಟ ಲೇಖನ, ಮೊ. ವು. ಯುದ್ಧರಂಗದಲ್ಲಿಯ ಸೈನ್ಯದ ಪೋಷಣೆಗಾಗಿ ಹಾಕಿದ ತೆರಿಗೆ : ಸೈನ್ಯದ ತೆರಿಗೆ. Lay under c. ತೆರಿಗೆ ಹಾಕಿ ವಸೂಲುಮಾಡು; ಸಹಾಯ ಪಡೆ ; ಉಪಯೋಗಿಸಿಕೊ. **Contríbutor** ಕಂ — (ನಾ.) (ಮು.,) ಲೇಖನ ದಾತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Contribútory (ಗು., ನಾ.) ನೆರವಾಗುವ ; ಸಹಾಯಕ. ಒಂದು ಸಂಘವು ನಷ್ಟವಾದಾಗ ಅದರ ದೇಣಿಯ ಮೊತ್ತಗಳನ್ನು ಕೊಡಲು ಭಾಗ ವಹಿಸಬೇಕಾದ ಹೊಣೆಯುಳ್ಳವನು : (ದೇಣಿಯ) ಹೊಣೆಗಾರ.

Cóntrite ಕಾಂಟ್ರೈಟ್ (ಗು.) ತನ್ನ ಪಾಪಕ್ಕಾಗಿ ಪರಿತಾಪ ಪಡುವ ; ಪಶ್ಚಾತ್ತಾಪಿ ; ಪಶ್ಚಾತ್ತಾಪ ಸೂಚಕ. **Cóntritely** (ಕ್ರಿ. ವಿ.) ; **Contrítion** ಕಂಟ್ರಿಷನ್ (ನಾ.) ಪಾಪಕ್ಕಾಗಿ ಪರಿತಾಪ ; ಪಶ್ಚಾತ್ತಾಪ ; ಎದೆಗುದಿ ; ಮರುಕ.

Contríve ಕಂಟ್ರೈವ್ (ಕ್ರಿ. ಸಕ.) ಕಲ್ಪನೆ ಮಾಡು ; ಕಲ್ಪಿಸು ; ರಚಿಸು ; ಅಗಿಸು ; ನಿರ್ವಹಿಸು ; ನಡಸು ; ಸಾಧಿಸು ; ಸಂಚು ಮಾಡು (C. to make matters worse ವಸ್ತುಸ್ಥಿತಿ ಮತ್ತೂ ಕೆಡುವಂತೆ ಹರುವುಮಾಡು). ಮನೆವಾರ್ತೆಯನ್ನು ನಿರ್ವಹಿಸು. **Contríver** (ನಾ.) ; **Contrívable** (ಗು.) ; **Contrívance** (ನಾ.) ರಚನೆ ; ಕಲ್ಪನೆ ; ಉಪಾಯ ; ಹೊಟ ; ಮೋಸ ; ಸಂಚು ; ತಂತ್ರ. ಸಾಧನ ; ಯಂತ್ರಸಾಧನ. ಯುಕ್ತಿ ; ಕಲ್ಪನಾ ಸಾಮರ್ಥ್ಯ.

Contról ಕಂಟ್ರೋಲ್ (ನಾ., ಕ್ರಿ. ಸಕ.) ಚಾಲನ ಶಕ್ತಿ ; ನಿಯಾಮಕ ಶಕ್ತಿ ; ಆಜ್ಞಾಶಕ್ತಿ ; ಅಧಿಕಾರ ; ಹತೋಟಿ ; ಹಿಡಿತ ; ವಶ ; ಅಂಕೆ ; ನಿರ್ಬಂಧ ; ನಿರೋಧ ; ಕೈನಡಕೆ ; ಕೈಆಳಿಕೆ. ಸಂಯಮ ; ನಿಗ್ರಹ ; ದಮನ. ಪ್ರಯೋಗಪರೀಕ್ಷೆಗಳಿಂದ ದೊರೆತ ಫಲಗಳನ್ನು ಸರಿನೋಡುವುದಕ್ಕಾಗಿ ಇಟ್ಟುಕೊಂಡಿರುವ ರೂಢಿಪ್ರಮಾಣ. (ಪ್ರೇತ ಪ್ರಪಂಚ) ಮಧ್ಯವರ್ತಿಯ ಮಾತುಗಳನ್ನೂ ಚೇಷ್ಟೆಗಳನ್ನೂ ತನ್ನ ಅಧೀನದಲ್ಲಿಟ್ಟುಕೊಂಡಿರುವುದೆಂದು ಹೇಳುವ ಅಮಾನುಷ ವ್ಯಕ್ತಿ ಅಥವಾ ಪ್ರೇತ. (ಬ. ವ. ದಲ್ಲಿ) ಆಕಾಶ ಫಲಕಯಾನಗಳು ದಿಕ್ಕು ತಿರುಗುವಾಗ ಸ್ಥಿರವಾಗಿರುವಂತೆ ಆಳವಡಿಸುವ ಅನೇಕ ಯಂತ್ರಸಾಧನಗಳು ; ನಿಯಂತ್ರಕಗಳು. (ಕ್ರಿ.) ಅಧಿಕಾರ ನಡಸು ; ಅಧೀನದಲ್ಲಿ, ಹಿಡಿತದಲ್ಲಿ, ಇಟ್ಟುಕೊ ; ದಮನ ಮಾಡು ; ನಿಗ್ರಹಿಸು ; ತಡೆ ; ಆಳು ; ಬಿಗಿಹಿಡಿ. ಸರಿನೋಡು ; ತಾಳೆ ನೋಡು. **Contróllable** (ಗು.) ; **Contrólment** (ನಾ.) ; **Contróller** (ನಾ.) (ಕ್ರಿಯಾರ್ಥಗಳಲ್ಲಿ). (ಸರ್ಕಾರ, ಅರಮನೆ, ಟಂಕಸಾಲೆ, ನಾವೆ, ಮೊ. ಗಳ) ವೆಚ್ಚಗಳನ್ನು ವಿಚಾರಣೆ ನೋಡಿಕೊಳ್ಳುವ ಅಧಿಕಾರಿ : ವ್ಯಯ ನಿಯಂತ್ರಕ (Comptroller ಎಂದು ತಪ್ಪಾಗಿ ಬರೆಯುವ ವಾಡಿಕೆಯುಂಟು). **Contróllership** (ನಾ.)

Cóntroversy ಕಾಂಟ್ರೊವರ್ಸಿ (ನಾ.) ವಾದ ವಿವಾದ ; ವಾಗ್ವಾದ ; ವಾಗ್ಯುದ್ಧ ; ಚರ್ಚೆ (Beyond c. ಚರ್ಚೆಗೆ ಆಸ್ಪದವೇ ಇಲ್ಲದೆ). **Contorvérsial** — ಷಲ್ (ಗು.) ವಾದಾಸ್ಪದ ; ವಾದಗ್ರಸ್ತ ; ಚರ್ಚಾಸ್ಪದ. **Controvérsialism** (ನಾ.) ; **Controvérsialist** (ನಾ.) ವಾದಚತುರ ; ವಾದಿ. **Controvérsially** (ಕ್ರಿ. ವಿ.) ; **Cóntrovert, Controvért** ಕಾಂಟ್ರೊವರ್ಟ್ (ಕ್ರಿ. ಸಕ.) ವಾದ ಮಾಡು ; ಚರ್ಚೆಮಾಡು ; ವಿವಾದ ಮಾಡು ; ಖಂಡಿಸು ; ಪ್ರತಿ ಹೇಳು. **Cóntrovertist** (ನಾ.)

Cóntumacy ಕಾಂಟ್ಯುಮಸಿ (ನಾ.) ಅಧಿಕಾರಿಯನ್ನು ಲಕ್ಷ್ಯಮಾಡದೆ ಮೊಂಡುತನದಿಂದ ಎದುರಿಸುವುದು ; ನ್ಯಾಯಸ್ಥಾನದ ಆಜ್ಞೆಯನ್ನು ಬೇಕೆಂದು ಉಲ್ಲಂಘಿಸುವುದು ; ನ್ಯಾಯಸ್ಥಾನಕ್ಕೆ ಅವಮರ್ಯಾದೆ ಮಾಡುವುದು ; ಅವಿನಯ. **Contumácious** ಕಾಂಟ್ಯುಮೇಷಸ್ (ಗು.) ತನ್ನ ಮೇಲಧಿಕಾರಿಯನ್ನು ನಿರ್ಲಕ್ಷ್ಯ ಮಾಡುವ ; ಅವಿಧೇಯನಾದ (ಮು., ನ್ಯಾಯಸ್ಥಾನದ ಆಜ್ಞೆಗೆ). **Contumáciously** (ಕ್ರಿ. ವಿ.) ; **Contumáciousness** (ನಾ.)

Cóntumely ಕಾಂಟ್ಯುಮಿಲಿ (ನಾ.) ಧಿಕ್ಕಾರದ, ತಾತ್ಸಾರದ, ನಿರ್ಲಕ್ಷ್ಯದ, ಮಾತು, ನಡತೆ ; ತಿರಸ್ಕಾರ ; ಧಿಕ್ಕಾರ ; ನಿಷ್ಠುರತೆ ; ಅವಮಾನ ; ಪಳಿವು (ಗ್ರಾಂ.). **Contumélious** — ಮೀಲಿಯಸ್ (ಗು.) ನಿಂದಕವಾದ ; ತಿರಸ್ಕಾರ ಸೂಚಕವಾದ ; ಧಿಕ್ಕರಿಸುವ. **Contuméliously** (ಕ್ರಿ. ವಿ.)

Contúse ಕಂಟ್ಯೂಸ್ (ಕ್ರಿ. ಸಕ.) (ರಕ್ತ ಬರದಂತೆ) ಗುದ್ದು, ಜಜ್ಜು ; ಮೂಗೇಟು ಕೊಡು. **Contúsion** — ಷನ್ (ನಾ.) ಜಜ್ಜುಗಾಯ ; ಮೂಗುಪೆಟ್ಟು ; ಬಾಸುಂಡೆ.

Conúndrum ಕೊನಂಡ್ರಮ್ (ನಾ.) ಒಗಟು ; ಸಮಸ್ಯೆ ; ಪ್ರಹೇಳಿಕೆ.

Convalésce ಕಾನ್ವಲೆಸ್ (ಕ್ರಿ. ಅಕ.) ರೋಗ ತೇರು ; ರೋಗದಿಂದೇಳು ; ಚೇತರಿಸಿಕೊ ; ಗುಣವಾಗು ; ವಾಸಿಯಾಗು ; ಆರೋಗ್ಯ ಪಡೆ ; ಹುಷಾರಾಗು. **Convaléscent** (ಗು., ನಾ.) ರೋಗದಿಂದೆದ್ದ (ವನು.) (C. hospital ರೋಗದಿಂದೆದ್ದವರ ಆರೈಕೆಗಾಗಿರುವ ವೈದ್ಯಶಾಲೆ). **Convaléscence** (ನಾ.) ರೋಗದಿಂದ ಕ್ರಮೇಣ ಚೇತರಿಸಿಕೊಳ್ಳುವುದು, ಆರೋಗ್ಯ ಪಡೆಯುವುದು ; ಚೇತರಿಕೆ.

Convéction ಕನ್ವೆಕ್‌ಷನ್ (ನಾ.) (ಕಣಗಳ ಚಲನೆಯಿಂದಾಗುವ) ಶಾಖದ ಅಥವಾ ವಿದ್ಯುತ್ತಿನ ಪ್ರಸರಣ ; ಪ್ರಚಲನ.

Convenánce (F) ಕೊನ್ವನಾನ್ಸ್ (ನಾ.; ಸಾ., ಬ. ವ. ದಲ್ಲಿ) ಸಾಂಪ್ರದಾಯಿಕ ಔಚಿತ್ಯ ; ಸಂಪ್ರದಾಯ ; ಶಿಷ್ಟಾಚಾರ.

Convéne ಕನ್ವೀನ್ (ಕ್ರಿ.) (ಸಭೆಯನ್ನು) ಕರೆ, ನೆರಸು ; ಒಟ್ಟುಗೂಡಿಸು ; —ಗೂಡು ; ನೆರೆ. (ನ್ಯಾಯಪೀಠದ ಎದುರಿಗೆ) ಬರಮಾಡು ; (ಬರುವಂತೆ) ಕರೆ ಕೊಡು. **Convénable** (ಗು.) ; **Convéner** (ನಾ.) (ಸಭೆ. ಮೊ. ನ್ನು) ಕರೆಯುವವನು, ಸೇರಿಸುವವನು ; ಆಮಂತ್ರಕ.

Convénience ಕನ್ವೀನಿಯನ್ಸ್ (ನಾ.) ಅನುಕೂಲ ; ಅನುವು ; ಸೌಕರ್ಯ (Marriage of c. ಸೌಕರ್ಯದ ಮದುವೆ. At your c. ನಿನಗೆ ಅನುಕೂಲವಾದಾಗ, ಅನುಕೂಲವಾದಂತೆ. Make a c. of one ಒಬ್ಬನ ಒಳ್ಳೆಯತನವನ್ನು ಸ್ವಾನುಕೂಲಕ್ಕಾಗಿ ದುರುಪಯೋಗ ಪಡಿಸಿಕೊ). ಉಪಯೋಗ ಸಾಧನ. ಶೌಚ ಕೋಷ್ಠ. (ಪ್ರಾಚೀ. ಪ್ರ.) ವಾಹನ. (ಬ. ವ. ದಲ್ಲಿ) ಸೌಕರ್ಯಗಳು ; ಸಾಧನ ಸಂಪತ್ತಿ. **Convénient** (ಗು.) ತಕ್ಕ ; ಅನುಕೂಲವಾದ ; ಅಚ್ಚುಕಟ್ಟಾದ ; ವಸತಿಯಾದ ; ಸೌಕರ್ಯವುಳ್ಳ ; ಪ್ರಶಸ್ತ. **Convéniently** (ಕ್ರಿ. ವಿ.)

Cónvent ಕಾನ್ವೆಂಟ್ (ನಾ.) ಒಟ್ಟಿಗೆ ವಾಸವಾಗಿರುವವರ ಧಾರ್ಮಿಕ ಸಮಾಜ (ಸಾ., ಹೆಂಗಸರದು) ; ಸಂನ್ಯಾಸಿನೀ ಮಠ ; ಸಂನ್ಯಾಸಿನಿಯರ ಆಶ್ರಮ.

Convénticle ಕನ್ವೆಂಟಿಕ್‌ಲ್ (ನಾ.) (ಚರಿತ್ರೆ) ಗುಟ್ಟಾಗಿ ನಡಸುವ ಮತ ಸಭೆ (ಮು., ಕೆಲವು ಕ್ರೈಸ್ತ ಪಂಗಡದವರದು) ; ಗುಪ್ತ ಸಭೆ ; ಈ ಸಭಾ ಮಂದಿರ.

Convéntion ಕನ್ವೆನ್ಷನ್ (ನಾ.) ಸಭೆಗೂಡಿಸುವುದು. ನಿಯಮಾನುಸಾರವಾಗಿ ಸೇರಿದ ಸಭೆ ; ವಿಧ್ಯುಕ್ತ ಸಭೆ ; ಸಭೆ. ಒಪ್ಪಂದ ; ಒಡಂಬಡಿಕೆ. (ಬಹುಮಟ್ಟಿಗೆ ಸ್ಪಷ್ಟವಾಗಿ ಹೇಳದ, ಮೊಗುಮಾದ) ಸಾಮಾನ್ಯ ಒಪ್ಪಿಕೆ ; ಇದರ ಆಧಾರದಮೇಲೆ ನಡೆಯುವ ಆಚರಣೆ ; ಒಪ್ಪಿಕೆ ; ನಡವಳಿಕೆ ; ಆಚಾರ ; ಸಂಪ್ರದಾಯ ; ಸಮಯ (ಗ್ರಾಂ.) ; ರೂಢಿ. **Convéntional** (ಗು.) ಸಾಂಪ್ರದಾಯಿಕ ; ಸಾಮಯಿಕ ; ಸಾಂಕೇತ ; ನೈಜವಲ್ಲದ ; ಅಸಹಜ. **Convéntionalism** (ನಾ.) ಸಂಪ್ರದಾಯ ಬದ್ಧತೆ. **Convéntionalist** (ನಾ.) ಸಂಪ್ರದಾಯಾನುಸಾರಿ. **Conventionálity** ಕನ್ವೆನ್ಷನ್ಯಾಲಿಟಿ (ನಾ.) ಸಂಪ್ರದಾಯ ; — ರೀತಿ ; — ಬದ್ಧತೆ. **Convéntionalize** — ನಲೈಸ್ (ಕ್ರಿ. ಸಕ.) ಸಂಪ್ರದಾಯಬದ್ಧ ಮಾಡು ; ಸಂಪ್ರದಾಯಾನುಸಾರವಾಗಿ ರಚಿಸು ; ಸಾಂಪ್ರದಾಯಿಕ ಮಾಡು. **Convéntionally** (ಕ್ರಿ. ವಿ.) ; **Convéntionary** (ಗು., ನಾ.) ಬಹುಕಾಲದ ಪದ್ಧತಿಯ ಮೇರೆಗಲ್ಲದೆ, ಬೇರೆ ಒಡಂಬಡಿಕೆಯ ಮೇರೆಗೆ ಮಾಡಿಕೊಂಡ ಷರತ್ತುಗಳುಳ್ಳ (ಹಿಡುವಳಿ, ಹಿಡುವಳಿದಾರ) : ಒಪ್ಪಂದದ ಹಿಡುವಳಿ(ದಾರ)

Convéntual ಕನ್ವೆಂಟ್ಯುಅಲ್ (ಗು., ನಾ.) ಸಂನ್ಯಾಸಿನೀ ಮಠದ(ವಳು)

Convérge ಕನ್ವರ್ಜ್ (ಕ್ರಿ.) (ಗೆರೆಗಳು) ಒಂದು ಬಿಂದುವಿನಲ್ಲಿ ಸೇರಹೋಗು ; ಏಕಾಗ್ರ ಮುಖವಾಗು, ಮಾಡು ; ಒಮ್ಮುಖವಾಗು, ಮಾಡು (ರೂಪ. ಸಹ). (ಗಣಿತ) (ಒಂದು ಶ್ರೇಣಿಯ ವಿಷಯದಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ನಿರ್ದಿಷ್ಟ ಮಿತಿಯನ್ನು ಸಮೀಪಿಸು ; ಪರಿಚ್ಛಿನ್ನವಾಗು. **Convérgence, -ncy** (ನಾ.) ಏಕಾಗ್ರ ಮುಖತೆ ; ಪರಿಚ್ಛಿನ್ನತೆ. **Convérgent** (ಗು.)

Cónversant, etc. **Converse**[1] ನೋಡಿ.

Convérse[1] ಕನ್ವರ್ಸ್ (ಕ್ರಿ. ಅಕ.) (ಒಬ್ಬನೊಡನೆ, ಒಂದು ವಿಷಯವಾಗಿ) ಮಾತನಾಡು ; ಸಂಭಾಷಿಸು. **Convérsable** (ಗು.) ಸಂಭಾಷಣೆಯಲ್ಲಿ ಸರಾಗವಾದ, ಹಿತವಾದ ; ಸಂಭಾಷಣೀಯ ; ವ್ಯವಹಾರ ಯೋಗ್ಯ. **Convérsableness** (ನಾ.) ಸಂಭಾಷಣೀಯತ್ವ. **Convérsably** (ಕ್ರಿ. ವಿ.) ; **Cónversance, -ncy** ಕಾನ್ವರ್ಸನ್ಸ್, — ಸನ್ಸಿ (ನಾ.) ಪರಿಚಯ. **Cónversant** (ಗು.) (ವ್ಯಕ್ತಿ, ವಿಷಯ, ಮೊ. ವು) ವಿಶೇಷ ಬಳಕೆಯುಳ್ಳ ; ಚೆನ್ನಾಗಿ ರೂಢಿಯಾದ ; ಪರಿಚಯವುಳ್ಳ ; ಪರಿಶ್ರಮವುಳ್ಳ. **Conversátion** — ಸೇಷನ್ (ನಾ.) ಮಾತುಕತೆ ; ಸಂಭಾಷಣೆ. ಸಂಗ ; ಸಂಭೋಗ [Criminal c. ಅಕ್ರಮ ಸಂಗ (ಸಂಕ್ಷಿಪ್ತ : crim. con.)]. ಸ್ವಭಾವಾನುಸಾರವಾಗಿ ಚಿತ್ರಿಸಿದ ಒಂದು ಗುಂಪಿನ ವರ್ಣಚಿತ್ರ (= C. piece). **Conversátional** (ಗು.) ಸಂಭಾಷಣಾತ್ಮಕ ; ಸಂಭಾಷಣ ಪ್ರಿಯನಾದ ; ಸಂಭಾಷಣ ಚತುರನಾದ. **Conversátionalist** (ನಾ.) ; **Conversátionally** (ಕ್ರಿ. ವಿ.) ; **Conversátionist** (ನಾ.) ಸಂಭಾಷಣ ಚತುರ. **Conversazióne** ಕಾನ್ವರ್‌ಸಾಟ್ಸಿಯೋನೆ (ನಾ. ; ಬ. ವ. -nes, -ni — ನೀ) (ಒಂದು ವಿದ್ವತ್‌ಸಂಸ್ಥೆ ಅಥವಾ ಕಲಾಸಂಸ್ಥೆ ನಡಸುವ) ಸಂಭಾಷಣ ಗೋಷ್ಠಿ.

Cónverse ಕಾನ್ವರ್ಸ್ (ನಾ) (ಪ್ರಾಚೀ. ಪ್ರ.) ಸಂಭಾಷಣ ; ಸಾಹಚರ್ಯ.

Cónverse[2] ಕಾನ್ವರ್ಸ್ (ಗು., ನಾ.) ವಿರುದ್ಧ ; ವ್ಯತಿರೇಕ ; ವಿಪರೀತ ; ವಿಪರ್ಯಯ. (ತರ್ಕ) ವಿಪರ್ಯಯ ಪ್ರತಿಜ್ಞೆ (ಉದಾ., "ಎಲ್ಲಾ ಮನುಷ್ಯರೂ ಪ್ರಾಣಿಗಳು" ಎಂಬ ಪ್ರತಿಜ್ಞೆಯ ವಿಪರ್ಯಯ ರೂಪ "ಕೆಲವು ಪ್ರಾಣಿಗಳು ಮನುಷ್ಯರು") ; (ಒಂದು ವಾಕ್ಯದ ಪದಗಳ ಸ್ಥಾನವನ್ನು ಬದಲಾಯಿಸುವುದರಿಂದಾದ) ವಿಪರ್ಯಯ ರೂಪ (ಉದಾ., "ಅವನಿಗೆ ಆಸ್ತಿಯಿಲ್ಲದಿದ್ದರೂ ವಿದ್ಯೆ ಇತ್ತು" ಎಂಬುದರ ವಿಪರ್ಯಯ ರೂಪ "ಅವನಿಗೆ ವಿದ್ಯೆಯಿಲ್ಲದಿದ್ದರೂ ಆಸ್ತಿ ಇತ್ತು"). (ಗಣಿತ) (ಒಂದು ಪ್ರತಿಜ್ಞೆಯ ದತ್ತಾಂಶವನ್ನು ಸಿದ್ಧಾಂತವಾಗಿಯೂ, ಸಿದ್ಧಾಂತವನ್ನು ದತ್ತಾಂಶವಾಗಿಯೂ ಮಾರ್ಪಡಿಸಿದ) ವಿಪರ್ಯಯ ಪ್ರತಿಜ್ಞೆ. **Convérsely** (ಕ್ರಿ. ವಿ.) ; **Convérsion** ಕನ್ವರ್ಷನ್ (ನಾ.) ಪರಿವರ್ತನೆ ; ವಿಪರ್ಯಯ (ಮು., ತರ್ಕದಲ್ಲಿ, ಕರ್ತೃ ಕ್ರಿಯೆಗಳ ಪರಸ್ಪರ ಸ್ಥಾನಭೇದ : ಉದಾ., "A ಯಾವುದೂ B ಆಗಿಲ್ಲ" ಎಂಬುದರ ವಿಪರ್ಯಯವು "B ಯಾವುದೂ A ಆಗಿಲ್ಲ"). (ಒಂದು ಅಭಿಪ್ರಾಯ, ಪಂಗಡ, ನಂಬಿಕೆ, ಮೊ. ಕ್ಕೆ) ತಿರುಗಿಸುವುದು ; ತಿರುಗುವುದು. ಮತ ಪರಿವರ್ತನೆ. ಪಾಪ ಮಾಡಿದವರನ್ನು ದೇವರ ಕಡೆಗೆ (ಸನ್ಮಾರ್ಗಕ್ಕೆ) ತಿರುಗಿಸುವುದು. ಬದಲಾವಣೆ ; ಬದಲಾಯಿಸುವುದು (*To, into* ಉಪ. ದೊಡನೆ). (ಆಧಾರ ಪತ್ರ, ಬಂಡವಾಳ ಪತ್ರ, ಮೊ. ನ್ನು) (ಬೇರೆ ತೆರದವನ್ನಾಗಿ) ಮಾರುವೆ ಮಾಡುವುದು. **Convért** (ಕ್ರಿ. ಸಕ.) ಪರಿವರ್ತಿಸು ; ಮಾರ್ಪಡಿಸು ; ಬದಲಾಯಿಸು ; ಮಾರುವೆ ಮಾಡು. (ಅಭಿಪ್ರಾಯ, ನಂಬಿಕೆ, ಸನ್ಮಾರ್ಗ, ದೇವತ್ವ, ಮೊ. ಕ್ಕೆ) ತಿರುಗಿಸು. ಮತಾಂತರ ಮಾಡು. **Cónvert** ಕಾನ್ವರ್ಟ್ (ನಾ.) ಪರಿವರ್ತನ ಹೊಂದಿದವನು ; ಪರಿವರ್ತಿತ ; ಮತಾಂತರ ಹೊಂದಿದವನು. **Convértible** ಕನ್ — (ಗು.) ಪರಿವರ್ತನ ಸಾಧ್ಯ ; ಪರಿವರ್ತನೀಯ (C. terms ಸಮಾನಾರ್ಥಕ ಪದಗಳು). (ಕಾಗದದ ಹಣದ ವಿಷಯದಲ್ಲಿ) ನಾಣ್ಯವಾಗಿ ಪರಿವರ್ತಿಸಲಾಗುವ ; ಮುರಿಸಲಾಗುವ. C. husbandry ಬೆಳೆಗಳ ಪರಿವರ್ತನೆ. **Convertibílity** (ನಾ.) ; **Convértibly** (ಕ್ರಿ. ವಿ.) ; **Cónvertend** ಕಾನ್ವರ್ಟೆಂಡ್ (ನಾ.) (ತರ್ಕ) ಒಂದು ಪ್ರತಿಜ್ಞೆಯ ಪರಿವರ್ತನಕ್ಕೆ ಪೂರ್ವರೂಪ. **Convérter** ಕನ್ವರ್ಟರ್ (ನಾ.) ಪರಿವರ್ತಕ (ಮು., ಉಕ್ಕಿನ ತಯಾರಿಯಲ್ಲಿ, ಮುದ್ದೆಕಬ್ಬಿಣವನ್ನು "ಬೆಸೆಮರ್" ಪ್ರಕ್ರಿಯೆಯಿಂದ ಉಕ್ಕನ್ನಾಗಿ ಪರಿವರ್ತಿಸಲು ಉಪಯೋಗಿಸುವ, ಉಷ್ಣನಿರೋಧಕ ಪದಾರ್ಥವನ್ನು ಒಳಮೈಗೆ ಹದ್ದಿಸಿರುವ, ಕಬ್ಬಿಣದ ಬಟ್ಟಿಪಾತ್ರೆ)

Cónvex ಕಾನ್ವೆಕ್ಸ್ (ಗು.) (ವೃತ್ತದ ಹೊರಮೈಯಂತೆ) ಹೊರ ಬಾಗುಳ್ಳ ; ಹೊರ ಉಬ್ಬಿನ ; ಪೀನಮಧ್ಯ. **Cónvexly** (ಕ್ರಿ. ವಿ.) ; **Convéxity** ಕನ್ವೆಕ್ಸಿಟಿ (ನಾ.) ಹೊರ ಉಬ್ಬು ; ಪೀನಮಧ್ಯತೆ.

Convéxo- ಕನ್ವೆಕ್ಸೊ- (ಸಮಾಸದಲ್ಲಿ ಪೂರ್ವಪದ) ಪೀನಮಧ್ಯ —. C.-concave ಪೀನ ನಿಮ್ನಮಧ್ಯ. C.-convex ದ್ವಿಪಾರ್ಶ್ವ ಪೀನಮಧ್ಯ. C.-plane ಪೀನ ಸಮತಲಾಕೃತಿ.

Conveý ಕನ್ವೇ (ಕ್ರಿ. ಸಕ.) ಸಾಗಿಸು ; ತೆಗೆದುಕೊಂಡುಹೋಗು ; ಒಯ್ಯಿ ; ಮುಟ್ಟಿಸು ; ತಲಪಿಸು. (ಅಭಿಪ್ರಾಯ, ಅರ್ಥ) ಕೊಡು, ತಿಳಿಯಪಡಿಸು. (ನ್ಯಾ. ಶಾ.) ವರ್ಗಕೊಡು, ವಹಿಸಿಬಿಡು. **Conveýable** (ಗು.) ; **Conveýance** (ನಾ.) ಒಯ್ಯುವುದು ; ಸಾಗಿಸುವುದು ; ಸಾಗಣೆ ; ರವಾನೆ ; ವಹನ. (ಅಭಿಪ್ರಾಯ, ಮೊ. ನ್ನು) ತಿಳಿಸುವುದು. (ನ್ಯಾ. ಶಾ.) ಒಂದು ಆಸ್ತಿಯನ್ನು ವರ್ಗಾಯಿಸುವುದು ; ವಹಿಸಿಬಿಡುವುದು ; ವರ್ಗ ; ವರ್ಗಪತ್ರ. ಯಾನ ; ವಾಹನ ; ಬಂಡಿ. **Conveýancer** (ನಾ.) ಆಸ್ತಿಯ ವರ್ಗಾವಣೆಗಾಗಿ ದಸ್ತೈವಜುಗಳನ್ನು ತಯಾರಿಸುವ ವಕೀಲ : ವರ್ಗಪತ್ರ ವಕೀಲ. **Conveýancing** (ನಾ.) (ನ್ಯಾ. ಶಾ.) ವರ್ಗಪತ್ರ ಬರೆಯುವುದು. ಆಸ್ತಿ ವರ್ಗಾವಣೆ.

Cónvict ಕಾನ್ವಿಕ್ಟ್ (ನಾ.), **Convíct** ಕನ್ವಿಕ್ಟ್ (ಕ್ರಿ. ಸಕ.) ತಪ್ಪು ಹೊತ್ತು ದಂಡನೆಯನ್ನು ಅನುಭವಿಸುತ್ತಿರುವ ಅಪರಾಧಿ ; ಬಂದೀವಾನ ; ಖೈದಿ. (ಕ್ರಿ.) ತಪ್ಪಿತಸ್ಥನೆಂದು ನಿರ್ಣಯಿಸು ; ಅಪರಾಧ ಹೊರಿಸು ; (ಒಬ್ಬನಿಗೆ) ತಪ್ಪು ಮನಗಾಣಿಸು. **Convíction** ಕನ್ವಿಕ್‌ಷನ್ (ನಾ.) ಅಪರಾಧಿಯೆಂದು ನಿರ್ಣಯಿಸುವುದು ; ಅಪರಾಧ ನಿರ್ಣಯ (Summary c. ಪಂಚಾಯಿತರಿಲ್ಲದೆ ದಂಡಾಧಿಕಾರಿಯು ಅಪರಾಧಹೊರಿಸುವುದು : ಸಂಕ್ಷಿಪ್ತ ಕ್ರಮದ ಅಪರಾಧ ನಿರ್ಣಯ). ಮನವರಿಕೆ ; ಮನಗಾಣಿಸುವುದು ; ನಿಶ್ಚಿತಾಭಿಪ್ರಾಯ ; ದೃಢ ನಿಶ್ಚಯ ; ನಂಬಿಕೆ. (ದೇವತಾ ಶಾಸ್ತ್ರ) ಪಾಪಜ್ಞಾನದ ಎಚ್ಚರ. **Cónvictism** ಕಾನ್ವಿಕ್ಟಿಸ್ಮ್ (ನಾ.) ಖೈದಿಗಳನ್ನು ಅಪರಾಧಿ ವಸಾಹತುಗಳಲ್ಲಿಡುವ ಪದ್ಧತಿ, ನೀತಿ. ಖೈದಿಗಳು. **Convíctive** ಕನ್ವಿಕ್ಟಿವ್ (ಗು.) ಮನಗಾಣಿಸುವ.

Convínce ಕನ್ವಿನ್ಸ್ (ಕ್ರಿ. ಸಕ.) ಮನಗಾಣಿಸು ; ಮನವೊಪ್ಪಿಸು ; ಒಬ್ಬನಲ್ಲಿ (ಪಾಪ, ಮೊ. ಗಳ) ಅರಿವನ್ನು ದೃಢೀಕರಿಸು ; ಮಂದಟ್ಟು ಮಾಡಿಕೊಡು. **Convíncement** (ನಾ.) = Conviction. **Convíncible** (ಗು.) ಮನಗಾಣಿಸ ಬಹುದಾದ ; — ತಕ್ಕ. **Convíncingly** (ಕ್ರಿ. ವಿ.) ; **Convíncingness** (ನಾ.)

Convívial ಕನ್ವಿವಿಯರ್ (ಗು.) ಹಬ್ಬದ ; ಉತ್ಸವದ ; ಭೋಜನ ಸಮಾರಂಭದ; ಔತಣದ; ಉತ್ಸವ ಯೋಗ್ಯವಾದ; ಸಂತೋಷ ಸಂಭ್ರಮದ ; ಉಲ್ಲಾಸಶೀಲ ; ಗೆಲವಿನ. **Convívialist** (ನಾ.) ಉಲ್ಲಾಸಶೀಲ. **Conviviálity** — ಆ್ಯಲಿಟಿ (ನಾ.) ಉಲ್ಲಾಸ(ಶೀಲತೆ) ; ಸಂತೋಷ ಸಂಭ್ರಮ ; ಉತ್ಸವ. **Convívially** — ಅಲಿ (ಕ್ರಿ. ವಿ.)

Convocátion ಕಾನ್ವೊಕೇಷನ್ (ನಾ.) ಕರೆದು ಒಟ್ಟುಗೂಡಿಸುವುದು ; ಸಭೆಕರೆಯುವುದು ; ಸಭೆ. (ಆಕ್ಸ್‌ಫರ್ಡ್ ಮತ್ತು ಡರ್‌ಹ್ಯಾಮ್ ವಿಶ್ವವಿದ್ಯಾನಿಲಯಗಳ) ಶಾಸನ ಸಭೆ. (ಕೆಲವು ವಿಶ್ವವಿದ್ಯಾನಿಲಯಗಳಲ್ಲಿ) ಪಾಂಡಿತ್ಯ ಪಡೆದ ವಿದ್ಯಾರ್ಥಿಗಳಿಗೆ ಪಟ್ಟಪ್ರದಾನ ಮಾಡುವುದಕ್ಕಾಗಿ ಆಹ್ವಾನಿಸಿದ ವಿಶ್ವವಿದ್ಯಾನಿಲಯದ ಅಧಿಕಾರಿವರ್ಗದ, ವಿದ್ಯಾರ್ಥಿ ಪಂಡಿತರು, ಮೊ. ರ, ಸಭೆ : ಪಟ್ಟಪ್ರದಾನ ಸಭೆ. **Convocátional** (ಗು.) ; **Convóke** ಕನ್ವೋಕ್ (ಕ್ರಿ. ಸಕ.) ಸಭೆ ಕರೆ.

Cónvolute ಕಾನ್ವೊಲ್ಯುಟ್ (ಗು., ನಾ.) ಸುರುಳಿ ಸುತ್ತಿಕೊಂಡಿರುವ (ಮು., ಸ. ವಿ. : ಮೊಗ್ಗಿನ ದಳ, ಎಲೆ, ಮೊ.). ಸುರುಳಿ. **Convolúted**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

— ಲ್ಯೂಟೆಡ್ (ಗು.) (ಪ್ರಾ. ವಿ.) ಸುರುಳಿ ಸುತ್ತಿಕೊಂಡಿರುವ ; ನುಲಿಚಿಕೊಂಡಿರುವ. **Convolútion** (ನಾ.) ಸುರುಳಿ ಸುತ್ತಿಕೊಂಡಿರುವುದು ; ನುಲಿಚಿಕೊಂಡಿರುವುದು ; ಸುರುಳಿ ; ನುಲಿಕೆ ; ಪದರ ; ಮಡಿಕೆ. **Convólve** ಕನ್ವಾಲ್ವ್ (ಕ್ರಿ.) ಸುರುಳಿ ಸುತ್ತಿಕೊ ; — ಸುತ್ತು.

Convólvulus ಕನ್ವಾಲ್ವ್ಯುಲಸ್ (ನಾ. ; ಬ. ವ. -luses) (ಗೆಣಸು, ಉಗನಿ ಹಂಬು, ಮೊ. ಗಳ ವರ್ಗಕ್ಕೆ ಸೇರಿದ) ಒಂದು ಬಳ್ಳಿ ಜಾತಿ.

Convoý ಕನ್ವಾಯ್ (ಕ್ರಿ. ಸಕ.), **Cónvoy** ಕಾನ್ವಾಯ್ (ನಾ.) (ಯುದ್ಧದ ಹಡಗು, ಪ್ರಯಾಣಿಕರ ಹಡಗಿನ ಅಥವಾ ಸಾಮಾನುಹಡಗಿನ) ರಕ್ಷಣೆಗಾಗಿ, ಬೆಂಗಾವಲಗಾಗಿ, ಹಿಂದೆ ಹೋಗು. (ಸಜ್ಜಿತ ಸೈನ್ಯ ದೊಡನೆ) ರಕ್ಷಣಾರ್ಥವಾಗಿ ಹೋಗು. (ಪ್ರಾಚೀ. ಪ್ರ.) (ಅತಿಥಿ, ಮಹಿಳೆ, ಮೊ. ರನ್ನು) ಕರೆದುಕೊಂಡುಹೋಗು ; ಜೊತೆಗೆ ಹೋಗು. (ನಾ.) ಬೆಂಗಾವಲಾಗಿ ಹೋಗುವುದು ; ಬೆಂಗಾವಲು ; ರಕ್ಷಣೆ. (ಗೌರವಾರ್ಥವಾಗಿ ಅಥವಾ ರಕ್ಷಣೆಗಾಗಿ) ಪರಿಚರ(ರು). ಬೆಂಗಾವಲಿನ ರಕ್ಷಣೆಯಲ್ಲಿರುವ ದಳ, ಸಾಮಾನು, ವ್ಯಾಪಾರದ ಹಡಗುಗಳು, ಮೊ.

Convúlse ಕನ್ವಲ್ಸ್ (ಕ್ರಿ. ಸಕ.) ರಭಸದಿಂದ ಅಳ್ಳಾಡಿಸು ; ಕಲಕು (ರೂಪ. ಸಹ.) ; ಸಂಕ್ಷೋಭೆಗೊಳಿಸು ; ಕಂಪನವುಂಟುಮಾಡು ; ಸೆಳವು ಬರಿಸು (ಸಾ., ಕರ್ಮಣಿಯಲ್ಲಿ). ವಿಪರೀತವಾಗಿ ನಗುಹಿಡಿಸು (ಸಾ., ಕರ್ಮಣಿಯಲ್ಲಿ). **Convúlsion** (ನಾ.) ದೇಹದ ಸ್ನಾಯುಗಳು ಅನಿಚ್ಛೆಯಿಂದ ಸಂಕೋಚವಾಗುವುದರಿಂದುಂಟಾಗುವ ಅಂಗಾಂಗಗಳ ರಭಸವಾದ ಅನಿಯತ ಚಲನೆ ; (ಸಾ., ಬ. ವ. ದಲ್ಲಿ) (ಎಳೆಮಕ್ಕಳ ವ್ಯಾಧಿಯಾದ) ಸೆಳವು, ಎಳವು. (ಬ. ವ. ದಲ್ಲಿ) ನಗುವಿನ ಉದ್ರೇಕ. (ಸಾಮಾಜಿಕದ, ರಾಜಕೀಯದ) ಉಗ್ರ ಕ್ಷೋಭೆ ; ಕಲಕಾಟ ; ಪ್ರಾಕೃತಿಕ ಉಗ್ರ ಸಂಕ್ಷೋಭೆ. **Convúlsionary** (ಗು.) ; **Convúlsive** (ಗು.) ಸೆಳವಿನ ; ಸೆಳವು ಬರಿಸುವ ; ಕಂಪಿಸುವ ; ಸಂಕ್ಷುಬ್ಧ ; ಸಂಕ್ಷೋಭಕ (ರೂಪ. ಸಹ). **Convúlsively** (ಕ್ರಿ. ವಿ.)

Cóny, -ney ಕೋನಿ, ಕನಿ (ನಾ.) ಮೊಲ (ಶಾಸನ ವಿಧಿ, ಮೊ. ಗಳಲ್ಲಿ). (ವ್ಯಾಪಾರದ ಹೆಸರು) ಮೊಲದ ತುಪ್ಪುಳುತೊವಲು. (ಪ್ರಾಚೀ. ಪ್ರ.) C.-catcher ವಂಚಕ ; ಮೋಸಗಾರ.

Coo ಕೂ (ಕ್ರಿ., ನಾ.) (ಪಾರಿವಾಳದ, ಪಾರಿವಾಳದಂಥ) ಮೆಲುಪಾದ ಕೂಜಿತ ಧ್ವನಿ (ಮಾಡು). Bill and c. ಪ್ರಣಯ ಸಲ್ಲಾಪ ಮಾಡು ; ಲಲ್ಲೈಸು.

Cook ಕುಕ್ (ನಾ.) ಅಡಿಗೆಯವನು(ಳು) ; ಬಾಣಸಿಗ. C.-house, C.-room ಅಡಿಗೆಯ ಮನೆ ; ಪಾಕ ಶಾಲೆ. C.-shop ಊಟದಂಗಡಿ. Too many cooks spoil the broth ಅಡಿಗೆಯವರು ಹೆಚ್ಚಿದಷ್ಟೂ ಅಡಿಗೆ ಹಾಳು (ರೂಪ.) ; ಹೆಚ್ಚುಮಂದಿ ಸೇರಿದರೆ ಕೆಲಸ ಹಾಳು.

Cook (ಕ್ರಿ.) ಅಡು ; ಅಡಿಗೆ ಮಾಡು ; ಬೇಯಿಸು ; ಅಡಿಗೆಯಾಗು ; ಬೇಯಿ ; ಪಚನ ಮಾಡು ; ಪಚನವಾಗು. (ರೂಪ.) ಸೃಷ್ಟನೆ ಮಾಡು ; ಹುಟ್ಟಿಸು (= C. up). (ಬಳ. ಮಾ.) (ಲೆಕ್ಕ, ಮೊ. ನ್ನು) ದುರುದ್ದೇಶದಿಂದ ತಿದ್ದು. (ಅಸಂ.) (ಓಡುವುದು, ಮೊ. ಆಯಾಸ ಕಾರ್ಯಗಳ ವಿಷಯದಲ್ಲಿ) ದಣಿಸು (ಸಾ., ಕರ್ಮಣಿಯಲ್ಲಿ). C. his goose ಅವನನ್ನು ತೀರಿಸಿಬಿಡು. **Coóker** (ನಾ.) ಅಡಿಗೆಯ ಪಾತ್ರೆಸಲಕರಣೆಗಳು : ಅಡುಪಾತ್ರೆ ; ಪಾಕಿ. ಚೆನ್ನಾಗಿ ಬೇಯುವ ಕಾಯಿಪಲ್ಯ, ಮೊ. ವು. (ಲೆಕ್ಕ, ಮೊ. ನ್ನು) ಮೋಸದಿಂದ ತಿದ್ದುವವನು ; ಲೆಕ್ಕ ಸೃಷ್ಟಕ. **Cóokery** (ನಾ.) ಅಡಿಗೆಯ ಕೆಲಸ ; ಪಾಕ ಶಾಸ್ತ್ರ. C.-book ಅಡಿಗೆಯ ಪುಸ್ತಕ ; ಪಾಕ ಶಾಸ್ತ್ರ. **Coókie** ಕುಕಿ (ನಾ.) ಸಣ್ಣ ಸೀರೊಟ್ಟಿ. **Coóky** ಕುಕಿ (ನಾ.) (ಬಳ. ಮಾ.) ಅಡಿಗೆಯವಳು.

Cool ಕೂಲ್ (ಗು., ನಾ.) ತಂಪಾದ ; ತಣ್ಣನೆಯ ; ಹಿತ ಶೀತಲ. [(ಬೇಟೆ) C. scent ನಸುಗಂಪು]. ಮನಸ್ಸು ಕಲಕದ ; ದುಡುಕದ ; ಅಕ್ಷುಬ್ಧ ; ಶಾಂತ ; ನಿಧಾನ ; ನಿರುತ್ಸಾಹದ ; ಅನಾದರದ ; ಉದಾಸೀನ. ಮರುಳಿ ; ಕೊರಮ ; ನುರಿತ ಕೈ ; ಧೂರ್ತ (C. hand). (ಅಧಿಕ್ಯಾರ್ಥದಲ್ಲಿ) It cost me a c. thousand ಮೆಲ್ಲಗೆ ಸಾವಿರ ರೂಪಾಯಿ ಕೈಬಿಟ್ಟುಹೋಯಿತು. (ನಾ.) ತಂಗಾಳಿ ; ತಂಪಾದ ಸ್ಥಳ ; ತಂಪು ; ತಣ್ಪು. C.-headed ಶಾಂತ ಚಿತ್ತ ; ದುಡುಕದ. C. tankard ದ್ರಾಕ್ಷಾಮದ್ಯ, ನೀರು, ನಿಂಬೆಯ ರಸ, ಮೊ. ನ್ನು ಸೇರಿಸಿ ಮಾಡಿದ ತಣ್ಣನೆಯ ಪಾನ. **Coólish** (ಗು.) ಸ್ವಲ್ಪ ತಣ್ಣನೆಯ. **Coólly** ಕೂಲ್ಲಿ (ಕ್ರಿ. ವಿ.) ; **Coólness** (ನಾ.)

Cool (ಕ್ರಿ.) ತಂಪಾಗು ; ತಣ್ಣಗಾಗು ; ಆರು (= C. down) (ರೂಪ. ಸಹ.) ; ತಂಪು ಮಾಡು ; ತಣ್ಣಗೆ ಮಾಡು ; ತಂಪಿಸು ; ಆರಿಸು (ರೂಪ. ಸಹ). C. one's coppers ಕುಡಿದು ಬಾಯಾರಿಕೆ ತೀರಿಸಿಕೊ. C. one's heels ಕಾದುಕೊಂಡಿರು. **Coóler** (ನಾ.) ತಣ್ಪಿಸುವ ಪಾತ್ರೆ ; (ಬಿಸಿ) ಆರಿಸುವ ಪಾತ್ರೆ ; ಶೀತಕ.

Coólie, Cooly ಕೂಲಿ (ನಾ.) (ಇಂಡಿಯದ ಅಥವಾ ಚೀನದ) ಕೂಲಿ ; ಕೂಲಿಗಾರ. **Coólieism** (ನಾ.) ಕೂಲಿ ಪದ್ಧತಿ ; ಜೀತಕ್ಕಾಗಿ ಕೂಲಿಗಳನ್ನು ಹೊರಗಿನಿಂದ ಕರಸುವುದು.

Coomb, Combe, Comb ಕೂಮ್ (ನಾ.) ಆಳವಾದ ಕಮ್ಮರಿ ಅಥವಾ ಕಣಿವೆ (ಮು., ಒಂದು ಬೆಟ್ಟದ ಅಥವಾ ಗುಡ್ಡದ ಪಕ್ಕದಲ್ಲಿಯದು) ; ತೀರದ ಕಣಿವೆ.

Coon ಕೂನ್ (ನಾ.) (ಅಮೆ. ಸಂ.) ರ್‍ಯಾಕೂನ್ ಎಂಬ ಮೃಗ. ತಂತ್ರಿ. Gone c. ತೀರ ಹಾಳಾಗಿಹೋದ.

Coop ಕೂಪ್ (ನಾ., ಕ್ರಿ. ಸಕ.) (ಕಾವುಕುಳಿತಿರುವ ಅಥವಾ ಕೊಬ್ಬುವುದಕ್ಕೆ ಬಿಟ್ಟಿರುವ) ಕೋಳಿಗಳಮೇಲೆ ಮುಚ್ಚುವ ಗೂಡೆ : ಕೋಳಿ ಹಂಜರ. ಕೋಳಿಗಳು ಓಡಾಡುವುದಕ್ಕೂ ಮೊಟ್ಟೆಯಿಡುವುದಕ್ಕೂ ಏರ್ಪಡಿಸಿರುವ ಸ್ಥಳ. ಮೀನುಹಿಡಿಯುವ ಬುಟ್ಟಿ. (ಕ್ರಿ.) ಹಂಜರ ಕವಿಚು. (ಮನುಷ್ಯರನ್ನು) ಬಂಧನದಲ್ಲಿಡು (also, c. up, in)

Coóper[1] ಕೂಪರ್ (ನಾ., ಕ್ರಿ. ಸಕ.) ಪೀಪಾಯಿ, ಮರದ ತೊಟ್ಟಿ, ಮೊ. ನ್ನು ಮಾಡುವವನು, ಭದ್ರಮಾಡುವವನು : ಪೀಪಾಯಿಗಾರ. (Dry, wet, c. ನಿರ್ದ್ರವ ಪದಾರ್ಥಗಳಿಗಾಗಿ, ದ್ರವ ಪದಾರ್ಥಗಳಿಗಾಗಿ, ಪೀಪಾಯಿ ಮಾಡುವವನು). ಮದ್ಯವನ್ನು ಯೋಗ್ಯತೆಗೆ ತಕ್ಕಂತೆ ವಿಂಗಡಿಸುವವನು, ಸೀಸೆಗಳಲ್ಲಿ ತುಂಬಿಡುವವನು, ಚಿಲ್ಲರೆಯಾಗಿ ಮಾರುವವನು (= wine-c.). ಒಂದು ತೆರದ ಮಿಶ್ರಮದ್ಯ. (ಕ್ರಿ.) ಪೀಪಾಯಿ ಭದ್ರಮಾಡು ; ಪೀಪಾಯಿಗಳಲ್ಲಿ ತುಂಬಿಡು. ಮೆರುಗು ಕೊಡು. **Coóperage** (ನಾ.) ಪೀಪಾಯಿಗಾರನ ಕೆಲಸ, ಅಂಗಡಿ. **Coópery** (ನಾ.) = Cooperage ; ಪೀಪಾಯಿಗಾರನ ಸರಕು.

Coóper[2]. **Coper**[2] ನೋಡಿ.

Co(-)óperate ಕೊ ಆಪರೇಟ್ (ಕ್ರಿ. ಅಕ.) (ಒಬ್ಬನೊಡನೆ, ಒಂದು ಕಾರ್ಯದಲ್ಲಿ, ಒಂದು ಉದ್ದೇಶಕ್ಕಾಗಿ) ಒಂದುಗೂಡಿ ಕೆಲಸಮಾಡು ; ಸಹಕರಿಸು ; ಕೂಡುನೆರೆ. (ವಸ್ತುಗಳ ವಿಷಯದಲ್ಲಿ) ಒಂದು ಪರಿಣಾಮವುಂಟುಮಾಡುವುದರಲ್ಲಿ ಕಾರಣವಾಗಿ ಸೇರಿರು. **Co-óperant** — ರಂಟ್ (ಗು., ನಾ.) ಒಂದೇ ಉದ್ದೇಶಕ್ಕಾಗಿ ಕೂಡಿ ಕೆಲಸಮಾಡುತ್ತಿರುವ(ದು) : ಸಹಕಾರಕ. **Co-óperator** — ರೇಟರ್ (ನಾ.) ಸಹಕಾರಿ. **Co-operátion** (ನಾ.) ಸಹಕಾರ ; ಕೂಡುನೆರವು. **Co-óperative** — ರೆಟಿವ್ (ಗು.) ಸಹಕಾರದ ; ಸಹಕಾರಕ. C. society ಸಹಕಾರ ಸಂಘ. C. store ಸಹಕಾರದ ಅಂಗಡಿ. **Co-óperatively** (ಕ್ರಿ. ವಿ.)

Co-ópt ಕೊಆಪ್ಟ್ (ಕ್ರಿ. ಸಕ.) ಒಂದು ಸಂಘದ ಸದ್ಯದ ಸದಸ್ಯರ ಅಭಿಮತಗಳಿಂದ ಹೊಸಬರನ್ನು ಸಂಘಕ್ಕೆ ಸೇರಿಸಿಕೊ : ಜೊತೆಗೆ ಆಯ್ದುಕೊ. **Co-optátion** ಜೊತೆಗೆ ಆಯ್ಕೆ.

Co(-)órdinate ಕೊ ಆರ್ಡಿನೇಟ್ (ಗು., ನಾ.), — ನೇಟ್ (ಕ್ರಿ. ಸಕ.) ಸಮಾನ ಸ್ಥಾನವುಳ್ಳ ; ಸಮಾನಾಧಿಕರಣ [ಮು., (ವ್ಯಾ.) ಒಂದು ಸಂಯುಕ್ತ ವಾಕ್ಯದಲ್ಲಿಯ ವಾಕ್ಯಭಾಗಗಳ ವಿಷಯದಲ್ಲಿ]. ಸಮಾನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಥಾನದ ವಸ್ತುಗಳಿಂದ ಕೂಡಿದ; ಸುಸಂಘಟಿತ; ಅನ್ಯೋನ್ಯ ಸಂಬಂಧವುಳ್ಳ. (ನಾ.) ಸಮಾನ ಸ್ಥಾನೀಯ. (ಗಣಿತ) ಒಂದು ಬಿಂದುವಿನ, ರೇಖೆಯ, ಸಮಕ್ಷೇತ್ರದ, ಸ್ಥಾನವಿನ್ಯಾಸದ ಮಾನಗಳ ಲ್ಲೊಂದು : ಸ್ಥಾನ ನಿರ್ದೇಶಕ. (ಕ್ರಿ.) ಸಮಾನ ಸ್ಥಾನದವನ್ನಾಗಿ ಮಾಡು. (ಭಾಗಗಳನ್ನು) ಅನ್ಯೋನ್ಯ ಸಂಬಂಧವಿರುವಂತೆ ಕೂಡಿಸು ; ಸುಸಂಘಟಿತವಾಗಿಸು ; ಸಮಭಾವ ಮಾಡು ; ಸರಿಹೊಂದಿಸು. **Co-órdinately** (ಕ್ರಿ. ವಿ.) ; **Co-ordinátion** (ನಾ.) ; **Co-órdinative** — ನೇ(ನ)ಟಿವ್ (ಗು.) ಸುಸಂಘಟಿತವಾಗಿಸುವ ; ಸಮಭಾವ ಮಾಡುವ ; ಅನ್ಯೋನ್ಯ ಸಂಬಂಧಾತ್ಮಕ.

Coot ಕೂಟ್ (ನಾ.) ಒಂದು ಜಾತಿಯ ನೀರುಹಕ್ಕಿ.

Cop[1] ಕಾಪ್ (ನಾ.) (ನೂಲುವುದರಲ್ಲಿ) ಕದಿರಿನಮೇಲೆ ಸುತ್ತಿರುವ ಶಂಕುವಿನಾಕಾರದ ದಾರದುಂಡೆ : ಕದಿರುಂಡೆ.

Cop[2] ಕಾಪ್ (ನಾ.) (ಅಸಂ.) ಪೋಲೀಸಿನವನು.

Cop[3] ಕಾಪ್ (ಕ್ರಿ. ಸಕ.) (ಅಸಂ.) ಹಿಡಿ ; ಹಿಡಿದುಕೊ.

Copaíba, -aíva ಕೊಪಯ್ಬ, ಕೊಪೇಬ, ಕೊಪಯ್ವ (ನಾ.) (ವಾಸನಾ ದ್ರವ್ಯವಾಗಿಯೂ ಔಷಧದಲ್ಲಿಯೂ ಕುಶಲ ಕರ್ಮಗಳಲ್ಲಿಯೂ ಉಪಯೋಗಿಸುವ) ಸುವಾಸನಾ ಗುಗ್ಗುಲ.

Cópal ಕೋಪಲ್ (ನಾ.) ಮೆರುಗುಕೊಡುವುದಕ್ಕಾಗಿ (ವಾರ್ನಿಷಿಗಾಗಿ) ಉಪಯೋಗಿಸುವ ಒಂದು ರಾಳ.

Copárcenary, -nery ಕೋಪಾರ್ಸಿನೆರಿ (ನಾ.) ದಾಯಾದ್ಯದ ಆಸ್ತಿಯಲ್ಲಿ ಸಹಭಾಗ ; ಸಹಭಾಗಿತ್ವ ; ಸಹಸ್ವಾಮ್ಯ ; ಕೂಡುಪಾಲು (ರೂಪ. ಸಹ). **Copárcener** (ನಾ.) ಸಮಾನ ಪೂರ್ವಜನ ಆಸ್ತಿಯ ಹಕ್ಕನ್ನು ಇತರ ಹಕ್ಕುದಾರರೊಡನೆ ಹಂಚಿಕೆಪಡೆಯುವವನು : ಸಹಭಾಗಿ ; ಪಾಲುದಾರ ; ದಾಯಾದ.

Copártner ಕೋಪಾರ್ಟ್ನರ್ (ನಾ.) ಸಹಭಾಗಿ ; ಪಾಲುದಾರ ; ಹಿಸ್ಸೆದಾರ. **Copártnership** (ನಾ.) = **Copártnery** (ನಾ.) ಪಾಲುಗಾರಿಕೆ.

Cope[1] ಕೋಪ್ (ನಾ., ಕ್ರಿ.) ಮೆರೆವಣಿಗೆಗಳಲ್ಲಿ ಕ್ರೈಸ್ತ ಪಾದ್ರಿಗಳು ಹಾಕಿಕೊಳ್ಳುವ ಉದ್ದವಾದ ನಿಲುವಂಗಿ. [(ರೂಪ.) C. of night ರಾತ್ರಿಯ ಮುಸುಕು; C. of heaven ಆಕಾಶ ವಿತಾನ]. (ಎರಕ ಹೊಯ್ಯುವಲ್ಲಿ) ಅಚ್ಚಿನ ಹೊರಭಾಗ. ತಲೆಕಟ್ಟಡ ; ತುದಿಕಟ್ಟಡ ; ಕಪಿಶೀರ್ಷ (= Coping). [C.-stone ಕಟ್ಟಡದ ತಲೆಗಲ್ಲು ; ಕಳಸ ; ಶಿಖರ (ರೂಪ.)]. (ಕ್ರಿ.) ನಿಲುವಂಗಿ ತೊಡು. (ಗೋಡೆ, ಮೊ. ಕ್ಕೆ) ತಲೆಕಟ್ಟಡ ಕಟ್ಟು. ಬಾನಿನಂತೆ ಕವಿ(ಚು). C. over ತಲೆಕಟ್ಟಡದಂತೆ ಚಾಚು, ಬಾಗಿರು. **Cóping** (ನಾ.) ತಲೆಕಟ್ಟಡ ; ಕುಂಬೆ.

Cope[2] ಕೋಪ್ (ಕ್ರಿ. ಅಕ.) (ಮನುಷ್ಯನೊಡನೆ, ಕೆಲಸದಲ್ಲಿ) ಸರಿಸಮವಾಗಿ ಹೋರಾಡು, ಹೆಣಗಾಡು ; ನಿಭಾಯಿಸು.

Cópeck ಕೋಪೆಕ್ (ನಾ.) ರಷ್ಯಾದೇಶದ ಒಂದು ತಾಮ್ರದ ನಾಣ್ಯ (ಸುಮಾರು ಕಾಲಾಣೆಯ ಬೆಲೆಯದು).

Cóper[1] ಕೋಪರ್ (ನಾ.) ಕುದುರೆಯ ವ್ಯಾಪಾರಿ (Also Horse-c.)

Cóper[2], **Coóper**[2] ಕೋಪರ್ (ನಾ.) (ಉತ್ತರ ಸಾಗರದ ಬೆಸ್ತರಿಗೆ) ಮದ್ಯಮಾರುವ ದೋಣಿ (ಹಡಗು)

Copérnican ಕೊಪರ್ನಿಕನ್ (ಗು.) 'ಕೊಪರ್ನಿಕಸ್' ಎಂಬ ಜ್ಯೋತಿಷ್ಕನ. C. system, theory ಭೂಮಿಯೂ ಇತರ ಗ್ರಹಗಳೂ ಸೂರ್ಯನ ಸುತ್ತಲೂ ಸುತ್ತುತ್ತಿರುವುವೆಂಬ ತತ್ತ್ವ, ವಾದ : ಕೊಪರ್ನಿಕಸ್ಸಿನ ತತ್ತ್ವ, ವಾದ.

Cópious ಕೋಪಿಯಸ್ (ಗು.) ಸಮೃದ್ಧ ; ವಿಪುಲ ; ಪುಷ್ಕಲ ; ಬಹುಲ ; ಹೇರಳ ; ತುಂಬ. ವಿಷಯಬಾಹುಳ್ಯವುಳ್ಳ ; ವಾಕ್ಸಂಪತ್ತಿಯುಳ್ಳ ; ಮಾತಿನಲ್ಲಿ ಪುಷ್ಕಲವಾದ. (ಭಾಷಾ ವಿಷಯದಲ್ಲಿ) ಶಬ್ದಸಂಪತ್ತಿಯುಳ್ಳ. **Cópiously** (ಕ್ರಿ. ವಿ.) ; **Cópiousness** (ನಾ.)

Cópper[1] ಕಾಪರ್ (ನಾ., ಗು., ಕ್ರಿ. ಸಕ.) ತಾಮ್ರ ; ತಾಮ್ರದ ನಾಣ್ಯ (ಕಾಸು, ಕಾಲಾಣೆ, ಅರ್ಧಾಣೆ) ; ತಾಮ್ರದ ಪಾತ್ರೆ ; ತಾಮ್ರದ ಅಥವಾ ಕಬ್ಬಿಣದ ಕುದಿಪಾತ್ರೆ. [Hot coppers ಕುಡಿತದಿಂದ ಒಣಗಿಹೋದ ಗಂಟಲು, ಬಾಯಿ. Cool one's coppers (cool ನೋಡಿ). C.-bit ತಾಮ್ರದ ಮೂತಿಯುಳ್ಳ ಬೆಸುಗೋಲು]. (ಕ್ರಿ.) (ಹಡಗಿನ ತಳ, ಮೊ. ಕ್ಕೆ) ತಾಮ್ರಹೊಚ್ಚು (= C.-bottom) (ಮು., ಭೂ. ಕೃ. ನಲ್ಲಿ). C. captain ಹಡಗಿನ ಯಜಮಾನನಂತೆ ನಟಿಸುವವನು. C. Indian ಉ. ಅಮೆರಿಕದ ತಾಮ್ರವರ್ಣಿ (= Red Indian). **Cópperhead** (ನಾ.) ಅಮೆರಿಕದ ಒಂದು ಜಾತಿಯ ವಿಷಸರ್ಪ. **Cópperplate** (ನಾ., ಗು.) ಅಕ್ಷರ, ಚಿತ್ರ, ಮೊ. ನ್ನು ಕೆತ್ತುವುದಕ್ಕೆ ಉಪಯೋಗಿಸುವ ನಯಮಾಡಿದ ತಾಮ್ರದ ತಗಡು : ತಾಮ್ರಫಲಕ ; ಇದರಿಂದ ತೆಗೆದ ಪ್ರತಿ. (ಗು.) (ಬರವಣಿಗೆ) ಅಂದವಾದ, ನೀಟಾದ. **Cópper-smith** (ನಾ.) ತಾಮ್ರದ ಕೆಲಸದವನು ; ತಾಮ್ರಕಾರ. **Cóppery** (ಗು.) ತಾಮ್ರವನ್ನು ಹೋಲುವ ; ತಾಮ್ರವಿರುವ ; ತಾಮ್ರ ವರ್ಣದ.

Cópper[2] ಕಾಪರ್ (ನಾ.) (ಅಸಂ.) ಪೋಲೀಸಿನವನು.

Cópperas ಕಾಪರಸ್ (ನಾ.) ಕಬ್ಬಿಣದ ಪ್ರಥಮ ಸಲ್ಫೇಟು : ಅನ್ನಭೇದಿ.

Cóppice ಕಾಪಿಸ್ (ನಾ.) ಆಗಾಗ ಕತ್ತರಿಸುವುದಕ್ಕಾಗಿ ಬೆಳೆಯಿಸುವ ಕುರುಚಲು ಮತ್ತು ಸಣ್ಣ ಗಿಡಗಳ ಸಣ್ಣ ಕಾಡು : ಕುರುಚಲು ಕಾಡು (C.-wood)

Cópra ಕಾಪ್ರ (ನಾ.) ಕೊಬ್ಬರಿ.

Cópro- ಕಾಪ್ರೊ— (ಸಮಾಸದಲ್ಲಿ ಪೂರ್ವ ಪದ) ಸಗಣಿ— ; ಲದ್ದಿ —. **Cóprolite** — ಲೈಟ್ (ನಾ.) ಶಿಲೀಭೂತ ಪುರೀಷ (ಇಂಥ ಪಳೆಯುಳಿಕೆಗಳು ನಷ್ಟವಾಗಿಹೋದ ಮೃಗಗಳ ಆಹಾರ, ಚರ್ಯೆ, ಮೊ. ಗಳ ವಿಷಯವಾಗಿ ಬಹಳ ಉಪಯುಕ್ತವಾದ ಸಂಗತಿಗಳನ್ನು ತಿಳಿಸುತ್ತವೆ). **Coprolític** — ಲಿಟಿಕ್ (ಗು.) ; **Coprólogy** ಕಾಪ್ರಾಲೊಜಿ (ನಾ.) ಸಾಹಿತ್ಯ, ಮೊ. ಗಳಲ್ಲಿ ಅಸಹ್ಯ ವಿಷಯಗಳ ಪ್ರಸ್ತಾಪ : ಅಶುಚಿ ಸಾಹಿತ್ಯ ; ಗೊಬ್ಬರದ ಬರವಣಿಗೆ. **Coprόphagous** — ಫಗಸ್ (ಗು.) (ಜೀರುಂಡೆಯ ವಿಷಯದಲ್ಲಿ) ಸಗಣಿ ತಿನ್ನುವ.

Copse ಕಾಪ್ಸ್ (ನಾ., ಕ್ರಿ. ಸಕ.) = Coppice. Copsewood ಕುರುಚಲು ಕಾಡು. (ಕ್ರಿ.) ಕುರುಚಲು ಕತ್ತರಿಸು ; ಕುರುಚಲು ಬೆಳೆಸು. **Cópsy** (ಗು.)

Copt ಕಾಪ್ಟ್ (ನಾ.) ಈಜಿಪ್ಟಿನ ದೇಶೀಯ ಕ್ರೈಸ್ತರಲ್ಲಿ ಒಂದು ಪಂಗಡದವನು. **Cóptic** (ಗು., ನಾ.) ಕಾಪ್ಟರ (ಭಾಷೆ)

Cópula ಕಾಪ್ಯುಲ (ನಾ.) (ತರ್ಕ, ವ್ಯಾ.) ಸಂಯೋಜಕ ಪದ ; ಕೂಡಿಸುವ ಪದ. (ಅಂ. ರ. ಶಾ.) ಕೂಡಿಸುವ ಭಾಗ ; ಸಂಯೋಜಕ (ಎಲುಬು, ಮೆಲ್ಲೆಲುಬು, ಅಸ್ಥಿರಜ್ಜು). (ಸಂ.) ಲಘು ಸಂಯೋಜಕ ಪದ. **Cópular** (ಗು.) ; **Cópulate** — ಲೇಟ್ (ಕ್ರಿ. ಅಕ.) ಸಂಭೋಗ ಮಾಡು ; (ಗಂಡು ಹೆಣ್ಣು) ಕೂಡು, ನೆರೆ. **Cópulatory** — ಲಟರಿ (ಗು.) ; **Copulátion** — ಲೇಷನ್ (ನಾ.) ಸಂಭೋಗ ; ಮೈಥುನ ; (ಗಂಡು ಹೆಣ್ಣಿನ) ಕೂಟ. (ತರ್ಕ, ವ್ಯಾ.) ಸಂಬಂಧ. **Cópulative** — ಲ(ಲೇ)ಟಿವ್ (ಗು., ನಾ.) ಕೂಡಿಸುವ ; ಸಂಯೋಜಕ ; ಸಂಬಂಧಕ. (ಪ್ರಾ. ವಿ., ಅಂ. ರ. ಶಾ.) ಸಂಭೋಗದ. (ನಾ.) ಸಂಯೋಜಕ ಅವ್ಯಯ, ಪದ. **Cópulatively** (ಕ್ರಿ. ವಿ.)

Cópy ಕಾಪಿ (ನಾ., ಕ್ರಿ.) (ಬರವಣಿಗೆ, ಚಿತ್ರ, ಮೊ. ಗಳ) ಪ್ರತಿ ; ನಕಲು ; ಪ್ರತಿರೂಪ ; ಪಡಿಯಚ್ಚು ; ಮೇಲ್ಪಂಕ್ತಿಯನ್ನನುಸರಿಸಿ ಬರೆದ ಪುಟ (ಬರಹ) : ಕರಡು ಬರಹ. (ಪುಸ್ತಕ, ಮೊ. ಗಳ) ಬರೆದ ಅಥವಾ ಮುದ್ರಿಸಿದ ಪ್ರತಿ. (Rough, foul, c. ಕಚ್ಚಾ ಪ್ರತಿ ; ಕರಡು ಪ್ರತಿ. Fair, clean, c. ಚೊಕ್ಕ ಪ್ರತಿ ; ಶುದ್ಧ ಪ್ರತಿ). ಪ್ರತಿಯೆತ್ತಬೇಕಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾದರಿ. ಮುದ್ರಣಮಾಡಬೇಕಾದ ಕೈಬರಹದ ಪ್ರತಿ : ಹಸ್ತಪ್ರತಿ. [That incident will make good c. ವೃತ್ತಪತ್ರಿಕೆ, ವೊ. ಗಳಲ್ಲಿ ಬರೆಯಲು ತಕ್ಕ ಚಿತ್ತಾಕರ್ಷಕ ವಿಷಯವಾಗಿದೆ. C.-book (ಬರಹ ಕಲಿತುಕೊಳ್ಳುವವರು) ಮೇಲ್ಪಂಕ್ತಿ ನೋಡಿಕೊಂಡು ಬರೆಯುವ ಪುಸ್ತಕ : ಮೇಲ್ಪಂಕ್ತಿ ಪುಸ್ತಕ ; ಮಾನೆ ಪುಸ್ತಕ. C.-book maxims ಜನಜನಿತವಾದ, ಸರ್ವಸಾಧಾರಣವಾದ, ನೀತಿವಚನಗಳು]. (ಕ್ರಿ.) (ಅಸಲು ಪ್ರತಿಯಿಂದ) ನಕಲುಮಾಡು, ಪ್ರತಿಯೆತ್ತು. (ಪರೀಕ್ಷೆಯಲ್ಲಿ) ಕದ್ದು ಬರೆ, ಕದ್ದುನೋಡಿ ಬರೆ. ಅನುಕರಿಸು. Copying-press ನಕಲೆತ್ತುವ ಅಚ್ಚು. **Cópyist** (ನಾ.) ಪ್ರತಿ ಮಾಡುವವನು ; ನಕಲು ಬರೆಯುವವನು. **Cópyhold** (ನಾ., ಗು.) (ಜಮಾನುಹಿಡುವಳಿಯ ದಾಖಲೆ ಮೇರೆಗೆ) ಹಿಡುವಳಿ ; ಪಟ್ಟೆ ; ಅಂಥ ಹಿಡುವಳಿಯ (ಜಮಾನು). **Cópyholder** (ನಾ.) ; **Cópyright** (ನಾ., ಗು., ಕ್ರಿ. ಸಕ.) ತನ್ನ ಮೂಲ ಕೃತಿಯ ಪ್ರತಿಗಳನ್ನು ಮುದ್ರಿಸಿ, ಪ್ರಕಟಿಸಿ, ಮಾರಲು ಮೂಲಕರ್ತನಿಗಾಗಲಿ, ತಾನು ತನ್ನ ಹಕ್ಕನ್ನು ವಹಿಸಿರುವವನಿಗಾಗಲಿ, ಕಾನೂನಿನ ಮೇರೆಗೆ ಒಂದು ಗೊತ್ತಾದ ವರ್ಷಗಳ ಕಾಲ ಕೊಟ್ಟಿರುವ ಏಕಬಾಧ್ಯತೆಯ ಹಕ್ಕು : ಗ್ರಂಥಸ್ವಾಮ್ಯ. (ಗು.) (ಪುಸ್ತಕಗಳು, ವೊ.) ಈ ಹಕ್ಕಿನಿಂದ ರಕ್ಷಿತವಾದ ; ಗ್ರಂಥಸ್ವಾಮ್ಯ ಪಡೆದ. (ಕ್ರಿ.) (ಪುಸ್ತಕ, ವೊ. ಕ್ಕೆ) ಗ್ರಂಥಸ್ವಾಮ್ಯ ಪಡೆ.

Coquét, Coquétte ಕೊಕೆಟ್ (ಕ್ರಿ. ಅಕ.) ಒಲಪು ತೋರಿಸು ; ಹಾವ ಭಾವ ತೋರಿಸು ; ಕುಲುಕು ಮಾಡು ; ಸರಸವಾಡು. (ಒಂದು ವಿಷಯವಾಗಿ) ಹುಡುಗಾಟವಾಡು. **Coquét** (ಗು.) ಬೆಡಗಿನ ; ಒಲಪಿನ ; ಒಯ್ಯಾರದ. **Cóquetry** ಕೋಕೆಟ್ರಿ (ನಾ.) ಒಲಪು ; ಕುಲುಕು ; ಒಯ್ಯಾರ ; ಬೆಡಗು ; ವಿಲಾಸ ; ವಿಭ್ರಮ. (ರೂಪ.) ಹುಡುಗಾಟ. (ಕಲೆ) ಚಾತುರ್ಯದಿಂದ ತೋರಿಸುವ ಸೊಗಸು, ಬೆಡಗು. **Coquétte** (ನಾ.) (ಪ್ರಣಯ ವಿಷಯದಲ್ಲಿ) ಹುಡುಗಾಟವಾಡುವ ಹೆಂಗಸು ; ಒಲಪುಗಾತಿ ; ಬೆಡಗುಗಾತಿ ; ವಿಲಾಸಗಾತಿ. ಒಂದು ಜಾತಿಯ ಹಕ್ಕಿ. **Coquéttish** (ಗು.) ; **Coquéttishly** (ಕ್ರಿ. ವಿ.)

Córacle ಕಾರಕ್‌ಲ್ (ನಾ.) ನೀರಿಳಿಯದ ಪದಾರ್ಥವನ್ನು ಹೊರಕ್ಕೆ ತೊಡಿಸಿರುವ, ಕಡ್ಡಿಹೆಣೆದು ಮಾಡಿದ ದೋಣಿ : ಹರಿಗೋಲು.

Córal ಕಾರಲ್ (ನಾ., ಗು.) ಹವಳ ; ಪ್ರವಾಳ (C.-island ಹವಳ ಬೆಳೆದು ಆದ ದ್ವೀಪ : ಪ್ರವಾಳ ದ್ವೀಪ. C.-rag ಕಲ್ಲಾದ ಹವಳದ ಸ್ತರಗಳಿರುವ ಸುಣ್ಣಕಲ್ಲು. C.-reef ಹವಳದ ದಿಬ್ಬ). ಹಲ್ಲು ಹುಟ್ಟುತ್ತಿರುವ ಮಕ್ಕಳಿಗಾಗಿ ನಯವಾಗಿ ಮಾಡಿದ ಹವಳದ ಆಟದ ಸಾಮಾನು. (ಗು.) ಹವಳದಂಥ (ಮು., ಕೆಂಪಗಿರುವ). **Córalline** — ಲಿನ್, — ಲೈನ್ (ಗು.) ಹವಳಗೆಂಪಿನ ; ಹವಳದ ; ಹವಳದಂಥ. **Córallite** — ಲೈಟ್ (ನಾ.) ಪಳೆಯುಳಿಕೆಯ ಹವಳ ; ಶಿಲೀಭೂತ ಪ್ರವಾಳ. ಹವಳಗಲ್ಲು ; ಪ್ರವಾಳ ಶಿಲೆ. **Córalloid** — ಲಾಯ್ಡ್ (ಗು., ನಾ.) ಹವಳದಂಥ (ಜೀವಿ)

Córbel ಕಾರ್ಬೆಲ್ (ನಾ., ಕ್ರಿ.) (ವಾ. ಶಾ.) ಗೋಡೆಯಿಂದ ಹೊರಚಾಚಿಕೊಂಡು ಮೇಲಿನ ಭಾರವನ್ನು ಹೊತ್ತಿರುವ ಕಲ್ಲು, ಮರ, ವೊ. ವು. C.-table ಚಾಚುಆಧಾರದಮೇಲಿನಿಂದ ಮುಂದುವರಿದಿರುವ ಕಟ್ಟಡ : ಬೋದಿಗೆ ಕಟ್ಟಡ. C. out, off ಚಾಚುಆಧಾರದಮೇಲೆ ಮುಂಬರಿವಂತೆ ಮಾಡು. **Córbelled** (ಗು.)

Cord ಕಾರ್ಡ್ (ನಾ., ಕ್ರಿ. ಸಕ.) ಹುರಿ ; ರಜ್ಜು. (ಅಂ. ರ. ಶಾ.) ಪ್ರಾಣಿದೇಹದಲ್ಲಿಯ ಹುರಿಯಂಥ ರಚನೆ (Spinal c. ಬೆನ್ನುಹುರಿ. Umbilical c. ಹೊಕ್ಕುಳ ಹುರಿ. Vocal cords ಧ್ವನಿ ತಂತು). ಬಟ್ಟೆಯಲ್ಲಿ ಎದ್ದುಕಾಣಿಸುವ ಹುರಿ ; ಹುರಿಬಟ್ಟೆ. ಮರದ ನಾಟಾಗಳ ಒಂದು ಅಳತೆ (ಸಾ., ೧೨೮ ಘನ ಅಡಿಗಳು). ಬಂಧ ; ಪಾಶ ; ಕಟ್ಟು. (ಕ್ರಿ.) ಹುರಿಯಿಂದ ಬಿಗಿ. **Córdage** ಕಾರ್ಡಿಜ್ (ನಾ.) (ಹಡಗಿನ) ಹಗ್ಗ ಹುರಿಗಳು. **Córded** (ಗು.) ಹುರಿಗಳಿಂದ ಬಿಗಿದ ; ಹುರಿ ಹವಣಿಸಿರುವ. (ಬಟ್ಟೆ, ವೊ. ಗಳ ವಿಷಯದಲ್ಲ) ಹುರಿಯೆದ್ದು ಕಾಣುವ ; ಹುರಿಯಿಂದ ಮಾಡಿದ.

Córdate ಕಾರ್ಡೇಟ್ (ಗು.) ಹೃದಯಾಕಾರದ.

Córdial ಕಾರ್ಡಿಯಲ್ (ಗು., ನಾ.) ಹೃದಯೋತ್ತೇಜಕ (ಔಷಧ, ಆಹಾರ, ಪಾನೀಯ) ; ಬಲವರ್ಧಕ. (ವ್ಯಾಪಾರ) ವಾಸನೆಕಟ್ಟಿ ಸೀಮಾಡಿದ ಮದ್ಯ : ಮದ್ಯ ಪಾನಕ. ಹೃತ್ಪೂರ್ವಕ ; ಆದರ ಪೂರ್ವಕ ; ಅಂತಃಕರಣ ಪೂರ್ವಕ ; ಬಗೆಯಾರ. **Cordiálity** — ಆ್ಯಲಿಟಿ (ನಾ.) ಆದರ ; ಪ್ರೀತಿ ; ಸೌಹಾರ್ದ ; ನಲುಮೆ. **Córdially** — ಅಲಿ (ಕ್ರಿ. ವಿ.)

Cordilléra ಕಾರ್ಡಿಲ್ಯೇರ (ನಾ.) (ಸಮಾನಾಂತರದಲ್ಲಿರುವ) ಬೆಟ್ಟದ ಸಾಲು (ಮು., ಆ್ಯಂಡೀಸ್ ಪರ್ವತಶ್ರೇಣಿ)

Córdite ಕಾರ್ಡೈಟ್ (ನಾ.) ಹೊಗೆ ಹೊರಡದ ಒಂದು ಸಿಡಿಮದ್ದು.

Córdon ಕಾರ್ಡನ್ (ನಾ.) ಗೋಡೆಯಲ್ಲಿ ಮುಂಚಾಚಿಕೊಂಡಿರುವ ಕಲ್ಲಿನ ವರಿಸೆ. (ಸೈನಿಕರು, ಪೊಲೀಸಿನವರು, ವೊ. ರ) ಕಾವಲು ಸಾಲು ; ರಕ್ಷಾವರಣ ; ಸೊಂಕುರೋಗದ ಪ್ರದೇಶಕ್ಕೂ ಅದು ತಗುಲದಿರುವ ಪ್ರದೇಶಕ್ಕೂ ಮಧ್ಯೇ ಇರುವ ಕಾವಲ ತಡೆ, ಎಲ್ಲೆ (= Sanitary c.) : ಸೊಂಕು ಕಾವಲು. ಅಲಂಕಾರಕ್ಕಾಗಿ ಹಾಕಿಕೊಳ್ಳುವ ದಾರ ಅಥವಾ ಜಡೆಪಟ್ಟಿ, ಹೆಣಿಗೆ. ನೈಟ್ ಪದವಿಯ ಲಾಂಛನಪಟ್ಟಿ [C. bleu ಒಂದು ವರ್ಗದ ನೈಟ್‌ಪದವಿಯವರು ಧರಿಸುತ್ತಿದ್ದ ಬಾನ್ನೀಲಿಯ ಪಟ್ಟಿ ; ಇಂಥ ಪಟ್ಟಿಯನ್ನು ಧರಿಸಿದವರು. (ಹಾಸ್ಯವಾಗಿ) ಭರ್ಜರಿ ಅಡಿಗೆಯವನು]. ಒಂದೇ ಕಾಂಡ ಬೆಳೆಯುವಂತೆ ಸುತ್ತು ರೆಂಬೆಗಳನ್ನು ಕತ್ತರಿಸಿಹಾಕಿದ ಹಣ್ಣುಗಿಡ.

Córdovan ಕಾರ್ಡೊವ್ಯಾನ್ (ಗು., ನಾ.) ಸ್ಪೆಯ್ನ್‌ದೇಶದಲ್ಲಿರುವ ಕಾರ್ಡೊವಾ ಪಟ್ಟಣದ (ತೊಗಲು)

Corduroý ಕಾರ್ಡರಾಯ್ (ನಾ., ಗು.) (ಮು., ಕೂಲಿಗಾರರು ಹಾಕಿಕೊಳ್ಳುವ) ಒರಟುಹುರಿಯ ಹತ್ತಿಬಟ್ಟೆ : ಹುರಿಬಟ್ಟೆ. (ಬ. ವ. ದಲ್ಲಿ) ಈ ಬಟ್ಟೆಯ ಷರಾಯಿ. (ಅಮೆ. ಸಂ.) C. road ಕೊಚ್ಚೆಯ ನೆಲದಮೇಲೆ ಹೋಗಲು ಅಡ್ಡವಾಗಿ ಹಾಕಿರುವ ಮರದ ದಿಮ್ಮಿಗಳ ರಸ್ತೆ : ದಿಮ್ಮಿರಸ್ತೆ.

Córdwain ಕಾರ್ಡ್‌ವೆಯ್ನ್ (ನಾ.) (ಪ್ರಾಚೀ. ಪ್ರ.) ಹಿಂದೆ ಪಾದರಕ್ಷೆಗಳನ್ನು ಮಾಡುವುದಕ್ಕಾಗಿ ಉಪಯೋಗಿಸುತ್ತಿದ್ದ ಸ್ಪೆಯ್ನ್ ದೇಶದ ತೊಗಲು. **Córdwainer** (ನಾ.) ಜೋಡು ಹೊಲಿಯುವವನು ; ಮೋಚಿ ; ಚಮ್ಮಾರ (ಈಗ, ಆ ಕೋಮಿನ ಸಂಘದ ಹೆಸರಾಗಿ ಮಾತ್ರ ಪ್ರಯೋಗ)

Core ಕೋರ್ (ನಾ., ಕ್ರಿ. ಸಕ.) ಮಧ್ಯಭಾಗ ; ಗರ್ಭ ; ಹೃದಯ ; ತಿರುಳು. (ಮಾವು, ಸೇಬು, ಮರಸೇಬು, ವೊ. ಹಣ್ಣುಗಳ ಮಧ್ಯಭಾಗದಲ್ಲಿರುವ ಗಟ್ಟಿಪೊರೆಯ) ಬೀಜಕೋಶ. ಕೊರೆದು ತೆಗೆದ ಮಧ್ಯಭಾಗ (ಮು., ಕೊರೆದ ಬಂಡೆಯದು). ವಿದ್ಯುತ್ಕಾಂತದ ಅಥವಾ ವಿದ್ಯುತ್ಪ್ರಚೋದಕದ (Induction coil) ಗರ್ಭದಲ್ಲಿಯ ಮೆತುಕಬ್ಬಿಣದ ಸರಳು ಅಥವಾ ತಂತಿಕಟ್ಟು. ಹಗ್ಗದ ನಡುಹುರಿ. ಅತ್ಯಂತ ಒಳಗಿನ ಭಾಗ [(ರೂಪ.) Rotten at the c. ತಿರುಳು ಕೊಳೆತ. Indian to the c. ಅಂತರಂಗದಲ್ಲೆಲ್ಲ ಭಾರತೀಯನಾದ] ; ಕೆಚ್ಚು ; ಚೇಗು. (ಕುರಿಗಳಲ್ಲಿಯ) ಒಂದು ವ್ಯಾಧಿ, ರೋಗದ ಗೆಡ್ಡೆ. ಎರಕಹೊಯ್ಯುವುದರಲ್ಲಿ ಮಧ್ಯೆ ಬಿಡಬೇಕಾದ ಸ್ಥಳದಲ್ಲಿಡುವ ಅಚ್ಚು : ತೆರಪಚ್ಚು. (ಕ್ರಿ.) (ಒಂದು ವಸ್ತುವಿನ) ತಿರುಳು, ಗರ್ಭ, ತೆಗೆದುಹಾಕು. **Córer** (ನಾ.) ಹಣ್ಣಿನ ಗರ್ಭ ತೆಗೆದುಹಾಕುವ ಆಯುಧ. **Córeless** (ಗು.)

Co-relátion = Correlation.

Co-relígionist ಕೋ ರಿಲಿಜನಿಸ್ಟ್ (ನಾ.) ಒಂದೇ ಮತಧರ್ಮದವನು ; ಸಧರ್ಮಿ.

Co-respóndent ಕೋ ರಿಸ್‌ಪಾಂಡೆಂಟ್ (ನಾ.) ದಾಂಪತ್ಯ ವಿಚ್ಛೇದ ವ್ಯವಹಾರದಲ್ಲಿ ಪ್ರತಿವಾದಿಯಾದ ಹೆಂಡತಿಯ ಜೊತೆಗೆ ಅವಳೊಡನೆ ವ್ಯಭಿಚಾರಿಯೆಂದು ಆಪಾದಿತನಾದವನು : ಸಹ ಪ್ರತಿವಾದಿ.

Coriáceous ಕಾ(ಕೋ)ರಿಯೇಷಸ್ (ಗು.) ತೊಗಲಿನಂಥ ; ತೊಗಲಿನ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Coriánder ಕಾರಿಆ್ಯಂಡರ್ (ನಾ.) ಕೊತ್ತುಂಬರಿ (ಬೀಜ) ; ಧನಿಯ (C. seed)

Corínthian ಕೊರಿಂತಿಯನ್ (ಗು., ನಾ.) ಕಾರಿಂತ್ ಪಟ್ಟಣದ(ವನು). (ಪ್ರಾಚೀ. ಪ್ರ.) ನೀಟುಗಾರ ; ಸೊಗಸುಗಾರ ; ಭೋಗ ಕಾಮಿ ; ವಿಷಯಾಸಕ್ತ ; ಕಾಮುಕ. (ಕಲೆ) ಕಾರಿಂತ್ ಅಲಂಕಾರ ವೈಖರಿಯ. (ವಾ. ಶಾ.) C. order ಕಾರಿಂತ್ ಕಂಬ.

Córium ಕೋರಿಯಂ (ನಾ.) (ಶ. ವಿ.) ಮೇಲ್ದರ್ಮದ ಅಡಿಯಲ್ಲಿಯ ಅಚ್ಚ ಚರ್ಮ. (ಕೀಟ ಶಾಸ್ತ್ರ) ಕೆಲವು ಕೀಟಗಳ ರೆಕ್ಕೆಗಳಲ್ಲಿಯ ಕೊಂಬಿನಂಥ ಆಧಾರ ಪದಾರ್ಥ.

Cork ಕಾರ್ಕ್ (ನಾ., ಗು., ಕ್ರಿ. ಸಕ.) ಕಾರ್ಕ್ ಮರ(ದ ತೊಗಟೆ) ; (ಮೀನಿನ ಗಾಳ, ಮೊ. ಕ್ಕೆ ತೇಲುವುದಕ್ಕಾಗಿ ಕಟ್ಟುವ) ಬೆಂಡು (Like a c. ತೇಲುವ ಸ್ವಭಾವವುಳ್ಳ ; ವ್ಯಥೆ, ಮೊ. ಗಳಿಂದ ಬೇಗ ಚೇತರಿಸಿಕೊಳ್ಳುವ). ಸೀಸೆಯ ಬಾಯಿ ಮುಚ್ಚುವ ಕಾರ್ಕ್‌ಬೆಂಡು, ಬಿರಡೆ ; ಕಾರ್ಕು. (ಸ. ವಿ.) (ಮೇಲ್ಜಾತಿಯ ಸಸ್ಯಗಳಲ್ಲ ಸಸ್ಯರಕ್ಷಣೆಗಾಗಿರುವ) ತೊಗಟೆಯ ಒಳಭಾಗ. (ಗು.) ಕಾರ್ಕಿನಿಂದ ಮಾಡಿದ ; ಬೆಂಡಿನ [C. jacket (ನೀರಿನಲ್ಲ ತೇಲಿಸುವ) ಬೆಂಡಿನ ಜುಬ್ಬ]. (ಕ್ರಿ.) ಬಿರಡೆ ಹಾಕು ; (ಸೀಸೆ, ಮೊ. ಗಳ) ಬಾಯಿ ಮುಚ್ಚು ; ಕಂಡಿ ಮುಚ್ಚು ; ಬೆಂಡು ಹಾಕು. ಸುಟ್ಟ ಕಾರ್ಕಿನಿಂದ ಕಪ್ಪು ಹಚ್ಚು. **Córk-screw** (ನಾ., ಕ್ರಿ.) ಸೀಸೆಯಲ್ಲಿಯ ಕಾರ್ಕನ್ನು ತೆಗೆಯುವ ಕಬ್ಬಿಣದ ತಿರುಪು : ಬಿರಡೆ ತಿರುಪು. (C.-s. curl ಬಿರಡೆತಿರುಪಿನಂಥ ಸುರುಳಿ). (ಕ್ರಿ.) ಮರಸುತ್ತಿನಂತೆ ಸುತ್ತು. **Córkwood** (ನಾ.) ಬೆಂಡು. **Córkage** ಕಾರ್ಕೆಜ್ (ನಾ.) ಸೀಸೆಗಳ ಬಿರಡೆ ಹಾಕುವುದು, ತೆಗೆಯುವುದು. (ತನ್ನಿಂದ ಕೊಳ್ಳದ) ಮದ್ಯದ ಸೀಸೆಯ ಬಿರಡೆ ತೆಗೆದು ಮದ್ಯವನ್ನು ಹಂಚುವುದಕ್ಕಾಗಿ ತಿಂಡಿಯಂಗಡಿಯವನು ವಸೂಲುಮಾಡುವ ಕೂಲಿ : ಬಿರಡೆಕೂಲಿ. **Corked** ಕಾರ್ಕ್ಡ್ (ಗು.) ಬಿರಡೆ ಹಾಕಿದ ; (ಸುಟ್ಟ ಕಾರ್ಕಿನ) ಕಪ್ಪು ಬಳಿದ. (ಮದ್ಯದ ವಿಷಯದಲ್ಲಿ) ಕಾರ್ಕ್ ರುಚಿಯ. **Córker** (ನಾ.) (ಅಸಂ.) ಮುಂದಿನ ಚರ್ಚೆಗೆ ಅವಕಾಶವಿಲ್ಲದಂತೆ ಮಾಡುವ ಪರಿಸ್ಥಿತಿ, ಸಂದರ್ಭ(ಮು., ಸಕ್ಕಾ ಸುಳ್ಳು) : ಬಿರಡೆ. **Córky** (ಗು.) ಕಾರ್ಕಿನಂಥ ; ಬೆಂಡಿನಂಥ ; ಬೆಂಡಾದ. (ಬಳ. ಮಾ.) ಹಗುರವಾದ ; ಚಟುವಟಿಕೆಯ ; ಲವಲವಿಕೆಯ. ಚಂಚಲ ; ಚಪಲ ; ಹಾರಾಡುವ.

Corm ಕಾರ್ಮ್ (ನಾ.) ನೆಲದೊಳಗಿನ ಗೆಡ್ಡೆಯಂಥ ದಂಟು ; ಗಟ್ಟಿ ಗೆಡ್ಡೆ.

Córmorant ಕಾರ್ಮೊರಂಟ್ (ನಾ.) (ಮೂರಡಿ ಉದ್ದದ) ಒಂದು ಜಾತಿಯ ಹೊಟ್ಟೆಬಾಕ ಸಮುದ್ರಪಕ್ಷಿ. ಹೊಟ್ಟೆಬಾಕ ; ದುರಾಶೆಯವನು ; ಆಶಾ ಪಾತಕ.

Corn[1] ಕಾರ್ನ್ (ನಾ.) ಕಾಳು (ಮು., ಧಾನ್ಯ ; ಮೆಣಸು, ಮೊ. ಗಳದು ಸಹ) ; ಧಾನ್ಯ ; ದವಸ ; ಬೆಳೆಯುತ್ತಿರುವ ಧಾನ್ಯಸಸ್ಯಗಳು : ಪಯಿರು. (ಅಮೆ. ಸಂ.) ಮುಸುಕಿನ ಜೋಳ (= Indian c.). C.-chandler ಚಿಲ್ಲರೆ ಧಾನ್ಯವ್ಯಾಪಾರಿ. C.-cob ಮುಸುಕಿನ ಜೋಳದ (ತೆನೆಯ) ದಿಂಡು. C.-exchange ಧಾನ್ಯವ್ಯಾಪಾರದ ಕಟ್ಟೆ. C.-factor ಧಾನ್ಯ ವ್ಯಾಪಾರಿ. C.-flour ಮುಸುಕಿನ ಜೋಳದ ಹಿಟ್ಟು ; ಅಕ್ಕಿ, ಮೊ. ಧಾನ್ಯದ ಹಿಟ್ಟು. C.-flower (ಧಾನ್ಯಸಸ್ಯಗಳ ಮಧ್ಯೆ ಬೆಳೆಯುವ) ಅಂದವಾದ ಹೂಬಿಡುವ (ಅನೇಕ ತೆರದ) ಸಸ್ಯಜಾತಿ. C.-laws ಧಾನ್ಯವ್ಯಾಪಾರವನ್ನು ನಿಯಂತ್ರಿಸುವ ಕಾನೂನು (ಮು., ಆಮದನ್ನು ನಿರ್ಬಂಧಕ್ಕೊಳಪಡಿಸುವ ಇಂಗ್ಲಿಷ್ ಕಾನೂನು ; ಇದು ಈಚೆಗೆ ರದ್ದಾಗಿದೆ) : ಧಾನ್ಯದ ಕಾನೂನು. C.-rent ಧಾನ್ಯರೂಪವಾಗಿ ಕೊಡುವ ಕಂದಾಯ : ಧಾನ್ಯಕಂದಾಯ. C.-stalk (ಬಳ. ಮಾ.) ಎತ್ತರವಾದ ಮನುಷ್ಯ (ಆಸ್ಟ್ರೇಲಿಯದಲ್ಲಿ ಹುಟ್ಟಿದ ಯೂರೋಪಿಯನ್ನರಿಗೆ ಅಡ್ಡಹೆಸರಾಗಿ ಪ್ರಯೋಗ). **Córny**[1] (ಗು.) ಕಾಳಿನ ; ಧಾನ್ಯದ ; ಧಾನ್ಯ ತುಂಬಿರುವ.

Corn[2] ಕಾರ್ನ್ (ಕ್ರಿ. ಸಕ.) ಉಪ್ಪು ಉದುರಿಸು ; ಉಪ್ಪಿಡು (ಮು., ಭೂ. ಕೃ. ನಲ್ಲ). **Córning** (ನಾ.) ರವೆರವೆಯಾಗಿ ಮಾಡುವುದು. ಉಪ್ಪು ಹಾಕಿಡುವುದು.

Corn[3] ಕಾರ್ನ್ (ನಾ.) ಕೊಂಬಿನ ಪದಾರ್ಥದಂತೆ ಗಡುಸಾಗಿರುವ ದೇಹಭಾಗ (ಮು., ಪಾದದಲ್ಲಿ) : ಜಡ್ಡು ; ಆಣಿ ; ಒತ್ತುಗಂಟು (Tread on my corns ನನ್ನ ಮನಸ್ಸು ನೋಯಿಸು). C.-plaster ಜಡ್ಡಿಗೆ ಹಚ್ಚುವ ಲೇಪ. **Córneous** (ಗು.) ಕೊಂಬಿನಂಥ ; ಕೊಂಬಿನಂಥ ಪದಾರ್ಥದ ; ಗಡುಸಾದ. **Córnify** (ಕ್ರಿ.) (ಶ. ವಿ., ಪ್ರಾ. ವಿ.) ಕೊಂಬಿನಂತೆ ಅಥವಾ ಕೊಂಬಿನ ಪದಾರ್ಥದಂತೆ ಮಾರ್ಪಡು, ಮಾರ್ಪಡಿಸು. **Cornificátion** (ನಾ.) ; **Cornúted** (ಗು.) ಕೊಂಬುಗಳುಳ್ಳ ; ಕೊಂಬುಗಳಂಥ ಚಾಚುಗಳುಳ್ಳ. **Córny**[2] (ಗು.) ಜಡ್ಡುಗಟ್ಟಿನ ; ಜಡ್ಡುಗಟ್ಟುಳ್ಳ.

Córnea ಕಾರ್ನಿಯ (ನಾ.) ಕಣ್ಣುಗುಡ್ಡೆಯ (ಮುಂಭಾಗದಲ್ಲಿರುವ, ಕೊಂಬಿನ ಪದಾರ್ಥದ ರಚನೆಯ) ಪಾರದರ್ಶಕ ಪಟಲ.

Cornélian, Car- ಕಾರ್ನೀಲಿಯನ್ (ನಾ.) ಮಬ್ಬುಕೆಂಪಿನ ಅಥವಾ ಕೆಂಪು ಛಾಯೆಯ ಬಿಳುಪಿನ ಒಂದು ಪ್ರಶಸ್ತಶಿಲೆ.

Córneous. **Corn**[3] ನೋಡಿ.

Córner ಕಾರ್ನರ್ (ನಾ.) ಮೂಲೆ ; ತಿರುವು ; ಕೋನ. [Turn the c. ಮೂಲೆ ತಿರುಗಿ (ಮತ್ತೊಂದು ಬೀದಿಗೆ) ಹೋಗು ; (ರೂಪ.) ವ್ಯಾಧಿ, ಮೊ. ಗಳಲ್ಲ ವಿಷಮಾವಸ್ಥೆಯನ್ನು ದಾಟು. Cut off a c. ಅಡ್ಡದಾರಿಯಲ್ಲಿ ಹೋಗಿ ಮೂಲೆತಿರುಗುವುದನ್ನು ತಪ್ಪಿಸಿಕೊ. Drive into a c. ತಪ್ಪಿಸಿಕೊಳ್ಳಲಾಗದಂತೆ ಮೂಲೆಗೆ ಅಟ್ಟು ; (ರೂಪ.) ಇಕ್ಕಟ್ಟಿಗೆ, ಸಂಕಟಕ್ಕೆ, ಸಿಕ್ಕಿಸು]. ಮೂಲೆತಾಕು ; ಸಂದುಗೊಂದು ; ಗೂಢ ಅಥವಾ ಬಹು ದೂರ ಪ್ರದೇಶ (Hole-and-c. transactions ಮುಚ್ಚುಮರೆಯ, ಗುಟ್ಟಿನ, ವ್ಯಾಪಾರಗಳು). ದಿಕ್ಕು (All the corners of the earth ಭೂಮಿಯ ಎಲ್ಲಾ ದಿಕ್ಕುಗಳು). (ವ್ಯಾಪಾರ) ಪೇಟೆಯಲ್ಲಿರುವ ಯಾವುದಾದರೂ ಒಂದು ಸರಕನ್ನು ಒಬ್ಬನು ಪೂರ್ತಿಯಾಗಿ ಕೊಂಡು ಬಿಟ್ಟು ಆ ಸರಕಿನ ವ್ಯಾಪಾರಿಗಳು ಅದನ್ನು ತನ್ನಿಂದಲೇ ಹೇಳಿದ ಬೆಲೆ ಕೊಟ್ಟು ಕೊಂಡುಕೊಳ್ಳುವಂತೆ ನಿರ್ಬಂಧಪಡಿಸುವುದು ; (ಶಿಥಿಲವಾಗಿ) ಯಾವುದಾದರೂ ಸರಕಿನ ಒಟ್ಟುಸ್ವಾಮ್ಯ ಪಡೆದು ಅದರ ಬೆಲೆಯನ್ನು ಏರಿಸುವ ಕೂಟ ; ಬೆಲೆಯೇರಿಕೆಯ ಕೂಟ. (ಕಾಲ್ಚೆಂಡಾಟದಲ್ಲಿ, ಹಾಕಿ ಆಟದಲ್ಲಿ) ಮೂಲೆಯ ಒದೆತ, ಹೊಡೆತ. C.-boy, -man ಬೀದಿ ಅಲೆಯುವವನು. C.-stone ಮೂಲೆಗಲ್ಲು ; (ರೂಪ.) ಅತ್ಯಾವಶ್ಯಕ ಭಾಗ ; ಮೂಲಾಧಾರ.

Córner (ಕ್ರಿ.) ಮೂಲೆಗಳಿಡು ; ಮೂಲೆ ಮಾಡು ; ಮೂಲೆಯಾಗು ; ಮೂಲೆಗೂಡು ; ಮೂಲೆಯಲ್ಲಿಡು ; ಮೂಲೆಗೆ ಅಟ್ಟು. (ಮು., ರೂಪ.) ಸಂಕಟಕ್ಕೆ ಸಿಕ್ಕಿಸು. (ವ್ಯಾಪಾರದ ಸರಕಿನ ಒಟ್ಟು ಸ್ವಾಮ್ಯ ಪಡೆದು ಅದರ ವ್ಯಾಪಾರಿಗಳನ್ನು) ಹಿಡಿತಕ್ಕೆ ಸಿಕ್ಕಿಸಿಕೊ ; (ವ್ಯಾಪಾರದ ಸರಕಿನ) ಬೆಲೆಯೇರಿಕೆಯ ಕೂಟವನ್ನೇರ್ಪಡಿಸು.

Córnet[1] ಕಾರ್ನೆಟ್ (ನಾ.) ಕಹಳೆಯಂಥ ಒಂದು ವಾದ್ಯವಿಶೇಷ ; ಈ ಕಹಳೆಯನ್ನು ಊದುವವನು (= **Córnetist**). ಗಂದಿಗೆಯ ಸಾಮಾನು, ಮೊ. ಗಳಿಗಾಗಿ ಮಾಡುವ ಕಾಗದದ ಸುರುಳಿ.

Córnet[2] ಕಾರ್ನೆಟ್ (ನಾ.) (ಕ್ರೈಸ್ತ) ಅನಾಥ ಸಂಸ್ಥೆಯ ಸದಸ್ಯರ ಬಿಳಿಯ ತಲೆಯುಡುಪು. (ಹಿಂದೆ) ಅಶ್ವಸೈನ್ಯದಲ್ಲಿಯ ಒಬ್ಬ ಅಧಿಕಾರಿ. **Córnetcy** (ನಾ.)

Córnice ಕಾರ್ನಿಸ್ (ನಾ.) (ವಾ. ಶಾ.) ಗೋಡೆಯ ಮೇಲ್ಭಾಗದಲ್ಲಿ ಮುಂಚಾಚಿಕೊಂಡಿರುವ ಅಲಂಕಾರಭಾಗ : ಕಪೋತ ; 'ಕಾರ್ನೀಸು.' (ಬೆಟ್ಟ ಹತ್ತುವಲ್ಲಿ) ಒಂದು ಕೋಡುಗಲ್ಲಿನ ಮೇಲಂಚಿನಲ್ಲಿ ಮುಂಚಾಚಿಕೊಂಡಿರುವ ಹಿಮಗಡ್ಡೆಯ ರಾಶಿ. **Córniced** (ಗು.)

Corníferous ಕಾರ್ನಿಫೆರಸ್ (ಗು.) (ಭೂ. ವಿ.) (ಕೊಂಬಿನ ಪದಾರ್ಥದ ರಚನೆಯಂತೆ ಕಾಣುವ) ಒಂದು ಜಾತಿಯ ಮರಳುಗಲ್ಲನ್ನುಳ್ಳ.

Córnish ಕಾರ್ನಿಷ್ (ಗು., ನಾ.) ಕಾರ್ನ್‌ವಾಲ್ ಪ್ರಾಂತದ ; ಕಾರ್ನಿಷ್ ಭಾಷೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Córnstone ಕಾರ್‌ನ್‌ಸ್ಟೋನ್ (ನಾ.) ಕೆಂಪು ಮತ್ತು ಹಸುರು ಬಣ್ಣಗಳ ಕರೆಗಳುಳ್ಳ ಒಂದು ತೆರದ ಸುಣ್ಣಕಲ್ಲು.

Cornucópia ಕಾರ್ನ್ಯುಕೋಪಿಯ (ನಾ. ; ಬ. ವ. -as) (ಹೂವು, ಹಣ್ಣು, ಧಾನ್ಯ, ಮೊ. ಗಳು ತುಂಬಿ ಸುರಿಯುತ್ತಿರುವಂತೆ ಕಲೆಯಲ್ಲಿ ಚಿತ್ರಿಸಿರುವ) ಸಮೃದ್ಧಿಯ ಚಿಹ್ನೆಯಾದ ಆಡಿನ ಕೊಂಬು ; ಈ ಆಕಾರದ ಅಲಂಕಾರ ಪಾತ್ರೆ. ಅಕ್ಷಯ ಪಾತ್ರೆ; ಸಮೃದ್ಧಿ. **Cornucópian** (ಗು.)

Cornúted. **Corn**[3] ನೋಡಿ.

Corólla ಕೊರಾಲ (ನಾ.) (ಸ. ವಿ.) ಹೂವಿನಲ್ಲಿಯ ಬಿಡಿಯೆಸಳುಗಳ ಅಥವಾ ಒಟ್ಟುಗೂಡಿದ ಒಂದೇ ಎಸಳಿನ, ಒಳ ಆವರಣ : ಎಸಳು ಸುತ್ತು ; ದಳವಲಯ. **Corolláceous** ಕಾರಲೇಷಸ್ (ಗು.)

Coróllary ಕೊರಾಲರಿ, **Córollary** ಕಾರಲರಿ (ನಾ.) ಸಿದ್ಧಾಂತವಾದ ಒಂದು ಪ್ರತಿಜ್ಞೆಯೊಡನೆ ಸೇರಿಸಿದ, ಆ ಪ್ರತಿಜ್ಞೆಯಿಂದ ಸುಲಭವಾಗಿ ಅನುಮಾನಿಸಬಹುದಾದ, ಮತ್ತೊಂದು ಪ್ರತಿಜ್ಞೆ : ಉಪ ಸಿದ್ಧಾಂತ ; ಅನು ಸಿದ್ಧಾಂತ. ಪರಿಣಾಮ.

Coróna ಕೊರೋನ (ನಾ. ; ಬ. ವ. -ae -ನೀ) (ಸೂರ್ಯನ ಅಥವಾ ಚಂದ್ರನ ಸುತ್ತಲೂ ಕಾಣುವ ಕಿರಿದಾದ) ಪ್ರಭಾ ವಲಯ. (ಪೂರ್ಣ ಸೂರ್ಯಗ್ರಹಣ ಕಾಲದಲ್ಲಿ ಚಂದ್ರನ ಸುತ್ತಲೂ ಕಾಣುವ ಬಿಳಿಯ ಬೆಳಕಿನ) ಪರಿವೇಷ (ಇದು ಸೂರ್ಯನಿಗೆ ಸೇರಿದುದೆಂದು ಈಚೆಗೆ ತಿಳಿದುಬಂದಿದೆ). (ಕ್ರೈಸ್ತ ದೇವಾಲಯದ ಮೇಲ್ಛಾವಣಿಯಿಂದ ತೂಗಕಟ್ಟಿರುವ) ವೃತ್ತಾಕಾರದ ಗೊಂಚಲುದೀಪ. (ಅಂ. ರ. ಶಾ.) ದೇಹದಲ್ಲಿಯ ಮುಕುಟಾಕಾರದ ನಾನಾ ಭಾಗಗಳು. (ಸ. ವಿ.) ಬೀಜದ ಮೇಲ್ಭಾಗದಲ್ಲಿಯ, ಅಥವಾ ಪುಷ್ಪದಳ ವೃತ್ತದೊಳಗಿನ, ಉಪಾಂಗ : ಬೀಜ ಮುಕುಟ ; ಪುಷ್ಪ ಮುಕುಟ. **Córonal** ಕಾರೊನಲ್ (ನಾ.) (ಮು., ಚಿನ್ನದ ಅಥವಾ ರತ್ನಕೆತ್ತಿದ) ಕಿರೀಟ, ಮುಕುಟ ; ಮುಡಿ ; ಬಾಸಿಗ ; ಸರ ; ಮಾಲೆ. **Corónal** ಕೊರೋನಲ್, **Córonal** ಕಾರೊನಲ್ (ಗು.) ಮುಕುಟದ ; ಕಿರೀಟದ. (ಅಂ. ರ. ಶಾ.) C. suture ತಲೆಬುರುಡೆಯಲ್ಲಿ ಹಣೆಯೆಲುಬನ್ನು ಪಕ್ಕೆಲುಬುಗಳಿಗೆ ಕೂಡಿಸುವ ಹಲ್ಲುಸೇರುವೆ. **Córonate(d)** ಕಾರೊನೇ — (ಗು.) (ಸ. ವಿ., ಪ್ರಾ. ವಿ.) ಮುಕುಟವುಳ್ಳ. **Coronátion** (ನಾ.) (ರಾಜನ, ರಾಣಿಯ) ಕಿರೀಟ ಧಾರಣೋತ್ಸವ ; ಪಟ್ಟಾಭಿಷೇಕ. C.-oath ಪಟ್ಟಾಭಿಷೇಕ ಸಮಯದಲ್ಲಿ ರಾಜನು ಮಾಡಬೇಕಾದ ಪ್ರತಿಜ್ಞೆ : ಪಟ್ಟಾಭಿಷೇಕ ಪ್ರತಿಜ್ಞೆ. **Córonet** (ನಾ.) (ಘನತೆಯಲ್ಲಿ ರಾಜನಿಗಿಂತ ಕಡಮೆಯೆಂದು ಸೂಚಿಸುವ) ಸಣ್ಣ ಕಿರೀಟ. (ಮು., ಹೆಂಗಸಿನ) ಚೂಡಾಭರಣ. ಮಾಲೆ ; ಸರ. (ಅಂ. ರ. ಶಾ.) ಕುದುರೆಯ ಗೊರಸು ಚರ್ಮಕ್ಕೆ ಸೇರುವ ಭಾಗ. **Córoneted** (ಗು.) (ಮು., ಶ್ರೀಮಂತ ವರ್ಗದ) ಸಣ್ಣ ಕಿರೀಟ ಧರಿಸಿರುವ. **Corónule** ಕೊರೋನ್ಯುಲ್ (ನಾ.) (ಸ. ವಿ.) ಬೀಜ, ಮೊ. ಗಳ ಮೇಲಿನ ಕಿರೀಟದಂಥ ಭಾಗ : ಮುಕುಟ. (ಪ್ರಾ. ವಿ.) 'ಕುರುಳುಪಾದಿ' ಜಾತಿಯ ಒಂದು ಸಮುದ್ರಪ್ರಾಣಿ.

Coronátion. **Corona** ನೋಡಿ.

Córoner ಕಾರೊನರ್ (ನಾ.) ದುರ್ಮರಣದ ವಿಷಯವಾಗಿ ವಿಚಾರಣೆ ನಡಸುವ ಅಧಿಕಾರಿ : ದುರ್ಮರಣ ವಿಚಾರಕ. (C.'s inquest ದುರ್ಮರಣ ವಿಚಾರಕನು ನಡಸುವ ವಿಚಾರಣೆ). (ಹಿಂದೆ) ರಾಜನ ಸ್ವಂತ ಆಸ್ತಿಯ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕಾಗಿ ನಿಯಮಿತನಾಗಿದ್ದ ಅಧಿಕಾರಿ. **Córonership** (ನಾ.)

Córonet. **Corona** ನೋಡಿ.

Córonoid ಕಾರೊನಾಯ್ಡ್, **Corónoid** ಕೊರೋನೊಯಿಡ್ (ಗು.) (ಅಂ. ರ. ಶಾ.) (ಎಲುಬುಗಳ ಚಾಚುಗಳು) ಕಾಗೆಯ ಕೊಕ್ಕಿನಂತೆ ಬಗ್ಗಿರುವ.

Corónule. **Corona** ನೋಡಿ.

Córporal[1] ಕಾರ್ಪೊರಲ್ (ಗು.) ಮನುಷ್ಯ ದೇಹದ ; ದೈಹಿಕ ; ಕಾಯಿಕ ; ಶಾರೀರಕ (C. punishment ದೇಹ ದಂಡನೆ). ಸ್ವಂತ. (ಪ್ರಾಚೀ. ಪ್ರ.) C. oath ಯಾವುದಾದರೂ ಪವಿತ್ರ ವಸ್ತುವನ್ನು ಮುಟ್ಟಿ ಮಾಡಿದ ಪ್ರಮಾಣ. **Córporally** (ಕ್ರಿ. ವಿ.) ; **Corporálity** — ರ್‍ಯಾಲಿಟಿ (ನಾ.) ದೈಹಿಕತ್ವ ; ಮೂರ್ತ ಸ್ವರೂಪ ; ದೇಹ ; ಭೌತ ಶರೀರ. (ಬ. ವ. ದಲ್ಲಿ) ದೈಹಿಕ ವಿಷಯಗಳು. **Corpóreal** ಕಾರ್ಪೋರಿಯಲ್ (ಗು.) ದೈಹಿಕ ; ಭೌತ ; ಸ್ಥೂಲ ; ಜಡ. (ನ್ಯಾ. ಶಾ.) ವಾಸ್ತವಿಕ. **Corporeálity** (ನಾ.) ; **Corpóreally** (ಕ್ರಿ. ವಿ.) ; **Corporéity** ಕಾರ್ಪೋರೀಯಿಟಿ (ನಾ.) ದೇಹಿತ್ವ ; ಭೌತ ಗುಣ, ಸ್ಥಿತಿ ; ದೇಹದ್ರವ್ಯ. **Córporate** — ರೆಟ್ (ಗು.) ಸಂಸ್ಥೆಯಾಗಿ ಏರ್ಪಟ್ಟ ; ಸಂಸ್ಥೆಯ (C. body, Body c. ವ್ಯಕ್ತಿಪ್ರಾಯವಾದ ಸಂಸ್ಥೆ ; ಸಂಸ್ಥಾ ರೂಪದ ವ್ಯಕ್ತಿ. C. town ಪೌರ ಸಂಸ್ಥೆಯುಳ್ಳ ಪಟ್ಟಣ). ಅನೇಕ ಮಂದಿ ಸೇರಿ ಒಂದು ಸಂಸ್ಥೆಯಾದ. **Córporately** (ಕ್ರಿ. ವಿ.) ; **Corporátion** (ನಾ.) (ಮು., ಒಂದು ವ್ಯಕ್ತಿಯಂತೆ ಕಾರ್ಯ ನಡಸಲು ಅಧಿಕಾರ ಪಡೆದ) ಸಂಸ್ಥೆ (Municipal c. ಪೌರ ಸಂಸ್ಥೆ). (ಬಳ. ಮಾ.) ಹೊಟ್ಟೆ ; ಒಡಲು ; ಬೊಜ್ಜು. **Córporative** — ರಟಿವ್ (ಗು.) ಸಂಸ್ಥೆಯ. **Córporator** — ರೇಟರ್ (ನಾ.) ಒಂದು ಸಂಸ್ಥೆಯ ಸದಸ್ಯ.

Córporal[2] ಕಾರ್ಪೊರಲ್, **Córporas** — ರ್‍ಯಸ್ (ನಾ.) (ಕ್ರೈಸ್ತರ) ಪ್ರಭುಭೋಜನ ಸಂಸ್ಕಾರದಲ್ಲಿ ಪೂತ ವಸ್ತುಗಳನ್ನಿಡುವ ವಸ್ತ್ರ.

Córporal[3] ಕಾರ್ಪೊರಲ್ (ನಾ.) 'ಸಾರ್ಜಂಟ್' ಎಂಬ ಅಧಿಕಾರಿಯ ಕೆಳಗಿನ ದರ್ಜೆಯ, ಸನ್ನದು ಪಡೆಯದ, ಅಧಿಕಾರಿ : 'ಕಾರ್ಪೊರಲ್.' (The little C. ಒಂದನೆಯ ನೆಪೋಲಿಯನ್). Ship's c. ಹಡಗಿನ ಕೆಳ ದರ್ಜೆಯ ಪೊಲೀಸು ಅಧಿಕಾರಿ.

Corporátion, etc. **Corporal**[1] ನೋಡಿ.

Córposant ಕಾರ್ಪೊಸ್ಯಾಂಟ್ (ನಾ.) ಬಿರುಗಾಳಿ ಮಳೆಯಲ್ಲಿ ಹಡಗಿನ ಮೇಲ್ಗಡೆ ಕೆಲವು ವೇಳೆ ಕಾಣುವ ಬೆಳಕಿನ ಚೆಂಡು.

Corps ಕೋರ್ (ನಾ. ; ಬ. ವ. Corps ಕೋರ್ಸ್) ಸೈನ್ಯಭಾಗ ; ದಳ. ವಿಶೇಷ ಕೆಲಸಕ್ಕಾಗಿ ನಿಯುಕ್ತವಾದ ದಳ. **C. d'armeé** (F) — ಡರ್ಮೇ (ನಾ.) ಸೈನ್ಯ ದಳ. **C. Diplomatíque** (F) — ಡೀಪ್ಲೊಮಾಟೀಕ್ (ನಾ.) ಒಂದು ಆಸ್ಥಾನದಲ್ಲಿ ಅಥವಾ ರಾಜಧಾನಿಯಲ್ಲಿ ಇರುವ ಪರ ರಾಷ್ಟ್ರಗಳ ಎಲ್ಲಾ ರಾಯಭಾರಿಗಳೂ ನಿಯೋಗಿಗಳೂ : ರಾಯಭಾರಿ ದಳ ; ನಿಯೋಗಿ ದಳ. **C.-de-ballét** (F) ಕಾರ್ ಡ ಬಾಲೇ (ನಾ.) ನೃತ್ಯ ದಳ.

Corpse ಕಾರ್ಪ್ಸ್, ಕಾರ್ಸ್ (ನಾ.) ಹೆಣ ; ಶವ.

Córpulent ಕಾರ್ಪ್ಯುಲೆಂಟ್ (ಗು.) ಬೊಜ್ಜುಳ್ಳ ; ಸ್ಥೂಲ ಕಾಯನಾದ ; ಕೊಬ್ಬಿನ. **Córpulence, -cy** (ನಾ.) ಬೊಜ್ಜು.

Córpus ಕಾರ್ಪಸ್ (ನಾ.) (ಮನುಷ್ಯನ ಅಥವಾ ಮೃಗದ) ದೇಹ ; ಮೈ (ಈಗ, ಹಾಸ್ಯವಾಗಿ). (ಶ. ವಿ.) ಪ್ರಾಣಿಯ ದೇಹದಲ್ಲಿ ರಚನಾ ವೈಶಿಷ್ಟ್ಯವುಳ್ಳ ಅಥವಾ ಕ್ರಿಯಾ ವೈಶಿಷ್ಟ್ಯವುಳ್ಳ ಅಂಗಭಾಗ [ಉದಾ., C. callosum (— ಕಲೋಸಮ್) ಮಿದುಳಿನ ಎರಡು ಅರ್ಧವೃತ್ತಗಳನ್ನೂ ಕೂಡಿಸುವ ಅಡ್ಡಸೇರುವೆ]. ಗ್ರಂಥ ಸಂಗ್ರಹ; ಲೇಖನ ಸಂಗ್ರಹ; ಸಂಹಿತೆ [C. juris ನ್ಯಾಯ ಸಂಹಿತೆ. C. delicti (— ಡಿಲಿಕ್ಟೈ) ಅಪರಾಧ ಸ್ಥಿರಪಡಬೇಕಾದರೆ ರುಜುವಾತಾಗಬೇಕಾದ ವಾಸ್ತವಾಂಶಗಳು : ಅಪರಾಧಾಂಶ ; ಅಪರಾಧ ವಸ್ತು. C. Christi (— ಕ್ರಿಸ್ಟಿ, — ಕ್ರಿಸ್ಟೈ) ಕ್ರಿಸ್ತದೇಹದ ಹಬ್ಬ]. (ಯಾವುದಾದರೂ ವಸ್ತುವಿನ) ಮೂಲ ದ್ರವ್ಯ, ಭೌತ ಪದಾರ್ಥ. ಅಸಲು (ಬಡ್ಡಿ ಅಥವಾ ಆದಾಯವಲ್ಲ) ; ಮೂಲ ನಿಧಿ.

Córpuscle ಕಾರ್ಪಸ್‌ಲ್, **Corpúscule** ಕಾರ್ಪಸ್ಕ್ಯುಲ್ (ನಾ.) ಒಂದು ಜೀವಿಯ ವಿವಿಕ್ತ ಭಾಗವಾಗಿರುವ ಸೂಕ್ಷ್ಮಾಂಗ ; ಕಣ. (ಮು., ಬ. ವ. ದಲ್ಲಿ) (ಕಶೇರುಕ ಪ್ರಾಣಿಗಳ ರಕ್ತದ ಬಹುಭಾಗವಾದ) ರಕ್ತಕಣಗಳು. ವಿದ್ಯುತ್ಕಣ. **Corpúscular** — ಸ್ಕ್ಯುಲರ್ (ಗು.) ಕಣದ. C. (emission) theory of light ಬೆಳಕೆಂಬುದು ಬೆಳಗುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪದಾರ್ಥದಿಂದ ಹೊರಟ ಕಣಗಳಿಂದುಂಟಾದ ಪರಿಣಾಮವೆಂಬ ವಾದ : ರಶ್ಮಿಕಣ ವಾದ.

Corrál ಕೊರ್‍ರ್ಯಾಲ್ (ನಾ., ಕ್ರಿ. ಸಕ.) (ಅಮೆ. ಸಂ.) (ಕುದುರೆ, ದನ, ಮೊ. ಗಳ) ಲಾಯ, ಕೊಟ್ಟಿಗೆ, ದೊಡ್ಡಿ. (ಪಾಳೆಯದಲ್ಲಿ ಬಂಡಿಗಳಿಂದ ಮಾಡಿದ) ರಕ್ಷಾವರಣ. (ಕಾಡು ಮೃಗಗಳನ್ನು ಹಿಡಿಯುವುದಕ್ಕಾಗಿ ಮಾಡಿದ) ಆವರಣ. (ಕ್ರಿ.) (ಬಂಡಿಗಳನ್ನು) ರಕ್ಷಾವರಣವಾಗಿ ಒಡ್ಡು. (ರಕ್ಷಾವರಣದಲ್ಲಿ) ಸೆರೆ ಹಾಕು. ಕೊಟ್ಟಿಗೆಯಲ್ಲಿ ಕೂಡು.

Corréct ಕರೆಕ್ಟ್ (ಕ್ರಿ. ಸಕ.) ಸರಿ ಮಾಡು ; ನೆಟ್ಟಗೆ ಮಾಡು ; ತಿದ್ದು ; ನೇರ್ಪಡಿಸು. (ಕರಡಚ್ಚು, ಮೊ. ಗಳಲ್ಲಿ) ತಪ್ಪುತಿದ್ದು. (ಒಬ್ಬನ) ತಪ್ಪು ತೋರಿಸು ; ಎಚ್ಚರಿಕೆ ಕೊಡು ; (ಒಬ್ಬನ ದೋಷವನ್ನು) ಸರಿ ಪಡಿಸು ; (ಒಬ್ಬನನ್ನು ತಪ್ಪಿತಕ್ಕಾಗಿ) ದಂಡಿಸು, ಶಿಕ್ಷಿಸು ; (ಕೆಡುಕುಮಾಡುವ ಗುಣವನ್ನು) ಪ್ರತೀಕರಿಸು ; ದೋಷ ಹೊಡೆ. (ವಾಯುಭಾರ ಮಾಪಕ, ಮೊ. ಗಳ ಸೂಚಿತಾಂಕವನ್ನು) ಪ್ರಮಾಣಕ್ಕೆ ಸರಿತರು ; ಪರಿಷ್ಕರಿಸು. **Corréction** (ನಾ.) ತಿದ್ದುವುದು ; ತಿದ್ದುಪಾಟು (I speak under c. ನಾನು ತಪ್ಪಾಗಿ ಹೇಳಿರಬಹುದು, ತಪ್ಪಿದ್ದರೆ ತಿದ್ದಿಕೊಳ್ಳುತ್ತೇನೆ). ದಂಡನೆ ; ಶಿಕ್ಷೆ (House of c. ಶಿಕ್ಷಾ ಗೃಹ). **Corréctional** (ಗು.) ತಿದ್ದುಪಡಿಯ. **Corréctitude** (ನಾ.) (ಮು., ನಡತೆಯ) ನೇರ್ಪು, ಋಜುತ್ವ, ಆರ್ಜವ. **Corréctive** (ಗು., ನಾ.) ಕೆಡುಕನ್ನು ಪ್ರತೀಕರಿಸುವ ಅಥವಾ ತಿದ್ದುವ (ವಸ್ತು) ; ದೋಷಹೊಡೆಯುವ (ವಸ್ತು). **Corréctively** (ಕ್ರಿ. ವಿ.) ; **Corréctor** (ನಾ.) ತಿದ್ದುವವನು ; ನೇರ್ಪಡಿಸುವವನು ; ತಪ್ಪುಹುಡುಕುವವನು ; ದೋಷ ವಿಮರ್ಶಕ ; ಪರಿಷ್ಕಾರಕ (C. of the press ಕರಡಚ್ಚು ತಿದ್ದುವವನು). ಶಿಕ್ಷೆಗಾರ.

Corréct (ಗು.) ಸರಿಯಾದ ; ಶುದ್ಧ ; ವಿಶುದ್ಧ ; ಯಥಾರ್ಥ ; ತಪ್ಪಿಲ್ಲದ (ನಡತೆ, ಚರ್ಯೆ, ಮೊ. ಗಳಲ್ಲಿ) ; ನ್ಯೂನಾತಿರೇಕವಿಲ್ಲದ ; ನೇರ ವಾದ ; ತಕ್ಕ. The c. card (ಅಸಂ.) ಆಟದ ನಥಿ, ಮೊ. ಗಳಲ್ಲಿ ಕಾರ್ಯಕ್ರಮದ ಪಟ್ಟಿ. ಸಭ್ಯ ವರ್ತನೆ ; ಮರ್ಯಾದೆ ; ಔಚಿತ್ಯ. **Corréctly** (ಕ್ರಿ. ವಿ.) ; **Corréctness** (ನಾ.)

Córrelate ಕಾರಿಲೇಟ್ (ನಾ., ಕ್ರಿ.), — ಲೇಟ್ (ಗು.) ಪರಸ್ಪರ ಸಂಬಂಧವುಳ್ಳ ಎರಡು ವಸ್ತುಗಳಲ್ಲೊಂದು ; ಅನ್ಯೋನ್ಯಾಂಗ. (ಕ್ರಿ.) ಪರಸ್ಪರ ಸಂಬಂಧವಿರು ; — ಸಂಬಂಧಿಸು. **Correlátion** (ನಾ.) ಪರಸ್ಪರ ಸಂಬಂಧ ; — ಸಂಬಂಧ ಕರಣ. **Corrélative** ಕರೆಲೆಟಿವ್ (ಗು., ನಾ.) ಪರಸ್ಪರ ಸಂಬಂಧವುಳ್ಳ ; ಸದೃಶವಾದ. (ವ್ಯಾ., ಪದಗಳ ವಿಷಯದಲ್ಲಿ) ಒಂದಕ್ಕೊಂದು ಸಂಬಂಧಪಟ್ಟು ಒಟ್ಟಿಗೆ ಪ್ರಯೋಗ ವಾಗುವ ; ಜೋಡಿ (ಉದಾ., *either* and *or*). (ನಾ.) ಸಂಬದ್ಧ ವಸ್ತು, ಪದ. **Corrélatively** (ಕ್ರಿ. ವಿ.) ; **Correlatívity** (ನಾ.)

Correspónd ಕಾರಿಸ್ಪಾಂಡ್ (ಕ್ರಿ. ಅಕ.) ಹೊಂದಿಕೆಯಾಗು ; — ಯಾಗಿರು ; ಸರಿಬೀಳು ; ತಾಳೆಹೋಗು ; ಹೋಲು ; ಒಪ್ಪು ; ಅನುರೂಪವಾಗಿರು ; ಅನುಗುಣವಾಗಿರು ; ಸರಿಹೊಂದು ; ಸಂವಾದಿ ಯಾಗಿರು ; ಜವಾಬಾಗಿರು. ಪತ್ರವ್ಯವಹಾರ ನಡಸು [Corresponding member (of learned society, etc.) ಒಂದು ಪಂಡಿತ ಮಂಡಲಯ ಸ್ಥಳದಲ್ಲಿಲ್ಲದೆ, ಪತ್ರಮುಖೇನ ಆ ಮಂಡಲಿಯೊಡನೆ ಸಂಬಂಧ ವಿಟ್ಟುಕೊಂಡು, ಮಂಡಲಿಯ ಒಳಆಡಳಿತಗಳಲ್ಲಿ ಮಾತ್ರ ಭಾಗ ವಹಿಸಲು ಅಧಿಕಾರವಿಲ್ಲದ ಗೌರವ ಸದಸ್ಯ : ಬಹಿಸ್ಸದಸ್ಯ ; ಪತ್ರವ್ಯವಹಾರ ಸದಸ್ಯ]. **Correspóndingly** (ಕ್ರಿ. ವಿ.) ; **Correspóndence** (ನಾ.) ಒಪ್ಪಿಕೆ ; ಹೊಂದಿಕೆ ; ಹೋಲಿಕೆ ; ತಾಳೆ ; ಅನುರೂಪತೆ. ಪತ್ರ ವ್ಯವಹಾರ. ಪತ್ರ ; ಕಾಗದ ; ಕಾಗದ ಪತ್ರ. C. school ಪತ್ರವ್ಯವ ಹಾರದ ಮೂಲಕ ಶಿಕ್ಷಣಕೊಡುವ ಪಾಠಶಾಲೆ : ಪತ್ರವ್ಯವಹಾರ ಶಿಕ್ಷಣಶಾಲೆ. **Correspóndent** (ನಾ., ಗು.) (ವ್ಯಕ್ತಿಗಳೊಡನೆ, ವರ್ತಮಾನ ಪತ್ರಿಕೆ ಗಳೊಡನೆ) ಪತ್ರವ್ಯವಹಾರ ನಡಸುವವನು ; ಪತ್ರವ್ಯವಹಾರಿ ; ಬಾತ್ಮೀ ದಾರ (ಮು., ಆ ಕಾರ್ಯಕ್ಕೇ ನಿಯಮಿತನಾದವನು : Mysore c., War-c.). (ಮು., ಮತ್ತೊಂದು ದೇಶದಲ್ಲಿಯ) ವ್ಯಕ್ತಿಯೊಡನೆ, ಸಂಘ ದೊಡನೆ, ಕ್ರಮವಾದ ವ್ಯಾಪಾರಸಂಬಂಧವುಳ್ಳ ಮನುಷ್ಯ, ಸಂಘ. (ಗು.) ಸರಿಹೊಂದುವ ; ತಾಳೆಬೀಳುವ ; ಒಪ್ಪುವ ; ಅನುರೂಪವಾದ ; ಅನುಗುಣವಾದ. **Correspóndently** (ಕ್ರಿ. ವಿ.)

Córridor ಕಾರಿಡಾರ್ (ನಾ.) ದೊಡ್ಡ ಕಟ್ಟಡದಲ್ಲಿಯ ಹಲವು ಕೋಣೆ ಗಳಿಗೆ ಪ್ರವೇಶಕೊಡುವ ಮುಖ್ಯ ಮಾರ್ಗ ; ಕಟ್ಟಡದ ಬೇರೆಬೇರೆ ಭಾಗಗಳಿಗೆ ಪ್ರವೇಶಕೊಡುವ ಹೊರ ದಾರಿ ; ನಡವೆ ; ಮೊಗಸಾಲೆ. (ರಾಜ್ಯಶಾಸ್ತ್ರ) ಪರ ರಾಷ್ಟ್ರದಲ್ಲಿ ಹಾಯ್ದು ಸಮುದ್ರ, ಮೊ. ಕ್ಕೆ ಹಾದಿ ಗೊಡುವ ಒಂದು ರಾಷ್ಟ್ರದ ಭೂಪಟ್ಟಿ. C. train ಒಂದು ಕೊನೆ ಯಿಂದ ಮತ್ತೊಂದು ಕೊನೆಗೆ ಹಾಯ್ದುಹೋಗುವಂತೆ ಕಿರುದಾರಿಯಿರುವ ರೈಲುಬಂಡಿ ಸಾಲು.

Corrigéndum ಕಾರಿಜೆಂಡಮ್ (ನಾ. ; ಬ. ವ. -da) ತಪ್ಪು ತಿದ್ದ ಬೇಕಾದ ಭಾಗ (ಮು., ಅಚ್ಚಾದ ಪುಸ್ತಕಗಳಲ್ಲಿ) ; ತಿದ್ದೋಲೆ ; ಶುದ್ಧಿ ಪತ್ರ.

Córrigible ಕಾರಿಜಿಬ್‍ಲ್ (ಗು.) ತಿದ್ದಲು ಸಾಧ್ಯವಾದ ; ತಿದ್ದಬಹು ದಾದ ; ತಿದ್ದಬರುವ ; ಶಿಕ್ಷಣೀಯ ; ಶಿಕ್ಷಣ ಸಾಧ್ಯ.

Corríval ಕರ್‍ರೈವಲ್ (ನಾ.) ಪೋಟಿಗಾರರಲ್ಲಿ ಒಬ್ಬನು ; ಸಹಸ್ಪರ್ಧಿ.

Corróborate ಕರಾಬೊರೇಟ್ (ಕ್ರಿ. ಸಕ.) (ನ್ಯಾ. ಶಾ., ಮೊ. ಗಳಲ್ಲಿ) (ನಿಯಮಾನುಸಾರವಾಗಿ) ದೃಢೀಕರಿಸು, ಸ್ಥಿರಪಡಿಸು ; ರುಜುವಾತು, ಮೊ. ಗಳಿಂದ ಸ್ಥಿರಪಡಿಸು, ಸಮರ್ಥಿಸು ; ತಾರ್ಕಣೆ ಕೊಡು. **Corróborative** — ರಟಿವ್ (ಗು) = **Corróboratory** (ಗು.) ; **Corróborator** — ರೇಟರ್ (ನಾ.) ; **Corroborátion** (ನಾ.) ರುಜುವಾತಿನಿಂದ ದೃಢೀಕರಿಸುವುದು ; ದೃಢೀಕರಣ ; ಸ್ಥಿರೀಕರಣ ; ಸಮರ್ಥನ. **Corróborant** — ರಂಟ್ (ಗು., ನಾ.) ಬಲವರ್ಧಕ (ಔಷಧ). ದೃಢೀಕರಿಸುವ, ಸ್ಥಿರೀಕರಿಸುವ (ಅಂಶ, ವಿಷಯ)

Corróde ಕರೋಡ್ (ಕ್ರಿ.) (ಕಿಲುಬು, ರಾಸಾಯನಿಕ ದ್ರವ್ಯ, ವ್ಯಾಧಿ, ಮೊ.) ಸವೆಯಿಸು, ಕ್ರಮೇಣ ತಿಂದುಹಾಕು, ಜೀರ್ಣಮಾಡು, ತುಕ್ಕು ಹಿಡಿ, ಕಿಲುಬು ಹಿಡಿ (ರೂಪ. ಸಹ). ತಿಂದುಹೋಗು, ಸವೆ, ಜೀರ್ಣವಾಗು. **Corrósion** — ಷನ್ (ನಾ.) ; **Corrósive** — ಸಿವ್ (ಗು., ನಾ.) ತುಕ್ಕುಹಿಡಿಸುವ ; ತಿಂದುಹಾಕುವ ; ಜೀರ್ಣಮಾಡುವ ; ನಾಶಕಾರಿ (ಪದಾರ್ಥ) (ರೂಪ. ಸಹ). C. sublimate ಪಾದರಸದ ಬೈಕ್ಲೋ ರೈಡ್ (ತೀಕ್ಷ್ಣ ವಿಷಪದಾರ್ಥ). **Corrósively** (ಕ್ರಿ. ವಿ.) ; **Corrósiveness** (ನಾ.)

Córrugate ಕಾರ್‍ರ್ಯು(ರು)ಗೇಟ್ (ಕ್ರಿ.) ಸುಕ್ಕುಗಳಾಗಿ, ಪದರಗಳಾಗಿ, ನಿರಿಗೆಗಳಾಗಿ, ಮಡಿಕೆಗಳಾಗಿ, ಸಂಕೋಚನ ಹೊಂದು, ಮಾಡು. ಸುಕ್ಕಾಗು ; ಸುಕ್ಕಿಸು ; ಸುಕ್ಕುಗಟ್ಟು ; ನಿರಿಗೆಗಟ್ಟು ; ಉಬ್ಬುತಗ್ಗು ಮಾಡು (Corrugated iron ಉಬ್ಬುತಗ್ಗಿನ ಕಬ್ಬಿಣದ ತಗಡು). **Corrugátion** (ನಾ.) (ಕ್ರಿಯಾರ್ಥಗಳಲ್ಲಿ) ; ಸುಕ್ಕು ; ನಿರಿಗೆ ; ಮಡಿಕೆ ; ಉಬ್ಬುತಗ್ಗು. **Córrugator** (ನಾ.) ಹುಬ್ಬು ಗಂಟುಹಾಕಿಕೊಳ್ಳುವಲ್ಲಿ ಸಂಕೋಚನವಾಗುವ ಸ್ನಾಯು : ಭ್ರೂಸಂಕೋಚಕ (ಸ್ನಾಯು)

Corrúpt ಕರಪ್ಟ್ (ಗು., ಕ್ರಿ.) ಕೊಳೆತ ; ಕೊಳೆಯುತ್ತಿರುವ ; ಕೆಟ್ಟು ಹೋದ ; ಹಾಳಾದ ; ಭ್ರಷ್ಟನಾದ ; ಕೆಡುಕನಾದ ; ಲಂಚಕೋರನಾದ ; ನಡತೆಗೆಟ್ಟ ; ನಡತೆಗೇಡಿಯಾದ. (ಭಾಷೆ, ಗ್ರಂಥಪಾಠ, ಮೊ. ಗಳಲ್ಲಿ) ತಪ್ಪುಗಳಿಂದ, ತಿದ್ದುಗಳಿಂದ, ಮಲಿನವಾದ ; ಅಸಾಧು ; ಅಶುದ್ಧ [C. practices ಲಂಚಕೋರ ನಡೆವಳಿಗಳು (ಮು., ಚುನಾವಣೆಗಳಲ್ಲಿ)]. (ಕ್ರಿ.) ಕೊಳೆ ; ಕೊಳಿಸು ; ಮಲಿನಗೊಳಿಸು ; ಕಳಂಕಿಸು ; ಕೆಡು ; ಕೆಡಿಸು ; ಹೊಲೆಗೆಡಿಸು (ರೂಪ. ಸಹ) ; ಲಂಚ ತಿನ್ನಿಸು, ತಿನ್ನು. (ಭಾಷೆಯನ್ನು) ಅಶುದ್ಧ ಮಾಡು ; ಹೊಲಬುಗೆಡಿಸು. **Corrúptible** (ಗು.) ಕೆಡಿಸಬಹುದಾದ ; ಕೆಡುವ ; ಕೆಟ್ಟುಹೋಗಬಹುದಾದ ; ಕೊಳೆ ಯುವ ; ನೀತಿಭ್ರಂಶವಾಗುವ ; ನಡತೆಗೆಡುವ. **Corruptibílity** (ನಾ.) ; **Corrúptibly** (ಕ್ರಿ. ವಿ.) ; **Corrúption** (ನಾ.) (ಕ್ರಿಯಾರ್ಥ ಗಳಲ್ಲಿ) ; ಕೊಳೆತ ; ~~ನೀತಿಭ್ರಷ್ಟತೆ~~ ; ನಡತೆಗೇಡು ; ಲಂಚ, ಮೊ. ದುರ್ವ್ಯಾಪಾರಗಳು ; ಭ್ರಷ್ಟಾಚರಣೆ. ಭಾಷಾ ಮಾಲಿನ್ಯ ; ಭಾಷೆಯ

नीतिभ्रष्टता

भ्रष्टाचार

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಶುದ್ಧತೆ ; ಅಪಭ್ರಂಶ. (ನ್ಯಾ. ಶಾ.) C. of blood ಸರ್ವನಾಶಕ್ಕೆ ಗುರಿಪಡಿಸಲ್ಪಟ್ಟವನಮೇಲೆ ಆಗುವ ಪರಿಣಾಮ (ಅವನಿಗೂ ಅವನ ಸಂತತಿಗೂ ಪಿತರಾರ್ಜಿತದಲ್ಲ ಯಾವ ಹಕ್ಕುಬಾಧ್ಯತೆಯೂ ಇಲ್ಲದೆಹೋಗುವುದು) : ಕುಲ ಭ್ರಷ್ಟತೆ. **Corrúptive** (ಗು.) ; **Corrúptly** (ಕ್ರಿ. ವಿ.) ; **Corrúptness** (ನಾ.)

Córsage ಕಾರ್ಸೆಜ್, **Corságe** (F) ಕೊರ್ಸಾಫ಼್ (ನಾ.) ಹೆಂಗಸಿನ ಎದೆಗವಚ (ಕುಪ್ಪಸ, ಮೊ.)

Córsair ಕಾರ್ಸೇರ್ (ನಾ.) [ಹಗೆಯ ವ್ಯಾಪಾರದ ಹಡಗುಗಳನ್ನು, ತಮ್ಮ ಸರ್ಕಾರದ ಅನುಮತಿಯಿಂದ, ಹಿಡಿದು ಕೊಳ್ಳೆಹೊಡೆಯುವ (ಮು., ಬಾರ್ಬರಿ ದೇಶದ)] ದರೋಡೆ ಹಡಗು. ಕಡಲುಗಳ್ಳ.

Corse ಕಾರ್ಸ್ (ನಾ.) (ಪ್ರಾಚೀ. ಪ್ರ., ಕಾವ್ಯ) = Corpse.

Córset ಕಾರ್ಸೆಟ್ (ನಾ.) [ಕಟ್ಟುಗಳಿಂದಲೂ ಒಂದು ತೆರದ ಕೊಂಬು ಪದಾರ್ಥದಿಂದಲೂ ಗುತ್ತನಾಗಿರುವಂತೆ ಬಿಗಿದಿರುವ (ಹೆಂಗಸಿನ)] ಒಳ ಕುಪ್ಪಸ. **Córseted** (ಗು.)

Córslet, Córselet ಕಾರ್ಸ್ಲೆಟ್ (ನಾ.) ದೇಹಕ್ಕೆ ಕಾಪಾಗಿ ಹಾಕಿ ಕೊಳ್ಳುವ ಕವಚ : ಎದೆಗಾಪು ; (ಗುತ್ತನಾಗಿರುವ) ಎದೆಗವಚ. (ಪ್ರಾ. ವಿ.) ಕೀಟದ ಎದೆ.

Cortége (F) ಕಾರ್ಟೇಫ಼್ (ನಾ.) ಪರಿವಾರ. ಮೆರೆವಣಿಗೆ (Funeral c. ಹೆಣದ ಮೆರೆವಣಿಗೆ)

Córtes ಕಾರ್ಟೆಸ್ (ನಾ. ; ಬ. ವ.) ಸ್ಪೆಯ್ನ್ ಅಥವಾ ಪೋರ್ಚುಗಲ್ಲಿನ ಶಾಸನಸಭೆಯ ಎರಡು ಶಾಖೆಗಳು.

Córtex ಕಾರ್ಟೆಕ್ಸ್ (ನಾ. ; ಬ. ವ. -tices -ಟಿಸೀಸ್) ತೊಗಟೆ ; ಒಂದು ಅಂಗದ ಹೊರಮೈ, ಹೊದಿಕೆ. ಮಿದುಳಿನ ಬೂದುವರ್ಣ ಪದಾರ್ಥದ ಹೊರ ಆವರಣ ; ಮೂತ್ರಪಿಂಡದ ಹೊದಿಕೆ. **Córtical** (ಗು.) (ಸ. ವಿ.) ತೊಗಟೆಯ. (ಪ್ರಾ. ವಿ.) ದೇಹದ ಅಥವಾ ಅಂಗದ ಹೊದಿಕೆಯಾಗಿರುವ. **Córticate(d)** (ಗು.) ತೊಗಟೆಯುಳ್ಳ ; ತೊಗಟೆ ಯಂಥ.

Corúndum ಕೊರಂಡಮ್ (ನಾ.) ಪಚ್ಚೆ, ಕೆಂಪು — ಇವುಗಳ ಜಾತಿಗೆ ಸೇರಿದ, ಹಳುಕುಗಟ್ಟಿದ, ಖನಿಜ (ನೀಲ, ಬೂದು, ಕಂದು, ಕಪ್ಪು, ಬಣ್ಣವುಳ್ಳದ್ದು) : ಕುರುಂದ ; ಕುರಂಗದ ಕಲ್ಲು.

Córuscate ಕಾರಸ್ಕೇಟ್ (ಕ್ರಿ. ಅಕ.) ಮಿನುಗು ; ಹೊಳೆ ; ಸ್ಫುರಿಸು ; ಮಿಂಚು (ರೂಪ. ಸಹ : ಬುದ್ಧಿ, ಕುಶಲತೆ, ಮೊ.). **Corúscant** ಕೊರಸ್ಕಂಟ್ (ಗು.) ; **Coruscátion** ಕಾರ — (ನಾ.) ಸಾ., ಫಳಫಳನೆ ಹೊಳೆಯುತ್ತಿರುವುದು ; ಮಿಂಚು ; ಹೊಳಪು ; ಸ್ಫುರಣ (ರೂಪ. ಸಹ)

Corveé ಕಾರ್ವೇ (ನಾ.) ದಣಿಗೆ, ಸರ್ಕಾರಕ್ಕೆ, ಪ್ರಜೆ ಮಾಡಬೇಕಾದ ಬಿಟ್ಟಿಕೆಲಸ : ಬಿಟ್ಟಿ ಬೇಗಾರಿ.

Córvine ಕಾರ್ವೈನ್ (ಗು.) ಕಾಗೆಯ (ಜಾತಿಯ)

Córybant ಕಾರಿಬ್ಯಾಂಟ್ (ನಾ. ; ಬ. ವ. -ts, -tes -ಟೀಸ್) ಫ್ರಿಜಿಯನ್ನರ ಸಿಬಿಲ್ ಎಂಬ ದೇವತೆಯನ್ನು ಆವೇಶದ ಕುಣಿತದಿಂದ ಆರಾಧಿಸುವ ಅರ್ಚಕ. **Corybántic** (ಗು.) ಈ ಅರ್ಚಕನ ಆವೇಶದ ಕುಣಿತದಂಥ. **Corybántian** —ಬ್ಯಾನ್‌ಷನ್ (ಗು.) ; **Corybántine** —ಟಿನ್, —ಟೈನ್ (ಗು.)

Córydon ಕಾರಿಡನ್ (ನಾ.) (ಗೊಲ್ಲಗೀತೆಗಳಲ್ಲ ಬರುವ) ಅಚ್ಚ ಹಳ್ಳಿಯವನ ಹೆಸರು ; ಹಳ್ಳಿಗ.

Córymb ಕಾರಿಂಬ್ (ನಾ.) (ಸ. ವಿ.) ಒಂದು ರೀತಿಯ ಹೂವುಬಿಡುವಿಕೆ ; ಪುಷ್ಪವಿನ್ಯಾಸದ ಒಂದು ಬಗೆ ; ತಳದ ಪುಷ್ಪಕಾಂಡಗಳು ಮೇಲಿನವಕ್ಕಿಂತಲೂ ಉದ್ದವಾಗಿರುವ ಪುಷ್ಪಗುಚ್ಛ. **Corymbóse** ಕೊರಿಂಬೋಸ್ (ಗು.) (ಪುಷ್ಪ)ಗುಚ್ಛಗಳಾಗಿ ಬಿಡುವ ; ಪುಷ್ಪಗುಚ್ಛದಂಥ.

Coryphaéus ಕಾರಿಫೀಯಸ್ (ನಾ.) (ಹಿಂದೆ ಗ್ರೀಕ್ ನಾಟಕದಲ್ಲಿ) ಮೇಳನಾಯಕ (ಈಗ, ರೂಪ. ಸಹ). **Corypheé** ಕೋರಿಫೇ (ನಾ.) ಮೇಳದ ಮುಖ್ಯ ನರ್ತಕ(ಕಿ)

Corýza ಕೊರೈಜ಼ (ನಾ.) ಮೂಗಿನಲ್ಲಿ ಸೋರುವುದು : ನೆಗಡಿ.

Cos ಕಾಸ್ (ನಾ.) Cosine ಪದದ ಸಂಕ್ಷಿಪ್ತ ರೂಪ.

Cose ಕೋಸ್ (ಕ್ರಿ. ಅಕ.) ಬೆಚ್ಚಗೆ ಮಾಡಿಕೊ ; ಸೌಕರ್ಯ ಮಾಡಿಕೊ ; ಅನುಕೂಲ ಮಾಡಿಕೊ ; ಸುಖ ಮಾಡಿಕೊ. **Cós(e)y, Cózy** (ಗು., ನಾ.) (ಸ್ಥಳದ ಅಥವಾ ಮನುಷ್ಯನ ವಿಷಯವಾಗಿ) ಬೆಚ್ಚಗಿರುವ ; ಅನುಕೂಲವಾದ ; ಸುಖವಾದ ; ಹಿತಕರವಾದ ; ಆಶ್ರಯ ಕೊಡುವ ; ಮರೆ ಕೊಡುವ ; ಇಬ್ಬರು ಕುಳಿತುಕೊಳ್ಳಲಾಗುವ, ಮೇಲ್ಭಾವಣಿಯುಳ್ಳ, ಮೂಲೆಯ ಸ್ಥಳ, ಬೆಚ್ಚನೆಯ ಸ್ಥಳ. Tea-c. ಟೀಪಾತ್ರೆಯನ್ನು ಬೆಚ್ಚಗಿಟ್ಟರುವುದಕ್ಕಾಗಿ ಉಪಯೋಗಿಸುವ ಕವುದಿ : ಕಾವು ಕವುದಿ.

Cosécant ಕೋಸೀಕಂಟ್ (ನಾ. ; ಸಂಕ್ಷಿಪ್ತ : cosec) (ತ್ರಿಕೋನಮಿತಿ) ಕೋಟಿಛೇದಕ.

Coseísmal ಕೋಸೈಸ್ಮಲ್ (ಗು., ನಾ.) ಭೂಕಂಪ ತರಂಗದಿಂದ ಏಕ ಕಾಲದಲ್ಲ ಕಂಪನವುಂಟಾದ (ಪ್ರದೇಶ ಬಿಂದುಗಳನ್ನು ಸೇರಿಸುವ ರೇಖೆ) : ಸಮಕಂಪನದ (ರೇಖೆ)

Cósher ಕಾಷರ್ (ಕ್ರಿ.) ಸುಖಭೋಜನ ಮಾಡಿಸು ; ಹೆಚ್ಚು ತಿಂಡಿ ತಿನ್ನಿಸು ; ಅತಿಯಾಗಿ ಲಾಲಿಸು, ಮುದ್ದಿಸು. ಸುಖದೂಟ ಮಾಡು. ಬಂಧುಗಳು, ಆಶ್ರಿತರು, ಮೊ. ರ ವೆಚ್ಚದಲ್ಲಿ ಜೀವನ ನೂಡು : ಆಶ್ರಯ ಜೀವನ ಮಾಡು. ಸಲಿಗೆಯಾಗಿ ಮಾತುಕತೆಯಾಡು.

Co-sígnatory ಕೋಸಿಗ್ನಟರಿ (ಗು., ನಾ.) ಇತರರೊಂದಿಗೆ ತಾನೂ ರುಜುಮಾಡಿರುವ(ವನು) : ಜೊತೆ ರುಜುಗಾರ.

Cósine ಕೋಸೈನ್ (ನಾ. ; ಸಂಕ್ಷಿಪ್ತ : cos) (ತ್ರಿಕೋನಮಿತಿ) ಕೋಟಿಜ್ಯಾ.

Cóslettize ಕಾಸ್ಲೆಟೈಸ್ (ಕ್ರಿ. ಸಕ.) (ಉಕ್ಕಿಗೆ, ಮು., ಸೈಕಲ್ಲಿನ ಚೌಕಟ್ಟುಗಳಿಗೆ) ತುಕ್ಕುಹಿಡಿಯದಂತೆ ಒಂದು ಬಗೆಯ ಸಂಸ್ಕಾರ ಕೊಡು : ಕಾಸ್ಲೆಟ್ ಸಂಸ್ಕಾರ ಕೊಡು. (ಇದನ್ನು ಕಂಡುಹಿಡಿದ 'ಕಾಸ್ಲೆಟ್' ಎಂಬಾತನ ಹೆಸರಿನಿಂದ)

Cosmétic ಕಾಸ್ಮೆಟಿಕ್ (ಗು., ನಾ.) ಕೂದಲು, ಚರ್ಮ ಅಥವಾ ಮುಖಚ್ಛಾಯೆ — ಇವನ್ನು ಅಂದಗೊಳಿಸುವ (ವಸ್ತು) : ಅಂಗ ರಾಗ ; ಕಾಂತಿ ವರ್ಧಕ.

Cósmic. **Cosmos** ನೋಡಿ.

Cósmo- ಕಾಸ್ಮೊ— (ಸಮಾಸದಲ್ಲ ಪೂರ್ವಪದ) ವಿಶ್ವ —.

Cosmógeny ಕಾಸ್ಮಾಜೆನಿ (ನಾ.) ವಿಶ್ವಸೃಷ್ಟಿ ; ವಿಶ್ವ ವಿಕಾಸ ; ಜಗದುತ್ಪತ್ತಿ.

Cosmógony ಕಾಸ್ಮಾಗೊನಿ (ನಾ.) ವಿಶ್ವಸೃಷ್ಟಿ (ವಾದ). **Cosmogónic(al)** ಕಾಸ್ಮೊಗಾನಿಕ್(ಕಲ್) (ಗು.) ; **Cosmógonist** ಕಾಸ್ಮಾಗೊನಿಸ್ಟ್ (ನಾ.) ವಿಶ್ವಸೃಷ್ಟಿ ವಾದಿ. ಸೃಷ್ಟಿಕ್ರಮ ಜಿಜ್ಞಾಸು, ಜ್ಞಾನಿ.

Cosmógraphy ಕಾಸ್ಮಾಗ್ರಫಿ (ನಾ.) ವಿಶ್ವದ ಅಥವಾ ಭೂಮಿಯ ಸಾಮಾನ್ಯ ರೂಪದ ವಿವರಣೆ, ರೇಖಾ ರಚನೆ : ವಿಶ್ವ ವಿವರಣೆ. **Cosmógrapher** (ನಾ.) ; **Cosmográphic(al)** ಕಾಸ್ಮೊಗ್ರಾಫಿಕ್(ಕಲ್) (ಗು.)

Cosmólogy ಕಾಸ್ಮಾಲೊಜಿ (ನಾ.) ವಿಶ್ವವು ಸುವ್ಯವಸ್ಥಿತವೆಂದೂ ಆ ವ್ಯವಸ್ಥೆಯು ಸಾಮಾನ್ಯ ನಿಯಮಗಳಿಗೆ ಒಳಪಟ್ಟಿದ್ದೆಂದೂ ಹೇಳುವ ವಾದ : ವಿಶ್ವ ಶಾಸ್ತ್ರ. **Cosmólogist** (ನಾ.) ವಿಶ್ವ ಶಾಸ್ತ್ರಜ್ಞ. **Cosmológic(al)** ಕಾಸ್ಮೊಲಾಜಿಕ್(ಕಲ್) (ಗು.)

Cosmoplástic ಕಾಸ್ಮೊಪ್ಲ್ಯಾಸ್ಟಿಕ್ (ಗು.) (ದೇವರಲ್ಲದೆ) ಪ್ರಕೃತಿ ಶಕ್ತಿಯೇ ವಿಶ್ವದ ಮೂಲತತ್ತ್ವವೆನ್ನುವ ; ವಿಶ್ವ ರಚಕ.

Cosmopólitan ಕಾಸ್ಮೊಪಾಲಿಟನ್ (ಗು., ನಾ.) ಪ್ರಪಂಚಕ್ಕೆಲ್ಲ ಸೇರಿದ ; ಸಕಲ ಪ್ರಪಂಚದ ; ರಾಷ್ಟ್ರೀಯ ಪ್ರತಿಬಂಧಕವಿಲ್ಲದ(ವನು) ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಕುಚಿತ ರಾಷ್ಟ್ರಭಾವನೆಯಿಲ್ಲದ(ವನು) ; ವಿಶ್ವಪ್ರಜೆ ; ಸರ್ವ ಸಮ ದರ್ಶಿ; ಉದಾರ ಭಾವನೆಯುಳ್ಳ(ವನು). **Cosmopólitanism** (ನಾ.); **Cosmopólitanize** (ಕ್ರಿ.) ; **Cosmópolite** ಕಾಸ್ಮಾಪೊಲೈಟ್ (ನಾ., ಗು.) ಪ್ರಪಂಚದ ಪ್ರಜೆ. ಸಂಕುಚಿತ ರಾಷ್ಟ್ರಭಾವನೆಯಿಲ್ಲದ(ವನು). **Cosmópolitism** — ಟಿಸ್ಮ್ (ನಾ.) ; **Cosmo-polítical** ಕಾಸ್ಮೊಪೊಲಿಟಿಕಲ್ (ಗು.)

Cosmoráma ಕಾಸ್ಮೊರಾಮ (ನಾ.) ಪ್ರಪಂಚದ ನಾನಾ ಪ್ರದೇಶಗಳ ಚಿತ್ರವನ್ನು ಸಹಜವಾಗಿ ಕಾಣುವಂತೆ ತೋರಿಸುವ ಇಣಿಕು ನೋಟ. **Cosmorámic** — ರ್ಯಾಮಿಕ್ (ಗು.)

Cósmos ಕಾಸ್ಮಾಸ್ (ನಾ.) ಸುವ್ಯವಸ್ಥಿತ ವಿಶ್ವ. (ಭಾವನೆ, ಮೊ. ಗಳ) ಸುವ್ಯವಸ್ಥಿತ ರಚನೆ; ಸುವ್ಯವಸ್ಥೆ; ಕ್ರಮ; ಸಮಗ್ರ ಅನುಭವ. ಒಂದು ಬಗೆಯ ಹೂವಿನ ಗಿಡ. **Cósmic** (ಗು.) ವಿಶ್ವದ. C. philosophy = Cosmism. **Cósmical** (ಗು.); **Cósmically** (ಕ್ರಿ. ವಿ.); **Cósmism** — ಸ್ಮ್ (ನಾ.) ವಿಶ್ವವು ಸ್ವಚಲಿತ ಪೂರ್ಣ ವೆಂಬ ವಾದ. **Cósmist** — ಮಿಸ್ಟ್ (ನಾ.)

Cóssack ಕಾಸ್ಯಾಕ್ (ನಾ.) ರಷ್ಯಾ ರಾಜ್ಯಕ್ಕೆ ಅಧೀನವಾದ ಒಂದು ತುರ್ಕೀ ಜನಾಂಗ (ಮು., ರಷ್ಯಾ ಸೇನೆಯಲ್ಲಿ ಅಶ್ವಸೈನಿಕರಾಗಿರುವವರು). C. post ಕೆಲವರು ಸವಾರರನ್ನುಳ್ಳ ಸೈನಿಕ ಗಡಿಕಾವಲು : ರಾವುತರ ಗಡಿ ಕಾವಲು. **Cóssacks** ಷರಾಯಿ (ಅಂಗಡಿಯವರು ಕೊಟ್ಟ ಹೆಸರು)

Cósset ಕಾಸೆಟ್ (ನಾ., ಕ್ರಿ. ಸಕ.) ಮುದ್ದಿನ ಕುರಿಮರಿ. ಮುದ್ದಿಸು ; ಅತಿಯಾಗಿ ಲಾಲಿಸು.

Cost ಕಾಸ್ಟ್ (ನಾ.) ಬೆಲೆ ; ಕ್ರಯ ; ಖರೀದಿ ; ಮೂಲ್ಯ ; ವೆಚ್ಚ [Prime c. (= C. price) (ವ್ಯಾಪಾರಿ) ಕೊಂಡ ಬೆಲೆ ; ಮೊದಲ ಬೆಲೆ; ಅಸಲು ಬೆಲೆ]. (ಬ. ವ. ದಲ್ಲಿ) ಕೋರ್ಟುಖರ್ಚು ; ನ್ಯಾಯ ವ್ಯವಹಾರದ ವೆಚ್ಚಗಳು (ಮು., ವ್ಯಾಜ್ಯ ಗೆದ್ದ ಕಕ್ಷಿಗೆ ಕೊಡಿಸತಕ್ಕವು). (ಕಾಲ, ಕಾರ್ಯ, ಮೊ. ಗಳ) ವ್ಯಯ. At c. ಅಸಲು ಬೆಲೆಗೆ. At all costs ಏನೇ ಆಗಲಿ. At the c. of ನಷ್ಟವಾಗುವಂತೆ ; ಭಂಗ ಬರುವಂತೆ ; ಹಾನಿ ಮಾಡಿಕೊಂಡು. C. accountant, clerk [ವ್ಯರ್ಥವ್ಯಯವಾಗದಂತೆ ನೋಡಿಕೊಳ್ಳುವುದಕ್ಕಾಗಿ ಒಂದು ವ್ಯಾಪಾರ ಸಂಸ್ಥೆಯಲ್ಲಿಯ (ಮು., ಮೇಲು)ವೆಚ್ಚದ] ಪ್ರತಿ ಬಾಬನ್ನೂ ಲೆಕ್ಕವಿಡುವ ಲೆಕ್ಕಿಗ, ಗುಮಾಸ್ತ : ವೆಚ್ಚದ ಗುಮಾಸ್ತ. Count the c. (ಕೆಲಸ ಕೈಕೊಳ್ಳುವುದಕ್ಕೆ ಮೊದಲೇ) ಆಗುಹೋಗುಗಳನ್ನು ಗುಣಿಸಿನೋಡು. **Cóstless** (ಗು.) ; **Cóstly** (ಗು.) ಹೆಚ್ಚು ಬೆಲೆಯ. **Cóstliness** (ನಾ.)

Cost (ಕ್ರಿ. ಅಕ.) ವೆಚ್ಚ ತಗಲು ; ಬೆಲೆ ಬೀಳು ; ಮುಟ್ಟು ; ಖರ್ಚಾಗು (It c. him five rupees ಅದಕ್ಕೆ ಅವನಿಗೆ ಐದು ರೂಪಾಯಿ ಮುಟ್ಟಿತು). (ರೂಪ.) ನಷ್ಟವಾಗು ; ಊನ ಬರು [It c. him his appointment ಅದು ಅವನ ಉದ್ಯೋಗಕ್ಕೆ ಹಾನಿ ತಂದಿತು. It c. him dear(ly) ಅದರಿಂದ ಅವನಿಗೆ ಹೆಚ್ಚು ನಷ್ಟವಾಯಿತು]. (ವ್ಯಾಪಾರ) ಬೆಲೆ ಕಟ್ಟು ; ಬೆಲೆ ಹಾಕು ; ಬೆಲೆ ಗೊತ್ತುಮಾಡು.

Cóstal ಕಾಸ್ಟಲ್ (ಗು.) ಪಕ್ಕೆಲುಬಿನ. **Cóstate** ಕಾಸ್ಟೆಟ್ (ಗು.) ಪಕ್ಕೆಲುಬು(ಗಳು)ಳ್ಳ.

Cóstard ಕಾಸ್ಟರ್ಡ್ (ನಾ.) ದೊಡ್ಡಹಣ್ಣು ಬಿಡುವ ಜಾತಿಯ ಸೇಬು. (ಪ್ರಾಚೀ. ಪ್ರ.) ತಲೆಬುರುಡೆ (ಅಪಹಾಸ್ಯ ಪ್ರಯೋಗ)

Cóstate. **Costal** ನೋಡಿ.

Costeán, -eén ಕಾಸ್ಟೀನ್ (ಕ್ರಿ. ಅಕ.) (ಗಣಿಕೆಲಸ) ಖನಿಜದ ಪದರವು ಯಾವ ಮಾರ್ಗವಾಗಿ ಹೋಗಿರುವುದೆಂಬುದನ್ನು ಕಂಡುಹಿಡಿಯಲು ಬಂಡೆ ಸಿಕ್ಕುವ ವರೆಗೂ ಗುಂಡಿ ತೋಡು : ಗಣಿಗಂಡಿ ತೋಡು.

Cóster(monger) ಕಾಸ್ಟರ್(ಮಂಗರ್) (ನಾ.) ತಳ್ಳುಬಂಡಿಯಲ್ಲಿಟ್ಟು ಕೊಂಡು ಹಣ್ಣುಹಂಪಲನ್ನು ಮಾರುವ ಬೀದಿವ್ಯಾಪಾರಿ.

Cóstive ಕಾಸ್ಟಿವ್ (ಗು.) ಮಲ ಬದ್ಧತೆಯುಳ್ಳ ; ಮಲ ಬದ್ಧವಾದ ; ಹೊಟ್ಟೆಕಟ್ಟಿದ ; ಮಲ ಕಟ್ಟಿದ. (ರೂಪ.) ಜಿಪುಣತನದ ; ಹಿಡಿತದ. **Cóstiveness** (ನಾ.)

Cóstume ಕಾಸ್ಟ್ಯೂಮ್, **Costúme** ಕಾಸ್ಟ್ಯೂಮ್ (ನಾ., ಕ್ರಿ. ಸಕ.) (ಜನಾಂಗ, ಪಂಗಡ, ಕಾಲ — ಇವುಗಳ) ಉಡುಪಿನ ರೀತಿ, ಉಡಿಗೆ ತೊಡಿಗೆಗಳ ತೆರ. (ನೀಟು ರೀತಿಗಳನ್ನು ಪರಿಗಣಿಸಿದ) ಉಡುಪು, ಉಡಿಗೆ ತೊಡಿಗೆ ; ವೇಷ ; ಪೋಷಾಕು. (C. piece ಚರಿತ್ರಕಾಲದ ಉಡುಪನ್ನು ಧರಿಸಿ ಅಭಿನಯಿಸುವ ನಾಟಕ : ತಕ್ಕುಡುಪಿನ ನಾಟಕ). (ಕ್ರಿ.) ಉಡುಪು ಹವಣಿಸು. **Costúmier** ಕಾಸ್ಟ್ಯೂಮಿಯರ್, **-mer** — ಮರ್ (ನಾ.) ಉಡಿಗೆ ತೊಡಿಗೆಗಳನ್ನು ಮಾಡು(ರು)ವವನು : ಉಡುಪುಗಾರ.

Cósy. **Cose** ನೋಡಿ.

Cot[1] ಕಾಟ್ (ನಾ., ಕ್ರಿ. ಸಕ.) ಮರೆಗಾಗಿ ಕಟ್ಟಿದ ಸಣ್ಣ ಕಟ್ಟಡ ; ಗೂಡು ; ಜೋಪಡಿ ; ಕೊಟ್ಟಿಗೆ ; ದೊಡ್ಡಿ (Sheep-c. ಕುರಿಯ ದೊಡ್ಡಿ. Bell-c. ಗಂಟೆಯ ಗೂಡು). (ಕಾವ್ಯ) ಗುಡಿಸಿಲು ; ಕುಟೀರ. (ಕ್ರಿ.) (ಕುರಿಯನ್ನು) ದೊಡ್ಡಿಯಲ್ಲಿ ಕೂಡು.

Cot[2] ಕಾಟ್ (ನಾ.) (ಆಂ. ಇಂ.) (ಹಗುರವಾದ) ಮಂಚ. (ನಾವೆ) (ಮೇಲಧಿಕಾರಿಗಳು, ರೋಗಿಗಳು, ಮೊ. ರ) ತೂಗುಮಂಚ ; ಡೋಲಿ ; ತೊಟ್ಟಿಲು.

Cot[3] ಕಾಟ್ (ನಾ.) (ಪ್ರಾಂತಿಕ) ಜಡೆಗಟ್ಟಿರುವ, ಬೊಂತೆಗಟ್ಟಿರುವ, ಕುರಿಯ ತುಪ್ಪಟ ; ಜಡೆಗಟ್ಟು.

Cot[4] ಕಾಟ್ (ನಾ.) ಒರಟೊರಟಾಗಿ ತೋಡಿ ಮಾಡಿದ ದೋಣಿ : ತೋಡುದೋಣಿ.

Cot[5] ಕಾಟ್ (ನಾ.) Cotangent ಪದದ ಸಂಕ್ಷಿಪ್ತ ರೂಪ.

Cotángent ಕೋಟ್ಯಾಂಜೆಂಟ್ (ನಾ. ; ಸಂಕ್ಷಿಪ್ತ : cot) (ತ್ರಿಕೋಣಮಿತಿ) ಕೋಟಿಸ್ಪರ್ಶಕ.

Cote ಕೋಟ್ (ನಾ.) ಗುಡಿಸಿಲು ; ಜೋಪಡಿ ; ಕೊಟ್ಟಿಗೆ ; ಗೂಡು ; ಮರೆ. Dove-c. ಪಾರಿವಾಳದ ಗೂಡು. Sheep-c. ಕುರಿಯ ದೊಡ್ಡಿ.

Co-témporary, etc. = Contemporary, etc.

Co-ténant ಕೋ ಟೆನಂಟ್ (ನಾ.) ಕೂಡುಹಿಡುವಳಿದಾರ ; ಜೊತೆ ಬಾಡಿಗೆದಾರ. **Co-ténancy** (ನಾ.) ಕೂಡೊಕ್ಕಲು.

Cóterie ಕೋಟೆರಿ (ನಾ.) ಒಂದೇ ಅಭಿರುಚಿ ಅಥವಾ ಅಭಿಮಾನ ಉಳ್ಳ ಕೆಲವು ಮಂದಿಯ ಕೂಟ, ಗೋಷ್ಠಿ ; ಸಣ್ಣ ಕೂಟ; ಬೇರೆ ತಂಡ. ಸಮಾಜದ ಉತ್ತಮ ಪಂಕ್ತಿಯ ಗೋಷ್ಠಿ ; ಮೇಲಿನ ವರ್ಗ, ಶ್ರೇಣಿ.

Co-tídal ಕೋ ಟೈಡಲ್ (ಗು.) C. line ಸಮುದ್ರದ ಉಬ್ಬರವು ಏಕ ಕಾಲದಲ್ಲಿ ಸಂಭವಿಸುವ ಸ್ಥಳಗಳನ್ನು ಸೇರಿಸುವ ಭೂಪಟದಮೇಲಿನ ರೇಖೆ : ಸಮವೇಲಾ ರೇಖೆ.

Cotíllion ಕೊಟಿಲ್ಯನ್, **Cotíllon** (F) — (ಲ್)ಯೊನ್ (ನಾ.) ಅನೇಕ ತೆರದ ನರ್ತನಗಳು ; ಈ ನರ್ತನಗಳಿಗೆ ಹೊಂದಿಸಿದ ಸಂಗೀತ.

Cóttage ಕಾಟೆಜ್ (ನಾ.) ಗುಡಿಸಿಲು ; (ಸಣ್ಣ) ಹಳ್ಳಿಮನೆ. C. hospital (ವಾಸವಿರುವ ವೈದ್ಯಾಧಿಕಾರಿವರ್ಗವಿಲ್ಲದ) ಗುಡಿಸಿಲು ಆಸ್ಪತ್ರೆ. **Cóttager** (ನಾ.) ಗುಡಿಸಿಲಿನಲ್ಲಿ ವಾಸಮಾಡುವವನು ; ಕುಟೀರ ವಾಸಿ.

Cóttar, -er[1] ಕಾಟರ್ (ನಾ.) ಸ್ಕಾಟ್ಲೆಂಡಿನ ರೈತ.

Cótter[2] ಕಾಟರ್ (ನಾ.) ಯಂತ್ರಭಾಗಗಳು, ಮೊ. ನ್ನು ಬಂಧಿಸುವುದಕ್ಕಾಗಿ ಉಪಯೋಗಿಸುವ ಕೀಲ, ಬೆಣೆ, ಬಂಧನಿ (ಮು., ಕಂಡಿಯಲ್ಲಿಟ್ಟು ಹೊಡೆದನಂತರ ಒಳಗೆ ಅರಳಿಕೊಳ್ಳುವ ಸೀಳುಮೊಳೆ : ಅರಳುಮೊಳೆ)

Cóttier ಕಾಟಿಯರ್ (ನಾ.) ಗುಡಿಸಿಲಿಗ ; ಹರಾಜುಗುತ್ತಿಗೆಯಲ್ಲಿ ಜಮೀನಿನ ಹಿಡುವಳಿ ಪಡೆದ ಐರಿಷ್ ರೈತ.

Cótton ಕಾಟನ್ (ನಾ.) ಹತ್ತಿ ; ಅರಳೆ ; ಹತ್ತಿಯ ಗಿಡ ; (ಹತ್ತಿಯ) ನೂಲು, ದಾರ (= Sewing-c ಹೊಲಿಗೆಯ ದಾರ) ; ಹತ್ತಿಯ ಬಟ್ಟೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Gun-c. (Gun ನೋಡಿ). C.-cake ಹತ್ತಿಯ (ಬೀಜದ) ಹಿಂಡಿ (ದನಗಳ ಮೇವು). C.-lord ಹತ್ತಿಯ ಪ್ರಭು. C.-spinner ಹತ್ತಿ ನೂಲುವವನು ; ಹತ್ತಿಯಂತ್ರದ (ಗಿರಣಿಯ) ಯಜಮಾನ. C. waste (ಯಂತ್ರಭಾಗಗಳನ್ನು ಒರಸಿ ಚೊಕ್ಕಟಮಾಡುವುದಕ್ಕೆ ಉಪಯೋಗಿಸುವ) ಹತ್ತಿಯ ಜುಂಗು. C. wool ಎಕ್ಕಿದ ಹತ್ತಿ (ಮು., ಅಂಗಿಯ ಒಳಗಡೆ, ಮೈಮೇಲೆ, ಮೊ. ದ ಎಡೆಗಳಲ್ಲಿಟ್ಟು ಬಂಧಿಸಲು ಅನುಕೂಲಸುವಂತೆ ಪಟ್ಟೆಯಾಗಿ ಮಾಡಿದುದು). C. yarn ಹತ್ತಿಯ ನೂಲು. **Cóttony** ಕಾಟ್ನಿ (ಗು.) ಹತ್ತಿಯಂಥ ; ತುಪ್ಪುಳಿನಂತಿರುವ. **Cottonócracy** ಕಾಟ್ನಾಕ್ರಸಿ (ನಾ.) ಹತ್ತಿಯ ಮಹತ್ತರರು, ದೌಲತ್ತಿನವರು. **Cottonópolis** — ಪೊಲಿಸ್ (ನಾ.) ಹತ್ತಿಯ ಪಟ್ಟಣ ; (ಹಾಸ್ಯವಾಗಿ) ಮ್ಯಾಂಚೆಸ್ಟರ್ ಪಟ್ಟಣ.

Cótton (ಕ್ರಿ. ಅಕ.) (ಒಬ್ಬರೊಡನೊಬ್ಬರು) ಹೊಂದು, ಹೊಂದಿಕೊಂಡಿರು ; ಸವರಿಸಿಕೊಂಡು ಹೋಗು (C. up ಸ್ನೇಹಾಭಿಲಾಷಿಯಾಗು). ಪ್ರೀತಿಯಿಂದ ಒಂದುಗೂಡು, ಬೆರೆ.

Cotylédon ಕಾಟಿಲೀಡನ್ (ನಾ.) ಮೇಲ್ತರದ ಸಸ್ಯಗಳ ಭ್ರೂಣದಲ್ಲಿಯ ಮೂಲಪರ್ಣ: ಬೀಜ ದಳ ; ಅಂಕುರ ದಳ. ಒಂದು ಸಸ್ಯಜಾತಿ. **Cotylédonous** (ಗು.) ಬೀಜದಳಗಳುಳ್ಳ.

Cótyloid ಕಾಟಿಲಾಯ್ಡ್ (ಗು.) (ಅಂ. ರ. ಶಾ.) ಬಟ್ಟಲಿನಾಕಾರದ ; ಪುಟಾಕಾರದ.

Couch[1] ಕೌಚ್ (ನಾ., ಕ್ರಿ.) ಹಾಸಿಗೆ ; ಸುಪ್ಪತ್ತಿಗೆ ; ಮೆತ್ತೆ ; ಆರಾಮ ಸೋಫ. (ಧಾನ್ಯ ಮೊಳಕೆ ಕಟ್ಟುವಲ್ಲಿ) ನೆನಸಿಟ್ಟ ಕಾಳು ಮೊಳಕೆಯಾಗುವ ಪಾತಿ : ಮೊಳಕೆಯ ಮಡಿ. (ಕ್ರಿ.) ಮಲಗು ; ಪವಡಿಸು (ಗ್ರಾಂ.) (ಈಗ, ಭೂ. ಕೃ. ನಲ್ಲಿ ಮಾತ್ರ). (ಮೊಳಕೆ ಕಟ್ಟುವಲ್ಲಿ) ಮೊಳಕೆಯಾಗಲು ಕಾಳನ್ನು ನೆಲದಮೇಲೆ ಹಾಕು : ಮೊಳೆಯ ಹಾಕು. (ಭರ್ಜಿ, ಮೊ. ನ್ನು) ತಿವಿಯುವುದಕ್ಕೆ ತಗ್ಗಿಸಿ ಹಿಡಿದುಕೊ. (ಕಣ್ಣಿನ ಪೊರೆಯನ್ನು) ತೆಗೆದು ಹಾಕು (C. person or person's eye for cataract). (ಭಾವ, ಮೊ. ನ್ನು ಮಾತಿನಲ್ಲಿ) ಹೇಳು, ವ್ಯಕ್ತಪಡಿಸು. (ಪದಗಳಲ್ಲಿ, ಅರ್ಥವನ್ನು) ಮರಸು, ಆಚ್ಛಾದಿಸು. (ಪ್ರಾಣಿಗಳು) ಮಲಗಿರು (ಮು., ಅವುಗಳ ನೆರೆಯಲ್ಲಿ). ನೆಲದಮೇಲೆ ಬಗ್ಗಿಕೊಂಡಿರು ; ಹೊಂಚು ಹಾಕಿಕೊಂಡಿರು.

Couch[2] ಕೌಚ್, ಕೂಚ್ (ನಾ.) ಒಂದು ತೆರದ ಹುಲ್ಲು (= C.-grass)

Coúchant ಕೌಚಂಟ್ (ಗು.) (ವಂಶಲಾಂಛನ) (ಪ್ರಾಣಿಗಳ ವಿಷಯದಲ್ಲಿ) ಹೊಟ್ಟೆಯಮೇಲೆ ಮಲಗಿ ತಲೆಯೆತ್ತಿಕೊಂಡಿರುವ.

Coúeism ಕೂಏಇಸ್ಮ್ (ನಾ.) (ರೋಗ ವಾಸಿಯಾಗಿ ಆರೋಗ್ಯ ಪಡೆಯುವೆನೆಂಬ) ಸ್ವಯಂಪ್ರೇರಣೆಯಿಂದ ರೋಗ ವಾಸಿಮಾಡುವ ಚಿಕಿತ್ಸೆ ; ಸ್ವಯಂಪ್ರೇರಣ (ಚಿಕಿತ್ಸೆ). (Emile Coue ಎಂಬ ಮನಶ್ಶಾಸ್ತ್ರಜ್ಞನ ಹೆಸರಿನಿಂದ)

Cough ಕಾಫ್ (ನಾ., ಕ್ರಿ.) ಕೆಮ್ಮು(ವುದು) ; ಕೆಮ್ಮಲು. C. down ಕೆಮ್ಮಿ ಕೆಮ್ಮಿ (ಭಾಷಣಕಾರನನ್ನು) ಮಾತು ನಿಲ್ಲಿಸುವಂತೆ ಮಾಡು. C. out, up ಕೆಮ್ಮಿ ಉಗುಳು ; ಕೆಮ್ಮುತ್ತ ಹೇಳು. C. up (ಅಸಂ.) ಒದರಿಬಿಡು ; ಮನಸ್ಸಿಲ್ಲದೆ ಹೇಳು. ಸಲ್ಲಿಸಿಬಿಡು ; ಒಪ್ಪಿಸಿಬಿಡು.

Could. Can ಪದದ ಭೂತ., ಭೂ. ಕೃ.

Coúlee ಕೂಲಿ, **Couleé** ಕೂಲೇ (ನಾ.) (ಭೂ. ವಿ.) ಕರಗಿದ ಕಲ್ಲಿನ ಪ್ರವಾಹ ಅಥವಾ ಹರವು. (ಅಮೆ. ಸಂ., ಕ್ಯಾನಡ) (ದೊಡ್ಡ ಪ್ರವಾಹದಿಂದ ಆದ) ಆಳವಾದ ಕೊರಕಲು.

Couleur de róse (F) ಕೂಲರ್ ಡ ರೋಸ್ (ಗು., ನಾ.) ಗುಲಾಬಿ ಬಣ್ಣ(ದ). (ರೂಪ.) ಮನೋಹರವಾಗಿ ಚಿತ್ರಿಸಿದ. ಆಶಾ ಜನಕ.

Coulísse ಕೂಲೀಸ್ (ನಾ.) (ನಾಟಕ ಶಾಲೆಯಲ್ಲಿ) ಪಕ್ಕಪರದೆ ; ಪಕ್ಕ ಪರದೆಗಳಿಗೆ ನಡುವೆ ಇರುವ ಎಡೆ. ತೂಬಿನ ಬಾಗಿಲು ಆಡುವ ಗಾಡಿ.

Coulómb ಕೂಲಾಮ್ (ನಾ.) ಒಂದು ಆಂಪೇರಿನ ವಿದ್ಯುತ್‌ಪ್ರವಾಹವು ಒಂದು ಸೆಕಂಡಿನಲ್ಲಿ ಸಾಗಿಸುವ ವಿದ್ಯುತ್ತಿನ ಪರಿಮಾಣ : 'ಕೂಲಾಮ್.'

Coúlter, Cól- ಕೋಲ್ಟರ್ (ನಾ.) ನೇಗಿಲಿನ ಗುಳದ ಮುಂದುಗಡೆ ಹಾಕಿರುವ ಕಬ್ಬಿಣದ ಅಲಗು (ಇದು ನೆಲವನ್ನು ಮೇಲಿನಿಂದ ಕೆಳಕ್ಕೆ ಕತ್ತರಿಸುತ್ತದೆ)

Coúncil ಕೌನ್ಸಿಲ್ (ನಾ.) ಸಲಹೆ ಕೊಡುವ, ಪರಾಮರ್ಶಕ, ಮಂಡಲಿ ; ಮಂತ್ರಾಲೋಚನ ಸಭೆ (Cabinet c. ಮಂತ್ರಿಮಂಡಲ). ಮತಸಭೆ (= Ecclesiastical c.). [Privy c. ಇಂಗ್ಲಿಷ್ ದೊರೆ ತಾನಾಗಿ ನಿಯಾಮಕಮಾಡುವ ಆಪ್ತಮಂಡಲಿ ; ನೆಲಸು ನಾಡು, ಮೊ. ಗಳಿಂದ ಬಂದ ಮೇಲರ್ಜಿಗಳನ್ನು ಪರ್ಯಾಲೋಚಿಸಿ ತೀರ್ಪುಕೊಡುವ ನ್ಯಾಯಮಂಡಲಿ (= Judicial committee of Privy C.). C. of State ರಾಜ್ಯ ಮಂತ್ರಾಲೋಚನ ಸಭೆ]. (ನಗರ, ಪಟ್ಟಣ, ಜಿಲ್ಲೆ, ಮೊ. ಗಳ) ಸ್ಥಳೀಯ ಮಂಡಲಿ (County C.). C.-board ಮಂತ್ರಾಲೋಚನೆಯ ಸಭೆಯವರು ಸುತ್ತುಕೂಡುವ ಮೇಜು ; ಆ ಸಭೆಯ ಅಧಿವೇಶನ. C.-chamber, -house ಮಂತ್ರಾಲೋಚನ ಶಾಲೆ. C. of War ಯುದ್ಧಾಲೋಚನ ಸಭೆ (ಅವಸರ ಸಂದರ್ಭದಲ್ಲಿ ಕರೆದ ಯುದ್ಧದ ಮೇಲಧಿಕಾರಿಗಳ ಸಭೆ) ; (ಕೆಲವು ರಾಜ್ಯಗಳಲ್ಲಿ) ಸ್ಥಿರ ಯುದ್ಧಮಂಡಲಿ. **Coúncillor** (ನಾ.) ಮಂತ್ರಾಲೋಚನ ಸಭೆಯ ಸದಸ್ಯ ; ಮಂತ್ರಿ. **Coúncillorship** (ನಾ.) ಮಂತ್ರಿತನ ; ಸಭಿಕತನ.

Coúnsel ಕೌನ್ಸೆಲ್ (ನಾ., ಕ್ರಿ. ಸಕ.) ಆಲೋಚನೆ ; ಸಲಹೆ ; ಮಂತ್ರಾಲೋಚನೆ (Take c. — ಒಡನೆ ಆಲೋಚಿಸು ; ಸಲಹೆ ಕೇಳು). [(ದೇವತಾ ಶಾಸ್ತ್ರ) C. of perfection (ಹಿಂದೆ, ಕ್ರಿಸ್ತನ ಅಥವಾ ಅಪಾಸ್ತಲರ) ಆದೇಶ, ಆಜ್ಞೆ (ಎಲ್ಲರಿಗೂ ಸಾಧ್ಯವಲ್ಲದ್ದು) : ಅಸಾಧ್ಯ ಧ್ಯೇಯ]. ಹವಣಿಕೆ ; ಉಪಾಯ ; ಯುಕ್ತಿ ; ಅಭಿಪ್ರಾಯ. [Keep one's (own) or another's c. ತನ್ನ, ಇತರರ, ಇಂಗಿತವನ್ನು ಗೋಪ್ಯವಾಗಿಡು]. ಒಂದು ವ್ಯವಹಾರದಲ್ಲಿ ನಿಯಮಿತರಾದ ನ್ಯಾಯವಾದಿಗಳ ಮಂಡಲಿ ; ನ್ಯಾಯ ವಾದಿ ; ಬ್ಯಾರಿಸ್ಟರ್ [King's C., Queen's C. (ಸಂಕ್ಷಿಪ್ತ : K.C., Q.C.) ಬ್ಯಾರಿಸ್ಟರುಗಳಲ್ಲಿ ರಾಜನಿರೂಪದಿಂದ ಪ್ರಶಸ್ತಿ ಪಡೆದವನು]. (ಕ್ರಿ.) ಆಲೋಚನೆ ಹೇಳು ; ಸಲಹೆ ಕೊಡು ; ಬುದ್ಧಿ ಹೇಳು. **Coúnsellor** (ನಾ.) ಆಲೋಚನೆ ಹೇಳುವವನು ; ಸಲಹೆಗಾರ.

Count[1] ಕೌಂಟ್ (ಕ್ರಿ.) ಎಣಿಸು ; ಗಣಿಸು ; ಲೆಕ್ಕ ಹಾಕು ; ಅಂಕಿಗಳನ್ನು ಕ್ರಮದಲ್ಲಿ ಹೇಳು [C up ಕೂಡು ; ಮೊತ್ತ ಕಂಡುಹಿಡಿ. C. out (ಒಟ್ಟಿನಿಂದ ತೆಗೆದುಕೊಳ್ಳುವಾಗ) ಎಣಿಸಿ ತೆಗೆದುಕೊ]. ಲೆಕ್ಕಕ್ಕೆ ತೆಗೆದುಕೊ ; ಪರಿಗಣಿಸು. (ಒಂದು ವಸ್ತುವನ್ನು ಹೀಗೆ, ಹಾಗೆ, ಎಂದು) ಗಣಿಸು. ಎಣಿಕೆಗೆ, ಗಣನೆಗೆ, ಬರು (That does not c. ಅದು ಎಣಿಕೆಗೆ ಬರುವುದಿಲ್ಲ). (ಮುಷ್ಟಿಯುದ್ಧ) Be counted out ಅವಧಿ ಕಾಲದಲ್ಲ ಮೇಲೇಳದೆಹೋಗು ; ಸೋತುಹೋಗು. C. for ಗಣ್ಯವಾಗಿರು ; ಗಣನೆಗೆ ಬರು. C. kin (with) — ಗೆ ಸ್ಪಷ್ಟ ಸಂಬಂಧವಿರು ; ಸಂಬಂಧ ಹೇಳಿಕೊ. C. on, upon ನಂಬಿಕೊಂಡಿರು ; ನೆಚ್ಚಿಕೊಂಡಿರು ; ಭರವಸೆಯಿಡು. C. out the House ಅಧಿವೇಶನವನ್ನು ಮುಂದಕ್ಕೆ ತಳ್ಳಿಡಿಸು. **Coúnter**[1] (ನಾ.) (ಆಟಗಳಲ್ಲಿ ಉಪಯೋಗಿಸುವ, ಲೋಹ, ದಂತ, ಮೊ. ಗಳಿಂದ ಮಾಡಿದ, ಸಾ., ದುಂಡಗಿರುವ) ಎಣಿಕೆಯ ಕಾಯಿ ; ಕೃತಕ ನಾಣ್ಯ. ಹಣವ್ಯಾಪಾರಿಯ ದುಡ್ಡೆಣಿಸುವ ಮೇಜು ; ಹಣ ಎಣಿಸಿಕೊಂಡು ಸರಕನ್ನು ಕೊಡುವ ಅಂಗಡಿಮೇಜು. C.-jumper ಅಂಗಡಿಯಲ್ಲಿ ಸಹಾಯಕ, ನೌಕರ. **Coúnting-house** (ನಾ.) ಲೆಕ್ಕದ ಪುಸ್ತಕಗಳು, ಮೊ. ನ್ನಿಟ್ಟಿರುವ ಮನೆ, ಕೋಣೆ : ಲೆಕ್ಕದ ಮನೆ ; ಕಚೇರಿ.

Count (ನಾ.) ಎಣಿಕೆ ; ಗಣನೆ ; ಲೆಕ್ಕ (Keep c., lose c. ಲೆಕ್ಕವಿರು ; ಲೆಕ್ಕ ತಪ್ಪಿಹೋಗು). ಒಟ್ಟು ; ಮೊತ್ತ. (ನ್ಯಾ. ಶಾ.) ಅಪಾದನೆಯ ಪ್ರತಿ ಅಂಶ. (ಪಾರ್ಲಿಮೆಂಟಿನ ಪ್ರಜಾಸಭೆಯಲ್ಲಿ ಸದಸ್ಯರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಲ್ವತ್ತುಮುಂದಿಗೆ ಕಡಮೆಯಾಗಿ ಹಾಜರಿರುವ ಸಂದರ್ಭದಲ್ಲಿ) ಅಧಿವೇಶನವನ್ನು ಮುಂದಕ್ಕೆ ತಳ್ಳಿಡುವುದು (= C.-out). (ಮುಷ್ಟಿಯುದ್ಧ) ಬಿದ್ದವನು ಮೇಲೇಳುವುದಕ್ಕೆ ಕೊಡುವ ಹತ್ತು ಸೆಕಂಡುಗಳ ಅವಧಿ (ಅಷ್ಟರಲ್ಲಿ ಏಳದಿದ್ದರೆ ಸೋತಂತೆ ಪರಿಗಣನೆ). **Coúntless** (ಗು.) ಲೆಕ್ಕವಿಲ್ಲದಷ್ಟು ; ಅಗಣಿತ ; ಅಸಂಖ್ಯಾತ.

Count[2] ಕೌಂಟ್ (ನಾ.) (ಇಂಗ್ಲೆಂಡಿನ 'ಅರ್ಲ್' ಎಂಬ ಶ್ರೀಮಂತ ಪದವಿಗೆ ಜವಾಬಾಗಿರುವ ಇತರ ರಾಜ್ಯದ) ಶ್ರೀಮಂತ ; 'ಕೌಂಟ್.' (C. Palatine. Palatine ನೋಡಿ). **Coúntship** (ನಾ.) ಶ್ರೀಮಂತತನ ; ಶ್ರೀಮಂತಿಕೆ ; ಕೌಂಟ್ ಪದವಿ. **Coúntess** (ನಾ.) ಕೌಂಟಿನ ಅಥವಾ ಅರ್ಲ್‌ನ ಹೆಂಡತಿ, ವಿಧವೆ ; ತನ್ನ ಹಕ್ಕುಬಾಧ್ಯತೆಯಿಂದಲೇ ಆ ಶ್ರೀಮಂತ ಪದವಿಯುಳ್ಳವಳು : ಶ್ರೀಮಂತೆ.

Coúntenance ಕೌಂಟಿನನ್ಸ್ (ನಾ., ಕ್ರಿ. ಸಕ.) ಮುಖಭಾವ ; — ಭಂಗಿ ; — ಮುದ್ರೆ ; — ಚರ್ಯೆ ; — ಚಹರೆ [Change (one's) c. (ಚಿತ್ತಕ್ಷೋಭೆಯಿಂದ, ಮನೋವಿಕಾರದಿಂದ) ಮುಖಚಹರೆ ಬದಲಾಯಿಸು. Keep one's c. ಗಾಂಭೀರ್ಯದಿಂದಿರು (ಮು., ನಗದಿರು)] ಮುಖ. ಶಾಂತಿ ; ಸ್ವಾಸ್ಥ್ಯ (Put out of c. ಮುಖಗೆಡಿಸು ; ಪೆಚ್ಚುಮಾಡು). ಅನುಗ್ರಹ ; ಒಪ್ಪಿಗೆ [Keep (person) in c. (ಸಾ., ಸಹಾಯತೋರಿ) ಎದೆಗೆಡದಂತೆ ಪ್ರೋತ್ಸಾಹಿಸು ; ಹುರಿದುಂಬಿಸು]. (ಕ್ರಿ.) (ಮಾಡಿದ ಕೆಲಸಕ್ಕೆ) ಒಪ್ಪಿಗೆ ಕೊಡು ; ಎಡೆಗೊಡು ; ಅನುಮೋದಿಸು. (ವ್ಯಕ್ತಿಯನ್ನು, ರೂಢಿಯನ್ನು) ಪ್ರೋತ್ಸಾಹಿಸು.

Coúnter[1]. **Count**[1] ನೋಡಿ.

Coúnter[2] ಕೌಂಟರ್ (ನಾ.) ಕುದುರೆಯ ಭುಜಗಳಿಗೆ ಮಧ್ಯೆ, ಕುತ್ತಿಗೆಯ ಕೆಳಗಡೆ, ಇರುವ ಎದೆಯ ಭಾಗ. ಹಡಗಿನ ಹಿಂಭಾಗದ ಕೊಂಕುಭಾಗ.

Coúnter[3] ಕೌಂಟರ್ (ನಾ.) ಒಂದು ತೆರದ ಕತ್ತಿಯ ವರಿಸೆ ; ಚಕ್ರ ವರಿಸೆ.

Coúnter[4] ಕೌಂಟರ್ (ನಾ.) (ಮೋಚಿ ಕೆಲಸದಲ್ಲಿ) ಬೂಟಿನ ಹಿಮ್ಮಡಿಯ ಸುತ್ತಲಿನ ಭಾಗ.

Coúnter[5] ಕೌಂಟರ್ (ಗು., ಕ್ರಿ., ಕ್ರಿ. ವಿ.) ವಿರುದ್ಧವಾದ ; ಮಾರಾದ ; ಪ್ರತಿಯಾದ ; ಪ್ರತಿರೂಪವಾದ ; ದುಪ್ರತಿಯಾದ. (ಕ್ರಿ.) ವಿರೋಧಿಸು ; ಪ್ರತಿಘಟಿಸು ; ಪ್ರತಿಯಾಗಿರು ; ಪ್ರತಿ ಹೇಳು. (ಚದುರಂಗ) ಪ್ರತಿಚಲನದಿಂದ ಎದುರಿಸು ; ಎದುರು ನಡಸು. (ಮುಷ್ಟಿಯುದ್ಧ) ಎದುರೇಟು ಕೊಡು. (ಕ್ರಿ. ವಿ.) ವಿರುದ್ಧವಾಗಿ ; ಪ್ರತಿಕೂಲವಾಗಿ ; ಪ್ರತಿಯಾಗಿ ; ಮಾರಾಗಿ ; ಎದುರಾಗಿ (Act c.)

Coúnter- ಕೌಂಟರ್— (ಸಮಾಸದಲ್ಲಿ ಪೂರ್ವಪದ) ಎದುರು — ; ಪ್ರತಿ — ; ಮಾರು — ; ವಿರುದ್ಧ — ; ಜವಾಬು — .

Counteráct ಕೌಂಟರ್ಯಾಕ್ಟ್ (ಕ್ರಿ. ಸಕ.) ಪ್ರತೀಕರಿಸು ; ಪ್ರತಿಕ್ರಿಯೆಯಿಂದ ತಡೆ, ನಿವಾರಿಸು ; ನಿಷ್ಫಲಗೊಳಿಸು ; ಹೊಡೆ(ದುಹಾಕು). **Counteráction** (ನಾ.) ; **Counteráctive** (ಗು.)

Counter-ágent ಕೌಂಟರ್ ಏಜೆಂಟ್ (ನಾ.) ಪ್ರತೀಕಾರಕ (ಶಕ್ತಿ)

Coúnter-approach ಕೌಂಟರ್ ಅಪ್ರೋಚ್ (ನಾ.) (ಸೈನ್ಯ) (ಪರಸೈನ್ಯದ ಮುತ್ತಿಗೆಯನ್ನು ತಡೆಯುವುದಕ್ಕಾಗಿ ಕೋಟೆಯ ಹೊರಗಡೆ ಹಾಕಿದ) ತಡೆಗೋಡೆ.

Coúnter-attáck ಕೌಂಟರ್ ಅಟ್ಯಾಕ್ (ನಾ., ಕ್ರಿ.) ಪ್ರತ್ಯಾಕ್ರಮಣ (ಮಾಡು) ; ಪ್ರತಿಯಾಗಿ ಮೇಲೆಬೀಳು(ವುದು) ; ಪ್ರತೀಕಾರ (ಮಾಡು)

Coúnter-attráction ಕೌಂಟರ್ ಅಟ್ರ್ಯಾಕ್‌ಷನ್ (ನಾ.) ಪ್ರತ್ಯಾಕರ್ಷಣೆ.

Coúnterbálance ಕೌಂಟರ್‌ಬ್ಯಾಲನ್ಸ್ (ನಾ., ಕ್ರಿ. ಸಕ.) ಪಡಿತೂಕ ; ಮಾರ್ತೂಕ ; ಈಡು ; ಪ್ರತಿಭಾರ ; ಸಮಭಾರ ; ಸಮತೂಕ. (ಕ್ರಿ.) — ವಾಗು ; — ಮಾಡು ; ಸಮೀಕರಿಸು.

Coúnterblast ಕೌಂಟರ್‌ಬ್ಲಾಸ್ಟ್ (ನಾ.) ಯಾವುದಕ್ಕಾದರೂ ವಿರುದ್ಧವಾಗಿ ಹೇಳುವ ಬಲವತ್ತರವಾದ ಹೇಳಿಕೆ ; ಎದುರು ಹೊಡೆತ ; ಪ್ರತ್ಯಾಘಾತ.

Counterchánge ಕೌಂಟರ್‌ಚೇಂಜ್ (ಕ್ರಿ.) ವಿನಿಮಯ ಮಾಡು ; — ವಾಗು ; ಅದಲುಬದಲು ಮಾಡು ; — ಆಗು ; ಪರಿವರ್ತನ ಮಾಡು ; ಪರಿವರ್ತವಾಗು.

Coúntercharge ಕೌಂಟರ್‌ಚಾರ್ಜ್ (ನಾ.) ಪ್ರತಿ ಆಪಾದನೆ ; ಪ್ರತಿ ದೋಷಾರೋಪಣೆ ; ಆಪಾದಕನಮೇಲೆ ಆಪಾದನೆ.

Coúntercheck ಕೌಂಟರ್‌ಚೆಕ್ (ನಾ.) ತಡೆ ; ಪ್ರತಿ ತಡೆ ; ಮಾರ್ತಡೆ ; ಪ್ರತಿರೋಧಕ. (ಪ್ರಾಚೀ. ಪ್ರ.) ಪ್ರತ್ಯಾಕ್ಷೇಪ.

Coúnter-claim ಕೌಂಟರ್ ಕ್ಲೆಯ್ಮ್ (ನಾ.) ಮತ್ತೊಬ್ಬನಿಗೆ ವ್ಯತಿರಿಕ್ತವಾಗಿ ಹೂಡಿದ ಹಕ್ಕು ; ಪ್ರತಿವಾದಿ ಹೂಡಿದ ಹಕ್ಕು : ಎದುರು ಹಕ್ಕು ; ಮಾರು ಹಕ್ಕು.

Counter-clóckwise. **Clock**[1] ನೋಡಿ.

Coúnter-espionáge ಕೌಂಟರ್‌ಎಸ್ಪಿಯೊನಾಜ್ (ನಾ.) (ಶತ್ರುವಿನ ಬೇಹುಗಾರಿಕೆಯನ್ನು ಪ್ರತಿಭಟಿಸುವುದಕ್ಕಾಗಿ ಏರ್ಪಡಿಸಿದ) ಪ್ರತಿ ಬೇಹುಗಾರಿಕೆ.

Coúnterfeit ಕೌಂಟರ್‌ಫಿಟ್, — ಫೀಟ್ (ಗು., ನಾ., ಕ್ರಿ. ಸಕ.) ಅನುಕರಣದ (ವಸ್ತು) ; ಕೃತಕ ; ಸಾಚಾ ಅಲ್ಲದ ; ಸುಳ್ಳು ; ಕಳ್ಳ ; ಖೋಟಾ (ನಾಣ್ಯ, ಗ್ರಂಥ, ವ್ಯಕ್ತಿ, ಮೊ. ಗಳ ವಿಷಯದಲ್ಲಿ). (ಕ್ರಿ.) ಅನುಕರಿಸು. (ನಾಣ್ಯ, ಕಾಗದದ ಹಣ, ಬರೆವಣಿಗೆ —ಇವನ್ನು) ಸೃಷ್ಟನೆ ಮಾಡು ; ಖೋಟಾ ತಯಾರಿಸು. (ಭಾವಗಳನ್ನು) ನಟನೆ ಮಾಡು ; ವೇಷ ತಾಳು. (ರೂಪ.) ಹತ್ತಿರ ಹೋಲು.

Coúnterfoil ಕೌಂಟರ್‌ಫಾಯ್‌ಲ್ (ನಾ.) (ಬ್ಯಾಂಕಿನ ಚೆಕ್ಕು, ರಸೀತಿ, ಮೊ. ಗಳಲ್ಲಿ ಬರೆದ ಮುಖ್ಯಾಂಶಗಳನ್ನು ಗುರುತು ಮಾಡಿ ಚಲಾವಣೆದಾರನು ಉಳಿಸಿಕೊಳ್ಳುವ) ಪಕ್ಕಪ್ರತಿ.

Coúnterfort ಕೌಂಟರ್‌ಫೋರ್ಟ್ (ನಾ.) (ಗೋಡೆಗೆ ಅಥವಾ ಮಾಳಿಗೆಗೆ ಆಧಾರವಾಗಿರುವ) ಊರೆ ಗೋಡೆ, ಆನಿಕೆ ಗೋಡೆ, ಒತ್ತು ಗೋಡೆ.

Counter-írritant ಕೌಂಟರ್ ಇರಿಟಂಟ್ (ನಾ.) ಒಳವ್ಯಾಧಿಗೆ ಪ್ರತಿಕ್ರಿಯೆಯಾಗಿ ಮೈಮೇಲೆ ಉರಿಯೆಬ್ಬಿಸುವುದಕ್ಕಾಗಿ ಉಪಯೋಗಿಸುವ ವಸ್ತು : ಪ್ರತ್ಯುದ್ರೇಕಕಾರಿ. **Counter-irritátion** (ನಾ.)

Countermánd ಕೌಂಟರ್‌ಮಾಂಡ್ (ಕ್ರಿ. ಸಕ., ನಾ.) (ಆಜ್ಞೆಯನ್ನು) ಹಿಂದಕ್ಕೆ ತೆಗೆದುಕೊ ; (ಮನುಷ್ಯ, ಸೈನ್ಯ, ಮೊ. ನ್ನು) ಪ್ರತ್ಯಾಜ್ಞೆ ಕೊಟ್ಟು ಹಿಂದಕ್ಕೆ ಕರೆ. (ಸರಕು, ಮೊ. ಕ್ಕೆ ಕೊಟ್ಟಿದ್ದ) ಕೋರಿಕೆಯನ್ನು ವಜಾ ಮಾಡು, ರದ್ದುಮಾಡು. (ನಾ.) ಹಿಂದಿನ ಆಜ್ಞೆಯನ್ನು ರದ್ದು ಮಾಡುವ ಆಜ್ಞೆ : ಪ್ರತ್ಯಾಜ್ಞೆ ; ರದ್ದಪ್ಪಣೆ.

Coúntermarch ಕೌಂಟರ್‌ಮಾರ್ಚ್ (ಕ್ರಿ., ನಾ.) ಹಿನ್ನಡೆ. (ಸೈನ್ಯ) ಹಿಂಬಳಸಿ ನಡೆ, ನಡಸು.

Coúntermark ಕೌಂಟರ್‌ಮಾರ್ಕ್ (ನಾ.) (ಹೆಚ್ಚುಭದ್ರತೆ, ಮೊ. ಕ್ಕಾಗಿ ಹಿಂದಿದ್ದ ಗುರುತಿನ ಜೊತೆಗೆ ಹಾಕುವ) ಹೆಚ್ಚುಗುರುತು ; ಮೇಲುಮುದ್ರೆ. (ಲೋಹ ಉತ್ತಮವಾದದ್ದೆಂದು ತೋರಿಸುವುದಕ್ಕಾಗಿ, ಒಡವೆ ತಯಾರಿಸಿದವನ ಗುರುತಿನ ಜೊತೆಗೆ ಹಾಕುವ) ಸಂಸ್ಥೆಯ ಮುದ್ರೆ.

Coúntermine ಕೌಂಟರ್‌ಮೈನ್ (ನಾ., ಕ್ರಿ.) (ಸೈನ್ಯ) ಮುತ್ತಿಗೆ ಹಾಕಿರುವ ಸೈನ್ಯದ ಸುರಂಗದ ಸಿಡಿಮದ್ದಿನ ಹಾವಳಿಯನ್ನು ತಡೆಯುವುದಕ್ಕಾಗಿ ಹಾಕಿದ ಸಿಡಿಮದ್ದಿನ ಸುರಂಗ; ಶತ್ರುಗಳು ಸಮುದ್ರದಲ್ಲಿಟ್ಟಿರುವ ಸಿಡಿಮದ್ದಿನ ಸಂಚಯವನ್ನು ನಾಶಗೊಳಿಸುವುದಕ್ಕಾಗಿ ಹಾಕಿದ ಸಿಡಿಮದ್ದಿನ ಸಂಚಯ : ಪ್ರತಿಸುರಂಗ. (ರೂಪ.) ಪ್ರತಿಸಂಚು ; ಮಾರುಸಂಚು. (ಕ್ರಿ.) ಪ್ರತಿಸುರಂಗದಿಂದ, ಮಾರುಸಂಚಿನಿಂದ, ಎದುರಿಸು ; ಪ್ರತಿಸಂಚು ನಡಸು ; ಪ್ರತಿಸುರಂಗ ಹಾಕು.

Coúntermure ಕೌಂಟರ್‌ಮ್ಯೂರ್ (ನಾ.) (ಹೆಚ್ಚುರಕ್ಷಣೆಗಾಗಿ ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೋಡೆಯ ಹಿಂದೆ, ಅಥವಾ ಒಳಗಡೆ, ಎಬ್ಬಿಸಿದ) ಮಾರುಗೋಡೆ ; ಕಾಪು ಗೋಡೆ.

Coúnterpane ಕೌಂಟರ್‌ಪೆನ್, —ಪೇನ್ (ನಾ.) ಹಾಸಿಗೆಯ ಮೇಲು ಹಾಸು ; ರಜಾಯಿ.

Coúnterpart ಕೌಂಟರ್‌ಪಾರ್ಟ್ (ನಾ.) ಪ್ರತಿ ; ಪಡಿರೂಪ. ಮತ್ತೊಂದನ್ನು, ಮತ್ತೊಬ್ಬನನ್ನು, ಪೂರ್ಣಮಾಡುವ ವಸ್ತು, ವ್ಯಕ್ತಿ ; ಜೊತೆ ; ಜೋಡಿ. ಒಂದು ದಸ್ತೈವಜಿನ ಕೂಡುಪ್ರತಿ.

Coúnterplot ಕೌಂಟರ್‌ಪ್ಲಾಟ್ (ನಾ., ಕ್ರಿ. ಸಕ.) (ಮತ್ತೊಬ್ಬನನ್ನು ಸೋಲಿಸುವುದಕ್ಕಾಗಿ ಹೂಡಿದ) ಪ್ರತಿಸಂಚು (ಮಾಡು) ; ಸಂಚು ಮುರಿ.

Coúnterpoint ಕೌಂಟರ್‌ಪಾಯ್‌ಂಟ್ (ನಾ.) (ಸಂ.) ಒಂದು ರಾಗದೊಡನೆ ಮೇಳಕ್ಕಾಗಿ ಸೇರಿಸಿದ ಮತ್ತೊಂದು ರಾಗ : ಸಂವಾದಿ ರಾಗ.

Coúnterpoise ಕೌಂಟರ್‌ಪಾಯ್ಸ್ (ನಾ., ಕ್ರಿ. ಸಕ.) ಪ್ರತಿಭಾರ ; ದಡ ; ಸಮಗಟ್ಟುವ ತೂಕ ; ಈಡು ; ಸಮಭಾರ ಸ್ಥಿತಿ ; ಸಮ ಸ್ಥಿತಿ ; ಸಮತೆ. (ಕ್ರಿ.) ಸಮ ತೂಗು, ತೂಗಿಸು ; ದಡಕಟ್ಟು ; ಸಮ ತೋಲನಕ್ಕೆ ತರು ; — ದಲ್ಲಿಡು ; ಸಮತೆಗೆ ತರು.

Coúnter-reformátion ಕೌಂಟರ್ ರೆಫ಼ರ್ಮೇಷನ್ (ನಾ.) ಒಂದು ಸುಧಾರಣೆಗೆ ಪ್ರತಿಕ್ರಿಯೆಯಾಗಿ ಮಾಡುವ ಮತ್ತೊಂದು ಸುಧಾರಣೆ : ಪ್ರತಿಸುಧಾರಣೆ. (ಮು., ಕ್ರೈಸ್ತ ಪ್ರಾಟೆಸ್ಟಂಟ್ ಮತದ ಸುಧಾರಣೆಯ ಮೇಲೆ ನಡಸಿದ ರೋ. ಕ್ಯಾ. ಮತದ ಸುಧಾರಣೆ)

Coúnterscarp ಕೌಂಟರ್‌ಸ್ಕಾರ್ಪ್ (ನಾ.) (ಕೋಟೆ) ಕಂದಕದ ಹೊರ ಗೋಡೆ ಅಥವಾ ಹೊರವೋರೆ.

Coúntershaft ಕೌಂಟರ್‌ಷಾಫ್ಟ್ (ನಾ.) (ಒಂದು ಯಂತ್ರದ ನಿರ್ದಿಷ್ಟ ಭಾಗಗಳಿಗೆ ಚಲನೆಯನ್ನು ಸಾಗಿಸುವುದಕ್ಕಾಗಿ ಪ್ರಧಾನ ಚಾಲಕಾಕ್ಷದಿಂದ ಚಲನೆ ಪಡೆಯುವ) ಅಂತರ ಚಾಲಕಾಕ್ಷ ; ಉಪ ಚಾಲಕಾಕ್ಷ.

Countersígn ಕೌಂಟರ್‌ಸೈನ್ (ನಾ., ಕ್ರಿ. ಸಕ.) ಪಹರೆಯ ಸಂಕೇತ (ಶಬ್ದ) ; ಕಾವಲು ಸಂಕೇತ (ಪದ). ಗುರುತು ತಿಳಿಯುವುದಕ್ಕಾಗಿ ಉಪಯೋಗಿಸುವ ಚಿಹ್ನೆ : ಪತ್ತೆಯ ಗುರುತು. (ಕ್ರಿ.) (ರುಜು ಮಾಡಿರುವ ಒಂದು ದಸ್ತೈವಜಿಗೆ) ಮೇಲುರುಜು ಮಾಡು ; ಸ್ಥಿರೀಕರಿಸು ; ಅಂಗೀಕರಿಸು.

Countersínk ಕೌಂಟರ್‌ಸಿಂಕ್ (ಕ್ರಿ. ಸಕ.) ಮೊಳೆಯ ತಲೆಯನ್ನು ಕೂರಿಸುವುದಕ್ಕಾಗಿ ಕಂಡಿಯ ಮೇಲ್ಭಾಗವನ್ನು ಹೆರೆದು ಅಗಲ ಮಾಡು : ಅರುಗು ಹೆರೆ. ಅಂಥ ಕಂಡಿಯಲ್ಲಿ ಮೊಳೆಯನ್ನು ಕೂರಿಸು.

Counter-ténor ಕೌಂಟರ್ ಟೆನರ್ (ನಾ.) (ಸಂ.) ಗಂಡಸಿನ ಉಚ್ಚ ಸ್ವರ(ದಲ್ಲಿ ಹಾಡುವ ಗಾಯಕ)

Countervaíl ಕೌಂಟರ್‌ವೇಯ್‌ಲ್ (ಕ್ರಿ.) ಸಮತೂಕ ಮಾಡು ; ಸಮ ತೂಗು ; ಸರಿಗಟ್ಟು ; ಸಮನಿಲ್ಲು [ಮು., C.-ing duty (ಎಂಬಲ್ಲಿ) ಪರದೇಶದಿಂದ ಅಲ್ಲಿಯ ಸರ್ಕಾರದ ಪ್ರೋತ್ಸಾಹದ್ರವ್ಯ ಪಡೆದು ತಯಾರಾಗಿ ಆಮದಾಗಿರುವ ಸರಕುಗಳಮೇಲೆ, ಸ್ವದೇಶದ ಸರಕುಗಳಮೇಲಿನ ಪೋಟಾಪೋಟಿಯನ್ನು ತಪ್ಪಿಸುವುದಕ್ಕಾಗಿ, ಸ್ವದೇಶ ಸರ್ಕಾರ ಹಾಕುವ ತೆರಿಗೆ: ಈಡು ತೆರಿಗೆ]

Coúnterweight ಕೌಂಟರ್‌ವೇಯ್ಟ್ (ನಾ.) ಸರಿದೂಗುವ ಭಾರ ; ಪ್ರತಿಭಾರ ; ಸಮತೂಕ.

Coúnterwork ಕೌಂಟರ್‌ವರ್ಕ್ (ನಾ., ಕ್ರಿ.) (ಸೈನ್ಯ) ಶತ್ರುವಿನ ತಡೆಗಟ್ಟುಗಳಿಗೆ ಪ್ರತಿಯಾಗಿ ಹಾಕಿದ ತಡೆಗಟ್ಟು : ಪ್ರತಿತಡೆ. (ಸಾ.) ವಿರೋಧಿಸುವ ಕೆಲಸ; ಪ್ರತಿಕ್ರಿಯೆ. (ಕ್ರಿ.) ಪ್ರತಿಕ್ರಿಯೆ ಮಾಡು ; ನಿರರ್ಥಕ ಮಾಡು ; ವಿರುದ್ಧವಾಗಿ ಕೆಲಸಮಾಡು.

Coúntess. **Count**[2] ನೋಡಿ.

Coúnting-house. **Count**[1] ನೋಡಿ.

Coúntry ಕಂಟ್ರಿ (ನಾ.) ದೇಶ; ಪ್ರದೇಶ ; ನಾಡು ; ರಾಷ್ಟ್ರ ; ಸೀಮೆ ; ತಾಯಿ ನಾಡು ; ತವರು ನಾಡು ; ಹುಟ್ಟು ನಾಡು ; ವಾಸದ ನಾಡು ; ಸ್ವದೇಶ ; ಜನ್ಮಭೂಮಿ. ಹಳ್ಳಿಗಾಡು ; ಗ್ರಾಮಾಂತರ ಪ್ರದೇಶ (ಪ್ರಧಾನ ನಗರ, ಪಟ್ಟಣ — ಇವುಗಳನ್ನು ಬಿಟ್ಟು ಉಳಿದ ಪ್ರದೇಶ). (ಕ್ರಿಕೆಟ್ ಆಟದ ಅಸಂ.) In the c. ಗುರಿಕೋಲಿಗೆ ದೂರವಾಗಿ. Appeal, go, to the c. ಚುನಾವಣೆದಾರರ ಅಭಿಮತ ಕೇಳು ; ನಾಡಿನ ಒಪ್ಪಿಗೆ ಕೇಳು ; ಹೊಸ ಚುನಾವಣೆಗಾಗಿ ಪಾರ್ಲಿಮೆಂಟನ್ನು ಮುಕ್ತಾಯ ಮಾಡು. C. cousin ಹಳ್ಳಿಗಾಡಿನ ರೀತಿಯ ನೆಂಟ : ಹಳ್ಳಿ ನೆಂಟ. C. dance ಹಳ್ಳಿಯ ಕುಣಿತ. C.-house, -seat ದೊಡ್ಡಮನುಷ್ಯನ ಗ್ರಾಮದ ಮನೆ, ಹಳ್ಳಿಮನೆ. C. note ಸ್ಥಳೀಯ ಬ್ಯಾಂಕಿನಿಂದ ಕೊಟ್ಟ ಕಾಗದದ ಹಣ. C. party ಕಾರಖಾನೆಯವರ ಪಕ್ಷಕ್ಕೆ ವಿರುದ್ಧವಾಗಿ ಭೂವ್ಯವಸಾಯದವರ ಪಕ್ಷವನ್ನು ಸಮರ್ಥಿಸುವ ರಾಜಕೀಯ ಪಕ್ಷದವರು : ರೈತ ಪಕ್ಷ ; ಕೃಷಿಕ ಪಕ್ಷ. C.-side (ನಿರ್ದಿಷ್ಟ) ಗ್ರಾಮಪ್ರದೇಶ(ದವರು). **Coúntrified, -ryfied** (ಗು.) (ನೋಟ, ನಡೆನುಡಿ, ಮೊ. ಗಳಲ್ಲಿ) ಹಳ್ಳಿಗಾಡಿನ ; ಗ್ರಾಮ್ಯ ; ಗ್ರಾಮೀಣ. **Coúntryman** — ಮ್ಯಾನ್ (ನಾ.; ಸ್ತ್ರೀ. **Coúntrywoman**) ಸ್ವದೇಶದವನು ; ಒಂದು (ನಿರ್ದಿಷ್ಟ) ದೇಶದವನು, ನಾಡಿನವನು. ಹಳ್ಳಿಗಾಡಿನವನು.

Coúnty ಕೌಂಟಿ (ನಾ.) ಗ್ರೇಟ್‌ಬ್ರಿಟನ್, ಐರ್ಲೆಂಡ್ ಮತ್ತು ಅನೇಕ ನೆಲಸುನಾಡುಗಳಲ್ಲಿ ಸರ್ಕಾರದ ಆಡಳಿತಕ್ಕೆ ಅನುಕೂಲವಾಗಿ ಭಾಗ ಮಾಡಿರುವ ಪ್ರದೇಶ : ಕೌಂಟಿ. ಒಂದು ಕೌಂಟಿಯ ಪ್ರಜೆಗಳು. C. borough, C. corporate ಐವತ್ತು ಸಾವಿರ ಪ್ರಜೆಗಿಂತಲೂ ಹೆಚ್ಚಾಗಿದ್ದು ಕೌಂಟಿಯೆಂದು ಪರಿಗಣಿತವಾಗುವ ನಗರ, ಪಟ್ಟಣ : ಕೌಂಟಿ ಪಟ್ಟಣ. C. family ಕೌಂಟಿಯಲ್ಲಿ ಪಿತರಾರ್ಜಿತವಾದ ಸ್ಥಿರಾಸ್ತಿಯಿರುವ ಮನೆತನ. C. Palatine (Palatine ನೋಡಿ)

Coup (F) ಕೂ (ನಾ.) ಗಮನಾರ್ಹವಾದ ಅಥವಾ ಜಯವನ್ನು ಹೊಂದಿದ ಹೊಡೆತ, ಕಾರ್ಯ : ಥರ್ಜರಿ ಹೊಡೆತ ; ಸಿಡಿಲೇಟು (ರೂಪ.). (ಬಿಲಿಯರ್ಡ್ಸ್ ಆಟ) ಚೆಂಡನ್ನು ನೇರವಾಗಿ ಕುಳಿ ತುಂಬಿಸುವುದು. **C. d'etát** ಕೂ ಡೆ ಟಾ (ನಾ.) ಚಂಡವೇಗದಿಂದ ಸಾಧಿಸಿದ ರಾಜ್ಯಕ್ರಾಂತಿ ; ಕ್ಷಿಪ್ರಾಕ್ರಮಣ ; ಕ್ಷಿಪ್ರ ತಂತ್ರ. **C. de gráce** — ಡ ಗ್ರಾಸ್ (ನಾ.) ತೀರಿಸಿಬಿಡುವ ಹೊಡೆತ. **C. de maín** — ಮ್ಯಾನ್ (ನಾ.) ಥಟ್ಟನೆ ಸಾಹಸದಿಂದ ಮಾಡಿದ ಆಕ್ರಮಣ. **C. d'oeíl** — ಡಯ್ (ನಾ.) ಅಖಂಡ ದೃಷ್ಟಿ ; ಒಟ್ಟುನೋಟ. **C. de theátre** — ಥೇಆಟ್ರ್ (ನಾ.) ನಾಟಕದಲ್ಲಿ(ಯಂತೆ) ಅನಿರೀಕ್ಷಿತವಾಗಿ ನಡೆಯುವ ಆಶ್ಚರ್ಯಕರವಾದ ಘಟನೆ.

Coúpe ಕೂಪೇ (ನಾ.) (ಒಳಗೆ ಇಬ್ಬರಿಗೂ ಹೊರಗೆ ಬಂಡಿನಡಸುವವನಿಗೂ ಮಾತ್ರ ಸ್ಥಳವಿರುವ) ನಾಲ್ಕು ಚಕ್ರದ ಮುಚ್ಚುಗಾಡಿ. ರೈಲುಬಂಡಿಯಲ್ಲಿ ಒಂದೇ ಪಕ್ಕದ ಆಸನವುಳ್ಳ ಅರೆಕೋಣೆ.

Coúple ಕಪ್‌ಲ್ (ನಾ., ಕ್ರಿ.) ಜೋಡಿ ; ಜೊತೆ (ಮು., ಬೇಟೆನಾಯಿಗಳದು) ; ಎಣೆ (ಗ್ರಾಂ.) ; ಯುಗ್ಮ ; ಮಿಥುನ ; ಎರಡು. ಎರಡು ಬೇಟೆನಾಯಿಗಳನ್ನು ಒಟ್ಟಿಗೆ ಕಟ್ಟುವ ಬಾರು (Go, hunt, run, in couples ಜೋಡಿಯಲ್ಲಿ ಹೋಗು, ಬೇಟೆಯಾಡು, ಓಡು). (ಜಾತ್ಯೇಕವಚನ : Ten couple ಹತ್ತು ಜೋಡಿ). (ಮದುವೆಯಾದ, ಮದುವೆ ನಿಶ್ಚಿತವಾದ) ದಂಪತಿಗಳು. (ನರ್ತನದಲ್ಲಿ) ಕುಣಿತದ ಜೊತೆ, ಪತ್ತಿಗರು. (A c. of ಎರಡು, ಇಬ್ಬರು). (ತೀರುಗಳ) ಕ್ರೈ. (ಚಲನ ವಿಜ್ಞಾನ) ಸಮಾನಾಂತರದಲ್ಲಿ ಎದುರುಬದುರಾಗಿ ಒಂದು ವಸ್ತುವನ್ನು ಸೆಳೆದು ಸುತ್ತುವಂತೆ ಮಾಡುವ ಎರಡು ಸಮಬಲಗಳು : ಬಲಯುಗ್ಮ. (ಕ್ರಿ.) (ವ್ಯಕ್ತಿಗಳನ್ನು) ಜೊತೆಗೂಡಿಸು, ಸೇರಿಸು. ಒಟ್ಟಾಗಿ ಕಟ್ಟು, ಬಂಧಿಸು (ಮು., ನಾಯಿಜೋಡಿಗಳನ್ನು). (ರೈಲುಬಂಡಿಗಳನ್ನು) ಕೂಡುಕೊಂಡಿಗಳಿಂದ ಸೇರಿಸು, ಜೋಡಿಸು. ಲಗ್ನಮಾಡು ; ಲಗ್ನವಾಗು. (ಎರಡು ವಸ್ತುಗಳನ್ನು ಒಟ್ಟಿಗೆ ಅಥವಾ ಒಂದರೊಡನೊಂದನ್ನು) ಸಂಬಂಧಿಸು, ಸಂಯೋಜಿಸು. (ಸ್ತ್ರೀ ಪುರುಷ) ಸಂಭೋಗ, ಸಂಗ, ಸಂಗಮ, ಮಾಡು ; ನೆರೆ ; ಮೈಥುನ ಮಾಡು. **Coúpler** (ನಾ.) ಸಂಬಂಧಕ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಯೋಜಕ. **Coúplet** (ನಾ.) ದ್ವಿಪದಿ. **Coúpling** (ನಾ.) (ಕ್ರಿಯಾರ್ಥಗಳಲ್ಲಿ). (ರೈಲುಬಂಡಿಗಳನ್ನು ಜೊತೆಗೂಡಿಸುವ) ಕೂಡುಕೊಂಡಿ. ಒಂದು ಯಂತ್ರದ ಭಾಗಗಳನ್ನು ಸಂಯೋಜಿಸುವ ಸಲಕರಣೆ: ಸಂಯೋಜಕ.

Coúpon ಕೂಪಾನ್, ಕೂಪೊನ್ (ನಾ.) ಬಡ್ಡಿ, ಮೊ. ನ್ನು ಪಡೆಯುವುದಕ್ಕೂ ರೈಲುಪ್ರಯಾಣ, ಮೊ. ಗಳಲ್ಲಿ ಹಣಕ್ಕೆ ಬದಲಾಗಿ ಕೊಡುವುದಕ್ಕೂ ಹರಿದುಕೊಡಬಹುದಾದ ಚಿಹ್ನಪತ್ರ; ಗುರುತುಚೀಟಿ. (ರಾಜ್ಯತಂತ್ರದ ಅಸಂ.) (ಒಬ್ಬ ಉಮೇದುವಾರನು ಪಾರ್ಲಮೆಂಟಿಗೆ ಚುನಾವಣೆಯಾಗುವುದಕ್ಕೆ ಅರ್ಹತೆಯುಳ್ಳವನೆಂದು ಪಡೆಯುವ) ಒಂದು ಪಕ್ಷದ ಮುಖಂಡನ ಅನುಮತಿ. ಬೀಡಿ, ತಿಂಡಿಪದಾರ್ಥ, ಮೊ. ಗಳ ಕಟ್ಟುಗಳೊಡನೆ ಅಥವಾ ಇತರ ವಿಧಗಳಲ್ಲಿ, ಹಂಚಿದ ಚೀಟಿಗಳು ಕೆಲವನ್ನು ಆ ವ್ಯಾಪಾರಿಗಳಿಗೆ ಒಪ್ಪಿಸಿದಲ್ಲಿ ಇನಾಮು ಬರುವ ಭರವಸೆಚೀಟಿ: 'ಕೂಪನ್.' C. system ಕೂಪನ್ ಪದ್ಧತಿ.

Coúrage ಕರೆಜ್ (ನಾ.) ಧೈರ್ಯ; ಎದೆಗಾರಿಕೆ; ಕೆಚ್ಚು; ಗುಂಡಿಗೆ; ಧಾತಿ; ಕಲಿತನ; ನಿರ್ಭಯ. Take, pluck up, c. ಧೈರ್ಯ ತಂದುಕೊ. Lose c. ಧೈರ್ಯಗುಂದು. Take one's c. in both hands ಸಾಹಸ ಕಾರ್ಯಕ್ಕೆ ಧೈರ್ಯದಿಂದ ನುಗ್ಗು. Dutch c. ಕುಡಿತದಿಂದುಂಟಾದ ನಿರ್ಭಯ. C. of one's opinions, convictions ಸ್ವಂತ ಅಭಿಪ್ರಾಯದಂತೆ ನಡೆಯುವ ಧೈರ್ಯ. **Courágeous** ಕರೇಜಸ್ (ಗು.); **Courágeously** (ಕ್ರಿ. ವಿ.); **Courágeousness** (ನಾ.)

Couránt[1] ಕುರ್ರ್ಯಾಂಟ್, **Coúrant** ಕೂರಂಟ್ (ನಾ.) ವೃತ್ತಪತ್ರಿಕೆ [ಅರೂಢಿ; ಕೆಲವು ವೃತ್ತಪತ್ರಿಕೆಗಳ ಹೆಸರುಗಳಲ್ಲಿ ಮಾತ್ರ ಪ್ರಯೋಗ (ಅಮೆ. ಸಂ., ಉಚ್ಚಾರಣೆ: ಕರಂಟ್)]

Couránt[2] ಕೂರಾಂಟ್ (ಗು.) (ವಂಶಲಾಂಛನ) (ಮೃಗ) ಓಡುತ್ತಿರುವಂತೆ ಚಿತ್ರಿಸಿರುವ.

Coúrier ಕು(ಕೂ)ರಿಯರ್ (ನಾ.) ಓಡುತ್ತ ಸಮಾಚಾರ ಒಯ್ಯುವವನು: ಚಾರ; ಹರಿಕಾರ. ಪ್ರಯಾಣದ ವ್ಯವಸ್ಥೆಗಳನ್ನು ನೋಡಿಕೊಳ್ಳುವ ಚಾರ. ಕೆಲವು ವೃತ್ತಪತ್ರಿಕೆಗಳ ಹೆಸರು (Liverpool C.)

Course ಕೋರ್ಸ್ (ನಾ.) ಮಾರ್ಗ; ಗತಿ; ಗಮನ; ನಡೆ; ಓಟ; ಹರಿವು; ಪಥ; ದಾರಿ; ಕ್ರಮ [Change one's c. ಗತಿ, ಮಾರ್ಗ, ಬದಲಾಯಿಸು. A dangerous c. ಅಪಾಯಕರವಾದ ಮಾರ್ಗ, ಗತಿ (ನಡೆವಳಿಯ ವಿಷಯದಲ್ಲಿ). C. of events ಘಟನಾವಳಿಯ ಗತಿ. C. of nature ಪ್ರಕೃತಿಯ ಗತಿ]. [(ಬ. ವ. ದಲ್ಲಿ) Evil courses ಕೆಟ್ಟ ನಡತೆ; ದುರ್ಮಾರ್ಗ]. ಓಟದ ಪಂದ್ಯ ನಡೆಯುವ ಪ್ರದೇಶ; ವೈಹಾಳಿ ಪಥ (= race-c.). ನೀರು ಹರಿಯುವ ಹಳ್ಳ; ನದೀ ಮಾರ್ಗ. (C. of exchange. Exchange ನೋಡಿ). ನಡೆವಳಿ. (ಉಪನ್ಯಾಸ, ಮೊ. ಗಳ) ಮಾಲೆ; ಪರಂಪರೆ; ಪದ್ಧತಿ. ಊಟದ ಪದಾರ್ಥಗಳ ಅನುಕ್ರಮದಲ್ಲಿ ಒಂದು ವರಿಸೆ. (ಕಟ್ಟಡದಲ್ಲಿ ಒಂದರ ಮೇಲೊಂದರಂತೆ ಬರುವ) ಕಲ್ಲಿನ ಅಥವಾ ಇಟ್ಟಿಗೆಯ ವರಿಸೆ. (ಬ. ವ. ದಲ್ಲಿ) ಋತು; ರಜಸ್ಸು; ಮುಟ್ಟು. (ನಾವೆ) Fore-c. (ಹಡಗಿನ) ಮುನ್‌ಪಟ; Main c. ಪ್ರಧಾನ ಪಟ. In the c. of ನಡುವೆ; ಮಧ್ಯೆ. By c. of (ವ್ಯವಹಾರ ನ್ಯಾಯ, ಮೊ. ಗಳ) ಸಾಮಾನ್ಯ ನಡೆವಳಿಯಮೇರೆ; ಕ್ರಮಾನುಸಾರವಾಗಿ. In due c. ಕಾಲ ಕ್ರಮದಲ್ಲಿ. Of c. ಸಹಜವಾಗಿ; ಸ್ವಾಭಾವಿಕವಾಗಿ; ನಿಸ್ಸಂದೇಹವಾಗಿ; ಅವಶ್ಯವಾಗಿ. Matter of c. ಸಹಜವಾಗಿ, ಸ್ವಾಭಾವಿಕವಾಗಿ, ನಡೆಯತಕ್ಕದ್ದು; ಸರ್ವ ಸಾಮಾನ್ಯವಾದದ್ದು.

Course (ಕ್ರಿ.) (ಬೇಟೆಯನ್ನು) ಅಟ್ಟಿಕೊಂಡು ಹೋಗು; ಬೆನ್ನಟ್ಟು. ಹರಿದಾಡು; ಹರಿ; ಓಡು (ಮು., ದ್ರವಗಳ ವಿಷಯದಲ್ಲಿ); (ಕುದುರೆಯನ್ನು) ಓಡಿಸು. ಬೇಟೆನಾಯಿಗಳಿಂದ ಬೇಟೆಯಾಡು. **Coúrser** (ನಾ.) (ಕಾವ್ಯ) ಓಟದ ಕುದುರೆ; ಜೂಜಿನ ಕುದುರೆ; ದಾಳಿಯ ಕುದುರೆ.

Court ಕೋರ್ಟ್ (ನಾ.) ಗೋಡೆಗಳಿಂದ ಅಥವಾ ಕಟ್ಟಡಗಳಿಂದ ಸುತ್ತುವರಿದಿರುವ ಪ್ರದೇಶ (= Courtyard); ಅಂಗಳ; ಅಂಗಣ; ತೊಟ್ಟಿ. (ಟೆನಿಸ್, ಮೊ. ಆಟಗಳಿಗಾಗಿ) ಸುತ್ತಾವರಣವುಳ್ಳ, ಛಾವಣಿಯಿಲ್ಲದ ಅಥವಾ ಉಳ್ಳ, ಚತುಶ್ಶಾಲೆ; ಆಟದ ಅಂಗಳ. (ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ) ಪ್ರೌಢ ವಿದ್ಯಾಶಾಲಾಂಗಣ. ಪ್ರದರ್ಶನ ಶಾಲೆ, ವಿವಿಧವಸ್ತು ಶಾಲೆ, ಮೊ. ಗಳಲ್ಲಿಯ ಬೇರೆ ಬೇರೆ ಭಾಗ, ಅಂಕಣ. ಅರಮನೆ; ರಾಜಗೃಹ; ರಾಜಾಸ್ಥಾನ; ದೊರೆಯ ನೌಕರರು ಮತ್ತು ಪರಿವಾರ; ರಾಜಪರಿವಾರ; ರಾಜಾಸ್ಥಾನದ ದೊಡ್ಡ ಮನುಷ್ಯರು; ಆಸ್ಥಾನಿಕರು. (ರಾಜ್ಯಭಾರ ಮಾಡುವ) ದೊರೆ ಮತ್ತು ಮಂತ್ರಿಗಳು (C. of St. James's ಬ್ರಿಟಿಷ್ ದೊರೆ ಮತ್ತು ಮಂತ್ರಿಗಳು); ಓಲಗ; ಒಡ್ಡೋಲಗ; ಆಸ್ಥಾನ; ದರ್ಬಾರು. (High C. of Parliament ನ್ಯಾಯಸ್ಥಾನವಾಗೇರ್ಪಟ್ಟ ಪಾರ್ಲಮೆಂಟಿನ ಸಭೆ). ನ್ಯಾಯಸ್ಥಾನ [Out of c. (ವಾದಿಯ ಮತ್ತು ವಾದದ ವಿಷಯದಲ್ಲಿ) ಮಾನವೆಯ ಹಕ್ಕಿಲ್ಲದ. ಅಸಂಗತ; ಅಸಂಬದ್ಧ]. ನ್ಯಾಯಾಧೀಶರ ಅಥವಾ ನ್ಯಾಯ ತೀರ್ಪಿಗಾಗಿ ನಿಯಮಿತರಾದ ಇತರರ ಸಭೆ: ನ್ಯಾಯ ಸಭೆ (C. of Law, Law-c., C. of justice, C. of judicature, County c., Criminal c., Police c., C. of Admiralty, C. of Common Pleas, C. of equity, etc.). ಒಂದು ಮಂಡಲಿಯ ಅಥವಾ ಸಂಘದ ಅಧಿಕಾರವುಳ್ಳ ಸದಸ್ಯರು; ಅವರ ಅಧಿವೇಶನ. (ಕೆಲವು ಮಿತ್ರಸಂಘಗಳಲ್ಲಿ) ಸಭಾ ಮಂದಿರ. (ಒಬ್ಬರ ದಯೆಯನ್ನೂ ಪ್ರೀತಿ ವಿಶ್ವಾಸಗಳನ್ನೂ ಅಪೇಕ್ಷಿಸುವವರು ಅಂಥವರಿಗೆ ತೋರಿಸುವ) ಗೌರವ, ಮರ್ಯಾದೆ, ಅನುನಯ (Pay c. to ಗೌರವ ಮರ್ಯಾದೆಗಳನ್ನು ತೋರಿಸು; ಅನುಸರಣೆ ಮಾಡು; ಅನುನಯ ತೋರು). C.-card (ಆದಿಯಲ್ಲಿ Coat-card) (ಇಸ್ಪೀಟಾಟದಲ್ಲಿ) ರಾಜ, ರಾಣಿ, ಗುಲಾಮ. C. circular (ವೃತ್ತಪತ್ರಿಕೆಗಳಲ್ಲಿ ಪ್ರಚಾರ ಮಾಡುವ) ರಾಜಾಸ್ಥಾನದ ವಿಚಾರಗಳು: ಆಸ್ಥಾನ ವರ್ತಮಾನ. C.-fool, -jester ಆಸ್ಥಾನ ವಿದೂಷಕ. C. guide (ಆಸ್ಥಾನದಲ್ಲಿ ದೊರೆಯ ಪರಿಚಯ ಪಡೆದಿರುವ) ಶ್ರೀಮಂತ ವರ್ಗದವರ ಹೆಸರು, ವಿಳಾಸ, ಮೊ. ವನ್ನುಳ್ಳ ಪುಸ್ತಕ: ಆಸ್ಥಾನಿಕರ ವಿಳಾಸಪುಸ್ತಕ. C. martial ಸೇನೆಯ ಮತ್ತು ನಾವೆಯ ಅಧಿಕಾರಿಗಳನ್ನು ನ್ಯಾಯವಿಚಾರಣೆ ಮಾಡುವುದಕ್ಕಾಗಿ ನೇಮಕವಾದ ನ್ಯಾಯಸ್ಥಾನ, ಕೋರ್ಟು: ಸೈನಿಕ ನ್ಯಾಯಸ್ಥಾನ. (Drumhead c. martial ರಣರಂಗದಲ್ಲಿ ತಲೆಕೆಳಗಾಗಿಟ್ಟಿರುವ ಭೇರಿಯ ಸುತ್ತ ನಡಸುವ ಕೋರ್ಟುವಿಚಾರಣೆ). C.-martial (ಕ್ರಿ. ಸಕ.) ಸೈನಿಕ ನ್ಯಾಯಸ್ಥಾನದಲ್ಲಿ ವಿಚಾರಣೆ ಮಾಡು. C. plaster ಗಾಯ, ಮೊ. ಕ್ಕಾಗಿ ಉಪಯೋಗಿಸುವ ಅಂಟುಲೇಪ ('ಪಳಾಸ್ತ್ರಿ') (ಹಿಂದೆ, ರಾಜಾಸ್ಥಾನದ ಮಹಿಳೆಯರು ಮುಖದ ಅಂದವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಉಪಯೋಗಿಸುತ್ತಿದ್ದದ್ದು). C. roll ಶ್ರೀಮಂತನ ಹಿಡುವಳಿಯಲ್ಲಿರುವ ಜಮೀನುಗಳ ದಾಖಲೆಪುಸ್ತಕ, ಕಡತ: ಜಮೀನುಹಿಡುವಳಿಯ ಕಡತ.

Court (ಕ್ರಿ. ಸಕ.) ಅನುನಯ ತೋರು; (ಆದರ, ಉಪಚಾರ, ಹೊಗಳಿಕೆ, ಮೊ. ಗಳಿಂದ, ಅಧಿಕಾರಿ, ಮೊ. ರ) ಅನುಗ್ರಹ, ಪ್ರೀತಿ, ಮೆಚ್ಚಿಕೆ, ಮೊ. ನ್ನು ಸಂಪಾದಿಸಲು ಯತ್ನಿಸು; ಪ್ರಣಯ ತೋರು; ಪ್ರೀತಿಸು. ಮೋಹಗೊಳಿಸು; ಮರುಳುಗೊಳಿಸು; ಮುಗ್ಧನನ್ನಾಗಿ ಮಾಡು; ಬಲೆಗೆ ಬೀಳುವಂತೆ ಮಾಡು (ರೂಪ.); ವಂಚಿಸು. (ವಿಚಾರಣೆ, ಮೊ. ಕ್ಕೆ) ಕರೆ ಕೊಡು, ಆಹ್ವಾನ ಕೊಡು. ಕೋರು; ಹುಡುಕಿಕೊಂಡು ಹೋಗು (You are courting disaster ಕೇಡನ್ನು ಕರೆಯುತ್ತಿರುವೆ). **Coúrteous** ಕೋರ್ಟ್ಯಸ್, ಕರ್ಟ್ಯಸ್ (ಗು.) (ನಡೆನುಡಿಗಳಲ್ಲಿ) ವಿನಯದಿಂದ ಕೂಡಿದ; ವಿನೀತ; ದಯಾಪರ; ಉದಾರ ಚರಿತ. **Coúrteously** (ಕ್ರಿ. ವಿ.); **Coúrteousness** (ನಾ.); **Coúrtesy** ಕೋರ್ಟಸಿ, ಕರ್ಟಸಿ (ನಾ.) ವಿನಯ; ವಿನೀತತೆ; ಸಭ್ಯತೆ; ಸೌಜನ್ಯ; ಸೌಶೀಲ್ಯ; ಅನುನಯ; ಆದರಣೆ; ದಾಕ್ಷಿಣ್ಯ; ಮರ್ಯಾದೆ; ಉಪಚಾರ; ವಿಶ್ವಾಸ [By c. ಅನುಗ್ರಹದಿಂದ (ಹಕ್ಕಿನಿಂದಲ್ಲ). C. title (ಶಾಸನಾಧಾರವಿಲ್ಲದ) ಔಪಚಾರಿಕ, ದಾಕ್ಷಿಣ್ಯದ, ಬಿರುದು. (ನ್ಯಾ. ಶಾ.) C. of England, Scotland

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆಂಡತಿಗೆ ದಾಯಭಾಗವಾಗಿ ಬಂದ ಕೆಲವುತೆರದ ಆಸ್ತಿಗಳನ್ನು ಆಕೆ ಸತ್ತ ಮೇಲೆ ಅನುಭೋಗಮಾಡಲು ಗಂಡನಿಗೆ ಇರುವ ಹಕ್ಕು]. = Curtsy. **Coúrtier** ಕೋರ್ಟಿಯರ್ (ನಾ.) ಆಸ್ಥಾನದ ದೊಡ್ಡಮನುಷ್ಯ : ಆಸ್ಥಾನಿಕ ; ದರ್ಬಾರಿ. **Coúrtly** (ಗು.) ಆಸ್ಥಾನೋಚಿತ ನಡೆ ನುಡಿಗಳುಳ್ಳ ; ನಡೆ ನುಡಿಗಳಲ್ಲಿ ನಯಶಾಲಿಯಾದ ; ವಿನಯದಿಂದ ಕೂಡಿದ ; ಸಭ್ಯ ; ಅತಿಮರ್ಯಾದೆಯ ; ಹೊಗಳಿಕೆಯ. **Coúrtliness** (ನಾ.) ; **Coúrtship** (ನಾ.) (ಮದುವೆಮಾಡಿಕೊಳ್ಳುವ ಉದ್ದೇಶದಿಂದ) ಪ್ರೇಮದ ನಡೆವಳಿ, ಪ್ರಣಯಾಚರಣೆ ; ಅನುನಯ.

Courtesán, -zán ಕೋ(ಕ)ರ್ಟಿಝ್ಯಾನ್ (ನಾ.) ಸೂಳೆ ; ವೇಶ್ಯಾಂಗನೆ; ವಾರ ಸ್ತ್ರೀ ; ನಾಯಕಸಾನಿ.

Coúrtesy, etc.
Coúrtier
Coúrtship } Court ನೋಡಿ.

Coúsin ಕಸ್ಸಿನ್ (ನಾ.) ದೊಡ್ಡಪ್ಪನ, ದೊಡ್ಡಮ್ಮನ, ಚಿಕ್ಕಪ್ಪನ, ಚಿಕ್ಕಮ್ಮನ, ಸೋದರ ಮಾವನ, ಸೋದರತ್ತೆಯ, ಮಗ, ಮಗಳು (Also, First c., C. german) ; ಒಂದು, ಎರಡು, ಮೊ. ತಲೆ ಕಳೆದ ಈ ಬಾಂಧವ್ಯವುಳ್ಳ ನಂಟ : ಸೋದರ ಬಾಂಧವ್ಯವುಳ್ಳ ನಂಟ ; ರಕ್ತ ಸಂಬಂಧಿ. (Call cousins ಬಾಂಧವ್ಯ ಹೂಡು ; ಸಂಬಂಧ ಹೇಳಿಕೊ ; ನಂಟತನ ಕಲ್ಪಿಸು). (ದೊರೆ ಇತರ ದೊರೆಗಳನ್ನು ಅಥವಾ ತನ್ನ ದೇಶದ ಶ್ರೀಮಂತನನ್ನು ಸಂಬೋಧಿಸುವಲ್ಲಿ ಉಪಯೋಗಿಸುವ ಪದ) : ಭ್ರಾತೃ. **Coúsinhood** (ನಾ.) ಭ್ರಾತೃ ಸಂಬಂಧ ; ಭ್ರಾತೃವರ್ಗ ; ಬಂಧು ವರ್ಗ. **Coúsinship** (ನಾ.) = Cousinhood ; ಭ್ರಾತೃ ಸಹಜವಾದ ನಡತೆ. **Coúsinly** (ಗು.) ಭ್ರಾತೃಸಹಜವಾದ.

Coute que Coúte (F) ಕೂಟ್ ಕೆ ಕೂಟ್ (ಕ್ರಿ. ವಿ.) ಏನೇ ಆಗಲಿ ; ಆದದ್ದಾಗಲಿ ; ಬಂದದ್ದು ಬರಲಿ.

Couváde ಕೂವಾಡ್ (ನಾ.) ಹೆಂಡತಿ ಹೆತ್ತಾಗ ಗಂಡನು ಬೇನೆ ಅನುಭವಿಸಿದಂತೆ ಮಲಗಿ ಹೆರಿಗೆಯ ಉಪಚಾರ ಪಡೆಯುವುದು ; ಗಂಡನ(ನುಭವಿಸುವ) ಬಾಣಂತಿತನ. (ಈ ಪದ್ಧತಿ ಕೆಲವು ಅನಾಗರಿಕ ಜನಾಂಗಗಳಲ್ಲಿ ರೂಢಿಯಲ್ಲಿದೆಯಂತೆ)

Cove[1] ಕೋವ್ (ನಾ., ಕ್ರಿ. ಸಕ.) ಸಣ್ಣ (ಸಮುದ್ರ) ಕೊಲ್ಲಿ, ಖಾರಿ. ಮರೆಯಾಗಿರುವ ಮೂಲೆತಾಕು ; ಗುಹೆ ; ಗವಿ. (ವಾ. ಶಾ.) ಒಳ ಬಾಗಿನ ಕಮಾನು. ಗೋಡೆ ಥಾವಣಿಗಾಗಲಿ ನೆಲಕ್ಕಾಗಲಿ ಸೇರುವ ಕಡೆ ಮಾಡುವ ಒಳಬಾಗು : ಒಳಬಾಗು ಸೇರಿಕೆ ; ಕಮಾನು ಸೇರುವೆ. (ಕ್ರಿ.) (ಗೋಡೆಯ ಮೇಲೂ ಕೆಳಗೂ) ಬಿಲ್ಲುಸೇರುವೆ ಮಾಡು.

Cove[2] ಕೋವ್ (ನಾ.) (ಅಸಂ.) ಆಸಾಮಿ ; ಗೆಳೆಯ (ಕಳ್ಳರ ಸಂಕೇತ)

Cóven, Cóvin ಕವೆನ್ (ನಾ.) ಕೂಟ (ಮು., ಮಾಟಗಾತಿಯರದು)

Cóvenant ಕವಿನಂಟ್ (ನಾ., ಕ್ರಿ.) ಒಪ್ಪಂದ ; ಒಡಂಬಡಿಕೆ ; ಕರಾರು. (ಬೈಬಲ್) ದೇವರಿಗೂ ಇಸ್ರೈಲೈಟರಿಗೂ ಆದ ಒಡಂಬಡಿಕೆ [Ark of the C. (Ark ನೋಡಿ). Land of the c. ಕೇನನ್ ; ಸ್ವರ್ಗ]. Solemn League and C. (ಇಂಗ್ಲೆಂಡಿನಲ್ಲೂ ಸ್ಕಾಟ್ಲೆಂಡಿನಲ್ಲೂ ಕ್ರೈಸ್ತ ಪ್ರೆಸ್ಬಿಟೇರಿಯನ್ ಮತವನ್ನು ಸ್ಥಾಪನೆ ಮಾಡಿದ) ವಿಧಿವಿಹಿತವಾದ ಸಂಧಿ ಮತ್ತು ಒಡಂಬಡಿಕೆ. C. of the League of Nations [ಮಹಾಯುದ್ಧದ ಅಂತ್ಯದಲ್ಲಾದ (ಕ್ರಿ. ಶ. ೧೯೧೯ರಲ್ಲಿ) 'ವರ್ಸೆಯ್ಲ್ಸ್' ಸಂಧಿಯಲ್ಲಿ ಮತ್ತು ಇತರ ಸಂಧಿಗಳಲ್ಲಿ ಗರ್ಭೀಕರಿಸಿರುವ] ಜನಾಂಗ ಸಂಘದ ಸ್ಥಾಪನೆಯ ಒಡಂಬಡಿಕೆ. (ಕ್ರಿ.) ಒಡಂಬಡು ; ಒಪ್ಪಂದ ಮಾಡಿಕೊ. **Cóvenanted** (ಗು.) ಒಡಂಬಡಿಕೆಯಿಂದ ಕಟ್ಟುಬಿದ್ದಿರುವ; ಒಪ್ಪಂದದ (ಮು., ಇಂಡಿಯನ್ ಸಿವಿಲ್‌ಸರ್ವಿಸಿನ ಅಧಿಕಾರಿಗಳ ವಿಷಯದಲ್ಲಿ). The c. service ಒಡಂಬಡಿಕೆಯ ಕಟ್ಟಿಗೊಳಪಟ್ಟ ಅಧಿಕಾರಿ ವರ್ಗ, ಇರಾಪೆ. **Cóvenanter** (ನಾ.) ಒಡಂಬಡಿಕೆಗೊಳಪಟ್ಟವನು ; ಒಪ್ಪಂದಗಾರ (ಮು., ಮೇಲೆ ಹೇಳಿದ ಕ್ರೈಸ್ತ ಒಡಂಬಡಿಕೆ, ಮೊ. ವಕ್ಕೆ)

Cóvent Garden ಕಾವೆಂಟ್ ಗಾರ್ಡ್‌ನ್ (ನಾ.) ಹೂವು, ಹಣ್ಣು ಹಂಪಲು, ತರಕಾರಿ — ಇವನ್ನು ಮಾರುವ ಲಂಡನ್ನಿನ ಒಂದು ಚೌಕ, ಮಾರ್ಕಟ್ಟು. (Convent Garden ಎಂಬುದರ ಅಪಭ್ರಂಶ : ಹಿಂದೆ, ಇಲ್ಲಿ ಒಂದು ಸಂನ್ಯಾಸಿಮಠಕ್ಕೆ ಸೇರಿದ ತೋಟವಿದ್ದಿತಂತೆ)

Cóventry ಕಾ(ಕ)ವೆಂಟ್ರಿ (ನಾ.) ಇಂಗ್ಲೆಂಡಿನ ವಾರಿಕ್‌ಷಯರಿನಲ್ಲಿರುವ ಒಂದು ಪುರಾತನ ಪಟ್ಟಣ. ಒಬ್ಬನ ಅಸಭ್ಯ ವರ್ತನೆ, ಮೊ. ತಪ್ಪಿತಕ್ಕಾಗಿ ಅವನೊಡನೆ ಯಾರೂ ಸೇರದೆ ಬಹಿಷ್ಕಾರ ಹಾಕಿರುವ ಸ್ಥಿತಿ. Send person to C. ಬಹಿಷ್ಕಾರ ಹಾಕು. (ಹಿಂದೆ, ಇಂಗ್ಲೆಂಡಿನಲ್ಲಿ ನಡೆದ ರಾಷ್ಟ್ರಾಂತರ್ಯುದ್ಧದಲ್ಲಿ, ಸಗ್ಗದೆ ತೊಂದರೆಕೊಡುತ್ತಿದ್ದ ರಾಜಪಕ್ಷದವರನ್ನು ಪಾರ್ಲಿಮೆಂಟ್ ಪಕ್ಷದ ಅಧಿಕಾರಿಗಳು ಕಾವೆಂಟ್ರಿಯಲ್ಲಿದ್ದ ಸೆರೆಮನೆಗೆ ಕಳುಹಿಸುತ್ತಿದ್ದರಂತೆ)

Cóver ಕವರ್ (ಕ್ರಿ. ಸಕ.) [ಬಟ್ಟೆ, ಮುಚ್ಚಳ, ಮೊ. ಗಳಿಂದ, (ರೂಪ.) ಅಪಮಾನ, ಮೊ. ಗಳಿಂದ] ಮುಚ್ಚು ; ಕವಿ ; ಹರವು ; ಹಾಸು ; ಹೊದಿಸು ; ಮರೆ ಮಾಡು ; ಆಚ್ಛಾದಿಸು ; ಆವರಿಸು ; ವ್ಯಾಪಿಸು. ಮರೆಯಾಗು ; ಮುಚ್ಚಳವಾಗಿರು ; ಮೇಲೆ ಕವಿ ; ಮೇಲ್ಭಾಗದಲ್ಲಿರು ; ಮರೆಕೊಡು ; ಕಾಪಾಡು. [Covering letter (ಲಕೋಟೆಯೊಳಗಿಟ್ಟಿರುವ ದಸ್ತೈವಜು, ಕಾಗದಪತ್ರ, ಮೊ. ಗಳ ವಿಷಯವಾದ ವಿವರವನ್ನು ತಿಳಿಸುವ) ಆವರಣ ಪತ್ರ]. (ಕೋಟೆ, ಫಿರಂಗಿ, ಮೊ. ಗಳ ವಿಷಯದಲ್ಲಿ, ಒಂದು ಗೊತ್ತಾದ ದೇಶಭಾಗದಮೇಲೆ) ಶಕ್ತಿಪ್ರಸಾರಣೆಯುಳ್ಳದ್ದಾಗಿರು ; ವ್ಯಾಪನೆಯಿರು. (C. with gun ಬಂದೂಕನ್ನು ಗುರಿಯಿಡು). (ಮನೋಭಾವಗಳು, ಮೊ. ನ್ನು) ಮರೆಮಾಚು, ಮುಚ್ಚಿಡು. (ಸೈನ್ಯ) ಮುಂದಿನ ಸಾಲಿನ ಸೈನಿಕರ ಹಿಂದೆ ನಿಲ್ಲು. (ಕ್ರಿಕೆಟ್) ಮುಂದಿನ ಆಟಗಾರನು ಹಿಡಿಯದೆ ಬಿಟ್ಟ ಚೆಂಡನ್ನು ಹಿಡಿಯುವುದಕ್ಕಾಗಿ ಹಿಂದೆ ನಿಂತಿರು (C.-point ದಾಂಡುಗಾರನ ಬಲಗಡೆಗೆ ಚೆಂಡುಹಿಡಿಯಲು ನಿಂತಿರುವ ಒಬ್ಬ ಆಟಗಾರ ; ಅವನು ನಿಂತಿರುವ ಸ್ಥಳ). (ವೃತ್ತಪತ್ರಿಕೆ) ಸಭೆ, ಮೊ. ಗಳ ಕಾರ್ಯಕಲಾಪ, ಸಮಾಚಾರ, ಮೊ. ಗಳ ವರದಿ, ಸುದ್ದಿ, ಕಳುಹಿಸು. ಒಳಕೊಳ್ಳು ; ಗರ್ಭೀಕರಿಸು. ವೆಚ್ಚಕ್ಕೆ ಸಾಕಾಗು. ವಿಮೆ, ಮೊ. ನ್ನು ಮಾಡಿ ರಕ್ಷಣೆ ಪಡೆ, ಕೊಡು. ದೂರ ಸಾಗು (The train covered ten miles). (ಗಂಡುಗುದುರೆಯ ವಿಷಯದಲ್ಲಿ) ಹೆಣ್ಣುಕುದುರೆಯಮೇಲೆ ಹತ್ತು, ಹಾರು. C. in ಮುಚ್ಚಿಬಿಡು ; (ಗೋರಿ, ಮೊ. ನ್ನು) ಮಣ್ಣು ಮುಚ್ಚಿಬಿಡು. C. up (ಕಾಗದ, ಮೊ. ನ್ನು ಸುತ್ತುವುದರಿಂದ) ಮರೆಮಾಡು. **Cóvering** (ನಾ.) ಮುಚ್ಚುವುದು ; ಮುಚ್ಚಳ.

Cóver (ನಾ.) ಮುಚ್ಚುವ ವಸ್ತು ; ಮುಚ್ಚಳ ; ಹೊದಿಕೆ ; ಗವುಸು ; ಮುಸುಕು ; ಮರೆ ; ಆಚ್ಛಾದನೆ ; ಆವರಣ ; ಪುಸ್ತಕದ ರಕ್ಷಾವರಣ, ರಟ್ಟು (From c. to c. ಪುಸ್ತಕದ ಒಂದು ಕೊನೆಯಿಂದ ಮತ್ತೊಂದು ಕೊನೆಯ ವರೆಗೆ : ಆದ್ಯಂತವಾಗಿ). (ಪತ್ರದ) ಲಕೋಟೆ, ಸುತ್ತುವ ಕಾಗದ. ಅವಿತುಕೊಳ್ಳುವ ಸ್ಥಳ ; ಮರಸು ; ಕಾಪು ; ರಕ್ಷೆ [Take c. (ಸೈನಿಕ) ನೆಲದ ತಿಟ್ಟು ತಗ್ಗುಗಳನ್ನು ರಕ್ಷಣೆಗಾಗಿ ಉಪಯೋಗಿಸಿಕೊ]. ತೆರೆ ; ನೆಪ ; ವ್ಯಾಜ ; ಛದ್ಮ [Under (the) c. of humility ನಮ್ರತೆಯ ವ್ಯಾಜದಿಂದ]. ಬೇಟೆಗೆ ಮರೆಕೊಡುವ ಕಾಡು ಅಥವಾ ಕುರುಚಲು, ಹೊದರು. (ವ್ಯಾಪಾರ) ತೀರಿಸಬೇಕಾದ ದೇಣಿಗೆ, ಸಂಭವಿಸಬಹುದಾದ ನಷ್ಟಕ್ಕೆ, ಆಧಾರವಾಗಿಡುವ ನಿಧಿ : ಈಡು ನಿಧಿ. ಊಟದ ಮೇಜಿನಮೇಲೆ ಊಟಮಾಡುವ ಪ್ರತಿಯೊಬ್ಬನಿಗೂ ಇಡುವ ತಟ್ಟೆ, ಕೈಚೌಕ, ಮೊ. (Covers were laid for fifty guests ಐವತ್ತು ಮಂದಿಗೆ ಭೋಜನದ ಏರ್ಪಾಡು ಮಾಡಲಾಯಿತು)

Cóverlet, -lid ಕವರ್ಲೆಟ್, — ಲಿಡ್ (ನಾ.) (ಹಾಸಿಗೆಯ) ಮೇಲುಹಾಸು ; ರಜಾಯಿ ; ಹೊದಿಕೆ ; ಗವುಸು.

Cóvert ಕವರ್ಟ್ (ಗು., ನಾ.) (ಬೆದರಿಕೆ, ನೋಟ, ಮೊ. ಗಳ ವಿಷಯದಲ್ಲಿ) ಮರೆಯ ; ಗುಪ್ತ ; ಗೂಢ ; ಪ್ರಚ್ಛನ್ನ ; ರಹಸ್ಯ ; ಮುಚ್ಚುಮರೆಯ. (ನಾ.) ಮರೆ ; ಕಾಪು ; ಮರಸು (ಮು., ಬೇಟೆಗೆ ಮರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾಗಿರುವ ಪೊದೆ). C. coat ಗಿಡ್ಡನಾದ ಮತ್ತು ಹಗುರವಾದ ಮೇಲಂಗಿ. **Cóvertly** (ಕ್ರಿ. ವಿ.) ; **Cóverture** ಕವರ್‌ಟ್ಯು(ಚ)ರ್ (ನಾ.) ಹೊದಿಕೆ ; ಮರೆ ; ಆಚ್ಛಾದನೆ ; ರಕ್ಷೆ ; ಕಾಪು. ಗಂಡನ ರಕ್ಷಣೆಯಲ್ಲಿರುವ ಮದುವೆಯಾದ ಹೆಂಗಸಿನ ಸ್ಥಿತಿ : ಪತಿಯ ರಕ್ಷಣೆ.

Cóvet ಕವೆಟ್ (ಕ್ರಿ. ಸಕ.) (ಸಾ., ಪರರೊಡವೆಗೆ) ಆಸೆಪಡು, ಬಯಸು, ದುರಾಶೆಪಡು, ಅಳುಪು (ಗ್ರಾಂ.). **Cóvetable** (ಗು.) ಬಯಸತಕ್ಕ ; ಆಶಾರ್ಹ. **Cóvetous** (ಗು.) ಬಾಚಿಕೊಳ್ಳುವ ; ದುರಾಶೆಯ ; ಅತ್ಯಾಶೆಯ ; ಲೋಭವುಳ್ಳ. **Cóvetously** (ಕ್ರಿ. ವಿ.) ; **Cóvetousness** (ನಾ.)

Cóvey ಕವಿ (ನಾ.) ಪಾರ್ಟ್ರಿಡ್ಜ್ ಪಕ್ಷಿಯ ಸಂತಾನ. ಕುಟುಂಬ ; ಗುಂಪು ; ತಂಡ ; ಗಣ ; ವೃಂದ.

Cóvin ಕವಿನ್ (ನಾ.) (ನ್ಯಾ. ಶಾ., ಪ್ರಾಚೀ. ಪ್ರ.) ಪಿತೂರಿ ; ಒಳ ಸಂಚು.

Cóving ಕೋವಿಂಗ್ (ನಾ.) ಕಟ್ಟಡದ ಕಮಾನುಭಾಗ. (ಬ. ವ. ದಲ್ಲಿ) ಶಾಖದ ಒಲೆಯ ಬಾಗಿನ ಪಕ್ಕಗಳು. ಓರೆಗಳು.

Cow[1] ಕೌ (ನಾ. ; ಬ. ವ. Cows, ಪ್ರಾಚೀ. ಪ್ರ. Kine) ಆಕಳು ; ಹಸು ; ಗೋವು ; ತುರು ; ಎಮ್ಮೆ. ಆನೆ, ಗೇಂಡಾಮೃಗ, ತಿಮಿಂಗಿಲ, ಮೊ. ಗಳ ಹೆಣ್ಣು. C.-boy ದನ ಕಾಯುವವನು ; ಗೊಲ್ಲರ ಹುಡುಗ ; ಗೋವಳ ; ಗೋವಳಿಗ ; ಗೋಪಾಲಕ. C.-catcher ಅಡ್ಡಬಂದ ದನ ಮತ್ತು ಇತರ ತೊಡರುಗಳನ್ನು ಹಿಡಿದೆಸೆಯುವುದಕ್ಕಾಗಿ ರೈಲ್ವೆಎಂಜಿನಿನ ಮುಂಭಾಗದಲ್ಲಿ ಹಾಕಿರುವ ಸಲಕರಣೆ : ಗೋವಾರಕ ; ದನ ತಡೆ. C.-calf ಹೆಣ್ಣು ಕರು ; ಹೆಂಗರು. Cowherd ದನ ಕಾಯುವವನು. C.-hide ದನದ ಚರ್ಮ(ದ ಚಾವಟಿ, ತೊಗಲು). C.-pox ಹಸುವಿನ ಮೊಲೆಯಮೇಲೇಳುವ ಸಿಡುಬು : ದನದ ಸಿಡುಬು (ಇದರ ಹಾಲನ್ನು ತೆಗೆದು ಮನುಷ್ಯರಿಗೆ ಸಿಡುಬು ಹಾಕುತ್ತಾರೆ). C.-puncher ದನದ ಮಂದೆಯನ್ನು ಹೊಡೆದುಕೊಂಡು ಹೋಗುವವನು. **Cówish** (ಗು.) ಹಸುವಿನಂಥ.

Cow[2] ಕೌ (ಕ್ರಿ. ಸಕ.) ಹೆದರಿಸು ; ಭಯಪಡಿಸು ; ಬೆದರಿಸು.

Cówage, Cówh- ಕೌಎಜ್, **Cówitch** ಕೌಇಚ್ (ನಾ.) (ಕಾಯಿಯ ಮೇಲ್ಭಾಗದಲ್ಲಿ, ಕುಟುಕುವ ಸೂಕ್ಷ್ಮವಾದ ವಿಷದ ಮುಳ್ಳುಗಳುಳ್ಳ) ನಸುಕುನ್ನಿ ಗಿಡ ; ತುರುಚಿ ಗಿಡ.

Cóward ಕವರ್ಡ್ (ನಾ., ಗು.) ಧೈರ್ಯವಿಲ್ಲದ ; ಪಿರಿಕಿ ; ಪುಕ್ಕಲು ; ಹೇಡಿ ; ಅಂಜುಕುಳಿ ; ಹಂದೆ ; ಭೀರು. **Cówardliness** (ನಾ.) ; **Cówardly** (ಗು., ಕ್ರಿ. ವಿ.) ; **Cówardice** (ನಾ.) ಹೇಡಿತನ ; ಹಂದೆತನ. Moral c. ಇತರರಿಗೆ ಅಸಮಾಧಾನವಾಗುವುದೆಂಬ ಭಯ.

Cówer ಕೌ(ಅ)ರ್ (ಕ್ರಿ. ಅಕ.) ಬಗ್ಗಿ ನಿಲ್ಲು ; ಒಡಲನ್ನು ಬಾಗಿಸಿ ಕುಳಿತುಕೊ. (ಮು., ಭಯದಿಂದ) ಬಗ್ಗಿ ಅಡಗಿಕೊ.

Cowl[1] ಕೌಲ್ (ನಾ.) ಕ್ರೈಸ್ತ ಸಂನ್ಯಾಸಿ ಧರಿಸುವ, ತಲೆಯುಡಿಗೆಯಿರುವ, ತೊಡಿಗೆ ; ಇದರ ತಲೆಯುಡಿಗೆ. ಹೊಗೆಕೊಳವಿಯ, ಗಾಳಿ ಕೊಳವಿಯ, ಟೊಪ್ಪಿಗೆ. **Cowled** (ಗು.)

Cowl[2], **Coul** ಕೌಲ್ (ನಾ.) ಸೀನೀರಿನ ತೊಟ್ಟಿ (ಮು., ಇಬ್ಬರು ದೊಣ್ಣೆಹಾಕಿ ಹೊತ್ತುಕೊಂಡುಹೋಗಲು ಅನುಕೂಲನುವಂತೆ ಎರಡು ಕಿವಿಗಳುಳ್ಳದ್ದು)

Cówrie, -ry ಕೌ(ಅ)ರಿ (ನಾ.) (ದ. ಏಷ್ಯಾದಲ್ಲೂ ಆಫ್ರಿಕದಲ್ಲೂ ಹಣವಾಗಿ ಉಪಯೋಗಿಸುವ) ಕವಡೆ (ಇದು ಹಿಂದೂ ಸಾಗರದಲ್ಲಿ ದೊರೆಯುವ ಒಂದು ಸಣ್ಣ ಸಿಂಪುಪ್ರಾಣಿಯ ಚಿಪ್ಪು) ; ಕವಡೆಯ ಪ್ರಾಣಿ(ಜಾತಿಗಳು)

Cówslip ಕೌಸ್ಲಿಪ್ (ನಾ.) ಒಂದು ಜಾತಿಯ ಹೂವಿನ ಗಿಡ.

Cóxa ಕಾಕ್ಸ (ನಾ. ; ಬ. ವ. -ae) ಸೊಂಟ ; ಕಟ. **Cóxal** (ಗು.)

Cóxcomb ಕಾಕ್ಸ್‌ಕೋಮ್ (ನಾ.) ಜಂಬದ ಕೋಳಿ ; ಜಂಬಗಾರ ; ಡಾಂಭಿಕ ; ಸೊಗಸುಗಾರ. **Coxcómbical** (ಗು.) ; **Cóxcombry** (ನಾ.) ಸೊಗಸುಗಾರತನ ; ಜಂಬಗಾರಿಕೆ.

Cóxswain ಕಾಕ್ಸ್‌ವೆಯ್ನ್, ಕಾಕ್ಸ್‌ನ್ (ನಾ.) (ದೋಣಿಯ) ಕರ್ಣಧಾರ ; ಚುಕ್ಕಾಣಿಗ. ಹಡಗಿನ ದೋಣಿಯ ಮತ್ತು ಅದರ ಚಾಕರರ ವಿಚಾರಣಕರ್ತ. **Cóxswainless** (ಗು.) ; **Cóxswainship** (ನಾ.)

Cóxy. **Cocky** ನೋಡಿ.

Coy ಕಾಯ್ (ಗು.) (ಸಾ., ಹುಡುಗಿಯರ ವಿಷಯದಲ್ಲಿ) ನಾಚಿಕೆಯ ; ಸಂಕೋಚಪಡುವ ; ಲಜ್ಜೆಯುಳ್ಳ ; ಸಿಗ್ಗಾಳಿ ; ವಿನೀತ. (ಸ್ಥಳದ ವಿಷಯದಲ್ಲಿ) ವಿವಿಕ್ತ ; ಮೂಲೆತಾಕಿನಲ್ಲಿರುವ. C. of ಹಿಂದೇಟಿನ ; ಮುಖಹೇಡಿತನದ ; ದಾಕ್ಷಿಣ್ಯವಿಲ್ಲದ. (ಮಾತು, ಮೊ. ಗಳಲ್ಲಿ) ಮಿತವಾದ. **Coýly** (ಕ್ರಿ. ವಿ.) ; **Coýness** (ನಾ.)

Coz ಕಜ಼್ (ನಾ.) (ಪ್ರಾಚೀ. ಪ್ರ.) Cousin ಪದದ ಸಂಕ್ಷಿಪ್ತ.

Coze ಕೋಜ಼್ (ಕ್ರಿ. ಅಕ., ನಾ.) ಮಾತುಕತೆ (ಆಡು) ; ಹರಟೆ (ಹೊಡೆ).

Cózen ಕಜ಼ನ್ (ಕ್ರಿ. ಸಕ.) ವಂಚಿಸು ; ಮೋಸ ಮಾಡು ; ಮರುಳುಗೊಳಿಸು ; ಪುಸಲಾಯಿಸು. **Cózenage** ಕಜ಼ನೆಜ್ (ನಾ.) ಮೋಸ, ವಂಚನೆ (ಮಾಡುವುದು)

Cózy. **Cose** ನೋಡಿ.

Crab[1] ಕ್ರ್ಯಾಬ್ (ನಾ.) ಏಡಿ ; ಏಡಿಕಾಯಿ ; ನಳ್ಳಿ (ಹತ್ತು ಕಾಲಿನ, ಗಡುಸು ಚರ್ಮದ, ಪ್ರಾಣಿ). (ಜ್ಯೋ. ವಿ.) ಕರ್ಕಾಟಕ. ಭಾರ ವಸ್ತುಗಳನ್ನು ಮೇಲಕ್ಕೆತ್ತುವ (ಆದಿಯಲ್ಲಿ ಹಿಡಿಕೊಂಡಿಗಳದ್ದು) ಯಂತ್ರ ಸಲಕರಣೆ : ನಳ್ಳಿಯೆತ್ತಿಗೆ. (ಬ. ವ. ದಲ್ಲಿ) ಅತ್ಯಂತ ಕಡಮೆಯ ಗರ ; ದುಗ (Turn out crabs ನಷ್ಟದಲ್ಲಿ ಪರಿಣಮಿಸು ; ನಿಷ್ಫಲವಾಗು). Catch a c. (ದೋಣಿ ನಡಸುವಲ್ಲಿ, ತಪ್ಪಿನಿಂದ) ಹುಟ್ಟು ನೀರಿನಲ್ಲಿ ತೊಡರಿಕೊ. C.(-louse) (ಮನುಷ್ಯನ ಮೈಗೆ ಹತ್ತುವ) ಕೂರೆ. C-pot ನಳ್ಳಿಹಿಡಿಯುವ ಬುಟ್ಟಿ. **Cráblet** (ನಾ.) ಪುಟ್ಟ ನಳ್ಳಿ. **Cráblike** (ಗು., ಕ್ರಿ. ವಿ.)

Crab[2] ಕ್ರ್ಯಾಬ್ (ಕ್ರಿ.) (ಡೇಗೆಯ ವಿಷಯದಲ್ಲಿ) ಪರಚು ; ಗೀರು ; ಪರಚಾಡು. (ಬಳ. ಮಾ.) ಖಂಡಿಸು ; ಜರೆ ; ವಿರುದ್ಧವಾಗಿ ಟೀಕಿಸು ; ಧ್ವಂಸ ಮಾಡು.

Crab[3] ಕ್ರ್ಯಾಬ್ (ನಾ.) ಕಾಡು ಸೇಬು (ಹಣ್ಣು ಮತ್ತು ಗಿಡ) (= C.-apple). (ರೂಪ.) ಸಿಡುಕು ಮೋರೆಯವನು ; ಸಿಡುಕಿ ; ಮುಂಗೋಪಿ.

Crábbed ಕ್ರ್ಯಾಬೆಡ್ (ಗು.) ಸಹಜ ರೀತಿಯವನಲ್ಲದ ; ಮೂರ್ಖ ; ಹಠಮಾರಿ ; ಒರಟಾದ ; ಕೋಪ ಸ್ವಭಾವದ ; ಸಿಡುಕಿನ ; ಕಟು ; ಉಗ್ರ. (ಗ್ರಂಥಗಳ, ಗ್ರಂಥಕರ್ತರ, ವಿಷಯದಲ್ಲಿ) ವಿಷಮ ; ತೊಡಕಿನ ; ಅರ್ಥವಾಗದ ; ಜಟಿಲ. (ಕೈಬರಹ) ವಿಕಾರವಾದ ; ತೊಡಕಾದ ; ಸೊಟ್ಟಾಪಟ್ಟೆ ; ಓದಲಾಗದ. **Crábbedly** — ಬೆ(ಬಿ)ಡ್ಲಿ (ಕ್ರಿ. ವಿ.) ; **Crábbedness** (ನಾ.) ; **Crábby** (ಗು.) ಒರಟಾದ ; ಸಿಡುಕಿನ ; ತೊಡಕಾದ ; ಜಟಿಲ.

Crack ಕ್ರ್ಯಾಕ್ (ನಾ., ಗು., ಕ್ರಿ.) (ಚಾವಟಿ, ಬಂದೂಕು, ಗುಡುಗು — ಇವುಗಳಿಂದ) ಥಟ್ಟನೆ ಆಗುವ ಕರ್ಕಶ ಧ್ವನಿ ; ಸಿಡಿತ ; ಚಟಚಟ [C. of doom (ಕ್ರೈಸ್ತ) ಅಂತ್ಯ ಮಹಾವಿಚಾರಣೆಯ ದಿನ ಆಗುವ ಅಸಾಧ್ಯವಾದ ಗುಡುಗಿನ ಮೊಳಗು]. ತೀಕ್ಷ್ಣವಾದ ಪೆಟ್ಟು, ಹೊಡೆತ (A c. on the head ತಲೆಮೊಟ್ಟು. In a c. ಒಂದು ಚಿಟಿಕೆಯಲ್ಲಿ ; ತತ್‌ಕ್ಷಣವೇ). (ಪ್ರಾಚೀ. ಪ್ರ.) (ಅಸಂ.) ಜಂಬ ; ಬಡಾಯಿ ; ಬೂಟಾಟಿಕೆ ; ಸುಳ್ಳು ; ಮಾತುಕತೆ ; ಹರಟೆ ; ವಿನೋದ. (ಬ. ವ. ದಲ್ಲಿ) ಸುದ್ದಿ ; ಸಮಾಚಾರ. ಬಿರುಕು ; ಬೀಟೆ ; ಒಡಕು ; ಸೀಳು ; ಸಂದು. ಒಳ್ಳೆಯ ಆಟಗಾರ, ಕುದುರೆ, ಮೊ. ವು ; ನಿಪುಣ ; ಘಟಿಕ. ಕನ್ನಗಳ್ಳ ; ಕನ್ನ ಹಾಕುವುದು ; ಮನೆ ನುಗ್ಗುವುದು. (ಗು., ಬಳ. ಮಾ.) ಅತ್ಯುತ್ತಮವಾದ ; ಪಕ್ಕಾ ; ಘರ್ಜರಿ. (C.-brained ತಲೆ ಕೆಟ್ಟ ; ಹುಚ್ಚು ಹಿಡಿದ). (ಕ್ರಿ.) ಕರ್ಕಶ ಧ್ವನಿ ಮಾಡು, — ಮಾಡಿಸು ; ಸಿಡಿ ; ಸಿಡಿಸು (C. a whip ಚಾವಟಿ ಚಟಗುಟ್ಟಿಸು). (ಕರಟಕಾಯಿ, ತಲೆ ಬುರುಡೆ, ಮೊ. ನ್ನು) ಜಜ್ಜು ; ಸೀಳುವಂತೆ ಒಡೆ ; ಬಿರಿ ; ಬಿರುಕು ಬಿಡು ; ಸೀಳು ; ಸೀಳಿಸು. (ನಂಬಿಕೆ, ಮೊ. ನ್ನು) ಕೆಡಿಸು, ಹಾಳುಮಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂದದ ಎಣ್ಣೆಗಳನ್ನು ಉಷ್ಣದಿಂದಲೂ ಒತ್ತಡದಿಂದಲೂ (ಪೆಟ್ರೋಲನಂಥ) ಹಗುರದ ಎಣ್ಣೆಗಳಾಗಿ ಭೇದಿಸು ; ಒಡೆ. (ಬಳ. ಮಾ., ಭೂ. ಕೃ. ನಲ್ಲ) ಹುಚ್ಚುಹಿಡಿದ. C. a bottle (ಮದ್ಯದ) ಸೀಸೆಯನ್ನು ಕುಡಿದುಬಿಡು, ತೀರಿಸಿಬಿಡು. C. a crib ಮನೆ ನುಗ್ಗು ; ಕನ್ನ ಹಾಕು. C. a joke ಹಾಸ್ಯಮಾಡು ; ತಮಾಷೆಮಾಡು ; ಹಾಸ್ಯದ ಮಾತನಾಡು. C.-jaw (ಬಳ. ಮಾ.) ಉಚ್ಚರಿಸಲಾಗದ (ಪದ). C. up ಹೊಗಳು ; ಸ್ತೋತ್ರ ಮಾಡು. Voice cracks, is cracked ದನಿ ಒಡೆಯುತ್ತದೆ, ಒಡೆದಿದೆ (ಮು., ಯೌವನ ಬಂದಾಗ). Whip cracks ಚಾವಟಿ ಚಟಚಟಿಸುತ್ತದೆ. **Cráckable** (ಗು.) ; **Cráckajack** (ನಾ.) = Crackerjack. **Crácker** (ನಾ.) (ಕ್ರಿಯಾರ್ಥಗಳಲ್ಲಿ). (ಥಟ್ಟನೆ ಸಿಡಿದು ಶಬ್ದಮಾಡುವ) ಪಟಾಕಿ ; ಚಟಚಟಗುಟ್ಟುವ ಸಕ್ಕರೆಮಿಠಾಯಿ ; ತೆಳುವಾದ ಗಡುಸುಬಿಸ್ಕತ್ತು. ಒಡೆಯುವ ಕತ್ತರಿ (Nut-crackers ಅಡಕೆ ಕತ್ತರಿ). ಮುರಿತ ; ನಾಶ ; ಧ್ವಂಸ. (ಪಾಠಶಾಲೆಯ ಅಸಂ.) ಸುಳ್ಳು. **Cráckerjack** (ಗು., ನಾ.) (ಅಮೆ. ಸಂ., ಅಸಂ.) ಅಸಾಧಾರಣವಾದ; ಅತ್ಯುತ್ತಮವಾದ (ವಸ್ತು, ಮನುಷ್ಯ). **Cráckle** ಕ್ರ್ಯಾಕ್‌ಲ್ (ಕ್ರಿ. ಅಕ., ನಾ.) ಚಟಚಟ ಶಬ್ದ (ಮಾಡು). ಸಣ್ಣ ಬಿರುಕುಗಳಿರುವಂತೆ ಕಾಣುವಹಾಗೆ ಮಾಡಿರುವ ಪಿಂಗಾಣಿಸಾಮಾನು, ಗಾಜುಸಾಮಾನು (=C.-china, C.-glass, C.-ware). **Cráckling** (ನಾ.) ; **Crácksman** —ಮನ್ (ನಾ.) ಕನ್ನಗಳ್ಳ. **Crácky** (ಗು.)

Crácknel ಕ್ರ್ಯಾಕ್ನೆಲ್ (ನಾ.) ಬಾಯಲ್ಲಿ ಬೇಗ ಪುಡಿಪುಡಿಯಾಗುವ ಹಗುರವಾದ ಒಂದು ತರದ ಗರಿಗರಿ ಬಿಸ್ಕತ್ತು.

Crádle ಕ್ರೇಡ್‌ಲ್ (ನಾ., ಕ್ರಿ. ಸಕ.) ತೊಟ್ಟಿಲು. ಕೂಸುತನ. ಹಸುಳೆತನ ; ಶೈಶವ (From the c. to the grave ಹುಟ್ಟಿದಂದಿನಿಂದ ಸಾಯುವವರೆಗೂ). (ರೂಪ.) ಚಿಕ್ಕಂದಿನಲ್ಲಿ, ಆದಿಯಲ್ಲಿ, ಹುಟ್ಟಿ ಬೆಳೆದು ಪೋಷಣೆಹೊಂದಿದ ಸ್ಥಳ : ಪೋಷಣಸ್ಥಾನ (C. of an art). ತೊಟ್ಟಿಲನ ಆಕಾರದ ಚೌಕಟ್ಟು. (ಕೆತ್ತನೆ ಕೆಲಸದಲ್ಲಿ) ಹಿಂದಕ್ಕೆ ಮುಂದಕ್ಕೆ ಆಡುವ, ಗರಗಸದ ಹಲ್ಲುಳ್ಳ ಕೊರೆವುಳಿ. (ಗಣಿಕೆಲಸ) ಬಂಗಾರದ ಅದುರುಳ್ಳ ಮಣ್ಣನ್ನು ಹಾಕಿ ನೀರಿನಲ್ಲಿ ಜಾಲಾಡಿಸುವ ತೊಟ್ಟಿ. (ಕ್ರಿ.) ತೊಟ್ಟಿಲಲ್ಲಿ ಮಲಗಿಸು, ಇಡು ; ತೊಟ್ಟಿಲಲ್ಲಿ ಹೇಗೊ ಹಾಗೆ ಒಳಕೊಳ್ಳು, ಕಾಪುಕೊಡು ; ರಕ್ಷಣೆಯಾಗಿರು ; ಸಾಕು ; ಪೋಷಿಸು. **Crádling** (ನಾ.) (ಕ್ರಿಯಾರ್ಥಗಳಲ್ಲಿ). (ವಾ. ಶಾ.) (ಮರದ ಅಥವಾ ಕಬ್ಬಿಣದ) ತೊಟ್ಟಿಲನಂಥ ಚೌಕಟ್ಟು.

Craft ಕ್ರಾಫ್ಟ್ (ನಾ.) ಜಾಣ್ಮೆ ; ಕೌಶಲ ; ಚತುರತೆ. ತಂತ್ರ ; ಮೋಸ. ಕಲೆ ; ಶಿಲ್ಪ(ಕರ್ಮ) ; ಕಸಬು ; ಕೆಲಸ ; ವೃತ್ತಿ (Handicraft ಕೈಕಸಬು. Priestcraft ಪೌರೋಹಿತ್ಯ. Statecraft ರಾಜ್ಯತಂತ್ರ. The gentle c. ಮೀನುಹಿಡಿಯುವ ಕಸಬು ; ಬೆಸ್ತರ ಕಸಬು). ಒಂದು ಕಸಬಿನ ಜನರು ; ಇವರ ಮಂಡಲಿ (The c. ಗುಪ್ತ ಆಚರಣೆಗಳುಳ್ಳ 'ಫ್ರೀಮೇಸನ್ಸ್' ಎಂಬ ಭ್ರಾತೃಮಂಡಲಿ). ದೋಣಿ ; ಹಡಗು (ಬ. ವ. Craft). C.-brother, C.-guild ಒಂದೇ ಕಸಬಿನ ಕೆಲಸಗಾರ, ಕೆಲಸಗಾರರ ಮಂಡಲಿ. **Cráftsman** ಕಸಬುಗಾರ ; ಕೆಲಸಗಾರ ; (ಕುಶಲ) ಕರ್ಮಿ ; ಶಿಲ್ಪಿ ; (ರೂಪ. ಸಹ). **Cráftsmanship** (ನಾ.) ಶಿಲ್ಪಕೌಶಲ. **Crâfty** ಕ್ರಾಫ್ಟಿ (ಗು.) ತಂತ್ರಿಯಾದ ; ಕೃತ್ರಿಮದ ; ಕುಟಿಲ ; ಕಪಟಿಯಾದ ; ವಂಚನೆಯ ; ಮೋಸದ. **Cráftily** (ಕ್ರಿ. ವಿ.) ; **Cráftiness** (ನಾ.)

Crag[1] ಕ್ರ್ಯಾಗ್ (ನಾ.) ಕಡಿದಾದ, ಒರಟಾದ, ಕಲ್ಲುಬಂಡೆ ; ಕಡಿದು ಬಂಡೆ [Cragsman (—ಮ್ಯನ್) ಕಡಿದುಬಂಡೆ ಹತ್ತುವುದರಲ್ಲಿ ನಿಪುಣ]. **Crágged** —ಗೆಡ್ (ಗು.) ; **Crággedness** (ನಾ.) ; **Crágginess** (ನಾ.) ; **Crággy** (ಗು.)

Crag[2] ಕ್ರ್ಯಾಗ್ (ನಾ.) (ಭೂ. ವಿ.) ಇಂಗ್ಲೆಂಡಿನ ನಾರ್ಫೋಕ್, ಸಫೋಕ್, ಎಸೆಕ್ಸ್ — ಈ ಪ್ರಾಂತಗಳಲ್ಲಿ ದೊರೆಯುವ ಸಿಂಪುಗೂಡಿದ ಮರಳಿನ ನಿಕ್ಷೇಪ.

Crake ಕ್ರೇಕ್ (ನಾ., ಕ್ರಿ. ಅಕ.) ಒಂದು ಜಾತಿಯ ಪಕ್ಷಿ ; ಅದರ ಕೂಗು. (ಕ್ರಿ.) ಆ ಪಕ್ಷಿಯಂತೆ ಕೂಗು.

Cram ಕ್ರ್ಯಾಮ್ (ಕ್ರಿ., ನಾ.) ಕೂರಿ ತುಂಬು ; ಗಿಡುಗು ; ಗಿಡಿ ; ಇಡಿ ; ತುರುಕು ; ಅಡಕು (C. down one's throat ಮೇಲಿಂದಮೇಲೆ ಹೇಳು) ; (ಕೋಳಿ, ಮೊ. ಕ್ಕೆ) ಮೇವನ್ನು ತುರುಕು ; ಅಡಕು ; ಅಡಚು ; ಅತಿಯಾಗಿ ತಿನ್ನು. (ರೂಪ.) ತಾತ್ಕಾಲಿಕವಾಗಿ ಪರೀಕ್ಷೆಗೆ ತಯಾರಾಗು ; — ತಯಾರು ಮಾಡು ; ಉರು ಹಚ್ಚು ; ಕಂಠಪಾಠ ಮಾಡು ; ವಿಷಯಗಳನ್ನು ತಲೆಗೆ ತುಂಬಿಕೊ (C.-full ಗಿಡುಗಿ ತುಂಬಿದ). (ನಾ.) ಸಂದಣಿ. ಪರೀಕ್ಷೆಗಾಗಿ ಕಂಠಪಾಠ ಮಾಡುವುದು. (ಅಸಂ.) ಸುಳ್ಳು ; ಪೊಳ್ಳು. **Crámmer** (ನಾ.) (ಕ್ರಿಯಾರ್ಥಗಳಲ್ಲಿ) ; (ಮು., ಶಾಲೆಯ ಹುಡುಗ) ತಲೆಗೆ ಗಿಡುಗುವವನು ; ಉರು ಹಚ್ಚುವವನು. ಸುಳ್ಳು.

Crámbo ಕ್ರ್ಯಾಂಬೊ (ನಾ.) ಒಬ್ಬನು ಹೇಳಿದ ಶಬ್ದಕ್ಕೆ ಅಂತ್ಯಪ್ರಾಸ ಪದಗಳನ್ನು ಊಹಿಸಿ ಹೇಳುವ ಒಂದು ಆಟ : ಅಂತ್ಯಪ್ರಾಸದ ಆಟ.

Cramp[1] ಕ್ರ್ಯಾಂಪ್ (ನಾ., ಕ್ರಿ. ಸಕ., ಗು.) (ಥಟ್ಟನೆ ಹತ್ತಿದ ಶೀತ, ಮೊ. ಗಳಿಂದಾದ) ಸ್ನಾಯು ಸಂಕೋಚನೆ ; ಹಿಡಿತ ; ಸೆಡೆತ. (Writers' c. ಬರಹಗಾರರ ಕೈಸೆಡೆತ. C.-fish ಮುಟ್ಟಿದರೆ ಧಕ್ಕೆಬಡಿಯುವ ಒಂದು ಮೀನಿನ ಜಾತಿ : ವಿದ್ಯುನ್ಮೀನು). (ಕ್ರಿ.) ಸಂಕೋಚಿಸು ; ಸೆಡೆತುಕೊಳ್ಳುವಂತೆ ಮಾಡು. (ರೂಪ.) (ಶಕ್ತಿ, ಮೊ. ನ್ನು) ಬಿಗಿಹಿಡಿ, ನಿಗ್ರಹಿಸು, ತಡೆ, ನಿರೋಧಿಸು. (ಗು.) ಸೆಡೆತುಕೊಂಡ ; ಸಂಕುಚಿತ. ತಿಳಿಯಲು ಕಷ್ಟವಾದ ; ಗಹನ (C. handwriting). **Crámpness** (ನಾ.) ; **Crámpedness** (ನಾ.)

Cramp[2] ಕ್ರ್ಯಾಂಪ್ (ನಾ.) ಕಟ್ಟಡದ ಕಲ್ಲುಗಳು, ಮೊ. ನ್ನು ಒಟ್ಟಿಗೆ ಹಿಡಿದುಕೊಳ್ಳುವುದಕ್ಕಾಗಿ ಹಾಕುವ, ಬಗ್ಗಿಸಿದ ಕೊನೆಗಳುಳ್ಳ, ಲೋಹದ ಸಲಾಕಿ, ಸರಳು (= C.-iron) : ಹಿಡಿಸರಳು ; ಬಿಗಿಪಟ್ಟಿ ; ಎರಡು ಹಲಗೆ, ಮೊ. ನ್ನು ಒಟ್ಟಿಗೆ ಬಿಗಿದು ಹಿಡಿಯುವುದಕ್ಕಾಗಿ ಉಪಯೋಗಿಸುವ ಸಲಕರಣೆ : ಕೂಡು ಹಿಡಿಕೆ ; ಬಂಧನಿ. ನಿರ್ಬಂಧ ; ನಿರೋಧ ; ತಡೆ ; ಹಿಡಿತ.

Crámpon ಕ್ರ್ಯಾಂಪನ್ (ನಾ.) ಲೋಹದ ಕೊಂಡಿ, ಕೊಕ್ಕೆ ; ಭಾರ ಎತ್ತುವ ಕಬ್ಬಿಣದ ಕೊಕ್ಕೆ : ಕೊಕ್ಕೆಯೆತ್ತಿಗೆ. ನೀರ್ಗಲ್ಲು, ಮೊ. ಗಳ ಮೇಲೆ ನಡೆಯುವುದಕ್ಕಾಗಿ ಉಪಯೋಗಿಸುವ ಮೊಳೆಗಳುಳ್ಳ ಕಬ್ಬಿಣದ ತಗಡು.

Cránage. **Crane** ನೋಡಿ.

Crane ಕ್ರೇನ್ (ನಾ., ಕ್ರಿ.) ಉದ್ದವಾದ, ಕಾಲು, ಕತ್ತು, ಕೊಕ್ಕು, ಉಳ್ಳ ನೀರುನಡೆಯ ಒಂದು ದೊಡ್ಡ ಹಕ್ಕಿ : ಕೊಕ್ಕರೆ ; ಬಕ ಪಕ್ಷಿ. ದೊಡ್ಡ ಭಾರಗಳನ್ನು ಎತ್ತಿ, ಬೇಕಾದ ಕಡೆಗೆ ತಿರುಗಿಸುವ ಯಂತ್ರ ; ಎತ್ತುಯಂತ್ರ ; 'ಕ್ರೇನ್'. ಯಾವುದಾದರೂ ದ್ರವವನ್ನು ಮೇಲಕ್ಕೆ ಹೀರಿ ತಳಕ್ಕೆ ಇಳಿಸುವ ಬಾಗುಕೊಳವಿ : 'ಸೈಫನ್'. ರೈಲ್ವೆ ಎಂಜಿನಿಗೆ ನೀರನ್ನು ಒದಗಿಸುವ ಕೊಳವಿ (= Water-c.). (C.-fly ಉದ್ದಗಾಲಿನ ಹಾರುಹುಳು). (ಕ್ರಿ.) ಕ್ರೇನ್‌ಯಂತ್ರದಿಂದ ಭಾರವೆತ್ತಿ ಇಳಿಸು. (ಕೊಕ್ಕರೆಯಂತೆ) ಕತ್ತು ನೀಡು, ಚಾಚು. C. at (ಬೇಲಿ, ತೊಡರು — ಇವುಗಳನ್ನು ಕಂಡು) ಹಿಂಜರಿದು ನಿಲ್ಲು ; ಹಿಂದೇಟು ಹೊಡೆ. **Cránage** ಕ್ರೇನೆಜ್ (ನಾ.) ಕ್ರೇನ್‌ಯಂತ್ರವನ್ನು ಉಪಯೋಗಿಸುವುದು ; ಇದರ ಉಪಯೋಗಕ್ಕಾಗಿ ಕೊಡುವ ತೆರಿಗೆ ; ಎತ್ತುಯಂತ್ರದ ತೆರಿಗೆ.

Craniólogy ಕ್ರೇನಿಯಾಲೊಜಿ (ನಾ.) ನಾನಾ ಜನಾಂಗಗಳವರ ತಲೆಬುರುಡೆಯ ಗಾತ್ರ, ಆಕಾರ, ರಚನೆ — ಇವುಗಳ ಪರೀಕ್ಷೆಯ ಶಾಸ್ತ್ರ : ಕಪಾಲ ಶಾಸ್ತ್ರ. **Craniólogist** (ನಾ.) ಕಪಾಲ ಶಾಸ್ತ್ರಜ್ಞ. **Craniológical** — ಯೊಲಾಜಿಕಲ್ (ಗು.)

Craniómeter ಕ್ರೇನಿಯಾಮಿಟರ್ (ನಾ.) ತಲೆಬುರುಡೆಗಳ ಅಳತೆಗಳನ್ನು ತೆಗೆಯುವ ಸಲಕರಣೆ : ಕಪಾಲ ಮಾಪಕ. **Craniómetry** (ನಾ.) ಕಪಾಲ ಮಾಪನ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cránium ಕ್ರೇನಿಯಂ (ನಾ. ; ಬ. ವ. -ia) ಮಿದುಳುಕೋಶ ; ತಲೆ ಬುರುಡೆ ; ಕಪಾಲ. **Cránial** (ಗು.)

Crank[1] ಕ್ರ್ಯಾಂಕ್ (ನಾ., ಕ್ರಿ. ಸಕ.) ಉದ್ದಚಲನೆಯನ್ನು ಬಟ್ಟಚಲನೆಯಾಗಿ, ಅಥವಾ ಇವುಗಳನ್ನು ವಿಪರ್ಯಯವಾಗಿ, ಮಾರ್ಪಡಿಸಲಾಗುವಂತೆ (ಯಂತ್ರದ) ಅಕ್ಷದಲ್ಲಿ ಅದರ ಸಮಕೋನಕ್ಕೆ ಬಾಗಿಸಿರುವ ಭಾಗ : ವಕ್ರದಂಡ ; 'ಕ್ರ್ಯಾಂಕು' ; ತೂಗುಗಂಟೆಯನ್ನು ತಗುಲಹಾಕುವುದರಲ್ಲಿ ಉಪಯೋಗಿಸುವ ಮೊಣಕೈ ಆಕಾರದ ಸೇರುವೆ. ದಂಡ್ಯಾಪರಾಧಿಗಳು ಶಿಕ್ಷೆಯ ಅನುಭವಕ್ಕಾಗಿ ತಿರುಗಿಸಬೇಕಾದ ತಿರುಗುತಟ್ಟೆಯ ಯಂತ್ರ. ವಕ್ರ ಭಾಷಣ ; ಸೊಟ್ಟ ಮಾತು. ವಿಚಿತ್ರ ಭಾವನೆ, ವರ್ತನೆ, ನಡೆವಳಿ. ಕೊಂಕ ; ವಕ್ರ ಮನುಷ್ಯ. (ಕ್ರಿ.) ಕ್ರ್ಯಾಂಕ್ ಆಕಾರವಾಗಿ ಬಗ್ಗಿಸು ; ಕ್ರ್ಯಾಂಕನ್ನು ಹವಣಿಸು, ತೊಡಿಸು.

Crank[2] ಕ್ರ್ಯಾಂಕ್ (ಗು.) ದುರ್ಬಲ ; ನಿತ್ರಾಣ ; ಅಲ್ಲಾಡುವ (ಸಾ., ಯಂತ್ರಸಾಧನದ ವಿಷಯದಲ್ಲಿ). (ನಾವೆ) ಮಗುಚಿಕೊಳ್ಳುವಂತಿರುವ ; ತಲೆಕೆಳಗಾಗುವಂತಿರುವ. **Cránky** (ಗು.) ಸದಾ ನರಳುತ್ತಿರುವ ; ಅಲ್ಲಾಡುವ ; ಸಡಿಲವಾದ ; ಹುಚ್ಚುಹುಚ್ಚಾದ ; ಚಂಚಲ ಸ್ವಭಾವದ ; ವಿಚಿತ್ರವಾದ ; ಕೊಂಕಾದ ; ವಕ್ರ ; ತಿರಿಚುಮುರಿಚಾದ. = Crank[2] (ನಾವೆ). **Cránkily** (ಕ್ರಿ. ವಿ.) ; **Cránkiness** (ನಾ.)

Cránkle ಕ್ರ್ಯಾಂಕ್‌ಲ್ (ಕ್ರಿ. ಅಕ., ನಾ.) ಒಳಕ್ಕೂ ಹೊರಕ್ಕೂ ಬಾಗು ; ತಿರಿಚು ; ತಿರುಗುಮುರುಗಾಗು. (ನಾ.) ಬಾಗು ; ಮುರಿವು ; ತಿರುವು.

Cránny ಕ್ರ್ಯಾನಿ (ನಾ.) ಬಿರುಕು ; ಬೀಟೆ ; ಸೀಳು ; ಒಡಕು ; ಸಂದು ; ಕಂಡಿ ; ಛಿದ್ರ. **Cránnied** ಕ್ರ್ಯಾನಿಡ್ (ಗು.) ಬಿರುಕುಗಳುಳ್ಳ ; ಬಿರುಕಿನಂತಿರುವ.

Crape ಕ್ರೇಪ್ (ನಾ., ಕ್ರಿ. ಸಕ.) (ಸಾ., ದುಃಖಪ್ರದರ್ಶನಕ್ಕಾಗಿ ಉಪಯೋಗಿಸುವ) ಸುಕ್ಕುಸುಕ್ಕಾದ ಒಡಲುಳ್ಳ, ಸಾ., ಕಪ್ಪುಬಣ್ಣದ ರೇಷ್ಮೆಯ ಅಥವಾ ಕೃತಕ ರೇಷ್ಮೆಯ, ನವಿರು ಬಟ್ಟೆ : ಕ್ರೇಪು. (ಇತರ ಬಣ್ಣದ್ದು ಅಥವಾ ಪದಾರ್ಥದ್ದು : ಸಾ., Crepe). ದುಃಖ ಸೂಚಕವಾಗಿ ಪರಂಗಿ ಟೋಪಿ, ಮೊ. ಗಳ ಸುತ್ತಲೂ ಕಟ್ಟುವ ಕ್ರೇಪು ಪಟ್ಟಿ : ದುಃಖ ಪಟ್ಟಿ. C.-cloth ಕ್ರೇಪುಬಟ್ಟೆಯಂಥ ಉಣ್ಣೆಯ ಬಟ್ಟೆ. (ಕ್ರಿ.) ಕ್ರೇಪುಬಟ್ಟೆಯನ್ನು ಹೊದಿಸು, ಉಡು, ತೊಡು. **Crápy** (ಗು.) ; **Craped** (ಗು.) (ಕ್ರಿಯಾರ್ಥಗಳಲ್ಲಿ) ; ಸುಕ್ಕುಸುಕ್ಕಾದ ; ನಿರಿನಿರಿಯಾದ.

Craps ಕ್ರ್ಯಾಪ್ಸ್ (ನಾ., ಬ. ವ.) (ಅಮೆ. ಸಂ.) ದಾಳ ಉರುಳಿಸಿ ಆಡುವ ಒಂದು ಅದೃಷ್ಟದ ಆಟ. Shoot craps ಈ ಆಟ ಆಡು.

Crápulent ಕ್ರ್ಯಾಪ್ಯುಲೆಂಟ್ (ಗು.) ಅತಿಸೇವನೆಯ ; ಮಿತಿಮೀರಿ ಕುಡಿಯುವ ; ಅತಿಕುಡಿತದ ; — ಸ್ವಭಾವದ ; ಅತಿಕುಡಿತದ ಫಲವಾಗಿ ನರಳುತ್ತಿರುವ. **Crápulence** (ನಾ.) ಅತಿಕುಡಿತ ; ವಿಷಯಾಸಕ್ತಿ. **Crápulous** (ಗು.) = Crapulent.

Crash[1] ಕ್ರ್ಯಾಷ್ (ಕ್ರಿ., ನಾ.) ಚೂರುಚೂರಾಗಿ ಒಡೆ ; ಪುಡಿಪುಡಿ ಮಾಡು ; — ಯಾಗು. ರಭಸದಿಂದ ಚಲಿಸು, ಹೋಗು, ಬೀಳು. (ವಾಯು ಯಾನದ ವಿಷಯದಲ್ಲಿ) ಕುಸಿದುಬೀಳು ; ಬಿದ್ದುಹೋಗು. ಪುಡಿಪುಡಿಯಾಗುವಂತೆ ಎಸೆ, ನೂಕು, ದೂಡು (Go, fall, c. ರಭಸದಿಂದ ನುಗ್ಗು, ಬೀಳು ; ಧಡೀರನೆ ಬೀಳು). (ನಾ.) ಗಾಜು ಚೂರುಚೂರಾದಂತೆ, ಸಿಡಿಲು ಬಡಿದಂತೆ, ಗಟ್ಟಿಯಾಗಿ ಬಾಜಿಸಿದ ವಾದ್ಯದಂತೆ, ಆಗುವ ಶಬ್ದ : ರಭಸ ಧ್ವನಿ ; ರಭಸದ ಜಜ್ಜು ಅಥವಾ ಒಡೆತ. (ರೂಪ.) (ವ್ಯಾಪಾರದಲ್ಲಿ) ನಾಶ, ನಂಬಿಕೆಗೆ ಹಾನಿ, ಮುಳುಗಿಹೋಗುವುದು.

Crash[2] ಕ್ರ್ಯಾಷ್ (ನಾ.) ಒರಸಿಕೊಳ್ಳುವ ಚೌಕ, ಮೊ. ಕ್ಕಾಗಿ ಉಪಯೋಗಿಸುವ ಒರಟು ಬಟ್ಟೆ.

Crásis ಕ್ರೇಸಿಸ್ (ನಾ.) (ಗ್ರೀಕ್ ವ್ಯಾಕರಣ) ಸ್ವರ ಸಂಧಿ.

Crass ಕ್ರ್ಯಾಸ್ (ಗು.) ದಪ್ಪ ; ಸ್ಥೂಲ ; ದೊಣ್ಣೆ ; ಒರಟು ; ಒಡ್ಡ ; ಮೊದ್ದು ; (ರೂಪ.) C. stupidity ಕಡು ದಡ್ಡತನ ; ಅತಿ ಮೌಢ್ಯ. **Crássly** (ಕ್ರಿ. ವಿ.) ; **Crássness** (ನಾ.) ; **Crássitude** (ನಾ.) ಒರಟುತನ ; ಅತಿ ಮಡ್ಡಿತನ ; ಪರಮ ಮೌಢ್ಯ ; ಸ್ಥೂಲತೆ.

Cratch ಕ್ರ್ಯಾಚ್ (ನಾ.) ದನಗಳ ಮೇವುಬುಟ್ಟಿ ; ಗೋದಣ.

Crate ಕ್ರೇಟ್ (ನಾ.) (ಗಾಜಿನ ಸಾಮಾನು, ಹಣ್ಣುಹಂಪಲು, ಮೊ. ನ್ನು ಇಟ್ಟು ತೆಗೆದುಕೊಂಡುಹೋಗುವುದಕ್ಕಾಗಿ ಉಪಯೋಗಿಸುವ) ತೆರಪು ಗಂಡಿಗಳುಳ್ಳ ದೊಡ್ಡ ಪೆಟ್ಟಿಗೆ ಅಥವಾ ಮೇದರ ಬುಟ್ಟಿ ; ಹೆಡಗೆ ; ತೆರಪು ಪೆಟ್ಟಿಗೆ. **Cráteful** (ನಾ.)

Cráter ಕ್ರೇಟರ್ (ನಾ.) ಜ್ವಾಲಾಮುಖಿಯ, ಅಗ್ನಿಪರ್ವತದ, ಬಾಯಿ ; ಬೋಗುಣಿಯಾಕಾರದ ಕುಳಿ, ಗುಂಡಿ (ಮು., ನೆಲದಲ್ಲಿ ಸಿಡಿಗುಂಡು ಸಿಡಿದು ಆದದ್ದು). **Cráteriform** (ಗು.) ಜ್ವಾಲಾಮುಖಿಯ ಬಾಯಿಯ ಆಕಾರದ.

Cravát ಕ್ರವ್ಯಾಟ್ (ನಾ.) (ಪ್ರಾಚೀ. ಪ್ರ., ಅಥವಾ ಅಂಗಡಿಮಾತು) ಕೊರಳಪಟ್ಟಿ ; ಕತ್ತುಪಟ್ಟಿ ; ಕಂಠವಸ್ತ್ರ. **Cravátted** (ಗು.)

Crave ಕ್ರೇವ್ (ಕ್ರಿ.) ಬೇಡು ; ಬೇಡಿಕೊ ; ಕೇಳಿಕೊ ; ಬಯಸು ; ಹಂಬಲಿಸು ; ಗೋಗರೆ. **Cráving** (ನಾ.) ಕಡು ಬಯಕೆ ; ತೃಷ್ಣೆ ; ಅತಿಕಾಂಕ್ಷೆ ; ವ್ಯಸನ.

Cráven ಕ್ರೇವ್‌ನ್ (ಗು., ನಾ.) ಪಿರಿಕಿ ; ಪುಕ್ಕ ; ಪುಕ್ಕಲು ; ಅಂಜುಕುಳಿ ; ಹಂದೆ ; ಹೇಡಿ ; ತುಚ್ಛ (ಮನುಷ್ಯ). Cry c. ಸೋಲೊಪ್ಪಿಕೊ ; ಶರಣಾಗತನಾಗು. **Cravenly** (ಕ್ರಿ. ವಿ.)

Craw ಕ್ರಾ (ನಾ.) ಪಕ್ಷಿಗಳ ಅಥವಾ ಕೀಟಗಳ ಜೀರ್ಣಾಂಗದ ಆದಿಭಾಗ ; ಎರೆಚೀಲ.

Cráwfish. **Crayfish** ನೋಡಿ.

Crawl[1] ಕ್ರಾಲ್ (ನಾ.) ಮೀನು, ಆಮೆ, ಮೊ. ಜಲಚರಗಳಿಗಾಗಿ ಆಳವಿಲ್ಲದ ಜಲಾಶಯದಲ್ಲಿ ಮಾಡಿದ ಕಟ್ಟೆ : ಮೀನು ಕಟ್ಟೆ. = Kraal.

Crawl[2] ಕ್ರಾಲ್ (ಕ್ರಿ. ಅಕ., ನಾ.) ದೇಕು ; ತೆವಳು ; ಹರಿ ; ಹರಿದಾಡು ; ಅಂಬೆಗಾಲಿಡು ; ಬಲು ಮೆಲ್ಲಗೆ ನಡೆ, ಚಲಿಸು ; ಹೆಜ್ಜೆಯಮೇಲೆ ಹೆಜ್ಜೆ ಹಾಕು ; ಮಾನಬಿಟ್ಟು ತೆವಳು. (ನೆಲ, ಮೊ.) ಹರಿದಾಡುವ ಪ್ರಾಣಿಗಳಿಂದ ಮುಲುಗುಟ್ಟುತ್ತಿರು. ಮೈಮೇಲೆ (ಕೀಟಗಳು) ಹರಿದಾಡಿದಂತಾಗು. (ನಾ.) ತೆವಳು ; ತೆವಳಿಕೆ ; ಹರಿದಾಟ. The c. ಅತಿ ವೇಗದಿಂದ ಈಜುವ ಒಂದು ವರಿಸ. **Cráwler** (ನಾ.) (ಕ್ರಿಯಾರ್ಥಗಳಲ್ಲಿ). ಮಗುವಿನ ಹೊರದಗಲೆ ; ದೇಕುಜುಬ್ಬ. ಹೇನು. ಪ್ರಯಾಣಿಕರನ್ನು ಹುಡುಕುತ್ತ ಸಾವಕಾಶವಾಗಿ ತಿರುಗುತ್ತಿರುವ ಬಾಡಿಗೆ ಗಾಡಿ. **Cráwly** (ಗು.) ಮೈಮೇಲೆ ಹರಿದಾಡಿದಂತಾಗುವ.

Cráyfish ಕ್ರೇಫಿಷ್, **Cráw—** ಕ್ರಾ— (ನಾ.) ನಳ್ಳಿಯಂಥ ಗಡುಸು ಚರ್ಮದ, ಸೀನೀರಿನ ವಾಸದ, ಒಂದು ಸಣ್ಣ ಜಲಚರ : ಮುಳ್ಳು ನಳ್ಳಿ.

Cráyon ಕ್ರೇಯನ್ (ನಾ., ಕ್ರಿ. ಸಕ.) (ಸೀಮೆಸುಣ್ಣ ಅಥವಾ ಇತರ ಪದಾರ್ಥದಿಂದ ಮಾಡಿ ರೇಖನಕ್ಕಾಗಿ ಉಪಯೋಗಿಸುವ) ಬಣ್ಣದ ಕಡ್ಡಿ, ಬಳಪ ; ವರ್ಣಿಕೆ. ವಿದ್ಯುಚ್ಛಾಪ ದೀಪದಲ್ಲಿ ಇಂಗಾಲ ದಂಡದ ಮೊನೆ. (ಕ್ರಿ.) ವರ್ಣಿಕೆಯಿಂದ ರೇಖಿಸು. (ರೂಪ.) ರೂಪ ರೇಖೆಗಳನ್ನು ಗುರುತಿಸು ; ಹೆಗ್ಗುರುತಿಸು.

Craze ಕ್ರೇಸ್ (ಕ್ರಿ. ಸಕ., ನಾ.) ಹುಚ್ಚು ಹಿಡಿಸು ; ಪೈತ್ಯ ಹಚ್ಚಿಸು (ಸಾ., ಭೂ. ಕೃ. ನಲ್ಲಿ). ಮಣ್ಣಿನ ಪಾತ್ರೆಗಳಮೇಲೆ (ಅಲಂಕಾರಕ್ಕಾಗಿ) ಸಣ್ಣಸಣ್ಣ ಬಿರುಕುಗಳನ್ನು ಬಿಡಿಸು, ಚಿತ್ರಿಸು ; ಇಂಥ ಬಿರುಕುಗಳು ಚಿತ್ರಿಸಿರು. (ನಾ.) ಹುಚ್ಚು ಅಥವಾ ಉನ್ಮಾದ ಕಲ್ಪನೆ ; ಚಿತ್ತಭ್ರಮೆ ; ಉನ್ಮಾದ ; ಹುಚ್ಚು ; ಅಯಿಲು ; ಗೇಂದಿ [Be the c ಸರ್ವಾಪೇಕ್ಷಣೀಯವಾಗು ; ಹುಚ್ಚು ಹತ್ತು, ಹಿಡಿ (ರೂಪ.)]. **Crázing** (ನಾ.) (ಕ್ರಿಯಾರ್ಥಗಳಲ್ಲಿ). C.-mill ತವರದ ಖನಿಜವನ್ನು ಪುಡಿಮಾಡುವ ತಾಟುಯಂತ್ರ. **Crázy** (ಗು.) (ಹಡಗು, ಕಟ್ಟಡ, ಮೊ. ಗಳ ವಿಷಯದಲ್ಲಿ) ಛದ್ರವಿಲ್ಲದ ; ಜರ್ಜರ ; ಜೀರ್ಣ ; ಸಡಿಲಗೊಂಡ ; ಅಲ್ಲಾಡುವ ; ಸದಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನರಳುತ್ತಿರುವ ; ಉನ್ಮತ್ತ ; ಹುಚ್ಚು ಹಿಡಿದ. (ನೆಲಗಟ್ಟು, ಮೆತ್ತೆ, ಮೊ. ಗಳ ವಿಷಯದಲ್ಲಿ) ಸಮರೂಪವಿಲ್ಲದ ಚೂರುಗಳನ್ನು ಚಿತ್ರವಾಗಿ ಜೋಡಿಸಿದ. (ಬಳ. ಮಾ.) ಅತ್ಯಾತುರನಾದ ; ಗೀಳು ಹಿಡಿದ. **Crázily** (ಕ್ರಿ. ವಿ.) ; **Cráziness** (ನಾ.)

Creak ಕ್ರೀಕ್ (ನಾ., ಕ್ರಿ. ಅಕ.) (ಎಣ್ಣೆ ಹಾಕದ ಕೀಲು, ಹೊಸ ಚಡಾವು, ಮೊ. ಗಳಂತೆ) ಕಿರುಗುಟ್ಟು ; ಕಿರುಕಲು ದನಿ (ಮಾಡು). **Creáky** (ಗು.)

Cream ಕ್ರೀಮ್ (ನಾ.) (ಹಾಲಿನ) ಕೆನೆ ; ಕೆನೆಯಿಂದ ಮಾಡಿದ ಅಥವಾ ಕೆನೆಯಂಥ ಭಕ್ಷ್ಯ. ಸ್ವಾರಸ್ಯವಾದ, ಸಾರ, ಭಾಗ ; ತಿರುಳು (ಮು., ಕಥೆಯಲ್ಲಿ). ಯಾವುದಾದರೂ ದ್ರವದಮೇಲೆ ಕಟ್ಟುವ ಕೆನೆ ; ಕೆನೆಯಂತೆ ತಯಾರಿಸಿದ ಪದಾರ್ಥ (Cold c. ತಂಪಿಸುವ ಲೇಪ ; ತಣ್ಗೆನೆ). ಕೆನೆಬಣ್ಣದ ಕುದುರೆ. C. of lime ಸುಣ್ಣದ ಕೆನೆ. C.-coloured ನಸು ಹಳದಿ ಛಾಯೆಯ ಬಿಳಿಯ ಬಣ್ಣದ ; ಕೆನೆಬಣ್ಣದ. C.-laid, -wove, paper ಹಾಲುಕಾಗದ. C. separator ಕೆನೆತೆಗೆಯುವ ಯಂತ್ರ ; ಕೆನೆ ಮಂತು. **Creámy** (ಗು.) ; **Creáminess** (ನಾ.)

Cream (ಕ್ರಿ.) ಕೆನೆಗಟ್ಟು ; ಕೆನೆಗೂಡು ; ಕೆನೆಗಟ್ಟಿಸು ; ಕೆನೆಗೂಡಿಸು ; ಕೆನೆ ತೆಗೆ ; ಸಾರವತ್ತಾದ ಭಾಗವನ್ನು ತೆಗೆದುಕೊ, ಗ್ರಹಿಸು. (ಚಹಾ, ಮೊ. ಕ್ಕೆ) ಕೆನೆ ಬೆರಸು. **Creámer** (ನಾ.) ಹಾಲಿನಿಂದ ಕೆನೆತೆಗೆಯುವ ತಟ್ಟೆ ; ಕೆನೆ ಮಂತು. **Creámery** — ಮೆರಿ (ನಾ.) ಬೆಣ್ಣೆಯ ಕಾರ್ಖಾನೆ ; ಹಾಲು, ಬೆಣ್ಣೆ, ಕೆನೆ, ಮೊ. ಗಳ ಅಂಗಡಿ : ಹೈನಿನಂಗಡಿ.

Crease ಕ್ರೀಸ್ (ನಾ., ಕ್ರಿ.) ಮಡಿಸಿದ ಗುರುತು ; ಮಡಿಕೆ ; ಗಳಿಗೆ ; ನಿರಿ ; ಸುಕ್ಕು. (ಕ್ರಿಕೆಟ್) ದಾಂಡುಗಾರನ ಮತ್ತು ಎಸೆಗಾರನ ಸ್ಥಳಗಳನ್ನು ತೋರಿಸುವ ಎಲ್ಲೆಗೆರೆ (Bowling c. ಚೆಂಡೆಸೆತದ ಎಲ್ಲೆಗೆರೆ). (ಕ್ರಿ.) ಮಡಿಕೆ, ನಿರಿಗೆ, ಗಳಿಗೆ, ಸುಕ್ಕು, ಮಾಡು ; — ಆಗು. **Creáser** (ನಾ.) ಸುಕ್ಕಿಸುವವನು ; ಸುಕ್ಕಿಸುವ ಸಲಕರಣೆ. **Creásy** (ಗು.)

Creáte ಕ್ರಿಯೇಟ್ (ಕ್ರಿ. ಸಕ.) ಸೃಷ್ಟಿಸು ; ಸೃಜಿಸು ; ಹುಟ್ಟಿಸು ; ಉತ್ಪತ್ತಿಮಾಡು ; ನಿರ್ಮಾಣಮಾಡು ; ಉಂಟುಮಾಡು ; ನಿರ್ಮಿಸು ; ಕಲ್ಪಿಸು ; ರಚಿಸು. ಪದವಿ, ಸ್ಥಾನ, ಕೊಡು (C. a peer ಶ್ರೀಮಂತಗಿರಿ ಕೊಡು. C. peers ಶ್ರೀಮಂತರನ್ನು ಹೊಸದಾಗಿ ಸೃಷ್ಟಿಸು). (ಅಸಂ.) ಗಡಿಬಿಡಿ ಮಾಡು (You needn't c. about it). **Creátive** (ಗು.) ಸೃಷ್ಟಿಸುವ ಗುಣವುಳ್ಳ ; ಸೃಷ್ಟಿಕಾರಕ ; ಕಲ್ಪಕ ; ಕಲ್ಪನಾ ಶಕ್ತಿಯ ; ರಚನಾತ್ಮಕ ; ನಿರ್ಮಾಣ ಮಾಡುವ ; ಉತ್ಪತ್ತಿ ಮಾಡುವ. **Creátively** (ಕ್ರಿ. ವಿ.) ; **Creátiveness** (ನಾ.) ; **Creátion** (ನಾ.) (ಮು., ಪ್ರಪಂಚದ) ಸೃಷ್ಟಿ ; ಉತ್ಪತ್ತಿ ; ನಿರ್ಮಾಣ. ಸೃಷ್ಟ ಪ್ರಪಂಚ ; ಜಗತ್ತು ; ವಿಶ್ವ. (ಮನುಷ್ಯನ) ಬುದ್ಧಿಸೃಷ್ಟಿ ; ಕಲ್ಪನಾ ಸೃಷ್ಟಿ ; ಪ್ರತಿಭಾ ಸೃಷ್ಟಿ. ಬಿರುದು, ಪದವಿ, ಮೊ. ನ್ನು ಕೊಡುವುದು. **Creátionism** (ನಾ.) (೧) ಪ್ರತಿ ಮನುಷ್ಯ ವ್ಯಕ್ತಿಗೂ ಹುಟ್ಟುವಾಗ ದೇವರು ಒಂದು ಆತ್ಮವನ್ನು ಸೃಜಿಸುತ್ತಾನೆ ಎಂಬ ವಾದ : ಪೃಥಗಾತ್ಮಸೃಷ್ಟಿ ವಾದ ; (೨) ಪ್ರತಿಯೊಂದು ದ್ರವ್ಯವೂ ಜಾತಿಯೂ ಮತ್ತೊಂದರಿಂದ ಉತ್ಪನ್ನವಾದದ್ದಾಗದೆ ತಾನೆ ಬೇರೆ ಸೃಷ್ಟಿಯಾದದ್ದು ಎಂಬ ವಾದ : ಪೃಥಗ್‌ದ್ರವ್ಯ ಸೃಷ್ಟಿ ವಾದ. **Creátionist** (ನಾ.) ; **Creátor** (ನಾ.) ಸೃಷ್ಟಿಸುವವನು ; ನಿರ್ಮಿಸುವವನು. The C. ಸೃಷ್ಟಿಕರ್ತ ; ಪರಮೇಶ್ವರ ; ಭಗವಂತ. **Creátress** (ನಾ., ಸ್ತ್ರೀ.)

Créatine ಕ್ರೀಯಟೈನ್ (ನಾ.) ಮಾಂಸ ರಸದಲ್ಲಿ ದೊರೆಯುವ ಒಂದು ಜೈವ ಪ್ರತ್ಯಾಮ್ಲ.

Creátion, etc. } **Create** ನೋಡಿ.
Creátor }

Creáture ಕ್ರೀಟ್ಯುರ್, ಕ್ರೀಚರ್ (ನಾ.) ಸೃಷ್ಟಿಯಾದ, ಸೃಷ್ಟ, ವಸ್ತು ; ಜೀವಿ ; ಜಂತು ; ಪ್ರಾಣಿ ; ಮನುಷ್ಯ. (ಮನುಷ್ಯನ ವಿಷಯದಲ್ಲಿ ಮೆಚ್ಚಿಕೆ, ತಿರಸ್ಕಾರ, ಅನುಗ್ರಹ, ಮೊ. ಭಾವಗಳನ್ನು ಸೂಚಿಸುವಾಗ) ಪ್ರಾಣಿ. ಉಪಜೀವಿ ; ಅಡಿಯಾಳು ; ಕೈಗೊಂಬೆ. The c. ವ್ಹಿಸ್ಕಿ ಅಥವಾ ಇತರ ಮದ್ಯ. C. comforts (Comfort ನೋಡಿ). **Creáturely** (ಗು.) ಪ್ರಾಣಿಗಳ ; ಪ್ರಾಣಿ ಸ್ವಭಾವದ.

Creche ಕ್ರೆಷ್, ಕ್ರೇಷ್ (ನಾ.) ತಾಯಂದಿರು (ಕಾರ್ಖಾನೆ, ಮೊ. ಗಳಲ್ಲಿ) ಕೆಲಸ ಕಾರ್ಯಗಳಲ್ಲಿ ತೊಡಗಿರುವಾಗ ಅವರ ಕೂಸುಗಳನ್ನು ನೋಡಿಕೊಳ್ಳುವುದಕ್ಕಾಗಿ ಏರ್ಪಡಿಸಿರುವ ಸಾರ್ವಜನಿಕ ಶಿಶುಶಾಲೆ : ಶಿಶುವಿಹಾರ.

Crédat Judaéus (Apélla) (ವಾಕ್ಯ) ನಂಬುವವನು ನಂಬಲಿ (ಅಪನಂಬಿಕೆಯನ್ನು ಸೂಚಿಸುವ ಮಾತು)

Crédence ಕ್ರೀಡೆನ್ಸ್ (ನಾ.) ನಂಬಿಕೆ ; ವಿಶ್ವಾಸ (Give c. to ನಂಬು. Letter of c. ಪರಿಚಯ ಪತ್ರ ; ನಂಬಿಕೆ ಪತ್ರ). (ಕ್ರೈಸ್ತ) ಪ್ರಭುಭೋಜನ ಸಂಸ್ಕಾರದಲ್ಲಿ ಉಪಯೋಗಿಸುವ ಸಣ್ಣ ಪಕ್ಕಮೇಜು. **Credéntial** ಕ್ರಿಡೆನ್ಷಲ್ (ನಾ., ಸಾ., ಬ. ವ. ದಲ್ಲಿ) ಪರಿಚಯ ಪತ್ರ(ಗಳು) (ಮು., ಒಂದು ಸರ್ಕಾರದಿಂದ ರಾಯಭಾರಿಯಾಗಿ ಹೋಗುವವನಿಗೆ ಆ ಸರ್ಕಾರದವರು ಕೊಡುವ ಪರಿಚಯ ಪತ್ರ) ; ಋಜುವಾತು ಪತ್ರ. ನಂಬಿಕೆಯ ಪತ್ರ. (ರೂಪ.) (ನಂಬಿಕೆಗೆ) ಆಧಾರಗಳು. **Crédible** ಕ್ರೆಡಿಬ್‌ಲ್ (ಗು.) ನಂಬಬಹುದಾದ ; ವಿಶ್ವಾಸ ಯೋಗ್ಯ. **Credibílity** (ಗು.) ; **Crédibly** (ಕ್ರಿ. ವಿ.)

Crédible. **Credence** ನೋಡಿ.

Crédit ಕ್ರೆಡಿಟ್ (ನಾ., ಕ್ರಿ. ಸಕ.) ನಂಬಿಕೆ ; ವಿಶ್ವಾಸ (Give c. to ನಂಬು) ; ವಿಶ್ವಾಸಾರ್ಹತೆ ; ಗಣ್ಯತೆ ; ಮಾತುಬರಿ ; ಇದರಿಂದ ದೊರೆತ ಶಕ್ತಿ, ಅಧಿಕಾರ, ಪ್ರಶಸ್ತಿ, ಮೊ. ವು (Get c. for ಸಲ್ಲತಕ್ಕ ಲಾಭ, ಪ್ರಶಸ್ತಿ, ಮೊ. ನ್ನು ಪಡೆ) ; ಹೆಸರು ಬರತಕ್ಕದ್ದು ; — ತರತಕ್ಕದ್ದು ; — ತರುವವನು. ಕೀರ್ತಿ ; ಖ್ಯಾತಿ ; ಗೌರವ ; ಯಶಸ್ಸು ; ಹೆಸರುವಾಸಿ ; ಭೂಷಣ (A c. to the school ಪಾಠಶಾಲೆಗೆ ಭೂಷಣ). ಸಾಲ ತೀರಿಸುವ ಉದ್ದೇಶವೂ ಶಕ್ತಿಯೂ ಉಳ್ಳವನೆಂಬ ಭರವಸೆ [Give c. (ನಂಬಿಕೆಯಮೇಲೆ) ಸಾಲ ಕೊಡು. Deal on c. ನಂಬಿಕೆಯಮೇಲೆ ವ್ಯವಹಾರಮಾಡು]. ಬ್ಯಾಂಕು, ಮೊ. ಗಳಲ್ಲಿ ಒಬ್ಬನ ಉಪಯೋಗಕ್ಕೆಂದು ಅವನ ಲೆಕ್ಕದಲ್ಲಿಟ್ಟಿರುವ ಹಣದ ಮೊತ್ತ [Letter (Bill) of c. ಮತ್ತೊಂದು ಸ್ಥಳದಲ್ಲಿರುವ ಬ್ಯಾಂಕು, ಮೊ. ಗಳಿಂದ ಒಂದು ಗೊತ್ತಾದ ಮೊತ್ತವನ್ನು ಪಡೆಯಲಾಗುವಂತೆ ಕೊಡುವ ನಂಬಿಕೆಯ ಪತ್ರ ; ಹಣಭರವಸೆಯ ಪತ್ರ]. ಲೇವಾದೇವಿಯ ದಾಖಲೆಪುಸ್ತಕಗಳಲ್ಲಿ ಜಮಾ ಕಟ್ಟುವುದು ; ಹಾಗೆ ಕಟ್ಟಿದ ಜಮಾ [Give person c. for (ಒಬ್ಬನ ಲೆಕ್ಕಕ್ಕೆ) ಜಮಾ ಕಟ್ಟು. (ರೂಪ. ಸಹ)] ; ಜಮಾ ಕಡೆ. (ಕ್ರಿ.) ನಂಬು. ಲೆಕ್ಕಕ್ಕೆ ಜಮಾ ಕಟ್ಟು (C. amount to person ; C. person with amount). (ರೂಪ.) C. person with (ಗುಣ)ವುಳ್ಳವನೆಂದು ಎಣಿಸು. **Créditable** (ಗು.) ಹೆಸರು, ಗಣನೆ, ಗೌರವ, ಮಾನ್ಯತೆ, ಕೀರ್ತಿ, ತರುವ ; ಹೊಗಳತಕ್ಕ ; ಮೆಚ್ಚತಕ್ಕ ; ಶ್ಲಾಘ್ಯ ; ಮಾನ್ಯ. **Créditably** (ಕ್ರಿ. ವಿ.) ; **Créditor** (ನಾ.) ಸಾಲ ಕೊಟ್ಟವನು ; ಸಾಲಿಗ ; ಲೇಣೆದಾರ. ಲೇವಾದೇವಿಯ ಲೆಕ್ಕ ಪುಸ್ತಕದಲ್ಲಿ ಜಮಾ ಕಡೆ (ಸಂಕ್ಷಿಪ್ತ : Cr.)

Crédo ಕ್ರೀಡೊ (ನಾ.) ಕೆಲವು (ಕ್ರೈಸ್ತ) ಮತ ಸೂತ್ರಗಳು ; ಇವುಗಳಲ್ಲಿ ಯಾವುದಾದರೂ ಒಂದನ್ನು ಗೀತಕ್ಕೆ ಹೊಂದಿಸುವುದು. (ಸಾ.,) ಮತ ; ನಂಬಿಕೆ.

Crédulous ಕ್ರೆಡ್ಯುಲಸ್ (ಗು.) ಸುಲಭವಾಗಿ, ವಿಚಾರಮಾಡದೆ, ನಂಬಿಬಿಡುವ ; ಸುಲಭವಾಗಿ ಮೋಸಗೊಳಿಸಲಾಗುವ ; ಅತಿನಂಬಿಕೆಯ (C. superstition ಅತಿನಂಬಿಕೆಯ ಮೂಢ ಶ್ರದ್ಧೆ). **Crédulously** (ಕ್ರಿ. ವಿ.) ; **Crédulousness** (ನಾ.) = Credulity. **Credúlity** ಕ್ರಿಡ್ಯೂಲಿಟಿ (ನಾ.) ಅವಿಚಾರದ ನಂಬಿಕೆ.

Creed ಕ್ರೀಡ್ (ನಾ.) ಕ್ರೈಸ್ತ ಮತಸೂತ್ರ ಸಂಗ್ರಹ ; ಮತ ; ನಂಬಿಕೆ. (ಯಾವುದಾದರೂ ಒಂದು ವಿಷಯದಮೇಲೆ) ಅಭಿಪ್ರಾಯಗಳು ; ಮತ. **Creédless** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Creek ಕ್ರೀಕ್ (ನಾ.) ಕರೆಯೊಳಕ್ಕೆ ಚಾಚಿಕೊಂಡಿರುವ ಸಮುದ್ರಭಾಗ; ಕಡಲ ಚಾಚು; ಖಾರಿ. ಕೊರಕಲು. ಸಣ್ಣ ಬಂದರು. ನದಿಯ ಸಣ್ಣ ಚಾಚು, ಕವಲು. (ಅಮೆ ಸಂ., ಮೊ.) ನದಿಯ ಶಾಖೆ; ಉಪ ನದಿ. ಬೆಟ್ಟಗಳ ನಡುವಿನ ಇಕ್ಕಟ್ಟಾದ ಸಮಭೂಮಿ.

Creel ಕ್ರೀಲ್ (ನಾ.) (ದೊಡ್ಡ) ಮೀನುಬುಟ್ಟಿ.

Creep ಕ್ರೀಪ್ (ಕ್ರಿ. ಅಕ.; ಭೂತ., ಭೂ. ಕೃ. Crept ಕ್ರೆಪ್ಟ್; ನಾ.) ನೆಲದಮೇಲೆ ಬಗ್ಗಿ, ಮಲಗಿ, ಹರಿ, ಹರಿದಾಡು, ಚಲಿಸು; ಮೆಲ್ಲನೆ ಸರಿ; ಭಯದಿಂದ ಚರಿಸು; ಜರುಗು; ದೇಕು; ತವಳು; ಕಾಣದಂತೆ, ಕಳ್ಳತನದಿಂದ, ಹೋಗು; ನುಸುಳಿಕೊಂಡು ಹೋಗು; ಗೊತ್ತಾಗದಂತೆ ಬಂದು ಸೇರಿಕೊ, ಕಾಣಿಸಿಕೊ. ತುಚ್ಛವಾಗಿ ನಡೆ, ಜೀವಿಸು. (ಸಸ್ಯಗಳ ವಿಷಯದಲ್ಲಿ, ನೆಲ, ಗೋಡೆ, ಮೊ. ಗಳಮೇಲೆ) ಹಬ್ಬು. [Flesh creeps (ಭಯ, ಅಸಹ್ಯ, ಮೊ. ಗಳಿಂದ) ಮೈಮೇಲೆ ಏನೋ ಹರಿದಂತಾಗುತ್ತದೆ; ಬುಳುಗುಟ್ಟುತ್ತದೆ; ಜುಮ್ಮೆನ್ನುತ್ತದೆ]. ನೀರಿನ ತಳದಲ್ಲಿ ಪಾತಾಳ ಗರಡಿ (ಭೇದಿ)ಯನ್ನು ಎಳೆ. [C.-mouse (ಗು.) ಅಂಜಿಕೆಯ; ಪುಕ್ಕಲು; ಹಿಂಜರಿಯುವ; ಮುಖಹೇಡಿ]. (ನಾ.) (ಕ್ರಿಯಾರ್ಥಗಳಲ್ಲಿ); ಮೈಗುಂದುವ ಭೀತಿ; ಕಂಪ ಭೀತಿ; ಅತಿ ಗಾಬರಿ. (ಸಾ., ಬ. ವ. ದಲ್ಲಿ: Gave me the creeps ಗಾಬರಿಯಿಂದ ನಡುಕ ಹತ್ತಿತು). ರೈಲುಮಾರ್ಗದ ಒಡ್ಡುಕಟ್ಟೆಯ ತಳಭಾಗದಲ್ಲಿಯ ಕಿರು ಕಮಾನು. ಬೇಲಿ, ಮೊ. ಗಳಲ್ಲಿಯ ಕಂಡಿ; ನುಸುಳುಗಂಡಿ. (ಭೂ. ವಿ.) ವಾತಾವರಣದ ಬದಲಾವಣೆಗಳಿಂದ ಬಂಧನ ಸಡಿಲದ ಬಂಡೆಗಳು ಕ್ರಮೇಣ ಸರಿಯುವುದು: ಶಿಲಾ ಸರಣ. **Creéper** (ನಾ.) (ಕ್ರಿಯಾರ್ಥಗಳಲ್ಲಿ). ಬಳ್ಳಿ; ಹಂಬು; ಲತೆ. (ನೀರಿನ ತಳದಲ್ಲಿರ ಬಹುದಾದ ವಸ್ತುಗಳನ್ನು ಪಡೆಯುವುದಕ್ಕಾಗಿ ಎಳೆದಾಡುವ) ಪಾತಾಳ ಗರಡಿ. (ಬಳ. ಮಾ.) ಸಿಲೋನಿನಲ್ಲಿ ತೇಯೆಲೆಯ ಸಸಿ ಹಾಕುವುದನ್ನು ಕಲಿಯುವವನು. **Creépy** (ಗು.) ಹರಿದಾಡುವ; ಬುಳುಗುಟ್ಟುವ; (ಅತಿಭೀತಿ, ಮೊ. ಗಳಿಂದ) ಮೈಯಲ್ಲಿ ಹರಿದಾಡಿದಂತಾಗುವ. **Creépy-Crawly** (ಗು.) ಬುಳುಗುಟ್ಟುವ; ಮೈಮೇಲೆ ಹರಿದಾಡಿದಂತಾಗುವ.

Creese, Crease ಕ್ರೀಸ್, **Kris** ಕ್ರಿಸ್ (ನಾ.) ಅಲೆಯಾಕಾರದ ಅಲಗುಳ್ಳ ಮಲಯದ್ವೀಪದ ಬಾಕು.

Cremáte ಕ್ರಿಮೇಟ್ (ಕ್ರಿ. ಸಕ.) (ಮು., ಹೆಣವನ್ನು) ದಹನಮಾಡು, ಸುಡು. **Cremátion** (ನಾ.) (ಶವ) ದಹನ. **Cremátionist** (ನಾ.) ಹೆಣಗಳನ್ನು ಸುಡಬೇಕೆಂಬ ಅಭಿಪ್ರಾಯವುಳ್ಳವನು: ಶವದಹನ ವಾದಿ. **Cremátor** (ನಾ.) ಹೆಣ, ಸತ್ತ ಸೆದೆ, ಮೊ. ವನ್ನು ಸುಡುವ ಮನುಷ್ಯ, ಸಲಕರಣೆ: ದಾಹಕ. **Crematórium** ಕ್ರೆಮಟೋರಿಯಂ (ನಾ.), **Crématory** — ಟರಿ (ನಾ.) ಹೆಣಸುಡುವ ಭೂಮಿ, ಸಲಕರಣೆ: ಸುಡುಗಾಡು; ದಹನ ಭೂಮಿ; ದಹನ ಯಂತ್ರ; ದಹನ ಶಾಲೆ.

Creme ಕ್ರೇಮ್ (ನಾ.) C. de menthe (F) ರುಚಿಗಾಗಿ 'ಪೆಪ್ಪರ್ ಮಿಂಟ್' ಎಂಬ ಪದಾರ್ಥವನ್ನು ಬೆರಸಿ ತಯಾರಿಸಿದ ಸೀಮದ್ಯ. C. de la c. (F) ಆಯ್ದು ತೆಗೆದದ್ದು; ಅತ್ಯುತ್ತಮವಾದದ್ದು.

Cremóna ಕ್ರಿಮೋನ (ನಾ.) (ಕ್ರಿಮೋನಾ ಪಟ್ಟಣದಲ್ಲಿ ಮಾಡಿದ) ಪಿಟೀಲು.

Crenáte(d) ಕ್ರೀನೇಟ್, —ಟೆಡ್ (ಗು.) (ಸ. ವಿ., ಪ್ರಾ. ವಿ.) ಹಲ್ಲಿನ ಏಣುಳ್ಳ, ಅಂಚುಳ್ಳ; ದಂತಿತ; ಕ್ರಕಚ. **Crenátion** ಕ್ರಿನೇಷನ್ (ನಾ.) ದಂತಾಕಾರದ ಏಣಿನ ರಚನೆ; ದಂತಿತ ರಚನೆ; ಕ್ರಕಚ ರಚನೆ. **Crénature** ಕ್ರೆ(ಕ್ರೀ)ನಚ್ಯುರ್ (ನಾ.) ಎಲೆ, ಮೊ. ಗಳ ಅಂಚಿನಲ್ಲಿರುವ ದುಂಡೇಣಿನ ಹಲ್ಲು.

Crénel, Crenélle ಕ್ರೆ(ಕ್ರಿ)ನೆಲ್ (ನಾ.) ಕೋಟೆಯಮೇಲಿನ ಕೈಪಿಡಿಗೋಡೆಯಲ್ಲಿ ಗುಂಡುಹಾರಿಸುವುದು, ಮೊ. ಕ್ಕಾಗಿ ಅಲ್ಲಲ್ಲಿ ಬಿಟ್ಟಿರುವ ಕಂಡಿ: ಕೋವಿಗಂಡಿ. **Crénel(l)ate** ಕ್ರೆನೆಲೇಟ್ (ಕ್ರಿ. ಸಕ.) ಕೋಟೆ ಕೈಪಿಡಿಯಲ್ಲಿ ಕೋವಿಗಂಡಿಗಳನ್ನಿಡು; —ಕೋಟೆತೆನೆ ಮಾಡು. **Crenellátion** (ನಾ.) (ಕ್ರಿಯಾರ್ಥಗಳಲ್ಲಿ) ಕೋಟೆ ತೆನೆ; ಕೋಟೆಯ ಕಂಡಿಕೈಪಿಡಿ. ದಂತಾಕೃತಿ; ಕ್ರಕಚ ರಚನೆ.

Crénulate ಕ್ರೆನ್ಯುಲೆಟ್ (ಗು.) (ಸ. ವಿ., ಪ್ರಾ. ವಿ.) [ಎಲೆ, ಸಿಂಪಿ (ಪ್ರಾಣಿಗಳ ಚಿಪ್ಪು), ಮೊ. ಗಳ ವಿಷಯದಲ್ಲಿ] ಸೂಕ್ಷ್ಮ ದಂತಾಕೃತಿಯುಳ್ಳ. **Crenulátion** (ನಾ.)

Créole ಕ್ರಿಯೋಲ್ (ನಾ., ಗು.) ವೆಸ್ಟ್ಇಂಡೀಸ್, ಮಾರಿಷಸ್, ಮೊ. ಪ್ರಾಂತಗಳಲ್ಲಿ ನೆಲಸಿರುವ ಐರೋಪ್ಯ (C. white), ಅಥವಾ ನೀಗ್ರೋ (C. negro) (ಸಂತತಿಯವನು): 'ಕ್ರಿಯೋಲ'. (ಗು.) ಕ್ರಿಯೋಲ ಸಂತತಿಯ. (ಪ್ರಾಣಿ, ಮೊ. ಗಳ ವಿಷಯದಲ್ಲಿ) ವೆಸ್ಟ್ ಇಂಡೀಸ್, ಮೊ. ಪ್ರಾಂತಗಳ ಭೂಗುಣಕ್ಕೆ ಪಳಗಿಸಿದ, ಪಳಗಿದ.

Créosol ಕ್ರೀಯೊಸಾಲ್, **Créa**— ಕ್ರೀಯ— (ನಾ.) ಟಾರೆಣ್ಣೆಯಿಂದ ಬಟ್ಟಿಯಿಳಿಸಿ ತೆಗೆದ ಸುವಾಸನೆಯ ಒಂದು ತೀವ್ರ ಕ್ಷಾರದ್ರವ (ಕ್ರಿಯೊಸೋಟಿನ ಮುಖ್ಯಭಾಗ); 'ಕ್ರೀಯೊಸಾಲ್.'

Créosote ಕ್ರೀಯೊಸೋಟ್ (ನಾ.) ಮರದ ಟಾರೆಣ್ಣೆಯಿಂದ ಬಟ್ಟಿಯಿಳಿಸಿ ತೆಗೆದ ಒಂದು ನಿರ್ವರ್ಣ ತೈಲ (ಇದು ಪ್ರಬಲ ವಿಷಾಪಹಾರಿ): ಕ್ರೀಯೊಸೋಟ್. (ವ್ಯಾಪಾರ) ಕಾರ್ಬಾಲಿಕ್ ಆಮ್ಲ.

Crepe ಕ್ರೇಪ್ (ನಾ.) (ವ್ಯಸನ ಸೂಚಕವಾದ ಉಡುಪಿನ ಕಪ್ಪು ಕ್ರೇಪುಬಟ್ಟೆಯನ್ನುಳಿದ) ಕ್ರೇಪುಬಟ್ಟೆ. C. de Chine ಕ್ರೇಪ್ ಡ ಷೀನ್ (F) (ನಾ.) ಹಸಿಯ ರೇಷ್ಮೆಯಿಂದ ಮಾಡಿದ ಕ್ರೇಪುಬಟ್ಟೆ. C. rubber ಪಾದರಕ್ಷೆಗಳ ಅಟ್ಟೆಗಳಿಗೂ ಇತರ ಕೆಲಸಗಳಿಗೂ ಉಪಯೋಗಿಸುವ ಬಹಳ ಬಾಳಿಕೆಯ ರಬ್ಬರು.

Crépitate ಕ್ರೆಪಿಟೇಟ್ (ಕ್ರಿ. ಅಕ.) ಚಿಟಚಿಟ ಶಬ್ದಮಾಡು; ಚಿಟಗುಟ್ಟು. (ಜೀರುಂಡೆ) ಕಟು ವಾಸನೆಯ ದ್ರವವನ್ನು ಚಿಲ್ಲೆಂದು ಉಗುಳು. **Crépitant** — ಟಂಟ್ (ಗು.) ಚಿಟಗುಟ್ಟುವ. **Crepitátion** (ನಾ.) ಚಿಟಚಿಟ(ಗುಟ್ಟುವುದು)

Crépon ಕ್ರೆಪೊ(ಪ)ನ್ (ನಾ.) ಕ್ರೇಪಿನಂಥ ಬಟ್ಟೆ (ಆದರೆ ಅದಕ್ಕಿಂತಲೂ ದೃಢವಾದ ಪದಾರ್ಥದಿಂದ ಮಾಡಿದುದು)

Crept. Creep ಧಾತುವಿನ ಭೂತ ಮತ್ತು ಭೂ. ಕೃ.

Crepúscular ಕ್ರಿಪಸ್ಕ್ಯುಲರ್ (ಗು.) ಮುಂಬೆಳಕಿನ, ಮುಚ್ಚಂಜೆಯ; ಸಂಧ್ಯಾ ರಾಗದ. (ಪ್ರಾ. ವಿ.) ಮುಂಬೆಳಕಿನಲ್ಲಿ, ಮುಚ್ಚಂಜೆಯಲ್ಲಿ, ಕಾಣಿಸಿಕೊಳ್ಳುವ ಅಥವಾ ಚಟುವಟಿಕೆಯಾಗಿರುವ. ಮಬ್ಬಾದ; ಇನ್ನೂ ಪೂರ್ತಿಯಾಗಿ ಬೆಳಕು ಬೀಳದಿರುವ; ನಸುಕಿನ.

Crescéndo (It.) ಕ್ರೆಷೆಂಡೊ (ಕ್ರಿ. ವಿ., ನಾ., ಗು.) (ಸಂ.) ಕ್ರಮೇಣ ಏರುವ ದನಿಯಲ್ಲಿ ಬಾಜಿಸುವ ಅಥವಾ ಹಾಡುವ. ಆರೋಹ (ಸಂಗೀತಭಾಗ). (ರೂಪ.) ಉತ್ಕರ್ಷದ ಕಡೆಗೆ ಏರುವುದು: ಆರೋಹಣ.

Créscent ಕ್ರೆಸೆಂಟ್ (ನಾ., ಗು.) ವೃದ್ಧಿ ಚಂದ್ರ; ತಿಂಗಳ ಮೊದಲ ಮತ್ತು ಕೊನೆಯ ಕಾಲುಭಾಗಗಳಲ್ಲಿ ಕಾಣುವ ಚಂದ್ರಬಿಂಬ: ಬಾಲ ಚಂದ್ರ; ಎಳವೆರೆ (ಗ್ರಾಂ.); ಖಂಡ ಚಂದ್ರ. ತುರ್ಕಿ ಸುಲ್ತಾನರ ಲಾಂಛನವಾದ ಬಾಲ ಚಂದ್ರ. ತುರ್ಕಿ ಆಧಿಪತ್ಯ; ಮುಸಲ್ಮಾನ್ ಮತ. ಬಾಲಚಂದ್ರಾಕೃತಿ (ಮು., ಮನೆಗಳ ಸಾಲು). (ಗು.) ವೃದ್ಧಿಯ; ಬಾಲಚಂದ್ರಾಕಾರದ.

Cress ಕ್ರೆಸ್ (ನಾ.) ಸಾ., ತಿನ್ನಲಾಗುವ ಕಟುರುಚಿಯ ಎಲೆಗಳುಳ್ಳ ಸಸ್ಯಜಾತಿಗಳಲ್ಲೊಂದು (Garden c., Water-c)

Crésset ಕ್ರೆಸೆಟ್ (ನಾ.) ಒಂದು ಗಣೆಯ ಮೇಲ್ತುದಿಯಲ್ಲಿ ದೀಪವನ್ನುರಿಸಲು ಎಣ್ಣೆಗಾಗಿ ಇಟ್ಟಿರುವ ಲೋಹಪಾತ್ರೆ, ಲೋಹದ ಹಣತೆ. (ಆಧುನಿಕ) ಹಡಗಿನ ನಿರ್ಮಾಣ, ಮೊ. ನ್ನು ಬೆಳಗುವ ಆಕಾಶ ದೀಪ.

Crest ಕ್ರೆಸ್ಟ್ (ನಾ., ಕ್ರಿ.) (ಪ್ರಾಣಿಗಳ ತಲೆಯಮೇಲಿನ) ಜುಟ್ಟು, ಶಿಖೆ (C.-fallen ಮುಖ ಜೋಲುಬಿದ್ದ; ಭಗ್ನೋತ್ಸಾಹ; ಖಿನ್ನ; ಕುಗ್ಗಿದ; ಕುಸಿದ; ಎದೆಗುಂದಿದ; ನಾಚುವಂತಾದ). ಚೂಡ; ಚೂಡಾಲಂಕಾರ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತುಪ್ಪುಳು ಗೊಂಡೆ ; ತುರಾಯಿ. ಸೀಸಕದ ಶಿಖರ. ತಲೆ ; ನೆತ್ತಿ ; ಮುಡಿ ; ತುದಿ ; ಅಗ್ರ ; ಶಿಖರ (ಮು., ಬೆಟ್ಟದ ವಿಷಯದಲ್ಲಿ). (ಕುದುರೆ, ನಾಯಿ, ಮೊ. ಗಳ) ಕತ್ತಿನಮೇಲಿನ ಏಣು. ಕುತ್ತಿಗೆಯ ಕೂದಲು ; ಆಯಾಲು ; ಕೇಸರ. (ಅಂ. ರ. ಶಾ.) ಎಲುಬಿನ ಉಬ್ಬೇಣು. (ವಂಶ ಲಾಂಛನ) [ಗುರಾಣಿ, ಸೀಸಕ, ಕವಚ — ಇವುಗಳಮೇಲೆ, ಅಥವಾ ಪ್ರತ್ಯೇಕವಾಗಿ (ಎಂದರೆ, ಮೊಹರು, ಲೇಖನಪತ್ರ, ಮೊ. ಗಳ ಮೇಲೆ) ಹಾಕುವ] ಲಾಂಛನ ಚಿತ್ರ. (ಕ್ರಿ.) — ಹವಣಿಸು ; — ಅಗಿರು ; (ಗುಡ್ಡ, ತರಂಗ — ಇವುಗಳ) ನೆತ್ತಿಗೇರು. (ತರಂಗಗಳ ವಿಷಯದಲ್ಲಿ) ಶಿಖರವಾಗಿ ಏಳು, ಏರು.

Cretáceous ಕ್ರಿಟೇಷಸ್ (ಗು.) ಸೀಮೆಸುಣ್ಣದ (ಸ್ವಭಾವದ)

Crétic ಕ್ರೀಟಿಕ್ (ನಾ.) (ಛಂ.) ರಗಣ (— ∪ —)

Crétify ಕ್ರೀಟಿಫೈ (ಕ್ರಿ. ಸಕ.) ಸುಣ್ಣದ ಲವಣಗಳನ್ನು ಗರ್ಭೀಕರಿಸು. **Cretificátion** (ನಾ.)

Crétin ಕ್ರೀಟಿನ್ (ನಾ.) (ಆಲ್ಪ್ಸ್ ಪರ್ವತದ ಕಣಿವೆಗಳಲ್ಲಿ ಕಾಣಬರುವಂಥ) ಕುರೂಪಿ ಹೆಡ್ಡ. **Crétinism** (ನಾ.) ಗಂಡಾಮಾಲೆಗೂಡಿದ ಕುರೂಪಿ ಹೆಡ್ಡತನ. **Crétinize** (ಕ್ರಿ. ಸಕ.) ; **Crétinous** (ಗು.)

Cretónne (F) ಕ್ರೀಟಾನ್, **Crétonne** ಕ್ರೆಟಾನ್ (ನಾ.) (ಕುರ್ಚಿ, ಸೋಫಾ, ಮೊ. ಗಳ ಮೆತ್ತೆಯ ಮೇಲ್ಭಾಗಕ್ಕೂ ಪರದೆಗಳಿಗೂ ಉಪ ಯೋಗಿಸುವ, ಒಂದು ಕಡೆ ಅಥವಾ ಎರಡು ಕಡೆಯೂ ವರ್ಣಚಿತ್ರ ಛಾಪಿ ಸಿರುವ) ದಪ್ಪವಾದ ಒರಟುಬಟ್ಟೆ : ಕ್ರೀಟಾನ್ ಬಟ್ಟೆ.

Crevásse (F) ಕ್ರಿವ್ಯಾಸ್ (ನಾ.) ನೀರ್ಗಲ್ಲುನದಿಯಲ್ಲಿ ಆಳವಾದ ಬಿರುಕು.

Crévice ಕ್ರೆವಿಸ್ (ನಾ.) ಬಿರುಕು ; ಬೀಟೆ ; ಸಂದು ; ಕಂಡಿ ; ರಂಧ್ರ.

Crew[1] ಕ್ರೂ (ನಾ.) (ಹಡಗಿನಲ್ಲಿಯ ಅಥವಾ ದೋಣಿಯಲ್ಲಿಯ) ಕಲಾಸಿ ತಂಡ ; ಹಡಗಿನ ನೌಕರರು ; ನಾವಿಕರ ತಂಡ. ಸಂಘ ; ಮಂಡಲಿ ; ತಂಡ ; ಗುಂಪು ; ನೆರವಿ ; ಹಿಂಡು ; ಪಡೆ ; ದೊಂಬಿ.

Crew[2]. Crow ಧಾತುವಿನ ಭೂತ ರೂಪ.

Crewel ಕ್ರೂಎಲ್ (ನಾ.) ಪರದೆಯ ಚಿತ್ರಕೆಲಸಕ್ಕೂ ಕಸೂತಿ ಕೆಲಸಕ್ಕೂ ಉಪಯೋಗವಾಗುವ ಸೂಕ್ಷ್ಮವಾದ ಉಣ್ಣೆಯ ದಾರ : ಕಸೂತಿ ದಾರ. C.-work ಕಸೂತಿ ಕೆಲಸ.

Crib ಕ್ರಿಬ್ (ನಾ., ಕ್ರಿ. ಸಕ.) ಮೇವು ತೊಟ್ಟಿ ; ಗೋದಣಿಗೆ. ಜೋಪಡಿ ; ಗುಡಿಸಲು ; ಕೊಟ್ಟಿಗೆ ; ಕಿರಿದಾದ ಕೋಣೆ. (ಕಟಕಟೆಯುಳ್ಳ) ಮಗುವಿನ ಮಂಚ, ತೊಟ್ಟಿಲು. (ಸಾಮನ್‌ಮೀನನ್ನು ಹಿಡಿಯುವ) ಕಡ್ಡಿಹೆಣಿಗೆಯ ಹಿಡಿಬುಟ್ಟಿ ; ಕೂಳೆ. ಗಣಿಯ ತೋಡುಗುಂಡಿಯ ಪಕ್ಕಗಳ ಆಸರೆಯ ಚೌಕಟ್ಟು ; ಊರೆಗಟ್ಟು. ನೀರಿನ ತಳ, ಹುಸಿ ನೆಲ, ಮೊ. ಗಳಲ್ಲಿ ಅಸ್ತಿಭಾರ ಹಾಕುವುದಕ್ಕಾಗಿ ಜಲ್ಲಿ, ಮೊ. ನ್ನು ತುಂಬಿದ, ತೊಲೆಗಳಿಂದ ಮಾಡಿದ, ಚೌಕಟ್ಟು : ಹದಿಕಟ್ಟು (= C.-work). (ಅಮೆ. ಸಂ.) (ಜೋಳ, ಉಪ್ಪು, ಮೊ. ಕ್ಕಾಗಿ ಮಾಡಿದ) ಓಡೆ, ಗಳಗೆ, ತೊಟ್ಟಿ. (ಬಳ. ಮಾ.) ಕೃತಿಚೌರ್ಯ ; ವಿದ್ಯಾರ್ಥಿಗಳ ಅಕ್ರಮ ಉಪಯೋಗ ಕ್ಕಾಗಿ ರಚಿಸಿದ ಅನುವಾದ. (ಕ್ರಿ.) ಇಕ್ಕಟ್ಟುಸ್ಥಳದಲ್ಲಿ ಕೂಡು ; (ಕೊಟ್ಟಿಗೆ, ಮೊ. ಕ್ಕೆ) ಗೋದಣಿಗೆಗಳನ್ನು ಹವಣಿಸು. ಕದಿ ; ಕಳವು ಮಾಡು ; ಚೌರ್ಯ ಮಾಡು ; ಒಬ್ಬನ ಲೇಖನವನ್ನು ಅಥವಾ ಗ್ರಂಥಭಾಗವನ್ನು ಅಕ್ರಮವಾಗಿ ಅಥವಾ ಆಕರವನ್ನು ಹೇಳದೆ, ಕದ್ದು ಬರೆ ; ಕೃತಿಚೌರ್ಯ ಮಾಡು.

Críbbage ಕ್ರಿಬೇಜ್ (ನಾ.) ಇಬ್ಬರು, ಮೂವರು ಅಥವಾ ನಾಲ್ವರು ಆಡಬಹುದಾದ ಒಂದುತೆರದ ಇಸ್ಪೀಟಾಟ.

Cribriform ಕ್ರೈ(ಕ್ರಿ)ಬ್ರಿಫಾರ್‌ಮ್ (ಗು.) (ಅಂ. ರ. ಶಾ., ಸ. ವಿ.) ಜರಡಿಯ ಕಂಡಿಗಳಂಥ ಸಣ್ಣ ಕಂಡಿಗಳುಳ್ಳ ; ಜರಡಿಯಂಥ.

Crick ಕ್ರಿಕ್ (ನಾ., ಕ್ರಿ. ಸಕ.) ಕತ್ತು, ಬೆನ್ನು, ಮೊ. ಗಳ ಸ್ನಾಯು ಗಳು ಥಟ್ಟನೆ ಸೆಡೆತುಕೊಳ್ಳುವುದು ; ಥಟ್ಟನೆ ಉಂಟಾದ ಸೆಡೆತ. (ಕತ್ತು, ಮೊ. ಭಾಗಗಳಲ್ಲಿ) ಸೆಡೆತವುಂಟುಮಾಡು.

Crícket[1] ಕ್ರಿಕೆಟ್ (ನಾ.) ಜಿರ್ರೆಂದು ಶಬ್ದಮಾಡುವ ಒಂದು ಜಾತಿಯ ಕುಪ್ಪುಳು ಕೀಟ : ಚಿಮ್ಮಂಡೆ ; ಒಂದು ಜಾತಿಯ ಮಿಡಿತೆ.

Crícket[2] ಕ್ರಿಕೆಟ್ (ನಾ., ಕ್ರಿ. ಅಕ.) ಚೆಂಡು, ದಾಂಡು, ಗುರಿಕೋಲು —ಇವುಗಳಿಂದ ಹನ್ನೊಂದು ಹನ್ನೊಂದು ಮಂದಿಯುಳ್ಳ ಎರಡು ಕಡೆಯ ಆಟಗಾರರು ಬಯಲಿನಲ್ಲಿ ಆಡುವ ಒಂದು ಆಟ : ಕ್ರಿಕೆಟ್ ಆಟ [Not c. (ಬಳ. ಮಾ.) (ಯಾವ ವಿಚಾರದಲ್ಲೇ ಆಗಲಿ ಮರ್ಯಾದಸ್ಥರಾದ ಎದು ರಾಳಿಗಳು ನ್ಯಾಯ ತಪ್ಪುವ ಸಂದರ್ಭದಲ್ಲಿ) ತರವಲ್ಲ ; ನ್ಯಾಯವಲ್ಲ]. (ಕ್ರಿ.) ಕ್ರಿಕೆಟ್ ಆಟವಾಡು. **Crícketer** (ನಾ.)

Crícoid ಕ್ರೈಕಾಯ್ಡ್ (ಗು., ನಾ.) ವಲಯಾಕಾರದ (ಗಂಟಲಿನ ಮೃದ್ವಸ್ಥಿ) : 'ಕ್ರೈಕಾಯ್ಡ್' ಮೃದ್ವಸ್ಥಿ.

Críer. **Cry** ನೋಡಿ.

Críkey ಕ್ರೈಕಿ (ಭಾವ. ಅವ್ಯ.) (ಅಸಂ.) (ಆಶ್ಚರ್ಯಸೂಚಕ) ಅಬ್ಬಬ್ಬಾ !

Crime ಕ್ರೈಮ್ (ನಾ., ಕ್ರಿ. ಸಕ.) ನ್ಯಾಯಸ್ಥಾನದ ದಂಡನೆಗೆ ಅರ್ಹ ವಾದ ಕೃತ್ಯ (ಸಾ., ದೊಡ್ಡ ತಪ್ಪಿತ) ; ಅಪರಾಧ ; ತಕ್ಸೀರು ; ಪಾತಕ ; ದುಷ್ಕಾರ್ಯ. C.-sheet ಸಿಪಾಯಿಯು ನಿಬಂಧನೆಗಳನ್ನು ಮೀರಿ ನಡೆದ ತಪ್ಪಿತಗಳ ದಾಖಲೆಯ ಪಟ್ಟಿ : ತಪ್ಪು ಪಟ್ಟಿ. (ಕ್ರಿ., ಸೈನ್ಯ) ಅಪರಾಧ ಹೊರಿಸು, ಸ್ಥಾಪಿಸು. **Crímeless** (ಗು.) ; **Críminal** ಕ್ರಿಮಿನಲ್ (ಗು., ನಾ.) ಅಪರಾಧದ ; ದೋಷಾತ್ಮಕ ; ತಕ್ಸೀರಿನ. (C. conversation, connexion ಅಕ್ರಮ ಸಂಭೋಗ ; ವ್ಯಭಿಚಾರ. C. law ದಂಡ ಶಾಸನ ; ದಂಡ ನ್ಯಾಯಶಾಸ್ತ್ರ). ಅಪರಾಧಿ ; ಪಾತಕಿ ; ತಕ್ಸೀರುದಾರ ; ಪಾಪ ಸಂಗ. **Críminally** (ಕ್ರಿ. ವಿ.) ; **Criminálity** — ನ್ಯಾಲಟಿ (ನಾ.) ಅಪರಾಧಿತನ ; ಪಾತಕಿತನ. **Críminate** — ನೇಟ್ (ಕ್ರಿ. ಸಕ.) ಅಪರಾಧವನ್ನು ಆಪಾದಿಸು ; ಅಪರಾಧ ಹೊರಿಸು ; ಅಪರಾಧಿಯೆಂದು ತೋರಿಸಿಕೊ. ಖಂಡಿಸು ; ತಪ್ಪು ಹಿಡಿ. **Criminátion** (ನಾ.) ; **Críminative** — ನೆಟಿವ್ (ಗು.) ಅಪರಾಧ ಹೊರಿಸುವ. **Críminatory** — ನಟೊರಿ (ಗು.) ; **Criminólogy** — ನಾಲೊಜಿ (ನಾ.) ಅಪರಾಧ (ವಿಚಾರ) ಶಾಸ್ತ್ರ. **Críminous** (ಗು.) ಅಪರಾಧ ಮಾಡಿದ ; ಪಾತಕದ (C. clerk 'ಅಪರಾಧ ಮಾಡಿದ ಪಾದ್ರಿ' ಎಂಬಲ್ಲಿ ಮಾತ್ರ)

Crímine, -iny ಕ್ರಿಮಿನಿ (ಭಾವ. ಅವ್ಯ.) (ಆಶ್ಚರ್ಯಸೂಚಕ) ಅಬ್ಬಬ್ಬಾ !

Crimp[1] ಕ್ರಿಂಪ್ (ನಾ., ಕ್ರಿ. ಸಕ.) ನಾವೆಯ ಕೆಲಸಕ್ಕಾಗಲಿ ಸಿಪಾಯಿ ಕೆಲಸಕ್ಕಾಗಲಿ ಜನರನ್ನು ಮರುಳುಗೊಳಿಸಿ ಸೇರಿಸುವ ಕಾರ್ಯಭಾರಿ (ರೂಪ. ಸಹ). (ಕ್ರಿ.) ನಾವಿಕತನಕ್ಕೂ ಸಿಪಾಯಿತನಕ್ಕೂ ಬಲೆಬೀಸಿ ಜನರನ್ನು ಸಿಕ್ಕಿಸಿಕೊ, ಮೋಸದಿಂದ ಸೇರಿಸು.

Crimp[2] ಕ್ರಿಂಪ್ (ಕ್ರಿ. ಸಕ., ಗು.) (ಒತ್ತಿ) ನಿರಿಗೆಗಳಾಗಿ, ಮಡಿಕೆಗಳಾಗಿ, ಮಾಡು. ತೆರೆತೆರೆಗಳಾಗುವಂತೆ ಮಾಡು, ಬಗ್ಗಿಸು. ಬೇಕಾದ ಆಕಾರಕ್ಕೆ ಬಗ್ಗಿಸು, ರೂಪು ಕೊಡು. ಸೆಡೆತುಕೊಳ್ಳುವಂತೆ ಮಾಡು. (ಗು.) (ಕ್ರಿಯಾರ್ಥಗಳಲ್ಲಿ) ; ಸುಲಭವಾಗಿ ಪುಡಿಯಾಗುವ ; ಗರಿಗರಿ ಯಾದ.

Crímson ಕ್ರಿಂಸ್‌ನ್ (ಗು., ನಾ., ಕ್ರಿ.) ಕಡುಗೆಂಪು (ಬಣ್ಣ). (ಕ್ರಿ.) ಕಡುಗೆಂಪು ಬಣ್ಣ ಕೊಡು ; — ವಾಗಿಸು ; — ವಾಗು.

Cringe ಕ್ರಿಂಜ್ (ಕ್ರಿ. ಅಕ., ನಾ.) ಕುಗ್ಗಿ ನಡೆ ; ಅತಿ.ನಮ್ರತೆಯಿಂದ ವರ್ತಿಸು ; ನಾಯಿಯಂತೆ ಒಲಿಯಿಸು ; ಅತಿ ದೈನ್ಯ ತೋರಿಸು ; ಹಲ್ಲುಗಿರಿದು ಬೇಡಿಕೊ ; ಹಲ್ಲು ಗಿಂಜು ; ದಾಸಾನುದಾಸನಂತೆ ವರ್ತಿಸು. (ನಾ.) ಅತಿ ದೈನ್ಯ ; ಹಲ್ಲುಗಿರಿತ.

Críngle ಕ್ರಿಂಗ್‌ಲ್ (ನಾ.) (ನಾವೆ) ಮತ್ತೊಂದು ಹಗ್ಗವನ್ನು ತೂರಿಸ ಲಾಗುವಂತೆ ಒಂದು ಹಗ್ಗದಲ್ಲಿ ಬಿಗಿದಿರುವ ಕಬ್ಬಿಣದ ಉಂಗುರವುಳ್ಳ ಕಣ್ಣು : ಹಗ್ಗದ ಕಣ್ಣು.

Crínite ಕ್ರೈನೈಟ್ (ಗು.) (ಸ. ವಿ., ಪ್ರಾ. ವಿ.) ಕೂದಲುಳ್ಳ ; ಲೋಮಶ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Crínkle ಕ್ರಿಂಕ್‌ಲ್ (ಕ್ರಿ., ನಾ.) ತಿರಿಚು ; ಸುಕ್ಕು (ಮಾಡು, ಆಗು) ; ತೆರೆತೆರೆ (ಮಾಡು, ಆಗು). **Crínkly** (ಗು.)

Crínkum-Cránkum ಕ್ರಿಂಕಂ ಕ್ರ್ಯಾಂಕಂ (ನಾ., ಗು.) ತಿರಿಚು ಮುರಿಚಾದ, ಅಷ್ಟಾವಕ್ರ (ವಸ್ತು) (ರೂಪ. ಸಹ)

Crínoid ಕ್ರಿ(ಕ್ರೈ)ನಾಯ್ಡ್ (ಗು., ನಾ.) (ಪ್ರಾ. ವಿ.) ನೈದಿಲೆ ಯಾಕಾರದ (ವಲ್ಕವಂತ ಪ್ರಾಣಿ). **Crinoídal** (ಗು.)

Crínoline ಕ್ರಿನೊಲಿ(ೕ)ನ್ (ನಾ.) ಹಿಂದೆ ಲಂಗಗಳಿಗೆ ಉಪಯೋಗಿಸುತ್ತಿದ್ದ, ಕುದುರೆಯ ಜವಿ, ಮೊ. ಗಳಿಂದ ಮಾಡಿದ ಗಟ್ಟಿಬಟ್ಟೆ. ಉಬ್ಬು ಪಟ್ಟಿ ಹಾಕಿದ ರವಿಕೆ. ಯುದ್ಧದ ಹಡಗಿಗೆ ರಕ್ಷಣೆಯಾಗಿ ಹಾಕಿದ ಸುತ್ತುಬಲೆ.

Crípple ಕ್ರಿಪ್‌ಲ್ (ನಾ., ಕ್ರಿ.) ಹೆಳವ ; ಕುಂಟ. ಕಿಟಕಿ, ಮೊ. ನ್ನು ಚೊಕ್ಕಟ ಮಾಡುವುದಕ್ಕಾಗಿ ಕಟ್ಟಿದ ಸಾರುವೆ. (ಕ್ರಿ.) ಕುಂಟು ಮಾಡು ; (ರೂಪ.) ಶಕ್ತಿಗುಂದಿಸು ; ಉಡುಗಿಸು. ಕುಂಟಿಕೊಂಡು ನಡೆ ; ಕುಂಟು. **Crípplédom** (ನಾ.) — ಸ್ಥಿತಿ ; **Crípplehood** (ನಾ.) ಹೆಳವತನ.

Cris ಕ್ರಿಸ್ = Creese.

Crísis ಕ್ರೈಸಿಸ್ (ನಾ., ಬ. ವ. Crises — ಸೀಸ್) ಸಂಧಿ ಕಾಲ ; ಸಂಧಿ ; (ಸತ್ವ)ಪರೀಕ್ಷೆಯ ಕಾಲ ; ಉತ್ಕಟ ಸ್ಥಿತಿ ; ವಿಷಮ ಸ್ಥಿತಿ (ಮು., ರೋಗದ್ದು). (ರಾಜ್ಯನೀತಿ, ವ್ಯಾಪಾರ, ಮೊ. ಗಳಲ್ಲಿ) ಗಂಡ ಕಾಲ, ಸಂಕಟ ಕಾಲ ; ಇಕ್ಕಟ್ಟು ; ಬಿಕ್ಕಟ್ಟು ; ಮುಗ್ಗಟ್ಟು ; ಸಂದಿಗ್ಧ ಸಮಯ. Cabinet c. ಮಂತ್ರಿಮಂಡಲದ ವಿಷಮ ಸಂಧಿ. Constitutional c. ರಾಜ್ಯವ್ಯವಸ್ಥೆಯಲ್ಲಿ ವಿಷಮ ಸಂಧಿ. Financial c. ಆರ್ಥಿಕ ವಿಷಮ ಸಂಧಿ.

Crisp ಕ್ರಿಸ್ಪ್ (ಗು., ನಾ., ಕ್ರಿ.) ಗರಿಗರಿಯಾದ ; ಗರಿಮುರಿಯಾದ ; ಗರಗಾದ ; ಲಘುವಾದ. ಲವಲವಿಕೆ ಹುಟ್ಟಿಸುವ ; ಹುರಿಗೊಳಿಸುವ (C. air) ; ಕ್ಷಿಪ್ರ ; ಆಲಸ್ಯವಿಲ್ಲದ ; ನಿರ್ಧರ ; ಖಂಡಿತ ; ಸ್ಪಷ್ಟ ; ಚುರುಕಾದ ; ಮೊನಚಾದ (C. manner ಚುರುಕು ನಡತೆ. C. style ಚುರುಕು ಶೈಲಿ). (ಕೂದಲು, ಮೊ. ಗಳ ವಿಷಯದಲ್ಲಿ) ಗುಂಗುರು (ಗುಂಗುರಾದ) ; ಸುರುಳಿ(ಸುರುಳಿಯಾದ). (ಸಮುದಾಯ ವಾಚಕ, ಅಸಂ.) ಬ್ಯಾಂಕುನೋಟುಗಳು ; ಕಾಗದದ ಹಣ. (ಬ. ವ. ದಲ್ಲಿ) (ಪೊಟ್ಟಣಗಳಲ್ಲಿಟ್ಟು ಮಾರುವ) ಆಲೂಗೆಡ್ಡೆಯ ಉಪ್ಪೇರಿ. (ಕ್ರಿ.) ಗುಂಗುರಾಗು ; — ಮಾಡು ; ಕೊಂಕು. ಗರಿಗರಿ ಮಾಡು ; — ಯಾಗು ; ಸುರುಳಿಸು. **Crísply** (ಕ್ರಿ. ವಿ.) ; **Críspness** (ನಾ.)

Críspate ಕ್ರಿಸ್ಪೇಟ್ (ಗು.) ಗರಿಗರಿಯಾದ ; ಗುಂಗುರು ಗುಂಗುರಾದ. (ಸ. ವಿ., ಪ್ರಾ. ವಿ.) ಅಲೆಯಾಕಾರದ ಅಂಚುಳ್ಳ. **Crispátion** (ನಾ.) ಸುರುಳಿ ಸುತ್ತುವುದು ; ಕೊಂಕುವುದು ; ಗುಂಗುರು (ಗುಂಗುರಾಗುವುದು) ; ತೆರೆತೆರೆ(ಯಾಗುವುದು) ; ಸುಕ್ಕು ; ಸಂಕೋಚನೆ ; ಆಕುಂಚನೆ (ಮು., ಮೈಮೇಲೆ ಮುಳ್ಳೇಳುವುದು, ರೋಮಾಂಚವಾಗುವುದು). **Críspy** (ಗು.)

Críss-cross ಕ್ರಿಸ್ ಕ್ರಾಸ್ (ನಾ., ಗು., ಕ್ರಿ. ವಿ., ಕ್ರಿ.) ಅಡ್ಡಾದಿಡ್ಡಿಯ ಗೆರೆಗಳು, ಪ್ರವಾಹಗಳು, ಮೊ. ವು. ; ಅಡ್ಡಸೇರುವೆ ; ಕತ್ತರಿ ಗುರುತು [C. row (Christ- ನೋಡಿ)]. (ಗು.) ಅಡ್ಡಗೆರೆಗಳುಳ್ಳ ; ಕತ್ತರಿಯಾಕಾರದ (C. pattern — ನಮೂನೆ. C. traffic ಅಡ್ಡ ಮಾರ್ಗಗಳಲ್ಲಿಯ (ಜನ, ವಾಹನ) ಸಂಚಾರ, ಓಡಾಟ. (ಮನುಷ್ಯರ ಅಥವಾ ಅವರ ಪ್ರಕೃತಿಯ ವಿಷಯದಲ್ಲಿ) ಮುಂಗೋಪವುಳ್ಳ, ಸಿಡಿಗುಟ್ಟುವ, ರೇಗುವ. (ಕ್ರಿ. ವಿ.) ಅಡ್ಡಡ್ಡಲಾಗಿ ; ಅಡ್ಡ ಮಾರ್ಗಗಳಲ್ಲಿ ; ಅಡ್ಡಾದಿಡ್ಡಿಯಾಗಿ ; ಪರಸ್ಪರ ವಿರುದ್ಧವಾಗಿ (Every thing went c. ಎಲ್ಲವೂ ಅಡ್ಡಾದಿಡ್ಡಿಯಾಗಿ ಹೋಯಿತು). (ಕ್ರಿ.) ಅಡ್ಡಲಾಗಿ ಹೋಗು. ಕತ್ತರಿಗೆರೆಗಳ ನಮೂನೆಯ ಕೆಲಸ ಮಾಡು.

Crístate ಕ್ರಿಸ್ಟೇಟ್ (ಗು.) ಜುಟ್ಟುಳ್ಳ ; ಶಿಖೆಯುಳ್ಳ ; ಏಣುಳ್ಳ.

Critérion ಕ್ರೈಟೀರಿಯನ್ (ನಾ., ಬ. ವ. -ia) (ಒಂದು ವಸ್ತುವಿನ ಗುಣವಿಮರ್ಶೆ ಮಾಡುವಲ್ಲಿ ಇಟ್ಟುಕೊಳ್ಳುವ) ಪ್ರಮಾಣ, ಅಳತೆ ; ನಿರ್ಣಾಯಕ ; ನಿರ್ಧಾರಕ ; ಒರೆಗಲ್ಲು ; ಮಾನ ದಂಡ ; ವಿಶೇಷ ಲಕ್ಷಣ.

Crític ಕ್ರಿಟಿಕ್ (ನಾ.) ವಿಮರ್ಶಕ ; ಶೋಧಕ ; ವಿಚಾರಕ ; ಗುಣ ದೋಷ ಪರೀಕ್ಷಕ. (ಸಾಹಿತ್ಯದ ಅಥವಾ ಕಲಾ ಕೃತಿಗಳ) ವಿವೇಚಕ ; ಗ್ರಂಥಪಾಠ ವಿಮರ್ಶಕ. **Criticáster** — ಕ್ಯಾಸ್ಟರ್ (ನಾ.) ಕ್ಷುದ್ರ ವಿಮರ್ಶಕ ; ಛಿದ್ರಾನ್ವೇಷಿ. **Crítical** — ಕಲ್ (ಗು.) ವಿಮರ್ಶಾತ್ಮಕ ; ವಿಮರ್ಶೆಯ. ಹುಳುಕು ಹುಡುಕುವ ; ತಪ್ಪುಹಿಡಿಯುವ. ಅಪಾಯ ಸಂಭವದ ; ವಿಷಮಾವಸ್ಥೆಯ ; ಸಂದಿಗ್ಧ ; ಸಂದುಕಟ್ಟಿನ (C. condition ವಿಷಮ ಸ್ಥಿತಿ). (ಗಣಿತ, ಭೌ. ವಿ.) ಒಂದು ಸ್ಥಿತಿಯಿಂದ ಮತ್ತೊಂದಕ್ಕೆ ದಾಟುವ ಸಂಧಿಯನ್ನು ಗುರುತಿಸುವ ; ಸಂಧಿಸ್ಥ ; ಅವಧಿಕ (C. angle ಅವಧಿಕ ಕೋನ). **Crítically** (ಕ್ರಿ. ವಿ.) ; **Críticism** — ಸಿಸ್ಮ್ (ನಾ.) ವಿಮರ್ಶೆ ; ಟೀಕೆ ; ಗುಣ ದೋಷ ವಿವೇಚನೆ. ವಿಮರ್ಶಾತ್ಮಕ ಲೇಖನ. **Críticize** — ಸೈಸ್ (ಕ್ರಿ. ಸಕ.) ತಪ್ಪುಹಿಡಿ ; ಖಂಡಿಸು ; ಆಕ್ಷೇಪಿಸು ; ದೋಷ ಹುಡುಕು. **Críticizable** (ಗು.)

Crítico ಕ್ರಿಟಿಕೊ— (ಸಮಾಸದಲ್ಲಿ ಪೂರ್ವಪದ) ವಿಮರ್ಶಾತ್ಮಕ ಮತ್ತು— (C.-historical ವಿಮರ್ಶಾತ್ಮಕ ಮತ್ತು ಚರಿತ್ರಾತ್ಮಕ)

Critíque ಕ್ರಿಟೀಕ್ (ನಾ.) ವಿಮರ್ಶಾತ್ಮಕ ಲೇಖನ ; ವಿಮರ್ಶೆ ; ವಿಮರ್ಶನ ಕಲೆ.

Croak ಕ್ರೋಕ್ (ನಾ., ಕ್ರಿ.) ಕಪ್ಪೆಯ ಕೂಗು ; ವಟ್ರವಟ್ರ ಶಬ್ದ. (ಕ್ರಿ.) ಕಪ್ಪೆಯಂತೆ ವಟಗುಟ್ಟು. ಕೇಡು ಸೂಚಿಸು ; ಅಪಶಕುನ ನುಡಿ. (ಅಸಂ.) ಗೊಟಕ್ಕೆನ್ನು ; ಸಾಯಿ. (ಅಮೆ. ಸಂ., ಅಸಂ.) ಕೊಲ್ಲು ; ಸಾಯಿಸು. ಗೊಣಗುಟ್ಟು. **Croáky** (ಗು.) ; **Croáker** (ನಾ.) (ಕ್ರಿಯಾರ್ಥಗಳಲ್ಲಿ). ಕೇಡು ಸೂಚಿಸುವವನು ; ದುಶ್ಶಕುನಿಗ.

Cróceate ಕ್ರೋಸಿಯೆಟ್ (ಗು.) ಕೇಸರಿ ಬಣ್ಣದ.

Cróchet ಕ್ರೊಷೆ, ಕ್ರೋಷಿ (ನಾ., ಕ್ರಿ. ಸಕ.) ಕೊಕ್ಕೆಕೊನೆಯ ಸೂಜಿಯಿಂದ (ಉಣ್ಣೆ, ಮೊ. ಗಳ) ದಾರದಲ್ಲಿ ಮಾಡಿದ ಹೆಣಿಗೆಯ ಕೆಲಸ : ಕ್ರೋಷೆ ಕೆಲಸ. (ಕ್ರಿ.) (ಶಾಲು, ಮೊ. ಕ್ಕೆ) ಕ್ರೋಷೆ ಕೆಲಸ ಮಾಡು.

Crock[1] ಕ್ರಾಕ್ (ನಾ.) ಮಡಕೆ ; ಗಡಿಗೆ ; ಕುಡಿಕೆ. (ಪ್ರಾಂತೀಯ) ಬಿಂದಿಗೆ ; ಕೊಡ. ಹೂವಿನ ಕುಂಡಗಳಲ್ಲಿಯ ಅಡಿಗಂಡಿಯನ್ನು ಮುಚ್ಚುವುದಕ್ಕಾಗಿ ಉಪಯೋಗಿಸುವ ಬೋಕಿಚೂರು. **Cróckery** (ನಾ.) ಪಿಂಗಾಣಿ ಸಾಮಾನು ; ಮಣ್ಣಿನ ಪಾತ್ರೆಗಳು ; ಮಡಕೆ ಕುಡಿಕೆಗಳು.

Crock[2] ಕ್ರಾಕ್ (ನಾ., ಕ್ರಿ.) (ಅಸಂ.) ಕೆಲಸಕ್ಕೆ ಬಾರದವನು ; ಶಕ್ತಿಯಿಲ್ಲದವನು ; ಅಸಮರ್ಥ ; ಅಪ್ರಯೋಜಕ. ಶಕ್ತಿಗುಂದಿದ ಕುದುರೆ. ಮುದಿ ಹೆಣ್ಣುಕುರಿ. ಶಕ್ತಿಗುಂದಿಸು ; ನಿತ್ರಾಣ ಮಾಡು (ಸಾ., ಭೂ. ಕೃ. ನಲ್ಲಿ). C. up (ಅಸಂ.) ಶಕ್ತಿಗುಂದಿಹೋಗು ; ನಿತ್ರಾಣವಾಗು.

Crócodile ಕ್ರಾಕೊಡೈಲ್ (ನಾ.) ಮೊಸಳೆ (ಒಂದು ದೊಡ್ಡ ಉಭಯ ಜೀವಿ ಸರೀಸೃಪ) ; ನೆಗಳು. (ರೂಪ.) ಬೂಟಾಟಿಕೆಗಾಗಿ ಅಥವಾ ದುರಾಲೋಚನೆಯಿಂದ ಅಳುವವನು [ಮೊಸಳೆ ಯಾವುದಾದರೂ ಪ್ರಾಣಿಯನ್ನು ಹಿಡಿದು ತಿನ್ನುವಾಗ ಕಣ್ಣೀರುಹಾಕುವುದೆಂಬ ಕಥೆಯಿಂದ] (C. tears ಬೂಟಾಟಿಕೆಯ ಅಳು ; ಕಪಟ ಕಂಬನಿ ; ಹುಸಿ ಮರುಕ). (ಬಳ. ಮಾ., ಹಾಸ್ಯವಾಗಿ) ಶಾಲೆಯ ಹುಡುಗಿಯರು ಇಬ್ಬರಿಬ್ಬರು ಒಟ್ಟಿಗೆ ಉದ್ದಸಾಲಿನಲ್ಲಿ ನಡೆದುಹೋಗುವುದು. **Crocodílian** — ಡಿಲಿಯನ್ (ಗು., ನಾ.) ಮೊಸಳೆಯ ; ಮೊಸಳೆಯ ಜಾತಿಗೆ ಸೇರಿದ (ಪ್ರಾಣಿ)

Crócus ಕ್ರೋಕಸ್ (ನಾ., ಬ. ವ. -uses) (ಸಾ., ಹಳದಿಯ ಅಥವಾ ನೇರಿಳೆಯ ಬಣ್ಣದ) ಬಹಳ ಪ್ರಕಾಶಮಾನವಾದ ಹೂವುಬಿಡುವ, ಗೆಡ್ಡೆ ಬೇರಿನ ಒಂದು ಜಾತಿಯ ಕುರುಚು ಗಿಡ. (C. sativus ಕುಂಕುಮ ಕೇಸರಿ ದೊರೆಯುವ ಈ ಜಾತಿಯ ಗಿಡ : ಕೇಸರಿ ಗಿಡ). (ರೋಹಕ್ಕೆ ಮೆರುಗು ಕೊಡುವುದಕ್ಕಾಗಿ ಉಪಯೋಗಿಸುವ) ಕಬ್ಬಿಣದ 'ಪರ್ ಆಕ್ಸೈಡ್' ಪುಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Croésus ಕ್ರೀಸಸ್ (ನಾ.) ಬಹಳ ಐಶ್ವರ್ಯವಂತ ; ಕುಬೇರ. (ಲಿಡಿಯಾ ದೇಶದ ದೊರೆಯಾಗಿದ್ದ Croesus ಎಂಬಾತನ ಹೆಸರಿನಿಂದ)

Croft ಕ್ರಾಫ್ಟ್ (ನಾ.) ಬೇಲಿ ಹಾಕಿರುವ (ಸಾ., ವ್ಯವಸಾಯದ) ಜಮೀನು ; ಸಣ್ಣ ಹಿಡುವಳಿ ; ತುಂಡು ಹೊಲ. **Crófter** ಸಣ್ಣ ಹಿಡುವಳಿದಾರ.

Cro-Mágnon ಕ್ರೋಮ್ಯಾನ್ಯನ್ (ಗು.) ಉದ್ದ ತಲೆಯೂ ಎತ್ತರದ ನಿಲವೂ ಇದ್ದ ಯೂರೋಪಿಯನ್ ಜನಾಂಗದ ಚರಿತ್ರಪೂರ್ವಜರ. (ಫ್ರಾನ್ಸಿನಲ್ಲಿರುವ Cro-Magnon ಎಂಬ ಸ್ಥಳದಲ್ಲಿಯ ಗುಹೆಗಳಲ್ಲಿ ದೊರೆತ ಅವಶೇಷಗಳಿಂದ)

Crómlech ಕ್ರಾಮ್ಲೆಕ್ (ನಾ.) ಲಂಬವಾಗಿ ನೆಟ್ಟ ಕಲ್ಲುಗಳಮೇಲೆ ಮಟ್ಟವಾಗಿ ಹಾಸಿದ ಚಪ್ಪಟೆಯ ದೊಡ್ಡ ಕಲ್ಲುಬಂಡೆಗಳುಳ್ಳ ಚರಿತ್ರಪೂರ್ವದ ಕಟ್ಟಡ : 'ಕ್ರಾಮ್ಲೆಕ್'.

Crone ಕ್ರೋನ್ (ನಾ.) ಹಣ್ಣುಹಣ್ಣು ಮುದುಕಿ ; ಮುದಿ ಹೆಣ್ಣುಕುರಿ.

Cróny ಕ್ರೋನಿ (ನಾ.) ಆಪ್ತ ಸ್ನೇಹಿತ ; ಅಚ್ಚುಮೆಚ್ಚಿನ ಗೆಳೆಯ.

Crook ಕ್ರುಕ್ (ನಾ., ಗು., ಕ್ರಿ.) ಕುರುಬನ, ಬಿಷಪ್ಪಿನ, ಕೊಂಡಿಕೊನೆಯ ದೊಣ್ಣೆ, ದಂಡ. ಕೊಂಡಿಯುಳ್ಳದ್ದು ; ದೋಟಿ ; ಕೊಂಡಿ ; ಕೊಕ್ಕೆ. ಬಾಗು ; ವಕ್ರ ; ಸೊಟ್ಟು. ಬಗ್ಗುವುದು. (ಅಸಂ.) ಕಳ್ಳ ; ಮೋಸಗಾರ [On the c. ಮೋಸದಿಂದ. C.-back(ed) ಗೂನು ಬೆನ್ನು, — ಬೆನ್ನಿನ]. (ಗು.) = Crooked. (ಕ್ರಿ.) ಬಗ್ಗು ; ವಕ್ರವಾಗು ; — ಗಿಸು ; ಮೈಮುರಿ. **Croóked** ಕ್ರುಕೆಡ್ (ಗು.) ಬಗ್ಗಿದ ; ತಿರಿಚಿದ ; ವಕ್ರ ; ಸೊಟ್ಟ ; ಡೊಂಕಾದ ; (ಮುದಿತನದಿಂದ) ಬಾಗಿದ. (ರೂಪ.) ಋಜುವಲ್ಲದ ; ನೇರವಲ್ಲದ ; ಮೋಸದ ; ಕುಟಿಲ. (ದೊಣ್ಣೆಯ ವಿಷಯದಲ್ಲಿ, ಉಚ್ಚಾರಣೆ : 'ಕ್ರುಕ್ಟ್') ಅಡ್ಡಕಡ್ಡಿಯ ಹಿಡಿಯುಳ್ಳ ; ಆಧಾರ ದಂಡವುಳ್ಳ. **Cróokedly** (ಕ್ರಿ. ವಿ.) ; **Cróokedness** (ನಾ.)

Crookes ಕ್ರುಕ್ಸ್ (ನಾ.) ಒಬ್ಬ ಪ್ರಸಿದ್ಧ ಇಂಗ್ಲಿಷ್ ವೈಜ್ಞಾನಿಕನ (Sir William Crookes) ಹೆಸರು. (ಅತನು ರಚಿಸಿದ ವೈಜ್ಞಾನಿಕ ಸಲಕರಣೆಗಳು, ಮೊ. ನ್ನು ಹೇಳುವ ಸಂದರ್ಭದಲ್ಲಿ ಪ್ರಯೋಗ). C. rays ಋಣ ವಿದ್ಯುತ್ ಕಿರಣಗಳು. C's tube ಅತಿನ್ಯೂನ ವಾಯುಪ್ರದೇಶದಲ್ಲಿ ನೋಡಬಹುದಾದ ದೃಶ್ಯಗಳನ್ನು ತೋರಿಸುವ ಗಾಜಿನ ನಿರ್ವಾಯು ನಾಳಿ. C.'s vacuum ಕ್ರುಕ್ಸನ ನಿರ್ವಾಯುಪ್ರದೇಶ (ವಾಯುವನ್ನು ಬಹಳಮಟ್ಟಿಗೆ ಹೊರಡಿಸಿಬಿಟ್ಟಿರುವದು)

Croon ಕ್ರೂನ್ (ಕ್ರಿ., ನಾ.) ಮೆಲು ದನಿ(ಯಲ್ಲಿ ಹಾಡು, ಗುಂಯ್‌ಗುಟ್ಟು)

Crop ಕ್ರಾಪ್ (ನಾ.) ಪಕ್ಷಿಗಳು ತಾವು ತಿಂದದ್ದನ್ನು ಜಠರಕ್ಕೆ ಸಾಗಿಸುವ ಮೊದಲು, ಜೀರ್ಣಕಾರ್ಯಕ್ಕನುಕೂಲಿಸುವಂತೆ ಮಾರ್ಪಡಿಸಲು, ಇಟ್ಟುಕೊಳ್ಳುವ ಗಂಟಲ ಕೊಳವೆಯಲ್ಲಿಯ ಸಂಚಿಯಂಥ ಅಂಗ : ಎರೆಚೀಲ. ಚಾವಟಿಯ ಹಿಡಿ, ಹಿಡಿಕೆ (Also, Hunting-c.). (ಆರಂಬ ಮಾಡಿ ಪಡೆದ) ಬೆಳೆ, ಪೈರು, ಫಸಲು (ಮು., ಧಾನ್ಯ) (In c., Under c. ಬೆಳೆಯಿಟ್ಟು. Out of c. ಬೆಳೆಯಿಡದೆ). (ದನ ಮೊ. ದ) ಪ್ರಾಣಿಯ ಹದಮಾಡಿದ ಒಟ್ಟುಚರ್ಮ. ತಲೆಗೂದಲು ಕತ್ತರಿಸುವುದು ; ಕತ್ತರಿಸಿದ ತಲೆಗೂದಲಿನ ರಚನೆ : 'ಕ್ರಾಪು'. ಕೊನೆ ಕತ್ತರಿಸಿಹಾಕಿದ ತುಂಡು. C.-eared ಮೊಟಕಾಗಿ ಕತ್ತರಿಸಿದ ಕಿವಿಯುಳ್ಳ, ತಲೆಗೂದಲುಳ್ಳ. C.-over (ವೆಸ್ಟ್‌ಇಂಡೀಸ್ ದ್ವೀಪಗಳ ಕಬ್ಬಿನ ಸುಗ್ಗಿಯ ಕೊನೆಯಲ್ಲಿ ಪ್ರತಿ ವರ್ಷವೂ ಮಾಡುವ) ಸುಗ್ಗಿಯ ಹಬ್ಬ. **Cróppy** (ನಾ.) ಕ್ರಾಪುತಲೆಯವನು.

Crop (ಕ್ರಿ.) ಕತ್ತರಿಸಿಹಾಕು. (ಪ್ರಾಣಿಗಳು ಸಸ್ಯಗಳ ತಲೆಯನ್ನು) ಮೇದುಹಾಕು, ಕಡಿದು ತಿನ್ನು. ಪೈರನ್ನು ಕೊಯ್ಯು, ಕಟಾವು ಮಾಡು ; ಬೆಳೆ ಕೂಡಹಾಕು. (ಕಿವಿ, ಬಾಲ, ಕೂದಲು, ಬಚ್ಚೆಯಮೇಲಿನ ಗುಂಜು, ಪುಸ್ತಕದ ಅಂಚುಗಳು, ಮೊ. ನ್ನು) ಮಟ್ಟಸವಾಗಿ ಕತ್ತರಿಸು. ಜಮೀನಿನಲ್ಲಿ ಬೆಳೆಯಿಡು, ಬೆಳೆಯಾಗು. ಅನಿರೀಕ್ಷಿತವಾಗಿ ಎದುರು ಬರು, ಒದಗು, ಸಂಭವಿಸು. C out, forth ಕಾಣಿಸಿಕೊ. (ಭೂ. ವಿ.) C. up, C. out, ನೆಲಮಟ್ಟದಲ್ಲಿ ಕಾಣಿಸಿಕೊ ; ಮೂಡು ; ಮೇಲಕ್ಕೆ ಬರು. **Crópper** (ನಾ.) ಬೆಳೆ ಮಾಡುವವನು ; ಬೆಳೆಯಾಗುವದು. ಕತ್ತರಿಸುವವನು ; ಕತ್ತರಿಸುವ ಸಲಕರಣೆ. ದೊಡ್ಡ ಎರೆಚೀಲವುಳ್ಳ ಪಾರಿವಾಳ. Good, heavy, light, c. ಒಳ್ಳೆಯ, ಹೆಚ್ಚಾದ, ಲಘುವಾದ, ಬೆಳೆಯಾಗುವ ಸಸ್ಯ. (ಅಸಂ.) ಬಲವಾದ ಬೀಳುವಿಕೆ ; ಬೀಳು ; ಪತನ ; ಸೋಲು.

Cróquet ಕ್ರೋಕೆ(ಕಿ) (ನಾ., ಕ್ರಿ. ಸಕ.) ಹುಲ್ಲುಮೈದಾನದಮೇಲೆ ಮರದ ಚೆಂಡುಗಳನ್ನು ಉದ್ದಹಿಡಿಯ ಮರದ ಕೊಡತಿಗಳಿಂದ ಹೊಡೆದು, ನೆಲದಲ್ಲಿ ನೆಟ್ಟ ಕಬ್ಬಿಣದ ಕಂಬಿಯ ವಲಯಗಳಲ್ಲಿ ತೂರಿ ಹೋಗುವಂತೆ ಮಾಡುವ ಒಂದು ತೆರದ ಆಟ : ಕ್ರೋಕೆ ಆಟ ; ಎದುರಾಳಿಯ ಚೆಂಡಿನ ಪಕ್ಕದಲ್ಲಿ ತನ್ನ ಚೆಂಡನ್ನು ಇಟ್ಟು ತುಳಿದುಕೊಂಡು ಕೊಡತಿಯಿಂದ ಹೊಡೆಯುವುದರಿಂದ ಎದುರಾಳಿಯ ಚೆಂಡನ್ನು ಓಡಿಸುವುದು. (ಕ್ರಿ.) ಕ್ರೋಕೆಯ ಆಟದಲ್ಲಿ ಎದುರಾಳಿಯ ಚೆಂಡನ್ನು (ಮೇಲೆ ಹೇಳಿದಂತೆ) ಓಡಿಸು. [Croqueting ಕ್ರೋಕಿಯಿಂಗ್ (ವರ್ತಮಾನ ಕೃದಂತ) ; Croqueted ಕ್ರೋಕಿಡ್ (ಭೂತ., ಭೂ. ಕೃ.)]

Croquétte ಕ್ರೊಕೆಟ್ (ನಾ.) ಅಕ್ಕಿ, ಆಲೂಗೆಡ್ಡೆ, ಮಾಂಸ, ಮೊ. ಕ್ಕೆ ಸಂಬಾರ ವಸ್ತುಗಳನ್ನು ಸೇರಿಸಿ ಎಣ್ಣೆ ಅಥವಾ ಇತರ ಜಿಡ್ಡಿನಲ್ಲಿ ಕರಿದ ಭಕ್ಷ್ಯ.

Crore ಕ್ರೋರ್ (ನಾ.) (ಆಂ. ಇಂ.) ನೂರು ಲಕ್ಷ ; ಕೋಟಿ (ಸಾ., ರೂಪಾಯಿಗಳು)

Crósier, -zier ಕ್ರೋಷ್ಯರ್ (ನಾ.) (ಕ್ರೈಸ್ತ ಮಠಾಧಿಕಾರಿಯಾದ) ಬಿಷಪ್ಪಿನ, ಅ್ಯಬಟ್ಟಿನ, ಧರ್ಮದಂಡ. (ತಪ್ಪಾಗಿ) ಆರ್ಚ್‌ಬಿಷಪ್ಪಿನ ಶಿಲುಬೆ.

Cross ಕ್ರಾಸ್ (ನಾ.) ಹಿಂದೆ ತಪ್ಪಿತಸ್ಥರನ್ನು (ಸಾ., ಅಡ್ಡಮರ ಹಾಕಿದ) ಉದ್ದ ದಸಿಗೆ ಬಂಧಿಸಿ (ಮೊಳೆ ಹೊಡೆದು) ಸಾಯಿಸುತ್ತಿದ್ದ (ಮು., ಕ್ರಿಸ್ತನನ್ನು ಹೀಗೆ ಬಂಧಿಸಿ ಸಾಯಿಸಿದ) ಶಿಲುಬೆ, ಕ್ರೂಶೆ. (ಕ್ರೈಸ್ತ ಮತದ ಲಾಂಛನವಾಗಿ ಉಪಯೋಗಿಸುವ) ಶಿಲುಬೆಯಾಕೃತಿ. (ಕ್ರೈಸ್ತ ಕರ್ಮಾನುಷ್ಠಾನದಲ್ಲಿ) ಬಲಗೈಯಿಂದ ಶಿಲುಬೆಯಾಕಾರವಾಗಿ ಮಾಡುವ ಕರನ್ಯಾಸ. (ಕ್ರೈಸ್ತ ಮೆರವಣಿಗೆಗಳಲ್ಲಿ ಅಥವಾ ಆರ್ಚ್‌ಬಿಷಪ್ಪಿನ ಮುಂದುಗಡೆ ಹಿಡಿದುಕೊಂಡುಹೋಗುವ) ಶಿಲುಬೆಯೇರಿಸಿದ ದಂಡ (C.-bearer ಶಿಲುಬೆ ಹೊರುವವನು). ಶಿಲುಬೆಯಾಕಾರದ ಸ್ಮಾರಕ (ಮು., ಪಟ್ಟಣದ ಮಧ್ಯದಲ್ಲಿರುವದು = Market-c.). ಕ್ರೈಸ್ತ ಮತ, ಧರ್ಮ. ಕ್ಲೇಶ ; ಸಂಕಟ ; ದುಃಖ ; ಉಪದ್ರವ ; ಬಾಧೆ ; ಕಷ್ಟ ; ಕಾಟ ; ಕಿರಿಕಿರಿ. ಶಿಲುಬೆಯಾಕಾರದ ವಸ್ತು. ಕತ್ತರಿ ಗುರುತು. [(Southern) C. ತ್ರಿಶಂಕು (ನಕ್ಷತ್ರಪುಂಜ). Fiery c. ಜನರಿಗೆ ಎಚ್ಚರಿಕೆ ಕೊಟ್ಟು ಯುದ್ಧಕ್ಕೆ ಎಬ್ಬಿಸುವುದಕ್ಕಾಗಿ ಸ್ಕಾಟ್ಲೆಂಡಿನವರು ಡಿಸ್ಟ್ರಿಕ್ಟುಗಳ ಮೂಲಕ ಕಳುಹಿಸಿ ಕೊಡುತ್ತಿದ್ದ ಅರೆಸುಟ್ಟು ರಕ್ತದಲ್ಲದ್ದಿದ ಶಿಲುಬೆ]. 'ನೈಟ್‌ಹುಡ್' ಪದವಿಯ ಒಂದು ಭೂಷಣ, ಪದಕ (Grand C. ಅತ್ಯುತ್ತಮ ಪದವಿಯ ಪದಕ. Victoria C. ವ್ಯಕ್ತಿಯ ಪರಾಕ್ರಮಕ್ಕಾಗಿ ಕೊಡುವ ಪದಕ). ತಳಿಗಳ ಮಿಶ್ರಣ. ಬೆರಕೆಯಿಂದ ಹುಟ್ಟಿದ ಪ್ರಾಣಿ ; ಬೆರಕೆಯ ಜಾತಿ ; ಬೆರಕೆ ; ಮಿಶ್ರಣ. (ಅಸಂ.) ಮೋಸ ; ವಂಚನೆ. ಬೀದಿಚೌಕ. On the c. ಮೂಲೆಯಿಂದ ಮೂಲೆಗೆ. **Crósslet** (ನಾ.) ಸಣ್ಣ ಶಿಲುಬೆ (ಮು., ವಂಶಲಾಂಛನದಲ್ಲಿ). **Crósswise** (ಕ್ರಿ. ವಿ.)

Cross (ಕ್ರಿ.) ಶಿಲುಬೆಯಾಕಾರದಲ್ಲಿ, ಕತ್ತರಿಯಾಕಾರದಲ್ಲಿ, ಇಡು. [C. swords (ಯುದ್ಧಮಾಡುವಲ್ಲಿ) ಕತ್ತಿಗೆ ಕತ್ತಿಯನ್ನು (ಅಡ್ಡವಾಗಿ) ಒಡ್ಡು. (ರೂಪ.) (ಒಬ್ಬರೊಡನೊಬ್ಬರು) ಕತ್ತಿಯುದ್ಧ ಮಾಡು, ಹೋರಾಡು]. [ಭೀತಿ, ಭಯಭಕ್ತಿ — ಇವುಗಳ ಸೂಚನೆಯಾಗಿ, ದೈವರಕ್ಷಣೆ ಪಡೆಯುವ ಉದ್ದೇಶದಿಂದ (ಮು., ತನ್ನ ದೇಹದಮೇಲೆ)] ಶಿಲುಬೆಯಾಕಾರವಾಗಿ ಕರನ್ಯಾಸ ಮಾಡು. [C. fortune-teller's hand with ಕಣಿಹೇಳುವವಳ ಕೈಗೆ (ಹಣ) ಕೊಡು]. ಕತ್ತರಿ ಗುರುತು ಹಾಕು ; ಅಡ್ಡಗೆರೆಯೆಳೆ [C. out, off ಹೊಡೆದುಹಾಕು. C cheque ಬ್ಯಾಂಕುಹುಂಡಿಯಮೇಲೆ ಅಡ್ಡಗೆರೆಗಳನ್ನೆಳೆದು, ಸಾ., & Co. ಎಂಬ ಸಂಕೇತವನ್ನೊ ಪಾವತಿಕೊಡುವ ಬ್ಯಾಂಕಿನ ಹೆಸರನ್ನೊ ಬರೆದುಕೊಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಈ ಹಣವು ನಗದಾಗಿ ಪಾವತಿಯಾಗದೆ ಆ ಬ್ಯಾಂಕಿನಲ್ಲಿ ಲೆಕ್ಕವಿಟ್ಟಿರುವವರ ಹೆಸರಿಗೆ ಜಮಾಕಟ್ಟಲಾಗುವುದು)]. (ಆಗಲೇ ಬರೆದಿರುವುದರಮೇಲೆ, ಪತ್ರದ ಮೇಲೆ) ಅಡ್ಡಲಾಗಿ ಬರೆ. (ರಸ್ತೆ, ನದಿ, ಸಮುದ್ರ, ಮೊ. ನ್ನು) ದಾಟು, ಹಾಯಿ, ದಾಟಿಸು, ಹಾಯಿಸು. (ಜೀನು, ಕುದುರೆ, ಮೊ. ಗಳಮೇಲೆ) ಅಡ್ಡಗಾಲು ಹಾಕಿ ಕುಳಿತುಕೊ. (ಒಬ್ಬರನ್ನೊಬ್ಬರು) ಹಾದುಹೋಗು [Two persons' letters c. ಇಬ್ಬರು (ಒಬ್ಬೊಬ್ಬರಿಗೆ) ಬರೆದ ಪತ್ರಗಳು ಅಡ್ಡಹಾಯಿ (ಎಂದರೆ, ಒಬ್ಬನ ಪತ್ರ ಬರುವುದಕ್ಕೆ ಮೊದಲೇ ಮತ್ತೊಬ್ಬನ ಪತ್ರ ಹೊರಟಿರು). C. one's mind ಮನಸ್ಸಿಗೆ ಹೊಳೆ. C. the path of ಸಂಧಿಸು ; ಎದುರಾಗು ; ಅಡ್ಡಬರು ; ಅಡ್ಡಹಾಯಿ ; ವಿರೋಧಿಸು ; ಪ್ರತಿಭಟಿಸು]. (ಮನುಷ್ಯನನ್ನು, ಏರ್ಪಾಡು, ಮೊ. ನ್ನು) ಮುರಿ, ಪ್ರತಿಭಟಿಸು ; ವಿರೋಧಿಸು. (ಬೇರೆಬೇರೆ ಪ್ರಭೇದದ ಪ್ರಾಣಿಗಳು ಕಲೆತು) ಮಿಶ್ರ ತಳಿ ಹುಟ್ಟು, — ಹುಟ್ಟಿಸು. ಹೋರಿ ಕೊಡಿಸು, ಹಾರಿಸು. (ಸಸ್ಯಗಳು) ಸಂಕರ ಗರ್ಭವಾಗು ; — ವಾಗಿಸು (= C.-fertilize)

Cross (ಗು.) ಅಡ್ಡಹಾಯುವ ; ಅಡ್ಡಲಾಗಿರುವ ; ಅಡ್ಡ [C. bench ಪಾರ್ಲಿಮೆಂಟಿನಲ್ಲಿ ಯಾವ ಪಕ್ಷಕ್ಕೂ ಸೇರದ ಸದಸ್ಯರಿಗಾಗಿ ಹಾಕಿರುವ ಆಸನ ; ಅಡ್ಡ ಪಂಕ್ತಿ. C.-bench (ಗು.) ಯಾವ ಪಕ್ಷಕ್ಕೂ ಸೇರದ, ಅಡ್ಡ ಪಂಕ್ತಿಯ (C.-b. mind ಸ್ವತಂತ್ರ ಬುದ್ಧಿ ; ಪಕ್ಷಾತೀತ ಬುದ್ಧಿ). C. voting ಸ್ವಪಕ್ಷಕ್ಕೆ ವಿರೋಧವಾಗಿ ಅಭಿಮತ ಕೊಡುವುದು]. ಅಡ್ಡಕೂಡುವ ; ವಿರುದ್ಧ ; ಪ್ರತಿಕೂಲ. (ಬಳ. ಮಾ.) ಮುಂಗೋಪವುಳ್ಳ ; ರೇಗುವ ಸ್ವಭಾವದ ; ಚಿತ್ತ ಸ್ತಿಮಿತವಿಲ್ಲದ. (ಅಸಂ.) ಮೋಸದ ; ವಂಚನೆಯ ; ಮೋಸಮಾಡಿ ಪಡೆದ. C.-bred ಅಡ್ಡಬೆರಸಿದ ; ಬೆರಕೆಯ ; ಮಿಶ್ರ ಜಾತಿಯ ; ಇಜ್ಜಾತಿಯ. C. entry (ಲೆಕ್ಕವಿಡುವುದರಲ್ಲಿ) ಹಣವನ್ನು ಬೇರೆ ಲೆಕ್ಕಕ್ಕೆ ವರ್ಗಮಾಡುವ, ಅಥವಾ ಹಿಂದೆ ಸೇರಿಸಿದುದನ್ನು ಹೊಡೆದುಹಾಕುವ, ನಮೂದು : ಅಡ್ಡ ನಮೂದು. C.-patch ದುಸ್ಸ್ವಭಾವದವನು. C. reference (ಗ್ರಂಥದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಮಾಡುವ) ಪ್ರಕರಣಾಂತರ ಸೂಚನೆ. **Cróssly** (ಕ್ರಿ. ವಿ.) ; **Cróssness** (ನಾ.); **Cróssing** (ನಾ.) (ಕ್ರಿಯಾರ್ಥಗಳಲ್ಲಿ); (ಎರಡು ರಸ್ತೆ, ರೈಲುಮಾರ್ಗ, ಮೊ. ಗಳ) ಕೂಡಲು, ಅಡ್ಡಸೇರುವೆ ; ಮಟ್ಟ ದಾಟು (Level c. ರಸ್ತೆ ಮತ್ತು ರೈಲುಮಾರ್ಗ ಅಥವಾ ಎರಡು ರೈಲುಮಾರ್ಗಗಳು ಸಂಧಿಸುವ ಒಂದೇ ಮಟ್ಟದ ಅಡ್ಡಸೇರುವೆ). ಬೀದಿಯನ್ನು ಅಡ್ಡಹಾಯ್ದುಹೋಗುವ ಸ್ಥಳ ; ಹಾಯಿ ದಾರಿ.

Cross- (ಸಮಾಸದಲ್ಲಿ ಪೂರ್ವಪದ) ಅಡ್ಡ—, ಶಿಲುಬೆ—. **C.-bar** (ನಾ.) ಅಡ್ಡ ಪಟ್ಟಿ, ಕಂಬಿ. **C.-beam** (ನಾ.) ಅಡ್ಡ ತೊಲೆ. **C.-bearer** (ನಾ.) [Cross (ನಾ.) ನೋಡಿ]. **Cróssbelt** (ನಾ.) ಬಂದೂಕಿನ ತೋಟಾಗಳು, ಮೊ. ನ್ನು ಇಡುವುದಕ್ಕಾಗಿ ಭುಜದಿಂದ ಅಡ್ಡಹಾಯ್ದು ಸೊಂಟದ ವರೆಗೆ ಹೋಗುವ ಎದೆಪಟ್ಟಿ ; ಅಡ್ಡ ಪಟ್ಟಿ. **Cróssbill** (ನಾ.) (ಕೊಕ್ಕು ಮುಚ್ಚಿಕೊಂಡಿರುವಾಗ ಕೊಕ್ಕಿನ ದವಡೆಗಳು ಅಡ್ಡ ಹಾಯುವ) ಒಂದು ಜಾತಿಯ ಪಕ್ಷಿ. **C.-bones** (ನಾ., ಬ. ವ.) ಸಾವಿನ ಸಂಜ್ಞೆಯಾಗಿ ತಲೆಬುರುಡೆಯ ಚಿತ್ರದ ತಳಗಡೆ ಕತ್ತರಿಯಾಗಿಡುವ ತೊಡೆಯೆಲುಬುಗಳ ಚಿತ್ರ. **C.-bow** (ನಾ.) (ಮರದ ಉದ್ದಹಿಡಿಗೆ ಅಡ್ಡಲಾಗಿ ಬಂಧಿಸಿ, ಕಲ್ಲು, ಅಂಬು, ಮೊ. ನ್ನು ಎಸೆಯುವುದಕ್ಕಾಗಿ ಹೆದೆಯನ್ನು ತಕ್ಕಂತೆ ಅಳವಡಿಸಿರುವ) ಅಡ್ಡಬಿಲ್ಲು. **C.-breed** (ನಾ.) ಅಡ್ಡ ತಳಿ ; ಅಡ್ಡ ನಾಡಿ. **C.-bun** (Bun[1] ನೋಡಿ). **C.-búttock** (ನಾ., ಕ್ರಿ. ಸಕ.) ಕುಸ್ತಿಮಾಡುವಲ್ಲಿ ಪಿರ್ರೆಗಳು ತಳಕ್ಕೆ ಬೀಳುವಂತೆ ಮಾಡುವ ಎಸೆತ : ಪಿರ್ರೆಯ ವರಿಸೆ. **C.-country** (ಗು.) ರಸ್ತೆಯನ್ನು ಬಿಟ್ಟು ಬಯಲಲ್ಲಿ ಹೋಗುವ. **C.-cut** (ನಾ.) ಮೂಲೆಯಮೇಲೆ ಕತ್ತರಿಸುವುದು ; ಅಡ್ಡ ಕೊಯ್ಲು (C. saw ಮರವನ್ನು ಎಳೆಗಳಿಗೆ ಅಡ್ಡಲಾಗಿ ಕೊಯ್ಯಲು ಅನುಕೂಲಪಡಿಸಿರುವ ಗರಗಸ : ಅಡ್ಡಕೊಯ್ಲು ಗರಗಸ). ಅಡ್ಡ ದಾರಿ ; ಸೀಳು ದಾರಿ. **C.-examinátion** (ನಾ.) ; **C.-exámine** (ಕ್ರಿ. ಸಕ.) [(ಮು., ಕೋರ್ಟಿನಲ್ಲಿ ಸಾಕ್ಷಿಗಳನ್ನು) ಹಿಂದೆ ನಡಸಿದ ವಿಚಾರಣೆಯಿಂದ ತಿಳಿದುಬಂದ ವಿಷಯಗಳನ್ನು ತಾಳೆನೋಡುವುದಕ್ಕಾಗಲಿ, ಮುಚ್ಚಿಟ್ಟ ವಿಷಯಗಳನ್ನು ಹೊರಡಿಸುವುದಕ್ಕಾಗಲಿ] ಅಡ್ಡ ವಿಚಾರಣೆಮಾಡು ; ಪಾಟಿ ಸವಾಲು ಮಾಡು. **C.-eyed** (ಗು.) ಮೆಳ್ಳೆಗಣ್ಣುಳ್ಳ. **C.-fertilize** [Cross (ಕ್ರಿ.) ನೋಡಿ]. **C.-fire** (ನಾ.) (ಸೈನಿಕ) ಗುಂಡುಹಾರುವ ಮಾರ್ಗಗಳು ಅಡ್ಡ ಹಾಯುವಂತೆ ಎರಡು ಮೂರು ಸ್ಥಳಗಳಿಂದ ಬಂದೂಕುಹೊಡೆತ (ರೂಪ. ಸಹ). **C.-garnet** (ನಾ.) ಬಾಗಿಲು, ಮೊ. ಗಳಿಗೆ ಹಾಕುವ T ಆಕಾರದ ಕೀಲು. **C.-grain** (ನಾ.) (ಮರದ) ಸಹಜವಾದ ಎಳೆಗೆ ಅಡ್ಡಲಾಗಿಹೋಗುವ ಎಳೆ : ಅಡ್ಡೆಳೆ. **C.-grained** (ಗು.) ಅಡ್ಡೆಳೆಗಳುಳ್ಳ ; (ರೂಪ.) ಸೊಟ್ಟ ಹಾದಿಯ ; ಮೂರ್ಖ ; ಹಠಮಾರಿ ; ಮಾರ್ಗಕ್ಕೆ ತರಲಾಗದ ; ಯಾರ ಮಾತನ್ನೂ ಕೇಳದ. **C.-hatch** (ಕ್ರಿ. ಸಕ.) ಸಮಾನಾಂತರ ಗೆರೆಗಳ ಅಡ್ಡ ಹೆಣಿಗೆಯನ್ನು ರೇಖಿಸು. **C.-head(ing)** (ವೃತ್ತಪತ್ರಿಕೆ, ಮೊ. ಗಳಲ್ಲಿ) ಒಂದು ಲೇಖನದ ವಿಷಯಗಳನ್ನು ಓದುಗರು ಸುಲಭವಾಗಿ ಗ್ರಹಿಸುವಂತೆ ಸೂಚಿಸುವುದಕ್ಕಾಗಿ ಅಲ್ಲಲ್ಲಿ ಅಡ್ಡಡ್ಡಲಾಗಿ ಕೊಟ್ಟಿರುವ ಶಿರನಾಮೆ : ಅಡ್ಡ ಶಿರನಾಮೆ. **C.-keys** (ನಾ.) (ವಂಶ ಲಾಂಛನ) ಎರಡು ಬೀಗದಕ್ಕೈಗಳನ್ನು ಕತ್ತರಿಯಾಗಿಟ್ಟಿರುವ ಲಾಂಛನ. **C.-legged** (ಗು.) ಪದ್ಮಾಸನ ಹಾಕಿಕೊಂಡು ಕುಳಿತಿರುವ ; (ಕುರ್ಚಿಯ ಮೇಲೆ) ಕಾಲುಮೇಲೆ ಕಾಲು ಹಾಕಿಕೊಂಡು ಕುಳಿತಿರುವ. **C.-light** (ನಾ.) ಒಂದು ಬೆಳಕನ್ನು ಹಾಯುವ ಅಡ್ಡಬೆಳಕು. (ರೂಪ.) ಒಂದು ವಿಷಯವನ್ನು ಮತ್ತೊಂದು ದೃಷ್ಟಿಕೋನದಿಂದ ನಿರೂಪಿಸುವುದು. **C.-piece** (ನಾ.) ಅಡ್ಡಪಟ್ಟಿ. **C.-purposes** (ನಾ., ಬ. ವ.) ವಿರುದ್ಧೋದ್ದೇಶಗಳು. ಒಂದು ಆಟದ ಹೆಸರು. (Be at c. ಒಬ್ಬರ ಅಭಿಪ್ರಾಯವನ್ನು ಮತ್ತೊಬ್ಬರು ತಪ್ಪುತಿಳಿದುಕೊ. ಒಂದೇ ಉದ್ದೇಶ ಸಾಧನೆಗಾಗಿ ಪರಸ್ಪರ ವಿರುದ್ಧವಾಗಿ ವರ್ತಿಸು). **C. question** (ನಾ.) ಪಾಟಿ ಸವಾಲಿನಲ್ಲಿ ಕೇಳುವ ಪ್ರಶ್ನೆ : ಅಡ್ಡ ಪ್ರಶ್ನೆ [C. questions and crooked answers ಒಂದು ಬಗೆಯ ಆಟ (ಈ ಆಟದಲ್ಲಿ ಒಬ್ಬನ ಪ್ರಶ್ನೆಗೆ ಉತ್ತರವಾಗಿ ಮತ್ತೊಬ್ಬನ ಪ್ರಶ್ನೆಯ ಉತ್ತರ ದೊರೆಯುವುದು ; ಇದು ಹಾಸ್ಯದಲ್ಲಿ ಪರಿಣಾಮ) : ವಕ್ರ ಪ್ರಶ್ನೋತ್ತರ]. **C.-question** (ಕ್ರಿ. ಸಕ.) = C.-examine. **C.-road** (ನಾ.) ಒಂದು ರಸ್ತೆಯನ್ನು ಅಡ್ಡಹಾಯುವ ಅಥವಾ ಎರಡು ಮುಖ್ಯ ರಸ್ತೆಗಳನ್ನು ಸೇರಿಸುವ ರಸ್ತೆ : ಅಡ್ಡ ರಸ್ತೆ ; ಕೂಡು ಹಾದಿ. ಎರಡು ರಸ್ತೆಗಳ ಸಂಧಿ, ಕೂಡಲು (=C. roads) [At the c. roads ಕವಲೊಡೆತದಲ್ಲಿ. (ರೂಪ.) (ಒಬ್ಬನ ಜೀವಮಾನ, ಮೊ. ಗಳ) ಸಂಧಿ ಕಾಲದಲ್ಲಿ, ಸಂದಿಗ್ಧ ಸ್ಥಿತಿಯಲ್ಲಿ]. **C.-section** (ನಾ.) ಅಡ್ಡ ಕೊಯ್ತ. **C.-stitch** (ನಾ.) ಕತ್ತರಿ ಹೊಲಿಗೆ ; ಈ ತೆರದ ಕಸೂತಿ ಕೆಲಸ. **C.-trees** (ನಾ., ಬ. ವ.) ಹಡಗಿನ ಮೇಲು ಪಟಸ್ತಂಭದ ಆಧಾರಕ್ಕಾಗಿ ತಳ ಪಟಸ್ತಂಭದ ನೆತ್ತಿಗೆ ಮೊಳೆಹೊಡೆದು ಬಿಗಿದ ಮಟ್ಟಹಾಯುವ ಎರಡು ಅಡ್ಡ ಮರಗಳು. **C.-word** (ನಾ.) (ಚೌಕುಳಿ ನಮೂನೆಯ ಕಾಗದದಮೇಲೆ ಅಡ್ಡಸಾಲಿನಲ್ಲೂ ಉದ್ದಸಾಲಿನಲ್ಲೂ ಬರೆದ ಕೆಲವು ಪದಗಳನ್ನು ಹೊಂದಿಸುವ) ಅಡ್ಡಪದ ಸಮಸ್ಯೆ.

Crótchet ಕ್ರಾಚೆಟ್ (ನಾ.) = Crochet. ಕೊಕ್ಕೆ ; ಕೊಕ್ಕೆಯಿರುವ ಉಪಕರಣ (ಮು., ಹೆರಿಗೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಲು ಉಪಯೋಗಿಸುವದು). (ಸಂ.) ಒಂದು ಗೊತ್ತಾದ ಸ್ವರದ ಚಿಹ್ನೆ ; ಆ ಸ್ವರ. ವಿಚಿತ್ರ ಭಾವನೆ ; ವಿಪರೀತ ಕಲ್ಪನೆ ; ಹುಚ್ಚುಹುಚ್ಚು. **Crotcheteér** (ನಾ.) ; **Crótchetiness** (ನಾ.) ; **Crótchety** (ಗು.) ವಿಚಿತ್ರ ಭಾವನೆಯ ; ವಕ್ರವಕ್ರ.

Cróton ಕ್ರೋಟನ್ (ನಾ.) ಬಣ್ಣಬಣ್ಣದ ಅಂದವಾದ ಎಲೆಗಳನ್ನು ಬಿಡುವ ಗಿಡಗಳ ಜಾತಿ ; (ಈ ಜಾತಿಯಲ್ಲಿಯ ಒಂದು ವಂಶಕ್ಕೆ ಸೇರಿದ) ಜಾಪಾಳದ ಗಿಡ. C.-oil ಜಾಪಾಳದ ಎಣ್ಣೆ (ಅತಿ ತೀವ್ರವಾದ ಭೇದಿಯೌಷಧ)

Crouch ಕ್ರೌಚ್ (ಕ್ರಿ., ನಾ.) (ಮು., ಭಯದಿಂದ ಅಥವಾ ದಾಸ ಭಾವನೆಯಿಂದ) ಬಾಗಿ ನಿಲ್ಲು ; ಕುಗ್ಗಿ ನಿಂತುಕೊ ; ಕುಗ್ಗಿರು ; ಮುದುರಿಕೊ ; ಅಡಗಿಕೊಂಡಿರು. ಬಗ್ಗಿಸು ; ತಗ್ಗಿಸು. (ನಾ.) — ವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Croup(e)[1] ಕ್ರೂಪ್ (ನಾ.) ಪಿರ್ರೆ ; ಪೃಷ್ಠಭಾಗ (ಮು., ಕುದುರೆಯದು)

Croup[2] ಕ್ರೂಪ್ (ನಾ.) ಮಕ್ಕಳಲ್ಲಿ ತೀಕ್ಷ್ಣವಾದ ಕೆಮ್ಮಿಗೆ ಕಾರಣವಾದ ಗಂಟಲಿನ ವಾಯುನಾಳದಲ್ಲಿಯ ಮತ್ತು ದನಿಸಂಪುಟದಲ್ಲಿಯ ರಕ್ತ ಕೆರಳಿದ ವ್ಯಾಧಿ.

Crow[1] ಕ್ರೋ (ನಾ.) ಕಾಗೆ [Carrion C. (Carrion ನೋಡಿ). White c. ಬಿಳಿಯ ಕಾಗೆ ; ಅಪರೂಪ ವಸ್ತು]. Have a c. to pluck with him ಅವನನ್ನು ಆಕ್ಷೇಪಿಸಲು, ತಪ್ಪುಹಿಡಿಯಲು, ಕಾರಣವಿರು. As the c. flies, In a c. line ನೆಟ್ಟನೆ ; ನೇರವಾಗಿ. C.(-bar) (ಸನ್ನೆಯಾಗಿ ಉಪಯೋಗಿಸುವ, ಸಾ., ಕೊಕ್ಕಿನಂಥ ಕೊನೆಯುಳ್ಳ) ಹಾರೆ(ಯ ಕೋಲು) ; ಗಡಾರಿ. C.-bill ದೇಹದಿಂದ ಬಂದೂಕಿನ ಗುಂಡು ಮೊ. ನ್ನು ತೆಗೆಯುವುದಕ್ಕಾಗಿ ಉಪಯೋಗಿಸುವ ಚಿಮುಟ. C.-quill (ಸೂಕ್ಷ್ಮದ ಬರೆವಣಿಗೆಗಾಗಿ ಉಪಯೋಗಿಸುವ) ಕಾಗೆಗರಿಯ ಲೇಖಣಿ ಅಥವಾ ಉಕ್ಕಿನ ಮುಳ್ಳುಲೇಖಣಿ. C.'s-foot ಕಡೆಗಣ್ಣಿನ ಸುಕ್ಕು (ಕಾಗೆಯ ಹೆಜ್ಜೆಯ ಗುರುತಿನಂತಿರುವುದರಿಂದ)

Crow[2] ಕ್ರೋ [ನಾ., ಕ್ರಿ. ಅಕ. ; ಭೂತ. Crew (ಕ್ರೂ) or Crowed ; ಭೂ. ಕೃ. Crowed] ಕೋಳಿಯ ಕೂಗು ; ಕೂಸಿನ ಸಂತೋಷದ ಕೂಗು ; ಕೆಲೆ ; ಕೇಕೆ. (ಕ್ರಿ.) ಕೋಳಿಯ ಕೂಗು ಕೂಗು. (ಮಗು) ಸಂತೋಷದಿಂದ ಕೇಕೆಹಾಕು. C. over ಜಯಭೇರಿ ಹೊಡೆ ; ಹೆಕ್ಕಳಿಸು.

Crowd ಕ್ರೌಡ್ (ನಾ., ಕ್ರಿ.) ಗುಂಪು ; ಸಂದಣಿ ; ನೆರವಿ ; ಮಂದಿ ; ಸಮೂಹ [Would pass in a c. ಸಂದಣಿಯಲ್ಲಿ ತಟಹಾಯುತ್ತದೆ ; ಅಷ್ಟೇನೂ ಕೀಳಲ್ಲ. The c. ಮಂದಿ]. (ಬಳ. ಮಾ.) ಕೂಟ ; ಸಂಘ ; ತಂಡ ; ಒಟ್ಟಿಲು. (ಕ್ರಿ.) ಗುಂಪು ಕೂಡು, ಕೂಡಿಸು. (ಸ್ಥಳ, ಮೊ. ನ್ನು) ತುಂಬು ; ಕಿಕ್ಕಿರಿ ; ನುಗ್ಗು ; ನುಗ್ಗಿಕೊಂಡು ಹೋಗು. (ಜನರನ್ನು, ವಸ್ತುಗಳನ್ನು) ಕಿಕ್ಕಿರಿದು ತುಂಬು. (C. out ಅವಕಾಶವಿಲ್ಲದುದರಿಂದ ಒಳಕ್ಕೆ ಬರದಂತೆ ಮಾಡು, ಹೊರಗಿಡು. ನೇರಲು ಅವಕಾಶ ಕೊಡದೆಹೋಗು; ತೆರಪಿಲ್ಲದಂತೆ ಮಾಡು). (ನಾವೆ) (ಹಡಗು ಅಥವಾ ಅದರ ನೌಕರರು) ತ್ವರೆಮಾಡು, ವೇಗ ಹೋಗು. C. sail ಎಂದಿಗಿಂತ ಹೆಚ್ಚುಪಟಗಳ ನ್ನೇರಿಸು.

Crown ಕ್ರೌನ್ (ನಾ.) (ಮು., ವಿಜಯ ಚಿಹ್ನೆಯಾಗಿ ಧರಿಸುವ) ಹೂವು ಮೊ. ಗಳ ದಂಡೆ. (ದೊರೆಯ ರತ್ನಖಚಿತ) ಕಿರೀಟ, ಮುಕುಟ, ಮುಡಿ. (ರೂಪ.) ರಾಜ ; ರಾಣಿ ; ಸ್ವಾಮಿ ; ಪ್ರಭು. ಪ್ರಭುತ್ವ ; ರಾಜ್ಯ ; ರಾಜ್ಯಾಧಿಕಾರ. ಕಿರೀಟದಾಕಾರದ (ಯಾವುದಾದರೂ) ಒಡವೆ. ಐದು ಷಿಲಿಂಗ್ ಬೆಲೆಯುಳ್ಳ ಒಂದು ಬ್ರಿಟಿಷ್ ನಾಣ್ಯ. ಇತರ ದೇಶಗಳ ಹಲವು ನಾಣ್ಯ (ಮು., Krone). (ಮು., ರುಂಡದ) ಮೇಲ್ಭಾಗ. ಅಗ್ರ ; ತುದಿ ; ನೆತ್ತಿ ; ಶಿಖರ ; ತಲೆ ; ಪಟ್ಟೆಹೊಡೆದ ರತ್ನದ ಮುಡಿ. ಕಮಾನಿನ ಅಗ್ರಭಾಗ, ಮಧ್ಯಭಾಗ. ಪರಂಗಿಟೋಪಿಯ ಮೇಲ್ಭಾಗ. ಒಸಡಿನಿಂದ ಹೊರಕ್ಕೆ ಕಾಣುವ ಹಲ್ಲಿನ ಭಾಗ. 15″ × 20″ ದ ಅಳತೆಯ ಕಾಗದ. C. Colony ಬ್ರಿಟಿಷ್ ಸಾಮ್ರಾಜ್ಯದೊಳಗೆ ರಾಜ್ಯದ ಕೆಲವು ವಿಷಯಗಳಲ್ಲಿ, ಇಂಗ್ಲೆಂಡಿನ ಸರ್ಕಾರದ ಮೂಲಕ, ರಾಜನ ಅಧಿಕಾರಕ್ಕೆ ಒಳಪಟ್ಟಿರುವ ವಸಾಹತು, ನೆಲಸು ನಾಡು. C.-glass ಸೀಸ ಅಥವಾ ಕಬ್ಬಿಣ ಬೆರಸದ, ಗುಂಡು ಹಲಗೆಗಳಾಗಿ ಮಾಡಿದ, ಮು., ಕಿಟಕಿಗಳಿಗೆ ಉಪಯೋಗಿಸುವ, ಗಾಜು. C.-land ಸರ್ಕಾರಿ ಜಮೀನು. C. law ದಂಡ ಶಾಸನ ; ತಕ್ಸೀರು ಕಾನೂನು. C. lawyer ಸರ್ಕಾರಿ ವಕೀಲ. C. prince ಯುವ ರಾಜ ; ಎಳೆಯರಸು (ಮು., ಉತ್ತರ ಯೂರೋಪಿನಲ್ಲಿ); ಸಿಂಹಾಸನಕ್ಕೆ ಗೊತ್ತಾದವನು. C. princess ಯುವ ರಾಣಿ ; ಎಳೆಯರಸಿ. C.-wheel ತನ್ನ ಸಮತಲಕ್ಕೆ ಲಂಬಮಾನವಾಗಿರುವ ಹಲ್ಲುಗಳುಳ್ಳ ಚಕ್ರ : ಅಡ್ಡಹಲ್ಲಿನ ಚಕ್ರ.

Crown (ಕ್ರಿ. ಸಕ.) (ಒಬ್ಬನಿಗೆ ತಲೆಯಮೇಲೆ) ಕಿರೀಟವಿಡು, ಮುಡಿಯಿಡು ; ಪಟ್ಟಕಟ್ಟು ; ರಾಜ್ಯಾಭಿಷೇಕ ಮಾಡು (Crowned heads ಕಿರೀಟ ಧಾರಿಗಳು ; ಪಟ್ಟಾಭಿಷಿಕ್ತರು ; ರಾಜರು ; ರಾಣಿಯರು). (ರೂಪ.) ಗೌರವಿಸು ; ಬಹುಮಾನ ಕೊಡು. ಮುಡಿಯಾಗಿರು ; ಮುಕುಟಪ್ರಾಯವಾಗಿರು ; ಮುಖ್ಯಾಭರಣವಾಗಿರು ; ಕಳಶಪ್ರಾಯವಾಗಿರು (ರೂಪ. ಸಹ) ; ಪೂರ್ಣಗೊಳಿಸು (To c. all ಎಲ್ಲದಕ್ಕೂ ಮೇಲಾಗಿ). ನೆತ್ತಿ, ಶಿಖರ, ಅಗಿರು. (ಪ್ರಯತ್ನಗಳನ್ನು) ಸಫಲಗೊಳಿಸು. (Crowned with success ಜಯಹೊಂದಿದ ; ಸಫಲವಾದ). C. a tooth ಹಲ್ಲಿನ ಸವೆದ ಭಾಗವನ್ನು ಚಿನ್ನ, ಮೊ. ಗಳ ಟೊಪ್ಪಿಗೆ ಬೆಸೆದು ಭದ್ರಪಡಿಸು. **Crowned** (ಗು.)

Crúcial ಕ್ರೂಷಿಯಲ್, ಕ್ರೂಷ್ಯಲ್, ಕ್ರೂಷಲ್ (ಗು.) ನಿರ್ಧಾರಕ ; ನಿರ್ಣಾಯಕ ; ನಿಷ್ಕರ್ಷಕ ; ಸಂದೇಹ ಪರಿಚ್ಛೇದಕ. (C. test ನಿರ್ಣಾಯಕ ಪರೀಕ್ಷೆ). (ಅಂ. ರ. ಶಾ.) ಶಿಲುಬೆಯಾಕಾರದ (C. incision — ಕೊರೆತ). **Crúciate** — ಯೆಟ್ (ಗು.) (ಪ್ರಾ. ವಿ., ಸ. ವಿ.) ಶಿಲುಬೆಯಾಕಾರದ.

Crúcible ಕ್ರೂಸಿಬ್‌ಲ್ (ನಾ.) (ಲೋಹ ಕರಗಿಸುವ) ಮೂಸೆ (ಸಾ., ಮಣ್ಣಿನದು). (ರೂಪ.) ಕಠಿನ ಪರೀಕ್ಷೆ ; ಅಗ್ನಿ ಪರೀಕ್ಷೆ.

Crucíferous ಕ್ರೂಸಿಫೆರಸ್ (ಗು.) ಶಿಲುಬೆಯನ್ನು ಧರಿಸಿರುವ, ಆಭರಣವಾಗಿಟ್ಟುಕೊಂಡಿರುವ. (ಸ. ವಿ.) ನಾಲ್ಕು ಸಮವಾದ ಪುಷ್ಪದಳಗಳಿದ್ದು, ಅವು ಶಿಲುಬೆಯಾಕಾರದಲ್ಲಿ ವಿನ್ಯಾಸಹೊಂದಿರುವ ಹೂವನ್ನು ಬಿಡುವ ಸಸ್ಯವರ್ಗದ : ಕ್ರೂಶ ಪುಷ್ಪಿ.

Crúcifix ಕ್ರೂಸಿಫಿಕ್ಸ್ (ನಾ.) ಶಿಲುಬೆಯಮೇಲೆ ಬಂಧಿಸಿದಂತಿರುವ ಕ್ರಿಸ್ತ ಪ್ರತಿಮೆ. (ತಪ್ಪಾಗಿ) ಶಿಲುಬೆ. **Crucifíxion** (ನಾ.) ಶಿಲುಬೆಗೆ ಏರಿಸುವುದು (The C. ಕ್ರಿಸ್ತನ ಕ್ರೂಶಾರೋಹಣ) ; ಕ್ರಿಸ್ತನ ಕ್ರೂಶಾರೋಹಣ ಚಿತ್ರ. **Crúcify** (ಕ್ರಿ. ಸಕ.) ಶಿಲುಬೆಗೆ ಮೊಳೆ ಹೊಡೆದು ಬಂಧಿಸಿ ಸಾಯಿಸು ; ಶಿಲುಬೆಗೇರಿಸು. (ರೂಪ.) (ಕ್ರೋಧಾದಿಗಳನ್ನು, ಪಾಪಗಳನ್ನು) ನಿಗ್ರಹಿಸು ; ದಮನ ಮಾಡು ; (ದೇಹವನ್ನು) ದಂಡಿಸು, ಶೋಷಿಸು. ಸಾಯಿಸು. (ಸೈನ್ಯ) ರಣರಂಗದಲ್ಲಿ ತಪ್ಪಿತಕ್ಕಾಗಿ ಸಿಪಾಯಿಯ ತೋಳುಗಳೆರಡನ್ನೂ ಚಾಚಿ ಕಟ್ಟು.

Crúciform ಕ್ರೂಸಿಫಾರ್ಮ್ (ಗು.) ಶಿಲುಬೆಯ ರೂಪಿನ.

Crúcify. **Crucifix** ನೋಡಿ.

Crude ಕ್ರೂಡ್ (ಗು.) ಹುಟ್ಟಿದ್ದು ಹುಟ್ಟಿದಂತೆಯೇ ಇರುವ ; ಪ್ರಾಕೃತ ; ಸಹಜ ಸ್ಥಿತಿಯ ; ಸ್ವಾಭಾವಿಕ ಸ್ಥಿತಿಯ. ಹಸಿಯಾದ ; ಹದಗೊಳಿಸದ. (ಆಹಾರ, ಮೊ.) ಜೀರ್ಣವಾಗದ, ಅಪಕ್ವ. (ವ್ಯಾಧಿ, ಮೊ.) ಪಕ್ವಕ್ಕೆ ಬಂದಿರದ, ಮಾಗಿರದ. (ರೂಪ.) (ಕಾರ್ಯ, ಹೇಳಿಕೆ, ಮರ್ಯಾದೆ) ನಯವಿಲ್ಲದ, ಒರಟಾದ ; ಅಸಂಸ್ಕೃತ ; ಒಡ್ಡಾದ. (ವ್ಯಾ., ಶಬ್ದರೂಪ) ಪ್ರತ್ಯಯ ಹಚ್ಚದ ; ಪ್ರಾತಿಪದಿಕ. **Crúdely** (ಕ್ರಿ. ವಿ.) ; **Crúdeness** (ನಾ.) ; **Crúdity** (ನಾ.) ಒರಟುತನ ; ಅಸಂಸ್ಕಾರಿತ್ವ. (ಬ. ವ. ದಲ್ಲಿ) ಕಚ್ಚಾ, ಹಸಿ, ಮೂಲ, ಉತ್ಪನ್ನಗಳು. (ಶ. ವಿ.) ಅಜೀರ್ಣ ; ಜಠರದಲ್ಲಿ ಜೀರ್ಣವಾಗದ, ಜೀರ್ಣವಾಗಿರದ, ಪದಾರ್ಥ.

Crúel ಕ್ರೂಎಲ್ (ಗು.) ಇತರರ ಬಾಧೆಯನ್ನು ನೋಡಿ ನಿರ್ಲಕ್ಷ್ಯದಿಂದಿರುವ, ಸಂತೋಷ ಪಡುವ ; ಕ್ರೂರ ; ನಿರ್ದಯ ; ನಿಷ್ಕರುಣ ; ನಿಷ್ಠುರ ; ಕಠಿನ ; ಕಠೋರ ; ಪರ ಪೀಡಕ ; ಮರುಕವಿಲ್ಲದ ; ಕೂರೆದೆಯ ; ನೋವು ಕೊಡುವ ; ವ್ಯಥೆಯಾಗುವ. **Crúelly** (ಕ್ರಿ. ವಿ.) ; **Crúelty** (ನಾ.) ಕ್ರೌರ್ಯ.

Crúet ಕ್ರೂಎಟ್ (ನಾ.) (ಊಟದ ಮೇಜಿನಮೇಲಿಡುವ ಹುಳಿರಸ, ಎಣ್ಣೆ, ಮೊ. ಕ್ಕೆ) ಗಾಜುಬಿರಡೆಯುಳ್ಳ ಸಣ್ಣ ಸೀಸೆ. (ಕ್ರೈಸ್ತ) ಪ್ರಭು ಭೋಜನ ಸಂಸ್ಕಾರದಲ್ಲಿ ದ್ರಾಕ್ಷಾಮದ್ಯವನ್ನು ಅಥವಾ ನೀರನ್ನು ಇಡುವ ಸಣ್ಣ ಪಾತ್ರೆ. C.-stand ಊಟದ ಮೇಜಿನಮೇಲೆ ಕ್ರೂಯೆಟ್ ಸೀಸೆ, ಮೊ. ನ್ನು ಇಡುವ ನಿಲವು.

Cruise ಕ್ರೂಸ್ (ಕ್ರಿ. ಅಕ., ನಾ.) (ಯುದ್ಧಕಾಲದಲ್ಲಿ ತಮ್ಮ ವ್ಯಾಪಾರದ ಹಡಗುಗಳ ರಕ್ಷಣೆಗಾಗಿಯೊ ಶತ್ರುಪಕ್ಷದ ಹಡಗುಗಳನ್ನು ಕೊಳ್ಳೆಹೊಡೆಯುವುದಕ್ಕಾಗಿಯೊ, ಇಲ್ಲವೆ, ಬರಿಯ ವಿನೋದಕ್ಕಾಗಿಯೊ) ಕಡಲಮೇಲೆ ಸುಳಿದಾಡು (ರೂಪ. ಸಹ) ; ಈ ತೆರದ ಕಡಲ ಪ್ರಯಾಣ. **Cruiser** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಡಲಮೇಲೆ ಸಂಚಾರಕ್ಕಾಗಿ ಅನುಕೂಲಪಡಿಸಿರುವ ಯುದ್ಧದ ಹಡಗು ; ಕಾವಲು ಹಡಗು. Armoured c. ಯುದ್ಧದ ಹಡಗಿಗಿಂತಲೂ ಹಗುರವಾದ ಲೋಹ ಕವಚವುಳ್ಳ ಕಾವಲು ಹಡಗು. (Un)protected c. ರಕ್ಷಣೆಯ ಅಂತನ್ನು ಉಳ್ಳ (ಇಲ್ಲದ) ಕಾವಲು ಹಡಗು.

Crumb, Crum ಕ್ರಂ. (ನಾ., ಕ್ರಿ. ಸಕ.) ಸಣ್ಣ ಚೂರು ; ಮುರುಕು (ಮು., ರೊಟ್ಟಿಯದು). (ರೂಪ.) (ಸೌಖ್ಯ, ಮೊ. ಗಳ) ಸಣ್ಣ ಕಣ, ಅಣು, ಲವ, ಲೇಶ. ರೊಟ್ಟಿಯ ಒಳಭಾಗದಲ್ಲಿಯ ಮೆತ್ತನೆಯ ಭಾಗ. C.-cloth ಮು., ಊಟದ ಮೇಜಿನ ಕೆಳಗಿನ ಜಮುಖಾನವು ಕೊಳೆಯಾಗದಂತೆ ಹಾಸಿರುವ ಮೇಲುಬಟ್ಟೆ. (ಕ್ರಿ.) ರೊಟ್ಟಿಯ ಚೂರುಗಳನ್ನು ಉದುರಿಸು, ಹರವು ; ರೊಟ್ಟಿಯ ತಿರುಳಿನಿಂದ ದಪ್ಪನಾಗಿ ಮಾಡು. ರೊಟ್ಟಿಯನ್ನು ಚೂರುಮಾಡು. **Crúmby** ಕ್ರಮಿ (ಗು.) ರೊಟ್ಟಿಯ ಚೂರುಗಳಂತೆ, ತಿರುಳಿನಂತೆ, ಇರುವ. (ಅಸಂ.) ದುಂಡುದುಂಡಗಿರುವ ; ಮೈ ತುಂಬಿಕೊಂಡಿರುವ ; ಅಂದವಾಗಿರುವ. ಸಮೃದ್ಧ.

Crúmble ಕ್ರಂಬ್‌ಲ್ (ಕ್ರಿ.) ಪುಡಿಪುಡಿಯಾಗು ; ಚೂರುಚೂರಾಗಿ ಬೀಳು, ಉದುರು (ರೂಪ. ಸಹ). **Crúmbly** (ಗು.) ಚೂರುಚೂರಾಗಿ ಬೀಳುವ.

Crúmmy ಕ್ರಮಿ (ಗು.) (ಅಸಂ.) (ಹೆಂಗಸರ ವಿಷಯದಲ್ಲಿ) ಮೈ ತುಂಬಿಕೊಂಡಿರುವ ; ಪುಷ್ಟ ; ಅಂದವಾದ.

Crump ಕ್ರಂಪ್ (ಕ್ರಿ. ಸಕ., ನಾ.) (ಬಳ. ಮಾ.) ಬಿರುಸಾಗಿ ಹೊಡೆ ; ಬಾರಿಸು (ಮು., ಕ್ರಿಕೆಟ್ ಚೆಂಡನ್ನು). (ನಾ.) ಬಿರುಸಾದ ಹೊಡೆತ ; ಬಲವಾಗಿ ಬೀಳುವುದು. (ಸೇನೆಯ ಅಸಂ.) ಸಿಡಿ ಗುಂಡು.

Crúmpet ಕ್ರಂಪೆಟ್ (ನಾ.) (ಹಿಟ್ಟಿಗೆ ಮೊಟ್ಟೆ, ಹಾಲು, ಮೊ. ನ್ನು ಹಾಕಿ ಕಲಸಿ ಕಾವಲಿಯಮೇಲೆ ಸುಟ್ಟ) ದೋಸೆ, ಮೆತು ರೊಟ್ಟಿ. (ಅಸಂ.) ತಲೆ [Barmy on the c. (Barmy ನೋಡಿ)]

Crúmple ಕ್ರಂಪ್‌ಲ್ (ಕ್ರಿ.) ನಲುಗಿಸು ; ಸುಕ್ಕಿಸು ; ಸುಕ್ಕಾಗು ; ಮುದುರು ; ಕಿವುಚು. ಕುಸಿದುಬೀಳು ; ಮುರಿದುಬೀಳು.

Crunch ಕ್ರನ್‌ಷ್ (ಕ್ರಿ., ನಾ.) ಹಲ್ಲಿನಿಂದ (ಕರಂ ಕರಂ, ಕಟಂ ಕಟಂ ಎಂದು) ಅಗಿ. ನೊರಜುಗಲ್ಲು, ಮೊ. ವು ಪುಡಿಪುಡಿಯಾಗುವಂತೆ ತುಳಿದು, ಚಕ್ರಹರಿದು, ಹೋಗು ; ಚಕಚಕನೆ ಮುಂದೆ ಸಾಗು ; ದಾರಿಮಾಡಿಕೊಂಡು ಹೋಗು.

Crúpper ಕ್ರಪರ್ (ನಾ.) ಕುದುರೆಯ ಬಾಲದ ಕೆಳಗೆ ಹಾಯ್ದು ಜೀನಿನ ಬೆನ್ನಿಗೆ ಬಿಗಿದಿರುವ ಬಿಗಿಪಟ್ಟಿ : ಬಾಲದ ಪಟ್ಟಿ. ಕುದುರೆಯ ಪೃಷ್ಠ ಭಾಗ.

Crúral ಕ್ರೂರರ್ (ಗು.) (ಅಂ. ರ. ಶಾ.) ಕಾಲಿನ.

Crusáde ಕ್ರುಸೇಡ್ (ನಾ., ಕ್ರಿ. ಅಕ.) (ಚರಿತ್ರೆ) ಕ್ರೈಸ್ತ ಪುಣ್ಯಭೂಮಿಯನ್ನು (ಪ್ಯಾಲೆಸ್ಟೈನನ್ನು) ಮಹಮ್ಮದೀಯರಿಂದ ಹಿಂದಕ್ಕೆ ಕಿತ್ತುಕೊಳ್ಳಲು ಕ್ರೈಸ್ತರು ಕೈಕೊಂಡ ದಂಡಯಾತ್ರೆ. ಧರ್ಮಪಾಲನೆಯ ಉದ್ದೇಶಕ್ಕಾಗೆಂದು ಕ್ರೈಸ್ತ ಮತದವರು ಎಬ್ಬಿಸಿದ ಯುದ್ಧ : ಧಾರ್ಮಿಕ ಯುದ್ಧ. (ರೂಪ.) ಜನತೆಯ ದೋಷಗಳನ್ನು ತೊಡೆದುಹಾಕುವುದಕ್ಕಾಗಿ ಹೂಡಿದ (ಸುಧಾರಣೆಯ) ಚಳವಳಿ (Temperance c. ಮದ್ಯಪಾನ ನಿರೋಧದ ಚಳವಳಿ). (ಕ್ರಿ.) ಧಾರ್ಮಿಕ ಯುದ್ಧ ಹೂಡು. **Crusáder** (ನಾ.) ಧಾರ್ಮಿಕ ಯುದ್ಧದಲ್ಲಿ ತೊಡಗಿರುವವನು.

Crusádo ಕ್ರುಸೇಡೊ (ನಾ.) (೨ ಷಿಲಿಂಗು ೪ ಪೆನಿ ಬೆಲೆಯುಳ್ಳ) ಪೋರ್ಚುಗೀಸರ ಒಂದು ನಾಣ್ಯ.

Cruse ಕ್ರೂಸ್(ಸ್) (ಪ್ರಾಚೀ. ಪ್ರ.) ಮಡಕೆ ; ಪಿಂಗಾಣಿಯ ಪಾತ್ರೆ. Widow's c ಅಕ್ಷಯ ಪಾತ್ರೆ.

Crush ಕ್ರಷ್ (ಕ್ರಿ., ನಾ.) ಜಜ್ಜು, ಮುರಿದುಹೋಗುವಂತೆ, ಕುಗ್ಗುಬಿಡಿ ; ಜಜ್ಜುಬಿಡಿ ; ನಜ್ಜುಗುಜ್ಜು ಮಾಡು ; ನೆಗ್ಗು. (ಉಡುಪು, ಮೊ. ನ್ನು ಎಳೆದಾಡುವುದರಿಂದ) ಮುದುರಿಸು, ಸುಕ್ಕಿಸು. ಹಿಸುಕು ; ಹಿಂಡು. (ರೂಪ.) ತಲೆಯೆತ್ತದಂತೆ ಮಾಡು ; ತುಳಿದುಬಿಡು ; ಸದೆಬಡಿ ; ಅದುಮಿಬಿಡು (A crushing defeat, reply ತಲೆಯೆತ್ತದಂತಾದ ಅಪಜಯ ; ಸಂಪೂರ್ಣ ಸೋಲು ; ತಲೆಯೆತ್ತಲಾಗದಂತೆ ಕೊಟ್ಟ ಉತ್ತರ. C. out ನಿರ್ಮೂಲ ಮಾಡು. C. a cup of wine ಒಂದು ಬಟ್ಟಲು ದ್ರಾಕ್ಷಾಮದ್ಯವನ್ನು ಕುಡಿದುಬಿಡು). ನುಗ್ಗಿಕೊಂಡು, ನುಸುಳಿಕೊಂಡು, ಹೋಗು. (ನಾ.) (ಕ್ರಿಯಾರ್ಥಗಳಲ್ಲಿ) ; ನಜ್ಜುಗುಜ್ಜು ಮಾಡುವುದು. (ಮು., ಜನರ) ನೂಕುನುಗ್ಗಲು, ಸಂದಣಿ. (ಬಳ. ಮಾ.) ಇಡಿಕಿರಿದ ವಿನೋದ ಕೂಟ. C.-room ನಾಟಕ ಶಾಲೆ, ಮೊ. ಗಳಲ್ಲಿ ವಿರಾಮ ಸಮಯಗಳಲ್ಲಿ ಅಡ್ಡಾಡಲು ಮಾಡಿರುವ ಸ್ಥಳ. C. hat ಮುದುರಲಾಗುವ ಪರಂಗಿಟೋಪಿ ; ಮುದುರುಟೋಪಿ.

Crust ಕ್ರಸ್ಟ್ (ನಾ., ಕ್ರಿ.) ರೊಟ್ಟಿಯಮೇಲಿನ ಗಟ್ಟಿಭಾಗ ; (ಯಾವ ಪದಾರ್ಥದಮೇಲಾಗಲಿ ಇರುವ) ಗಟ್ಟಿ ಹೊರಪದರ ; ಹೆಪ್ಪು ; ಹೊಕ್ಕು ; ಹೆಕ್ಕಳಿಕೆ ; ಪೊರೆ (ಉದಾ., ಮೆತು ಹಿಮರಾಶಿಯ ಮೇಲ್ಭಾಗದಲ್ಲಿಯ ಗಟ್ಟಿ ಪದರ). ಒಣಕಲು ರೊಟ್ಟಿಯ ಚೂರು. ಕಡುಬಿನಂಥ, ಒಬ್ಬಟ್ಟಿನಂಥ, ಭಕ್ಷ್ಯದಮೇಲಿನ ಹಿಟ್ಟಿನ ಪದರ. ಗಡುಸಾಗಿ ಮಾರ್ಪಟ್ಟ ಚರ್ಮದ ಮೇಲ್ಭಾಗ. (ಭೂ. ವಿ.) ಭೂಮಿಯ ಹೊರ ಪದರ. ಒಂದು ವಸ್ತುವಿನ ಮೈಮೇಲೆ ಬಳಿದಂತಿರುವ ಅಥವಾ ಕುಳಿತಿರುವ ಪದರ. [C. of wine (ಸೀಸೆಯ ಪಕ್ಕಗಳಿಗೆ ಅಂಟಿಕೊಂಡಿರುವ) ದ್ರಾಕ್ಷಾಮದ್ಯದ ಹೆಪ್ಪು. C. of prejudice ಅವಿಚಾರಾಭಿಪ್ರಾಯದ, ಅವಿಚಾರ ನಿಶ್ಚಯದ, ಪೊರೆ]. ಪ್ರಾಣಿಯ ಅಥವಾ ಸಸ್ಯದ ಗಡುಸಾದ ಹೊರ ಪದರ : ವಲ್ಕ ; ತೊಗಟೆ ; ಸಿಪ್ಪು ; ಚಿಪ್ಪು. (ರೂಪ.) ಮೇಲ್ಭಾಗ. (ಕ್ರಿ.) ಹೊರ ಮೈ ಗಡುಸಾಗು, ಆಗಿಸು ; ಹೆಪ್ಪು, ಹೆಕ್ಕಳಿಕೆ, ಕಟ್ಟು, ಕಟ್ಟಿಸು. **Crústed** (ಗು.) ಹೆಕ್ಕಳಿಕೆ, ಹೆಪ್ಪು, ಕಟ್ಟಿದ. (ರೂಪ.) ಪುರಾತನವಾದ ; ಹಳತಾಗಿಹೋದ ; ಪೂಜ್ಯವಾದ. (C. prejudice ಹೊಕ್ಕುಗಟ್ಟಿದ ಅವಿಚಾರ, ದುರಭಿಪ್ರಾಯ, ಮುಂಮತ. C. theory ಪ್ರಾಚೀನ, ಬೆನ್ನು ಹತ್ತಿದ, ಪೂಜ್ಯವಾದ, ಅಭಿಪ್ರಾಯ). **Crústy** (ಗು.) (ನಾಮವಾಚಕದ ಅರ್ಥಗಳಲ್ಲಿ) ; ರೇಗುವ ಸ್ವಭಾವದ ; ಸಿಡುಕುವ ; ಅಸಮಾಧಾನದಿಂದ ಮರ್ಯಾದೆ ತೋರಿಸದೆ ಆಡುವ.

Crustácea ಕ್ರಸ್ಟೇಷ್ಯ, — ಷ (ನಾ., ಬ. ವ.) ಗಡುಸು ಹೊದಿಕೆಯುಳ್ಳ, ಸಾ., ಜಲಚರಗಳಾದ, (ದೊಡ್ಡ ಗುಂಪಿನ) ಪ್ರಾಣಿಜಾತಿಗಳು (ಉದಾ., ಏಡಿ, ನಳ್ಳಿ, ಮೊ.) ; ವಲ್ಕವಂತ ವರ್ಗ. **Crustácean** — ಷನ್ (ಗು., ನಾ.) ವಲ್ಕವಂತ ಪ್ರಾಣಿಗಳ. (ನಾ.) ವಲ್ಕವಂತ ಪ್ರಾಣಿ. **Crustaceólogy** — ಷಿಯಾಲೊಜಿ (ನಾ.) ವಲ್ಕವಂತ ಪ್ರಾಣಿ ಶಾಸ್ತ್ರ. **Crustáceous** — ಷಸ್ (ಗು.) ಗಡುಸು ಪದರದ ; ವಲ್ಕದಂಥ. (ಪ್ರಾಣಿಗಳ ವಿಷಯದಲ್ಲಿ) ಗಡುಸು ಚರ್ಮವುಳ್ಳ ; ವಲ್ಕವಂತ (ಮು., ಪ್ರಾ. ವಿ. ದಲ್ಲಿ, ವಲ್ಕವಂತ ವರ್ಗಕ್ಕೆ ಸೇರಿದ)

Crutch ಕ್ರಚ್ (ನಾ.) ಕುಂಟನ ಊರುಗೋಲು, ಕಂಕುಳುಕೋಲು (ಸಾ., ಅಡ್ಡಪಟ್ಟಿ ಹಾಕಿ, ಜೋಡಿಯಾಗಿರುವದು) ; ಆಧಾರ ; ಊರೆ ; ಆನಿಕೆ ; ಆಸರೆ (ರೂಪ. ಸಹ). (ನಾವೆ) ಕವಲುಳ್ಳ ಅನೇಕ ತರದ ಸಲಕರಣೆಗಳು. ಅಡ್ಡಪಟ್ಟಿ. **Crutched** ಕ್ರಚ್ಟ್, **Crútched** ಕ್ರಚೆಡ್ (ಗು.)

Crux ಕ್ರಕ್ಸ್ (ನಾ.) ಕಷ್ಟಭಾಗ ; ಕ್ಲಿಷ್ಟಾಂಶ ; ಒಗಟು ; ಗಂಟು ; ಜಿಗಟು.

Cry ಕ್ರೈ (ನಾ., ಕ್ರಿ.) (ವ್ಯಥೆ, ನೋವು, ಭಯ, ಸಂತೋಷ, ಮೊ. ಗಳ ಸೂಚನೆಯಾಗಿ) ಕೂಗು, ಅಳು, ಒರಲು, ಅಬ್ಬರಿಸು, ಬೊಬ್ಬೆ(ಯಿಡು) ; ಗೋಳು ಕರೆ ; ರೋದನ (ಮಾಡು) ; ಚೀತ್ಕಾರ (ಮಾಡು) ; ಅರಚು ; ಕಿರಿಚು ; ಕೇಕೆ (ಹಾಕು). ಮೊರೆ ; ಬೇಡಿಕೆ. ಬೀದಿವ್ಯಾಪಾರಿಯ ಸಾಮಾನುಕೂಗು. ವದಂತಿ ; ಗಾಳಿಸಮಾಚಾರ ; ಬೀದಿಸುದ್ದಿ ; ಜನರ ಕೂಗು ; ಪಡೆಮಾತು (ಗ್ರಾಂ.). ಗುರಿ ನುಡಿ ; ಸಂಕೇತ ಪದ (War-c. ಯುದ್ಧ ಘೋಷ ; ಕಾಳಗದ ಕೂಗು). ಬೇಟೆನಾಯಿ, ಮೊ. ಗಳ ಬಗುಳು, ಊಳು (ರೂಪ. ಸಹ). Full c. ಬೆನ್ನಟ್ಟುವುದು. Within c. ಕೂಗಿನ ದೂರದಲ್ಲಿ. A far c. ಬಹು ದೂರ. C.-baby ಎಳೆಗೂಸಿನಂತೆ ಅಳುವವನು ; ಅಳುಬುರುಕ. Much cry and little

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

wool ಅಬ್ಬರ ಬಹಳ, ಆದಾಯ ಕಡಮೆ (ಉದಾ., ಹಂದಿಯ ಕೂದಲನ್ನು ಕತ್ತರಿಸುವಲ್ಲಿಯಂತೆ). Follow in the c. ವಿಚಾರಮಾಡದೆ ಅನುಸರಿಸಿ ಹೋಗುವ, ರೆಕ್ಕಕ್ಕೆಬಾರದವರ, ಗುಂಪಿನಲ್ಲಿ ಸೇರು.

Cry (ಕ್ರಿ.) ಗಟ್ಟಿಯಾಗಿ ಹೇಳು, ಕೂಗು (C. out ಗಟ್ಟಿಯಾಗಿ ಕೂಗಿಹೇಳು). (ಬೇಟೆನಾಯಿಗಳು) ಬಗುಳು. ಮಾರಿಕೆಗೆ ಇದೆಯೆಂದು ಘೋಷಿಸು [C. stinking fish ತನ್ನ ಸರಕನ್ನು ತಾನೇ ದೂಷಿಸಿ ಕೂಗು (ರೂಪ.)]. C. one's heart out ಎದೆ ಬಿರಿಯುವಂತೆ ಅಳು. C. over spilt milk ಕಳೆದು ಹೋದುದಕ್ಕೆ ವ್ಯರ್ಥವಾಗಿ ಅಳು ; ಆಗಿಹೋದುದಕ್ಕೆ ವ್ಯಥಾ ಪೇಚಾಡು. C. for the moon ಅಸಾಧ್ಯ ವಸ್ತುವಿಗಾಗಿ ಅಂಗಲಾಚು ; ನಿಲುಕದ್ದಕ್ಕೆ ಕೈನೀಡು. C. down ಜರೆ ; ಹಳಿ ; ಅಲ್ಲಗಳೆ ; ಇಳಿಕೆಗೈ (ಗ್ರಾಂ.). C. off ವ್ಯಾಪಾರದ ಒಪ್ಪಂದದಿಂದ ಹಿಂಜರಿ. C. up ಹೊಗಳು ; ತಾರೀಫು ಮಾಡು. C. craven (Craven ನೋಡಿ). C. halves ಪಾಲು ಕೇಳು. C. quarter, quits (ಆಯಾ ಪದಗಳನ್ನು ನೋಡಿ). C. shame upon (ಕೃತ್ಯ, ಮನುಷ್ಯ — ಇವನ್ನು) ಪ್ರತಿಭಟಿಸು, ತೆಗಳು ; ಅವಿವೇಕವೆಂದು ಕೂಗಿ ಹೇಳು. **Críer** (ನಾ.) ಕೂಗುವವನು ; ಸಾರುವವನು ; ಡಂಗುರ ಹೊಡೆಯುವವನು ; ನ್ಯಾಯಸ್ಥಾನದ ಘೋಷಕ. **Crýing** (ನಾ.) (ಕ್ರಿಯಾರ್ಥಗಳಲ್ಲಿ). (ಕೆಡುಕುಗಳ ವಿಷಯದಲ್ಲಿ) ಗಮನ ಸೆಳೆಯುವ ; ಪ್ರಬಲವಾದ.

Crýogen ಕ್ರೈಯೊಜೆನ್ (ನಾ.) (ರ. ವಿ.) ದ್ರವ ವಸ್ತುಗಳನ್ನು ಘನೀಕರಿಸುವ ಮಿಶ್ರಣ : ಘನೀಕರಣ ಮಿಶ್ರಣ. ಈ ಮಿಶ್ರಣವನ್ನು ತಯಾರಿಸುವುದಕ್ಕಾಗಿ ನೀರ್ಗಲ್ಲಿನೊಡನೆ ಬೆರಸುವ ಪದಾರ್ಥ.

Crypt ಕ್ರಿಪ್ಟ್ (ನಾ.) ನೆಲ ಗವಿ ; ನೆಲ ಕೋಣೆ ; ನೆಲ ಮಾಳಿಗೆ (ಮು., ಹೆಣ ಹೂಳಲು ಕ್ರೈಸ್ತ ದೇವಾಲಯಗಳ ತಳಗಡೆ ಮಾಡಿರುವದು). **Crýptic** (ಗು.) ರಹಸ್ಯ ; ಗುಪ್ತ ; ಗೂಢ.

Crýpt(o)- ಕ್ರಿಪ್ಟೊ- (ಸಮಾಸದಲ್ಲಿ ಪೂರ್ವಪದ) ಗುಪ್ತ —. **Cryptobránchiate** ಕ್ರಿಪ್ಟೊಬ್ರ್ಯಾಂಕಿಯೆಟ್ (ಗು.) ಗುಪ್ತ ಜಲಪುಪ್ಪುಸಗಳುಳ್ಳ.

Crýptogam ಕ್ರಿಪ್ಟೊಗ್ಯಾಮ್ (ನಾ.) ಕೇಸರಗಳೂ ಶಲಾಕೆಗಳೂ ಇಲ್ಲದ, ಆದಕಾರಣ ನಿಜವಾದ ಹೂವು ಕಾಯಿಗಳಿಲ್ಲದ, ಸಸ್ಯ (ಜರಿ ಗಿಡಗಳು, ಪಾಚಿಗಳು, ಮೊ. ವು.) : ಗುಪ್ತಪುಷ್ಪಿ. **Cryptogámic** (ಗು.) ಗುಪ್ತಪುಷ್ಪೀಯಗಳ. **Cryptógamous** ಕ್ರಿಪ್ಟಾಗಮಸ್ (ಗು.) ಗುಪ್ತಪುಷ್ಪೀಯ. **Cryptógamist** (ನಾ.) — ಶಾಸ್ತ್ರಜ್ಞ. **Cryptógamy** (ನಾ.) ಗುಪ್ತಪುಷ್ಪಿತ್ವ.

Crýptogram ಕ್ರಿಪ್ಟೊಗ್ರ್ಯಾಮ್, **-graph** —ಗ್ರಾಫ್ (ನಾ.) ಗೂಢ ಲಿಪಿ ; ಗೂಢ ಲೇಖನ. **Cryptográphic** —ಗ್ರ್ಯಾಫಿಕ್ (ಗು.) ; **Cryptógrapher** ಕ್ರಿಪ್ಟಾಗ್ರಫರ್ (ನಾ.), **Cryptógraphist** (ನಾ.) ; **Cryptógraphy** (ನಾ.) (ರಹಸ್ಯ ತಿಳಿದವರಿಗೆ ಮಾತ್ರ ಅರ್ಥವಾಗುವ) ಗೂಢ ಲಿಪಿ.

Cryptólogy ಕ್ರಿಪ್ಟಾಲೊಜಿ (ನಾ.) ಗೂಢ ಭಾಷೆ.

Crýstal ಕ್ರಿಸ್ಟಲ್ (ನಾ., ಗು.) ಸ್ವಚ್ಛವೂ ಪಾರದರ್ಶಕವೂ ಆದ ನೀರ್ಗಲ್ಲಿನಂಥ ಖನಿಜ (Rock-c. ಸ್ಫಟಿಕ ರೂಪದ ಶುದ್ಧ 'ಕ್ವಾರ್ಟ್ಸ್' ಶಿಲೆ ; ಇದರ ಹಳುಕು). ಹರಳು ; ಹಳುಕು. (C. set ನಿಸ್ತಂತು ವಾರ್ತಾ ಪ್ರಸರಣದಲ್ಲಿ, ಬಂದ ಧ್ವನಿತರಂಗಗಳನ್ನು ಗ್ರಹಿಸುವ ಸುಲಭವಾದ ಗ್ರಾಹಕ ಸಲಕರಣೆ : ಸ್ಫಟಿಕ ಗ್ರಾಹಕ). (ಕಾವ್ಯ) ಸ್ವಚ್ಛವೂ ಪಾರದರ್ಶಕವೂ ಆದ ವಸ್ತು (ಮು., ನೀರು). [C.-gazing ಭವಿಷ್ಯತ್ ಸಂದರ್ಭಗಳನ್ನು ಕಂಡುಕೊಳ್ಳುವುದಕ್ಕೆಂದು ಶಿಲಾಸ್ಫಟಿಕ ಗೋಳ, ತಟ್ಟೆಯಲ್ಲಿ ಹಾಕಿಟ್ಟ ಶಾಯಿ, ಮೊ. ನ್ನು ಏಕಾಗ್ರ ದೃಷ್ಟಿಯಿಂದ ನೋಡುತ್ತಿರುವುದು : ಮಣಿ ವೀಕ್ಷಣ. Crystal (ಬಳ. ಮಾ.) ಈರೀತಿಯಾಗಿ ಪಡೆದ ಭವಿಷ್ಯ ಜ್ಞಾನ ; ಭವಿಷ್ಯದ್ವಾಣಿ]. ಬಹಳ ಸ್ವಚ್ಛಗುಣವುಳ್ಳ ಗಾಜು (Also, C. glass) ; ಈ ಗಾಜಿನ ಪಾತ್ರೆ, ಮೊ. ವು (C. Palace ಗಾಜಿನಿಂದಲೂ ಕಬ್ಬಿಣದಿಂದಲೂ ಕಟ್ಟಿದ ಲಂಡನ್ನಿನಲ್ಲಿಯ ಒಂದು ದೊಡ್ಡ ಪ್ರದರ್ಶನ ಶಾಲೆ : ಸ್ಫಟಿಕ ಮಂದಿರ). (ರ. ವಿ., ಖನಿಜಶಾಸ್ತ್ರ) (ಒಂದು ಗೊತ್ತಾದ ಒಳರಚನೆಯಿದ್ದು, ಒಂದು ಕ್ರಮದಲ್ಲಿ ಅಳವಡಿಸಿದ ಸಮತಳದ ಮುಖಗಳಿಂದ ಎಲ್ಲೆಗಟ್ಟಿ) ನಿರ್ದಿಷ್ಟ ಘನರೂಪವನ್ನು ಪಡೆದ ಅಣುರಾಶಿ ; ಸ್ಫಟಿಕ ; ಸ್ಫಟಿಕಾಕೃತಿ. (ಗು.) ಸ್ಫಟಿಕ ವಸ್ತುವಿನಿಂದ ಮಾಡಿದ ; — ವಸ್ತುವಿನಂಥ ; ಸ್ಫಟಿಕದಂತೆ ಸ್ವಚ್ಛ, ಶುಭ್ರ. **Crýstalline** — ಲಿನ್, — ಲೈನ್ (ಗು.) = Crystal (ಗು.). C. lens of eye ಕಣ್ಣುಗುಡ್ಡೆಯಲ್ಲಿ ಕಪ್ಪುತೆರೆಯ ಹಿಂದೆ ಇರುವ ಸ್ಫಟಿಕದ ಲೆನ್ಸು. **Crýstallize** —ಲೈಸ್ (ಕ್ರಿ.) ಸ್ಫಟಿಕಾಕೃತಿಗಳನ್ನಾಗಿ ಮಾಡು ; — ಗಳಾಗು. (ರೂಪ.) ಸ್ಪಷ್ಟ, ನಿರ್ದಿಷ್ಟ, ಸ್ಥಿರ, ರೂಪು ಕೊಡು. (Crystallized fruit ಸಕ್ಕರೆಯಲ್ಲಿ ಊರಿಟ್ಟು ಹಳುಕುಸಕ್ಕರೆಯಲ್ಲಿ ಹೊರಳಿಸಿದ ಹಣ್ಣು). **Crýstallizable** (ಗು.) ; **Crystallizátion** — ಲೈಸೇಷನ್ (ನಾ.)

Crýstallo ಕ್ರಿಸ್ಟಲೊ — (ಸಮಾಸದಲ್ಲಿ ಪೂರ್ವಪದ) ಸ್ಫಟಿಕ — . **C.-génic** ಕ್ರಿಸ್ಟಲೊ ಜೆನಿಕ್ (ಗು.) ಸ್ಫಟಿಕ ಕಾರಕ. **C.-geny** (ನಾ.) ಸ್ಫಟಿಕ ಕರಣ. **C.-graphy** — ಲಾಗ್ರಫಿ (ನಾ.) ಸ್ಫಟಿಕ ಶಾಸ್ತ್ರ. **C.-gráphic(al)** ಕ್ರಿಸ್ಟಲೊಗ್ರ್ಯಾಫಿಕ್ (ಕಲ್) (ಗು.)

Crýstalloid ಕ್ರಿಸ್ಟಲಾಯ್ಡ್ (ಗು., ನಾ.) ಸ್ಫಟಿಕಾಕೃತಿಯಂಥ ; ಸ್ಫಟಿಕದಂಥ ; ಸ್ಫಟಿಕ ರಚನೆಯುಳ್ಳ (ವಸ್ತು) (Colloid ಎಂಬುದರೊಡನೆ ಹೋಲಿಸಿ)

Cténoid ಟೀನಾಯ್ಡ್ (ಗು., ನಾ.) ಹಣಿಗೆಯಂತಿರುವ ಹಲ್ಲುಗಳುಳ್ಳ ಅಥವಾ ಶಲ್ಕಗಳುಳ್ಳ (ಮೀನು)

Cub ಕಬ್ (ನಾ., ಕ್ರಿ.) ಯಾವುದಾದರೂ ಕಾಡುಪ್ರಾಣಿಯ ಮರಿ (C.-hunting ನರಿಮರಿಯ ಬೇಟೆ). ಮರಿ ಸ್ಕೌಟು (ಬಾಲ ಭಟ). ನಯವಿಲ್ಲದ ತರುಣ ; ಒರಟು ಹುಡುಗ (ಸಾ., Unlicked c.). (ಕ್ರಿ.) ಮರಿಹಾಕು ; ಈಯಿ. **Cúbbish** (ಗು.) ; **Cúbhood** (ಗು.) ; **Cúbbing** (ನಾ.) ನರಿಮರಿಯ ಬೇಟೆ.

Cúbage, etc. **Cube** ನೋಡಿ.

Cúbby ಕಬಿ (ನಾ.) ಬೆಚ್ಚನೆಯ ಸ್ಥಳ (C.-hole, -house)

Cube ಕ್ಯೂಬ್ (ನಾ., ಕ್ರಿ. ಸಕ.) ಆರು ಸಮಚತುರಶ್ರಗಳಿಂದಾದ ಘನಾಕೃತಿ ; ಘನ ; ಘನಾಕಾರದ ದಿಮ್ಮಿ, ವಸ್ತು. ಒಂದು ಸಂಖ್ಯೆಯನ್ನು ಅದರ ವರ್ಗದಿಂದ ಗುಣಿಸುವುದರಿಂದ ಬಂದ ಲಬ್ಧ : ಘನ (ಲಬ್ಧ) (೩ರ ಘನ = ೨೭). (C.-root ಘನಮೂಲ : ೨೭ರ ಘನ ಮೂಲ = ೩). (C. powder ಘನಾಕೃತಿಯ ಕಣಗಳ ಸಿಡಿಮದ್ದು). (ಕ್ರಿ.) (ಒಂದು ಸಂಖ್ಯೆಯ) ಘನವನ್ನು, (ಒಂದು ಘನವಸ್ತುವಿನ) ಘನ ಮಾನವನ್ನು, ಕಂಡುಹಿಡಿ ; ತ್ರಿಘಾತ ಮಾಡು. ಘನಾಕೃತಿಗಳನ್ನು ಹದ್ದಿಸು. **Cúbage** ಕ್ಯೂಬೆಜ್ (ನಾ.) ಘನ ಪರಿಮಾಣ ; ಘನ ಮಾನ (ಕಂಡುಹಿಡಿಯುವುದು) (= **Cúbature** ಕ್ಯೂಬಚ್ಯುರ್). **Cúbic** (ಗು., ನಾ.) ಘನಾಕೃತಿಯ [C. foot ಪ್ರತಿ ಏಣಿನ ಉದ್ದವೂ ಒಂದು ಅಡಿಯುಳ್ಳ ಘನಾಕೃತಿಯ ಅಳತೆ : ಘನ ಅಡಿ. C. content ಘನ ಪರಿಮಾಣ ; ಘನ ಫಲ]. ಸಂಖ್ಯೆಗಳ ಘನಲಬ್ಧಗಳ ; ತ್ರಿಘಾತೀಯ (C. equation ಘನ ಸಮೀಕರಣ. C. expression ತ್ರಿಘಾತ ರಾಶಿ). **Cúbical** (ಗು.) ; **Cúbically** (ಕ್ರಿ. ವಿ.) ; **Cúbiform** (ಗು.) ಘನಾಕೃತಿಯ. **Cúbism** ಕ್ಯೂಬಿಸ್ಮ್ (ನಾ.) ಘನಾಕೃತಿಯನ್ನು ಮಾದರಿಯಾಗಿಟ್ಟುಕೊಂಡು ರೂಪಿಸುವ ಆಧುನಿಕ ಕಲಾ ಕೃತಿಗಳ ರಚನೆ : ಘನಾಕೃತಿ ಕಲೆ. **Cúbist** (ನಾ.) ; **Cúboid** (ಗು., ನಾ.) ಘನಾಕೃತಿಯ ; ಘನದಂತಿರುವ. (ನಾ.) ಸಮಕೋನ ಚತುರ್ಬಾಹುಗಳಿಂದ ಕೂಡಿದ ಘನಾಕೃತಿ. **Cuboídal** (ಗು.)

Cúbicle ಕ್ಯೂಬಿಕ್‌ಲ್ (ನಾ.) ಪಾಠಶಾಲೆ, ಮೊ. ಗಳಲ್ಲಿ ವಿದ್ಯಾರ್ಥಿಗಳು ರಾತ್ರಿ ಮಲಗಿಕೊಳ್ಳುವ ಪ್ರತ್ಯೇಕವಾದ ಸಣ್ಣ ಕೋಣೆ.

Cúbit ಕ್ಯೂಬಿಟ್ (ನಾ.) (೧೮ರಿಂದ ೨೨ ಅಂಗುಲದ ವರೆಗಿರುವ ಅಳತೆಯು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊಳ. **Cúbital** (ಗು.) ಮುಂದೋಳಿನ ; (ಇತರ ಪ್ರಾಣಿಗಳಲ್ಲಿ) ಮುಂಗಾಲಿನ ಕೆಳಭಾಗದ.

Cúboid. **Cube** ನೋಡಿ.

Cúckold ಕಕಲ್ಡ್ (ನಾ., ಕ್ರಿ. ಸಕ.) ಹಾದರಗಿತ್ತಿಯ ಗಂಡ ; ಅಸತೀಪತಿ. — ಆಗಿಮಾಡು (ಹಾಸ್ಯಾಪಮಾನ ಸೂಚಕ)

Cúckoo ಕುಕೂ (ನಾ.) ಕೋಗಿಲೆ [ಇತರ ಹಕ್ಕಿಗಳ (ಸಾ., ಕಾಗೆಯ) ಗೂಡಿನಲ್ಲಿ ಮೊಟ್ಟೆಯಿಟ್ಟುಹೋಗುವ ಹಕ್ಕಿ]. ಏನೂ ಅರಿಯದವನು ; ದಡ್ಡ. C. clock ಕೋಗಿಲೆಯ ಕೂಗಿನಂತೆ ಗಂಟೆಹೊಡೆಯುವ ಗಡಿಯಾರ. C.-spit ಕೆಲವು ಹುಳುಮರಿಗಳು (ದೇಹರಕ್ಷಣೆಗಾಗಿ) ತಮ್ಮ ದೇಹದಮೇಲೆ ಸ್ರವಿಸಿ ಹರಡಿಕೊಳ್ಳುವ ನೊರೆಯುಗುಳು. **Cúculine** ಕ್ಯೂಕ್ಯುಲೈ(ಲಿ)ನ್ (ಗು.) ಕೋಗಿಲೆಯ.

Cúcullate(d) ಕ್ಯೂಕಲೇಟ್, — ಲೇಟೆಡ್ (ಗು.) (ಸ. ವಿ., ಪ್ರಾ. ವಿ.) ಕುಂಚಿಗೆಯ, ಕುಲಾವಿಯ, ಆಕಾರದ ; ಕುಲಾವಿಯುಳ್ಳ.

Cúcumber ಕ್ಯೂಕಂಬರ್ (ನಾ.) ಸೌತೆಕಾಯಿ (ಬಳ್ಳಿ). Cool as a c. ಶಾಂತವಾಗಿ ; ಸಮಾಧಾನವಾಗಿ ; ಸ್ವಲ್ಪವೂ ಚಿಂತೆಗೊಳ್ಳದೆ ; ಕಳವಳಪಡದೆ ; ಮನ ಕದಡದೆ.

Cucúrbit ಕ್ಯೂಕರ್‌ಬಿಟ್ (ನಾ.) ಸೋರೆಕಾಯಿ (ಹಂಬು) ; ಸೋರೆ ಬುರುಡೆ. **Cucurbitáceous** —ಟೇಷಸ್ (ಗು.) (ಕರಿಬೂಜು, ಕೆಕ್ಕರಿಕೆ, ಕುಂಬಳ, ಪಡವಲ, ಸೌತೆ, ಸೋರೆ, ಮೊ. ಸಸ್ಯಜಾತಿಗಳನ್ನೊಳಕೊಂಡ) ಕರ್ಕಟೀ ವರ್ಗದ.

Cud ಕಡ್ (ನಾ.) ಮೆಲುಕು ; ರೋಮಂಥ. Chew the c. ಮೆಲುಕು ಹಾಕು. (ರೂಪ.) ಮನನಮಾಡು; ಚಿಂತನೆ ಮಾಡು; ಮನಸ್ಸಿನಲ್ಲಿ ತಿರುವಿಹಾಕು.

Cúdbear ಕಡ್‌ಬೇರ್ (ನಾ.) ಹಲವು ಕಲ್ಲುಹೂವುಗಳಿಂದ ತಯಾರಿಸಿದ ಧೂಮ್ರುಬಣ್ಣ ಅಥವಾ ನೇರಿಳೆಬಣ್ಣ. ಒಂದು ಜಾತಿಯ ಕಲ್ಲುಹೂವು.

Cúddle ಕಡ್‌ಲ್ (ಕ್ರಿ., ನಾ.) ತಬ್ಬಿಕೊ ; ಅಪ್ಪು ; ಆಲಿಂಗಿಸು ; ಮುದ್ದಾಡು. ಮುದುರಿಕೊಂಡು ಬೆಚ್ಚಗೆ ಮಲಗಿಕೊ ; ಹತ್ತಿರಹತ್ತಿರ ಬೆಚ್ಚಗೆ ಮಲಗು. (ನಾ.) ತಬ್ಬಿಕೆ ; ಆಲಿಂಗನ ; ಮುದ್ದಾಟ. **Cúddlesome, Cúddly** (ಗು.) ತಬ್ಬಿಕೊಳ್ಳಲು ತಕ್ಕ ; ತಬ್ಬಿಕೊಳ್ಳಬೇಕೆಂದೆನಿಸುವ.

Cúddy[1] ಕಡಿ (ನಾ.) ದೋಣಿಯ, ಸಣ್ಣ ಹಡಗಿನ, ಕೋಣೆ ; ಕಿರುಮನೆ ; ಮಾಡ ; ಅರೆ ; ಅಲಮಾರು.

Cúddy[2] ಕಡಿ (ನಾ.) ಕತ್ತೆ. 'ಕೋಲ್ ಫ಼ಿಷ್' ಎಂಬ ಜಾತಿಯ ಮೀನಿನ ಮರಿ. ಮಡ್ಡಿ ; ದಡ್ಡ ; ಹುಚ್ಚ. ಕಲ್ಲು, ಮೊ. ನ್ನು ಎತ್ತುವುದಕ್ಕಾಗಿ ಮುಕ್ಕಾಲಿಯಮೇಲೆ ಅಳವಡಿಸಿರುವ ಸನ್ನೆಯಂತ್ರ.

Cúdgel ಕಜ಼್‌ಜೆಲ್ (ನಾ., ಕ್ರಿ. ಸಕ.) (ಆಯುಧವಾಗಿ ಉಪಯೋಗಿಸುವ) ದಪ್ಪವಾದ ಮೋಟುದೊಣ್ಣೆ; ಲಟ್ಟಾ; ಗದೆ. [C.-play ದೊಣ್ಣೆಯಾಟ ; ದೊಣ್ಣೆಕಾಳಗ ; ದೊಣ್ಣೆವರಿಸೆ. (ರೂಪ.) Take up the cudgels for ವಾದದಲ್ಲಿ ಸಹಾಯಕ್ಕೆ ಬರು ; ಪರವಾಗಿ ಹೋರಾಡು]. (ಕ್ರಿ.) ದೊಣ್ಣೆಯಿಂದ ಬಡಿ (ಮು., ರೂಪ. C. one's brains for ತರೆ ಚಚ್ಚಿಕೊ ; ಬುದ್ಧಿಯನ್ನು ಚುರುಕುಮಾಡು)

Cúdweed ಕಡ್‌ವೀಡ್ (ನಾ.) ಮೆಲುಕುತಪ್ಪಿದ ದನಗಳಿಗೆ ಮೇವಾಗಿ ಹಾಕುವ ಒಂದು ಬಗೆಯ ಸೊಪ್ಪು.

Cue[1] ಕ್ಯೂ (ನಾ.) ನಾಟಕದ ಒಂದು ಭಾಷಣದ ಕೊನೆಯ ಮಾತುಗಳು (ಮತ್ತೊಬ್ಬ ನಟನು ರಂಗದಮೇಲೆ ಬರುವುದಕ್ಕೆ ಅಥವಾ ಮಾತನಾಡುವುದಕ್ಕೆ ಸೂಚನೆ) : ಆರಂಭ ಸಂಕೇತ. (ಸಂ.) ಹಾಡುವವನಿಗೆ ಅಥವಾ ವಾದ್ಯದವನಿಗೆ ಕೊಡುವ ಇಂಥ ಸೂಚನೆ. ಹೇಗೆ ನಡೆದುಕೊಳ್ಳಬೇಕೆಂಬುದಕ್ಕೆ ಸೂಚನೆ ; ಕರ್ತವ್ಯ ಸೂಚನೆ. ಹಿಡಿಯಬೇಕಾದ ಹಾದಿ ; ಅನುಸರಿಸಬೇಕಾದ ಮಾರ್ಗ.

Cue[2] ಕ್ಯೂ (ನಾ.) (ತಲೆಗೂದಲು) ಜಡೆ (Also, Queue). ಬಿಲಿಯರ್ಡ್ಸ್, ಮೊ. ಆಟಗಳಲ್ಲಿ ಚೆಂಡನ್ನು ಹೊಡೆಯಲು ಉದ್ದವಾಗಿಯೂ ನೇರವಾಗಿಯೂ ಚೂಪಾಗಿಯೂ ಚೂಪುಕೊನೆಗೆ ತೊಗಲು ತೊಡಿಸಿಯೂ ಇರುವ ದಾಂಡು. **Cuéist** ಕ್ಯೂಯಿಸ್ಟ್ (ನಾ.) ಬಿಲಿಯರ್ಡ್ಸ್ ಆಟಗಾರ.

Cuff[1] ಕಫ್ (ನಾ, ಕ್ರಿ. ಸಕ.) ಮೈದೊಡಿಗೆಯ ತೋಳಿನ ಕೊನೆಯ ಅಲಂಕಾರ ಪಟ್ಟಿ ; ಮಣಿಕಟ್ಟಿನಲ್ಲಿ (ಅಂಗಿಯ ತೋಳಿಗೆ ಸೇರದೆ ಪ್ರತ್ಯೇಕವಾಗಿ) ತೊಡುವ ಬಟ್ಟೆಯ ಪಟ್ಟಿ : ಮಣಿಕಟ್ಟು ಪಟ್ಟಿ. ಕೈಕೋಳ, ಕೈಬೇಡಿ, ಹಾತ್‌ಬೇಡಿ (ಹಾಕು) (= Handcuff). **-Cuffed** (ಗು.)

Cuff[2] ಕಫ್ (ಕ್ರಿ. ಸಕ., ನಾ.) ಮುಷ್ಟಿಯಿಂದ, ಹಿಡಿಗೈಯಿಂದ, ಗುದ್ದು ; ಅಂಗೈಯಿಂದ ಅಪ್ಪಳಿಸು ; ಇಂಥ ಗುದ್ದು ; ಅಪ್ಪಳಿಕೆ ; ಮುಷ್ಟಿಪ್ರಹಾರ.

Cui bóno (L) ಕೈ ಬೋನೊ (ವಾಕ್ಯ) ಯಾರ ಪ್ರಯೋಜನಕ್ಕಾಗಿ ? ಯಾರಿಗೆ ಪ್ರಯೋಜನವಾಯಿತು ? (ಎಂದರೆ, 'ಇದನ್ನು ಯಾರು ಮಾಡಿರಬಹುದು ?') ; (ಬಳಕೆಯಲ್ಲಿ) ಯಾವ ಉದ್ದೇಶಕ್ಕಾಗಿ ?

Cuiráss ಕ್ವಿರ್‍ಯಾಸ್, ಕ್ಯೂರ್‍ಯಾಸ್ (ನಾ.) (ಎದೆಗಾಪು, ಬೆನ್ನುಗಾಪು — ಇವೆರಡೂ ಒಟ್ಟಿಗೆ ಸೇರಿಸಿದ) ಮೈಗಾಪು, ಮೈಜೋಡು. ಗುತ್ತನಾಗಿರುವ, ತೋಳಿಲ್ಲದ, ಹೆಂಗಸಿನ ಕುಪ್ಪಸ. **Cuirassiér** —ಸೀಯರ್ (ನಾ.) ಮೈಗಾಪು ತೊಟ್ಟಿರುವ ಅಶ್ವಯೋಧ, ರಾವುತ.

Cuisíne ಕ್ವಿಸೀನ್ (ನಾ.) ಅಡಿಗೆಯ ಮನೆ(ಯ ಏರ್ಪಾಡು) ; ಅಡಿಗೆಯ ಅಣಿ ; ಅಡುವ ರೀತಿ, ವಿಧಾನ ; ಪಾಕ ಪರಿಕರವಣೆ.

Cuisse ಕ್ವಿಸ್, **Cuish** ಕ್ವಿಷ್ (ನಾ.) (ಚರಿತ್ರೆ) ತೊಡೆಗಾಪು ; ಊರುತ್ರಾಣ (ಸಾ., ಬ. ವ. ದಲ್ಲಿ)

Cúl-de-sac (F) ಕ್ಯೂಡ್ ಸಾಕ್, ಕ್ಯೂರ್ ಡ ಸ್ಯಾಕ್ (ನಾ.) ಕುರುಡು ಗಲ್ಲಿ. (ಅಂ. ರ. ಶಾ.) ಒಂದೇ ಕೊನೆಯಲ್ಲಿ ತೆರೆದಿರುವ ನಾಳ, ಮೊ. ವು : ಅಂಥ ನಾಳ.

Cúlinary ಕ್ಯೂಲಿನರಿ (ಗು.) ಅಡಿಗೆಯ ಮನೆಯ ; ಪಾಕಶಾಲೆಯ ; ಅಡಿಗೆಯ ; ಪಾಕದ ; ಅಡಲು ತಕ್ಕ ; ಪಾಕ ಯೋಗ್ಯ.

Cull ಕಲ್ (ಕ್ರಿ. ಸಕ., ನಾ.) (ಹೂವು, ಮೊ. ನ್ನು) ಬಿಡಿಸು, ತಿರಿ ; ಆಯಿಸು ; ಆರಿಸು. (ನಾ.) ಕೀಳ್ತರದ್ದೆಂದಾಗಲಿ, ಸಂತಾನವೃದ್ಧಿಗೆ ಬಹು ಮುದಿಯೆಂದಾಗಲಿ, ಮಂದೆಯಿಂದ ಬೇರ್ಪಡಿಸಿದ (ಸಾ., ಕೊಬ್ಬಿಸಿದ) ದನ.

Cúllender. **Colander** ನೋಡಿ.

Cúllet ಕಲೆಟ್ (ನಾ.) (ಕರಗಿಸುವುದಕ್ಕಾಗಿ) ಮೂಸೆಗೆ ಹಾಕುವ ಉಪಯೋಗಕ್ಕೆ ಬಾರದ ಗಾಜು ಸಾಮಾನು, ಗಾಜು ಚೂರುಗಳು.

Cúlly ಕಲಿ (ನಾ.) (ಅಸಂ.) ಸುಲಭವಾಗಿ ಮೋಸಹೋಗುವವನು ; ದಡ್ಡ ; ಮಡ್ಡಿ. ಗೆಳೆಯ.

Culm[1] ಕಲ್ಮ್ (ನಾ.) ಕಲ್ಲಿದ್ದಲ ದೂಳು (ಮು., 'ಆಂತ್ರಸೈಟ್' ಎಂಬ ಗಟ್ಟಿಜಾತಿಯದು)

Culm[2] ಕಲ್ಮ್ (ನಾ.) (ಸ. ವಿ.) ಸಸ್ಯದ ಗೆಣ್ಣುಕಾಂಡ, ಗೆಣ್ಣುದಂಟು (ಮು., ಗೆಣ್ಣುಗಳುಳ್ಳ ಕಬ್ಬು, ಮೊ. ದ ಹುಲ್ಲುಜಾತಿಗಳದು). **Culmíferous** (ಗು.) ಗೆಣ್ಣು ಕಾಂಡವುಳ್ಳ.

Cúlminant. **Culminate** ನೋಡಿ.

Cúlminate ಕಲ್ಮಿನೇಟ್ (ಕ್ರಿ. ಅಕ.) ತುತ್ತತುದಿಗೇರು (*in* ಉಪ. ಮೊದನೆ) ; ಅತ್ಯುನ್ನತ ಸ್ಥಿತಿಗೇರು, ಬರು ; ಶಿಖರವನ್ನಡರು. (ಖ. ವಿ.) ಮಧ್ಯಾಹ್ನರೇಖೆಯಲ್ಲಿರು. **Culminátion** (ನಾ.) ; **Cúlminant** —ನಂಟ್ (ಗು.) ತುತ್ತತುದಿಯಲ್ಲಿಯ ; ತುತ್ತತುದಿಯಾದ ; ನೆತ್ತಿಯ ಮೇಲಿನ ; ಅಗ್ರಸ್ಥ ; ಉಚ್ಚಸ್ಥ ; (ಆಕಾಶ ಕಾಯದ ವಿಷಯದಲ್ಲಿ) ಮಧ್ಯಾಹ್ನರೇಖೆಯಲ್ಲಿರುವ.

Cúlpable ಕಲ್ಪಬ್‌ಲ್ (ಗು.) ಅಪರಾಧದ ; ಅಪರಾಧಾತ್ಮಕ ; ದೂಷ್ಯ ; ನಿಂದ್ಯ ; ದಂಡ್ಯ ; ದಂಡನೀಯ ; ಆಪಾದನೀಯ ; ತಪ್ಪುಹೊರುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(C. negligence ನಿಂದಾರ್ಹವಾದ ಔದಾಸೀನ್ಯ). **Culpability** (ನಾ.) = **Cúlpableness** (ನಾ.) ; **Cúlpably** (ಕ್ರಿ. ವಿ.)

Cúlprit ಕಲ್ಪ್ರಿಟ್ (ನಾ.) ತಪ್ಪಿತಸ್ಥ ; ದೋಷಿ ; ಅಪರಾಧಿ ; ಅಪಾದಿತ ; ನ್ಯಾಯಸ್ಥಾನದಲ್ಲಿ ನಿಂತ ಕೈದಿ.

Cult ಕಲ್ಟ್ (ನಾ.) ಆರಾಧನ ಪದ್ಧತಿ, ವಿಧಿ ; ಮತಶ್ರದ್ಧೆ ; ಪಂಥ. (ವ್ಯಕ್ತಿಗಾಗಲಿ ವಸ್ತುವಿಗಾಗಲಿ ಮಾಡುವ) ಉಪಾಸನೆ, ಆರಾಧನೆ. ಭಕ್ತಿ ; ಆಸಕ್ತಿ ; ಅಭಿನಿವೇಶ.

Cúltivate ಕಲ್ಟಿವೇಟ್ (ಕ್ರಿ. ಸಕ.) ಉಳು ; ಉಳುಮೆ ಮಾಡು ; ಕೃಷಿ ಮಾಡು ; ವ್ಯವಸಾಯ ಮಾಡು ; ಸಾಗುವಳಿ ಮಾಡು ; ಆರಂಬ ಮಾಡು ; ಗೆಯ್ಮೆ. (ರೂಪ.) (ವ್ಯಕ್ತಿ, ಮನಸ್ಸು, ಮರ್ಯಾದೆ, ಮೊ. ನ್ನು) ಅಭಿವೃದ್ಧಿಪಡಿಸು, ಬೆಳಸು, ವಿಕಾಸಗೊಳಿಸು ; ಸಂಸ್ಕರಿಸು (ಮು., ಭೂ. ಕೃ. ನಲ್ಲಿ). (ಸಾಮರ್ಥ್ಯ, ಕಲೆ, ವ್ಯಕ್ತಿ, ವ್ಯಕ್ತಿಪರಿಚಯ — ಇವನ್ನು) ಅಭ್ಯಾಸಮಾಡು, ಬೆಳಸು. **Cultivátion** (ನಾ.) ಉಳುಮೆ ; ಸಾಗುವಳಿ ; ವ್ಯವಸಾಯ (ಸ್ಥಿತಿ) ; ಬೇಸಾಯ ; ಆರಂಬ (ರೂಪ. ನಹ). **Cúltivator** (ನಾ.) ಬೇಸಾಯಗಾರ ; ಕೃಷಿಗಾರ ; ಒಕ್ಕಲಿಗ ; ರೈತ. ಕುಂಟೆ ; ಹರತೆ ಯಂತ್ರ. **Cúltivable** — ವಬ್ಲ್ (ಗು.)

Cúltrate ಕಲ್ಟ್ರೇಟ್ (ಗು.) ಕತ್ತಿಯ (ಏಣಿನಂತಿರುವ) ಏಣುಳ್ಳ ; ಕೂರ್ ಅಲಗಿನ. **Cúltriform** (ಗು.)

Cúlture ಕಲ್ಚ್ಯರ್, ಕಲ್ಚರ್ (ನಾ., ಕ್ರಿ. ಸಕ.) ಉಳುಮೆ ; ಗೆಯ್ಮೆ ; ಕೃಷಿ ; ಸಾಗುವಳಿ ; ವ್ಯವಸಾಯ. (ಜೇನ ಹುಳು, ಮೀನು, ರೇಷ್ಮೆ ಹುಳು, ಚಿಪ್ಪುಮೀನು, ಜೀವಾಣು, ಮೊ. ಗಳ) ಸಾಕಣೆ, ಅಭಿವರ್ಧನೆ, ಕೃಷಿ. ಸಾಕಿ ವೃದ್ಧಿಗೊಳಿಸಿದ ಜೀವಾಣುರಾಶಿ. (ಕಾಯಿಕ, ಮಾನಸಿಕ, ಶಿಕ್ಷಣದಿಂದ ಪಡೆದ) ಅಭಿವೃದ್ಧಿ ; ಬುದ್ಧಿವಿಕಾಸ ; ಸಂಸ್ಕಾರ ; ಸಂಸ್ಕೃತಿ. (ಕ್ರಿ.) ವ್ಯವಸಾಯ ಮಾಡು ; ಸಂಸ್ಕಾರ ಕೊಡು (ಮು., ಭೂ. ಕೃ. ನಲ್ಲಿ). **Cúltural** (ಗು.) ವ್ಯಾವಸಾಯಿಕ ; ಸಂಸ್ಕೃತಿಯ. **Cúltured** (ಗು.) ಸಂಸ್ಕಾರ ಪಡೆದ ; ಸಂಸ್ಕೃತ. **Cúlturist** (ನಾ.) ವ್ಯವಸಾಯಿ ; ಕೃಷಿಗಾರ ; ಸಂವರ್ಧಕ ; ಸಂಸ್ಕೃತಿ ವಾದಿ:

Cúlver ಕಲ್ವರ್ (ನಾ.) ಪಾರಿವಾಳ ; ಕಪೋತ. (ಪ್ರಾಂತಿಕ) ಕಾಡು ಪಾರಿವಾಳ.

Cúlverin ಕಲ್ವೆರಿನ್ (ನಾ.) (ಚರಿತ್ರೆ) (ಆದಿಯಲ್ಲಿ) ಸಣ್ಣ ಬಂದೂಕು ; (ಈಚೆಗೆ) ಅತಿ ಉದ್ದವಾದ ದೊಡ್ಡ ಫಿರಂಗಿ.

Cúlvert ಕಲ್ವರ್ಟ್ (ನಾ.) ರಸ್ತೆಯ ಕೆಳಗೆ, ರಸ್ತೆಗಡ್ಡವಾಗಿ, ನೀರನ್ನು ಸಾಗಿಸುವ ಕಾಲುವೆ, ನೀರ್ಗೊಳವೆ ; ಅಡಿಗಾಲುವೆ. ವಿದ್ಯುತ್ ತಂತಿಸಮುದಾಯದ ಹೊರಜಿಗಾಗಿ ನೆಲದಲ್ಲಿ ಮಾಡಿರುವ ಕಾಲುವೆ : ಹೊರಜಿ ಕಾಲುವೆ.

Cum (L) ಕಮ್ (ಉಪ.) ಒಡನೆ ; ಕೂಡ ; ಸಮೇತ ; ಸಹ. C. grano (salis) (ವಾಚ್ಯಾರ್ಥ) ಉಪ್ಪುಕಣವನ್ನು ಬೆರಸಿ ; (ರೂಪ.) ಜಾಗರೂಕತೆಯಿಂದ ; ಪೂರ್ತಿಯಾಗಿ ನಂಬದೆ. Cum dividend (ಸಂಕ್ಷಿಪ್ತ : Cum div.) ಸದ್ಯದಲ್ಲಿಯೇ ಸಲ್ಲಿಸಬೇಕಾದ ಭಾಜ್ಯ ಲಾಭಾಂಶವೂ ಸೇರಿ. (ಜೊತೆಗೂಡಿಸಿದ ಎರಡು ಮೂರು ಊರುಗಳ ವಿಷಯದಲ್ಲಿ) Madura-cum-Ramnad constituency ಮಧುರೆ ಮತ್ತು ರಾಮನಾಡು ಕೂಡಿ ಆದ ಚುನಾವಣಾ ಕ್ಷೇತ್ರ.

Cúmber ಕಂಬರ್ (ಕ್ರಿ. ಸಕ., ನಾ.) ಅಡ್ಡಿಮಾಡು ; ತಡೆಯೊಡ್ಡು ; ಅಡಚಣೆ ಮಾಡು ; ಪ್ರತಿಬಂಧಿಸು ; ಭಾರ ಹೊರಿಸು ; ಹೊರೆಯೇರಿಸು. (ನಾ.) ಅಡ್ಡಿ ; ಅಡಚಣೆ ; ಪ್ರತಿಬಂಧಕ ; ತಡೆ ; ಹೊರೆ. **Cúmbersome** (ಗು.) ಹೊರೆಯಾದ ; ಅಡಕವಾಗಿಲ್ಲದ ; ಪ್ರತಿರೋಧಕ ; ತೊಡಕಿನ ; ತೊಂದರೆಯ. **Cúmbersomely** (ಕ್ರಿ. ವಿ.) ; **Cúmbersomeness** (ನಾ.) ; **Cúmbrous** (ಗು.) ; **Cúmbrously** (ಕ್ರಿ. ವಿ.) ; **Cúmbrousness** (ನಾ.)

Çúm(m)in ಕಮಿನ್ (ನಾ.) ಜೀರಿಗೆ (ಗಿಡ)

Cúmmerbund ಕಮರ್‌ಬಂಡ್ (ನಾ.) (ಆಂ. ಇಂ.) ನಡು ಪಟ್ಟಿ ; ನಡು ಕಟ್ಟು ; ಕಮ್ಮರಬಂದು.

Cúmulate ಕ್ಯೂಮ್ಯುಲೇಟ್ (ಗು.), — ಲೇಟ್ (ಕ್ರಿ.) ರಾಶಿ, ಗುಡ್ಡೆ, ಹಾಕಿದ ; ಒಟ್ಟುಗೂಡಿಸಿದ. (ಕ್ರಿ.) ಕೂಡಹಾಕು ; ಒಟ್ಟುಗೂಡಿಸು ; ಶೇಖರಿಸು ; ರಾಶಿ, ಗುಡ್ಡೆ, ಹಾಕು ; ರಾಶಿಗೂಡು. **Cumulátion** (ನಾ.) — ವುದು. ಗುಡ್ಡೆ ; ರಾಶಿ ; ಒಟ್ಟಿಲು (ಮು. ರೂಪಕ). **Cúmulative** — ಲೆಟಿವ್ (ಗು.) ಒಟ್ಟುಗೂಡುವ ; ಒಟ್ಟುಗೂಡಿದ ; ಮೊತ್ತದ ; ಕೂಡುತ್ತಹೋಗುವ ; ಸಂಚಿತ ; ಬಲಗೂಡುತ್ತಹೋಗುವ. C. evidence ಒಂದುಗೂಡುವ ಸಾಕ್ಷ್ಯ. C. preference shares (ಒಂದು ವ್ಯಾಪಾರಸಂಘದ ಬಂಡವಾಳದ ಸಾಮಾನ್ಯ ಪಾಲುಗಳಮೇಲೆ ಚಾಲ್ತಿವರ್ಷದ ಬಡ್ಡಿ ಸಂದಾಯವಾಗುವುದಕ್ಕೆ ಮೊದಲು ಅಗ್ರೆ ಬಾಕಿಯಿರುವ ಬಡ್ಡಿಯನ್ನೆಲ್ಲ ಪಡೆಯುವ ಹಕ್ಕುಳ್ಳ) ಕೂಡುಬಡ್ಡಿಯ ಅಗ್ರಪಾಲುಗಳು. C. voting ಎಷ್ಟುಮಂದಿ ಪ್ರತಿನಿಧಿಗಳಿರಬೇಕೊ ಅಷ್ಟು ಅಭಿಮತಗಳು ಪ್ರತಿ ಚುನಾವಣೆದಾರನಿಗೂ ಇದ್ದು, ಅವೆಲ್ಲವನ್ನೂ ಒಬ್ಬನಿಗಾಗಲಿ ಕೆಲವರಿಗಾಗಲಿ ಕೊಡಬಹುದಾದ ಪದ್ಧತಿ : ಒಟ್ಟುಗೂಡುವ ಅಭಿಮತ. **Cúmulatively** (ಕ್ರಿ. ವಿ.) ; **Cúmulativeness** (ನಾ.)

Cúmulus (L) ಕ್ಯೂಮ್ಯುಲಸ್ (ನಾ. ; ಬ. ವ. -li, -ಲೈ) ಗುಡ್ಡೆ ; ರಾಶಿ ; ಒಡ್ಡು ; ಒಟ್ಟಿಲು ; ಒಂದು ಗುಡ್ಡೆಯ ಶಂಕುವಿನಾಕಾರದ ನೆತ್ತಿ. (ಪ. ಶಾ.) ಮಟ್ಟತಲದಮೇಲೆ ಒಂದರ ಮೇಲೊಂದು ರಾಶಿಗೂಡಿ ಕುಳಿತಿರುವ ದುಂಡುದುಂಡಾದ ಮೇಘಗಳ ಒಡ್ಡು : ಒಡ್ಡು ಮೋಡ. **Cúmulo** - (ಸಮಾಸದ ಪೂರ್ವಪದ) ; **Cúmulous** (ಗು.)

Cúneate ಕ್ಯೂನಿಯೆಟ್ (ಗು.) ಬೆಣೆಯಾಕಾರದ. **Cúneiform** ಕ್ಯೂನಿಇಫಾರ್ಮ್, **Cunéiform** ಕ್ಯುನೀಇ —, **Cúniform** ಕ್ಯೂನಿಫಾರ್ಮ್ (ಗು., ನಾ.) ಬೆಣೆಯಾಕಾರದ. ಪರ್ಷಿಯಾ, ಅಸಿರಿಯಾ, ಮೊ. ದೇಶಗಳ ಪ್ರಾಚೀನ ಶಾಸನ ಲಿಪಿ : ಬೆಣೆ ಲಿಪಿ.

Cúnning ಕನಿಂಗ್ (ನಾ., ಗು.) ತಂತ್ರ ; ಕಪಟ ; ಮಾಯ ; ಠಕ್ಕು. ಕೌಶಲ ; ಚಮತ್ಕಾರ ; ಯುಕ್ತಿ ; ಜಾಣ್ಮೆ ; ಉಪಾಯ ; ಚಾತುರ್ಯ ; ನೈಪುಣ್ಯ ; ಬಲ್ಮೆ ; ಸಾಮರ್ಥ್ಯ. ಬೆರಗು (ಗ್ರಾಂ.). ತಂತು ; ಕಳಿಂಗತನ. (ಗು.) ತಂತ್ರಿ ; ಕಪಟಿ ; ಮಾಯಾವಿ ; ಕಳಿಂಗ ; ಕುಯುಕ್ತಿಯುಳ್ಳ. ಜಾಣ ; ಕುಶಲ ; ಚತುರ ; ಚಮತ್ಕಾರಿ ; ನಿಪುಣ ; ಮರ್ಮಿ. **Cúnningly** (ಕ್ರಿ. ವಿ.)

Cup ಕಪ್ (ನಾ.) (ಕುಡಿಯುವ) ಬಟ್ಟಲು [Coffee-c. ; Challenge c. ಆಟಪಾಟಗಳ ಸ್ಪರ್ಧೆಯಲ್ಲಿ ಗೆದ್ದವರ ವಶಕ್ಕೆ ಕೊಡುವ, (ಸಾ., ಚಿನ್ನದ ಅಥವಾ ಬೆಳ್ಳಿಯ) ಬಹುಮಾನದ ಬಟ್ಟಲು ; ಆ ಬಹುಮಾನವು, ಸಾ., ಮುಂದೆ ಅದೇ ಆಟಪಾಟಗಳಲ್ಲಿ ಜಯಶೀಲರಾದವರ ವಶಕ್ಕೆ ಕೊಡಲಾಗುವುದು : ಮೇಲಾಟದ ಬಟ್ಟಲು]. ಬಟ್ಟಲಾಕಾರದ ದುಂಡನೆಯ ಕುಳಿ, ಪುಟ (ಮು., ಪುಷ್ಪಪುಟ, ಎಲುಬು, ಮೊ. ಗಳಲ್ಲಿಯ ಕುಳಿ) ; ಆಶ್ರಯ ಪುಟ. ಬಟ್ಟಲುತುಂಬು (Half a c. ಅರ್ಧ ಬಟ್ಟಲು). ಕ್ರೈಸ್ತ ಪ್ರಭುಭೋಜನ ಸಂಸ್ಕಾರದಲ್ಲಿ ಉಪಯೋಗಿಸುವ ಬಟ್ಟಲು, ಸೇವಿಸುವ ಮದ್ಯ. ವಿಧಿ ; ಅದೃಷ್ಟ ; ಪ್ರಾಪ್ತಿ ; ದಶೆ ; ಪಾಲಿಗೆ ಬಂದದ್ದು ; ಪಡೆದುಬಂದದ್ದು ; ಪಡಪು ; ಅನುಭವಿಸಬೇಕಾದದ್ದು ; ಅನುಭವ. (His c. of happiness was full ಅವನ ಸುಖ ಪೂರ್ಣವಾಯಿತು. The cups that cheer but not inebriate ಮತ್ತೇರಿಸದೆ ಗೆಲವುಂಟುಮಾಡುವ ಪಾನ : ಟೀ ; ಚಾ. In one's cups ಕುಡಿದು ಮತ್ತೇರಿದಾಗ). ರುಚಿಗಾಗಿ ವಿಧವಿಧ ಪದಾರ್ಥಗಳನ್ನು ಬೆರಸಿ ಮಾಡಿದ ದ್ರಾಕ್ಷಾ ಮದ್ಯ, ಸೇಬಿನ ಮದ್ಯ, ಮೊ. Claret-c. ಕ್ಲ್ಯಾರೆಟ್ ಮದ್ಯ. A c. too low ಉತ್ಸಾಹ ಶೂನ್ಯ ; ನಿರುತ್ಸಾಹಿ. There is many a slip between the c. and the lip ಕೈಗೆ ಬಂದ ತುತ್ತು ಬಾಯಿಗಿಲ್ಲ. C.-bearer (ಮು., ಶ್ರೀಮಂತರ ಮತ್ತು ದೊರೆಗಳ ಮನೆಗಳಲ್ಲಿ) ಮದ್ಯ ಹಂಚುವವನು. C.-moss ಬಟ್ಟಲನಾಕಾರದ ಛಾಚುಗಳುಳ್ಳ ಒಂದು ಜಾತಿಯ ಕಲ್ಲುಹೂವು. **Cúpful** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cup (ಕ್ರಿ. ಸಕ.) ರಕ್ತಚೋಷಕದಿಂದ (ಮನುಷ್ಯನ) ರಕ್ತವನ್ನು ತೆಗೆ. (ಗಾಲ್ಫ್ ಆಟ) ಚೆಂಡನ್ನು ಹೊಡೆಯುವಾಗ ದಾಂಡಿನಿಂದ ನೆಲವನ್ನು ಹೊಡೆ. Cupping-glass ರಕ್ತತೆಗೆಯುವ ಬಟ್ಟಲು : ರಕ್ತ ಚೋಷಕ.

Cúpboard ಕಬರ್ಡ್ (ನಾ.) (ಗಾಜಿನ ಸಾಮಾನು, ಊಟದ ಸಾಮಾನು, ಮೊ. ಗಳನ್ನಿಡುವ) ಮಾಡ, ಬಾಗಿಲ ಗೂಡು, ಅಲಮಾರು. Skeleton in the c. (Skeleton ನೋಡಿ). C. love ಸ್ವಾರ್ಥಕ್ಕಾಗಿ ತೋರಿಸುವ ಹುಸಿ ಪ್ರೇಮ.

Cúpel ಕ್ಯೂಪೆಲ್ (ನಾ., ಕ್ರಿ. ಸಕ.) ಮಾದರಿಯಲ್ಲಿರುವ ಚಿನ್ನ ಅಥವಾ ಬೆಳ್ಳಿಯ ಪರಿಮಾಣವನ್ನು ಕಂಡುಹಿಡಿಯುವುದಕ್ಕಾಗಿ ಉಪಯೋಗಿಸುವ ಸಣ್ಣ ಚಪ್ಪಟೆಯ ದುಂಡುಬಟ್ಟಲು ; ಪರೀಕ್ಷೆಯ ಮೂಸೆ. (ಕ್ರಿ.) ಅಂಥ ಮೂಸೆಯಿಂದ (ಚಿನ್ನ ಅಥವಾ ಬೆಳ್ಳಿಯ) ಪರಿಮಾಣ ಕಂಡುಹಿಡಿ. ಲೋಹಪರೀಕ್ಷೆ ಮಾಡು. ಪುಟಕ್ಕೆ ಹಾಕು. **Cupellátion** (ನಾ.)

Cúpid ಕ್ಯೂಪಿಡ್ (ನಾ.) (ರೋಮನರ) ಪ್ರಣಯ ದೇವತೆ ; ಕಾಮದೇವ ; ಮನ್ಮಥ. ಬಹಳ ಚೆಲುವಾದ ಹುಡುಗ. C.'s bow ಕಾಮದೇವನ ಬಿಲ್ಲಿನಂತೆ ಬಾಗಿರುವ ತುಟಿ. **Cupídity** ಕ್ಯುಪಿಡಿಟಿ (ನಾ.) ಲೋಭ ; ಅತ್ಯಾಶೆ ; ದುರಾಶೆ.

Cúpola ಕ್ಯೂಪೊಲ (ನಾ.) (ವಾ. ಶಾ.) ಕಟ್ಟಡದ ಅರ್ಧಗೋಲಾಕೃತಿಯ ಮೇಲ್ಛಾವಣಿ ; ಗುಮ್ಮಟ ; ಗುಮ್ಮಟದ ಒಳಮಾಳಿಗೆ. ಲೋಹಕರಗಿಸುವ ಕುಲುಮೆ (= C.-furnace). ಲೋಹ ಕವಚವುಳ್ಳ ಯುದ್ಧದ ಹಡಗಿನಲ್ಲಿಟ್ಟಿರುವ ಫಿರಂಗಿಗಳ ರಕ್ಷಣೆಗಾಗಿ ಹಾಕಿರುವ ತಿರುಗು ಗುಮ್ಮಟ. (ಅಂ. ರ. ಶಾ., ಪ್ರಾ. ವಿ.) ಗುಮ್ಮಟದ ಆಕಾರದ ಅಂಗ ಅಥವಾ ಚಾಚು.

Cúpric ಕ್ಯೂಪ್ರಿಕ್ (ಗು.) ತಾಮ್ರವನ್ನೊಳಕೊಂಡ ; ತಾಮ್ರವುಳ್ಳ. ಸಂಯುಕ್ತದಲ್ಲಿ ತಾಮ್ರವು ದ್ವಿಪ್ರಮಾಣದಲ್ಲಿರುವ. **Cupríferous** (ಗು.) ತಾಮ್ರ ದೊರೆಯುವ. **Cúprous** (ಗು.) ಸಂಯುಕ್ತದಲ್ಲಿ ತಾಮ್ರವು ಏಕಪ್ರಮಾಣದಲ್ಲಿರುವ. **Cúpreous** ಕ್ಯೂಪ್ರಿಅಸ್ (ಗು.) ತಾಮ್ರದ ; ತಾಮ್ರದಂತಿರುವ.

Cúpule ಕ್ಯೂಪ್ಯೂಲ್ (ನಾ.) (ಸ. ವಿ., ಪ್ರಾ. ವಿ.) ಬಟ್ಟಲನಾಕಾರದ ಅಂಗ ; ಪುಟ.

Cur ಕರ್ (ನಾ.) ಕೀಳುಜಾತಿಯ ನಾಯಿ ; ಬೀದಿ ನಾಯಿ. ಸಿಡುಕಿನ, ಕೀಳು ಸಾಕಲನ, ಹೇಡಿ, ಮನುಷ್ಯ. ತುಚ್ಛ ; ಕೀಳ ; ಹೀನ ; ಹೇಡಿ ; ಕುನ್ನಿ. **Cúrrish** ಕರಿಷ್ (ಗು.) ಬೀದಿ ನಾಯಿಯಂಥ ; ಮೇರೆಬೀಳುವ ಸ್ವಭಾವದ ; ಸಿಡುಕಿನ ; ನೀಚ ; ಕೀಳು. **Cúrrishly** (ಕ್ರಿ. ವಿ.) ; **Cúrrishness** (ನಾ.)

Cúracy. **Curate** ನೋಡಿ.

Cúrate ಕ್ಯೂರೆಟ್ (ನಾ.) (ಒಂದು ಪ್ರಾಂತದ) ಪಾದ್ರಿಯ ಸಹಾಯಕ. C.-in-charge ಪಾದ್ರಿಗೆ ತನ್ನ ಕೆಲಸವನ್ನು ಮಾಡಲು ಶಕ್ತಿ ಅಥವಾ ಅಪ್ಪಣೆ ಇಲ್ಲದಾಗ ಅವನ ಬದಲಾಗಿ ನಿಯಮಿತನಾಗುವ ಕ್ರೈಸ್ತ ವೈದಿಕ : ಬದಲ ಪಾದ್ರಿ. (ಹಾಸ್ಯವಾಗಿ) ಕೆಂಡವನ್ನು ಕೆದಕಿ ಉರಿಸಲು ಉಪಯೋಗಿಸುವ ಚುಚ್ಚುಕಂಬಿ. **Cúracy** ಕ್ಯೂರಸಿ (ನಾ.) ಸಹಾಯಕ ಪಾದ್ರಿಯ ಅಧಿಕಾರ, ದತ್ತಿ, ಮಾನ್ಯ.

Cúrative. **Cure**[1] ನೋಡಿ.

Curátor (೧) ಕ್ಯುರೇಟರ್, **Cúrator** (೨) ಕ್ಯೂರಟರ್ (ನಾ.) (೧) ವಿಚಾರಣಕರ್ತ ; ಮೇಲ್ವಿಚಾರಕ ; ಪಾರುಪತ್ಯಗಾರ ; ಆಡಳಿತಗಾರ. (ವಿಶ್ವವಿದ್ಯಾನಿಲಯದಲ್ಲಿ) ಆಡಳಿತಸಂಸ್ಥೆಯ ಸದಸ್ಯ. (ವಸ್ತುಪ್ರದರ್ಶನ ಶಾಲೆಯ, ಪುಸ್ತಕ ಭಂಡಾರದ) ಕಾರ್ಯಭಾರಿ, ನಿರ್ವಾಹಕ. (೨) (ಅಪ್ರಾಪ್ತ ವಯಸ್ಕ, ಬುದ್ಧಿ ಸರಿಯಿಲ್ಲದವನು, ಮೊ. ರ) ಪಾಲಕ. **Curátorship** (ನಾ.) ; **Curatórial** ಕ್ಯೂರಟೋರಿಯಲ್ (ಗು.)

Curb ಕರ್ಬ್ (ನಾ., ಕ್ರಿ. ಸಕ.) ಕುದುರೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಕಡಿವಾಣಕ್ಕೆ ಸೇರಿಸಿರುವ ಸರಪಣಿ ಅಥವಾ ಬಾರು : (ಕಡಿವಾಣದ) ದವಡೆಪಟ್ಟಿ. (ರೂಪ.) ತಡೆ ; ನಿರ್ಬಂಧ ; ನಿಗ್ರಹ. ಕುದುರೆಯ ಕಾಲಮೇಲಿನ ಗಟ್ಟಿ ಗಂತಿ. ಬಾವಿಯ ಕಟ್ಟೆ, ಚೌಕಟ್ಟು. ರಸ್ತೆಯ ಎರಡು ಏಣಿನಲ್ಲೂ ಹಾಕುವ ತಡೆಗಲ್ಲು (= Kerb). (C. roof ಪ್ರತಿ ಮುಖದಲ್ಲಿಯೂ ಎರಡು ಇಳಿಜಾರುಗಳಿದ್ದು, ಕೆಳಭಾಗದ್ದು ಹೆಚ್ಚು ಕಡಿದಾಗಿರುವ ಛಾವಣಿ : ಇಜ್ಜಾರು ಛಾವಣಿ). (ಕ್ರಿ.) (ಕುದುರೆಗೆ) ದವಡೆಪಟ್ಟಿ ಹಾಕು. (ರೂಪ.) ತಡೆ ಹಾಕು ; ಅದುಮು ; ಅಡಗಿಸು ; ನಿಗ್ರಹಿಸು. **Cúrby** (ಗು.) (ಕುದುರೆಯ) ಕಾಲಮೇಲೆ ಗಂತಿಕಟ್ಟಿದ, ಗಂತಿಕಟ್ಟುವ.

Cúrcuma ಕರ್ಕ್ಯುಮ (ನಾ.) ಅರಿಸಿನ (C. paper ಕ್ಷಾರಪದಾರ್ಥದ ರಾಸಾಯನಿಕ ಪರೀಕ್ಷೆಗಾಗಿ ಉಪಯೋಗಿಸುವ ಅರಿಸಿನದ ಕಾಗದ) ; ಅರಿಸಿನದ ಗಿಡ.

Curd ಕರ್ಡ್ (ನಾ.) ಮೊಸರು (ಸಾ., ಬ. ವ. ದಲ್ಲಿ ಪ್ರಯೋಗ) ; ಗರಣೆ. C. soap ಕೊಬ್ಬು ಮತ್ತು ಸೋಡ ಸೇರಿಸಿ ಮಾಡಿದ ಬಿಳಿಯ ಸಾಬೂನು. **Cúrdy** (ಗು.) ; **Cúrdle** ಕರ್ಡ್‌ಲ್ (ಕ್ರಿ.) ಹೆಪ್ಪುಗಟ್ಟು ; — ಗಟ್ಟಿಸು ; ಗರಣೆಯಾಗು ; — ಮಾಡು C. the blood with horror ಘೋರದಿಂದ ರಕ್ತ ಗೆಡ್ಡೆಕಟ್ಟು (ರೂಪ.)

Cure[1] ಕ್ಯೂರ್ (ನಾ., ಕ್ರಿ.) ಚಿಕಿತ್ಸೆ ; ಔಷಧ ; ಮದ್ದು. ಹರುವು (ಗ್ರಾಂ.) ; (ರೋಗ) ಪರಿಹಾರಕ ; (ರೋಗ) ವಾಸಿಯಾಗುವುದು (Milk-c. ಹಾಲುಚಿಕಿತ್ಸೆ : ಹಾಲುಸೇವನೆಯಿಂದ ರೋಗ ವಾಸಿಮಾಡುವುದು). ಜೀವನದ ಆಧ್ಯಾತ್ಮಿಕ ರಕ್ಷಣೆ (C. of Souls ಆತ್ಮಗಳ ರಕ್ಷಣೆ). (ರಬ್ಬರನ್ನು) ಮೆತುವಾಗುವಂತೆ ಅಥವಾ ಗಟ್ಟಿಯಾಗುವಂತೆ ಸಂಸ್ಕರಿಸು(ವುದು). (ಕ್ರಿ.) ಚಿಕಿತ್ಸೆ ಮಾಡು ; (ರೋಗ) ವಾಸಿ ಮಾಡು ; — ವಾಸಿಯಾಗು (ರೂಪ. ಸಹ) ; ಗುಣಪಡಿಸು ; ಗುಣವಾಗು ; ಹರಿಸು ; ಪರಿಹರಿಸು. (ಮಾಂಸ, ಹಣ್ಣು, ತಂಬಾಕು — ಇವನ್ನು ಉಪ್ಪಿಡುವುದು, ಒಣಗಿಸುವುದು, ಮೊ. ಕ್ರಿಯೆಗಳಿಂದ) ಕೆಡದಂತೆ ಇಡು, ಇರು. (ರಬ್ಬರು) ಮೆತುವಾಗುವಂತೆ ಅಥವಾ ಗಟ್ಟಿಯಾಗುವಂತೆ ಸಂಸ್ಕಾರ ಹೊಂದು. **Cúreless** (ಗು.) ; **Curabílity** (ನಾ.) ; **Cúrable** (ಗು.) ; **Cúrative** ಕ್ಯೂರಟಿವ್ (ಗು., ನಾ.) (ಮು., ರೋಗವನ್ನು) ವಾಸಿಮಾಡುವ (ಪದಾರ್ಥ) ; ಪರಿಹಾರಕ.

Cure[2] ಕ್ಯೂರ್ (ನಾ.) (ಅಸಂ.) ವಿಚಿತ್ರ ಮನುಷ್ಯ.

Cure[3] (F) ಕ್ಯುರೇ (ನಾ.) ಫ್ರಾನ್ಸ್, ಮೊ. ದೇಶಗಳಲ್ಲಿ ಪ್ರಾಂತದ ಪಾದ್ರಿ.

Curétte ಕ್ಯೂರೆಟ್ (ನಾ., ಕ್ರಿ.) ಶಸ್ತ್ರಚಿಕಿತ್ಸಕನ ಸಣ್ಣ ಹೆರೆಗತ್ತಿ. (ಕ್ರಿ.) ಹೆರೆಗತ್ತಿಯಿಂದ ಹೆರೆ.

Cúrfew ಕರ್‌ಫ್ಯೂ (ನಾ.) ಹೊತ್ತು ಮುಳುಗಿದಮೇಲೆ ಒಂದು ಗೊತ್ತಾದ ಕಾಲಕ್ಕೆ ಎಲ್ಲೆಲ್ಲಿಯೂ ಬೆಂಕಿಯನ್ನು ನಂದಿಸಬೇಕೆಂದು ಕಟ್ಟಳೆ ವಿಧಿಸುತ್ತಿದ್ದ ಪೂರ್ವಕಾಲದ ಕಾನೂನು ; ಹೀಗೆ ಬೆಂಕಿ ನಂದಿಸಬೇಕಾದ ಹೊತ್ತು ; ಹೀಗೆ ನಂದಿಸುವುದಕ್ಕೆ ಸೂಚನೆ ಕೊಡಲು ಬಾರಿಸುತ್ತಿದ್ದ ಗಂಟೆ (= C.-bell). ಈಗಲೂ ಕೆಲವು (ಪಾಶ್ಚಾತ್ಯ) ಪಟ್ಟಣಗಳಲ್ಲಿ ಹೊತ್ತುಮುಳುಗಿದಮೇಲೆ ಒಂದು ನಿರ್ದಿಷ್ಟ ಕಾಲಕ್ಕೆ ರೂಢಿಯಾಗಿ ಹೊಡೆಯುವ ಗಂಟೆ. (ಯುದ್ಧಕಾಲದ ಕಾನೂನು, ಮೊ. ಗಳಿಗನುಸಾರವಾಗಿ) ಒಂದು ಗೊತ್ತಾದ ಹೊತ್ತಿನಮೇಲೆ ಜನರು ಹೊರಗೆ ಸಂಚಾರ ಮಾಡಕೂಡದೆಂದು ವಿಧಿಸುವ ಕಾಲ, ಅಥವಾ ಸೂಚಿಸುವ ಸಂಕೇತ. Curfew order ಅಂಥ ವಿಧಿ.

Cúria (L) ಕ್ಯೂರಿಯ (ನಾ.) ಪ್ರಾಚೀನ ರೋಮನರ ಮೂರು ಕುಲಗಳಲ್ಲೊಂದರ ಹತ್ತು ಪಂಗಡಗಳಲ್ಲಿ ಒಂದು ; ಆ ಪಂಗಡದ ಪೂಜಾಸ್ಥಳ. ರೋಮನರ ಮಂತ್ರಸಭಾ ಮಂದಿರ ; ಪುರಾತನ ಇಟಲಿಯ ಪಟ್ಟಣಗಳ ಮಂತ್ರಸಭೆ. ನ್ಯಾಯಸ್ಥಾನ (ಮು., ಸ್ವಾಮಿ ಭೃತ್ಯ ಸಂಬಂಧದ ಜಮೀನುಹಿಡುವಳಿಗೆ ಸಂಬಂಧಪಟ್ಟದ್ದು). (ಕ್ರೈಸ್ತ) ಪೋಪ್ ಗುರುವಿನ ನ್ಯಾಯಸ್ಥಾನ. **Cúrial** (ಗು.) ; **Cúrialism** (ನಾ.) ಈ ಪದ್ಧತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cúrio ಕ್ಯೂರಿಯೊ (ನಾ. ; ಬ. ವ. -os) ವಿಚಿತ್ರವಾದ, ಅಪೂರ್ವ, ಕರಾವಸ್ತು ; ವಿಚಿತ್ರ ವಸ್ತು.

Curiósity ಕ್ಯೂರಿಯಾಸಿಟಿ (ನಾ.) ತಿಳಿದುಕೊಳ್ಳಬೇಕೆಂಬ ಆಸೆ ; ಕುತೂಹಲ ; ಕೌತುಕ ; ವಿಚಿತ್ರತೆ ; ಅಪೂರ್ವತೆ ; ಅಚ್ಚರಿ. A c. ವಿಚಿತ್ರ, ಅಪೂರ್ವ, ವಸ್ತು ; ಕೌತುಕವಸ್ತು. **Cúrious** (ಗು.) ತಿಳಿದುಕೊಳ್ಳಬೇಕೆಂಬ ಆಸೆಯುಳ್ಳ ; ಕುತೂಹಲವುಳ್ಳ ; — ಹುಟ್ಟಿಸುವ ; ಸೂಕ್ಷ್ಮದೃಷ್ಟಿಯಿಂದ ಪರೀಕ್ಷಿಸುವ (C. inquiry ಸೂಕ್ಷ್ಮ ವಿಚಾರಣೆ). ವಿಚಿತ್ರ ; ಆಶ್ಚರ್ಯಕರ ; ಅಪೂರ್ವ ; ವಿಲಕ್ಷಣ. **Cúriously** (ಕ್ರಿ. ವಿ.) ; **Cúriousness** (ನಾ.)

Curl ಕರ್ಲ್ (ನಾ., ಕ್ರಿ.) ಗುಂಗುರು ಕೂದಲು ; ಕೊಂಕು ಕುರುಳು ; ಕೂದಲಿನ ಗುಂಗುರು. (C.-paper ತಲೆಗೂದಲನ್ನು ಗುಂಗುರು ಗುಂಗುರಾಗಿ ತಿರಿಚಲು ಉಪಯೋಗಿಸುವ ಕಾಗದ : ಕುರುಳು ಕಾಗದ). ಸುರುಳಿಯಾಕಾರವಾಗಿ ತಿರಿಚಿಕೊಂಡಿರುವ ಯಾವುದಾದರೂ ವಸ್ತು : ಸುರುಳಿ ; ತಿರುವು ; [C. of the lip (ತಿರಸ್ಕಾರ ಸೂಚಕವಾದ) ತುಟಿಯ ತಿರುವು]. ಗುಂಗುರು ಗುಂಗುರಾಗಿರುವುದು. (Keep the hair in c. ತಲೆಗೂದಲನ್ನು ಗುಂಗುರು ಗುಂಗುರಾಗಿಟ್ಟಿರು). (ಆಲೂಗೆಡ್ಡೆ, ಮೊ. ಬೆಳೆಗಳಲ್ಲಿ) ಕುಡಿಗಳು ಅಥವಾ ಎಲೆಗಳು ಸುರುಟಿಕೊಳ್ಳುವ ರೋಗ : ಸುರುಟುರೋಗ. (ಕ್ರಿ.) ನಿಡುಸುರುಳಿಯಾಗಿ ತಿರಿಚು, ತಿರಿಚಿಕೊ ; ಸುತ್ತು ; ಸುತ್ತಿಕೊ ; ಗುಂಗುರು ಗುಂಗುರು ಮಾಡು ; — ಆಗು (C. up ನಿಡುಸುರುಳಿಯಾಗಿ ಸುತ್ತು, ಸುತ್ತಿಕೊ). (ಅಸಂ.) ಮುದುರಿಕೊ. (ಹೊಗೆ, ಮೊ. ವು) ನಿಡುಸುರುಳಿಯಾಕಾರದಲ್ಲಿ ಹೋಗು. 'ಕರ್ಲಿಂಗ್' ಎಂಬ ಆಟವಾಡು. **Cúrling** (ನಾ.) (ಕ್ರಿಯಾರ್ಥಗಳಲ್ಲಿ) ; ಸ್ಕಾಟ್ಲೆಂಡಿನಲ್ಲಿ ದೊಡ್ಡ ದುಂಡುಕಲ್ಲುಗಳಿಂದ ನೀರ್ಗಲ್ಲಿನಮೇಲೆ ಆಡುವ ಒಂದು ಆಟ. C.-irons, -tongs, -pins ತಲೆಗೂದಲನ್ನು ಕೊಂಕಿಸುವ ಸಲಕರಣೆಗಳು : ಗುಂಗುರು ಪಟ್ಟ, ಹಿಡಿಕೆ. **Cúrly** (ಗು.) ಗುಂಗುರು ಗುಂಗುರಾದ. C.-pate ಗುಂಗುರು ಕೂದಲ ತಲೆಯುಳ್ಳವನು : ಗುಂಗುರು ಕೂದಲ.

Cúrlew ಕರ್ಲ್ಯೂ (ನಾ.) ಒಂದು ಜಾತಿಯ ಕ್ರೌಂಚ ಪಕ್ಷಿ.

Curmúdgeon ಕರ್‌ಮಡ್‌ಜನ್ (ನಾ.) ಲೋಭಿ ; ಕೃಪಣ ; ಜಿಪುಣ. **Curmúdgeonly** (ಕ್ರಿ. ವಿ.)

Cúrrach, -agh ಕರ, ಕುರಖ್ (ನಾ.) = Coracle. (Curragh) ಜೌಗು ನೆಲ.

Cúrrant ಕರಂಟ್ (ನಾ.) ದ್ವೀಪದ್ರಾಕ್ಷಿ (ಮೆಡಿಟರೇನಿಯನ್ ಸಮುದ್ರ ಪ್ರಾಂತಗಳಲ್ಲಿ ಬೆಳೆಯುವ ಬೀಜವಿಲ್ಲದ ದ್ರಾಕ್ಷಿಯನ್ನು ಒಣಗಿಸಿ ತಯಾರಿಸಿದ್ದು)

Cúrrency. **Current** ನೋಡಿ.

Cúrrent ಕರೆಂಟ್ (ನಾ., ಗು.) ಹರಿಯುವ ಹೊಳೆ ; ಹೊನಲು ; ಒಂದು ಗೊತ್ತಾದ ದಿಕ್ಕಿನಲ್ಲಿ ಹರಿಯುವ ನೀರು, ಗಾಳಿ, ಮೊ. ವು. ಓಟ ; ಹರಿವು ; ಪ್ರವಾಹ ; ಸೆಳವು ; ಸೆಳೆತ. (ಘಟನೆಗಳು, ಅಭಿಪ್ರಾಯಗಳು, ಮೊ. ಗಳ) ಗತಿ, ಪ್ರವೃತ್ತಿ. (ಒಂದು ಕಾಯದಲ್ಲಿ) ವಿದ್ಯುತ್ಪ್ರವಾಹ. (ಗು.) (ಹಣ, ಅಭಿಪ್ರಾಯಗಳು, ಸಮಾಚಾರಗಳು, ಜನವಾರ್ತೆ, ವದಂತಿ, ಪದಗಳು) ಸಲ್ಲುವ, ಸಲುವಳಿಯಾದ, ಚಲಾವಣೆಯಲ್ಲಿರುವ, ಉಪಯೋಗದಲ್ಲಿರುವ, ಪ್ರಯೋಗದಲ್ಲಿರುವ, ಪ್ರಚಾರದಲ್ಲಿರುವ, ರೂಢಿಯಲ್ಲಿರುವ, ವಾಡಿಕೆಯಲ್ಲಿರುವ, ಬಳಕೆಯಲ್ಲಿರುವ ; ಪ್ರಚಲಿತ ; ಚಾಲ್ತಿ. (Pass, go, run, c. ಯಥಾರ್ಥವೆಂದು, ನಿಜವೆಂದು, ಅಕೃತ್ರಿಮವೆಂದು, ಸಹಜವೆಂದು, ಸಾಮಾನ್ಯವಾಗಿ ಅಂಗೀಕಾರ ಪಡೆ, ಗ್ರಾಹ್ಯವಾಗಿರು). (ಕಾಲದ ವಿಷಯದಲ್ಲಿ) ನಡೆಯುತ್ತಿರುವ ; ವರ್ತಮಾನ (C. month) ; ವರ್ತಮಾನ ಕಾಲದ ; ಈ ಹೊತ್ತಿನ (C. issue of journal ವೃತ್ತ ಪತ್ರಿಕೆಯ ಸದ್ಯದ ಸಂಚಿಕೆ). C. handwriting ಓಡು ಬರೆವಣಿಗೆ ; ಮೋಡಿ ಬರವಣಿಗೆ. **Cúrrently** (ಕ್ರಿ. ವಿ.) ; **Cúrrency** ಕರೆನ್ಸಿ (ನಾ.) ಯಾವುದಾದರೂ ವಸ್ತು ಅಥವಾ ವಿಷಯವು ಬಳಕೆ (ಚಲಾವಣೆ) ಯಲ್ಲಿರುವ ಕಾಲ : ಪ್ರಚಲನ ಕಾಲ ; ಪ್ರಚಾರ ಕಾಲ ; ವ್ಯವಹಾರ ಕಾಲ. (ಹಣ) ಚಲಾವಣೆ ; ಸಲುವಳಿ. ಒಂದು ದೇಶದಲ್ಲಿ ಚಲಾವಣೆಯಲ್ಲಿರುವ ನಾಣ್ಯ. (ಪದಗಳ, ಭಾವಗಳ, ವದಂತಿಗಳ) ಪ್ರಯೋಗ, ಪ್ರಚಲನೆ, ಚಲಾವಣೆ.

Cúrricle ಕರಿಕ್‌ಲ್ (ನಾ.) (ಸಾ., ಎರಡು ಕುದುರೆಗಳನ್ನು ಕಟ್ಟುವ) ಎರಡು ಚಕ್ರದ ಹಗುರವಾದ ಬಂಡಿ.

Currículum (L) ಕರಿಕ್ಯುಲಂ (ನಾ. ; ಬ. ವ. -la) (ವಿದ್ಯಾಭ್ಯಾಸದ) ಗತಿ, ಪಥ ; ವ್ಯಾಸಂಗ ಕ್ರಮ. (ಒಂದು ವಿದ್ಯಾ ಸಂಸ್ಥೆಯಲ್ಲಿ ಅಥವಾ ಅದರ ಒಂದು ಶಾಖೆಯಲ್ಲಿ ಶಿಕ್ಷಣಕೊಡುವ ಎಲ್ಲಾ ವಿಷಯಗಳ) ಪಾಠಕ್ರಮ.

Cúrrier ಕರಿಯರ್ (ನಾ.) ಹದಮಾಡಿದ ತೊಗಲನ್ನು ಶುದ್ಧಿ ಮಾಡಿ ಅದಕ್ಕೆ ಬಣ್ಣ ಹಾಕುವವನು : ತೊಗಲು ರಂಗಾರೆ.

Cúrry[1] ಕರಿ (ನಾ., ಕ್ರಿ. ಸಕ.) ಸಂಬಾರದ ಪುಡಿ, ಅರಿಸಿನದ ಪುಡಿ, ಮೊ. ನ್ನು ಹಾಕಿ ಅಟ್ಟ ಮಾಂಸ, ತರಕಾರಿ, ಮೊ. ಗಳ ಪಲ್ಯ : ಕರಿ ; (C.-paste, -powder ಮಸಾಲೆ ಹಿಟ್ಟು, ಪುಡಿ). (ಕ್ರಿ.) ಮಸಾಲೆ ಪುಡಿ ಹಾಕು.

Cúrry[2] ಕರಿ (ಕ್ರಿ. ಸಕ.) (ಕುದುರೆ, ಮೊ. ನ್ನು) ಖರಾರಿನಿಂದ ಉಜ್ಜು, ಮಾಲೀಸು ಮಾಡು (C.-comb ಮಾಲೀಸು ಹಣಿಗೆ ; ಖರಾರು). (ಹದ ಮಾಡಿದ ತೊಗಲನ್ನು) ಉಜ್ಜಿ ನಯಮಾಡು, ಶುದ್ಧಿ ಮಾಡು. (ರೂಪ.) ಬಡಿ ; ತೀಡು. C. favour (ಒಬ್ಬನನ್ನು) ಅನುಸರಿಸಿ (ಅವನ) ದಯ ಸಂಪಾದಿಸಲು ಯತ್ನಿಸು ; ಅನುಗ್ರಹ ಪಡೆಯಲು ಆಶ್ರಯಿಸು.

Curse ಕರ್ಸ್ (ನಾ., ಕ್ರಿ.) (ಒಬ್ಬನಿಗೆ, ಒಂದು ವಸ್ತುವಿಗೆ) ಕೇಡಾಗಲಿ, ನಾಶವಾಗಲಿ, ಎಂದು ದೇವರನ್ನು ಕುರಿಯುವುದು ; ಶಾಪ ; ಅಭಿಶಾಪ ; ಕ್ರೈಸ್ತಪಾದ್ರಿ ವಿಧಿಪೂರ್ವಕವಾಗಿ ಹಾಕುವ ಬಹಿಷ್ಕಾರ (Curses come home to roost ಇಟ್ಟ ಶಾಪ ಕೊಟ್ಟವನಿಗೇ ತಟ್ಟುತ್ತದೆ. Under a c. ಶಾಪಗ್ರಸ್ತವಾಗಿ). ಧರ್ಮನಿಂದಕ ಭಾಷೆ ; ಆಣೆ. ಶಾಪಕ್ಕೀಡಾದ ವಸ್ತು. ಶಾಪದ ಫಲ. ಹಾನಿ ; ಕೇಡು ; ಆಪತ್ತು ; ವಿಪತ್ತು. [(ಇಸ್ಪೀಟಾಟ) C. of Scotland ದಯಮಂಡಿನ ಒಂಬತ್ತನೆಯ ಬಂದು]. (ಕ್ರಿ.) ಶಾಪವಿಡು, ಹಾಕು ; ಶಪಿಸು ; ಬಹಿಷ್ಕಾರ ಹಾಕು ; ದೈವದೂಷಣೆ ಮಾಡು ; ಕೇಡು ಬರು ; ಹಾನಿ ತಟ್ಟು (ಮು., ಕರ್ಮಣಿಯಲ್ಲಿ). **Cúrsed** ಕರ್ಸೆಡ್, **Curst** ಕರ್ಸ್ಟ್ (ಗು., ಕ್ರಿ. ವಿ.) (ಕ್ರಿಯಾರ್ಥಗಳಲ್ಲಿ) ; ನಿಂದ್ಯ ; ಹಾಳು ; ಅನಿಷ್ಟ ; ಶಾಪಾರ್ಹ ; ಹೇಯ. (ಪ್ರಾಚೀ. ಪ್ರ., ಸಾ., Curst) ವಿಷಮ ಸ್ವಭಾವದ ; ಜಗಳಗಂಟಿಯಾದ. (ಕ್ರಿ. ವಿ.) = **Cúrsedly** (ಕ್ರಿ. ವಿ.) ; **Cúrsedness** (ನಾ.)

Cúrsive, **Cúrsor, etc.** } **Cursory** ನೋಡಿ.

Cúrsory ಕರ್ಸೊರಿ (ಗು.) ಆತುರದ ; ಅವಸರದ ; ಓಟದ ; ಮೇಲು ಮೇಲಿನ ; ಸ್ಥೂಲ (C. inspection ಸ್ಥೂಲ ಪರೀಕ್ಷೆ). **Cúrsorily** (ಕ್ರಿ. ವಿ.) ; **Cúrsoriness** (ನಾ.) ; **Cursórial** ಕರ್ಸೋರಿಯಲ್ (ಗು.) ಓಡುಗಾಲುಳ್ಳ (C. birds ಓಡುಗಾಲ ಹಕ್ಕಿಗಳು). **Cúrsor** ಕರ್ಸರ್ (ನಾ.) ಕೆಲವು ಗಣನಾ ಸಲಕರಣೆಗಳಲ್ಲಿ ಮಾನಫಲಕದಮೇಲೆ ಓಡಾಡಿಸಲು ಅಳವಡಿಸಿರುವ ಗುರುತುಪಟ್ಟಿ : ಜರುಗುಪಟ್ಟಿ. **Cúrsive** (ಗು., ನಾ.) ಓಟದ (ಬರೆವಣಿಗೆ) ; ಮೋಡಿ.

Curt ಕರ್ಟ್ (ಗು.) ಅಲಕ್ಷ್ಯ (ಅವಿನಯ) ತೋರುವಷ್ಟು ಹ್ರಸ್ವವಾದ ; ಬಿಗುಮಾನದ ; ತೀರ ಅಡಕವಾದ ; ಅತಿ ಸಂಕ್ಷಿಪ್ತ. (ಮೂಲಾರ್ಥ) ಮೊಟಕಾದ. **Cúrtly** (ಕ್ರಿ. ವಿ.) ; **Cúrtness** (ನಾ.)

Curtaíl ಕರ್ಟೆಯ್‌ಲ್ (ಕ್ರಿ. ಸಕ.) ಮೊಟಕು ಮಾಡು ; ಕಡಮೆ ಮಾಡು ; ಕೊತ ಮಾಡು ; ಕತ್ತರಿಸು ; ಸಂಕ್ಷೇಪ ಮಾಡು ; ಹ್ರಸ್ವ ಮಾಡು (ರೂಪ. ಸಹ). **Curtaílment** (ನಾ.) ; **Cúrtail-step, Cúrtal-** (ನಾ.) ಏಣುಸಮರಿದ ಅಡಿಯ ಮೆಟ್ಟಲು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cúrtain ಕರ್ಟನ್, ಕರ್ಟ್‌ನ್ (ನಾ.) (ಬಟ್ಟೆಯ) ತೆರೆ [Draw the c. (aside or back) ತೆರೆಯೆಳೆದು ತೋರಿಸು, ಅಥವಾ ಮರೆಮಾಡು : ತೆರೆಯೆಳೆ]. (ನಾಟಕದ) ಪರದೆ ; ಜವನಿಕೆ [C. falls (ಅಂಕ, ನಾಟಕ, ಮುಗಿದು) ಪರದೆ ಬೀಳುತ್ತದೆ ; (ರೂಪ.) ಮುಗಿಯುತ್ತದೆ. C. rises (ನಾಟಕಾರಂಭದಲ್ಲಿ, ಅಂಕದ ಆರಂಭದಲ್ಲಿ) ಪರದೆ ಏಳುತ್ತದೆ ; (ರೂಪ.) ಆರಂಭವಾಗುತ್ತದೆ]. (ಮೇಲ್ಭಾಗದಲ್ಲಿ ಮಾಳಿಗೆಯ ಭಾರವನ್ನು ಹೊತ್ತಿರದ) ಅಡ್ಡ ಗೋಡೆ ; (ಎರಡು ಪ್ರದೇಶಗಳನ್ನು ಪ್ರತ್ಯೇಕಿಸುವ) ಅಡ್ಡ ತೆರೆ ; ತಡಿಕೆ ; ವಿಭಾಜಕ. ಮುಚ್ಚು ; ಮರೆ (ಪಾರಿಭಾಷಿಕ ಪ್ರಯೋಗಗಳಲ್ಲಿ). C.-fire (ಸೈನಿಕ) ಪ್ರವೇಶ ತಡೆಯುವ ಗುಂಡಿನ ಸುರಿಮಳೆ. C. lecture ಹಾಸಿಗೆಯಲ್ಲಿ ಹೆಂಡತಿ ಗಂಡನನ್ನು ಆಕ್ಷೇಪಿಸಿ ಮಾಡುವ ಬೋಧನೆ : ಶಯ್ಯೋಪನ್ಯಾಸ. C.-raiser (ನಾಟಕಾದಿಯಲ್ಲಿ ಪ್ರದರ್ಶಿಸುವ) ಸಣ್ಣ ಆರಂಭ ದೃಶ್ಯ. Behind the c. ತೆರೆಯ ಹಿಂದೆ ; ಗುಟ್ಟಾಗಿ ; ಯಾರೂ ಅರಿಯದಂತೆ. Drop or raise the c. (ರೂಪ.) ಕೊನೆಗಾಣಿಸು, ಆರಂಭ ಮಾಡು.

Cúrtain (ಕ್ರಿ. ಸಕ.) ತೆರೆ, ಪರದೆ, ಹವಣಿಸು ; ತೆರೆ ಹಾಕು ; ಮರೆ ಮಾಡು.

Cúrtilage ಕರ್ಟಿಲೆಜ್ (ನಾ.) (ನ್ಯಾ. ಶಾ., ಪ್ರಾಂತಿಕ) ವಾಸದ ಮನೆಗೆ ಸೇರಿದ, ಒಂದೇ ಆವರಣದಲ್ಲಿರುವ, ಬಯಲು, ಅಂಗಳ, ಹಿತ್ತಿಲು.

Cúrtsy, -sey ಕರ್ಟ್ಸಿ (ನಾ., ಕ್ರಿ. ಅಕ.) (ಮಂಡಿ ಬಗ್ಗಿಸಿ, ಮೈ ಬಾಗಿಸಿ) (ಪಾಶ್ಚಾತ್ಯ) ಸ್ತ್ರೀಯರು ಮಾಡುವ ಪ್ರಣಾಮ. (ಕ್ರಿ.) ಪ್ರಣಾಮ ಮಾಡು (= Make, drop, a c.)

Cúrvature. **Curve** ನೋಡಿ.

Curve (ನಾ., ಕ್ರಿ.) ವಕ್ರ ರೇಖೆ ; ವಕ್ರಾಕೃತಿ ; ಕೊಂಕು ಗೆರೆ ; ಡೊಂಕು ; ಬಾಗು ; ತಿರುವು ; ವಕ್ರ ; ವಕ್ರಿ. (ಯಾವುದಾದರೂ ವಿಚಾರದ ಸಂಖ್ಯಾಪರಿಮಾಣಗಳನ್ನು ಥಟ್ಟನೆ ಗ್ರಹಿಸಲಾಗುವಂತೆ ರಚಿಸಿರುವ) ಪರಿಮಾಣ ರೇಖೆ. (ಕ್ರಿ.) ಬಾಗು ; ಬಾಗಿಸು ; ವಕ್ರ ವಾಗು ; ವಕ್ರೀಕರಿಸು ; ಮುರಿ ; ತಿರುಗು. **Cúrvature** ಕರ್ವ ಟ್ಯುರ್ (ನಾ.) ಬಾಗು ; ಡೊಂಕು ; ಮುರಿತ ; ತಿರುವು ; ವಕ್ರ ; ವಕ್ರತೆ ; ವಕ್ರಮಾನ ; ವಕ್ರಾಕೃತಿ ; ವಲನ. (ಜ್ಯಾ.) ಒಂದು ವಕ್ರ ರೇಖೆಯ ಒಂದು ನಿರ್ದಿಷ್ಟ ಭಾಗವು ಆ ಪ್ರದೇಶದ ಋಜುರೇಖೆಯಿಂದ ಬಾಗಿರುವ ಪರಿಮಾಣ : ವಕ್ರ ಪರಿಮಾಣ ; ವಕ್ರತೆ.

Curvét, Cúrvet ಕರ್ವೆಟ್ (ನಾ., ಕ್ರಿ. ಅಕ.) ಕುದುರೆಯ ಒಂದು ತೆರದ ನೆಗೆತ (ಎರಡು ಮುಂಗಾಲುಗಳನ್ನೂ ಒಟ್ಟಿಗೆ ಎತ್ತಿ ಅವನ್ನು ಕೆಳಗಿಡುವುದಕ್ಕೆ ಮುಂಚೆಯೇ ಹಿಂಗಾಲುಗಳೆರಡನ್ನೂ ಎತ್ತಿ ಮುಂದಕ್ಕೆ ಕುಪ್ಪಳಿಸುವುದು) : ನಾಗಾಲು ನೆಗೆತ. (ಕ್ರಿ.) (ಕುದುರೆ ಅಥವಾ ಸವಾರ) ಹೀಗೆ ನೆಗೆ.

Curvicaúdate ಕರ್ವಿಕಾಡೇಟ್ (ಗು.) ಡೊಂಕು ಬಾಲದ.

Curvifóliate ಕರ್ವಿಫೋಲಿಯೆಟ್ (ಗು.) ಹಿಂಬಾಗಿದ ಎಲೆಗಳುಳ್ಳ.

Cúrviform ಕರ್ವಿಫಾರ್ಮ್ (ಗು.) ವಕ್ರಾಕಾರದ.

Curvilínear ಕರ್ವಿಲಿನಿಯರ್ (ಗು.) ವಕ್ರರೇಖೆಯಿಂದ(ಗಳಿಂದ) ಕೂಡಿದ ; ವಕ್ರರೇಖೆಯುಳ್ಳರುವ ; ವಕ್ರರೇಖೆಯ ; — ಗಳುಳ್ಳ. **Curvilínearly** (ಕ್ರಿ. ವಿ.) ; **Curvilineárity** —ಆ್ಯರಿಟಿ (ನಾ.)

Cúrvograph ಕರ್ವೊಗ್ರಾಫ್ (ನಾ.) ವಕ್ರರೇಖೆಗಳನ್ನೆಳೆಯಲು ಉಪ ಯೋಗಿಸುವ ಸಲಕರಣೆ : ವಕ್ರರೇಖಕ.

Cúscus ಕಸ್‌ಕಸ್ (ನಾ.) ಲಾಮಂಚ ; ಬಾಳ ; ಕೊಳವೇರು (ಗ್ರಾಂ.) (ಒಂದು ಜಾತಿಯ ಹುಲ್ಲಿನ ಬೇರು). ಆಫ್ರಿಕದ ಸಾವೆಯ ಕಾಳು. ನ್ಯೂಗಿನಿಯಲ್ಲಿರುವ ಒಂದು ಜಾತಿಯ ಹೊಟ್ಟೆಸಂಚಿಯ ಮೃಗ.

Cúshion ಕುಷನ್ (ನಾ., ಕ್ರಿ. ಸಕ.) (ಕುಳಿತುಕೊಳ್ಳುವುದಕ್ಕೆ, ಒರಗಿಕೊಳ್ಳು ವುದಕ್ಕೆ, ತುರುಬಿನ ಕೆಳಗಡೆ, ಬಿಲಿಯರ್ಡ್ಸ್ ಆಟದ ಮೇಜಿನ ಪಕ್ಕಗಳಲ್ಲಿ, ಉಜ್ಜುವ ಇತರ ಭಾಗಗಳಲ್ಲಿ, ಉಪಯೋಗಿಸುವ) ಮೆತ್ತೆ ; ದಿಂಬು ; ತಿವಾಸಿ [Pin-c. (Pin ನೋಡಿ)]. ಕೆಲಸಮಾಡುತ್ತಿರುವ ಎಂಜಿನಿನ ವರ್ತುಲನಾಳದಲ್ಲಿಯ ಆಡುಬೆಣೆಗೆ (Piston) ಡಿಕ್ಕಿತಪ್ಪಿಸುವ ಉಳಿಕೆಯ ಹಬೆ. (ಹಂದಿ, ಮೊ. ಗಳ) ತುಂಬಿಕೊಂಡಿರುವ ಪಿರ್ರೆಯ ಭಾಗ. ಕುದುರೆಯ ಗೊರಸಿನ ತಳದ ಮಧ್ಯಭಾಗದಲ್ಲಿ ಬೆಳೆಯುವ ಮೆತುಗಂತಿ. ಮೆತ್ತೆಯಾಕಾರದ ಭಕ್ಷ್ಯ. C.-tire ಬೈಸಿಕಲ್ಲಿನ ಚಕ್ರದ ಮೆತ್ತೆಪಟ್ಟಿ (ಗಾಳಿತುಂಬಿಯೂ ಗಟ್ಟಿಯಾಗಿಯೂ ಇರದೆ, ರಬ್ಬರಿನ ಚೂರು ಗಳಿಂದ ತುಂಬಿದ ರಬ್ಬರುಕೊಳವೆ). (ಕ್ರಿ.) ಮೆತ್ತೆಗಳನ್ನು ಹವಣಿಸು ; ಮೆತ್ತೆ ಹಾಕಿ ರಕ್ಷಣೆ ಕೊಡು. (ದೂರು, ದೋಷಾರೋಪಣೆ, ಮೊ. ನ್ನು) ಗಲಭೆಗೆ ಅವಕಾಶವಿಲ್ಲದೆ ಅಡಗಿಸಿಬಿಡು. (ಬಿಲಿಯರ್ಡ್ಸ್ ಚೆಂಡನ್ನು) ಮೆತ್ತೆಗೆ ಅನಿಸಿಬಿಡು. **Cúshiony** (ಗು.) ಮೆತ್ತೆಯಂಥ.

Cúshy ಕುಷಿ (ಗು.) (ಅಸಂ., ಆಂ. ಇಂ.) (ಒಂದು ಉದ್ಯೋಗ, ಕೆಲಸ, ಮೊ. ಗಳ ವಿಷಯದಲ್ಲಿ) ಸಲೀಸಾದ, ಸುಲಭವಾದ, ಸುಖವಾದ. 'ಖುಷಿ'.

Cusp ಕಸ್ಪ್ (ನಾ.) ಮೊನೆ ; ಶೃಂಗ. (ಜ್ಯಾ.) ಒಂದು ವಕ್ರರೇಖೆಯ ಎರಡು ಶಾಖೆಗಳು ಸಂಧಿಸಿ ನಿಲ್ಲುವ ಬಿಂದು. (ವಾ. ಶಾ.) ಒಂದು ತೆರದ ಕಮಾನಿನ ರಚನೆಯಲ್ಲಿ, ಎರಡು ಕಮಾನುಗಳು ಸೇರುವ ಎಡೆಯಲ್ಲಿ, ಚಾಚಿಕೊಂಡಿರುವ ಕೋಡು. (ಸ. ವಿ.) (ಮು., ಎಲೆಯ) ಮೊನಚು ಕೊನೆ. **Cusped** ಕಸ್ಪ್ಡ್ (ಗು.) ; **Cúspidal** ಕಸ್ಪಿಡಲ್ (ಗು.) ಶೃಂಗದ ; ಕೋಡಿನ (ರೀತಿಯ). **Cúspidate(d)** —ಡೆಟ್, —ಡೇಟೆಡ್ (ಗು.) ಶೃಂಗಾಗ್ರವುಳ್ಳ ; ಮೊನೆಯುಳ್ಳ.

Cúspidor(e) ಕಸ್ಪಿಡಾರ್, — ಡೋರ್ (ನಾ.) (ಅಮೆ. ಸಂ.) ಉಗು ಳುವ ಪಾತ್ರೆ ; ಪೀಕುದಾನಿ.

Cuss ಕಸ್ (ನಾ.) (ಅಮೆ. ಸಂ.) ಶಾಪ. ವ್ಯಕ್ತಿ ; ಆಸಾಮಿ ; ಪ್ರಾಣಿ (ಸಾ., ಹೀನಾಯವಾಗಿ. Curse ಪದದ ಗ್ರಾಮ್ಯರೂಪ). **Cússedness** ಕಸೆಡ್‌ನೆಸ್ (ನಾ.) ವಕ್ರತೆ ; ಮೂರ್ಖತ್ವ (ಮು., Pure c.) (Cursedness ಪದದ ಗ್ರಾಮ್ಯರೂಪ)

Cústard ಕಸ್ಟರ್ಡ್ (ನಾ.) ಮೊಟ್ಟೆಯ ಲೋಳೆಯನ್ನು ಹಾಲಿನೊಡನೆ ಕಡೆದು ಸೀ ಹಾಕಿ ಬೇಯಿಸಿ ಮಾಡಿದ ಭಕ್ಷ್ಯ ಅಥವಾ ಪಾಯಸ. C.-apple ರಾಮಫಲ.

Cústody ಕಸ್ಟೊಡಿ (ನಾ.) ಅಧೀನ ; ವಶ ; ರಕ್ಷಣೆ ; ಪಾಲನೆ ; 'ಸುಪರ್ದು' ; ಕಾವಲು ; ಸೆರೆ ; ಬಂಧನ (Take into c. ಬಂಧಿಸು ; ಸೆರೆ ಹಿಡಿ ; ಕೈದು ಮಾಡು). **Custódial** ಕಸ್ಟೋಡಿಯಲ್ (ಗು.) — ಸಂಬಂಧಪಟ್ಟ. **Custódian** (ನಾ.); **Custódier** (ನಾ.) ಅಧೀನದಲ್ಲಿ (ಸುಪರ್ದಿನಲ್ಲಿ) ಇಟ್ಟುಕೊಂಡಿರುವವನು ; ರಕ್ಷಕ ; ಪಾಲಕ.

Cústom ಕಸ್ಟಮ್ (ನಾ.) ರೂಢಿ ; ಬಳಕೆ ; ಪದ್ಧತಿ ; ವಾಡಿಕೆ ; ಸಂಪ್ರ ದಾಯ ; 'ಮಾಮೂಲು'. (ಬ. ವ. ದಲ್ಲಿ) (ಆಮದು ರಫ್ತು ಸರಕಿನ ಮೇಲೆ ಹಾಕುವ) ಸುಂಕ. The customs ಸುಂಕದ ಖಾತೆ. C.-house ಸುಂಕದ ಕಟ್ಟೆ (ಮು., ರೇವುಪಟ್ಟಣದಲ್ಲಿರುವದು). ವ್ಯಾಪಾ ರದ ಗಿರಾಕಿ ; ವರ್ತನೆ. **Cústomary** (ಗು., ನಾ.) ರೂಢಿಯ ; ಸಾಂಪ್ರದಾಯಿಕ ; ಬಳಕೆಯ ; ವಾಡಿಕೆಯ. (ನ್ಯಾ. ಶಾ.) ಮಾಮೂ ಲಿನ ; ಮಾಮೂಲನ್ನನುಸರಿಸಿದ. (ನೇರಿಸಿ ಬರೆದಿಟ್ಟ ಒಂದು ದೇಶದ) ಸಂಪ್ರದಾಯ ಸಂಗ್ರಹ. **Cústomarily** (ಕ್ರಿ. ವಿ.) ; **Cústomariness** (ನಾ.) ; **Cústomer** ಕಸ್ಟಮರ್ (ನಾ.) ಕೊಳ್ಳುವವನು ; ಗಿರಾಕಿ ; ವರ್ತನೆಗಾರ. Awkward c. ಎಡವಟ್ಟು ಗಿರಾಕಿ ; ತೊಡರಿಗೆ ಸಿಕ್ಕಿನುವವನು. Queer c. ವಿಚಿತ್ರ ಗಿರಾಕಿ ; ವಿಚಿತ್ರ ವರ್ತನೆ ಯುಳ್ಳವನು.

Cústos (L) ಕಸ್ಟಾಸ್ (ನಾ.) = Custodian. C. rotulorum ದಾಖಲೆಯ ದಸ್ತೈವಜುಗಳು, ಮೊ. ವುಗಳ ಪಾಲಕನಾದ ಒಂದು ಪ್ರಾಂತದ ಶಾಂತಿರಕ್ಷಣೆಯ ಮುಖ್ಯ ನ್ಯಾಯಾಧಿಪತಿ.

Cut ಕಟ್ (ನಾ.) ಕತ್ತರಿಸುವುದು ; ಕಡಿತ ; ಕೊಯ್ತ ; ಕಚ್ಚು ; ಛೇದನ. (ಕೂಲಿ, ಸಂಬಳ, ಬೆಲೆ, ಮೊ. ಗಳಲ್ಲಿ) ಕೋತ. (ಚೂರಿ, ಕತ್ತಿ, ಚಾವಟಿ — ಇವುಗಳಿಂದ) ಕಡಿತ ; ಗಾಯ ; ಹೊಡೆತ ; ಏಟು ; ಪೆಟ್ಟು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(C. and thrust ಕೈಕೈ ಹೋರಾಟ ; ಮುಷ್ಟಾಮುಷ್ಟಿ). (ನಾಟಕ ಭಾಗ, ಮೊ. ಗಳ) ವಿಚ್ಛೇದನ, ಲೋಪನ, ಹಾರಿಸುವಿಕೆ, ಬಿಡುಗೆ. ಮನಚುಚ್ಚುವ, ಮನಸ್ಸನ್ನು ನೋಯಿಸುವ, ನಡೆ, ನುಡಿ ; ಇರಿತ. (ಕ್ರಿಕೆಟ್, ಟೆನಿಸ್, ಕ್ರೋಕೆ, ಮೊ. ಆಟಗಳಲ್ಲಿ) ಚೆಂಡುಹೊಡೆಯುವ ಒಂದು ವರಿಸೆ. (ಉಡಿಗೆ, ತೊಡಿಗೆ, ಮೊ. ಗಳಲ್ಲಿ) ಒಂದು ರೀತಿ, ನೀಟು, ವೈಖರಿ [The c. of one's jib (Jib[1] ನೋಡಿ)]. ಕಡಿದು ಮಾಡಿದ ರೈಲುರಸ್ತೆ. ಪರದೆ, ಪಟ, ಮೊ. ನ್ನು ಏರಿಸುವುದಕ್ಕೂ ಇಳಿಸುವುದಕ್ಕೂ ಅನುಕೂಲಿಸುವಂತೆ ರಂಗದ ನೆಲದಲ್ಲಿ ಮಾಡಿರುವ ಸಂದು. ಪುಸ್ತಕ, ವರ್ತಮಾನ ಪತ್ರಿಕೆ, ಮೊ. ಗಳಲ್ಲಿ ಸಂದರ್ಭಕ್ಕೆ ತಕ್ಕ ಚಿತ್ರ ಹಾಕುವುದಕ್ಕಾಗಿ ಮರದ ತುಂಡಿನಮೇಲೆ ಕೊರೆದು ಮಾಡಿದ ಚಿತ್ರದ ಅಚ್ಚು : ಮರದಚ್ಚು (= Woodcut). ಕತ್ತರಿಸಿ ತೆಗೆದ (ಮು., ಮಾಂಸದ) ತುಂಡು, ಖಂಡ. A c. above ಒಂದು ದರ್ಜೆ, ತರಗತಿ, ಅಂತಸ್ತು, ಮೇಲು. C.-out ಮೋಟಾರುಬಂಡಿಯಲ್ಲಿ ಅನಿಲವನ್ನು ಬೇಗ ಹೊರಡಿಸಲು ಮಾಡಿರುವ ಉಪಾಯ. Draw cuts ಬೇರೆಬೇರೆ ಉದ್ದದ ಕಡ್ಡಿಗಳಲ್ಲಿ ಒಂದನ್ನು ಎತ್ತಿತೆಗೆದು ಅದೃಷ್ಟ ಫಲವನ್ನು ಗೊತ್ತುಮಾಡು. Give one the c. direct ಪರಿಚಿತನನ್ನು ಗುರುತಿಸುವ ಮನಸ್ಸಿಲ್ಲದೆ ನಿರಾಕರಿಸು. Short c. ಸೀಳು ದಾರಿ ; ಹತ್ತಿರದ ದಾರಿ.

Cut (ಕ್ರಿ.) ಕತ್ತರಿಸು ; ತುಂಡು ಮಾಡು ; ತರಿ ; ಕಡಿ ; ಕೊಯ್ಯಿ ; ಹರಿ ; ವಿಚ್ಛೇದಿಸು [C. the knot (ರೂಪ.) ನೇರವಾಗಿ ಬಿಡಿಸಲು ಸಾಧ್ಯವಲ್ಲದ ತೊಡಕನ್ನು ಉಪಾಯಾಂತರದಿಂದ ಕತ್ತರಿಸಿ ಬಿಡಿಸು: ಸಮಸ್ಯೆ ಬಿಡಿಸು. C. the connection ಸಂಬಂಧ ತೊರೆ]. ಇರಿ ; ಚುಚ್ಚು ; ಒಳಹೊಗು ; (ಚೂರಿ, ಮೊ. ಗಳಿಂದ) ಗಾಯಮಾಡು. [(ರೂಪ.) Argument cuts both ways ವಾದವು ಉಭಯ ಪಕ್ಷಕ್ಕೂ ತಟ್ಟುತ್ತದೆ. A cutting remark ಮನ ಚುಚ್ಚುವ, ಮರ್ಮಭೇದಕವಾದ, ನುಡಿ]. ಅಡ್ಡಹಾಯಿ (Two lines c. each other). (ಅಸಂ.) ಓಡು (C. and run ಓಡಿಹೋಗು ; ಪಲಾಯನಮಾಡು). (ಕೂಲಿ, ಬೆಲೆ, ಕಾಲ, ಮೊ. ನ್ನು) ಕಡಮೆಮಾಡು, ಕೋತಮಾಡು, ತಗ್ಗಿಸು, ಇಳಿಸು. (ಉಡುಪನ್ನು, ವಜ್ರ, ಮೊ. ನ್ನು) ಆಕಾರಕ್ಕೆ ಹೊಂದುವಂತೆ ಕತ್ತರಿಸಿ ರೂಪು ಕೊಡು ; ಕಂಡರಿಸು ; ವಜ್ರದ ಕಮಲ ಬಿಡಿಸು. [C. a figure (Figure ನೋಡಿ)]. ಕೊರೆ ; ತೋಡು (C. a trench ಕಾಲುವೆ ತೋಡು). ಮಾಡು (C. a joke ಹಾಸ್ಯ ಮಾಡು). (ಇಸ್ಪೀಟಾಟದಲ್ಲಿ) ಕಲಸಿ ಒಟ್ಟಿಗಿಟ್ಟಿರುವ ಎಲೆಗಳ ಮೊತ್ತದಿಂದ ಒಂದು ಭಾಗವನ್ನು ಎತ್ತಿಡು; ಕಟ್ಟು ವಿಭಾಗಿಸು. (ಕ್ರಿಕೆಟ್, ಮೊ. ಆಟಗಳಲ್ಲಿ ಚೆಂಡನ್ನು) ಒಂದು ವರಿಸೆಯಲ್ಲಿ ಹೊಡೆ. ಪರಿಚಯಸ್ಥನನ್ನು ಗುರುತಿಸದೆ ಇರು (C. him dead ಅವನು ಸತ್ತಂತೆ ಎಣಿಸಿ ತೊರೆದುಬಿಡು). C. back (ಕ್ರಿ.) (ಚಲಚ್ಚಿತ್ರ) ಪರದೆಯಮೇಲೆ ಆಗಲೆ ತೋರಿಸಿದ ಚಿತ್ರವನ್ನು, ನಾಟಕದ ಉದ್ದೇಶಸಾಧನೆಗಾಗಿ, ಮತ್ತೊಮ್ಮೆ ತೋರಿಸು : ಹಿನ್ನೋಟ ತೋರಿಸು. C.-back (ನಾ.) ಹೀಗೆ ತೋರಿಸಿದ ಚಿತ್ರ ; ಹಿನ್ನೋಟ. C. a caper (Caper ನೋಡಿ). C.-and-come-again ಸಮೃದ್ಧಿ. C. coat according to cloth ಬಟ್ಟೆಯ ಅಳತೆಗೆ ತಕ್ಕಂತೆ ಅಂಗಿಗೆ ಕತ್ತರಿಸು (ರೂಪ.) ; ಹಾಸಿಗೆಯಿದ್ದಷ್ಟು ಕಾಲು ಚಾಚು (ರೂಪ.). C. down ಕತ್ತರಿಸಿ ಕೆಡವಿಬಿಡು ; (ರೂಪ.) (ಖರ್ಚು) ಕೋತಮಾಡು. C. and dried, dry (ಅಭಿಪ್ರಾಯಗಳು, ಮೊ. ಗಳ ವಿಷಯದಲ್ಲಿ) ಸಿದ್ಧವಾದ ; ನಿರ್ದಿಷ್ಟವಾದ ; ಖಚಿತವಾದ ; ಹೊಸದಲ್ಲದ. C. one's eye tooth or wisdom tooth ಬುದ್ಧಿ ಬರು ; ಅನುಭವ ಪಡೆ ; ವಿವೇಕಿಯಾಗು. C. it fine ಎಷ್ಟು ಬೇಕೊ ಅಷ್ಟುಮಾತ್ರ ಉಳಿಯುವಂತೆ ಕೋತಮಾಡು ; ಹತ್ತ ಕತ್ತರಿಸು ; ಕನಿಷ್ಠ ಪ್ರಮಾಣಕ್ಕೆ ಇಳಿಸು. C. in ಕೊರೆ ; ಇರಿ ; ಚುಚ್ಚು ; ಭೇದಿಸು. ಸುಳುಕೊಡದೆ ಥಟ್ಟನೆ ಒಳಹೊಗು ; ನುಸಿ ; ನುಗ್ಗು. ಮಾತಿನ ನಡುವೆ ಬಾಯಿಹಾಕು. (ಮೋಟಾರು ನಡಸುವಲ್ಲಿ) ಎದುರುಬದುರಾಗಿ ಹೋಗುತ್ತಿರುವ ಎರಡು ಬಂಡಿಗಳ ಮಧ್ಯೆ ನುಸಿದುಹೋಗು. (ಇಸ್ಪೀಟಾಟದಲ್ಲಿ) ಕಟ್ಟುಭಾಗಿಸಿದ ಫಲವಾಗಿ ಬಿಟ್ಟುಹೋದ ಆಟಗಾರನ ಸ್ಥಳವನ್ನು ತೆಗೆದುಕೊ. C. a joke ಹಾಸ್ಯ ಮಾಡು ; ಗೇಲಿ ಮಾಡು ; ತಮಾಷೆ ಮಾಡು. C. a lecture ಉಪನ್ಯಾಸಕ್ಕೆ, ಪಾಠಕ್ಕೆ, ಹೋಗದೆ ತಪ್ಪಿಸಿಕೊ. C. a loss ನಷ್ಟ ಬರಬಹುದಾದ ವ್ಯಾಪಾರವನ್ನು ಸಕಾಲದಲ್ಲಿ ತೊರೆದುಬಿಡು. C. no ice (ಅಸಂ.) ಏನೂ ಸಾಧಿಸದೆಹೋಗು. C. off ಕತ್ತರಿಸಿಬಿಡು ; ಕೊನೆಗಾಣಿಸು ; (ಸಾಮಾನು, ಸರಬರಾಯಿ, ಸಮಾಚಾರ — ಇವನ್ನು) ಅಡ್ಡಯಿಸು, ತಡೆ. (ಪ್ರವೇಶವಿಲ್ಲದಂತೆ) ಬಹಿಷ್ಕರಿಸು ; ಹೊರಹಾಕು ; ಹಕ್ಕು ತಪ್ಪಿಸು. C. off with a shilling (ಒಂದು ಷಿಲಿಂಗನ್ನು ಮಾತ್ರ ಹೆಸರಿಗೆ ಕೊಟ್ಟಂತೆಮಾಡಿ) ಹಕ್ಕು ತಪ್ಪಿಸು ; ಹಕ್ಕುದಾರಿಯಿಂದ ತೊಲಗಿಸಿಬಿಡು. C. out ಕತ್ತರಿಸಿಹಾಕು ; (ರೂಪ.) (ಸಹಸ್ಪರ್ಧಿಯ ವಿಷಯದಲ್ಲಿ) ಮೀರು ; ಹಿಂದಕ್ಕೆ ಹಾಕು ; ಮೇಲುಗೈಯಾಗು ; ಸ್ಥಳ ಆಕ್ರಮಿಸು. (ಯಾವುದಾದರೂ ಒಂದು ಕೆಲಸವನ್ನು) ತೊರೆದುಬಿಡು ; (ನಲಕರಣೆಯನ್ನು) ಬಳಸದೆಹೋಗು. ಕೆತ್ತು ; ಕೊರೆ ; ರೂಪು ಕೊಡು ; ಆಕಾರ ಕೊಡು (ರೂಪ. ಸಹ). ತಯಾರಿಸು ; ಸಿದ್ಧಮಾಡು (His work is c. out for him). (ಇಸ್ಪೀಟಾಟ) ಎಲೆಗಳ ಕಟ್ಟಿನಿಂದ ಹಠಾತ್ತಾಗಿ ಒಂದು ಎಲೆಯನ್ನು ಎತ್ತಿ ತೆಗೆದು ಬಂದುದರ ಫಲವಾಗಿ ಆಟದಿಂದ ಬಹಿಷ್ಕರಿಸಲ್ಪಡು. (ನಾವೆ) (ಶತ್ರುವಿನ ಹಡಗನ್ನು) ಆ ಹಡಗಿಗೂ ತೀರಕ್ಕೂ ನಡುವೆ ಬಂದು ಹಿಡಿದುಕೊ, ಆಕ್ರಮಿಸು. (ಒಂದು ಸ್ಥಾನಕ್ಕೆ) ಸ್ವಭಾವವಾಗಿ ಯೋಗ್ಯನಾಗಿರು (He is c. out for the job). C. the record (ಓಟದ ಪಂದ್ಯ, ಮೊ. ಗಳಲ್ಲಿ) ಅದುವರೆಗೂ ದಾಖಲೆಯಿರುವ ಪರಮಾವಧಿಯನ್ನು ಮೀರಿಸು. ಇತರ ಯಾವ ವಿಷಯದಲ್ಲಾದರೂ ಅದುವರೆಗಿದ್ದ ಒಂದು ಮಿತಿಯನ್ನು ಮೀರಿಸು. C. short ಮೊಟಕು ಮಾಡು ; ಕಡಮೆ ಮಾಡು ; ಅಡ್ಡಬರು ; ಥಟ್ಟನೆ ನಿಲ್ಲಿಸಿಬಿಡು. C. one's stick ಹೋಗು ; ಹೊರಡು. C. a tooth ಹಲ್ಲು ಹುಟ್ಟು (ಒಸಡಿನಿಂದ ಹೊರಗೆ ಕಾಣಿಸಿಕೊ). C. up ಚೂರುಚೂರಾಗಿ ಕತ್ತರಿಸು ; ತುಂಡುತುಂಡು ಮಾಡು ; ಸಂಪೂರ್ಣವಾಗಿ ನಾಶಮಾಡು ; ನಿರ್ಮೂಲ ಮಾಡು. (ರೂಪ.) ನಿಷ್ಠುರವಾಗಿ ವಿಮರ್ಶೆ ಮಾಡು ; ಖಂಡಿಸು ; ಮನಸ್ಸು ಕೊರೆ ; ಬಹಳ ವ್ಯಥೆಗೊಳಿಸು. C. up rough ಕೋಪ, ರೋಷ, ತೋರು ; ಜಗಳ ಹೂಡು. C. up (well) ಭಾರಿ ಆಸ್ತಿ ಬಿಟ್ಟುಹೋಗು. C. the whole concern ಆ ವ್ಯಾಪಾರವನ್ನೆಲ್ಲ ತೊಲಗಿಸಿಕೊ. **Cútpurse** (ನಾ.) ಗಂಟುಕತ್ತರಿಸುವವನು ; ಜೇಬುಗಳ್ಳ ; ಗಂಟುಕಳ್ಳ. **Cút-throat** (ನಾ., ಗು.) ಕೊರಳು ಕೊಯ್ಕ ; ಕೊಲೆಗೇಡಿ ; ಕೊಲೆಗಡಿಕ ; ಘಾತುಕ. (ಗು.) ವಿಪರೀತವಾದ ; ಅತಿರೇಕದ (C. competition). (ಕೆಲವು ತೆರದ ಇಸ್ಪೀಟಾಟಗಳಲ್ಲಿ) ಮುಕ್ಕೈ. **Cútter** (ನಾ.) ಕತ್ತರಿಸುವವನು ; — ವುದು ; (ಕಲ್ಲು)ಕುಟಿಗ. ಕತ್ತರಿಸಬಹುದಾದ ಮೋಲ್ತರದ ಮೊತು ಇಟ್ಟಿಗೆ. ಯುದ್ಧದ ಹಡಗಿನ ದೋಣಿ ; ಒಕ್ಕೂವೆಯ ಸಣ್ಣ ಹಡಗು. **Cútting** (ಗು., ನಾ.) (ಕ್ರಿಯಾರ್ಥಗಳಲ್ಲಿ) ; (ರೈಲುರಸ್ತೆ, ಮೊ. ಕ್ಕಾಗಿ ದಿಣ್ಣೆಯನ್ನು ಕಡಿದು ಮಾಡಿದ) ತೋಡುದಾರಿ. (Press c. ವರ್ತಮಾನ ಪತ್ರಿಕೆಯಿಂದ ಕತ್ತರಿಸಿತೆಗೆದ ವಿಷಯಭಾಗ). **Cúttingly** (ಕ್ರಿ. ವಿ.) ; **Cútty** ಕಟಿ (ಗು., ನಾ.) ಕತ್ತರಿಸಿ ಮೊಟಕು ಮಾಡಿದ ; ಅತಿ ಮೊಟಕಾದ. (ನಾ.) ಮೋಟು ಚುಂಗಾಣಿ.

Cutáneous ಕ್ಯುಟೇನಿಯಸ್ (ಗು.) ಚರ್ಮದ.

Cútcha, Kútcha ಕಚ (ಗು., ನಾ.) (ಆಂ. ಇಂ.) ಕೀಳು ಗುಣದ ; ಹಂಗಾಮಿಯ ; ' ಕಚ್ಚಾ '. (ನಾ.) ಹಸಿಯಿಟ್ಟಿಗೆ.

Cutchérry, Cútchery ಕಚೆರಿ (ನಾ.) (ಆಂ. ಇಂ.) ಕಚೇರಿ.

Cute ಕ್ಯೂಟ್ (ಗು.) (ಬಳ. ಮಾ.) ಜಾಣ ; ಕುಶಲ ಮತಿ ; ಚತುರ. (ಅಮೆ. ಸಂ., ಬಳ. ಮಾ.) ಆಕರ್ಷಕ. (Acute ಪದದ ಬಳಕೆಯ ರೂಪ). **Cútely** (ಕ್ರಿ. ವಿ.) ; **Cúteness** (ನಾ.)

Cúticle ಕ್ಯೂಟಿಕ್‌ಲ್ (ನಾ.) ಹೊರ ಚರ್ಮ. (ಸ. ವಿ.) ಹೊರ ಪೊರೆ. **Cutícular** ಕ್ಯುಟಿಕ್ಯುಲರ್ (ಗು.)

Cútis ಕ್ಯೂಟಿಸ್ (ನಾ.) (ಅಂ. ರ. ಶಾ.) (ಹೊರಚರ್ಮದ ಅಡಿಯಲ್ಲಿರುವ) ನಿಜ ಚರ್ಮ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cútlas ಕಟ್ಲಸ್ (ನಾ.) (ಮು., ನಾವಿಕರು ಉಪಯೋಗಿಸುವ) ಅಗಲವಾದ, ಬಗ್ಗಿದ ಅಲಗುಳ್ಳ, ಸಣ್ಣ ಕತ್ತಿ : ಕುಡುಗತ್ತಿ.

Cútler ಕಟ್ಲರ್ (ನಾ.) ಚೂರಿ, ಕತ್ತರಿ, ಮೊ. ನ್ನು ತಯಾರಿಸುವವನು, ಅಥವಾ ವ್ಯಾಪಾರ ಮಾಡುವವನು : ಚೂರಿಕತ್ತರಿಗಾರ. **Cútlery** (ನಾ.) ಚೂರಿ ಕತ್ತರಿಗಳ ವ್ಯಾಪಾರ ; ಚೂರಿ ಕತ್ತರಿ.

Cútlet ಕಟ್ಲೆಟ್ (ನಾ.) ಬೇಯಿಸಿದ ಅಥವಾ ಕರಿದ ಮಾಂಸದ ಚೂರು.

Cúttle ಕಟ್‌ಲ್ (ನಾ.) (ಸಾ., C.-fish) ಅಟ್ಟಿಕೊಂಡುಹೋದಾಗ (ತಪ್ಪಿಸಿಕೊಳ್ಳಲು) ಕಪ್ಪುದ್ರವವನ್ನು ಉಚ್ಚುವ ಒಂದು ಜಾತಿಯ ವಲ್ಕವಂತ ಪ್ರಾಣಿ : ಕಟ್‌ಲ್ ಮೀನು. C.-bone ಈ ಪ್ರಾಣಿಯ ಒಳಸಿಂಪಿ (ಉಜ್ಜಿ ಮೆರುಗುಕೊಡುವುದಕ್ಕೆ ಉಪಯೋಗ) ; 'ಸಮುದ್ರದ ನೊರೆ'.

Cútworm ಕಟ್‌ವರ್ಮ್ (ನಾ.) ಸಣ್ಣ ಸಸ್ಯಗಳನ್ನು ನೆಲಮಟ್ಟ ಕಡಿದು ಹಾಕುವ ಕಂಬಳಿಹುಳು.

Cyánic ಸೈಅ್ಯನಿಕ್ (ಗು.) ನೀಲ ವರ್ಣದ. (ರ. ವಿ.) 'ಸೈಅ್ಯನೊಜೆನ್' ಸಂಯುಕ್ತದ. **Cyánogen** (ನಾ.) (ರ. ವಿ.) ಒಂದು ಇಂಗಾಲ ಪರಮಾಣುವೂ ಒಂದು ಸಾರಜನಕ ಪರಮಾಣುವೂ ಕೂಡಿ ಸಂಯುಕ್ತವಾಗಿರುವ ಅಂಶ. **Cýanide** ಸೈಅನೈಡ್ (ನಾ.) (ರ. ವಿ.) ಸೈಅ್ಯನೊಜೆನ್ನಿನ ಮತ್ತು ಒಂದು ಲೋಹಧಾತುವಿನ ಸಂಯುಕ್ತ. C. process 'ಪೊಟಾಸಿಯಂ ಸೈಅನೈಡ್' ಲಘುದ್ರಾವಣದಿಂದ ಒಂದು ಪ್ರಶಸ್ತಲೋಹದ (ಬೆಳ್ಳಿ, ಚಿನ್ನ) ಖನಿಜವನ್ನು ಸಂಸ್ಕರಿಸಿ ಆ ಲೋಹವನ್ನು ತೆಗೆಯುವ ಪ್ರಕ್ರಿಯೆ : ಸಯನೈಡ್ ಪ್ರಕ್ರಿಯೆ.

Cyanósis ಸೈಅನೋಸಿಸ್ (ನಾ.) (ಆಮ್ಲಜನಕವು ತಕ್ಕಷ್ಟು ಸೇರಿರದ ರಕ್ತದ ಪರಿಚಲನದಿಂದ ಹುಟ್ಟುವ) ನೀಲಿ ಕಾಮಾಲೆ.

Cýcad ಸೈಕ(ಕ್ಯಾ)ಡ್ (ನಾ.) (ಸ. ವಿ.) ತಾಳವೃಕ್ಷದಂಥ ಒಂದು ಜಾತಿಯ ಮರ : ತಾಳಕಲ್ಪ.

Cýclamen ಸಿಕ್ಲಮೆನ್ (ನಾ.) (ಇತರ ಹೂವುಗಳಿಗಿಂತ) ಮೊದಲೇ ಅರಳುವ ಅಂದವಾದ ಹೂವು ಬಿಡುವ ಸಸ್ಯಜಾತಿ.

Cýcle ಸೈಕ್‌ಲ್ (ನಾ., ಕ್ರಿ. ಅಕ.) ಘಟನೆಗಳು, ಗೋಚರಾನುಭವಗಳು, ಮೊ. ವು ಪದೇಪದೇ ಒಂದೇ ಕಾಲಪರಿಮಾಣದಲ್ಲಿ ಆವೃತ್ತಿಯಾಗುವ ಚಕ್ರಗತಿಯ ಕಾಲ ; ಚಕ್ರ ; ಕಾಲಚಕ್ರ ; ಸುತ್ತು ; ಆವೃತ್ತಿ ; ಆವರ್ತ. ಒಂದು ವಿಷಯ ಪೂರ್ತಿಯಾಗುವುದಕ್ಕೆ ಹಿಡಿಯುವ ಕಾಲ. ನಿಷ್ಕೃಷ್ಟವಾಗಿ ಹೇಳದ ಒಂದು ದೀರ್ಘ ಕಾಲ ; ಯುಗ. ಸಂಪೂರ್ಣ ಶ್ರೇಣಿ. ಒಂದು ವಿಷಯವನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಲೂ ಕಟ್ಟಿರುವ ಕಾವ್ಯಮಾಲೆ, ಕಥಾವಳಿ : ಕಾವ್ಯ ಚಕ್ರ ; ನಾಟಕ ಚಕ್ರ. ಇಗ್ಗಾಲಿ (ಬೈಸಿಕಲ್), ಮೂಗಾಲಿ (ಟ್ರೈಸಿಕಲ್), ಮೊ. ವು [C.-car ಎರಡು ಅಥವಾ ಮೂರು ವರ್ತುಲನಾಳಿಗಳ ಎಂಜಿನ್ನುಳ್ಳ ಬಹಳ ಹಗುರವಾದ ಮೋಟಾರು ಮೂಗಾಲಿ (ಕೆಲವು ಸಂದರ್ಭಗಳಲ್ಲಿ ನಾಗಾಲಿ)]. (ಸ. ವಿ.) ಪತ್ರವಿನ್ಯಾಸದಲ್ಲಿ ಪೂರ್ತಿಯಾದ ಒಂದು ತಿರುವು. (ಖ. ವಿ.) ಖಗೋಳ ವೃತ್ತ, ಪರಿಧಿ. (ಕ್ರಿ.) ಆವರ್ತವಾಗು ; ಸುತ್ತಿ ಬರು ; ಸೈಕಲ್ ಸವಾರಿ ಮಾಡು. **Cýclic(al)** ಸೈ(ಸಿ) — (ಗು.) ಚಕ್ರಗತಿಯಲ್ಲಿ ಆವರ್ತಿಸುವ ; ಆವರ್ತ ; ಪರಿವರ್ತಿ ; ಕಾಲಚಕ್ರದ. (ಸ. ವಿ.) (ಹೂವಿನ ವಿಷಯದಲ್ಲಿ) ದಳಗಳು ಸುತ್ತು ಸುತ್ತಾಗಿರುವ. ಕಾವ್ಯ ಚಕ್ರದ (Cyclic poet ಚಕ್ರಕಾವ್ಯ ಕವಿ). Cyclic chorus ಚಕ್ರ ಮೇಳ. **Cýclist** (ನಾ.) ಸೈಕಲ್ ಸವಾರ.

Cýclograph ಸೈ(ಸಿ)ಕ್ಲೊಗ್ರಾಫ್ (ನಾ.) ವೃತ್ತಖಂಡಗಳನ್ನು ರೇಖಿಸುವ ಸಲಕರಣೆ : ವೃತ್ತಖಂಡ ರೇಖಕ.

Cýcloid ಸೈ(ಸಿ)ಕ್ಲಾಯ್ಡ್ (ನಾ.) (ಗಣಿತ) ಒಂದು ವೃತ್ತರೇಖೆಯು ಒಂದು ಋಜುರೇಖೆಯಮೇಲೆ ಉರುಳುವಾಗ ಅದರ ಪರಿಧಿಯಮೇಲಿನ (ಅಥವಾ ತ್ರಿಜ್ಯದಮೇಲಿನ) ಒಂದು ಬಿಂದುವು ಆಕಾಶದಲ್ಲಿ ರಚಿಸುವ ವಕ್ರರೇಖೆ ; ಚಕ್ರಾಭಾಸ ; ಚಕ್ರಕಲ್ಪ. **Cycloídal** (ಗು.)

Cyclómeter ಸೈಕ್ಲಾಮಿಟರ್ (ನಾ.) ವೃತ್ತಖಂಡ ಮಾಪಕ ; ಚಕ್ರಾವರ್ತ ಮಾಪಕ (ಬೈಸಿಕಲ್ ಮೊ. ಗಳ ಗಾಲಿಯ ಉರುಳುಗಳನ್ನು ಅಳೆಯುವ ಸಲಕರಣೆ)

Cýclone ಸೈಕ್ಲೋನ್ (ನಾ.) ನ್ಯೂನತಮ ವಾಯುಭಾರವಿರುವ ಪ್ರದೇಶದ ಕೇಂದ್ರದ ಸುತ್ತಲೂ ಸುತ್ತುವ ಮಾರುತ ಸರಣಿ : ಸುಂಟರ ಗಾಳಿ ; ಸುಳಿ ಗಾಳಿ ; ಆವರ್ತ ಮಾರುತ ; ಮಹಾ ಚಕ್ರ ವಾತ ; (ಪರಿಮಿತ ವ್ಯಾಸವುಳ್ಳ) ಪ್ರಚಂಡ ಮಾರುತ ; ಝುಂಝೂ ವಾತ. **Cyclónic** — ಕ್ಲಾನಿಕ್ (ಗು.)

Cyclop(a)édia ಸೈಕ್ಲೊಪೀಡಿಯ (ನಾ.) = Encyclopaedia. **Cyclop(a)édic** (ಗು.)

Cýclop(s) ಸೈಕ್ಲಾಪ್(ಸ್) (ನಾ. ; ಬ. ವ. -ops, -opses, -opes, -ಕ್ಲೋಪೀಸ್) (ಗ್ರೀಕ್ ಪುರಾಣ) ಒಕ್ಕಣ್ಣಿನ ಒಬ್ಬ ರಾಕ್ಷಸ. ಒಕ್ಕಣ್ಣ. **Cyclopéan** ಸೈಕ್ಲೊಪೀಯನ್, **-clópian** ಸೈಕ್ಲೋಪಿಯನ್ (ಗು.) ಒಕ್ಕಣ್ಣ ರಾಕ್ಷಸನ ; — ನಂಥ ; ಬೃಹದಾಕಾರದ ; ರಾಕ್ಷಸಾಕಾರದ ; ವಿಪರೀತ ದೊಡ್ಡ. C. masonry ಅಸಮವಾದ ಭಾರಿ ಕಲ್ಲುಗುಂಡುಗಳಿಂದ ಕಟ್ಟುತ್ತಿದ್ದ ಪೂರ್ವಕಾಲದ ಕಟ್ಟಡ : ರಾಕ್ಷಸ ಕಟ್ಟಡ.

Cycloráma ಸೈಕ್ಲೊರಾಮ (ನಾ.) ಪ್ರಕೃತಿ ದೃಶ್ಯ, ಮೊ. ಗಳ ಚಿತ್ರವು ವಿಸ್ತಾರವಾದ ಒಂದು ವರ್ತುಲನಾಳಿಯಾಕಾರದ ಅಂತಃಪ್ರದೇಶದಲ್ಲಿ ಅಳವಡಿಸಿರುವುದನ್ನು ಪ್ರೇಕ್ಷಕನು ಒಳಗಡೆ ಮಧ್ಯದಲ್ಲಿ ನಿಂತು ನೋಡುವ ದೃಶ್ಯ : ಚಕ್ರ ದೃಶ್ಯ.

Cýclostyle ಸೈಕ್ಲೊಸ್ಟೈಲ್ (ನಾ.) ತುದಿಯಲ್ಲಿ ತಿರುಗುವ ಸಣ್ಣ ಹಲ್ಲುಚಕ್ರವುಳ್ಳ ಲೇಖನಿಯಿಂದ ಮುದ್ರಣ ಪತ್ರಫಲಕದ ಮೇಲೆ ಅಕ್ಷರ, ಮೊ. ನ್ನು ಕೊರೆದು ಆ ಫಲಕದಿಂದ ಅನೇಕ ಪ್ರತಿಗಳನ್ನು ಮುದ್ರಿಸಲಾಗುವ ಸಲಕರಣೆ : ಚಕ್ರ ಲೇಖಕ.

Cýgnet ಸಿಗ್ನೆಟ್ (ನಾ.) ಮರಿ ಹಂಸ.

Cýlinder ಸಿಲಿಂಡರ್ (ನಾ.) ಉರುಳೆ (ಗಟ್ಟಿ ಅಥವಾ ಟೊಳ್ಳು). (ಜ್ಯಾ.) ಒಂದು ಋಜುರೇಖೆಯು ತನ್ನ ಕೊನೆಗಳಿಂದ ಯಾವುದಾದರೂ ನಿರ್ದಿಷ್ಟ ವಕ್ರರೇಖೆಯನ್ನು (ಸಾ., ವೃತ್ತರೇಖೆಯನ್ನು) ರಚಿಸುವಂತೆ ತನಗೆ ಸಮಾನಾಂತರವಾಗಿ ಸುತ್ತುವುದರಿಂದ ಆದ ಘನಾಕೃತಿ : ವರ್ತುಲ ಸ್ತಂಭಾಕೃತಿ ; ವರ್ತುಲ ಕಾಂಡ ; ವರ್ತುಲ ನಾಳಿ. ಬ್ಯಾಬಿಲಾನ್ ಅಥವಾ ಅಸಿರಿಯದ ದೇವಸ್ಥಾನಗಳ ಕೆಳಗೆ ಹೂತಿಟ್ಟಿರುವ ಬೆಣೆಲಿಪಿ ಕೊರೆದ, ಜೇಡಿಮಣ್ಣಿನಿಂದಮಾಡಿ ಅವಿಗೆಯಲ್ಲಿ ಸುಟ್ಟ, ಪೀಪಾಯಿಯಾಕಾರದ ವಸ್ತು. ಅಸಿರಿಯನ್ನರು ಮುದ್ರೆಯಾಗಿ ಉಪಯೋಗಿಸುತ್ತಿದ್ದ ಉರುಳೆಯಾಕಾರದ ಕಲ್ಲು. ಅನೇಕ ಯಂತ್ರಗಳ ಉರುಳೆಯಾಕಾರದ ಭಾಗ (ಮು., ಆಡುಬೆಣೆಯಮೇಲೆ ಕಾರ್ಯಮಾಡುವ ಹಬೆಯ ಕೋಷ್ಠ). ಮುದ್ರಣ ಮಾಡುವಲ್ಲಿ ಉಪಯೋಗಿಸುವ ಲೋಹದ ಉರುಳೆ. **Cylíndrical** (ಗು.) ವರ್ತುಲಸ್ತಂಭಾಕೃತಿಯ ; ಉರುಳೆಯಾಕಾರದ. **Cýlindroid** (ಗು., ನಾ.) ವರ್ತುಲಸ್ತಂಭ ಕಲ್ಪ.

Cýmbal ಸಿಂಬಲ್ (ನಾ.) (ಕಂಚಿನ ಅಥವಾ ಹಿತ್ತಾಳೆಯ) ತಾಳ ; ಝಲ್ಲರಿ. **Cýmbalist** (ನಾ.) ತಾಳ ಹಾಕುವವನು.

Cýmbiform ಸಿಂಬಿಫಾರ್ಮ್ (ಗು.) (ಅಂ. ರ. ಶಾ., ಸ. ವಿ.) ದೋಣಿಯಾಕಾರದ.

Cymbocephálic ಸಿಂಬೊಸಿಫ್ಯಾಲಿಕ್ (ಗು.) ದೋಣಿಯಾಕಾರದ (ಎಂದರೆ, ನಿಡಿದಾಗಿಯೂ ಕಿರಿದಾಗಿಯೂ ಇರುವ) ಕಪಾಲವುಳ್ಳ : ದೋಣಿ ಕಪಾಲಿ.

Cyme ಸೈಮ್ (ನಾ.) (ಸ. ವಿ.) ಪ್ರಧಾನ ವೃಂತವು ತುದಿಯಲ್ಲಿ ಒಂದೇ ಹೂವು ಬಿಟ್ಟು ಅದು ಅರಳಿದ ತರುವಾಯ ಉಪ ವೃಂತಗಳು ಹೂವು ಬಿಟ್ಟು ಅರಳುತ್ತ ಹೋಗುವ ಪುಷ್ಪವಿನ್ಯಾಸ : ಮಧ್ಯಾರಂಭ ಮಂಜರಿ. **Cymóse** (ಗು.) ಮಧ್ಯಾರಂಭ ಮಂಜರಿಯ.

Cýmoscope ಸೈಮೊಸ್ಕೋಪ್ (ನಾ.) ನಿಸ್ತಂತು ವಾರ್ತಾಪ್ರಸರಣದಲ್ಲಿ ತರಂಗಗಳನ್ನು ಕಂಡುಹಿಡಿಯಲು ಉಪಯೋಗಿಸುವ ಸಲಕರಣೆ : ವಿದ್ಯುತ್ತರಂಗ ದರ್ಶಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Cýmric ಕಿಮ್ರಿಕ್ (ಗು.) ವೇಲ್ಸ್ ಜನರ, ಭಾಷೆಯ.

Cýnic ಸಿನಿಕ್ (ಗು., ನಾ.) (ಕ್ರಿ. ಪೂ. ೪೦೦ ರಲ್ಲಿದ್ದ) ಗ್ರೀಕ್ ತತ್ತ್ವಜ್ಞನೊಬ್ಬನು ಸ್ಥಾಪಿಸಿದ ಒಂದು ತಾತ್ತ್ವಿಕ ಪಂಥದ (ಅನುಯಾಯಿ) (ಈ ಪಂಥದವರು ಐಶ್ವರ್ಯ, ಭೋಗ, ಕಲೆ, ವಿಜ್ಞಾನ — ಇವೆಲ್ಲವನ್ನೂ ತುಚ್ಛೀಕರಿಸಿ ನೋಡುವೆವೆಂಬ ಹೆಮ್ಮೆಯಿಂದಿದ್ದವರು) : 'ಸಿನಿಕ'. ಸಿನಿಕ ತತ್ತ್ವಾನುಯಾಯಿಗಳ. ಜರತೆಗಾರ ; ಸರ್ವ ತಿರಸ್ಕಾರಿ. ಎಲ್ಲದರಲ್ಲೂ ತಪ್ಪು ಹಿಡಿಯುವ ಸ್ವಭಾವದವನು ; ದೋಷದೃಕ್ಕು ; ಭೋಗ ವಿದ್ವೇಷಿ. ಪ್ರಪಂಚದಲ್ಲಿ ಜನರ ಸದ್ಭಾವನೆ ಸದ್ವರ್ತನೆಗಳು ಕಪಟವೆಂದು ನಂಬಿ ಅವನ್ನು ಅಲ್ಲಗಳೆಯುವವನು. **Cýnical** (ಗು.) ನಿಷ್ಠುರ ; ಸಿಡುಕಿನ ; ಜರೆಯುವ ; ಒಳ್ಳೆಯದನ್ನು ನಂಬದ ; ತಪ್ಪು ಹುಡುಕುವ ; ಸದಾ ವಕ್ರ ; ದೋಷೈಕದೃಷ್ಟಿಯ ; ಜನರ ಸದ್ಭಾವದಲ್ಲಿ ನಂಬಿಕೆಯಿಲ್ಲದ ; ತಿರಸ್ಕಾರ ಭಾವದ. **Cýnically** (ಕ್ರಿ. ವಿ.) ; **Cýnicism** (ನಾ.) ಸಿನಿಕ ತತ್ತ್ವ ; ಸಿನಿಕ ಭಾವ, ಗುಣ, ನಡತೆ ; ನಿಷ್ಠುರತೆ ; ಮಾನವ ದ್ವೇಷ ; ತಿರಸ್ಕಾರ ; ಜರತೆ ; ಹಳಿಕೆ.

Cýno- ಸೈ(ಸಿ)ನೊ- (ಸಮಾಸದಲ್ಲಿ ಪೂರ್ವಪದ) ಶ್ವಾನ—, ನಾಯಿ — ; **Cynophóbia** ಶ್ವಾನ ಭಯ.

Cynocéphalus ಸಿ(ಸೈ)ನೊಸೆಫಲಸ್ (ನಾ.) (ಗ್ರೀಕ್ ಪುರಾಣದಲ್ಲಿಯ) ನಾಯಿತಲೆಯ ಮನುಷ್ಯ : ಶ್ವಾನ ಶೀರ್ಷಿ. (ಜೀ. ವಿ.) ನಾಯಿಮುಖದ 'ಬಬೂನ್' ಕೋತಿ.

Cýnosure ಸಿ(ಸೈ)ನೊಸ್ಯೂ(ಷೂ, ಫ಼ೂ)ರ್ (ನಾ.) ಧ್ರುವ ನಕ್ಷತ್ರವಿರುವ ನಕ್ಷತ್ರ ಪುಂಜ : ಲಘು ಸಪ್ತರ್ಷಿ (ನಕ್ಷತ್ರ ಪುಂಜ) ; ಜ್ಯೋತಿರಥ. ಮಾರ್ಗದರ್ಶಕ (ನಕ್ಷತ್ರ). ಮೆಚ್ಚಿಗೆಗೆ ಪಾತ್ರವಾದದ್ದು ; ಆಕರ್ಷಕ ; ಮೋಹಕ ; ಮನ ಸೆಳೆ.

Cýpher. **Cipher** ನೋಡಿ.

Cy pres ಸೀ ಪ್ರೇ (ಕ್ರಿ. ವಿ., ನಾ., ಗು.) (ನ್ಯಾ. ಶಾ.) (ಅಂತಿಮ ಇಷ್ಟ ಪತ್ರಗಾರನ ಉದ್ದೇಶಗಳಿಗೆ) ಆದಷ್ಟು ಹತ್ತಿರ. ಸರಿ ಸುಮಾರು ; ಹತ್ತಿರ ಹತ್ತಿರ.

Cýpress ಸೈಪ್ರೆಸ್ (ನಾ.) ಗಟ್ಟಿ ದಾರುವೂ ಒತ್ತಾಗಿರುವ ಕಪ್ಪೆಲೆಗಳೂ ಉಳ್ಳ ಒಂದು ಜಾತಿಯ ಮರ : ಸೈಪ್ರೆಸ್ ಮರ. (ದುಃಖಸೂಚಕ ಚಿಹ್ನೆಯಾಗಿ ಉಪಯೋಗಿಸುವ) ಸೈಪ್ರೆಸ್ ಮರದ ರೆಂಬೆ (ರೂಪ. ಸಹ)

Cýprian ಸಿಪ್ರಿಯನ್ (ಗು., ನಾ.) ಸೈಪ್ರೆಸ್ ದೇಶದ(ವನು) ; ವಿಷಯ ಲಂಪಟ ; ಸ್ವೇಚ್ಛಾಚಾರಿ. **Cýpriot(e)** ಸಿಪ್ರಿಯಾಟ್, — ಯೋಟ್ (ಗು., ನಾ.) ಸೈಪ್ರೆಸ್ ದೇಶದ(ವನು)

Cyrenáic ಸೈರಿನೇಯಿಕ್ (ಗು., ನಾ.) (ಸೈರೀನಿ ಪಟ್ಟಣದ ಅರಿಸ್ಟಿಪಸ್ ಎಂಬ ತತ್ತ್ವಜ್ಞನು ಸ್ಥಾಪಿಸಿದ) ಸುಖ ವಾದದ (ಅನುಯಾಯಿ) ; ಸುಖ ವಾದಿ.

Cyst ಸಿಸ್ಟ್ (ನಾ.) (ಜೀ. ವಿ.) ಪ್ರಾಣಿಗಳಲ್ಲಿ ಅಥವಾ ಸಸ್ಯಗಳಲ್ಲಿ ಸ್ರಾವದ್ರವವುಳ್ಳ ಪೊಳ್ಳು ಅಂಗ, ಚೀಲ, ಕೋಶ. (ರೋಗ) ಪೂತಿ ದ್ರವ್ಯ, ಜಂತು, ಮೊ. ಗಳುಳ್ಳ ಕೋಶ : ಪೂತಿಕೋಶ. **Cýstiform** (ಗು.) ಪೂತಿಕೋಶಾಕಾರದ. **Cýstic** (ಗು.) ಪೂತಿಕೋಶದ ; ಮೂತ್ರಕೋಶದ ; ಪಿತ್ತಕೋಶದ. **Cystítis** ಸಿಸ್ಟೈಟಿಸ್ (ನಾ.) ; **Cýstocele** ಸಿಸ್ಟೊಸೀಲ್ (ನಾ.) ಮೂತ್ರಕೋಶದ ಊತ. **Cýstoid** ಸಿಸ್ಟಾಯ್ಡ್ (ಗು.) ಪೂತಿಕೋಶದಂಥ. **Cystóma** ಸಿಸ್ಟೋಮ (ನಾ. ; ಬ. ವ. -mata) ಪೂತಿಕೋಶಗಳುಳ್ಳ ಸ್ಫೋಟ, ಬಾವು.

Cýtoblast ಸೈಟೊಬ್ಲಾಸ್ಟ್ (ನಾ.) ಜೀವ ಕಣದ ಜೀವದ್ರವ್ಯದ ಆಧಾರಬಿಂದು.

Cýtode ಸೈಟೋಡ್ (ನಾ.) ಆಧಾರಬಿಂದುವಿಲ್ಲದ ಜೀವ ಕಣ, ಅಥವಾ ಜೀವದ್ರವ್ಯ ಬಿಂದು (ಜೀವ ವ್ಯಕ್ತವಾಗಿರುವ ಪದಾರ್ಥಗಳಲ್ಲಿ ಅತ್ಯಂತ ಕೀಳಾದದ್ದು)

Cýtoplasm ಸೈಟೊಪ್ಲ್ಯಾಸ್ಮ್ (ನಾ.) ಜೀವ ದ್ರವ್ಯ (ಮು., ಜೀವ ಕಣದ್ದು, ಆಧಾರಬಿಂದುವಿನದಲ್ಲ)

Czar, Tsar, Tzar ಟ್ಸಾರ್, ಝ಼ಾರ್ (ನಾ.) ರಷ್ಯಾ ಚಕ್ರವರ್ತಿ. **Czárevitch, -wicn, Tsár-** ಟ್ಸಾ(ಝ಼ಾ)ರೆವಿಚ್ (ನಾ.) ರಷ್ಯಾ ಚಕ್ರವರ್ತಿಯ ಮಗ. **Czarévna, Tsar-** ಟ್ಸಾ(ಝ಼ಾ)ರೆವ್ನ (ನಾ.) ರಷ್ಯಾ ಚಕ್ರವರ್ತಿಯ ಮಗಳು. **Czarína, Tsar-** ಟ್ಸಾ(ಝ಼ಾ)ರೀನ (ನಾ.) ರಷ್ಯಾ ಚಕ್ರವರ್ತಿಯ ಹೆಂಡತಿ ; ರಷ್ಯಾ ಚಕ್ರವರ್ತಿನಿ. **Czarítza, Tsar-** ಟ್ಸಾರಿಟ್ಸ, ಝ಼ಾರಿಟ್ಸ (ನಾ.) (Czarina ಪದದ ರಷ್ಯನ್ ರೂಪ)

Czech, -kh ಚೆಖ್ (ನಾ., ಗು.) ಬೊಹೀಮಿಯಾ ದೇಶದ(ವನು)

Czecho-Slóvak ಚೆಕೊಸ್ಲೋವ್ಯಾಕ್, **Czecho-Slovák** ಚೆಕೋ ಸ್ಲೊವಾಕ್ (ಗು., ನಾ.) ಚೆಕೊಸ್ಲೊವೇಕಿಯಾ ಎಂಬ (ಹೊಸ) ರಾಷ್ಟ್ರದ(ವನು)

D

D ಡೀ. ಇಂಗ್ಲಿಷ್ ವರ್ಣಮಾಲೆಯ ನಾಲ್ಕನೆಯ ಅಕ್ಷರ. (ಸಂ.) ಸಪ್ತ ಸ್ವರಗಳಲ್ಲಿ ಎರಡನೆಯದು : 'ರಿ' ; ಋಷಭ. ಎಣಿಕೆಯ ಕ್ರಮದಲ್ಲಿ ನಾಲ್ಕನೆಯದು (Group D., etc.)

ಸಂಕ್ಷಿಪ್ತಗಳು : **D = 500** (XD = 490 ; MDCLXVI = 1666). **D.B.E.** (Dame of British Empire) ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಹೆಂಗಸಿಗೆ ಕೊಡುವ ಒಂದು ಬಿರುದು. **D.T.** (Delirium tremens) (ಅತಿ ಕುಡುಕರಿಗೆ ಬರುವ) ಕಂಪ ಸನ್ನಿ. **D.V.** (Deo volente) ದೈವೇಚ್ಛೆಯಿದ್ದರೆ. **D.O.M.** (Deo optimo maximo) ಸರ್ವೋತ್ತಮನೂ ಮಹತ್ತಮನೂ ಆದ ದೇವರಿಗೆ. **D.N.B.** (Dictionary of National Biography) ಸ್ವದೇಶೀಯ ಪ್ರಸಿದ್ಧ ಜನರ ಜೀವನ ಚರಿತ್ರೆಯ ನಿಘಂಟು. **D.C.M.** (Distinguished conduct medal) ಉದಾತ್ತ ವರ್ತನೆಯ (ಬಿರುದಿನ) ಪದಕ. **D.C.L.** (Doctor of Civil Law) ವ್ಯವಹಾರ ಧರ್ಮ ವಿಶಾರದ. **D.D.** (Doctor of Divinity) ದೇವತಾ ಶಾಸ್ತ್ರ ವಿಶಾರದ. **D.Lit(t).** (Doctor of Literature) ಸಾಹಿತ್ಯ ವಿಶಾರದ. **d.** (Daughter) ಮಗಳು ; (Died) ಸತ್ತದ್ದು, ಮರಣ (d. 1826) ; (Denarius) ಪೆನಿ (ನಾಣ್ಯ, £ 1—2s.—3d.). **d —** (Damn), **d-d** (Damned) (ಶಪಿಸುವ ಮಾತು) ಹಾಳಾಗ ! ಹಾಳಾದದ್ದು ! **dep.** (Departure) ಹೊರಡುವುದು. **Deut.** (Deuteronomy). **do** (ditto) ಅದೇ ; ಮೇಲೆ ಹೇಳಿದುದೇ. **Dr.** (Debtor, Doctor) ಸಾಲಗಾರ ; ಪಂಡಿತ, ವಿಶಾರದ. **dwt.** (Pennyweight) ೨೪ ಗ್ರೇಯ್ನ್ ತೂಕ.

Da = Dad.

Dab[1] ಡ್ಯಾಬ್ (ಕ್ರಿ. ಸಕ., ನಾ.) ಮೆಲ್ಲಗೆ ಅಥವಾ ತಟಕ್ಕನೆ ಹೊಡೆ, ಬಡಿ, ತಟ್ಟು ; (ಸ್ಪಂಜು, ಕುಂಚಿಗೆ, ಮೊ. ಗಳಿಂದ) ಮೇಲ್ಮೈಯನ್ನು (ಉಜ್ಜದೆ) ಒತ್ತು. (ನಾ.) ಮೆಲ್ಲನೆಯ ಅಥವಾ ಥಟ್ಟನೆಯ ಹೊಡೆತ ; ತಟ್ಟು ; ಒತ್ತು ; (ಸ್ಪಂಜು, ಚೌಕ. ಮೊ. ನ್ನು) ಮೇಲ್ಮೈಗೆ (ಉಜ್ಜದೆ) ಒತ್ತುವುದು. ಈ ರೀತಿಯಾಗಿ ಒತ್ತಿದ ದ್ರವ, ಬಣ್ಣ, ಮೊ. ವು. ನೆನೆದ ಅಥವಾ ಕೊಳೆಯಾದ ಚಿಂದಿಬಟ್ಟೆ. **Dábber** (ನಾ.) — ವವನು ; — ವದು ; (ಮು., ಮೇಲ್ಮೈಗೆ ಶಾಯಿಯನ್ನೊ ಬಣ್ಣವನ್ನೊ ಒಂದೇ ಸಮವಾಗಿ ಹಚ್ಚಲು ಮುದ್ರಣಕಾರರು, ಮೊ. ರು ಉಪಯೋಗಿಸುವ) ಮೆತು ಪದಾರ್ಥದ ದುಂಡನೆಯ ಒತ್ತಿಗೆ ; ತಟ್ಟೊತ್ತಿಗೆ. ಕೂಡಕ್ಷರ ಫಲಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿಂದ ಮುದ್ರಣ ಮಾಡುವಲ್ಲಿ ಅದರ ಮೇಲಿಟ್ಟ ತೇವದ ಕಾಗದವು ಅಕ್ಷರಗಳ ಸಂದುಗಳಲ್ಲೆಲ್ಲ ಸೇರುವಂತೆ ತಟ್ಟುವುದಕ್ಕಾಗಿ ಉಪಯೋಗಿಸುವ ಒತ್ತಿಗೆ : ಅಚ್ಚೊತ್ತಿಗೆ. **Dábby** (ಗು.) ನೆನೆದ ; ಒದ್ದೆಯಾದ ; ತೇವವಾದ ; (ಬಟ್ಟೆಯ ವಿಷಯದಲ್ಲಿ) ನೆನೆದು ಹತ್ತಿಕೊಂಡಿರುವ.

Dab² ಡ್ಯಾಬ್ (ನಾ.) ಒಂದು ಜಾತಿಯ ಸಣ್ಣ ಚಪ್ಪಟೆಯ ಮೀನು.

Dab³ ಡ್ಯಾಬ್ (ನಾ.) (ಬಳ. ಮಾ.) (ಆಟಪಾಟಗಳಲ್ಲಿ, ಕೆಲಸ ಕಾರ್ಯಗಳಲ್ಲಿ) ಜಾಣ, ದಕ್ಷ, ನಿಪುಣ, ಚತುರ.

Dábble ಡ್ಯಾಬ್‌ಲ್ (ಕ್ರಿ.) ಚಿಮುಕಿಸಿ ನೆನಸು ; ಚಿಮುಕಿಸು ; ಎರಚು ; ಪ್ರೋಕ್ಷಿಸು ; (ನೀರು, ಕೆಸರು, ಮೊ. ನ್ನು) ಸಿಡಿಸು ; ಹಾರಿಸು ; ತೋಯಿಸು ; ಕೊಳೆಮಾಡು. ನೀರು ಸಿಡಿಯುವಂತೆ, ಎರಚುವಂತೆ, ನೀರಿನಲ್ಲಿ ಕೈಕಾಲನ್ನು, ಕೊಕ್ಕನ್ನು, ಆಡಿಸು ; ನೀರಿನಲ್ಲಿ ಆಟವಾಡು. ಯಾವುದಾದರೂ ಒಂದು ಕಾರ್ಯದಲ್ಲಿ, ಉದ್ಯಮದಲ್ಲಿ, ಕೇವಲ ವಿನೋದಕ್ಕಾಗಿ ತೊಡಗು, ಕೈಹಾಕು ; ನಿಷ್ಠೆಯಿಲ್ಲದೆ ಮೇಲ್ಮೇಲೆ ಮಾಡು. **Dábbler** (ನಾ.)

Dábster ಡ್ಯಾಬ್‌ಸ್ಟರ್ (ನಾ.) = Dab³ ; = Daubster.

Da cápo (It.) ಡಾ ಕಾಪೊ. (ಸಂ.) (ಸೂಚನೆ) ಮೊದಲಿಂದ ಮತ್ತೆ ನುಡಿ(ಸು) ; ಪುನರಾವರ್ತನೆ ಮಾಡು ; ಪುನರಾವರ್ತಿಸು.

Dace ಡೇಯ್ಸ್ (ನಾ.) ಸಿಹಿನೀರಿನ ಒಂದು ಜಾತಿಯ ಸಣ್ಣ ಮೀನು.

Dáchshund ಡಾಕ್‌ಸ್‌ಹುಂಡ್(ಟ್) (ನಾ.) ಮೋಟುಕಾಲಿನ ತಳಿಯ ಒಂದು ನಾಯಿಜಾತಿ.

Dacoít ಡಕಾಯ್ಟ್ (ನಾ.) ಇಂಡಿಯಾ ಅಥವಾ ಬರ್ಮಾ ದೇಶದ ಸಾಯುಧ ಚೋರತಂಡದವನು : ಡಕಾಯಿತ. **Dacoíty** (ನಾ.) ಡಕಾಯಿತಿ.

Dáctyl ಡ್ಯಾಕ್ಟಿಲ್ (ನಾ.) (ಛಂ.) ಭಗಣ (—∪∪). **Dactýlic** (ಗು., ನಾ.) 'ಭ' ಗಣಗಳ ; (ಸಾ., ಬ. ವ. ದಲ್ಲಿ) ಭಗಣಾತ್ಮಕ (ಬಂಧ, ಪದ್ಯ)

Dad ಡ್ಯಾಡ್, **Da** ಡಾ, **Dáda** ಡ್ಯಾಡ, **Dáddy** ಡ್ಯಾಡಿ (ನಾ.) (ಬಳ. ಮಾ.) ಅಪ್ಪ ; ಅಯ್ಯ ; ದಾದ (ಮು., ಸಂಬೋಧನೆಯಲ್ಲಿ). Daddy-longlegs ಒಂದು ಜಾತಿಯ ಹಾರುಹುಳು.

Dáddle ಡ್ಯಾಡ್‌ಲ್ (ನಾ., ಕ್ರಿ. ಅಕ.) (ಪ್ರಾಂತಿಕ) ಮುಷ್ಟಿ. (ಕ್ರಿ.) ತೊಡರಿಕೊಂಡು ನಡೆ ; ತಪ್ಪಡಿಯಿಡು. ಕಾಲ ಕಳೆ ; ಸೋಮಾರಿಯಾಗಿರು.

Dádo ಡೇಡೊ (ನಾ.) (ವಾ. ಶಾ.) ಸುಣ್ಣಪಾದದ ಅಡಿಗೂ ಕಾರ್ನಿಸಿಗೂ ಮಧ್ಯದ ಘನಾಕೃತಿಯ ಭಾಗ. ಗೋಡೆಯ ತಳದಿಂದ ಸ್ವಲ್ಪ ಎತ್ತರದವರೆಗೂ ಹಲಗೆಸೇರುವೆಯಿಂದಲೊ, ಮೇಲ್ಭಾಗದಂತಲ್ಲದೆ ಬೇರೆ ಬಣ್ಣ ಹಾಕಿರುವುದರಿಂದಲೊ, ಅಳವಡಿಸಿರುವ ಗೋಡೆಯ ಅಡಿಭಾಗ : ಮೇಜುಕಟ್ಟು. **Dádoed** (ಗು.)

Daédal ಡೀಡಲ್ (ಗು.) (ಕಾವ್ಯ) ಚತುರ ; ಕುಶಲ ; ಕಲ್ಪನಕಾರಿ. ನಾನಾ ಪ್ರಕಾರ ; ತೊಡಕಾದ ; ಅಸರಳ ; ಜಟಿಲ ; ಗೂಢ ; ರಹಸ್ಯಾತ್ಮಕ. **Daedálian, -lean** ಡೀಡೇಲಿಯನ್ (ಗು.) ಗ್ರೀಕ್ ಶಿಲ್ಪಿ ಡೀಡಲಸ್ಸಿನ ರೀತಿಯ ; ಕುಶಲ ರಚನೆಯ ; ತೊಡಕಾದ ; ಜಟಿಲ ; ಸುತ್ತುಬಳಸಿನ.

Daemónic ಡಿಮಾನಿಕ್ = Demonic.

Daff ಡಾಫ್ (ಕ್ರಿ. ಸಕ.) (ಪ್ರಾಚೀ. ಪ್ರ.) (ಬಟ್ಟೆಬರೆ, ಮೊ. ನ್ನು) ತೆಗೆದಿಡು ; ಬದಿಗಿಡು ; ಎಸೆದುಬಿಡು ; ನೂಕಿಬಿಡು.

Dáffodil ಡ್ಯಾಫೊಡಿಲ್ (ಕಾವ್ಯ, ಮೊ. ಗಳಲ್ಲಿ **Daffodílly, Dáffadowndílly**) (ನಾ., ಗು.) ಒಂದು ಜಾತಿಯ ನೆಲನೈದಿಲೆ ; ನಸು ಹಳದಿ ಬಣ್ಣದ ಒಂದು ಜಾತಿಯ ಹೂವು, ಗಿಡ (ಕೆಲವುವೇಳೆ, ವೇಲ್ಸ್ ರಾಷ್ಟ್ರೀಯ ಲಾಂಛನ). ನಸು ಹಳದಿ ಬಣ್ಣ(ದ)

Daft ಡಾಫ್ಟ್ (ಗು.) ಅವಿವೇಕದ ; ನಿರ್ಲಕ್ಷ್ಯತೆಯ ; ಮೂರ್ಖತನದ ; ಹುಚ್ಚುಹುಚ್ಚಾದ ; ಹುಚ್ಚುಹತ್ತಿದಂತೆ ಮೆರೆಯುವ ; ಉನ್ಮತ್ತ.

Dag ಡ್ಯಾಗ್ (ನಾ., ಕ್ರಿ.) ಕುರಿಯ ಹಿಂಭಾಗದಲ್ಲಿ ಮಷ್ಟು ಕಟ್ಟಿದ ಉಣ್ಣೆಯ ಜೊಂಡೆ (D.-tailed ಉಣ್ಣೆ ಮಷ್ಟುಕಟ್ಟಿದ ಬಾಲವುಳ್ಳ). ಹಿಂದೆ ಉಪಯೋಗಿಸುತ್ತಿದ್ದ ಒಂದು ತೆರದ ಭಾರವಾದ ಕೈಬಂದೂಕು. ಚೂಪಾಗಿಯೂ ನೆಟ್ಟಗೂ ಇರುವ ಮರಿಸಾರಂಗದ ಕೊಂಬು. ಇಬ್ಬನಿ, ಮಂಜು ; ತುಂತುರು ; ಸೋನೆ. (ಕ್ರಿ.) ಉಡುಪಿನ ಏಣುಗಳನ್ನು ಕಚ್ಚುಕಚ್ಚಾಗಿ ಕತ್ತರಿಸು ; ಕೊಚ್ಚು ; ಕತ್ತರಿಸು. ಕೊಳೆ ಸೇರು ; ಕೊಳೆ ಮಾಡು ; ಮಷ್ಟು ಹತ್ತು. (ಆರಂಬ) ಕುರಿಯ ಮಷ್ಟು ಉಣ್ಣೆಯನ್ನು ಕತ್ತರಿಸಿಹಾಕು. (ಪ್ರಾಚೀ. ಪ್ರ.) ಚೂಪು ಕೊನೆಯ ಆಯುಧದಿಂದ ತಿವಿ, ಇರಿ, ಕೊಲ್ಲು. ಭಾರವಾದ ಕೈಬಂದೂಕಿನಿಂದ ಗುಂಡುಹಾರಿಸು. ಚಿಮುಕಿಸು ; ಚಿಮುಕಿಸಿ ತೋಯಿಸು ; ಸೋನೆ ಸುರಿ ; ತುಂತುರು ಬೀಳು.

Dágger ಡ್ಯಾಗರ್ (ನಾ.) ಚೂಪು ಕೊನೆಯ ಹರಿತದ ಸಣ್ಣ ಅಲಗಿನ ಇರಿಯುವ ಆಯುಧ : ಕಠಾರಿ ; ಬಾಕು ; ಸುರಿಗೆ (At daggers drawn ಕಠಾರಿ ಹಿರಿದು ; ಕತ್ತಿ ಮಸೆಯುತ್ತ ; ಕತ್ತಿ ಕಟ್ಟಿ ; ಕಾದಾಡಲು ಸಿದ್ಧವಾಗಿ ; ಬದ್ಧ ವೈರದಿಂದ. Look, speak, daggers ಮನ ಇರಿಯುವಂತೆ ನೋಡು, ಮಾತಾಡು). (ಮುದ್ರಣ) ಕಠಾರಿ ಗುರುತು (†)

Dágo ಡೇಗೊ (ನಾ.) (ಅಮೆ. ಸಂ.) ಸ್ಪೇಯ್ನ್, ಪೋರ್ಚುಗಲ್ ಅಥವಾ ಇಟಲೀ ಸಂತತಿಯ ಅಮೆರಿಕನು.

Daguérreotype ಡಗೆರೊಟೈಪ್ (ನಾ.) ಹಿಂದೆ ಛಾಯಾಚಿತ್ರ ತೆಗೆಯುತ್ತಿದ್ದ ಪ್ರಕ್ರಿಯೆ (ಬೆಳ್ಳಿಯ ಅಥವಾ ಬೆಳ್ಳಿಹಚ್ಚಿದ ತಾಮ್ರದ ತಗಡಿನಮೇಲೆ ಅಯೊಡೀನ್ ಅಥವಾ ಅಯೊಡೀನ್ ಮತ್ತು ಬ್ರೋಮೀನ್ ಎಂಬ ಧಾತುಗಳಿಂದ ಸಂಸ್ಕಾರಮಾಡಿ ಶೀಘ್ರಚೇತನಿಯನ್ನಾಗಿ ಸಿದ್ಧಗೊಳಿಸಿದುದನ್ನು ಛಾಯಾಚಿತ್ರಕದಲ್ಲಿಟ್ಟು ಚಿತ್ರ ತೆಗೆದು, ಪಾದರಸದ ಹಬೆಯಿಂದ ರೂಪೇರಿಸುತ್ತಿದ್ದ ಒಂದು ಪ್ರಕ್ರಿಯೆ) ; ಈ ಪ್ರಕ್ರಿಯೆಯಿಂದ ತೆಗೆದ ಚಿತ್ರ. (Daguerre ಎಂಬ ಕಲ್ಪಕನ ಹೆಸರಿನಿಂದ)

Dáhlia ಡೇ(ಡಾ)ಲಿಯ (ನಾ.) ಬಣ್ಣಬಣ್ಣದ ಸುತ್ತುಹೂವುಗಳು ಬಿಡುವ ಮೆಕ್ಸಿಕೊ ತವರಿನ ಒಂದು ಜಾತಿಯ ಗೆಡ್ಡೆಯ ಗಿಡ : ಡೇಲಿ. (Blue d. ಅಸಾಧ್ಯವಾದದ್ದು). ಕೆಂಪು ಛಾಯೆ. (Dahl ಎಂಬ ಸಸ್ಯವಿಜ್ಞಾನಿಯ ಹೆಸರಿನಿಂದ)

Dail Eíreann ಡಾಲ್ ಏರ(ರಿ)ನ್ (ನಾ.) (ಸಂಕ್ಷಿಪ್ತ : Dail) ಐರಿಷ್ ಸ್ವತಂತ್ರ ರಾಷ್ಟ್ರದ ಕೆಳ ಶಾಸನಸಭೆ.

Daíly. **Day** ನೋಡಿ.

Daínty ಡೇಯ್ಂಟಿ (ನಾ., ಗು.) ಮಧುರವಾದ ; ರುಚಿಯಾದ ; ರಸವತ್ತಾದ ; ಸವಿಯಾದ ; ಇನಿದಾದ (ಕವಳ, ತಿಂಡಿ, ಉಣಿಸು) ; ರಸಕವಳ ; ಮೃಷ್ಟಾನ್ನ (ರೂಪ. ಸಹ). ಸುರಸ ; ಕೋಮಲ ; ಲಲಿತ ; ಸುಕುಮಾರ ; ಲಾವಣ್ಯವುಳ್ಳ ; ಸೂಕ್ಷ್ಮ ; ನಿರ್ಮಲವಾದ ; ಅಚ್ಚುಕಟ್ಟಿನ ; ಚೊಕ್ಕ ; ಅಂದವಾದ ; ಸುಖವಾದ ; ಕೋಮಲವಾದ ಅಭಿರುಚಿಯ ; ನಾಜೂಕಿನ ; ಸೊಗಸಿನ ; ಭೋಗಾಭಿಲಾಷೆಯ. **Daíntily** (ಕ್ರಿ. ವಿ.) ; **Daíntiness** (ನಾ.)

Daíry ಡೇರಿ (ನಾ.) ಹಾಲು, ಕೆನೆ ಇಡುವ ಮತ್ತು ಬೆಣ್ಣೆ, ಮೊ. ವನ್ನು ಮಾಡುವ ಕೋಣೆ ಅಥವಾ ಕಟ್ಟಡ ; ಹೈನಿನ ಮನೆ (Dairymaid ಹೈನಗಿತ್ತಿ). (ಆರಂಬದಲ್ಲಿ) ಹೈನಿನ ಶಾಖೆ. (ಹಾಲು, ಮೊ. ದ) ಹೈನಿನ ಅಂಗಡಿ (Dairyman ಹೈನಿಗ). ಕರೋಹಟ್ಟಿ ; ಗೋಶಾಲೆ ; ಇದರಲ್ಲಿಯ ಹಸುಗಳು. **Daírying** (ನಾ.)

Daís ಡೇಯ್ಸ್, **Daís** ಡೇಯಿಸ್ (ನಾ.) (ಅಗ್ರಪೀಠ, ಸಿಂಹಾಸನ, ಮೊ. ಕ್ಕಾಗಿ ಹಾಕಿರುವ) ವೇದಿಕೆ.

Daísy ಡೇಯ್ಸಿ (ನಾ.) ಯೂರೋಪಿನ ಒಂದು ಜಾತಿಯ ಸಣ್ಣ ಹೂವು, ಗಿಡ (ಕಾಡುಜಾತಿ ಅಥವಾ ಬೆಳಸಿದ್ದು). (ಅಸಂ.) ಯಾವುದಾದರೂ ಒಂದರ ಅತ್ಯುತ್ತಮವಾದ ಮಾದರಿ ; ಅತ್ಯುತ್ತಮವಾದದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

D.-chain ಡೆಯ್ಸಿ ದಂಡೆ. D.-cutter ನಡಗೆಯಲ್ಲಿ ಕಾಲನ್ನು ಹೆಚ್ಚಾಗಿ ಮೇಲಕ್ಕೆತ್ತದ ಕುದುರೆ. (ಕ್ರಿಕೆಟ್ ಆಟದಲ್ಲಿ) ಮೇಲಕ್ಕೇಳದೆ ನೆಲಮಟ್ಟದಲ್ಲಿ ಓಡುವ ಚೆಂಡು. **Daísied** ಡೇಯ್ಸಿಡ್ (ಗು.) ಡೆಯ್ಸಿ ಹೂವುಗಳಿಂದ ತುಂಬಿದ ಅಥವಾ ಅಲಂಕರಿಸಿದ (D. lawns)

Dak. **Dawk** ನೋಡಿ.

Dal. **Dhal** ನೋಡಿ.

Dalaí, Dalaí-láma. **Lama** ನೋಡಿ.

Dale ಡೇಲ್ (ನಾ.) ಕಣಿವೆ (ಕಾವ್ಯದಲ್ಲಿ : Hill and d.). Dalesman ಕಣಿವೆಯವನು.

Dálly ಡ್ಯಾಲಿ (ಕ್ರಿ.) ವಿನೋದವಾಡು ; ಆಟವಾಡು ; ಲೀಲೆಯಾಡು ; ಸರಸವಾಡು ; ಚಕ್ಕಂದವಾಡು ; ಲಲ್ಲೆ ಹೊಡೆ ; ವಿಲಾಸವಾಡು ; ಪ್ರಣಯ ಚೇಷ್ಟೆ ತೋರು. (ಒಬ್ಬನಲ್ಲಿ, ಒಂದು ಕಾರ್ಯದಲ್ಲಿ) ಅಶ್ರದ್ಧೆ ತೋರು ; ಅಸಡ್ಡೆ ಮಾಡು ; ಕಾಲಹರಣ ಮಾಡು ; ಆಲಸ್ಯ ಮಾಡು ; ತಡ ಮಾಡು. D. away (ಕಾಲ, ಸಮಯ, ಸಂದರ್ಭ — ಇವನ್ನು) ವ್ಯರ್ಥವಾಗಿ ಕಳೆದುಬಿಡು. **Dálliance** (ನಾ.)

Dal ségno (It.) ಡಾಲ್ ಸೇನ್ಯೊ (ಸಂಕ್ಷಿಪ್ತ : D. S.) (ಸಂ. ಸೂಚನೆ) ನಿರ್ದಿಷ್ಟ ಸ್ಥಾನದಿಂದ ಪುನರಾವೃತ್ತಿ ಮಾಡು.

Dáltonism ಡಾಲ್ಟನಿಸ್ಮ್ (ನಾ.) ಬಣ್ಣಗುರುಡು ; ವರ್ಣಾಂಧತೆ (ಮು., ಹಸುರಿಗೂ ಕೆಂಪಿಗೂ ವ್ಯತ್ಯಾಸ ಕಾಣದಿರುವುದು). **Daltónian** ಡಾಲ್ಟೋನಿಯನ್ (ಗು., ನಾ.) ಡಾಲ್ಟನಿನ ; ಡಾಲ್ಟನನು ಮೊದಲು ಪ್ರತಿಪಾದಿಸಿದ ಪರಮಾಣು ವಾದದ. ಬಣ್ಣಗುರುಡ ; ವರ್ಣಾಂಧ. (John Dalton ಎಂಬ ರಸವಿಜ್ಞಾನಿಯ ಹೆಸರಿನಿಂದ)

Dam[1] ಡ್ಯಾಮ್ (ನಾ., ಕ್ರಿ. ಸಕ.) (ನೆರೆಹಾವಳಿ ತಪ್ಪಿಸುವುದಕ್ಕಾಗಲಿ ಜನರ ಇತರ ಉಪಯೋಗಕ್ಕಾಗಿ ನೀರನ್ನು ತಡೆದು ನಿಲ್ಲಿಸಿ ಮಟ್ಟವೇರಿಸುವುದಕ್ಕಾಗಲಿ ಕಟ್ಟಿದ) ಅಣೆ(ಕಟ್ಟು), ಕಟ್ಟೆ ; ನೀರೊಡ್ಡು ; ಒಡ್ಡು. (ಜೌಗುಪ್ರದೇಶ ಮೊ. ಗಳಲ್ಲಿ ಕಲ್ಲು, ಗುಂಡು, ಮರದ ದಿಮ್ಮಿ, ಮಣ್ಣು, ಮೊ. ಗಳಿಂದ ಮಾಡಿದ) ಎತ್ತರದ ಹಾದಿ : ಹುದಿ ಹಾದಿ. (ಕ್ರಿ.) ಅಣೆ ಕಟ್ಟು ; ಒಡ್ಡು ಹಾಕು ; ಕಟ್ಟೆ ಹಾಕು (ಸಾ., up ಉಪ. ಜೊತೆನೆ) ; ಅಡ್ಡಗಟ್ಟು ; ತಡೆಗಟ್ಟು (ರೂಪ. ಸಹ)

Dam[2] ಡ್ಯಾಮ್ (ನಾ.) (ಮೃಗದ) ತಾಯಿ. The devil and his d. ಪಾಪಶಕ್ತಿಗಳು ; ಅನಿಷ್ಟಗಳು ; ಪೀಡೆಗಳು.

Dámage ಡ್ಯಾಮೆಜ್ (ನಾ., ಕ್ರಿ. ಸಕ.) ಕೆಡುಕು ; ಕೇಡು ; ನಷ್ಟ ; ಹಾನಿ ; ಅಪಾಯ. (ನ್ಯಾ. ಶಾ., ಬ. ವ. ದಲ್ಲಿ) ನಷ್ಟಪರಿಹಾರ (ದ್ರವ್ಯ) ; ದಂಡ. (ಅಸಂ.) ಖರ್ಚು (What's the d.? ಎಷ್ಟು ತೆರಬೇಕು ?). (ಕ್ರಿ.) ಬೆಲೆ ಅಥವಾ ಉಪಯೋಗ ಕಡಮೆಯಾಗುವಂತೆ (ಸಾ., ವಸ್ತುವನ್ನು) ಕೆಡಿಸು ; ಹಾಳುಮಾಡು ; ನಷ್ಟಪಡಿಸು ; (ಒಬ್ಬನ, ಒಂದು ಸಂಸ್ಥೆ, ಮೊ. ಗಳ) ಯಶಸ್ಸಿಗೆ ಕುಂದಕ, ಹಾನಿ, ಭಂಗ, ತರು. (A damaging admission ಹೆಸರುಕೆಡಿಸುವ ಒಪ್ಪಿತ). **Dámageable** (ಗು.)

Damascéne ಡ್ಯಾಮಸೀನ್, **Damaskeén** — ಸ್ಕೀನ್ (ಗು. ನಾ., ಕ್ರಿ. ಸಕ.) ಡಮಾಸ್ಕಸ್ಸಿನ ; ಡಮಾಸ್ಕ್ ಬಟ್ಟೆಯ ; ಡಮಾಸ್ಕ್ ಲೋಹ ಚಿತ್ರಕೆಲಸದ. (ನಾ.) ಡಮಾಸ್ಕಸ್ ಪಟ್ಟಣಿಗ ; ಡಮಾಸ್ಕ್ ಲೋಹ ಚಿತ್ರಕೆಲಸ. (ಕ್ರಿ.) (ಲೋಹವಸ್ತುವಿನಮೇಲೆ) ಬೆಳ್ಳಿ, ಚಿನ್ನ, ಮೊ. ಗಳಿಂದ ನಕಾಸೆ ಕೆಲಸ ಮಾಡು.

Dámask ಡ್ಯಾಮಸ್ಕ್ (ನಾ., ಗು., ಕ್ರಿ. ಸಕ.) (D. rose ಗುಲಾಬಿ ಅತ್ತರನ್ನು ತಯಾರಿಸಲು ಉಪಯೋಗಿಸುವ, ಹಿಂದೆ ಡಮಾಸ್ಕಸ್ಸಿನಿಂದ ತಂದ, ನಸುಗೆಂಪು ಬಣ್ಣದ ಗುಲಾಬಿ ಹೂವು) ; ಡಮಾಸ್ಕ್ ಗುಲಾಬಿಯ ಬಣ್ಣ. ಚಿತ್ರ ನೆಯ್ಗೆ (ಸಾ., ರೇಷ್ಮೆಯ) ಬಟ್ಟೆ ; ಮೇಜಿನಮೇಲೆ ಹಾಸುವ ಚಿತ್ರದ ಉಬ್ಬುನೆಯ್ಗೆಯ ಕಿತ್ತಾನಾರು ಬಟ್ಟೆ. ತೆರೆಯಿಡಿದಂತೆ ಕಾಣುವ ಡಮಾಸ್ಕಸ್ ಉಕ್ಕು. (ಗು.) ಡಮಾಸ್ಕ್ ಗುಲಾಬಿಯ ಬಣ್ಣದ ; ನಸುಗೆಂಪಿನ. ಡಮಾಸ್ಕ್ ರೇಷ್ಮೆ ಅಥವಾ ಕಿತ್ತಾನಾರು ಅಥವಾ ಉಕ್ಕು, ಇದರಿಂದ ಮಾಡಿದ. (ಕ್ರಿ.) ಚಿತ್ರ ನೆಯ್ಯಿ. = Damascene ; ಚಿತ್ರದ ಅಲಂಕಾರ ಮಾಡು ; (ಕೆನ್ನೆ, ಮೊ. ನ್ನು) ಕೆಂಪಗೆ ಮಾಡು.

Dame ಡೇಮ್ (ನಾ.) (ಪ್ರಾಚೀ. ಪ್ರ., ಕಾವ್ಯ ಅಥವಾ ಹಾಸ್ಯ ಪ್ರಯೋಗ) ಮಹಿಳೆ ; ವನಿತೆ ; ಗೌರವ ಸ್ತ್ರೀ ; ಆರ್ಯೆ. (ನ್ಯಾ. ಶಾ.) 'ನೈಟ್' ಅಥವಾ 'ಬ್ಯಾರನ್' ಪದವಿಯುಳ್ಳಾತನ ಹೆಂಡತಿಯ ಹೆಸರಿನ ಹಿಂದೆ ಸೇರಿಸುವ ಬಿರುದು. (ರೂಪ). D. Fortune ಭಾಗ್ಯಮಾತೆ (ದೇವತೆ) ; D. Nature ಪ್ರಕೃತಿಮಾತೆ (ದೇವತೆ). D.-school ಮುದುಕಮ್ಮ ನಿಟ್ಟಿರುವ ಪ್ರಾಥಮಿಕ ಪಾಠಶಾಲೆ : ಅಜ್ಜಿಯ ಮಠ.

Dámmar ಡ್ಯಾಮರ್ (ನಾ.) ಮೆರುಗೆಣ್ಣೆಯ (ವಾರ್ನಿಷಿನ) ತಯಾರಿಯಲ್ಲಿ ಉಪಯೋಗಿಸುವ ಒಂದು ರಾಳಪದಾರ್ಥ : 'ಡಾಮರ್'.

Damn ಡ್ಯಾಮ್ (ಕ್ರಿ., ನಾ.) ಹಾಳಾಗಿಸು ; ಕಳಂಕ ಹಚ್ಚು ; ತಲೆಯೆತ್ತದಂತೆ ತಪ್ಪುಹೊರಿಸು (D. a person's character ಒಬ್ಬನ ಹೆಸರು ಕೆಡಿಸು). (ನಾಟಕಶಾಲೆಯಲ್ಲಿ, ಸಭಿಕರು) ಅಸಮಾಧಾನ ತೋರು, ನಾಟಕ ನಿಲ್ಲಿಸುವಂತೆ ಮಾಡು. ದೋಷವನ್ನು ಬಹಿರಂಗವಾಗಿ ಉಗ್ಗಡಿಸಿ ತಪ್ಪುಹೊರಿಸು ; ಖಂಡಿಸು ; ನಾಶ ತರು ; ಹಾನಿ ತರು ; ಭಂಗ ತರು. (D. with faint praise ನಿರುತ್ಸಾಹದ ಹೊಗಳಿಕೆಯಿಂದ ಹಳಿ, ಅತೃಪ್ತಿ ಸೂಚಿಸು). ನರಕಕ್ಕೆ ನೂಕು. (Damn ! ಹಾಳಾಗ ! I'll be damned if I know it ನನಗೆ ಖಂಡಿತವಾಗಿ ಗೊತ್ತಿಲ್ಲ). ಶಪಿಸು (D. your eyes ನಿನ್ನ ಕಣ್ಣು ಇಂಗ !). (ನಾ.) ಶಾಪ. ಅತ್ಯಲ್ಪ ; ಲವ ; ಲೇಶ (Don't care a d.). **Dámnable** — ನಬ್‌ಲ್ (ಗು.) ನಿಂದಾರ್ಹ ; ದಂಡಾರ್ಹ ; ಶಾಪಕ್ಕೆ ಗುರಿಯಾದ ; ಪಾಪಕ್ಕೆ ಪಕ್ಕಾದ, ಈಡಾದ ; ಸಹಿಸಲಾಗದ ; ಅನಿಷ್ಟ ; ಹಾಳು. **Dámnably** (ಕ್ರಿ. ವಿ.) ; **Damnátion** (ನಾ., ಭಾವ. ಅವ್ಯ.) ಆಟ ಮೊ. ಗಳ ದೂಷಣೆ, ಗರ್ಹಣೆ. ಅನಂತ ನರಕಶಿಕ್ಷೆಗೆ ತಳ್ಳಿಬಿಡುವುದು. ನಾಶವಾಗಿ ಹೋಗಲಿ ! **Dámnatory** — ನಟರಿ (ಗು.) ನಿಂದಾತ್ಮಕ ; ಭಂಗ ತರುವ ; ಶಪಿಸುವ ; ನರಕಕ್ಕೆ ತಳ್ಳುವ. **Damned** ಡ್ಯಾಮ್ಡ್, **Dámned** — ಮ್ನೆಡ್ (ಗು., ಕ್ರಿ. ವಿ.) (ಕ್ರಿಯಾರ್ಥಗಳಲ್ಲಿ). (The d. ನರಕದಲ್ಲಿಯ ಪಾಪಾತ್ಮಗಳು ; ನಿತ್ಯ ನರಕಿಗಳು). ಹಾಳು ; ಅನಿಷ್ಟ ; ಸಹಿಸಲಾಗದ ; ನಾರಕ. ಅತಿಯಾಗಿ ; ವಿಪರೀತವಾಗಿ (D., d-d, hot ವಿಪರೀತ ಬಿಸಿ). **Dámnify** (ಕ್ರಿ. ಸಕ.) (ನ್ಯಾ. ಶಾ.) ಕೆಡುಕು ಮಾಡು ; ನಷ್ಟ ಮಾಡು. **Damnificátion** (ನಾ.) ; **Dámning** ಡ್ಯಾಮಿಂಗ್ (ನಾ.), — ಮಿಂಗ್, — ಮ್ನಿಂಗ್ (ಗು.) (ಕ್ರಿಯಾರ್ಥಗಳಲ್ಲಿ). D. evidence ತಪ್ಪುಹೊರಿಸುವ ಋಜುವಾತು.

Damnósa heréditas (L) ಡ್ಯಾಮ್ನೋಸ ಹಿರೆ(ರೀ)ಡಿಟ್ಯಾಸ್ (ನಾ.) ಲಾಭಕ್ಕಿಂತ ಹೊರೆಯೇ ಹೆಚ್ಚಾದ ಪಿತರಾರ್ಜಿತ.

Dámocles ಡ್ಯಾಮೊಕ್ಲೀಸ್ (ನಾ.) [ತಲೆಯಮೇಲೆ ಕತ್ತಿಯನ್ನು ಕೂದಲೆಳೆಯಿಂದ ತೂಗಕಟ್ಟಿ ಅವುತಣದ ಭೋಜನಕ್ಕೆ ಕುಳ್ಳಿರಿಸಲ್ಪಟ್ಟ ಡ್ಯಾಮೊಕ್ಲೀಸ್ ಎಂಬ ಗ್ರೀಕನು]. Sword of D. ತಲೆಯಮೇಲೆ ತೂಗುತ್ತಿರುವ ಕತ್ತಿ. ಸಂಪತ್ಸಮೃದ್ಧಿಯಲ್ಲಿ ಸನ್ನಿಹಿತ ಗಂಡಾಂತರ ; ಯಾವ ಗಳಿಗೆಯಲ್ಲೋ ಒದಗಬಹುದಾದ ಅಪಾಯ.

Dámon and Pýthias ಡೇಮನ್ ಅಂಡ್ ಪಿತಿಯಸ್ (ನಾ., ಗು.) ಪ್ರಾಣಸ್ನೇಹಿತರು ; ಡೇಮನ್ ಪಿತಿಯಸ್ಸರಂಥ (D.-and-P. friendship). (ಒಂದು ಗ್ರೀಕ್ ಕಥೆಯಿಂದ)

Damp ಡ್ಯಾಂಪ್ (ನಾ., ಗು., ಕ್ರಿ.) ತೇವ ; ತನು (ತಣು) ; ಆರ್ದ್ರತೆ. ಗಣಿ, ಮೊ. ಗಳಲ್ಲಿ ಸೇರಿರುವ ಇಂಗಾಲಾಮ್ಲ ವಾಯು (= Choke-d., Black d.). ಥಟ್ಟನೆ ಹೊತ್ತಿಕೊಳ್ಳುವ ಇಂಗಾಲ ಜಲಜನಕ ಸಂಯುಕ್ತದ ಮತ್ತು ವಾಯುವಿನ ಮಿಶ್ರಣ (= Fire-d.). ವಿಷಾದ ; ನಿರುತ್ಸಾಹ ; ನಿಸ್ತೇಜ ; ಉತ್ಸಾಹಭಂಗ ; ವಿಷಣ್ಣತೆ ; ಮ್ಲಾನತೆ ; ಮಂಕು [Cast a d. over ಉತ್ಸಾಹಶೂನ್ಯ ಮಾಡು. D.-proof ತೇವವೇರದ. D. (-proof) course ಗೋಡೆಯಲ್ಲಿ ತೇವ ಮೇಲೇರದಂತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಕುವ ಪದಾರ್ಥದ ಪರಿಸೆ : ತೇವತಡೆಯ ಪರಿಸೆ]. (ಗು.) ತೇವವಾದ ; (ಸ್ವಲ್ಪ) ಒದ್ದೆಯಾದ ; ಆರ್ದ್ರ. (ಕ್ರಿ.) ತೇವ ಮಾಡು. ಉಸಿರಾಡದಂತೆ ಮಾಡು ; ಗಾಳಿಯಾಡದಂತೆ ಮಾಡು ; ಅಡಚು ; ಮಂದಗೊಳಿಸು; ಆರಿಸು ; ನಂದಿಸು (D. down a fire ಬೂದಿ, ಮೊ. ನ್ನು ಮುಚ್ಚಿ ಬೆಂಕಿಯನ್ನು ಅಡಚು). (ಸಂ.) (ತಂತಿಯ) ಸ್ಪಂದನವನ್ನು ತಡೆ. (ಉತ್ಸಾಹವನ್ನು, ಆಶೆಯನ್ನು) ಕುಂದಿಸು, ಕುಗ್ಗಿಸು ; ಉತ್ಸಾಹಭಂಗ ಮಾಡು ; ಎದೆಗುಂದಿಸು. (ತೋಟಗಾರಿಕೆ) D. off ಕೊಳೆತು ಬಿದ್ದು ಹೋಗು. **Dámpen** ಡ್ಯಾಂಪ್‌ನ್ (ಕ್ರಿ.) ; **Dámper** (ನಾ.) ಉತ್ಸಾಹ ಭಂಜಕ (ವಸ್ತು ಅಥವಾ ವ್ಯಕ್ತಿ). (ಪಿಯಾನೊ ವಾದ್ಯ) ತಂತಿಯ ಸ್ಪಂದನವನ್ನು ನಿಲ್ಲಿಸುವದು : ಮಿಡಿ ತಡೆ. ಉರಿತವನ್ನು ಕ್ರಮಪಡಿಸುವುದಕ್ಕಾಗಿ ಗಾಳಿಯ ಹರಿವನ್ನು ಕ್ರಮಪಡಿಸುವ ಲೋಹದ ತಗಡು. ಕಾಗದ, ತಲೆಚೀಟಿ. ಮೊ. ನ್ನು ತೇವಮಾಡುವ ಸಲಕರಣೆ ; ಆರ್ದ್ರಕ ; ತೇವ ತಡಿ. (ಬೆಂಬೂದಿಯಲ್ಲಿ ಸುಟ್ಟ) ಕೆಂಡ ರೊಟ್ಟಿ. **Dámpish** (ಗು.) ; **Dámply** (ಕ್ರಿ. ವಿ.) ; **Dámpness** (ನಾ.)

Dámsel ಡ್ಯಾಮ್ಸೆಲ್ (ನಾ.) (ಪ್ರಾಚೀ. ಪ್ರ., ಸಾಹಿತ್ಯ) ಕನ್ಯೆ; ಹುಡುಗಿ ; ಹೆಣ್ಣು ; (ಮದುವೆಯಿಲ್ಲದ) ಯುವತಿ ; ಕುಮಾರಿ. Celestial d. ಅಪ್ಸರ ಸ್ತ್ರೀ.

Dance ಡಾನ್ಸ್ (ಕ್ರಿ.) ಕುಣಿ ; ನರ್ತನ ಮಾಡು ; ನಾಟ್ಯವಾಡು (ಸಾ., ವಾದ್ಯವನ್ನನುಸರಿಸಿ) [D. to one's tune or pipe ಒಬ್ಬನು ಹೇಳಿದಂತೆ ಕುಣಿ (ನಡೆ)] ; ಕುಣಿದಾಡು ; ನೆಗೆದಾಡು ; (ಹೃದಯ, ರಕ್ತ, ಮೊ. ವು) ಚಟುವಟಿಕೆಯಿಂದ ಚಲಿಸು, ಮಿಡಿ. ನೀರು, ಮೊ. ಗಳಲ್ಲಿ ಮುಳುಗಿ ಮುಳುಗಿ ಮೇಲೇಳು ; ಮೇಲಕ್ಕೂ ಕೆಳಕ್ಕೂ ಆಡು. [D. upon nothing ಗಲ್ಲಿಗೇರು. D. attendance upon a person ಹಾಜರುಭಾಷಿಯಾಗಿರು ; ಓಲೈಸು ; (ಒಬ್ಬನ) ಮರ್ಜಿಯನ್ನು ಅನುಸರಿಸಿ ಹೋಗು. (ಒಬ್ಬನ) ಸಮಯ ಕಾಯಿ]. (ಕರಡಿ, ಮೊ. ನ್ನು) ಕುಣಿಸು. (ಮಗುವನ್ನು) ಎಸೆದಾಡು, (ತೊಡೆಯಮೇಲೆ) ಕುಲುಕಾಡಿಸು. D. away, off, into ಕುಣಿದು ಕುಣಿದು ಕಳೆದುಕೊ, ತಂದುಕೊ (Danced his head off ಕುಣಿದು ಕುಣಿದು ತಲೆ ತೆಗಸಿಕೊಂಡನು. — his chance away — ಅವಕಾಶ ಕಳೆದುಕೊಂಡನು ; — herself into favour — ಒಲಿಸಿಕೊಂಡಳು ; — ಪ್ರೀತಿಗೆ ಪಾತ್ರಳಾದಳು). **Dáncer** (ನಾ.) (ಕ್ರಿಯಾರ್ಥಗಳಲ್ಲಿ) ಹಣಕ್ಕಾಗಿ ನೆರವಿಯಲ್ಲಿ ನಾಟ್ಯ ಕಟ್ಟುವವನು (ಳು) ; ನಟ ; ನಟಿ ; ನರ್ತಕ ; ನರ್ತಕಿ (Dancing girl ನರ್ತಕಿ ; ನಾಯಕಸಾನಿ). Merry dancers ಉತ್ತರ ಧ್ರುವದ ವಿದ್ಯುತ್ಪ್ರಭೆ.

Dance (ನಾ.) ಕುಣಿತ ; ನರ್ತನ ; ನೃತ್ಯ ; ನಾಟ್ಯ ; ತಾಫೆ. ಕುಣಿತಕ್ಕೆ ಹೊಂದಿಸಿದ ಗೀತ, ವಾದ್ಯ. ನಟರ ತಂಡ. Lead (person) a d. ಉಪಯೋಗಕ್ಕೆ ಬಾರದ ಕೆಲಸದಲ್ಲಿ ಅಥವಾ ಕ್ರಮದಲ್ಲಿ ತೊಡರಿಸು. D. of Death, Macabre ಸಾವು ಎಲ್ಲ ಅವಸ್ಥೆಯವರನ್ನೂ ಕೈಹಿಡಿದು ಶ್ಮಶಾನಕ್ಕೆ ಕರೆದುಕೊಂಡುಹೋಗುವ ಕುಣಿತ(ದ ಚಿತ್ರ) : ಮೃತ್ಯುನೃತ್ಯ. St. Vitus's d. ಸಾ., ಮಕ್ಕಳಿಗೆ ಬರುವ ನಳವು ರೋಗ ; ಕಂಪ ವಾತ.

Dándelíon ಡ್ಯಾಂಡಿಲೈಅನ್ (ನಾ.) ಹಳದಿಯ ಹೂವು ಬಿಡುವ ಒಂದು ಜಾತಿಯ ಗಿಡ.

Dánder ಡ್ಯಾಂಡರ್ (ನಾ.) (ಬಳ. ಮಾ.) ಸಿಟ್ಟು ; ರೇಗು ; ಕೋಪ. Get one's d. up ರೇಗು ; ರೇಗಿಸು.

Dándle ಡ್ಯಾಂಡ್‌ಲ್ (ಕ್ರಿ. ಸಕ.) (ಮಗುವನ್ನು) ತೊಡೆಯಮೇಲೆ ಅಥವಾ ಕಂಕುಳಲ್ಲಿ ಕುಲುಕಾಡಿಸು, ಎತ್ತಿ ಆಡಿಸು ; ಮುದ್ದಾಡು ; ಲಾಲಿಸು ; ಅತಿ ಪ್ರೀತಿಸು.

Dándruff, -iff ಡ್ಯಾಂಡ್ರ(ಡ್ರಿ)ಫ್ (ನಾ.) ಕೂದಲಿರುವ ಚರ್ಮದಿಂದ (ಮು., ತಲೆಯಿಂದ) ಹುರುಪು ಹುರುಪಾಗಿ ಏಳುವ ಸತ್ತ ಚರ್ಮ : ಹಗರು ; ತಲೆ ಹೊಟ್ಟು ; — ಹುರುಪು ; — ಸಿಬ್ಬು ; — ಸುಂಡು.

Dándy[1] ಡ್ಯಾಂಡಿ (ನಾ., ಗು.) ಸೊಗಸುಗಾರ (ಮು., ತನ್ನ ಉಡುಪಿನಲ್ಲಿ) ; ಠೀವಿಗಾರ ; ಷೋಕಿ ಲಾಲ. ಠೀಕಿನ ; ಸೊಗಸಿನ. ಒಂದು ತರದ ಒಕ್ಕೂವೆಯ ಹಡಗು. ಗೋವಳಿಗರು ಉಪಯೋಗಿಸುವ ಎಗುರುಪಟ್ಟಿ ಹಾಕಿದ ಬಂಡಿ (= D.-cart). D.-brush ತಿಮಿಂಗಿಲದ ಅಸ್ಥಿವತ್ಪದಾರ್ಥವನ್ನು ಸೀಳಿ ಮಾಡಿದ ತೊಡಪ, ಖರಾರು (ಕುದುರೆಗಳನ್ನು ಶುಚಿಮಾಡುವುದಕ್ಕಾಗಿ ಉಪಯೋಗ). **Dandíacal** ಡ್ಯಾಂಡೈಅಕಲ್ (ಗು.) ಠೀಕಿನ : ಸೊಗಸುಗಾರತನದ. **Dándify** (ಕ್ರಿ. ಸಕ.) ; **Dandification** (ನಾ.) ; **Dándyish** (ಗು.) ; **Dándyism** (ನಾ.)

Dándy[2] ಡ್ಯಾಂಡಿ (ನಾ.) = Dengue.

Dándy[3], **Dándi** ಡ್ಯಾಂಡಿ (ನಾ.) (ಆಂ. ಇಂ.) ಗಂಗಾ ನದಿಯ ಹರಿಗೋಲಿನವನು ; ದಂಡಿ. (Dandi) ದಂಡಧಾರಿಯಾದ ಶೈವ ಭಿಕ್ಷು. (ಇಬ್ಬರು ಅಥವಾ ಹೆಚ್ಚು ಮಂದಿ ಹೊರುವ) ಡೋಲಿ ; ದಂಡಿಗೆ.

Dane ಡೇನ್ (ನಾ.) ಡೆನ್‌ಮಾರ್ಕ್ ದೇಶಿಗ. ಮೋಟು ಕೂದಲಿನ ಬಲವಾದ ಒಂದು ಜಾತಿಯ ನಾಯಿ (= Great D.). **Dánish** (ಗು., ನಾ.) ಡೆನ್‌ಮಾರ್ಕಿನ ; ಡೇನರ (ಭಾಷೆ)

Dánger ಡೇಂಜರ್ (ನಾ.) ಅಪಾಯ ; ಅನರ್ಥ ; ಆಪತ್ತು ; ಭಯ ; ಗಂಡಾಂತರ ; ಪ್ರಮಾದ ; ಸೆರಗು (ಗ್ರಾಂ.). (ರೈಲ್ವೆ) ಅಪಾಯ ಸೂಚನೆ (Signal is at d. ಸಂಜ್ಞೆ ಅಪಾಯ ತೋರಿಸುತ್ತಿದೆ). **Dángerous** (ಗು.) ; **Dángerously** (ಕ್ರಿ. ವಿ.)

Dángle ಡ್ಯಾಂಗ್‌ಲ್ (ಕ್ರಿ.) ತೂಗಾಡು ; ನೇತಾಡು ; ಜೋಲಾಡು ; ಓಲಾಡು ; ತೂಗಾಡಿಸು. ಒಬ್ಬನ ಮುಂದೆ, ಕಣ್ಣೆದುರಿಗೆ (ಆಶೆ, ಮೊ. ನ್ನು) ಮನ ಸೆಳೆಯುವಂತೆ ತೋರು. (ಅನುಚರನಾಗಿ, ಪ್ರಣಯಿಯಾಗಿ) ಒಬ್ಬನ(ಳ) ಹಿಂದೆ ಮುಂದೆ ಸುತ್ತಾಡು; ಅನುಸರಣೆಮಾಡು. **Dángler** (ನಾ.)

Dániel ಡ್ಯಾನೈಲ್ (ನಾ.) ಪ್ರಾಮಾಣಿಕ ನ್ಯಾಯ ನಿಪುಣ; ಅಸಾಧಾರಣ ಪ್ರಜ್ಞಾಶಾಲಿ. (ಷೇಕ್ಸ್‌ಪಿಯರ್ ಕವಿಯ ಒಂದು ನಾಟಕದಲ್ಲಿಯ ಪ್ರಯೋಗದಿಂದ)

Dank ಡ್ಯಾಂಕ್ (ಗು.) ನೆನೆದ ; ತೇವವಾದ ; ನೀರು ಒಸರುತ್ತಿರುವ. (ವಾಯು, ಹವ, ಮೊ. ವು, ಅಹಿತವಾಗಿ, ಅನಾರೋಗ್ಯಕರವಾಗಿ) ಅತಿ ತಂಡಿಯಾಗಿರುವ.

Dantéan ಡ್ಯಾಂಟೀಯನ್ (ಗು., ನಾ.) ಇಟಲಿ ದೇಶದ ಡ್ಯಾಂಟೆ ಕವಿಯ (ಗ್ರಂಥಾಭ್ಯಾಸಿ) ; ಡ್ಯಾಂಟೆಯ ಶೈಲಿಯ ; ಡ್ಯಾಂಟೆಯ ವರ್ಣನೆಯಂಥ. **Dantésque** ಡ್ಯಾಂಟೆಸ್ಕ್ (ಗು.) ಡ್ಯಾಂಟೆಯಂಥ ; ಆತನ ಕವಿತ್ವದಂಥ. **Dántist** (ನಾ.) = Dantean (ನಾ.)

Dap ಡ್ಯಾಪ್ (ಕ್ರಿ., ನಾ.) ಗಾಳವನ್ನು ನೀರಿನಲ್ಲಿ ಮುಳುಗಿಸುತ್ತ ತೇಲಿಸುತ್ತ ಮೀನುಹಿಡಿ ; (ಚೆಂಡು) ಪುಟ ನೆಗೆ, ಪುಟ ಹಾರು ; (ಚೆಂಡನ್ನು) ಪುಟ ಹಾರಿಸು. (ನಾ.) ಚೆಂಡಿನ ಪುಟ, ಪುಟ ನೆಗೆತ.

Dáphne ಡ್ಯಾಫ್ನಿ (ನಾ.) ಹೂವು ಬಿಡುವ ಕೆಲವು ಜಾತಿಯ ಪೊದೆ ಗಿಡ.

Dápper ಡ್ಯಾಪರ್ (ಗು.) (ನೋಟದಲ್ಲಿ, ಚಲನ ವಲನದಲ್ಲಿ, ಉಡುಪಿನಲ್ಲಿ) ನೀಟಾದ, ಚುರುಕಾದ, ಚಟುವಟಿಕೆಯುಳ್ಳ, ಸೂಟಿಯಾದ.

Dápple ಡ್ಯಾಪ್‌ಲ್ (ಕ್ರಿ., ನಾ.) ಬಣ್ಣ ಬಣ್ಣದ ಚುಕ್ಕೆಗಳಿಂದಲೂ ಮಚ್ಚೆಗಳಿಂದಲೂ ವ್ಯತ್ಯಾಸವನ್ನು ಚಿತ್ರಿಸು ; — ವ್ಯತ್ಯಾಸ ಕಾಣು ; ಮಚ್ಚೆ ಮಚ್ಚೆ ಮಾಡು ; — ಯಾಗಿರು. (ನಾ.) ಮಚ್ಚೆ ಮಚ್ಚೆಯಾಗಿರುವುದು. **D.-grey** ಕಪ್ಪು ಮಚ್ಚೆಗಳಿರುವ ಬೂದು ಬಣ್ಣದ (ಕುದುರೆ)

Dárbies ಡಾರ್‌ಬಿಸ್ (ನಾ., ಬ. ವ.) (ಅಸಂ.) ಕೈಕೋಳ.

Dárby and Joan ಡಾರ್ಬಿ ಅ್ಯಂಡ್ ಜೋನ್ (ನಾ.) ಪರಸ್ಪರ ಅನುರಕ್ತರಾದ ವೃದ್ಧ ದಂಪತಿಗಳು.

Dare ಡೇರ್ (ಕ್ರಿ. ಸಕ. ; ಭೂತ. Durst, Dared ; ಭೂ. ಕೃ. Dared) ಧೈರ್ಯದಿಂದ ನುಗ್ಗು ; ಧೈರ್ಯವಿರು ; ಧೃಷ್ಟತನವಿರು (I d. swear ನಾನು ಧೈರ್ಯವಾಗಿ ಪ್ರಮಾಣ ಮಾಡಬಲ್ಲೆ ; ನಿಜವೆಂದು ಧೈರ್ಯವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೇಳುತ್ತೇನೆ. He dares to insult me ನನ್ನನ್ನು ಹೀನಾಯ ಮಾಡುವಷ್ಟು ಧೈರ್ಯ ಅವನಿಗೆ!). ಯತ್ನಿಸು ; ಪ್ರಯತ್ನ ಮಾಡು ; ಎದೆ ಮಾಡು ; ಸಾಹಸ ಮಾಡು ; ಆದದ್ದಾಗಲೆಂದು ತೊಡಗು (I d. a leap ಆದದ್ದಾಗಲಿ, ಹಾರಿಬಿಡುತ್ತೇನೆ. I dare say ನಾನು ನಂಬುತ್ತೇನೆ ; ಇರಬಹುದು). (ಒಬ್ಬನನ್ನು) ಧಿಕ್ಕರಿಸು ; ಪ್ರತಿಭಟಿಸು. **D.-devil** ಅಪಾಯವನ್ನು ಲಕ್ಷ್ಯಮಾಡದವನು ; ಹುಚ್ಚು ಸಾಹಸಿ. **Dáring** (ನಾ., ಗು.) (ಕ್ರಿಯಾರ್ಥಗಳಲ್ಲಿ) ; ಸಾಹಸ ಧೈರ್ಯ(ವುಳ್ಳ) ; ಎದೆಗಾರಿಕೆ(ಯ) ; ನಿರ್ಭೀತ ; ನಿರ್ಭೀತಿ ; ಸಾಹಸಿಕೆ. **Dáringly** (ಕ್ರಿ. ವಿ.)

Dark ಡಾರ್ಕ್ (ಗು.) ಕತ್ತಲೆಯಾದ ; ಕತ್ತಲೆಯ ; ಬೆಳಕಿಲ್ಲದ ; ಅಂಧಕಾರದ ; ಮಬ್ಬಾದ ; ಮಸುಕಾದ (D. lantern ಬೆಳಕನ್ನು ಮುಚ್ಚಬಹುದಾಗುವ ಲಾಂದ್ರ) ; ಕಪ್ಪುಛಾಯೆಯ (D. blue ಗಾಢ ನೀಲ ; ಕಪ್ಪು ನೀಲ) ; (ಮುಖ) ಕಂದು ಬಣ್ಣದ ; ಕರಿಯ ; ಕಪ್ಪನೆಯ ; ಕೃಷ್ಣ ; ಶ್ಯಾಮ. ಕೆಟ್ಟ ; ದುಷ್ಟ ; ಘೋರ ; ಕಾಳ [D. side of things (ಒಂದು ವಸ್ತುವಿನ ಅಥವಾ ವಿಷಯದ) ದೋಷದ ಪಕ್ಕ, ಕೆಟ್ಟ ಕಡೆ]. ವಿಷಣ್ಣ ; ಉತ್ಸಾಹಶೂನ್ಯ ; ಭಯೋತ್ಪಾದಕ. ಮರೆಯಾದ ; ರಹಸ್ಯವಾದ ; ಗೂಢ (D. saying ಗುಪ್ತವಾದ ಹೇಳಿಕೆ. Keep d. ರಹಸ್ಯವಾಗಿರು ; ಅವಿತುಕೊಂಡಿರು ; ರಹಸ್ಯವಾಗಿಟ್ಟಿರು) ; ಅಪರಿಚಿತ ; ಅಜ್ಞಾತ [D. horse ಅನಿರೀಕ್ಷಿತವಾಗಿ ಪೂಜಿನಲ್ಲಿ ಗೆದ್ದ ಕುದುರೆ ; (ರೂಪ.) ಅನಿರೀಕ್ಷಿತವಾಗಿ ಪ್ರಸಿದ್ಧಿಗೆ ಬಂದವನು]. ಅಸಂಸ್ಕೃತ ; ಅಜ್ಞಾನಾಂಧಕಾರದ (The d. ages ಅಂಧಕಾರ ಯುಗ). The D. Continent ಅಪರಿಚಿತ, ಅಸಂಸ್ಕೃತ, ಭೂಖಂಡ (ಆಫ್ರಿಕ). D. room (ಛಾಯಾಚಿತ್ರಫಲಕ, ಮೊ. ನ್ನು ಸಂಸ್ಕರಿಸುವುದಕ್ಕಾಗಿ ತೀವ್ರ ಕಿರಣಗಳು ಒಳಹೊಗದಂತೆ ಏರ್ಪಡಿಸಿರುವ) ಕತ್ತಲೆ ಕೋಣೆ. **Dárken** ಡಾರ್ಕನ್ (ಕ್ರಿ.) ಕತ್ತಲೆಯಾಗು ; ಕತ್ತಲೆ ಮಾಡು ; ಕುರುಡು ಮಾಡು (ರೂಪ. ಸಹ) ; (ಮಬ್ಬು, ಮಂಕು) ಕವಿಸು (ರೂಪ.). ವಿಷಣ್ಣನಾಗು. Never d. my door again ಮರಳಿ ನನ್ನ ಮನೆಯ ಹೊಸ್ತಿಲನ್ನು ತುಳಿಯಬೇಡ. D. counsel ವಿಷಯವನ್ನು (ಮತ್ತಷ್ಟು) ತೊಡಕು ಮಾಡು. **Dárkle** (ಕ್ರಿ. ಅಕ.) ಅಡಗಿಕೊಂಡಿರು ; ಕತ್ತಲೆ ಕವಿ. **Dárkling** (ಕ್ರಿ. ವಿ., ಗು.) ಕತ್ತಲೆಯಲ್ಲಿ(ಯ). **Dárk(e)y** (ನಾ.) (ಬಳ. ಮಾ.) ನೀಗ್ರೊ. **Dárkish** (ಗು.) ; **Dárkly** (ಕ್ರಿ. ವಿ.) ; **Dárkness** (ನಾ.) : Prince of d. ಸೈತಾನ.

Dark (ನಾ.) ಕತ್ತಲೆ ; ಅಂಧಕಾರ [In the d. ಕತ್ತಲೆಯಲ್ಲಿ ; (ರೂಪ.) ತಿಳಿಯದೆ] ; ರಾತ್ರಿ ; ಇರುಳು (At d. ರಾತ್ರಿಯಲ್ಲಿ) ; ಕಪ್ಪು ಬಣ್ಣ ; ಬೆಳಕಿಲ್ಲದಿರುವುದು (The lights and darks of a picture ಒಂದು ಚಿತ್ರದ ಬೆಳಕು ನೆರಳುಗಳು). ಅಜ್ಞಾನ ; ಅರಿಯಮೆ (ಗ್ರಾಂ.) [Leap in the d. ಕತ್ತಲೆಯಲ್ಲಿ ಹಾರು(ವುದು) ; (ಮುನ್ನರಿಯದೆ ಒಂದು ಕಾರ್ಯದಲ್ಲಿ) ದುಡುಂ ಪ್ರವೇಶ ಮಾಡು(ವುದು)]. **Dárksome** (ಗು.) ಸ್ವಲ್ಪ ಕತ್ತಲೆಯಾದ ; (ಕಾವ್ಯ) ಕತ್ತಲೆಯಾದ. (ಬಣ್ಣದಲ್ಲೊ ಕಾಂತಿಯಲ್ಲೊ) ಮಸುಕಾದ, ಮಬ್ಬಾದ.

Dárling ಡಾರ್ಲಿಂಗ್ (ನಾ., ಗು.) ಪ್ರೀತಿಪಾತ್ರ ; ಅಚ್ಚುಮೆಚ್ಚಿನ ; ಪ್ರಿಯತಮ (ಮನುಷ್ಯ ಅಥವಾ ಪ್ರಾಣಿ) ; ಮೋಹದ (ವಸ್ತು) ; ಮುದ್ದು ; ಕಂದ ; ಅಣುಗ(ಗಿ) (ಗ್ರಾಂ.)

Darn[1] ಡಾರ್ನ್ (ಕ್ರಿ. ಸಕ., ನಾ.) (ಉಣ್ಣೆ, ಮೊ. ದ) ಹೆಣಿಗೆಯಲ್ಲಿ ಬಿದ್ದಿರುವ ಕಂಡಿಯನ್ನು ಸೂಜಿಯಿಂದ ಬೇರೆ ಎಳೆ ಹಾಕಿ ಮುಚ್ಚು ; ರಫ್ಪುಮಾಡು ; ಎಳೆ ತುಂಬು. ಎಳೆತುಂಬಿದ ಭಾಗ ; ರಫ್ಪು. **Dárning** (ನಾ.) ; **D.-ball, -last** ರಫ್ಪು ಕೆಲಸಮಾಡುವಾಗ ಆ ವಸ್ತುವನ್ನು ನೀಡುವುದಕ್ಕಾಗಿ ಉಪಯೋಗಿಸುವ ಸಲಕರಣೆ.

Darn[2] ಡಾರ್ನ್ (ಕ್ರಿ. ಸಕ.) (ಅಸಂ.) Damn ಎಂಬುದರ ಅಪಭ್ರಂಶ.

Dárnel ಡಾರ್ನೆಲ್, ಡಾರ್ನ್‌ಲ್, (ನಾ.) ಪಯಿರಿನ ಮಧ್ಯೆ ಬೆಳೆಯುವ ಒಂದು ಜಾತಿಯ ಕಳೆಹುಲ್ಲು.

Dart ಡಾರ್ಟ್ (ನಾ., ಕ್ರಿ.) ಚೂಪಾದ ಎಸೆಯುವ ಆಯುಧ ; ಹಗುರವಾದ ಈಟಿ ; ಅಂಬು ; ಕಣೆ. (ಬ. ವ. ದಲ್ಲಿ) ಆಟದ ಈಟಿಗಳು ಮತ್ತು ಗುರಿ — ಇವುಗಳಿಂದ ಮನೆಯೊಳಗೆ ಆಡುವ ಒಂದು ಆಟ : ಈಟಿಯಾಟ. ಕೀಟ, ಮೊ. ಗಳ ಚುಚ್ಚುಮುಳ್ಳು, ಕೊಂಡಿ. ಥಟ್ಟನೆಯ ತೀವ್ರ ಚಲನೆ. ಎಸೆಗೋಲನ್ನು ಎಸೆಯುವುದು. (ಕ್ರಿ.) (ಎಸೆಗೋಲನ್ನು) ಎಸೆ. (ನೋಟ, ಪ್ರಭೆ, ಕೋಪ—ಇವನ್ನು) ಥಟ್ಟನೆ ಸೂಸು, ಬೀರು. ಥಗ್ಗನೆ ಎದ್ದು ಓಡು. **Dárter** (ನಾ.) (ಕ್ರಿಯಾರ್ಥಗಳಲ್ಲಿ). ಒಂದು ಜಾತಿಯ ಜಾಲಪಾದ ಪಕ್ಷಿ. (ಬ. ವ. ದಲ್ಲಿ) ಮೀನ್‌ಚುಳ್ಳಿ ಪಕ್ಷಿಜಾತಿ. ಒಂದು ಮೀನ ಜಾತಿ. **Dártle** ಡಾರ್ಟಲ್ (ಕ್ರಿ.) ಎಸೆಗೋಲನ್ನು ಎಸೆಯುತ್ತಿರು ; ಚಿಮ್ಮುತ್ತಿರು.

Dártmoor ಡಾರ್ಟ್‌ಮು(ಮೋ)ರ್ (ನಾ.) ಇಂಗ್ಲೆಂಡಿನ ಡೆವನ್‌ಷಯರಿನಲ್ಲಿಯ ಡಾರ್ಟ್‌ಮೋರ್ ಪ್ರದೇಶದಲ್ಲಿರುವ ಪ್ರಸಿದ್ಧ ಸೆರೆಮನೆ.

Dártmouth ಡಾರ್ಟ್‌ಮತ್ (ನಾ.) ಡೆವನ್‌ಷಯರಿನಲ್ಲಿಯ ಡಾರ್ಟ್‌ಮತ್ ಪಟ್ಟಣದಲ್ಲಿರುವ ಪ್ರೌಢ ನೌಕಾಶಾಲೆ.

Dártre ಡಾರ್‌ಟರ್ (ನಾ.) ನಾನಾ ತೆರದ ಚರ್ಮರೋಗಗಳು (ಮು., ದದ್ದು ರೋಗ). **Dártrous** ಡಾರ್‌ಟ್ರಸ್ (ಗು.)

Darwínian ಡಾರ್ವಿನಿಯನ್ (ಗು., ನಾ.) ಚಾರ್ಲ್ಸ್ ಡಾರ್ವಿನ್ ಎಂಬ ಜೀವ ವಿಜ್ಞಾನಿಯ. (ಜೀವಿಗಳ ಬೇರೆಬೇರೆ ವಂಶಗಳು ಹೇಗೆ ವಿಕಾಸಹೊಂದಿದುವು ಎಂದು ತೋರಿಸುವ) ಡಾರ್ವಿನ್ನಿನ ಪರಿಣಾಮವಾದದ. ಡಾರ್ವಿನ್ ಮತಾನುಯಾಯಿ. **Dárwinism** —ನಿಸ್ಮ್ (ನಾ.) ಡಾರ್ವಿನ್ ತತ್ತ್ವ. **Dárwinist** (ನಾ.) = Darwinian. **Darwinístic** (ಗು.) ; **Dárwinite** (ನಾ., ಗು.) ; **Dárwinize** (ಕ್ರಿ.) ಡಾರ್ವಿನ್ನಿನಂತೆ ವಿಚಾರಮಾಡು.

Dash ಡ್ಯಾಷ್ (ಕ್ರಿ.) ಚೂರುಚೂರು ಮಾಡು (Flowers dashed by rain ಮಳೆಯಿಂದ ಎಸಳುಗಳು ಕಿತ್ತುಹೋದ ಹೂವುಗಳು). ಅಪ್ಪಳಿಸು ; ದೂಡು ; ಎಸೆ ; ಒಗೆ ; ನೂಕಿಬಿಡು (*away, off, out, down,* ಮೊ. ಉಪ. ದೊಡನೆ). (ವಸ್ತುವಿನ ಅಥವಾ ಮನುಷ್ಯನ ವಿಷಯದಲ್ಲಿ) ಎಸೆದುಬಿಡು, ಎರಚಿಬಿಡು, ಓಡಿಸಿಬಿಡು (*against, upon, into* ಉಪ. ದೊಡನೆ). ನೀರು, ಮೊ. ನ್ನು ಎರಚು (D.-board ಮಣ್ಣು, ಕೆಸರು, ನೀರು, ಮೊ. ಬೀಳುವುದನ್ನು ತಡೆಯುವುದಕ್ಕಾಗಿ ಬಂಡಿಯ ಮುಂಭಾಗದಲ್ಲಿ ಹಾಕಿರುವ ಹಲಗೆಯ ಅಥವಾ ಚರ್ಮದ ತಡೆ : ಕೆಸರು ತಡೆ). (ಮದ್ಯಕ್ಕೆ ನೀರು ಬೆರಸಿ, ಆನಂದಕ್ಕೆ ನೋವು ಸೇರಿಸಿ) ಸಾರ ಕಡಮೆಮಾಡು ; ಬೆರಸು. ಮುರಿ ; ಭಗ್ನ ಮಾಡು ; ಭಂಗ ತರು ; ಹಾಳು ಮಾಡು (D. one's hopes ಆಶೆ ಮುರಿ). ಕುಗ್ಗಿಸು ; ಉತ್ಸಾಹ ಭಂಗ ಮಾಡು ; ದಿಕ್ಕುತೋರದಂತೆ ಮಾಡು. ಅವಸರವಸರದಲ್ಲಿ ಬರೆದುಹಾಕು, ಗೀಚಿಹಾಕು. ಕೆಳಗೆರೆ ಎಳೆ. (ಅಸಂ.) = Damn ! (ಶಾಪ). ಬಿರುಸಾಗಿ ಬೀಳು, ಓಡು, ಹಾಯಿ, ಬಿದ್ದುಬಿಡು ; ಢಕ್ಕಾಮುಕ್ಕಿಯಾಗು ; ಡಿಕ್ಕಿ ಹೊಡೆ (*against, upon* ಉಪ. ದೊಡನೆ). ಜೋರಾಗಿ ಸವಾರಿ ಮಾಡಿಕೊಂಡು ಹೋಗು ; ಬಂಡಿ ಓಡಿಸಿಕೊಂಡು ಹೋಗು ; ದೌಡೋಡಿಸು (*up* ಉಪ. ದೊಡನೆ). ಸುತ್ತಾಡು ; ಬಳಸಾಡು ; ಜಬರ್ಾಗಿ ನಡೆದುಕೊ. **Dásher** (ನಾ.) (ಕ್ರಿಯಾರ್ಥಗಳಲ್ಲಿ). ಕಡೆಗೋಲು ; ಮಂತು. **Dáshing** (ಗು.) ; **Dáshingly** (ಕ್ರಿ. ವಿ.)

Dash (ನಾ.) ಜೋರಾದ ಹೊಡೆತ ; ಅಪ್ಪಳಿಕೆ ; ನುಗ್ಗುವಿಕೆ ; ಢಕ್ಕಾಮುಕ್ಕಿ ; ಡಿಕ್ಕಿ ; ನೀರಿನ ಹೊಡೆತ ; ನೀರಿನ ಹೊಡೆತದ ಶಬ್ದ. ಬಣ್ಣದ ಪಟ್ಟೆ. ಬೆರಸಿದ್ದು ; ಸೇರಿಸಿದ್ದು ; ಬೆರಕೆ (D. of brandy). ಅವಸರದ ಲೇಖಣಿ ಗೀಟು. (ಬರವಣಿಗೆಯಲ್ಲೂ ಮುದ್ರಣದಲ್ಲೂ ಅರ್ಥವಿರಾಮವನ್ನು ತೋರಿಸುವುದಕ್ಕಾಗಲಿ, ಬಿಟ್ಟಿರುವ ಅಕ್ಷರಗಳನ್ನು ಅಥವಾ ಪದಗಳನ್ನು ತೋರಿಸುವುದಕ್ಕಾಗಲಿ, ಮಧ್ಯೆ ಸೇರಿಸಿದುದನ್ನು ತೋರಿಸುವುದಕ್ಕಾಗಲಿ, ಉಪಯೋಗಿಸುವ) ಅಡ್ಡಗೀಟು. ನುಗ್ಗಾಟ ; ನೂಕುನುಗ್ಗಲು ; ಮೇಲೆ ಬೀಳುವುದು ; ಥಟ್ಟನೆ ಮುಂಬರಿಯುವುದು. ಸಾಹಸದಿಂದ ಕಾರ್ಯಮಾಡುವ ಶಕ್ತಿ ; ಸತ್ವ ; ಕೆಚ್ಚು ; ಆಡಂಬರ ; ಮೆರೆತ ; ಪ್ರದರ್ಶನ (Cut a d. ಡಂಗು ಬಡಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Dástard ಡಾಸ್ಟರ್ಡ್ (ನಾ.) ಹೇಡಿ ; ಹಂದೆ ; ಪುಕ್ಕ ; (ಮು., ಘಾತುಕ ಕೃತ್ಯ ನಡಸಿ, ಅಪಾಯಕ್ಕೆ ಸಿಕ್ಕದೆ) ಜಾರಿಕೊಳ್ಳುವವನು. **Dástardly** (ಕ್ರಿ. ವಿ.) ; **Dástardliness** (ನಾ.)

Dáta ಡೇಟ (ನಾ.) Datum ಪದದ ಬ. ವ.

Dátaller, Dáy-taler ಡೇಟೆಲರ್ (ನಾ.) ದಿನಗೂಲಿ ; ಚೆಂಗೂಲಿ.

Date[1] ಡೇಟ್ (ನಾ.) ಖರ್ಜೂರ, ಖರ್ಜೂರದ ಗಿಡ (= D.-palm); ಉತ್ತುತ್ತೆ ಕಾಯಿ (ಉತ್ತತ್ತಿ)

Date[2] ಡೇಟ್ (ನಾ.) (ಪತ್ರದಲ್ಲಿ, ಕಾಗದದಲ್ಲಿ, ಪುಸ್ತಕದಲ್ಲಿ, ಶಾಸನದಲ್ಲಿ, ಬರೆದಿರುವ) ಕಾಲ, ತೇದಿ, ತಾರೀಖು, ತಿಥಿ, ದಿನ (ಕೆಲವು ವೇಳೆ ಇದ ರೊಡನೆ ಸ್ಥಳ ಸಹ ಸೇರಿ). (ಪ್ರಾಚೀ. ಪ್ರ., ಕಾವ್ಯ) (ಒಬ್ಬನ) ವಯಸ್ಸು, ಜೀವಮಾನ, ಆಯುಸ್ಸು. (ಅಮೆ. ಸಂ., ಬಳ. ಮಾ.) ಮಾಡಬೇಕಾದ ಯಾವುದಾದರೂ ಕಾರ್ಯಕ್ಕೆ (ಕಾಲ, ಸ್ಥಳಗಳ ವಿಷಯದಲ್ಲಿ) ಒಂದು ಗೊತ್ತುಪಾಡು : ಕಾಲದ ಗೊತ್ತುಪಾಡು. (Go) out of d. ಹಿಂದಿನ ಕಾಲದ್ದು (ಆಗು) ; ಅರೂಢಿ(ಯಾಗು). Up to d. ಇಂದಿನ ವರೆಗೂ. (ಅಸಂ.) ಆಧುನಿಕ ಕಾಲದ ಆವಶ್ಯಕತೆಗೆ ಅಥವಾ ತಿಳಿವಳಿಕೆಗೆ ಅನುಗುಣವಾದ ; —ವಾಗಿ ; ಕಾಲೋಚಿತವಾದ ; —ವಾಗಿ. D.-line ತೇದಿಗಳಿಗೆ ಸಂಬಂಧಪಟ್ಟ ರೇಖೆ : ತೇದಿ ರೇಖೆ [ಮು., ಗ್ರೀನಿಚ್ ಪಟ್ಟಣದಿಂದ ೧೮೦ನೆಯ ಡಿಗ್ರಿಯ ಮಧ್ಯಾಹ್ನರೇಖೆ : ಈ ಗುರಿರೇಖೆಯಲ್ಲೂ ಇತರ ಎಲ್ಲಾ ಪ್ರದೇಶಗಳಲ್ಲೂ ಪಂಚಾಂಗದ ದಿನದ ಆರಂಭ ಅಂತ್ಯಗಳು ಮಧ್ಯರಾತ್ರಿಯಿಂದ ಮಧ್ಯರಾತ್ರಿಯ ವರೆಗೆ ಆದಂತೆ ಎಣಿಸಲಾಗಿದೆ. ಈ ಗುರಿರೇಖೆಯ ಪೂರ್ವಕ್ಕೂ ಪಶ್ಚಿಮಕ್ಕೂ ಈ ದಿನದ ಆರಂಭ ಅಂತ್ಯಗಳ ಸಮಯವು ವ್ಯತ್ಯಾಸ ಹೊಂದುತ್ತ ಹೋಗುವುದು : ಎಂದರೆ, ಈ ರೇಖೆಯಿಂದ ಪಶ್ಚಿಮಕ್ಕಾಗಲಿ ಪೂರ್ವಕ್ಕಾಗಲಿ ಹೋಗುತ್ತಹೋಗುತ್ತ ಒಂದು ವಾರದಿನವು (ಸೋಮವಾರವೆನ್ನೋಣ) ಪ್ರತಿ ಸ್ಥಳದಲ್ಲಿಯೂ ಮಧ್ಯರಾತ್ರಿಯಲ್ಲಿ ಆರಂಭ ವಾದರೂ ಆ ಕ್ಷಣದಲ್ಲಿಯೇ ಅದು ಎಲ್ಲ ಸ್ಥಳಗಳಲ್ಲೂ ಆರಂಭವಾಗುವುದಿಲ್ಲ. ಪಶ್ಚಿಮಕ್ಕೆ ಹೋಗುತ್ತಹೋಗುತ್ತ ಈ ಆರಂಭ ಕಾಲವು ಗುರಿರೇಖೆಯ ಕಾಲ ಕ್ಕಿಂತ ಮುಂದುಮುಂದಾಗಿಯೇ ಸಂಭವಿಸುತ್ತಬಂದು ಮರಳಿ ಗುರಿರೇಖೆಗೆ ಬರುವ ವೇಳೆಗೆ ಒಂದು ಸಂಪೂರ್ಣ ದಿನ ವ್ಯತ್ಯಾಸವಾಗುವುದು. ಆದ ಕಾರಣ ಈ ಗುರಿರೇಖೆಯ ಪೂರ್ವಕ್ಕೆ ವಾರದ ದಿನವು ಭಾನುವಾರವೆಂದೂ ಪಶ್ಚಿಮಕ್ಕೆ ಸೋಮವಾರವೆಂದೂ ಸಂಕೇತಮಾಡಿಕೊಳ್ಳಲಾಗಿದೆ. ಈ ಸಂಕೇ ತಕ್ಕೆ ಎಲ್ಲ ರಾಷ್ಟ್ರಗಳೂ ಸಮ್ಮತಿಸಿವೆ]. **Dáteless** (ಗು.) ತೇದಿ ಹಾಕದ ; ತಾರೀಖು ಇಲ್ಲದ ; ಕೊನೆಮೊದಲಿಲ್ಲದ ; ಕೊನೆಗಾಣದ ; ಅನಂತ ; ಅನಾದಿ (ಕಾಲದ)

Date (ಕ್ರಿ.) ತೇದಿ ಹಾಕು ; ತಾರೀಖು ಬರೆ [**Dáter** (ನಾ.) ತಾರೀಖು ಹಾಕುವವನು, ಹಾಕುವದು]. (ಒಂದು ಘಟನೆಯ) ಕಾಲ ನಿರ್ದೇಶ ಮಾಡು ; ಕಾಲ ಗಣನೆ ಮಾಡು ; ತಾರೀಖು ಹಾಕಿರು. (ಒಂದು ಗೊತ್ತಾದ ಕಾಲದಿಂದ) ಆರಂಭವಾಗು. (ಕಲೆ, ಶೈಲಿ, ಮೊ.) ಒಂದು ಗೊತ್ತಾದ ಕಾಲಕ್ಕೆ ಸಂಬಂಧಪಟ್ಟಂತೆ ಕಾಣು. **Dátable** (ಗು.)

Dátive ಡೇಟಿವ್ (ಗು., ನಾ.) (ವ್ಯಾ.) ಚತುರ್ಥೀ ವಿಭಕ್ತಿ ; ಸಂಪ್ರದಾನ (ಕಾರಕ) (=D. case). **Datíval** ಡಟೈವಲ್ (ಗು.) ; **Dátively** ಡೇಟಿವ್ಲಿ (ಕ್ರಿ. ವಿ.)

Dátum ಡೇಟಂ (ನಾ. ; ಬ. ವ. -ta) ಗೊತ್ತಾದ ಅಥವಾ ಅಂಗೀಕೃತ ಪ್ರತಿಜ್ಞೆ, ತತ್ತ್ವ ; ದತ್ತಾಂಶ ; ಆಧಾರಾಂಶ ; ಸಾಧನ. (ಮಾಪನ ಗಳಲ್ಲಿ) ನಿರ್ದಿಷ್ಟ ಆರಂಭಸ್ಥಾನ (D. line, point ಆಧಾರ ರೇಖೆ, ಬಿಂದು)

Datúra ಡಟ್ಯೂರ (ನಾ.) ಪ್ರಜ್ಞೆತಪ್ಪಿಸಿ, ಗಾಢವಾದ ನಿದ್ರಾವಸ್ಥೆಯ ನ್ನುಂಟುಮಾಡಿ, ಕೊನೆಗೆ ಪ್ರಾಣ ತೆಗೆಯುವ ಒಂದು ವಿಷಪದಾರ್ಥ ವಿರುವ ಕೆಲವು ಸಸ್ಯಜಾತಿಗಳು : ಉಮ್ಮತ್ತಿಯ ಜಾತಿಯ ಸಸ್ಯ.

Daub ಡಾಬ್ (ಕ್ರಿ., ನಾ.) (ಗೋಡೆ, ಮೊ. ಕ್ಕೆ ಕೆಸರುಮಣ್ಣು, ಲೇಪ, ಮೊ. ನ್ನು) ಬಳಿ, ತೊಡೆ, ಒರೆ, ಮೆತ್ತು ; ಗಿಲಾವು ಮಾಡು. (ಮೇಲ್ಮೈಗೆ ಮುಲಾಮು, ಮೊ. ನ್ನು) ಹಚ್ಚು, ಬಳಿ. ಕೊಳೆ ಮಾಡು ; ಕರೆ ಮಾಡು ; (ಅಡ್ಡಾದಿಡ್ಡಿಯಾಗಿ) ಬಣ್ಣ ತೊಡೆ, ಬಳಿ. (ನಾ.) ಮೆತ್ತಡ ; ಲೇಪ ; ಬಳಿತ ; ಅಡ್ಡಾದಿಡ್ಡಿಯಾಗಿ ಹಚ್ಚಿದ ಬಣ್ಣ. **Daúber** (ನಾ.) ಬಣ್ಣ ಬಳಿಯುವವನು ; —ವದು ; ಮಡ್ಡಿ ಬಣ್ಣಕಾರ (= **Daúbster**). **Daúby** (ಗು.) ಅಂಟಂಟಾಗಿರುವ. ಲೇಪದಂಥ ; (ಅಡ್ಡಾದಿಡ್ಡಿಯಾಗಿ) ಬಣ್ಣ ಬಳಿದ ; ಮಲಿನವಾದ ; ಕೊಳೆಯಾದ.

Daúghter ಡಾಟರ್ (ನಾ.) ಮಗಳು ; ಪುತ್ರಿ ; ಕುಟುಂಬದ, ಕುಲದ, ಹೆಣ್ಣು ; ಶಿಷ್ಯಳು. (ಮನುಷ್ಯತ್ವಾರೋಪಣೆ) Fortune and its daughter Confidence ಐಶ್ವರ್ಯವೂ ಅದರಿಂದ ಹುಟ್ಟಿದ ಆತ್ಮ ವಿಶ್ವಾಸವೂ. **D.-language** (ಒಂದು ಭಾಷೆಯಿಂದ) ಹುಟ್ಟಿದ ಭಾಷೆ : ಜನ್ಯ ಭಾಷೆ. **D.-in-law** ಸೊಸೆ ; (ಶಿಥಿಲವಾಗಿ) ಸವತಿಯ ಮಗಳು ; ಮಲ ಮಗಳು. **Daúghterhood** (ನಾ.) ಮಗಳುತನ ; (ಒಟ್ಟು) ಹೆಣ್ಣುಮಕ್ಕಳು. **Daúghterly** (ಗು.) ಮಗಳಿಗೆ ತಕ್ಕ ; ಮಗಳಂಥ.

Daunt ಡಾಂಟ್ (ಕ್ರಿ. ಸಕ.) ಎದೆಗುಂದಿಸು ; ಅಧೈರ್ಯಗೊಳಿಸು ; ಹೆದರಿಸು ; ಅಂಜಿಸು ; ಭಯಪಡಿಸು ; ಉತ್ಸಾಹಗುಂದಿಸು. (ಉಪ್ಪು ಹಾಕಿದ ಹೆರಿಂಗ್‌ಮೀನನ್ನು) ಪೀಪಾಯಿಯೊಳಕ್ಕೆ ಕೂರಿ ಭರ್ತಿಮಾಡು. **Daúntless** (ಗು.) ಹೆದರದ ; ಅಂಜದ ; ನಿರ್ಭೀತ ; ಎದೆಗುಂದದ ; ಬಿಡದೆ ಸಾಧಿಸುವ. **Daúntlessly** (ಕ್ರಿ. ವಿ.); **Daúntlessness** (ನಾ.)

Daúphin ಡಾಫಿನ್ (ನಾ.), **Daúphiness** —ನೆಸ್ (ನಾ., ಸ್ತ್ರೀ.) ಫ್ರಾನ್ಸ್ ದೇಶದ ದೊರೆಯ ಹಿರಿಯ ಮಗ, ಹಿರಿಯ ಮಗನ ಹೆಂಡತಿ.

Dávenport ಡ್ಯಾವ್‌ನ್‌ಪೋರ್ಟ್ (ನಾ.), **Dévonport** ಡೆವನ್— (ನಾ.) ಒಂದು ತರದ ಸಣ್ಣ ಅಲಂಕಾರದ ಮೇಜು.

Dávid and Jónathan ಡೇವಿಡ್ ಅ್ಯಂಡ್ ಜಾನತನ್ (ನಾ.) ಅಗಲ ದಿರುವ ಸ್ನೇಹಿತರು.

Dávit ಡ್ಯಾ(ಡೇ)ವಿಟ್ (ನಾ.) (ಲಂಗರನ್ನು ಹಡಗಿಗೆ ತಗುಲಿಸದೆ ಮೇಲೆತ್ತು ವುದಕ್ಕಾಗಿ ಹಡಗಿನ ಮೂತಿಯಲ್ಲಿಟ್ಟಿರುವ, ಅಥವಾ ಹಡಗಿನ ದೋಣಿಯನ್ನು ಮೇಲೆತ್ತುವುದಕ್ಕಾಗಲಿ ನೀರಿಗೆ ಇಳಿ ಬಿಡುವುದಕ್ಕಾಗಲಿ ಹಡಗಿನ ಪಕ್ಕ ಭಾಗದಲ್ಲಿ ಅಥವಾ ಹಿಂಭಾಗದಲ್ಲಿ ಇಟ್ಟಿರುವ) ಭಾರವೆತ್ತುವ (ಕ್ರೇನ್) ಯಂತ್ರ.

Dávy[1] **(Lamp)** ಡೇವಿ (ಲ್ಯಾಂಪ್) (ನಾ.) ಗಣಿಗಳಲ್ಲಿರಬಹುದಾದ ಸಿಡಿವಾಯುವಿನ ಸಂಪರ್ಕವನ್ನು ದೀಪಕ್ಕೆ ತಪ್ಪಿಸುವುದಕ್ಕಾಗಿ ತಂತಿಯ ಬಲೆ ಸುತ್ತುಗಟ್ಟಿದ ಅನಪಾಯ ದೀಪ ; ಡೇವೀ ರಕ್ಷಕ ದೀಪ. (Sir Humphry Davy ಎಂಬ ಕಲ್ಪಕನ ಹೆಸರಿನಿಂದ)

Dávy[2] ಡೇವಿ (ನಾ.) (ಅಸಂ.) Take one's d. ಆಣೆಯಿಟ್ಟುಕೊ. (Affidavit ಪದದ ಸಂಕ್ಷಿಪ್ತ)

Daw ಡಾ (ನಾ.) = Jackdaw.

Dawdle ಡಾಡ್‌ಲ್ (ಕ್ರಿ., ನಾ.) ಹೊತ್ತು ಕಳೆ(ಯುವವನು) ; ಕಾಲ ಹರಣ ಮಾಡು(ವವನು) ; ಪಾಲುಮಾರು(ವವನು) ; ಸೋಮಾರಿ. D. away (time, etc.) (ಕಾಲ, ಮೊ. ನ್ನು) ವ್ಯರ್ಥವಾಗಿ ಕಳೆದುಬಿಡು. **Dawdler** (ನಾ.)

Dawk, Dak ಡಾಕ್ (ನಾ.) (ಆಂ. ಇಂ.) ದಾರಿಯುದ್ದಕ್ಕೂ ಅಲ್ಲಲ್ಲಿ ಇಟ್ಟಿರುವ ಮನುಷ್ಯರ ಅಥವಾ ಕುದುರೆ, ಮೊ. ಗಳ ಮೂಲಕ ಮಜಲಿ ನಿಂದ ಮಜಲಿಗೆ ಸಾಗಿಸುವ ಅಂಚೆಯ ಟಪಾಲು ಅಥವಾ ಇತರ ಸಾಗಣೆ ; ಮಜಲು ಟಪಾಲು. D. bungalow ಮಜಲುಸಿಲ್ದಾಣ ದಲ್ಲಿ ಪ್ರಯಾಣಿಕರಿಗಾಗಿ ಮಾಡಿರುವ ಮನೆ : ಮಜಲು ಮನೆ. Travel d. ಮಜಲುಪ್ರಯಾಣ ಮಾಡು.

Dawn ಡಾನ್ (ಕ್ರಿ. ಅಕ., ನಾ.) ಬೆಳಕು ಹರಿ ; ಬೆಳಗಾಗು ; ಅರುಣೋ ದಯವಾಗು. (ರೂಪ.) (ಮನಸ್ಸಿಗೆ) ಹೊಳೆ ; ಭಾಸವಾಗು ; ಮೂಡು ; ಉದಯಿಸು [First dawnings ಆರಂಭ ದಶೆ. Dawn upon

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೊಳೆ ; ಗೋಚರವಾಗು ; ಸ್ಫುರಿಸು ; ಭಾಸವಾಗು]. (ನಾ.) ಮುಂಬೆಳಕು ; ಅರುಣೋದಯ ; ಉಷಸ್ಸು ; ಉದಯ. ಸ್ಫುರಣೆ ; ಹೊಳಪು. **Dawning** (ನಾ.) ಮೂಡಲು (ದಿಕ್ಕು)

Day ಡೇ (ನಾ.) ಹಗಲು ; ಅಹಸ್ಸು ; ದಿನ ; ದಿವಸ. (ಶಿಥಿಲವಾಗಿ) ಮುಂಬೆಳಕೂ ಹಿಂಬೆಳಕೂ ಸೇರಿ ಆದ ಹಗಲು [D. and night (ಕ್ರಿ. ವಿ.) ಹಗಲೂ ಇರುಳೂ ; ಅಹರ್ನಿಶಿ ; ದಿವಾ ರಾತ್ರಿ ; ಅಹೋರಾತ್ರಿ. D.-break, Break of d. ಬೆಳಕು ಹರಿಯುವ ಕಾಲ ; ಹೊತ್ತಾರೆ ; ಉಷಃಕಾಲ ; ಅರುಣೋದಯ]. By d. ಹಗಲಲ್ಲಿ. Carry, win, (lose) the d. ಗೆಲ್ಲು ; ಜಯಶಾಲಿಯಾಗು ; (ಸೋಲು ; ಅಪಜಯ ಹೊಂದು). Clear as d. ಹಗಲ ಬೆಳಕಿನಷ್ಟು ಸ್ಪಷ್ಟ. End one's days ಸಾಯಿ. Every dog has his d. ಎಂಥವನಿಗೂ ಅನುಕೂಲ ಕಾಲ ಬಂದೇ ಬರುತ್ತದೆ. Fallen on evil days ಕೆಟ್ಟ ಕಾಲ ಬಂದು ; ಕಷ್ಟವಡಸಿ ; ದುರ್ದಶೆಗೆ ಸಿಕ್ಕಿ. Keep one's d. ಹೊತ್ತಿಗೆ ತಪ್ಪದಿರು. Know the time of d. ಎಚ್ಚತ್ತಿರು ; ಕಣ್ಣು ಬಿಟ್ಟು ಕೊಂಡಿರು ; ಅರಿತಿರು. Sufficient unto the d. is the evil thereof ಇಂದಿನ ಕೇಡೇ ಇಂದಿಗೆ ಸಾಕಾಗಿದೆ. Better days ಒಳ್ಳೆಯ ಕಾಲ ; ದೆಸೆಯ ಕಾಲ. Last D. or D. of Judgment (Judgment ನೋಡಿ). Civil d. ಮಧ್ಯರಾತ್ರಿಯಿಂದ ಮಧ್ಯ ರಾತ್ರಿಯ ವರೆಗಿನ ಕಾಲ ; ವ್ಯವಹಾರ ದಿನ. Creature of a d. ಒಂದು ದಿನದ ಬಾಳುವೆಯ ಪ್ರಾಣಿ ; ಅಲ್ಪಾಯುಷಿ. D. about ದಿನ ಬಿಟ್ಟು ದಿನ. D. after d., D. by d., Every d., From d. to d. (ಕ್ರಿ. ವಿ.) ದಿನ ದಿನವೂ ; ಪ್ರತಿ ದಿನವೂ ; ದಿನೇದಿನೇ ; ದಿನ ದಿನಕ್ಕೆ. The d. after the fair (ಕ್ರಿ. ವಿ.) ನಂತೆ ಮುಗಿದ ಮೇಲೆ ; ಕಾಲ ಮಿಂಚಿ ; ಸಮಯ ಕಳೆದುಕೊಂಡು. D. of grace (Grace ನೋಡಿ). The days of old ಪುರಾತನ ಕಾಲ. First d. ಭಾನುವಾರ. Men of other days ಹಿಂದಿನ ಕಾಲದ ಜನರು. Men of the d. ಆ ಕಾಲದ ಪ್ರಮುಖರು. Natural d. = Sidereal d. ಸಹಜ ದಿನ. On one's d. ತಾನು ಉಚ್ಛ್ರಾಯದಲ್ಲಿರುವಾಗ. One d. (ಕ್ರಿ. ವಿ.) ಯಾವುದೋ ಒಂದು ದಿನ (ಹಿಂದೆ ಅಥವಾ ಮುಂದೆ). One of these (fine) days ಇಷ್ಟರಲ್ಲೆ ; ಈ ಹೊತ್ತು ನಾಳೆ (ಭವಿಷ್ಯದ್ವಚನ, ವಾಗ್ದಾನ, ಇವುಗಳಲ್ಲಿ ಪ್ರಯೋಗ). One's d. (೧) ಒಬ್ಬನ ಜೀವಮಾನ, ಉಚ್ಛ್ರಾಯ ಕಾಲ, ಅಧಿಕಾರ ಕಾಲ, ಚಟುವಟಿಕೆಯ ಕಾಲ. (೨) (ಸಾ., ವಾರಕ್ಕೊಂದಾವೃತ್ತಿ, ಒಬ್ಬನ ಸರದಿಯ) ಅತಿಥಿ ಸತ್ಕಾರದ ದಿನ. Present-d. ಈಗಿನ ; ಆಧುನಿಕ. Sidereal d. ಮೇಷರಾಶಿಯ ಆದಿ ಬಿಂದು ಮಧ್ಯಾಹ್ನ ರೇಖೆಯನ್ನು ದಾಟಿದ ಕಾಲ ದಿಂದ ಮತ್ತೊಂದು ಬಾರಿ ಅದನ್ನು ದಾಟುವ ವರೆಗಿನ ಕಾಲ : ನಕ್ಷತ್ರ ದಿನ (ಸೌರ ದಿನಕ್ಕಿಂತಲೂ ಸುಮಾರು ೪ ನಿಮಿಷ ಕಡಮೆ). Solar or astronomical d. ಮಧ್ಯಾಹ್ನದಿಂದ ಮಧ್ಯಾಹ್ನದ ವರೆಗಿನ ಕಾಲ : ಸೌರ ದಿನ. Some d. (ಕ್ರಿ. ವಿ.) ಮುಂದೆ ; ಎಂದಾದರೂ ; ಭವಿಷ್ಯದಲ್ಲಿ. The d. ನಡೆಯುತ್ತಿರುವ ದಿನ. The other d. ಈಚೆಗೆ ; ಮೊನ್ನೆ. These days (ಕ್ರಿ. ವಿ.) ಈಗಿನ ಕಾಲದಲ್ಲಿ. This d. week, month, year (ಹೋದ ಅಥವಾ ಬರುವ) ವಾರದ, ತಿಂಗಳಿನ, ವರ್ಷದ, ಈ ದಿನ.

D.-boarder ಪಾಠಶಾಲೆಯಲ್ಲಿ ಭೋಜನ ಮಾತ್ರ ಮಾಡಿ ಅಲ್ಲಿ ಮಲಗದ ವಿದ್ಯಾರ್ಥಿ. **D.-book** (ಲೆಕ್ಕವಿಡುವ ಪದ್ಧತಿಯಲ್ಲಿ) ಪ್ರತಿ ದಿನವೂ ವ್ಯಾಪಾರದ ಜಮಾ ಖರ್ಚುಗಳೆಲ್ಲವನ್ನೂ ಬಂದಹಾಗೆಲ್ಲ ಬರೆದುಕೊಂಡು ಕೊನೆಗೆ ವರ್ಗದ ಪುಸ್ತಕಕ್ಕೆ ದಾಖಲು ಮಾಡಿಕೊಳ್ಳುವ ದಿನಪುಸ್ತಕ : ರೋಜುಪುಸ್ತಕ. **D.-boy** ಮನೆಯಲ್ಲಿಯೇ ಊಟ ಮಾಡಿಕೊಂಡು ಪಾಠಶಾಲೆಗೆ ಹೋಗುವ ವಿದ್ಯಾರ್ಥಿ. **D.-dream, -ing, -er** ಹಗಲುಗನಸು ; ದಿವಾಸ್ವಪ್ನ. ಭಾವ ಮಗ್ನತೆ ; ಮನೋರಾಜ್ಯ ; ಗಾಳಿ ಗೋಪುರ. ಭಾವ ಮಗ್ನ ; ಚಿಂತಾ ಮಗ್ನ. **D.-labourer** ದಿನಗೂಲಿ(ಯವ) ; ಜೆಂಗೂಲಿ. **Daýlight** (ನಾ.) ಹಗಲ ಬೆಳಕು ; ಹಗಲು, ಸೂರ್ಯನ ಬೆಳಕು [Burn d. (Burn[2] ನೋಡಿ)]. ಬಹಿರಂಗ ; ಪ್ರಕಾಶ. ಮುಂಬೆಳಗು ; ಹೊತ್ತಾರೆ (Before d. ಮುಂಜಾನೆ). (ಕಣ್ಣಿಗೆ ಕಾಣುವ) ಅವಕಾಶ, ಅಂತರ, ತೆರಪು (ದೋಣಿಜೂಜಿನಲ್ಲಿ ಬೇರೆ ಬೇರೆ ದೋಣಿಗಳಿಗಿರುವ, ಕುದುರೆಸವಾರನಿಗೂ ಜೀನಿಗೂ ಮಧ್ಯೆ ಬಿಟ್ಟಿರುವ, ಮದ್ಯದ ಗಾಜುಬಟ್ಟಲಿನಲ್ಲಿ ಮದ್ಯದ ಮಟ್ಟಕ್ಕೂ ಬಟ್ಟಲಿನ ಏಣಿಗೂ ಇರುವ, ಅಂತರ. No d. ಪೂರ್ತಿ ತುಂಬು). (ಬ. ವ. ದಲ್ಲಿ, ಅಸಂ.) ಕಣ್ಣುಗಳು ; ದೃಷ್ಟಿಶಕ್ತಿ ; ಪ್ರಜ್ಞೆ. Let d. into (ಅಸಂ.) (ಮನುಷ್ಯ, ಮೊ. ನ್ನು) ಭರ್ಜಿ, ಮೊ. ಗಳಿಂದ ತಿವಿ, ಇರಿ, ಅಥವಾ ಗುಂಡಿನಿಂದ ಹೊಡೆ. Broad d. (Broad ನೋಡಿ). D. saving ಬೆಳಕಿರುವಾಗ ವ್ಯಥಾ ದೀಪವುರಿಸುವುದು, ಮೊ. ನ್ನು ತಪ್ಪಿಸುವುದಕ್ಕಾಗಿ ಕಾಲಗಣನೆಯಲ್ಲಿ ಕಾಲ್ಪನಿಕ ವ್ಯತ್ಯಾಸ ಮಾಡುವುದು (ಎಂದರೆ, ಬೇಸಗೆಯಲ್ಲಿ ಗಡಿಯಾರಗಳನ್ನು ಸಾ., ಒಂದು ಗಂಟೆ ಮುಂದಕ್ಕೂ, ಚಳಿಗಾಲದಲ್ಲಿ ಒಂದು ಗಂಟೆ ಹಿಂದಕ್ಕೂ ತಿರುಗಿಸಿಡುವುದು) : ಹಗಲುಳಿಕೆ. **D.-long** (ಗು., ಕ್ರಿ. ವಿ.) ದಿನವೆಲ್ಲ (ನಡೆಯುವ). **D.-room** ಹಗಲುಹೊತ್ತು ಮಾತ್ರ ಉಪಯೋಗಿಸುವ ಕೋಣೆ (ಮು., ಪಾಠಶಾಲೆಯಲ್ಲಿ ಎಲ್ಲರೂ ಒಟ್ಟಿಗೆ ವಾಸವಾಗಿರುವ ಸಂದರ್ಭದಲ್ಲಿ). **D.-school** ಹಗಲು ಮಠ (ಸಾಯಂ ಪಾಠಶಾಲೆ, ಭಾನುವಾರದ ಪಾಠಶಾಲೆ ಅಥವಾ ಊಟದ ಪಾಠಶಾಲೆ ಅಲ್ಲದ್ದು). **D.-sight** ಹಗಲುಗಣ್ಣು. **Daýsman** ದಿನಗೂಲಿಯವನು. (ಪ್ರಾಚೀ. ಪ್ರ.) ಮಧ್ಯಸ್ಥಗಾರ. **D.-spring** (ಕಾವ್ಯ) ಅರುಣೋದಯ ; ಪ್ರಭಾತ. **D.-star** ಶುಕ್ರ ನಕ್ಷತ್ರ ; ಚುಕ್ಕಿ ; ಬೆಳ್ಳಿ. ದಿನಮಣಿ ; ಸೂರ್ಯ. **Daý-tale, Dáytal, Dátal** ಡೇಟೇಲ್, ಡೇಟೆಲ್, ಡೇಟ್ಲ್ (ನಾ.) (ಕೆಲಸ, ಕೂಲಿ, ಮೊ. ಗಳ) ದಿನದ ಲೆಕ್ಕ. **D.-ticket** ಆ ದಿನವೇ ಹೋಗಿ ಹಿಂದಕ್ಕೆ ಬರಲು ಅನುಕೂಲಿಸುವ ಪ್ರಯಾಣದ ಬೆಲೆಚೀಟಿ (ಟಿಕೆಟ್ಟು). **D.-time** ಹಗಲು ಹೊತ್ತು. **D.-woman** ಹೈನಗಿತ್ತಿ. **Daýwork, D.-work** ದಿನಗೆಲಸ. **Daíly** (ಗು., ಕ್ರಿ. ವಿ., ನಾ.) ಪ್ರತಿ ದಿನ(ದ) ; ದೈನಿಕ ; ಪ್ರತಿ ದಿನವೂ ; ದಿನೇ ದಿನೇ ; ತಪ್ಪದೆ. ದಿನ ಪತ್ರಿಕೆ (ಬ. ವ. Dailies). D.-bread ಜೀವನಾಧಾರ ; ಜೀವಿಕೆ.

Daze ಡೇಯ್ಸ್ (ಕ್ರಿ. ಸಕ., ನಾ.) ದಿಗ್ಭ್ರಮೆಗೊಳಿಸು ; ಮಂಕುಗವಿಸು ; ಕಣ್ಣು ಮಂಜುಮಾಡು ; ಕಣ್ಣು ಕೋರೈಸು. (ನಾ.) ಕೋರೈಕೆ ; ದಿಗ್ಭ್ರಮೆ ; ಮಂಕುಗವಿತ. **Dázedly** —ಜ಼್ಡ್ಲಿ (ಕ್ರಿ. ವಿ.) ; **Dázzle** ಡ್ಯಾಜ಼್ಲ್ (ಕ್ರಿ. ಸಕ., ನಾ.) ಕಣ್ಣು ಚುಚ್ಚು, ಕುಕ್ಕು. (ದೃಷ್ಟಿ, ಕಣ್ಣು, ಮನುಷ್ಯ— ಇವನ್ನು ಅತಿ ಬೆಳಕು, ವಿಚಿತ್ರ ಚಲನೆ, ವಿಪರೀತ ಸಂಖ್ಯೆ, ಮೊ. ಗಳಿಂದ) ಮಂಜುಗವಿಸು, ಕೋರೈಸು. ದಿಗ್ಭ್ರಮೆಗೊಳಿಸು, ವಿಸ್ಮಯಗೊಳಿಸು, ಬೆರಗು ಮಾಡು (ರೂಪ. ಸಹ) (Dazzled with or by). (ನಾ.) ಕಡು ಹೊಳಪು ; ಅತಿ ಪ್ರಕಾಶ. D. lamps or lights (ಮೋಟಾರು ಬಂಡಿಯಲ್ಲಿಯ) ಕಣ್ಣುಕೋರೈಸುವ ದೀಪಗಳು. D. paint ಹಡಗಿನ ಮಾದರಿಯನ್ನೂ ಮಾರ್ಗವನ್ನೂ (ಶತ್ರುಗಳು) ತಿಳಿಯಲಾಗದಂತೆ ಅಳವಡಿಸಿರುವ ಬಣ್ಣದ ರೀತಿ : ಕೋರೈಸುವ ಬಣ್ಣ. **Dázzlement** (ನಾ.) ; **Dázzlingly** (ಕ್ರಿ. ವಿ.)

Deácon ಡೀಕ(ಕ್)ನ್ (ನಾ.) (ಆದ್ಯ ಕ್ರೈಸ್ತಮಂಡಲಿಯಲ್ಲಿ) ಧರ್ಮಾಧಿಕಾರಿ ; (ಎಪಿಸ್ಕೊಪಲ್ ಕ್ರೈಸ್ತಮಂಡಲಿಯಲ್ಲಿ) ಬಿಷಪ್ಪಿಗೂ ಕ್ರೈಸ್ತ ಪುರೋಹಿತನಿಗೂ ಕೆಳದರ್ಜೆಯ ಅಧಿಕಾರಿ ; (ಪ್ರೆಸ್ಬಿಟೀರಿಯನ್ ಕ್ರೈಸ್ತ ಮಂಡಲಿಯಲ್ಲಿ) ಲೌಕಿಕ ವಿಚಾರದ ಅಧಿಕಾರಿ. **Deáconess** (ನಾ., ಸ್ತ್ರೀ.) ಡೀಕನ್ನಿನ ಅಧಿಕಾರದಂಥ ಅಧಿಕಾರವುಳ್ಳ ಹೆಂಗಸು. **Deáconship** (ನಾ.) ; **Diáconal** ಡೈಆ್ಯಕೊನಲ್ (ಗು.) ಡೀಕನ್ನಿನ.

Dead ಡೆಡ್ (ಗು., ನಾ., ಕ್ರಿ. ವಿ.) ಸತ್ತ ; ಸತ್ತುಹೋದ ; ಮಡಿದ ; ಜೀವ ಹೋದ ; ಮೃತ ; ಜೀವವಿಲ್ಲದ ; ನಿರ್ಜೀವವಾದ [The d. ಸತ್ತವನು(ರು). From the d. ಸತ್ತವರ ಮಧ್ಯದಿಂದ] ತೀರಿಹೋದ ; ಆಗಿಹೋದ. (ಕೈ, ಕಾಲು, ಮೊ.) ಜೋಮುಹಿಡಿದ ; ಮರವಟ್ಟ ; ಜಡವಾಗಿ ಹೋದ ; ನಿಶ್ಚೇಷ್ಟವಾದ ; ಪ್ರಜ್ಞೆತಪ್ಪಿದ ; ಅರಿವು ತಪ್ಪಿದ ; ಜಡ ; ಅಚೇತನ. ಅಧ್ಯಾತ್ಮಜ್ಞಾನ ರಹಿತ ; ಧಾರ್ಮಿಕ ಪ್ರಜ್ಞೆಯಿಲ್ಲದ. ಅರೂಢಿ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯವಹಾರವಳಿದ ; ಬಳಕೆ ತಪ್ಪಿದ ; ಸಂದ (ಗ್ರಾಂ.). ನಿಷ್ಫಲ. ಮಂಕಾದ ; ಕಾಂತಿ ರಹಿತ ; ಶಕ್ತಿಗುಂದಿದ ; ನಿಸ್ಸತ್ವ ; ಸ್ತಬ್ಧ ; ತಟಸ್ಥ ; ನಿಶ್ಚಲ ; ಥಟ್ಟನೆ ಆದ. ಸಂಪೂರ್ಣ ; ತೀರ. (ಕ್ರಿ. ವಿ.) ಸಂಪೂರ್ಣವಾಗಿ (D. asleep ಗಾಢ ನಿದ್ರೆಯಲ್ಲಿ). (ನಾ.) ನಿಶ್ಶಬ್ದ ಕಾಲ (At d. of night ರಾತ್ರಿ ಸದ್ದು ಅಡಗಿರುವಾಗ. In the d. of winter ಜೀವಚಿಹ್ನೆ ಕಾಣದ ಹೇಮಂತ ಋತುವಿನ ಕಾಲದಲ್ಲಿ). Cut him d. (Cut ನೋಡಿ). D. against ನೇರೆದುರಾಗಿ ; ತೀರ ವಿರುದ್ಧ ವಾಗಿ. D. as a doornail ಪೂರ್ತಿ ಸತ್ತ. D. and gone ಸತ್ತುಹೋದ. D. men's shoes (Shoes ನೋಡಿ). D. men tell no tales (ಗುಟ್ಟು ತಿಳಿದವನನ್ನು) ಕೊಂದುಬಿಟ್ಟರೆ ಗುಟ್ಟು ಹೊರಬೀಳದೆ ಇರುತ್ತದೆ. D. on the target ನೇರುನೆಟ್ಟಗೆ. D. to ಮನಸ್ಸಿಗೆ ಹತ್ತದೆ ; ಜಡ್ಡುಗಟ್ಟಿ ; ಮರವಟ್ಟು. Flog a d. horse (Flog ನೋಡಿ)

D.-alive ಬದುಕಿದ್ದರೂ ಜೀವವಿಲ್ಲದಂತಿರುವ ; ಜೀವಚ್ಛವವಾದ ; ನಡೆಹೆಣವಾದ ; ಉತ್ಸಾಹಶೂನ್ಯ. (ಸ್ಥಳ, ಉದ್ಯೋಗ, ಮೊ. ಗಳ ವಿಷಯದಲ್ಲಿ) ನಿರುತ್ಸಾಹ ; ಜಡ ; ಬೇಸರವಾದ. **D. arch, window, etc.,** ತೋರ್ಕೆಯ ಕಮಾನು, ಕಿಟಕಿ, ಮೊ. **D. ball** ಆಟದಲ್ಲಿ ಲೆಕ್ಕಕ್ಕಿಲ್ಲದ ಚೆಂಡು. **D.-beat** ಪೂರ ಬಳಲಿದ. (ಯಂತ್ರಶಾಸ್ತ್ರ) ಪುನಃಕಂಪನವಿಲ್ಲದ ; ಕ್ಷಿಪ್ರಸ್ತಂಭಿ. (ಅಮೆ. ಸಂ., ಅಸಂ.) ಜೀವನಕ್ಕಾಗಿ ಒಬ್ಬನಮೇಲೆ ಬಿದ್ದಿರುವ ಅಯೋಗ್ಯ ಸೋಮಾರಿ : ಬಿಟ್ಟಿ ಹಿಟ್ಟಿನವನು. **D. brand** ಆರಿದ ಕೊಳ್ಳಿ. **D. calm** ಪೂರ್ಣ ಸ್ತಬ್ಧತೆ, ಶಾಂತಿ. **D. certainty** ಪೂರ್ಣ ನಿಶ್ಚಯ ; ಖಡಾ ಖಂಡಿತ. **D. coal** ಆರಿದ ಕೆಂಡ. **D. colour** (ಚಿತ್ರದಲ್ಲಿ ಮೊದಲ ವರಿಸೆಯ) ಹೊಳಪಿಲ್ಲದ ಬಣ್ಣ. **D. drunk** ಪ್ರಜ್ಞೆ ತಪ್ಪುವಂತೆ ಕುಡಿದು ; ಅಮಲೇರಿ. **D. end** ರೈಲ್ವೆ, ಮೊ. ದ ಬಂಡಿಮಾರ್ಗಗಳಲ್ಲಿ ಆ ಮಾರ್ಗಗಳ ಶಾಖೆಯ ನಿಲುಕೊನೆ. **D. faint** ಪೂರ್ತಿ ಪ್ರಜ್ಞೆತಪ್ಪಿದ. **D. fence** ಒಣಗಿದ ಮರ, ಮೊ. ಗಳಿಂದ ಹಾಕಿದ ಬೇಲಿ : ಒಣ ಬೇಲಿ (Quickset fence ಬೆಳೆಯುವ ಗಿಡದ ಬೇಲಿ). **D. freight** ಹಡಗನ್ನು ಬಾಡಿಗೆಗೆ ತೆಗೆದುಕೊಳ್ಳುವಲ್ಲಿ ಸಾಮಾನಿಡದೆ ಖಾಲಿಬಿಟ್ಟ ಸ್ಥಳಕ್ಕೂ ಕೊಡಬೇಕಾದ ಬಾಡಿಗೆ : ಖಾಲಿ ಬಾಡಿಗೆ. **D. gold** ಮೆರುಗಿಡದ ಚಿನ್ನ. **D. ground** ಕೋಟೆ, ಪದಾತಿಸೈನ್ಯ, ಮೊ. ಗಳ ಗುಂಡಿನೇಟಿಗೆ ಸಿಕ್ಕದಷ್ಟು ದೂರದ ಪ್ರದೇಶ. **D. hand** (ಕ್ರೈಸ್ತಮಂಡಲಿಯ, ಅಥವಾ ಇತರ ಸಂಸ್ಥೆಯ, ಹಿಡುವಳಿಯಲ್ಲಿರುವ) ಪರಭಾರೆ ಮಾಡಲಾಗದ ಜಮೀನು. **D.-head** ಬೆಲೆಕೊಡದೆ, ನಾಟಕ ನೋಡುವವನು, ಬಂಡಿಯಲ್ಲಿ ಪ್ರಯಾಣ ಮಾಡುವವನು : ಬಿಟ್ಟಿ ಗಿರಾಕಿ. **D. heat** (ಜೂಜೋಟ, ಮೊ. ಗಳಲ್ಲಿ ಪೈಪೋಟಿಗಾರರು) ಸರಿ ಸಮ. **D. hours** ನಿಶ್ಶಬ್ದ ಕಾಲ (ರಾತ್ರಿಯಲ್ಲಿ). **D.-house** ಹೆಣದ ಮನೆ ; ಶವಾಗಾರ. **D. language** ವ್ಯವಹಾರದಲ್ಲಿಲ್ಲದ ಭಾಷೆ. **D. letter** ಆಚರಣೆಯಲ್ಲಿಲ್ಲದ ಕಟ್ಟಳೆ, ನಿಯಮ. ವಿಳಾಸದಾರನು ಪತ್ತೆಯಿಲ್ಲದುದರಿಂದ ಪಾವತಿಯಾಗದೆ ಅಂಚೆಯ ಕಚೇರಿಯಲ್ಲಿ ಹಾಗೆಯೇ ಉಳಿದಿರುವ ಪತ್ರ ; ಪತ್ತೆಸಿಕ್ಕದ ಪತ್ರ. **D. level** (ಹಳ್ಳದಿಣ್ಣೆಗಳಿಲ್ಲದ) ಒಂದೇ ಮಟ್ಟ. **D. lift, pull** ಒಬ್ಬನಿಂದ ಎತ್ತಲಾಗದ, ಎಳೆಯಲಾಗದ, ಭಾರ : ಹೆಣಭಾರ ; ಸರ್ವಶಕ್ತಿಯನ್ನೂ ಪ್ರಯೋಗಿಸಬೇಕಾದ ವಿಷಮ ಸ್ಥಿತಿ. **D.-light** (ನಾವೆ) ಬಿರುಗಾಳಿ ಮಳೆಯಲ್ಲಿ ಹಡಗಿನ ಕೋಣೆಗಳ ಕಿಟಕಿಗಳನ್ನೂ ಇತರ ಗವಾಕ್ಷಿಗಳನ್ನೂ ಸಂದುಬಿಡದೆ ಮುಚ್ಚುವ ಕದ. **D. line** ದಾಟಿ ಮುಂದಕ್ಕೆ ಹೋಗಕೂಡದ ಅಥವಾ ಹೋಗಲಾಗದ ಗೆರೆ. **D.-lock** ಪೂರ್ಣ ಸ್ತಂಭನೆ : ಬಿಕ್ಕಟ್ಟು. **D. loss** (ಪರಿಹಾರವಿಲ್ಲದ) ಪೂರ್ಣ ನಷ್ಟ. **D. march** ಪ್ರೇತಸಂಸ್ಕಾರ ವಾದ್ಯ ; ಹೆಣಮೆರವಣಿಗೆಯ ವಾದ್ಯ. **D. matter** ನಿರ್ಜೀವ ಪದಾರ್ಥ ; ಜಡ ದ್ರವ್ಯ. **D. men** or **marines** ಖಾಲಿ ಸೀಸೆಗಳು. **D.-nettle** ಒಂದು ಜಾತಿಯ ತುರುಚಿಗಿಡದಂಥ ಎಲೆಗಳುಳ್ಳ, ಆದರೆ ಅವುಗಳಲ್ಲಿ ವಿಷದ ಮುಳ್ಳಿಲ್ಲದ, ಗಿಡ. **D.-office** ಪ್ರೇತ ಸಂಸ್ಕಾರ ; ಅಪರ ಕ್ರಿಯೆ. **D. point** or **D. centre** ಎಂಜಿನಿನ ಆಡುಬೆಣೆಗೆ ಅಥವಾ ಚಾಲಕ ದಂಡಕ್ಕೆ ಚಲನಶಕ್ತಿ ಅತ್ಯಂತ ಕಡಮೆಯಾಗಿರುವ ಅದರ ಚಲನ ಮಾರ್ಗದ ಇಕ್ಕಡೆಗಳ ಪರಮಾವಧಿ : ಸ್ತಬ್ಧ ಬಿಂದು ; ಸ್ತಬ್ಧ ಕೇಂದ್ರ. **D. reckoning** (ನಾವೆ) ನಕ್ಷತ್ರ, ಮೊ. ಗಳ ಸಹಾಯದಿಂದ ಹಡಗಿನ ಸ್ಥಾನವನ್ನು ಗೊತ್ತುಮಾಡಲು ಸಾಧ್ಯವಿಲ್ಲದಾಗ ದಿಕ್ಸೂಚಿ, ವೇಗಸೂಚಿ, ಮೊ. ಗಳಿಂದ ಗುಣಿಸುವುದು. **D. Sea** ಪ್ಯಾಲಸ್ಟೈನಿನಲ್ಲಿರುವ ಅತಿ ಉಪ್ಪುನೀರಿನ ದೊಡ್ಡ ಸರೋವರ (ಇದರಲ್ಲಿ ಜಲಚರಗಳಿಲ್ಲ) : ನಿರ್ಜೀವ ಸಮುದ್ರ. **D. shot** ಗುರಿ ತಪ್ಪದ (ಗುರಿಗಾರ). **D. sound** ಅನುರಣನವಿಲ್ಲದ ಧ್ವನಿ. **D. spit** (ಬಳ. ಮಾ.) ಪಡಿಯಚ್ಚು ; ತದ್ರೂಪ. **D. stock** ಯಾರೂ ಕೊಳ್ಳದೆ ಹಾಗೆಯೇ ಬಿದ್ದಿರುವ ಸಾಮಾನು ; ಮಾರಾಟವಾಗದ ಸರಕು. ಉಪಯೋಗಕ್ಕೆ ಬಾರದಿರುವ ಬಂಡವಾಳ : ಜಡ ಬಂಡವಾಳ. **D. stop** ಥಟ್ಟನೆ, ಪೂರ್ತಿಯಾಗಿ, ನಿಂತುಬಿಡುವುದು. **D. water** (ಹರಿಯದೆ) ನಿಂತ ನೀರು. **D. weight** ಉಪಯೋಗಕ್ಕೆ ಒದಗದ ಭಾರ ; ಜಡ ತೂಕ ; ಹೆಣಭಾರ. (ರೂಪ.) (ಋಣ, ಮೊ. ಗಳ) ಹೊರೆ.

Deáden ಡೆಡ್‌ನ್ (ಕ್ರಿ.) ನಿಶ್ಚೇತನಗೊಳ್ಳು ; — ಗೊಳಿಸು ; ಕಳೆಗುಂದು ; — ಗುಂದಿಸು ; ಮಂದಗೊಳ್ಳು ; — ಗೊಳಿಸು ; ಜಡ ಮಾಡು ; ಸಾಯಿಸು. **Deádly** (ಗು., ಕ್ರಿ. ವಿ.) ಸಾಯಿಸುವ ; ಘಾತುಕ ; ಮಾರಕ ; ವಿಷ ಸ್ವಭಾವದ ; ನಂಜಿಡಿದ (D. Nightshade ಒಂದು ತೀವ್ರ ವಿಷಸಸ್ಯ). ಭಯಂಕರ ; ಕ್ರೂರ ; ಮಹಾ ; ನರಕ ಶಿಕ್ಷಾರ್ಹವಾದ (D. sin ಮಹಾ ಪಾತಕ). ದುಶ್ಶಾಮ್ಯ ; ಬದ್ಧ ವೈರದ ; ಹಗೆ ಕಾರುವ ; ವಿಧ್ವಂಸಕ ; ಸಂಹಾರಕ ; ಸಾವಿನಂಥ ; ಹೆಣದಂಥ (D. paleness ಹೆಣದ ವೈವರ್ಣ್ಯ). ಅತಿ ; ವಿಪರೀತ (D. haste ವಿಪರೀತ ಆತುರ). (ಕ್ರಿ. ವಿ.) ಸತ್ತಂತೆ ; ಹೆಣದಂತೆ (D. white ಹೆಣದಂತೆ ಬಿಳಿಚಿಕೊಂಡ). D. tired ಅತಿ, ವಿಪರೀತ, ದಣಿದು **Deádliness** (ನಾ.) ; **Deádness** (ನಾ.)

Deaf ಡೆಫ್ (ಗು.) ಕಿವುಡಾದ ; ಕಿವಿ ಕೇಳಿಸದ ; ಕೆಪ್ಪ ; ಬಧಿರ (The d. ಕಿವುಡರು. None so d. as those that won't hear ಕಿವಿಗೊಡದವರಷ್ಟು ಕಿವುಡರು ಯಾರೂ ಇಲ್ಲ). (ಸಂ.) ಸ್ವರ, ತಾಳ, ಮೊ. ವು ಮನಹೊಗದ, ನಾಟದ. ಕಿವಿಗೊಡದ ; ಲಕ್ಷ್ಯ ಮಾಡದ [Turn a d. ear to ಕಿವಿಗೆ ಹಾಕಿಕೊಳ್ಳದಿರು ; ಕಿವುಡುಗೇಳು (ಗ್ರಾಂ.)]. D. nut ತಿರುಳಿಲ್ಲದ ಕಾಯಿ. D.-and-dumb alphabet, language ಮೂಗರ ವರ್ಣಮಾಲೆ, ಭಾಷೆ. D.-mute ಮೂಗ. **Deáfly** (ಕ್ರಿ. ವಿ.) ಕಿವಿ ಕೇಳದೆ (ರೂಪ. ಸಹ). ಮಂದವಾಗಿ ; ಅಸ್ಪಷ್ಟವಾಗಿ. **Deáfness** (ನಾ.) ಕಿವುಡು. **Deáfen** ಡೆಫ್‌ನ್ (ಕ್ರಿ. ಸಕ.) (ಗದ್ದಲ ಮಾಡಿ) ಕಿವಿ ಕೇಳದಂತೆ ಮಾಡು ; ಕಿವುಡುಗೊಳಿಸು. ಹೆಚ್ಚುಶಬ್ದ ಮಾಡಿ ಮೊದಲನ ಶಬ್ದವನ್ನು ಮುಳುಗಿಸಿಬಿಡು. (ನೆಲ, ಮೊ. ನ್ನು) ಶಬ್ದ ತೂರದಂತೆ ಮಾಡು.

Deal[1] ಡೀಲ್ (ನಾ., ಕ್ರಿ. ; ಭೂತ., ಭೂ. ಕೃ. Dealt ಡೆಲ್ಟ್) [A great d., good d. ಬಹಳ(ವಾಗಿ) ; ಹೆಚ್ಚು ; ಹೆಚ್ಚಾಗಿ ; ತುಂಬ ; ಯಥೇಚ್ಛವಾಗಿ. (ಅಸಂ.) A d. = A great d.]. (ದಾನ, ಮೊ. ನ್ನು, ಅನೇಕರಿಗೆ) ಹಂಚು. (ಒಬ್ಬನ ಭಾಗಕ್ಕೆ ಅಥವಾ ಪಾಲಿಗೆ ಬಂದದ್ದನ್ನು) ಕೊಡು [Dealt him happiness ಸುಖ ಕೊಟ್ಟಿತು. Deal a blow ಏಟು ಕೊಡು (ರೂಪ. ಸಹ)]. ಇಸ್ಪೀಟಾಟದಲ್ಲಿ (ಆಟಗಾರರಿಗೆ) ಎಲೆ ಹಂಚು ; ಎಲೆ ಕೊಡು. [(ನಾ.) ಇಸ್ಪೀಟೆಲೆಯ ಹಂಚಿಕೆ]. ವ್ಯವಹರಿಸು ; ಸಂಪರ್ಕ ಮಾಡು ; ಒಡವೆರೆ (ಮು., ನಿಷೇಧಾರ್ಥದಲ್ಲಿ : I refuse to d. with him ಅವನ ಸಂಗಡ ವ್ಯವಹಾರ ನನಗೆ ಬೇಡ). (ಒಬ್ಬನೊಡನೆ) ವ್ಯಾಪಾರ ನಡಸು. (ನಾ.) (ಬಳ. ಮಾ.) ಒಂದು ವ್ಯಾಪಾರ ; ಮೋಸದ ವ್ಯಾಪಾರ. (ಕ್ರಿ.) ನಡೆದುಕೊ ; ಆಚರಿಸು ; ವರ್ತಿಸು ; ತೊಡಗಿರು ; ಪ್ರವೃತ್ತನಾಗು (D. with ನೋಡಿಕೊ ; ವಿಚಾರಿಸಿಕೊ ; ವಿಚಾರ ಮಾಡು. D. honourably with or by ಗೌರವದಿಂದ ವರ್ತಿಸು). **Deáler** (ನಾ.) (ಕ್ರಿಯಾರ್ಥಗಳಲ್ಲಿ) ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಾಪಾರಿ (ಮು., ಸಮಾಸ ಪದಗಳಲ್ಲಿ : ಉದಾ., Corn-d. ಧಾನ್ಯ ವ್ಯಾಪಾರಿ). **Deáling** (ನಾ.)

Deal[2] ಡೀಲ್ (ನಾ.) ಒಂದು ಗೊತ್ತಾದ ಅಳತೆಯ 'ಫರ್' ಅಥವಾ 'ಪೈನ್' ಮರದ ಹಲಗೆ(ಗಳು) ; ಫರ್ ಅಥವಾ ಪೈನ್ ದಾರು ; ಜಾಯಿಕಾಯಿ ಮರದ ದಾರು.

Deambulátion ಡೀಆ್ಯಂಬುಲೇಷನ್ (ನಾ.) ತಿರುಗಾಟ ; ನಡೆದಾಟ ; ಸಂಚಾರ. **Deámbulatory** — ಲಟರಿ (ಗು., ನಾ.) = Ambulatory.

Dean[1] ಡೀನ್ (ನಾ.) ಮುಖ್ಯ (ಕ್ರೈಸ್ತ) ಆರಾಧನ ಮಂದಿರದ ಮಂಡಲಯ ಪ್ರಧಾನಾಧಿಕಾರಿ. (ಪ್ರೌಢವಿದ್ಯಾಶಾಲೆಗಳಲ್ಲಿ) ಅಲ್ಲಿಯೇ ವಾಸವಾಗಿದ್ದು ವಿದ್ಯಾರ್ಥಿಗಳ ನೀತಿಶಿಕ್ಷಣ, ಮೊ. ನ್ನು ನೋಡಿಕೊಳ್ಳುವ ವಿದ್ಯಾಧಿಕಾರಿ ; ಶಿಷ್ಟಿಪ್ರವರ್ತಕ. (ಆಧುನಿಕ ವಿಶ್ವವಿದ್ಯಾನಿಲಯಗಳಲ್ಲಿ) ಒಂದು ವಿದ್ಯಾಮಂಡಲದ ಅಧ್ಯಕ್ಷ. = Doyen. **Deánery** (ನಾ.) ಡೀನಿನ ಅಧಿಕಾರ, ಕಚೇರಿ, ಮನೆ. ಹಳ್ಳಿಯ ಡೀನಿನ ಅಧಿಕಾರ ಪ್ರಾಂತ. **Deánship** (ನಾ.)

Dean[2], **Dene** ಡೀನ್ (ನಾ.) ಕಣಿವೆ ; ಕಮರಿ.

Dear ಡಿಯರ್ (ಗು., ನಾ., ಕ್ರಿ. ವಿ., ಭಾವ. ಅವ್ಯ.) ಅಕ್ಕರೆಯ ; ಪ್ರೀತಿಯ ; ಪ್ರಿಯ (ಮಾತನಾಡುವಾಗ ಅನೇಕ ಸಂದರ್ಭಗಳಲ್ಲಿ ಗೌರವಾರ್ಥವಾಗಿ, ಕೆಲವು ವೇಳೆ ವ್ಯಂಗ್ಯಾರ್ಥದಲ್ಲಿ) ; ಒಲವಿನ ; ಮೆಚ್ಚಿನ ; ಪ್ರೀತಿಯ ; ಅಮೂಲ್ಯವಾದ (For d. life ಜೀವಭಯದಿಂದ). ಬಹು ಬೆಲೆಯ ; ತುಟ್ಟಿಯ (It sells d. ಅದು ಬಹಳ ಬೆಲೆ, ತುಟ್ಟಿ, ತಗ್ಗು. D. year ತುಟ್ಟಿಯ ವರ್ಷ. D. shop ಹೆಚ್ಚುಬೆಲೆಯ ಅಂಗಡಿ ; ತುಟ್ಟಿಯಂಗಡಿ). (ನಾ.) ಪ್ರೀತಿಪಾತ್ರ [My dear ; My dearest ; A. d. (ಮುದ್ದುಮಾಡುವಲ್ಲಿ)]. (ಭಾವ. ಅವ್ಯ.) Dear, Dear ! Dear me ! Oh dear ! (ಆಶ್ಚರ್ಯ, ವ್ಯಥೆ, ಸಹಾನುಭೂತಿ, ಮೊ. ಗಳನ್ನು ಸೂಚಿಸುವುದು). **Dearly** (ಕ್ರಿ. ವಿ.) ; **Deárness** (ನಾ.) ; **Dearth** ಡರ್ತ್ (ನಾ.) ಆಹಾರಪದಾರ್ಥಗಳ ಕೊರತೆ, ತುಟ್ಟಿ ; ತಕ್ಕಷ್ಟು ದೊರೆಯದೆ ಇರುವುದು ; ಅಭಾವ. **Deáry, -ie** (ನಾ.) (ಸಾ., ಸಂಬೋಧನೆಯಲ್ಲಿ) ಮುದ್ದು.

Death ಡೆತ್ (ನಾ.) ಸಾವು ; ಸಾಯುವುದು ; ಮರಣ ; ನಿಧನ (Die the d.). [D.-bed ಮೃತ್ಯುಶಯ್ಯೆ ; ಮರಣ ಕಾಲ. D.-bed repentance (ರೂಪ.) ಕಾಲಾತೀತ ಪಶ್ಚಾತ್ತಾಪ ; ಕೆಟ್ಟಮೇಲೆ ಬಂದ ಬುದ್ಧಿ]. ಜೀವಮಾನದ ಅಂತ್ಯ. ನಾಶ ; ವಿನಾಶ ; ಸರ್ವ ನಾಶ. ಮೃತ್ಯು ; ಯಮ ; ಜವರಾಯ. ಕೊಲೆ ; ಹತ್ಯ ; ವಧೆ. At death's door ಸಾಯುವ ಸ್ಥಿತಿಯಲ್ಲಿ; ಕಂಠಗತ ಪ್ರಾಣನಾಗಿ. Be d. on (ಅನಂ.) ಷಿಕಾರಿ, ಮೊ. ನ್ನು ಕೊಲ್ಲುವುದರಲ್ಲಿ ಚತುರನಾಗಿರು. (ರೂಪ.) ಯಾವುದಾದರೂ ಕಾರ್ಯಸಾಧನೆಯಲ್ಲಿ ಚತುರನಾಗಿರು. Be in at the d. (ನರಿಯ ಬೇಟೆಯಲ್ಲಿ) ನರಿಯನ್ನು ಕೊಲ್ಲುವಾಗ ಅಲ್ಲಿರು ; (ರೂಪ.) ಯಾವುದಾದರೂ ಉದ್ಯಮದ ಕೊನೆಗಾಣಿಕೆಯನ್ನು ನೋಡು. Be the d. of ಕೊಲ್ಲು ; ಮೃತ್ಯುವಾಗು ; ಮಾರಕವಾಗು. Catch one's d. ಅತಿ ಶೀತ, ಮೊ. ಮಾರಕ ರೋಗಕ್ಕೆ ತುತ್ತಾಗು. D. on rats (ನಾಯಿಯ ವಿಷಯದಲ್ಲಿ) ಇಲಿಗಳಿಗೆ ಮೃತ್ಯು. D.'s-head ಸಾವಿನ ಚಿಹ್ನೆಯಾಗಿ ಉಪಯೋಗಿಸುವ ತಲೆಬುರುಡೆ : ಮೃತ್ಯು ಕಪಾಲ. ಬೆನ್ನಿನಮೇಲೆ ಕಪಾಲ ಚಿಹ್ನೆಯಿರುವ ಒಂದು ಜಾತಿಯ ಚಿಟ್ಟೆ. Do to d., Put to d., Stone to d. ಕೊಲ್ಲು ; ಕಲ್ಲು ಬೀರಿ ಕೊಲ್ಲು. Everlasting d. ನರಕ ಜೀವನ ; ಸದಾ ನರಕ ವಾಸ ; ನಿತ್ಯ ನರಕ. Eyes closed in d. ಸತ್ತು ಕಣ್ಣು ಮುಚ್ಚಿಹೋಗಿ. Field of d. ಸಾವಿನ ಕಳ ; ಕೊಲೆ ನೆಲ ; ಯುದ್ಧ ಭೂಮಿ ; ರಣ ರಂಗ. Hold on like grim d. ಸಾವಿನಂತೆ ಪಟ್ಟು ಹಿಡಿ ; ಹಿಡಿದರೆ ಬಿಡದಿರು. It is, we make it, d. to ಮರಣ ದಂಡನೆ ವಿಧಿಸಿರುತ್ತೇವೆ. Jaws of d. ಮೃತ್ಯು ಮುಖ. Sick unto d., Tired to d. ಅತಿ ಬೇಜಾರಾಗಿ ; ರೋಸಿಹೋಗಿ ; ಅತಿ ಬಳಲಿ. Sure as d. ಖಡಾ ಖಂಡಿತವಾಗಿ. War to the d. ಮರಣಾಂತ ಯುದ್ಧ.

Black d. (Black ನೋಡಿ). **Civil d.** ಶಾಸನ ಬಹಿಷ್ಕಾರ, ಗಡೀಪಾರು, ಮೊ. ಗಳಿಂದಾಗುವ ರಾಷ್ಟ್ರಿಕನ ಹಕ್ಕುನಷ್ಟ : ವ್ಯವಹಾರ ಮರಣ. **D.-adder** ಒಂದು ಜಾತಿಯ ವಿಷಸರ್ಪ. **D.-blow** ಸಾವೇಟು ; ಮಾರಕ ; ಘಾತಕ (ರೂಪ. ಸಹ). **D.-duties** ಸತ್ತವನ ಆಸ್ತಿ ವಾರಸುದಾರನಿಗೆ ಹೋಗುವುದಕ್ಕೆ ಮೊದಲು ವಸೂಲ್ಮಾಡುವ ತೆರಿಗೆ : ವಾರಸು ತೆರಿಗೆ. **D.-feud** ಮರಣಾಂತ ವೈರ. **D.-mask** ಸತ್ತವನ ಮುಖದಮೇಲೆ ಒತ್ತಿ ತೆಗೆದ ಪಡಿಯಚ್ಚು. **D.-rate** ಒಂದು ಸಾವಿರ ಪ್ರಜೆಗೆ ಪ್ರತಿವರ್ಷವೂ ಸಾಯುವವರ ಸಂಖ್ಯೆ : ಸಾವಿನ ದರ. **D.-rattle** ಸಾಯುತ್ತಿರುವವನ ಗಂಟಲಲ್ಲಿ ಗೊರಗುಟ್ಟುವ ಧ್ವನಿ : ಶ್ವಾಸದ ಎಳೆತ ; ಉಸಿರು ಕಡೆತ. **D.-roll** ಕೊಲೆಯಾದವರ ಅಥವಾ ಸತ್ತವರ ಪಟ್ಟಿ. **D.-trap** ಕೇವಲ ಅನಾರೋಗ್ಯವಾದ ಅಥವಾ ಅಪಾಯಕರವಾದ ಸ್ಥಳ : ಮಾರಕ ಸ್ಥಳ ; ಸಾವಿನ ಬೋನು. **D.-warrant** ಮರಣ ಶಾಸನ ; ವಧಾಜ್ಞೆ. (ರೂಪ.) ನಿರೀಕ್ಷೆ, ಸಂತೋಷ, ಮೊ. ಗಳ ಭಂಗಕಾರಿ. **D.-watch** ಟಕಟಕ ಶಬ್ದ ಮಾಡುವ ಒಂದು ಜಾತಿಯ ಹುಳು (ಈ ಶಬ್ದವು ಸಾವನ್ನು ಸೂಚಿಸುವುದೆಂದು ಕೆಲವರ ನಂಬಿಕೆ). **Deáthless** (ಗು.) ಸಾವಿಲ್ಲದ ; ಅಮರ. **Deáthlessly** (ಕ್ರಿ. ವಿ.) ; **Deáthlessness** (ನಾ.) ; **Deáthlike** (ಗು., ಕ್ರಿ. ವಿ.) ; **Deáthly** (ಗು., ಕ್ರಿ. ವಿ.) ; **Deáthward(s)** (ಗು., ಕ್ರಿ. ವಿ.)

Debácle (F) ಡಿಬಾಕ್‌ಲ್ (ನಾ.) ನದಿಯಲ್ಲಿಯ ನೀರ್ಗಲ್ಲಿನ ಒಡೆತ. (ಭೂ. ವಿ.) ಕಲ್ಲು, ಮಣ್ಣು, ಮೊ. ನ್ನು ಹೊಡೆದುಕೊಂಡು ರಭಸದಿಂದ ನುಗ್ಗುವ ಪ್ರವಾಹ ; ಕೊಚ್ಚಿಕೊಂಡುಹೋಗುವ ಪ್ರವಾಹ. ಗಲಾಟೆಯ ನೂಕುನುಗ್ಗಲು ; ಗೊಂದಲ ; ತುಮುಲ ; (ಭಯದಿಂದ) ಚೆದರಿ ಓಡುವುದು. ಪತನ ; ಉರುಳು (ಉದಾ., ಸರ್ಕಾರ ಉರುಳಿಕೊಳ್ಳುವುದು)

Debár ಡಿಬಾರ್ (ಕ್ರಿ. ಸಕ.) ಒಳಗೆ ಹೋಗದಂತೆ, ಹಕ್ಕು ಪಡೆಯದಂತೆ, ತಡೆ ; ಅಡ್ಡಿ ಮಾಡು ; ನಿಷೇಧಿಸು ; ಹೊರಹಾಕು ; ಬಹಿಷ್ಕರಿಸು ; ಹಕ್ಕು ತಪ್ಪಿಸು.

Debárk ಡಿಬಾರ್ಕ್ (ಕ್ರಿ.) = Disembark. **Debarkátion** (ನಾ.)

Debáse ಡಿಬೇಸ್ (ಕ್ರಿ. ಸಕ.) (ಗುಣ, ಬೆಲೆ, ಯೋಗ್ಯತೆ — ಇವುಗಳನ್ನು) ಕೀಳ್ಮಾಡು ; ಕಡಮೆ ಮಾಡು ; ಇಳಿಕೆ ಮಾಡು ; ಹೀನಯಿಸು ; ಕೆಡಿಸು. (ನಾಣ್ಯಕ್ಕೆ) ಕೀಳ್ಬೆರಕೆ ಮಾಡು ; (ನಾಣ್ಯವನ್ನು) ಮಟ್ಟ ಮಾಡು. **Debásement** (ನಾ.)

Debáte ಡಿಬೇಟ್ (ಕ್ರಿ., ನಾ.) (ಯಾವುದಾದರೂ ವಿಷಯವನ್ನು) ಚರ್ಚಿಸು, ವಾದ ಮಾಡು ; ವಾಗ್ವಾದ ಮಾಡು [Debating-society (ಅಭ್ಯಾಸಕ್ಕಾಗಿ) ಚರ್ಚೆಮಾಡುವ ಸಂಘ : ಚರ್ಚಾ ಸಂಘ]. ಹೋರಾಡು ; ಹೊಡೆದಾಡು ; ವ್ಯಾಜ್ಯ ಮಾಡು. ಆಲೋಚಿಸು ; ವಿಚಾರ ಮಾಡು ; ಮಥಿಸು ; ಮನಸ್ಸಿನಲ್ಲಿ ತಿರುವಿಹಾಕು. ವಾದ ; ವಿವಾದ ; ವಾಗ್ವಾದ ; ಚರ್ಚೆ. **Debátable** (ಗು.) ವಾದ ಗ್ರಸ್ತ ; ವಿವಾದಾಸ್ಪದವಾದ ; ಚರ್ಚಾಸ್ಪದವಾದ [D. ground (ಎರಡು ರಾಷ್ಟ್ರಗಳು ಹಕ್ಕುಹೂಡಿದ) ವಾದಗ್ರಸ್ತ ಭೂಮಿ ; ಗಡಿನೆಲ. (ರೂಪ.) ವಾದಾಸ್ಪದ ವಿಷಯ. **Debáter** (ನಾ.) ವಾದ ಚತುರ ; ವಾದಿ.

Debaúch ಡಿಬಾಚ್ (ಕ್ರಿ., ನಾ.) ಸೌಶೀಲ್ಯಗೆಡಿಸು ; ಸದ್ವರ್ತನೆಗೆಡಿಸು ; ಭ್ರಷ್ಟ ಮಾಡು. ಕೆಡಿಸು ; ದೂಷಿಸು. ಅತಿಭೋಗಾಸಕ್ತ ಮಾಡು ; ವಿಷಯ ಲಂಪಟ ಮಾಡು ; — ಆಗು ; ವ್ಯಭಿಚರಿಸು. (ಅಭಿರುಚಿ, ಅಭಿಪ್ರಾಯಗಳನ್ನು) ಹೊಲೆಗೆಡಿಸು. ಮಿತಿಮೀರಿದ ಕುಡಿತ, ಮೊ. ವಿಷಯ ಲಂಪಟತೆ ; ವ್ಯಭಿಚಾರ. **Debaúchable** (ಗು.) ; **Debaucheé** ಡೆಬಾಷೀ (ನಾ.) ವ್ಯಭಿಚಾರಿ ; ವಿಷಯ ಲಂಪಟ ; ಪೋಕರಿ. **Debaúchery** ಡಿಬಾಚರಿ (ನಾ.) ವ್ಯಭಿಚಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Debénture ಡಿಬೆನ್ಚ್ಯುರ್, ಡಿಬೆಂಚರ್ (ನಾ.) (ಪ್ರಾಚೀ. ಪ್ರ., ಪಾರಿಭಾಷಿಕ) ಅರಮನೆಗೆ ಅಥವಾ ಸರ್ಕಾರದ ಕಚೇರಿಗೆ ಸಾಮಾನು ಸರಬರಾಯಿ ಮಾಡುವವನಿಗೆ ಕೊಡುವ ಹಣಸಲ್ಲುವ ಚೀಟಿ. ಆಮದು ಮಾಡಿದ ಸರಕನ್ನು ಮತ್ತೆ ರಫ್ತುಮಾಡುವಾಗ ಸುಂಕದ ಇಲಾಖೆಯವರು ಅಂಥ ರಫ್ತುದಾರನಿಗೆ ಹಿಂದೆ ವಸೂಲಾದ ಸುಂಕದಲ್ಲಿ ತೋರಿಸುವ ರಿಯಾಯಿತಿಯ ಮೊಬಲಗಿನ ಹಣಸಲ್ಲುವ ಚೀಟಿ. ಒಂದು ಬಗೆಯ ಸಾಲಪತ್ರ (ಪತ್ರದಮೇಲೆ ನಮೂದಿಸಿರುವ ಮೊತ್ತವು ಸಲಕೆಯಾಗಿರುವುದೆಂದೂ ಅಸಲುಹಣ ತೀರಿಸುವ ವರೆಗೂ ಒಂದು ಗೊತ್ತಾದ ದರದ ಮೇರೆಗೆ ಬಡ್ಡಿ ಕೊಡಲಾಗುವುದೆಂದೂ, ಆ ಸಾಲವು ತನ್ನ ಆಸ್ತಿಯ ಮೇರೆ ಮೊದಲುಹಕ್ಕು ಉಳ್ಳದ್ದಾಗಿರುವುದೆಂದೂ ನಮೂದಿಸಿ ಒಂದು ಸಂಸ್ಥೆ ಅಥವಾ ಸಂಘವು ತನ್ನ ಮುದ್ರೆಹಾಕಿ ಕೊಟ್ಟದ್ದು) : ಡಿಬೆಂಚರ್ ಪತ್ರ. **D. stock** ಡಿಬೆಂಚರ್ ಸಾಲಪತ್ರಗಳ ಒಟ್ಟು ಮೊತ್ತವನ್ನು ಒಂದು ಮಾಡಿ ಅದರ ನಾಮಾತ್ಮಕ ಅಸಲಿನಮೇಲೆ ಶಾಶ್ವತವಾಗಿ ಗೊತ್ತಾದ ಬಡ್ಡಿಮಾತ್ರ ವರ್ಷೇವರ್ಷೇ ಪಾವತಿಮಾಡಲಾಗುವುದೆಂದು ಬದ್ಧಪಡಿಸಿರುವ ಡಿಬೆಂಚರ್ ಸಂಚಯ : ಡಿಬೆಂಚರ್ ಬಂಡವಾಳ.

Debílitate ಡಿಬಿಲಿಟೇಟ್ (ಕ್ರಿ. ಸಕ.) (ದೇಹಸ್ಥಿತಿ, ಮೊ. ನ್ನು) ಶಕ್ತಿಗುಂದಿಸು, ದುರ್ಬಲ ಮಾಡು, ನಿತ್ರಾಣ ಮಾಡು, ಉಡುಗಿಸು. **Debílity** (ನಾ.) (ಆರೋಗ್ಯ, ಉದ್ದೇಶ, ಮೊ. ಗಳ) ದೌರ್ಬಲ್ಯ, ನಿತ್ರಾಣ, ನಿರ್ಬಲತೆ, ನಿಶ್ಶಕ್ತಿ, ಉಡುಗು.

Débit ಡೆಬಿಟ್ (ನಾ., ಕ್ರಿ. ಸಕ.) ಲೆಕ್ಕದ ಖರ್ಚುಕಡೆ ; ದೇಣೆ. (ಕ್ರಿ.) (ಒಬ್ಬನ) ಲೆಕ್ಕಕ್ಕೆ ಖರ್ಚುಹಾಕು ; ದೇಣೆ ಕಟ್ಟು.

Debonaír, -bonnaíre ಡೆಬೊನೇರ್ (ಗು.) (ಪ್ರಾಚೀ. ಪ್ರ.) ಉಲ್ಲಾಸಕರ ; ಪ್ರಸನ್ನ ; ಸರಸಿ ; ಕೋಮಲ ಸ್ವಭಾವದ.

Debóshed ಡಿಬಾಷ್ಟ್ (ಗು.) Debauched ಪದದ ಪ್ರಾಚೀನ ರೂಪ.

Deboúch ಡಿಬೂಷ್, ಡೆಬುಷ್ (ಕ್ರಿ. ಅಕ.) (ಸೈನ್ಯ, ಹೊಳೆ, ಮೊ. ವು ಗಿರಿ ಕಂದರ, ಕಾಡು, ಮೊ. ಗಳಿಂದ) ಬಯಲಿಗೆ ಬರು, ಹೊರಗೆ ಬರು. **Deboúchment** (ನಾ.)

Débris, Debrís ಡೇ(ಯ್)ಬ್ರೀ, ಡೆಬ್ರೀ (ನಾ.) ಚೆದರಿ ಬಿದ್ದಿರುವ ಚೂರುಗಳು ; ಹೊಡೆದುಕೊಂಡುಬಂದು ಬಿದ್ದ, ಮುರಿದುಬಿದ್ದ, ಚೂರುಗಳ ರಾಶಿ ; ಮುರುಕಲುಗುಪ್ಪೆ ; ಭಗ್ನಾವಶೇಷ.

Debt ಡೆಟ್ (ನಾ.) (ಹಣದ, ಸಾಮಾನಿನ, ಉಪಕೃತಿಯ) ಕಡ, ಸಾಲ, ಋಣ. D. of honour ನಂಬಿಕೆ ಸಾಲ ; ಮಾನದ ಸಾಲ (ಕಾನೂನಿನ ಬಲದಿಂದ ಪಡೆಯಲಾಗದ್ದು : ಮು., ಜೂಜಾಟದಲ್ಲಿ ಸೋತ ಹಣ). D.-collector (ಸಾಲಗರಿಗಾಗಿ ವಸೂಲ್ಮಾಡುವ) ಸಾಲ ವಸೂಲಿಗಾರ. D. of nature ಪ್ರಕೃತಿ ಋಣ : ಸಾವು. National D. ರಾಷ್ಟ್ರವು ಪ್ರಜೆಗಳಿಂದ ತೆಗೆದುಕೊಂಡಿರುವ ಸಾಲ : ಸಾರ್ವಜನಿಕ ಋಣ. Funded d. ಬಡ್ಡಿಮಾತ್ರ ಕೊಡುತ್ತಬರಬೇಕಾದ ಸಾರ್ವಜನಿಕ ಋಣದ ಸಂಚಿತ ಭಾಗ : ಸಂಚಿತ ಋಣ. Floating d. ಕೇಳಿದಾಗ ಕೊಡಬೇಕಾದ, ಅಥವಾ ಕ್ಲುಪ್ತಕಾಲದಲ್ಲಿ ತೀರಿಸಬೇಕಾದ, ಸಾರ್ವಜನಿಕ ಋಣದ ಭಾಗ : ಚಲ ಋಣ. Small d. (ಕೆಳಕೋರ್ಟಿನ ಮೂಲಕ ವಸೂಲುಮಾಡಿಕೊಳ್ಳಬಹುದಾದ) ಸಣ್ಣ ಸಾಲ. Get into d. ಸಾಲಕ್ಕೆ ಬೀಳು. Get into a person's d. ಒಬ್ಬನಿಗೆ ಋಣಿಯಾಗು. In d. ಸಾಲದಲ್ಲಿ ಸಿಕ್ಕಿ. **Débtor** (ನಾ.) (ಹಣದ, ಉಪಕೃತಿಯ, ಕರ್ತವ್ಯದ) ಋಣ ತೀರಿಸಬೇಕಾದವನು : ಸಾಲಗಾರ ; ಋಣಿ. (ಲೆಕ್ಕಪದ್ಧತಿಯಲ್ಲಿ) ದೇಣೆಯ ಕಡೆ (ಸಂಕ್ಷಿಪ್ತ : Dr)

Debús ಡೀಬಸ್ (ಕ್ರಿ.) (ಸೈನ್ಯ) (ಮನುಷ್ಯರು ಅಥವಾ ಸಾಮಾನು) ಮೋಟಾರುಬಂಡಿಯಿಂದ ಇಳಿಸು, ಇಳಿ.

Début (F) ಡೆ(ೇ)ಬೂ (ನಾ.) ಸಮಾಜಕ್ಕೆ ಪ್ರಥಮ ಪ್ರವೇಶ ; (ನಾಟ್ಯರಂಗ, ಮೊ. ಗಳಲ್ಲಿ ನಟನಾಗಿ) ಪ್ರಥಮ ದರ್ಶನ. **Débutant** (F) ಡೆಬ್ಯುಟಾಙ್, — ಟಾಂಟ್ (ನಾ. ; ಸ್ತ್ರೀ. -ante — ಟಾಂಟ್) ನಾಟ್ಯ, ಮೊ. ಗಳಲ್ಲಿ ಪ್ರಥಮ ಪ್ರವೇಶ ಮಾಡುವ ನಟ ಅಥವಾ ನಟಿ : ಪ್ರಥಮ ಪ್ರವೇಶಿ. ಸಮಾಜಕ್ಕೆ ಹೊಸದಾಗಿ ಪರಿಚಯವಾಗುವ ಯುವತಿ.

Déca- ಡೆಕ -, **Dec-** ಡೆಕ್ - (ಸಮಾಸದಲ್ಲಿ ಪೂರ್ವಪದ) ದಶ —, ಹತ್ತು —. **Décagram(me)** —ಗ್ರ್ಯಾಮ್ (ನಾ.) ಹತ್ತು ಗ್ರಾಂ (= ·ಲ೮೩೩ತೊಲ ತೂಕ). **Décalitre** — ಲೀಟರ್ (ನಾ.) ಹತ್ತು ಲೀಟರ್ (= ೬೧೦ ಘನ ಅಂಗುಲ). **Décametre** — ಮೀಟರ್ (ನಾ.) ಹತ್ತು ಮೀಟರು (= ೩೨।।। ಅಡಿ ಉದ್ದಳತೆ)

Décade ಡೆಕೆಡ್, **Décad** ಡೆಕಡ್ (ನಾ.) ಹತ್ತರ ತಂಡ, ಗುಂಪು, ಶ್ರೇಣಿ ; ದಶಕ ; ದಶಮಾನ ; ಹತ್ತು ವರ್ಷ. ಹತ್ತುಹತ್ತಾಗಿ ವಿಭಾಗಿಸಿದ ಪುಸ್ತಕಗಳಲ್ಲಿ ಒಂದುಹತ್ತು. **Décadal** ಡೆಕಡಲ್ (ಗು.) ಹತ್ತರ ; ಹತ್ತು ವರ್ಷದ. **Decádic** ಡಿಕ್ಯಾಡಿಕ್ (ಗು.) ಹತ್ತುಹತ್ತಾಗಿ ಗಣಿಸುವ ; ದಶಮಾನದ.

Décadence ಡೆಕಡೆನ್ಸ್, **Decádence** ಡಿಕೇಡೆನ್ಸ್ (ನಾ.) ಇಳಿಕೆ ; ಇಳಿ ಗತಿ ; ಕ್ಷೀಣ ಗತಿ ; ಕ್ಷೀಣಿಸುವುದು ; ಅವನತಿ (ಮು., ಕಲೆ ಅಥವಾ ಸಾಹಿತ್ಯವು ಉಚ್ಚಸ್ಥಿತಿಗೇರಿ ಅವನತಿಹೊಂದುವ ಕಾಲದ ವಿಷಯದಲ್ಲಿ). **Décadent** ಡೆಕಡೆಂಟ್, **Decádent** ಡಿಕೇಡೆಂಟ್ (ಗು., ನಾ.) ಕ್ಷೀಣ ಗತಿಯ ; ಕ್ಷೀಣಿಸುತ್ತಿರುವ ; ಇಳಿಗಾಲದ ; ಅವನತಿಯ (ಕಾಲದ). (ಸಾಹಿತ್ಯದ ಅಸಂ.) ಆಡಂಬರ, ಅಸ್ಪಷ್ಟತೆ, ಶೈಲಿಯ ಕಾಠಿನ್ಯ, ರಸಾತಿರೇಕ, ಮೊ. ಹಲವು ದೋಷಗಳನ್ನು ಪ್ರದರ್ಶಿಸುವ (ಬರಹಗಾರ, ಕಲೆಗಾರ)

Décagon ಡೆಕಗನ್ (ನಾ.) ಹತ್ತು ಭುಜಗಳೂ ಕೋನಗಳೂ ಉಳ್ಳ ಸಮತಲಾಕೃತಿ : ದಶಾಶ್ರ ; ದಶಭುಜ ; ದಶಕೋನ. **Decágonal** ಡೆಕ್ಯಾಗೊನಲ್ (ಗು.) ದಶ ಭುಜಗಳುಳ್ಳ ; ದಶ ಭುಜದ.

Decágynous ಡಿಕ್ಯಾಜಿನಸ್ (ಗು.) ಹತ್ತು ಪುಷ್ಪಶಲಾಕೆಗಳುಳ್ಳ : ದಶ ಶಲಾಕಿ.

Decahédral ಡೆಕಹೀಡ್ರಲ್ (ಗು.) ಹತ್ತು ಮುಖಗಳುಳ್ಳ : ದಶ ಮುಖಿ. **Decahédron** (ನಾ.) ದಶಮುಖಾಕೃತಿ.

Decálcify ಡಿಕ್ಯಾಲ್ಸಿಫೈ (ಕ್ರಿ. ಸಕ.) (ಎಲುಬು, ಮೊ. ಗಳಲ್ಲಿಯ) ಸುಣ್ಣದ ಭಾಗವನ್ನು ತೆಗೆದುಬಿಡು ; ಸುಣ್ಣ ಕಳೆ.

Décalogue ಡೆಕಲಾಗ್ (ನಾ.) (ಕ್ರೈಸ್ತರ) ದಶ ಶಾಸನಗಳು, ನಿಯಮಗಳು, ವಿಧಿಗಳು, ಆದೇಶಗಳು.

Decámeron ಡಿಕ್ಯಾಮೆರನ್ (ನಾ.) [ಇಟಲಿಯ ಕತೆಗಾರ ಬೊಕ್ಕಾಚೊ (Boccaccio) ಎಂಬಾತನ ಕಥಾವಳಿಯಂಥ] ಕಥಾ ದಶ ದಶಕ (ಇವು ಹತ್ತು ಮಂದಿ ತಲಾ ಹತ್ತರಂತೆ ಹತ್ತು ದಿನಗಳಲ್ಲಿ ಹೇಳಿದ ಕಥೆಗಳು)

Decámp ಡಿಕ್ಯಾಂಪ್ (ಕ್ರಿ. ಅಕ.) ಪಾಳೆಯ ಎತ್ತು, ತೆಗೆ, ಬಿಟ್ಟುಹೋಗು. ಹೇಳದೆ ಕೇಳದೆ ಹೊರಟುಹೋಗು ; ತಲೆ ತಪ್ಪಿಸಿಕೊ ; ಮರೆಯಾಗು ; ಪಲಾಯನ ಮಾಡು ; ಕಂಬಿ ಕೀಳು. **Decámpment** (ನಾ.)

Decánal ಡಿಕೇನಲ್ (ಗು.) ಡೀನ್ ಅಧಿಕಾರಿಯ ; ಡೀನಿನ ಅಧಿಕಾರದ, ವಾಸಸ್ಥಾನದ. (ಕ್ರೈಸ್ತ ಆರಾಧನ ಮಂದಿರದಲ್ಲಿ) ಪವಿತ್ರ ಗಾಯಕ ಸ್ಥಾನಕ್ಕೆ ದಕ್ಷಿಣ ಭಾಗದ, ಡೀನ್ಅಧಿಕಾರಿ ಕುಳಿತುಕೊಳ್ಳುವ ಸ್ಥಳದ.

Decándrous ಡಿಕ್ಯಾಂಡ್ರಸ್ (ಗು.) ಹತ್ತು ಪುಷ್ಪಕೇಸರಗಳುಳ್ಳ : ದಶ ಕೇಸರಿ.

Decánt ಡಿಕ್ಯಾಂಟ್ (ಕ್ರಿ. ಸಕ.) ಪಾತ್ರೆಯ ತಳದಲ್ಲಿ ಸೇರಿರುವ ಮಷ್ಟನ್ನು ಕಲಕದಂತೆ ಪಾತ್ರೆಯನ್ನು ನಿಧಾನವಾಗಿ ಬಗ್ಗಿಸಿ ಅದರಲ್ಲಿಯ ತಿಳಿಯ ದ್ರವವನ್ನು ಸುರಿ : ದ್ರವ ಬಸಿ ; ತಿಳಿ ಬಗ್ಗಿಸು. (ಮದ್ಯವನ್ನು) ಸೀಸೆಯಿಂದ ಕಲಕದೆ ಬಟ್ಟಲಿಗೆ ಬಗ್ಗಿಸು. **Decánter** (ನಾ.) (ಊಟದ ಮೇಜಿನ ಮೇಲಿಡುವ) ಗಾಜುಬಿರಡೆ ಹಾಕಿದ ಮದ್ಯದ ಸೀಸೆ.

Decápitate ಡಿಕ್ಯಾಪಿಟೇಟ್ (ಕ್ರಿ. ಸಕ.) ತಲೆ ಕಡಿ, ತೆಗೆ, ಹೊಯ್ಯಿ ; ಶಿರಶ್ಛೇದ ಮಾಡು (ಮು., ಕಾನೂನಿನ ಶಿಕ್ಷೆಯಾಗಿ) ; ತಲೆ ಕತ್ತರಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Decápitable (ಗು.) ತಲೆ ತೆಗೆಯಬೇಕಾದ (ಅಪೂರ್ವ ಪ್ರಯೋಗ). **Decapitátion** (ನಾ.)

Décapod ಡೆಕಪಾಡ್ (ನಾ.) ಹತ್ತು ಪಾದಗಳ ಮಳ್ಳವಂತ ಪ್ರಾಣಿ: ದಶಪಾದಿ.

Decárbonize ಡಿಕಾರ್ಬೊನೈಸ್ (ಕ್ರಿ. ಸಕ.) (ಒಂದು ವಸ್ತುವಿನಲ್ಲಿಯ) ಇಂಗಾಲವನ್ನು ಅಥವಾ ಇಂಗಾರಾಮ್ಲವನ್ನು ಕಳೆ.

Décastyle ಡೆಕಸ್ಟೈಲ್ (ಗು., ನಾ.) ಹತ್ತು ಕಂಬಗಳುಳ್ಳ (ಮೊಗಸಾಲೆ, ಮೊ.)

Decásualize ಡಿಕ್ಯಾಷ್ಯು(ಸ್ಯು)ಅಲೈಸ್ (ಕ್ರಿ. ಸಕ.) ಹಂಗಾಮಿ ಕೂಲಿಯನ್ನು ವಜಾ ಮಾಡಿಬಿಡು. **Decasualizátion** (ನಾ.)

Decasyllábic ಡೆಕಸಿಲ್ಯಾಬಿಕ್ (ಗು., ನಾ.), **Decasýllable** — ಸಿಲಬ್‌ಲ್ (ನಾ., ಗು.) ಹತ್ತಕ್ಷರದ (ಪಾದ) ; ದಶಾಕ್ಷರ (ಪಾದ)

Decathólicize ಡಿಕಥಾಲಸೈಸ್ (ಕ್ರಿ. ಸಕ.) (ಒಂದರ) ಸರ್ವ ವ್ಯಾಪಕತ್ವ ತಪ್ಪಿಸು ; ಸಾರ್ವತ್ರಿಕತ್ವ ಕಳೆ.

Decaý ಡಿಕೇ (ಕ್ರಿ., ನಾ.) ನಶಿಸು ; ಕ್ಷಯಿಸು ; ಕ್ಷೀಣಿಸು ; ಶಿಥಿಲವಾಗು ; ಗಳಿತವಾಗು ; ಅಳಿದುಹೋಗು ; ಹಾಳಾಗು ; (ಗುಣ) ಕೆಡು ; (ಅಧಿಕಾರ, ಐಶ್ವರ್ಯ, ಶಕ್ತಿ, ಸೌಂದರ್ಯ, ಮೊ.) ಕುಗ್ಗಿಹೋಗು. ಕೊಳೆ ; ಹುಳುತುಹೋಗು ; ಕೊಳೆಯಿಸು ; ಶಿಥಿಲ ಮಾಡು. (ನಾ.) ಕ್ಷಯ ; ಕ್ಷಯಿಸುವುದು ; ಕ್ಷೀಣತೆ ; ಜೀರ್ಣತೆ ; ಶೈಥಿಲ್ಯ ; ಗ್ಲಾನಿ ; ಕೊಳೆತ ; ಅಳಿವು ; ನಾಶ ; ಹಾಳು (Phonetic d. ಭಾಷಾಶಾಸ್ತ್ರದಲ್ಲಿ ವರ್ಣಕ್ಷಯ ; ಮಾತಿನ ವರ್ಣಗಳು ತೆಯ್ದುಹೋಗುವುದು). ಆರೋಗ್ಯ ನಾಶ ; ಕೊಳೆತ ಭಾಗ (Remove the d. ಕೊಳೆತ ಭಾಗವನ್ನು ತೆಗೆದುಹಾಕು)

Deceáse ಡಿಸೀಸ್ (ನಾ., ಕ್ರಿ. ಅಕ.) (ಮು., ಕಾನೂನಿನಲ್ಲಿ, ಗಂಭೀರ ಪ್ರಯೋಗದಲ್ಲಿ) ಮರಣ ; ನಿಧನ. ಸಾಯಿ ; ಪ್ರಾಣ ಬಿಡು. **Deceásed** (ಗು., ನಾ.) ಸತ್ತ(ವನು) ; ಮೃತ.

Deceít ಡಿಸೀಟ್ (ನಾ.) ಮೋಸ ; ವಂಚನೆ ; ತಂತ್ರ ; ಕಪಟ ; ಮೋಸ ಮಾಡುವುದು ; ಮೋಸದ ವೇಷ. **Deceítful** (ಗು.) ; **Deceítfully** (ಕ್ರಿ. ವಿ.) ; **Deceítfulness** (ನಾ.) ; **Deceíve** (ಕ್ರಿ.) ಮೋಸಗೊಳಿಸು ; ಮೋಸ ಮಾಡು ; ವಂಚಿಸು ; ಠಕ್ಕಿಸು ; ತಪ್ಪುದಾರಿಗೆಳೆ [D. oneself ತನ್ನನ್ನು ತಾನೇ (ತಪ್ಪು ತಿಳವಳಿಕೆಯಿಂದ) ವಂಚಿಸಿಕೊ ; ಆತ್ಮವಂಚನೆ ಮಾಡಿಕೊ ; ತಪ್ಪು ತಿಳಿ]. ತಂತ್ರ ನಡಸು. ಆಶಾ ಭಂಗ ಮಾಡು. **Deceívable** (ಗು.) ; **Deceíver** (ನಾ.) ; **Decéption** ಡಿಸೆಪ್ಷನ್ (ನಾ.) ಮೋಸ ಮಾಡುವುದು ; ಮೋಸಹೋಗುವುದು ; ಮೋಸ ; ತಂತ್ರ ; ವಂಚನೆ ; ಕಪಟ ; ಠಕ್ಕು. **Decéptive** (ಗು.) ಮೋಸಗೊಳಿಸುವ ; ತಪ್ಪುದಾರಿಗೆಳೆಯುವ ; ಮೋಸಗೊಳಿಸಬಹುದಾದ. **Decéptively** (ಕ್ರಿ. ವಿ.) ; **Decéptiveness** (ನಾ.)

Decélerate ಡೀಸೆಲರೇಟ್ (ಕ್ರಿ. ಸಕ.) ವೇಗ ಕಡಮೆಮಾಡು ; ಗತಿ ಮಂದಮಾಡು.

Decémber ಡಿಸೆಂಬರ್ (ನಾ.) (ಇಂಗ್ಲಿಷ್) ವರ್ಷದ ಹನ್ನೆರಡನೆಯ ತಿಂಗಳು. **Decémbrist** (ನಾ.) ೧೮೨೫ನೆಯ ಡಿಸೆಂಬರಿನಲ್ಲಿ ರಷ್ಯಾದೇಶದಲ್ಲಿ ನಡೆದ ಕ್ರಾಂತಿಯ ಪಿತೂರಿಕೋರರ ಸಂಘದ ಸದಸ್ಯ.

Decémvir ಡಿಸೆಂವರ್ (ನಾ. ; ಬ. ವ. -rs — ವರ್ಸ್, -ri — ವಿರೈ) (ರೋಮನ್ ಚರಿತ್ರೆ) ಮಂತ್ರಮಂಡಲಿಯಾಗಿ ಅಥವಾ ರಾಜ್ಯಭಾರ ಮಂಡಲಿಯಾಗಿ (ಕ್ರಿ. ಪೂ. ೪೫೧ರಲ್ಲಿ) ನಿಯಮಿತವಾದ ಹತ್ತು ಮಂದಿ ಸದಸ್ಯರಲ್ಲೊಬ್ಬನು. (ವೆನಿಸ್ ನಗರದಲ್ಲಿಯಂತೆ) ರಾಜ್ಯಭಾರ ಮಂಡಲಿಯ ಹತ್ತು ಮಂದಿ ಸದಸ್ಯರಲ್ಲೊಬ್ಬನು : 'ದಶನಾಯಕ'. **Decémviral** — ವಿರಲ್ (ಗು.) ದಶನಾಯಕರ. **Decémvirate** — ವಿರೆಟ್ (ನಾ.) ದಶನಾಯಕರ ಪದವಿ ಅಥವಾ ಅಧಿಕಾರ ; ದಶನಾಯಕರು.

Décency. **Decent** ನೋಡಿ.

Decénnary ಡಿಸೆನರಿ (ಗು., ನಾ.) ಹತ್ತು ವರ್ಷ ಕಾಲ(ದ) ; ದಶ ವತ್ಸರ(ದ) ; ದಶ ವಾರ್ಷಿಕ. **Decénniad** — ನಿಆ್ಯಡ್ (ನಾ.), **Decénnium** — ನಿಯಂ (ನಾ., ಬ. ವ. -ia) ಹತ್ತು ವರ್ಷದ ಕಾಲ ; ದಶಮಾನ (ಕಾಲ) ; ದಶ ವರ್ಷ. **Decénnial** (ಗು.) ಹತ್ತು ವರ್ಷ ಕಾಲದ ; ಹತ್ತು ವರ್ಷಕ್ಕೊಮ್ಮೆ ಸಂಭವಿಸುವ : ದಶ ವಾರ್ಷಿಕ. **Decénnially** (ಕ್ರಿ. ವಿ.)

Décent ಡೀಸೆಂಟ್ (ಗು.) ಸಭ್ಯ ; ಉಚಿತ ; ಒಪ್ಪುವ ; ಚೆನ್ನಾದ ; ಲಕ್ಷಣವಾದ ; ಅಂದವಾದ ; ವಿನೀತ ; ಮರ್ಯಾದೆಗೂಡಿದ ; ಶಿಷ್ಟ ; ಅಶ್ಲೀಲವಲ್ಲದ ; ಅನುಕೂಲವಾದ ; ತಕ್ಕ ; ಯೋಗ್ಯ ; ತಕ್ಕ ಮಟ್ಟಿನ. (ಶಾಲಾ ಅಸಂ.) ದಯೆಯುಳ್ಳ ; ಬೈಯದ ; ಕ್ರೂರವಲ್ಲದ. **Décentish** (ಗು.) ; **Décently** (ಕ್ರಿ. ವಿ.) ; **Décency** (ನಾ.) ನಡತೆಯ ಔಚಿತ್ಯ ; ಸಭ್ಯತೆ ; ವಿನಯ ; ಶಿಷ್ಟತೆ ; ಮರ್ಯಾದೆ. The decencies ಯೋಗ್ಯ ನಡೆವಳಿ ; ಶಿಷ್ಟಾಚಾರ. D. forbids ಯೋಗ್ಯ ನಡೆವಳಿಗೆ ವಿರುದ್ಧ.

Decéntralize ಡೀಸೆಂಟ್ರಲೈಸ್ (ಕ್ರಿ. ಸಕ.) ಒಂದು ಕೇಂದ್ರದಲ್ಲಿ ಒಟ್ಟುಗೂಡಿರುವ ಆಡಳಿತಾಧಿಕಾರಗಳನ್ನು ಪ್ರತ್ಯೇಕಿಸಿ ಹಂಚು : ಕೇಂದ್ರೀಕೃತತ್ವ ತಪ್ಪಿಸು ; ಅವಕೇಂದ್ರಿಸು. ಸ್ಥಳೀಯಾಡಳಿತದ ಅಧಿಕಾರ ಕೊಡು. **Decentralizátion** (ನಾ.) ಅವಕೇಂದ್ರೀಕರಣ.

Decéption, etc. **Deceit** ನೋಡಿ.

Dechrístianize ಡೀಕ್ರಿಸ್ಟ್ಯ(ಸ್ಚ)ನೈಸ್ (ಕ್ರಿ. ಸಕ.) ಕ್ರೈಸ್ತತ್ವವನ್ನು ಕಳೆ.

Déci- ಡೆಸಿ — (L. Decimus ಪದದ ಸಂಕ್ಷಿಪ್ತ) (ಸಮಾಸದಲ್ಲಿ ಪೂರ್ವ ಪದ) (ಫ್ರೆಂಚ್ ಪದ್ಧತಿಯ ಅಳತೆಗಳಲ್ಲಿ) ಹತ್ತರಲ್ಲೊಂದು ಭಾಗ : ದಶಾಂಶ —. **Décigram(me)** (ನಾ.) ಒಂದು ಗ್ರಾಮಿನ ದಶಾಂಶ. **Décilitre** (ನಾ.) ಲೀಟರಿನ ದಶಾಂಶ. **Décimetre** (ನಾ.) ಮೀಟರಿನ ದಶಾಂಶ.

Decíde ಡಿಸೈಡ್ (ಕ್ರಿ.) (ವಿಚಾರ, ವ್ಯವಹಾರ, ವಾದ — ಇವನ್ನು) ನಿರ್ಣಯಿಸು ; ನಿರ್ಧರಿಸು ; ತೀರ್ಮಾನಿಸು ; ನಿಶ್ಚಯಿಸು ; ಬಗೆಹರಿಸು ; ಇತ್ಯರ್ಥ ಮಾಡು ; ತರಿಸರ್ (ಗ್ರಾಂ.) ; ತೀರ್ಪು ಕೊಡು ; ಒಂದು ಗೊತ್ತಿಗೆ, ನಿರ್ಧಾರಕ್ಕೆ, ಬರು, ತರು. That decides me ಅದು ನನ್ನನ್ನು ಒಂದು ತೀರ್ಮಾನಕ್ಕೆ ತರುತ್ತದೆ. **Decídable** (ಗು.) ತೀರ್ಮಾನಿಸಲಾಗುವ. **Decíded** (ಗು.) (ಕ್ರಿಯಾರ್ಥಗಳಲ್ಲಿ) ; ನಿಷ್ಕೃಷ್ಟವಾದ ; ಗೊತ್ತಾದ ; ಸ್ಪಷ್ಟವಾದ ; ನಿರ್ವಿವಾದವಾದ. (ಮನುಷ್ಯರ ವಿಷಯದಲ್ಲಿ) ಸ್ಪಷ್ಟಾಭಿಪ್ರಾಯದ ; ಖಂಡಿತವಾದ ; ಅನುಮಾನವಿಲ್ಲದ ; ಓಲಾಡದ. **Decídedly** (ಕ್ರಿ. ವಿ.) ; **Decíder** (ನಾ.) (ಕ್ರಿಯಾರ್ಥಗಳಲ್ಲಿ) ; (ಜೂಜೋಟದಲ್ಲಿ) ಸರಿ ಸಮವಾಗಿ ಬಂದವರಲ್ಲಿ (ಪುಗಳಲ್ಲಿ) ಅಗ್ರಗಾಮಿಯನ್ನು ನಿರ್ಣಯಿಸಲು ಬಿಡುವ ಓಟ : ತೀರ್ಮಾನದ ಓಟ. **Decísion** ಡಿಸಿಷನ್ (ನಾ.) ನಿರ್ಣಯ ; ತೀರ್ಮಾನ ; ನಿರ್ಧಾರ ; ನಿಶ್ಚಯ ; (ನ್ಯಾಯ) ನಿಷ್ಕರ್ಷೆ ; ತೀರ್ಪು ; ಗೊತ್ತುವಳಿ ; ತರಿಸಲವು (ಗ್ರಾಂ.) ; ಮನಸ್ಸುಮಾಡುವುದು ; ಸಂಕಲ್ಪ ಮಾಡುವುದು ; ದೃಢ ಸಂಕಲ್ಪ. **Decísive** ಡಿಸೈಸಿವ್ (ಗು.) ನಿರ್ಣಾಯಕ ; ನಿರ್ಧಾರಕ ; ತೀರ್ಮಾನಿಸಿಬಿಡುವ (D. battle ನಿರ್ಧಾರಕ ಕದನ. D. character ನಿಷ್ಕೃಷ್ಟವಾದ ನಡತೆ. D. superiority ನಿಸ್ಸಂಶಯವಾದ ಮೇಲ್ಮೆ). ಖಂಡಿತ ; ನಿಷ್ಕರ್ಷೆಯಾದ. **Decísively** (ಕ್ರಿ. ವಿ.) ; **Decísiveness** (ನಾ.)

Decíduous ಡಿಸಿಡ್ಯುಅಸ್ (ಗು.) (ಎಲೆ, ಹಲ್ಲು, ಕೊಂಬು, ಮೊ. ಗಳ ವಿಷಯದಲ್ಲಿ) ಕಾಲ ಕಾಲಕ್ಕೆ ಉದುರಿಹೋಗುವ, ಬಿದ್ದುಹೋಗುವ ; ಸ್ವಾಭಾವಿಕವಾಗಿ ಕಳಚಿಬೀಳುವ ; (ಎಲೆಗಳು) ವರ್ಷಂಪ್ರತಿ ಉದುರಿಹೋಗುವ. (ಇರುವೆ, ಮೊ. ಗಳ ವಿಷಯದಲ್ಲಿ) ಸಂಭೋಗಾನಂತರ ರೆಕ್ಕೆಯುದುರಿಹೋಗುವ. ಅಸ್ಥಿರ ; ಕ್ಷಣಿಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Decíllion ಡಿಸಿಲ್ಯನ್ (ನಾ.) (ಇಂಗ್ಲಿಷ್ ಪದ್ಧತಿಯಲ್ಲಿ) ಒಂದರ ಮುಂದೆ ೬೦ ಸೊನ್ನೆಗಳನ್ನಿಟ್ಟರೆ ಆಗುವ ಸಂಖ್ಯೆ : 10^{60}. (ಅಮೇರಿಕನ್ ಮತ್ತು ಫ್ರೆಂಚ್ ಪದ್ಧತಿಯಲ್ಲಿ) ಒಂದರ ಮುಂದೆ ೩೩ ಸೊನ್ನೆಗಳನ್ನಿಟ್ಟರೆ ಆಗುವ ಸಂಖ್ಯೆ : 10^{33}. **Decíllionth** (ಗು., ನಾ.) $\frac{1}{10^{60}}$ ಅಥವಾ $\frac{1}{10^{33}}$.

Décimal ಡೆಸಿಮಲ್ (ಗು., ನಾ.) ದಶಮಾಂಶದ; ದಶಮಾನದ; ಹತ್ತುಹತ್ತು ಹಿಡಿದು ಹೋಗುವ; ಹತ್ತುಹತ್ತಾಗಿ ಎಣಿಸಿದ; ದಶಮಾನ ನಾಣ್ಯಪದ್ಧತಿಯ. D. arithmetic ದಶಮಾನ ಗಣಿತ; ದಶಮಾಂಶ ಗಣಿತ (= Decimals). D. coinage ದಶಮಾನ ನಾಣ್ಯಪದ್ಧತಿ. D. fraction or Decimals ದಶಾಂಶ ಭಿನ್ನರಾಶಿ; ದಶಮಾಂಶ. D. notation ದಶಮಾನ ಅಂಕನ ಪದ್ಧತಿ [1, 2, 3 - - - ; (ರೋಮನ್) I, II, III - - - ಅಲ್ಲ]. D. numeration ರೂಢಿಯಲ್ಲಿರುವ ದಶಮಾನ ಗಣನಾ ಪದ್ಧತಿ; ದಶಮಾನ ಸಂಖ್ಯಾಪಠನ. D. system (of weights and measures) ಹತ್ತುಹತ್ತರಂತೆ ಏರುತ್ತ ಅಥವಾ ಇಳಿಯುತ್ತಹೋಗುವ (ತೂಕದ, ಅಳತೆಯ) ಪದ್ಧತಿ : ದಶಮಾನ ಪದ್ಧತಿ. Recurring d. ಆವರ್ತಕ ದಶಮಾಂಶ. **Décimalist** (ನಾ.) (ನಾಣ್ಯದಲ್ಲಿ, ತೂಕದಲ್ಲಿ ಅಥವಾ ಅಳತೆಯಲ್ಲಿ) ದಶಮಾನ ವಾದಿ. **Décimalize** (ಕ್ರಿ. ಸಕ.) ದಶಮಾನಕ್ಕೆ ತಿರುಗಿಸು. **Decimalizátion** (ನಾ.); **Décimally** (ಕ್ರಿ. ವಿ.) ಹತ್ತುಹತ್ತಾಗಿ; ದಶಮಾನವಾಗಿ; ದಶಮಾಂಶವಾಗಿ; ದಶಾಂಶ ಭಿನ್ನರಾಶಿಯಾಗಿ.

Décimate ಡೆಸಿಮೇಟ್ (ಕ್ರಿ. ಸಕ.) (ದಂಗೆಯೆದ್ದ ಅಥವಾ ಹೇಡಿಗಳಾದ ಸಿಪಾಯಿಗಳನ್ನು) ಹತ್ತರಲ್ಲೊಬ್ಬನಂತೆ ಕೊಂದುಹಾಕು. (ಸಾಂಕ್ರಾಮಿಕ ರೋಗ, ಮೊ.) ಹತ್ತರಲ್ಲೊಂದು ಪಾಲನ್ನು ಅಥವಾ ಬಹು ಮಂದಿಯನ್ನು ಕೊಲ್ಲು. **Decimátion** (ನಾ.)

Décimus ಡೆಸಿಮಸ್ (ಗು., ನಾ.) ಒಂದೇ ಹೆಸರಿನ ಹತ್ತನೆಯ(ವನು) (Narasimha D. ಹತ್ತನೆಯ ನರಸಿಂಹ)

Decípher ಡಿಸೈಫರ್ (ಕ್ರಿ. ಸಕ., ನಾ.) (ಗೋಪ್ಯ ಲಿಪಿಯಲ್ಲಿ ಬರೆದುದನ್ನು) ಸಾಮಾನ್ಯ ಬರಹವಾಗಿ ತಿರುಗಿಸು, ಅಥವಾ ಸಂಕೇತವನ್ನು ಹಿಡಿದು ಅರ್ಥಮಾಡು. (ತೊಡಕು ಬರೆವಣಿಗೆ, ಚಿತ್ರ ಬರೆವಣಿಗೆ, ಇತರ ತೊಡಕು — ಇವಕ್ಕೆ) ಅರ್ಥಮಾಡು. (ನಾ.) ಗೋಪ್ಯ ಲಿಪಿಯಲ್ಲಿ ಬರೆದ ಪತ್ರದ ಅರ್ಥ. **Decípherable** (ಗು.); **Decípherment** (ನಾ.)

Decísion, etc. Decide ನೋಡಿ.

Decívilize ಡಿಸಿವಿಲೈಸ್ (ಕ್ರಿ. ಸಕ.) ಅನಾಗರಿಕ ಸ್ಥಿತಿಗೆ ತರು.

Deck ಡೆಕ್ (ನಾ.) ಹಡಗಿನ ಒಂದು ಪಕ್ಕದಿಂದ ಮತ್ತೊಂದು ಪಕ್ಕಕ್ಕೆ, ಅಥವಾ ಅದರ ಒಂದು ಭಾಗದಲ್ಲಿ, ಹಾಕಿರುವ ಹಲಗೆಗಳ ಅಥವಾ ಹಲಗೆ ಮುಚ್ಚಿದ ಕಬ್ಬಿಣದ ಅಟ್ಟ : ಹಡಗಿನ ಅಟ್ಟ [ದೊಡ್ಡ ಹಡಗುಗಳಲ್ಲಿ (Main) ಪ್ರಧಾನ, (Middle) ಮಧ್ಯದ, (Lower) ತಳದ, ಮೊ. ದ ಅಟ್ಟಗಳಿರುವುವು]. Clear the decks (Clear ನೋಡಿ). On d. ಹಡಗಿನ ಅಟ್ಟದಮೇಲೆ (ತಳದಲ್ಲಲ್ಲ). D.-chair (ಪ್ರಯಾಣಿಕರ ಜಹಜಿನಲ್ಲಿ ಹಾಕಿರುವ) ಮಡಿಚು ನಾಗಾಲಿ, ಆರಾಮ ಕುರ್ಚಿ. D.-house ಹಡಗಿನ ಮೇಲಟ್ಟದ ಕೋಣೆ.

Deck (ಕ್ರಿ. ಸಕ.) ಅಲಂಕರಿಸು; ಸಿಂಗರಿಸು; ಕೈಗೈ (ಗ್ರಾಂ.); ಸಜ್ಜುಗೊಳಿಸು. ಹಡಗಿಗೆ ಅಟ್ಟಹಾಕು.

Declaím ಡಿಕ್ಲೇಯ್ಮ್ (ಕ್ರಿ.) ಧೋರಣೆಯಿಂದ ಮಾತನಾಡು (ಸಾ., ಆಕ್ಷೇಪಿಸಿ); ಭಾಷಣ, ಕಂಠ ಪಾಠ, ಮೊ. ನ್ನು ಅಭ್ಯಾಸ ಮಾಡು. ಉದ್ವೇಗ, ಉಜ್ಜ್ವಲ, ಭಾಷಣ ಮಾಡು. ಅಲಂಕಾರ ಶೈಲಿಯಲ್ಲಿ ಹೇಳು. **Declaímer** (ನಾ.); **Declamátion** ಡೆಕ್ಲಮೇಷನ್ (ನಾ.) ಧೋರಣೆಯಿಂದ, ಉದ್ವೇಗದಿಂದ, ಆಲಂಕಾರಿಕವಾಗಿ, ಭಾಷಣ ಮಾಡುವುದು; ಆಲಂಕಾರಿಕ ಭಾಷಣಾಭ್ಯಾಸ; ಕಂಠ ಪಾಠ ಭಾಷಣ; ನವರಿಸಿ ಸಿದ್ಧಮಾಡಿದ ಭಾಷಣ : ಸಿದ್ಧ ಭಾಷಣ. ಉದ್ವೇಗ, ಉಜ್ಜ್ವಲ, ಭಾಷಣ. **Declámatory** ಡಿಕ್ಲ್ಯಾಮಟರಿ (ಗು.)

Declárant, etc. Declare ನೋಡಿ.

Decláre ಡಿಕ್ಲೇರ್ (ಕ್ರಿ.) ತಿಳಿಯಪಡಿಸು; ಪ್ರಸಿದ್ಧಪಡಿಸು; ಪ್ರಕಟಿಸು; ಬಹಿರಂಗವಾಗಿ, ವಿಧಿ ವಿಹಿತವಾಗಿ, ಸ್ಪಷ್ಟವಾಗಿ, ದೃಢವಾಗಿ, ಸಾರಿ ಹೇಳು [D. war ಯುದ್ಧ ಹೂಡುವುದಾಗಿ ಸಾರಿ ಹೇಳು. D. a dividend (ಇಷ್ಟು) ಲಾಭಾಂಶ ಕೊಡಲಾಗುವುದೆಂದು ಪ್ರಕಟಿಸು]. (ಅಪನಂಬಿಕೆ, ಆಶ್ಚರ್ಯ ಅಥವಾ ಜುಗುಪ್ಸೆ — ಇವನ್ನು ಸೂಚಿಸುವಲ್ಲಿ : Well, I d.! ಚೆನ್ನಾಯಿತು, ಏನು ಹೇಳಲಿ!). (ಬ್ರಿಜ್ ಇಸ್ಪೀಟಾಟದಲ್ಲಿ) ತುರುಫು ಹೇಳು ಅಥವಾ 'ತುರುಫು ಇಲ್ಲದಾಟ'ವೆಂದು ಹೇಳು. (ಇತರ ಇಸ್ಪೀಟಾಟಗಳಲ್ಲಿ) ತನ್ನಲ್ಲಿ ಇಂಥಿಂಥ ಎಲೆಗಳ ವರಿಸೆ, ಮೊ. ವು ಇರುವುವೆಂದು ಹೇಳು. (ಸುಂಕ) ಸುಂಕ ತೆರಬೇಕಾದ ಸರಕು ತನ್ನಲ್ಲಿದೆಯೆಂದು ಹೇಳಿಬಿಡು. D. for, against ಒಂದು ಪಕ್ಷಕ್ಕೆ ಅನುಕೂಲವಾಗಿ, ವಿರೋಧವಾಗಿ, ಇರು. D. innings closed, or d. (ಕ್ರಿಕೆಟ್ ಆಟ) ಆಟವಾಡಬೇಕಾದವರು ಇನ್ನೂ ಇರುವಾಗಲೆ ಆಟ ಮುಕ್ತಾಯವಾದಂತೆ ಒಪ್ಪಿಗೆ ಹೇಳು. D. off (ವ್ಯಾಪಾರ, ಮೊ. ನ್ನು) ಸಾಕುಮಾಡು. D. oneself ಮನಸ್ಸಂಕಲ್ಪವನ್ನು ತಿಳಿಸಿಬಿಡು; ಯೋಗ್ಯತೆ ತೋರಿಸಿಕೊ. **Declárative** ಡಿಕ್ಲ್ಯಾರಟಿವ್ (ಗು.) ದೃಢಪಡಿಸುವ; ಸಾರಿ ಹೇಳುವ. (ವ್ಯಾ.) ಅವಧಾರಣಾರ್ಥಕ. **Decláratively** (ಕ್ರಿ. ವಿ.); **Decláratory** (ಗು.); **Decláredly** ಡಿಕ್ಲೇರೆಡ್ಲಿ (ಕ್ರಿ. ವಿ.); **Declárant** ಡಿಕ್ಲೇರಂಟ್ (ನಾ.) ಪ್ರಮಾಣ ಕರ್ತ; ಹೇಳಿಕೆ ಕೊಡುವವನು (ಮು., ಕಾನೂನು ಸಂಬಂಧದಲ್ಲಿ). **Declarátion** ಡೆಕ್ಲರೇಷನ್ (ನಾ.) (ವಿಧಿ ವಿಹಿತವಾಗಿ, ಕಾನೂನಿಗನುಸಾರವಾಗಿ) ತಿಳಿಯಪಡಿಸುವುದು, ಹೇಳುವುದು, ಸಾರುವುದು; ದೃಢ ವಚನ. [D. of war ಯುದ್ಧ ಹೂಡುವುದಕ್ಕೆ ಮೊದಲೇ ಈ ವಿಷಯವನ್ನು ತಿಳಿಯಪಡಿಸುವುದು : ಯುದ್ಧ ಪ್ರಕಟನೆ (ಇದು ಈಗ ಅರೂಢಿ). D. of the poll ಚುನಾವಣೆಯಲ್ಲಿ ಪ್ರತಿ ಉಮೇದುವಾರನಿಗೆ ಬಂದಿರುವ ಒಟ್ಟು ಅಭಿಮತಗಳ ಸಂಖ್ಯೆಯನ್ನು ಪ್ರಕಟಿಸುವುದು : ಚುನಾವಣೆಯ ಪ್ರಕಟನೆ]. (ಹಿಂದಿನ ನಡವಳಿಗಳು, ಮುಂದಿನ ಸಂಕಲ್ಪಗಳು, ಮೊ. ನ್ನು ದೊರೆ, ರಾಷ್ಟ್ರ, ಜನರು, ತಿಳಿಯಪಡಿಸುವ) ಪ್ರಕಟನೆ; ಸಂಕಲ್ಪ ಪ್ರಕಟನ ಪತ್ರಿಕೆ; (ಒಪ್ಪಂದದ ಷರತ್ತುಗಳು, ಮೊ. ಗಳ) ಪ್ರಸಿದ್ಧ ಪತ್ರಿಕೆ (D. of rights; D. of Independence, etc.). (ನ್ಯಾ. ಶಾ) ವಾದಿ ಹೂಡುವ ಹಕ್ಕುಪಟ್ಟಿ; (ಭಾಷೆಯುಟ್ಟುಕೊಳ್ಳುವುದಕ್ಕೆ ಒಪ್ಪಿಗೆಯಿಲ್ಲದಾಗ ಹೇಳುವ) ಸತ್ಯ ವಚನ. ವಾಙ್ಮೂಲ; ಹೇಳಿಕೆ. ಸುಂಕದ ಸಾಮಾನಿನ ಪಟ್ಟಿ.

Declassé (F) ಡೆಕ್ಲಾಸೆ (ಗು.; ಸ್ತ್ರೀ. -ee) ಜಾತಿಗೆಟ್ಟ; ಜಾತಿಭ್ರಷ್ಟ; ಕುಲಗೆಟ್ಟ; ಸಮಾಜ ಬಾಹಿರ.

Declénsion ಡಿಕ್ಲೆನ್ಷನ್ (ನಾ.) ಇಳಿತ; ಓರೆ; ಬಾಗು. (ಭೌ. ವಿ.) ದಿಕ್ಸೂಚಿಯ ಬಾಗು (= Declination). (ಪ್ರಾಮಾಣಿಕತೆ, ಮೊ. ಗಳಿಂದ) ಚ್ಯುತಿ; ಅವನತಿ; ಕ್ಷೀಣ ಗತಿ; ಕ್ಷಯ. (ವ್ಯಾ.) ವಿಭಕ್ತಿರೂಪ ನಡಸುವುದು; ವಿಭಕ್ತಿ ರೂಪ, ಮಾಲೆ, ಗಣ.

Declinátion. Decline ನೋಡಿ.

Declíne ಡಿಕ್ಲೈನ್ (ಕ್ರಿ.) ಕೆಳವೋರೆಯಾಗು; ಇಳಿತರವಾಗು; ಓಲು; ಒರೆ; ಜೋಲು; ಬಾಗು; ಬಗ್ಗು. — ಇಸು (With head declined ತಲೆವಾಗಿ. Declines its blossoms ಹೂವುಗಳನ್ನು ಬಾಗಿಸುತ್ತದೆ). (ಹಗಲು, ಜೀವ, ಮೊ.) ಮುಗಿದುಬರು; ಅವಸನ್ನವಾಗು. ಚ್ಯುತನಾಗು; ನೀತಿಭ್ರಷ್ಟನಾಗು; ಬಿದ್ದುಹೋಗು; ಕ್ಷೀಣಿಸು; ಕ್ಷಯಿಸು; ಕುಗ್ಗು; ಕುಂದು; ಕಡಮೆಯಾಗು. (ಚರ್ಚೆ, ಪ್ರತಿಭಟನೆ, ಯುದ್ಧ, ಮೊ. ಗಳ ಕರೆಯನ್ನು) ನಿರಾಕರಿಸು. (ಔತಣ, ಮೊ. ನ್ನು) ಒಪ್ಪಿಕೊಳ್ಳಲಾಗುವುದಿಲ್ಲವೆಂದು ಹೇಳಿಬಿಡು [D. with thanks (ವ್ಯಂಗ್ಯವಾಗಿ) ನಮಸ್ಕಾರ ಹೇಳಿ ನಿರಾಕರಿಸು]. (ವ್ಯಾ.) ವಿಭಕ್ತಿರೂಪ ನಡಸು, ಹೇಳು. **Declínable** (ಗು.); **Declinátion** ಡೆಕ್ಲಿನೇಷನ್ (ನಾ.) ಕೆಳವೋರೆ; ಇಳಿಬಾಗು. (ಖ. ವಿ.) ಖಗೋಳ ನಿರಕ್ಷ ರೇಖೆಯಿಂದ ಉತ್ತರಕ್ಕಾಗಲಿ ದಕ್ಷಿಣಕ್ಕಾಗಲಿ ನಕ್ಷತ್ರ, ಮೊ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಕ್ಕಿರುವ ಕೋನದೂರ ; ಖಗೋಳ ಅಕ್ಷಾಂಶ ; ಕ್ರಾಂತಿ. (ದಿಕ್ಸೂಚಿ) (ನಿಜ ದಕ್ಷಿಣೋತ್ತರ ರೇಖೆಯಿಂದಿರುವ) ಭ್ರಂಶ, ಚ್ಯುತಿ. **Declinátional** (ಗು.)

Declíne (ನಾ.) ಅವನತಿ ; ಅವಗತಿ ; ಕ್ಷೀಣಗತಿ ; ಇಳಿಕೆ ; ಇಳಿತರ ; ಶಕ್ತಿಕ್ಷೀಣತೆ ; ಕುಂದು ; ಕ್ಷಯ ; ಕೀಳು ದೆಸೆ. ಕ್ಷಯ ರೋಗ. ಬೆಲೆ ಬಿದ್ದುಹೋಗುವುದು ; ಬೆಲೆಯಿಳಿತ. (ಸೂರ್ಯ, ಜೀವ, ಮೊ. ಗಳ) ಅಸ್ತ ; ಅವಸಾನ ; ಇಳಿಗಾಲ. **Declinómeter** ಡೆಕ್ಲಿನಾಮಿಟರ್ (ನಾ.) (ದಿಕ್ಸೂಚಿ) ಭ್ರಂಶ ಮಾಪಕ. **Declívity** ಡಿಕ್ಲಿವಿಟಿ (ನಾ.) ಇಳಿಜಾರು ; ಇಳಿವೋರೆ ; ಕೆಳವೋರೆ ; ಇಳುಕಲು. **Declívous** ಡಿಕ್ಲೈವಸ್ (ಗು.) ಇಳಿಜಾರಾದ ; ಕೆಳವೋರೆಯ.

Declívity } **Declívous** } **Decline** ನೋಡಿ.

Declútch ಡೀಕ್ಲಚ್ (ಕ್ರಿ. ಅಕ.) (ಮೋಟಾರುಬಂಡಿಯ) ಬಿಗಿಹಿಡಿಕೆ ಸಡಿಲಿಸು.

Decóction ಡಿಕಾಕ್‌ಷನ್ (ನಾ.) ಕಷಾಯ (ಇಳಿಸುವುದು)

Decóde ಡೀಕೋಡ್ (ಕ್ರಿ. ಸಕ.) (ಗುಪ್ತ ಭಾಷೆಯಲ್ಲಿ ಬರೆದಿರುವ ದೂರವಾಣಿ, ಮೊ. ನ್ನು) ಸಂಕೇತ ಉಪಯೋಗಿಸಿ ಅರ್ಥಮಾಡು, ಸಾಮಾನ್ಯ ಭಾಷೆಗೆ ತಿರುಗಿಸು.

Decóllate ಡಿಕಾಲೇಟ್, **Décollate** ಡೆಕಲೇಟ್ (ಕ್ರಿ. ಸಕ.) ತಲೆ ಕಡಿ ; ತುದಿ ಕತ್ತರಿಸಿಹಾಕು ; ಶಿರಶ್ಛೇದ ಮಾಡು ; ಅಗ್ರಚ್ಛೇದ ಮಾಡು. **Decóllated** (ಗು.) (ಪ್ರಾ. ವಿ.) (ಶಂಖ, ಮೊ. ಪ್ರಾಣಿಕೋಶಗಳು) ಮುಡಿ ಮುರಿದುಹೋದ ಅಥವಾ ತೆಯ್ದು ಹೋದ. **Decollátion** ಡೀಕಾಲೇಷನ್ (ನಾ.)

Decóllete (F) ಡೆಕೊಲೆಟೆ, ಡೇಕಾಲ್ಟೇ (ಗು.) (ಸ್ತ್ರೀ. -ee) (ಉಡುಪಿನ ವಿಷಯದಲ್ಲಿ) ಕೆಳ ಮಟ್ಟದ ಕತ್ತುಪಟ್ಟಿಯುಳ್ಳ ; ಇಂಥ ಉಡುಪು ತೊಟ್ಟಿರುವ.

Decólo(u)rize ಡಿಕಲರೈಸ್ (ಕ್ರಿ. ಸಕ.) ಬಣ್ಣ ಕಳೆ, ತೆಗೆ ; ನಿರ್ವರ್ಣ ಮಾಡು. **Decólo(u)rizátion** (ನಾ.) ; **Decólo(u)rizer** (ನಾ.) ಬಣ್ಣ ಕಳೆಯುವವನು ; — ವಂಥದು ; ಬಣ್ಣ ಕಳೆಯುವ ಸಲಕರಣೆ ; ವರ್ಣ ಹಾರಕ. **Decólorant** — ರಂಟ್ (ಗು., ನಾ.) ಬಣ್ಣ ಕಳೆಯುವ (ಪದಾರ್ಥ). **Decólorate** — ರೆಟ್ (ಗು.) ಬಣ್ಣಹೋದ ; — ರೇಟ್ (ಕ್ರಿ. ಸಕ.) ಬಣ್ಣ ಕಳೆ. **Decolo(u)rátion** (ನಾ.)

Décomplex ಡೀಕಾಂಪ್ಲೆಕ್ಸ್ (ಗು.) ಸಿಕ್ಕುಸಿಕ್ಕಾದ ; ಬಲು ತೊಡಕಾದ ; ತೊಡಕು ಭಾಗಗಳುಳ್ಳ ; ಜಟಿಲ ಅವಯವಗಳುಳ್ಳ.

Decompóse ಡೀಕಂಪೋಸ್ (ಕ್ರಿ.) (ಪದಾರ್ಥ, ಬೆಳಕು, ಮೊ. ನ್ನು) ಪ್ರತ್ಯೇಕ ಭಾಗಗಳಾಗಿ ವಿಂಗಡಿಸು, ಬೇರ್ಪಡಿಸು ; ಬೇರೆ ಬೇರೆಯಾಗಿ ಮಾಡು ; ಒಡೆ ; ಪೃಥಕ್ಕರಿಸು. (ಭಾವ, ಉದ್ದೇಶ, ಮೊ. ನ್ನು) ಬಿಡಿಸು, ವಿಭಜಿಸು, ವಿವರಿಸು ; ವಿಘಟಿಸು. ಕೊಳೆತುಹೋಗು ; ಕೊಳೆಯಿಸು. **Decompósable** — ಸಬ್‌ಲ್ (ಗು.) ಪ್ರತ್ಯೇಕ ಭಾಗಗಳಾಗಿ ಮಾಡಲು ಬರುವ ; ಪೃಥಕ್ಕರಿಸಲಾಗುವ ; ವಿಭಜನ ಸಾಧ್ಯ. **Decompóser** (ನಾ.) ವಿಂಗಡಿಸುವಂಥದು; ಪೃಥಕ್ಕಾರಕ. **Decomposítion** ಡೀಕಾಂಪೊಸಿಷನ್ (ನಾ.) ಪೃಥಕ್ಕರಣ ; ವಿಘಟನೆ ; ಬೇರ್ಪಡಿಕೆ.

Decómposite ಡೀಕಾಂಪೊಸಿ(ಸೈ)ಟ್ (ಗು., ನಾ.) ಒಂದು ಸಂಯುಕ್ತದೊಡನೆ ಒಂದು ಧಾತುವನ್ನು ಹೊಸದಾಗಿ ಸೇರಿಸಿ ಮಾಡಿದ (ಪದಾರ್ಥ, ಪದ, ಮೊ. ವು) : ಪುನಸ್ಸಂಯುಕ್ತ.

Décompound ಡೀಕಾಂಪೌಂಡ್ (ಗು., ನಾ.) ಪುನಸ್ಸಂಯುಕ್ತ ; (ಸ. ವಿ.) (ಸಂಯುಕ್ತ ಎಲೆಗಳ ಅಥವಾ ಹೂಗೊಂಚಲುಗಳ ವಿಷಯದಲ್ಲಿ) ಭಾಗಗಳು ಮರಳಿ ಭಾಗವಾಗಿರುವ.

Decompréss ಡೀಕಂಪ್ರೆಸ್ (ಕ್ರಿ. ಸಕ.) (ನೀರಿನ ತಳದಲ್ಲಿ ಅಥವಾ ಇತರ ಕಡೆ ಕೆಲಸಮಾಡುವವನ ಮೈಮೇಲೆ ವಾಯುತಡೆಯ ಮೂಲಕ) ಒತ್ತಡ ಕಡಮೆಮಾಡು. **Decompréssion** (ನಾ.) ; **Decompréssor** (ನಾ.) ಮೋಟಾರು ಎಂಜಿನಿನಲ್ಲಿ ಒತ್ತಡ ಕಡಮೆಮಾಡುವ ಸಾಧನ.

Decónsecrate ಡೀಕಾನ್ಸಿಕ್ರೇಟ್ (ಕ್ರಿ. ಸಕ.) ಐಹಿಕಕ್ಕೆ ತಿರುಗಿಸು ; ಪವಿತ್ರತೆಯನ್ನು ಕಳೆ.

Decontról ಡೀಕಂಟ್ರೋಲ್ (ಕ್ರಿ. ಸಕ., ನಾ.) (ಮು., ಯುದ್ಧಕಾಲದಲ್ಲಿ) ಸರ್ಕಾರದ ಅಧೀನ ಬಿಡಿಸು(ವುದು) ; — ನಿರ್ಬಂಧ, ಹಿಡಿತ, ತಪ್ಪಿಸು (ವುದು)

Decór (F) ಡೆಕೋರ್ (ನಾ.) ಶೃಂಗಾರ ; ಅಲಂಕಾರ. ದಿವಾನ್‌ಖಾನೆಯನ್ನು, (ನಾಟ್ಯ) ರಂಗವನ್ನು, ಅಂದಗೊಳಿಸುವ ಎಲ್ಲ ಸಾಮಗ್ರಿಗಳು ; ಪ್ರಸಾಧನ.

Décorate ಡೆಕೊರೇಟ್ (ಕ್ರಿ. ಸಕ.) (ಆರಾಧನ ಮಂದಿರ, ಮೊ. ನ್ನು ಹೂವು, ತೋರಣ, ಮೊ. ಗಳಿಂದ) ಸಿಂಗರಿಸು, ಅಲಂಕರಿಸು, ಚೆಲುವುಗೊಳಿಸು, ಕೈಗೈ (ಗ್ರಾಂ.). ಅಲಂಕಾರವಾಗಿರು ; ಭೂಷಣವಾಗಿರು. ಬಿರುದುಪದಕ, ಮೊ. ಗಳಿಂದ ಭೂಷಿಸು. **Décorated** (ಗು., ನಾ.) ಇಂಗ್ಲಿಷ್ ವಾಸ್ತುಶಿಲ್ಪದ ಒಂದು ರೀತಿ(ಯ). **Decorátion** (ನಾ.) ಅಲಂಕಾರ ; ಶೃಂಗಾರ. (ಬ. ವ. ದಲ್ಲಿ) ಉತ್ಸವ ಸಂದರ್ಭಗಳಲ್ಲಿ ಕಟ್ಟುವ ತೋರಣ, ಬಾವುಟ, ಹೂಮಾಲೆ, ಮೊ. ದ ಅಲಂಕಾರಗಳು. ಘನತೆಯ ಗುರುತಾಗಿ ಕೊಡುವ, ತೊಡುವ, ಬಿರುದಿನ ಪದಕ, ಮೊ. ವು. **Décorative** — ರೆಟಿವ್ (ಗು.) ಅಲಂಕಾರದ ; ಆಲಂಕಾರಿಕ. **Décorator** (ನಾ.) (ಕ್ರಿಯಾರ್ಥಗಳಲ್ಲಿ) ; ಮನೆಯ ಗೋಡೆಗಳಿಗೆ ಚಿತ್ರಕಾಗದಗಳನ್ನು ಹಚ್ಚುವುದು, ಬಣ್ಣ ಬಳಿಯುವುದು, ಮೊ. ಅಂದಗಾರಿಕೆಯ ಕೆಲಸಮಾಡುವ ಕೆಲಸಗಾರ : ಪ್ರಸಾಧಕ ; ಅಲಂಕಾರಗಾರ.

Decórum ಡಿಕೋರಂ (ನಾ.) ಒಪ್ಪು ; ಔಚಿತ್ಯ ; ನಯ ವಿನಯ ; ಮರ್ಯಾದೆ ; ಸಭ್ಯಾಚಾರ. **Decórous** ಡೆಕೋರಸ್, **Decórous** — ಕೊ — (ಗು.) ಒಳ್ಳೆಯ ಅಭಿರುಚಿಯುಳ್ಳ ; ಔಚಿತ್ಯವುಳ್ಳ ; ಘನತೆಯ ; ಗಂಭೀರವಾದ ; ಮರ್ಯಾದೆಯುಳ್ಳ ; ಸಭ್ಯ. **Decórously** (ಕ್ರಿ. ವಿ.)

Decoý ಡಿಕಾಯ್ (ನಾ., ಕ್ರಿ. ಸಕ.) (ಪಳಗಿಸಿದ ಹಕ್ಕಿ, ಮೊ. ಗಳ ಸಹಾಯದಿಂದ) ಕಾಡುಬಾತುಗಳನ್ನು ಮೋಸದಿಂದ ಹಿಡಿಯಲು ಬಲೆಬೀಸಿದ ಕಿರಿದಾದ ಚಾಚುಗಳುಳ್ಳ ಕೊಳ. (ಹಕ್ಕಿ, ಮೃಗ, ಮೊ. ನ್ನು) ಬಲೆಯಲ್ಲಿ ಬೀಳಿಸಲು ತರಬೇತು ಮಾಡಿರುವ ಹಕ್ಕಿ ಅಥವಾ ಮೃಗ : ದೀಹ (ಗ್ರಾಂ.). (ರೂಪ.) ಒಬ್ಬನನ್ನು ತೊಂದರೆಗೆ ಅಥವಾ ಅಪಾಯಕ್ಕೆ ಉಪಾಯದಿಂದ ಸಿಕ್ಕಿಸುವವನು ; ಮೋಸಗಾರನ ಸಹಾಯಕ (= D.-duck). ಬಲೆಯಲ್ಲಿ ತಾನಾಗಿ ಬೀಳುವಂತೆ ಅಳವಡಿಸಿರುವ ಉಪಾಯ ; ಮೋಸದ ಸೆಳೆತ. ಗಾಳ ; ಬಲೆ ; ಬೋನು. (ಕ್ರಿ.) ಬಲೆ ಬೀಸು ; ಆಸೆದೋರಿ ಸೆಳೆ ; ಕೆಡವು ; ಮರುಳುಮಾಡು ; ಮಚ್ಚುಮಾಡು ; ಏಮಾರಿಸು ; ಮೋಸಗೊಳಿಸು ; ವಂಚಿಸು ; (ಉಪಾಯದಿಂದ) ತೊಂದರೆಗೆ ಸಿಕ್ಕಿಸು.

Decreáse ಡಿಕ್ರೀಸ್ (ಕ್ರಿ.), **Décrease** ಡೀಕ್ರೀಸ್ (ನಾ.) ಕಡಮೆ ಮಾಡು ; — ಯಾಗು ; ತಗ್ಗು ; ತಗ್ಗಿಸು ; ಇಳಿ(ಸು). (ನಾ.) — ವುದು ; ಕಡಮೆ ; ತಗ್ಗು ; ಇಳಿತ ; ಕೊರತೆ ; ನ್ಯೂನತೆ. **Décrement** ಡೆಕ್ರಿಮೆಂಟ್ (ನಾ.) = Decrease (ನಾ.) ; ತೇಮಾನ ; ಕ್ಷಯ. [ಮು., ವೈಜ್ಞಾನಿಕ ಪ್ರಯೋಗ ಪದ ; Increment (ಏರಿಕೆ) ಪದಕ್ಕೆ ವಿರುದ್ಧ ಪದ]

Decreé ಡಿಕ್ರೀ (ನಾ., ಕ್ರಿ. ಸಕ.) (ತಕ್ಕ ಅಧಿಕಾರಿಯಿಂದ ಪ್ರಕಟವಾದ) ಶಾಸನ, ವಿಧಿ, ಕಟ್ಟಳೆ. (ನೌಕಾ ನ್ಯಾಯಸ್ಥಾನದ) ತೀರ್ಪು, ನಿರ್ಣಯ. (ವಿವಾಹ ವಿಚ್ಛೇದ ವ್ಯವಹಾರದಲ್ಲಿ) ದಂಪತಿಗಳಾಗಿದ್ದವರು ಬೇರೆ ಬೇರೆಯಾಗಬಹುದೆಂದು ಕೊಡುವ, ಅಥವಾ ದಾಂಪತ್ಯ ವಿಚ್ಛೇದದ, ತೀರ್ಪು [D. nisi (ಆರು ತಿಂಗಳಿಗೆ ಕಡಮೆಯಿಲ್ಲದ ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿರ್ದಿಷ್ಟ ಕಾಲದಲ್ಲಿ ತೀರ್ಪಿಗೆ ವಿರುದ್ಧವಾದ ಕಾರಣವನ್ನು ತೋರಿಸದಿದ್ದರೆ ತೀರ್ಪು ಸ್ಥಿರಪಡುವಂತೆ ಕೊಡುವ) ವಿವಾಹ ವಿಚ್ಛೇದದ ಗಡುವುತೀರ್ಪು]. ದೈವಾಜ್ಞೆ; ದೈವ ಸಂಕಲ್ಪ; ಪ್ರಕೃತಿ ನಿಯಮ. (ಕ್ರಿ.) ಶಾಸನ ಮಾಡು; (ವಿಧಿವತ್ತಾಗಿ) ತೀರ್ಪು ಕೊಡು; ವಿಧಿಸು. **Decrétal** (ನಾ.) ಪೋಪ್‌ಗುರುವಿನ ವಿಧಿ, ಶಾಸನ. (ಬ. ವ. ದಲ್ಲಿ) ಕ್ರೈಸ್ತ ನ್ಯಾಯವಿಧಿಗಳ ಸಂಗ್ರಹ.

Decrépit ಡಿಕ್ರೆಪಿಟ್ (ಗು.) (ವ್ಯಕ್ತಿ, ಸಂಸ್ಥೆ, ಮೊ. ಗಳ ವಿಷಯದಲ್ಲಿ) ಇಳಿದುಹೋದ; ಕುಸಿದ; (ಬಲ) ಕುಗ್ಗಿಹೋದ; ಉಡುಗಿಹೋದ; ಜೀರ್ಣವಾದ; ಸತ್ವಗುಂದಿದ; ಮುಪ್ಪಡಸಿದ; ಜರ್ಜರಿತ; ಗಳಿತ. **Decrépitude** (ನಾ.)

Decrépitate ಡಿಕ್ರೆಪಿಟೇಟ್ (ಕ್ರಿ.) ಶಾಖದಿಂದ ಚಿಟಗುಟ್ಟು, — ಗುಟ್ಟಿಸು; — ಸಿಡಿ; — ಸಿಡಿಸು. (ಖನಿಜ ಅಥವಾ ಲವಣ) ಚಿಟಗುಟ್ಟಿ ಪುಡಿಪುಡಿಯಾಗು(ವಂತೆ ಮಾಡು). **Decrepitátion** (ನಾ.)

Decrescéndo (It.) ಡೇಕ್ರೆಷೆಂಡೊ = Diminuendo.

Decréscent ಡಿಕ್ರೆಸೆಂಟ್ (ಗು.) (ಸಾ., ಚಂದ್ರನ ವಿಷಯದಲ್ಲಿ) ಕ್ಷೀಣ; ಇಳಿತದ; ಕಲೆಗುಂದುತ್ತಿರುವ.

Decrétal. **Decree** ನೋಡಿ.

Decrý ಡಿಕ್ರೈ (ಕ್ರಿ. ಸಕ.) ಅಲ್ಲಗಳೆ; ಹಳಿ; ಜರೆ; ತೆಗಳು; ದೂಷಣೆ ಮಾಡು; ಇಳಿಕೆಗೈ (ಗ್ರಾಂ.); ಏಳಿಸು (ಗ್ರಾಂ.)

Decrystallizátion ಡಿಕ್ರಿಸ್ಟಲೈಸೇಷನ್ (ನಾ.) ಸ್ಫಟಿಕಾಕೃತಿಯನ್ನು ಕಳೆಯುವುದು; ಅಸ್ಫಟಿಕೀಕರಣ.

Décuman ಡೆಕ್ಯುಮನ್ (ಗು.) [ಸಾ., ಅಲೆಯ ವಿಷಯದಲ್ಲಿ (ರೂಪ. ಸಹ)] ಅತಿ ದೊಡ್ಡದಾದ; ಪ್ರಬಲವಾದ; ಭಾರಿ.

Decúmbent ಡಿಕಂಬೆಂಟ್ (ಗು.) (ಸ. ವಿ., ಪ್ರಾ. ವಿ.) (ಸಸ್ಯ, ಹೊಡೆ, ಬಿರುಗೂದಲು, ಮೊ. ಗಳ ವಿಷಯದಲ್ಲಿ) ನೆಲದಮೇಲೆ ಹಬ್ಬುವ, ಮೈಮೇಲೆ ಒರಗಿರುವ.

Décuple ಡೆಕ್ಯುಪ್‌ಲ್ (ಗು., ನಾ., ಕ್ರಿ. ಸಕ.) ಹತ್ತು ಮಡಿಯ; ಹತ್ತು ಮಡಿ, ದಶ ಗುಣ (ಮಾಡು); ಹತ್ತರಿಂದ ಗುಣಿಸು.

Decússate ಡಿಕಸೆಟ್ (ಗು.), ಡಿಕಸೇಟ್ (ಕ್ರಿ.) ಕತ್ತರಿಯಾಕಾರದ; ಕತ್ತರಿಗೆರೆಯ; X ಆಕಾರದ; ಪರಸ್ಪರ ಛೇದಿಸುವ. (ಸ. ವಿ.) (ಎದುರುಬದುರಾಗಿ ಹೊರಟಿರುವ ಎಲೆ, ಮೊ. ಗಳ ಜೋಡಿಗಳಲ್ಲಿ ಒಂದು ಜೋಡಿಗೆ ಅದರ ಮೇಲಿನದು ಸಮಕೋನವಾಗಿ ಕತ್ತರಿಯಾಕಾರದಲ್ಲಿ ಹಾಯುವ) ಕತ್ತರಿ ಜೋಡಿಯ. (ಅಲಂ.) ಒಂದು ವಾಕ್ಯದ ಮೊದಲಿನ ಭಾಗದಲ್ಲಿಯ ಸಮಾನ ಪದಗಳ ಪದಕ್ರಮವನ್ನು ಎರಡನೆಯ ಭಾಗದಲ್ಲಿ ಹಿಂದುಮುಂದು ಮಾಡಿದ: ಕ್ರಮ ವ್ಯತ್ಯಯದ (ಉದಾ., I cannot dig; to beg I am ashamed). (ಕ್ರಿ.) ಕತ್ತರಿಯಾಕಾರದಲ್ಲಿ ಅಳವಡಿಸು, ಇರು; ಕತ್ತರಿ ಮಾಡು; ಪರಸ್ಪರ ಛೇದಿಸು. **Decússated** (ಗು.); **Decussátion** (ನಾ.)

Dedentítion ಡೀಡೆಂಟಿಷನ್ (ನಾ.) (ಶ. ವಿ.) ಹಲ್ಲು ಬಿದ್ದು, ಉದುರಿ, ಹೋಗುವುದು.

Dédicate ಡೆಡಿಕೇಟ್ (ಕ್ರಿ. ಸಕ.) (ದೇವರಿಗಾಗಲಿ, ಪವಿತ್ರ ಕಾರ್ಯಕ್ಕಾಗಲಿ) ವಿಧಿವತ್ತಾಗಿ ಅರ್ಪಿಸು; ಸಮರ್ಪಿಸು; ಮೀಸಲಿಡು; ಮುಡಿಪು ಕಟ್ಟು; (ವಿಶೇಷೋದ್ದೇಶಗಳಿಗಾಗಿ) ನಿವೇದಿಸು. (ತನ್ನ ಗ್ರಂಥ, ಮೊ. ನ್ನು ಆಶ್ರಯದಾತ, ಸ್ನೇಹಿತ, ಮೊ. ರಿಗೆ) ಅಂಕಿತ ಮಾಡು. **Dédicator** (ನಾ.) ಅರ್ಪಣಕಾರ. **Dedicateé** — ಕೆಟೀ (ನಾ.) ಯಾರಿಗೆ ಅರ್ಪಣೆ ಮಾಡಿದೆಯೊ ಆತನು: ಅರ್ಪಣ ಪಾತ್ರ. **Dédicative** — ಕೇ(ಕ)ಟಿವ್ (ಗು.) ನಿವೇದಿಸುವ; ಅರ್ಪಣದ. **Dédicatory** — ಕೆ(ೇ)ಟರಿ (ಗು.) = Dedicative. **Dedicátion** (ನಾ.) ಅರ್ಪಣೆ; ಅಂಕಿತ. ಕಟ್ಟಡ, ಮೊ. ಗಳ ಮೇಲೆ ಹಾಕುವ ನಿವೇದನ ಶಾಸನ; ಗ್ರಂಥದಲ್ಲಿ ಹಾಕುವ ಅಂಕಿತ.

Dedúce ಡಿಡ್ಯೂಸ್ (ಕ್ರಿ. ಸಕ.) (ವರ್ಷಾನುಚರಿತ್ರೆ, ಮೊ. ನ್ನು) ಒಂದು ಗೊತ್ತಾದ ಕಾಲದಿಂದ ಅಥವಾ ಒಂದು ಗೊತ್ತಾದ ಕಾಲದ ವರೆಗೆ ತರು. (ಒಬ್ಬನ, ಒಂದರ) ವಂಶಕ್ರಮವನ್ನು ಗುರುತಿಸು; ಒಂದು ವಂಶಕ್ಕೆ ಸೇರಿದವನು, ಸೇರಿದ್ದು, ಎಂದು ಹೇಳು. (ತಾರ್ಕಿಕ ರೀತಿಯಿಂದ) ಅನುಮಾನಿಸು; ನಿಗಮನ ಮಾಡು. (ತರ್ಕ) ದತ್ತ ಪ್ರತಿಜ್ಞೆಗಳಿಂದ ಸಹಜವಾಗಿ ಹೊರಡುವ ಅನುಮಿತಿಯನ್ನು ನಿರೂಪಿಸು. ಸಾಮಾನ್ಯ ಮೂಲತತ್ತ್ವದಿಂದ ನಿರ್ದಿಷ್ಟ ವಿಷಯವನ್ನು ಅನುಮಾನಿಸು. **Dedúcible** (ಗು.); **Dedúction**[1] ಡಿಡಕ್‌ಷನ್ (ನಾ.) ಕಾರಣಪೂರ್ವಕ ಊಹನ; ನಿಗಮನ (Induction = ಅನುಗಮನ). ಅನುಮಾನಮಾಡಿ ಪಡೆದದ್ದು; ಅನುಮಿತಿ. **Dedúctive** (ಗು.) ಅನುಮಾನದ; ಅನುಮಿತಿಯ; ನಿಗಮನದ. **Dedúctively** (ಕ್ರಿ. ವಿ.)

Dedúct ಡಿಡಕ್ಟ್ (ಕ್ರಿ. ಸಕ.) (ಮೊತ್ತ, ಭಾಗ, ಮೊ. ನ್ನು) ತೆಗೆದುಬಿಡು, ಕಳೆ; ಕಡಮೆಮಾಡು; ಮುರಿದುಕೊ; ಹಿಡಿದುಕೊ; ವಜಾ ಹಾಕು. **Dedúction**[2] (ನಾ.) ಕಳೆಯುವುದು; ತೆಗೆದುಬಿಡುವುದು; ಕಳೆದ ಅಂಶ; ವ್ಯವಕಲನ.

Dee ಡೀ (ನಾ.) D ಅಕ್ಷರ. D ಆಕಾರದ ಉಂಗುರ, ಬಳೆ, ಮೊ. ವು.

Deed ಡೀಡ್ (ನಾ.) ಉದ್ದೇಶಪೂರ್ವಕವಾಗಿ ಮಾಡಿದ್ದು. ಸಾಹಸ ಕಾರ್ಯ; ಪ್ರಶಸ್ತ ಕಾರ್ಯ. ನಡೆದ ಸಂಗತಿ; ಕಾರ್ಯ; ಕೃತ್ಯ; ಕೆಲಸ; ಗೆಯ್ಮೆ; ಮಾಡಿಕೆ [In word and d. ಮಾತಿನಲ್ಲೂ ಕಾರ್ಯದಲ್ಲೂ. In d. and not in name ಕಾರ್ಯದಲ್ಲಿ, ಬರಿಯ ಮಾತಿನಲ್ಲಲ್ಲ; ಕಾರ್ಯತಃ. In (very) d. ಕ್ರಿಯಾ ಪೂರ್ವಕವಾಗಿ]. (ನ್ಯಾ. ಶಾ.) (ದಾನ, ಕ್ರಯ, ಸ್ವಾಮ್ಯ, ಸಿದ್ಧಿ, ಮೊ. ಗಳ) ಪತ್ರ; ದಸ್ತೈವಜು; ತಮಸೂಕು; ಕತಬೆ; ಸನ್ನದು; ಶಾಸನ. D.-poll ಒಂದು ಕಕ್ಷಿ ಮಾತ್ರ ಬರೆದುಕೊಟ್ಟ ದಸ್ತೈವಜು [ಎರಡು ಕಕ್ಷಿಗಳೂ ಸೇರಿ ಒಂದೇ ಕಾಗದದಮೇಲೆ ಬರೆದ ಬೇರೆ ಬೇರೆಯ ಪತ್ರಗಳನ್ನು, ಮುಂದೆ ಗುರುತಿಸುವುದಕ್ಕಾಗಿ, ಕೋಚುಕೋಚಾಗಿ ಕತ್ತರಿಸಿ ಬೇರ್ಪಡಿಸುವ ಪದ್ಧತಿ ಹಿಂದೆ ಇದ್ದಿತು. (Poll ಎಂದರೆ, 'ಕೋಚಾಗಿ ಕತ್ತರಿಸದೆ ಸಮವಾಗಿ ಕತ್ತರಿಸಿದ' ಎಂದು ಅರ್ಥ)]. **Deédless** (ಗು.) ಕಾರ್ಯ ಮಾಡದ; ಕಾರ್ಯ ಚಿಹ್ನೆಯಿಲ್ಲದ (D. old age ಕಾರ್ಯವೇನೂ ಮಾಡದ ಮುಪ್ಪು); ಸಾಹಸ ಕಾರ್ಯವೇನನ್ನೂ ಮಾಡಿರದ, ಮಾಡದ; ನಿರುದ್ಯೋಗಿಯಾದ.

Deem ಡೀಮ್ (ಕ್ರಿ. ಸಕ.) ತಿಳಿ; ಎಣಿಸು; ನಂಬು; ಬಗೆ; ನೆನೆ; ಅಭಿಪ್ರಾಯಪಡು; ಪರಿಗಣಿಸು. D. highly of ಗೌರವವಿಟ್ಟುಕೊಂಡಿರು.

Deep ಡೀಪ್ (ಗು.) ಆಳವಾದ; ಆಳವಾಗಿ ಹೋಗುವ; ಆಳದಲ್ಲಿರುವ (D. water). ದೀರ್ಘವಾದ; ಉದ್ದವಾದ; ಅಗಾಧ; ಪೂರ್ಣವಾದ. ಭೇದಿಸಲಾಗದ; ಅಭೇದ್ಯ; ಗಾಢ; ಗಹನ; ಮೇಲೆ ಮೇಲಲ್ಲದೆ ಒಳಹೊಕ್ಕು ನೋಡುವ; ಅತಿಶಯವಾದ; ಅತಿಯಾದ; ಉಜ್ಜ್ವಲ; ದಟ್ಟ; ಘೋರ. ಹೃತ್ಪೂರ್ವಕ; ಮಗ್ನ; ಮುಳುಗಿದ; ಏಕಾಗ್ರ ಚಿತ್ತ. (ರಾಗ, ಗಂಟೆ, ದನಿ — ಇವುಗಳ ವಿಷಯದಲ್ಲಿ) ಮಂದ್ರ, ಘನ, ಗಂಭೀರ. D. border ಅಗಲವಾದ, ದೊಡ್ಡ, ಅಂಚು. D. colour ಉಜ್ಜ್ವಲ ವರ್ಣ; ದಟ್ಟ ಬಣ್ಣ. D. curses ಮನಕಲಕಿ ಹಾಕುವ ಶಾಪಗಳು. D. in debt ಸಾಲದಲ್ಲಿ ಮುಳುಗಿ. D. draught ಪೂರ್ಣ ಪಾನ. D. influence ಗಾಢ ಪ್ರಭಾವ. D. insight ಮರ್ಮ ಜ್ಞಾನ. D. interest ಗಾಢಾಸಕ್ತಿ. D. learning, study ಘನ ಪಾಂಡಿತ್ಯ; ಗಾಢ ವ್ಯಾಸಂಗ. D. mourning (ಉಡುಪಿನ ವಿಷಯದಲ್ಲಿ) ಹೆಚ್ಚುವ್ಯಸನ ಸೂಚನೆಗಾಗಿ ಧರಿಸುವ ಅಗಲವಾದ ಕಪ್ಪು ಕ್ರೇಪುಬಟ್ಟೆ, ಮೊ. ವು. D.-mouthed ನಾದದಿಂದ ಕೂಡಿದ ಗಟ್ಟಿದನಿಯ (ಕೀರು ದನಿಯಲ್ಲ) (D.-mouthed dogs). D. night ನಡು ರಾತ್ರಿ. A d. one (ಅನಂ.) ತಂತ್ರಿ; ಮರ್ಮ. D. plunge ಆಳವಾದ ಮುಳುಗು. D. in a pursuit ತೊಡಗಿದ ಕಾರ್ಯದಲ್ಲಿಯೇ ಮುಳುಗಿಹೋಗಿ, ಮಗ್ನನಾಗಿ. D. reader

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಂಥಗಳ ಸ್ವಾರಸ್ಯವನ್ನು ಹೀರುವ ವಾಚಕ ; ಗಾಢ ವ್ಯಾಸಂಗಿ. D. red ಕಡುಗೆಂಪು. D. shelf ಹೆಚ್ಚು ಒಳಹೊಗುವ ಅರೆ. D. sigh ನಿಟ್ಟುಸಿರು. D. sin ಘೋರಪಾತಕ. D. sleep ಗಾಢ ನಿದ್ರೆ ; ಸುಷುಪ್ತಿ. D. thinker ಅಮೂಲ ವಿಚಾರಿ ; ತಳಸ್ಪರ್ಶಿ ; ತತ್ತ್ವಾನ್ವೇಷಿ. In d. waters ನಡು ನೀರಿನಲ್ಲಿ ; ಬಹು ಕಷ್ಟದಲ್ಲಿ, ಸಂಕಟದಲ್ಲಿ, ಮುಳುಗಿ. D. wound ಆಳದ ಗಾಯ. The deeper causes ಗೂಢ ಕಾರಣಗಳು. Drawn up six deep ಒಬ್ಬರ ಹಿಂದೆ ಒಬ್ಬರಂತೆ ನಿಲ್ಲಿಸಿದ ಆರುಮಂದಿ ಸಾಲಿನ. **Deépen** (ಕ್ರಿ.) ಆಳ ಮಾಡು ; ಆಳವಾಗು. **Deéply** (ಕ್ರಿ. ವಿ.) ; **Deépmost** (ಗು.) ಅತ್ಯಂತ ಆಳವಾದ ; ಕಟ್ಟಾಳದ. **Deépness** (ನಾ.). **Depth** ಡೆಪ್ತ್ (ನಾ.) ಆಳ ; ಮೇಲಿಂದ ಕೆಳಗಿನ, ಮೇಲ್ಮೈಯಿಂದ ಒಳಗಿನ, ಮುಂಭಾಗದಿಂದ ಹಿಂಭಾಗದ ವರೆಗಿನ, ಆಳತೆ. ಗಭೀರತೆ; ಗಾಢತೆ ; ಗೂಢತೆ ; ಗಹನತೆ. (ಬುದ್ಧಿ) ತೀಕ್ಷ್ಣತೆ. (ವರ್ಣ) ಸಾಂದ್ರತೆ ; (ಕತ್ತಲೆಯ) ಗಾಢತ್ವ. (ಬ. ವ. ದಲ್ಲಿ) ಆಳವಾದ ನೀರು, ಪ್ರದೇಶ ; ಪಾತಾಳ ; ತಟ್ಟ ತಳ ; ಅತ್ಯಂತ ಒಳಪ್ರದೇಶ ; ನಡು ; ಮಧ್ಯ (In the d. of winter ನಡು ಮಾಗಿಯಲ್ಲಿ). ಅಂತರಂಗ ; ಅಂತರಾಳ (Cry from the depths ಹೃದಯಾಂತರಾಳದಿಂದ ಎದ್ದ ಕೂಗು). Depths of degradation ತೀರ ಅಧೋಗತಿ. Out of one's d. ತನ್ನ ಆಳಕ್ಕೆ ಮೀರಿ ; (ರೂಪ.) ತನ್ನ ಶಕ್ತಿ ಮೀರಿದ ಕಾರ್ಯದಲ್ಲಿ ಅಥವಾ ವಿಷಯದಲ್ಲಿ ತೊಡಗಿ. D.-charge ನೀರಿನೊಳಗೆ ಪ್ರಯಾಣಮಾಡುವ ನಾವೆಯಮೇಲೆ ಒಂದು ಗೊತ್ತಾದ ಆಳದಲ್ಲಿ ಸಿಡಿಯುವಂತೆ ಅಳವಡಿಸಿರುವ ಸಿಡಿಗುಂಡು : ಆಳದ ಸಿಡಿಗುಂಡು.

Deep (ನಾ.) [The d. (ಕಾವ್ಯ) ಸಮುದ್ರ]. (ಸಾ., ಬ. ವ. ದಲ್ಲಿ) ಸಮುದ್ರದ ಆಳವಾದ ಭಾಗ(ಗಳು). ಅಗಾಧ ; ಪಾತಾಳ ; ಹಳ್ಳ ; ಕೂಪ ; ಕುಹರ. ಮನೋಭಾವನೆಯ, ಮನೋವೇದನೆಯ, ಗೂಢ ಪ್ರದೇಶ.

Deep (ಕ್ರಿ. ವಿ.) ಆಳವಾಗಿ ; ಅಡಿ ತಳದಲ್ಲಿ. Drink d. ಪೂರ್ತಿಕುಡಿ. Read d. into the night ರಾತ್ರಿ ಬಹಳ ಹೊತ್ತಿನ ವರೆಗೂ ಓದು. Still waters run d. ಶಾಂತವಾದ ನೀರು ಆಳವಾಗಿ ಹೋಗುತ್ತದೆ ; ತುಂಬಿದ ಕೊಡ ತುಳುಕುವುದಿಲ್ಲ. D.-drawn (sigh) ನಿಡಿದಾಗಿ ಎಳೆದ (ನಿಟ್ಟುಸಿರು). D.-laid (scheme) ಗೂಢವಾಗಿಯೂ ವಿಸ್ತಾರವಾಗಿಯೂ ಹೂಡಿದ (ಹೂಟ, ಹಂಚಿಕೆ, ಹೊಂಚಿಕೆ). D.-rooted ಆಳವಾಗಿ ಬೇರು ಬಿಟ್ಟ ; ಬೇರೂರಿದ ; ರೂಢಮೂಲ (ಮು., ದುರಾಗ್ರಹ, ದುರಭಿಪ್ರಾಯ). D.-seated (ಚಿತ್ತವೃತ್ತಿ, ವ್ಯಾಧಿ) ಬಹು ಆಳದಲ್ಲಿರುವ, ಅಂತಸ್ಥ.

Deer ಡಿಯರ್ (ನಾ.) (ಸಮೂಹ ವಾಚಕ ಏ. ವ.; ಸಾ., ಬ. ವ. ಕ್ಕಾಗಿ) ಜಿಂಕೆ ; ಎರಲೆ; ಚಿಗರಿ ; ಹುಲ್ಲೆ. Small d. ಕೆಲಸಕ್ಕೆ ಬಾರದ ಪ್ರಾಣಿಗಳು ಅಥವಾ ವಸ್ತುಗಳು (ಸಮುದಾಯದಲ್ಲಿ). D.-hound ಬೂದು ಬಣ್ಣದ, ಒರಟಾದ, ಒಂದು ಜಾತಿಯ ಬೇಟೆನಾಯಿ. D.-forest ಜಿಂಕೆಗಳಿಗಾಗಿ ಬಿಟ್ಟಿರುವ ಕಾಡು ; ಜಿಂಕೆಗಳನ್ನು ಮರಸುಬೇಟೆಯಾಡುವ ಕಾಡು : ಜಿಂಕೆಕಾಡು. D.-lick (ಜಿಂಕೆಗಳು ಉಪ್ಪು ನೆಕ್ಕುವುದಕ್ಕಾಗಿ ಬರುವ) ಉಪ್ಪು, ಮೊ. ದ ಲವಣಗಳು ತುಂಬಿರುವ ಊಟೆ ಅಥವಾ ತೇವದ ನೆಲ. D.-neck ಕುದುರೆಯ ತೆಳುಗೊರಳು. D.'s-foot ಒಂದು ಬಗೆಯ ನಯವಾದ ಹುಲ್ಲು. Deerskin ಜಿಂಕೆಯ ಚರ್ಮ, ಕೃಷ್ಣಾಜಿನ (ದಿಂದ ಮಾಡಿದ). D.-stalker ಜಿಂಕೆಯ ಮರಸುಬೇಟೆಗಾರ. ಮುಂದೆಯೂ ಹಿಂದೆಯೂ ಕೋಡುಳ್ಳ ಟೋಪಿ.

Deface ಡಿಫೇಸ್ (ಕ್ರಿ. ಸಕ.) ಮುಖಗೆಡಿಸು ; ರೂಪುಗೆಡಿಸು ; ವಿರೂಪ ಮಾಡು; ವಿಕಾರ ಮಾಡು ; (ಅಂದ, ಚೆಲುವು) ಕೆಡಿಸು ; ಕುಂದು ತರು ; ಅವಮಾನ ತರು ; ಅಳಿಸಿ, ಒರಸಿ, ಉಜ್ಜಿ, ಬಿಡು ; ತಿಳಿಯಲಾಗದಂತೆ ಮಾಡು. **Defáceable** (ಗು.) ; **Defácement** (ನಾ.)

De facto ಡೀ ಫ್ಯಾಕ್ಟೋ (ಗು., ಕ್ರಿ. ವಿ.) ನಿಜವಾಗಿ ; ವಸ್ತುತಃ ; ವಾಸ್ತವಿಕವಾಗಿ ; ಕಾರ್ಯತಃ; ಅನುಭೋಗಿಸುವ (ಹಕ್ಕು ಇರಲಿ, ಇಲ್ಲದಿರಲಿ). King d. f. ; the d.-f. king ವಸ್ತುತಃ ದೊರೆ.

Défalcate ಡಿ(ೀ)ಫ್ಯಾಲ್ಕೇಟ್ (ಕ್ರಿ. ಅಕ.) ಸ್ವಾಧೀನಕ್ಕೆ ಕೊಟ್ಟಿರುವ ಹಣವನ್ನು ದುರುಪಯೋಗ ಮಾಡಿಕೊ, ಅಪಹರಿಸು ; (ಹಣ) ತಿಂದು ಹಾಕು. **Defalcátion** ಡೀ — (ನಾ.) ನಂಬಿಕೆಯ ದ್ರೋಹ ಮಾಡಿ ಹಣ ತಿಂದುಹಾಕುವುದು ; ದುರುಪಯೋಗ ಮಾಡಿಕೊಂಡ ಹಣ ; ದುರುಪಯುಕ್ತ ದ್ರವ್ಯ. **Défalcator** (ನಾ.)

Defáme ಡಿಫೇಮ್ (ಕ್ರಿ. ಸಕ.) ಹೆಸರು ಕೆಡಿಸು ; ಯಶಸ್ಸಿಗೆ ಕುಂದು ತರು ; ಅಪಮಾನಕ್ಕೆ ಗುರಿಮಾಡು ; ಚಾಡಿ ಹೇಳು ; ಮಾನ ನಷ್ಟ ಮಾಡು. **Defamátion** ಡೆ(ಡೀ)ಫಮೇಷನ್ (ನಾ.) ಮಾನ ನಷ್ಟ (ಮಾಡುವುದು). **Defámatory** ಡಿಫ್ಯಾಮಟರಿ (ಗು.)

Defaúlt ಡಿಫಾಲ್ಟ್ (ನಾ., ಕ್ರಿ.) ಕೊರತೆ ; ಅಭಾವ [In d. of (ಆ ವಸ್ತು) ಇಲ್ಲದಿರುವುದರಿಂದ, ಇಲ್ಲದಿದ್ದರೆ]. ಕಾರ್ಯ ಮಾಡದೆ ತಪ್ಪುವುದು ; ಹಾಜರಾಗಲು ತಪ್ಪುವುದು. ತಪ್ಪು ; ಅಸಡ್ಡೆ [Make d. (ಮಾಡಬೇಕಾದ) ಕಾರ್ಯ ಮಾಡದೆ, (ಕಾಣಿಸಿಕೊಳ್ಳ ಬೇಕಾಗಿದ್ದು) ಕಾಣಿಸಿಕೊಳ್ಳದೆ, ತಪ್ಪು. Judgment by d. ಪ್ರತಿವಾದಿ ವಾದಿಸಲು ತಪ್ಪಿದ್ದರಿಂದ ವಾದಿಯ ಪರವಾಗಿ ಕೊಟ್ಟ ತೀರ್ಪು : ಗೈರಹಾಜರಿ ತೀರ್ಪು]. (ಕೊಡಬೇಕಾದ ಹಣವನ್ನು) ಕೊಡದೆ ತಪ್ಪುವುದು. (ಕ್ರಿ.) (ಕೊಡಬೇಕಾದ ಹಣ) ಕೊಡದೆ ತಪ್ಪು. ನ್ಯಾಯ ಸ್ಥಾನದಲ್ಲಿ ಹಾಜರಾಗದೆ ತಪ್ಪಿಸಿಕೊ. (ಕರ್ತವ್ಯ) ತಪ್ಪು. ಕೊರತೆ, ಅಭಾವ, ಅಗಿರು ಗೈರಹಾಜರಿ ತೀರ್ಪು ಕೊಡು. **Defaúlter** (ನಾ.)

Defeásance ಡೀಫೀಸನ್ಸ್ (ನಾ.) ಇಲ್ಲದ್ದನ್ನಾಗಿ, ಸಲ್ಲದ್ದನ್ನಾಗಿ, ಮಾಡುವುದು ; ರದ್ದು ಮಾಡುವುದು ; ವ್ಯರ್ಥ ಕರಣ. **Defeásible** ಡಿ — (ಗು.) ರದ್ದುಮಾಡಲಾಗುವ ; — ಬಹುದಾದ ; ಹಿಂದಕ್ಕೆ ತೆಗೆದುಕೊಳ್ಳಬಹುದಾದ. **Defeasibílity** (ನಾ.)

Defeát ಡಿಫೀಟ್ (ಕ್ರಿ. ಸಕ., ನಾ.) ವ್ಯರ್ಥ ಮಾಡು ; ನಿಷ್ಫಲಗೊಳಿಸು ; ನಿರರ್ಥಕ (ಮಾಡು). (ನ್ಯಾ. ಶಾ.) ರದ್ದು ಮಾಡು(ವುದು). (ಪ್ರಾಚೀ. ಪ್ರ.) ಆಶಾಭಂಗ ಮಾಡು ; ವಿಫಲ ಮಾಡು ; ವಂಚಿಸು. (ಸ್ಪರ್ಧೆಯಲ್ಲಿ, ಯುದ್ಧದಲ್ಲಿ) ಸೋಲಿಸು ; ಮುರಿ ; ಪರಾಜಿತ ಮಾಡು. (ನಾ.) ಸೋಲು ; ಅಪಜಯ ; ಪರಾಜಯ ; ಪರಿಭವ ; ಭಂಗ ; ಮುರಿಕೆ. **Defeátism** (ನಾ.) ಸೋಲೊಪ್ಪಿಕೊಳ್ಳುವ ನಡತೆ ; ಸೋಲು ನಡತೆ ; ಪರಾಜಿತ ಭಾವ. ಮುಂದೆ ಹೋರಾಡುವುದು ಸಾಧ್ಯವಲ್ಲವೆಂದಾಗಲಿ, ಅಥವಾ ಜಯದಿಂದಾಗುವುದಕ್ಕಿಂತ ಸೋಲಿನಿಂದ ತಮಗೆ ಕೊನೆಯಲ್ಲಿ ಹೆಚ್ಚುಪ್ರಯೋಜನವಾಗಬಹುದೆಂದಾಗಲಿ ಒಂದು ದೇಶ, ಪಂಗಡ, ಚಳವಳಿ, ಮೊ.ವು ತಮ್ಮ ಸೋಲನ್ನು ಬಯಸುವ, ಒಪ್ಪಿಕೊಳ್ಳುವ, ಸಾರುವ, ನೀತಿ ಅಥವಾ ಪದ್ಧತಿ : ಪರಾಭವ ಸ್ವೀಕಾರ. **Defeátist** (ನಾ., ಗು.)

Defeáture ಡಿಫೀಟ್ಯುರ್, — ಚರ್ (ಕ್ರಿ. ಸಕ.) ಗುರುತು ತಿಳಿಯದಂತೆ ಮಾಡು ; ರೂಪುಗೆಡಿಸು ; ಕೂನು ತಪ್ಪಿಸು.

Défecate ಡೆಫಿಕೇಟ್ (ಕ್ರಿ. ಸಕ.) ಕಶ್ಮಲ, ಕಸ, ಕಳೆ ; ಶುದ್ಧಮಾಡು ; ನಿರ್ಮಲಗೊಳಿಸು ; (ರೂಪ. ಸಹ). ಮಲ ವಿಸರ್ಜನೆ ಮಾಡು ; ಹೊಲಸು ತೆಗೆ ; (ಕಶ್ಮಲ, ಮಲ, ಪಾಪ — ಇವನ್ನು) ಕಳೆದುಬಿಡು, ತೊಳೆ ; ಪುನೀತಮಾಡು. **Defecátion** (ನಾ.) ; **Défecator** (ನಾ.)

Deféct ಡಿಫೆಕ್ಟ್ (ನಾ.) ಕೊರತೆ ; ನ್ಯೂನತೆ ; ಊನ ; ಅರೆ ; ಐಬು ; ಕುಂದು ; ದೋಷ ; ಕಳಂಕ. (ಒಂದು ವಸ್ತು) ಕಡಮೆಬೀಳುವ ಮೊತ್ತ ; ಕೊರೆ ; ಕಡಮೆ. **Deféction** (ನಾ.) (ನಾಯಕ, ಪಕ್ಷ, ಧರ್ಮ, ಕರ್ತವ್ಯ — ಇವುಗಳನ್ನು) ಬಿಟ್ಟುಹೋಗುವುದು, ತೊರೆಯುವುದು. (ಸ್ವಧರ್ಮ) ಪರಿತ್ಯಾಗ ; ಚ್ಯುತಿ ; ಭ್ರಂಶ. **Deféctive** (ಗು.) ಕುಂದು ಕೊರತೆಗಳುಳ್ಳ ; ನ್ಯೂನ ; ಊನ ; ಅಸಮಗ್ರ ; ತಪ್ಪುಳ್ಳ. (ವ್ಯಾ.) ಎಲ್ಲ ವಿಭಕ್ತಿರೂಪಗಳೂ ಇಲ್ಲದ ; ನ್ಯೂನ. **Deféctively** (ಕ್ರಿ. ವಿ.) ; **Deféctiveness** (ನಾ.)

Defénce ಡಿಫೆನ್ಸ್ (ನಾ.) (ತೊಂದರೆಯಿಂದ) ರಕ್ಷಿಸಿಕೊಳ್ಳುವುದು. (ಮೇಲೆ ಬೀಳದಂತೆ) ಕಾಪಾಡಿಕೊಳ್ಳುವುದು ; ಕಾಪು ; ಕಾವಲು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮರೆ ; ರಕ್ಷಣೆ [Best d. is offence ಮೊದಲು ತಾನಾಗಿ ಮೇರೆ ಬೀಳುವುದೇ (ಆಕ್ರಮಣವೇ) ಉತ್ತಮ ರಕ್ಷಣೆ ; ಒಂದು ಕಾರ್ಯದಲ್ಲಿ (ಇತರರಿಗೆ ಕಾಯದೆ) ತಾನೇ ಆರಂಭಿಸುವುದರಲ್ಲಿ ಹೆಚ್ಚು ಅನುಕೂಲ ವುಂಟು]. (ಕ್ರಿಕೆಟ್ ಆಟ) ತನ್ನ ಗುರಿಕೋಲನ್ನು ಕಾದು ಕೊಂಡಿರುವುದು ; ದಾಂಡಿನಾಟ (ಚೆಂಡೆಸತವಲ್ಲ). [Science or art of d. (ಮುಷ್ಟಿ ಯುದ್ಧ, ಕತ್ತಿವರಿಸೆ, ಮೊ. ದ) ಆತ್ಮರಕ್ಷಣ ವಿದ್ಯೆ]. (ಸೈನ್ಯ ; ಬ. ವ. ದಲ್ಲಿ) ರಕ್ಷಣೆ ; ದುರ್ಗ ; ಕೋಟೆ (Line of d. ರಕ್ಷಣ ದುರ್ಗದ ಸಾಲು). ಕಾಪಾಡತಕ್ಕದ್ದು ; ರಕ್ಷಿಸತಕ್ಕದ್ದು ; ರಕ್ಷಕ. ಸಮರ್ಥನೆ ; ಸರಿದೋರಿಸುವುದು ; ಸಮರ್ಥಿಸುವ ಭಾಷಣ, ಬರಹ ; ಉತ್ತರ ; ಸಮಾಧಾನ. (ನ್ಯಾ. ಶಾ.) ಅಪರಾಧಿ ಮಾಡುವ ನಿರಾಕರಣೆ, ಖಂಡನೆ ; ಪ್ರತಿವಾದ ; ಪ್ರತಿವಾದಿಯ ಪರದ ನ್ಯಾಯ ವಾದಿ(ಗಳು). Defence of the Realm Act (ಸಂಕ್ಷಿಪ್ತ : D. O. R. A. ; ಹಾಸ್ಯವಾಗಿ Dora) (ಕಳೆದ ಮಹಾಯುದ್ಧದಲ್ಲಿ ರಾಜ್ಯ ರಕ್ಷಣೆಗಾಗಿ ಸರ್ಕಾರಕ್ಕೆ ವಿಸ್ತಾರವಾದ ಅಧಿಕಾರಕೊಡಲು ಇಂಗ್ಲೆಂಡಿನಲ್ಲಿ ಏರ್ಪಟ್ಟ ೧೯೧೪ನೆಯ ಆಗಸ್ಟಿನ) ದೇಶರಕ್ಷಣ ಶಾಸನ. **Defénceless** (ಗು.) ; **Defénceleslly** (ಕ್ರಿ. ವಿ.) ; **Defénceleslness** (ನಾ.) ; **Defénd** (ಕ್ರಿ.) (ಪ್ರಾಚೀ. ಪ್ರ.) ತಪ್ಪಿಸು ; ನಿವಾರಿಸು ; ಪರಿಹರಿಸು [ಈಗ, God d. ! (ದೇವರು ತಪ್ಪಿಸಲಿ !) ಎಂಬ ಪ್ರಯೋಗದಲ್ಲಿ ಮಾತ್ರ]. (ಮೇರೆಬೀಳುವುದನ್ನು, ಆಕ್ರಮಣವನ್ನು) ತಡೆ ; ಕಾಯಿ ; ಕಾಪಿಡು ; ಕಾಪಾಡು ; ರಕ್ಷಿಸು (*Against*, *from* ಉಪ. ದೊಡನೆ). (ವಾದದಿಂದ) ಸಮರ್ಥನೆ ಮಾಡು ; ಉತ್ತರ, ಸಮಾಧಾನ, ಕೊಡು. ಒಬ್ಬನ ಪರವಾಗಿ, ಒಬ್ಬನ ಪಕ್ಷ ಹಿಡಿದು, ವಾದಿಸು, ಬರೆ. (ನ್ಯಾ. ಶಾ.) ಪ್ರತಿವಾದಿಸು (D. oneself). (ನ್ಯಾಯವಾದಿಯ ವಿಷಯದಲ್ಲಿ) ಪ್ರತಿವಾದಿಯ ಪರವಾಗಿ ವಾದಿಸು ; ಪ್ರತಿವಾದಿಸು. **Defèndant** — ಡಂಟ್ (ನಾ., ಗು.) ಪ್ರತಿವಾದಿ ; ಪ್ರತಿವಾದಿ ಸ್ಥಾನದಲ್ಲಿರುವ (The d. company). **Defénder** (ನಾ.) ರಕ್ಷಕ ; ಪಾಲಕ [D. of the Faith 'ಧರ್ಮ ಸಂರಕ್ಷಕ' ಎಂಬುದು ಇಂಗ್ಲಿಷ್ ದೊರೆಗಳ ಬಿರುದು]. (ಆಟಪಾಟ) ತನ್ನ ಜಯಪ್ರಶಸ್ತಿ, ಮೊ. ಗಳ ರಕ್ಷಕ (ಪ್ರತಿ ಪದ : Challenger ಸ್ಪರ್ಧೆಗೆ ಕರೆಯುವವನು). **Defénsible** (ಗು.) (ಯುದ್ಧದಲ್ಲಾಗಲಿ, ವಾದದಲ್ಲಾಗಲಿ) ಸುಲಭವಾಗಿ ರಕ್ಷಿಸ ಲಾಗುವ, ಸಮರ್ಥಿಸಲಾಗುವ ; ರಕ್ಷಣ ಸಾಧ್ಯ ; ನ್ಯಾಯದೋರಿಸ ಲಾಗುವ ; ಕಾರಣ ಕೊಡಲಾಗುವ. **Defènsibílity** (ನಾ.) ; **Defénsibly** (ಕ್ರಿ. ವಿ.) ; **Defénsive** (ಗು., ನಾ.) ರಕ್ಷಣಾತ್ಮಕ ; ರಕ್ಷಿಸಲಾಗುವ ; ಆತ್ಮ ರಕ್ಷಣದ ; ರಕ್ಷಣೋಪಾಯವಾಗಿರುವ (ಆಕ್ರಮಣಕ್ಕಲ್ಲ). ರಕ್ಷಣೆ [Be, stand, act, on the d. ಆತ್ಮ ರಕ್ಷಣೆ ಮಾಡಿಕೊ]. **Defénsively** (ಕ್ರಿ. ವಿ.)

Defér[1] ಡಿಫರ್ (ಕ್ರಿ.) ಮುಂದಕ್ಕೆ ತಳ್ಳು, ತಳ್ಳಿಡು, ಹಾಕು [Deferred annuity ಪಾವತಿ ಮುಂದಕ್ಕೆ ತಳ್ಳಿದ ವರ್ಷಾಶನ. Deferred pay ನೌಕರಿ ಬಿಟ್ಟಾಗ ಅಥವಾ ಸತ್ತಾಗ ಕೊಡುವುದಕ್ಕಾಗಿ ಹಿಡಿಯುವ ವೇತನ, ಸಂಬಳ (ಮು., ಸಿಪಾಯಿಯದು). Deferred share(s) ಒಂದು ಗೊತ್ತಾದ ದಿನದ ವರೆಗಾಗಲಿ, ಒಂದು ಗೊತ್ತಾದ ಸಂದರ್ಭ ಒದಗುವ ವರೆಗಾಗಲಿ, ಕಡಮೆಯ ಲಾಭಾಂಶ ಕೊಡುವುದನ್ನೊ, ಅಥವಾ ಲಾಭಾಂಶ ಕೊಡದೆಯೇ ಇರುವುದನ್ನೊ ವ್ಯಕ್ತಪಡಿಸಿರುವ (ಒಂದು ಸಂಘದ) ಬಂಡ ವಾಳದ ಪಾಲು(ಗಳು) : ಲಾಭ ತಳ್ಳಿಟ್ಟ ಪಾಲು(ಗಳು)]. ಕಾಲ ತಳ್ಳು ; ಕಾಲಹರಣ ಮಾಡು ; ವಿಳಂಬ ಮಾಡು. **Defèrment** (ನಾ.)

Defér[2] ಡಿಫರ್ (ಕ್ರಿ. ಸಕ.) (ಅಭಿಪ್ರಾಯದಲ್ಲಾಗಲಿ ಕಾರ್ಯದಲ್ಲಾಗಲಿ ಒಬ್ಬನಿಗೆ) ಮನ್ನಣೆ, ಗೌರವ, ಕೊಡು ; ದಾಕ್ಷಿಣ್ಯ ತೋರು. **Déference** ಡೆಫೆರೆನ್ಸ್ (ನಾ.) (ಬುದ್ಧಿಯಲ್ಲಾಗಲಿ ಅಧಿಕಾರದಲ್ಲಾಗಲಿ ತನಗೆ ಮೇಲ್ಪಟ್ಟವನ ಬುದ್ಧಿವಾದ, ಮೊ. ಗಳಿಗೆ ಕೊಡುವ) ಗೌರವ, ಮನ್ನಣೆ (Pay d. to. In d. to one's opinion ಒಬ್ಬನ ಅಭಿ ಪ್ರಾಯಕ್ಕೆ ಮನ್ನಣೆ ಕೊಡುವುದಕ್ಕಾಗಿ). **Deferéntial** ಡೆಫೆರೆನ್ಷಲ್ (ಗು.) ಮನ್ನಣೆಯ ; ಗೌರವದಿಂದ ಕೂಡಿದ. **Deferéntially** (ಕ್ರಿ. ವಿ.)

Déferent ಡೆಫೆರೆಂಟ್ (ಗು.) (ಶ. ವಿ.) (ದ್ರವ ನಾಳಗಳು, ಮೊ. ಗಳ ವಿಷಯದಲ್ಲಿ) ನಿರ್ದಿಷ್ಟ ಸ್ಥಾನಕ್ಕೆ ಸಾಗಿಸುವ ; ವಾಹಕ. = Deferential (ಅಪೂರ್ವ ಪ್ರಯೋಗ)

Defíance ಡಿಫೈಅನ್ಸ್ (ನಾ.) ಯುದ್ಧಕ್ಕೊ, ಹೇಳಿದ ಮಾತಿನ ಅಥವಾ ಹಿಡಿದ ಪಕ್ಷದ ಸ್ಥಾಪನೆಗೊ, ಪ್ರತಿಭಟಿಸಿ ಕರೆಯುವುದು ; ಪ್ರತಿ ಭಟನೆ ; ಕೆಣಕುವುದು ; ಮಾರ್ಮಲೆತ. ಸ್ಪಷ್ಟವಾದ ಅವಿಧೇಯತೆ ; ಉಲ್ಲಂಘನೆ ; ನಿರ್ಲಕ್ಷ್ಯ (Bid d. to, Set at d. ಪ್ರತಿಭಟಿಸು ; ನಿರ್ಲಕ್ಷಿಸು. In d. of ಪ್ರತಿಭಟಿಸಿ ; ಉಲ್ಲಂಘಿಸಿ ; ನಿರ್ಲಕ್ಷಿಸಿ). **Defíant** (ಗು.) ಸ್ಪಷ್ಟವಾಗಿ ಅವಿಧೇಯತೆ ತೋರುವ ; ಎದುರು ಬೀಳುವ ; ಪ್ರತಿಭಟಿಸುವ ; ನಿರ್ಲಕ್ಷಿಸುವ ; ಸ್ನೇಹ ಸಂಧಾನಗಳನ್ನು ನಿರಾಕರಿಸುವ ; ಉದ್ಧಟ ; ನಂಬದ ; ಸಂಶಯಗ್ರಸ್ತ. **Defíantly** (ಕ್ರಿ. ವಿ.)

Defíciency ಡಿಫಿಷೆನ್ಸಿ (ನಾ.) ಕೊರತೆ ; ನ್ಯೂನತೆ ; ಕೊರೆ ; ಕಡಮೆ ; ಅಪೂರ್ಣತೆ ; ಅಸಮಗ್ರತೆ. (ಒಂದು ಪದಾರ್ಥ, ಮು., ಪರಮಾನ) ಕಡಮೆಬಿದ್ದ ಮೊತ್ತ. **Defícient** — ಷೆಂಟ್ (ಗು.) ಅಸಮಗ್ರ ; ಊನ ; ನ್ಯೂನ ; ಕೊರತೆಯಾದ ; ಸಾಲದ ; (ನಿರ್ದಿಷ್ಟ ಗುಣ) ಇಲ್ಲದ. (ಮೊತ್ತ, ಬಲ, ಮೊ. ಗಳಲ್ಲಿ) ತಕ್ಕಷ್ಟಿಲ್ಲದ. ನ್ಯೂನ ಬುದ್ಧಿಯ ; ಅರೆ ಮರುಳಾದ. **Defíciently** (ಕ್ರಿ. ವಿ.) ; **Déficit** ಡೆ(ಡೀ)ಫಿಸಿಟ್ (ನಾ.) ಮು., ಹಣ ಕಡಮೆಬಿದ್ದ ಮೊತ್ತ ; ಕೊರೆ ; ದೇಣೆಗಿಂತಲೂ ಲೇಣೆ ಕಡಮೆಯಾಗಿರುವುದು ; ತೆರುವುದಕ್ಕಿಂತಲೂ ಬರುವುದು ಕಡಮೆಯಾಗಿರುವುದು ; ಈ ಕಡಮೆಯ ಮೊತ್ತ.

De fíde (L) ಡೀ ಫೈಡಿ (ಗು.) ಆಪ್ತ ವಚನವಾಗಿ ಅಂಗೀಕರಿಸತಕ್ಕ. (ರೋ. ಕ್ಯಾ.) ಧರ್ಮಾಧಿಕಾರ ಸ್ಥಾನದಿಂದ ಅಪೌರುಷೇಯವೆಂದು ಬೋಧಿಸಿದ.

Defiláde ಡಿಫೈಲೇಡ್ (ಕ್ರಿ. ಸಕ., ನಾ.) (ಕೋಟೆಯನ್ನು) ಶತ್ರುಗಳ ಸಾಲುಗುಂಡುಗಳಿಂದ ರಕ್ಷಿಸು(ವುದು) = **Defílement**[1] (ನಾ.)

Defíle[1] ಡಿಫೈಲ್ (ಕ್ರಿ. ಅಕ.), **Défile** ಡೀಫೈಲ್ (ನಾ.) (ಒಬ್ಬನ ಹಿಂದೆ ಒಬ್ಬನಂತೆ) ಉದ್ದಸಾಲಿನಲ್ಲಿ ನಡೆ ; ದಂಡವ್ಯೂಹಗಳಾಗಿ ನಡೆ. ಸೈನಿಕರು ಹೀಗೆ ಉದ್ದಸಾಲಿನಲ್ಲಿ ಮಾತ್ರ ನಡೆಯಲಾಗುವ ಕಿರು ದಾರಿ ; ಇಕ್ಕಟ್ಟುದಾರಿ, ಕಣಿವೆ.

Defíle[2] ಡಿಫೈಲ್ (ಕ್ರಿ. ಸಕ.) ಕೊಳೆ ಮಾಡು ; ಮಾಸು ; ಕರೆಗೊಳಿಸು ; ಮಲಿನ ಮಾಡು ; ಕಳಂಕಿಸು ; ಅಶುದ್ಧ ಮಾಡು ; ಮೈಲಿಗೆ ಮಾಡು ; ಅಪವಿತ್ರ ಮಾಡು ; ಕಲುಷಿತ ಮಾಡು ; ಹೊಲೆಗಲಸು ; ದೂಷಿತ ಮಾಡು. **Defílement**[2] (ನಾ.)

Defíne ಡಿಫೈನ್ (ಕ್ರಿ. ಸಕ.) ಎಲ್ಲೆ, ಮೇರೆ, ಹದ್ದು, ಗೊತ್ತು ಮಾಡು, ನಿರ್ಣಯಿಸು ; ಅವಧಿ ನಿರ್ಧರಿಸು. (ಮು., ರೂಪರೇಖೆಯನ್ನು) ಸ್ಫುಟ ಗೊಳಿಸು, ಸ್ಪಷ್ಟಮಾಡು (Well-defined image ಸ್ಪಷ್ಟವಾಗಿ ಕಾಣುವ ಪ್ರತಿರೂಪ ; ಸ್ಪಷ್ಟ ರೇಖಿತ ಬಿಂಬ. D. one's position ಒಬ್ಬನ ಸ್ಥಾನವನ್ನು, ಸ್ಥಿತಿಯನ್ನು, ಅಭಿಪ್ರಾಯವನ್ನು, ನಿಷ್ಕೃಷ್ಟವಾಗಿ ತಿಳಿಸು). ನಿಷ್ಕೃಷ್ಟವಾಗಿ ಹೇಳು ; ನಿಷ್ಕೃಷ್ಟಾರ್ಥ ಕೊಡು ; ಲಕ್ಷಣ ನಿರೂಪಿಸು. (ಗುಣ, ಧರ್ಮ — ಇವುಗಳ ವಿಷಯದಲ್ಲಿ) ಸಮಗ್ರ ಲಕ್ಷಣ ವಾಗಿರು. **Definable** (ಗು.) ; **Définite** ಡೆಫಿನಿಟ್ (ಗು.) ಗೊತ್ತಾದ, ಸ್ಪಷ್ಟವಾದ, ಎಲ್ಲೆಯುಳ್ಳ ; ನಿರ್ದಿಷ್ಟ ; ನಿಷ್ಕೃಷ್ಟ ; ನಿಯತ ; ಸ್ಪಷ್ಟ ; ಖಚಿತ ; ಖಂಡಿತ ; ನಿರಕು ; ಕರಾರುವಾಕ. (ವ್ಯಾ.) D. inflexions ಜರ್ಮನ್ ಭಾಷೆಯಲ್ಲಿಯೂ ಪ್ರಾಚೀನ ಇಂಗ್ಲಿಷ್ ಭಾಷೆ ಯಲ್ಲಿಯೂ ನಿರ್ದೇಶಕ ಗುಣವಾಚಿಯ ಮತ್ತು ಇಂಥ ಇತರ ಪದಗಳ ಮುಂದೆ ಬರುವ ಗುಣವಾಚಕಗಳು. D. article ನಿರ್ದೇಶಕ ಗುಣವಾಚಿ (ಇಂಗ್ಲಿಷಿನ the ಎಂಬುದು). **Définitely** (ಕ್ರಿ. ವಿ.) ; **Définiteness** (ನಾ.) ; **Definítion** (ನಾ.) ಒಂದು ವಸ್ತುವಿನ ನಿಷ್ಕೃಷ್ಟ ಸ್ವರೂಪ ವನ್ನಾಗಲಿ, ಒಂದು ಪದದ ನಿಷ್ಕೃಷ್ಟಾರ್ಥವನ್ನಾಗಲಿ ಹೇಳುವುದು ; ಲಕ್ಷಣ ನಿರ್ದೇಶ ; ಲಕ್ಷಣ ನಿರೂಪಣೆ ; ಲಕ್ಷಣ. (ರೂಪ ರೇಖೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಪಷ್ಟೀಕರಿಸುವುದು, ಸ್ಪಷ್ಟವಾಗಿರುವುದು ; ಸ್ಪಷ್ಟ ರೂಪತೆ (ಮು., ಲೆನ್ಸಿನಲ್ಲ ಹಾಮುಬಂದ ಬಿಂಬದ ವಿಷಯದಲ್ಲಿ). **Definitive** (ಗು.) ನಿಷ್ಕೃಷ್ಟ ; ನಿರ್ಣೀತ ; ಸ್ಪಷ್ಟ ; ನಿಯತ. (ಉತ್ತರ, ಒಪ್ಪಂದ, ಕೌಲು, ತೀರ್ಪು, ಮೊ. ಗಳ ವಿಷಯದಲ್ಲಿ) ನಿರುಪಾಧಿಕವಾದ, ತೀರ್ಮಾನದ. **Definitively** (ಕ್ರಿ. ವಿ.)

Déflagrate ಡೆಫ್ಲಗ್ರೇಟ್ (ಕ್ರಿ.) ತೀವ್ರ ಜ್ವಾಲೆಯೊಡನೆ ಉರಿದು ಹೋಗು, ಉರಿಸು. **Deflagrátion** (ನಾ.) ; **Déflagrator** (ನಾ.) ತೀವ್ರ ಜ್ವಾಲೆಯನ್ನುಂಟುಮಾಡುವ ಸಲಕರಣೆ (ಮು., ಅತಿ ಶಾಖ ಹುಟ್ಟಿಸಲು ಅಳವಡಿಸಿದ ಪ್ರವಾಹ ವಿದ್ಯುತ್ತಿನ ಸಾಧನ) : ತೀವ್ರಜ್ವಾಲಕ.

Defláte ಡಿಫ್ಲೇಟ್ (ಕ್ರಿ. ಸಕ.) [(ಚಕ್ರದ) ಗಾಳಿತುಂಬಿದ ರಬ್ಬರುಪಟ್ಟೆ, ಮೊ. ಗಳಿಂದ] ಒಳಗಾಳಿ, ಮೊ. ನ್ನು ಹೊರಡಿಸು. (ಚಲಾವಣೆಯ ಹಣದ) ಬೆಲೆ ತಗ್ಗಿಸು. **Deflátion** (ನಾ.) ಚಲಾವಣೆಯ ಬೆಲೆ ತಗ್ಗುವುದು, ತಗ್ಗಿಸುವುದು.

Defléct ಡಿಫ್ಲೆಕ್ಟ್ (ಕ್ರಿ.) ಪಕ್ಕಕ್ಕೆ ಬಾಗು, ಬಾಗಿಸು ; ತಿರುಗು ; ಓಲು ; ಓರೆಯಾಗು ; ಪಥ ತಪ್ಪು, ತಪ್ಪಿಸು ; ನೇರದಾರಿ ಬಿಡು. **Defléctor** (ನಾ.) ಪಥ ತಪ್ಪಿಸುವದು ; ಬಾಗಿಸುವದು [ಉದಾ., ಪಥ ತಪ್ಪಿಸುವ ಅಯಸ್ಕಾಂತ ; (ಕೊಳವಿಯಲ್ಲಿಯ) ವಾಯುಪಥವನ್ನು ಬಾಗಿಸುವ ಅಡ್ಡಪಟ್ಟಿ] ; ಅಪಸಾರಕ. **Defléction, Defléxion** (ನಾ.) ತಿರುವು ; ಬಾಗು ; ಓಲು ; ಜೋಲು (ರೂಪ. ಸಹ). (ವಿದ್ಯುತ್ ಅಥವಾ ಕಾಂತ ಪ್ರಕ್ರಿಯೆಯಲ್ಲಿ) ಕಾಂತಸೂಚಿ ಶೂನ್ಯಸ್ಥಾನ ಬಿಟ್ಟು ತಿರುಗುವ ಓಲು : ಅಪಸಾರ.

Deflówer ಡಿಫ್ಲವರ್ (ಕ್ರಿ. ಸಕ.) ಹೂವು ಕಿತ್ತುಹಾಕು. ಕನ್ಯಾತ್ವವನ್ನು ಕಳೆ, ಹಾಳುಮಾಡು ; (ಹೆಣ್ಣನ್ನು) ಕೆಡಿಸು. ಕೆಡಿಸಿಬಿಡು ; ಭಂಗಮಾಡು. **Deflorátion** ಡೆಫ್ಲೊರೇಷನ್ (ನಾ.) (ಕ್ರಿಯಾರ್ಥಗಳಲ್ಲಿ). ಗ್ರಂಥದ ಸ್ವಾರಸ್ಯ ಭಾಗಗಳ ಸಂಗ್ರಹಣ.

Défluent ಡೆಫ್ಲುಎಂಟ್ (ಗು., ನಾ.) (ಮುಖ್ಯಭಾಗದಿಂದ) ಕೆಳಹರಿಯುವ (ಭಾಗ : ಉದಾ., ನೀರ್ಗಲ್ಲುನದಿಯ ತಳಭಾಗ)

Defórest ಡಿಫಾರೆಸ್ಟ್ (ಕ್ರಿ. ಸಕ.) = Disforest.

Defórm ಡಿಫಾರ್ಮ್ (ಕ್ರಿ. ಸಕ.) ಅಂದಗೆಡಿಸು ; ರೂಪುಗೆಡಿಸು ; ವಿರೂಪ, ಕುರೂಪ, ವಿಕಾರ, ಮಾಡು ; ಆಕಾರ ಕೆಡಿಸು ; ಮುಖ ಕೆಡಿಸು (ಮು., ಭೂ. ಕೃ. ನಲ್ಲಿ). **Deformátion** ಡೀ —(ನಾ.) ರೂಪ ವಿಕೃತಿ ; ಕುರೂಪ ; ವಿರೂಪ ; ವಿಕಾರ. ಒಂದು ಪದದ ವಿಕೃತ ರೂಪ (ಉದಾ., Damn ಎಂಬ ಪದಕ್ಕೆ Dang). (ಭೌ. ವಿ.) ಮಾರ್ಪಟ್ಟ ರೂಪ. **Defórmity** ಡಿಫಾರ್ಮಿಟಿ (ನಾ.) ವಿಕೃತ ರೂಪಾಗಿರುವುದು ; ವಿಕಾರ ; ವಿರೂಪ ; ಕುರೂಪ (ದೈಹಿಕ ಅಥವಾ ನೈತಿಕ). ಅಂಗ ವಿಕಾರ.

Defraúd ಡಿಫ್ರಾಡ್ (ಕ್ರಿ. ಸಕ.) ವಂಚಿಸು ; ಮೋಸಗೊಳಿಸು ; (ಒಬ್ಬನ ಪದಾರ್ಥವನ್ನು) ವಂಚನೆಯಿಂದ ಪಡೆ.

Defraý ಡಿಫ್ರೇ (ಕ್ರಿ. ಸಕ.) (ಬೆಲೆಯನ್ನು, ವೆಚ್ಚವನ್ನು) ಕೊಡು, ವಹಿಸು. **Defraýable** (ಗು.) ; **Defraýal** (ನಾ.)

Defróck ಡಿಫ್ರಾಕ್ (ಕ್ರಿ. ಸಕ.) = Unfrock.

Deft ಡೆಫ್ಟ್ (ಗು.) ಕುಶಲ ; ಚತುರ ; ನಿಪುಣ ; ಜಾಣ ; ಪಳಗಿದ ; ಕೈಚಳಕವುಳ್ಳ. **Déftly** (ಕ್ರಿ. ವಿ.) ; **Déftness** (ನಾ.)

Defúnct ಡಿಫಂಕ್ಟ್ (ಗು.) ಸತ್ತ ; ಮೃತ ; ಗತ ; ಜೀವವಳಿದ ; ಈಗ ಇಲ್ಲದ ; ಕೆಲಸ ಮಾಡದಿರುವ. The d. ಸತ್ತವನು(ರು)

Defý ಡಿಫೈ (ಕ್ರಿ. ಸಕ.) (ಪ್ರಾಚೀ. ಪ್ರ., ಹಾಸ್ಯವಾಗಿ) ದ್ವಂದ್ವ ಯುದ್ಧಕ್ಕೆ ಅಥವಾ ಸ್ಪರ್ಧೆಗೆ ಕರೆ (ಕೊಡು). ಮಾಡಿ ತೋರಿಸೆಂದೊ ಪ್ರತಿವಾದಿಸೆಂದೊ ಪ್ರತಿಭಟಿಸಿ, ಮೂದಲಿಸಿ, ಕರೆ ; ನಿರ್ಭಯವಾಗಿ ಪ್ರತಿಭಟಿಸು ; ಎದುರು ಬೀಳು ; ಮಾರ್ಮಲೆ (ಗ್ರಾಂ.) ; ನಿರ್ಲಕ್ಷ್ಯ ಮಾಡು ; ಉಲ್ಲಂಘಿಸು ; ನಿರಾಕರಿಸು ; ವಿರೋಧಿಸು. (ವಸ್ತುಗಳ ವಿಷಯದಲ್ಲಿ) ದಾಟಲಾಗದ ಅಡಚಣೆಗಳನ್ನೊಡ್ಡು ; ಅಸಾಧ್ಯವಾಗಿರು (Defies attack ಆಕ್ರಮಣಕ್ಕೆ ಅಸಾಧ್ಯವಾಗಿದೆ). **Defíer** (ನಾ.)

Degagé (F) ಡೆಗಾಷೆ (ಗು. ; ಸ್ತ್ರೀ. -ee) ಸುಲಭ ; ಸರಳ ; ಸರಾಗ.

Degénerate ಡಿಜೆನೆರೆಟ್ (ಗು., ನಾ.), — ರೇಟ್ (ಕ್ರಿ. ಅಕ.) ಸಹಜ ಗುಣವಳಿದ ; ಕುಲಗೆಟ್ಟ ; ಭ್ರಷ್ಟ ; ಉಛ್ರಾಯ ಸ್ಥಿತಿಯಿಂದ ಅವನತಿ ಹೊಂದಿದ ; ಅವನತ. (ಜೀ. ವಿ.) ಕೀಳು ರೂಪಕ್ಕೆ ಮರಳಿದ. (ನಾ.) — ಮನುಷ್ಯ ಅಥವಾ ಪ್ರಾಣಿ. (ಕ್ರಿ.) ಕುಲಗೆಡು ; ಭ್ರಷ್ಟವಾಗು ; ಅವನತಿ ಹೊಂದು. **Degéneracy** —ರಸಿ (ನಾ.) ; **Degenerátion** — ರೇಷನ್ (ನಾ.) (ಕ್ರಿಯಾರ್ಥಗಳಲ್ಲಿ) ; (ರೂಪ. ಸಹ). (ರೋಗ) ಅಂಗಭಾಗಗಳ ರಚನಾ ವಿಕಾರ ; ಅಂಗ ವಿಕಲತೆ ; ರೋಗ ವಿಕಾರ (ಮು., ಹೃದಯದ ಮೇದೋವಿಕಾರ)

Deglutítion ಡೀಗ್ಲೂಟಿಷನ್ (ನಾ.) ನುಂಗುವುದು (ರೂಪ. ಸಹ)

Degráde ಡಿಗ್ರೇಡ್ (ಕ್ರಿ.) ಕೆಳ ದರ್ಜೆಗೆ ಇಳಿಸು ; ಕೆಳಕ್ಕೆ ಹಾಕು ; (ಶಿಕ್ಷೆಯಾಗಿ) ಅಧಿಕಾರದಿಂದ ತೆಗೆದುಹಾಕು ; ಪದ ಚ್ಯುತನನ್ನಾಗಿ ಮಾಡು. (ಇತರರ ಗಣನೆಯಲ್ಲಿ) ಕೀಳು ಮಾಡು ; ಹೀನಯಿಸು ; ತಗ್ಗಿಸು ; ಅವನತಿಗೆ ತರು ; ಅವನ್ನತಿ ಹೊಂದು ; ನೀತಿಭ್ರಷ್ಟನಾಗು ; ನೀತಿಭ್ರಷ್ಟ ಮಾಡು. (ಜೀ. ವಿ.) ಕೀಳು ರೂಪಕ್ಕೆ ಇಳಿಸು. (ಭೌ. ವಿ.) (ಶಕ್ತಿಯನ್ನು) ದುಷ್ಪರಿವರ್ತನ ರೂಪಕ್ಕೆ ಇಳಿಸು. (ಭೂ. ವಿ.) (ಶಿಲೆಗಳು ಮೊ. ನ್ನು) ಶಿಥಿಲತ್ವಕ್ಕೆ ಇಳಿಸು ; ಸವೆಯಿಸು. **Degráding** (ಗು.) ; **Degradátion** ಡೆಗ್ರೆಡೇಷನ್ (ನಾ.)

Degreé ಡಿಗ್ರೀ (ನಾ.) (ಪ್ರಾಚೀ. ಪ್ರ.) (ಸೋಪಾನ ಪಂಕ್ತಿಯಲ್ಲಿಯ) ಮೆಟ್ಟಿಲು ; ಶ್ರೇಣಿ ; ಪಂಕ್ತಿ ; ಅಂತಸ್ತು. (ಏರುವ ಅಥವಾ ಇಳಿಯುವ ಪರಿಮಾಣದಲ್ಲಿಯ ಅಥವಾ ಪರಿಣಾಮ ಕ್ರಮದಲ್ಲಿಯ) ಅಂತಸ್ತು, ಮಜಲು (By degrees ಮೆಟ್ಟಲು ಮೆಟ್ಟಲಾಗಿ ; ಕ್ರಮೇಣ). ನೇರವಾದ ವಂಶಕ್ರಮದಲ್ಲಿಯ ಒಂದು ಅಂತಸ್ತು, ತಲೆಮಾರು (Prohibited degrees ವಿವಾಹ ಸಂಬಂಧ ಬೆಳಸಲು ಕೇವಲ ಹತ್ತಿರ ಬಾಂಧವ್ಯವೆಂದು ಪರಿಗಣಿಸಿದ ತಲೆಮೊರೆಗಳು). (ಸಮಾಜದಲ್ಲಿಯ ಅಥವಾ ಅಧಿಕಾರದಲ್ಲಿಯ) ಸ್ಥಾನ, ಪದವಿ. ತಾರತಮ್ಯ (Each good in its d. ಪ್ರತಿಯೊಂದೂ ಅದರದರ ಸ್ಥಾನದಲ್ಲಿ ಒಳ್ಳೆಯದೇ). (ಅಧಿಕ್ಯದಲ್ಲಿ ಅಥವಾ ಮೊತ್ತದಲ್ಲಿ) ಒಂದು ಮಟ್ಟ, ದರ್ಜೆ [To a high d. ಬಹು ಮೇಲು ಮಟ್ಟಕ್ಕೆ ; ನಿರತಿಶಯವಾಗಿ. To the last d. ಕೊನೆಯ (ಮಟ್ಟದ) ವರೆಗೂ = To a d. (ಬಳ. ಮಾ.). (ನ್ಯಾ. ಶಾ.) Principal in the first, second, d. ಪ್ರಾಮುಖ್ಯತೆಯಲ್ಲಿ ಮೊದಲನೆಯವನು, ಎರಡನೆಯವನು : ತಕ್ಸೀರು ಮಾಡಿದವನೂ ಅದಕ್ಕೆ ಸಹಾಯ ಮಾಡಿದವನೂ]. ಪಾಂಡಿತ್ಯದ ಅಂಗೀಕಾರ ಸೂಚನೆಯಾಗಿ ಕೊಡುವ ವಿದ್ಯಾಸಂಸ್ಥೆಯ ಪದವಿ : ಪಾಂಡಿತ್ಯ ಪದವಿ (Honorary d. ಪ್ರಸಿದ್ಧ ಪುರುಷರಿಗೆ ಕೊಡುವ ಗೌರವ ಪದವಿ). 'ಫ್ರೀಮೇಸನ್ಸ್' ಎಂಬ (ರಹಸ್ಯ) ಸಂಘದವರ ಒಂದು ಪದವಿ. (ವ್ಯಾ.) ತರ ತಮ ಭಾವ (The positive ನೈಜ ಭಾವ ; The comparative ತರ ಭಾವ ; The superlative ತಮ ಭಾವ). (ಜ್ಯಾ., ಮೊ.) ಕೋನ ಮಾನ ; ಕೋನಾಂಶ (ಸಮಕೋನದ $\frac{1}{90}$ ನೆಯ ಭಾಗ) ; ವರ್ತುಲ ರೇಖಾ ಖಂಡದ ಮಾನ (ವೃತ್ತ ಪರಿಧಿಯ $\frac{1}{360}$ ನೆಯ ಭಾಗ). [D. of latitude ಒಂದು ಅಕ್ಷಾಂಶ (ಇದರ ಪರಿಮಾಣ ೬೯ ಮೈಲಗಳು)]. (ಬೀ. ಗ.) ಒಂದು ಪದಶ್ರೇಣಿಯಲ್ಲಿ ಅಜ್ಞಾತ ಪದಕ್ಕಿರುವ ಮಹತ್ತಮ ಘಾತ ಪರಿಮಾಣ ; ಘಾತ. (ಶಾಖ ಮಾಪಕ) ಯಾವುದಾದರೂ ಮಾನಪದ್ಧತಿಯಲ್ಲಿ ಉಪಯೋಗಿಸುವ ಒಂದು ಅಳತೆಯ ಮಾನ : ಶಾಖಾಂಶ. **Degreéless** (ಗು.)

Degréssion ಡಿಗ್ರೆಷನ್ (ನಾ.) ಇಳಿತ ; ಅವನತಿ. (ಮು., ಒಂದು ಮಿತಿಗೆ ಕೆಳಗಿರುವ ವರಮಾನದಮೇಲೆ ಹಾಕುವ) ತೆರಿಗೆಯ ದರದ ಇಳಿತ.

De haut en bás (F) ಡ ಓ ಟಾಞ್ ಬಾ (ಕ್ರಿ. ವಿ.) ತಲೆಯಿಂದ ಕಾಲವರೆಗೆ ; ಆಪಾದ ಮಸ್ತಕ. ದರ್ಪದಿಂದ ; ಬಿಗುಮಾನದಿಂದ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿರಸ್ಕಾರ ಭಾವದಿಂದ ; ಅತಿ ಗೌರವ ತಾಳಿ ; ಅನುಗ್ರಹ ತೋರಿಸುವ ರೀತಿಯಲ್ಲಿ.

Dehísce ಡಿಹಿಸ್ (ಕ್ರಿ. ಅಕ.) (ಮು., ಸ. ವಿ., ಬೀಜಪಾತ್ರಗಳ ವಿಚಾರ ವಾಗಿ ; ಶ. ವಿ.) ಬಾಯಿ ಬಿಡು ; ಬಿರಿ ; ತೆರೆ ; ಒಡೆ ; ವಿದಳಿಸು. **Dehíscence** (ನಾ.) ; **Dehíscent** (ಗು.)

Dehórtative ಡಿಹಾರ್ಟಟಿವ್ (ಗು., ನಾ.) ಮನ ಮುರಿಯುವ; ಮನಸ್ಸನ್ನು ತಿರುಗಿಸುವ(ಅಥದು) ; ನಿವೃತ್ತಿಕಾರಕ.

Dehúmanize ಡೀಹ್ಯೂಮನೈಸ್ (ಕ್ರಿ. ಸಕ.) ಮನುಷ್ಯತ್ವವನ್ನು ಕಳೆದು ಬಿಡು, ಹಾಳು ಮಾಡು. ಅಪಮಾನುಷ ಮಾಡು.

Dehýdrate ಡೀಹೈಡ್ರೇಟ್ (ಕ್ರಿ. ಸಕ.) (ರ. ವಿ.) (ಒಂದು ಪದಾರ್ಥದಲ್ಲಿಯ) ನೀರನ್ನು ಅಥವಾ ಜಲಾಂಶವನ್ನು ಕಳೆ ; ನಿರ್ಜಲ ಮಾಡು.

Dehýpnotize ಡಿಹಿಪ್ನೋಟೈಸ್ (ಕ್ರಿ. ಸಕ.) ಸಂಮೋಹನ ಸ್ಥಿತಿಯಿಂದ ಎಬ್ಬಿಸು, ಎಚ್ಚರಿಸು, ಬಿಡಿಸು ; ಸಂಮೋಹನವನ್ನು ನಿವಾರಣೆಮಾಡು.

Déicide ಡೀಇಸೈಡ್ (ನಾ.) ದೇವತೆಯನ್ನು ಕೊಲ್ಲುವವನು, ಕೊಲ್ಲುವದು : ದೇವ ಘಾತ(ಕ)

Deíctic, Deíktic ಡೈಕ್ಟಿಕ್ (ಗು.) (ಭಾ. ಶಾ., ವ್ಯಾ.) ನಿದರ್ಶಕ ; ನಿರ್ದೇಶಕ. (ತರ್ಕ) ಪ್ರತ್ಯಕ್ಷ ಪ್ರಮಾಣದ ; ಸಾಕ್ಷಾತ್ತಾಗಿ ಸಾಧಿಸುವ.

Déiform ಡೀಇಫಾರ್ಮ್ (ಗು.) ರೂಪದಲ್ಲೂ ಸ್ವಭಾವದಲ್ಲೂ ದೇವರಂತಿರುವ : ದೇವ ಸದೃಶ ; ದೇವ ಸ್ವರೂಪಿ.

Déify ಡೀಇಫೈ (ಕ್ರಿ. ಸಕ.) ದೇವರನ್ನಾಗಿ ಮಾಡು ; ದೈವತ್ವ ಕಲ್ಪಿಸು ; ದೇವರೆಂದು ಭಾವಿಸು ; ಆರಾಧಿಸು. **Deificátion** (ನಾ.) ದೈವೀಕರಣ.

Deign ಡೇನ್ (ಕ್ರಿ. ಸಕ.) ಯೋಗ್ಯವೆಂದು, ಉಚಿತವೆಂದು, ತಕ್ಕುದೆಂದು, ಎಣಿಸು. (ಕಾರ್ಯ ಮಾಡಲು, ಉತ್ತರ, ಮೊ. ವನ್ನು ಕೊಡಲು) ಅನುಗ್ರಹಿಸು ; ದೊಡ್ಡಮನಸ್ಸು ಮಾಡು.

Déi grátia (L) ಡೀಇ ಗ್ರೇಷಿಯ (ಕ್ರಿ. ವಿ.) ದೇವರ ದಯದಿಂದ ; ದೈವಾನುಗ್ರಹದಿಂದ ; ದೈವ ಪ್ರಸಾದದಿಂದ.

De íntegro (L) ಡೀ ಇಂಟಿಗ್ರೊ (ಕ್ರಿ. ವಿ.) ಹೊಸದಾಗಿ ; ಮತ್ತೆ.

Déism ಡೀಇಸ್ಮ್ (ನಾ.) (ವೇದದಂಥ) ಅಪೌರುಷೇಯ ವಾಕ್ಕಿನಲ್ಲಿ ನಂಬಿಕೆಯಿಡದೆ ದೇವರಿರುವನೆಂದು ನಂಬುವುದು ; ದೇವಾಸ್ತಿಕ್ಯ ; ದೇವಾಸ್ತಿಕತೆ ; ಪ್ರಕೃತಿಸಿದ್ಧ ಮತ. **Déist** (ನಾ.) — ವವನು ; —ವಾದಿ. **Déistic(al)** (ಗು.)

Déity ಡೀಇಟಿ (ನಾ.) ದೇವತ್ವ ; ದೈವ ಗುಣ ; ದೈವ ಸ್ವಭಾವ. ದೈವ ; ದೇವತೆ. The D. ಸೃಷ್ಟಿಕರ್ತ ; ದೇವರು ; ಪರಮೇಶ್ವರ.

Deject ಡಿಜೆಕ್ಟ್ (ಕ್ರಿ. ಸಕ.) ಖಿನ್ನ ಮಾಡು ; ಕುಗ್ಗಿಸು ; ನಿರುತ್ಸಾಹಗೊಳಿಸು ; ವಿಷಣ್ಣ ಮಾಡು (ಸಾ., ಭೂ. ಕೃ. ನಲ್ಲಿ). **Dejéctedly** (ಕ್ರಿ. ವಿ.) ; **Dejéction**[1] (ನಾ.) ಖಿನ್ನತೆ ; ಮ್ಲಾನತೆ ; ವಿಷಣ್ಣತೆ ; ನಿರುತ್ಸಾಹ ; ಮಂಕು.

Dejécta ಡಿಜೆಕ್ಟ (ನಾ., ಬ. ವ.) (ಮನುಷ್ಯನ ಅಥವಾ ಇತರ ಪ್ರಾಣಿಯ) ಮಲ ; ಅಮೇಧ್ಯ ; ಹೇಲು. **Dejéction**[2] (ನಾ.) (ವೈದ್ಯ) ಮಲ (ವಿಸರ್ಜನೆ) ; ಹೇಲು(ವುದು)

Déjeuner ಡೆಝನೇ (ನಾ.) ಬೆಳಗಿನೂಟ ; ಹೊತ್ತರೂಟ. ಲಘು ಭೋಜನ (ಮು., ಉತ್ಸವ ಸಂಬಂಧದ್ದು)

De júre (L) ಡೀ ಜೂರಿ (ಗು., ಕ್ರಿ. ವಿ.) ಶಾಸನಾನುಸಾರವಾದ ; ನ್ಯಾಯವಾದ ; ಹಕ್ಕಿನ. ನ್ಯಾಯವಾಗಿ ; ಹಕ್ಕಿನಿಂದ [King d. j ; the d.-j. king ನ್ಯಾಯವಾಗಿ ಬಂದ, ಹಕ್ಕಿನಿಂದ ಬಂದ, ದೊರೆ (De facto ಪದದೊಡನೆ ಹೋಲಿಸಿ)]

Delactátion ಡಿಲ್ಯಾಕ್ಟೇಷನ್ (ನಾ.) (ಮಗುವಿಗೆ, ಕರುವಿಗೆ) ಮೊಲೆ ಹಾಲು ತಪ್ಪಿಸುವುದು ; ಮೊಲೆ ಬಿಡಿಸುವುದು. ಹಾಲು ಕೊಡುವುದನ್ನು ಕೃತಕವಾಗಿ ನಿಲ್ಲಿಸುವುದು.

Deláminate ಡಿಲ್ಯಾಮಿನೇಟ್ (ಕ್ರಿ.) (ಜೀ. ವಿ.) ಪ್ರತ್ಯೇಕ ಪದರಗಳಾಗಿ ಸೀಳು. **Delaminátion** (ನಾ.)

Deláte ಡಿಲೇಟ್ (ಕ್ರಿ. ಸಕ.) ದೂರು, ಚಾಡಿ, ಹೇಳು ; ತಪ್ಪು, ದೋಷ, ಹೊರಿಸು ; ಆಪಾದಿಸು. (ತಪ್ಪಿತವನ್ನು) ವರದಿಮಾಡು, ಹರಡು, ಪ್ರಸಿದ್ಧಮಾಡು. **Delátion** (ನಾ.) ; **Delátor** (ನಾ.)

Deláy ಡಿಲೇ (ಕ್ರಿ., ನಾ.) ಮುಂದಕ್ಕೆ ಹಾಕು(ವುದು) ; ತಳ್ಳಿಡು(ವುದು); ಸದ್ಯದ ವಿಚಾರಕ್ಕಿಡದಿರು(ವುದು) ; ಸಾವಕಾಶ (ಮಾಡು) ; ಹೊತ್ತು ಮಾಡು(ವುದು) ; ತಡ (ಮಾಡು) ; ತಳುವು (ಗ್ರಾಂ.) ; ತಾಮಸ ಮಾಡು(ವುದು) ; ಆಲಸ್ಯ (ಮಾಡು) ; ತಡವಾಗು(ವುದು) ; ಕಾಲಹರಣ (ಮಾಡು) ; ಕಾಯಿ ; ಅಡಚಣೆ (ಮಾಡು) ; ಪ್ರತಿಬಂಧ (ಒಡ್ಡು)

Del crédere (It.) ಡೆಲ್ ಕ್ರೇಡೆರೇ (ಗು., ಕ್ರಿ. ವಿ., ನಾ.) (ವ್ಯಾಪಾರ) (ಗಿರಾಕಿ ಖಾತರಿಯೆಂದು ಹೇಳುವ ವ್ಯಾಪಾರಿಪ್ರತಿನಿಧಿಯ) ಭರವಸೆಯ ಮೇಲೆ ; ಈ ಭರವಸೆಗಾಗಿ ಕೊಡಬೇಕಾದ ರುಸುಮು, ದಳ್ಳಾಳಿ.

Déle ಡೀಲಿ (ವಿಧಿ ರೂಪ) (ಮುದ್ರಣ ಸೂಚನೆ. ಸಂಕ್ಷಿಪ್ತ ; d., ℊ) (ಗುರುತು ಮಾಡಿದ ಅಕ್ಷರ, ಪದ, ವಾಕ್ಯ, ಮೊ. ನ್ನು) ತೆಗೆದುಹಾಕು, ಬಿಟ್ಟುಬಿಡು.

Deléctable ಡಿಲೆಕ್ಟಬ್ಲ್ (ಗು.) (ಪ್ರಾಚೀ. ಪ್ರ., ಕಾವ್ಯ) ಉಲ್ಲಾಸಕರ ; ಸುಖಕರ ; ಆಪ್ಯಾಯಮಾನ ; ಮನೋರಂಜಕ ; ಹರ್ಷ ಕೊಡುವ. **Delectátion** ಡೀ — (ನಾ.) (ಸಾ., For one's d. ಆತ್ಮ ಸಂತೋಷಕ್ಕಾಗಿ)

Deléctus ಡಿಲೆಕ್ಟಸ್ (ನಾ.) (ಪಾಠಶಾಲೆಯ ಉಪಯೋಗಕ್ಕಾಗಿ) ಆರಿಸಿದ ಗ್ರಂಥಭಾಗಗಳುಳ್ಳ ಪಠ್ಯಪುಸ್ತಕ : ಗ್ರಂಥ ಸಂಕಲನ.

Délegacy. **Delegate** ನೋಡಿ.

Délegate ಡೆಲಿಗೆಟ್ (ನಾ.), — ಗೇಟ್ (ಕ್ರಿ. ಸಕ.) ಪ್ರತಿನಿಧಿ ; ಪ್ರತಿ ನಿಯುಕ್ತ ; ನಿಯೋಗಿ ; ಸಂಮೇಳನಕ್ಕೆ ಒಂದು ಸಂಘದ ಪರವಾಗಿ ಆಯ್ದು ಕಳುಹಿಸಿದ ಪ್ರತಿನಿಧಿ. (ಕ್ರಿ.) (ಒಬ್ಬನನ್ನು) ನಿಯೋಜಿಸು ; ಪ್ರತಿನಿಧಿಯಾಗಿ ಕಳುಹಿಸು. (ಅಧಿಕಾರ, ಮೊ. ನ್ನು ಪ್ರತಿನಿಧಿಗೆ) ವಹಿಸು. **Délegacy** — ಗಸಿ (ನಾ.) ಅಧಿಕಾರವನ್ನು (ಒಬ್ಬನಿಗೆ) ವಹಿಸಿಬಿಡುವ ಪದ್ಧತಿ ; ಪ್ರತಿನಿಧಿಯಾಗಿ ನಿಯಮಿಸುವುದು ; ಪ್ರಾತಿನಿಧ್ಯ. ಪ್ರತಿನಿಧಿಗಳು. **Delegátion** — ಗೇಷನ್ (ನಾ.) ನಿಯೋಗಿಗೆ ಅಧಿಕಾರವನ್ನು ವಹಿಸಿ ಕೊಡುವುದು ; ಪ್ರತಿನಿಯೋಜನೆ. ಪ್ರತಿನಿಧಿಗಳು.

Deléte ಡಿಲೀಟ್ (ಕ್ರಿ. ಸಕ.) (ಅಕ್ಷರ, ಪದ, ವಾಕ್ಯ, ಮೊ. ನ್ನು) ಹೊಡೆದು ಹಾಕು ; ತೊಡೆದುಹಾಕು ; ತೆಗೆದುಹಾಕು ; ಬಿಟ್ಟುಬಿಡು (ರೂಪ. ಸಹ). **Deletion** (ನಾ.)

Deletérious ಡೆಲಿಟೀರಿಯಸ್ (ಗು.) ದೇಹಕ್ಕೆ ಕೆಡುಕುಮಾಡುವ ; ಹಾನಿಕರ (ರೂಪ. ಸಹ). **Deletériously** (ಕ್ರಿ. ವಿ.)

Delíberate ಡಿಲಿಬೆರೆಟ್ (ಗು.), — ರೇಟ್ (ಕ್ರಿ.) ಉದ್ದೇಶ ಪೂರ್ವಕ ; ಬುದ್ಧಿ ಪೂರ್ವಕ ; ತಿಳಿದು ಮಾಡಿದ ; ಬೇಕೆಂದು ಮಾಡಿದ. (ಆವೇಗ ಪೂರ್ವಕವಾಗಲ್ಲದೆ) ಯೋಚಿಸಿ ಮಾಡಿದ, ಸಾವಧಾನದ ; ತೀರ್ಮಾನಕ್ಕೆ ಬರಲು ಸಾವಕಾಶ ಮಾಡುವ ; ಜಾಗರೂಕತೆಯುಳ್ಳ ; (ಆತುರ ಪಡದೆ) ಸಾವಕಾಶವಾಗಿ ಮಾಡಿದ (ಚಲನೆ, ಮೊ.). (ಕ್ರಿ.) ಆಲೋಚನೆ ಮಾಡು ; ಸಾವಧಾನವಾಗಿ ಯೋಚಿಸು. ಅಭಿಪ್ರಾಯ, ಸಲಹೆ, ತೆಗೆದುಕೊ ; ವಿಚಾರ ಮಾಡು ; ಚರ್ಚಿಸು. **Delíberately** (ಕ್ರಿ. ವಿ.) ; **Delíberateness** (ನಾ.) ; **Deliberátion** (ನಾ.) ಮನಸ್ಸಿನಲ್ಲಿ ತೂಕಮಾಡುವುದು ; ಜಾಗರೂಕತೆ ; ಎಚ್ಚರಿಕೆ ; ಸಾವಧಾನವಾಗಿ ವಿಚಾರಮಾಡುವುದು. ಆಲೋಚನೆ ; ಮಂತ್ರಣ ; ವಿಚಾರ. ಪರವಾಗಿಯೂ ಪ್ರತಿಯಾಗಿಯೂ ಹೇಳಬಹುದಾದ ಕಾರಣಗಳ ಚರ್ಚೆ. ಜೋಕೆ ; ಆತುರ ಪಡದೆ ಇರುವುದು. ಚಲನೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾವಕಾಶ, ನಿಧಾನ. **Delíberative** — ರೆಟಿವ್ (ಗು.) ಆಲೋಚಕ ; ಚರ್ಚೆಮಾಡುವುದಕ್ಕಾಗಿ ನಿಯಮಿಸಿದ ; ಮಂತ್ರಣದ (D. assembly ಆಲೋಚನ ಸಭೆ ; ಮಂತ್ರಣ ಸಭೆ. D. functions ಚರ್ಚೆಮಾಡುವ, ಸಲಹೆ ಕೊಡುವ, ಅಧಿಕಾರ, ಕರ್ತವ್ಯ). **Delíberatively** (ಕ್ರಿ. ವಿ.)

Délicacy ಡೆಲಿಕಸಿ (ನಾ.) (ರಚನೆಯ) ನಯ ; ಮಾರ್ದವ ; ಲಾಲಿತ್ಯ ; ಲಾವಣ್ಯ ; ಸುಕುಮಾರತೆ ; ಸೂಕ್ಷ್ಮತೆ ; ನಾಜೂಕು ; ಅಶಕ್ತತೆ. ದಾಕ್ಷಿಣ್ಯ ; ವಿನಯ ; ಸೌಜನ್ಯ. ಸ್ವಾರಸ್ಯ ; ಮಾಧುರ್ಯ ; ಸವಿ. ಸವಿಯುಣಿಸು ; ರಸಭಕ್ಷ್ಯ. **Délicate** — ಕೆಟ್ (ಗು.) (ಕಾವ್ಯ) ಆಹ್ಲಾದಕ. ರುಚಿಯಾದ ; ಸವಿಯಾದ ; ಇನಿದಾದ ; ಇಂಪಾದ ; ಮೆಲುಪಾದ. ಸೂಕ್ಷ್ಮ ; ದುರ್ಬಲ. (ರಚನೆ) ನಯವಾದ, ನವಿರಾದ ; ಮೃದು ; ಲಘು ; ತನು ; ಲಲಿತ (ರಚನೆಯ) ; ಕೋಮಲ (ಗುಣವುಳ್ಳ). ಮನ ನೋಯಿಸಲೊಲ್ಲದ ; ಒರಟಿಲ್ಲದ ; ಅಶ್ಲೀಲಕ್ಕೆ ಅಳುಕುವ. ನಾಜೂಕಾದ ; ಸುಲಭವಾಗಿ ಬಾಧೆಗೀಡಾಗುವ, ವ್ಯಾಧಿಗೀಡಾಗುವ. ಸಂದುಕಟ್ಟಿನ ; ವಿಷಮ ಸಂದರ್ಭದ. ತೊಡಕುಗಳುಳ್ಳ. (ವ್ಯಕ್ತಿಗಳು, ಯಂತ್ರಗಳು) ಕೇವಲ ಸೂಕ್ಷ್ಮವಾದ. ಚತುರ ; ಚಳಕದ (A d. touch ಸೂಕ್ಷ್ಮ ಸ್ಪರ್ಶ ; ನಯ ಕೌಶಲ). ದಾಕ್ಷಿಣ್ಯಪರ (ಮು., ಕಾರ್ಯ ವಿಷಯದಲ್ಲಿ). **Délicately** (ಕ್ರಿ. ವಿ.)

Delícious ಡಿಲಿಷಸ್ (ಗು.) ಸವಿಯಾದ ; ರುಚಿಯಾದ ; ಇನಿದಾದ ; ಮಧುರವಾದ ; ರಸವತ್ತಾದ ; ಸ್ವಾರಸ್ಯವಾದ ; ಅಪ್ಯಾಯಮಾನವಾದ ; ಸುಖಕರವಾದ ; ಅಹ್ಲಾದಕರವಾದ. **Delíciously** (ಕ್ರಿ. ವಿ.) ; **Delíciousness** (ನಾ.)

Delíct ಡಿಲಿಕ್ಟ್ (ನಾ.) ನ್ಯಾಯೋಲ್ಲಂಘನೆ ; ಕಾಯಿದೆ ಮುರಿಯುವಿಕೆ ; ಕಾನೂನಿನ ಭಂಗ ; ಅಪರಾಧ ; ತಪ್ಪಿತ (In flagrant d. ಪ್ರತ್ಯಕ್ಷವಾಗಿ ಅಪರಾಧ ಮಾಡುತ್ತಿರುವಲ್ಲಿ)

Delíght ಡಿಲೈಟ್ (ಕ್ರಿ., ನಾ.) ಆನಂದಪಡಿಸು ; ಸಂತೋಷಗೊಳಿಸು ; ಹರ್ಷಪಡಿಸು ; — ಪಡು ; ಹಿಗ್ಗು ; ನಲಿ(ಸು) [I shall be delighted to (ಅಹ್ವಾನವನ್ನು ಒಪ್ಪಿಕೊಳ್ಳುವಲ್ಲಿ) ಬಹಳ ಸಂತೋಷದಿಂದ]. ಮಾಡಲು ಮನಸ್ಸಿರು ; ಆಸಕ್ತನಾಗಿರು. (The books delighted in by the many ಅನೇಕ ಮಂದಿ ಓದಿ ಆನಂದಪಡುವ ಪುಸ್ತಕಗಳು). (ನಾ.) ಆನಂದ ; ಆಮೋದ ; ಹರ್ಷ ; ಸಂತೋಷ ; ನಲಿವು. — ಕೊಡುವ ವಸ್ತು : ಆನಂದ ಕಾರಕ. **Delíghtful** (ಗು.) ; **Delíghtfully** (ಕ್ರಿ. ವಿ.) ; **Delíghtsome** (ಗು.)

Delílah ಡಿಲೈಲ, Da- ಡ- (ನಾ.) ದುಷ್ಪ್ರೇರಕಳು ; ಮಾಯಾಂಗನೆ ; ಮಾಯಾವಿನಿ ; ಮಾಟಗಿತ್ತಿ ; ದ್ರೋಹಿ.

Delímit(ate) ಡಿಲಿಮಿಟ್, — ಟೇಟ್ (ಕ್ರಿ. ಸಕ.) ಹದ್ದುಬಸ್ತು ಗೊತ್ತು ಮಾಡು, ನಿರ್ಣಯಿಸು ; (ಪ್ರಾಂತಿಕ) ಗಡಿ, ಎಲ್ಲೆ, ಮೇರೆ, ಗೊತ್ತು ಮಾಡು ; ಮಿತಿ ಕಲ್ಪಿಸು. **Delimitátion** (ನಾ.)

Delíneate ಡಿಲಿನಿಯೇಟ್ (ಕ್ರಿ. ಸಕ.) ರೇಖನದಿಂದ ಅಥವಾ ವಿವರಣದಿಂದ ತೋರಿಸು ; ರೂಪಿಸು ; ಚಿತ್ರಿಸು ; ರೇಖಿಸು ; ವರ್ಣಿಸು. **Delineátion** (ನಾ.) ; **Delíneator** (ನಾ.)

Delineávit, -verunt (L) (ಡಿಲಿನಿಯೇವಿಟ್, — ವೀರಂಟ್) (ಕ್ರಿ. ; ಸಂಕ್ಷಿಪ್ತ : del.) [ಇಂಥವನು(ರು)] ಇದನ್ನು ರೇಖಿಸಿದನು(ರು)

Delínquency ಡಿಲಿಂಕ್ವೆನ್ಸಿ (ನಾ.) ಕರ್ತವ್ಯ ಲೋಪ ; ಕರ್ತವ್ಯ ಪರಾಙ್ಮುಖತೆ ; ಕರ್ತವ್ಯ ಚ್ಯುತಿ. ತಪ್ಪು ; ದೋಷ ; ಅಪರಾಧ ; ಲೋಪ. ಕೆಟ್ಟ ಕೆಲಸ ; ಅಕಾರ್ಯ ; ದುಷ್ಕಾರ್ಯ. **Delínquent** (ಗು., ನಾ.) ಕರ್ತವ್ಯ ಭ್ರಷ್ಟ(ನಾದ) ; ಕರ್ತವ್ಯ ಚ್ಯುತ ; ದೋಷಿ ; ತಪ್ಪಿತಸ್ಥ ; ಅಪರಾಧಿ.

Deliquésce ಡೆಲಿಕ್ವೆಸ್ (ಕ್ರಿ. ಅಕ.) ದ್ರವವಾಗು ; ಆರ್ದ್ರವಾಗು ; ನೀರಾಗು ; ಕರಗು ; ಕರಗಿಹೋಗು (ರೂಪ. ಸಹ). **Deliquéscent** (ಗು.) (ವಾಯುಮಂಡಲದಿಂದ ನೀರನ್ನು ಹೀರಿ) ಕರಗಿಹೋಗುವ. (ಸ. ವಿ.) ಅನೇಕ ರೆಂಬೆಗಳಾಗಿ ಹರಡಿಕೊಳ್ಳುವ. **Deliquéscence** (ನಾ.) ಕರಗುವುದು ; ದ್ರವಣ ; ದ್ರವ ಸ್ಥಿತಿ ; ದ್ರವ ಪದಾರ್ಥ.

Delírium ಡಿಲಿರಿಯಂ (ನಾ.) ಅಸಂಬದ್ಧವಾದ ಮಾತನ್ನಾಡುವ ಬುದ್ಧಿ ವಿಕಲ್ಪ ; ಸನ್ನಿ ; ಮತಿವಿಭ್ರಮ ; ಚಿತ್ತ ಭ್ರಮೆ ; ಉನ್ಮಾದ ; ಉದ್ರೇಕ. D. tremens (ಸಂಕ್ಷಿಪ್ತ : d. t.) ಅತಿ ಕುಡುಕರಿಗೆ ಬರುವ ಕಂಪ ಸನ್ನಿ : ಮದ್ಯೋನ್ಮಾದ. **Delírious** (ಗು.) ಸನ್ನಿ ಹಿಡಿದ ; ಬುದ್ಧಿ ವಿಕಲ್ಪವಾದ ; ಹುಚ್ಚು ಹಿಡಿದಂತಿರುವ ; ಚಿತ್ತಭ್ರಮೆಯಿಂದ ಅಸಂಬದ್ಧವಾಗಿ ಕೂಗಾಡುವ ; ಉನ್ಮತ್ತ ಪ್ರಲಾಪಿ ; ಹುಚ್ಚು ಹುಚ್ಚಾದ ; ಉನ್ಮತ್ತ ; ಉದ್ರಿಕ್ತ. **Delíriously** (ಕ್ರಿ. ವಿ.)

Delitéscent ಡೆಲಿಟೆಸೆಂಟ್, **Délitescent** ಡೀ— (ಗು.) ಗುಪ್ತ ; ಗೂಢ ; ಪ್ರಚ್ಛನ್ನ ; ಅವ್ಯಕ್ತ ; ಅಡಗಿಕೊಂಡಿರುವ. **Delitéscence** (ನಾ.)

Delíver ಡಿಲಿವರ್ (ಕ್ರಿ. ಸಕ.) ಉದ್ಧರಿಸು ; ಉಳಿಸು ; ರಕ್ಷಿಸು ; ಕಾಪಾಡು. ವಿಮೋಚನೆ ಮಾಡು ; ಬಿಡುಗಡೆ ಮಾಡು ; ಬಿಡಿಸು ; ಪಾರು ಮಾಡು. (ಗರ್ಭ) ಭಾರವಿಳಿಸು ; ಮೈಬಿಟ್ಟು ಕಳೆ. ಹೆರು ; ಹಡೆ ; ಪ್ರಸವಿಸು (ಕರ್ಮಣಿಯಲ್ಲಿ) (ರೂಪ. ಸಹ : Was delivered of a poem ಒಂದು ಕವನ ಹುಟ್ಟಿತು). (ಮು., ಬಹು ಕಾಲ ಮನಸ್ಸಿನಲ್ಲಿಯೇ ಇಟ್ಟುಕೊಂಡಿದ್ದ ಅಭಿಪ್ರಾಯ, ಮೊ. ನ್ನು) (ಭಾಷಣದಲ್ಲಿ) ಹೇಳಿಬಿಟ್ಟು ಹೊರೆಯಿಳಿಸಿಕೊ, ಹೊರಗೆಡಹು. ಬಿಟ್ಟುಕೊಡು ; ಅಧೀನ ಮಾಡು ; ವಶಪಡಿಸು ; ಮತ್ತೊಬ್ಬನಿಗೆ ವಹಿಸಿಬಿಡು. (ಪತ್ರಗಳನ್ನು, ಭಾಂಗಿಗಳನ್ನು, ಕೇಳಿದ್ದ ಸರಕುಗಳನ್ನು) ಅವರವರಿಗೆ ಕೊಡು, ತಲಪಿಸು, ಮುಟ್ಟಿಸು, ಬಟವಾಡೆ ಮಾಡು. [D. the goods (ರೂಪ.) ತನ್ನ ಭಾಗದ ಒಪ್ಪಂದವನ್ನು ನಡಸಿಬಿಡು ; ಮಾತಿನಂತೆ ನಡೆ]. (ಲೆಕ್ಕ) ಒಪ್ಪಿಸು, ಕೊಡು. (ನ್ಯಾ. ಶಾ.) ವಿಧ್ಯುಕ್ತವಾಗಿ ಕೊಟ್ಟುಬಿಡು, ಒಪ್ಪಿಸಿಬಿಡು (ಮು., ಮುದ್ರೆ ಹಾಕಿ ಪರಿಷ್ಕರಿಸಿದ ದಸ್ತೈವಜನ್ನು ಗ್ರಾಹಕನಿಗೆ. Seal and d. ಮುದ್ರೆ ಹಾಕಿ ಒಪ್ಪಿಸಿಬಿಡು). (ಏಟು) ಕೊಡು ; (ಚೆಂಡು) ಎಸೆ. (D. an attack ದಾಳಿಮಾಡು ; ಮೇಲೆ ಬೀಳು ; ಏಟು ಕೊಡು. D. battle ಕಾಳಗ ಕೊಡು). ಹೊರಬಿಡು ; ಹೊರಸೂಸು. ಹೇಳು ; ಪಠಿಸು ; ಭಾಷಣ ಮಾಡು ; ಉಪನ್ಯಾಸ ಕೊಡು (Well-delivered sermon ಸಲಕ್ಷಣವಾಗಿ ಹೇಳಿದ ಧರ್ಮಪ್ರವಚನ). **Delíverable** (ಗು.) ; **Delíverance** (ನಾ.) ಬಿಡುಗಡೆ ; ಉದ್ಧಾರ ; ಮುಕ್ತಿ ; ವಿಮೋಚನೆ. ಒತ್ತಿಹೇಳಿದ, ವಿಧಿವತ್ತಾಗಿ ಹೇಳಿದ, ಅಭಿಪ್ರಾಯ. **Delíverer** (ನಾ.) (ಕ್ರಿಯಾರ್ಥಗಳಲ್ಲಿ) ; ರಕ್ಷಕ ; ವಿಮೋಚಕ ; ತಾರಕ ; ಉದ್ಧಾರಕ ; ತ್ರಾತ. **Delívery** (ನಾ.) ಹೆರಿಗೆ ; ಪ್ರಸವ. ವಹಿಸಿಬಿಡುವುದು. ಅಂಚೆಯ ಕಾಗದಪತ್ರ, ಮೊ. ನ್ನು ಪಾವತಿ ಮಾಡುವುದು : ಅಂಚೆಯ ಬಟವಾಡೆ (The first d. ಮೊದಲನೆಯ ಬಟವಾಡೆ. The two o'clock d. ಎರಡುಗಂಟೆಯ ಬಟವಾಡೆ). (ನ್ಯಾ. ಶಾ.) ಆಸ್ತಿಯನ್ನು ವಿಧಿವತ್ತಾಗಿ ವಹಿಸಿಬಿಡುವುದು ; ಸ್ವಾಧೀನಪಡಿಸುವುದು ; (ಪಾವತಿ ಪಡೆಯುವವನಿಗಾಗಲಿ ಮೂರನೆಯ ಕಕ್ಷಿಗಾಗಲಿ ದಸ್ತೈವಜಿನ) ವರ್ಗ, ವರ್ಗಾವಣೆ. ಒಂದು ಕ್ಷಿಪಣಿಯನ್ನು (ಮು., ಕ್ರಿಕೆಟ್ ಚೆಂಡನ್ನು) ಎಸೆಯುವುದು ; ಎಸೆತ (A high d. ಮೇಲೆಸೆತ). ಸಾಗಿಸುವುದು ; ನಿರ್ಗಮ (D. tube ನಿರ್ಗಮ ನಾಳ ; ಸಾಗು ನಾಳ). (ಭಾಷಣ, ಮೊ. ಗಳ) ವಾಚನ, ಹೇಳಿಕೆ ; ವಾಗ್ಧಾಟಿ ; ವಾಕ್‌ಶೈಲಿ (Its d. took two hours ಅದರ ವಾಚನ ಎರಡು ಗಂಟೆ ಹಿಡಿಯಿತು. It was a telling d. ಮನ ಹಿಡಿಯುವಂತೆ ಮಾಡಿದ ವಾಚನ)

Dell ಡೆಲ್ (ನಾ.) ಸಣ್ಣ ಕಂದರ, ಕಣಿವೆ (ಸಾ., ಮರಗಳಿಂದ ಬಳಸಿದುದು)

Délla Crúscan ಡೆಲ ಕ್ರುಸ್ಕನ್ (ಗು., ನಾ.) 'ಡೆಲ್ಲ ಕ್ರುಸ್ಕ' ಎಂಬ ಫ್ಲಾರೆನ್ಸಿನ ಸಾಹಿತ್ಯ ಸಂಸ್ಥೆಯ ಸದಸ್ಯ. ('ಡೆಲ್ಲ ಕ್ರುಸ್ಕ' ಎಂಬುದು ಇಟ್ಯಾಲಿಯನ್ ಭಾಷೆಯನ್ನು ಶುದ್ಧಿಗೊಳಿಸುವುದಕ್ಕಾಗಿ ಹುಟ್ಟಿದ ಒಂದು ಸಂಘ. ಈ ಸಂಘವು ನಪ್ರಮಾಣವಾದ ಒಂದು ನಿಘಂಟುವನ್ನು ಪ್ರಕಟಿಸಿತು). ಸಾಹಿತ್ಯದಲ್ಲಿ ಕೃತಕ (ಅಸ್ವಾಭಾವಿಕ) ಮಾರ್ಗಗಳನ್ನು ಅನುಸರಿಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವವನು. (೧೮ನೆಯ ಶತಮಾನದ ಅಂತ್ಯದಲ್ಲಿ ಇಂಗ್ಲೆಂಡಿನಲ್ಲಿ ಹುಟ್ಟಿದ್ದ) ಕೃತಕ ಕಾವ್ಯಮಾರ್ಗದ ಅನುಯಾಯಿ.

Délphian ಡೆಲ್ಫಿಯನ್, **Délphic** ಡೆಲ್ಫಿಕ್ (ಗು.) ಗ್ರೀಸಿನಲ್ಲಿಯ 'ಡೆಲ್ಫಿ' ಎಂಬ ಸ್ಥಳದ. ಹಿಂದೆ ಅಲ್ಲಿ ಸುಪ್ರಸಿದ್ಧವಾಗಿದ್ದ ದಿವ್ಯ ಭವಿಷ್ಯದ್ವಾಣಿಯ(ಂಥ). ಗೂಢ ; ಸಂದಿಗ್ಧ ; ರಹಸ್ಯ.

Délta ಡೆಲ್ಟ (ನಾ.) ಗ್ರೀಕ್ ಅಕ್ಷರಮಾಲೆಯ (ಇಂಗ್ಲಿಷಿನ D ಅಕ್ಷರಕ್ಕೆ ಸಾಟಿಯಾದ) ನಾಲ್ಕನೆಯ ಅಕ್ಷರ [ಅದರ ದೊಡ್ಡಕ್ಷರ (Δ) ತ್ರಿಕೋನಾಕಾರವುಳ್ಳದ್ದು]. ನದೀಮುಖದಲ್ಲಿ ಇಂತಹ ತ್ರಿಕೋನಾಕಾರವಾಗಿ ಏರ್ಪಟ್ಟ ಮೆಕ್ಕಲುಭೂಮಿ : ನದೀಮುಖಜ ಭೂಮಿ ; ಕುದುರು. D. metal ತಾಮ್ರ, ಸತು ಮತ್ತು ಅಯೋಮ್ಯಾಂಗನೀಸ್ ಬೆರಸಿ ಮಾಡಿದ ಮಿಶ್ರ ಲೋಹ. D. rays (ರೇಡಿಯಂ, ಮೊ. ಸ್ವಯಂ ಪ್ರಕಾಶ ಪದಾರ್ಥಗಳು ಸೂಸುವ ಮಂದಪ್ರವೇಶನವುಳ್ಳ) 'ಡೆಲ್ಟ' ಕಿರಣಗಳು. **Deltáic** ಡೆಲ್ಟೇಯಿಕ್ (ಗು.) ನದೀ ಮುಖಜ ಭೂಮಿಯ(ಂಥ) ; —ಯಾಗಿ ಏರ್ಪಟ್ಟ. **Déltoid** (ಗು., ನಾ.) ತ್ರಿಕೋನಾಕಾರದ ; ನದೀ ಮುಖಜ ಭೂಮಿಯಂಥ. ಮೇಲ್ತೋಳನ್ನು ಎತ್ತುವ ಭುಜದ ಸ್ನಾಯು (= D. muscle) ; ತ್ರಿಕೋನ ಸ್ನಾಯು.

Delúde ಡಿಲ್ಯೂಡ್ (ಕ್ರಿ. ಸಕ.) ತಪ್ಪುಮಾರ್ಗಕ್ಕೆಳೆ ; ಮೋಸ ಪಡಿಸು ; ವಂಚಿಸು ; ಮರುಳುಗೊಳಿಸು ; ಭ್ರಾಂತಿಗೊಳಿಸು. **Delúsion** —ಝನ್ (ನಾ.) ಮೋಸ ಪಡಿಸುವುದು ; ಮೋಸಹೋಗುವುದು ; ಮೋಸ ; ಭ್ರಮೆ ; ಭ್ರಾಂತಿ ; ಮೋಹ ; ಮಾಯೆ. (ಬುದ್ಧಿಭ್ರಮಣೆಯ ಫಲವಾಗಿ) ವಸ್ತುಗಳ ವಿಷಯದಲ್ಲಿ ತಪ್ಪು ಅಭಿಪ್ರಾಯ. **Delúsional** (ಗು.) ; **Delúsive** ಡಿಲ್ಯೂಸಿವ್ (ಗು.) ಭ್ರಾಂತಿ ಕಾರಕ ; ಮೋಸಗೊಳಿಸುವ; ಮೋಹಗೊಳಿಸುವ ; ಮರುಳು ಮಾಡುವ ; ಆಶಾ ಭಂಜಕ ; ಮಾಯೆಯ. **Delúsively** (ಕ್ರಿ. ವಿ.) ; **Delúsiveness** (ನಾ.)

Déluge ಡೆಲ್ಯೂಜ್ (ನಾ., ಕ್ರಿ. ಸಕ.) ಜಲಪ್ರಳಯ ; ವಿಪ್ಲವ [The D. (ಬೈಬಲ್ಲಿನ) ನೋವ ಎಂಬಾತನ ಕಾಲದ ಮಹಾಪ್ರಳಯ]. ಸುರಿಮಳೆ ; ಮಾತಿನ ಸುರಿಮಳೆ. (ಕ್ರಿ.) ನೆರೆ ಬರು ; ಜಲಪ್ರಳಯ ಮಾಡು (ರೂಪ. ಸಹ)

Delve ಡೆಲ್ವ್ (ಕ್ರಿ., ನಾ.) (ಪ್ರಾಚೀ. ಪ್ರ., ಕಾವ್ಯ, ಪ್ರಾಂತಿಕ) ಅಗೆ ; ತೋಡು. (ರೂಪ.) ಲೇಖನ, ಪತ್ರ, ಮೊ. ನ್ನು ಪರಿಶೋಧಿಸು, ಅನ್ವೇಷಣ ಮಾಡು. (ರಸ್ತೆ, ಮೊ. ಗಳ ವಿಷಯದಲ್ಲಿ) ಥಕ್ಕನೆ ಕೆಳಗಿಳಿ, ಇಳಿಮೋರೆಯಾಗು. (ನಾ.) ಕುಹರ ; ಹಳ್ಳ ; ದೊ(ಡೊ)ಗರು ; ಗುಂಡಿ ; ಗುಳಿ. ಸುಕ್ಕು.

Demágnetize ಡೀಮ್ಯಾಗ್ನೆಟೈಸ್ (ಕ್ರಿ. ಸಕ.) ಕಾಂತಶಕ್ತಿಯನ್ನು ಕಳೆ ; ನಿಷ್ಕಾಂತ ಮಾಡು. **Demágnetizátion** (ನಾ.)

Démagogue ಡೆಮಗಾಗ್ (ನಾ.) ಮಂದಿನಾಯಕ. ಜನಸಾಮಾನ್ಯದ ದುರಾಗ್ರಹವನ್ನೂ ಆಶೆಯನ್ನೂ ಕೆರಳಿಸಿ ಗಲಭೆಮಾಡುವ ರಾಜಕೀಯ ಚಳವಳಿಗಾರ, ಭಾಷಣಕಾರ. **Demagógic** —ಗಾಗಿಕ್, —ಗಾಜಿಕ್ (ಗು.) ; **Démagog(u)ism** —ಗಾಗಿಸ್ಮ್ (ನಾ.) —ನ ವರ್ತನೆ, ನೀತಿ. **Démagogy** —ಗಾಗಿ, —ಗಾಜಿ, —ಗೋಜಿ (ನಾ.)

Demánd ಡಿಮಾಂಡ್ (ನಾ.) ಹಕ್ಕಿನ ಬಲದಮೇಲೆ, ಅಥವಾ ನಿರ್ಬಂಧವಾಗಿ, ಕೇಳಿದ್ದು, ಕೇಳುವುದು ; ಹಕ್ಕುಕೇಳಿಕೆ ; ತಗಾದೆ ; ತಗಾದೆ ಮಾಡಿ ಕೇಳಿದ್ದು. (Payable on d. ಕೇಳಿದ ಕೂಡಲೆ ಕೊಡಬೇಕಾದ). (ಒಂದು ಸರಕಿಗಿರುವ) ಗಿರಾಕಿ. Laws of supply and d. ಸರಕಿನ ಸರಬರಾಯಿಗೂ ಗಿರಾಕಿಗೂ ಇರುವ ಸಂಬಂಧದ ನಿಯಮಗಳು. In d. ಗಿರಾಕಿಯಿರುವ ; —ಇದ್ದು ; ಎಲ್ಲರೂ ಕೋರುವ. There are many demands on my time ನನಗಿರುವ ಕಾಲದಲ್ಲಿ ಎಷ್ಟೋ ಅವಶ್ಯ ವಿಷಯಗಳಿಗೆ ಗಮನ ಕೊಡಬೇಕಾಗಿದೆ ; ನನಗೆ ಜರೂರಾದ ಅನೇಕ ಕೆಲಸಗಳಿವೆ, ಪುರಸತ್ತಿಲ್ಲ.

Demánd (ಕ್ರಿ. ಸಕ.) ಹಕ್ಕುಹಿಡಿದು, ಜರೂರಾಗಿ, ನಿರ್ಬಂಧಪಡಿಸಿ, (ಪದಾರ್ಥವನ್ನು) ಕೇಳು ; ಬಲವಾಗಿ ಕೇಳು ; ತಗಾದೆ ಮಾಡು. ಬೇಕಾಗು ; ಬೇಕಾಗಿರು ; ಅಪೇಕ್ಷಿಸು ; ಅವಶ್ಯಕವಾಗಿರು (Task demands skill ಕೆಲಸಕ್ಕೆ ಕೌಶಲ ಬೇಕು. Piety demands it ಧರ್ಮನಿಷ್ಠೆಗೆ ಅದು ಬೇಕಾಗಿದೆ). ಹೇಳಬೇಕೆಂದು ನಿರ್ಬಂಧಪಡಿಸು ; ಹೇಳೆಂದು ಕೇಳು, ಪ್ರಶ್ನೆಮಾಡು (D. one's business ಅವನಿಗೆ ಏನಾಗಬೇಕೆಂದು ಕೇಳು). **Demándable** (ಗು.) ; **Demándant** (ನಾ.) ಬಲವಂತಮಾಡಿ ಕೇಳುವವನು ; ತಗಾದೆಗಾರ. (ನ್ಯಾ. ಶಾ.) ಸ್ವತ್ತಿನ ವ್ಯಾಜ್ಯದಲ್ಲಿ ವಾದಿ ; (ಸಾ.) ವಾದಿ ; ಹಕ್ಕು ಹೂಡುವವನು.

Demarcátion ಡೀಮಾರ್ಕೇಷನ್ (ನಾ.) ಎಲ್ಲೆ ಗುರುತುಮಾಡುವುದು ; ಮಿತಿ ನಿರ್ದೇಶ (Line of d. ಎಲ್ಲೆಗೆರೆ). **Démarcate** (ಕ್ರಿ. ಸಕ.)

Demárche (F) ಡೆಮಾರ್ಷ್ (ನಾ.) ನಡೆ ; ನಡಗೆ ; ಹೆಜ್ಜೆ. ಕಾರ್ಯಕ್ರಮ ; ಕಾರ್ಯ ರೀತಿ. ರಾಜಕೀಯ ವರ್ತನೆ.

Dematérialize ಡೀಮಟೀರಿಯಲೈಸ್ (ಕ್ರಿ.) ಅಭೌತ, ಅಪಾರ್ಥಿವ, ಮಾಡು ; —ವಾಗು ; ಅಧ್ಯಾತ್ಮಿಕ, ಪಾರಮಾರ್ಥಿಕ, ಮಾಡು ; —ವಾಗು

Demeán[1] ಡಿಮೀನ್ (ಕ್ರಿ., ಸ್ವಕರ್ಮ ವಾಚಕ) D. oneself ವರ್ತಿಸು ; ನಡೆದುಕೊ ; ಆಚರಿಸು. **Demeánour** (ನಾ.) ನಡತೆ ; ವರ್ತನೆ ; ಚರ್ಯೆ.

Demeán[2] ಡಿಮೀನ್ (ಕ್ರಿ. ಸಕ. ; ಸಾ., ಸ್ವಕರ್ಮ ವಾಚಕ) ಹೀನಾಯವಾಗಿ ವರ್ತಿಸು ; ಹೀನಯಿಸಿಕೊಳ್ಳು ; ಕೀಳಾಗಿ ನಡೆ.

Demént ಡಿಮೆಂಟ್ (ಕ್ರಿ. ಸಕ.) ಹುಚ್ಚು ಹಿಡಿಸು ; ಉನ್ಮಾದಗೊಳಿಸು (ಸಾ., ಭೂ. ಕೃ. ನಲ್ಲಿ). **Deméntedly** (ಕ್ರಿ. ವಿ.) ; **Deméntia** ಡಿಮೆನ್ಷಿಯ (ನಾ.) (ವೈದ್ಯ) ಮನೋದೌರ್ಬಲ್ಯದ ಒಂದು ತೆರನಾದ ಉನ್ಮಾದ ; ಚಿತ್ತವೈಕಲ್ಯ.

Demérit ಡಿಮೆರಿಟ್ (ನಾ.) ಅಯೋಗ್ಯತೆ ; ಅವಗುಣ ; ತಪ್ಪು ; ದೋಷ ; ಕುಂದು ; ಕೊರತೆ. **Deméritórious** (ಗು.) ಯೋಗ್ಯತೆಯಿಲ್ಲದ.

Demésne ಡಿಮೇಯ್ನ್, ಡಿಮೀನ್ (ನಾ.) (ನ್ಯಾ. ಶಾ.) (ಸ್ಥಿರಾಸ್ತಿಯನ್ನು) ತನ್ನ ಸ್ವಂತದ್ದಾಗಿ ಪಡೆದಿರುವುದು (Hold in d.) ; (ಸ್ಥಿರಾಸ್ತಿಯ) ಸ್ವಾಧೀನಾನುಭವ ; ಸ್ವಾಧೀನಾನುಭವದ ಸ್ಥಿರಾಸ್ತಿ. (Royal d. ರಾಜನ ಜಮೀನು. State d. ಸರ್ಕಾರದ ಜಮೀನು). ರಾಜನ ಅಥವಾ ರಾಷ್ಟ್ರದ ಆಳಿಕೆಯಲ್ಲಿರುವ ದೇಶ ; ರಾಜ್ಯ. ಸ್ಥಿರಾಸ್ತಿ ; ಭೂಮಿ ಕಾಣಿ. ಪ್ರಾಂತ ; ಪ್ರದೇಶ ; ಕ್ಷೇತ್ರ.

Démi- ಡೆಮಿ- (ಸ. ಪೂ. ಪ.) ಅರೆ ; ಅರ್ಧ ; ಅರ್ಧಾಕೃತಿ ; ಅಸಮಗ್ರ ; ಅಪೂರ್ಣ ; ಖಂಡ. **Démigod** (ನಾ.) ಅರ್ಧದೇವ ; ಉಪದೇವತೆ ; ದೇವಕಲ್ಪ ; ದೇವ ಮಾನವ (ಜಾತ) ; ದೇವಾಂಶ ಸಂಭೂತ ; ದೇವತ್ವ ಪಡೆದ ಮನುಷ್ಯ ; ಕ್ಷುದ್ರ ದೇವತೆ. **Demi-official** (letter) (ಸಂಕ್ಷಿಪ್ತ : D. O.) (ಮು., ಇಂಡಿಯಾ ಸರ್ಕಾರಿ ಖಾತೆಗಳಲ್ಲಿ) ಸರ್ಕಾರಿ ವಿಷಯಗಳನ್ನು ಖಾಸಗಿ ರೂಪದಲ್ಲಿ ಬರೆದ (ಕಾಗದ, ಪತ್ರ)

Démilune ಡೆಮಿಲ್ಯೂನ್ (ನಾ.) ಕೊತ್ತಲದ ಹೊರರಕ್ಷಣೆಯ ಗೋಡೆ, ಮೊ. ವು : ಕೊತ್ತಲದ ಕಾಪು.

Démi-monde (F) ಡೆಮಿಮಾಂಡ್, ಡೆಮಿಮೋಂಡ್ (ನಾ.) ಸಮಾಜದ ಹೊರ ಎಲ್ಲೆಯಲ್ಲಿರುವ ಸ್ತ್ರೀವರ್ಗ ; ಸಂಶಯಾಸ್ಪದವಾದ ನಡತೆಯುಳ್ಳ ಹೆಂಗಸರು ; ಸ್ವೈರಿಣಿಯರು. **Démi-mondaíne** —ಡೇನ್ (ನಾ.) —ಹೆಂಗಸು.

Démi-rep ಡೆಮಿ ರೆಪ್ (ನಾ.) ಸಂಶಯಾಸ್ಪದವಾದ ಶೀಲಸ್ವಭಾವದವಳು ; ಸಂಶಯ ಚಾರಿತ್ರೆ.

Demíse ಡಿಮೈಸ್ (ಕ್ರಿ. ಸಕ., ನಾ.) (ಆಸ್ತಿಯನ್ನು ಅಂತಿಮ ಇಷ್ಟಪತ್ರದಿಂದ ಅಥವಾ ಕರಾರಿನಿಂದ) ಪರಾಧೀನ ಮಾಡು(ವುದು). (ಸಾವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಂದಾಗಲ ತೊರೆತದಿಂದಾಗಲ ಹಕ್ಕು, ಮೊ. ನ್ನು) ಉತ್ತರಾಧಿಕಾರಿಗೆ ವಹಿಸು(ವುದು) (D. of the Crown ಸಿಂಹಾಸನವನ್ನು ಬಿಟ್ಟುಕೊಡುವುದು). ಸಾವು ; ಮರಣ ; ನಿಧನ. **Demísable** (ಗು.)

Demíssion ಡಿಮಿಷನ್ (ನಾ.) ತ್ಯಜಿಸುವುದು ; ವಿಸರ್ಜಿಸುವುದು ; ರಾಜಿನಾಮೆ ಕೊಡುವುದು ; ತೊರೆದುಬಿಡುವುದು ; ತೊರೆಹ ; ಬಿಟ್ಟುಕೊಡುವುದು ; ಪರಿತ್ಯಾಗ. **Demít** ಡಿಮಿಟ್ (ಕ್ರಿ.) ಅಧಿಕಾರ ತ್ಯಾಗ ಮಾಡು ; ರಾಜಿನಾಮೆ ಕೊಡು ; ತ್ಯಜಿಸಿಬಿಡು.

Démiurge ಡೆ(ಡೀ)ಮಿಯರ್ಜ್ (ನಾ.) (ಪ್ಲೇಟೋವಿನ ತತ್ತ್ವಶಾಸ್ತ್ರದಲ್ಲಿ) ಸೃಷ್ಟಿಕರ್ತ. **Demiúrgic** (ಗು.)

Demób ಡಿಮಾಬ್ (ಕ್ರಿ. ಸಕ.) (ಅಸಂ.) Demobilize ಪದದ ಸಂಕ್ಷಿಪ್ತ.

Demóbilize ಡೀಮೋಬಿಲೈಸ್ (ಕ್ರಿ. ಸಕ.) (ಸೇನಾ ದಳಗಳನ್ನು, ಹಡಗುಗಳನ್ನು) ಯುದ್ಧಸಿದ್ಧತೆಯಿಂದ ಬಿಡಿಸು, ಕಳಚು, ಚೆದರಿಸಿಬಿಡು. **Demóbilizátion** (ನಾ.)

Demócracy ಡಿಮಾಕ್ರಸಿ (ನಾ.) ಪ್ರಜಾಯತ್ತ ರಾಜ್ಯ ; ಪ್ರಜೆಗಳು ಸಾಕ್ಷಾತ್ತಾಗಿ ಅಥವಾ ಪ್ರತಿನಿಧಿಗಳ ಮೂಲಕ ನಡಸುವ ರಾಜ್ಯಭಾರ : ಪ್ರಜಾ ಪ್ರಭುತ್ವ ; ಪ್ರಜಾ ಪ್ರತಿನಿಧಿ ಪ್ರಭುತ್ವ. (ಶ್ರೀಮಂತ ವರ್ಗವನ್ನುಳಿದ) ಪ್ರಜಾ ಸಾಮಾನ್ಯ ವರ್ಗ ; ಪ್ರಜಾಸಾಮಾನ್ಯ. **Démocrat** ಡೆಮೊಕ್ರ್ಯಾಟ್ (ನಾ.) ಪ್ರಜಾ ಪ್ರಭುತ್ವ ವಾದಿ ; ಪ್ರಜಾಯತ್ತ ರಾಜ್ಯ ವಾದಿ. **Demócratism** ಡಿಮಾಕ್ರ್ಯಾಟಿಸ್ಮ್ (ನಾ.) ಪ್ರಜಾ ಪ್ರಭುತ್ವ ತತ್ತ್ವ, ಪದ್ಧತಿ. **Democrátic** ಡೆಮೊಕ್ರ್ಯಾಟಿಕ್ (ಗು.) ಪ್ರಜಾ ಪ್ರಭುತ್ವದ ; ಪ್ರಜಾ ಪ್ರಭುತ್ವ ವಾದಿಯಾದ. **Democrátically** (ಕ್ರಿ. ವಿ.) ; **Demócratize** ಡಿಮಾಕ್ರಟೈಸ್ (ಕ್ರಿ.) ; **Demócratizátion** (ನಾ.)

Demócritéan ಡಿಮಾಕ್ರಿಟೀಯನ್ (ಗು.) 'ಡಿಮಾಕ್ರಿಟಸ್' ಎಂಬ ಗ್ರೀಕ್ ತತ್ತ್ವಜ್ಞನ ; ಆತನ ಹಾಸ್ಯಪರತೆಯ ; ಆತನ ಪರಮಾಣು ವಾದದ.

Demogórgon ಡೀಮೊಗಾರ್ಗನ್ (ನಾ.) ಅಧೋ ಲೋಕದ, ಗೂಢ ಸ್ವರೂಪದ ಒಂದು ಭೀಕರ ದೇವತೆ.

Demógraphy ಡಿಮಾಗ್ರಫಿ (ನಾ.) ಜನಪಂಗಡಗಳ ಸ್ಥಿತಿಯನ್ನು ತಿಳಿಸುವ ಅವರ ಜನನ ಮರಣ, ರೋಗ ರುಜಿನಾದಿಗಳ ಲೆಕ್ಕಾಚಾರ ; ಜನಾಂಗ ಸ್ಥಿತಿ ವಿವರಣೆ. **Demógrapher** (ನಾ.) ; **Demográphic** ಡೀಮೊಗ್ರ್ಯಾಫಿಕ್ (ಗು.)

Démoisélle ಡೆಮ್ವಾಸೆಲ್ (ನಾ.) ತರುಣಿ ; ಹುಡುಗಿ ; ಹೆಣ್ಣು. ಒಂದು ಜಾತಿಯ ಕೊಕ್ಕರೆ.

Demólish ಡಿಮಾಲಿಷ್ (ಕ್ರಿ. ಸಕ.) (ಕಟ್ಟಡ, ಸಂಸ್ಥೆ, ತತ್ತ್ವ, ಮೊ. ನ್ನು) ಕೆಡವು, ಉರುಳಿಸು, ನಾಶಪಡಿಸು ; ಹಾಳು ಮಾಡು ; ನಿರ್ಮೂಲ ಮಾಡು ; ನೆಲಸಮ ಮಾಡು ; ಧ್ವಂಸ ಮಾಡು. ತಿಂದುಹಾಕು. **Demolítion** ಡೆ(ಡೀ)ಮೊಲಿಷನ್ (ನಾ.)

Démon, Daé- ಡೀಮನ್ (ನಾ.) ಅತಿಮಾನುಷ ವ್ಯಕ್ತಿ ; ಕ್ಷುದ್ರ ದೇವತೆ ; ಅಸುರ ; ರಾಕ್ಷಸ ; ಭೂತ ; ಪಿಶಾಚಿ ; ದೆವ್ವ (ದೆವ್ವು). ದೈವ ; ಭಾಗ್ಯ ದೇವತೆ. ಅಂತರಾತ್ಮ. ಅಧಿ ದೇವತೆ ; ಅಭಿಮಾನದೇವತೆ. ಕೆಡುಕು ದೈವ ; ಅನಾರ್ಯ ದೇವತೆ ; ಪಾಪ ದೇವತೆ ; ಪಾಪ ಮೂರ್ತಿ ; ಸೈತಾನ. ಕೆಡುಕುಮಾಡುವ ಅತಿಮಾನುಷ ವ್ಯಕ್ತಿ. ಕ್ರೂರ, ಉಗ್ರ, ಭಯಂಕರ, ಹಾನಿಕರ, ನಾಶಕರ, ಪ್ರಚಂಡ, ವ್ಯಕ್ತಿ (D. bowler ಕ್ರಿಕೆಟ್ ಆಟದಲ್ಲಿ ಪ್ರಚಂಡ ಚೆಂಡೆಸೆಗಾರ. Is a d. for work ದೆವ್ವದಂತೆ ಕೆಲಸಮಾಡುವವನು). **Démono-** (ಸ. ಪೂ. ಪ.) ; **Demonólatry** ಡೀಮನಾಲಟ್ರಿ (ನಾ.) ಪಿಶಾಚಾರಾಧನೆ. **Demonólogy** — ರೊಜಿ (ನಾ.) ಭೂತ ವಿದ್ಯೆ ; ಪಿಶಾಚ ವಿದ್ಯೆ ; ಭೂತ, ಪ್ರೇತ, ಮೊ. ಗಳಲ್ಲಿ ನಂಬಿಕೆ. **Demóniac** ಡಿಮೋನಿಆ್ಯಕ್ (ಗು., ನಾ.) ದೆವ್ವ, ಪಿಶಾಚಿ, ಹಿಡಿದ(ವನು) ; ಪಿಶಾಚಿಯಂಥ ; ಅತಿಮಾನುಷ ಶಕ್ತಿಯ ; ಉನ್ಮತ್ತ ; ಅಸುರ ; ಪ್ರಚಂಡ ; ಹುಚ್ಚು ಕೆರಳಿದ. **Demóniacal** ಡೀಮೊನೈಅಕಲ್ (ಗು.) ; **D(a)emónic** ಡಿಮಾನಿಕ್ (ಗು.) = Demoniac ; ಆವೇಶ ಬಂದ ; ಅತಿಮಾನುಷ ಬುದ್ಧಿಯುಳ್ಳ ; — ಪ್ರಚೋದನೆಯುಳ್ಳ. **Démonism** ಡೀಮೊನಿಸ್ಮ್ (ನಾ.) ಭೂತ ಪ್ರೇತಗಳಲ್ಲಿ ನಂಬಿಕೆ. **Démonize** (ಕ್ರಿ. ಸಕ.) ದೆವ್ವವಾಗಿ, ದೆವ್ವದಂತೆ, ಮಾಡು ; ದೆವ್ವವಾಗಿ ತೋರಿಸು.

Demónetize ಡಿಮಾ(ಮ)ನಿಟೈಸ್ (ಕ್ರಿ. ಸಕ.) (ಲೋಹ, ಮೊ. ಗಳ) ನಾಣ್ಯತ್ವ ಕಳೆ ; ಅನಾಣ್ಯ ಮಾಡು.

Demónstrate ಡಿಮಾನ್‌ಸ್ಟ್ರೇಟ್, **Démonstrate** ಡೆಮನ್ — (ಕ್ರಿ.) (ಮನೋಭಾವಗಳು, ಮೊ. ನ್ನು) ಪ್ರದರ್ಶಿಸು, ತೋರಿಸಿಕೊ. ಮಾದರಿಗಳಿಂದ ಅಥವಾ ಪ್ರಯೋಗಗಳಿಂದ ವಿವರಿಸಿ ವ್ಯಕ್ತಪಡಿಸು ; ಪ್ರತ್ಯಕ್ಷ ಮಾಡಿ ತೋರಿಸು ; ನಿದರ್ಶನ ಕೊಡು ; ಪ್ರದರ್ಶಕನಾಗಿ ಪಾಠ ಕಲಿಸು. ಸಿದ್ಧಾಂತಮಾಡಿ ತೋರಿಸು ; ಪ್ರತಿಪಾದಿಸು ; ಸಾಧಿಸು ; ನಿರ್ದೇಶಿಸು. ನಿದರ್ಶನವಾಗಿರು. ಸೇನಾ ಪ್ರದರ್ಶನ ಮಾಡು. ಸಾರ್ವಜನಿಕ ಸಭೆಗೂಡಿ ಅಭಿಪ್ರಾಯ ಪ್ರದರ್ಶನ ಮಾಡು. **Demónstrable** ಡಿಮಾನ್‌ಸ್ಟ್ರಬ್‌ಲ್, **Démonstrable** ಡೆಮನ್ — (ಗು.) ನಿದರ್ಶನ ಸಾಧ್ಯ. **Demónstrabílity** (ನಾ.) ; **Demónstrably** (ಕ್ರಿ. ವಿ.) ; **Demónstrant** ಡಿಮಾನ್‌ಸ್ಟ್ರಂಟ್ (ನಾ.) ಸಾರ್ವಜನಿಕ ಅಭಿಪ್ರಾಯ ಪ್ರದರ್ಶನ ಮಾಡುವವನು. **Demonstrátion** ಡೆಮನ್‌ಸ್ಟ್ರೇಷನ್ (ನಾ.) ಪ್ರದರ್ಶನ ; ನಿದರ್ಶನ (ವಾಗಿರುವ ವಸ್ತು). **Demonstrátional** (ಗು.) ; **Demonstrátionist** (ನಾ.) ಅಭಿಪ್ರಾಯ ಪ್ರದರ್ಶನದಲ್ಲಿ ಭಾಗ ವಹಿಸುವವನು ; ಪ್ರದರ್ಶನ ವಾದಿ. **Demónstrative** ಡಿಮಾನ್‌ಸ್ಟ್ರಟಿವ್ (ಗು., ನಾ.) ನಿದರ್ಶಿಸುವ ; ನಿರ್ದೇಶಕ (ಮು., ವ್ಯಾ. ದಲ್ಲಿ : D. pronoun or adjective, or d. ನಿರ್ದೇಶಕ ಸರ್ವನಾಮ, ಗುಣವಾಚಕ). (ಪ್ರತ್ಯಕ್ಷ) ನಿದರ್ಶಕ ; ಪ್ರತಿಪಾದಕ ; ನಿರ್ಣಾಯಕ ; ನಿರ್ಧಾರಕ. ಮನೋಭಾವಗಳನ್ನು ಹೊರಗೆ ತೋರಿಸಿಕೊಳ್ಳುವ (D. affection ಬಹಿರಾಡಂಬರದ ಪ್ರೀತಿ). **Demónstratively** (ಕ್ರಿ. ವಿ.) ; **Demónstrativeness** (ನಾ.) ; **Démonstrator** ಡೆಮನ್‌ಸ್ಟ್ರೇಟರ್ (ನಾ.) (ಪ್ರತ್ಯಕ್ಷ) ನಿದರ್ಶಕ ; ನಿದರ್ಶಕೋಪಾಧ್ಯಾಯ ; ಶಿಷ್ಯರಿಗೆ ಶಾಸ್ತ್ರಪ್ರಯೋಗವನ್ನು ಕಲಿಸುವ ಶಾಸ್ತ್ರ ವಿಶಾರದನ ಸಹಾಯಕ. ಸಾರ್ವಜನಿಕ ಸಭೆಯಲ್ಲಿ ಅಭಿಪ್ರಾಯ ಪ್ರದರ್ಶನ ಮಾಡುವವನು ; ಪ್ರದರ್ಶಕ.

Demóralize ಡಿಮಾರಲೈಸ್ (ಕ್ರಿ. ಸಕ.) ನೀತಿಗೆಡಿಸು ; ಶೀಲ ಹಾಳು ಮಾಡು ; ಧರ್ಮಭ್ರಷ್ಟ ಮಾಡು. (ಮು., ಸೈನ್ಯದಳಗಳ) ವಿಧೇಯತೆ, ಶಿಸ್ತು, ಒಕ್ಕಟ್ಟು, ಧೈರ್ಯ, ಕಷ್ಟ ಸಹಿಷ್ಣುತೆ, ಮೊ. ಗುಣಗಳನ್ನು ನಾಶ ಮಾಡು. **Demóralizátion** (ನಾ.)

De mórtuis nil nísi bónum (L) ಡೀ ಮಾಟ್ಯೂರ್ಇಸ್ ನಿಲ್ ನಿಸಿ ಬೋನಂ (ವಾಕ್ಯ), ಸತ್ತವರ ವಿಷಯದಲ್ಲಿ ಒಳ್ಳೆಯದನ್ನಲ್ಲದೆ ಬೇರೆ ಮಾತನಾಡಬಾರದು.

Démos ಡೀಮಸ್ (ನಾ.) (ಮನುಷ್ಯತ್ವಾರೋಪಣೆ ಮಾಡಿದ) ಜನತೆ, ಪ್ರಜಾಸಾಮಾನ್ಯ.

Demosthénic ಡೆಮಾಸ್ತೆನಿಕ್ (ಗು.) 'ಡೆಮಾಸ್ತನೀಸ್' ಎಂಬ ಗ್ರೀಕ್ ವಾಗ್ಮಿಯಂಥ, ಅಥವಾ ಆತನ ವಾಗ್ಮಿತೆಯಂಥ. (ಭಾಷಣದ ವಿಷಯದಲ್ಲಿ) ವಾಗ್ಝರಿಯುಳ್ಳ, ದೇಶಾಭಿಮಾನೋದ್ದೀಪಕ, ದೋಷೋದ್ಘಾಟಕ.

Demótic ಡಿಮಾಟಿಕ್ (ಗು.) ಜನತಾ ಪ್ರಿಯ ; ಜನಸಾಮಾನ್ಯದ. (ಪ್ರಾಚೀ. ಶಾ.) ಪ್ರಾಚೀನ ಈಜಿಪ್ಟಿನ ಲಿಪಿಯ ಸುಲಭಮಾಡಿದ ರೂಪದ.

Demúlcent ಡಿಮಲ್ಸೆಂಟ್ (ಗು., ನಾ.) ಶಾಮಕ (ಔಷಧ)

Demúr ಡಿಮರ್ (ಕ್ರಿ ಅಕ., ನಾ.) ತೊಂದರೆ, ಅಡ್ಡಿ, ಹೇಳು ; ತಕರಾರು ಹೂಡು ; ಶಂಕೆಪಡು ; ಆಕ್ಷೇಪಣೆಯೊಡ್ಡು. (ನ್ಯಾ. ಶಾ.) ಪ್ರತಿಪಕ್ಷಿಯ ಹೇಳಿಕೆಯನ್ನು ಆಕ್ಷೇಪಿಸು. (ನಾ.) ಆಕ್ಷೇಪಿಸುವುದು ; ಆಕ್ಷೇಪಣೆ ; ಶಂಕೆ. **Demúrrable** (ಗು.) ಅಡ್ಡಿಯೊಡ್ಡಬಹುದಾದ ; ಆಕ್ಷೇಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡಬಹುದಾದ (ಮು., ನ್ಯಾ. ಶಾ. ದಲ್ಲಿ). **Demúrrant** — ರಂಟ್ (ನಾ.) ಅಡ್ಡಿ ಹೇಳುವವನು ; ಶಂಕಿಸುವವನು ; ಔಚಿತ್ಯ ಪ್ರತಿಭಟನೆ ಮಾಡುವವನು. **Demúrrer** (ನಾ.) ಪ್ರತಿಕಕ್ಷಿಯ ವಾದವನ್ನು ವಸ್ತುತಃ ಒಪ್ಪಿಕೊಂಡರೂ ಅದು ನ್ಯಾಯತಃ ನಿಲ್ಲತಕ್ಕದ್ದಲ್ಲವೆಂದು ಹೂಡುವ ಆಕ್ಷೇಪಣೆ ; ತಕರಾರು.

Demúre ಡಿಮ್ಯೂರ್ (ಗು.) ಶ್ರೀಮದ್ಗಾಂಭೀರ್ಯದ ; ಕೃತಕ ಗಾಂಭೀರ್ಯ ಅಥವಾ ಮರ್ಯಾದೆ ಹೂಡಿದ ; ಕೃತಕ ವಿನಯವುಳ್ಳ ; ವಿನಯಾಡಂಬರದ. ಮಿತ ಭಾಷಣದ; ಲಜ್ಜೆ ನಟಿಸುವ. **Demúrely** (ಕ್ರಿ.ವಿ.) ; **Demúreness** (ನಾ.)

Demúrrage ಡಿಮರೆಜ್ (ನಾ.) ಹಡಗನ್ನು ಬಾಡಿಗೆಗೆ ತೆಗೆದುಕೊಂಡಿರುವವನು ನಿಯತ ಕಾಲದೊಳಗಾಗಿ ಹಡಗಿಗೆ ಸರಕನ್ನು ತುಂಬದೆಯೊ ಹಡಗಿನಿಂದ ಸರಕನ್ನು ಇಳಿಸದೆಯೊ ಹೋದುದಕ್ಕಾಗಿ ತೆರಬೇಕಾದ ದಂಡ. ರೈಲ್ವೆ ವಿಷಯದಲ್ಲೂ ಇದೇ ತೆರದ ದಂಡ : ಸುಸ್ತಿ ಸುಂಕ ; ತಡವು ದಂಡ. ನಿಲ್ಲಿಸಿಬಿಡುವುದು ; ನಿರೋಧ ; ತಡೆ ; ತಡ. ಚಿನ್ನದ ಗಟ್ಟಿಯನ್ನು ನಾಣ್ಯಕ್ಕೊ ಕಾಗದದ ಹಣಕ್ಕೊ ಪರಿವರ್ತಿಸುವಲ್ಲಿ 'ಬ್ಯಾಂಕ್ ಆಫ್ ಇಂಗ್ಲೆಂಡ್' ಎಂಬ ಪ್ರಸಿದ್ಧ ಬ್ಯಾಂಕು ಕಟಾಯಿಸಿಕೊಳ್ಳುವ, ಮುರಿದುಕೊಳ್ಳುವ, ರುಸುಮು : ನಾಣ್ಯ ಸುಂಕ.

Demý ಡಿಮ್ಮೈ (ನಾ. ; ಬ. ವ. -ies ಡಿಮ್ಮೈಸ್) ಬರೆಯುವ ಅಥವಾ ಮುದ್ರಿಸುವ ಕಾಗದದ ವಿಸ್ತಾರದ ಒಂದು ಅಳತೆ : (ಮುದ್ರಣ ಕಾಗದ, $17\frac{1}{2}'' \times 22\frac{1}{2}''$; ಬರೆಯುವ ಕಾಗದ, $15\frac{1}{2}'' \times 20''$). (ಆಕ್ಸ್‌ಫರ್ಡಿನ ಮ್ಯಾಗ್ಡಲೀನ್ ಪ್ರೌಢ ವಿದ್ಯಾಶಾಲೆಯಲ್ಲಿ) ವೇತನ ವಿದ್ಯಾರ್ಥಿ. **Demýship** (ನಾ.) ಈ ವಿದ್ಯಾರ್ಥಿವೇತನ.

Den ಡೆನ್ (ನಾ.) (ಅಡವಿಮೃಗದ) ಇಕ್ಕೆ, ನೆರೆ, ಗುಹೆ, ಗವಿ, ಬಿಲ ; ಕಳ್ಳಕಾಕರರು ಅಡಗಿಕೊಂಡಿರುವ ಸ್ಥಳ. ವಾಸಯೋಗ್ಯವಲ್ಲದ ಸಣ್ಣ ಕೋಣೆ, ಗೂಡು. (ಗಲಭೆಯಿಲ್ಲದಂತೆ ಕೆಲಸಮಾಡಲು ಕುಳಿತುಕೊಳ್ಳುವ) ಏಕಾಂತದ ಕೋಣೆ.

Denárius ಡಿನೇರಿಯಸ್ (ನಾ. ; ಬ. ವ. -rii -ರಿಯೈ) ಪ್ರಾಚೀನ ರೋಮನರ ಚಿನ್ನ ಅಥವಾ ಬೆಳ್ಳಿಯ ಒಂದು ನಾಣ್ಯ (ಬೆಳ್ಳಿಯದು ಸುಮಾರು ೮ ಪೆನಿ ಬೆಲೆ ಬಾಳತಕ್ಕದ್ದು) : ದೀನಾರ. [ಇಂಗ್ಲಿಷಿನ ಪೆನಿ ನಾಣ್ಯದ ಸಂಕ್ಷಿಪ್ತ ರೂಪ (d) Denarius ಎಂಬ ಪದದಿಂದ ಬಂದಿದೆ]

Dénary ಡೀನರಿ (ಗು.) ಹತ್ತರ ; ದಶ ಮಾನದ.

Denátionalize ಡಿನ್ಯಾಷನಲೈಸ್ (ಕ್ರಿ. ಸಕ.) ಒಂದು ರಾಷ್ಟ್ರಕ್ಕಿರುವ ಪದವಿಯನ್ನಾಗಲಿ ವೈಶಿಷ್ಟ್ಯವನ್ನಾಗಲಿ ಇಲ್ಲದಂತೆ ಮಾಡು. (ಪ್ರಜೆಯನ್ನು) ತನ್ನ ರಾಷ್ಟ್ರದ ಪ್ರಜೆತನದಿಂದ ತಪ್ಪಿಸು. ಜನಾಂಗೀಯ ಧರ್ಮವನ್ನು, ಸಂಸ್ಕೃತಿಯನ್ನು, ಕಳೆದುಕೊ. ಒಂದು ಸಂಸ್ಥೆ ರಾಷ್ಟ್ರೀಯ ಆಸ್ತಿಯಾಗಿರುವ ಸ್ಥಿತಿಯನ್ನು ತಪ್ಪಿಸು ; ರಾಷ್ಟ್ರತ್ವ ಕಳೆ. **Denátionalizátion** (ನಾ.)

Denáturalize ಡಿನ್ಯಾಚ್ಯು(ಚ)ರಲೈಸ್ (ಕ್ರಿ. ಸಕ.) ಸ್ವಭಾವವನ್ನು ಬದಲಾಯಿಸು ; ಅಸ್ವಾಭಾವಿಕ ಮಾಡು. ಪ್ರಜೆತನವನ್ನು ಅಥವಾ ರಾಷ್ಟ್ರೀಯತೆಯನ್ನು ತಪ್ಪಿಸು (ಸಾ., ಸ್ವಕರ್ಮ ವಾಚಕವಾಗಿ). **Denáturalizátion** (ನಾ.) ; **Denáture** ಡಿನೇಟ್ಯು(ಚ)ರ್ (ಕ್ರಿ. ಸಕ.) (ಮು., ತೇ ಎಲೆ, ಮದ್ಯಸಾರ, ಮೊ. ನ್ನು ಬೆರಕೆಯಿಂದ) ಸ್ವಭಾವ ಬದಲಾಯಿಸು, ಮುಖ್ಯ ಗುಣ ಬದಲಾಯಿಸು ; ಗುಣ ಕೆಡಿಸು. **Denáturant** ಡಿನ್ಯಾಚ್ಯುರಂಟ್ (ನಾ.) ಸ್ವಭಾವ ಕಳೆಯುವುದಕ್ಕಾಗಿ ಉಪಯೋಗಿಸುವ ಪದಾರ್ಥ ; ಗುಣಾಪಹಾರಕ.

Déndrite ಡೆಂಡ್ರೈಟ್ (ನಾ.) ವೃಕ್ಷಾಕೃತಿಯ ಅಥವಾ ಶೈವಲಾಕೃತಿಯ ರೇಖೆಗಳು(ಳ್ಳ ಕಲ್ಲು ಅಥವಾ ಖನಿಜ) : ಸಸ್ಯಾಂಕನ (ಶಿಲೆ). **Dendrític** ಡೆಂಡ್ರಿಟಿಕ್ (ಗು.)

Dendr(o)-, -i- (ಸ. ಪೂ. ಪ.) ವೃಕ್ಷ —. **Déndriform** ಡೆಂಡ್ರಿಫಾರ್ಮ್ (ಗು.) ವೃಕ್ಷಾಕಾರದ. **Déndroid** ಡೆಂಡ್ರಾಯ್ಡ್ (ಗು.) ವೃಕ್ಷಕಲ್ಪ. **Dendrólogy** ಡೆಂಡ್ರಾಲೊಜಿ (ನಾ.) ವೃಕ್ಷಶಾಸ್ತ್ರ. **Dendrólogist** (ನಾ.) ವೃಕ್ಷ ಶಾಸ್ತ್ರಜ್ಞ.

Dene[1] ಡೀನ್ (ನಾ.) ಸಮುದ್ರದ ಪಕ್ಕದಲ್ಲಿಯ ಮರಳು ಬಯಲು, ಮಳಲು ದಿಣ್ಣೆ.

Dene[2]. **Dean**[2] ನೋಡಿ.

Denegátion ಡೆನಿಗೇಷನ್ (ನಾ.) (ಪ್ರಾಚೀ. ಪ್ರ.) ಇಲ್ಲವೆನ್ನುವುದು ; ನಿರಾಕರಣೆ.

Déne-hole ಡೀನ್‌ಹೋಲ್, **Dáne-hole** ಡೇನ್ — (ನಾ.) (ಪ್ರಾಚೀ. ಶಾ.) ಸೀಮೆಸುಣ್ಣದ ಗುಡ್ಡಗಳಲ್ಲಿ (ಕೆಲವುವೇಳೆ ೬೦ ಅಡಿ ಆಳದ ತೋಡುಗುಂಡಿಯಿಂದ ಪ್ರವೇಶವುಳ್ಳ) ಕೃತಕ ಗುಹೆ.

Déngue ಡೆಂಗೇ(ಗಿ) (ನಾ.) ಮೈಮೇಲೆ ಗುಳ್ಳೆಗಳೆದ್ದು ಜ್ವರ ಬಂದು ಕೀಲುಗಳಲ್ಲಿ (ಸಂಧಿಗಳಲ್ಲಿ) ತೀವ್ರ ಯಾತನೆಯಾಗುವ ಸೊಂಕುರೋಗ : 'ಡೆಂಗಿ' ಜ್ವರ.

Deníable, etc. **Deny** ನೋಡಿ.

Dénigrate ಡೆನಿಗ್ರೇಟ್ (ಕ್ರಿ. ಸಕ.) ಕಪ್ಪುಮಾಡು ; ಮಸಿ ಹಚ್ಚು ; ಕಳಂಕಿಸು ; ಕರೆಗೋಳಿಸು ; ನಿಂದಿಸು ; ಹೆಸರು ಕೆಡಿಸು. **Dénigrator** (ನಾ.) ; **Denigrátion** (ನಾ.)

Denítrate ಡೀನೈಟ್ರೇಟ್, **Denítrify** ಡೀನೈಟ್ರಿಫೈ (ಕ್ರಿ. ಸಕ.) ನೈಟ್ರಿಕ್ ಅಥವಾ ನೈಟ್ರಸ್ ಆಮ್ಲ ರಹಿತ ಮಾಡು ; ನೈಟ್ರೇಟ್ ಲವಣ ರಹಿತ ಮಾಡು.

Dénizen ಡೆನಿಸೆನ್ (ನಾ., ಕ್ರಿ. ಸಕ.) (ಒಂದು ಸ್ಥಳದ) ಪ್ರಜೆ, ನಿವಾಸಿ. ವಾಸದ ಹಕ್ಕನ್ನೂ ಕೆಲವು ಇತರ ಹಕ್ಕುಗಳನ್ನೂ ಪಡೆದ ಪರದೇಶದವನು : ನೆಲಸಿಗ. ದೇಶರೂಢಿ ಪಡೆದ, ಪಳಗಿದ, ಪರದೇಶದ, ಪದ, ಪ್ರಾಣಿ, ಸಸ್ಯ. (ಕ್ರಿ.) ದೇಶದ ವಾಸಸ್ಥನನ್ನಾಗಿ, ನೆಲಸಿಗನನ್ನಾಗಿ, ಅಂಗೀಕರಿಸು (ಸಾ., ಕರ್ಮಣಿ ಪ್ರಯೋಗ). **Dénizenship** (ನಾ.)

Denóminate ಡಿನಾಮಿನೇಟ್ (ಕ್ರಿ. ಸಕ.) ಹೆಸರು ಕೊಡು ; ಹೆಸರಿಡು ; ಹೆಸರಿಟ್ಟು ಕರೆ, ಹೇಳು. **Denominátion** (ನಾ.) ಹೆಸರು ; ಉಪಾಧಿ (ಮು., ಲಕ್ಷಣ ನಾಮ, ವರ್ಗ ನಾಮ). (ಸಂಖ್ಯೆಗಳು, ತೂಕಗಳು, ಹಣ, ಮೊ. ಗಳಲ್ಲಿ, ಮಾನಗಳ) ವರ್ಗ, ರಾಶಿ (Reduce to the same d. ಒಂದೇ ರಾಶಿಗೆ ತರು. Money of small denominations ಸಣ್ಣ ಮಾನದ ನಾಣ್ಯಗಳು). ನಿರ್ದಿಷ್ಟ ನಾಮವುಳ್ಳ ತರಗತಿ, ಜಾತಿ, ಪಂಗಡ, ಬಗೆ. ಧಾರ್ಮಿಕ ಪಂಗಡ, ಶಾಖೆ, ಸಂಪ್ರದಾಯ ; ಮತ. **Denóminátional** (ಗು.) D. education ಒಂದು ಧರ್ಮದ, ಮತದ, ಸಂಪ್ರದಾಯದ, ತತ್ತ್ವಾನುಸಾರವಾಗಿ ಕೊಡುವ ಶಿಕ್ಷಣ : ಮತಾನುಸಾರ ಶಿಕ್ಷಣ. **Denominátionalize** (ಕ್ರಿ. ಸಕ.) ; **Denóminative** — ನೆಟಿವ್ (ಗು.) ಹೆಸರಾಗಿರುವ ; ಹೆಸರು ಕೊಡುವ ; ಹೆಸರುಳ್ಳ. **Denóminator** — ನೇಟರ್ (ನಾ.) ಭಿನ್ನ ರಾಶಿಯಲ್ಲಿ ಅಡ್ಡಗೆರೆಯ ಕೆಳಗಿನ ಅಂಕಿ : ಛೇದ.

Denotátion ಡಿನೊಟೇಷನ್ (ನಾ.) ಗುರುತುಗಳಿಂದ, ಸಂಕೇತಗಳಿಂದ, ತೋರಿಸುವುದು ; ನಿರ್ದೇಶನ. ಗುರುತು ; ಸೂಚನೆ ; ಉಪಲಕ್ಷಣ ; (ಪದದ) ಅರ್ಥ ; (ತರ್ಕ) ಒಂದು ಪದದ ಅರ್ಥದಲ್ಲಿ ಸೇರಿಸಬಹುದಾದ ಒಟ್ಟು ಪದಾರ್ಥಗಳು ; ಪದವ್ಯಾಪ್ತಿ ; ಪದಪ್ರಸಾರ ; ಅರ್ಥವ್ಯಾಪ್ತಿ. **Denótative** ಡಿನೋಟಟಿವ್ (ಗು.) ನಿರ್ದೇಶಕ ; ಸೂಚಕ. (ತರ್ಕ) ನಿರ್ದಿಷ್ಟ ಉಪಲಕ್ಷಣವಲ್ಲದ (Connotative ಪದದೊಡನೆ ಹೋಲಿಸಿ). **Denótatively** (ಕ್ರಿ. ವಿ.) ; **Denóte** (ಕ್ರಿ. ಸಕ.) ನಿರ್ದೇಶಿಸು ; ಸೂಚಿಸು ; ಗುರುತಾಗಿರು ; ತೋರಿಸು ; ತಿಳಿಸು. ಹೆಸರಾಗಿರು. (ತರ್ಕ) —ಕ್ಕೆ ಹೆಸರಾಗಿರು ; ಜಾತಿವಾಚಕ ವಾಗಿರು (The word 'white' *denotes* all white things, as snow, paper, foam). **Denótement** (ನಾ.) ನಿರ್ದೇಶ ; ಗುರುತು ; ಸೂಚಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Denouément (F) ಡೆನೂಮಾಙ್ (ನಾ.) ಘಟನೆಯನ್ನು, ತೊಡಕುಗಳನ್ನು, ವಿವರಿಸುವುದು, ಬಿಡಿಸುವುದು. (ನಾಟಕ, ಕಾದಂಬರಿ, ವೊ. ಗಳಲ್ಲಿ) ನಿರ್ವಹಣ, ಅಂತ್ಯ ಪರಿಣಾಮ.

Denoúnce ಡಿನೌನ್ಸ್ (ಕ್ರಿ. ಸಕ.) (ಕೇಡನ್ನು, ಪ್ರತೀಕಾರವನ್ನು) ಮುನ್ ಸೂಚಿಸು, ಪ್ರಕಟಿಸು ; ಚಾಡಿ, ದೂರು, ಹೇಳು ; ದೂಷಿಸು. ಬಹಿರಂಗವಾಗಿ ಅಪವಾದ ಹೊರಿಸು ; ಆಪಾದಿಸು ; ದೋಷೋದ್ಘಾಟನೆ ಮಾಡು. (ಯುದ್ಧ ವಿರತಿ, ಕೌಲು, ವೊ. ವು) ಕೊನೆಗಂಡಿದೆಯೆಂದು ಪ್ರಕಟ ಮಾಡು. ನಿರಾಕರಿಸು. **Denoúncement** (ನಾ.) ; **Denunciátion** ಡಿನನ್ಸಿ(ನ್ಷಿ)ಏಷನ್ (ನಾ.) (ಕ್ರಿಯಾರ್ಥಗಳಲ್ಲಿ) ; ಬೈಗುಳು ; ದೂಷಣೆ. **Denúnciative** — ಏಟಿವ್, — ಯಟಿವ್ (ಗು.) ; **Denúnciator** —ಏಟರ್ (ನಾ.) ; **Denúnciatory** (ಗು.)

De nouveaú (F) ಡೆನೂವೋ, **De nóvo** (L) ಡೀನೋವೊ (ಕ್ರಿ. ವಿ.) ಹೊಸದಾಗಿ ; ಮತ್ತೆ ; ಮರಳಿ ; ಪುನಃ.

Dense ಡೆನ್ಸ್ (ಗು.) (ಪದಾರ್ಥ) ಒತ್ತುಗೂಡಿದ ; ದಟ್ಟ ; ಗಾಢ ; ನಿಬಿಡ ; ಸಾಂದ್ರ ; ಸಂದಣಿಸಿದ ; ಇಡಿಕಿರಿದ ; ಸ್ಥೂಲ ; ಮಂದ ; ದಡ್ಡ ; ಮಡ್ಡಿ ; ಮೂರ್ಖ. **Dénsely** (ಕ್ರಿ. ವಿ.) ; **Dénseness** (ನಾ.) ; **Dénsity** (ನಾ.) (ಪದಾರ್ಥದ) ಸಾಂದ್ರತೆ. (ಭೌ. ವಿ.) ಏಕ ಮಾನದ ಗಾತ್ರದಲ್ಲಿರುವ ದ್ರವ್ಯದ ಮೊತ್ತ : ಒಂದು ವಸ್ತುವಿನ - ದ್ರವ್ಯಪರಿಮಾಣಕ್ಕೂ ಘನಪರಿಮಾಣಕ್ಕೂ ಇರುವ ಪ್ರಮಾಣದಿಂದ ಅಳೆದ ಸಾಂದ್ರತೆ. ಗುಂಪುಗೂಡಿದ ಸ್ಥಿತಿ ; ನಿಬಿಡತೆ ; ಸಂದಣಿ. ಮಾಂದ್ಯ ; ದಡ್ಡತನ.

Dent ಡೆಂಟ್ (ನಾ., ಕ್ರಿ. ಸಕ.) (ಮೊಂಡು ಆಯುಧದಿಂದ ಮಾಡಿದಂತೆ) ಕಚ್ಚು (ಮಾಡು)

Déntal ಡೆಂಟಲ್ (ಗು., ನಾ.) ಹಲ್ಲಿನ ; ದಂತ್ಯ ; ದಂತ ವೈದ್ಯದ ; ದಂತದ ಅಭಿಧಮನಿ, ನರ, ವೊ. D. letter or d. ದಂತ್ಯ (ವರ್ಣ) (ಉದಾ., ತವರ್ಗ). **Déntalize** (ಕ್ರಿ. ಸಕ.) ; **Déntate** — ಟೇಟ್ (ಗು.) (ಸ. ವಿ., ಪ್ರಾ. ವಿ.) ಹಲ್ಲಿನಂಥ ಏಣುಗಳುಳ್ಳ ; ಹಲ್ಲುಗಳುಳ್ಳ ; ಸದಂತ ; ದಂತಿತ. **Dentátion** — ಟೇಷನ್ (ನಾ.) ; **Dentáto-** (ಸ. ಪೂ. ಪ.) ದಂತಿತ —. **Dentatoángulate** ಡೆಂಟೇಟೊಆ್ಯಂಗ್ಯುಲೆಟ್ (ಗು.) ದಂತಿತ ಕೋನಗಳುಳ್ಳ. **Dénti-** (ಸ. ಪೂ. ಪ.) ದಂತ —. **Déntiform** ಡೆಂಟಿಫಾರ್ಮ್ (ಗು.) ದಂತಾಕಾರದ. **Dentígerous** — ಜೆರಸ್ (ಗು.) ದಂತ ಧಾರಿ. **Dentilíngual** — ಲಿಂಗ್ವಲ್ (ಗು.) ದಂತ್ಯೋಚ್ಚಾರಣೆಯ. **Dénticle** ಡೆಂಟಿಕ್ಲ್ (ನಾ.) ಸಣ್ಣ ಹಲ್ಲು ; ಸಣ್ಣ ಹಲ್ಲಿನಂಥ ಚಾಚು. **Dentícular** — ಕ್ಯುಲರ್ (ಗು.) ಸಣ್ಣ ಹಲ್ಲಿನಂಥ. **Dentículate** — ಲೆಟ್ (ಗು.), **-lated** — ಲೇಟೆಡ್ (ಗು.) ಸೂಕ್ಷ್ಮ ದಂತಗಳುಳ್ಳ. **Denticulátion** (ನಾ.) ; **Déntifrice** — ಫ್ರಿಸ್ (ನಾ.) ಹಲ್ಲು ತೊಳೆಯುವುದಕ್ಕೆ ಉಪಯೋಗಿಸುವ ಪುಡಿ, ಸರಿ, ವೊ. ವು : ಹಲ್ಲು ಪುಡಿ ; ದಂತಚೂರ್ಣ ; ದಂತಧಾವಕ. **Déntine** ಡೆಂಟಿ(ೀ)ನ್ (ನಾ.) ಹಲ್ಲಿನ ಬಹಳ ಭಾಗವಾಗಿರುವ ಗಡುಸೂ (ಬಿರುಸೂ) ಸಾಂದ್ರವೂ ಆದ ಪದಾರ್ಥ : ದಂತದ್ರವ್ಯ. **Déntist** — ಟಿಸ್ಟ್ (ನಾ.) ದಂತ ವೈದ್ಯ ; — ಚಿಕಿತ್ಸಕ. **Déntistry** (ನಾ.) ದಂತ ವೈದ್ಯ (ಶಾಸ್ತ್ರ). **Dentítion** (ನಾ.) ಹಲ್ಲು ಹುಟ್ಟುವುದು, ಮೊಳೆಯುವುದು, ಬರುವುದು. (ಪ್ರಾಣಿಯಲ್ಲಿ) ಹಲ್ಲು ಅಳವಟ್ಟಿರುವ ರೀತಿ : ದಂತ ವಿನ್ಯಾಸ. **Dénture** ಡೆಂಟ್ಯುರ್ (ನಾ.) (ಸಾ., ಕಟ್ಟಿದ, ಮಾಡಿಸಿದ, ಮಾಟದ) ಹಲ್ಲುಸಾಲು ; ಕೃತಕ ದಂತಶ್ರೇಣಿ.

Denúde ಡಿನ್ಯೂಡ್ (ಕ್ರಿ. ಸಕ.) ಬತ್ತಲೆ ಮಾಡು ; ನಗ್ನ ಮಾಡು. (ಬಟ್ಟೆ ಬರೆ, ಹೊದಿಕೆ, ಸ್ವತ್ತು, ಗುಣ, ಲಕ್ಷಣ, ವೊ. ನ್ನು) ಕಳೆ, ತೆಗೆ, ಇಲ್ಲದಂತೆ ಮಾಡು. (ಭೂ. ವಿ.) ಮೇಲಿರುವುದನ್ನು ತೆಗೆದುಹಾಕಿ (ಶಿಲೆ, ರಚನೆ — ಇವು) ಕಾಣುವಂತೆ ಮಾಡು ; ಮುಸುಕು ಕಳೆ ; ಕೊಚ್ಚಿಹಾಕು. **Denudátion** ಡೆನ್ಯುಡೇಷನ್ (ನಾ.) ಕೊಚ್ಚಿಗೆ ; ಕೃಶ ಮಾಡುವುದು ; ತೇಲಿಹೋಗುವುದು. **Denúdative** ಡಿನ್ಯೂಡಟಿವ್ (ಗು.)

Dený ಡಿನೈ (ಕ್ರಿ. ಸಕ.) ಇಲ್ಲವೆಂದು, ನಿಜವಲ್ಲವೆಂದು, ಹೇಳು ; ಇಲ್ಲವೆನ್ನು ; ಅಲ್ಲವೆನ್ನು ; ನಿರಾಕರಿಸು (D. one's faith ತನ್ನ ಮತದಲ್ಲಿ ತನಗೆ ನಂಬಿಕೆಯಿಲ್ಲವೆಂದು ನಿರಾಕರಿಸು. D. one's leader ಒಬ್ಬನು ತನ್ನ ನಾಯಕನಲ್ಲವೆಂದು ನಿರಾಕರಿಸು. D. one's signature ಸಹಿ ತನ್ನದಲ್ಲವೆಂದು ನಿರಾಕರಿಸು. D. one's word ತಾನು ಹೇಳಲಿಲ್ಲವೆನ್ನು). ಕೊಡುವುದಿಲ್ಲವೆನ್ನು ; ಕೊಡದೆಹೋಗು [This was denied me or to me ಇದನ್ನು ನನಗೆ ಕೊಡುವುದಿಲ್ಲವೆಂದು ಹೇಳಿದರು. D. oneself (ಸುಖ, ಲಾಭ) ತೊರೆ, ವರ್ಜಿಸು ; ಸ್ವಾರ್ಥ ತ್ಯಾಗ ಮಾಡು]. (ನೋಡಬಂದವನಿಗೆ) ಮನೆಯಲ್ಲಿಲ್ಲವೆಂದು ಹೇಳು ; ಭೇಟಿ ಕೊಡಲಾಗುವುದಿಲ್ಲವೆಂದು ಹೇಳು ; ಭೇಟಿ ಕೊಡದಿರು. **Deníable** (ಗು.) ನಿರಾಕರಿಸಬಹುದಾದ. **Deníal** (ನಾ.) ಇಲ್ಲವೆನ್ನುವುದು ; ಅಲ್ಲವೆನ್ನುವುದು ; ನಿರಾಕರಣೆ. (Meet charge with flat d. ಆಪಾದನೆಯನ್ನು ಖಂಡಿತವಾಗಿ ನಿರಾಕರಿಸು). (ಸುಖದ, ಲಾಭದ) ತೊರೆಹ, ವರ್ಜನೆ. ಮಾರು ನುಡಿ ; ಎದುರು ಮಾತು **Deníer** (ನಾ.)

Déodand ಡೀಒಡ್ಯಾಂಡ್ (ನಾ.) (ಚರಿತ್ರೆ) ಒಬ್ಬನ ಸಾವಿಗೆ ಕಾರಣವಾಯಿತೆಂದು ದಾನ, ಧರ್ಮ, ವೊ. ಕ್ಕೆ ಉಪಯೋಗಿಸಲು ಸರ್ಕಾರಕ್ಕೆ ಸೇರಿಸಿಕೊಂಡ ಸ್ವತ್ತು : ದೇವ ದತ್ತಿ.

Déodar ಡೀಒಡಾರ್ (ನಾ.) (ಹಿಮಾಲಯದ) ದೇವದಾರು ಮರ.

Deódorize ಡೀಓಡೊರೈಸ್ (ಕ್ರಿ. ಸಕ.) ವಾಸನೆ, ನಾತ, ಕಳೆ ; ನಿರ್ವಾಸನೆ ಮಾಡು; ನಿರ್ಗಂಧ ಮಾಡು ; ಸೊಂಕು ಕಳೆ. **Deodorizátion** (ನಾ.) ; **Deódorizer** (ನಾ.)

Deontólogy ಡೀಆಂಟಾಲೊಜಿ (ನಾ.) ಕರ್ತವ್ಯ ಶಾಸ್ತ್ರ ; ನೀತಿ ಶಾಸ್ತ್ರ ; ಧರ್ಮ ಶಾಸ್ತ್ರ. **Deontológical** ಡಿಆಂಟೊಲಾಜಿಕಲ್ (ಗು.) ; **Deontólogist** ಡೀಆಂಟಾಲೊಜಿಸ್ಟ್ (ನಾ.)

Déo óptimo máximo (L) ಡೀಯೊ ಆಪ್ಟಿಮೊ ಮ್ಯಕ್ಸಿಮೊ (ವಾಕ್ಯ ಭಾಗ), ಸರ್ವೋತ್ತಮನೂ ಮಹತ್ತಮನೂ ಆದ ದೇವರಿಗೆ (ಅರ್ಪಣೆಗಳಲ್ಲಿ ಪ್ರಯೋಗ)

Déo volénte (L) ಡೀಯೊ ವೊಲೆಂಟಿ (ಕ್ರಿ. ವಿ. ; ಸಂಕ್ಷಿಪ್ತ : D. V.) ದೈವೇಚ್ಛೆಯಿದ್ದರೆ ; ಏನೂ ಅಡ್ಡ ಬಾರದಿದ್ದರೆ.

Depárt ಡಿಪಾರ್ಟ್ (ಕ್ರಿ.) (ಕಾವ್ಯ, ಪ್ರಾಚೀ. ಪ್ರ., ವೊ.) ಹೊರಟು ಹೋಗು ; ಬೀಳ್ಕೊಳ್ಳು ; ಹೊರಡು ; ತೆರಳು ; ಬಿಡು. [ಮು., (ರೈಲ್ವೆ, ವೊ. ಗಳ) ವೇಳಾ ಪಟ್ಟಿಗಳಲ್ಲಿ : Dep. 6-30 a.m. ಹೊರಡುವುದು ಬೆಳಗ್ಗೆ ೬||೦ ಗಂಟೆಗೆ]. ಸಾಯಿ ; ಪರಲೋಕಕ್ಕೆ ತೆರಳು ; ಇಹಲೋಕ ತ್ಯಜಿಸು (D. from life, D. this life ಜೀವ ಬಿಡು). ದಾರಿಬಿಟ್ಟು ಹೋಗು ; ದಾರಿ ತಪ್ಪು ; ಅಡ್ಡ ಮಾರ್ಗ ಹಿಡಿ. ದೂರ ಹೋಗು (D. from received custom ಪದ್ಧತಿ ಬಿಟ್ಟು ನಡೆ ; ಸಂಪ್ರದಾಯ ಬಿಡು). **Depárted** (ಗು., ನಾ.) ಕಳೆದುಹೋದ ; ಗತ ; ಮೃತ ; ಸಂದ [D. greatness ಸಂದ, ಗತ, ಮಹಿಮೆ. The d. ಸತ್ತವನು (ರು) ; ಮೃತ(ರು)]. **Depárture** — ಟ್ಯುರ್, — ಚರ್ (ನಾ.) ಹೊರಡುವುದು. (ನಿಜ, ಆದರ್ಶ ಪ್ರಮಾಣ) ತಪ್ಪಿಹೋಗುವುದು ; ಬಿಟ್ಟುಹೋಗುವುದು ; ಅಪಗಮನ. (ಮು., ರೈಲ್‌ಬಂಡಿಯ) ಹೊರಡಿಕೆ (The d. platform ರೈಲು ಹೊರಡುವ ಜಗಲಿ). ಮಾರ್ಗಾವಲಂಬನ. (New d. ಹೊಸ ಮಾರ್ಗ). (ನಾವೆ.) ಪ್ರಯಾಣದಲ್ಲಿ ಹಡಗು ದಾಟಿರುವ ರೇಖಾಂಶ ವ್ಯತ್ಯಾಸದ ಮೊತ್ತ ; ಅಪಗಮನ.

Depártment ಡಿಪಾರ್ಟ್‌ಮೆಂಟ್ (ನಾ.) (ನಾನಾ ಭಾಗಗಳುಳ್ಳ) ಸಂಕೀರ್ಣ ಸಂಸ್ಥೆಯಲ್ಲಿ ಒಂದು ಪ್ರತ್ಯೇಕ ಭಾಗ ; (ಮು., ಸರ್ಕಾರದಲ್ಲಿ ಅಥವಾ ಪೌರ ಸಂಸ್ಥೆಯಲ್ಲಿ) ಇಲಾಖೆ, ಶಾಖೆ, ಭಾಗ. ಫ್ರಾನ್ಸಿನ ಒಂದು ಆಡಳಿತ ವಿಭಾಗ, ಪ್ರಾಂತ. D. store (ಎಲ್ಲ ತರದ ವಸ್ತುಗಳನ್ನೂ ಒದಗಿಸುವ) ದೊಡ್ಡ ಅಂಗಡಿ : ಸಕಲ ಸರಕಿನ ಮಳಿಗೆ. **Departméntal** ಡೀ — (ಗು.) ; **Departméntally** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Depásture ಡಿಪಾಸ್ಚ್ಯುರ್ (ಕ್ರಿ.) (ದನಕರುಗಳ ವಿಷಯದಲ್ಲಿ) ಹುಲ್ಲುಗಾವಲಿನಲ್ಲಿ ಮೇಯಿ, ಮೇಯಿಸು. (ಜಮೀನಿನ ವಿಷಯದಲ್ಲಿ) ಮೇವಾಗು. **Depásturage** — ರೆಜ್ (ನಾ.) (ದನಕರುಗಳನ್ನು ಜಮೀನಿನಲ್ಲಿ) ಮೇಯಿಸುವುದು, ಮೇಯಿಸುವ ಹಕ್ಕು.

Depaúperate ಡಿಪಾಪೆರೇಟ್ (ಕ್ರಿ. ಸಕ.) ಬಡವಾಗಿಸು ; ಬಡತನಕ್ಕೆ ತರು ; ನಿರ್ಗತಿಕ ಮಾಡು ; ಕ್ಷೀಣ ದೆಸೆಗೆ ತರು ; ಬೆಳೆಯದಂತೆ ಮಾಡು ; ಅವನತಿ ಹೊಂದಿಸು ; (ಶಕ್ತಿ, ಗುಣ, ಮೊ. ನ್ನು) ಕುಗ್ಗಿಸು. **Depauperátion** (ನಾ.)

Depaúperize ಡೀಪಾಪೆರೈಸ್ (ಕ್ರಿ. ಸಕ.) ನಿರ್ಗತಿ ತಪ್ಪಿಸು ; ಬಡತನ ಬಿಡಿಸು ; ದಾರಿದ್ರ್ಯದಿಂದ ಮೇಲೆತ್ತು, ಉದ್ಧರಿಸು.

Depénd ಡಿಪೆಂಡ್ (ಕ್ರಿ. ಅಕ.) (ಕಾವ್ಯ, ಪ್ರಾಚೀ. ಪ್ರ., ಮೊ.) ಜೋಲು ; ನೇಲು ; ನೇತಾಡು ; ತೊಂಗು ; ಇಳಿಬೀಳು ; (ಒಂದರಮೇಲೆ) ನಿಲ್ಲು ; ಅವಲಂಬಿಸಿರು ; ಆಶ್ರಯಿಸು (It depends upon his efforts ಅದು ಅವನ ಪ್ರಯತ್ನಗಳನ್ನವಲಂಬಿಸಿದೆ. She depends upon her pen ಆಕೆಯ ಜೀವನಕ್ಕೆ ಬರೆವಣಿಗೆಯೇ ಅವಲಂಬನ. That depends ಖಂಡಿತವಾಗಿ ಹೇಳುವ ಹಾಗಿಲ್ಲ). ನಂಬಿರು ; ಭರವಸೆಯಿಡು (ವಿಧಿರೂಪದಲ್ಲಿ, D. upon it). (ದಾವಾ, ಮೊ. ಗಳು) ಫೈಸಲಾತಿಗಾಗಿ ಕಾದಿರು ; ತೀರ್ಮಾನವಾಗದಿರು. **Depéndable** (ಗು.) ಭರವಸೆಯಿಡಬಹುದಾದ ; ನಂಬಬಹುದಾದ ; ವಿಶ್ವಾಸಪಾತ್ರ. **Depéndableness** (ನಾ.) ; **Depéndably** (ಕ್ರಿ. ವಿ.) ; **Depéndant, -ent** — ಡೆಂಟ್ (ನಾ.) ಜೀವನಕ್ಕೆ ಮತ್ತೊಬ್ಬನನ್ನು ಆಶ್ರಯಿಸಿರುವವನು ; ಉಪಜೀವಿ ; ಆಶ್ರಿತ ; ಅವಲಂಬಿ ; ಪರಿಜನ ; ಸೇವಕ ; ಭೃತ್ಯ. **Depéndence, -ance** (ನಾ.) ಆಶ್ರಯ ; ಅವಲಂಬನೆ ; (ಪರ) ಅಧೀನತೆ ; ಆಧಾರ ; ಭರವಸೆ ; ನಂಬಿಕೆ. **Depéndency** (ನಾ.) ಅಧೀನವಾಗಿರುವುದು ; ಆಶ್ರಯದಲ್ಲಿರುವುದು ; ಅವಲಂಬಿ ; ಆಶ್ರಿತ (ಮು., ಆಶ್ರಿತ ರಾಜ್ಯ ; ಅಧೀನ ದೇಶ ; ಸಾಮಂತ ರಾಷ್ಟ್ರ). **Depéndent** (ಗು.) ಅವಲಂಬಿಸಿರುವ ; ಅಧೀನ ; ಒಳಪಟ್ಟ ; ಆಶ್ರಿತ ; ಅವಲಂಬಿ ; ಪರತಂತ್ರ ; ಮತ್ತೊಬ್ಬನ ವೆಚ್ಚದಿಂದ ನಡಸುತ್ತಿರುವ. (ವ್ಯಾ.) (ವಾಕ್ಯ, ವಾಕ್ಯಭಾಗ, ಪದ — ಇವುಗಳ ವಿಷಯದಲ್ಲಿ) ಅಧೀನ ಸಂಬಂಧದಲ್ಲಿರುವ.

Dephósphorize ಡೀಫಾಸ್ಫೊರೈಸ್ (ಕ್ರಿ. ಸಕ.) (ಒಂದು ಅದುರನ್ನು) ರಂಜಕ ರಹಿತ ಮಾಡು. **Dephosphorizátion** (ನಾ.)

Depíct ಡಿಪಿಕ್ಟ್ (ಕ್ರಿ. ಸಕ.) ರೇಖನದಿಂದ ಅಥವಾ ಬಣ್ಣಗಳಿಂದ ರೂಪಿಸು ; ರೇಖಿಸು ; ಚಿತ್ರಿಸು. ನಿರೂಪಿಸು ; ವರ್ಣಿಸು. **Depícter** (ನಾ.) ; **Depíctor** (ನಾ.) ; **Depíction** (ನಾ.) ; **Depíctive** (ಗು.) — ನಿರೂಪಿಸುವ ; ನಿರೂಪಕ. **Depícture** — ಕ್ಚ್ಯುರ್, — ಕ್ಚರ್ (ಕ್ರಿ. ಸಕ.) ಚಿತ್ರಿಸು ; ವರ್ಣಿಸು.

Dépilate ಡೆಪಿಲೇಟ್ (ಕ್ರಿ. ಸಕ.) ಕೂದಲು ಕಳೆ, ತೆಗೆ ; ಕೇಶ ನಾಶ ಮಾಡು. **Depilátion** (ನಾ.) ; **Dépilator** (ನಾ.) ; **Depílatory** (ಗು., ನಾ.) ಕೂದಲು ಕಳೆಯುವ (ಪದಾರ್ಥ) ; ಕೇಶ ನಾಶಕ.

Depláne ಡೀಪ್ಲೇನ್ (ಕ್ರಿ. ಅಕ.) ವ್ಯೋಮ ಫಲಕಯಾನದಿಂದ ಇಳಿ.

Deplénish ಡಿಪ್ಲೆನಿಷ್ (ಕ್ರಿ. ಸಕ.) ಬರಿದು ಮಾಡು ; ಖಾಲಿ ಮಾಡು ; ಸರಕಿಲ್ಲದಂತೆ ಮಾಡು.

Depléte ಡಿಪ್ಲೀಟ್ (ಕ್ರಿ. ಸಕ.) ಬರಿದು ಮಾಡು ; ಖಾಲಿ ಮಾಡು ; ಹೊರದೆಗೆದುಬಿಡು ; ತೆರವು ಮಾಡು ; ಒತ್ತುಗೆ ತಪ್ಪಿಸು. (ವೈದ್ಯ) (ಪದಾರ್ಥ ಅಥವಾ ದ್ರವವು ದೇಹದಲ್ಲಿ ಅಥವಾ ದೇಹನಾಳಗಳಲ್ಲಿ ಮಿತಿ ಮೀರಿ ಸೇರಿರುವಾಗ ಅದನ್ನು ವಿರೇಚನದಿಂದ ಅಥವಾ ರಕ್ತಶೋಷಣದಿಂದ) ಹೊರಗೆಡಹು. **Deplétion** (ನಾ.) ; **Deplétive** (ಗು., ನಾ.) ಬರಿದು ಮಾಡುವ ; ರೇಚಕ ; ಶೋಷಕ. **Deplétory** (ಗು.)

Deplóre ಡಿಪ್ಲೋರ್ (ಕ್ರಿ. ಸಕ.) ಶೋಕಿಸು ; ವ್ಯಥೆಪಡು ; ಸಂತಪಿಸು ; ಗೋಳಾಡು ; ಪ್ರಲಾಪಿಸು ; ಮರುಗು ; ಹಲುಬು. ದೊಡ್ಡ ಅಪವಾದವಾಗಿ ಭಾವಿಸು. **Deplórable** (ಗು.) ; **Deplórably** (ಕ್ರಿ. ವಿ.) ; **Deplorabílity** (ನಾ.) ; **Deplórableness** (ನಾ.)

Deploý ಡಿಪ್ಲಾಯ್ (ಕ್ರಿ., ನಾ.) (ಸೇನೆ) ದಳಗಳನ್ನು ಉದ್ದಸಾಲಿನಿಂದ ಅಗಲಸಾಲಿಗೆ ಹರಡು(ವುದು). **Deploýment** (ನಾ.)

Deplúme ಡಿಪ್ಲ್ಯೂಮ್ (ಕ್ರಿ. ಸಕ.) ಪುಕ್ಕ ತರಿ ; ಗರಿ ಕಿತ್ತುಹಾಕು ; ರೆಕ್ಕೆ ಪುಕ್ಕ ಕತ್ತರಿಸು (ದೂಪ.) ; (ಗೌರವ, ಸಂಪತ್ತು, ಮೊ. ನ್ನು) ಇಲ್ಲದಂತೆ ಮಾಡು.

Depólarize ಡೀಪೋಲರೈಸ್ (ಕ್ರಿ. ಸಕ.) (ದೃ. ವಿ.) ಒಂದು ಕಿರಣದ ಧ್ರುವೀಭವನದ ಗತಿಯನ್ನು ಬದಲಾಯಿಸು. (ವಿದ್ಯುತ್ತು, ಕಾಂತಶಕ್ತಿ) ಧ್ರುವವಿಲ್ಲದಂತೆ ಮಾಡು ; ನಿರ್ಧ್ರುವ ಮಾಡು ; (ರೂಪ.) (ನಂಬಿಕೆ, ಅಸಮಾಧಾನ, ಮೊ. ನ್ನು) ಅಳ್ಳಾಡಿಸು, ಕದಲಿಸು, ಸಡಿಲಿಸು, ಕರಗಿಸು. **Depolarizátion** (ನಾ.) ; **Depólarizer** (ನಾ.)

Depónent ಡಿಪೋನೆಂಟ್ (ಗು., ನಾ.) (ಲ್ಯಾಟಿನ್ ಮತ್ತು ಗ್ರೀಕ್ ವ್ಯಾ.) ಕರ್ಮಣಿ ರೂಪದಲ್ಲಿದ್ದರೂ ಕರ್ತರಿ ಅರ್ಥದ (ಕ್ರಿಯಾಪದ). (ನ್ಯಾಯಸ್ಥಾನ, ಮೊ. ಗಳಲ್ಲಿ ಉಪಯೋಗಿಸುವುದಕ್ಕಾಗಿ) ಪ್ರಮಾಣ ಮಾಡಿ ಹೇಳಿಕೆ ಕೊಡುವವನು ಅಥವಾ ಬರೆದುಕೊಡುವವನು ; ಸಾಕ್ಷಿ.

Depópulate ಡಿಪಾಪ್ಯುಲೇಟ್ (ಕ್ರಿ.) ಜನಸಂಖ್ಯೆ ಕಡಮೆಮಾಡು ; — ಕಡಮೆಯಾಗು ; ನಿರ್ಜನ ಮಾಡು ; — ವಾಗು ; ಜನಶೂನ್ಯ ಮಾಡು ; — ವಾಗು. **Depopulátion** (ನಾ.)

Depórt ಡಿಪೋರ್ಟ್ (ಕ್ರಿ. ಸಕ.) ನಡೆದುಕೊ ; ವರ್ತಿಸು ; ವ್ಯವಹರಿಸು. ದೇಶಭ್ರಷ್ಟ ಮಾಡು ; ಗಡೀಪಾರು ಮಾಡು. **Deportátion** ಡೀ — (ನಾ.) ; **Deporteé** ಡಿ — (ನಾ.) ಗಡೀಪಾರಾದವನು. **Depórtment** (ನಾ.) ನಡತೆ ; ವರ್ತನೆ ; ನಡೆವಳಿ ; (ರ. ವಿ. ದ ಪರೀಕ್ಷೆಗಳಲ್ಲಿ) ಒಂದು ವಸ್ತು ವರ್ತಿಸುವ ರೀತಿ.

Depóse ಡಿಪೋಸ್ (ಕ್ರಿ.) ಅಧಿಕಾರ ಕಳೆ ; ಪದಚ್ಯುತ ಮಾಡು ; ಪಟ್ಟದಿಂದುರುಳಿಸು ; ಸಿಂಹಾಸನ ತಪ್ಪಿಸು. (ಮು., ನ್ಯಾಯಸ್ಥಾನದಲ್ಲಿ, ಪ್ರಮಾಣ ಮಾಡಿ) ಸಾಕ್ಷ್ಯ ಕೊಡು, ಹೇಳು ; ಹೇಳಿಕೆ, ವಾಙ್ಮೂಲ, ಕೊಡು. **Depósable** (ಗು.) ; **Deposítion**[1] ಡೀ(ಡೆ)ಪೊಸಿಷನ್ (ನಾ.) ಕ್ರಿಸ್ತನನ್ನು ಶಿಲುಬೆಯಿಂದ ಕೆಳಕ್ಕಿಳಿಸಿದ್ದು ; ಇದರ ಚಿತ್ರ : ಅವರೋಹಣ (ಚಿತ್ರ). ಅಧಿಕಾರದಿಂದ ತೆಗೆದುಹಾಕುವುದು. ಪದಚ್ಯುತಿ (ಮು., ಆಳಿಕೆಯಿಂದ, ಪಟ್ಟದಿಂದ, ಸಿಂಹಾಸನದಿಂದ). ಪ್ರಮಾಣ ಮಾಡಿಕೊಟ್ಟ ಸಾಕ್ಷ್ಯ ; ಹೇಳಿಕೆ, ವಾಙ್ಮೂಲ (ಕೊಡುವುದು). ಆಪಾದನೆ.

Depósit ಡಿಪಾಸಿಟ್ (ನಾ., ಕ್ರಿ. ಸಕ.) ಶೇಖರಿಸಿಟ್ಟ, ಅಥವಾ ಭದ್ರವಾಗಿಟ್ಟಿರಲು ವಹಿಸಿದ, ವಸ್ತು ; ನಿಧಿ ; ನಿಕ್ಷೇಪ ; ಕೈಯೆಡೆ (ಗ್ರಾಂ.). (ಸಾ., ಬಡ್ಡಿಗೆ, ಒಂದು ಗೊತ್ತಾದ ಕಾಲಕ್ಕೆ, ಅಥವಾ ಮೊದಲೇ ತಿಳಿಸದೆ ಪಡೆಯಲಾಗದಂತೆ) ಒಂದು ಬ್ಯಾಂಕಿನಲ್ಲಿ ಇಟ್ಟಿರುವ ಹಣ ; ಠೇವಣಿ ; ಠೇವಣಾತಿ ; ಇಡುಗೆ (On d. ಇಡುಗೆಯಾಗಿ. He has a current and a d. account ಆತನಿಗೆ ಚಾಲ್ತಿ ಮತ್ತು ಇಡುಗೆಯ ಲೆಕ್ಕವಿದೆ). ಖಾತರಿ ಹಣ. ಬಯ್ಕೆ (ಗ್ರಾಂ.) ; ಇಟ್ಟದ್ದು ; ಇಡುವುದು ; ನಿಕ್ಷಿಪ್ತ ವಸ್ತು ; (ಸಹಜವಾಗಿ ಸೇರಿದ) ಪದಾರ್ಥಸಂಚಯ. ಒಂದು ದ್ರವದಲ್ಲಿದ್ದು, ಕೆಳಗಿಳಿದು ಅಡಿಯಲ್ಲಿ ಕೂಡಿದ, ಒಂಡು, ಒಂಡಿನ ಪೊರೆ. (ಕ್ರಿ.) (ಒಂದು ಗೊತ್ತಾದ ರೀತಿಯಲ್ಲಿ, ಸ್ಥಳದಲ್ಲಿ) ಇಡು, ಮಡಗು (ಮು., ಬ್ಯಾಂಕಿನಲ್ಲಿ ಹಣವನ್ನು ಬಡ್ಡಿಗೆ) ; ಠೇವಣಿಯಿಡು. (ನೀರು, ಗಾಳಿ, ಮೊ. ವು) ತಂದುಹಾಕು, ಇಡು. ಭದ್ರವಾಗಿಟ್ಟಿರಲು ವಹಿಸಿಕೊಡು ; ನ್ಯಾಸವಿಡು. (ಕರಾರು ನಡಸುವ ಖಾತರಿಗಾಗಿ, ಕಂತುಗಳನ್ನು ಮುಂದೆ ಕೊಡುವ ಭರವಸೆಗಾಗಿ) ಖಾತರಿಹಣ ಕೊಡು ; ಅಡವಿಡು. **Depósitary** — ಸಿಟರಿ (ನಾ.) ಯಾವನಿಗೆ ವಸ್ತುವನ್ನು ವಹಿಸಿದೆಯೊ ಅವನು : ನ್ಯಾಸ ಧಾರಿ. **Deposítion**[2] ಡೀ(ಡೆ)ಪೊಸಿಷನ್ (ನಾ.) ಇಡುವುದು ; ನ್ಯಾಸ ; ನಿಕ್ಷೇಪ. **Depósitor** ಡಿಪಾಸಿಟರ್ (ನಾ.) (ಹಣ, ಆಸ್ತಿ, ಮೊ. ನ್ನು) ನ್ಯಾಸವಿಡುವವನು ; ನ್ಯಾಸಕಾರಿ ; ಠೇವಣಿಗ ; ಠೇವಣಿದಾರ. ಯಾವುದಾದರೂ ಪದಾರ್ಥವನ್ನು ನಿಕ್ಷೇಪಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಲಕರಣೆ, ಸಾಧನ ; ನಿಕ್ಷೇಪಕ. (ಭೌ. ವಿ.) ವಿದ್ಯುಲ್ಲೇಪಕ. **Depósitory** — ಸಿಟರಿ (ನಾ.) ಕೋಶ ; ಭಂಡಾರ ; ನಿಧಿ ; ಕಣಜ ; ಉಗ್ರಾಣ (ರೂಪ. ಸಹ) ; = Depositary.

Dépot ಡೆಪೋ, ಡಿ—, ಡೀ— (ನಾ.) (ಸೇನೆ) ಉಗ್ರಾಣ ; ಮೋತೀ ಖಾನೆ ; ಕೋಠಿ. ಒಂದು ಪಡೆಯ ಮುಖ್ಯ ಬೀಡು ; ಠಾಣ್ಯ. ಉಮೇದುವಾರರನ್ನು ತರಬೇತು ಮಾಡುವ ಸ್ಥಳ. ಹೊರ ದೇಶದ ಉದ್ಯೋಗಕ್ಕೆ ಹೋಗದೆ ನಿಂತಿರುವ ಪಡೆಯ ಭಾಗ. ಮಂಡಿ ; ಗಡಂಗು ; ವ್ಯಾಪಾರ ಕೇಂದ್ರ. [ಅಮೆ. ಸಂ. (ಉಚ್ಚಾರಣೆ : ಡೀಪೋ)] ರೈಲ್ವೆ ನಿಲ್ದಾಣ, ಬೀಡು.

Depráve ಡಿಪ್ರೇವ್ (ಕ್ರಿ. ಸಕ.) ಕೆಡಿಸು ; ಕೆಟ್ಟುಹೋಗುವಂತೆ ಮಾಡು ; ಹೀನಯಿಸು ; ನೀಚ ಮಾಡು ; (ನೀತಿ)ಭ್ರಷ್ಟ ಮಾಡು. **Depravátion** ಡೀ(ಡೆ)ಪ್ರವೇಷನ್ (ನಾ.) ; **Deprávity** ಡಿಪ್ರ್ಯಾವಿಟಿ (ನಾ.) (ನೀತಿ) ಭ್ರಷ್ಟತೆ ; ನೈಚ್ಯ ; ಪಾತಿತ್ಯ ; ದುಷ್ಟತನ. (ದೇವ. ಶಾ.) ಮನುಷ್ಯನ ಸಹಜ ಪಾಪಿತನ.

Déprecate ಡೆಪ್ರಿಕೇಟ್ (ಕ್ರಿ. ಸಕ.) ಬೇಡವೆಂದು, ಸಲ್ಲದೆಂದು, ಹೇಳು, ಬೋಧಿಸು, ವಾದಿಸು, ಮೊರೆಯಿಡು, ಪ್ರಾರ್ಥಿಸು (D. one's anger ಕೋಪ ಮಾಡಬಾರದೆಂದು ಕೇಳಿಕೊ). ತನಗೆ ಇಷ್ಟವಿಲ್ಲವೆಂದು, ತಾನು ಒಪ್ಪಲಾರೆನೆಂದು, ಹೇಳು ; ಒಪ್ಪದಿರು ; ನಿಷೇಧಿಸು ; ಅಸಮ್ಮತಿ ಸೂಚಿಸು (D. hasty action ದುಡುಕಿನ ಕಾರ್ಯವನ್ನು ನಿಷೇಧಿಸು). **Déprecatingly** (ಕ್ರಿ. ವಿ.) ; **Deprecátion** (ನಾ.) ; **Déprecative** (ಗು.) ; **Déprecatory** (ಗು.)

Depréciate ಡಿಪ್ರೀಷಿಯೇಟ್ (ಕ್ರಿ.) (ಬೆಲೆ, ಯೋಗ್ಯತೆ) ಕಡಮೆ ಮಾಡು ; — ಯಾಗು ; ಬೆಲೆ ತಗ್ಗಿಸು ; — ತಗ್ಗು. (ಹಣದ) ಕೊಳ್ಳುವ ಶಕ್ತಿಯನ್ನು ಕುಂದಿಸು. ಏಳಿಸು (ಗ್ರಾಂ.) ; ಇಳಿಕ್ಕೆ (ಗ್ರಾಂ.) ; ಲಾಘವ ಮಾಡು ; ನಿಕೃಷ್ಟವಾಗಿ ಎಣಿಸು ; ಜರೆ ; ಹಳಿ ; ಇಳಿಸು. **Depréciatingly** (ಕ್ರಿ. ವಿ.) ; **Depréciatory** — ಅಟರಿ (ಗು.) ; **Depreciátion** — ಸಿ(ಷಿ) — (ನಾ.) ಕಡಮೆ ಮಾಡುವುದು ; — ಯಾಗುವುದು ; ನಿಕೃಷ್ಟ ಮಾಡುವುದು ; — ವಾಗುವುದು ; ಇಳಿತಾಯ ; ತಗ್ಗಿಸುವುದು ; ತಗ್ಗುವುದು ; ಕುಗ್ಗುವುದು ; ಕರಡಾಗುವುದು ; (ಬೆಲೆಕಟ್ಟುವಲ್ಲ, ಅಂದಾಜುಮಾಡುವಲ್ಲ, ಆಯ ವ್ಯಯದ ಪಟ್ಟಿಗಳಲ್ಲಿ) ಸವೆತ, ಕರಡು, ತೆಗೆಯುವುದು.

Depredátion ಡೆಪ್ರಿಡೇಷನ್ (ನಾ. ; ಸಾ., ಬ. ವ. ದಲ್ಲಿ) ಕೊಳ್ಳೆ, ಸೂರೆ, ಲೂಟಿ (ಹೊಡೆಯುವುದು) ; ನಾಶ ಮಾಡುವುದು ; ಧ್ವಂಸ ಮಾಡುವುದು. **Dépredator** (ನಾ.) — ವವನು.

Depréss ಡಿಪ್ರೆಸ್ (ಕ್ರಿ. ಸಕ.) ಕೆಳಕ್ಕೆ ನೂಕು, ತಳ್ಳು ; ಅದುಮು ; ಕೆಳಕ್ಕಿಳಿಸು ; ತಗ್ಗಿಸು ; ಕುಗ್ಗಿಸು ; ಅಣಗಿಸು ; ಕೀಳ್ಮಾಡು ; ಖಿನ್ನ ಮಾಡು ; ದೈನ್ಯಗೊಳಿಸು. ಧರಾಟಿ ತಗ್ಗಿಸು (ಮು., ವ್ಯಾಪಾರದಲ್ಲಿ). (ದನಿಯನ್ನು) ತಗ್ಗಿಸು ; ಶ್ರುತಿಗುಂದಿಸು ; ಮಂದ್ರ ಮಾಡು. ಎದೆಗುಂದಿಸು ; ನಿರುತ್ಸಾಹಗೊಳಿಸು ; ಉತ್ಸಾಹಗೆಡಿಸು. Depressed classes (ಇಂಡಿಯದ) ನಿಮ್ನ ಜನರು, ಅಸ್ಪೃಶ್ಯರು. **Depréssible** (ಗು.) ; **Depréssant** ಡಿಪ್ರೆಸಂಟ್ (ಗು., ನಾ.) (ವೈ. ಶಾ.) ಇಳಿಸುವ, ತಗ್ಗಿಸುವ, ಮಾಂದ್ಯ ಮಾಡುವ (ಔಷಧ) ; ಮಾಂದ್ಯ ಜನಕ. **Depréssion** ಡಿಪ್ರೆಷನ್ (ನಾ.) ಇಳಿಸುವುದು ; ತಗ್ಗಿಸುವುದು ; ಕುಗ್ಗಿಸುವುದು ; ಇಳಿತ ; ಕುಗ್ಗು ; ಮುಗ್ಗಟ್ಟು. (ಖ. ವಿ.) (ನಕ್ಷತ್ರ, ಮೊ. ಗಳ) ಕ್ಷಿತಿಜದ ಕೆಳಗಿನ ಕೋನದೂರ : ನತಿ ; ಅವನತಿ [' Altitude ' (ಉನ್ನತಿ) ಗೆ ಪ್ರತಿಪದ] ; ನತ ಕೋನ. ತಗ್ಗು ; ಹಳ್ಳ ; ಗುಂಡಿ. (ಮು., ವ್ಯಾಪಾರದಲ್ಲಿ) ಕುಗ್ಗು ; ಕುಸಿತ ; ಮುಗ್ಗಟ್ಟು ; ಮಾಂದ್ಯ. ದನಿಯ ಮಂದ್ರತೆ, ಇಳಿತ. ನಿರುತ್ಸಾಹ ; ಖಿನ್ನತೆ ; ಚಿಂತೆ ; ಕೊರಗು ; ಕೊರತೆ ; ಶಕ್ತಿಗುಂದು. ವಾಯುಭಾರ ಮಾಪಕದ, ವಾಯುಭಾರದ (ಮು., ನ್ಯೂನತಮ ಭಾರಕೇಂದ್ರದ) ಇಳಿತ. **Depréssor** ಡಿಪ್ರೆಸರ್ (ನಾ.) (ಅಂ. ರ. ಶಾ.) D. muscle or d. ಯಾವುದಾದರೂ ಅಂಗ, ಮೊ. ನ್ನು ಕೆಳಕ್ಕೆಳೆಯುವ ಸ್ನಾಯು ; ಅವಕರ್ಷಕ (ಸ್ನಾಯು)

Deprivátion. **Deprive** ನೋಡಿ.

Depríve ಡಿಪ್ರೈವ್ (ಕ್ರಿ. ಸಕ.) ಇಲ್ಲದಂತೆ ಮಾಡು ; ಅನುಭವಿಸದಂತೆ ಮಾಡು ; ತಪ್ಪಿಸು ; ಕಳೆ ; ಅಪಹರಿಸು ; ಕಿತ್ತುಕೊ. (ಮು., ಕ್ರೈಸ್ತ ಪಾದ್ರಿಯ) ಅಧಿಕಾರ ಕಳೆ, ತಪ್ಪಿಸು. **Deprívable** (ಗು.) ತಪ್ಪಿಸಲಾಗುವ ; ತಪ್ಪಿಸಬಹುದಾದ ; ತಪ್ಪಿಸುವ. **Deprival** (ನಾ.) = **Deprivátion** ಡೆ(ಡೀ)ಪ್ರೈ(ಪ್ರಿ)— (ನಾ.) ನಷ್ಟ ; ಹಾನಿ ; ಅಪಹರಣ ; ಕಳತ ; (ಮು., ಪಾದ್ರಿಯನ್ನು ಅಧಿಕಾರದಿಂದ) ತೆಗೆದು ಬಿಡುವುದು ; ಪದಚ್ಯುತಿ. That is a great d. ಅದು ದೊಡ್ಡ ನಷ್ಟ, ಹಾನಿ.

De prófundis (L) ಡೀ ಪ್ರೊಫಂಡಿಸ್ (ನಾ., ಕ್ರಿ. ವಿ.) (ನೊಂದ ಎದೆಯ) ಆಳದಿಂದ (ಬಂದ ಅಳು, ಕೂಗು) ; ದುಃಖದ ಮೊರೆ.

Depth. **Deep** ನೋಡಿ.

Depúrate, ಡಿಪ್ಯೂರೇಟ್, **Dépurate** ಡೆಪ್ಯು— (ಕ್ರಿ.) (ಕಲ್ಮಷವಿಲ್ಲದಂತೆ) ಶುದ್ಧಮಾಡು, ಶುದ್ಧವಾಗು. **Depurátion** ಡೆಪ್ಯು— (ನಾ.) ; **Depúrative** ಡಿಪ್ಯೂರಟಿವ್, **Dépurative** ಡೆಪ್ಯುರೇಟಿವ್ (ಗು., ನಾ.) ನಿಷ್ಕಲ್ಮಷ ಮಾಡುವ (ಸಾಧನ). **Dépurator** (ನಾ.) ನಿಷ್ಕಲ್ಮಷ ಮಾಡುವ ಸಾಧನ, ಪದಾರ್ಥ ; ಶೋಧಕ.

Deputátion. **Depute** ನೋಡಿ.

Depúte ಡಿಪ್ಯೂಟ್ (ಕ್ರಿ. ಸಕ.) (ಕಾರ್ಯವನ್ನು, ಅಧಿಕಾರವನ್ನು) ಬದಲಿಯವನಿಗೆ ವಹಿಸು, ಒಪ್ಪಿಸು ; ಪ್ರತಿನಿಧಿಯಾಗಿ ನಿಯಮಿಸು ; ನಿಯೋಜಿಸು. **Deputátion** ಡೆಪ್ಯುಟೇಷನ್ (ನಾ.) ಇತರರಿಗೆ ಪ್ರತಿನಿಧಿಯಾಗಿ ಕೆಲಸಮಾಡಲು ನಿಯಾಮಕವಾದ ಮಂಡಲಿ ; ನಿಯೋಗ ಮಂಡಲಿ. **Députize** (ಕ್ರಿ. ಅಕ.) (ಮು., ಸಂಗೀತ ಕಚೇರಿಗಳಲ್ಲಿ) (ಒಬ್ಬನಿಗೆ) ಪ್ರತಿನಿಧಿಯಾಗಿ ವರ್ತಿಸು. **Députy** (ನಾ.) ಒಬ್ಬನಿಗೆ ಅಥವಾ ಇತರರಿಗೆ ಬದಲಾಗಿ ಕಾರ್ಯಮಾಡಲು ನಿಯಮಿತನಾದವನು : ಪ್ರತಿನಿಧಿ ; ನಿಯೋಗಿ ; ಬದಲಿ (By d. ನಿಯೋಗಿಯ ಮೂಲಕ). ನಿಯೋಗಿ ಮಂಡಲದ ಸದಸ್ಯ. (ಶಾಸನ ಸಭೆಯಲ್ಲಿ) ಪ್ರತಿನಿಧಿ (Chamber of Deputies ಫ್ರಾನ್ಸಿನ ಮತ್ತು ಕೆಲವು ಇತರ ಶಾಸನ ಸಭೆಗಳಲ್ಲಿ ಕೆಳಸಭೆ). **Députyship** (ನಾ.) ನಿಯೋಗಿತನ.

Derácinate ಡಿರ್ಯಾಸಿನೇಟ್ (ಕ್ರಿ. ಸಕ.) ಬೇರುಮುಟ್ಟ ಕಿತ್ತುಹಾಕು ; ನಿರ್ಮೂಲ ಮಾಡು.

Deraíl ಡಿರೆಯ್ಲ್ (ಕ್ರಿ.) (ರೈಲ್‌ಬಂಡಿ ಸಾಲು, ಮೊ.) ಕಂಬಿ ತಪ್ಪಿಸು ; ಕಂಬಿ ತಪ್ಪು (ಸಾ., ಕರ್ಮಣಿಯಲ್ಲಿ). **Deraílment** (ನಾ.)

Derángé ಡಿರೇಂಜ್ (ಕ್ರಿ. ಸಕ.) ಚೆಲ್ಲಾಪಿಲ್ಲಿ ಮಾಡು ; ಅಸ್ತವ್ಯಸ್ತ ಮಾಡು ; ಅಣಿಗೆಡಿಸು ; ಕ್ರಮಭಂಗ ಮಾಡು ; ಅವ್ಯವಸ್ಥೆ ಮಾಡು ; ಜೋಡಣೆಗೆಡಿಸು ; ಕ್ರಮತಪ್ಪಿ ನಡೆಯುವಂತೆ ಮಾಡು ; ಚಿತ್ತಭ್ರಮೆ ಮಾಡು ; ಬುದ್ಧಿಭ್ರಂಶ ಮಾಡು ; ತಲೆಗೆಡಿಸು ; ಹುಚ್ಚುಹಿಡಿಸು (ಮು., ಭೂ. ಕೃ. ನಲ್ಲಿ). ಕೆಡಿಸು ; ಅಡ್ಡಿ, ತಡೆ, ಮಾಡು. **Derángement** (ನಾ.)

Dérby ಡಾರ್ಬಿ, ಡರ್ಬಿ (ನಾ.) ಇಂಗ್ಲೆಂಡಿನ ಎಪ್ಸಂ ಎಂಬ ಸ್ಥಳದಲ್ಲಿ ನಡೆಯುವ ವಾರ್ಷಿಕ ಕುದುರೆಯ ಜೂಜು. D. day ಆ ಜೂಜಿನ ದಿನ. D. dog ಜೂಜೋಟದ ಹಾದಿಯಲ್ಲಿ ಅಲೆದಾಡುವ ನಾಯಿ ; (ರೂಪ) ಅಕಾಲದಲ್ಲಿ ಆಗುವ ಅಲ್ಪ ಅಡಚಣೆ, ಅಡ್ಡಿ. (ಈ ಜೂಜನ್ನು ೧೭೮೦ರಲ್ಲಿ ಸ್ಥಾಪಿಸಿದ ' ಅರ್ಲ್ ಆಫ್ ಡಾರ್ಬಿ' ಯ ಹೆಸರಿನಿಂದ)

Dérbyshire ಡಾ(ಡ)ರ್ಬಿಷರ್ (ಗು.) D. neck ಥೈರಾಯ್ಡ್ ಗ್ರಂಥಿಯ (ವಿಪರೀತ) ಊತ ; ಗಳಗಂಡ. D. spar ಡರ್ಬಿಷಯರಿನಲ್ಲಿ ಬಣ್ಣ ಬಣ್ಣಗಳಲ್ಲಿ ದೊರೆಯುವ ಒಂದು ಖನಿಜ (ಇದರಿಂದ ವಿಧ ವಿಧವಾದ ಅಲಂಕಾರ ಪದಾರ್ಥಗಳನ್ನು ಮಾಡುತ್ತಾರೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

De régle (F) ಡ ರೇಗ್ಲ್ (ಗು.) ಬಳಕೆಯ ; ರೂಢಿಯ ; ಲೋಕಾಚಾರದ ; ತಕ್ಕ ; ಉಚಿತ.

Dérelict ಡೆರಿಲಿಕ್ಟ್ (ಗು., ನಾ.) ತೊರೆದುಬಿಟ್ಟ ; ಕೈಬಿಟ್ಟ ; ದಿಕ್ಕಿಲ್ಲದ ; ತ್ಯಕ್ತ ; ವಾರಸುದಾರರಿಲ್ಲದ (ಮು., ಸಮುದ್ರದಲ್ಲಿ ಬಿಟ್ಟ ಹಡಗಿನ ವಿಷಯದಲ್ಲಿ). ಪರಿತ್ಯಾಗಮಾಡಿದ ಆಸ್ತಿ (ಮು., ಹಡಗು). ಕರ್ತವ್ಯ ಪರಾಙ್ಮುಖ. **Derelíction** (ನಾ.) ತೊರೆದುಬಿಡುವುದು ; ತೊರೆಹ ; ಪರಿತ್ಯಾಗ ; ತೊರೆಯಲ್ಪಡುವುದು. ಹೊಸ ನೆಲ ಮೂಡುವಂತೆ ಸಮುದ್ರ ಹಿಮ್ಮೆಟ್ಟುವುದು. ಕರ್ತವ್ಯ ಪರಾಙ್ಮುಖತೆ ; ಕರ್ತವ್ಯಲೋಪ ; ಧರ್ಮಲೋಪ ; ನ್ಯೂನತೆ ; ಕುಂದು.

Deríde ಡಿರೈಡ್ (ಕ್ರಿ. ಸಕ.) ತುಚ್ಛವಾಗೆಣಿಸಿ, ಕಡೆಗಣಿಸಿ, ನಗು ; ಅಪಹಾಸ್ಯ, ಉಪಹಾಸ, ಮಾಡು ; ಕುಚೋದ್ಯ ಮಾಡು ; ಅಣಕಿಸು. **Derísion** ಡಿರಿಷನ್ (ನಾ.) ಅಪಹಾಸ್ಯ(ಸ) ; ಪರಿಹಾಸ ; ಅಣಕ ; ನಗೆಗೇಡು ; ಧಿಕ್ಕಾರ ; ಹಾಸ್ಯಾಸ್ಪದವಾದದ್ದು (Hold, have, in d. ಅಪಹಾಸ್ಯಾಸ್ಪದನೆಂದು, ನಗೆಗೇಡಿಯೆಂದು, ಎಣಿಸು ; ಅಣಕಿಸು ; ಅಪಹಾಸ್ಯ ಮಾಡು. Be in d. ನಗೆಗೀಡಾಗಿರು. Bring into d. ನಗೆಗೀಡಾಗಿಸು). **Derísive** ಡಿರೈಸಿವ್, **Derísory** ಡಿರೈಸರಿ (ಗು.) ಅಣಕಿಸುವ ; ಅಪಹಾಸ್ಯ ಮಾಡುವ ; ಹಾಸ್ಯಾಸ್ಪದ ; ನಗೆಗೀಡಾದ (D. cheers ಅಪಹಾಸ್ಯ ಸೂಚಕವಾದ ಕೂಗು ಅಥವಾ ಚಪ್ಪಾಳೆ) ; ನಗೆಗೀಡಾಗುವಷ್ಟು ನಿರರ್ಥಕ ; ಗಂಭೀರವಾಗಿ ಎಣಿಸಲರ್ಹವಲ್ಲದ. **Derísively** (ಕ್ರಿ. ವಿ.)

De rigueúr (F) ಡ ರೀಗರ್ (ಗು.) ಮರ್ಯಾದೋಚಿತ [Durbar dress is d. r. (ಈ ಸಂದರ್ಭದಲ್ಲಿ) ದರ್ಬಾರು ಉಡುಪು ಉಚಿತ]

Derivátion, etc. Derive ನೋಡಿ.

Dérive ಡಿರೈವ್ (ಕ್ರಿ.) (ಇಂದ) ಪಡೆ, ಹೊಂದು, ತೆಗೆದುಕೊ, ಉತ್ಪತ್ತಿಯಾಗು ; ಮೂಲದಿಂದ ತರು, ಬರು ; ಅವತರಿಸು ; ಇಳಿದುಬರು ; ಹುಟ್ಟು. ಸಂಗ್ರಹಿಸು ; ಶೇಖರಿಸು. (ಜ್ಞಾನ, ನಿಶ್ಚಯ, ಭಾವ, ಮೊ. ನ್ನು) — ಇಂದ ಊಹಿಸು, ಅನುಮಾನಿಸು. (ಪದಗಳ ವಿಷಯದಲ್ಲಿ) — ಇಂದ ವ್ಯುತ್ಪತ್ತಿ ಪಡೆ, ಸಿದ್ಧಿಸು. (ವ್ಯಕ್ತಿ, ವಸ್ತು, ಪದ, ಇವುಗಳ ಮೂಲ, ಇಳಿತ, ರಚನೆ) — ಇಂದ ಆಗಿದೆಯೆಂದು, ಬಂದಿದೆಯೆಂದು, ತೋರಿಸು, ಸಿದ್ಧಿಸು, ಸಾಧಿಸು ; ವ್ಯುತ್ಪತ್ತಿ ಹೇಳು, ಕೊಡು ; ನಿಷ್ಪನ್ನ ಮಾಡು. **Derívable** (ಗು.) ; **Derivátion** ಡೆರಿವೇಷನ್ (ನಾ.) ಒಂದು ಮೂಲದಿಂದ ಪಡೆಯುವುದು. ಹುಟ್ಟು ; ಉತ್ಪತ್ತಿ ; ಮೂಲ ; ಇಳಿತ. (ಪದದ) ವ್ಯುತ್ಪತ್ತಿ (ಹೇಳುವುದು) ; ರೂಪನಿಷ್ಪತ್ತಿ (ಮಾಡುವುದು) ; ನಿರುಕ್ತಿ ; ನಿರ್ವಚನ. ವಿಕಾಸ ವಾದ ; ಪರಿಣಾಮ ವಾದ. **Derivátionist** (ನಾ.) (ಜೀ. ವಿ.) ವಿಕಾಸ ವಾದಿ. ಶಬ್ದವ್ಯುತ್ಪತ್ತಿ ವಿಚಾರ ಮಾಡುವವನು ; ನಿರುಕ್ತಿಕಾರ. **Derívative** ಡಿರಿವಟಿವ್ (ಗು., ನಾ.) ನಿಷ್ಪನ್ನ, ಉತ್ಪನ್ನ, ಸಾಧಿತ, ವ್ಯುತ್ಪನ್ನ (ವಸ್ತು, ಪದ, ರಸಾಯನ ಪದಾರ್ಥ) (ಮೂಲವಲ್ಲದ್ದು). **Derívatively** (ಕ್ರಿ. ವಿ.)

Derm ಡರ್ಮ್ (ನಾ.) ಚರ್ಮ ; (ಮೇಲ್ಚರ್ಮದ ಅಡಿಯಲ್ಲಿರುವ) ನಿಜ ಚರ್ಮ ; ಒಳ ಚರ್ಮ. **Dérma** ಡರ್ಮ (ನಾ.) (ಅಂ. ರ. ಶಾ.) = Derm. **Dérmal** (ಗು.) ; **Dérmic** (ಗು.) ; **Dermatítis** ಡರ್ಮಟೈಟಿಸ್ (ನಾ.) ಚರ್ಮದ ಊತ. **Dermat(o)-, Dermo-** (ಸ. ಪೂ. ಪ.) ; **Dermatólogy** ಡರ್ಮಟಾಲೊಜಿ (ನಾ.) ಚರ್ಮ ಮತ್ತು ಚರ್ಮರೋಗ ವಿಷಯಕವಾದ ಶಾಸ್ತ್ರ : ಚರ್ಮಶಾಸ್ತ್ರ. **Dermatólogist** (ನಾ.) ಚರ್ಮಶಾಸ್ತ್ರಜ್ಞ.

Dern ಡರ್ನ್ (ಗು., ನಾ.) = Darn².

Dernier ressórt (F) ಡೇರ್ನ್ಯೇ ರಸಾರ್ (ನಾ.) ಕಟ್ಟಕಡೆಯ ಉಪಾಯ, ಅವಲಂಬನ ; ಆಶೆ ಬಿಟ್ಟ ಪ್ರಯತ್ನ.

Dérogate ಡೆರೊಗೇಟ್ (ಕ್ರಿ. ಅಕ.) ಕಡಮೆಮಾಡು ; ನ್ಯೂನಮಾಡು ; ಲಾಘವಮಾಡು ; ಕುಂದು ತರು ; ಕೊರತೆಪಡಿಸು ; ಕೀಳುಪಡಿಸು ; ಹೀನಯಿಸು. (ಗಣನೆಯಲ್ಲಿ) ಕೀಳಾಗು ; ಹೀನ ಕಾರ್ಯ ಮಾಡು. **Derogátion** (ನಾ.) ಕಾನೂನಿನ, ಅಧಿಕಾರದ, ಸ್ಥಾನದ, ಘನತೆಯ, ಮಹತ್ತನ್ನು ಕುಂದಿಸುವುದು, ಲಾಘವ ಮಾಡುವುದು. ಭಂಗ ; ಹಾನಿ ; ಕುಂದು ; ಕೊರತೆ ; ಪತನ ; ಚ್ಯುತಿ ; ಭ್ರಂಶ ; ಕ್ಷಯ ; ಅವಮಾನ. **Derógatory** ಡಿರಾಗಟರಿ (ಗು.) ಕುಂದು, ಭಂಗ, ತರುವ ; ಹಾನಿಕರ ; ಹೀನಾಯವಾದ ; ಲಾಘವಿಸುವ ; ಅವಮಾನಕಾರಿ ; ಕೀಳಾದ ; ಅಯೋಗ್ಯ ; ಹೀನ ; ಪದವಿಗೆ, ಸ್ಥಾನಕ್ಕೆ, ಮರ್ಯಾದೆಗೆ, ಉಚಿತವಲ್ಲದ.

Dérrick ಡೆರಿಕ್ (ನಾ.) ಭಾರ ವಸ್ತುಗಳನ್ನು ಸಾಗಿಸುವ ಅಥವಾ ಮೇಲಕ್ಕೆತ್ತುವ ಸಾಧನ ; ಒಂದು ತೆರದ ಎತ್ತುಯಂತ್ರ. ಎಣ್ಣೆಯ ಬಾವಿಯ ಮೇಲೆ ಅಥವಾ ಇಂಥ ಇತರ ತೋಡುಗುಂಡಿಯ ಮೇಲೆ ಭಾರವೆತ್ತಿ ಇಳಿಸುವ ಸಾಧನಕ್ಕೆ ಆಧಾರವಾದ ಕಟ್ಟಡ, ಹೂಡೆ, ಗೋಪುರ.

Dérring-dó ಡೆರಿಂಗ್ ಡೂ (ನಾ.) (ಮೂಲಾರ್ಥ: ಮಾಡಲು ಸಾಹಸ ಪಡುವ) ; ನಿರಾಶೆಯಿಂದ ಹುಟ್ಟಿದ ಧೈರ್ಯ ; ಅತಿ ಧೈರ್ಯ ; ಹುಚ್ಚು ಸಾಹಸ.

Dérringer ಡೆರಿಂಜರ್ (ನಾ.) ದೊಡ್ಡ ನಾಳದ ಸಣ್ಣ ಪಿಸ್ತೂಲು (ಅಮೆ. ಸಂ. ; ಕಲ್ಪಕನ ಹೆಸರಿನಿಂದ)

Dérvish ಡರ್ವಿಷ್ (ನಾ.) ಬಡತನದಲ್ಲಿದ್ದುಕೊಂಡು ದೇಹ ದಂಡನೆ ಮಾಡುವ ವ್ರತ ಕೈಕೊಂಡಿರುವ ಮುಸಲ್ಮಾನ್ ಸಂನ್ಯಾಸಿ, ಸಾಧು ; ಫಕೀರ ; ದರವೇಶಿ (Dancing or whirling d., Howling d. ಆಯಾ ಪಂಥದ ನಿಯಮಗಳಿಗೆ ತಕ್ಕಂತೆ, ಕುಣಿಯುವ, ರಭಸದಿಂದ ಸುತ್ತು ತಿರುಗುವ, ಕಿರಿಚಿಕೊಳ್ಳುವ, ದರವೇಶಿ)

Déscant ಡೆಸ್‌ಕ್ಯಾಂಟ್ (ನಾ.), **Descánt** — ಕ್ಯಾಂಟ್ (ಕ್ರಿ. ಅಕ.) (ಕಾವ್ಯ) ಹಾಡು ; ಪದ ; ಗೀತೆ ; ರಾಗ ; ಶ್ರುತಿ ; ಗಾನ. (ಕ್ರಿ.) ತಡೆಯಿಲ್ಲದೆ ಮಾತಾಡು ; ನಿರರ್ಗಳವಾಗಿ ಉಗ್ಗಡಿಸು (ಮು., ಹೊಗಳಿಕೆಯಲ್ಲಿ) [D. upon the beauties of (ಅದರ) ಸೌಂದರ್ಯವನ್ನು ಉಗ್ಗಡಿಸು]

Descénd ಡಿಸೆಂಡ್ (ಕ್ರಿ.) ಕೆಳಕ್ಕೆ ಬರು, ಹೋಗು, ಸರಿ, ಇಳಿ, ಇಳಿದು ಹೋಗು ; ಬೀಳು. (Descending letter ಅಕ್ಷರ ರಚನೆಯಲ್ಲಿ ಸಾಲಿನ ಗೆರೆಯ ತಳಕ್ಕೆ ಇಳಿಬೀಳುವ ಅಕ್ಷರ). ಇಳಿವೋರೆಯಾಗಿರು. ಥಟ್ಟನೆ ಮೇಲೆ ಬೀಳು, ಕವಿ, ಎರಗು ; ಆಕ್ರಮಣ ಮಾಡು. (ಆಖ್ಯಾನಕ, ಮೊ. ಗಳಲ್ಲಿ) ಹಿಂದಿನ ಕಾಲದಿಂದ ಈಚಿನ ಕಾಲಕ್ಕೆ ಇಳಿದುಬರು ; ಇಳಿಕ್ರಮದಲ್ಲಿರು (ಗಣಿತ : Descending series of numbers ಇಳಿಕ್ರಮದಲ್ಲಿರುವ ಸಂಖ್ಯಾ ಶ್ರೇಣಿ : ಅವರೋಹ ಶ್ರೇಣಿ). ಸಾಮಾನ್ಯದಿಂದ ವಿಶೇಷಕ್ಕೆ ಬರು. (ಕಾರ್ಯ ಮಾಡಲು) ಬಗ್ಗು ; ತಗ್ಗು. (ಅಪೂರ್ವ) — ಇಂದ ವಂಶಕ್ರಮದಲ್ಲಿ ಬಂದಿರು ; ವಂಶದಲ್ಲಿ ಹುಟ್ಟು. (ಗುಣ, ಆಸ್ತಿ, ವಿಶೇಷ ಸ್ಥಾನಮಾನ — ಇವು) ವಂಶಕ್ರಮವಾಗಿ ಬರು. (ಹಕ್ಕಿಗೆ, ಪಾಲಿಗೆ) ಸಂದುಬರು, ಸಲ್ಲು. **Descéndant, -ent** — ಡಂಟ್ (ನಾ.) ವಂಶಕ್ರಮದಲ್ಲಿ, ಅನುಗತವಾಗಿ, ಬಂದವನು, ಬಂದದ್ದು ; ವಂಶಜ ; ಸಂತತಿಯವನು. **Descénded** (ಭೂ. ಕೃ.) ; **Descéndible, -able** (ಗು.) ವಂಶಾನುಗತವಾಗಿ ಬರಬಹುದಾದ ; ಅನುವಂಶೀಯ. **Descént** (ನಾ.) ಇಳಿಯುವುದು ; ಇಳಿತ ; ಇಳಿ ಗತಿ ; ಅವರೋಹಣ ; ಇಳಿವೋರೆ ; ಇಳುಕಲು ; ಇಳಿ ಹಾದಿ. ಥಟ್ಟನೆಯ ಆಕ್ರಮಣ (ಮು., ಸಮುದ್ರ ಮಾರ್ಗದಿಂದ). ಅವನತಿ ; ಬೀಳು ; ಪತನ ; ಕ್ಷೀಣ ಗತಿ ; ಇಳಿ ಕ್ರಮ. ವಂಶಾನುಕ್ರಮದಲ್ಲಿ ಬಂದಿರುವುದು, ಬರುವುದು ; ಸಂತತಿ ; ಹುಟ್ಟು ; ವಂಶ ; ಕುಲ ; ಗೋತ್ರ ; ತಲೆಮೊರೆ (Twelve descents after the flood ಪ್ರಳಯವಾದಮೇಲೆ ಹನ್ನೆರಡು ತಲೆಮೊರೆಗಳು). (ಆಸ್ತಿ, ಬಿರುದು, ಗುಣ — ಇವು) ವಂಶಾನುಕ್ರಮವಾಗಿ ಬರುವುದು ; ವಂಶಾನು ಪ್ರಾಪ್ತಿ ; ಪರಂಪರಾ ಪ್ರಾಪ್ತಿ.

Describe ಡಿಸ್ಕ್ರೈಬ್ (ಕ್ರಿ. ಸಕ.) ವಿವರಿಸು ; ನಿರೂಪಿಸು ; ಹೇಳು ; ವರ್ಣಿಸು ; ಗುಣ ಕಥನ ಮಾಡು. (ಮು., ಜ್ಯಾಮಿತಿಯ ಆಕೃತಿಯನ್ನು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗುರುತಿಸು, ರೇಖಿಸು. (ಒಂದು ಗೊತ್ತಾದ ಪಥದಲ್ಲಿ) ಚರಿಸು; ಪಥ ನಿರ್ಮಿಸು. **Describable** (ಗು.); **Description** ಡಿಸ್ಕ್ರಿಪ್‍ಷನ್ (ನಾ.) ವಿವರಣೆ. (ವ್ಯಕ್ತಿಯ, ವಸ್ತುವಿನ, ಘಟನೆಯ) ವರ್ಣನೆ [Answers to the d. ಆ ಲಕ್ಷಣಗಳು (ಇಲ್ಲಿ) ಕಂಡುಬರುತ್ತವೆ]. ಲಕ್ಷಣ ನಿರೂಪಣ; ಲಕ್ಷಣ. ತರ; ಬಗೆ; ಜಾತಿ (No food of any d. ಯಾವ ಬಗೆಯ ಆಹಾರವೂ ಇಲ್ಲ. Tyrant of the worst d. ಅತ್ಯಂತ ನೀಚನಾದ ಪ್ರಪಾಪೀಡಕ). **Descriptive** (ಗು.) ವಿವರಿಸುವ; ವರ್ಣಿಸುವ; ವರ್ಣನಾತ್ಮಕ (D. touches ವಿವರಣಾತ್ಮಕವಾದ ಸೂಕ್ಷ್ಮರಚನೆ, ರೇಖೆಗಳು. D. writer ವಿವರಣ ಪ್ರಿಯ ಲೇಖಕ). **Descriptively** (ಕ್ರಿ. ವಿ.)

Description, etc. Describe ನೋಡಿ.

Descry ಡಿಸ್ಕ್ರೈ (ಕ್ರಿ. ಸಕ.) ದೂರದಿಂದ ಕಾಣು, ನೋಡು; ಕಂಡುಕೊ (ರೂಪ. ಸಹ)

Desecrate ಡೆಸಿಕ್ರೇಟ್ (ಕ್ರಿ. ಸಕ.) ಪವಿತ್ರತ್ವ ಕಳೆ; ಅಪವಿತ್ರ ಮಾಡು; ಅಪರಿಶುದ್ಧ ಮಾಡು; ಕಳಂಕಿಸು; ಭ್ರಷ್ಟ ಮಾಡು; ಕೆಡಿಸು; ಹೊಲೆಗಲಸು. (ಪಾಪಕ್ಕೆ, ಅಧರ್ಮಕ್ಕೆ) ಅರ್ಪಿಸು, ನಿವೇದಿಸು. **Desecration** (ನಾ.); **Desecrator** (ನಾ.)

Desensitize ಡೀಸೆನ್ಸಿಟೈಸ್ (ಕ್ರಿ. ಸಕ.) (ಛಾಯಾಗ್ರಾಹಿ ಫಲಕ, ಮೊ. ಗಳ) ಕ್ಷಿಪ್ರ ಗ್ರಾಹಿತ್ವವನ್ನು ಕುಂದಿಸು ಅಥವಾ ನಾಶಗೊಳಿಸು; ಕ್ಷಿಪ್ರ ಗ್ರಾಹಿತ್ವ ಕಳೆ.

Desert[1] ಡಿಸರ್ಟ್ (ನಾ.) ಯೋಗ್ಯತೆ; ಅರ್ಹತೆ; ತಗುತಿ (ಗ್ರಾಂ.); ತಕ್ಕುಮೆ (ಗ್ರಾಂ.); (ಒಳ್ಳೆಯದಕ್ಕೊ ಕೆಟ್ಟದ್ದಕ್ಕೊ ಇರುವ) ಯೋಗ್ಯತೆ. ಒಳ್ಳೆಯ ಫಲ ಪಡೆಯಲು ತಕ್ಕ ನಡತೆ; ಸದ್ಗುಣ. ಯೋಗ್ಯ ಜನ; ತಕ್ಕವರು. (ಬ. ವ. ದಲ್ಲಿ) ಒಳ್ಳೆಯ ಅಥವಾ ಕೆಟ್ಟ ಪ್ರತಿಫಲ ಪಡೆಯಲರ್ಹವಾದ ಕಾರ್ಯಗಳು ಅಥವಾ ಗುಣಗಳು; ತಕ್ಕ ಫಲ (Reward him according to his deserts ಅವನ ಯೋಗ್ಯತೆಗೆ ತಕ್ಕಂತೆ ಫಲ ಕೊಡು. He has got his deserts ಅವನಿಗೆ ತಕ್ಕದ್ದಾಗಿದೆ). **Desertless** (ಗು.)

Desert[2] ಡೆಸರ್ಟ್ (ಗು., ನಾ.), **Desert** ಡಿಸರ್ಟ್ (ಕ್ರಿ.) ನಿರ್ಜನ; ಬಂಜರು; ಪಾಳುಬಿದ್ದ; ಉಳುಮೆಯಾಗದ. (ರೂಪ.) ಶುಷ್ಕ; ನೀರಸ; ಸ್ವಾರಸ್ಯವಿಲ್ಲದ. (ನಾ.) ನೀರೂ ಗಿಡಗಳೂ ಇಲ್ಲದ ಪ್ರದೇಶ; ಮರು ಭೂಮಿ; ಮರಳುಗಾಡು; ಕಾಡು ನೆಲ. (ಕ್ರಿ.) (ವಸ್ತುವನ್ನು) ತೊರೆದುಬಿಡು, ಬಿಟ್ಟುಬಿಡು. (ಸ್ಥಳ, ಸಂಚಾರ ಪ್ರದೇಶ — ಇವನ್ನು) ಬಿಟ್ಟು ಹೋಗು. (ಹೆಂಡತಿ, ಅಧಿಕಾರ, ಸೈನ್ಯ, ನಾವೆ — ಇಂಥ) ಜವಾಬ್ದಾರಿ ಹೊತ್ತದ್ದನ್ನು ಕೈಬಿಡು, ಪರಿತ್ಯಜಿಸು; ತಪ್ಪಿಹೋಗು; ಬಿಡು; ಕೆಡು (His presence of mind deserted him ಅವನ ಸ್ಥೈರ್ಯ ಕೆಟ್ಟಿತು); ಬಿಟ್ಟು ಓಡಿಹೋಗು. **Deserter** (ನಾ.); **Desertion** (ನಾ.)

Deserve ಡಿಸರ್ವ್ (ಕ್ರಿ.) (ಒಳ್ಳೆಯದಕ್ಕಾಗಲಿ ಕೆಟ್ಟದ್ದಕ್ಕಾಗಲಿ ನಡತೆಯಿಂದ ಅಥವಾ ಗುಣದಿಂದ) ಅರ್ಹನಾಗಿರು; ಪಾತ್ರನಾಗಿರು; ತಕ್ಕವನಾಗಿರು. **Deservedly** — ವೆಡ್ಲಿ (ಕ್ರಿ. ವಿ.) ಅರ್ಹತೆಗೆ ತಕ್ಕಂತೆ. **Deserving** (ಗು.) (ಪ್ರಶಂಸೆ, ಆಕ್ಷೇಪಣೆ, ಮೊ. ಕ್ಕೆ) ಅರ್ಹನಾದ; ತಕ್ಕ; ಯೋಗ್ಯ; ಪ್ರಶಸ್ತವಾದ.

Deshabille (F) ಡೆಸಬೀಲ್ (ನಾ.) = Dishabille.

Desiccate ಡೆಸಿಕೇಟ್, **Desiccate** ಡಿಸಿ — (ಕ್ರಿ. ಸಕ.) (ಮು., ಹಾಲು, ಮೊ. ನ್ನು ಕೆಡದಂತೆ ಇಟ್ಟಿರುವುದಕ್ಕಾಗಿ) ಇಮರಿಸು, ಇಂಗಿಸು; ಬತ್ತಿಸು; ಒಣಗಿಸು; ತೇವವನ್ನು ಪೂರ್ತಿಯಾಗಿ ಕಳೆ; ಶೋಷಿಸು. **Desiccation** (ನಾ.); **Desiccator** (ನಾ.) ತೇವ ತೆಗೆಯುವವನು; ತೇವ ಕಳೆಯುವ ಸಲಕರಣೆ, ಸಾಧನ: ಶೋಷಕ (ಸಾಧನ.) **Desiccative** ಡೆಸಿಕೇಟಿವ್, **Desiccative** ಡಿಸಿಕಟಿವ್ (ಗು.) ಶೋಷಿಸುವ ಗುಣವುಳ್ಳ, ಪ್ರವೃತ್ತಿಯುಳ್ಳ: ಶೋಷಕ.

Desiderate ಡಿಸಿಡರೇಟ್ (ಕ್ರಿ. ಸಕ.) ಇಲ್ಲವೆಂದು ಕೊರಗು; — ವ್ಯಥೆ ಪಟ್ಟು (ಒಂದನ್ನು) ಬಯಸು; ಕೋರು; ಕುರಿ. **Desiderative** — ರೆಟಿವ್ (ಗು., ನಾ.) (ವ್ಯಾ.) ಒಂದು ಧಾತುವಿಗೆ ಹೊಸ ಪ್ರತ್ಯಯ ಸೇರಿಸಿ ಆ ಧಾತು ತಿಳಿಸುವ ಕ್ರಿಯೆಯನ್ನು ಮಾಡುವ ಇಚ್ಛೆಯನ್ನು ಸೂಚಿಸುವಂತೆ ಮಾಡಿದ (ಪದ, ಮೊ.): ಇಚ್ಛಾರ್ಥಕ (ಪದ). **Desideratum** — ರೇಟಂ (ನಾ.; ಬ. ವ. -ta) ಇಲ್ಲದೆಹೋದ ವಸ್ತು; ಅನುಭವಕ್ಕೆ ಬಂದ ಕೊರತೆ; ಅರೆ; ಅರಕೆ; ಅವಶ್ಯವೆಂದು, ಮುಖ್ಯವೆಂದು, ಕೋರುವ ವಸ್ತು; ಆವಶ್ಯಕತೆ.

Design ಡಿಸೈನ್ (ನಾ., ಕ್ರಿ.) ಮನಃಕಲ್ಪನೆ; ಎಣಿಕೆ; ಹೂಟ; ಸಂಚು. (He has designs upon me ಅವನು ನನ್ನ ಮೇಲೆ ಹೂಟ ಹೂಡಿದ್ದಾನೆ). ಉದ್ದೇಶ; ಸಂಕಲ್ಪ; ಆಶಯ (Whether by accident or d. ಅಕಸ್ಮಾತ್ತಾಗಿಯೊ ಉದ್ದೇಶಪೂರ್ವಕವಾಗಿಯೊ); ಗುರಿ; ಲಕ್ಷ್ಯ; ಪೂರ್ವ ಸಂಕಲ್ಪ. (ಚಿತ್ರ, ಮೊ. ವಕ್ಕಾಗಿ ಹಾಕಿದ) ನಕ್ಷೆ, ಮೊ. ವು; (ಕಲೆಯ, ಸಾಹಿತ್ಯದ) ಸ್ಥೂಲ ಕಲ್ಪನೆ; ಮಾದರಿ; ಸಂವಿಧಾನ; ವಿನ್ಯಾಸ; ನಿರೂಪಣೆ; ಘಟನೆ; ರಚನೆ. (ಕ್ರಿ.) ಒಬ್ಬನಿಗಾಗಿ ತೆಗೆದಿಡು. (ವ್ಯಕ್ತಿಯನ್ನು, ವಸ್ತುವನ್ನು) ಒಂದು ಕಾರ್ಯಕ್ಕಾಗಿ ಮೀಸಲಿಡು. ಹೂಡು; ಕಲ್ಪಿಸು; ರೂಪ ಕೊಡು. ಉದ್ದೇಶಿಸು; ಸಂಕಲ್ಪಿಸು; ಗೊತ್ತು ಮಾಡು; ಗುರಿಯಿಡು. (ಚಿತ್ರ, ಕಟ್ಟಡ, ಮೊ. ಗಳ) ನಕ್ಷೆ ಹಾಕು; ಹಗ್ಗುರುತು ಹಾಕು; ಸ್ಥೂಲ ನಿರ್ದೇಶ ಮಾಡು; ಸಂವಿಧಾನ ಮಾಡು. **Designer** (ನಾ.) (ಕ್ರಿಯಾರ್ಥಗಳಲ್ಲಿ); ಶಿಲ್ಪಕಾರರಿಗೆ ನಕ್ಷೆ ತಯಾರಿಸಿಕೊಡುವವನು; ನಕ್ಷೆಗಾರ. **Designing** (ಗು.) (ಕ್ರಿಯಾರ್ಥಗಳಲ್ಲಿ); ತಂತ್ರಿಯಾದ; ಕೃತ್ರಿಮಿ; ಕಪಟಿ; ಒಳಸಂಚು ಮಾಡುವ; ಹೂಟ ಹೂಡುವ.

Designate ಡೆಸಿಗ್ನೆಟ್ (ಗು.), ಡೆಸಿ(ಸಿ)ಗ್ನೇಟ್ (ಕ್ರಿ. ಸಕ.) ಅಧಿಕಾರಕ್ಕೆ ನಿಯಮಿತನಾದ, ಆದರೆ ಇನ್ನೂ ಪಟ್ಟ ಪಡೆಯದ; ಗೊತ್ತಾದ; ಉದ್ದಿಷ್ಟ [Designate ಪದವನ್ನು ಇದಕ್ಕೆ ಸಂಬಂಧಿಸಿದ ನಾಮವಾಚಕದ ಮುಂದೆ ಬರೆಯಬೇಕು (Governor d.)]. ನಿರ್ದೇಶಿಸು; ಗೊತ್ತಾಗಿ ಹೇಳು; ವಿಶೇಷಿಸು; ಹೆಸರಾಗಿ, ಗೊತ್ತಾಗಿ ಅಥವಾ ಅಂಕಿತವಾಗಿ, ಇರು; ಹೆಸರಿಡು; (ಎಂದು) ಹೇಳು, ಸೂಚಿಸು, ವರ್ಣಿಸು; ಅಧಿಕಾರಕ್ಕೆ ಗೊತ್ತು ಮಾಡು; ನಿಯಮಿಸು (*As, to, for* ಉಪ. ದೊಡನೆ). **Designation** ಡೆಸಿ(ಸಿ)ಗ್ನೇಷನ್ (ನಾ.) ಅಧಿಕಾರಕ್ಕೆ ನೇಮಿಸುವುದು. (ಅಧಿಕಾರ, ಉದ್ಯೋಗ, ಮೊ. ಗಳ) ಹೆಸರು, ಅಂಕಿತ, ನಿರ್ದೇಶ.

Desilverize ಡೀಸಿಲ್ವರೈಸ್ (ಕ್ರಿ. ಸಕ.) (ಮು., ಸೀಸದಿಂದ) ಬೆಳ್ಳಿ ತೆಗೆ.

Desipience ಡಿಸಿಪಿಯೆನ್ಸ್ (ನಾ.) ಅವಿವೇಕ; ದಡ್ಡತನ; ಮೂರ್ಖತನ; ತಿಳಿಗೇಡಿತನ; ಹುಡುಗಾಟಿಕೆ.

Desire ಡಿಸೈಅರ್ (ನಾ., ಕ್ರಿ. ಸಕ.) ಬಯಕೆ; ಹಾರೈಕೆ; ಇಚ್ಛೆ; ಆಕಾಂಕ್ಷೆ; ಅಪೇಕ್ಷೆ; ಅಭಿಲಾಷೆ; ಆಶೆ; ಇಷ್ಟ; ಕೋರಿಕೆ; ಹವಣಿಕೆ. ಬಯಕೆಯ ವಸ್ತು. (ಕ್ರಿ.) ಬಯಸು; ಕೋರು; ಇಚ್ಛಿಸು; ಅಪೇಕ್ಷಿಸು; ಆಶೆಪಡು; ಹಾರೈಸು. ಹೇಳು (D. him to wait ಕಾದಿರುವಂತೆ ಅವನಿಗೆ ಹೇಳು). **Desirable** (ಗು.) ಬಯಸತಕ್ಕ; ಬೇಕೆನಿಸುವ; ಹಾರೈಸತಕ್ಕ; ಆಶಿಸತಕ್ಕ; ಅಪೇಕ್ಷಣೀಯ. **Desirableness** (ನಾ.); **Desirability** (ನಾ.); **Desirably** (ಕ್ರಿ. ವಿ.); **Desirous** (ಗು.) ಬಯಸುವ; ಕೋರುವ; ಇಚ್ಛಿಸುವ; ಆಶೆಪಡುವ; ಅಭಿಲಾಷೆಯುಳ್ಳ.

Desist ಡಿಸಿ(ಸಿ)ಸ್ಟ್ (ಕ್ರಿ. ಅಕ.) (ಮಾಡುವುದನ್ನು) ಬಿಟ್ಟುಬಿಡು; (ಪಾಪದಿಂದ) ದೂರವಾಗು; ಹಿಂಜರಿದು ನಿಲ್ಲು; ಮಾಣು (ಗ್ರಾಂ.)

Desk ಡೆಸ್ಕ್ (ನಾ.) ಓದುವುದಕ್ಕಾಗಲಿ ಬರೆಯುವುದಕ್ಕಾಗಲಿ ಉಪಯೋಗಿಸುವ (ಕೆಲವು ಸಂದರ್ಭಗಳಲ್ಲಿ, ಸಳಿಖಾನೆಗಳು, ಪೀಠ, ಮೊ. ಗಳುಳ್ಳ) ಇಳಿಮೇಜು. The d. ಗುಮಾಸ್ತಗಿರಿ; ಕಚೇರಿ ಕೆಲಸ; ಬರೆವಣಿಗೆಯ ಕೆಲಸ; ಸಾಹಿತ್ಯೋದ್ಯೋಗ, ಪಾದ್ರಿ ಕೆಲಸ. **Deskful** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Désolate ಡೆಸೊಲೆಟ್ (ಗು.), — ಲೇಟ್ (ಕ್ರಿ. ಸಕ.) ಒಬ್ಬೊಂಟಿಗನಾದ; ತಾನೊಬ್ಬನೇ ಆದ; ಏಕಾಂಗಿಯಾದ; ಮತ್ತೆ ಯಾರೂ ಇಲ್ಲದ. ವಿವಿಕ್ತ; ನಿರ್ಜನ; ಶೂನ್ಯ; ಪಾಳು; ಕಾಡು; ಹಾಳಾದ; ಪಾಳುಬಿಟ್ಟ; ಹಾಳುಬಿದ್ದ; ಹಾಳು ಸುರಿಯುವ; ಬಂಜರು. ಭಯ ಹುಟ್ಟಿಸುವ; ದಿಕ್ಕಿಲ್ಲದ; ಕಂಗೆಟ್ಟ; ಅನಾಥ. (ಕ್ರಿ.) ನಿರ್ಜನ ಮಾಡು; ಪಾಳು ಮಾಡು; ಶೂನ್ಯವಾಗಿ ಮಾಡು; (ಮನುಷ್ಯನನ್ನು) ದೀನನನ್ನಾಗಿ, ನಿರ್ಗತಿಕನನ್ನಾಗಿ, ಮಾಡು; ಧ್ವಂಸ ಮಾಡು; ಹಾಳುಗೆಡವು. **Désolately** (ಕ್ರಿ. ವಿ.); **Désolateness** (ನಾ.); **Desolátion** (ನಾ.) — ಮಾಡುವುದು; — ಸ್ಥಿತಿ; ನಿರ್ಗತಿ; ತೀವ್ರ ದುಃಖ. **Désolator** (ನಾ.)

Despaír ಡೆಸ್ಪೇರ್ (ನಾ., ಕ್ರಿ. ಅಕ.) ನಿರಾಶೆ; ಹತಾಶೆ. (ಕೆಟ್ಟತನದಿಂದಾಗಲಿ, ಗುಣಾತಿಶಯದಿಂದಾಗಲಿ) ನಿರಾಶಾ ಜನಕ ವಸ್ತು, ವಿಷಯ. (ಕ್ರಿ.) ನಿರಾಶನಾಗು; ಹತಾಶನಾಗು; ಆಶೆ ಬಿಡು; ಎದೆಗುಂದು; ಧೈರ್ಯಗೆಡು (His life is despaired of ಅವನು ಉಳಿಯುವ ಆಶೆಯಿಲ್ಲ). **Despaíringly** (ಕ್ರಿ. ವಿ.); **Desperádo** ಡೆಸ್ಪೆರೇಡೊ (ನಾ.) ಯಾವುದಕ್ಕೂ ಹೇಸದವನು (ಮು., ಪಾತಕ ಕೃತ್ಯದಲ್ಲಿ ತೊಡಗಿದವನು); ಹುಚ್ಚು ಸಾಹಸಿ. **Désperate** ಡೆಸ್ಪೆರೆಟ್ (ಗು.) ಸ್ವಲ್ಪವೂ ಆಶೆಯುಳಿಯದ; ನಿರಾಶ; ಹತಾಶ; ನಿರಾಶಾ ಕರ; ಅತ್ಯಂತ ಅಪಾಯಕರವಾದ; ಉಗ್ರ; ದುರ್ಘಟ; ಅಸಾಧ್ಯ; ನಿರಾಶೆಯಿಂದ ಏನನ್ನೂ ಲಕ್ಷ್ಯಮಾಡದ; ಉಚ್ಛೃಂಖಲ; ಯಾವುದಕ್ಕೂ ಹೇಸದ; ಅತಿ ಸಾಹಸದ; ಅತ್ಯಂತ ಕೇಡಿನ (A d. storm ಹುಚ್ಚು ಬಿರುಗಾಳಿ); ಅತ್ಯಂತ ಹೆಚ್ಚಾದ; ವಿಪರೀತ (A d. fool ವಿಪರೀತ ಮುಟ್ಠಾಳ). **Désperately** (ಕ್ರಿ. ವಿ.); **Désperateness** (ನಾ.); **Desperátion** (ನಾ.)

Despátch. **Dispatch** ನೋಡಿ.

Desperádo, Désperate, etc. **Despair** ನೋಡಿ.

Déspicable. **Despise** ನೋಡಿ.

Despíse ಡಿಸ್‌ಪೈಸ್ (ಕ್ರಿ. ಸಕ.) ಹೇಯವಾಗಿ, ತುಚ್ಛವಾಗಿ, ಕಾಣು; ಹೀನಯಿಸು; ಕಡೆಗಣಿಸು; ಉಪೇಕ್ಷಿಸು; ಏಳಿಸು (ಗ್ರಾಂ.); ಇಳಿಕೈ (ಗ್ರಾಂ.); ಜರೆ; ನಿರ್ಲಕ್ಷಿಸು. **Déspicable** ಡೆಸ್ಪಿಕಬ್‌ಲ್ (ಗು.) ಹೇಯ; ತುಚ್ಛ; ಕುತ್ಸಿತ; ಅಲ್ಪ; ನೀಚ; ಕ್ಷುದ್ರ; ಅಧಮ; ತಿರಸ್ಕಾರ ಯೋಗ್ಯ. **Déspicably** (ಕ್ರಿ. ವಿ.)

Despíte ಡಿಸ್ಪೈಟ್ (ನಾ., ಉಪ.) (ಪ್ರಾಚೀ. ಪ್ರ.) ಅತ್ಯವಮಾನ; ಕೆಡುಕು; ಕಡೆಗಣಿಕೆ; ಧಿಕ್ಕಾರ; ತಿರಸ್ಕಾರ. ದ್ವೇಷ; ಆಕ್ರೋಶ; ಮಾತ್ಸರ್ಯ; ಕ್ರೋಧ; ಹಗೆ; ಮಾನ ಭಂಗ (Died of mere d. ಅಹಂಕಾರ ಮುರಿದುದರಿಂದ ಸತ್ತುಹೋದನು). In d. of, D. of, D. ಆದರೂ; ಪ್ರತಿಬಂಧಕವಿದ್ದರೂ; ವಿರುದ್ಧ ಭಾವವಿದ್ದರೂ. In my d. (ಪ್ರಾಚೀ. ಪ್ರ.) ನನ್ನ ಪ್ರಯತ್ನವೇನೂ ಸಾಗದೆ. **Despíteful** (ಗು.); **Despítefully** (ಕ್ರಿ. ವಿ.)

Despoíl ಡಿಸ್ಪಾಯ್‌ಲ್ (ಕ್ರಿ. ಸಕ.) ಸುಲಿಗೆ ಮಾಡು; ಸುಲಿ; ಕೊಳ್ಳೆ ಹೊಡೆ; ಸೂರೆ ಮಾಡು; ಲೂಟಿ ಮಾಡು; ಅಪಹರಿಸು; ಬರಿದು ಮಾಡು; ಶೂನ್ಯ ಮಾಡು. **Despoíler** (ನಾ.); **Despoílment** (ನಾ.); **Despoliátion** ಡಿಸ್ಪೋಲಿಯೇಷನ್ (ನಾ.)

Despónd ಡಿಸ್ಪಾಂಡ್ (ಕ್ರಿ. ಅಕ., ನಾ.) ಎದೆಗುಂದು; ನಿರಾಶನಾಗು; ನಿರುತ್ಸಾಹನಾಗು; ಮಂಕು ಕವಿದಿರು; ವಿಷಣ್ಣನಾಗು. (ನಾ.) (ಪ್ರಾಚೀ. ಪ್ರ.) 'Slough of D. ನಿರಾಶೆಯೆಂಬ ಹೂಳು' ಎಂಬಲ್ಲಿ ಮಾತ್ರ. **Despóndence** (ನಾ.); **Despóndency** (ನಾ.); **Despóndent** (ಗು.); **Despóndently** (ಕ್ರಿ. ವಿ.); **Despóndingly** (ಕ್ರಿ. ವಿ.)

Déspot ಡೆಸ್ಪಟ್ (ನಾ.) ನಿರಂಕುಶ ಪ್ರಭು, ರಾಜ; ಕ್ರೂರ ರಾಜ; ಪ್ರಜಾ ಪೀಡಕ ದೊರೆ; ದಬ್ಬಾಳಿಕೆಯ ಅಧಿಕಾರಿ. **Despótic** ಡೆಸ್ಪಾ — (ಗು.); **Despótically** (ಕ್ರಿ. ವಿ.); **Déspotism** ಡೆಸ್ಪಟಿಸ್ಮ್ (ನಾ.) ನಿರಂಕುಶ ಪ್ರಭುತ್ವ; ನಿರಂಕುಶ ಪ್ರಭು ದೇಶ. **Déspotist** — ಟಿಸ್ಟ್ (ನಾ.) ನಿರಂಕುಶ ಪ್ರಭುತ್ವ ವಾದಿ.

Désquamate ಡೆಸ್ಕ್ವಮೇಟ್ (ಕ್ರಿ.) ಚರ್ಮ ಸುಲಿ (ಭೂ. ಕೃ. ನಲ್ಲ); ಹುರುಪೇಳು; ಶಲ್ಕಗಳಾಗಿ ಬರು. **Desquamátion** (ನಾ.); **Desquámative** ಡಿಸ್ಕ್ವ್ಯಾಮಟಿವ್ (ಗು.); **Desquámatory** — ಮಟೋರಿ, — ಮಟರಿ (ಗು.)

Dessért ಡೆಸರ್ಟ್ (ನಾ.) ಊಟ ಮುಗಿದಮೇಲೆ ಬಡಿಸುವ ಹಣ್ಣು, ಸೀಭಕ್ಷ್ಯ, ಮೊ. ವು. **D.-spoon** (ಇದನ್ನು ತಿನ್ನುವುದಕ್ಕಾಗಿ ಉಪಯೋಗಿಸುವ) ಮಧ್ಯದಳತೆಯ ಚಮಚ; ಹಣ್ಣು ಚಮಚ.

Destinátion. **Destine** ನೋಡಿ.

Déstine ಡೆಸ್ಟಿನ್ (ಕ್ರಿ. ಸಕ.) ನಿಯಮಿಸು; ಮೊದಲೇ ಗೊತ್ತುಮಾಡು; ನಿರ್ದೇಶಿಸು; ವಿನಿಯೋಗಿಸು; ಉದ್ದೇಶಿಸು. . ಮೀಸಲಾಗಿರು; — ಇಡು (ಮು., ಕರ್ಮಣಿಯಲ್ಲಿ). He was destined to suffer ಅನುಭವಿಸುವುದು ಅವನ ಹಣೆಯಲ್ಲಿ ಬರೆದಿತ್ತು. **Destinátion** (ನಾ.) (ವ್ಯಕ್ತಿಯಾಗಲಿ ವಸ್ತುವಾಗಲಿ) ಹೋಗಿ ಸೇರಬೇಕಾದ ಸ್ಥಳ; ಗಮ್ಯಸ್ಥಾನ. ಉದ್ದೇಶ; ಗುರಿ; ಧ್ಯೇಯ; ಕೊನೆ. **Déstiny** (ನಾ.) ಹಣೆಯಬರಹ; ದೈವ; ವಿಧಿ; ಅದೃಷ್ಟ; ನಿಯತಿ. (ವ್ಯಕ್ತಿ, ರಾಜ್ಯ, ಮೊ. ಗಳ) ಅಂತ್ಯ; ಪರ್ಯವಸಾನ.

Déstitute ಡೆಸ್ಟಿಟ್ಯೂಟ್ (ಗು.) ನಿರ್ಗತಿಕ; ದರಿದ್ರ; ರಿಕ್ತ; ದೀನ; ಜೀವನಾಧಾರವಿಲ್ಲದ. ಇಲ್ಲದ; ಶೂನ್ಯ; ರಹಿತ. **Destitútion** (ನಾ.)

Déstrier ಡೆಸ್ಟ್ರಿಅರ್ (ನಾ.) (ಚರಿತ್ರೆ) ಸೈನ್ಯದ ಕುದುರೆ; ಯುದ್ಧಾಶ್ವ.

Destroý ಡಿಸ್ಟ್ರಾಯ್ (ಕ್ರಿ. ಸಕ.) ನಾಶಮಾಡು; ಹಾಳುಮಾಡು; ಧ್ವಂಸಮಾಡು; ಅಳಿ; ಅಳಿಸು; ಉರುಳಿಸು; ನಿಷ್ಫಲಗೊಳಿಸು; ಅನುಪಯೋಗ ಮಾಡು. ಕೊಲ್ಲು; ನಿರ್ನಾಮ ಮಾಡು; ತೊಡೆದುಹಾಕು; ಹೊಡೆದುಹಾಕು; ಅಳಿಸಿಬಿಡು; ನಿಷ್ಪ್ರಯೋಜನ ಮಾಡು. **Destroýable** (ಗು.); **Destroýer** (ನಾ.) (ಕ್ರಿಯಾರ್ಥಗಳಲ್ಲಿ); 'Torpedo-boat d.' ಎಂಬುದರ ಸಂಕ್ಷಿಪ್ತ. **Destrúctible** ಡಿಸ್ಟ್ರಕ್ಟಿಬ್‌ಲ್ (ಗು.) ನಾಶಗೊಳಿಸಲಾಗುವ; ನಾಶ ಸಾಧ್ಯ. **Destructibílity** (ನಾ.) ನಾಶ ಸಾಧ್ಯತೆ. **Destrúction** (ನಾ.) ಅಳಿವು; ನಾಶನ; ಹಾಳುಮಾಡುವುದು; ಧ್ವಂಸಗೊಳಿಸುವುದು; ನಾಶ; ಧ್ವಂಸ(ವಾಗುವುದು); ನಾಶ ಮಾಡುವುದು; ನಾಶ ಕಾರಣ; ನಾಶಕ. **Destrúctive** (ಗು., ನಾ.) ನಾಶ ಮಾಡುವ; ನಾಶಕರ; ವಿನಾಶಕಾರಕ; ಹಾನಿಕರ. (ವಿಮರ್ಶೆ, ರಾಜ್ಯನೀತಿ — ಇವುಗಳ ವಿಷಯದಲ್ಲಿ) ಖಂಡನಾತ್ಮಕ; ನೇರ್ಪಡಿಸುವ ಮಾರ್ಗ ಸೂಚಿಸದೆ ಸುಮ್ಮನೆ ಖಂಡಿಸುವ; ರಚನಾತ್ಮಕವಲ್ಲದ. (ನಾ.) ನಾಶಮಾಡಲು ಯತ್ನಿಸುವ, ನಾಶಮಾಡುವ, ವ್ಯಕ್ತಿ, ವಸ್ತು; ವಿನಾಶಕ; ನಾಶಕಾರಿ. **Destrúctively** (ಕ್ರಿ. ವಿ.); **Destrúctiveness** (ನಾ.); **Destrúctor** (ನಾ.) ಸೆತ್ತೆಸೆದೆಯನ್ನು ಸುಟ್ಟುಹಾಕುವ ಅಗ್ನಿಕೋಷ್ಠ.

Désuetude ಡೆಸ್ವಿಟ್ಯೂಡ್ (ನಾ.) ಬಳಕೆ ತಪ್ಪಿಹೋಗುವುದು; ಬಳಕೆಯಿಲ್ಲದ ಸ್ಥಿತಿ; ಅಪ್ರಚಾರ; ಅರೂಢಿ.

Desúlphurize ಡೀಸಲ್ಫರೈಸ್ (ಕ್ರಿ. ಸಕ.) ಗಂಧಕ ರಹಿತ ಮಾಡು; ನಿರ್ಗಂಧಕ ಮಾಡು. **Desúlphurizátion** (ನಾ.)

Désultory ಡೆಸಲ್ಟರಿ (ಗು.) ಒಂದು ವಿಷಯದಿಂದ ಮತ್ತೊಂದಕ್ಕೆ ಹಾರುವ; ಅಸಂಬದ್ಧ; ಒಂದು ಕ್ರಮವಿಲ್ಲದ; ನೆಲೆಯಿಲ್ಲದ; ಅವ್ಯವಸ್ಥಿತ. **Désultorily** (ಕ್ರಿ. ವಿ.); **Désultoriness** (ನಾ.)

Desynónymize ಡೀಸಿನಾನಿಮೈಸ್ (ಕ್ರಿ. ಸಕ.) (ಸಮಾನಾರ್ಥಕ ಪದಗಳಲ್ಲಿ) ಭಾವಭೇದ ಮಾಡು (ಉದಾ., ಸಮಾನಾರ್ಥಕಗಳಾದ 'ಕಣ',

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಕಳ' ಎಂಬ ಪದಗಳಲ್ಲಿ 'ಕಣ'ವನ್ನು ಕಾಳೊಕ್ಕುವ ಸ್ಥಳಕ್ಕೂ, 'ಕಳ'ವನ್ನು ಯುದ್ಧರಂಗಕ್ಕೂ ಪ್ರತ್ಯೇಕಿಸಿಡುವುದು)

Detách ಡಿಟ್ಯಾಚ್ (ಕ್ರಿ. ಸಕ.) ಕಳಚು ; ಕಳಚಿ ತೆಗೆ ; ಬಿಡಿಸು ; ಅಗಲಿಸು ; ಪ್ರತ್ಯೇಕ ಮಾಡು ; [Detached mind, view ನಿಷ್ಪಕ್ಷಪಾತ ಮನಸ್ಸು, ದೃಷ್ಟಿ. Detached house (ಮತ್ತೊಂದು ಮನೆಗೆ ಸಂಬಂಧವಿಲ್ಲದ) ಪ್ರತ್ಯೇಕವಾದ ಮನೆ]. (ನಾವೆ, ಪಡೆ, ಮೊ. ನ್ನು) ಬೇರೆ ಕೆಲಸಕ್ಕಾಗಿ ಕಳುಹಿಸು. **Detáchable** (ಗು.) ; **Detáchedly** (ಕ್ರಿ. ವಿ.) ; **Detáchedness** (ನಾ.) ; **Detáchment** (ನಾ.) ಪ್ರತ್ಯೇಕಿಸುವುದು ; ಬೇರೆ ಮಾಡುವುದು. ಬೇರೆ ಉದ್ಯೋಗಕ್ಕೆ ನಿಯಮಿಸಿದ ಸೇನಾ ಭಾಗ, ನೌಕಾ ಭಾಗ, ಅಥವಾ ದೊಡ್ಡ ದಳ. (ನೆರೆಹೊರೆ, ಜನಾಭಿಪ್ರಾಯ, ಮೊ. ಗಳಿಂದ ಬಾಧಿತವಾಗದೆ) ನಿರ್ಲಿಪ್ತವಾಗಿರುವುದು ; ನಿರ್ಲಿಪ್ತತೆ ; ಅನಾಸಕ್ತಿ ; ವಿರಕ್ತಿ ; ನಿಷ್ಪಕ್ಷಪಾತ. ವಿಚಾರ ಸ್ವಾತಂತ್ರ್ಯ. ತಾನೇ ಬೇರೆಯಾಗಿ ನಿಲ್ಲುವುದು ; ವಿವಿಕ್ತತೆ.

Détail ಡೀಟೆಯ್‌ಲ್, **Detaíl** ಡಿಟೆಯ್‌ಲ್ (ನಾ., ಕ್ರಿ. ಸಕ.) ಒಂದು ವಿಷಯವನ್ನು ಕೂಲಂಕಷವಾಗಿ, ಸಣ್ಣ ಸಣ್ಣ ಭಾಗಗಳನ್ನೆತ್ತಿಕೊಂಡು, ವಿಚಾರಮಾಡುವುದು. ವಿವರ ; ತಪಶೀಲು (In d. ವಿವರವಾಗಿ ; ಸವಿಸ್ತಾರವಾಗಿ ; ತಪಶೀಲಾಗಿ. Go into d. ಕೂಲಂಕಷವಾಗಿ ನೋಡು ; ತಪಶೀಲಾಗಿ ವಿಚಾರಮಾಡು. Army beaten in d. ಸೇನೆ ಸಣ್ಣ ಸಣ್ಣ ಪ್ರತ್ಯೇಕ ಕದನಗಳಲ್ಲಿ ಸೋತು). ತಪಶೀಲು ಲೆಕ್ಕ. ಭಿನ್ನ ಭಾಗ ; ಸೂಕ್ಷ್ಮಾಂಶ ; ಸಣ್ಣ ಅಥವಾ ಅಪ್ರಧಾನ ವಿಷಯ [But that is a d. ಆದರೆ ಅದು ಅಪ್ರಧಾನ ವಿಷಯ (ಸಾ., ವ್ಯಂಗ್ಯವಾಗಿ : ಹೆಚ್ಚು ಗಮನ ಸೆಳೆಯುವ ಉದ್ದೇಶದಿಂದ)]. ಕಟ್ಟಡ, ಚಿತ್ರ, ಮೊ. ಗಳಲ್ಲಿ ಅಪ್ರಧಾನ ಅಲಂಕಾರ ; ಈ ಅಲಂಕಾರ ರೀತಿ. (ಸೈನ್ಯ) (ಆ ದಿನದ) ಆಜ್ಞೆಗಳನ್ನು ಹಂಚುವುದು. ಪ್ರತ್ಯೇಕ ಕಾರ್ಯಕ್ಕೆ ನಿಯಮಿಸಿದ ಸಣ್ಣ ದಳ. (ಕ್ರಿ.) ತಪಶೀಲು ಕೊಡು ; ವಿವರವಾಗಿ, ವಿಸ್ತಾರವಾಗಿ, ಹೇಳು. (ಸೈನ್ಯ) ವಿಶೇಷ ಕಾರ್ಯಕ್ಕಾಗಿ ನಿಯಮಿಸು. **Détailed** — ಟೆಯ್‌ಲ್ಡ್ (ಗು.) ಸವಿಸ್ತರ.

Detain ಡಿಟೆಯ್‌ನ್ (ಕ್ರಿ. ಸಕ.) ಸೆರೆಯಲ್ಲಿಡು ; ಬಂಧನದಲ್ಲಿಡು. (ಕೊಡಬೇಕಾದ ಹಣ, ಮೊ. ನ್ನು) ಕೊಡದೆ ನಿಲ್ಲಿಸಿಕೊ, ಹಿಡಿದುಕೊ. ಕಾಯಿಸು ; ತಡೆ (ಮಾಡು) ; ಅಡ್ಡಿ ಮಾಡು. **Detaíner** (ನಾ.) (ನ್ಯಾ. ಶಾ.) ಸಾಲ, ಕಂದಾಯ, ಮೊ. ನ್ನು ತೀರಿಸದೆ ಹೋದುದಕ್ಕಾಗಿ ಜಪ್ತಿ ಮಾಡಿ ಹಿಡಿದ (ಚರ ಜಪ್ತಿಯ) ವಸ್ತುಗಳನ್ನು ಹಿಂದಕ್ಕೆ ಕೊಡದೆ ನಿಲ್ಲಿಸಿಕೊಳ್ಳುವುದು. (ವ್ಯಕ್ತಿಯನ್ನು) ಬಂಧನದಲ್ಲಿಡುವುದು. ಆಗಲೆ ದಸ್ತಗಿರಿಯಾದವನನ್ನು ಮತ್ತೊಂದು ಮೊಕದ್ದಮೆಗಾಗಿ ಸೆರೆಯಲ್ಲೇ ಇಟ್ಟುಕೊಂಡಿರುವಂತೆ ಕೊಟ್ಟ ಆಜ್ಞಾಪತ್ರ : ತಡೆಯಾಜ್ಞೆ.

Detéct ಡಿಟೆಕ್ಟ್ (ಕ್ರಿ. ಸಕ.) (ತಪ್ಪಿತಸ್ಥನನ್ನು, ಕೃತ್ಯ ನಡಸುತ್ತಿರುವವನನ್ನು, ತಪ್ಪನ್ನು) ಕಂಡುಹಿಡಿ ; ಗೊತ್ತು ಹಚ್ಚು ; ಪತ್ತೆ ಮಾಡು. **Detéctable** (ಗು.) ; **Detéction** (ನಾ.) ; **Detéctor** (ನಾ.) ; **Detéctive** (ಗು., ನಾ.) ಕಂಡುಹಿಡಿಯುವ ; ಪತ್ತೇದಾರಿ. ವಿಶೇಷದ ಮೊಕದ್ದಮೆಗಳನ್ನು ಪತ್ತೆ ಮಾಡುವುದಕ್ಕೆ ನಿಯಮಿತನಾದ ಪೊಲೀಸಿನವನು : ಪತ್ತೇದಾರಿ ಪೊಲೀಸಿನವನು ; ಪತ್ತೇದಾರ. Private d. ವೇತನಕ್ಕಾಗಿ ವಿಶೇಷದ ಪತ್ತೇದಾರಿ ಕೆಲಸವನ್ನು ಕೈಕೊಳ್ಳುವವನು : ಖಾಸಗಿ ಪತ್ತೇದಾರ. Amateur d. ಪೊಲೀಸು ಮೊಕದ್ದಮೆಗಳ ವಿಷಯದಲ್ಲಿ ಪತ್ತೇದಾರಿಯ ತತ್ತ್ವಗಳನ್ನು ಕಟ್ಟುವವನು. D. story ಪತ್ತೇದಾರಿ ಕಥೆ.

Detént ಡಿಟೆಂಟ್ (ನಾ.) ಯಂತ್ರಸಾಧನಗಳಲ್ಲಿ ಚಲನೆಯನ್ನು ತಡೆದಿಟ್ಟಿರುವ ಹಿಡಿಕೆ : ತಡೆ ಹಿಡಿಕೆ (ಅದನ್ನು ಕಳಚಿದರೆ ಚಲನ ಆರಂಭವಾಗಿ ಯಂತ್ರ ನಡೆಯುತ್ತ ಹೋಗುವುದು). (ಗಡಿಯಾರ, ಮೊ. ಗಳಲ್ಲಿ) ಗಂಟೆ ಹೊಡೆಯುವುದನ್ನು ನಿಯಂತ್ರಿಸುವ ಹಿಡಿಕೆ : ನಿಯಂತ್ರಕ. **Deténtion** (ನಾ.) ತಡೆಯುವುದು ; ತಡೆಯಲ್ಪಟ್ಟಿರುವುದು ; ತಡೆಹೊಂದಿರುವುದು. ತಡೆ ; ಬಂಧನ ; ಸೆರೆ (House of D. ಸೆರೆ ಮನೆ ; ಬಂಧನ ಗೃಹ). ಬಲಾತ್ಕಾರದ, ನಿರ್ಬಂಧದಿಂದಾದ, ತಡ ; ಕಾಲ ವಿಳಂಬ. (ಪಾಠಶಾಲೆಗಳಲ್ಲಿ) ಶಿಕ್ಷೆಮಾಡುವುದಕ್ಕಾಗಿ ಬಂಧನದಲ್ಲಿಟ್ಟಿರುವುದು.

Deténte (F) ಡೇಟಾಂಟ್ (ನಾ.) ರಾಷ್ಟ್ರಗಳಿಗಿದ್ದ ಪರಸ್ಪರ ವೈಮನಸ್ಯಗಳ ಪರಿಹಾರ, ಅಂತ್ಯ.

Detenú ಡೆಟನ್ಯೂ (ನಾ.) ಬಂಧನದಲ್ಲಿಡಲ್ಪಟ್ಟಿರುವವನು ; ಬಂದಿ (ಮು., ಇಂಡಿಯಾದಲ್ಲಿ ರಾಜಕೀಯ ಬಂದಿ). **Detenué** (ನಾ., ಸ್ತ್ರೀ.)

Detér ಡಿಟರ್ (ಕ್ರಿ. ಸಕ.) ಧೈರ್ಯಗುಂದಿಸು ; (ತೊಂದರೆ, ಮೊ. ದ ಭಯ ಹುಟ್ಟಿಸಿ) ಅಡ್ಡಿ ಮಾಡು, ತಡೆಯೊಡ್ಡು ; ಭಯಹುಟ್ಟಿಸು ; ಹೆದರಿಸು. ಹಿಮ್ಮೆಟ್ಟಿಸು ; ಹಿಂಜರಿಸು. **Detérment** (ನಾ.) ; **Detérrent** ಡಿಟೆರೆಂಟ್ (ಗು., ನಾ.) ಅಡ್ಡಿ ಮಾಡುವ ; ತಡೆಯೊಡ್ಡುವ (D. weather ತಡೆಯಾಗಿರುವ ವಾಯುಸ್ಥಿತಿ). ಅಡ್ಡಿ ಮಾಡುವುದು ; ತಡೆಯೊಡ್ಡುವುದು. **Detérrence** (ನಾ.)

Detérgent ಡಿಟರ್ಜೆಂಟ್ (ಗು., ನಾ.) ಶುದ್ಧ ಮಾಡುವ, ಕೊಳೆ ಕಳೆಯುವ (ವಸ್ತು) ; ಮಾರ್ಜಕ (ವಸ್ತು) ; ಶುದ್ಧಿಕಾರಕ. **Detérsive** — ಸಿವ್ (ಗು., ನಾ.) ಶುದ್ಧಿಕಾರಕ.

Detériorate ಡಿಟೀಯ್‌ರಿಯೊರೇಟ್ (ಕ್ರಿ.) ಕೀಳಾಗು ; ಬೀಳಾಗು ; ಕ್ಷೀಣವಾಗು ; — ವಾಗಿಸು ; ಕ್ಷಯಿಸು ; ಇಳಿಗುಂದು. **Deterioration** (ನಾ.) ; **Detériorative** (ಗು.) ಕ್ಷೀಣಗೊಳಿಸುವ ; ಕ್ಷೀಣವಾಗುತ್ತ ಹೋಗುವ.

Detérminant, etc. **Determine** ನೋಡಿ.

Detérmine ಡಿಟರ್ಮಿನ್ (ಕ್ರಿ.) (ಮು., ನ್ಯಾ. ಶಾ. ದಲ್ಲಿ) ಕೊನೆಗಾಣು ; — ಗಾಣಿಸು. ಕೊನೆಮುಟ್ಟು ; — ಮುಟ್ಟಿಸು ; ತೀರಿಸು. (ವ್ಯಾಜ್ಯ, ಮುಂದಿನ ಗತಿ, ಕರ್ತವ್ಯ, ಮೊ. ನ್ನು) ಬಗೆಹರಿಸು ; ಇತ್ಯರ್ಥ ಮಾಡು ; ಫೈಸಲು ಮಾಡು. ಮಿತಿ ಕಲ್ಪಿಸು ; ನಿರ್ಣಯಿಸು ; ನಿರ್ಧರಿಸು ; ನಿಶ್ಚಯಿಸು ; ನಿಷ್ಕರ್ಷಿಸು ; ಒಂದು ಗೊತ್ತಿಗೆ ಬರು ; ತೀರ್ಪು ಕೊಡು. (ದಿನವನ್ನು) ಮೊದಲೇ ಗೊತ್ತು ಮಾಡು. (ಒಂದು ವಿಚಾರದಲ್ಲಿ) ಖಂಡಿತ ಮಾಡುವ, ಗೊತ್ತಿಗೆ ಬರುವ, ಅಂಶವಾಗಿರು ; ನಿರ್ಧಾರಕವಾಗಿರು. (Demand determines supply ಗಿರಾಕಿಗೆ ತಕ್ಕಂತೆ ಸರಬರಾಯಿ). ಗುರಿ, ಉದ್ದೇಶ, ಇಡು. ಪ್ರೇರಿಸು. (ಒಬ್ಬನು) ಮಾಡತಕ್ಕದ್ದೆಂದು ನಿರ್ಣಯಿಸು. ಮನಸ್ಸು ಮಾಡು ; ಸಂಕಲ್ಪ ಮಾಡು (Be determined ಸಂಕಲ್ಪ ಮಾಡಿರು). **Detérminable** (ಗು.) ; **Detérminant** — ಮಿನಂಟ್ (ಗು., ನಾ.) ಸಂಕಲ್ಪ ಮಾಡುವ(ದು) ; ಗೊತ್ತು ಮಾಡುವ(ದು) ; ನಿರ್ಧಾರಕ ; ನಿರ್ಣಾಯಕ ; ನಿರ್ದೇಶಕ ; ನಿಷ್ಕರ್ಷಕ. (ಗಣಿತ) ಒಂದು ನಿರ್ದಿಷ್ಟ ಲಕ್ಷಣವುಳ್ಳ ಸಂಖ್ಯಾಪದ ವ್ಯೂಹದ ವಿನ್ಯಾಸ. **Detérminate** — ಮಿನೆಟ್ (ಗು.) ಪರಿಮಿತ ; ನಿರ್ದಿಷ್ಟ ; ಗೊತ್ತಾದ ; ಸ್ಪಷ್ಟ ; ನಿಷ್ಕೃಷ್ಟ ; ನಿರ್ಧಾರಿತ ; ನಿಯತ ; ಖಚಿತ. **Detérminately** (ಕ್ರಿ. ವಿ.) ; **Detérminateness** (ನಾ.) ; **Determinátion** (ನಾ.) ಕೊನೆಗಾಣಿಸುವುದು ; ಕೊನೆಗಾಣುವುದು ; ಕೊನೆಮುಟ್ಟುವುದು ; ಅಂತ್ಯ. (ಮು., ನ್ಯಾ. ಶಾ. ದಲ್ಲಿ) ಒಂದು ಆಸ್ತಿ ಅಥವಾ ಆಸ್ತಿಯಲ್ಲಿ ಪ್ರಯೋಜನಾಂಶ ನಿಂತುಹೋಗುವುದು. ವಾದದ, ಚರ್ಚೆಯ, ಅಂತ್ಯ, ಮುಗಿವು. (ಕೋರ್ಟಿನ) ತೀರ್ಪು, ನಿರ್ಣಯ, ಇತ್ಯರ್ಥ, ಫೈಸಲು. ಲಗ್ನ, ಕಾಲ, ಮೊ. ನ್ನು ನಿರ್ಣಯಿಸುವುದು : ಕಾಲ ನಿರ್ಣಯ. ನಿಷ್ಕರ್ಷೆ ; ನಿಶ್ಚಯ. ವ್ಯಾಪ್ತಿ ನಿರ್ಣಯ ; ಮಿತಿ ಕಲ್ಪನೆ. (ತರ್ಕ) (ಒಂದು ಭಾವನೆಗೆ ಅಥವಾ ಕಲ್ಪನೆಗೆ, ಅದರ ಮುಖ್ಯ ಲಕ್ಷಣಗಳನ್ನು ಕೊಟ್ಟು) ವ್ಯಾಪ್ತಿ ನಿರ್ಧಾರ ಮಾಡುವುದು, ಲಕ್ಷಣ ಹೇಳುವುದು. ಮೊತ್ತ, ಮೊ. ನ್ನು ಕರಾರುವಾಕ ತಿಳಿದುಕೊಳ್ಳುವುದು : ನಿಷ್ಕೃಷ್ಟ ಮಾಪನ. ಒಂದು ಗೊತ್ತಾದ ಗತಿ ; ನಿರ್ಣಾಯಕವಾದ ಒಲವು ; ಪ್ರವೃತ್ತಿ. [D. of blood (to some part) ರಕ್ತ (ಒಂದು ಅಂಗಭಾಗಕ್ಕೆ ಹೋಗುವ) ಪ್ರವೃತ್ತಿ ; ರಕ್ತದ ಹರಿತ]. ಉದ್ದೇಶ ನಿರ್ಧರಿಸುವುದು ; ನಿರ್ಧಾರ ; ಸಂಕಲ್ಪ ; ಗೊತ್ತಾದ ಅಭಿಪ್ರಾಯ ; ದೃಢ ಮನಸ್ಸು ; ಪಟ್ಟು. **Detérminative** — ಮಿನೆಟಿವ್ (ಗು., ನಾ.) ಒಂದು ಗೊತ್ತಾದ ಮಾರ್ಗದಲ್ಲಿ ಹೋಗುವಂತೆ ಪ್ರಚೋದಿಸುವ (ವಸ್ತು). ನಿರ್ಣಾಯಕ ; ನಿರ್ದೇಶಕ. ಉಪಲಕ್ಷಿಸುವ, ವಿಶೇಷಿಸುವ (ಲಕ್ಷಣ, ಪದ, ಲಾಂಛನ) ; ವಿಶಿಷ್ಟ ಲಕ್ಷಣವಾದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Detérmined — ಮಿಂಡ್ (ಗು.) (ಕ್ರಿಯಾರ್ಥಗಳಲ್ಲಿ). ದೃಢ; ಗಟ್ಟಿ ಮನಸ್ಸಿನ; ಹಿಂಜರಿಯದ; ಪಟ್ಟುಹಿಡಿದ. **Detérminism** — ನಿಸ್ಸ್‌ಮ್ (ನಾ.) (ಇಚ್ಛೆಯೇ ಅನ್ಯ ಶಕ್ತಿ ಸಂಸ್ಕಾರಗಳಿಗೆ ಅಧೀನವಾಗಿರುವುದರಿಂದ) ಮನುಷ್ಯನಿಗೆ ಇಚ್ಛಾಸ್ವಾತಂತ್ರ್ಯವಿಲ್ಲವೆಂಬ ವಾದ; ನಿಯತಿ ವಾದ; ಸಂಕಲ್ಪನಿರ್ಣಯ ವಾದ. **Detérminist** (ನಾ., ಗು.) ನಿಯತಿ ವಾದಿ; — ವಾದದ. **Deterministic** (ಗು.) — ವಾದದ; — ವಾದಿಯ.

Detérsive. Detergent ನೋಡಿ.

Detést ಡಿಟೆಸ್ಟ್ (ಕ್ರಿ. ಸಕ.) ಹೇಸು; ಅಸಹ್ಯಪಡು; ಜುಗುಪ್ಸೆಪಡು; ದ್ವೇಷಕಾರು. **Detéstable** (ಗು.); **Detéstableness** (ನಾ.); **Detéstably** (ಕ್ರಿ. ವಿ.); **Detestátion** ಡೀ (ಡೆ)— (ನಾ.) ಅತಿ ದ್ವೇಷ; ಜುಗುಪ್ಸೆ (Hold in d. ಹೇಸು; ಜುಗುಪ್ಸೆಪಡು). ದ್ವೇಷಕ್ಕೆ ಈಡಾದ ವ್ಯಕ್ತಿ, ವಸ್ತು.

Dethróne ಡಿಥ್ರೋನ್ (ಕ್ರಿ. ಸಕ.) (ದೊರೆಯನ್ನು) ಸಿಂಹಾಸನದಿಂದುರುಳಿಸು; ರಾಜ್ಯಾಧಿಕಾರ ಕಳೆ; ಪದಚ್ಯುತ ಮಾಡು. **Dethrónement** (ನಾ.)

Détinue ಡೆಟಿನ್ಯೂ (ನಾ.) (ನ್ಯಾ. ಶಾ.) Action of d. ಅನ್ಯಾಯವಾಗಿ ಹಿಡಿದುಹಾಕಿಕೊಂಡಿರುವ ವಸ್ತುವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಹಾಕಿದ ದಾವೆ: ಅಕ್ರಮ ನಿರೋಧ ದಾವೆ.

Détonate ಡೆ(ಡೀ)ಟೊನೇಟ್ (ಕ್ರಿ.) ದೊಡ್ಡ ಶಬ್ದದೊಡನೆ ಸಿಡಿ(ಸು); ಸ್ಫೋಟಿಸು; ಸ್ಫೋಟವಾಗು. **Detonátion** (ನಾ.) ಸಿಡಿತ; ಸ್ಫೋಟನ. **Détonative** (ಗು.) ಸಿಡಿಯುವ; ಸ್ಫೋಟಕ. **Détonator** (ನಾ.) ಸಿಡಿಸುವ ಸಾಧನ (ಮು., ಒಂದು ಸಿಡಿಗುಂಡಿನ ಭಾಗವಾಗಿ); ಸ್ಫೋಟಕ. ಮಂಜು ಸುರಿಯುತ್ತ ದಿಕ್ಕು ಕಾಣದೆ ಇರುವ ಸಂದರ್ಭದಲ್ಲಿ ಸಂಜ್ಞೆಗಾಗಿ ಸಿಡಿಸುವ ಸ್ಫೋಟಕ; ಕಾವಳದ ಸಂಜ್ಞೆ.

Detoúr ಡಿಟೂಅರ್, ಡೆಟೂರ್ (ನಾ.) ಸುತ್ತು ಹಾದಿ; ಬಳಸು ದಾರಿ; ಅಡ್ಡ ದಾರಿ (Make a d. ಅಡ್ಡ ದಾರಿ ಹಿಡಿ)

Detráct ಡಿಟ್ರ್ಯಾಕ್ಟ್ (ಕ್ರಿ.) ಒಟ್ಟಿನಿಂದ ತೆಗೆದುಹಾಕು; ಅಪಕರ್ಷಿಸು; ಕುಂದಿಸು; ಕಡಮೆ ಮಾಡು (ಮು., 'ಒಬ್ಬನಿಗೆ ಕೊಡಬಹುದಾದ ಗೌರವ, ಮೊ. ನ್ನು ಕಡಮೆಮಾಡು' ಎಂಬ ಅರ್ಥದಲ್ಲಿ); ಅವಮರ್ಯಾದೆ ಮಾಡು. **Detráction** (ನಾ.); **Detráctor** (ನಾ.) ಗೌರವ ಕುಗ್ಗಿಸುವವನು; ಮರ್ಯಾದೆ ಕಳೆಯುವವನು; ನಿಂದಕ; ದೂಷಕ. **Detráctive** (ಗು.) ಕಡಮೆ ಮಾಡುವ; ಕೊರತೆ ಮಾಡುವ, ದೂಷಣೆ ಮಾಡುವ.

Detraín ಡಿಟ್ರೆಯ್‌ನ್ (ಕ್ರಿ.) (ಸೈನ್ಯದಳ, ಮೊ.) ರೈಲುಬಂಡಿಯಿಂದ ಇಳಿಸು, ಇಳಿ.

Détriment ಡೆಟ್ರಿಮೆಂಟ್ (ನಾ.) ಕೆಡುಕು; ಕೇಡು; ಹಾನಿ; ನಷ್ಟ; ಬಾಧಕ (ಮು., Without d. to ಎಂಬಲ್ಲಿ). **Detriméntal** (ಗು., ನಾ.) ಕೆಡುಕು ಮಾಡುವ; ಹಾನಿಕರ; ಅಪಾಯಕರ; ನಷ್ಟಕರ. (ನಾ.) (ಅಸಂ.) (ಪಿತ್ರಾರ್ಜಿತದ ಹಕ್ಕಿಲ್ಲದ) ಕಿರಿಯ ಮಗ; (ಆದುದರಿಂದ) ಒಪ್ಪಿಗೆಯಾಗದ ಕನ್ಯಾರ್ಥಿ; ಇಷ್ಟನಲ್ಲದ ವರ. **Detriméntally** (ಕ್ರಿ. ವಿ.)

Detríted ಡಿಟ್ರೈಟೆಡ್ (ಗು.) (ಭೂ. ವಿ.) ಬಂಧನ ಸಡಿಲದ; ಪುಡಿಪುಡಿಯಾದ; ಸವೆದುಹೋದ. **Detrítion** ಡಿಟ್ರಿಷನ್ (ನಾ.) ಉಜ್ಜಿ ಸವೆದುಹೋಗುವುದು; ತೇದುಹೋಗುವುದು; ತೇಮಾನ; ಸವೆತ; ಕ್ಷಯ. **Detrítus** ಡಿಟ್ರೈಟಸ್ (ನಾ.) ಬಂಧನ ಸಡಿಲಹೋಗಿ, ಉಜ್ಜಿ, ಸವೆದು, ಆದ ಪದಾರ್ಥ (ಉದಾ., ಪುಡಿಗಲ್ಲು, ಮರಳು, ಮಣ್ಣು, ಮೊ.). **Detrítal** (ಗು.)

De tróp (F) ಡ ಟ್ರೋ (ಗು.) ಬೇಡವಾದ; ಇಷ್ಟವಿಲ್ಲದ; ಪ್ರತಿಬಂಧಕವಾಗಿರುವ; ಅಡ್ಡವಾಗಿರುವ.

Deuce[1] ಡ್ಯೂಸ್ (ನಾ.) (ಪಗಡೆಯಲ್ಲಿ) ದುಗ; (ಇಸ್ಪೀಟಿನಲ್ಲಿ) ಎರಡು; (ಟೆನಿಸ್ ಆಟದಲ್ಲಿ) ಎರಡು ಪಕ್ಷದವರ ಗೆಲ್ಲುಸಂಖ್ಯೆಯೂ ಒಂದೇ ಆಗಿದ್ದು ಯಾವುದಾದರೂ ಒಂದು ಪಕ್ಷದವರು ಗೆಲ್ಲಬೇಕಾದರೆ ಒಟ್ಟಿಗೆ ಎರಡು ಹೊಡೆತಗಳನ್ನು ಗೆಲ್ಲಬೇಕಾದ ಸ್ಥಿತಿ: ಸಮ.

Deuce[2] ಡ್ಯೂಸ್ (ನಾ.) ಕೇಡು; ದುರದೃಷ್ಟ; ಕಾಟ; ಪೀಡೆ; ಶನಿ; ದೆವ್ವ; ಹಾಳು; ಸೈತಾನ (D. take it ಹಾಳಾಗಿ ಹೋಗಲಿ. What the d.! ಏನು ಹಾಳು! The d. is in it if I cannot ನನ್ನ ಕೈಯಲ್ಲಿ ಖಂಡಿತವಾಗಿ ಆಗುತ್ತದೆ. Play the d. with ಕೆಡಿಸಿಬಿಡು; ಹಾಳುಮಾಡು; ಕಾಟ ಕೊಡು. The d. to pay ತೊಂದರೆ ಬಂದೀತು; ಬರಲಿರುವ ಕೇಡು; ಕಾಟ; ಪೀಕಲಾಟ. A d. of a mess ಹಾಳು ತೊಡಕು. D. a bit ಲವಲೇಶವೂ ಇಲ್ಲ. The d. he isn't ಅವನಲ್ಲವೆಂದು ನಂಬಲಾಗುವುದಿಲ್ಲ. **Deúced** ಡ್ಯೂಸೆಡ್, **Deuced** ಡ್ಯೂಸ್ಟ್ (ಗು., ಕ್ರಿ. ವಿ.) ಅವ್ಯವಸ್ಥೆಯಾದ; —ಯಾಗಿ; ಅತಿ; ವಿಪರೀತ (In a d. hurry ವಿಪರೀತ ಅವಸರದಲ್ಲಿ). **Deúcedly** ಡ್ಯೂಸೆಡ್ಲಿ (ಕ್ರಿ. ವಿ.)

Déus ex máchina (L) ಡೀಅಸ್ ಎಕ್ಸ್ ಮ್ಯಾಕಿನ (ನಾ.) (ಮು., ನಾಟಕ ಕಾದಂಬರಿಗಳಲ್ಲಿ) ಕಷ್ಟ ಪರಿಹಾರಮಾಡಲು ತಕ್ಕ ಸಮಯದಲ್ಲಿ ಬರುವ ಶಕ್ತಿವಿಶೇಷ, ಘಟನೆ; ದೈವ ಘಟನೆ.

Déus misereátur (L) ಡೀಅಸ್ ಮಿಸೆರಿಏಟರ್ (ನಾ.) "ದೇವರೇ ಕರುಣಿಸು" ಎಂಬ ಪವಿತ್ರ ಗೀತ.

Deuteragónist ಡ್ಯೂಟೆರಗೋನಿಸ್ಟ್, **Deuterágonist** -ರ್ಯಾಗೊ- (ನಾ.) (ಗ್ರೀಕ್ ನಾಟಕದಲ್ಲಿ) ಮುಖ್ಯ ನಟನಿಗೆ ಎರಡನೆಯವನು: ದ್ವಿತೀಯ ನಟ.

Deútero- ಡ್ಯೂಟೆರೊ — (ಸ. ಪೂ. ಪ.) ಎರಡನೆಯ —; ದ್ವಿತೀಯ —; **Deuterógamy** —ರಾಗಮಿ (ನಾ.) ಮೊದಲನೆಯ ಹೆಂಡತಿ (ಅಥವಾ ಗಂಡ) ಸತ್ತಮೇಲೆ ಮಾಡಿಕೊಳ್ಳುವ ಎರಡನೆಯ ಮದುವೆ: ದ್ವಿತೀಯ ದಾಂಪತ್ಯ.

Deuterónomy ಡ್ಯೂಟೆರಾನೊಮಿ, **Deú-** — ರೊನಾಮಿ (ನಾ.) ಬೈಬಲ್ಲಿನ ಹಳೆಯ ಒಡಂಬಡಿಕೆಯ ಮೊದಲನೆಯ ಪಂಚಕದ ಐದನೆಯ ಪುಸ್ತಕ. **Deuteronómic(al)** —ರೊನಾಮಿ —(ಗು.); **Deuteró-nomist** —ರಾನೊಮಿಸ್ಟ್ (ನಾ.) ಬೈಬಲ್ಲಿನ ಮೊದಲನೆಯ ಪಂಚಕದ ಐದನೆಯ ಪುಸ್ತಕದ ಕರ್ತ(ರು), ಸಂಕಲನಕಾರ.

Dévastate ಡೆವಸ್ಟೇಟ್ (ಕ್ರಿ. ಸಕ.) ಪಾಳುಗೆಡವು; ನಾಶಗೊಳಿಸು; ಧ್ವಂಸ ಮಾಡು. **Devastátion** (ನಾ.); **Dévastator** (ನಾ.)

Devélop(e) ಡಿವೆಲೊಪ್ (ಕ್ರಿ.) ಅರಳು; ಅರಳಿಸು; ಹೊಮ್ಮು; ಹೊಮ್ಮಿಸು; ವಿಕಸಿಸು; ವ್ಯಕ್ತ ಮಾಡು; — ವಾಗು; ಪ್ರಕಾಶ ಮಾಡು; — ವಾಗು; ಪ್ರಕಟ ಮಾಡು; — ವಾಗು. ಅವ್ಯಕ್ತ ಸ್ಥಿತಿಯಿಂದ ವ್ಯಕ್ತವಾದ ಅಥವಾ ಚಟುವಟಿಕೆಯ ಸ್ಥಿತಿಗೆ ತರು, ಬರು. ಬೆಳೆ; ಬೆಳೆಯುತ್ತಹೋಗು; ವೃದ್ಧಿಯಾಗು; ನೆರೆ; ಬಲಿ. (ದಾಳಿಗೆ, ಆಕ್ರಮಣಕ್ಕೆ) ಆರಂಭಿಸು. ಪೂರ್ತಿಯಾಗಿ, ದೊಡ್ಡದಾಗಿ, ವಿಸ್ತಾರವಾಗಿ, ಯಥಾಕ್ರಮವಾಗಿ, ಮಾಡು, ಆಗು. (ಛಾಯಾ ಚಿತ್ರ) ಚಿತ್ರ ತೆಗೆದ ಫಲಕವನ್ನು, ಪಟಲವನ್ನು, ಚಿತ್ರ ಹೊಮ್ಮುವಂತೆ ಸಂಸ್ಕರಿಸು; ಸ್ಫುಟಗೊಳಿಸು. ಅಭಿವೃದ್ಧಿಯಾಗು; — ಮಾಡು. ತೋರಿಸಿಕೊ (Has developed a tendency to ಆ ಕಡೆಗೆ ಪ್ರವೃತ್ತಿ ಬೆಳಸಿಕೊಂಡಿದ್ದಾನೆ). ಪಕ್ವಕ್ಕೆ ಬರು, ತರು; ಪಕ್ವವಾಗು. **Devélopable** (ಗು.); **Devéloper** (ನಾ.) (ಕ್ರಿಯಾರ್ಥಗಳಲ್ಲಿ). (ಛಾಯಾಚಿತ್ರ ಕ್ರಿಯೆಯಲ್ಲಿ) ಚಿತ್ರವನ್ನು ಸ್ಫುಟಗೊಳಿಸುವ ರಾಸಾಯನಿಕ ಕಾರಕ: ಸ್ಫುಟೀ ಕಾರಕ. **Devélop(e)ment** (ನಾ.) ಕ್ರಮೇಣ ವಿಕಸಿಸುವುದು, ಅರಳುವುದು; ಕ್ರಮ ವಿಕಸನ; ಅಭಿವೃದ್ಧಿಗೊಳಿಸುವುದು. ಬೆಳವಣಿಗೆ; ವೃದ್ಧಿ; ವಿಕಾಸ; (ಪ್ರಾಣಿ ಮತ್ತು ಸಸ್ಯವಂಶಗಳ) ವಿಕಸನ. ನೆರತೆ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಕ್ವಾವಸ್ಥೆ ; ಪರಿಣಾಮ ; ಅಭಿವೃದ್ಧಿ ಸ್ಥಿತಿ. ಉತ್ಪನ್ನ. ವಿಸ್ತೃತ ರೂಪ. ಛಾಯಾಚಿತ್ರ ಸ್ಫುಟೀಕರಣ. **Developméntal** (ಗು.) ಬೆಳವಣಿಗೆಗೆ ಸಹಜವಾದ (D. diseases). ವಿಕಾಸಾತ್ಮಕ. **Devélopméntally** (ಕ್ರಿ. ವಿ.)

Déviate ಡೀವಿಯೇಟ್ (ಕ್ರಿ. ಅಕ.) ಮುರಿ ; (ಓರೆಗೆ) ತಿರುಗು ; ಕೊಂಕು ; (ಋಜುಮಾರ್ಗ, ನಿಯಮ, ನಿಶ್ಚಯ, ಮೊ. ಗಳಿಂದ) ಅಡ್ಡಮಾರ್ಗಕ್ಕೆ ಹೋಗು ; ಮಾರ್ಗ ಬಿಟ್ಟು ಹೋಗು ; ದಾರಿ ತಪ್ಪು. **Deviátion** (ನಾ.) (ಕ್ರಿಯಾರ್ಥಗಳಲ್ಲಿ). ಹಡಗು, ಮೊ. ಗಳಲ್ಲಿಯ ಕಬ್ಬಿಣದ ಪದಾರ್ಥದಿಂದಾದ ದಿಕ್ಸೂಚಿಯ ಒಲವು. ಸಹಜಸ್ಥಾನ ಬಿಟ್ಟು ತಿರುಗಿದ ದೃಗಕ್ಷದ ಒಲವು : ದಿಕ್ಚ್ಯುತಿ.

Devíce ಡಿವೈಸ್ (ನಾ.) (ಪ್ರಾಚೀ. ಪ್ರ.) ರಚನೆ ; ಮಾಟ ; ನಿರ್ಮಾಣ ; ನೋಟ (Things of strange d. ವಿಚಿತ್ರ ಮಾಟದ, ನೋಟದ, ವಸ್ತುಗಳು). (ಬ. ವ. ದಲ್ಲಿ) ಭಾವನೆ ; ಚಿತ್ತವೃತ್ತಿ ; ಮನಸ್ಸು ; ಇಷ್ಟ (Left to one's own devices ಸ್ವಂತ ಏರ್ಪಾಡಿಗೆ ಬಿಟ್ಟ). ನಕ್ಷೆ ; ಕಾರ್ಯಕ್ರಮ ರಚನೆ ; ವ್ಯವಸ್ಥೆ ; ಕಲ್ಪನೆ. ತಂತ್ರ ; ಹೂಟ ; ಉಪಾಯ ; ಯುಕ್ತಿ ; ಸಾಧನ ; ಸಲಕರಣೆ. ಒಂದು ಉದ್ದೇಶಕ್ಕಾಗಿ ಅನುಕೂಲಪಡಿಸಿಕೊಂಡ ವಸ್ತು. ರೇಖನ ; ಚಿತ್ರ ; ವಂಶಲಾಂಛನ ಚಿಹ್ನೆ ; ಮುದ್ರಿಕೆ.

Dévil ಡೆವ್‌ಲ್, ಡೆವಿಲ್ (ನಾ.) (The D. ಪಾಪಮೂರ್ತಿ ; ದುಷ್ಟಾತ್ಮ ; ಜನವಿಮೋಹಕ ; ದೈವದ್ವೇಷಿ ; ಸೈತಾನ). ಅಕ್ರೈಸ್ತ ದೇವತೆ. ದೆವ್ವ (ದೆವ್ವು) ; ಭೂತ ; ಪಿಶಾಚಿ ; ಪೀಡೆ. ದುಷ್ಟ ; ಕೆಡುಕಿ ; ಕೇಡಿಗ ; ಕ್ರೂರಿ. ಅತಿ ಜಾಣ ; ಚತುರ. ಧೂರ್ತ ; ತಂತ್ರಿ. ಹರ ಮಾರಿ. ಅದೃಷ್ಟ ಹೀನ ; ಮಂದಭಾಗ್ಯ (Poor d.). ತುಂಟ ಮೃಗ. ಮುಖಂಡನಿಗಾಗಿ ಕೆಲಸಮಾಡುವ ಕೆಳದರ್ಜೆಯ ನ್ಯಾಯವಾದಿ (Attorney-General's d. ಶ್ರೇಷ್ಠನ್ಯಾಯವಾದಿಯ ಸಹಾಯಕ). ವೇತನ ಕೊಟ್ಟು ನಿಯಮಿಸಿಕೊಂಡಿರುವವನಿಗೆ ಹೆಸರುಬರುವುದಕ್ಕಾಗಿ ದುಡಿಯುವ ಬರಹಗಾರ. (Printer's d. ಮುದ್ರಣ ಕಚೇರಿಯಲ್ಲಿ ಕೆಲಸ ಗಾರರಿಗಾಗಿ ದುಡಿಯುವವನು). ಮೂರ್ತೀಕರಿಸಿದ ದುರ್ಗುಣ (The d. of greed ಆಶಾ ಪಿಶಾಚ). ಕಾದಾಡುವ ಹುಮ್ಮಸ್ಸು ; ಆಸುರೀ ಭಾವ. ಮೇಲೆಬೀಳುವುದರಲ್ಲಿ, ದಾಳಿಯಿಡುವುದರಲ್ಲಿ, ಆಕ್ರಮಣದಲ್ಲಿ, ರಭಸ. ಕೆಲವು ಬಗೆಯ ಮೃಗಜಾತಿ, ಪಕ್ಷಿಜಾತಿ, ಬಾಣ ಬಿರುಸು, ಆಯುಧ, ಮೊ. ಗಳ ಹೆಸರು. ಹೆಚ್ಚು ರುಚಿಯಾಗಿರುವಂತೆ ಅಟ್ಟ ಭಕ್ಷ್ಯ (Devilled bones). A d. of a- ಅನಿಷ್ಟ — ; ಶನಿ — ; ವಿಚಿತ್ರ — ; ಅದ್ಭುತ—. — is the d. ದೊಡ್ಡ ತೊಂದರೆ, ಪೀಡೆ. Like the d. ದೆವ್ವದಂತೆ ; ಬಹಳ ಸಾಹಸದಿಂದ. Go to the d. ಹಾಳಾಗಿ ಹೋಗು ; ತೊಲಗಿಹೋಗು. The d.! (ಜುಗುಪ್ಸೆ ಅಥವಾ ಆಶ್ಚರ್ಯದ ಉದ್ಗಾರ) : ಹಾಳು ! ಶನಿ ! D. a one ಒಂದೂ ಅಲ್ಲ. The d. and all ಕೆಟ್ಟದ್ದೆಲ್ಲ. Between the d. and the deep sea ಅತ್ತ ಹುಲಿ, ಇತ್ತ ದರಿ ; ಉಭಯ ಸಂಕಟಕ್ಕೆ ಸಿಕ್ಕಿ ; ಇಕ್ಕಟ್ಟಿನಲ್ಲಿ. Devils-on-horseback ಹಂದಿಯ ಮಾಂಸದ ಚೂರುಗಳಲ್ಲಿ 'ಆಯ್‌ಸ್ಟರ್' ಎಂಬ ಸಿಂಪಿಯ ಮೃದ್ವಂಗಿಯನ್ನು ಸೇರಿಸಿ ಮಾಡಿದ ಭಕ್ಷ್ಯ ವಿಶೇಷ. D. take the hindmost ಹಿಂದಿನವನು ಹಾಳಾಗಿಹೋಗಲಿ (ಸ್ವಾರ್ಥಪರತೆಯ ಪೈಪೋಟಿಯ ನೀತಿ). Give the d. his due ಯಾವನೇ ಆಗಲಿ, ನಿನಗೆ ಬೇಡದವನಾಗಿದ್ದರೂ, ಅವನಿಗೆ ಸಲ್ಲತಕ್ಕ ಗೌರವ ಕೊಡು. ಗುಣಕ್ಕೆ ಮತ್ಸರವೆ ? The d. to pay ಮುಂದೆ ಕಷ್ಟವಿದೆ. Talk of the d. and he will appear ನೆನೆದರೆ ಅಲ್ಲೇ ಬಂದ (ಒಬ್ಬನ ವಿಷಯವಾಗಿ ಮಾತನಾಡುತ್ತಿರುವಾಗ ಅವನು ಅಕಸ್ಮಾತ್ತಾಗಿ ಅಲ್ಲಿಗೆ ಬಂದರೆ ಹೇಳುವ ಮಾತು). The d. among the tailors ಗೊಂದಲ ; ಗರಾಟೆ ; ಗಲಭೆ ; ಗಲಬಿಲ ; ದೊಂಬಿ. D. on two sticks ಒಂದು ತೆರದ ಆಟ. D.'s advocate, -acy (ಕ್ರೈಸ್ತ) ಸಾಧು ಸಂತರಪಟ್ಟಿಯಲ್ಲಿ ಒಬ್ಬ ಸಾಧುವನ್ನು ಸೇರಿಸುವುದಕ್ಕೆ ಪ್ರತಿಪಕ್ಷ ಹೇಳುವವನು : ಸೈತಾನಿನ ವಾದಿ ; (ರೂಪ.) ಅಲ್ಲಗಳೆಯುವವನು ; ದೂಷಕ ; ಅಲ್ಲಗಳೆಯುವುದು. D.'s bedpost ಇಸ್ಪೀಟಿನ ಕಳಾವರು ನಾಲ್ಕನೆಯ ಬಂದು. D.'s bones (ಪಗಡೆಯ) ದಾಳಗಳು ; ನೆತ್ತ. D.'s books ಇಸ್ಪೀಟು ಕಟ್ಟು. D.'s tattoo ಕೆಲಸವಿಲ್ಲದೆ ಬೆರಳಿನಿಂದ ಭೇರಿ ಹೊಡೆಯುವುದು. D.'s-bit ಸಸ್ಯವಿಶೇಷ. D.'s coach-horse ಒಂದು ಜಾತಿಯ ಜೀರುಂಡೆ. D.'s dust ಹಳೆಯ ಚಿಂದಿಯಿಂದ ತೆಗೆದ ದಾರ (ಅಗ್ಗದ ಬಟ್ಟೆ ಮಾಡಲು ನೆಯ್ಯುವುದಕ್ಕಾಗಿ). D.-dodger (ಕ್ರೈಸ್ತ) ಉಪದೇಶಿ, ಪಾದ್ರಿ. D.-fish (ಹಲವು ಜಾತಿಯ ಮೀನುಗಳ ಹೆಸರು). D.-may-care ನಿರ್ಲಕ್ಷ್ಯವಾದ ; ಯಾವುದನ್ನೂ ಲಕ್ಷಿಸದೆ ನೆಗೆದಾಡುವ. **Dévildom** (ನಾ.) ಸೈತಾನಿನ, ದೆವ್ವದ, ರಾಜ್ಯ ; ಸೈತಾನಿನ ಕಾರ್ಯಕ್ಷೇತ್ರ. ದೆವ್ವಗಳ ಸ್ಥಿತಿ ; ಪಿಶಾಚತ್ವ. **Dévilhood** (ನಾ.) ದೆವ್ವದ ಸ್ಥಿತಿ ; ಪಿಶಾಚತ್ವ. **Dévilward(s)** (ಕ್ರಿ. ವಿ.) ಪಿಶಾಚ ಮಾರ್ಗದಲ್ಲಿ. **Dévilish** (ಗು., ಕ್ರಿ. ವಿ.) ದೆವ್ವದಂತೆ (ಇರುವ) ; ಪಿಶಾಚ ಯೋಗ್ಯ ; ಪೈಶಾಚ ; ಅತಿ ದುಷ್ಟ. (ಕ್ರಿ. ವಿ.) ವಿಪರೀತವಾಗಿ ; ಮಹಾ ; ಪರಮ. **Dévilishly** (ಕ್ರಿ. ವಿ.) ; **Dévilishness** (ನಾ.) ; **Dévilism** (ನಾ.) ಪಿಶಾಚತ್ವ ; ಪಿಶಾಚಾರಾಧನೆ. **Dévilment** (ನಾ.) ಚೇಷ್ಟೆ ; ಕಾಟ ; ಕೆಡುಕು ; ಕೇಡು. ಪಿಶಾಚೋತ್ಸಾಹ. ಪೈಶಾಚಿಕ ದೃಶ್ಯ. **Dévilry, -try** (ನಾ.) ಮಾಟ ; ಇಂದ್ರಜಾಲ ; ಯಕ್ಷಿಣಿ ; ಪಿಶಾಚ ಕಾರ್ಯ. ಕೆಟ್ಟತನ ; ದುಷ್ಟತನ ; ಕ್ರೌರ್ಯ ; ಕಾಟ. ಸಾಹಸ. ಉನ್ಮಾದಾನಂದ. ಪಿಶಾಚ ಶಾಸ್ತ್ರ ; ಪಿಶಾಚಿಗಳು.

Dévil (ಕ್ರಿ.) (ಸಾ., ಯಜಮಾನನ ಉಪಯೋಗಕ್ಕಾಗಿ) ನ್ಯಾಯವಾದಿಯ ಅಥವಾ ಗ್ರಂಥಕರ್ತನ ಕೆಲಸಗಾರನಾಗಿ ದುಡಿ ; ದೆವ್ವದಂತೆ ದುಡಿ. ಕಾರದ ಮಸಾಲೆ ಹಾಕಿ ಅಡು, ಸುಡು.

Dévious ಡೀವಿಯಸ್ (ಗು.) ದೂರದ ; ಅಡ್ಡ ಮಾರ್ಗದಲ್ಲಿರುವ ; ಬಳಸಾದ ; ಸುತ್ತು ಸುತ್ತುವ ; ಸೊಟ್ಟಾದ ; ವಕ್ರ ; ಕುಟಿಲ ; ದಾರಿ ತಪ್ಪಿ ಹೋಗುವ ; ತಪ್ಪು ಮಾಡುವ. **Déviously** (ಕ್ರಿ. ವಿ.) ; **Déviousness** (ನಾ.)

Devíse ಡಿವೈಸ್ (ಕ್ರಿ. ಸಕ., ನಾ.) (ನ್ಯಾ. ಶಾ.) ಅಂತಿಮ ಇಷ್ಟಪತ್ರದ ಮೂಲಕ ಸ್ಥಿರಾಸ್ತಿಯನ್ನು ಬರೆದುಕೊಡು(ವುದು) ; ಇದನ್ನು ನಮೂದಿಸಿರುವ ಕಲಮು. [**Devísor** (ನಾ.) ಆಸ್ತಿ ದಾತ. **Deviseé** (ನಾ.) ಯಾವನಿಗಾಗಿ ಆಸ್ತಿ ಬಿಟ್ಟಿದೆಯೊ ಅವನು : ದಾನ ಪಾತ್ರ]. ಹಂಚಿಕೆ ಹಾಕು ; ಯುಕ್ತಿ ಮಾಡು ; ಉಪಾಯ ಹೂಡು ; ಯೋಜಿಸು ; ಕಲ್ಪನೆ ಮಾಡು. ಸಂಚು ನಡಸು ; ಹೂಟ ಹೂಡು. **Devísable** (ಗು.) ; **Devíser** (ನಾ.)

Devítalize ಡಿ(ೀ)ವೈಟಲೈಸ್ (ಕ್ರಿ. ಸಕ.) ನಿರ್ಜೀವ ಮಾಡು ; ನಿತ್ರಾಣ ಮಾಡು ; ನಿಸ್ಸತ್ವ ಮಾಡು ; ಸತ್ವಗುಂದಿಸು. **Devitalizátion** (ನಾ.)

Devítrify ಡಿ(ೀ)ವಿಟ್ರಿಫೈ (ಕ್ರಿ. ಸಕ.) ಕಾಚ ಗುಣವನ್ನು ಕಳೆ. (ಗಾಜನ್ನೊ ಕಾಚ ಶಿಲೆಯನ್ನೊ) ಅಪಾರದರ್ಶಕವಾಗಿಯೂ ಸ್ಫಟಿಕಾಕೃತಿಯುಳ್ಳದ್ದನ್ನಾಗಿಯೂ ಮಾಡು. **Devitrificátion** (ನಾ.)

Devoíd ಡಿವಾಯ್ಡ್ (ಗು.) ಇಲ್ಲದ ; ರಹಿತ ; ಶೂನ್ಯ ; ಹೀನ.

Dévoir ಡೆವರ್, **Devoír** ಡ(ಡೆ)ವ್ವಾರ್ (ನಾ.) ಕರ್ತವ್ಯ ; ಕೈಲಾದದ್ದು ; ಕೈಲಾದಷ್ಟು (Do one's d. ತನ್ನ ಕರ್ತವ್ಯ ನಡಸು ; ಕೈಲಾದದ್ದನ್ನೆಲ್ಲ ಮಾಡು). (ಬ. ವ. ದಲ್ಲಿ) ಮರ್ಯಾದೆ ; ಆದರ ; ಸತ್ಕಾರ (Pay one's devoirs to — ಗೆ ಸತ್ಕಾರ ಮಾಡು ; ಆದರಿಸು)

Dévolute ಡೆವೊಲ್ಯೂಟ್ (ಕ್ರಿ. ಸಕ.) (ಕೆಲಸವನ್ನು ಮತ್ತೊಬ್ಬನಿಗೆ) ವಹಿಸಿಬಿಡು, ವರ್ಗಾಯಿಸು. **Devolútion** (ನಾ.) ಉರುಳುವುದು ; ಅನೇಕ ಬದಲಾವಣೆಗಳನ್ನು ಹೊಂದಿ (ಸದ್ಯಸ್ಥಿತಿಗೆ) ಬಂದಿರುವುದು : ಅಪತರಣ ; ಅಪಸರಣ. ಅನ್ವಯ ಪ್ರಾಪ್ತವಾಗಿ ಆಸ್ತಿ ಬರುವುದು : ಆಸ್ತಿ ಪ್ರಾಪ್ತಿ. ಚಲಾಯಿಸದೆಹೋದ ಹಕ್ಕು ಕೊನೆಗೆ ಮೂಲ ವಾರಸುದಾರನಿಗೆ ಸೇರಿಹೋಗುವುದು. (ಜೀ. ವಿ.) ಜೀವಿವಂಶಗಳ ಅಪಕರ್ಷ ('ವಿಕಾಸ'ಕ್ಕೆ ಪ್ರತಿ). (ಕಾರ್ಯವನ್ನು) ಮತ್ತೊಬ್ಬನಿಗೆ ವಹಿಸುವುದು. (ಕೆಲಸವನ್ನಾಗಲಿ ಅಧಿಕಾರವನ್ನಾಗಲಿ) ಇತರರಿಗೆ ವಹಿಸುವುದು (ಮು.,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾರ್ಲಿಮೆಂಟು ಸಭೆ ತಾನು ನಿರ್ಮಿಸಿದ ಮಂಡಲಗಳಿಗೆ). **Devólve** ಡಿವಾಲ್ವ್ (ಕ್ರಿ.) (ಕರ್ತವ್ಯವನ್ನು, ಕಾರ್ಯವನ್ನು) ಮತ್ತೊಬ್ಬನಿಗೆ ವಹಿಸು, ಒಪ್ಪಿಸು ; (ಕರ್ತವ್ಯ, ಕಾರ್ಯ) ಒಬ್ಬನಮೇಲೆ ಬೀಳು. ಇಳಿದು ಬರು ; ಅನ್ವಯಕ್ರಮವಾಗಿ ಪ್ರಾಪ್ತವಾಗು.

Devónian ಡಿವೋನಿಯನ್ (ಗು., ನಾ.) (ಇಂಗ್ಲೆಂಡಿನ) ಡೆವನ್‌ಷಯರಿನ(ವನು). (ಭೂ. ವಿ.) 'ಸಿಲ್ಯೂರಿಯನ್' ಸ್ತರದ ಮೇಲೆಯೂ 'ಕಾರ್ಬಾನಿಫೆರಸ್' ಸ್ತರದ ಕೆಳಗೂ ನೆಲಸಿರುವ (ಭೂ ರಚನೆ)

Devóte ಡಿವೋಟ್ (ಕ್ರಿ. ಸಕ.) ಅರ್ಪಿಸು ; ಸಮರ್ಪಿಸು ; ನಿವೇದಿಸು ; ಕೊಡು ; ವಿನಿಯೋಗಿಸು ; ಮೀಸಲಿಡು ; ಒಪ್ಪಿಸಿಬಿಡು. ನಾಶಕ್ಕೆ ಗುರಿಪಡಿಸು ; ನಾಶದ ಪಾಲು ಮಾಡು. ಶಾಪ ಹಾಕು ; ಶಪಿಸು. **Devótement** (ನಾ.) ಅರ್ಪಣ. **Devóted** (ಗು.) (ಕ್ರಿಯಾರ್ಥಗಳಲ್ಲ). ಭಕ್ತಿಯುಳ್ಳ ; ದೃಢ ನಿಷ್ಠೆಯುಳ್ಳ ; ಶ್ರದ್ಧಾಳು ; ಅನುರಕ್ತ (D. friend). (ಮು., D. head ಭಕ್ತಿಯ ಥಲವುಳ್ಳ ವ್ರತನಿಷ್ಠನಾಗಿ ಶಿಕ್ಷೆಗೆ ಗುರಿಯಾದವನು). **Devótedly** (ಕ್ರಿ. ವಿ.) ; **Devoteé** ಡೆವೊಟೀ (ನಾ.) ಭಕ್ತ ; ಉಪಾಸಕ ; ಧರ್ಮ ನಿಷ್ಠ ; ಅಂಧ ಭಕ್ತ. **Devótion** ಡಿವೋಷನ್ (ನಾ.) ಆಸಕ್ತಿ ; ಅನುರಕ್ತಿ ; ಶ್ರದ್ಧೆ ; ಭಕ್ತಿ ; ಧರ್ಮ ನಿಷ್ಠೆ. ಉಪಾಸನೆ ; ಅರ್ಪಣೆ ; ನಿವೇದನೆ. (ಬ. ವ. ದಲ್ಲಿ) ಆರಾಧನೆ ; ಪೂಜೆ ; ಪ್ರಾರ್ಥನೆ (Was at his devotions ಆರಾಧನೆ ಮಾಡುತ್ತಿದ್ದನು). **Devótional** (ಗು.) ; **Devótionally** (ಕ್ರಿ. ವಿ.) ; **Devótionalism** (ನಾ.) ; **Devótionalist** (ನಾ.) ; **Devoút** ಡಿವೌಟ್ (ಗು.) (ವ್ಯಕ್ತಿ, ಕಾರ್ಯ, ಮೊ. ಗಳ ವಿಷಯದಲ್ಲಿ) ಭಕ್ತಿಯುತ ; ನಿಷ್ಠ ; ಧರ್ಮ ನಿಷ್ಠ ; ಧಾರ್ಮಿಕ [**Devóutness** (ನಾ.)]. ಮನಃಪೂರ್ವಕ ; ಶುದ್ಧಾಂತಃಕರಣದ ; ಸತ್ಯ ; ಅಕೃತ್ರಿಮ. **Devoútly** (ಕ್ರಿ. ವಿ.)

Devoúr ಡಿವೌಅರ್ (ಕ್ರಿ. ಸಕ.) (ಮೃಗಗಳ ವಿಷಯದಲ್ಲಿ) ತಿನ್ನು ; ತಿಂದು ಹಾಕು ; ಮುಕ್ಕು ; ಬುಕ್ಕು ; ಮೃಗದಂತೆ ಅತ್ಯಾಶೆಯಿಂದ ತಿನ್ನು. (ಬೈಬಲ್) (ವಸ್ತು, ಆಸ್ತಿ, ಆಸ್ತಿವಂತ, ಮೊ. ನ್ನು ನಿರ್ಲಕ್ಷ್ಯದಿಂದ) ಧ್ವಂಸಮಾಡು, ನಾಶಗೊಳಿಸು, ಕೊಳ್ಳೆ ಹೊಡೆ, ಸುಲಿ. (ಬೆಂಕಿ, ಆಯುಧ, ಉಪದ್ರವ — ಇವು) ಕೊಂದುಹಾಕು, ಪ್ರಜಾನಾಶ ಮಾಡು. ನುಂಗು ; ನುಂಗಿಹಾಕು ; ಕಬಳಿಸು. (ಪುಸ್ತಕ, ಕಥೆ, ಸೌಂದರ್ಯ, ಸುಂದರ ವ್ಯಕ್ತಿ — ಇವನ್ನು) ಕಿವಿ, ಕಣ್ಣು, ಮೊ. ಗಳಿಂದ ಗ್ರಹಿಸು, ಹೀರು. (ಒಬ್ಬನ) ಗಮನವನ್ನು ತಲ್ಲೀನವಾಗುವಂತೆ ಮಾಡು ; ಮಗ್ನಗೊಳಿಸು (Devoured by anxiety ಆತಂಕದಲ್ಲಿ ಮುಳುಗಿ). (ಕಾವ್ಯ) D. the way ಬಹು ಬೇಗ ಹೋಗು (ಮು., ಕುದುರೆಯ ವಿಷಯದಲ್ಲಿ). **Devoúringly** (ಕ್ರಿ. ವಿ.)

Devoút. **Devote** ನೋಡಿ.

Dew ಡ್ಯೂ (ನಾ.) ಇಬ್ಬನಿ (ವಾಯುಮಂಡಲದಲ್ಲಿಯ ನೀರಿನ ಹಬೆ ಸಂಜೆಯಿಂದ ಬೆಳಗಿನವರೆಗೆ ತಣ್ಣನೆಯ ಪದಾರ್ಥಗಳಮೇಲೆ ದ್ರವೀಭವಿಸಿ ಆದದ್ದು). (ಸಾ., ನಿದ್ದೆ, ವಾಗ್ಮಿತೆ, ಪ್ರಾಯ, ಸಂಗೀತ, ಮೊ. ಗಳ ವಿಷಯದಲ್ಲಿ) ತಿಳಿಯದಂತೆ ಆವರಿಸುವ, ಪ್ರಸನ್ನಗೊಳಿಸುವ, ಚೇತನ ಕೊಡುವ, ಪ್ರಭಾವ. ಹೊಸ ಚೇತನ ; ಪ್ರಸನ್ನತೆ. (ಮು., ಕಣ್ಣೀರಿನ, ಬೆವರಿನ) ತೇವದ ಹನಿ. Mountain d. ಕಳ್ಳತನದಿಂದ ಬಟ್ಟಿಯಿಳಿಸಿ ತೆಗೆದ ಮದ್ಯ. Dewberry ಒಂದು ತೆರದ ಸಸ್ಯ, ಅದರ ಹಣ್ಣು. D.-claw ಕೆಲವು ನಾಯಿಗಳಲ್ಲಿ ಕಂಡುಬರುವ ವಿಕಸನ ಹೊಂದಿರದ ಒಳ ಕಾಲ್ಬೆರಳು. D.-drop ಇಬ್ಬನಿ (ಹನಿ). D.-fall ಇಬ್ಬನಿಗರೆಯುವ ಹೊತ್ತು ; ಸಂಜೆ ; ಬೈಗು. D.-point ವಾಯುಮಂಡಲದಲ್ಲಿಯ ಆವಿ ಇಬ್ಬನಿಯಾಗಿ ಮಾರ್ಪಡಲು ಬೇಕಾದ ಶಾಖದ ಪರಿಮಾಣ : ತುಷಾರಾಂಕ. D.-rake ಹುಲ್ಲಿನ ಮೇಲಿರುವ ಇಬ್ಬನಿಯನ್ನು ನೆಲಕ್ಕೆ ಬೀಳಿಸುವ ಹಲುಬೆ. D.-ret (ಕ್ರಿ. ಸಕ.) (ನಾರು ಪಟ್ಟೆ, ಮೊ. ನ್ನು) ನೀರಿನಲ್ಲಿ ಕೊಳೆಯಿಸುವುದಕ್ಕೆ ಬದಲಾಗಿ ಇಬ್ಬನಿಗೆ ಬಿಟ್ಟು ಕೊಳೆಯಿಸು. D.-worm ತೋಟದ ಒಂದು ದೊಡ್ಡ ಹುಳು. **Déwless** (ಗು.) ; **Dewy** ಡ್ಯೂಯಿ (ಗು.) ಇಬ್ಬನಿಗೂಡಿದ. **Déwily** (ಕ್ರಿ. ವಿ.); **Déwiness** (ನಾ.)

Dew (ಕ್ರಿ.) ಇಬ್ಬನಿಗೂಡು ; ಇಬ್ಬನಿ ಬೀಳು (It is beginning to d. ಇಬ್ಬನಿಗೂಡಲು ಮೊದಲಾಗಿದೆ). ಇಬ್ಬನಿಯಲ್ಲಿ ತೋಯಿ, ತೋಯಿಸು, ನೆನೆ, ನೆನಸು.

Dewán ಡಿವಾನ್ (ನಾ.) ಇಂಡಿಯಾ ಸಂಸ್ಥಾನಗಳಲ್ಲಿ ಆರ್ಥಿಕ ಮುಖ್ಯ ಮಂತ್ರಿ ; ಪ್ರಧಾನ ಮಂತ್ರಿ ; ದಿವಾನ.

Déwlap ಡ್ಯೂಲ್ಯಾಪ್ (ನಾ.) ದನಗಳ ಕುತ್ತಿಗೆಯಿಂದ ಜೋಲಾಡುವ ಚರ್ಮದ ಪದರ : ಗಂಗೆದೊವಲು (ಇತರ ಪ್ರಾಣಿಗಳ ವಿಷಯದಲ್ಲೂ ಮನುಷ್ಯನ ವಿಷಯದಲ್ಲೂ ಪ್ರಯೋಗವುಂಟು). **Déwlapped** (ಗು.)

Déxter ಡೆಕ್‌ಸ್ಟರ್ (ಗು.) ಬಲಗಡೆಯ ; ಬಲಗೈ ಪಕ್ಕದ (ವಂಶಲಾಂಛನದಲ್ಲ, ನೋಡುವವನ ಎಡಕ್ಕೆ). **Dextérity** —ಟೆರಿಟಿ (ನಾ.) (ಕೈಯ, ಬುದ್ಧಿಯ) ಜಾಣ್ಮೆ, ಕೌಶಲ, ಚಾತುರ್ಯ, ನೈಪುಣ್ಯ ; ಕೈಚಳಕ. ಬಲಗೈಯನ್ನು ಉಪಯೋಗಿಸುವುದು : ಬಲಗೈತನ. **Déxt(e)rous** (ಗು.) ಕೈಜಾಣ್ಮೆಯ ; ಕೈಚಳಕದ ; ಕರ ಕೌಶಲದ. ದಕ್ಷ ; ಜಾಣ ; ಕುಶಲ ; ಚತುರ ; ನಿಪುಣ. ಬಲಗೈ ಉಪಯೋಗಿಸುವ : ಬಲಚ. **Déxt(e)rously** (ಕ್ರಿ. ವಿ.)

Dey ಡೇ (ನಾ.) (ಚರಿತ್ರೆ) ಆಲ್‌ಜೀರ್ಸಿನ ಅಥವಾ ಟ್ರಿಪೋಲಿಯ ರಾಜ್ಯಾಧಿಕಾರಿ.

D(h)úrrie ಡರಿ (ನಾ.) ತೆರೆಗಳಿಗಾಗಿಯೂ ಸೋಫಾ ಗವಸಿಗಾಗಿಯೂ ಉಪಯೋಗಿಸುವ (ಇಂಡಿಯದ) ಅಂಚುಗಟ್ಟಿದ ದಪ್ಪ ಬಟ್ಟೆ.

Diabétes ಡೈಅಬೀಟಿ(ೕ)ಸ್ (ನಾ.) ಮೂತ್ರದಲ್ಲಿ ಸಕ್ಕರೆ ಹೆಚ್ಚಾಗಿ ಹೋಗುತ್ತ, ಹೆಚ್ಚು ಬಾಯಾರಿಕೆಯಿದ್ದು, ದೇಹ ಕೃಶವಾಗುತ್ತಹೋಗುವ ವ್ಯಾಧಿ : ಬಹುಮೂತ್ರ ವ್ಯಾಧಿ ; ಮಧುಮೂತ್ರ ವ್ಯಾಧಿ. **Diabétic** — ಬೀ(ಬೆ) — (ಗು., ನಾ.) ಬಹುಮೂತ್ರ ವ್ಯಾಧಿಯ. ಬಹುಮೂತ್ರ ರೋಗಿ.

Diáblerie, -ery ಡಿಆಬ್ಲೆರಿ (ನಾ.) ಮೋಡಿ ; ಪಂಪು ; ಮಾಟ ; ಪಿಶಾಚ ವಿದ್ಯೆ. ಪಿಶಾಚ ವರ್ತನೆ ; ಅತಿ ನಿರ್ಲಕ್ಷ್ಯತೆ.

Diabólic(al) ಡೈಅಬಾಲಿಕ್(ಕಲ್) (ಗು.) ದೆವ್ವದ ; ದೆವ್ವದಂಥ ; (ಹೊರ ರೂಪಿನಲ್ಲಿ) ದೆವ್ವದಂತಿರುವ (ಸಾ., -ic) ; ಪೈಶಾಚಿಕ ; ಪೈಶಾಚ ; ಅತ್ಯಂತ ಕ್ರೂರ ; ದುಷ್ಟ ; ಘೋರ (ಸಾ., -ical). **Diabólically** (ಕ್ರಿ. ವಿ.) ; **Diábolism** ಡೈಅಬೊಲಿಸ್ಮ್ (ನಾ.) ಮಾಟ ; ಮೋಡಿ ; ಪಂಪು. ಪಿಶಾಚ ವರ್ತನೆ ; —ಪ್ರಕೃತಿ. ದೆವ್ವಗಳಲ್ಲಿ ನಂಬಿಕೆ ; ಪಿಶಾಚಾರಾಧನೆ. **Diábolize** ಡೈಅಬೊಲೈಸ್ (ಕ್ರಿ. ಸಕ.) ಪಿಶಾಚಿಯನ್ನಾಗಿ ಮಾಡು ; ಪಿಶಾಚಿಯೆಂದು ತೋರಿಸು.

Diábolo ಡೈ(ಡಿ)ಆಬೊಲೊ (ನಾ.) ಇರ್ತಲೆಯ ಬುಗುರಿ ಮತ್ತು ಕಡ್ಡಿಗಳಿಂದ ಆಡುವ ಒಂದು ತೆರದ ಆಟ.

Diáconal ಡೈಆಕೊನಲ್ (ಗು.) ಕ್ರೈಸ್ತ ಆರಾಧನಮಂದಿರದ ಧರ್ಮಾಧಿಕಾರಿ ಡೀಕನ್ನಿನ. **Diáconate** — ಕೊನೆಟ್ (ನಾ.) ಡೀಕನ್ನಿನ ಅಧಿಕಾರ, ಉದ್ಯೋಗ, ಉದ್ಯೋಗ ಕಾಲ. ಡೀಕನ್ನರು.

Diacrític(al) ಡೈಅಕ್ರಿಟಿಕ್(ಕಲ್) (ಗು.) ವಿಶೇಷ ಸೂಚಕ (ಮು., D. marks ಒಂದು ಅಕ್ಷರದ ಉಚ್ಚಾರಣೆ, ಸ್ವರ, ಮೊ. ಭೇದಗಳನ್ನು ತೋರಿಸುವ ಮುದ್ರಣದ ಗುರುತುಗಳು : ಉಚ್ಚಾರ ಚಿಹ್ನೆ). ಭೇದ ತಿಳಿಯಲಾಗುವ ; ವ್ಯತ್ಯಾಸಗಳನ್ನು ಅರಿಯಲಾಗುವ.

Diactínic ಡೈಆಕ್ಟಿನಿಕ್ (ಗು.) ರಾಸಾಯನಿಕ ಪರಿಣಾಮ ಕಿರಣಗಳನ್ನು ತೂರಿಹೋಗಲು ಬಿಡುವ ; --ಗೆ ಪಾರದರ್ಶಕವಾದ ; ರಸ ಕಿರಣ ಭೇದ್ಯ.

Díadem ಡೈಅಡೆಂ (ನಾ.) ಕಿರೀಟ ; ಮುಕುಟ ; ಮುಡಿ ; ತಲೆಯ ಸುತ್ತಲೂ ಧರಿಸುವ ಎಲೆಗಳ, ಅಥವಾ ಹೂವಿನ, ದಂಡೆ : ಶಿರೋಮಾಲೆ. ರಾಜತ್ವ ; ಅರಸುತನ ; ಪ್ರಭುತ್ವ. ಮಾನೋನ್ನತಿ ; ಪರಮ ಯಶಸ್ಸು. **Díademed** — ಡೆಮ್ಡ್ (ಗು.)

Diaéresis ಡೈಎರಿಸಿಸ್, ಡೈಈಯ್ರಿಸಿಸ್ (ನಾ. ; ಬ. ವ. -eses -ಸೀಸ್) ಎರಡು ಸ್ವರಗಳು ಒಟ್ಟಿಗೆ ಬರುವಲ್ಲಿ ಪ್ರತಿಯೊಂದನ್ನೂ ಬೇರೆ ಬೇರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಚ್ಚರಿಸಬೇಕೆಂದು ತೋರಿಸುವುದಕ್ಕಾಗಿ ಎರಡನೆಯ ಸ್ವರದಮೇಲೆ ಹಾಕುವ ಚಿಹ್ನೆ (..) (ಉದಾ., Aërate ಎಅರೇಟ್, Coöperate ಕೋಆಪರೇಟ್); ಸ್ವರ ವಿಸಂಧಿ ಚಿಹ್ನೆ.

Diagnóse ಡೈಅಗ್ನೋಸ್ (ಕ್ರಿ. ಸಕ.) (ಒಂದು ರೋಗದ) ಸ್ವಭಾವವನ್ನು ಅದರ ಚಿಹ್ನೆಗಳಿಂದ ಗೊತ್ತುಮಾಡು; ರೋಗ ನಿರ್ಣಯ ಮಾಡು. **Diagnósis** (ನಾ.; ಬ. ವ. -oses -ಸೀಸ್) ರೋಗ ನಿದಾನ. ರೋಗ ಸ್ವಭಾವದ ನಿರೂಪಣೆ. ಮನುಷ್ಯನ ಶೀಲಸ್ವಭಾವಗಳ ವರ್ಗೀಕರಣ. ಜೀವಿವಂಶ, ಮೊ. ಗಳ ನಿಷ್ಕೃಷ್ಟ ನಿರ್ಣಯ. **Diagnóstic** — ಅಗ್ನಾಸ್ಟಿಕ್ (ಗು., ನಾ.) ರೋಗ ನಿದಾನದ; ರೋಗ ನಿದಾನ ಸಹಾಯಕ. (ರೋಗ) ಲಕ್ಷಣ. **Diagnóstics** (ನಾ.) ರೋಗ ನಿದಾನ (ಪ್ರಕರಣ). **Diagnóstically** (ಕ್ರಿ. ವಿ.) ರೋಗ ನಿದಾನದ ಮೂಲಕ; —ಕ್ಕೆ ಸಂಬಂಧಪಟ್ಟು. **Diagnostícian** — ಗ್ನಾಸ್ಟಿಷನ್ (ನಾ.) ರೋಗ ನಿದಾನ ಕುಶಲಿ.

Diágonal ಡೈಆ್ಯಗೊನಲ್ (ಗು., ನಾ.) ಬಹುಭುಜಾಕೃತಿಯ, ಬಹುಮುಖ ಘನಾಕೃತಿಯ, ಯಾವುದಾದರೂ ಎರಡು ಅಪಾರ್ಶ್ವ ಕೋನಗಳನ್ನು ಸೇರಿಸುವ (ಋಜು ರೇಖೆ): ಮೂಲೆ ಗೆರೆ; ಕರ್ಣ ರೇಖೆ. ಒಂದು ಸಮಾಂತರ ಚತುರ್ಭುಜದ ಕರ್ಣದಂತೆ ಮೂರೆಮೂಲೆಯಾದ, ಮೂಲೆಯಮೇಲಿಟ್ಟ (D. row or d. ಚದುರಂಗದ ಮಣೆಯಮೇಲಿನ ಏಕ ವರ್ಣದ ಮನೆಗಳಿರುವ ರೀತಿಯಲ್ಲಿ). ಸಮಕೋನವಲ್ಲದ ಮತ್ತಾವ ಕೋನದಲ್ಲಾದರೂ ಬಾಗಿರುವ; ಯಾವುದಾದರೂ ಒಂದು ಭಾಗ ಆ ರೀತಿಯಲ್ಲಿ ಬಾಗಿರುವ; ಓರೆಯಾದ; ಕೋಚಾದ [D. cloth or d. (ಬಟ್ಟೆಯ) ಅಂಚಿಗೆ ಮೂಲೆ ಮೂಲೆಯಾಗಿ ಒಡಲಗೆ ಉಬ್ಬುನೆಯ್ಗೆ ಮಾಡಿರುವ ಬಟ್ಟೆ]. **Diágonally** (ಕ್ರಿ. ವಿ.)

Díagram ಡೈಅಗ್ರ್ಯಾಮ್ (ನಾ.) (ಜ್ಯಾ.) ರೇಖಾ ಚಿತ್ರ; ರೇಖಾಕೃತಿ. (ಒಂದು ವಸ್ತುವಿನ ರೂಪು ಲಕ್ಷಣಗಳನ್ನು ತೋರಿಸುವುದಕ್ಕಾಗಿ ಹಾಕಿದ) ನಕ್ಷೆ. ಕಾರ್ಯಕ್ರಮ, ಬಲ, ಮೊ. ಗಳನ್ನು ರೇಖೆಗಳಿಂದ ಸಂಕೇತವಾಗಿ ತೋರಿಸುವ ನಕ್ಷೆ. **Diagrammátic** (ಗು.); **Diagrammátically** (ಕ್ರಿ. ವಿ.); **Diagrámmatize** (ಕ್ರಿ. ಸಕ.)

Díagraph ಡೈಅಗ್ರಾಫ್ (ನಾ.) ವಸ್ತುಗಳ ಲಂಬಪಾತಗಳನ್ನು ಎಳೆಯುವುದಕ್ಕೂ, ನಕ್ಷೆ, ಭೂಪಟ, ಮೊ. ನ್ನು ವಿಸ್ತರಿಸಿ ರಚಿಸುವುದಕ್ಕೂ ಉಪಯೋಗಿಸುವ, ಅಳತೆಕಡ್ಡಿಯೂ ಕೋನಮಾಪಕವೂ ಉಳ್ಳ, ಸಲಕರಣೆ: ನಕ್ಷಾ ರೇಖಕ.

Díal ಡೈಅಲ್ (ನಾ., ಕ್ರಿ. ಸಕ.) (ಸಾ., Sun-d.) ಮಾನ ರೇಖೆಗಳನ್ನು ಹಾಕಿರುವ ಫಲಕದಮೇಲೆ ನೆರಳು ಬೀಳುವ ಸ್ಥಾನದಿಂದ ಕಾಲ ನಿರ್ಣಯ ಮಾಡುವ ಸಲಕರಣೆ: ಛಾಯಾ ಯಂತ್ರ; ನೆರಳು ಗಡಿಯಾರ; ಗಡಿಯಾರದ ಮುಖಫಲಕ (= D.-plate). ಆವಿ ಒತ್ತಡ ಮಾಪಕ, ಅನಿಲ ಪೀಡನ ಮಾಪಕ, ಮೊ. ಗಳಲ್ಲಿಯ ಸೂಚಿ ಆಡುವ ಫಲಕ: ಸೂಚೀ ಫಲಕ. (ಕ್ರಿ.) ಸೂಚೀ ಫಲಕದಲ್ಲಿ ಅಳತೆ ತೋರು, ಅಳೆ.

Díalect ಡೈಅಲೆಕ್ಟ್ (ನಾ.) ಒಂದು ಪ್ರಾಂತಕ್ಕೆ, ಪಂಗಡಕ್ಕೆ, ವ್ಯಕ್ತಿಗೆ, ವೈಲಕ್ಷಣ್ಯವಾಗಿರುವ ಭಾಷಾ ರೂಪ; ಪ್ರಾಂತ ಭಾಷೆ; ದೇಸಿನುಡಿ. (ಪದಗಳು, ಉಚ್ಚಾರಣೆ, ಭಾಷಾಮರ್ಯಾದೆ — ಇವು ವ್ಯತ್ಯಾಸಗೊಂಡಿರುವ) ಒಂದು ಭಾಷೆಯ ಒಳಭೇದ. **Dialéctal** (ಗು.) ಭಾಷೆಯ ಒಳಭೇದದ. **Dialéctally** (ಕ್ರಿ. ವಿ.); **Dialectólogy** — ಕ್ಟಾಲೊಜಿ (ನಾ.) ಭಾಷೆಯ ಒಳಭೇದಗಳ ವಿಚಾರ. **Dialectólogist** (ನಾ.)

Dialéctic ಡೈಅಲೆಕ್ಟಿಕ್ (ನಾ., ಗು.) (ಸಾ., ಬ. ವ. ದಲ್ಲಿ) ಬೇರೆ ಬೇರೆ ಮತಗಳ (ಅಭಿಪ್ರಾಯಗಳ) ತಥ್ಯತೆಯನ್ನು ವಿಚಾರಮಾಡುವ ಶಾಸ್ತ್ರ; ತಥ್ಯತೆಯನ್ನು ಚರ್ಚೆಯಿಂದ ಪರೀಕ್ಷಿಸುವುದು: ತಥ್ಯ ಪರಾಮರ್ಶೆ; ತರ್ಕ; ಜಿಜ್ಞಾಸ; ವಾಕ್ಯಾರ್ಥ; ವಾದ ವಿವಾದ. (ಆಧುನಿಕ ತತ್ತ್ವಶಾಸ್ತ್ರದಲ್ಲಿ, ಏ. ವ. ಮಾತ್ರ) ತಾತ್ತ್ವಿಕ, ಆಧ್ಯಾತ್ಮಿಕ, ವಿಚಾರದಲ್ಲಿ ಪರಸ್ಪರ ವಿರೋಧ ಭಾವಗಳನ್ನೂ ಅವುಗಳ ಪರಿಹಾರವನ್ನೂ ಕುರಿತ ವಿಮರ್ಶೆ: ತತ್ತ್ವ ಮೀಮಾಂಸ. ತರ್ಕದ; ವಾದದ; ವಾದ ಚತುರ; = Dialectal. **Dialectícian** — ಷನ್ (ನಾ.) ತಾರ್ಕಿಕ; ನೈಯಾಯಿಕ. **Dialéctical** (ಗು.) ತಾರ್ಕಿಕ; ವಾದಾತ್ಮಕ; = Dialectal. (ಆಧುನಿಕ ತತ್ತ್ವಶಾಸ್ತ್ರಾರ್ಥದಲ್ಲಿ) ತತ್ತ್ವ ಮೀಮಾಂಸದ. **Dialéctically** (ಕ್ರಿ. ವಿ.)

Dialógic, etc. **Dialogue** ನೋಡಿ.

Díalogue ಡೈಅಲಾಗ್ (ನಾ.) ಸಂಭಾಷಣೆ; ಸಂವಾದ; ಸಂಭಾಷಣ ರೂಪದಲ್ಲಿ ಬರೆದ ಗ್ರಂಥ, ಲೇಖನ: ಸಂವಾದ ಗ್ರಂಥ (Written in d. ಸಂವಾದ ರೂಪದಲ್ಲಿ ಬರೆದ). (ಕಥೆ ಕಾದಂಬರಿಗಳಲ್ಲಿ) ಸಂಭಾಷಣ ಭಾಗ. **Dialógic** — ಜಿಕ್ (ಗು.) ಸಂಭಾಷಣದ; ಸಂವಾದದ. **Diálogist** ಡೈಆ್ಯಲೊಜಿಸ್ಟ್ (ನಾ.) ಸಂಭಾಷಣಗಾರ; ಸಂವಾದ ಲೇಖಕ.

Diálysis ಡೈಆ್ಯಲಿಸಿಸ್ (ನಾ.; ಬ. ವ. -yses — ಸೀಸ್) ಒಂದು ಮಿಶ್ರಣ ದ್ರವದಲ್ಲಿಯ ಶ್ಯಾನ ಭಾಗವನ್ನು (ಅಂಟುವಜ್ರಗುಣದ ಭಾಗವನ್ನು) ಸ್ಫಾಟಿಕ ಭಾಗದಿಂದ ಪ್ರತ್ಯೇಕಿಸುವುದು (ಚರ್ಮಪತ್ರದ ತಳವಿರುವ ಪಾತ್ರೆಯಲ್ಲಿ ಈ ಮಿಶ್ರಣದ ದ್ರವವನ್ನು ಹಾಕಿ ಪಾತ್ರೆಯನ್ನು ನೀರಿನಮೇಲೆ ತೇಲಬಿಟ್ಟಲ್ಲಿ ಸ್ಫಾಟಿಕ ಭಾಗವು ಪತ್ರದ ಮೂಲಕ ನೀರಿಗೆ ಹರಿದುಹೋಗಿ ಅಂಟುವಜ್ರ ಗುಣದ ಭಾಗವು ಪಾತ್ರೆಯಲ್ಲಿಯೇ ಉಳಿಯುವುದು): ಪಾರ ಪೃಥಕ್ಕರಣ. **Díalyse** ಡೈಅಲೈಸ್ (ಕ್ರಿ. ಸಕ.); **Dialýtic** — ಲಟಿಕ್ (ಗು.) (ರ. ವಿ.) ಪಾರ ಪೃಥಕ್ಕರಣದ.

Diamagnétic ಡೈಅಮ್ಯಾಗ್ನೆಟಿಕ್ (ಗು., ನಾ.) ಕಾಂತಾಕರ್ಷಣ ಕ್ಷೇತ್ರದಲ್ಲಿ ತಡೆಯಿಲ್ಲದಂತೆ ತೂಗಗಟ್ಟಿದಾಗ ಕಾಂತಾಕ್ಷಕ್ಕೆ ಅಡ್ಡವಾಗಿ, ಎಂದರೆ, ಪೂರ್ವ ಪಶ್ಚಿಮ ದಿಕ್ಕಿನಲ್ಲಿ, ನಿಲ್ಲುವ ಪ್ರವೃತ್ತಿಯುಳ್ಳ: ಅಡ್ಡಕಾಂತ; ಅಡ್ಡಕಾಂತವಸ್ತು(ಗಳ); ಅಡ್ಡಕಾಂತತೆಯ. **Diamagnétically** (ಕ್ರಿ. ವಿ.); **Diamágnetize** (ಕ್ರಿ. ಸಕ.); **Diamágnetism**—ಟಿಸ್ಮ್ (ನಾ.) ಅಡ್ಡಕಾಂತತೆ; ಕಾಂತ ವಿಜ್ಞಾನದ ಅಡ್ಡಕಾಂತ ಭಾಗ.

Diamantíferous. **Diamond** ನೋಡಿ.

Diámeter ಡೈಆ್ಯಮಿಟರ್ (ನಾ.) ಒಂದು ಕಾಯದ ಒಂದು ಪಕ್ಕದಿಂದ ಎದುರು ಪಕ್ಕಕ್ಕೆ ಹಾದುಹೋಗುವ, ಅಥವಾ, ಜ್ಯಾಮಿತಿಯ ಒಂದು ಆಕೃತಿಯ ಕೇಂದ್ರದಿಂದ ಮಿತಿಗಳಿಗೆ ಹೋಗುವ, ಋಜುರೇಖೆ: ವ್ಯಾಸ; ಅಡ್ಡಳತೆ; ಅಗಲ; ದಪ್ಪ. ಸೂಕ್ಷ್ಮದರ್ಶಕದ ವರ್ಧನ ಶಕ್ತಿಯ ರೇಖಾ ಮಾಪನದ ಮಾನ, ಏಕಾಂಶ (Unit): ವ್ಯಾಸ (Lens magnifying 2,000 diameters ಎರಡು ಸಾವಿರ ವ್ಯಾಸಗಳ ವರ್ಧನಶಕ್ತಿಯ ಲೆನ್ಸು). **Díametral** (ಗು.) ವ್ಯಾಸದ. **Diámetrally** (ಕ್ರಿ. ವಿ.) = Diametrically. **Diamétrical** ಡೈಅಮೆಟ್ರಿಕಲ್ (ಗು.) ವ್ಯಾಸದ; ವ್ಯಾಸ ಮಾರ್ಗದ. (ಎದುರಿಕೆ, ಪ್ರತಿಭಟನೆ, ವಿರೋಧ, ಮೊ. ಗಳ ವಿಷಯದಲ್ಲಿ) ತೀರ; ನೇರಿದಿರಾದ; ಪೂರ್ತಿಯಾದ. ವಿರುದ್ಧ; ಪ್ರತಿ. **Diamétrically** (ಕ್ರಿ. ವಿ.)

Díamond ಡೈ(ಅ)ಮಂಡ್ (ನಾ.) ಅಷ್ಟ ಮುಖಾಕೃತಿಯಲ್ಲಾಗಲಿ ಅದಕ್ಕೆ ಸಂಬಂಧಪಟ್ಟ ಇತರ ಆಕೃತಿಯಲ್ಲಾಗಲಿ ಸ್ಫಟಿಕೀಭವಿಸಿ, ಎಲ್ಲ ಪದಾರ್ಥಗಳಿಗಿಂತಲೂ ಪೆಡಸಾಗಿ ವರ್ಣರಹಿತವಾಗಿಯೊ ವರ್ಣಚ್ಛಾಯೆಯುಳ್ಳದ್ದಾಗಿಯೊ ಇರುವ ಶುದ್ಧ ಇಂಗಾಲಧಾತುವಿನ ಪ್ರಶಸ್ತ ಶಿಲೆ: ವಜ್ರ; ವಯಿರ ('ವಯಿರ' ಮುಡಿ = ವಜ್ರ ಕಿರೀಟ). [Bristol, Cornish, etc., d. ಹಲವು ಬಗೆಯ ಶಿಲಾ ಸ್ಫಟಿಕಗಳು. Black d. ಕಪ್ಪು ವಜ್ರ; ಕಲ್ಲಿದ್ದಲು. Rough d. (ಸಾಣೆ ಹಿಡಿಯದಿರುವ) ಒರಟು ವಜ್ರ. (ರೂಪ.) ಹೊರಕ್ಕೆ ಒರಟನಾಗಿ ಕಂಡುಬಂದರೂ ನಿಜವಾಗಿ ಯೋಗ್ಯತೆಯುಳ್ಳವನು. D. cut d. (ಚಾತುರ್ಯ, ತಂತ್ರ, ಮೊ. ಗಳಲ್ಲಿ) ಸರಿ ಸಮ]. ಮಿರುಗುವ ಕಣ ಅಥವಾ ಬಿಂದು. (ಗಾಜನ್ನು ಸೀಳುವ) ಸಣ್ಣ ವಜ್ರದ ಚೂರಿನ ಮೊನೆಯ ಆಯುಧ: ವಜ್ರ. ವಜ್ರದ ಹಳುಕಿನ ಅಡ್ಡಕೊಯ್ತದ ಆಕೃತಿಯ ರೂಪ: ವಜ್ರಾಕೃತಿ (D. panes

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಿಟಕಿಯ ಬಾಗಿಲಿಗೆ ಹಾಕುವ ವಜ್ರಾಕೃತಿಯ ಸಣ್ಣ ಗಾಜುಬಿಲ್ಲೆಗಳು). ಇಸ್ಪೀಟಿನ ಡಯಮಂಡು (A small d. ಡಯಮಂಡು ರಂಗಿನ ಕೀಳೆಲೆ). ಒಂದು ತೆರದ (ಬಹು ಸಣ್ಣ ಅಕ್ಷರದ) ಅಚ್ಚಿನ ಮೊಳೆ. D.-back ಒಂದು ತೆರದ ಚಿಟ್ಟೆ ; — ಆಮೆ. D. cement ವಜ್ರಗಳನ್ನು ಅಂಟಿಸಲು ಉಪಯೋಗಿಸುವ ಅಂಟು : ವಜ್ರಗಚ್ಚು. D.-drill ಗಡುಸುಪದಾರ್ಥಗಳಲ್ಲಿ ಕಂಡಿಕೊರೆಯುವುದಕ್ಕಾಗಿ ಉಪಯೋಗಿಸುವ ವಜ್ರದ ಮೊನೆಯ ಬೈರಿಗೆ : ವಜ್ರಬೈರಿಗೆ. D.-field (ನೆಲದಲ್ಲಿ) ವಜ್ರಗಳು ದೊರೆಯುವ ಪ್ರದೇಶ : ವಜ್ರಕ್ಷೇತ್ರ. D.-point ನಕಾಸೆ ಕೆಲಸದಲ್ಲಿ ಉಪಯೋಗಿಸುವ ವಜ್ರದ ಕೊರೆಯುಳಿ ; (ನಾ., ಬ. ವ. ದಲ್ಲಿ) ಎರಡು ಗೆರೆಗಳು ಅಥವಾ ಎರಡು ರೈಲುಕಂಬಿಗಳು ಕೋಚಾಗಿ ಅಡ್ಡಹಾಯುವ ಸ್ಥಳ : ವಜ್ರಮೊನೆ. D.-snake ಆಸ್ಟ್ರೇಲಿಯದ ಮತ್ತು ಟಾಸ್‌ಮೇನಿಯದ ಒಂದು ಜಾತಿಯ ಹಾವು. D. wedding ಮದುವೆಯ ಅರುವತ್ತನೆಯ ವರ್ಷದ ಉತ್ಸವ : ವಿವಾಹ ವಜ್ರೋತ್ಸವ. **Diamondíferous** (ಗು.), **Diamantíferous** — ಮ್ಯಾ — (ಗು.) ವಜ್ರಗಳು ದೊರೆಯುವ. **Díamondwise** (ಕ್ರಿ. ವಿ.)

Díamond (ಗು., ಕ್ರಿ. ಸಕ.) ವಜ್ರದಿಂದ ಮಾಡಿದ ; ವಜ್ರ ಖಚಿತ. ವಜ್ರಾಕಾರದ. (ಕ್ರಿ.) ವಜ್ರಗಳಿಂದ ಅಥವಾ ಇಬ್ಬನಿಯ ಬಿಂದುಗಳಿಂದ ಅಲಂಕರಿಸು ; ವಜ್ರ ಕೆತ್ತು ; ವಜ್ರಾಲಂಕಾರ ಮಾಡು.

Diána ಡೈಆ್ಯ(ಏ)ನ (ನಾ.) ಇಟಾ್ಯಲಿಯನ್ನರಲ್ಲಿ ಕನ್ಯಾತ್ವದ ಮತ್ತು ಬೇಟೆಯ ಅಧಿದೇವತೆ. ಕನ್ಯಕೆಯಾಗಿಯೇ ಇರಲು ಇಚ್ಛಿಸುವವಳು ; ಬ್ರಹ್ಮಚಾರಿಣಿ. ಬೇಟೆಗಾತಿ.

Diapáson ಡೈಅಪೇಸನ್ (ನಾ.) ಸ್ವರಮೇಳ ; ಮಧುರ ಸ್ವರ ; ಗೀತ ಘೋಷ. (ಕಂಠದ, ವಾದ್ಯದ) ನಾದ ವಿಸ್ತರ, ವ್ಯಾಪ್ತಿ ; ಸ್ವರದ ಒಂದು ಗೊತ್ತಾದ ಮಟ್ಟ. ಸ್ವರ ದ್ವಿಶೂಲ. Open, closed or stopped, d. ಆರ್ಗನ್‌ವಾದ್ಯದಲ್ಲಿ ಎರಡು ಮುಖ್ಯವಾದ ಮೂಲ ಕೊಳಲುಗಳು.

Díaper ಡೈಅಪರ್ (ನಾ., ಕ್ರಿ. ಸಕ.) ವಜ್ರಾಕೃತಿಯ ಚೌಕುಳಿಯ ಬಟ್ಟೆ ; ಇದರಿಂದ ಮಾಡಿದ ಕೂಸಿನ ಚೌಕ. ಗೋಡೆ, ಮೊ. ಗಳ ಮೇಲಿನ ವಜ್ರಾಕೃತಿಯ ಚಿತ್ರ. (ಕ್ರಿ.) ವಜ್ರಾಕೃತಿಯ ಚಿತ್ರ ಮಾಡು.

Diáphanous ಡೈಆ್ಯಫನಸ್ (ಗು.) ಪಾರದರ್ಶಕ ; ಬೆಳಕಿಳಿಯುವ ; ಒಳಮೈ ಕಾಣುವಂತೆ ಬಹಳ ತೆಳುವಾದ.

Diaphorétic ಡೈಅಫೊರೆಟಿಕ್ (ಗು., ನಾ.) ಬೆವರುಂಟುಮಾಡುವ (ಔಷಧ, ಚಿಕಿತ್ಸೆ) : ಸ್ವೇದಕಾರಿ.

Díaphragm ಡೈಅಫ್ರ್ಯಾಮ್ (ನಾ.) ಸಸ್ತನಿಗಳಲ್ಲಿ ಎದೆಯ ಭಾಗವನ್ನೂ ಹೊಟ್ಟೆಯ ಭಾಗವನ್ನೂ ಪ್ರತ್ಯೇಕಿಸುವ, ಮೃದ್ವಸ್ಥಿಯಿಂದಲೂ ಸ್ನಾಯುವಿನಿಂದಲೂ ಮಾಡಿದ, ವಿಭಾಜಕಾಂಗ ; ವಪೆ. ಚಿಪ್ಪುಮೀನು, ಸಸ್ಯಾಂಗ, ಮೊ. ಗಳಲ್ಲಿಯ ವಿಭಾಜಕಾಂಗ. (ದ್ಯ. ವಿ.) (ಲೆನ್ಸು, ಮೊ. ಗಳ ಅಂಚಿನಿಂದ ಬರುವ ಕಿರಣಗಳನ್ನು ತಡೆಯುವುದಕ್ಕಾಗಿ) ಮಧ್ಯೆ ರಂಧ್ರವಿರುವ ಬಿಲ್ಲೆ ; (ದೂರವಾಣಿ, ನಿಸ್ತಂತು ವಾರ್ತಾಪ್ರಸರಣ — ಇವುಗಳಲ್ಲಿ, ತೆಳುವಾದ) ಅದುರುಬಿಲ್ಲೆ. **Diaphragmátic** — ಫ್ರ್ಯಾಗ್ಮ್ಯಾಟಿಕ್ (ಗು.)

Díarchy, Dý- ಡೈಆರ್ಕಿ (ನಾ.) ಎರಡು ಸ್ವತಂತ್ರ ಅಧಿಕಾರಿವರ್ಗಗಳಿಂದ ನಡೆಸುವ ಪ್ರಭುತ್ವ (ಮು., ೧೯೨೧ರಲ್ಲಿ ಇಂಡಿಯಾದಲ್ಲಿ ಜಾರಿಗೆ ಬಂದ ಸುಧಾರಿತ ರಾಜ್ಯಭಾರ ಕ್ರಮ) : ದ್ವಿಪ್ರಭುತ್ವ.

Díarist, etc. **Diary** ನೋಡಿ.

Diarrhoéa ಡೈಅರೀಯ (ನಾ.) ಅತಿಭೇದಿ ; ಅತಿಸಾರ. **Diarrhoéal** (ಗು.) ; **Diarrhoéic** (ಗು.)

Díary ಡೈಅರಿ (ನಾ.) ದಿನಚರಿ ಪಟ್ಟಿ, ಪುಸ್ತಕ ; ದಿನಚರಿ ; ದಿನಚರಿ ಪಂಚಾಂಗ (ಮು., ಯಾವುದಾದರೂ ಗೊತ್ತಾದ ಉದ್ಯೋಗದಲ್ಲಿರುವವರ ಉಪಯೋಗಕ್ಕಾಗಿ). **Diárial** — ಏರಿಯಲ್ (ಗು.) ; **Díarist** — ಅರಿಸ್ಟ್ (ನಾ.) ದಿನಚರಿ ಬರೆಯುವವನು ; ದಿನಚರಿಗಾರ. **Diarístic** (ಗು.) ; **Díarize** (ಕ್ರಿ.) ದಿನಚರಿಯಿಡು ; ದಿನಚರಿಯಲ್ಲಿ ಸೇರಿಸು.

Díastase ಡೈಅಸ್ಟೇಸ್ (ನಾ.) (ರ. ವಿ.) (ಆಹಾರ ಜೀರ್ಣಕಾರ್ಯದಲ್ಲಿ ಬಹು ಮುಖ್ಯ ಕ್ರಿಯೆಯಾದ) ಪಿಷ್ಟವನ್ನು ಶರ್ಕರವಾಗಿ ಮಾರ್ಪಡಿಸುವ ಒಂದು ಕಿಣ್ವ (ಎಂದರೆ, ಪಾನಕದಂಥ ದ್ರವದಲ್ಲಿ ಹುಳಿ ಹುಟ್ಟಿಸುವುದು, ನೊರೆಗೂಡಿಸುವುದು, ಮೊ. ದ ವ್ಯತ್ಯಾಸಗಳನ್ನುಂಟುಮಾಡುವ ಒಂದು ಸೂಕ್ಷ್ಮ ವಸ್ತುವಿಶೇಷ). **Diastátic** — ಸ್ಟ್ಯಾಟಿಕ್ — , **-ásic** — ಸ್ಟೇ — (ಗು.)

Díastole ಡೈಆ್ಯಸ್ಟೊಲಿ (ನಾ.) (ಹೃದಯದ ಅಥವಾ ಅಪಧಮನಿಯ) ವ್ಯಾಕೋಚನ (ಸಂಕೋಚನ ನಿಂತಕೂಡಲೆ ನಡೆಯುವ ಕಾರ್ಯ. ಸಂಕೋಚನ ವ್ಯಾಕೋಚನಗಳೆರಡೂ ಸೇರಿ ಆದ ಕಾರ್ಯವೇ ನಾಡಿಯ ಹೊಡೆತ). Systole and diastole (ರೂಪ.) (ಪ್ರತಿಕ್ರಿಯೆ, ಆಂದೋಲನ, ಮೊ. ವಿಷಯಗಳಲ್ಲಿ) ಕುಗ್ಗುಹಿಗ್ಗುಗಳು, ಹಿಡಿತ ಬಿಡಿತಗಳು.

Diathérmancy ಡೈಅಥರ್ಮನ್ಸಿ (ನಾ.) ಪ್ರಸಾರೋಷ್ಣವನ್ನು ತನ್ನಲ್ಲಿ ತೂರಿಹೋಗುವಂತೆ ಬಿಡುವ ಗುಣ : ಉಷ್ಣ ಭೇದ್ಯತೆ. **Diathérmanous** (ಗು.); **Diathérmic** (ಗು.) — ಗುಣವುಳ್ಳ; ಉಷ್ಣ ಭೇದ್ಯ. **Diathérmy** (ನಾ.) ದೇಹದೊಳಗಿನ ಅಂಗಾಂಶಗಳಲ್ಲಿ ಶಾಖ ಹುಟ್ಟಿಸುವುದಕ್ಕಾಗಿ ವಿದ್ಯುತ್ಪ್ರವಾಹ ಹರಿಸುವುದು : ವಿದ್ಯುದುಷ್ಣ ಪ್ರಸಾರ.

Diáthesis ಡೈಆ್ಯಥಿಸಿಸ್ (ನಾ. ; ಬ. ವ. -eses—ಸೀಸ್) (ವೈ. ಶಾ.) ದೇಹ ಪ್ರಕೃತಿಯ ಒಲವು ; ಸಹಜ ಪ್ರವಣತೆ ; ಸಹಜ ಪ್ರವೃತ್ತಿ.

Díatom ಡೈಅಟಂ (ನಾ.) (**Diatóma** ಎಂಬ ಜಾತಿಗೆ ಸೇರಿದ) ಒಂದು ಸೂಕ್ಷ್ಮದರ್ಶಕೀಯ ಏಕಾಣು ಸಸ್ಯಜೀವಿಯಾದ ಶೈವಲ (ಮು., ಸಮುದ್ರದ ತಳದಲ್ಲಿ ಪಳೆಯುಳಿಕೆಯ ನಿಕ್ಷಿಪ್ತವಾಗಿ ದೊರೆಯುವದು). **Diatomáceous** ಡೈಅಟೊಮೇಷಸ್ (ಗು.)

Diatómic ಡೈಅಟಾಮಿಕ್ (ಗು.) (ರ. ವಿ.) ಎರಡು ಪರಮಾಣುಗಳುಳ್ಳ : ದ್ವಿ ಪರಮಾಣುಕ. ಪ್ರತಿಸ್ಥಾಪನ ಸಾಧ್ಯವಾದ ಎರಡು ಜಲಜನಕ ಪರಮಾಣುಗಳುಳ್ಳ.

Diatónic ಡೈಅಟಾನಿಕ್ (ಗು.) (ಸಂ.) ಒಂದು ಆದರ್ಶ ಪ್ರಮಾಣದ ಸ್ವರಾಷ್ಟಕಕ್ಕೆ ಎಂಟು ಸ್ವರಗಳಿರುವ ವರೀಯ ಅಥವಾ ಅವರೀಯ ಸ್ವರಶ್ರೇಣಿಯ ; (ಸಂಗೀತದಲ್ಲಿ) ಇಂಥ ಸ್ವರಶ್ರೇಣಿಯಿಂದ ರಚಿಸಿದ.

Díatribe ಡೈಅಟ್ರೈಬ್ (ನಾ.) ತೀಕ್ಷ್ಣ ವಿಮರ್ಶೆ ; ಖಂಡನೆ ; ದೂಷಣೆ.

Dib ಡಿಬ್ (ಕ್ರಿ. ಅಕ) = Dap.

Dibásic ಡೈಬೇಸಿಕ್ (ಗು.) (ರ. ವಿ.) ಎರಡು ಕ್ಷಾರಕಗಳುಳ್ಳ, ಅಥವಾ ಒಂದು ಕ್ಷಾರಕದ ಎರಡು ಪರಮಾಣುಗಳುಳ್ಳ : ದ್ವಿಕ್ಷಾರಕ.

Díbber ಡಿಬರ್ (ನಾ.) ಬಿತ್ತನೆಯ ಗುಳಿ, ಮೊ. ನ್ನು ಮಾಡುವ ಸಾಧನ : ಗುಳಿ ದಸಿ.

Díbble ಡಿಬ್‌ಲ್ (ನಾ., ಕ್ರಿ.) ಗುಳಿ ದಸಿ. (ಕ್ರಿ.) ಇದರಿಂದ ಗುಳಿ ಮಾಡು ; ಈ ರೀತಿಯಾಗಿ ಬಿತ್ತು ಅಥವಾ ಪಯಿರಿಡು.

Dibs ಡಿಬ್ಸ್ (ನಾ., ಬ. ವ.) ಮಕ್ಕಳ ಒಂದು ತೆರದ ಆಟ ; ಇಸ್ಪೀಟಿನ ಆಟದಲ್ಲಿ ಎಣಿಕೆಯ ಕಾಯಿ. (ಅಸಂ.) ಹಣ ; ದುಡ್ಡು.

Dice, etc. **Die**[1] ನೋಡಿ.

Dichlamýdeous ಡೈಕ್ಲಮಿಡಿಯಸ್ (ಗು.) (ಸ. ವಿ.) ಪುಷ್ಪಪಾತ್ರವೂ ದಳವಲಯವೂ ಉಳ್ಳ : ದ್ವಿಕೋಶ(ಯುಕ್ತ)

Dichógamous ಡೈಕಾಗಮಸ್ (ಗು.) (ಸ. ವಿ.) ಸ್ವಪರಾಗದ ಆಧಾನಕ್ಕೆ ಅವಕಾಶವಿಲ್ಲದಂತೆ ಪುಷ್ಪಕೇಸರಗಳೂ ಶಲಾಕೆಗಳೂ ಬೇರೆ ಬೇರೆ ಕಾಲಗಳಲ್ಲಿ ಬಲಿಯುವ : ಪೃಥಕ್ ಸಂಗಮಿ.

Dichótomy ಡೈಕಾಟೊಮಿ (ನಾ.) ಎರಡಾಗಿ ವಿಭಾಗ ; ದ್ವಿಧಜನ. (ಸ. ವಿ., ಪ್ರಾ. ವಿ.) ಎರಡೆರಡಾಗಿ ಕವಲೊಡೆಯುತ್ತಹೋಗುವುದು :

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದ್ವೈಧೀಕರಣ ; ದ್ವಂದ್ವ ವರ್ಗೀಕರಣ. **Dichotómic** ಡೈಕೊಟಾಮಿಕ್ (ಗು.) ; **Dichótomist** ಡೈಕಾಟೊಮಿಸ್ಟ್ (ನಾ.) ; **Dichótomize** (ಕ್ರಿ.) ; **Dichótomous** (ಗು.) ; **Dichótomously** (ಕ್ರಿ. ವಿ.)

Dichróic ಡೈಕ್ರೋಯಿಕ್ (ಗು.) ಎರಡು ಬಣ್ಣಗಳುಳ್ಳ ; —ತೋರಿಸುವ (ಮು., ದ್ವಿವಕ್ರೀಭವನವುಳ್ಳ ಸ್ಫಟಿಕಗಳ ವಿಷಯದಲ್ಲಿ) : ದ್ವಿವರ್ಣಿ.

Dichromátic ಡೈಕ್ರೊಮ್ಯಾಟಿಕ್ (ಗು.) ಎರಡು ಬಣ್ಣಗಳುಳ್ಳ (ಮು., ಪ್ರಾಣಿವಂಶಗಳಲ್ಲಿ ಒಂದರ ವ್ಯಕ್ತಿಗಳ ಬಣ್ಣವು ಮತ್ತೊಂದರ ವ್ಯಕ್ತಿಗಳ ಬಣ್ಣದಂತಿರದೆ ಬೇರೆಯಾಗಿರುವ ಸಂದರ್ಭದಲ್ಲಿ) : ದ್ವಿವರ್ಣಿ ; ದ್ವಿವರ್ಣಕ. **Dichrómic** ಡೈಕ್ರೋಮಿಕ್ (ಗು.) ಎರಡೇ ಬಣ್ಣಗಳ ; ದ್ವಿವರ್ಣಿ (ಮು., ಬಣ್ಣಗುರುಡಿನ ವಿಷಯದಲ್ಲಿ, ಮೂರು ಮೂಲವರ್ಣಗಳಲ್ಲಿ ಎರಡನ್ನು ಮಾತ್ರ ಗುರುತಿಸಲಾಗುವ)

Dick ಡಿಕ್ (ನಾ.) (೧) Richard ಎಂಬ ಹೆಸರಿನ ಬಳಕೆಯ ರೂಪ ; (Tom, Dick and Harry ಯಾರೋ ಅನಾಮಧೇಯರು : ವೆಂಕ, ಸೀನ, ನಾಣ) ; ಯಾವನೋ ಒಬ್ಬನು ; ಹುಡುಗ ; ಮನುಷ್ಯ. (೨) (ಅಸಂ.) ಕುದುರೆಯ ಚಾವಟಿ. (ಅಮೆ. ಸಂ.) ಕಳ್ಳತನ, ಮೊ. ನ್ನು ಕಂಡು ಹಿಡಿಯುವ ಉದ್ಯೋಗದವನು : ಪತ್ತೇದಾರ. (೩) Take one's d. (ಅಸಂ.) ಆಣೆಯಿಟ್ಟುಕೊ ; ಪ್ರಮಾಣ ಮಾಡು ; ದೃಢವಾಗಿ ಹೇಳು (ಪ್ರಾಯಶಃ Declaration ಎಂಬುದರಿಂದ). (೪) ತೊಗಲಿನ ಮುಂಗವಚ. (೫) ಕಾಲುವೆ ; ಅಡ್ಡಕಟ್ಟೆ ; ಹಳ್ಳ. (೬) Dictionary ಪದದ ಸಂಕ್ಷಿಪ್ತ ; ಉದ್ಧವಾದ ಪದಗಳು.

Díckens ಡಿಕೆನ್ಸ್ (ನಾ.) (ಬಳ. ಮಾ.) ದೆವ್ವ ; ಪಿಶಾಚಿ ; ಭೂತ ; ಸೈತಾನ (What the dickens ! Play the dickens with ಎಂಬಲ್ಲಿ)

Dícker ಡಿಕರ್ (ನಾ., ಕ್ರಿ. ಅಕ.) (ವ್ಯಾಪಾರ) ಹತ್ತು (ಮು., ಚರ್ಮಗಳ ವಿಷಯದಲ್ಲಿ) ; (ಚರ್ಮ) ದಶಕ. (ಕ್ರಿ.) (ಅಮೆ. ಸಂ.) ಅದಲು ಬದಲು ವ್ಯಾಪಾರ ಮಾಡು ; ವಿನಿಮಯ— ; ಚೌಕಸಿ ಮಾಡು ; ಕೊಸರಾಡು.

Dícky[1], **-ey** ಡಿಕಿ (ನಾ.) (ಬಳ. ಮಾ., ಅಸಂ.) ಕತ್ತೆ. ಸಣ್ಣ ಹಕ್ಕಿ (= D.-bird). ಜುಬ್ಬದ (ಷರ್ಟಿನ) ತೋಳಿಲ್ಲದ ಮುಂಭಾಗ ; ದೂಳು ಪಾವುಡ ; ಮುಂಗವಚ. ಬಂಡಿಹೊಡೆಯುವವನ ಪೀಠ ; ಬಂಡಿಯ ಹಿಂಭಾಗದಲ್ಲಿಯ ಸೇವಕನ ಪೀಠ.

Dícky[2] (ಗು.) (ಅಸಂ.) ಭದ್ರವಿಲ್ಲದ ; ಅಲ್ಲಾಡುವ ; ಜರ್ಜರಿತ.

Dicotylédon ಡೈಕಾಟಿಲೀಡನ್ (ನಾ.) (ಹೂವು ಬಿಡುವ ಸಸ್ಯಜಾತಿಗಳಲ್ಲಿ) ದ್ವಿ ಬೀಜದಳ ಸಸ್ಯ. **Dicotylédonous** — ಲೀ(ಲೆ)ಡನಸ್ (ಗು.)

Díctaphone ಡಿಕ್ಟಫೋನ್ (ನಾ.) ಮಾತಾಡಿದುದನ್ನು ಗುರುತು ಮಾಡಿಟ್ಟುಕೊಂಡು ಮುಂದೆ ಬೇಕಾದಾಗ ಅದನ್ನು ಹೇಳುವ ಯಂತ್ರ : ಉಕ್ತ ಪ್ರತಿವಾಣಿ. (ವ್ಯಾಪಾರದ ಹೆಸರು)

Díctate ಡಿಕ್ಟೇಟ್ (ನಾ.), **Dictáte** ಡಿಕ್ಟೇಟ್ (ಕ್ರಿ.) (ಮು., ವಿವೇಕ, ಅಂತರಾತ್ಮ, ಸ್ವಭಾವ, ಮೊ. ಗಳ) ಅಧಿಕಾರ ವಾಣಿ, ವಿಧಿ, ಆಜ್ಞೆ (ಸಾ., ಬ. ವ. ದಲ್ಲಿ). (ಕ್ರಿ.) (ಬರೆದುಕೊಳ್ಳಬೇಕಾದ ವಿಷಯವನ್ನು, ಸಾ., ಬರಹಗಾರನಿಗೆ) ಗಟ್ಟಿಯಾಗಿ ಹೇಳು, ಓದು ; ಹೇಳಿ ಬರಸು. (ಷರತ್ತುಗಳು, ಮಾಡಬೇಕಾದ ಕಾರ್ಯಗಳು, ಮೊ. ನ್ನು ಅಧಿಕಾರ ವಾಣಿಯಿಂದ) ನೇಮಕ ಮಾಡು, ಕಟ್ಟುಮಾಡು, ಅಪ್ಪಣೆ ಕೊಡು ; ವಿಧಿಸು ; ಆಜ್ಞಾಪಿಸು ; ಆದೇಶ ಕೊಡು ; ಶಾಸನ ಮಾಡು (Will not be dictated to ಆಜ್ಞೆ ತೆಗೆದುಕೊಳ್ಳತಕ್ಕವನಲ್ಲ). **Dictátion** (ನಾ.) (ಕ್ರಿಯಾರ್ಥಗಳಲ್ಲಿ). ಉಕ್ತ ಲೇಖನ. **Dictátor** (ನಾ.) ನಿರಂಕುಶ ಪ್ರಭು (ಮು., ಒಂದು ರಾಷ್ಟ್ರದ ಪ್ರಭುತ್ವಕ್ಕೆ ತಾತ್ಕಾಲಿಕವಾಗಿ ಅಥವಾ ಅಕ್ರಮವಾಗಿ ಬಂದವನು ; ಸಾ., ಪ್ರಜಾಪ್ರಭುತ್ವವನ್ನು ಅಳಿಸಿ ಆ ರಾಷ್ಟ್ರದ ಪ್ರಭುತ್ವವನ್ನು ಕೈಕೊಂಡವನು). ಯಾವ ಕ್ಷೇತ್ರದಲ್ಲಿಯೇ ಆಗಲಿ ನಿರಂಕುಶಾಧಿಕಾರ ಪಡೆದಿರುವವನು ; ಸರ್ವಾಧಿಕಾರಿ. ಹೇಳಿ ಬರಸುವವನು. **Dictátorship** (ನಾ.) ; **Dictátress** (ನಾ., ಸ್ತ್ರೀ.) ; **Dictatórial** ಡಿಕ್ಟಟೋರಿಯಲ್ (ಗು.) ನಿರಂಕುಶಾಧಿಕಾರಿಯ ; ದಬ್ಬಾಳಿಕೆಯ ; ಉದ್ಧತ. **Dictatórially** (ಕ್ರಿ. ವಿ.)

Díction ಡಿಕ್‌ಷನ್ (ನಾ.) ಶಬ್ದರೀತಿ ; ಪದಪ್ರಯೋಗ ; ಪದ ವಿನ್ಯಾಸ ; ಶಬ್ದಯೋಜನೆ ; ವಾಕ್ಸರಣಿ ; ಮಾತಿನ ಜೋಡಣೆ ; ನುಡಿ ನಡೆ. **Díctionary** ಡಿಕ್‌ಷನರಿ (ನಾ.) ಒಂದು ಭಾಷೆಯ ಪದಗಳು ಅಥವಾ ಯಾವುದಾದರೂ ಒಂದು ವಿಶೇಷ ವಿಷಯದ ಅಥವಾ ಲೇಖಕನ ಸಂಬಂಧದ ಪದಗಳು, ಮೊ. ನ್ನು ಅಕಾರಾದಿಯಾಗಿ ವಿಂಗಡಿಸಿ ಅರ್ಥ ಕೊಡುವ ಪುಸ್ತಕ : ನಿಘಂಟು ; ಶಬ್ದಕೋಶ (English-Kannada d. ; D. of architecture, of the Bible ; Shakespeare d., etc.). Walking or living d. ಅನೇಕ ವಿಷಯಗಳನ್ನು ತಿಳಿದವನು ; ಜ್ಞಾನ ಭಂಡಾರಿ. D. style ಅತಿ ಶುದ್ಧ ಶೈಲಿ ; ಕೇವಲ ಪಂಡಿತ ಶೈಲಿ ; ನಿಘಂಟು ಶೈಲಿ.

Díctionary. **Diction** ನೋಡಿ.

Díctograph ಡಿಕ್ಟೊಗ್ರಾಫ್ (ನಾ.) ಒಂದು ಕೋಣೆಯಲ್ಲಿ ಮಾಡಿದ ಶಬ್ದಗಳನ್ನು, ಅಥವಾ ಆಡಿದ ಮಾತುಗಳನ್ನು, ಮತ್ತೊಂದು ಕೋಣೆಯಲ್ಲಿ ಗ್ರಹಿಸಿ ಬರೆಯಲಾಗುವಂತೆ ಧ್ವನಿವೃದ್ಧಿ ಮಾಡುವ ಸಲಕರಣೆ : ಧ್ವನಿ ವಾಹಕ. (ವ್ಯಾಪಾರದ ಹೆಸರು)

Díctum ಡಿಕ್ಟಂ (ನಾ. ; ಬ. ವ. -ta, -ums) ವಿಧ್ಯುಕ್ತವಾದ ಹೇಳಿಕೆ, ವಚನ, ನುಡಿ ; ಸೂತ್ರ ; ಸೂಕ್ತಿ. ಆದೇಶ. (ನ್ಯಾ. ಶಾ.) ನ್ಯಾಯಾಧಿಪತಿಯ, ಕಾನೂನಿನ ಬಲವಿಲ್ಲದ, ಅಭಿಪ್ರಾಯ ನಿರೂಪಣೆ.

Did ಡಿಡ್. Do ಧಾತುವಿನ ಭೂತ ರೂಪ.

Didáctic ಡಿ(ಡೈ)ಡ್ಯಾಕ್ಟಿಕ್ (ಗು.) ಶಿಕ್ಷಣಾತ್ಮಕ ; ಉಪದೇಶಾತ್ಮಕ ; ಬೋಧನಾತ್ಮಕ ; ಬೋಧಪರ ; ನೀತಿಪರ. ಉಪಾಧ್ಯಾಯನ ರೀತಿಯ, ಶೈಲಿಯ. **Didáctically** (ಕ್ರಿ. ವಿ.) ; **Didácticism** — ಸಿಸ್ಮ್ (ನಾ.) ಬೋಧಪರತೆ ; ಉಪದೇಶಪರತ್ವ.

Díddle ಡಿಡ್ಲ್ (ಕ್ರಿ. ಸಕ.) (ಅಸಂ.) ಮೋಸ ಮಾಡು ; ವಂಚಿಸು.

Didst ಡಿಡ್‌ಸ್ಟ್. Do ಧಾತುವಿನ ಭೂತ, ಮಧ್ಯಮ ಪುರುಷ, ಏಕ ವಚನ ರೂಪ.

Didýmium ಡಿಡಿಮಿಯಂ (ನಾ.) ಒಂದು ಅಪರೂಪ ಲೋಹ : 'ಡಿಡಿಮಿಯಂ'.

Die[1] ಡೈ (ನಾ. ; ಬ. ವ. Dice, Dies) (೧) (ಬ. ವ. Dice) ಮುಖಗಳಮೇಲೆ ಒಂದರಿಂದ ಆರರ ವರೆಗೆ ಚುಕ್ಕೆಗಳುಳ್ಳ ಸಣ್ಣ ಘನಾಕೃತಿಗಳಲ್ಲೊಂದು (ಅದೃಷ್ಟದ ಆಟಗಳಲ್ಲಿ ಉಪಯೋಗ) : ದಾಳ ; ನೆತ್ತ ; ಹಾಸಂಗಿ (ಗ್ರಾಂ.). (Dice ದಾಳದಾಟ ; ಪಗಡೆಯಾಟ). [The d. is cast (ದಾಳ ಬಿಟ್ಟು ಆಯಿತು) ; ಹಿಂದಕ್ಕೆ ಬರಲಾಗದಂತೆ ನಿರ್ಧಾರವಾಗಿ ಹೋಯಿತು ; ಹಿಂದಕ್ಕೆ ಬರುವಂತಿಲ್ಲ ; ಕಾರ್ಯ ಮಿಂಚಿಹೋಯಿತು. Upon the d. ಅದೃಷ್ಟದಮೇಲೆ. As straight, true, as a d. ದಾಳದಂತೆ ನಿಕರವಾಗಿ, ಯಥಾರ್ಥವಾಗಿ]. (೨) (ಬ. ವ. Dies) (ವಾ. ಶಾ.) ಸ್ತಂಭಪೀಠ, ಗದ್ದುಗೆ, ಮೊ. ಗಳ ತಳಕ್ಕೂ ತಳ ಕಪೋತಕ್ಕೂ ಮಧ್ಯೇ ಇರುವ ಚದುರವಾದ ಘನಾಕೃತಿಯ ಭಾಗ. (ನಾಣ್ಯದ ಬಿಲ್ಲೆ, ಬಹುಮಾನ ಪದಕ, ಕಾಗದ, ಮೊ. ಗಳಮೇಲೆ ಮುದ್ರೆಯೊತ್ತುವುದಕ್ಕೆ ಲೋಹದಲ್ಲಿ ಕೆತ್ತಿ ಮಾಡಿದ) ಥಾಪ, ಅಚ್ಚು, ಠಸ್ಸೆ, ಮುದ್ರೆ. D.-sinker ಠಸ್ಸೆ ಕೆತ್ತುವವನು. **Dice** ಡೈಸ್ (ಕ್ರಿ.) ಪಗಡೆಯಾಡು ; ದಾಳ ಬಿಡು ; ನೆತ್ತವಾಡಿ ಕಳೆದುಕೊ. (ರೇಖೆಗಳಿಂದ ಅಥವಾ ಬಣ್ಣಗಳಿಂದ) ಚೌಕುಳಿ ಮಾಡು. D.-box ದಾಳಗಳನ್ನು ಎಸಯುವ, ಗಳಿಗೆ ಬಟ್ಟಲಾಕಾರದ, ಸಂಪುಟ. D.-b. insulator ದೂರಲೇಖಕದ ತಂತಿಗಳಿಗೆ ಆಶ್ರಯವಾಗಿರುವ, ಗಳಿಗೆಬಟ್ಟಲನಾಕಾರದ, ಪಿಂಗಾಣಿಯ ವಿದ್ಯುನ್ನಿರೋಧಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Die[2] ಡೈ (ಕ್ರಿ. ಅಕ.) ಸಾಯಿ ; ಮಡಿ ; ಅಳಿ ; ದೇಹ ಬಿಡು ; ಪ್ರಾಣ ಬಿಡು, ಕೊಡು ; ಪ್ರಾಣತ್ಯಾಗ ಮಾಡು ; ಮೃತನಾಗು ; ಮರಣ ಹೊಂದು ; ಕಾಲವಾಗು ; ತೀರಿಕೊಳ್ಳು ; ತೀರಿಹೋಗು ; ಅಗಿಹೋಗು. [D. a martyr ಸ್ವಧರ್ಮಕ್ಕಾಗಿ ಪ್ರಾಣ ತೆರು. D. a glorious death ಘನವಾದ ಸಾವು ಸಾಯಿ. D. a dog's death ನಾಯಿಯಂತೆ (ಹೀನಾಯಪಟ್ಟು) ಸಾಯಿ. D. the death ಕೊಲ್ಲಲ್ಪಡು ; ಮರಣ ದಂಡನೆ ಪಡೆ. D. game ಯುದ್ಧಮಾಡುತ್ತ, ಹೋರಾಡುತ್ತ, ಹೆಣ ಗಾಡುತ್ತ, ಸಾಯಿ (ತೆಪ್ಪನಿದ್ದುಕೊಂಡು ಅಲ್ಲ). D. hard ಹೆಣಗಾಡಿ ಸಾಯಿ. D. in one's bed ವಯಸ್ಸಾಗಿ ಅಥವಾ ರೋಗ ಬಂದು ಸಾಯಿ. D. in one's shoes ದುರ್ಮರಣ ಹೊಂದು. D. in harness ಉದ್ಯೋಗದಲ್ಲಿರುವಾಗಲೆ ಸಾಯಿ. D. in last ditch ಕಟ್ಟಕಡೆಯ ವರೆಗೂ ಹೋರಾಡಿ ಸಾಯಿ. Never say d. ಬಿಡದಿರು ; ಎದೆಗುಂದದಿರು ; ಧೈರ್ಯಗೆಡದಿರು]. (ಬೈಬಲ್) ಸಾವಿನಲ್ಲಿ ಹೇಗೊ ಹಾಗೆ ಯಾತನೆಪಡು (I d. daily ಪ್ರತಿ ದಿನವೂ ಪಾಪದೊಡನೆ ಹೋರಾಡಿ ಮರಣಯಾತನೆಯನ್ನನುಭವಿಸುತ್ತೇನೆ). ಆತ್ಮನಾಶ ಹೊಂದು. [D. unto (ಪಾಪದ) ದಾಸ್ಯದಿಂದ ಮುಕ್ತನಾಗು, ಬಿಡುಗಡೆ ಹೊಂದು. Be dying for ಮಾಡುವುದಕ್ಕೆ ತವಕಪಡುತ್ತಿರು, ಕುದಿಯುತ್ತಿರು, ತಪಿಸುತ್ತಿರು, ಸಾಯುತ್ತಿರು. D. of laughing ನಕ್ಕು ನಕ್ಕು ಸಾಯಿ ; ಹೊಟ್ಟೆ ಹುಣ್ಣಾಗುವಷ್ಟು ನಗು]. (ಸಸ್ಯ, ಮೊ. ಗಳ ವಿಷಯದಲ್ಲಿ) ಸತ್ವ ನಾಶವಾಗು ; ಬಾಡಿಹೋಗು ; ಬತ್ತಿಹೋಗು ; ಒಣಗಿಹೋಗು ; ಸತ್ತುಹೋಗು. (ಪ್ಯಾರೆ, ಕೀರ್ತಿ, ಶಬ್ದ, ಮೊ. ಗಳ ವಿಷಯದಲ್ಲಿ) ನಂದಿಹೋಗು, ಆರಿಹೋಗು, ಕೊನೆಗಾಣು, ಕ್ಷೀಣವಾಗು, ನಿರ್ಮೂಲ ವಾಗು, ಅಳಿಸಿಹೋಗು, ನಶಿಸಿಹೋಗು, ಮರೆತುಹೋಗು, ಕಣ್ಮರೆ ಯಾಗು, ನೆನಪಿಲ್ಲದಂತಾಗು. **Die-away** (ಗು.) ನಶಿಸುವ ; ಕ್ಷಯಿಸುವ ; ಕೃಶವಾಗುವ. **D.-hard** (ಗು., ನಾ.) ಜಗ್ಗದ ; ಕಡೆಯ ವರೆಗೂ ಹೋರಾಡುವ ; ಸುಲಭವಾಗಿ ಸಾಯದವನು ; ಕಡೆಯ ವರೆಗೂ ಬಲಾತ್ಕಾರ, ಮೊ. ನ್ನು ಪ್ರತಿಭಟಿಸುವವನು. ಹಠಮಾರಿಯಾದ ರಾಜ್ಯನೀತಿಜ್ಞ, ಮೊ. ರು. **Die-hards** (ಇಂಗ್ಲೆಂಡಿನ) ಒಂದು ಪದಾತಿದಳದ ಹೆಸರು.

Dieléctric ಡೈಇ(ಎ)ಲೆಕ್ಟ್ರಿಕ್ (ಗು., ನಾ.) ವಿದ್ಯುನ್ನಿರೋಧಕ, ವಿದ್ಯು ದಭೇದ್ಯ (ಪಥ, ವಸ್ತು, ಪದಾರ್ಥ) ; ಅವಾಹಕ.

Diésel ಡೀಸೆಲ್ (ಗು., ನಾ.) ಜರ್ಮನ್ ದೇಶದ 'ರುಡಾಲ್ಫ್ ಡೀಸೆಲ್' ಎಂಬಾತನ, ಅಥವಾ ಆತನು ರಚಿಸಿದ ಎಂಜಿನಿನ, ಅಥವಾ ಆ ಎಂಜಿನಿನ ಆವೃತ್ತಿಯ. ಡೀಸೆಲ್ ಎಂಜಿನುಗಳನ್ನು ಅಳವಡಿ ಸಿರುವ. (ನಾ.) (ಒಳಕ್ಕೆ ಎರಚಿದ ದ್ರವಇಂಧನವು ಎಂಜಿನಿನ ಸ್ತಂಭ ನಾಳಿಯಲ್ಲಿ ಆವಿಯಾಗಿ, ಒಳಗಿರುವ ಒತ್ತಡದ ವಾಯುವಿನೊಡನೆ ಬೆರೆತು, ಶಾಖದಿಂದ ಹೊತ್ತಿಕೊಂಡು, ಎಲ್ಲವೂ ಸಿಡಿದು ಅನಿಲರೂಪ ತಾಳಿ, ಇದರಿಂದುಂಟಾದ ಹೆಚ್ಚು ಒತ್ತಡದಿಂದ ಸ್ತಂಭನಾಳಿಯಲ್ಲಿಯ ಆಡುಬೆಣೆ ಯನ್ನು ಹಿಂದಕ್ಕೂ ಮುಂದಕ್ಕೂ ಬೇಗ ಬೇಗನೆ ಆಡಿಸುವುದರಿಂದ ಚಲನ ವುಂಟಾಗುವಂತೆ ಏರ್ಪಡಿಸಿದ) ಡೀಸೆಲ್ ಎಂಜಿನು (= D.-engine)

Díes írae ಡೈಈಸ್ ಐರೀ (ನಾ.) (ಕಲ್ಪಾಂತ) ಅಂತ್ಯ ಮಹಾವಿಚಾರಣ ದಿನ. ಈ ಪದಗಳಿಂದ ಆರಂಭವಾಗುವ ಲ್ಯಾಟಿನ್ ಗೀತೆ.

Diés non ಡೈಈಸ್ ನಾನ್ (ನಾ.) (ನ್ಯಾ. ಶಾ.) ನ್ಯಾಯಸಂಬಂಧ ವಾದ ಕಾರ್ಯ ಮಾಡದ ದಿನ ; ಅವ್ಯವಹಾರ ದಿನ ; ಲೆಕ್ಕಕ್ಕೆ ತೆಗೆದು ಕೊಳ್ಳದ ದಿನ.

Díet[1] ಡೈಎಟ್ (ನಾ., ಕ್ರಿ. ಸಕ.) ಆಹಾರ ಕ್ರಮ ; ಗೊತ್ತುಮಾಡಿದ ಆಹಾರ ; ಪಥ್ಯ ; (ಒಬ್ಬನ ಸಾಮಾನ್ಯ) ಆಹಾರ. (ಕ್ರಿ.) ಪಥ್ಯಕ್ಕಾಗಲಿ ದಂಡನೆಗಾಗಲಿ ಒಂದು ಗೊತ್ತಾದ ಆಹಾರವನ್ನು ಉಣಿಸು, ಉಣ್ಣು; ಪಥ್ಯದಲ್ಲಿಡು ; —ಇರು ; ಅಹಾರ ಕೊಡು, ತೆಗೆದುಕೊ. **Dietárian** (ನಾ.) ಪಥ್ಯವಿಡುವವನು ; ಪಥ್ಯಮಾಡುವವನು. **Díetary** (ನಾ., ಗು.) ಪಥ್ಯ(ದ). (ಚಿಕಿತ್ಸಾಲಯ, ಕಾರಖಾನೆ, ಮೊ. ಗಳಲ್ಲಿ ಕೊಡುವ) ಗೊತ್ತಾದ ಅಳತೆಯ ಆಹಾರ ; ಪಡಿಭತ್ಯ. **Dietétic** (ಗು.) ಪಥ್ಯದ ; ಆಹಾರದ. **Dietétics** (ನಾ.) ಪಥ್ಯಶಾಸ್ತ್ರ ; ಆಹಾರ ಶಾಸ್ತ್ರ. **Dietétically** (ಕ್ರಿ. ವಿ.)

Díet[2] ಡೈಎಟ್ (ನಾ.) ರಾಷ್ಟ್ರೀಯ ಅಥವಾ ಅಂತರ್ರಾಷ್ಟ್ರೀಯ ಕಾರ್ಯ ನಿರ್ವಹಣಕ್ಕಾಗಿ ಸೇರಿದ ಸಭೆ, ಸದಸ್ಸು, ಪರಿಷತ್ತು. ರಾಷ್ಟ್ರದ ಶಾಸನ ಸಭೆಗಳ ಅಧಿವೇಶನ (ಮು., ಪರರಾಷ್ಟ್ರೀಯ ಸಭೆಗಳಿಗೆ ಇಂಗ್ಲಿಷ್ ಹೆಸರು)

Díffer ಡಿಫರ್ (ಕ್ರಿ. ಅಕ.) ವ್ಯತ್ಯಾಸವಾಗಿರು, ವಾಗು ; ಹೋಲದಿರು ; ಅಂತರವಿರು ; ಹೆಚ್ಚುಕಡಮೆಯಾಗಿರು ; ಬೇರೆಯಾಗಿರು ; ಭಿನ್ನ ವಾಗಿರು ; ವಿರುದ್ಧವಾಗಿರು ; ಭೇದವಿರು ; ಹೊಂದದಿರು ; ಒಪ್ಪದಿರು ; ಭಿನ್ನಾಭಿಪ್ರಾಯ ಪಡು (Agree to d. ಪರಸ್ಪರ ಒಪ್ಪಿಕೆಯಾಗುವುದು ಸಾಧ್ಯವಲ್ಲವೆಂದು ಬಿಟ್ಟುಬಿಡು ; ಭಿನ್ನಾಭಿಪ್ರಾಯ ಪಡಲು ಒಪ್ಪು). **Dífference** ಡಿಫರೆನ್ಸ್ (ನಾ., ಕ್ರಿ. ಸಕ.) ಭೇದ ; ಭಿನ್ನತೆ ; ವ್ಯತ್ಯಾಸ ; ಅಂತರ ; ಅಸಾಮ್ಯ ; ತಾರತಮ್ಯ ; ಹೆಚ್ಚುಕಡಮೆ. ಮೊಬಲಗುಗಳು ಒಂದಕ್ಕೊಂದು ವ್ಯತ್ಯಾಸವಾಗಿರುವ ಮೊತ್ತ ; ವ್ಯವ ಕಲನ ಫಲ. (Distinction without d. ವ್ಯತ್ಯಾಸವಿಲ್ಲದ ಭೇದ. Split the d. ಭೇದವನ್ನು ಸಮಭಾಗಿಸು). (ಕೆಲವು ತೇದಿಗಳ ಮಧ್ಯೆ ಬದಲಾಯಿಸುವ, ಬಂಡವಾಳ ಪತ್ರ, ಮೊ. ಗಳ) ಬೆಲೆಯ ವ್ಯತ್ಯಾಸ. (ಅಭಿಪ್ರಾಯದಲ್ಲಿ, ವಾದದಲ್ಲಿ, ವ್ಯಾಜ್ಯದಲ್ಲಿ) ಭಿನ್ನಾಭಿಪ್ರಾಯ. ವ್ಯಾಜ್ಯ; ಕಲಹ ; ಮನಸ್ತಾಪ ; ವೈಮನಸ್ಯ. (ವ್ಯಕ್ತಿಗಳನ್ನು ಅಥವಾ ಜೀವಿ ವಂಶಗಳನ್ನು ಪ್ರತ್ಯೇಕಿಸಲಾಗುವ) ವೈಲಕ್ಷಣ್ಯ(ವಾಗಿರು) ; ವಿಶಿಷ್ಟ ಲಕ್ಷಣ (ವಾಗಿರು). (It makes a great d. ಅದು ಬಹಳ ಮುಖ್ಯವಾದದ್ದು). **Dífferent** ಡಿಫರೆಂಟ್ (ಗು.) ಭಿನ್ನವಾದ ; (ರೂಪು, ಸ್ವಭಾವ, ಗುಣ) ಬೇರೆ (ಬೇರೆ)ಯಾದ ; ವ್ಯತ್ಯಾಸವಾದ ; ವಿವಿಧ ; ಬಗೆ ಬಗೆಯ (*from*, *to*, ಉಪ. ಜೊತೆನೆ, *than* ಅವ್ಯ. ಜೊತೆನೆ). **Dífferently** (ಕ್ರಿ. ವಿ.); **Differéntia** — ರೆನ್ಷಿಯ (ನಾ. ; ಬ. ವ. -ae —ಯಾ) ವಿಶೇಷ ಲಕ್ಷಣ ; ವೈಲಕ್ಷಣ್ಯ (ಮು., ಜೀವಿವಂಶಗಳ ವಿಷಯದಲ್ಲಿ). **Differéntial** — ರೆನ್ಷಲ್ (ಗು., ನಾ.) ಭೇದಾತ್ಮಕ ; ಭೇದ ಕಾರಕ ; ಭೇದ ಜನ್ಯ ; ವ್ಯತ್ಯಾಸ ತೋರಿಸುವ [D. duties, charges, tariff (ಸಂದರ್ಭಕ್ಕೆ ತಕ್ಕಂತೆ ವ್ಯತ್ಯಾಸವಾಗುವ) ಭೇದಕಾರಕ ಸುಂಕ, ಮೂಲ್ಯ, ತೆರಿಗೆ]. ಒಂದು ಗೊತ್ತಾದ ವ್ಯತ್ಯಾಸವಿರುವ; ವೈಲಕ್ಷಣ್ಯದ ; ಭಿನ್ನ ಲಕ್ಷಣದ (D. diagnosis ಭೇದಸೂಚಕ ರೋಗ ನಿದಾನ). (ಭೌ. ವಿ., ಯಂತ್ರ ಶಾಸ್ತ್ರ) ಎರಡು ಅಥವಾ ಹೆಚ್ಚಾದ ಚಲನ, ಒತ್ತಡ, ಮೊ. ಗಳ ವ್ಯತ್ಯಾಸದ ; ವ್ಯತ್ಯಾಸಾತ್ಮಕ [D. gear, or D. ಮೋಟಾರ್ ಬಂಡಿ ಮೂಲೆತಿರುಗುವಾಗ ಅದರ ಹಿಂದಿನ ಚಕ್ರಗಳು ಬೇರೆ ಬೇರೆಯ ವೇಗದಿಂದ ಸುತ್ತುವಂತೆ ಅಳವಡಿಸುವ ಚಾಲನ ಸಾಧನ]. (ಗಣಿತ ; ನಾ.) ನಿರಂತರವಾಗಿ ವ್ಯತ್ಯಾಸಹೊಂದುತ್ತಿರುವ ಒಂದು ಮೊತ್ತದ ಪಕ್ಕ ಪಕ್ಕದ ಮೂಲ್ಯಗಳಿಗಿರುವ ಸೂಕ್ಷ್ಮತಮ ವ್ಯತ್ಯಾಸ (D. calculus ಈ ವ್ಯತ್ಯಾಸವನ್ನು ಗಣಿಸುವ ವಿಧಿ, ಗಣಿತ ಭಾಗ : ಚಲನಕಲನ ಗಣಿತ). **Differéntially** (ಕ್ರಿ. ವಿ.) ; **Differéntiate** — ಷಿಯೇಟ್ (ಕ್ರಿ.) ವ್ಯತ್ಯಾಸ ಮಾಡು ; ಭೇದ ಮಾಡು ; ಭಿನ್ನವಾಗು ; — ಮಾಡು. (ಜೀವಿ ವಂಶಗಳು, ಅಂಗಗಳು, ಕಾರ್ಯಗಳು, ಸಮಾನಾರ್ಥ ಪದಗಳು — ಇವನ್ನು) ವಿಶೇಷಿಸು, ಭಿನ್ನ ಮಾಡು. (ಒಂದೊಂದಕ್ಕೆ) ಪ್ರಭೇದ ಮಾಡು. (ಗಣಿತ) ಚಲನಕಲನ ಮಾಡು. **Differentiátion** (ನಾ.)

Dífficile (F) ಡಿಫಿಸಿ(ಲ್)ಲ್ (ಗು.) ಹೊಂದಿಕೊಂಡುಹೋಗದ ; ಬಗ್ಗದ ; ಸಗ್ಗದ ; ಒಪ್ಪಿಸಲು ಕಠಿನವಾದ.

Dífficult ಡಿಫಿಕಲ್ಟ್ (ಗು.) (ಮಾಡಲು, ಅಭ್ಯಸಿಸಲು) ಕಷ್ಟವಾದ ; ತೊಂದರೆಯಾದ ; ಕಡಿದು ; ಅರಿದು ; ದುಷ್ಕರ ; ಕಠಿನವಾದ ; ಶ್ರಮ ಸಾಧ್ಯವಾದ ; ಪ್ರಯಾಸದ ; ಕ್ಲಿಷ್ಟ ; ವಿಷಮ ; ಇಕ್ಕಟ್ಟಿನ ; ದುರ್ಗಮ. (D. of access ಹತ್ತಿರ ಹೋಗಲು ಕಷ್ಟವಾದ ; ದುರ್ಗಮವಾದ). **Dífficulty** (ನಾ.) ಕಷ್ಟ ; ಕ್ಲೇಶ (With d. ಕಷ್ಟಪಟ್ಟು) ; ಕಠಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾದದ್ದು ; ಗಹನವಾದದ್ದು ; ಅಡ್ಡಿ ; ಪ್ರತಿಬಂಧಕ ; ಅಡಚಣೆ. ವ್ಯವಹಾರದಲ್ಲಿ ಇಕ್ಕಟ್ಟು (ಮು., ಹಣವಿಲ್ಲದಿರುವುದು). ಅನಿಷ್ಟ ; ಅಧ್ಯಂತರ. Make difficulties ತೊಂದರೆಯೊಡ್ಡು ; ನೆವ ತೆಗೆ.

Díffidence ಡಿಫಿಡೆನ್ಸ್ (ನಾ.) ಆತ್ಮವಿಶ್ವಾಸವಿಲ್ಲದಿರುವುದು ; ಆತ್ಮ ಸಂಶಯ ; ಅಧೈರ್ಯ ; ಸಂಕೋಚ ; ಶಂಕೆ. **Díffident** (ಗು.) ; **Díffidently** (ಕ್ರಿ. ವಿ.)

Díffluence ಡಿಫ್ಲುಎನ್ಸ್ (ನಾ.) ಚೆದರಿ ಹರಿಯುವುದು (ರೂಪ. ಸಹ). ದ್ರವವಾಗುವುದು ; ದ್ರವವಾಗಿ ಕರಗಿಹೋಗುವುದು ; ದ್ರವೀಭವನ. **Díffluent** (ಗು.)

Diffráct ಡಿಫ್ರ್ಯಾಕ್ಟ್ (ಕ್ರಿ. ಸಕ.) (ದೃ. ವಿ.) (ಒಂದು ಅಪಾರದರ್ಶಕ ವಸ್ತುವಿನ ಅಂಚಿನ ಅಥವಾ ಬಹಳ ಕಿರಿದಾದ ಸಂದಿನ ವಿಷಯದಲ್ಲಿ, ಅಥವಾ ಬಹಳ ಹತ್ತಿರಹತ್ತಿರ ಗೆರೆಗಳು ಗೀರಿರುವ ಕ್ಷೇತ್ರತಲದಿಂದ ಪ್ರತಿ ಫಲಿತವಾಗುವ ಸಂದರ್ಭದಲ್ಲಿ) ಹಾಯ್ದುಹೋಗುವ ಕಿರಣಜಾಲವನ್ನು ಬಾಗಿಸಿ ಬೆಳಕು ನೆರಳುಗಳ, ಅಥವಾ ಬಣ್ಣ ಬಣ್ಣದ ಪಟ್ಟೆಗಳ, ಶ್ರೇಣಿ ಯಾಗಿ ಒಡೆ : ವಕ್ರವಿಯೋಜನ ಮಾಡು ; (ಮೇಲೆ ಹೇಳಿದಂತೆ ಬೆಳಕಿನ ಕಿರಣಗಳ ವಿಷಯದಲ್ಲಿ ಮಾತ್ರವಲ್ಲದೆ ನಾದ, ವಿದ್ಯುತ್ತು, ಮೊ. ಗಳ ವಿಷಯ ದಲ್ಲಿಯೂ ಹೀಗೆಯೇ). **Diffráction** (ನಾ.) (ಕಿರಣ) ವಕ್ರ ವಿಯೋಜನ (D. grating ವಕ್ರವಿಯೋಗ ರೇಖಾಫಲಕ). **Diffráctive** (ಗು.) ; **Diffráctively** (ಕ್ರಿ. ವಿ.)

Diffúse ಡಿಫ್ಯೂಸ್ (ಗು.), — ಸ್ (ಕ್ರಿ.) (ಬೆಳಕು, ಕೆರಳು, ಮೊ. ಗಳ ವಿಷಯದಲ್ಲಿ) ಹರಡಿದ ; ವಿಸ್ತರಿಸಿದ ; ಚೆದರಿದ ; ಗುಂಪುಗೂಡಿರದ ; ಅಡಕವಾಗಿರದ ; ಅತಿ ಲಂಬಿತ ; ಬಿಗಿಯಿಲ್ಲದ ; ಶಿಥಿಲ. (ಕ್ರಿ.) (ಬೆಳಕು, ಕಣಗಳು, ಉಷ್ಣ, ಸೌಹಾರ್ದ, ಜ್ಞಾನ, ವದಂತಿ, ಮೊ.) ಹರಡು, ಸೂಸು, ಚೆದರು, ಪ್ರಸರಿಸು, ವ್ಯಾಪನೆ ಮಾಡು, ವಿಸ್ತರಿಸು ; ವ್ಯಾಪ್ತವಾಗು ; — ವಾಗಿಸು. (ಭೌ. ವಿ.) (ಅನಿಲಗಳ ಅಥವಾ ದ್ರವಗಳ ವಿಷಯದಲ್ಲಿ) ಹರಡಿಕೊಂಡು ಅನ್ಯೋನ್ಯವಾಗಿ ಬೆರೆ, ಬೆರಸು. **Diffúsely** (ಕ್ರಿ. ವಿ.) ; **Diffúseness** (ನಾ.) ; **Diffúsible** — ಸಿ — (ಗು.) ; **Diffusibílity** (ನಾ.) ; **Diffúsion** — ಷನ್ (ನಾ.) ; **Diffúsive** — ಸಿ — (ಗು.) ; **Diffúsively** (ಕ್ರಿ. ವಿ.) ; **Diffúsiveness** (ನಾ.)

Dig ಡಿಗ್ [ಕ್ರಿ. ; ಭೂತ., ಭೂ. ಕೃ. Dug ; (ಹಿಂದಿನ ರೂಪ) Digged ; ನಾ.]. (ಗುದ್ದಲಿ, ಪಿಕಾಸಿ, ಉಗುರು, ಕೈ, ಮುಸುಡಿ, ಮೊ. ಗಳಿಂದ ನೆಲವನ್ನು) ಅಗೆ, ತೋಡು, ತಿರುವಿಹಾಕು. (ವಿಷಯ ಗ್ರಹಣಕ್ಕಾಗಿ, ಗ್ರಂಥ, ಮೊ. ನ್ನು) ಅನ್ವೇಷಣ ಮಾಡು ; ಹುಡುಕಿಕೊಂಡು, ಕೆದಕಿಕೊಂಡು, ಹೋಗು ; (ಒಳಗೆ, ಮಾರ್ಗವಾಗಿ, ತಳಗಡೆ) ಅಗೆದು ದಾರಿ, ಗುಂಡಿ, ಮಾಡು [D. a pit for (ರೂಪ.) ಹಳ್ಳಕ್ಕೆ ಕೆಡವು ; ಸಿಕ್ಕಿಸಿಕೊಳ್ಳಲು ಯತ್ನಿಸು]. (ಉರುಳುಗೆಡ್ಡೆ, ಗೆಣಸು, ಮೊ. ನ್ನು) ಅಗೆದು ತೆಗೆ. (ಉಗುರು, ಕಾಲು, ತಿವಿಯುವ ಆಯುಧ, ಮೊ. ಗಳಿಂದ) ತಿವಿ, ಇರಿ, ನಾಟು (D. a person in the ribs ಒಬ್ಬನ ಪಕ್ಕೆಯನ್ನು ತಿವಿ). [D. (oneself) in ಆತ್ಮರಕ್ಷಣೆಗಾಗಿ ಕಂದಕವನ್ನೋ ಗುಂಡಿಯನ್ನೋ ಅಗೆದು ಸಿದ್ಧಪಡಿಸಿಕೊ. D. out ಅಗೆದು ತೆಗೆ, ಪಡೆ, ಮಾಡು. D. up (ಬಂಜರು ನೆಲವನ್ನು) ಕೆದಕು]. (ನಾ.) ಅಗತೆ ; ಚುಚ್ಚು ; ತಿವಿತ (ಮು., ಪಕ್ಕೆಲುಬಿನಲ್ಲಿ). (ರೂಪ.) D. at ಒಬ್ಬನನ್ನು ಗುರಿಯಿಟ್ಟು ಕೊಂಡು ಮಾಡಿದ ಟೀಕೆ : ಚುಚ್ಚುನುಡಿ. **Dígger** ಡಿಗರ್ (ನಾ.) (ಕ್ರಿಯಾರ್ಥಗಳಲ್ಲಿ). ಚಿನ್ನ ದೊರೆಯುವ ಪ್ರದೇಶಗಳಲ್ಲಿ ಗುಂಡಿತೋಡಿ ಯಾಗಲಿ ಬೇರೆ ವಿಧದಿಂದಾಗಲಿ ಚಿನ್ನ ಹುಡುಕುವವನು : ಬಂಗಾರ ಬೆದಕ ; ಸ್ವರ್ಣಾನ್ವೇಷಕ (= Gold-d.). (ಅಸಂ.) ಆಸ್ಟ್ರೇಲಿಯ ದವನು. (ಬ. ವ. ದಲ್ಲಿ) ಗೆಡ್ಡೆ ಗೆಣಸುಗಳನ್ನು ತಿಂದು ಜೀವಿಸುವ ಉ. ಅಮೆರಿಕದ ಇಂಡಿಯನರು. ಅನೇಕ ಯಂತ್ರಸಲಕರಣೆಗಳ ಅಗೆಯುವ ಭಾಗ : ಖಾತಕ. ಒಂದು ಜಾತಿಯ ಕಣಜದ ಹುಳು (= D.-wasp). **Digging** (ನಾ.) (ಕ್ರಿಯಾರ್ಥಗಳಲ್ಲಿ). (ಬ. ವ. ದಲ್ಲಿ ಕೆಲವು ವೇಳೆ A diggings). ಚಿನ್ನ ದೊರೆಯುವ ಪ್ರದೇಶ ; ಚಿನ್ನದ ಗಣಿ. (ಬ. ವ. ದಲ್ಲಿ ; ಬಳ. ಮಾ. ; ಸಂಕ್ಷಿಪ್ತ Digs) ಬಿಡಾರ ; ನೆಲೆವೀಡು ; ವಸತಿ.

Digámma ಡೈಗ್ಯಾಮ (ನಾ.) ಪ್ರಾಚೀನ ಗ್ರೀಕ್ ವರ್ಣಮಾಲೆಯಲ್ಲಿ (ಬಹಳ ಹಿಂದೆಯೇ ಬಳಕೆ ತಪ್ಪಿಹೋದ, ಆದರೆ ಭಾಷಾಶಾಸ್ತ್ರದಲ್ಲಿ ಉಪಯುಕ್ತವಾದ) ಆರನೆಯ ಅಕ್ಷರ (F ; ಧ್ವನಿಯಲ್ಲಿ W)

Dígamy ಡಿಗಮಿ (ನಾ.) [ಮೊದಲನೆಯ ಹೆಂಡತಿ (ಅಥವಾ ಗಂಡ) ಸತ್ತಮೇಲೆ] ಎರಡನೆಯ ಮದುವೆ ; ದ್ವಿತೀಯ ದಾಂಪತ್ಯ. **Dígamist** (ನಾ.) ; **Dígamous** (ಗು.) ದ್ವಿತೀಯ ದಾಂಪತ್ಯದ.

Digástric ಡೈಗ್ಯಾಸ್ಟ್ರಿಕ್ (ಗು., ನಾ.) (ಅಂ. ರ. ಶಾ.) (ಸ್ನಾಯುಗಳ ವಿಷಯದಲ್ಲಿ) ಉಬ್ಬಿದ ಎರಡು ಕೊನೆಗಳುಳ್ಳ. ಕೆಳದವಡೆಯ ಸ್ನಾಯು.

Dígest ಡೈಜೆಸ್ಟ್ (ನಾ.), **Digést** ಡಿ(ಡೈ)ಜೆಸ್ಟ್ (ಕ್ರಿ.) (ಮು., ಕಾನೂನಿನ ನಿಯಮಗಳ) ಸುವ್ಯವಸ್ಥಿತ ಸಂಗ್ರಹ, ಸಾರ ಸಂಗ್ರಹ ; ವಿಷಯಪಟ್ಟಿ ; (ನ್ಯಾಯ) ಸಂಹಿತೆ. (ಕ್ರಿ.) ಕ್ರೋಡೀಕರಿಸು ; ಸಂಗ್ರಹಿಸು ; ವ್ಯವಸ್ಥೆಗೊಳಿಸು ; ಕ್ರಮಕ್ಕೆ ತರು. ಪರ್ಯಾಲೋಚಿಸು ; ಮನಸ್ಸಿನಲ್ಲೇ ಭಾವಿಸು ; ಮನನ ಮಾಡು. (ಆಹಾರ) ಪಚನ ಮಾಡು ; — ವಾಗು ; ಜೀರ್ಣಮಾಡಿಕೊ ; — ವಾಗು ; ಜೀರ್ಣಿಸು ; ಅರಗಿಸಿಕೊ ; ಅರಗು (Digests well ಚೆನ್ನಾಗಿ ಜೀರ್ಣವಾಗುತ್ತದೆ) ; (ರೂಪ. ಸಹ). (ಔಷಧವನ್ನು, ದ್ರಾಕ್ಷಾಮದ್ಯ, ಮೊ. ಗಳ ವಿಷಯದಲ್ಲಿ) ಜೀರ್ಣಶಕ್ತಿಯುಂಟುಮಾಡು. (ಗೆದ್ದ ರಾಜ್ಯ, ಮೊ. ನ್ನು) ಜೀರ್ಣಿಸಿಕೊ, ದಕ್ಕಿಸಿಕೊ, ಸೇರಿಸಿಕೊ, ಹೊಂದಿಸಿಕೊ, ಸ್ವಾಯತ್ತ ಪಡಿಸಿಕೊ. (ಅವಮಾನವನ್ನು, ಅಭಿಪ್ರಾಯವನ್ನು) ಸಹಿಸು, ತಾಳಿಕೊ, ನುಂಗಿಕೊ ; ಸಮಾಧಾನ ಮಾಡಿಕೊ. **Digéstible** (ಗು.) ; **Digestibílity** (ನಾ.) ; **Digéstibly** (ಕ್ರಿ. ವಿ.) ; **Digéster** (ನಾ.) (ಕ್ರಿಯಾರ್ಥಗಳಲ್ಲಿ) ; (ಮು., ಅಡಿಗೆಯಲ್ಲಿ) ಬೇಯಿಸುವ ಪಾತ್ರೆ : ಪಾಚಕ(ಪಾತ್ರೆ). **Digéstion** — ಸ್ಚ್ಯನ್, — ಸ್ಚನ್ (ನಾ.) (ದೇಹದ ಅಥವಾ ಮನಸ್ಸಿನ ಆಹಾರ) ಜೀರ್ಣವಾಗುವುದು ; ಜೀರ್ಣಿಸಿಕೊಳ್ಳುವುದು ; ಜೀರ್ಣಿಸುವುದು ; ಜೀರ್ಣ ಕಾರ್ಯ ; ಪಚನ (Easy of d. ಸುಲಭವಾಗಿ ಜೀರ್ಣಿಸುವ) ; ಜೀರ್ಣಶಕ್ತಿ (Weak d. ದುರ್ಬಲ ಜೀರ್ಣಶಕ್ತಿ). ಸಾರ ತೆಗೆಯುವುದಕ್ಕಾಗಿ ಶಾಖ ದ್ರವದಲ್ಲಿ ಬಹಳ ಹೊತ್ತು ಪಚನ ಮಾಡುವುದು ; ಸಾವಕಾಶವಾಗಿ ಬೇಯಿಸುವುದು. **Digéstive** (ಗು., ನಾ.) ಜೀರ್ಣಶಕ್ತಿಯ ; ಜೀರ್ಣಶಕ್ತಿಯುಂಟುಮಾಡುವ (ಪದಾರ್ಥ) ; ಜೀರ್ಣಕಾರಿ. (ಕುರುವನ್ನು) ಹಣ್ಣುಮಾಡಿ ಕೀವುಗಟ್ಟಿಸುವ ಮುಲಾಮು. **Digéstively** (ಕ್ರಿ. ವಿ.)

Dígger, etc. Dig ನೋಡಿ.

Dight ಡೈಟ್ (ಕ್ರಿ. ಸಕ.) (ಪ್ರಾಚೀ. ಪ್ರ. ; ಮು., ಭೂ. ಕೃ. ನಲ್ಲಿ, dight) ಉಡಿಸು ; ತೊಡಿಸು ; ಅಲಂಕರಿಸು ; ಸಜ್ಜುಗೊಳಿಸು ; ಕೈಗೈ (ಗ್ರಾಂ.) ; ಸಿದ್ಧಗೊಳಿಸು.

Dígit ಡಿಜಿಟ್ (ನಾ.) (ಕೈಯ, ಕಾಲಿನ) ಬೆರಳು, ಬೆಟ್ಟು (ಹಾಸ್ಯವಾಗಿ ; ಜೀ. ವಿ., ಅಂ. ರ. ಶಾ.) ; ಬೆಟ್ಟಗಲ ; ಬೆರಳಗಲ. (ಸೊನ್ನೆಯಿಂದ ಒಂಬತ್ತರ ವರೆಗೆ ಯಾವುದಾದರೂ) ಅಂಕಿ. (ಖ. ವಿ.) (ಗ್ರಹಣವನ್ನಳೆಯುವಲ್ಲಿ) ಸೂರ್ಯನ ಅಥವಾ ಚಂದ್ರನ ವ್ಯಾಸದ ಹನ್ನೆರಡರಲ್ಲೊಂದು ಭಾಗ, ದ್ವಾದಶಾಂಶ. **Dígital** (ಗು.) ಬೆರಳಿನ ; — ಗಳ ; — ಗಳುಳ್ಳ ; — ಅಂತಿರುವ. **Dígitáte(d)** (ಗು.) (ಪ್ರಾ. ವಿ.) ಬಿಡಿಬಿಡಿಯಾದ. (ಸ. ವಿ.) ಬೆರಳುಗಳಂಥ ಕವಲುಗಳುಳ್ಳ. **Digitátion** (ನಾ.) ; **Digitáto-** (ಸ. ಪೂ. ಪ.) ; **Dígitigrade** (ಗು.) (ಪ್ರಾ. ವಿ.) (ಹಿಮ್ಮಡಿಯೂರದೆ) ಕಾಲ್ಬೆರಳುಗಳಮೇಲೆ ನಡೆಯುವ ; ಅಂಗುಲಿಗಾಮಿ (Plantigrade ಪದದೊಡನೆ ಹೋಲಿಸಿ ನೋಡಿ)

Dígnify, etc. Dignity ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Dígnity ಡಿಗ್ನಿಟಿ (ನಾ.) ಘನತೆ ; ಗಾಂಭೀರ್ಯ ; ಗೌರವ (D. of labour ಕಾಯಕ ಗೌರವ. Beneath one's d. ಘನತೆಗೆ ಕುಂದು ; ಮಾನಕ್ಕೆ ಕಡಮೆ). ಮಹಿಮೆ ; ದೊಡ್ಡತನ ; ಗೌರವಾಧಿಕಾರ ; ಪದವಿ ; ಅಂತಸ್ತು ; ಮಹತ್ವ ; ಪ್ರತಿಷ್ಠೆ. **Dígnitary** (ನಾ.) ದೊಡ್ಡ ಅಧಿಕಾರಿ (ಮು., ಕ್ರೈಸ್ತ ವೈದಿಕ). **Dígnify** (ಕ್ರಿ. ಸಕ.) ಯೋಗ್ಯತೆಯುಂಟುಮಾಡು ; ಗೌರವ, ಘನತೆ, ಮಹತ್ವ, ಕೊಡು ; ಗಂಭೀರಗೊಳಿಸು ; ದೊಡ್ಡ ಹೆಸರು ಕೊಡು (School dignified with name of college ಮಹಾಪಾಠಶಾಲೆಯೆಂದು ಹೆಸರಿಟ್ಟ ಸಾಮಾನ್ಯ ಪಾಠಶಾಲೆ)

Dígraph ಡೈಗ್ರಾಫ್ (ನಾ.) ಒಂದೇ ಉಚ್ಚಾರಣೆಯುಳ್ಳ ದ್ವ್ಯಕ್ಷರ (ಉದಾ., Ch, Ea) : ಸಂಧ್ಯಕ್ಷರ.

Digréss ಡಿ(ಡೈ)ಗ್ರೆಸ್ (ಕ್ರಿ. ಅಕ.) ದಾರಿ ಬಿಟ್ಟು ಹೋಗು ; ದಾರಿ ತಪ್ಪು ; (ಭಾಷಣದಲ್ಲಿ ಅಥವಾ ಲೇಖನದಲ್ಲಿ, ತಾತ್ಕಾಲಿಕವಾಗಿ, ಪ್ರಕೃತ) ವಿಷಯ, ಮಾತು, ಬಿಟ್ಟು ಹೋಗು. **Digréssion** (ನಾ.) ಅಪ್ರಸ್ತುತ ಪ್ರಸ್ತಾಪ. **Digréssive** (ಗು.)

Dihédral ಡೈಹೀಡ್ರಲ್ (ಗು.) (ಸ್ಫಟಿಕ ಶಾಸ್ತ್ರ) ಎರಡು ಸಮತಳ ಕ್ಷೇತ್ರಗಳಿಂದ ಅಥವಾ ಮುಖಗಳಿಂದ ಕೂಡಿದ : ದ್ವಿಫಲಕ ; ದ್ವಿಮುಖ. D. angle (ಮು., ವ್ಯೋಮ ಫಲಕಯಾನದ) ಫಲಕದ್ವಯ ಮಧ್ಯದ ಕೋನ.

Dike, Dyke ಡೈಕ್ (ನಾ., ಕ್ರಿ. ಸಕ.) ಹಳ್ಳ ; ಜಲದಾರಿ ; ಕಾಲುವೆ ; ನಾಲೆ. (ತೆಂಡೆಗಟ್ಟಿದ) ಮೋಟು ಗೋಡೆ. ಕಟ್ಟೆ ; ಏರಿ ; ಒಡ್ಡು ; ಅಣೆಕಟ್ಟು ; ಅಡ್ಡಗಟ್ಟು (ಮು., ಹಾಲೆಂಡಿನಲ್ಲಿ ಕಡಲಿಗೆ ಹಾಕಿರುವದು). ಒಡ್ಡುದಾರಿ. (ರೂಪ.) ತಡೆ ; ಪ್ರತಿಬಂಧಕ ; ರಕ್ಷಣೆ ; ಕಾಪು. (ಭೂ. ವಿ., ಗಣಿ) ಭೂಸ್ತರದಲ್ಲಿಯ ಬಿರುಕಿನಲ್ಲಿ ತುಂಬಿಕೊಂಡಿರುವ ಪದಾರ್ಥ ; ಅಂಥ ಬಿರುಕು. (D.-reeve ಜೌಗುಪ್ರಾಂತದಲ್ಲಿ ಚರಂಡಿಗಳು, ಕಾಲುವೆಗಳು, ಜಲದಾರಿಗಳು, ತೂಬುಗಳು, ಮಡುವಾಯಿಗಳು, ಕಡಲ ಅಡ್ಡಗಟ್ಟುಗಳು — ಇವುಗಳ ವಿಚಾರಣೆ ನೋಡಿಕೊಳ್ಳುವುದಕ್ಕಾಗಿ ನಿಯಮಿತನಾದ ಅಧಿಕಾರಿ : ನೀರುಕಟ್ಟೆಗಳ ವಿಚಾರಣಕರ್ತ). (ಕ್ರಿ.) ಕಟ್ಟೆ ಹಾಕು ; ಏರಿಹಾಕು ; ಅಡ್ಡಗಟ್ಟು.

Dilápidate ಡಿಲ್ಯಾಪಿಡೇಟ್ (ಕ್ರಿ.) (ಕಟ್ಟಡ, ಸಾಮಾನು, ಬಟ್ಟೆ ಬರೆ, ಸ್ಥಿರಾಸ್ತಿ, ಐಶ್ವರ್ಯ, ಮೊ.) ಜೀರ್ಣಾವಸ್ಥೆಗೆ ತರು, ಬರು ; ಜೀರ್ಣಮಾಡು ; — ವಾಗು ; ಹಾಳುಮಾಡು ; ಹಾಳುಬೀಳು ; ಶಿಥಿಲವಾಗು ; — ಮಾಡು; ಕ್ಷಯಿಸು. **Dilapidátion** (ನಾ.) ಜೀರ್ಣಾವಸ್ಥೆ(ಗೆ ತರುವುದು, ಬರುವುದು) ; ಶಿಥಿಲ ಮಾಡುವುದು ; — ವಾಗುವುದು ; ಹಾಳಾಗುವುದು ; ಹಾಳು ಮಾಡುವುದು (The d. of the national resources ರಾಷ್ಟ್ರದ ಸಂಪತ್ಸಾಧನಗಳನ್ನು ಹಾಳುಮಾಡುವುದು). (ಸಾಮಾನಿನ) ಸವೆತಕ್ಕಾಗಿ ಅನುಭವದಾರನಿಗೆ ಹಾಕುವ ತೆರ ; ತೇಮಾನ. (ಬೆಟ್ಟದ, ಗುಡ್ಡದ) ಕೋಡುಗಲ್ಲು, ಮೊ. ವು ಬಿದ್ದು ಹೋಗುವುದು ; ಹೀಗೆ ಬಿದ್ದು ಆದ ರಾಶಿ : ಶಕಲ ರಾಶಿ.

Diláte ಡಿ(ಡೈ)ಲೇಟ್ (ಕ್ರಿ.) ಹೆಚ್ಚು ಅಗಲವಾಗು, ಮಾಡು ; ಅಗಲಿಸು ; ಉಬ್ಬು ; ಉಬ್ಬಿಸು ; ಹಿಗ್ಗು ; ಹಿಗ್ಗಿಸು (With dilated eyes ಹಿಗ್ಗಿದ ಕಣ್ಣುಗಳಿಂದ); ಊದು ; ಊದಿಸು ; ದೊಡ್ಡದಾಗು ; ದೊಡ್ಡದು ಮಾಡು ; ವಿಸ್ತರಿಸು ; ವಿಸ್ತರಿಸಿ ಹೇಳು, ಬರೆ ; ಲಂಬಿಸು (*upon* ಉಪ. ದೊಡನೆ). **Dilátable** (ಗು.) ; **Dilatabílity** (ನಾ.); **Dilatátion** — ಲಟೇಷನ್ (ನಾ.) ; **Dilátion** — ಲೇಷನ್ (ನಾ.); **Dilátor** (ನಾ.) (ಅಂ. ರ. ಶಾ.) ಯಾವುದಾದರೂ ಅಂಗವನ್ನು ವಿಸ್ತರಿಸುವ ಸ್ನಾಯು : ವಿಸ್ತಾರಕ (ಸ್ನಾಯು) (= D. muscle. Constrictor ಪದದೊಡನೆ ಹೋಲಿಸಿ ನೋಡಿ)

Dílatory ಡಿಲಟರಿ (ಗು.) ತಡ ಮಾಡುವ ; ತಡವಾಗುವ ; ಕಾಲಹರಣ ಮಾಡುವ ; ವಿಲಂಬಿ ; ತಾಮಸ. **Dílatorily** (ಕ್ರಿ. ವಿ.) ; **Dílatoriness** (ನಾ.)

Dilémma ಡಿ(ಡೈ)ಲೆಮ (ನಾ.) ಎರಡೂ ಪ್ರತಿಕೂಲವಾದ ಮಾರ್ಗಗಳಲ್ಲಿ ಯಾವುದಾದರೊಂದನ್ನು ಆಯ್ದುಕೊಳ್ಳುವಂತೆ ಬಲವಂತಪಡಿಸುವ ಯುಕ್ತಿ, ಸನ್ನಿವೇಶ (Horns of the d. ಉಭಯ ಸಂಕಟ ಸಮಸ್ಯೆ) ; ಉಭಯ ಸಂಕಟ ; ಇಕ್ಕಟ್ಟು ; ಇಕ್ಕೋಡು. **Dilemmátic** — ಮ್ಯಾ — (ಗು.)

Dilettánte ಡಿಲೆಟ್ಯಾಂಟಿ, ಡಿಲೆಟ್‌ಟ್ಯಾಂಟೆ (ನಾ. ; ಬ. ವ. -ti — ಟೀ ; ಗು.) ಕಲಾ ಪ್ರೇಮಿ, ವಿನೋದಿ, ಹವ್ಯಾಸಿ, ಪ್ರವೇಶಿ. ಯಾವುದನ್ನೂ ಚೆನ್ನಾಗಿ ಅಭ್ಯಾಸಮಾಡದೆ ಎಲ್ಲದಕ್ಕೂ ಕೈಹಾಕುವ(ವನು) ; ಅನನುಭವಿ. **Dilettántish** (ಗು.) ; **Dilettántism** (ನಾ.)

Díligence ಡಿಲಿಜೆನ್ಸ್ (ನಾ.) ಸ್ಥಿರ, ದೃಢ, ಪ್ರಯತ್ನ ; ಕಾರ್ಯತತ್ಪರತೆ ; ಉದ್ಯೋಗಶೀಲತೆ ; ವ್ಯಾಸಂಗ ; ಅಧ್ಯವಸಾಯ ; ಶ್ರಮಶೀಲತೆ ; ಶ್ರದ್ಧೆ. **Díligent** (ಗು.) ; **Díligently** (ಕ್ರಿ. ವಿ.)

Dill ಡಿಲ್ (ನಾ.) ಸಬ್ಬಸಿಗೆ ಸೊಪ್ಪು, ಗಿಡ ; ಶಾಲೇಯ.

Dílly-dálly ಡಿಲಿ ಡ್ಯಾಲಿ (ಕ್ರಿ. ಅಕ.) (ಬಳ. ಮಾ.) (ಒಂದು ಗೊತ್ತಿಗೆ ಬಾರದೆ) ತೂಗಾಡುತ್ತಿರು, ಓಲಾಡು ; ಎಳೆದಾಡುತ್ತಿರು ; ಹಿಂದು ಮುಂದು ನೋಡು ; ಕಾಲಹರಣ ಮಾಡು ; ಹೊತ್ತು ಕಳೆ ; ಆಲಸ್ಯ ಮಾಡು.

Díluent ಡಿಲ್ಯೂ(ಲ್ಯು, ಲು) ಎಂಟ್ (ಗು., ನಾ.) ನೀರು ಹೆಚ್ಚಿಸಿ ಸಾರ ಕಡಮೆಮಾಡುವ (ಪದಾರ್ಥ). (ರಕ್ತ, ಮೊ. ಗಳಲ್ಲಿ) ನೀರಿನ ಪರಿಮಾಣವನ್ನು ಹೆಚ್ಚಿಸುವ (ಪದಾರ್ಥ). ದ್ರವ ವರ್ಧಕ. **Dílute** ಡಿ(ಡೈ)ಲ್ಯೂ(ಲೂ)ಟ್ (ಗು., ಕ್ರಿ. ಸಕ.) ನೀರು ಬೆರಸಿ ಸಾರ ಕಡಮೆಮಾಡಿದ. (ಬಣ್ಣದ ವಿಷಯದಲ್ಲಿ) ಮಾಸಿಹೋದ, ಆಳಿಸಿಹೋದ, ಮಂಕಾದ. (ರೂಪ.) ನೀರಾದ ; ನಿಸ್ಸಾರವಾದ ; ಸಾರಗುಂದಿಸಿದ ; ಬಲ ಕುಗ್ಗಿಸಿದ. (ಕ್ರಿ.) ನೀರು ಬೆರಸಿ ಸಾರ ಕಡಮೆ ಮಾಡು ; ನೀರು ಬೆರಸು ; ತೆಳ್ಳಗೆ ಮಾಡು. (ಬಣ್ಣದ) ಮೆರುಗನ್ನು ಕುಂದಿಸು. (ವಾದ, ಉತ್ಸಾಹ) ಕುಗ್ಗಿಸು. D. labour ಕೆಲವರು ಕುಶಲ ಕಾರ್ಯಗಾರರಿಗೆ ಬದಲಾಗಿ ಅಕುಶಲಿಗಳನ್ನೊ ಹೆಂಗಸರನ್ನೊ ಸೇರಿಸು. **Dilútion** (ನಾ.)

Dilúvial ಡಿಲ್ಯೂ(ಲೂ)ವಿಯಲ್ (ಗು.) (ಮು., ಬೈಬಲ್ಲಿನಲ್ಲಿ ಹೇಳಿರುವ) ಜಲಪ್ರಳಯದ. (ಭೂ. ವಿ.) ನೀರ್ಗಲ್ಲಿನ ಪ್ರವಾಹದ. D. changes, theory ಸಾಮಾನ್ಯ ಜಲಪ್ರಳಯದಿಂದ ಅಥವಾ ಉತ್ಪಾತಕರವಾದ ನೀರಿನ ಹೊಡೆತದಿಂದ ಆದ ಬದಲಾವಣೆಗಳು, ಇದರ ತತ್ತ್ವ. **Dilúvialist** (ನಾ.)

Dim ಡಿಮ್ (ಗು., ಕ್ರಿ.) ಮಸುಕಾದ ; ಮಬ್ಬಾದ ; ಮಂಕಾದ ; ಮಂಜಾದ ; ಮಾಸಲಾದ ; ಕಳೆಗುಂದಿದ ; ಕಾಂತಿಯಿಲ್ಲದ ; ನಿಸ್ತೇಜ ; ಅಸ್ಪಷ್ಟ ; ಅಸ್ಪಷ್ಟವಾಗಿ ಕಾಣುವ, ಕೇಳುವ, ಗ್ರಹಿಸುವ ; ಅವ್ಯಕ್ತ ; ಮಂದ. (ಕ್ರಿ.) ಮಬ್ಬುಗೊಳಿಸು ; ಮಬ್ಬಾಗು ; (ಕಾಂತಿ ಮಾರಿ) ಕಳೆಗುಂದಿಸು. **Dímly** (ಕ್ರಿ. ವಿ.) ; **Dímmish** (ಗು.) ಮಬ್ಬು ಮಬ್ಬಾದ. **Dímness** (ನಾ.)

Dime ಡೈಮ್ (ನಾ.) (ಅಮೆ. ನಂ.) ಡಾಲರಿನ ಹತ್ತನೆಯ ಭಾಗದ ಬೆಳ್ಳಿಯ ನಾಣ್ಯ (D. novel ಅಗ್ಗದ ಅದ್ಭುತ ಕಥೆ)

Diménsion ಡಿ(ಡೈ)ಮೆನ್ಷನ್ (ನಾ.) ಅಳತೆಮಾಡಲಾಗುವ ವಿಸ್ತಾರ, ವಿಸ್ತೀರ್ಣ (ಉದ್ದ, ಅಗಲ, ದಪ್ಪ, ಕ್ಷೇತ್ರಫಲ, ಘನಫಲ) ; ಪ್ರಮಾಣ ; ಪರಿಮಾಣ ; ಅಳತೆ [Of great dimensions ಬಹಳ ದೊಡ್ಡ ಪ್ರಮಾಣದ. The three dimensions ಮೂರು ಪರಿಮಾಣಗಳಾದ ಉದ್ದ, ಅಗಲ, ದಪ್ಪ (ಅಥವಾ ಎತ್ತರ) : (ಬಿಂದುವಿಗೆ ಪರಿಮಾಣವಿಲ್ಲ ; ರೇಖೆಗೆ ಒಂದು, ಕ್ಷೇತ್ರಕ್ಕೆ ಎರಡು, ಘನಕ್ಕೆ ಮೂರು, ಪರಿಮಾಣಗಳು). Fourth d. (ಗಣಿತದ ಊಹನೆಗಳಲ್ಲಿ) ಕ್ಷೇತ್ರಕ್ಕೆ ಘನಾಕೃತಿ ಯಾವ ಸಂಬಂಧದಲ್ಲಿದೆಯೊ ಘನಾಕೃತಿಗೆ ಅಂಥ ಸಂಬಂಧವುಳ್ಳ ದ್ರವ್ಯಧರ್ಮ : ಚತುರ್ಥ ಪರಿಮಾಣ]. (ಬೀ. ಗ.) ಒಂದು ಗುಣಫಲದ ಮೊತ್ತದಲ್ಲಿ ಗುಣ್ಯ ಬೀಜಾಂಕವಾಗಿರುವ ಅಜ್ಞಾತ ಬೀಜಾಂಕದ (ಅಥವಾ ಬೀಜಾಂಕಗಳ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಟ್ಟು ಘಾತಪರಿಮಾಣ (ಉದಾ., x^3, x^2y, xyz — ಇವೆಲ್ಲವೂ ತ್ರಿಪರಿಮಾಣ ಪದಗಳು). (-)**Diménsional** (ಗು.) ; **Diménsionless** (ಗು.)

Dímerous ಡಿಮೆರಸ್ (ಗು.) (ಸ. ವಿ.) ಎರಡು ಭಾಗಗಳುಳ್ಳ ; ದ್ವಿಖಂಡ ; ಇಪ್ಪಾಲಿನ.

Dímeter ಡಿಮಿಟರ್ (ನಾ.) ದ್ವಿಪ್ರಮಾಣದ ಪದ್ಯ [ಕೆಲವು (ಪಾಶ್ಚಾತ್ಯ) ವೃತ್ತಗಳಲ್ಲಿ ಪ್ರಮಾಣಕ್ಕೆ ಒಂದು ಗಣ, ಮತ್ತೆ ಕೆಲವಲ್ಲಿ ಎರಡು ಗಣ]

Dimídiate ಡಿ(ಡೈ)ಮಿಡಿಯೆಟ್ (ಗು.) ಅರ್ಧ ಮಾಡಿದ ; ಅರ್ಧಿಸಿದ ; ಇಭ್ಭಾಗ ಮಾಡಿದ ; ಎರಡಾಗಿ ತುಂಡಿಸಿದ.

Dimínish ಡಿಮಿನಿಷ್ (ಕ್ರಿ.) ಕಡಮೆ ಮಾಡು ; — ಯಾಗು ; ಕೊರೆ ಮಾಡು ; — ಯಾಗು ; ಕುಂದು ; ಕುಂದಿಸು ; ಕುಗ್ಗಿಸು ; ಕೀಳ್ಮಾಡು (Hide one's diminished head ಗೌರವ ಕುಗ್ಗಿದುದರಿಂದ ತಲೆ ಮರಸಿಕೊ). (ವಾ. ಶಾ.) ಶಂಕುವಿನಂತೆ ದಪ್ಪ ಕಿರಿದಾಗುತ್ತ ಕೊನೆ ಚೂಪಾಗು ; — ಚೂಪು ಮಾಡು. **Dimínishable** (ಗು.) ; **Dimínishingly** (ಕ್ರಿ. ವಿ.) ; **Diminútion** — ನ್ಯೂಷನ್ (ನಾ.) ಕಡಮೆ ಮಾಡುವುದು ; — ಯಾಗುವುದು ; ಕಡಮೆ ; ಕೊರತೆ ; ಕುಂದು ; ಕಡಮೆಬಿದ್ದ ಮೊತ್ತ. **Dimínutive** — ನ್ಯುಟಿವ್ (ಗು. ನಾ.) (ವ್ಯಾ.) ಅಲ್ಪಾರ್ಥಕ (ಶಬ್ದ) ; ಕಿರಿದಾದ ; ಸಣ್ಣ ; ಮೋಟ ; ಪುಟ್ಟ. **Dimínutíval** — ಟೈವಲ್ (ಗು.) (ವ್ಯಾ.) ಅಲ್ಪಾರ್ಥಕದ. **Dimínutively** — ಟಿವ್ಲಿ (ಕ್ರಿ. ವಿ.) ; **Dimínutiveness** (ನಾ.)

Dimínuéndo (It.) ಡಿಮಿನ್ಯುಎಂಡೊ (ನಾ.) (ಸಂ., ಸೂಚನೆ ; ಸಂಕ್ಷಿಪ್ತ Dim.) ದನಿಯನ್ನು ಕ್ರಮೇಣ ಇಳಿಸುತ್ತಹೋಗು (Crescendo ಪದದೊಡನೆ ಹೋಲಿಸಿ ನೋಡಿ). ಕ್ರಮೇಣ ಕಡಮೆ ಮಾಡುವುದು ; ಅವರೋಹಣ ; ಇಳಿದನಿಯ ಹಾಡು (ರೂಪ. ಸಹ)

Dímissory ಡಿಮಿಸರಿ (ಗು.) ಕಳುಹಿಸಿಕೊಡುವ ; ಹೋಗಲು ಅಪ್ಪಣೆ ಕೊಡುವ. Letters d. ತನ್ನ ಸ್ವಂತ ಅಧಿಕಾರಪ್ರಾಂತದಿಂದ ಹೊರಗೆ ದೀಕ್ಷೆಪಡೆಯಲು ಬಿಷಪ್ಪನು ಒಬ್ಬನಿಗೆ ಕೊಡುವ ಅನುಮತಿಪತ್ರ.

Dímity ಡಿಮಿಟಿ (ನಾ.) ಉಬ್ಬು ಪಟ್ಟೆಗಳನ್ನೊ ಚಿತ್ರಗಳನ್ನೊ ನೆಯ್ದ ಹತ್ತಿಯ ದಪ್ಪಬಟ್ಟೆ (ಮಲಗುವ ಮನೆಯ ಪರದೆ, ಮೊ. ಗಳಿಗೆ ಉಪಯೋಗ)

Dimórphic ಡೈಮಾರ್ಫಿಕ್, **Dimórphous** ಡೈಮಾರ್ಫಸ್ (ಗು.) (ಸ. ವಿ., ಪ್ರಾ. ವಿ., ರ. ವಿ., ಖನಿಜ) ಎರಡು ಪ್ರತ್ಯೇಕ ರೂಪಗಳಲ್ಲಿ ಕಾಣುವ, ದೊರೆಯುವ : ದ್ವಿರೂಪಿ. **Dimórphism** — ಸ್ರ್ಮ್ (ನಾ.) ದ್ವಿರೂಪತ್ವ ; ಒಂದರಿಂದೊಂದು ಹುಟ್ಟಿದ ಪ್ರತ್ಯೇಕವಾದ ದ್ವಿವಿಧ ಸ್ಫಟಿಕಾಕೃತಿಗಳನ್ನು ತಳೆಯುವ ಗುಣ. (ಜೀ. ವಿ.) ಒಂದೇ ಗಿಡದಲ್ಲಿ ಅಥವಾ ಒಂದೇ ವಂಶದ ಗಿಡಗಳಲ್ಲಿ ಎರಡು ಪ್ರತ್ಯೇಕ ರೂಪಗಳ ಹೂವು, ಎಲೆ, ಮೊ. ವು ಕಾಣಿಸಿಕೊಳ್ಳುವುದು ; ಒಂದೇ ವಂಶದ ಪ್ರಾಣಿಗಳ ರಚನೆ, ಗಾತ್ರ, ಬಣ್ಣ, ಮೊ. ಗಳಲ್ಲಿ ಎರಡು ಪ್ರತ್ಯೇಕ ರೂಪಗಳು ಕಾಣಿಸಿಕೊಳ್ಳುವುದು. (ಭಾ. ಶಾ.) ಒಂದು ಭಾಷೆಯಲ್ಲಿ ಒಂದು ಪದವು ಎರಡು ಪ್ರತ್ಯೇಕ ರೂಪಗಳಲ್ಲಿರುವುದು.

Dímple ಡಿಂಪ್‌ಲ್ (ನಾ., ಕ್ರಿ.) (ಮು., ಕೆನ್ನೆಯಲ್ಲಿ ಅಥವಾ ಗಲ್ಲದಲ್ಲಿ) ಸಣ್ಣ ಕುಳಿ, ಹಳ್ಳ, ತಗ್ಗು. (ನೀರಿನ ಮೇಲಿನ) ಸಣ್ಣ ತೆರೆ. (ಕ್ರಿ.) ಕುಳಿ ಬೀಳಿಸು ; ಕುಳಿಗಾಣಿಸು ; ತೆರೆಗಾಣಿಸು ; — ಏಳಿಸು. **Dímply** (ಕ್ರಿ. ವಿ.)

Din ಡಿನ್ (ನಾ., ಕ್ರಿ.) ಎಡೆಬಿಡದೆ ನಡೆಯುತ್ತಿರುವ, ಕಿವಿಯಿಡಿಯುವ, ಗಲಭೆಯ ಸದ್ದು, ಕೂಗು, ಗದ್ದಲ, ಅಬ್ಬರ, ಗೊಂದಲ ; ಕೋಲಾಹಲ. (ಕ್ರಿ.) — ಇಂದ ಕಿವುಡುಗೊಳಿಸು ; ಬೇಸರ ಹಿಡಿಯುವಂತೆ (ಒಬ್ಬನ ಕಿವಿಯಲ್ಲಿ) ಎಡೆಬಿಡದೆ ಹೇಳುತ್ತಿರು. ಎಡೆಬಿಡದೆ ಗದ್ದಲಮಾಡು ; ಕಿವಿಗಿಡಿ.

Dine ಡೈನ್ (ಕ್ರಿ.) (ಮುಖ್ಯವಾದ) ಊಟ ಮಾಡು ; (ಪ್ರಧಾನ) ಭೋಜನ ಮಾಡು. [D. out ಮನೆಯಲ್ಲಿ ಬಿಟ್ಟು ಇತರ ಕಡೆ ಊಟಮಾಡು. D. off or on — ಅನ್ನು ತಿನ್ನು ; — ಊಟಮಾಡು. D. with Duke Humphrey ಊಟವಿಲ್ಲದೆ ಇರು ; ಹಸಿದಿರು (ಪ್ರಾಯಶಃ, ಸೆಯ್‌ಂಟ್‌ಪಾಲ್ ಆರಾಧನ ಮಂದಿರದ ಪ್ರಾಕಾರದಲ್ಲಿಯ Duke Humphrey's Walk ಎಂಬ ತಿರುಗಾಡು ಹಾದಿಯಲ್ಲಿ, ಊಟದ ಹೊತ್ತಿನಲ್ಲಿ, ಹೊಟ್ಟೆಗಿಲ್ಲದೆ ಅಡ್ಡಾಡುತ್ತಿರುವವರ ಪ್ರಸ್ತಾವದಿಂದ)]. ಗೌರವಾರ್ಥವಾಗಿ ಊಟ ಹಾಕು, ಭೋಜನವೇರ್ಪಡಿಸು. (ಕೋಣೆ ಮೊ. ಗಳ ವಿಷಯದಲ್ಲಿ) — ಮಂದಿಗೆ ಊಟಕ್ಕೆ ಸ್ಥಳವಾಗು, ಅವಕಾಶವಾಗು. Dining-room ಊಟದ ಮನೆ; ಭೋಜನ ಶಾಲೆ. **Díner** (ನಾ.) ಊಟ ಮಾಡುವವನು ; ಅತಿಥಿ ; ರೈಲ್ವೆಯಲ್ಲಿಯ ಊಟದ ಬಂಡಿ. D.-out ಸಾಮಾನ್ಯವಾಗಿ, ಮನೆಯಲ್ಲಿ ಊಟಮಾಡದೆ ಇತರ ಕಡೆಗಳಲ್ಲಿ ಊಟಮಾಡುವವನು (ಮು., ಸಾಮಾಜಿಕ ಗುಣಗಳಿಗಾಗಿ ಆತಿಥ್ಯಕ್ಕೆ ಬಹು ಮಂದಿಯಿಂದ ಕರೆ ಪಡೆಯುವವನು). **Dínner** ಡಿನರ್ (ನಾ.) (ದಿನದ, ಮುಖ್ಯ) ಊಟ, ಭೋಜನ (ಮಧ್ಯಾಹ್ನದ್ದು ಅಥವಾ ಸಾಯಂಕಾಲದ್ದು : ಬೇರೆ ಬೇರೆ ಭೋಜ್ಯಪದಾರ್ಥಗಳ ವರಿಸೆಯುಳ್ಳ ಕ್ರಮವಾದ ಊಟ). (ಒಬ್ಬನ ಗೌರವಾರ್ಥವಾಗಿ, ಒಂದು ವಿಶೇಷ ಸಂದರ್ಭದಲ್ಲಿ, ನಡಸುವ) ಸಂತೋಷ ಭೋಜನ, ಔತಣ, ಸಂತರ್ಪಣೆ. D.-bell ಊಟದ ಗಂಟೆ. D.-hour,-time ಊಟದ ಹೊತ್ತು. D.-party ಭೋಜನ ಸಮಾರಂಭ. D.-set ತಟ್ಟೆ, ಬಟ್ಟಲು, ಪರಾತ, ಮೊ. ಊಟದ ಅಣಿ. D.-wagon (ಸುಲಭವಾಗಿ ಸಾಗಿಸಲು) ಉರುಳುಚಕ್ರವಿರುವ ಕಾಲುಗಳುಳ್ಳ ಆಹಾರವಸ್ತುಗಳ ಪರಾತ. D. without grace ಮದುವೆಗೆ ಮೊದಲೇ ಮಾಡಿದ ಸಂಭೋಗ. **Dínnerless** (ಗು.)

Díng-dóng ಡಿಂಗ್ ಡಾಂಗ್ (ಕ್ರಿ. ವಿ., ನಾ., ಗು.) ಒಂದಾದ ಮೇಲೊಂದರಂತೆ ಬಡಿಯುವ ಎರಡು ಗಂಟೆಗಳ ಶಬ್ದ(ದಂಥ) (Hammer away at it d. ಎಡೆಬಿಡದೆ ಏಟಿನಮೇಲೆ ಏಟು ಹೊಡೆ. ಮನಃಪೂರ್ವಕವಾಗಿ, ಶ್ರದ್ಧೆಯಿಂದ, ಮಾಡು. D. race ಒಬ್ಬರಾದ ಮೇಲೊಬ್ಬರು ಪರ್ಯಾಯವಾಗಿ ಗೆಲ್ಲುವ ಪಂದ್ಯ). ಗಂಟೆಯ (ಗಳ) ಶಬ್ದ ; ಗಣ ಗಣ. ಪ್ರಾಸದ ಜಣ ಜಣ.

Dínghy, Díngey ಡಿಂಗಿ (ನಾ.) ಹಡಗಿನ ಸಣ್ಣ ದೋಣಿ ; ಹುಟ್ಟು ಹಾಕಿ ನಡಸುವ ವಿಹಾರದ ಸಣ್ಣ ದೋಣಿ. (ಹಿಂದಿಯಲ್ಲಿ 'ಡೀಂಗಿ')

Díngle ಡಿಂಗ್‌ಲ್ (ನಾ.) ಸಾ., ಮರಗಳ ನೆರಳು ಬೀಳುತ್ತಿರುವ ಆಳವಾದ ತಗ್ಗುಪ್ರದೇಶ, ಹಳ್ಳ ; (ಗುಡ್ಡಗಳ ಮಧ್ಯೆ ಕಿರಿದಾಗಿಯೂ ಆಳವಾಗಿಯೂ ಇರುವ) ಸಣ್ಣ ಕಣಿವೆ.

Díngle-Dángle ಡಿಂಗ್‌ಲ್ ಡ್ಯಾಂಗ್‌ಲ್ (ಕ್ರಿ. ವಿ., ನಾ.) ತೂಗಾಡುತ್ತಿರುವಂತೆ ; ನೇತಾಡುತ್ತ ; ಜೋಲಾಡುತ್ತ. ಹಿಂದುಮುಂದಕ್ಕೆ ಜೋಲಾಡುತ್ತಿರುವುದು ; ಜೋಲಾಡುತ್ತಿರುವ ಉಪಾಂಗ

Díngy ಡಿಂಜಿ (ಗು.) ಮಾಸಲು ಬಣ್ಣದ ; ಮಾಸಿ ಕಪ್ಪಾದ ; ಮಂಕಾದ ; ಮಸುಕಾದ ; ಕೊಳಕಾಗಿ, ಮಲಿನವಾಗಿ, ಕಾಣುವ. **Díngily** (ಕ್ರಿ. ವಿ.) ; **Dínginess** (ನಾ.)

Dínky ಡಿಂಕಿ (ಗು.) (ಬಳ. ಮಾ.) ಅಂದವಾದ ; ಚೆಲುವಾದ ; ಸೊಗಸಾದ ; ಮುದ್ದಾದ ; ಮನೋಹರವಾದ.

Dínner. Dine ನೋಡಿ.

Dínosaur, Deíno- ಡೈನೊಸಾರ್ (ನಾ.) ವಂಶ ನಷ್ಟವಾಗಿಹೋದ ಅದ್ಭುತ ಕಾಯದ ಒಂದು ಸರೀಸೃಪ : ಮಹಾ ಸರೀಸೃಪ. **Dinosaúrian** (ಗು., ನಾ.)

Dínothere, Deíno- ಡೈನೊತಿಯರ್ (ನಾ.) ವಂಶ ನಷ್ಟವಾಗಿ ಹೋದ ಅದ್ಭುತ ಕಾಯದ ಒಂದು ಸೊಂಡಲಿನ ಮೃಗ : ಮಹಾ ಗಜ.

Dint ಡಿಂಟ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) ಏಟು ; ಪೆಟ್ಟು ; ಬಡಿತ (By d. of ಬಲದಿಂದ ; ಶಕ್ತಿಯಿಂದ ; ಮೂಲಕ). ಹೊಡೆತದಿಂದ ಅಥವಾ ಒತ್ತಡದಿಂದ ಆದ ಗುರುತು ; ಕಚ್ಚು ; ನೆಗ್ಗು. (ಕ್ರಿ.) ಕಚ್ಚು ಕಚ್ಚು ಮಾಡು ; ಕಚ್ಚು ಬೀಳಿಸು ; ಗುಂಡಿ ಕೆಡವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Díocese ಡೈಒಸೆ(ಸೀ)ಸ್ (ನಾ.) (ಕ್ರೈಸ್ತ ಗುರು) ಬಿಷಪ್ಪಿನ ಆಡಳಿತ ಪ್ರಾಂತ. **Diócesan** ಡೈಆಸಿ(ಸೆ)ಸನ್ (ಗು., ನಾ.) — ಪ್ರಾಂತದ (ವನು) ; — ಪ್ರಾಂತದ ಬಿಷಪ್‌ಗುರು.

Dioécious ಡೈಈಷಿಯಸ್ (ಗು.) (ಸ. ವಿ.) ಗಂಡು ಹೂವೂ ಹೆಣ್ಣು ಹೂವೂ ಬೇರೆ ಬೇರೆ ಸಸ್ಯಗಳಲ್ಲಿರುವ ; ಭಿನ್ನ ಲಿಂಗಿ. (ಪ್ರಾ. ವಿ.) ಪುರುಷಾಂಗವೂ ಸ್ತ್ರೀಅಂಗವೂ ಬೇರೆ ಬೇರೆ ವ್ಯಕ್ತಿಗಳಲ್ಲಿರುವ ; ಭಿನ್ನ ಲಿಂಗಿ.

Dionýsian ಡೈಓನಿಸಿಯನ್, **-iac** — ಆ್ಯಕ್ (ಗು.) ಗ್ರೀಕರ ಮದ್ಯದೇವತೆಯಾದ ಡೈಓನಿಸಸ್ಸಿನ ; ಆ ದೇವತೆಯ ಆರಾಧನೆಯ.

Dióptric ಡೈಆಪ್‌ಟ್ರಿಕ್ (ಗು., ನಾ.) ದೃಷ್ಟಿಸಾಧನವಾದ. (ಕಿರಣ) ವಕ್ರೀಭವನದಿಂದ ದೃಷ್ಟಿಸಹಾಯಕವಾಗುವ (D. glass, lens, system). (ಕಿರಣ) ವಕ್ರೀಭವನದ, ವಕ್ರೀಭವಿಸುವ. ವಕ್ರೀಭವನ ಶಾಸ್ತ್ರದ. (ನಾ.) ವಕ್ರೀಭವನ ಶಕ್ತಿಯ ಮಾನ : ಒಂದು ಮೀಟರಿನ ನಾಭಿದೂರವುಳ್ಳ ಲೆನ್ಸಿನ ಶಕ್ತಿ. (ದೃ. ವಿ., ಬ. ವ. ದಲ್ಲಿ) (ಕಿರಣ) ವಕ್ರೀಭವನ ಶಾಸ್ತ್ರ (Catoptrics ಪದದೊಡನೆ ಹೋಲಿಸಿ). **Dióptrically** (ಕ್ರಿ. ವಿ.)

Dioráma ಡೈಓರಾಮ (ನಾ.) ಚಿತ್ರರಚನೆಯಲ್ಲಿ ತಕ್ಕಂತೆ ಬಣ್ಣಗಳನ್ನು ಅಳವಡಿಸಿ ಇವುಗಳ ಬದಲಾವಣೆಯಿಂದಲೂ ಬೆಳಕನ್ನು ಹಾಯಿಸುವ ದಿಕ್ಕಿನ ಬದಲಾವಣೆಯಿಂದಲೂ ಸೂರ್ಯೋದಯ, ಮೊ. ದ ಪ್ರಾಕೃತಿಕ ದೃಶ್ಯಗಳನ್ನು ತೋರಿಸುವ ಕೌತುಕದ ವರ್ಣ ಚಿತ್ರಪಟ : 'ಡೈಯೊರಾಮ.' **Diorámic** —ರ್‍ಯಾಮಿಕ್ (ಗು.)

Dióxide ಡೈಆಕ್ಸೈ(ಕ್ಸಿ)ಡ್ (ನಾ.) (ರ. ವಿ.) ಎರಡು ತುಲ್ಯಭಾರ ಆಮ್ಲಜನಕವೂ ಒಂದು ತುಲ್ಯಭಾರ ಲೋಹ ಅಥವಾ ಲೋಹಕಲ್ಪವೂ ಸಂಯೋಗಹೊಂದಿ ಆದ ಸಂಯುಕ್ತ : 'ದ್ವಿ ಆಕ್ಸೈಡ್.' (Carbon d. ಇಂಗಾಲ ದ್ವಿ ಆಕ್ಸೈಡ್)

Dip ಡಿಪ್ (ಕ್ರಿ.) ಅದ್ದು ; ಮುಳುಗಿಸು (D. one's pen in gall ಮನಸ್ಸು ಕೊರೆಯುವಂತೆ, ಮನೋವೇಧಕವಾಗಿ, ಕ್ರೂರವಾಗಿ, ಬರೆ). ಅದ್ದಿ ಬಣ್ಣಕೊಡು ; ಬಣ್ಣದಲ್ಲಿ ಅದ್ದು. ಕರಗಿದ ಕೊಬ್ಬಿನಲ್ಲಿ ಬತ್ತಿಯನ್ನದ್ದಿ (ಮೋಂಬತ್ತಿ) ಮಾಡು. (ಕುರಿಯನ್ನು) ಕ್ರಿಮಿ ನಾಶಕ ದ್ರವದಲ್ಲಿ ತೊಳೆ. (ದ್ರವ, ಧಾನ್ಯ, ಮೊ. ನ್ನು) ಮೊಗೆ, ತೋಡು, ತೋಡಿ ತೆಗೆದುಕೊ. (ಬಾವುಟ, ಹಡಗಿನ ಪಟ, ತಕ್ಕಡಿಯ ದಂಡಿಗೆ, ಮೊ. ನ್ನು) ಸ್ವಲ್ಪ ತಗ್ಗಿಸು, ಇಳಿಸು. (ಬಳ. ಮಾ.) ಸಾಲದಲ್ಲಿ ಮುಳುಗು ; ಆಧಾರ, ಈಡು, ಮಾಡು. ಮುಳುಗು ಹಾಕು. (ಯಾವುದಾದರೂ ಪದಾರ್ಥವನ್ನು ಹೊರಕ್ಕೆ ತೆಗೆಯಲು) ಕೈ, ಸೌಟು, ಮೊ. ನ್ನು ಹಾಕು (D. into one's purse ಧಾರಾಳವಾಗಿ ವೆಚ್ಚಮಾಡು). ಒಂದು ಮಟ್ಟದ ಕೆಳಗಿಳಿ [Sun dips below horizon ಸೂರ್ಯನು ಕ್ಷಿತಿಜದ ಕೆಳಗೆ ಇಳಿಯುತ್ತಾನೆ, ಮುಳುಗುತ್ತಾನೆ. Bird dips and rises in flight ಹಕ್ಕಿ ಹಾರುವಲ್ಲ ಕೆಳಕ್ಕಿಳಿದು ಮೇಲಕ್ಕೇರುತ್ತದೆ. Scale dips (ತಕ್ಕಡಿಯ) ದಂಡಿಗೆ ಬಾಗುತ್ತದೆ]. ತಳಕ್ಕೆ ಇಳಿ ; ಇಳಿವೋರೆಯಾಗು ; ಅವನತವಾಗು (ಮು., ಕಾಂತಸೂಚಿ ಮತ್ತು ಧೂಸ್ತರ). (Dipping-needle ಕಾಂತಾಕರ್ಷಣದ ಅವನತಿಯನ್ನು ಅಳೆಯುವುದಕ್ಕಾಗಿ ತಕ್ಕಂತೆ ತಿರುಗಲು ಅಳವಡಿಸಿರುವ ಕಾಂತಸೂಚಿ : ಅವನತಿ ಸೂಚಿ). ಒಳಹೊಕ್ಕು ವಿಚಾರ ಮಾಡು ; ಬುಡಮುಟ್ಟ ಶೋಧಿಸು (D. deep into the future ಭವಿಷ್ಯವನ್ನು ಚೆನ್ನಾಗಿ ಪರಿಶೋಧಿಸು). ಪುಸ್ತಕವನ್ನು ಅಲ್ಲಲ್ಲಿ, ಬೇಗ ಬೇಗನೆ, ಓದಿನೋಡು ; ಮೇಲೆಮೇಲೆ ನೋಡು ; ತಿರುವಿಹಾಕು. **Dípper** ಡಿಪರ್ (ನಾ.) (ಕ್ರಿಯಾರ್ಥಗಳಲ್ಲಿ). (ಕ್ರೈಸ್ತ) ಆ್ಯನಬ್ಯಾಪ್ಟಿಸ್ಟ್ ಅಥವಾ ಬ್ಯಾಪ್ಟಿಸ್ಟ್ ಮತದವನು. ಒಂದು ಜಾತಿಯ ನೀರುಹಕ್ಕಿ. ಒಂದು ತೆರದ ಸೌಟು. (ಛಾಯಾ ಚಿತ್ರದಲ್ಲಿ) ಅಸಲುಪ್ರತಿಗಳನ್ನು ದ್ರಾವಣದಲ್ಲಿ ಮುಳುಗಿಸುವ ಸಾಧನ. The D. (ಅಮೆ. ಸಂ.) ಸಪ್ತರ್ಷಿ (ನಕ್ಷತ್ರ) ಮಂಡಲ.

Dip (ನಾ.) ಮುಳುಗು(ವುದು) ; ಮುಳುಕು ; ನಿಮಜ್ಜನ ; ಅವಗಾಹ. ಒಂದು ಸಲ ಅದ್ದಿ, ಮೊಗೆದು, ತೆಗೆದ ಮೊತ್ತ. (ಬಳ. ಮಾ.) (ಸಮುದ್ರ, ಮೊ. ಗಳಲ್ಲಿ) ಸ್ನಾನ (ಮಾಡುವುದು). ಮುಳುಗಿರುವ ಪ್ರಮಾಣ. (ಖ. ವಿ.) ಪ್ರೇಕ್ಷಕನು ಎತ್ತರಕ್ಕೆ ಹೋದಂತೆಲ್ಲ ಕಾಣುವ ಕ್ಷಿತಿಜದ ತೋರಿಕೆಯ ಪಾತ : ಕ್ಷಿತಿಪಾಧರಾಂಶ. ಕಾಂತಸೂಚಿ ಕ್ಷಿತಿಜರೇಖೆಯೊಡನೆ ಮಾಡುವ ಕೋನ : ಕಾಂತಾವನತಿ. ಧೂಸ್ತರದ ಇಳಿವೋರೆ, ಅವನತಿ. ಬಾನ್ ರೇಖೆ, ಮೊ. ಗಳ ಅವನತಿ, ಬಾಗು. ಕೊಬ್ಬಿನ ಮೋಂಬತ್ತಿ. ಕುರಿ, ಮೊ. ಗಳನ್ನು ತೊಳೆಯುವುದಕ್ಕಾಗಿ ತಯಾರಿಸಿದ (ಔಷಧ) ದ್ರವ. D.-needle = Dipping-needle. D.-net ದೊಡ್ಡ ಹಿಡಿಯುಳ್ಳ ಸಣ್ಣ ಮೀನ್ಬಲೆ. D.-pipe,-trap (ಯಾವುದಾದರೂ ಅನಿಲವು ಮುಂದೆ ಹರಿಯದಂತೆ ತಡೆಯಲು ಅದು ಸಾಗುತ್ತಿರುವ ಕೊಳವಿಯನ್ನು ದ್ರವವಿಟ್ಟಿರುವ ಒಂದು ಪಾತ್ರೆಯ ದ್ರವದಲ್ಲ ಬಗ್ಗಿಸಿರುವ) ಮುಳುಗು ನಾಳ ; ಅದ್ದುನಾಳ ; ದ್ರವದಲ್ಲ ಅದ್ದುವಂತೆ ಬಾಗಿರುವ ಅನಿಲ ನಾಳ ; ಅನಿಲವು ಮುಂದೆ ಸಾಗದಂತೆ ಅಳವಡಿಸಿರುವ ಹಿಡಿಸಾಧನ.

Diphthéria ಡಿಫ್ಥೀರ್‍ಯಿಯ, **Diphtherítis** ಡಿಫ್ಥರೈಟಿಸ್ (ನಾ.) ದೇಹದ ಒಳಭಾಗದಲ್ಲಿಯ, ಮು., ಗಂಟಲಿನಲ್ಲಿಯ, ಶ್ಲೇಷ್ಮಚರ್ಮವು ಉದ್ದೀಪನ ಹೊಂದಿ ಅದರಿಂದ ಹೊರಟ ಸ್ರವವು ಕೃತಕ ಚರ್ಮದಂತೆ ಏರ್ಪಡುವ ಕಠಿನವಾದ ಒಂದು ಅಂಟುರೋಗ : ಗಳ ಚರ್ಮ ರೋಗ. **Diphthérial** (ಗು.) ; **Diphthéric** —ತೆರಿಕ್ (ಗು.) ; **Diphtherític** — ತಿರಿಟಿಕ್ (ಗು.) ; **Diphtheroid** (ಗು.)

Díphthong ಡಿಫ್‌ಥಾಂಗ್ (ನಾ.) ಒಟ್ಟಿಗೆ ಬರುವ ಎರಡು ಸ್ವರಗಳ ಸಹೋಚ್ಚಾರಣೆ (ಉದಾ., Scout, Toil ಎಂಬಲ್ಲ). ಒಂದು ಸ್ವರದ ಉಚ್ಚಾರಣೆಯುಳ್ಳ ಎರಡು ಸ್ವರಾಕ್ಷರಗಳು : ಸಂಯುಕ್ತ ಸ್ವರ ; ಸಂಧಿ ಸ್ವರ (ಉದಾ., Feat ಎಂಬಲ್ಲ) ; ಸಂಯುಕ್ತ ಸ್ವರಾಕ್ಷರ (æ). **Diphthóngal** (ಗು.) ; **Díphthongize** (ಕ್ರಿ. ಸಕ.)

Dipl(o)- ಡಿಪ್ಲೊ — (ಸ. ಪೂ. ಪ.) ದ್ವಿ—, ದ್ವಯ— (ವೈಜ್ಞಾನಿಕ ಪದಗಳಲ್ಲ). **Diploblástic** — ಬ್ಲ್ಯಾಸ್ಟಿಕ್ (ಗು.) (ಸ. ವಿ.) ಎರಡು ಬೀಜಪೊರೆಗಳುಳ್ಳ. **Diplocárdiac** — ಕಾರ್ಡಿಆ್ಯಕ್ (ಗು.) ಎಡಬಲದ ಭಾಗಗಳು ಪ್ರತ್ಯೇಕವಾಗಿರುವ ಹೃದಯವುಳ್ಳ : ದ್ವಿಹೃದಯಕ.

Diplóma ಡಿಪ್ಲೋಮ (ನಾ. ; ಬ. ವ. -s ; ಅಪೂರ್ವವಾಗಿ -ta) ರಾಜ್ಯ ಪತ್ರ ; ಸರ್ಕಾರಿ ಪತ್ರ ; ಶಾಸನ ಪತ್ರ ; ಅಧಿಕಾರ ಪತ್ರ. (ಒಂದು ಪ್ರಶಸ್ತಿಯನ್ನೊ ವಿಶೇಷಾಧಿಕಾರವನ್ನೊ ಕೊಡುವ) ಸನ್ನದು (ಮು., ವಿಶ್ವವಿದ್ಯಾನಿಲಯದಲ್ಲ ಅಥವಾ ಪ್ರೌಢ ವಿದ್ಯಾಶಾಲೆಯಲ್ಲ ಕೊಡುವ ಪದವಿಯ ಪ್ರಶಸ್ತಿಪತ್ರ). **Diplóma'd, -maed** — ಮ್ಯಾಡ್ (ಗು.) ; **Diplómaless** (ಗು.)

Diplómacy ಡಿಪ್ಲೋಮಸಿ (ನಾ.) ಅಂತರ್ರಾಷ್ಟ್ರೀಯ ವ್ಯವಹಾರ ನಿರ್ವಹಣ ; ರಾಯಭಾರ ನಿರ್ವಹಣ ಕೌಶಲ. ಕೌಶಲ ; ಚತುರತೆ ; ತಂತ್ರ ; ವ್ಯವಹಾರ ಚಾತುರ್ಯ ; ಸಾಮೋಪಾಯ ; ನಯ ; ಉಪಾಯ. **Díplomat** ಡಿಪ್ಲೊಮ್ಯಾಟ್, **-ate** —ಮೇಟ್ = **Diplómatist** ಡಿಪ್ಲೋಮಟಿಸ್ಟ್ (ನಾ.) ರಾಯಭಾರ ನಿರ್ವಾಹಕ ; ರಾಯ ಭಾರ ಕುಶಲಿ ; ರಾಯಭಾರಿ. ವ್ಯವಹಾರ ಪಟು. **Diplomátic** ಡಿಪ್ಲೊಮ್ಯಾಟಿಕ್ (ಗು.) ಸರ್ಕಾರದ ಪತ್ರಗಳು, ಮೂಲ ಪತ್ರಗಳು, ಸನ್ನದುಗಳು, ಮೊ. ಗಳಿಗೆ ಸಂಬಂಧಪಟ್ಟ ; ಇವುಗಳ ಮೂಲಪಾಠದ (D. copy ಮೂಲದ ಯಥಾಪ್ರತಿ). ರಾಯಭಾರದ ; ರಾಯಭಾರ ನಿರ್ವಹಣದ (D. body ಒಂದು ಆಸ್ಥಾನದಲ್ಲಿಯ ರಾಯಭಾರಿ ವರ್ಗ. D. service ರಾಯಭಾರದ ಅಧಿಕಾರಿಗಳು). ರಾಯಭಾರ ಕುಶಲ. ಸಾಮೋಪಾಯದಿಂದ ನಡಸುವ. (ಹೇಳಿಕೆಗಳು, ವ್ಯವಹಾರಗಳು, ವ್ಯಕ್ತಿಗಳು — ಇವುಗಳ ವಿಷಯದಲ್ಲ) ಮುಚ್ಚುಮರೆಯ, ಮೋಸದ ; ಕಪಟ. **Diplomátically** (ಕ್ರಿ. ವಿ.) ; **Diplómatize** ಡಿಪ್ಲೋಮಟೈಸ್ (ಕ್ರಿ. ಅಕ.) ರಾಯಭಾರಿಯಾಗಿರು ; ನಿಯೋಗಿಯ ಉದ್ಯೋಗ ಮಾಡು ; ಸಾಮೋಪಾಯ ಮಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Dípper. Dip ನೋಡಿ.

Dipsománia ಡಿಪ್ಸೋಮೇನಿಯ (ನಾ.) ಮದ್ಯಕುಡಿಯುವ ಅತ್ಯಾಶೆ; ಕುಡಿತದ ಹುಚ್ಚು; ಕಳ್ಳೀಳು; ಮದ್ಯೋನ್ಮಾದ. **Dipsomániac** (ನಾ.) ಅತಿ ಕುಡುಕ; ಮದ್ಯೋನ್ಮಾದಿ.

Dipsópathy ಡಿಪ್ಸಾಪತಿ (ನಾ.) ದ್ರವ ವರ್ಜನೆಯಿಂದ ವ್ಯಾಧಿಯನ್ನು ಗುಣಮಾಡುವುದು: ದ್ರವವರ್ಜನ ಚಿಕಿತ್ಸೆ.

Dipsósis ಡಿಪ್ಸೋಸಿಸ್ (ನಾ.) (ವೈ. ಶಾ.) ಮಿತಿಮೀರಿದ ದಾಹ; ಅತಿತೃಷ್ಣೆ.

Díptera ಡಿಪ್ಟೆರ (ನಾ., ಬ. ವ.) ಎರಡು ರೆಕ್ಕೆಯ ಹಾರುಹುಳುಗಳು (ನೊಣ, ಮೊ. ವು). **Dípteral** (ಗು.) (ವಾ. ಶಾ.) ಎರಡು ಕಂಬಸಾಲು ಗಳುಳ್ಳ. **Dípterous** (ಗು.) ಎರಡು ರೆಕ್ಕೆಗಳುಳ್ಳ. ದ್ವಿಪಕ್ಷ ಮಕ್ಷಿಕ ಪ್ರಾಣಿಗಳ ವರ್ಗಕ್ಕೆ ಸೇರಿದ. (ಸ. ವಿ.) ರೆಕ್ಕೆಗಳಂತಿರುವ ಎರಡು ಅನುಬಂಧಗಳುಳ್ಳ: ದ್ವಿಪತ್ರಕ.

Dire ಡಯರ್ (ಗು.) ಭಯಂಕರ; ಘೋರ; ಉಗ್ರ; ದಾರುಣ; ವಿಪತ್ಕರ (D. sisters ಉಗ್ರ ದೇವತೆಗಳು; ಉಗ್ರಾಂಬಿಕೆಯರು). **Dírely** (ಕ್ರಿ. ವಿ.); **Díreful** (ಗು.); **Dírefully** (ಕ್ರಿ. ವಿ.)

Diréct ಡಿ(ಡೈ)ರೆಕ್ಟ್ (ಕ್ರಿ.) (ಕಾಗದಪತ್ರ, ಭಾಂಗಿ, ಮೊ. ಕ್ಕೆ) ವಿಳಾಸ ಬರೆ. (ಒಬ್ಬನಿಗೆ, ಒಬ್ಬನನ್ನುದ್ದೇಶಿಸಿ) ಹೇಳು, ಬರೆ (I d. my remarks to you ನಿಮ್ಮನ್ನು ಕುರಿತು ಈ ಮಾತುಗಳನ್ನು ಹೇಳುತ್ತೇನೆ). ನಿರ್ವಹಿಸು; ನಡಸು; ನಿಯಂತ್ರಿಸು (Soul directs body, commander troops ಆತ್ಮವು ಶರೀರವನ್ನು ನಡಸುತ್ತದೆ; ಸೇನಾಧಿಪತಿ ಸೇನೆಯನ್ನು ನಡಸುತ್ತಾನೆ). (ವಸ್ತು, ವ್ಯಕ್ತಿ, ದೃಷ್ಟಿ, ಗಮನ — ಇವನ್ನು) ಒಂದು ಕಡೆಗೆ ನೇರವಾಗಿ ತಿರುಗಿಸು. ದಾರಿ ತೋರಿಸು; ಮಾರ್ಗನಿರ್ದೇಶ ಮಾಡು; ಗುರಿಯಿಡು (Directing-post ದಾರಿ ತೋರುವ ಕಂಬ; ತೋರುಗಂಬ; ಕೈಮರ; ಕೈಗಂಬ). ಬುದ್ಧಿವಾದಕ ನಾಗಿ ನಡಸು, ಪ್ರೇರಿಸು, ಪ್ರಚೋದಿಸು (Duty directs my actions ನನ್ನ ಕಾರ್ಯಗಳು ಕರ್ತವ್ಯಪ್ರೇರಿತಗಳು). (ಒಬ್ಬನು) ಮಾಡು ವಂತೆ ನೇಮಿಸು; ಅಪ್ಪಣೆ ಕೊಡು; ಆಜ್ಞೆ ಮಾಡು. **Diréction** (ನಾ.) ನಡಸುವುದು; ಉದ್ದೇಶಿಸುವುದು; ಗುರಿಯಿಡುವುದು; ಮಾರ್ಗ ತೋರಿಸುವುದು; ಕಾರ್ಯನಿರ್ವಾಹ (ಮಾಡುವುದು); ಮೇಲ್ವಿಚಾರ; ಆಡಳಿತ; = Directorate; (ಸಾ., ಬ. ವ. ದಲ್ಲಿ) ಕಾರ್ಯಕ್ರಮದ ವಿಷಯವಾಗಿ ಆದೇಶ; ಅಪ್ಪಣೆ. (ಕಾಗದ, ಭಾಂಗಿ, ಮೊ. ಗಳ ಮೇಲೆ) ವಿಳಾಸ, ಶಿರನಾಮೆ. (ಹೋಗುವ, ನೋಡುವ) ದಿಕ್ಕು, ದೆಸೆ, ಕಡೆ, ಮಾರ್ಗ; ಅವಕಾಶ; ಕ್ಷೇತ್ರ; ವಿಷಯ (New directions of inquiry ಅನ್ವೇಷಣದಲ್ಲಿ, ವಿಚಾರದಲ್ಲಿ, ಹೊಸ ಮಾರ್ಗಗಳು. Improvement in many directions ನಾನಾ ಮುಖದ ಅಭಿವೃದ್ಧಿ. **Diréctive** (ಗು.); **Diréctor** (ನಾ.) ಮೇಲ್ವಿಚಾರಣಕರ್ತ; ಚಾಲಕ; ಕಾರ್ಯ ನಿರ್ವಾಹಕ; ಆಡಳಿತಗಾರ; ವ್ಯವಸ್ಥಾಪಕ (ಮು., ವ್ಯಾಪಾರ ಸಂಘದ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯ). (ಕ್ರೈಸ್ತ ಮತ) ಧಾರ್ಮಿಕ ವಿಷಯಗಳನ್ನು ಉಪದೇಶಮಾಡುವ ಪುರೋಹಿತ; ಧರ್ಮೋಪದೇಶಕ; ಧರ್ಮಗುರು. ಯಂತ್ರಸಾಧನ, ಮೊ. ಗಳಲ್ಲಿ ಗತಿಯನ್ನು ನಿಯಂತ್ರಿ ಸುವ ಸಲಕರಣೆ; ನಿಯಂತ್ರಕ. **Diréctorate** —ಕ್ಟೊರೆಟ್ (ನಾ.) ಅಧ್ಯಕ್ಷನ (ನಿರ್ವಾಹಕನ) ಕಚೇರಿ; ನಿರ್ವಾಹಕ ಮಂಡಲಿ. **Directórial** —ಕ್ಟೋರಿಯಲ್ (ಗು.); **Diréctorship** —ಕ್ಟರ್‌ಷಿಪ್ (ನಾ.); **Diréctress** (ನಾ.); **Diréctory** (ಗು., ನಾ.) ಮಾರ್ಗ ದರ್ಶಕ; ಸಲಹೆ ಕೊಡುವ. (ನಾ.) (ಮು., ಕ್ರೈಸ್ತ ಪೂಜಾವಿಧಿ, ಆರಾಧನ ಕ್ರಮ — ಇವನ್ನು ಹೇಳುವ) ವಿಧಿಪುಸ್ತಕ. ಒಂದು ಪ್ರಾಂತದ ವಿವಿಧ ವಿಷಯ ಸಂಗ್ರಹ: ಪ್ರಾಂತ ಕೈಪಿಡಿ. **Diréctrix** (ನಾ.; ಬ. ವ. -ices) = Directress. (ಜ್ಯಾ.) (ಒಂದು ವಕ್ರರೇಖೆ ಯನ್ನೊ ಕ್ಷೇತ್ರವನ್ನೊ ರಚಿಸುವಾಗ ಉಪಯೋಗಿಸುವ) ನಿಯತ ರೇಖೆ.

Diréct (ಗು., ಕ್ರಿ. ವಿ.) ನೇರವಾದ; ನೆಟ್ಟನೆಯ; ಸೊಟ್ಟಿಲ್ಲದ; ಋಜು; ಬಳಸಿಲ್ಲದ; ಸುತ್ತಿಲ್ಲದ. [Went d. to heaven ನೆಟ್ಟಗೆ ಸ್ವರ್ಗಕ್ಕೆ ಹೋದನು. D. action ರಾಜ್ಯ ವ್ಯವಸ್ಥೆಗಳನ್ನು ಶಾಸನ ಸಭೆಗಳಲ್ಲಿ ಹೆಚ್ಚುಅಭಿಮತಗಳಿಂದ ಸಾಧಿಸುವುದಕ್ಕೆ ಬದಲಾಗಿ ಮುಷ್ಕರ ಹಿಡಿದು ಸಮಾಜವನ್ನು ಬಲವಂತಗೊಳಿಸಿ ಸರ್ಕಾರ ಒಪ್ಪುವಂತೆ ನಿರ್ಬಂಧಿ ಸುವ ಕಾರ್ಯ: ನೇರು ಕೈಮಾಡಿಕೆ. D. current (ವಿದ್ಯುತ್) ಸಂತತ ಪ್ರವಾಹ; ಏಕಮುಖ ಪ್ರವಾಹ. D. ray (ಪ್ರತಿಫಲಿತವಾಗದ ಅಥವಾ ವಕ್ರೀಭವಿಸದ) ನೇರವಾದ ಕಿರಣ. D. shot, hit ನೇರವಾದ ಗುಂಡಿ ನೇಟು, ಹೊಡೆತ (ಪುಟನೆಗೆದು ಬಂದದ್ದಲ್ಲ)]. (ಖ. ವಿ.) (ಗ್ರಹ, ಮೊ. ಗಳ ವಿಷಯದಲ್ಲಿ) ರಾಶಿಚಕ್ರ ಕ್ರಮದಲ್ಲಿ ಹೋಗುವ; ಋಜು ಗತಿಯ. (ಸಂತತಿ, ವಂಶ ಪರಂಪರೆ) ನೇರವಾದ (ಶಾಖಾಸಂತತಿಯಲ್ಲದ); ಪ್ರತ್ಯಕ್ಷ; ಸಾಕ್ಷಾತ್. (ವಾದ ವಿಷಯದಲ್ಲಿ) ಕಾರ್ಯಕಾರಣ ಸಂಗತವಾದ; ನೇರವಾದ. ಸಂಪೂರ್ಣವಾದ (D. opposite ಸಂಪೂರ್ಣ ವಿರುದ್ಧ ವಾದ). (ಸಂ.) (ಅಂತರ, ಸ್ವರಮೇಳ — ಇವುಗಳಲ್ಲಿ) ವಿಪರ್ಯಯ ವಲ್ಲದ; (ಗತಿಯ ವಿಷಯದಲ್ಲಿ) ವಿರುದ್ಧವಲ್ಲದ. ಮುಚ್ಚುಮರೆಯಿಲ್ಲದ; ನಿಷ್ಕಪಟ; ಸರಳ; ವಿಷಯಕ್ಕೆ ನೇರವಾಗಿ ಹೋಗುವ. ನಿಸ್ಸಂಶಯ ವಾದ; ಸ್ಪಷ್ಟ; ಖಂಡಿತ. [(ವ್ಯಾ.) D. speech or oration ಆಡಿದ, ಭಾಷಣದ, ಮಾತುಗಳನ್ನೇ ಉಪಯೋಗಿಸಿ ಹೇಳುವುದು (ಬೇರೆ ಮಾತುಗಳಲ್ಲಲ್ಲ): ಪ್ರತ್ಯಕ್ಷ ಕಥನ. D. tax ಕೊನೆಗೆ ಭಾರ ಹೊರಬೇಕಾ ದವನಿಂದಲೇ ನೇರವಾಗಿ ವಸೂಲುಮಾಡಿದ ತೆರಿಗೆ, ಮೊ.]. (ಕ್ರಿ. ವಿ.). (ಗುಣ ವಾಚಕದ ಅರ್ಥಗಳಲ್ಲಿ); ಸ್ವತಃ; ಪ್ರತ್ಯಕ್ಷವಾಗಿ (ಪರೋಕ್ಷವಾಗಲ್ಲದೆ). **Diréctness** (ನಾ.); **Diréctly** (ಕ್ರಿ. ವಿ., ಸಂ. ಅವ್ಯ.) ನೇರವಾಗಿ; ಕೂಡಲೆ; ತಡಮಾಡದೆ; ಈಗಲೇ; ತತ್‌ಕ್ಷಣ. (ಬಳ. ಮಾ.) ಒಡನೆಯೇ (Went d. I knew ತಿಳಿದೊಡನೆಯೇ ಹೋದೆನು)

Diréction, Diréctor, etc. **Direct** ನೋಡಿ.

Dirge ಡರ್ಜ್ (ನಾ.) ಶವಸಂಸ್ಕಾರ ಕಾಲದಲ್ಲಿ ಅಥವಾ ಮೃತನ ಸ್ಮಾರಕವಾಗಿ ಹಾಡುವ ಗೀತೆ: ಶ್ಮಶಾನ ಗೀತೆ; ಶೋಕ ಗೀತೆ; ಸಾವು ಹಾಡು. ಗೋಳು; ಅಳು; ವಿಲಾಪ; ಪ್ರಲಾಪ.

Dírigible ಡಿರಿಜಿಬ್‌ಲ್ (ಗು., ನಾ.) ನಡಸಲಾಗುವ (ಮು., ಆಕಾಶ ಬುಟ್ಟಿಗಳ ವಿಷಯದಲ್ಲಿ). (ನಾ.) ನಡಸಲಾಗುವ ಆಕಾಶಬುಟ್ಟಿ ಅಥವಾ ಗಾಳಿಹಡಗು.

Díriment ಡಿರಿಮೆಂಟ್ (ಗು.) ನಿರರ್ಥಕಗೊಳಿಸುವ; ಇಲ್ಲಮಾಡುವ; ರದ್ದುಮಾಡುವ; ವ್ಯರ್ಥಮಾಡುವ; ನಿಷ್ಫಲ (D. impediment ಮೊದಲಿನಿಂದಲೂ ಮದುವೆಯನ್ನು ನಿರರ್ಥಕಮಾಡುವ ಅಡಚಣೆ)

Dirk ಡರ್ಕ್ (ನಾ., ಕ್ರಿ. ಸಕ.) ಒಂದು ತೆರದ ಬಾಕು, ಕಠಾರಿ (ಮು., ಸ್ಕಾಟ್ಲೆಂಡಿನ ಮಲೆನಾಡಿಗರದು). (ಕ್ರಿ.) ಇದರಿಂದ ತಿವಿ, ಇರಿ.

Dirt ಡರ್ಟ್ (ನಾ.) ಕೊಳೆ; ಕೊಳಕು; ಕೆಸರು; ಕೊಚ್ಚೆ; ರೊಚ್ಚು; ಹೊಲಸು; ಮಲ. ಕೆಲಸಕ್ಕೆ ಬಾರದ ವಸ್ತು; ಕಸ [Yellow d. ಚಿನ್ನ. D. (ನೆಲದ ವಿಷಯದಲ್ಲಿ ತಿರಸ್ಕಾರವಾಗಿ) ಮಣ್ಣು. D.-cheap ಹೊರೆಯಗ್ಗ; ಅತಿಯಗ್ಗ]. ಭೂಮಿ; ನೆಲ. ಕೊಳಕುತನ; ಹೇಸಿಕೆ; ಹೊಲಸು ಮಾತು. Cast, fling, throw, d. ಮಣ್ಣೆಸೆ, ಭಂಡ ಮಾತಾಡು; ಬಯ್ಯಿ. Eat d. ಮಣ್ಣು ತಿನ್ನು; — ಮುಕ್ಕು; ಅವಮಾನ, ಮೊ. ನ್ನು ಸಹಿಸಿಕೊಂಡಿರು. D.-eating (ಸಾ., ಕೆಲವು ಅನಾಗರಿಕ ಜನರಲ್ಲಿಯೂ ಕೆಲವರು ಬಸುರಿಯರಲ್ಲಿಯೂ ಕಂಡುಬರುವ) ಮಣ್ಣುತಿನ್ನುವ ಗೀಳು (ರೋಗ). **Dírty** (ಗು., ಕ್ರಿ.) (ನಾಮವಾಚ ಕಾರ್ಥಗಳಲ್ಲಿ). ಕಲ್ಮಷ; ಕಶ್ಮಲ; ಅಶುದ್ಧ; ಅಶ್ಲೀಲ. ಹೀನ; ಕುತ್ಸಿತ; ತುಚ್ಛ; ನೀಚ; ಅಧಮ [D. work ಕೊಳಕು, ಹೊಲಸು, ಕೆಲಸ; ಹೀನ ಕಾರ್ಯ; ಮು., ಅಪ್ರಾಮಾಣಿಕ ಪ್ರವರ್ತನೆ. ದುಡಿತ; ಗುಲಾಮ ಚಾಕರಿ (Do person's d. work for him)]. ಅನ್ಯಾಯದಿಂದ ಸಂಪಾದಿಸಿದ; ಅನ್ಯಾಯಾರ್ಜಿತ. (ವಾಯುಸ್ಥಿತಿ) ವಿಷಮ; ಬಿರುಗಾಳಿ ಮಳೆಯಿಂದ ಕೂಡಿದ. (ಬಣ್ಣ) ಶುದ್ಧವಲ್ಲದ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿಳಿಯಲ್ಲದ. [Do the d. (ಅಸಂ.) ಕುತಂತ್ರ ಮಾಡು ; ನೀಚ ಮೋಸ ಮಾಡು]. **Dírtily** (ಕ್ರಿ. ವಿ.) ; **Dírtiness** (ನಾ.) ; **Dírtyish** (ಗು.)

Dis- ಡಿಸ್— (ಪೂ. ಪ್ರ.) ಬೇರೆ ಬೇರೆಯಾಗಿ ; ದೂರವಾಗಿ ; ಪ್ರತ್ಯೇಕವಾಗಿ ; ಮಧ್ಯೆ ; ಒಂದೊಂದಾಗಿ ; ಪೂರ್ತಿಯಾಗಿ (ಅಭಾವಾರ್ಥಕ ಪದಗಳಲ್ಲಿ : Disannul) ; ಅ— ; ಅನ್— ; ನಿಸ್— (ನಿಷೇಧಾರ್ಥಕ) ; — ರಹಿತ ; — ಹೀನ ; — ಚ್ಯುತ.

Disáble ಡಿಸೇಬ್‌ಲ್ (ಕ್ರಿ. ಸಕ.) (ಮಾಡಲಾಗದಂತೆ) ನಿಶ್ಯಕ್ತಿಗೊಳಿಸು ; ಅಶಕ್ತ ಮಾಡು ; ಶಕ್ತಿಗುಂದಿಸು ; ದುರ್ಬಲ ಮಾಡು ; ಕಾನೂನಿನ ಮೇರೆಗೆ ಅನರ್ಹನನ್ನಾಗಿ ಮಾಡು, ನಿಷೇಧಿಸು ; ಅನರ್ಹನೆಂದು ನಿಷೇಧಿಸು. ಅಡ್ಡಿಮಾಡು ; ತಡೆಯೊಡ್ಡು. **Disabílity** ಡಿಸ್‌ಅಬಿಲಿಟಿ (ನಾ.) ಯಾವುದಾದರೂ ಕಾರ್ಯವನ್ನು ಮಾಡಲು ಇರುವ ಕುಂದು (ಮು., ಕಾನೂನಿನ ವಿಷಯವಾದ ನ್ಯೂನತೆ, ಅಯೋಗ್ಯತೆ, ಅನರ್ಹತೆ) ; ಅಶಕ್ತಿ ; ದೌರ್ಬಲ್ಯ. **Disáblement** — ಏಬ್‌ಲ್ — (ನಾ.)

Disabúse ಡಿಸ್‌ಅಬ್ಯೂಸ್ (ಕ್ರಿ. ಸಕ.) ತಪ್ಪುತಿಳಿವಳಿಕೆ ಕಳೆ ; ನೆಚ್ಚಿಕೆ ಬಿಡಿಸು ; ಭ್ರಾಂತಿ ತಪ್ಪಿಸು.

Disaccórd ಡಿಸ್‌ಅಕಾರ್ಡ್ (ನಾ., ಕ್ರಿ. ಅಕ.) ಹೊಂದಿಕೆಯಿಲ್ಲದಿರು(ವುದು) ; ಹೊಂದದಿರು(ವುದು) ; ಅಸಂಗತಿ ; ಅಸಾಮಂಜಸ್ಯ ; ಅಸಮ್ಮತಿ(ಸು) ; ಭಿನ್ನಾಭಿಪ್ರಾಯ (ಪಡು) ; ಅಸಂಗತವಾಗು ; ಒಪ್ಪದಿರು.

Disadvántage ಡಿಸ್‌ಅ್ಯಡ್ವಾಂಟೇಜ್ (ನಾ.) ಅನನುಕೂಲ ; ಪ್ರತಿಕೂಲ (ಪರಿಸ್ಥಿತಿ) (Taken at a d. ಪ್ರತಿಕೂಲ ಸ್ಥಿತಿಯಲ್ಲಿ ಸಿಕ್ಕಿ). ನಷ್ಟ ; ಹಾನಿ ; ಕೇಡು ; ಅಹಿತ. **Disádvantágeous** — ಅ್ಯಡ್ವಂಟೇಜಸ್ (ಗು.) ಅನನುಕೂಲವಾದ ; ಪ್ರತಿಕೂಲವಾದ ; ಹಾನಿಕರ ; ಭಂಗ ತರುವ. **Disádvantágeously** (ಕ್ರಿ. ವಿ.)

Disaffécted ಡಿಸ್‌ಅಫೆಕ್ಟೆಡ್ (ಗು.) ಪ್ರೀತಿ ತಪ್ಪಿದ ; ಅಭಿಮಾನ ತಪ್ಪಿದ ; ಸ್ನೇಹವಳಿದ ; ಮನಸ್ಸೊಡೆದ ; ಅಸಂತುಷ್ಟ ; ಅತೃಪ್ತಿ ಪಡೆದ. ಭಕ್ತಿಹೀನ ; ಗೌರವ ತೋರದ (ಮು., ಸರ್ಕಾರಕ್ಕೆ) ; ರಾಜಭಕ್ತಿಯಿಲ್ಲದ ; ರಾಜದ್ವೇಷವುಳ್ಳ. **Disaffection** (ನಾ.) ರಾಜಕೀಯ ಅವಿಶ್ವಾಸ, ಅಪ್ರೀತಿ, ಅಸಮಾಧಾನ.

Disaffírm ಡಿಸ್‌ಅಫರ್ಮ್ (ಕ್ರಿ. ಸಕ.) (ನ್ಯಾ. ಶಾ.) (ಹಿಂದಿನ ತೀರ್ಮಾನವನ್ನು) ತಿರುಗಿಸು, ತಲೆಕೆಳಗು ಮಾಡು, ರದ್ದು ಮಾಡು ; (ತೀರ್ಮಾನ) ತಿರಸ್ಕರಿಸು, ನಿರಾಕರಿಸು, ಒಪ್ಪದೆಹೋಗು. (ಕರಾರು, ಒಪ್ಪಂದ, ಮೊ. ನ್ನು) ಇಲ್ಲವೆನ್ನು, ಅಲ್ಲವೆನ್ನು, ನಿಷೇಧಿಸು. **Disaffirmátion** — ಅ್ಯ — (ನಾ.)

Disaffórest ಡಿಸ್‌ಅಫಾರೆಸ್ಟ್ (ಕ್ರಿ. ಸಕ.) ಕಾನೂನನುಸರಿಸಿ ಕಾಡಾಗಿ ಪರಿಗಣಿಸುತ್ತಿದ್ದುದನ್ನು ಸಾಮಾನ್ಯ ಜಮೀನಾಗಿ ಮಾಡು ; ಕಾಡು ತೆಗೆ. **Disafforestátion** (ನಾ.)

Disagreé ಡಿಸ್‌ಅಗ್ರೀ (ಕ್ರಿ. ಅಕ.) ಭೇದವಿರು ; ಭಿನ್ನವಾಗಿರು ; ಹೋಲದಿರು ; ಹೊಂದದಿರು ; ಹೊಂದಿಕೆಯಿಲ್ಲದಿರು ; ತಾಳೆಬೀಳದಿರು ; ಸರಿಬೀಳದಿರು ; ಭಿನ್ನಾಭಿಪ್ರಾಯ ಪಡು ; ಒಪ್ಪದಿರು ; ಒಡಂಬಡದಿರು ; ಸಮ್ಮತಿಸದಿರು ; ಅಸಮ್ಮತಿಸು ; ಕಚ್ಚಾಡು ; ಕಲಹ ಮಾಡು. (ಆಹಾರ, ಹವ, ಮೊ. ವಿಷಯದಲ್ಲಿ) ಒಂಟದಿರು, ಒಗ್ಗದಿರು, ಸೇರದಿರು, ಹಿತವಾಗದಿರು ; ಪ್ರತಿಕೂಲವಾಗು ; ವಿರೋಧ ಮಾಡು ; ದುಷ್ಪರಿಣಾಮ ಮಾಡು. **Disagreément** (ನಾ.) ; **Disagreéable** — ಅಗ್ರಿ(ೕ)ಅಬ್‌ಲ್ (ಗು., ನಾ.) ರುಚಿಸದ ; ಒಪ್ಪಿಗೆಯಾಗದ ; ಒಗ್ಗದ ; ಸೇರದ ; ಸರಿಬೀಳದ ; ಹೊಂದದ ; ಇಷ್ಟವಿಲ್ಲದ ; ಅಹಿತವಾದ ; ಅಪ್ರಿಯವಾದ ; ಕೋಪ ಪ್ರಕೃತಿಯ. (ನಾ. ; ಸಾ., ಬ. ವ. ದಲ್ಲಿ) ಹಿತವಲ್ಲದ ಅನುಭವ(ಗಳು) ; ತೊಂದರೆ(ಗಳು) ; ಅನಿಷ್ಟ(ಗಳು) ; ಅಹಿತ(ಗಳು) ; ಸಂಕಟ(ಗಳು) ; ಕಿರುಕುಳ(ಗಳು) ; ಪೀಡೆ(ಗಳು). **Disagreéableness** (ನಾ.) ; **Disagreéably** (ಕ್ರಿ. ವಿ.)

Disallow ಡಿಸ್‌ಅಲೌ (ಕ್ರಿ. ಸಕ.) ಮಂಜೂರು ಮಾಡದಿರು ; ಹೊಡೆದುಹಾಕು ; ತಳ್ಳಿಹಾಕು ; ನಿರಾಕರಿಸು ; ಸಮ್ಮತಿಸದಿರು ; ಅಂಗೀಕರಿಸದಿರು ; ಒಪ್ಪಿಗೆ ಕೊಡದಿರು ; ನಿಷೇಧಿಸು ; ಪ್ರತಿಷೇಧಿಸು.

Disannúl ಡಿಸ್‌ಅನಲ್ (ಕ್ರಿ. ಸಕ.) ಹೊಡೆದುಹಾಕು ; ತೊಡೆದುಹಾಕು ; ಅಳಿಸಿಬಿಡು ; ರದ್ದುಮಾಡು.

Disappeár ಡಿಸ್‌ಅಪಿಯರ್ (ಕ್ರಿ. ಅಕ.) ಕಾಣದಂತಾಗು ; ಕಾಣದೆ ಹೋಗು ; ಮರೆಯಾಗು ; ಮಾಯವಾಗು ; ಅದೃಶ್ಯವಾಗು ; ಬಯಲಾಗು ; ಅಂತರ್ಧಾನವಾಗು ; ಮೈಗರೆ ; ಕಳೆದುಹೋಗು ; ಅಳಿದುಹೋಗು ; ಅಂತರಿಸು ; ಹೊರಟುಹೋಗು. **Disappeárance** (ನಾ.)

Disappoínt ಡಿಸ್‌ಅಪಾಯ್‌ಂಟ್ (ಕ್ರಿ. ಸಕ.) ಸಂಕಲ್ಪವನ್ನು, ಅಭಿಲಾಷೆಯನ್ನು, ನಿರೀಕ್ಷಣೆಯನ್ನು, ನಡಸದೆಹೋಗು ; ಆಶಾಭಂಗ ಮಾಡು ; ಕೈಕೊಡು (ವ್ಯಂಗ್ಯಾರ್ಥ) ; ತಪ್ಪು. (ಒಬ್ಬನೊಡನೆ ಮಾಡಿಕೊಂಡ) ಕಾರ್ಯನಿಶ್ಚಯವನ್ನು ನಡಸದೆಹೋಗು ; ಗೊತ್ತಿಗೆ ತಪ್ಪು (Disappointed *at*, *in*, *of*, *with*. Agreeably disappointed ಮೂಡಿದ್ದ ಭಯವು ಆಧಾರವಿಲ್ಲದ್ದೆಂದು ತಿಳಿದು ಸಂತೋಷಪಟ್ಟು). ಸುಳ್ಳು ಮಾಡು ; (ಆಶೆ, ಉದ್ದೇಶ, ಮೊ. ನ್ನು) ಕೆಡಿಸು, ಭಂಗಪಡಿಸು, ವಿಫಲಗೊಳಿಸು. **Disappoíntedly** (ಕ್ರಿ. ವಿ.) ; **Disappoínting** (ಗು.) ; **Disappoíntingly** (ಕ್ರಿ. ವಿ.) ; **Disappoíntment** (ನಾ.) ಆಶಾಭಂಗ ; ನಿರೀಕ್ಷಣೆ ಸಫಲವಾಗದೆಹೋಗುವುದು ; ಇದರಿಂದಾದ ವ್ಯಥೆ.

Disapprobátion. **Disapprove** ನೋಡಿ.

Disappróve ಡಿಸ್‌ಅಪ್ರೂವ್ (ಕ್ರಿ.) ಒಪ್ಪಿಗೆ ಕೊಡದಿರು ; ಒಪ್ಪದಿರು ; ಅಸಮ್ಮತಿ ಸೂಚಿಸು ; ಅಸಮಾಧಾನ ತೋರು ; ಪ್ರತಿಕೂಲ ಅಭಿಪ್ರಾಯ ಕೊಡು, ಪಡು. **Disappróval** (ನಾ.) ; **Disappróvingly** (ಕ್ರಿ. ವಿ.) ; **Disapprobátion** — ಅ್ಯಪ್ರೊಬೇಷನ್ (ನಾ.) ಅಸಮ್ಮತಿ ; ಅಸಮಾಧಾನ ; ಅನನುಮೋದನ ; ಒಪ್ಪದಿರುವುದು ; ಮೆಚ್ಚದಿರುವುದು. **Disápprobative** (ಗು.) ; **Disápprobatory** (ಗು.)

Disárm ಡಿಸ್‌ಆರ್ಮ್ (ಕ್ರಿ.) ಆಯುಧವಿಲ್ಲದಂತೆ ಮಾಡು ; ನಿರಾಯುಧನನ್ನಾಗಿ ಮಾಡು. (ಕತ್ತಿವರಿಸ, ಮೊ. ಗಳಲ್ಲಿ, ಕೈಯಿಂದ) ಆಯುಧ ಬೀಳಿಸು. (ನಗರದ, ಹಡಗಿನ) ಕೋಟೆಯನ್ನು, ರಕ್ಷಾವರಣವನ್ನು ನಿರ್ಮೂಲ ಮಾಡು ; ರಕ್ಷಣೆ ಹಾಳುಮಾಡು. (ಸೇನೆ, ನಾವೆ) ಶಾಂತಿ ಕಾಲದ ಮಟ್ಟಕ್ಕೆ ಇಳಿ(ಸು) ; ಸೈನಿಕ ಸಿಬ್ಬಂದಿಯನ್ನು ಕಡಮೆಮಾಡು ಅಥವಾ ತೆಗೆದುಬಿಡು ; ಶಸ್ತ್ರಬಲ ತಗ್ಗಿಸು. ಕೆಡುಕುಮಾಡುವ ಶಕ್ತಿಯನ್ನು ಕಳೆ ; ನಿಷ್ಕಂಟಕ ಮಾಡು ; ನಿರಪಾಯವಾಗಿಸು. (ದ್ವೇಷ, ವಿರೋಧ, ಅಸೂಯೆ, ಸಂದೇಹ, ಮೊ. ನ್ನು) ನಿವಾರಣೆ ಮಾಡು, ಸಮಾಧಾನಕ್ಕೆ ತರು, ಶಾಂತಿಗೊಳಿಸು. **Disármament** (ನಾ.) ಶಸ್ತ್ರಬಲ ಕಡಮೆಮಾಡುವುದು ; ಶಸ್ತ್ರ ತ್ಯಾಗ.

Disarránge ಡಿಸ್‌ಅರೇಂಜ್ (ಕ್ರಿ. ಸಕ.) ಕ್ರಮಗೆಡಿಸು ; ಓರಣಗೆಡಿಸು ; ಅಣಿಗೆಡಿಸು ; ಅಚ್ಚುಕಟ್ಟು ಕೆಡಿಸು ; ಚೆಲ್ಲಾಪಿಲ್ಲಿ ಮಾಡು ; ಅವ್ಯವಸ್ಥೆ ಮಾಡು. **Disarrángement** (ನಾ.)

Disarraý ಡಿಸ್‌ಅರೇ (ನಾ., ಕ್ರಿ. ಸಕ.) ಓರಣವಿಲ್ಲದಿರುವುದು ; ಕ್ರಮಗೆಟ್ಟಿರುವುದು ; ಅಸ್ತವ್ಯಸ್ತತೆ ; ಅವ್ಯವಸ್ಥೆ. ಓರಣಗೆಡಿಸು ; ಅಣಿಗೆಡಿಸು ; ಕ್ರಮಗೆಡಿಸು ; ವ್ಯೂಹಗೆಡಿಸು. (ಕಾವ್ಯ) ಉಡುಪು ಕಳಚು.

Disartículate ಡಿಸ್‌ಆರ್ಟಿಕ್ಯುಲೇಟ್ (ಕ್ರಿ. ಸಕ.) ಸಂಧಿಗೂಡಿದ ಭಾಗಗಳನ್ನು ಪ್ರತ್ಯೇಕಿಸು ; ಕೀಲು ಕಳಚು ; ಪ್ರತ್ಯೇಕ ಭಾಗಗಳನ್ನು ಬಿಡಿಸಿ ತೆಗೆ. **Disarticulátion** (ನಾ.)

Dísassimilátion ಡಿಸ್‌ಅಸಿಮಿಲೇಷನ್ (ನಾ.) (ಶ. ವಿ.) ದೇಹಗತ ಪದಾರ್ಥವನ್ನು ಹೆಚ್ಚು ಸರಳಪದಾರ್ಥಗಳಾಗಿ ಅಥವಾ ಮಲ ಪದಾರ್ಥಗಳಾಗಿ ಮಾರ್ಪಡಿಸುವುದು ; ಪ್ರತಿ ಪರಿಣಾಮ.

Disassóciátion ಡಿಸ್‌ಅಸೋಸಿಯೇಷನ್ (ನಾ.) = Dissociation.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Disáster ಡಿಸ್ಯಾಸ್ಟರ್ (ನಾ.) (ಘಟ್ಟನೆ ಒದಗುವ) ವಿಪತ್ತು, ಆಪತ್ತು; ಗ್ರಹಚಾರ; ಕೇಡು; ಅನರ್ಥ; ದುರದೃಷ್ಟ; ದುರ್ದೈವ (A record of d. ವಿಪತ್ಪರಂಪರೆ). **Disástrous** (ಗು.); **Disástrously** (ಕ್ರಿ. ವಿ.)

Disavów ಡಿಸ್‌ಅವೌ (ಕ್ರಿ. ಸಕ.) ತಿಳಿಯದೆನ್ನು; ಒಪ್ಪದಿರು; ಅಂಗೀಕರಿಸದಿರು; ಸಮ್ಮತಿಸದಿರು; ನಿರಾಕರಿಸು. **Disavowál** (ನಾ.) ನಿರಾಕರಣೆ.

Disbánd ಡಿಸ್‌ಬ್ಯಾಂಡ್ (ಕ್ರಿ.) (ಸೈನ್ಯ, ಮೊ. ನ್ನು) ಒಡೆದುಬಿಡು, ಕಟ್ಟು ಕಳಚು, ಚೆದರಿಸಿಬಿಡು. ಚಾಕರಿಯಿಂದ ತೆಗೆದುಬಿಡು. (ಸೇನೆ) (ಕ್ರಮವೊಡೆದು) ಚೆದರಿಹೋಗು. ಸೈನಿಕೋದ್ಯೋಗವನ್ನು ಬಿಟ್ಟು ಹೋಗು. **Disbándment** (ನಾ.)

Disbár ಡಿಸ್‌ಬಾರ್ (ಕ್ರಿ. ಸಕ.) ವಕೀಲಸಂಸ್ಥೆಯ ಸದಸ್ಯತ್ವ ತಪ್ಪಿಸು; — ದಿಂದ ಬಹಿಷ್ಕರಿಸು; ಬ್ಯಾರಿಸ್ಟರ್ ಪದವಿ ಕಿತ್ತುಹಾಕು. **Disbárment** (ನಾ.)

Disbeliéve ಡಿಸ್‌ಬಿಲೀವ್ (ಕ್ರಿ.) (ವ್ಯಕ್ತಿ, ಹೇಳಿಕೆ, ಮೊ. ನ್ನು) ನಂಬದಿರು; ನಂಬಿಕೆಯಿಡದಿರು; ನಂಬಿಕೆಯಿಲ್ಲದಿರು; ಸಂಶಯಾತ್ಮನಾಗಿರು; ಶ್ರದ್ಧೆಯಿಲ್ಲದವನಾಗಿರು. **Disbeliéf** (ನಾ.) ನಂಬಿಕೆಯಿಲ್ಲದಿರುವುದು; ಅಪನಂಬಿಕೆ; ಅವಿಶ್ವಾಸ; ಅಶ್ರದ್ಧೆ; ನಾಸ್ತಿಕತೆ.

Disbénch ಡಿಸ್‌ಬೆಂಚ್ (ಕ್ರಿ. ಸಕ.) ಲಂಡನ್ನಿನ 'ಇನ್ಸ್ ಆಫ್ ಕೋರ್ಟ್' ಸಂಸ್ಥೆಯಲ್ಲಿ ಒಬ್ಬನಿಗಿರುವ ಹಿರಿಯ ಸದಸ್ಯತನದ ಸ್ಥಾನಮಾನವನ್ನು ತಪ್ಪಿಸು.

Disbránch ಡಿಸ್‌ಬ್ರಾನ್ಸ್, — ಬ್ರಾಂಚ್ (ಕ್ರಿ. ಸಕ.) ಕೊಂಬೆಗಳನ್ನು ಕತ್ತರಿಸಿಹಾಕು; ಶಾಖೆಗಳನ್ನು ತೆಗೆದುಹಾಕು.

Disbúd ಡಿಸ್‌ಬಡ್ (ಕ್ರಿ. ಸಕ.) (ಮು., ಹೆಚ್ಚಾಗಿರುವ) ಮೊಗ್ಗುಗಳನ್ನು ತೆಗೆದುಹಾಕು; ಕುಡಿ ಚಿವುಟಿಹಾಕು.

Disbúrden ಡಿಸ್‌ಬರ್ಡನ್, **-búrthen** — ಬರ್ದನ್ (ಕ್ರಿ. ಸಕ.) ಭಾರ ಕಳೆ; ಹೊರೆಯಿಳಿಸು (ರೂಪ. ಸಹ). (ಯೋಚನೆ, ಮೊ. ನ್ನು) ಕಳೆದುಕೊ; (ಹೇಳಿಕೊಂಡು) ಹೊರೆಯಿಳಿಸಿಕೊ.

Disbúrse ಡಿಸ್‌ಬರ್ಸ್ (ಕ್ರಿ.) ವೆಚ್ಚಮಾಡು; ಹಣ ಪಾವತಿ ಮಾಡು; ಬಟವಾಡೆ ಮಾಡು. **Disbúrsement** (ನಾ.)

Disc ಡಿಸ್ಕ್ (ನಾ.) = Disk.

Discálceate ಡಿಸ್‌ಕ್ಯಾಲ್ಸಿಯೆಟ್ (ಗು., ನಾ.), **Discálceated** — ಯೇಟೆಡ್, **Discálced** — ಕ್ಯಾಲ್ಸ್ಟ್ (ಗು.) ಬರಿಗಾಲಿನಲ್ಲಿರುವ ಅಥವಾ ಮೆಟ್ಟು ಮಾತ್ರ ಹಾಕಿಕೊಂಡಿರುವ [ಕ್ರೈಸ್ತ ಸಂನ್ಯಾಸಿ(ನಿ)]

Discárd ಡಿಸ್‌ಕಾರ್ಡ್ (ಕ್ರಿ., ನಾ.) ಇಸ್ಪೀಟಾಟದಲ್ಲಿ ಎಲೆಯನ್ನು ಕೈಯಿಂದ ಕಿತ್ತುಹಾಕು(ವುದು); ಎಲೆ ಕಳೆ(ಯುವುದು). (ಬಟ್ಟೆಬರೆ, ಅಭ್ಯಾಸ, ನಂಬಿಕೆ, ಮೊ. ನ್ನು) ತ್ಯಜಿಸು, ತಿರಸ್ಕರಿಸು, ನಿರಾಕರಿಸು. ಕೆಲಸದಿಂದ ತೆಗೆದುಹಾಕು; ವಿಸರ್ಜಿಸು. (ನಾ.) ಇಸ್ಪೀಟಾಟದಲ್ಲಿ ಕಳೆದ ಎಲೆ.

Discárnate ಡಿಸ್‌ಕಾರ್ನೆಟ್ (ಗು.) ಮಾಂಸ ತೆಗೆದುಬಿಟ್ಟ; ಮಾಂಸದಿಂದ ಬೇರ್ಪಡಿಸಿದ; ದೇಹ ರಹಿತ; ಅಮೂರ್ತ.

Discérn ಡಿಸ(ಸ್)ರ್‌ನ್ (ಕ್ರಿ.) (ಪ್ರಾಚೀ. ಪ್ರ.) (ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ) ವ್ಯತ್ಯಾಸ ತಿಳಿ, ಭೇದ ಗ್ರಹಿಸು; ವಿವೇಚನೆ ಮಾಡು. (ಕಣ್ಣಿನಿಂದ, ಕಿವಿಯಿಂದ, ಆಲೋಚನೆಯಿಂದ) ಅರಿತುಕೊ, ಕಂಡುಕೊ; ಪರಿಶೀಲಿಸು. **Discérnible** (ಗು.); **Discérnibly** (ಕ್ರಿ. ವಿ.); **Discérning** (ಗು.) ಸೂಕ್ಷ್ಮ ಗ್ರಹಣ ಶಕ್ತಿಯುಳ್ಳ; ವಿವೇಚನಾ ಶಕ್ತಿಯುಳ್ಳ; ಚುರುಕು ಬುದ್ಧಿಯುಳ್ಳ; ಒಳಹೊಕ್ಕು, ಸೂಕ್ಷ್ಮವಾಗಿ, ಪರೀಕ್ಷಿಸುವ; ಸೂಕ್ಷ್ಮದರ್ಶಿಯಾದ. **Discérnment** (ನಾ.) ಸೂಕ್ಷ್ಮ ಗ್ರಹಣ (ಮಾಡುವುದು); ಸೂಕ್ಷ್ಮ ಗ್ರಾಹಕ ಶಕ್ತಿ; ವಿವೇಚನೆ (ಮಾಡುವುದು)

Discérptible ಡಿಸರ್ಪ್ಟಿಬ್‌ಲ್ (ಗು.) ಬೇರೆ ಬೇರೆಯಾಗಿ ಕೀಳಲಾಗುವ, ಬಿಡಿಸಲಾಗುವ, ಭಾಗಮಾಡಲಾಗುವ; ಅಖಂಡವಲ್ಲದ; ವಿಭಜನ ಸಾಧ್ಯ. **Discerptibílity** (ನಾ.); **Discérption** (ನಾ.) ಕಳಚಿ ಬೇರೆ ಬೇರೆ ಮಾಡುವುದು; ಬೇರ್ಪಡಿಸುವುದು; ವಿದಳನ; ಬೇರ್ಪಡಿಸಿದ ಭಾಗ.

Dischárge ಡಿಸ್‌ಚಾರ್ಜ್ (ಕ್ರಿ.) (ಹಡಗು, ಮೊ. ಗಳ) ಭಾರ, ಹೊರೆ, ಸರಕು, ಇಳಿಸು. (D. bankrupt ದಿವಾಳಿಯನ್ನು ಸಾಲದಿಂದ ಬಿಡುಗಡೆ ಮಾಡು). ವಿದ್ಯುತ್ತನ್ನು ಸೆಳೆದುಹಾಕು, ವಿಸರ್ಜಿಸು. ಕೆಲಸದಿಂದ ತೆಗೆದುಹಾಕು; ಅಧಿಕಾರದಿಂದ ನಿವೃತ್ತಿಮಾಡು, ವಜಾಮಾಡು. (ಸೆರೆಯಾಳುಗಳನ್ನು) ಬಿಡುಗಡೆ ಮಾಡು. (ರೋಗಿಯನ್ನು ಆಸ್ಪತ್ರೆಯಿಂದ, ನ್ಯಾಯದರ್ಶಿಗಳನ್ನು ನ್ಯಾಯಸ್ಥಾನದಿಂದ) ಬಿಡುಗಡೆ ಮಾಡು. (ಸಾಮಾನು, ದ್ರವ, ಕೀವು, ಬೈಗುಳು, ಮೊ. ನ್ನು) ಇಳಿಸು, ಹೊರಗೆಡಹು, ಕಳೆ, ಹೊರಡಿಸು, ಹೊರ ಬಿಡು (Ship is discharging ಹಡಗಿನಿಂದ ಸಾಮಾನು ಇಳಿಯುತ್ತಿದೆ. Abscess is discharging ಒಳಕುರುವಿನಿಂದ ಕೀವು ಸುರಿಯುತ್ತಿದೆ). ಕ್ಷಿಪಣಿಯನ್ನು ಎಸೆ, ಹಾರಿಸು (D. gun ಬಂದೂಕು ಹಾರಿಸು). (ನದಿಯ ವಿಷಯದಲ್ಲಿ, ಸಮುದ್ರಕ್ಕೆ, ಸರೋವರಕ್ಕೆ) ಪ್ರವಾಹ ಹರಿಸು, ಸುರಿ, ಬೀಳು, ಬಸಿ. (ನ್ಯಾ. ಶಾ.) ರದ್ದುಮಾಡು. ಬಿಡುಗಡೆಹೊಂದು. (ಕರ್ತವ್ಯ, ಸಾಲ, ಹರಕೆ, ಪ್ರತಿಜ್ಞೆ — ಇವನ್ನು) ಸಲ್ಲಿಸು, ನೆರವೇರಿಸು, ತೀರಿಸು, ನಿರ್ವಹಿಸು, ನಡಸು. (ಬಣ್ಣ) ಕಳೆ; (ಬಟ್ಟೆಯ ಬಣ್ಣ) ತೆಗೆ. **Dischárger** (ನಾ.) (ಕ್ರಿಯಾರ್ಥಗಳಲ್ಲಿ); ವಿದ್ಯುತ್‌ವಿಸರ್ಜಕ.

Dischárge (ನಾ.) (ಹಡಗಿನಿಂದ) ಸಾಮಾನು ಇಳಿಸುವುದು, ಇಳಿಕೆ. ಬಂದೂಕು, ಮೊ. ನ್ನು ಹಾರಿಸುವುದು, ಹಾರಿಕೆ (A d. of arrows ಅಂಬುಗಳ ಎಸೆತ, ಎಸುಗೆ). (ದ್ರವ, ವಿದ್ಯುತ್ತು, ಕೀವು, ಮೊ. ಗಳ) ಸುರಿತ, ಹರಿತ, ಸ್ರಾವ. ಬಿಡುಗಡೆ; (ದೋಷ) ವಿಮೋಚನೆ; 'ಖುಲಾಸೆ'. ಬಿಡುಗಡೆ ಚೀಟಿ; ವಿಮೋಚನ ಪತ್ರ; ಅಧಿಕಾರ ನಿವೃತ್ತಿ; ಕೆಲಸದಿಂದ ತೆಗೆದುಹಾಕುವುದು; (ಸಾಲದ) ಪಾವತಿ; (ಕಡದ) ತೀರಿಕೆ; (ಕರ್ತವ್ಯದ) ನೆರವೇರಿಕೆ, ನಿರ್ವಾಹ. (ಬಣ್ಣಗೆಲಸ) ಬಣ್ಣಕಳೆಯುವ ವಿಧಾನ; ಇದಕ್ಕಾಗಿ ಉಪಯೋಗಿಸುವ ಮಿಶ್ರಣ.

Discíple ಡಿಸೈಪ್‌ಲ್ (ನಾ.) (ಕಲೆ, ಮತ, ಮೊ. ಗಳಲ್ಲಿ) ಒಬ್ಬ ನಾಯಕನ, ಗುರುವಿನ, ಅನುಯಾಯಿ; ಶಿಷ್ಯ; ಮತಸ್ಥ. ಕ್ರಿಸ್ತನ ಸಾಕ್ಷಾತ್ ಶಿಷ್ಯರಲ್ಲೊಬ್ಬನು (ಮು., ಹನ್ನೆರಡು ಮಂದಿಯಲ್ಲೊಬ್ಬನು). ಆದಿಕಾಲದ ಕ್ರೈಸ್ತ. **Discípleship** (ನಾ.); **Discípular** ಡಿಸಿಪ್ಯುಲರ್ (ಗು.) ಶಿಷ್ಯನ; ಅನುಯಾಯಿಯ; — ಗೆ ತಕ್ಕ, ಯೋಗ್ಯವಾದ.

Díscipline ಡಿಸಿಪ್ಲಿನ್ (ನಾ.) (ಪ್ರಾಚೀ. ಪ್ರ.) ಶಿಕ್ಷಣದ ಒಂದು ವಿಭಾಗ; ವಿದ್ಯೆ. ಮಾನಸಿಕ ಶಿಕ್ಷಣ; ನೀತಿ ಶಿಕ್ಷಣ. ಇಂತಹ ಶಿಕ್ಷಣವನ್ನುಂಟು ಮಾಡುವ ಕಷ್ಟದೆಸೆ. (ಪ್ರಾಚೀ. ಪ್ರ.) ಸೈನಿಕ ಶಿಕ್ಷಣ; ಯುದ್ಧಾಭ್ಯಾಸ; ಕವಾಯತು. (ಶಾಲಾ ವಿದ್ಯಾರ್ಥಿಗಳು, ಸಿಪಾಯಿಗಳು, ಸೆರೆಯಾಳುಗಳು, ಮೊ. ರಲ್ಲಿ) ಶಿಷ್ಟಿ (ಪಾಲನೆ); ನೀತ್ಯನುಪಾಲನೆ; ವಿನಯ; ಶಿಸ್ತು; ಅಂಕೆ. ನಡವಳಿಕೆಯ ನಿಯಮಗಳು. (ಕ್ರೈಸ್ತಮತಕ್ಕೆ ಶಿಷ್ಯರಮೇಲಿರುವ) ಶಾಸನಾಧಿಕಾರ. ತಪಸ್ಸಿನಿಂದ ದೇಹ ದಂಡನೆ. ದಂಡನೆ; ಶಾಸ್ತಿ; ಶಿಕ್ಷೆ. **Dísciplinal** — ಪ್ಲಿನಲ್, **Disciplínal** — ಪ್ಲೈನಲ್ (ಗು.); **Disciplinárian** — ಪ್ಲಿನೇ— (ನಾ.) ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವವನು: ಶಿಷ್ಟಿ ಪಾಲಕ. **Dísciplinary** ಡಿಸಿಪ್ಲಿನರಿ, **Disciplínary** — ಪ್ಲೈ — (ಗು.) ಶಿಷ್ಟಿಪಾಲನೆಯ; ಶಿಷ್ಟಿಯ; ಶಿಸ್ತಿನ. (ಮಾನಸಿಕ) ಶಿಕ್ಷಣಾತ್ಮಕ.

Díscipline (ಕ್ರಿ. ಸಕ.) ಹತೋಟಿಗೆ, ಅಂಕೆಗೆ, ತರು; ಅಂಕೆಯಲ್ಲಿಡು; ಶಿಸ್ತಿನಲ್ಲಿಡು. (ವಿಧೇಯತೆಗೂ ನಿಯಮಾನುಸರಣೆಗೂ) ಶಿಕ್ಷಣ ಕೊಡು; ತಯಾರುಮಾಡು; ಅಭ್ಯಾಸಮಾಡಿಸು. ಕವಾಯತು ಮಾಡಿಸು. ದಂಡಿಸು; ಶಿಕ್ಷಿಸು. **Dísciplinable** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Disclaím ಡಿಸ್‌ಕ್ಲೆಯ್ಮ್ (ಕ್ರಿ.) (ನ್ಯಾ. ಶಾ.) ಹಕ್ಕನ್ನು ಬಿಟ್ಟುಬಿಡು; (ತನಗೆ) ಬಾಧ್ಯತೆಯಿಲ್ಲವೆನ್ನು; (ಗ್ರಂಥಕರ್ತೃತ್ವ, ಮೊ. ನ್ನು) ತನ್ನದಲ್ಲವೆನ್ನು, ಅಂಗೀಕರಿಸದಿರು. **Disclaímer** (ನಾ.) ಹಕ್ಕು ಬಾಧ್ಯತೆಯಿಲ್ಲವೆನ್ನುವುದು; ಅನಂಗೀಕಾರ; ನಿರಾಕರಣೆ.

Disclóse ಡಿಸ್‌ಕ್ಲೋಸ್ (ಕ್ರಿ. ಸಕ.) ತೆರೆ; ಮರೆದೆಗೆ; ಮುಸುಕು ತೆಗೆ; ಬಯಲು ಮಾಡು; ಕಾಣುವಂತೆ ಇಡು; ತಿಳಿಯಪಡಿಸು; ಪ್ರಕಟಿಸು; ಪ್ರಕಾಶಗೊಳಿಸು; ಬಹಿರಂಗ ಮಾಡು; ಹೊರಗೆಡಹು; ಹೊರಗೆ ಬಿಡು; ರಟ್ಟು ಮಾಡು. **Disclósure** — ಝರ್ (ನಾ.) ಮರೆದೆಗೆಯುವುದು; ಪ್ರಕಟಗೊಳಿಸುವುದು; ಪ್ರಕಟಗೊಳಿಸಿದುದು; ಪ್ರಕಟನೆ; ಬಹಿರಂಗ ಪಡಿಸಿದ್ದು.

Díscoid. **Disk** ನೋಡಿ.

Discólour ಡಿಸ್‌ಕಲರ್ (ಕ್ರಿ.) ಬಣ್ಣ ಬದಲಾಯಿಸು; ಬಣ್ಣಗೆಡು; ಬಣ್ಣಗೆಡಿಸು; ಕರೆ ಮಾಡು; ಕರೆಯಾಗು; ಕೊಳೆ ಮಾಡು; ಕೊಳೆಯಾಗು; ಬಣ್ಣ ಹೋಗು; ವಿವರ್ಣವಾಗು; ಮಾಸು; ಕಳೆಗುಂದು. **Dis-colo(u)rátion** (ನಾ.); **Discólourment** (ನಾ.)

Discómfit ಡಿಸ್‌ಕಂಫಿಟ್ (ಕ್ರಿ. ಸಕ.) (ಯುದ್ಧದಲ್ಲಿ) ಓಡಿಸಿಬಿಡು, ಸೋಲಿಸು. ಉದ್ದೇಶ ನಡೆಯದಂತೆ ಮಾಡು; ಉತ್ಸಾಹ ಮುರಿ; ಆಶಾಭಂಗ ಮಾಡು; ಕಂಗೆಡಿಸು; ಮುಖಗೆಡಿಸು. **Discómfiture** — ಟ್ಯುರ್, — ಚರ್ (ನಾ.) ಮುರಿತ; ಚೆದರಿಕೆ; ಸೋಲು; ಪರಾಜಯ; ಪರಾಭವ.

Discómfort ಡಿಸ್‌ಕಂಫರ್ಟ್ (ನಾ., ಕ್ರಿ. ಸಕ.) (ದೇಹದ, ಮನಸ್ಸಿನ) ಅಹಿತ, ಅಸ್ವಾಸ್ಥ್ಯ, ಕ್ಲೇಶ, ತೊಂದರೆ; ಇರುಸು ಮುರುಸು; ನೆಮ್ಮದಿಯಿಲ್ಲದಿರುವುದು; ಸುಖಾಭಾವ. (ಕ್ರಿ.) ಅಸೌಖ್ಯ ಮಾಡು; ಅಸ್ವಸ್ಥ ಮಾಡು; ಕಿರಿಕಿರಿಗೊಳಿಸು; ತೊಂದರೆಪಡಿಸು.

Discommóde ಡಿಸ್‌ಕಮೋಡ್ (ಕ್ರಿ. ಸಕ.) ಅನನುಕೂಲ ಮಾಡು; ತೊಂದರೆಗೀಡುಮಾಡು; ಕಿರುಕುಳ ಕೊಡು; ಕ್ಲೇಶಗೊಳಿಸು.

Discómmon ಡಿಸ್‌ಕಾಮನ್ (ಕ್ರಿ. ಸಕ.) (ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್‌ನಲ್ಲಿ, ವ್ಯಾಪಾರಿಯನ್ನು) ಪ್ರೌಢ ವಿದ್ಯಾರ್ಥಿಗಳೊಡನೆ ವ್ಯಾಪಾರ ಮಾಡದಂತೆ ಪ್ರತಿಬಂಧಿಸು. (ಸಾರ್ವಜನಿಕ ಜಮೀನನ್ನು) ಮದ್ದಕ ತಪ್ಪಿಸು, ಆವರಣದಲ್ಲಿ ಸೇರಿಸಿಕೊ. **Discómmons** — ನ್ಸ್ (ಕ್ರಿ. ಸಕ.) (ಪ್ರೌಢ ವಿದ್ಯಾಶಾಲೆಯ ಸದಸ್ಯನಿಗೆ) ನಿತ್ಯದ ಊಟ ತಪ್ಪಿಸು. (ವ್ಯಾಪಾರಿಗೆ) ಪ್ರೌಢ ವಿದ್ಯಾರ್ಥಿಗಳೊಡನೆ ವ್ಯಾಪಾರ ತಪ್ಪಿಸು.

Discompóse ಡಿಸ್‌ಕಂಪೋಸ್ (ಕ್ರಿ. ಸಕ.) ಮನಶ್ಶಾಂತಿಗೆ ಕುಂದಕ ತರು; ಚಿತ್ತಸ್ಥೈರ್ಯ ಕೆಡಿಸು; ಅಪ್ರಸನ್ನ ಮಾಡು; ಮನ ಕಲಕು; ಕ್ಷೋಭೆಗೊಳಿಸು. **Discompósedly** —ಸ್ಡ್ಲಿ (ಕ್ರಿ. ವಿ.); **Discompósingly** (ಕ್ರಿ. ವಿ.); **Discompósure** — ಝ್ಯುರ್, — ಝರ್ (ನಾ.)

Disconcért ಡಿಸ್‌ಕನ್ಸರ್ಟ್ (ಕ್ರಿ. ಸಕ.) ಹೊಂದಿಕೆ ತಪ್ಪಿಸು; ಕ್ರಮಭಂಗ ಮಾಡು; (ಸಂಕಲ್ಪವನ್ನೊ, ಏರ್ಪಡಿಸಿದ ಕಾರ್ಯಗಳನ್ನೊ) ಸಾಗದಂತೆ ಮಾಡು, ಭಂಗ ಮಾಡು; ಚಿತ್ತಸ್ಥೈರ್ಯಗೆಡಿಸು; ಕ್ಷೋಭೆಗೊಳಿಸು; ಗಾಬರಿ, ತಬ್ಬಿಬ್ಬು, ಹಿಡಿಸು. **Disconcértment** (ನಾ.)

Disconnéct ಡಿಸ್‌ಕನೆಕ್ಟ್ (ಕ್ರಿ. ಸಕ.) ಸಂಬಂಧ ಹರಿ, ತಪ್ಪಿಸು, ಕಳಚು (*From*, *with* ಉಪ. ದೊಡನೆ). **Disconnécted** (ಗು.) (ಕ್ರಿಯಾರ್ಥಗಳಲ್ಲಿ); (ಭಾಷಣದ ಅಥವಾ ಲೇಖನದ ವಿಷಯದಲ್ಲಿ) ಹೊಂದಿಕೆಯಿಲ್ಲದ, ಅಸಂಬದ್ಧ, ಅಸಂಗತ. **Disconnéctedly** (ಕ್ರಿ. ವಿ.); **Disconnéctedness** (ನಾ.); **Disconnéxion, -éction** (ನಾ.) ಸಂಬಂಧ ತಪ್ಪಿಸುವುದು; ಕಳಚಿಹಾಕುವುದು; ಸಂಬಂಧವಿಲ್ಲದಿರುವುದು; ವಿಸಂಗತಿ; ವಿಸಂಯೋಗ; ಅಸಂಬದ್ಧತೆ.

Discónsolate ಡಿಸ್‌ಕಾನ್ಸೊಲೆಟ್ (ಗು.) ಸ್ತಿಮಿತಗೆಟ್ಟ; ಮನಶ್ಶಾಂತಿಯಿಲ್ಲದ; ಮನಸ್ಸಮಾಧಾನವಿಲ್ಲದ; ನೆಮ್ಮದಿಯಿಲ್ಲದ; ಸಂತೋಷವಿಲ್ಲದ; ಖಿನ್ನ; ವಿಷಣ್ಣ; ಸಮದಾಯಿಸಲಾಗದ. **Discónsolately** (ಕ್ರಿ. ವಿ.)

Discontént ಡಿಸ್‌ಕಂಟೆಂಟ್ (ನಾ., ಗು., ಕ್ರಿ. ಸಕ.) ಅತೃಪ್ತಿ; ಅಸಮಾಧಾನ; ಕೊರತೆ. (ಗು.) ಅಸಮಾಧಾನವುಳ್ಳ; ಅತೃಪ್ತ. (ಕ್ರಿ.; ಸಾ., ಭೂ. ಕೃ. ನಲ್ಲಿ) ಅತೃಪ್ತಿಗೊಳಿಸು; ಅಸಮಾಧಾನ ಪಡಿಸು; ಅಸಂತುಷ್ಟ ಮಾಡು. **Disconténtedly** (ಕ್ರಿ. ವಿ.); **Disconténtedness** (ನಾ.); **Disconténtment** (ನಾ.)

Discontíguous ಡಿಸ್‌ಕಂಟಿಗ್ಯೂಅಸ್ (ಗು.) (ಭಾಗಗಳು) ಕೂಡಿಕೊಂಡಿಲ್ಲದ, ಹತ್ತಿಕೊಂಡಿಲ್ಲದ; ಸೇರಿರದ; ಬೇರೆ ಬೇರೆಯಾಗಿರುವ.

Discontínue ಡಿಸ್‌ಕಂಟಿನ್ಯೂ (ಕ್ರಿ. ಸಕ.) ನಿಲ್ಲುವಂತೆ ಮಾಡು; ಬಿಟ್ಟುಬಿಡು; ತ್ಯಜಿಸು; ನಿಲ್ಲಿಸಿಬಿಡು. **Discontínuance** (ನಾ.); **Discóntinuíty** —ಕಾಂ— (ನಾ.) ಬಿಡುವು; ಅಂತರ; ಅವಕಾಶ. **Discontínuous** —ಕಂ— (ಗು.) (ದೇಶದಲ್ಲಾಗಲಿ ಕಾಲದಲ್ಲಾಗಲಿ) ಅವಿಚ್ಛಿನ್ನತೆಯಿಲ್ಲದಿರುವ; ಮಧ್ಯೇ ಮಧ್ಯೇ ಎಡೆಯಿರುವ, ಬಿಡುವುಳ್ಳ, ಅವಕಾಶವಿರುವ. ಬಿಟ್ಟುಬಿಟ್ಟು ಬರುವ; ಅಸಂತತ; ವಿಚ್ಛಿನ್ನ. **Discontínuously** (ಕ್ರಿ. ವಿ.)

Díscord ಡಿಸ್‌ಕಾರ್ಡ್ (ನಾ.), **Discórd** (ಕ್ರಿ. ಅಕ.) ಹೊಂದಿಕೆಯಿಲ್ಲದಿರುವುದು; ಅಸಾಂಗತ್ಯ; ಅಸಮ್ಮತಿ; ವಿರೋಧ; ವೈಮನಸ್ಯ; ವೈಷಮ್ಯ (Apple of d. *Apple* ನೋಡಿ). ಕರ್ಕಶ ಧ್ವನಿ; ತುಮುಲ ಧ್ವನಿ; ಗೊಂದಲ. (ಸಂ.) ಒಟ್ಟಿಗೆ ನುಡಿಸಿದ ಎರಡು ಸ್ವರಗಳಿಗೆ ಹೊಂದಿಕೆಯಿಲ್ಲದಿರುವುದು; ಮತ್ತೊಂದು ಸ್ವರದೊಡನೆ ಹೊಂದಿಕೆಯಾಗದ ಸ್ವರ; ಅಪಸ್ವರ; ವಿಸಂಗತ ಸ್ವರ. (ಕ್ರಿ.) ಹೊಂದದಿರು; ಒಪ್ಪದಿರು; ಮೇಳವಿಲ್ಲದಿರು; ಬೇರೆಯಾಗಿರು; ಅಸಂಗತವಾಗು (*With*, *from* ಉಪ. ದೊಡನೆ). (ಸ್ವರ) ವಿಸಂಗತವಾಗು; ಕರ್ಕಶವಾಗು; ಕಿರುಗುಟ್ಟು; ಹೊಂದಿಕೆಯಿಲ್ಲದಿರು. **Discórdance** — ಡನ್ಸ್ (ನಾ.); **Discórdant** — ಡಂಟ್ (ಗು.); **Discórdantly** (ಕ್ರಿ. ವಿ.)

Díscount ಡಿಸ್‌ಕೌಂಟ್ (ನಾ.), **Discoúnt** (ಕ್ರಿ. ಸಕ.) ಕೂಡಲೆ ಅಥವಾ ಮುಂಗಡವಾಗಿ ಮೊಬಲಗು ಕೊಟ್ಟದ್ದಕ್ಕಾಗಿ ನಿಯತವಾದ (ಬೆಲೆಯ) ಮೊತ್ತದಿಂದ ಕಡಮೆಮಾಡಿದ ಮೊಬಲಗು: ವಟ್ಟ; ತಳ್ಳುಪಡಿ; ಸೋಡಿ. ಹುಂಡಿಯ ಮೊಬಲಗನ್ನು ಮುಂಗಡವಾಗಿ ಕೊಡುವಾಗ ಕಟಾಯಿಸಿಕೊಳ್ಳುವ ವಟ್ಟ. ಹುಂಡಿಯನ್ನು ಮುಂಗಡವಾಗಿ ಮುರಿಸುವುದು. (At a d. ನಮೂದುಬೆಲೆಗಿಂತ ಕಡಮೆಯಾಗಿ; ಬೆಲೆ ಬಿದ್ದುಹೋಗಿ; ಗಿರಾಕಿಯಿಲ್ಲದೆ. ಗೌರವ, ಪುರಸ್ಕಾರ, ಇಲ್ಲದೆ). ಒಂದು ಹೇಳಿಕೆಯಲ್ಲಿ ಅತ್ಯುಕ್ತಿಗಾಗಿ ಬಿಡಬೇಕಾದ ಭಾಗ; ಬಿಡಿಕೆ; ಕಳೆತ; ತ್ಯಾಜ್ಯಾಂಶ. (ಕ್ರಿ.) (ಇನ್ನೂ ಗಡು ತುಂಬದ) ಹುಂಡಿಗೆ ಸದ್ಯದ ಬೆಲೆ ಕೊಡು, ಪಡೆ; ಹುಂಡಿ ವಟಾಯಿಸು. ಲೆಕ್ಕದಿಂದ ಬಿಟ್ಟುಬಿಡು; ಗಣನೆಗೆ ತೆಗೆದುಕೊಳ್ಳದೆ ಬಿಡು; ಕಡೆಗಣಿಸು; ಕಡಮೆ ಮಾಡು; ನ್ಯೂನ ಮಾಡು; (ಮುಂದೆ ಬರಬಹುದಾದ ಲಾಭವನ್ನು) ಸದ್ಯದ ಕಡಮೆಯ ಫಲಕ್ಕಾಗಿ ಬಿಟ್ಟುಕೊಡು. ಅತ್ಯುಕ್ತಿಗಾಗಿ ತಳ್ಳುಪಡಿ ಮಾಡು. (ವರ್ತಮಾನ, ಮೊ. ಗಳನ್ನು) ಮೊದಲೇ ತಿಳಿಸಿ (ಅದರ) ಸಾರ್ಥಕ್ಯವನ್ನು ಕುಂದಿಸು, ಮೊದಲೇ ಊಹಿಸಿ ಸ್ವಾರಸ್ಯ ಕಡಮೆಮಾಡು. **Discoúntable** (ಗು.)

Discoúntenance ಡಿಸ್‌ಕೌಂಟಿನನ್ಸ್ (ಕ್ರಿ. ಸಕ.) ಅನುಮೋದನೆ ಕೊಡದಿರು; ಒಪ್ಪದಿರು; ಅಸಮ್ಮತಿ ತೋರು; ಉಪೇಕ್ಷೆ ಮಾಡು; ಮುಖಮುರಿ; ಮುಖಭಂಗ ಮಾಡು; ಪ್ರೋತ್ಸಾಹಿಸದಿರು; ಉತ್ಸಾಹಭಂಗ ಮಾಡು.

Discoúrage ಡಿಸ್‌ಕರೆ(ರಿ)ಜ್ (ಕ್ರಿ. ಸಕ.) ಧೈರ್ಯಗೆಡಿಸು; ಅಧೈರ್ಯಪಡಿಸು; ಎದೆಗುಂದಿಸು; ಉತ್ಸಾಹ ಕುಗ್ಗಿಸು; ಪ್ರೋತ್ಸಾಹಿಸದಿರು; ಸಮ್ಮತಿಸದಿರು; ಅನುಮೋದಿಸದಿರು; ಮಾಡದಂತೆ ತಡೆ. **Discoúragement** (ನಾ.); **Discoúragingly** (ಕ್ರಿ. ವಿ.)

Díscourse ಡಿಸ್‌ಕೋರ್ಸ್ (ನಾ.), **Discoúrse** (ಕ್ರಿ.) (ಪ್ರಾಚೀ. ಪ್ರ.) ಮಾತು; ಸಂಭಾಷಣೆ; ಸಂವಾದ; ಭಾಷಣ; ಪ್ರಬಂಧ; ಪ್ರವಚನ; (ಧರ್ಮ) ಪ್ರಸಂಗ; ವ್ಯಾಖ್ಯಾನ; ಉಪದೇಶ. (ಕ್ರಿ.) ಮಾತನಾಡು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಧಾಷಿಸು ; ಸಂವಾದ ಮಾಡು ; ಉಪನ್ಯಾಸ ಕೊಡು. (ಒಂದು ವಿಷಯವನ್ನು ಕುರಿತು ಭಾಷಣದಿಂದಾಗಲಿ ಬರವಣಿಗೆಯಿಂದಾಗಲಿ) ಪ್ರಸಂಗ ಮಾಡು, ವ್ಯಾಖ್ಯಾನ ಮಾಡು (*Of, upon* ಉಪ. ದೊಡನೆ). ರಾಗ ಹಾಡು, ಹೇಳು.

Discoúrteous ಡಿಸ್‌ಕೋ(ಕ)ರ್ಟ್ಯಸ್ (ಗು.) ಮರ್ಯಾದೆ ತೋರದ; —ತಿಳಿಯದ ; ವಿನಯವಿಲ್ಲದ;—ತೋರದ ; ದಾಕ್ಷಿಣ್ಯವಿಲ್ಲದ ; ಅಸಭ್ಯ. **Discoúrtesy** — ಟೆಸಿ (ನಾ.) ಅವಿನಯ ; ಅಸಭ್ಯತೆ ; ಅವ ಮರ್ಯಾದೆ ; ನಿರ್ದಾಕ್ಷಿಣ್ಯ. **Discoúrteously** (ಕ್ರಿ. ವಿ.)

Discóver ಡಿಸ್‌ಕವರ್ (ಕ್ರಿ. ಸಕ.) ಮರೆ, ಮುಸುಕು, ತೆಗೆ ; ತೆರೆ ; ಹೊರಗೆಡಹು ; ಬಹಿರಂಗಪಡಿಸು ; ಬಯಲು ಮಾಡು ; ಬಿಚ್ಚಿಡು ; ದೃಷ್ಟಿಗೆ ತರು ; ಬೆಳಕಿಗೆ ತರು ; ಗೋಚರಪಡಿಸು ; ತೋರಿಸು ; ತಿಳಿಯಪಡಿಸು ; ಪ್ರಕಟಿಸು ; ಪ್ರದರ್ಶನ ಮಾಡು. ಗುಟ್ಟನ್ನು ಹೊರಗೆಡಹು. [(ಚದುರಂಗ) D. check ಕಾಯನ್ನು ಅಥವಾ ಪ್ಯಾದೆಯನ್ನು ತೆಗೆದು (ದೊರೆಗೆ) ಶಹಾ ಕೊಡು]. (ವಿಷಯ ಮೊ. ನ್ನು, ತಿಳಿಯದಿದ್ದ ದೇಶವನ್ನು) ಕಂಡುಹಿಡಿ. ಥಟ್ಟನೆ ಸ್ಫೂರ್ತಿಗೆ ತಂದುಕೊ ; ಕಂಡುಕೊ ; ತಿಳಿ. **Discóverable** (ಗು.) ; **Discóverer** (ನಾ.) ; **Discóvery** (ನಾ.) ಗುಟ್ಟು ಹೇಳಿಬಿಡುವುದು; ಹೊರಗೆಡಹುವುದು. (ನ್ಯಾ. ಶಾ.) ಒಂದು ವ್ಯವಹಾರದಲ್ಲಿ ಒಬ್ಬ ಕಕ್ಷಿ ತನಗೆ ಆಧಾರವಾಗಿರುವ ವಿಷಯಗಳನ್ನಾಗಲಿ ಕಾಗದಪತ್ರಗಳನ್ನಾಗಲಿ ನಿರ್ಬಂಧದಿಂದ ಹೊರಗೆಡಹುವುದು : ಆಧಾರ ಪ್ರಕಟನೆ. (ಕಾವ್ಯದಲ್ಲಿ ಅಥವಾ ನಾಟಕದಲ್ಲಿ) ವಸ್ತು ನಿರೂಪಣ, ಪ್ರಕಾಶನ. ಅನಾವರಣ ; ಕಂಡುಹಿಡಿಯುವುದು ; ತಿಳಿಯಪಡಿಸುವುದು ; ಪ್ರಕಟ ಮಾಡುವುದು. ಕಂಡುಹಿಡಿದ ವಸ್ತು, ವಿಷಯ.

Discóvert ಡಿಸ್‌ಕವರ್ಟ್ (ಗು.) (ನ್ಯಾ. ಶಾ.) (ಹೆಂಗಸಿನ ವಿಷಯದಲ್ಲಿ) ಮದುವೆಯಾಗಿರದ ಅಥವಾ ವಿಧವೆಯಾದ ; ಪತಿ ರಹಿತೆಯಾದ ; ಪತಿ ರಕ್ಷಣೆಯಿಲ್ಲದ.

Discrédit ಡಿಸ್‌ಕ್ರೆಡಿಟ್ (ನಾ., ಕ್ರಿ. ಸಕ.) ಮಾನ ನಷ್ಟ ; ಅಪಮಾನ ; ಗೌರವ ಹಾನಿ ; ಅಪಖ್ಯಾತಿ ; ಅಪ ಯಶಸ್ಸು ; ಕೆಟ್ಟ ಹೆಸರು ; ಕಳಂಕ ; ನಿಂದೆ ; ದೂರು ; ಪಳಿ (ಗ್ರಾಂ.) ; ಅಪಯಶಸ್ಸುಂಟುಮಾಡುವುದು ; ಅಪಕೀರ್ತಿ ತರುವುದು. ಸಂಶಯ; ಅಪನಂಬಿಕೆ; ಅವಿಶ್ವಾಸ (It throws d. upon ಅದು ಸಂಶಯ ಹುಟ್ಟಿಸುವುದು). ವ್ಯಾಪಾರದಲ್ಲಿ ನಂಬಿಕೆ ಕಳೆದುಕೊಳ್ಳುವುದು ; ವಿಶ್ವಾಸ ಹಾನಿ. (ಕ್ರಿ.) ನಂಬದಿರು ; ನಂಬದೆಹೋಗು. ಅಪನಂಬಿಕೆ, ಅವಿಶ್ವಾಸ, ಹುಟ್ಟಿಸು ; ನಂಬಿಕೆ ಗೆಡಿಸು ; ಅಪಖ್ಯಾತಿ ತರು ; ಅಪಮಾನ ಮಾಡು ; ಹೆಸರುಗೆಡಿಸು. **Discréditable** (ಗು.) ನಂಬಿಕೆಗೆ ಅರ್ಹವಲ್ಲದ ; ಅಪಖ್ಯಾತಿ ತರುವ ; ಹೆಸರು ಕೆಡಿಸುವ ; ಅಪಮಾನಕರವಾದ ; ನಾಚಿಕೆಗೀಡಾದ. **Discréditably** (ಕ್ರಿ. ವಿ.)

Discreét ಡಿಸ್‌ಕ್ರೀಟ್ (ಗು.) ಯುಕ್ತಾಯುಕ್ತ ಪರಿಜ್ಞಾನವುಳ್ಳ ; ವಿವೇಚನೆಯುಳ್ಳ ; ವಿವೇಕವುಳ್ಳ; ಮುಂದಾಲೋಚನೆಯುಳ್ಳ ; ಜಾಗರೂಕತೆಯುಳ್ಳ; ಎಚ್ಚರಿಕೆಯುಳ್ಳ. ಅನವಶ್ಯವಾಗಿ, ಅಸಮಯದಲ್ಲಿ, ಮಾತನಾಡದ. **Discreétly** (ಕ್ರಿ. ವಿ.) ; **Discrétion** — ಕ್ರೆಷನ್ (ನಾ.) (ಸಂಪೂರ್ಣವಾಗಿ ಅಥವಾ ಕೆಲವು ನಿಬಂಧನೆಗಳಿಗೊಳಪಟ್ಟು) ತನ್ನ ಮನವೊಪ್ಪುವಂತೆ ತೀರ್ಮಾನಿಸುವ ಸ್ವಾತಂತ್ರ್ಯ ; ಸ್ವಂತ ವಿವೇಚನೆ (It is within one's d. ಅದು ಸ್ವಂತ ವಿವೇಚನೆಯಿಂದ ನಡೆಯತಕ್ಕದ್ದು. At the d. of ಇಷ್ಟಾನುಸಾರವಾಗಿ. At d. ಮನಸ್ಸಿಗೆ ಒಪ್ಪಿದಂತೆ. Surrender at d. ಯಾವ ಷರತ್ತೂ ಹಾಕದೆ ಪೂರ್ತಿ ಅಧೀನನಾಗು, ಒಪ್ಪಿಸಿಬಿಡು). ವಿವೇಕ ; (ಯುಕ್ತಾಯುಕ್ತ) ವಿವೇಚನೆ ; ವಿಚಕ್ಷಣೆ. Years, age, of d. ತನ್ನ ವಿಚಾರಗಳನ್ನು ತಾನೇ ನಡಸಿಕೊಳ್ಳಲು ಅರ್ಹತೆಯುಳ್ಳ ವಯಸ್ಸು ; ವ್ಯವಹಾರ ದಶೆ ; ಪ್ರಾಪ್ತ ವಯಸ್ಸು ; ವಿವೇಚನೆಯ ವಯಸ್ಸು. D. is the better part of valour ಶೌರ್ಯಕ್ಕಿಂತ ವಿವೇಚನೆಯೇ ಉತ್ತಮ ಪಕ್ಷ (ಹೇಡಿಗಳ ವಿಷಯದಲ್ಲಿ ವ್ಯಂಗ್ಯವಾಗಿ ಹೇಳುವ ಮಾತು). **Discrétionary** (ಗು.)

Díscrepant ಡಿಸ್‌ಕ್ರಿಪಂಟ್, **Discrépant** — ಕ್ರೆ — (ಗು) (ಕಥೆ, ಮೊ. ಗಳ ವಿಷಯದಲ್ಲಿ) ಅಸಂಗತವಾದ ; ವ್ಯತ್ಯಾಸವುಳ್ಳ ; ಅಸಂಬದ್ಧವಾದ ; ಭಿನ್ನವಾದ ; ಹೊಂದಿಕೆಯಿಲ್ಲದ. **Discrépancy** — ಕ್ರೆ — (ನಾ.)

Díscrete ಡಿಸ್‌ಕ್ರೀಟ್ (ಗು.) ಪ್ರತ್ಯೇಕವಾದ ; ಪೃಥಕ್ಕಾದ ; ಭಿನ್ನ ಭಿನ್ನವಾದ ; (ಪ್ರತಿಯೊಂದೂ) ಬೇರೆ ಬೇರೆಯಾದ ; ಭಿನ್ನ ಭಾಗಗಳುಳ್ಳ ; ಅವಿಚ್ಛಿನ್ನವಲ್ಲದ ; ಅಸಂತತ. (ತತ್ತ್ವ ಶಾಸ್ತ್ರ) ಭಾವಾತ್ಮಕ ; ಭಾವನಾಮಾತ್ರದ ; ಅಮೂರ್ತ. **Díscreteness** (ನಾ.)

Discríminate ಡಿಸ್‌ಕ್ರಿಮಿನೇಟ್ (ಕ್ರಿ.) ಭೇದ ಮಾಡು ; —ತೋರಿಸು ; ಮತ್ತೊಂದರಿಂದ ವಿಭೇದ ಮಾಡು ; ಪಕ್ಷಪಾತ ಮಾಡು (D. against ತೆರಿಗೆ, ಮೊ. ಗಳ ವಿಷಯದಲ್ಲಿ ಪ್ರತಿಕೂಲವಾಗಿ ಭೇದ ತೋರಿಸು). ಸೂಕ್ಷ್ಮ ಭೇದಗಳನ್ನು ತಿಳಿ, ವಿವೇಚಿಸು. **Discriminátion** (ನಾ.) ವಿವೇಚನೆ. **Discríminative** (ಗು.) ; **Discríminating** (ಗು.) (ಕ್ರಿಯಾರ್ಥಗಳಲ್ಲಿ) ; ಸೂಕ್ಷ್ಮವಾಗಿ ಪರಿಶೀಲಿಸುವ ; ವಿವೇಚಿಸುವ ; ಸೂಕ್ಷ್ಮ ಗ್ರಾಹಕ ; ಚುರುಕಾದ ; ಸೂಕ್ಷ್ಮ ಬುದ್ಧಿಯ. ಸಂದರ್ಭಕ್ಕೆ ತಕ್ಕಂತೆ ವ್ಯತ್ಯಾಸವಾಗುವ. (D. duty, rate ಸರಕನ್ನು ಕಳುಹಿಸುವ ದೇಶಕ್ಕನುಸಾರವಾಗಿ, ತೆರಿಗೆ ಹಾಕಬೇಕಾದ ವ್ಯಕ್ತಿಯ ಯೋಗ್ಯತೆಗನುಸಾರವಾಗಿ, ವ್ಯತ್ಯಾಸವಾಗುವ ಸುಂಕ, ತೆರಿಗೆ : ಭೇದಕ ಸುಂಕ)

Discrówn ಡಿಸ್‌ಕ್ರೌನ್ (ಕ್ರಿ. ಸಕ.) (ದೊರೆಯ) ಕಿರೀಟ ಕಿತ್ತುಕೊ ; (ದೊರೆಯನ್ನು) ಪದಚ್ಯುತನನ್ನಾಗಿ ಮಾಡು (ರೂಪ. ಸಹ)

Discúrsive ಡಿಸ್‌ಕರ್ಸಿವ್ (ಗು.) ಬಳಸಾಡುವ; ವಿಷಯದಿಂದ ವಿಷಯಕ್ಕೆ ಹಾರುವ ; ಅತಿ ವಿಸ್ತರಿಸುವ ; ವ್ಯಾಖ್ಯಾನಾತ್ಮಕ ; ತಾರ್ಕಿಕ ; (ಅಂತಃ ಪ್ರೇರಿತವಲ್ಲದ) ವಿಚಾರಪೂರ್ವಕವಾದ. **Discúrsively** (ಕ್ರಿ. ವಿ.) ; **Discúrsiveness** (ನಾ.)

Díscus ಡಿಸ್‌ಕಸ್ (ನಾ.) ಪುರಾತನ ರೋಮನರ ಮತ್ತು ಗ್ರೀಕರ ವ್ಯಾಯಾಮ ಸಾಧನೆಗಳಲ್ಲಿ ಮತ್ತು ಆಧುನಿಕ 'ಒಲಿಂಪಿಕ್' ವ್ಯಾಯಾಮಗಳಲ್ಲಿ, ಎಸೆದಾಡುವ, ಭಾರವಾದ ಚಕ್ರ : ಎಸೆಚಕ್ರ ; ಚಕ್ರಾಯುಧ ; ಪಾರುಂಬಳೆ (ಗ್ರಾಂ.)

Discúss ಡಿಸ್‌ಕಸ್ (ಕ್ರಿ. ಸಕ.) (ತಾರ್ಕಿಕ ರೀತಿಯಿಂದ, ವಾದದಿಂದ) ವಿಚಾರಮಾಡು ; ಚರ್ಚಿಸು ; ವಾದ ವಿವಾದ ಮಾಡು. (ಆಹಾರ, ಮದ್ಯ — ಇವನ್ನು) ಸಂತೋಷದಿಂದ ತಿನ್ನು, ಕುಡಿ, ಸೇವಿಸು. **Discússible** (ಗು.) ; **Discússion** — ಕಷನ್ (ನಾ.) ಚರ್ಚೆ ; ಜಿಜ್ಞಾಸ ; ವಾದ ವಿವಾದ ; ವಿಚಾರ. ಸಂತೋಷದಿಂದ ಊಟಮಾಡುವುದು.

Disdaín ಡಿಸ್‌ಡೆಯ್ನ್ (ನಾ., ಕ್ರಿ. ಸಕ.) ಅಸಡ್ಡೆ (ಮಾಡು) ; ಧಿಕ್ಕಾರ; ಧಿಕ್ಕರಿಸು ; ಜರೆ(ತ); ತಿರಸ್ಕಾರ ; ತಿರಸ್ಕರಿಸು ; ಮರ್ಯಾದೆಗೆ, ಯೋಗ್ಯತೆಗೆ, ಕಡಮೆಯೆಂದು ಭಾವಿಸು ; ಕಡೆಗಣಿಸು ; ಹೀನಯಿಸು ; ಉಪೇಕ್ಷೆ (ಮಾಡು) ; ಇಳಿಕೆ ಮಾಡು(ವುದು) ; ಕೀಳೆಣಿಸು(ವುದು) ; ನಿರ್ಲಕ್ಷಿಸು(ವುದು). **Disdaínful** (ಗು.) ; **Disdaínfully** (ಕ್ರಿ. ವಿ.)

Diseáse ಡಿಸೀಸ್ (ನಾ.) (ದೇಹದ, ಸಸ್ಯದ, ಅಥವಾ ಅವುಗಳ ಒಂದು ಭಾಗದ) ಅಸ್ವಸ್ಥತೆ ; ರೋಗ ಸ್ಥಿತಿ ; ವ್ಯಾಧಿ ; ರೋಗ ; ಬೇನೆ ; ಜಾಡ್ಯ ; ಕುತ್ತ (ಗ್ರಾಂ.) ; ಕಾಯಿಲೆ ; ಮನೋ ರೋಗ ; ವ್ಯಾಧಿ ವಿಕಾರ ; ನೀತಿ ವಿಕಾರ. **Diseásed** ಡಿಸೀಸ್ಡ್ (ಗು.)

Disembárk ಡಿಸ್‌ಎಂಬಾರ್ಕ್ (ಕ್ರಿ.) (ಹಡಗಿನಿಂದ) ದಡ ಸೇರು, ದಡ ಸೇರಿಸು, ಇಳಿ(ಸು). **Disémbarkátion** (ನಾ.)

Disembárrass ಡಿಸ್‌ಎಂಬ್ಯಾರಸ್ (ಕ್ರಿ. ಸಕ.) ದಿಕ್ಕುತೋರದ ಸ್ಥಿತಿಯನ್ನು ಪರಿಹಾರ ಮಾಡು ; ಸಂಕಟಾವಸ್ಥೆಯಿಂದ, ತೊಡರಿನಿಂದ, ಬಿಡಿಸು ; ತೊಡರು ತಪ್ಪಿಸು ; ಸಿಕ್ಕಿನಿಂದ ಬಿಡಿಸು. **Disembárrassment** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Disembódy ಡಿಸ್‌ಎಂಬಾಡಿ (ಕ್ರಿ. ಸಕ.) (ಆತ್ಮವನ್ನು, ಭಾವವನ್ನು) ದೇಹದಿಂದ, ಮೂರ್ತ ರೂಪದಿಂದ, ಪ್ರತ್ಯೇಕಿಸು, ಬಿಡುಗಡೆ ಮಾಡು ; ಅಶರೀರ, ಅಮೂರ್ತ, ಮಾಡು. (ಸೇನೆಯನ್ನು, ದಳಗಳನ್ನು) ವಿಮೋಚನೆ ಮಾಡು, ಕಳಚಿಬಿಡು ; ಪಡೆ ಚೆದರಿಸು.

Disembógue ಡಿಸ್‌ಎಂಬೋಗ್ (ಕ್ರಿ.) ನದೀಮುಖದಿಂದ (ನೀರು) ಸುರಿ, ಹರಿ(ಸು). (ಜ್ವಾಲಾಮುಖಿ, ಮೊ. ವು) ಹೊರ ಚಿಮ್ಮು, ಕಾರು. (ರೂಪ.) (ಭಾಷಣ, ಜನ ಸಂದಣಿ, ಮೊ. ವು) ಪ್ರವಹಿಸು, ಹೊರಕ್ಕೆ ಹರಿ, ಸುರಿ.

Disembósom ಡಿಸ್‌ಎಂಬೂಸಮ್ (ಕ್ರಿ.) (ಮನಸ್ಸಿನಲ್ಲಿರುವುದನ್ನು) ಹೊರಗೆಡಹು ; ಗುಟ್ಟನ್ನು ಹೇಳಿಕೊ ; ಎದೆಬಿಚ್ಚಿ ಹೇಳು ; ಮನೋಭಾರವನ್ನು ಇಳಿಸಿಕೊ ; ಅಂತರ್ಯ ತಿಳಿಸು.

Disembowel ಡಿಸ್‌ಎಂಬೌಎಲ್ (ಕ್ರಿ. ಸಕ.) ಕರುಳು ತೆಗೆ ; ಕರುಳು ಹೊರಹೊರಡುವಂತೆ ಹೊಟ್ಟೆ ಸೀಳು, ಬಗಿ. (ರೂಪ.) ಒಳಗಿರುವುದನ್ನು ತೆಗೆದುಬಿಡು. **Disembowelment** (ನಾ.)

Disembroil ಡಿಸ್‌ಎಂಬ್ರಾಯ್ಲ್ (ಕ್ರಿ. ಸಕ.) ತೊಡರಿನಿಂದ ಬಿಡಿಸು ; ಸಿಕ್ಕು ತಪ್ಪಿಸು ; ಗೊಂದಲವಿಲ್ಲದಂತೆ ಮಾಡು.

Disenchánt ಡಿಸ್‌ಎಂಚಾಂಟ್ (ಕ್ರಿ. ಸಕ.) ಮಾಟದಿಂದ, ಮಂತ್ರದಿಂದ, ಮಾಯೆಯಿಂದ, ಮೋಹದಿಂದ, ಬಿಡುಗಡೆ ಮಾಡು, ನಿವಾರಣೆ ಮಾಡು ; ನಿರ್ಮೋಹಗೊಳಿಸು. **Disenchántment** (ನಾ.)

Disencúmber ಡಿಸ್‌ಎನ್ಕಂಬರ್ (ಕ್ರಿ. ಸಕ.) ತಡೆ, ಅಡ್ಡಿ, ತೊಂದರೆ, ಆತಂಕ, ಪ್ರತಿಬಂಧಕ, ಮೊ. ಗಳಿಂದ ಬಿಡುಗಡೆ ಮಾಡು ; ಭಾರ ಇಳಿಸು ; ಹೊರೆಯಿಳಿಸು.

Disendow ಡಿಸ್‌ಎಂಡೌ (ಕ್ರಿ. ಸಕ.) (ಮು., ಚರ್ಚಿನ) ದತ್ತಿಯನ್ನು ಕಿತ್ತುಕೊ ; ಇದ್ದ ದತ್ತಿ ಇಲ್ಲದಂತೆ ಮಾಡು. **Disendowment** (ನಾ.)

Disengáge ಡಿಸ್‌ಎಂಗೇಜ್ (ಕ್ರಿ., ನಾ.) ಬೇರೆ ಮಾಡು ; ಬೇರ್ಪಡಿಸು ; ಪ್ರತ್ಯೇಕಿಸು ; ಕಳಚು ; ಬಿಡಿಸು ; ವಿಯೋಜಿಸು. ಬೇರೆ ಬರು ; ಕಳಚಿಹೋಗು ; ಸಂಬಂಧ ತಪ್ಪು, ತಪ್ಪಿಸು. (ಕತ್ತಿಯ ಸಾಧನೆಯಲ್ಲಿ) ಕತ್ತಿಯ ಮೊನೆಯನ್ನು ಎದುರಾಳಿಯ ಕತ್ತಿಯ ಮತ್ತೊಂದು ಕಡೆಗೆ ಹಾಯಿಸು ; ಕತ್ತಿಯ ಈ ವರಿಸೆ. **Disengáged** —ಗೇಜ್ಡ್ (ಗು.) (ಕ್ರಿಯಾರ್ಥಗಳಲ್ಲಿ). (ಬಂದವರನ್ನು ನೋಡುವುದಕ್ಕಾಗಲಿ, ಸಂಧಿಸಬಹುದಾದ ಇತರ ಕೆಲಸಕ್ಕೆ ಗಮನ ಕೊಡುವುದಕ್ಕಾಗಲಿ) ಅವಕಾಶವುಳ್ಳ, ವಿರಾಮವುಳ್ಳ. ತೆರಪಾಗಿರುವ ; ಬಿಡುವಾಗಿರುವ ; ಖಾಲಿಯಾಗಿರುವ ; ಯಾರೂ ಗೊತ್ತು ಮಾಡಿಕೊಂಡಿರದ. **Disengágement** (ನಾ.) (ಕ್ರಿಯಾರ್ಥಗಳಲ್ಲಿ). (ರಾಸಾಯನಿಕ ಘಟಕ) ಬಿಡುಗಡೆಯಾಗುವುದು ; ರಾಸಾಯನಿಕ ವಿಘಟನ, ವಿಶ್ಲೇಷಣ. ಬಂಧನಗಳಿಲ್ಲದಿರುವುದು ; ಸೇರಿಕೆ ಹರಿದಿರುವುದು. ಸ್ವಾಭಾವಿಕ ಸರಳತೆ. ಮದುವೆ ಮಾಡಿಕೊಳ್ಳುವ ವಾಗ್ದಾನದಿಂದ ಬಿಡುಗಡೆ ಪಡೆಯುವುದು : ನಿಶ್ಚಿತಾರ್ಥ ವಿಚ್ಛೇದ. (ಕತ್ತಿಯ ಸಾಧನೆ) = Disengage (ನಾ.)

Disentail ಡಿಸ್‌ಎಂಟೆಯ್ಲ್ (ಕ್ರಿ. ಸಕ.) (ನ್ಯಾ. ಶಾ.) ಆಸ್ತಿಯ ಪರಭಾರೆ ಮಾಡಲಾಗದ ಸ್ಥಿತಿಯನ್ನು ತಪ್ಪಿಸು, ಪರಿಹರಿಸು.

Disentángle ಡಿಸ್‌ಎಂಟ್ಯಾಂಗ್ಲ್ (ಕ್ರಿ.) (ಸಿಕ್ಕಿನಿಂದ) ಬಿಡಿಸು, ಬಿಡಿಸಿಕೊ ; ತೊಡರುಗಳಿಲ್ಲದಂತೆ ಮಾಡು ; ತೊಡಕು ಬಿಡಿಸು, ಬಿಡು ; ಹುರಿ ಬಿಡಿಸು, ಬಿಡು ; ಗೋಜಿಲ್ಲದಂತಾಗು. **Disentánglement** (ನಾ.)

Disenthrál(l) ಡಿಸ್‌ಎಂತ್ರಾಲ್ (ಕ್ರಿ. ಸಕ.) ಗುಲಾಮಗಿರಿ ಬಿಡಿಸು ; ದಾಸ್ಯ ನಿವೃತ್ತಿ ಮಾಡು ; ಬಂಧ ವಿಮೋಚನೆ ಮಾಡು. **Disenthrálment** (ನಾ.)

Disentómb ಡಿಸ್‌ಎಂಟೂಮ್ (ಕ್ರಿ. ಸಕ.) ಗೋರಿಯಿಂದ, ಸಮಾಧಿಯಿಂದ, ಹೊರತೆಗೆ ; ಅಗೆದು ತೆಗೆ ; (ರೂಪ.) ಅನ್ವೇಷಣ ಮಾಡಿ ಕಂಡುಹಿಡಿ.

Disestáblish ಡಿಸ್‌ಎಸ್ಟ್ಯಾಬ್ಲಿಷ್ (ಕ್ರಿ. ಸಕ.) ಸರ್ಕಾರದ ವ್ಯವಸ್ಥೆಯನ್ನು ತೆಗೆದುಬಿಡು ; ಆಧಾರ ನಿವಾರಣೆ ಮಾಡು. (ಚರ್ಚಿಗೆ) ಸರ್ಕಾರದ ಆಧಾರ ತಪ್ಪಿಸು ; ನಿರಾಧರಿಸು. **Disestáblishment** (ನಾ.)

Disfávour ಡಿಸ್‌ಫೇವರ್ (ನಾ., ಕ್ರಿ. ಸಕ.) ಅಪ್ರೀತಿ ; ಅಪ್ರಸನ್ನತೆ ; ಅಸಮ್ಮತಿ ; ಅನಾದರಣೆ. ಅಪ್ರೀತಿಗೆ ಪಾತ್ರನಾಗಿರುವುದು (Fall into, be in, d. ವಿಶ್ವಾಸ ಕಳೆದುಕೊ). (ಕ್ರಿ.) ಅಪ್ರೀತಿ ತೋರು ; ಅನಾದರಣೆ ಮಾಡು ; ಅಪ್ರಸನ್ನನಾಗಿರು.

Disfeáture ಡಿಸ್‌ಫೀಟ್ಯು(ಚ)ರ್ (ಕ್ರಿ. ಸಕ.) ರೂಪುಗೆಡಿಸು ; ಅಂದಗೆಡಿಸು ; ವಿರೂಪ ಮಾಡು ; ವಿಕಾರಗೊಳಿಸು.

Disfígure ಡಿಸ್‌ಫಿಗ್ಯುರ್ (ಕ್ರಿ. ಸಕ.) ಆಕಾರಗೆಡಿಸು ; ರೂಪುಗೆಡಿಸು ; ವಿಕಾರ ಮಾಡು ; ಕಳಂಕಗೊಳಿಸು. **Disfigurátion** (ನಾ.) ; **Disfígurement** (ನಾ.)

Disfórest ಡಿಸ್‌ಫಾರೆಸ್ಟ್ (ಕ್ರಿ. ಸಕ.) = Disafforest ; ಮರಗಾಡು ಇಲ್ಲದಂತೆ ಮಾಡು ; ಕಾಡು ಕಡಿ ; ಹಾಡಿ ಕಡಿ(ದು ನಾಡು ಮಾಡು)

Disfránchise ಡಿಸ್‌ಫ್ರಾನ್‌ಚಿ(ಚೈ)ಸ್ (ಕ್ರಿ. ಸಕ.) ಪ್ರಜೆತನದ ಹಕ್ಕುಗಳನ್ನು ತಪ್ಪಿಸು. ಪಾರ್ಲಿಮೆಂಟಿಗೆ ಪ್ರತಿನಿಧಿಯನ್ನು ಕಳುಹಿಸುವ ಹಕ್ಕನ್ನು (ಒಂದು ಸ್ಥಳದಿಂದ), ಅದಕ್ಕೆ ಪ್ರತಿನಿಧಿಯನ್ನು ಚುನಾಯಿಸಲು ಮತಕೊಡುವ ಹಕ್ಕನ್ನು (ಒಬ್ಬ ವ್ಯಕ್ತಿಯಿಂದ), ಕಿತ್ತುಕೊ ; ಚುನಾವಣೆಯ ಹಕ್ಕು ಕಿತ್ತುಕೊ. **Disfránchisement** — ಚಿ — (ನಾ.)

Disfróck ಡಿಸ್‌ಫ್ರಾಕ್ (ಕ್ರಿ. ಸಕ.) ಪಾದ್ರಿತನದ ಉಡುಪನ್ನೂ ಅಧಿಕಾರವನ್ನೂ ಕಿತ್ತುಕೊ.

Disgórge ಡಿಸ್‌ಗಾರ್ಜ್ (ಕ್ರಿ.) (ಮು., ರೂಪಕದಲ್ಲಿ : ಅನ್ಯಾಯವಾಗಿ ಸಂಪಾದಿಸಿದ ಆದಾಯವನ್ನು, ಲೂಟಿಯನ್ನು) ಕಕ್ಕು. (ನದಿ, ಮೊ. ಗಳ ವಿಷಯದಲ್ಲಿ) ಹರಿ(ಸು) ; ಸುರಿ(ಸು) ; ಬೀಳು.

Disgráce ಡಿಸ್‌ಗ್ರೇಸ್ (ನಾ., ಕ್ರಿ. ಸಕ.) ಅನುಗ್ರಹ ನಷ್ಟ ; ಘನತೆಯ ಸ್ಥಾನದಿಂದ ಉರುಳುವುದು ; ನಂಬಿಕೆ ಕೆಡಿಸಿಕೊಳ್ಳುವುದು ; ಅಪಮಾನ ; ಅಪಕೀರ್ತಿ ; ಅಪಯಶಸ್ಸು ; ಮಾನ ಭಂಗ ; ನಾಚಿಕೆಗೇಡು ; ಕೆಟ್ಟ ಹೆಸರು ; ಪಳಿ (ಗ್ರಾಂ) ; ನಿಂದೆ ; ಅಪಯಶಸ್ಸು ತರುವಂಥದು ; ಅಪವಾದ ಕಾರಣ. (ಕ್ರಿ.) ಅನುಗ್ರಹ ತಪ್ಪಿಸು ; ವಿಶ್ವಾಸ ತೋರಿಸದೆ ಹೋಗು ; ಪದಭ್ರಷ್ಟನನ್ನಾಗಿ ಮಾಡು ; ಇರುವ ಅಧಿಕಾರದಿಂದ ಕೆಳಕ್ಕೆ ತಳ್ಳು ; (ಒಬ್ಬನಿಗೆ) ಅಪಮಾನ, ಅಪಕೀರ್ತಿ, ಕೆಟ್ಟ ಹೆಸರು, ತರು ; ಮಾನಭಂಗ ಮಾಡು ; ಅವಮಾನ ಮಾಡು ; (-) ಗೆ ಕಳಂಕವಾಗಿರು. **Disgráceful** (ಗು.) ; **Disgrácefully** (ಕ್ರಿ. ವಿ.) ; **Disgrácefulness** (ನಾ.)

Disgrúntled ಡಿಸ್‌ಗ್ರಂಟ್‌ಲ್ಡ್ (ಗು.) ಅತೃಪ್ತ ; [ಗ್ರಾ] ಅಸಂತುಷ್ಟ ; ಅಸಮಾಧಾನಗೊಂಡ ; ಗೊಣಗುಟ್ಟುವ.

Disguíse ಡಿಸ್‌ಗೈಸ್ (ಕ್ರಿ. ಸಕ., ನಾ.) (ಗುರುತು ತಿಳಿಯದಂತೆ) ವೇಷ ಹಾಕಿಕೊ ; ರೂಪು ಮರಸಿಕೊ ; ತಪ್ಪುತಿಳಿವಳಿಕೆ ಕೊಡು ; ಬೇರೆ ರೀತಿಯಾಗಿ ಕಾಣಿಸು, ತೋರು ; ತಪ್ಪುಬಣ್ಣ ಕೊಡು ; ಮರೆಮಾಚು ; — ಮಾಡು ; ಮುಚ್ಚಿಡು ; ಬಚ್ಚಿಡು (D. one's intention ಉದ್ದೇಶವನ್ನು ಮರೆಮಾಚು. Disguised in or with drink or liquor ಕುಡಿದು ಬದಲಾಯಿಸಿ). (ನಾ.) ಗುರುತು ತಿಳಿಯದಂತೆ ಬೇರೆ ಉಡುಪನ್ನು ಅಥವಾ ರೂಪನ್ನು ತಳೆಯುವುದು ; ಮರೆ ; ವೇಷ ; ಸೋಗು ; ರೂಪು ಬದಲಾಯಿಸಿಕೊಂಡಿರುವ ಸ್ಥಿತಿ (Blessing in d. ಪರಿಣಾಮದಲ್ಲ ಹಿತಕಾರಿಯಾಗುವ ಅಹಿತ). ಮೋಸದ ವೇಷ. ಕೃತಕ ನಡೆವಳಿ ; ನಟನೆ ; ಮುಚ್ಚು ಮರೆ ; ಮೋಸ ; ವಂಚನೆ. **Disguísement** (ನಾ.)

Disgúst ಡಿಸ್‌ಗಸ್ಟ್ (ನಾ., ಕ್ರಿ. ಸಕ.) ಅಸಹ್ಯ ; ಜುಗುಪ್ಸೆ ; ಬೇಸರ ; ಹೇಸಿಕೆ ; ಹೇವರಿಕೆ (*At, for, towards, against* ಉಪ. ದೊಡನೆ). (ಕ್ರಿ.) — ಹುಟ್ಟಿಸು ; ರೋಸುವಂತೆ ಮಾಡು (Disgusted *with*,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

at, by). **Disgústedly** (ಕ್ರಿ. ವಿ.) ; **Disgústingly** (ಕ್ರಿ. ವಿ.) ; **Disgústful** (ಗು.) ಅಸಹ್ಯಕರವಾದ ; ಜುಗುಪ್ಸೆ ಹುಟ್ಟಿಸುವ ; ಹೇವರಿಕೆಯುಂಟುಮಾಡುವ.

Dish ಡಿಷ್ (ನಾ.) (ಗಾಜಿನ, ಪಿಂಗಾಣಿಯ, ಲೋಹದ) ತಟ್ಟೆ, ಊಟದ ತಟ್ಟೆ ; ಗಂಗಳ ; ತಳಿಗೆ. (ತಟ್ಟೆಯಲ್ಲಿಟ್ಟ) ಊಟ, ತಿಂಡಿ ; (ಒಂದು ಗೊತ್ತಾದ) ಅಡಿಗೆ, ಭಕ್ಷ್ಯ [Made d. ಅನೇಕ ಪದಾರ್ಥಗಳನ್ನು ಹಾಕಿ ಮಾಡಿದ ಭಕ್ಷ್ಯ : ಕೂಟ ಭಕ್ಷ್ಯ. Side-d. (Side ನೋಡಿ). Standing d. ದಿನಗಟ್ಟಳೆಯ ಅಡಿಗೆ (ರೂಪ. ಸಹ)]. (ಪ್ರಾಚೀ. ಪ್ರ.) ಬಟ್ಟಲು (ಮು., D. of tea ಚಾ ಪಾನ. D. of gossip ಹರಟೆ). (ಯಾವ ಕೆಲಸಕ್ಕಾಗಲಿ ಉಪಯೋಗಿಸುವ) ತಟ್ಟೆಯಾಕಾರದ ಪಾತ್ರೆ. D.-cover ತಟ್ಟೆಯಲ್ಲಿಯ ಆಹಾರಪದಾರ್ಥವನ್ನು ಬಿಸಿಯಾಗಿಟ್ಟಿರಲು ಉಪಯೋಗಿಸುವ ಲೋಹ, ಮೊ. ಗಳ ಮುಚ್ಚಳ : ಚಟ್ಟಣಿ. D.-cloth, D.-clout (ಪ್ರಾಚೀ. ಪ್ರ.) ತಟ್ಟೆಯೊರಸುವ ಬಟ್ಟೆ. D.-wash, D.-water ತಟ್ಟೆ ತೊಳೆದ ನೀರು. D.-washer ತೋಕೆಯಾಡಿಸುವ ಒಂದು ಜಾತಿಯ ಸಣ್ಣ ನೀರುಹಕ್ಕಿ.

Dish (ಕ್ರಿ.) ಊಟವನ್ನು ತಟ್ಟೆಯಲ್ಲಿಟ್ಟು ಸಿದ್ಧಪಡಿಸು [D. up ಬಡಿಸು ; (ರೂಪ.) (ವಿಷಯಗಳನ್ನು, ವಾದವನ್ನು) ಅಣಿಯಾಗಿ ಜೋಡಿಸು, ಚಿತ್ತಾಕರ್ಷಕವಾಗಿ ಪ್ರದರ್ಶಿಸು]. ಕುಳಿಯಾಕಾರವಾಗಿ, ತಟ್ಟೆಯ ಆಕಾರವಾಗಿ, ಮಾಡು ; ಕುಳಿ ಬೀಳಿಸು. ಸಿಕ್ಕಿಸಿಕೊ ; ಎದುರು ಪಕ್ಷದವರ ಹೂಟ ನಡೆಯದಂತೆ ಮಾಡು : ಹೂಟ ಮುರಿ. (ಮು., ರಾಜ್ಯ ತಂತ್ರದಲ್ಲಿ ಪ್ರತಿಪಕ್ಷದವರನ್ನು) ಅವರ ನೀತಿಯನ್ನೇ ಅನುಸರಿಸಿ ಸೋಲಿಸು : ಪ್ರತಿ ಹೂಟ ಹೂಡು (Dishing the Whigs)

Dishabílle ಡಿಸಬಿ(ೀ)ಲ್ (ನಾ.) ಅಲಕ್ಷ್ಯವಾಗಿ, ಅರ್ಧರ್ಧವಾಗಿ, ಉಡುಪು ತೊಟ್ಟಿರುವುದು ; ಅಲಕ್ಷ್ಯದ ಉಡಿಗೆ ; ಅರೆಯುಡಿಗೆ ; ಹಗುರುಡಿಗೆ (ನಾ., In d.)

Dishabítuate ಡಿಸ್‌ಹಬಿಟ್ಯುಏಟ್ (ಕ್ರಿ. ಸಕ.) ಅಭ್ಯಾಸ ತಪ್ಪಿಸು ; ರೂಢಿ ತಪ್ಪಿಸು ; ಬಳಕೆ ತಪ್ಪಿಸು.

Dishallúcinátion ಡಿಸ್‌ಹ್ಯಲ್ಯೂಸಿನೇಷನ್ (ನಾ.) ಮರುಳು ಬಿಡಿಸುವುದು ; ಮೋಹ ನಿವಾರಣೆ ; ಭ್ರಾಂತಿ ವಿಮೋಚನೆ.

Dishármonize ಡಿಸ್‌ಹಾರ್ಮೊನೈಸ್ (ಕ್ರಿ. ಸಕ.) ಹೊಂದಿಕೆ ತಪ್ಪಿಸು ; ಮೇಳವಿಲ್ಲದಂತೆ ಮಾಡು ; ಅಸಂಗತ ಮಾಡು ; ಅಸಮಂಜಸ ಮಾಡು ; ಸಾಮರಸ್ಯ ತಪ್ಪಿಸು ; ವಿಷಮ ಮಾಡು ; ಅಪಸ್ವರ ಮಾಡು ; ಶ್ರುತಿ ತಪ್ಪಿಸು. **Dishármony** (ನಾ.) ಮೇಳನವಿಲ್ಲದಿರುವುದು ; ಹೊಂದಿಕೆಯಿಲ್ಲದಿರುವುದು ; ಅಸಂಗತಿ ; ಅಪಸ್ವರ ; ಅಸಾಮರಸ್ಯ ; ವೈಷಮ್ಯ. **Disharmónious** — ಮೋನಿಯಸ್ (ಗು.)

Disheárten ಡಿಸ್‌ಹಾರ್ಟ್‌ನ್ (ಕ್ರಿ. ಸಕ.) ಎದೆಗುಂದಿಸು ; ಧೈರ್ಯಗೆಡಿಸು ; ನಿರುತ್ಸಾಹಗೊಳಿಸು. **Disheártenment** (ನಾ.)

Dishérison ಡಿಸ್‌ಹೆರಿಸನ್ (ನಾ.) ಉತ್ತರಾಧಿಕಾರದ ಹಕ್ಕುಬಾಧ್ಯತೆ ತಪ್ಪಿಸುವುದು ; ವಾರಸು ತಪ್ಪಿಸುವುದು ; ದಾಯಭಾಗಕ್ಕೆ ಅನರ್ಹನನ್ನಾಗಿ ಮಾಡುವುದು.

Dishévelled, -eled ಡಿಷೆವೆಲ್ಡ್ (ಗು.) ತಲೆ ಕೆದರಿಕೊಂಡಿರುವ ; (ತಲೆಗೂದಲಿನ ವಿಷಯದಲ್ಲಿ) ಬಿಚ್ಚಿದ, ಕೆದರಿದ, ಕಟ್ಟದ. (ಮನುಷ್ಯನ ವಿಷಯದಲ್ಲಿ) ಒಪ್ಪವಿಲ್ಲದ, ಓರಣವಿಲ್ಲದ, ಒರಟೊರಟಾದ, ತಲೆ ಬಾಚಿಕೊಳ್ಳದ, ಅಂದವಿಲ್ಲದ. **Dishévelment** (ನಾ.)

Dishónest ಡಿಸ್‌ಆನೆಸ್ಟ್ (ಗು.) (ವ್ಯಕ್ತಿ, ಕಾರ್ಯ, ಹೇಳಿಕೆ, — ಇವುಗಳ ವಿಷಯದಲ್ಲಿ) ನಿಜವಲ್ಲದ, ಸುಳ್ಳಾದ, ಅಪ್ರಾಮಾಣಿಕ, ಮೋಸದ, ವಂಚನೆಯ, ಠಕ್ಕಿನ. **Dishónestly** (ಕ್ರಿ. ವಿ.) ; **Dishónesty** (ನಾ.) ಪ್ರಾಮಾಣಿಕತೆಯಿಲ್ಲದಿರುವುದು ; ಅಪ್ರಾಮಾಣಿಕತೆ ; ಅಸತ್ಯ ; ಠಕ್ಕು ; ಠಟವಟ ; ಮೋಸ ; ವಂಚನೆ ; ಕಪಟ.

Dishónour ಡಿಸ್‌ಆನರ್ (ನಾ., ಕ್ರಿ. ಸಕ.) ಅವಮಾನ ; ಅವಮರ್ಯಾದೆ ; ಅಗೌರವ ; ಅಪಯಶಸ್ಸು ; ನಾಚಿಕೆಗೇಡಿತನ ; ಕೆಟ್ಟ ಹೆಸರು ; ಮಾನ ಚ್ಯುತಿ ; ಸ್ಥಾನ ಭ್ರಷ್ಟತೆ ; ಅವಮಾನಕರವಾದದ್ದು ; ಅಗೌರವ ತರುವಂಥದು. (ಹುಂಡಿ, ಚೆಕ್ಕು, ಮೊ.) ಮಾನ್ಯ ಮಾಡದೆ ತಿರಸ್ಕರಿಸುವುದು, ನಿರಾಕರಣೆ. (ಕ್ರಿ.) ಅವಮಾನ ಮಾಡು ; ಮಾನ ಹಾನಿ ಮಾಡು ; ಹೆಸರು ಕೆಡಿಸು ; ಅಪಕೀರ್ತಿ ತರು ; ಅಗೌರವ ತೋರಿಸು. ಪಾತಿವ್ರತ್ಯ ಕೆಡಿಸು ; ಮಾನಭಂಗ ಮಾಡು. (ಹುಂಡಿ, ಚೆಕ್ಕು, ಮೊ. ನ್ನು ಅಂಗೀಕರಿಸುವುದಿಲ್ಲವೆಂದು, ಅಥವಾ ಅದಕ್ಕೆ ಹಣ ಕೊಡುವುದಿಲ್ಲವೆಂದು) ನಿರಾಕರಿಸು. **Dishónourable** (ಗು.) ಅವಮಾನಕರವಾದ ; ಅಗೌರವವಾದ ; ನೀತಿಗೆಟ್ಟ ; ಘನತೆಗೆಟ್ಟ ; ನೀಚ ; ಹೀನ. **Dishónourableness** (ನಾ.) ; **Dishónourably** (ಕ್ರಿ. ವಿ.)

Dishórn ಡಿಸ್‌ಹಾರ್ನ್ (ಕ್ರಿ. ಸಕ.) ಕೊಂಬು ಕತ್ತರಿಸು ; ಕೋಡು ಕಳೆ.

Dishoúse ಡಿಸ್‌ಹೌಸ್ (ಕ್ರಿ. ಸಕ.) (ಜನ, ಮೊ. ರನ್ನು) ಮನೆಯಿಲ್ಲದಂತೆ ಮಾಡು, ಮನೆಬಿಟ್ಟೋಡಿಸು ; ಮನೆ ಕೆಡವು.

Disillúsion ಡಿಸ್‌ಇಲ್ಯೂಷನ್ (ನಾ., ಕ್ರಿ. ಸಕ.), **Disillúsionize** — ನೈಸ್ (ಕ್ರಿ. ಸಕ.) ಭ್ರಾಂತಿ ನಿವಾರಣೆ (ಮಾಡು) ; ಮೋಹವಿಮೋಚನೆ (ಮಾಡು) ; ತಪ್ಪುತಿಳಿವಳಿಕೆ ಕಳೆ. **Disillúsionment** (ನಾ.)

Disinclíne ಡಿಸ್‌ಇನ್‌ಕ್ಲೈನ್ (ಕ್ರಿ. ಸಕ.) ಒಲವಿಲ್ಲದಂತೆ, ಪ್ರವೃತ್ತಿಯಿಲ್ಲದಂತೆ, ಮಾಡು ; (ಕೆಲಸಕ್ಕೆ) ಮನಸ್ಸಿಲ್ಲದಂತೆ ಮಾಡು ; ಒಲವಿಲ್ಲದಿರು ; ಪ್ರವೃತ್ತಿಯಿಲ್ಲದಿರು. **Disinclinátion** — ಕ್ಲಿನೇಷನ್ (ನಾ.) (ಮಾಡಲು) ಮನಸ್ಸಿಲ್ಲದಿರುವುದು ; ಅನಿಚ್ಛೆ ; ಅಪ್ರವೃತ್ತಿ.

Disincórporate ಡಿಸ್‌ಇನ್‌ಕಾರ್ಪೊರೇಟ್ (ಕ್ರಿ. ಸಕ.) ಸಂಘ ವಿಲಯ ಮಾಡು ; ಸಂಸ್ಥೆಯನ್ನು ಕರಗಿಸು.

Disinféct ಡಿಸ್‌ಇನ್‌ಫೆಕ್ಟ್ (ಕ್ರಿ. ಸಕ.) (ಕೋಣೆ, ಬಟ್ಟೆಬರೆ, ಮೊ. ಗಳಿಂದ) ಸೋಂಕು ಕಳೆ ; ಸೋಂಕಿಲ್ಲದಂತೆ ಶುದ್ಧಮಾಡು, ತೊಳೆ. **Disinféctant** — ಫೆಕ್ಟಂಟ್ (ಗು., ನಾ.) ಸೋಂಕು ನಿವಾರಕ (ಔಷಧ). **Disinféction** — ಫೆಕ್‌ಷನ್ (ನಾ.)

Disingénuous ಡಿಸ್‌ಇಂಜೆನ್ಯುಅಸ್ (ಗು.) ಪ್ರಾಮಾಣಿಕತೆಯಿಲ್ಲದ ; ನಿಷ್ಕಾಪಟ್ಯವಿಲ್ಲದ ; ಋಜುವಲ್ಲದ ; ಗೂಢೋದ್ದೇಶವುಳ್ಳ ; ವಂಚನೆಯ ; ಠಕ್ಕಿನ ; ಕುಟಿಲ ; ಕಪಟಾಚರಣೆಯ. **Disingénuously** (ಕ್ರಿ. ವಿ.) ; **Disingénuousness** (ನಾ.)

Disinhérit ಡಿಸ್‌ಇನ್‌ಹೆರಿಟ್ (ಕ್ರಿ. ಸಕ.) ಉತ್ತರಾಧಿಕಾರ ತಪ್ಪಿಸು ; ದಾಯದ ಹಕ್ಕು ತಪ್ಪಿಸು ; ವಾರಸು ತಪ್ಪಿಸು. **Disinhéritance** (ನಾ.)

Disíntegrate ಡಿಸ್‌ಇಂಟಿಗ್ರೇಟ್ (ಕ್ರಿ.) ಪ್ರತ್ಯೇಕ ಭಾಗಗಳಾಗಿ ಒಡೆ ; ಸಂಯುಕ್ತತೆ, ಕಳೆ, ಕೆಡು ; ಹೊಂದಿಕೆ ಬಿಡು ; ಅಂಟಿಕೆ ಬಿಡಿಸು, ಬಿಟ್ಟು ಹೋಗು ; ಛಿನ್ನಭಿನ್ನವಾಗು ; ಏಕಾಂಗ ರಚನೆ ಕೆಡು ; ಬಂಧ ಸಡಿಲು ; ಶಿಥಿಲವಾಗು, ಮಾಡು ; ಕಳಲು. **Disintegrátion** (ನಾ.) ; **Disíntegrator** (ನಾ.) ಪದಾರ್ಥಗಳನ್ನು ಪುಡಿಮಾಡುವ ಯಂತ್ರ : ಚೂರ್ಣಕ.

Disintér ಡಿಸ್‌ಇಂಟರ್ (ಕ್ರಿ. ಸಕ.) ಸಮಾಧಿಯಿಂದ, ಗೋರಿಯಿಂದ, ಹೊರದೆಗೆ ; ಹೂತದ್ದನ್ನು ಅಗೆದು ತೆಗೆ ; ನೆಲದಿಂದ ಹೊರದೆಗೆ ; (ರೂಪ.) ಬಯಲಿಗೆ ತರು ; ಹೊರಕ್ಕೆತರು. **Disintérment** (ನಾ.)

Disínterest ಡಿಸ್‌ಇಂಟರೆಸ್ಟ್ (ಕ್ರಿ. ಸಕ., ಸ್ವಾರ್ಥಕ) ಆಸಕ್ತಿ ತಪ್ಪಿಸು ; ಆಸಕ್ತಿ ವಹಿಸಿಕೊಳ್ಳದೆ ಬಿಡು ; ನಿರ್ಲಿಪ್ತವಾಗು ; (ಮನಸ್ಸಿಗೆ) ಹತ್ತಿಸಿಕೊಳ್ಳದಿರು (ಮು., ರಾಜನೀತಿಯಲ್ಲಿ : ಭಾಗ ವಹಿಸುವ ಹಕ್ಕನ್ನು ಅಥವಾ ಉದ್ದೇಶವನ್ನು ಬಿಟ್ಟುಬಿಡು). **Disínterested** (ಗು.) ಸ್ವಾರ್ಥತೆಯ ಒಲವಿಲ್ಲದ ; ನಿಷ್ಪಕ್ಷಪಾತವಾದ ; ನಿಸ್ಸ್ವಾರ್ಥ ; ಅಸ್ವಾರ್ಥ ; ಅನಾಸಕ್ತ ; ನಿಷ್ಕಾಮ. **Disínterestedly** (ಕ್ರಿ. ವಿ.) ; **Disínterestedness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Disjécta mémbra (L) ಡಿಸ್ಜೆಕ್ಟ ಮೆಂಬ್ರ (ನಾ., ಬ. ವ.) ಚೂರುಗಳು ; ಹರುಕು ಮುರುಕುಗಳು ; ಚೆಲ್ಲಾಪಿಲ್ಲಿಯಾಗಿ ಬಿದ್ದ ಅವಶಿಷ್ಟಗಳು.

Disjoín ಡಿಸ್‌ಜಾಯ್‌ನ್ (ಕ್ರಿ. ಸಕ.) ಸೇರಿಕೆ ಬಿಡಿಸು ; ಸಂಬಂಧ ಬಿಡಿಸು ; ಬೇರೆ ಬೇರೆ ಮಾಡು ; ಕಳಚು ; ಪ್ರತ್ಯೇಕಿಸು ; ಅಗಲಿಸು ; ವಿಯೋಜಿಸು.

Disjoínt ಡಿಸ್‌ಜಾಯ್‌ಂಟ್ (ಕ್ರಿ. ಸಕ.) ಕೀಲು, ಸಂಧಿ, ಸಂಬಂಧ, ಸ್ಥಳ, ತಪ್ಪಿಸು ; ಕೀಲು ಬಿಡಿಸಿ ಪ್ರತ್ಯೇಕಿಸು. ಕಾರ್ಯಕ್ಕೆ ತಡೆಯೊಡ್ಡು. **Disjoíntedly** (ಕ್ರಿ. ವಿ.) ; **Disjoíntedness** (ನಾ.)

Disjúnction ಡಿಸ್‌ಜಂಕ್‌ಷನ್ (ನಾ.) ಬೇರೆ ಬೇರೆ ಮಾಡುವುದು ; ಕಳಚುವುದು ; ಪ್ರತ್ಯೇಕಿಸುವುದು ; ಪೃಥಕ್ಕರಿಸುವುದು ; ವಿಚ್ಛೇದ ; ವಿಶ್ಲೇಷಣ ; ವಿಯೋಜನ. **Disjúnctive** (ಗು., ನಾ.) ಅಗಲಿಸುವ ; ಪ್ರತ್ಯೇಕಿಸುವ ; ವಿಯೋಜಕ ; ವಿಶ್ಲೇಷಕ. (ತರ್ಕ) ಎರಡು (ಅಥವಾ ಹೆಚ್ಚಾದ) ಪದ, ಪ್ರತಿಪಾದನೆ, ವೊ. ಗಳಲ್ಲಿ ಒಂದನ್ನು ಆರಿಸಿಕೊಳ್ಳುವ ಸಂದರ್ಭದ : ಪಕ್ಷಾಂತರದ ; ಪಕ್ಷಾಂತರ ವಾಕ್ಯ ; ವಿಕಲ್ಪಕ. (ವ್ಯಾ.) ಪಕ್ಷಾಂತರ ಸೂಚಕ (ಸಂಬಂಧಾವ್ಯಯ). D. proposition ಎರಡು (ಅಥವಾ ಹೆಚ್ಚಾದ) ಪ್ರತಿಪಾದನೆಗಳಲ್ಲಿ ಯಾವುದಾದರೂ ಒಂದು ನಿಜವೆಂದು ಸಾಧಿಸುವ ಪ್ರತಿಜ್ಞೆ. **Disjúnctively** (ಕ್ರಿ. ವಿ.)

Disk, Disc ಡಿಸ್ಕ್ (ನಾ.) ತೆಳ್ಳನೆಯ ದುಂಡು ತಗಡು ; ಬಿಲ್ಲೆ ; ಬಟ್ಟು (ಉದಾ., ನಾಣ್ಯ) ; ಚಕ್ರ. (ಚಪ್ಪಟೆಯ ಅಥವಾ ಚಪ್ಪಟೆಯಾಗಿ ಕಾಣುವ) ದುಂಡನೆಯ ಗುರುತು, ತಲ ; ಬಿಂಬ ; ಮಂಡಲ (Sun's d. ಸೂರ್ಯ ಬಿಂಬ, ಮಂಡಲ). (ದೇಹ, ಸಸ್ಯ, ವೊ. ಗಳಲ್ಲಿ) ದುಂಡಾಗಿರುವ ಚಪ್ಪಟೆಯ ಭಾಗ. **Díscoid** ಡಿಸ್ಕಾಯ್ಡ್ (ಗು.) ಚಕ್ರಾಕಾರದ.

Dislíke ಡಿಸ್‌ಲೈಕ್ (ಕ್ರಿ. ಸಕ., ನಾ.) ಇಷ್ಟವಿಲ್ಲದಿರು ; ಸೇರದಿರು ; ಆಗದಿರು ; ಅಸಹ್ಯ ತೋರು ; ಪ್ರೀತಿಯಿಲ್ಲದಿರು. ಅಸಹ್ಯತೆ ; ಸೇರದಿರುವಿಕೆ ; ಅಪ್ರೀತಿ ; ಅರುಚಿ ; ದ್ವೇಷ (*To, of, for* ಉಪ. ದೊಡನೆ)

Díslocate ಡಿಸ್‌ಲೊಕೇಟ್ (ಕ್ರಿ. ಸಕ) (ಅಂಗ, ಯಂತ್ರಸಾಧನ, ವಿಚಾರಗಳು — ಇವನ್ನು) ಕೀಲು ತಪ್ಪಿಸು ; ಸ್ಥಳ ತಪ್ಪಿಸು ; ಸ್ಥಾನ ಚ್ಯುತಿ ಮಾಡು ; ಸ್ಥಾನ ಪಲ್ಲಟ ಮಾಡು ; ಅಸಂಬದ್ಧ ಮಾಡು. (ಭೂ. ವಿ.) (ಸ್ತರಗಳನ್ನು) ಅವಿಚ್ಛಿನ್ನವಾಗಿಲ್ಲದಂತೆ ಮಾಡು, ಪಲ್ಲಟ ಮಾಡು. **Dislocátion** (ನಾ.)

Dislódge ಡಿಸ್‌ಲಾಡ್ಜ್ (ಕ್ರಿ. ಸಕ.) (ಮು., ಕೋಟೆ ಕಟ್ಟಿಕೊಂಡಿರುವ, ರಕ್ಷಣಾವರಣದಲ್ಲಿರುವ, ಶತ್ರುವನ್ನು) ಹೊರಕ್ಕೆ ಹೊರಡಿಸು, ಸ್ಥಳಬಿಟ್ಟು ಹೊರಡುವಂತೆ ಮಾಡು, ಉಚ್ಚಾಟನೆ ಮಾಡು ; ನೆಲೆ ತಪ್ಪಿಸು. **Dislódg(e)ment** (ನಾ.)

Disloýal ಡಿಸ್‌ಲಾಯಲ್ (ಗು.) (ಸ್ನೇಹ, ವೊ. ಗಳಲ್ಲಿ) ಪ್ರಾಮಾಣಿಕತೆಯಿಲ್ಲದ ; (ಸ್ವಾಮಿ) ನಿಷ್ಠೆಯಿಲ್ಲದ ; (ರಾಜ) ಭಕ್ತಿಯಿಲ್ಲದ ; ರಾಜದ್ರೋಹ ಮಾಡುವ ; ತಪ್ಪಿ ನಡೆಯುವ. **Disloýalist** (ನಾ., ಗು.) ರಾಜದ್ರೋಹಿ ; ರಾಜದ್ವೇಷಿ. **Disloýally** (ಕ್ರಿ. ವಿ.) ; **Disloýalty** (ನಾ.)

Dísmal ಡಿಸ್‌ಮಲ್ (ಗು.) ಮಂಕು ಕವಿದ ; ಮಬ್ಬುಗವಿದ ; ನಿರುತ್ಸಾಹಗೊಳಿಸುವ ; ವ್ಯಥೆ ಹುಟ್ಟಿಸುವ ; ವಿಷಾದಕರ ; ಭೀಕರ ; ಭಯಂಕರ. The d. science ಅರ್ಥಶಾಸ್ತ್ರ. **Dísmals** (ನಾ., ಬ. ವ.) (The d. ನಿರುತ್ಸಾಹ ; ವಿಷಣ್ಣತೆ ; ಮಂಕು). **Dísmally** (ಕ್ರಿ. ವಿ.) ; **Dísmalness** (ನಾ.)

Dismántle ಡಿಸ್‌ಮ್ಯಾಂಟ್‌ಲ್ (ಕ್ರಿ. ಸಕ.) ಹೊದಿಕೆ, ರಕ್ಷಾವರಣ, ವೊ. ನ್ನು ತೆಗೆದುಬಿಡು ; ಕೆಡವಿಬಿಡು ; ಬತ್ತಲೆ ಮಾಡು ; ಹೊದಿಕೆ, ಕವಚ, ಕಳಚು. (ಕೋಟೆ, ಹಡಗು, ವೊ. ಕ್ಕೆ) ರಕ್ಷಣೆ ಕಳೆ. ಯಂತ್ರ, ವೊ. ನ್ನು ಬಿಚ್ಚು. ಕೆಡವು ; ಹಾಳುಮಾಡು ; ನಾಶಮಾಡು. **Dismántlement** (ನಾ.)

Dismást ಡಿಸ್‌ಮಾಸ್ಟ್ (ಕ್ರಿ. ಸಕ.) (ಹಡಗಿನ) ಪಟಸ್ತಂಭವನ್ನು (ಗಳನ್ನು) ತೆಗೆದುಹಾಕು ; ಕೂವೆ ಕಿತ್ತು ಹಾಕು, ಮುರಿದುಹಾಕು.

Dismaý ಡಿಸ್‌ಮೇ (ಕ್ರಿ. ಸಕ., ನಾ.) ನಿರುತ್ಸಾಹ(ಗೊಳಿಸು) ; ದಿಗಿಲು (ಗೊಳಿಸು) ; ಭಯಾತಿಶಯ (ಹುಟ್ಟಿಸು) ; ಗಾಬರಿ (ಹುಟ್ಟಿಸು). ಭಯ ಭ್ರಾಂತಿ.

Dismémber ಡಿಸ್‌ಮೆಂಬರ್ (ಕ್ರಿ. ಸಕ.) ಅಂಗಾಂಗಗಳನ್ನು ಕಳಚಿ ಹಾಕು ; ಕೈಕಾಲು ಕಡಿದುಹಾಕು ; ಅಂಗಚ್ಛೇದ ಮಾಡು. (ಸಾಮ್ರಾಜ್ಯ, ದೇಶ — ಇವನ್ನು) ಒಡೆ, ಛಿನ್ನಭಿನ್ನ ಮಾಡು, ಹರಿದು ಹಂಚು, ತುಂಡು ತುಂಡು ಮಾಡು, ಪಾಲು ಮಾಡು. **Dismémberment** (ನಾ.)

Dismíss ಡಿಸ್‌ಮಿಸ್ (ಕ್ರಿ. ಸಕ., ನಾ.) (ಸಭೆಯನ್ನು, ಸೈನ್ಯವನ್ನು) ಕಳುಹಿಸಿಬಿಡು, ಚೆದರಿಸಿಬಿಡು, ಒಟ್ಟು ಒಡೆ. (ಸೈನ್ಯ) ಕವಾಯತು ಮುಗಿಯಿತು ಹೊರಡಿರಿ (ಎಂದು ಕೊಡುವ ಆಜ್ಞೆ) : ಚೆದರು (ನಾ. ಸಹ). (The d. ಕವಾಯತು ಮುಗಿದಮೇಲೆ ಬಿಡುಗಡೆ, ಚೆದರಿಕೆ). ಬೀಳ್ಕೊಡು ; ಕಳುಹಿಸು ; ಹೋಗಲು ಅಪ್ಪಣೆಕೊಡು. (ಕೆಲಸದಿಂದ, ಉದ್ಯೋಗದಿಂದ) ತೆಗೆದುಹಾಕು, ವಜಾ ಮಾಡು, ವಿಸರ್ಜಿಸು, ಮನೆಗೆ ಕಳುಹಿಸು (He was dismissed the army, or from the army ಅವನನ್ನು ಸೈನ್ಯದಿಂದ ವಜಾಮಾಡಿದರು). (ಎದುರಿಗೆ ನಿಲ್ಲದಂತೆ) ಕಳುಹಿಸಿಬಿಡು ; ತೊಲಗಿಸಿಬಿಡು ; ಹೊರಡಿಸಿಬಿಡು. ಮನಸ್ಸಿಗೆ ಹಚ್ಚಿಕೊಳ್ಳದಿರು ; ಮನಸ್ಸಿನಿಂದ ದೂರಮಾಡು. (ಒಂದು ವಿಷಯವನ್ನು) ವಿಚಾರಕ್ಕವಕಾಶ ಕೊಡದೆ ಥಟ್ಟನೆ ಮುಗಿಸು. (ನ್ಯಾ. ಶಾ.) (ಮೊಕದ್ದಮೆ) ಹಿಡಿಯದಿರು ; (ಮೊಕದ್ದಮೆ ಕೇಳಲು ಮುಂದೆ ಅವಕಾಶ ಕೊಡದೆ) ವಜಾ ಮಾಡು. (ಕ್ರಿಕೆಟ್ ಆಟದಲ್ಲಿ) (ದಾಂಡುಗಾರನ ವಿಷಯವಾಗಿ, ಚೆಂಡನ್ನು) ಹೊಡೆ ; (ಎಸೆಗಾರನಿಂದ ಬಂದ ಚೆಂಡನ್ನು) ಹೊಡೆದು (ಸಾ. ಎಲ್ಲೆಗೆ) ಕಳುಹಿಸಿಬಿಡು ; (ಚೆಂಡುಹಿಡಿಯುವವರು ದಾಂಡುಗಾರನ, ಎದುರು ಪಕ್ಷದವರ) ಆಟ ಕಳೆ. **Dismíssal** (ನಾ.) ; **Dismíssion** (ನಾ.) (ಈಗ ಅಪೂರ್ವ) ; **Dismíssible** (ಗು.)

Dismoúnt ಡಿಸ್‌ಮೌಂಟ್ (ಕ್ರಿ., ನಾ.) (ಕುದುರೆ, ವೊ. ಗಳಿಂದ) ಇಳಿ(ಯುವುದು), ಇಳಿಸು(ವುದು) ; ಕೆಳಗಿಳಿ(ಯುವುದು) ; ಕೆಳಗಿಳಿಸು(ವುದು). (ಕುದುರೆ, ಶತ್ರು, ವೊ.) ಕೆಡವು, ಉರುಳಿಸು. ಒಂದು ವಸ್ತುವನ್ನು ಅದು ಕುಳಿತಿರುವ ಆಧಾರದಿಂದ ಹೊರದೆಗೆ (ಮು., ಫಿರಂಗಿಯನ್ನು ಅದರ ವಾಹನದಿಂದ). (ಯಂತ್ರಭಾಗಗಳನ್ನು) ಕಳಚು.

Disobédience, etc. Disobey ನೋಡಿ.

Disobeý ಡಿಸ್‌ಒಬೇ (ಕ್ರಿ.) ಅವಿಧೇಯನಾಗಿ ವರ್ತಿಸು ; ಅವಜ್ಞೆ ಮಾಡು ; ಮಾತು ನಡಸದಿರು ; ಕಟ್ಟು ಮೀರು, ಮುರಿ. (ಒಬ್ಬನ ಮಾತನ್ನು, ಕಾನೂನನ್ನು) ಮೀರು, ಅತಿಕ್ರಮಿಸು, ಲಕ್ಷಿಸದಿರು. **Disobédience** ಡಿಸ್‌ಒಬೀಡಿಯನ್ಸ್ (ನಾ.) ಅವಿಧೇಯತೆ ; ಅಪ್ಪಣೆ ಮೀರುವುದು ; ಆಜ್ಞೋಲ್ಲಂಘನೆ (D. to orders, master, etc.) ; ಎದುರುಬೀಳುವುದು ; ನಿಯಮ ತಪ್ಪುವುದು. **Disobédient** (ಗು.) ಅವಿಧೇಯ ; ಮಾತು ಕೇಳದ ; ಆಜ್ಞೆ ಪಾಲಿಸದ. **Disobédiently** (ಕ್ರಿ. ವಿ.)

Disoblíge ಡಿಸ್‌ಒಬ್ಲೈಜ್ (ಕ್ರಿ. ಸಕ.) ಒಬ್ಬನ ಅನುಕೂಲತೆಯನ್ನು, ಅಭಿಲಾಷೆಯನ್ನು, ಲಕ್ಷಿಸದಿರು, ನಡಸಿಕೊಡದಿರು ; ಅನನುಕೂಲ, ತೊಂದರೆ, ಆಗುವಂತೆ ನಡೆ ; ನಿರ್ದಾಕ್ಷಿಣ್ಯ ತೋರು. **Disoblíging** (ಗು.) ; **Disoblígingly** (ಕ್ರಿ. ವಿ.) ; **Disoblígingness** (ನಾ.)

Disórder ಡಿಸ್‌ಆರ್ಡರ್ (ನಾ., ಕ್ರಿ. ಸಕ.) ಕ್ರಮವಿಲ್ಲದಿರುವುದು ; ಅಕ್ರಮ; ತಾರುಮಾರು, ಕ್ರಮ ಭಂಗ,—ಹಾನಿ (ಮಾಡು) ; ಅವ್ಯವಸ್ಥೆ (ಮಾಡು) ; ಚೆಲ್ಲಾಪಿಲ್ಲಿ (ಮಾಡು). ಓರಣವಿಲ್ಲದಿರುವುದು ; ಅಣಿಯಿಲ್ಲದಿರುವುದು ; ಅಣಿಗೇಡು. ಗದ್ದಲ ; ಗಲಭೆ ; ಗೊಂದಲ ; ಗಲಿಬಿಲಿ ; ಗಲಾಟೆ ; ದೊಂಬಿ ; ಕೋಲಾಹಲ ; ದಂಗೆ. ಅಸ್ವಸ್ಥತೆ ; ವ್ಯಾಧಿ ; ಬೇನೆ; ರೋಗ. (ಕ್ರಿ.) ಅಣಿ ತಪ್ಪಿಸು ; ಓರಣಗೆಡಿಸು ; ಗಲಿಬಿಲಿ ಮಾಡು. ದೇಹಸ್ಥಿತಿ ಕೆಡಿಸು ; ಆರೋಗ್ಯ ಕೆಡಿಸು ; ರೋಗ ತರು. **Disórderly** (ಗು.) ಅಣಿಗೆಟ್ಟ ; ಓರಣವಿಲ್ಲದ ; ಅಚ್ಚುಕಟ್ಟಿಲ್ಲದ ; ಕ್ರಮ ತಪ್ಪಿದ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಕ್ರಮದ; ಅವ್ಯವಸ್ಥೆಯ; ಗೊಂದಲದ; ಗಲಭೆಯ; ದೊಂಬಿಯ (D. house ಜೂಜಾಟದ, ವ್ಯಭಿಚಾರದ, ಮನೆ). **Disórderliness** (ನಾ.)

Disórganize ಡಿಸ್‌ಆರ್ಗನೈಸ್ (ಕ್ರಿ. ಸಕ.) ರಚನೆಗೆಡಿಸು; ಒಕ್ಕಟ್ಟು ಕೆಡಿಸು; ಕ್ರಮಭಂಗ ಮಾಡು; ಗಲಬಿಲಿ ಮಾಡು; ಅವ್ಯವಸ್ಥೆ ಮಾಡು. **Disorganizátion** (ನಾ.)

Disórientate ಡಿಸ್‌ಓ(ಆ)ರಿಯೆಂಟೇಟ್ (ಕ್ರಿ. ಸಕ.) (ಚರ್ಚಿನಲ್ಲಿ) ಪವಿತ್ರ ಗಾಯನ ಸ್ಥಾನದ ಭಾಗವನ್ನು ನೇರವಾಗಿ ಪೂರ್ವ ದಿಕ್ಕಿಗೆ ತಿರುಗಿ ಕೊಂಡಿರದಂತೆ ಇಡು. ನೆಲೆ ತಿಳಿಯದಂತೆ (ಒಬ್ಬನನ್ನು) ಭ್ರಾಂತಿ ಗೊಳಿಸು, ದಿಕ್ಕು ತೋರದಂತೆ ಮಾಡು, ದಿಗ್ಭ್ರಮೆಗೊಳಿಸು (ರೂಪ. ಸಹ). **Disorientátion** (ನಾ.)

Disown ಡಿಸ್‌ಓನ್ (ಕ್ರಿ. ಸಕ.) ನಿರಾಕರಿಸು; ಅಂಗೀಕರಿಸದೆಹೋಗು; ಸ್ವೀಕರಿಸದಿರು; ತೊರೆ; ತ್ಯಜಿಸು; ತನ್ನದಲ್ಲವೆನ್ನು; (-) ಗೆ ಸ್ವಾಮಿ ನಿಷ್ಠೆ ತೋರದಿರು.

Dispárage ಡಿಸ್‌ಪ್ಯಾರೆ(ರಿ)ಜ್ (ಕ್ರಿ. ಸಕ.) ಅಗೌರವ ತರು; ಕೀಳ್ಮಾಡು; ಅಲ್ಲಗಳೆ; ಜರೆ; ಇಳಿಕೆಗೈ; ಹೀನಯಿಸಿ ಮಾತನಾಡು; ಲಾಘವ ಮಾಡು. **Dispáragement** (ನಾ.); **Dispáragingly** (ಕ್ರಿ. ವಿ.)

Dísparate ಡಿಸ್ಪರೆಟ್ (ಗು., ನಾ.) ಸತ್ವತಃ ಬೇರೆಯಾದ; ಪ್ರತ್ಯೇಕ ತೆರದ; ಪರಸ್ಪರ ಸಂಬಂಧವಿಲ್ಲದ; ಭಿನ್ನ; ಭಿನ್ನ ಜಾತಿಯ; ವೈದೃಶ್ಯದ. (ನಾ; ಸಾ., ಬ. ವ. ದಲ್ಲಿ) ಪರಸ್ಪರ ಹೋಲಿಕೆಯೇ ಇಲ್ಲದ ವಸ್ತುಗಳು; ಅಜಗಜಾಂತರ. **Dísparately** (ಕ್ರಿ. ವಿ.); **Dísparateness** (ನಾ.); **Dispárity** ಡಿಸ್‌ಪ್ಯಾರಿಟಿ (ನಾ.) ಅಸಮತೆ; ಭಿನ್ನತೆ; ವ್ಯತ್ಯಾಸ; ಭೇದ; ಹೆಚ್ಚುಕಡಮೆ; ತಾರತಮ್ಯ; ಹೊಂದಿಕೆಯಿಲ್ಲದಿರುವುದು.

Dispárity. **Disparate** ನೋಡಿ.

Dispárk ಡಿಸ್‌ಪಾರ್ಕ್ (ಕ್ರಿ. ಸಕ.) ಉದ್ಯಾನ ಭೂಮಿಯನ್ನು ಬೇರೆ ಉಪಯೋಗಕ್ಕೆ ತಿರುಗಿಸು, ವಿನಿಯೋಗಿಸು (ರೂಪ. ಸಹ)

Dispárt ಡಿಸ್‌ಪಾರ್ಟ್ (ಕ್ರಿ.) ಪ್ರತ್ಯೇಕಿಸು; ಬೇರೆ ಮಾಡು; ಬೇರ್ಪಡಿಸು; ಒಡೆ; ಭೇದಿಸು. ಬೇರೆ ಬೇರೆ ದಿಕ್ಕುಗಳಲ್ಲಿ ಹೋಗು. ಹಂಚು.

Dispássionate ಡಿಸ್‌ಪ್ಯಾಷನೆಟ್ (ಗು.) ಉದ್ರೇಕವಿಲ್ಲದ; ಶಾಂತ; ಪಕ್ಷಪಾತವಿಲ್ಲದ; ರಾಗದ್ವೇಷವಿಲ್ಲದ. **Dispássionately** (ಕ್ರಿ. ವಿ.); **Dispássionateness** (ನಾ.)

Dispátch, Des- ಡಿಸ್‌ಪ್ಯಾಚ್ (ಕ್ರಿ., ನಾ.) (ಹೋಗಬೇಕಾದ ಸ್ಥಳಕ್ಕೆ ಅಥವಾ ಒಂದು ಉದ್ದೇಶಕ್ಕಾಗಿ) ಕಳುಹಿಸಿಕೊಡು; ಸಾಗಹಾಕು; ರವಾನಿಸು. ಯಮಲೋಕಕ್ಕೆ ಕಳುಹಿಸು; ಸಾವಿನೇಟು ಕೊಡು; ಕೊಲ್ಲು. (ಕಾರ್ಯವನ್ನು, ಉದ್ಯೋಗವನ್ನು) ಸಾವಕಾಶವಿಲ್ಲದಂತೆ ಮಾಡು; ಕೊನೆಮುಟ್ಟಿಸು; ಮುಗಿಸಿಬಿಡು. (ಆಹಾರವನ್ನು) ಬೇಗ ತಿಂದುಬಿಡು. (ಪ್ರಾಚೀ. ಪ್ರ.) ಜಾಗ್ರತೆಮಾಡು; ತ್ವರೆಮಾಡು. (ನಾ.) (ಚಾರ, ಪತ್ರ, ಮೊ. ನ್ನು) ಕಳುಹಿಸಿಬಿಡುವುದು; ರವಾನೆ. ಕೊಂದು ಹಾಕುವುದು [Happy d. ಜಪಾನಿನವರು ಆಚರಿಸುವಂಥ (ಹರಿಕರಿ ಎಂಬ) ಆತ್ಮ ಹತ್ಯೆ: ಸುಖ ಮರಣ]. ಕೆಲಸವನ್ನು ಆಲಸ್ಯಮಾಡದೆ ಕೂಡಲೆ ತೀರಿಸಿಬಿಡುವುದು: ಕ್ಷಿಪ್ರ ವ್ಯವಸ್ಥೆ; ಕ್ಷಿಪ್ರಕಾರಿತ್ವ; ಕಾರ್ಯ ದಕ್ಷತೆ; ತ್ವರೆ. ಬರೆದು ಕಳುಹಿಸಿದ ಸಮಾಚಾರ, ಕಾಗದ, ಪತ್ರ (ಮು., ರಾಜ್ಯಾಡಳಿತ ವಿಚಾರದ ಸರ್ಕ್ಯಾರಿ ಪತ್ರ) (D.- box ಕಾಗದ ಪತ್ರಗಳನ್ನು ಇಟ್ಟು ತೆಗೆದುಕೊಂಡುಹೋಗುವ ಪೆಟ್ಟಿಗೆ: ಕಾಗದ ಪತ್ರಗಳ ಕೈ ಸಂದೂಕು). ಸಾಮಾನು, ಮೊ. ನ್ನು ಸಾಗಿಸುವ ಏರ್ಪಾಡು, ಸಾಧನ. D.-rider ಸೈನಿಕ ಸಮಾಚಾರವನ್ನು ಒಯ್ಯುವ ಕುದುರೆ ಸವಾರ ಅಥವಾ ಮೋಟಾರ್ ಸೈಕಲನ ಸವಾರ; ಓಲೆ ಸವಾರ.

Dispél ಡಿಸ್ಪೆಲ್ (ಕ್ರಿ. ಸಕ.) (ಭಯ, ಕತ್ತಲೆ, ಮೊ. ನ್ನು) ಹೋಗಲಾಡಿಸು, ಓಡಿಸು, ಚೆದರಿಸು, ತೊಲಗಿಸು, ದೂರ ಮಾಡು.

Dispénsable, Dispénsary, etc. **Dispense** ನೋಡಿ.

Dispénse ಡಿಸ್‌ಪೆನ್ಸ್ (ಕ್ರಿ.) ಹಂಚು; ಹಂಚಿ ಕೊಡು; ಕೊಡು. (ಮತ ಸಂಸ್ಕಾರ, ನ್ಯಾಯ) ನಡಸು. (ಔಷಧವನ್ನು) ಮಾಡಿಕೊಡು. ವಿನಾಯಿತಿ ಕೊಡು. ಕರ್ತವ್ಯದಿಂದ ಬಿಡುಗಡೆ ಮಾಡು. D. with (ನಿಯಮ) ಸಡಿಲಿಸು; (-) ಇಂದ ವಿನಾಯಿತಿ ಕೊಡು. (ಪ್ರಮಾಣದ) ಬಂಧನ ತಪ್ಪಿಸು, ಬಿಡಿಸು; ಪ್ರಮಾಣ ವಿಮೋಚನೆ ಮಾಡು. ಆವಶ್ಯಕವಿಲ್ಲದಂತೆ ಮಾಡು; ಇಲ್ಲದೆ ಕಾರ್ಯ ನಡಸು; ಬಿಟ್ಟುಬಿಡು. **Dispénser** (ನಾ.) (ಮು., ವೈದ್ಯ ಬರೆದುಕೊಟ್ಟ) ಔಷಧಗಳನ್ನು ಮಾಡಿಕೊಡುವವನು. **Dispénsable** — ಸಬ್‌ಲ್ (ಗು.) (ಕ್ರೈಸ್ತ ಮತ ನಿಯಮ, ನ್ಯಾಯ, ಶಪಥ — ಇವು) ಕೆಲವು ವಿಶೇಷ ಸಂದರ್ಭಗಳಲ್ಲಿ ಸಡಿಲಿಸಬಹುದಾದ; ಅವಶ್ಯವಾಗಿ ಬೇಕಾಗದ; ಅನವಶ್ಯಕ; ಇಲ್ಲದೆ ನಡಸಬಹುದಾದ, ಮಾಡಬಹುದಾದ; ಬಿಡಬಹುದಾದ; ವರ್ಜನಸಾಧ್ಯ; ವಿನಾಯಿತಿ ಕೊಡಬಹುದಾದ. **Dispénsary** (ನಾ.) (ಮು., ಧರ್ಮಾರ್ಥವಾಗಿ) ಔಷಧಗಳನ್ನು ಕೊಡುವ ಸ್ಥಳ; ಔಷಧ ಶಾಲೆ; ಔಷಧದಂಗಡಿ. **Dispensátion** — ಸೇಷನ್ (ನಾ.) ಹಂಚುವುದು; ಹಂಚಿ ಕೊಡುವುದು; ಹಂಚಿಕೆ; ವಿನಿಯೋಗ. (ಮು., ಭಗವಂತನು ಪ್ರಪಂಚವನ್ನು) ವ್ಯವಸ್ಥೆ ಮಾಡುವುದು, ನಡಸುವುದು. (ಭಗವಂತನಿಂದ ಅಥವಾ ಪ್ರಕೃತಿಯಿಂದ ಆದ) ವ್ಯವಸ್ಥೆ; ದೈವ ನಿಯಾಮಕ; ಪ್ರಕೃತಿ ನಿಯಾಮಕ; ವಿಧಿ ವಿಧಾನ. ಒಂದು ಕಾಲದಲ್ಲಿ ಆಚರಣೆಯಲ್ಲಿರುವ ಮತವ್ಯವಸ್ಥೆ (Christian d.). (ಮು., ಕ್ರೈಸ್ತ ಮತವಿಧಿಗಳಲ್ಲಿ ನಿಯಮಿಸಿರುವ) ದಂಡ ಅಥವಾ ತೆರಿಗೆಯ ವಿನಾಯಿತಿ; ವಿಮೋಚನೆ (*With, from* ಉಪ. ದೊಡನೆ). ಇಲ್ಲದೆಯೇ ನಡಸಿಕೊಂಡು ಹೋಗುವುದು (*With* ಉಪ. ದೊಡನೆ); ಬಿಟ್ಟುಬಿಡುವುದು; ವರ್ಜನೆ.

Dispeóple ಡಿಸ್‌ಪೀಪ್‌ಲ್ (ಕ್ರಿ. ಸಕ.) ಜನವಿಲ್ಲದಂತೆ ಮಾಡು; ನಿರ್ಜನ ಮಾಡು.

Dispérse ಡಿಸ್‌ಪರ್ಸ್ (ಕ್ರಿ.) ಚೆದರಿಸು; ಚೆದರಿಹೋಗು; ಓಡಿಸು; ಹೋಗು; ಚೆಲ್ಲು; (ದಿಕ್ಕಾಪಾಲಾಗಿ) ಎರಚು, ಹರಡು, ಕಳುಹಿಸು; ಚೆಲ್ಲಾಪಿಲ್ಲಿ ಮಾಡು, — ಆಗು; ಸೋಲಿಸಿ ಚೆದರಿಸು; ಸೋತು ಚೆದರು. ಬೇರೆ ಬೇರೆ ಪ್ರದೇಶಗಳಿಗೆ ಕಳುಹಿಸು; — ಳಲ್ಲಿ ನಿಲ್ಲಿಸು. ಚಲಾವಣೆ ಮಾಡು; ಪ್ರಸಾರ ಮಾಡು. (ದೃ. ವಿ.) (ಬಿಳಿಯ ಬೆಳಕನ್ನು) ಬಣ್ಣಬಣ್ಣದ ಕಿರಣಗಳಾಗಿ ಒಡೆ; ವಿಕಿರಣ ಮಾಡು. **Dispérsal** (ನಾ.); **Dispérsedly** — ಸೆಡ್ಲಿ (ಕ್ರಿ. ವಿ.); **Dispérsive** — ಸಿವ್ (ಗು.) ಚೆದರುವ, ಪ್ರತ್ಯೇಕ ಭಾಗಗಳಾಗುವ (ಗುಣವುಳ್ಳ); ವಿಕಿರಣ ಕಾರಕ. **Dispérsively** (ಕ್ರಿ. ವಿ.); **Dispérsiveness** (ನಾ.); **Dispérsion** — ಪರ್ಷನ್ (ನಾ.) ಚೆದರಿಕೆ; ಹರಡಿಕೆ; ಪ್ರಸಾರ; ವಿಕಿರಣ. The D. ಸೆರೆಸಿಕ್ಕಿದಮೇಲೆ ಇತರ ಮತಸ್ಥರ ಮಧ್ಯದಲ್ಲಿ ಹರಡಿಹೋದ ಯೆಹೂದ್ಯರು.

Dispírit ಡಿಸ್ಪಿರಿಟ್ (ಕ್ರಿ. ಸಕ.) ಉತ್ಸಾಹ ಕುಗ್ಗಿಸು; ಎದೆಗುಂದಿಸು; ಧೈರ್ಯಗೆಡಿಸು; ವಿಷಣ್ಣ ಮಾಡು; ಖಿನ್ನ ಮಾಡು. **Dispíritedly** (ಕ್ರಿ. ವಿ.)

Dispíteous ಡಿಸ್‌ಪಿಟಿಯಸ್ (ಗು.) ಕರುಣೆಯಿಲ್ಲದ; ನಿಷ್ಕರುಣ; ಕಲ್ಲೆದೆಯ; ನಿರ್ದಯ.

Displáce ಡಿಸ್‌ಪ್ಲೇಸ್ (ಕ್ರಿ. ಸಕ.) ಸ್ಥಳ ತಪ್ಪಿಸು; ಸ್ಥಾನ ಪಲ್ಲಟ ಮಾಡು; ಪದಭ್ರಷ್ಟ ಮಾಡು; ಉಚ್ಚಾಟನೆ ಮಾಡು; ಕದಲಿಸು; ಅಧಿಕಾರ ಕಳೆ; ಹೊರಡಿಸಿಬಿಡು; (ಒಬ್ಬನ) ಸ್ಥಳವನ್ನಾಕ್ರಮಿಸು; ಒಂದರ ಸ್ಥಾನದಲ್ಲಿ ಮತ್ತೊಂದನ್ನಿಡು; ಪ್ರತಿಯಾಗಿಡು. **Displácement** (ನಾ.) (ಕ್ರಿಯಾರ್ಥಗಳಲ್ಲಿ). ಸ್ಥಾನಚ್ಯುತಿ; ಸ್ಥಾನ ಪಲ್ಲಟ. ಒಂದು ವಸ್ತು ಆದ್ಯಸ್ಥಾನದಿಂದ ಕದಲಿರುವ ಮೊತ್ತ: ಸ್ಥಾನಾಂತರ. ಒಂದು ದ್ರವದಲ್ಲಿ ಒಂದು ಘನವಸ್ತು ಮುಳುಗಿರುವ ಅಥವಾ ತೇಲುತ್ತಿರುವ ಸಂದರ್ಭದಲ್ಲಿ ಅದು ಆಕ್ರಮಿಸಿಕೊಂಡಿರುವ ಆ ದ್ರವದ ಮೊತ್ತ ಅಥವಾ ತೂಕ: ಸ್ಥಾನಾಕ್ರಮಣ (A ship with a d. of 100,000 tons ಒಂದು ಲಕ್ಷ ಟನ್ನು ತೂಕದ ನೀರಿನ ಭಾಗವನ್ನು ಆಕ್ರಮಿಸಿಕೊಂಡಿರುವ ಹಡಗು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Displaý ಡಿಸ್‌ಪ್ಲೇ (ಕ್ರಿ. ಸಕ., ನಾ.) ತೋರಿಸು ; ಕಾಣಿಸು ; ಪ್ರದರ್ಶಿಸು ; ಆಡಂಬರವಾಗಿ ತೋರಿಸು ; ಮೆರಸು ; ಮರೆದೆಗೆ ; ಬಹಿರಂಗ ಮಾಡು. ಸೂಚಿಸು. (ನಾ.) — ವುದು ; ಪ್ರದರ್ಶನ ; ತೋರ್ಕೆ ; ಆಡಂಬರ. (ಮುದ್ರಣ) ಗಮನ ಸೆಳೆಯುವಂತೆ ಮುದ್ರಣಾಕ್ಷರಗಳನ್ನು ಅಂದವಾಗಿ ಅಳವಡಿಸುವುದು : ಆಕರ್ಷಕ ಮುದ್ರಣ.

Displeáse ಡಿಸ್‌ಪ್ಲೀಸ್ (ಕ್ರಿ. ಸಕ.) ಅಸಮಾಧಾನಪಡಿಸು ; ಅಪ್ರಿಯ ಮಾಡು ; ಮನಸ್ಸು ಕೆಡಿಸು ; ಕೋಪಗೊಳಿಸು ; ಮನಸ್ಸಿಗೆ ಒಪ್ಪದಿರು [Be displeased ಅಸಮಾಧಾನ ಪಡು ; ಬೇಸರಗೊಳ್ಳು ; ಕೋಪಗೊಳ್ಳು ; ಒಪ್ಪದಿರು (*At*, *with*, ಉಪ. ದೊಡನೆ)]. **Displeásing** (ಗು.) ; **Displeásingly** (ಕ್ರಿ. ವಿ.) ; **Displeásure** ಡಿಸ್‌ಪ್ಲೆಷರ್ (ನಾ., ಕ್ರಿ. ಸಕ.) ಅಸಮಾಧಾನ ; ಅಸಂತೋಷ ; ಅಸಮ್ಮತಿ ; ಕೋಪ. (ಕ್ರಿ.) ಅಸಮಾಧಾನ ಪಡಿಸು ; ಅಸಂತೋಷವುಂಟುಮಾಡು ; ಕೋಪಗೊಳಿಸು ; ರೇಗಿಸು.

Displúme ಡಿಸ್‌ಪ್ಲೂಮ್ (ಕ್ರಿ. ಸಕ.) (ಕಾವ್ಯ) ಪುಕ್ಕ ತರಿ. (ರೂಪ.) ಭೂಷಣ ಕಳೆ ; ಮಾನ ಕಳೆ ; ಗೌರವ ಕೆಡಿಸು ; ಪದಚ್ಯುತಿ ಮಾಡು.

Dispórt ಡಿಸ್‌ಪೋರ್ಟ್ (ಕ್ರಿ., ಸ್ವಾರ್ಥಕ, ಅಕ., ನಾ.) (ಪ್ರಾಚೀ. ಪ್ರ.) ಕುಣಿದಾಡು ; ವಿಹರಿಸು ; ಸಂತೋಷದಿಂದ ಮೆರೆ ; ನಲಿದಾಡು ; ಆಟವಾಡು. (ನಾ.) ವಿಹಾರ ; ವಿನೋದ ; ಕೇಳಿ ; ಕ್ರೀಡೆ ; ಆಟ.

Dispósal, etc. **Dispose** ನೋಡಿ.

Dispóse ಡಿಸ್‌ಪೋಸ್ (ಕ್ರಿ.) (ತಕ್ಕಂತೆ, ಆಯಾ ಸ್ಥಳಗಳಲ್ಲಿ) ಇಡು ; ಅಣಿಯಾಗಿಡು ; ಒಂದು ಕ್ರಮದಲ್ಲಿಡು ; ವಿನ್ಯಾಸ ಮಾಡು; ವ್ಯೂಹ ರಚಿಸು. (ಮನುಷ್ಯನನ್ನು, ಮನಸ್ಸನ್ನು) ಒಂದು ಸ್ಥಿತಿಗೆ ತರು (ಮು., ಭೂ. ಕೃ. ನಲ್ಲಿ : Well-disposed ಅನುಕೂಲ ಮನೋಭಾವವುಳ್ಳವನಾಗಿ ; Ill-disposed ಪ್ರತಿಕೂಲ —). ಓಲಿಸು ; ಇಷ್ಟಪಡುವಂತೆ, ಮನಸ್ಸಿಡುವಂತೆ, ಮಾಡು ; ಪ್ರವೃತ್ತಿಯುಂಟುಮಾಡು. ಘಟನೆಗಳ ನಡೆಯನ್ನು ಗೊತ್ತುಮಾಡು ; ಗೊತ್ತಿಗೆ ತರು ; ವ್ಯವಸ್ಥೆ ಮಾಡು ; ನಿಯಾಮಕ ಮಾಡು (Man proposes God disposes ಆಡುವುದು ಮಾಡುವುದು ನಮ್ಮ ಇಚ್ಛೆ, ಆಗುವುದು ಹೋಗುವುದು ದೈವೇಚ್ಛೆ). D. of ಗೊತ್ತುಮಾಡು ; ವ್ಯವಸ್ಥೆ ಮಾಡು ; ಯುಕ್ತತೋರಿದಂತೆ ನಡಸು. ತನ್ನ ಕೈಯಿಂದ ತೊಲಗಿಸಿಕೊ ; ಸುಮ್ಮನೆ ಹಾಕಿಬಿಡು ; ಮುಗಿಸಿಬಿಡು ; ಕೊಂದುಬಿಡು. (ಹಕ್ಕು, ವಾದ, ಎದುರಾಳಿ —ಇವನ್ನು) ಫೈಸಲು ಮಾಡು, ತೀರಿಸಿಬಿಡು ; ಧ್ವಂಸ ಮಾಡು. (ಕ್ರಿಕೆಟ್ ಆಟದಲ್ಲಿ) ಆಟ ಕಳೆದುಬಿಡು. (ಆಹಾರವನ್ನು) ತಿನ್ನು, ಉಣ್ಣು. ವಿಲೆ ಮಾಡು ; ಮಾರಿಬಿಡು. **Dispósable** (ಗು.) ಫೈಸಲು ಮಾಡಬಹುದಾದ ; ತೊಲಗಿಸಬಹುದಾದ. ವಹಿಸಿಬಿಡಬಹುದಾದ ; ಉಪಯೋಗಿಸಿಬಿಡಬಹುದಾದ. ತನ್ನ ಕೈಯಲ್ಲಿರುವ. **Disposabílity** (ನಾ.) ; **Dispósal** (ನಾ.) ಫೈಸಲು (ಮಾಡುವುದು) ; ತೊಲಗಿಸಿಬಿಡುವುದು ; ವ್ಯವಸ್ಥೆ ಮಾಡುವುದು ; ವಿನಿಯೋಗ (ಮಾಡುವುದು) ; ಹಂಚಿಕೆ (ಮಾಡುವುದು) ; ನಿರ್ವಾಹ. ವಿಕ್ರಯ. ವಶ (At one's d. ಒಬ್ಬನ ವಶದಲ್ಲಿ). ಇಡುವುದು ; ವಿನ್ಯಾಸ ; ವ್ಯವಸ್ಥೆ ; ಏರ್ಪಾಟು ; ಕ್ರಮ. **Dispóser** (ನಾ.) ಪರಾಧೀನ ಮಾಡುವವನು. **Disposítion** (ನಾ.) ಅಣಿಗೂಡಿಸುವುದು ; ವಿನ್ಯಾಸ ; ಭಾಗಗಳ ಪರಸ್ಪರ ಸ್ಥಾನ. (ಸಾ., ಬ. ವ. ದಲ್ಲಿ) ರಚನಾ ಕ್ರಮ ; ವ್ಯವಸ್ಥೆ ; ಸೌರಣೆ ; ಸನ್ನಾಹ. (ಮೇಲೆ ಬೀಳುವುದಕ್ಕೆ ಸಿದ್ಧವಾಗಿ ಅಥವಾ ರಕ್ಷಣೆಯ ಕಾರ್ಯಕ್ಕಾಗಿ ಸೈನ್ಯವನ್ನು) ಸಜ್ಜುಗೊಳಿಸಿರುವುದು : ವ್ಯೂಹ ರಚನೆ. ವಿಧಿ ; ವ್ಯವಸ್ಥೆ. ದೈವ ನಿಯಾಮಕ (A d. of Providence). (ಅಂತಿಮ ಇಷ್ಟಪತ್ರದ ಅಥವಾ ಇತರ ದಸ್ತೈವಜಿನ ಮೂಲಕ) ಕೊಡುವುದು, ವಿನಿಯೋಗ. ಅಧೀನ ; ವಶ (At one's d. ತನ್ನ ಅಧೀನದಲ್ಲಿ). (ಸ್ವಾಭಾವಿಕ) ಪ್ರವೃತ್ತಿ ; ಪ್ರಕೃತಿ ; ಮನೋಧರ್ಮ ; ಓಲು, ಮನಸ್ಸು ; ಇಷ್ಟ.

Disposséss ಡಿಸ್‌ಪೊಸೆಸ್ (ಕ್ರಿ. ಸಕ.) (ಮನುಷ್ಯನನ್ನು) ಸ್ಥಳ ಬಿಟ್ಟು ಹೋಗುವಂತೆ ಮಾಡು ; ಹೊರಡಿಸಿಬಿಡು ; ಸ್ಥಾನಭ್ರಷ್ಟ ಮಾಡು ; ಉಚ್ಚಾಟನೆ ಮಾಡು ; ಹಕ್ಕು, ಅನುಭವ, ತಪ್ಪಿಸು ; ಕಿತ್ತುಕೊ ; ಕಸಿದುಕೊ ; (ಒಬ್ಬನಿಗೆ) ಇಲ್ಲದಂತೆ ಮಾಡು. ದೆವ್ವ ಬಿಡಿಸು ; (ಹಿಡಿದಿರುವ) ಗ್ರಹವನ್ನು ಉಚ್ಚಾಟನೆ ಮಾಡು. **Dispossésion** (ನಾ.) ; **Dispossésor** (ನಾ.)

Dispraíse ಡಿಸ್‌ಪ್ರೆಯ್ಸ್ (ಕ್ರಿ. ಸಕ., ನಾ.) ಹೀನಾಯ (ಮಾಡು) ; ಹೀನಯಿಸು ; ನಿಂದಿಸು ; ನಿಂದೆ ; ತೆಗಳು(ವುದು) ; ದೂಷಿಸು(ವುದು) ; ದೂಷಣೆ ; ಅಪವಾದ (ಮಾಡು) ; ಜರೆ(ತ) ; ಇಳಿಕೆ(ಗೈ) (ಗ್ರಾಂ.)

Dispropórtion ಡಿಸ್‌ಪ್ರೊಪೋರ್ಷನ್ (ನಾ.) ಅಳತೆಗೆಟ್ಟಿರುವುದು; ಭಾಗಗಳಲ್ಲಿ ಪರಸ್ಪರ ಹೊಂದಿಕೆಯಿಲ್ಲದಿರುವುದು ; ಸಮತೆ ತಪ್ಪಿರುವುದು ; ಅಸಾಮಂಜಸ್ಯ ; ಅಸಮ ಪ್ರಮಾಣ ; ಹೆಚ್ಚುಕಡಮೆ. **Dispropórtioned** (ಗು.) ; **Dispropórtionate** — ನೆಟ್ (ಗು.) ಪ್ರಮಾಣ ಸಾಮ್ಯವಿಲ್ಲದ ; ಅಸಮ ಪ್ರಮಾಣದ ; ಹೊಂದಿಕೆಯಿಲ್ಲದ ; ಪರಸ್ಪರ ಅತಿ ದೊಡ್ಡದಾದ, ಅಥವಾ ಅತಿ ಸಣ್ಣದಾದ. **Dispropórtionately** (ಕ್ರಿ. ವಿ.)

Dispróve ಡಿಸ್‌ಪ್ರೂವ್ [ಕ್ರಿ. ಸಕ. ; ಭೂ. ಕೃ. -d, (ಅಪೂರ್ವವಾಗಿ) -n] ಸುಳ್ಳೆಂದು, ಸರಿಯಲ್ಲವೆಂದು, ಅಪ್ರಮಾಣವೆಂದು, ಸ್ಥಾಪಿಸು ; ತಪ್ಪು ತೋರಿಸು ; ಅಪತರ್ಕವನ್ನು ಎತ್ತಿತೋರಿಸು ; ಸುಳ್ಳುಮಾಡು ; ಖಂಡಿಸು. **Disproóf** ಡಿಸ್‌ಪ್ರೂಫ್ (ನಾ.) ಖಂಡನೆ (ಮಾಡುವುದು) ; ಅಬದ್ಧವೆಂದು ಸಾಧಿಸುವುದು ; ಖಂಡನ ಸಾಕ್ಷ್ಯ.

Dispúte ಡಿಸ್‌ಪ್ಯೂಟ್ (ಕ್ರಿ., ನಾ.) ಚರ್ಚೆ (ಮಾಡು) ; ಚರ್ಚಿಸು ; ವಾದಿಸು ; ವಾಗ್ವಾದ (ನಡಸು) ; ವಿವಾದ (ಮಾಡು) (ಮನುಷ್ಯನ ವಿಷಯದಲ್ಲಿ *with, against* ಉಪ. ದೊಡನೆ ; ಪ್ರಸ್ತಾವದ ವಿಷಯದಲ್ಲಿ *on, about* ಉಪ. ದೊಡನೆ). ಜಗಳವಾಡು ; ಕಾದಾಡು ; ವಾಕ್ಕಲಹ ಮಾಡು ; (ಹೇಳಿಕೆ, ಸಂಗತಿ — ಇವನ್ನು) ಖಂಡಿಸು, ಪ್ರತಿಭಟಿಸು, ವಿರೋಧಿಸು, ತಪ್ಪೆನ್ನು. (ಹಡಗಿನಿಂದ ದಡಕ್ಕಿಳಿಯುವುದು, ಮುಂದಕ್ಕೆ ನುಗ್ಗುವುದು, ಮೊ. ನ್ನು) ತಡೆ, ಅಡ್ಡಯಿಸು. (ಮೇಲ್ಮೆ, ಜಯ, ಮೊ. ನ್ನು ಪಡೆಯಲು) ಹೋರಾಡು. (ನಾ.) (In d. ಚರ್ಚೆಯಲ್ಲಿ ; ವಿವಾದದಲ್ಲಿ ; ವಾದಾಸ್ಪದವಾಗಿ. Beyond, past, without, d. ಚರ್ಚಾಸ್ಪದವಲ್ಲದೆ ; ಖಂಡಿತವಾಗಿ ; ನಿರ್ವಿವಾದವಾಗಿ ; ನಿಸ್ಸಂಶಯವಾಗಿ ; ನಿರಾಕ್ಷೇಪವಾಗಿ). ವಾಕ್ಕಲಹ ; ವ್ಯಾಜ್ಯ ; ಭಿನ್ನಾಭಿಪ್ರಾಯ. **Dísputable** —ಪ್ಯುಟ—, **Dispútable** —ಪ್ಯೂಟ— (ಗು.) ಚರ್ಚಾಸ್ಪದವಾದ ; ವಿವಾದಾಸ್ಪದವಾದ ; ಸಂದೇಹಾಸ್ಪದವಾದ ; ಅನಿಶ್ಚಿತವಾದ ; ಖಂಡಿತವಲ್ಲದ. **Dísputably** (ಕ್ರಿ. ವಿ.) ; **Disputátion** —ಪ್ಯು— (ನಾ.) ಚರ್ಚೆ ; ವಾದ ; ವಾಗ್ವಾದ; ತರ್ಕ ; ವಾದಾನುವಾದ. **Disputátious** (ಗು.) ; **Disputátiously** (ಕ್ರಿ. ವಿ.) ; **Disputátiousness** (ನಾ.) ; **Dísputant** (ನಾ., ಗು.) (ಮು., ಸಭೆಯಲ್ಲಿ) ವಾದ ಮಾಡುವ(ವನು) ; ವಾದಿ.

Disquálify ಡಿಸ್‌ಕ್ವಾಲಿಫೈ (ಕ್ರಿ. ಸಕ.) (ಒಂದು ಕಾರ್ಯಕ್ಕೆ, ಅಧಿಕಾರಕ್ಕೆ) ಅನರ್ಹ ಮಾಡು ; ಅಯೋಗ್ಯ ಮಾಡು ; ಅಶಕ್ತ ಮಾಡು. (ಕಾನೂನಿನ ಮೂಲಕ) ಅಯೋಗ್ಯ ಮಾಡು ; ಅರ್ಹತೆಯಿಲ್ಲವೆಂದು, ಹೇಳಿಬಿಡು, ನಿರ್ಣಯಿಸು. **Disqualificátion** (ನಾ.) (ಕ್ರಿಯಾರ್ಥಗಳಲ್ಲಿ). ನ್ಯೂನತೆ ; ಕುಂದು ; ಕೊರತೆ ; ಅಯೋಗ್ಯತೆ.

Disquíet ಡಿಸ್‌ಕ್ವೈಎಟ್ (ಕ್ರಿ. ಸಕ., ಗು., ನಾ.) ಶಾಂತಿಯಿಲ್ಲದಂತೆ ಮಾಡು ; ಅಶಾಂತ ಮಾಡು ; ವ್ಯಾಕುಲ(ಗೊಳಿಸು) ; ಕಳವಳ(ವುಂಟುಮಾಡು) ; ತೊಂದರೆ ಪಡಿಸು. (ಗು.) ಶಾಂತಿಯಿಲ್ಲದ ; ಅಶಾಂತ ; ಸಮಾಧಾನವಿಲ್ಲದ ; ಕಲಕಿದ. **Disquíeting** (ಗು.) ; **Disquíetude** (ನಾ.) ; **Disquíetness** (ನಾ.)

Disquisítion ಡಿಸ್‌ಕ್ವಿಸಿಷನ್ (ನಾ.) (ಪ್ರಾಚೀ. ಪ್ರ.) ವಿಚಾರ(ಣೆ). (ಯಾವುದಾದರೂ ಒಂದು ವಿಷಯದಮೇಲೆ ವಿಸ್ತಾರವಾದ ಅಥವಾ ವಿವರಗಳನ್ನೊಳಕೊಂಡ) ಪ್ರಬಂಧ, ಪ್ರಸಂಗ, ಉಪನ್ಯಾಸ, ವ್ಯಾಖ್ಯಾನ. **Disquisítional** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Disráte ಡಿಸ್‌ರೇಟ್ (ಕ್ರಿ. ಸಕ.) (ನಾವೆ) ಕೆಳ ತರಗತಿಗೆ, ಅಂತಸ್ತಿಗೆ, ದರ್ಜೆಗೆ, ಇಳಿಸು, ಹಾಕು.

Disregárd ಡಿಸ್‌ರಿಗಾರ್ಡ್ (ಕ್ರಿ. ಸಕ., ನಾ.) ಗಮನ ಕೊಡದಿರು ; ಗಮನಿಸದಿರು ; ಅಸಡ್ಡೆ (ಮಾಡು) ; ಅನಾದರ (ಮಾಡು) ; ಕಡೆಗಣಿಸು ; ಅಲಕ್ಷ್ಯ (ಮಾಡು) ; ಉದಾಸೀನ (ಮಾಡು) ; ಉಪೇಕ್ಷೆ (ಮಾಡು) ; ತಾತ್ಸಾರ (ಮಾಡು) ; ನಿರಾಕರಿಸು.

Disrélish ಡಿಸ್‌ರೆಲಿಷ್ (ನಾ., ಕ್ರಿ. ಸಕ.) ಅಪ್ರೀತಿ, ಅರುಚಿ (ತೋರು) ; ಅಸಹ್ಯತೆ ; ಜುಗುಪ್ಸೆ (ಪಡು). (ಕ್ರಿ.) ಅಸಹ್ಯಪಡು ; ರುಚಿಸದಿರು ; ಒಗ್ಗದೆಹೋಗು ; ಸೇರದಿರು ; ಅಹಿತವಾಗು ; ಸರಿಬೀಳದಿರು.

Disremémber ಡಿಸ್‌ರಿಮೆಂಬರ್ (ಕ್ರಿ. ಸಕ.) (ಪ್ರಾಂತ ಪ್ರಯೋಗ, ಮೊ.) ನೆನಪಿಲ್ಲದಿರು ; ಮರೆತುಹೋಗು ; ಜ್ಞಾಪಕ ತಪ್ಪು.

Disrepaír ಡಿಸ್‌ರಿಪೇರ್ (ನಾ.) (ದುರಸ್ತುಮಾಡದೆ ಇರುವುದರಿಂದಾದ) ದುಸ್ಥಿತಿ (ಸಾ., Is in d.) ; ನಾದುರಸ್ತು ; ಅರೋಡು.

Disrepúte ಡಿಸ್‌ರಿಪ್ಯೂಟ್ (ನಾ.) ಅವಮಾನ ಸ್ಥಿತಿ ; ಮಾನ ಹಾನಿ ; ಅಪಖ್ಯಾತಿ ; ಅಪಯಶಸ್ಸು ; ಅಪಕೀರ್ತಿ ; ಕೆಟ್ಟ ಹೆಸರು. **Disré-putable** — ರೆಪ್ಯುಟಬ್‌ಲ್ (ಗು.) ; **Disréputableness** (ನಾ.) ; **Disréputably** (ಕ್ರಿ. ವಿ.)

Disrespéct ಡಿಸ್‌ರಿಸ್ಪೆಕ್ಟ್ (ನಾ.) ಮರ್ಯಾದೆಯಿಲ್ಲದಿರುವುದು ; ಅಗೌರವ ; ಅವಮರ್ಯಾದೆ ; ಅನಾದರಣೆ. **Disrespéctful** (ಗು.) ; **Disrespéctfully** (ಕ್ರಿ. ವಿ.) ; **Disrespéctfulness** (ನಾ.)

Disróbe ಡಿಸ್‌ರೋಬ್ (ಕ್ರಿ.) ಕವಚ ತೆಗೆ ; ಉಡುಪು ಬಿಚ್ಚು, ಕಳಚು ; ಹೊದಿಕೆ ತೆಗೆ (ರೂಪ. ಸಹ)

Disroót ಡಿಸ್‌ರೂಟ್ (ಕ್ರಿ. ಸಕ.) ಬೇರು ಕಿತ್ತುಹಾಕು ; ಬುಡಮುಟ್ಟ ಕೀಳು ; ನೆಲೆ ತಪ್ಪಿಸು.

Disrúpt ಡಿಸ್‌ರಪ್ಟ್ (ಕ್ರಿ. ಸಕ.) ಒಡೆ(ದು ಹಾಕು) ; ಚೂರು ಚೂರು ಮಾಡು ; ಬಲವಂತದಿಂದ ಬೇರ್ಪಡಿಸು ; ಭೇದಿಸು. **Disrúption** (ನಾ.) ಚೂರುಚೂರು ಮಾಡುವುದು ; — ಆಗುವುದು ; ಬಿರಿದು, ಸಿಡಿದು, ಒಡೆದು, ಹೋಗುವುದು ; ತೀವ್ರ ನಾಶ ; ಚೂರು ಚೂರಾದ ಸ್ಥಿತಿ ; ನಾಶ ; ಧಂಗ ; ಒಡಕು. **Disrúptive** (ಗು.)

Dissátisfy ಡಿಸ್‌ಸ್ಯಾಟಿಸ್‌ಫೈ (ಕ್ರಿ. ಸಕ.) ತೃಪ್ತಿಗೊಳಿಸದೆ ಹೋಗು ; ಅತೃಪ್ತಿಗೊಳಿಸು ; ಅಸಮಾಧಾನ, ಅಸಂತೋಷ, ಹುಟ್ಟಿಸು (Dissatisfied *with*, *at*). **Dissatisfáction** (ನಾ.)

Disseát ಡಿಸ್‌ಸೀಟ್ (ಕ್ರಿ. ಸಕ.) ಆಸನದಿಂದ ಎಬ್ಬಿಸು, ತಳ್ಳು ; ಪೀಠವಿಲ್ಲದಂತೆ ಮಾಡು ; ಸ್ಥಾನ ತಪ್ಪಿಸು ; ಪದಭ್ರಷ್ಟ ಮಾಡು.

Disséct ಡಿಸೆಕ್ಟ್ (ಕ್ರಿ. ಸಕ.) ತುಂಡು ತುಂಡಾಗಿ ಕತ್ತರಿಸು. (ಅಂಗ ರಚನೆ, ಮೊ. ನ್ನು ತೋರಿಸುವುದಕ್ಕಾಗಿ, ಪ್ರಾಣಿ, ಸಸ್ಯ— ಇವನ್ನು) ಕೊಯ್ಯಿ ; ವಿಚ್ಛೇದಿಸು ; ಅಂಗಚ್ಛೇದ ಮಾಡು. ಭಾಗ ಭಾಗವಾಗಿ ಪರೀಕ್ಷಿಸು ; ವಿಭಜಿಸು ; ಸವಿಸ್ತಾರವಾಗಿ ವಿಮರ್ಶೆಮಾಡು. **Dis-séction** (ನಾ.) ವಿಚ್ಛೇದನ. **Disséctor** (ನಾ.) ವಿಚ್ಛೇದಕ.

Disseíse, -ze ಡಿಸ್‌ಸೀಸ್ (ಕ್ರಿ. ಸಕ.) ಆಸ್ತಿಯ ಅಧಿಕಾರ, ಅನುಭವ, ಸ್ವಾಮ್ಯ, ತಪ್ಪಿಸು (ಸಾ., ಬಲವಂತದಿಂದ, ಅನ್ಯಾಯವಾಗಿ) (ರೂಪ. ಸಹ). **Disseísin, -zin** — ಸ್ಸಿನ್ (ನಾ.) (ನ್ಯಾ. ಶಾ.) (ಬಲವಂತದಿಂದ, ಅನ್ಯಾಯವಾಗಿ) ಆಸ್ತಿಯ ಸ್ವಾಮ್ಯ ತಪ್ಪಿಸುವುದು ; ಸ್ಥಿರಾಸ್ತಿಯನ್ನು ಅನ್ಯಾಯವಾಗಿ ಒಬ್ಬನಿಂದ ಕಿತ್ತುಕೊಳ್ಳುವುದು ; ಆಸ್ತಿಹರಣ ; ಕವರ್ತೆ (ಗ್ರಾಂ.)

Dissémble ಡಿಸೆಂಬ್‌ಲ್ (ಕ್ರಿ.) (ನಡತೆ, ಮನೋಭಾವ, ಅಭಿಪ್ರಾಯ, ಕಾರ್ಯ — ಇವುಗಳ ವಿಷಯದಲ್ಲಿ) ಮರೆಮಾಚು, ಮರೆ ಮಾಡು, ಮುಚ್ಚಿಡು, ಸೋಗು ಹಾಕು ; ಗೋಪ್ಯ ಮಾಡು. (ಪ್ರಾಚೀ. ಪ್ರ.) ನೋಡದವನಂತೆ ನಟಿಸು ; ಕಂಡೂ ಕಾಣದಂತಿರು ; ನಿರ್ಲಕ್ಷಿಸು. (ವಿಷಯವನ್ನು) ಹೇಳದಿರು ; ಕಪಟಾಚರಣೆ ಮಾಡು ; ಮೋಸ ಮಾಡು. **Dissémbler** (ನಾ.)

Disséminate ಡಿಸೆಮಿನೇಟ್ (ಕ್ರಿ. ಸಕ.) (ಬೀಜ ಎರಚುವಂತೆ) ಎಲ್ಲೆಲ್ಲಿಯೂ ಚೆಲ್ಲು, ಬಿತ್ತು ; ಹೊರಗೆ ಹರಡು ; ಪ್ರಸಾರ ಮಾಡು (ಸಾ., ರೂಪ. ದಲ್ಲಿ). **Disseminátion** (ನಾ.) ; **Disséminator** (ನಾ.)

Dissénsion. Dissent ನೋಡಿ.

Dissént ಡಿಸೆಂಟ್ (ಕ್ರಿ. ಅಕ., ನಾ.) ಒಪ್ಪಿಗೆ ಕೊಡದಿರು ; ಒಪ್ಪದಿರು ; ಸಮ್ಮತಿಸದಿರು ; ಅಸಮ್ಮತಿ(ಸು) ; ಭಿನ್ನಾಭಿಪ್ರಾಯ ಪಡು ; —ಹೇಳು (*From* ಉಪ. ದೊಡನೆ). (ಮು., ಸರ್ಕಾರದಿಂದ ಸ್ಥಾಪಿತವಾದ ಮಠದ ತತ್ತ್ವಗಳ ವಿಷಯದಲ್ಲಿ : Dissenting minister ರಾಜ್ಯ ಸಂಸ್ಥಾಪಿತ ಮಠತತ್ತ್ವಗಳನ್ನು ಅಂಗೀಕರಿಸದ ಪುರೋಹಿತ ; ಭಿನ್ನಾಭಿಪ್ರಾಯದ ಪಾದ್ರಿ). (ನಾ.) ಭಿನ್ನಾಭಿಪ್ರಾಯ (ಹೇಳುವುದು) ; ರಾಜ್ಯಸ್ಥಾಪಿತ ಮಠದ ತತ್ತ್ವಗಳ ಅನಂಗೀಕಾರ ; —ಅನಂಗೀಕಾರಿಗಳು. **Disséntingly** (ಕ್ರಿ. ವಿ.) ; **Dissénter** (ನಾ.) (ಮು., ರಾಜ್ಯಸ್ಥಾಪಿತ ಮಠದ) ಅನಂಗೀಕಾರಿ. ಇಂಗ್ಲೆಂಡಿನ ಮತ್ತು ಸ್ಕಾಟ್ಲೆಂಡಿನ ಮಠಾನುಯಾಯಿತ್ವವನ್ನು ತೊರೆದಿರುವ ಪಂಗಡಕ್ಕೆ ಸೇರಿದವನು. **Disséntient** — ಷಿಯೆಂಟ್, — ಷೆಂಟ್ (ಗು., ನಾ.) ಬಹುಮತವನ್ನು ಅಥವಾ ಅಧಿಕಾರದ ಅಭಿಪ್ರಾಯವನ್ನು ಅಂಗೀಕರಿಸದ(ವನು) ; ಅನಂಗೀಕಾರಿ ; ಒಪ್ಪದವನು. **Dissénsion** — ಷನ್ (ನಾ.) ಭಿನ್ನಾಭಿಪ್ರಾಯ ; ಮನಸ್ತಾಪ ; ವೈಮನಸ್ಯ ; ವೈಷಮ್ಯ ; ವಿರೋಧ ; ಒಡಕು ; ಕಚ್ಚಾಟ.

Dissépiment ಡಿಸೆಪಿಮೆಂಟ್ (ನಾ.) (ಸ. ವಿ., ಪ್ರಾ. ವಿ.) (ಎರಡು ಭಾಗಗಳನ್ನು ಪ್ರತ್ಯೇಕಿಸುವ) ತಡಕೆ, ಪಾಲಿ ; ಅಂತರ ಪಟ.

Dissért ಡಿಸರ್ಟ್, **Dissertate** ಡಿಸರ್ಟೇಟ್ (ಕ್ರಿ. ಅಕ.) ಭಾಷಣ ಮಾಡು ; ಪ್ರಸಂಗ ಮಾಡು ; ವ್ಯಾಖ್ಯಾನ ಮಾಡು ; ಉಪನ್ಯಾಸ ಮಾಡು. **Dissertátion** (ನಾ.) ಪ್ರೌಢ ಪ್ರಬಂಧ ; ಉಪನ್ಯಾಸ.

Dissérve ಡಿಸ್‌ಸರ್ವ್ (ಕ್ರಿ. ಸಕ.) (-) ಗೆ ಕೆಡುಕು ಮಾಡು, ಪ್ರತಿಕೂಲ ಮಾಡು, ಅಪಕಾರ ಮಾಡು, ಅಪಸೇವೆ ಮಾಡು. **Dissérvice** (ನಾ.)

Disséver ಡಿಸೆವರ್ (ಕ್ರಿ.) ಪ್ರತ್ಯೇಕಿಸು ; ಪ್ರತ್ಯೇಕವಾಗು ; ಬೇರೆ ಮಾಡು ; ಬೇರೆಯಾಗು ; ಅಗಲಿಸು ; ಭಾಗವಾಗು ; — ಮಾಡು.

Díssident ಡಿಸಿಡೆಂಟ್ (ಗು., ನಾ.) (ಅಭಿಪ್ರಾಯ, ನಡತೆ, ಮೊ. ಗಳಲ್ಲಿ) ಒಪ್ಪಿಗೆಯಿಲ್ಲದ, ಅಂಗೀಕರಿಸದ ; ಭಿನ್ನವಾದ ; = Dissentient (ಗು., ನಾ.) ; = Dissenter. **Díssidence** (ನಾ.)

Disșíght ಡಿಸ್‌ಸೈಟ್, ಡಿಸ್ಸೈಟ್ (ನಾ.) ನೋಡುವುದಕ್ಕೆ ಅಸಹ್ಯವಾದ ವಸ್ತು ; ಕಣ್ಣುಬೇನೆ.

Dissímilar ಡಿಸಿಮಿಲರ್ (ಗು.) ಹೋಲಿಕೆಯಿಲ್ಲದ ; ಬೇರೆ ತೆರದ ; ಸಾಮ್ಯವಿಲ್ಲದ ; ಭಿನ್ನ ; ವ್ಯತ್ಯಸ್ತ ; ವಿದೃಶ ; ವಿಜಾತೀಯ ; ವಿಷಮ (*To* ಉಪ. ದೊಡನೆ ; ಅಪೂರ್ವವಾಗಿ *from*, *with* ಉಪ. ದೊಡನೆ ಸಹ). **Dissímilárity** —ಲ್ಯಾ— (ನಾ.) ; **Dissímilarly** —ಲ— (ಕ್ರಿ. ವಿ.) ; **Dissímilate** (ಕ್ರಿ. ಸಕ.) (ಭಾ. ಶಾ.) ಹತ್ತಿರ ಹತ್ತಿರ ಬರುವ ಒಂದೇ ತೆರದ ಧ್ವನಿಗಳನ್ನು ಬೇರೆ ಬೇರೆ ಮಾಡು (ಉದಾ.— Cinnamo*m* ಎಂಬುದನ್ನು Cinnamo*n* ಎಂದು) ; ಭಿನ್ನ ಮಾಡು. **Dissimilátion** (ನಾ.) ; **Dissimílitude** (ನಾ.) ಅಸಮತೆ ; ವೈದೃಶ್ಯ ; ವಿಷಮತೆ.

Dissímilate, etc. Dissimilar ನೋಡಿ.

Dissímulate ಡಿಸಿಮ್ಯುಲೇಟ್ (ಕ್ರಿ.) (ಒಳಗಿರುವುದನ್ನು) ಹೊರಕ್ಕೆ ಇಲ್ಲದಂತೆ ತೋರಿಸು ; (ಇಲ್ಲದಂತೆ, ಅನುಭವಿಸದಂತೆ) ನಟಿಸು ; ಸೋಗು ಹಾಕು ; ವೇಷ ತಾಳು ; ಕಪಟಾಚರಣೆ ಮಾಡು ; ಠಕ್ಕು ಮಾಡು. **Dissímulátion** (ನಾ.) ; **Dissímulator** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Díssipate ಡಿಸಿಪೇಟ್ (ಕ್ರಿ.) (ಮೋಡ, ಆವಿ, ಚಿಂತೆ, ಹೆದರಿಕೆ, ಕತ್ತಲೆ, ಮೊ.) ಚೆದರಿಸು, ಚೆದರು, ಓಡಿಸು, ಓಡು, ಕಳೆ, ಕರಗಿಸು, ಕರಗು ; ಅಳಿದುಹೋಗು(ವಂತೆ ಮಾಡು) ; (ಹಣವನ್ನು) ಪೋಲು ಮಾಡು ; (ಶಕ್ತಿಯನ್ನು, ಗಮನವನ್ನು) ದುರ್ವ್ಯಯ ಮಾಡು, ಹಾಳು ಮಾಡು ; ಹಲವು ಕಡೆಗೆ ಹರಿಯಬಿಡು ; ದುರ್ವ್ಯಸನಗಳಲ್ಲಿ ತೊಡಗು (People go there to d. ಜನರು ಅಲ್ಲಿಗೆ ವಿಷಯಲೋಲುಪತೆಗಾಗಿ ಹೋಗುತ್ತಾರೆ). **Díssipative** — ಪೇಟಿವ್ (ಗು.) ; **Díssipated** (ಗು.) (ಕ್ರಿಯಾರ್ಥಗಳಲ್ಲಿ) ; ವ್ಯಭಿಚಾರಿಯಾದ. **Dissipátion** (ನಾ.) ಚೆದರಿಸುವುದು ; ಚೆದರಿಹೋಗುವುದು ; ನಾಶ ಮಾಡುವುದು ; ನಾಶವಾಗಿ ಹೋಗುವುದು ; ನಾಶ; ದುರ್ವ್ಯಯ ; ಹಣ ಪೋಲುಮಾಡುವುದು. ಚಿತ್ತಸ್ಖಲನ. ವಿಷಯ ಲೋಲುಪತೆ ; ವ್ಯಭಿಚಾರ.

Dissócialize ಡಿಸ್‌ಸೋಷಲೈಸ್ (ಕ್ರಿ. ಸಕ.) ಸಮಾಜ ಪ್ರಿಯನಲ್ಲದವನನ್ನಾಗಿ ಮಾಡು ; ಸಮಾಜದಲ್ಲಿ ಸೇರಲು ಇಷ್ಟವಿಲ್ಲದಂತೆ ಮಾಡು.

Dissóciate ಡಿಸೋಷಿಯೇಟ್ (ಕ್ರಿ. ಸಕ.) ಜೊತೆ ಬಿಡು ; ಬೇರ್ಪಡು ; ಬೇರ್ಪಡಿಸು ; ಪ್ರತ್ಯೇಕಿಸು ; ವಿಯೋಗಿಸು ; ಅಗಲಿಸು ; ಬಿಡಿಸು ; ಕಳಚು. ಸಹಭಾಗಿಯಾಗದಿರು ; ಒಡಗೂಡದಿರು. (ರ. ವಿ.) (ಮು., ಉಷ್ಣಪ್ರಯೋಗದಿಂದ) ವಿಯೋಜಿಸು, ಪೃಥಕ್ಕರಿಸು. (ಮ. ಶಾ.) (ಮನುಷ್ಯನ ಮನಸ್ಸಿನಲ್ಲಿ) ಅನೇಕ ಪ್ರಜ್ಞಾಕೇಂದ್ರಗಳು ವಿಕಾಸವಾಗುವಂತೆ ಮಾಡು ; (Dissociated personality ಒಬ್ಬನಲ್ಲಿ ಪ್ರತ್ಯೇಕವಾದ ಎರಡು ಅಥವಾ ಹೆಚ್ಚು ವ್ಯಕ್ತಿತ್ವಗಳು ಒಟ್ಟಿಗಿರುವ ಸ್ಥಿತಿ : ಅನೈಕ್ಯ ವ್ಯಕ್ತಿತ್ವ). **Dissociátion** — ಷಿ(ಸಿ) — (ನಾ.) ಅಗಲಿಕೆ ; ವಿಯೋಜನ ; ಬೇರ್ಪಡಿಕೆ. ವಿವಿಕ್ತ ವ್ಯಕ್ತಿತ್ವ. **Dissóciable** ಡಿಸ್ಸೋಷಬ್'ಲ್ (ಗು.) ಸ್ನೇಹಶೀಲನಲ್ಲದ; ಸಹವಾಸ ಶೀಲ — ; ಇತರರೊಡನೆ ಬೆರೆಯದ. (ಡಿಸೋಷಿಯಬ್'ಲ್) ಬೇರ್ಪಡಿಸಲಾಗುವ. **Dissóciative** ಡಿಸೋಷಿಏಟಿವ್ (ಗು.)

Díssoluble ಡಿಸಲ್ಯುಬ್'ಲ್, **Dissóluble** —ಸಾ— (ಗು.) ಕರಗಿಸಬಹುದಾದ ; ದ್ರವಣ ಸಾಧ್ಯ ; ಬಿಡಿಸಬಹುದಾದ ; ಕಟ್ಟು ಬಿಡಿಸಲಾಗುವ ; ಪೃಥಕ್ಕರಿಸಲಾಗುವ ; ಪ್ರತ್ಯೇಕಿಸಬಹುದಾದ ; ವಿಚ್ಛೇದನ ಸಾಧ್ಯ ; ಲೀನ ಸಾಧ್ಯ. **Díssolubílity** (ನಾ.)

Díssolute ಡಿಸೊಲ್ಯೂಟ್ (ಗು.) ನೀತಿಗೆಟ್ಟ ; ವಿಷಯ ಲಂಪಟ ; ವ್ಯಭಿಚಾರಿ ; ದುರ್ವ್ಯಸನಿ ; ಪೋಕರಿ. **Díssolutely** (ಕ್ರಿ. ವಿ.) ; **Díssoluteness** (ನಾ.) ; **Dissolútion** (ನಾ.) ಕರಗುವುದು ; ಬಂಧನ ಸಡಿಲುವುದು ; ಬೇರೆ ಬೇರೆಯಾಗುವುದು ; ವಿಲಯನ ; ದ್ರವಣ. ಪೃಥಕ್ಕರಣ ; ವಿಘಟನೆ. (ಮಂಜಿನಗೆಡ್ಡೆಯ ಅಥವಾ ನೀರ್ಗಲ್ಲಿನ) ದ್ರವೀಭವನ, — ಕರಣ, ನೀರಾಗುವುದು. (ಸೇರಿಕೆ, ಬಂಧನ, ಪತ್ತಿಗೆ, ಪಾಲುಗಾರಿಕೆ, ಮದುವೆ, ಸಂಬಂಧ — ಇವುಗಳ) ವಿಘಟನೆ, ವಿಚ್ಛೇದ. ಸಭೆಯ ವಿಸರ್ಜನೆ, ಮುಕ್ತಾಯ, ಚೆದರಿಕೆ (ಮು., ಹೊಸ ಚುನಾವಣೆಗಾಗಿ ಶಾಸನ ಸಭೆಯನ್ನು ವಿಸರ್ಜಿಸುವುದು). ಸಾವು ; ಮರಣ ; ಅಳಿವು. ಬತ್ತಿಹೋಗುವುದು ; ಕಾಣದಂತಾಗುವುದು ; ಮುಕ್ತಾಯ ; ಕ್ಷಯ ; ನಾಶ.

Dissólve ಡಿಸ಼ಾಲ್ವ್ (ಕ್ರಿ.) ಕರಗು ; ಕರಗಿಸು ; ವಿಲೀನವಾಗು ; ವಿಲೀನ ಮಾಡು (ಮು., ದ್ರವದಲ್ಲಿ ಹಾಕಿ. Dissolved in tears ಕಣ್ಣೀರಿನಲ್ಲಿ ಮುಳುಗಿ ; ಬಹಳ ಅಳುತ್ತ) ; ವಿಘಟಿಸು ; ಶಿಥಿಲವಾಗು ; — ಮಾಡು ; ಬೇರೆ ಬೇರೆ ಭಾಗಗಳಾಗಿ ಒಡೆ ; ಸಡಿಲು ; ಸಡಿಲಿಸು ; ಅದೃಶ್ಯವಾಗು ; —ವಾಗಿಸು ; ಮರೆಯಾಗು ; —ಯಾಗಿಸು [Dissolving views (of magic lantern) ಒಂದು ಕ್ರಮೇಣ ಮರೆಯಾಗುತ್ತ ಮತ್ತೊಂದು ದೃಷ್ಟಿಪಥಕ್ಕೆ ಬರುವ (ಮಾಯಾದೀಪದ) ದೃಶ್ಯಗಳು : ವಿಲೀನ ದೃಶ್ಯಗಳು]. ಚೆದರಿಹೋಗು ; ಚೆದರಿಸಿಬಿಡು ; ವಿಸರ್ಜಿಸು (ಮು., D. Parliament, or d.). (ಪತ್ತಿಗೆ, ಪಾಲುಗಾರಿಕೆ, ಮೊ. ನ್ನು) ಕೊನೆಗಾಣಿಸು, ಮುರಿ ; ರದ್ದುಮಾಡು ; ವಿಚ್ಛೇದಿಸು. **Dissólvable** (ಗು.) ; **Dissólvent** (ಗು., ನಾ.) ಒಂದು ಪದಾರ್ಥವನ್ನು ತನ್ನಲ್ಲಿ ಲೀನಮಾಡಿಕೊಳ್ಳುವ (ವಸ್ತು) (ಸಾ.) *of* ಉಪ. ದೊಡನೆ) ; ಲೀನಕಾರಿ ; ವಿದ್ರಾವಕ.

Díssonant ಡಿಸೊನಂಟ್ (ಗು.) ಸ್ವರಮೇಳನವಿಲ್ಲದ ; ವಿಸ್ವರದ ; ಶ್ರುತಿಗೂಡದ ; ಅಪಶ್ರುತಿಯ ; ಅಪಸ್ವರದ ; ಕರ್ಕಶ ಧ್ವನಿಯ. ಹೊಂದಿಕೆಯಿಲ್ಲದ; ಅಸಂಗತ. **Díssonance** (ನಾ.); **Díssonantly** (ಕ್ರಿ. ವಿ.)

Dissuáde ಡಿಸ್ವೇಡ್ (ಕ್ರಿ. ಸಕ.) ಬೇಡವೆಂದು ಬೋಧಿಸು ; (ಕಾರ್ಯ) ಸಲ್ಲದೆಂದು ವಾದಿಸು ; (ಮಾಡದಂತೆ) ತಡೆ, ತಿರುಗಿಸು. **Dissuásion** — ಝನ್ (ನಾ.) ; **Dissuásive** — ಸಿವ್ (ಗು.)

Dissýllable, etc. **Disyllable** ನೋಡಿ.

Dissýmmetry ಡಿಸ್‌ಸಿಮೆಟ್ರಿ (ನಾ.) (ಎಡ ಬಲದ ಕೈಗಳಲ್ಲಿರುವಂತೆ) ರೂಪಸಾಮ್ಯ ; ವಿಮುಖ ರೂಪಸಾಮ್ಯ (ಮು., ಸ್ಫಟಿಕಾಕೃತಿಗಳ ಎಡ ಬಲದ ವ್ಯತ್ಯಾಸವುಳ್ಳ ರೂಪಸಾಮ್ಯ). **Dissymmétric(al)** (ಗು.)

Dístaff ಡಿಸ್ಟಾಫ್ (ನಾ.) ಉಣ್ಣೆಯನ್ನು ಅಥವಾ ಸಣಬನ್ನು ನೂಲುವಾಗ ಅದನ್ನು ಸುತ್ತುವುದಕ್ಕಾಗಿ ಉಪಯೋಗಿಸುವ, ಸುಮಾರು ಮೂರು ಅಡಿ ಉದ್ದದ, ಸೀಳುಗೋಲು : ಹಂಜಿಗೋಲು. ಚರಕದಲ್ಲಿ ಹಂಜಿಗೋಲಿನ ಭಾಗ. ಹೆಂಗಸಿನ ಉದ್ಯೋಗ ; ಹೆಣ್ಣುಗೆಲಸ. D. side ವಂಶದ ಸ್ತ್ರೀಶಾಖೆ, ಹೆಣ್ಣುಸಂತತಿ (Spear-side ನೋಡಿ)

Dístal ಡಿಸ್ಟಲ್ (ಗು.) (ಅಂ. ರ. ಶಾ., ಸ. ವಿ.) ದೇಹದ ಮಧ್ಯಭಾಗದಿಂದ ಅಥವಾ ಸೇರಿಕೆಯ ಸ್ಥಳದಿಂದ ದೂರದಲ್ಲಿರುವ ; ಕೊನೆಯಲ್ಲಿರುವ ; ಅಂಚಿನಲ್ಲಿರುವ.

Dístance ಡಿಸ್ಟನ್ಸ್ (ನಾ., ಕ್ರಿ. ಸಕ.) ದೂರ ; ಅಂತರ ; ಅವಕಾಶ ; ಗೆಂಟು (ಗ್ರಾಂ.) (Within striking-d. ಏಟಿಗೆ ನಿಲುಕುವಷ್ಟು ದೂರದೊಳಗೆ). ಸಲಗೆ ಕೊಡದಿರುವುದು ; ಗಾಂಭೀರ್ಯ (Keep one's d. ದೂರದಲ್ಲಿರು ; ಸಲಗೆ ಕೊಡದಿರು). ದೂರದ ಪ್ರದೇಶ ; ದೂರ ಬಿಂದು (*At, to, from*, a d. In the d.) ; [Middle d. (ಚಿತ್ರಿಸಿದ ಅಥವಾ ಸಹಜವಾದ ಭೂಪ್ರದೇಶದ ದೃಶ್ಯದಲ್ಲಿ, ಮುಂಭಾಗಕ್ಕೂ ದೂರಭಾಗಕ್ಕೂ ಮಧ್ಯೇ ಇರುವ) ಮಧ್ಯಪ್ರದೇಶ]. ಕಾಲಾವಧಿ ; ಅಂತರ (At this d. of time. A good d. off ಬಹಳ ದೂರದಲ್ಲಿ). (ಕ್ರಿ.) ದೂರವಿಡು ; ದೂರದಲ್ಲಿರುವಂತೆ ಕಾಣಿಸು. (ಜೂಜಿನಲ್ಲಿ ಅಥವಾ ಸ್ಪರ್ಧೆಯಲ್ಲಿ) ಬಹಳ ಹಿಂದೆ ಬೀಳಿಸು. **Dístant** ಡಿಸ್ಟಂಟ್ (ಗು.) ದೂರದ ; ದೂರದಲ್ಲಿರುವ (Three miles d.). (ಸ್ಥಾನ, ಕಾಲ, ಹೋಲಿಕೆ, ಮೊ. ಗಳಲ್ಲಿ) ಬಹು ದೂರವಿರುವ, ಬಹು ಅಂತರವುಳ್ಳ ; ಹೊಂದಿಕೆಯಿಲ್ಲದ (A d. likeness, connexion ದೂರದ ಹೋಲಿಕೆ, ಸಂಬಂಧ. D. ages ದೂರದ ಯುಗ, ಕಾಲ. D. signal ರೈಲುಮಾರ್ಗದಲ್ಲಿ ಎಚ್ಚರಿಕೆ ಕೊಡುವುದಕ್ಕಾಗಿ ಹಾಕಿರುವ, ನಿಲ್ದಾಣದ ಹತ್ತಿರದ್ದಲ್ಲದ, ದೂರದ ಸನ್ನೆಗಂಬ, ಕೈಮರ). ಸಲಗೆಯಿಂದಿಲ್ಲದ ; ಗಂಭೀರದ. ಅನಾದರದ. **Dístantly** (ಕ್ರಿ. ವಿ.)

Distáste ಡಿಸ್‌ಟೇಸ್ಟ್ (ನಾ.) ಅರುಚಿ ; ಅಪ್ರೀತಿ ; ಅಸಹ್ಯತೆ ; ಜುಗುಪ್ಸೆ ; ಹೇವರಿಕೆ ; ಅನಿಚ್ಛೆ. **Distásteful** (ಗು.) ; **Distástefulness** (ನಾ.)

Distémper[1] ಡಿಸ್‌ಟೆಂಪರ್ (ಕ್ರಿ. ಸಕ., ನಾ.) (ಪ್ರಾಚೀ. ಪ್ರ. ; ಸಾ., ಭೂ. ಕೃ. ನಲ್ಲಿ) ಆರೋಗ್ಯ ಸ್ಥಿತಿಯನ್ನು ಕೆಡಿಸು ; ಮನಸ್ಸ್ವಾಸ್ಥ್ಯ, ಮನಶ್ಶಾಂತಿ, ಮನಸ್ಸಿನ ಹದ, ಸಮತೆ — ಕೆಡಿಸು. (A distempered fancy ಭ್ರಾಂತಿ ಕಲ್ಪನೆ). ವಿಕಾರಗೊಳಿಸು. (ನಾ.) ದೇಹದ ಅಥವಾ ಮನಸ್ಸಿನ ಅಸ್ವಸ್ಥತೆ ; ವ್ಯಾಧಿ ; ರೋಗ ; ವಿಕಾರ. (ನೆಗಡಿ, ಕೆಮ್ಮು, ನಿಶ್ಶಕ್ತಿ — ಇವುಗಳಿಂದ ಕೂಡಿದ) ನಾಯಿಯ ರೋಗ. ರಾಜಕೀಯ ಸಂಕ್ಷೋಭೆ, ಅವ್ಯವಸ್ಥೆ.

Distémper[2] ಡಿಸ್‌ಟೆಂಪರ್ (ನಾ., ಕ್ರಿ. ಸಕ.) ಲೆಪ್ಪ, ಸೀಮೆಸುಣ್ಣ, ಮೊ. ಗಳು ಮೆತ್ತಿ ನಯಮಾಡಿದ ಒಡಲಿನಮೇಲೆ ಎಣ್ಣೆಬೆರಸದ, ದಟ್ಟವಾದ, ನೀರುಬಣ್ಣಗಳಿಂದ ಚಿತ್ರಿಸುವ ಪದ್ಧತಿ (ದೃಶ್ಯರಚನೆಗೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಳಗೋಡೆಗಳಿಗೆ ಬಣ್ಣಹಚ್ಚುವುದಕ್ಕೂ ಉಪಯೋಗ. Paint in d.). (ಕ್ರಿ.) ಈ ರೀತಿಯಲ್ಲಿ ಬಣ್ಣಹಾಕು, ಚಿತ್ರಿಸು.

Disténd ಡಿಸ್ಟೆಂಡ್ (ಕ್ರಿ.) (ಒಳಗಿನ ಒತ್ತಡದಿಂದ ಗಾಳಿಬುಟ್ಟಿ, ಅಭಿಧಮನಿ, ಮೂಗಿನ ಹೊಳ್ಳೆ, ಮೊ.) ಊದು, ಉಬ್ಬು, ಹಿಗ್ಗು ; — ಇಸು. **Disténsible** (ಗು.) ; **Distensibílity** (ನಾ.) ; **Disténsion** (ನಾ.)

Dístich ಡಿಸ್ಟಿಕ್ (ನಾ.) ಅರ್ಥಪೂರ್ಣವಾದ ಎರಡು ಪದ್ಯಪಾದಗಳು : ದ್ವಿಪದಿ. **Dístichous** (ಗು.) (ಸ. ವಿ.) (ಹಣ್ಣು, ಮೊ.) ಕಾಂಡದ ಎರಡು ಕಡೆಯೂ ಎದುರು ಬದುರಾಗಿ ಲಂಬಸಾಲಿನಲ್ಲಿ ಅಳವಟ್ಟಿರುವ ; ಎರಡು ಸಾಲಿನ.

Distíl ಡಿಸ್ಟಿಲ್ (ಕ್ರಿ.) ತೊಟ್ಟಿಕ್ಕು ; ಹನಿ ಹನಿಯಾಗಿ ಬೀಳು ; ಹನಿಸು ; ಹನಿ ; ಜಿನುಗು ; ಒಸರು ; ಸ್ರವಿಸು. ಶಾಖದಿಂದ ಆವಿಯಾಗಿ, ಶೀತದಿಂದ ಸಾಂದ್ರೀಭವಿಸಿ, ಮರಳಿ (ದ್ರವವಾಗಿ) ಸೇರು, ಸೇರಿಸು ; ಬಟ್ಟಿಯಿಳಿ(ಸು). (ಸಸ್ಯ, ಮೊ. ಗಳ, ಅಥವಾ ರೂಪಕವಾಗಿ ತತ್ತ್ವ, ಮೊ. ಗಳ) ಸಾರವಿಳಿಸು, ಸಂಗ್ರಹಿಸು. ಶಾಖದಿಂದ (ಒಂದು ಪದಾರ್ಥದ ಹಬೆಯ ಭಾಗವನ್ನು) ಹೊರಡಿಸಿಬಿಡು, ಹಾರಿಸಿಬಿಡು. (ವ್ಹಿಸ್ಕಿ ಎಂಬ ಮದ್ಯವನ್ನೂ ಪದಾರ್ಥದ ಸಾರತತ್ತ್ವವನ್ನೂ) ಬಟ್ಟಿಯಿಳಿಸಿ ತಯಾರಿಸು. **Distillátion** (ನಾ.) ; **Distíllatory** — ಲಟೊರಿ (ಗು.) ಬಟ್ಟಿಯಿಳಿಸುವ ; ಬಟ್ಟಿಯಿಳಿಸುವುದರಲ್ಲಿ ಉಪಯೋಗಿಸುವ. **Distillate** — ಲೇಟ್ (ನಾ.) ಬಟ್ಟಿಯಿಳಿಸಿ ತೆಗೆದದ್ದು ; ಬಟ್ಟಿಯಿಳಿಸಿದ್ದು ; ಬಟ್ಟಿ. **Distíller** (ನಾ.) (ಮು., ಮದ್ಯಸಾರ ದ್ರವವನ್ನು) ಬಟ್ಟಿಯಿಳಿಸುವವನು ; ಬಟ್ಟಿಕಾರ. (ಸಮುದ್ರಪ್ರಯಾಣದಲ್ಲಿ ಸಮುದ್ರದ ನೀರಿನಿಂದ ಸೀನೀರನ್ನು) ಬಟ್ಟಿಯಿಳಿಸುವ ಸಾಧನ ; ಬಟ್ಟಿಯಂತ್ರ. **Distíllery** (ನಾ.) ಮದ್ಯಸಾರವನ್ನು ಬಟ್ಟಿಯಿಳಿಸುವ ಕಾರಖಾನೆ : ಬಟ್ಟಿ ಕಾರಖಾನೆ.

Distínct ಡಿಸ್ಟಿಂಕ್ಟ್ (ಗು.) ಏಕರೂಪವಲ್ಲದ ; ಬೇರೆಯಾದ ; ಪ್ರತ್ಯೇಕವಾದ ; ಭಿನ್ನವಾದ (*From* ಉಪ. ದೊಡನೆ). ಸ್ಪಷ್ಟವಾಗಿ ಕಾಣುವ ; ಸ್ಪಷ್ಟವಾದ ; ನಿಶ್ಚಿತವಾದ. **Distínctly** (ಕ್ರಿ. ವಿ.) ; **Distínctness** (ನಾ.) ; **Distínction** (ನಾ.) ಭೇದ (ಮಾಡುವುದು) ; ಭಿನ್ನತೆ ; ಭೇದಗಣನೆ ; ವ್ಯತ್ಯಾಸ (D. without a difference ಹೆಸರಿಗೆ ಮಾತ್ರ ಮಾಡುವ, ಅಥವಾ ಕೃತಕ, ವ್ಯತ್ಯಾಸ). ಪ್ರತ್ಯೇಕಿಸಿ ತೋರಿಸುವಂಥ ಗುರುತು, ಹೆಸರು, ಬಿರುದು ; ಹೆಚ್ಚುಗಾರಿಕೆ ; ವಿಶೇಷ ಲಕ್ಷಣ ; ಘನತೆಯ ಗುರುತು ; ಪ್ರಖ್ಯಾತಿ ; ಘನತೆ ; ಯಶಸ್ಸು ; ಮಹತ್ತ್ವ ; ವೈಶಿಷ್ಟ್ಯ. (ಸಾಹಿತ್ಯ ಶೈಲಿಯ) ವೈಶಿಷ್ಟ್ಯ, ವ್ಯಕ್ತಿತ್ವ. **Distínctive** (ಗು.) ಭೇದ ತೋರಿಸುವ ; ವಿಶೇಷ ಲಕ್ಷಣವಾದ ; ವೈಶಿಷ್ಟ್ಯ ಸೂಚಕ. **Distínctively** (ಕ್ರಿ. ವಿ.) ; **Distínctiveness** (ನಾ.)

Distíngue (F) ಡಿಸ್ಟ್ಯಾಂಗೇ (ಗು.) (ರೀತಿ, ರೂಪು, ನಡತೆ, ಮೊ. ಗಳ ವಿಷಯದಲ್ಲಿ) ವಿಶೇಷ ಲಕ್ಷಣದ ; ವೈಶಿಷ್ಟ್ಯವುಳ್ಳ.

Distínguish ಡಿಸ್ಟಿಂಗ್ವಿಷ್ (ಕ್ರಿ.) (ತರಗತಿಗಳು, ಮೊ. ಗಿ) ವಿಂಗಡಿಸು. ವ್ಯತ್ಯಾಸವಾಗಿರು ; ವ್ಯತ್ಯಾಸ ಕಾಣು ; ವ್ಯತ್ಯಾಸ ತೋರಿಸು; ವ್ಯತ್ಯಾಸ ಮಾಡು ; ಭೇದ ಮಾಡು ; ವಿಶೇಷಿಸು ; (ಒಬ್ಬನ, ಒಂದರ) ಕುರುಹು ಅಥವಾ ಲಕ್ಷಣ ಆಗಿರು. (ಕೇಳುವುದು, ನೋಡುವುದು, ಮೊ. ಗಳಿಂದ) ತಿಳಿದುಕೊ, ಗುರುತಿಸು. ಪ್ರಾಮುಖ್ಯತೆಗೆ ಬರು, ಏರು (ಮು., ಪೌರುಷ ಪ್ರದರ್ಶನದಿಂದ) ; ಹೆಸರು ಪಡೆ. **Distínguishable** (ಗು.) ; **Distínguishably** (ಕ್ರಿ. ವಿ.) ; **Distínguished** — ಗ್ವಿಷ್ಟ್ (ಗು.) (ಕ್ರಿಯಾರ್ಥಗಳಲ್ಲಿ) ; (ಗುಣ, ಮೊ. ಗಳಿಂದ) ಪ್ರಖ್ಯಾತನಾದ, ಪ್ರಸಿದ್ಧನಾದ ; ವೈಶಿಷ್ಟ್ಯವುಳ್ಳ (*For*, *by* ಉಪ. ದೊಡನೆ) ; ಮಹತ್ತ್ವಪಡೆದ ; ಶ್ರೇಷ್ಠ ಪದವಿಯ.

Distórt ಡಿಸ್ಟಾರ್ಟ್ (ಕ್ರಿ. ಸಕ.) (ನಿಜವಾಗಿ, ಅಥವಾ ಸೊಟ್ಟಗನ್ನಡಿ, ಮೊ. ಗಳಿಂದ ಕೃತಕವಾಗಿ) ವಿರೂಪ ಮಾಡು ; ತಿರಿಚು ; ವಕ್ರ ಮಾಡು ; ಕೊಂಕಿಸು. (ಉದ್ದೇಶಗಳು, ವಿಷಯಗಳು, ಹೇಳಿಕೆಗಳು, ಮೊ. ನ್ನು) ತಪ್ಪಾಗಿ ತೋರು ; ತಪ್ಪು ಅಭಿಪ್ರಾಯ ಕೊಡು ; ಅಪಾರ್ಥ ಮಾಡು ; ತಿರಿಚಿ ಹೇಳು. **Distórtedly** (ಕ್ರಿ. ವಿ.) ; **Distórtion** (ನಾ.) (ಕ್ರಿಯಾರ್ಥಗಳಲ್ಲಿ). (ಭೌ. ವಿ.) (ವಿಚ್ಛಿನ್ನತೆಯಿಲ್ಲದ) ರೂಪವಿಕಾರ. ವಿಕೃತ ರೂಪ ಅಥವಾ ಬಿಂಬ. (ನಿಸ್ತಂತುವಿನ ಅಥವಾ ದೂರವಾಣಿಯ ಮೂಲಕ ಕಳುಹಿಸಿದ ಶಬ್ದಗಳಲ್ಲಿ) ಅಸ್ಪಷ್ಟತೆ, ಅವ್ಯಕ್ತತೆ. **Distórtional** (ಗು.) ; **Distórtionist** (ನಾ.) ವಿಕಟ ಚಿತ್ರಕ ; (ಮೈಯನ್ನು ಬಗೆ ಬಗೆಯಾಗಿ ತಿರಿಚುವ) ದೊಂಬರಾಟದವನು : ಮೈ ತಿರಿಚಿಗ.

Distráct ಡಿಸ್‌ಟ್ರ್ಯಾಕ್ಟ್ (ಕ್ರಿ. ಸಕ.) (ಗಮನ, ಮನಸ್ಸು, ಮೊ. ನ್ನು) ಬೇರೆ ಬೇರೆ ಕಡೆಗೆ ತಿರುಗಿಸು, ಸೆಳೆ, ಎಳೆ (ಸಾ., *from* ಉಪ. ದೊಡನೆ) ; ಚಿತ್ತಭ್ರಮಣೆ ಮಾಡು (ಸಾ., ಭೂ. ಕೃ. ನಲ್ಲಿ ; *Between* ಉಪ. ದೊಡನೆ). ಹುಚ್ಚುಹಿಡಿಸು ; ಬುದ್ಧಿಭ್ರಂಶ ಮಾಡು ; ಕೆರಳಿಸು (Distracted *with*, *by*, *at*). **Distráctedly** (ಕ್ರಿ. ವಿ.) ; **Distráctingly** (ಕ್ರಿ. ವಿ.) ; **Distráction** (ನಾ.) ಚಿತ್ತಭ್ರಮಣೆ ; ಚಿತ್ತಭ್ರಂಶ ; ಚಿತ್ತಭ್ರಂಶಕಾರಿ ; ಚಿತ್ತೈಕಾಗ್ರತೆ ಇಲ್ಲದಿರುವುದು ; ವ್ಯಗ್ರತೆ ; ವಿನೋದ ; ವಿಶ್ರಾಂತಿ. ದಿಗ್ಭ್ರಮಣೆ ; ಕ್ಷುಬ್ಧಿ ; ಗೊಂದಲ ; ಕಳವಳ. ಉನ್ಮಾದ ; ಹುಚ್ಚು (To d. ಹುಚ್ಚುಹಿಡಿಸುವಷ್ಟು)

Distraín ಡಿಸ್‌ಟ್ರೇಯ್ನ್ (ಕ್ರಿ. ಅಕ.) (ನ್ಯಾ. ಶಾ.) (ಕರ್ತವ್ಯ ನಡಸದೆ ಹೋದುದಕ್ಕಾಗಿ, ಅಥವಾ ಕಂದಾಯ, ಬಾಡಿಗೆ, ಮೊ. ನ್ನು ಕೊಡದೆ ತಪ್ಪಿದುದಕ್ಕಾಗಿ, ಒಬ್ಬನ) ಚರಾಸ್ತಿಯನ್ನು ಜಫ್ತಿಮಾಡು. **Distraíner, -or** (ನಾ.) ಜಫ್ತಿಮಾಡುವವನು. **Distraineé** (ನಾ.) ಆಸ್ತಿ ಜಫ್ತಿಯಾದವನು. **Distraínment** (ನಾ.), **Distraínt** (ನಾ.) ಜಫ್ತಿ (ಮಾಡುವುದು)

Distraít (F) ಡಿಸ್‌ಟ್ರೇ (ಗು. ; ಸ್ತ್ರೀ. -ite — ಟ್ರೇಟ್) ಅನ್ಯ ಮನಸ್ಕನಾದ ; ಗಮನ ಕೊಡದಿರುವ ; ಅನವಧಾನದ.

Distraúght ಡಿಸ್‌ಟ್ರಾಟ್ (ಗು.) (ಪ್ರಾಚೀ. ಪ್ರ.) ಅತಿ ಕಳವಳಗೊಂಡ ; ಕ್ಷೋಭೆಗೊಂಡ ; ತಳಮಳಿಸುವ ; ಬುದ್ಧಿಭ್ರಮಣೆ ಹೊಂದಿದ ; ಹುಚ್ಚು ಹಿಡಿದ.

Distréss ಡಿಸ್‌ಟ್ರೆಸ್ (ನಾ., ಕ್ರಿ. ಸಕ.) ಅತಿ ಕಷ್ಟ, ನೋವು, ದುಃಖ, ವ್ಯಥೆ ; ಯಾತನೆ ; ಸಂಕಟ ; ಬೇಗುದಿ ; ತೊಂದರೆ. (ಹಣದ, ಆವಶ್ಯಕವಾಗಿ ಬೇಕಾದ ಅನುಕೂಲ್ಯಗಳ) ಕೊರತೆ, ಅಭಾವ ; ಕಷ್ಟ ದಶೆ ; ಅಪಾಯ ಸ್ಥಿತಿ ; ಇಕ್ಕಟ್ಟು. ದಣಿವು ; ಆಯಾಸ ; (ದೇಹ) ಸೋತುಹೋಗಿರುವುದು ; ಉಸಿರಿಲ್ಲದಿರುವುದು ; ಸೋಲು ; ಬಳಲಿಕೆ. (ನ್ಯಾ. ಶಾ.) ಜಫ್ತಿ. (D.-gun, -rocket ಕಷ್ಟಕ್ಕೆ ಸಿಕ್ಕಿದ ಹಡಗಿನಿಂದ ಕಳುಹಿಸಿದ ಗುಂಡಿನ ಶಬ್ದ, ಆಕಾಶ ಬಾಣ ; ಅಪಾಯ ಸಂಕೇತ. D.-warrant ಜಫ್ತಿಮಾಡಲು ಅಧಿಕಾರಪತ್ರ). (ಕ್ರಿ.) ವ್ಯಥೆಗೀಡುಮಾಡು ; ಅತಿ ಸಂಕಟಕ್ಕೆ ಗುರಿಪಡಿಸು ; ಗೋಳುಗುಟ್ಟಿಸು ; ಪೀಡಿಸು ; ಪೇಚಾಡಿಸು ; ಮನೋವ್ಯಥೆಯುಂಟುಮಾಡು. **Distréssful** (ಗು.) (The d. country ಐರ್ಲೆಂಡು ದೇಶ). **Distréssingly** (ಕ್ರಿ. ವಿ.)

Distríbute ಡಿಸ್ಟ್ರಿಬ್ಯೂಟ್ (ಕ್ರಿ. ಸಕ.) ಹಂಚು ; ಹಂಚಿಕೊಡು ; ಪಾಲು ಮಾಡಿ ಕೊಡು. ಹರಡು ; ಚೆದರಿಸು ; ಎರಚು ; ಬೇರೆ ಬೇರೆ ಕಡೆ ಇಡು, ನಿಲ್ಲಿಸು, ಸ್ಥಾಪಿಸು. ಭಾಗ ಮಾಡು ; ವಿಂಗಡಿಸು ; ವಿನ್ಯಾಸ ಮಾಡು ; ವರ್ಗೀಕರಿಸು. (ತರ್ಕ) (ಒಂದು ಪದವನ್ನು, ಅದರಿಂದ ವಾಚ್ಯವಾದ ಎಲ್ಲ ವಸ್ತುಗಳನ್ನೂ ಒಳಕೊಳ್ಳುವಂತೆ) ಪೂರ್ಣ ವ್ಯಾಪನಾರ್ಥದಲ್ಲಿ ಉಪಯೋಗಿಸು. **Distríbutor** (ನಾ.) ; **Distríbutable** (ಗು.) ; **Distríbutary** — ಟರಿ (ಗು., ನಾ.) ಹಂಚುವ ; ವಿಭಾಗವಾಗುವ. (ಭೂಗೋಳ ಶಾಸ್ತ್ರ) (ನದಿಯಿಂದ ಕವಲೊಡೆದು ಹೊರಟು ಮರಳಿ ಆ ನದಿಯನ್ನು ಸೇರದ) ನದೀ ಶಾಖೆ. **Distribútion** (ನಾ.) ಹಂಚುವುದು ; ಹಂಚಿಕೆ ; ವಿಭಾಗ ; ಪಾಲು ಮಾಡಿ ಕೊಡುವುದು. (ಅರ್ಥಶಾಸ್ತ್ರ) ಉತ್ಪನ್ನ ವಸ್ತುಗಳನ್ನು ವಾಣಿಜ್ಯದ ಮೂಲಕ ಅನುಭೋಗಿಗಳಲ್ಲಿ ಹರಡುವುದು ; ಒಂದು ಸಮಾಜದ ಒಟ್ಟು ಉತ್ಪನ್ನಗಳು ಆ ಸಮಾಜದ ಅನುಭೋಗಿ ವರ್ಗಗಳಲ್ಲಿ ಅಥವಾ ವ್ಯಕ್ತಿಗಳಲ್ಲಿ ಹಂಚಿಕೆಯಾಗುವ ಪರಿಮಾಣ. ಹರಡುವುದು ; ಹರಡಿಕೆ ; ಚೆದರಿಸುವುದು ; ಚೆದರುವುದು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚೆದರಿಕೆ ; ಪ್ರಸರಿಸುವುದು ; ಪ್ರಸಾರ ; ವ್ಯಾಪನೆ ; ಹಂಚಿಹೋಗುವುದು. ಭಾಗಗಳಾಗಿ ವಿಂಗಡಿಕೆ ; ವಿಭಾಗ ; ವಿನ್ಯಾಸ ; ವಿಭಜನ ; ವರ್ಗೀಕರಣ. (ತರ್ಕ) ಪೂರ್ಣ ವ್ಯಾಪನೆ. **Distribútional** (ಗು.) ; **Distríbutive** —ಬ್ಯುಟಿವ್ (ಗು., ನಾ.) ಹಂಚಿಕೆಯ ; ವಿಭಜನೆಯ ; ವಿಂಗಡಿಕೆಯ. (ತರ್ಕ, ವ್ಯಾ.) ಒಂದು ತರಗತಿಯ ಪ್ರತಿ ವ್ಯಕ್ತಿಯನ್ನೂ ಪ್ರತ್ಯೇಕವಾಗಿ ಸೂಚಿಸುವ (ಒಟ್ಟು ಸಮುದಾಯವನ್ನಲ್ಲ) ; ವ್ಯಕ್ತಿವಾಚಕ ಪದ (ಉದಾ., *Each, either, every*). **Distríbutively** (ಕ್ರಿ. ವಿ.)

Dístrict ಡಿಸ್ಟ್ರಿಕ್ಟ್ (ನಾ., ಕ್ರಿ. ಸಕ.) ಆಡಳಿತದ ಸೌಕರ್ಯಕ್ಕಾಗಿ ಪ್ರತ್ಯೇಕಿಸಿದ ಪ್ರಾಂತ ; ತುಕಡಿ ; ಜಿಲ್ಲೆ. (ಕ್ರೈಸ್ತ) ಆರಾಧನ ಮಂದಿರ, ಪುರೋಹಿತ, ಮೊ. ಅನುಕೂಲ್ಯಗಳನ್ನುಳ್ಳ ಒಂದು ಉಪ ನಗರ. ಕಾರ್ಯಕ್ಷೇತ್ರ. ಸಮಾನ ವೈಲಕ್ಷಣ್ಯಗಳನ್ನುಳ್ಳ ದೇಶಭಾಗ ; ಪ್ರದೇಶ ; ನಾಡು. (ಕ್ರಿ.) ಜಿಲ್ಲೆಗಳಾಗಿ ವಿಂಗಡಿಸು.

Distrúst ಡಿಸ್‌ಟ್ರಸ್ಟ್ (ನಾ., ಕ್ರಿ. ಸಕ.) ನೆಚ್ಚಿಕೆ, ನಂಬಿಕೆ, ಇಲ್ಲದಿರುವುದು ; ಅಪನಂಬಿಕೆ ; ಅವಿಶ್ವಾಸ ; ಸಂಶಯ ; ಸಂದೇಹ. (ಕ್ರಿ.) ನಂಬದಿರು ; ನೆಚ್ಚದಿರು ; ಸಂಶಯ ಪಡು ; ಅಪನಂಬಿಕೆ ಪಡು. **Distrústful** (ಗು.) (*Of* ಉಪ. ಜೊಡನೆ). **Distrústfully** (ಕ್ರಿ. ವಿ.)

Distúrb ಡಿಸ್‌ಟರ್ಬ್ (ಕ್ರಿ. ಸಕ.) ಕೆರಳಿಸು ; ತೊಂದರೆ ಮಾಡು ; ಶಾಂತಿ ಭಂಗ ಮಾಡು ; ಮನಸ್ಸು ಕಲಕು ; ಕದಡು ; ಕಲಕು ; ಕ್ಷೋಭೆಗೊಳಿಸು. **Distúrbance** — ಬನ್ಸ್ (ನಾ.) ಶಾಂತಿ ಭಂಗ ; ಕ್ಷೋಭೆ ; ಕಲಕು ; ಗಲಭೆ ; ಗಲಾಟೆ ; ಗೊಂದಲ ; ದೊಂಬಿ ; ದಂಗೆ ; ದಾಂಧಲೆ. (ನ್ಯಾ. ಶಾ.) ಬಾಧೆ ; ಆತಂಕ ; ಹಕ್ಕಿಗೆ ಅಥವಾ ಆಸ್ತಿಯ ಅನುಭವಕ್ಕೆ ಅಡ್ಡಿ (ತರುವುದು)

Disúnion ಡಿಸ್‌ಯೂನಿಯನ್ (ನಾ.) ಬೇರೆಯಾಗುವುದು ; ಅಗಲಿಕೆ ; ವಿಯೋಗ ; ಒಕ್ಕಟ್ಟಿಲ್ಲದಿರುವುದು ; ಅನೈಕಮತ್ಯ ; ಭೇದ ; ಒಡಕು ; ವೈಮನಸ್ಯ. **Disuníte** — ಯುನೈಟ್ (ಕ್ರಿ.)

Disúse ಡಿಸ್‌ಯೂಸ್ (ನಾ.), ಡಿಸ್‌ಯೂಸ್ (ಕ್ರಿ. ಸಕ.) (ಉಪಯೋಗ) ನಿಲ್ಲಿಸಿಬಿಡು(ವುದು) ; ಉಪಯೋಗಿಸದೆ ಬಿಟ್ಟಿರುವುದು ; ಅಭ್ಯಾಸ ತಪ್ಪಿರುವುದು ; ಬಳಕೆಯಿಲ್ಲದ ಸ್ಥಿತಿ ; ಅನಭ್ಯಾಸ ; ಅರೂಢಿ ; ಅವ್ಯವಹಾರ. ಉಪಯೋಗಿಸದಿರು ; ಬಳಸದಿರು.

Disýllable ಡೈ(ಡಿ)ಸಿಲಬ್‌ಲ್, **Diss-** ಡಿಸಿ —, **Díss-** ಡಿಸ್ಸಿ — (ನಾ.) ಎರಡು ಸ್ವರದ ಪದ ; ದ್ವಿಸ್ವರ. **Dis(s)yllábic** — ಲ್ಯಾ — (ಗು.) ; **Dis(s)yllábically** (ಕ್ರಿ. ವಿ.)

Ditch ಡಿಚ್ (ನಾ., ಕ್ರಿ.) (ನೀರು ನಿಲ್ಲುವುದಕ್ಕಾಗಲಿ ಸಾಗುವುದಕ್ಕಾಗಲಿ ಅಥವಾ ಗಡಿಯನ್ನು ಗುರುತಿಸುವುದಕ್ಕಾಗಲಿ ಮಾಡಿದ) ಕಾಲುವೆ, ಖಾತ ; ಚರಂಡಿ ; ಮೋಹರಿ ; ಕಂದಕ ; ಅಗಳು. (ನೀರು) ಹಳ್ಳ [Die in last d. (Die ನೋಡಿ). D.-water ಚರಂಡಿನೀರು ; (ನಿಂತ) ರೊಚ್ಚುನೀರು]. (ಕ್ರಿ.) ಚರಂಡಿ, ಕಾಲುವೆ, ಮೊ. ನ್ನು ತೋಡು, ಮಾಡು, ದುರಸ್ತುಮಾಡು (ಮು., Hedging and ditching ಎಂಬಲ್ಲಿ). ಕಾಲುವೆ, ಚರಂಡಿ, ಮೊ. ನ್ನು ಮಾಡಿ ನೀರನ್ನು ಹೊರಡಿಸು. (ಗಾಡಿಯ ವಿಷಯದಲ್ಲಿ) ಹಳ್ಳದಲ್ಲಿ ಸಿಕ್ಕಿಸು, ಹಳ್ಳಕ್ಕೆ ಕೆಡವು. **Dítcher** (ನಾ.) — ತೋಡುವವನು ; — ತೋಡುವ ಯಂತ್ರಸಾಧನ.

Dítheism ಡೈಥಿಯಿಸ್‌ಮ್ (ನಾ.) ದ್ವಿದೇವ ಮತ ; ಈಶ್ವರ ದ್ವಯ ವಾದ ; ಪಾಪ ಪುಣ್ಯಗಳೆಂಬ ಪರಸ್ಪರ ವಿರೋಧವಾದ ಪ್ರತ್ಯೇಕ ಶಕ್ತಿಗಳ ಅಸ್ತಿತ್ವದಲ್ಲಿ ನಂಬಿಕೆ : ದ್ವಿತತ್ತ್ವ ವಾದ.

Díther ಡಿದರ್ (ಕ್ರಿ. ಅಕ., ನಾ.) ನಡುಗು ; ಅದುರು ; ಕಂಪಿಸು. ನಡುಕ ; ಕಂಪನ.

Díthyramb ಡಿಥಿರ್‍ಯಾಂಬ್, — ರ್‍ಯಾಮ್ (ನಾ.) ಗ್ರೀಕರ ಆವೇಶದ ಮೇಳಗಾನ ; ಉನ್ಮತ್ತ ಗೀತೆ ; ಆವೇಶ ಗಾನ ; ಕುಡಿತದ ಹಾಡು ; ಕಳ್ಪಾಡು. ಆವೇಶದ ಅಥವಾ ಆಡಂಬರದ ಕವನ, ಭಾಷಣ, ಲೇಖನ. **Dithyrámbic** — ರ್‍ಯಾಂಬಿಕ್ (ಗು., ನಾ.)

Dítto ಡಿಟೊ (ಗು., ನಾ.) (ಸಂಕ್ಷಿಪ್ತ : do, do ; ಬ. ವ. -s) ಹಿಂದೆ ಹೇಳಿದ ; ಮೇಲೆ ಹೇಳಿದ್ದು ; ಅದೇ ; ಸದರಿ. ಪಡಿಯಚ್ಚು ; ಪ್ರತಿ ; ನಕಲು (D. suit, Suit of dittos ಒಂದೇ ತೆರದ ಬಟ್ಟೆಯಿಂದ ಮಾಡಿದ ಉಡುಪು). Say d. to ಒಪ್ಪು ; ಸಮ್ಮತಿಸು ; ಅಹುದೆನ್ನು ; ಅಸ್ತುಹೇಳು ; ಹೂಗುಟ್ಟು.

Dittógraphy ಡಿಟಾಗ್ರಫಿ (ನಾ.) ಪ್ರತಿಯೆತ್ತುವುದರಲ್ಲಿ ಒಂದು ಅಕ್ಷರವನ್ನು, ಪದವನ್ನು ಅಥವಾ ವಾಕ್ಯಭಾಗವನ್ನು ಕೈತಪ್ಪಿ ಮತ್ತೆ ಬರೆಯುವುದು ; ಪುನರ್ಲಿಪಿ ದೋಷ. **Dittográphic** ಡಿಟೊಗ್ರ್ಯಾಫಿಕ್ (ಗು.)

Dítty ಡಿಟಿ (ನಾ.) ಸಣ್ಣ, ಸರಳ — ಹಾಡು, ಪದ ; ಲಘು ಗೀತೆ.

Dítty-bag, -box ಡಿಟಿಬ್ಯಾಗ್, — ಬಾಕ್ಸ್ (ನಾ.) ನಾವಿಕನ, ಅಂಬಿಗನ, ಬೆಸ್ತನ — ಹಸುಬೆ ಚೀಲ, ಸಂಚಿ, ಪೆಟ್ಟಿಗೆ.

Diurétic ಡೈಯೂರೆಟಿಕ್ (ಗು., ನಾ.) ಮೂತ್ರಸ್ರಾವ ಉತ್ತೇಜಕ (ವಸ್ತು)

Diúrnal ಡೈಅರ್ನಲ್ (ಗು.) (ಖ. ವಿ.) ಒಂದು ದಿನದ ; ಒಂದು ದಿನ ಹಿಡಿಯುವ ; ದೈನಿಕ. (ಪ್ರಾಚೀ. ಪ್ರ.) ದಿನಂಪ್ರತಿಯ ; ಪ್ರತಿ ದಿನದ. ದಿನದ (ರಾತ್ರಿಯದಲ್ಲದ) ; ಹಗಲಿನ. **Diúrnally** (ಕ್ರಿ. ವಿ.)

Dív ಡೀವ್ (ನಾ.) (ಪರ್ಷಿಯನ್ ಪುರಾಣದಲ್ಲಿ) ದೆವ್ವ, ಪಿಶಾಚಿ, ಪಾಪ ದೇವತೆ.

Díva (L) ಡೀವ (ನಾ.) ಪ್ರಸಿದ್ಧ ಗಾಯಕಿ ; (ಸಂಗೀತ ನಾಟಕದಲ್ಲಿ) ಮುಖ್ಯ ಗಾಯಕಿ.

Dívagate ಡೈವಗೇಟ್ (ಕ್ರಿ. ಅಕ.) ಮಾರ್ಗಬಿಟ್ಟು ಹೋಗು ; ಅಡ್ಡದಾರಿ ಹಿಡಿ ; ವಿಷಯಬಿಟ್ಟು ಹೋಗು. **Divagátion** (ನಾ.)

Dívalent ಡೈ(ಡಿ)ವಲೆಂಟ್ (ಗು.) ಜಲಜನಕದ ಎರಡು ಪರಮಾಣುಗಳೊಡನೆ ಸಂಯೋಗಹೊಂದುವ ಸ್ವಭಾವದ ; ಎರಡು ಸಂಯೋಜಕ ತುಲ್ಯಗಳುಳ್ಳ ; ದ್ವಿಯೋಗ ಶಕ್ತ.

Diván ಡಿವ್ಯಾನ್ (ನಾ.) ಪೂರ್ವದೇಶಗಳ ಮಂತ್ರಾಲೋಚನ ಸಭೆ (ಮು., ತುರ್ಕಿಯ ಮಂತ್ರಿಸಭೆ) ; — ನ್ಯಾಯಸ್ಥಾನ. ಕೊಠಡಿಯ ಗೋಡೆಯ ಉದ್ದಕ್ಕೂ ಅಳವಡಿಸಿರುವ (ಕೆಲವುವೇಳೆ ಮೆತ್ತೆಹಾಕಿರುವ) ಉದ್ದವಾದ ಜಗಲಿ. ಹೊಗೆಬತ್ತಿ (ಚುಟ್ಟಾ, ಬೀಡಿ, ಸಿಗರೆಟ್) ಸೇದುವ ಕೋಣೆ ; ಚುಟ್ಟಾ ಅಂಗಡಿ.

Diváricate ಡಿ(ಡೈ)ವ್ಯಾರಿಕೇಟ್ (ಕ್ರಿ. ಅಕ.) (ರಸ್ತೆ, ರೆಂಬೆ, ಮೊ. ಗಳ ವಿಷಯದಲ್ಲಿ) ಕವಲೊಡೆ. **Diváricátion** (ನಾ.) ; **Diváricate** — ಕೆಟ್ (ಗು.) (ಸ. ವಿ., ಪ್ರಾ. ವಿ.) ಕಾಂಡದಿಂದ, ಪ್ರಧಾನಾಂಗದಿಂದ, ಬಹುಮಟ್ಟಿಗೆ ಸಮಕೋನದಲ್ಲಿ, ಶಾಖೆ ಹೊರಡುವ.

Dive ಡೈವ್ (ಕ್ರಿ. ಅಕ., ನಾ.) (ನೀರು, ಮೊ. ಗಳಲ್ಲಿ, ಮು., ತಲೆ ಮುಂದಾಗಿ) ಮುಳುಗು. ಕೆಳಕ್ಕೆ ಅಥವಾ ಕಣ್ಣಿಗೆ ಕಾಣದಂತೆ ಥಟ್ಟನೆ ಇಳಿ, ಮರೆಯಾಗು. (ನೀರು, ಪಾತ್ರೆ, ಜೇಬು, ಮೊ. ಗಳಲ್ಲಿ) ಕೈಹಾಕು, ಕೈಯಿಡು. ಒಳಹೊಕ್ಕು, ಆಳವಾಗಿ, ಆಲೋಚಿಸು ; ಬುಡಮುಟ್ಟ ಪರೀಕ್ಷಿಸು. (Diving-bell ಒಬ್ಬನನ್ನು ಆಳವಾದ ನೀರಿನೊಳಕ್ಕೆ ಇಳಿಸಲಾಗುವ ತಳವಿಲ್ಲದ ಪೆಟ್ಟಿಗೆ ಅಥವಾ ಗಂಟೆಯಾಕಾರದ ಪಾತ್ರೆ : ಮುಳುಗು ಪೆಟ್ಟಿಗೆ ; — ಗಂಟೆ). (ಮುಳುಗುಹಡಗಿನ ವಿಷಯದಲ್ಲಿ) ನೀರಿನಲ್ಲಿ ಮುಳುಗಿಸು. (ಆಕಾಶ ಯಾನ) ಬಹಳ ವೇಗನೆ ಕೆಳಕ್ಕಿಳಿ(ಯುವುದು). (ನಾ.) ಮುಳುಕು ; ತಲೆ ಮುಂದಾಗಿ ಹಾಕುವ ಮುಳುಕು ; ಒಳ ಈಜು ; ಅಂತರೀಜು ; ಥಟ್ಟನೆ ಕಣ್ಣಿಗೆ ಕಾಣದಂತೆ ಮುಳುಗುವುದು, ಮರೆಯಾಗುವುದು. (ಅಮೆ. ಸಂ.) ಕುಡಿತದ ಗವಿ. ಯಾವುದಾದರೂ ಗೊತ್ತಾದ ಪದಾರ್ಥವನ್ನು ಮಾರುವ, ನೆಲದ ತಳಗಡೆಯ ಅಥವಾ ಕಟ್ಟಡದ ಮೇಲ್ಪಾಯದಲ್ಲಿಯ, ಕೋಣೆ (Oyster d.). ಹೆಸರುಗೆಟ್ಟವರು (ಪೋಲಿಗಳು) ಅಡಗಿಕೊಂಡಿರುವ ಸ್ಥಳ ಅಥವಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶರಣ ಸ್ಥಾನ. **Díver** (ನಾ.) (ಕ್ರಿಯಾರ್ಥಗಳಲ್ಲಿ). (ಮುತ್ತಿನ ಚಿಪ್ಪಿಗಾಗಿ, ಮುಳುಗಿರುವ ಹಡಗು, ಮೊ. ಗಳ ಪರೀಕ್ಷೆಗಾಗಿ) ನೀರಿನಲ್ಲಿ ಮುಳುಗುವವನು. (ಕೆಲವು ಜಾತಿಯ) ಮುಳುಗು ಹಕ್ಕಿ ; ಮುಳುಕ.

Divérge ಡಿ(ಡೈ)ವರ್ಜ್ (ಕ್ರಿ.) (ಒಂದು ಬಿಂದುವಿನಿಂದ, ಒಂದೊಂದರಿಂದ) ಬೇರೆ ಬೇರೆ ದಿಕ್ಕುಗಳಲ್ಲಿ ಹೋಗು ; ಹಾದಿ ಬಿಟ್ಟು ಬೇರೆ ದಿಕ್ಕಿಗೆ ಹೋಗು ; ದೂರ ದೂರ ಹೋಗು ; ಅಗಲುತ್ತ ಹೋಗು ; ವ್ಯತ್ಯಾಸವಾಗು ; ಅತಿಕ್ರಮಿಸು ; ದಾರಿಬಿಟ್ಟು ಹೋಗುವಂತೆ ಮಾಡು ; ದಿಕ್ಚ್ಯುತಿ ಮಾಡು. **Divérgence** (ನಾ.) ಅಪಸರಣ. **Divérgency** (ನಾ.) ; **Divérgent** (ಗು.) ; **Divérgently** (ಕ್ರಿ. ವಿ.) ; **Divérgingly** (ಕ್ರಿ. ವಿ.)

Dívers ಡೈವರ್ಸ್ (ಗು.) (ಪ್ರಾಚೀ. ಪ್ರ., ಹಾಸ್ಯವಾಗಿ) ಹಲವು ; ಕೆಲವು ; ಒಂದಕ್ಕಿಂತಲೂ ಅಧಿಕವಾದ ; ಅನೇಕ ; ಬಗೆ ಬಗೆಯ ; ಹಲವು ತೆರದ ; ನಾನಾ ; ವಿವಿಧ. **Divérse** ಡೈ(ಡಿ)ವರ್ಸ್ (ಗು.) (ಸ್ವಭಾವದಲ್ಲೂ ಗುಣಗಳಲ್ಲೂ) ಭಿನ್ನವಾದ, ಸಾಮ್ಯವಿಲ್ಲದ ; ಅನ್ಯ ರೀತಿಯ ; ಬೇರೆ ಬೇರೆಯ ; ಬಗೆ ಬಗೆಯ ; ವ್ಯತ್ಯಾಸ ಹೊಂದುತ್ತ ಹೋಗುವ. **Divérsely** (ಕ್ರಿ. ವಿ.) ; **Divérsiform** (ಗು.) ; **Divérsify** (ಕ್ರಿ. ಸಕ.) ಬೇರೆ ರೀತಿಯವನ್ನಾಗಿ ಮಾಡು ; ವಿವಿಧ ಮಾಡು ; ನಾನಾ ರೂಪ ಮಾಡು ; ಬದಲಾಯಿಸು. **Diversificátion** (ನಾ.) ; **Divérsion** (ನಾ.) ಬೇರೆ ಕಡೆಗೆ ತಿರುಗಿಸುವುದು ; ತಿರುಗುವುದು ; ದಿಕ್ಚ್ಯುತಿ ಮಾಡುವುದು ; ಗಮನವನ್ನು ಬೇರೆ ಕಡೆಗೆ ತಿರುಗಿಸುವುದು ; ಹೀಗೆ ತಿರುಗಿಸುವ ಉಪಾಯ ; ತಂತ್ರ. ವಿನೋದ ; ಆಟ ; ಕ್ರೀಡೆ ; ವಿಹಾರ. **Divérsity** (ನಾ.) ನಾನಾತ್ವ ; ವಿವಿಧತೆ ; ವೈವಿಧ್ಯ ; ವೈಚಿತ್ರ್ಯ ; ಭಿನ್ನತೆ ; ಬೇರೆ ರೀತಿ ; ಅನೇಕತೆ ; ಬಗೆಬಗೆಯಾಗಿರುವುದು. **Divért** (ಕ್ರಿ. ಸಕ.) (ಹೊಳೆ, ಮೊ. ನ್ನು) ಬೇರೆ ಕಡೆಗೆ ತಿರುಗಿಸು ; ದಿಕ್ಕು ಬದಲಾಯಿಸು (*From*, *to* ಉಪ. ದೊಡನೆ). ಪರಿಹಾರ ಮಾಡು ; ತೊಲಗಿಸಿಕೊ ; ಬಳಿಗೆ ಬರದಂತೆ ಅಟ್ಟಿಬಿಡು. (ಒಂದರಿಂದ ಮತ್ತೊಂದಕ್ಕೆ, ಒಬ್ಬನ) ಗಮನ ಸೆಳೆ ; ಮನಸ್ಸು ತಿರುಗಿಸು. ವಿನೋದಗೊಳಿಸು ; ನಗಿಸು ; ಹೊತ್ತು ಹೋಗಿಸು. **Divérting** (ಗು.) ; **Divértingly** (ಕ್ರಿ. ವಿ.)

Divertissemént (F) ಡೀವರ್‌ಟೀಸ್‌ಮಾನ್ (ನಾ.) ನಾಟಕದ ಅಂಕಗಳ ಮಧ್ಯೆ ಪ್ರದರ್ಶಿಸುವ ಸಣ್ಣ ನಾಟ್ಯ ಅಥವಾ ಮೂಕಾಭಿನಯ, ಮೊ.

Díves ಡೈವೀಸ್ (ನಾ.) ಧನಿಕ ; ಐಶ್ವರ್ಯವಂತ(ನಿಗೆ ಲಾಕ್ಷಣಿಕ ನಾಮ) ; ಸಾಹುಕಾರ. (ನ್ಯಾ. ಶಾ.) D. costs ಹೆಚ್ಚಿನ ದರದ ಕೋರ್ಟುಖರ್ಚು ('Pauper costs ನಿರ್ಗತಿಕ ಕೋರ್ಟುಖರ್ಚು' ಎಂಬುದಕ್ಕೆ ವ್ಯತಿರಿಕ್ತ)

Divést ಡಿ(ಡೈ)ವೆಸ್ಟ್ (ಕ್ರಿ. ಸಕ.) ಉಡುಪು ತೆಗೆ(ದುಹಾಕು) ; (ಉಡುಪು, ಮೊ. ನ್ನು) ಕಳಚಿಹಾಕು. ಕಸಿದುಕೊ ; ತೆಗೆದುಬಿಡು (D. oneself of ತೊರೆದುಬಿಡು ; ತ್ಯಜಿಸಿಬಿಡು) ; ಇಲ್ಲದಂತೆ ಮಾಡು ; ತಪ್ಪಿಸು. **Divéstment** (ನಾ.) = **Divéstiture** ಡಿ(ಡೈ)ವೆಸ್ಟಿಚ್ಯುರ್ (ನಾ.) (ಕ್ರಿಯಾರ್ಥಗಳಲ್ಲಿ, ರೂಪ. ಸಹ). ಒಂದು ಸ್ವಾಮ್ಯದ ಅಥವಾ ಹಕ್ಕಿನ ಅಪಹರಣ ; ಹಕ್ಕು ತಪ್ಪಿಸುವುದು ; ಸ್ವಾಮ್ಯವನ್ನು ಕಿತ್ತುಕೊಳ್ಳುವುದು ; ಪರಭಾರೆ ಮಾಡುವುದು.

Dívi ಡಿವಿ (ನಾ.) (ಸಹಕಾರ ಸಂಘಗಳ ಅಸಂ.) ಭಾಜ್ಯಾಂಶ (Dividend ಪದದ ಸಂಕ್ಷಿಪ್ತ)

Divíde ಡಿವೈಡ್ (ಕ್ರಿ., ನಾ.) ಭಾಗ ಮಾಡು ; ಪಾಲು ಮಾಡು ; ಭಾಗವಾಗು ; ವಿಭಾಗಿಸು ; ವಿಭಾಗವಾಗು ; ಹೋಳಾಗು ; ಹೋಳು ಮಾಡು ; ಭೇದಿಸಿಕೊಂಡು ಹೋಗು ; ಹಾದಿ ಮಾಡಿಕೊಂಡು ಹೋಗು. ಭಾಗಗಳಾಗಿ ಗುರುತುಮಾಡು, ವಿಂಗಡಿಸು ; ವರ್ಗೀಕರಣ ಮಾಡು ; ಬೇರೆ ಬೇರೆ ಜಾತಿಗಳನ್ನು ವಿಂಗಡಿಸು. (ಒಂದರಿಂದ) ಕತ್ತರಿಸಿ ಹಾಕು ; ಖಂಡಿಸು ; ಬೇರೆ ಮಾಡು ; ಪ್ರತ್ಯೇಕಿಸು. ಪರಸ್ಪರ ಒಪ್ಪಿಗೆಯಿಲ್ಲದಂತೆ ಮಾಡು ; ಭಿನ್ನಾಭಿಪ್ರಾಯ ಹುಟ್ಟಿಸು ; ಒಡಕು ಹುಟ್ಟಿಸು ; ಭೇದ ತಂದುಹಾಕು. ಪಾಲು ಮಾಡು ; ಹಂಚು ; ಒಡೆ (*Among*, *between* ಉಪ. ದೊಡನೆ) ; ಪಾಲು ಮಾಡಿಕೊ. (ಗಣಿತ) ಭಾಗಾಕಾರ ಮಾಡು ; ಭಾಗಿಸು. (ಸಂಖ್ಯೆಗಳ ವಿಷಯದಲ್ಲಿ) ಶೇಷವುಳಿಯದಂತೆ ಭಾಗವಾಗು. (ಪಾರ್ಲಿಮೆಂಟ್ ಸಭೆ, ಇತರ ಅಧಿವೇಶನ, ಮೊ. ಗಳಲ್ಲಿ) ಅಭಿಮತ ಕೊಡುವಾಗ ಎರಡು ಪ್ರತ್ಯೇಕ ಪಂಗಡಗಳಾಗು, ಮಾಡು. (ನಾ.) (ಅಮೆ. ಸಂ., ಮೊ.) (ನೀರು ಹರಿಯುವ ದಿಕ್ಕುಗಳ) ಜಲ ವಿಭಾಗಸ್ಥಾನ. **Dívidend** ಡಿವಿಡೆಂಡ್ (ನಾ.) (ಗಣಿತ) ಭಾಜ್ಯ (ಯಾವ ಸಂಖ್ಯೆಯನ್ನು ಭಾಗಿಸಬೇಕೊ ಅದು). ಒಂದು ಸಂಘ ತೆಗೆದುಕೊಂಡಿರುವ ಸಾಲದಮೇಲೆ ಸಾಲ ಕೊಟ್ಟಿರುವವರಿಗೆ ಹಂಚಬೇಕಾದ ಮೊತ್ತ ; ಭಾಜ್ಯಾಂಶ. ಕೂಡುಬಂಡವಾಳ ಸಂಘದ ಪಾಲುದಾರರಿಗೆ ಹಂಚುವ ಲಾಭಾಂಶ (Ex d. ನಷ್ಟೆಯ ಭಾಗ ಬಿಟ್ಟು ; ಲಾಭಾಂಶ ವಿಲ್ಲದೆ. Cum d. ಲಾಭಾಂಶ ಕೂಡಿ). ದಿವಾಳಿಯಾಗಿಹೋದವನ ಆಸ್ತಿಯಲ್ಲಿ ಅವನ ಸಾಲಗಾರರಿಗೆ ಹಂಚುವ ಭಾಗ ; ಇದರಲ್ಲಿ ಒಬ್ಬನ ಪಾಲಿಗೆ ಬರುವ ಭಾಗ ; ಭಾಜ್ಯಾಂಶ (D.-warrant ಭಾಜ್ಯಾಂಶ ಅಥವಾ ಲಾಭಾಂಶ ಪಡೆಯುವ ಅಧಿಕಾರ ಪತ್ರ ; ಭಾಜ್ಯಾಂಶಪತ್ರ). **Divíder** ಡಿವೈಡರ್ (ನಾ.) (ಕ್ರಿಯಾರ್ಥಗಳಲ್ಲಿ). (ಬ. ವ. ದಲ್ಲಿ) ಅಳತೆಯ ಕೈವಾರ (ಮು., ಬಹಳ ಸಣ್ಣ ಅಂತರಗಳನ್ನು ಅಳೆಯಲಾಗುವಂತೆ ತಿರುಪುಮೊಳೆ ಹಾಕಿ ಅಳವಡಿಸಿರುವದು). **Divídual** ಡಿವಿಡ್ಯುಅಲ್ (ಗು.) ಪ್ರತ್ಯೇಕವಾದ ; ಬೇರೆಯಾದ ; ಬೇರೆ ಮಾಡಲಾಗುವ ; ಭಾಗಿಸಬಹುದಾದ ; ಹಂಚಿದ ; ಪಾಲಾದ ; ವಿಭಕ್ತ. **Divídually** (ಕ್ರಿ. ವಿ.) ; **Divísible** ಡಿವಿಸಿಬ್‌ಲ್ (ಗು.) (ಕಾರ್ಯತಃ ಅಥವಾ ಮನಸ್ಸಿನಲ್ಲಿ) ಭಾಗಿಸಲಾಗುವ ; ಭಾಗ ಸಾಧ್ಯ ; ಭಾಜ್ಯ ; ವಿಭಜಿಸಲಾಗುವ. (ಗಣಿತ) [D. by ಶೇಷವಿಲ್ಲದಂತೆ (ಒಂದು ಸಂಖ್ಯೆಯಿಂದ) ಭಾಗವಾಗುವ]. **Divisibílity** (ನಾ.) ಭಾಜ್ಯತೆ ; ವಿಭಜನ ಸಾಧ್ಯತೆ. **Divísion** ಡಿವಿಷನ್ (ನಾ.) ಭಾಗ ಮಾಡುವುದು ; ಭಾಗವಾಗುವುದು ; ಪ್ರತ್ಯೇಕವಾಗುವುದು ; ಪಾಲು (ಮಾಡುವುದು) ; ಹಂಚುವುದು ; ಹಂಚಿಕೆ (D. of labour ಕಾರ್ಖಾನೆಯಲ್ಲಿ ನಡೆಯುವ ಒಂದು ಕಾರ್ಯದ ಬೇರೆ ಬೇರೆ ಭಾಗಗಳನ್ನು ಗೊತ್ತಾದ ಬೇರೆ ಬೇರೆ ಕೆಲಸಗಾರರಿಗೆ ಕೊಡುವುದರಿಂದ ಕಾಲ ಕಡಮೆಮಾಡಿಕೊಳ್ಳುವ ಏರ್ಪಾಡು: ಕೆಲಸದ ಹಂಚಿಕೆ ; ಕಾರ್ಯ ವಿಭಾಗ). ಹೊಂದಿಕೆಯಿಲ್ಲದಿರುವುದು ; ಭೇದ ; ಭಿನ್ನಾಭಿಪ್ರಾಯ ; ವೈಮನಸ್ಯ ; ಒಡಕು. (ಗಣಿತ) ಭಾಗಾಕಾರ (Long d. ಪ್ರತಿ ವಿನ್ಯಾಸವನ್ನೂ ಬರೆಯುತ್ತಹೋಗಿ ಉತ್ತರ ಪಡೆಯುವ ಭಾಗಾಕಾರ : ದೀರ್ಘ ಭಾಗಾಕಾರ. Short d. ಹೀಗೆ ಮಾಡದೆ ಮನಸ್ಸಿನಲ್ಲಿಯೇ ಲೆಕ್ಕ ಮಾಡಿಕೊಂಡು ಉತ್ತರ ಮಾತ್ರ ಬರೆಯುವ ಭಾಗಾಕಾರ : ಹ್ರಸ್ವ ಭಾಗಾಕಾರ). (ತರ್ಕ) ವರ್ಗೀಕರಣ ; ಅರ್ಥವ್ಯತ್ಯಾಸ ನಿರ್ದೇಶ. (ಪಾರ್ಲಿಮೆಂಟ್) ಅಹುದು, ಅಲ್ಲ ಎಂಬ ಅಭಿಮತಗಳನ್ನು ಬೇರೆ ಬೇರೆ ಲೆಕ್ಕ ಮಾಡುವುದಕ್ಕಾಗಿ ಸಭೆಯನ್ನು ಎರಡು ಭಾಗಗಳಾಗಿ ವಿಂಗಡಿಸುವುದು. ವಿಭಾಜಕ ರೇಖೆ ; ಸರಹದ್ದು ; ಎಲ್ಲೆ ; ಗಡಿ. ಭಾಗ ; ವಿಭಾಗ ; ವರ್ಗ. ಆಡಳಿತ ಪ್ರಾಂತ ; ಜಿಲ್ಲೆ ; ತುಕಡಿ ; ಮಂಡಲ, ಮೊ. ವು. (ಮು. ಸೈನಿಕ) ಒಬ್ಬನ ಆಧಿಪತ್ಯದಲ್ಲಿರುವ ಸೇನೆಯ ಅಥವಾ ನಾವೆಯ ಒಂದು ಗೊತ್ತಾದ ಭಾಗ. (ಫಿರಂಗಿ, ಮೊ. ಗಳಿಂದ ಕೂಡಿದ, ಸಾ., ಪದಾತಿಗಳ ಎರಡು ಅಥವಾ ಹೆಚ್ಚಾದ ದಳಗಳು ಸೇರಿಆದ) ಸೈನ್ಯ ವಿಭಾಗ ; ತುಕಡಿ. (ಜೀ. ವಿ.) ತರಗತಿ, ವರ್ಗ, ಕುಟುಂಬ, ಜಾತಿ, ಮೊ. ದ ವಿಭಾಗ. (ಸೆರೆಮನೆಯ ವಿಷಯದಲ್ಲಿ: First, second, third, d. ನ್ಯಾಯಾಧಿಪತಿ ಗೊತ್ತುಮಾಡಿದ ಸೆರೆಮನೆಯ ಮೃದು, ಸಾಮಾನ್ಯ, ಕಠಿನ, ಉಪಚಾರ ಪಡೆಯುವ ಪಂಗಡ). **Divísional** (ಗು.) (D. rest ತೋಡುಕಂದಕದಲ್ಲಿಯ ಯುದ್ಧದಿಂದ ಒಂದು ದಳಕ್ಕೆ ವಿರಾಮ ಕೊಟ್ಟು ಸೇನೆಯ ಹಿಂಭಾಗದಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ಕಳುಹಿಸಿದ ಬಿಡುವುಕಾಲ). **Divísionally** (ಕ್ರಿ. ವಿ.) ; **Divísor** ಡಿವೈಸರ್ (ನಾ.) (ಗಣಿತ) ಭಾಜಕ (ಒಂದು ಸಂಖ್ಯೆಯನ್ನು ಯಾವುದರಿಂದ ಭಾಗಿಸಬೇಕೊ ಅದು) ; ಶೇಷವಿಲ್ಲದಂತೆ ಮತ್ತೊಂದು ಸಂಖ್ಯೆಯನ್ನು ಭಾಗ ಮಾಡುವ ಸಂಖ್ಯೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Dívi-Díví ಡಿವಿ ಡಿವಿ (ನಾ.) (ಚರ್ಮ ಹದಮಾಡಲು ಉಪಯೋಗಿಸುವ, ಅಮೆರಿಕದ ಉಷ್ಣವಲಯದಲ್ಲಿ ಬೆಳೆಯುವ) ಒಂದು ಸಣ್ಣ ಮರದ ತಿರಿಚಿ ಕೊಂಡಿರುವ ಉದ್ದವಾದ ಬೀಜಕೋಶ ; ಈ ಮರ.

Divíne ಡಿವೈನ್ [ಗು. (ತರ ತಮಗಳು -er,-est) ; ನಾ., ಕ್ರಿ.] ದೇವರ ; ದೇವರಂಥ ; ದೇವದತ್ತ ; ದೈವಿಕ [D. right of kings (ಪ್ರಜೆಗಳ ಅಭಿಪ್ರಾಯಕ್ಕೆ ಲಕ್ಷ್ಯಕೊಡದೆ ನಡೆಯುವ) ದೊರೆಗಳ ದೇವದತ್ತ ಹಕ್ಕು ; ರಾಜರ ದೇವದತ್ತ ಅಧಿಕಾರ]. ದೇವರಿಗೆ ಅರ್ಪಿತವಾದ ; ಪುಣ್ಯ ; ಪವಿತ್ರ [D. service (ಸಾರ್ವಜನಿಕ) ದೇವತಾರಾಧನೆ] ದೇವಯೋಗ್ಯವಾದ ; ಸರ್ವೋತ್ಕೃಷ್ಟವಾದ ; ದಿವ್ಯವಾದ. (ನಾ.) ದೇವತಾಶಾಸ್ತ್ರ ನಿಪುಣ (ಸಾ., ಕ್ರೈಸ್ತ ವೈದಿಕ). (ಕ್ರಿ.) ಸ್ಫೂರ್ತಿಯಿಂದ, ಸೂಕ್ಷ್ಮ ಜ್ಞಾನದಿಂದ, ಮಂತ್ರತಂತ್ರದಿಂದ ಅಥವಾ ಊಹೆಯಿಂದ, ತಿಳಿ. ಊಹಿಸು ; ಮುನ್ನರಿ ; ಭವಿಷ್ಯ ತಿಳಿ ; ಭವಿಷ್ಯ ಹೇಳು ; ಕಾಲಜ್ಞಾನದಿಂದ ಹೇಳು. [Divining-rod. (Dowsing ನೋಡಿ)]. **Divinátion** ಡಿವಿನೇಷನ್ (ನಾ.) ಅಜ್ಞಾತವಾದದ್ದನ್ನು ಅಥವಾ ಭವಿಷ್ಯವನ್ನು ಅತಿಮಾನುಷ ಶಕ್ತಿಯಿಂದ ಊಹಿಸುವುದು, ತಿಳಿಯುವುದು ; ಕಾಲ ಜ್ಞಾನ ; ಭವಿಷ್ಯಜ್ಞಾನ ; ಮುಂದಾಗುವುದನ್ನು ಚತುರತೆಯಿಂದ ಊಹಿಸಿ ಹೇಳುವುದು ; ಕಣಿ ಹೇಳುವುದು. **Divínely** (ಕ್ರಿ. ವಿ.) ; **Divíner** (ನಾ.) ; **Divínity** (ನಾ.) ದಿವ್ಯತೆ ; ದೇವತ್ವ ; ದೇವತೆ (The D. ದೇವರು ; ಭಗವಂತ ; ಪರಮೇಶ್ವರ). ಪೂಜ್ಯ ; ದೇವರಂಥವನು ; ಪುಣ್ಯ ಪುರುಷ. ದೇವತಾ ಶಾಸ್ತ್ರ. ವಿಶ್ವವಿದ್ಯಾನಿಲಯದಲ್ಲಿ ದೇವತಾಶಾಸ್ತ್ರ ಶಾಖೆ. (ರಟ್ಟುಕಟ್ಟು) D. calf (ಮಸಿಯನ್ನಾಗಲಿ ಚಿನ್ನದ ರೇಕನ್ನಾಗಲಿ ಉಪಯೋಗಿಸದೆ ಹಾಗೆಯೇ ಅಚ್ಚೊತ್ತಿ ಅಕ್ಷರ, ಮೊ. ವು ಹಾಕಿದ ಕರಿಗಂದು ಬಣ್ಣದ) ಕರುವಿನ ತೊಗಲು. **Divinize** (ಕ್ರಿ. ಸಕ.) ದೈವತ್ವಕ್ಕೇರಿಸು ; ದೈವೀಕರಿಸು ; ದೇವತೆಯಾಗಿ ಪರಿಗಣಿಸು. **Divinizátion** (ನಾ.)

Divórce ಡಿವೋರ್ಸ್ (ನಾ., ಕ್ರಿ. ಸಕ.) ಮದುವೆಯನ್ನು ಕಾನೂನನುಸರಿಸಿ ರದ್ದುಪಡಿಸು(ವುದು) (D. a vinculo matrimonii ವಿವಾಹ ಬಂಧನದಿಂದ ಬಿಡುಗಡೆ) ; ವಿವಾಹ ವಿಚ್ಛೇದ ; ಮದುವೆಯ ಬಿಡಿಕೆ ; ಸೋಡ್ತಿ ; ನ್ಯಾಯಸ್ಥಾನದ ತೀರ್ಮಾನದಿಂದ ದಂಪತಿಗಳನ್ನು ಅಗಲಿಸುವುದು (D. a mensa et thoro ದಂಪತಿಗಳನ್ನು ಸಹ ಭೋಜನದಿಂದಲೂ ಸಹಶಯ್ಯೆಯಿಂದಲೂ ಅಗಲಿಸುವುದು : ದಾಂಪತ್ಯದ ಬಿಡುಗಡೆ). (ಶಿಥಿಲವಾಗಿ) ವಿವಾಹ ವಿಚ್ಛೇದದ ಕೋರ್ಟಪ್ಪಣೆ ; ಮದುವೆಯ ರದ್ದಪ್ಪಣೆ. (ರೂಪ.) (ವಸ್ತುಗಳನ್ನು, ಒಂದರಿಂದೊಂದನ್ನು) ಅಗಲಿಸು(ವುದು), ಪ್ರತ್ಯೇಕಿಸು(ವುದು). (ಗಂಡನನ್ನು, ಹೆಂಡತಿಯನ್ನು) ಬಿಟ್ಟುಬಿಡು, ತೊರೆ, ನಿರಾಕರಿಸು ; (ಸಂಬಂಧ) ಕಳಚು. **Divorceé** ಡಿ(ಡ್ವೈ)ವೋರ್ಸೀ (ನಾ.) ದಾಂಪತ್ಯ ವಿಚ್ಛಿತ್ತಿ ಹೊಂದಿದವನು(ಳು). **Divórcement** ಡಿ— (ನಾ.)

Divúlge ಡಿ(ಡ್ವೈ)ವಲ್ಜ್ (ಕ್ರಿ. ಸಕ.) ಹೊರಗೆಡಹು ; ಬಯಲು ಮಾಡು ; ರಟ್ಟು ಮಾಡು. **Divulgátion** ಡೈವಲ್‌ಗೇಷನ್ (ನಾ.) ; **Divúlgement** ಡಿವಲ್ಜ್— (ನಾ.) ; **Divúlgence** (ನಾ.)

Díxy, Díxie ಡಿಕ್ಸಿ (ನಾ.) ಆಹಾರಪದಾರ್ಥಗಳನ್ನು ಬೇಯಿಸುವುದಕ್ಕೂ ಚಾ, ಮೊ. ವನ್ನು ಕಾಯಿಸುವುದಕ್ಕೂ, ಇವನ್ನು ಬೀಡಿಗೆ ತೆಗೆದುಕೊಂಡುಹೋಗುವುದಕ್ಕೂ ಉಪಯೋಗಿಸುವ ಕಬ್ಬಿಣದ ದೊಡ್ಡ ತಪ್ಪಲೆ. (ಪರ್ಷಿಯನ್, ದೇಗ್ಚಾ)

Dízen ಡೈ(ಡಿ)ಸ್ನ್ (ಕ್ರಿ. ಸಕ.) ಸಿಂಗರಿಸು ; ಶೃಂಗಾರ ಮಾಡು ; ಚಿತ್ರ ವಿಚಿತ್ರವಾಗಿ ಅಲಂಕರಿಸು.

Dizzy ಡಿಸಿ (ಗು., ಕ್ರಿ. ಸಕ.) ತಲೆ ತಿರುಗುವ ; ತಲೆ ಸುತ್ತುವ ; ಸ್ತಿಮಿತ ಗೆಟ್ಟ ; ತತ್ತರಿಸುವ ; ದಿಗ್ಭ್ರಮೆಯಾಗುವ ; ದಿಗ್ಭ್ರಮೆಗೊಳಿಸು(ವ) ; ತಲೆ ತಿರುಗುವಂತೆ, ತತ್ತರಿಸುವಂತೆ, ಮಾಡು(ವ). (ಬೆಟ್ಟ, ಗೋಪುರ, ಮೊ. ಗಳ ವಿಷಯದಲ್ಲಿ) ಬಹಳ ಎತ್ತರವಾದ, ಉನ್ನತವಾದ. (ಪ್ರವಾಹ, ಚಕ್ರ, ಮೊ. ಗಳ ವಿಷಯದಲ್ಲಿ) ಬಹು ವೇಗವಾಗಿ ಚಲಿಸುವ, ಸುತ್ತುವ. **Dízzily** (ಕ್ರಿ. ವಿ.) ; **Dízziness** (ನಾ.)

Do[1] ಡೂ [ಕ್ರಿ. ; ಸಹಾಯಕ ಕ್ರಿಯೆ ; ಏ. ವ. : ವರ್ತಮಾನ ಕಾಲ, ಮಧ್ಯಮ ಪುರುಷ Doest ಡೂಇಸ್ಟ್, Dost ಡಸ್ಟ್ ; ಪ್ರಥಮ ಪುರುಷ Does ಡಸ್ ; (ಪ್ರಾಚೀ. ಪ್ರ.) Doth ಡತ್, Doeth ಡೂಇತ್ ; ಭೂತ Did ಡಿಡ್, Didst ಡಿಡ್‌ಸ್ಟ್ ; ಭೂ. ಕೃ. Done ಡನ್. Do not, Did not ಎಂಬ ರೂಪಗಳಿಗೆ ಬದಲಾಗಿ Don't ಡೋನ್ಟ್, Did'nt ಡಿಡ್ನ್ಟ್ ಎಂಬವು ಬಳಕೆಯಲ್ಲಿವೆ. Does not ಎಂಬುದಕ್ಕೆ ಬದಲಾಗಿ Doesn't ಡಸ್ನ್ಟ್ ಎಂಬುದೂ Don't ಎಂಬ ಗ್ರಾಮ್ಯ ರೂಪವೂ ರೂಢಿಯಲ್ಲವೆ]. ಮಾಡು ; ಉದ್ದೇಶಿಸಿದ ಕಾರ್ಯವನ್ನು ಮುಗಿಸು.

೧. (ಕ್ರಿ. ಸಕ.) Do to death ಹೊಡೆದುಹಾಕು ; ಕೊಂದುಹಾಕು. Does him credit ಅವನಿಗೆ ಗಣ್ಯತೆ, ಗೌರವ, ಕೊಡುತ್ತದೆ. Does credit to his intelligence ಅವನ ಜಾಣ್ಮೆಗೆ ಗೌರವ ತರುತ್ತದೆ. It is done ಮಾಡಿ ಆಯಿತು. I have done ಮುಗಿಸಿದೆನು. Done up ಬಳಲಿಹೋದ ; ದಣಿದುಹೋದ. Paper-hanger does a house ಗೋಡೆಗೆ ಕಾಗದ ಹಚ್ಚುವ ಕೆಲಸಗಾರನು ಒಂದು ಮನೆಗೆ ಕಾಗದ ಅಂಟಿಸುತ್ತಾನೆ. Housemaid does a room ಮನೆಗೆಲಸದವಳು ಕೋಣೆಯನ್ನು ಒಪ್ಪ ಮಾಡುತ್ತಾಳೆ. Do one's hair ತಲೆ ಬಾಚು, ಬಾಚಿಕೊ. Do a portrait (ಮನುಷ್ಯನ) ಭಾವಚಿತ್ರ ತಯಾರಿಸು. Meat done brown ಕಂದುಬಣ್ಣಕ್ಕೆ ಬರುವಂತೆ ಅಟ್ಟಮಾಂಸ. Do into English ಇಂಗ್ಲಿಷಿಗೆ ಪರಿವರ್ತನ ಮಾಡು. Do your lesson ಪಾಠ ಗಟ್ಟಿಮಾಡು. He did Lear ಲಿಯರಿನ ಪಾತ್ರವನ್ನು ಅಭಿನಯಿಸಿದನು. Do the polite ಮರ್ಯಾದೆಯಿಂದ ನಡೆದುಕೊ. Do battle ಯುದ್ಧಮಾಡು. Do in the eye ಮೋಸ ಮಾಡು. He did me badly in the last deal ಹೋದ ವ್ಯಾಪಾರದಲ್ಲಿ ಅವನು ನನಗೆ ಮೋಸ ಮಾಡಿದನು. Done brown ಮೋಸಹೋದ ; ಮೋಸಕ್ಕೀಡಾದ ; ವಂಚಿತನಾದ. The car does twenty miles on a gallon of gasoline ಮೋಟಾರುಬಂಡಿ ಒಂದು ಗ್ಯಾಲನ್ ಗ್ಯಾಸೊಲೈನಿಗೆ ಇಪ್ಪತ್ತು ಮೈಲಿ ಪ್ರಯಾಣ ಮಾಡುತ್ತದೆ. He is trying to do Europe in twenty days ಯೂರೋಪ್ ಪ್ರಯಾಣವನ್ನು ಅವನು ಇಪ್ಪತ್ತು ದಿನಗಳಲ್ಲಿ ಮುಗಿಸಬೇಕೆಂದು ಪ್ರಯತ್ನ ಪಟ್ಟಿದ್ದಾನೆ. (ಅನಂ.) He is doing a ten-year term in the central jail ಕೇಂದ್ರ ಬಂದೀಖಾನೆಯಲ್ಲಿ ಅವನು ಹತ್ತು ವರ್ಷದ ಸಜ ಅನುಭವಿಸುತ್ತಿದ್ದಾನೆ. Do oneself well ತನ್ನ ಸೌಖ್ಯ ತಾನು ಚೆನ್ನಾಗಿ ನೋಡಿಕೊ.

೨. (ಕ್ರಿ. ಅಕ.) Do or die ಮಾಡು, ಇಲ್ಲ ಮಡಿ. Let us have done with it ಅದನ್ನು ಪೂರಯಿಸಿಬಿಡೋಣ. ಇನ್ನು ಅದರ ಗೊಡವೆ ಬೇಡ. How do you do? How d'ye do? ಸೌಖ್ಯವೇ? ಕ್ಷೇಮದಿಂದಿದ್ದೀರಾ? If no better plan can be found, he will make this do ಹೆಚ್ಚು ಅನುಕೂಲವಾದ ಉಪಾಯ ದೊರೆಯದಿದ್ದರೆ ಅವನು ಇದನ್ನೇ ಅನುಕೂಲಪಡಿಸಿಕೊಳ್ಳುವನು. A job that wants or takes doing ಹೆಚ್ಚು ಕುಶಲತೆ ಆವಶ್ಯಕವಾದ ಕೆಲಸ. Neither do they after the law and commandment ಅವರು ಶಾಸ್ತ್ರ ವಿಧಿಯನ್ನೂ ದೈವಾಜ್ಞೆಯನ್ನೂ ಅನುಸರಿಸಿ ನಡೆಯುವುದಿಲ್ಲ. What is to do? ಏನು ಮಾಡಬೇಕು? ತೊಂದರೆ ಏನು? Farmers were doing badly ರೈತರಿಗೆ ಕಷ್ಟವಾಗಿತ್ತು. That will do ಅಷ್ಟು ಸಾಕು.

೩. ಹಿಂದೆ ಹೇಳಿದ ಕ್ರಿಯೆಗೆ ಬದಲಾಗಿ—

(1) If you saw the truth as clearly as I *do*. (2) Did you see him? I *did*. (3) I wanted to see him and I *did* so. (4) In passing through the market, which he seldom *did*. (5) If you want to tell him, *do* it now.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೪. ಸಹಾಯಕ ಕ್ರಿಯೆ—

(1) (ಯಾವುದಾದರೂ ವಿಷಯವನ್ನು ಒತ್ತಿಹೇಳುವಾಗ) I did see him ನಾನು ಅವನನ್ನು ಖಂಡಿತವಾಗಿ ನೋಡಿದೆನು. Do tell me ದಯವಿಟ್ಟು ಹೇಳು. Do you go rather ? ನೀನೇ ದಯವಿಟ್ಟು ಹೋಗಿ ಬರುವೆಯಾ ? (2) Rarely does it happen that ಹೀಗೆ ಸಂಭವಿಸುವುದು ಅಪೂರ್ವ. (3) Do you dare ? or, Dare you ? ಧೈರ್ಯವುಂಟೊ ?

೫. ವಾಕ್ಯಭಾಗಗಳು, ಮೊ.—

A to-do ಗಡಿಬಿಡಿ ; ಗದ್ದಲ. Well-to-do ಅನುಕೂಲ ಸ್ಥಿತಿಯಲ್ಲಿರುವ ; ಉಪಪನ್ನ. Have to do with ಒಡನೆ ಸಂಬಂಧವಿರು ; ಗೊಡವೆ ಇರು ; ವ್ಯವಹಾರ ಸಂಬಂಧವಿರು. Nothing doing ಏನೂ ನಡೆಯುತ್ತಿಲ್ಲ. Done ಸರಿ ; ಆಯಿತು (ಕರಾರು, ಪಣ, ಮೊ. ನ್ನು ಒಪ್ಪಿಕೊಳ್ಳುವಾಗ ಹೇಳುವ ಮಾತು). Do-nothing (ಗು., ನಾ.) ಏನೂ ಮಾಡದ(ವನು) ; ಸೋಮಾರಿ(ಯಾದ) ; ಮೈಗಳ್ಳ(ನಾದ)

೬. ಉಪಸರ್ಗಗಳೊಡನೆ—

Do by (ಒಬ್ಬನೊಡನೆ, ಒಂದರ ವಿಷಯದಲ್ಲಿ, ಒಂದು ಗೊತ್ತಾದ ರೀತಿಯಲ್ಲಿ) ವರ್ತಿಸು, ನಡೆದುಕೊ, ವ್ಯವಹರಿಸು. Do for (ಬಳ. ಮಾ.) (-) ಗೆ ಮನೆವಾರ್ತೆ ಮಾಡು. ನಾಶ ಮಾಡು ; ಹಾಳು ಮಾಡು ; ಕೊಲ್ಲು. Do to, unto = Do by. Do with ಸರಿಹೊಂದಿಕೊ ; ಸಹಿಸಿಕೊ ; (ಹಾಸ್ಯವಾಗಿ) Could do with a drink ಕೊಂಚ ಮದ್ಯಪಾನವನ್ನು ಸಹಿಸಿಕೊಂಡೇನು. Do without ಇಲ್ಲದೆಯೇ ಕೆಲಸ ನಡಸು.

೭. ಕ್ರಿ. ವಿ. ಗಳೊಡನೆ—

Do away (with) ತೆಗೆದುಬಿಡು ; ರದ್ದು ಮಾಡು ; ನಾಶ ಮಾಡಿಬಿಡು. Do in (ಅಸಂ.) ಕೊಲ್ಲು.. Do up ಸರಿಯಾದ ಸ್ಥಿತಿಗೆ ತರು ; ನೇರ್ಪಡಿಸು ; ಸರಿಪಡಿಸು ; ದುರಸ್ತು ಮಾಡು. (ಭಾಂಗಿಯನ್ನು) ಸುತ್ತು ಗಟ್ಟು.

Dóable ಡೂಅಬ್‌ಲ್ (ಗು.) ; **Dóer** ಡೂಅರ್ (ನಾ.) ; **Dóing** ಡೂಇಂಗ್ (ನಾ. ; ಸಾ., ಬ. ವ. ದಲ್ಲಿ) ಕಾರ್ಯ.

Do[2] ಡೂ (ನಾ.) (ಅಸಂ.) ಮೋಸ ; ವಂಚನೆ ; ಠಕ್ಕು. (ಬಳ. ಮಾ) ಸಂತೋಷ ಸಮಾರಂಭ ; ವಿನೋದೋತ್ಸವ (There's a big do on at No. 2). (ಬ. ವ. ದಲ್ಲಿ) ಪಾಲು.

Do[3] ಡೋ (ನಾ.) (ಸಂ.) ಸ್ವರಶ್ರೇಣಿಯ ಆದಿ ಸ್ವರ ; 'ಸ'.

Do[4] ಡೋ Ditto ಎಂಬುದರ ಸಂಕ್ಷಿಪ್ತ.

Doat. **Dote** ನೋಡಿ.

Dóab ಡೋ(ಡೂ)ಅಬ್, **Doóab, Dúab** ಡೂಅಬ್ (ನಾ.) (ಇಂಡಿಯಾದಲ್ಲಿ) ಒಟ್ಟುಗೂಡುವ ಎರಡು ನದಿಗಳ ಮಧ್ಯೇ ಇರುವ ಪ್ರದೇಶ : ದೋಆಬ್.

Dóbbin ಡಾಬಿನ್ (ನಾ.) ಜೀತದ ಕುದುರೆ ; ಗೇಮೆಯ ಕುದುರೆ.

Docétism ಡೊಸೀಟಿಸ್ಮ್ (ನಾ.) ಕ್ರಿಸ್ತನ ದೇಹವು ಪಾರ್ಥಿವವಲ್ಲವೆಂದೂ ಮಾಯಾರೂಪದ್ದು ಅಥವಾ ಸ್ವರ್ಗೀಯ ಪದಾರ್ಥದ್ದು ಎಂದೂ ಹೇಳುವ ಪಾಷಂಡ ವಾದ. **Docétic** — ಸೀ(ಸೆ) — (ಗು.) ಈ ಪಾಷಂಡ ವಾದದ. **Docétist** —ಸೀ— (ನಾ.) ಈ ಪಾಷಂಡ ವಾದಿ.

Dóchmiac ಡಾಕ್‌ಮಿಆ್ಯಕ್ (ಗು., ನಾ.) ∪ — — ∪ — ಈ ಗಣ(ದ) ; ಈ ಗಣದ ಪಾದ(ದ)

Dócile ಡೋಸೈಲ್, ಡಾಸಿಲ್ (ಗು.) ಹೇಳಿದಂತೆ ಕೇಳುವ ; ತಿದ್ದಬಹುದಾದ ; ಅಂಕೆಯಲ್ಲಿಟ್ಟರಲಾಗುವ ; ಮೆತ್ತನೆಯ ; ನಮ್ರ ; ಎಳೆದಂತೆ ಬರುವ ; ಸಾಧು ; ಮೆದುಕ. **Docílity** ಡೊಸಿಲಿಟಿ (ನಾ.)

Dock[1] ಡಾಕ್ (ನಾ.) ಹಲವು ಬಗೆಯ ಒರಟು ಕಳೆಯ ಸಸ್ಯಜಾತಿ (ತುರುಚಿಯ ಸೋಂಕಿಗೆ ಕೈಕಂಡ ಮದ್ದು)

Dock[2] ಡಾಕ್ (ನಾ.) ಮೃಗದ ಬಾಲದ ದೃಢವಾದ ಮಾಂಸದ ಭಾಗ ; ಬಾಲದ ದಿಂಡು. (ಕುದುರೆಯ) ಜೀನಿಗೆ ಸೇರಿದ ಬಾಲದ ಪಟ್ಟಿ.

Dock[3] ಡಾಕ್ (ಕ್ರಿ. ಸಕ) (ಮೃಗದ ಬಾಲ, ಮನುಷ್ಯನ ಕೂದಲು, ಮೊ. ನ್ನು) ಮೊಟಕಾಗಿ ಕತ್ತರಿಸು ; ಮೊಂಡು ಮಾಡು ; ಕಡಮೆ ಮಾಡು ; ಇಲ್ಲದಂತೆ ಮಾಡು ; (ಮನುಷ್ಯ, ಸರಬರಾಯಿ — ಇವುಗಳ ವಿಷಯದಲ್ಲಿ) ಮಿತಿಯಿಡು, ಕಟ್ಟಿಗೊಳಪಡಿಸು, ಕೋತ ಮಾಡು. (ನ್ಯಾ. ಶಾ.) D. the entail ಆಸ್ತಿಯ ಪರಿಮಿತ ಹಕ್ಕುದಾರಿಯ ನಿರ್ಬಂಧವನ್ನು ತೆಗೆದು ಹಾಕು. **Dócktailed** ಮೊಂಡು ಬಾಲದ.

Dock[4] ಡಾಕ್ (ನಾ.) (ಸಮುದ್ರದಲ್ಲಿ) ಹಡಗುಗಳನ್ನು ಭರ್ತಿಮಾಡುವುದಕ್ಕೂ, ಅವುಗಳಿಂದ ಸಾಮಾನು ಇಳಿಸುವುದಕ್ಕೂ ಅಥವಾ ಅವನ್ನು ದುರಸ್ತುಮಾಡುವುದಕ್ಕೂ ಅನುಕೂಲಿಸುವಂತೆ ನೀರನ್ನು ಒಳಕ್ಕೆ ಬಿಡುವುದಕ್ಕಾಗಲಿ ಹೊರಕ್ಕೆ ಹೊರಡಿಸುವುದಕ್ಕಾಗಲಿ ತಕ್ಕ ಬಾಗಿಲುಗಳ ಏರ್ಪಾಟುಳ್ಳ ಹೊಂಡದಂಥ ಕಟ್ಟೆ : ಹಡಗುಕಟ್ಟೆ ; 'ಗೋದಿ'. [Dry or graving d. ನೀರನ್ನು ಹೊರಕ್ಕೆ ಹೊರಡಿಸಿ ಹಡಗನ್ನು ಕಟ್ಟುವುದಕ್ಕಾಗಲಿ ದುರಸ್ತುಮಾಡುವುದಕ್ಕಾಗಲಿ ಅನುಕೂಲವುಳ್ಳ ಹಡಗುಕಟ್ಟೆ: ಒಣ ಕಟ್ಟೆ. Wet d. ಹೆಚ್ಚುಉಬ್ಬರದ ಮಟ್ಟಕ್ಕೆ ನೀರನ್ನು ಯಾವಾಗಲೂ ಇಟ್ಟಿರುವ ಹಡಗುಕಟ್ಟೆ: ತುಂಬುಕಟ್ಟೆ. Floating d. ನೀರಿಲ್ಲದ ಕಟ್ಟೆಯಾಗಿ ಉಪಯೋಗಿಸಿಕೊಳ್ಳಲಾಗುವ ತೇಲುಕಟ್ಟಡ : ತೇಲುಕಟ್ಟೆ] . (ಸಾ., ಬ. ವ. ದಲ್ಲಿ) (ಕಚೇರಿಗಳು, ಮೊ. ಗಳನ್ನುಳ್ಳ) ಹಡಗುಕಟ್ಟೆಗಳ ಸಾಲು. (ರೈಲ್ವೆ) ನಿಲ್ದಾಣದಲ್ಲಿ ರೈಲುಬಂಡಿಗೆ ಸಾಮಾನು ತುಂಬುವ, ಬಂಡಿಯಿಂದ ಸಾಮಾನಿಳಿಸುವ, ಕಟ್ಟೆ. D.-dues = [**Dóckage** ಡಾಕೆಜ್ (ನಾ.)] ಹಡಗುಕಟ್ಟೆಯ ಬಾಡಿಗೆ. D.-glass (ದ್ರಾಕ್ಷಾ) ಮದ್ಯವನ್ನು ರುಚಿನೋಡುವುದಕ್ಕಾಗಿ ಉಪಯೋಗಿಸುವ ದೊಡ್ಡ ಗಾಜಿನ ಪಾತ್ರೆ. D.-master ಹಡಗು ಕಟ್ಟೆ, ಹಡಗು ಕಟ್ಟಡ, ಹಡಗು ದುರಸ್ತು, ಇವಕ್ಕೆ ಸಂಬಂಧಪಟ್ಟ ಸಲಕರಣೆಗಳು — ಇವುಗಳ ಮೇಲ್ವಿಚಾರಿ.

Dock (ಕ್ರಿ.) (ಹಡಗನ್ನು) ಹಡಗುಕಟ್ಟೆಗೆ ತರು ; (ಹಡಗು) ಹಡಗುಕಟ್ಟೆಗೆ ಬರು ; ಹಡಗುಕಟ್ಟೆಗಳನ್ನು ಹವಣಿಸು. **Dócker** (ನಾ.) ಹಡಗುಕಟ್ಟೆಯ ಕೂಲಿಯಾಳು. **Dóckize** ಡಾಕೈಸ್ (ಕ್ರಿ. ಸಕ.) (ನದಿಯನ್ನು) ಹಡಗುಕಟ್ಟೆಗಳ ಸಾಲನ್ನಾಗಿ ಮಾಡು. **Dockizátion** (ನಾ.)

Dock[5] ಡಾಕ್ (ನಾ.) ಅಪರಾಧ ನ್ಯಾಯಸ್ಥಾನದಲ್ಲಿ ಖೈದಿ ನಿಲ್ಲಲು ಗೊತ್ತುಮಾಡಿರುವ ಆವರಣ : ಬಂದಿ (ಖೈದಿ) ಕಟಕಟೆ. D. brief ವಿಚಾರಣೆಗೆ ನಿಂತಿರುವ ಬಡ ಖೈದಿಯ ಕೋರಿಕೆಯಂತೆ ಅವನ ಪರ ವಾದಿಸುವುದು.

Dócket ಡಾಕೆಟ್ (ನಾ., ಕ್ರಿ. ಸಕ.) (ನ್ಯಾ. ಶಾ.) ನ್ಯಾಯತೀರ್ಪುಗಳ ದಾಖಲೆಪುಸ್ತಕ [(ಕ್ರಿ.) ಈ ಪುಸ್ತಕದಲ್ಲಿ ಬರೆದಿಡು] . ಕಾಗದದಮೇಲೆ ಅಥವಾ ದಸ್ತೈವಜಿನಮೇಲೆ ಅದರಲ್ಲಿರುವ ವಿಷಯವನ್ನು ಸಂಗ್ರಹಿಸಿ ಬರೆದಿರುವ ಬರವಣಿಗೆ: ಸೂಚಿ ; ಸೂಚೀ ಪತ್ರ ; ಸೂಚೀ ಚೀಟಿ [(ಕ್ರಿ.) ಸೂಚಿ ಬರೆದಿಡು] . ಸುಂಕ ಸಂದಿದೆಯೆಂದು ಸುಂಕದ ಕಟ್ಟೆಯ ಅಧಿಕಾರಿ ಕೊಡುವ ಅಧಿಕಾರಪತ್ರ ; ಸುಂಕದ ರಸೀತಿ. (ಪತ್ರ ತರುವವನಿಗೆ ಹತ್ತಿಯ ಮೂಟೆಗಳನ್ನು ಪಡೆಯುವ ಅಧಿಕಾರ ಕೊಡುವ) ತೀರುವೆ ಮನೆಯ ಅಧಿಕಾರ ಪತ್ರ.

Dóctor ಡಾಕ್ಟರ್ (ನಾ., ಕ್ರಿ.) (ಪ್ರಾಚೀ. ಪ್ರ.) ಉಪಾಧ್ಯಾಯ ; ಪಂಡಿತ (Who shall decide when doctors disagree ಪಂಡಿತರೇ ಭಿನ್ನಾಭಿಪ್ರಾಯ ಪಡುವಾಗ ತೀರ್ಮಾನ ಮಾಡುವರಾರು ?). ವಿಶ್ವವಿದ್ಯಾನಿಲಯದ ಯಾವುದಾದರೂ ಒಂದು ಶಾಖೆಯಲ್ಲಿ ಅತ್ಯುನ್ನತ ಬಿರುದನ್ನು ಪಡೆದಿರುವವನು (ಅನೇಕ ವೇಳೆ ಇದು ಗೌರವದ ಬಿರುದು ; ಹೆಸರಿನ ಜೊತೆಗೆ ಸೇರಿಸುವುದು ; ಸಂಕ್ಷಿಪ್ತ Dr). ಮು., ವೈದ್ಯಶಾಸ್ತ್ರದಲ್ಲಿ ಪಂಡಿತಪದವಿ ಪಡೆದಿರುವವನು(ಳು) (ಸಾ., ಯಾವ ಸಾಮಾನ್ಯ ವೈದ್ಯನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆಸರಿನೊಡನೆಯೂ ಸೇರಿಸುವ ರೂಢಿಯಿದೆ); ವೈದ್ಯ ; ಪಂಡಿತ ; ಚಿಕಿತ್ಸಕ. (ನಾವೆಯ ಅಸಂ.) ಹಡಗಿನ ಅಡಿಗೆಯವನು. ಯಂತ್ರಕಾರ್ಯವನ್ನು ಕ್ರಮಪಡಿಸುವ ಯಂತ್ರಸಾಧನಗಳು. ಕೃತಕ ನೊಣ. (D.'s stuff ಔಷಧ; ಮದ್ದು ; ಭೇದಿಯೌಷಧ). (ಕ್ರಿ.) ಒಬ್ಬನಿಗೆ ಪಂಡಿತಪಟ್ಟ ಕೊಡು. ಚಿಕಿತ್ಸೆ ಮಾಡು ; ಔಷಧ ಕೊಡು. (ಯಂತ್ರ, ಮೊ. ನ್ನು) ದುರಸ್ತು ಮಾಡು, ಸರಿಮಾಡು. ಬೆರಕೆ ಮಾಡು ; ಮೋಸದ ಬದಲಾವಣೆ ಮಾಡು. ವೈದ್ಯ (ವೃತ್ತಿ) ಮಾಡು; ಚಿಕಿತ್ಸೆ ಮಾಡು ; ವೈದ್ಯನಾಗಿರು. **Dóctoral** = **Doctórial** ಡಾಕ್ಟೋರಿಯಲ್ (ಗು.) ಪಂಡಿತನ. **Dóctorless** ಡಾಕ್ಟರ್— (ಗು.) ; **Dóctorate** ಡಾಕ್ಟೊರೆಟ್ (ನಾ.) ಪಂಡಿತ ಪದವಿ. **Dóctorship** —ಕ್ಟರ್— (ನಾ.), **Dóctorhood** (ನಾ.) ಪಂಡಿತ ತನ. **Dóctress** (ನಾ.) ಪಂಡಿತೆ.

Dóctors' Cómmons ಡಾಕ್ಟರ್ಸ್ ಕಾಮನ್ಸ್ (ನಾ., ಬ. ವ.) ಲಂಡನ್ನಿನಲ್ಲಿಯ ನ್ಯಾಯಶಾಸ್ತ್ರ ಪ್ರವೀಣರ ಸಂಘದ ಸಹಪಂಕ್ತಿ. ಈ ಪಂಡಿತರ ಕೆಲವು ಕೋರ್ಟುಗಳು ನಡೆಯುತ್ತಿದ್ದ ಕಟ್ಟಡಗಳು.

Doctrinaíre ಡಾಕ್ಟ್ರಿನೇರ್, **Doctrinárian** —ನೇರಿಯನ್ (ನಾ., ಗು.) ಶುಷ್ಕ ತಾತ್ತ್ವಿಕ. ಪರಿಸ್ಥಿತಿಯನ್ನು ಗಣಿಸದೆ ನಿಯಮಗಳನ್ನು ಪ್ರಯೋಗಿಸುವವನು ; ಕೇವಲ ಸೂತ್ರಿ. (ಗು.) ತತ್ತ್ವಮಾತ್ರದ ; ತತ್ತ್ವ ಮುಗ್ಧ ; ಕಾರ್ಯಪರವಲ್ಲದ. **Doctrinaírism** (ನಾ.) ; **Doctrinárianism** (ನಾ.)

Dóctrine ಡಾಕ್ಟ್ರಿನ್ (ನಾ.) ಉಪದೇಶ ; ಬೋಧನೆ. (ಧಾರ್ಮಿಕ, ರಾಜಕೀಯ, ವೈಜ್ಞಾನಿಕ, ಮೊ. ವಿಷಯಗಳ) ನಂಬಿಕೆ, ತತ್ತ್ವ, ವಾದ, ಮತ, ಸಿದ್ಧಾಂತ. **Dóctrinism** — ನಿಸ್ಮ್ (ನಾ.) ಒಂದು ತತ್ತ್ವಾನುಸರಣೆ ; ತತ್ತ್ವ ನಿರೂಪಣೆ. **Dóctrinist** (ನಾ.) ತಾತ್ತ್ವಿಕ. **Dóctrinize** (ಕ್ರಿ. ಅಕ.) ತತ್ತ್ವ ಕಟ್ಟು. **Doctrínal** ಡಾಕ್‌ಟ್ರೈನಲ್, **Dóctrinal** — ಟ್ರಿನಲ್ (ಗು.) ತತ್ತ್ವ ಸಂಬಂಧವಾದ ; ತತ್ತ್ವಬೋಧಕ ; ತಾತ್ತ್ವಿಕ. **Dóctrinally** (ಕ್ರಿ. ವಿ.)

Dócument ಡಾಕ್ಯುಮೆಂಟ್ (ನಾ., ಕ್ರಿ. ಸಕ.) ಆಧಾರ ; ಪ್ರಮಾಣ ; ದಾಖಲೆ (ಮು., ದಸ್ತಾವೇಜು, ಲೇಖನ ಅಥವಾ ಶಾಸನ. Human d. ಮನುಷ್ಯಸ್ವಭಾವವನ್ನು ಉದಾಹರಿಸುವ ವಿವರಣೆ, ಘಟನೆ, ಮೊ.). ಕಾಗದ ಪತ್ರ ; ದಸ್ತಾವೇಜು. (ಕ್ರಿ.) ಪ್ರಮಾಣ ಕೊಟ್ಟು ಸ್ಥಾಪಿಸು ; ದಾಖಲೆಗಳನ್ನು ಹವಣಿಸು ; ಋಜುವಾತು ಮಾಡು. **Documéntary** (ಗು.) ಪ್ರಮಾಣ ಪತ್ರಗಳ ; ದಾಖಲೆಯ. **Documentátion** (ನಾ.) ದಾಖಲೆಗಳ ಋಜುವಾತನ್ನೂ ಪ್ರಮಾಣಗಳನ್ನೂ ಉಪಯೋಗಿಸಿಕೊಳ್ಳುವುದು. ಒಂದು ಹಡಗಿಗೆ ತಕ್ಕ ಪ್ರಮಾಣಪತ್ರಗಳನ್ನು ಒದಗಿಸುವುದು.

Dódder[1] ಡಾಡರ್ (ನಾ.) ಎಲೆಗಳಿಲ್ಲದ, ದಾರದೆಳೆಗಳಂತಿರುವ, ಲಘುವಾದ, ಪರೋಪಜೀವಿ ಸಸ್ಯಜಾತಿ.

Dodder[2] ಡಾಡರ್ (ಕ್ರಿ. ಅಕ.) (ಶಕ್ತಿಯಿಲ್ಲದೆ, ಅದಿರುವಾಯು, ಮೊ. ಗಳಿಂದ) ನಡುಗು, ಅದಿರು, ಕಂಪಿಸು. (D.-grass ಅದಿರು ಹುಲ್ಲು). ಕೈಕಾಲು ನಡುಗು ; ಶಕ್ತಿಗುಂದಿರು ; ನಿತ್ರಾಣವಾಗಿರು. **Dódderer** (ನಾ.) ಅಶಕ್ತನಾದ, ಬಲಹೀನನಾದ, ಯೋಗ್ಯತೆಯಿಲ್ಲದ, ಮನುಷ್ಯ.

Dóddered ಡಾಡರ್ಡ್ (ಗು.) (ಓಕ್ ಮರಗಳ) ಕೊಂಬೆಗಳು ಬಿದ್ದುಹೋದ.

Dodec(a)- ಡೋಡೆಕ್(ಕ)— (ಪೂ. ಪ್ರ.) ದ್ವಾದಶ —. **Dodécagon** (ನಾ.) ಹನ್ನೆರಡು ಬಾಹು (ಬದಿ) ಗಳುಳ್ಳ ಸಮತಲಾಕೃತಿ : ದ್ವಾದಶ ಕೋನ. **Dodecahédron** — ಹೆಡ್ರನ್, — ಹೀಡ್ರನ್ (ನಾ.) ಹನ್ನೆರಡು ಮುಖಗಳುಳ್ಳ ಘನಾಕೃತಿ : ದ್ವಾದಶ ಮುಖಿ. **Dodecasýllable** (ನಾ.) ಹನ್ನೆರಡು ಸ್ವರಗಳುಳ್ಳ ಪಾದ : ದ್ವಾದಶ ಸ್ವರಿ.

Dodge ಡಾಡ್‌ಜ್ (ಕ್ರಿ., ನಾ.) ಹಿಂದಕ್ಕೂ ಮುಂದಕ್ಕೂ ಚಲಿಸು, ಕದಲಾಡು ; ಸ್ಥಳ ಬದಲಾಯಿಸು ; ಹಿಂದಕ್ಕೂ ಮುಂದಕ್ಕೂ, ತಳಕ್ಕೂ ಮೇಲಕ್ಕೂ, ಬೇಗ ಬೇಗ ಚಲಿಸು. ಹಿಂದೆ ಅಟ್ಟಿಕೊಂಡು ಬರುವವನನ್ನು, ಏಟನ್ನು, ತಪ್ಪಿಸಿಕೊಳ್ಳಲು ನುಣುಚಿಕೊ ; ಕೈಗೆ ಸಿಕ್ಕದಂತೆ ಹೊರಳಿಕೊ. ಹೊರಳಿಸಿ ಮಾತಾಡು ; ಎರಡು ಪಕ್ಷವೂ ಅರ್ಥವಾಗುವಂತೆ ತಪ್ಪಿಸಿಕೊಂಡು ಮಾತನಾಡು ; ನುಸುಳುಮಾತಾಡು. (ನಾದ ಮಾಲೆಯನ್ನು ಬಾರಿಸುವ ಗಂಟೆಯ ವಿಷಯದಲ್ಲಿ) ಸಹಜ ಕ್ರಮ ತಪ್ಪಿ ಒಂದು ಅಕ್ರಮ ನಾದ ಮಾಡು. (ಕ್ರಿ. ಸಕ.) ತಂತ್ರ ಮಾಡು ; ವಂಚಿಸು. ಆಟವಾಡಿಸು. (ಅಟ್ಟಿಬರುವವರನ್ನು, ಎದುರಾಳಿಯನ್ನು, ಏಟನ್ನು) ಪಕ್ಕಕ್ಕೆ ಥಟ್ಟನೆ ತಿರುಗಿ ಅಥವಾ ಯುಕ್ತಿಯಿಂದ ತಪ್ಪಿಸಿಕೊ ; (ಒಂದು ವಸ್ತುವನ್ನು) ಹಿಂದಕ್ಕೂ ಮುಂದಕ್ಕೂ ಆಡಿಸು. ಒಬ್ಬನನ್ನು ಅಸಂಬದ್ಧವಾಗಿ, ಪೂರ್ವಾಪರ ಸಂಬಂಧವಿಲ್ಲದೆ, ಪ್ರಶ್ನೆಮಾಡು. (ನಾ.) ತಪ್ಪಿಸಿಕೊಳ್ಳುವುದು ; ನುಣುಚಿಕೊಳ್ಳುವುದು; ಫಕ್ಕನೆ ಪಕ್ಕಕ್ಕೆ ತಿರುಗುವುದು. ಠಕ್ಕು ; ಮೋಸ ; ಯುಕ್ತಿ ; ತಂತ್ರ ; ಕಪಟ ; ನೆಪ. (ಬಳ. ಮಾ.) ಚಾತುರ್ಯದ ಉಪಾಯ. ಯಾಂತ್ರಿಕ, ಮೊ. ಸಾಧನ. ನಾದಮಾಲೆಯನ್ನು ಬಾರಿಸುವಾಗ ಒಂದು ಕಡೆ ಕ್ರಮ ತಪ್ಪಿ ಬಾರಿಸುವುದು : ಅಕ್ರಮ ನಾದ. **Dódger** (ನಾ.) (ಕ್ರಿಯಾರ್ಥಗಳಲ್ಲಿ). ಉಪಾಯಗಾರ ; ತಂತ್ರಿ. (ಬಳ. ಮಾ.) (ಸಮುದ್ರದ ತುಂತುರು ಬೀಳದಂತೆ ಹಡಗುಸೇತುವೆಯ ಮೇಲೆ ಇಟ್ಟಿರುವ) ಮರೆ. (ಅಮೆ. ಸಂ.) ಪ್ರಕಟನೆಯ ಸಣ್ಣ ಕೈಚೀಟಿ. ಮುಸುಕಿನಜೋಳದ ಹಿಟ್ಟಿನ ರೊಟ್ಟಿ (Corn d.). **Dódgy** (ಗು.) ಉಪಾಯದ ; ತಂತ್ರಿಯಾದ.

Dódo ಡೋಡೊ (ನಾ. ; ಬ. ವ. -oes, -os) (ಮಾರಿಷಸ್ ದ್ವೀಪದಲ್ಲಿ ಹಿಂದೆ ಇದ್ದು ಈಗ ವಂಶ ನಷ್ಟವಾಗಿ ಹೋಗಿರುವ) ಒಂದು ದೊಡ್ಡ ಪಕ್ಷಿ.

Doe ಡೋ (ನಾ.) ಕಂದುಬಣ್ಣದ ಹೆಣ್ಣು ಜಿಂಕೆ ; ಹೆಣ್ಣೆರಳೆ. ಹೆಣ್ಣು ಮೊಲ. **Doéskin** ಹೆಣ್ಣುಜಿಂಕೆಯ ಚರ್ಮ, ತೊಗಲು ; ಇದನ್ನು ಹೋಲುವ ನವಿರು ಬಟ್ಟೆ.

Does, Doést. **Do** ನೋಡಿ.

Doff ಡಾಫ್ (ಕ್ರಿ. ಸಕ.) (ಟೋಪಿಯನ್ನು, ಉಡುಪನ್ನು) ತೆಗೆ. (ಅಪೂರ್ವ ಪ್ರಯೋಗ) (ಪದ್ಧತಿಯನ್ನು, ಸ್ಥಿತಿಯನ್ನು) ತೊರೆದುಬಿಡು, ಬಿಟ್ಟುಬಿಡು, ತ್ಯಜಿಸಿಬಿಡು.

Dog ಡಾಗ್ (ನಾ.) ನಾಯಿ ; ಶೊಣಗ ; ಬೇಟೆ ನಾಯಿ [(ರೂಪ.) Dogs of war ಯುದ್ಧದ ಅನರ್ಥಗಳು : ಕೊಳ್ಳೆ, ಮೊ. ವು]. ಗಂಡು ನಾಯಿ ; ಗಂಡು ತೋಳ (Also, D.-wolf) ; ಗಂಡು ನರಿ (Also, D.-fox). ಕೆಲಸಕ್ಕೆ ಬಾರದವನು ; ಅಯೋಗ್ಯ ; ಕುನ್ನಿ ; ಒರಟ ; ಸಿಡುಕ. ಆಸಾಮಿ (Sly, lucky, jolly, d. ತಂತ್ರಿ, ಅದೃಷ್ಟವಂತ, ಖುಷಿ, ಆಸಾಮಿ). [(ಖ. ವಿ.) Greater and Lesser D. ಮಹಾ ಶ್ವಾನ, ಲಘು ಶ್ವಾನ, ನಕ್ಷತ್ರ (ಪುಂಜ)ಗಳು. D.-Star ಲುಬ್ಧಕ. D.-days ವರ್ಷದ ಅತ್ಯಂತ ಸಕೆಯ ದಿನಗಳು]. (ಯಾವುದಾದರೂ ವಸ್ತುವನ್ನು) ಬಿಗಿಯಾಗಿ ಹಿಡಿದುಕೊಳ್ಳುವ ಸಾಧನ. ಮೇಲಕ್ಕೆ ಬಗ್ಗಿಸಿರುವ ಮೊನೆಯ ಕೊನೆಗಳುಳ್ಳ ಸಣ್ಣ ಕಬ್ಬಿಣದ ಸರಳು (ಸಾ., ಭಾರವಾದ ತೊಲೆಗಳನ್ನು ಒಟ್ಟಿಗೆ ಬಿಗಿಯುವ ಸಾಧನ). [(ಬ. ವ. ದಲ್ಲಿ) Dogs, Fire-dogs ಸೌದೆಯನ್ನು ಉರಿಸುವುದು, ಮೊ. ಕ್ಕಾಗಿ ಉಪಯೋಗಿಸುವ ಲೋಹದ ಎರಡು ಆಸರೆಗಳು. The dogs (ಬಳ. ಮಾ.) ಬೇಟೆನಾಯಿಗಳ ಜೂಜಿನ ಅಧಿವೇಶನ]. (ಬಳ. ಮಾ.) Put on d. ಪ್ರತಿಷ್ಠೆಯ ಸೋಗು ಹಾಕಿಕೊ. D., Sea-d. ಬಿರುಗಾಳಿ ಮಳೆಯನ್ನು ಸೂಚಿಸುವ ದಿಗಂತ ಪ್ರಾಂತದ ಬೆಳಕು. Sun d. ಸೂರ್ಯಾಭಾಸ ; ಪ್ರತಿಸೂರ್ಯ. Go to the dogs ಹಾಳಾಗಿ ಹೋಗು. Throw to the dogs ಬಿಸಾಟುಬಿಡು ; ಬಲಿಗೊಟ್ಟುಬಿಡು. Not have word to throw at d. ಯಾರೊಡನೆಯೂ ಮಾತನಾಡದೆ ಬಿಗುಮಾನದಿಂದಿರು, ಮೌನವಾಗಿರು. Every d. has his day (Day ನೋಡಿ). Love me, love my d. ನನ್ನ ಮೇಲೆ ನಿನಗೆ ಪ್ರೀತಿಯಿದ್ದರೆ ನಾನು ಪ್ರೀತಿಸುವುದೆಲ್ಲವನ್ನೂ ಪ್ರೀತಿಸು. Rain cats and dogs (Cat ನೋಡಿ). Die like a d., a dog's death (Die ನೋಡಿ). Not a d.'s chance ಲೇಶಮಾತ್ರವೂ ಅವಕಾಶವಿಲ್ಲ. Take hair of d. that bit you ಕುಡಿತದ ದುಷ್ಪರಿಣಾಮ ಪರಿಹಾರಕ್ಕಾಗಿ ಮತ್ತೂ ಕುಡಿ. Help lame d. over stile

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಇತರರ) ಕಷ್ಟಕ್ಕಾಗು ; (ಇತರರ) ಕಷ್ಟಕಾಲದಲ್ಲ ನೆರವಾಗು. Lead a d.'s life ನಾಯಿಪಾಡು ಪಡು ; ತೊಂದರೆ ಪಡು. Lead one a d.'s life ನಾಯಿಪಾಡು ಪಡಿಸು. Give d. ill name and hang him ಕೆಟ್ಟ ಹೆಸರು ಇಟ್ಟು ನಾಶಮಾಡು ; ಏನೋ ಒಂದು ದೋಷಾರೋಪ ಮಾಡಿ ಹಾಳುಮಾಡು. Let sleeping dogs lie ಕೆಡುಕರನ್ನು ಕೆಣಕಬೇಡ. D. in the manger ತನಗೆ ಉಪಯೋಗವಿಲ್ಲದ್ದನ್ನು ಇತರರೂ ಉಪಯೋಗಿಸದಂತೆ ತಡೆ ಮಾಡು ; ತನಗೂ ಬೇಡ, ಇತರರಿಗೂ ಕೊಡ. **Dogberry** ಒಂದು ಬಗೆಯ ಕಾಯಿ. **D.-biscuit** ನಾಯಿತಿಂಡಿಗಾಗಿ ಮಾಡಿದ ಬಿಸ್ಕತ್ತು. **D.-box** ರೈಲ್‌ಬಂಡಿಯಲ್ಲಿ ನಾಯಿಗಳಿಗಾಗಿ ಪ್ರತ್ಯೇಕಿಸಿಟ್ಟಿರುವ ಕೋಣೆ : ನಾಯಿ ಡಬ್ಬಿ. **Dog-cart** ಎರಡು ಅಡ್ಡಆಸನಗಳನ್ನು ಹಾಕಿರುವ ಎರಡುಚಕ್ರದ (ಕುದುರೆಯ) ಗಾಡಿ. **D.-cheap** ಅತಿಯಗ್ಗ ; ಹೊಲೆಯಗ್ಗ. **D.-collar** ನಾಯಿಯ ಕತ್ತುಪಟ್ಟಿ ; (ರೂಪ.) (ಅಗಲವಾಗಿಯೂ ನೇರವಾಗಿಯೂ ಇರುವ) ಮನುಷ್ಯನ ಕೊರಳಪಟ್ಟಿ. **D.-faced** ನಾಯಿಮುಖದ (ಬಬೂನ್ ಎಂಬ ಒಂದುತೆರದ ಕೋತಿಯ ವಿಶೇಷಣ). **D.-fall** (ಕುಸ್ತಿಮಾಡುತ್ತಿರುವ ಜಟ್ಟಿಗಳಿಬ್ಬರೂ) ಒಂದೇ ಕಾಲದಲ್ಲಿ ನೆಲಮುಟ್ಟುವ ವರಿಸೆ. **D.-fennel** ಒಂದು ಬಗೆಯ ದುರ್ವಾಸನೆಯ ಸಸ್ಯ. **D.-fish** ಕೆಲವು ಜಾತಿಯ ಸಣ್ಣ ಮೀನು. **D.-hole,-hutch** ಸಣ್ಣ ಅಯೋಗ್ಯವಾದ ಕೋಣೆ ; ನಾಯಿಗೂಡು. **D. latin** ತಪ್ಪುತಪ್ಪಾದ, ಬೆರಕೆಯ, ಲ್ಯಾಟಿನ್ ಭಾಷೆ. **D.-lead** ನಾಯಿಯನ್ನು ನಡಸುವ ಹುರಿ, ಸರಪಣಿ, ಮೊ. **D.-leg(ged)** (staircase) ದಿಕ್ಕು ಬದಲಾಯಿಸುತ್ತಹೋಗುವ (ಮೆಟ್ಟಲುಸಾಲು). **D.-rose** ಬೇಲಿಯ ಕಾಡುಗುಲಾಬಿ ಹೂವು. **D.'s-ear** (ನಾ., ಕ್ರಿ. ಸಕ) (ಪುಸ್ತಕದ ಹಾಳೆಗಳನ್ನು ಪದೇ ಪದೇ ತಿರುವಿ ಹಾಕುವುದರಿಂದಾದ) ಮುದುರುಮೂಲೆ (ಮಾಡು). **D.-shore** ದೋಣಿ, ಮೊ. ನ್ನು ನೀರಿಗೆ ಬಿಡುವಾಗ ಉಪಯೋಗಿಸುವ ಊರೆ. **D.-skin** ಕೈಚೀಲಕ್ಕಾಗಿ ಉಪಯೋಗಿಸುವ ನಾಯಿತೊಗಲು ಅಥವಾ ಅದರಂತಿರುವ ಇತರ ತೊಗಲು. **D.-seep** ನಾಯಿನಿದ್ದೆ ; ಲಘುವಾದ, ಆಗಾಗ ಎಚ್ಚರಗೊಳ್ಳುವ, ನಿದ್ದೆ. **D.'s letter** : 'r' ಎಂಬ ಅಕ್ಷರ (ನಾಯಿಯ ಗುರ್ರೆಂಬ ದನಿಯಿಂದ). **D.'s-meat** ಕುದುರೆಯ ಮಾಂಸ : ಗಬ್ಬು ಮಾಂಸ. **D.'s-nose** ಬಿಯರ್ ಮತ್ತು ಜಿನ್ ಎಂಬ ಮದ್ಯಗಳು. **D.('s)-tail, D.'s-tongue, D.'s-tooth** ಹಲವುಜಾತಿಯ ಸಸ್ಯಗಳು. **D.-tired** ತುಂಬ ಬಳಲಿದ ; ತೀರ ದಣಿದ. **D.-tooth** ನಾರ್ಮನ್ ಮತ್ತು ಆದಿ ಇಂಗ್ಲಿಷ್ ವಾಸ್ತುಶಿಲ್ಪದಲ್ಲಿ ಸಣ್ಣ, ಚದುರ ಶಂಕುವಿನಾಕಾರದ, ಅಲಂಕಾರ. **D.-violet** ವಾಸನೆಯಿಲ್ಲದ 'ವಯೊಲೆಟ್' ಹೂವು. **D.-whip** ನಾಯಿ ಹೊಡೆಯುವ ಚಾವಟಿ. **Dógged** ಡಾಗೆಡ್ (ಗು.) ಹಠಮಾರಿಯಾದ ; ಹಿಡಿದ ಪಟ್ಟು ಬಿಡದ ; ಛಲದ ; ಜಗ್ಗದ ; ಬಗ್ಗದ (It's d. does it ಪಟ್ಟು ಹಿಡಿದು ಮಾಡಿದರೆ ಕೆಲಸ ಕೈಗೂಡುವುದು). **Dóggedly** (ಕ್ರಿ. ವಿ) ; **Dóggedness** (ನಾ.) ; **Dóggish** (ಗು.) ; **Dógless** (ಗು.) ; **Dóglike** (ಗು.) ; **Dóggy, Dóggie** (ನಾ.)ಸಣ್ಣ ನಾಯಿ (ಮುದ್ದಿನ ಹೆಸರು). **Dóghood** (ನಾ.)

Dog (ಕ್ರಿ. ಸಕ.) ಹಿಂದೆಯೇ ಹೋಗು ; ಹಿಂಬಾಲಿಸಿ ಹೋಗು ; ಬೆನ್ನಟ್ಟಿ ಹೋಗು ; ಜಾಡು ಹಿಡಿದು ಹೋಗು. (ಯಂತ್ರ) ಹಿಡಿಕೆಯಿಂದ ಬಿಗಿಯಾಗಿ ಹಿಡಿ.

Dógate. Doge ನೋಡಿ.

Doge ಡೋಜ್ (ನಾ.) (ಚರಿತ್ರ) ವೆನಿಸ್, ಜಿನೋವ ಪಟ್ಟಣಗಳ ಪ್ರಧಾನ ದಂಡಾಧಿಕಾರಿ. **Dógate** ಡೋಗೇಟ್ (ನಾ.) ಈ ದಂಡಾಧಿಕಾರಿಯ ಅಧಿಕಾರ.

Dóggerel ಡಾಗರೆಲ್ (ಗು., ನಾ.) ಕ್ರಮಬದ್ಧವಲ್ಲದ ವಿಕಟ ಪದ್ಯ ; ಕ್ಷುಲ್ಲಕ, ಕೀಳ್ತರದ, ಗಾಂಭೀರ್ಯವಿಲ್ಲದ (ಪದ್ಯ) ; ಕುಂಟು ಪದ್ಯ ; 'ಬಗದಾಳ'.

Dóggo ಡಾಗೋ (ಕ್ರಿ. ವಿ.) (ಅನಂ.) Lie d. ಯಾವ ಸೂಚನೆಯನ್ನೂ ಕೊಡದೆ, ಅಲುಗದೆ, ಇರು.

Dógma ಡಾಗ್ಮ (ನಾ. ; ಬ. ವ. -s, ಅಪೂರ್ವವಾಗಿ -ta) (ಮು., ಮಠಾಧಿಕಾರದಿಂದ ವಿಧಾಯಕವಾದ) ತತ್ತ್ವ, ಸಿದ್ಧಾಂತ, ಮತ ತತ್ತ್ವ. ವಿಚಾರಕ್ಕೆಡೆಗೊಡದ ನಂಬಿಕೆ. ಔದ್ಧತ್ಯದಿಂದ ಹೇಳುವುದು. **Dogmátic** — ಮ್ಯಾಟಿಕ್ (ಅಪೂರ್ವವಾಗಿ **-ical**) (ಗು.) ಮತ ತತ್ತ್ವದ (ಗಳ) ; ತತ್ತ್ವಾತ್ಮಕ ; ಶಾಸ್ತ್ರಾಧಾರದ (ಅನುಮಾನದಿಂದ ತರ್ಕಿಸಿದುದಲ್ಲದ). (ವ್ಯಕ್ತಿ, ಪುಸ್ತಕ, ಮೊ. ಗಳ ವಿಷಯದಲ್ಲಿ) ಅಧಿಕಾರ ಯುಕ್ತ. ಅಹಂಕಾರದ ; ಗರ್ವದ ; ಹಠದ ; ಉದ್ಧತ. **Dogmátics** (ನಾ.) ಮತ ತತ್ತ್ವ ಸಿದ್ಧಾಂತ (ಮು., ಮತ ತತ್ತ್ವದ ದೇವತಾ ಶಾಸ್ತ್ರ). **Dogmátically** (ಕ್ರಿ. ವಿ.) ; **Dógmatize** ಡಾಗ್ಮಟೈಸ್ (ಕ್ರಿ.) ಸರಿಯಾದ ಆಧಾರ ಕೊಡದೆ ಪ್ರತಿಪಾದಿಸು ; ದೃಢವಾಗಿ ಸಾಧಿಸು ; ಅಧಿಕಾರ ವಾಣಿಯಿಂದ ಮಾತನಾಡು. (ವಿಧಿಗಳು, ಮೊ. ನ್ನು) ಸಿದ್ಧಾಂತವಾಗಿ ನಿರೂಪಿಸು. **Dógmatism** (ನಾ.) ; **Dógmatist** (ನಾ.) ಸೂತ್ರಾಂಧ ; ಶಾಸ್ತ್ರಾಂಧ.

Doíly ಡಾಯ್ಲಿ (ನಾ.) (ಊಟ ಮುಗಿದಮೇಲೆ ಬೆರಳು ತೊಳೆದುಕೊಳ್ಳುವುದಕ್ಕಾಗಿಟ್ಟಿರುವ ನೀರಿನ ಗಾಜುಪಾತ್ರೆಯ ಅಡಿಯಲ್ಲಿ ಹಾಸುವ) ಸಣ್ಣ ಚಿತ್ರದ ಚೌಕ.

Doit ಡಾಯ್ಟ್ (ನಾ.) ಬಹಳ ಸ್ವಲ್ಪ ಹಣ ; ಬಹಳ ಚಿಕ್ಕ ನಾಣ್ಯ ; ಪುಡಿ ಕಾಸು. ಅತ್ಯಲ್ಪವಾದದ್ದು (Don't care a d. ಕವಡೆಗೆ ಕಡೆ)

Doíted ಡಾಯ್ಟೆಡ್ (ಗು.) (ಮು., ಮುಪ್ಪಿನಿಂದ) ಅರುಳು ಮರುಳಾದ.

Dólce far niénte (It.) ಡೊಲ್ಚೇ ಫಾರ್ ನಿಯೆಂಟೇ (ನಾ.) ಹಿತವಾದ ಅನುದ್ಯೋಗ ; ಸುಖದ ಸೋಮಾರಿತನ.

Dóldrums ಡಾಲ್‌ಡ್ರಮ್ಸ್ (ನಾ., ಬ. ವ.) ಮಾಂದ್ಯ ; ಮಂಕು ; ನಿರುತ್ಸಾಹ ; ಖಿನ್ನತೆ ; ವಿಷಣ್ಣತೆ. (ಹಡಗಿನ ವಿಷಯದಲ್ಲಿ) ಗಾಳಿಯಿಲ್ಲದೆ ಶಾಂತವಾಗಿರುವ ಸ್ಥಿತಿ (ಸಾ., In the d.). ಶಾಂತತೆ ; ಸ್ತಬ್ಧತೆ. ವಿಷುವದ್ವೃತ್ತದ ಬಳಿ ಪದೇ ಪದೇ ದಿಕ್ಕು ಬದಲಾಯಿಸಿ ಬೀಸುವ ನಸುಗಾಳಿಯ ಶಾಂತ ವಾತ ಪ್ರದೇಶ.

Dole[1] ಡೋಲ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) ಅದೃಷ್ಟ ; ಪಾಲು ; ವಿಧಿ ; ಹಣೆಯ ಬರಹ (Happy man be his d. ಅವನು ಸುಖವಾಗಿರಲಿ). ದಾನವಾಗಿ ಹಂಚುವುದು ; ದಾನ ; ಧರ್ಮ. (ಮು., ಲೋಭಿತನದಿಂದ ಕೊಟ್ಟ) ಅನ್ನ, ಬಟ್ಟೆ, ದುಡ್ಡು, ಭಿಕ್ಷೆ. (ಬಳ. ಮಾ.) [The d. ನಿರುದ್ಯೋಗಿಗಳು ಕೇಳಲು ಹಕ್ಕಿರುವ ಸಹಾಯ]. (ಕ್ರಿ.) ಹಿಡಿತದಿಂದ (ಭಿಕ್ಷೆ) ಕೊಡು. **Dólesman, -woman** ಡೋಲ್ಸ್— ಪಡಿಭಿಕ್ಷ ಪಡೆಯುವವನು (ಳು)

Dole[2] ಡೋಲ್ (ನಾ.) (ಕಾವ್ಯ) ವ್ಯಥೆ ; ಸಂಕಟ ; ಗೋಳು ; ದುಃಖ ; ಅಳಲು **Dóleful** (ಗು.) ಗೋಳುಕರೆಯ ; ಉತ್ಸಾಹ ಶೂನ್ಯವಾದ ; ದುಃಖದ ; ವ್ಯಥೆಯ ; ಕೊರಗುವ ; ವಿಷಣ್ಣ. **Dólefully** (ಕ್ರಿ. ವಿ.) ; **Dólefulness** (ನಾ.) ; **Dólorous** (ಗು.) ಡಾ(ಡೋ)ಲರಸ್ (ಸಾ., ಕಾವ್ಯದಲ್ಲಿ ಅಥವಾ ಹಾಸ್ಯವಾಗಿ) ವ್ಯಥೆಗೊಳಿಸುವ; ನೋವು ಕೊಡುವ ; ಉತ್ಸಾಹಶೂನ್ಯವಾದ ; ಸಂಕಟಕರವಾದ ; ಶೋಕಾರ್ತ ; ದುಃಖಪೀಡಿತ; ಗೋಳುಕರೆಯ. **Dólorously** (ಕ್ರಿ. ವಿ.) ; **Dólour** (ನಾ.) (ಕಾವ್ಯ) ವ್ಯಸನ ; ವ್ಯಥೆ ; ಸಂಕಟ ; ದುಃಖ ; ಕೊರಗು.

Dólichocephálic ಡಾಲಿಕೊಸಿಫ್ಯಾಲಿಕ್ (ಗು.) ಉದ್ದವಾದ ತಲೆಯುಳ್ಳ ; ನಿಡುದಲೆಯ ; ದೀರ್ಘ ಶೀರ್ಷ (ಉದ್ದದ 4/5ಕ್ಕಿಂತಲೂ ಕಡಮೆಯ ಅಗಲದ ತಲೆಬುರುಡೆಯುಳ್ಳ) ; ಇಂಥ ತಲೆಬುರುಡೆಯುಳ್ಳ ಮನುಷ್ಯನ ಅಥವಾ ಕುಲದ.

Doll ಡಾಲ್ (ನಾ.) ಬೊಂಬೆ ; ಗೊಂಬೆ. ಪ್ರೀತಿಯ ಹುಡುಗಿ ; ತಿಳಿಗೇಡಿಯಾದ ಚೆಲುವೆ ; ಅಲಂಕಾರದ ಬೊಂಬೆ. **Dóllish** (ಗು.) ಬೊಂಬೆಯಂಥ (ಚೆಲುವೆ, ಆದರೆ ತಿಳಿಗೇಡಿ). **Dóllishly** (ಕ್ರಿ. ವಿ.) ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Dóllishness (ನಾ.) ; **Dólly** ಡಾಲಿ (ನಾ.) (ಬೊಂಬೆಯ ಮುದ್ದಿನ ಹೆಸರು ; ಮು., ಸಂಬೋಧನೆಯಲ್ಲಿ). ಬಟ್ಟೆ ಒಗೆಯುವುದು, (ಗಣಿಯ) ಅದುರು ತೊಳೆಯುವುದು, ಅಸ್ತಿಭಾರದ ಗೂಟ ಹೊಡೆಯುವುದು, ಕಬ್ಬಿಣ ಕೊರೆಯುವುದು, ಮೆರುಗು ಕೊಡುವುದು—ಇವೇ ಮೊ. ಗಳಲ್ಲಿ ಉಪಯೋಗಿಸುವ ತೆರ ತೆರದ ಸಲಕರಣೆಗಳು. D.-shop ನಾವಿಕ ಸಾಮುಗ್ರಿಗಳನ್ನು ಮಾರುವ ಅಂಗಡಿ.

Dóllar ಡಾಲರ್ (ನಾ.) ಅಮೆ. ಸಂ. ಗಳ ಚಿನ್ನದ ಮತ್ತು ಬೆಳ್ಳಿಯ ನಾಣ್ಯ (ಅಮೆ. ಸಂ. ಗಳ ನಾಣ್ಯಪದ್ಧತಿಯ ಮಾನ, ಏಕ ; = ೧೦೦ ಸೆಂಟುಗಳು ; ಸುಮಾರು ೪ ಷಿಲಿಂಗ್ ಮತ್ತು ೧॥ ಪೆನಿ, ಅಥವಾ ೩ ರೂಪಾಯಿಗಳ, ಬೆಲೆಯುಳ್ಳದ್ದು) : 'ಡಾಲರು' (ಇದರ ಚಿಹ್ನೆ $). (ಪೂರ್ವದಲ್ಲಿ ಜರ್ಮನಿಯ 'ಥೇಲರ್' ಎಂಬ, ಅಥವಾ ಸ್ಪೆಯ್‌ನ್ ದೇಶದ 'ಪೆಸೊ' ಎಂಬ, ನಾಣ್ಯಕ್ಕೆ ಇಂಗ್ಲಿಷ್ ಹೆಸರು). (The almighty d. ಸರ್ವಶಕ್ತ ಧನ ; ದೇವಪ್ರಾಯ ಧನ ; ಧನ ದೇವತೆ). ಕೆನಡ, ಮೊ. ದೇಶಗಳ ಈ ಮಾನದ ನಾಣ್ಯ. (ಅಸಂ.) ಐದು ಷಿಲಿಂಗಿನ ನಾಣ್ಯ : 'ಕ್ರೌನ್.'

Dóllop ಡಾಲಪ್ (ನಾ.) (ಬಳ. ಮಾ.) (ತಿಂಡಿ, ಮೊ. ಗಳ) ವಿಕಾರವಾದ ಅಥವಾ ಆಕಾರವಿಲ್ಲದ ಮುದ್ದೆ.

Dólly Várden ಡಾಲಿ ವಾರ್ಡೆನ್ (ನಾ.) ಹೆಂಗಸಿನ ಹಲವು ಬಗೆಯ ಟೋಪಿ ಮತ್ತು ಉಡುಪು. [ಡಿಕೆನ್ಸ್ ಎಂಬ ಇಂಗ್ಲಿಷ್ ಕಾದಂಬರಿಕಾರನ ಒಂದು ಕಾದಂಬರಿಯಲ್ಲಿಯ ಪಾತ್ರದ ಹೆಸರಿನಿಂದ]

Dólmen ಡಾಲ್‌ಮೆನ್ (ನಾ.) (Cromlech ಎಂಬ) ಪೂರ್ವ ಕಾಲದ ಹಾಸುಬಂಡೆಯ ಕಲ್ಲುಕಟ್ಟಡ(ಕ್ಕೆ ಫ್ರೆಂಚ್ ಹೆಸರು) ; ಪಾಂಡು ಕುಳಿ ; ಮೋರೆಯರ ಕುಳಿ.

Dólomite ಡಾಲೊಮೈಟ್ (ನಾ.) ಸುಣ್ಣ ಮತ್ತು ಮ್ಯಾಗ್ನೀಸಿಯದ ಯುಗ್ಮ ಕಾರ್ಬೊನೇಟಿನ ಒಂದು ಬಗೆಯ ಶಿಲೆ. The Dolomites (ಮು., ಟೈರೋಲಿನಲ್ಲಿರುವ) ಈ ಶಿಲೆಯ ಬೆಟ್ಟಗಳು. **Dolomític** — ಮಿಟಿಕ್ (ಗು.)

Dólorous, Dólour. **Dole**[2] ನೋಡಿ.

Dolóse ಡೊಲೋಸ್ (ಗು.) (ನ್ಯಾ. ಶಾ.) ಅಪರಾಧ ಬುದ್ಧಿಯ ; ದುರುದ್ದೇಶದ ; ಉದ್ದೇಶ ಪೂರ್ವಕವಾಗಿ ಮೋಸಮಾಡುವ.

Dólphin ಡಾಲ್ಫಿನ್ (ನಾ.) ತಿಮಿಂಗಿಲದ ಜಾತಿಗೆ ಸೇರಿದ, ಕೊಕ್ಕಿನಂಥ ಮೂತಿಯುಳ್ಳ, ಸಸ್ತನಿ ಸಮುದ್ರಪ್ರಾಣಿ : ಹಂದಿಮೀನು. (ವಂಶ ರಾಂಛನ, ಶಿಲ್ಪ, ಮೊ. ಗಳಲ್ಲಿ) ಕೊಂಕು ಮೀನು, ವಕ್ರ ಮೀನ. (ಮು., ನಾವೆಯ) ಹಲವು ಸಲಕರಣೆಗಳು.

Dolt ಡೋಲ್ಟ್(ನಾ.) ದಡ್ಡ ; ಮಡ್ಡಿ ; ಹೆಡ್ಡ ; ಮಂದ ಬುದ್ಧಿ. **Dóltish** (ಗು.) ದಡ್ಡನಂಥ; ಮಂದ ಬುದ್ಧಿಯ. **Dóltishness** (ನಾ.)

-dom — ಡಮ್ (ಉ. ಪ್ರ.) ಪದವಿ, ಸ್ಥಿತಿ, ಪ್ರಾಂತ, ಸಮೂಹ, ವಾಚಕಗಳಾದ ನಾಮಪದಗಳನ್ನು ನಾಮವಾಚಕಗಳಿಂದ ಅಥವಾ ಗುಣವಾಚಕಗಳಿಂದ ಮಾಡುವ ಉ. ಪ್ರ. (Earldom, freedom kingdom, officialdom)

Domaín ಡೊಮೆಯ್‌ನ್ (ನಾ.) ಭೂಸ್ವತ್ತು ; ಜಮೀನು ; ಭೂಮಿ ಕಾಣಿ ; ಅಧಿಕಾರಕ್ಕೊಳಪಟ್ಟ, ಆಳಿಕೆಯಲ್ಲಿರುವ, ಪ್ರಾಂತ ; ರಾಜ್ಯ ; ಆಧಿಪತ್ಯ ; ಪ್ರಭಾವ ಕ್ಷೇತ್ರ ; ಭಾವನೆಯ, ಕಾರ್ಯದ, ಕ್ಷೇತ್ರ, ವ್ಯಾಪ್ತಿ. (ಅಂತರ್ರಾಷ್ಟ್ರೀಯ ಮತ್ತು ಅಮೆ. ಸಂ. ನ್ಯಾ. ಶಾ.) Eminent D. ಆವಶ್ಯಕತೆ ಬಿದ್ದಾಗ ಯಾರ ಆಸ್ತಿಯನ್ನಾಗಲಿ ಕಿತ್ತುಕೊಂಡು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ರಾಷ್ಟ್ರಕ್ಕಿರುವ ಪರಮಾಧಿಕಾರ, ಪ್ರಭುತ್ವ. **Dománial** ಡೊಮೇನಿಯಲ್ (ಗು.)

Dome ಡೋಮ್ (ನಾ., ಕ್ರಿ. ಸಕ.) (ಕಾವ್ಯ) ಪ್ರಾಸಾದ ; ಸೌಧ ; ಭವ್ಯ ಮಂದಿರ. (ವರ್ತುಲಾಕಾರದ, ಅಂಡಾಕಾರದ ಅಥವಾ ಬಹುಕೋನಾಕಾರದ ಅಸ್ತಿಭಾರದ ಮೇಲಿನ ಕಟ್ಟಡದ) ಗುಮ್ಮಟ ; ಗುಂಬಜು ; ಭುವನೇಶ್ವರಿ. (ಆಕಾಶ, ಮರಗಳು, ಮೊ. ಗಳಿಂದ ಆದ) ಸ್ವಾಭಾವಿಕ ಮೇಲಾವರಣ ; ವಿತಾನ. ಗುಡ್ಡ, ಮೊ. ಗಳ ಗುಂಡುತಿರುಗಿರುವ ನೆತ್ತಿ. (ಕ್ರಿ.) ಗುಮ್ಮಟ ಮಾಡು ; ಗುಮ್ಮಟದ ಆಕಾರ ಕೊಡು. **Domed** (ಗು.) ; **Dómic(al)** ಡೋ(ಡಾ) — (ಗು.) ಗುಮ್ಮಟದ ; ಗುಮ್ಮಟದಂತಿರುವ ; ಗುಮ್ಮಟಗಳುಳ್ಳ. **Dómelike** ಡೋ — (ಗು.) ; **Dómy** (ಗು.) ಗುಮ್ಮಟದಂಥ ; ಗುಮ್ಮಟವುಳ್ಳ.

Dómesday (Book) ಡೋ(ಡೂ)ಮ್ಸ್‌ಡೇ (ಬುಕ್) (ನಾ.) ೧೦೮೬ನೆಯ ಇಸವಿಯಲ್ಲಿ ಮೊದಲನೆಯ ವಿಲಿಯಮ್ ದೊರೆ ಇಂಗ್ಲೆಂಡಿನ ಭೂಸ್ಥಿತಿಗಳ ವಿಸ್ತಾರ, ಬೆಲೆ, ಸ್ವಾಮ್ಯ, ಮೊ. ಗಳ ವಿಚಾರಣೆ ಮಾಡಿ ಬರೆಯಿಸಿಟ್ಟ ದಾಖಲೆಯ ಪುಸ್ತಕ : ಜಮೀನು ದಫ್ತರ ; ಹಿಡುವಳಿ ದಫ್ತರ.

Doméstic ಡೊಮೆಸ್ಟಿಕ್ (ಗು., ನಾ.) ಮನೆಯ ; ಸಂಸಾರದ ; ಗೃಹಕೃತ್ಯದ ; ಸ್ವದೇಶದ ; ದೇಶೀಯ ; ಮನೆಯಲ್ಲಿ ಮಾಡಿದ ; ಸ್ಥಳೀಯ ತಯಾರಿಯ. (ಪ್ರಾಣಿಗಳ ವಿಷಯದಲ್ಲಿ, ಮನುಷ್ಯನೊಡನೆ ವಾಸವಿರುವುದರಿಂದ) ಸಾಧುವಾದ, ಪಳಗಿಸಿದ, ಸಾಕಿದ. ಮನೆಯಲ್ಲೇ ಇರುವ ; ಸ್ವಗೃಹ ಪ್ರೀತಿಯುಳ್ಳ. (ನಾ.) ಮನೆಯಾಳು. **Doméstically** (ಕ್ರಿ. ವಿ.) ; **Domésticate** (ಕ್ರಿ. ಸಕ.) (ನೆಲಸಿಗರನ್ನು, ಪ್ರಾಣಿಗಳನ್ನು, ಆ ಸ್ಥಳಕ್ಕೆ) ಒಗ್ಗಿಸು, ಹೊಂದಿಕೊಳ್ಳುವಂತೆ ಮಾಡು. ಮನೆಯ ಮೇಲೆ ಪ್ರೀತಿಯುಳ್ಳದ್ದನ್ನಾಗಿ(ವನನ್ನಾಗಿ) ಮಾಡು ; ಗೃಹಾಸಕ್ತ ಮಾಡು (ಮು., ಭೂ. ಕೃ. ನಲ್ಲಿ). (ಪ್ರಾಣಿಗಳನ್ನು) ಮನುಷ್ಯನ ಅಧೀನಕ್ಕೆ ತರು ; ಸಾಧು ಮಾಡು ; ಪಳಗಿಸು. (ಕಾಡು ಜನರನ್ನು) ನಾಗರಿಕ ಮಾಡು. **Domésticable** (ಗು.) ; **Domesticátion** (ನಾ.) ; **Domestícity** ಡೋ(ಡಾ)—(ನಾ.) ಸಂಸಾರಿ ಲಕ್ಷಣ ; ಮನೆ ಬಾಳಿಕೆ ; ಗೃಹ ಜೀವನ ; ಅಂತರಂಗ ಸ್ಥಿತಿ ; ಗೃಹ ಪ್ರೇಮ : ಗೃಹಾಸಕ್ತಿ. ಪಳಗಿದ ಸ್ಥಿತಿ ; ಪಳಕೆ ; ಸಾಧುತ್ವ. The domesticities ಗೃಹಕೃತ್ಯಗಳು ; ಮನೆಯ ವಿಚಾರಗಳು.

Dómicile ಡಾಮಿಸಿ(ಸೈ)ಲ್ (ನಾ., ಕ್ರಿ.) ವಾಸಸ್ಥಾನ ; ವಸತಿ ; ನೆಲೆ ; ಮನೆ. (ನ್ಯಾ. ಶಾ.) ಗೊತ್ತಾದ ಕಾಯಂ ವಾಸಸ್ಥಾನ ; ನೆಲಸಿಕೆ. ನೆಲಸಿಕೆಯ ನಿಜತ್ವ. ಹುಂಡಿಗೆ ಹಣ ಕೊಡಲು ಗೊತ್ತುಮಾಡಿರುವ ಊರು, ಸ್ಥಳ. (ಕ್ರಿ.) ಒಂದು ಗೊತ್ತಾದ ಸ್ಥಳದಲ್ಲಿ ಹುಂಡಿಗೆ ಹಣ ಕೊಡುವಂತೆ ನಿರ್ದೇಶಿಸು. ಒಂದು ಸ್ಥಳದಲ್ಲಿ ಸ್ಥಾಪಿಸು, ನೆಲಸು, ನೆಲಸುವಂತೆ ಮಾಡು, ವಾಸಮಾಡು (Also, **Domicíliate** — ಸಿಲಿಯೇಟ್). **Domiciliátion** (ನಾ.) ; **Domicíliary** (ಗು.) ವಾಸಸ್ಥಾನದ [D. visit (ಸರ್ಕಾರದ) ಅಧಿಕಾರಿಗಳು ಖಾಸಗಿ ಮನೆಗಳನ್ನು ಹೊಕ್ಕು ಹುಡುಕಲು ಅಥವಾ ಪರೀಕ್ಷಿಸಲು ಹೋಗುವುದು]

Dóminant ಡಾಮಿನಂಟ್ (ಗು., ನಾ.) ಅಧಿಕಾರ ಶಕ್ತಿಯ ; ವ್ಯಾಪಕವಾದ ; ಪ್ರಬಲವಾದ ; ಮೇಲುಗೈ ಆದ. (ಎತ್ತರಗಳ ವಿಷಯದಲ್ಲಿ) ಎಲ್ಲಕ್ಕೂ ಮಿಗಿಲಾದ ; ಅತ್ಯುನ್ನತವಾದ ; ಎದ್ದು ಕಾಣುವ ; ಪ್ರಧಾನ. (ಸಂ.) ಸ್ವರಶ್ರೇಣಿಯ ಐದನೆಯ ಸ್ವರ [(ಗು.) D. chord ಐದನೆಯ ಸ್ವರ]. ('ಮೆಂಡೆಲ್' ತತ್ತ್ವ) ಸಂಕರ ಸಂತಾನಗಳಲ್ಲಿ, ಮೊದಲನೆಯ ತಲೆಮೊರೆಯಲ್ಲಿ ಕಾಣಿಸಿಕೊಳ್ಳುವ, ತಾಯಿಯ ಕಡೆಯಿಂದ ಅಥವಾ ತಂದೆಯ ಕಡೆಯಿಂದ ಮಾತ್ರ ಆರ್ಜಿತವಾದ, ಪ್ರಧಾನ ಗುಣ(ದ). **Dóminance** (ನಾ.) ; **Dóminantly** (ಕ್ರಿ. ವಿ.) ; **Dóminate** — ನೇಟ್ (ಕ್ರಿ.) ಒಬ್ಬನ, ಒಂದರ, ಮೇಲೆ ಅಧಿಕಾರ, ಪ್ರಭಾವ, ಇರು ; ಅಧಿಕಾರ ನಡಸು ; ಆಳು (*Over* ಉಪ. ದೊಡನೆ ಕ್ರಿ. ಅಕ.). (ವ್ಯಕ್ತಿ, ಅಧಿಕಾರ, ನಾದ, ನೋಟ — ಇವುಗಳಲ್ಲಿ) ಅತ್ಯಂತ ಪ್ರಬಲವಾಗಿ, ಪ್ರಧಾನವಾಗಿ, ಪ್ರಮುಖವಾಗಿ, ಇರು. (ಎತ್ತರಗಳ ವಿಷಯದಲ್ಲಿ) ಅತ್ಯಂತ ಎತ್ತರವಾಗಿರು, ಉನ್ನತ ಸ್ಥಾನದಲ್ಲಿರು. **Dominátion** (ನಾ.) ಉಚ್ಛ್ರಾಯ ; ಪ್ರಾಬಲ್ಯ ; ಆಧಿಪತ್ಯ ; ಪ್ರಭುತ್ವ. (ಬ. ವ. ದಲ್ಲಿ) (ಕ್ರೈಸ್ತ) ನಾಲ್ಕನೆಯ ದರ್ಜೆಯ ದೇವತೆಗಳ ವರ್ಗ, ದೇವದೂತ ವರ್ಗ. **Domineér** ಡಾಮಿನೀಯರ್ (ಕ್ರಿ. ಅಕ.) ಪ್ರಬಲವಾಗಿರು ; ದರ್ಪದಿಂದ ನಡೆ ; ಸೊಕ್ಕಿನಿಂದ, ಅಹಂಭಾವದಿಂದ, ವರ್ತಿಸು ; ಪೀಡಿಸು ; ಕಾಡಿಸು ; ಗೋಳುಗುಟ್ಟಿಸು. **Domineéringly** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Domínical ಡೊಮಿನಿಕಲ್ (ಗು.) (ಏಸುಕ್ರಿಸ್ತ) ಪ್ರಭುವಿನ (D. year ಕ್ರಿಸ್ತ ವರ್ಷ); (ಏಸುಕ್ರಿಸ್ತ) ಪ್ರಭುವಿನ ದಿನದ (ಭಾನುವಾರದ). (D. letter ವರ್ಷದ ಭಾನುವಾರಗಳನ್ನು ಸೂಚಿಸಲು ಉಪಯೋಗಿಸುವ A ಯಿಂದ G ವರೆಗಿನ ಏಳು ಅಕ್ಷರಗಳಲ್ಲೊಂದು)

Domínican ಡೊಮಿನಿಕನ್ (ಗು., ನಾ.) ಸೆಯ್ಂಟ್ ಡಾಮಿನಿಕ್ಕಿನ ಅಥವಾ ಧರ್ಮೋಪದೇಶ ಮಾಡಲು ಆತನು ಸ್ಥಾಪಿಸಿದ ಸಂನ್ಯಾಸಿ ಪಂಥದ. (ನಾ.) ಡಾಮಿನಿಕ್ ಪಂಥದ ಸಂನ್ಯಾಸಿ.

Dóminie ಡಾಮಿನಿ (ನಾ.) ಉಪಾಧ್ಯಾಯ; ಅಧ್ಯಾಪಕ.

Domínion ಡೊಮಿನ್ಯನ್ (ನಾ.) ಪ್ರಭುತ್ವ; ಆಧಿಪತ್ಯ; ದೊರೆತನ; ಆಳಿಕೆ; ಒಡೆತನ; ಅಧಿಕಾರ. ಶ್ರೀಮಂತನ ಜಹಗೀರು. ರಾಜ್ಯ; ರಾಷ್ಟ್ರ; ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಸ್ವಾತಂತ್ರ್ಯ ಪಡೆದ ಒಳರಾಷ್ಟ್ರ (ಕೆನಡ, ನ್ಯೂಸ್ಲೀರೆಂಡ್, ಮೊ. ವ). (ನ್ಯಾ. ಶಾ.) ಸ್ವಾಮಿತ್ವದ ಹಕ್ಕು.

Dómino ಡಾಮಿನೊ (ನಾ.; ಬ. ವ. -oes) ಮುಖಚಹರೆ ತಿಳಿಯದಂತೆ ತೊಟ್ಟುಕೊಳ್ಳುವ ಅರೆಮೊಗವಾಡವಿರುವ ಸಡಿಲವಾದ ದಗಲ (ಮು., ವೇಷ ಹಾಕಿಕೊಳ್ಳುವುದರಲ್ಲಿ). ಅರೆಮೊಗವಾಡದ ದಗಲ ತೊಟ್ಟಿರುವವನು. 'ಡಾಮಿನೋಸ್' ಎಂಬ ಆಟದಲ್ಲಿ ಉಪಯೋಗಿಸುವ, ೧ ರಿಂದ ೬ ರ ವರೆಗೆ ಗುರುತುಗಳು ಮಾಡಿದ, ಉದ್ದುದ್ದವಾದ ಚದುರಕಾಯಿಗಳು ಎಲರಲ್ಲ ಒಂದು; (ಬ. ವ. ದಲ್ಲಿ) ಈ ಆಟ.

Don[1] ಡಾನ್ (ನಾ.) ಸ್ಪೆಯ್ನ್ ದೇಶದಲ್ಲಿ ಒಬ್ಬನ ಕ್ರೈಸ್ತ ಹೆಸರಿನ ಹಿಂದೆ ಸೇರಿಸುವ ಗೌರವ ಸೂಚಕ ಪದ [D. Juan (ಶ್ರೀಮಂತ) ಸ್ತ್ರೀವಿಲಾಸಿ; D. Quixote ಒಬ್ಬ ಹುಚ್ಚುಸಾಹಸಿಯ ಹೆಸರು]. ಸ್ಪೆಯ್ನ್ ದೇಶದ ಗೌರವಸ್ಥ, ದೊಡ್ಡಮನುಷ್ಯ; ಸ್ಪೆಯ್ನ್ ದೇಶದವನು. ಪ್ರಸಿದ್ಧ ಪುರುಷ; ಹೆಸರಾದವನು; ಯಾವುದಾದರೂ ಒಂದರಲ್ಲಿ ದಕ್ಷ, ಪ್ರವೀಣ. ಪ್ರೌಢ ವಿದ್ಯಾಶಾಲೆಯ ಅಧ್ಯಕ್ಷ, ಸಭಾಸದಸ್ಯ, ಅಧ್ಯಾಪಕ. **Dónnish** (ಗು.) ಡಾನಿನ; ಪ್ರೌಢವಿದ್ಯಾಶಾಲೆಯ ಡಾನಿನಂತಿರುವ. ವಿದ್ಯಾಡಂಬರದ. **Dónnishness** (ನಾ.)

Don[2] ಡಾನ್ (ಕ್ರಿ. ಸಕ.) (ಉಡುಪು) ಹಾಕಿಕೊ, ತೊಟ್ಟುಕೊ, ಧರಿಸು.

Dóna(h) ಡೊನ್ನ, ಡೋನ (ನಾ.) (ಅಸಂ.) ಹೆಂಗಸು; ನಲ್ಲೆ; ಪ್ರಿಯೆ.

Donátion ಡೊನೇಷನ್ (ನಾ.) (ಉಚಿತವಾಗಿ) ಕೊಡುವುದು; ಕೊಡುಗೆ; ದಾನ; ಕೊಟ್ಟದ್ದು; ದಾನ ಮಾಡಿದ್ದು (ಮು., ಒಂದು ಸಂಸ್ಥೆಗೆ ದ್ರವ್ಯದಾನ). **Donáte** (ಕ್ರಿ. ಸಕ.) (ಅಮೆ. ಸಂ.) (ಉಚಿತವಾಗಿ) ಕೊಡು; ದಾನ ಕೊಡು. **Dónative** ಡಾ(ಡೋ)ನಟಿವ್ (ಗು., ನಾ.) ದಾನದ (ಮು., ಕ್ರೈಸ್ತಮತದ ಜೀವನಾಧಾಯದ). ವಿಧಿಯನ್ನನುಸರಿಸಿ ಬಿಷಪ್, ಮೊ. ಅಧಿಕಾರಿಗಳ ಮೂಲಕವಲ್ಲದೆ (ಒಂದು ಮಠಕ್ಕೆ) ನೇರವಾಗಿ ಕೊಟ್ಟ (ಜೀವನಾಧಾಯ). ದಾನ; ಉಚಿತವಾಗಿ ಕೊಟ್ಟ (ಬಹುಮಾನ). **Dónatory** ಡಾನಟರಿ (ನಾ.) ದಾನ ಪಡೆದವನು; ಪ್ರತಿಗ್ರಹಿ [= **Doneé** ಡೋನೀ (ನಾ.)]. **Dónor** ಡೋನ(ನಾ)ರ್ (ನಾ.) ಕೊಡುವವನು; ದಾತ; ದಾನಿ.

Done Do ಧಾತುವಿನ ಭೂ. ಕೃ. ರೂಪ.

Dónga ಡಾಂಗ (ನಾ.) ನೀರುಹಳ್ಳ; ಕೊರಕಲು.

Dónjon ಡಂ(ಡಾಂ)ಜನ್ (Dungeon ಎಂಬ ಪದದ ಪ್ರಾಚೀನ ರೂಪ) (ನಾ.) ದುರ್ಗದ ದೊಡ್ಡ ಗೋಪುರ; ಪೂರ್ವಕಾಲದ ದುರ್ಗದ ಮಧ್ಯಭಾಗದಲ್ಲಿಯ ದುರ್ಗಮ ಪ್ರದೇಶ.

Dónkey ಡಾಂಕಿ (ನಾ.; ಬ. ವ. -eys) ಕತ್ತೆ. (ರೂಪ.) ದಡ್ಡ; ಮಡ್ಡ; ಬುದ್ಧಿಹೀನ. D.-engine ಹಡಗಿನ ನೆಲಗಟ್ಟಿನ ಮೇಲಿನ (ಭಾರ) ಎಳೆಯುವ ಅಥವಾ (ಭಾರ) ಎತ್ತುವ ಆವಿಯ ಎಂಜಿನು.

Don't. (**Do** ನೋಡಿ). (ನಾ.) (ಹಾಸ್ಯವಾಗಿ) ನಿಷೇಧ (ಬೇಡವೆನ್ನುವ ಆಜ್ಞೆ)

Doólie, -ly ಡೂಲಿ (ನಾ.) (ಸೈನ್ಯದಲ್ಲಿ ಗಾಯಪಟ್ಟವರನ್ನು ಸಾಗಿಸಲು ಉಪಯೋಗಿಸುವ) ಡೋಲಿ.

Doom ಡೂಮ್ (ನಾ., ಕ್ರಿ. ಸಕ.) (ಚರಿತ್ರೆ) ಕಾನೂನು; ಕಾಯಿದೆ; ಶಾಸನ; ವಿಧಿ. (ಪ್ರಾಚೀ. ಪ್ರ.) ತೀರ್ಪು; ತೀರ್ಮಾನ; ದಂಡಾಜ್ಞೆ; (ನ್ಯಾಯಸ್ಥಾನದ) ದಂಡನೆ, ಶಿಕ್ಷೆ. (ಸಾ., ಕೆಟ್ಟ) ಅದೃಷ್ಟ; ಹಣೆಯ ಬರಹ; ಗತಿ; ನಾಶ; ಅಳಿವು; ಸಾವು. ಅಂತ್ಯದ ತೀರ್ಪು; ಅಂತಿಮ ಮಹಾ ವಿಚಾರಣೆ (ಈಗ, Crack of d., Day of d., Doomsday ಎಂಬವುಗಳಲ್ಲಿ ಮಾತ್ರ. Till doomsday ಎಂದೆಂದಿಗೂ). (ಕ್ರಿ.) ದಂಡನೆ ವಿಧಿಸು. ದುರ್ಗತಿಗೆ, ನಾಶಕ್ಕೆ, ಗುರಿಪಡಿಸು (ಮು., ಭೂ. ಕೃ. ನಲ್ಲಿ). (ಪ್ರಾಚೀ. ಪ್ರ.) ತೀರ್ಮಾನ ಕೊಡು; ವಿಧಿಸು (Doomed his death ಅವನಿಗೆ ಮರಣದಂಡನೆ ವಿಧಿಸಲಾಯಿತು)

Door ಡೋರ್ (ನಾ.) ಬಾಗಿಲು; ಕದ; ದ್ವಾರ [Front d. ಮುಂಬಾಗಿಲು. Lives next d. ಪಕ್ಕದ ಮನೆಯಲ್ಲೇ ವಾಸಮಾಡುತ್ತಾನೆ. Lives three doors off ಮೂರು ಮನೆಯ ಆಚೆ—. Next d. to (ರೂಪ.) ಹತ್ತಿರ ಹತ್ತಿರವಾಗಿ; ಬಹು ಮಟ್ಟಿಗೆ; ಮುಕ್ಕಾಲು ಮೂರುವೀಸ ಪಾಲು. At death's d. ಸಾವಿಗೆ ಸಮೀಪದಲ್ಲಿ; ಮೃತ್ಯುವಿನ ಬಾಗಿಲಲ್ಲಿ]. ಪ್ರವೇಶಮಾರ್ಗ; ಒಳಹೊಗುವ, ಹೊರಕ್ಕೆಬರುವ, ಮಾರ್ಗ. Show one the d. ಆಚೆ ಕಳುಹಿಸು; ಹೊರ ಹೊರಡಿಸು. Open a d. to ದಾರಿ ಮಾಡಿಕೊಡು; ಅವಕಾಶ ಕಲ್ಪಿಸು. Close the d. upon ದಾರಿಯಿಲ್ಲದಂತೆ, ಅವಕಾಶವಿಲ್ಲದಂತೆ, ಅಸಾಧ್ಯವಾಗುವಂತೆ, ಮಾಡು. Out of doors (ಮನೆಯ) ಹೊರಗೆ; ಬಯಲಿನಲ್ಲಿ; (ರೂಪ.) ಅನುಚಿತ; ಅಸಂಬದ್ಧ. Within doors (ಮನೆಯ) ಒಳಗೆ. Lay at the d. of ಆರೋಪಿಸು; ಮೇಲೆ ಹೊರಿಸು. Lie at the d. of ಮೇಲೆ ಹೊರು; ಆರೋಪಿತವಾಗು Darken d. ಹೊಸಲು ಮೆಟ್ಟು, ಬಾಗಿಲಿಗೆ ಸುಳಿ (ಸಾ., ನಿಷೇಧಾರ್ಥದಲ್ಲಿ). **D.-bell** (ಹಿಡಿಯನ್ನು ಒತ್ತುವುದರಿಂದ) ಒಳಗೆ ಗಂಟೆ ಬಾರಿಸುವಂತೆ ತಲೆಬಾಗಿಲಲ್ಲಿ ಅಳವಡಿಸಿಟ್ಟಿರುವ ಸಲಕರಣೆ: ಬಾಗಿಲ ಗಂಟೆ. **D.-case, -frame** ಬಾಗಿಲುವಾಡ; ಬಾಗಿಲ ಚೌಕಟ್ಟು; ವಾಸಕಾಲು. **D.-keeper** ಬಾಗಿಲು ಕಾಯುವವನು; ದ್ವಾರಪಾಲಕ. **D.-mat** ಕಾಲೊರಸು. **D.-money** ವಿನೋದಾದಿಗಳನ್ನು ನೋಡಲು ಒಳಹೊಗುವುದಕ್ಕೆ ಕೊಡಬೇಕಾದ ರುಸುಮು: ಪ್ರವೇಶ ಹಣ. **D.-nail** ಬಾಗಿಲ ಮೈತುಂಬ ಹೊಡೆಯುವ ಗುಬ್ಬಿಮೊಳೆ (Dead, deaf, as a d.-n.). **D.-plate** ಮನೆಯ ವಾಸಸ್ಥನ ಹೆಸರು ಕೆತ್ತಿ, ಬರೆದು, ಬಾಗಿಲಲ್ಲಿ ಹಾಕಿರುವ ಹಲಗೆ (ಸಾ., ಹಿತ್ತಾಳೆಯದು): ಹೆಸರು ಹಲಗೆ. **D.-posts** ಬಾಗಿಲ ಚೌಕಟ್ಟಿನ ನಿಲುವು(ಪಟ್ಟಿ)ಗಳು, ನಿಡುಕುಗಳು. **D.-step** (ಹೊರ) ಬಾಗಿಲಿಗೆ ಹತ್ತುವ ಮೆಟ್ಟಲು; ಹೊಸಲು ಮೆಟ್ಟಲು; ಬಾಗಿಲ ಮೆಟ್ಟಲು. **D.-stone** ಬಾಗಿಲ ಮುಂದಿನ ಹಾಸುಗಲ್ಲು, ಮೆಟ್ಟುಗಲ್ಲು. **D.-way** (ಕದವಿಟ್ಟಿರುವ) ದ್ವಾರ. (-) **Doored** (ಗು.); **Doórless** (ಗು.)

Dope ಡೋಪ್ (ನಾ., ಕ್ರಿ. ಸಕ.) ಊಟಕ್ಕೂ, ಕೀಲು ಮೊ. ಗಳ ಚಲನ ಸೌಲಭ್ಯಕ್ಕೂ ಉಪಯೋಗಿಸುವ ಮಂದ ದ್ರವ. (ಮು., ಹಾರುಯಂತ್ರಗಳಿಗೆ ಉಪಯೋಗಿಸುವ ಹಲವು ತೆರದ) ಮೆರುಗು ಎಣ್ಣೆ. (ಅಸಂ.) ಮತ್ತು ಬರಿಸುವ, ಮಂಕುಗೊಳಿಸುವ, ಪಾನ. (ಕ್ರಿ. ಅಕ.) ಮತ್ತು ಬರಿಸುವ ಪಾನ ಕುಡಿಸು.

Dóra ಡೋರ (ನಾ.) **Defence** ನೋಡಿ.

Dórcas ಡಾರ್ಕಸ್ (ನಾ.) ಬಡವರಿಗೆ ಉಡುಪುಗಳನ್ನು ತಯಾರು ಮಾಡುವುದಕ್ಕಾಗಿ ಸೇರಿದ ಸ್ತ್ರೀಯರ ಸಭೆ.

Dórian ಡೋರಿಯನ್ (ಗು., ನಾ.) (ಪ್ರಾಚೀನ ಗ್ರೀಸಿನ ಒಂದು ಜಿಲ್ಲೆಯಾದ) ಡೋರಿಸ್ಸಿನ (ನಿವಾಸಿ). [ಪ್ರಾಚೀನ ಗ್ರೀಕರ ಮೂರು ಪಂಗಡಗಳಲ್ಲಿ (Aeolian, Ionian, Dorian) ಒಂದಾದ] ಡೋರಿಯನ್ ಪಂಗಡದ(ವನು). D. mode ಸರಳವಾದ ಮತ್ತು ಗಂಭೀರವಾದ ಶೈಲಿ, ರೀತಿ. **Dóric** ಡಾರಿಕ್ (ಗು., ನಾ.) = Dorian (ಗು.); ಡೋರಿಕ್ (ಶಿಲ್ಪ) ರೀತಿ, ನಮೂನೆ, ಶೈಲಿ (= D. order).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಪ್ರಾಂತ ಭಾಷೆಯ ವಿಷಯದಲ್ಲಿ) ಗ್ರಾಮ್ಯ. (ನಾ.) ಡೋರಿಕ್ ಪ್ರಾಂತ ಭಾಷೆ; ಇಂಗ್ಲಿಷ್ ಗ್ರಾಮ್ಯ ಭಾಷೆ.

Dórking ಡಾರ್ಕಿಂಗ್ (ಗು., ನಾ.) 'ಡಾರ್ಕಿಂಗ್' ತಳಿಯ (ಕೋಳಿ). (Dorking ಎಂಬುದು ಇಂಗ್ಲೆಂಡಿನ Surrey ಜಿಲ್ಲೆಯಲ್ಲಿದೆ)

Dórmant ಡಾರ್ಮಂಟ್ (ಗು.) (ಚಳಿಗಾಲದಲ್ಲಿ ಕೆಲವು ಪ್ರಾಣಿಗಳು, ಹೂವಿನ ಮೊಗ್ಗುಗಳು, ಅವ್ಯಕ್ತ ಸಾಮರ್ಥ್ಯ — ಇವುಗಳ ವಿಷಯದಲ್ಲಿ, ಚಟುವಟಿಕೆಯಿಲ್ಲದೆ ನಿದ್ದೆಯಲ್ಲಿರುವಂತೆ) ಚೇತನ ತೋರದಿರುವ; ಸುಪ್ತ; ಸುಪ್ತಾವಸ್ಥೆಯ. (ವಂಶಲಾಂಛನದಲ್ಲಿಯ ಮೃಗದ ವಿಷಯದಲ್ಲಿ) ತಲೆಯನ್ನು ಪಂಜಾಗಳ ಮಧ್ಯೆ ಇಟ್ಟುಕೊಂಡಿರುವ. ಕಾರ್ಯರೂಪದಲ್ಲಿಲ್ಲದ; ನಿಶ್ಚಲ (Lie d. ಚಟುವಟಿಕೆ ತೋರದೆ ಬಿದ್ದಿರು). D. warrant ಆವಶ್ಯಕತೆ ತೋರಿದಂತೆ ಭರ್ತಿಮಾಡಿಕೊಳ್ಳಲು ಖಾಲಿ ಬಿಟ್ಟಿರುವ ಆಜ್ಞಾಪತ್ರ, ಅಧಿಕಾರ ಪತ್ರ. D. partner ಕೆಲಸಮಾಡದ ಪಾಲುದಾರ. **Dórmancy** (ನಾ.) ಸುಪ್ತಾವಸ್ಥೆ; ನಿದ್ರಾವಸ್ಥೆ.

Dórmer ಡಾರ್ಮರ್ (ನಾ.) (Also, D.-window) ಇಳಿಜಾರು ಚಾವಣಿಯಲ್ಲಿ ಮುಂದಕ್ಕೆ ಚಾಚಿಕೊಂಡು ನೆಟ್ಟಗೆ ನಿಂತಿರುವ ಕಿಟಕಿ.

Dormeúse ಡಾರ್'ಮಸ್ (ನಾ.) ನಿದ್ದೆಮಾಡಲು ಅನುಕೂಲವುಳ್ಳ ಪ್ರಯಾಣದ ಬಂಡಿ. ಒಂದು ಬಗೆಯ ಸುಪ್ಪತ್ತಿಗೆ, ಮೆತ್ತೆ.

Dórmitory ಡಾರ್ಮಿಟೊರಿ (ನಾ.) (ಅನೇಕ ಹಾಸಿಗೆಗಳನ್ನು ಹಾಕಿರುವ, ಕೆಲವು ವೇಳೆ ಸಣ್ಣ ಸಣ್ಣ ಕೋಣೆಗಳಾಗಿ ವಿಭಾಗಿಸಿರುವ) ಮಲಗುವ ಶಾಲೆ; ನಿದ್ರಾ ಶಾಲೆ. (ಪಟ್ಟಣಿಗರ ವಾಸದ ಮನೆಗಳಿರುವ) ಹಳ್ಳಿಯ ಪ್ರಾಂತ ಅಥವಾ ಉಪನಗರದ ಭಾಗ.

Dórmouse ಡಾರ್'ಮೌಸ್ (ನಾ.; ಬ. ವ. -mice -ಮೈಸ್) ಇಲಿಗೂ ಅಳಿಲಿಗೂ ಮಧ್ಯಸ್ಥವಾಗಿರುವ, ಹಿಮಂತ ಋತುವಿನಲ್ಲಿ ಸಂತತವಾಗಿ ನಿದ್ದೆಹೋಗುವ, ಪದಾರ್ಥಗಳನ್ನು ಅಗಿದು ಪುಡಿಪುಡಿ ಮಾಡುವ ಹಲ್ಲುಗಳುಳ್ಳ, ಒಂದು ಸಣ್ಣ ಪ್ರಾಣಿ: ಅಳಿಲಿಲಿ.

Dórothy bag ಡಾರೊತಿ ಬ್ಯಾಗ್ (ನಾ.) ಮಣಿಕಟ್ಟಿಗೆ ಕುಣಿಕೆಗಳಿಂದ ತೂಗಹಾಕಿಕೊಳ್ಳುವ, ಮೇಲ್ಮುಚ್ಚಳವಿಲ್ಲದ, ಹೆಂಗಸಿನ ಕೈಚೀಲ.

Dórsal ಡಾರ್ಸಲ್ (ಗು.) (ಅಂ. ರ. ಶಾ., ಪ್ರಾ. ವಿ., ಸ. ವಿ.) ಬೆನ್ನಿನ; ಬೆನ್ನ ಮೇಲಿನ; ಬೆನ್ನ ಬಳಿಯ. ಬೆನ್ನುದಿಬ್ಬಸಾಲಿನ ಆಕಾರದ. **Dórsally** (ಕ್ರಿ. ವಿ.)

Dors(o)- ಡಾರ್ಸ್—, ಡಾರ್ಸೊ— (ಸ. ಪೂ. ಪ.) ಬೆನ್ನು ಮತ್ತು—. **Dorsabdóminal** ಡಾರ್ಸ್‌ಆ್ಯಬ್ಡಾಮಿನಲ್ (ಗು.) ಬೆನ್ನು ಮತ್ತು ಹೊಟ್ಟೆಯ. **Dorsoláteral** ಡಾರ್ಸೊಲ್ಯಾಟೆರಲ್ (ಗು.) ಬೆನ್ನು ಮತ್ತು ಪಕ್ಕೆಗಳ.

Dórtour, -ter ಡಾರ್ಟರ್ (ನಾ.) (ಚರಿತ್ರೆ) (ಮು., ಸಂನ್ಯಾಸಿ ಮಠದ) ಮಲಗುವ ಕೋಣೆ; ಅನೇಕ ಮಂದಿ ಮಲಗುವ ಕೋಣೆ.

Dose ಡೋಸ್ (ನಾ., ಕ್ರಿ. ಸಕ.) ಒಂದು ಸಾರಿ ತೆಗೆದುಕೊಳ್ಳುವ ಔಷಧ; ಸಾರಿ. (ರೂಪ.) (ಹೊಗಳಿಕೆ, ದಂಡನೆ, ಮೊ. ಗಳಲ್ಲಿ) ಒಂದು ಸಲದ್ದು. (ಕ್ರಿ.) (ಒಬ್ಬನಿಗೆ) ಔಷಧ ಕೊಡು; ಭೇದಿಗೆ ಕೊಡು. ಬೆರಕೆ ಮಾಡು, ಬೆರಸು (ಮು., ದ್ರಾಕ್ಷಾಮದ್ಯವನ್ನು ಮದ್ಯಸಾರದೊಡನೆ). **Dósage** ಡೋಸೆ(ಸಿ)ಜ್ (ನಾ.) ಔಷಧವನ್ನು ಗೊತ್ತಾದ ಪರಿಮಾಣದಲ್ಲಿ ಕೊಡುವುದು; ಒಂದು ಸಲದ ಔಷಧದ ಪರಿಮಾಣ.

Doss ಡಾಸ್ (ನಾ., ಕ್ರಿ. ಅಕ.) (ಅಸಂ.) ಹಾಸಿಗೆ (ಮು., ಸಾಮಾನ್ಯದ ತಂಗುಮನೆಯದು). ನಿದ್ದೆ. (D. house ಸಾಮಾನ್ಯದ ತಂಗುಮನೆ). (ಕ್ರಿ.) ತಂಗುಮನೆಯಲ್ಲಿ ಮಲಗು. **Dósser** (ನಾ.) ಸಾಮಾನ್ಯದ ತಂಗುಮನೆಗೆ ಆಗಾಗ ಹೋಗುವವನು.

Dóssal ಡಾಸಲ್, **-el** ಡಾಸೆಲ್ (ನಾ.) (ಕ್ರೈಸ್ತದೇವಾಲಯದ) ಬಲಿಪೀಠದ ಹಿಂದೆ ಅಥವಾ 'ಚಾನ್ಸೆಲ್' ಎಂಬ ಭಾಗದ ಸುತ್ತಲೂ ಇಳಿಯಬಿಟ್ಟಿರುವ ಅಲಂಕಾರದ ತೆರೆ.

Dóssier ಡಾಸಿಯರ್, ಡಾಸ್ಯೇ (ನಾ.) ಕಾಗದಪತ್ರಗಳ, ದಸ್ತೈವಜುಗಳ, ಕಟ್ಟು (ಮು., ಒಬ್ಬನ ಪೂರ್ವೋತ್ತರಗಳನ್ನು ಕುರಿತದ್ದು)

Dóssy ಡಾಸಿ (ಗು.) (ಅಸಂ.) ಚಟುವಟಿಕೆಯಾದ; ಅಂದವಾದ; ಠೀಕಾದ.

Dost. **Do** ನೋಡಿ.

Dot ಡಾಟ್ (ನಾ., ಕ್ರಿ. ಸಕ.) ಸಣ್ಣ ಚುಕ್ಕೆ; ಚುಕ್ಕೆ; ಬಿಂದು; (ಇಂಗ್ಲಿಷ್ ಅಕ್ಷರ ಲೇಖನದಲ್ಲಿ) i ಮತ್ತು j ಅಕ್ಷರಗಳ ಮೇಲಿಡುವ ಚುಕ್ಕೆ. ಪದದ ಉಚ್ಚಾರಣೆ ತೋರಿಸುವುದಕ್ಕಾಗಿ ಉಪಯೋಗಿಸುವ ಗುರುತು. (ಸಂ. ಲೇಖನದಲ್ಲಿ) ಸ್ವರ ಲಕ್ಷಣಗಳನ್ನು ತೋರಿಸುವುದಕ್ಕಾಗಿ ಹಾಕುವ ಚುಕ್ಕೆ. ಸಣ್ಣ ಮಗು. ಪುಟ್ಟ ವಸ್ತು; ಅತ್ಯಲ್ಪವಾದದ್ದು; ಲವ; ಲೇಶ. [**D.-&-dash** (ಗು.) (ಮಾರ್ಸ್ ಎಂಬ ವೈಜ್ಞಾನಿಕನ ದೂರಲೇಖನದಲ್ಲಿಯಂತೆ) ಚುಕ್ಕೆಗಳಿಂದಲೂ ಸಣ್ಣ ಗೀಟುಗಳಿಂದಲೂ ರಚಿಸಿದ. **D.-wheel** ಚುಕ್ಕೆಗಳ ಸಾಲನ್ನೆಳೆಯುವ ಚಕ್ರ]. (ಕ್ರಿ.) ಚುಕ್ಕೆ ಹಾಕು; ಚುಕ್ಕೆಗಳಿಂದ ಗುರುತುಮಾಡು (Dot the i's and cross the t's ವಿವರಗಳನ್ನು ಭರ್ತಿಮಾಡು; ಅರ್ಥವನ್ನು ಸ್ಪಷ್ಟಪಡಿಸು). ಚುಕ್ಕೆಗಳಿಟ್ಟಂತೆ ಬಗೆಬಗೆಯಾಗಿ ಹರಡು (Sea dotted with ships ಹಡಗುಗಳು ಅಲ್ಲಲ್ಲಿ ಚುಕ್ಕೆಗಳಂತೆ ಹರಡಿರುವ ಸಮುದ್ರ). ಚುಕ್ಕೆ ಹೊಯ್ದಂತೆ ಚೆಲ್ಲು, ಹರಡು (*About, all over*, ಇವುಗಳೊಡನೆ). D and carry(one) ಕೂಡುವ ಲೆಕ್ಕದಲ್ಲಿ ಮುಂದಿನ ಸಾಲಿಗೆ ಅಂಕಿಯನ್ನು ಸೇರಿಸಲು ನೆನಪಿರುವುದಕ್ಕಾಗಿ ಮಕ್ಕಳು ಹೇಳಿಕೊಳ್ಳುವ ಸೂತ್ರ [ಚುಕ್ಕೆಹಾಕಿ ಮುಂದಕ್ಕೆ(ಒಂದನ್ನು) ತೆಗೆದುಕೊ]. Dot and go one (ನಾ., ಗು., ಕ್ರಿ., ಕ್ರಿ. ವಿ.) ಕುಂಟಡಿ(ಯಿಡು); — ವವನು; ಕುಂಟು ನಡಗೆಯ; ಕುಂಟು ನಡಗೆಯಲ್ಲಿ. **Dótty** ಡಾಟಿ (ಗು.) ಸುತ್ತಲೂ ಅಲ್ಲಲ್ಲಿ ನಿಂತಿರುವ; ಅಲ್ಲಲ್ಲಿ ಇರುವ. ಚುಕ್ಕೆ ಚುಕ್ಕೆಯಾದ. (ಬಳ. ಪೂ.) ಅದಿರು ನಡಗೆಯ (Dotty on his legs); ಮಂಕು ಬುದ್ಧಿಯ; ಅರುಳು ಮರುಳಾದ; ಅರೆ ಮರುಳಾದ.

Dote, Doat ಡೋಟ್ (ಕ್ರಿ. ಅಕ.) ಅವಿವೇಕಿಯಾಗಿರು; ಅರುಳು ಮರುಳಾಗು (ಮು., ಮುಪ್ಪಿನಿಂದ); ಮೋಹದಿಂದ ಮರುಳಾಗು; ಹುಚ್ಚು ಹಿಡಿದಂತಾಗು; ಬುದ್ಧಿಗೆಟ್ಟುಹೋಗು; ಭ್ರಾಂತನಾಗು. (ಒಬ್ಬನ, ಒಂದರ, ಮೇಲೆ) ಅತಿ ಪ್ರೀತಿ ತೋರಿಸು; ಮೋಹಿತನಾಗು; ಭ್ರಾಂತಿಯಿರು. **Dótard** ಡೋಟರ್ಡ್ (ನಾ.) (ಮುಪ್ಪಿನಿಂದ) ಅರುಳು ಮರುಳಾದವನು. **Dótage** ಡೋಟಿಜ್ (ನಾ.) ಅರುಳು ಮರುಳು. **Dótingly** (ಕ್ರಿ. ವಿ.)

Doth. **Do** ನೋಡಿ.

Dóttle, Dottel ಡಾಟ್ಲ್ (ನಾ.) ಹೊಗೆಸೇದಿದಮೇಲೆ ಚುಂಗಾಣಿಯಲ್ಲಿ ಸುಡದೆ ಉಳಿದಿರುವ ಹೊಗೆಸೊಪ್ಪಿನ ಗಟ್ಟಿ, ಅಡಚು.

Douáne ಡೂಆನ್, **Douane** ಡ್ವಾನ್ (ನಾ.) ಸುಂಕದ ಕಟ್ಟೆ, ಮನೆ.

Doúble ಡಬ್ಲ್ (ಗು., ಕ್ರಿ. ವಿ., ನಾ., ಕ್ರಿ.)

೧. (ಗು., ಕ್ರಿ. ವಿ.) ಎರಡಿರುವ; ಎರಡು; ಜೋಡಿ; ಜೊತೆಯ; ದ್ವಯ; ದ್ವಂದ್ವ; ಯುಗ್ಮ; ಯುಗಳ; ಇಮ್ಮಡಿ; ದ್ವಿಗುಣ; ಎರಡರಷ್ಟು. ಮುದುರಿದ; ಮಡಿಚಿದ; ಬಾಗಿದ; ಬಗ್ಗಿಹೋದ. ಹೆಚ್ಚಿದ, ದ್ವಿಗುಣಿತ — ದಳದ. ಉಭಯ ಸಂಬಂಧವುಳ್ಳ; ಉಭಯ; ಇಬ್ಬಗೆಯ; ಸಂದಿಗ್ಧವಾದ (D. meaning). (ಸಂ.) ಒಂದು ಅಷ್ಟಕ ತಗ್ಗಿದ. ಮೋಸದ; ವಂಚನೆಯ; ಕಪಟದ. D. as bright ಎರಡರಷ್ಟು ಹೊಳಪಾಗಿ. See d. ಒಂದೇ ವಸ್ತು ಎರಡಾಗಿ ಕಾಣು (ಮು., ಕುಡುಕನ ವಿಷಯದಲ್ಲಿ). Ride d. ಕುದುರೆಯ ಮೇಲೆ ಅಥವಾ ಕಾಲ್ಬಂಡಿಯ ಮೇಲೆ ಇಬ್ಬರು ಒಟ್ಟಿಗೆ ಸವಾರಿಮಾಡು; ಜೋಡು ಸವಾರಿ ಮಾಡು. Sleep d. ಒಂದೇ ಹಾಸಿಗೆಯಲ್ಲಿ ಇಬ್ಬರು ಮಲಗು; ಜೋಡಿಯಾಗಿ ಮಲಗು. Work d. tides ಎರಡು ಸರದಿಯೂ, ಹೊತ್ತೂ, ಕೆಲಸಮಾಡು; ದ್ವಿಗುಣವಾಗಿ, ಶಕ್ತಿಮೀರಿ, ಕೆಲಸಮಾಡು.

CC-0. In Public Domain. Gurukul Kangri Collection, Haridwar

D.-acting ಎರಡು ವಿಧಗಳಲ್ಲಿ ಅಥವಾ ಎರಡು ದಿಕ್ಕುಗಳಲ್ಲಿ ನಡೆಯುವ (ಮು., ಆವಿಯು ಆಡುಬೆಣೆಯ ಎರಡು ಪಕ್ಕಗಳಲ್ಲಿಯೂ ಕೆಲಸ ಮಾಡುವ ಆವಿಎಂಜಿನಿನ ವಿಷಯದಲ್ಲಿ). **D. axe** ಇಬ್ಬಾಯ ಕೊಡಲಿ. **D.-barrel** ಜೋಡು ನಾಳಿಯ (ಬಂದೂಕು). **D.-barrelled** ಜೋಡು ನಾಳಿಯ. (ರೂಪ.) ಶ್ಲಾಘನೆ, ಮೊ. ಗಳಲ್ಲಿ ದ್ವಂದ್ವಾರ್ಥವುಳ್ಳ ; ಉಭಯಾರ್ಥಕ. ದ್ವಂದ್ವ ಉಪನಾಮವುಳ್ಳ. **D.-bass** ಅತಿ ಮಂದ್ರ ಸ್ವರ ಕೊಡುವ ಪಿಟೀಲಿನಂಥ ವಾದ್ಯವಿಶೇಷ. **D.-bedded** ಎರಡು ಹಾಸಿಗೆಗಳುಳ್ಳ ; ಜೋಡು ಹಾಸಿಗೆಯ. **D.-breasted** (ಅಂಗಿಯ ವಿಷಯದಲ್ಲಿ) ಯಾವ ಪಕ್ಕದಲ್ಲಾಗಲಿ ಗುಂಡಿ ಹಾಕುವಂತಿರುವ. **D. chin** (ಗಲ್ಲದ ಕೆಳಗೆ ಮತ್ತೊಂದು ಗಲ್ಲದಂತೆ ಕಾಣುವ) ಗಲ್ಲದ ಮಡಿಕೆ ; ಜೋಡಿ ಗಲ್ಲ. **D.-dealer** ಮೋಸಗಾರ ; ವಂಚಕ. **D.-dealing** (ನಾ., ಗು.) ಮೋಸ (ಮಾಡುವುದು) ; ವಂಚಿಸುವುದು ; ಮೋಸಗಾರಿಕೆ ; ವಂಚನೆ. **D.-dyed** (ಸಾ., ರೂಪ. ದಲ್ಲಿ) ಪಾಪದಲ್ಲಿ ಮುಳುಗಿದ ; ಅತಿ ಪಾಪ ಕಲುಷಿತ (D.-d. scoundrel ಪರಮ ಪಾಪಿ). **D. eagle** ಇತ್ತಲೆಯ ಹದ್ದು ; ಗಂಡಭೇರುಂಡ. **D.-edged** ಎರಡು (ಕತ್ತರಿಸುವ) ಏಣುಗಳುಳ್ಳ ; ಇಬ್ಬಾಯಿಯ. (ರೂಪ.) (ವಾದ, ಚುಚ್ಚುಮಾತು, ಮೊ. ಗಳಲ್ಲಿ) ಪರವಾಗಿಯೂ ವಿರುದ್ಧವಾಗಿಯೂ ಕೂಡ ಇರುವ ; ಎರಡು ಕಡೆಗೂ ತಟ್ಟುವ. **D. entendre** (F) ಡೂಬ್‌ಲ್ ಆಂಟಾಂಡ್ರ್ (ನಾ.) ಸಂದಿಗ್ಧಾರ್ಥವುಳ್ಳ ನುಡಿ, ಹೇಳಿಕೆ ; ಎರಡರ್ಥವಾಗುವ ವಾಕ್ಯ (ಒಂದು ಸಾ., ಅಶ್ಲೀಲ) ; ದ್ವಂದ್ವಾರ್ಥಕ (ವಾಕ್ಯ) ; ಶ್ಲೇಷೋಕ್ತಿ ; ದ್ವಂದ್ವಾರ್ಥ ವಾಕ್ಯಪ್ರಯೋಗ ; ಶ್ಲೇಷ ಪ್ರಯೋಗ. **D. entry** ಎರಡು ಸಲ ನಮೂದು ; ಎರಡುಸಲ ಬರೆಯುವುದು. **D.-faced** ಕೃತ್ರಿಮವುಳ್ಳ ; ಕಪಟಿಯಾದ ; ಋಜುವಲ್ಲದ. **D. first** (ವಿಶ್ವ ವಿದ್ಯಾನಿಲಯದ) ಎರಡು ಪರೀಕ್ಷಾ ಭಾಗಗಳಲ್ಲಿ ಪ್ರಥಮ ತರಗತಿಯ ಪ್ರಶಸ್ತಿ ಪಡೆದವನು. **D.-ganger** ಒಬ್ಬನು ಸಾಯುವುದಕ್ಕೆ ಸ್ವಲ್ಪ ಮೊದಲು, ಅಥವಾ ಸತ್ತ ಸ್ವಲ್ಪ ಹೊತ್ತಿನೊಳಗಾಗಿ, ಅವನಂತೆಯೇ ಕಾಣುವುದೆಂದು ಕೆಲವರು ಭಾವಿಸುವ ಪ್ರೇತ. **D. harness** (ರೂಪ.) ಮದುವೆ ; ದಾಂಪತ್ಯ. **D.-headed** (ಗು.) ಇತ್ತಲೆಯ. **D.-leaded** (ಮುದ್ರಣದಲ್ಲಿ) ಗಮನ ಸೆಳೆಯುವುದಕ್ಕಾಗಿ ಪಂಕ್ತಿ ಪಂಕ್ತಿಗೂ ಮಧ್ಯೆ ಎರಡರಷ್ಟು ಸ್ಥಳ ಬಿಟ್ಟ. **D.-lock** (ಕ್ರಿ. ಸಕ.) (ಕೆಲವು ಬೀಗಗಳಲ್ಲಿ) ಬೀಗದ ಕೈಯನ್ನು ಎರಡು ಸಲ ತಿರುಗಿಸು. **D.-quick** (=D. time) (ಕ್ರಿ. ವಿ.) ಬಹು ಬೇಗನೆ ; ಅತಿ ತ್ವರಿತವಾಗಿ. **D.-refine** ಎರಡು ಸಲ ಶೋಧಿಸು, ಸೋಸು. **D. star** (ಒಂದೇ ನಕ್ಷತ್ರದಂತೆ ಕಣ್ಣಿಗೆ ಕಾಣುವ ಬಹಳ ಹತ್ತಿರ ಹತ್ತಿರವಿರುವ ಎರಡು ಪ್ರತ್ಯೇಕ ನಕ್ಷತ್ರಗಳು) : ಜೋಡಿ ನಕ್ಷತ್ರ. **D. time** (D. quick time) ನಿಯಮಬದ್ಧವಾದ ಓಡುನಡಗೆ

೨. (ನಾ., ಕ್ರಿ.) ಎರಡರಷ್ಟು, ಇಮ್ಮಡಿ (ಪ್ರಮಾಣ ಅಥವಾ ಸಂಖ್ಯೆ). (D. or quits ಸೋತವನು ತಾನು ಸೋತ ಎರಡರಷ್ಟು, ತನ್ನ ಸಾಲದ ಎರಡರಷ್ಟು, ಕೊಡಬೇಕೆ ಅಥವಾ ಏನೂ ಕೊಡಬೇಕಾದುದಿಲ್ಲವೆ ಎಂಬುದನ್ನು ಗೊತ್ತುಮಾಡಲು ಆಡುವ ಆಟ, ಎಸೆಯುವ ಎಸೆತ). (ಒಂದು ವಸ್ತುವಿನ ಅಥವಾ ವ್ಯಕ್ತಿಯ) ಪ್ರತಿಕೃತಿ, ಪ್ರತಿರೂಪ, ಪ್ರತಿಬಿಂಬ ; ನಕಲು ; ಪ್ರತಿ ; ಪಡಿಯಚ್ಚು. ಸಾಯುತ್ತಿರುವವನ ಅಥವಾ ಆಗತಾನೆ ಸತ್ತವನ ಪ್ರತಿಬಿಂಬ, ಪ್ರೇತ. (ಸೈನಿಕ) (At the d. ಓಡುತ್ತ ; ಓಟದಲ್ಲಿ). (ಟೆನಿಸ್ ಆಟ) ಎರಡು ಜೋಡಿಗಳ ಆಟ. ($\frac{1}{8}$ ಪೆನಿ ಬೆಲೆಯ) ಒಂದು ತಾಮ್ರದ ನಾಣ್ಯ. (ಬೇಟೆಯ ಮೃಗದ ಅಥವಾ ನದಿಯ) ಥಟ್ಟನೆಯ ತಿರುವು, ಮುರಿವು. ಯುಕ್ತಿ ; ಉಪಾಯ; ತಂತ್ರ. (ಕ್ರಿ.) ಎರಡರಷ್ಟು ಮಾಡು ; ಹೆಚ್ಚಿಸು ; ಇಮ್ಮಡಿಸು ; ದ್ವಿಗುಣಿಸು ; ಎರಡರಿಂದ ಗುಣಿಸು ; ಎರಡರಷ್ಟಾಗು. (ಸಂ.) ಮೇಲಿನ ಅಥವಾ ಕೆಳಗಿನ ಅಷ್ಟಕದ ಅದೇ ಸ್ವರವನ್ನು ಸೇರಿಸು. [(ನಟ) D. part(s) (ಒಂದೇ ನಾಟಕದಲ್ಲಿ) ಎರಡು ಪಾತ್ರಗಳನ್ನು ಅಭಿನಯಿಸು ; ಎರಡು ವೇಷ ಹಾಕು]. (ಸೈನಿಕ) ಎರಡರಷ್ಟು ವೇಗದಿಂದ ಓಡು. (ಪ್ರಯಾಣಿಕ, ಮೊ. ನ್ನು) ಮತ್ತೊಬ್ಬನೊಡನೆ ಒಂದೇ ಬಿಡಾರದಲ್ಲಿ ಸೇರಿಸು ; ಇಬ್ಬರನ್ನು ಒಂದೇ ಕಡೆ ಹಾಕು (Also, D. up). (ಕಾಗದ, ಬಟ್ಟೆ, ಮೊ. ನ್ನು) ಮಡಿಸು ; ಮಡಿಚಿಕೊ (ಸಾ., *up* ಉಪ. ದೊಡನೆ). [D. up ಬಗ್ಗಿ ಹೋಗು ; (ಮೈ) ಮುದುರಿಕೊ ; ಏಟುಕೊಟ್ಟು (ಒಬ್ಬನನ್ನು) ಬಗ್ಗಿಕೊಳ್ಳುವಂತೆ, ಮುದುರಿಕೊಳ್ಳುವಂತೆ, ಮಾಡು. (ಕಾಗದ, ಎಲೆ, ಮೊ.) ಮಡಿಸಿಕೊ, ಮುದುರಿಕೊ]. ಮುಷ್ಟಿ ಹಿಡಿ. (ಬಿಲಿಯರ್ಡ್ಸ್ ಆಟ) ಪುಟವೇಳು, ಪುಟವೆಬ್ಬಿಸು. (ನಾವೆ) (ಭೂಶಿರವನ್ನು) ಬಳಸು. ಓಟದಲ್ಲಿ ಥಟ್ಟನೆ, ಫಕ್ಕನೆ, ತಿರುಗು ; ವಕ್ರ ವಕ್ರವಾಗಿ ಓಡು ; ಹಿಂದಕ್ಕೂ ಮುಂದಕ್ಕೂ ಓಡಾಡು. **Doúbleness** (ನಾ.) ; **Doúbly** (ಕ್ರಿ. ವಿ.) ; **Doúblet** ಡಬ್ಲೆಟ್ (ನಾ.) (ಚರಿತ್ರೆ) ಗಂಡಸರು ತೊಡುವ, ತೋಳುಳ್ಳ ಅಥವಾ ತೋಳಿಲ್ಲದ, ಸೊಂಟದಿಂದ ಹೆಚ್ಚಾಗಿ ಕೆಳಕ್ಕಿಳಿಯದ, ಅಂಗಿ. (D. and hose ಗಂಡಸಿನ ಉಡಿಗೆ ತೊಡಿಗೆ ; ಗಂಡುಡುಪು ; ಮೇಲಂಗಿಯಿಲ್ಲದ ಹಗುರವಾದ ಉಡುಪು). ಜೊತೆಯಲ್ಲಿಯ ಒಂದು ; (ಒಂದರ) ಜೋಡಿ (ಮು., ಒಂದೇ ವ್ಯುತ್ಪತ್ತಿಯುಳ್ಳ, ಆದರೆ ಅರ್ಥಭೇದವುಳ್ಳ, ಎರಡು ಪದಗಳಲ್ಲೊಂದು (ಉದಾ., ಪಡೆ, ಹಡೆ ; ನೆಲ, ನೆಲೆ). (ಬ. ವ. ದಲ್ಲಿ) ಒಂದೇ ಸಲ ಹಾಕಿದ ಎರಡು ದಾಳಗಳ ಮೇಲೂ ತೋರುವ ಒಂದೇ ಸಂಖ್ಯೆ : ಸಮ ಗರ. ದ್ವಿನಾಳಿ ಬಂದೂಕಿನಿಂದ ಒಂದೇ ಸಲ ಕೊಂದ ಎರಡು ಹಕ್ಕಿಗಳು. (ಸೂಕ್ಷ್ಮದರ್ಶಕ, ಮೊ.) ಎರಡು ಸರಳ ಲೆನ್ಸುಗಳು ಸೇರಿದ ಜೋಡಿ : ಲೆನ್ಸುಜೋಡಿ.

Doúble enténdre, Doúblet. **Double** ನೋಡಿ.

Doubloón ಡಬ್ಲೂನ್ (ನಾ.) ಸ್ಪೆಯಿನ್ ದೇಶದ ಒಂದು ಚಿನ್ನದ ನಾಣ್ಯ (ಹಿಂದೆ ೩೩ ರಿಂದ ೩೬ ಷಿಲಿಂಗು ಬೆಲೆಯಿದ್ದದ್ದು ; ಈಗ ಒಂದು ಪೌಂಡಿಗೆ ಸ್ವಲ್ಪ ಹೆಚ್ಚಾದ ಬೆಲೆಯುಳ್ಳದ್ದು)

Doublúre (F) ಡೂಬ್ಲೂರ್ (ನಾ.) (ಪುಸ್ತಕದ ರಟ್ಟಿನ ಒಳಮೈಯಲ್ಲಿ ಹಾಕಿರುವ, ಸಾ., ತೊಗಲಿನ, ಚಿತ್ರ ರೇಖನದ) ಅಸ್ತರಿ.

Doubt ಡೌಟ್ (ನಾ., ಕ್ರಿ) ಸಂದೇಹ ; ಸಂಶಯ ; (ಒಂದು ವಿಷಯವಾಗಿ) ನಿಶ್ಚಯ, ನಂಬಿಕೆ, ಇಲ್ಲದಿರುವುದು; ಅಪನಂಬಿಕೆ ; ಅಳುಕು ; ಅನಿಶ್ಚಯ ; ಅನಿಶ್ಚಿತ ಬುದ್ಧಿ (*Of, about* ಉಪ. ದೊಡನೆ) ; ಸಂದಿಗ್ಧ ಸ್ಥಿತಿ ; ಸ್ಪಷ್ಟವಾದ, ಸಂಪೂರ್ಣವಾದ, ಋಜುವಾತು ಇಲ್ಲದಿರುವುದು [Give one the benefit of the d. (Benefit ನೋಡಿ). Make no d. ಸ್ವಲ್ಪವೂ ಸಂದೇಹಪಡದಿರು. No d. ಸಂದೇಹವಿಲ್ಲದೆ ; ಖಂಡಿತವಾಗಿ ; ನಿಸ್ಸಂದೇಹವಾಗಿ ; ಎಲ್ಲರೂ ತಿಳಿದಂತೆ. Without d. ಖಂಡಿತವಾಗಿ ; ನಿಶ್ಚಯವಾಗಿ]. (ಕ್ರಿ.) ಸಂದೇಹ, ಸಂಶಯ, ಪಡು ; ಹಿಂದುಮುಂದು ನೋಡು ; ಅನಿಶ್ಚಿತವಾಗಿರು ; ನಂಬದಿರು (I d. whether he will win ಅವನು ಜಯಶಾಲಿಯಾಗುವನೆಂದು ನಂಬಲಾರೆ. I never doubted of success ಜಯವಾಗುವುದರಲ್ಲಿ ನಾನೆಂದಿಗೂ ಸಂದೇಹಪಡಲಿಲ್ಲ). (ಪ್ರಾಚೀ. ಪ್ರ., ಪ್ರಾಂತ ಪ್ರಯೋಗ) ಭಯಪಡು ; ಹೆದರು ; ಶಂಕಿಸು ; (ಯೋಚನೆ) ತೋರು (I d. we are late ನಾವು ಹೊತ್ತು ಮೀರಿದೆವೆಂದು ತೋರುತ್ತದೆ ; ನಾವು ಹೊತ್ತುಮೀರಿರಬಹುದು). **Doúbtful** (ಗು.) (ಅರ್ಥ, ನಡತೆ, ನಿಜಾಂಶ, ಪರಿಣಾಮ — ಇವು) ಸಂದೇಹಾಸ್ಪದವಾದ ; ಅನಿಶ್ಚಿತವಾದ (D. Syllable, letter ಸಂದರ್ಭಾನುಸಾರವಾಗಿ ಹ್ರಸ್ವವಾಗಿಯೊ ದೀರ್ಘವಾಗಿಯೊ ಆಗುವ ಅಕ್ಷರ : ಸಂದಿಗ್ಧಾಕ್ಷರ). ಅಭಿಪ್ರಾಯ ನಿಷ್ಕೃಷ್ಟವಿಲ್ಲದ ; ಗೊತ್ತಿಲ್ಲದ ; ಖಂಡಿತವಿಲ್ಲದ ; ಹಿಂದುಮುಂದು ನೋಡುವ ; ಓಲಾಡುವ. **Doúbtfully** (ಕ್ರಿ. ವಿ.) ; **Doúbtfulness** (ನಾ.) ; **Doúbtless** (ಕ್ರಿ. ವಿ.) ಖಂಡಿತವಾಗಿ ; ನಿಸ್ಸಂದೇಹವಾಗಿ ; ನಿಸ್ಸಂಶಯವಾಗಿ.

Douce ಡೂಸ್ (ಗು.) ಸ್ತಿಮಿತ ; ಶಾಂತ ; ಮೃದು ; (ಮನಸ್ಸು) ಕಲಕದ.

Douceúr (F) ಡೂಸರ್ (ನಾ.) ಇನಾಮು ; ಬಹುಮಾನ ; ಲಂಚ.

Douche ಡೂಷ್ (ನಾ., ಕ್ರಿ.) ದೇಹದ ಒಳಭಾಗವನ್ನಾಗಲಿ ಹೊರಭಾಗವನ್ನಾಗಲಿ ತೊಳೆಯುವುದಕ್ಕೂ ಚಿಕಿತ್ಸಾ ಕಾರ್ಯಕ್ಕೂ ಚಿಮ್ಮುವ ನೀರಿನ ಧಾರೆ ; ನೀರು ಚಿಮ್ಮು ; ಚಿಮ್ಮುತೊಳೆತ ; —ದ ಸಾಧನ. (ಅಂತರ್) ಮಾರ್ಜಕ. (ಕ್ರಿ.) ಚಿಮ್ಮುನೀರಿನಿಂದ ತೊಳೆ, ತೊಳೆದುಕೊ.

Dough ಡೋ (ನಾ.) ನಾದಿದ ಹಿಟ್ಟು ; ಹುದುಗು ಹಿಟ್ಟು ; ರೊಟ್ಟಿಯ ಕಣಕ ; ಕಣಕದಂಥ ಪದಾರ್ಥ. (ಅಸಂ.) ಹಣ. D.-boy ಬೇಯಿ

Digitized by Arya Samaj Foundation Chennai and eGangotri

ಸಿದ ಹಿಟ್ಟಿನ ಮುದ್ದೆಭಕ್ಷ್ಯ, ಕಡುಬು. (ಅಸಂ.) ಅಮೆ. ಸಂ. ಗಳ ಪದಾತಿ ದಳದ ಪ್ಯಾದೆ. **Dóughnut** (ನಾ.) ಕಜ್ಜಾಯ; ಎರೆಯಪ್ಪ. **Dóughy** ಡೋಇ (ಗು.); **Dóughiness** (ನಾ.)

Doúghty ಡೌಟಿ (ಗು.) (ಪ್ರಾಚೀ. ಪ್ರ., ಹಾಸ್ಯ ಪ್ರಯೋಗ) ಸಾಹಸಿ; ಶೂರ; ಧೀರ; ವೀರ; ಪರಾಕ್ರಮಿ; ಬಲಿಷ್ಠ; ಅದ್ಭುತ ಪರಾಕ್ರಮದ. **Doúghtily** (ಕ್ರಿ. ವಿ.); **Doúghtiness** (ನಾ.)

Dour ಡೂರ್ (ಗು.) ಕಠಿನ; ನಿಷ್ಠುರ; ಹಠದ. **Doúrly** (ಕ್ರಿ. ವಿ.); **Doúrness** (ನಾ.)

Douse, Dowse ಡೌಸ್ (ಕ್ರಿ. ಸಕ.) (ನಾವೆ) (ಪಟ) ಇಳಿಸು; (ಹಡಗಿನ ಗವಾಕ್ಷಿಗಳನ್ನು) ಮುಚ್ಚು; (ಬೆಳಕನ್ನು) ನಂದಿಸು; (ದೀಪವನ್ನು) ಆರಿಸು [D. the glim (ಅಸಂ.) ದೀಪ ಆರಿಸು]. (ಒಬ್ಬನ ಮೇಲೆ) ನೀರೆರಚು, ನೀರು ಸುರಿ.

Dove ಡವ್ (ನಾ.) ಪಾರಿವಾಳ; ಕಪೋತ. (ಕ್ರೈಸ್ತ) ಪರಿಶುದ್ಧಾತ್ಮ. ಸರಳತೆಯ ಅಥವಾ ನಿಷ್ಕಳಂಕ ಮನಸ್ಸಿನ ಆದರ್ಶ (D.-eyed ಶಾಂತ, ನಿಷ್ಕಳಂಕ, ದೃಷ್ಟಿಯ). ಶುಭ ವರ್ತಮಾನ, ಶಾಂತಿ, ತರುವವನು. ಮುದ್ದು; ಪ್ರಿಯ (ಮು., My d.). D.-colour(ed) ಉಜ್ಜ್ವಲ ಬೂದು ಬಣ್ಣ(ದ). D.'s-foot ಸಸ್ಯವಿಶೇಷ. D.-hawk ಪಾರಿವಾಳದ ಬಣ್ಣದ ಗಿಡುಗ, ಡೇಗೆ. D.-cot(e) ಪಾರಿವಾಳದ ಮನೆ, ಗೂಡು (Flutter the dove-cotes ಶಾಂತರನ್ನು ಗಾಬರಿಪಡಿಸು). **Dóvelike** (ಗು.)

Dóver's Powder ಡೋವರ್ಸ್ ಪೌಡರ್ (ನಾ.) ಬೆವರು ಹುಟ್ಟಿಸುವ ಒಂದು ಶಮನಕಾರಿ ಔಷಧ. (Dover ಎಂಬ ವೈದ್ಯನ ಹೆಸರಿನಿಂದ)

Dóvetail ಡವ್‌ಟೆಯ್‌ಲ್ (ನಾ., ಕ್ರಿ.) ಮರದ ಹಲಗೆ, ಮೊ. ನ್ನು ಒಂದನ್ನೊಂದಕ್ಕೆ ಜೋಡಿಸುವುದಕ್ಕಾಗಿ ಒಂದರ ಏಣಿನಲ್ಲಿ ಬೆಣೆಯಾಕಾರದ ಸಂದುಗಳನ್ನೂ ಮತ್ತೊಂದರ ಏಣಿನಲ್ಲಿ ಆ ಸಂದುಗಳಲ್ಲಿ ಸರಿಯಾಗಿ ಕೂಡುವಂತೆ (ಪಾರಿವಾಳದ ತೋಕೆಯ ಆಕಾರದ) ಕೂರುಗಳನ್ನೂ ಮಾಡಿ ಜೋಡಿಸು; ಹಲ್ಲುಗೂಡಿಸು; ಇಂಥ ಜೋಡಣೆ; ಕೂಲು (ಮಾಡಿ ಕೂಡಿಸು). (ರೂಪ.) ಒಟ್ಟಿಗೆ ಜೋಡಿಸು, ಕೂಡಿಸು, ಕೂಡು, ಸೇರು.

Dowager ಡೌಎಜರ್ (ನಾ.) ಸತ್ತುಹೋದ ಗಂಡನಿಂದ ಬಂದ ಆಸ್ತಿಯನ್ನೊ ಬಿರುದನ್ನೊ ಅನುಭವಿಸುತ್ತಿರುವ ವಿಧವೆ (ಬಹುಮಟ್ಟಿಗೆ, ಇತರ ಪದಗಳೊಡನೆ ಸೇರಿ ಬರುವುದು: ಉದಾ., Queen d.; D. duchess)

Dowdy ಡೌಡಿ (ನಾ., ಗು.) (ಉಡುಪು, ಮೊ. ಗಳ ವಿಷಯದಲ್ಲಿ) ಅಂದವಿಲ್ಲದ, ವಿಕಾರವಾದ, ಅವಲಕ್ಷಣದ, ನಾಜೂಕಿಲ್ಲದ, ಆಕರ್ಷಕವಲ್ಲದ, ಕಾಲರೀತಿಯನ್ನನುಸರಿಸದ. ಇಂಥ ಉಡುಪು ಹಾಕಿಕೊಂಡಿರುವ (ವಳು). **Dowdily** (ಕ್ರಿ. ವಿ.); **Dowdiness** (ನಾ.); **Dowdyism** (ನಾ.); **Dowdyish** (ಗು.)

Dowel ಡೌಎಲ್ (ನಾ., ಕ್ರಿ. ಸಕ.) ಮರ, ಕಲ್ಲು, ಮೊ. ಗಳ ತುಂಡುಗಳನ್ನು ಒಂದನ್ನೊಂದು ಅಗಲಹೋಗದಂತೆ ಕೂಡಿಸಿ ಭದ್ರಪಡಿಸುವುದಕ್ಕಾಗಿ ಉಪಯೋಗಿಸುವ ತಲೆಯಿಲ್ಲದ ಮರದ ಗೂಟ ಅಥವಾ ಲೋಹದ ಮೊಳೆ: ಒಳಮೊಳೆ; ಒಳಬೆಣೆ. (ಕ್ರಿ.) ಒಳಬೆಣೆ ಹಾಕು.

Dower ಡೌಅರ್ (ನಾ., ಕ್ರಿ. ಸಕ.) ವಿಧವೆಗೆ ಜೀವಾವಧಿ ನಡೆದು ಕೊಂಡುಬರುವ ಗಂಡನ ಆಸ್ತಿಯ ಪಾಲು: ವಿಧವಾಂಶ. ಹೆಂಡತಿ ಗಂಡನ ಮನೆಗೆ ತಂದ ಹಣ ಅಥವಾ ಆಸ್ತಿ; ಬಳಿವಳಿ. ಸಹಜವಾಗಿ ಬಂದ ಬುದ್ಧಿಸಂಪತ್ತು, ಸಾಮರ್ಥ್ಯ; ಪ್ರಕೃತಿ ದತ್ತವಾದದ್ದು. (ಕ್ರಿ.) ಬಳಿವಳಿ ಕೊಡು; ಸಹಜ ಸಾಮರ್ಥ್ಯ, ಬುದ್ಧಿ, ಮೊ. ನ್ನು ಅನುಗ್ರಹಿಸು. **Dowerless** (ಗು.); **Dowry** ಡೌ(ಅ)ರಿ (ನಾ.) ಬಳಿವಳಿ. ಸಹಜ ಸಾಮರ್ಥ್ಯ; ಪ್ರಕೃತಿದತ್ತವಾದದ್ದು.

Down[1] ಡೌನ್ (ನಾ.) ಬಯಲು ಮೇಡು; (ಬ. ವ. ದಲ್ಲಿ) ಮು., ದಕ್ಷಿಣ ಇಂಗ್ಲೆಂಡಿನಲ್ಲಿ ಹುಲ್ಲುಗಾವಲಾಗಿ ಉಪಯೋಗಿಸುವ, ಮರಗಳಿಲ್ಲದ, ಏರಿಳಿತದ, ಸೀಮೆಸುಣ್ಣಕಲ್ಲಿನ ಬೋರೆಯ ಪ್ರದೇಶ; ಹುಲ್ಲುಗಾವಲು ಬೋರೆ: = Dune. The Downs ಇಂಗ್ಲೆಂಡಿನಲ್ಲಿ North Downs ಎಂಬ ಪ್ರದೇಶದ ಎದುರಿಗಿರುವ ಸಮುದ್ರಭಾಗ. **Downy**[1] (ಗು.) ಬೋರೆಯ; ಬೋರೆಯಂಥ.

Down[2] ಡೌನ್ (ನಾ.) ಹಕ್ಕಿಯ ಎಳೆಮರಿಗಳ ಮೊದಮೊದಲಿನ ಮೈಹೊದಿಕೆ; (ಮೆತ್ತೆ, ಮೊ. ಗಳಲ್ಲಿ ತುಂಬುವ) ಹಕ್ಕಿಯ ತುಪ್ಪುಳು, ತೂಲಿಕೆ; ನವಿರಾದ, ಮೊಟಕಾದ, ಮೃದುಗೂದಲು (ಮು., ಮುಖದ ಮೇಲಿನ ಮೊದಲ ಕೂದಲು, ಮತ್ತು ಹಣ್ಣು, ಮೊ. ಗಳ ಮೇಲಿನದು); ಎಳೆಗೂದಲು. ತುಪ್ಪುಳಿನಂಥ ಪದಾರ್ಥ. **Downy**[2] (ಗು.) ತುಪ್ಪುಳಿನ; ತುಪ್ಪುಳಿನಂಥ; ತುಪ್ಪುಳು ತುಂಬಿದ. ಮೆತ್ತನೆಯ; ಮೃದುವಾದ. (ಅಸಂ.) ಪೂರ್ತಿ ಎಚ್ಚತ್ತಿರುವ; ಗುಟ್ಟು ತಿಳಿದಿರುವ. **Downily** (ಕ್ರಿ. ವಿ.); **Downiness** (ನಾ.)

Down[3] ಡೌನ್ (ಕ್ರಿ. ವಿ.) (Downmost ತಮ ಭಾವದ ಗು. ಅಥವಾ ಕ್ರಿ. ವಿ.)

೧. (ಚಲನೆಯ ವಿಷಯದಲ್ಲಿ) ಕೆಳಕ್ಕೆ; ಕೆಳಗೆ; ನೆಲಕ್ಕೆ. Come d. ಮಲಗುವ ಮನೆಯಿಂದ ಇಳಿದು ಹೊರಕ್ಕೆ ಬಾ. Knock d. ಕೆಳಕ್ಕೆ ತಳ್ಳು. Sun goes d. ಸೂರ್ಯ ಮುಳುಗುತ್ತಾನೆ. Ship goes d. ಹಡಗು ಮುಳುಗುತ್ತದೆ. Food goes d. ಆಹಾರ (ಗಂಟಲಲ್ಲಿ) ಇಳಿಯುತ್ತದೆ. Get d. ಇಳಿ. ನುಂಗು. Book, etc. goes d. ಪುಸ್ತಕ, ಮೊ. ದು ಅಂಗೀಕೃತವಾಗುತ್ತದೆ. Brought d. by river ನದಿಯ ಪ್ರವಾಹ ತಂದ. Money d., Pay d. ಕೈಮೇಲೆ ಹಣ ಕೊಡು; ಹಣ ಒಡನೆಯೇ ಕೊಟ್ಟುಬಿಡು. Take d. ಹೇಳಿದುದನ್ನು ಬರೆದುಕೊ. Put d. (ಕಾಗದದಮೇಲೆ) ಬರೆ. Bill d. for second reading today ಈ ದಿನ ಕಾನೂನಿನ ಮಸೂದೆ ಎರಡನೆಯ ಸಲ ಓದುವುದಕ್ಕೆ ಬರೆದು ಸಿದ್ಧವಾಗಿದೆ. Bear d. ಗಾಳಿಯ ದಿಕ್ಕಿನಲ್ಲಿ ಹಡಗು ನಡಸು. Hunt d., Ride d., Run d. (ಬೇಟೆಯಾಡಿ, ಸವಾರಿ ಮಾಡಿ, ಓಡಿ) (ಬೇಟೆ) ಮುಂದಕ್ಕೆ ಓಡಲಾರದಂತೆ ಕಂಗೆಡಿಸು. Run d. (Run ನೋಡಿ). Shout d., Hiss d. ಕೂಗಿ, ಹಿಸ್ಸೆಂದು ಶಬ್ದಮಾಡಿ, ಮಾತು ನಿಲ್ಲಿಸುವಂತೆ ಮಾಡು, ಬಾಯಿ ಮುಚ್ಚಿಸು. Go d. ವಿಶ್ವ ವಿದ್ಯಾನಿಲಯದಿಂದ ರಜ ಬಂದಾಗ ಅಥವಾ ವ್ಯಾಸಂಗ ಮುಗಿದಮೇಲೆ (ಊರಿಗೆ) ಹೋಗು. Send d. (ವಿಶ್ವವಿದ್ಯಾನಿಲಯದ ಶಿಕ್ಷೆಯಾಗಿ) ಕಳುಹಿಸಿಬಿಡು. Up and d. ಅಲ್ಲಿಂದಿಲ್ಲಿಗೆ. D. with the aristocrats! ಶ್ರೀಮಂತರನ್ನು ಮಟ್ಟಹಾಕು.

೨. (ಸ್ಥಳದ ವಿಷಯದಲ್ಲಿ) Blinds were d. (ಬಾಗಿಲ)ತೆರಗಳನ್ನು ಇಳಿಸಿದ್ದರು. He is not d. yet ಅವನು ಮಲಗುವ ಕೋಣೆಯಿಂದ ಇನ್ನೂ ಕೆಳಕ್ಕೆ ಬಂದಿಲ್ಲ. Hit man who is d. ಕೆಳಗೆ ಬಿದ್ದವನನ್ನು ಹೊಡೆ. Many down with fever ಅನೇಕರು ಜ್ವರದಿಂದ ಮಲಗಿರುತ್ತಾರೆ. D. in the mouth, D., D.-hearted ಎದೆಗುಂದಿದ; ನಿರುತ್ಸಾಹದಿಂದಿರುವ. Are we d.-hearted? (ಅಸಂ.) ನಾವು ಧೈರ್ಯಗುಂದಿಲ್ಲ. Bread is d. ರೊಟ್ಟಿಯ ಬೆಲೆ ಇಳಿದಿದೆ.

೩. (ಕ್ರಮ, ಕಾಲ, ಗುಣ — ಇವುಗಳ ವಿಷಯದಲ್ಲಿ) From King d. to cobbler ಅರಸನಿಂದ ಆಳಿನ ವರೆಗೆ; ದಿವಾನನಿಂದ ಜವಾನನ ವರೆಗೆ. Custom handed d. ಪರಂಪರೆಯಾಗಿ ಬಂದ ಸಂಪ್ರದಾಯ, ವಾಡಿಕೆ. Boil d. ದ್ರವದೊಡನೆ ಬೆರೆತುಹೋಗುವಂತೆ ಬೇಯಿಸು; ಸಾರವಿಳಿಸು. Grind d. ಹಿಟ್ಟಾಗುವಂತೆ (ಬೀಸುವ ಕಲ್ಲಿನಲ್ಲಿ) ಬೀಸು; ನುಣ್ಣಗೆ ಅರೆ. Wear d. ಉಜ್ಜಿಹೋಗು; ಸವೆದುಹೋಗು. Calm d. ಶಾಂತವಾಗು; ತಣ್ಣಗಾಗು; ಸ್ತಿಮಿತಕ್ಕೆ ಬರು.

೪. (ವಾಕ್ಯಭಾಗಗಳು). Be d. (up)on ಮೇಲೆ ಬೀಳು; ಕಠಿನವಾಗಿ ದಂಡಿಸು. D. to the ground ಸಂಪೂರ್ಣವಾಗಿ; ಪೂರ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾಗಿ ; ನೆಲಮುಟ್ಟ. D. at heel (Heel ನೋಡಿ). D. on one's luck (Luck ನೋಡಿ). D. and out ಮುಷ್ಟಿಯುದ್ಧದಲ್ಲಿ ಮತ್ತೆ ಹೋರಾಡಲು ಶಕ್ತಿಯಿಲ್ಲದ ; ಜೀವನದ ಹೋರಾಟದಲ್ಲಿ ಸೋತುಹೋದ ; ಸಾಕಾಗಿಹೋದ. D. under ಅಭಿಮುಖವಾದ ಸ್ಥಳದಲ್ಲಿ.

Dówncast[1] (ಗು.) (ದೃಷ್ಟಿ) ತಗ್ಗಿ(ಸಿ)ದ, ಕೆಳಗಿಳಿ(ಸಿ)ದ. ಮನ ಗುಂದಿದ ; ಖಿನ್ನ ; ವಿಷಣ್ಣ. **Dówncast**[2] (ನಾ.) (Also, D.-shaft) ಒಂದು ಗಣಿಯೊಳಕ್ಕೆ ಹೊರ ಗಾಳಿಯನ್ನು (ಶುದ್ಧ ವಾಯುವನ್ನು) ಸಾಗಿಸುವ ಉದ್ದಗಂಡಿ: ಗಾಳಿಗಂಡಿ. **Down-easter** (ಅಮೆ. ಸಂ.) ನ್ಯೂಇಂಗ್ಲೆಂಡ್ ಪ್ರಾಂತದವನು (ಮು., ಮೆಯ್‌ನ್ ಸಂಸ್ಥಾನದವನು). **Downfall** (ನಾ.) ಮಳೆ, ಮೊ. ಗಳ ಎಡೆಬಿಡದ ಸುರಿತ. ಉತ್ತಮ ಸ್ಥಿತಿಯಿಂದ ಹೀನ ದಶೆಗೆ ಬೀಳುವುದು ; ಬೀಳು ; ಅಧಃಪತನ ; ಅವನತಿ ; ನಾಶ. **Downhill** (ನಾ., ಗು., ಕ್ರಿ. ವಿ.) ಇಳಿಜಾರು; ಇಳಿತ(ದ) (D. of life ಜೀವಮಾನದ ಇಳಿವಯಸ್ಸು). (ಗು.) ಇಳಿಜಾರಾದ. (ಕ್ರಿ. ವಿ.) ಇಳಿತದ ದಿಕ್ಕಿನಲ್ಲಿ ; ಇಳಿಜಾರಿನಲ್ಲಿ ; ಇಳಿವಿನಲ್ಲಿ. **Dównpour** (ನಾ.) (ಮಳೆ, ಮೊ. ಗಳ) ಎಡೆಬಿಡದ ಸುರಿತ. **Dównright** (ಗು., ಕ್ರಿ. ವಿ.) (ಪ್ರಾಚೀ. ಪ್ರ.) ಲಂಬವಾದ. ಸ್ಪಷ್ಟವಾದ ; ಸರಳವಾದ ; ವ್ಯಕ್ತವಾದ ; ಮುಚ್ಚುಮರೆಯಿಲ್ಲದ ; ಋಜುವಾದ ನಿಷ್ಕಪಟವಾದ ; ನಿರ್ದಾಕ್ಷಿಣ್ಯ ಪ್ರಕೃತಿಯ. ಸಂಪೂರ್ಣವಾದ ; ಪರಮ ; ಶುದ್ಧ ; ಪಕ್ಕಾ (A d. lie. A d. atheist. D. nonsense ಶುದ್ಧ ಅಸಂಬದ್ಧ). (ಕ್ರಿ. ವಿ.) ಪೂರ್ತಿಯಾಗಿ ; ಸಂಪೂರ್ಣವಾಗಿ ; ಖಂಡಿತವಾಗಿ ; ಪೂರಾ (D. scared ಪೂರ್ತಿ ಭಯಪಟ್ಟು. D. insolent ಅತಿ ಸೊಕ್ಕಿನ). **Downríghtness** (ನಾ.) ; **Downstaírs** (ಕ್ರಿ. ವಿ., ನಾ.), **Dównstair(s)** (ಗು.) ಮಹಡಿಯ ಕೆಳಗೆ ; ಕೆಳ ಅಂತಸ್ತಿಗೆ ;— ನ(ಲ್ಲಿ). **Dównthrow** (ನಾ.) (ಭೂ. ವಿ.) ಭೂಸ್ತರಗಳ ಮುರಿವಿನಲ್ಲಿ ಒಂದು ಕಡೆಗೆ ಸ್ತರದ ಇಳಿವು ; (ಭೂಸ್ತರಗಳ) ಅವನತಿ ; ಪತನ. **Dówntrodden** (ಗು.) ಕೆಳಕ್ಕೆ ತುಳಿದ, ಅದುಮಿದ ; ಕೆಳಗೆ ಮೆಟ್ಟಿದ. **Dównward** (ಗು., ಕ್ರಿ. ವಿ.), **Dównwards** (ಕ್ರಿ. ವಿ.) ಕೆಳಗಿನ ; ಕೀಳಾದ ; (ನಿರ್ದಿಷ್ಟ ಕಾಲದಿಂದ) ಈಚೆಗೆ, ಕೆಳಕ್ಕೆ, ಕೆಳಮುಖಕ್ಕೆ (ಚಲಿಸುವ, ಹರಿಯುವ, ಹೋಗುವ)

Down (ಉಪ.) ಕೆಳಕ್ಕೆ ; ಕೆಳಗಡೆಯಲ್ಲಿ ; (ಹರಿವಿನ) ಕೆಳಮುಖದಲ್ಲಿ (Situated d. the river). Up and down ಮೇಲಕ್ಕೂ ಕೆಳಕ್ಕೂ, ಹಿಂದಕ್ಕೂ ಮುಂದಕ್ಕೂ. D. town ಸುತ್ತಮುತ್ತಲಿನ ಪ್ರದೇಶದಿಂದ ಪಟ್ಟಣದೊಳಕ್ಕೆ. D. the wind ಗಾಳಿಯೊಡನೆ (Let go d. the wind ಗಾಳಿಗೆ ಬಿಟ್ಟುಬಿಡು; ಕೈಬಿಡು; ತೊರೆದುಬಿಡು ; ತ್ಯಜಿಸು ; ಕಡೆಗಣಿಸು ; ತಿರಸ್ಕರಿಸು)

Down (ಗು. ; ತರತಮಗಳಲ್ಲಿ) ಕೆಳಮುಖವಾಗಿರುವ ; ಕೆಳಗಡೆಯ. **D.-draught** ಮೇಲಿನಿಂದ ಕೆಳಕ್ಕೆ ನುಗ್ಗುವ ಗಾಳಿ (ಮು., ಹೊಗೆಕೊಳವಿಯಿಂದ ಹೊಗೆಯನ್ನು ಕೋಣೆಯೊಳಕ್ಕೆ ತಳ್ಳುವ ಗಾಳಿ). **D. grade** (ರೈಲುರಸ್ತೆಯಲ್ಲಿ) ಇಳಿವೋರೆ ; (ರೂಪ.) ಇಳಿವು ; ಬೀಳು ; ಅವನತಿ.

Down (ಕ್ರಿ. ಸಕ.) (ಬಳ. ಮಾ.) (ಸಾ., ಮನುಷ್ಯನನ್ನಾಗಲಿ ಹಾರುಯಂತ್ರವನ್ನಾಗಲಿ) ಕೆಳಕ್ಕೆ ತರು, ಇಳಿಸು, ಕೆಳಕ್ಕೆ ಎಸೆ, ಹೊಡೆದು ಕೆಳಕ್ಕೆ ಬೀಳಿಸು, ಉರುಳಿಸು. D. tools (ಕಾರ್ಖಾನೆಯಲ್ಲಿ) ಆಯುಧಗಳನ್ನಿಟ್ಟುಬಿಡು ; ಕೆಲಸ ಮಾಡದೆ ಕುಳಿತುಬಿಡು ; ಕೆಲಸ ಮಾಡುವುದಿಲ್ಲವೆಂದು ಮುಷ್ಕರ ಹಿಡಿ.

Down (ನಾ.) ದೌರ್ಭಾಗ್ಯ ; ದುರದೃಷ್ಟ (ಸಾ., Ups and downs ಏರಿಳಿತಗಳು ; ಏಳು ಬೀಳುಗಳು). (Dominoes ಆಟದಲ್ಲಿ) ಮೊದಲ ಕಾಯನ್ನು ಇಡುವುದು, ಇಳಿತ. Have a d. on (ಒಬ್ಬನ) ಮೇಲೆ ಅಪ್ರೀತಿಯಿರು, ಮೇಲೆಬೀಳುವಂತಿರು.

Dówning street ಡೌನಿಂಗ್ ಸ್ಟ್ರೀಟ್ (ನಾ.) (ಲಂಡನ್ನಿನಲ್ಲಿ ಪ್ರಧಾನಿಯೂ ಇನ್ನು ಕೆಲವರು ಮಂತ್ರಿಗಳೂ ಇರುವ ಬೀದಿಯ ಹೆಸರು). ಇಂಗ್ಲೆಂಡಿನ ಸರ್ಕಾರ ; —ದ ಮುಖ್ಯ ಸ್ಥಾನ (Does not find favour in D. s. ಇದಕ್ಕೆ ಸರ್ಕಾರದ ಮನ್ನಣೆಯಿಲ್ಲ. D. s. disapproves ಸರ್ಕಾರ ಅಸಮ್ಮತಿ ತೋರಿಸುತ್ತದೆ)

Dówny[1],[2]. **Down**[1],[2] ನೋಡಿ.

Dówry. Dower ನೋಡಿ.

Dówsing ಡೌಸಿಂಗ್ (ನಾ.) ನೆಲದೊಳಗೆ ಅಡಗಿರುವ ನೀರನ್ನಾಗಲಿ ಖನಿಜಗಳನ್ನಾಗಲಿ ಊಹೆಕಡ್ಡಿಯ ಮೂಲಕ ಹುಡುಕುವುದು. D.-(or divining-)rod ನೀರು ಅಥವಾ ಖನಿಜಗಳು ನೆಲದಲ್ಲಿ ಅಡಗಿರುವ ಸ್ಥಳದಲ್ಲಿ ಬಗ್ಗುವ ಕೈಯಲ್ಲಿಯ ಕವಲುಗೋಲು.

Doxólogy ಡಾಕ್ಸಾಲೊಜಿ (ನಾ.) (ದೇವರ) ಸ್ತೋತ್ರವಾಕ್ಯ ; ಪ್ರಾರ್ಥನಾ ಗೀತ.

Dóxy[1] ಡಾಕ್ಸಿ (ನಾ.) ತಿರುಕನ ಸೂಳೆ ; ಉಪಪತ್ನಿ ; ಜಾರೆ.

Dóxy[2] ಡಾಕ್ಸಿ (ನಾ.) ಅಭಿಪ್ರಾಯ, ಮತ (ಮು., ದೇವತಾ ಶಾಸ್ತ್ರದ ವಿಷಯದಲ್ಲಿ. Orthodoxy, Heterodoxy ಎಂಬ ಪದಗಳ ಕೊನೆಯ ಭಾಗದ ಹಾಸ್ಯಪ್ರಯೋಗ)

Doýen(F) ಡ್ವ್ಯಾಯ್ಯಾನ್, (ಇಂಗ್ಲಿಷಿನಲ್ಲಿ) ಡ್ವಾಯೆನ್, ಡಾಯ್‌ಯೆನ್ (ನಾ.) ಒಂದು ಮಂಡಲದ ಪ್ರಧಾನ ಸದಸ್ಯ (ಮು., ಒಂದು ಆಸ್ಥಾನದಲ್ಲಿಯ ಪ್ರಮುಖ ನಿಯೋಗಿ) ; ಹಿರಿಯ ; ಪ್ರಮುಖ.

Doýley = Doily

Doze ಡೋಸ್ (ಕ್ರಿ. ಅಕ., ನಾ.) ತೂಕಡಿಸು ; ಅರೆ ನಿದ್ದೆಯಲ್ಲಿರು (D. off ನಸು ನಿದ್ದೆ ಮಾಡು). (ನಾ.) ನಸು ನಿದ್ದೆ ; ತೂಕಡಿಕೆ ; ಜೋಂಪು.

Dózen ಡಸ್‌ನ್ (ನಾ., ಬ. ವ. Dozen, Dozens) ಹನ್ನೆರಡು ; ಡಜನ್ನು. (ಗುಣವಾಚಕವಾಗಿ : Several d. figs ಅನೇಕ ಡಜನ್ ಅಂಜೂರದ ಹಣ್ಣುಗಳು. ನಾಮವಾಚಕವಾಗಿ : Some dozens of people ಅನೇಕ ಮಂದಿ. Dozens of times ಅನೇಕ ಬಾರಿ). (ಬ. ವ. Dozens) ಹನ್ನೆರಡು ಹನ್ನೆರಡರ ಒಟ್ಟು (Pack them in dozens ಹನ್ನೆರಡು ಹನ್ನೆರಡಾಗಿ ಕಟ್ಟಿಡು, ತುಂಬಿಡು). Baker's, Devil's, Long, Printer's, d. ಹದಿಮೂರು. Talk nineteen to the d. ಸದಾ ಹರಟುತ್ತಿರು ; ಎಡೆಬಿಡದೆ ಮಾತನಾಡುತ್ತಿರು : ಮಾತಿನ ಮಳೆ ಸುರಿಸುತ್ತಿರು.

Drab[1] ಡ್ರ್ಯಾಬ್ (ನಾ., ಕ್ರಿ. ಅಕ.) ಮಲಿನವಾದ, ಶುಚಿಯಿಲ್ಲದ, ಹೆಂಗಸು. ಹಾದರಗಿತ್ತಿ ; ವ್ಯಭಿಚಾರಿಣಿ ; ಸೂಳೆ ; ಬೊಡ್ಡಿ. (ಕ್ರಿ.) ಹಾದರ, ವ್ಯಭಿಚಾರ, ಮಾಡು.

Drab[2] ಡ್ರ್ಯಾಬ್ (ಗು., ನಾ.) ಮಂಕಾದ ನಸು ಕಂದುಬಣ್ಣ(ದ) ; ಮಂಕಾದ. ವಿವಿಧತೆಯಿಲ್ಲದ ; ಬೇಸರ ಹಿಡಿಸುವ. (ನಾ.) ವೈವಿಧ್ಯವಿಲ್ಲದಿರುವುದು ; ಏಕ ಸ್ವರ. **Drábbet** ಡ್ರ್ಯಾಬೆಟ್, **Drabbét** ಡ್ರ್ಯ— (ನಾ.) ನಸು ಕಂದುಬಣ್ಣದ ಮೂಲೆನೆಯ್ಗೆಯ ಬಟ್ಟೆ.

Drábble ಡ್ರ್ಯಾಬ್‌ಲ್ (ಕ್ರಿ.) ಕೆಸರುನೀರಿನಲ್ಲಿ ಓಡಾಡುತ್ತ ಅದನ್ನು ಸುತ್ತ ಮುತ್ತ ಸಿಡಿಸುತ್ತಹೋಗು ; ಕೆಸರು ಸಿಡಿಸು.

Drachm ಡ್ರ್ಯಾಮ್ (ನಾ.) ಪ್ರಾಚೀನ ಗ್ರೀಕರ Drachma ಎಂಬ (9¾ಪೆನಿ ಬೆಲೆಯ) ಒಂದು ಬೆಳ್ಳಿಯ ನಾಣ್ಯ : ದ್ರಮ್ಮ (ಕನ್ನಡ ಶಾಸನಗಳಲ್ಲಿ). (ಔಷಧಗಳ ತೂಕ) 60 ಗ್ರೇಯ್ನುಗಳು, ⅛ಔನ್ಸು ; (ಚಿನ್ನ ಬೆಳ್ಳಿಯ ತೂಕ) 27⅓ ಗ್ರೇಯ್ನುಗಳು, 1/16ಔನ್ಸು. ಸ್ವಲ್ಪ ; ಲವ ; ಲೇಶ. **Dráchma** ಡ್ರ್ಯಾಕ್ಮ (ನಾ. ; ಬ. ವ. -mas, -mae) = Drachm (ನಾಣ್ಯ) ; ಆಧುನಿಕ ಗ್ರೀಕರ ಫ್ರ್ಯಾಂಕ್ ಎಂಬ ನಾಣ್ಯ.

Dracónian ಡ್ರಕೋನಿಯನ್, **Dracónic** ಡ್ರಕಾನಿಕ್ (ಗು.) (ಕಾನೂನುಗಳ ವಿಷಯದಲ್ಲಿ) ಕಠಿನವಾದ ; ಕಠೋರವಾದ ; ನಿರ್ದಯ ; ಕ್ರೂರವಾದ. (ಕ್ರಿ. ಪೂ. ೬೨೧ರಲ್ಲಿದ್ದ Drakon ಎಂಬ ಅಥೆನ್ಸಿನ ಶಾಸನಕಾರನ ಹೆಸರಿನಿಂದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Draff ಡ್ರಾಫ್ (ನಾ.) ಚರಟ ; (ಯಾವುದಾದರೂ ದ್ರವದ ತಳಗಡೆ ಕೂಡುವ) ಗಸಿ. ಸಾರಾಯಿ ಮಾಡಿದಮೇಲೆ ಉಳಿಯುವ ಬಾರ್ಲಿಗೋಧಿಯ ಚರಟ. ಕಲಗಚ್ಚು.

Draft ಡ್ರಾಫ್ಟ್ (ನಾ., ಕ್ರಿ. ಸಕ.) (ಒಂದು ದೊಡ್ಡ ಗುಂಪಿನಿಂದ, ಮು., ಸೇನೆಯಿಂದ, ವಿಶೇಷ ಕಾರ್ಯಕ್ಕಾಗಿ, ಒಂದು ತಂಡವನ್ನು, ದಳವನ್ನು) ಬೇರ್ಪಡಿಸುವುದು ; ಹೀಗೆ ಬೇರ್ಪಡಿಸಿದ ಭಾಗ ; ಸೇನಾದಳದ ಭಾಗ ; ಸಹಾಯಕ ದಳ. ಕೋರಿಕೆಯಪತ್ರದ ಮೇರೆಗೆ ಹಣ ಪಡೆದುಕೊಳ್ಳುವುದು [Make a d. on fund, etc. ಒಂದು ನಿಧಿ, ಮೊ. ಗಳಿಂದ (ಹಣ ತೆಗೆದುಕೊಳ್ಳುವ ಹಕ್ಕಿರುವವನು) ಕೋರಿಕೆಯಪತ್ರದ ಮೂಲಕ ಹಣ ಪಡೆ. (ರೂಪ.) ತನ್ನಲ್ಲಿಟ್ಟಿರುವ ನಂಬಿಕೆ, ಸ್ನೇಹ, ಮೊ. ಗಳನ್ನು ಉಪಯೋಗಿಸಿಕೊ]. (ಮು.,) ಒಂದು ಬ್ಯಾಂಕಿನ (ಅಥವಾ ಖಜಾನೆಯ) ಒಂದು ಶಾಖೆಯಿಂದ ಮತ್ತೊಂದು ಶಾಖೆಗೆ ಪಡೆದ ಹುಂಡಿ. ನಡಸಬೇಕಾದ ಕೆಲಸದ ನಕ್ಷೆ. (ದಸ್ತೈವಜಿನ, ಕಾಗದಪತ್ರಗಳ, ಮಸೂದೆಯ) ಕರಡು ಪ್ರತಿ (ಮಾಡು). (ಕಲ್ಲುಕೆಲಸ) ಕಲ್ಲನ್ನು ಮಟ್ಟ ಮಾಡುವುದಕ್ಕಾಗಿ ಅದರ ಅಂಚಿನಲ್ಲಿ ಉಳಿಗೆಲಸದ ಗುರುತು ಮಾಡು: ಮಟ್ಟದ ಗುರುತು (ಮಾಡು)

Dráftsman ಡ್ರಾಫ್ಟ್ಸ್‌ಮ್ಯನ್ (ನಾ.) ರೇಖನಗಳನ್ನು ಅಥವಾ ನಕ್ಷೆಗಳನ್ನು ಬರೆಯುವವನು : ರೇಖನಗಾರ ; ನಕ್ಷೆಗಾರ. ದಸ್ತೈವಜುಗಳ, ಪಾರ್ಲಿಮೆಂಟಿನ ಮಸೂದೆಗಳ, ಕರಡು ಪ್ರತಿ ತಯಾರಿಸುವವನು: ಕರಡುಗಾರ (= Draughtsman)

Drag ಡ್ರ್ಯಾಗ್ (ಕ್ರಿ.) (ಬಲವಾಗಿ, ಕಷ್ಟದಿಂದ, ಘರ್ಷಣದಿಂದ) ದರ ದರ ಎಳೆ. (ಪಾದಗಳು, ಬಾಲ, ಮೊ. ವು) ನೆಲದಮೇಲೆ ಎಳೆದಾಡು ; [Ship drags her anchor ಹಡಗು ತನ್ನ ಲಂಗರನ್ನು ಎಳೆದುಕೊಂಡು ಹೋಗುತ್ತದೆ. Anchor drags ಲಂಗರು ನೆಲ ಕಚ್ಚುವುದಿಲ್ಲ. D. in (Also, D. in by the head and shoulders) (ಒಂದು ವಿಷಯವನ್ನು) ಅನವಶ್ಯವಾಗಿ ತರು, ಎಳೆದುಕೊಂಡು ಬಾ]. (ನಂ.) ಬಹಳ ನಿಧಾನವಾಗಿ ಹೋಗು ; ಎಳೆ ; ಗೆಲುವಿಲ್ಲದಿರು ; ಕಳೆ ಕಟ್ಟದಿರು. [D. on ಬೇಸರ ಹಿಡಿಯುವಂತೆ ಮುಂದಕ್ಕೆಳೆ ; ಎಳೆಯುತ್ತಿರು. D. out (ಕಾಲ) ತಳ್ಳಿಕೊಂಡು ಹೋಗು]. (ಸಾ., ನೀರಿನ ತಳದಲ್ಲಿ ಬಿದ್ದಿರುವ ಮನುಷ್ಯನನ್ನೊ ವಸ್ತುವನ್ನೊ ಹುಡುಕಲು) ಪಾತಾಳಗರಡಿ ಹಾಕು. ನೀರಿನ ತಳದಲ್ಲಿ ಬಿದ್ದಿರುವ ವಸ್ತುಗಳನ್ನು ಸಂಗ್ರಹಿಸಲು ಎಳೆಬಲೆಯನ್ನೆಳೆ. (ನೆಲವನ್ನು) ಹರತೆ, ಹಲುಬೆ, ಹೊಡೆ. (ಚಕ್ರಕ್ಕೆ, ಬಂಡಿಗೆ) ತಡೆಮರ ಹಾಕು, ಬಿರಿ ಹಾಕು. [ಬಳ. ಮಾ. D. up (child) (ಮಗುವನ್ನು) ಒರಟೊರಟಾಗಿ ಬೆಳಸು]

Drag (ನಾ.) ಭಾರವಾದ ಹಲುಬೆ, ಕುಂಟೆ : ಹೆಗ್ಗುಂಟೆ. (ಒರಟಾದ, ಗಾಲಿಯಿಲ್ಲದ) ಜಾರುಬಂಡಿ. (ಪ್ರಯಾಣದ ಬಾಡಿಗೆ ಗಾಡಿಯಂತಿರುವ) ನಾಲ್ಕು ಕುದುರೆಯ ಗಾಡಿ. ಪಾತಾಳ ಗರಡಿ. (ಮೀನು, ಬೇಟೆ, ಮೊ. ನ್ನು ಹಿಡಿಯಲು ನೀರಿನಲ್ಲಿ, ನೆಲದಮೇಲೆ) ಎಳೆಯುವ ಬಲೆ: ಎಳೆಬಲೆ (= D.-net). ಗೊಬ್ಬರದ ಹಲುಬೆ. (ಬಂಡಿ ಇಳಿಜಾರಿನಲ್ಲಿ ಹೋಗುತ್ತಿರುವಾಗ ಅದರ ವೇಗವನ್ನು ತಡೆಯುವ) ಕಬ್ಬಿಣದ ತಡೆ, ಬಿರಿ. ತಡೆ ; ಅಡ್ಡಿ ; ಅಡಚಣೆ. (ಬೇಟೆನಾಯಿಗಳ ವಿಷಯದಲ್ಲಿ) ನರಿಗೆ ಬದಲಾಗಿ ಕಟುವಾಸನೆಯುಳ್ಳ ಇತರ ಸೆಳೆವಸ್ತು (D.-hounds ಈ ತೆರದ ಬೇಟೆ ನಾಯಿಗಳು) ; ಈ ಬೇಟೆಗಾರರ ಸಂಘ. ನಿಧಾನ ಚಲನ ; ಮಂದ ಗತಿ ; ತಡೆ ನಡೆ. **D.-anchor** (ಗಾಳಿಯಲ್ಲಿ ಹೊಡೆದುಕೊಂಡು ಹೋಗುವ ಹಡಗಿನ ನಡೆಯನ್ನು ತಡೆಯುವುದಕ್ಕಾಗಿ) ಹೊರಚಿಯಿಂದ ಅದಕ್ಕೆ ಬಿಗಿದ ತೇಲುಚೌಕಟ್ಟು. **D.-chain** (ಬಂಡಿಯ ಚಕ್ರದ ಗತಿಯನ್ನು) ತಡೆಯುವ ಸರಪಣಿ : ತಡೆ ಸರಪಣಿ ; (ರೂಪ.) ಅಡ್ಡಿ ; ತಡೆ ; ಪ್ರತಿಬಂಧಕ.

Drággle ಡ್ರ್ಯಾಗ್ಗ್‌ಲ್ (ಕ್ರಿ.) ನೆಲದಮೇಲೆ, ಕೆಸರಿನಲ್ಲಿ, ಎಳೆದಾಡಿ — ತೋಯಿಸು, ಕೊಳೆಮಾಡು, ಕೊಳೆಯಾಗು; ನೆಲದಮೇಲೆ—ಎಳೆದಾಡು, ಈಜಾಡು, ಎಳಲು ; ಹಿಂದೆ ಬೀಳು ; ಹಿಂದೆ ಹಿಂದೆಯೇ ಬಳಸಾಡು. **D.-tail(ed)** ನೆಲದಮೇಲೆ ಈಜಾಡುವ ಕೊಳಕಾದ ಲಂಗ(ದ)

Drágoman ಡ್ರ್ಯಾಗೊಮನ್ (ನಾ. ; ಬ. ವ. -ans, -en) (ಮು., ಅರಬ್ಬಿ, ತುರ್ಕಿ, ಪರ್ಷಿಯನ್, ಭಾಷೆಗಳಲ್ಲಿ) (ಹೊರಗಿನವರಿಗೆ) ಭಾಷಾ ಪರಿವರ್ತನ ಮಾಡಿ ಹೇಳುವವನು ; ದುಬಾಸಿ (ದ್ವಿಭಾಷಿ)

Drágon ಡ್ರ್ಯಾಗನ್ (ನಾ.) (ಮೊಸಳೆಯ ಅಥವಾ ಹಾವಿನ ರೂಪೂ, ಹಕ್ಕಿಯ ರೆಕ್ಕೆಗಳೂ ನಖಗಳೂ, ಉಳ್ಳದ್ದಾಗಿಯೂ, ಸಾ., ಉರಿಯನ್ನು ಕಾರುತ್ತಿರುವಂತೆಯೂ, ವರ್ಣಿಸುವ) ಒಂದು ಪೌರಾಣಿಕ ಭಯಂಕರ ಪ್ರಾಣಿ : 'ಡ್ರೇಗನ್'. ಪಾತಿವ್ರತ್ಯ ರಕ್ಷಕ ; ನಿಧಿ ಪಾಲಕ (ಗ್ರೀಕ್ ಪುರಾಣದ ಕಥೆಯಿಂದ). ಕಣ್ಣುಬಿಟ್ಟುಕೊಂಡು ಕಾಯುತ್ತಿರುವವನು. ಒಬ್ಬ ಕನ್ಯೆಯನ್ನು ನೋಡಿಕೊಳ್ಳಲು ಅವಳ ಜೊತೆಯಲ್ಲಿರುವ ಹಿರಿಯ ಹೆಂಗಸು. (ಬೈಬಲ್ಲು) ತಿಮಿಂಗಿಲ, ಮೊಸಳೆ, ಷಾರ್ಕ್ ಮೀನು, ಸರ್ಪ, ಬಳ್ಳು. [The old D. ಸೈತಾನ (ವೇದದ ಅಹಿಯನ್ನು ಹೋಲಿಸಿ)]. ಹಲವು ಹಲ್ಲಿಜಾತಿ, ಪಾರಿವಾಳದ ಜಾತಿ. **D.-fly** (ಉದ್ದವಾಗಿಯೂ ತೆಳುವಾಗಿಯೂ ಇರುವ ದೇಹವೂ ದೊಡ್ಡ ಎರಡುಜೊತೆಯ ರೆಕ್ಕೆಗಳೂ ಉಳ್ಳ) ಒಂದು ಜಾತಿಯ ಹಾರುಹುಳು : ಕೊಡತಿ ಹುಳು ; ತೂಕದ ಹುಳು. **D.'s-blood** ಒಂದು ತಾಳೆಯ ಜಾತಿಯ ಹಣ್ಣಿನಿಂದ ಸ್ರವಿಸುವ ಉಜ್ಜ್ವಲ ರಕ್ತವರ್ಣದ ಹಾಲು, ಅಂಟು.

Dragonnáde ಡ್ರ್ಯಾಗೊನೇಡ್ (ನಾ., ಕ್ರಿ. ಸಕ.) (ಬ. ವ. ದಲ್ಲಿ) (ಫ್ರೆಂಚ್ ದೊರೆಯಾಗಿದ್ದ ಹದಿನಾಲ್ಕನೆಯ ಲ್ಯೂಯಿಯ ಆಳಿಕೆಯಲ್ಲಿ ಪ್ರಾಟೆಸ್ಟಂಟ್ ಕ್ರೈಸ್ತರ ಮೇಲೆ ಅಶ್ವಸೈನಿಕರನ್ನು ಹಾಕಿ ಮಾಡುತ್ತಿದ್ದ) ಚಿತ್ರಹಿಂಸೆ. ಸೈನಿಕರ ಮೂಲಕ ನಡಸುವ ಚಿತ್ರಹಿಂಸೆ. (ಕ್ರಿ.) ಹೀಗೆ ಚಿತ್ರಹಿಂಸೆ ಮಾಡು.

Dragoón ಡ್ರಗೂನ್ (ನಾ., ಕ್ರಿ. ಸಕ.) ಕುದುರೆ ಸಿಪಾಯಿ ; ರಾವುತ ; ಭೀಕರನಾದ ಒರಟು ಮನುಷ್ಯ. ಒಂದು ಜಾತಿಯ ಪಾರಿವಾಳ (Also, Dragon). (ಕ್ರಿ.) ಒಬ್ಬನಮೇಲೆ ಕುದುರೆಸಿಪಾಯಿಗಳನ್ನು ಹಾಕು ; ಚಿತ್ರಹಿಂಸೆ ಮಾಡು. ಚಿತ್ರಹಿಂಸೆ ಮಾಡಿ ತನ್ನ ಹಾದಿಗೆ ಬಗ್ಗಿಸು ; ಬಲಾತ್ಕಾರದಿಂದ ಮಾಡಿಸು.

Drain ಡ್ರೆಯ್‌ನ್ (ಕ್ರಿ., ನಾ.) (ಕಾಲುವೆ, ಕೊಳಾಯಿ, ಮೊ. ಗಳ ಮೂಲಕ ದ್ರವವನ್ನು) ಹರಿಸಿಬಿಡು ; (ರೂಪ.) (D. the wealth of ಐಶ್ವರ್ಯ ಹರಿದುಹೋಗುವಂತೆ ಮಾಡು, ಬರಿದು ಮಾಡು). (ಪಾನೀಯವನ್ನು) ಪೂರ್ತಿ ಕುಡಿ, ಹೀರಿಹಾಕು ; ಕುಡಿದು ಬರಿದುಮಾಡು. ತೇವವನ್ನು ಹೊರಡಿಸಿ (ಜಮೀನು, ಮೊ. ನ್ನು) ಒಣಗಿಸು, ಆರವಾಸಿಗೆ ತರು. (ನದಿಯ ವಿಷಯದಲ್ಲಿ, ಒಂದು ಪ್ರಾಂತದಲ್ಲಿಯ) ಹೆಚ್ಚುನೀರನ್ನು ಹೊಡೆದುಕೊಂಡುಹೋಗು. (ಮನುಷ್ಯನ, ವಸ್ತುವಿನ) ಆಸ್ತಿ, ಶಕ್ತಿ, ಮೊ. ನ್ನು ಇಲ್ಲದಂತೆ ಮಾಡು, ಹಾಳುಮಾಡು, ಕಳೆ. ಜಿನುಗು ; ಸ್ರವಿಸು ; ಹರಿದುಹೋಗು ; ಬಸಿದುಹೋಗು ; (ಒದ್ದೆಬಟ್ಟೆ, ಪಾತ್ರೆ, ಮೊ. ಗಳ ವಿಷಯದಲ್ಲಿ) ನೀರು ಸುರಿಸಿ ತೇವ ಕಳೆ (Set it there to d. ನೀರು ಬಸಿದುಹೋಗುವುದಕ್ಕಾಗಿ ಇಡು). (ನಾ.) (ನೀರು, ರೊಚ್ಚುನೀರು, ಮೊ. ವು ಹರಿದುಹೋಗಲು ಮಾಡಿರುವ) ಕಾಲುವೆ, ಚರಂಡಿ, ಮೋರಿ, ನಾಳಿ, ಮೊ. ವು. (ಶಸ್ತ್ರಚಿಕಿತ್ಸೆ) (ಕೀವು, ಮೊ. ನ್ನು) ಬಸಿದುಹಾಕುವ ಕೊಳವೆ : ಬಸಿಕೊಳವೆ. ಎಡೆಬಿಡದ ಹರಿವು. ಒಂದೇ ಸಮನಾಗಿ ಹಣ ಹಿಂದಕ್ಕೆ ತೆಗೆದುಕೊಳ್ಳುವುದು. ವೆಚ್ಚ (A great d. on my resources ನನ್ನ ಸಂಪತ್ತು ಹೆಚ್ಚಾಗಿ ಹರಿದುಹೋಗುತ್ತಿದೆ). (ಅಸಂ.) ಒಂದು ಗುಟುಕು. **Dráinage**—ನೆ(ನಿ)ಜ್ (ನಾ.) ನೀರು ಹೊರಡಿಸುವುದು ; (ಸ್ವಾಭಾವಿಕವಾದ ಅಥವಾ ಕೃತಕದ) ನೀರ್ಗಾಲುವೆಗಳ ಏರ್ಪಾಡು, ಚರಂಡಿಯ ಏರ್ಪಾಡು (D.-basin ನದಿಗೆ ನೀರು ಬಸಿಯುವ ಪ್ರಾಂತ); ಬಸಿದುಹೋದದ್ದು ; (ಚರಂಡಿಯ) ರೊಚ್ಚುನೀರು. **Dráiner** (ನಾ.) (ಕ್ರಿಯಾರ್ಥಗಳಲ್ಲಿ). ಒಂದು ವಸ್ತುವಿನ ನೀರು ಬಸಿದುಹೋಗುವುದಕ್ಕಾಗಿ ಅದನ್ನಿಡುವ ಪಾತ್ರೆ : ಬಸಿಪಾತ್ರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Drake[1] ಡ್ರೇಕ್ (ನಾ.) (ಮೀನುಹಿಡಿಯುವುದರಲ್ಲಿ ಉಪಯೋಗಿಸುವ ದಿನ ಜೀವಿಯಾದ) ಒಂದು ಜಾತಿಯ ನೊಣ.

Drake[2] ಡ್ರೇಕ್ (ನಾ.) ಗಂಡು ಬಾತು(ಕೋಳಿ) (Play ducks and drakes with ಹಾಳು ಮಾಡು ; ಪೋಲು ಮಾಡು ; ಅಪವ್ಯಯ ಮಾಡು)

Dram ಡ್ರ್ಯಾಮ್ (ನಾ.) ಒಂದು ತೂಕ : ಡ್ರ್ಯಾಮ್ (= Drachm). (ಮದ್ಯ, ಮೊ. ಗಳ) ಒಂದು ಎಳೆತ. **D.-drinker, D.-drinking** ತಪ್ಪದೆ ಮದ್ಯಕುಡಿಯುವ ಅಭ್ಯಾಸವುಳ್ಳವನು ; — ಕುಡಿಯುವುದು. **D.-shop** ಮದ್ಯದಂಗಡಿ.

Dráma ಡ್ರಾಮ (ನಾ.) ನಾಟಕ ; ರೂಪಕ ; (ರಂಗಸ್ಥಳದ) ಆಟ. (The d. ನಾಟಕ ಕಲೆ ; — ಸಾಹಿತ್ಯ ; — ರಚನೆ ; — ಪ್ರದರ್ಶನ). ನಾಟಕದಂಥ ಘಟನಾವಳಿ. **Dramátic** ಡ್ರಮ್ಯಾಟಿಕ್ (ಗು.) ನಾಟಕದ ; ನಾಟಕೀಯ ; ರೂಪಕದ ; ರೂಪಕ ಯೋಗ್ಯ ; ನಟನಂಥ ; ನಟನೆಯ ; ಅಭಿನಯದ ; ಅಭಿನಯ ಯೋಗ್ಯ. ಥಟ್ಟನೆ ಸಂಭವಿಸುವ ; ಕೌತುಕವುಂಟುಮಾಡುವ ; ಮನ ಮುಟ್ಟುವ. ಮತ್ತೊಬ್ಬನ ಅಭಿಪ್ರಾಯಗಳನ್ನು ತೋರಿಸುವ. **Dramátically** (ಕ್ರಿ. ವಿ.) ; **Drámatis persónae**(L) ಡ್ರ್ಯಾಮಟಿಸ್ ಪರ್ಸೋನೀ (ನಾ., ಬ. ವ. ; ಅನೇಕ ವೇಳೆ ಏ. ವ. ದ ಪ್ರಯೋಗ) ಒಂದು ನಾಟಕದಲ್ಲಿಯ ಪಾತ್ರಗಳು, ಪಾತ್ರ ವರ್ಗ. **Drámatist** (ನಾ.) ನಾಟಕಕಾರ ; ರೂಪಕ ರಚಿಸುವವನು. **Drámatize** (ಕ್ರಿ.) (ಕಾದಂಬರಿ, ಮೊ. ನ್ನು) ನಾಟಕಕ್ಕೆ ರೂಪಾಂತರಿಸು, ಮಾರ್ಪಡಿಸು ; (ಕಾದಂಬರಿ ಮೊ. ವು) ನಾಟಕ ಸಾಧ್ಯವಾಗಿರು. **Dramatizátion** (ನಾ.) ; **Drámaturge** — ಟರ್ಜ್ (ನಾ.) ನಾಟಕಕಾರ. **Dramatúrgic** (ಗು.) ; **Drámaturgist** (ನಾ.) ನಾಟಕಕಾರ. **Drámaturgy** (ನಾ.) ನಾಟಕ ರಚನೆ, ಕಲೆ, ಶಾಸ್ತ್ರ ; ನಾಟಕಾಭಿನಯ.

Drank. Drink ಧಾತುವಿನ ಭೂತ ರೂಪ.

Drape ಡ್ರೇಪ್ (ಕ್ರಿ. ಸಕ.) (ಬಟ್ಟೆ, ಮೊ. ನ್ನು) ಹೊದಿಸು, ತೊಡಿಸು, ಸಿಂಗರಿಸು ; (ಬಟ್ಟೆಗಳನ್ನೂ ತೆರೆಗಳನ್ನೂ) ಅಂದವಾದ ನೆರಿಗೆಗಳಾಗಿ ಅಳವಡಿಸು. **Dráper** (ನಾ.) ಬಟ್ಟೆಯ ವ್ಯಾಪಾರಿ ; ಜವಳಿಯ ವರ್ತಕ. **Drápery** ಡ್ರೇಪರಿ (ನಾ.) ಬಟ್ಟೆ ; ಜವಳಿ ; ಜವಳಿಯ ವ್ಯಾಪಾರ. (ಶಿಲ್ಪ, ಮೊ. ಗಳಲ್ಲಿ) ಉಡುಪಿನ ರಚನೆ ; ವಸ್ತ್ರ ವಿನ್ಯಾಸ. ನೆರಿಗೆಗಳಾಗಿ ಅಳವಡಿಸಿರುವ ಉಡಿಗೆ ಅಥವಾ ತೆರೆ. **Dráperied** ಡ್ರೇಪರಿಡ್ (ಗು.)

Drástic ಡ್ರ್ಯಾಸ್ಟಿಕ್ (ಗು.) ತೀವ್ರ ಪರಿಣಾಮದ ; ಜೋರಾದ ; ಚುರುಕಾದ ; ಉಗ್ರವಾದ ; ತೀಕ್ಷ್ಣವಾದ ; ಕಠಿನವಾದ ; ಪ್ರಚಂಡವಾದ. (ಔಷಧ) ಒತ್ತರವಾಗಿ, ಬಲವಾಗಿ, ಭೇದಿಮಾಡಿಸುವ : ಕಟು ರೇಚಕ. **Drástically** (ಕ್ರಿ. ವಿ.)

Drat ಡ್ರ್ಯಾಟ್ (ಕ್ರಿ. ಸಕ., ಪ್ರಥಮ ಪುರುಷ, ಏಕ ವಚನ, ಸಂಭಾವನಾ ರೂಪ) (ಅನಂ.) ಹಾಳಾಗ ! ನಾಶವಾಗ ! ಶಾಪ ತಟ್ಟ ! ಪೀಡೆ ! **Drátted** (ಗು.)

Draught ಡ್ರಾಫ್ಟ್ (ನಾ.) (ಕೆಲವು ಅರ್ಥಗಳಲ್ಲಿ Draft ರೂಪ ಸಹ) (ಭಾರ) ಎಳೆಯುವುದು ; ಎಳೆತ [Beast of d. ಭಾರವೆಳೆಯುವ ಪ್ರಾಣಿ. D.-horse (ಬಂಡಿ, ನೇಗಿಲು, ಮೊ. ನ್ನು) ಎಳೆಯುವ ಕುದುರೆ]. (ಮೀನು, ಮೊ. ಕ್ಕಾಗಿ) ಬಲೆಹಾಕಿ ಎಳೆಯುವುದು ; ಒಂದು ಎಳೆತದಲ್ಲಿ ಬಲೆಗೆ ಬಿದ್ದ ಮೀನಿನ ಮೊತ್ತ. ಒಂದು ಕುಡಿತ ; ಹೀಗೆ ಕುಡಿದ ಮೊತ್ತ ; [(ರೂಪ.) ಸಂತೋಷ, ಪ್ರೀತಿ, ನೋವು, ಮೊ. ಗಳಲ್ಲಿ ಸಹ]. (ದ್ರವ ಔಷಧದ ಒಂದು) ಗುಟುಕು (Black d. ಭೇದಿಯೌಷಧ). (ನಾವೆ) ಹಡಗು ತೇಲಲು ಬೇಕಾದ ನೀರಿನ ಆಳ ; ಹಡಗು (ತನ್ನ ನಡೆಯಲ್ಲಿ ಒಂದು ಸಲಕ್ಕೆ) ತಳ್ಳಿಹಾಕುವ ನೀರಿನ ಮೊತ್ತ. (ಬ. ವ. ದಲ್ಲಿ) ಚದುರಂಗದ ಮಣೆಯಂಥ ಮಣೆಯಮೇಲೆ ಒಂದೇ ರೂಪಿನ ೨೪ ಕಾಯಿಗಳಿಂದ ಆಡುವ ಒಂದು ಆಟ (**D.-board** ಈ ಆಟದ ಮಣೆ.) (ಒಂದು ಕೊಠಡಿ, ಹೊಗೆಕೊಳವಿ, ಮೊ. ಗಳಲ್ಲಿಯ) ಗಾಳಿಯ ಹರಿವು [Forced d. ಕುಲುಮೆಯಲ್ಲಿ ಮೇಲ್ಗಡೆಯ ಗಾಳಿಯನ್ನು ತೆಳುವುಮಾಡುವುದರಿಂದಾಗಲಿ ಕೆಳಗಡೆಯ ಗಾಳಿಯನ್ನು ಒತ್ತರಿಸುವುದರಿಂದಾಗಲಿ ನುಗ್ಗಿಸಿದ ಗಾಳಿ : ನುಗ್ಗುಗಾಳಿ. Feel the d. (ಅನಂ.) ಪ್ರತಿಕೂಲ ಪರಿಸ್ಥಿತಿಯಿಂದ ತೊಂದರೆಪಡು, ಪೇಚಾಡು]. [**Draúghty** (ಗು.) ; **Draúghtiness** (ನಾ.)]. ಹೊರ ರೇಖೆ ; (ಚಿತ್ರಕಲನಕ್ಕೆ ಮೊದಲು ಹಾಕುವ) ಸ್ಥೂಲ ನಕ್ಷೆ. (ಯಾವುದಾದರೂ ಕಟ್ಟಡದ) ನಕಾಸೆ (= Draft). (ದಸ್ತಾವೇಜು, ಮೊ. ಗಳ) ಕರಡು ಪ್ರತಿ, ಕಚ್ಚಾ ಪ್ರತಿ (ಸಾ., Draft). ಸೇನೆಯಿಂದ ಪ್ರತ್ಯೇಕಿಸಿದ ದಳ, ಸಿಪಾಯಿಗಳ ತಂಡ, ಸಹಾಯ ದಳ ; ಇವುಗಳ ಆಯ್ಕೆ (ಸಾ., Draft). ಬ್ಯಾಂಕು, ಮೊ. ಗಳಲ್ಲಿಟ್ಟಿರುವ ನಿಧಿಯಿಂದ ಹಣವನ್ನು ಹಿಂದಕ್ಕೆ ಪಡೆಯಲು ಬರೆದ ಕೋರಿಕೆಯ ಪತ್ರ ; ಹುಂಡಿ ; ಚೆಕ್ಕು (ಈಗ Draft). ಪಾತ್ರೆಯಿಂದ ಮದ್ಯವನ್ನು ಬಿರುಡೆಕೊಳವೆಯ ಮೂಲಕ ತೆಗೆಯುವುದು [Beer on d. ಬಿರುಡೆಕೊಳವೆ ಇಟ್ಟಿರುವ ಪೀಪಾಯಿಯಲ್ಲಿರುವ ಬಿಯರ್ ಮದ್ಯ. D. beer ಪೀಪಾಯಿಯಲ್ಲಿಯ ಮದ್ಯ (ಸೀಸೆಯಲ್ಲಿ ತುಂಬಿಟ್ಟದ್ದಲ್ಲ)]

Draúghtsman ಡ್ರಾಫ್ಟ್ಸ್‌ಮನ್ (ನಾ. ; ಬ. ವ. -men) ರೇಖನ, ನಕ್ಷೆ, ನಕಾಸೆ, ಇವನ್ನು ಬರೆಯುವವನು : ನಕಾಸೆಗಾರ (Good, bad, no, d. ಒಳ್ಳೆಯ, ಕೆಟ್ಟ, ಉಪಯೋಗವಿಲ್ಲದ, ನಕಾಸೆಗಾರ). (ಮಸೂದೆ, ದಸ್ತಾವೇಜು, ಮೊ. ಗಳ) ಕರಡುಗಾರ. [**Draúghtsmanship** (ನಾ.) ; **Draúghtswoman** (ನಾ., ಸ್ತ್ರೀ.)]. 'ಡ್ರಾಫ್ಟ್ಸ್' ಎಂಬ ಆಟದ ಕಾಯಿ.

Dravídian ದ್ರವಿಡಿಯನ್ (ಗು., ನಾ) (ಕನ್ನಡ, ತಮಿಳು, ತೆಲುಗು, ಮಲೆಯಾಳ, ಮೊ. (ಮು.,) ದಕ್ಷಿಣ ಇಂಡಿಯದ ಮತ್ತು ಸಿಲೋನಿನ ಜನರನ್ನೊಳಕೊಂಡ) ಆರ್ಯೇತರ ಕುಲ. ದ್ರಾವಿಡ ಭಾಷೆ, ಜನ ; ದ್ರಾವಿಡ.

Draw ಡ್ರಾ (ಕ್ರಿ. ; ಭೂತ. Drew ಡ್ರೂ, ಭೂ. ಕೃ. Drawn ಡ್ರಾನ್) ಎಳೆ(ದುಕೊ) ; ಸೆಳೆ ; ಆಕರ್ಷಿಸು ; ಸೇದು ; ಎಳೆದುಕೊಂಡುಹೋಗು (D. criminal to execution). (ಬಿಲ್ಲನ್ನು) ಬಗ್ಗಿಸು. ಸಂಕುಚಿಸು ; ಕುಗ್ಗಿಸು ; ಕೊಂಕಿಸು (With drawn face ಮುಖ ಸೊಟ್ಟಗೆ ಮಾಡಿಕೊಂಡು). ಕರುಳು ತೆಗೆ [Hanged, drawn and quartered (ಮಹಾಪರಾಧಿಯನ್ನು ಗಲ್ಲಿಗೆ ಹಾಕಿ, ಕರುಳು ಹಿರಿದು, ದೇಹವನ್ನು ನಾಲ್ಕಾರು ಭಾಗಗಳಾಗಿ ತುಂಡಿಸಿ. D. fowl ಕೋಳಿಯನ್ನು ಅಡುವುದಕ್ಕೆ ಮೊದಲು ಅದರ ಕರುಳು ತೆಗೆ]. ತೀರ್ಮಾನವಾಗದೆ ಸಂದಿಗ್ಧವಾಗಿರು ; ಸಮವಾಗಿರು (D. game or battle). Calf draws cow ಕರು ಹಸುವಿನ ಕೆಚ್ಚಲನ್ನು ಹೀರಿಬಿಡುತ್ತದೆ, ಬರಿದುಮಾಡುತ್ತದೆ. Chimney draws well ಹೊಗೆಕೊಳವಿ ಗಾಳಿಯನ್ನು ಸರಾಗವಾಗಿ ಎಳೆಯುತ್ತದೆ. D. all the trumps (ಇಸ್ಪೀಟಿನ) ತುರುಫೆಲ್ಲ ಆಡಿಸಿಬಿಡು. D. back (ಕೊಟ್ಟ ಕಾರ್ಯದಿಂದ) ಹಿಂಜರಿ, ಹಿಮ್ಮೆಟ್ಟು. D. ball (ಕ್ರಿಕೆಟ್ ಆಟ) ದಾಂಡಿನಿಂದ ಚೆಂಡನ್ನು ಗುರಿಕೋಲಿಗೂ ಕಾಲಿಗೂ ಮಧ್ಯೆ ಹೋಗುವಂತೆ ಹೊಡೆ. (ಗಾಲ್ಫ್ ಆಟ) ಚೆಂಡನ್ನು ಬಹಳ ಎಡಕ್ಕೆ ಹೊಡೆ. D. bit, bridle, rein ಕಡಿವಾಣ ಸೆಳೆದು ಕುದುರೆಯನ್ನು ತಡೆ ; (ರೂಪ.) ತಡೆದುಕೊ ; (ಮನಸ್ಸನ್ನು) ಬಿಗಿಹಿಡಿದುಕೊ. ನಿಗ್ರಹಿಸು. D. blank (ಬೇಟೆ) ಏನೂ ದೊರೆಯದೆಹೋಗು. D. blood (ದೇಹದಿಂದ) ರಕ್ತ ತೆಗೆ. D. a character (ಒಬ್ಬನನ್ನು) ವರ್ಣಿಸು, ನಿರೂಪಿಸು. D. a cheque (ಹಣ ಕೊಡುವಂತೆ, ಬ್ಯಾಂಕಿಗೆ) ಚೆಕ್ಕು ಬರೆ. D. cloth ಊಟವಾದಮೇಲೆ (ಊಟದ ಮೇಜನ್ನು) ಚೊಕ್ಕಟ ಮಾಡು. D. curtain, veil ಪರದೆಯನ್ನು, ಬುರುಕಿಯನ್ನು, ಮುಚ್ಚುವಂತೆ, ತೆರೆಯುವಂತೆ, ಎಳೆ. Draws customers ಗಿರಾಕಿಗಳನ್ನು ಆಕರ್ಷಿಸುತ್ತದೆ, ಸೆಳೆಯುತ್ತದೆ. D. a deed of gift ದಾನಪತ್ರ ಬರೆ. D. a deep breath ನೀಳುಸಿರು ಎಳೆದುಕೊ. D. distinctions, comparisons (ಒಂದೊಂದಕ್ಕೆ, ಒಬ್ಬರೊಬ್ಬರಿಗೆ) ಭೇದ ಮಾಡು, ಹೋಲಿಸು. D. to an end ಮುಗಿಯುತ್ತಬರು ; ಮುಗಿ ; ಮುಗಿಸು. D. him out ಅವನ ಸಮಾಚಾರ, ಯೋಗ್ಯತೆ, ಕೋಪ, ಮೊ. ನ್ನು ಹೊರಪಡಿಸು, ಹೊರಡಿಸು ; ಅವನನ್ನು ಹೊರಕ್ಕೆ ಬರುವಂತೆ ಮಾಡು. D. in ಪುಸಲಾಯಿಸು ; ಸಿಕ್ಕಿಸಿಕೊ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಆಶೆ ಹುಟ್ಟಿಸಿ) ವಶಮಾಡಿಕೊ. (ಹಗಲು) ತೀರುತ್ತ, ಮುಗಿಯುತ್ತ, ಬರು ; (ಹಗಲು, ಅಹಃ ಪ್ರಮಾಣ) ದಿನ ದಿನಕ್ಕೆ ಕಡಮೆಯಾಗುತ್ತ ಬರು. D. inference, conclusion, from ಅದರಿಂದ ಅನುಮಾನ, ತೀರ್ಮಾನ, ಮಾಡು. D. inspiration ಸ್ಫೂರ್ತಿ ಪಡೆ. D. the line at ಗೆರೆ ಹಾಕು ; ಮಿತಿ ಕಲ್ಪಿಸು ; ಅಲ್ಲಿಂದ ಮುಂದಕ್ಕೆ ಹೋಗೆನೆನ್ನು. D. lots ಚೀಟಿಹಾಕಿ ಆಯು, ನಿರ್ಧರಿಸು. D. it mild (ರೂಪ.) ಮಿತಿ ಮೀರದಿರು ; ಉತ್ಪ್ರೇಕ್ಷೆ ಮಾಡದಿರು. D. off (ಸೇನೆಯನ್ನು) ಹಿಂದಕ್ಕೆ ಕರಸಿಕೊ ; (ಸೇನೆ, ಮೊ.) ಹಿಂದಕ್ಕೆ ಹೋಗು. D. on (ಆ ಮಾರ್ಗಕ್ಕೆ) ಸೆಳೆ ; ಉಂಟುಮಾಡು ; ತರು ; ಆಕರ್ಷಿಸು ; ಪುಸಲಾಯಿಸು ; ಹತ್ತಿರ ಸಾರು. D. on one's memory, resources ಜ್ಞಾಪಿಸಿಕೊ ; ಸಾಧನ ಸಂಪತ್ತನ್ನು ಉಪಯೋಗಿಸಿಕೊ. D. out ಹೊರಕ್ಕೆ ಸೆಳೆ, ತೆಗೆ ; (ಸೇನಾ ಭಾಗವನ್ನು) ಪ್ರತ್ಯೇಕಿಸು ; (ಸೇನೆಯನ್ನು) ಸಜ್ಜುಗೊಳಿಸು ; ವ್ಯೂಹ ಕಟ್ಟು. ಸಾವಕಾಶ ಮಾಡು ; ವಿಳಂಬ ಮಾಡು ; ಲಂಬಿಸು ; ಬೆಳಸು ; (ವಿಷಯವನ್ನು) ಸೆಳೆ, ಹೊರಡಿಸು ; ಮಾತಿಗೆಳೆ. (ತಕ್ಕ ರೀತಿಯಲ್ಲಿ) ಬರೆ. (ಅಹಸ್ಸು) ಹೆಚ್ಚುತ್ತಹೋಗು. D. a picture ಚಿತ್ರವನ್ನು ರೇಖಿಸು ; ಚಿತ್ರ ಬರೆ. D. ruin upon oneself ಕೇಡು ತಂದುಕೊ. D. one's salary ಸಂಬಳ ತೆಗೆದುಕೊ. D. one's sword against (ಒಬ್ಬನ) ಮೇಲೆ ಬೀಳು ; (ಒಬ್ಬನ) ಮೇಲೆ ಕತ್ತಿ ಹಿರಿ. D. him into talk ಅವನನ್ನು ಮಾತಿಗೆಳೆ. D. the tea, The tea draws ಚಹದ ಕಷಾಯ ಇಳಿಸು, ಇಳಿಯುತ್ತದೆ. D. him out of temptation ಅವನನ್ನು ದುಷ್ಪ್ರೇರಣೆಗಳಿಂದ ಹೊರಕ್ಕೆ ಸೆಳೆ. D. up ನೆಟ್ಟಗೆ ನಿಲ್ಲು ; ನಡೆದಿರು ; ಸಮಕ್ಕೆ ಬರು ; ನಿಲ್ಲು ; ನಿಲ್ಲಿಸು. (ಸೇನೆಯ ವಿಷಯದಲ್ಲಿ) ವ್ಯೂಹ ರಚಿಸು ; ವ್ಯೂಹಕಟ್ಟಿ ನಿಲ್ಲು. (ದಸ್ತಾವಜು, ಮೊ. ನ್ನು) ಬರೆ, ರಚಿಸು, ತಯಾರಿಸು (D. up a document). D. water from well ಬಾವಿಯಿಂದ ನೀರು ಸೇದು. D. wire (ಕಂಬಿಚ್ಚಿನಲ್ಲಿ) ತಂತಿಯೆಳೆ. I felt drawn to him ನಾನು ಅವನಿಂದ ಆಕರ್ಷಿತನಾದೆನು. The jury is drawn very fairly ಚೀಟಿಹಾಕಿ ನ್ಯಾಯದರ್ಶಿಗಳನ್ನು ಸರಿಯಾಗಿಯೇ ಆಯಲಾಗಿದೆ. Long-drawn agony ದೀರ್ಘ ಯಾತನೆ. Oil of sweet almonds newly drawn ಹೊಸದಾಗಿ (ಹಿಂಡಿ) ತೆಗೆದ ಬಾದಾಮಿಯೆಣ್ಣೆ. The sail draws ಹಡಗಿನ ಪಟ ಗಾಳಿಯಿಂದ ಉಬ್ಬಿಕೊಳ್ಳುತ್ತದೆ. The ship draws twenty feet of water ಹಡಗು ೨೦ ಅಡಿ ಆಳದ ನೀರಿನಲ್ಲಿ (ಮುಳುಗಿರುವ ಭಾಗವುಳ್ಳದ್ದಾಗಿ) ತೇಲುತ್ತದೆ. The tax draws well ತೆರಿಗೆ ಚೆನ್ನಾಗಿ ಬರುತ್ತದೆ. He drew my attention ಅವನು ನನ್ನ ಗಮನ ಸೆಳೆದನು. He drew his sword, pistol ಅವನು ಕತ್ತಿಯನ್ನು (ಒರೆಯಿಂದ) ಹಿರಿದನು, ಪಿಸ್ತೂಲನ್ನು (ಕೋಶದಿಂದ) ಸೆಳೆದನು. It drew after it great consequences ಅದು ಮಹತ್ತಾದ ಪರಿಣಾಮಗಳನ್ನುಂಟುಮಾಡಿತು. The rope drew taut ಹಗ್ಗ ಎಳೆದು ಬಿಗಿಯಾಯಿತು. They drew round the table ಅವರು ಮೇಜಿನ ಸುತ್ತಲೂ ಸೇರಿದರು. Drew the winner ಗೆಲ್ಲುಚೀಟಿಯನ್ನು ಆಯ್ದನು. **Drawback** (ನಾ.) ರಫ್ತುಮಾಡಿದ ಸರಕಿನಮೇಲೆ ಹಿಂದಕ್ಕೆ ಕೊಡುವ ಅಥವಾ ವಜಾಕೊಡುವ ಸುಂಕ ಅಥವಾ ಆಮದು ತೆರಿಗೆ : ನೋಡಿ ಸುಂಕ, ತೆರಿಗೆ; ವಜಾ ಕೊಟ್ಟುದ್ದು ; ನೋಡಿ (ಮಾಡಿದ್ದು). ನ್ಯೂನತೆ ; ಕೊರತೆ ; ಕುಂದು. ಪ್ರತಿಕೂಲ ; ಅಡ್ಡಿ ; ಅನಾನುಕೂಲ. D. lock (ಒಳ ಗುಬುಟೆಯ ಸಹಾಯದಿಂದ ಹಿಂದಕ್ಕೆ ಸೆಳೆಯಲಾಗುವ) ಏಗುರು ಸಲಾಕಿಯುಳ್ಳ ಬೀಗ. **Drawbridge** (ನಾ.) (ಒಂದು ಕೊನೆಯನ್ನು ಮೇಲಕ್ಕೆತ್ತಿ ಅಥವಾ ಸೆಳೆದು ಒಳಗೆ ಹೋಗಲು ತಡೆಮಾಡಬಹುದಾದ, ಅಥವಾ ನಾಲೆಯ, ನದಿಯ, ಹಾದಿಯಲ್ಲಿ ದೋಣಿ, ಮೊ. ವು ಹೋಗಲು ತೆರಪುಕೊಡುವ) ಕೀಲುಸೇತುವೆ; ಎತ್ತು— ; ಸೆಳೆ— ; ಎಳೆ—. **Draw-well** ಸೇದುಬಾವಿ. **Drawee** ಡ್ರಾಈ (ನಾ.) ಯಾರ ಮೇಲೆ ಹುಂಡಿ ಅಥವಾ ಚೆಕ್ಕು ಬರೆದಿದೆಯೊ ಅವನು ; ಹುಂಡಿಗೆ, ಚೆಕ್ಕಿಗೆ, ಹಣ ಕೊಡಬೇಕಾದವನು. **Drawer** (ನಾ.) (ಕ್ರಿಯಾರ್ಥಗಳಲ್ಲಿ). (ಪ್ರಾಚೀ. ಪ್ರ.) ಮದ್ಯದಂಗಡಿಯಲ್ಲಿ ಪೀಪಾಯಿಯಿಂದ ಮದ್ಯ ಸೆಳೆದು ತೆಗೆಯುವ ಸೇವಕ. (ಪೆಟ್ಟಿಗೆಯ) ಸೆಳೆಖಾನೆ [(Drawers or chest of drawers (Chest ನೋಡಿ)]. **Drawerful** (ನಾ.) ಸೆಳೆಖಾನೆ ತುಂಬು(ವಷ್ಟು). **Drawers** (ನಾ.) ಒಳ ಷರಾಯಿ ; ಇಜಾರು ; ಪಾಯಿಜಾಮೆ. **Drawing** (ನಾ.) (ಕ್ರಿಯಾರ್ಥಗಳಲ್ಲಿ). (ಬಣ್ಣವಿಲ್ಲದ ಅಥವಾ ಏಕ ವರ್ಣದ) ರೇಖನ (ಕಲೆ) [Out of d. ತಪ್ಪಾಗಿ ರೇಖಿಸಿ(ದ)] ರೇಖಾಕೃತಿ ; ನಕ್ಷೆ ; (ರೇಖನ) ಚಿತ್ರ. **D.-block** ರೇಖನಕ್ಕಾಗಿ ಮಾಡಿರುವ ಕಾಗದಗಳ(ನ್ನು ಒಂದು ಏಣಿನಲ್ಲಿ ಸ್ವಲ್ಪ ಮಾತ್ರ ಒಟ್ಟಿಗೆ ಅಂಟಿಸಿ ಸುಲಭವಾಗಿ ತೆಗೆಯಲಾಗುವಂತೆ ಮಾಡಿರುವ ಪುಸ್ತಕದಂಥ) ಕಟ್ಟು. **D.-board** ರೇಖನ ಮಾಡಲು (ನಕ್ಷೆಕಾಗದವನ್ನು ಹರವಿ ಬಂಧಿಸಲಾಗುವ) ಮಣೆ : ನಕ್ಷೆಯ ಮಣೆ ; ರೇಖನ ಫಲಕ. **D.-compass(es)** (ಒಂದು ಕಾಲಿನ ಕೊನೆಯಲ್ಲಿ ಸೀಸದ ಕಡ್ಡಿ ಅಥವಾ ಮಸಿಕಡ್ಡಿಯನ್ನು ಸಿಕ್ಕಿಸಲು ಏರ್ಪಾಡುಳ್ಳ) ನಕ್ಷೆಕೈವಾರ. **D.-pin** (ನಕ್ಷೆಕಾಗದವನ್ನು ಮಣೆಗೆ ಬಂಧಿಸುವ) ನಕ್ಷೆಸೂಜಿ. **D.-room** (ನಾ.) ಅತಿಥಿ ಅಭ್ಯಾಗತರನ್ನು ಬರಮಾಡಿಕೊಳ್ಳುವ ಕೊಠಡಿ ; ದಿವಾನ್‌ಖಾನೆ ; ಭೇಟಿ ಕೊಠಡಿ ; (ಮು., ಆಸ್ಥಾನದಲ್ಲಿ ರಾಣಿಗೆ) ಮಹಿಳೆಯರನ್ನು ಭೇಟಿ ಮಾಡಿಸುವುದು ; ವಿಹಿತ ಕ್ರಮದ ಭೇಟಿ. **Drawn-work** ಎಳೆತೆಗೆದು ಮಾಡುವ ಕಸೂತಿ ಕೆಲಸ. **Draw-plate** (ನಾ.) ತಂತಿಯನ್ನು ಎಳೆದು ತೆಳುವಾಗಿ ಮಾಡಲು ತಕ್ಕ ಕಂಡಿಗಳುಳ್ಳ ಉಕ್ಕಿನ ತಗಡುಬಿಲ್ಲೆ : ಕಂಬಚ್ಚು.

Draw (ನಾ.) ಎಳೆಯುವುದು ; ಎಳೆತ ; ಸೆಳೆತ ; ಆಕರ್ಷಣ ; ಆಕರ್ಷಕ ವಸ್ತು. ಚೀಟಿಹಾಕಿ ಆಯುವುದು ; ಚೀಟಿಹಾಕಿ ಮಾಡುವ (ಅದೃಷ್ಟದ) ವ್ಯಾಪಾರ. (ತೀರ್ಮಾನವಾಗದ) ಸಮ ಆಟ. ವಿಷಯ ಹೊರಡಿಸುವುದಕ್ಕಾಗಲಿ ತನ್ನ ಮೆಚ್ಚಿನ ವಿಷಯದಲ್ಲಿ ಮಾತಾಡುವಂತೆ ಎಳೆಯುವುದಕ್ಕಾಗಲಿ ಆಡಿದ್ದು, ಮಾಡಿದ್ದು.

Drawcánsir ಡ್ರಾಕ್ಯಾನ್ಸರ್ (ನಾ., ಗು.) ಶತ್ರು ಮಿತ್ರರಿಬ್ಬರಿಗೂ ಭಯಂಕರನಾದ(ವನು) : ಉಭಯ ಭಯಂಕರ ; ಭಯಗೊಳಿಸಿ ಕಾಡುವ ಪುಂಡ.

Drawl ಡ್ರಾಲ್ (ಕ್ರಿ., ನಾ.) ಸೋಮಾರಿತನದಿಂದ ಅಥವಾ ಬೇಕೆಂದು ಅತಿ ನಿಧಾನವಾಗಿ ಮಾತನಾಡು(ವುದು) ; ಎಳೆದು ಹೇಳು(ವುದು) ; ರಾಗವೆಳೆದು ಮಾತನಾಡು(ವುದು). ಅತಿ ನಿಧಾನವಾಗಿ, ಎಳೆದು, ಹೇಳಲ್ಪಡು. **Drawlingly** (ಕ್ರಿ. ವಿ.)

Dray ಡ್ರೇ (ನಾ.) ಹೆಚ್ಚಿನ ಭಾರ ಎಳೆಯುವುದಕ್ಕಾಗಿ ಮಾಡಿದ, ಪಕ್ಕಗಳಿಲ್ಲದ ತಗ್ಗು ಬಂಡಿ (ಮು., ಮದ್ಯಕಾರನದು). **D.-horse** ಬಲವಾದ ದೊಡ್ಡ ಕುದುರೆ. **Dráyman** (ನಾ.) ಮದ್ಯಕಾರನ ಬಂಡಿಯಾಳು.

Dread ಡ್ರೆಡ್ (ಕ್ರಿ. ಸಕ., ನಾ., ಗು.) ಬಹು ಭಯಪಡು ; ಬಹಳ ಹೆದರು ; ಭಯದಿಂದ ಕುಗ್ಗಿಹೋಗು, ನಡುಗು. ಬಹಳ ಭೀತಿಯಿಂದ ಎದುರು ನೋಡುತ್ತಿರು ; ನೆನೆದು ನಡುಗು. (ನಾ.) ಬಹಳ ಭಯ, ಭೀತಿ, ಅಂಜಿಕೆ, ದಿಗಿಲು ; ಕಟ್ಟಳುಕು ; ಭಯ ಭಕ್ತಿ (ಹುಟ್ಟಿಸತಕ್ಕದ್ದು). (ಗು.) ಭಯಪಡಿಸುವ ; ಭೀತಿಗೊಳಿಸುವ ; ಭಯಂಕರವಾದ ; ಭಯ ಭಕ್ತಿ ಹುಟ್ಟಿಸುವ. **Dreádful** (ಗು.) ಅತಿ ಭಯಂಕರವಾದ ; ಘೋರ ; ಭೀಕರ ; ಭಯ ಭಕ್ತಿ ಹುಟ್ಟಿಸುವ. (Penny d. ಭಯಂಕರ ವಿಷಯಗಳುಳ್ಳ ಒಂದಾಣೆಯ ಕಥೆಯ ಪುಸ್ತಕ). ತೊಂದರೆ ಕೊಡುವ ; ಬೇಸರ ಹಿಡಿಸುವ ; ಬಹಳ ಕೆಟ್ಟ ; ಬಹಳ ಉದ್ದವಾದ ; ಬಹಳ ಅಸಹ್ಯಕರವಾದ. **Dreádfully** (ಕ್ರಿ. ವಿ.)

Dreádnought ಡ್ರೆಡ್‌ನಾಟ್ (ನಾ.) ಬಿರುಗಾಳಿ ಮಳೆಗೆ ರಕ್ಷಣೆಯಾಗಿ ಹಾಕಿಕೊಳ್ಳುವ ದಪ್ಪಂಗಿ(ಯ ಬಟ್ಟೆ). (ಭಾರ ಹೊರುವುದರಲ್ಲಿಯೂ ಶಕ್ತಿಯಲ್ಲಿಯೂ ಹಿಂದಿನವಕ್ಕಿಂತಲೂ ಬಹಳ ಮುಂದುವರಿದ) ೨೦ನೆಯ ಶತಮಾನದ ಯುದ್ಧದ ಹಡಗು.

Dream ಡ್ರೀಮ್ (ನಾ.) ಕನಸು (ಬೀಳುವುದು); ಸ್ವಪ್ನ(ವಾಗುವುದು) (Waking d. ಎಚ್ಚರಗನಸು) ; ಮನಃಕಲ್ಪನೆ ; ಅಸಂಭವ ಕಲ್ಪನೆ ; ಮನೋರಾಜ್ಯ ; ಗಾಳಿಗೋಪುರ ; ಕನವರಿಕೆ ; ಹಂಬಲು ; ಬಯಕೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಗಲುಗನಸು (= Day-d.); ಸ್ವಪ್ನಸಾಧ್ಯವಾದದ್ದು ; ಸ್ವಪ್ನ ಪ್ರಾಯವಾದದ್ದು ; ಸ್ವಪ್ನಸುಂದರ ವಸ್ತು. **D.-reader** ಸ್ವಪ್ನಫಲ ಹೇಳುವವನು. **D.-world, -land** ಸ್ವಪ್ನ ಪ್ರಪಂಚ ; ಕನಸು ನಾಡು ; ಮನೋರಾಜ್ಯ ; ಕಲ್ಪನಾ ಪ್ರಪಂಚ. **Dreámless** (ಗು.) ; **Dreám-like** (ಗು.) ; **Dreámy** (ಗು.) (ಕಾವ್ಯ) ಸ್ವಪ್ನಮಯವಾದ ; ಸ್ವಪ್ನ ಶೀಲ ; ಮೂರು ಹೊತ್ತೂ ಯೋಚನೆಮಾಡುತ್ತಿರುವ ಸ್ವಭಾವದ ; ಭಾವ ಮಗ್ನ ; ಮನಃಕಲ್ಪನೆಯ ; ಕಾರ್ಯಪರನ(ವ)ಲ್ಲದ ; ಕಾರ್ಯ ರೂಪಕ್ಕೆ ಬಾರದ ; ಕನಸಿನಂಥ ; ಅಸ್ಪಷ್ಟವಾದ ; ಮಸುಕಾದ. **Dreámily** (ಕ್ರಿ. ವಿ.) ; **Dreáminess** (ನಾ.)

Dream (ಕ್ರಿ. ; ಭೂತ. Dreamt ಡ್ರೆಮ್ʻಟ್, -ed ಡ್ರೀಮ್ʻಡ್ ; ಭೂ. ಕೃ. Dreamt) ಕನಸು ಕಾಣು ; ಕನಸು ಬೀಳು (Dreamt a d. Did you d. it ? ಕನಸು ಕಂಡೆಯೇನು ?). ಕನಸಿನಲ್ಲಿಯಂತೆ ಭಾವಿಸಿಕೊ ; ಸಾಧ್ಯವೆಂದು ಭಾವಿಸು. (ನಿಷೇಧಾರ್ಥದಲ್ಲಿ) (Never dreamt of ಕನಸಿನಲ್ಲೂ ಭಾವಿಸಿರದ). ಭಾವ ಮಗ್ನನಾಗಿರು ; ಸವಿಗನಸು ಕಾಣುತ್ತಿರು ; ಚಟುವಟಿಕೆಯಿಲ್ಲದಿರು ; ಕಾರ್ಯಪರ ನಾಗದಿರು (D. away one's time ಕಲ್ಪನೆಯಲ್ಲೇ ಕಾಲ ಕಳೆ). **Dreámer** (ನಾ.)

Dreám-hole ಡ್ರೀಮ್ʻ ಹೋಲ್ (ನಾ.) (ಗೋಪುರ, ಮೊ. ಗಳಲ್ಲಿ ಬಿಟ್ಟಿರುವ) ಬೆಳಕುಗಂಡಿ.

Dreáry ಡ್ರಿಯರಿ, (ಕಾವ್ಯ) **Drear** ಡ್ರಿಯರ್ (ಗು.) ನಿರಾನಂದಕರ ವಾದ ; ಮಂಕು ಕವಿದ ; ಹಾಳು ಸುರಿಯುತ್ತಿರುವ ; ಉತ್ಸಾಹ ಶೂನ್ಯ ವಾದ. **Dreár(i)ly** (ಕ್ರಿ. ವಿ.) ; **Dreár(i)ness** (ನಾ.)

Dredge[1] ಡ್ರೆಜ್ʻ (ನಾ., ಕ್ರಿ.) ನದಿಯ ಅಥವಾ ಸಮುದ್ರದ, ತಳದಿಂದ ಚಿಪ್ಪುಮೀನುಗಳನ್ನೂ ಇತರ ನಿದರ್ಶನ ವಸ್ತುಗಳು, ಮೊ. ನ್ನೂ ಮೇಲಕ್ಕೆ ತರುವ, ಅಥವಾ ತಳದಿಂದ ಮಣ್ಣು, ಹೂಳು, ಮೊ. ನ್ನು ಎತ್ತಿಹಾಕುವ, ಸಲಕರಣೆ : ಹೂಳೆತ್ತುಯಂತ್ರ. (ಕ್ರಿ.) ಹೂಳೆತ್ತು ಯಂತ್ರದಿಂದ ಮೇಲಕ್ಕೆ ತರು, ಚೊಕ್ಕಟ ಮಾಡು, ಹೂಳು ತೆಗೆ ; ಹೂಳೆತ್ತುಯಂತ್ರವನ್ನುಪಯೋಗಿಸು. **Drédger**[1] (ನಾ.) ಹೂಳೆತ್ತು ಯಂತ್ರವನ್ನು ಉಪಯೋಗಿಸುವವನು ; ಚಿಪ್ಪುಮೀನನ್ನು ಎತ್ತಿತೆಗೆಯು ವುದಕ್ಕಾಗಿ ಉಪಯೋಗಿಸುವ ದೋಣಿ. ಹೂಳೆತ್ತು ಯಂತ್ರ.

Dredge[2] ಡ್ರೆಜ್ʻ (ಕ್ರಿ. ಸಕ.) (ಹಿಟ್ಟನ್ನೊ ಇತರ ಪುಡಿಯನ್ನೊ) ಉದುರಿಸು, ಎರಚು. **Dredging-box** = **Drédger**[2] (ನಾ.) ಹಿಟ್ಟು, ಮೊ. ಸೂಸುವುದಕ್ಕಾಗಿ ಸಣ್ಣ ಕಂಡಿಗಳನ್ನು ಮಾಡಿರುವ ಮುಚ್ಚಳವುಳ್ಳ ಪೆಟ್ಟಿಗೆ : ಸೂಸು ಡಬ್ಬಿ.

Dree ಡ್ರೀ (ಕ್ರಿ. ಸಕ.) (ಪ್ರಾಚೀ. ಪ್ರ.) ಸಹಿಸು ; ತಾಳಿಕೊ ; ಅನುಭವಿಸು (D. one's weird ಅದೃಷ್ಟಕ್ಕೆ ತಲೆಬಗ್ಗಿಸು ; ಬಂದದ್ದನ್ನನುಭವಿಸು)

Dreg ಡ್ರೆಗ್ (ನಾ. ; ಸಾ., ಬ. ವ. ದಲ್ಲಿ) (ದ್ರವದ) ತಳದಲ್ಲಿ ನಿಂತಿರು ವುದು ; ಗಸಿ ; ಗಷ್ಟು ; ಚರಟ (Drink, drain, to the dregs ಗಸಿಯ ವರೆಗೂ ಬಸಿದುಕೊ). ಅನುಪಯೋಗವಾದ ಭಾಗ ; ಕೆಲಸಕ್ಕೆ ಬಾರದ್ದು ; ಕಸ. (ಏ. ವ. ದಲ್ಲಿ) ಮಿಕ್ಕಿರುವ ಅಲ್ಪಸ್ವಲ್ಪ ; ಉಳಿಕೆ ; ಶೇಷ (Not a d. ಒಂದು ರವೆಯಷ್ಟೂ ಇಲ್ಲ). **Dréggy** (ಗು.) ಗಸಿಯಂಥ ; ಮಲಿನವಾದ ; ನಾರುವ.

Dreíbund ಡ್ರೈಬುಂಡ್ʻ (ನಾ.) [೧೮೮೨-೮೩ನೆಯ ಇಸವಿಯಲ್ಲಿ ಜರ್ಮನಿ, ಆಸ್ಟ್ರಿಯ ಮತ್ತು ಇಟಲಿಗೆ (ರಷ್ಯ ಮತ್ತು ಫ್ರಾನ್ಸಿಗೆ ವ್ಯತಿರಿಕ್ತ ವಾಗಿ) ಆದ] ತ್ರಿರಾಜ್ಯ ಮೈತ್ರಿ.

Drench ಡ್ರೆನ್ʻಷ್, ಡ್ರೆಂಚ್ (ನಾ., ಕ್ರಿ. ಸಕ.) ಪ್ರಾಣಿಗೆ ಕುಡಿಸಿದ ಒಂದು ಸಲದ ಔಷಧ. (ಪ್ರಾಚೀ. ಪ್ರ.) ಔಷಧದ (ಅಥವಾ ವಿಷದ) ದೊಡ್ಡ ಕುಡಿತ. ನೆನೆಯುವುದು ; ನೆನಸುವುದು ; ತೋಯಿಸುವುದು ; ಸುರಿಯುವುದು ; ಸುರಿತ (A d. of rain ಮಳೆಯ ನೆನೆತ). (ಕ್ರಿ.) ಹೆಚ್ಚಾಗಿ ಕುಡಿಸು. (ಪ್ರಾಣಿಗೆ ಔಷಧವನ್ನೊ ದ್ರವವನ್ನೊ) ಬಲವಂತದಿಂದ ಕುಡಿಸು ; ಗೊಟ್ಟ ಹೊಯ್ಯಿ. (ಕುರಿಯನ್ನು ತೊಳೆಯುವಲ್ಲಿ, ಚರ್ಮ ಹದಮಾಡುವಲ್ಲಿ) ಚೆನ್ನಾಗಿ ತೋಯಿಸು ; ಸುರಿಯುವ ನೀರಿನಲ್ಲಿ ಮೈಯೆಲ್ಲ ತೋಯಿಸು ; ಅದ್ದಿಡು (Drenched *with*, *by*). **Dréncher** (ನಾ.) (ಕ್ರಿಯಾರ್ಥ ಗಳಲ್ಲಿ). ನೆನೆ ಮಳೆ ; ನೀರಿನ ಧಾರೆ. ಪ್ರಾಣಿಗೆ ಔಷಧ ಕುಡಿಸುವ ಸಲಕರಣೆ ; ಗೊಟ್ಟ.

Drésden ಡ್ರೆಸ್ʻಡೆನ್ʻ (ನಾ.) D. china, porcelain ಸ್ಯಾಕ್ಸನಿ ಪ್ರಾಂತದಲ್ಲಿ (ಮು., ೧೮ನೆಯ ಶತಮಾನದಲ್ಲಿ) ತಯಾರಾದ ಪಿಂಗಾಣಿ (ಸಾಮಾನು)

Dress[1] ಡ್ರೆಸ್ʻ (ಕ್ರಿ.) (ಸೈನ್ಯ : ದಳ, ಮೊ. ಗಳ ವರಿಸೆಯಲ್ಲಿ ಅಥವಾ ಸೈನಿಕರ ಸಾಲಿನಲ್ಲಿ) ಸಾಲುನಿಲುವನ್ನು ಸರಿಮಾಡು ; ಸಾಲು ಸರಿಯಾಗಿ ನಿಲ್ಲಿಸು. ಸಾಲು ಸರಿಯಾಗಿ ನಿಲ್ಲು. ಅಲಂಕರಿಸು ; ಸಿಂಗರಿಸು ; ಸಜ್ಜುಮಾಡು ; ಉಡುಪು ಹಾಕು, ಹಾಕಿಕೊ, ತೊಟ್ಟುಕೊ ; ಉಡಿಸು ; ತೊಡಿಸು (Dressed in black ಕಪ್ಪುಡಿಗೆ ತೊಟ್ಟ. D. well ಅಂದವಾಗಿ ಉಡುಪು ಹಾಕಿಕೊ. D. for dinner ಊಟದ ತೊಡಿಗೆ ತೊಟ್ಟುಕೊ. D. up ವಿಶೇಷವಾಗಿ ವಸ್ತ್ರಾಲಂಕಾರ ಮಾಡು, ಮಾಡಿಕೊ ; ವೇಷದುಡಿಗೆ ತೊಡು, ತೊಡಿಸು. D. out ಠೀವಿಯಾಗಿ, ಸೊಗಸು ಕಾಣುವಂತೆ, ಉಡುಪು ಹಾಕಿಕೊ). (ನಾಟಕಕ್ಕೆ) ಉಡುಪು ಹವಣಿಸು. (ಗಾಯಕ್ಕೆ; ಗಾಯ ಪಡೆದವನಿಗೆ) ಔಷಧ (ಮುಲಾಮು) ಹಚ್ಚು ; ತೊಳೆದು, ಔಷಧ ಹಚ್ಚಿ, ಬಟ್ಟೆ ಕಟ್ಟು. (ತೊಳೆದು, ಒಪ್ಪಮಾಡಿ, ನಯಗೊಳಿಸಿ) ಸಿದ್ಧಪಡಿಸು, ಅಣಿಮಾಡು. ಕುದುರೆಯನ್ನು ಖರಾರಿನಿಂದ ಉಜ್ಜು. ತೊಗಲನ್ನು ನಯಮಾಡು. [(ರೂಪ.) D. down ಹೊಡೆ ; ಚೆಚ್ಚು ; ಛೀಪೆಟ್ಟು ಹಾಕು]. (ಹತ್ತಿಯನ್ನು) ಎಕ್ಕು. (ಬಟ್ಟೆಗೆ) ನಯ ಕೊಡು. (ಕಟ್ಟಡದ ಕಲ್ಲನ್ನು) ಕೆತ್ತಿ ನಯಮಾಡು. (ಆಹಾರವನ್ನು) ಅಡು, ತಯಾರಿಸು. (ಸಸಿಯನ್ನು) ಸವರು, ಕತ್ತರಿಸಿ ಸರಿಮಾಡು. ಗೊಬ್ಬರ ಹಾಕು. **Drésser**[1] (ನಾ.) (ಅಡಿಗೆಮನೆಯಲ್ಲಿ ತಟ್ಟೆ, ಮೊ. ನ್ನಿಡಲು ಬಡುಗಳುಳ್ಳ) ಪಕ್ಕನಿಲು. **Drésser**[2] (ನಾ.) (ಕ್ರಿಯಾರ್ಥ ಗಳಲ್ಲಿ). ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸಕನ ಸಹಾಯಕ. **Dréssership** (ನಾ.) ; **Dréssing** (ನಾ.) (ಕ್ರಿಯಾರ್ಥಗಳಲ್ಲಿ). ಬೈಯುವುದು ; ಬೈಗುಳು ; ಛೀಪೆಟ್ಟು ಹಾಕುವುದು ; ಹೊಡೆಯುವುದು ; ಹೊಡೆತ. (ಚಟ್ನಿ, ಮಸಾಲೆ, ಸಂಬಾರ, ಮೊ.) ವ್ಯಂಜನ ಪದಾರ್ಥ. ಗೊಬ್ಬರ. ಗಾಯಕ್ಕೆ ಕಟ್ಟು, ಮುಲಾಮು, ಮೊ. ವು. (ಬಟ್ಟೆ) ಮುರುಮುರಿ ಯಾಗುವುದಕ್ಕಾಗಿ ಹಾಕುವ ಗಂಜಿ, ಮೊ. ಗಟ್ಟಿಮಾಡುವ ಪದಾರ್ಥ. **D.-bell** ಊಟಕ್ಕೆ ಉಡುಪು ತೊಡಬೇಕೆಂಬ ಸೂಚನೆಯ ಗಂಟೆ : ಉಡುಪು ಗಂಟೆ. **D.-case** ಅಲಂಕಾರ ಸಾಮಗ್ರಿಯ ಪೆಟ್ಟಿಗೆ. **D.-gown** ಅಲಂಕಾರ ಮಾಡಿಕೊಳ್ಳುವಾಗ ಅಥವಾ ಸಾದಾ ಉಡುಪಿ ನಲ್ಲಿರುವಾಗ ಹಾಕಿಕೊಳ್ಳುವ ಮೇಲಂಗಿ. **D.-room** ಉಡುಪು ಹಾಕಿಕೊಳ್ಳುವ, ಅಲಂಕಾರ ಮಾಡಿಕೊಳ್ಳುವ, ಕೋಣೆ. **D.-table** ಕನ್ನಡಿ, ಮೊ. ಇಟ್ಟಿರುವ ಅಲಂಕಾರಮಾಡಿಕೊಳ್ಳುವ ಮೇಜು.

Dress[2] ಡ್ರೆಸ್ʻ (ನಾ.) ಬಟ್ಟೆಬರೆ ; ಉಡುಪು ; ಉಡಿಗೆ ತೊಡಿಗೆ [Full d. (ವಿಶೇಷ ಸಂದರ್ಭಗಳಲ್ಲಿ ಹಾಕಿಕೊಳ್ಳುವ) ಪೂರ್ತಿಯುಡುಪು ; ಉತ್ಸವ ದುಡುಪು ; ಹಬ್ಬದುಡಿಗೆ. Evening d. or d. ಸಂಜೆಯ ಗೋಷ್ಠಿಗಳಲ್ಲಿ ಅಥವಾ ಔತಣದೂಟದಲ್ಲಿ ತೊಡುವ ಉಡುಪು : ಔತಣದುಡುಪು. Morning d. ಸಾದಾ ಉಡುಪು. A d. ಹೆಂಗಸಿನ ಮೇಲುಡುಪು]. ಹೊರ ಹೊದಿಕೆ ; ವೇಷ ; ಹೊರ ರೂಪು (Birds in their winter d. ಹಕ್ಕಿಗಳು ಚಳಿಗಾಲದ ತಮ್ಮ ಮೈಹೊದಿಕೆಯಲ್ಲಿ). **D.-circle** ನಾಟಕಶಾಲೆಯಲ್ಲಿ ಮುಂದಿನ ಸಾಲು (ಹಿಂದಿನ ಕಾಲದಲ್ಲಿ, ಈ ಸಾಲಿನಲ್ಲಿ ಕುಳಿತುಕೊಳ್ಳುವವರು ಸಂಜೆಯುಡುಪನ್ನು ಹಾಕಿಕೊಳ್ಳಬೇಕಾಗಿದ್ದಿತಂತೆ). **D.-guard** (ಉಡುಪು ಕೆಡದಂತೆ ಬೈಸಿಕಲ್, ಮೊ. ವಾಹನಗಳಲ್ಲಿ ಇಟ್ಟಿರುವ) ಉಡುಪು ಕಾಪು. **D.-improver** ಹೆಂಗಸಿನ ಲಂಗವನ್ನು ಬೆನ್ನಿನ ಕಡೆ ಉಬ್ಬಿಸಿ ಅಂದವಾಗಿ ತೋರಿಸುವ ಸಲಕರಣೆ. **Dress-maker, Dressmaking** (ನಾ.) ಹೆಂಗಸರ ಉಡುಪುಗಳನ್ನು ತಯಾರಿಸುವವಳು, — ತಯಾರಿಸುವುದು. **D.-rehearsal** ವೇಷ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಕಿಕೊಂಡು ಮಾಡುವ ಕೊನೆಯ ಸಲದ ನಾಟಕಾಭ್ಯಾಸ. **Dréssy** (ಗು.) ಉಡುಪಿನಲ್ಲಿ ಠೀಕಾದ, ಸೊಗಸಾದ ; ಉಡುಪಿನಲ್ಲಿ ಪ್ರೀತಿಯುಳ್ಳ ; (ಉಡುಪು) ನೀಟಾದ ; ಠೀವಿಯ ; ಸೊಗಸಿನ. **Dréssiness** (ನಾ.)

Drew. Draw ಧಾತುವಿನ ಭೂತ ರೂಪ.

Dríbble ಡ್ರಿಬ್‌ಲ್ (ಕ್ರಿ., ನಾ.) ತೊಟ್ಟಿಕ್ಕು ; ತೊಟ್ಟಿಕ್ಕಿಸು ; ಹನಿ ಹನಿಯಾಗಿ, ಬೀಳು, ಬೀಳಿಸು ; ಹನಿ , ಹನಿಸು. ತೊಟ್ಟು ತೊಟ್ಟಾಗಿ ಬೀಳುವುದು ; ತೊಟ್ಟು ; ಹನಿ. (ಮಗು, ಬೆಪ್ಪ, ಮೊ. ರ ವಿಷಯದಲ್ಲಿ) ಜೊಲ್ಲು ಸುರಿಸು. (ಕಾಲ್ಚೆಂಡಾಟ) (ಚೆಂಡನ್ನು) ಮುಂದಕ್ಕೆ ಸ್ವಲ್ಪ ಸ್ವಲ್ಪವಾಗಿ ಒಬ್ಬ ಆಟಗಾರನು ಅಥವಾ ಇಬ್ಬರು ಆಟಗಾರರು ಪರ್ಯಾಯವಾಗಿ ಉರುಳಿಸಿಕೊಂಡು ಹೋಗು(ವುದು). (ಬಿಲಿಯರ್ಡ್ಸ್ ಆಟ) ಚೆಂಡನ್ನು ಮೇಜಿನ ಜೇಬಿಗೆ ಬಹಳ ನಿಧಾನವಾಗಿ ಉರುಳಿಸು, (ಚೆಂಡು) ಉರುಳು. **Dríbbler** (ಮು., ಕಾಲ್ಚೆಂಡಾಟದಲ್ಲಿ) ಚೆಂಡನ್ನು ಮೆಲ್ಲ ಮೆಲ್ಲಗೆ ಉರುಳಿಸಿಕೊಂಡುಹೋಗುವವನು. **Dríb(b)let** (ನಾ.) ಸ್ವಲ್ಪ ಮೊತ್ತ ; ತುಸ ; ಕೊಂಚ ; ತೊಟಕು ; ಹನಿ (By dribblets ತೊಟಕು ತೊಟಕಾಗಿ, ಸ್ವಲ್ಪ ಸ್ವಲ್ಪವಾಗಿ)

Dríer, etc. Dry ನೋಡಿ.

Dríft ಡ್ರಿಫ್ಟ್ (ನಾ.) ಪ್ರವಾಹದಲ್ಲಿ, (ಗಾಳಿಯ) ಹರಿವಿನಲ್ಲಿ, ಹೊಡೆದುಕೊಂಡು ಹೋಗುತ್ತಿರುವುದು ; ನಿಧಾನವಾದ, ಮಂದವಾದ, ಹರಿವು, ಪ್ರವಾಹ. (ನಾವೆ) (ಸೆಳವುಗಳಿಂದ, ಪ್ರವಾಹಗಳಿಂದ, ಹಡಗಿನ) ಮಾರ್ಗ ಚ್ಯುತಿ, ದಿಕ್ಚ್ಯುತಿ, ಮಾರ್ಗ ತಪ್ಪಿಹೋಗುವುದು. (ಸುರುಳಿಗೋವಿಯಿಂದ ಹಾರಿಸಿದ) ಗುಂಡಿಗೆ (ಕ್ಷಿಪಣಿಗೆ) ತನ್ನ ಭ್ರಮಣದಿಂದಲೂ ವಾಯುವಿನ ಚಲನ ಮತ್ತು ಘರ್ಷಣದಿಂದಲೂ ಆದ ದಿಕ್ಚ್ಯುತಿ. (ಅರಣ್ಯದ ಕಾಯಿದೆ) ದನಗಳನ್ನು ಒಂದು ಗೊತ್ತಾದ ದಿನ, ಒಂದು ಗೊತ್ತಾದ ಸ್ಥಳಕ್ಕೆ, ಸ್ವಾಮಿತ್ವ ನಿರ್ಧರ (ನಿರ್ಣಯ), ಮೊ. ಕ್ಕಾಗಿ ಅಟ್ಟಿಕೊಂಡು ಹೋಗುವುದು. (ಸ್ವಾಭಾವಿಕವಾದ, ಗೋಚರಕ್ಕೆ ಬಾರದ) ಪ್ರವೃತ್ತಿ, ಒಲವು. ಸಂದರ್ಭಕ್ಕಾಗಿ ಕಾದುಕೊಂಡಿರುವುದು ; ಗೊತ್ತಿಲ್ಲದಿರುವುದು ; ನಿಷ್ಕಾರ್ಯ ; ಅನಿಶ್ಚಯ. [The policy of d. (ತಿರಸ್ಕಾರವಾಗಿ) ಅನಿಶ್ಚಿತ, ಸಂಕಲ್ಪ ಶೂನ್ಯ, ನೀತಿ ; ಯಾದೃಚ್ಛಿಕ ನೀತಿ]. (ಒಬ್ಬ ವ್ಯಕ್ತಿಯ ಅಥವಾ ಆತನ ನುಡಿಗಳ) ಅಭಿಪ್ರಾಯ, ಉದ್ದೇಶ, ಅರ್ಥ, ತಾತ್ಪರ್ಯ, ಆಶಯ, ಗುರಿ. ಮಳೆಯ ಹೊಡೆತ ; ಗಾಳಿಹೊಡೆತ. ಹೊಡೆದುಕೊಂಡು ಹೋಗುವ ರಾಶಿ. ಗಾಳಿಹೊಡೆತದಿಂದ ಒಟ್ಟುಗೂಡಿದ ಹಿಮರಾಶಿ, ಮರಳು, ಮೊ. ವು (**D.-ice, -wood**); ನೀರಿನ ಪ್ರವಾಹ ಹೊಡೆದುಕೊಂಡುಬಂದು ಸೇರಿಸಿದ ಪದಾರ್ಥ. (ಭೂ. ವಿ.) ನೀರಿನ ಪ್ರವಾಹದಿಂದ ಅಥವಾ ಗಾಳಿಯ ಹೊಡೆತದಿಂದ ನೆಲದಮೇಲೆ ಸೇರಿದ ಒಟ್ಟಿಲು. (ಹೆರಿಂಗ್ ಮೊ. ಮೀನುಗಳನ್ನು ಹಿಡಿಯುವುದಕ್ಕಾಗಿ) ಸಮುದ್ರದ ಉಬ್ಬರವಿಳಿತಗಳು ಹೊಡೆದುಕೊಂಡು ಹೋಗುವಂತೆ ಬಿಟ್ಟ ದೊಡ್ಡ ಬಲೆ ; ಕೊಚ್ಚುಬಲೆ (Also, **D.-net**). (ಗಣಿ) ಖನಿಜದ ಧಾರೆಯನ್ನನುಸರಿಸಿಹೋಗುವ ಸಮತಲ ಮಾರ್ಗ ; (ಖನಿಜ) ಧಾರಾ ಸುರಂಗ. (ದ ಆಫ್ರಿಕ) ಹೊಳೆಹಾಯುವ ಸ್ಥಳ ; ಹಾಯಿಗಡ ; ಕಡವು. ಲೋಹದಲ್ಲಿ ಕಂಡಿಮಾಡುವುದಕ್ಕಾಗಲಿ, ಕಂಡಿಯನ್ನು ಅಗಲ ಮಾಡುವುದಕ್ಕಾಗಲಿ, ಉಪಯೋಗಿಸುವ ಆಯುಧ ; ಲೋಹ ಬೈರಿಗೆ. **D.-anchor** = Drag-anchor.

Drift (ಕ್ರಿ.) [ನೀರಿನ ಪ್ರವಾಹದಲ್ಲಿ(ಯಂತೆ), ಗಾಳಿಯ ಹೊಡೆತದಲ್ಲಿ (ಯಂತೆ)] ಹೊಡೆದುಕೊಂಡುಹೋಗು. (ಪ್ರವಾಹ) ಕೊಚ್ಚಿಕೊಂಡು ಹೋಗು ; ಹೊಡೆದುಕೊಂಡುಹೋಗು. ಯಾವ ಉದ್ದೇಶವೂ ಇಲ್ಲದೆ, ಸಂದರ್ಭ ಎಳೆದಂತೆ, ಹೋಗುತ್ತಿರು. ಗಾಳಿ(ಯಿಂದ) ರಾಶಿಗಳಾಗಿ ಒಟ್ಟುಗೂಡಿಸು, ಒಟ್ಟುಗೂಡು ; ಪ್ರವಾಹ ಬಂದು (ಹೊಲ, ರಸ್ತೆ, ಮೊ. ನ್ನು) ಮುಚ್ಚಿಬಿಡು. (ಲೋಹದಲ್ಲಿ) ಕಂಡಿ ಮಾಡು, ಕಂಡಿಯನ್ನು ಅಗಲಮಾಡು. **Dríftage** ಡ್ರಿಫ್ಟೆಜ್ (ನಾ.) ಕೊಚ್ಚಿಕೊಂಡು, ಹೊಡೆದುಕೊಂಡು, ಹೋಗುವುದು ; ಕೊಚ್ಚಿಕೊಂಡು ಬಂದದ್ದು ; ಹೊಡೆದುಕೊಂಡು ಬಂದದ್ದು. **Drífter** (ನಾ.) ಹೊಡೆದುಕೊಂಡು ಹೋಗುವವನು (ವದು) ; ಕೊಚ್ಚುಬಲೆ ಹಾಕಿ ಮೀನುಹಿಡಿಯುವ ದೋಣಿ.

Drill[1] ಡ್ರಿಲ್ (ನಾ., ಕ್ರಿ.) ಕಂಡಿ ಕೊರೆ(ಯುವ ಮೊಳೆ) ; ಬೈರಿಗೆ (ಹಿಡಿ) ; ಬೈರಿಗೆ ಯಂತ್ರ (D. through ಪೂರಾ ಕಂಡಿಯಾಗು, ಕಂಡಿ ಮಾಡು). ('ಆಯ್‌ಸ್ಟರ್' ಎಂಬ ಮೃದ್ವಂಗಿಯ ಚಿಪ್ಪನ್ನು) ಕಂಡಿಕೊರೆಯುವ ಚಿಪ್ಪುಮೀನು. ಕವಾಯತು ; ಸೈನ್ಯ ಶಿಕ್ಷಣ. [D.-sergeant ಸಿಪಾಯಿಗಳಿಗೆ ಕವಾಯತು ಕಲಿಸುವ ಅಧಿಕಾರಿ (ರೂಪ. ಸಹ)]. (ರೂಪ.) ಕಠಿನ ನಿಯಮ ; ಶಿಸ್ತು ; ದಿನಚರಿಯ ಕಟ್ಟು. (ಕ್ರಿ.) ಶಿಸ್ತಿಗೆ ಒಳಪಡು, ಒಳಪಡಿಸು ; ಶಿಸ್ತಿನ ಶಿಕ್ಷಣ ಪಡೆ ; ಕವಾಯತು ಮಾಡಿಸು, ಕಲಿಸು. D. him in what he has to say ಅವನು ಹೇಳಬೇಕಾದುದನ್ನು ಗಟ್ಟಿಮಾಡಲು ತಕ್ಕ ಶಿಕ್ಷಣ ಕೊಡು, ತರಬೇತು ಮಾಡು.

Drill[2] ಡ್ರಿಲ್ (ನಾ., ಕ್ರಿ. ಸಕ.) ಬೀಜ ಬಿತ್ತಲು ಮಾಡಿದ ಸಣ್ಣ ನೇಗಿಲುಸಾಲು ; ಇಂಥ ಸಾಲುಗಳುಳ್ಳ ದಿಬ್ಬಸಾಲು ; ಹೀಗೆ ಬಿತ್ತಿ ಹುಟ್ಟಿದ ಸಸಿಗಳ ಸಾಲು. ಸಾಲು ಮಾಡಿ, ಬಿತ್ತಿ, ಮಣ್ಣುಮುಚ್ಚುವ ಯಂತ್ರ ; ಕೂರಿಗೆ (ಯಂತ್ರ). (ಕ್ರಿ.) ಕೂರಿಗೆಯಿಂದ (— ಯಂತ್ರದಿಂದ) ಬಿತ್ತು ; ನೇಗಿಲುಸಾಲಿನಲ್ಲಿ ನೆಡು, ಬಿತ್ತು.

Drill[3] ಡ್ರಿಲ್ (ನಾ.) ಒಂದು ಜಾತಿಯ ದೊಡ್ಡ ಕೋತಿ.

Drill[4] ಡ್ರಿಲ್ (ನಾ.) ಮೂಲೆನೆಯ್ಗೆಯ ಒಂದು ತೆರದ ಒರಟುಬಟ್ಟೆ : ಡ್ರಿಲ್‌ಬಟ್ಟೆ.

Dríly. Dry ನೋಡಿ.

Drink ಡ್ರಿಂಕ್ [ಕ್ರಿ. ; ಭೂತ. Drank ಡ್ರ್ಯಾಂಕ್ ; ಭೂ. ಕೃ. Drunk ಡ್ರಂಕ್, (ಕಾವ್ಯ) Drunken] ಕುಡಿ ; ಈಂಟು (ಗ್ರಾಂ.). (ಸ್ಪಾ ಎಂಬ ಸ್ಥಳದಲ್ಲಿ ದೊರೆಯುವಂಥ ಖನಿಜಮಿಶ್ರವಾದ ನೀರನ್ನು ಆರೋಗ್ಯಕ್ಕಾಗಿ) ಕುಡಿ. (D. off, up ಎಲ್ಲವನ್ನೂ ಒಂದೇ ಸಲ ಕುಡಿದುಬಿಡು). (ಗಿಡಗಳು, ಸಚ್ಛಿದ್ರ ವಸ್ತುಗಳು, ಮೊ. ವು ತೇವವನ್ನು) ಹೀರು, ಹೀರಿಕೊ (ಸಾ., *up, in* ಉಪ. ದೊಡನೆ). (ರೂಪ.) (D. in ಹರ್ಷದಿಂದ ಅವಲೋಕಿಸು, ಆಲೋಚಿಸು, ಕಿವಿಗೊಟ್ಟು ಕೇಳು). ಕುಡಿದು (ಪಾತ್ರೆಯನ್ನು) ಬರಿದುಮಾಡು (D. the cup of pain). (ಬಂದ ಕೂಲಿ, ಮೊ. ನ್ನು) ಕುಡಿತಕ್ಕೆ ಹಾಕು; ಮದ್ಯ ಕುಡಿ (ಸಾ., ಮಿತಿ ಮೀರಿ, ಅಮಲೇರುವಂತೆ) ; ಕುಡುಕನಾಗಿರು. [D. deep ಪೂರ್ತಿ ಕುಡಿ ; (ಮದ್ಯವನ್ನು) ಅತಿಯಾಗಿ ಕುಡಿ]. D. hard, heavily, like a fish ಮಿತಿಮೀರಿ ಕುಡಿ. Drinking-bout ಕುಡಿತದ ಸ್ಪರ್ಧೆ, ಮೇಲಾಟ, ಪಂದ್ಯ. Drinking-water ಕುಡಿಯುವ ನೀರು. D. oneself to death ಕುಡಿದು ಕುಡಿದು ಸಾಯಿ. D. oneself out of a situation ತೊಂದರೆ, ಕೇಡು, ಬಂದಾಗ ಕುಡಿದು ಮನಸ್ಸಿಗೆ ಅಂಟದಂತೆ ಮಾಡಿಕೊ. D. down or under the table ಕುಡಿತದಲ್ಲಿ ಸ್ವಾಧೀನ ತಪ್ಪದಿರು. D. to ನಂಬಿಕೆ ಕೊಡಲು, ಶುಭ ಕೋರಲು, ಕ್ಷೇಮವನ್ನು ಬಯಸಿ, ಕುಡಿ]. ಕುಡಿದು (ಒಬ್ಬನಿಗೆ) ಮೇಲನ್ನು ಕೋರು [D. one's health (ಒಬ್ಬನು) ಆರೋಗ್ಯವಾಗಿರಲೆಂದು ಹರಸಿ ಕುಡಿ. D. success or confusion to (ಒಬ್ಬನಿಗೆ) ಜಯವಾಗಲೆಂದು, ಕೇಡು ಬರಲೆಂದು, ಕುಡಿ]. (-) **Drínker** (ನಾ.) ಕುಡಿಯುವವನು ; ಕುಡುಕ. **Drunk** (ಗು., ನಾ.) ಕುಡಿದು ಅಮಲೇರಿದ [Beastly, blind, dead, half, &c. d. D. as a fiddler or lord. (ರೂಪ.) D. with joy, success, rage ಹರ್ಷದಿಂದ, ಜಯದಿಂದ, ಕೋಪದಿಂದ, ಮೈಮರೆತ, ಪರವಶನಾದ.] (ಅಸಂ.) ಕುಡಿತದ ಹುಚ್ಚು. (ಪೋಲೀಸಿನವರ ಆಪಾದನೆಯ ಪಟ್ಟಿಯಲ್ಲಿ) ಕುಡಿತ, ಕುಡಿತದ ಅಪರಾಧಿ ; ಕುಡಿತದ ಅಪರಾಧ ಹೊರಿಸಲ್ಪಟ್ಟವನು ; ಕುಡುಕ. **Drúnkard** (ನಾ.) ಕುಡುಕ. **Drúnken** (ಗು.) ಕುಡಿದು ಅಮಲೇರಿದ ; ಕುಡಿತಕ್ಕೆ ಬಿದ್ದ ; ಸದಾ ಕುಡಿದಿರುವ ; ಕುಡಿತದಿಂದಾದ ; ಕುಡಿತದ ಚಿಹ್ನೆಯ (D. frolic ಕುಡಿತದ ಚೆಲ್ಲಾಟ ; D. brawl ಕುಡಿತದ ರಂಪ). **Drúnkenly** (ಕ್ರಿ. ವಿ.) ; **Drúnkenness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Drink (ನಾ.) ಕುಡಿದ, ಹೀರಿಕೊಂಡ, ದ್ರವ ; ಪಾನೀಯ ; ಕುಡಿಯುವ ಪದಾರ್ಥ ; ಪಾನದ್ರವ್ಯ ; ಪಾನ ; ಕುಡಿತ ; ಅಮಲೇರುವ ಪಾನ ; ಮದ್ಯ ; ಕಳ್ಳು (Strong d.) ; ಮಿತಿ ಮೀರಿ (ಮದ್ಯ) ಕುಡಿಯುವುದು ; ಅತಿ ಕುಡಿತ [On the d. ಕುಡಿತಕ್ಕೆ ಬಿದ್ದು. In d. ಕುಡಿದು (ಅಮಲೇರಿ)]. ಒಂದು ಕುಡಿತ ; ಒಂದು ಬಟ್ಟಲು (ಪಾನ). D.-offering ಕಳ್ಳೆರೆತ ; ಮಧು ಸಮರ್ಪಣ. **Drínkable** (ಗು., ನಾ.) ಕುಡಿಯಬಹುದಾದ ; ಪಾನ ಯೋಗ್ಯ ; (ಬ. ವ. ದಲ್ಲಿ) ಕುಡಿಯಲು ಯೋಗ್ಯವಾದ ಪಾನೀಯಗಳು. **Drínkless** (ಗು.) ಕುಡಿತವಿಲ್ಲದ.

Drip ಡ್ರಿಪ್ (ಕ್ರಿ., ನಾ.) ಹನಿ ; ಹನಿಸು ; ಹನಿ ಹನಿಯಾಗಿ ಬೀಳು ; ತೊಟ್ಟಿಕ್ಕು. (ರಕ್ತ, ಮೊ. ಗಳಿಂದ ತೊಯ್ದು) ತೊಟ್ಟಿಕ್ಕು (Dripping wet ತೊಟ್ಟಿಕ್ಕುವಷ್ಟು ನೆನೆದಿರುವ). (ನಾ.) ಹನಿಯುವುದು ; ತೊಟ್ಟಿಕ್ಕುವುದು ; ತೊಟ್ಟಿಕ್ಕುವ ದ್ರವ ; ಹನಿ ; ತೊಟ್ಟು. (ವಾ. ಶಾ.) ಕೆಳಗೆ ಮಳೆನೀರು ಸುರಿಯದಂತೆ ಹಾಕಿರುವ ಸೂರು : ಮುಂಜೂರು. **D.-moulding, Drípstone** ಕಿಟಕಿಯ ಅಥವಾ ಬಾಗಿಲಿನ ಮೇಲಿನ ಮುಂಜೂರು. **D.-drop** ಎಡೆಬಿಡದೆ ತಟ ತಟನೆ ತೊಟ್ಟಿಕ್ಕುತ್ತಿರುವುದು. **Dríppy** (ಗು.) (ಮಳೆ) ಹನಿಯುತ್ತಿರುವ, ಜಿನುಗುತ್ತಿರುವ. **Drípping** (ನಾ.) (ಕ್ರಿಯಾರ್ಥಗಳಲ್ಲಿ). ಸುಡುವ ಮಾಂಸದಿಂದ ತೊಟ್ಟಿಕ್ಕುವ ಕೊಬ್ಬು, ನೆಣ (ಇದು ಆಹಾರಕ್ಕಾಗಿಯೂ ಆಹಾರಪದಾರ್ಥಗಳನ್ನು ಕರಿಯುವುದಕ್ಕಾಗಿಯೂ ಉಪಯೋಗ). **Díppings** (ನಾ., ಬ. ವ.) ತೊಟ್ಟಿಕ್ಕುತ್ತಿರುವ ನೀರು, ನೆಣ, ಮೊ. ವು.

Drive ಡ್ರೈವ್ (ಕ್ರಿ. ; ಭೂತ. Drove ಡ್ರೋವ್, ಭೂ. ಕೃ. Driven ಡ್ರಿವನ್) (ಹೊಡೆದು, ಬೈದು, ಹೆದರಿಸಿ, ಬಲವಂತದಿಂದ) ಅಟ್ಟು, ತರುಬು, ತಳ್ಳು, ದಬ್ಬು ; ದೂಡು ; ನೂಕು ; ಓಡಿಸು ; ಅಟ್ಟಿಕೊಂಡು ಹೋಗು. (*Away, back, in, out, from, to, through* — ಇವುಗಳೊಡನೆ) ; (ಮಂದೆ) ಹೊಡೆದುಕೊಂಡು ಹೋಗು. (D. out ಅಟ್ಟಿಬಿಡು ; ಓಡಿಸಿಬಿಡು ; ಸ್ಥಳವನ್ನಾಕ್ರಮಿಸು). ಬೇಟೆಯನ್ನು ಸೋವು ; ಶತ್ರುವನ್ನು ಬೆನ್ನಟ್ಟು. (ಒಂದು ಪ್ರಾಂತವನ್ನು) ಸುತ್ತಾಡಿ ಪರೀಕ್ಷಿಸು. (ಅರಣ್ಯದ ಕಾಯಿದೆ) ಮಂದೆ ಹೊಡೆದುಕೊಂಡು ಹೋಗು (Drift ನೋಡಿ). (ಬಂಡಿಯ, ನೇಗಿಲಿನ, ಕುದುರೆ, ಮೊ. ನ್ನು) ಹೊಡೆದು ನಡಸು ; ಬಂಡಿ ಹೊಡೆ ; ರೈಲುಬಂಡಿಯನ್ನು ನಡಸು. ಬಂಡಿಯಲ್ಲಿ ಸಾಗಿಸು, ಕರೆದುಕೊಂಡು ಹೋಗು. (ತನ್ನ) ಬಂಡಿಯಲ್ಲಿ ಹೋಗು, ಪ್ರಯಾಣ ಮಾಡು. ಬಲವಂತದಿಂದ ಚೋದಿಸು ; ಪ್ರೇರಿಸು ; ಬಲವಂತ ಮಾಡು ; ಬಲಾತ್ಕರಿಸು (D. mad ಹುಚ್ಚುಹಿಡಿಸು. D. out of one's senses ಭ್ರಾಂತನನ್ನಾಗಿ ಮಾಡು). ಮಿತಿ ಮೀರಿ ಕೆಲಸ ಮಾಡು (Was very hard driven ಅತಿಯಾಗಿ ದುಡಿಯಬೇಕಾಯಿತು ; ಶಕ್ತಿ ಮೀರಿ ಕೆಲಸ ಮಾಡಬೇಕಾಯಿತು). (ಗಾಳಿ, ನೀರು) ಹೊಡೆದುಕೊಂಡು ಹೋಗು. (ಕ್ರಿಕೆಟ್ ಆಟ) ದಾಂಡನ್ನು ನೇರವಾಗಿ ಬೀಸಿ (ಚೆಂಡನ್ನು) ಹೊಡೆದು ಓಡಿಸು. (ಗಾಲ್ಫ್ ಆಟ) ಹೊಡೆದಾಂಡಿನಿಂದ (ಚೆಂಡನ್ನು) ಹೊಡೆ. (ಗೂಟ, ಮೊಳೆ, ಮೊ. ನ್ನು) ನೆಲ, ಗೋಡೆ, ಮೊ. ಕ್ಕೆ ಹೊಡೆ, ಇಳಿಸು. (ಸುರಂಗ) ಕೊರೆ. ಏಟನ್ನೊ ಆಯುಧವನ್ನೊ (ಒಬ್ಬನಿಗೆ) ಗುರಿಯಿಟ್ಟು ಹೊಡೆ, ಎಸೆ (= Let d.). (ಆವಿಶಕ್ತಿ ಅಥವಾ ಇತರ ಶಕ್ತಿ) (ಯಂತ್ರವನ್ನು) ನಡಸು. ಮುಂದಕ್ಕೆ ಹಾಕು ; ತಳ್ಳಿದು. ನುಗ್ಗಿಹೋಗು ; ತ್ವರೆಮಾಡು. ಕಷ್ಟಪಟ್ಟು ಕೆಲಸಮಾಡು ; ದುಡಿ. D. a quill, pen ಲೇಖನಿ ಓಡಿಸು ; ಬರೆ. He drove a roaring trade ಅವನು ಜೋರಾದ, ಭರಾಟಿ, ವ್ಯಾಪಾರ ನಡಸಿದನು. He drove a good bargain ಅವನು ಒಳ್ಳೆಯ ಲಾಭದ ವ್ಯಾಪಾರ ನಡಸಿದನು. Driving rain ಹೊಡೆದುಕೊಂಡು ಬರುವ ಮಳೆ. D. at ಉದ್ದೇಶಿಸು ; ತಾತ್ಪರ್ಯಪಡು ; ಗುರಿಯಿಡು (What are you driving at ? ನಿನ್ನ ಉದ್ದೇಶವೇನು ?). Driving--iron, -putter ಗಾಲ್ಫ್ ದಾಂಡುಗಳು. **Dríver** (ನಾ.) ಬಂಡಿ, ಮೊ. ನ್ನು ನಡಸುವವನು ; ಬಂಡಿಯಾಳು (Cab-d. ಬಾಡಿಗೆ ಬಂಡಿ ಹೊಡೆಯುವವನು. Engine-d. ಎಂಜಿನನ್ನು ನಡಸುವವನು. Slave-d. ಗುಲಾಮರ ತಂಡದ ಮೇಲ್ವಿಚಾರಕ, ಮೇಸ್ತ್ರಿ). (ಗಾಲ್ಫ್ ಆಟ) (ಚೆಂಡನ್ನು ಬಹು ದೂರಕ್ಕೆ ಹೊಡೆಯಲು ಉಪಯೋಗಿಸುವ) ಬಗ್ಗಬಲ್ಲ ಮರದ ತಲೆಯುಳ್ಳ ದಾಂಡು. (ಯಂತ್ರಶಾಸ್ತ್ರ) (ನೇರವಾಗಿ ಶಕ್ತಿಯನ್ನು ಪಡೆದು ಯಂತ್ರದ ಇತರ ಭಾಗಗಳನ್ನು ನಡಸುವ) ಚಾಲಕ (ಚಕ್ರ, ಮೊ. ಭಾಗ). Front, rear, -d. ಶಕ್ತಿಯನ್ನು ಮುಂದಿನ, ಹಿಂದಿನ, ಚಕ್ರಕ್ಕೆ ಕೊಟ್ಟು ನಡಸಲಾಗುವ ಬೈಸಿಕಲ್ಲು ; ಮುಂಚಾಲಕ, ಹಿಂಚಾಲಕ, ಬೈಸಿಕಲ್ಲು. Quill -d. ಗುಮಾಸ್ತ ; ಬರಹಗಾರ ; ಲೇಖಕ. **Dríverless** (ಗು.) ; **Dríving-wheel** (ನಾ.) (ಯಂತ್ರದ ಇತರ ಭಾಗಗಳಿಗೆ ಚಲನಶಕ್ತಿ ಕೊಡುವ) ಚಾಲಕ ಚಕ್ರ, ಎಳೆಯುವ ಎಂಜಿನಿನ ದೊಡ್ಡ ಚಕ್ರ. ನೇರವಾಗಿ ಒತ್ತಿ ನಡಸುವ ಬೈಸಿಕಲ್ ಚಕ್ರ.

Drove[1] (ನಾ.) ಒಟ್ಟಿಗೆ (ಹೊಡೆದುಕೊಂಡು) ಹೋಗುತ್ತಿರುವ ಮಂದೆ ; ಹಿಂಡು ; ಗುಂಪು ; ಸಮೂಹ ; ತಂಡ. ಕಲ್ಲುಕುಟಿಕನ ಅಗಲದ ಉಳಿ.

Drove[2] (ಕ್ರಿ. ಸಕ.) ದನದ ವ್ಯಾಪಾರ ಮಾಡು. **Dróver** (ನಾ.) ದನದ ಹಿಂಡನ್ನು ಮಾರುವ ಕಟ್ಟೆಗೆ ಹೊಡೆದುಕೊಂಡು ಹೋಗುವವನು ; ದನದ ವ್ಯಾಪಾರಿ. **Dróving** (ನಾ.)

Drive (ನಾ.) ಬಂಡಿ ಸವಾರಿ. (ಬೇಟೆಯನ್ನಾಗಲಿ ಶತ್ರುವನ್ನಾಗಲಿ) ತರುಬುವುದು, ಸೋಹುವುದು, ಓಡಿಸುವುದು. (ಕ್ರಿಕೆಟ್, ಗಾಲ್ಫ್ ಆಟಗಳಲ್ಲಿ) ಹೊಡೆತ. (ಪ್ರಚೋದಕ) ಶಕ್ತಿ, ಸಾಮರ್ಥ್ಯ ; ಮನಃಪ್ರವೃತ್ತಿ. ಬಂಡಿಯ ರಸ್ತೆ, ಹಾದಿ (ಮು., ಮನೆಯ ಮುಂದಕ್ಕೆ ಹೋಗುವ ಖಾಸಗಿ ರಸ್ತೆ). ಒಂದು ವಿಶೇಷ ಉದ್ದೇಶಕ್ಕಾಗಿ ಹಣ ಒದಗಿಸಲು ಮಾಡಿದ ಏರ್ಪಾಡು. Whist-d. (Whist ನೋಡಿ)

Drível ಡ್ರಿವಲ್ (ಕ್ರಿ., ನಾ.) (ಮಗುವಿನಂತೆ) ಜೊಲ್ಲು, ಸಿಂಬಳ, ಸುರಿ, ಸುರಿಸು. ಮಗುವಿನಂತೆ ಅಥವಾ ಮಂದಬುದ್ಧಿಯಂತೆ ಪೆಚ್ಚುಪೆಚ್ಚಾಗಿ ಮಾತನಾಡು. ವ್ಯರ್ಥವಾಗಿ, ಅವಿವೇಕವಾಗಿ, ಹಾಳುಮಾಡು, ಪೋಲುಮಾಡು. (ನಾ.) ಅವಿವೇಕದ ಹರಟೆ ; ಗೊಡ್ಡು ಹರಟೆ. **Dríveller** (ನಾ.)

Drízzle ಡ್ರಿಸ್ಲ್ (ಕ್ರಿ. ಅಕ., ನಾ.) ಮಳೆ ಜಿನುಗು ; ಸೋನೆ ಬೀಳು ; ಜಡಿ ಹಿಡಿ ; ಸೋನೆಯಿಂದ ನೆನೆದುಹೋಗು. (ನಾ.) ಸೋನೆ ; ತುಂತುರು ಮಳೆ ; ತೂರು (ಮಳೆ) ; ಜಿನುಗು ಮಳೆ ; ಜಡಿ (ಮಳೆ). **Drízzly** (ಗು.) ಸೋನೆ ಬೀಳುವ ; ಮಳೆ ಜಿನುಗುವ.

Droit ಡ್ರಾಯ್ಟ್, (F) ಡ್ರ್ವಾ (ನಾ.) (ನ್ಯಾ. ಶಾ.) ಹಕ್ಕು ; ಹಕ್ಕಿನದು ; ಸಲ್ಲಬೇಕಾದದ್ದು. ನ್ಯಾಯರೀತಿಯಾಗಿ ಸಲ್ಲಬೇಕಾದ ಮೇಲು ಸಂಪಾದನೆ (ಮು., Droits of Admiralty ಶತ್ರುಗಳ ನಾವೆ, ನಾಶವಾದ ಹಡಗು, ಮೊ. ಗಳಿಂದ ನೌಕಾಧಿಪತ್ಯಕ್ಕೆ ಬರುವ ಲಾಭಾಂಶ)

Droll ಡ್ರೋಲ್ (ಗು., ನಾ., ಕ್ರಿ. ಅಕ.) ಹಾಸ್ಯಕರ ; ನಗೆಯಾಟದ ; ವಿಚಿತ್ರವಾದ ; ವಿಲಕ್ಷಣವಾದ ; ತಮಾಷೆಯ ; ಆಶ್ಚರ್ಯಕರವಾದ. (ನಾ., ಕ್ರಿ., ಈಗ ಅಪೂರ್ವ) ಹಾಸ್ಯಗಾರ(ನಂತೆ ಆಡು) ; ಹಾಸ್ಯಮಾಡು ; ತಮಾಷೆ ಮಾಡು ; ಗೇಲಿ ಮಾಡು. **Drólly** ಡ್ರೋಲ್ಲಿ (ಕ್ರಿ. ವಿ.) ; **Dróllness** (ನಾ.) ; **Dróllery** ಡ್ರೋಲರಿ (ನಾ.) ಹಾಸ್ಯ, ನಕಲಿ, ತಮಾಷೆ (ಮಾಡುವುದು). ಹಾಸ್ಯಪ್ರಬಂಧ ; ನಕಲಿಯ ಬರವಣಿಗೆ ; ವಿಚಿತ್ರ ವಿನೋದ.

Drómedary ಡ್ರಾ(ಡ್ರ)ಮೆಡರಿ (ನಾ.) [ಸವಾರಿಗಾಗಿ ಪಳಗಿಸಿದ, ಲಘುವಾದ, ವೇಗವುಳ್ಳ (ಸಾ., ಅರೇಬಿಯದ) ಒಂಟಿ ದುಬರಿಯ] ಒಂಟೆ.

Drone ಡ್ರೋನ್ (ನಾ., ಕ್ರಿ.) (ಕೆಲಸ ಮಾಡದ) ಗಂಡು ಜೇನುಹುಳು ; (ರೂಪ.) ಸೋಮಾರಿ ; ಮೈಗಳ್ಳ ; ಕೆಲಸಗಳ್ಳ. (ದೀರ್ಘವಾದ) ಝೇಂಕಾರ ; ಗುಂಜಾರವ ; ಒಂದೇ ರಾಗದ, ವೈವಿಧ್ಯವಿಲ್ಲದ, ಬೇಸರ ಹುಟ್ಟಿಸುವ, ಭಾಷಣ, ಭಾಷಣಕಾರ. ತಿದಿಗೊಳಲಿನ ಮಂದ್ರಸ್ವರದ ಕೊಳವಿ ; ಈ ಕೊಳವಿಯಿಂದ ಹೊರಡುವ ಗೊತ್ತಾದ ಏಕನಾದ, ಶ್ರುತಿ. (ಕ್ರಿ.) ಜೇನುಹುಳುವಿನಂತೆ, ತಿದಿಗೊಳಲಿನಂತೆ, ಝೇಂಕಾರ ಮಾಡು ಒಂದೇ ರಾಗದಲ್ಲಿ, ವೈವಿಧ್ಯವಿಲ್ಲದೆ, ಮಾತನಾಡು. ಕಾಲ ಕಳೆ ; ಕಾಲಹರಣ ಮಾಡು ; (ಜೀವಮಾನ, ಮೊ. ನ್ನು) ವ್ಯರ್ಥವಾಗಿ ಕಳೆದುಬಿಡು ; ಸೋಮಾರಿಯಾಗಿರು. **Dróningly** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Droop ಡ್ರೂಪ್ (ಕ್ರಿ., ನಾ.) ಜೋಲು ; ಜೋಲಹಾಕು ; ಓಲು ; ಇಳಿಯಬೀಳು ; ತಲೆ ಬಗ್ಗಿಸು ; ಕುಗ್ಗು ; ಕುಸಿ ; (ಕಣ್ಣು) ಕೆಳಗೆ ನೋಡು ; ಕೆಳದೃಷ್ಟಿಯಾಗು. (ಕಾವ್ಯ, ಸೂರ್ಯ, ಮೊ. ವಿಷಯದಲ್ಲಿ) ಮುಳುಗು ; ಕ್ಷೀಣವಾಗು ; ಸೊರಗು ; ಜೋಲಬೀಳು ; ಶಕ್ತಿಗುಂದು; ಧೈರ್ಯಗುಂದು. (ನಾ.) ಜೋಲಿರುವ, ಕುಗ್ಗಿರುವ, ಸ್ಥಿತಿ ; ಕುಸಿತ ; ಎದೆಗುಂದುವುದು ; ಸ್ವಾಸ್ಥ್ಯಗೆಡುವುದು. **Droópingly** (ಕ್ರಿ. ವಿ.)

Drop ಡ್ರಾಪ್ (ನಾ.) (೧) (ನೀರು, ಕಣ್ಣೀರು, ಬೆವರು, ಇಬ್ಬನಿ, ರಕ್ತ, ಇವೇ ಮೊ.) ಹನಿ, ತೊಟ್ಟು, ಬಟ್ಟು, ಬಿಂದು. (ಔಷಧ) ಒಂದು ದ್ರವದ ಅತ್ಯಲ್ಪ ಪ್ರಮಾಣ ; ತೊಟ್ಟು. (ಬ. ವ. ದಲ್ಲಿ) ತೊಟ್ಟು ತೊಟ್ಟಾಗಿ ಅಳೆಯಬೇಕಾದ ಔಷಧ ದ್ರವ : ತೊಟ್ಟಿನ ಔಷಧ. ಬಹಳ ಸ್ವಲ್ಪ (ಮೊತ್ತ) ; ಲವ ; ಕಣ (A d. in the ocean ಸಮುದ್ರದಲ್ಲಿ ಒಂದು ತೊಟ್ಟು ; ಗಣನೆಗೆ ಬಾರದ್ದು). ಮಾದಕ ದ್ರವದ ಒಂದು ಬಟ್ಟಲು, ಮೊ. (Take a d. ಸ್ವಲ್ಪ ಕುಡಿ. Has taken a d. too much ಹೆಚ್ಚಾಗಿ ಕುಡಿದು ಅಮಲೇರಿದೆ. Have a d. in one's eye ಕುಡಿತದ ಚಿಹ್ನೆ ತೋರು). ಇಳಿಬೀಳುವ, ತೂಗಾಡುವ, ಆಭರಣ : ಲೋಲಕ ; ಕುಂಡಲ (Ear-drops ಲೋಲಕಗಳು ; ಹತ್ತಕಡಕು ; ಹತ್ತೊಂಟಿ). (ಗಾಜಿನ) ಗೊಂಚಲು ತೂಗುದೀಪದ ಗಾಜುಕಡ್ಡಿಗಳು. ಸಕ್ಕರೆಗುಂಡು. Acid drops ಹುಳಿ ಸಕ್ಕರೆಗುಂಡು.

(೨) ಬೀಳುವುದು ; ಬೀಳಿಸುವುದು ; ಬೀಳು ; ಅವನತಿ ; ಇಳಿವು ; (ಬೆಲೆಯ, ಶಾಖದ) ಇಳಿತ. ಬೀಳುವ, (ಒಬ್ಬನು) ಬೀಳಿಸುವ, ವಸ್ತು [ಉದಾ., ರಂಗಸ್ಥಳದಲ್ಲಿ ಅಂಕಗಳ ಮಧ್ಯೆ ಇಳಿಬಿಡುವ ಚಿತ್ರದ ಪರದೆ ; ಬೀಳು ತೆರೆ (= D.-curtain, D.-scene)]. (ಗಲ್ಲಿಗೇರಿಸುವಲ್ಲಿ) ವಧ್ಯನ ಕಾಲುಕೆಳಗಿನಿಂದ ಸೆಳೆದುಬಿಡುವ ನಿಲ್ಲುಮಣೆ ; ಗಲ್ಲು ; ವಧ್ಯನು ಬೀಳುವಂತೆ ಗೊತ್ತುಮಾಡಿರುವ ದೂರ (D. of 3 feet). ನೆಲಮಟ್ಟದ ಥಟ್ಟನೆಯ ಇಳಿತ, ಪಾತ ; ಈ ಪಾತದ ಪ್ರಮಾಣ. ಕಾಲ್ಚೆಂಡನ್ನು ಕೆಳಕ್ಕೆ ಹಾಕಿ, ಅದು ಮೇಲಕ್ಕೆದ್ದಾಗ ಒದೆಯುವುದು (=D.-kick). **D.-scene** (ನಾ.) = D. curtain ; ಕೊನೆಯ ದೃಶ್ಯ ; ಜೀವಮಾನದಲ್ಲಿ ಅಂತಿಮ ದೃಶ್ಯ. **D.-shutter** ಛಾಯಾ ಚಿತ್ರ ತೆಗೆಯುವುದರಲ್ಲಿ ಫಲಕವನ್ನು ಕ್ಷಣಮಾತ್ರ ಬೆಳಕಿಗೆ ಒಡ್ಡಿ ಮುಚ್ಚಿ ಬಿಡುವ ಏರ್ಪಾಡುಳ್ಳ ಸಲಕರಣೆ : ಬೀಳು ಮುಚ್ಚಳ. **D.-sulphur, -tin** (ಕರಗಿರುವಾಗ ಹನಿ ಹನಿಯಾಗಿ ನೀರಿನಲ್ಲಿ ಹಾಕುವುದರಿಂದಾದ) ಹರಳು ಗಂಧಕ, ಹರಳು ತವರ. **Drópwort** (ನಾ.) ಗೆಡ್ಡೆಯ ನಾರು ಬೇರುಗಳುಳ್ಳ ಒಂದು ಜಾತಿಯ ಗಿಡ. **Dróplet** (ನಾ.) ಸಣ್ಣ ಹನಿ.

Drop (ಕ್ರಿ.) ಹನಿ ಹನಿಯಾಗಿ ಬೀಳು ; ಹನಿ ; ತೊಟ್ಟಿಕ್ಕು ; ಕೆಳಕ್ಕೆ ಬೀಳು ; (ರೂಪ.) ಸೂಚಿತವಾಗು ; ಉದ್ದೇಶವಿಲ್ಲದೆ ಹೊರಬೀಳು (The remark dropped from him). ಕಾಣದೆಹೋಗು ; ಬಿದ್ದು (ಬಿಟ್ಟು) ಹೋಗು [A letter has dropped out ಒಂದು ಅಕ್ಷರ ಬಿದ್ದು (ಬಿಟ್ಟು) ಹೋಗಿದೆ, ಲೋಪವಾಗಿದೆ]. (ಶಕ್ತಿಗುಂದಿ, ಗಾಯ ಪಡೆದು, ಮೊ. ಗ) ನೆಲಕ್ಕೆ ಬೀಳು, ಕುಸಿ (D. on one's knee ಮಂಡಿ ಯೂರಿ ಎರಗು). (ಬೇಟೆನಾಯಿ) ಬೇಟೆಯನ್ನು ಕಂಡಾಗ ಹೊಂಚು ಕೂಡು. ನಿದ್ದೆ ಹತ್ತು ; —ಹೋಗು. (ಮತ್ತೆ) ಹಿಂದಿನ ಅಭ್ಯಾಸ, ಮೊ. ಕ್ಕೆ ಬೀಳು. ಸಾಯಿ ; ಬಿದ್ದುಹೋಗು ; ಗತಿಸಿಹೋಗು ; ನಿಂತು ಹೋಗು (The affair was allowed to d. ಆ ವಿಷಯ ಅಲ್ಲಿಗೇ ಮುಗಿಯುವಂತೆ ಬಿಡಲಾಯಿತು. The correspondence dropped ಪತ್ರ ವ್ಯವಹಾರ ನಿಂತುಹೋಯಿತು). (ಗತಿ, ಸ್ಥಿತಿ, ಮೊತ್ತ, ಅಂತಸ್ತು, ಸ್ವರ) ಇಳಿ, ತಗ್ಗು (Prices d. ಬೆಲೆಗಳು ತಗ್ಗುತ್ತವೆ. Voice drops ದನಿ ಇಳಿಯುತ್ತದೆ). ಪ್ರವಾಹದಲ್ಲಿ ಕೆಳಮುಖಕ್ಕೆ ಹೋಗು. ಹಿಂದೆ ಬೀಳು ; ಹಿಂದೆ ನಿಲ್ಲು. ಅನಿರೀಕ್ಷಿತವಾಗಿ ಬರು, ಹೋಗು (ಭೇಟಿಕಾರನ ವಿಷಯದಲ್ಲಿ D. in ; ಸ್ಥಳದ ವಿಷಯದಲ್ಲಿ D. into ; ಮನುಷ್ಯನ ವಿಷಯದಲ್ಲಿ D. across. D. on or across ದಂಡಿಸು ; ಶಿಕ್ಷೆಮಾಡು ; ಛೀಪೆಟ್ಟುಹಾಕು. ಅಕಸ್ಮಾತ್ತಾಗಿ ಭೇಟಿಯಾಗು). (ದ್ರವ, ಕಣ್ಣೀರು) ಹನಿ ಹನಿಯಾಗಿ ಸುರಿಸು ; ತೊಟ್ಟಿಕ್ಕು ; ತೊಟ್ಟಿಕ್ಕಿಸು. ಉದುರಿಸು ; ಬಿಟ್ಟುಬಿಡು ; ಕೈಬಿಡು (D. anchor ಲಂಗರು ಬಿಡು, ಹಾಕು). ಈಯಿ ; ಮರಿ ಹಾಕು (ಮು., ಕುರಿ). ಪರಿಜ್ಞಾನವಿಲ್ಲದಹಾಗೆ, ನಿರುದ್ದೇಶವಾಗಿ, ಹೇಳು (D. a hint ಪ್ರಾಸಂಗಿಕವಾಗಿ ಸೂಚನೆ ಕೊಡು. D. a postcard ಅಂಚೆಯ ಪತ್ರ ಬರೆದುಹಾಕು. D. a line ಒಂದು ಪಂಕ್ತಿ ಬರೆದುಹಾಕು). (ಹಣವನ್ನು, ಮು., ಜೂಜಾಟದಲ್ಲಿ) ಕಳೆದುಕೊ. (ಕೊಡಲಿಯಿಂದ ಕಡಿದು, ಮುಷ್ಟಿಯಿಂದ ಗುದ್ದಿ, ಗುಂಡಿನಿಂದ ಹೊಡೆದು) ಕೆಡವು, ಬೀಳಿಸು, ಉರುಳಿಸು ; ಎತ್ತಿಹಾಕು. (ಪ್ರಯಾಣಿಕನನ್ನು, ಭಾಂಗಿಯನ್ನು) ಇಳಿಸು, ಇಳಿಸಿಬಿಡು. ಮಾತಿನಲ್ಲಿ, ಬರವಣಿಗೆಯಲ್ಲಿ (ಅಕ್ಷರ, ಹಕಾರ, ಮೊ. ನ್ನು) ಲೋಪಿಸು. (ಕಣ್ಣು, ದೃಷ್ಟಿ, ದನಿ) ಇಳಿಸು, ತಗ್ಗಿಸು. (D. curtsy ಪ್ರಣಾಮ ಮಾಡು). (ಕಾಲ್ಚೆಂಡಾಟ) ಚೆಂಡನ್ನು ಒದೆದೋಡಿಸು ; ಪುಟದ ಒದೆತದಿಂದ ಗುರಿಹೊಗಿಸು (Take d.-kick ಒದೆ). ಸಹವಾಸ ಬಿಡು ; ಬಿಟ್ಟುಬಿಡು (D. it!). D. away, in ಒಬ್ಬೊಬ್ಬರಾಗಿ, ಹೊರಟುಹೋಗು, ಒಳಹೊಗು. D. off (= D. away) ; ನಿದ್ದೆಹೋಗು. **Dróppings** (ನಾ., ಬ. ವ.) ತೊಟ್ಟು ತೊಟ್ಟಾಗಿ ಬೀಳುವದು, ಬಿದ್ದದ್ದು (ಉದಾ., ಮೋಂಬತ್ತಿಯಿಂದ ಕರಗಿ ಸೋರಿದ ಮೇಣ). ಮೃಗಗಳ ಸಗಣಿ ; ಹಕ್ಕಿಗಳ ಹಿಕ್ಕೆ.

Drópsy ಡ್ರಾಪ್ಸಿ (ನಾ.) ಜಲೋದರ ; ಮಹೋದರ ; ಶೋಭೆ ; (ರೂಪ.) ಮಿತಿ ಮೀರಿ ಉಬ್ಬಿದ ಸ್ಥಿತಿ. **Drópsical** (ಗು.) ; **Drópsically** (ಕ್ರಿ. ವಿ.)

Dross ಡ್ರಾಸ್ (ನಾ.) ಲೋಹಗಳನ್ನು ಕರಗಿಸುವಾಗ ಮೇಲೆ ಕಟ್ಟುವ ಕಿಟ್ಟ ; (ಕಬ್ಬಿಣದ) ಮಂಡೂರ. (ಯಾವ ಪದಾರ್ಥದಲ್ಲಾದರೂ ಮಿಶ್ರವಾಗಿರುವ) ಕಸ, ಕಶ್ಮಲ, ಕೊಳೆ ; ಕೆಲಸಕ್ಕೆ ಬಾರದ, ನಿಸ್ಸಾರವಾದ, ವಸ್ತು. **Dróssy** (ಗು.)

Drought ಡ್ರೌಟ್, (ಕಾವ್ಯ) **Drouth** ಡ್ರೌತ್ (ನಾ.) (ಪ್ರಾಚೀ. ಪ್ರ.) ಒಣಗಿರುವ ಸ್ಥಿತಿ ; ಒಣಕಲು ; ಶುಷ್ಕತೆ ; ತೇವವಿಲ್ಲದಿರುವುದು ; ಬಾಯಾರಿಕೆ ; ದಾಹ ; ದ್ರವ ಬತ್ತಿದ ವಾಯುಸ್ಥಿತಿ ; ಮಳೆಯಿಲ್ಲದಿರುವುದು ; ಅನಾವೃಷ್ಟಿ ; ಬರ. **Droúghty, Droúthy** (ಗು.) ತೇವವಿಲ್ಲದೆ ಒಣಗಿರುವ ; ನೀರಸ ; ನಿರ್ದ್ರವ ; ಮಳೆಯಿಲ್ಲದ ; ಬಾಯಾರಿದ. ಕುಡಿತದ ಚಟಕ್ಕೊಳಪಟ್ಟ.

Drove, Dróver, Dróving. **Drive** ನೋಡಿ.

Drown ಡ್ರೌನ್ (ಕ್ರಿ.) ಮುಳುಗಿ (ಸತ್ತು)ಹೋಗು (Be drowned ಮುಳುಗಿ ಸಾಯಿ. Drowning man ಮುಳುಗಿಹೋಗುತ್ತಿರುವವನು). (ಒಬ್ಬನನ್ನು, ಪ್ರಾಣಿಯನ್ನು) ಮುಳುಗಿಸಿ ಉಸುರು ಹೋಗುವಂತೆ ಮಾಡು. ಮುಳುಗು ; ಮುಳುಗಿಸು ; ಆಳು (ಗ್ರಾಂ.) ; ಪ್ರವಾಹ ಹರಿಸು ; (ಪ್ರವಾಹದಿಂದ) ಕೊಚ್ಚಿಸು ; ತೋಯಿಸಿಬಿಡು ; ನೆನಸು [(ರೂಪ.) Drowned in tears ಕಣ್ಣೀರಿನಲ್ಲಿ ಮುಳುಗಿ. Like drowned rat ತೊಯ್ದುಹೋದ ಇಲಿಯಂತೆ ಒದ್ದೆಮುದ್ದೆಯಾಗಿ. D. out ಪ್ರವಾಹ ಬಂದು ಹೊರಡಿಸಿಬಿಡು]. (ವ್ಯಸನ, ಮೊ. ವನ್ನು) ಕುಡಿತದಿಂದ, ಮುಳುಗಿಸಿಬಿಡು, ಮರೆಸಿಬಿಡು. ಹೆಚ್ಚು ಗದ್ದಲದಿಂದ ಮಾತು, ಮೊ. ವು ಕೇಳದಂತೆ ಮಾಡು, ಅಡಗಿಸಿಬಿಡು.

Drowse ಡ್ರೌಸ್ (ಕ್ರಿ., ನಾ.) ತೂಕಡಿಸು ; ತೂಕಡಿಸುತ್ತಿರು ; ಅರೆ ನಿದ್ದೆಯಲ್ಲಿರು ; ಜೋಂಪಿನಲ್ಲಿರು. ಜಡನಾಗಿರು ; ಮಂದವಾಗಿರು. ತೂಕಡಿಕೆ ಬರುವಂತೆ ಮಾಡು ; ತೂಕಡಿಕೆಯಲ್ಲಿ (ಕಾಲ) ಕಳೆ. (ನಾ.) ತೂಕಡಿಕೆ ; ಅರೆ ನಿದ್ದೆ ; ಜೋಂಪು. **Drowsy** ಡ್ರೌಸಿ (ಗು.) ತೂಕಡಿಸುವ ; ಅರೆ ನಿದ್ದೆಯಲ್ಲಿರುವ ; ಮಂಪರದಿಂದಿರುವ ; ನಿದ್ದೆ ಬರುವಂತೆ ಮಾಡುವ ; ನಿದ್ದೆ ಬರಿಸುವ ; ಜಡವಾದ ; ಮಂದವಾದ. **D.-head** ತೂಕಡಿಸುವವನು. **Drowsihead** (ನಾ.) (ಪ್ರಾಚೀ. ಪ್ರ.) = **Drowsiness** (ನಾ.) ; **Drowsily** (ಕ್ರಿ. ವಿ.)

Drub ಡ್ರಬ್ (ಕ್ರಿ. ಸಕ.) (ದೊಣ್ಣೆಯಿಂದ) ಹೊಡೆ, ಚೆಚ್ಚು ; ಮೈಮುರಿ ; (ಯುದ್ಧದಲ್ಲಿ) ಸದೆ ಬಡಿ. [D. into ಯಾವುದಾದರೂ ಅಭಿಪ್ರಾಯವನ್ನು ಒಬ್ಬನ ತಲೆಗೆ ಬಲವಂತದಿಂದ ತುಂಬು, ತುರುಕು. D. out of — ತಲೆಯಿಂದ ಹೊರಡಿಸು, ತೊಲಗಿಸು]. **Drúbbing** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Drudge ಡ್ರಜ್ (ನಾ., ಕ್ರಿ. ಅಕ.) ಗುಲಾಮ ಚಾಕರಿ ಮಾಡು(ವವನು) ; ಕೀಳಾಳು ; ದುಡಿತದ ಕತ್ತೆ ; ಗುಲಾಮ ; ವಿರಾಮವಿಲ್ಲದೆ ದುಡಿ(ಯುವವನು). (ಅನಿಷ್ಟ ಕೆಲಸವನ್ನು) ಗುಲಾಮನಂತೆ ಮಾಡು ; ದುಡಿ. **Drúdgery** (ನಾ.) ದುಡಿತ ; ದುಡಿಮೆ ; ಗುಲಾಮ ಚಾಕರಿ. **Drúdgingly** (ಕ್ರಿ. ವಿ.)

Drug ಡ್ರಗ್ (ನಾ., ಕ್ರಿ.) ಬೆರಕೆಯಿಲ್ಲದ ಮೂಲ ಔಷಧವಸ್ತು (ಜೈವ ಅಥವಾ ಅಜೈವ ; ಮಿಶ್ರಣ ಮಾಡಿಯೊ ಮಾಡದೆಯೊ ಪ್ರಯೋಗ) ; ಗಂದಿಗೆ ವಸ್ತು ; ಮೂಲಿಕೆ ; ಬೇರು ; ಹಸುರು ಮದ್ದು. The d. habit ಅಫೀಮು, ಮೊ. ದ ಪದಾರ್ಥ ಸೇರಿದ, ಮಯಕ ಬರಿಸುವ, ಔಷಧವನ್ನು ಸೇವಿಸುವ ಅಭ್ಯಾಸ). ಮಾರಿಕೆಯಾಗದೆ, ಗಿರಾಕಿಯಿಲ್ಲದೆ, ಬಿದ್ದಿರುವ ಪದಾರ್ಥ : ನಿಂತ ಸರಕು ; ಯಾರಿಗೂ ಬೇಡವಾದ ಪದಾರ್ಥ (ಸಾ., D. in the market). (ಕ್ರಿ.) (ಮು., ನಿದ್ದೆ ಬರಿಸುವ ಅಥವಾ ವಿಷದ) ಗಂದಿಗೆ ಪದಾರ್ಥಗಳನ್ನು ಬೆರಸು, ಮಿಶ್ರ ಮಾಡು. (ಮು., ನಿದ್ದೆ ಬರಿಸುವ) ಔಷಧವಸ್ತುಗಳನ್ನು ಸೇವನೆಗೆ ಕೊಡು, ಸೇವಿಸು, ಸೇವಿಸುವ ಅಭ್ಯಾಸ ಮಾಡು. ಓಕರಿಕೆ ತರು ; ವೆಗಟಾಗು. **Drúggist** (ನಾ.) ಗಂದಿಗ ; ಔಷಧ ವ್ಯಾಪಾರಿ ; ಔಷಧಗಾರ. **Drúggy** (ಗು.)

Drúgget ಡ್ರಗೆಟ್ (ನಾ.) ನೆಲದಮೇಲೆ ಅಥವಾ ಮೇಜಿನಮೇಲೆ ಹಾಸುವ ಒರಟು ಉಣ್ಣೆಯ ಬಟ್ಟೆ ; ಉಣ್ಣೆಯ ಹಾಸುಗಂಬಳಿ ; ಮೇಲು ಜಮಖಾನ.

Drúid ಡ್ರೂಇಡ್ (ನಾ.) ಪುರಾತನ ಗಾಲ್ ಮತ್ತು ಬ್ರಿಟನ್ ದೇಶಗಳಲ್ಲಿದ್ದ ಕೆಲ್ಟ್ ಜನರಲ್ಲಿ, ಪುರೋಹಿತ, ಕಣಿ ಹೇಳುವವನು, ಮಾಂತ್ರಿಕ : 'ಡ್ರೂಯಿಡ'. ವೇಲ್ಸಿನ ರಾಷ್ಟ್ರಸಭೆಯ ಅಧಿಕಾರಿ. **Drúidess** (ನಾ., ಸ್ತ್ರೀ.) ; **Druídic(al)** (ಗು.) ; **Drúidism** (ನಾ.)

Drum ಡ್ರಮ್ (ನಾ.) ಮದ್ದಲೆ ; ಮೃದಂಗ ; ತಬಲ ; ಡೋಲು ; ಹರೆ ; ದುಂದುಭಿ ; ಭೇರಿ ; ಪಟಹ ; ಡಿಂಡಿಮ ; ಡಮರುಗ ; ನಗಾರಿ ; ಕರಡೆ. (ಪ್ರಾ. ವಿ.) ಅನುರಣನ ಮಾಡುವ ಅಂಗ (ಉದಾ., ಕಿರಿಚು ಕೋತಿಯ ಗಂಟಲಿನಲ್ಲಿಯ ಒಂದು ಎಲುಬು). ಮದ್ದಲೆಯ(ಂತಹ) ಶಬ್ದ (ಮು., ಬಿಟರ್ನ್ ಎಂಬ ಹಕ್ಕಿಯ ಕೂಗು) ; ಮದ್ದಲೆ, ಮೊ. ನ್ನು ಬಾರಿಸುವವನು ; ಮದ್ದಲಿಗ. ವರ್ತುಲ ನಳಿಕಾಕೃತಿ(ಯ ರಚನೆ, ವಸ್ತು) (D. of ear ಮಧ್ಯಗಿವಿಯ ಪೊಳ್ಳುಭಾಗ : ಕಿವಿಯ ಹರೆ). (ಯಂತ್ರದಲ್ಲಿ, ಮೇರೆ ಏನಾದರೂ ಸುತ್ತುವುದಕ್ಕಾಗಲಿ, ಇತರ ಉಪಯೋಗಕ್ಕಾಗಲಿ ಇರುವ) ವರ್ತುಲ ನಾಳಿ ; ಸ್ತಂಭ ದಂಡ ; ದುಂಡುಗಂಬದ ಭಾಗವಾಗಿರುವ ಗುಂಡುದಿಮ್ಮಿ. ಎಣ್ಣೆ, ಮೊ. ನ್ನು ಹಾಕಿಡುವ ಕೊಳಗ ಪಾತ್ರೆ. ಸಂಜೆಯ ಸತ್ಕಾರಗೋಷ್ಠಿ. **D.-fire** (ಸಾ., ಪದಾತಿಸೈನ್ಯದ ಆಕ್ರಮಣಕ್ಕೆ ಪೂರ್ವಭಾವಿಯಾಗಿ) ಎಡೆಬಿಡದೆ ಬಿರುಸಾಗಿ ಕರೆಯುವ ಫಿರಂಗಿ ಗುಂಡಿನ ಮಳೆ. **D.-head** ಮದ್ದಲೆ, ಮೊ. ಗಳ ಚರ್ಮದ ಭಾಗ [D.-h. court martial (Court ನೋಡಿ)] ; ಕಿವಿಯ ಹರೆಗೆ ಅಡ್ಡರಾಗಿ ಚಾಚಿರುವ ಸೂಕ್ಷ್ಮಚರ್ಮ. ಹಾಯಿ ರಾಟೆಯ ದುಂಡು ನೆತ್ತಿ. **D. major** ಒಂದು ದಳದ ಭೇರಿಯವರ ನಾಸನ್ನದು ಮೇಲಧಿಕಾರಿ. **Drúmstick** ನಗಾರಿ (ಬಡಿಯುವ) ಕೋಲು. ನುಗ್ಗೆಯ ಕಾಯಿ.

Drum (ಕ್ರಿ.) ಮದ್ದಲೆ, ಮೊ. ನ್ನು ಬಾರಿಸು. (ಯಾವುದರ ಮೇಲಾದರೂ) ಎಡೆಬಿಡದೆ ಹೊಡೆ, ತಟ್ಟು, ಕುಟ್ಟು, ಬಡಿ (On piano, at door. Feet d. on floor ಪಾದಗಳು ನೆಲದ ಮೇಲೆ ತಾಳ ಬಡಿಯುತ್ತವೆ). (ಹಕ್ಕಿ, ಕೀಟ, ಇವುಗಳ ವಿಷಯದಲ್ಲಿ) ಬೇಗ ಬೇಗನೆ ರೆಕ್ಕೆ ಅದುರಿಸಿ ಗಟ್ಟಿಯಾದ ಧ್ವನಿ ಮಾಡು. ಡಂಗುರ ಹೊಡೆದು ಸಾರು ; ಭೇರಿ ಹೊಡೆದು (ಸೈನ್ಯ ಸೇರಲು) ಕರೆ. (D. out ಡಂಗುರ ಹೊಡೆದು ಅಟ್ಟಿಬಿಡು, ಹೊರದೂಡು). (ಒಬ್ಬನಿಗೆ) ಹೇಳಿ ಹೇಳಿ ಬೇಸರ ಹಿಡಿಸು. ಪಾಠವನ್ನು ಹೇಳಿ ಹೇಳಿ ತಲೆಗೆ ಗಿಡುಗು. (ರಾಗ, ಮೊ. ನ್ನು) ಮದ್ದಲೆಯಲ್ಲಿ (ಯಂತೆ) ಬಾಜಿಸು. **Drúmmer** ಮದ್ದಲೆ ಬಾರಿಸುವವನು ; (ಅಮೆ. ಸಂ.) ವ್ಯಾಪಾರಿಯ ತಿರುಗುದಳ್ಳಾಳಿ.

Drum[2] ಡ್ರಮ್, **Drúmlin** ಡ್ರಮ್ಲಿನ್ (ನಾ.) (ಭೂ. ವಿ.) [(ಗಾಳಿ, ನೀರು ಅಥವಾ ನೀರ್ಗಲ್ಲಿನ ಪ್ರವಾಹ — ಇವುಗಳಿಂದ) ಹೊಡೆದುಕೊಂಡು ಬಂದು ಸೇರಿ ಆದ] ಉದ್ದವಾಗಿಯೂ ಅಗಲ ಕಿರಿದಾಗಿಯೂ ಇರುವ ಗುಡ್ಡ.

Drúmmond light ಡ್ರಮಂಡ್ ಲೈಟ್ (ನಾ.) = Limelight (Lime ನೋಡಿ). (Captain Drummond ಎಂಬ ನಿರ್ಮಾಪಕನ ಹೆಸರಿನಿಂದ)

Drunk, &c. Drink ನೋಡಿ.

Drupe ಡ್ರೂಪ್ (ನಾ.) ಮಧ್ಯದಲ್ಲಿ ಓಟೆಯುಳ್ಳ ತಿರುಳುಗಾಯಿ, ಹಣ್ಣು : ಒಳಓಟೆಯ ಕಾಯಿ ; ಅಷ್ಟಿಫಲ (ಉದಾ., ಮಾವಿನ ಕಾಯಿ). **Drupáceous** ಡ್ರುಪೇಷಸ್ (ಗು.) ಅಷ್ಟಿಫಲದ ; ಅಷ್ಟಿಫಲ ಬಿಡುವ. **Drúpel** ಡ್ರೂಪೆಲ್, **Drúpelet** ಡ್ರೂಪ್ಲೆಟ್ (ನಾ.) ಸಂಯುಕ್ತ ಫಲದಲ್ಲಿಯ ಸಣ್ಣ ಓಟೆಗಾಯಿ.

Druse ಡ್ರೂಸ್ (ನಾ.) ಲೆಬನನ್ ಬೆಟ್ಟದ ಸುತ್ತುಮುತ್ತಲಿನ ಪ್ರಾಂತದಲ್ಲಿರುವ ಮಹಮ್ಮದೀಯ ಧಾರ್ಮಿಕ ಮತ್ತು ರಾಜಕೀಯ ಪಂಗಡದವನು.

Dry ಡ್ರೈ (ಗು. ; ತರ Drier, ತಮ Driest) ತೇವವಿಲ್ಲದ ; ಒಣಗಿದ (D. eyes ಕಣ್ಣೀರಿಲ್ಲದ ಕಣ್ಣುಗಳು). (ತಕ್ಕಷ್ಟು) ಮಳೆಯಿಲ್ಲದ. ಪೂರ್ತಿ ಒಣಗಿಹೋದ ; ಬರಡು ; (ಬಳ. ಮಾ.) ಬಾಯಾರಿದ ; ನೀರಡಸಿದ. (ದ್ರವ) ಇಂಗಿಹೋದ ; ಬತ್ತಿಹೋದ ; ಇಮರಿದ. (ನೀರು ಸುರಿದುಹೋಗಿ ಅಥವಾ ಒರಸಿದುದರಿಂದ) ಆರಿದ. (ದೇಶ, ಕಾನೂನು ಮೊ.) ಕುಡಿತವಿಲ್ಲದ ; ಪಾನ ನಿರೋಧ ಮಾಡಿರುವ (Go d. ಪಾನ ನಿರೋಧ ಶಾಸನವನ್ನು ಅಂಗೀಕರಿಸು). ಶುಷ್ಕ ; ನೀರಸ. ನಿರ್ದಯ ; ಕಠಿನ. Cow is d. ಹಸು ಬತ್ತಿಹೋಗಿದೆ, ಹಾಲುಕೊಡುವುದು ನಿಂತುಹೋಗಿದೆ, ಮಾನಿಸಿಕೊಂಡಿದೆ, ಬಿಡಿಸಿಕೊಂಡಿದೆ. Die a d. death (ನೀರಿನಲ್ಲಿ ಮುಳುಗಿಹೋಗುವುದರಿಂದಲ್ಲದೆ ಅಥವಾ ರಕ್ತಪಾತದಿಂದಲ್ಲದೆ) ಒಣಸಾವು ಸಾಯಿ. **D.-bob** (Bob[4] ನೋಡಿ). **D. bread** (ಬೆಣ್ಣೆಯಿಲ್ಲದ) ಒಣ ರೊಟ್ಟಿ. **D.-bulb** (thermometer) (ವಾಯುವಿನ ಆರ್ದ್ರತೆ ಅಳೆಯುವ ಜೋಡಿ ಶಾಖಮಾಪಕಗಳಲ್ಲಿ) ಒಣಬುರುಡೆಯ (ಶಾಖಮಾಪಕ). **D.-clean** (ಬಟ್ಟೆ, ಮೊ. ನ್ನು) ನೀರನ್ನು ಉಪಯೋಗಿಸದೆ ಶುಚಿ ಮಾಡು, ಚೆಲುವೆ ಮಾಡು : ಒಣಚೆಲುವೆ ಮಾಡು (**D.-cleaning ; D.-cleaner**). **D. cooper** ಒಣ ಸರಕಿಗೆ ಪೀಪಾಯಿಗಳನ್ನು ತಯಾರಿಸುವವನು. **D. cough** (ಶ್ಲೇಷ್ಮವಿಲ್ಲದ) ಒಣ ಕೆಮ್ಮು. **D.-cure** (ಮಾಂಸ, ಮೊ. ಕೆಡದಂತೆ ಇರುವುದಕ್ಕಾಗಿ ದ್ರವದಲ್ಲಿ ಊರಹಾಕದೆ) ಉಪ್ಪಿಟ್ಟು ಒಣಗಿಸು. **D.-dock** (Dock[4] ನೋಡಿ). **D. facts** ಸ್ಪಷ್ಟವಾಗಿ ಹೇಳಿದ, ಉತ್ಪ್ರೇಕ್ಷೆಯಿಲ್ಲದ, ವಿಷಯಗಳು ; ಶುಷ್ಕ ವಿಷಯಗಳು. **D.-fly** (ಗು., ಕ್ರಿ. ಅಕ.) (ಗಾಳದ) ನೊಣವನ್ನು ನೀರಿನಮೇಲೆ ಆಡಿಸಿ ಮೀನು ಹಿಡಿ. **D. goods** (ಧಾನ್ಯ, ಮೊ. ದ) ಒಣ ಸರಕು. (ಅಮೆ. ಸಂ.) ಹತ್ತಿ, ಉಣ್ಣೆ, ರೇಷ್ಮೆ, ಮೊ. ಗಳ ಬಟ್ಟೆ, ಅರಿವೆ, ಜವಳಿ. **D. jest, humour, sarcasm** ಶುಷ್ಕ ಹಾಸ್ಯ ; ಶುಷ್ಕ ವಿನೋದ ; ಕಟುಹಾಸ್ಯ. **D. lands** ಖುಷ್ಕಿ ಜಮೀನು ; ಹೊಲಗಳು. **D. light** ಶುದ್ಧವಾದ ಬೆಳಕು ; (ರೂಪ.) ನಿಷ್ಪಕ್ಷಪಾತವಾದ ಶುದ್ಧದೃಷ್ಟಿ (The d. light of the understanding). **D. lodging** ಊಟವಿಲ್ಲದೆ ವಸತಿ ಮಾತ್ರ ದೊರೆಯುವ ಸ್ಥಳ. **D. measure** ಒಣ ಸರಕುಗಳ (ಧಾನ್ಯ, ಮೊ. ಗಳ) ಘನ ಅಳತೆ. **D.-nurse** (ನಾ., ಕ್ರಿ. ಸಕ.) ಕೂಸಿಗೆ ಮೊಲೆಯೂಡುವ ಕೆಲಸವಿಲ್ಲದ ದಾದಿ : ಒಣ ದಾದಿ. ಕೂಸನ್ನು ಮೊಲೆಯೂಡದೆ (ಹಾಲು ಹೊಯ್ದು) ಸಾಕು. **D. pile** ನಿರ್ದ್ರವ ವಿದ್ಯುಜ್ಜನಕ ಕೋಶಶ್ರೇಣಿ. **D.-plate** (ಬಿಂಬಿಸಿದ ಚಿತ್ರವನ್ನು ಸಾವಕಾಶವಾಗಿ ಸ್ಫುಟೀಕರಿಸಬಹುದಾದ ಛಾಯಾಚಿತ್ರದ) ನಿರ್ದ್ರವ ಫಲಕ. **D.-point** ತಾಮ್ರದ ತಗಡಿನಮೇಲೆ (ಆಮ್ಲವನ್ನು ಉಪಯೋಗಿಸದೆ, ಚಿತ್ರ) ಕೊರೆಯುವುದಕ್ಕಾಗಿ ಉಪಯೋಗಿಸುವ ಮೊನೆಯಾಯುಧ. (ಕ್ರಿ. ಅಕ.) ಈ ತೆರನಾಗಿ (ಚಿತ್ರ) ಕೊರೆ. (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ತೆರನಾಗಿ ಕೊರೆದ ರೇಖನ. **D.-rot** (ಗಾಳಿಗೊಡ್ಡಿರದ ಮರದ ದಿಮ್ಮಿ, ತೊಲೆ, ಮೊ. ವು) ಶಿಲೀಂಧ್ರದಿಂದ ಲೊಡ್ಡಾಗುವುದು: ಸತ್ವ ನಾಶ; ಹೀಗೆ ಲೊಡ್ಡುಮಾಡುವ ಶಿಲೀಂಧ್ರ. (ರೂಪ.) ಸೂಚನೆಯೇ ಕೊಡದ ನೈತಿಕ ಅಥವಾ ಸಾಮಾಜಿಕ ಕ್ಷಯ, ಕ್ಷೀಣತೆ. **D.-salt** (ಕ್ರಿ. ಸಕ.) = D. cure. **D.-salter(y)** ಗಂದಿಗೆಯೌಷಧ, ಬಣ್ಣ, ಗೋಂದು, ಎಣ್ಣೆ, ಉಪ್ಪಿನಕಾಯಿ, ಡಬ್ಬಿಮಾಂಸ, ಮೊ. ಜಿನಸುಗಳ ವ್ಯಾಪಾರಿ; ಗಂದಿಗೆ ವ್ಯಾಪಾರಿ; — ವ್ಯಾಪಾರ; — ಅಂಗಡಿ. **D.-shod** (ಗು., ಕ್ರಿ. ವಿ.) (= D. shoed) ಒದ್ದೆಯಿಲ್ಲದ ಪಾದರಕ್ಷೆ ಹಾಕಿಕೊಂಡು; ಪಾದಗಳನ್ನು ತೇವಮಾಡಿಕೊಳ್ಳದ(ದೆ). **D. thanks** ಶುಷ್ಕ ವಂದನೆಗಳು. **D.-walling** ಗಾರೆಯನ್ನು ಅಥವಾ ಸೇರನ್ನು ಉಪಯೋಗಿಸದೆ ಗೋಡೆಕಟ್ಟುವುದು. **D. wine** ಸೀಯೂ ಹಣ್ಣಿನ ರುಚಿಯೂ ಇಲ್ಲದ ದ್ರಾಕ್ಷಾಮದ್ಯ. **Drýish** (ಗು.); **Drýly, Drìly** (ಕ್ರಿ. ವಿ.); **Drýness** (ನಾ.); **Drýasdust** ಡ್ರೈಯ್ಯಸ್ ಡಸ್ಟ್ (ನಾ.), **Drý-as-dust** (ಗು.) ಶ್ರಮಪಟ್ಟೂ ಸ್ವಾರಸ್ಯಹುಟ್ಟಿಸದ ಪುರಾತನ ಶೋಧಕ, ಚರಿತ್ರೆಗಾರ; ನೀರಸ ಚರಿತ್ರೆಗಾರ; ಶುಷ್ಕ ಪಂಡಿತ. (ಗು.) ಕೇವಲ ಶುಷ್ಕ; ಅತಿ ನೀರಸ; ರಸವಿಲ್ಲದ; ಏನೂ ಸ್ವಾರಸ್ಯ ವಿಲ್ಲದ. [Dr. D. ಸ್ಕಾಟ್ ಎಂಬ ಇಂಗ್ಲಿಷ್ ಕಾದಂಬರಿಕಾರನು ತನ್ನ ಕೃತಿಯನ್ನು ಅರ್ಪಣೆಮಾಡಿದ ಕಾಲ್ಪನಿಕ ಪಂಡಿತ]

Dry (ಕ್ರಿ.) [ಒರಸಿ, ಹಬೆಯಾಗಿ (ಅಟ್ಟಿ), ನೀರು ಬಸಿದು] ಒಣಗು, ಒಣಗಿಸು. ಬಾಡು; ಬತ್ತು; ಆರು; ಆರಹಾಕು. ಹಸು ಹಾಲು ಕರೆಯುವುದನ್ನು ನಿಂತುಹೋಗುವಂತೆ ಮಾಡು, ಮಾನಿಸಿ ಕೊಳ್ಳುವಂತೆ ಮಾಡು. D. up ಪೂರ್ತಿಯಾಗಿ ಇಂಗಿಹೋಗು, ಒಣಗಿಹೋಗುವಂತೆ ಮಾಡು. (ತೇವ) ಪೂರ್ತಿಯಾಗಿ ಬತ್ತಿಹೋಗು, ಇಂಗಿಹೋಗು. (ಬಾವಿ, ಮೊ. ವು) ನೀರಿಲ್ಲದಂತಾಗು, ಬತ್ತಿಹೋಗು, ಒಣಗಿಹೋಗು. (ಬಳ. ಮಾ., ವಿಧಿರೂಪದಲ್ಲಿ) (ಮಾತು, ಕೆಲಸ) ನಿಲ್ಲಿಸು, ಸಾಕುಮಾಡು. **Drίer, Drýer** (ನಾ.) ಒಣಗಿಸುವವನು; — ವದು. ತೇವ ಹೀರುವದು. (ಬಳಿಯುವ ಬಣ್ಣಗಳು, ಮೆರುಗು ಎಣ್ಣೆಗಳು, ಮೊ.) ಬಳಿದಮೇಲೆ ಬೇಗ ಒಣಗುವುದಕ್ಕಾಗಿ ಅವುಗಳಿಗೆ ಸೇರಿಸುವ ಸೀಸಭಸ್ಮ, ಮ್ಯಾಂಗನೀಸ್ ಭಸ್ಮ, ಮೊ. ವು. (ಬಟ್ಟೆ, ಬೆಳೆ, ಅದುರು, ಮೊ. ನ್ನು) ಒಣಗಿಸುವ ಯಂತ್ರಸಾಧನ: ಶೋಷಕ.

Drýasdust. **Dry** ನೋಡಿ.

Dúad ಡ್ಯೂಅ್ಯಡ್ (ನಾ.) Dyad ಪದದ ತಪ್ಪುರೂಪ.

Dúal ಡ್ಯೂಅಲ್ (ಗು., ನಾ.) ಎರಡರ; ಇಬ್ಬರ; ಇಬ್ಬಗೆಯ; ಇಬ್ಭಾಗದ; ಉಭಯ; ದ್ವಂದ್ವ; ದ್ವಿವಿಧ (D. ownership ದ್ವಿಸ್ವಾಮಿತ್ವ). (The) D. monarchy ಇಬ್ಬರ ದೊರೆತನ; ದ್ವೈರಾಜ್ಯ (ಹಿಂದಿನ ಆಸ್ಟ್ರೋ ಹಂಗೇರಿಯನ್ ಸಾಮ್ರಾಜ್ಯ). (ವ್ಯಾ.) D. number or D. ದ್ವಿವಚನ (ಏ. ವ., ಬ. ವ. ಗಳ ಜೊತೆಗೆ). **Dúalism** (ನಾ.) ದ್ವಿತ್ವ; ದ್ವಿರೂಪತೆ; ದ್ವಿವಿಧತೆ; (ತತ್ತ್ವ) ದ್ವೈತ. ದ್ವಿವಚನ ಪ್ರಯೋಗ. (ಮನಸ್ಸು - ದ್ರವ್ಯ, ಪಾಪ - ಪುಣ್ಯ, ಮೊ.) ಪ್ರಪಂಚಕ್ಕೆ ಸ್ವತಂತ್ರವಾದ ಎರಡು ಮೂಲ ತತ್ತ್ವಗಳುಂಟೆಂಬ ವಾದ (Idealism and Materialism ಎಂಬವನ್ನು ಹೋಲಿಸಿ ನೋಡಿ). (ಕ್ರೈಸ್ತ) ಏಸುಕ್ರಿಸ್ತನಲ್ಲಿ ದೇವತ್ವ ಮನುಷ್ಯತ್ವಗಳೆರಡೂ ಉಂಟೆಂಬ ವಾದ. **Dúalist** (ನಾ.) ದ್ವೈತ (ಮತ) ವಾದಿ; ದ್ವೈತಿ. **Dualístic** (ಗು.) ದ್ವೈತದ; ದ್ವೈತ ಸ್ವಭಾವದ; ದ್ವಿ; ಎರಡರ. **Dualístically** (ಕ್ರಿ. ವಿ.); **Duálity** ಡ್ಯೂಅ್ಯಲಿಟಿ (ನಾ.) ದ್ವಿತ್ವ; ದ್ವೈತ; ಉಭಯತ್ವ. **Dúalize** ಡ್ಯೂಅಲೈಸ್ (ಕ್ರಿ.ಸಕ.) ಎರಡಾಗಿ ಮಾಡು; —ತಿಳಿ. **Dúally** (ಕ್ರಿ. ವಿ.) ಎರಡು ರೀತಿಯಲ್ಲಿ; ದ್ವಿವಚನದಲ್ಲಿ.

Dúalin ಡ್ಯೂಅಲಿನ್ (ನಾ.) (ಹಿಟ್ಟುಪ್ಪು, ನೈಟ್ರೋಗ್ಲಿಸರಿನ್ ಮತ್ತು ಮರ ಕೊಯ್ಲಿನ ಪುಡಿ, ಇವನ್ನು ಸೇರಿಸಿ ಮಾಡಿದ) ಬಲವಾದ ಸಿಡಿಮದ್ದು.

Dub[1] ಡಬ್ (ನಾ.) (ಮು., ಸ್ಕಾಟ್ಲೆಂಡಿನಲ್ಲಿ) ನಿಂತ ನೀರಿನ ಅಥವಾ ಬಗ್ಗಡದ ನೀರಿನ ಹಳ್ಳ; (ಇಂಗ್ಲೆಂಡಿನ ಉತ್ತರ ಪ್ರಾಂತಗಳಲ್ಲಿ) ನದಿಯ (ಆಳವಾದ) ಮಡು.

Dub[2] ಡಬ್ (ಕ್ರಿ. ಸಕ.) ಒಬ್ಬನ ಭುಜಗಳನ್ನು ಕತ್ತಿಯಿಂದ ಮೆಲ್ಲಗೆ ತಟ್ಟಿ ಅತನನ್ನು 'ನೈಟ್' ಎಂಬ ಬಿರುದಾಳಾಗಿ ಮಾಡು; ಹೊಸ ಬಿರುದು ಕೊಡು; (ಅಡ್ಡ) ಹೆಸರಿಡು [Dubbed me Doctor, a scribbler ನನಗೆ ಪಂಡಿತನೆಂದು, ಕ್ಷುದ್ರ ಲೇಖಕನೆಂದು, ಕುಕವಿಯೆಂದು (ಬಿರುದು) ಹೆಸರು ಕೊಟ್ಟನು, ಕರೆದನು]. (ಗಾಳದ ಕೃತಕ ನೊಣವನ್ನು) ಸಿದ್ಧಮಾಡು. (ತೊಗಲಿಗೆ) ಚರಬಿ ಹಚ್ಚು. **Dúbbing** (ನಾ.) (ಕ್ರಿಯಾರ್ಥಗಳಲ್ಲಿ). ತೊಗಲಿಗೆ ಹಚ್ಚುವುದಕ್ಕಾಗಿ ತಯಾರಿಸಿದ ಚರಬಿ; ತೊಗಲು ಚರಬಿ (= **Dúbbin**)

Dubíety ಡ್ಯು(ಡ್ಯೂ)ಬೈಇ(ಎ)ಟಿ (ನಾ.) ಸಂಶಯ; ಸಂದೇಹ; ಸಂದೇಹಾಸ್ಪದವಾದದ್ದು. **Dúbious** ಡ್ಯೂಬಿಯಸ್ (ಗು.) ಸ್ಫುಟ ವಲ್ಲದ; ಮಬ್ಬಾದ (D. light ಮಬ್ಬು ಬೆಳಕು); ಅಸ್ಪಷ್ಟ. ನಂಬ ರಾಗದ; ನೆಚ್ಚರಾಗದ (D. friend); ಸಂಶಯಾಸ್ಪದವಾದ; ಸಂದೇಹಾಸ್ಪದವಾದ; ಸಂದಿಗ್ಧ (A d. compliment — ಶ್ಲಾಘನೆ); ಸಂಶಯ ಪಡುವ; ಸಂದೇಹ ಪಡುವ. D. under-taking, struggle ಫಲ ಸಂಶಯಾಸ್ಪದವಾದ ಪ್ರಯತ್ನ, ಹೋರಾಟ. D. gains ಸಂಶಯಕ್ಕೆಡೆಗೊಡುವ ಆದಾಯ. D. company ಸಂದೇಹಾಸ್ಪದವಾದ ಜೊತೆ, ಸಂಗ, ಸಹವಾಸ. **Dúbiously** (ಕ್ರಿ. ವಿ.); **Dúbiousness** (ನಾ.); **Dubitátion** ಡ್ಯೂಬಿಟೇಷನ್ (ನಾ.) ಸಂದೇಹ; ಸಂಶಯ. **Dúbitative** — ಟೆಟಿವ್ (ಗು.) ಸಂದೇಹದ; ಸಂಶಯದ; ಸಂದೇಹಾಸ್ಪದ; ಸಂದಿಗ್ಧ. **Dúbitatively** (ಕ್ರಿ. ವಿ.)

Dúcal. **Duke** ನೋಡಿ.

Dúcat ಡಕಟ್ (ನಾ.) (ಹಿಂದೆ ಯೂರೋಪಿನ ಅನೇಕ ದೇಶಗಳಲ್ಲಿ ಚಲಾವಣೆಯಲ್ಲಿದ್ದ ೯ ಶಿಲಿಂಗು ಬೆಲೆ ಬಾಳುವ) ಒಂದು ಚಿನ್ನದ ನಾಣ್ಯ: 'ಡಕಟ್'. ನಾಣ್ಯ. (ಬ. ವ. ದಲ್ಲಿ) ಹಣ.

Dúce ಡೂಚೆ (ನಾ.) ಮುಖಂಡ; ಮುಖ್ಯಸ್ಥ; (ಅಧಿ) ನಾಯಕ; ಅಧಿಪತಿ. (Il D. ಈಲ್—, The D. ಇಟ್ಯಾಲಿಯನ್ 'ಫ್ಯಾಸಿಸ್ಟ್' ಪಂಗಡದ ನಾಯಕನಾದ ಸೀನ್ಯಾರ್ ಮೂಸೊಲೀನಿ ಎಂಬಾತನು)

Dúchess, Dúchy. **Duke** ನೋಡಿ.

Duck[1] ಡಕ್ [ನಾ.; ಬ. ವ., ಸಾ., Duck (ಸಮೂಹ ವಾಚಕ), Ducks] ಬಾತು (ಕೋಳಿ) (Like d. in thunderstorm ಬಿರುಗಾಳಿ ಮಳೆಯಲ್ಲಿಯ ಬಾತಿನಂತೆ ಕಣ್ಣುಕಣ್ಣು ಬಿಡುತ್ತ, ಕಂಗೆಟ್ಟು. Like water off d.'s back ಯಾವ ಪರಿಣಾಮವೂ ಮಾಡದೆ ನಿರರ್ಥಕವಾಗಿ. Like d. to water ಯಾವುದಕ್ಕಾದರೂ ಸಹಜವಾಗಿ ಹೊಂದಿಕೊಂಡು. Fine day for young ducks ಮಳೆಯ ಹವ. Lame d. ಶಕ್ತಿಗುಂದಿದವನು; ನಿತ್ರಾಣಿ. ಪತ್ರವ್ಯಾಪಾರದಲ್ಲಿ ಹಣ ಹವಣಿಸದೆ ಸುಸ್ತಿಬಿದ್ದವನು. In two shakes of d.'s tail ರೆಪ್ಪೆ ಬಡಿಯುವುದರಲ್ಲಿ). ಹೆಣ್ಣು ಬಾತು (Drake = ಗಂಡು ಬಾತು); ಬಾತು ಕೋಳಿಯ ಮಾಂಸ. ಮುದ್ದು; ಚಿನ್ನ; ಪ್ರಿಯೆ (ಮು., ಸಂಬೋಧನೆಯಲ್ಲಿ). (ಕ್ರಿಕೆಟ್ ಆಟ) ದಾಂಡುಗಾರನ ಸೊನ್ನೆಯ ಓಟ(೦) (= D.'s egg). Bombay d. ಒಂದು ಜಾತಿಯ ಸಣ್ಣ ಮೀನು. **D.-bill** ಕೆಂಪು ಗೋಧಿ. ಬಾತಿನ ಕೊಕ್ಕಿನಂತೆ ಮೂತಿಯಿರುವ ಆಸ್ಟ್ರೇಲಿಯದ ಒಂದು ವಿಚಿತ್ರಪ್ರಾಣಿ (= **D.-mole**). **D.-boards** (ಸೈನಿಕ ಅನಂ.) (ಕಂದಕದಮೇಲೆ ಅಥವಾ ಕೆಸರಿನಮೇಲೆ ನಡೆದುಹೋಗಲು ಹಾಕಿರುವ) ಕಿರಿದಾದ ಮರದ ಹಲಗೆಯ ದಾರಿ. **D. & drake** ಚಪ್ಪಟೆಯ ಕಲ್ಲು ತೂರು ನೀರಿನ ಮೇಲ್ಮೈಯನ್ನು ಸೋಕಿಕೊಂಡು ಹೋಗುವಂತೆ ಎಸೆಯುವ ಆಟ [Make ducks and drakes of, Play ducks and drakes with (ಹಣವನ್ನು) ಪೋಲು ಮಾಡು, ನೀಗಿಬಿಡು, ಅಪವ್ಯಯ ಮಾಡು, ನಾಶ ಮಾಡು]. **D.-hawk** ಜವುಗುಪ್ರದೇಶದ ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಾತಿಯ ಗಿಡುಗ, ಡೇಗೆ. **D.-shot** ಕಾಡು ಬಾತುಗಳನ್ನು ಹೊಡೆಯಲು ಉಪಯೋಗಿಸುವಂಥ ಗಾತ್ರದ ಬಂದೂಕುಗುಂಡು. **Dúckweed** ನಿಂತ ನೀರಿನಮೇಲೆ ಹರಡಿಕೊಳ್ಳುವ ಒಂದು ಜಾತಿಯ ಸಸ್ಯ; ಅಂತರ ಗಂಗೆ. **Dúcker**[1] (ನಾ.) ಬಾತುಕೋಳಿಗಳನ್ನು ಸಾಕುವವನು. **Dúcky** (ನಾ.) ರನ್ನ; ಚಿನ್ನ; ಮುದ್ದು (= Ducky diamond). **Dúckling** (ನಾ.) ಮರಿ ಬಾತು [Ugly d. (Ugly ನೋಡಿ)]

Duck[2] ಡಕ್ (ಕ್ರಿ., ನಾ.) ನೀರಿನ ಕೆಳಗೆ ತಲೆ ಮುಳುಗಿಸಿ ಕೂಡಲೆ ಮೇಲಕ್ಕೆತ್ತು; ನೀರಿನಲ್ಲಿ (ಥಟ್ಟನೆ) ಮುಳುಗಿ ಮರಳಿ ಮೇಲೇಳು; ಮುಳುಕು ಹಾಕು (ರೂಪ. ಸಹ); ಬೇಗನೆ ಬಾಗು, ಬಗ್ಗು; (ಏಟು ತಪ್ಪಿಸಿಕೊಳ್ಳುವುದಕ್ಕಾಗಲಿ ಇತರ ಉದ್ದೇಶದಿಂದಾಗಲಿ) ತಲೆಯನ್ನು ಥಟ್ಟನೆ ಚಲಿಸು. ಮರ್ಯಾದೆ ತೋರಿಸಲು, ನಮಸ್ಕಾರ ಮಾಡಲು, ಬಾಗು. (ಒಬ್ಬನನ್ನು, ಒಂದನ್ನು) ಕ್ಷಣ ಮಾತ್ರ ನೀರಿನಲ್ಲಿ ಮುಳುಗಿಸು, ಅದ್ದು; (ತಲೆಯನ್ನು) ಥಟ್ಟನೆ ಕೆಳಗಿಳಿಸು, ತಗ್ಗಿಸು. (ನಾ.) (ನೀರಿನಲ್ಲಿ) ಮುಳುಗು (ಹಾಕುವುದು); ತಲೆ ತಗ್ಗಿಸುವುದು. **Dúcker**[2] (ನಾ.) ಒಂದು ಜಾತಿಯ ನೀರುಮುಳುಗು ಹಕ್ಕಿ. **Dúcking** (ನಾ.); **Dúcking-stool** ಬಯ್ಯುವ ಗಿಲಯುಳ್ಳ ಹೆಂಗಸನ್ನೊ ಅಥವಾ ಇತರ ತುಂಟರನ್ನೊ ನೀರಿನಲ್ಲಿ ಮುಳುಕು ಹಾಕಿಸಿ ದಂಡಿಸುವುದಕ್ಕಾಗಿ ಕೆಳಕ್ಕೂ ಮೇಲಕ್ಕೂ ಆಡುವಂತೆ ಅಳವಡಿಸಿರುವ ತೊಲೆಯ ಕೊನೆಯಲ್ಲಿಯ ನಾಕಾಲಿ.

Duck[3] ಡಕ್ (ನಾ.) ಹಡಗಿನ ಸಣ್ಣ ಪಟಗಳಿಗೂ (ಮು., ನಾವಿಕರ) ಹೊರ ಅಂಗಿಗೂ ಉಪಯೋಗಿಸುವ ಗಟ್ಟಿಬಟ್ಟೆ. (ಬ. ವ. ದಲ್ಲಿ) ಈ ಬಟ್ಟೆಯ ಷರಾಯಿ.

Duct ಡಕ್ಟ್ (ನಾ.) (ದ್ರವವನ್ನು ಸಾಗಿಸುವ) ನಾಳ, ನಾಲೆ, ಕಾಲುವೆ, ಕೊಳಾಯಿ. (ದೇಹದಲ್ಲಿ ಅನ್ನಕ್ಷೀರ, ರಕ್ತದ್ರವ ಅಥವಾ ಇತರ ಸ್ರಾವ ಪದಾರ್ಥ, ಇವನ್ನು ಸಾಗಿಸುವ) ನಾಳ [Biliary d. ಪಿತ್ತನಾಳ. Eustachian d. ಯೂಸ್ಟೇಕಿಯಸ್ ಎಂಬಾತನು ಮೊದಲು ತಿಳಿಸಿದ ನಾಳ]. **Dúctless** (ಗು.) ಸಾಗುನಾಳಗಳಿಲ್ಲದ; ನಿರ್ನಾಳ [D. glands (ಸ್ರಾವ ಪದಾರ್ಥವನ್ನು ಸಾಗಿಸಲು ನಾಳಗಳಿಲ್ಲದೆ ನೇರವಾಗಿ ರಕ್ತಕ್ಕೆ ಸೇರಿಸುವ) ನಿರ್ನಾಳ ಗ್ರಂಥಿಗಳು]

Dúctile ಡಕ್ಟಿ(ಟೈ)ಲ್ (ಗು.) (ಲೋಹಗಳ ವಿಷಯದಲ್ಲಿ) ಮೆತುವಾದ; ಬಗ್ಗಿಸಲಾಗುವ; ಭಿದುರವಲ್ಲದ; ತಂತಿ ಎಳೆಯಲಾಗುವ; ಎಳಕೆಯುಳ್ಳ; ದೃಢವಾದ (ಕಿತ್ತುಹೋಗದ). (ಜೇಡುಮಣ್ಣು, ಮೊ. ವು, ವ್ಯಕ್ತಿ, ಅಥವಾ ಅವನ ನಡತೆ) (ಆಕಾರ) ತಿದ್ದಬಹುದಾದ; ಮಾರ್ಗಕ್ಕೆ ಎಳೆಯಲಾಗುವ; ಎಳೆದಂತೆ ಬರುವ; ಸಾಧುವಾದ. **Ductílity** —ಕ್ಟಿ— (ನಾ.) ತಂತಿಯೆಳಕೆ.

Dud ಡಡ್ (ನಾ.) (ಅಸಂ.) (ಬ. ವ. ದಲ್ಲಿ) ಬಟ್ಟೆ ಬರೆ. ಹರುಕು ಚಿಂದಿಗಳು. (ಏ. ವ. ದಲ್ಲಿ) ಬೆದರು ಬೊಂಬೆ (= **Dúdman**). ಸಿಡಿಯದೆ (ಹಾರದೆ) ಹಾಗೆಯೇ ಉಳಿದ ಸಿಡಿಗುಂಡು, ಮೊ. ವು. ನಿಷ್ಫಲ ಪ್ರಯತ್ನ; ವ್ಯಥಾಲೋಚನೆ. ಅಪ್ರಯೋಜಕ; ಕೆಲಸಕ್ಕೆ ಬಾರದವನು.

Dude ಡ್ಯೂಡ್ (ನಾ.; ಸ್ತ್ರೀ. **Dudíne** ಡ್ಯೂಡೀನ್) (ಅಮೆ. ಸಂ. ಅಸಂ.) ಬಹು ಮಟ್ಟಿಗೆ ಇಂಗ್ಲಿಷರ ಉಡುಪನ್ನೂ ನಡೆ ನುಡಿಗಳನ್ನೂ ಅನುಕರಿಸುವ ಅತಿ ನಾಜೂಕಿನ ಸೌಂದರ್ಯಾಭಿರುಚಿಯುಳ್ಳವನು; ಸೊಗಸುಗಾರ; ಡಂಭಗಾರ; ಷೋಕೀಲಾಲ. **Dúdish** (ಗು.)

Dúdgeon ಡಜ್ಜನ್ (ನಾ.) ರೋಷ; ಆಗ್ರಹ; ಕ್ರೋಧ; ಮುನಿಸು; ಸಿಟ್ಟು; ಕೋಪ; ಅಸಮಾಧಾನ (ಸಾ., In d. ರೋಷದಿಂದ)

Due ಡ್ಯೂ (ಗು., ಕ್ರಿ. ವಿ.) (ಸಾಲ, ಉಪಕಾರ, ಕರ್ತವ್ಯ) ತೀರಿಸಬೇಕಾದ, ಸಲ್ಲಿಸಬೇಕಾದ. ತಕ್ಕ; ಉಚಿತ; ಯುಕ್ತ. Fall, become, d. ಸಲ್ಲಿಸಬೇಕಾದ ಅವಧಿ ಬರು; ಸಲ್ಲಿಸಬೇಕಾಗು. D. date ವಾಯಿದೆಯ ದಿನ. First place is d. to Milton ಮಿಲ್ಟನ್ನಿಗೆ ಪ್ರಥಮ ಸ್ಥಾನ ಸಲ್ಲತಕ್ಕದ್ದು. It is d. to him to say ಅದು ಅವನು ಹೇಳತಕ್ಕದ್ದು. He has his d. reward ಅವನಿಗೆ ತಕ್ಕ ಪ್ರತಿಫಲ ಸಂದಿದೆ. After d. consideration ತಕ್ಕಷ್ಟು ಪರಿಗಣಿಸಿದಮೇಲೆ, ವಿಚಾರ ಮಾಡಿದ ಮೇಲೆ. In d. time ಸಕಾಲಕ್ಕೆ. The difficulty is d. to our ignorance ಈ ತೊಂದರೆಗೆ ನಮ್ಮ ಅಜ್ಞಾನವೇ ಕಾರಣ. The discovery is d. to Newton ಇದನ್ನು ಕಂಡುಹಿಡಿದವನು ನ್ಯೂಟನ್ನನು. (I came late *due* to an accident ಎಂಬಲ್ಲಿ *due* ಪದದ ಪ್ರಯೋಗ ತಪ್ಪು; *owing* ಎಂದಿರಬೇಕು). He is d. to speak to-night ಈ ರಾತ್ರಿ ಆತನು ಭಾಷಣಮಾಡಬೇಕೆಂದು ಗೊತ್ತಾಗಿದೆ. The train is d. at 7-30 ರೈಲುಬಂಡಿ ಬರಬೇಕಾದ ಕಾಲ ೭॥ ಗಂಟೆ. It is already d. and over-d. ಇಷ್ಟು ಹೊತ್ತಿಗೆ ಬರಬೇಕಾಗಿದ್ದಿತು; ಬರಬೇಕಾದ ಕಾಲ ಮೀರಿತು; ಕಾಲಾತೀತವಾಯಿತು. Went d. east ನೇರವಾಗಿ ಪೂರ್ವ ದಿಕ್ಕಿಗೆ ಹೋಯಿತು. A d. North wind ನೇರವಾಗಿ ಉತ್ತರದಿಂದ ಬೀಸುವ ಗಾಳಿ.

Due (ನಾ.) ಒಬ್ಬನಿಗೆ ಸಲ್ಲತಕ್ಕದ್ದು [Give one his d. ಒಬ್ಬನಿಗೆ ಸಲ್ಲತಕ್ಕದ್ದನ್ನು ಸಲ್ಲಿಸು. Give the devil his d. (Devil ನೋಡಿ)]. ಸಾಲ; ಕಡ; ಋಣ; ಬಾಕಿ (Pay one's dues ಕೊಡಬೇಕಾದ ಬಾಕಿ ಕೊಟ್ಟುಬಿಡು). (ಸಾ., ಬ. ವ. ದಲ್ಲಿ) (ನ್ಯಾಯವಾಗಿ ಸಲ್ಲತಕ್ಕ) ಸುಂಕ; ರುಸುಮು [Harbour ಬಂದರಿನ, light ಬೆಳಕಿನ, tonnage ತೂಕದಮೇಲಿನ, dues ತೆರಿಗೆ]. (ನಾವೆ) For a full d. ಪೂರ್ತಿಯಾಗಿ; ಸಂಪೂರ್ಣವಾಗಿ; ನಿಶ್ಶೇಷವಾಗಿ.

Dúel ಡ್ಯೂಎಲ್ (ನಾ., ಕ್ರಿ. ಅಕ.) (ವ್ಯಾಜ್ಯ ಬಗೆಹರಿಸುವುದಕ್ಕಾಗಿ ಇಬ್ಬರಿಗೆ, ಇಬ್ಬರು ಸಂಗಡಿಗರ ಸಮ್ಮುಖದಲ್ಲಿ, ಘಾತಕ ಶಸ್ತ್ರಗಳಿಂದ ನಡೆಯುವ) ದ್ವಂದ್ವ ಯುದ್ಧ; (The d. ದ್ವಂದ್ವಯುದ್ಧ ಮತ್ತು ಅದರ ನಿಯಮಗಳು). (ಇಬ್ಬರು ಮನುಷ್ಯರಿಗೆ, ಎರಡು ಪಂಗಡಗಳಿಗೆ, ಪಕ್ಷಗಳಿಗೆ, ಪ್ರಾಣಿಗಳಿಗೆ, ನಡೆಯುವ) ಹೋರಾಟ, ಕದನ. (ಕ್ರಿ.) ದ್ವಂದ್ವ ಯುದ್ಧ ಮಾಡು. **Dúel(l)ist** (ನಾ.) ದ್ವಂದ್ವ ಯುದ್ಧ ಮಾಡುವವನು; — ಅಭ್ಯಾಸ ಮಾಡುವವನು.

Duénna ಡ್ಯೂಎನ (ನಾ.) ಕನ್ಯಕೆಯರ ಜೊತೆಗಾರಳಾಗಿಯೂ ಅವರ ವಿಚಾರಣೆ ನೋಡಿಕೊಳ್ಳುವವಳಾಗಿಯೂ ಗೊತ್ತಾದ ಹಿರಿಯ ಹೆಂಗಸು: ಕನ್ಯಾ ರಕ್ಷಕಿ.

Duét(t) ಡ್ಯೂಎಟ್ (ನಾ.) ಎರಡು ಕಂಠಕ್ಕೆ ಅಥವಾ ಎರಡು ವಾದ್ಯಗಳಿಗೆ ಹೊಂದುವಂತೆ ರಚಿಸಿದ ಹಾಡು, ಸಂಗೀತ. (ರೂಪ.) ಸಂವಾದ; ಸಂಭಾಷಣ. ಬೈಗುಳು ಪಂದ್ಯ. ಜೋಡಿ; ಜೊತೆ; ಯುಗ್ಮ. **Duéttist** (ನಾ.)

Duff[1] ಡಫ್ (ನಾ.) (Dough ಎಂಬುದಕ್ಕೆ ಪ್ರಾಂತ ರೂಪ)

Duff[2] ಡಫ್ (ಕ್ರಿ. ಸಕ.) (ಅಸಂ.) (ಸರಕನ್ನು) ಕೃತಕ, ಖೋಟಾ, ಮಾಡು; ಹೊಸದಾಗಿ ಕಾಣುವಂತೆ ಮೆರುಗು, ಮೊ. ನ್ನು ಕೊಡು; ಗಿಲೀಟು ಮಾಡು. (ಆಸ್ಟ್ರೇಲಿಯ) ದನಗಳನ್ನು ಕದ್ದು ಅವುಗಳಮೇಲಿನ ಮುದ್ರೆಯನ್ನು ಬದಲಾಯಿಸು. **Dúffing** (ಗು.) ಖೋಟಾ.

Dúffel, Dúffle ಡಫ್ಲ್ (ನಾ.) ದಪ್ಪವಾದ ಮೇಲ್ಚುಂಗು ಉಳ್ಳ ಒರಟು ಉಣ್ಣೆಯ ಬಟ್ಟೆ. ಶಿಕಾರಿಯವರು ಅಥವಾ ವಿಹಾರಕ್ಕಾಗಿ ಹೋಗುವವರು ತಮ್ಮ ಜೊತೆಯಲ್ಲಿ ತೆಗೆದುಕೊಂಡುಹೋಗುವ ಸಾಮಾನು ಸರಂಜಾಮು, ಬದಲುಡುಪು.

Dúffer ಡಫ್ರ್ (ನಾ.) ಕೆಲಸಕ್ಕೆ ಬಾರದ ವಸ್ತುಗಳನ್ನು ಉತ್ತಮವಾದುವೆಂದು ಹೇಳಿ ಮಾರುವವನು; ತಿರುಗುವ್ಯಾಪಾರಿ; ಬೀದಿ ಮಾರಾಟಗಾರ; ಕೋಲಿ ಸೆಟ್ಟಿ. ಅಲ್ಪವಸ್ತುಗಳನ್ನು ಬೆಲೆಯುಳ್ಳವಾಗಿ ಕಾಣುವಂತೆ ರೂಪು ಕೊಡುವವನು: ಗಿಲೀಟುಗಾರ. ಖೋಟಾ ನಾಣ್ಯ, ಚಿತ್ರ, ಮೊ. ವು. ಬರಡು, ಗೊಡ್ಡು, ಗಣಿ. ಕೆಲಸಕ್ಕೆ ಬಾರದ್ದು. ಕಾರ್ಯಶಕ್ತಿಯಿಲ್ಲದವನು; ಅನುಪಯೋಗಿ; ಅಪ್ರಯೋಜಕ; ದಡ್ಡ; ಮಡ್ಡಿ; ಮದಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Dúfter ಡಫ್ಟರ್ (ನಾ.) ಕಚೇರಿಯ ಕಾಗದಗಳ ಕಟ್ಟು ; ದಾಖಲೆ ಪುಸ್ತಕ. ಯಾವುದಾದರೂ ಕಾರ್ಯ ನಡಸುವ ಕಚೇರಿ ; ಖಾತೆ ; ದಫ್ತರ.

Dug[1] ಡಗ್ (ನಾ.) (ಸಸ್ತನಿ ಪ್ರಾಣಿಗಳ) ಕೆಚ್ಚಲು, ಮೊಲೆ, ಮೊಲೆತೊಟ್ಟು. (ಈಗ ಹೆಂಗಸರ ವಿಷಯದಲ್ಲಿ ತಿರಸ್ಕಾರವಾಗಿ ಪ್ರಯೋಗ)

Dug[2] ಡಗ್. Dig ಧಾತುವಿನ ಭೂತ. ಮತ್ತು ಭೂ. ಕೃ. ರೂಪ.

Dúgong ಡೂಗಾಂಗ್ (ನಾ. ; ಬ. ವ., ಸಾ., Dugong) ಇಂಡಿಯನ್ ಸಮುದ್ರಗಳ, ಸಸ್ಯಾಹಾರಿಯಾದ ಒಂದು ದೊಡ್ಡ ಸಸ್ತನಿಪ್ರಾಣಿ.

Dúg-out ಡಗ್ ಔಟ್ (ನಾ.) ಮರದ ದಿಮ್ಮಿಯನ್ನು ತೋಡಿ ಮಾಡಿದ ದೋಣಿ : ತೋಡು ದೋಣಿ. ನೆಲದಲ್ಲಿ ತೋಡಿ ಮಾಡಿದ ರಕ್ಷಣ ಸ್ಥಾನ, ನೆಲ ಮಾಳಿಗೆ (ಮು., ಯುದ್ಧ ದಳಗಳಿಗಾಗಿ ಮಾಡಿದ್ದು). (ಅಸಂ.) ಮರಳಿ ಕೆಲಸಕ್ಕೆ ನಿಯಮಿತನಾದ ನಿವೃತ್ತಾಧಿಕಾರಿ.

Duke ಡ್ಯೂಕ್ (ನಾ.) (ಚರಿತ್ರೆ) ಕೊನೆ ಕೊನೆಯ ರೋಮನ್ ಚಕ್ರವರ್ತಿಗಳ ಕೈಕೆಳಗಿನ ಪ್ರಾಂತ ಸೇನಾನಾಯಕ, ದಳಪತಿ. (ಬೈಬಲ್) ಒಂದು ಕುಲದ ಮುಖಂಡ, ತಲೆಯಾಳು. (ಯೂರೋಪಿನ ಕೆಲವು ಭಾಗಗಳಲ್ಲಿ) ಒಂದು ಸಣ್ಣ ಸಂಸ್ಥಾನದ ಪ್ರಭು ; (ಗ್ರೇಟ್ ಬ್ರಿಟನ್ ಮತ್ತು ಇತರ ಕೆಲವು ದೇಶಗಳಲ್ಲಿ) ರಾಜಮನೆತನ ವಿನಾ ವಂಶಾನುಗತವಾದ ಶ್ರೀಮಂತ ಪದವಿಯ ಉತ್ತಮ ಬಿರುದನ್ನು ಪಡೆದಿರುವವನು (Also, Royal d. ಈ ಬಿರುದೂ ಇದ್ದು ರಾಜಕುಟುಂಬಕ್ಕೂ ಸೇರಿದವನಾಗಿ ಅಗ್ರಮರ್ಯಾದೆಯುಳ್ಳವನು). [Dine with D. Humphrey (Dine ನೋಡಿ)]. ಒಂದು ಬಗೆಯ ಚೆರಿ ಹಣ್ಣು, ಗಿಡ. (ಅಸಂ.) ಕೈ ; ಮುಷ್ಟಿ. **Dúcal** (ಗು.) ಡ್ಯೂಕಿನ ; ಡ್ಯೂಕಿನಂಥ ; ಡ್ಯೂಕ್ ಎಂಬ ಬಿರುದುಳ್ಳ. **Dúchess** ಡಚೆಸ್ (ನಾ.) ಡ್ಯೂಕಿನ ಹೆಂಡತಿ, — ವಿಧವೆ. ಗಾಂಭೀರ್ಯವುಳ್ಳ ಹೆಂಗಸು. (ಅಸಂ.) ಹಣ್ಣುಹಂಪಲಿನ ಬೀದಿವ್ಯಾಪಾರಿಯ ಹೆಂಡತಿ (ಸಂಕ್ಷಿಪ್ತ : Dutch). **Dúchy** ಡಚಿ (ನಾ.) ಆಳುವ ಡ್ಯೂಕಿನ ಅಥವಾ ಡಚೆಸ್ಸಿನ ಸಂಸ್ಥಾನ. ರಾಜಮನೆತನದ ಡ್ಯೂಕ್‌ಪ್ರಾಂತಗಳಾದ ಇಂಗ್ಲೆಂಡಿನ ಕಾರನ್‌ವಾಲ್, ಲ್ಯಾಂಕ್ಯಾಸ್ಟರ್. **Dúkedom** ಡ್ಯೂಕ್‌ಡಮ್ (ನಾ.) ಡ್ಯೂಕು ಆಳುವ ಪ್ರಾಂತ ; ಡ್ಯೂಕ್ ಪದವಿ. **Dúkeries** ಡ್ಯೂಕರೀಸ್ (ನಾ., ಬ. ವ.) ಅನೇಕ ಡ್ಯೂಕ್ ಜಹಗೀರುಗಳಿರುವ ಇಂಗ್ಲೆಂಡಿನ ನಾಟಿಂಗಂಷಯರಿನಲ್ಲಿಯ ಪ್ರಾಂತ.

Dúlcet ಡಲ್ಸೆಟ್ (ಗು.) ಇಂಪಾದ ; ಹಿತವಾದ ; ಇನಿದಾದ ; ಸವಿಯಾದ ; ಮಧುರ (ಮು., ನಾದದ ವಿಷಯದಲ್ಲಿ) ; ಸುರಸ ; ಆಪ್ಯಾಯಮಾನವಾದ. **Dúlcify** ಡಲ್ಸಿಫೈ (ಕ್ರಿ. ಸಕ.) ಇನಿದು ಮಾಡು ; ಹಿತವಾಗಿಸು ; ಸವಿಯಾಗಿಸು ; ಆಪ್ಯಾಯಮಾನ ಮಾಡು. **Dulcificátion** (ನಾ.)

Dúlcimer ಡಲ್ಸಿಮರ್ (ನಾ.) (ಧ್ವನಿ ವೃದ್ಧಿಮಾಡುವ ಹಲಗೆಯಮೇಲೆ ಅಥವಾ ಪೆಟ್ಟಿಗೆಯಮೇಲೆ ತಕ್ಕಂತೆ ಬೇರೆ ಬೇರೆ ಉದ್ದದ ತಂತಿಗಳನ್ನು ಅಳವಡಿಸಿ ಅವನ್ನು ಸಣ್ಣ ಸುತ್ತಿಗೆಯಿಂದ ನುಡಿಸುವ) ತಂತಿವಾದ್ಯ.

Dulcinéa ಡಲ್ಸಿನೀಯ, **Dulcínea** — ನಿಯ (ನಾ.) (ಪೂಜ್ಯತೆ ಮತ್ತು ಗುಣಸಂಪೂರ್ಣತೆಯನ್ನು ಆರೋಪಿಸಿದ) ಪ್ರಾಣಕಾಂತೆ, ಮನೋವಲ್ಲಭೆ, ಹೃದಯೇಶ್ವರಿ, ನಲ್ಲೆ, ಇನಿಯೆ. [Don Quixote ಎಂಬ ಕಾದಂಬರಿಯಲ್ಲಿ ಕಥಾನಾಯಕನ ಪ್ರಿಯೆ]

Dull ಡಲ್ (ಗು., ಕ್ರಿ.) ಮಂದ ಬುದ್ಧಿಯ ; ದಡ್ಡ ; ಮಡ್ಡಿ ; ಮೊದ್ದು ; ಬುದ್ಧಿಹೀನ. (ಕಿವಿ, ಕಣ್ಣು, ಆಯುಧ, ಮೊ. ಗಳ ವಿಷಯದಲ್ಲಿ) ತೀಕ್ಷ್ಣವಲ್ಲದ, ಮೊನೆಯಿಲ್ಲದ, ಕೂರ್ಪಿಲ್ಲದ, ಪಟುತ್ವವಿಲ್ಲದ, ಮೊಂಡ, ಮದಡಾದ. (ಅಚೇತನ ವಸ್ತುಗಳ ವಿಷಯದಲ್ಲಿ) ಜಡ. (ನೋವು, ಮೊ.) ಸ್ಪಷ್ಟವಾಗಿ ತೋರದ, ತೀವ್ರವಲ್ಲದ. (ಮನುಷ್ಯ, ಪ್ರಾಣಿ, ವ್ಯಾಪಾರ) ಚುರುಕಿಲ್ಲದ ; ಚಟುವಟಿಕೆಯಿಲ್ಲದ ; ನಿಧಾನವಾಗಿ ನಡೆಯುವ ; ಚಲಿಸದಿರುವ ; ಬಿದ್ದಂತೆ ಬಿದ್ದಿರುವ. (ಸರಕು) ಗಿರಾಕಿಯಿಲ್ಲದ, ಮಾರಾಟವಿಲ್ಲದ, ಸುಲಭವಾಗಿ ಮಾರಲಾಗದ. ಗೆಲುವಿಲ್ಲದ ; ಮಂಕಾದ ; ಮನ ಕುಗ್ಗಿದ ; ಕಳೆಗುಂದಿದ ; ಬೇಸರ ಹಿಡಿಸುವ ; ಒಂದೇ ರಾಗದ ; ನೀರಸ ; ಸಪ್ಪೆ. (ಬಣ್ಣ, ಬೆಳಕು, ಶಬ್ದ, ರುಚಿ) ಮಬ್ಬಾದ, ಪ್ರಕಾಶವಿಲ್ಲದ, ಅಸ್ಪಷ್ಟ, ತೀಕ್ಷ್ಣವಲ್ಲದ ; (ವಾಯುಸ್ಥಿತಿ) ಮೋಡ ಕವಿದಿರುವ. (ಕ್ರಿ.) ಮೊಂಡು, ಮಂಕು, ಮಂದ,—ಮಾಡು, ಆಗು [D. the edge of (ಆಯುಧದ) ಬಾಯಿ ಮೊಂಡು ಮಾಡು, ಹರಿತಗೆಡಿಸು ; ಚುರುಕು, ಆಸಕ್ತಿ, ಪ್ರಭಾವ, ಸ್ವಾರಸ್ಯ, ಮೊ. ನ್ನು ಕಡಮೆ ಮಾಡು]. ಬಲಗುಂದು ; ಬಲಗುಂದಿಸು ; ತೀಕ್ಷ್ಣತೆ, ಸ್ಪಷ್ಟತೆ, ಕೆಡು, ಕಡಮೆಯಾಗು. **Dúllard** (ನಾ.) ; **Dúllish** ಡಲಿಷ್ (ಗು.) ಸ್ವಲ್ಪ ಮಂಕಾದ. **Dúl(l)ness** (ನಾ.) ; **Dúlly** ಡಲ್ಲಿ (ಕ್ರಿ. ವಿ.)

Dúly ಡ್ಯೂಲಿ (ಕ್ರಿ. ವಿ.) ಸರಿಯಾಗಿ ; ತಕ್ಕಂತೆ ; ಉಚಿತ ರೀತಿಯಲ್ಲಿ ; ಯಥಾ ಯೋಗ್ಯವಾಗಿ; ಹೊಂದಿಕೆಯಾಗಿ; ತಕ್ಕಷ್ಟು (ಮಟ್ಟಿಗೆ) ; ಸಾಕಾದಷ್ಟು. ಹೊತ್ತಿಗೆ ಸರಿಯಾಗಿ ; ಸಕಾಲದಲ್ಲಿ ; ಕಾಲ ಕ್ರಮದಲ್ಲಿ.

Dúma ಡೂಮ (ನಾ.) ರಷ್ಯದ ಶಾಸನ ಸಭೆ (೧೯೦೬-೧೭)

Dumb ಡಮ್ (ಗು., ತರ ರೂಪ Dumber ಡಮರ್, ತಮ ರೂಪ Dumbest ಡಮಿಸ್ಟ್) ಬಾಯಿಲ್ಲದ; ಮೂಕ ; ಮೂಗ ; ಬಾಯಿ ಬಾರದ [The d. ಮೂಗರು. The deaf and d. ಮೂಗರು. D. animals ಮೂಕ ಪ್ರಾಣಿಗಳು (ಕರುಣೆಯಿಂದಲೋ ಅಸಡ್ಡೆಯಿಂದಲೋ ಹೇಳುವ ಮಾತು). The d. millions (ಸರ್ಕಾರ ವಿಚಾರಗಳು, ಮೊ. ಗಳಲ್ಲಿ) ತಮ್ಮ ಮನೋಭಾವಗಳನ್ನು ಮಾತಿನಿಂದ ಹೊರಗೆಡವರಾರದ ಪ್ರಜೆಗಳು : ಮೂಕ ಪ್ರಜೆಗಳು]. (ಕಿವಿಗೆ) ಕೇಳಿಸದ ; ಶಬ್ದ ಕೊಡದ. (ನಾಚಿಕೆ, ಬೆರಗು, ಮೊ. ಗಳಿಂದ) ಮಾತುಡುಗಿದ ; ಮೌನ. English a d. people ಇಂಗ್ಲಿಷರು (ಹೆಚ್ಚು) ಮಾತಾಡದವರು. Nature is d. on the point ಈ ವಿಷಯವಾಗಿ ಪ್ರಕೃತಿ ಮೂಕ ಭಾವ ವಹಿಸಿದೆ (ಇದಕ್ಕೆ ಪ್ರಕೃತಿಯಲ್ಲಿ ಯಾವ ಸೂಚನೆಯೂ ದೊರೆಯುವುದಿಲ್ಲ). Strike d. ಆಶ್ಚರ್ಯ, ಸಂಕೋಚ, ಮೊ. ಗಳಿಂದ ಮಾತನಾಡದಂತೆ ಮಾಡು, ಮಾತುಡುಗಿಸು. **D. barge, craft** ಪಟಗಳಾಗಲಿ ಮತ್ತಾವ ಚಾಲಕ ಶಕ್ತಿಯಾಗಲಿ ಇಲ್ಲದ ದೋಣಿ. **D.-bell** ಅಂಗ ಸಾಧನೆಗಾಗಿ ಕೈಯಲ್ಲಿ ಹಿಡಿದು ಉಪಯೋಗಿಸುವ, ಕೊನೆಗಳಲ್ಲಿ ಭಾರದ ಗುಂಡುಗಳುಳ್ಳ, ಮೋಟಾದ ಕಬ್ಬಿಣದ ದಂಡ (ಸಾ., ಒಂದು ಜೊತೆ) : ಇಗ್ಗುಂಡು. (ಕ್ರಿ.) ಇಗ್ಗುಂಡಿನಿಂದ ಅಂಗಸಾಧನೆ ಮಾಡು. **D. piano** ಬೆರಳುಗಳ ಅಭ್ಯಾಸಕ್ಕಾಗಿ ಮಾತ್ರ ಮಾಡಿರುವ ನಾದ ಕೊಡದ ಮೆಟ್ಟಲುಗಳುಳ್ಳ ಪಿಯಾನೊವಾದ್ಯ. **D. show** ಮಾತಿಲ್ಲದೆ ಅಂಗ ವಿನ್ಯಾಸದಿಂದ ಅಭಿಪ್ರಾಯ ತಿಳಿಸುವ ನಾಟಕ ಭಾಗ : ಮೂಕಾಭಿನಯ. **D. waiter** ಊಟದ ಮನೆಯಲ್ಲಿ ಬಡಿಸುವವನ ಆವಶ್ಯಕತೆಯಿಲ್ಲದಂತೆ ಪದಾರ್ಥಗಳನ್ನು ಅಣಿಮಾಡಿರುವ ತಿರುಗುಬೀರು. **D. well** ನೆಲದ ಜವುಗನ್ನು ಅಥವಾ ಮೇಲಿನ ನೀರನ್ನು ಬಸಿಯುವುದಕ್ಕಾಗಿ ಮಾಡಿರುವ ಬಾವಿ : ಬಸಿ ಬಾವಿ. **Dúmbly** ಡಮ್ಲಿ (ಕ್ರಿ. ವಿ.) ; **Dúmbness** (ನಾ.) ; **Dumbfóund** ಡಮ್‌ಫೌಂಡ್ (ಕ್ರಿ. ಸಕ.) ಮೂಕ ಮಾಡು ; ಸ್ತಬ್ಧ ಮಾಡು ; ಸೊಲ್ಲೆತ್ತದಂತೆ ಮಾಡು ; ಬಾಯಿ ಕಟ್ಟು ; ಮಾತುಡುಗಿಸು ; ನಿರುತ್ತರ ಮಾಡು ; ಸ್ತಂಭೀಭೂತ ಮಾಡು ; ದಿಕ್ಕು ತೋರದಂತೆ ಮಾಡು.

Dumb (ಕ್ರಿ. ಸಕ.) ಮೂಕನನ್ನಾಗಿ ಮಾಡು.

Dúmbledore ಡಂಬ್‌ಲ್‌ಡೋರ್ (ನಾ.) ಹೆಜ್ಜೇನು. ಒಂದು ಜಾತಿಯ ಜೀರುಂಡೆ.

Dúmdum (bullet) ಡಮ್‌ಡಮ್ (ಬುಲೆಟ್) (ನಾ.) (ನಾಟಿದೊಡನೆಯೇ ಹಿಗ್ಗಿಕೊಂಡು ಮಾಂಸವನ್ನು ಹರಿದುಹಾಕುವ ಮೆತುಮೂತಿಯ) ಒಂದು ತೆರದ ಬಂದೂಕುಗುಂಡು : ಡಮ್‌ಡಮ್ ಗುಂಡು. (ಇಂಡಿಯಾದಲ್ಲಿಯ ಡಮ್‌ಡಮ್ ಎಂಬ ಸ್ಥಳದಿಂದ)

Dúmmy ಡಮಿ (ನಾ., ಗು.) (ಮೂವರು ಆಟಕ್ಕೆ ಕುಳಿತು ನಾಲ್ಕನೆಯ ಆಟಗಾರನನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಆ ಕೈಯ ಎಲೆಗಳನ್ನು ಕಾಣುವಂತೆ ಹರಡಿ ಜೋಡಿಯಾಟಗಾರನು ಆ ಎಲೆಗಳನ್ನು ತಾನೇ ಆಡುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ವ್ವಿಸ್ಟ್' ಎಂಬ ಇಸ್ಪೀಟಾಟದಲ್ಲಿ) ಕಲ್ಪಿತ ಆಟಗಾರ. (D. whist or D. ಹೀಗೆ ಆಡುವ ಇಸ್ಪೀಟಾಟ). (Auction bridge ಎಂಬ ಇಸ್ಪೀಟಾಟದಲ್ಲಿ, ಜೊತೆಯ ಆಟಗಾರನಿದ್ದರೂ ಈ ರೀತಿಯಾಗಿಯೇ ಆಟವಾಡುವವನ) ಮೂಕ ಜೋಡಿ. (Double d. ಇಂಥ ಎರಡು ಕಲ್ಪಿತ ಆಟಗಾರರ ಕೈಗಳುಳ್ಳ ಇಸ್ಪೀಟಾಟ). ಕೆಲಸದಲ್ಲಿ ಯಾವ ಭಾಗವನ್ನೂ ವಹಿಸದೆ ನೋಟಕ್ಕಾಗಿ ಮಾತ್ರ ಇರುವವನು ; ನಾಮ ಮಾತ್ರದವನು ; ನೆಪ ಮಾತ್ರದವನು ; ಆಕಾರ ಮಾತ್ರದವನು ; ಒಬ್ಬನ ಕೈಗೊಂಬೆಯಾಗಿರುವವನು ; ಹುರುಳಿಲ್ಲದವನು. ದಡ್ಡ ; ಮಡ್ಡಿ ; ಹೆಡ್ಡ. ಖೋಟಾ ವಸ್ತು ; ತೋರ್ಕೆಯ ವಸ್ತು ; ಕೃತಕಾಕೃತಿ. ಒಳಗೇನೂ ಇಲ್ಲದ ಸಾಮಾನುಗಂಟು, ಮೊ. ವು. ಮನುಷ್ಯನಂತೆ ತೋರುವುದಕ್ಕಾಗಿ ಉಡುಪು ತೊಡಿಸಿದ ದಿಮ್ಮಿ. (ಬಂದೂಕಿನ) ಗುರಿಗಾಗಿ ಇಟ್ಟ ಮನುಷ್ಯನ ಪ್ರತಿಮೆ. ಮಕ್ಕಳಿಗೆ ಚೀಪಲು ಕೊಡುವ ರಬ್ಬರಿನ ಮೊಲೆತೊಟ್ಟು. (Sell the d. ರಗ್ಬಿ ಕಾಲ್ಚೆಂಡಾಟದಲ್ಲಿ ಚೆಂಡನ್ನು ಮತ್ತೊಬ್ಬನಿಗೆ ಹಾಕುವುದಾಗಿ ನಟಿಸಿ ಎದುರಾಳಿಯನ್ನು ಮೋಸಗೊಳಿಸು). (ಗು.) ಬರಿ ತೋರ್ಕೆಯ ; ವೇಷದ.

Dump[1] ಡಂಪ್ (ನಾ.) ಗಿಡ್ಡಾಗಿಯೂ ದಪ್ಪವಾಗಿಯೂ ಇರುವ ವಸ್ತು ; ಮೋಟಾದದ್ದು. (ಆಟಗಳಲ್ಲಿ ಉಪಯೋಗಿಸುವ ಸೀಸದ) ಎಣಿಕೆಯ ಕಾಯಿ. ಚಲಾವಣೆಯಲ್ಲಿಲ್ಲದ ಆಸ್ಟ್ರೇಲಿಯದ ಒಂದು ನಾಣ್ಯ. (ಅಸಂ.) ಸಣ್ಣ ನಾಣ್ಯ ; ಕಾಸು (Not worth a d. ಕಾಸಿಗೂ ಕಡೆ). ಹಡಗುಕಟ್ಟಡದಲ್ಲಿ ಉಪಯೋಗಿಸುವ ಒಂದು ತೆರದ ಬಿಗಿಮೊಳೆ. ಹಡಗಿನಮೇಲೆ ಆಡುವ ಒಂದು ತೆರದ ಆಟಕ್ಕೆ ಉಪಯೋಗಿಸುವ ಹಗ್ಗದ ಸಿಂಬೆ ; ಒಂದು ತೆರದ 'ಸ್ಕಿಟ್‌ಲ್ಸ್' ಎಂಬ ಆಟ. ಒಂದು ತೆರದ ಮಿಠಾಯಿ. ಗಿಡ್ಡಾಗಿಯೂ ದಪ್ಪನಾಗಿಯೂ ಇರುವವನು ; ಗುಜ್ಜಾರಿ.

Dump[2] ಡಂಪ್ (ಕ್ರಿ., ನಾ.) (ಕಸ ಕಡ್ಡಿಯನ್ನು) ಸುರಿ, ಹಾಕು, ಬಗ್ಗಿಸಿಬಿಡು, ತಳ್ಳು, ನೂಕು, ಎಸೆ, ಕೆಡವು, ರಾಶಿ ಹಾಕು ; ದಪ್ಪನೆ ಬೀಳಿಸು ; ಬೀಳು. (ವ್ಯಾಪಾರ) ಹೆಚ್ಚುಬೆಲೆಗೆ ಸ್ಥಳದಲ್ಲಿ ಮಾರಾಟವಾಗದ ಸರಕನ್ನು, ಅಲ್ಲಿ ಬೆಲೆ ಕಡಮೆ ಮಾಡಲು ಇಷ್ಟವಿಲ್ಲದೆ, ಹೊರ ದೇಶದ ವ್ಯಾಪಾರವನ್ನು ಸೆಳೆಯುವುದಕ್ಕಾಗಿ, ಬೆಲೆ ಕಡಮೆ ಮಾಡಿ, ಅಲ್ಲಿಗೆ ಸಾಗಿಸು : ಅಗ್ಗದ ಸರಕನ್ನು ತಂದು ತುಂಬು. ಬೇಡದ ಜನರನ್ನು ಪರದೇಶದಲ್ಲಿ ತಂದಿಳಿಸು. (ನಾ.) ಗುದ್ದು ; ತಟ್ಟು. (ಅಮೆ. ಸಂ.) ಕಸದ ಗುಡ್ಡೆ ; ತಿಪ್ಪೆ ; ಕಸವನ್ನು ಒಟ್ಟುವ ಸ್ಥಳ. (ಸೇನೆ) ಯುದ್ಧ ರಂಗದಲ್ಲಿ ಮದ್ದು ಗುಂಡು ಇಡುವ ಹಂಗಾಮಿ ಉಗ್ರಾಣ : ಹಂಗಾಮಿ ಮದ್ದಿನ ಕೋಠಿ. **Dúmper** (ನಾ.)

Dúmpling ಡಂಪ್ಲಿಂಗ್ (ನಾ.) ಹಣ್ಣಿಟ್ಟು ಅಥವಾ ಇಡದೆಯೇ ಬೇಯಿಸಿದ ಅಥವಾ ಸುಟ್ಟ ನಾದುಹಿಟ್ಟು ; ಹಿಟ್ಟಿನುಂಡೆಯ ಭಕ್ಷ್ಯ.

Dumps ಡಮ್ಪ್ಸ್ (ನಾ., ಬ. ವ.) ಇಳಿಮನಸ್ಸು ; ಮ್ಲಾನತೆ ; ವಿಷಣ್ಣತೆ ; ಮಂಕು ; ನಿರುತ್ಸಾಹ ; ವ್ಯಥೆ ; ಖೇದ. **Dúmpy**[1] (ಗು.)

Dúmpy[2] ಡಂಪಿ (ಗು., ನಾ.) ಗಿಡ್ಡಾಗಿಯೂ ದಪ್ಪನಾಗಿಯೂ ಇರುವ (D. level ಭೂಮಿಯ ಏರು ತಗ್ಗುಗಳನ್ನು ಅಳೆಯುವುದರಲ್ಲಿ ಉಪಯೋಗಿಸುವ ಈ ತೆರದ ರಸಮಟ್ಟ). (ನಾ.) ಗಿಡ್ಡ ಕಾಲುಗಳುಳ್ಳ ಒಂದು ತಳಿಯ ಕೋಳಿ. (ಬ. ವ. ದಲ್ಲಿ) ಕುದುರೆಸವಾರರ ಒಂದು ದಳ(ದ ಹೆಸರು). **Dúmpiness** (ನಾ.)

Dun[1] ಡನ್ (ಗು., ನಾ.) (ಕತ್ತೆಯ ಅಥವಾ ಇಲಿಯ ಬಣ್ಣದಂಥ) ಮಾಸಲು ಕಂದು ಬೂದು ಬಣ್ಣ(ದ). ಈ ಬಣ್ಣದ ಕುದುರೆ. (ಕಾವ್ಯ) ಕತ್ತಲೆಯಾದ ; ಮಬ್ಬಾದ. ಮೀನು ಹಿಡಿಯುವುದಕ್ಕಾಗಿ ಉಪಯೋಗಿಸುವ (ಅನೇಕ ತೆರದ) ಕೃತಕ ನೊಣ.

Dun[2] ಡನ್ (ನಾ., ಕ್ರಿ. ಸಕ.) ಬಿಡದೆ ತಗಾದೆಮಾಡುವ ಸಾಲಗಾರ ; ಸಾಲ ವಸೂಲಿಗಾರ ; ತಗಾದೆಗಾರ ; ನಕ್ಷತ್ರಿಕ. ಸಾಲ ತೀರಿಸಿ ಬಿಡಬೇಕೆಂದು ತಗಾದೆ (ಕೊಡು) ; ವರಾತ (ಮಾಡು) ; ಕಾಡು ; ಪೀಡಿಸು.

Dunce ಡನ್ಸ್ (ನಾ.) ದಡ್ಡ ; ಮಡ್ಡಿ ; ಮಂದ ಬುದ್ಧಿ. (D.'s cap ಪಾಠಶಾಲೆಯಲ್ಲಿ ದಡ್ಡನ ತಲೆಗಿಡುವ ಶಂಕುವಿನಾಕಾರದ ಕಾಗದದ ಟೋಪಿ ; ಮಂಕು ಟೋಪಿ.) (John Duns Scotus ಎಂಬ ಒಬ್ಬ ತತ್ತ್ವಜ್ಞನ ಹೆಸರಿನಿಂದ)

Dúnderhead ಡಂಡರ್‌ಹೆಡ್ (ನಾ.) ದಡ್ಡ ; ಮಡ್ಡಿ ; ಮಂದ ಬುದ್ಧಿ. **Dúnder-headed** (ಗು.)

Dune ಡ್ಯೂನ್ (ನಾ.) (ಸಮುದ್ರದ ಅಥವಾ ನದಿಯ) ತೀರದಲ್ಲಿ ಗುಡ್ಡೆಯಾಗಿ ಅಥವಾ ಸಾಲುಗಟ್ಟಿ ಬಿದ್ದಿರುವ ಮರಳಿನ ರಾಶಿ, ದಿಬ್ಬ.

Dung ಡಂಗ್ (ನಾ., ಕ್ರಿ. ಸಕ.) ಗೊಬ್ಬರ ; ಲದ್ದಿ ; ಸಗಣಿ ; ತೊಪ್ಪೆ. (ರೂಪ.) ಹೊಲೆ ; ಹೊಲಸು. (ಕ್ರಿ.) ನೆಲಕ್ಕೆ ಗೊಬ್ಬರ ಹಾಕು. (ದನ) ಸಗಣಿ ಹಾಕು. **D.-beetle** ಸಗಣಿಯಲ್ಲಿ ಹುಳುಮರಿಗಳು ಬೆಳೆಯುವ ಒಂದು ಜಾತಿಯ ದುಂಬಿ ; ಸಗಣಿ ದುಂಬಿ. **D.-cart** ಗೊಬ್ಬರದ ಬಂಡಿ. **D.-fly** ಸಗಣಿ (ತಿನ್ನುವ) ನೊಣ. **D.-fork** ಗೊಬ್ಬರ ಹರಡುವ ಹಲುಬೆಗೋಲು. **Dúnghill** ಡಂಗ್‌ಹಿಲ್ (ನಾ.) ಗೊಬ್ಬರದ ಕುಪ್ಪೆ ; ತಿಪ್ಪೆ [Cock on his own d. ಮನೆಯಲ್ಲೇ ಇದ್ದುಕೊಂಡು ಜಂಬ ಮಾಡುವವನು ('ಉತ್ತರನ ಪೌರುಷ ಒಲೆಯಮುಂದೆ' ಎಂಬಂತೆ). ಮನೆಯಲ್ಲಿ ದರ್ಪದಿಂದ ಕಾಡುವವನು]. **D.-h. cock** ಮನೆಯ ಮುಂದಿನ ಕೋಳಿ (ಕಾಳಗದ ಕೋಳಿಯಲ್ಲ). (ರೂಪ.) ಹಂದೆಯಾದ ; ಹೇಡಿಯಾದ ; ತುಚ್ಛ. **D.-worm** ದನದ ಸಗಣಿಯಲ್ಲಿ ದೊರೆಯುವ ಒಂದು ಜಾತಿಯ ಜಂತುಹುಳು.

Dúngaree ಡಂಗರೀ (ನಾ.) ಇಂಡಿಯದ ಒಂದು ತೆರದ ಒರಟು ಬಟ್ಟೆ.

Dúngeon ಡಂಜನ್ (ನಾ., ಕ್ರಿ. ಸಕ.) (ಈಗಿನ ರೂಪ, ಸಾ., Donjon) ದುರ್ಗದ ಮಧ್ಯ ಪ್ರದೇಶದಲ್ಲಿಯ ದೊಡ್ಡ ಗೋಪುರ. ಕೈದಿಗಳಿಗಾಗಿ ಮಾಡಿರುವ ಭದ್ರವಾದ ನೆಲಮಾಳಿಗೆಯ ಕೋಣೆ ; ನೆಲಮಾಳಿಗೆಯ ಬಂದೀಖಾನೆ ; ಕಾರಾಗೃಹ ; ಕತ್ತಲೆ ಗವಿ. (ಕ್ರಿ.) ಇಂಥ ಬಂದೀಖಾನೆಯಲ್ಲಿ ಸೆರೆಹಾಕು, ಕೂಡು.

Dúnnage ಡನೆಜ್ (ನಾ.) ಹಡಗಿನಲ್ಲಿಯ ಸರಕಿನ ನಡು ನಡುವೆ ಅಥವಾ ತಳಗಡೆ, ತೇವ ತಟ್ಟದಿರುವುದಕ್ಕಾಗಿ ಅಥವಾ ಸಾಮಾನು ಒಂದಕ್ಕೊಂದು ಉಜ್ಜಿಕೊಳ್ಳದಿರುವುದಕ್ಕಾಗಿ ಇಡುವ ಚಾಪೆ, ಕುರುಚಲು ಸೊಪ್ಪು, ಕಂಡಿಹಲಗೆ, ಮೊ. ವು.

Duodécimal ಡ್ಯೂಒಡೆಸಿಮಲ್ (ಗು., ನಾ.) ಹನ್ನೆರಡರ ; ಹನ್ನೆರಡನೆಯ ಭಾಗದ ; ದ್ವಾದಶಾಂಶ ; ದ್ವಾದಶಾಂಶೀಯ ; ಹನ್ನೆರಡು ಹನ್ನೆರಡರಂತೆ ಹೋಗುವ ; ದ್ವಾದಶ ಮಾನದ. (ನಾ., ಬ. ವ. ದಲ್ಲಿ) ಅಡಿ, ಅಂಗುಲ, ಹನ್ನೆರಡನೆಯೊಂದಂಗುಲ — ಈ ಮಾನಗಳಲ್ಲಿ ಕೊಟ್ಟಿರುವ ಬೇರೆ ಬೇರೆ ಮೊತ್ತಗಳನ್ನು ಒಂದೇ ಮಾನಕ್ಕೆ ತಂದುಕೊಳ್ಳದೆ ಹಾಗೆಯೇ ಗುಣಾಕಾರ ಮಾಡುವ ವಿಧಾನ ; ಅಡ್ಡ ಗುಣಾಕಾರ.

Duodécimo ಡ್ಯೂಒಡೆಸಿಮೊ (ನಾ.) (ಸಾ., ಸಂಕ್ಷಿಪ್ತ : 12mo) ಪ್ರತಿ ಹಾಳೆಯೂ ಮುದ್ರಣದ ಪೂರ್ತಿ ಹಾಳೆಯ ಹನ್ನೆರಡರ ಒಂದು ಭಾಗವಾಗಿರುವ ಹಾಳೆಗಳುಳ್ಳ ಪುಸ್ತಕದ ಆಕಾರ ; ದ್ವಾದಶ ಪತ್ರ. ಸಣ್ಣ, ಪುಟ್ಟ, — ವಸ್ತು, ಮನುಷ್ಯ.

Duodénary ಡ್ಯೂಒಡೀನರಿ (ಗು.) ಹನ್ನೆರಡು ಹನ್ನೆರಡುಳ್ಳ ; ಹನ್ನೆರಡು ಹನ್ನೆರಡರ ತಂಡದ.

Duodénum ಡ್ಯೂಒಡೀನಮ್ (ನಾ.) (ಅಂ. ರ. ಶಾ.) ಜಠರದ ಕೊನೆಯಿಂದ ಹೊರಡುವ ಸಣ್ಣ ಕರುಳಿನ ಆದಿ ಭಾಗ ; ಮುಂಗರುಳು ; ಪ್ರಥಮಾಂತ್ರ. **Duodénal** (ಗು.) ; **Duodenítis** — ನೈಟಿಸ್ (ನಾ.) ಮುಂಗರುಳಿನ ಊತ.

Dúologue ಡ್ಯೂಒಲಾಗ್ (ನಾ.) ಇಬ್ಬರ ಸಂಭಾಷಣೆ ; ದ್ವಿಭಾಷಣೆ. ದ್ವಿ ನಟ ನಾಟಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Dupe ಡ್ಯೂಪ್ (ನಾ., ಕ್ರಿ. ಸಕ.) ಮೋಸಕ್ಕೆ ಗುರಿಯಾದವನು ; ಮೋಸ ಹೋದವನು ; ಬೆಳ್ಳಕ್ಕಿ ; ಬೆಪ್ಪ. (ಕ್ರಿ.) ಮೋಸ ಮಾಡು ; ಕಣ್ಣಿಗೆ ಮಣ್ಣೆರಚು ; ಮರುಳುಗೊಳಿಸು. **Dúper** (ನಾ.) ; **Dúpery** (ನಾ.) ಮೋಸ ಕೃತ್ಯ ; ಮೋಸ ಹೋದವನ ಸ್ಥಿತಿ. **Dúpable** (ಗು.) ; **Dupabílity** (ನಾ.) ಮೋಸಹೋಗುವ ಸ್ವಭಾವ.

Dúple ಡ್ಯೂಪ್‌ಲ್ (ಗು.) ದ್ವಯ ; ದ್ವಿ (ಈಗ, ಮುಂದೆ ಹೇಳುವವುಗಳಲ್ಲಿ ಮಾತ್ರ : D. ratio ಎರಡರಷ್ಟರ ಪ್ರಮಾಣ ; ದ್ವಿ ಪ್ರಮಾಣ. D. time, rhythm). **Dúplex** ಡ್ಯೂಪ್ಲೆಕ್ಸ್ (ಗು.) ಎರಡರ ; ದ್ವಯ ; ದ್ವಿ ; ಇರ್. D. gas-burner (ಎರಡು ನಾಳಿಗಳಿಂದ ಹೊರಟ ಅನಿಲದ ಚಿಮ್ಮಲು ಒಟ್ಟುಗೂಡಿ ಒಂದೇ ಜ್ವಾಲೆಯಾಗಿ ಉರಿಯುವಂತೆ ಅಳವಡಿಸಿರುವ) ದ್ವಿನಾಳಿ ಜ್ವಾಲಕ. D. lamp ಎರಡು ಬತ್ತಿಗಳು ಉರಿಯುವ ದೀಪ : ಇಬ್ಬತ್ತಿ ದೀಪ. D. telegraphy (ಒಂದೇ ತಂತಿಯ ಮೂಲಕ ಏಕ ಕಾಲದಲ್ಲಿ ಎರಡು ಕಡೆಯೂ ಸಮಾಚಾರಗಳನ್ನು ಕಳುಹಿಸಲಾಗುವ) ಉಭಯ ಮಾರ್ಗ ದೂರಲೇಖಕ. **Dúplicate** ಡ್ಯೂಪ್ಲಿಕೆಟ್ (ಗು., ನಾ.), — ಕೇಟ್ (ಕ್ರಿ. ಸಕ.) (ಅನುರೂಪವಾಗಿರುವ) ಎರಡು ಭಾಗಗಳುಳ್ಳ ; ದ್ವಿಗುಣಿತ ; ಇಮ್ಮಡಿಯ ; ಎರಡರಷ್ಟರ (D. proportion or ratio ಸಂಖ್ಯೆಗಳ ವರ್ಗಗಳ ಪ್ರಮಾಣಕ್ಕೂ ಆ ಸಂಖ್ಯೆಗಳ ಪ್ರಮಾಣಕ್ಕೂ ಇರುವ ಅನುಪಾತ). ಒಂದು ವಸ್ತುವಿನೊಡನೆ ಎಲ್ಲಾ ವಿಧಗಳಲ್ಲಿಯೂ ಹೋಲಿಕೆಯಿರುವ ಮತ್ತೊಂದು ; ಪ್ರತಿರೂಪ ; ನಕಲು ; ಜೋಡಿ. (ಒಂದು ಪತ್ರದ ಅಥವಾ ದಸ್ತಾವಜಿನ) ದುಪ್ಪತಿ, ನಕಲು (ಅಸಲನಂತೆಯೇ ಕಾನೂನಿನ ಅಂಗೀಕಾರವುಳ್ಳದ್ದು). ಎರಡು ಭಾಗಗಳಲ್ಲಿ ಬರೆದ ಒಂದು ಹುಂಡಿಯ ದುಪ್ರತಿ. ಅಡವಿಟ್ಟು ಕೊಳ್ಳುವವನ ಒತ್ತೆಚೀಟಿ. ಸಮಾನಾರ್ಥಕ ಪದ. ಎರಡು ವಸ್ತುಗಳಲ್ಲಿ ಒಂದೊಂದಕ್ಕೆ ಸಂಪೂರ್ಣವಾದ ಹೋಲಿಕೆ (Made in d.). (ಕ್ರಿ.) ಇಮ್ಮಡಿಸು ; ದ್ವಿಗುಣಿಸು ; ಎರಡರಿಂದ ಗುಣಿಸು. ಒಂದೊಂದಕ್ಕೆ ಸಂಪೂರ್ಣ ಹೋಲಿಕೆಯಿರುವಂಥ ಎರಡನ್ನು ಮಾಡು ; ಸ್ವಲ್ಪವೂ ವ್ಯತ್ಯಾಸವಿಲ್ಲದ ನಕಲನ್ನು ತಯಾರಿಸು ; (ದು)ಪ್ರತಿ ಮಾಡು ; ನಕಲು ಮಾಡು ; ಪ್ರತಿಗಳನ್ನು ತಯಾರಿಸು. **Dúplicator** (ನಾ.) ಒಂದು ಅಸಲಿನ ಅನೇಕ ಪ್ರತಿಗಳನ್ನು ತಯಾರಿಸುವ ಯಂತ್ರ : ನಕಲು ಯಂತ್ರ. **Duplicátion** (ನಾ.) ; **Duplícity** — ಸಿಟಿ (ನಾ.) ಇಬ್ಬಗೆಯ ವಹಿವಾಟು ; ಇಮ್ಮುಖದ ವ್ಯಾಪಾರ ; ಎರಡು ನಡತೆ ; ಮೋಸಗಾರಿಕೆ ; ವಂಚನೆ.

Dúplex, Dúplicate, Duplícity, etc. Duple ನೋಡಿ.

Dúrable ಡ್ಯೂರಬ್‌ಲ್ (ಗು.) ಬಾಳಿಕೆ ಬರುವ ; ಬಹುಕಾಲವಿರುವ ; ತಡೆತ ಬರುವ ; ಸವೆತ, ಕ್ಷಯ, ಮೊ. ನ್ನು ತಡೆಯುವ. **Durabílity** (ನಾ.) ಬಾಳಿಕೆ ; ತಡೆತ. **Dúrableness** (ನಾ.) ; **Dúrably** (ಕ್ರಿ. ವಿ.)

Durálumin ಡ್ಯೂರ್ಯಾಲ್ಯೂಮಿನ್ (ನಾ.) ಅಲ್ಯುಮಿನಿಯಮ್ಮಿನ ಒಂದು ಮಿಶ್ರಲೋಹ (ವಿಮಾನಗಳ ಕಟ್ಟಡದಲ್ಲಿ ಹೆಚ್ಚಾಗಿ ಉಪಯೋಗಿಸುವದು ; ವಿಶೇಷ ಶಕ್ತಿಯೂ ಗಡುಸೂ ಉಳ್ಳದ್ದು). (ವ್ಯಾಪಾರದ ಹೆಸರು)

Dúra máter (L) ಡ್ಯೂರ ಮೇಟರ್ (ನಾ.) (ಅಂ. ರ. ಶಾ.) ಮಿದುಳನ್ನೂ ಮಿದುಳುಬಳ್ಳಿಯನ್ನೂ ಆವರಿಸಿರುವ ದುರ್ಭೇದ್ಯವಾದ ಹೊರ ಚರ್ಮ.

Durámen ಡ್ಯುರೇಮೆನ್ (ನಾ.) (ಹೊರ ಬೆಳವಣಿಗೆಯುಳ್ಳ ಮರಗಳ) ಚೇಗು.

Dúrance ಡ್ಯೂರನ್ಸ್ (ನಾ.) ಸೆರೆ ; ಬಂಧನ ; ನಿರ್ಬಂಧ (ಸಾ., In d. vile ಎಂಬಲ್ಲಿ)

Durátion ಡ್ಯುರೇಷನ್ (ನಾ.) ಕಾಲದ ಗತಿ ; ಕಾಲಾವಧಿ ; ಅವಧಿ ; ಕಾಲ [For the d. ನಡೆಯುವ ವರೆಗೂ (ಯುದ್ಧಕಾಲದಲ್ಲಿ ಮಾಡಿಕೊಳ್ಳುವ ಗುತ್ತಿಗೆಯ ಕರಾರಿನಲ್ಲಿ)]. **Dúring** (ಉಪ.) — ಕಾಲದಲ್ಲಿ ; — ಆಗ ; — ವರೆಗೂ ; — ಮಧ್ಯೆ ; — ನಡುವೆ.

Dúrbar ದರ್ಬಾರ್ (ನಾ.) (ಇಂಡಿಯಾದಲ್ಲಿ) ರಾಜನ ಆಸ್ಥಾನ ; ಒಡ್ಡೋಲಗ ; ದರ್ಬಾರು. (ದೇಶೀಯ ದೊರೆ, ಗವರ್ನರು, ವೈಸ್‌ರಾಯಿ — ಇವರು ನಡಸುವ) ದರ್ಬಾರು.

Duréss(e) ಡ್ಯೂರೆಸ್ (ನಾ.) ಬಲಾತ್ಕಾರದ ತಡೆ, ನಿರ್ಬಂಧ ; ಬಂಧನ ; ಸೆರೆ. ಬಲಾತ್ಕಾರ (ಮು., ಒಬ್ಬನನ್ನು ಒಂದು ಕೆಲಸ ಮಾಡುವಂತೆ, ನ್ಯಾಯವಿರುದ್ಧವಾಗಿ, ಸೆರೆ, ಬೆದರಿಕೆ, ಮೊ. ಗಳಿಂದ ಬಲಾತ್ಕರಿಸುವುದು). Under d. ; Plea of d. ಒಂದು ಕರಾರು ನಿರ್ಬಂಧದಿಂದ ಆದುದೆಂಬ ಕಾರಣದಿಂದ ಅದನ್ನು ಒಪ್ಪಕೂಡದೆಂಬ ವಾದ.

Dúring. Duration ನೋಡಿ.

Durn ಡರ್ನ್ (ಕ್ರಿ. ಸಕ.) = Darn[2].

Dúrra, Dh- ಡುರ (ನಾ.) ಒಂದು ಜಾತಿಯ ಜೋಳ.

Durst ಡರ್‌ಸ್ಟ್. Dare ಧಾತುವಿನ ಭೂತ ಮತ್ತು ಸಂಭಾವನಾ ರೂಪ.

Durwán ದರ್ವಾನ್ (ನಾ.) (ಆಂ. ಇಂ.) ಬಾಗಿಲು ಕಾಯುವವನು ; ದ್ವಾರ ಪಾಲಕ.

Dusk ಡಸ್ಕ್ (ನಾ., ಗು., ಕ್ರಿ.) ಮಬ್ಬು ; ಮಸುಕು (ಆಗು, ಮಾಡು) ; ಮುಂಗತ್ತಲೆ (ಆಗು, ಮಾಡು) ; ಮುಚ್ಚಂಜೆ. (ಗು., ಕಾವ್ಯ) ನೆರಳು ನೆರಳಾದ ; ಮಬ್ಬಾದ ; ಮಸುಕಾದ ; ಮಬ್ಬು, ಮಾಸಲು, ಬಣ್ಣದ. **Dúskish** (ಗು.) ಸ್ವಲ್ಪ ಮಬ್ಬಾದ, ಮಸುಕಾದ. **Dúsky** (ಗು.) ; **Dúskily** (ಕ್ರಿ. ವಿ.) ; **Dúskiness** (ನಾ.)

Dust ಡಸ್ಟ್ (ನಾ.) ದೂಳು ; ಧೂಳಿ ; ಮಣ್ಣು ; ಮಣ್ಣು ಹುಡಿ (Shake off the d. of one's feet ಕಾಲಿನ ದೂಳು ಝಾಡಿಸಿ ಹೊರಟುಹೋಗು ; ಕೋಪದಿಂದ ಹೊರಟುಹೋಗು. Throw d. in one's eyes ಕಣ್ಣಿಗೆ ಮಣ್ಣೆರಚು ; ಮರುಳುಗೊಳಿಸು ; ಮೋಸಪಡಿಸು. Bite the d. ಗಾಯಪಟ್ಟು ಅಥವಾ ಕೊಲ್ಲಲ್ಪಟ್ಟು ನೆಲಕ್ಕುರುಳು ; ಮಣ್ಣು ಮುಕ್ಕು. Make or raise a d. ದೂಳೆಬ್ಬಿಸು). (ಮನೆಯ) ಕಸ. ಪುಷ್ಪ ಪರಾಗ ; ಪುಷ್ಪ ಧೂಳಿ. ಸತ್ತವನ ಅವಶೇಷ, ಉಳಿಕೆ, ಬೂದಿ, ಮಣ್ಣು [Honoured D. ಗೌರವಾರ್ಹವಾದ (ಮನುಷ್ಯನ) ಅವಶೇಷ. In the d. ಮಣ್ಣುಪಾಲಾಗಿ ; ಸತ್ತು]. ಮನುಷ್ಯ ದೇಹ ; ಪಾರ್ಥಿವ ಶರೀರ ; ಮನುಷ್ಯ. ಮಾನಗುಂದು ; ಗೌರವ ಹಾನಿ ; ಅವಮಾನ (Humbled in, to, the d. ನೆಲಕ್ಕೆ ಕುಗ್ಗಿ ; ಮಣ್ಣು ತಿಂದು, ಮುಕ್ಕಿ ; ಮಾನ ಹೋಗಿ ; ಅಪಮಾನ ಹೊಂದಿ). ಗದ್ದಲ ; ಗೊಂದಲ ; ಗಲಾಟೆ ; ಗಲಭೆ ; ದೊಂಬಿ ; ಉದ್ರೇಕ ; ಜಗಳ ; ಹೋರಾಟ ; ಹುಯ್ಲು (D. and heat ಹೋರಾಟದ ಕಷ್ಟನಿಷ್ಠುರಗಳು). (ಅಸಂ.) ನಗದು ಹಣ ; ದುಡ್ಡು. **Dústbin, D.-hole** ಕಸದ ತೊಟ್ಟಿ, ಗುಂಡಿ. **D.-brand** (ಕಾಳಿಗೆ ಬರುವ) ಕಾಡಿಗೆ ರೋಗ. **D.-cloak,-cloth,-coat,-gown,-wrap** ದೂಳು ಬೀಳದಂತೆ ಹೊದಿಸಿರುವ, ತೊಟ್ಟಿರುವ, ಅಂಗಿ, ವಸ್ತ್ರ, ಪಾವುಡ, ಕಾಪು : ದೂಳು ಹೊದಿಕೆ ; ದೂಳು ಕಾಪು. **D.-colour** ಮಾಸಲು ಕಂದುಬಣ್ಣ ; ಮಣ್ಣುಬಣ್ಣ. **D.-cover** ಪುಸ್ತಕದ ರಟ್ಟಿನ ಮೇಲಿನ ಮರೆಹಾಳೆ. **D.-guard** ಯಂತ್ರದಲ್ಲಿ, ಬೈಸಿಕಲ್ಲಿನಲ್ಲಿ, ದೂಳು ಬೀಳದಂತೆ ತಡೆಯುವ ಕಾಪು : ದೂಳು ಕಾಪು. **Dústman**(ನಾ.) ಕಸ ತೆಗೆಯುವವನು. ನಿದ್ರಾ ದೇವತೆ [ರಾತ್ರಿ ನಿದ್ದೆಯ ಹೊತ್ತಿಗೆ ಮಕ್ಕಳು (ಕಣ್ಣಿಗೆ ದೂಳು ಬಿದ್ದಂತೆ) ಕಣ್ಣುಹೊಸಕಿಕೊಳ್ಳುವಂತೆ ಮಾಡುವ ಶಕ್ತಿ]. **Dústpan** (ನಾ.) ಕಸದ ತಟ್ಟೆ, ಮೊರ. **D.-shot** ಅತ್ಯಂತ ಸಣ್ಣ ಬಂದೂಕು ಗುಂಡು ; ರವೆಗುಂಡು ; ಚರೆ. **Dústless** (ಗು.)

Dust (ಕ್ರಿ.) ದೂಳುದುರಿಸು ; ಪುಡಿಯುದುರಿಸು. (ಹಕ್ಕಿಗಳ ವಿಷಯದಲ್ಲಿ) ದೂಳುಸ್ನಾನ ಮಾಡು. (D. the eyes of ಕಣ್ಣಿಗೆ ಮಣ್ಣೆರಚು ; ವಂಚಿಸು ; ಮೋಸಗೊಳಿಸು). ದೂಳು ಮಾಡು ; — ಮಾಡಿಕೊ ; ದೂಳಾಗು ; ದೂಳು ಕೊಡವು, ತೆಗೆ, ಹೊಡೆ, ಒರಸು [D. one's jacket (ಒಬ್ಬನನ್ನು) ಬೆನ್ನಿನ ದೂಳು ಝಾಡಿಸು, ಚಚ್ಚು, ಬಡಿ]. **Dúster** (ನಾ.) (ಸಾಮಾನಿನ) ದೂಳೊರಸುವ, ದೂಳು ಹೊಡೆಯುವ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಟ್ಟೆ : ದೂಳೊರಸು ; ದೂಳು ಹೊಡೆಯುವವನು. **Dústing** (ನಾ.) (ಕ್ರಿಯಾರ್ಥಗಳಲ್ಲಿ). (ಅನಂ.) ಹೊಡೆಯುವುದು ; ಹೊಡೆತ ; ಬಡಿಯುವುದು; ಬಡಿತ; ಚಚ್ಚುವುದು. ಸಮುದ್ರದಲ್ಲಿ ಬಿರುಗಾಳಿಯಿಂದ ಎಸೆದಾಟ, ಎತ್ತಿಹಾಕಾಟ. ಬಿರುಗಾಳಿ. **Dústy** (ಗು.) ದೂಳಾದ ; ಹುಡಿಯಾದ ; ದೂಳು ತುಂಬಿದ ; ದೂಳು ಸೇರಿದ ; ದೂಳು ಕುಳಿತಿರುವ. ನೀರಸ ; ಶುಷ್ಕ ; ಅನಾಕರ್ಷಕ. (ಅಸಂ.) Not so d. ಇದ್ದಮಟ್ಟಿಗೆ ಒಳ್ಳೆಯದೇ ; ಅಷ್ಟೇನೂ ಕಳಪೆಯಲ್ಲ. **D. miller** ಒಂದು ಬಗೆಯ ಸಸ್ಯ. ಮೀನು ಹಿಡಿಯಲು ಉಪಯೋಗಿಸುವ ಕೃತಕ ನೊಣ. **Dústily** (ಕ್ರಿ. ವಿ.) ; **Dústiness** (ನಾ.)

Dutch[1] ಡಚ್ (ಗು., ನಾ.) (ಚರಿತ್ರೆ) 'ನೆದರ್ಲೆಂಡ್ಸ್' ಪ್ರಾಂತ ಸೇರಿದ ಜರ್ಮನಿಯ (High D. ದಕ್ಷಿಣ ಜರ್ಮನರ. Low D. ಸಮುದ್ರದ ದಂಡೆಯ ಮತ್ತು ನೆದರ್ಲೆಂಡ್ಸ್ ಮತ್ತು ಫ್ಲಾಂಡರ್ಸಿನ ಜರ್ಮನರ). ಹಾಲೆಂಡ್ ಮತ್ತು ನೆದರ್ಲೆಂಡ್ಸ್ ಜನರ, ಭಾಷೆಯ (D. school ದಿನಚರಿಯ ವಿಷಯಗಳನ್ನು ಕಲಾ ದೃಷ್ಟಿಯಿಂದ ರಮಣೀಯವಾಗಿ ಚಿತ್ರಿಸುವ ಚಿತ್ರಗಾರರ ಪಂಥ : ಡಚ್ ಕಲಾ ಪದ್ಧತಿ. The D. ಹಾಲೆಂಡಿನ ಮತ್ತು ನೆದರ್ಲೆಂಡ್ಸಿನ ಜನರು : ಡಚ್ಚರು). ಹಾಲೆಂಡಿನ ; ಡಚ್ಚರು ಮಾಡಿದ, ಕಂಡುಹಿಡಿದ (D. clock, chair, cheese). ಡಚ್ಚರ ವೈಶಿಷ್ಟ್ಯದ ; ಡಚ್ಚರದೆಂದು ಹೇಳುವ [D. auction, D. courage (ಆ ಪದಗಳನ್ನು ನೋಡಿ). Talk to one like a D. uncle ತಂದೆ ಮಗನಿಗೆ ಬೋಧಿಸುವಂತೆ ಬೋಧಿಸು. D. wife ಹಾಸಿಗೆಯಲ್ಲಿ ಕೈಕಾಲನ್ನಿಟ್ಟುಕೊಳ್ಳಲು ಬೆತ್ತ, ಮೊ. ಗಳಿಂದ ಮಾಡಿದ ಚೌಕಟ್ಟು ; ಹೀಗೆಯೇ ಉಪಯೋಗಿಸುವ ಉದ್ದವಾದ ದಿಂಬು]. (ನಾ.) (ಚರಿತ್ರೆ) ಜರ್ಮನ್ ಭಾಷೆ (ಯ ಅನೇಕ ರೂಪಗಳಲ್ಲಿ ಯಾವುದಾದರೂ ಒಂದು). (High D. ಜರ್ಮನ್ ಭಾಷೆ. Low D. ಹಾಲೆಂಡಿನ ಮತ್ತು ಇತರ ಉತ್ತರ ಪ್ರಾಂತಗಳ ಭಾಷೆಗಳನ್ನೊಳಕೊಂಡ ಕೆಳ ಜರ್ಮನ್ ಭಾಷೆ). ಹಾಲೆಂಡಿನ ಮತ್ತು ನೆದರ್ಲೆಂಡ್ಸಿನ ಭಾಷೆ (Double D. ಅರ್ಥವಾಗದ ಭಾಷೆ: ಗಜಬಿಜ ಭಾಷೆ). **Dútchman** — ಮ್ಯನ್ (ನಾ. ; ಬ. ವ. -men ; ಸ್ತ್ರೀ. -woman) ಹಾಲೆಂಡಿನವನು; ನೆದರ್ಲೆಂಡ್ಸಿನವನು [Or, I'm a D., I'm a D. if — (ಶಪಥದಿಂದ ಹೇಳುವಲ್ಲಿ ಉಪಯೋಗಿಸುವ ವಾಕ್ಯಗಳು): I'm a D. if I do it ನಾನು ಅದನ್ನು ಮಾಡಿದರೆ ಭ್ರಷ್ಟ ; ನಾನು ಅದನ್ನು ಖಂಡಿತವಾಗಿಯೂ ಮಾಡುವುದಿಲ್ಲ]. ಡಚ್ಚರ ಹಡಗು (Flying D. ಪ್ರೇತ ರೂಪದ ಹಡಗು. ವೇಗವಾದ ಒಂದು ರೈಲುಬಂಡಿಯ ಹೆಸರು)

Dutch[2]. **Duke** ನೋಡಿ.

Dúteous, etc. **Duty** ನೋಡಿ.

Dúty ಡ್ಯೂಟಿ (ನಾ.) (ದೊಡ್ಡವರ, ಗೌರವಾನ್ವಿತರ, ವಿಷಯದಲ್ಲಿ ಅನುಸರಿಸಬೇಕಾದ) ಒಳ್ಳೆಯ ನಡತೆ, (ತೋರಿಸಬೇಕಾದ) ಮರ್ಯಾದೆ, ಗೌರವ. ವಿಧೇಯತೆ ; ನಮ್ರತೆ. ಕರ್ತವ್ಯ ; ಧರ್ಮ ; ಭಾರ ; ಕಡ ; ಋಣ ; ಮಾಡಬೇಕಾದದ್ದು (D. call ನೋಡುವುದಕ್ಕೆ ಇಷ್ಟವಿಲ್ಲದಿದ್ದರೂ ಕರ್ತವ್ಯಕ್ಕಾಗಿ ವಿಚಾರಿಸಿಕೊಂಡು ಬರಬೇಕೆಂಬ ಭೇಟಿ : ಕರ್ತವ್ಯದ ಭೇಟಿ). ಕೆಲಸ ; ಕಾರ್ಯ ; ಉದ್ಯೋಗ (On, off, d. ತನ್ನ ಗೊತ್ತಾದ ಕಾರ್ಯದಲ್ಲಿ ಉದ್ಯುಕ್ತನಾಗಿದ್ದು, ಉದ್ಯುಕ್ತನಾಗಿರದೆ ; ಕೆಲಸದಮೇಲೆ, ಕೆಲಸದಮೇಲಿರದೆ). (ಸರಕಿನ ತಯಾರಿ, ಮಾರಾಟ, ಆಮದು ರಫ್ತು, — ಇವುಗಳಮೇಲೆ ಸರ್ಕಾರ ಹಾಕುವ) ತೆರಿಗೆ, ಸುಂಕ (Customs, Excise ನೋಡಿ). (Death, Probate, Succession, Stamp, duties ವಾರಸು ತೆರಿಗೆ, ಅಂತಿಮ ಇಷ್ಟಪತ್ರಕ್ಕೆ ನ್ಯಾಯಸ್ಥಾನದ ಋಜುವಾತು ತೆರಿಗೆ, ಆಸ್ತಿಯ ಹಕ್ಕಿನ ತೆರಿಗೆ, ದಸ್ತಾವೇಜುಗಳಮೇಲಿನ ತೆರಿಗೆ). (ಕ್ರೈಸ್ತ ಮತ ವಿಷಯದಲ್ಲಿ) ಚರ್ಚಿನ ಕೆಲಸ ; ಪಾದ್ರಿಯ ಕೆಲಸ. (ಯಂತ್ರ ಶಾಸ್ತ್ರ) (ವೆಚ್ಚವಾಗುವ ಇಂಧನದ ಒಂದು ಮಾನಕ್ಕೆ ನಡೆಯುವ ಕಾರ್ಯದಿಂದ ಅಳೆದ) ಎಂಜಿನಿನ ಕಾರ್ಯಶಕ್ತಿ, ಸಾಮರ್ಥ್ಯ. Do d. for (ಮತ್ತೊಂದರ) ಬದಲಾಗಿ ಕೆಲಸ ಮಾಡು, ಕೆಲಸಕ್ಕೆ ಒದಗು. **D.-paid** ಸುಂಕ ಪಾವತಿಯಾಗಿರುವ. **D.-free** ಸುಂಕ ಮಾಫಿಯಾದ. **Dútiable** (ಗು.) ಸುಂಕ ಹಾಕಬಹುದಾದ. **Dúteous** (ಗು.) (ಮನುಷ್ಯನ ಅಥವಾ ನಡತೆಯ ವಿಷಯದಲ್ಲಿ) ಕರ್ತವ್ಯಪರ ; ವಿಧೇಯ. **Dúteously** (ಕ್ರಿ. ವಿ.) ; **Dúteousness** (ನಾ.) ; **Dútiful** (ಗು.) ವಿಧೇಯ ; ನಮ್ರ ; ಕರ್ತವ್ಯ ನಡಸುವ. **Dútifully** (ಕ್ರಿ. ವಿ.) ; **Dútifulness** (ನಾ.)

Dúvet (F) ಡ್ಯುವೇ (ನಾ.) ತುಪ್ಪುಳು ಮೆತ್ತೆ ; ತೂಲ ತಲ್ಪ.

Dux ಡಕ್ಸ್ (ನಾ. ; ಬ. ವ. ಇಲ್ಲ) ಪಾಠಶಾಲೆಯ ತರಗತಿಯಲ್ಲಿ ಮೊದಲಿಗ : ಹಿರಿಯ ಮಣಿ.

Dwarf ಡ್ವಾರ್ಫ್ (ನಾ., ಗು., ಕ್ರಿ.) (ಮನುಷ್ಯ, ಪ್ರಾಣಿ, ಸಸ್ಯ) ಗುಜ್ಜು, ಗುಜ್ಜಾರಿ, ಕುಳ್ಳ, ಗಿಡ್ಡ, ಮೋಟ, ಕುರುಚು, ಕುರುಚಲು, ಕುಬ್ಜ. (ಮು., ಸ್ಕ್ಯಾಂಡಿನೇವಿಯನ್ ಪುರಾಣದಲ್ಲಿ) ಲೋಹಗೆಲಸದಲ್ಲಿ ನಿಪುಣನಾದ ಒಬ್ಬ ಗಿಡ್ಡ ಅಮಾನುಷ ವ್ಯಕ್ತಿ. (ಅನೇಕ ಗಿಡಗಳ ಹೆಸರಿನಲ್ಲಿ) ಕುರುಚುಬಿದ್ದ, ಬೆಳೆವಣಿಗೆಯಿಲ್ಲದ. (ಕ್ರಿ.) (ಬೆಳವಣಿಗೆ, ಬುದ್ಧಿ, ಮೊ. ಗಳಲ್ಲಿ) ಅಭಿವೃದ್ಧಿ ನಿಂತುಹೋಗು, ಕುರುಚುಬೀಳು, — ಬೀಳಿಸು. (ದೂರದಿಂದ, ವೈದೃಶ್ಯದಿಂದ) ಸಣ್ಣದಾಗಿ ತೋರುವಂತೆ ಮಾಡು. **Dwárfish** (ಗು.) ; **Dwárfishly** (ಕ್ರಿ. ವಿ.) ; **Dwárfishness** (ನಾ.)

Dwell ಡ್ವೆಲ್ (ಕ್ರಿ. ಅಕ. ; ಭೂತ., ಭೂ. ಕೃ. Dwelt ; ನಾ.) ವಾಸ ಮಾಡು ; ನೆಲಸಿರು ; ಇರು. (ಯಾವುದಾದರೂ ವಿಷಯದಮೇಲೆ) ಗಮನವಿಡು, ವಿಸ್ತಾರವಾಗಿ ಬರೆ, ಭಾಷಣ ಮಾಡು, ಲಂಬಿಸು (D. upon note, syllable, idea, etc. ರಾಗ, ಅಕ್ಷರ, ಅಭಿಪ್ರಾಯ, ಮೊ. ನ್ನು ದೀರ್ಘವಾಗಿ ಎಳೆ, ಒತ್ತಿ ಹೇಳು). (ಕುದುರೆಯ ವಿಷಯದಲ್ಲಿ) ಪಾದವೆತ್ತುವುದನ್ನು ತಡಮಾಡು, ತಡೆ ಹಾರುವುದಕ್ಕೆ ಮೊದಲು ಸ್ವಲ್ಪ ನಿಲ್ಲು. (ಯಂತ್ರಶಾಸ್ತ್ರ ; ನಾ.) (ಯಂತ್ರಚಲನದಲ್ಲಿ ಒಂದು ಗೊತ್ತಾದ ಉದ್ದೇಶಕ್ಕಾಗಿ) ನಿಯತ ಕಾಲದ ಕೊಂಚ ನಿಲವು. **Dwéller** (ನಾ.) ನಿವಾಸಿ. ತಡೆ ಹಾರುವುದಕ್ಕೆ ಮೊದಲು ಸ್ವಲ್ಪ ನಿಲ್ಲುವ ಕುದುರೆ. **Dwélling** (ನಾ.) (ಕ್ರಿಯಾರ್ಥಗಳಲ್ಲಿ); ವಾಸಸ್ಥಾನ ; ಮನೆ. **D.-house** ವಾಸದ ಮನೆ (ಕಚೇರಿ, ಕೋಠಿ, ಮೊ. ಗಳಲ್ಲ). **D.-place** = Dwelling.

Dwíndle ಡ್ವಿಂಡ್ಲ್ (ಕ್ರಿ. ಅಕ.) ಸಣ್ಣದಾಗು ; ಕಿರಿದಾಗು ; ಕಡಮೆಯಾಗು ; ಕುಗ್ಗಿಹೋಗು ; ಕೃಶವಾಗು ; ನವೆ ; ಸವೆ ; ನಶಿಸಿಹೋಗು ; ಕ್ಷಯಿಸು ; ಕ್ಷೀಣಿಸು ; ಅಪ್ರಧಾನವಾಗು ; ಅವನತಿ ಹೊಂದು ; ಕೀಳಾಗು.

Dýad ಡೈಅ್ಯಡ್ (ನಾ.) ಎರಡು (ಸಂಖ್ಯೆ); ಜೊತೆ ; ಜೋಡಿ ; ಯುಗ್ಮ ; ದ್ವಯ. (ರ. ವಿ.) ಜಲಜನಕದ ಎರಡು ಪರಮಾಣುಗಳ ಸಂಯೋಗಶಕ್ತಿಯುಳ್ಳ ಪರಮಾಣು, ಘಟಕ, ಅಥವಾ ಮೂಲ ಧಾತು ; ದ್ವಿಯೋಗಿ. **Dyádic** ಡೈಅ್ಯಡಿಕ್ (ಗು.)

Dýarchy. **Diarchy** ನೋಡಿ.

Dye ಡೈ (ನಾ) ಬಣ್ಣ ; ವರ್ಣ ; ರಂಗು. (ರೂಪ.) (Crime, scoundrel, of blackest, deepest, d. ಪರಮ ನೀಚ, ಪರಮ ಪಾತಕ, ಪರಮ ದುರಾತ್ಮ). ವರ್ಣದ್ರವ್ಯ. **D.-stuff, -ware, -wood** ವರ್ಣದ್ರವ್ಯ ಕೊಡುವ ಪದಾರ್ಥ, ಸಾಮಗ್ರಿ, ಮರ ; ವರ್ಣವಸ್ತು. **D.-house, -works** ಬಣ್ಣ ಹಾಕುವ ಮನೆ, ಕಾರಖಾನೆ.

Dye (ಕ್ರಿ. ; ಭೂತ., ಭೂ. ಕೃ. Dyed) ರಂಗು ಹಾಕು ; ಬಣ್ಣ ಹಾಕು ; — ಕಟ್ಟು ; — ಕೊಡು ; ಬಣ್ಣದಲ್ಲಿ ಅದ್ದು. (ಬಟ್ಟೆ, ಮೊ.) ಬಣ್ಣ ಹತ್ತು, ಹಿಡಿ. **Dýer** (ನಾ.) ಬಟ್ಟೆ, ಮೊ. ಕ್ಕೆ ರಂಗು ಹಾಕುವವನು ; ಬಣ್ಣಗಾರ ; ರಂಗಾರಿ.

Dýing ಡೈಇಂಗ್ (ನಾ., ಗು.) (Die ಧಾತುವಿನ ಕ್ರಿಯಾರ್ಥಗಳಲ್ಲಿ) ; ಮರಣದ ; ಸಾಯುವ ಕಾಲದ. D. declaration ಸಾಯುವಾಗ ಹೇಳಿದ ಹೇಳಿಕೆ. D. oath ಸಾಯುವಾಗ ಇಟ್ಟುಕೊಂಡ ಆಣೆ, ಮಾಡಿದ ಭಾಷೆ; ಸಾಯುವಾಗ ಹೇಗೊ ಹಾಗೆ ವಿಧಿಪೂರ್ವಕವಾಗಿ ಮಾಡಿದ ಭಾಷೆ. D. wish ಸಾಯುವಾಗ ಕೇಳಿದ ಕೋರಿಕೆ ; ಕೊನೆಯ ಆಸೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

क्रियात्मक, क्रियात्मक, शक्तियुत, बलवत्तर

Dyke. **Dike** ನೋಡಿ.

Dynámic ಡೈ(ಡಿ)ನ್ಯಾಮಿಕ್ (ಗು., ನಾ.) ಚಲನಾತ್ಮಕ (Static, Potential ಪದಗಳೊಡನೆ ಹೋಲಿಸಿ ನೋಡಿ). ಕ್ರಿಯಾಶಕ್ತ ; ಕ್ರಿಯಾತ್ಮಕ ; ಶಕ್ತಿಯುತ ; ಬಲವತ್ತಾದ. ಗತಿಶಾಸ್ತ್ರ ಸಂಬಂಧವಾದ. (ಔಷಧ) ದೇಹ ವ್ಯಾಪಾರದ (Organic ಪದದೊಡನೆ ಹೋಲಿಸಿ ನೋಡಿ). (ತತ್ತ್ವಶಾಸ್ತ್ರ) ದ್ರವ್ಯ ಅಥವಾ ಮನಸ್ಸು ಕೇವಲ ಶಕ್ತಿಗಳ ಕಾರ್ಯವೆಂದು ಪ್ರತಿಪಾದಿಸುವ ವಾದದ: ಚಲಶಕ್ತಿ ವಾದದ. (ನಾ.) ಕ್ರಿಯಾಶಕ್ತಿ ; ಚಾಲಕ ಶಕ್ತಿ ; ಪ್ರೇರಕ ಶಕ್ತಿ. **Dynámics** (ನಾ., ಬ. ವ. ರೂಪವಾದರೂ ಏ. ವ. ದಲ್ಲ ಪ್ರಯೋಗ) ಒಂದು ವಸ್ತುವಿಗೆ ಸ್ಥಾಯಿಭಾವವನ್ನಾಗಲಿ ಚಲನೆಯನ್ನಾಗಲಿ ಕೊಡುವ, ಅಥವಾ ಅದರ ಚಲನೆಯಲ್ಲಿ ವ್ಯತ್ಯಾಸವುಂಟುಮಾಡುವ, ಬಲಗಳ ಕಾರ್ಯವನ್ನು ವಿಚಾರಮಾಡುವ ಭೌತವಿಜ್ಞಾನ ಭಾಗ : ಬಲ ಕ್ರಿಯಾ ಶಾಸ್ತ್ರ. ಯಾವ ಶಾಸ್ತ್ರದಲ್ಲಾಗಲಿ ಬಲಕ್ರಿಯಾ ವಿಚಾರ ಮಾಡುವ ಭಾಗ. ಚಾಲಕ ಶಕ್ತಿ ; ಪ್ರೇರಕ ಶಕ್ತಿ. **Dynámical** (ಗು.) ಬಲಕ್ರಿಯಾ ಶಾಸ್ತ್ರದ. ಕ್ರಿಯಾತ್ಮಕ ಬಲದ ಅಥವಾ ಯಂತ್ರಶಕ್ತಿಯ. (ದೇವ. ಶಾ.) (ಸಹಜ ಪ್ರೇರಣೆಯ ವಿಷಯದಲ್ಲ, ಯಾಂತ್ರಿಕ ಚೋದನ ಮಾಡದೆ, ದೈವ ಶಕ್ತಿಯನ್ನು ಕೊಡುವ) ಚಲಶಕ್ತಿ ವಾದದ. **Dynámically** (ಕ್ರಿ. ವಿ) ; **Dýnamism** (ನಾ.) (ತತ್ತ್ವಶಾಸ್ತ್ರ) (ವಿಶ್ವವು ಮೂಲಭೂತ ಅಥವಾ ಅಂತರ್ಯಾಮಿ ಬಲಗಳಿಂದ ರಚಿತವಾದದ್ದೆಂಬ) ಬಲ ಸೃಷ್ಟಿ ವಾದ. **Dýnamist** (ನಾ.) ಬಲ ಸೃಷ್ಟಿ ವಾದಿ.

Dýnamite ಡೈ(ಡಿ)ನಮೈಟ್ (ನಾ., ಕ್ರಿ. ಸಕ.) ಯಾವುದಾದರೂ ಲೀನಕಾರಿ ಜಡಪದಾರ್ಥವನ್ನು 'ನೈಟ್ರೊಗ್ಲಿಸರಿನ್' ಎಂಬ ಸ್ಫೋಟಕ ವಸ್ತುವಿನೊಡನೆ ಬೆರಸಿ ಮಾಡಿದ ತೀವ್ರಸ್ಫೋಟಕ ; ಪ್ರಬಲವಾದ ಸಿಡಿಮದ್ದು : 'ಡೈನಮೈಟು'. (ಕ್ರಿ.) ಡೈನಮೈಟಿಟ್ಟು ಒಡೆ, ಚೂರು ಚೂರು ಮಾಡು. **Dýnamiter, -tard** (ನಾ.) (ಮು., ಕ್ರಾಂತಿ ಚಳವಳಿಗಾಗಿ) ಸಿಡಿಮದ್ದನ್ನು ಉಪಯೋಗಿಸುವವನು. **Dynamític** — ಮಿ — (ಗು.) ; **Dýnamitism** —ಮೈ —(ನಾ.) ಸಿಡಿಮದ್ದು ಕ್ರಾಂತಿಕಾರನ ಮತ, ನಡೆವಳಿಕೆ ಅಥವಾ ವ್ಯವಹಾರ : ಡೈನಮೈಟ್ ಮತ. ಒಂದು ಸರ್ಕಾರವನ್ನು, ಕುಲವನ್ನು, ವ್ಯಕ್ತಿಯನ್ನು, ಎದುರಿಸಲು ಸಹಾಯಕವಾಗಿ ಡೈನಮೈಟ್, ಮೊ. ಗಳನ್ನು ಉಪಯೋಗಿಸುವುದು. **Dýnamitist** (ನಾ.)

Dýnamo- ಡೈನಮೊ — (ಸ. ಪೂ. ಪ.) ಶಕ್ತಿ —. D.-electric ಚಲ ವಿದ್ಯುತ್ತಿನ ; ಪ್ರವಾಹ ವಿದ್ಯುಚ್ಛಕ್ತಿಯ. ಯಾಂತ್ರಿಕ ಶಕ್ತಿಯನ್ನು ವಿದ್ಯುಚ್ಛಕ್ತಿಯನ್ನಾಗಿ ಮಾರ್ಪಡಿಸುವ.

Dýnamo ಡೈನಮೊ (ನಾ. ; ಬ. ವ. -os) ತಾಮ್ರದ ತಂತಿಯ ಸುರುಳಿಗಳನ್ನು ಕಾಂತಕ್ಷೇತ್ರದಲ್ಲಿ ವೇಗವಾಗಿ ತಿರುಗಿಸುವುದರಿಂದ ಯಾಂತ್ರಿಕ ಶಕ್ತಿಯನ್ನು ವಿದ್ಯುಚ್ಛಕ್ತಿಯನ್ನಾಗಿ ಮಾರ್ಪಡಿಸುವ ಯಂತ್ರ: ಚಲವಿದ್ಯುಜ್ಜನಕ ಯಂತ್ರ ; 'ಡೈನಮೊ'. (D.-electric machine ಎಂಬುದರ ಸಂಕ್ಷಿಪ್ತ)

Dynamómeter ಡೈ(ಡಿ)ನಮಾಮಿಟರ್ (ನಾ.) (ಪ್ರಾಣಿ, ಎಂಜಿನು, ಯಾಂತ್ರಿಕ ಬಲ — ಇವುಗಳಿಂದ ವೆಚ್ಚವಾದ) ಶಕ್ತಿಯನ್ನು ಅಳೆಯುವ ಒಂದು ಸಲಕರಣೆ ; ಶಕ್ತಿ ಮಾಪಕ. ದೂರದರ್ಶಕದ ವರ್ಧನಶಕ್ತಿ ಮಾಪಕ.

Dýnast ಡಿ(ಡೈ)ನ್ಯಸ್ಟ್ (ನಾ.) ಆಳುವವನು ; ಒಡೆಯ ; ಪ್ರಭು ; ದೊರೆ ; ಅರಸು ; ರಾಜ ; ರಾಜ ಸಂತತಿಯವನು ; ಅರಸುಮನೆತನದವನು. **Dýnasty** — ನಸ್ಟಿ (ನಾ.) ವಂಶಾನುಕ್ರಮವಾಗಿ ಆಳಿದವರ ಪಂಕ್ತಿ ; ರಾಜ ವಂಶ ; ರಾಜ ಸಂತತಿ ; ದೊರೆ ಮನೆತನ. **Dynástic** — ನ್ಯಾ — (ಗು.) ; **Dynástically** (ಕ್ರಿ. ವಿ.)

Dyne ಡೈನ್ (ನಾ.) (ಭೌ. ವಿ.) ಬಲದ ಮಾನ (ಒಂದು ಗ್ರ್ಯಾಮ್ ದ್ರವ್ಯದಮೇಲೆ ಒಂದು ಸೆಕಂಡಿನ ಕಾಲ ಕಾರ್ಯನಡಸಿ ಅದರಲ್ಲಿ ಒಂದು ಸೆಕಂಡಿಗೆ ಒಂದು ಸೆಂಟಿಮೀಟರಿನಂತೆ ವೇಗವೃದ್ಧಿ ಮಾಡುವ ಬಲದ ಮೊತ್ತ) : 'ಡೈನು'.

Dýsentery ಡಿಸೆಂಟೆರಿ (ನಾ.) ಕರುಳಿನ ಒಳಚರ್ಮವೂ ಅದರಲ್ಲಿಯ ಗ್ರಂಥಿಗಳೂ ಊತವೇರಿ, ನುಲಿತು, ಆಮವೂ ರಕ್ತವೂ ಹೊರಬೀಳುವ ವ್ಯಾಧಿ : ಆಮ ಶಂಕೆ. **Dysentéric** (ಗು.)

Dysgénic ಡಿಸ್‌ಜೆನಿಕ್ (ಗು.) ಸಂತತಿಯಮೇಲೆ ದುಷ್ಪರಿಣಾಮ ಮಾಡುವ (Eugenic ಎಂಬುದಕ್ಕೆ ಪ್ರತಿ)

Dyslogístic ಡಿಸ್‌ಲೊಜಿಸ್ಟಿಕ್ (ಗು.) ಕೆಟ್ಟರ್ಥದ; ನಿಂದಾರ್ಥಕ; ನಿಂದಾತ್ಮಕ ; ದೂಷಣಾತ್ಮಕ ; ತೆಗಳಿಕೆಯ. **Dyslogístically** (ಕ್ರಿ. ವಿ.)

Dyspépsia ಡಿಸ್‌ಪೆಪ್ಸಿಯ, **-sy** — ಪ್ಸಿ (ನಾ.) ಅಜೀರ್ಣ ವ್ಯಾಧಿ (ಆಹಾರವು ತಕ್ಕಂತೆ ಜೀರ್ಣವಾಗದಿರುವ ರೋಗ) ; ಅಗ್ನಿ ಮಾಂದ್ಯ. **Dyspéptic** (ಗು., ನಾ.) ಅಜೀರ್ಣ ವ್ಯಾಧಿಯುಳ್ಳ(ವನು) ; ಅಜೀರ್ಣ ರೋಗಿ ; ಇದರಿಂದ ಹುಟ್ಟಿದ ಜಡತೆಯುಳ್ಳ(ವನು)

Dyspnoéa ಡಿಸ್‌ಪ್ನೀಯ (ನಾ.) (ವೈ. ಶಾ) ಕಷ್ಟಶ್ವಾಸ ; ಕಟ್ಟುಸಿರು ; ಶ್ವಾಸಾವರೋಧ. **Dyspnoéic** (ಗು.)

Dysúria ಡಿಸ್ಯೂರಿಯ (ನಾ.) ಉರಿ ಮೂತ್ರ (ರೋಗ)

E

E ಈ. ಇಂಗ್ಲಿಷ್ ವರ್ಣಮಾಲೆಯ ಐದನೆಯ ಅಕ್ಷರ. (ಸಂ.) ಸ್ವರಾಷ್ಟಕದ ಮೂರನೆಯ ಸ್ವರ ('ಗ', ಗಾಂಧಾರ). ('ಲಾಯ್ಡ್ಸ್' ಎಂಬ ನಾವಾ ಚಾಲಕರ ದಾಖಲೆಯ ಪುಸ್ತಕಗಳಲ್ಲಿ) ಎರಡನೆಯ (ದುಯ್ಯಂ) ತರಗತಿಯ ಹಡಗು.

ಸಂಕ್ಷಿಪ್ತಗಳು : **E. N. E.** (East-north-east ಪೂರ್ವಕ್ಕೂ ಈಶಾನ್ಯಕ್ಕೂ ಮಧ್ಯೇ ಇರುವ ದಿಕ್ಕು) : ಪೂರ್ವೇಶಾನ್ಯ. **E. by N.** (East by north) ಪೂರ್ವಕ್ಕೂ ಪೂರ್ವೇಶಾನ್ಯಕ್ಕೂ ಮಧ್ಯೇ ಇರುವ ದಿಕ್ಕು. **E. S. E.** (East-south-east ಪೂರ್ವಕ್ಕೂ ಆಗ್ನೇಯಕ್ಕೂ ಮಧ್ಯೇ ಇರುವ ದಿಕ್ಕು) : ಪೂರ್ವಾಗ್ನೇಯ. **E. by S.** (East by south) ಪೂರ್ವಕ್ಕೂ ಪೂರ್ವಾಗ್ನೇಯಕ್ಕೂ ಮಧ್ಯೇ ಇರುವ ದಿಕ್ಕು. **E. R. (et I.)** [Edvardus Rex (et Imperator) : Edward King (and Emperor)] ಎಡ್ವರ್ಡ್ ರಾಜ (ಮತ್ತು ಚಕ್ರವರ್ತಿ). **E. D. D.** (English dialect dictionary) ಇಂಗ್ಲಿಷ್ ಪ್ರಾಂತ ಭಾಷೆಗಳ ನಿಘಂಟು. **E. (& O.) E.** [Errors (& omissions) excepted] ತಪ್ಪುಗಳು (ಬಿಟ್ಟುಹೋದವೂ) ಹೊರತಾಗಿ. **e. g.** (Exempli gratia, for example) ಉದಾಹರಣೆಗಾಗಿ.

Esq.(uire) ; **etc.**(etera) ; **Exc.**(ept) ; **Exod.**(us) ; **Exor.** (Executor) ; **Exrx.** (Executrix) ; **Ezek.**(iel)

Each ಈಚ್ (ಗು., ಸ. ನಾ.) ಪ್ರತಿಯೊಂದೂ ; ಪ್ರತಿಯೊಬ್ಬ ; ಪ್ರತಿಯೊಬ್ಬಳು ; ಒಂದೊಂದೂ ; ಒಬ್ಬೊಬ್ಬ (Each of us has two votes. We have two votes e. They hate e. other. E. hates the other. Sides of two triangles are equal e. to e. ಎರಡು ತ್ರಿಕೋನಗಳ ಜವಾಬಾಗಿರುವ ಭುಜಗಳು ಒಂದಕ್ಕೊಂದು ಸಮವಾಗಿವೆ)

Eáger ಈಗರ್ (ಗು.) ತೀವ್ರವಾದ ಅಭಿಲಾಷೆಯಿಂದ, ಉತ್ಸಾಹದಿಂದ, ಕೂಡಿದ ; ಕಟ್ಟಾಸೆಯುಳ್ಳ ; ಅತ್ಯಾಸಕ್ತಿಯುಳ್ಳ ; ಹೆಚ್ಚು ಕುತೂಹಲವುಳ್ಳ ; ತವಕಿಸುವ ; ಆತುರವುಳ್ಳ ; ಉತ್ಸುಕ. (ರಾಗಾವೇಶಗಳು, ಮೊ.

अत्यासक्तियुक्त, उत्सुक, आतुरतायुक्त, कुतूहलयुक्त.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳ ವಿಷಯದಲ್ಲಿ) ತೀಕ್ಷ್ಣ; ಗಾಢ; ಉತ್ಕಟ; ಪ್ರಬಲ. (ಪ್ರಾಚೀ. ಪ್ರ.) E. air ಕೊರೆಯುವ ಗಾಳಿ. **Eágerly** (ಕ್ರಿ. ವಿ.); **Eágerness** (ನಾ.)

Eágle ಈಗ್‌ಲ್ (ನಾ.) ತೀಕ್ಷ್ಣದೃಷ್ಟಿಯೂ ಪ್ರಬಲವಾದ ಹಾರು ಶಕ್ತಿಯೂ ಉಳ್ಳ ಒಂದು ದೊಡ್ಡ ಹಿಂಸ್ರ ಪಕ್ಷಿ: ಹದ್ದು; ಗೃಧ್ರ; ಗರುಡ ಪಕ್ಷಿ. ಹದ್ದಿನ ಚಿತ್ರ, ಆಕಾರ (ಮು., ರೋಮನ್ ಅಥವಾ ಫ್ರೆಂಚ್ ಸೈನ್ಯದ ಲಾಂಛನ; ಕ್ರೈಸ್ತ ಆರಾಧನ ಮಂದಿರದಲ್ಲಿ ಓದುವಾಗ ಧರ್ಮಗ್ರಂಥಗಳನ್ನಿಡುವ ಗೃಧ್ರಾಕಾರದ ನಿಲುಮೇಜು). (ಅಮೆ. ಸಂ.) Double e. ಇಪ್ಪತ್ತು ಡಾಲರು ಬೆಲೆ ಬಾಳುವ ಒಂದು ನಾಣ್ಯ. **E.-eyed** ತೀಕ್ಷ್ಣದೃಷ್ಟಿಯುಳ್ಳ; ಚುರುಕು ನೋಟದ. **E.-owl** ಯೂರೋಪಿನ ಅತ್ಯಂತ ದೊಡ್ಡ ಗೂಬೆ(ಯ ಜಾತಿ). **Eáglet** (ನಾ.) ಮರಿ ಹದ್ದು.

Ear[1] ಇಯರ್ (ನಾ.) ಕಿವಿ; ಕರ್ಣ; ಶ್ರವಣೇಂದ್ರಿಯ; ಶ್ರೋತ್ರೇಂದ್ರಿಯ (ಮು., ಹೊರ ಭಾಗ); ಶ್ರವಣ ಶಕ್ತಿ; ನಾದ ಪರಾಮರ್ಶ ಶಕ್ತಿ (E. for music ಸಂಗೀತಾಭಿರುಚಿ). ಕಿವಿಯಾಕಾರದ ವಸ್ತು (ಮು., ಹೂಜಿಯ ಹಿಡಿ). A word in your e. ಕಿವಿಯಲ್ಲಿ; ಗುಟ್ಟಾಗಿ; ಅಂತರಂಗದಲ್ಲಿ; ಒಂದು ಮಾತು; ಕಿವಿಮಾತು; ಗುಟ್ಟುಮಾತು. Be all ears ಮೈಯೆಲ್ಲ ಕಿವಿಯಾಗಿರು; ಕಿವಿಗೊಟ್ಟು ಕೇಳು; ಪೂರ್ತಿ ಗಮನ ಕೊಟ್ಟು ಕೇಳು; ತಲ್ಲೀನವಾಗಿ ಕೇಳು. Bring (storm, hornet's nest, etc.) about one's ears (ಬಿರುಗಾಳಿ, ಗೂಡಿನಲ್ಲಿಯ ಹೆಗ್ಗಣಜಗಳ ತಂಡ, ಮೊ. ನ್ನು) ಮೇಲೆರಗುವಂತೆ ಮಾಡು; ತೊಂದರೆ, ಕೇಡು, ತರು, ತಂದುಕೊ. Give e. ಕಿವಿಗೊಡು; ಆಲಿಸಿ ಕೇಳು; ಮನಸ್ಸಿಟ್ಟು ಕೇಳು. Have a person's e. (ಒಬ್ಬನ) ಕಿವಿಯನ್ನು ವಶಪಡಿಸಿಕೊ. I would give my ears (ಒಂದು ಕಾರ್ಯಕ್ಕಾಗಿ, ಒಂದು ವಸ್ತುವಿಗಾಗಿ) ಎಷ್ಟು ತ್ಯಾಗ ಬೇಕಾದರೂ ಮಾಡುತ್ತೇನೆ; ಏನು ಬೇಕಾದರೂ ಮಾಡುತ್ತೇನೆ. It goes in at one e. and out at the other ಈ ಕಿವಿಯಲ್ಲಿ ಹೊಕ್ಕು ಆ ಕಿವಿಯಲ್ಲಿ ಹೋಗುತ್ತದೆ; ಯಾವ ಪರಿಣಾಮವನ್ನೂ ಮಾಡುವುದಿಲ್ಲ. Over head and ears ಇಳಿಯ ಮುಳುಗಿ; ಪೂರ್ತಿ ಮುಳುಗಿ (ರೂಪ. ಸಹ); (— in debt ಮೈಯೆಲ್ಲ ಸಾಲ). Prick up one's ears ಕಿವಿ ನೆಟ್ಟಗೆ ಮಾಡಿಕೊ; ಉತ್ಸುಕನಾಗಿರು. I sent him away with a flea in his e. ಮನಸ್ಸಿಗೆ ಹತ್ತುವಂತೆ ಅವನಿಗೆ ಬುದ್ಧಿಹೇಳಿ ಕಳುಹಿಸಿಬಿಟ್ಟೆನು. Set (persons) by the ears (ಜನರಲ್ಲಿ) ಮನಸ್ತಾಪ ಹುಟ್ಟಿಸು, ಕಿತ್ತಾಟ ಹಚ್ಚು. Were your ears burning last night? ನಾವು ನಿನ್ನ ವಿಷಯವನ್ನು ಮಾತನಾಡುತ್ತಿದ್ದೆವು. **E.-ache** ಕಿವಿ ಪೋಟು. **E.-mark** (ನಾ.) (ಸ್ವಾಮಿತ್ವ ತೋರಿಸುವುದಕ್ಕಾಗಿ ಕುರಿ, ಮೊ. ಗಳ) ಕಿವಿಯಮೇಲೆ ಮಾಡುವ ಗುರುತು; (ರೂಪ.) ಲಕ್ಷಣ. (ಕ್ರಿ. ಸಕ.) (ಕುರಿ, ಮೊ. ಗಳಮೇಲೆ) ಈ ರೀತಿಯಾಗಿ ಗುರುತು ಮಾಡು. (ರೂಪ.) ಒಂದು ಗೊತ್ತಾದ ಉದ್ದೇಶಕ್ಕೆ (ಹಣ, ಮೊ. ನ್ನು) ತೆಗೆದಿಡು, ಮೀಸಲಾಗಿಡು. **E.-phone** ಕೇಳುವವನ ಕಿವಿಗೆ ಸಿಕ್ಕಿಸಲಾಗುವ ದೂರವಾಣಿಯ ಅಥವಾ ನಿಸ್ತಂತುವಿನ (ಬಾನುಲಿಯ) ಗ್ರಾಹಕ: ಕರ್ಣವಾಣಿ. **E.-ring** ಹತ್ತಕಡಕು; ಹಕ್ಕೊಂಟಿ; ಮುರುವು; ಕರ್ಣಕುಂಡಲ; ಓಲೆ. **E.-shot** ಕಿವಿ ಕೇಳಿಸುವಷ್ಟು ದೂರ; ಕೇಳುದೂರ. **E.-trumpet** (ಕಿವಿ ಕೇಳದಿರುವವರ ಉಪಯೋಗಕ್ಕಾಗಿ ಮಾಡಿರುವ) ಕಿವಿ ಕಹಳೆ. **E.-wax** (ಕಿವಿ) ಗುಗ್ಗೆ. **Eárwig** (ನಾ., ಕ್ರಿ. ಸಕ.) (ಕಿವಿಯ ಮೂಲಕ ತಲೆಯನ್ನು ಹೊಗುವುದೆಂದು ಹಿಂದೆ ತಿಳಿದಿದ್ದ) ಒಂದು ಜಾತಿಯ ಹುಳು: ಕರ್ಣಕೀಟ. (ಕ್ರಿ.) (ಒಬ್ಬನಿಗೆ) ವಿಷಯಗಳನ್ನು ಗುಟ್ಟಾಗಿ ತಿಳಿಸಿ ಪ್ರೇರೇಪಣೆ ಮಾಡು, ಒಲಿಸು. ಕಿವಿಯಲ್ಲಿ ತುಂಬು. (-) **eared** (ಗು.); **Eárless** (ಗು.)

Ear[2] ಇಯರ್ (ನಾ.) (ಹೂವು ಅಥವಾ ಬೀಜಗಳುಳ್ಳ) ಧಾನ್ಯದ ತೆನೆ, ಹೊಡೆ, ಕದಿರು.

Eáring ಇಯರಿಂಗ್ (ನಾ.) (ನಾವೆ.) ಪಟದ ಮೇಲ್ಮೂಲೆಯನ್ನು ಧ್ವಜದ ಅಡ್ಡಮರಕ್ಕೆ ಬಿಗಿಯುವ (ಅನೇಕ ಹಗ್ಗಗಳಲ್ಲಿ) ಸಣ್ಣ ಹಗ್ಗ, ಮಿಣಿ.

Earl ಅರ್ಲ್ (ನಾ.; ಸ್ತ್ರೀ. Countess) 'ಮಾರ್ಕ್ವಿಸ್' ಮತ್ತು 'ವೈಕೌಂಟ್' ಪದವಿಗಳ ಮಧ್ಯವರ್ತಿಯ ಪದವಿಯುಳ್ಳ ಶ್ರೀಮಂತ (Count[2] ನೋಡಿ). **E. Marshal** ವಂಶಲಾಂಛನದ ಸಂಸ್ಥೆ, ಮೊ. ಗಳ ಅಧ್ಯಕ್ಷ. **Eárldom** (ನಾ.) ಅರ್ಲಿನ ಆಧಿಪತ್ಯ, ಪದವಿ.

Eárly ಅರ್ಲಿ (ಗು., ಕ್ರಿ. ವಿ.) ಮುಂಚೆ; ಹೊತ್ತಿಗೆ ಮುಂಚೆ; ಮುಂಚಿತವಾಗಿ; ಮೊದಲೇ; ಶೀಘ್ರ; ಕ್ಷಿಪ್ರ; ಬೇಗ; ಮುಂಚಿನ; ಮೊದಲಿನ; ಆದಿಯ. E. visit ಶೀಘ್ರ ಭೇಟಿ. E. risers ಬೆಳಗ್ಗೆ ಬೇಗ ಏಳುವವರು; ಹೊತ್ತಿಗೆ ಮುಂಚೆ ಏಳುವವರು. Keep e. hours ಬೇಗ ಮಲಗಿ ಬೇಗ ಏಳು. E. door ಪ್ರೇಕ್ಷಕರನ್ನು ನಾಟಕಶಾಲೆಗೆ ಕ್ಲುಪ್ತ ಕಾಲಕ್ಕೆ ಮುಂಚೆಯೇ ಹೆಚ್ಚು ತೆರವನ್ನು ತೆಗೆದುಕೊಂಡು ಬಿಡುವ ಬಾಗಿಲು. Earlier on ಇನ್ನೂ ಪ್ರಾರಂಭದಲ್ಲಿಯೇ; ಹಿಂದೆಯೇ. E. and late ಸದಾ ಕಾಲದಲ್ಲೂ. E. peaches ವರ್ಷದಲ್ಲಿ ಮೊದಲೇ ಹಣ್ಣಾಗುವ ಪೀಚ್ ಹಣ್ಣು. E. English style ಕ್ರೈಸ್ತ ಆರಾಧನ ಮಂದಿರಗಳ ಕಟ್ಟಡದ ಆದಿ ಇಂಗ್ಲಿಷ್ ರೀತಿ (೧೧೮೯-೧೨೮೦). Fix an e. date ಒಂದು ಹತ್ತಿರದ ದಿನವನ್ನು ಗೊತ್ತುಮಾಡು. At your earliest convenience ತಮಗೆ ಅನುಕೂಲವಾದೊಡನೆಯೇ; ಆದಷ್ಟು ಮುಂಚಿತವಾಗಿ. The e. part of the century ಶತಮಾನದ ಆದಿ ಭಾಗ. The e. spring ವಸಂತ ಋತುವಿನ ಮೊದಲ ಭಾಗ. E. bird (ಹಾಸ್ಯವಾಗಿ) ಹೊತ್ತಿಗೆ ಮುಂಚೆ ಏಳುವವನು (The e. bird gets the worm ಬೇಗ ಎದ್ದು ಹೊರಟ ಹಕ್ಕಿಗೆ ಎರೆ ದೊರೆಯುತ್ತದೆ. ಅಲಕ್ಷ್ಯಮಾಡದೆ ಚುರುಕಾಗಿರುವವನು ಜಯ ಹೊಂದುತ್ತಾನೆ). E.-Victorian ವಿಕ್ಟೋರಿಯಾ ರಾಣಿಯ ಆಳಿಕೆಯ ಆದಿ ಕಾಲದ (ಲೇಖಕ); ಹಳೆಯ ಕಾಲದ (ಲೇಖಕ). **Eárliness** (ನಾ.)

Earn ಅರ್ನ್ (ಕ್ರಿ. ಸಕ.) (ಮನುಷ್ಯ, ಕಾರ್ಯ, ನಡತೆ, ಮೊ. ಗಳ ವಿಷಯದಲ್ಲಿ) ಕಷ್ಟಕ್ಕೆ ಅಥವಾ ಯೋಗ್ಯತೆಗೆ ತಕ್ಕ ಪ್ರತಿಫಲ ಹೊಂದು; (ಪ್ರತಿಫಲವಾಗಿ) ಪಡೆ; ಸಂಪಾದಿಸು; ಗಳಿಸು; ಆರ್ಜಿಸು; (ಯೋಗ್ಯತೆ, ಅರ್ಹತೆ) ಪ್ರಯತ್ನಪಟ್ಟು ಸಂಪಾದಿಸು. **Eárning** (ನಾ.) (ಕ್ರಿಯಾರ್ಥಗಳಲ್ಲಿ). (ಬ. ವ. ದಲ್ಲಿ) ಗಳಿಸಿದ, ಸಂಪಾದಿಸಿದ, ಹಣ; ಸಂಪಾದನೆ; ಗಳಿಕೆ.

Eárnest[1] ಅರ್ನೆಸ್ಟ್ (ಗು., ನಾ.) ಶ್ರದ್ಧೆಯ; ಶ್ರದ್ಧಾ ಪೂರ್ವಕವಾದ; ಮನಃಪೂರ್ವಕವಾದ; ಆಸಕ್ತಿಯುಳ್ಳ; ಅಸಡ್ಡೆಯಿಲ್ಲದ; ತೀವ್ರವಾದ; ಕಟ್ಟಕ್ಕರೆಯ (ಅಪೇಕ್ಷೆ, ಮೊ. ವು). In e. ಶ್ರದ್ಧೆಯಿಂದ; ನಡ್ಡೆಯಿಂದ (ಹಾಸ್ಯಕ್ಕಲ್ಲ). **Eárnestly** (ಕ್ರಿ. ವಿ.); **Eárnestness** (ನಾ.)

Eárnest[2] ಅರ್ನೆಸ್ಟ್ (ನಾ.) (ಮು., ಒಂದು ಕರಾರನ್ನು ದೃಢಪಡಿಸುವುದು, ಮೊ. ಕ್ಕಾಗಿ) ಪಾವತಿ ಮಾಡಿದ ಮುಂಗಡದ ಹಣ; ಸಂಚಕಾರ. ಪೂರ್ವ ಸೂಚನೆ; ಪೂರ್ವ ಲಕ್ಷಣ; ಸೂಚನೆ; ಮುನ್ನರಿಕೆ (Is an e. of what is to come ಮುಂದೆ ಬರುವುದರ ಪೂರ್ವ ಸೂಚನೆ)

Earth ಅರ್ತ್ (ನಾ.) ನೆಲ; ಭೂಮಿ (It fell to e. ಅದು ನೆಲಕ್ಕೆ ಬಿದ್ದಿತು). ನರಿ, ಮೊ. ಗಳ ಬಿಲ. ಭೂಗ್ರಹ; ಪೃಥಿವಿ; ಭೂಲೋಕ (Why on e.? ಏತಕ್ಕೆ ತಾನೆ?). ಮಣ್ಣು. (ರ. ವಿ.) (ಬೆಂಕಿ ಹೊತ್ತಿಕೊಳ್ಳದ, ರುಚಿಯಾಗಲಿ ವಾಸನೆಯಾಗಲಿ ಇಲ್ಲದ, ಯಾವುದಾದರೂ) ಲೋಹಧಸ್ಮ. (ವಿದ್ಯುತ್ಪಥ ಮಂಡಲ ಪೂರ್ತಿಯಾಗುವಂತೆ) ಭೂಸಂಬಂಧ. **E.-born** ಮನುಷ್ಯ ಜಾತಿಯ; ಮರ್ತ್ಯ; ಭೂಮಿಯಿಂದ ಹುಟ್ಟಿಬಂದ; ಭೂಜಾತ. **E.-closet** ಶುದ್ಧಿಮಾಡಲು (ನೀರಿಗೆ ಬದಲಾಗಿ) ಮಣ್ಣನ್ನುಪಯೋಗಿಸುವ ಪಾಯಖಾನೆ. **E.-light, -shine** (ಚಂದ್ರಮಂಡಲದ ಕತ್ತಲೆಯ ಭಾಗವು ಸ್ವಲ್ಪಮಟ್ಟಿಗೆ ಬೆಳಗುವಂತೆ ಮಾಡುವ) ಭೂಕಾಂತಿ. **E.-nut** ಒಂದು ಜಾತಿಯ ಗೆಡ್ಡೆಬಿಡುವ ಗಿಡ. **Earthquake** (ನಾ.) ಭೂಕಂಪ; ನೆಲ ಗುಡುಗು; ನೆಲ ನಡುಕ. (ರೂಪ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಸಾಮಾಜಿಕ ಅಥವಾ ಇತರ) ಕ್ಷೋಭೆ, ಕಲಕು. **Eárthwork** (ನಾ.) ಸೇನೆಯ ರಕ್ಷಣೆಗಾಗಿ ಸುತ್ತಲೂ ಹಾಕುವ ಮಣ್ಣುದಿಬ್ಬ : ಕೊತ್ತಳ. ಮಣ್ಣುಕೆಲಸ ; ಮಟ್ಟಿ ಕಾಮಗಾರಿ. **Eárthworm** (ನಾ.) ಮಣ್ಣು ಹುಳು, ಎರೆಹುಳು. (ರೂಪ.) ದೊಗ್ಗಿಸಲಾಮು ಹಾಕುವವನು ; ನೆಲಕ್ಕೆ ಕುಗ್ಗಿ ಅನುಸರಣೆ ಮಾಡುವವನು ; ಆತ್ಮ ಗೌರವವಿಲ್ಲದವನು. **Eárthen** (ಗು.) (ಜೇಡಿ)ಮಣ್ಣಿನಿಂದ ಮಾಡಿದ. **Eárthenware** (ನಾ. ; ಅನೇಕ ವೇಳೆ ಗುಣವಾಚಕವಾಗಿ ಪ್ರಯೋಗ) ಜೇಡಿಮಣ್ಣಿನ ಪಾತ್ರೆಗಳು, ಮೊ. ವು ; ಮಣ್ಣಿನ ಪಾತ್ರೆಗಳು. ಜೇಡಿ ಮಣ್ಣು. **Eárthly** (ಗು.) ಭೂಮಿಯ ; ಭೂ ಸಂಬಂಧವಾದ ; ಭೂಲೋಕದ ; ಇಹಲೋಕದ ; ಐಹಿಕ ; ಪ್ರಾಪಂಚಿಕ. (ಬಳ. ಮಾ.) No e. use ಏನೇನೂ ಪ್ರಯೋಜನವಿಲ್ಲ. No e. chance ಯಾವ ಸಂಭವವೂ ಇಲ್ಲ. Not an e. (ಅಸಂ.) ಸಂಭವವೇ ಇಲ್ಲ. **Eárthliness** (ನಾ.) ; **Eárthy** (ಗು.) ಭೂಮಿಯ ; ಮಣ್ಣಿನ ; ಮಣ್ಣಿನಂಥ ; ಪಾರ್ಥಿವ. (ರೂಪ.) ಕೇವಲ ಐಹಿಕವಾದ ; ಜಡವಾದ. **Eárthiness** (ನಾ.)

Earth (ಕ್ರಿ.) ಸಸ್ಯದ ಬೇರುಗಳನ್ನು ಮಣ್ಣುಹಾಕಿ ಮುಚ್ಚು ; ಮಣ್ಣು ಏರಹಾಕು. (ನರಿಯನ್ನು) ಬಿಲಕ್ಕೆ ಓಡಿಸು, ಬಿಲಹೊಗಿಸು ; (ನರಿ) ಬಿಲಹೊಗು. (ವಿದ್ಯುತ್ತು) ಭೂಸಂಬಂಧ ಪಡೆ, ಮಾಡು.

Eárwig. Ear ನೋಡಿ.

Ease ಈಸ್ (ನಾ.) ನೋವು ಅಥವಾ ತೊಂದರೆ ಇಲ್ಲದಿರುವುದು ; ನಿರ್ಬಂಧ ವಿಲ್ಲದಿರುವುದು (At one's e. ನಿರಾತಂಕವಾಗಿ ; ಹಾಯಾಗಿ) ; ಸುಖ ; ಸಮಾಧಾನ ; ಸ್ವಾಸ್ಥ್ಯ ; ಅನಾಯಾಸ ; ಶಾಂತಿ ; ನಿಶ್ಚಿಂತತೆ. (ಸೈನ್ಯ) (Stand at e. ಹಾಯಾಗಿ, ಆರಾಮವಾಗಿ, ನಿಲ್ಲು). ನೋವಿನ ಶಮನ. ವಿಶ್ರಾಂತಿ. [Chapel of e. (Chapel ನೋಡಿ)]. ಸೌಲಭ್ಯ ; ಸೌಕರ್ಯ (ಮು., With e. ಸಲೀಸಾಗಿ ; ಸರಾಗವಾಗಿ). **Eáseful** (ಗು.) ಹಿತಕರವಾದ ; ಸುಖವಾದ ; ಹಾಯಾದ ; ಸರಾಗವಾದ ; ಸಲೀಸಾದ ; ಶಾಮಕವಾದ ; ವಿಶ್ರಾಂತಿಯಿರುವ. ಸೋಮಾರಿತನದ. **Eásefully** (ಕ್ರಿ. ವಿ.) ; **Eásefulness** (ನಾ.) ; **Eáseless** (ಗು.); **Eásy** ಈಸಿ (ಗು., ಕ್ರಿ. ವಿ., ನಾ.) ನೋವು, ಅಸ್ವಾಸ್ಥ್ಯ, ತೊಂದರೆ, ಕಾಟ, ಆತಂಕ, ಮೊ. ಗಳಿಲ್ಲದ ; ಸುಖವಾದ ; ಸ್ವಸ್ಥವಾದ ; ಹಾಯಾದ ; ಶಾಂತವಾದ ; ಆರಾಮವಾದ ; ನಿರಾಯಾಸ ; ಸುಕರ (E. circumstances ಅನುಕೂಲ ಸ್ಥಿತಿ ; ನೆಮ್ಮದಿ ; ಸುಖ ಸ್ಥಿತಿ ; ಐಶ್ವರ್ಯ ಸ್ಥಿತಿ). ನಿರಾತಂಕ ; ನಿಶ್ಚಿಂತ ; ಸರಾಗ ; ಸುಲಭ ; ಸುಸೂತ್ರ ; ಇಳಿದು (ಗ್ರಾಂ.) (E. manners ಸರಳವಾದ ನಡತೆ. Free and e. ಸಲೀಸಾದ ; ಸರಳವಾದ ; ಅತಿ ನಿಯಮಬದ್ಧವಲ್ಲದ ; ಅತಿ ಕಟ್ಟುನಿಟ್ಟಿಲ್ಲದ). (ಮಾಡಲು) ಕಷ್ಟವಲ್ಲದ (E. of access ಸುಲಭ ಸಾಧ್ಯ ; ಸುಗಮ). ಸುಲಭವಾಗಿ ಒಪ್ಪಿಸಲಾಗುವ. (ವ್ಯಾಪಾರದ ಸರಕು, ಪೇಟೆ) ಗಿರಾಕಿಯಿಲ್ಲದ. (ಕ್ರಿ. ವಿ.) — ಆಗಿ. Take it e. ಆತುರ, ಕಷ್ಟ, ಕಳವಳ, ಪಡದೆ ಸರಾಗವಾಗಿ ನಡೆ ; ತೊಂದರೆ ಮಾಡಿಕೊಳ್ಳಬೇಡ. (ಆಜ್ಞೆ) E. ! ನಿಧಾನವಾಗಿ ನಡೆ ! E. all ! ನಿಲ್ಲಿಸಿ ! (ಸಾ., ದೋಣಿನಡೆಯಲ್ಲಿ). An e. ಸ್ವಲ್ಪ ವಿಶ್ರಾಂತಿ. Stand e. ! (ಸೈನ್ಯ) (ಆರಾಮವಾಗಿ ನಿಂತಿರುವ ಪಡೆಗೆ ಆಜ್ಞೆ) ಪೂರ್ಣ ಆರಾಮವಾಗಿ ನಿಲ್ಲಿ ! E. chair (ಸುಖಾಸನವಾದ) ಆರಾಮ ಕುರ್ಚಿ (ಸಾ., ತೋಳುಗಳುಳ್ಳದ್ದು). E.-going (ಕುದುರೆಯ ವಿಷಯದಲ್ಲಿ) ಸರಳ ನಡೆಯ ; ಸಲೀಸಾಗಿ ಹೋಗುವ ; (ಮನುಷ್ಯನ ವಿಷಯದಲ್ಲಿ) ಸುಖಾಭಿಲಾಷಿ ; ತೊಂದರೆ ತೆಗೆದುಕೊಳ್ಳದ ; ಮೈ ಬಗ್ಗದ ; ಅಲಸ ; ಸೋಮಾರಿ. **Eásily** (ಕ್ರಿ. ವಿ.) ; **Eásiness** (ನಾ.)

Ease (ಕ್ರಿ.) ನೋವು, ತೊಂದರೆ, ಮೊ. ನ್ನು ಕಳೆ, ಪರಿಹರಿಸು ; ಕ್ಲೇಶವಿಲ್ಲದಂತೆ ಮಾಡು ; ಶಮನ ಮಾಡು ; ಮನಶ್ಶಾಂತಿ ಕೊಡು. (ಹಾಸ್ಯವಾಗಿ) (ಒಬ್ಬನ ದುಡ್ಡಿನ ಚೀಲ, ಮೊ.) ಭಾರವಿಳಿಸು, ಅಪಹರಿಸು ; (ಬಹಳ ಬಿಗಿಯಾಗಿರುವುದನ್ನು) ಸಡಿಲಿಸು, ಸರಿಪಡಿಸು. (ನಾವೆ) (ಹಗ್ಗ, ಪಟ, ಮೊ. ನ್ನು) ಸಡಿಲಿಸು (*Away, down, off* ಉಪ. ಜೊಡನೆ). E. her ಎಂಜಿನಿನ ವೇಗವನ್ನು ಕಡಮೆಮಾಡು. E. off ಭಾರ ಕಡಮೆಯಾಗು, ಹಗುರವಾಗು.

Eásel ಈಸ್ಲೆರ್, ಈಸ್ಲ್‌ರ್ (ನಾ.) ಚಿತ್ರ, ಮೊ. ಕ್ಕೆ ಆಧಾರವಾಗಿರುವ ಮರದ ಚೌಕಟ್ಟು ; ಚಿತ್ರಾಧಾರ.

Eásement ಈಸ್‌ಮೆಂಟ್ (ನಾ.) (ನ್ಯಾ. ಶಾ.) (ಒಬ್ಬನಿಗೆ) ಮತ್ತೊಬ್ಬನ ಜಮೀನಿನಮೇಲಿರುವ ದಾರಿ, ಮೊ. ಗಳ ಹಕ್ಕು ; ಅನುಭೋಗದ ಹಕ್ಕು ; ಮಾಮೂಲು ಹಕ್ಕು. ಗುಡಿಸಿಲು, ಮೊ. ದ ಹೆಚ್ಚಿಗೆಯ ಕಟ್ಟಡ. (ಪ್ರಾಚೀ. ಪ್ರ.) ಹೊರೆಯ ಅಥವಾ ನೋವಿನ ಪರಿಹಾರ ; ಉಪಶಮನ.

East ಈಸ್ಟ್ (ಕ್ರಿ. ವಿ., ನಾ., ಗು.) ಮೂಡಲು ; ಪೂರ್ವ (ದಿಕ್ಕು) ; ಮೂಡಲ ; ಮೂಡಲಿಗೆ [To the e. (of) (ಇಂದ) ಪೂರ್ವ ದಿಕ್ಕಿಗೆ, ಮೂಡಲಿಗೆ. E. (wind) ಮೂಡಲಿನಿಂದ ಬೀಸುವ ಗಾಳಿ ; ಮೂಡಲ ಗಾಳಿ]. ಪ್ರಪಂಚದ ಪೂರ್ವಭಾಗ ; ಪೂರ್ವ ದೇಶಗಳು ; ಮೂಡಲ ನಾಡುಗಳು. Far E. (ಚೀನ, ಜಪಾನ್, ಮೊ.) ತೀರಾ ಪೂರ್ವ ದೇಶಗಳು. Near E. (ಹತ್ತಿರದ ಪೂರ್ವ ದೇಶವಾದ) ತುರ್ಕಿ. **E. Indies** ಇಂಡಿಯ, ಇಂಡಿಯಾ ಪೂರ್ವದೇಶಗಳು ಮತ್ತು ಆಚಿನ ದ್ವೀಪಗಳು. **E. End** ಲಂಡನ್ ಪಟ್ಟಣದ ಮೂಡಲ ಪ್ರದೇಶ (ಬಡವರ ವಸತಿ). **Eástward** (ಗು., ನಾ.) ಮೂಡಲ ಕಡೆ(ಯ). **Eástward(s)** (ಕ್ರಿ. ವಿ.) ಮೂಡಲ ಕಡೆಗೆ ; — ಕಡೆಯಲ್ಲಿ. **Eásterly** (ಗು., ಕ್ರಿ. ವಿ.) ಪೂರ್ವ ದಿಕ್ಕಿನ ; ಪೂರ್ವ ದಿಕ್ಕಿಗೆ ; ಪೂರ್ವ ದಿಕ್ಕಿನಲ್ಲಿ ; ಮೂಡಲ ; ಮೂಡಲಿಗೆ ; ಮೂಡಲ ಕಡೆಯಲ್ಲಿ ; ಮೂಡಲಿನಿಂದ (ಬರುವ) (E. wind ಮೂಡಲ ಗಾಳಿ). **Eástern** (ಗು., ನಾ.) ಪ್ರಪಂಚದ ಮೂಡಲ ಭಾಗದ ; —ಭಾಗದಲ್ಲಿ ವಾಸವಾಗಿರುವ ; ಪ್ರಾಚ್ಯ. [E. Church ಗ್ರೀಕ್ ಚರ್ಚು. E. question ಮೂಡಲ ಯೂರೋಪಿಗೆ (ಮು., ತುರ್ಕಿಗೆ) ಸಂಬಂಧಪಟ್ಟ ರಾಜಕೀಯ ಸಮಸ್ಯೆ : ಪೂರ್ವದೇಶದ ಸಮಸ್ಯೆ]. ಮೂಡಲ ದಿಕ್ಕಿಗಿರುವ. (ನಾ.) ಮೂಡಲ ಸೀಮೆಯವನು. 'ಈಸ್ಟರ್ನ್ ಚರ್ಚಿನ' ಸದಸ್ಯ. **Eásternmost** (ಗು.) ಅತ್ಯಂತ ಪೂರ್ವದಿಕ್ಕಿನ. **Eásting** (ನಾ.) (ನಾವೆ) ನೇರವಾಗಿ ಮೂಡಲ ದಿಕ್ಕಿನಲ್ಲಿ (ಹಡಗು) ಪ್ರಯಾಣಮಾಡಿದ ದೂರ. ಮೂಡಲ ದಿಕ್ಕು.

Eáster ಈಸ್ಟರ್ (ನಾ.) (ಮಾರ್ಚಿ ೨೧ನೆಯ ತಾರೀಖು ಅಥವಾ ಅದರ ತರುವಾಯ ಬರುವ, ಮೊದಲನೆಯ ಭಾನುವಾರದ ದಿನ ಆಚರಿಸುವ) ಕ್ರಿಸ್ತನ ಪುನರುತ್ಥಾನದ ಉತ್ಸವ : ಈಸ್ಟರ್ ಹಬ್ಬ [E. day, Sunday. (ಪ್ರಾಚೀ. ಪ್ರ.) Eastertide]. ಈಸ್ಟರ್ ದಿನದಿಂದ ಆರಂಭವಾದ ವಾರ (= E. week). E. eggs ಈಸ್ಟರ್ ಹಬ್ಬದಲ್ಲಿ ಸ್ನೇಹಿತರಿಗೆ ಉಪಚಾರವಾಗಿ (ಮರ್ಯಾದೆಗಾಗಿ) ಕೊಡುವ ಬಣ್ಣಹಾಕಿದ, ಮೊಟ್ಟೆಯಾಕಾರದ ಮಿಠಾಯಿ, ಮೊ. ವು : ಈಸ್ಟರ್ ಮೊಟ್ಟೆಗಳು. E. eve ಈಸ್ಟರ್‌ದಿನದ ಹಿಂದಿನ ದಿನ.

Eásterly, etc., Eásting. East ನೋಡಿ.

Eásy. Ease ನೋಡಿ.

Eat ಈಟ್ [ಕ್ರಿ. ; ಭೂತ., ate ಏಟ್, ಎಟ್ ; eat ಈಟ್, ಎಟ್ (ಪ್ರಾಚೀ. ಪ್ರ.) ; ಭೂ. ಕೃ. Eaten ಈಟ್‌ನ್] ತಿನ್ನು ; ಭಕ್ಷಿಸು ; ಅಗಿದು ನುಂಗು ; ದ್ರವಾಹಾರವನ್ನು ಕುಡಿ ; ಊಟಮಾಡು. E. away ಸ್ವಲ್ಪ ಸ್ವಲ್ಪವಾಗಿ, ಕ್ರಮೇಣ, ತಿಂದುಬಿಡು, ಕೊರೆದುಹಾಕು, ಹಾಳು ಮಾಡು. E. one's heart out ಒಳಗೊಳಗೇ ಕೊರಗುತ್ತಿರು, ವ್ಯಥೆ ಪಡುತ್ತಿರು. E. humble pie ಅತಿ ದೈನ್ಯದಿಂದ ಕ್ಷಮಾಪಣೆ ಬೇಡು ; ಮಾನಗೆಟ್ಟ ದೈನ್ಯ ತೋರು ; ಅಪಮಾನ ಸಹಿಸಿಕೊ. E. (person) out of house and home ತಿಂದು ತಿಂದು (ಒಬ್ಬನ) ಮನೆ ಹಾಳುಮಾಡು (ರೂಪ. ಸಹ). E. one's terms or dinners ವಕೀಲ ವೃತ್ತಿಗಾಗಿ ಓದುತ್ತಿರು. E. one's words ಆಡಿದ ಮಾತನ್ನು ಮಾನಗೆಟ್ಟು ಅತಿ ದೈನ್ಯದಿಂದ ಹಿಂದಕ್ಕೆ ತೆಗೆದುಕೊ. E. up ಪೂರ್ತಿ ತಿಂದುಬಿಡು, ತಿಂದುಹಾಕು, ನಾಶಮಾಡು. Eaten up with pride ದುರಹಂಕಾರದ ; ಜಂಬದಿಂದ, ಅಹಂಕಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿಂದ, ತುಂಬಿದ ; ತಲೆ ತಿರುಗಿದ. The cakes e. crisp ರೊಟ್ಟಿ ತಿನ್ನಲು ಗರಿಗರಿಯಾಗಿದೆ, ಲಘುವಾಗಿದೆ. (Horse, etc.) eats its head off (ಕುದುರೆ, ಮೊ. ಗಳಿಂದ) ಆಗುವ ಪ್ರಯೋಜನಕ್ಕಿಂತ ಅವುಗಳ ತಿಂಡಿ, ಮೊ. ಗಳ ವೆಚ್ಚ ಹೆಚ್ಚು ; ಹಾಗದ ಗೋಧಿ ಮುಪ್ಪಾಗದ ಬೆಲ್ಲ ತಿಂದಿತು. Well, don't e. me! (ಉಗ್ರವಾಗಿ, ಜೋರಾಗಿ, ಒತ್ತರದಿಂದ, ಪ್ರತಿವಾದ ಮಾಡುತ್ತಿರುವವನಿಗೆ, ಹಾಸ್ಯವಾಗಿ) ಅಯ್ಯಾ ! ನನ್ನನ್ನು ತಿಂದುಹಾಕಬೇಡ ! **Eátable** (ಗು., ನಾ. ; ಸಾ., ಬ. ವ. ದಲ್ಲಿ) ತಿನ್ನಲಾಗುವ ; ತಿನ್ನತಕ್ಕ. ತಿಂಡಿ ; ತೀನಿ ; ಭಕ್ಷ್ಯ. **Eáting** (ನಾ.) (ಕ್ರಿಯಾರ್ಥ ಗಳಲ್ಲಿ). E.-house ತಿಂಡಿಯಂಗಡಿ ; ಊಟದಂಗಡಿ.

Eau (F) ಓ (ನಾ.) E.-de-Cologne ಕೊಲೋನ್ ಪಟ್ಟಣದಲ್ಲಿ ತಯಾರಾದ ಪರಿಮಳ ದ್ರವ. E.-de-Luce ಹಾವಿನ ಕಡಿತಕ್ಕೆ (ಪ್ರತೀಕಾರದ) ಒಂದು ಮದ್ದು. E.-de-vie ಬ್ರಾಂದಿ. E. sucree ನೀರು ಮತ್ತು ಸಕ್ಕರೆ. [Eau = (ಫ್ರೆಂಚಿನಲ್ಲಿ) ನೀರು]

Eaves ಈವ್ಸ್ (ನಾ., ಈಗ, ಬ. ವ.) ಛಾವಣಿಯ ಅಥವಾ ಮಾಳಿಗೆಯ ಮುಂಚಾಚಿಕೊಂಡಿರುವ ಭಾಗದ ಏಣು ; ಸೂರು ; ಮುಂಜೂರು. **Eávesdrop** (ನಾ., ಕ್ರಿ. ಸಕ.) ಸೂರುನೀರು ; — ಬೀಳುವ ಸ್ಥಳ. ಗುಟ್ಟುಮಾತನ್ನು ಆಲಿಸಿ ಕೇಳಲು ಸೂರಿನ ಕೆಳಗೆ ನಿಂತಿರು ; ಗುಟ್ಟು ಮಾತನ್ನು (ಕಳ್ಳತನದಿಂದ) ಆಲಿಸು ; ಹೊಂಚು ಕೇಳು. **Eávesdropper** (ನಾ.) ಹೊಂಚು ಕೇಳುವವನು.

Ebb ಎಬ್ (ನಾ., ಕ್ರಿ. ಅಕ.) ಉಬ್ಬರದ ನೀರಿನ ಇಳಿತ (E. and flow ಉಬ್ಬರವಿಳಿತ ; ಏರಿಳಿತ ; ಬರುತ ಇಳಿತ). ಇಳಿತ ; ಇಳಿಗಾಲ ; ಬೀಳು ; ಕ್ಷೀಣ ಗತಿ ; ಕ್ಷಯ ; ಅವನತಿ (At a low e. ಅತಿ ಕ್ಷೀಣ ಸ್ಥಿತಿಯಲ್ಲಿ ; ಬೀಳು ಗತಿಯಲ್ಲಿ). (ಕ್ರಿ.) ಏರುನೀರು ಹಿಂದಕ್ಕೆ ಸರಿ. (ಸಮುದ್ರದ) ಉಬ್ಬರದ ನೀರು ಇಳಿ. ಹಿಂದಕ್ಕೆ ಸರಿ ; ಹಿಂಜರಿ ; ಇಳಿ ; ಇಳಿದು ಹೋಗು ; ಕುಗ್ಗು ; ಕ್ಷಯಿಸು ; ಕ್ಷೀಣಿಸು. **E.-tide** ಇಳಿಪ್ರವಾಹ.

Ébon ಎಬನ್ (ಗು.) (ಕಾವ್ಯ) ಕರಿಯ ಮರದಿಂದ (ಎಬನಿಯಿಂದ) ಮಾಡಿದ ; ಎಬನಿಯಷ್ಟು ಕಪ್ಪಾದ. **Ébonite** ಎಬೊನೈಟ್ (ನಾ.) = Vulcanite. **Ébony** ಎಬೊನಿ (ನಾ., ಗು.) ಗಡುಸಾದ ಒಂದು ಕರಿಯಮರ(ದ ಜಾತಿ). (ಗು.) ಎಬನಿ ಮರದಿಂದ ಮಾಡಿದ ; ಎಬನಿಯಂತೆ ಕಪ್ಪಗಿರುವ. **Ébonize** (ಕ್ರಿ. ಸಕ.) (ಸಾಮಾನು, ಮೊ. ನ್ನು) ಕರಿಯಮರದಂತೆ ಕಾಣುವಹಾಗೆ ಮಾಡು.

Ebríety ಇ(ಈ)ಬ್ರೈಎಟಿ (ನಾ.) (ಈಗ ಅಪೂರ್ವ) ಕುಡಿದಿರುವುದು ; ಕುಡುಕತನ ; ನಿಷಾ ; ಅಮಲು. **Ébrious** ಈಬ್ರಿಯಸ್ (ಗು.) (ಈಗ ಅಪೂರ್ವ). ಕುಡಿತದ ; ಕುಡಿಯುವ ಸ್ವಭಾವದ ; ಅಮಲೇರಿದ.

Ebúllient ಇಬಲಿಯೆಂಟ್ (ಗು.) ಕುದಿಯು(ತ್ತಿರು)ವ ; ಉಕ್ಕಿಬರು(ತ್ತಿರು)ವ ; ಉಕ್ಕೇರು(ತ್ತಿರು)ವ. ಉದ್ರೇಕವಾದ ; ಉತ್ಸಾಹವುಳ್ಳ. **Ebúllience, -cy** (ನಾ.) ; **Ebullítion** ಎಬಲಿಷನ್ (ನಾ.) ಕುದಿ ; ಕುದಿತ ; ಕುದಿಯುವುದು ; ಉಕ್ಕಿಬರುವುದು ; ಉಕ್ಕೇರುವುದು ; ಉದ್ರೇಕ. (ರೂಪ.) (ಮನೋವಿಕಾರ, ಯುದ್ಧ, ಮೊ. ಗಳು) ಥಟ್ಟನೆ ಹೊರಹೊಮ್ಮುವುದು ; ಕ್ಷೋಭೆ.

Ecárte (F) ಎಕಾರ್ಟೇ (ನಾ.) ಇಬ್ಬರಾಡುವ (ಒಂದು ತೆರದ) ಇಸ್ಪೀಟಾಟ.

Écce Hómo(L) ಎಕ್ಸಿ ಹೋಮೋ (ನಾ.) ಮುಳ್ಳಿನ ಕಿರೀಟವಿಟ್ಟಿರುವ ಕ್ರಿಸ್ತನ ಚಿತ್ರ (ಲ್ಯಾಟಿನ್ ಅರ್ಥ: "ಅಗೋ ! ಮನುಷ್ಯನನ್ನು ನೋಡು ")

Eccéntric ಎ(ಇ)ಕ್ಸೆಂಟ್ರಿಕ್ (ಗು., ನಾ.) (ಮತ್ತೊಂದು ವೃತ್ತದೊಡನೆ) ಸಮಾನ ಕೇಂದ್ರವಿಲ್ಲದ ; ಭಿನ್ನ ಕೇಂದ್ರಕ ; ಕೇಂದ್ರದಲ್ಲಿಟ್ಟಿರದ ; (ಅಕ್ಷ, ಮೊ. ವು) ಕೇಂದ್ರಸ್ಥವಲ್ಲದ ; ವಿಕೇಂದ್ರ ; ವಿಷಮ ಕೇಂದ್ರಕ ; ಕೇಂದ್ರಚ್ಯುತ. (ಗ್ರಹ ಪಥ) ವೃತ್ತಾಕಾರವಲ್ಲದ. (ಆಕಾಶಸ್ಥ ಕಾಯ) ವೃತ್ತಾಕಾರವಲ್ಲದ ಪಥದಲ್ಲಿ ಸುತ್ತುತ್ತಿರುವ. ಕ್ರಮವಿಲ್ಲದ ; ಅಕ್ರಮ ; ವಿಷಮ ; ವಿಲಕ್ಷಣ; ವಿಚಿತ್ರ ; ವಕ್ರ ; ಮನಸೋ ಇಚ್ಛೆಯ. (ಯಂತ್ರಶಾಸ್ತ್ರ ; ನಾ.) (ಮು., ಆವಿಯೆಂಜಿನಿನ ಆಡುಬೆಣೆಗಾಗಿ) ವೃತ್ತ ಚಲನೆಯನ್ನು ಉದ್ದ ಚಲನೆಯಾಗಿ ಮಾರ್ಪಡಿಸುವ ವಿಷಮ ಕೇಂದ್ರಕ ಸಾಧನ. E. strap, rod ವಿಷಮ ಕೇಂದ್ರಕ ಪಟ್ಟಿ, ದಂಡ. **Eccéntrically** (ಕ್ರಿ. ವಿ.) ; **Eccentrícity** (ನಾ.) ವಿಷಮ ಕೇಂದ್ರತೆ ; ವಿಕೇಂದ್ರತೆ. (ವಕ್ರರೇಖೆಯ) ವೃತ್ತಾಕಾರ ಚ್ಯುತಿ. ಅಸಹಜ ರೀತಿ, ಗುಣ, ಪದ್ಧತಿ ; ವಿಚಿತ್ರತೆ ; ವಿಜಾತೀಯತೆ ; ವಕ್ರತೆ.

Ecclésia ಎಕ್ಲೀಸಿಯ, — ಷಿಯ (ನಾ.) (ಗ್ರೀಕ್ ಪ್ರಾಚೀನ) (ಮು., ಅಥೆನ್ಸ್ ಪಟ್ಟಣಿಗರ) ನಿಯತ ಸಭೆ. **Ecclésiast** ಎಕ್ಲೀಸಿಆ್ಯಸ್ಟ್ (ನಾ.) — ಸಭೆಯ ಸದಸ್ಯ. (ಹಳೆಯ ಒಡಂಬಡಿಕೆಯ 'ಎಕ್ಲೀಸಿಆ್ಯಸ್ಟೀಸ್' ಎಂಬ ಭಾಗವನ್ನು ಬರೆದವನೆಂದು ಪರಿಗಣಿಸುವ) ಸಾಲೊಮನ್ ಉಪದೇಶಿ. **Ecclesiástes** — ಆ್ಯಸ್ಟೀಸ್ (ನಾ.) ಹಳೆಯ ಒಡಂಬಡಿಕೆಯ ಒಂದು ಭಾಗ. **Ecclesiásticus** — ಸ್ಟಿಕಸ್ (ನಾ.) ಹಳೆಯ ಒಡಂಬಡಿಕೆಯಲ್ಲಿ ಪ್ರಮಾಣವೆಂದು ಪರಿಗಣಿಸದ (ಪ್ರಕ್ಷಿಪ್ತ) ಭಾಗಗಳಲ್ಲೊಂದು.

Ecclesiástic ಎಕ್ಲೀಸಿಆ್ಯಸ್ಟಿಕ್ (ನಾ., ಗು.) (ಕ್ರೈಸ್ತ) ಉಪದೇಶಿ ; ಪಾದ್ರಿ. (ಗು. ಈಗ ಅಪೂರ್ವ). **Ecclesiástical** (ಗು.) ಕ್ರೈಸ್ತ ಧರ್ಮದ ; ಕ್ರೈಸ್ತ ವೈದಿಕರ ; ಕ್ರೈಸ್ತ ಮಠೀಯ ; ಚರ್ಚಿನ. E. Commission(ers) ಇಂಗ್ಲಿಷ್ ಚರ್ಚಿನ ಕೆಲವು ವರಮಾನಗಳ ವಿನಿಯೋಗ ಮಾಡುವ ನಿಯುಕ್ತ ಮಂಡಲ(ದವರು). **Ecclesiástically** (ಕ್ರಿ. ವಿ.) ; **Ecclesiásticism** (ನಾ.) ; **Ecclesiólogy** — ಯಾಲೊಜಿ (ನಾ.) ಕ್ರೈಸ್ತ ಆರಾಧನ ಮಂದಿರಗಳ ಶಾಸ್ತ್ರ ; ಚರ್ಚಿನ ಶಾಸ್ತ್ರ (ಮು. ಮಂದಿರದ ಕಟ್ಟಡ, ಅದರ ಅಲಂಕಾರ, ಇವುಗಳ ವಿಷಯವಾದದ್ದು). **Ecclesiológic(al)** — ಯೊಲಾಜಿಕ್(ಅಲ್) (ಗು.) ; **Ecclesiólogist** — ಯಾಲೊಜಿಸ್ಟ್ (ನಾ.)

Écdysis ಎಕ್‌ಡಿಸಿಸ್ (ನಾ.) (ಮು., ಹಾವು, ಮೊ. ಗಳ ಪೊರೆಯ ವಿಷಯದಲ್ಲಿ) ಉಚ್ಚುವುದು ; ಪೊರೆ ಬಿಡುವುದು. ಉಚ್ಚಿದ ಪೊರೆ.

Échelon ಎಷಲೊನ್, ಎಷೆಲಾನ್ (ನಾ., ಕ್ರಿ. ಸಕ.) ಸೈನ್ಯ ದಳಗಳನ್ನು ಸಮಾನಾಂತರವಾಗಿಯೂ, ಒಂದೊಂದು ದಳವೂ ಅದರ ಮುಂದಿನ ದಳದಿಂದ ಸ್ಪಷ್ಟವಾಗಿ ಪ್ರತ್ಯೇಕಗೊಂಡು, ಎಡಕ್ಕೊ ಬಲಕ್ಕೊ ಸ್ವಲ್ಪ ಚಾಚಿಕೊಂಡಿರುವಂತೆಯೂ ಅಳವಡಿಸಿರುವದು ; ಸೋಪಾನ ವ್ಯೂಹ (In e. ಹೀಗೆ ನಿಲ್ಲಿಸಿದ). (ದೃ. ವಿ.) ಸೋಪಾನ ರೀತಿಯಲ್ಲಿ ಅಳವಡಿಸಿದ ಗಾಜಿನ ಫಲಕಗಳು. (ಕ್ರಿ.) ಸೋಪಾನವ್ಯೂಹದಲ್ಲಿ ನಿಲ್ಲಿಸು.

Echínoderm ಇಕೈನೊಡರ್ಮ್, **Échinoderm** ಎಕಿನೊ — (ನಾ.) ಒಂದು ಸಮುದ್ರಪ್ರಾಣಿ ವರ್ಗದ ಪ್ರಾಣಿ ; ಕಂಟಕ ಚರ್ಮಿ.

Écho ಎಕೋ (ನಾ.) (ಶಬ್ದತರಂಗಗಳ ಪ್ರತಿಫಲನದಿಂದ ಹುಟ್ಟುವ) ಮರುದನಿ ; ಮಾರ್ದನಿ ; ಎದುರುಲಿ ; ಪ್ರತಿಧ್ವನಿ ; ಹೊಳಲು (Cheer person, etc. to the e. ಮಾರ್ದನಿಯಾಗುವಂತೆ ಒಬ್ಬನನ್ನು ಗಟ್ಟಿಯಾಗಿ ಹೊಗಳು, ಪ್ರಶಂಸಿಸು). ಪ್ರತಿಧ್ವನಿ ದೇವತೆ. ಗಾಢವಾದ ಅನುಕರಣ ; ಅತಿ ದಾಸ್ಯಭಾವದಿಂದ ಅನುಸರಣೆ, ಅನುಕರಣೆ, ಮಾಡುವವನು ; ಸ್ವತಂತ್ರಾಭಿಪ್ರಾಯವಿಲ್ಲದವನು. ಒಂದು ಪಾದದ ಅಂತ್ಯಾಕ್ಷರಗಳು ಮುಂದಿನ ಪಾದದ ಆದ್ಯಕ್ಷರಗಳಾಗುವ ಅಲಂಕಾರ ; ಒಂದು ಬಗೆಯ ಮುಕ್ತಾಕ್ಷರ ಗ್ರಾಸಾಲಂಕಾರ. **Écholess** (ಗು.) ; **Échoism** ಎಕೊಯಿಸ್ಮ್ (ನಾ.) ದನಿಯನ್ನನುಸರಿಸಿ ಪದಗಳನ್ನು ರಚಿಸುವುದು ; ಧ್ವನ್ಯನುಕರಣ (ಶಬ್ದರಚನೆ). **Échoic** (ಗು.) ಮರುದನಿಯ (ಸ್ವಭಾವದ)

Écho (ಕ್ರಿ.) (ಸ್ಥಳಗಳ ವಿಷಯದಲ್ಲಿ) ಮರು ದನಿ, ಪ್ರತಿಧ್ವನಿ, ಹೊಳಲು, — ಕೊಡು. (ಶಬ್ದಗಳ ವಿಷಯದಲ್ಲಿ) ಮರುನುಡಿ ; ಪ್ರತಿಧ್ವನಿಯಾಗು. ಮತ್ತೊಬ್ಬನು ಹೇಳಿದುದನ್ನೇ ಹೇಳು. (ಒಬ್ಬನ) ಮಾತುಗಳನ್ನು ಅಥವಾ ಅಭಿಪ್ರಾಯಗಳನ್ನು ಅನುಕರಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Eclaircissemént (F) ಎಕ್ಲೇರ್‌ಸೀಸ್‌ಮಾನ್ (ನಾ.) ಸ್ಪಷ್ಟಪಡಿಸುವುದು. ಸಂಶಯ ಬಗೆಹರಿಸುವುದು.

Eclát (F) ಎಕ್ಲಾ (ನಾ.) ಸ್ಪಷ್ಟವಾದ, ಸುವ್ಯಕ್ತವಾದ, ಗೆಲವು; ಪೂರ್ಣ ಪ್ರಶಂಸೆ; ಜಯೋತ್ಕರ್ಷ; ಜಯಜಯಕಾರ; ಸಂಭ್ರಮ; ವೈಭವ; ಅಟ್ಟಹಾಸ (With great e.)

Ecléctic ಎಕ್ಲೆಕ್ಟಿಕ್ (ಗು., ನಾ.) (ತತ್ತ್ವಶಾಸ್ತ್ರ) ಪ್ರತಿಯೊಂದು ಪಂಥದಿಂದಲೂ ತನಗೆ ಸರಿದೋರಿದ ತತ್ತ್ವಗಳನ್ನು ಆರಿಸಿಕೊಳ್ಳುವ (ಪುರಾತನ ತಾತ್ತ್ವಿಕ); ಸಾರ ಸಂಗ್ರಹಿ. ಅನೇಕ ಆಕರಗಳಿಂದ ಆಯ್ದುಕೊಳ್ಳುವ (ವನು); ಅಭಿಪ್ರಾಯ, ಅಭಿರುಚಿ, ಮೊ. ಗಳಲ್ಲಿ ಸಂಕೋಚ ದೃಷ್ಟಿಯಿಲ್ಲದ(ವನು); ವಿಶಾಲ ಹೃದಯದ(ವನು). **Ecléctically** (ಕ್ರಿ. ವಿ.); **Eclécticism** (ನಾ.) ಸಾರಸಂಗ್ರಹ ಪದ್ಧತಿ.

Eclípse ಇಕ್ಲಿಪ್ಸ್ (ನಾ.) ತೇಜೋಮಯವಾದ ಒಂದು ಕಾಯದಿಂದ (ಸೂರ್ಯ, ಚಂದ್ರ, ಮೊ. ಗಳಿಂದ) ಹೊರಟ ಬೆಳಕು ಆ ಕಾಯಕ್ಕೂ ನಮ್ಮ ಕಣ್ಣಿಗೂ (ಅಥವಾ, ಪ್ರಕಾಶಮಾನವಾದ ಒಂದು ಕಾಯಕ್ಕೂ ಅದಕ್ಕೆ ಪ್ರಕಾಶಕೊಡುವ ತೇಜಸ್ಸಿಗೂ) ಮಧ್ಯೇ ಬರುವ ಒಂದು ತೇಜೋರಹಿತ ಕಾಯದಿಂದ ತಡೆಹೊಂದುವುದರಿಂದಾದ ಕಾಂತಿಮಾಲಿನ್ಯ, ಕಾಂತಿ ನಾಶ: ಗ್ರಹಣ (Annular ಕಂಕಣ, Partial ಪಾರ್ಶ್ವ, ಖಂಡ, Total ಪೂರ್ಣ, e. ಗ್ರಹಣ). ಕಳೆಗುಂದು; ಕಾಂತಿಗುಂದು; ತೇಜೋಹಾನಿ [In e. (ಪಕ್ಷಿಗಳ ವಿಷಯದಲ್ಲಿ) ಹೆಣ್ಣನ್ನು ಆಕರ್ಷಿಸುವ ಅಂದವಾದ ಗರಿಗಳನ್ನು ಕಳೆದುಕೊಂಡು; ಪ್ರಭಾ ಹೀನವಾಗಿ]. ಸಮುದ್ರದಲ್ಲಿಯ ದೀಪಗೃಹದ ಬೆಳಕು ಒಂದು ಗೊತ್ತಾದ ಕಾಲಕ್ರಮದಲ್ಲಿ ಮರೆಯಾಗುತ್ತ ಹೋಗುವುದು. (ರೂಪ.) ಮರೆ. **Eclíptic** (ಗು., ನಾ.) ಗ್ರಹಣದ; ಸೂರ್ಯನ ಆಪಾತ ಪಥ; ಕ್ರಾಂತಿವೃತ್ತ.

Eclípse (ಕ್ರಿ. ಸಕ.) (ಆಕಾಶ ಕಾಯದ ವಿಷಯದಲ್ಲಿ) ಗ್ರಹಣ ಹಿಡಿ. (ಮು., ಸಮುದ್ರದಲ್ಲಿಯ ದೀಪಗೃಹದ ಬೆಳಕನ್ನು) ತಡೆಮಾಡು; ಕತ್ತಲಿಸು; ಮರಸು; ಮುಚ್ಚು. (ರೂಪ.) ಕಾಂತಿಹೀನ ಮಾಡು; ಮಸುಳಿಸು; ಕಳೆಗುಂದಿಸು; ಕಾಂತಿ ಮೀರಿಸು. ಮೀರು; ಅತಿಶಯಿಸು.

Éclogue ಎಕ್ಲಾಗ್ (ನಾ.) ಲಘು ಕಾವ್ಯ (ಮು., ಗೊಲ್ಲ ಗೀತೆ); ಸಣ್ಣ ಕವನ.

Ecólogy = Oecology.

Económic ಈ(ಎ)ಕೊನಾಮಿಕ್ (ಗು., ನಾ.) ಅರ್ಥಶಾಸ್ತ್ರದ; ಆರ್ಥಿಕ; ಲಾಭಕ್ಕಾಗಿ ನಡಸುವ; ವ್ಯಾಪಾರ ರೀತಿಯ; ತನ್ನ ಖರ್ಚನ್ನು ತಾನು ಹುಟ್ಟಿಸಿಕೊಳ್ಳುವ. (ಬಾಡಿಗೆಯ ವಿಷಯದಲ್ಲಿ) (ಕಟ್ಟಡ ಕಟ್ಟಿದವನು, ಸ್ವತ್ತುಕರ್ತ, ಮೊ. ರಿಗೆ) ಲಾಭ, ಆದಾಯ, ಕೊಡುವ. ಕೈಗಾರಿಕೆಗಳಿಗೆ ಸಂಬಂಧಪಟ್ಟ. (ನಾ., ಬ. ವ. ದಲ್ಲಿ) (ದೇಶದ ಸಂಪತ್ತಿನ ಉತ್ಪತ್ತಿ ಮತ್ತು ಅದರ ಹಂಚಿಕೆ — ಇವುಗಳ ವಿಷಯವನ್ನು ಪ್ರತಿಪಾದಿಸುವ) ಅರ್ಥಶಾಸ್ತ್ರ; ಒಂದು ದೇಶದ ಸಾಂಪತ್ತಿಕ ಸ್ಥಿತಿ, ಆರ್ಥಿಕ ಸ್ಥಿತಿ. E. botany, geography, etc. ಆರ್ಥಿಕ ದೃಷ್ಟಿಯಿಂದ ವ್ಯಾಸಂಗಮಾಡುವ ಸಸ್ಯಶಾಸ್ತ್ರ, ಭೂಗೋಳಶಾಸ್ತ್ರ, ಮೊ.: ಆರ್ಥಿಕ ಸಸ್ಯಶಾಸ್ತ್ರ; — ಭೂಗೋಳಶಾಸ್ತ್ರ. **Económical** (ಗು.) ಮಿತ ವ್ಯಯ ಮಾಡುವ; ಹಿಡಿತ ವೆಚ್ಚದ; ಒಪ್ಪವಾಗಿ ಬಳಸುವ; ಹಾಳತವಾದ; ದುಂದು ವ್ಯಯ ಮಾಡದ. ಆರ್ಥಿಕ; ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟ. **Económically** (ಕ್ರಿ. ವಿ.) ಮಿತವಾಗಿ; ಹಾಳತವಾಗಿ; ಹಿಡಿತದಿಂದ; ದುಂದು ವೆಚ್ಚ ಮಾಡದೆ. ಆರ್ಥಿಕ ದೃಷ್ಟಿಯಿಂದ; ಆರ್ಥಿಕವಾಗಿ. **Écónomist** ಈಕಾನೊಮಿಸ್ಟ್ (ನಾ.) ಅರ್ಥಶಾಸ್ತ್ರಜ್ಞ. ಆರ್ಥಿಕ ಸ್ಥಿತಿಯ ವಿಷಯವಾಗಿ, ಅರ್ಥಶಾಸ್ತ್ರ ವಿಷಯವಾಗಿ, ಬರೆಯುವವನು. ಹಣಕಾಸಿನ ಆಡಳಿತಗಾರ; ಮಿತವ್ಯಯ ಮಾಡುವವನು; ಮಿತವ್ಯಯಿ. **Écónomize** (ಕ್ರಿ.) ಹಾಳತವಾಗಿ ಉಪಯೋಗಿಸು; ಹಿಡಿತದಿಂದ ವೆಚ್ಚಮಾಡು; ಹೆಚ್ಚುವೆಚ್ಚ ಉಳಿಸು; ಖರ್ಚು ಕಡಮೆ ಮಾಡು. ಹೆಚ್ಚು ಉಪಯೋಗವಾಗುವ ರೀತಿಯಲ್ಲಿ ನಿರ್ವಹಿಸು.

Economizátion (ನಾ.); **Ecónomy** (ನಾ.) ಒಂದು ಸಮಾಜದ ವ್ಯಾಪಾರ (ವ್ಯವಹಾರ)ಗಳ ಮತ್ತು ಬದುಕುಬಾಳುಗಳ ಆಡಳಿತ; ಮನೆವಾರ್ತೆ; ಆರ್ಥಿಕ ಆಡಳಿತ, ನಿರ್ವಹಣ. (Political E. ಸಂಪತ್ತಿನ ಉತ್ಪತ್ತಿ, ಹಂಚಿಕೆ, ಇವುಗಳ ತತ್ತ್ವ: ಅರ್ಥಶಾಸ್ತ್ರ; ಅರ್ಥನೀತಿ). ಮಿತ ವ್ಯಯ; ಹಿಡಿತ; ಹಾಳತ; ಒಪ್ಪ. (ಬ. ವ. ದಲ್ಲಿ) ಮಿತ ವ್ಯಯದ ಸಂದರ್ಭಗಳು; ಮಿತ ವ್ಯಯಗಳು; ಮಿತಾಚರಣೆ. (ದೇವ. ಶಾ.) (ಒಂದು ಮತತತ್ತ್ವದ) ಉಚಿತ ಪ್ರತಿಪಾದನೆ (E. of truth ಆವಶ್ಯಕವಾದಷ್ಟು ಸತ್ಯಪ್ರತಿಪಾದನೆ). (ರೂಪ.) ಸಂವಿಧಾನ; ರಚನೆ; ವ್ಯವಸ್ಥೆ. ಸುವ್ಯವಸ್ಥಿತ ಸಂಘ, ಸಂಸ್ಥೆ, ಮೊ. ವು.

Écstasy ಎಕ್‌ಸ್ಟಸಿ (ನಾ.) ಭಾವಾವೇಶ; ಭಾವೋದ್ರೇಕ; ಭಾವ ಮತ್ತತೆ; ರಾಗ ಪರವಶತೆ (ಮು., ಅತ್ಯಾನಂದ); ಹರ್ಷೋನ್ಮಾದ; ಆನಂದ ಪರವಶತೆ; ಮೈಮರವು. (ವೈ. ಶಾ.) ಮನಸ್ಸು ಒಂದೇ ಭಾವದಲ್ಲಿ ಲೀನವಾಗಿರುವಂತೆ ಮಾಡುವ ನರವ್ಯೂಹದ ವಿಕಾರ ಸ್ಥಿತಿ: ತಲ್ಲೀನತಾ ಜಡತೆ; ಸಮಾಧಿ. ಕವಿತಾವೇಶ. **Écstasize** (ಕ್ರಿ.) ಹರ್ಷೋನ್ಮಾದಗೊಳ್ಳು; — ಗೊಳಿಸು; ಭಾವ ಭ್ರಾಂತ ಮಾಡು; ಭಾವ ಭ್ರಾಂತಿಗೊಳ್ಳು; ಮೈಮರೆ. **Ecstátic** — ಸ್ಟ್ಯಾ — (ಗು.) (ಮು., ಆನಂದಾತಿಶಯದ) ಭಾವೋದ್ರೇಕದ; ಭಾವೋದ್ರೇಕಗೊಳ್ಳುವ, ಮಾಡುವ. **Ecstátically** (ಕ್ರಿ. ವಿ.) ಆನಂದಾತಿಶಯದಿಂದ; ಹರ್ಷೋತ್ಕರ್ಷದಿಂದ; ಭಾವಾತಿರೇಕದಿಂದ.

Écto- ಎಕ್ಟೊ — (ಸ. ಪೂ. ಪ.) ಹೊರಗಿನ —, ಬಾಹ್ಯ —. **-blast** — ಬ್ಲ್ಯಾಸ್ಟ್ (ನಾ.) ಜೀವ ಕಣದ ಹೊರ ಪೊರೆ. **-genétic** — ಜೆನಿಟಿಕ್ (ಗು.) (ಕೂಸು, ಮೊ.) ಬಸುರಾಗದೆ ಹುಟ್ಟಿದ. **-plasm** — ಪ್ಲ್ಯಾಸ್ಮ್ (ನಾ.) (ಜೀ. ವಿ.) ಜೀವದ್ರವ್ಯದ ಹೊರ ಪೊರೆ. (ಭೂತಾವೇಶ) ಆವೇಶಿಯ ದೇಹದಿಂದ ಹೊರಡುವ ಪ್ರಭೆ. **-zóon** — ಜೋಅನ್ (ನಾ.) ದೇಹದ ಚರ್ಮದ ಮೇಲಿದ್ದು ತೊಂದರೆಮಾಡುವ ಪರೋಪಜೀವಿ ಕೀಟ: ಬಾಹ್ಯ ಪರೋಪಜೀವಿ.

Ecuménical. **Oecumenical** ನೋಡಿ.

Éczema ಎಕ್ಸಿಮ (ನಾ.) ಹಲವು ಬಗೆಯ ಚರ್ಮರೋಗ (ಕಜ್ಜಿ, ತುರಿ, ಇಸುಬು, ಕರಪಾಣಿ, ಮೊ. ವು)

Edácious ಇಡೇಷಸ್ (ಗು.) ತಿನ್ನುವ; ಊಟದ; ಅತಿಯಾಗಿ ತಿನ್ನುವ; ಹೊಟ್ಟೆಬಾಕ; ತಿಂಡಿಪೋತ; ಅತ್ಯಾಶೆಯ. **Edácity** ಇಡ್ಯಾಸಿಟಿ (ನಾ.) ಹೊಟ್ಟೆಬಾಕತನ; ಅತ್ಯಾಶೆ; ತಿನ್ನುವ ಶಕ್ತಿ.

Èdda ಎಡ (ನಾ.) (Older, Poetic, E.) ಐಸ್ಲೆಂಡಿನ ಪುರಾತನ ಕವನಗಳ ಸಂಗ್ರಹ. (Younger, Prose, E.) ಐಸ್ಲೆಂಡಿನ ಕಾವ್ಯಗಳಿಗೆ ಗದ್ಯದ ಕೈಪಿಡಿ.

Éddy ಎಡಿ (ನಾ., ಕ್ರಿ.) ಸಣ್ಣ ನೀರುಸುಳಿ; ಜಲಾವರ್ತ; ಸುಳಿಯಾಗಿ ಸುತ್ತುವ ಗಾಳಿ, ಕಾವಳ, ಹೊಗೆ, ಮೊ. ವು; ಸುಂಟರ ಗಾಳಿ; ಸುಳಿಗಾವಳ. (ಕ್ರಿ.) ಸುಳಿಯಾಗಿ ಸುತ್ತು, ಸುತ್ತಿಸು; ಸುಳಿಯೇಳು, ಏಳಿಸು.

Éden ಈಡ್‌ನ್ (ನಾ.) ಆದಮನೂ ಈವಳೂ ಸೃಷ್ಟಿಯಾದಾಗ ಅವರ ವಾಸಸ್ಥಾನ. (ರೂಪ.) ನಂದನ; ಭೂಸ್ವರ್ಗ; ಆನಂದ ನಿಲಯ; ಪರಮ ಸುಖ ಸ್ಥಿತಿ; ಸ್ವರ್ಗೀಯ ಸಂತೋಷ.

Edéntate ಇಡೆಂಟೇಟ್ (ಗು., ನಾ.) ಉಳಿಹಲ್ಲೂ ಕೋರೆಹಲ್ಲೂ ಇಲ್ಲದ (ಪ್ರಾಣಿ); ಹಲ್ಲಿಲ್ಲದ (ಪ್ರಾಣಿ): ಅದಂತಿ.

Edge ಎಜ್ (ನಾ.) ಕತ್ತರಿಸುವ ಆಯುಧದ ಬಾಯಿ; ಅಲಗಿನ ಏಣು, ಮೊನೆ; ಅಲಗಿನ ಹರಿತ, ಮೊನಚು, ತೀಕ್ಷ್ಣತೆ [The knife has no e. ಚಾಕು ಹರಿತವಾಗಿಲ್ಲ. Take the e. off ಹರಿತ ಕಳೆ; ಮೊಂಡು ಮಾಡು. (ಹಸಿವು, ವಾದ, ಮೊ.) ಬಲಗುಂದಿಸು, ಕುಂದಿಸು, ಕಡಮೆ ಮಾಡು, ತೀಕ್ಷ್ಣತೆ ಕಡಮೆಮಾಡು, ಮಂದ ಮಾಡು. Set (person's)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

teeth on e. (ಒಬ್ಬನ) ಹಲ್ಲನ್ನು ಹುಳಿಹಿಡಿಸು, ಜುಮಗುಟ್ಟಿಸು, ಚಳಿತು ಹೋಗಿಸು. (ಹಿತವಿಲ್ಲದಿರುವುದರಿಂದ) ಸಹಿಸಲಾಗದಂತೆ ಮಾಡು; ಅಸಮಾಧಾನಗೊಳಿಸು. ಅಸಹ್ಯ ಹಿಡಿಸು. Be on e. ತವಕಿಸು; ಉದ್ರೇಕಗೊಳ್ಳು; ಕೆರಳು; ರೇಗು]. ಏಣಿನಾಕಾರದ ವಸ್ತು (ಮು., ದಿಣ್ಣೆಯ ನೆತ್ತಿ). (ರೂಪ.) ವಿಷಮ ಸ್ಥಿತಿ; ಸಂಕಟ ಸಮಯ. (ಒಂದು ಘನಾಕೃತಿಯ ಎರಡು ಮುಖಗಳು ಸೇರುವ) ಏಣು. (ಒಂದರ ಹೊರಮೈಯ) ಎಲ್ಲೆಗೆರೆ, ಅಂಚು. (ಪ್ರಪಾತದ) ಏಣು, ಅರುಗು. **E.-tool** ಕತ್ತರಿಸುವ (ಉಳಿ, ಮೊ. ದ) ಆಯುಧ. (ರೂಪ.) Edged tool ಅಪಾಯಕರವಾದ ಆಯುಧ, ವಿಷಯ. **Édgeless** (ಗು.); **Édgeways, -wise** (ಕ್ರಿ. ವಿ.) ಅಂಚು ಮೇಲಾಗಿ, ಏಣು ಮುಂದಾಗಿ. [(ರೂಪ.) Get a word in e. (ಮಾತಾಳಿಯು ಮಾತು ನಿಲ್ಲಿಸಿದ ಸಮಯದಲ್ಲಿ, ತನ್ನ ಮಾತನ್ನು ತೂರಿಸು, ಮಾತಿಗೆ ಅವಕಾಶ ಮಾಡಿಕೊ]. (ಎರಡು ವಸ್ತುಗಳ ವಿಷಯದಲ್ಲಿ) ಏಣಿಗೆ ಏಣು ಸೇರಿ, ಅಂಚುಗೂಡಿ, ಮೊನೆಮೊನೆಗೂಡಿ. **Édgy** (ಗು.) ಮೊನೆಯೇಣಿನ; ಚೂಪಲಗಿನ; ಕೂರ್ಮೊನೆಯ; ಹರಿತವಾದ; ತೀಕ್ಷ್ಣವಾದ. (ಚಿತ್ರ) ಬಹಳ ಕೂರಾದ, ಸ್ಫುಟವಾದ, ಹೊರ ರೇಖೆಯುಳ್ಳ. ರೇಗುಸ್ವಭಾವದ; ನರಗಳು ಉದ್ರೇಕಗೊಂಡ.

Edge (ಕ್ರಿ.) (ಆಯುಧ, ಮೊ. ನ್ನು) ಮಸೆ, ಹರಿತ ಮಾಡು, ಮೊನೆ ಮಾಡು, ಕೂರಾಗಿಸು, ತೀಕ್ಷ್ಣ ಮಾಡು (ರೂಪ. ಸಹ). (E. on = Egg on). ಅಂಚುಗಟ್ಟು; ಕರೆಕಟ್ಟು; ಅಂಚಾಗು. (ಕೊಂಚ ಕೊಂಚವಾಗಿ) ನುಸುಳಿಸು, ನೂಕು, ನುಸುಳು (*Into, in, out, off* ಮೊ. ಗಳೊಡನೆ). ಓರೆಯಾಗಿ, ಮೂಲೆಯ ಮೇರೆ, ನೂಕಿಕೊಂಡು ಹೋಗು. **Édging** (ನಾ.) (ಕ್ರಿಯಾರ್ಥಗಳಲ್ಲಿ). ಅಂಚು; ಅರುಗು; ಕರೆ. **E.-shears** ಹುಲ್ಲುಮೈದಾನದ ಅಂಚಿನಲ್ಲಿಯ ಕುರುಚಲು ಗಿಡದ ಸಾಲನ್ನು ಮಟ್ಟವಾಗಿ ಕತ್ತರಿಸುವ ದೊಡ್ಡ ಕತ್ತರಿ: ಅಂಚುಗತ್ತರಿ.

Édible ಎಡಿಬ್‌ಲ್ (ಗು., ನಾ.) ತಿನ್ನತಕ್ಕ; ತಿನ್ನಬಹುದಾದ; ಆಹಾರಯೋಗ್ಯವಾದ; — ವಸ್ತು; ಭಕ್ಷ್ಯ. **Edibílity** (ನಾ.)

Édict ಈಡಿಕ್ಟ್ (ನಾ.) (ತಕ್ಕ ಅಧಿಕಾರಿ ಸಾರಿಸಿದ, ಪ್ರಕಟಪಡಿಸಿದ) ಆಜ್ಞೆ, ಶಾಸನ; ಕಟ್ಟಳೆ; ರಾಜ ಶಾಸನ. **Edíctal** ಇ — (ಗು.)

Édifice ಎಡಿಫಿಸ್ (ನಾ.) ಕಟ್ಟಡ (ಮು., ದೊಡ್ಡದು) (ರೂಪ. ಸಹ); ಮಂದಿರ; ಭವನ.

Édify ಎಡಿಫೈ (ಕ್ರಿ. ಸಕ.) ಮನಸ್ಸನ್ನು ಉತ್ತಮಗೊಳಿಸು (ಅನೇಕ ವೇಳೆ ವ್ಯಂಗ್ಯಾರ್ಥದಲ್ಲಿ); ಆತ್ಮೋನ್ನತಿ ಮಾಡು; ಆತ್ಮಸಾಧನೆಗೆ ಮಾರ್ಗ ತೋರು; ನೀತಿಬೋಧೆ ಮಾಡು; ನೀತಿಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡು; ನೀತಿಯನ್ನು ಕ್ರಮಗೊಳಿಸು; ತಿಳಿವಳಿಕೆ ಕೊಡು; ಜ್ಞಾನ ಕೊಡು. **Edificátion** (ನಾ.)

Édit ಎಡಿಟ್ (ಕ್ರಿ. ಸಕ.) (ಇತರರ ಗ್ರಂಥಗಳನ್ನು, ಲೇಖನಗಳನ್ನು) ಸರಿನೋಡಿ, ತಿದ್ದಿ, ಮುದ್ರಣಕ್ಕೆ ಸಿದ್ಧಪಡಿಸು; ಸಂಪಾದಿಸು; ಸಂಪಾದನೆ ಮಾಡು; ಪರಿಷ್ಕರಿಸಿ ಮುದ್ರಿಸು. (ವೃತ್ತಪತ್ರಿಕೆಗಳಲ್ಲ ರಾಜ್ಯಾಡಳಿತ ವಿಚಾರಗಳು, ಮೊ. ನ್ನು, ಅಲ್ಲಲ್ಲ ಮೊಟಕುಮಾಡಿ, ಹೊಸವನ್ನು ಸೇರಿಸಿ) ಸಂಸ್ಕರಿಸಿ ಪ್ರಕಟಿಸು. (ವೃತ್ತಪತ್ರಿಕೆ, ಮೊ. ಕ್ಕೆ) ಸಂಪಾದಕನಾಗು; ಸಂಪಾದಕತನ ನಡಸು. **Edítion** ಎ(ಇ)ಡಿಷನ್ (ನಾ.) (ಸಾಹಿತ್ಯ) ಗ್ರಂಥ ಪ್ರಕಟವಾದ ರೂಪ; ಮುದ್ರಣ (Library e. ಭಂಡಾರ ಮುದ್ರಣ. Popular e. ಸಾಮಾನ್ಯ ಮುದ್ರಣ). ಒಂದೇ ಮುದ್ರಣ ರೂಪದಲ್ಲಿ, ಒಂದೇ ಕಾಲದಲ್ಲಿ, ಪ್ರಕಟವಾದ ಪುಸ್ತಕ, ವೃತ್ತಪತ್ರಿಕೆ, ಮೊ. ಗಳ ಒಟ್ಟು ಸಂಖ್ಯೆ. **Edítion de Lúxe** (F) ಇಡಿಷನ್ ಡಿ ಲು(ಲೂ)ಕ್ಸ್ (ನಾ.) ಸುಂದರ ಮುದ್ರಣ. **Edítio prínceps** (L) ಇಡಿಷಿಯೋ ಪ್ರಿನ್ಸೆಪ್ಸ್ (ನಾ.) ಒಂದು ಗ್ರಂಥದ ಮೊದಲನೆಯ ಮುದ್ರಣ, ಪ್ರಥಮ ಮುದ್ರಣ. **Éditor** ಎಡಿಟರ್ (ನಾ.) (ಗ್ರಂಥ) ಸಂಪಾದಕ; (ಪತ್ರಿಕಾ) ಸಂಪಾದಕ. **Éditorship** (ನಾ.) ಸಂಪಾದಕತ್ವ. **Éditress** (ನಾ.) ಸಂಪಾದಕಿ. **Editórial** — ಟೋರಿಯಲ್ (ಗು., ನಾ.) ಸಂಪಾದಕನ; ಸಂಪಾದಕೀಯ. ಸಂಪಾದಕನು ಅಥವಾ ಸಂಪಾದಕನ ಜವಾಬ್ದಾರಿಯಮೇಲೆ ಬರೆದು ಪ್ರಕಟವಾದ ವೃತ್ತಪತ್ರಿಕೆಯ ಲೇಖನ: ಸಂಪಾದಕ ಲೇಖನ; ಸಂಪಾದಕೀಯ (ಲೇಖನ); ಅಗ್ರ ಲೇಖನ. **Editórially** (ಕ್ರಿ. ವಿ.)

Éducate ಎಡ್ಯುಕೇಟ್ (ಕ್ರಿ. ಸಕ.) (ಮಾನಸಿಕ ಮತ್ತು ನೈತಿಕ) ಶಿಕ್ಷಣ ಕೊಡು; ವಿದ್ಯಾಭ್ಯಾಸ ಮಾಡಿಸು; ವಿದ್ಯೆ ಕಲಿಸು; ತಿದ್ದು; ತಯಾರು ಮಾಡು; ಶಿಕ್ಷಣಕ್ಕೊಳಪಡಿಸು; ತರಬೇತು ಮಾಡು. (ಮೃಗಾದಿಗಳನ್ನು) ಪಳಗಿಸು; ತರಬೇತು ಮಾಡು. **Educabílity** — ಕಬಿಲಿಟಿ (ನಾ.) ಶಿಕ್ಷಣ ಸಾಧ್ಯತೆ; ಶಿಕ್ಷಣೀಯತೆ. **Éducable** — ಕಬ್‌ಲ್ (ಗು.) ಶಿಕ್ಷಣಾರ್ಹ; ಶಿಕ್ಷಣ ಸಾಧ್ಯ; ತಿದ್ದಬಹುದಾದ. **Educátion** — ಕೇಷನ್ (ನಾ.) ಶಿಕ್ಷಣ; ಶಿಕ್ಷಣ ಕೊಡುವುದು. (ಕ್ರಮಬದ್ಧವಾಗಿ ಕಲಿಸುವ) ವಿದ್ಯೆ; ಸುಶಿಕ್ಷೆ; ವಿದ್ಯಾಭ್ಯಾಸ; ಕಲಿಕೆ; ಕಲ್ಪಿ (ಗ್ರಾಂ.); ಓದುಬರಹ; ಶಿಕ್ಷಣ ಕ್ರಮ [Classical e. ಪ್ರೌಢ ಪ್ರಾಚೀನ (ಗ್ರೀಕ್, ಲ್ಯಾಟಿನ್) ವಿದ್ಯಾ ಶಿಕ್ಷಣ. Commercial e. ವಾಣಿಜ್ಯ, ವ್ಯಾಪಾರ, ಶಿಕ್ಷಣ. Art e. ಕಲಾ ಶಿಕ್ಷಣ]. ನೀತಿ ನಡೆವಳಿಗಳ ಅಥವಾ ಬುದ್ಧಿಶಕ್ತಿಯ ಅಭಿವರ್ಧನ. (ಮೃಗಾದಿಗಳ) ಶಿಕ್ಷಣ, ಪಳಕೆ, ತಿದ್ದುಪಾಡು, ತಯಾರಿ, ತರಬೇತು. **Educátional** (ಗು.) ಶಿಕ್ಷಣದ; ವಿದ್ಯಾಭ್ಯಾಸದ. **Educátion(al)ist** (ನಾ.) ಶಿಕ್ಷಣ ಸಮರ್ಥ; ಶಿಕ್ಷಣ ಶಾಸ್ತ್ರಜ್ಞ. **Educátionally** (ಕ್ರಿ. ವಿ.); **Éducative** — ಕೆಟಿವ್ (ಗು.) ಶಿಕ್ಷಣದ; ಶಿಕ್ಷಣಾತ್ಮಕ; ಬೋಧಪ್ರದ; ಬುದ್ಧಿ ಸಂಸ್ಕಾರದ. **Éducator** — ಕೇಟರ್ (ನಾ.) ಶಿಕ್ಷಕ.

Edúce ಇಡ್ಯೂಸ್ (ಕ್ರಿ. ಸಕ.) (ಅವ್ಯಕ್ತ ಸ್ಥಿತಿಯಲ್ಲಿರುವುದನ್ನು) ಹೊರದೆಗೆ, ಹೊರಹೊಮ್ಮಿಸು; ಪ್ರಕಾಶಕ್ಕೆ ತರು; ಅರಳಿಸು; ವಿಕಸನ ಮಾಡು. (ರ. ವಿ.) (ಒಂದು ಪದಾರ್ಥವನ್ನು) ಸಂಯುಕ್ತ ಸ್ಥಿತಿಯಿಂದ ಹೊರಡಿಸು; ವಿಘಟಿಸು. (ಕೊಟ್ಟ ಆಧಾರಗಳಿಂದ ಸಂಖ್ಯೆಯನ್ನು, ತತ್ತ್ವವನ್ನು) ಅನುಮಾನಿಸು, ಊಹಿಸು, ತರ್ಕಿಸಿ ತಿಳಿ. **Edúcible** (ಗು.); **Éduct** ಈಡಕ್ಟ್ (ನಾ.) (ರ. ವಿ.) ಮೊದಲು ಸಂಯುಕ್ತ ಸ್ಥಿತಿಯಲ್ಲಿ ಸೇರಿಕೊಂಡಿದ್ದ ವಸ್ತುವಿನಿಂದ ಹೊರಡಿಸಿದ ವಸ್ತು: ವಿಘಟಿತ ವಸ್ತು; — ದ್ರವ್ಯ. ಅನುಮಾನ; ಊಹೆ; ಊಹಿಸಿ ತಿಳಿದದ್ದು. **Edúction** ಇ — (ನಾ.) ಹೊರಗೆಡಹುವುದು; ಬಿಡಿಸುವುದು. (ಆವಿಯ ಎಂಜಿನಿನಲ್ಲಿ) **E.-pipe, -valve,** etc. (Exhaust-pipe, etc. ನೋಡಿ)

Edúlcorate ಇಡಲ್ಕೊರೇಟ್ (ಕ್ರಿ. ಸಕ.) ಕಟು ಗುಣಗಳಿಲ್ಲದಂತೆ ಮಾಡು; ಶುದ್ಧಿಗೊಳಿಸು; ಶೋಧಿಸು. (ಕ್ಷಾಲನ, ಮೊ. ಗಳಿಂದ) ವಿಲೀನಸಾಧ್ಯ ಕಣಗಳನ್ನು ಹೊರಡಿಸು. **Edulcorátion** (ನಾ.)

Eel ಈಲ್ (ನಾ.) ಹಾವಿನ ರೂಪಿನ ಮೀನು: ಹಾವುಮೀನು. (ರೂಪ.) ಜಾರಿಕೊಳ್ಳುವ, ನುಣುಚಿಕೊಳ್ಳುವ, ಪ್ರಾಣಿ: ನುಣುಚುಪ್ರಾಣಿ. (ಬಳ. ಮಾ.) ದ್ರಾಕ್ಷಿ ಹುಳಿರಸದಲ್ಲಿಯೂ ಹುಳಿತ ಕಲಸುಹಿಟ್ಟಿನಲ್ಲಿಯೂ ದೊರೆಯುವ ಸೂಕ್ಷ್ಮಪ್ರಾಣಿ. **E.-buck** ಹಾವುಮೀನುಗಳನ್ನು ಹಿಡಿಯುವ ಕುಕ್ಕೆ. **E.-spear** ಹಾವುಮೀನನ್ನು ಚುಚ್ಚಿ ಹಿಡಿಯುವ ಭರ್ಜಿ. **Éely** (ಗು.) ಹಾವುಮೀನಿನಂಥ.

E'en. Even ಪದದ ಸಂಕ್ಷಿಪ್ತ ರೂಪ.

E'er. Ever ಪದದ ಸಂಕ್ಷಿಪ್ತ ರೂಪ.

Eérie, Eéry ಈರಿ (ಗು.) (ಭೂತ, ಪ್ರೇತ, ಮೊ. ಗಳಲ್ಲಿ) ಮೂಢ ನಂಬಿಕೆಯಿಂದ ಅಂಜುವ, ಹೆದರುವ. ಭಯ ಹುಟ್ಟಿಸುವ. **Eérily** (ಕ್ರಿ. ವಿ.); **Eériness** (ನಾ.)

Effáce ಎಫೇಸ್ (ಕ್ರಿ. ಸಕ.) ಅಳಿಸು; ಅಳಿಸಿಬಿಡು; ತೊಡೆ(ದುಬಿಡು); ಉಜ್ಜಿ ಹಾಕು; ಒರಸಿಬಿಡು. (ರೂಪ.) ನಿರ್ಮೂಲ ಮಾಡು. ಇಲ್ಲದಂತೆ ಮಾಡು; ನಾಶಗೊಳಿಸು; ಹುಟ್ಟಡಗಿಸು; ನಿರ್ನಾಮ ಮಾಡು. ಸಂಪೂರ್ಣವಾಗಿ ಅತಿಶಯಿಸು, ಮೀರಿಸು, ತಲೆಮೆಟ್ಟು. ಮಸುಳಿಸು; ಮರಸು; ಮರೆಗೊಳಿಸು. (E. oneself) (ತಾನು) ಅಲ್ಪನೆಂದು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಪ್ರಮುಖನೆಂದು, ಭಾವಿಸು, ಪರಿಗಣಿಸು. **Effáceable** — ಸಬ್‌ಲ್ (ಗು.) ; **Effácement** (ನಾ.)

Efféct ಎಫೆಕ್ಟ್ (ನಾ.) ಫಲ ; ಪರಿಣಾಮ ; ಕಾರ್ಯ (Cause and e. ಕಾರಣ ಕಾರ್ಯ ಭಾವ) ; ಫಲ ; ಪ್ರಯೋಜನ (Of no e. ಪ್ರಯೋಜನವಿಲ್ಲದ). ಚಿತ್ರ, ಮೊ. ಗಳಲ್ಲಿ ವರ್ಣಗಳ ಅಥವಾ ರೂಪಗಳ ಹೊಂದಿಕೆ (A pretty e. ಸೊಗಸಾದ ಹೊಂದಿಕೆ). ಅಭಿಪ್ರಾಯ ; ತಾತ್ಪರ್ಯ ; ಆಶಯ. (ಬ. ವ. ದಲ್ಲಿ) ಆಸ್ತಿ ; ಚರ ಆಸ್ತಿ ; ಬ್ಯಾಂಕಿನಲ್ಲಿರುವ ಹಣ [Personal effects ಸ್ವಂತ ಚರಆಸ್ತಿ. No effects ಬಂಡವಾಳವಿಲ್ಲ (ತಿರಸ್ಕಾರಮಾಡಿದ ಹುಂಡಿಯಮೇಲೆ ಬ್ಯಾಂಕಿನವನು ಬರೆಯುವ ಮಾತು)]. (Give e. to ಕಾರ್ಯರೂಪಕ್ಕೆ ತರು ; ಪರಿಣಾಮಕಾರಿಯಾಗಿ ಮಾಡು ; ಆಚರಣೆಗೆ ತರು ; ಜಾರಿಗೆ ತರು. Take e. ಕಾರ್ಯರೂಪಕ್ಕೆ ಬರು, ಮೊ.). (ಪ್ರೇಕ್ಷಕ, ಶ್ರೋತೃ, ಮೊ. ವರ ಮೇಲೆ) ಆಗುವ ಪರಿಣಾಮ (Calculated for e. ಪರಿಣಾಮವುಂಟುಮಾಡಲು ಗುಣಾಕಾರ ಹಾಕಿದ). (Bring to, carry into, e. ನಿರ್ವಹಿಸು ; ನೆರವೇರಿಸು ; ನಡಸು ; ಕಾರ್ಯರೂಪಕ್ಕೆ ತರು. In e. ಕಾರ್ಯತಃ ; ವಸ್ತುತಃ ; ತತ್ತ್ವತಃ ; ವಾಸ್ತವವಾಗಿ). **Efféctive** (ಗು., ನಾ.) ಪರಿಣಾಮಕಾರಿ ; ಫಲಕಾರಿ ; ಕಾರ್ಯಕಾರಿ ; ಕಾರ್ಯಸಾಧಕ [E. range of (weapon) (ಆಯುಧದ) ಸಾರ್ಥಕ ಕಾರ್ಯಕ್ಷೇತ್ರ ; ಕೈನಡೆಯುವ, ಪ್ರಭಾವ, ಕ್ಷೇತ್ರ]. ಪರಿಣಾಮದಲ್ಲಿ ಪ್ರಬಲವಾದ ; ಗುರಿತಾಕುವ. (ಸಿಪಾಯಿಗಳ ಅಥವಾ ನಾವಿಕರ ವಿಷಯದಲ್ಲಿ) ಉದ್ಯೋಗಕ್ಕೆ ದಕ್ಷರಾದ. ಕಾರ್ಯತಃ ಇರುವ ; ವಾಸ್ತವವಾದ ; ನಡೆಯುತ್ತಿರುವ ; ಚಾಲ್ತಿಯಲ್ಲಿರುವ. (ನಾ.) ದಕ್ಷನಾದ ಸಿಪಾಯಿ ; ಸೈನ್ಯದ ಕಾರ್ಯಸಾಧಕ ಭಾಗ. **Efféctively** (ಕ್ರಿ. ವಿ.) ; **Efféctiveness** (ನಾ.) ; **Efféctless** (ಗು.) ಫಲಕಾರಿಯಾಗದ ; ಪ್ರಯೋಜನವಾಗದ. **Efféctual** (ಗು.) ಕಾರ್ಯಸಾಧಕ ; ಫಲಕಾರಿ ; ಪರಿಣಾಮಕಾರಿ ; ಊರ್ಜಿತವಾಗುವ. **Efféctually** (ಕ್ರಿ. ವಿ.) ; **Efféctualness** (ನಾ.) ; **Efféctuate** — ಟ್ಯುಏಟ್ (ಕ್ರಿ. ಸಕ.) ಆಗುವಂತೆ ಮಾಡು ; ಕಾರ್ಯರೂಪಕ್ಕೆ ತರು ; ನೆರವೇರಿಸು ; ಈಡೇರಿಸು. **Effectuátion** (ನಾ.)

Effect (ಕ್ರಿ. ಸಕ.) ಆಗಮಾಡು ; ಸಾಧಿಸು ; ನೆರವೇರಿಸು (E. a policy of insurance ವಿಮೆ ಮಾಡು)

Efféminate ಎಫೆಮಿನೆಟ್ (ಗು.) ಹೆಂಗಸಿನಂಥ ; ಹೆಣ್ಣಿಗ ; ಪೌರುಷವಿಲ್ಲದ. ಸ್ತ್ರೀ ಲಂಪಟ ; ವಿಷಯ ಲಂಪಟ. ಅತಿ ನಾಜೂಕಿನ ; ಸುಕುಮಾರ ; ಕೋಮಲ. **Efféminacy** — ಮಿನಸಿ (ನಾ.) ಹೆಣ್ಣಿಗತನ ; ಸ್ತ್ರೀ ಸ್ವಭಾವ. **Efféminately** (ಕ್ರಿ. ವಿ.)

Efféndi ಎಫೆಂಡಿ (ನಾ.) ತುರ್ಕಿದೇಶದಲ್ಲಿ ಸರ್ಕಾರದ ಅಧಿಕಾರಿಗಳ ವಿಷಯದಲ್ಲೂ ವಿದ್ವತ್ತಿನ ಉದ್ಯೋಗಗಳ ಸದಸ್ಯರ ವಿಷಯದಲ್ಲೂ ಹೇಳುವ ಗೌರವದ ಮಾತು.

Éfferent ಎಫೆರೆಂಟ್ (ಗು.) (ಶ. ವಿ.) ಹೊರಗಡೆಗೆ ಒಯ್ಯುವ ; ಹೊರಡಿಸುವ ; ಅಪವಾಹಿ ; ಬಹಿರ್ವಾಹಿ. E. vessels, nerves ಅಪವಾಹಿ ರಕ್ತನಾಳಗಳು, ಬಹಿರ್ವಾಹಿ ನರಗಳು.

Effervésce ಎಫರ್ವೆಸ್ (ಕ್ರಿ. ಅಕ.) ಅನಿಲದ ಗುಳ್ಳೆಗಳು ಹೊರಡು ; ಗುಳ್ಳೆ ಏಳು ; ಉಕ್ಕೇಳು (ಅನೇಕ ವೇಳೆ, ರೂಪಕದಲ್ಲಿ ಮನುಷ್ಯರ ವಿಷಯವಾಗಿ). **Effervéscence, -ency** —ಸೆನ್ಸ್, —ಸೆನ್ಸಿ (ನಾ.) ಕುದಿ ; ಉಕ್ಕು. **Effervéscent** (ಗು.) ಕುದಿ ಏಳುವ ; ಉಕ್ಕೇರುವ.

Efféte ಎಫೀಟ್ (ಗು.) ಬಳಲಿಹೋದ ; ಸೋತುಹೋದ ; ಜೀರ್ಣವಾದ ; ಶಕ್ತಿಯಿಲ್ಲದ ; ಕುಗ್ಗಿದ ; ನಿಸ್ಸತ್ವ ; ನಿತ್ರಾಣ ; ಬೀಳಾದ ; ಬಲಹೀನ. **Efféteness** (ನಾ.)

Efficácious ಎಫಿಕೇಷಸ್ (ಗು.) (ವಸ್ತುವಿನ ವಿಷಯದಲ್ಲಿ) ಅಪೇಕ್ಷಿತ ಫಲವನ್ನು (ಖಂಡಿತವಾಗಿ) ಉಂಟುಮಾಡುವ ; ಪರಿಣಾಮಕಾರಿ ; ಫಲಕಾರಿ ; ಕಾರ್ಯಕಾರಿ ; ಕಾರ್ಯಸಾಧಕ ; ಗುಣಕಾರಿ. **Efficáciously** (ಕ್ರಿ. ವಿ.) ; **Efficáciousness** (ನಾ.) ; **Éfficacy** —ಕಸಿ (ನಾ.) ಪರಿಣಾಮ ; ಪರಿಣಾಮಕಾರಿತ್ವ ; ಕಾರ್ಯಕಾರಿತ್ವ ; ಸಫಲತ್ವ ; ಪ್ರಭಾವ ; ಗುಣ. **Efficiency** — ಷೆನ್ಸಿ (ನಾ.) (ಗುಣವಾಚಕದ ಅರ್ಥಗಳಲ್ಲಿ). (ಯಂತ್ರಶಾಸ್ತ್ರ) ಒಂದು ಯಂತ್ರಕ್ಕೆ ಒದಗಿಸಿದ ಶಕ್ತಿಗೂ ಆ ಯಂತ್ರದಿಂದಾದ ಉಪಯೋಗ ಕೆಲಸಕ್ಕೂ ಇರುವ ಸಂಬಂಧ ; ಒದಗಿಸಿದ ಶಕ್ತಿಯ ಯಾವ ಭಾಗವು ಉಪಯೋಗ ಕೆಲಸವಾಗಿ ಪರಿಣಮಿಸುವುದೊ ಆ ಪ್ರಮಾಣ ; ಕಾರ್ಯಸಮರ್ಥತೆ. **Efficient** — ಷೆಂಟ್ (ಗು.) ಫಲ ಕೊಡುವ ; ಫಲಕಾರಿಯಾಗುವ ; ಪರಿಣಾಮಕಾರಿ ; ಕಾರ್ಯಕಾರಿ ; ಕಾರ್ಯ ಸಾಧಕ. (ಮನುಷ್ಯರ ವಿಷಯದಲ್ಲಿ) ಸಮರ್ಥ ; ಶಕ್ತ ; ದಕ್ಷ ; ಕಾರ್ಯ ಪಟು (E. cause ನಿಮಿತ್ತ ಕಾರಣ ; ಕಾರ್ಯಸಾಧಕ ಕಾರಣ). **Efficiently** (ಕ್ರಿ. ವಿ.)

Éffigy ಎಫಿಜಿ (ನಾ.) ಭಾವ ಚಿತ್ರ ; ಚಿತ್ರ ; ಪ್ರತಿಮೆ ; ಪ್ರತಿಕೃತಿ ; ಆಕಾರ [Hang, burn, (person) in e. (ಒಬ್ಬನ) ಆಕೃತಿಯನ್ನು ನೇಣುಹಾಕು, ಸುಡು]

Efflorésce ಎಫ್ಲೊರೆಸ್ (ಕ್ರಿ. ಅಕ.) ಹೂವಾಗು ; ಹೂವರಳು ; ಹೂ ಬಿರಿ ; ಹೂವಿನಂತೆ ಅರಳು ; (ರೂಪ. ಸಹ). (ರ. ವಿ., ಸ್ಫಟಿಕ ವಸ್ತು) ಗಾಳಿಗೆ ಒಡ್ಡಿದಾಗ ನಯವಾದ ಪುಡಿಯಾಗಿ ಮಾರ್ಪಡು ; ಅರಳಿಕೊ. (ಲವಣಗಳು) ಮೇಲಿನ ಪ್ರದೇಶಕ್ಕೆ ಬಂದು ಅಲ್ಲಿ ಸ್ಫಟಿಕಾಕೃತಿ ತಾಳು, ಸ್ಫಟಿಕವಾಗು, ಹರಳುಗಟ್ಟು. (ನೆಲ, ಗೋಡೆ) ಉಪ್ಪುಕಣಗಳಿಂದ ತುಂಬು ; ಉಪ್ಪುಗಟ್ಟು ; ಉಪ್ಪೇಳು. **Effloréscence** — ಸೆನ್ಸ್ (ನಾ.) ; **Effloréscent** (ಗು.)

Éffluence ಎಫ್ಲುಎನ್ಸ್ (ನಾ.) (ಬೆಳಕು, ವಿದ್ಯುತ್ತು, ಮೊ.) ಹೊರಸೂಸುವುದು ; ಹೊರಕ್ಕೆ ಹರಿಯುವುದು ; ಬಹಿಃಪ್ರವಾಹ ; ಹೊರಕ್ಕೆ ಹರಿದದ್ದು, ಹರಿಯುವದು ; ಹೊರ ಹರಿತ ; ನಿರ್ಗಮ (ರೂಪ. ಸಹ). **Éffluent** (ಗು., ನಾ) ಹೊರ ಸೂಸುವ ; ಹೊರ ಹರಿಯುವ ; ಹರಿಯುವ ; ಪ್ರವಹಿಸುವ. (ನಾ.) (ಸರೋವರ, ಕೆರೆ, ದೊಡ್ಡ ಹೊಳೆ, ರೊಚ್ಚುನೀರಿನ ಕಟ್ಟೆ, ಮೊ. ಗಳಿಂದ ಹರಿಯುವ) ಹಳ್ಳ, ಹೊಳೆ.

Efflúvium ಎಫ್ಲೂವಿಯಂ (ನಾ. ; ಬ. ವ. -ia) (ಶ್ವಾಸ ಕೋಶಗಳಿಗೂ ಘ್ರಾಣೇಂದ್ರಿಯಕ್ಕೂ ಕೆಡುಕುಮಾಡುವ) ದುರ್ಗಂಧದ ಹಬೆ ; ದುರ್ಗಂಧ ; ನಾತ. (ಅಯಸ್ಕಾಂತ, ಮೊ. ಗಳಿಂದ ಹೊರಹೊರಡುವುದೆಂದು ಊಹಿಸಿರುವ) ಸೂಕ್ಷ್ಮ ಕಣಗಳ ಹರಿವು, ಪ್ರವಾಹ.

Éfflux ಎಫ್ಲಕ್ಸ್ (ನಾ.) (ದ್ರವ, ವಾಯು, ಅನಿಲ, ಇವುಗಳ ವಿಷಯವಾಗಿ) ಹೊರಸೂಸುವುದು ; ಹೊರ ಹೊರಡುವುದು ; ಹೊರ ಹರಿಯುವುದು ; ಹೊರ ಹರಿತ ; ಹೊರ ಸೂಸಿದ್ದು ; ಹೊರ ಹರಿದದ್ದು ; ಬಹಿಃಪ್ರವಾಹ ; ನಿರ್ಗಮ (ರೂಪ. ಸಹ) ; (E. of time ಕಾಲ ಕಳೆದುಹೋಗುವುದು). **Efflúxion** ಎಫ್ಲಕ್‌ಷನ್ (ನಾ.)

Éffort ಎಫರ್ಟ್ (ನಾ.) ಪ್ರಯತ್ನ ; ಉದ್ಯಮ ; ಪ್ರಯಾಸ ; ತೊಡಕ ; ಮಿಡುಕು (ಗ್ರಾಂ.) ; ತಿಣುಕು. (ವಕ್ತೃತ್ವ, ಮೊ. ಗಳ ವಿಷಯದಲ್ಲಿ) ಶಕ್ತಿ ಪ್ರದರ್ಶನ. (ಬಳ. ಮಾ.) ಚಿತ್ತೈಕಾಗ್ರತೆಯಿಂದ ಅಥವಾ ವಿಶೇಷ ಕಾರ್ಯಶಕ್ತಿಯಿಂದ ಸಾಧಿಸಿದುದು, ಸಾಧನೆ. **Éffortless** (ಗು.) ಪ್ರಯತ್ನ ಮಾಡದ ; ಪ್ರಯತ್ನವಿಲ್ಲದ ; ನಿಷ್ಪ್ರಯತ್ನ ; ಅಪ್ರವೃತ್ತಿಯ ; (ಚತುರತೆ, ಮೊ. ಗಳ ವಿಷಯದಲ್ಲಿ) ಅಪ್ರಯತ್ನವಾದ ; ನಿರಾಯಾಸ ; ಸುಲಭ.

Effróntery ಎಫ್ರಂಟೆರಿ (ನಾ.) ನಾಚಿಕೆಗೆಟ್ಟ ಧಾರ್ಷ್ಟ್ಯ ; ಮಾನಗೆಟ್ಟ ದಿಟ್ಟತನ ; ಧೂರ್ತತೆ ; ಔದ್ಧತ್ಯ.

Effúlgent ಎಫಲ್ಜೆಂಟ್ (ಗು.) ಪ್ರಭೆ ಸೂಸುತ್ತಿರುವ ; ಹೊಳೆಯುತ್ತಿರುವ ; ಮಿರುಗುವ ; ಥಳಥಳಿಸುವ ; ಪ್ರಕಾಶಿಸುವ ; ಡಾಳಿಸುವ ; ಪ್ರಜ್ವಲಿಸುವ ; ಉದ್ದೀಪ್ತ. **Effúlgence** (ನಾ.) ; **Effúlgently** (ಕ್ರಿ. ವಿ.)

Effúse ಎಫ್ಯೂಸ್ (ಗು.), ಎಫ್ಯೂಸ್ (ಕ್ರಿ. ಸಕ.) (ಪುಷ್ಪ ವಿಕಸನ, ಪುಷ್ಪ ರಚನೆ, ಇವುಗಳ ವಿಷಯದಲ್ಲಿ) ವಿರಳವಾಗಿ ಹರಡುವ. (ಶಂಖ) ತುಟಿಗಳು

परिणामकारी, फलकारी, कार्यकारी, कार्यसाधक, गुणकारी

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೀರಿನಿಂದ, ಸಂದುಗೆರೆಯಿಂದ, ಪ್ರತ್ಯೇಕಪಟ್ಟಿರುವ. (ಕ್ರಿ.) (ದ್ರವ, ವಾಯು, ಬೆಳಕು, ವಾಸನೆ, ಇವನ್ನು) ಹೊರಸೂಸು, ಹೊರಚೆಲ್ಲು ; ಚೆಲ್ಲು; ಸುರಿ(ಸು) (ರೂಪ. ಸಹ). **Effúsion** — ಷನ್ (ನಾ.) ಪ್ರವಾಹ ; ತಡೆಯಿಲ್ಲದ, ನಿರರ್ಗಳವಾದ, — ಮಾತು, ವಾಕ್ಕು ; ವಾಕ್ಪ್ರವಾಹ (ಅನೇಕ ವೇಳೆ, ಸಾಹಿತ್ಯಕೃತಿಯ ವಿಷಯದಲ್ಲಿ ತುಚ್ಛವಾಗಿ ಹೇಳುವುದು). **Effúsive** — ಸಿವ್ (ಗು.) (ಭಾಷಣದ ಅಥವಾ ಮನೋಭಾವಗಳ ವಿಷಯದಲ್ಲಿ) ನಿರರ್ಗಳ, ಪುಷ್ಕಳ, ಉಕ್ಕುವ, ಉಕ್ಕಿ ಹರಿಯುವ. (ಭೂ. ವಿ., ಅಗ್ನಿಶಿಲೆಯ ವಿಷಯದಲ್ಲಿ) ಕರಗಿದ್ದಾಗ ಹರಿದು ತರುವಾಯ ಘನೀಭವಿಸಿದ. **Effúsively** (ಕ್ರಿ. ವಿ.) ; **Effúsiveness** (ನಾ.)

Eft ಎಫ್ಟ್ (ನಾ.) ಕೊಳಗಳು, ಹಳ್ಳಕೊಳ್ಳಗಳು, ಜವುಗು ಪ್ರದೇಶಗಳು — ಇವುಗಳಲ್ಲಿ ವಾಸವಾಗಿರುವ, ಕಪ್ಪೆಯಜಾತಿಯ, ಹಲ್ಲಿಯಾಕಾರದ, ಒಂದು ಪ್ರಾಣಿ.

Eftsoón(s) ಎಫ್ಟ್‌ಸೂನ್(ನ್ಸ್) (ಕ್ರಿ. ವಿ.) (ಪ್ರಾಚೀ. ಪ್ರ.) ಕೂಡಲೆ ; ಬೇಗನೆ ; ತತ್‌ಕ್ಷಣ ; ಸಾವಕಾಶ ಮಾಡದೆ.

Egád ಇಗ್ಯಾಡ್ (ಭಾವ. ಅವ್ಯ.) ದೇವರಾಣೆ ; ಅಯ್ಯೋ ದೇವರೇ !

Egéria ಇಜೀರಿಯ (ನಾ.) (ಒಬ್ಬನ) ರಕ್ಷಕ ದೇವತೆ ; ಮನೆದೈವ.

Egg¹ ಎಗ್ (ನಾ.) [ಹೆಣ್ಣುಹಕ್ಕಿ, ಮೊ. ವು (ಮು., ಸಾಕಿದ ಕೋಳಿ) ಇಡುವ, ಹೊಸಪ್ರಾಣಿಯ ಅಂಕುರವುಳ್ಳ] ಅಂಡ, ಮೊಟ್ಟೆ, ತತ್ತಿ, ಗುಡ್ಡು [Addle e., Wind e., (ಆಯಾ ಪದಗಳನ್ನು ನೋಡಿ)]. (ರೂಪ.) In the e. ಆರಂಭ ಸ್ಥಿತಿಯಲ್ಲಿ ; ಪ್ರಥಮಾವಸ್ಥೆಯಲ್ಲಿ ; ಬೀಜ ರೂಪದಲ್ಲಿ. As full as an e. ಗಿಡಿಗಿ ತುಂಬಿದ ; ಇಡಿಕಿರಿದ. Bad e. ಫಲಕಾರಿಯಾಗದೆಹೋಗುವ, ಫಲನದೆಹೋಗುವ, ಉಪಯೋಗವಾಗದೆಹೋಗುವ, ಕೆಲಸಕ್ಕೆ ಬಾರದ, ಅಪ್ರಯೋಜಕ, ನಿಷ್ಪ್ರಯೋಜಕ, — ಮನುಷ್ಯ, ಹಂಚಿಕೆ, ಉಪಾಯ. As sure as eggs is eggs ಖಂಡಿತವಾಗಿ ; ನಿಸ್ಸಂಶಯವಾಗಿ ; ನಿಸ್ಸಂದೇಹವಾಗಿ. Teach your grandmother to suck eggs ತನಗಿಂತಲೂ ಹೆಚ್ಚು ಅನುಭವವುಳ್ಳವರಿಗೆ ಬುದ್ಧಿವಾದ ಹೇಳಲು ಹೋಗು ; ಗುರುವಿಗೆ ತಿರುಮಂತ್ರ ಹೇಳು ; ಅಜ್ಜಿಗೆ ಕೆಮ್ಮು ಕಲಿಸು. Have all your eggs in one basket ನಷ್ಟಕ್ಕೆ ಹೆದರದೆ ಒಂದೇ ಪ್ರಯತ್ನದಮೇಲೆ ಎಲ್ಲವನ್ನೂ ಒಡ್ಡಿಬಿಡು. E. and anchor, dart, tongue (ವಾಸ್ತುಶಿಲ್ಪ) ತೆರ ತೆರದ ಅಲಂಕಾರಗಳು. E.-and-spoon race ಮೊಟ್ಟೆಯನ್ನಿಟ್ಟ ಚಮಚವನ್ನು ಹಿಡಿದು ಓಡುವ ಪಂದ್ಯ. E. cleavage (ಜೀ. ವಿ.) ಫಲಬದ್ಧ (ಗರ್ಭವಾದ) ತತ್ತಿಯೊಳಗಡೆ ಜೀವಕಣಗಳು ಬಿರಿಯುತ್ತಹೋಗಿ ಭ್ರೂಣವಾಗಿ ಏರ್ಪಡುವ ಕ್ರಮ. **E.-cup** ಚಿಪ್ಪಿನೊಡನೆ ಬೇಯಿಸಿದ ಮೊಟ್ಟೆಯನ್ನಿಡುವ ಬಟ್ಟಲು. **E.-dance** ಕಣ್ಣು ಕಟ್ಟಿಕೊಂಡು ಮೊಟ್ಟೆಗಳ ನಡುವೆ ಕುಣಿಯುವ ಕುಣಿತ. (ರೂಪ.) ತೊಡಕಾದ ಕೆಲಸ. **E.-flip, -nog** ಬಿಸಿ ಬಿಸಿಯಾದ ಬಿಯರ್, ಸೈಡರ್, ವೈನ್, ಮೊ. ಮದ್ಯಗಳಲ್ಲಿ ಮೊಟ್ಟೆಯ ಲೋಳೆಯನ್ನು ಕಲಸಿ ಮಾಡಿದ ಪಾನ : ಮೊಟ್ಟೆಯ ಪಾನ. **E.-plant** (ಬಿಳಿಯ) ಬದನೆಯ ಗಿಡ. **E.-shell** ಮೊಟ್ಟೆಯ ಚಿಪ್ಪು. ಸತ್ವವಿಲ್ಲದೆ ಪುಡಿಪುಡಿಯಾಗುವ ವಸ್ತು (E.-s. china ಬಹಳ ತೆಳ್ಳನೆಯ ಪಿಂಗಾಣಿ ಸಾಮಾನು). **E.-slice** ಮೊಟ್ಟೆಯ ದೋಸೆಯನ್ನು ಕಾವಲಿಯಿಂದ ತೆಗೆಯುವ ಮಗುಚುಕೈ. **E.-spoon** ಬೇಯಿಸಿದ ಮೊಟ್ಟೆಯನ್ನು ತಿನ್ನಲು ಉಪಯೋಗಿಸುವ ಸಣ್ಣ ಚಮಚ. **E.-tooth** ತಾನಿರುವ ಆವರಣದ ಚಿಪ್ಪನ್ನು ಒಡೆದುಕೊಂಡು ಹೊರಗೆ ಬರಲು ಹಕ್ಕಿಯ ಭ್ರೂಣದ ಕೊಕ್ಕಿನ ಹೊದಿಕೆಯಮೇಲಿರುವ ಗಂತಿ. **E.-whisk** ಮೊಟ್ಟೆಯ ಲೋಳೆಯನ್ನು ಕಡೆಯುವ ಪಾತ್ರೆ.

Egg² ಎಗ್ (ಕ್ರಿ. ಸಕ.) (ಒಂದು ಕಾರ್ಯಕ್ಕೆ, ಒಬ್ಬನನ್ನು) ಪ್ರೇರಿಸು, ಹುರಿದುಂಬಿಸು, ಪ್ರೋತ್ಸಾಹಿಸು (*On* ಉಪ. ದೊಡನೆ)

Églantine ಎಗ್ಲಂಟೈ(ಟಿ)ನ್ (ನಾ.) ಸುವಾಸನೆಯ ಎಲೆಗಳುಳ್ಳ ಒಂದು ಜಾತಿಯ ಕಾಡು ಗುಲಾಬಿ.

Égo ಎಗೊ, ಈಗೊ (ನಾ.) (ತತ್ತ್ವಶಾಸ್ತ್ರ) (ಜ್ಞೇಯ ವಿಷಯವಲ್ಲದ) ಜ್ಞಾತೃ ; ವಿಷಯಿ ; ಅಹಂ ; ನಾನು. **Égoism** — ಇಸ್ಮ್ (ನಾ.) (ನೀತಿಶಾಸ್ತ್ರ) ಸ್ವಾರ್ಥವೇ ನೀತಿಯ ತಳಹದಿಯೆಂದು ಪ್ರತಿಪಾದಿಸುವ ವಾದ ; ಸ್ವಾರ್ಥಮೂಲ ತತ್ತ್ವ ; ಸ್ವಾರ್ಥತಾ ವಾದ. ವ್ಯವಸ್ಥಿತವಾದ ಸ್ವಾರ್ಥತೆ ; ಅಹಂಭಾವ ; ಸ್ವಾಭಿಮಾನ ; = Egotism. **Égoist** (ನಾ.) ; **Egoístic(al)** (ಗು.) ; **Egoístically** (ಕ್ರಿ. ವಿ.) ; **Égotism** (ನಾ.) 'ನಾನು', 'ನನ್ನದು' ಎಂದು ಪದೇ ಪದೇ ಪ್ರಯೋಗಿಸುವುದು ; ಸ್ವವಿಷಯವಾಗಿಯೇ (ಹೆಚ್ಚಾಗಿ) ಮಾತನಾಡುವ ಅಭ್ಯಾಸ ; ಆತ್ಮದುರಭಿಮಾನ ; ಸ್ವಾರ್ಥಸಾಧನೆ ; ಸ್ವಾರ್ಥತೆ. **Égotist** (ನಾ.) ; **Egotístic(al)** (ಗು.) ; **Egotístically** (ಕ್ರಿ. ವಿ.) ; **Égotize** (ಕ್ರಿ. ಅಕ.) ಸ್ವಪ್ರತಿಷ್ಠೆಯಿಂದ ಮಾತನಾಡು, ಬರೆ.

Egrégious ಇಗ್ರೀಜಿಯಸ್, — ಜಸ್ (ಗು.) (ಪ್ರಾಚೀ. ಪ್ರ.) ಪ್ರಸಿದ್ಧವಾದ ; ಪ್ರಖ್ಯಾತ ; ಅತಿಶಯವಾದ ; ಸರ್ವೋತ್ಕೃಷ್ಟ ; ಎಲ್ಲವನ್ನೂ ಮೀರಿಸುವ. (ಈಗ) ಘೋರವಾದ ; ಅತಿಯಾದ ; ಪರಮ ; ಪಕ್ಕಾ (E. folly, blunder, ass ಘೋರವಾದ ಅವಿವೇಕ, ಅತಿಯಾದ ತಪ್ಪಿತ, ಶುದ್ಧಮುಟ್ಠಾಳ, ದಡ್ಡ). **Egrégiously** (ಕ್ರಿ. ವಿ.) ; **Egrégiousness** (ನಾ.)

Égress ಈಗ್ರೆಸ್ (ನಾ.) ಹೊರಕ್ಕೆ ಹೋಗುವುದು ; ಹೊರಕ್ಕೆ ಹೋಗುವ ಹಕ್ಕು, ಸ್ವಾತಂತ್ರ್ಯ ; ಹೊರಕ್ಕೆ ಹಾದಿ, ಮಾರ್ಗ (ರೂಪ. ಸಹ) ; ನಿರ್ಗಮ ; ಬಿಡುಗಡೆಯ ಮಾರ್ಗ ; ತಪ್ಪಿಸಿಕೊಳ್ಳಲಾಗುವ ಮಾರ್ಗ. (ಖ. ವಿ.) ಗ್ರಹಣದ ಮೋಕ್ಷ ; ಗ್ರಹಣಾಂತ ; ನಿಷ್ಕ್ರಮಣ. **Egréssion** ಇಗ್ರೆಷನ್ (ನಾ.) ಹೊರಕ್ಕೆ ಹೋಗುವುದು ; ಹೊರಬೀಳುವುದು ; ಹೊರಡುವುದು.

Égret ಎ(ಈ)ಗ್ರೆಟ್ (ನಾ.) ಒಂದು ಜಾತಿಯ ಬಿಳಿಯ ಹೆರನ್‌ಪಕ್ಷಿ. ಕೆಲವು ಜಾತಿಯ ಹೂವುಗಿಡಗಳ ಬೀಜಗಳಮೇಲಿನ ತುಪ್ಪುಳುಗೂದಲು.

Egýptian ಇಜಿಪ್ಷನ್ (ಗು., ನಾ.) ಈಜಿಪ್ಟಿನ(ವನು). [E. pound ಸುಮಾರು ೨೦॥ ಷಿಲಿಂಗು ಬೆಲೆಯ ಒಂದು ನಾಣ್ಯ (ಸಂಕ್ಷಿಪ್ತ : £ E ; ಉದಾ., £ E 10). E. printing-type ದಪ್ಪವಾದ ಕಾವುಳ್ಳ ಒಂದು ತರದ ಅಚ್ಚಿನ ಮೊಳೆ]. = Gipsy. **Egyptólogy** ಈಜಿಪ್ಟಾಲೊಜಿ (ನಾ.) ಈಜಿಪ್ಟಿನ ಪುರಾತನವಸ್ತುವಿದ್ಯೆ. **Egyptólogist** (ನಾ.) — ವಿದ್ಯಾವ್ಯಾಸಂಗಿ, ಪಂಡಿತ.

Eh ಏ, ಎಯ್ (ಭಾವ. ಅವ್ಯ.) (ಪ್ರಶ್ನೆ, ಆಶ್ಚರ್ಯ ಅಥವಾ ಸಮ್ಮತಿಕೇಳುವುದು — ಈ ಸಂದರ್ಭಗಳಲ್ಲಿ ಪ್ರಯೋಗ)

Eíder ಐಡರ್ (ನಾ.) ಉತ್ತರ ಶೀತವಲಯದ ಒಂದು ಜಾತಿಯ ಬಾತು. E.(-down) ಈ ಬಾತಿನ ಎದೆಯಮೇಲಿರುವ ಮೆತುವಾದ ತುಪ್ಪುಳು. E.-down ಈ ಬಾತಿನ ತುಪ್ಪುಳು ತುಂಬಿದ ರಜಾಯಿ.

Eídograph ಐಡೊಗ್ರಾಫ್ (ನಾ.) ರೇಖನಗಳನ್ನು ವಿಸ್ತರಿಸುವುದಕ್ಕಾಗಲಿ ಸಂಕುಚಿಸುವುದಕ್ಕಾಗಲಿ ಉಪಯೋಗಿಸುವ ಸಲಕರಣೆ : ನಕ್ಷಾ ವಿಸ್ತಾರಕ.

Eidólon ಐಡೋಲನ್ (ನಾ. ; ಬ. ವ. -ons, -la) ಭೂತ ; ಪ್ರೇತ ; ಪಿಶಾಚ. ಮಾಯಾ ಬಿಂಬ.

Eight ಎಯ್ಟ್ (ಗು., ನಾ.) ಎಂಟು ; ಅಷ್ಟ(ಕ) (೮, 8, VIII). (ಸ್ಕೇಟಿಂಗ್ ಆಟ) ಒಂದನ್ನೊಂದು ಒತ್ತಿಕೊಂಡಿರುವ ಎರಡು ವೃತ್ತಗಳ ಆಕೃತಿ. ದೋಣಿ ನಡಸುವಲ್ಲಿ ಎಂಟು ಮಂದಿ ಚಾಲಕರು. The Eights ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ಜಿನಲ್ಲಿ ಎಂಟೆಂಟು ಮಂದಿ ಚಾಲಕರು ಆಡುವ ದೋಣಿಪಂದ್ಯಗಳು. **Eighth** ಎಯ್ಟ್ತ್ (ಗು., ನಾ.) ಎಂಟನೆಯ(ದು, ವನು, ವಳು). **Eíghthly** (ಕ್ರಿ. ವಿ.) ; **Eighteén** ಎಯ್ಟೀನ್ (ಗು., ನಾ.) ಹದಿನೆಂಟು (೧೮, 18, XVIII). **Eighteénmo** ಅಷ್ಟಾದಶ ಪತ್ರಿ ; ೧೮ ಹಾಳೆಗಳಾಗಿ ಅಥವಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೩೭ ಪುಟಗಳಾಗಿ ಮಡಿಸಿದ ದೊಡ್ಡ ಕಾಗದದ ಹಾಳೆ. **Eighteénth** (ಗು., ನಾ.) ಹದಿನೆಂಟನೆಯ(ದು, ವನು, ವಳು). **Eíghty** ಎಯ್ಟಿ (ಗು., ನಾ.) ಎಂಬತ್ತು (ಲಂ, 80, LXXX). **Eíghtieth** (ಗು., ನಾ.)

Eirénicon ಐರೀನಿಕಾನ್ (ನಾ.) ಸಂಧಿ ಪ್ರಸ್ತಾವ.

Eistéddfod ಎಯ್‌ಸ್ಟೆದ್‌ವೊಡ್ (ನಾ.) ವೆಲ್ಷ್ ಕವಿಪರಿಷತ್ತು.

Eíther ಈದರ್, ಐದರ್ (ಗು., ಸ. ನಾ., ಕ್ರಿ. ವಿ., ಸಂ. ಅವ್ಯ.) ಎರಡರಲ್ಲಿ ಪ್ರತಿಯೊಂದೂ ; ಎರಡೂ (At e. end was a lamp ಪ್ರತಿ ಕೊನೆಯಲ್ಲಿಯೂ ಒಂದು ದೀಪವಿದ್ದಿತು. E. is tenable ಎರಡೂ ಅಂಗೀಕರಿಸತಕ್ಕದ್ದೇ, ಪ್ರತಿಪಾದ್ಯವೇ). ಎರಡರಲ್ಲಿ ಯಾವುವಾದರೂ ಒಂದು ; ಇಬ್ಬರಲ್ಲಿ ಯಾರಾದರೂ ಒಬ್ಬರು (Put the lamp at e. end ದೀಪವನ್ನು ಯಾವ ಕೊನೆಯಲ್ಲಾಗಲಿ ಇಡು. E. of you can go ನಿಮ್ಮಲ್ಲಿ ಯಾರೊಬ್ಬರಾದರೂ ಹೋಗಬಹುದು). (ಕ್ರಿ. ವಿ. ಅಥವಾ ಸಂ. ಅವ್ಯ.) He is e. drunk or mad ಅವನು ಕುಡಿದಿದ್ದಾನೆ, ಇಲ್ಲ, ಹುಚ್ಚನಾಗಿದ್ದಾನೆ. E. come in or go out ಬಂದರೆ ಒಳಕ್ಕೆ ಬಾ, ಇಲ್ಲದಿದ್ದರೆ ಹೊರಕ್ಕೆ ಹೋಗು. If you do not go, I shall not e. ನೀನು ಹೋಗದಿದ್ದರೆ ನಾನೂ ಹೋಗುವುದಿಲ್ಲ.

Ejáculate ಇಜ್ಯಾಕ್ಯುಲೇಟ್ (ಕ್ರಿ. ಸಕ.) ಫಕ್ಕನೆ ನುಡಿ, ಹೇಳು. ದೇಹದಿಂದ (ದ್ರವ, ಮೊ. ನ್ನು) ಉಚ್ಚು, ಚಿಮ್ಮು, ಚೆಲ್ಲು ; ಹೊರ ತಳ್ಳು. **Ejaculátion** (ನಾ.) ; **Ejáculatory** — ಲಟರಿ (ಗು.)

Ejéct ಇಜೆಕ್ಟ್ (ಕ್ರಿ. ಸಕ.) (ಒಂದು ಸ್ಥಳದಿಂದ, ಅಧಿಕಾರದಿಂದ, ಆಸ್ತಿಯಿಂದ) ಓಡಿಸಿಬಿಡು, ಅಟ್ಟಿಬಿಡು, ಹೊರಡಿಸಿಬಿಡು, ತಳ್ಳಿಬಿಡು, ದಬ್ಬು ; ಹೊರ ದೂಡು ; ಉಚ್ಚಾಟನೆ ಮಾಡು ; ಚಿಮ್ಮು ; ಹೊರಸೂಸು; ವಿಸರ್ಜಿಸು. **Ejéction** (ನಾ.) ; **Ejéctive** (ಗು.) ಅಟ್ಟಿಬಿಡುವ. ಊಹನೆಯ ; ಕಲ್ಪನೆಯ. **Ejéctment** (ನಾ.) (ನ್ಯಾ. ಶಾ.) (ಒಬ್ಬನನ್ನು ಅವನ ಹಿಡುವಳಿಯಿಂದ) ಹೊರಡಿಸುವುದು, ಉಚ್ಚಾಟನೆ; (ಒಂದು ಸ್ಥಳದಿಂದ, ಸ್ಥಾನದಿಂದ, ಅಧಿಕಾರದಿಂದ, ಆಸ್ತಿಯಿಂದ) ಅಟ್ಟಿಬಿಡುವುದು (=Ejection). **Ejéctor** (ನಾ.)

Éject ಈಜೆಕ್ಟ್ (ನಾ.) ಊಹಿತ ವಿಷಯ ; ಕಲ್ಪನೆ (ಪ್ರತ್ಯಕ್ಷವಾದದ್ದಾಗಲಿ, ನಮ್ಮ ಅರಿವಿಗೆ ಗೋಚರವಾಗತಕ್ಕ ವಿಷಯವಾಗಲಿ, ಅಲ್ಲ)

Eke[1] ಈಕ್ (ಕ್ರಿ. ಸಕ.) [E. out (ಸಾಲದಿರುವ ವರಮಾನಕ್ಕೆ) ಪೂರಣ ಮಾಡು, ಭರ್ತಿ ಮಾಡು]. (ಅನುಚಿತ ಪ್ರಯೋಗ) ಜೀವನ ನಡಸು ; ಹೊಟ್ಟೆ ಹೊರೆ.

Eke[2] ಈಕ್ (ಕ್ರಿ. ವಿ.) (ಪ್ರಾಚೀ. ಪ್ರ.) ಮತ್ತೂ ; ಕೂಡ ; ಸಹ ; ಮೇಲಾಗಿ ; ಅಲ್ಲದೆ.

Ékka ಎಕಾ (ನಾ.) (ಆಂ. ಇಂ.) (ಇಂಡಿಯದ) ಒಂಟಿಕುದುರೆಯ (ಎತ್ತಿನ) ಸಣ್ಣ ಗಾಡಿ ; ಎಕ್ಕ.

Eláborate ಇಲ್ಯಾಬೊರೆಟ್ (ಗು.), — ರೇಟ್ (ಕ್ರಿ. ಸಕ.) ಜೋಕೆಯಿಂದ, ಬಹಳ ವಿವರವಾಗಿ, ಪರ್ಯಾಲೋಚಿಸಿ ಮಾಡಿದ ; ಅತ್ಯುತ್ತಮವಾಗಿ ಪರಿಷ್ಕರಿಸಿದ, ನಯಪಡಿಸಿದ ; ವಿಸ್ತಾರವಾದ; ವಿಶದವಾದ. (ಕ್ರಿ.) ಕಷ್ಟಪಟ್ಟು, ಪ್ರಯತ್ನಪಟ್ಟು, ಮಾಡು ; ಉಂಟುಮಾಡು. (ಹೊಸ ಕಲ್ಪನೆ, ವಾದಾಂಶ, ಮೊ. ನ್ನು) ವಿಸ್ತಾರವಾಗಿ ವಿವರಿಸು ; ವಿವರಣೆ ಮಾಡು. (ಪ್ರಕೃತಿಸನ್ನಿವೇಶಗಳ ವಿಷಯದಲ್ಲಿ : ಪದಾರ್ಥ, ಮೊ. ನ್ನು). ಅದರ ಮೂಲಧಾತುಗಳಿಂದ ಅಥವಾ ಆಕರಗಳಿಂದ ರಚಿಸು, ಉತ್ಪತ್ತಿಮಾಡು. **Elaborátion** (ನಾ.) ; **Eláborative** — ರೇ(ರ)ಟಿವ್ (ಗು.) ; **Eláborately** — ರೆಟ್ಲಿ (ಕ್ರಿ. ವಿ.) ; **Eláborateness** (ನಾ.)

Elán (F) ಎಲಾನ್ (ನಾ.) ಲವಲವಿಕೆ ; ಉತ್ಸಾಹಶಕ್ತಿ ; ತವಕ ; ಸಂಭ್ರಮ ; ಒತ್ತರದ ನುಗ್ಗಾಟ ; ಜೋರಿನಿಂದ ನುಗ್ಗುವುದು.

Elápse ಇಲ್ಯಾಪ್ಸ್ (ಕ್ರಿ. ಅಕ.) (ಕಾಲ) ಕಳೆದುಹೋಗು, ಹರಿದುಹೋಗು.

Elástic ಇಲ್ಯಾಸ್ಟಿಕ್ (ಗು., ನಾ.) (ಘನ, ದ್ರವ, ಅನಿಲ, — ವಸ್ತುಗಳು) ಸಂಕೋಚನ, ವಿಸ್ತರಣ, ರೂಪವಿಕೃತಿ — ಇವುಗಳಿಂದ ಬಿಡುಗಡೆಯಾದೊಡನೆಯೇ ತಮ್ಮ ಸಹಜವಾದ ಗಾತ್ರ, ಆಕಾರ, ರೂಪು — ಇವನ್ನು ಥಟ್ಟನೆ ಮರಳಿ ಹೊಂದುವ ; ಸ್ಥಿತಿಸ್ಥಾಪಕ ; ಎಗುರು ಗುಣವುಳ್ಳ. (ಮನುಷ್ಯರ ಅಥವಾ ಮನೋಭಾವಗಳ ವಿಷಯದಲ್ಲಿ) ಉಲ್ಲಾಸಶೀಲ. ಬಗ್ಗಿಸಲಾಗುವ ; ಹಿಗ್ಗಿಸಲಾಗುವ ; ಹೊಂದಿಸಲಾಗುವ (E. conscience ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವ ಆತ್ಮಸಾಕ್ಷಿ. E.-side boots, E.-sides ಗುಂಡಿಗಳಾಗಲಿ ಕಟ್ಟುದಾರಗಳಾಗಲಿ ಇಲ್ಲದೆ ಪಕ್ಕಗಳಲ್ಲಿ ವಿಸ್ತರಿಸಲಾಗುವ, ಬರೆನೆಯ್ಗೆಯ, ೧೯ನೆಯ ಶತಮಾನದ ಪರಂಗಿಜೋಡು, ಬೂಟ್ಸು). (ನಾ.) (ಸಾ., ಇಂಡಿಯಾ ರಬ್ಬರಿನ ಎಳೆಗಳನ್ನು ಸೇರಿಸಿ ಹೆಣೆದಿರುವ) ಉದ್ದಮಾಡಲಾಗುವ ದಾರ ಅಥವಾ ಹುರಿ : ಹಿಗ್ಗುದಾರ, — ಹುರಿ. **Elásticálly** (ಕ್ರಿ. ವಿ.) ; **Elastícity** ಎ(ಈ)ಲ್ಯಾಸ್ಟಿಸಿಟಿ (ನಾ.) ಸ್ಥಿತಿಸ್ಥಾಪಕತ್ವ. (ರೂಪ.) ಕುಗ್ಗನ್ನು ಪ್ರತಿಬಂಧಿಸುವ ಅಥವಾ ಪರಿಹರಿಸುವ ಶಕ್ತಿ ; ಪುನಶ್ಚೈತನ್ಯಶಕ್ತಿ ; ಉಲ್ಲಾಸಶೀಲತೆ. ಹೊಂದಿಕೊಂಡು ಹೋಗುವ ಗುಣ.

Eláte ಇಲೇಟ್ (ಕ್ರಿ. ಸಕ., ಗು.) (ಮು., ಭೂ. ಕೃ. ನಲ್ಲಿ) ಉತ್ತೇಜಿಸು ; ಉತ್ಸಾಹಿಸು ; ಹುರಿದುಂಬಿಸು ; ಉಬ್ಬಿಸು ; ಹಿಗ್ಗಿಸು. ಗರ್ವಗೊಳಿಸು. (ಗು.) ಉತ್ಸಾಹದಿಂದಿರುವ ; ಉಬ್ಬಿದ ; ಹಿಗ್ಗಿದ ; ಗರ್ವದಿಂದಿರುವ. **Elátion** (ನಾ.) ಉತ್ಸಾಹ ; ಸಡಗರ ; ಸಂಭ್ರಮ ; ಹಿಗ್ಗು ; ಬೀಗು ; ಗರ್ವ.

Élbow ಎಲ್ಬೋ (ನಾ.) ಮೊಣಕೈ ; ಮೊಳಕೈ ; ಮೊಣಕೈ ಆಕಾರದ ಬಾಗು ಅಥವಾ ಮೂಲೆ. At one's e. ಪಕ್ಕದಲ್ಲೇ ; ಬಳಿಯಲ್ಲೇ ; ಹತ್ತಿರದಲ್ಲೇ. Up to the elbows (ಒಂದು ಕಾರ್ಯದಲ್ಲಿ) ಪೂರ್ತಿಯಾಗಿ ಮುಳುಗಿ, ಮಗ್ನನಾಗಿ. Out at elbows (ಅಂಗಿ) ತೋಳು ಹರಿದ, ಹರುಕರಾದ ; (ಮನುಷ್ಯ) ದರಿದ್ರ, ಬಡವ. **E.-grease** ಜೋರಾಗಿ ಉಜ್ಜಿ ಮೆರುಗುಕೊಡುವ ಕೆಲಸ ; ಕಷ್ಟ ಕೆಲಸ. **E.-room** ಬೇಕಾದಷ್ಟು ಸ್ಥಳ, ಅವಕಾಶ.

Élbow (ಕ್ರಿ.) (ಮೊಣಕೈಯಿಂದ) ನೂಕು, ತಳ್ಳು ; ತಳ್ಳಿಕೊಂಡು ಒಳನುಗ್ಗು.

Élchee ಎಲ್ಚಿ (ನಾ.) ರಾಯಭಾರಿ ; ನಿಯೋಗಿ.

Eld ಎಲ್ಡ್ (ನಾ.) (ಪ್ರಾಚೀ. ಪ್ರ., ಕಾವ್ಯ, ಪ್ರಾಂತ ಪ್ರಯೋಗ) ಮುದಿತನ ; ಮುಪ್ಪು ; ವಾರ್ಧಕ್ಯ. ಹಿಂದಿನ ಕಾಲ ; ಪೂರ್ವ, ಪುರಾತನ, — ಕಾಲ.

Élder[1] ಎಲ್ಡರ್ (ಗು., ನಾ.) (ಸಂಬಂಧಿಗಳಲ್ಲಿ ಇಬ್ಬರು ನಿರ್ದಿಷ್ಟವ್ಯಕ್ತಿಗಳಲ್ಲಿ) ದೊಡ್ಡವನು, ಹಿರಿಯ, ಜ್ಯೇಷ್ಠ (His e. brother ಅವನ ಅಣ್ಣ. Which is the e. ಹಿರಿಯವನು ಯಾರು ?). (ಇಸ್ಪೀಟಾಟ : E. hand ಮೊದಲ ಆಟಗಾರ). (ಬ. ವ. ದಲ್ಲಿ) ಹೆಚ್ಚು ವಯಸ್ಸಿನವರು ; ಹಿರಿಯರು ; ದೊಡ್ಡವರು ; ವೃದ್ಧರು. ವಯಸ್ಸಿನಲ್ಲಿ ದೊಡ್ಡವನು ; ವೃದ್ಧ ; ವಯೋವೃದ್ಧ. ಮಂತ್ರಾಲೋಚನ ಸಭೆಯ ಸದಸ್ಯ. ಆದ್ಯ ಕ್ರೈಸ್ತಮತದಲ್ಲಿ ಮತ್ತು ಕೆಲವು ಪ್ರಾಟೆಸ್ಟಂಟ್ ಮತಗಳಲ್ಲಿ, ಒಬ್ಬ (ಗೊತ್ತಾದ) ಅಧಿಕಾರಿ : ಮಠದ ಹಿರಿಯ. **Éldership** (ನಾ.) ಹಿರಿಯತನ. ಕ್ರೈಸ್ತಮತದಲ್ಲಿ ಹಿರಿಯನ ಅಧಿಕಾರ. ಹಿರಿಯರ ಸಮುದಾಯ. **Élderly** (ಗು.) ವಯಸ್ಸಾದ; ವೃದ್ಧ. **Éldest** (ಗು.) (ಮಗ, ಮಗಳು, ಮೊ. ರಲ್ಲಿ) ಮೊದಲು ಹುಟ್ಟಿದ, ಇರುವವರಲ್ಲಿ ಹೆಚ್ಚು ವಯಸ್ಸಿನ ; ಕಡು, ತೀರ, — ಹಿರಿಯ ; ಸರ್ವಜ್ಯೇಷ್ಠ.

Élder[2] ಎಲ್ಡರ್ (ನಾ.) ಬಿಳಿಯ ಹೂವು ಬಿಡುವ ಒಂದು ಜಾತಿಯ ಕುರುಚಲು ಗಿಡ. E.(-berry) wine ಇದರ ಹಣ್ಣಿನಿಂದ ಮಾಡಿದ ಮದ್ಯ.

El Doràdo ಎಲ್ ಡೊರಾಡೊ (ನಾ.) ಚಿನ್ನ ಹೇರಳವಾಗಿರುವ ಕಾಲ್ಪನಿಕ ದೇಶ ; ಚಿನ್ನದ ನಾಡು ; ಹೊನ್ನಾಡು ; ಸುವರ್ಣ ಭೂಮಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Éldritch ಎಲ್(ಡ್)ರಿಚ್ (ಗು.) ಘೋರ ; ಭಯಂಕರ.

Eléct ಇಲೆಕ್ಟ್ (ಗು., ಕ್ರಿ. ಸಕ.) ಆಯ್ದ ; ಆರಿಸಿದ ; ಚುನಾಯಿಸಿದ ; (ಉತ್ತಮವೆಂದು) ಆಯ್ದುಕೊಂಡ ; ಉತ್ತಮವಾದ. (ದೇವ. ಶಾ.) ದೇವರು ಆರಿಸಿದ (The e.) ; ಅಧಿಕಾರ, ಮೊ. ಕ್ಕೆ ಆಯ್ದ, ಚುನಾಯಿಸಿದ (ಆದರೆ ಇನ್ನೂ ಅಧಿಕಾರ ವಹಿಸದ) (Bride e. ಗೊತ್ತಾದ, ನಿಶ್ಚಿತವಾದ, —ಹೆಣ್ಣು, ವಧು). (ಕ್ರಿ.) ಆರಿಸು ; ಆಯ್ದುಕೊ ; (ಒಬ್ಬನನ್ನು, ವೋಟಿನ ಮೂಲಕ) ಚುನಾಯಿಸು (E. a magistrate. E. him to the magistracy. E. him (to be) magistrate). (ದೇವ. ಶಾ., ದೇವರ ವಿಷಯದಲ್ಲಿ : ವ್ಯಕ್ತಿಗಳಲ್ಲಿ ಕೆಲವರನ್ನು ಬಿಟ್ಟು ಮತ್ತೆ ಕೆಲವರನ್ನು) ಉದ್ಧರಣಕ್ಕಾಗಿ, ಮೋಕ್ಷಕ್ಕಾಗಿ, ಆರಿಸು. **Eléction** (ನಾ.) ಆಯುವುದು ; ಆರಿಸುವುದು ; ಆಯ್ಕೆ ; ಚುನಾವಣೆ (ಮು., ವೋಟಿನ ಮೂಲಕ) [General e. (ಮು., ಪಾರ್ಲಿಮೆಂಟಿನ ಪ್ರಜಾ ಪ್ರತಿನಿಧಿಗಳನ್ನು) ದೇಶದಲ್ಲೆಲ್ಲ ಚುನಾಯಿಸುವುದು : ಸಾಧಾರಣ ಚುನಾವಣೆ. By-e. ಖಾಲಿಬಿದ್ದ ಸ್ಥಳವನ್ನು ಭರ್ತಿ ಮಾಡುವುದಕ್ಕಾಗಿ ಮಾಡುವ ಚುನಾವಣೆ : ಉಪ ಚುನಾವಣೆ]. (ದೇವ. ಶಾ.) ದೇವರು ಮೋಕ್ಷಕ್ಕೆ ಆರಿಸುವುದು. **Electioneér** ಇಲೆಕ್ಷನೀಯರ್ (ಕ್ರಿ. ಅಕ., ನಾ.) ರಾಜಕೀಯ ಚುನಾವಣೆಯಲ್ಲಿ ಒಬ್ಬನಿಗಾಗಿ, ಒಂದು ಪಕ್ಷಕ್ಕಾಗಿ, ಪ್ರಚಾರ ನಡಸು, ಪರಿಶ್ರಮಿಸು. (ನಾ.) — ವವನು ; ಚುನಾವಣಾ ಪ್ರಚಾರಕ. **Eléctive** (ಗು.) (ಅಧಿಕಾರಿ, ಅಧಿಕಾರ, ವಿಧಾಯಕ ಶಕ್ತಿ —ಇವುಗಳ ವಿಷಯದಲ್ಲಿ) ಚುನಾವಣೆಯಿಂದ ನಿಯಾಮಕವಾದ, ಭರ್ತಿಯಾದ, ಪಡೆದ. ಚುನಾಯಿಸುವ ಅಧಿಕಾರವುಳ್ಳ ; ಆಯ್ದ ; ಚುನಾಯಿಸಿದ. (ರ. ವಿ.) E. affinity ಕೆಲವು ಪದಾರ್ಥಗಳನ್ನು ಬಿಟ್ಟು ಮತ್ತೆ ಕೆಲವುಗಳೊಡನೆ ಸಂಯೋಗಹೊಂದುವ ಪ್ರವೃತ್ತಿ : ಆಯ್ಕೆಯ ಸಂಯೋಗ. **Eléctively** (ಕ್ರಿ. ವಿ.) ; **Eléctor** (ನಾ.) (ಮು., ಪಾರ್ಲಿಮೆಂಟಿನ ಸದಸ್ಯನನ್ನು) ಚುನಾಯಿಸುವ ಹಕ್ಕುಳ್ಳವನು ; ಚುನಾಯಕ. (ಚರಿತ್ರೆ) ಚಕ್ರವರ್ತಿಯನ್ನು ಚುನಾಯಿಸುವುದರಲ್ಲಿ ಭಾಗ ವಹಿಸುವ ಅಧಿಕಾರವುಳ್ಳ ಜರ್ಮನ್ ರಾಜ (ಕುಮಾರ). **Eléctoral** (ಗು.) ಚುನಾಯಕರ ; ಚುನಾಯಕರಿಂದ ಕೂಡಿದ ; ಚುನಾವಣೆಯ ಹಕ್ಕುಳ್ಳ. **Eléctorate** —ರೆಟ್ (ನಾ.) ಚುನಾಯಕ ಸಮುದಾಯ. ಜರ್ಮನ್ ಚುನಾಯಕ ಪ್ರಭುವಿನ ಪದವಿ, ರಾಜ್ಯ. **Eléctorship** (ನಾ.) ಚುನಾಯಕತನ. **Eléctress** (ನಾ.) ಚುನಾಯಕಿ. ಜರ್ಮನ್ ಚುನಾಯಕ ಪ್ರಭುವಿನ ಹೆಂಡತಿ.

Electrícity ಈ(ಎ)ಲೆಕ್ಟ್ರಿಸಿಟಿ (ನಾ.) ವಿದ್ಯುಚ್ಛಕ್ತಿ [Frictional e. ಘರ್ಷಣ ವಿದ್ಯುತ್ತು : (ಒಂದು ಕಾಯದ ಕಣಗಳಲ್ಲಿ, ಅಥವಾ ಅವುಗಳನ್ನು ಸುತ್ತುವರಿದಿರುವ ಆಕಾಶದಲ್ಲಿ, ಆ ಕಾಯದ ಘರ್ಷಣೆಯಿಂದ ಏರ್ಪಟ್ಟ ಒಂದು ವಿಶೇಷಸ್ಥಿತಿ). Galvanic e. ಪ್ರವಾಹ ವಿದ್ಯುತ್ತು ; ಗಾಲ್ವಾನಿ ವಿದ್ಯುತ್ತು (ರಾಸಾಯನಿಕ ಕ್ರಿಯೆಯಿಂದ ಹುಟ್ಟಿದುದು). Magnetic e. ಕಾಂತ ಜನಿತ ವಿದ್ಯುತ್ತು. Negative or resinous e. ಋಣ ಅಥವಾ ರಾಳ ವಿದ್ಯುತ್ತು. Positive or vitreous e. ಧನ ಅಥವಾ ಕಾಚ ವಿದ್ಯುತ್ತು. (ಈಗಿನ ವೈಜ್ಞಾನಿಕರ ಅಭಿಪ್ರಾಯದಲ್ಲಿ ಧನ ಋಣ ವಿದ್ಯುತ್ತುಗಳೆರಡೂ ಒಂದೇ ಶಕ್ತಿಯ ಬೇರೆಬೇರೆ ಸ್ಥಿತಿಗಳು ಅಥವಾ ಮಟ್ಟಗಳು). Thermal e. ಶಾಖ ಜನಿತ ವಿದ್ಯುತ್ತು]. ವಿದ್ಯುದ್ವಿಜ್ಞಾನ ; ವಿದ್ಯುಚ್ಛಾಸ್ತ್ರ ; ವಿದ್ಯುದ್ವಿದ್ಯೆ. **Eléctric** ಇಲೆಕ್ಟ್ರಿಕ್ (ಗು., ನಾ.) ವಿದ್ಯುತ್ತಿನ ; ವಿದ್ಯುತ್ತಿನಿಂದ ತುಂಬಿದ ; ವಿದ್ಯುಜ್ಜನಕ. (ನಾ.) ಘರ್ಷಣದಿಂದ ವಿದ್ಯುತ್ತನ್ನು ಪ್ರಚೋದಿಸಬಹುದಾದ ಪದಾರ್ಥ ; ವಿದ್ಯುದ್ವಸ್ತು. E. charge 'ಲೈಡನ್ ಜಾರ್' ಮೊ. ಗಳಲ್ಲಿ ಶೇಖರಿಸಿದ ವಿದ್ಯುತ್ತು : ಸಂಚಿತ ವಿದ್ಯುತ್ತು. E. blue ಉಕ್ಕು ನೀಲಿ ; ವಿದ್ಯುನ್ನೀಲ. E. chair (ವಿದ್ಯುತ್ತು ನುಗ್ಗಿ ಪ್ರಾಣಿಗಳನ್ನು ಕೊಲ್ಲುವಂತೆ ಅಳವಡಿಸಿರುವ) ವಿದ್ಯುದಾಸನ. E. eel ಮುಟ್ಟಿದರೆ ಧಕ್ಕೆ ಕೊಡಬಲ್ಲ ಹಾವುಮೀನು. E. light ವಿದ್ಯುದ್ದೀಪ. E. shock ಲೈಡನ್ ಜಾರ್, ಮೊ. ಗಳಿಂದ ವಿದ್ಯುತ್ತು ಥಟ್ಟನೆ ಹೊರಟು ದೇಹಕ್ಕೆ ನುಗ್ಗಿ ಕೊಡುವ ಧಕ್ಕೆ : ವಿದ್ಯುದ್ಧಕ್ಕೆ. E. storm ಭೂಗೋಳದ ವಿದ್ಯುತ್‌ಸ್ಥಿತಿಯ ಕ್ಷೋಭೆ. E. torch (ಒಳಗಿರುವ ನಿರ್ದ್ರವ ವಿದ್ಯುಜ್ಜನಕದ ಚೋದನೆಯಿಂದ ಬೆಳಗುವ) ವಿದ್ಯುತ್ತಿನ ಪಂಜು. **Eléctrical** (ಗು.) ವಿದ್ಯುತ್ತಿನ ; ವಿದ್ಯುತ್ತಿನ ಸಂಬಂಧವುಳ್ಳ. **Eléctrically** (ಕ್ರಿ. ವಿ.) ; **Electrícian** ಈ(ಎ)ಲೆಕ್ಟ್ರಿಷನ್ (ನಾ.) ವಿದ್ಯುಚ್ಛಾಸ್ತ್ರಜ್ಞ ; ವಿದ್ಯುಚ್ಛಿಲ್ಪಿ. **Electrificátion** ಇ — (ನಾ.) ವಿದ್ಯುತ್ ಪೂರಣ ; ವಿದ್ಯುತ್‌ಪೂರಣ ಸ್ಥಿತಿ. ಆವಿಯ ರೈಲುಮಾರ್ಗವನ್ನು ವಿದ್ಯುತ್ತಿನ ರೈಲುಮಾರ್ಗವಾಗಿ ಮಾರ್ಪಡಿಸುವುದು. **Eléctrify** (ಕ್ರಿ. ಸಕ.) ವಿದ್ಯುತ್‌ಪೂರಣ ಮಾಡು ; ವಿದ್ಯುತ್ತನ್ನು ಕೊಡು. (ಮನುಷ್ಯ, ಮೊ. ನ್ನು) ವಿದ್ಯುದಾಘಾತಕ್ಕೆ ಗುರಿಪಡಿಸು. (ರೈಲು ಮಾರ್ಗಗಳು, ವಾಹನ ಸಾಧನಗಳು, ಕೈಗಾರಿಕೆ, ಮೊ. ವನ್ನು) ವಿದ್ಯುಚ್ಚಾಲಿತಗಳನ್ನಾಗಿ ಮಾಡು. (ರೂಪ.) ವಿದ್ಯುದಾವೇಗವುಂಟು ಮಾಡು ; ತೇಜು ಮಾಡು ; ಉದ್ರೇಕಿಸು. **Eléctrize** (ಕ್ರಿ. ಸಕ.) = Electrify. **Electrizátion** (ನಾ.) ; **Eléctrode** (ನಾ.) ಪ್ರವಾಹ ವಿದ್ಯುತ್ಕೋಶದ ಎರಡು ಧ್ರುವಗಳಲ್ಲೊಂದು : ವಿದ್ಯುದ್ಧ್ರುವ (ಋಣ ಧ್ರುವ, ಧನ ಧ್ರುವ). **Electroliér** (ನಾ.) ವಿದ್ಯುದ್ದೀಪಗಳ ಗೊಂಚಲು. **Eléctron** ಇಲೆಕ್ಟ್ರಾನ್ (ನಾ.) (ಭೌ. ವಿ., ರ. ವಿ.) ಒಂದು ಪರಮಾಣುವಿಗೆ ಸಂಬಂಧಿಸಿದ ಋಣವಿದ್ಯುತ್ ಸಂಚಯದಲ್ಲಿಯ ಅವಿಭಾಜ್ಯ ವಿದ್ಯುದಂಶ, ವಿದ್ಯುನ್ಮಾನ (ಈ ವಿದ್ಯುನ್ಮಾನಗಳು ಪ್ರತಿ ಮೂಲಧಾತುವಿಗೂ ಒಂದೊಂದು ಗೊತ್ತಾದ ಸಂಖ್ಯೆಯುಳ್ಳವಾಗಿ ಪ್ರತಿ ಪರಮಾಣುವಿನ ಮಧ್ಯಸ್ಥವಾದ ಧನ ಆಧಾರಬಿಂದುವಿನ ಸುತ್ತಲೂ ಸುತ್ತಾಡುತ್ತಿರುವುವೆಂಬುದು ವೈಜ್ಞಾನಿಕರ ಮತ). **Electrónic** (ಗು.)

Eléctro- ಇಲೆಕ್ಟ್ರೊ— (ಸ. ಪೂ. ಪ.) ವಿದ್ಯುತ್—. **-bath** ವಿದ್ಯುತ್ತಿನ ಮೂಲಕ ಒಂದು ವಸ್ತುವಿಗೆ ಮುಲಾಮುಮಾಡಲು, ತಕ್ಕ (ಲೋಹ) ಲವಣವನ್ನು ಲೀನಮಾಡಿಕೊಂಡಿರುವ ದ್ರವ : ವಿದ್ಯುದ್ದ್ರಾವಣ. **-biology** ಜೀವಿಗಳ ವಿದ್ಯುಚ್ಚರ್ಯೆಯ ವಿಷಯವಾದ ಶಾಸ್ತ್ರ : ವಿದ್ಯುಜ್ಜೀವ ಶಾಸ್ತ್ರ. **-chemistry** ವಿದ್ಯುದ್ರಸಾಯನ ಶಾಸ್ತ್ರ. **-cute** (ಕ್ರಿ. ಸಕ.) ವಿದ್ಯುನ್ಮರಣ ವಿಧಿಸು ; ವಿದ್ಯುತ್ತಿನಿಂದ ಕೊಲ್ಲು. **-cution** (ಮರಣ ದಂಡನೆಯಾಗಿ) ವಿದ್ಯುತ್ತಿನಿಂದ ಕೊಲ್ಲುವುದು : ವಿದ್ಯುನ್ಮರಣ (ದಂಡನೆ). **-dynamics** ವಿದ್ಯುದ್ಗತಿ ಶಾಸ್ತ್ರ. **-engraving** ವಿದ್ಯುದ್ರೇಖನ. **-graph** ವಿದ್ಯುತ್‌ಸ್ಥಿತಿಯನ್ನು (ರೇಖನದ ಮೂಲಕ) ಸೂಚಿಸುವ ಸಲಕರಣೆ : ವಿದ್ಯುತ್‌ಸ್ಥಿತಿ ಲೇಖಕ. **-kinetics** ವಿದ್ಯುಚ್ಚಲನ ಶಾಸ್ತ್ರ. **-logy** ವಿದ್ಯುಚ್ಛಾಸ್ತ್ರ. **-lyse** ವಿದ್ಯುತ್ಕಾರ್ಯದಿಂದ ವಿಘಟನೆ ಮಾಡು : ವಿದ್ಯುದ್ವಿಶ್ಲೇಷಣ ಮಾಡು. **-lysis** ವಿದ್ಯುತ್ಕಾರ್ಯದಿಂದ ರಾಸಾಯನಿಕ ವಿಭೇದನ : ವಿದ್ಯುದ್ರಸ ವಿಭಜನ (ಶಾಸ್ತ್ರ). (ಶಸ್ತ್ರ ವೈದ್ಯ) ವಿದ್ಯುತ್ತಿನ ಮೂಲಕ ದೇಹದಲ್ಲಿಯ ಗಂತಿಗಳನ್ನೂ ಅಶ್ಮರಿಗಳನ್ನೂ ಕರಗಿಸುವುದು. **-lyte** ವಿದ್ಯುತ್ಕಾರ್ಯದಿಂದ ವಿಘಟಿತವಾದ ಪದಾರ್ಥ : ವಿದ್ಯುದ್ವಿಶ್ಲೇಷ್ಯ. **-magnet** (ಮೆತು ಕಬ್ಬಿಣದ ಸರಳಿನ ಸುತ್ತಲೂ ಸುತ್ತಿದ ಆಚ್ಛಾದಿತ ತಂತಿಯ ಸುರುಳಿಯ ಮೂಲಕ ವಿದ್ಯುತ್ತನ್ನು ಹರಿಸುವುದರಿಂದಾದ) ವಿದ್ಯುತ್ಕಾಂತ. **-magnetism** ವಿದ್ಯುತ್ ಪ್ರವಾಹದಿಂದುಂಟುಮಾಡಿದ ಕಾಂತ ಶಕ್ತಿ : ವಿದ್ಯುತ್ಕಾಂತತೆ. **-meter** ವಿದ್ಯುಚ್ಛಕ್ತಿಯನ್ನಳೆಯುವ ಸಲಕರಣೆ : ವಿದ್ಯುನ್ಮಾಪಕ. **-motion** ಪ್ರವಾಹ ವಿದ್ಯುಚ್ಚಲನೆ ; ವಿದ್ಯುತ್ಪ್ರವಾಹದಿಂದುಂಟಾದ ಯಾಂತ್ರಿಕ ಚಲನೆ. **-motive** (ಗು., ನಾ.) ವಿದ್ಯುಚ್ಚಲನೆಯ ; ವಿದ್ಯುತ್ಪ್ರವಾಹ ಪ್ರಚೋದಕ. ವಿದ್ಯುಚ್ಚಾಲಿತ ಸಾಗು ಯಂತ್ರ. **-motor** ವಿದ್ಯುತ್ತನ್ನು ಚಾಲಕ ಶಕ್ತಿಯಾಗಿ ಉಪಯೋಗಿಸುವ ಯಂತ್ರ : ವಿದ್ಯುಚ್ಚಾಲಕ. **-negative** ಋಣ ವಿದ್ಯುತ್ತಿನ. **-pathy** ವಿದ್ಯುತ್ತಿನಿಂದ ರೋಗಗಳಿಗೆ ಚಿಕಿತ್ಸೆಮಾಡುವುದು : ವಿದ್ಯುಚ್ಚಿಕಿತ್ಸೆ. **-phore, -phorus** ಪ್ರತ್ಯಕ್ಷ ಸಂಪರ್ಕದಿಂದಲ್ಲದೆ ಪ್ರೇರಣದಿಂದ ಸ್ಥಾಯೀ ವಿದ್ಯುತ್ತನ್ನು ಜನಿಯಿಸುವ ಸಲಕರಣೆ. **-plate** (ಕ್ರಿ. ಸಕ.) ವಿದ್ಯುದ್ರಾಸಾಯನಿಕ ವಿಭಜನದ ಮೂಲಕ ಒಂದು ವಸ್ತುವಿಗೆ ಬೆಳ್ಳಿ, ಮೊ. ಮುಲಾಮು ಮಾಡು : ವಿದ್ಯುಲ್ಲೇಪನ ಮಾಡು. (ನಾ.) ವಿದ್ಯುಲ್ಲೇಪಿತ ವಸ್ತು. **-positive** ಧನ ವಿದ್ಯುತ್ತಿನ. **-scope** ವಿದ್ಯುತ್ತಿನ ಸನ್ನಿಧಿಯನ್ನೂ ಅದರ ಜಾತಿಯನ್ನೂ ನಿರ್ದೇಶಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಲಕರಣೆ : ವಿದ್ಯುದ್ದರ್ಶಕ. **-statics** ಸ್ಥಾಯಿಾ ವಿದ್ಯುಚ್ಛಾಸ್ತ್ರ. **-therapy** ವಿದ್ಯುಚ್ಚಿಕಿತ್ಸೆ. **-therapist** ವಿದ್ಯುಚ್ಚಿಕಿತ್ಸಕ. **-thermal** ವಿದ್ಯುಚ್ಛಾಖದ. **-tonus** ಪ್ರವಾಹವಿದ್ಯುತ್ತಿನ ಪರಿಣಾಮದಿಂದಾದ ನರದ ಸ್ಥಿತಿ. **-type** (ನಾ.) ಒಂದು ಅಚ್ಚಿನಮೇಲೆ ಪ್ರವಾಹವಿದ್ಯುತ್ತಿನ ಮೂಲಕ ತಾಮ್ರವನ್ನು (ಕಣ ಕಣವಾಗಿ) ನಿಕ್ಷೇಪಿಸಿ ತಯಾರಿಸಿದ ಮಾದರಿ, ಪ್ರತಿ : ವಿದ್ಯುತ್ಪ್ರತಿ ; (ಕ್ರಿ. ಸಕ.) ಈ ರೀತಿ ಪ್ರತಿತಯಾರಿಸು.

Eléctrum ಇಲೆಕ್ಟ್ರಂ (ನಾ.) (ಪೂರ್ವಿಕರು ಉಪಯೋಗಿಸುತ್ತಿದ್ದ) ಚಿನ್ನ ಮತ್ತು ಬೆಳ್ಳಿಯ ಒಂದು ಮಿಶ್ರಲೋಹ. ಬೆಳ್ಳಿ ಸೇರಿದ ಚಿನ್ನದ ಅದುರು.

Eléctuary ಇಲೆಕ್ಚ್ಯುಅರಿ (ನಾ.) ಜೇನುತುಪ್ಪದೊಡನೆಯೋ ಷರಬತ್ತಿನೊಡನೆಯೋ ಕಲಸಿದ (ಔಷಧದ) ಚೂರ್ಣ, ಭಸ್ಮ, ಮೊ. ವು ; ಲೇಹ್ಯ.

Eleemósynary ಎಲಿಈಮಾಸಿನರಿ (ಗು.) ಭಿಕ್ಷದ ; ತಿರುಪೆಯ ; ಭಿಕ್ಷವನ್ನವಲಂಬಿಸಿದ ; ಧರ್ಮದ ; ದಾನವಾಗಿ, ಉಚಿತವಾಗಿ, ಕೊಟ್ಟ ; ಧರ್ಮಾರ್ಥವಾದ.

Élegant ಎಲಿಗಂಟ್ (ಗು., ನಾ.) (ನಡೆ, ಶೈಲಿ, ಗ್ರಂಥಕಾರ, ನಡತೆ — ಇವುಗಳ ವಿಷಯದಲ್ಲಿ) ಲಲಿತ ; ಲಾವಣ್ಯದ ; ಮನೋಹರವಾದ ; ಅಂದವಾದ ; ಸೊಬಗುಳ್ಳ ; ನಾಜೂಕಾದ ; ನಯ ; ಸಂಸ್ಕೃತ. (ಜೀವನದ ರೀತಿ, ಮೊ.) ಉತ್ತಮ ಅಭಿರುಚಿಯ ; ವಿಲಾಸದ ; ರಸಿಕ. (ಗ್ರಾಮ್ಯ) ಅತ್ಯುತ್ತಮ. (ನಾ.) ಒಳ್ಳೆಯ ಅಭಿರುಚಿಯೂ ನೀಟುಗಾರಿಕೆಯೂ ಉಳ್ಳವನೆಂದು ತೋರ್ಪಡಿಸಿಕೊಳ್ಳುವವನು ; ಸೊಗಸುಗಾರ. **Élegance** — ಗನ್ಸ್ (ನಾ.) ಅಂದ ; ಚೆಂದ ; ಸೊಬಗು ; ಸೊಗಸು ; ನಯ ; ವಿರಾಸ ; ಲಾಲಿತ್ಯ ; ಲಾವಣ್ಯ. **Élegantly** (ಕ್ರಿ. ವಿ.)

Élegy ಎಲಿಜಿ (ನಾ.) ಅಳು ಹಾಡು ; ಅಳಲು ಹಾಡು ; ಶೋಕ ಗೀತೆ ; ವಿಲಾಪ ಗೀತೆ ; ಚರಮ ಗೀತೆ (ಅನೇಕ ಸಂದರ್ಭಗಳಲ್ಲಿ ಒಂದು ಗೊತ್ತಿಲ್ಲದೆ ಇತರ ಕವನಗಳಿಗೂ ಉಪಯೋಗಿಸುವುದುಂಟು). ಶೋಕ ಗೀತೆಯ ಛಂದಸ್ಸಿನಲ್ಲಿ ಬರೆದ ಕವಿತೆ, ಪದ್ಯ. **Elegíac** ಎಲಿಜೈಅ್ಯಕ್ (ಗು., ನಾ.) (ಛಂದಸ್ಸಿನ ವಿಷಯದಲ್ಲಿ) ಶೋಕ ಗೀತೆಗೆ ಒಪ್ಪುವ, ಉಚಿತವಾದ [E. Couplet (ಮು., ಗ್ರೀಕ್ ಮತ್ತು ಲ್ಯಾಟಿನ್ ಭಾಷೆಯ) ಪ್ರತಿ ಪಾದಕ್ಕೂ ೬ ಅಥವಾ ೫ ಭಗಣಗಳುಳ್ಳ, ಅಥವಾ ಅದಕ್ಕೆ ಸಮಾನವಾದ ಗಣಗಳುಳ್ಳ, ದ್ವಿಪದಿ : ಶೋಕ ದ್ವಿಪದಿ]. ಶೋಕಾತ್ಮಕ ; ದುಃಖದ ; ಗೋಳಿನ. (ನಾ., ಬ. ವ. ದಲ್ಲಿ) ಶೋಕ ಪದ್ಯಗಳು ; ಅಳಲು ಹಾಡುಗಳು. **Élegize** ಎಲಿಜೈಸ್ (ಕ್ರಿ.) ಶೋಕ ಗೀತೆ ರಚಿಸು ; ಶೋಕ ರಸದಲ್ಲಿ ಬರೆ.

Élement ಎಲಿಮೆಂಟ್ (ನಾ.) ಅಂಗ ಭಾಗ ; ಮೂಲಾಂಶ ; ಘಟಕಾಂಶ (Reduced to its elements ಅದರ ಘಟಕಾಂಶಗಳಾಗಿ ವಿಭಜಿಸಿದ. The elements of national wealth ರಾಷ್ಟ್ರ ಸಂಪತ್ತಿನ ಮೂಲಾಂಶಗಳು. Cant was a notable e. in his style ಅವನ ಶೈಲಿಯಲ್ಲಿ ಡಂಭವು ಪ್ರಮುಖಾಂಶವಾಗಿತ್ತು). (ರ. ವಿ.) ವಿಭಜನೆ ಮಾಡಲಾಗದ ದ್ರವ್ಯಗಳಲ್ಲೊಂದು : ಮೂಲ ಧಾತು. ಪಂಚ ಭೂತಗಳಲ್ಲೊಂದು [(ಪಾಶ್ಚಾತ್ಯರಲ್ಲಿ) The four elements ಭೂಮಿ, ನೀರು, ವಾಯು, ಬೆಂಕಿ]. ಒಂದು ಜೀವಿಯ ನೆಲೆಯಾದ ಅಥವಾ ವ್ಯಾಪ್ತಿಕ್ಷೇತ್ರವಾದ ಭೂತಗಳಲ್ಲೊಂದು ; (ರೂಪ.) (In, out of, his, e. ಅವನ ಸ್ವಾಭಾವಿಕ ಸನ್ನಿವೇಶದಲ್ಲಿ ; — ದ ಹೊರಗೆ). (ಬ. ವ. ದಲ್ಲಿ) ವಾತಾವರಣದ ಶಕ್ತಿಗಳು ; ಭೂತ ಶಕ್ತಿಗಳು : ಗಾಳಿ, ಮಳೆ, ಮೊ. ವು (War of the elements ಭೂತ ಶಕ್ತಿಗಳ ಘರ್ಷಣೆ, ಹೋರಾಟ). (ಬ. ವ. ದಲ್ಲಿ) (ಒಂದು ಶಾಸ್ತ್ರದ, ಕಲೆಯ) ಬಾಲ ಪಾಠಗಳು, ಮೂಲ ಪಾಠಗಳು [Euclid's Elements ಯೂಕ್ಲಿಡ್ಡಿನ ರೇಖಾ ಗಣಿತದ (ಜ್ಯಾಮಿತಿಯ) ಮೂಲ ಪಾಠಗಳು]. **Eleméntal** (ಗು., ನಾ.) (ಪಂಚ) ಭೂತಗಳ ; ಭೌತ ; ಪ್ರಕೃತಿಶಕ್ತಿಗಳ (E. worship ಪ್ರಕೃತಿಶಕ್ತಿಗಳ ಉಪಾಸನೆ). ಪ್ರಕೃತಿಶಕ್ತಿಗಳಿಗೆ ಹೋಲಿಸಬಹುದಾದ (E. grandeur ಪ್ರಕೃತಿ ವೈಭವ). ಸಂಯುಕ್ತವಾಗಿಲ್ಲದ ; ಅಸಂಯುಕ್ತ. ಅತ್ಯಾವಶ್ಯಕವಾದ ; ಅಗತ್ಯವಾದ. (ನಾ., ಥಿಯಾಸೊಫಿ) ಪೃಥಿವಿ, ವಾಯು, ಮೊ. ಗಳ ಅಧಿದೇವತೆ. **Eleméntary** (ಗು.) ಮೂಲ ರೂಪದ ; ಪ್ರಾಥಮಿಕ ; ಪೀಠಿಕಾ ರೂಪದ. (ರ. ವಿ.) ವಿಭಜಿಸಲಾಗದ ; ವಿಶ್ಲೇಷಿಸಲಾಗದ ; ಮೂಲಧಾತುವಾದ. **Eleméntarily** (ಕ್ರಿ. ವಿ.) ; **Eleméntariness** (ನಾ.)

Elénchus ಇಲೆಂಕಸ್ (ನಾ.) (ತರ್ಕ) ಖಂಡನ ; ನಿರಾಕರಣ. Socratic e. (ಸಣ್ಣ ಸಣ್ಣ ಪ್ರಶ್ನೋತ್ತರಗಳ ಮೂಲಕ ಸತ್ಯವನ್ನು ಹೊರಡಿಸುವ) ಸಾಕ್ರೆಟೀಸಿನ ವಾದಸರಣಿ. **Elénctic** (ಗು.) ಖಂಡನಾತ್ಮಕವಾದ ; ನಿರಸನದ ; ಪ್ರತಿಪ್ರಶ್ನೆಯ ; ಅಡ್ಡಪ್ರಶ್ನೆಯ ; ಪ್ರತಿಪ್ರಶ್ನೆ ಹಾಕುವ ಸ್ವಭಾವದ.

Élephant ಎಲಿಫಂಟ್ (ನಾ.) ಆನೆ ; ಗಜ (E. goad ಅಂಕುಶ). [White e. ಬಿಳಿಯಾನೆ ; (ರೂಪ.) (ಕಾಪಾಡಲು ಬಹಳ ವೆಚ್ಚಮಾಡಬೇಕಾದುದರಿಂದ) ಹೊರೆಹೆಚ್ಚಾದ ಆಸ್ತಿ]. ಕಾಗದದ ಒಂದು ಗೊತ್ತಾದ ಅಳತೆ (28″ × 23″ ; Double e. 40″ × 26½″). **Elephantíasis** ಎಲಿಫಂಟೈಅಸಿಸ್ (ನಾ.) ದೇಹಭಾಗದ ಚರ್ಮವು ಆನೆಯ ಚರ್ಮದಂತೆ ಬಹಳ ದಟ್ಟವಾಗಿ ಊದುವ ಒಂದು ಚರ್ಮರೋಗ : ಆನೆಕಾಲು ರೋಗ. **Elephántine** — ಫ್ಯಾಂಟೈ(ಟಿ)ನ್ (ಗು.) ಆನೆಗಳ (E. epoch ಭೂಮಿಯಮೇಲೆ ಬೃಹತ್ಕಾಯದ ಗಜಚರ್ಮಿಗಳು ವಿಶೇಷವಾಗಿದ್ದ ಯುಗ : ಗಜ ಯುಗ). ಒರಟೊರಟಾದ ; ಒಡ್ಡೊಡ್ಡಾದ ; ಅಸಾಧಾರಣವಾದ ; ಬೃಹತ್ಕಾಯದ ; ಬಹು ಭಾರಿಯಾದ (E. movements, humour, task ಆನೆಯ ನಡೆ ; ಕ್ಲಿಷ್ಟ ವಿನೋದ ; ಅಗಾಧ ಕಾರ್ಯ). **Elephántoid** — ಫ್ಯಾಂಟಾಯ್ಡ್ (ಗು.) ಆನೆಯಂಥ ; ಆನೆಯಂಥ ಮೃಗಗಳ. **Élephantry** (ನಾ.) ಗಜ ದಳ.

Eleusínian ಎಲ್ಯುಸಿನಿಯನ್ (ಗು.) E. mysteries ಅಟಿಕ ಪ್ರಾಂತದ ಎಲ್ಯುಸಿಸ್ ಎಂಬ ಸ್ಥಳದಲ್ಲಿ 'ಡೆಮಿಟರ್' ದೇವತೆಯ ಪ್ರೀತ್ಯರ್ಥವಾಗಿ ಆಚರಿಸುತ್ತಿದ್ದ ಮತಾಚಾರದ ಉತ್ಸವ ರಹಸ್ಯಗಳು.

Eleutherománia ಇಲ್ಯೂಥರೊಮೇನಿಯ (ನಾ.) ಸ್ವಾತಂತ್ರ್ಯ ಬೇಕೆಂಬ ಮದೋತ್ಸಾಹ ; ಸ್ವಾತಂತ್ರ್ಯೋನ್ಮಾದ.

Eleutherophýllous ಇಲ್ಯೂಥರೊಫಿಲಸ್ (ಗು.) ಪ್ರತ್ಯೇಕ ಪ್ರತ್ಯೇಕವಾಗಿರುವ ಎಲೆಗಳುಳ್ಳ : ಸ್ವತಂತ್ರ ಪರ್ಣಿ.

Élevate ಎಲಿವೇಟ್ (ಕ್ರಿ. ಸಕ.) ಮೇಲೆತ್ತು ; ಎತ್ತು ; ಎತ್ತಿ ಹಿಡಿ ; ಎತ್ತರಿಸು ; ಏರಿಸು. (ರೋ. ಕ್ಯಾ. ರ ಯೂಕರಿಸ್ಟ್ ವ್ರತದಲ್ಲಿಯ ಪವಿತ್ರ ರೊಟ್ಟಿಯನ್ನು ನಮಸ್ಕರಿಸುವುದಕ್ಕಾಗಿ) ಮೇಲಕ್ಕೆತ್ತಿ ಹಿಡಿ. (ಬಂದೂಕಿನ, ಫಿರಂಗಿಯ) ಅಕ್ಷವನ್ನು ಎತ್ತರಿಸು. (ಅಂತಸ್ತು, ದರ್ಜೆ, ಮೊ. ನ್ನು) ಮೇಲ್ಪಡಿಸು, ಹೆಚ್ಚಿಸು, ಉನ್ನತ ಮಾಡು. (ಉದ್ದೇಶಗಳನ್ನು, ಶೈಲಿಯನ್ನು) ಉತ್ತಮಗೊಳಿಸು, ಉತ್ಕರ್ಷಗೊಳಿಸು (ಮು., ಭೂ. ಕೃ. ನಲ್ಲಿ). (ಬಳ. ಮಾ.) ಸ್ವಲ್ಪ ಕುಡಿದ (ಭೂ. ಕೃ. ನಲ್ಲಿ). **Elevátion** (ನಾ.) ಮೇಲೆತ್ತುವುದು ; ಮೇಲೆತ್ತಲ್ಪಡುವುದು. (ಮು. ಫಿರಂಗಿ) ಕ್ಷಿತಿಜದೊಡನೆ ಮಾಡುವ ಕೋನ. (ಒಂದು ನಿರ್ದಿಷ್ಟ ಮಟ್ಟದಮೇಲೆ, ಮು., ಸಮುದ್ರಮಟ್ಟದ ಮೇಲೆ, ಇರುವ) ಎತ್ತರ, ಔನ್ನತ್ಯ. ಒಂದು ಲಂಬ ಸಮತಲದಮೇಲೆ ರೇಖಿಸಿದ ಚಾಚುನಕ್ಷೆ. ಮನೆ, ಮೊ. ಗಳ ಮುಂಭಾಗ, ಹಿಂಭಾಗ, ಪಕ್ಕಗಳು — ಇವನ್ನು ತೋರಿಸುವ ಚಪ್ಪಟೆಯ ರೇಖನ : ಉನ್ನತಿ ನಕ್ಷೆ. ಉನ್ನತಿ ; ವೈಭವ ; ಉಚ್ಛ್ರಾಯ ; ಉತ್ಕರ್ಷ ; ಘನತೆ ; ಮೇಲ್ಮೆ ; ಏರಿಕೆ. **Élevator** (ನಾ.) ಮೇಲೆತ್ತುವ ವ್ಯಕ್ತಿ, ವಸ್ತು. ಅಂಗ, ಮೊ. ನ್ನು ಮೇಲೆತ್ತುವ ಸ್ನಾಯು ; ಧಾನ್ಯ, ಮೊ. ನ್ನು ಮೇಲಕ್ಕೆತ್ತುವ ಯಂತ್ರ : ಮೇಲೆತ್ತಿಗೆ. **Élevatory** (ಗು.) ಮೇಲೆತ್ತುವ ; ಮೇಲೆತ್ತುವ ಪ್ರವೃತ್ತಿಯ (ರೂಪ. ಸಹ)

Eléven ಇಲೆವೆ(ವ್)ನ್ (ಗು. ನಾ.) ಹನ್ನೊಂದು (೧೧, 11, XI). An e. ಕ್ರಿಕೆಟ್, ಮೊ. ಆಟಗಳಲ್ಲಿ ಒಂದು ಪಕ್ಷದ ಹನ್ನೊಂದು ಮಂದಿ ಆಟಗಾರರು. The E. (ಜೂಡಸ್ ಎಂಬಾತನನ್ನು ಬಿಟ್ಟು) ಕ್ರಿಸ್ತನ (ಮಿಕ್ಕ) ಹನ್ನೊಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂದಿ ಶಿಷ್ಯರು. **Elévens** (ಪ್ರಾಂತ ಭಾಷೆ) ಉಪಾಹಾರ ; ಅವಸರ ದೂಟ. **Eléventh** (ಗು., ನಾ.) ಹನ್ನೊಂದನೆಯ(ದು, ವನು, ವಳು). The e. hour (Hour ನೋಡಿ)

Elf ಎಲ್ಫ್ (ನಾ. ; ಬ. ವ. Elves) (ಟ್ಯೂಟನ್ನರ ಪುರಾಣ) ಪ್ರಕೃತ್ಯತೀತ, ಅಪ್ರಾಕೃತ, ಸ್ವಭಾವಾತೀತ, — ವ್ಯಕ್ತಿ [ಶಾಕಿನಿ, ಬೇತಾಳ, ಮರುಳು (ಗ್ರಾಂ.)]. ಚೇಷ್ಟೆ ಮಾಡುವ, ಕೀಟಲೆ ಮಾಡುವ, ಪ್ರಾಣಿ ; ತುಂಟ ಮಗು. ಗುಜ್ಜಾರಿ ; ಗಿಡ್ಡ ; ಸಣ್ಣ ಪ್ರಾಣಿ ; ಚಿಳ್ಳೆ. **E.-bolt** ಚಕಮುಕಿ ಕಲ್ಲಿನ ಅಂಬುತಲೆ. **E.-lock** ಸಿಕ್ಕುಬಿದ್ದ, ಜಡೆಗಟ್ಟಿದ, ಕೂದಲು ; ಬೊಂತೆ. **E.-struck** ದೆವ್ವ, ಮೋಹಿನಿ, — ಹಿಡಿದ ; ಮೈದುಂಬಿದ. **Élfish** (ಗು.) ; **Élvish** (ಗು.) ; **Élfin** (ಗು., ನಾ.) ಗುಜ್ಜಾರಿ. ಮಗು.

Elícit ಇಲಿಸಿಟ್ (ಕ್ರಿ. ಸಕ.) (ಗೂಢವಾಗಿ, ಅವ್ಯಕ್ತವಾಗಿ, ಇರುವುದನ್ನು) ಹೊರ ಸೆಳೆ, ಹೊರದೆಗೆ (ಸಾ., ರೂಪಕದಲ್ಲಿ) ; (ಆಧಾರಗಳಿಂದ ತತ್ತ್ವಾಂಶ ಗಳನ್ನು, ಒಬ್ಬನಿಂದ ಒಪ್ಪಿಗೆ, ಉತ್ತರ, ಮೊ. ನ್ನು) ಹೊರಡಿಸು.

Elíde ಇಲೈಡ್ (ಕ್ರಿ. ಸಕ.) (ಸ್ವರವನ್ನು, ಅಕ್ಷರವನ್ನು) ಉಚ್ಚಾರಣೆಯಲ್ಲಿ ಬಿಟ್ಟುಬಿಡು, ತೇಲಿಸಿಬಿಡು. **Elísion** ಇಲಿಷನ್ (ನಾ.) — ವುದು ; ಅಕ್ಷರ ಲೋಪ ; (ಅಪೂರ್ವವಾಗಿ) ಪುಸ್ತಕ, ಮೊ. ಗಳಲ್ಲಿ ಗ್ರಂಥಭಾಗ ಗಳನ್ನು ಬಿಟ್ಟುಬಿಡುವುದು : ಗ್ರಂಥ ಲೋಪ ; ವಾಕ್ಯ ಲೋಪ.

Éligible ಎಲಿಜಿಬ್ಲ್ (ಗು.) (ಅಧಿಕಾರ, ಮೊ. ಕ್ಕೆ) ಆರಿಸಲು ತಕ್ಕ ; ಆಯ್ಕೆಗೆ ತಕ್ಕ ; ಆಯತಕ್ಕ ; ಚುನಾಯಿಸಲು ಅರ್ಹವಾದ. ಅಪೇಕ್ಷ ಣೀಯ ; ವರಣೀಯ ; ತಕ್ಕ ; ಉಚಿತ ; ಅರ್ಹ(ತೆಯುಳ್ಳ) ; ಯೋಗ್ಯ (ತೆಯುಳ್ಳ). **Eligibílity** (ನಾ.) ; **Éligibly** (ಕ್ರಿ. ವಿ.)

Elíminate ಇಲಿಮಿನೇಟ್ (ಕ್ರಿ. ಸಕ.) ತೆಗೆದುಹಾಕು ; ಕಳೆ(ದುಬಿಡು) ; ತಳ್ಳಿಬಿಡು ; ವರ್ಜಿಸು. (ಶ. ವಿ.) (ಅಂಗಭಾಗಗಳಿಂದ ಉಚ್ಛಿಷ್ಟ ಅಥವಾ ಉಪಯೋಗವಿಲ್ಲದ ಪದಾರ್ಥವನ್ನು) ಹೊರಡಿಸು, ವಿಸರ್ಜಿಸು. (ರ. ವಿ.) (ಸಂಯುಕ್ತ ಪದಾರ್ಥದಿಂದ ಒಂದು ಘಟಕಾಂಶವನ್ನು) ಹೊರ ಹಾಕು, ವಿಸರ್ಜಿಸು. (ಪ್ರಶ್ನಭಾಗ, ಮೊ. ನ್ನು) ಗಣನೆ ಮಾಡದಿರು, ಕಡೆಗಣಿಸು, ಬಿಟ್ಟುಬಿಡು. (ಬೀ. ಗ.) (ಒಂದು ಸಮೀಕರಣದ ಎರಡು ಕಡೆಗಳಿಂದಲೂ ಸಮಾನಾಂಕಗಳನ್ನು) ತೆಗೆದುಬಿಡು, ಹೊರಡಿಸಿಬಿಡು. (ಅನುಚಿತ ಪ್ರಯೋಗ) (ಒಂದು ಸಂಯುಕ್ತದಿಂದ ಉದ್ದಿಷ್ಟ ಘಟಕವನ್ನು) ಹೊರ ಸೆಳೆ, ಪ್ರತ್ಯೇಕಿಸು (ರೂಪ. ಸಹ). **Elíminable** (ಗು.) ; **Eliminátion** (ನಾ.)

Elísion. **Elide** ನೋಡಿ.

Elíte ಎಲ(ಲ)ಟ್ (ನಾ.) ಆಯ್ದ ಭಾಗ ; ಉತ್ಕೃಷ್ಟ ಭಾಗ ; ಸಾರ. ಪ್ರಮುಖರು ; ಉತ್ತಮರು ; ಗಣ್ಯರು. E. of the town ಊರಿನ ಗಣ್ಯರು.

Elíxir ಇಲಿಕ್ಸರ್ (ನಾ.) ಕೀಳು ಲೋಹಗಳನ್ನು ಚಿನ್ನವಾಗಿ ಮಾಡಬಲ್ಲ ರಸವಾದಿಯ ಸಾಮಗ್ರಿ : ಸಿದ್ಧ ರಸ. ಜೀವಮಾನವನ್ನು ಅಪರಿಮಿತ ವಾಗಿ ಮಾಡಬಲ್ಲ ಔಷಧ : ಸಂಜೀವಿನಿ. ದಿವ್ಯೌಷಧ ; ರಾಜೌಷಧ.

Elizabéthan ಇಲಿಸಬೀತನ್ (ಗು., ನಾ.) ಎಲಿಸಬೆತ್ ರಾಣಿಯ ಕಾಲ ದ(ವನು, ಲೇಖಕ, ಗ್ರಂಥಕರ್ತ)

Elk ಎಲ್ಕ್ (ನಾ.) ಉತ್ತರ ಯೂರೋಪ್ ಮತ್ತು ಉತ್ತರ ಅಮೆರಿಕದ ಪ್ರಾಂತಗಳಲ್ಲಿ ವಾಸವಾಗಿರುವ ಜಿಂಕೆಯ (ಚಿಗರಿಯ) ಜಾತಿಯ ಒಂದು ದೊಡ್ಡ ಮೃಗ : ಒಂದು ಜಾತಿಯ ಕಡವೆ. ಜಿಂಕೆ, ಸಾರಂಗ, ಮೊ. ಜಾತಿಗಳ ಮೃಗ ; 'ಎಲ್ಕ್'.

Ell ಎಲ್ (ನಾ.) ಉದ್ದದ ಒಂದು ಅಳತೆ (English e. = ೪೫ ಅಂಗುಲ ; ಈಗ ಆಳತೆಯಲ್ಲಿ ಇದು ಅರೂಢಿ). Give him an inch and he'll take an e. ಬೆರಳು ತೋರಿದರೆ ಹಸ್ತ ನುಂಗುತ್ತಾನೆ. ಇತ್ತಿತ್ತಬಾ ಎಂದರೆ ಇದ್ದದ್ದನ್ನೇ ಕಿತ್ತುಕೊಂಡ.

Élliman ಎಲಿಮನ್ (ನಾ.) ಕೀಲುಹಿಡಿತ, ಮೊ. ಕ್ಕೆ ಬಳಿದು ತಿಕ್ಕುವ ಒಂದು ಔಷಧದ್ರವ. (Elliman ಎಂಬಾತನ ತಯಾರಿ)

Ellípse[1] ಎಲಿಪ್ಸ್ (ನಾ.) ಅಂಡವೃತ್ತ ; ದೀರ್ಘವೃತ್ತ. ಒಂದು ಶಂಕು ವಿನ ಪಾರ್ಶ್ವಕ್ಕೂ ಅದರ ತಳಕ್ಕೂ ಇರುವ ಕೋನಕ್ಕಿಂತಲೂ ಕಡಮೆ ಯಾದ ಕೋನದಲ್ಲಿ ಶಂಕುವನ್ನು ಒಂದು ಸಮತಲ ಕ್ಷೇತ್ರವು ಕತ್ತರಿಸಿ ದರೆ ಉಂಟಾಗುವ ಆಕೃತಿ. = Ellipsis. **Ellípsoid** (ನಾ.) ಒಂದು ಅಕ್ಷವನ್ನನುಸರಿಸಿ ಮಾಡಿದ ಸಮತಲ ಕ್ಷೇತ್ರದ ಕತ್ತರಿಕೆಗಳು ಎಲ್ಲವೂ ಅಂಡವೃತ್ತಗಳಾಗಿಯೂ ಮತ್ತೊಂದು ಅಕ್ಷವನ್ನನುಸರಿಸಿ ಮಾಡಿದವುಗಳೆಲ್ಲವೂ ಅಂಡವೃತ್ತಗಳಾಗಿಯೊ ವೃತ್ತಗಳಾಗಿಯೊ ಏರ್ಪಡುವಂಥ ಘನಾಕೃತಿ : ಅಂಡಾಕೃತಿ. **Ellíptic(al)**[1] (ಗು.) ; **Ellíptically**[1] (ಕ್ರಿ. ವಿ.) ; **Elliptícity** (ನಾ.) ಅಂಡವೃತ್ತಾಕೃತಿ. (ಒಂದು ಗ್ರಹಪಥ, ಮೊ.) ವೃತ್ತಾಕಾರ ತಪ್ಪಿ ಆದ ಭ್ರಂಶ : ವೃತ್ತ ಚ್ಯುತಿ ; ಅಂಡ ವೃತ್ತತೆ. ಒಂದು ಗೋಳಕಲ್ಪವು ಗೋಳಾಕೃತಿ ತಪ್ಪಿ ಆದ ಭ್ರಂಶ : ಗೋಳ ಚ್ಯುತಿ.

Ellípsis, -pse[2] ಎಲಿಪ್ಸಿಸ್, -ಪ್ಸ್ (ನಾ. ; ಬ. ವ. -pses -ಸೀಸ್) ಒಂದು ವಾಕ್ಯದಲ್ಲಿ ಅರ್ಥಕ್ಕೆ ಅಥವಾ ಅನ್ವಯಕ್ಕೆ ಅವಶ್ಯವಾಗಿರುವ ಪದಗಳು ಬಿಟ್ಟುಹೋಗಿರುವುದು ; ಅಧ್ಯಾಹಾರ. **Ellíptical**[2] (ಗು.) ಅಧ್ಯಾ ಹಾರವುಳ್ಳ. **Ellíptically**[2] (ಕ್ರಿ. ವಿ.)

Elm ಎಲ್ಮ್ (ನಾ.) ಒಂದು ಜಾತಿಯ ಮರ. **Élmy** (ಗು.) ಎಲ್ಮ್ ಮರ ಗಳುಳ್ಳ.

Elocútion ಎಲೊಕ್ಯೂಷನ್ (ನಾ.) ಭಾಷಣ ರೀತಿ, ಶೈಲಿ, ಕಲೆ ; ವಾಗ್ಮಿತೆ ; ವಕ್ತೃತ್ವ ; ವಾಕ್ಚಾತುರ್ಯ ; ವಾಕ್ಪಟುತ್ವ ; ಭಾಷಣ ; ಮಾತುಗಾರಿಕೆ. **Elocútionary** (ಗು.) ; **Elocútionist** (ನಾ.) ವಾಕ್ಚತುರ ; ವಾಕ್ಪಟು ; ವಾಗ್ಮಿ.

Élongate ಈಲಾಂಗೇಟ್, **Elóngate** ಇ— (ಕ್ರಿ.), **Elóngate** ಇಲಾಂ ಗೆಟ್ (ಗು.) ಉದ್ದ ಮಾಡು ; ನಿಡಿದು ಮಾಡು ; ದೀರ್ಘ ಮಾಡು ; ಎಳೆ ; ಲಂಬಿಸು ; ಬೆಳಸು. (ಸ. ವಿ.) ತೆಳ್ಳಗೆ ಉದ್ದವಾಗಿರು ; ಕ್ರಮೇಣ ತುದಿ ಮೊನಚಾಗು. (ಗು. ; ಸ. ವಿ., ಪ್ರಾ. ವಿ.) ಉದ್ದವಾದ ; ಸೆಳೆ ಯಾಕಾರದ, ತುದಿ ಮೊನಚಾದ. **Elongátion** ಈ — (ನಾ.) ಉದ್ದ ವಾಗುವುದು; ಉದ್ದ ಮಾಡುವುದು ; ದೀರ್ಘೀಕರಣ ; ಲಂಬನೆ. (ಒಂದು ರೇಖೆ, ಮೊ. ಗಳ) ಮುಂದೆಳೆದ, ದೀರ್ಘೀಕರಿಸಿದ, ಲಂಬಿಸಿದ, ಭಾಗ. (ಖ. ವಿ.) ಒಂದು ಗ್ರಹಕ್ಕೆ ಸೂರ್ಯನಿಂದಿರುವ ಕೋನದೂರ.

Elópe ಇಲೋಪ್ (ಕ್ರಿ. ಅಕ.) (ಹೆಂಗಸಿನ ವಿಷಯದಲ್ಲ, —ಗಂಡನನ್ನು, ಮನೆ ಯನ್ನು, ಬಿಟ್ಟು) ಒಬ್ಬನನ್ನು ಎತ್ತಿಕೊಂಡು, ಕಟ್ಟಿಕೊಂಡು, ಹೋಗು ; ಹೇಳದೆ ಕೇಳದೆ ಓಡಿಹೋಗು ; ಪಲಾಯನಮಾಡು. **Elópement** (ನಾ.) ಪಲಾಯನ.

Éloquence ಎಲೊಕ್ವೆನ್ಸ್ (ನಾ.) ಭಾಷೆಯನ್ನು ನಿರರ್ಗಳವಾಗಿಯೂ ಶಕ್ತಿಯುತವಾಗಿಯೂ ಸಂದರ್ಭಕ್ಕೆ ತಕ್ಕಂತೆಯೂ ಉಪಯೋಗಿಸು ವುದು ; ವಾಗ್ಢೋರಣೆ ; ವಾಗ್ಝರಿ ; ವಾಗ್ವೈಖರಿ ; ವಾಕ್ಸಂಪತ್ತು ; ವಾಕ್ಪಟುತೆ ; ಅಲಂಕಾರ ಭಾಷಣ ; ವಾಗ್ಮಿತೆ. ಭಾಷಣ ಕಲೆ (Professor of E. ಭಾಷಣ ಕಲಾ ವಿಶಾರದ). **Éloquent** (ಗು.) ; **Éloquently** (ಕ್ರಿ. ವಿ.)

Else ಎಲ್ಸ್ (ಕ್ರಿ. ವಿ.) (ಅನಿರ್ದಿಷ್ಟ ಸ. ನಾ. ಮತ್ತು ಪ್ರಶ್ನಾರ್ಥಕ ಸ. ನಾ. ಗಳ ಮುಂದೆ) ಮತ್ತೆ ; ಮತ್ತು ; ಜೊತೆಗೆ ; ಇನ್ನೂ (Any one e. ? ಮತ್ತಾರಾದರೂ ಉಂಟೆ ? Any thing e. ? ಮತ್ತೇನಾದರೂ ಉಂಟೆ ? Who else's ? Whose e. ? ಮತ್ತೆ ಯಾರದು ?). ಬದಲು ; ಪ್ರತಿ ; ಬೇರೆ ; ಭಿನ್ನ [What e. can I say ? (ಅದಕ್ಕೆ ಬದಲಾಗಿ) ಮತ್ತೇನು ತಾನೆ ಹೇಳಲಿ ?]. ಇಲ್ಲದಿದ್ದರೆ ; ಅಲ್ಲದಿದ್ದರೆ ; ತಪ್ಪಿದರೆ [Run, (or) e. you will be late ಓಡು, ಇಲ್ಲದಿದ್ದರೆ ತಡವಾಗುವುದು]. **Elsewhere** ಮತ್ತೊಂದು ಸ್ಥಳದಲ್ಲಿ ; — ಕ್ಕೆ ; ಬೇರೆ ಕಡೆ(ಗೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Elúcidate ಇ(ಈ)ಲ್ಯೂ(ಲೂ)ಸಿಡೇಟ್ (ಕ್ರಿ. ಸಕ.) ಬೆಳಕು ಬೀಳಿಸು; ಬೆಳಗು; ಪ್ರಕಾಶ ಮಾಡು; ವಿಶದಪಡಿಸು; ವಿವರಿಸು; ಸ್ಪಷ್ಟಪಡಿಸು. **Elucidátion** (ನಾ.); **Elúcidator** (ನಾ.); **Elúcidative** (ಗು.); **Elúcidatory** — ಡೇಟೊರಿ, — ಡಟೋರಿ (ಗು.)

Elúde ಇ(ಈ)ಲ್ಯೂ(ಲೂ)ಡ್ (ಕ್ರಿ. ಸಕ.) (ಹೊಡೆತ, ಅಪಾಯ, ಕಷ್ಟ, ಹಿಡಿತ, ಮನುಷ್ಯ, ವಿಚಾರಣೆ, ಅವಲೋಕನೆ —ಇವುಗಳಿಂದ) ಚಾತುರ್ಯದಿಂದ ತಪ್ಪಿಸಿಕೊ; ಜಾರಿಕೊ; ನುಸುಳಿಕೊ; ನುಣುಚಿಕೊ. (ಅರಿವಿಗೆ, ಬುದ್ಧಿಗೆ) ಎಟುಕದಿರು, ಮೀರಿರು, ಒಳಪಡದಿರು, ಒಳಗಾಗದಿರು; ಹಿಡಿತಕ್ಕೆ ಸಿಕ್ಕದಿರು. **Elúsion** — ಷನ್ (ನಾ.); **Elúsive** —ಸಿವ್ (ಗು.) ತಪ್ಪಿಸಿಕೊಳ್ಳುವ (ರೂಪ. ಸಹ). **Elúsively** (ಕ್ರಿ. ವಿ.); **Elúsiveness** (ನಾ.); **Elúsory** (ಗು.) ತಪ್ಪಿಸಿಕೊಳ್ಳುವ ಸ್ವಭಾವದ; ಹಿಡಿತಕ್ಕೆ ಸಿಕ್ಕದ; ಮಾಯಾ ರೂಪದ.

Élvan ಎಲ್ವನ್ (ನಾ.) ಗಟ್ಟಿಯಾದ ಒಂದು ಬಗೆಯ ಅಗ್ನಿಶಿಲೆ; ಈ ಶಿಲೆಯ ಅಗಲವಾದ ಪಟ್ಟಿ.

Élver ಎಲ್ವರ್ (ನಾ.) ಎಳೆಯ ಹಾವುಮೀನು.

Élvish. **Elf** ನೋಡಿ.

Elyseé (F) ಎಲೀಸ್ಸೇ (ನಾ.) ಫ್ರೆಂಚ್ ರಾಷ್ಟ್ರಪತಿಯ (ರಾಷ್ಟ್ರಾಧ್ಯಕ್ಷನ) ಸರ್ಕಾರಿ ಮನೆ.

Elýsium ಇಲಿಸಿ(ಷಿ)ಯಂ (ನಾ.) (ಗ್ರೀಕ್ ಪುರಾಣ) ಪುಣ್ಯಾತ್ಮರ ಸತ್ತಮೇಲಿನ ನಿವಾಸ. ಆದರ್ಶ ಸೌಖ್ಯದ ಸ್ಥಳ, ಸ್ಥಿತಿ; ಸ್ವರ್ಗ; ಸ್ವರ್ಗಸುಖ. **Elýsian** (ಗು.) ಸ್ವರ್ಗೀಯ; ದಿವ್ಯ; ಪರಮಾನಂದಕರ.

Élytron ಎಲಿಟ್ರಾನ್ (ನಾ.; ಬ. ವ. -ra) ಜೀರುಂಡೆ ವರ್ಗದ ಕೀಟದ ಗಡುಸು ಪಕ್ಷಕೋಶ (ರೆಕ್ಕೆಯ ಹೊರ ಆವರಣ). ಯೋನಿ (ಮಾರ್ಗ)

Em ಎಮ್ (ನಾ.) M ಅಕ್ಷರ. (ಮುದ್ರಣದಲ್ಲಿ) ಒಂದು ಪಂಕ್ತಿಯಲ್ಲಿರುವ ಮುದ್ರಣದ ಮೊತ್ತವನ್ನು ಅಳೆಯುವ ಮಾನ. (This line is 22 ems)

Emáciate ಇಮೇ(ಮ್ಯಾ)ಷಿಯೇಟ್ (ಕ್ರಿ. ಸಕ.) ಕೃಶ ಮಾಡು; ಬಡಕಲು ಮಾಡು; ನವೆಯಿಸು; ಕ್ಷಯಿಸು; ಕೃಶಿಸು (ಮು., ಭೂ. ಕೃ. ನಲ್ಲಿ). (ನೆಲದ) ಸಾರ ಕಳೆ; ನಿಸ್ಸಾರ ಮಾಡು. **Emaciátion** ಇಮೇಸಿ(ಷಿ)ಯೇಷನ್ (ನಾ.)

Émanate ಎಮನೇಟ್ (ಕ್ರಿ. ಅಕ.) (ಹೊರ) ಹೊರಡು; (ಆಕರ, ಮನುಷ್ಯ, ಮೊ. ಗಳಿಂದ) ಒಗೆ, ಹುಟ್ಟು, ಬರು . (*From* ಉಪ. ದೊಡನೆ). **Emanátion** (ನಾ.) ಹೊರ ಹೊರಡುವುದು; ಒಂದು ಆಕರದಿಂದ ಹೊರಡುವುದು (ಮು., ರೂಪ. ದಲ್ಲಿ; ಸದ್ಗುಣಗಳು, ನೀತಿಶಕ್ತಿ — ಇವುಗಳ ವಿಷಯವಾಗಿ). ಉದ್ಗಮ; ಹೊರಹೊರಟದ್ದು. ಕಾಂತಿ; ಪ್ರಭೆ; ಪ್ರಭಾವ. ಪರವಸ್ತುವಿನಿಂದ ಹೊರಡುವ ವ್ಯಕ್ತಿ, ವಸ್ತು. **Émanative** — ನೆಟಿವ್ (ಗು.) ಹೊರಹೊರಡುವ ಪ್ರವೃತ್ತಿಯ; ಉದ್ಗಮ ಪ್ರಭೆಯ; ಉದ್ಗಮ ಸ್ವಭಾವದ. ಉದ್ಗಮ ತತ್ತ್ವಕ್ಕೆ ಸಂಬಂಧಿಸಿದ.

Emáncipate ಇಮ್ಯಾನ್ಸಿಪೇಟ್ (ಕ್ರಿ. ಸಕ.) (ರೋಮನ್ ನ್ಯಾ. ಶಾ.) (ಮಗುವನ್ನೂ ಹೆಂಡತಿಯನ್ನೂ) ಮನೆಯ ಯಜಮಾನನ ಅಧಿಕಾರದಿಂದ ಬಿಡಿಸು, ಸ್ವತಂತ್ರಪಡಿಸು. (ನ್ಯಾಯ, ಸಮಾಜ, ರಾಜ್ಯ, ಬುದ್ಧಿ, ನೀತಿ — ಈ ಸಂಬಂಧದ) ನಿರ್ಬಂಧದಿಂದ ತಪ್ಪಿಸು, ಬಿಡಿಸು; ಕೈಬಿಡಿಸು; ಬಂಧನ, ನಿರ್ಬಂಧ, ತಪ್ಪಿಸು; ಬಿಡುಗಡೆ ಮಾಡು; (ದಾಸ್ಯ) ವಿಮೋಚನೆ ಮಾಡು. **Emancipátion** (ನಾ.) (ಮು., ದಾಸ್ಯದಿಂದ ಅಥವಾ ಕಾನೂನಿನಿಂದಾದ ನ್ಯೂನತೆಗಳಿಂದ) ಬಿಡಿಸುವುದು; ವಿಮೋಚನೆ ಮಾಡುವುದು; ಬಿಡುಗಡೆ ಮಾಡುವುದು; (ಬುದ್ಧಿಯ ಅಥವಾ ನೀತಿಯ ಬಂಧನಗಳಿಂದ) ವಿಮೋಚನೆ, ಬಿಡುಗಡೆ, ಬಿಡಿಕೆ. **Emancipátionist** (ನಾ.) ಯಾವುದಾದರೂ ವರ್ಗದವರ (ಮು., ಗುಲಾಮರ) ವಿಮೋಚನೆಗಾಗಿ ವಾದಿಸುವವನು; ವಿಮೋಚನ ವಾದಿ. **Emáncipator** (ನಾ.); **Emáncipatory** (ಗು.); **Emáncipist** (ನಾ.) (ಆಸ್ಟ್ರೇಲಿಯದಲ್ಲಿ) ತನ್ನ ನಿರ್ಬಂಧದ ಅವಧಿಯನ್ನು ಮುಗಿಸಿರುವ ಹಳೆಯ ಸೆರೆಯಾಳು.

Emásculate ಇಮ್ಯಾಸ್ಕ್ಯುಲೆಟ್ (ಗು.), — ಲೇಟ್ (ಕ್ರಿ. ಸಕ.) ಬೀಜ ತೆಗೆದ; ಬೀಜ ಒಡೆದ; ಹಿಡಾ ಮಾಡಿದ. ಗಂಡಸುತನವಿಲ್ಲದ; ನಪುಂಸಕ; ಷಂಡ; ಹೆಣ್ಣಿನಂಥ; ಹೆಣ್ಣಿಗ; ನಿರ್ವೀರ್ಯ. (ಕ್ರಿ.) ಬೀಜ ಒಡೆ; ಹಿಡಾ ಮಾಡು; ಶಕ್ತಿಗುಂದಿಸು; ನಿರ್ವೀರ್ಯ ಮಾಡು; ಪುಂಸ್ತ್ವ ಕಳೆ; ಪೌರುಷ ಕಳೆ. (ಭಾಷೆಯನ್ನು) ನಿಸ್ಸತ್ವ ಮಾಡು, ಪುಷ್ಟಿಹೀನ ಮಾಡು. (ಸಾಹಿತ್ಯಪ್ರಬಂಧವನ್ನು) ಅಲ್ಲಲ್ಲಿ ಕತ್ತರಿಸಿ ಸತ್ವಗುಂದಿಸು, ಕಳೆಗೆಡಿಸು. **Emasculátion** (ನಾ.); **Emásculative** (ಗು.); **Emásculatory** (ಗು.)

Embálm ಎಂಬಾಮ್ (ಕ್ರಿ. ಸಕ.) (ಹೆಣವನ್ನು) ಸುಗಂಧ ದ್ರವ್ಯಗಳನ್ನು ಹಾಕಿ ಕೆಡದಂತೆ ರಕ್ಷಿಸು, ಕಾಪಾಡು. ಮರೆಯದ ಹಾಗೆ ಮಾಡು. ಸುಗಂಧವುಳ್ಳದ್ದನ್ನಾಗಿ ಮಾಡು; ಸುವಾಸನೆ ಕಟ್ಟು; ಸುವಾಸಿತ ಮಾಡು. **Embálmment** (ನಾ.)

Embánk ಎಂಬ್ಯಾಂಕ್ (ಕ್ರಿ. ಸಕ.) (ನದಿ, ಪೊ. ನ್ನು) ದಡ, ಏರಿ, ಕಟ್ಟೆ, ಮೊ. ಗಳಿಂದ ಹದ್ದಿನಲ್ಲಿಡು, ಬಂಧಿಸು; ಕಟ್ಟೆ ಕಟ್ಟು; ಏರಿ ಹಾಕು; ಅಣೆ ಕಟ್ಟು. **Embánkment** (ನಾ.) ಕಟ್ಟೆ; ಒಡ್ಡು; ಏರಿ; ಅಣೆ(ಕಟ್ಟು)

Embárgo ಎಂಬಾರ್ಗೊ (ನಾ., ಕ್ರಿ. ಸಕ.) ಒಂದು ದೇಶದಲ್ಲಿಯ ಬಂದರಿನಲ್ಲಿರುವ ಹಡಗುಗಳು ಹೊರಹೋಗಕೂಡದೆಂದೂ, ಪರ ರಾಜ್ಯಗಳ ಹಡಗುಗಳು ಬಂದರಿನೊಳಕ್ಕೆ ಬರಕೂಡದೆಂದೂ ಮಾಡಿದ (ಸರ್ಕಾರದ) ಆಜ್ಞೆ, ಪ್ರತಿಬಂಧಕ: ಬಂದರು ಬಂದು. ವಾಣಿಜ್ಯವನ್ನು, ವ್ಯಾಪಾರವನ್ನು, ತಡೆಮಾಡುವುದು, ನಡೆಯದಂತೆ ನಿರ್ಬಂಧಿಸುವುದು; ವಾಣಿಜ್ಯ, ವ್ಯಾಪಾರ, —ನಿಷೇಧ (Be under, lay on, an e.). ಅಡ್ಡಿ; ಅಡಚಣೆ; ತಡೆ; ನಿಷೇಧ; ನಿರೋಧ. (ಕ್ರಿ.) (ಹಡಗುಗಳನ್ನು, ವ್ಯಾಪಾರವನ್ನು) ನಿರ್ಬಂಧದಲ್ಲಿ ಹಾಕು, ತಡೆಗಡೆ ಮಾಡು; ಬಂದರು ಬಂದು ಮಾಡು. ಸರ್ಕಾರದ ಕೆಲಸಕ್ಕಾಗಿ (ಹಡಗುಗಳನ್ನು, ಸಾಮಾನನ್ನು) ಹಿಡಿದುಕೊ, ಮುಟ್ಟುಗೋಲು ಹಾಕು.

Embárk ಎಂಬಾರ್ಕ್ (ಕ್ರಿ.) (ಹೋಗಬೇಕಾದ ಸ್ಥಳಕ್ಕೆ ಹೋಗಲು) ಹಡಗು ಹತ್ತು, — ಹತ್ತಿಸು. (ಒಂದು ಕಾರ್ಯದಲ್ಲಿ, ಉದ್ಯಮದಲ್ಲಿ, ಯುದ್ಧ, ಮೊ. ಗಳಲ್ಲಿ) ತೊಡಗು, ಪ್ರಾರಂಭಿಸು, ಪ್ರವರ್ತಿಸು. **Embarkátion** (ನಾ.)

Embarrás de choíx, de richessé (F) ಆನ್‌ಬಾರಾ ಡ ಷ್ವಾ, ಡ್ ರೀಷೆಸ್ (ನಾ.) ಏನು ಮಾಡಬೇಕೆಂದು ತೋರದಷ್ಟು (ದಿಗ್ಭ್ರಮೆ ಹಿಡಿಸುವಷ್ಟು) ಪಕ್ಷಾಂತರಗಳು, ಐಶ್ವರ್ಯ; ಲೆಕ್ಕವಿಲ್ಲದಷ್ಟು ವಿಕಲ್ಪಗಳು, ಅಪಾರ ಸಂಪತ್ತು.

Embárrass ಎಂಬ್ಯಾರಸ್ (ಕ್ರಿ. ಸಕ.) ಹೊರೆ ಹೇರು; ತಡೆ ಮಾಡು; ತಡೆಗಟ್ಟು; ಕಿರಿಕಿರಿ ಮಾಡು; ತೊಂದರೆಗೆ ಈಡುಮಾಡು. (ಭೂ. ಕೃ.) ಸಾಲದ ತೊಡರಿಗೆ ಸಿಕ್ಕಿದ; ಸಾಲ ಹೊತ್ತ; ಸಾಲದ ಹೊರೆಯಿಂದ ಪೇಚಾಡುವ. (ಪ್ರಶ್ನೆ, ಮೊ. ನ್ನು) ತೊಡಕು ಮಾಡು. ಕಂಗೆಡಿಸು; ಮನಸ್ಸಿಗೆ ಸಂಕೋಚ, ಕ್ಲೇಶ, ಪೇಚಾಟ, ಉಂಟುಮಾಡು. **Embárrassingly** (ಕ್ರಿ. ವಿ.); **Embárrassment** (ನಾ.)

Émbassy ಎಂಬಸಿ (ನಾ.) ರಾಯಭಾರಿಯ ಉದ್ಯೋಗ, ಅಧಿಕಾರ; — ವಾಸಸ್ಥಾನ; (ದೊರೆ, ಮೊ. ರ ಬಳಿಗೆ) ರಾಯಭಾರ.

Embáttle[1] ಎಂ(ಇಂ)ಬ್ಯಾಟ್‌ಲ್ (ಕ್ರಿ. ಸಕ.) (ಸೈನ್ಯವನ್ನು) ಯುದ್ಧಕ್ಕೆ ಸಜ್ಜುಗೊಳಿಸು; (ಯುದ್ಧ) ವ್ಯೂಹ ರಚಿಸು; ಪಡೆಯೊಡ್ಡು.

Embáttle[2] ಎಂಬ್ಯಾಟ್‌ಲ್ (ಕ್ರಿ. ಸಕ.) (ಕಟ್ಟಡಕ್ಕೆ, ಗೋಡೆಗೆ) ಕಂಡಿಗಳುಳ್ಳ ಕೈಪಿಡಿಗೋಡೆ ಹಾಕು, ಕಟ್ಟು; ಕೋಟೆತನೆ ಮಾಡು, ಕಟ್ಟು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Embaý ಎಂಬೇ (ಕ್ರಿ. ಸಕ.) (ಹಡಗನ್ನು) ಕೊಲ್ಲಿಯೊಳಗಡೆ ಇಡು, ನಿಲ್ಲಿಸು. (ಗಾಳಿಯು ಹಡಗನ್ನು) ಕೊಲ್ಲಿಯೊಳಕ್ಕೆ ನೂಕು, ತಳ್ಳು, ಹೊಡೆದುಕೊಂಡು ಬರು. ಕೊಲ್ಲಿಯಲ್ಲಿಯಂತೆ ಸುತ್ತುವರಿ, ಸುತ್ತು ಗಟ್ಟು, ಆವರಿಸು. **Embaýment** (ನಾ.)

Embéd, Im- ಎಂಬೆಡ್, ಇಂ — (ಕ್ರಿ. ಸಕ.) (ಸುತ್ತಲರುವ ಪದಾರ್ಥ ದಲ್ಲಿ ಭದ್ರವಾಗಿ) ನೆಡು, ನಾಟು, ಹೂಳು, ಹದಿ (ಮು., ಭೂ. ಕೃ. ನಲ್ಲಿ). (ಸುತ್ತಲನ ಪದಾರ್ಥದ ವಿಷಯದಲ್ಲಿ) ಭದ್ರವಾಗಿ ಹಿಡಿದುಕೊ.

Embéllish ಎಂಬೆಲಿಷ್ (ಕ್ರಿ. ಸಕ.) ಅಂದಗೊಳಿಸು ; ಚೆಂದ ಮಾಡು ; ಅಲಂಕರಿಸು ; ಸಿಂಗರಿಸು ; ಸೊಗಸು ಮಾಡು. (ಕಥೆ, ಹೇಳಿಕೆ) ಕಲ್ಪಿತ ವಿಷಯಗಳನ್ನು ಹೆಣೆದು ಸ್ವಾರಸ್ಯ ಹೆಚ್ಚಿಸು, ಬಣ್ಣ ಕೊಡು. **Embéllishment** (ನಾ.) ಅಲಂಕಾರ.

Émber[1] ಎಂಬರ್ (ನಾ. ; ಸಾ., ಬ. ವ. ದಲ್ಲಿ) ಬೆಂಬೂದಿ (ಆರಿಹೋಗು ತ್ತಿರುವ ನಣ್ಣ ಕೆಂಡ). (ರೂಪ.) Embers of an old love ಹಿಂದಿನ ಪ್ರೇಮದ ನಸು ಕಾವು, ನೆನಪು.

Émber[2] ಎಂಬರ್ (ಗು.) E. days ಉಪವಾಸದ ಮತ್ತು ಪ್ರಾರ್ಥನೆಯ ದಿನಗಳು : [(೧) 'ಲೆಂಟ'ನಲ್ಲಿ ಮೊದಲನೆಯ ಭಾನುವಾರ, (೨) 'ವ್ಹಿಟ್ ಸಂಡೆ,' (೩) 'ಹೋಲಿ ಕ್ರಾಸ್ ಡೇ' (ಸೆಪ್ಟೆಂಬರು ೧೪), (೪) 'ಸೆಯ್ನ್ಂಟ್ ಲ್ಯೂಷಿಯಸ್ ಡೇ' (ಡಿಸೆಂಬರು ೧೩) — ಈ ದಿನಗಳ ತರುವಾಯ ಬರುವ ಬುಧ, ಶುಕ್ರ ಮತ್ತು ಶನಿವಾರಗಳು]

Émber[3] ಎಂಬರ್ (ನಾ.) (ಸಾ., E.-goose, -diver) ಆರ್ಕ್ಟಿಕ್ ದ್ವೀಪಗಳ ಕಡಲ ಕೋಳಿ.

Embézzle ಎಂಬೆಜ಼್ಲ್ (ಕ್ರಿ. ಸಕ.) (ಹಣ, ವೊ. ನ್ನು) ಮೋಸದಿಂದ ಸ್ವಂತಕ್ಕೆ ಬಳಸಿಕೊ ; ದುರುಪಯೋಗ ಮಾಡಿಕೊ ; ತಿಂದುಹಾಕು ; ದಸ್ತು ಮಾಡು. **Embézzlement** (ನಾ.)

Embítter ಎಂಬಿಟರ್ (ಕ್ರಿ. ಸಕ.) ಕಹಿ ಮಾಡು ; ಕಟು ಮಾಡು (ರೂಪ.). ಕೇಡನ್ನು ಹೆಚ್ಚಿಸು, ಅಧಿಕ ಮಾಡು. (ಮನುಷ್ಯನನ್ನು, ಮನೋಭಾವವನ್ನು) ಉದ್ರೇಕಗೊಳಿಸು, ರೇಗಿಸು, ಕೆರಳಿಸು ; ವೈಮನಸ್ಯವುಂಟುಮಾಡು ; ಮನಸ್ಸು ಕೆಡಿಸು. **Embítterment** (ನಾ.)

Emblázon ಎಂಬ್ಲೇಜ಼ನ್ (ಕ್ರಿ. ಸಕ.) (ವಂಶಲಾಂಛನದ ಗುರಾಣಿಯ ಮೇಲನಂತೆ) ಎದ್ದು ಕಾಣುವಹಾಗೆ ಚಿತ್ರಿಸು. (ಗುರಾಣಿಯಮೇಲೆ) ವಂಶಲಾಂಛನ ಚಿಹ್ನೆಗಳಿಂದ ಅಲಂಕಾರ ಮಾಡು, ಚಿತ್ರಿಸು, ಕೆತ್ತು (ರೂಪ. ಸಹ). ಪ್ರಸಿದ್ಧಿಗೊಳಿಸು ; ಹೊಗಳು ; ಶ್ಲಾಘಿಸು ; ಉಗ್ಗಡಿಸು ; ಸ್ತೋತ್ರ ಮಾಡು. **Emblázonment** (ನಾ.) ; **Emblázonry** (ನಾ.) = Blazonry.

Émblem ಎಂಬ್ಲೆಮ್ (ನಾ., ಕ್ರಿ. ಸಕ.) ಲಾಂಛನ ; ಕುರುಹು ; ಗುರುತು ; ಚಿಹ್ನೆ ; ಸಂಕೇತ. (ಪ್ರಾಚೀ. ಪ್ರ.) ಚಿತ್ರರೂಪದಲ್ಲಿ ರಚಿಸಿರುವ ದೃಷ್ಟಾಂತ ಕಥೆ, ಸಾಮತಿ ಕಥೆ ; ಸಂಕೇತ ಚಿತ್ರ. (ಮನುಷ್ಯನ ವಿಷಯದಲ್ಲಿ, ಒಂದು ಗುಣದ) ಮಾದರಿ. ವಂಶಲಾಂಛನದ ಸಂಕೇತ. (ಕ್ರಿ.) ಸಂಕೇತವಾಗಿ ಮಾಡು ; ಸಂಕೇತದ ಮೂಲಕ ತೋರಿಸು ; ಕುರುಹಾಗಿರು ; ಲಾಂಛನವಾಗಿ ತೋರಿಸು ; ಲಾಂಛನವಾಗಿರು. **Emblemátic(al)** — ಮ್ಯಾ — (ಗು.) (ಒಂದರ) ಮಾದರಿಯಾದ, ಕುರುಹಾದ, ಸಂಕೇತವಾದ ; ದ್ಯೋತಕ. **Emblemátically** (ಕ್ರಿ. ವಿ.) ; **Emblématist** — ಮಟಿಸ್ಟ್ (ನಾ.) ಕುರುಹುಗಳನ್ನು ರಚಿಸುವವನು ; ಲಾಂಛನಕಾರ ; ರೂಪಕ ಕಥೆ ಕಟ್ಟುವವನು. **Emblématize** (ಕ್ರಿ. ಸಕ.) ಕುರುಹಾಗಿ, ಲಾಂಛನವಾಗಿ, ಸಂಕೇತವಾಗಿ, ಇರು ; ಲಾಂಛನದಿಂದ, ಸಂಕೇತ ರೂಪವಾಗಿ, ತೋರಿಸು.

Émblement ಎಂಬ್ಲಿಮೆಂಟ್ (ನಾ.) (ನ್ಯಾ. ಶಾ. ; ಸಾ., ಬ. ವ. ದಲ್ಲಿ) ಉಳುಮೆಯ (ಬಿತ್ತಿದ) ಜಮೀನಿನಿಂದ ಬರುವ ಆದಾಯ, ಲಾಭ ; ಬೆಳೆ ; ಪಯಿರು. (ಕೆಲವು ವೇಳೆ) ಭೂಮಿಯ ಸ್ವಾಭಾವಿಕ ಉತ್ಪನ್ನಗಳು.

Embódy, Im- ಎಂಬಾಡಿ, ಇಂ — (ಕ್ರಿ. ಸಕ.) (ಆತ್ಮಕ್ಕೆ) ದೇಹ, ಶರೀರ, ರೂಪ, ಆಕಾರ, — ಕೊಡು ; ಮೂರ್ತೀಕರಿಸು ; ಸಶರೀರಮಾಡು. (ಭಾವ, ಅಭಿಪ್ರಾಯ, ವೊ. ಕ್ಕೆ) ಮೂರ್ತರೂಪ ಕೊಡು. (ತತ್ತ್ವ, ವೊ. ನ್ನು) ಸ್ಪಷ್ಟವಾಗಿ, ಕಾರ್ಯರೂಪದಲ್ಲಿ, ತೋರಿಸು. (ವಸ್ತುಗಳ ವಿಷಯದಲ್ಲಿ, ಭಾವ., ವೊ. ಗಳ) ಸ್ವರೂಪವಾಗಿರು. ಒಂದುಗೂಡಿಸು ; ಒಟ್ಟುಗೂಡಿಸು ; ಒಂದಾಗಿ ಸೇರಿಸು ; ಒಳಕೊಳ್ಳು ; ಸೇರು ; ಸೇರಿಸು ; ಉಳ್ಳದ್ದಾಗಿರು ; ಗರ್ಭೀಕರಿಸು. **Embódiment** (ನಾ.)

Embóg ಎಂಬಾಗ್ (ಕ್ರಿ. ಸಕ.) ಬದಿ ನೆಲದಲ್ಲಿ, ಉಸುಬಿನಲ್ಲಿ, —ಹೂಳು, ಹೂತುಹೋಗಿಸು, ಸಿಕ್ಕಿಸು, ಬಂಧಿಸು. (ಕೈ ಕಾಲು) ಆಡದಂತೆ ಮಾಡು (ರೂಪ. ಸಹ)

Embólden ಎಂಬೋಲ್ಡನ್, **Im-** ಇಂ — (ಕ್ರಿ. ಸಕ.) ಧೈರ್ಯ ಕೊಡು ; ಪ್ರೋತ್ಸಾಹಗೊಳಿಸು ; ಹುರಿದುಂಬಿಸು.

Émbolism ಎಂಬೊಲಿಸ್ಮ್ (ನಾ.) ರಕ್ತದ ಗೆಡ್ಡೆ, ವೊ. ಗಳಿಂದ ಅಪಧಮನಿಗಳು ಕಟ್ಟಿಹೋಗುವುದು (ಮು., ಪಾರ್ಶ್ವವಾಯುವಿಗೆ ಕಾರಣವಾಗಿ) ; ಧಮನಿ ಬಂಧ. ಕಾಲ ಗಣನೆಯಲ್ಲಿ, ಪಂಚಾಂಗದಲ್ಲಿ, —ದಿನಗಳನ್ನೊ, ತಿಂಗಳುಗಳನ್ನೊ, ವರ್ಷಗಳನ್ನೊ— ಮಧ್ಯೆ ಸೇರಿಸುವುದು ; ಅಧಿಕ ದಿನ, ಮಾಸ, ವರ್ಷ ; ಇವುಗಳ ಸೇರಿಕೆ.

Embonpoínt (F) ಅನ್‌ಬೊನ್‌ಪ್ವಾನ್ (ನಾ.) (ಮು., ಹೆಂಗಸರ ವಿಷಯ ದಲ್ಲಿ, ಶರೀರ ಸ್ಥೂಲತೆಗೆ, ಸಾ., ನಯ ನುಡಿ) ಮೈ ತುಂಬಿಕೊಂಡಿರುವುದು ; ತುಂಬು ಮೈ.

Embósom, Im- ಎಂಬುಸ಼್ಮ್, ಇಂ — (ಕ್ರಿ. ಸಕ.) ತಬ್ಬು ; ತಬ್ಬಿಕೊ ; ಎದೆಗೆ ಅವಚಿಕೊ ; ಅಪ್ಪು ; ಅಪ್ಪಿಕೊ ; ತಕ್ಕೈಸು ; ಆಲಿಂಗಿಸು. (ಭೂ. ಕೃ. ನಲ್ಲಿ) (ಮರಗಳು, ಗುಡ್ಡಗಳು, ವೊ.) ಸುತ್ತು ಗಟ್ಟಿರುವ ; ಸುತ್ತುವರಿದಿರುವ ; ಆವರಣದಲ್ಲಿರುವ ; ಆವರಿಸಿರುವ ; ಆವೃತ.

Embóss ಎಂಬಾಸ್ (ಕ್ರಿ. ಸಕ.) ಉಬ್ಬುಚಿತ್ರ ಕೆತ್ತು ; ಉಬ್ಬಚ್ಚು ಮಾಡು. (ಒಂದು ಪ್ರದೇಶದಮೇಲೆ) ಚಿತ್ರಗಳು, ವೊ. ವು ಚಾಚಿ ನಿಂತಿರುವಂತೆ ಮಾಡು ; ಮುಂದಕ್ಕೆ ಉಬ್ಬಿಕೊಂಡಿರುವಂತೆ ಮಾಡು ; ಚಾಚಿಸು ; ಉಬ್ಬಿಸು. **Embóssment** (ನಾ.)

Embouchúre (F) ಅನ್‌ಬೂಷುರ್ (ನಾ.) ನದೀ ಮುಖ. ನದಿಯ ಕಣಿವೆ ವಿಸ್ತಾರವಾಗುವ ಬಯಲು. (ಸಂ.) ಒಂದು ವಾದ್ಯದ ಬಾಯಿಗಿಟ್ಟುಕೊಳ್ಳುವ ಭಾಗ, ಊದುವ ಭಾಗ ; ಊದುಗಂಡಿ ; ಓಲಗದ ಪೀಪಿ. ವಾದ್ಯವನ್ನು ಊದುವಾಗ ತುಟಿ, ವೊ. ನ್ನು ಅಳವಡಿಸುವ ರೀತಿ.

Embowél ಎಂಬೌಎಲ್ (ಕ್ರಿ. ಸಕ.) (ಹೊಟ್ಟೆಯಿಂದ) ಕರುಳು ತೆಗೆ. (ಪ್ರಾಚೀ. ಪ್ರ.) ಹುದುಗಿಸು ; ಅಡಗಿಸು.

Embowér ಎಂಬೌಅರ್ (ಕ್ರಿ. ಸಕ.) (ಲತಾ ಗೃಹದಲ್ಲಿಯಂತೆ) ಆವರಣ ಕೊಡು, ಸುತ್ತುಗಟ್ಟು, ಆವರಿಸು.

Embráce ಎಂಬ್ರೇಸ್ (ಕ್ರಿ. ಸಕ., ನಾ.) (ಸಾ., ಪ್ರೀತಿಯ ಲಕ್ಷಣವಾಗಿ, ತೋಳಿನಿಂದ) ತಬ್ಬಿಕೊ ; ಅಪ್ಪಿಕೊ ; ತಕ್ಕೈಸು ; ಆಲಿಂಗಿಸು. ಸುತ್ತುಗಟ್ಟು ; ಆವರಿಸು ; ಒಳಕೊಳ್ಳು. (ಕೇಳಿಕೆ, ಹೇಳಿಕೆ, ಸಂದರ್ಭ, ವೊ. ನ್ನು) ಆದರದಿಂದ ಸ್ವೀಕರಿಸು ; ಅಪ್ಪುಕೈ (ಗ್ರಾಂ.). (ಕಾರ್ಯಗತಿ, ತತ್ತ್ವ, ಮತ, ಪಕ್ಷ — ಇವನ್ನು) ಅವಲಂಬಿಸು, ಅಂಗೀಕರಿಸು, ಸ್ವೀಕರಿಸು. ಸೇರಿರು, ಉಳ್ಳದ್ದಾಗಿರು. (ವ್ಯಕ್ತಿವಿಷಯದಲ್ಲಿ : ವರದಿ, ಸೂತ್ರ, ವೊ. ಗಳಲ್ಲಿ) ಅಡಕಮಾಡು, ಸೇರಿಸು, ಅಡಗಿಸು. (ಕಣ್ಣಿನಿಂದ, ಮನಸ್ಸಿನಿಂದ) ಗ್ರಹಿಸು. (ನಾ.) ತೆಕ್ಕೆ ; ಅಪ್ಪು(ಗೆ) ; ತಬ್ಬು ; ಆಲಿಂಗನ. (ನಯ ನುಡಿ) ಸಂಭೋಗ ; ಮೈಥುನ. **Embráceable** —ಸಬ್ಲ್ (ಗು.) ; **Embrácement** (ನಾ.)

Embránchment ಎಂಬ್ರಾನ್ಷ್(ನ್ಚ್)ಮೆಂಟ್ (ನಾ.) (ನದೀ ಶಾಖೆ, ವೊ. ಗಳ) ಕವಲೊಡೆತ, ಕವಲು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Embrángle, Im- ಎಂಬ್ರ್ಯಾಂಗ್‌ಲ್, ಇಂ — (ಕ್ರಿ. ಸಕ.) ಸಿಕ್ಕಿನಲ್ಲಿ ಸಿಕ್ಕಿಸು ; ತೊಡಕಿಸು ; ಕಂಗೆಡಿಸು ; ತಬ್ಬಿಬ್ಬು ಮಾಡು ; ದಿಗ್ಭ್ರಮೆಗೊಳಿಸು. **Embránglement** (ನಾ.)

Embrásure ಎಂಬ್ರೇಷ್ಟರ್, ಎಂಬ್ರಷ್ಯುರ್ (ನಾ.) ಬಾಗಿಲ ಅಥವಾ ಕಿಟಕಿಯ ದ್ವಾರದ ಪಕ್ಕಗಳ ಗೋಡೆಯನ್ನು ಓಟವಾಗಿಸುವುದು, ಓರೆಯಾಗಿಸುವುದು. (ಕೋಟೆಯ) ಕೈಪಿಡಿ ಗೋಡೆಯಲ್ಲಿ, ಒಳಗಡೆಯಿಂದ ಅಗಲವಾಗುತ್ತ ಬರುವ, ಫಿರಂಗಿ (ಬಂದೂಕು)ಗಂಡಿ ; ಜೇರುಗಂಡಿ ; ಫಿರಂಗಿ ಜಾಲಕ.

Émbrocate ಎಂಬ್ರೊಕೇಟ್ (ಕ್ರಿ. ಸಕ.) ವ್ಯಾಧಿಯನ್ನು ಶಮನಮಾಡಲು (ಅಂಗ, ಮೊ. ನ್ನು) ತೊಳೆ ; ತೈಲ, ದ್ರವ, — ಹಚ್ಚು, ತಿಕ್ಕು ; ಕಾವು ಕೊಡು. **Embrocátion** (ನಾ.) ರೋಗಭಾಗವನ್ನು ಉಜ್ಜುವುದಕ್ಕಾಗಿ, ನೀವುವುದಕ್ಕಾಗಿ, ಉಪಯೋಗಿಸುವ ತೈಲ, ದ್ರವ: ಉಜ್ಜು ತೈಲ.

Embroíder ಎಂಬ್ರಾಯ್ಡರ್ (ಕ್ರಿ. ಸಕ.) (ವಸ್ತ್ರ, ಮೊ. ನ್ನು) ಕಸೂತಿ ಕೆಲಸದಿಂದ ಅಲಂಕರಿಸು ; ಕಸೂತಿ ಕೆಲಸ ಮಾಡು ; ಕಸೂತಿ ಹಾಕು ; ಬುಟ್ಟಾ ಹಾಕು. (ಕಥನವನ್ನು, ವೃತ್ತಾಂತವನ್ನು) ಕಾಲ್ಪನಿಕ ವಿಷಯಗಳನ್ನು ಸೇರಿಸಿ ಅಂದಗೊಳಿಸು, ಸ್ವಾರಸ್ಯಗೊಳಿಸು, ಅಲಂಕಾರ ಮಾಡು. **Embroídery** — ಡರಿ (ನಾ.) ಕಸೂತಿ ಕೆಲಸ (ಮಾಡುವುದು). ಅನಾವಶ್ಯಕವಾದ ಹೆಚ್ಚಿನ ಅಲಂಕಾರ.

Embroíl ಎಂಬ್ರಾಯ್ಲ್ (ಕ್ರಿ. ಸಕ.) (ವಿಚಾರಗಳು, ಕಥನಗಳು, ಮೊ. ನ್ನು) ಗೊಂದಲದ ಸ್ಥಿತಿಗೆ ತರು, ತೊಡಕು ಮಾಡು, ಸಿಕ್ಕು ಮಾಡು ; ಗೋಜಿಸು. ಪರಸ್ಪರ ದ್ವೇಷ ಕೆರಳಿಸು. **Embroílment** (ನಾ.)

Embrówn ಎಂಬ್ರೌನ್ (ಕ್ರಿ. ಸಕ.) ಕಂದು ಬಣ್ಣಕ್ಕೆ ತಿರುಗಿಸು ; ಕಂದು ಬಣ್ಣ ಮಾಡು.

Émbryo ಎಂಬ್ರಿಯೊ (ನಾ. ; ಬ. ವ. -os ; ಗು.) ಭ್ರೂಣ (ಹುಟ್ಟುವುದಕ್ಕೆ, ಮೊಟ್ಟೆಯೊಡೆದು ಹೊರಗೆ ಬರುವುದಕ್ಕೆ, ಮೊದಲಿನ ಮರಿಯ ರೂಪ) ; (ಬಳ. ಮಾ.) ಗರ್ಭ ; ಮೂಲಾವಸ್ಥೆಯಲ್ಲಿರುವ ವಸ್ತು ; ಆರಂಭ ಅವಸ್ಥೆ ; —ಸ್ಥಿತಿ ; —ದಶೆ (In e. ಗರ್ಭಾವಸ್ಥೆಯಲ್ಲಿ ; ಪರಿಣಾಮ ಹೊಂದಿಲ್ಲದೆ ; ಅಸ್ಪಷ್ಟ, ಅಸ್ಫುಟ, ಸ್ಥಿತಿಯಲ್ಲಿ). (ಗು.) ಗರ್ಭಾವಸ್ಥೆಯ; ಪರಿಣಾಮ ಹೊಂದಿಲ್ಲದ ; ಅಸ್ಫುಟ ಸ್ಥಿತಿಯಲ್ಲಿರುವ. **Embryónic** — ಯಾನಿಕ್ (ಗು.) ಭ್ರೂಣದ ; ಭ್ರೂಣದಂತಿರುವ. (ರೂಪ.) ಅಪಕ್ವವಾದ ; ವಿಕಸನ ಹೊಂದಿಲ್ಲದ ; ಪರಿಣಾಮ ಹೊಂದಿಲ್ಲದ.

Émbryo- ಎಂಬ್ರಿಯೊ— (ಸ. ಪೂ. ಪ.) ಭ್ರೂಣ — . **-ctony** ಎಂಬ್ರಿಯೊಕ್ಟೊನಿ (ನಾ.) (ಗರ್ಭಾಶಯದಲ್ಲಿ) ಭ್ರೂಣ ನಾಶ. **-génesis** — ಯೊಜೆನೆಸಿಸ್ (ನಾ.) ಭ್ರೂಣ ರಚನೆ ; ಭ್ರೂಣೋತ್ಪತ್ತಿ. **-logy** —ಯಾಲೊಜಿ (ನಾ.) ಭ್ರೂಣ ಶಾಸ್ತ್ರ. **-tomy** —ಯಾಟೊಮಿ (ನಾ.) ಗರ್ಭಾಶಯದಲ್ಲಿ ಭ್ರೂಣವನ್ನು ಕತ್ತರಿಸಿಹಾಕುವುದು : ಭ್ರೂಣ ವಿಚ್ಛೇದ.

Embús ಎಂಬಸ್ (ಕ್ರಿ.) (ಸೈನ್ಯ) (ಜನರನ್ನು, ಸಾಮಾನನ್ನು) ಮೋಟಾರು ಬಸ್ಸುಗಳಿಗೆ ತುಂಬು ; ಮೋಟಾರು ಬಸ್ಸು ಹತ್ತು, ಹತ್ತಿಸು.

Eménd ಇಮೆಂಡ್ (ಕ್ರಿ. ಸಕ.) (ಪುಸ್ತಕ, ಮೊ. ಗಳ ಗ್ರಂಥಭಾಗದಲ್ಲಿಯ) ತಪ್ಪುಗಳನ್ನು ತಿದ್ದು, ಪರಿಷ್ಕರಿಸು. **Emendátion** ಈ —, ಎ — (ನಾ.) ಪರಿಷ್ಕರಣ ; ತಿದ್ದುಪಾಡು(ಟು) ; ತಿದ್ದುಪಡಿ. **Émendator** (ನಾ.) ಪರಿಷ್ಕಾರಕ. **Eméndatory** ಇಮೆಂಡಟ(ಟೋ)ರಿ (ಗು.) ಪರಿಷ್ಕರಣ ಸಂಬಂಧದ ; ತಿದ್ದುಪಾಟಿನ.

Émerald ಎಮರಲ್ಡ್ (ನಾ.) ಉಜ್ಜ್ವಲ ಹಸುರು ಬಣ್ಣದ ಪ್ರಶಸ್ತ ಶಿಲೆ : ಪಚ್ಚೆ ; ಪಸುರ್ವಣಿ ; ಮರಕತ. ಪಚ್ಚೆಯ ಬಣ್ಣ. ಒಂದು ಗೊತ್ತಾದ ಅಳತೆಯ ಅಚ್ಚಿನ ಮೊಳೆ. E. Isle ಐರ್ಲೆಂಡು ದೇಶ. **Émeraldine** — ಡಿ(ಡೈ)ನ್ (ಗು., ನಾ.) ಪಚ್ಚೆಹಸುರಿನ. (ನಾ.) ನೀಲಿಯಿಂದ ತಯಾರಿಸಿದ ಒಂದು ಹಸುರು ಬಣ್ಣ.

Emérge ಇಮರ್ಜ್ (ಕ್ರಿ. ಅಕ.) ಒಂದು ದ್ರವದಿಂದ ಮೇಲಕ್ಕೆ ಬರು, ಹೊರ ಬರು. (ಆವರಣ, ಮೊ. ಗಳಿಂದ) ದೃಷ್ಟಿಪಥಕ್ಕೆ ಬರು, ಗೋಚರಕ್ಕೆ ಬರು. (ಸಂಕಟ ಸ್ಥಿತಿ, ಮೊ. ಗಳಿಂದ) ಬಿಡುಗಡೆ ಹೊಂದು, ಪಾರಾಗು. (ಸಂಗತಿ, ಮೊ. ಗಳ ವಿಷಯದಲ್ಲಿ) ವಿಚಾರದ ಫಲವಾಗಿ ಬಯಲಿಗೆ ಬರು, ಹೊರಪಡು, ತಿಳಿದುಬರು. (ಪ್ರಶ್ನೆ, ಕಷ್ಟ, ಮೊ. ವು) ಹುಟ್ಟು, ಉಂಟಾಗು, ಉದಿಸು, ತಲೆದೋರು. **Emérgence** (ನಾ.) ನಿರ್ಗಮನ ; ಉದಯ ; ಹೊರಹೊಮ್ಮಿಕೆ. **Emérgency** ಇಮರ್ಜೆನ್ಸಿ (ನಾ.) ತತ್‌ಕ್ಷಣ ಕಾರ್ಯ ನಡಸಬೇಕಾದ ಅನಿರೀಕ್ಷಿತ ಸಂದರ್ಭ ; ತುರ್ತು ; ಜರೂರು ; ಅವಸರ. E. door, exit ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ (ಉದಾ., ಬೆಂಕಿ ಬಿದ್ದಾಗ) ಹೊರಕ್ಕೆ ಹೋಗುವ ಬಾಗಿಲು, ದ್ವಾರ, ಮೊ. ವು : ಅವಸರದ ಬಾಗಿಲು. E. man (ಐರ್ಲೆಂಡಿನಲ್ಲಿ) ವಿಶೇಷ ಕಾರ್ಯಕ್ಕಾಗಿ (ಮು., ಒಬ್ಬನನ್ನು ಅವನ ಸ್ಥಾನದಿಂದ ಹೊರಡಿಸುವುದಕ್ಕಾಗಿ) ನ್ಯಾಯಾಧಿಕಾರಿಯ ಕೈಕೆಳಗಿರುವ ಅಧಿಕಾರಿ. **Emérgent** (ಗು.) ಮೇಲೇಳುವ; ಹೊರಬರುವ. (ಅನುಚಿತ ಪ್ರಯೋಗ) ಜರೂರಾದ ; ಅವಸರವಾದ ; ಒತ್ತರದ.

Eméritus ಇ(ಈ)ಮೆರಿಟಸ್ (ಗು.) ಮರ್ಯಾದೆಯೊಡನೆ ಅಧಿಕಾರದಿಂದ ನಿವೃತ್ತನಾದ ; ವಿಶ್ರಾಂತ (E. professor ವಿಶ್ರಾಂತ ಮಹೋಪಾಧ್ಯಾಯ)

Émerods ಎಮರಾಡ್ಸ್ (ನಾ., ಬ. ವ.) (ಬೈಬಲ್ಲಿನಲ್ಲಿ) = Haemorrhoids.

Emérsion ಇಮರ್ಷನ್ (ನಾ.) (ಮುಳುಗಿದ್ದುದು) ಮೇಲೇಳುವುದು, ಹೊರಬೀಳುವುದು. ಗ್ರಹಣಾಂತದಲ್ಲಿ, ಮರೆಬಿದ್ದ ಮೇಲೆ, ಸೂರ್ಯ, ಚಂದ್ರ, ನಕ್ಷತ್ರಗಳು ಮರಳಿ ಕಾಣಿಸಿಕೊಳ್ಳುವುದು ; ಶುದ್ಧ ಮಂಡಲವಾಗುವುದು ; ಬಿಡುಗಡೆ ; ಮೋಕ್ಷ.

Émery ಎಮರಿ (ನಾ.) (ಲೋಹ, ಕಲ್ಲು, ಮೊ. ನ್ನು ಸಾಣೆಹಿಡಿಯಲು ಉಪಯೋಗಿಸುವ) ಕುರುಂದದ ಕಲ್ಲು. E.-cloth, -paper, -wheel ಕುರುಂದದ ಪುಡಿ ಹಚ್ಚಿದ ಬಟ್ಟೆ, ಕಾಗದ, ಸಾಣೆಚಕ್ರ.

Emétic ಇಮೆಟಿಕ್ (ಗು., ನಾ.) ವಾಂತಿ ಮಾಡಿಸುವ (ಔಷಧ) (ರೂಪ. ಸಹ). **Émesis** ಎಮಿಸಿಸ್ (ನಾ.) ವಾಂತಿ(ಯಾಗುವುದು)

Emeúte ಎಮುಟ್, ಇಮ್ಯೂಟ್ (ನಾ.) (ಜನರ) ದಂಗೆ ; ಬಂಡಾಯ.

Émigrate ಎಮಿಗ್ರೇಟ್ (ಕ್ರಿ.) ಮತ್ತೊಂದು ದೇಶದಲ್ಲಿ ನೆಲಸುವುದಕ್ಕಾಗಿ ಹೋಗು ; ಒಕ್ಕಲು ಹೋಗು ; ವಲಸೆ ಹೋಗು ; (ಬಳ. ಮಾ.) ವಾಸಸ್ಥಾನವನ್ನು ಬದಲಾಯಿಸು. ವಲಸೆ ಹೋಗಲು ಸಹಾಯಮಾಡು. **Émigrant** — ಗ್ರಂಟ್ (ಗು., ನಾ.) ವಲಸೆ ಹೋಗುವ (ಹಕ್ಕಿಗಳ ವಿಷಯದಲ್ಲೂ ಸಹ) ; ವಲಸೆ ಹೋಗುವವನು ; ವಲಸಿಗ. **Emigrátion** —ಗ್ರೇಷನ್ (ನಾ.) ಒಂದು ಸ್ಥಳದಿಂದ, ಒಂದು ಸನ್ನಿವೇಶದಿಂದ, ಹೊರಕ್ಕೆ ಹೊರಡುವುದು ; ವಲಸೆ ಹೋಗುವುದು. **Émigratory** —ಗ್ರೇಟರಿ (ಗು.) ವಲಸೆ ಹೋಗುವ ; — ಸ್ವಭಾವದ.

Emigré (F) ಎಮಿಗ್ರೇ (ನಾ.) ಫ್ರೆಂಚ್ ವಲಸಿಗ (ಮು., ಫ್ರಾನ್ಸಿನ ಕ್ರಾಂತಿಯಲ್ಲಿ ವಲಸಹೋದ ರಾಜಪಕ್ಷದವನು)

Éminence ಎಮಿನೆನ್ಸ್ (ನಾ.) ಏರುನೆಲ ; ದಿಣ್ಣೆ ; ಮೇಡು ; ತಿಟ್ಟು ; ಎತ್ತರ. (ಸಮಾಜದಲ್ಲಿ, ಬುದ್ಧಿಶಕ್ತಿ, ಮೊ. ಗಳಲ್ಲಿ) ಉನ್ನತಿ, ಔನ್ನತ್ಯ, ಉನ್ನತ ಸ್ಥಾನ, ಪ್ರಾಧಾನ್ಯ, ಉತ್ಕೃಷ್ಟತೆ, ಹೆಚ್ಚುಗಾರಿಕೆ ; ಹಿರಿಮೆ ; ಪೆಂಪು (ಗ್ರಾಂ.). (E.-) ಕಾರ್ಡಿನಲ್ ಎಂಬ ಕ್ರೈಸ್ತ ಧರ್ಮಗುರುವಿನ ಬಿರುದು. **Éminent** (ಗು.) ಉನ್ನತ; ಘನ; ಉಚ್ಚ ; ಶ್ರೇಷ್ಠ ; ಉತ್ಕೃಷ್ಟ ; ಪ್ರಸಿದ್ಧ ; ಪ್ರಖ್ಯಾತ. E. domain (Domain ನೋಡಿ). **Éminently** (ಕ್ರಿ. ವಿ.)

Emír ಎಮೀರ್, **Émir** ಈಮರ್ (ನಾ.) ಅರಬ ಅಥವಾ ಮುಸಲ್ಮಾನ್ ದೊರೆ, ಅರಸು ಮಗ, ಅಥವಾ ಪ್ರಾಂತಾಧಿಪತಿ : ಅಮೀರ. ಮಹಮ್ಮದನ ಸಂತತಿಯವನು, ವಂಶಿಕ (= Ameer)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Émissary ಎಮಿಸರಿ (ನಾ.) ನಾ., ಗುಪ್ತ ಕಾರ್ಯಸಾಧನೆಗಾಗಿ ಕಳುಹಲ್ಪಟ್ಟವನು : ಗುಪ್ತ ದೂತ ; ಬೇಹುಕಾರ.

Emíssion. **Emit** ನೋಡಿ.

Emít ಇಮಿಟ್ (ಕ್ರಿ. ಸಕ.) (ಪ್ರವಾಹ, ಬೆಳಕು, ಶಾಖ, ನಾದ, ಅಭಿಪ್ರಾಯ, ಕಾಗದದ ಹಣ, ಮೊ. ನ್ನು) ಹೊರಸೂಸು, ಹೊರಕ್ಕೆ ಕಳುಹಿಸು, ಹೊರಡಿಸು, ಹೊರ ಬಿಡು, ಚೆಲ್ಲು, ವಿಸರ್ಜಿಸು, ಚಲಾವಣೆ ಮಾಡು. **Emíssion** ಇಮಿಷನ್ (ನಾ.) —ವುದು ; ಹೊರಸೂಸಿದ, ಹೊರಡಿಸಿದ, ವಿಸರ್ಜಿಸಿದ, ವಸ್ತು. E. theory ಬೆಳಕೆಂಬುದು ಬೆಳಗುವ ವಸ್ತುಗಳಿಂದ ಹೊರಟ ಭಾರರಹಿತ ಕಣಗಳ ಪ್ರವಾಹಗಳಿಂದಾದುದು ಎಂಬ ವಾದ, ತತ್ತ್ವ : ನಿಸ್ಸರಣ ವಾದ. **Emíssive** — ಸಿವ್ (ಗು.) ಹೊರಸೂಸುವ.

Émma gee ಎಮ ಜೀ (ನಾ.) (ಅಸಂ.) ಯಂತ್ರಫಿರಂಗಿ.

Émmet ಎಮೆಟ್ (ನಾ.) ಇರುವೆ.

Emóllient ಇಮಾಲಿಯೆಂಟ್ (ಗು., ನಾ.) (ಪ್ರಾಣಿಗಳ ದೇಹಭಾಗಗಳನ್ನು) ಮೃದು ಮಾಡುವ (ಲೇಪನ, ಮುಲಾಮು) (ರೂಪ. ಸಹ)

Emólument ಇಮಾಲ್ಯುಮೆಂಟ್ (ನಾ.) (ಅಧಿಕಾರದಿಂದ ಅಥವಾ ಕೆಲಸದಿಂದ ಬರುವ) ವರಮಾನ ; ಆದಾಯ ; ಸಂಬಳ ; ವೇತನ.

Emótion ಇಮೋಷನ್ (ನಾ.) ಮನೋಭಾವ ; ರಸ ಭಾವ ; ಅಲ(ಂ)ಪು (ಗ್ರಾಂ.) ; ಉದ್ವೇಗ ; ಉದ್ರೇಕ ; ಆವೇಗ ; ಮನೋವಿಕಾರ. (ಮ. ಶಾ.) ಭಾವ ; ರಾಗ. **Emótional** (ಗು.) ಭಾವಗಳ ; ಮನೋವಿಕಾರಕ್ಕೀಡಾಗುವ ; ಉದ್ರೇಕಪರ ; ಆವೇಶಪರ. **Emótionalism** (ನಾ.) ಭಾವಾವೇಶ ಗುಣ (ಮು., ಭಾವಾವೇಶವನ್ನು ಕೃಷಿ ಮಾಡುವ ಅಥವಾ ಅದಕ್ಕೆ ಬಗ್ಗುವ ಅಭ್ಯಾಸ) ; ಭಾವ ಪರವಶತೆ. **Emótionalist** (ನಾ.) ಭಾವಾವೇಶಗಳು ನಡೆವಳಿಕೆಗೆ ಆಧಾರವೆಂದು ವಾದಿಸುವವನು ; ಭಾವ ವಾದಿ. (ತಿರಸ್ಕಾರವಾಗಿ) ಅವಿವೇಕದಿಂದ ಭಾವಾವೇಶಗಳಿಗೊಳಗಾಗುವವನು ; ಉದ್ರೇಕ ಸ್ವಭಾವದವನು ; (ಅಗೌರವವಾಗಿ) ಇತರರ ಭಾವಾವೇಶ ಹೊಮ್ಮುವಂತೆ ಮನ ಸೆಳೆಯುವವನು ; ಉದ್ರೇಕಕಾರಿ. **Emotionálity** — ನ್ಯಾಲಿಟಿ (ನಾ.) ಭಾವಾವೇಶ ಗುಣ ಅಥವಾ ಮನೋವೃತ್ತಿ. **Emótionally** (ಕ್ರಿ. ವಿ.) ; **Emótionless** (ಗು.) ಭಾವಾವೇಶವಿಲ್ಲದ. **Emótive** — ಟಿವ್ (ಗು.) ಭಾವೋದ್ರೇಕ ಮಾಡುವ ; ಭಾವೋದ್ರೇಕದ. **Emótively** (ಕ್ರಿ. ವಿ.)

Empánel, Im- ಎಂಪ್ಯಾನೆಲ್, ಇಂ — (ಕ್ರಿ. ಸಕ.) (ನ್ಯಾಯದರ್ಶಿಗಳ ಹೆಸರನ್ನು) ಪಟ್ಟಿಯಲ್ಲಿ ಸೇರಿಸು, ದಾಖಲು ಮಾಡು.

Émpathy ಎಂಪತಿ (ನಾ.) (ಮ. ಶಾ.) ಚಿಂತಕನ ವ್ಯಕ್ತಿತ್ವವನ್ನು ಚಿಂತ್ಯ ವಸ್ತುವಿನಮೇಲೆ ಪ್ರವರ್ತಿಸುವಂತೆ ಮಾಡುವ (ಮತ್ತು ಅದರಿಂದ ಚಿಂತ್ಯವನ್ನು ಸಂಪೂರ್ಣವಾಗಿ ಗ್ರಹಿಸುವ) ಶಕ್ತಿ : ಅನುಭೂತಿ ಶಕ್ತಿ.

Émperor ಎಂಪರರ್ (ನಾ.) ಚಕ್ರವರ್ತಿ ; ಸಮ್ರಾಟ ; ಸಾರ್ವಭೌಮ. ಪವಿತ್ರ ರೋಮನ್ ಚಕ್ರಾಧಿಪತ್ಯದ ಅಧಿಪತಿ. Purple E. ಒಂದು ಜಾತಿಯ ಪತಂಗದ ಹುಳು. **Émperorship** (ನಾ.) ಚಕ್ರವರ್ತಿ ಪದವಿ ; ಚಕ್ರವರ್ತಿತ್ವ ; ಸಾರ್ವಭೌಮತ್ವ. **Émpress** ಎಂಪ್ರೆಸ್ (ನಾ.) ಚಕ್ರವರ್ತಿಯ ಹೆಂಡತಿ ; ಚಕ್ರವರ್ತಿನಿ ; ಸಮ್ರಾಜ್ಞಿ (ಸಾಮ್ರಾಜ್ಯ ವಾಳುವವಳು). (ರೂಪ.) ನಿರಂಕುಶಾಧಿಕಾರಿಣಿ ; ಸರ್ವಾಧಿಕಾರಿಣಿ.

Émphasis ಎಂಫಸಿಸ್ (ನಾ. ; ಬ. ವ. Emphases — ಸೀಸ್) (ವಿಶೇಷಾರ್ಥವನ್ನು ಸೂಚಿಸುವುದಕ್ಕಾಗಿ ಪದದಮೇಲೆ ಹಾಕುವ) ಸ್ವರ ಭಾರ, ಒತ್ತು. (ಮಾತು, ಭಾವ, ಕಾರ್ಯ, ಮೊ. ಗಳ) ವೀರ್ಯ, ಪ್ರಾಬಲ್ಯ, ಸಾಮರ್ಥ್ಯ. (ಒಂದು ವಸ್ತುವಿಗೆ ಕೊಡುವ) ಪ್ರಾಧಾನ್ಯ, ಪ್ರಾಮುಖ್ಯತೆ, ಗೌರವ, ಮಹತ್ತ್ವ, ಪ್ರಭಾವ. ಹೊರ ರೇಖೆಯ ತೀಕ್ಷ್ಣತೆ, ಸ್ಪಷ್ಟತೆ. **Émphasize** — ಸೈಸ್ (ಕ್ರಿ. ಸಕ.) (ಮಾತಾಡುವುದರಲ್ಲಿ ಪದದಮೇಲೆ) ಸ್ವರಭಾರ ಹಾಕು ; (ಪದಗಳನ್ನು) ಒತ್ತಿ ಹೇಳು. (ವಿಷಯ, ಮೊ. ಕ್ಕೆ) ಪ್ರಾಧಾನ್ಯ, ಪ್ರಾಶಸ್ತ್ಯ, ಕೊಡು. **Emphátic** ಎಂಫ್ಯಾಟಿಕ್ (ಗು.) (ಭಾಷೆ, ಸ್ವರ, ಭಾವ, ವ್ಯಕ್ತಿ — ಇವುಗಳ ವಿಷಯದಲ್ಲಿ) ಒತ್ತಿ ಹೇಳುವ, ಸ್ಪಷ್ಟಪಡಿಸುವ. (ಪದಗಳು) ಒತ್ತುಳ್ಳ ; ಸ್ವರಭಾರ ಹೊಂದಿರುವ. (ಕಾರ್ಯಗಳು) ಪ್ರಬಲವಾದ ; ಅರ್ಥವತ್ತಾದ. **Emphátically** (ಕ್ರಿ. ವಿ.)

Émpire ಎಂಪಯರ್ (ನಾ.) ಚಕ್ರವರ್ತಿಯ ರಾಜ್ಯ ; ಚಕ್ರಾಧಿಪತ್ಯ ; (ಸರ್ವಾಧಿಕಾರವುಳ್ಳ ವಿಸ್ತಾರವಾದ) ಸಾಮ್ರಾಜ್ಯ. ನಿರಂಕುಶಾಧಿಕಾರ ; ಸರ್ವಾಧಿಕಾರ. (ಚರಿತ್ರೆ) The E. (ಸಾ.,) ಪವಿತ್ರ ರೋಮನ್ ಚಕ್ರಾಧಿಪತ್ಯ. E. Day ಮೇ ತಿಂಗಳ ೨೪ನೆಯ ತಾರೀಖು (ವಿಕ್ಟೋರಿಯಾ ಮಹಾರಾಣಿಯ ಹುಟ್ಟಿದ ದಿನ). (ಅಮೆ. ಸಂ.) E. City, State ನ್ಯೂಯಾರ್ಕು (ಪಟ್ಟಣ, ಸಂಸ್ಥಾನ)

Empíric ಎಂಪಿರಿಕ್ (ಗು., ನಾ.) (ತತ್ತ್ವದ ಆಧಾರದಮೇಲಲ್ಲದೆ) ಕೇವಲ ಸಮೀಕ್ಷೆಯನ್ನೂ ಪ್ರಯೋಗಗಳನ್ನೂ ಅವಲಂಬಿಸಿರುವ, ಅನುಸರಿಸುವ. ಬರಿ ಪ್ರಯೋಗಗಳ ಮೇಲೆಯೇ ಆಧಾರವಿಟ್ಟಿರುವ(ವನು) ; ಅನುಭವಾತ್ಮಕ ; ಪ್ರಾಯೋಗಿಕ. ಅನುಭವ ವಾದಿ ; ಪ್ರಯೋಗ ವಾದಿ. ಅಳಲೆಕಾಯಿ ಪಂಡಿತ. **Empírical** (ಗು.) ; **Empírically** (ಕ್ರಿ. ವಿ.) ; **Empíricism** — ಸಿಸ್‌ಮ್ (ನಾ.) ಶಾಸ್ತ್ರ ಜ್ಞಾನವಿಲ್ಲದ ಬರಿ ಅನುಭವ ವೈದ್ಯ : ಅಳಲೆಕಾಯಿ ವೈದ್ಯ. ಯಾವ ಕಲೆಯಲ್ಲೇ ಆಗಲಿ ಶಾಸ್ತ್ರದಲ್ಲೇ ಆಗಲಿ ಪ್ರಯೋಗಸಿದ್ಧ ಪದ್ಧತಿಗಳ ಆಚರಣೆ. (ತತ್ತ್ವಶಾಸ್ತ್ರ) ಅನುಭವವೊಂದೇ ಜ್ಞಾನಕ್ಕೆ ಮೂಲಾಧಾರವೆಂದು ಪ್ರತಿಪಾದಿಸುವ ವಾದ, ತತ್ತ್ವ : ಅನುಭವೈಕ ವಾದ. **Empíricist** (ನಾ.)

Emplácement ಎಂಪ್ಲೇಸ್‌ಮೆಂಟ್ (ನಾ.) ಸ್ಥಾನ ; ಸ್ಥಳ ; ಪ್ರದೇಶ ; ನೆಲೆ ; ನಿಲವು ; ನಿಲ್ಲಿಸುವುದು ; ಇಡುವುದು ; ಸ್ಥಾಪನೆ. ಫಿರಂಗಿಗಳನ್ನು ಇಡುವುದಕ್ಕಾಗಿ ಮಾಡಿದ ಜಗಲಿ.

Empláne ಎಂಪ್ಲೇನ್ (ಕ್ರಿ.) ಫಲಕ ವಿಮಾನ ಹತ್ತು, ಏರು.

Employ̆ ಎಂಪ್ಲಾಯ್ (ಕ್ರಿ. ಸಕ., ನಾ.) (ವಸ್ತು, ಶಕ್ತಿ, ಮೊ. ನ್ನು) ಉಪಯೋಗಿಸು, ಪ್ರಯೋಗಿಸು, ಬಳಸು (*For, in, on, about* ಉಪ. ದೊಡನೆ). (ಒಬ್ಬನನ್ನು) ಕೆಲಸಕ್ಕಿಟ್ಟುಕೊ ; (ತಾನು) ಕೆಲಸ ವಿಟ್ಟುಕೊಂಡಿರು ; ಕಾರ್ಯ ಮಾಡುತ್ತಿರು ; ತೊಡಗಿರು ; ನಿರತನಾಗಿರು. ಕೆಲಸ ಮಾಡಿಸು ; ತೊಡಗಿಸು. (ನಾ.) In the e. of — ನ ಚಾಕರಿಯಲ್ಲಿ, ಊಳಿಗದಲ್ಲಿ. **Employ̆able** (ಗು.) ; **Emplóye** (F) ಆಂಪ್ಲಾಯೇ, ಅನ್‌ಪ್ಲ್ವಾಯೇ (ನಾ. ; ಸ್ತ್ರೀ. -ee — ಈ) ಕೂಲಿಯಾಳು ; ಚಾಕರ ; ನೌಕರ. **Employ̆eé** ಎಂಪ್ಲಾಯಿ (ನಾ.) = Employe. **Employ̆er** (ನಾ.) ಚಾಕರಿಗಿಟ್ಟುಕೊಳ್ಳುವವನು ; ಕೆಲಸ ಕೊಡುವವನು ; ಧಣಿ ; ಯಜಮಾನ. **Employ̆ment** (ನಾ.) (ಕ್ರಿಯಾರ್ಥಗಳಲ್ಲಿ). (ಒಬ್ಬನ ಮುಖ್ಯವಾದ, ಕ್ರಮವಾದ) ಉದ್ಯೋಗ, ವೃತ್ತಿ, ವ್ಯಾಪಾರ, ಚಾಕರಿ, ನೌಕರಿ, ಕೆಲಸ.

Empoíson ಎಂಪಾಯ್ಸ್ನ(ಯ್ಸ್ನ)ನ್ (ಕ್ರಿ. ಸಕ.) ವಿಷ ಹಾಕು ; ನಂಜಿಡು ; ವಿಷ ಸುರಿ ; ವಿಷ ಹಿಂಡು ; ವಿಷದಲ್ಲಿ ಅದ್ದು. (ರೂಪ.) ವಿಷ ಹಾಕಿದಂತೆ ಕಲುಷಿತ ಮಾಡು ; ದೂಷಿತ ಮಾಡು ; ಮಲಿನ ಮಾಡು ; ಕಳಂಕಿಸು ; ಮನಃಕಷಾಯ ಪಡಿಸು ; ಮನಸ್ಸು ಕೆಡಿಸು ; ವಿರೋಧ ಹುಟ್ಟಿಸು.

Empórium ಎಂಪೋರಿಯಂ (ನಾ.) ವಾಣಿಜ್ಯ ಕೇಂದ್ರ ; ವ್ಯಾಪಾರ— ; ವ್ಯಾಪಾರ ಸ್ಥಳ. ಅಂಗಡಿ(ಗೆ ಆಡಂಬರದ ಹೆಸರು)

Empow̆er ಎಂಪೌಅರ್ (ಕ್ರಿ. ಸಕ.) ಅಧಿಕಾರ ಕೊಡು ; ಶಕ್ತಿ ಕೊಡು. (ಒಂದು ಕೆಲಸ ಮಾಡಲು, ಒಬ್ಬನಿಗೆ) ಅಧಿಕಾರ ವಹಿಸು ; ಮೊಕ್ತಿಯಾರಿ ಕೊಡು ; ವಕಾಲತ್ತು ವಹಿಸಿಕೊಡು.

Émpress. **Emperor** ನೋಡಿ.

Empréssement (F) ಅನ್‌ಪ್ರೆಸ್‌ಮಾನ್ (ನಾ.) ಆದರ ಪ್ರದರ್ಶನ ; ಅತಿ ಆದರ ; ಆದರಾತಿಶಯ.

Emprise, -íze ಎಂಪ್ರೈಸ್ (ನಾ.) (ಪ್ರಾಚೀ. ಪ್ರ.) (ವೀರ ಪುರುಷನಿಗೆ ತಕ್ಕ) ಸಾಹಸ ಕಾರ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Émpty ಎಂಪ್ಟಿ (ಗು., ನಾ.) ಬರಿದಾದ ; ಬರಿಯ ; ಒಳಗೇನೂ ಇಲ್ಲದ ; ಪೊಳ್ಳು ; ಶೂನ್ಯ ; ಖಾಲಿ ; (ಗುಣ) ರಹಿತ, ಇಲ್ಲದ; ನಿರ್ಗುಣ ; ತಿರುಳಿಲ್ಲದ. (ಬಳ. ಮಾ.) ಹಸಿದ ; ಬರಿ ಹೊಟ್ಟೆಯ. (ಮನೆ) ಬೈಟಕ್ಕು ಸಾಮಾನಾಗಲಿ ಜನರಾಗಲಿ ಇಲ್ಲದ. (ಸಾಮಾನು ಬಂಡಿ, ಹಡಗು, ಮೊ.) ಭಾರ ಹೇರಿರದ, ಭರ್ತಿಯಿಲ್ಲದ. (ವ್ಯಕ್ತಿ, ಹೂಟ, ಸಂವಿಧಾನ, ಮೊ.) ವಿವೇಕವಿಲ್ಲದ ; — ರಹಿತ ; — ಶೂನ್ಯ ; ಅರ್ಥವಿಲ್ಲದ. (ನಾ.) ಬರಿದಾದ ಸಾಮಾನುಬಂಡಿ ; ಖಾಲಿ ಬಂಡಿ, ಪೆಟ್ಟಿಗೆ, ಮೊ. ಪು. E.-handed ಬರಿಗೈಯ ; ಕೊಡುವುದಕ್ಕೇನೂ ತರದ ; ರಿಕ್ತ ಹಸ್ತ ; ಏನೂ ತೆಗೆದುಕೊಂಡುಹೋಗದ. E.-headed, -pated ಪೊಳ್ಳು ತಲೆಯ ; ಬುದ್ಧಿಯಿಲ್ಲದ ; ಬುದ್ಧಿ ಶೂನ್ಯ. **Émptiness** (ನಾ.)

Émpty (ಕ್ರಿ.) (ಪಾತ್ರೆ, ಮೊ. ಗಳ) ಒಳಗಿನದನ್ನು ತೆಗೆದುಬಿಡು ; ಬರಿದು ಮಾಡು ; ಖಾಲಿ ಮಾಡು ; ತೆರಪು ಮಾಡು. ಪಾತ್ರೆ, ಮೊ. ಗಳಲ್ಲಿರುವುದನ್ನು ಒಂದರಮೇಲೆ ಚೆಲ್ಲು, ಒಂದಕ್ಕೆ ಸುರಿ. (ನದಿಯ ವಿಷಯದಲ್ಲಿ) (ಸಮುದ್ರ, ಮೊ. ಗಳಲ್ಲಿ) ಬೀಳು, ಸುರಿ. ಬರಿದಾಗು ; ಖಾಲಿಯಾಗು ; ಶೂನ್ಯವಾಗು.

Empúrple ಎಂಪರ್‌ಪ್‌ಲ್ (ಕ್ರಿ. ಸಕ.) ಧೂಮ್ರವರ್ಣ ಮಾಡು ; ನೇರಿಳೆ ಬಣ್ಣ ಮಾಡು ; ಕೆಂಪು ಮಾಡು ; ಕೆಂಪೇರಿಸು.

Empyréan ಎಂಪಿರೀಯನ್, **Empýrean** — ರಿಯನ್ (ಗು., ನಾ.) ಅಗ್ನಿಲೋಕ(ದ) ; ತೇಜೋಲೋಕ(ದ) ; ದೇವರ ನಿವಾಸ(ದ) ; ಉಚ್ಚತಮ ಸ್ವರ್ಗ(ದ). ದೇವ ಲೋಕ(ದ) ; ಆಕಾಶ(ದ) ; ಬಾನಿನ. ವಿಶ್ವಾಕಾಶ. **Empýreal** (ಗು.)

Ému, Émeu ಈಮ್ಯೂ (ನಾ.) ಆಸ್ಟ್ರೇಲಿಯದ ಒಂದು ದೊಡ್ಡ ಪಕ್ಷಿ (ಜಾತಿ)

Émulate ಎಮ್ಯುಲೇಟ್ (ಕ್ರಿ. ಸಕ.) ಸರಿಸಮಕ್ಕೆ ಬರಲು, ಮೀರಲು, ಯತ್ನಿಸು ; ಸ್ಪರ್ಧಿಸು ; ಹುರುಡಿಸು ; ಮೇಲಾಡು ; ಆಸಕ್ತಿಯಿಂದ, ಉತ್ಸಾಹದಿಂದ, ಅನುಕರಿಸು ; ಮೇಲ್ಪಂಕ್ತಿ ಅನುಸರಿಸು. **Emulátion** (ನಾ.) ; **Émulator** (ನಾ.) ; **Émulative** — ಲೇಟಿವ್ (ಗು.) ; **Émulous** (ಗು.) (ಒಬ್ಬನನ್ನು, ಒಂದನ್ನು) ಆಸಕ್ತಿಯಿಂದ, ಈರ್ಷ್ಯೆಯಿಂದ, ಅನುಕರಿಸುವ. (ಪ್ರಖ್ಯಾತಿ, ಮೊ. ನ್ನು) ಆಶಿಸುವ ; ಕೀರ್ತಿ ಕಾಮಿ ; ಸ್ಪರ್ಧೆಯ ಬುದ್ಧಿಯಿಂದ ಚೋದಿತನಾದ; ಹುರುಡಿಸುವ ; ಸ್ಪರ್ಧಿಸುವ ; ಸ್ಪರ್ಧಾಳು. **Émulously** (ಕ್ರಿ. ವಿ.)

Emúlsify. **Emulsion** ನೋಡಿ.

Emúlsion ಇಮಲ್ಷನ್ (ನಾ.) ಜಿಡ್ಡಿನ ಅಥವಾ ರಾಳಪದಾರ್ಥದ ಸೂಕ್ಷ್ಮ ಕಣಗಳು ದ್ರವದ ಆಳದುದ್ದಕ್ಕೂ ತೇಲಾಡುತ್ತಿರುವುದರಿಂದ ಹಾಲಿನಂತೆ ಕಾಣುವ ದ್ರವ. **Emúlsionize** (ಕ್ರಿ. ಸಕ.) = **Emúlsify** — ಸಿಫೈ (ಕ್ರಿ. ಸಕ.) (ರಚನೆಯಲ್ಲಿ) ಹಾಲಿನಂತಾಗಿಸು. **Emúlsive** (ಗು.) ಹಾಲಿನ ರಚನೆಯುಳ್ಳ.

Emúnctory ಇಮಂಕ್ಟರಿ (ಗು., ನಾ.) (ಮೂಗು) ಸೀದುವ. ಪ್ರಯೋಜನ ತೀರಿದ (ವ್ಯರ್ಥ) ಪದಾರ್ಥವನ್ನು ದೇಹದಿಂದ ಹೊರಸಾಗಿಸುವ (ಅಂಗ, ನಾಳ) : ವಿಸರ್ಜಕ (ಅಂಗ)

En ಎನ್ (ನಾ.) ಮುದ್ರಣದಲ್ಲಿ ಅಗಲದ ಮಾನ (Em ಗಿಂತಲೂ ಕಿರಿದಾದದ್ದು)

Enáble ಎನೇಬ್‌ಲ್ (ಕ್ರಿ. ಸಕ.) (ಒಬ್ಬನಿಗೆ, ಮಾಡುವುದಕ್ಕೆ) ಶಕ್ತಿಯುಂಟು ಮಾಡು, ಶಕ್ತಿ ಕೊಡು ; ಅಧಿಕಾರ ಕೊಡು ; ಸಮರ್ಥ ಮಾಡು ; (ವ್ಯಕ್ತಿ, ಮೊ. ಕ್ಕೆ, ಕೆಲಸಮಾಡಲು) ಅವಕಾಶ ಕಲ್ಪಿಸು, ಅನುಕೂಲ ಒದಗಿಸು. Enabling Act or Statute (ಒಬ್ಬ ಅಥವಾ ಒಂದು ಸಂಸ್ಥೆ ಯಾವುದಾದರೂ ಒಂದು ಕಾರ್ಯವನ್ನು ಮಾಡುವುದಕ್ಕೆ ನ್ಯಾಯ ಸಮ್ಮತವಾಗುವಂತೆ) ಅಧಿಕಾರ ಕೊಡುವ ಕಾನೂನು.

Enáct ಎನ್ಯಾಕ್ಟ್ (ಕ್ರಿ. ಸಕ.) ಕಾನೂನು ಮಾಡು ; ಕಟ್ಟಳೆ, ಕಾಯಿದೆ, ಮಾಡು ; ಶಾಸನ ಮಾಡು ; ವಿಧಿಸು. (ರಂಗಭೂಮಿಯಲ್ಲಿ ಅಥವಾ ಜೀವಮಾನದಲ್ಲಿ ಒಂದು ಪಾತ್ರವನ್ನು, ದೃಶ್ಯವನ್ನು) ಅಭಿನಯಿಸು ; ನಾಟಕವಾಡು. **Enáction** (ನಾ.), **Enáctment** (ನಾ.) ಕಾನೂನು ಮಾಡುವುದು ; ಕಾನೂನು ; ಶಾಸನ. **Enáctive** (ಗು.); **Enácting** (ಗು.) Enacting clauses ಒಂದು ಕಾನೂನಿನಲ್ಲಿ ಶಾಸನಕರ್ತರ ಅಧಿಕಾರವನ್ನು ತೋರಿಸಿ ವಿಧಾಯಕ ಮಾಡುವ ಕಲಮುಗಳು. **Enáctory** (ಗು.)

Enámel ಎನ್ಯಾಮೆಲ್ (ನಾ., ಕ್ರಿ. ಸಕ.) ಒಂದು ಲೋಹದ ಮೈಮೇಲೆ ಅದು ತುಕ್ಕುಹಿಡಿಯದಿರುವುದಕ್ಕಾಗಲಿ ಅಥವಾ ಅಂದಕೊಡುವುದಕ್ಕಾಗಲಿ ಲೇಪಿಸುವ ಗಾಜಿನಂಥ ಲೇಪ : ಗಾಜುಲೇಪ ; 'ಎನ್ಯಾಮೆಲ್' (ರೂಪ. ಸಹ) ; ನುಣುಪಾಗಿಯೂ ಗಡುಸಾಗಿಯೂ ಇರುವ ಯಾವುದಾದರೂ ಲೇಪ. ಮುಖವನ್ನು ಅಂದಗೊಳಿಸಲು ಹಚ್ಚುವ (ಅನೇಕ ತೆರದ) ಮೆರುಗು. ಹಲ್ಲಿನಮೇಲಿನ ಗಡುಸು ಪೊರೆ. ಎನ್ಯಾಮೆಲ್ ಲೇಪದಮೇಲೆ ರಚಿಸಿದ ಚಿತ್ರಕೆಲಸ. (ಕಾವ್ಯ) ನುಣುಪಾದ, ಪ್ರಕಾಶವಾದ, — ಹೊರಬಣ್ಣ, ಪಚ್ಚೆಹುಲ್ಲು, ಮೊ. ಪು. (ಕ್ರಿ.) (ಲೋಹ, ಮೊ. ಕ್ಕೆ, ಮುಖ ಅಥವಾ ಚರ್ಮಕ್ಕೆ) ಎನ್ಯಾಮೆಲ್ ಬಳಿ, ಮೆರುಗು ಕೊಡು. (ಆಕೃತಿ, ಮೊ. ಗಳನ್ನು) ಎನ್ಯಾಮೆಲಿನಿಂದ ಚಿತ್ರಿಸು. ಬಗೆಬಗೆಯ ಬಣ್ಣಗಳಿಂದ ಅಲಂಕರಿಸು, ಸಿಂಗರಿಸು.

Enámour ಎನ್ಯಾಮರ್ (ಕ್ರಿ. ಸಕ.) ಪ್ರೇಮ ಹುಟ್ಟಿಸು ; ಮನ ಸೆಳೆ ; ಮೋಹಗೊಳಿಸು (ಮು., ಭೂ. ಕೃ. ನಲ್ಲಿ) ; ಮುಗ್ಧನಾಗಿಸು.

Enarthrósis ಎನಾರ್ಥ್ರೋಸಿಸ್ (ನಾ.) (ಅಂ. ರ. ಶಾ.) ಒರಳೂ ಗುಂಡಿನ ಕೀಲು.

En blóc (F) ಎನ್(ಆನ್) ಬ್ಲಾಕ್ (ಕ್ರಿ. ವಿ.) ಒಟ್ಟಿಗೆ ; ಒಟ್ಟಾಗಿ.

Encaénia ಎನ್ಸೀನಿಯ (ನಾ.) ಅರ್ಪಣ ಮಹೋತ್ಸವ ; (ಆಕ್ಸ್‌ಫರ್ಡಿನಲ್ಲಿ) = Commemoration.

Encáge, In- ಎನ್ಕೇಜ್, ಇನ್ — (ಕ್ರಿ. ಸಕ.) ಬೋನಿನಲ್ಲಿ, ಪಂಜರದಲ್ಲಿ, ಕೂಡು, ಬಂಧಿಸು (ರೂಪ. ಸಹ)

Encámp ಎನ್‌ಕ್ಯಾಂಪ್ (ಕ್ರಿ.) (ಸೈನ್ಯ) ಪಾಳೆಯ ಬಿಡು, ಬಿಡಿಸು ; ಶಿಬಿರದಲ್ಲಿ ಬೀಡು ಬಿಡು ; ಬಯಲಿನಲ್ಲಿ ಹಾಕಿದ ಡೇರೆಗಳಲ್ಲಿ ಇಳಿ, ಇಳಿಸು ; ಮೊಕ್ಕಾಮು ಮಾಡು. **Encámpment** (ನಾ.) (ಕ್ರಿಯಾರ್ಥಗಳಲ್ಲಿ). ದಳಗಳು ಬೀಡುಬಿಟ್ಟಿರುವ ಸ್ಥಳ ; ಶಿಬಿರ ; ಪಾಳೆಯ.

Encáse, In- ಎಂಕೇಸ್, ಇಂ — (ಕ್ರಿ. ಸಕ.) ಒಂದು ಕೋಶದಲ್ಲಿ, ಆವರಣದಲ್ಲಿ, ಪೆಟ್ಟಿಗೆಯಲ್ಲಿ, ಇಡು, ಮುಚ್ಚು. **Encásement** (ನಾ.)

Encásh ಎನ್‌ಕ್ಯಾಷ್ (ಕ್ರಿ. ಸಕ.) (ಹುಂಡಿ, ಮೊ.) ನಗದು ಹಣಕ್ಕೆ ಮಾರ್ಪಡಿಸು, ಮುರಿಸು ; — ನಗದು ಹಣ ಪಡೆ. **Encáshment** (ನಾ.) (ಹುಂಡಿ, ಮೊ. ನ್ನು) ಮುರಿಸುವುದು ; ನಗದಾಗಿ ಬಂದ ಹಣ.

Encaústic ಎನ್‌ಕಾಸ್ಟಿಕ್ (ಗು., ನಾ.) ಸುಡುವ ವಿಧಾನದ ಚಿತ್ರ, ಚಿತ್ರ ಕಲೆ : ಸೂಡು ಚಿತ್ರ. E. brick, tile ಬಣ್ಣಬಣ್ಣದ ಜೇಡಿ ಮಣ್ಣುಗಳನ್ನಿಟ್ಟು ಚಿತ್ರಿಸಿ ಸುಟ್ಟ ಇಟ್ಟಿಗೆ, ಹೆಂಚು.

Enceínte (F) ಅನ್‌ಸ್ಯಾಂಟ್, — ಸೇಂಟ್ (ಗು., ನಾ.) (ಹೆಂಗಸಿನ ವಿಷಯದಲ್ಲಿ) ಬಸುರಾದ, ಗರ್ಭ ಧರಿಸಿದ, ಗರ್ಭಿಣಿಯಾದ. (ನಾ.) (ಕೋಟೆ ಕೊತ್ತಲಗಳಲ್ಲಿ) ಆವರಣ, ಪ್ರಾಕಾರ ; ಕೋಟೆಯ ಮುಖ್ಯಾವರಣ.

Encephálic ಎನ್ಸಿಫ್ಯಾಲಿಕ್ (ಗು.) ಮಿದುಳಿನ.

Encháin ಎನ್‌ಚೆಯ್ನ್ (ಕ್ರಿ. ಸಕ.) ಸರಪಣಿ ಬಿಗಿ ; ತೊಡರು ಹಾಕು ; ಬೇಡಿ, ಸಂಕೋಲೆ, ಹಾಕು ; ಕಟ್ಟಿಹಾಕು. (ಗಮನವನ್ನು, ಭಾವಗಳನ್ನು) ಸೆಳೆದು ಹಿಡಿ, ಬಂಧಿಸು. **Encháinment** (ನಾ.)

Enchánt ಎನ್‌ಚಾಂಟ್ (ಕ್ರಿ. ಸಕ.) ಮಾಟ ಮಾಡು ; ಮಂತ್ರದಿಂದ ಬಂಧಿಸು ; ಮರುಳು ಮಾಡು (ರೂಪ. ಸಹ) ; ಮೋಹಗೊಳಿಸು ; ಆಹ್ಲಾದಗೊಳಿಸು ; ಆನಂದವುಂಟುಮಾಡು. **Enchánter** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಂತ್ರಿಕ ; ಮಂತ್ರವಾದಿ ; ಮಾಟಗಾರ. **Enchántment** (ನಾ.) (ಕ್ರಿಯಾರ್ಥಗಳಲ್ಲಿ). (ರೂಪ.) ಮೋಹಕ ಶಕ್ತಿ. **Enchántress** (ನಾ.) ಮಾಟಗಾತಿ ; (ರೂಪ.) ಮೋಹಪರವಶ ಮಾಡುವ ಹೆಂಗಸು ; ಮೋಹಿನಿ. **Enchántingly** (ಕ್ರಿ. ವಿ.)

Enchirídion ಎನ್ಕೈರಿಡಿಯನ್ (ನಾ.) ಕೈಪಿಡಿ ; ಹಸ್ತ ಪುಸ್ತಕ.

Encírcle ಎನ್ಸರ್ಕ್‌ಲ್ (ಕ್ರಿ. ಸಕ.) ಸುತ್ತು ; ಸುತ್ತುಗಟ್ಟು ; ಸುತ್ತುಬಳಸು ; ಆವರಿಸು ; ಪರಿವೇಷ್ಟಿಸು (*With* ಉಪ. ದೊಡನೆ). ಸುತ್ತಲೂ ವೃತ್ತ ಮಾಡು ; ಮಂಡಲ ರಚಿಸು ; ವಲಯಗಟ್ಟು.

En clair (F) ಅನ್ ಕ್ಲೇರ್ (ವಾಕ್ಯಭಾಗ) (ಟೆಲಿಗ್ರಾಮುಗಳು, ಸರ್ಕಾರದ ಸಂದೇಶಗಳು, ಮೊ.) ಸಾಮಾನ್ಯ (ವ್ಯವಹಾರ) ಭಾಷೆಯಲ್ಲಿ (ಗೂಢ ಭಾಷೆಯಲ್ಲಲ್ಲ)

Enclásp ಎನ್‌ಕ್ಲಾಸ್ಪ್ (ಕ್ರಿ. ಸಕ.) ಬಂಧನಿಯಲ್ಲಿ ಹಿಡಿದುಕೊ. ಅಪ್ಪು ; ಆಲಿಂಗಿಸು ; ತಕ್ಕೈಸು ; ತಬ್ಬಿಕೊ.

Enclávе (F) ಎನ್‌ಕ್ಲೇವ್, ಆನ್‌ಕ್ಲಾವ್ (ನಾ.) ಪರ ರಾಜ್ಯ ಸುತ್ತುಗಟ್ಟಿರುವ ದೇಶ.

Enclític ಎನ್‌ಕ್ಲಿಟಿಕ್ (ಗು., ನಾ.) (ವ್ಯಾಕರಣ) ಹಿಂದಿನ ಪದದ ಭಾಗವಾಗಿ ಉಚ್ಚರಿಸುವಷ್ಟು ಅಪ್ರಧಾನವಾದ (ಪದ) (ಮು., ಗ್ರೀಕಿನಲ್ಲಿ ಹಿಂದಿನ ಪದದಮೇಲೆ ಸ್ವರಭಾರ ಹಾಕುವ). **Enclítically** (ಕ್ರಿ. ವಿ.)

Enclóse, In- ಎನ್‌ಕ್ಲೋಸ್, ಇನ್— (ಕ್ರಿ. ಸಕ.) (ಜಮೀನು, ಮೊ. ನ್ನು ಗೋಡೆ, ಮೊ. ಗಳಿಂದ) ಸುತ್ತುಗಟ್ಟು, ಆವರಿಸು ; ಆವರಣ ಹಾಕು ; ಬೇಲಿ ಹಾಕು (*With, in* ಉಪ. ದೊಡನೆ). ಕೋಶದಲ್ಲಿ ಮುಚ್ಚಿಡು ; ಪೆಟ್ಟಿಗೆಯಲ್ಲಿ, ಭರಣಿಯಲ್ಲಿ, ಇಡು ; ಒಳಕ್ಕೆ ಸೇರಿಸು (ಮು. ಪತ್ರದೊಡನೆ ಲಕೋಟೆಯಲ್ಲಿ) ; ಇಡು. (ಮು., ಗಣಿತ ಶಾಸ್ತ್ರದಲ್ಲಿ) ಸುತ್ತಲೂ ಆವರಿಸು ; ಸುತ್ತುವರಿ ; ಒಳಕೊಂಡಿರು. ಎಲ್ಲ ಕಡೆಗಳಲ್ಲೂ ಮುತ್ತು, ಸುತ್ತಿರಿ. **Enclósure** — ಝ್ಯರ್, — ಝರ್ (ನಾ.) ಹದ್ದುಬಸ್ತು ಮಾಡಿಕೊಳ್ಳುವುದು ; ಬೇಲಿ, ಮೊ. ನ್ನು ಹಾಕಿಕೊಳ್ಳುವುದು (ಮು., ಊರೊಟ್ಟಿನ ನೆಲವನ್ನು ಖಾಸಗಿ ಆಸ್ತಿಯನ್ನಾಗಿ ಮಾಡಿಕೊಳ್ಳುವುದಕ್ಕಾಗಿ. E. Act ಆವರಣದ ಕಾನೂನು). ಸುತ್ತುಗಟ್ಟಿರುವ ಬೇಲಿ, ಮೊ. ದು ; ಸುತ್ತುಗಟ್ಟುಳ್ಳ ಪ್ರದೇಶ ; ಆವರಣ. ಪತ್ರದ ಜೊತೆಯಲ್ಲಿ ಲಕೋಟೆಯಲ್ಲಿಡುವ ಇತರ ಕಾಗದ, ಮೊ. ವು : ಸೇರಿಕೆಗಳು ; ಅಡಕಗಳು ; ಮಲಪೂಪಿಗಳು.

Enclóthe ಎನ್‌ಕ್ಲೋದ್ (ಕ್ರಿ. ಸಕ.) ಬಟ್ಟೆಯುಡಿಸು ; ಉಡಿಗೆ ಹಾಕು, ತೊಡಿಸು.

Encloúd ಎನ್‌ಕ್ಲೌಡ್ (ಕ್ರಿ. ಸಕ.) ಮೋಡಗವಿಸು ; ಮೋಡ ಮುಚ್ಚು.

Encómium ಎನ್‌ಕೋಮಿಯಂ (ನಾ.) ಅತಿ ಹೊಗಳಿಕೆ ; ಶ್ಲಾಘನೆ ; ಪ್ರಶಂಸೆ ; ಕೊಂಡಾಟ ; ಮೆಚ್ಚುನುಡಿ. **Encómiast** ಎನ್‌ಕೋಮಿಆ್ಯಸ್ಟ್ (ನಾ.) ಪ್ರಶಂಸೆಗಾರ ; ಸ್ತುತಿ ಪಾಠಕ ; ಸ್ತೋತ್ರಗಾರ ; ಹೊಗಳುಭಟ್ಟ ; ಮುಖಸ್ತುತಿ ಮಾಡುವವನು. **Encomiástic** — ಆ್ಯಸ್ಟಿಕ್ (ಗು.)

Encómpass ಎನ್‌ಕಂಪಸ್ (ಕ್ರಿ. ಸಕ.) (ಮು., ಸ್ನೇಹಭಾವದಿಂದ ಅಥವಾ ಶತ್ರುಭಾವದಿಂದ) ಸುತ್ತುವರಿ ; ಸುತ್ತುಗಟ್ಟು ; ಬಳಸು ; ಒಳಕೊಳ್ಳು ; ಉಳ್ಳದ್ದಾಗಿರು. **Encómpassment** (ನಾ.)

Encóre (F) ಆನ್ಕಾರ್, ಆಙ್ಕೋರ್ (ಭಾವ. ಅವ್ಯ., ನಾ., ಕ್ರಿ. ಸಕ.) ಮತ್ತೊಮ್ಮೆ. ಹಾಡು, ಮೊ. ನ್ನು ಮರಳಿ ಹಾಡಬೇಕೆಂದೂ, ಅಭಿನಯ, ಮೊ. ನ್ನು ಮರಳಿ ಪ್ರದರ್ಶಿಸಬೇಕೆಂದೂ ಕೇಳುವ (ಶ್ರೋತೃವಿನ, ಪ್ರೇಕ್ಷಕನ) ಕೇಳಿಕೆ. (ಕ್ರಿ.) (ಹಾಡು, ಮೊ. ನ್ನು) ಪುನರಾವೃತ್ತಿ ಮಾಡಬೇಕೆಂದು ಕೇಳು ; ಹಾಡುಗಾರನನ್ನು ಅಥವಾ ಆಟಗಾರನನ್ನು ಇದಕ್ಕಾಗಿ ಕರೆ, ಬರಹೇಳು. 'ಮತ್ತೊಮ್ಮೆ !' ಎಂದು ಕೇಳು.

Encoúnter ಎನ್‌ಕೌಂಟರ್ (ಕ್ರಿ. ಸಕ., ನಾ.) ಎದುರಿಸು ; ಪ್ರತಿಭಟಿಸು ; ಎದುರುಬೀಳು ; ಮೇಲೆ ಬೀಳು. ಸಂಧಿಸು (ಸಾ., ಅಕಸ್ಮಾತ್ತಾಗಿ). (ನಾ.) ಎದುರಿಸುವುದು ; ಪ್ರತಿಭಟಿಸುವುದು ; ಪ್ರತಿಭಟನೆ ; ಹೋರಾಟ ; ಕದನ. ಸಂಧಿಸುವುದು ; ಸಮಾಗಮ.

Encoúrage ಎನ್‌ಕರೆಜ್ (ಕ್ರಿ. ಸಕ.) ಧೈರ್ಯ ಕೊಡು ; — ಹೇಳು ; — ಹುಟ್ಟಿಸು ; (ಮಾಡಲು) ಪ್ರೋತ್ಸಾಹಿಸು ; ಪ್ರೇರಿಸು ; ಹುರಿದುಂಬಿಸು ; ಉತ್ತೇಜಿಸು. (ವಾಣಿಜ್ಯ, ಅಭಿಪ್ರಾಯ, ಮೊ. ನ್ನು, ಮೊ. ಕ್ಕೆ) ಅಭಿವೃದ್ಧಿಪಡಿಸು ; ಸಹಾಯ ಮಾಡು, ನೆರವು ಕೊಡು, ಒತ್ತಾಸೆ ಕೊಡು. **Encoúragement** (ನಾ.) ; **Encoúragingly** (ಕ್ರಿ. ವಿ.)

Encrímson ಎನ್‌ಕ್ರಿಂಸನ್ (ಕ್ರಿ. ಸಕ.) ಕಡುಗೆಂಪು ಮಾಡು ; ರಕ್ತವರ್ಣ ಮಾಡು.

Encroách ಎನ್‌ಕ್ರೋಚ್ (ಕ್ರಿ. ಅಕ.) [ಇತರರ ದೇಶದ (ಪ್ರದೇಶದ) ಮೇಲೆ, ಹಕ್ಕು, ಮೊ. ಗಳ ಮೇಲೆ, ಅತಿಕ್ರಮದಿಂದ] ಆಕ್ರಮಣ ಮಾಡು ; ಆಕ್ರಮಿಸು ; ಅತಿಕ್ರಮಿಸು ; ತನ್ನದಲ್ಲದ್ದಕ್ಕೆ ಕೈಹಾಕು. **Encroáchment** (ನಾ.) ಆಕ್ರಮಣ ; ಅತಿಕ್ರಮಣ ; ಒತ್ತುವರಿ.

Encrúst, In- ಎನ್‌ಕ್ರಸ್ಟ್, ಇನ್— (ಕ್ರಿ.) ಹೊರ ಪೊರೆ ಕಟ್ಟು, ಕಟ್ಟಿಸು ; (ಒಂದು ವಸ್ತುವಿಗೆ) ಅಲಂಕಾರಕ್ಕಾಗಿ ಪ್ರಶಸ್ತ ಪದಾರ್ಥದ ಮೇಲ್ಪದರ ಕೊಡು ; ಪೊರೆ, ಪದರ, —ಕಟ್ಟು ; ಹೆಕ್ಕಳಿಕೆಯಾಗು. **Encrústment** (ನಾ.) ಪೊರೆ ; ಪದರ ; ಹೆಕ್ಕಳಿಕೆ.

Encúmber ಎನ್‌ಕಂಬರ್ (ಕ್ರಿ. ಸಕ.) (ವ್ಯಕ್ತಿಯನ್ನು, ಚಲನೆಯನ್ನು, ಕಾರ್ಯವನ್ನು, — ಹೊರೆ, ಕಷ್ಟ, ಮೊ. ಗಳಿಂದ) ಪ್ರತಿಬಂಧಿಸು, ಅಡಚಣೆ ಮಾಡು, ಆತಂಕಪಡಿಸು ; ಭಾರ ಹೊರಿಸು ; (ವ್ಯಕ್ತಿಯಮೇಲೆ, ಆಸ್ತಿಯಮೇಲೆ, ಸಾಲಗಳ) ಹೊರೆ ಹೇರು. (ಒಂದು ಸ್ಥಳವನ್ನು, ಸದ್ಯಕ್ಕೆ ಕೆಲಸಕ್ಕೊದಗದ ಚಿಲ್ಲರೆ ಸಾಮಾನು, ಮೊ. ಗಳಿಂದ) ತುಂಬು, ಅಡಚು (ರೂಪ. ಸಹ). **Encúmberment** (ನಾ.); **Encúmbrance** —ಬ್ರನ್ಸ್ (ನಾ.) ಹೊರೆ ; ಭಾರ ; ಅಡ್ಡಿ ; ಅಡಚಣೆ ; ಆತಂಕ ; ತಡೆ ; ತೊಡರು ; ಪ್ರತಿಬಂಧಕ ; ಬಾಧೆ ; ತೊಂದರೆ (Without e. ಮಕ್ಕಳಿಲ್ಲದೆ). ಆಸ್ತಿಯಮೇಲೆ ಇತರರ ಹಕ್ಕು, ಅಡವು, ಈಡು, ಭೋಗ್ಯ, ಮೊ. ವು ; ಪೂರ್ವಾಧಿ. **Encúmbrancer** (ನಾ.) ಮತ್ತೊಬ್ಬನ ಆಸ್ತಿಯ ಮೇಲೆ ಪೂರ್ವಾಧಿಯುಳ್ಳವನು.

Encýclic(al) ಎನ್‌ಸೈಕ್ಲಿಕ್(ಅಲ್) (ಗು., ನಾ.) ವಿಸ್ತಾರ ಪ್ರಚಾರಕ್ಕಾಗಿ ಕಳುಹಿಸಿದ (ಪೋಪ್‌ಗುರುವಿನ ನಿರೂಪ)

Encyclop(a)édia ಎನ್‌ಸೈಕ್ಲೊಪೀಡಿಯ (ನಾ.) ಸಕಲ ಜ್ಞಾನದ ವಿಷಯವಾಗಿ, ಅಥವಾ ಅದರ ಒಂದು ಗೊತ್ತಾದ ಶಾಖೆಯ ವಿಷಯವಾಗಿ, ವಿಷಯಗಳನ್ನು ಸಾ., ಅಕಾರಾದಿಯಾಗಿ ವಿಂಗಡಿಸಿರುವ, ಗ್ರಂಥ : ಜ್ಞಾನ ಕೋಶ ; ವಿಶ್ವ ಕೋಶ. **Encyclopaédic(al)** (ಗು.) ವಿಶ್ವಕೋಶದ ; — ದಂಥ. ಎಲ್ಲ ವಿಷಯಗಳನ್ನೂ ಒಳಕೊಂಡ ; ವಿಷಯಪೂರ್ಣ ; ವ್ಯಾಪಕ. **Encyclopaédism** (ನಾ.) ಸರ್ವವ್ಯಾಪಕ ಪಾಂಡಿತ್ಯ. ವಿಶ್ವಕೋಶ ಕರ್ತರ ತತ್ತ್ವಗಳು. **Encyclopaédist** (ನಾ.) ವಿಶ್ವಕೋಶ ರಚಿಸುವವನು ; ವಿಶ್ವಕೋಶಕಾರ. ಸಕಲ ಜ್ಞಾನ ಸಂಬಂಧವಾದ ವಿಷಯಗಳನ್ನು ಪರಿಶೀಲಿಸುವವನು, ಬಲ್ಲವನು : ವಿಶ್ವ ಜ್ಞಾನಿ.

Encýst ಎನ್ಸಿಸ್ಟ್ (ಕ್ರಿ. ಸಕ.) ಕೋಶದಲ್ಲಿ, ಬಹಿರಾವರಣದೊಳಗೆ, ಇಡು. **Encystátion** (ನಾ.), **Encýstment** (ನಾ.) ಕೋಶಾವರಣವುಳ್ಳ ಸ್ಫೋಟದ ಸ್ಥಿತಿ. (ಜೀ. ವಿ.) ಕೋಶಾವರಣ ಏರ್ಪಡುವುದು.

End ಎಂಡ್ (ನಾ.) ಕೊನೆ ; ತುದಿ ; ಕಡೆ ; ಅಂತ್ಯ ; ಅಂತ ; ಅಂಚು ; ಎಲ್ಲೆ ; ಮೇರೆ ; ಮಿತಿ ; ಅವಧಿ (There is no e. to it ಅದಕ್ಕೆ ಕೊನೆಯಿಲ್ಲ). ಉಳಿದದ್ದು ; ಉಳಿಕೆ ; ತುಂಡು (Candle ends ಉರಿದು ಮಿಕ್ಕ ಮೋಂಬತ್ತಿಯ ತುಂಡುಗಳು. Odds and ends ಚೂರು ಪಾರು ; ಚಿಲ್ಲರೆ ಪಲ್ಲರೆ. Shoemaker's e. ಮೇಣ ಹಾಕಿ ಹುರಿಮಾಡಿದ ಬಿರುಗೂದಲನ ಕೊನೆಯುಳ್ಳ ಮೋಚಿಯವನ ದಾರ). (ಕಾಲ, ಕಾರ್ಯ, ಸ್ಥಿತಿ, ಗ್ರಂಥ, ಮೊ. ಗಳ) ಮುಗಿವು, ಮುಗಿತ, ಮುಕ್ತಾಯ, ಸಮಾಪ್ತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊನೆಗಾಲ ; ನಾಶ ; ಸಾವು ; ಮಡಿವು. ಫಲ ; ಉದ್ದೇಶ ; ಗುರಿ ; ಪರಿಣಾಮ (To gain his ends ಅವನ ಉದ್ದೇಶಸಾಧನೆಗಾಗಿ. To what e. ? ಯಾವ ಪ್ರಯೋಜನಕ್ಕಾಗಿ ?). ಅಂತಿಮ, ನಿರ್ಣಾಯಕ, — ಕಾರಣ. At a loose e. ಕೆಲಸವಿಲ್ಲದೆ ; ಬಿಡುವಾಗಿ. At one's wits' e. ಏನೂ ತೋರದೆ ; ಬುದ್ಧಿಗೆ ಹೊಳೆಯದೆ ; ದಿಗ್ಭ್ರಮೆಯಾಗಿ ; ಹಿಂದುಮುಂದು ತೋರದೆ. Be at, come to, an e. ಮುಗಿದುಹೋಗು ; ಕೊನೆಗೊಳ್ಳು ; ತುದಿ ಮುಟ್ಟು ; ಪೂರ್ತಿಯಾಗು. E. on ಕೊನೆ ಕಣ್ಣಿಗೆ ನೇರವಾಗಿರುವಂತೆ ಅಥವಾ ಯಾವುದಾದರೂ ವಸ್ತುವಿನ ಕಟ್ಟೆದುರಿಗಿರುವಂತೆ. E.-paper ಪುಸ್ತಕದ ಮೊದಲನಲ್ಲೂ ಕೊನೆಯಲ್ಲೂ ಒಂದು ಭಾಗ ರಟ್ಟಿನ ಒಳಮೈಗೆ ಹಚ್ಚಿ ಮತ್ತೊಂದು ಭಾಗವನ್ನು ಹಾಗೆಯೇ ಬಿಟ್ಟಿರುವ ಬರಿಹಾಳೆ. E.-to-e. ಒಂದು ದೇಶದ ಕೊನೆಯಿಂದ ಮತ್ತೊಂದು ಕೊನೆಗೆ (ಮು., ಮೋಟಾರು ಮತ್ತು ಸೈಕಲು ಪಂದ್ಯಗಳಲ್ಲಿ). Go (in) off the deep e. (ಈಜುಕಟ್ಟೆಯ ವಿಷಯದಲ್ಲಿ) (ರೂಪ.) ಅನಾವಶ್ಯಕವಾಗಿ ಗಾಬರಿಗೊಳ್ಳು. ಅಪಾಯವನ್ನು ಲಕ್ಷಿಸದೆ ಮುಂದುವರಿ, ಮುನ್ನುಗ್ಗು ; ನಷ್ಟಕ್ಕೆ ಸಿದ್ಧನಾಗಿ ವರ್ತಿಸು. Have at one's fingers' or tongue's e. ಕರಗತವಾಗಿರು ; ಸಿದ್ಧವಾಗಿಟ್ಟುಕೊಂಡಿರು ; ಕಂಠಪಾಠವಾಗಿ ತಿಳಿದಿರು ; ಚೆನ್ನಾಗಿ ತಿಳಿದಿರು. In the e. ಕೊನೆಗೆ ; ಕಟ್ಟಕಡೆಗೆ. Is at the e. of his tether ಇನ್ನು ಹೆಚ್ಚು ತಿಳಿಯದು ; ಶಕ್ತ್ಯಿದ್ದಷ್ಟೂ ಮಾಡಿದ್ದಾನೆ ; ಇನ್ನು ಹೆಚ್ಚಾಗಿ ಏನೂ ಮಾಡಲಾರ. Keep one's e. up (ಸಂಭಾಷಣೆ, ವ್ಯಾಪಾರ, ಮೊ. ಗಳಲ್ಲಿ) ದಕ್ಷತೆಯಿಂದ ನಿರ್ವಹಿಸು. Make both ends meet ವರಮಾನವನ್ನೂ ವೆಚ್ಚವನ್ನೂ ಸರಿಹೊಂದಿಸು. Make an e. of ಕೊನೆಗಾಣಿಸು ; ಮುಗಿಸಿಬಿಡು ; ನಿಲ್ಲಿಸಿಬಿಡು ; ಸಾಕುಮಾಡು. No. e. ಕೊನೆಯಿಲ್ಲದಷ್ಟು ; ಅನೇಕ ; ಬಹಳ ; ಅಪಾರ. On e. ಎಡೆ ಬಿಡದೆ ; ಒಂದೇ ಸಮನೆ ; ನಿರಂತರ (For three weeks on e. ಎಡೆ ಬಿಡದೆ ಮೂರು ವಾರಗಳ ಕಾಲ). Place on e. ನೆಟ್ಟಗೆ ನಿಲ್ಲಿಸು. Placed e. to e. ಉದ್ದುದ್ದವಾಗಿ ಕೊನೆಕೊನೆ ಮುಟ್ಟುವಂತೆ ಇಟ್ಟ ; ಕೊನೆಕೊನೆ ಗೂಡಿಸಿದ. Put an e. to ನಿಲ್ಲಿಸು ; ಮುಗಿಸು ; ಕೊನೆಗಾಣಿಸು ; ತೊಡೆದುಹಾಕು. Turn e. for e. ತಲೆಕೆಳಗು ಮಾಡು. World without e. ಕೊನೆಗಾಣದೆ ; ಎಂದೆಂದಿಗೂ ; ಸರ್ವದಾ ; ನಿರಂತರವೂ. **Éndless** (ಗು.) ತುದಿಮೊದಲಿಲ್ಲದ ; ಎಡೆಬಿಡದ ; ಬಿಡುವಿಲ್ಲದ ; ಎಂದಿಗೂ ಮುಗಿಯದ ; ಅನಂತ ; ಅಪಾರ ; ಅಪರಿಮಿತ ; ಶಾಶ್ವತ ; ಅವಿಚ್ಛಿನ್ನ ; ನಿರಂತರ ; ಸಂತತ. E. band, cable, chain (ತಿರುಗುವ ಚಕ್ರಗಳು, ಮೊ. ಗಳ ಮೇಲೆ ಹಾಕಿ ಅವು ಸಂತತವಾಗಿ ಸುತ್ತುವಂತೆ ಮಾಡುವುದಕ್ಕಾಗಿ) ಕೊನೆಗಳೆರಡೂ ಒಟ್ಟಿಗೆ ಸೇರಿಸಿರುವ ಪಟ್ಟಿ, ಹೊರಜಿ, ಸರಪಣಿ. **Éndlessly** (ಕ್ರಿ. ವಿ.) ; **Éndlessness** (ನಾ.)

End (ಕ್ರಿ.) (ಕಾರ್ಯ, ಭಾಷಣ, ಜೀವ, ಮೊ. ನ್ನು) ಮುಗಿಸು, ಕೊನೆಗಾಣಿಸು ; ತುದಿ ಮುಟ್ಟಿಸು, ಪೂರಯಿಸು ; ಮುಕ್ತಾಯ ಮಾಡು ; ಕೊನೆಮುಟ್ಟಿಸಿಬಿಡು ; ತೀರಿಸು ; ನಾಶಮಾಡು ; ಹಾಳುಮಾಡು ; ಧ್ವಂಸಮಾಡು ; ಕೊಲ್ಲು. ಕೊನೆಗಾಣು ; ಮುಗಿ ; ತೀರಿ ಹೋಗು ; ಸಮಾಪ್ತವಾಗು ; ಪರಿಣಾಮವಾಗು (E. by doing ಕೊನೆಗೆ ಮಾಡಿಬಿಡು. Will e. by marrying a Duke ಕೊನೆಗೆ ಒಬ್ಬ ಡ್ಯೂಕನ್ನು ಮದುವೆಯಾಗಿಬಿಡುತ್ತಾಳೆ). E. up ಕೊನೆಗಾಣಿಸು ; ಮುಗಿಸಿಬಿಡು. **Énding** (ನಾ.) (ಕ್ರಿಯಾರ್ಥಗಳಲ್ಲಿ) ; (ಪದ, ಕಥೆ, ಮೊ. ಗಳ) ಕೊನೆಯ ಭಾಗ, ಅಂತ. (ವ್ಯಾ.) ಪದಾಂತ ; ಪ್ರತ್ಯಯ.

Endámage ಎನ್‌ಡ್ಯಾಮೆಜ್ (ಕ್ರಿ. ಸಕ.) = Damage.

Endánger ಎಂಡೇಂಜರ್ (ಕ್ರಿ. ಸಕ.) ಅಪಾಯವುಂಟುಮಾಡು ; ಅಪಾಯಕ್ಕೆ ಸಿಕ್ಕಿಸು ; ವಿಪತ್ತಿಗೆ ತರು.

Endeár ಎಂಡಿಯರ್ (ಕ್ರಿ. ಸಕ.) ಪ್ರೀತಿಪಾತ್ರ ಮಾಡು ; ಪ್ರೀತಿಪಾತ್ರನಾಗು ; ಅಕ್ಕರೆಗೊಳಿಸು ; ಪ್ರಿಯನಾಗು. **Endeáringly** (ಕ್ರಿ. ವಿ.) ಪ್ರೀತಿ ಹುಟ್ಟಿಸುವಂತೆ ; ಪ್ರೀತಿಯಿಂದ ; ಮುದ್ದು ಮಾಡುವಂತೆ. **Endeárment** (ನಾ.) ಪ್ರೀತಿ, ಹುಟ್ಟಿಸುವುದು, ತೋರಿಸುವುದು, ಇರುವುದು ; ಮುದ್ದಾಟ ; ಮುತ್ತಿಟ್ಟುಕೊಳ್ಳುವುದು ; ಪ್ರೀತಿ ; ಪ್ರೀತಿಯ ವಸ್ತು, ಕಾರ್ಯ, ಮಾತು.

Endeávour ಎಂಡೆವರ್ (ಕ್ರಿ., ನಾ.) (ಮಾಡಲು) ಯತ್ನಿಸು, ಪ್ರಯತ್ನಿಸು, ಸಾಹಸ ಪಡು. ಪ್ರಯತ್ನ ; ಉದ್ಯಮ.

Endémic ಎಂಡೆಮಿಕ್ (ಗು., ನಾ.) (ಒಂದು ಗೊತ್ತಾದ) ಜನರಲ್ಲಿ, ದೇಶದಲ್ಲಿ, — ತಪ್ಪದೆ, ನಿಯತವಾಗಿ, ಏಕರೀತಿಯಾಗಿ —, ಕಂಡುಬರುವ (ವ್ಯಾಧಿ, ಜಾಡ್ಯ) ; ಸ್ಥಳಿಕ (ವ್ಯಾಧಿ). **Endémically** (ಕ್ರಿ. ವಿ.) ; **Endemícity** — ಸಿಟಿ (ನಾ.) ಗೊತ್ತಾದ ಜನರಲ್ಲಿ, ಸ್ಥಳದಲ್ಲಿ, ಕಂಡುಬರುವುದು, ಕಂಡುಬರುವಂಥದು.

Endérmic ಎಂಡರ್ಮಿಕ್ (ಗು.) ಚರ್ಮದಮೇಲೆ, ಚರ್ಮದ ಮೂಲಕ, ಪರಿಣಾಮವುಂಟುಮಾಡುವ. **Endérmically** (ಕ್ರಿ. ವಿ.)

Éndive ಎಂಡಿವ್ (ನಾ.) (ಯೂರೋಪಿನ) ಒಂದು ಜಾತಿಯ 'ಚಿಕೊರಿ' ಎಂಬ ಗಿಡ (ಅದರ ಸುರುಳಿಲೆಗಳನ್ನು ಪಚ್ಚಡಿಗಾಗಿ ಉಪಯೋಗಿಸುತ್ತಾರೆ)

Endo- ಎಂಡೊ— (ಸ. ಪೂ. ಪ.) ಒಳ— , ಅಂತರ್—. **-cardítis** — ಕಾರ್ಡೈಟಿಸ್ (ನಾ.) ಹೃದಯದ ಒಳಪೊರೆಯ ಊತ (ಮು., ಹೃದಯದೊಳಗಿನ ಕವಾಟಗಳ ಪೊರೆಯದು). **-cárdium** (ನಾ.) ಹೃದಯದ ಒಳಗೋಡೆಗೆ ಹತ್ತಿಕೊಂಡಿರುವ ಪೊರೆ : ಹೃದಯದ ಒಳಪೊರೆ. **-carp** (ನಾ.) ಬೀಜಕೋಶದ ಒಳಪೊರೆ. **-crane** (ನಾ.) ತಲೆಬುರುಡೆಯ ಒಳ ಮೈ. **-crine** (ಗು.) (ಗ್ರಂಥಿಗಳ ವಿಷಯದಲ್ಲಿ) ಒಳಗೇ ರಸ ಸ್ರವಿಸುವ ; ನಾಳ ರಹಿತ ; ನಿರ್ನಾಳ. **-derm** (ನಾ.) ಭ್ರೂಣದ ಆದ್ಯವಸ್ಥೆಯ ಪೊರೆಯ ಒಳ ಪದರ. **-gamous** (ಗು.) ಎಂಡಾಗಮಸ್ (ಗು.), **-gamy** —ಗಮಿ (ನಾ.) ತಮ್ಮ ಗೋತ್ರದಲ್ಲೇ, ವಂಶದಲ್ಲೇ, ಮದುವೆ ಮಾಡಿಕೊಳ್ಳುವ; — ವುದು; ಸ್ವಗೋತ್ರ ವಿವಾಹ(ದ). **-gen** ಎಂಡೋಜೆನ್ (ನಾ.) ಕಾಂಡದ ಒಳಭಾಗದಲ್ಲಿ ದಾರು ನಿರ್ಮಾಣವಾಗುವ ಸಸ್ಯ : ಅಂತರ್ವರ್ಧಿಷ್ಣು. **-genous** ಎಂಡಾಜೆನಸ್ (ಗು.) ಒಳಗಿನಿಂದ ಬೆಳೆಯುತ್ತ ಬರುವ. **-lymph** (ನಾ.) ಕಿವಿಯೊಳಗಿನ ಚರ್ಮಕುಹರದಲ್ಲಿಯ ದ್ರವ : ಕರ್ಣಾಂತ ದ್ರವ. **-metrítis** —ಮಿಟ್ರೈಟಿಸ್ (ನಾ.) ಗರ್ಭಕೋಶದ ಒಳಪೊರೆಯ ಊತ. **-metrium** (ನಾ.) ಗರ್ಭಕೋಶದ ಒಳಪೊರೆ. **-morph** (ನಾ.) ಒಂದು ಖನಿಜದೊಳಗಡೆ ಅಡಗಿರುವ ಮತ್ತೊಂದು ಖನಿಜ : ಅಂತರ್ಗತ ಖನಿಜ. **-párasite** —ಪ್ಯಾರಸೈಟ್ (ನಾ.) ದೇಹದ ಒಳಗಿರುವ ಪರೋಪಜೀವಿ. **-plasm, -sarc** (ನಾ.) ಜೀವಕಣದ ನಯವಾದ ಒಳಪೊರೆ. **-scope** (ನಾ.) ದೇಹದ ಒಳಭಾಗಗಳನ್ನು ನೋಡಲು ಸಾಧಕವಾದ ಒಂದು ಸಲಕರಣೆ: ಅಂತರ್ದರ್ಶಕ. **-skéleton** (ನಾ.) ಕಶೇರುಕಗಳ ದೇಹದೊಳಗಡೆಯ ಅಸ್ಥಿಪಂಜರ. **Endósmose, Endosmósis** ಎಂಡಾಸ್(ಸ್)ಮೋಸ್, ಎಂಡಸ್‌ಮೋಸಿಸ್ (ನಾ.) ಸೂಕ್ಷ್ಮ ಛಿದ್ರಗಳುಳ್ಳ ಅಂತಃಪಟಲದ ಮೂಲಕ ದ್ರವವು ಒಳಗಿರುವ ಮತ್ತೊಂದು ದ್ರವದೊಡನೆ ಬೆರೆಯಲು ಹರಿಯುವುದು : ಅಂತರ್ವಾಹ. **Endosmómeter** — ಮಾಮಿಟರ್ (ನಾ.) ಅಂತರ್ವಾಹವನ್ನು ತೋರಿಸುವ ಮತ್ತು ಅಳೆಯುವ ಸಲಕರಣೆ: ಅಂತರ್ವಾಹ ಮಾಪಕ. **-sperm** (ನಾ.) ಬೀಜಗಳಲ್ಲಿ ಭ್ರೂಣದೊಂದಿಗೆ ಸಂಗ್ರಹಿಸಲ್ಪಟ್ಟಿರುವ 'ಅಲ್‌ಬ್ಯೂಮೆನ್' ಎಂಬ ಸಸಾರಜನಕ ಆಹಾರವಸ್ತು : ಬೀಜಾಂತಸ್ಸಾರ. **-spore** (ನಾ.) ಸೂಕ್ಷ್ಮ ಬೀಜದ ಒಳಪೊರೆ ; ಕೋಶದೊಳಗಿನ ಸೂಕ್ಷ್ಮ ಬೀಜ. **-thélium** —ತೀಲಿಯಂ (ನಾ.) ರಕ್ತನಾಳಗಳು, ಮೊ. ಗಳ ಒಳಪದರದಲ್ಲಿಯ ಜೀವಾಣುಗಳ ಸ್ತರ : ಅಂತಸ್ತರ.

Endórse, In- ಎಂಡಾರ್ಸ್, ಇಂ — (ಕ್ರಿ. ಸಕ.) ಒಂದು ದಸ್ತೈವಜಿನ, ತಮಸೂಕಿನ, ಪತ್ರದ, —ಹಿಂಬದಿಯಲ್ಲಿ ಬರೆ : ಹಿಂಬರೆ (ಮು., ಹುಂಡಿ, ಚೆಕ್ಕು, ಮೊ. ಗಳ ಹಿಂಬದಿಯಲ್ಲಿ ತನ್ನ ಹೆಸರನ್ನು) ಸಹಿ ಮಾಡು. (ವಿವರಣೆಯನ್ನು, ಟಿಪ್ಪಣಿಯನ್ನು, ಒಂದು ಪತ್ರದ ಹಿಂಭಾಗದಲ್ಲಿ) ಬರೆ ; ಷರಾ ಬರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[E. over ಹುಂಡಿ, ಮೊ. ಗಳಲ್ಲಿ ತನ್ನ ಹಕ್ಕುಗಳನ್ನು ಮತ್ತೊಬ್ಬನಿಗೆ ಬರೆದುಕೊಡು (ರೂಪ. ಸಹ)]. (ಹೇಳಿಕೆಯನ್ನು, ಅಭಿಪ್ರಾಯವನ್ನು) ದೃಢಪಡಿಸು; ಒಪ್ಪು; ಸಮ್ಮತಿಸು. (ಗ್ರಾಮ್ಯ) (ಔಷಧಗಳು, ಮೊ. ಗಳ) ಪ್ರಕಟನೆಗಳಲ್ಲಿರುವ ಹೊಗಳಿಕೆಯನ್ನು ಅನುಮೋದಿಸು. Motorist's, publican's, licence is endorsed ಮೋಟಾರಿನವನಿಗೆ, ಸಾರಾಯಿ ಅಂಗಡಿಯವನಿಗೆ, ಕೊಟ್ಟಿರುವ ಅಪ್ಪಣೆಚೀಟಿಯ ಮೇಲೆ ತಪ್ಪಿತವನ್ನು ನಮೂದಿಸಲಾಗಿದೆ. **Endórsement** (ನಾ.) ಹಿಂಬರಹ; ಷರಾ.

Endoẃ ಎಂಡೌ (ಕ್ರಿ. ಸಕ.) (ಒಬ್ಬನಿಗೆ, ಒಂದು ಸಂಸ್ಥೆಗೆ) ಆಸ್ತಿ ಬಿಡು, ಶಾಶ್ವತ ಆದಾಯ ಬರುವಂತೆ ಆಸ್ತಿಯನ್ನು ಬರೆದುಕೊಡು; ದತ್ತಿ ಬಿಡು. (ಒಬ್ಬನಿಗೆ ವಿಶೇಷ ಹಕ್ಕುಗಳು, ಮೊ. ನ್ನು) ಕೊಡು. (ಒಬ್ಬನಿಗೆ, ಶಕ್ತಿ, ಅರ್ಹತೆ, ಮೊ. ನ್ನು) ಉಂಟುಮಾಡು; ಯುಕ್ತ, ಸಂಪನ್ನ, ಮಾಡು (ಮು., ಭೂ. ಕೃ. ನಲ್ಲಿ). **Endoẃment** (ನಾ.) ದತ್ತಿ; ಕೊಡುಗೆ; ಉಂಬಳಿ; ಮಾನ್ಯ; ಪುದುವಟ್ಟು; ಶಾಶ್ವತ ವರಮಾನ ದಾನ. ದೈವದತ್ತ ಯೋಗ್ಯತೆ, ಶಕ್ತಿ, ಗುಣ, ಮೊ. E. assurance ವಿಮೆ ಮಾಡಿದವನಿಗೆ ಒಂದು ಗೊತ್ತಾದ ವಯಸ್ಸಾದೊಡನೆಯೇ ಕೊಡುವಂತೆ, ಅಥವಾ ಆ ಗಡುವಿನೊಳಗಾಗಿ ಅವನು ಸತ್ತರೆ ಅವನ ವಾರಸುದಾರರಿಗೆ ಕೊಡುವಂತೆ, ಕರಾರು ಮಾಡಿಕೊಂಡು ಒಂದು ಗೊತ್ತಾದ ಮೊಬಲಗನ್ನು ಸಲ್ಲಿಸುವ ವಿಮೆ.

Endué, In- ಎಂಡ್ಯೂ, ಇಂ— (ಕ್ರಿ. ಸಕ.) (ಬಟ್ಟೆಬರೆ, ಮೊ. ನ್ನು) ತೊಟ್ಟುಕೊ, ಧರಿಸು (ರೂಪ. ಸಹ); ಉಡಿಗೆ ತೊಡಿಸು. ಶಕ್ತಿ, ಅಧಿಕಾರ, ಗುಣಾತಿಶಯ, ಮೊ. ನ್ನು ಉಂಟುಮಾಡು, ಕೊಡು.

Endúre ಎಂಡ್ಯೂರ್ (ಕ್ರಿ.) (ನೋವು, ಮೊ. ನ್ನು) ಅನುಭವಿಸು, ಸಹಿಸಿಕೊ, ತಾಳಿಕೊ. ಬಾಳಿಕೆ ಬರು; ತಡೆ; ಇರು. **Endúrable** (ಗು.) ತಾಳಬಹುದಾದ; ಸಹ್ಯ. **Endúrance** — ರನ್ಸ್ (ನಾ.) ಸಹಿಸುವುದು; ತಾಳಿಕೊಳ್ಳುವುದು. ಸಹಿಸಿಕೊಳ್ಳುವ ಅಭ್ಯಾಸ, ಶಕ್ತಿ; ಸಹನೆ; ತಾಳ್ಮೆ; ಸಹಿಷ್ಣುತೆ. **Endúringly** (ಕ್ರಿ. ವಿ.); **Endúringness** (ನಾ.)

Éndways, -wise ಎಂಡ್‌ವೇಸ್, — ವೈಸ್ (ಕ್ರಿ. ವಿ.) ನೋಟಕನಿಗೆ ಎದುರಾಗಿ ಕೊನೆ ತಿರುಗಿಸಿ; ಮೇಲ್ಗಡೆಗೆ, ಮುಂದುಗಡೆಗೆ, — ಕೊನೆ ತಿರುಗಿಸಿ; ತುದಿ ಎದುರಾಗಿ; ತುದಿ ಮೇಲಾಗಿ; ತುದಿ ಮುಂದಾಗಿ; ತುದಿಗೆ ತುದಿ ಸೇರುವಂತೆ.

Énema ಎನಿಮಾ, **Enéma** ಎ(ಇ)ನೀಮ [ನಾ.; ಬ. ವ. -mas, (ಪ್ರಯೋಗ ಶಾಸ್ತ್ರದಲ್ಲಿ) Enemata] ದ್ರವವನ್ನಾಗಲಿ ಅನಿಲವನ್ನಾಗಲಿ ಮಲನಾಳದೊಳಕ್ಕೆ ನುಗ್ಗಿಸುವುದು; ಇದಕ್ಕಾಗಿ ಉಪಯೋಗಿಸುವ ಸಲಕರಣೆ, ಪಿಚಕಾರಿ: ವಸ್ತಿ; 'ಎನೀಮ'.

Énemy ಎನೆ(ನಿ)ಮಿ (ನಾ., ಗು.) ಹಗೆ; ಆಗದವನು; ಶತ್ರು; ವಿರೋಧಿ; ವೈರಿ; ಎದುರಾಳಿ (The E. ಸೈತಾನ). ಶತ್ರುಸೈನ್ಯದವನು; ಶತ್ರು ಜನಾಂಗದವನು; ಶತ್ರು ಸೈನ್ಯ; ಶತ್ರು ನೌಕೆ. [(ಬಳ. ಮಾ.) How goes the e.? ಹೊತ್ತೇನಾಗಿದೆ? ಎಷ್ಟುಹೊತ್ತಾಗಿದೆ?]. (ಗು.) ಹಗೆಯ; ಶತ್ರುವಿನ (E. ships ಶತ್ರು ನೌಕೆಗಳು. E. goods ಶತ್ರುವಿನ ಸರಕು). **Énmity** ಎನ್ಮಿಟಿ (ನಾ.) ಹಗೆತನ; ಶತ್ರುತ್ವ; ದ್ವೇಷ; ವೈರ; ವಿರೋಧ.

Energétic, etc. **Energy** ನೋಡಿ.

Energúmen ಎನರ್ಗ್ಯೂಮೆನ್ (ನಾ.) ದೆವ್ವ ಹಿಡಿದವನು; ಉನ್ಮತ್ತ; ಆವೇಶ ಹಿಡಿದವನು; ಅತ್ಯುತ್ಸಾಹಿ. ಧರ್ಮೋನ್ಮತ್ತ; ಸ್ವಮತಾಂಧ.

Énergy ಎನರ್ಜಿ (ನಾ.) ಬಲ; ಶಕ್ತಿ; ಆಪು; ಅಳವು (ಗ್ರಾಂ.). (ಭಾಷಣ, ಕಾರ್ಯ, ವ್ಯಕ್ತಿ, ಮೊ. ಗಳ ವಿಷಯದಲ್ಲಿ) ವೀರ್ಯ, ಸಾಮರ್ಥ್ಯ, ಚೈತನ್ಯ, ಓಜಸ್ಸು. ಯತ್ನ; ಪ್ರಯತ್ನ. (ಬ. ವ. ದಲ್ಲಿ) (ವೈಯಕ್ತಿಕ) ಶಕ್ತಿಸಾಮರ್ಥ್ಯಗಳು. Devote your energies to this ನಿನ್ನ ಶಕ್ತಿಸಾಮರ್ಥ್ಯಗಳನ್ನೆಲ್ಲ ಇದಕ್ಕಾಗಿ ವಿನಿಯೋಗಿಸು. Actual, kinetic, motive, e. (ಭೌ. ವಿ.) ಕ್ರಿಯಾತ್ಮಕ, ಚಲನಾತ್ಮಕ, ಚಾಲಕ, — ಶಕ್ತಿ (ಒಂದು ವಸ್ತುವಿನ ಚಲನಕಾರಣದಿಂದ ಅದು ಪಡೆಯುವ ಕಾರ್ಯಶಕ್ತಿ; ಇದರ ಅಳತೆ: ವಸ್ತುವಿನ ದ್ರವ್ಯಪರಿಮಾಣವನ್ನು ಅದರ ವೇಗಗತಿಯ ವರ್ಗದಿಂದ ಗುಣಿಸಿ ಅರ್ಧಿಸಿದ ಮೊತ್ತ). Potential e. ಸ್ಥಿತಿ ಶಕ್ತಿ, Static e. ಸ್ಥಾಯೀ ಶಕ್ತಿ, Latent e. ಗುಪ್ತ, ಗೂಢ, ಶಕ್ತಿ (ಇತರ ಕಾಯಗಳೊಡನೆ ತನಗಿರುವ ಸಂಬಂಧದಿಂದುಂಟಾದ ಒತ್ತರಗಳ ಫಲವಾಗಿ ಒಂದು ಕಾಯಕ್ಕಿರುವ ಕ್ರಿಯಾಕಾರಕ ಶಕ್ತಿ). Conservation of e. ಶಕ್ತಿಸ್ಥಾಯಿತ್ವ. **Energétic** — ಜೆಟಿಕ್ (ಗು., ನಾ.) ಚಟುವಟಿಕೆಯುಳ್ಳ; ಬಲಗುಂದದ ಕಾರ್ಯಶಕ್ತಿಯುಳ್ಳ; ಜೋರಾದ; ಚುರುಕಾದ; ವೀರ್ಯಯುತವಾದ; ಪ್ರಬಲ ಪ್ರವೃತ್ತಿಯುಳ್ಳ; ಉತ್ಸಾಹವುಳ್ಳ. (ನಾ., ಬ. ವ. ದಲ್ಲಿ) ಶಕ್ತಿಶಾಸ್ತ್ರ. **Energétically** (ಕ್ರಿ. ವಿ.); **Enérgic** (ಗು.) (ಅಪೂರ್ವ) = Energetic. **Énergize** (ಕ್ರಿ.) (ವ್ಯಕ್ತಿಗೆ, ಕೆಲಸಕ್ಕೆ) ಶಕ್ತಿ ತುಂಬು, ಶಕ್ತಿ ಚೋದಿಸು; ಚಟುವಟಿಕೆಯಾಗಿರು.

Enérvate ಎನರ್ವೆಟ್ (ಗು.), **Énervate** ಎನರ್ವೇಟ್ (ಕ್ರಿ. ಸಕ.) (ಕಾಯ, ನೀತಿ, ಸಾಹಿತ್ಯ, ಕಲೆ — ಈ ವಿಷಯಗಳಲ್ಲಿ) ಶಕ್ತಿ, ವೀರ್ಯ, ಓಜಸ್ಸು, ಮೊ., ಇಲ್ಲದ; ದುರ್ಬಲ; ನಿಸ್ಸತ್ವ. (ಕ್ರಿ.) ಶಕ್ತಿಗುಂದಿಸು. **Enervátion** (ನಾ.) ಶಕ್ತಿಗುಂದಿಸುವುದು; ಶಕ್ತಿಗುಂದು.

Enfáce ಎನ್‌ಫೇಸ್ (ಕ್ರಿ. ಸಕ.) ಹುಂಡಿ, ಮೊ. ಗಳಮೇಲೆ ಬರೆ, ಮುದ್ರಿಸು, ಮುದ್ರೆಯೊತ್ತು. **Enfácement** (ನಾ.) ಮುಖಬರಹ.

En famílle (F) ಆನ್ ಫಾಮೀಯ್ (ಕ್ರಿ. ವಿ.) ಮನೆಯಲ್ಲಿ; ತನ್ನ ಕುಟುಂಬದವರೊಡನೆ.

Enfánt terríble (F) ಆನ್‌ಫಾನ್ ಟೆರೀಬ್ಲ್ [ನಾ.; ಬ. ವ. Enfants terribles (ಉಚ್ಚಾರಣೆ ಏ. ವ. ದಂತೆಯೇ)] ಅನಾನುಕೂಲವಾಗುವ ಪ್ರಶ್ನೆಗಳನ್ನು ಕೇಳುವ, ತಾನು ಕೇಳಿದುದನ್ನೆಲ್ಲ ಇತರರನ್ನು ತೊಂದರೆಗೆ ಸಿಕ್ಕಿಸುವಂತೆ ಪುನರಾವೃತ್ತಿ ಮಾಡುವ, ಮಗು; ಅಸಾಧ್ಯದ ಮಗು; ಭಯಂಕರ ಮಗು.

Enfeéble ಎನ್‌ಫೀಬ್‌ಲ್ (ಕ್ರಿ. ಸಕ.) ಬಲಹೀನ ಮಾಡು; ದುರ್ಬಲ ಮಾಡು; ಬಲಗುಂದಿಸು; ಶಕ್ತಿಗುಂದಿಸು; ಅಶಕ್ತ ಮಾಡು. **Enfeéblement** (ನಾ.)

Enfeóff ಎನ್‌ಫೆ(ಫೀ)ಫ್ (ಕ್ರಿ. ಸಕ.) ಸೈನಿಕ ಅಥವಾ ಇತರ ರೀತಿಯ ಸಹಾಯಮಾಡುವ ಷರತ್ತಿನಮೇಲೆ (ಒಬ್ಬನಿಗೆ) ಮಾನ್ಯ, ಉಂಬಳಿ, ಮೊ. ನ್ನು ಕೊಡು. (ರೂಪ.) ವಹಿಸಿಬಿಡು; ಒಪ್ಪಿಸಿಬಿಡು. **Enfeóffment** (ನಾ.) ಹೀಗೆ ವಹಿಸಿಬಿಡುವುದು; ಹೀಗೆ ಉಂಬಳಿಕೊಟ್ಟದ್ದರ ಸನ್ನದು, ದಸ್ತೈವಜು; ಹೀಗೆ ಕೊಟ್ಟ ಉಂಬಳಿ.

En féte (F) ಆನ್ ಫೇಟ್ (ಕ್ರಿ. ವಿ., ಗು.) ಉತ್ಸವಕ್ಕಾಗಿ ಉಡಿಗೆ ತೊಡಿಗೆ ಹಾಕಿಕೊಂಡ(ಡು); ಉತ್ಸವದಲ್ಲಿ ತೊಡಗಿ(ರುವ); ಹಬ್ಬದ ಉಡಿಗೆಯುಟ್ಟು(ಕೊಂಡ)

Enfétter ಎನ್‌ಫೆಟರ್ (ಕ್ರಿ. ಸಕ.) ಬೇಡಿ ಹಾಕು; ಸಂಕೋಲೆ ಹಾಕು (ರೂಪ. ಸಹ); ಬಂಧಿಸು. (ಒಬ್ಬನನ್ನು) ದಾಸನನ್ನಾಗಿ ಮಾಡು.

Enfiláde ಎನ್‌ಫಿಲೇಡ್ (ನಾ., ಕ್ರಿ. ಸಕ.) ಕೊನೆಯಿಂದ ಕೊನೆಗೆ ಸೈನಿಕರ ಸಾಲಿಗೆ ಸಾಲನ್ನೇ ನಾಶಮಾಡುವ ಫಿರಂಗಿ, ಮೊ. ಗಳ ಗುಂಡು. (ಕ್ರಿ.) (ಸೇನಾ ದಳಗಳು, ರಸ್ತೆ, ಮೊ. ನ್ನು) ಗುಂಡಿನೇಟಿಗೆ ಒಳಪಡಿಸು. (ಕೊಟಡಿಗಳು, ಬಾಗಿಲುಗಳು, ಮರಗಳು, ಮೊ. ಗಳ ವಿಷಯದಲ್ಲಿ) ಸಮಾನಾಂತರವಾಗಿ ಎದುರುಬದುರಿಗಿರುವ ರಚನೆ: ಇಚ್ಚಾಲು.

Enfóld, In- ಎನ್‌ಫೋಲ್ಡ್, ಇನ್— (ಕ್ರಿ. ಸಕ.) (ವ್ಯಕ್ತಿ, ಮೊ. ನ್ನು) ಹೊದಿಸಿಡು, ಆಚ್ಛಾದಿಸು, ಸುತ್ತು, ಆವೃತ ಮಾಡು; ಬಿಗಿದಪ್ಪು; ಆಲಿಂಗಿಸು. ಮಡಿಕೆ ಮಡಿಕೆಯಾಗಿ, ಪದರ ಪದರಗಳಾಗಿ, ಮಾಡು; ಮಡಿಚು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Enfórce ಎನ್‌ಫೋರ್ಸ್ (ಕ್ರಿ. ಸಕ.) (ವಾದ, ತಗಾದೆ, ಮೊ. ನ್ನು) ಒತ್ತಿ ಹೇಳು ; ಒತ್ತಾಯಪಡಿಸು ; ಬಲವಂತ, ಬಲಾತ್ಕಾರ, ಮಾಡು. (ಕಾರ್ಯವನ್ನು, ನಡವಳಿಯನ್ನು, ಒಬ್ಬನಿಗೆ) ವಿಧಿಸು. (ಕಾನೂನು, ಮೊ. ಗಳನ್ನು) ಆಚರಿಸಬೇಕೆಂದು ನಿರ್ಬಂಧಿಸು ; ಜಾರಿಗೆ ತರು ; ಚಲಾಯಿಸು. **Enfórceable** — ಸಬ್‌ಲ್ (ಗು.) ; **Enfórcedly** — ಸೆ — (ಕ್ರಿ. ವಿ.) ; **Enfórcement** (ನಾ.)

Enfráme ಎನ್‌ಫ್ರೇಮ್ (ಕ್ರಿ. ಸಕ.) (ಪಟ, ಮೊ. ಕ್ಕೆ) ಕಟ್ಟು ಹಾಕು, ಚೌಕಟ್ಟಾಗಿರು.

Enfránchise ಎನ್‌ಫ್ರಾನ್‌ಚಿ(ಚೈ)ಸ್ (ಕ್ರಿ. ಸಕ.) (ದಾಸ್ಯ, ಸೆರೆ, ಬಂಧನ, ನಿರ್ಬಂಧದ ತೆರಿಗೆ, ಕಾಯಿದೆಯ ಜವಾಬ್ದಾರಿಗಳು — ಇವೇ ಮೊ. ಗಳಿಂದ) ಬಿಡುಗಡೆ ಮಾಡು, ಮುಕ್ತ ಮಾಡು ; ಸ್ವಾತಂತ್ರ್ಯ ಕೊಡು. (ಒಂದು ಪಟ್ಟಣಕ್ಕೆ) ಪೌರ ಹಕ್ಕುಗಳನ್ನು ಕೊಡು (ಮು., ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯದ ಹಕ್ಕನ್ನು). (ಒಬ್ಬನಿಗೆ) ಚುನಾವಣೆಯ ಹಕ್ಕು ಕೊಡು. **Enfránchisement** — ಚಿ — (ನಾ.)

Engáge ಎಂಗೇಜ್ (ಕ್ರಿ.) ಕರಾರಿನಿಂದ ಅಥವಾ ವಾಗ್ದಾನದಿಂದ ಕಟ್ಟು ಮಾಡು (ಮು., ಮದುವೆಯ ವಿಷಯದಲ್ಲಿ : Engaged couple ಮದುವೆ ನಿಶ್ಚಯ ಮಾಡಿಕೊಂಡ ಗಂಡೂ ಹೆಣ್ಣೂ). (ಸೇವಕನನ್ನು) ಗೊತ್ತು, ನಿಶ್ಚಯ, — ಮಾಡಿಕೊ, ಇಟ್ಟುಕೊ; ಕೂಲಿಗಿಟ್ಟುಕೊ; ಕೆಲಸಕ್ಕೆ ಗೊತ್ತು ಮಾಡಿಕೊ. (ಸ್ಥಾನ, ಜಾಗ, ಬಂಡಿ, ಮೊ. ನ್ನು) ಮೊದಲೇ ಗೊತ್ತು ಮಾಡಿಕೊ. (ಮಾಡುವುದಾಗಿ) ಭರವಸೆ, ಮಾತು, ಕೊಡು. (E. for ಖಾತರಿ ಕೊಡು ; ವಾಗ್ದಾನ ಮಾಡು). ಪ್ರೇರಿಸು ; ಪ್ರೋತ್ಸಾಹಿಸು ; ಸೆಳೆ ; ಆಕರ್ಷಿಸು ; ಮೋಹಗೊಳಿಸು ; ಮುಗ್ಧ ಮಾಡು. (ವಾ. ಶಾ.) (ಕಂಬವನ್ನು) ಗೋಡೆಯೊಳಗೆ ಬಿಗಿಸು, ಬಂಧಿಸು. (ಒಂದು ವಸ್ತುವನ್ನು ಮತ್ತೊಂದರೊಡನೆ) ತೊಡರಿಕೊಳ್ಳುವಂತೆ ಮಾಡು, ಕೂಡಿಸು, ತಗುಲಿಸು ; ಹಲ್ಲುಹಲ್ಲುಗೂಡುವಂತೆ ಮಾಡು. (ಗಮನವನ್ನು) ಸೆಳೆದು ಹಿಡಿ. (ರಾಜ್ಯನೀತಿ, ಮೊ. ಗಳಲ್ಲಿ) ತೊಡಗು, ಪ್ರವೃತ್ತನಾಗು, ಪ್ರವರ್ತಿಸು. (ಸೇನಾ ದಳಗಳನ್ನು) ಯುದ್ಧದಲ್ಲಿ ತೊಡಗುವಂತೆ ಮಾಡು ; ಯುದ್ಧ ಹೂಡು ; ಹೋರಾಡು ; ತಾಗು. **Engágement** (ನಾ.) (ಕ್ರಿಯಾರ್ಥಗಳಲ್ಲಿ). ವಿವಾಹ ನಿಶ್ಚಯ. ವಾಗ್ದಾನ ; ಕರಾರು ; ಒಪ್ಪಂದ. ಒಟ್ಟು ಸೇರಲು ಏರ್ಪಾಡು ; ಗೊತ್ತುಪಾಡು. (ಬ. ವ. ದಲ್ಲಿ) ಹಣಕಾಸಿನ ಜವಾಬ್ದಾರಿ, ಹೊಣೆ. ಕದನ ; ಮೇಲೆ ಬೀಳುವುದು. **Engágingly** (ಕ್ರಿ. ವಿ.) ಗಮನ ಅಥವಾ ಪ್ರೇಮ ಸೆಳೆಯುವಂತೆ ; ಆಕರ್ಷಕವಾಗಿ.

En garcón (F) ಆನ್ ಗಾರ್‌ಸಾನ್ (ಕ್ರಿ. ವಿ., ಗು.) ಬ್ರಹ್ಮಚಾರಿಯಾಗಿ ; ಮದುವೆಯಿಲ್ಲದೆ(ದ) ; ಅವಿವಾಹಿತ.

Engárland ಎನ್‌ಗಾರ್ಲಂಡ್ (ಕ್ರಿ. ಸಕ.) ಹಾರ ಹಾಕು ; ಮಾಲೆ ಹಾಕು. (ಹೂವು, ಮೊ. ಗಳಿಂದ) ಮಾಲೆ ಕಟ್ಟು.

Engénder ಎನ್‌ಜೆಂಡರ್ (ಕ್ರಿ. ಸಕ.) ಹುಟ್ಟಿಸು (ಈಗ ರೂಪಕದಲ್ಲಿ ಮಾತ್ರ). (ಸ್ಥಾನ, ಸ್ಥಿತಿ, ಮೊ. ಗಳ ವಿಷಯದಲ್ಲಿ) ಆಗಿಸು, ಉಂಟು ಮಾಡು ; ತರು.

Éngine ಎಂಜಿನ್ (ನಾ., ಕ್ರಿ. ಸಕ.) ಅನೇಕ ಭಾಗಗಳನ್ನೊಳಕೊಂಡ ಯಂತ್ರಸಾಧನ : 'ಎಂಜಿನು' ; ಆವಿಯ ಎಂಜಿನು ; ಬೆಂಕಿಯಾರಿಸುವ ಎಂಜಿನು ; ಯುದ್ಧ ಯಂತ್ರ. ಸಾಧನ ; ಸಲಕರಣೆ ; ಯಂತ್ರ. [**E.-driver** (ಆವಿಯ) ಎಂಜಿನು ನಡಸುವವನು (ಮು., ಸ್ಥಾನಾಂತರ ಚಲಯನ್ನು). **E.-lathe** ಎಂಜಿನಿನಿಂದ ನಡೆಯುವ ಚರಕಿಯಂತ್ರ. **Engine-sized** paper ಯಂತ್ರದಿಂದ ಹೊಳಪುಕೊಟ್ಟ ಕಾಗದ. **E.-turning** ಯಂತ್ರದಿಂದ ಮಾದರಿಗಳನ್ನು ಲೋಹಗಳಮೇಲೆ ಕೊರೆಯುವುದು]. (ಕ್ರಿ.) (ಹಡಗಿಗೆ) ಆವಿಯ ಎಂಜಿನುಗಳನ್ನು ಇಡು. **Engineér** — ನಿಯರ್ (ನಾ., ಕ್ರಿ.) ಸೇನೆಯ ರಕ್ಷಣಸಾಧನಗಳನ್ನು ಸಂವಿಧಾನಮಾಡಿ ರಚಿಸುವವನು ; ಸೈನಿಕ ಶಿಲ್ಪಿ ; ಶಿಲ್ಪಿದಳದ ಸಿಪಾಯಿ. ಸೇತುವೆ, ಕಾಲುವೆ, ಉರಿವಾಯು ಕಾರ್ಖಾನೆ, ಮೊ. ಜನೋಪಯೋಗ ಕಾರ್ಯಗಳನ್ನು ಸಂವಿಧಾನ ಮಾಡುವವನು (= Civil e.) : ವಾಸ್ತುಶಿಲ್ಪಿ. ಎಂಜಿನುಗಳನ್ನು ರಚಿಸುವವನು : ಯಂತ್ರ ಶಿಲ್ಪಿ. ಆವಿಯ ಎಂಜಿನಿನ ಮೇಲ್ವಿಚಾರಕ. (ಕ್ರಿ.) (ಯಂತ್ರ) ಶಿಲ್ಪಿಯಾಗಿರು ; (ಸೇತುವೆ, ಕಟ್ಟಡ, ಮೊ. ನ್ನು) ಕಟ್ಟು, ವಿಚಾರಣೆ ನೋಡಿಕೊ. (ಬಳ. ಮಾ.) ಏರ್ಪಾಡುಮಾಡು ; ಕಲ್ಪಿಸು ; ರಚಿಸು ; ಆಗಮಾಡು ; ಹೂಟ ಹೂಡು. **Engineérship** (ನಾ.) ಯಂತ್ರ ಶಿಲ್ಪಿತನ. **Engineéring** (ನಾ.) ಯಂತ್ರಶಿಲ್ಪಿತನ ; ಯಂತ್ರ ಶಿಲ್ಪ [Civil ವಾಸ್ತು, Mechanical ಯಾಂತ್ರಿಕ, Military ಸೈನಿಕ, e. ಶಿಲ್ಪ. Agricultural ವ್ಯವಸಾಯದ, Electric ವಿದ್ಯುತ್ತಿನ, Gas ಉರಿವಾಯುವಿನ ಕಾರ್ಯದ, Hydraulic ಹರಿನೀರಿನ ಶಕ್ತಿಸಂಬಂಧದ, Railway ರೈಲುಮಾರ್ಗದ, Sanitary ಆರೋಗ್ಯ ವಿಷಯದ, Telegraph ದೂರಲೇಖನದ (ಟೆಲಿಗ್ರಾಫಿನ) e. ಶಿಲ್ಪ]. (ರೂಪ.) ಉಪಾಯ ಹೂಡುವುದು ; ಸಂಚು ನಡಸುವುದು ; ಹೂಟ ; ಸಂಚು ; ತಂತ್ರ. **Énginery** — ನರಿ, — ನ್ರಿ (ನಾ.) ಎಂಜಿನುಗಳು ; ಯಂತ್ರಸಾಧನೆ (ಅನೇಕ ವೇಳೆ ರೂಪಕದಲ್ಲಿ)

Engírd(le) ಎನ್‌ಗರ್ಡ್(ಲ್) (ಕ್ರಿ. ಸಕ.) ನಡುಪಟ್ಟಿ ಸುತ್ತು(ಗಟ್ಟು) ; (ನಡು ಪಟ್ಟಿಯಂತೆ) ಸುತ್ತುವರಿ, ಬಳಸು.

Énglander ಇಂಗ್ಲಂಡರ್ (ನಾ.) ಇಂಗ್ಲೆಂಡಿನವನು. Little E. ಸಾಮ್ರಾಜ್ಯನೀತಿ ವಿರೋಧಿ.

Énglish ಇಂಗ್ಲಿಷ್ (ಗು., ನಾ.) ಇಂಗ್ಲೆಂಡಿನ ; ಇಂಗ್ಲಿಷ್ (The E. ಇಂಗ್ಲಿಷರು). ಇಂಗ್ಲಿಷ್ ಭಾಷೆ (Also, The king's E., queen's E.). [Old E. (ಕ್ರಿ. ಶ. ೧೧೫೦ ಕ್ಕೆ ಅಂತವಾದ) ಹಳೆಯ ಇಂಗ್ಲಿಷು. Middle E. (ಕ್ರಿ. ಶ. ೧೫೦೦ ಕ್ಕೆ ಅಂತವಾದ) ಮಧ್ಯಕಾಲದ ಇಂಗ್ಲಿಷು. In plain E. ಸ್ಪಷ್ಟವಾದ ಮಾತಿನಲ್ಲಿ]. ಮುದ್ರಣದ ಮೊಳೆಗಳಲ್ಲಿ ಒಂದು ಗೊತ್ತಾದ ಅಳತೆಯದು. **Énglishism** (ನಾ.) ಇಂಗ್ಲಿಷ್ (ಭಾಷಾ) ಮರ್ಯಾದೆ, ಅಭಿಮಾನ. **Énglishman** — ಮ್ಯನ್ **-woman** (ಹುಟ್ಟನಿಂದ, ವಂಶದಿಂದ, ನೆಲಸು ಹಕ್ಕಿನಿಂದ, ಆದ) ಇಂಗ್ಲಿಷಿನವನು(ಳು)

Énglish (ಕ್ರಿ. ಸಕ.) (ಪ್ರಾಚೀ. ಪ್ರ., ಆಡಂಬರ) ಇಂಗ್ಲಿಷು ಭಾಷೆಗೆ ಪರಿವರ್ತಿಸು.

Engórge ಎನ್‌ಗಾರ್ಜ್ (ಕ್ರಿ. ಸಕ.) ಆತುರದಿಂದ ಮುಕ್ಕು, ತಿನ್ನು ; ಗಿಡಿಗಿಕೊ ; ಅಡಚಿಕೊ ; ತುರುಕು ; ಗಪ ಗಪನೆ ನುಂಗು. (ಕರ್ಮಣಿ) ಗಿಡಿಗಿರು ; ತುಂಬಿರು ; ಇಡಿಕಿರಿದಿರು. (ರೋಗ ಪರೀಕ್ಷೆ) ರಕ್ತ ಕಟ್ಟಿರು. **Engórgement** (ನಾ.)

Engráft, In- ಎನ್‌ಗ್ರಾಫ್ಟ್, ಇನ್ — (ಕ್ರಿ. ಸಕ.) ಒಂದು ಮರದ ಕೊಂಬೆಯನ್ನು ಮತ್ತೊಂದರ ಕೊಂಬೆಯ ಒಳಗಡೆ, ಅಥವಾ ಮೇಲ್ಗಡೆ ಸೇರಿಸಿ ಕಟ್ಟು ; ಕಸಿ ಕಟ್ಟು ; ಅಂಟು ಕಟ್ಟು. (ನೀತಿ, ತತ್ತ್ವ, ಮೊ. ನ್ನು, ಮನಸ್ಸು, ಮೊ. ಗಳಲ್ಲಿ) ನಾಟು, ಬೇರೂರಿಸು, ಸ್ಥಾಪಿಸು. (ಒಂದು ವಸ್ತುವನ್ನು ಮತ್ತೊಂದರಲ್ಲಿ) ಅಂತರ್ಗತ ಮಾಡು, ಹೊರಗಿನಿಂದ ತಂದು ಸೇರಿಸು. **Engráftment** (ನಾ.)

Engraíl ಎನ್‌ಗ್ರೇಯ್ಲ್ (ಕ್ರಿ. ಸಕ.) ಏಣನ್ನು (ಗರಗಸದ ಹಲ್ಲಿನಂತೆ) ಕಚ್ಚು ಕಚ್ಚು ಮಾಡು ; ಕ್ರಕಚ ಮಾಡು ; ಗರಗಸದ ಹಲ್ಲಿನ ರೂಪನ್ನು ಕೊಡು (ಮು., ವಂಶಲಾಂಛನದಲ್ಲಿ)

Engraín, In- ಎನ್‌ಗ್ರೇಯ್ನ್, ಇನ್ — (ಕ್ರಿ. ಸಕ.) (ವರ್ಣದ್ರವ್ಯ, ಮೊ.) ಒಂದು ವಸ್ತುವಿನೊಳಕ್ಕೆ ಆಳವಾಗಿ ಇಳಿಯುವಂತೆ, ವ್ಯಾಪಿಸುವಂತೆ, ಮಾಡು (ಸಾ., ರೂಪಕದಲ್ಲಿ). (ಭೂ. ಕೃ.) ದೃಢಮೂಲವಾದ ; ಜನ್ಮಕ್ಕೆ ಹತ್ತಿದ ; ಸ್ವಭಾವ ಸಿದ್ಧವಾದ ; ನಾಟಿದ (An engrained rogue ಹುಟ್ಟುಕಳ್ಳ ; ಪಕ್ಕಾ ಕಳ್ಳ)

Engráve ಎನ್‌ಗ್ರೇವ್ (ಕ್ರಿ. ಸಕ.) (ಗಡುಸಾದ ಮೇಲ್ಮೈಯನ್ನು ಕೊರೆದು ಮಾಡಿದ ರೇಖೆಗಳಿಂದ) ರೇಖಿಸು, ಕೊರೆ, ಕೆತ್ತು, ಚಿತ್ರಿಸು, ಅಲಂಕರಿಸು ; ನಕಾಸೆ ಮಾಡು. (ರೂಪ.) ಮನಸ್ಸಿನಲ್ಲಿ ಬಲವಾಗಿ ನಾಟಿರುವಂತೆ, ನಿಲ್ಲುವಂತೆ, ಮಾಡು. ಮುದ್ರಣ ಮಾಡುವುದಕ್ಕಾಗಿ ತಗಡಿನ ಮೇಲೆ (ಚಿತ್ರ, ಮೊ. ನ್ನು) ರೇಖೆಗಳಾಗಿ ಕೆತ್ತು ; ಮುದ್ರಣಫಲಕ ಕೆತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Engráver (ನಾ.) ಅಕ್ಷರ, ಚಿತ್ರ, ಮೊ. ನ್ನು ತಗಡಿನಮೇಲೆ, ದಾರುವಿನಮೇಲೆ, ಕೆತ್ತುವವನು (ಮು., ಮುದ್ರಣಕ್ಕಾಗಿ); ನಕಾಸೆ ಕೆತ್ತುವವನು. **Engráving** (ನಾ.) (ಕ್ರಿಯಾರ್ಥಗಳಲ್ಲ). ಕೆತ್ತನೆ ಮಾಡಿದ ತಗಡಿನಿಂದ ತೆಗೆದ ಚಿತ್ರದ ಪ್ರತಿ, ಮೊ. ವು; ಕೆತ್ತನೆ; ನಕಾಸೆ.

Engróss ಎನ್‌ಗ್ರೋಸ್ (ಕ್ರಿ. ಸಕ.) (ದಸ್ತಾವೇಜನ್ನು) ದೊಡ್ಡ ಅಕ್ಷರಗಳಲ್ಲಿ ಬರೆ. ಕಾನೂನಿಗನುಸಾರವಾದ ರೂಪದಲ್ಲಿ ಹೇಳು, ಬರೆ. (ಚರಿತ್ರ) (ಧಾನ್ಯ, ಮೊ. ಗಳನ್ನು) ಏಕಸ್ವಾಮ್ಯ ಪಡೆಯುವುದಕ್ಕಾಗಿ ಎಲ್ಲವನ್ನೂ ಕೊಂಡುಕೊಂಡುಬಿಡು. (ಸಂಭಾಷಣೆ, ಮೊ. ನ್ನು) ಒಬ್ಬರಿಗೂ ಅವಕಾಶ ಕೊಡದೆ ತಾನೇ ಆಕ್ರಮಿಸಿಕೊ. (ವ್ಯಕ್ತಿ, ಗಮನ, ಕಾಲ, ಮೊ. ಗಳ ವಿಷಯದಲ್ಲಿ) ತಲ್ಲೀನವಾಗಿಸು, ಮಗ್ನವಾಗುವಂತೆ ಮಾಡು (ಮು., ಭೂ. ಕೃ. ನಲ್ಲಿ). (Engrossed in subject ವಿಷಯದಲ್ಲಿ ತಲ್ಲೀನನಾಗಿ). **Engróssment** (ನಾ.) ತಲ್ಲೀನತೆ.

Engúlf, In- ಎನ್‌ಗಲ್ಫ್, ಇನ್— (ಕ್ರಿ. ಸಕ.) ಆಳದಲ್ಲಿ ದುಮುಕಿಬಿಡು, ಮುಳುಗಿಹೋಗು. (ರೂಪ.) ಸಂಪೂರ್ಣವಾಗಿ ನುಂಗಿಬಿಡು. **Engúlfment** (ನಾ.)

Enhánce ಎನ್‌ಹಾನ್ಸ್ (ಕ್ರಿ. ಸಕ.) (ಗುಣ, ಶಕ್ತಿ, ಮೊ. ನ್ನು) ಹೆಚ್ಚಿಸು, ಅತಿಶಯಿಸು, ವರ್ಧಿಸು, ಅಧಿಕ ಮಾಡು. ಉತ್ಪ್ರೇಕ್ಷೆ ಮಾಡು: ಇರುವುದಕ್ಕಿಂತಲೂ ಅತಿಶಯವಾಗಿ ಹೇಳು; ಅತ್ಯುಕ್ತಿಯಲ್ಲಿ ಹೇಳು; (ಬೆಲೆ, ಕೂಲಿ, ತೆರಿಗೆ, ಮೊ. ನ್ನು) ಏರಿಸು. **Enháncement** (ನಾ.)

Enharmónic ಎನ್‌ಹಾರ್ಮಾನಿಕ್ (ಗು.) (ಸಂ.) ಅರ್ಧಸ್ವರಕ್ಕಿಂತ ಕಡಮೆಯಾದ ಕಾಲದ, — ಕಾಲವುಳ್ಳ. **Enharmónically** (ಕ್ರಿ. ವಿ.)

Enígma ಇನಿಗ್ಮ (ನಾ.) ಒಗಟು; ಸಮಸ್ಯೆ; ಗೂಢ ಪ್ರಶ್ನೆ. ತಿಳಿಯಲು ತೊಡಕಾದ ಮನುಷ್ಯ ಅಥವಾ ವಸ್ತು. **Enigmátic(al)** ಈನಿಗ್‌ಮ್ಯಾಟಿಕ್(ಅಲ್) (ಗು.); **Enigmátically** (ಕ್ರಿ. ವಿ.); **Enígmatize** ಇನಿಗ್ಮಟೈಸ್ (ಕ್ರಿ. ಸಕ.) ಒಗಟು ಮಾಡು; ಒಗಟು ಮಾತನಾಡು; ಒಗಟಾಗಿ, ತೊಡಕಾಗಿ, ಮಾಡು.

Enísle, In- ಎನೈಲ್, ಇ — (ಕ್ರಿ. ಸಕ.) ದ್ವೀಪವನ್ನಾಗಿ ಮಾಡು; ದ್ವೀಪದಲ್ಲಿಡು; ಬೇರೆಯಿಡು; ಬೇರ್ಪಡಿಸು; ಪ್ರತ್ಯೇಕಿಸು.

Enjámbment ಎನ್‌ಜ್ಯಾಂಬ್‌ಮೆಂಟ್ (ನಾ.) (ಛಂ.) ಅರ್ಥಪೂರ್ತಿಗಾಗಿ ವಾಕ್ಯವನ್ನು ದ್ವಿಪದಿಯ ಎರಡನೆಯ ಪಾದದ ಮುಂದಕ್ಕೂ ಬೆಳೆಸುವುದು.

Enjoín ಎನ್‌ಜಾಯ್‌ನ್ (ಕ್ರಿ. ಸಕ.) (ಕಾರ್ಯವನ್ನು, ನಡೆವಳಿಯನ್ನು, ಒಬ್ಬನಿಗೆ) ವಿಧಿಸು, ಹೊರಿಸು, ಕಟ್ಟುಮಾಡು. ಆಜ್ಞಾಪಿಸು; ಅಪ್ಪಣೆಮಾಡು; ಕ್ರಮ ವಿಧಿಸು; ಕಟ್ಟಳೆಮಾಡು. (ನ್ಯಾ. ಶಾ., ಮು., ಅಮೆ. ಸಂ.) ನ್ಯಾಯಸ್ಥಾನದ ಆಜ್ಞೆಯಿಂದ ಪ್ರತಿಬಂಧಿಸು, ತಡೆಮಾಡು.

Enjóy ಎಂಜಾಯ್ (ಕ್ರಿ. ಸಕ.) (E. oneself ಸುಖಾನುಭವ ಮಾಡು; ಸಂತೋಷ ಪಡು; ಆನಂದಿಸು; ನಲಿ; ಭೋಗಿಸು). (ಅನುಕೂಲ್ಯ, ಮೊ. ಗಳ) ಅನುಭೋಗವುಳ್ಳವನಾಗಿರು; ಅನುಭವಿಸು; ಬಳಸು; ಉಳ್ಳವನಾಗಿರು; ಪಡೆದಿರು (E. poor health ಆರೋಗ್ಯ ಸರಿಯಾಗಿಲ್ಲದಿರು). **Enjóyable** (ಗು.); **Enjóyableness** (ನಾ.); **Enjóyably** (ಕ್ರಿ. ವಿ.); **Enjóyment** (ನಾ.) ಸುಖಾನುಭವ; ಸಂತೋಷ; ನಲಿವು; ಸಂತೋಷ ಕೊಡುವಂಥದು. ಪಡಪು; ಬಳಕೆ; ಅನುಭೋಗ; ಇಷ್ಟಾಪೂರ್ತಿ.

Enkíndle ಎನ್‌ಕಿಂಡ್‌ಲ್ (ಕ್ರಿ. ಸಕ.) (ಜ್ವಾಲೆ, ಭಾವೋದ್ರೇಕ, ಯುದ್ಧ, ಮೊ. ನ್ನು) ಹೊತ್ತಿಕೊಂಡು ಮೇಲೇಳುವಂತೆ ಮಾಡು; ಹೊತ್ತಿಸು; ಉರಿಸು; ಕನಲಿಸು; ಕೆರಳಿಸು; ರೇಗಿಸು; ಉದ್ರೇಕಗೊಳಿಸು; ಉದ್ದೀಪನೆ ಮಾಡು.

Enláce ಎನ್‌ಲೇಸ್ (ಕ್ರಿ. ಸಕ.) ಬಿಗಿಯಾಗಿ ಸುತ್ತು; ಬಿಗಿದಪ್ಪು; ಆವರಿಸು; ಸುತ್ತುಗಟ್ಟು; ಹೆಣೆ; ತೊಡಕಿಸು. **Enlácement** (ನಾ.)

Enlárge ಎನ್‌ಲಾರ್ಜ್ (ಕ್ರಿ.) ಹೆಚ್ಚಿಸು; ಬೆಳಸು; (ಮನಸ್ಸು, ಹೃದಯ, ಭಾವಗಳು — ಇವನ್ನು) ದೊಡ್ಡದು ಮಾಡು; ವಿಸ್ತರಿಸು; ವಿಶಾಲ ಮಾಡು. (ಪ್ರಾಚೀ. ಪ್ರ.) ಬಿಡುಗಡೆ ಮಾಡು; ಸೆರೆ ಬಿಡಿಸು; ದೊಡ್ಡದಾಗು; ವಿಸ್ತಾರವಾಗು; ಹರಡು; ಬೆಳೆ; ಉಬ್ಬಿಕೊ; ಹರವಿಕೊ. (ಯಾವುದಾದರೂ ವಿಷಯದಮೇಲೆ) ವಿಸ್ತರಿಸಿ ಹೇಳು, ಬಿಡಿಸಿ ಹೇಳು, ವಿವರಿಸು, ಹೇಳಿಕೊ. (ಛಾಯಾ ಚಿತ್ರ) (ದೃಗ್ಯಂತ್ರದ ಮೂಲಕ) ಚಿತ್ರವನ್ನು ಹೆಚ್ಚು ಪ್ರಮಾಣವುಳ್ಳದ್ದನ್ನಾಗಿ ಮಾಡು; ದೊಡ್ಡದು ಮಾಡು, ಆಗು; ಹೆಚ್ಚುಪ್ರಮಾಣದ್ದನ್ನಾಗಿ ಮಾಡಲು ಸಾಧ್ಯವಿರು. **Enlárgement** (ನಾ.) (ಬಂಧನದಿಂದ) ಬಿಡುಗಡೆ. (ಚಿತ್ರ) ವಿಸ್ತರಣ. **Enlárger** (ನಾ.) ಛಾಯಾಚಿತ್ರದ ವಿಷಮ ಪ್ರತಿಯನ್ನಾಗಲಿ (Negative) ಸಮ ಪ್ರತಿಯನ್ನಾಗಲಿ (Positive) ದೃಗ್ವಿಧಾನದಿಂದ ದೊಡ್ಡದುಮಾಡಲು ಅಥವಾ ಚಿಕ್ಕದುಮಾಡಲು ಅನುಕೂಲವಿರುವ ಯಂತ್ರಸಾಧನ: ವಿಸ್ತಾರಕ.

Enlíghten ಎನ್‌ಲೈಟನ್ (ಕ್ರಿ. ಸಕ.) (ಒಬ್ಬನಿಗೆ, ಒಂದು ವಿಷಯವಾಗಿ) ತಿಳಿಯಹೇಳು, ತಿಳಿವಳಿಕೆ ಕೊಡು, ತಿಳಿಸು. (ಕಾವ್ಯ) (ಒಂದು ವಸ್ತುವಿನಮೇಲೆ) ಬೆಳಕು ಬೀಳಿಸು; ಬೆಳಗು; ಪ್ರಕಾಶಪಡಿಸು; (ಒಬ್ಬನಿಗೆ) ಬೆಳಕು ತೋರು. (ರೂಪ.) ಜ್ಞಾನ, ಬುದ್ಧಿ, ಅಧ್ಯಾತ್ಮ ಜ್ಞಾನ, ಕೊಡು; ಪ್ರಬೋಧಿಸು; ಜ್ಞಾನೋದಯವುಂಟುಮಾಡು; (ಬಳ. ಮಾ.) ತಿಳಿಯಪಡಿಸು; ಅರುಹು; ದುರಭಿಮಾನ, ಅಂಧ ಶ್ರದ್ಧೆಗಳನ್ನು, ಕಳೆ, ಹೋಗಲಾಡಿಸು (ಮು., ಭೂ. ಕೃ. ನಲ್ಲಿ). **Enlíghtenment** (ನಾ.) ~~ತಿಳಿವಳಿಕೆ~~; ಜ್ಞಾನೋದಯ. ज्ञानोदय

Enlínk ಎನ್‌ಲಿಂಕ್ (ಕ್ರಿ. ಸಕ.) ಒಟ್ಟಿಗೆ ಪೋಣಿಸು, ಜೋಡಿಸು, ಸೇರಿಸು, ಕೂಡಿಸು, ತಗುಲಿಸು (*With, to* ಉಪ. ದೊಡನೆ) (ರೂಪ. ಸಹ)

Enlíst ಎನ್‌ಲಿಸ್ಟ್ (ಕ್ರಿ.) ಸೈನಿಕ ವೃತ್ತಿಗೆ ಸೇರಿಸು, ಸೇರು; ಪಟ್ಟಿಯಲ್ಲಿ ಸೇರಿಸು, ದಾಖಲುಮಾಡು. (ಒಂದು ಉದ್ಯಮದಲ್ಲಿ ಮನುಷ್ಯರು, ಮನೋಭಾವಗಳು, ಪ್ರಕೃತಿಶಕ್ತಿಗಳು, ಶಾಸ್ತ್ರಗಳು, ಮೊ. ಗಳ) ಸಹಕಾರ ಸಹಾಯಗಳನ್ನು ಸಂಪಾದಿಸು, ಪಡೆ. **Enlístment** (ನಾ.)

Enlíven ಎನ್‌ಲೈವ್‌ನ್ (ಕ್ರಿ. ಸಕ.) (ಮನುಷ್ಯರು, ಮನೋಭಾವಗಳು, ವ್ಯಾಪಾರ, ಮೊ. ಕ್ಕೆ) ಚೈತನ್ಯ ಕೊಡು, ಚಟುವಟಿಕೆಯುಂಟುಮಾಡು, ಕಳೆದುಂಬು, ಹುರಿದುಂಬು, ಗೆಲವುಂಟುಮಾಡು. (ಚಿತ್ರ, ದೃಶ್ಯ, ಮೊ. ಕ್ಕೆ) ಕಾಂತಿ ಕೊಡು; ಜೀವಕಳೆ ಕೊಡು.

En másse (F) ಎನ್‌ಮ್ಯಾಸ್, ಅನ್‌ಮಾಸ್ (ಕ್ರಿ. ವಿ.) ಒಟ್ಟಿಗೆ; ಒಟ್ಟಾಗಿ; ಸಮುದಾಯವಾಗಿ; ಎಲ್ಲ ಒಟ್ಟಿಗೆ.

Enmésh ಎನ್‌ಮೆಷ್, **Emm-** ಎಮೆಷ್, **Imm-** ಇಮೆಷ್ (ಕ್ರಿ. ಸಕ.) ಬಲೆಯಲ್ಲಿ(ಯಂತೆ) ತೊಡರಿಸು, ಸಿಕ್ಕಿಸು. **Enméshment** (ನಾ.)

Énmity. **Enemy** ನೋಡಿ.

Énnead ಎನಿಆ್ಯಡ್ (ನಾ.) ಒಂಬತ್ತರ ಗಣ, ತಂಡ, ಒಟ್ಟು; ನವಕ (ಪ್ರವಚನಗಳು, ವಿಷಯಗಳು)

Ennóble ಎನೋಬ್‌ಲ್ (ಕ್ರಿ. ಸಕ.) (ಒಬ್ಬನನ್ನು) ಘನತೆವಂತನನ್ನಾಗಿ, ಶ್ರೀಮಂತನನ್ನಾಗಿ, ಮಾಡು; ಘನತೆ ತರು; ಶ್ರೇಷ್ಠತೆ ಕೊಡು; ಆರ್ಯತೆ ಕೊಡು; ಉನ್ನತಿಗೇರಿಸು; ಮೇಲ್ಮೆಗೆ ಎತ್ತು; ಉದಾತ್ತ ಮಾಡು; ಉತ್ತಮಗೊಳಿಸು. **Ennóblement** (ನಾ.)

Énnui ಆನ್ವೀ, **Ennuí** ಆನ್‌ವೀ (ನಾ.) (ಉದ್ಯೋಗ ಅಥವಾ ಆಸಕ್ತಿ ಇಲ್ಲದುದರಿಂದ) ಮನಸ್ಸಿಗೆ ಜುಗುಪ್ಸೆ, ಗ್ಲಾನಿ, ಬೇಸರಿಕೆ, ಬಳಲಿಕೆ, ನಿರುತ್ಸಾಹ, ಜಡತನ. **Ennuiéd** ಆನ್ವೀಡ್ (ಗು.); **Ennuyé** (F) ಆನ್ವೀಯೇ (ಗು., ನಾ., ಪುಲ್ಲಿಂಗ; ಸ್ತ್ರೀ. -yee —ಯೇ) ಜುಗುಪ್ಸೆ ಹಿಡಿದ(ವನು, ವಳು)

Éno ಈನೋ (ನಾ.) Eno's Fruit Salt ಎಂಬ ಸ್ವಾಮ್ಯಪಡೆದ ಒಂದು ಔಷಧದ ಉಪ್ಪು (Eno ಎಂಬಾತನ ಹೆಸರಿನಿಂದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Enórmity. **Enormous** ನೋಡಿ.

Enórmous ಇನಾರ್ಮಸ್ (ಗು.) ಬಹಳ ; ಬಹು ದೊಡ್ಡ ; ವಿಪರೀತ ; ಅತ್ಯಂತ ; ಮಹಾ ; ಅಪರಿಮಿತ (E. beast ಮಹಾಮೃಗ. E. difference ಅಪರಿಮಿತ ವ್ಯತ್ಯಾಸ). **Enórmously** (ಕ್ರಿ. ವಿ.) ; **Enórmousness** (ನಾ.) ; **Enórmity** (ನಾ.) ವಿಪರೀತ, ಮಿತಿ ಮೀರಿದ, — ದುಷ್ಟತನ, ಕೆಟ್ಟತನ ; ವೈಪರೀತ್ಯ ; ಘೋರಾಪರಾಧ ; ಮಹಾಪರಾಧ ; ಪಾತಕ.

Enoúgh ಇನಫ್, (ಕಾವ್ಯ) **Enow** ಇನೌ (ಗು., ನಾ., ಕ್ರಿ. ವಿ.) ಸಾಕು ; ಸಾಕಾದಷ್ಟು ; ಬೇಕಾದಷ್ಟು ; ತಕ್ಕಷ್ಟು. E. of this folly ಈ ಅವಿವೇಕ ಸಾಕು. E.! ಸಾಕು! ಬಾಯಿ ಮುಚ್ಚು! E. is as good as a feast ಸಾಕಾದಷ್ಟಿದ್ದರೆ ಹಬ್ಬದಂತೆ. Cry 'e.' (ಸೋತೆನೆಂದು ಒಪ್ಪಿ) ಸಾಕೆನ್ನು. I have had e. of him ಅವನಿಂದ ನನಗೆ ಸಾಕಾಗಿಹೋಗಿದೆ. I had e. to do to catch the train ರೈಲು ಹಿಡಿಯುವುದೇ ನನಗೆ ಸಾಕಷ್ಟು ಕೆಲಸವಾಯಿತು. E. and to spare ಬೇಕಾದಷ್ಟಕ್ಕಿಂತಲೂ ಹೆಚ್ಚಾಗಿಯೇ. Five men are e. ಐದು ಜನ ಸಾಕು. It is boiled (just) e. ಎಷ್ಟು ಬೇಕೊ ಅಷ್ಟು (ಮಾತ್ರ) ಕುದಿಸಿದೆ, ಬೇಯಿಸಿದೆ. She sings well e. ಅವಳು ತಕ್ಕ ಮಟ್ಟಿಗೆ ಹಾಡುತ್ತಾಳೆ. Oddly e., he had lost his purse ಏನು ವಿಚಿತ್ರವೊ! ಅವನು ತನ್ನ ಹಣದ ಚೀಲವನ್ನು ಕಳೆದುಕೊಂಡಿದ್ದನು. Sure e., there it was ನಿಜವಾಗಿಯೂ (ಎಣಿಸಿದ್ದಂತೆಯೇ) ಅದು ಅಲ್ಲೇ ಇದ್ದಿತು.

Enoúnce ಇನೌನ್ಸ್ (ಕ್ರಿ. ಸಕ.) ನಿರೂಪಿಸು ; (ಪದಗಳನ್ನು) ಉಚ್ಚರಿಸು, ಉಚ್ಚಾರ ಮಾಡು. **Enoúncement** (ನಾ.)

En passánt (F) ಆನ್ ಪಾಸಾನ್ (ಕ್ರಿ. ವಿ.) ಪ್ರಾಸಂಗಿಕವಾಗಿ ; ಪ್ರಸ್ತಾಪತ್ವೇನ ; ಆನುಷಂಗಿಕವಾಗಿ ; ಮಾರ್ಗವಶದಿಂದ. (ಚದುರಂಗ) Take e. p. (ಒಂದೇ ಸಲ ಎರಡು ಮನೆ ದಾಟುವ ಪ್ಯಾದೆಯನ್ನು ಅದು ಒಂದೇ ಮನೆ ದಾಟಿದ್ದ ಸಂದರ್ಭದಲ್ಲಿ ಹೇಗೊ ಹಾಗೆ) ಮಾರ್ಗವಶವಾಗಿ ಹೊಡೆ.

Enquíre, Enquíry. **Inquire** ನೋಡಿ.

Enráge ಎನ್‌ರೇಜ್ (ಕ್ರಿ. ಸಕ.) ರೇಗಿಸು ; ಕೆರಳಿಸು ; ಸಿಟ್ಟೆಬ್ಬಿಸು ; ರೋಷಗೊಳಿಸು ; ಅತಿ ಕೋಪ ಹುಟ್ಟಿಸು (Enraged *at*, *by*, *with*)

En rappórt (F). **Rapport** ನೋಡಿ.

Enrápture ಎನ್‌ರ್‍ಯಾಪ್ಚ್ಯರ್, — ಪ್ಚರ್ (ಕ್ರಿ. ಸಕ.) ಅತ್ಯಂತ ಸಂತೋಷ ಹುಟ್ಟಿಸು ; ಆನಂದಗೊಳಿಸು ; ಪರವಶ ಮಾಡು.

Enrégiment ಎನ್‌ರೆಜ್ಮೆಂಟ್ (ಕ್ರಿ. ಸಕ.) (ಮಂದಿಯನ್ನು) ಒಂದು ದಳವಾಗಿ ರಚಿಸು. ಶಿಸ್ತಿಗೊಳಪಡಿಸು ; ಶಿಕ್ಷಿತ ಮಾಡು.

En régle (F) ಆನ್ ರೇಗ್ಲ್ (ಕ್ರಿ. ವಿ.) ವಿಧಿವತ್ತಾಗಿ ; ಯಥಾ ವಿಧಿಯಾಗಿ ; ವಿಹಿತ ರೀತಿಯಲ್ಲಿ.

Enrích ಎನ್‌ರಿಚ್ (ಕ್ರಿ. ಸಕ.) ಐಶ್ವರ್ಯವಂತನನ್ನಾಗಿ ಮಾಡು ; ಹಣವಂತನನ್ನಾಗಿ ಮಾಡು. (ವಸ್ತುಸಂಗ್ರಹ, ವಿವಿಧ ವಸ್ತು ಪ್ರದರ್ಶನ ಶಾಲೆ, ಪುಸ್ತಕ — ಇವುಗಳಲ್ಲಿರುವುದರ ಜೊತೆಗೆ) ಮತ್ತಷ್ಟು ಸೇರಿಸು, ಹೆಚ್ಚಿಸು, ಅಭಿವೃದ್ಧಿ ಮಾಡು. (ಗುಣ, ರುಚಿ, ಮೊ. ಗಳನ್ನು) ಅಧಿಕ ಮಾಡು, ಪುಷ್ಟಿಗೊಳಿಸು ; ಸಂಪದ್ಯುಕ್ತ ಮಾಡು ; ಸಿರಿ ಹೊಮ್ಮಿಸು. **Enríchment** (ನಾ.)

Enróbe ಎನ್‌ರೋಬ್ (ಕ್ರಿ. ಸಕ.) ಉಡುಪು ತೊಡಿಸು, ತೊಡು ; ವಸ್ತ್ರ ಧರಿಸು.

Enról(l) ಎನ್‌ರೋಲ್ (ಕ್ರಿ. ಸಕ.) (ಪಟ್ಟಿಯಲ್ಲಿ, ಮು., ಸೈನಿಕರ ಪಟ್ಟಿಯಲ್ಲಿ, ಒಬ್ಬನ) ಹೆಸರು ಬರೆ, ಸೇರಿಸು, ದಾಖಲು ಮಾಡು. (ಒಂದು ಸಂಘ, ಮೊ. ಗಳಲ್ಲಿ ಒಬ್ಬನನ್ನು) ಸದಸ್ಯನನ್ನಾಗಿ ಸೇರಿಸಿಕೊ. (ದಸ್ತಾವೇಜು, ಮೊ. ನ್ನು) ನ್ಯಾಯಸ್ಥಾನದ ದಾಖಲೆಪುಸ್ತಕದಲ್ಲಿ, ದಫ್ತರದಲ್ಲಿ, ದಾಖಲು ಮಾಡು. ನಿರೂಪಿಸು ; ನಮೂದಿಸು ; ಬರೆದಿಡು. ಪ್ರಶಸ್ತಿಗೊಳಿಸು. (ಕ್ರಿ. ಅಕ.) ದಾಖಲಾಗು. **Enrólment** (ನಾ.)

En roúte (F) ಆನ್ ರೂಟ್ (ಕ್ರಿ. ವಿ.) ದಾರಿಯಲ್ಲಿ ; ಮಾರ್ಗದಲ್ಲಿ ; ಪಯಣ ಮಾರ್ಗದಲ್ಲಿ.

Ens ಎನ್ಸ್ (ನಾ. ; ಬ. ವ. Entia ಎನ್ಷಿಯ) (ತತ್ತ್ವಶಾಸ್ತ್ರ) ವಸ್ತು ; ತತ್ತ್ವ ; ಪದಾರ್ಥ.

Ensámple ಎನ್‌ಸಾಂಪ್‌ಲ್ (ನಾ.) (ಪ್ರಾಚೀ. ಪ್ರ.) = Example.

Ensánguined ಎನ್‌ಸ್ಯಾಂಗ್ವಿನ್ಡ್ (ಗು.) ನೆತ್ತರ ಕರೆಯುಳ್ಳ ; ರಕ್ತದ ಕಲೆಯಾದ ; ರಕ್ತ ಕಲುಷಿತವಾದ ; ರಕ್ತಮಯವಾದ (ರೂಪ. ಸಹ)

Enscónce ಎನ್‌ಸ್ಕಾನ್ಸ್ (ಕ್ರಿ. ಸಕ.) (ಗುಪ್ತವಾದ, ಸುರಕ್ಷಿತವಾದ, ಬೆಚ್ಚನೆಯ, — ಸ್ಥಳದಲ್ಲಿ) ನೆಲಸು, ಸೇರಿಕೊ, ಹೊಕ್ಕುಕೊ, ಆಶ್ರಯ ಪಡೆ, ಅಡಗಿಕೊ, ತಲೆಗರೆ (ಗ್ರಾಂ) ; ಮೆಯ್ಗರೆ (ಗ್ರಾಂ.)

Ensémble (F) ಆನ್‌ಸಾಂಬ್‌ಲ್ (ನಾ.) (Also, Tout e.) (ಪ್ರತ್ಯೇಕ ಭಾಗಗಳನ್ನು ಗಮನಿಸದೆ) ಒಟ್ಟಾಗಿ, ಸಮಗ್ರವಾಗಿ, — ಪರಿಶೀಲಿಸಿದುದು ; ಒಟ್ಟು ; ಸಮಗ್ರ ; ಒಟ್ಟಿನ ಪರಿಣಾಮ, ಫಲ. (ಸಂ.) ಗಾಯಕರೆಲ್ಲರೂ ಒಟ್ಟಿಗೆ ಸೇರಿ ನುಡಿಸುವ, ಹಾಡುವ, ಸಂಗೀತ ಭಾಗ ; ಮೇಳಭಾಗ.

Enshríne ಎನ್‌ಶ್ರೈನ್ (ಕ್ರಿ. ಸಕ.) (ಸ್ಮಾರಕ ವಸ್ತು, ಮೊ. ನ್ನು) ಪವಿತ್ರ ಆವರಣದಲ್ಲಿ ಸ್ಥಾಪಿಸು, ಪ್ರತಿಷ್ಠೆ ಮಾಡು ; ಗುಡಿಯಲ್ಲಿರಿಸು. (ಅಮೂಲ್ಯ ವಸ್ತುವಿಗೆ) ಪವಿತ್ರದ ನೆಲೆಯಾಗಿರು (ರೂಪ. ಸಹ) ; ಪವಿತ್ರವಾಗಿ ಭಾವಿಸು, ಕಾಪಾಡಿಕೊಂಡು ಬರು. **Enshrínement** (ನಾ.)

Enshroúd ಎನ್‌ಶ್ರೌಡ್ (ಕ್ರಿ. ಸಕ.) ಪೂರ್ತಿಯಾಗಿ ಮುಚ್ಚು ; ಮುಸುಕು ಹಾಕು ; ಹೊದಿಸು ; ಆಚ್ಛಾದಿಸು ; ಕಾಣದಂತೆ ಮರೆಮಾಡು.

Énsiform ಎನ್ಸಿಫಾರ್ಮ್ (ಗು.) ಕತ್ತಿಯಾಕಾರದ. E. cartilage ಎದೆಮೂಳೆಗೆ ಸೇರಿರುವ ಕತ್ತಿಯಾಕಾರದ ಮೃದ್ವಸ್ಥಿ.

Énsign ಎನ್ಸೈನ್ (ನಾ.) (ಅಧಿಕಾರ, ಮೊ. ಗಳ.) ಚಿಹ್ನೆ, ಗುರುತು, ಲಾಂಛನ, ಪದಕ, ಬಿಲ್ಲೆ. ಬಾವುಟ ; ಧ್ವಜ ; ಪತಾಕೆ ; (ಮು. ಬ್ರಿಟಿಷ್ ನಾವೆಯಲ್ಲಿ) ಒಂದು ಮೂಲೆಯಲ್ಲಿ 'ಯೂನಿಯನ್ ಜ್ಯಾಕ್' ಲಾಂಛನವಿರುವ ಬಿಳಿಯ, ನೀಲಿಯ ಅಥವಾ ಕೆಂಪಿನ ಬಾವುಟ (White e. ರಾಜ ನೌಕಾ ದಳದ ಬಾವುಟ. Blue e. ನೌಕಾ ರಕ್ಷಣ ದಳ, ಮೊ. ಗಳ ಬಾವುಟ. Red e. ವಾಣಿಜ್ಯ ನೌಕೆಗಳ ಬಾವುಟ). ಬಾವುಟ ಹೊತ್ತಿರುವವನು ; ಬಾವುಟದ ಸಿಪಾಯಿ. **Énsigncy** — ಸಿ (ನಾ.) ಧ್ವಜಧಾರಿ ಸಿಪಾಯಿಯ ಸ್ಥಾನ, ಅಧಿಕಾರ.

Énsilage ಎನ್ಸಿಲೆಜ್ (ನಾ., ಕ್ರಿ. ಸಕ.) ದನಗಳ ಹಸುರುಮೇವನ್ನು ಒಣಗಿಸದೆ ಹಾಗೆಯೇ ತಕ್ಕ ಹಗೇವುಗಳಲ್ಲಿ ಹಾಕಿ ಮುಚ್ಚಿಟ್ಟು ರಕ್ಷಿಸುವುದು ; ಹೀಗೆ ಕಾದಿಟ್ಟ ಹಸುರುಮೇವು: ಹಗೇವುಮೇವು. (ಕ್ರಿ.) ಹಸುರುಮೇವನ್ನು ಹಗೇವಿನಲ್ಲಿಟ್ಟು ಭದ್ರಪಡಿಸು ; ಹಗೇವುಮೇವು ಮಾಡು. **Ensíle** ಎನ್ಸೈಲ್ (ಕ್ರಿ. ಸಕ.) = Ensilage.

Ensláve ಎನ್‌ಸ್ಲೇವ್ (ಕ್ರಿ. ಸಕ.) ಗುಲಾಮನನ್ನಾಗಿ ಮಾಡು ; ತೊತ್ತು ಮಾಡು ; ಅಡಿಯಾಳು ಮಾಡು ; ಆಳ್ಗೊಳ್ಳು ; ದಾಸತ್ವಕ್ಕೆ ಹಾಕು (ರೂಪ. ಸಹ : ಪದ್ಧತಿ, ಅಂಧ ಶ್ರದ್ಧೆ, ಮೊ. ಗಳ ವಿಷಯದಲ್ಲಿ). **Enslávement** (ನಾ.) ; **Ensláver** (ನಾ.) (ಕ್ರಿಯಾರ್ಥಗಳಲ್ಲಿ). ಪುರುಷನನ್ನು ಮೋಹಪಾಶಕ್ಕೆ ಸಿಕ್ಕಿಸಿಕೊಳ್ಳುವಂಥ ಸೊಬಗುಳ್ಳ ಸ್ತ್ರೀ : ಮೋಹಿನಿ.

Ensnáre ಎನ್‌ಸ್ನೇರ್ (ಕ್ರಿ. ಸಕ.) ಬಲೆಯಲ್ಲಿ ಬೀಳಿಸು, ಕೆಡವು ; ಬಂಧನದಲ್ಲಿ ಸಿಕ್ಕಿಸಿಕೊ (ರೂಪ. ಸಹ)

Ensoúl, In- ಎನ್‌ಸೋಲ್, ಇನ್ — (ಕ್ರಿ. ಸಕ.) ಆತ್ಮ ತುಂಬು, — ಎರೆ, — ಹೊಯ್ಯಿ ; ಆತ್ಮಕ್ಕೆ ಸೇರಿಸಿಕೊ ; ಆತ್ಮಾಂತರ್ಗತ ಮಾಡು ; ಒಳಗೆ ಆತ್ಮದಂತಿರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Enspheré ಎನ್‌ಸ್ಫಿಯರ್ (ಕ್ರಿ. ಸಕ.) ಗೋಲ ಮಾಡು ; ಗೋಲದಲ್ಲಿ, ಗೋಲದಲ್ಲಿಯಂತೆ, ಇಡು ; ಸುತ್ತುಗಟ್ಟು ; ಆವರಿಸು.

Ensué ಎನ್‌ಸ್ಯೂ (ಕ್ರಿ.) ಆಮೇಲೆ ಆಗು ; ತರುವಾಯ ಸಂಭವಿಸು ; ಪರಿಣಾಮವಾಗಿ ಬರು ; ಪರಿಣಮಿಸು (*From*, *on* ಉಪ. ಜೊಡನೆ). (ಬೈಬಲ್) ಹುಡುಕಿಕೊಂಡು ಹೋಗು ; ಅರಸು ; ಬಯಸು ; ಆಶಿಸು.

Ensúre ಎನ್‌ಷೂರ್ (ಕ್ರಿ. ಸಕ.) (ಮನುಷ್ಯನನ್ನು, ವಸ್ತುವನ್ನು, ಅಪಾಯ ಸಂಭವವಿಲ್ಲದಂತೆ) ಸುರಕ್ಷಿತ ಮಾಡು. (ಸಂಭವಿಸುವುದೆಂದು) ಖಂಡಿತ ಮಾಡು, ಭರವಸೆ ಕೊಡು, ನಿಶ್ಚಿತ ಮಾಡು ; ನೆಚ್ಚಿಕೆ ಕೊಡು. (ಒಂದು ವಸ್ತುವನ್ನು ಒಬ್ಬನಿಗೆ, ಒಬ್ಬನಿಗಾಗಿ) ಭದ್ರಪಡಿಸು, ಕಾದಿಡು ; = Insure (ಹಿಂದಿನ ಪ್ರಯೋಗ)

Enswáthe ಎನ್‌ಸ್ವೇದ್ (ಕ್ರಿ. ಸಕ.) ಪಟ್ಟಿ ಸುತ್ತು, ಕಟ್ಟು (ರೂಪ. ಸಹ). **Enswáthement** (ನಾ.)

Entáblature ಎಂಟ್ಯಾಬ್ಲಚ್ಯುರ್ (ನಾ.) (ವಾ. ಶಾ.) ಅಲಂಕಾರಗಂಬದ ಮೇಲ್ಭಾಗದಲ್ಲಿರುವ ಬೋದಿಗೆ, ಸುತ್ತುಚಿತ್ರ, ಮೊ. ಭಾಗ : ಕಂಬದ ತಲೆಕಟ್ಟಡ.

Entáblement ಎನ್‌ಟೇಬ್‌ಲ್‌ಮೆಂಟ್ (ನಾ.) ವಿಗ್ರಹಪೀಠದ ಮೇಲಿನ ಮಟ್ಟವಾದ ಜಗಲಿ(ಗಳು)

Entaíl ಎಂಟೆಯ್‌ಲ್ (ನಾ., ಕ್ರಿ. ಸಕ.) ಭೂಸ್ಥಿತಿಯನ್ನು ಮನಸ್ಸು ಬಂದಂತೆ ಪರಭಾರೆ ಮಾಡಲು ಅವಕಾಶವಿಲ್ಲದೆ ಅನುಭೋಗ ಪರಂಪರೆಯನ್ನು ಮೊದಲೇ ನಿಷ್ಕರ್ಷೆ ಮಾಡುವುದು ; ಪರಾಧೀನವಾಗದ ಏರ್ಪಾಡು ; ಹೀಗೆ ನಿಷ್ಕರ್ಷೆ ಮಾಡಿದ ಭೂಸ್ಥಿತಿ. (ರೂಪ.) (ಗುಣಾತಿಶಯಗಳ, ನಂಬಿಕೆ, ಮೊ. ಗಳ) ಅನ್ವಯಾಗತ ಪ್ರಾಪ್ತಿ. (ಕ್ರಿ.) ಭೂಸ್ಥಿತಿ ಮೊ. ವು ಪರಭಾರೆಯಾಗದಂತೆ ಅನುಭೋಗ ಕ್ರಮವನ್ನು ನಿಷ್ಕರ್ಷೆ ಮಾಡು. (ಒಬ್ಬನಿಗೆ ಒಂದು ವಸ್ತುವನ್ನು) ಪರಭಾರೆ ಮಾಡಲಾಗದಂತೆ ಕೊಡು. (ವೆಚ್ಚಕ್ಕೆ, ದುಡಿಮೆಗೆ, ಒಬ್ಬನನ್ನು) ಒಳಪಡಿಸು. ಆವಶ್ಯಕ ಮಾಡು. The work entails expense ಕೆಲಸಕ್ಕೆ ಖರ್ಚು ತಗುಲುತ್ತದೆ. **Entaílment** (ನಾ.)

Entángle ಎಂಟ್ಯಾಂಗ್‌ಲ್ (ಕ್ರಿ. ಸಕ.) ಬಲೆಯಲ್ಲಿ ಅಥವಾ ತೊಡಕಿನಲ್ಲಿ ಸಿಕ್ಕಿಸು. (ಮನುಷ್ಯ, ಮೊ. ನ್ನು) ತೊಂದರೆಯಲ್ಲಿ ತೊಡರಿಸು ; ತೊಡಕು ಮಾಡು ; ಸಿಕ್ಕು ಬೀಳಿಸು (ರೂಪ. ಸಹ). **Entánglement** (ನಾ.) (ಕ್ರಿಯಾರ್ಥಗಳಲ್ಲಿ). (ಸೈನ್ಯ) ಶತ್ರುವಿನ ಮುಂಬರಿವನ್ನು ತಡೆಯುವುದಕ್ಕಾಗಿ ಒಡ್ಡಿದ ತಡೆ (ಮು., ದಸಿಗಳನ್ನು ಹೂಳಿ ಮುಳ್ಳುತಂತಿ ಹಾಕಿದ್ದು)

Entélechy ಎಂಟೆಲ(ಲೆ)ಕಿ (ನಾ.) (ತತ್ತ್ವಶಾಸ್ತ್ರ) ಅಂತಶ್ಶಕ್ತಿಯ ಪರಿಪೂರ್ಣತಾ ಸಿದ್ಧಿ. (ಅರಿಸ್ಟಾಟಲನ ಮತರೀತಿಯಲ್ಲಿ : The soul is the E. of the body ಆತ್ಮವು ದೇಹದ ಪರಿಪೂರ್ಣಾವಸ್ಥೆ). ಸಂಭಾವ್ಯವಾದದ್ದು ; ವಾಸ್ತವವಾಗಿ ಸಿದ್ಧಿಸುವುದು. ಯಾವುದಕ್ಕಾದರೂ ರೂಪವನ್ನೂ ಪರಿಪೂರ್ಣತೆಯನ್ನೂ ಕೊಡುವಂಥದು ; ಪರಿಪೂರ್ಣಾವಸ್ಥೆ. ಆತ್ಮ (ದೇಹವಲ್ಲ). ('ಲೈಬ್ನಿಟ್ಸ್' ಎಂಬ ತತ್ತ್ವಜ್ಞನ ಮತದಲ್ಲಿ) ಅಪೃಥಕ್ಕರಣೀಯ ಪರಮಾಣು : ಏಕ ಪರಮಾಣು.

Entéllus ಎಂಟೆಲಸ್ (ನಾ.) (Also, E. monkey) ಇಂಡಿಯಾ ದೇಶದ ಒಂದು ಗಡ್ಡದ ಕೋತಿ : ಸಿಂಗಳೀಕ.

Enténte (F) ಅನ್ಟಾನ್ಟ್ (ನಾ.) (ರಾಜ್ಯತಂತ್ರ) ರಾಜ್ಯಗಳಲ್ಲಿ ಪರಸ್ಪರ ಮೈತ್ರಿ, ಸಖ್ಯ ; ಹೀಗೆ ಮೈತ್ರೀಭಾವವುಳ್ಳ ರಾಜ್ಯವರ್ಗ ; ಮಿತ್ರ ರಾಜ್ಯಗಳು.

Énter ಎಂಟರ್ (ಕ್ರಿ.) ಹೊಗು ; ಒಳಕ್ಕೆ ಹೋಗು, ಬರು ; ಪ್ರವೇಶಿಸು. (ನಾಟಕದಲ್ಲಿ : ರಂಗ ಸೂಚನೆ, ಪ್ರಥಮ ಪುರುಷ, ವಿಧಿ ರೂಪ) ರಂಗಕ್ಕಿಳಿ ; ಪ್ರವೇಶಿಸು (E. Macbeth ಮ್ಯಾಕ್‌ಬೆತ್ತನು ಪ್ರವೇಶಿಸುತ್ತಾನೆ). [E. into (ಸಂಭಾಷಣೆ, ಸಂಬಂಧ, ಕರಾರು, ವಿಚಾರಣೆ, ಮೊ. ಗಳ ವಿಷಯದಲ್ಲಿ) ತೊಡಗು, ಬೆಳಸು, ಮಾಡು, ಮಾಡಿಕೊ. (ಒಬ್ಬನ ಮನೋವೃತ್ತಿ, ಮೊ. ಗಳ ವಿಷಯದಲ್ಲಿ) ಇಂಗಿತ ತಿಳಿ, ಸೂಕ್ಷ್ಮ ತಿಳಿ, ಅನುಕಂಪ ತೋರು, ಸಹಾನುಭೂತಿ ತೋರು. (ಲೆಕ್ಕಾಚಾರಗಳು, ಮುಂದಾಲೋಚನೆಗಳು, ಮೊ. ಗಳಲ್ಲಿ) ಸೇರಿರು, ಒಳಗಾಗಿರು, ಭಾಗವಾಗಿರು, ಅಡಕವಾಗಿರು. E. (up)on (ಆಸ್ತಿಯನ್ನು) ಸ್ವಾಧೀನ ಪಡಿಸಿಕೊ ; ಆಸ್ತಿಗೆ ಬರು. (ಕಾರ್ಯವನ್ನು) ಆರಂಭಮಾಡು ; (ವಿಷಯಕ್ಕೆ) ಪ್ರವರ್ತಿಸು, ಕೈ ಹಚ್ಚು]. (ಮಾಂಸಖಂಡ, ಮೊ. ನ್ನು) (ಒಳ)ಹೊಗು, ನಾಟು, ಪ್ರವೇಶಿಸು. (ಸೈನ್ಯ, ಧರ್ಮಸಂಸ್ಥೆ, ಮೊ. ಕ್ಕೆ) ಸೇರು, ಸೇರಿಕೊ. (ನಾಯಿಗೆ) ಆರಂಭ ಶಿಕ್ಷಣ ಕೊಡು. (ಕುದುರೆಯನ್ನು) ಪಳಗಿಸು, ತರಬೇತು ಮಾಡು. (ಹೆಸರು, ವಿವರಣೆ, ಮೊ. ಗಳನ್ನು ಪಟ್ಟಿ, ಪುಸ್ತಕ, ಮೊ. ಗಳಲ್ಲಿ) ಬರೆ, ದಾಖಲು ಮಾಡು, ದಾಖಲಾಗು. (E. an appearance ಸಭೆ ಮೊ. ಗಳಲ್ಲಿ ಕಾಣಿಸಿಕೊ. E. a protest ಆಕ್ಷೇಪಣೆಯನ್ನೊ ಅಸಮ್ಮತಿಯನ್ನೊ ವರದಿಯ ಪುಸ್ತಕದಲ್ಲಿ ದಾಖಲುಮಾಡು ; ಆಕ್ಷೇಪಿಸು ; ಪ್ರತಿ ಭಟಿಸು). (ವಿದ್ಯಾರ್ಥಿಗೆ, ಒಂದು ಸಂಘದ ಸದಸ್ಯತ್ವಕ್ಕೆ) ಪ್ರವೇಶ ಕೊಡು, ಕೊಡಿಸು. E. up (ಲೆಕ್ಕಪುಸ್ತಕ, ಮೊ. ಗಳಲ್ಲಿ) ಎಲ್ಲ ಬಾಬುಗಳನ್ನೂ ದಾಖಲು ಮಾಡಿಬಿಡು. **Énterable** (ಗು.);

Éntrance[1] ಎಂಟ್ರನ್ಸ್ (ನಾ.) ಒಳಕ್ಕೆ ಹೋಗುವುದು, ಬರುವುದು ; ಪ್ರವೇಶಿಸುವುದು ; ಪ್ರವೇಶ. ರಂಗಕ್ಕೆ ನಟನ ಪ್ರವೇಶ. (ಅಧಿಕಾರ, ಮೊ.) ಬರುವುದು, ಆರಂಭಿಸುವುದು ; ಆರಂಭ. ಪ್ರವೇಶಾಧಿಕಾರ ; ಪ್ರವೇಶದ ಹಕ್ಕು. (ಸಂಘ, ಪಾಠಶಾಲೆ, ಮೊ. ಕ್ಕೆ ಸೇರುವಾಗ ಕೊಡಬೇಕಾದ) ಪ್ರವೇಶ ಧನ, ತೆರ (= E. fee). ದ್ವಾರ ; ಒಳಹೊಗುವ ಬಾಗಿಲು, ಮಾರ್ಗ. **Éntrant** ಎಂಟ್ರಂಟ್ (ನಾ.) (ಕೋಣೆ, ಉದ್ಯೋಗ, ಮೊ. ನ್ನು, ಜೂಜು, ಮೊ. ಕ್ಕೆ) ಪ್ರವೇಶಿಸುವವನು, ಪ್ರವೇಶಿ. **Éntry** ಎಂಟ್ರಿ (ನಾ.) ಒಳಕ್ಕೆ ಹೋಗುವುದು, ಬರುವುದು ; ಪ್ರವೇಶ. ವಿಧಿಪೂರ್ವಕವಾದ, ವಿಧಿವಿಹಿತವಾದ, ಪ್ರವೇಶ. (ನ್ಯಾ. ಶಾ.) ಸ್ವಾಧೀನ ತೆಗೆದುಕೊಳ್ಳುವುದು. ಒಳಹೊಗುವ ಸ್ಥಳ ; ಪ್ರವೇಶ ಸ್ಥಳ ; ಬಾಗಿಲು ; ದ್ವಾರ ; ಹೊರ ಬಾಗಿಲು ; ದಾರಿ ; ಮಾರ್ಗ ; ಪ್ರವೇಶಮಾರ್ಗದಲ್ಲಿಯ ಹಜಾರ ; ಹೊರ ಹಜಾರ. ನದೀ ಮುಖ. (ದಾಖಲೆಪುಸ್ತಕ, ಲೆಕ್ಕಪುಸ್ತಕ, ಮೊ. ಗಳಲ್ಲಿ) ದಾಖಲು ಮಾಡುವುದು, ನಮೂದಿಸುವುದು ; ಹೀಗೆ ದಾಖಲು ಮಾಡಿದ ಬಾಬು ; ದಾಖಲೆ ; ನಮೂದು. [Book-keeping by double, single, e. ಇಬ್ಬಗೆಯ, ಏಕಮುಖದ, ಎಂದರೆ, ಪ್ರತಿ ಬಾಬನ್ನೂ ಖಾತೆಯಲ್ಲಿ ಎರಡು ಸಲ ಅಥವಾ ಒಂದೇ ಸಲ ದಾಖಲುಮಾಡುವ ಲೆಕ್ಕಪದ್ಧತಿ]. (ಜೂಜು, ಮೊ. ಗಳ) ಸ್ಪರ್ಧಿಗಳ ಪಟ್ಟಿ.

Entéric ಎಂಟೆರಿಕ್ (ಗು., ನಾ.) ಕರುಳಿನ ; ಅಂತ್ರದ. ವಿಷಮಶೀತ ಜ್ವರ ; 'ಟೈಫಾಯ್ಡ್' ಜ್ವರ (= E. fever). **Enterítis** ಎಂಟೆರೈಟಿಸ್ (ನಾ.) (ಸಣ್ಣ) ಕರುಳಿನ ಊತ.

Éntero- ಎಂಟೆರೊ, **Enteró-** ಎಂಟೆರಾ — (ಸ. ಪೂ. ಪ.) ಕರುಳಿನ—, ಅಂತ್ರ—. **-lite** — ರೊಲೈಟ್ (ನಾ.) ಕರುಳು, ಮೊ. ಗಳಲ್ಲಿಯ ಕಲ್ಲು, ಅಶ್ಮರಿ. **-tomy** —ರಾಟೊಮಿ (ನಾ.) ಕರುಳನ್ನು ಕೊಯ್ದು ತೆರೆಯುವುದು ; ಅಂತ್ರ ವಿಚ್ಛೇದನ.

Énterprise ಎಂಟರ್‌ಪ್ರೈಸ್ (ನಾ.) ಉದ್ಯಮ ; ಪ್ರಯತ್ನ ; ವ್ಯವಸಾಯ ; ತೊಡಗು (ಮು., ಧೈರ್ಯವಾಗಿ ಅಥವಾ ಕಷ್ಟದಿಂದ ಮಾಡಬೇಕಾದದ್ದು) ; ಸಾಹಸ. (ಕಷ್ಟಸಾಧ್ಯ ಕಾರ್ಯಗಳಲ್ಲ ತೊಡಗಲು) ಧೈರ್ಯ, ಕೆಚ್ಚು (He has no e. ಅವನಲ್ಲಿ ಧೈರ್ಯ ಸಾಹಸಗಳಿಲ್ಲ). **Énterprising** (ಗು.) ಪ್ರಯತ್ನಪಡುವ ; ಸಾಹಸಿ ; ಧೈರ್ಯಶಾಲಿ. **Énterprisingly** (ಕ್ರಿ. ವಿ.)

Entertaín ಎಂಟರ್‌ಟೆಯ್‌ನ್ (ಕ್ರಿ. ಸಕ.) (ಪತ್ರವ್ಯವಹಾರ, ಸಂಭಾಷಣೆ) ನಡಸಿಕೊಂಡು ಬರು, ನಡಸುತ್ತಿರು, ಮಾಡುತ್ತಿರು, ಇಟ್ಟುಕೊಂಡಿರು. ವಿನೋದ ಪಡಿಸು ; ಮನೋರಂಜನೆ ಮಾಡು. ಆದರಿಸು ; ಆದರೋಪಚಾರಗಳಿಂದ ಬರಮಾಡಿಕೊ ; ಆದರಾತಿಥ್ಯ ಮಾಡು ; ಸತ್ಕರಿಸು ; ಸಂತೋಷಗೋಷ್ಠಿ, ಔತಣ, — ಏರ್ಪಡಿಸು [E. angels unawares (Angel ನೋಡಿ). They e. a great deal ಅವರು ಬಹಳ ಆದರಿಸುತ್ತಾರೆ]. (ಭಾವ, ಚಿತ್ತವೃತ್ತಿ, ಸೂಚನೆ — ಇವನ್ನು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನಸ್ಸಿಗೆ ತೆಗೆದುಕೊ ; ಆಶ್ರಯ, ಎಡೆ, ಕೊಡು ; ಹಿಡಿ. (ಇಂಡಿಯಾ ಸರ್ಕಾರದ ಪ್ರಯೋಗದಲ್ಲಿ) ಸರ್ಕಾರದ ಅಧಿಕಾರಕ್ಕೆ ತೆಗೆದುಕೊ, ನಿಯಮಿಸು (ಸಾ., ಕೆಳ ದರ್ಜೆಯವರನ್ನು). **Entertaíning** (ಗು.) ಮನೋರಂಜಕವಾದ ; (ಈಗ ಮು.,) ವಿನೋದಕರವಾದ. **Entertaíningly** (ಕ್ರಿ. ವಿ.) ; **Entertaínment** (ನಾ.) (ಕ್ರಿಯಾರ್ಥಗಳಲ್ಲಿ) ; ವಿನೋದ (Much to my e. ನನಗೆ ಕೇವಲ ವಿನೋದವುಂಟುಮಾಡುವಂತೆ). ಸತ್ಕಾರ ; ಔತಣ. ವಿನೋದ ಪ್ರದರ್ಶನ.

Enthrál(l) ಎಂತ್ರಾಲ್ (ಕ್ರಿ. ಸಕ.) ಗುಲಾಮನನ್ನಾಗಿ, ದಾಸನನ್ನಾಗಿ, ಮಾಡು (ಸಾ., ರೂಪಕದಲ್ಲಿ). ಮೋಹಗೊಳಿಸು ; ಮರುಳುಗೊಳಿಸು ; ಮುಗ್ಧಮಾಡು. **Enthrálment** (ನಾ.)

Enthróne ಎಂತ್ರೋನ್ (ಕ್ರಿ. ಸಕ.) (ದೊರೆ, ಬಿಷಪ್, ಮೊ. ರನ್ನು) ಸಿಂಹಾಸನವೇರಿಸು, ಗದ್ದುಗೆಯೇರಿಸು, ಸಿಂಹಾಸನದಲ್ಲಿ ಕುಳ್ಳಿರಿಸು, ಪಟ್ಟಾಭಿಷೇಕ ಮಾಡು (ಮು., ವಿಧಿವತ್ತಾಗಿ, ಅಧಿಕಾರ ಸ್ವೀಕಾರ ಸೂಚಕವಾಗಿ) (ರೂಪ. ಸಹ). **Enthrónement** (ನಾ.), **Enthronizátion** —ನಿ(ನೈ)ಜ಼ೇಷನ್ (ನಾ.) ಸಿಂಹಾಸನ ಹತ್ತಿಸುವುದು ; ಸಿಂಹಾಸನಾರೋಹಣ ; ಪಟ್ಟಾಭಿಷೇಕ (ರೂಪ. ಸಹ)

Enthúse. **Enthusiasm** ನೋಡಿ.

Enthúsiasm ಎಂತ್ಯೂಸಿಅ್ಯಸ಼್ಮ್ (ನಾ.) (ಉದ್ದೇಶ, ಧ್ಯೇಯ ಸಾಧನೆ, ಮೊ. ಕ್ಕಾಗಿ) ಉತ್ಸಾಹ ; ಸಂಭ್ರಮ ; ಸಡಗರ ; ಉಬ್ಬಟೆ ; ಆವೇಶ ; ಹುಚ್ಚು (*For, about* ಉಪ. ದೊಡನೆ). **Enthúse** (ಕ್ರಿ. ಅಕ.) (ಬಳ. ಮಾ.) ಉತ್ಸಾಹ,— ಉಕ್ಕು, ಚಿಮ್ಮು. **Enthúsiast** — ಅ್ಯಸ್ಟ್ (ನಾ.) (ಯಾವುದಾದರೂ ಪಕ್ಷ, ಮೊ. ಕ್ಕಾಗಿ) ಕೇವಲ ಉತ್ಸಾಹ ತುಂಬಿರುವವನು ; ಅತ್ಯುತ್ಸಾಹಿ. ಕಲ್ಪನಾ ಪ್ರಪಂಚದವನು ; ಭ್ರಾಂತ. **Enthusiástic** — ಅ್ಯ— (ಗು.) ; **Enthusiástically** (ಕ್ರಿ. ವಿ.)

Énthymeme ಎಂತಿಮೀಮ್ (ನಾ.) (ತರ್ಕ) ಒಂದು ಪ್ರತಿಜ್ಞಾ ವಾಕ್ಯವನ್ನು ಲೋಪಮಾಡಿರುವ ನ್ಯಾಯ : ಲುಪ್ತ ನ್ಯಾಯ.

Entíce ಎಂಟೈಸ್ (ಕ್ರಿ. ಸಕ.) (ವ್ಯಕ್ತಿ, ಮೊ. ನ್ನು ಒಂದು ಸ್ಥಳ, ಮಾರ್ಗ, ಮೊ. ಗಳಿಂದ ಮತ್ತೊಂದಕ್ಕೆ) ಆಕರ್ಷಿಸು, ಸೆಳೆ. **Entícement** (ನಾ.)

Entíre ಎಂಟೈಯ್‌ರ್ (ಗು., ನಾ.) ಎಲ್ಲಾ ; ತೀರ ; ಇಡಿಯ ; ಪೂರ್ತಿ ; ಪೂರಾ ; ಸಮಗ್ರ ; ಪೂರ್ಣ ; ಸಂಪೂರ್ಣ ; ಸಕಲ ; ಸರ್ವ. ಮುರಿದಿಲ್ಲದ ; ಒಡೆದಿಲ್ಲದ ; ಅಖಂಡ ; ಅಚ್ಚಳಿಯದ. ಕೆಟ್ಟಿಲ್ಲದ ; ಲೋಪವಿಲ್ಲದ. ಬೀಜ ಒಡೆಯದ ; ಹಿಡಾ ಮಾಡಿರದ. ಬೀಜದ (ಕುದುರೆ). ಉಪಾಧಿಯಿಲ್ಲದ; ನಿರುಪಾಧಿಕ (E. affection ಪೂರ್ಣ ಪ್ರೇಮ, ವಿಶ್ವಾಸ). ಬರಿಯ ; ಕೇವಲ (E. delusion ಕೇವಲ, ಬರಿಯ,— ಭ್ರಾಂತಿ). ಎಲ್ಲವೂ ಒಂದುಗೂಡಿರುವ. ಅಪ್ಪಟ ; ಬೆರಕೆಯಿಲ್ಲದ ; ಮಿಶ್ರಣವಿಲ್ಲದ ; ಶುದ್ಧ. **Entíreness** (ನಾ.) ಸಂಪೂರ್ಣತೆ; ಸಮಗ್ರತೆ. **Entírely** (ಕ್ರಿ. ವಿ.) ಪೂರ್ತಿಯಾಗಿ ; ತಾನೇ ಆಗಿ. **Entírety** ಎಂಟೈಯ್‌ರ್‌ಟಿ (ನಾ.) = Entireness ; (In its e. ಪೂರ್ತಿಯಾಗಿ) ; ಒಟ್ಟು. (ನ್ಯಾ. ಶಾ.) Possession by entireties ಅವಿಭಕ್ತ ಆಸ್ತಿಯ ಅನುಭವ.

Entítle ಎಂಟೈಟ್‌ಲ್ (ಕ್ರಿ. ಸಕ.) (ಪುಸ್ತಕ, ಮೊ. ಕ್ಕೆ) ಹೆಸರಿಡು ('ಕವಿಚರಿತೆ' ಮೊ. ಗಿ). ಒಬ್ಬನಿಗೆ ಹೆಸರು, ಬಿರುದು, ಕೊಡು ('ಸುಲ್ತಾನ್', 'ರಾಜಾ', ಮೊ. ಗಿ). (ಸಂದರ್ಭಗಳು, ಗುಣಾತಿಶಯಗಳು, ಮೊ. ವಿಷಯದಲ್ಲಿ, ವ್ಯಕ್ತಿ, ಮೊ. ಕ್ಕೆ, ಒಂದು ವಸ್ತುವಿಗಾಗಿ, ಕಾರ್ಯಮಾಡುವುದಕ್ಕಾಗಿ) ಹಕ್ಕು, ಯೋಗ್ಯತೆ, ಅಧಿಕಾರ, ಕೊಡು ; ಅರ್ಹಮಾಡು.

Éntity ಎಂಟಿಟಿ (ನಾ.) (ಒಂದರ) ಇರುವಿಕೆ, ಅಸ್ತಿತ್ವ, ಇರವು (ಗ್ರಾಂ.) (ಗುಣಗಳು ಅಥವಾ ಸಂಬಂಧಗಳು ಅಲ್ಲ). ಅಸ್ತಿತ್ವವುಳ್ಳದ್ದು ; ಪದಾರ್ಥ ; ವಸ್ತು. **Éntitative** -ಟೆಟಿವ್ (ಗು.) (ಒಂದರ) ಅಸ್ತಿತ್ವದ ; ಅಸ್ತಿತ್ವವುಳ್ಳ.

Ento- ಎಂಟೊ— (ಸ. ಪೂ. ಪ.) ಒಳಗಿನ —, ಒಳ —, ಅಂತರ್ —. **-párasite, -zóon** (ನಾ.) (ದೇಹದ) ಒಳಗಿನ ಪರೋಪಜೀವಿ. **-phyte** (ನಾ.) ಒಂದು ಗಿಡದೊಳಗಡೆ ಅಥವಾ ಪ್ರಾಣಿಯೊಳಗಡೆ ಬೆಳೆಯುವ ಸಸ್ಯ : ಒಳ ಸಸ್ಯ.

Entómb ಎಂಟೂಮ್ (ಕ್ರಿ. ಸಕ.) ಸಮಾಧಿಯಲ್ಲಿಡು ; ಸಮಾಧಿ ಮಾಡು ; ಗೋರಿಯಲ್ಲಿಡು (ರೂಪ. ಸಹ); ಹೂಳು; ಸಮಾಧಿ (ಗೋರಿ) ಯಾಗಿರು; ಸಮಾಧಿಯಂತಿರು ; ಸಮಾಧಿಯಾಗು. **Entómbment** —ಮೆಂಟ್ (ನಾ.)

Entómic. **Entomo-** ನೋಡಿ.

Entomo- ಎಂಟೊಮಾ—, ಎಂಟಾಮೊ—, ಎಂಟೊಮೊ—(ಸ. ಪೂ. ಪ.) ಕೀಟ—, ಕ್ರಿಮಿ—, ಹುಳು—. **-lite** — ಟಾಮೊಲೈಟ್ (ನಾ.) ಪಳೆಯುಳಿಕೆಯ ಕೀಟ. **-logy** —ಟೊಮಾಲೊಜಿ (ನಾ.) ಕೀಟ ವಿಜ್ಞಾನ ; ಕ್ರಿಮಿ ಶಾಸ್ತ್ರ, ವಿದ್ಯೆ. **-lógical** —ಮೊಲಾ— (ಗು.) ; **-logist** —ಮಾಲೊಜಿಸ್ಟ್ (ನಾ.) ಕೀಟ ಶಾಸ್ತ್ರಜ್ಞ. **-logize** —ಲೊಜೈಸ಼್ (ಕ್ರಿ. ಅಕ.) ಕೀಟ ಶಾಸ್ತ್ರಾಭ್ಯಾಸ ಮಾಡು; ಕೀಟಗಳ ಮಾದರಿಗಳನ್ನು ಶೇಖರಿಸು ; ಕೀಟಗಳ ಚಾಳಿಯನ್ನು ಪರೀಕ್ಷಿಸು. **-phagous** —ಫಗಸ್ (ಗು.) ಹುಳುಗಳನ್ನು ತಿನ್ನುವ ; ಕ್ರಿಮಿ ಭಕ್ಷಕ. **-philous** —ಫಿಲಸ್ (ಗು.) (ಸ. ವಿ.) ಕೀಟಗಳ ಮೂಲಕ ಫಲಬೀಳುವ, ಗರ್ಭಾಧಾನವಾಗುವ. **-tomy** —ಟೊಮಿ (ನಾ.) ಕೀಟಗಳನ್ನು ಕೊಯ್ದು ಪರೀಕ್ಷಿಸುವ ಶಾಸ್ತ್ರ ; ಕೀಟಚ್ಛೇದ ಶಾಸ್ತ್ರ. **Entómic** ಎಂಟಾಮಿಕ್ (ಗು.) ಕೀಟಗಳ.

Entouráge (F) ಆನ್‌ಟುರಾಷ್ (ನಾ.) ಸುತ್ತುಮುತ್ತಲನದು ; ಸನ್ನಿವೇಶ ; (ಮು., ದೊಡ್ಡಮನುಷ್ಯನ ಸುತ್ತಲೂ ಇರುವ) ಪರಿವಾರ.

En-tout-cás (F) ಆನ್-ಟೂ-ಕಾ (ನಾ.) ಬಿಸಿಲುಕೊಡೆ.

Entrácte (F) ಆನ್‌ಟ್ರಾಕ್ಟ್ (ನಾ.) ನಾಟಕದ ಅಂಕಗಳ ಮಧ್ಯದ ವಿರಾಮ : ಅಂಕ ವಿರಾಮ ; ಈ ವಿರಾಮ ಕಾಲದಲ್ಲಿ ನಡಸುವ ನೃತ್ಯ, ಗೀತ, ಮೊ. ದು.

Éntrails ಎಂಟ್ರೆಯ್‌ಲ್ಸ್ (ನಾ., ಬ. ವ.) ಕರುಳು ; ಅಂತ್ರ. (ರೂಪ.) (ಭೂಮಿ, ಮೊ. ಗಳ) ಒಳ ಭಾಗ, ಗರ್ಭ.

Entraín ಎಂಟ್ರೆಯ್‌ನ್ (ಕ್ರಿ.) ರೈಲು ಹತ್ತು, ಹತ್ತಿಸು (ಮು., ಸೇನಾದಳಗಳನ್ನು)

Entrámmel ಎಂಟ್ರ್ಯಾಮೆಲ್ (ಕ್ರಿ. ಸಕ.) ತೊಡರಿಸು ; ತೊಡಕಿಸು ; ತಡೆಗಟ್ಟು ; ಪ್ರತಿಬಂಧಿಸು ; ತೊಂದರೆ ಮಾಡು.

Éntrance[1], **Éntrant.** **Enter** ನೋಡಿ.

Entránce[2] ಎಂಟ್ರಾನ್ಸ್ (ಕ್ರಿ. ಸಕ.) ಮೈಮರೆಯುವಂತೆ ಮಾಡು ; ಪರವಶ ಮಾಡು ; ಸಮಾಧಿ ಮಗ್ನ ಮಾಡು. (ಸಂತೋಷದಿಂದ, ಭಯದಿಂದ) ಪ್ರಜ್ಞೆ ತಪ್ಪಿಸು, ಮೈಮರಸು ; (ಮೈಮರವಿನಿಂದ ಹೇಗೊ ಹಾಗೆ) ಮರುಳು ಮಾಡು, ಮುಗ್ಧ ಮಾಡು (*From, to* ಉಪ. ದೊಡನೆ). **Entráncement** (ನಾ.)

Entráp ಎಂಟ್ರ್ಯಾಪ್ (ಕ್ರಿ. ಸಕ.) ಬೋನಿನಲ್ಲಿ(ಯಂತೆ) ಹಿಡಿ ; ಬೋನಿಗೆ ಬೀಳಿಸು. (ಯಾವುದಾದರೂ ಕೆಲಸ ಮಾಡುವಂತೆ, ನಾಶವಾಗಿ ಹೋಗುವಂತೆ, ಮೊ. ಗಿ) ಮೋಸಕ್ಕೆ ಸೆಳೆ ; ದಾರಿ ತಪ್ಪಿಸು ; ಹಳ್ಳಕ್ಕೆ ಕೆಡವು ; ಸಿಕ್ಕಿಸು.

Entreát ಎಂಟ್ರೀಟ್ (ಕ್ರಿ. ಸಕ.) (ಒಬ್ಬನನ್ನು, ಒಂದಕ್ಕಾಗಿ) ಬೇಡಿಕೊ, ಕೇಳಿಕೊ (*Of* ಉಪ. ದೊಡನೆ ಸಹ) ; ಮೊರೆಯಿಡು ; ಪ್ರಾರ್ಥಿಸು. **Entreátingly** (ಕ್ರಿ. ವಿ.) ಮೊರೆಯಿಟ್ಟು ; ದೈನ್ಯದಿಂದ. **Entreáty** (ನಾ.) ಮೊರೆಯಿಟ್ಟು, ದೈನ್ಯದಿಂದ, ಕೇಳಿಕೊಳ್ಳುವುದು, ಬೇಡಿಕೊಳ್ಳುವುದು ; ಮೊರೆ ; ಬೇಡಿಕೆ.

Entrechát (F) ಆನ್‌ಟ್ರ್ಷಾ (ನಾ.) ನರ್ತನದಲ್ಲಿ ಮೇಲಕ್ಕೆಗುರುವಾಗ ಹಿಮ್ಮಡಿಗಳನ್ನು ಅನೇಕ ಬಾರಿ ಒಟ್ಟಿಗೆ ತಟ್ಟಿಕೊಳ್ಳುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Entreé (F) ಆನ್‌ಟ್ರೇ (ನಾ.) ಪ್ರವೇಶದ (ವಿಶೇಷ) ಹಕ್ಕು; ಪ್ರವೇಶಾಧಿಕಾರ. ಮಧ್ಯೆ ಬಡಿಸುವ ಒಂದು ತೆರದ ಭಕ್ಷ್ಯ.

Entrénch, In- ಎಂಟ್ರೆನ್ಷ್, ಇನ್— (ಕ್ರಿ. ಸಕ.) (ಬೀಡು, ಸೈನ್ಯ, ಪಟ್ಟಣ — ಇವುಗಳ) ಸುತ್ತಲೂ ಕಂದಕ ತೋಡು, ಅಗಳು ಮಾಡು (ರೂಪ. ಸಹ: E. oneself ರಕ್ಷಣೆ ಕಲ್ಪಿಸಿಕೊ; ಭದ್ರವಾಗಿ ನಿಲ್ಲು). (ಅಪೂರ್ವವಾಗಿ) ಅತಿಕ್ರಮ ಪ್ರವೇಶ ಮಾಡು; ಅಕ್ರಮ ಪ್ರವೇಶ ಮಾಡು; ಮತ್ತೊಬ್ಬನದನ್ನು ಆಕ್ರಮಿಸು. **Entrénchment** (ನಾ.)

Entre noús (F) ಆಂಟ್ರ ನೂ (ಕ್ರಿ. ವಿ.) ನಮ್ಮ ನಮ್ಮಲ್ಲೇ; ಅಂತರಂಗದಲ್ಲಿ; ಗೋಪ್ಯವಾಗಿ.

Entrepót (F) ಆಂಟ್ರ್‌ಪೋ (ನಾ.) ಸಾಮಾನನ್ನು ಅಡಕುವ, ತುಂಬುವ, — ಕೋಠಿ, ಉಗ್ರಾಣ; ಗಡಂಗು. (ಆಮದು ರಫ್ತಿಗೂ ಸಂಗ್ರಹಣ ಪ್ರಸಾರಣಗಳಿಗೂ ಏರ್ಪಾಡುಳ್ಳ) ವಾಣಿಜ್ಯ ಕೇಂದ್ರ.

Entrepreneúr (F) ಆಂಟ್ರ್‌ಪ್ರ್‌ನರ್ (ನಾ.) (ಅರ್ಥಶಾಸ್ತ್ರ) ಒಂದು ವ್ಯಾಪಾರದ ಅಥವಾ ಕಾರ್ಖಾನೆಯ ಯೋಜಕ, ಚಾಲಕ, ವ್ಯವಸ್ಥಾಪಕ. ವಿನೋದ ಗೋಷ್ಠಿಗಳನ್ನು (ಮು., ಸಂಗೀತ ಕಚೇರಿಗಳನ್ನು) ಏರ್ಪಡಿಸುವವನು: ವಿನೋದ ವ್ಯವಸ್ಥಾಪಕ.

Éntresol (F) ಎಂಟ್‌ರ್‌ಸಾಲ್, ಆಂಟ್ರ— (ನಾ.) ನೆಲಅಂತಸ್ತಿಗೂ ಎರಡನೆಯ ಅಂತಸ್ತಿಗೂ ಮಧ್ಯೇ ಇರುವ ತಗ್ಗು ಅಂತಸ್ತು.

Éntropy ಎಂಟ್ರೊಪಿ (ನಾ.) (ಭೌ. ವಿ.) ಒಂದು ವ್ಯೂಹದಲ್ಲಿಯ ಉಷ್ಣ ಶಕ್ತಿಯನ್ನು ಯಾಂತ್ರಿಕ ಶಕ್ತಿಯನ್ನಾಗಿ ಮಾರ್ಪಡಿಸುವಲ್ಲಿ, ಕಾರ್ಯಕ್ಕೆ ಒದಗದ ಶಕ್ತಿಯ ಪರಿಮಾಣ: ಜಡೋಷ್ಣ. (ರೂಪ.) ನಿಷ್ಕ್ರಿಯಾ ಸ್ಥಿತಿ; ಜಡ ಸ್ಥಿತಿ.

Entrúst, In- ಎಂಟ್ರಸ್ಟ್, ಇಂ— (ಕ್ರಿ. ಸಕ.) (ಒಬ್ಬನಿಗೆ ಕೆಲಸ, ವಸ್ತು, ಮೊ. ನ್ನು) ನಂಬಿ ಒಪ್ಪಿಸು, ವಹಿಸು.

Éntry. Enter ನೋಡಿ.

Entwíne, In- ಎಂಟ್ವೈನ್, ಇಂ— (ಕ್ರಿ. ಸಕ.) ಒಂದಕ್ಕೊಂದಕ್ಕೆ ಹೆಣೆ, ಸುತ್ತಿಕೊ (ರೂಪ. ಸಹ). (ಒಂದರೊಡನೆ, ಒಂದರ ಸುತ್ತಲೂ, ಮತ್ತೊಂದನ್ನು) ಸುತ್ತು, ಆವರಿಸು, ದಂಡೆಗಟ್ಟು. ತಬ್ಬು; ಅಪ್ಪು; ಆಲಿಂಗಿಸು.

Entwíst, In- ಎಂಟ್ವಿಸ್ಟ್, ಇಂ— (ಕ್ರಿ. ಸಕ.) ಹುರಿ ಮಾಡಿ ಸುತ್ತು; ಹುರಿ ಮಾಡು; (ಹುರಿ) ಹೊಸೆ.

Enúcleate ಇನ್ಯೂಕ್ಲಿಯೇಟ್ (ಕ್ರಿ. ಸಕ.) ವಿವರಿಸು; ಸ್ಪಷ್ಟಗೊಳಿಸು; ವಿಶದಪಡಿಸು; ವ್ಯಕ್ತಮಾಡು. (ಶಸ್ತ್ರವೈದ್ಯ) (ಗೆಡ್ಡೆ, ಮೊ. ನ್ನು, ಅದರ) ಕೋಶ, ಮೊ. ಗಳಿಂದ ಹೊರದೆಗೆ. **Enucleátion** (ನಾ.)

Enúmerate ಇನ್ಯೂಮರೇಟ್ (ಕ್ರಿ. ಸಕ.) ಎಣಿಕೆ ಮಾಡು; ಎಣಿಸು; (ಬಾಬುಗಳನ್ನು) ನಮೂದಿಸು; ಒಂದೊಂದಾಗಿ ಹೇಳು. **Enumerátion** (ನಾ.) ಎಣಿಕೆ; ಗಣನೆ. **Enúmerator** (ನಾ.) ಎಣಿಸುವವನು; ಗಣತಿ ತೆಗೆದುಕೊಳ್ಳುವವನು: ಗಣಕ. **Enúmerative** — ಮರೇ(ರ)ಟಿವ್ (ಗು.)

Enúnciate ಇನನ್ಷಿ(ನ್ಸಿ)ಯೇಟ್ (ಕ್ರಿ. ಸಕ.) (ಪ್ರತಿಜ್ಞಾ ವಾಕ್ಯವನ್ನು, ವಾದ ವಿಷಯವನ್ನು) ಸ್ಪಷ್ಟವಾಗಿ ನಿರೂಪಿಸು. ಸಾರು; ಸಾರಿ ಹೇಳು; ಘೋಷಿಸು. (ಮಾತುಗಳನ್ನು) ಉಚ್ಚರಿಸು, ನುಡಿ. **Enunciátion** (ನಾ.) ನಿರೂಪಣೆ; ಉಚ್ಚಾರಣೆ; ಪ್ರತಿಜ್ಞೆ. **Enúnciative** —ಯೇ(ಯ)ಟಿವ್ (ಗು.); **Enúnciator** (ನಾ.)

Enúre ಎನ್ಯೂರ್ (ಕ್ರಿ.) = Inure.

Enurésis ಎನ್ಯುರೀಸಿಸ್ (ನಾ.) (ವೈ. ಶಾ.) ಅನೈಚ್ಛಿಕವಾಗಿ ಮೂತ್ರ ಹರಿಯುವುದು; ಮೂತ್ರಸ್ರಾವ ತಡೆಯಲಾಗದಿರುವುದು; ಅನೈಚ್ಛಿಕ ಮೂತ್ರಸ್ರಾವ.

Envélop ಎನ್ವೆಲಪ್ (ಕ್ರಿ. ಸಕ.) (ಮನುಷ್ಯ, ವಸ್ತು, ವಿಷಯ, ಮೊ. ನ್ನು, — ಬಟ್ಟೆ, ಉರಿ, ಮೋಡ, ರಹಸ್ಯ, ಮೊ. ಗಳಲ್ಲಿ) ಸುತ್ತುವರಿ, ಆವರಿಸು, ಮರಸು, ಮುಚ್ಚು, ಆಚ್ಛಾದಿಸು. (ಸೈನ್ಯ) (ಶತ್ರುವನ್ನು) ಸುತ್ತುಗಟ್ಟು, ಮುತ್ತು. **Envélopment** (ನಾ.); **Énvelope** ಎನ್ವೆಲೋಪ್, ಆನ್ವ್‌ಲೋಪ್ (ನಾ.) ಸುತ್ತುವ ಪದಾರ್ಥ; ಹೊದಿಕೆ; ಆವರಣ; ಲಕೋಟೆ (ಮು., ಒಂದು ಪತ್ರವನ್ನೊಳಕೊಂಡು ಗೋಂದು ಹಚ್ಚಿದುದು)

Envénom ಎನ್‌ವೆನಂ (ಕ್ರಿ. ಸಕ.) (ಆಯುಧ, ವಾಯು, ಮೊ. ಗಳಲ್ಲಿ, ಮೊ. ಗಳಿಗೆ) ವಿಷ ಹಾಕು, ವಿಷವಿಡು. (ಮನೋಭಾವಗಳು, ಮಾತುಗಳು, ಕ್ರಿಯೆಗಳು, ಇವುಗಳ ವಿಷಯದಲ್ಲಿ) ವಿಷ ಹಿಂಡು, ದ್ವೇಷ ತುಂಬು, ಕಟು ಮಾಡು, ಉಗ್ರಗೊಳಿಸು. (ಮನಸ್ಸು, ಮೊ. ನ್ನು) ಕೆಡಿಸು; ಮನಸ್ತಾಪ ಹುಟ್ಟಿಸು.

Énviable, etc. Envy ನೋಡಿ.

Envíron ಎನ್ವೈರನ್ (ಕ್ರಿ. ಸಕ.) (ಮನುಷ್ಯರ ಅಥವಾ ವಸ್ತುಗಳ ವಿಷಯದಲ್ಲಿ) ಸುತ್ತುಗಟ್ಟು, ಸುತ್ತಿರಿ, ಬಳಸು, ಬಳಸಿ ನಿಲ್ಲು; ಪರಿವೇಷ್ಟಿಸು. (ಮನುಷ್ಯ, ಸ್ಥಳ, ಮೊ. ನ್ನು) ಆಕ್ರಮಣಕ್ಕಾಗಲಿ ರಕ್ಷಣೆಗಾಗಲಿ ಆವರಿಸು, ಮುತ್ತು. **Envíronment** (ನಾ.) ಸುತ್ತುಗಟ್ಟುವುದು; ಪರಿವೇಷ್ಟನೆ. ಸುತ್ತಲೂ ಇರುವ ವಸ್ತುಗಳು, ಪ್ರದೇಶ; ಸನ್ನಿವೇಶ; ಸಂದರ್ಭ; ಪರಿಸ್ಥಿತಿ. **Envírons** — ವೈ(ವಿ)ರನ್ಸ್ (ನಾ., ಬ. ವ.) (ಒಂದು ಪಟ್ಟಣ, ಮೊ. ಗಳ) ಸುತ್ತಲಿನ ಪ್ರದೇಶ, ಹೊರ ವಲಯ; ಸುತ್ತುಮುತ್ತು; ಪರಿಸರ.

Envísage ಎನ್ವಿಸೇಜ್ (ಕ್ರಿ. ಸಕ.) ದಿಟ್ಟಿಸಿ ನೋಡು; ಮನದಟ್ಟು ಮಾಡಿಕೊ; ಮನಸ್ಸಿನಲ್ಲಿ ರೂಪಿಸಿಕೊ. ನೋಡು. (ಅಪಾಯವನ್ನು, ವಸ್ತುಸ್ಥಿತಿಯನ್ನು) ಧೈರ್ಯವಾಗಿ ಎದುರಿಸು. ಆಲೋಚಿಸು; ಚಿಂತಿಸಿ ನೋಡು (ಮು., ಒಂದು ನಿರ್ದಿಷ್ಟ ದೃಷ್ಟಿಯಲ್ಲಿ). **Envísagement** (ನಾ.)

Énvoy[1] ಎನ್ವಾಯ್ (ನಾ.) (ಪ್ರಾಚೀ. ಪ್ರ.) ಗ್ರಂಥಕರ್ತನ ಉಪಸಂಹಾರ ವಾಕ್ಯ (ಮು., ಕೆಲವು ಪ್ರಾಚೀನ ತೆರದ ಕಾವ್ಯಗಳಲ್ಲಿ ಸ್ತೋತ್ರರೂಪವಾದ ಅಥವಾ ವಿಮರ್ಶಾತ್ಮಕವಾದ ಮುಕ್ತಾಯದ ಸಣ್ಣ ಪದ್ಯ): ಉಪಸಂಹಾರ ಶ್ಲೋಕ; ಸಮಾಪ್ತಿ ವಾಕ್ಯ.

Énvoy[2] ಎನ್ವಾಯ್ (ನಾ.) ಚಾರ; ಪ್ರತಿನಿಧಿ (ಮು., ರಾಯಭಾರಿಗಿಂತಲೂ ಕಡಮೆ ದರ್ಜೆಯ ಪೂರ್ಣಾಧಿಕಾರ ನಿಯೋಗಿ). **Énvoyship** (ನಾ.) ಪ್ರತಿನಿಧಿತನ; ನಿಯೋಗಿತ್ವ.

Énvy ಎನ್ವಿ (ನಾ., ಕ್ರಿ. ಸಕ.) (ತನಗಿಂತಲೂ ಉತ್ತಮ ಸ್ಥಿತಿಯಲ್ಲಿರುವವರ ವಿಷಯದಲ್ಲಿ) ಹೊಟ್ಟೆಕಿಚ್ಚು; —ಉರಿ; ಕರುಬು; ಈರ್ಷ್ಯೆ; ಅಸೂಯೆ; ಹೊಟ್ಟೆಕಿಚ್ಚಿಗೆ ಕಾರಣವಾದದ್ದು, ಪಾತ್ರವಾದದ್ದು. ಮತ್ತೊಬ್ಬರ ಭಾಗ್ಯವನ್ನು ತನಗೂ ಬಯಸುವುದು; ಮತ್ತೊಬ್ಬರಿಗಿರುವ ಉತ್ತಮತೆ ತನಗಿಲ್ಲವೆಂಬ ಕೊರತೆಯನ್ನು (ಮೆಚ್ಚಿಕೆಯಲ್ಲಿ) ಸೂಚಿಸುವುದು (I envy you your good fortune). (ಕ್ರಿ.) ಹೊಟ್ಟೆಕಿಚ್ಚು ಪಡು; ಈರ್ಷ್ಯೆ ಪಡು; ಅಸೂಯೆ ಪಡು; ಕರುಬು. **Énviable** (ಗು.) ಅಸೂಯೆ ಹುಟ್ಟಿಸುವ (ಅಪೇಕ್ಷಣೀಯವಾದ ಪದಾರ್ಥದ, ಅದನ್ನುಳ್ಳವನ, ವಿಷಯದಲ್ಲಿ); ಅಪೇಕ್ಷಿಸತಕ್ಕ; ಬಯಸತಕ್ಕ; ಅಪೇಕ್ಷಣೀಯ. **Énviably** (ಕ್ರಿ. ವಿ.); **Énvious** (ಗು.) ಹೊಟ್ಟೆಕಿಚ್ಚಿನ; ಅಸೂಯೆಯುಳ್ಳ; ಈರ್ಷ್ಯೆಯಿಂದ ಕೂಡಿದ. (ಒಬ್ಬನ, ಒಂದರ, ವಿಷಯದಲ್ಲಿ) ಅಸೂಯೆಪಡುವ. **Énviously** (ಕ್ರಿ. ವಿ.)

Enwínd, In- ಎನ್‌ವೈಂಡ್, ಇನ್— (ಕ್ರಿ. ಸಕ.) (ಮತ್ತೊಂದರ ಸುತ್ತಲೂ) ಸುತ್ತಿಕೊ.

Enwómb ಎನ್‌ವೂಮ್ (ಕ್ರಿ. ಸಕ.) ಗರ್ಭಾಶಯದಲ್ಲಿ(ಯಂತೆ) ಧರಿಸು; ಗರ್ಭೀಕರಿಸು; ಬಸಿರಿನಲ್ಲಿ ತಾಳು; ಗರ್ಭ ಧರಿಸುವಂತೆ ಮಾಡು.

Enwráp, In- ಎನ್‌ರ್ಯಾಪ್, ಇನ್— (ಕ್ರಿ. ಸಕ.) ಸುತ್ತು; ಕವಿಸು; ಆವರಿಸು; ಹೊದಿಕೆ ಹೊದ್ದು (ರೂಪ. ಸಹ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Enwreáthe, In- ಎನ್‌ರೀದ್, ಇನ್— (ಕ್ರಿ. ಸಕ) ಮಾಲೆ, ದಂಡೆ, — ಸುತ್ತು, ಆವರಿಸು. ಒಂದರೊಡನೊಂದು ಸುತ್ತು, ಸುತ್ತಿಕೊ, ಹೆಣೆದುಕೊ.

Enzoótic ಎನ್‌ಝೋಆಟಿಕ್ (ಗು., ನಾ.) ಒಂದು ಗೊತ್ತಾದ ಪ್ರಾಂತದಲ್ಲಿ, ಅಥವಾ ಒಂದು ಗೊತ್ತಾದ ಋತುವಿನಲ್ಲಿ, ದನ, ಮೊ. ನ್ನು ತಪ್ಪದೆ ಪೀಡಿಸುವ (ವ್ಯಾಧಿ); ಸ್ಥಳೀಯ, ಕಾಲಿಕ, ವ್ಯಾಧಿ.

Énzyme ಎನ್‌ಸ್ಝೈಮ್, — ಝಿಮ್ (ನಾ.) (ರ. ವಿ.) (ಯಾಸ್ಟ್, ಮೊ. ಜೀವಿಕಣ್ವಗಳನ್ನುಳ್ಳ) ಅಜೈವಿಕ ಅಥವಾ ರಾಸಾಯನಿಕ ಕಿಣ್ವ.

Éocene ಈಯೊಸೀನ್ (ಗು.) (ಭೂ. ವಿ.) ತೃತೀಯ ಯುಗದ ಭೂಪದರದ ಅತ್ಯಂತ ಕೆಳಗಿನ ಭಾಗದ.

Eolíthic ಈಯೊಲಿತಿಕ್ (ಗು.) ಪೂರ್ವ ಶಿಲಾಯುಗಕ್ಕೆ ಹಿಂದಿನ ಯುಗದ; ಆದಿ ಶಿಲಾಯುಗದ.

Éon. **Aeon** ನೋಡಿ.

Éosin ಈಯೊಸಿನ್ (ನಾ.) (ಮು., ಸೂಕ್ಷ್ಮದರ್ಶಕದಲ್ಲೂ ವರ್ಣಚ್ಛಾಯಾ ಚಿತ್ರದಲ್ಲೂ ಉಪಯೋಗಿಸುವ) ಕೆಂಪುಬಣ್ಣದ ಸ್ಫುರಕ ದ್ರವ್ಯ.

Eozóic ಈಯೊಝೋಇಕ್ (ಗು.) (ಭೂ. ವಿ.) (ಸ್ತರಗಳ ವಿಷಯದಲ್ಲಿ) ಪ್ರಾಣಿಗಳ ಅಸ್ತಿತ್ವದ ಆದಿ ಸೂಚನೆ ಕಂಡುಬರುವ. (ಸ್ತರ) ಆದಿಪ್ರಾಣಿ ಸೂಚಕ.

Épact ಈ(ಎ)ಪ್ಯಾಕ್ಟ್ (ನಾ.) ಜನವರಿ ಮೊದಲನೆಯ ತಾರೀಖಿನಲ್ಲಿ ಚಂದ್ರನ ವಯಸ್ಸು (ಎಂದರೆ, ಅಮಾವಾಸ್ಯೆಯಿಂದ ಎಷ್ಟು ದಿನಗಳಾದುವು ಎಂಬ ಲೆಕ್ಕ). ಚಾಂದ್ರಮಾನ ವರ್ಷದ ದಿನಗಳಮೇಲೆ ಸೌರಮಾನ ವರ್ಷದ ದಿನಗಳ ಆಧಿಕ್ಯ : ಸೌರಾಧಿಕ್ಯ.

Éparchy ಎಪರ್ಕಿ (ನಾ.) ಆಧುನಿಕ ಗ್ರೀಸ್‌ರಾಜ್ಯದ ಒಂದು ಪ್ರಾಂತ. ರಷ್ಯದ (ಗ್ರೀಕ್) ಚರ್ಚಿನಲ್ಲಿ ಬಿಷಪ್ಪಿನ ಆಡಳಿತ ಪ್ರಾಂತ. **Éparch** ಎಪಾರ್ಕ್ (ನಾ.) — ಪ್ರಾಂತಾಧಿಕಾರಿ ; — ಬಿಷಪ್ ಗುರು.

Epaúlement ಎಪಾಲ್ಮೆಂಟ್ (ನಾ.) ಎದೆಮಟ್ಟದ ಹಂಗಾಮಿ ಕೋಟೆ ಗೋಡೆ (ಮು., ಪಾರ್ಶ್ವ ರಕ್ಷಣೆಗಾಗಿ)

Épaulet(te) ಎಪಾಲೆಟ್ (ನಾ.) ಅಧಿಕಾರ ಕವಚದ ಭುಜದ ಅಲಂಕಾರ ಪಟ್ಟಿ : ಭುಜಕೀರ್ತಿ. (ಖಾಸಗಿ ಸಿಪಾಯಿಯ ವಿಷಯದಲ್ಲಿ) Win his epaulettes ಅಧಿಕಾರಿಹುದ್ದೆಗೆ ಬಡತಿ ಪಡೆ.

Epérgne ಇಪರ್ನ್ (ನಾ.) ಊಟದ ಮೇಜಿನ ಮಧ್ಯಾಲಂಕಾರ (ಮು., ಶಾಖೆಗಳೊಡೆದ ರೂಪದಲ್ಲಿರುವದು)

Epexegésis ಎಪೆಕ್ಸಿಜೀಸಿಸ್ (ನಾ.) ಅರ್ಥವನ್ನು ಸ್ಪಷ್ಟಪಡಿಸುವುದಕ್ಕಾಗಿ ಹೆಚ್ಚು ಪದ ಅಥವಾ ಪದಗಳನ್ನು ಸೇರಿಸುವುದು ; ಹೀಗೆ ಸೇರಿಸುವ ಪದ(ಗಳು) : ಅರ್ಥ ವಿವರಕ. **Epexegétic(al)** —ಜೆ— (ಗು.) ; **Epexegétically** (ಕ್ರಿ. ವಿ.)

Ephémera ಇ(ಎ)ಫೆಮೆರ (ನಾ. ; ಬ. ವ. — ras), **- ron** —ರನ್ (ನಾ. ; ಬ. ವ. -rons, -ra) ಒಂದು ದಿನ ಮಾತ್ರ ಜೀವಿಸುವ ಹುಳು : ದಿನ ಜೀವಿ (ಕೀಟ) ; ಈ ಕೀಟಜಾತಿ. ಅಲ್ಪಾಯುಷ್ಯ ವಸ್ತು ; ಅಲ್ಪಾಯುಷಿ ; ಕ್ಷಣಿಕ ಜೀವಿ ; ಕ್ಷಣಭಂಗುರ ವಸ್ತು. **Ephémeral** (ಗು.) (ವೈ. ಶಾ.) ಒಂದು ದಿನ ಮಾತ್ರವಿರುವ ; (ಕೀಟ, ಹೂವು, ಮೊ. ಗಳ ವಿಷಯದಲ್ಲಿ) ಒಂದು ದಿನ ಅಥವಾ ಕೆಲವು ದಿನ ಮಾತ್ರ ಜೀವಿಸಿರುವ ; ದಿನ ಬಾಳುವೆಯ ; ಅಲ್ಪಾಯುಷಿ ; ಅಲ್ಪ ಕಾಲಿಕ ; ನಶ್ವರ. **Ephemerálity** —ರ್‍ಯಾ— (ನಾ.) ; **Ephémeris** (ನಾ. ; ಬ. ವ. -ides ಎಫಿಮೆರಿಡೀಸ್) (ನಾ.) ಖಗೋಳ ದಿನ ಪಂಚಾಂಗ, ಪಡಕ, ಕೋಷ್ಟಕ.

Épiblast ಎಪಿಬ್ಲಾಸ್ಟ್ (ನಾ.) (ಜೀ. ವಿ.) ಭ್ರೂಣಾವರಣದ ಹೊರ ಪೊರೆ.

Épic ಎಪಿಕ್ (ಗು., ನಾ.) ಒಬ್ಬ ಅಥವಾ ಹೆಚ್ಚುಮಂದಿ ವೀರ ಪುರುಷರ ಸಾಹಸಗಳನ್ನು ವಿವರಿಸುವ (ಕಾವ್ಯ): ಮಹಾ ಕಾವ್ಯ; ವೀರ ಕಾವ್ಯ ; ಪುರಾಣ ಕಾವ್ಯ ; ಇತಿಹಾಸ ಕಾವ್ಯ [ಉದಾ., ರಾಮಾಯಣ, ಮಹಾಭಾರತ, (ಗ್ರೀಕ್) ಇಲಿಯಡ್ ಮತ್ತು ಒಡೆಸಿ]. ಮಹಾ ಕಾವ್ಯಕ್ಕೆ ತಕ್ಕ. E. dialect ಗ್ರೀಕಿನಲ್ಲಿ ಮಹಾಕಾವ್ಯಗಳನ್ನು ಬರೆದ ಭಾಷಾರೂಪ. National e. ಒಂದು ಜನಾಂಗದ ಪೂರ್ವ ಚರಿತ್ರೆಯನ್ನೊಳಕೊಂಡ ಯಾವುದಾದರೂ ರೂಪದ ಕಾವ್ಯ : ರಾಷ್ಟ್ರ ಮಹಾಕಾವ್ಯ. **Épical** (ಗು.) ; **Épically** (ಕ್ರಿ. ವಿ.)

Épicarp ಎಪಿಕಾರ್ಪ್ (ನಾ.) (ಸ. ವಿ.) ಕಾಯಿಗಳಲ್ಲಿ ಸಿಪ್ಪೆಯ ಹೊರ ಪೊರೆ.

Epicédium ಎಪಿಸೀಡಿಯಂ, **Epicedíum** —ಸಿಡೈಅಂ (ನಾ.) ಅಂತ್ಯ ಕ್ರಿಯಾ ಗೀತೆ ; ಶ್ಮಶಾನ ಗೀತೆ ; ಚರಮ ಗೀತೆ.

Épicene ಎಪಿಸೀನ್ (ಗು., ನಾ.) (ಲ್ಯಾಟಿನ್ ಮತ್ತು ಗ್ರೀಕ್ ವ್ಯಾ.) (ಲಿಂಗಭೇದ ತೋರಿಸದೆ ಪುಂಸ್ತ್ರೀ ಜಾತಿಗಳಿಗೆ ಅನ್ವಯಿಸುವ) ಉಭಯ ಲಿಂಗಿ. ಎರಡು ಲಿಂಗಗಳ ವೈಲಕ್ಷಣ್ಯಗಳೂ ಉಳ್ಳ (ವ್ಯಕ್ತಿ) ; ದ್ವಿಲಿಂಗಿ.

Epicéntrum, -tre ಎಪಿಸೆಂಟ್ರಂ, — ಸೆಂಟರ್ (ನಾ.) ಭೂಕಂಪ ಹುಟ್ಟುವ ಸ್ಥಾನ ; ಭೂಕಂಪ ಕೇಂದ್ರ.

Épicure ಎಪಿಕ್ಯೂರ್ (ನಾ.) ತಿನ್ನುವುದರಲ್ಲೂ ಕುಡಿಯುವುದರಲ್ಲೂ ಕೇವಲ ಉತ್ತಮವಾದುವನ್ನೂ ರುಚಿಯಾದುವನ್ನೂ ಭೋಗಿಸುವವನು ; ಸುಖ ಭೋಗಿ ; ಭೋಗ ಲಾಲಸ ; ರಸಿಕ ಭೋಗಿ. **Épicurism** (ನಾ.) ; **Epicuréan** ಎಪಿಕ್ಯುರೀಯನ್ (ಗು., ನಾ.) (ಕ್ರಿ. ಪೂ. ೩೦೦ ರಲ್ಲಿದ್ದ ಅಥೆನ್ಸಿನ ತತ್ತ್ವಜ್ಞನಾದ) ಎಪಿಕ್ಯೂರಸ್ಸಿನ (ಅನುಯಾಯಿ) [ಎಪಿಕ್ಯುರಸ್ಸನು, ಅತ್ಯುತ್ತಮವಾದ ಸುಖವು ಧರ್ಮ ಶಾಂತಿಗಳಿಂದ ದೊರೆಯತಕ್ಕದ್ದೆಂದೂ, ಅಂಥ ಸುಖವನ್ನು ಸಂಪಾದಿಸುವುದು ಮನುಷ್ಯನ ಕರ್ತವ್ಯವೆಂದೂ ಬೋಧಿಸಿದನು. ಅವನ ಅನುಯಾಯಿಗಳು ಈ ಸುಖದ ಸ್ವರೂಪವನ್ನು ಆಭಾಸಗೊಳಿಸಿ ಅದನ್ನು ಇಂದ್ರಿಯ ಭೋಗೇಚ್ಛೆಯಾಗಿ ತಿರುಗಿಸಿದರು. ಈಗ ರೂಢಿಯಲ್ಲಿರುವುದು ಈ ಆಭಾಸದ ಅರ್ಥ]. ಸಂತೋಷದಲ್ಲಿ (ಮು., ಮೇಲ್ತರದ ಇಂದ್ರಿಯ ಸುಖಾನುಭೋಗದಲ್ಲಿ) ಅನುರಕ್ತನಾದ(ವನು) : ಸುಖ ಲೋಲ ; ವಿಷಯಾಸಕ್ತ. **Epicuré-anism** (ನಾ.)

Épicycle ಎಪಿಸೈಕ್‌ಲ್ (ನಾ.) ದೊಡ್ಡ ವೃತ್ತದ ಪರಿಧಿಯಮೇಲೆ ಕೇಂದ್ರವುಳ್ಳ ಸಣ್ಣ ವೃತ್ತ : ಉಪರಿ ವೃತ್ತ. **Epicýclic** —ಸೈ(ಸಿ)— (ಗು.) **Epicýcloid** ಎಪಿಸೈಕ್ಲಾಯ್ಡ್ (ನಾ.) ಮತ್ತೊಂದು ವೃತ್ತದಮೇಲೆ ಉರುಳುತ್ತಿರುವ ವೃತ್ತದ ಪರಿಧಿಯಲ್ಲಿಯ ಒಂದು ನಿರ್ದಿಷ್ಟ ಬಿಂದು ರೇಖಿಸುವ ವಕ್ರರೇಖೆ : ಉಪರಿ ವೃತ್ತಕಲ್ಪ. **Epicycloídal** (ಗು.)

Epideíctic ಎಪಿಡೈಕ್ಟಿಕ್ (ಗು.) ಪ್ರದರ್ಶನ ಯೋಗ್ಯ ; ಬಾಹ್ಯಾಡಂಬರಕ್ಕಾಗಿ ಉದ್ದೇಶಿಸಿದ.

Epidémic ಎಪಿಡೆಮಿಕ್ (ಗು., ನಾ.) ಜನತಂಡದಲ್ಲಿ, ವಿಶೇಷ ಕಾಲದಲ್ಲಿ, ಒಟ್ಟಾಗಿ ಹರಡುವ (ವ್ಯಾಧಿ) ; ಸಾಂಕ್ರಾಮಿಕ ರೋಗ (ರೂಪ. ಸಹ). (Endemic ಪದದೊಡನೆ ಹೋಲಿಸಿ ನೋಡಿ). **Epidémical** (ಗು.) = Epidemic (ಗು.); ಸಾಂಕ್ರಾಮಿಕ ರೋಗವಿಶಿಷ್ಟವಾದ. **Epidémically** (ಕ್ರಿ. ವಿ.) ; **Epidemiólogy** ಎಪಿಡೀಮಿಯಾಲೊಜಿ (ನಾ.) ಸಾಂಕ್ರಾಮಿಕ ರೋಗ ಶಾಸ್ತ್ರ.

Epidérmis ಎಪಿಡರ್ಮಿಸ್ (ನಾ.) ಪ್ರಾಣಿಗಳ ಚರ್ಮದ ಹೊರ ಪೊರೆ ; ಹೊರ ಚರ್ಮ. (ಪ್ರಾಣಿಯ ಚಿಪ್ಪಿನ) ಹೊರ ಪೊರೆ. (ಗಿಡದ) ಹೊರ ತೊಗಟೆಯ ಒಳಗಡೆಯಿರುವ ನಿಜ ಚರ್ಮ ; ಒಳ ತೊಗಟೆ. **Epidérmal** (ಗು.) ; **Epidérmic** (ಗು.) ; **Epidérmoid** (ಗು.) ಹೊರ ಚರ್ಮ ಸ್ವಭಾವದ. **Epidermoídal** (ಗು.)

Epigástrium ಎಪಿಗ್ಯಾಸ್ಟ್ರಿಯಂ (ನಾ.) ಜಠರಕ್ಕೆ ಹೊದ್ದಿಕೊಂಡಂತಿರುವ ಅದರ ಮೇಲ್ಭಾಗದಲ್ಲಿಯ ಹೊಟ್ಟೆಯ ಭಾಗ ; ಜಠರದಮೇಲಿನ ಹೊಟ್ಟೆ. **Epigástric** (ಗು.)

Épigee ಎಪಿಜೀ (ನಾ.) = Perigee.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Épigene ಎಪಿಜೀನ್ (ಗು.) (ಭೂ. ವಿ.) ಭೂಮಿಯ ಮೇಲ್ಮೈಯಮೇಲೆ ಉಂಟಾದ. (ಸ್ಫಟಿಕ ವಿಷಯದಲ್ಲ) ರಚನೆಯಾದಂದಿನಿಂದೀಚೆಗೆ ರಾಸಾಯನಿಕ ವ್ಯತ್ಯಾಸ ಹೊಂದಿದ.

Epigénesis ಎಪಿಜೆನಿಸಿಸ್ (ನಾ.) (ಜೀ. ವಿ.) ಜೈವಾಂಕುರವು ರೂಪಗೊಂಡು ಆದ ಹೊಸ ಉತ್ಪತ್ತಿ. Theory of e. ಪುನರುತ್ಪತ್ತಿ ಕ್ರಿಯೆಯಲ್ಲಿ ಅಂಕುರವು ಕ್ರಮೇಣ ವಿಕಾಸಹೊಂದಿ ಆದುದಲ್ಲವೆಂದೂ ಜೈವಿಕ ದ್ರವ್ಯವು ಅನುಗೂಡಿ ಆದುದೆಂದೂ ಪ್ರತಿಪಾದಿಸುವ ವಾದ : ಜೈವಾಂಕುರ ಸೃಷ್ಟಿ ವಾದ.

Epiglóttis ಎಪಿಗ್ಲಾಟಿಸ್ (ನಾ.) ನಾಲಗೆಯ ಬುಡದಲ್ಲಿ ನೆಟ್ಟಗೆ ನಿಂತಿರುವ ಎಲೆಯಾಕಾರದ ಮೃದ್ವಸ್ಥಿ (ತುತ್ತು, ದ್ರವ, ಮೊ. ನ್ನು ನುಂಗುವಾಗ ಇದು ಶ್ವಾಸನಾಳದಮೇಲೆ ಬಾಗಿ ಅದರ ಮುಚ್ಚಳವಾಗುತ್ತದೆ) : ಉಪಜಿಹ್ವೆ. **Epiglóttic** (ಗು.)

Épigram ಎಪಿಗ್ರ್ಯಾಮ್ (ನಾ.) ಚಮತ್ಕಾರಭಾವದಿಂದ ಮುಕ್ತಾಯವಾಗುವ ಸಣ್ಣ ಕವನ ; ಹುರುಳು ನುಡಿ ; ಚುಟುಕಿ ನುಡಿ ; ಚುಚ್ಚು ನುಡಿ ; ನಾಟು ನುಡಿ ; ಸೂಚೀಮುಖಿ ; ನಾಟುವಂತೆ ಹೇಳುವ ಮಾತು, ರೀತಿ. **Epigrammátic** —ಗ್ರಮ್ಯಾಟಿಕ್ (ಗು.) ; **Epigrammátically** (ಕ್ರಿ. ವಿ.) ; **Epigrámmatist** —ಗ್ರ್ಯಾಮಟಿಸ್ಟ್ (ನಾ.) ; **Epigrámmatize** (ಕ್ರಿ.) ನಾಟುನುಡಿ ಕಾವ್ಯ ರಚಿಸು ; ಸೂಚೀಮುಖಿ ಶೈಲಿಯಲ್ಲಿ ಬರೆ, ಭಾಷಣ ಮಾಡು ; ನಾಟುನುಡಿ ಕಾವ್ಯದ ವಿಷಯವನ್ನಾಗಿ ಮಾಡು.

Épigraph ಎಪಿಗ್ರಾಫ್ (ನಾ.) (ಕಲ್ಲು, ವಿಗ್ರಹ, ನಾಣ್ಯ, ಮೊ. ಗಳ) ಮೇಲಿನ ಲೇಖನ, ಅಂಕನ, ಶಾಸನ. ಆದರ್ಶ ವಾಕ್ಯ. **Epigráphic** (ಗು.) ; **Epígraphist** ಇಪಿಗ್ರಫಿಸ್ಟ್ (ನಾ.) ಶಾಸನವಿದ್ಯಾ ಪಂಡಿತ, ವ್ಯಾಸಂಗಿ. **Epígraphy** (ನಾ.) ಶಾಸನಗಳು ; ಶಾಸನಗಳ ವಿವರಣ, ವರ್ಗೀಕರಣ, ಮೊ. ಗಳ ವಿಷಯವಾದ ಶಾಸ್ತ್ರ : ಶಾಸನ ಶಾಸ್ತ್ರ, ವಿದ್ಯೆ.

Épilepsy ಎಪಿಲೆಪ್ಸಿ (ನಾ.) ರೋಗಿ ಪ್ರಜ್ಞೆತಪ್ಪಿ ನೆಲಕ್ಕೆ ಬಿದ್ದು ಸೆಳವು ಬಂದು ಬಾಯಲ್ಲಿ ನೊರೆಗಟ್ಟುವ ನರವ್ಯೂಹದ ವ್ಯಾಧಿ ; ಮೂರ್ಛೆ ರೋಗ ; ಅಪಸ್ಮಾರ ; ಬೀಳುವ ರೋಗ ; ಮಲ ರೋಗ. **Epiléptic** (ಗು., ನಾ.) ಮೂರ್ಛೆರೋಗದ ; ಅಪಸ್ಮಾರದ. ಮೂರ್ಛೆರೋಗಿ ; ಅಪಸ್ಮಾರಿ.

Épilogue ಎಪಿಲಾಗ್ (ನಾ.) ಗ್ರಂಥದ ಉಪಸಂಹಾರ ಭಾಗ ; ಕಡೆ ನುಡಿ ; ಹಿನ್ನುಡಿ. ನಾಟಕಾಂತದಲ್ಲಿ ಪ್ರೇಕ್ಷಕರನ್ನುದ್ದೇಶಿಸಿ ಹೇಳುವ ಭಾಷಣ, ಸಣ್ಣ ಕವನ ; ಮುಕ್ತಾಯ ; ಭರತ ವಾಕ್ಯ. **Epílogist** — ಲೊಜಿಸ್ಟ್ (ನಾ.) ಉಪಸಂಹಾರ ಭಾಷಣಕಾರ, ಲೇಖಕ.

Epíphany ಇಪಿಫನಿ (ನಾ.) 'ಮೇಜೈ' ಎಂಬ ಪೌರಸ್ತ್ಯ ಜ್ಞಾನಿಗಳಿಗೆ ಕ್ರಿಸ್ತನು ಕಾಣಿಸಿಕೊಂಡದ್ದು. ಇದರ ಜ್ಞಾಪಕಾರ್ಥವಾಗಿ ಕ್ರೈಸ್ತರು (ಜನವರಿ ೬ನೆಯ ತಾರೀಖಿನಲ್ಲ) ಆಚರಿಸುವ ಹಬ್ಬ. ಅತಿಮಾನುಷ ವ್ಯಕ್ತಿಯ ತೋರ್ಕೆ ; ದೇವರ ಪ್ರತ್ಯಕ್ಷ.

Epiphenómenon ಎಪಿಫಿನಾಮಿನನ್ (ನಾ. ; ಬ. ವ. -ena) (ವೈದ್ಯ, ತತ್ತ್ವಶಾಸ್ತ್ರ) ಗೌಣ ಲಕ್ಷಣ (ಮತ್ತೊಂದರ ಸಹವರ್ತಿ ಮಾತ್ರ, ಅದರ ಕಾರಣವಾಗಲಿ ಫಲವಾಗಲಿ ಅಲ್ಲ) : ಉಪ ವಿಕಾರ.

Épiphyte ಎಪಿಫೈಟ್ (ನಾ.) ಮತ್ತೊಂದು ಗಿಡದಮೇಲೆ ಬೆಳೆಯುವ (ಸಾ., ಅದರಿಂದ ಪೋಷಣೆ ಪಡೆಯದ) ಸಸ್ಯ : ಅಪ್ಪುಗಿಡ. ಪ್ರಾಣಿ ಶರೀರದಮೇಲಿನ ಸಸ್ಯ ಪರೋಪಜೀವಿ. **Epiphýtal** (ಗು.) ; **Epiphýtic** —ಫಿಟಿಕ್ (ಗು.)

Epíscopacy ಇಪಿಸ್ಕೊಪಸಿ (ನಾ.) ಕ್ರೈಸ್ತ ಧರ್ಮಸಂಸ್ಥೆಯಮೇಲಿರುವ ಬಿಷಪ್‌ಗುರುಗಳ ಆಡಳಿತ. ಬಿಷಪ್‌ಗುರುಗಳು. **Epíscopal** (ಗು.) ಬಿಷಪ್ಪಿನ ; ಬಿಷಪ್ಪುಗಳ. E. church ಬಿಷಪ್‌ಗುರುಗಳ ಆಡಳಿತದಲ್ಲಿರುವ ಕ್ರೈಸ್ತ ಧರ್ಮ ಸಂಸ್ಥೆ. **Epíscopalism** —ಪಲಿಸ್ಮ್ (ನಾ.) ಕ್ರೈಸ್ತ ಧರ್ಮ ಸಂಸ್ಥೆಯ ಆಡಳಿತದಲ್ಲಿ ಪರಮಾಧಿಕಾರವು ಬಿಷಪ್ ಗಣಕ್ಕೆ ಸೇರಿದುದೇ ಹೊರತು ಯಾವ ಒಬ್ಬ ವ್ಯಕ್ತಿಗೂ ಸೇರಿದುದಲ್ಲವೆಂಬ ವಾದ : ಬಿಷಪ್‌ಗಣ ಪ್ರಭುತ್ವ. **Epíscopally** (ಕ್ರಿ. ವಿ.) ; **Episcopálian** — ಪೇಲಿಯನ್ (ಗು., ನಾ.) ಬಿಷಪ್ ಆಡಳಿತದ (ವಾದಿ). ಇಂತಹ ಧರ್ಮಸಂಸ್ಥೆಯ (ಸದಸ್ಯ). **Episcopálianism** (ನಾ.) ಇಂತಹ ಧರ್ಮಸಂಸ್ಥೆಯವರ ತತ್ತ್ವಗಳು. **Epíscopate** — ಪೆಟ್ (ನಾ.) ಬಿಷಪ್ಪಿನ ಅಧಿಕಾರ, ಅಧಿಕಾರ ಪ್ರಾಂತ, ಅಧಿಕಾರ ಕಾಲ. The e. ಬಿಷಪ್ಪುಗಳು.

Épisode ಎಪಿಸೋಡ್ (ನಾ.) ಗ್ರೀಕ್ ರುದ್ರನಾಟಕಗಳಲ್ಲಿ ಎರಡು ಮೇಳಗೀತಗಳ ಮಧ್ಯೆ ಬರುವ ಭಾಗ. ಪ್ರಾಸಂಗಿಕ ಕಥೆ ಅಥವಾ ಘಟನಾವಳಿ ; ಉಪಾಖ್ಯಾನ ; ಉಪ ಕಥೆ ; ಅಡ್ಡ ಕಥೆ. **Episódic(al)** —ಸಾ— (ಗು.) ; **Episódically** (ಕ್ರಿ. ವಿ.)

Epispástic ಎಪಿಸ್‌ಪ್ಯಾಸ್ಟಿಕ್ (ಗು., ನಾ.) (ವೈ. ಶಾ.) ಬೊಬ್ಬೆ ಅಥವಾ ಗುಳ್ಳೆಯೆಬ್ಬಿಸುವ (ಲೇಪ)

Epistemólogy ಎಪಿಸ್ಟೀಮಾಲೊಜಿ (ನಾ.) ತತ್ತ್ವಶಾಸ್ತ್ರದಲ್ಲಿ ಪ್ರಮಾಣ ಪ್ರಮೇಯ ವಿಚಾರ ; ಜ್ಞಾನವುಂಟಾಗುವ ರೀತಿ ಮತ್ತು ಅದರ ಆಧಾರಗಳನ್ನು ಕುರಿತ ಶಾಸ್ತ್ರಭಾಗ.

Epístle ಇಪಿಸ್‌ಲ್ (ನಾ.) ಪತ್ರ ; ಓಲೆ ; ಕಾಗದ (ಈಗ, ಸಾಮಾನ್ಯ ಕಾಗದಪತ್ರಗಳ ವಿಷಯದಲ್ಲ ವಿನೋದವಾಗಿ ಹೇಳುವ ಮಾತು). ಮು., ಬೈಬಲ್ಲಿನ ಪ್ರಮಾಣಭಾಗಗಳಲ್ಲಿ ಸೇರಿದ ಧರ್ಮಪ್ರವರ್ತಕನ ಪತ್ರ. (The E. ಪ್ರಭುಭೋಜನ ಸಂಸ್ಕಾರದಲ್ಲಿ ಓದುವ ಧರ್ಮ ಪ್ರವರ್ತಕರ ಪತ್ರಭಾಗಗಳು). ಸಾಹಿತ್ಯ ಕೃತಿ (ಸಾ., ಪತ್ರದ ರೂಪದಲ್ಲಿ ರಚಿಸಿದ ಪದ್ಯ). **Epístolary** —ಸ್ಟೊಲರಿ (ಗು.) ಪತ್ರಗಳ ; ಪತ್ರ ವ್ಯವಹಾರದ ; ಪತ್ರಮೂಲಕ ನಡೆಯುವ ; ಪತ್ರಗಳಿಗೆ ಒಪ್ಪುವ, ಹೊಂದುವ. **Epístoler** — ಸ್ಟೊಲರ್ (ನಾ.) ಕಾಗದ, ಪತ್ರ, ಬರೆಯುವವನು : ಪತ್ರ ಲೇಖಕ. (ಕ್ರೈಸ್ತ ಧರ್ಮ) ಧರ್ಮಪ್ರವರ್ತನಾಚಾರ್ಯರ ಪತ್ರ ಓದುವವನು : ಪತ್ರ ವಾಚಕ.

Epístrophe ಎಪಿಸ್ಟ್ರಫಿ (ನಾ.) (ಅಲಂ.) ಅನೇಕ ವಾಕ್ಯಗಳು ಅಥವಾ ವಾಕ್ಯಭಾಗಗಳು ಸಮಾನ ಪದದಿಂದ ಅಂತ್ಯವಾಗುವ ಅಲಂಕಾರ : ಸಮಾನ ಪದಾಂತಾಲಂಕಾರ.

Épistyle ಎಪಿಸ್ಟೈಲ್ (ನಾ.) (ವಾ. ಶಾ.) = Architrave.

Épitaph ಎಪಿಟಾಫ್ (ನಾ.) ಸಮಾಧಿಯಮೇಲೆ ಕೆತ್ತಿದ (ಕೆತ್ತಲು ಯೋಗ್ಯವಾದ) ಮಾತುಗಳು ; ಸಮಾಧಿ ಲೇಖ ; ಚರಮ ವಾಕ್ಯ.

Epithalámium ಎಪಿತಲೇಮಿಯಂ (ನಾ. ; ಬ. ವ. -iums, -ia) ಮದುವೆಯ ಹಾಡು ಅಥವಾ ಕವನ ; ವಿವಾಹ ಗೀತ. **Epithalámial** (ಗು.) ಮದುವೆಯ ಹಾಡಿನ ರೀತಿಯ. **Epithalámic** —ಲ್ಯಾ— (ಗು.) ಮದುವೆಯ ಹಾಡಿನ.

Epithélium ಎಪಿತೀಲಿಯಂ (ನಾ.) ಲಾಲಾ ಚರ್ಮದ ಹೊರ ಪೊರೆ. (ಸ. ವಿ.) ಹೊಸ ಜೀವಕಣಗಳಿಂದಾದ ಹೊರ ಚರ್ಮ. **Epithélial** (ಗು.)

Épithet ಎಪಿತೆಟ್ (ನಾ.) ಗುಣ ಅಥವಾ ವಿಶೇಷಣವನ್ನು ಹೇಳುವ ಪದ : ಗುಣ ವಾಚಕ ; ವಿಶೇಷಣ. ಉಪಾಧಿ ; ಸಾರ್ಥಕ ನಾಮ (ಧೇಯ). **Epithétic(al)** (ಗು.) ; **Epithétically** (ಕ್ರಿ. ವಿ.)

Epítome ಇಪಿಟೊಮಿ (ನಾ.) (ಒಂದು ಗ್ರಂಥದ, ಪುಸ್ತಕದ) ಸಾರ, ಸಂಗ್ರಹ, ಅಡಕ ; ಸಂಕ್ಷಿಪ್ತ ನಿರೂಪಣೆ ; ಸಂಕ್ಷೇಪ. (ರೂಪ.) ಒಂದು ವಸ್ತುವನ್ನು ಸೂಕ್ಷ್ಮ ರೂಪದಲ್ಲಿ ಬಿಂಬಿಸುವ ವಸ್ತು (Man, the world's e. ಮನುಷ್ಯನು ಜಗತ್ತಿನ ಸೂಕ್ಷ್ಮ ರೂಪ). **Epítomist** (ನಾ.) ಸಂಕ್ಷೇಪಕಾರ. **Epítomize** (ಕ್ರಿ. ಸಕ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Epizóon ಎಪಿಝೋಅನ್ (ನಾ. ; ಬ. ವ. -oa) (ಪ್ರಾಣಿಯ ಮೈಮೇಲೆ ಜೀವಿಸುವ) ಉಪರಿ ಜೀವಿ. **Epizoótic** — ಝೊಟಿ — (ಗು., ನಾ.) ಪ್ರಾಣಿಗಳಲ್ಲಿ ತಾತ್ಕಾಲಿಕವಾಗಿ ಹರಡಿರುವ (ರೋಗ); ಪ್ರಾಣಿ ಸಾಂಕ್ರಾಮಿಕ ರೋಗ.

Époch ಎ(ಈ)ಪಾಕ್ (ನಾ.) (ಚರಿತ್ರೆ, ವಿಜ್ಞಾನ, ಜೀವಮಾನ, ಮೊ. ಗಳಲ್ಲಿ) ಯುಗಾರಂಭ (An e.-making event ಹೊಸ ಯುಗಾರಂಭದ ಘಟನೆ). ಕಾಲ ; ಯುಗ. ವಿಶೇಷ ಘಟನೆಗಳಿಂದ ಕೂಡಿದ ಚರಿತ್ರ ಕಾಲ, ಅಥವಾ ಜೀವಿತ ಕಾಲ. **Épochal** ಎಪೊಕಲ್ (ಗು.) ಯುಗದ ; ಯುಗ ಕಲ್ಪನೆಯ.

Épode ಎಪೋಡ್ (ನಾ.) ಗ್ರೀಸಿನ 'ಆರ್ಕಿಲೋಕಸ್' ಕವಿ ನಿರ್ಮಿಸಿದ ಭಾವಗೀತಾ ರೂಪ. (ಗ್ರೀಕ್ ನಾಟಕದಲ್ಲಿ ಮೇಳ ಎದುರುಮೇಳಗಳಾದ ಮೇಲೆ ಬರುವ) ಕೊನೆ ಗೀತ.

Éponym ಎಪೊನಿಮ್ (ನಾ.) ಒಂದು ಸ್ಥಳಕ್ಕೆ, ಜನಾಂಗಕ್ಕೆ, ಅಥವಾ ಸಂಸ್ಥೆಗೆ ತನ್ನ ಹೆಸರನ್ನು ಕೊಡುವವನು. **Epónymous** ಎಪಾನಿಮಸ್ (ಗು.) ಒಂದು ಸಂಸ್ಥೆ, ಮೊ. ಕ್ಕೆ ತನ್ನ ಹೆಸರು ಕೊಡುವ.

Épopee ಎಪೊಪೀ (ನಾ.) ಮಹಾಕಾವ್ಯ ಅಥವಾ ಕವಿತೆ.

Épos ಎಪಾಸ್ (ನಾ.) ಬರೆದಿಡದ ಪ್ರಾಚೀನ ಮಹಾಕವಿತೆ ; ಮಹಾಕಾವ್ಯ.

Epsílon ಎಪ್ಸೈಲನ್, **Épsilon** ಎಪ್ಸಿಲಾನ್ (ನಾ.) ಗ್ರೀಕ್ ಅಕ್ಷರ (E, ε)

Épsom ಎಪ್ಸಂ (ನಾ.) ಇಂಗ್ಲೆಂಡಿನ ಸರೇ ಕೌಂಟಿ(ಜಿಲ್ಲೆ)ಯಲ್ಲಿಯ ಒಂದು ಪಟ್ಟಣ. [E. Salt ಮ್ಯಾಗ್ನೀಸಿಯಂ ಸಲ್ಫೇಟ್ (ಲವಣ); ಭೇದಿಯುಪ್ಪು]. ಎಪ್ಸಂ ಪಟ್ಟಣದಲ್ಲಿಯ ಕುದುರೆಜೂಜಿನ ಪಥ, ಓಡುಹಾದಿ, ಮೈಹಾಳಿ. ಅಲ್ಲಿ ನಡೆಯುವ, ಅಲ್ಲಿಯ ಮತ್ತು ಇತರ ಕುದುರೆ ಜೂಜುಗಳ ಮುಖ್ಯ ಸಭೆ, ಅಧಿವೇಶನ.

Équable ಈ(ಎ)ಕ್ವಬ್‌ಲ್ (ಗು) ಒಂದೇ ಸಮನಾಗಿರುವ ; ಏರು ಕೊರೆಯಾಗದ ; ಹೆಚ್ಚು ಕಡಮೆಯಾಗದ ; ಬದಲಾಯಿಸದ ; ಸುಲಭವಾಗಿ ಕಲಕಲಾಗದ ; ಸಮ ಧಾತುವಾದ ; ಸ್ತಿಮಿತ ; ನಿರ್ವಿಕಾರ. **Equabílity** (ನಾ.) ; **Équably** (ಕ್ರಿ. ವಿ.)

Équal ಈಕ್ವಲ್ (ಗು., ನಾ., ಕ್ರಿ. ಸಕ.) ಸರಿ ; ಸಮ ; ಸಮಾನ ; ಸರಿಸಮ ; ಎಣೆ ; ಈಡು ; ತೋಡು ; ಜೋಡಿ. ತಕ್ಕಷ್ಟು ಶಕ್ತಿ, ಸಾಮರ್ಥ್ಯ, ಧೈರ್ಯ, — ಉಳ್ಳ ; ತಕ್ಕ ; ಸಮರ್ಥ ; ಸಾಲುವ (E. laws ಏಕ ಸಮವಾದ ಕಾಯಿದೆಗಳು. E. fight ಸಮ ಯುದ್ಧ, ಕದನ, ಹೋರಾಟ). (ನಾ.) ಅಧಿಕಾರ, ದರ್ಜೆ, ಮೊ. ಗಳಲ್ಲಿ ಮತ್ತೊಬ್ಬನಿಗೆ ಸಮನಾದವನು ; ಸಮಾನಸ್ಕಂಧ ; ಸರಿಕ (Mix with your equals ಸಮಾನಸ್ಕಂಧರೊಡನೆ ಸೇರು. He has no e. ಅವನಿಗೆ ಎಣೆಯೇ ಇಲ್ಲ). (ಬ. ವ. ದಲ್ಲಿ) ಸಮ ವಸ್ತುಗಳು (If equals be added to equals ಸಮ ಮೊತ್ತಗಳಿಗೆ ಸಮ ಮೊತ್ತಗಳನ್ನು ಸೇರಿಸಿದರೆ). (ಕ್ರಿ.) ಸಮವಾಗು ; ಸಮವಾಗಿರು ; ಸಮ ಮಾಡು. **Equálity** ಇಕ್ವಾಲಿಟಿ (ನಾ.) ಸಮತೆ ; ಸಮಾನತೆ (Is on an e. with — ಒಡನೆ ಸಮಾನವಾಗಿದೆ). **Équalize** ಈಕ್ವಲೈಜ್ (ಕ್ರಿ.) (ವಸ್ತು, ಮೊ. ನ್ನು) —ಕ್ಕೆ ಸಮ ಮಾಡು ; ಸಮೀಕರಿಸು ; ಸರಿಗಟ್ಟು. **Equalizátion** (ನಾ.) ; **Équally** (ಕ್ರಿ. ವಿ.) ಸಮ ಪ್ರಮಾಣದಲ್ಲಿ ; ಸಮವಾಗಿ ; ಒಂದೇ ರೀತಿಯಲ್ಲಿ ; ಏಕ—.

Equanímity ಈಕ್ವನಿಮಿಟಿ (ನಾ.) ಸಮ ಚಿತ್ತತೆ ; ಸಮ ಭಾವ ; ಮನಸ್ಥೈರ್ಯ ; ಚಿತ್ತ ಶಾಂತಿ. **Equánimous** ಇಕ್ವ್ಯಾನಿಮಸ್ (ಗು.) ಸಮತಾ ಭಾವವುಳ್ಳ ; ಸಮ ಚಿತ್ತ.

Equáte ಇಕ್ವೇಟ್ (ಕ್ರಿ. ಸಕ.) (ಒಂದು ಮತ್ತೊಂದರೊಡನೆ) ಸಮವೆಂದು ನಿರೂಪಿಸು ; ಸಮ ಮಾಡು ; ಸರಿಗಟ್ಟು ; ಸಮೀಕರಿಸು ; ಸಮವೆಂದು ಪರಿಗಣಿಸು. **Equátion** (ನಾ.) ಸಮೀಕರಿಸುವುದು ; ಸಮೀಕರಣ. (ಸರಬರಾಯಿ, ಗಿರಾಕಿಗಳು, ಮೊ. ನ್ನು) ಸರಿದೂಗುವುದು, ಸರಿಸಮ ಮಾಡುವುದು. ನ್ಯೂನಾತಿರಿಕ್ತಗಳಿಗಾಗಿ ಸರಿಗಟ್ಟುವ, ಮೊತ್ತ, ವಿಧಾನ. [Personal e. ದೃಗ್ಗತಘಟನೆಗಳ ಕಾಲವನ್ನು ಗೊತ್ತುಮಾಡುವಲ್ಲಿ ಪ್ರೇಕ್ಷಕನ ವ್ಯಕ್ತಿತ್ವದಿಂದಾದ ನ್ಯೂನಾತಿರೇಕಗಳಿಗಾಗಿ ಕೊಡಬೇಕಾದ ಅವಕಾಶ : ವ್ಯಕ್ತಿದೋಷ ಸಮೀಕರಣ (ರೂಪ. ಸಹ)]. (ಗಣಿತ) (=) ಎಂಬ ಗುರುತಿನಿಂದ ಕೂಡಿದ ಎರಡು ರಾಶಿಗಳನ್ನು ಸಮವೆಂದು ದೃಢೀಕರಿಸುವ ಸೂತ್ರ : ಸಮೀಕರಣ. **Equátional** (ಗು.) ; **Equátionally** (ಕ್ರಿ. ವಿ.)

Equátor ಇಕ್ವೇಟರ್ (ನಾ.) ಭೂಮಿಯ ಎರಡು ಧ್ರುವಗಳಿಗೂ ಸಮಾನ ದೂರದಲ್ಲಿರುವ ಭೂಮಿಯ ದೊಡ್ಡವೃತ್ತ ; ಸಮಭಾಜಕ ವೃತ್ತ ; ವಿಷುವದ್ವೃತ್ತ ; ನಿರಕ್ಷ ರೇಖೆ ; ಭೂಮಧ್ಯ ರೇಖೆ ; = Equinoctial. Magnetic e. = Aclinic line. **Equatórial** ಈಕ್ವಟೋರಿಯಲ್ (ಗು.) ವಿಷುವದ್ವೃತ್ತದ ; — ವೃತ್ತ ಸಮೀಪದ. E. telescope ವಿಷುವದ್ವೃತ್ತ ಸಮತಲ ಪ್ರದೇಶಕ್ಕೆ ಸಮಾಂತರವಾಗಿ ಸುತ್ತುವಂತೆ ಅಳವಡಿಸಿರುವ ಅಕ್ಷಕ್ಕೆ ಜೋಡಿಸಿರುವ ದೂರದರ್ಶಕ : ವಿಷುವದ್ ದೂರದರ್ಶಕ. **Equatórially** (ಕ್ರಿ. ವಿ.)

Équerry ಎಕ್ವೆರಿ, **Equérry** ಇಕ್ವೆರಿ (ನಾ.) ದೊರೆಯ, ಶ್ರೀಮಂತನ, ಕುದುರೆಗಳ ವಿಚಾರಣೆ ನೋಡಿಕೊಳ್ಳುವ ಅಧಿಕಾರಿ : ಅಶ್ವಪಾಲ ; ಅಶ್ವಾಧಿಕಾರಿ. ಬ್ರಿಟಿಷ್ ಅರಮನೆಯ ಒಬ್ಬ ಅಧಿಕಾರಿ.

Equéstrian ಇಕ್ವೆಸ್ಟ್ರಿಯನ್ (ಗು., ನಾ.) ಕುದುರೆ ಸವಾರಿಯ (E. statue ಅಶ್ವಾರೋಹಿ ಪ್ರತಿಮೆ ; ಸವಾರನ ಪ್ರತಿಮೆ). (ರೋಮನ್ ಪ್ರಾಚೀನ) ಅಶ್ವಾರೋಹಿ ವೀರರ. (ನಾ.) ಅಶ್ವಾರೂಢ ; ಸವಾರ ; ರಾಹುತ ; ಕುದುರೆಯಮೇಲೆ ಕಸರತ್ತುಮಾಡುವವನು. **Equestriénne** ಎಕ್ವೆಸ್ಟ್ರಿಯೆನ್ (ನಾ.) ಕುದುರೆ ಸವಾರಳು (ಮು., ಸರ್ಕಸ್ಸಿನ ಸಾಹಸ ಸವಾರಳು)

Equiángular ಈಕ್ವಿಆ್ಯಂಗ್ಯುಲರ್ (ಗು.) ಸಮಾನ ಕೋನಗಳುಳ್ಳ (E. figure ಸಮಾನ ಕೋನಾಕೃತಿ. Mutually e. ಪರಸ್ಪರ ಸಮಾನ ಕೋನಿಕ)

Equidístant ಈಕ್ವಿಡಿಸ್ಟಂಟ್ (ಗು.) ಸಮ ದೂರವುಳ್ಳ ; ಸಮಾಂತರವುಳ್ಳ.

Equiláteral ಈಕ್ವಿಲ್ಯಾಟರಲ್ (ಗು.) ಸಮ ಭುಜ(ಬಾಹು)ಗಳುಳ್ಳ.

Equilíbrate, etc. **Equilibrium** ನೋಡಿ.

Equilíbrium ಈಕ್ವಿಲಿಬ್ರಿಯಂ (ನಾ.) ಸಮತೂಕ ಸ್ಥಿತಿ (ರೂಪ. ಸಹ) ; ಸಮಸ್ಥಿತಿ ; ಸಮತೆ (A body in stable e. ಪೂರ್ವ ಸ್ಥಿತಿ ತಪ್ಪಿಸಲು ಸ್ವಲ್ಪ ಕದಲಿಸಿದಲ್ಲಿ ಮರಳಿ ಪೂರ್ವಸ್ಥಿತಿಗೇ ಬರುವ ಕಾಯ). ನಿಷ್ಪಕ್ಷಪಾತ. **Equilíbrate** ಈಕ್ವಿಲೈಬ್ರೇಟ್ (ಕ್ರಿ.) (ಎರಡು ವಸ್ತುಗಳು) ಸಮತೋಲನವಾಗುವಂತೆ ಮಾಡು, ಸರಿದೂಗುವಂತೆ ಮಾಡು ; ಸರಿದೂಗಿಸು ; ಸರಿತೂಕಕ್ಕೆ ತರು ; ಸರಿದೂಗು. **Equilibrátion** (ನಾ.) ; **Equílibrist** ಇ(ಈ)ಕ್ವಿಲಿಬ್ರಿಸ್ಟ್ (ನಾ.) ಚಾಚಿ ಕಟ್ಟಿದ ಹಗ್ಗದಮೇಲೆ ನಡೆಯುವವನು(ಳು) ; ದೊಂಬರಾಟದವನು(ಳು)

Equimúltiple ಈಕ್ವಿಮಲ್ಟಿಪ್‌ಲ್ (ನಾ. ; ಸಾ., ಬ. ವ. ದಲ್ಲಿ) ಮತ್ತೊಂದು ಸಂಖ್ಯೆಯೊಡನೆ ಸಮಾನ ಅಪವರ್ತನವುಳ್ಳ ಸಂಖ್ಯೆ (ಉದಾ., ೪೮ = ೬ × ೮ ; ೩೦ = ೬ × ೫) : ಸಮಾನಾಪವರ್ತನಿ.

Équine ಈಕ್ವೈನ್ (ಗು.) ಕುದುರೆಯ ; ಕುದುರೆಯಂಥ.

Equinóctial. **Equinox** ನೋಡಿ.

Équinox ಈ(ಎ)ಕ್ವಿನಾಕ್ಸ್ (ನಾ.) ಸೂರ್ಯನು ವಿಷುವದ್ವೃತ್ತವನ್ನು ಹಾಯುವ (ಹಗಲೂ ಇರುಳೂ ಒಂದೇ ಪ್ರಮಾಣವುಳ್ಳ) ಕಾಲ (ಮಾರ್ಚ್ ೨೧ನೆಯ ಮತ್ತು ಸೆಪ್ಟೆಂಬರು ೨೩ನೆಯ ತಾರೀಖಿನ ಸುಮಾರು) ; ವಿಷುವತ್ತು ; ವಿಷುವತ್ಸಂಕ್ರಾಂತಿ (Vernal e. ಮೇಷಸಂಕ್ರಾಂತಿ ; ಮೇಷಾಯನ. Autumnal e. ತುಲಾ ಸಂಕ್ರಾಂತಿ ; ತುಲಾಯನ). (ಬ. ವ. ದಲ್ಲಿ) ವಿಷುವದ್ವೃತ್ತವನ್ನು ಸೂರ್ಯನು ಹಾಯುವ ಎರಡು ಬಿಂದುಗಳು : ಸಂಕ್ರಾಂತಿ ಬಿಂದುಗಳು ; ವಿಷುವದ್ಬಿಂದುಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Equinóctial ಎ(ಈ)ಕ್ವಿನಾಕ್‌ಷಲ್ (ಗು., ನಾ.) ಸಮ ದಿವಾ ರಾತ್ರಿಗಳುಳ್ಳ; ವಿಷುವತ್ತಿನ (E. line ಭೂಮಿಯ ಅಕ್ಷಕ್ಕೆ ಲಂಬಮಾನವಾದ ಸಮತಳವುಳ್ಳ ಖಗೋಳವೃತ್ತ : ವಿಷುವದ್ವೃತ್ತ). ವಿಷುವತ್ಕಾಲದಲ್ಲಿ ಅಥವಾ ಅದರ ಸಮೀಪ ಕಾಲದಲ್ಲಿ ಸಂಭವಿಸುವ (E. gales ವಿಷುವನ್ಮಾರುತಗಳು). ಭೂಮಧ್ಯ ರೇಖೆಯಲ್ಲಿಯ ಅಥವಾ ಅದರ ಸಮೀಪದಲ್ಲಿಯ. = E. line ; (ಬ. ವ. ದಲ್ಲಿ) E. gales.

Equíp ಇಕ್ವಿಪ್ (ಕ್ರಿ. ಸಕ.) (ನಾವೆ, ಸೈನ್ಯ, ಮನುಷ್ಯ — ಇವರಿಗೆ ಆವಶ್ಯಕವಾದುದನ್ನು) ಒದಗಿಸು, ಸಜ್ಜುಗೊಳಿಸು, ಅಣಿಮಾಡು, ಸಿದ್ಧಮಾಡು. ಪ್ರಯಾಣ, ಮೊ. ಕ್ಕೆ ಹವಣಿಸು, ಅಣಿಮಾಡು, ಅಣಿಮಾಡಿಕೊ. **Equípment** (ನಾ.) ಸಾಮಾನು ಸರಂಜಾಮು ; ಸಜ್ಜು. **Équipage** ಎಕ್ವಿಪೆಜ್ (ನಾ.) ಒಂದು ಉದ್ಯಮಕ್ಕಾಗಿ ಬೇಕಾದ ಉಪಕರಣಗಳು ; ಸಜ್ಜು ; ಸಾಮಾನು ಸರಂಜಾಮು ; ಪ್ರಯಾಣ, ಮೊ. ಕ್ಕೆ ಬೇಕಾದ ಸಾಮಗ್ರಿ. ಪರಿವಾರ ಸಜ್ಜಿತವಾದ ವಾಹನ.

Équipoise ಈಕ್ವಿಪಾಯ್ಸ್ (ನಾ., ಕ್ರಿ. ಸಕ.) ಸಮ ತೂಕ ; ಸಮ ತೋಲನ (ಅನೇಕ ವೇಳೆ ರೂಪಕವಾಗಿ) : ಸಮ ಚಿತ್ತತೆ. ಸಮತೋಲನ ಮಾಡುವ ವಸ್ತು. (ಕ್ರಿ.) ಸಮತೋಲನ ಮಾಡು ; ಸಮಸ್ಥಿತಿಗೆ ತರು ; (ಮನಸ್ಸನ್ನು) ಸಮತಾ ಭಾವದಲ್ಲಿಡು.

Equipóllent ಈಕ್ವಿಪಾಲೆಂಟ್ (ಗು., ನಾ.) ಬಲ, ಶಕ್ತಿ, ಸಾಮರ್ಥ್ಯಗಳಲ್ಲಿ ಸಮನಾಗಿರುವ; ಸಮ ಬಲ ; ಸಮ ಶಕ್ತ. ಸರಿಸುಮಾರು ಸಮವಾದ. (ನಾ.) — ವಸ್ತು. **Equipóllence, -ency** (ನಾ.)

Equipónderance, -ancy ಈಕ್ವಿಪಾಂಡೆರನ್ಸ್, — ರನ್ಸಿ (ನಾ.) ಸಮ ತೂಕ ; ಸಮ ತೋಲನ ಸ್ಥಿತಿ. **Equipónderant** — ರಂಟ್ (ಗು., ನಾ.) ಸಮ ತೂಕದ ; ಸಮ ತೋಲನವುಳ್ಳ. (ಬ. ವ. ದಲ್ಲಿ) ಸಮ ತೂಕದ ವಸ್ತುಗಳು. **Equipónderate** — ರೇಟ್ (ಕ್ರಿ. ಸಕ.) ಸಮತೋಲನವಾಗು ; ಸರಿದೂಗು.

Equipoténtial ಈಕ್ವಿಪೊಟೆನ್ಷಲ್ (ಗು.) (ಭೌ. ವಿ.) ಒಂದು ವಸ್ತುವಿನ ಪ್ರತಿ ಬಿಂದುವಿನಲ್ಲೂ ಒಂದು ಬಲದ ಮಟ್ಟವು ಒಂದೇ ಸಮವುಳ್ಳ, ಸ್ಥಾಯಿಯಾಗುಳ್ಳ ; ಸಮ ಮಟ್ಟದ. ಸಮ ಸಾಮರ್ಥ್ಯವುಳ್ಳ.

Équitable. **Equity** ನೋಡಿ.

Equitátion ಎಕ್ವಿಟೇಷನ್ (ನಾ.) (ಸಾ., ವಿನೋದವಾಗಿ) ಕುದುರೆ ಸವಾರಿ ; ರಾವುತತನ.

Équity ಎಕ್ವಿಟಿ (ನಾ.) ನೀತಿ ; ಧರ್ಮ ; ಕಾನೂನಿನಲ್ಲಿ ಬಿಟ್ಟು ಹೋಗಿರುವುದನ್ನು ಸೇರಿಸಿ, ಅಥವಾ ತಪ್ಪಿಹೋಗಿರುವುದನ್ನು ತಿದ್ದಿಕೊಂಡು, ನಡಸುವ ನ್ಯಾಯ : ಧರ್ಮ ನ್ಯಾಯ. ರೂಢಿಯಾದ ಮತ್ತು ಕಾನೂನುಸಮ್ಮತವಾದ ನ್ಯಾಯದ ಜೊತೆಗೆ ಅದನ್ನು ಮೀರಿ ಜಾರಿಮಾಡುವ ಧರ್ಮತತ್ತ್ವಗಳು. **Équitable** —ಟಬ್‌ಲ್ (ಗು.) ಸರಿಯಾದ ; ಧರ್ಮ, ನೀತಿ, ಸಮ್ಮತವಾದ ; ನಿಷ್ಪಕ್ಷಪಾತವಾದ ; ಸಮದರ್ಶಿಯಾದ. **Équitableness** (ನಾ.) ; **Équitably** (ಕ್ರಿ. ವಿ.) (ಹಕ್ಕುಬಾಧ್ಯತೆ, ಮೊ. ಗಳ ವಿಷಯದಲ್ಲಿ) ಕಾನೂನಿಗೆ ಸರಿಹೊಂದದಿದ್ದರೂ ನೀತಿದೃಷ್ಟಿಯಿಂದ ಅಂಗೀಕರಿಸಬಹುದಾದ ; ಧರ್ಮ ಸಮ್ಮತವಾದ.

Equívalent ಇಕ್ವಿವಲೆಂಟ್ (ಗು., ನಾ.) — ಕ್ಕೆ ಸಮಬೆಲೆಯುಳ್ಳ ; (ಪದಗಳ ವಿಷಯದಲ್ಲಿ) ಸಮಾನಾರ್ಥವುಳ್ಳ ; ಸರಿ ; ಸಮ ; ಈಡು (ಆದದ್ದು). (ರ. ವಿ.) — ಕ್ಕೆ ಸಂಯೋಗಮೂಲ್ಯದಲ್ಲಿ ಸಮನಾದ : ಸಮ ಸಂಯೋಗಿ. (ನಾ.) ಸಮಾನ ವಸ್ತು, ಮೊತ್ತ, ಪದ, ಮೊ. ವು ; ಸಮಾನಾರ್ಥಕ. **Equívalence, -ency** (ನಾ.)

Equívocal ಇಕ್ವಿವೊಕಲ್ (ಗು.) ಎರಡರ್ಥದ ; ದ್ವಂದ್ವಾರ್ಥವುಳ್ಳ ; ಸಂದಿಗ್ಧಾರ್ಥದ ; ಸಂಶಯಾರ್ಥದ ; ಸಂದಿಗ್ಧ ಸ್ವಭಾವದ ; ಹೊರಳು ಮಾತಿನ. (E. generation ಸ್ವಯಂ ಜನನ). ಅನಿರ್ಣೀತ ; ಅನಿರ್ಧಾರಿತ. (ಮನುಷ್ಯರು, ನಡತೆ, ಮೊ. ಗಳ ವಿಷಯದಲ್ಲಿ) ಸಂಶಯಾಸ್ಪದವಾದ, ಅನುಮಾನಕ್ಕೆಡೆಗೊಡುವ. **Equivocálity**—ಕ್ಯಾ—(ನಾ.) ; **Equívocalness** —ಕಲ್— (ನಾ.) ; **Equívocally** (ಕ್ರಿ. ವಿ.) ; **Equívocate** — ಕೇಟ್ (ಕ್ರಿ. ಅಕ.) (ನಿಶ್ಚಯವನ್ನು ಮರೆಮಾಡಲು) ಸಂದಿಗ್ಧವಾಗಿ ಮಾತನಾಡು ; ಹೊರಳುಮಾತಾಡು. **Equivocátion** (ನಾ.) ; **Equívocator** (ನಾ.) ; **Équivoque, -oke** ಈ(ಎ)ಕ್ವಿವೋಕ್ (ನಾ.) ದ್ವಂದ್ವಾರ್ಥ ; ಅನಿಶ್ಚಯಾರ್ಥ ; ಸಂದಿಗ್ಧತೆ ; ಹೊರಳು ಮಾತು ; ಮರೆ ಮಾತು.

Éra ಈಯ್ರ (ನಾ.) ಒಂದು ನಿರ್ದಿಷ್ಟ ಕಾಲದಿಂದ ಪ್ರಾರಂಭಿಸುವ ಕಾಲಮಾನ ಪದ್ಧತಿ ; ಶಕ (ಉದಾ., Christian e. ಕ್ರಿಸ್ತ ಶಕ. E. of the Hegira ಮುಸ್ಲಿಂ ಶಕ ; ಇಸ್ಲಾಮಿ ಶಕ). ಚರಿತ್ರ ಕಾಲ ; ಕಾಲ ; ಶಕಾರಂಭ ದಿನ.

Eradiátion ಇರೇಡಿಯೇಷನ್ (ನಾ.) ಕಿರಣ ಸೂಸುವುದು ; ಕಿರಣ ಪ್ರಸಾರಣ.

Erádicate ಇರ್ಯಾಡಿಕೇಟ್ (ಕ್ರಿ. ಸಕ.) ಬೇರುಮುಟ್ಟ ಕಿತ್ತುಹಾಕು ; ನಿರ್ಮೂಲ ಮಾಡು ; ಮೂಲೋತ್ಪಾಟನ ಮಾಡು ; ತೊಡೆದುಹಾಕು. **Erádicable** (ಗು.) ; **Eradicátion** (ನಾ.)

Eráse ಇರೇಸ್(ನ್) (ಕ್ರಿ. ಸಕ.) ಅಳಿಸಿಬಿಡು ; ತೊಡೆದುಹಾಕು ; ಉಜ್ಜಿಬಿಡು ; ಒರಸಿಬಿಡು. **Erásable** (ಗು.) ; **Eráser** (ನಾ.) ಉಜ್ಜಿಹಾಕುವವನು ; —ವದು. **Erásure** —ಷರ್ (ನಾ.) ಉಜ್ಜಿಹಾಕುವುದು ; ಉಜ್ಜಿಹಾಕಿದ್ದು.

Erástian ಇರ್ಯಾಸ್ಟಿಯನ್ (ಗು., ನಾ.) ಧಾರ್ಮಿಕಾಧಿಕಾರವು ಲೌಕಿಕಾಧಿಕಾರಕ್ಕೆ ಒಳಪಟ್ಟಿರಬೇಕೆಂಬ ವಾದದ (ಅನುಯಾಯಿ) (Erastus ಎಂಬ 'ಹೈಡಲ್‌ಬರ್ಗ್' ವೈದ್ಯನದೆಂದು ಊಹೆ). **Erástianism** (ನಾ.) ; **Erástianize** (ಕ್ರಿ. ಸಕ.)

Ere ಏರ್ (ಉಪ., ಸಂ. ಅವ್ಯ.) (ಕಾವ್ಯ, ಪ್ರಾಚೀ. ಪ್ರ.) ಮುಂಚೆ ; ಮುನ್ನ ; ಮೊದಲು. E. long ಇಷ್ಟರಲ್ಲೆ ; ಬೇಗನೆ ; ಶೀಘ್ರದಲ್ಲಿಯೇ. Erewhile ಸ್ವಲ್ಪ ಹಿಂದೆ, ಮೊದಲು.

Érebus ಎರಿಬಸ್ (ನಾ.) (ಗ್ರೀಕ್ ಪುರಾಣ) ಭೂಮಿಗೂ ಅಧೋಲೋಕಕ್ಕೂ ಮಧ್ಯೇ ಇರುವ ಅಂಧಕಾರ ಪ್ರದೇಶ.

Eréct ಇರೆಕ್ಟ್ (ಗು., ಕ್ರಿ. ಸಕ.) ನೆಟ್ಟನೆಯ ; ನೇರವಾದ ; ಋಜುವಾದ ; ಬಾಗಿಲ್ಲದ (ರೂಪ. ಸಹ). ಲಂಬ. (ಕೂದಲು, ಮೊ. ಗಳ ವಿಷಯದಲ್ಲಿ) ನಿಮಿರಿದ ; ನಿಗುರಿದ ; ನೆಟ್ಟಗೆ ನಿಂತ. (ಕ್ರಿ.) ಎತ್ತಿ ನಿಲ್ಲಿಸು ; ನೆಟ್ಟಗೆ ನಿಲ್ಲಿಸು ; ನಿಮಿ(ಗು)ರಿಸು. ಕಟ್ಟು (ರೂಪ. ಸಹ). (ಜನರನ್ನು ತರಗತಿ, ಪಂಗಡ, ಮೊ. ವನ್ನಾಗಿ, ತತ್ತ್ವ, ಮೊ. ನ್ನು ಪದ್ಧತಿ, ಮೊ. ವನ್ನಾಗಿ) ಏರ್ಪಡಿಸು, ಸ್ಥಾಪಿಸು. **Eréctile** ಇರೆಕ್ಟ್(ಕ್ಟೈ)ಲ್ (ಗು.) ಕಟ್ಟಲಾಗುವ ; ನೆಟ್ಟಗೆ ನಿಲ್ಲಿಸಲಾಗುವ ; ನಿಮಿ(ಗು)ರಿಸಲಾಗುವ (E. tissue ಪ್ರಾಣಿಗಳು ಉದ್ರೇಕಗೊಂಡಾಗ ಹಿಗ್ಗಿ ದೃಢವಾಗಬಲ್ಲ ಅವುಗಳ ಅಂಗರಚನಾ ಭಾಗ). **Eréction** (ನಾ.) ನೆಟ್ಟಗೆ ನಿಲ್ಲಿಸುವುದು ; ನಿಮಿ(ಗು)ರಿಸುವುದು. ಕಟ್ಟುವುದು ; ಕಟ್ಟಡ (ರೂಪ. ಸಹ). **Eréctor** (ನಾ.) —ವವನು ; —ವದು [E.-muscle ನಿಮಿ(ಗು)ರಿಸುವ ಸ್ನಾಯು]

Éremite ಎರಿ(ರೆ)ಮೈಟ್ (ನಾ.) ವಿರಕ್ತ ; ವಿರಾಗಿ ; ನಿಸ್ಸಂಗಿ ; ಜೋಗಿ (ಮು., ಕ್ರೈಸ್ತ ವಿರಕ್ತ). **Eremític(al)** —ಮಿ— (ಗು.)

Érethism ಎರಿತಿಸ್ಮ್ (ನಾ.) (ವೈ. ಶಾ.) [ಅಂಗ, ಅಂಗಾಂಶ, (ರೂಪಕವಾಗಿ) ಮನಸ್ಸು — ಇವುಗಳ] ವಿಪರೀತ ಉದ್ರೇಕ ; ಅತಿರೇಕ ಸಂಕ್ಷೋಭೆ.

Erg, Érgon ಅರ್ಗ್, ಅರ್ಗಾನ್ (ನಾ.) (ಭೌ. ವಿ.) ಕಾರ್ಯದ ಅಥವಾ ಶಕ್ತಿಯ ಮೂಲ ಮಾನ, ಏಕ ಮಾನ (ಒಂದು ಡೈನ್ ಬಲ ಪ್ರಯೋಗವಾದ ಬಿಂದು ಆ ಬಲದ ಗತಿಯ ಕಡೆಗೆ ಒಂದು ಸೆಂಟಿಮೀಟರ್ ದೂರ ಚಲಿಸುವಲ್ಲಿ ಮಾಡುವ ಕೆಲಸದ ಪರಿಮಾಣ) : 'ಅರ್ಗ್'.

Ergatócracy ಅರ್ಗಟಾಕ್ರಸಿ (ನಾ.) ಕೆಲಸಗಾರರ ಅಧಿಕಾರ, ಪ್ರಭುತ್ವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Érgo (L) ಅರ್ಗೋ (ಕ್ರಿ. ವಿ.) (ಸಾ., ಹಾಸ್ಯ ಪ್ರಯೋಗ) ಆದುದರಿಂದ ; ಆದಕಾರಣ.

Érgot ಅರ್ಗಟ್ (ನಾ.) ರೈ, ಮೊ. ಧಾನ್ಯಗಳಿಗೆ ತಗುಲುವ ಒಂದು ಶಿಲೀಂಧ್ರ ರೋಗ. (ಔಷಧಕ್ಕಾಗಿ ಉಪಯೋಗಿಸುವ) ರೋಗ ತಗುಲಿದ ರೈ ಬೀಜ. **Ergotism** —ಟಿಸ್ಮ್ (ನಾ.) = Ergot ; —ರೋಗ ತಗುಲುವುದು ; ರೋಗ ತಗುಲಿದ ರೈ ಧಾನ್ಯದ ರೊಟ್ಟಿಯಿಂದ ಬರುವ ರೋಗ.

Érin ಏ(ಎ)ರಿನ್, ಇಯರಿನ್ (ನಾ.) ಐರ್ಲೆಂಡಿನ ಪೂರ್ವದ ಹೆಸರು.

Erístic ಎರಿಸ್ಟಿಕ್ (ಗು., ನಾ.) ವಾದ, ತರ್ಕ (ಕಲೆ, ವಿದ್ಯೆ) ; ವಾದ ಗ್ರಸ್ತ ; ಚರ್ಚಾಸ್ಪದ. (ವಾದ ಮಾಡುವವನ ವಿಷಯದಲ್ಲಿ) ಸತ್ಯಕ್ಕಿಂತ ಜಯಕ್ಕೆ ಹೆಚ್ಚು ಗಮನ ಕೊಟ್ಟ, ಕೊಡುವ.

Érmine ಅರ್ಮಿನ್ (ನಾ.) ಮುಂಗುಸಿಯಂತಿರುವ ಒಂದು ಜಾತಿಯ ಪ್ರಾಣಿ (ಇದರ ತುಪ್ಪುಳುಚರ್ಮವು ಬೇಸಗೆಯಲ್ಲಿ ಕಂದು ಬಣ್ಣವುಳ್ಳದ್ದಾಗಿಯೂ ಚಳಿಗಾಲದಲ್ಲಿ ಬೆಳ್ಳಗೂ ಇರುವುದು ; ಬಾಲದ ಕೊನೆ ಮಾತ್ರ ಯಾವಾಗಲೂ ಕಪ್ಪಗಿರುವುದು). (ನ್ಯಾಯಾಧೀಶರ ಮತ್ತು ಶ್ರೀಮಂತರ ಅಧಿಕಾರದ ನಿಲುವಂಗಿಗಳಲ್ಲಿ ಉಪಯೋಗಿಸುವ) ಅರ್ಮಿನ್ ತುಪ್ಪುಳು ಚರ್ಮ (ಅನೇಕ ವೇಳೆ, ಕಾವ್ಯದಲ್ಲಿ ಪರಿಶುದ್ಧತೆಯ ಲಕ್ಷಣವಾಗಿ ಪ್ರಯೋಗ) ; ನ್ಯಾಯಾಧೀಶನ ಅಧಿಕಾರ. (ವಂಶ ಲಾಂಛನ) ಬಿಳಿಯ ಒಡಲಿನಮೇಲೆ ಕಪ್ಪು ಚುಕ್ಕೆಗಳು. **Érmined** ಅರ್ಮಿನ್ಡ್ (ಗು.) ಅರ್ಮಿನ್ ಉಡುಪು ತೊಟ್ಟ ; ಅರ್ಮಿನಿನಿಂದ ಅಲಂಕರಿಸಿದ. ನ್ಯಾಯಾಧೀಶ ಪದವಿಗೆ, ಶ್ರೀಮಂತ ಪದವಿಗೆ, ನೇಮಿಸಿದ.

Erne ಅರ್ನ್ (ನಾ.) ಒಂದು ಜಾತಿಯ ಹದ್ದು ; ಕಡಲ ಹದ್ದು.

Eróde ಇರೋಡ್ (ಕ್ರಿ. ಸಕ.) (ಆಮ್ಲಗಳು, ಪ್ರವಾಹ, ಮೊ.) ತಿಂದು ಹಾಕು, ಕೊರೆದುಹಾಕು ; ಕ್ರಮೇಣ ಸವೆಯಿಸು ; ನಾಶಮಾಡು. **Erósion** —ಝನ್ (ನಾ.) —ವುದು ; ಸವೆತ. **Erósive** —ಸಿವ್ (ಗು.) ಸವೆಯಿಸುವ (ಗುಣವುಳ್ಳ)

Erótic ಎರಾಟಿಕ್ (ಗು., ನಾ.) ಕಾಮ ಸಂಬಂಧವಾದ ; ಪ್ರಣಯ ಸಂಬಂಧವಾದ ; ಶೃಂಗಾರದ. (ನಾ.) ಶೃಂಗಾರ ಕಾವ್ಯ ; ಪ್ರಣಯ ಗೀತೆ ; ಜಾವಡಿ.

Erótománia ಎರೋಟೊಮೇನಿಯ (ನಾ.) (ವೈ. ಶಾ.) ಕಾಮದಿಂದ ಹುಟ್ಟಿದ ವಿಷಣ್ಣತೆ, ಖಿನ್ನತೆ, ಹುಚ್ಚು ; ಕಾಮೋನ್ಮಾದ ; ಕಾಮ ಭ್ರಮೆ.

Err ಅರ್ (ಕ್ರಿ. ಅಕ.) ತಪ್ಪು (ಮಾಡು) ; ತಪ್ಪಿಹೋಗು ; (ಹೇಳಿಕೆ, ಮೊ.) ತಪ್ಪಾಗಿರು. ಪಾಪ ಮಾಡು. **Érrant** ಎರಂಟ್ (ಗು., ನಾ.) ಸಾಹಸ ಕಾರ್ಯಗಳನ್ನು ಹುಡುಕುತ್ತ ಸಂಚರಿಸು(ತ್ತಿರು)ವ (ಮು., Knight-e. ಸಂಚಾರಿಯಾದ ಸಾಹಸ ವೀರ ; ಸಾಹಸಾನ್ವೇಷಿ) ; ಸಂಚರಿಸು(ತ್ತಿರು)ವ ; ಅಲೆಯು(ತ್ತಿರು)ವ ; ದಾರಿ ಬಿಟ್ಟು ಹೋಗು(ತ್ತಿರು)ವ ; ತಪ್ಪುದಾರಿಗೆ ಹೋಗು(ತ್ತಿರು)ವ ; ಅಪಮಾರ್ಗಿಯಾದ. (ನಾ.) ಸಾಹಸ ವೀರ. **Érrancy** (ನಾ.) ; **Érrantry** (ನಾ.) ಸಾಹಸ ವೀರನ ಸ್ಥಿತಿ, ನಡತೆ, ಅಭಿಪ್ರಾಯಗಳು, ಭಾವನೆಗಳು. **Errátic** ಎರ್ರ್ಯಾಟಿಕ್ (ಗು.) ಚಲನೆಯಲ್ಲಿ ಒಂದು ಗೊತ್ತಿಲ್ಲದ ; ಅಕ್ರಮ, ಅನಿರ್ದಿಷ್ಟ, ಚಲನೆಯ. (ರೋಗದ ವಿಷಯದಲ್ಲಿ) ಒಂದು ಭಾಗದಿಂದ ಮತ್ತೊಂದಕ್ಕೆ ಚಲಿಸುವ ; ಸಂಚಾರಿ. ನಡತೆಯಲ್ಲಿ, ಪದ್ಧತಿಯಲ್ಲಿ, ಅಭಿಪ್ರಾಯದಲ್ಲಿ, ಒಂದು ಕ್ರಮ, ಗೊತ್ತು, ಇಲ್ಲದ ; ಯದ್ವಾತದ್ವಾ ; ಹುಚ್ಚಾಬಟ್ಟೆ ; ಅವ್ಯವಸ್ಥೆಯ. E. blocks (ಭೂ. ವಿ.) ಸುತ್ತುಮುತ್ತಲಿನ ಭೂಸ್ತರಗಳಿಗೆ ಅನುರೂಪವಾಗಿಲ್ಲದ ಆಗಂತುಕ ಬಂಡೆಗಳು. **Errátically** (ಕ್ರಿ. ವಿ.) ; **Errátum** ಎರೇಟಂ (ನಾ. ; ಬ. ವ. -ta) (ಮುದ್ರಣದಲ್ಲಿ ಅಥವಾ ಬರಹದಲ್ಲಿ) ತಪ್ಪು, ದೋಷ, ಅಶುದ್ಧ, ಸ್ಖಾಲಿತ್ಯ ; (ಮು., ಬ. ವ. ದಲ್ಲಿ) ಒಂದು ಪುಸ್ತಕದಲ್ಲಿ ಅದರಲ್ಲಿಯ ಅಶುದ್ಧಗಳನ್ನು ಕೊಟ್ಟಿರುವ ಪಟ್ಟಿ ; ತಪ್ಪೋಲೆ. **Erróneous** ಎರೋನಿಯಸ್ (ಗು.) ತಪ್ಪಾದ ; ಸರಿಯಿಲ್ಲದ ; ಅಶುದ್ಧ ; ದೋಷಯುಕ್ತ. **Erróneously** (ಕ್ರಿ. ವಿ.) ; **Erróneousness** (ನಾ.) ; **Érror** ಎರರ್ (ನಾ.) ತಪ್ಪು ; ದೋಷ ; ಅಶುದ್ಧ ; ಸ್ಖಾಲಿತ್ಯ [Make, commit, an e. ; Clerical e. (Cleric ನೋಡಿ)] ; ಪ್ರಮಾದ ; ಭ್ರಾಂತಿ ; ದಾರಿ ಬಿಟ್ಟು ಹೋಗುವುದು ; ಸನ್ಮಾರ್ಗ ಚ್ಯುತಿ (In e. ತಪ್ಪಾಗಿ ; ತಪ್ಪಿಹೋಗಿ ; ತಪ್ಪು ತಿಳಿವಳಿಕೆಯಿಂದ. E. of a planet ಒಂದು ಗ್ರಹದ ದೃಷ್ಟ ಸ್ಥಾನಕ್ಕೂ ಗುಣಿತ ಸ್ಥಾನಕ್ಕೂ ಇರುವ ವ್ಯತ್ಯಾಸ ; ಗ್ರಹದ ಸ್ಥಾನ ಚ್ಯುತಿ). (ನ್ಯಾ. ಶಾ.) Writ of e. ತೀರ್ಪಿನಲ್ಲಿ ತಪ್ಪಿದೆ ಎಂಬ ಕಾರಣದಿಂದ ತೀರ್ಪನ್ನು ಬದಲಾಯಿಸಬೇಕೆಂದು ತಂದ ಆಜ್ಞಾಪತ್ರ. **Errorless** (ಗು.)

Érrand ಎರಂಡ್ (ನಾ.) ಸೇವಕನು ಸಮಾಚಾರ, ಮೊ. ನ್ನು ಕೊಂಡೊಯ್ಯುವುದು ; ದೌತ್ಯ [Run, go, (on) errands ಸಮಾಚಾರ ತೆಗೆದುಕೊಂಡು ಹೋಗು]. ಪ್ರಯಾಣದ ಉದ್ದೇಶ ; ಉದ್ದೇಶ ; ಕಾರ್ಯ. **E.-boy** ಸಮಾಚಾರ ಒಯ್ಯುವ ಆಳು ; ಓಲೆಕಾರ ; ಹರಿಕಾರ.

Érrant, Errátic, Errátum, etc. Err ನೋಡಿ.

Erse ಅರ್ಸ್ (ಗು., ನಾ.) ಹೈಲೆಂಡ್ ಗೇಲಿಕ್ (ಪ್ರಾಂತ ಭಾಷೆ). (ಅಸಂ.) ಐರಿಷ್ (ಭಾಷೆ)

Erst ಅರ್ಸ್ಟ್ (ಕ್ರಿ. ವಿ.) (ಪ್ರಾಚೀ. ಪ್ರ., Also, **Érstwhile**) ಮೊದಲು ; ಪೂರ್ವದಲ್ಲಿ ; ಹಿಂದೆ.

Erubéscent ಎರುಬೆಸೆಂಟ್ (ಗು.) ಕೆಂಪೇರುವ ; (ನಾಚಿಕೆ, ಮೊ. ಗಳಿಂದ) ಮುಖ ಕೆಂಪಾಗುವ.

Eructátion ಇರಕ್ಟೇಷನ್ (ನಾ.) ತೇಗು(ವುದು) ; (ರೂಪ.) (ಮು., ಜ್ವಾಲಾಮುಖಿ) ಕಾರುವುದು.

Érudite ಎರುಡೈಟ್ (ಗು.) (ಮನುಷ್ಯರ ಮತ್ತು ಗ್ರಂಥಗಳ ವಿಷಯದಲ್ಲಿ) ಬಹುಶ್ರುತ ; ಪ್ರೌಢವಾದ ; ಪಾಂಡಿತ್ಯದ ; ವಿದ್ವತ್ತಿನ ; ವ್ಯುತ್ಪನ್ನ ; ಹೆಚ್ಚು ಓದಿದ. **Éruditely** (ಕ್ರಿ. ವಿ.) ; **Erudítion** — ಡಿಷನ್ (ನಾ.) ಪಾಂಡಿತ್ಯ ; ವಿದ್ವತ್ತು ; ವ್ಯುತ್ಪತ್ತಿ ; ವೈದುಷ್ಯ ; ಪ್ರೌಢಿಮೆ ; ಕಲಿಕೆ.

Erúpt ಇರಪ್ಟ್ (ಕ್ರಿ. ಅಕ.) (ಹಲ್ಲಿನ ವಿಷಯದಲ್ಲಿ) ಒಸಡು ಒಡೆದು ಮೂಡು ; (ಹಲ್ಲು) ಹುಟ್ಟು, ಮೊಳೆ. (ಜ್ವಾಲಾಮುಖಿ) ಹೊರಚಿಮ್ಮು, ಕಾರು. **Erúption** ಇರಪ್ಷನ್ (ನಾ.) ಚಿಮ್ಮುವಿಕೆ ; ಕಾರುವಿಕೆ (ಬಿಸಿ ನೀರಿನ ಊಟೆ, ವ್ಯಾಧಿ, ಯುದ್ಧ, ಮನಃಕ್ಷೋಭೆ, ಉಲ್ಲಾಸ, ಬುದ್ಧಿ ಚಾತುರ್ಯ —ಇವುಗಳ ವಿಷಯದಲ್ಲಿ ಸಹ). (ವೈ. ಶಾ.) (ಗುಳ್ಳೆ, ಮೊ.) ಏಳುವುದು, ತೋರುವುದು. ಗುಳ್ಳೆ ; ಸ್ಫೋಟ. (ಹಲ್ಲು) ಹುಟ್ಟುವುದು, ಮೊಳೆಯುವುದು, ಮೊಳೆತ. **Erúptional** (ಗು.) ; **Erúptive** (ಗು.) ಹೊರಚಿಮ್ಮುವ ; —ವಂತಿರುವ ; ಜ್ವಾಲಾಮುಖಿಯ ಹೊರಚಿಮ್ಮಿನ ; ಜ್ವಾಲಾಮುಖಿಯಿಂದ, ಆದ, ಎರಚಿದ, ಚಿಮ್ಮಿದ. ಗುಳ್ಳೆಯೇಳುವ ; ಸ್ಫೋಟಕಾರಿ. **Erúptively** (ಕ್ರಿ. ವಿ.) ; **Erúptiveness** (ನಾ.) ; **Eruptívity** (ನಾ.)

-ery, -ry (ಮುಂದೆ ಹೇಳುವ ಅರ್ಥಗಳನ್ನುಳ್ಳ ಪದಗಳನ್ನು ಮಾಡುವ ಉ. ಪ್ರ.) : (೧) ಸರಕುಗಳು (Drapery) ; (೨) ಉದ್ಯೋಗ ಅಥವಾ ಸ್ಥಿತಿ (Archery, Dupery) ; (೩) ಕೆಲಸ, ವ್ಯವಸಾಯ, ತಳಿಯ ಅಭಿವೃದ್ಧಿ — ಇವುಗಳ ಸ್ಥಳ (Brewery, Vinery, Piggery) ; (೪) ನಡತೆ (Foolery) ; (೫) ಸಂಬಂಧಪಟ್ಟ ಎಲ್ಲವೂ (Popery)

Erysípelas ಎರಿಸಿಪಿಲ್ಯಾಸ್ (ನಾ.) (Also, St. Anthony's fire, or the rose) ಚರ್ಮದಮೇಲೆ ಕಡುಗೆಂಪು ಬಣ್ಣವುಂಟುಮಾಡುವ ಒಂದು ಉಷ್ಣವ್ಯಾಧಿ ; ಒಂದು ಬಗೆಯ ದದ್ದುರೋಗ ; ವಿಸರ್ಪ ; ಇಸುಬು.

Erythéma ಎರಿತೀಮ (ನಾ.) ಚರ್ಮದಮೇಲೆ ಅಲ್ಲಲ್ಲ ಆಗುವ ಉರಿಯೂತ ; ಗಂದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Escaláde ಎಸ್ಕಲೇಡ್ (ನಾ.) ಏಣಿಗಳಿಂದ (ಕೋಟೆಗೋಡೆ, ಮೊ. ನ್ನು) ಹತ್ತುವುದು ; ಹಲ್ಲಾ ; ಲಗ್ಗೆ (ಹತ್ತುವುದು). **Escalator** (ನಾ.) ಪ್ರಯಾಣಿಕರನ್ನು ಮೇಲಕ್ಕೆ ಹತ್ತಿಸುವುದಕ್ಕಾಗಲಿ ಕೆಳಕ್ಕಿಳಿಸುವುದಕ್ಕಾಗಲಿ ಉಪಯೋಗಿಸುವ ಚರ ಸೋಪಾನ ; ತಿರುಗು ಮೆಟ್ಟಿಲು.

Escállop. **Scallop** ನೋಡಿ.

Escapáde ಎಸ್ಕಪೇಡ್ (ನಾ.) ಬಂಧನವನ್ನು ಹರಿದುಕೊಂಡು ಹೋಗುವುದು ; ಕಟ್ಟು ಕಿತ್ತುಕೊಂಡು ಹೋಗುವುದು ; ಮನಸ್ವೀ ನಡತೆ ; ಸ್ವೇಚ್ಛಾ ವರ್ತನೆ ; ತಪ್ಪು ನಡತೆ ; ಹುಚ್ಚುಸಾಹಸ.

Escápe ಎಸ್ಕೇಪ್ (ನಾ.) (ನಿರ್ಬಂಧ, ಅಪಾಯ, ಮೊ. ಗಳಿಂದ) ತಪ್ಪಿಸಿಕೊಳ್ಳುವುದು ; ತಪ್ಪಿಸಿಕೊಂಡು ಹೋಗುವುದು (A narrow, hair-breadth, e. ಬಹಳ ಸ್ವಲ್ಪ ಅವಕಾಶದಲ್ಲಿ, ಕೂದಲೆಳೆಯಷ್ಟರಲ್ಲಿ, ತಪ್ಪಿಸಿಕೊಂಡದ್ದು, ಪಾರಾದದ್ದು) ; ಬಿಡುಗಡೆ ; ವಿಮೋಚನೆ ; ಪಾರಾಗುವುದು. (ಅನಿಲ, ಮೊ.) ಸೋರಿಹೋಗುವುದು ; ಸೋರಿಕೆ. ಕಾಡುಸನಿಯಾಗಿ ಬೆಳೆಯುತ್ತಿರುವ ತೋಟದ ಸಸ್ಯ. ಬೆಂಕಿ ಹೊತ್ತಿ ಉರಿಯುತ್ತಿರುವ ಮನೆಯಿಂದ ಮನೆಯವರನ್ನು ಉಳಿಸುವುದಕ್ಕಾಗಿ ಉಪಯೋಗಿಸುವ ಸಾಧನ ; ಉರಿಪಾರು (ಸಾಧನ). **E.-pipe, -valve** ಆವಿ ಅಥವಾ ನೀರು ಹೊರಕ್ಕೆ ಸೋರಿಹೋಗಲು ಉಪಯೋಗವಾಗುವ ತೆರಪುಕೊಳವಿ, ಕವಾಟ. **E.-shaft** (ಇತರ ಮಾರ್ಗಗಳು ಕಟ್ಟಿಹೋದಾಗ ಗಣಿಕೆಲಸಗಾರರು ತಪ್ಪಿಸಿಕೊಳ್ಳಲು ಮಾಡಿರುವ) ಪಾರು ಗಂಡಿ. **Escapólogist** ಎಸ್ಕ್ಯಾಪಾಲೊಜಿಸ್ಟ್ (ನಾ.) ಮೈಗೆ ಸರಪಣಿ ಬಿಗಿದು, ಕೈಗಳನ್ನು ಸರಪಣಿಯಿಂದ ಭದ್ರವಾಗಿ ಕಟ್ಟಿದಲ್ಲಿ ಆ ಬಂಧನಗಳನ್ನು ಬಿಡಿಸಿಕೊಳ್ಳುವ, ಅಥವಾ ಮುಚ್ಚಿದ ಪೆಟ್ಟಿಗೆ, ಮುಚ್ಚಿದ ಗೂಡು, ಕಟ್ಟಿದ ಗೋಣಿಚೀಲ —ಇವುಗಳಲ್ಲಿ ಕೂಡಿದಾಗ ಇವುಗಳಿಂದ ಬಿಡಿಸಿಕೊಂಡು ಬರುವ ಕಣ್ಕಟ್ಟು ಆಟಗಾರ.

Escápe (ಕ್ರಿ.) (ಸೆರೆಮನೆ, ಶಿಕ್ಷೆ, ಮೊ. ಗಳಿಂದ) ಬಿಡುಗಡೆಯಾಗು ; —ಹೊಂದು ; ಬಿಡಿಸಿಕೊ. (ಆವಿ, ದ್ರವ, ಮೊ.) ಹೊರ ಸೂಸು, ಸೋರಿಹೋಗು, ತಪ್ಪಿಸಿಕೊ ; ಓಡಿಹೋಗು ; ಪಾರಾಗು. ಗಮನಕ್ಕೆ ಅಥವಾ ಜ್ಞಾಪಕಕ್ಕೆ ಬಾರದಿರು (His name had escaped me ಅವನ ಹೆಸರು ನನಗೆ ಮರತೇಹೋಗಿದ್ದಿತು). (ಮಾತು) ತಪ್ಪಿ ಬಂದುಬಿಡು ; ಬಾಯಿ ತಪ್ಪಿ ಬರು. **Escápement** (ನಾ.) ಬಿಡುಗಡೆ ದಾರಿ ; ತಪ್ಪಿಸಿಕೊಳ್ಳುವ ದಾರಿ. (ಗಡಿಯಾರದಲ್ಲಿ) ಚಾಲಕವನ್ನೂ ನಿಯಂತ್ರಕವನ್ನೂ ಸಂಬಂಧಿಸುವ ಸಲಕರಣೆ ; ಸಂಬಂಧಕ ; ನಿಯೋಜಕ.

Escárp ಎಸ್ಕಾರ್ಪ್ (ನಾ., ಕ್ರಿ. ಸಕ.) ಆಳುವೇರಿಯ ಕಟ್ಟೆದುರಿನಲ್ಲಿ ಮತ್ತು ಅದರ ತಳಗಡೆ ಹಾಕಿರುವ ಕಡಿದಾದ ಕಟ್ಟೆ ; ಈ ತೆರದ ಸ್ವಾಭಾವಿಕವಾದ ಇಳಿಜಾರು. (ಕ್ರಿ.) ಕಡಿದಾದ ಕಟ್ಟೆ ಮಾಡು ; ಇಳಿಜಾರು ಮಾಡು. **Escárpment** (ನಾ.)

Eschalót. **Shallot** ನೋಡಿ.

Eschatólogy ಎಸ್ಕಟಾಲೊಜಿ (ನಾ.) ಅಂತಿಮ ಗತಿ ಶಾಸ್ತ್ರ. (ಕ್ರೈಸ್ತ) ಸಾವು, ತೀರ್ಪು, ಸ್ವರ್ಗ, ನರಕ, —ಅಂತಿಮದ ಈ ನಾಲ್ಕಕ್ಕೆ ಸಂಬಂಧಿಸಿದ ಶಾಸ್ತ್ರ. **Eschatológical** —ಟೊಲಾ— (ಗು.)

Escheát ಎಸ್ಚೀಟ್ (ನಾ., ಕ್ರಿ.) ವಾರಸುದಾರರಿಲ್ಲದೆ ಅಥವಾ ಅಂತಿಮ ಇಷ್ಟಪತ್ರ ಬರೆಯದೆ ಸತ್ತುಹೋದಲ್ಲಿ ಅಂಥವನ ಆಸ್ತಿ ಸರ್ಕಾರಕ್ಕಾಗಲಿ ಅವನ ಕ್ಷೇತ್ರಪ್ರಭುವಿಗಾಗಲಿ ಹಿಂದಕ್ಕೆ ಸೇರಿಹೋಗುವುದು ; ಹೀಗೆ ಸೇರಿಹೋದ ಆಸ್ತಿ. (ಕ್ರಿ.) ಸರ್ಕಾರದ ವಶಪಡಿಸಿಕೊ ; (ಆಸ್ತಿಯನ್ನು, ಒಬ್ಬನಿಗೆ) ವಾರಸು, ಮೊ. ಇಲ್ಲದುದರಿಂದ, ವಹಿಸಿಬಿಡು ; ಹೀಗೆ ಆಸ್ತಿ ಹಿಂದಕ್ಕೆ ಬರು.

Eschew ಎಸ್ಚೂ (ಕ್ರಿ. ಸಕ.) ಬಿಟ್ಟುಬಿಡು ; ತೊರೆ ; ಉಳಿ ; ದೂರ ಮಾಡು ; (ಕಾರ್ಯ, ನಡತೆ, ಯಾವುದಾದರೂ ಆಹಾರವನ್ನು, ಮೊ. ನ್ನು) ತ್ಯಜಿಸು, ವರ್ಜಿಸು, ಸೇವಿಸದಿರು.

Escländre (F) ಎಸ್ಕ್ಲಾಂಡ್ರ್ (ನಾ.) ನಾಚಿಕೆಗೇಡು ಕೆಲಸ, ಪುಕಾರು ; ಗುಲ್ಲು.

Éscort ಎಸ್ಕಾರ್ಟ್ (ನಾ.), **Escórt** (ಕ್ರಿ. ಸಕ.) ಮನುಷ್ಯರಿಗೆ, ಸಾಮಾನು, ಮೊ. ಕ್ಕೆ, ಕಾವಲಾಗಿ ಹೋಗುವ ಆಯುಧ ಧರಿಸಿದವರ ತಂಡ ; ಮೈಗಾವಲು ; ಬೆಂಗಾವಲು ; ಒಬ್ಬನ ಪ್ರಯಾಣದಲ್ಲಿ ಅವನಿಗೆ ಮರ್ಯಾದೆಗಾಗಿ, ರಕ್ಷಣೆಗಾಗಿ, ಅಥವಾ ಮಾರ್ಗ ತೋರಿಸುವುದಕ್ಕಾಗಿ, ಜೊತೆಯಲ್ಲಿ ಹೋಗುವವನು(ರು) ; ಜೊತೆ ಜನ. (ಕ್ರಿ.) ಬೆಂಗಾವಲಾಗಿ, ಮಾರ್ಗದರ್ಶಕನಾಗಿ, ಮರ್ಯಾದೆಗಾಗಿ, ಜೊತೆಯಲ್ಲಿ ಹೋಗು.

Escríbe ಈಸ್ಕ್ರೈಬ್ (ಕ್ರಿ. ಸಕ.) (ಗಣಿತ) ತ್ರಿಕೋಣದ ಒಂದು ಬಾಹುವನ್ನು ಹೊರಗಡೆಯೂ, ಲಂಬಿಸಿದ ಇತರ ಎರಡು ಬಾಹುಗಳನ್ನು ಒಳಗಡೆಯೂ ತಾಕುವಂತೆ (ವೃತ್ತವನ್ನು) ರಚಿಸು : ಬಹಿರ್ವೃತ್ತ ರಚಿಸು.

Escritoíre (F) ಎಸ್ಕ್ರಿಟ್ವಾರ್ (ನಾ.) ಕಾಗದ ಕಡ್ಡಿಗಳನ್ನಿಡುವುದಕ್ಕಾಗಿ ಸೆಳೆಖಾನೆ, ಮೊ. ಗಳನ್ನುಳ್ಳ ಬರೆಯುವ ಮೇಜು ; ಲೇಖನ ಸಾಮಗ್ರಿ ಮೇಜು ; ಬರವಣಿಗೆಯ ಮೇಜು.

Ésculent ಎಸ್ಕ್ಯುಲೆಂಟ್ (ಗು., ನಾ.) ತಿನ್ನಬಹುದಾದ (ವಸ್ತು) ; ಆಹಾರ ಯೋಗ್ಯ (ವಸ್ತು)

Escútcheon ಎಸ್ಕಚನ್ (ನಾ.) ವಂಶಲಾಂಛನ ಕೆತ್ತಿದ ಗುರಾಣಿ (A blot on his e. ಅವನ ಗೌರವಕ್ಕೆ, ಕೀರ್ತಿಗೆ, ಯಶಸ್ಸಿಗೆ, ಕಳಂಕ ; ಕುಲ ಕಳಂಕ). ಹಡಗಿನ ಹೆಸರು ಹಾಕಿರುವ ಅದರ ಹಿಂಭಾಗದ ಮಧ್ಯ ಪ್ರದೇಶ. ಬೀಗದಕೈ ಕಂಡಿಯ ಕೀಲುಮುಚ್ಚಳ.

Éskar, Ésker ಎಸ್ಕರ್ (ನಾ.) (ಭೂ. ವಿ.) ಐರ್ಲೆಂಡಿನ ನದಿಕಣಿವೆಗಳಲ್ಲಿಯ, ನೀರ್ಗಲ್ಲಿನ ಯುಗಾನಂತರದ, ಪುಡಿಕಲ್ಲುಮಣ್ಣಿನ ದಿಬ್ಬ.

Eskimó, -quimaú ಎಸ್ಕಿಮೋ (ನಾ. ; ಬ. ವ. -moes, -maux —ಮೋಸ್) ಉತ್ತರ ಅಮೆರಿಕದ ಒಂದು ಕುಲದವನು.

Esotéric ಎಸೊಟೆರಿಕ್ (ಗು.) (ಮತ ತತ್ತ್ವ, ಮೊ. ಗಳ ವಿಷಯದಲ್ಲಿ) ಪ್ರವೇಶವುಳ್ಳವನಿಗೆ ಅಥವಾ ದೀಕ್ಷೆ ಪಡೆದವನಿಗೆ ಮಾತ್ರ ಉದ್ದೇಶಿಸಿದ. (ಶಿಷ್ಯರ ವಿಷಯದಲ್ಲಿ) ಪ್ರವೇಶ ಪಡೆದ ; ಪ್ರವಿಷ್ಟ ; ದೀಕ್ಷೆ ಪಡೆದ ; ದೀಕ್ಷಿತ ; ಉಪದಿಷ್ಟ. ಗೂಢ ; ಗೋಪ್ಯ ; ರಹಸ್ಯ ; ಗುಹ್ಯಾದ. **Esotérical** (ಗು.) ; **Esotérically** (ಕ್ರಿ. ವಿ.)

Espálier ಎಸ್ಪ್ಯಾಲಿಯರ್ (ನಾ.) ಗಿಡಗಳೂ ಪೊದರುಗಳೂ ಹೊದ್ದಿ ಬೆಳೆಯುವಂತೆ ಕಟ್ಟುವ ಚೌಕಟ್ಟು ; ಹೀಗೆ ಕಟ್ಟಿ ಬೆಳೆಸಿದ ಗಿಡ.

Espárto ಎಸ್ಪಾರ್ಟೊ (ನಾ.) ಕಾಗದ ತಯಾರುಮಾಡುವುದಕ್ಕಾಗಿ ಸ್ಪೆಯ್ನಿನಿಂದ ಆಮದುಮಾಡುವ ಕೆಲವು ತೆರದ ಹುಲ್ಲು (= E. grass)

Espécial ಎಸ್ಪೆಷಲ್ (ಗು.) ಪ್ರಮುಖ ; ಮುಖ್ಯ ; ಪ್ರತ್ಯೇಕ ; ವಿಶೇಷ ; ವೈಶಿಷ್ಟ್ಯವುಳ್ಳ (My e. friend ನನ್ನ ಮುಖ್ಯ ಸ್ನೇಹಿತ. Thing of e. importance ವಿಶೇಷ ಪ್ರಾಮುಖ್ಯತೆಯುಳ್ಳದ್ದು). ಒಂದು ಗೊತ್ತಾದ ; ನಿರ್ದಿಷ್ಟ. ಮುಖ್ಯವಾಗಿ ಒಂದು ವಿಷಯಕ್ಕೆ ಮಾತ್ರ ಸಂಬಂಧಿಸಿದ (For your e. benefit ನಿಮ್ಮ ಪ್ರಯೋಜನಕ್ಕಾಗಿ ಮಾತ್ರ). **Espécially** (ಕ್ರಿ. ವಿ.)

Esperánto ಎಸ್ಪೆರ್ಯಾಂಟೊ (ನಾ.) ಎಲ್ಲಾ ಜನಾಂಗಗಳವರಿಗೂ ಸಾಮಾನ್ಯ ಭಾಷೆಯಾಗಿರಲೆಂದು ರಚಿಸಿದ ಒಂದು ಕೃತಕ ಭಾಷೆ ; ಕಾಲ್ಪನಿಕ ಸಾರ್ವತ್ರಿಕ ಭಾಷೆ ; 'ಎಸ್ಪೆರಾಂಟೊ '.

Espíal ಎಸ್ಪೈಅಲ್ (ನಾ.) ಗೂಢಚಾರನಾಗಿರುವುದು ; ಬೇಹು ಕಾಯುವುದು. ವೀಕ್ಷಣೆ ; ನೋಟ ; ದೃಷ್ಟಿ. **Éspionage** ಎಸ್ಪಿಯೊನೆಜ್, **Espionáge** —ನಾಜ್ (ನಾ.) ಗೂಢಚಾರತನ ; ಬೇಹು ; ಬೇಹು ಕಾಯುವುದು ; ಬೇಹುಕಾರರನ್ನು ಹಾಕುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Esplanáde ಎಸ್‌ಪ್ಲನೇಡ್ (ನಾ.) ಸಮತಲ ಪ್ರದೇಶ ; ಸಮ ಭೂಮಿ (ಮು., ಸಾರ್ವಜನಿಕ ವಿಹಾರಕ್ಕಾಗಿ) ; ಕೋಟೆಯನ್ನೂ ಪೇಟೆಯನ್ನೂ ಪ್ರತ್ಯೇಕಿಸುವ ಸಮತಲ ಪ್ರದೇಶ ; ಕೋಟೆಮೈದಾನ ; ತೀರದ ರಸ್ತೆ.

Espoúse ಎಸ್ಪೌಸ್ (ಕ್ರಿ. ಸಕ.) (ಸಾ., ಪುರುಷನ ವಿಷಯದಲ್ಲಿ) ಮದುವೆಯಾಗು ; (ಹೆಣ್ಣನ್ನು) ಮದುವೆ ಮಾಡಿಕೊಡು. (ತತ್ತ್ವ, ಪಕ್ಷ, ಮೊ. ನ್ನು) ಹಿಡಿ, ಸ್ವೀಕರಿಸು, ಅಂಗೀಕರಿಸು, ಅವಲಂಬಿಸು, ವಹಿಸು, ಸಮರ್ಥಿಸು. **Espoúsal** (ನಾ. ; ಸಾ., ಬ. ವ. ದಲ್ಲಿ) ಮದುವೆ ; ನಿಶ್ಚಿತಾರ್ಥ. (ರೂಪ.) ಒಂದು ಪಕ್ಷ, ಮೊ. ನ್ನು ಸಮರ್ಥಿಸುವುದು, ಅನುಮೋದಿಸುವುದು, ಅಂಗೀಕರಿಸುವುದು ; ಸಮರ್ಥನೆ ; ಅನುಮೋದನೆ ; ಅಂಗೀಕಾರ.

Esprít ಎಸ್ಪ್ರೀ (ನಾ.) ಚಟುವಟಿಕೆ ; ಚೂಟಿ ; ಗೆಲವು. **E. de corps** — ಡ ಕೋ(ಕಾ)ರ್ (ನಾ.) ತಾನು ಸೇರಿರುವ ಸಂಘ, ವೃತ್ತಿ, ಮೊ. ಗಳ ಘನತೆಯಮೇಲೂ ಹಿತದಮೇಲೂ ಇರಬೇಕಾದ ದೃಷ್ಟಿ, ಅಭಿಮಾನ. ಸಂಘಬುದ್ಧಿ ; ಸಂಸ್ಥಾಬುದ್ಧಿ. **E. fort** —ಫ಼ಾರ್ (ನಾ.) ಗಟ್ಟಿ ಮನಸ್ಸಿನವನು ; ದೃಢಶಾಲಿ ; ಸ್ವತಂತ್ರಾಭಿಪ್ರಾಯವುಳ್ಳವನು.

Espý ಎಸ್ಪೈ (ಕ್ರಿ. ಸಕ.) ಕಾಣು ; ನೋಡು ; (ತಪ್ಪು, ಮೊ. ನ್ನು) ಕಂಡುಹಿಡಿ.

Esquimaú. **Eskimo** ನೋಡಿ.

Esquíre ಎಸ್‌ಕ್ವೈಅರ್ (ಸಂಕ್ಷಿಪ್ತ : Esq.) (ನಾ.) (ಹುಟ್ಟು, ಸ್ಥಾನ, ವಿದ್ಯೆ, ಮೊ. ಗಳಿಂದ) ದೊಡ್ಡಮನುಷ್ಯನೆಂದು ಪರಿಗಣಿತನಾದವನ ಹೆಸರಿನ ಮುಂದೆ (ಮು., ಕಾಗದ ಪತ್ರಗಳ ವಿಳಾಸದಲ್ಲಿ) ಬರೆಯುವ ಗೌರವದ ಮಾತು ('ಶ್ರೀಮಾನ್' ಎಂಬಂತೆ). (ಪ್ರಾಚೀ. ಪ್ರ.) = Squire.

Ess ಎಸ್ (ನಾ.) S ಅಕ್ಷರ ; S ಆಕಾರದ ವಸ್ತು. Collar of esses ಬ್ರಿಟನ್ನಿನ ಲಂಕಾಸ್ಟರ್ ಮನೆತನದ ಚಿಹ್ನೆಯಾಗಿದ್ದ ಕೊರಳ ಪಟ್ಟಿ (ಈಗಲೂ ಕೆಲವು ಅಧಿಕಾರಿಗಳ ಉಡುಪಿನಲ್ಲಿರುವುದು)

Éssay ಎಸೇ (ನಾ.), **Essaý** (ಕ್ರಿ.) ಪ್ರಯತ್ನ. ಸಣ್ಣ ಗದ್ಯಲೇಖನ ; ಪ್ರಬಂಧ ; ಪ್ರಸಂಗ ; ಲಘು ಲೇಖನ. (ಕ್ರಿ.) ಪ್ರಯತ್ನಿಸು; ಯತ್ನಿಸು ; (ಮನುಷ್ಯನನ್ನು, ವಸ್ತುವನ್ನು) ಪರೀಕ್ಷಿಸು ; ಒರೆ ಹಚ್ಚು.

Ésse ಎಸಿ (ನಾ.) ಅಸ್ತಿತ್ವ ; ವಾಸ್ತವಿಕತೆ ; ಸತ್ತಾ ; ಸಾರಭೂತ ಧರ್ಮ.

Éssence ಎಸೆನ್ಸ್ (ನಾ.) ಸತ್ತ್ವ ; (ಆಧ್ಯಾತ್ಮಿಕ ಅಥವಾ ಅಭೌತಿಕ) ಸತ್ ; ಮೂಲ ತತ್ತ್ವ ; ಸಾರ. ನೈಸರ್ಗಿಕ, ಮೂಲ, — ಸ್ವಭಾವ ; ಅವಶ್ಯ ಗುಣ ಅಥವಾ ಅಂಶ. ಬಟ್ಟಿಯಿಳಿಸುವುದು, ಮೊ. ಗಳಿಂದ ಬಂದ ಸಾರ ; ಸಾರಾಂಶ ; ತಿರುಳು (ರೂಪ. ಸಹ). ಸುಗಂಧ ; ಸುವಾಸನೆ. **Éssenced** (ಗು.) ; **Esséntial** ಎಸೆನ್ಷಲ್ (ಗು., ನಾ.) ಸಾರಭೂತವಾದ ; ತತ್ತ್ವವಾದ. ಆವಶ್ಯಕ ; ಅಗತ್ಯ [E. proposition ಒಂದು ವಸ್ತುವಿನ ಲಕ್ಷಣದಲ್ಲಿ ಗರ್ಭಿತವಾಗಿರುವ ಅರ್ಥವನ್ನು ವಿವರಿಸಿ ಹೇಳುವ ಪ್ರತಿಜ್ಞಾ ವಾಕ್ಯ]. [E. character (ವಂಶ, ಜಾತಿ, ಮೊ. ಗಳ ವಿಷಯದಲ್ಲಿ ಒಂದು ವಂಶ, ಮೊ. ಕ್ಕೂ ಅದರೊಡನೆ ಸೇರಿಸಿದ ಮೇಲಿನ ತರಗತಿಯವಕ್ಕೂ ಇರುವ ವ್ಯತ್ಯಾಸಗಳನ್ನು ತೋರಿಸುವ) ವಿಶಿಷ್ಟ ಲಕ್ಷಣ. E. oil ಗೊತ್ತಾದ ವಾಸನೆ, ಮೊ. ಗಳುಳ್ಳ ಚಂಚಲ ತೈಲ ; ಸುಗಂಧ ತೈಲ]. (ನಾ.) ಆವಶ್ಯಕವಾದ ಅಂಶ. **Esséntially** (ಕ್ರಿ. ವಿ.) ; **Essentiálity** —ಷಿಆ್ಯ— (ನಾ.)

Estáblish ಎಸ್ಟ್ಯಾಬ್ಲಿಷ್ (ಕ್ರಿ. ಸಕ.) (ಸರ್ಕಾರ, ವ್ಯಾಪಾರ ಸಂಸ್ಥೆ, ಸ್ಥಾನ, ಮೊ. ನ್ನು) ಸ್ಥಿರವಾಗಿರುವಂತೆ ಸ್ಥಾಪಿಸು. (ಅಧಿಕಾರ, ಮೊ. ಗಳಲ್ಲಿ) ನಿಲ್ಲಿಸು, ನಿಲ್ಲು ; ನೆಲಸು ; ನೆಲೆಗೊಳಿಸು. (ಪದ್ಧತಿ, ರೂಢಿ, ನಂಬಿಕೆ, ಮೊ. ನ್ನು) ಸ್ಥಿರಪಡಿಸು, ಊರ್ಜಿತಗೊಳಿಸು. (ಕ್ರೈಸ್ತ ಧರ್ಮ ಸಂಸ್ಥೆಯನ್ನು) ಕಾನೂನಿಗನುಸಾರವಾಗಿ ದೇಶೀಯವನ್ನಾಗಿ ಮಾಡು. **Estáblishment** (ನಾ.) ಸ್ಥಾಪಿಸುವುದು ; ಸ್ಥಾಪನೆ. ಒಂದು ಉದ್ದೇಶಕ್ಕಾಗಿ ನಿಯಮಿಸಿಕೊಂಡಿರುವ, ವ್ಯವಸ್ಥೆಗೊಳಪಟ್ಟ, ಜನ ತಂಡ : ಸಿಬ್ಬಂದಿ [Peace e. ಶಾಂತಿ ಕಾಲದ (ಕಡಮೆಯಾದ) ಸೈನ್ಯ ಸಿಬ್ಬಂದಿ. War e. ಯುದ್ಧ ಕಾಲದ (ಹೆಚ್ಚಾದ) ಸೈನ್ಯಸಿಬ್ಬಂದಿ]. ಸಾರ್ವಜನಿಕ ಸಂಸ್ಥೆ ; ವ್ಯಾಪಾರ ಸಂಸ್ಥೆ. ಮನೆ ; ಸಂಸಾರ (Separate e. ಉಪಪತ್ನಿಯುಳ್ಳವನ ಪ್ರತ್ಯೇಕ ಸಂಸಾರ). **Establishmentárian** (ಗು., ನಾ.) ಸರ್ಕಾರ ಸ್ಥಾಪಿತ ಧರ್ಮ ಸಂಸ್ಥೆಯ (ಅನುಯಾಯಿ)

Estáte ಎಸ್ಟೇಟ್ (ನಾ.) ಸ್ಥಿತಿ ; ಅವಸ್ಥೆ ; ನೆರೆ ; ಇರವು. (ಪ್ರಾಚೀ. ಪ್ರ.) ಸ್ಥಾನ ; ದಶೆ ; ದರ್ಜೆ ; ಅಂತಸ್ತು ; ಪದವಿ (The holy e. of matrimony ದಾಂಪತ್ಯದ ಪವಿತ್ರ ಸ್ಥಿತಿ, ಸ್ಥಾನ. Man's e. ಪ್ರಬುದ್ಧ ದಶೆ). ರಾಜ್ಯಾಧಿಕಾರದಲ್ಲಿ ಭಾಗವಹಿಸುವ ಜನತೆಯ ತರಗತಿ, ವರ್ಗ [The Three Estates (in England) ಧಾರ್ಮಿಕ ಪ್ರಭುಗಳು, ಲೌಕಿಕ ಪ್ರಭುಗಳು, ಜನ ಸಾಮಾನ್ಯರು. Fourth e. ವೃತ್ತ ಪತ್ರಿಕೆಗಳು]. ಆಸ್ತಿಯ ಹಕ್ಕು (Real e. ಸ್ಥಿರಾಸ್ತಿ ; Personal e. ಚರಾಸ್ತಿ). ಸ್ಥಿರಾಸ್ತಿ (E. agent ಸ್ಥಿರಾಸ್ತಿಯ ವಿಚಾರಣಕರ್ತ. ಹೊಲ ಮನೆಗಳ ವ್ಯಾಪಾರದಲ್ಲಿ ಮಧ್ಯಸ್ಥ ಮಾಡುವವನು : ಸ್ವತ್ತಿನ ದಳ್ಳಾಳಿ). ಒಬ್ಬನ ಒಟ್ಟು ಲೇಣೆದೇಣೆಗಳು, ಆಸ್ತಿ ಪಾಸ್ತಿಗಳು. **Estáted** (ಗು.) ಆಸ್ತಿಯುಳ್ಳ.

Esteém ಎಸ್ಟೀಮ್ (ಕ್ರಿ. ಸಕ., ನಾ.) ಗೌರವದಿಂದ ಕಾಣು ; ದೊಡ್ಡದೆಂದೆಣಿಸು ; ಎಣಿಸು ; ಪರಿಗಣಿಸು [I shall e. it (as) a favour ಉಪಕಾರವೆಂದೆಣಿಸುವೆನು]. (ನಾ.) ಮಾನ್ಯತೆ ; ಗೌರವ ; ಗಣ್ಯತೆ ; ಬೆಲೆ ; ಸದಭಿಪ್ರಾಯ. **Éstimable** ಎಸ್ಟಿಮಬ್‌ಲ್ (ಗು.) ಗೌರವಾರ್ಹ ; ಮಾನ್ಯ ; ಗಣ್ಯ.

Éster ಎಸ್ಟರ್ (ನಾ.) (ರ. ವಿ.) ಯಾವುದಾದರೂ ಆಮ್ಲವೂ ಮದ್ಯಸಾರವೂ ಸೇರಿದ ಪದಾರ್ಥದಲ್ಲಿ ಜಲಾಂಶವನ್ನು ಕಳೆದು ಮಂದಯಿಸಿದುದರಿಂದ ಆದ ಸಂಯುಕ್ತ.

Éstimate ಎಸ್ಟಿಮೆಟ್ (ನಾ.), —ಮೇಟ್ (ಕ್ರಿ. ಸಕ.) (ಸಂಖ್ಯೆ, ಮೊತ್ತ, ಮೊ. ಗಳ) ಸರಿಸುಮಾರು ಅಭಿಪ್ರಾಯ, ಗಣನೆ ; ಅಂದಾಜು ; ಅಂದಾಜು ಸಂಖ್ಯೆ, ಮೊತ್ತ. (The Estimates ಪಾರ್ಲಿಮೆಂಟಿಗೆ ಪ್ರತಿ ವರ್ಷವೂ ಒಪ್ಪಿಸುವ ರಾಜ್ಯಾಡಳಿತದ ವೆಚ್ಚದ ಅಂದಾಜು). (ಒಂದು ಗೊತ್ತಾದ ಕೆಲಸವನ್ನು ತಾನು ಮಾಡುವುದಕ್ಕಾಗಿ ಗುತ್ತಿಗೆದಾರನು ಕೊಡುವ) ಅಂದಾಜು ಪಟ್ಟಿ. (ನಡತೆ ಅಥವಾ ಗುಣಗಳ ವಿಷಯದಲ್ಲಿ) ಅಭಿಪ್ರಾಯ. (ಕ್ರಿ.) ಅಂದಾಜು ಮಾಡು ; ಬೆಲೆ ಕಟ್ಟು. ಅಭಿಪ್ರಾಯಪಡು ; ಎಣಿಸು. **Éstimative** —ಮಟಿವ್ (ಗು.) ಅಂದಾಜು ಮಾಡಲಾಗುವ ; ಅಂದಾಜು ಮಾಡುವ. **Éstimator** —ಮೇ— (ನಾ.) ಅಂದಾಜುಗಾರ. **Estimátion** (ನಾ.) (ಅರ್ಹತೆಯ, ಬೆಲೆಯ) ಅಭಿಪ್ರಾಯ, ಎಣಿಕೆ, ಗಣನೆ (In my e. ನನ್ನ ಅಭಿಪ್ರಾಯದಲ್ಲಿ). ಗಣ್ಯತೆ ; ಗೌರವ (Hold in e. ಗಣ್ಯವಾಗಿ ಭಾವಿಸು. Be in e. ಗಣ್ಯವಾಗಿರು)

Éstival, etc. **Aestival** ನೋಡಿ.

Estóp ಎಸ್ಟಾಪ್ (ಕ್ರಿ. ಸಕ.) (ನ್ಯಾ. ಶಾ.) ತಡೆ ; ಅಡ್ಡಿಮಾಡು ; ಪ್ರತಿಬಂಧಿಸು ; ನಿರೋಧಿಸು ; ಬಾಯಿ ಕಟ್ಟು. **Estóppage** —ಪೆಜ್ (ನಾ.) ; **Estóppel** —ಪೆಲ್ (ನಾ.) ಒಂದು ಮಾರ್ಗ ಹಿಡಿಯಲು ತನ್ನ ಹಿಂದಿನ ವರ್ತನೆಯಿಂದ ತಡೆ ಹೊಂದುವುದು, ಪ್ರತಿಬಂಧವಾಗುವುದು ; ಸ್ವಾರ್ಜಿತ, ಸ್ವಯಂಕೃತ, — ಪ್ರತಿಬಂಧ ; ಪ್ರತಿಬಂಧ ; ಅಡ್ಡಿ ; ಅಡಚಣೆ ; ನಿರೋಧ.

Estráde ಎಸ್ಟ್ರಾಡ್ (ನಾ.) ಜಗಲಿ ; ವೇದಿಕೆ.

Estránge ಎಸ್ಟ್ರೇಂಜ್ (ಕ್ರಿ. ಸಕ.) ಮನಸ್ಸು ಕೆಡಿಸು ; ವಿಮುಖಗೊಳಿಸು; ವಿಶ್ವಾಸ ಕಳೆ ; ಅಗಲಿಸು. **Estrángement** (ನಾ.)

Estreát ಎಸ್ಟ್ರೀಟ್ (ಕ್ರಿ. ಸಕ.) (ನ್ಯಾ. ಶಾ.) (ಜುಲ್ಮಾನೆ, ಜಾಮೀನು ಬಿಡುಗಡೆ, ಮೊ. ಗಳ) ದಾಖಲೆಯೆತ್ತಿ ಅದನ್ನು ಜಾರಿಗೆ ತರಲು, ಸಂಬಂಧಪಟ್ಟ ಕೋರ್ಟಿಗೆ ಹಿಂದಕ್ಕೆ ಕಳುಹಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Éstuary ಎಸ್ಚ್ಯುಅರಿ (ನಾ.) (ದೊಡ್ಡ ನದಿಯ) ಅಳಿವೆ. **Éstuarine** —ರಿನ್, —ರೈನ್ (ಗು.), **Estuárian** —ಏರಿಯನ್ (ಗು.), **Estuárial** (ಗು.) ಅಳಿವೆಯ.

Esúrient ಇಸ್ಯೂರಿಯೆಂಟ್ (ಗು.) (ಹಾಸ್ಯವಾಗಿ) ಹಸಿದ; ದರಿದ್ರನಾಗಿಯೂ ಆಶಾಪಾತಕನಾಗಿಯೂ ಇರುವ; ದುರಾಶೆಯ. **Esúrience, -ency** (ನಾ.)

Éta ಈ(ಏ)ಟ (ನಾ.) ಗ್ರೀಕ್ ವರ್ಣಮಾಲೆಯ ಏಳನೆಯ ಅಕ್ಷರ (H, η). **Étacism** ಏಟಸಿಸ್ಮ್ (ನಾ.) ಗ್ರೀಕ್ 'ಏಟ' ವರ್ಣವನ್ನು 'ಏ' ಎಂದು ಉಚ್ಚರಿಸುವುದು.

Etat-majór (F) ಏಟಾ ಮಾಝಾರ್ (ನಾ.) (ಸೇನೆಯ) ಸಿಬ್ಬಂದಿ, ಅಧಿಕಾರಿ ವರ್ಗ, ಕಚೇರಿ.

Et cétera, Etcétera ಎಟ್ ಸೆಟೆರ (ಪದಪುಂಜ; ನಾ.; ಬ. ವ. -as; ಸಂಕ್ಷಿಪ್ತ: etc., &c.) ಮೊದಲಾದದ್ದು; ಮುಂತಾದದ್ದು; ಇತ್ಯಾದಿ (I remain yours etc.). (ನಾ., ಬ. ವ. ದಲ್ಲಿ) ಹೆಚ್ಚಿಗೆ; ಹೆಚ್ಚು ವಿಷಯಗಳು, ವಸ್ತುಗಳು; ಚಿಲ್ಲರೆ ಸಾಮಾನುಗಳು, ವಿಷಯಗಳು.

Etch ಎಚ್ (ಕ್ರಿ.) ತಗಡು, ಮೊ. ಗಳ ಮೇಲೆ ಆಮ್ಲ, ಮೊ. ತಿಂದು ತುಕ್ಕುಮಾಡುವ ಪದಾರ್ಥದಿಂದ ಕೊರೆದು (ಮು., ಅಂಥ ತಗಡಿನಿಂದ ಮುದ್ರಣ ಮಾಡುವುದಕ್ಕಾಗಿ) ಪ್ರತಿರೂಪ ತಯಾರಿಸು. (ಚಿತ್ರ, ಮೊ. ನ್ನು ದ್ರಾವಕ, ಮೊ. ಗಳಿಂದ ತಿನ್ನಿಸಿ) ಕೊರೆ, ಕೆತ್ತು. **Étching** (ನಾ.) ಕೊರೆತ; ಕೊರೆದ ತಗಡಿನಿಂದ ತೆಗೆದ ಪ್ರತಿ. **E.-needle** ಕೊರೆಸೂಜಿ; ಕೆತ್ತುವುಳಿ.

Etérnal ಇಟರ್ನಲ್ (ಗು.) ಎಂದೆಂದಿಗೂ ಇರುವ; ಶಾಶ್ವತ; ನಿತ್ಯ; ಅನಂತ [E. life, punishment. The E. ಸನಾತನ ಪುರುಷ; ದೇವರು. E. city (City ನೋಡಿ)]. (ಬಳ. ಮಾ.) ನಿರಂತರ; ಸಂತತ; ಅವಿಚ್ಛಿನ್ನ; ಪದೇ ಪದೇ; ಅಡಿಗಡಿಗೆ. These e. bickerings ಎಡೆಬಿಡದ ಈ ಕಾದಾಟಗಳು. The e. triangle ಎರಡು ಗಂಡೂ ಒಂದು ಹೆಣ್ಣೂ ಅಥವಾ ಎರಡು ಹೆಣ್ಣೂ ಒಂದು ಗಂಡೂ — ಹೀಗೆ ಮೂವರಿಗೆ ಸಂಬಂಧಪಟ್ಟ ಪ್ರಣಯ ಸಮಸ್ಯೆ: ಸಂತತ ತ್ರಿಕೋನ ಸಮಸ್ಯೆ. **Etérn(al)ize** (ಕ್ರಿ. ಸಕ) ; **Etérnally** (ಕ್ರಿ. ವಿ.) ; **Etérnity** (ನಾ.) ಶಾಶ್ವತತೆ; ನಿತ್ಯತೆ; ಅಳಿಯದ ಕೀರ್ತಿ; ಶಾಶ್ವತ ಯಶಸ್ಸು. (ಬ. ವ. ದಲ್ಲಿ) ಶಾಶ್ವತ ತತ್ತ್ವಗಳು, ಸತ್ಯಗಳು; ನಿತ್ಯಗಳು; ಅನಂತ ಕಾಲ (ಮು., ಮುಂದಿನದು). ಪರಲೋಕ ಜೀವನ.

Etésian ಎಟೀಷಿಯನ್ (ಗು.) E. winds ಮೆಡಿಟರೇನಿಯನ್ ಸಮುದ್ರದಲ್ಲಿ ಬೇಸಗೆಯಲ್ಲಿ ಸುಮಾರು ೪೦ ದಿನ ವಾಯುವ್ಯ ದಿಕ್ಕಿನಿಂದ ಬೀಸುವ ಮಾರುತ, ಗಾಳಿ.

Éther ಈತರ್ (ನಾ.) ಶುದ್ಧಾಕಾಶ; ಮೇಘಗಳಿಂದಾಚಿನ ಪ್ರದೇಶ; ಆಕಾಶ. (ಭೌ. ವಿ.) ಎಲ್ಲ ಅವಕಾಶವನ್ನೂ ವಾಯು ಮತ್ತು ಇತರ ವಸ್ತುಕಣಗಳ ಮಧ್ಯೇ ಇರುವ ಛಿದ್ರಗಳನ್ನೂ ತುಂಬಿಕೊಂಡು, ಬೆಳಕಿನ ಕಿರಣಗಳು ಹಾದುಹೋಗಲು ಮಧ್ಯವರ್ತಿಯಾದ, ಸ್ಥಿತಿಸ್ಥಾಪಕತ್ವವುಳ್ಳ, ಸೂಕ್ಷ್ಮ ಪ್ರವಾಹಿ ದ್ರವ್ಯ: ಆಕಾಶ ದ್ರವ್ಯ. (ರ. ವಿ.) ಗಂಧಕಾಮ್ಲ, ಮೊ. ಆಮ್ಲಗಳು ಮದ್ಯಸಾರದಮೇಲೆ ಕಾರ್ಯ ನಡಸಿ ಜನಿಯಿಸುವ ನಿರ್ವರ್ಣವಾದ, ಲಘುವಾದ, ಚಂಚಲ ದ್ರವ (ಇಂದ್ರಿಯ ಸುಪ್ತಿಕಾರಕ): 'ಈತರು.' **Étheric** (ಗು.) ಈತರಿನ; ಆಕಾಶದ. **Ethéreal, -ial** ಇಥೀರ್ಯಿಯಲ್ (ಗು.) ಈತರ್ ಸ್ವಭಾವದ, ಈತರಿನಂಥ; ಆಕಾಶದ; ವಾಯುವಿನಂಥ; ಹಗುರ; ಸೂಕ್ಷ್ಮ. ಸ್ವರ್ಗೀಯ; ಅಪ್ರಾಪಂಚಿಕ ವಸ್ತುವಿನ ಸೂಕ್ಷ್ಮತೆ, ರೀತಿ, ಅಥವಾ ತೋರ್ಕೆ, ಉಳ್ಳ; ಅಪಾರ್ಥಿವ; ಅಧೌತ (E. oil ಚಂಚಲ ತೈಲ). **Ethereálity** —ಆ್ಯಲಿಟಿ (ನಾ.); **Etherealization** —ಯಲೈ— (ನಾ.); **Ethérealize** (ಕ್ರಿ. ಸಕ.); **Ethéreally** (ಕ್ರಿ. ವಿ.); **Étherification** (ನಾ.); **Étherify** (ಕ್ರಿ. ಸಕ.); **Étherize** (ಕ್ರಿ. ಸಕ.) ರೋಗಿಯನ್ನು ಈತರಿನ ಸುಪ್ತಿ ಪ್ರಭಾವಕ್ಕೆ ಒಡ್ಡು. **Etherizátion** (ನಾ.)

Éthic ಎತಿಕ್ (ಗು., ನಾ.), **Éthical** (ಗು.) ನೀತಿವಿಷಯದ; ನೀತಿಶಾಸ್ತ್ರದ; ನೈತಿಕ (E. dative ಉಕ್ತವಿಷಯದಲ್ಲಿ ಪರೋಕ್ಷ ಸಂಬಂಧವುಳ್ಳವನನ್ನು ಸೂಚಿಸುವ ಚತುರ್ಥೀ ವಿಭಕ್ತಿ: ಉದಾ., Beat me that dog ನನಗಾಗಿ ಆ ನಾಯಿಯನ್ನು ಹೊಡೆ). (ನಾ., ಬ. ವ. ದಲ್ಲಿ) ನೀತಿಶಾಸ್ತ್ರ; ನೀತಿಶಾಸ್ತ್ರ ಗ್ರಂಥ; ನೀತಿ ತತ್ತ್ವಗಳು, ನಿಯಮಗಳು; ನಡೆವಳಿಯ ನಿಯಮಗಳು. **Éthically** (ಕ್ರಿ. ವಿ.); **Éthicize**—ಸೈಸ್ (ಕ್ರಿ. ಸಕ.)

Ethiópian ಈತಿಯೋಪಿಯನ್ (ಗು., ನಾ.) ಈತಿಯೋಪಿಯಾ ದೇಶದ (ವನು). (ಮು., ಮಾನವ ಶಾಸ್ತ್ರದಲ್ಲಿ ಒಂದು ಮಾನವ ಕುಲದ ಹೆಸರು)

Éthmoid ಎತ್ಮಾಯ್ಡ್ (ಗು.) ಜಲ್ಲಡಿಯಂತಿರುವ; ಒಂದರಿಯಂತಿರುವ. E. bone ಮೂಗಿನ ಮೂಲದಲ್ಲಿರುವ ಒಂದರಿಯ ರಚನೆಯ ಚದುರಾಕಾರದ ಮೂಳೆ (ಇದರಲ್ಲಿಯ ರಂಧ್ರಗಳ ಮೂಲಕ ವಾಸನಾ ನರಗಳು ಮೂಗಿಗೆ ಹೋಗುವುವು): ಜಾಲರಾಸ್ಥಿ.

Éthnic(al) ಎತ್ನಿಕ್(ಅಲ್) (ಗು.) (ಮಾನವ) ಕುಲದ; ಕುಲ ಸಂಬಂಧವಾದ. (-ic) ಯೆಹೂದ್ಯ ಅಥವಾ ಕ್ರೈಸ್ತ ಪಂಗಡಕ್ಕೆ ಸೇರಿರದ; = Ethnological. **Éthnically** (ಕ್ರಿ. ವಿ.); **Éthnicism** —ಸಿಸ್ಮ್ (ನಾ.) ಯೆಹೂದ್ಯೇತರ ಮತ್ತು ಕ್ರೈಸ್ತೇತರ ಜನಾಂಗಗಳ ಮತಧರ್ಮಗಳು, ಅಥವಾ ಅವರ ಸಾಮಾನ್ಯ ವೈಲಕ್ಷಣ್ಯಗಳು. **Ethnógraphy** ಎತ್ನಾಗ್ರಫಿ (ನಾ.) ಮಾನವ ಕುಲ(ಗಳ ಶಾಸ್ತ್ರೀಯ) ವಿವರಣೆ. **Ethnógrapher** (ನಾ.); **Ethnográphic(al)** ಎತ್ನೊಗ್ರ್ಯಾ— (ಗು.); **Ethnográphically** (ಕ್ರಿ. ವಿ.); **Ethnólogy** ಎತ್ನಾಲೊಜಿ (ನಾ.) ಜನಾಂಗಗಳು, ಅವುಗಳ ಪರಸ್ಪರ ಸಂಬಂಧಗಳು ಮತ್ತು ವೈಲಕ್ಷಣ್ಯಗಳು —ಇವನ್ನು ಕುರಿತ ಶಾಸ್ತ್ರ: ಮಾನವ ಕುಲ ಶಾಸ್ತ್ರ. **Ethnológic(al)** ಎತ್ನೊಲಾ— (ಗು.) (Ethnologic frontier ಕುಲಗಳ ವಿಭಾಗದ ಸರಹದ್ದು, ಎಲ್ಲೆ). **Ethnológically** (ಕ್ರಿ. ವಿ.); **Ethnólogist** ಎತ್ನಾ— (ನಾ.)

Et hoc genus omne (L) ಮತ್ತು ಆ ತೆರದವು; ಇತ್ಯಾದಿ (Et cetera ಎಂಬುದಕ್ಕೆ ಆಲಂಕಾರಿಕ ಪ್ರಯೋಗ)

Ethólogy ಇತಾಲೊಜಿ (ನಾ.) ಶೀಲ ಸ್ವಭಾವ ಶಾಸ್ತ್ರ. **Ethológical** ಎತೊಲಾಜಿ— (ಗು.); **Éthos** ಈತಾಸ್ (ನಾ.) ಕುಲ, ಪಂಗಡ, ಜನ, ಪದ್ಧತಿ —ಇವುಗಳ ವೈಲಕ್ಷಣ್ಯ, ಮನೋಭಾವ, ಶೀಲ.

Éthyl ಎತಿಲ್ (ನಾ.) (ರ. ವಿ.) ಸಾಮಾನ್ಯ ಮದ್ಯಸಾರದ, ಸಾಮಾನ್ಯ ಈತರ್ ದ್ರವದ ಮತ್ತು ಅಸೀಟಿಕಾಮ್ಲದ ಮೂಲಘಟಕ: 'ಎತಿಲ್'.

Étiolate ಈಟಿಯೊಲೇಟ್ (ಕ್ರಿ. ಸಕ.) (ಸಸ್ಯವನ್ನು) ಬೆಳಕು ತಪ್ಪಿಸುವುದರಿಂದ ಬಿಳಿಚಿಕೊಳ್ಳುವಂತೆ ಮಾಡು. (ಒಬ್ಬನನ್ನು) ಬಿಳಿಚಿಕೊಳ್ಳುವಂತೆ, ವಿವರ್ಣವಾಗುವಂತೆ, ಮಾಡು. **Etiolátion** (ನಾ.)

Etiólogy = Aetiology.

Etiquétte ಎಟಿಕೆಟ್ (ನಾ.) ಶಿಷ್ಟ ಸಮಾಜದಲ್ಲಿ ವ್ಯಕ್ತಿ ವರ್ತನೆಯ ಸಾಂಕೇತ ನಿಯಮಗಳು; ಸಮಾಜ ಮರ್ಯಾದೆ; ಸಮಯಾಚಾರ. ಆಸ್ಥಾನ ಸಂಪ್ರದಾಯಗಳು, ನಡೆವಳಿಗಳು, ಮರ್ಯಾದೆಗಳು. ಉದ್ಯೋಗ ವೃತ್ತಿಕಾರರು (ಮು., ವೈದ್ಯವೃತ್ತಿ ಮತ್ತು ನ್ಯಾಯವೃತ್ತಿಯವರು) ತಮ್ಮ ಸಹವೃತ್ತಿಕಾರರ ಅನುಕೂಲ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿಯೂ ತಮ್ಮ ವ್ಯಕ್ತಿಘನತೆಯನ್ನು ಪಾಲಿಸುವ ವಿಷಯದಲ್ಲಿಯೂ ಅನುಸರಿಸಬೇಕಾದ ನಡವಳಿಗಳು: ವೃತ್ತಿ, ವರ್ತನ, —ಮರ್ಯಾದೆ.

Étna ಎಟ್ನ (ನಾ.) ಮದ್ಯಸಾರದ ಉರಿಯಿಂದ ಸ್ವಲ್ಪ ದ್ರವವನ್ನು ಕಾಯಿಸಲು ಉಪಯೋಗಿಸುವ ಪಾತ್ರೆ.

Éton ಈಟನ್ (ನಾ.) E. collar ಅಂಗಿಯ ಕೊರಳುಪಟ್ಟಿಯ ಹೊರಗಡೆ ಧರಿಸುವ, ಅಗಲವಾಗಿಯೂ ಬಿರುಸಾಗಿಯೂ ಇರುವ, ಕೊರಳುಪಟ್ಟಿ. E. crop ಹುಡುಗನಿಗೆ ಕತ್ತರಿಸುವಂತೆ ಮೋಟಕಾಗಿ ಕತ್ತರಿಸಿದ ಹೆಂಗಸಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೂದಲನ ಕತ್ತರಿಕೆ. E. jacket ನಡುವಿನ ವರೆಗೆ ಮಾತ್ರವಿರುವ ಹುಡುಗನ ಗಿಡ್ಡಂಗಿ. **Etónian** ಇಟೋನಿಯನ್ (ನಾ.) ಈಟನ್ ಪ್ರೌಢ ವಿದ್ಯಾಶಾಲೆಯ ವಿದ್ಯಾರ್ಥಿ.

Etrúscan ಇಟ್ರಸ್ಕನ್ (ಗು., ನಾ.) ಪುರಾತನ ಇಟ್ರುರಿಯಾ ದೇಶದ (ವನು)

Et séquens ಎಟ್ ಸೀಕ್ವೆನ್ಸ್ [ಸಂಕ್ಷಿಪ್ತ: Et Seq(q)]. **Et sequéntes** —ಸಿಕ್ವೆಂಟೀಸ್, **-tia** —ಸಿಕ್ವೆನ್ಷಿಯ (L) (ಪುಸ್ತಕ, ಮೊ. ಗಳ ವಿಷಯದಲ್ಲಿ) ಮತ್ತು ಮುಂದೆ ಬರುವ ಪದಗಳು, ಪುಟಗಳು, ಮೊ.; ಮುಂದಿನವು.

Etuí, Etweé ಎಟ್ವೀ (ನಾ.) ಸೂಜಿ, ಹಲ್ಲುಕಡ್ಡಿ, ಮೊ. ನ್ನಿಡುವ ಸಣ್ಣ ಸಂಚಿ.

Etymólogy ಎಟಿಮಾಲೊಜಿ (ನಾ.) ಶಬ್ದರಚನೆ, ಶಬ್ದಾರ್ಥ— ಇವಕ್ಕೆ ಸಂಬಂಧಪಟ್ಟ ವಿಷಯಗಳ ವಿಚಾರ; ಈ ವಿಷಯದ ಭಾಷಾಶಾಸ್ತ್ರ ಭಾಗ, ವ್ಯಾಕರಣ ಭಾಗ; ಶಬ್ದ ವಿಚಾರ ಪ್ರಕರಣ; ನಿರುಕ್ತಿ ಪ್ರಕರಣ; ಶಬ್ದನಿಷ್ಪತ್ತಿ; ವ್ಯುತ್ಪತ್ತಿ. **Etymóloger** (ನಾ.), **Etymólogist** (ನಾ.) ವ್ಯುತ್ಪತ್ತಿ ಶಾಸ್ತ್ರಜ್ಞ; ನಿರುಕ್ತಿಕಾರ. **Etymológic(al)** —ಮೊಲಾಜಿ—; **Etymológically** (ಕ್ರಿ. ವಿ.); **Etymólogize** —ಮಾಲೊಜೈಸ್ (ಕ್ರಿ.) ಶಬ್ದವ್ಯುತ್ಪತ್ತಿಯನ್ನು ಅನುಕ್ರಮವಾಗಿ ಬಿಚ್ಚಿ ಹೇಳು; ವ್ಯುತ್ಪತ್ತಿ ಹೇಳು; ಶಬ್ದವ್ಯುತ್ಪತ್ತಿ ಪ್ರಕರಣವನ್ನು ಅಭ್ಯಾಸ ಮಾಡು. **Étymon** ಎಟಿಮಾನ್ (ನಾ.) ಮೂಲ ಶಬ್ದ; ಧಾತು; ಪ್ರಕೃತಿ; ಪ್ರಾತಿಪದಿಕ.

Étymon. Etymology ನೋಡಿ.

Eucalýptus ಯೂಕಲಿಪ್ಟಸ್ (ನಾ.) ನೀಲಗಿರಿ ತೈಲ ಕೊಡುವ ಮರ; 'ಯೂಕಲಿಪ್ಟಸ್' ಮರ. E. oil —ಎಣ್ಣೆ; ನೀಲಗಿರಿ ತೈಲ (ಸೋಂಕು ನಿವಾರಕ)

Eúcharist ಯೂಕರಿಸ್ಟ್ (ನಾ.) ಪ್ರಭುಭೋಜನ (ಸಂಸ್ಕಾರ); ಈ ಸಂಸ್ಕಾರದಲ್ಲಿ ಉಪಯೋಗಿಸುವ ಪವಿತ್ರಮಾಡಿದ ವಸ್ತುಗಳು (ಮು., ರೊಟ್ಟಿ). Give, receive, the E. ಪ್ರಭುಭೋಜನ ಸಂಸ್ಕಾರ ಕೊಡು, ಪಡೆ. **Eucharístic(al)** (ಗು.)

Euchlórine ಯೂಕ್ಲೋರಿ(ೀ)ನ್ (ನಾ.) ಉಜ್ಜ್ವಲ ಹಳದಿಹಸುರಿನ ಒಂದು ಸಂಯುಕ್ತ ಅನಿಲ (ಡೇವಿ ಎಂಬ ವೈಜ್ಞಾನಿಕನು ಕಂಡುಹಿಡಿದದ್ದು): 'ಯೂಕ್ಲೋರೀನ್'.

Éuchre ಯೂಕರ್ (ನಾ., ಕ್ರಿ. ಸಕ.) ಇಬ್ಬರು, ಮೂವರು, ಅಥವಾ ನಾಲ್ವರು ಆಡಬಹುದಾದ ಅಮೆರಿಕದ ಒಂದು ತೆರದ ಇಸ್ಪೀಟಾಟ: 'ಯೂಕರ್' ಆಟ. (ಕ್ರಿ.) ಈ ಆಟದಲ್ಲಿ ಎದುರಾಳಿ ಮೂರು ಪಟ್ಟನ್ನು ತೆಗೆದುಕೊಳ್ಳಲು ತಪ್ಪಿದ್ದರಿಂದ ತಾನು ಪ್ರಯೋಜನ ಪಡೆ; (ರೂಪ.) ಸೋಲಿಸು; ಮೇಲಾಗು.

Eúclid ಯೂಕ್ಲಿಡ್ (ನಾ.) (ಸು., ಕ್ರಿ. ಪೂ. ೩೦೦ ರಲ್ಲಿದ್ದ) ಅಲೆಗ್ಸಾಂಡ್ರಿಯದ ಗಣಿತ ಶಾಸ್ತ್ರಜ್ಞ; ಯೂಕ್ಲಿಡ್ಡಿನ ಜ್ಯಾಮಿತಿಯ ಮೂಲ ಪಾಠಗಳು; (ಬಳ. ಮಾ.) ಜ್ಯಾಮಿತಿ ಶಾಸ್ತ್ರ; ರೇಖಾ ಗಣಿತ; (ಆಧುನಿಕ) (ಯೂಕ್ಲಿಡ್ಡಿನ ಆಧಾರಸೂತ್ರಗಳು ನಿರ್ವಿವಾದವಾದುವೆಂದು ಅಂಗೀಕರಿಸುವುದರಿಂದ ಲಭಿಸಿದ) ಸಾಮಾನ್ಯ ಜ್ಯಾಮಿತಿ. **Euclidéan** —ಡಿ(ೀ)ಯನ್ (ಗು.)

Eud(a)émonism ಯುಡೀಮನಿಸ್ಮ್ (ನಾ.) ಸುಖ ಸಾಧಕವಾದ ವರ್ತನೆಯೇ ಧರ್ಮವೆಂಬ, ಸುಖವೇ ಪರಮ ಪುರುಷಾರ್ಥವೆಂಬ, ವಾದ: ಸುಖವಾದ. **Eud(a)émonist** (ನಾ.)

Eudiómeter ಯೂಡಿಯಾಮಿಟರ್ (ನಾ.) (ರ. ವಿ.) ಅನಿಲಗಳ ಅಳತೆಗೂ ವಿಶ್ಲೇಷಣ ಕಾರ್ಯಕ್ಕೂ ಉಪಯೋಗಿಸುವ ಒಂದು ಸಲಕರಣೆ (ಹಿಂದೆ, ವಾಯುವಿನ ಪರಿಶುದ್ಧತೆಯನ್ನು, ಎಂದರೆ, ವಾಯುಮಂಡಲದಲ್ಲಿಯ ಆಮ್ಲಜನಕದ ಪರಿಮಾಣವನ್ನು ಕಂಡುಹಿಡಿಯಲು ಉಪಯೋಗಿಸುತ್ತಿದ್ದದ್ದು); ಅನಿಲ ಮಾಪಕ; ಅನಿಲ ವಿಶ್ಲೇಷಕ. **Eudiométric(al)** — ಯೊಮೆಟ್ರಿ — (ಗು.); **Eudiométrically** (ಕ್ರಿ. ವಿ.); **Eudiómetry** — ಯಾ — (ನಾ.) ಅನಿಲ ವಿಶ್ಲೇಷಕವನ್ನು ಉಪಯೋಗಿಸುವ ಕಾರ್ಯ, ಕಲೆ.

Eugénic ಯೂಜೆನಿಕ್ (ಗು., ನಾ.) (ಮು., ಮನುಷ್ಯನು) ಉತ್ತಮ ಸಂತಾನ ಪಡೆಯುವ ವಿಷಯದ. (ಬ. ವ. ದಲ್ಲಿ) ಉತ್ತಮ ಸಂತಾನ ಶಾಸ್ತ್ರ **Eúgenist** (ನಾ.) — ಶಾಸ್ತ್ರಜ್ಞ.

Euhémerism ಯುಹೀಮೆರಿಸ್ಮ್ (ನಾ.) ಪೌರಾಣಿಕ ಕಥೆಗಳು ಚರಿತ್ರಾಧಾರವುಳ್ಳವೆಂದು ಹೇಳುವುದು. ದೇವತಾಂಶ ಪುರುಷರೆಂದೆನಿಸಿಕೊಂಡವರು ಆದಿಯಲ್ಲಿ ಮನುಷ್ಯರಾಗಿದ್ದು ತಮ್ಮ ಶೌರ್ಯ ಸತ್ತ್ವ ಪ್ರಭಾವಗಳಿಂದ ದೇವತ್ವಕ್ಕೆ ಏರಿಸಲ್ಪಟ್ಟವರೆಂಬ ವಾದ. **Euhémerist** (ನಾ.); **Euhemerístic** (ಗು.); **Euhémerize** (ಕ್ರಿ.) (ಸು., ಕ್ರಿ. ಪೂ. ೩೧೬ ರಲ್ಲಿದ್ದ) 'ಯುಹೀಮೆರಸ್' ಎಂಬ ಸಿಸಿಲಿಯನ್ ತತ್ತ್ವಜ್ಞನ ರೀತಿಯಲ್ಲಿ ವ್ಯಾಖ್ಯೆಮಾಡು; — ರೀತಿಯನ್ನನುಸರಿಸು.

Eúlogy ಯೂಲೊಜಿ (ನಾ.) (ಒಬ್ಬನ, ಒಂದರ) ಸ್ತೋತ್ರಮಾಡುವ ಭಾಷಣ, ಬರಹ; ಹೊಗಳಿಕೆ; ಪ್ರಶಂಸೆ; ಸ್ತೋತ್ರ; ಗುಣಗಾನ (Pronounce his e. ಅವನ ವಿಷಯವಾಗಿ ಸ್ತೋತ್ರಪಾಠ ಮಾಡು. Pronounce a e. on him). **Eúlogize** (ಕ್ರಿ. ಸಕ.) ಹೊಗಳು; ಸ್ತೋತ್ರಮಾಡು; ಪ್ರಶಂಸಿಸು; ಸ್ತುತಿಸು; ಕೀರ್ತಿಸು; ಶ್ಲಾಘಿಸು; ಗುಣಗಾನ ಮಾಡು. **Eúlogist** (ನಾ.); **Eulogístic** (ಗು.); **Eulogístically** (ಕ್ರಿ. ವಿ.)

Eúnuch ಯೂನಕ್ (ನಾ.) ಬೀಜವೊಡೆದ ಗಂಡಸು (ಮು., ಅಂತಃಪುರದಲ್ಲಿ, ಜನಾನಾಗಳಲ್ಲಿ, ಪೌರಸ್ತ್ಯ ರಾಜಾಸ್ಥಾನಗಳಲ್ಲಿ, ಹಿಂದೆ ರೋಮನ್ ಚಕ್ರಾಧಿಪತ್ಯದಲ್ಲಿ, ರಾಜಕಾರ್ಯಗಳಿಗಾಗಿ ನಿಯಮಿತನಾಗುತ್ತಿದ್ದವನು); ನಪುಂಸಕ; ಖೋಜಾ; ಕೊಜ್ಜೆ; ಹಿಜಿಡ.

Eupéptic ಯುಪೆಪ್ಟಿಕ್ (ಗು.) ಒಳ್ಳೆಯ ಜೀರ್ಣಶಕ್ತಿಯ; —ಯುಳ್ಳ. **Eupépsia** ಯೂ —(ನಾ.) ಜೀರ್ಣಾಂಗಗಳ ಆರೋಗ್ಯ; ಒಳ್ಳೆಯ ಜೀರ್ಣಶಕ್ತಿ (= **Eupépsy**)

Eúphemism ಯೂಫಿಮಿಸ್ಮ್ (ನಾ.) ಕಠಿನ ಅಥವಾ ಒರಟಾದ ಶಬ್ದಗಳನ್ನು ಪ್ರಯೋಗಿಸಬೇಕಾಗುವಲ್ಲಿ, ಅವಕ್ಕೆ ಬದಲಾಗಿ ನಯ ಅಥವಾ ಅಸ್ಪಷ್ಟ ಪದಪ್ರಯೋಗ ಮಾಡುವುದು; ನಯ ನುಡಿ; ಸಾಮ್ಯೋಕ್ತಿ (ಉದಾ., 'ಹೇಡಿ' ಎಂಬುದಕ್ಕೆ ಬದಲಾಗಿ 'ಪರಮ ಸಾಧು' ಎಂದು ಹೇಳುವುದು). **Euphemístic** (ಗು.); **Euphemístically** (ಕ್ರಿ. ವಿ.); **Eúphemize** (ಕ್ರಿ.)

Eúphony ಯೂಫೊನಿ (ನಾ.) ಇಂಪಾದ, ಇನಿದಾದ, — ದನಿ, ಉಲಿ; (ಸಾ., ಪದಗಳು, ಪದ ಸರಣಿ, ಮೊ. ಗಳ) ಸುಸ್ವನ, ಸುಸ್ವರ; ಶಬ್ದ ಮಾಧುರ್ಯ, ಲಾಲಿತ್ಯ; ಸುಲಭೋಚ್ಚಾರಣೆಗಾಗಿ ಮಾಡಲೆಳಸುವ ಸ್ವರವ್ಯತ್ಯಾಸ; ಉಚ್ಚಾರಣ ಸೌಕರ್ಯ; ಸುಖೋಚ್ಚಾರಣೆ. **Euphónic(al)** ಯುಫಾನಿ—(ಗು.) ಸುಸ್ವನದ. **Euphónically** (ಕ್ರಿ. ವಿ.); **Euphónious** ಯೂಫೋ — (ಗು.) ಸುಸ್ವನ ಪೂರ್ಣ; ಸುಸ್ವನ ವಿಶಿಷ್ಟ; ಕಿವಿಗಿಂಪಾದ; ಮಧುರ. **Euphóniously** (ಕ್ರಿ. ವಿ.); **Eúphonize** ಯೂಫೊನೈಸ್ (ಕ್ರಿ. ಸಕ.)

Eúphuism ಯೂಫ್ಯೂಇಸ್ಮ್ (ನಾ.) ಕೃತಕ ಶೈಲಿ; ಆಡಂಬರದ ಶೈಲಿ; ಪಾಂಡಿತ್ಯ ಪ್ರದರ್ಶಕ ಶೈಲಿ. **Eúphuist** (ನಾ.); **Euphuístic** (ಗು.); **Euphuístically** (ಕ್ರಿ. ವಿ.)

Eurásian ಯುರೇಷಿಯನ್ (ಗು., ನಾ.) ಯೂರೋಪಿಯನ್ನರ ಮತ್ತು ಏಷ್ಯನ್ನರ ಮಿಶ್ರ ಸಂತತಿಯ(ವನು); ಚಟ್ಟಿಗಾರ. ಯೂರೋಪ್ ಮತ್ತು ಏಷ್ಯದ.

Euréka ಯುರೀಕ (ಭಾವ. ಅವ್ಯ., ನಾ.) (ಜಯೋತ್ಸಾಹದ ಉದ್ಗಾರ) ಸಿಕ್ಕಿತು! ಹೊಳೆಯಿತು! ಕಂಡುಹಿಡಿದುಬಿಟ್ಟೆ! (ಒಂದು ವ್ಯಾಪಾರದ ವಸ್ತುವಿನ ಹೆಸರಾಗಿಯೂ ಪ್ರಯೋಗ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Eurhýthmic ಯೂರಿತ್ಮಿಕ್ (ಗು.) ಸುಮೇಳನ ಪ್ರಮಾಣದ; ಉಚಿತ ಪ್ರಮಾಣದ (ಮು., ವಾಸ್ತುಶಿಲ್ಪದಲ್ಲಿ). **Eurhýthmics** (ನಾ., ಬ. ವ.) ಸಂಗೀತದ ಸಹಾಯದಿಂದ ಸಾಧಿಸುವ ವ್ಯಾಯಾಮ: ಸಂಗೀತ ವ್ಯಾಯಾಮ.

Européan ಯೂರೋಪೀಯನ್ (ಗು., ನಾ.) ಯೂರೋಪಿನ(ವನು); ಯೂರೋಪಿನಲ್ಲಿ ಸಂಭವಿಸುವ, ವ್ಯಾಪ್ತಿಯುಳ್ಳ (A E. reputation ಒಟ್ಟು ಯೂರೋಪಿನಲ್ಲಿ ಹರಡಿರುವ ಕೀರ್ತಿ, ಯಶಸ್ಸು). **Européanism** (ನಾ.) (ಭಾವನೆಗಳು, ರೀತಿನೀತಿಗಳು, ಮರ್ಯಾದೆಗಳು, ಪದ್ಧತಿಗಳು, ಮೊ. ಗಳ ವಿಷಯದಲ್ಲಿ) ಯೂರೋಪಿನವನ್ನು ಸ್ವೀಕರಿಸುವ ಪ್ರವೃತ್ತಿ; ಯೂರೋಪಿಗೆ ಅಥವಾ ಯೂರೋಪಿಯನ್ನರಿಗೆ ವ್ಯಕ್ತಿಗತವಾದದ್ದು, ವಿಶೇಷ ಲಕ್ಷಣವುಳ್ಳದ್ದು: ಯೂರೋಪ್ ವೈಲಕ್ಷಣ್ಯ. **Europeanizátion** — ನೈಸೇಷನ್ (ನಾ.); **Européanize** (ಕ್ರಿ. ಸಕ.) (ತೋರ್ಕೆ, ಪದ್ಧತಿಗಳು, ಜೀವನ ರೀತಿ, ವ್ಯಾಪ್ತಿ, ಮೊ. ಗಳಲ್ಲಿ) ಯೂರೋಪಿನದಾಗಿ ಮಾಡು.

Eustáchian ಯೂಸ್ಟೇಕಿಯನ್ (ಗು.) (ಕ್ರಿ. ಶ. ೧೬ನೆಯ ಶತಮಾನದಲ್ಲಿದ್ದ) 'ಯೂಸ್ಟೇಕಿಯಸ್' ಎಂಬ ಅಂಗರಚನಾ ಶಾಸ್ತ್ರಜ್ಞನ. E. tube ಗಂಟಲ ಮೇಲ್ಭಾಗದಿಂದ ನಡುಗಿವಿಯ ಕುಹರಕ್ಕೆ ಹೋಗುವ ನಾಳ: ಯೂಸ್ಟೇಕಿಯಸ್ಸಿನ ನಾಳ.

Eutérpe ಯೂಟರ್ಪಿ (ನಾ.) (ಗ್ರೀಕ್ ಪುರಾಣ) ಸಂಗೀತ ಕಲಾ ದೇವತೆ; ಸಂಗೀತಾಭಿಮಾನ ದೇವತೆ. (ಸ. ವಿ.) ಅಂದವಾಗಿ ಎತ್ತರಕ್ಕೆ ಬೆಳೆಯುವ ಒಂದು ಜಾತಿಯ ತಾಳೆಯ ಮರ. (ಖ. ವಿ.) ೨೭ನೆಯ ಕ್ಷುದ್ರಗ್ರಹ. **Eutérpean** (ಗು.) ಯೂಟರ್ಪಿ ದೇವತೆಗೆ ಅಥವಾ ಸಂಗೀತಕ್ಕೆ ಸಂಬಂಧಪಟ್ಟ.

Eutéxia ಯುಟೆಕ್ಸಿಯ (ನಾ.) ಸುಲಭವಾಗಿ (ಎಂದರೆ ಕೆಳಗಾವಿನಲ್ಲಿ) ಕರಗುವ ಲಕ್ಷಣ, ಗುಣ. **Eutéctic** (ಗು., ನಾ.) ಸುಲಭವಾಗಿ ಕರಗುವ (ಪದಾರ್ಥ)

Euthanásia ಯೂತನೇಸಿ(ಸ್ಸಿ)ಯ (ನಾ.) ಸೌಮ್ಯವಾದ ಮತ್ತು ಅನಾಯಾಸವಾದ ಸಾವು; ಒಳ್ಳೆಯ ಸಾವು; ಸುಖ ಮರಣ; (ಮು., ವಾಸಿಯಾಗದ ಮತ್ತು ಬಹಳ ನೋವು ಕೊಡುವ ರೋಗಗಳಲ್ಲಿ) ಸುಖ ಮರಣವುಂಟುಮಾಡುವುದು; ಸುಖಮರಣ ಕಾರಕ.

Eutópia ಯೂಟೋಪಿಯ (ನಾ.) ('ಸರ್ ಥಾಮಸ್ ಮೂರ್' ಎಂಬ ಇಂಗ್ಲಿಷ್ ಗ್ರಂಥಕರ್ತನು ಮೊದಲು ಉಪಯೋಗಿಸಿದ ಪದ) ಆದರ್ಶಪ್ರಾಯವಾದ ದೇಶ (Utopia ನೋಡಿ)

Eútrophy ಯೂಟ್ರಫಿ (ನಾ.) (ವೈ. ಶಾ.) ಪುಷ್ಟಿಕರ ಆಹಾರ. **Eútrophic** ಯುಟ್ರಾಫಿಕ್ (ಗು.) ದೇಹಪೋಷಣೆ ಮಾಡುವ; ಪುಷ್ಟಿಕಾರಕ.

Evácuate ಇವ್ಯಾಕ್ಯುಏಟ್ (ಕ್ರಿ. ಸಕ.) (ಮು., ಜಠರದಿಂದ ಅಥವಾ ಇತರ ದೇಹಾಂಗದಿಂದ ಅದರೊಳಗಿರುವುದನ್ನು) ಹೊರಡಿಸಿಬಿಡು, ಕಳೆ, ಬರಿದು ಮಾಡು; ವಿಸರ್ಜಿಸು. (ಒಂದು ಸ್ಥಳದಿಂದ, ಮು., ಸೇನಾ ದಳಗಳನ್ನು) ತೆಗೆದುಬಿಡು, ಕಳುಹಿಸಿಬಿಡು; ಖಾಲಿ ಮಾಡು. (ಮಲ, ಮೊ. ನ್ನು) ವಿಸರ್ಜಿಸು, ಹೊರ ಹೊರಡಿಸು (ರೂಪ. ಸಹ). **Evácuant** — ಅಂಟ್ (ಗು., ನಾ.) (ವೈ. ಶಾ.) ದೇಹಾಂಗದಿಂದ ಅದರ ಒಳಗಿನ ಪದಾರ್ಥವನ್ನು ಹೊರಡಿಸಲು ನೆರವಾಗುವ; ಭೇದಿ ಮಾಡಿಸುವ (ಔಷಧ); ವಿರೇಚಕ; ವಮನಕಾರಿ; ಸ್ವೇದಕಾರಿ. **Evacuátion** (ನಾ)

Eváde ಇವೇಡ್ (ಕ್ರಿ. ಸಕ.) (ಆಕ್ರಮಣ, ಬೆನ್ನಟ್ಟು, ಕೃತ್ರಿಮ, ವಿರೋಧಿ, ಏಟು, ಪ್ರತಿಬಂಧಕ, ಮೊ. ಗಳಿಂದ) ತಪ್ಪಿಸಿಕೊ; — ಗೆ ಸಿಕ್ಕದಿರು. (ಕರ್ತವ್ಯ, ಮೊ. ನ್ನು) ಮಾಡದೆ ಬಿಡು; (ಪ್ರಶ್ನೆಗಳಿಗೆ ಉತ್ತರಕೊಡದೆ, ವಾದ, ಮೊ. ಕ್ಕೆ ಒಪ್ಪಿಕೊಳ್ಳದೆ) ಜಾರಿಕೊ, ನುಣುಚಿಕೊ. (ಕಾನೂನು, ಮೊ. ನ್ನು ಅಕ್ಷರಶಃ ಅನುಸರಿಸುವಂತೆ ಮಾಡಿ ಅದರ) ನಿಜಾಭಿಪ್ರಾಯ ನಡೆಯದಂತೆ ಮಾಡು; ಉದ್ದೇಶಭಂಗ ಮಾಡು. (ವಸ್ತುಗಳ ವಿಷಯದಲ್ಲಿ) ಹಿಡಿತಕ್ಕೆ ಸಿಕ್ಕದಿರು. **Evádable** (ಗು.); **Evásion** — ಷನ್ (ನಾ.) ತಪ್ಪಿಸಿಕೊಳ್ಳುವ ಉಪಾಯ; ತಪ್ಪಿಸಿಕೊಳ್ಳುವುದು; ನುಣುಚಿಕೊಳ್ಳುವ ನೆಪ. **Evásive** — ಸಿವ್ (ಗು.) ತಪ್ಪಿಸಿಕೊಳ್ಳುವ; ಪಟ್ಟಿಗೆ ಸಿಕ್ಕದ; ಕಳಚಿಕೊಳ್ಳುವ; ನುಣುಚಿಕೊಳ್ಳುವ. **Evásively** (ಕ್ರಿ. ವಿ.); **Evásiveness** (ನಾ.)

Evaginate ಇವ್ಯಾಜಿನೇಟ್ (ಕ್ರಿ. ಸಕ.) (ಶ. ವಿ.) (ನಾಳಾಕಾರದ ಅಂಗವನ್ನು) ಒಳಹೊರಗು ಮಾಡು. **Evaginátion** (ನಾ.)

Eváluate ಇವ್ಯಾಲ್ಯುಏಟ್ (ಕ್ರಿ. ಸಕ.) ಬೆಲೆ ಕಟ್ಟು; ಬೆಲೆ ಕಂಡುಹಿಡಿ; ಮೊತ್ತ ಗೊತ್ತುಮಾಡು. **Evaluátion** (ನಾ.)

Evanésce ಎವನೆಸ್ (ಕ್ರಿ. ಅಕ.) ಕಣ್ಮರೆಯಾಗು; ಅದೃಶ್ಯವಾಗು; ಅಳಿಸಿಹೋಗು; ಮಾಯವಾಗು; ಅಂತರ್ಧಾನವಾಗು. **Evanéscent** (ಗು.) (ತೋರ್ಕೆ, ನೆನಪು, ಮೊ. ಗಳ ವಿಷಯದಲ್ಲಿ) ಬೇಗ ಮಾಸಿಹೋಗುವ, ಅಳಿಸಿಹೋಗುವ; ಕಣ್ಮರೆಯಾಗುವ; ಮಾಯವಾಗುವ; ಅದೃಶ್ಯವಾಗುವ; ಕ್ಷಣಿಕ. (ಗಣಿತ) ಸೂಕ್ಷ್ಮತಮವಾದ; ಸೊನ್ನೆಗೆ ಹತ್ತಿರ ಹತ್ತಿರ ಹೋಗುವ; ಶೂನ್ಯಪ್ರಾಯ. **Evanéscence** (ನಾ.); **Evanéscently** (ಕ್ರಿ. ವಿ.)

Evángel ಇವ್ಯಾಂಜೆಲ್ (ನಾ.) (ಪ್ರಾಚೀ. ಪ್ರ.) (ಬೈಬಲ್ಲಿನ) ಸುವಾರ್ತೆ, ನಲ್ನುಡಿ, ಒಸಗೆ; ನಾಲ್ಕು ಸುವಾರ್ತೆಗಳಲ್ಲಿ ಯಾವುದಾದರೂ ಒಂದು. (ರಾಜಕೀಯ, ಮೊ.) ಉದ್ಧಾರಕ ತತ್ತ್ವ. **Evangélic(al)** ಈ(ಎ) — (ಗು., ನಾ.) ಸುವಾರ್ತೆಯ ಅಥವಾ ಕ್ರೈಸ್ತ ಮತಧರ್ಮದ ಬೋಧೆಯ; (ಮು., -ical) ಕರ್ಮಾಚರಣೆ, ಸಂಸ್ಕಾರಗಳು — ಇವಕ್ಕಿಂತ ಶ್ರದ್ಧಾಭಕ್ತಿಗಳೇ ಮುಕ್ತಿಸಂಪಾದನೆಗೆ ಮುಖ್ಯವೆಂಬ ತತ್ತ್ವವೇ ಸುವಾರ್ತೆಯ ಸಾರಾಂಶವೆಂದು ಸಾಧಿಸುವ ಪ್ರಾಟೆಸ್ಟೆಂಟ್ ಮತದ(ವನು). **Evangélicalism** (ನಾ.); **Evangélically** (ಕ್ರಿ. ವಿ.); **Evángelism** ಇ — (ನಾ.) ಸುವಾರ್ತೆಯ ಬೋಧನೆ, ಉಪದೇಶ; = Evangelicalism. **Evángelist** (ನಾ.) ನಾಲ್ಕು ಸುವಾರ್ತೆಗಳನ್ನು ಬರೆದವರಲ್ಲೊಬ್ಬನು; ಸುವಾರ್ತಾಕಾರ; ಸುವಾರ್ತಾ ಬೋಧಕ. ಮನೆ ಮನೆ ಸುತ್ತಿ (ಕ್ರೈಸ್ತ) ಧರ್ಮೋಪದೇಶ ಮಾಡುವವನು: (ಕ್ರೈಸ್ತ) ಸಂಚಾರೋಪದೇಶಿ. **Evangelístic** (ಗು.) ನಾಲ್ಕು ಮಂದಿ ಸುವಾರ್ತಾ ಲೇಖಕರ; ಸುವಾರ್ತೋಪದೇಶಿಗಳ; = Evangelical. **Evángelize** (ಕ್ರಿ. ಸಕ.) ಸುವಾರ್ತೆಯನ್ನು ಬೋಧಿಸು, ಉಪದೇಶಿಸು. ಕ್ರೈಸ್ತ ಮತಕ್ಕೆ (ಒಬ್ಬನನ್ನು) ಒಲಿಸಿಕೊ, ಸೇರಿಸಿಕೊ. **Evangelizátion** (ನಾ.)

Evánish ಇವ್ಯಾನಿಷ್ (ಕ್ರಿ. ಅಕ.) ಮಾಯವಾಗು; ಕಣ್ಮರೆಯಾಗು; ಅದೃಶ್ಯವಾಗು; ಅಳಿದುಹೋಗು; ನಾಶಹೊಂದು. **Evánishment** (ನಾ.)

Eváporate ಇವ್ಯಾಪೊರೇಟ್ (ಕ್ರಿ.) ಘನ ಸ್ಥಿತಿಯಿಂದ ಅಥವಾ ದ್ರವ ಸ್ಥಿತಿಯಿಂದ ಅನಿಲ ಸ್ಥಿತಿಗೆ ತಿರುಗಿಸು, ತಿರುಗು; ಬಾಷ್ಪೀಕರಿಸು; —ಭವಿಸು; ಉಗಿಯಾಗಿ, ಹಬೆಯಾಗಿ, ಆವಿಯಾಗಿ, ಮಾಡು, ಹೋಗು; ಇಮರು; ಇಮರಿಸು; ಇಂಗು; ಇಂಗಿಸು; ಆರು; ಆರಿಸು; [ರೂಪ. ಸಹ. ಮು., (ಬಳ. ಮಾ.) ಮಾಯವಾಗು; ಕಾಣದಂತಾಗು; ಅದೃಶ್ಯವಾಗು; ಸಾಯಿ]. **Eváporable** (ಗು.); **Eváporative** — ರೇ(ರ)— (ಗು.) ಬಾಷ್ಪೀಕರಣದ; ಬಾಷ್ಪ ಮಾಡುವ. **Evaporátion** —ರೇ— (ನಾ.) ಬಾಷ್ಪೀಭವನ; —ಕರಣ. **Eváporator** (ನಾ.) ಬಾಷ್ಪಕಾರಕ (ಮನುಷ್ಯ, ಸಲಕರಣೆ: ಮು., ಹಣ್ಣು, ಮೊ. ನ್ನು ಒಣಗಿಸುವ ಶೋಷಕ)

Evásion. Evade ನೋಡಿ.

Eve[1] ಈವ್ (ನಾ.) (ಬೈಬಲ್) ಸೃಷ್ಟಿಯ ಮೊದಲನೆಯ ಹೆಂಗಸು; ಈವಳು. Daughter of E. ಹೆಂಗಸು (ಹೆಂಗಸರಿಗೆ ಸ್ವಾಭಾವಿಕವಾಗಿರುವ ಕುತೂಹಲದ ಪ್ರಸ್ತಾಪದಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Eve[2] ಈವ್ (ನಾ.) (ಸಾ., ಚರ್ಚಿನ ಉತ್ಸವ ಸಂದರ್ಭದ) ಹಿಂದಿನ, — ಸಂಜೆ, ದಿನ. [Christmas eve (Christ ನೋಡಿ). On the e. of an election ಚುನಾವಣೆಗೆ ಪೂರ್ವಭಾವಿಯಾಗಿ]. (ಪ್ರಾಚೀ. ಪ್ರ.) ಸಂಜೆ.

Evéction ಇವೆಕ್‌ಷನ್ (ನಾ.) ಚಂದ್ರನ ರೇಖಾಂಶದಲ್ಲಿ ಅಸಮತೆ; ಚಂದ್ರನ ಚಲನೆಯಲ್ಲಿ ಕಾಣಬರುವ ವ್ಯತ್ಯಾಸ; (ಚಂದ್ರನ ಸಮಾಗಮ ಪ್ರತಿರೋಧಗಳಲ್ಲಿರುವುದಕ್ಕಿಂತಲೂ ಅದರ ಚತುರ್ಥಾಂಶಗಳಲ್ಲಿರುವ ಅದರ ಸರಾಸರಿ ಸ್ಥಾನವು ಅದರ ನೈಜ ಸ್ಥಾನಕ್ಕಿಂತ ೨॥ ಡಿಗ್ರಿಗಳಷ್ಟು ಅಧಿಕ ವಾಗಿರುತ್ತದೆ)

Éven[1] ಈವನ್ (ನಾ.) (ಕಾವ್ಯ) ಸಂಜೆ; ಸಂಧ್ಯಾ ಕಾಲ; ಸಾಯಂ ಕಾಲ; ಬೈಗು. **Évensong** (ನಾ.) (ಇಂಗ್ಲೆಂಡಿನ ಕ್ರೈಸ್ತ ಆರಾಧನ ಮಂದಿರದಲ್ಲಿ) ಸಾಯಂ ಪ್ರಾರ್ಥನೆ. **Éventide** (ನಾ.) ಸಂಧ್ಯಾ ಕಾಲ; ಸಂಜೆ.

Éven[2] ಈವನ್ [ಗು.; - er, - est (ತರ ತಮಗಳು)] (ಸಮ) ಮಟ್ಟವಾದ; ಸಪಾಟ; ಸಮವಾದ. ನಯವಾದ; ನುಣುಪಾದ. ಗುಣದಲ್ಲಿ ಒಂದೇ ಸಮನಾದ. (ಒಂದರೊಡನೆ) ಏಕ ಸಮತಲದಲ್ಲಿ ಅಥವಾ ಏಕ ರೇಖೆಯಲ್ಲಿ ಇರುವ. ಸಮ ತೂಕವುಳ್ಳ; ಸಮ ತೋಲನದ; ಸಮ ದೃಷ್ಟಿಯ (E.-handed justice ಸಮ ದೃಷ್ಟಿಯ, ನಿಷ್ಪಕ್ಷಪಾತದ, — ನ್ಯಾಯ). [(ನ್ಯಾ. ಶಾ., ವ್ಯಾಪಾರ) Of e. date ಅದೇ ತೇದಿಯ, ತಾರೀಖಿನ]. (ಮನುಷ್ಯಪ್ರಕೃತಿ, ಮೊ.) ಸಮ ಸ್ಥಿತಿಯ, ಸಮತೆಯ; ಕಲಕದ; ಅಕ್ಷುಬ್ಧ. (ಸಂಖ್ಯೆ) ಶೇಷವಿಲ್ಲದೆ ಎರಡರಿಂದ ಭಾಗಿಸಲಾಗುವ; ಸರಿ; ಸಮ [Odd ಬೆಸ (ಸಂಖ್ಯೆ)]. Be e. with ಹಗೆ, ಸೇಡು, ತೀರಿಸಿಕೊ. **Évenly** (ಕ್ರಿ. ವಿ.); **Évenness** (ನಾ.)

Éven (ಕ್ರಿ. ಸಕ.) ಒಂದೇ ಮಟ್ಟವಾಗಿ ಮಾಡು; ಒಂದೇ ಸಮ ಮಾಡು; ಸರಿಸಮವೆಂದು, ಎಣೆಯೆಂದು, ಪರಿಗಣಿಸು; ಸರಿಮಾಡು; ಸಮಮಾಡು; ಸರಿಯಾಗು; ಎಣೆಯಾಗು. E. up ಸಮತೂಕ ಮಾಡು; ಸರಿದೂಗಿಸು. E. up on (ಅಮೆ. ಸಂ.) ಮುಯ್ಯಿ ತೀರಿಸು; ಮುಯ್ಯಿಗೆ ಮುಯ್ಯಿ ಮಾಡು; (ಒಬ್ಬನಿಗೆ) ಹಿಂದಿರುಗಿಸಿ ಕೊಡು.

Éven[3] ಈವನ್ (ಕ್ರಿ. ವಿ.) — ಊ; ಕೂಡ (He disputes e. the facts ವಾಸ್ತವಾಂಶಗಳನ್ನೂ ಆಕ್ಷೇಪಿಸುತ್ತಾನೆ. I never e. opened that book ಆ ಪುಸ್ತಕವನ್ನು ನಾನು ತೆರೆದುಕೂಡ ನೋಡಲಿಲ್ಲ. Does he e. suspect the danger? ಅಪಾಯವುಂಟೆಂದು ಅವನು ಅನುಮಾನವಾದರೂ ಪಡುತ್ತಾನೆಯೇ? E. if my watch is right we shall be late ನನ್ನ ಗಡಿಯಾರ ಸರಿಯಾಗಿದೆಯೆಂದು ಇಟ್ಟು ಕೊಂಡರೂ ನಾವು ಹೊತ್ತುಮೀರುವೆವು. This applies e. more to French than to English ಇದು ಇಂಗ್ಲಿಷಿಗಿಂತಲೂ ಫ್ರೆಂಚಿಗೇ ಹೆಚ್ಚಾಗಿ ಅನ್ವಯಿಸುತ್ತದೆ). (ಪ್ರಾಚೀ. ಪ್ರ.) ಹೆಚ್ಚುಕಡಮೆಯಿಲ್ಲದೆ; ಸರಿಯಾಗಿ; ಅಷ್ಟೇ (E. so ಸರಿ, ಹಾಗೆಯೇ. E. our own God ನಮ್ಮ ದೇವರು ಕೂಡ)

Évening ಈವ್ನಿಂಗ್ (ನಾ.) ಸಂಜೆ; ಸಾಯಂಕಾಲ; ಸಂಧ್ಯಾ ಕಾಲ; ಇಳಿ ಹೊತ್ತು; ಬೈಗು; ಸೂರ್ಯಾಸ್ತದಿಂದ ಮಲಗುವ ಹೊತ್ತಿನ ವರೆಗಿನ ಕಾಲ; (Musical evenings ಸಂಗೀತ ಕಚೇರಿ ನಡೆಯುವ ಸಂಜೆಗಳು). (ರೂಪ.) ಮುಪ್ಪು; ವೃದ್ಧಾಪ್ಯ; ಕೊನೆಯ ದಿನಗಳು. E. dress ಸಂಜೆಯ ಸಂಪ್ರದಾಯದ ಉಡುಪು; ಸಂಜೆಯುಡುಪು. E. star ಸೂರ್ಯ ಮುಳುಗಿದಮೇಲೆ ಪಶ್ಚಿಮ ದಿಕ್ಕಿನಲ್ಲಿ ಕಾಣುವ ಬುಧ, ಬೃಹಸ್ಪತಿ, ಅಥವಾ ಇತರ ಗ್ರಹ (ಮು., The e. star ಶುಕ್ರ; ಬೆಳ್ಳಿ)

Evént ಇವೆಂಟ್ (ನಾ.) ನಡೆದದ್ದು; ನಡೆಯುವದು; ನಡವಳಿಕೆ; ಆದದ್ದು; ಸಂಗತಿ; ಸಂದರ್ಭ; ಸಂಭವ (In the e. of his death ಅವನು ಸತ್ತ ಪಕ್ಷದಲ್ಲಿ). (ವಿಶೇಷ) ಘಟನೆ; ದೊಡ್ಡ ಸಂಗತಿ (It was quite an e.). (ಆಕಸ್ಮಿಕ ಸಂಭವಗಳ ತತ್ತ್ವದಲ್ಲಿ) ಒಂದೊಂದಕ್ಕೆ ಸಂಬಂಧವಿಲ್ಲದಿರುವ ಅನೇಕ ಸಾಧ್ಯ ಘಟನೆಗಳಲ್ಲಿ ಯಾವುದಾದರೂ ಒಂದು. Double e. ಎರಡು ಘಟನೆಗಳು ಒಟ್ಟಿಗೆ ಬರುವುದು; ಜೋಡಿ ಘಟನೆ (ಮು., ಜೂಜಾಟಗಳ ಸಂದರ್ಭದಲ್ಲಿ). (ಪಂದ್ಯದಲ್ಲಿ ಅಥವಾ ಆಟದಲ್ಲಿ) ಯಾವುದಾದರೂ ಘಟನೆಯ ಫಲ ಪ್ರಾಪ್ತಿಗೆಂದು ಹಣ ಒಡ್ಡುವ ಸಂದರ್ಭ, ವಿಷಯ. ಫಲ; ಪರಿಣಾಮ. In any or either e., At all events ಹೇಗಾದರೂ; ಅಂತೂ; ಏನೇ ಆಗಲಿ; ಯಾವ ಸಂದರ್ಭದಲ್ಲೂ. **Evéntful** (ಗು.) ವಿಶೇಷ ಘಟನೆಗಳುಳ್ಳ. **Evéntless** (ಗು.); **Evéntual** — ಟ್ಯುಅಲ್ (ಗು.) ಕೆಲವು ಸಂದರ್ಭಗಳಲ್ಲಿ ಪ್ರಾಪ್ತವಾಗುವ, ಒದಗುವ, ಸಂಭವಿಸುವ; ಸಂಭವಿಸಬಹುದಾದ; ಸಂಭಾವ್ಯ. **Evéntually** (ಕ್ರಿ. ವಿ.) ಕಟ್ಟಕಡೆಗೆ; ಕೊನೆಗೆ. **Eventuálity** — ಆ್ಯಲಟಿ (ನಾ.) ಸಂಭವಿಸಬಹುದಾದ ಘಟನೆ; ಸಾಧ್ಯ; ಸಂಭವನೀಯ; ಆಗಬಹುದಾದದ್ದು; ನಡೆಯಬಹುದಾದದ್ದು. **Evéntuate** — ಏಟ್ (ಕ್ರಿ. ಅಕ.) ಆಗು; ಪರಿಣಮಿಸು; (ಮು., ಅಮೆ. ಸಂ.) ಸಂಭವಿಸು; ನಡೆ.

Éver ಎವರ್ (ಕ್ರಿ. ವಿ.) ಎಂದಿಗೂ; ಎಂದೂ; ಯಾವಾಗಲೂ; ಎಲ್ಲ ಕಾಲದಲ್ಲೂ; ಸದಾ; ಸರ್ವದಾ; ಯಾವಾಗಲಾದರೂ; ಎಂದಾದರೂ. For e., For e. and e., For e. and a day ಮುಂದೆ ಎಂದೆಂದಿಗೂ; ಸಂತತವಾಗಿ; ಸದಾ. Evermore ಯಾವಾಗಲೂ; ಎಂದಿಗೂ. E. after, E. since ಅಂದಿನಿಂದ; ಅಂದಿನಿಂದೀಚೆಗೆ. (ಪ್ರಾಚೀ. ಪ್ರ.) E. and anon ಆಗಾಗ; ಅಡಿಗಡಿಗೆ; ಪದೇ ಪದೇ; ಪುನಃ ಪುನಃ. Did you e. hear such stuff? ನೀನು ಇಂಥ ಪೊಳ್ಳು ಮಾತನ್ನು ಎಂದಾದರೂ ಕೇಳಿದ್ದೀಯಾ? Be as quick as e. you can ನಿನ್ನಿಂದ ಸಾಧ್ಯವಾಗುವ ಮಟ್ಟಿಗೂ ಬೇಗ, ನಡೆ, ಮಾಡು. What e. does he want? ಅವನಿಗೆ ಇನ್ನೇನು ತಾನೆ ಬೇಕು? Who e. can it be? ಮತ್ತೆ ಯಾರಾಗಿದ್ದಾರು? Which e. Brown do you mean? ಮತ್ತೆ ಯಾವ ಬ್ರೌನನ್ನು ನೀನು ಹೇಳುವುದು? How e. did I drop it? ನಾನು ಅದನ್ನು ಹೇಗೆ ಕೆಡವಿಕೊಂಡಿದ್ದೇನು? E. so (ಹಿಂದೆ, Never so) ಬಹಳ (It is e. so much easier ಅದು ಎಷ್ಟೋ ಸುಲಭ). Did you e.? ನೀನು ಎಂದಾದರೂ ನೋಡಿರುವೆಯಾ? ಕೇಳಿರುವೆಯಾ?

Éverglade ಎವರ್‌ಗ್ಲೇಡ್ (ನಾ.) (ಅಮೆ. ಸಂ.) ಜವುಗು ಪ್ರದೇಶ (ಮು., The everglades ದಕ್ಷಿಣ ಫ್ಲಾರಿಡ ಪ್ರಾಂತದಲ್ಲಿಯದು)

Évergreen ಎವರ್‌ಗ್ರೀನ್ (ಗು., ನಾ.) ಯಾವಾಗಲೂ ಹಸುರಾಗಿಯೂ ಹೊಸತಾಗಿಯೂ ಇರುವ (ಗಿಡ, ಮೊ.); ನಿತ್ಯಹಸುರು (ಗಿಡ); ಎಲ್ಲ ಋತುಗಳಲ್ಲಿಯೂ ಹಸುರೆಲೆಗಳನ್ನುಳ್ಳ (ಗಿಡ, ಪೊದರು, ಮೊ.) (Deciduous ಪದದ ಅರ್ಥದೊಡನೆ ಹೋಲಿಸಿ ನೋಡಿ); (ರೂಪ.) ಯಾವಾಗಲೂ ಹೊಸತಾಗಿರುವ.

Everlásting ಎವರ್‌ಲಾಸ್ಟಿಂಗ್ (ಗು., ನಾ.) ಎಂದೆಂದೂ ಇರುವ; ಯಾವಾಗಲೂ ಇರುವ; ನಿತ್ಯ; ಶಾಶ್ವತ; ಬಹು ಕಾಲ ಬಾಳುವ; ಪ್ರತಿ ನಿತ್ಯದ. (ಸಸ್ಯಗಳ ವಿಷಯದಲ್ಲಿ) ಒಣಗಿಸಿದಮೇಲೆಯೂ ಬಣ್ಣವನ್ನೂ ಆಕಾರವನ್ನೂ ಉಳಿಸಿಕೊಂಡಿರುವ. (ನಾ.) ಅನಂತ ಕಾಲ; ಶಾಶ್ವತ ಕಾಲ (From e.; The E. ಶಾಶ್ವತ ಪುರುಷ; ದೇವರು). ಒಣಗಿದಮೇಲೆಯೂ ಬದಲಾಯಿಸದ ಹೂವು (ಬಿಡುವ ಗಿಡ). (ಒಡಲನಲ್ಲಿ) ಉಬ್ಬೆಳೆಗಳುಳ್ಳ ಮೂರೆನೆಯ್ಗೆಯ ಉಣ್ಣೆಯ ಬಟ್ಟೆ. **Everlástingly** (ಕ್ರಿ. ವಿ.); **Everlástingness** (ನಾ.)

Evért ಇವರ್ಟ್ (ಕ್ರಿ. ಸಕ.) (ಶ. ವಿ.) (ಅಂಗ, ಮೊ. ನ್ನು) ಒಳ ಹೊರಗು ಮಾಡು. (ಪ್ರಾಚೀ. ಪ್ರ.) (ಸರ್ಕಾರ, ಮೊ. ನ್ನು) ಉರುಳಿಸಿಬಿಡು, ಕೆಡವಿಬಿಡು, ತಲೆಕೆಳಗು ಮಾಡು. **Evérsion** (ನಾ.)

Évery ಎವರಿ, ಎವ್ರಿ (ಗು.) ಪ್ರತಿ; ಪ್ರತಿಯೊಂದೂ; ಒಂದೊಂದೂ; ಒಬ್ಬೊಬ್ಬರೂ; ಪ್ರತಿಯೊಬ್ಬರೂ; ಎಲ್ಲ; ಎಲ್ಲರೂ. It engaged his e. thought ಅವನ ಯೋಚನೆಯೆಲ್ಲ ಅದರಮೇಲೆಯೇ ಇದ್ದಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

He comes e. other day ಅವನು ದಿನ ಬಿಟ್ಟು ದಿನ ಬರುತ್ತಾನೆ. E. now and then, E. now and again ಆಗಾಗ; ಆಗಿಂದಾಗ್ಗೆ; ಅಡಿಗಡಿಗೆ; ಬಾರಿ ಬಾರಿಗೂ. E. bit as much ಸಂಪೂರ್ಣವಾಗಿ. **Éverybody** — ಬಾ(ಬ)ಡಿ(ನಾ.) ಪ್ರತಿಯೊಬ್ಬರೂ. E. else ಉಳಿದವರೆಲ್ಲರೂ. **Éveryday** (ನಾ., ಗು.) ಪ್ರತಿ ದಿನವೂ (ಸಂಭವಿಸುವ); ಪ್ರತಿದಿನದ; ನಿತ್ಯಗಟ್ಟಳೆಯ; (ಸರ್ವ) ಸಾಮಾನ್ಯವಾದ; ಸಾಧಾರಣವಾದ. (Every one), **Éveryone** (ಸ. ನಾ.) ಪ್ರತಿಯೊಬ್ಬನೂ; ಪ್ರತಿಯೊಂದೂ. = **Éveryman** (ನಾ) ಸಾಧಾರಣ ಮನುಷ್ಯ; ಯಾವೊಬ್ಬಾತ. **Éverything** (ಸ. ನಾ.) ಪ್ರತಿಯೊಂದೂ; ಎಲ್ಲವೂ; ಸರ್ವಸ್ವ; ಮುಖ್ಯವಾದದ್ದು (Pace is e. ನಡೆ, ಗತಿ, ಅತ್ಯಂತ ಮುಖ್ಯವಾದದ್ದು). Every time ಎಲ್ಲ ಕಾಲದಲ್ಲೂ; ಪ್ರತಿ ಸಲವೂ; ಸದಾ; ತಪ್ಪದೆ. **Éveryway** (ಕ್ರಿ. ವಿ.) ಪ್ರತಿ ಮಾರ್ಗದಲ್ಲೂ; ಎಲ್ಲ ರೀತಿಯಲ್ಲೂ. **Éverywhere** (ಕ್ರಿ. ವಿ.) ಎಲ್ಲೆಲ್ಲೂ; ಎಲ್ಲೆಡೆಯಲ್ಲೂ; ಸರ್ವತ್ರ.

Evíct ಇವಿಕ್ಟ್ (ಕ್ರಿ. ಸಕ.) (ಮು., ಜಮೀನು, ಮೊ. ಗಳಿಂದ ಹಿಡುವಳಿದಾರನನ್ನು) ಹೊರಡಿಸು, ಓಡಿಸಿಬಿಡು, ಅಟ್ಟಿಬಿಡು, ತಳ್ಳಿಬಿಡು, ದಬ್ಬಿಬಿಡು. (ಆಸ್ತಿಯನ್ನು, ಅದರ ಹಕ್ಕನ್ನು, ಒಬ್ಬನಿಂದ, ಕಾನೂನು ಕ್ರಮ ಜರುಗಿಸಿ) ಹಿಂದಕ್ಕೆ ಪಡೆ, ಸ್ವಾಧೀನಪಡಿಸಿಕೊ. **Evíction** (ನಾ.); **Evíctor** (ನಾ.)

Évidence ಎವಿಡೆನ್ಸ್ (ನಾ., ಕ್ರಿ. ಸಕ.) ಸ್ಪಷ್ಟತೆ; ವ್ಯಕ್ತತೆ (ಮು., In e. ಸ್ಪಷ್ಟವಾಗಿ; ಸುವ್ಯಕ್ತವಾಗಿ; ಕಣ್ಣಿಗೆ ಕಾಣಿಸುವಂತೆ; ಪ್ರತ್ಯಕ್ಷವಾಗಿ). ಸೂಚನೆ; ನಿದರ್ಶನ; ಗುರುತು; ಕುರುಹು; ಚಿಹ್ನೆ; ಲಕ್ಷಣ; ಪ್ರಮಾಣ (External e. ಬಾಹ್ಯ ಪ್ರಮಾಣ; Internal e. ಆಂತರಿಕ ಪ್ರಮಾಣ). (ನ್ಯಾ. ಶಾ.) (ಹೇಳಿಕೆಯಿಂದ ಅಥವಾ ದಸ್ತೈವಜು, ಮೊ. ಗಳಿಂದ ವಸ್ತುಸ್ಥಿತಿಯನ್ನು, ಸಂಗತಿಯನ್ನು, ಸ್ಥಾಪಿಸುವ) ರುಜುವಾತು, ಸಾಕ್ಷ್ಯ [Call (person) in e. ಸಾಕ್ಷಿಯಾಗಿ ಕರೆ. Circumstantial, Presumptive, Verbal, e. (ಆಯಾ ಪದಗಳನ್ನು ನೋಡಿ). Turn King's, Queen's, e. (ಒಂದು ತಕ್ಸೀರಿನಲ್ಲಿ ಸೇರಿದ್ದವನು) ತನ್ನ ಸಹಅಪರಾಧಿತರಿಗೆ ವಿರೋಧವಾಗಿ ಸಾಕ್ಷ್ಯ ಕೊಡು; ಸರ್ಕಾರಿ ಸಾಕ್ಷಿಯಾಗು]. (ಕ್ರಿ.) ತೋರಿಸು; ಸೂಚಿಸು; ಪ್ರಮಾಣವಾಗಿರು; ಸಾಕ್ಷಿಯಾಗಿರು. **Evidéntial** — ಷಲ್ (ಗು.) ಸಾಕ್ಷ್ಯದ; ಸಾಕ್ಷ್ಯಾಧಾರವಾದ; ರುಜುವಾತನ್ನು ಒದಗಿಸುವ; ರುಜುವಾತಿನ ಸ್ವಭಾವದ. **Evidéntiary** — ಷರಿ (ಗು.) = Evidential. **Evidéntially** (ಕ್ರಿ. ವಿ.); **Évident** (ಗು.) (ಕಣ್ಣಿಗೂ ಮನಸ್ಸಿಗೂ) ಸ್ಪಷ್ಟ; ಪ್ರತ್ಯಕ್ಷ; ವ್ಯಕ್ತ; ವಿಶದ; ಸ್ಫುಟ; ಪ್ರಕಾಶ. **Évidently** (ಕ್ರಿ. ವಿ.)

Évil ಈವಿಲ್ (ಗು., ನಾ., ಕ್ರಿ. ವಿ.) ಕೆಟ್ಟ; ದುಷ್ಟ; ಹೊಲ್ಲ; ಕೇಡು ಮಾಡುವ (The E. One ಸೈತಾನ. Of e. repute ಕೆಟ್ಟ ಹೆಸರಿನ. An e. tongue ದೂರುವ, ನಿಂದಿಸುವ, ನಾಲಗೆ; ಕೆಟ್ಟ ಬಾಯಿ. E. eye ಕೇಡುಕು ನೋಟ; ಕೆಟ್ಟ ಕಣ್ಣು; ಕೆಟ್ಟ ದೃಷ್ಟಿ; ದೃಷ್ಟಿ ದೋಷ). (ನಾ.) ಕೇಡು; ಕೇಡುಕು; ಕೆಟ್ಟದ್ದು; ಹೊಲ್ಲೆಹ; ದುಷ್ಕೃತ್ಯ; ಪಾಪ (Of two evils choose the less ಎರಡು ಕೇಡುಕುಗಳಲ್ಲಿ ಕಡಮೆಯಾದುದನ್ನು ಆಯ್ದುಕೊ. E.-doer ಕೇಡುಕು ಮಾಡುವವನು; ಕೇಡಿಗ; ಪಾಪ ಕರ್ಮಿ. Aleppo e. ಕುರುಗಳೇಳುವ ಒಂದು ತೆರದ ರೋಗ); ರಾಜರು ಮುಟ್ಟಿದರೆ ಗುಣವಾಗುವುದೆಂಬ ನಂಬಿಕೆಯಿದ್ದ ಒಂದು ಗ್ರಂಥಿವ್ಯಾಧಿ: ಗಂಡಮಾಲೆ (= King's evil). (ಕ್ರಿ. ವಿ.) ಕೇಡುಕಾಗಿ; ಕೆಟ್ಟ ರೀತಿಯಲ್ಲಿ (Speak e. of). **Évilly** (ಕ್ರಿ. ವಿ.)

Evínce ಇವಿನ್ಸ್ (ಕ್ರಿ. ಸಕ.) ತೋರಿಸು; ಸೂಚಿಸು; ವ್ಯಕ್ತಪಡಿಸು. (ಗುಣ, ವೈಶಿಷ್ಟ್ಯ, ಮೊ. ನ್ನು) ಪ್ರದರ್ಶಿಸು, ಪ್ರಕಾಶಗೊಳಿಸು. **Evíncive** (ಗು.) ಪ್ರದರ್ಶಿಸುವ.

Évirate ಈ(ಎ)ವಿರೇಟ್ (ಕ್ರಿ. ಸಕ.) ಬೀಜವೊಡೆ; ಹಿಡಾ ಮಾಡು; (ರೂಪ.) ಪುಂಸ್ತ್ವ ಕಳೆ; ನಿರ್ವೀರ್ಯ ಮಾಡು; ನಿಸ್ಸತ್ವ ಮಾಡು. **Evirátion** ಎವಿರೇಷನ್ (ನಾ.)

Evíscerate ಇವಿಸೆರೇಟ್ (ಕ್ರಿ. ಸಕ.) ಕರುಳು ತೆಗೆ, ಬಗಿ. (ರೂಪ.) (ಒಂದು ವಸ್ತುವಿನಿಂದ) ಒಳಹುರುಳು ತೆಗೆದುಹಾಕು; ನಿಸ್ಸತ್ವಮಾಡು; ನಿಸ್ಸಾರ ಮಾಡು; ನಿತ್ರಾಣ ಮಾಡು. **Eviscerátion** (ನಾ.)

Evóke ಇವೋಕ್ (ಕ್ರಿ. ಸಕ.) (ಸತ್ತವನ ಪ್ರೇತ, ಮನೋಭಾವಗಳು, ನೆನಪುಗಳು, ಶಕ್ತಿಗಳು) ಎದ್ದುಬರುವಂತೆ, ಮೇಲೇಳುವಂತೆ, ಮಾಡು; ಕರೆ; ಎಬ್ಬಿಸು; ಬರಿಸು; ಆವಾಹನೆ ಮಾಡು; ಆಹ್ವಾನಿಸು. (ದಾವೆ) ಮೇಲಿನ ಕೋರ್ಟಿಗೆ ಕರಸು. **Evocátion** ಎವೊ — (ನಾ.); **Evócative** ಇವಾ(ವೊ)ಕಟಿವ್ (ಗು.) ಹೊರ ಸೆಳೆಯುವ. **Evócatory** ಇವಾಕಟ(ಟೋ)ರಿ (ಗು.) ಕರೆಕೊಡುವ; ಬರಿಸುವ.

Évolute ಎವೊಲ್ಯೂಟ್ (ಗು., ನಾ.) ಒಂದು ವಕ್ರರೇಖೆಯ ವಕ್ರಕೇಂದ್ರಗಳನ್ನು ಸೇರಿಸುವುದರಿಂದಾದ ಮತ್ತೊಂದು ವಕ್ರರೇಖೆ; ವಕ್ರರೇಖಾ ಕೇಂದ್ರ ಪಥ; ಅನುವಕ್ರ (= E. curve)

Evolútion. **Evolve** ನೋಡಿ.

Evólve ಇವಾಲ್ವ್ (ಕ್ರಿ.) ಅರಳು; ಬಿಚ್ಚಿಕೊ; ಹೊಮ್ಮು; ವಿಕಸಿಸು; (ರೂಪ.) ಕ್ರಮ ಕ್ರಮವಾಗಿ, ಕ್ರಮ ಸರಣಿಯಲ್ಲಿ, ಬರು, ತರು. (ಉಷ್ಣ, ಮೊ. ನ್ನು) ಸೂಸು, ಹೊರ ಬಿಡು. (ವಾದ, ಸಂಗತಿಗಳು, ಮೊ. ನ್ನು) ಪರಿಣಾಮಗೊಳಿಸು; ನಿಗಮನ ಮಾಡು; ಬೆಳಸು; ಕಟ್ಟು [E. from one's inner consciousness ಮನೋಭಾವನೆಯಿಂದ ಕಟ್ಟು (ಅನೇಕ ವೇಳೆ ಹಾಸ್ಯವಾಗಿ)]. **Evólvement** (ನಾ.); **Evolútion** ಎ(ಈ)ವೊಲ್ಯೂಷನ್ (ನಾ.) (ಸುರುಳಿ, ಮೊಗ್ಗು, ಮೊ.) ಬಿಚ್ಚಿಕೊಳ್ಳುವುದು, ಅರಳುವುದು, ವಿಕಸನ (ರೂಪ. ಸಹ). (ಘಟನೆಗಳು, ಮೊ.) ಪರಂಪರೆಯಾಗಿ ಕಾಣಿಸಿಕೊಳ್ಳುವುದು. (ಅನಿಲ, ಉಷ್ಣ, ಮೊ.) ಹೊರ ಸೂಸುವುದು. (ಗಣಿತ) ಘಾತಮೂಲ ಕಂಡುಹಿಡಿಯುವುದು. (ಜೀವಿ, ಸಂವಿಧಾನ, ವಾದ, ಮೊ. ಗಳ) ವಿಕಾಸ, ವಿಕಸನ, ಪರಿಣಾಮ (Theory of E. ಗರ್ಭಧಾರಣವಾಗುವುದರಿಂದ ಭ್ರೂಣವು ಹೊಸದಾಗಿ ಸೃಷ್ಟಿಯಾಗುವುದಿಲ್ಲವೆಂದೂ, ಹಿಂದಿನಿಂದ ಬಂದದ್ದೇ ವಿಕಾಸವಾಗುವುದೆಂದೂ ಹೇಳುವ ವಾದ: ವಿಕಾಸ ವಾದ; ಪರಿಣಾಮ ವಾದ). ಜೀವಿ ವಂಶಗಳು ಪ್ರತ್ಯೇಕ ಪ್ರತ್ಯೇಕವಾಗಿ ಸೃಷ್ಟಿಯಾಗದೆ ಹಿಂದಿನ ರೂಪಗಳಿಂದ ವಿಕಾಸವಾಗುವುದು. ವಿಶ್ವದ್ರವ್ಯವು ಒಟ್ಟುಗೂಡುವುದರಿಂದ ಆಕಾಶ ಕಾಯಗಳ ರಚನೆ. ಸೇನಾ ದಳಗಳ, ಹಡಗುಗಳ, ವಿನ್ಯಾಸದಲ್ಲಾಗಲಿ ಚಲನೆಯಲ್ಲಾಗಲಿ ಮಾಡುವ ಬದಲಾವಣೆ. ಕುಣಿತ, ಮೊ. ಗಳಲ್ಲಿ ಸುತ್ತುತಿರುಗುವುದು, ಚಲನೆ. **Evolútional** (ಗು.); **Evolútionary** (ಗು.); **Evolútionism** (ನಾ.) ವಿಕಾಸ ವಾದ; ಪರಿಣಾಮ ವಾದ. **Evolútionist** (ನಾ.)— ವಾದಿ. **Evolutionístic** (ಗು.); **Évolutive** ಎವೊಲ್ಯು(ಲ್ಯೂ)ಟಿವ್ (ಗು.) ವಿಕಾಸಕ; ವಿಕಸನ ಸಹಕಾರಿ.

Evúlsion ಇವಲ್ಷನ್ (ನಾ.) ಬಲವಂತದಿಂದ ಕಿತ್ತುಹಾಕುವುದು; ಉತ್ಪಾಟನ.

Ewe ಯೂ (ನಾ.) ಹೆಣ್ಣುಕುರಿ. One's e. lamb (ಒಬ್ಬನ ಅತ್ಯಂತ ವಿಶ್ವಾಸಪಾತ್ರವಾದ ಆಸ್ತಿ; ಸರ್ವಸ್ವವೆಂದು ತಿಳಿದುಕೊಂಡಿರುವುದು)

Éwer ಯೂಅರ್ (ನಾ.) ಹೂಜಿ; ಮಲಗುವ ಮನೆಯಲ್ಲಿಯ ನೀರಿನ ಕೂಜ.

Ex (L) ಎಕ್ಸ್ (ಉಪ.) (ವ್ಯಾಪಾರ) ಇಂದ; ಹೊರಗೆ (Ex ship, Ex store ಹಡಗಿನಿಂದ, ಕೋಠಿಯಿಂದ, ಹೊರಗೆ ತಂದು ಮಾರಿದ). Ex dividend (ಸಂಕ್ಷಿಪ್ತ: Ex div., x.d.) ಮುಂದಿನ ಲಾಭಾಂಶ ಹೊರತು.

Ex- ಎಕ್ಸ್ — (ಪೂ. ಪ್ರ.) (೧) (L) ಹೊರಕ್ಕೆ; ಮುಂದಕ್ಕೆ (Exclude, Exit). ಪೂರ್ತಿಯಾಗಿ, ಸಂಪೂರ್ಣವಾಗಿ (Excruciate). ಹೊರಡಿಸು; ಅಟ್ಟಿಬಿಡು; ಬಿಡುಗಡೆ ಮಾಡು (Exonerate, Expatriate). ಇಲ್ಲದಿರುವ (Ecaudate ಬಾಲವಿಲ್ಲದ). (೨) (Gk) ಹಿಂದೆ; ಹಿಂದೆ ಇದ್ದ; ಪೂರ್ವದ; ಮಾಜಿ (Ex-Chancellor, Ex-Prime-Minister)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Exácerbate ಎಗ್ಸ್ಯಾಸರ್‌ಬೇಟ್, ಎಕ್ಸ್ಯಾ— (ಕ್ರಿ. ಸಕ.) (ನೋವು, ರೋಗ, ಕೋಪ, ಇವನ್ನು) ಹೆಚ್ಚಿಸು, ಉಲ್ಬಣ ಮಾಡು ; ರೇಗಿಸು ; ಕೆರಳಿಸು ; ಉದ್ರೇಕಿಸು. **Exacerbátion** (ನಾ.)

Exáct ಎಗ್ಸ್ಯಾಕ್ಟ್ (ಗು., ಕ್ರಿ. ಸಕ.) ಸರಿಯಾದ ; ನಿಷ್ಕೃಷ್ಟವಾದ. ನಿಕರವಾದ ; ಖಂಡಿತವಾದ ; ಕರಾರುವಾಕು. (ಮನುಷ್ಯ, ಅಭಿಪ್ರಾಯ, ವಿವರಣೆ, ವರದಿ, ಉತ್ತರ, ಮೊ.) ಯಥಾರ್ಥವಾದ, ಹೆಚ್ಚುಕಡಮೆ ಯಿಲ್ಲದ ; ತಪ್ಪಿಲ್ಲದ ; ನೇರವಾದ (E. sciences ಸಂಪೂರ್ಣ ನಿಷ್ಕೃಷ್ಟತೆ ಯುಳ್ಳ ವಿಜ್ಞಾನ ಶಾಖೆಗಳು ; ನಿಷ್ಕೃಷ್ಟ ಶಾಸ್ತ್ರಗಳು). (ಕ್ರಿ.) (ಹಣ, ರುಸುಮು, ಮೊ. ನ್ನು ಕೊಟ್ಟುಬಿಡುವಂತೆ ಒಬ್ಬನನ್ನು ತಗಾದೆಮಾಡಿ, ವರಾತಮಾಡಿ) ಬಲಾತ್ಕಾರದಿಂದ ಪಡೆ ; ಕೀಳು ; ಸೆಳೆ. (ಕಾರ್ಯ, ನಡತೆ) ನಡೆಯುವಂತೆ ನಿರ್ಬಂಧಿಸು, ಒತ್ತಾಯಪಡಿಸು. (ಸಂದರ್ಭ ಗಳ ವಿಷಯದಲ್ಲಿ) ಕೂಡಲೆ ಮಾಡಬೇಕಾಗಿರು. **Exácting** (ಗು.) ಬಹಳ ಹೆಚ್ಚಾದ ಅನುಕೂಲ್ಯಗಳು, ಕಷ್ಟ ಪ್ರಯತ್ನಗಳು, ತ್ಯಾಗ, — ಇವು ಆವಶ್ಯಕವಾದ ; ಕಷ್ಟತರ. **Exáctable** (ಗು.) ; **Exáctor** (ನಾ.) (ಮು., ಅಧಿಕಾರ ಬಲದಿಂದ) ಸುಲಿಯುವವನು. **Exáction** (ನಾ.) (ಹಣ, ಮೊ. ಗಳ) ಸುಲಿಗೆ ; ಬಲವಂತದಿಂದ ಸೆಳೆಯುವುದು ; ಹೀಗೆ ಸೆಳೆದ ಹಣ, ವಸ್ತು. ಮಿತಿ ಮೀರಿದ ತೆರಿಗೆ, ದಂಡ. **Exáctly** (ಕ್ರಿ. ವಿ.) (ಗುಣವಾಚಕಾರ್ಥಗಳಲ್ಲಿ). (ಉತ್ತರ ಅಥವಾ ಒಪ್ಪಿಗೆ ಯಾಗಿ) ಸರಿಯೇ ; ಅದೇ ; ಅಹುದು ; ನಿಜವಾಗಿ ಹಾಗೆಯೇ ; ನೀನು ಹೇಳುವಂತೆಯೇ ಸರಿ. **Exáctness** (ನಾ.) ; **Exáctitude** (ನಾ.) ನಿಷ್ಕೃಷ್ಟತೆ.

Exággerate ಎಗ್ಸ್ಯಾಜೆರೇಟ್ (ಕ್ರಿ. ಸಕ.) ನಿಜವಾಗಿರುವುದಕ್ಕಿಂತಲೂ ಹೆಚ್ಚಾಗಿ ತೋರಿಸು ; ಅತಿ(ಶಯ)ಮಾಡು ; ಹೆಚ್ಚುಮಾಡು ; ಇಲ್ಲದ ಗುರುತ್ವವನ್ನಾರೋಪಿಸು. (ಆಕಾರ, ಮೊ. ನ್ನು) ವಿಪರೀತ ದೊಡ್ಡ ದಾಗಿ ಮಾಡು. **Exággeratedly** (ಕ್ರಿ. ವಿ.) ; **Exaggerátion** (ನಾ.) ಅತಿಶಯೋಕ್ತಿ ; ಅತ್ಯುಕ್ತಿ. **Exággerative** (ಗು.) ; **Exággeratively** (ಕ್ರಿ. ವಿ.) ; **Exággerator** (ನಾ.)

Exált ಎಗ್ಸಾಲ್ಟ್ (ಕ್ರಿ. ಸಕ.) ಮೇಲೆತ್ತು ; ಮೇಲೇರಿಸು ; ದರ್ಜೆ, ಅಧಿಕಾರ, ಮೊ. ನ್ನು ಹೆಚ್ಚಿಸು. ಸ್ತೋತ್ರಮಾಡು ; ಹೊಗಳು (E. to the skies ಆಕಾಶಕ್ಕೇರಿಸು). ಘನತೆಗೇರಿಸು ; ಗಾಂಭೀರ್ಯ ಗೊಳಿಸು ; ಉತ್ಕರ್ಷಿಸು ; ಉನ್ನತ ಮಾಡು (ಮು., ಭೂ. ಕೃ. ನಲ್ಲಿ). (ಬಣ್ಣ, ಮೊ. ನ್ನು) ಗಾಢ ಮಾಡು ; ಉಜ್ಜ್ವಲಗೊಳಿಸು ; ಶುದ್ಧ ಮಾಡು. **Exaltátion** (ನಾ.) ಮೇಲೆತ್ತುವುದು ; ಮೇಲೇರಿಸುವುದು (ಸಾ., ರೂಪ. ದಲ್ಲಿ). ಆನಂದಾತಿರೇಕ ; ಪರವಶತೆ ; ಮಹೋತ್ಕರ್ಷ.

Exámine ಎಗ್ಸ್ಯಾಮಿನ್ (ಕ್ರಿ.) ಶೋಧಿಸು ; ಪರೀಕ್ಷಿಸು ; ವಿಚಾರಣೆ ಮಾಡು ; ಒಳಹೊಕ್ಕು ನೋಡು ; ಆರಯ್ಯಿ. **Examinátion** (ನಾ.) ಶೋಧನೆ ; ವಿಚಾರಣೆ (Post-mortem e. ಶವ ಪರೀಕ್ಷೆ) ; (ವಿದ್ಯಾರ್ಥಿ) ಪರೀಕ್ಷೆ (ಸಂಕ್ಷಿಪ್ತ : Exam.). E.-paper ಪ್ರಶ್ನ ಪತ್ರಿಕೆ ; ಪರೀಕ್ಷಾ ಪತ್ರಿಕೆ. **Examinátional** (ಗು.) ಪರೀಕ್ಷೆಯ ; ಪರೀಕ್ಷೆಗೆ ಸಂಬಂಧ ಪಟ್ಟ. **Exáminant, Exáminer** (ನಾ.) ಪರೀಕ್ಷಕ. **Exáminee** (ನಾ.) ಪರೀಕ್ಷ್ಯ ; ಪರೀಕ್ಷೆಗೊಳಗಾಗುವವನು. **Examinatórial** — ನಟೋ — (ಗು.), **Exáminatory** — ಟೋ(ಟ)ರಿ (ಗು.) ಪರೀಕ್ಷೆಯ ; ಪರೀಕ್ಷಕರ ; — ಗೆ ಸಂಬಂಧಪಟ್ಟ.

Exámple ಎಗ್ಸಾಂಪ್‌ಲ್ (ನಾ., ಕ್ರಿ. ಸಕ.) (ಸಾಮಾನ್ಯ ನಿಯಮ ವನ್ನು ಸ್ಪಷ್ಟಪಡಿಸುವುದಕ್ಕಾಗಿ ಕೊಡುವ) ದೃಷ್ಟಾಂತ, ಉದಾಹರಣೆ; ಉದಾಹರಣೆಗಾಗಿ ಕೊಡುವ ಪ್ರಶ್ನೆ, ಅಭ್ಯಾಸ. (ಚಿತ್ರ, ಕೆಲಸ ಗಾರಿಕೆ, ಮೊ. ಗಳ) ಮಾದರಿ, ಆದರ್ಶ, ಮೇಲ್ಪಂಕ್ತಿ. ಇತರರಿಗೆ ಎಚ್ಚರಿಕೆ (Make an e. of him ಇತರರಿಗೆ ಎಚ್ಚರಿಕೆ ಕೊಡುವಂತೆ ಅವನನ್ನು ದಂಡಿಸು). ಹಿಂದಿನ ಬಳಕೆ ; ಪೂರ್ವ ರೂಢಿ (Beyond e. ಅನಾದರ್ಶವಾದ. Without e. ದೃಷ್ಟಾಂತ ರಹಿತ. Set a good e. ಒಳ್ಳೆ ಮೇಲ್ಪಂಕ್ತಿ ಹಾಕು. Take e. by ಅನುಸರಿಸು ; ಅನುಕರಿಸು). (ಕ್ರಿ.) ಉದಾಹರಿಸು ; ದೃಷ್ಟಾಂತ ಕೊಡು (ಭೂ. ಕೃ. ನಲ್ಲಿ). **Exémplar** ಎಗ್ಝೆಂಪ್ಲರ್ (ನಾ.) ಮಾದರಿ ; ಆದರ್ಶ ; ಮೇಲ್ಪಂಕ್ತಿ ; ದೃಷ್ಟಾಂತ ; ಉದಾಹರಣೆ. **Exémplary** (ಗು.) ಆದರ್ಶಪ್ರಾಯ ; ಮಾದರಿಯಾದ ; ದೃಷ್ಟಾಂತವಾದ ; ಎಚ್ಚರಿಕೆಯ [E. damages (ನ್ಯಾ. ಶಾ.) ಪರಿಹಾರಕ್ಕೆ ಆವಶ್ಯಕವಾದುದಕ್ಕಿಂತಲೂ ಹೆಚ್ಚಾಗಿ ತೆರಿಸಿದ ದಂಡ]. **Exémplarily** (ಕ್ರಿ. ವಿ.) ; **Exémplariness** (ನಾ.) ; **Exémplify** (ಕ್ರಿ. ಸಕ.) ಉದಾಹರಣೆ, ದೃಷ್ಟಾಂತ, ಕೊಡು ; — ಆಗಿರು. (ಒಂದು ದಸ್ತೈವಜಿನ) ಮುದ್ರೆಯೊತ್ತಿದ ಅಧಿಕಾರಪ್ರತಿ ತಯಾರಿಸು. **Exémplificátion** (ನಾ.)

Exánimate ಎಗ್ಸ್ಯಾನಿಮೇಟ್, ಎಕ್ಸ್ಯಾ — (ಗು.) ಸತ್ತ ; ಮೃತ ; ನಿರ್ಜೀವ ; ನಿಶ್ಚೇತನ ; ನಿರುತ್ಸಾಹ ; ನಿಸ್ಸತ್ವ ; ಹುರುಪಿಲ್ಲದ.

Ex ánimo (L) ಎಕ್ಸ್ ಆ್ಯನಿಮೊ (ಕ್ರಿ. ವಿ., ಗು.) ಮನಃಪೂರ್ವಕ (ವಾಗಿ) ; ಹೃತ್ಪೂರ್ವಕ(ವಾಗಿ)

Exásperate ಎಗ್ಸಾಸ್ಪೆರೇಟ್ (ಕ್ರಿ. ಸಕ.) (ವೈಮನಸ್ಯ, ವ್ಯಾಧಿ, ನೋವು — ಇವನ್ನು) ಹೆಚ್ಚುಮಾಡು ; ಉಲ್ಬಣಮಾಡು ; ತೀವ್ರತೆ ಹೆಚ್ಚಿಸು. (ಒಬ್ಬ ನನ್ನು) ರೇಗಿಸು, ಕೆರಳಿಸು, ಉದ್ರೇಕಿಸು. **Exásperatingly** (ಕ್ರಿ. ವಿ.) ; **Exasperátion** (ನಾ.) ರೇಗು ; ಕೆರಳಿಕೆ ; ಉದ್ರೇಕ ; ತೀವ್ರತೆ.

Ex cathédra (L) ಎಕ್ಸ್ ಕತೀಡ್ರ, — ಕ್ಯಾತಿಡ್ರ (ಕ್ರಿ. ವಿ., ಗು.) ಅಧಿಕಾರ ಯುತ(ವಾಗಿ) ; — ವಾಣಿಯಿಂದ ; — ಸ್ಥಾನದಿಂದ ; ಗುರು ಪೀಠದಿಂದ.

Éxcavate ಎಕ್ಸ್‌ಕವೇಟ್ (ಕ್ರಿ. ಸಕ.) ತೋಡು ; ಅಗೆ ; ಬಗಿ ; ಅಗೆದು (ಗುಂಡಿ, ಕಾಲುವೆ) ಮಾಡು ; (ಭೂಮಿಯಿಂದ) ಅಗೆದು ಹೊರದೆಗೆ ; ಭೂಶೋಧನೆ ಮಾಡು. **Excavátion** (ನಾ.) (ಭೂಮಿಯನ್ನು) ತೋಡು ವುದು ; ತೋಡುಗೆಲಸ ; ಭೂಶೋಧನೆ. **Éxcavator** (ನಾ.) (ಭೂಮಿ ಯನ್ನು) ತೋಡುವವನು ; ಭೂಶೋಧಕ. ತೋಡುಯಂತ್ರ.

Exceéd ಎಕ್ಸೀಡ್ (ಕ್ರಿ.) (ಅಧಿಕಾರ, ಹಕ್ಕು, ಮೊ. ನ್ನು) ಮೀರು, ಅತಿ ಕ್ರಮಿಸು. (ಒಂದು ಗೊತ್ತಾದ ಮೊತ್ತ, ಮೊ. ಕ್ಕಿಂತ) ಹೆಚ್ಚಾಗಿರು ; ಹೆಚ್ಚಾಗು. (ತಿಂಡಿ, ಮೊ. ಗಳಲ್ಲ) ಮಿತಿ ಮೀರು. (ಒಬ್ಬನನ್ನು) ಮಿಂಚು, ಅತಿಶಯಿಸು ; ಸರ್ವೋತ್ಕೃಷ್ಟನಾಗಿರು ; ಸರ್ವೋತ್ತಮ ನಾಗಿರು. **Exceéding** [ಗು., (ಪ್ರಾಚೀ. ಪ್ರ.) ಕ್ರಿ. ವಿ.] ; **Exceédingly** (ಕ್ರಿ. ವಿ.) ; **Excéss** ಎಕ್ಸೆಸ್ (ನಾ.) ಮಿತಿ ಮೀರು ವುದು ; ಮಿತಿ ಮೀರಿದ್ದು ; ಮೀರಿಕೆ (In e. of ಹೆಚ್ಚಾಗಿ) ; ಹೆಚ್ಚು ; ಆಧಿಕ್ಯ ; ಅತಿ ; ಅತಿರೇಕ. (ಸಾ., ಬ. ವ. ದಲ್ಲಿ) ಅತ್ಯಾಚಾರ ; ತಿನ್ನುವುದರಲ್ಲಿ, ಕುಡಿಯುವುದರಲ್ಲಿ, ಮಿತಿಯಿಲ್ಲದಿರುವುದು ; ಅಮಿತಿ. ಒಂದಕ್ಕಿಂತ ಮತ್ತೊಂದು ಹೆಚ್ಚಾಗಿರುವ ಮೊತ್ತ. E. fare on railway ರೈಲುಪ್ರಯಾಣ ಮಾಡುವಲ್ಲಿ ಗೊತ್ತಾದ ದೂರಕ್ಕಿಂತಲೂ ಹೆಚ್ಚಾಗಿ ಹೋದುದರಿಂದಲೋ ಅಥವಾ ಗೊತ್ತಾದ ತರಗತಿಗಿಂತ ಮೇಲಿನ ತರಗತಿಯಲ್ಲಿ ಪ್ರಯಾಣ ಮಾಡಿದುದರಿಂದಲೋ ಕೊಡಬೇಕಾದ ಹೆಚ್ಚು ತೆರ. E. luggage ತೆರ ಕೊಡದೆ ತೆಗೆದುಕೊಂಡುಹೋಗಬಹುದಾದುದಕ್ಕಿಂತಲೂ ಹೆಚ್ಚಾದ ಪ್ರಯಾಣದ ಸಾಮಾನು. E. profits duty ಯುದ್ಧಸಂದರ್ಭದಲ್ಲಿ ಅತಿಯಾಗಿ ಬಂದ ಲಾಭದಮೇಲಿನ ತೆರಿಗೆ : ಅತಿಲಾಭದ ತೆರಿಗೆ. **Excéssive** (ಗು.) ಅತಿಯಾದ ; ವಿಪರೀತವಾದ. **Excéssively** (ಕ್ರಿ. ವಿ.)

Excél ಎಕ್ಸೆಲ್ (ಕ್ರಿ.) (ಇತರರನ್ನು ಗುಣಾತಿಶಯದಲ್ಲಿ, ಕಾರ್ಯದಲ್ಲಿ) ಮೀರು, ಮಿಗು, ಅತಿಶಯಿಸು ; ಮೇಲಾಗು ; ಅತ್ಯುತ್ತಮನಾಗಿರು ; ಉತ್ಕೃಷ್ಟವಾಗಿರು ; ಶ್ರೇಷ್ಠವಾಗಿರು. **Éxcellence** (ನಾ.) ಉತ್ಕೃಷ್ಟತೆ ; ಶ್ರೇಷ್ಠತೆ ; ಹೆಚ್ಚುಗಾರಿಕೆ ; ಮೇಲ್ಮೆ. **Éxcellency** (ನಾ.) (ರಾಯಭಾರಿಗಳು, ಪ್ರಾಂತಾಧಿಪತಿಗಳು ಮತ್ತು ಅವರ ಪತ್ನಿ ಯರು, ಇತರ ಕೆಲವರು ದೊಡ್ಡ ಅಧಿಕಾರಿಗಳು — ಇವರನ್ನು ಸಂಬೋ ಧಿಸುವಲ್ಲಿ ಉಪಯೋಗಿಸುವ ಗೌರವದ ಮಾತು : Your, His,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Her, E. ಘನತೆವೆತ್ತವರೆ! ಘನತೆ ವೆತ್ತ — !). **Excellent** (ಗು.) ಅತ್ಯುತ್ತಮವಾದ; ಶ್ರೇಷ್ಠವಾದ; ಘನವಾದ; ಬಹಳ ಒಳ್ಳೆಯದಾದ. **Excellently** (ಕ್ರಿ. ವಿ.)

Excélsior ಎಕ್ಸೆಲ್ಸಿಯಾ(ಯ)ರ್ (ಭಾವ. ಅವ್ಯ., ನಾ.) ಮತ್ತೂ ಮೇಲೆ! ಮೇಲೆ ಮೇಲೆ! (ವ್ಯಾಪಾರದ ಗುರುತು, ವೊ. ಗಳಲ್ಲಿ) ಮೇಲಾದದ್ದು, ಉತ್ತಮವಾದದ್ದು. (ಅಮೆ. ಸಂ.) ಮೆತ್ತೆ, ವೊ. ಕ್ಕೆ ತುಂಬುವುದಕ್ಕಾಗಿ ಉಪಯೋಗಿಸುವ ನಯವಾದ ಮತ್ತು ಮೃದುವಾದ, ತೋಬಡದ (ಹತ್ತಿರಿಯ) ದಾರುಪದಾರ್ಥದ ಸುರುಳಿಯ ಚೂರುಗಳು.

Excépt ಎಕ್ಸೆಪ್ಟ್ (ಕ್ರಿ., ಉಪ., ಸಂ. ಅವ್ಯ.), **Excépting** (ಉಪ., ಸಂ. ಅವ್ಯ. -ing ರೂಪವು *not*, *without* ಎಂಬ ಪದಗಳ ತರುವಾಯ ಮಾತ್ರ ಪ್ರಯೋಗ: ಉದಾ., We are all fallible except the Pope, not excepting the Pope. ಸಾ., always ಪದದ ತರುವಾಯ ಕೂಡ -ing ರೂಪವೇ). (ಎಣಿಕೆಯಿಂದ, ಹೇಳಿಕೆ, ವೊ. ಗಳಿಂದ) ಬಿಟ್ಟುಬಿಡು, ವಿನಾಯಿತಿ ಮಾಡು, ಹೊರತು ಮಾಡು (ಉದಾ., Present company excepted ಇಲ್ಲಿರುವವರನ್ನು ಬಿಟ್ಟು. E. him from the general pardon ಸಾಮಾನ್ಯ ಕ್ಷಮಾಪಣೆಯಿಂದ ಅವನನ್ನು ಹೊರತುಮಾಡು). ವಿರೋಧಿಸು; ಆಕ್ಷೇಪಿಸು; ಪ್ರತಿಭಟಿಸು. (ಉಪ., ಸಂ. ಅವ್ಯ.) ಹೊರತು; ಉಳಿದು; ಬಿಟ್ಟು; ವಿನಾಯಿಸಿ [We all failed e. him ಅವನು ಹೊರತು ನಾವೆಲ್ಲರೂ ತಪ್ಪಿಹೋದೆವು. E. for the omission of accents ಸ್ವರಭಾರ ಹಾಕದೆಯಿರುವುದನ್ನು ಬಿಟ್ಟರೆ. It is right e. that the accents are omitted ಅದೇನೊ ಸರಿಯೆ, ಆದರೆ ಸ್ವರಭಾರ ಹಾಕುವುದನ್ನು ಬಿಟ್ಟಿದೆ. (ಪ್ರಾಚೀ. ಪ್ರ.) E. he be born again ಅವನು ಮರಳಿ ಹುಟ್ಟಿದ ಹೊರತು]. **Excéption** —ಷನ್ (ನಾ.) ವಿನಾಯಿತಿ; ಅಪವಾದ; ಪ್ರತಿಷೇಧ; ವಿನಾಯಿತಿ ಮಾಡಿರುವುದು; ನಿಯಮವನ್ನನುಸರಿಸದಿರುವುದು. The e. proves the rule ಕೆಲವು ಅಪವಾದಗಳಿರುವುದು ನಿಯಮವಿರುವುದನ್ನು ಸಮರ್ಥಿಸುತ್ತದೆ; ಈ ಅಪವಾದಗಳನ್ನು ಬಿಟ್ಟು ಮಿಕ್ಕವಕ್ಕೆ ನಿಯಮ ಅನುವರ್ತಿಸುತ್ತದೆ. (ಬಳಕೆಯಲ್ಲಿ) ನನ್ನ ವಾದಾಂಶ ದುರ್ಬಲವಾದಷ್ಟೂ ನನ್ನ ನಂಬಿಕೆ ಬಲಗೊಳ್ಳುತ್ತದೆ. With the e. of (ಅದು) ಹೊರತು, ಬಿಟ್ಟು, ವಿನಾಯಿಸಿ. Take e. ಆಕ್ಷೇಪಿಸು. Subject, liable, to e. ಆಕ್ಷೇಪಣೆಗೆ ಅವಕಾಶವಿದ್ದು. **Excéptionable** (ಗು.) ಆಕ್ಷೇಪಣೆಗೆ ಅವಕಾಶವಿರುವ; ಆಕ್ಷೇಪಣೀಯ. **Excéptional** (ಗು.) ವಿನಾಯಿತಿಯಾಗಿರುವ; ಅಪವಾದಾತ್ಮಕ; ಅಸಾಧಾರಣವಾದ; ವಿಶೇಷ (E. advantages). **Excéptionally** (ಕ್ರಿ. ವಿ.); **Exceptionálity** — ನ್ಯಾ — (ನಾ.); **Excéptive** (ಗು.) (ತರ್ಕ, ವೊ.) (ಯಾವುದಾದರೊಂದನ್ನು) ವಿನಾಯಿತಿ ಮಾಡುವ. (ಮನುಷ್ಯ, ವೊ. ರ ವಿಷಯದಲ್ಲಿ) ಆಕ್ಷೇಪಿಸುವ; ಆಕ್ಷೇಪಕ; ತಪ್ಪು ಹುಡುಕುವ.

Éxcerpt ಎ(ಇ)ಕ್ಸರ್ಪ್‌ಟ್ (ನಾ.), **Excérpt** (ನಾ., ಕ್ರಿ. ಸಕ.) ಗ್ರಂಥ, ವೊ. ಗಳಿಂದ ಎತ್ತಿ ತೆಗೆದದ್ದು; ಉದ್ಧರಿಸಿದ ಭಾಗ; ಎತ್ತಿಕೆ. (ಪಂಡಿತಸಂಘ, ವೊ. ಗಳ ಕಾರ್ಯಕಲಾಪಗಳಿಂದ) ಖಾಸಗಿ ಪ್ರಚಾರಕ್ಕಾಗಿ ಎತ್ತಿ ಬೇರೆ ಮುದ್ರಿಸಿದ ಭಾಗ. (ಕ್ರಿ.) ಗ್ರಂಥ, ವೊ. ಗಳಿಂದ ಎತ್ತಿ ತೆಗೆ, ಉದ್ಧರಿಸು. **Excérptible** (ಗು.); **Excérption** (ನಾ.) ಎತ್ತಿ ಬರೆಯುವುದು, ಹೇಳುವುದು; ಎತ್ತಿ ಬರೆದದ್ದು, ಹೇಳಿದ್ದು; ಉದ್ಧರಣ; ಎತ್ತಿಕೆ.

Excéss, etc. **Exceed** ನೋಡಿ.

Exchánge ಎಕ್ಸ್‌ಚೇಂಜ್ (ನಾ., ಕ್ರಿ.) (ಸರಕು, ಯುದ್ಧದ ಸೆರೆಯಾಳು, ಏಟು, ಮಾತು, ವೊ. ಗಳ) ವಿನಿಮಯ, ಮಾರುವೆ, ಮಾರುಪಡಿ, ಬದಲಾಯಿಕೆ, ಅದಲು ಬದಲು [E. is no robbery (ನ್ಯಾಯವಲ್ಲದ ವಿನಿಮಯದ ವಿಷಯದಲ್ಲಿ ಹಾಸ್ಯವಾಗಿ) ಮಾರುವೆ ಸುಲಿಗೆಯಲ್ಲ]. (ಒಂದೇ ದೇಶದ ಬೇರೆ ರೂಪದ ನಾಣ್ಯಕ್ಕಾಗಲಿ, ಪರದೇಶದ ನಾಣ್ಯಕ್ಕಾಗಲಿ) ನಾಣ್ಯ ವಿನಿಮಯ; ನಾಣ್ಯ ವಿನಿಮಯ ವ್ಯಾಪಾರ; [Par of e. ಒಂದು ದೇಶದ ನಾಣ್ಯಪದ್ಧತಿಯನ್ನು ಮತ್ತೊಂದು ದೇಶದ ನಾಣ್ಯಪದ್ಧತಿಯೊಡನೆ ಹೋಲಿಕೆ ಮಾಡುವಲ್ಲಿ ಈ ನಾಣ್ಯಗಳಿಗೆ ಪರಸ್ಪರ ಸಂಬಂಧ ತೋರಿಸುವ ಗೊತ್ತಾದ ಬೆಲೆ: ಸರಿಮಾರುವೆಯ ದರ; ಅದಲು ಬದಲಿಯ ಸಾಮಾನ್ಯ ದರ. Rate, course, of e. ಪರದೇಶದ ನಾಣ್ಯಪದ್ಧತಿಯ ಮೇಲೆ ತೆಗೆದುಕೊಂಡ ಹುಂಡಿಗಳನ್ನು ಕೊಳ್ಳಬಹುದಾದ ದರ; ಈ ಬೆಲೆಗೂ ಸರಿಮಾರುವೆಯ ಬೆಲೆಗೂ ಇರುವ ವ್ಯತ್ಯಾಸ]. (ಮು., ಬೇರೆ ಬೇರೆ ದೇಶಗಳಲ್ಲಿ) ನಗದು ಹಣ ಕೊಡದೆ ಅವರವರ ಸಾಲಗಳನ್ನು ಹುಂಡಿಗಳ ಮೂಲಕ ಫೈಸಲುಮಾಡಿಕೊಳ್ಳುವ ಪದ್ಧತಿ (First, second, third, of e. ತಪ್ಪುದಾರಿ ಹಿಡಿಯಬಹುದೆಂಬ ಶಂಕೆಯಿಂದ ಕೊಡುವ ಒಂದೇ ಹುಂಡಿಯ ಮೊದಲನೆಯ, ಎರಡನೆಯ, ಮೂರನೆಯ, ಪ್ರತಿ). ಮತ್ತೊಂದಕ್ಕೆ ಮಾರುವೆ ಮಾಡಿಕೊಂಡ ವಸ್ತು; ಬದಲಾಯಿಸಿಕೊಂಡದ್ದು. ವ್ಯಾಪಾರಿಗಳು ವ್ಯಾಪಾರಕಾರ್ಯ ಮಾಡುವುದಕ್ಕಾಗಿ ಸೇರುವ ಕಟ್ಟಡ: ಮಾರುವೆ ಕಟ್ಟೆ (Stock-e. ಪಾಲು ಬಂಡವಾಳ, ಸರ್ಕಾರಿ ಸಾಲಪತ್ರ, ವೊ. ಗಳ ಕ್ರಯ ವಿಕ್ರಯದ ಮಂದಿರ; ಪತ್ರವ್ಯಾಪಾರ ಕಟ್ಟೆ). ಒಂದು ಪ್ರಾಂತದ ದೂರವಾಣಿವ್ಯವಸ್ಥೆಯ (ಟೆಲಿಫೋನ್) ಚಂದಾದಾರರ ತಂತಿಗಳೆಲ್ಲವೂ ಒಂದು ಸ್ಥಳದಲ್ಲಿ ಸೇರಿ ಒಬ್ಬರಿಂದೊಬ್ಬರಿಗೆ ಸಂಭಾಷಣ ಸಂಬಂಧ ಕಲ್ಪಿಸಿಕೊಡುವ ದೂರವಾಣಿ ಮಾರುವೆ ಅಥವಾ ಕೇಂದ್ರ. (ಕ್ರಿ.) ಒಂದಕ್ಕೆ ಬದಲಾಗಿ ಮತ್ತೊಂದು ವಸ್ತುವನ್ನು ಕೊಡು, ಪಡೆ; ಅದಲು ಬದಲು ಮಾಡು; (ಏಟು, ಮಾತು, ನೋಟ, ವೊ. ನ್ನು) ಕೊಟ್ಟು ತೆಗೆದುಕೊ, ವಿನಿಮಯ ಮಾಡು, ಮಾರುವೆ ಮಾಡು, ಸಾಟಿ ಮಾಡು. (ಒಂದು ಸೈನ್ಯದಳದಿಂದ ಅಥವಾ ಒಂದು ಹಡಗಿನಿಂದ ಮತ್ತೊಂದಕ್ಕೆ ಒಬ್ಬ ಹುದ್ದೇದಾರನನ್ನು) ವಿನಿಮಯ ಮಾಡಿಕೊ. **Exchángeable**—ಜಬ್‌ಲ್ (ಗು.) ವಿನಿಮಯ ಸಾಧ್ಯ. E. value ಒಂದು ಸರಕನ್ನು ಮತ್ತೊಂದರೊಡನೆ ವಿನಿಮಯ ಮಾಡಿಕೊಳ್ಳಬಹುದಾದ ಅಂದಾಜು ಬೆಲೆ: ಮಾರುವೆ ಬೆಲೆ. **Exchangeabílity** (ನಾ.)

Exchéquer ಎಕ್ಸ್‌ಚೆಕರ್ (ನಾ.) ದೇಶದ ವರಮಾನದ ಹಣವನ್ನು ತೆಗೆದುಕೊಂಡು ಇರಿಸಿಕೊಂಡಿರಲು ನಿಯಮಿತವಾದ, ಮುಖ್ಯ ಖಜಾನೆ, ಸರ್ಕಾರಿ ಇಲಾಖೆ, ಖಾತೆ: ವರಮಾನದ ಇಲಾಖೆ (Chancellor of the E. ಗ್ರೇಟ್ ಬ್ರಿಟನ್ನಿನ ಆರ್ಥಿಕ ಮಂತ್ರಿ); ರಾಜನ ಅಥವಾ ರಾಜ್ಯದ ಖಜಾನೆ, ಕೋಶ; ರಾಜ್ಯ ಕೋಶ; ಬೊಕ್ಕಸ. (ಒಬ್ಬನಲ್ಲಿರುವ) ಹಣ. ಹಿಂದೆ ಪ್ರತ್ಯೇಕವಾಗಿದ್ದ ಇಂಗ್ಲೆಂಡಿನ ಒಂದು ನ್ಯಾಯಸ್ಥಾನ (= Court of E.) (ಲೆಕ್ಕಮಾಡುವ ಮೇಜಿನಮೇಲೆ ಹಾಸಲು ಉಪಯೋಗಿಸುತ್ತಿದ್ದ ಪಪ್ಪಳಿ ನಮೂನೆಯ ಬಟ್ಟೆಯಿಂದ). E. bill (ಪಾರ್ಲಮೆಂಟಿನ ಅಧಿಕಾರದಿಂದ ಹೊರಟು ಚಾಲ್ತಿ ಬಡ್ಡಿಯನ್ನು ಪಡೆಯುವ) ಖಜಾನೆಯ ಹುಂಡಿ.

Excíse[1] ಎಕ್ಸೈಸ್ (ನಾ., ಕ್ರಿ. ಸಕ.) (ಸರಕು ತಯಾರಾಗುತ್ತಿರುವಾಗ ಅಥವಾ ಮಾರಾಟಕ್ಕೆ ಮೊದಲು, ಒಳದೇಶದ ಸರಕಿನಮೇಲೆ ಹಾಕುವ) (ಒಳ) ಸುಂಕ; ಸಾಯರು; ಜಕಾತಿ; ಈ ತೆರಿಗೆಯನ್ನು ವಸೂಲು ಮಾಡುವ ಇಲಾಖೆ: ಸುಂಕದ ಇಲಾಖೆ. (ಕ್ರಿ.) ಸರಕಿನಮೇಲೆ ಸುಂಕ ಹಾಕು; ನಿರ್ಬಂಧದಿಂದ ಸುಂಕ ವಸೂಲ್ಮಾಡು; ತೆರಬೇಕಾದುದಕ್ಕಿಂತಲೂ ಹೆಚ್ಚಾಗಿ ತೆರಿಸು (ರೂಪ. ಸಹ). **Excísable** (ಗು.); **Excíseman** — ಮ್ಯನ್ (ನಾ.) ಒಳಸುಂಕದ ಅಧಿಕಾರಿ.

Excíse[2] ಎಕ್ಸೈಸ್ (ಕ್ರಿ. ಸಕ.) (ಒಂದು ಗ್ರಂಥಭಾಗ, ದೇಹದ ಅಂಗ, ಕೈಕಾಲು, ವೊ. ನ್ನು) ಕತ್ತರಿಸಿಹಾಕು, ಛೇದಿಸು. (ಸ. ವಿ., ಪ್ರಾ. ವಿ.) ಕೊಯ್ದುಹಾಕು; ವಿಚ್ಛೇದಿಸು; ಕೊರೆದುಹಾಕು. **Excísion** ಎಕ್ಸಿಷನ್ (ನಾ.) ಕತ್ತರಿಸಿಹಾಕುವುದು; ತೆಗೆದುಹಾಕುವುದು; ಛೇದನ; ನಾಶಮಾಡುವುದು. ಒಂದು ಧರ್ಮಸಂಸ್ಥೆಯಿಂದ ಬಹಿಷ್ಕರಿಸುವುದು; ಬಹಿಷ್ಕಾರ.

Excíte ಎಕ್ಸೈಟ್ (ಕ್ರಿ. ಸಕ.) (ಮನೋಭಾವಗಳು, ಬುದ್ಧಿಶಕ್ತಿ, ವೊ. ನ್ನು) ಚೋದಿಸು, ಉದ್ರೇಕಿಸು, ಉತ್ತೇಜಿಸು; ಕೆರಳಿಸು; ರೇಗಿಸು; ಎಬ್ಬಿಸು. [(ಬಳ. ಮಾ.) Don't e. ರೇಗಬೇಡ; ಶಾಂತವಾಗಿರು].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕಾರ್ಯ, ಚಟುವಟಿಕೆ, ವೊ. ನ್ನು) ಉಂಟುಮಾಡು. ಭಾವೋದ್ರೇಕ ಗೊಳಿಸು. (ಪದಾರ್ಥದಲ್ಲಿ ವಿದ್ಯುಚ್ಛಕ್ತಿಯನ್ನು, ಕಾಂತ ಶಕ್ತಿಯನ್ನು) ಉತ್ತೇಜಿಸು. (ಶಕ್ತಿಪ್ರವಾಹವನ್ನು) ಹರಿಸು. (ಛಾಯಾ ಚಿತ್ರ) (ಫಲಕವನ್ನು) ಕ್ಷಿಪ್ರಗ್ರಾಹಿಯನ್ನಾಗಿ ಮಾಡು. **Excítable** (ಗು.) (ಮು., ಮನುಷ್ಯರ ವಿಷಯದಲ್ಲಿ) ಸುಲಭವಾಗಿ ಕೆರಳಿಸಲಾಗುವ, ಕೆರಳುವ; ಸಮತೂಕ ವಿಲ್ಲದ; ಚಿತ್ತಸಮತೆಯಿಲ್ಲದ. **Excitabílity** (ನಾ.) ಕೆರಳುವ ಅಥವಾ ಸುಲಭವಾಗಿ ಕೆರಳಿಸಲಾಗುವ ಗುಣ, ಸ್ವಭಾವ. (ಶ. ವಿ.) ನಿರ್ದಿಷ್ಟ ಪ್ರೇರಕದಿಂದ (ಒಂದು ಅಂಗವು) ತನ್ನ ಸಹಜ ಕ್ರಿಯಾ ವರ್ತನೆಗೆ ಪ್ರೇರಣೆಹೊಂದುವ ಯೋಗ್ಯತೆ: ಉತ್ತೇಜನೀಯತೆ. **Éxcitant** ಎಕ್ಸಿಟಂಟ್, **Excítant** ಎಕ್ಸೈಟಂಟ್ (ಗು., ನಾ.) ಕೆರಳಿಸುವ; ಉದ್ರೇಕಿಸುವ. (ದೇಹಾಂಗಗಳನ್ನು, ಅಂಗಾಂಶಗಳನ್ನು) ಹೆಚ್ಚು ಕ್ರಿಯಾಶಕ್ತ ಮಾಡುವ ಸಾಧನ; ಉತ್ತೇಜಕ; ಉದ್ರೇಕಕಾರಿ. ವಿದ್ಯುತ್ಪ್ರೇರಕ. **Excitátion** ಎಕ್ಸಿ— (ನಾ.) ಕೆರಳಿಸುವುದು; ಉತ್ತೇಜನ; ಉದ್ರೇಕ. **Excítative** ಎಕ್ಸೈಟಟಿವ್ (ಗು.); **Excítatory** — ಟಟ(ಟೋ)ರಿ (ಗು.) ಕೆರಳಿಸುವ; ಉದ್ರೇಕಿಸುವ; ಉತ್ತೇಜಕ. **Excítedly** (ಕ್ರಿ. ವಿ.); **Excítement** (ನಾ.) ಕೆರಳಿಸು ವುದು; ಪ್ರೇರಿಸುವುದು; ಕೆರಳಿ(ಸಿ)ದ ಸ್ಥಿತಿ; ಕೆರಳು; ಉದ್ರೇಕ; ಸಂಭ್ರಮ; ಸಡಗರ; ಗಡಿಬಿಡಿ; ಕೋಲಾಹಲ. (ವೈ. ಶಾ.) ಯಾವು ದಾದರೂ ಅಂಗದಲ್ಲಿ ಅಸಹಜವಾದ ಕೆರಳಿಕೆ. ಪ್ರೇರಕ; ಚೋದಕ.

Exclaím ಎಕ್ಸ್‌ಕ್ಲೆಯ್‌ಮ್ (ಕ್ರಿ.) (ಮು., ನೋವು, ಕೋಪ, ವೊ. ಗಳಿಂದ) ಕೂಗಿಕೊ, ಒದರಿಕೊ. ಕೂಗಿ ಹೇಳು. E. against ಕೂಗಾಟಮಾಡಿ ಖಂಡಿಸು, ಆರೋಪಿಸು. **Exclamátion** — ಕ್ಲಮೇಷನ್ (ನಾ.) ಕೂಗುವುದು; ಕೂಗಾಟ; ಕೂಗಿ ಹೇಳುವುದು; ಘೋಷಣ; ಕೂಗಿ ಹೇಳಿದ್ದು. Note of e. ಆಶ್ಚರ್ಯ ಚಿಹ್ನೆ (!). **Exclámatory** — ಕ್ಲ್ಯಾಮಟರಿ (ಗು.) ಕೂಗಿ ಹೇಳುವ; ಕೂಗಿಕೊಳ್ಳುವ; ಘೋಷ ಣೆಯ.

Exclúde ಎಕ್ಸ್‌ಕ್ಲ್ಯೂಡ್ (ಕ್ರಿ. ಸಕ.) (ಒಬ್ಬನನ್ನು, ಒಂದನ್ನು, — ಒಂದು ಸ್ಥಳ, ಸಮಾಜ, ಹಕ್ಕು ಬಾಧ್ಯತೆ, ವೊ. ಗಳಿಂದ) ಹೊರಚ್ಚು ಮಾಡು; ಹೊರ ಹಾಕು; ಬಹಿಷ್ಕರಿಸು; ಸೇರಿಸದಿರು. ಕಳೆ; ಬಿಡು. (ಸಂಶಯ, ವೊ. ನ್ನು) ಅಸಂಭವ ಮಾಡು, ಅಸಾಧ್ಯ ಮಾಡು. **Exclúsion** — ಕ್ಲ್ಯೂಷನ್ (ನಾ.); **Exclúsive** — ಸಿವ್ (ಗು.) ಸೇರಿಸದ; ಹೊರ ಹಾಕಿರುವ; ಬಹಿಷ್ಕರಿಸಿದ; ಬಹಿಷ್ಕಾರಕ. (ಸಮಾಜ ಪಂಗಡಗಳು, ವೊ. ಗಳಲ್ಲಿ) ಇತರರನ್ನು ಸೇರಿಸಿಕೊಳ್ಳದ; ಸದಸ್ಯರನ್ನು ಸೇರಿಸಿ ಕೊಳ್ಳಲು ಹಿಂಜರಿಯುವ; ಪ್ರತ್ಯೇಕ. (ಅಂಗಡಿ, ವೃತ್ತ ಪತ್ರಿಕೆ) ಬೇರೆ ಎಲ್ಲಿಯೂ ದೊರೆಯದ, ಪ್ರಕಟವಾಗದ. (ಪದಗಳು, ವೊ. ಗಳ ವಿಷಯ ದಲ್ಲಿ) ಗೊತ್ತಾಗಿ ಹೇಳಿದವು ಹೊರತು ಮಿಕ್ಕವನ್ನು ಬಿಟ್ಟ: ವ್ಯಾವ ರ್ತಕ; ಮಿಕ್ಕೆಲ್ಲವನ್ನೂ ಬಿಟ್ಟು ಅದೊಂದನ್ನೇ ಅನುಸರಿಸುವ (His e. occupation ಅವನ ಏಕಮಾತ್ರ ಉದ್ಯೋಗ). **Exclúsively** (ಕ್ರಿ. ವಿ.); **Exclúsiveness** (ನಾ.); **Exclúsivism** — ಸಿಮ್ (ನಾ.) ಬಹಿಷ್ಕಾರ ನೀತಿ; ಪ್ರತ್ಯೇಕತೆಯ ನೀತಿ.

Excógitate ಎಕ್ಸ್‌ಕಾಜಿಟೇಟ್ (ಕ್ರಿ. ಸಕ.) ಪರ್ಯಾಲೋಚಿಸು; ಚಿಂತನೆ ಮಾಡು; ಕಲ್ಪನೆ ಮಾಡು. **Excogitátion** (ನಾ.); **Excógitative** — ಟೇ(ಟ)ಟಿವ್ (ಗು.) ಪರ್ಯಾಲೋಚನೆಯ; — ಗೆ ಸಂಬಂಧ ಪಟ್ಟ.

Excommúnicate ಎಕ್ಸ್‌ಕಮ್ಯೂನಿಕೇಟ್ (ಕ್ರಿ. ಸಕ.) (ಮತ ಧರ್ಮ) (ಒಬ್ಬನನ್ನು ಧರ್ಮಸಂಸ್ಥೆಯ ಎಲ್ಲ ಆಡಳಿತಗಳಿಂದಲೂ ಸಂಸ್ಕಾರಗ ಳಿಂದಲೂ) ಬಹಿಷ್ಕರಿಸು; ಜಾತಿಯಿಂದ ಹೊರಹಾಕು. **Excommunicátion** (ನಾ.) ಬಹಿಷ್ಕಾರ. **Excommúnicator** (ನಾ.) ಬಹಿ ಷ್ಕರಿಸುವವನು. **Excommúnicatory** — ಕಟ(ಟೋ)ರಿ (ಗು.) ಬಹಿಷ್ಕಾರ ಸಂಬಂಧದ; ಬಹಿಷ್ಕರಿಸುವ. **Excommúnicant** — ಕಂಟ್ (ನಾ.) ಬಹಿಷ್ಕೃತ; ಬಹಿಷ್ಕಾರಕ.

Excóriate ಎಕ್ಸ್‌ಕೋ(ಕಾ)ರಿಯೇಟ್ (ಕ್ರಿ. ಸಕ.) (ಒಂದು ಭಾಗದ) ಚರ್ಮವನ್ನು ಉಜ್ಜಿಹಾಕು, ತೆಗೆದುಹಾಕು; (ಚರ್ಮ) ಸುಲಿ, ಸುಲಿದು ಹಾಕು. **Excoriátion** (ನಾ.)

Éxcrement ಎಕ್ಸ್‌ಕ್ರಿಮೆಂಟ್ (ನಾ., ಅನೇಕ ವೇಳೆ ಬ. ವ. ದಲ್ಲಿ) (ಕರುಳಿ ನಿಂದ ಹೊರಹಾಕಿದ) ಮಲ; ಹೇಲು; ಸಗಣಿ; ಲದ್ದಿ; ಅಮೇಧ್ಯ. **Excreméntal** (ಗು.); **Excrementítious** — ಟಿಷಸ್ (ಗು.) ಅಮೇಧ್ಯ ಸ್ವಭಾವದ; — ಕ್ಕೆ ಸಂಬಂಧಪಟ್ಟ; — ದಿಂದ ಹುಟ್ಟಿದ.

Excréscence ಎಕ್ಸ್‌ಕ್ರೆಸೆನ್ಸ್ (ನಾ.) (ಪ್ರಾಣಿಯ ದೇಹದಮೇಲೆ ಅಥವಾ ಸಸ್ಯದಮೇಲೆ ಅಸ್ವಾಭಾವಿಕವಾಗಿ, ರೋಗಸಂಬಂಧವಾಗಿ, ಏಳುವ) ಗಂತಿ, ದುರ್ಮಾಂಸ, ಗೆಡ್ಡೆ, ಗಳಲೆ (ರೂಪ. ಸಹ). **Excréscent** (ಗು.) ಅಸಹಜವಾಗಿ ಬೆಳೆಯುವ; ಅಸ್ವಾಭಾವಿಕ ವೃದ್ಧಿಯ; ಅನವಶ್ಯ ವಾದ. (ವ್ಯಾ., ಒಂದು ಪದದಲ್ಲಿಯ ಧ್ವನಿಯ ವಿಷಯದಲ್ಲಿ) ಉಚ್ಚಾರಣ ಸೌಲಭ್ಯಕ್ಕಾಗಿ ಮಾತ್ರ ಬಂದ (ಉದಾ., ಒನಲ — ಒಂದರಿ; ಕನ್ನರಿ — ಕಿಂದರಿ; ಪರಾಮರ್ಶಿಸು — ಪರಾಂಬರಿಸು). **Excrescéntial** ಎಕ್ಸ್‌ಕ್ರೆಸೆನ್ಷಲ್ (ಗು.) ಅಸಹಜವಾದ ಬೆಳವಣಿಗೆಯ; ಅಸ್ವಾಭಾವಿಕ ವೃದ್ಧಿಯ. ಅನವಶ್ಯವಾದ.

Excréta. **Excrete** ನೋಡಿ.

Excréte ಎಕ್ಸ್‌ಕ್ರೀಟ್ (ಕ್ರಿ. ಸಕ.) (ಪ್ರಾಣಿಗಳ ಅಥವಾ ಸಸ್ಯಗಳ ವಿಷಯ ದಲ್ಲಿ, ಉಪಯೋಗವಳಿದ ಪದಾರ್ಥಗಳನ್ನು ದೇಹದಿಂದ) ಹೊರದೂಡು, ಹೊರಡಿಸು, ವಿಸರ್ಜಿಸು, ಕಳೆ. **Excrétion** (ನಾ.) ವಿಸರ್ಜನೆ. **Excrétive** (ಗು.) ವಿಸರ್ಜಿಸುವ; ವಿಸರ್ಜಕ. **Excrétory** (ಗು., ನಾ.) ವಿಸರ್ಜಕ; ವಿಸರ್ಜನದ. (ನಾ.) ವಿಸರ್ಜನ ನಾಳ. **Excréta** (ನಾ., ಬ. ವ.) ದೇಹದಿಂದ ಹೊರದೂಡಿದ ಉಪಯೋಗ ವಳಿದ ಪದಾರ್ಥಗಳು: ಮಲ ಮೂತ್ರಗಳು.

Excrúciate ಎಕ್ಸ್‌ಕ್ರೂಷಿಯೇಟ್ (ಕ್ರಿ. ಸಕ.) (ಒಬ್ಬನ ಇಂದ್ರಿಯಗಳಿಗೆ) ಅತಿ ಯಾತನೆ ಕೊಡು; ಮನಸ್ಸಿಗೆ ಯಾತನೆಯುಂಟುಮಾಡು (ಈಗ ಅಪೂರ್ವ). **Excrúciating** (ಗು.) ಅತಿ ಯಾತನೆ ಕೊಡುವ. **Excrúciatingly** (ಕ್ರಿ. ವಿ.); **Excruciátion** — ಷಿ(ಸಿ)ಯೇಷನ್ (ನಾ.) ಅತ್ಯಂತ ನೋವನ್ನುಂಟುಮಾಡುವುದು; ಅತ್ಯಂತ ನೋವನ್ನು ಅನುಭವಿಸುವುದು; ಅತಿ ಯಾತನೆ.

Éxculpate ಎಕ್ಸ್‌ಕಲ್ಪೇಟ್ (ಕ್ರಿ. ಸಕ.) ನಿಂದೆಯಿಂದ ತಪ್ಪಿಸು; ನಿರಪ ರಾಧಿ ಮಾಡು; (ಆಪಾದನೆ, ವೊ. ಗಳಿಂದ ಒಬ್ಬನನ್ನು) ಬಿಡುಗಡೆ ಮಾಡು; ನಿರ್ದೋಷ ಮಾಡು. **Exculpátion** (ನಾ.); **Excúlpatory** — ಪಟ(ಟೋ)ರಿ (ಗು.)

Excúrrent ಎಕ್ಸ್‌ಕರೆಂಟ್ (ಗು.) ಹೊರ ಹರಿಯುವ; ಹೊರಕ್ಕೆ ಮಾರ್ಗ ಕೊಡುವ; ಬಹಿರ್ಗಾಮಿ; (ರಕ್ತದ ವಿಷಯದಲ್ಲಿ) ರಕ್ತಕೋಶದಿಂದ ಹರಿಯುವ; ಅಪಧಮನಿಯ. (ಸ. ವಿ.) ಚಾಚಿಕೊಂಡಿರುವ.

Excúrse. **Excursion** ನೋಡಿ.

Excúrsion ಎಕ್ಸ್‌ಕರ್ಷನ್ (ನಾ.) (ಹಿಂದಕ್ಕೆ ಬೇಗ ಬರುವ ಉದ್ದೇಶದ) ಪ್ರಯಾಣ; ತಿರುಗಾಟ; ಸಂಚಾರ; ವಿಹಾರ; ಹೋಗಿ ಬರುವುದು (ರೂಪ. ಸಹ). (ಕೆಲವು ಮಂದಿ ಸೇರಿ ಹೊರಡುವ) ಸಂತೋಷ ಪ್ರವಾಸ; ಕೂಡು ಪಯಣ; ಪ್ರವಾಸ ಗೋಷ್ಠಿ [E. train ಸಂತೋಷ ಪ್ರವಾ ಸದ ರೈಲುಬಂಡಿ (ಸಾ., ಕಡಮೆಮಾಡಿದ ದರದಮೇಲೆ)]. (ಪ್ರಾಚೀ. ಪ್ರ.) ಮುತ್ತಿಗೆಗೆ ಸಿಕ್ಕಿದ ಸೈನ್ಯವು ಮುತ್ತಿಗೆ ತಪ್ಪಿಸಿಕೊಳ್ಳಲು ಮೇಲೆ ಬೀಳು ವುದು (Alarms and excursions). (ಖ. ವಿ.) ಪಥಚ್ಯುತಿ; ಉತ್ಕ್ರಮ; ಭ್ರಂಶ. ಪ್ರಸಕ್ತ ವಿಷಯ ಬಿಟ್ಟು ಮತ್ತೊಂದಕ್ಕೆ ಹೋಗುವುದು. **Excúrsional** (ಗು.); **Excúrsionary** (ಗು.) ಸಂತೋಷ ಪ್ರವಾಸದ. **Excúrsionist** (ನಾ.) ವಿಹಾರ ಪ್ರಯಾಣಿಕ; — ಪ್ರವಾಸಿ. **Excúrse** (ಕ್ರಿ. ಅಕ.) (ಅಪೂರ್ವ) ಅಲೆ; ಮಾರ್ಗ ಬಿಟ್ಟು ಹೋಗು (ಸಾ., ರೂಪ.); ಸಂತೋಷ ಪ್ರವಾಸ ಮಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Excúrsive (ಗು.) ಸಂತೋಷ ಪ್ರವಾಸದ. (ಪಾಠ ಪ್ರವಚನ, ಮೊ. ಗಳ ವಿಷಯದಲ್ಲಿ) ಪ್ರಸಕ್ತ ವಿಷಯ ಬಿಟ್ಟು ಮತ್ತೊಂದು ವಿಷಯಕ್ಕೆ ಹೋಗುವ. **Excúrsively** (ಕ್ರಿ. ವಿ.); **Excúrsiveness** (ನಾ.)

Excúrsus ಎಕ್ಸ್‌ಕರ್ಸಸ್ (ನಾ.; ಬ. ವ. -uses) ಒಂದು ಗ್ರಂಥ ದಲ್ಲಿ ಯಾವುದಾದರೂ ಒಂದು ವಿಷಯವಾಗಿ ವಿಶದವಾದ ಚರ್ಚೆ (ಸಾ., ಗ್ರಂಥಾಂತದಲ್ಲಿ ಕೊಟ್ಟಿರುವ ವಿವರಣಾನುಬಂಧದಲ್ಲಿ); ಪ್ರಾಸಂಗಿಕ ಚರ್ಚೆ.

Excúse ಎಕ್ಸ್‌ಕ್ಯೂಸ್ (ಕ್ರಿ. ಸಕ.) (ತಪ್ಪನ್ನು) ಮನ್ನಿಸು, ಕ್ಷಮಿಸು; ಕ್ಷಮಾಪಣೆ ಮಾಡು; ಮಾಫು ಮಾಡು. (ಒಬ್ಬನಿಗೆ, ತನಗಾಗಿ, — ಕರ್ತವ್ಯ, ಮೊ. ಗಳಿಂದ) ಬಿಡುಗಡೆ ಪಡೆ; ತಪ್ಪಿಸಿಕೊ. (ಒಬ್ಬನನ್ನು ಕರ್ತವ್ಯದಿಂದ) ಬಿಡುಗಡೆ ಮಾಡು. ನೆವವಾಗಿರು; ಸಮಾಧಾನ ಹೇಳು. ವಿನಾಯಿತಿ ಕೊಡು (We e. him the fee ಅವನಿಗೆ ರುಸುಮನ್ನು ವಿನಾಯಿತಿ ಮಾಡುತ್ತೇವೆ. We will e. your presence ನೀವು ಬರಬೇಕಾಗಿಲ್ಲವೆಂದು ವಿನಾಯಿತಿ ಕೊಡುತ್ತೇವೆ). E. me ಕ್ಷಮಿಸಬೇಕು (ತಕ್ಕ ಮರ್ಯಾದೆ ಅನುಸರಿಸದೆ ತಪ್ಪಿದುದಕ್ಕೆ, ಮಧ್ಯೆ ಅಡ್ಡ ಬಂದುದಕ್ಕೆ, ಕ್ಷಮಾಪಣೆ ಬೇಡಿ ಹೇಳುವ ಮಾತು. ಒಬ್ಬನೊಡನೆ ಒಂದು ವಿಷಯದಲ್ಲಿ ಒಪ್ಪದೆ ಹೋಗುವ ಸಂದರ್ಭದಲ್ಲಿ ಹೇಳುವ ಮರ್ಯಾದೆಯ ಮಾತು). **Excúsable** (ಗು.) ಕ್ಷಮಿಸಬಹುದಾದ; ಕ್ಷಮ್ಯ. **Excúsably** (ಕ್ರಿ. ವಿ.); **Excúsatory** —ಸ್ಯಟ(ಟೋ)ರಿ (ಗು.) ನೆವ ಹೇಳುವ; ಕ್ಷಮಾ ಯಾಚನೆಯ. ವಿಷಾದ ಸೂಚಕ.

Excúse — ಕ್ಯೂಸ್ (ನಾ.) ನೆಪ; ಸಮಾಧಾನ ಹೇಳುವುದು; ಕ್ಷಮೆ; ಕ್ಷಮಾಪಣೆ (ಸಾ., In e. of ಕ್ಷಮಾಪಣೆಯಾಗಿ); ಕ್ಷಮಾ ಕಾರಣ. (ಕರ್ತವ್ಯ, ಮೊ. ಗಳಿಂದ) ವಿನಾಯಿತಿಗೆ ಕಾರಣ.

Éxeat ಎಕ್ಸಿಯ್ಯಟ್ (ನಾ.) (ವಿದ್ಯಾಶಾಲೆ, ಮೊ. ಗಳಲ್ಲಿ) ಹಂಗಾಮಿ ಗೈರಹಾಜರಿಗೆ ಅಪ್ಪಣೆ; ಸ್ವಲ್ಪಕಾಲ ಬಾರದೆ ನಿಲ್ಲಲು ಅನುಮತಿ.

Éxecrable ಎಕ್ಸಿಕ್ರಬ್‌ಲ್ (ಗು.) ಜುಗುಪ್ಸೆ ಹುಟ್ಟಿಸುವ; ಹೇಯ; ಅಸಹ್ಯ; ಹಾಳು. **Éxecrably** (ಕ್ರಿ. ವಿ.)

Éxecrate ಎಕ್ಸಿಕ್ರೇಟ್ (ಕ್ರಿ.) ಅಸಹ್ಯಪಡು; ಹೇವರಿಸು; ಹೇವರಿಕೆ ತೋರಿಸು; ಹೇಯವೆಂದು ಬಯ್ಯು; (ಹಾಳಾಗ ಎಂದು) ಶಪಿಸು. **Execrátion** (ನಾ.) ಶಪನೆ; ಹೇವರಿಕೆ; ಹೇಯ ಭಾವನೆ. **Éxecrative** (ಗು.); **Éxecratory** (ಗು.) ಶಪನೆಯ.

Éxecute ಎಕ್ಸಿಕ್ಯೂಟ್ (ಕ್ರಿ. ಸಕ.) (ಉದ್ದೇಶ, ಆಜ್ಞೆ, ನ್ಯಾಯ, ಕಾನೂನಿನ ದಂಡನೆ, ಅಂತಿಮ ಇಷ್ಟಪತ್ರ — ಇವನ್ನು) ನಡಸು, ನೆರವೇರಿಸು, ಕಾರ್ಯರೂಪಕ್ಕೆ ತರು, ಆಗಮಾಡು; ಕಾರ್ಯ ನಿರ್ವಹಿಸು; ಸಾಧಿಸು. (ಕಾನೂನನುಸರಿಸಿ ಬರೆದ ದಸ್ತಾವೇಜನ್ನು) ಸಹಿ ಮಾಡಿ, ಮುದ್ರೆಯೊತ್ತಿ, ಇತರ ಕ್ರಮ ನಡಸಿ, ಸಪ್ರಮಾಣ ಮಾಡು; (ದಸ್ತಾವೇಜು, ಮೊ. ನ್ನು) ಬರೆದುಕೊಡು. ಆಸ್ತಿಯ ವರ್ಗ ಕೊಡು. (ಸಂಗೀತ) ಹಾಡು; ಬಾಜಿಸು. ಮರಣ ದಂಡನೆ ವಿಧಿಸು; ಗಲ್ಲಿಗೇರಿಸು. **Éxecutable** (ಗು.); **Execútion** (ನಾ.) ನಡಸುವುದು; ನೆರವೇರಿಸುವುದು; ನಿರ್ವಾಹ; ನಿರ್ವಹಣ; ಸಾಧನ; ಆಚರಣೆ; ಅನುಷ್ಠಾನ; ಕಾರ್ಯರೂಪಕ್ಕೆ ತರುವುದು; ಕಾರ್ಯ ನಡಸುವುದು. ಸಂಗೀತದಲ್ಲಿ ತೋರಿಸುವ ಕೌಶಲ, ಚಮತ್ಕಾರ. (ಆಯುಧಗಳ ವಿಷಯದಲ್ಲಿ) ನಾಶ ಪರಿಣಾಮ [Do e. ನಾಶ ಮಾಡು. (ಸೌಂದರ್ಯ, ಮೊ. ಮೋಹಕ ಶಕ್ತಿಗಳ ವಿಷಯದಲ್ಲಿ ರೂಪಕವಾಗಿ)]. (ತೆರಿಗೆ ಅಥವಾ ಸಾಲವನ್ನು ತೀರಿಸದ ಸಂದರ್ಭದಲ್ಲಿ ಸಾಮಾನನ್ನಾಗಲಿ ಸಾಲಗಾರನನ್ನಾಗಲಿ) ಜಪ್ತಿ, ದಸ್ತಗಿರಿ, ಮಾಡುವುದು; ಜಾರಿ. ಮರಣ ದಂಡನೆ ವಿಧಿಸುವುದು; ಗಲ್ಲಿಗೆ ಹಾಕುವುದು; ಶಿರಚ್ಛೇದನ. **Execútioner** (ನಾ.) (ಉದ್ದೇಶ, ನ್ಯಾಯ, ಮೊ. ನ್ನು) ನಡಸುವವನು, ನೆರವೇರಿಸುವವನು. (ಮರಣ) ದಂಡನೆಯ ಕಾರ್ಯ ನಡಸುವವನು; ಗಲ್ಲಿಗೆ ಹಾಕುವವನು; ವಧಕಾರ. (ರೂಪ.) ಕೊಲೆಗಾರ. **Exécutive** ಎಕ್ಸೆಕ್ಯುಟಿವ್ (ಗು., ನಾ.) ಕಾರ್ಯ ನಡಸುವ; ಕಾರ್ಯ ನಿರ್ವಹಣದ; ನಿರ್ವಾಹಕ. ಕಾನೂನು, ತೀರ್ಪುಗಳು, ದಂಡನೆಗಳು — ಇವನ್ನು ಕಾರ್ಯರೂಪಕ್ಕೆ ತರುವ (ಸರ್ಕಾರದ ಶಾಖೆ): ಕಾರ್ಯ ಶಾಖೆ. (ಮು., ಅಮೆ. ಸಂ.) (ವ್ಯಾಪಾರ ಸಂಸ್ಥೆ, ಮೊ. ಗಳಲ್ಲಿ) ಕಾರ್ಯ ನಿರ್ವಾಹಕ. **Éxecutor** ಎಕ್ಸೆ(ಗ್ಸೆ)ಕ್ಯುಟರ್ (ನಾ.) ಕಾರ್ಯ ನೆರವೇರಿಸುವವನು, ನಡಸುವವನು; ಕಾರ್ಯ ನಿರ್ವಾಹಕ (ಈ ಅರ್ಥದಲ್ಲಿ 'ಎಕ್ಸೆ —' ರೂಪ). ಅಂತಿಮ ಇಷ್ಟಪತ್ರ ಬರೆಯುವವನು ತನ್ನ ಆ ದಸ್ತಾವೇಜನ್ನು ಜಾರಿಗೆ ತರಲು ನಿಯಾಮಕ ಮಾಡುವ ಮನುಷ್ಯ: ಇಷ್ಟ ನಿರ್ವಾಹಕ (ಈ ಅರ್ಥದಲ್ಲಿ 'ಎಗ್ಸೆ —' ರೂಪ). Literary e. ಗ್ರಂಥಕರ್ತನ ಅಪ್ರಕಟ ಗ್ರಂಥಗಳು, ಮೊ. ಗಳ ವಿಲೇವಾರಿಗೆ ನಿಯಮಿತನಾದವನು. **Exécutórial** (ಗು.) ಕಾರ್ಯ ನಿರ್ವಾಹಕನ; ಕಾರ್ಯ ನಿರ್ವಹಣದ. **Exécutorship** (ನಾ.); **Exécutrix** (ನಾ., ಸ್ತ್ರೀ.; ಬ. ವ. -cutrices)

Exegésis ಎಕ್ಸಿಜೀಸಿಸ್ (ನಾ.) ಅರ್ಥ ಪ್ರತಿಪಾದನೆ, ನಿರೂಪಣೆ. ಭಾಷ್ಯ (ಮು., ಬೈಬಲ್ಲಿನದು). **Exegétic(al)** — ಜೆ — (ಗು.); **Exegétically** (ಕ್ರಿ. ವಿ.)

Exémplar, etc. **Example** ನೋಡಿ.

Exémpt ಎಗ್ಸೆಂಪ್ಟ್ (ಗು., ನಾ., ಕ್ರಿ. ಸಕ.) (ತೆರಿಗೆ, ಅಧೀನ, ನ್ಯೂನತೆ, ಮೊ. ಗಳಿಂದ) ವಿನಾಯಿತಿ ಪಡೆದ(ವನು), ವಿಮುಕ್ತನಾದ(ವನು), ಬಿಡುಗಡೆ ಹೊಂದಿದ(ವನು). (ಕ್ರಿ.) ವಿನಾಯಿತಿ ಕೊಡು, ಮಾಡು; ಬಿಡುಗಡೆ ಮಾಡು. **Exémption** (ನಾ.) ವಿನಾಯಿತಿ; ಬಿಡುಗಡೆ; ವಿಮೋಚನೆ.

Exénterate ಎಕ್ಸೆಂಟೆರೇಟ್ (ಕ್ರಿ. ಸಕ.) ಕರುಳು ಬಗಿ, ತೆಗೆ (ರೂಪ. ಮಾತ್ರ). **Exenterátion** (ನಾ.)

Exequátur ಎಕ್ಸಿಕ್ವೇಟರ್ (ನಾ.) ಒಂದು ದೇಶದ ರಾಜ್ಯ ಪ್ರತಿನಿಧಿಯನ್ನು ಅಥವಾ ವಾಣಿಜ್ಯ ಪ್ರತಿನಿಧಿಯನ್ನು ಪರದೇಶದ ಸರ್ಕಾರ ಅಂಗೀಕರಿಸುವುದು: ಪರ ರಾಜ್ಯದಲ್ಲಿ ನಿಯೋಗಿಯ ಸ್ವೀಕಾರ. ಪೋಪ್ ಗುರುವಿನ ಅನುಜ್ಞೆಯ ಮೇರೆಗೆ ನಿರೂಪ, ಮೊ. ನ್ನು ಬಿಷಪ್ ಗುರು ಕೊಡಲು ದೊರೆ ಕೊಟ್ಟ ಅನುಮತಿ.

Éxequies ಎಕ್ಸಿಕ್ವಿಸ್ (ನಾ., ಬ. ವ.) ಪ್ರೇತ ಕರ್ಮ; ಅಪರ ಕರ್ಮ; ಉತ್ತರ ಕ್ರಿಯೆಗಳು.

Éxercise ಎಕ್ಸರ್‌ಸೈಸ್ (ನಾ., ಕ್ರಿ.) (ದೇಹಾಂಗ, ಮನಶ್ಶಕ್ತಿ, ಅಧಿಕಾರ, ಹಕ್ಕು — ಇವುಗಳ) ಬಳಕೆ, ಪ್ರಯೋಗ, ಉಪಯೋಗ, ಚಲಾವಣೆ; ಅಭ್ಯಾಸ; ಪಳಕೆ. (ಸದ್ಗುಣಗಳು, ಕಸಬು, ಕರ್ತವ್ಯ, ಮತ ಸಂಸ್ಕಾರ, ಮೊ. ಗಳ) ಆಚರಣೆ, ಅನುಷ್ಠಾನ. (ಮು. ದೇಹಾರೋಗ್ಯಕ್ಕಾಗಿ) ಸ್ನಾಯುಗಳು, ಅಂಗಾಂಗಗಳು, ಮೊ. ನ್ನು ಚಲಿಸುವುದು, ಬಲವಾಗಿ ಆಡಿಸುವುದು: ಸಾಧನೆ; ವ್ಯಾಯಾಮ; ಸಾಮು; ಗರಡಿ ಸಾಧನೆ. ದೇಹದ, ಮನಸ್ಸಿನ, ಆತ್ಮದ, ಶಿಕ್ಷಣ. ವ್ಯವಸಾಯ. (ಬ. ವ. ದಲ್ಲಿ) ಸೈನಿಕ ಕವಾಯತು; ಅಂಗ ಸಾಧನೆ; ಕಸರತ್ತು. ವಿದ್ಯಾಪಟ್ಟ ಪಡೆಯಲು ಮಾಡಬೇಕಾದ ವಾಕ್ಯಾರ್ಥ, ಉಪನ್ಯಾಸ, ಮೊ. ವು. (ವಿದ್ಯಾರ್ಥಿಗಳಿಗೆ ಬರೆಯಲು ನಿಯಮಿಸಿದ ವಾಕ್ಯರಚನೆ, ಪ್ರಬಂಧ, ಮೊ.) ಅಭ್ಯಾಸ ಪಾಠ. ಪೂಜಾ ಕರ್ಮ. (ಕ್ರಿ.) (ಮನಶ್ಶಕ್ತಿ, ಹಕ್ಕು, ಮೊ. ನ್ನು) ಬಳಸು, ಉಪಯೋಗಿಸು, ಪ್ರಯೋಗಿಸು, ಚಲಾಯಿಸು. ತರಬೇತು ಮಾಡು; ಪಳಗಿಸು; ಶಿಕ್ಷಣ ಕೊಡು; ಅಭ್ಯಾಸ ಮಾಡಿಸು. ಒಬ್ಬನಿಗೆ ಶಕ್ತಿಮೀರಿದ ಕೆಲಸ, ಶ್ರಮ, ಕೊಡು. ಕಳವಳಗೊಳಿಸು. (ಕರ್ತವ್ಯ) ನಡಸು, ನಿರ್ವಹಿಸು. (ಕುದುರೆ, ಮೊ.) ಅಂಗ ವ್ಯಾಯಾಮ, ಅಂಗ ಸಾಧನೆ, ಕಸರತ್ತು, ಮಾಡು, ಕೊಡು. **Éxercisable** (ಗು.); **Exercitátion** ಎಗ್ಸರ್ಸಿಟೇಷನ್ (ನಾ.) ಅಭ್ಯಾಸ; ಶಿಕ್ಷಣ; ಸಾಹಿತ್ಯದ ಭಾಷಣ, ಪ್ರಬಂಧ, ಮೊ.

Exercitátion. **Exercise** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Éxergue ಎಕ್ಸರ್ಗ್, **Exérgue** ಎಗ್ಸರ್ಗ್ (ನಾ.) ಸಾ., ನಾಣ್ಯದ ಅಥವಾ ಬಿರುದುಪದಕದ ಹಿಂಭಾಗದಲ್ಲಿ ಪ್ರಮುಖ ಚಿತ್ರದ ತಳಗಡೆ ಬಿಟ್ಟಿರುವ ಸ್ವಲ್ಪ ಸ್ಥಳ ; ಇಲ್ಲಿಯ ಲೇಖ, ಬರಹ. **Exérgual** — ಗ್ಅಲ್, — ಗ್ಯುಅಲ್ (ಗು.) — ಕ್ಕೆ ಸಂಬಂಧಪಟ್ಟ.

Exért ಎಗ್ಸರ್ಟ್ (ಕ್ರಿ. ಸಕ.) (ಗುಣ, ಬಲ, ಪ್ರಭಾವ — ಇವನ್ನು) ಪ್ರಯೋಗಿಸು, ಉಪಯೋಗಿಸು, ಪರಿಣಾಮಕಾರಿ ಮಾಡು. ಪ್ರಯತ್ನಪಡು ; ಪ್ರಯಾಸಪಡು. E. oneself (ಮಾಡಲು, ಒಂದು ಉದ್ದೇಶಕ್ಕಾಗಿ) ಪ್ರಯತ್ನ ಪಡು, ಪಾಡುಪಡು, ಒದ್ದಾಡು ; ಉಜ್ಜುಗಿಸು ; ಶ್ರಮ ವಹಿಸು ; ವ್ಯವಸಾಯ ಮಾಡು. **Exértion** (ನಾ.)

Éxeunt ಎಕ್ಸಿಅಂಟ್ (ಕ್ರಿ. ಅಕ.) (ನಾಟಕ ರಂಗದ ಸೂಚನೆ) (ಇಬ್ಬರು ಅಥವಾ ಹೆಚ್ಚಾದ ನಟರು ರಂಗಸ್ಥಳವನ್ನು ಬಿಟ್ಟು) ಹೊರಡುವರು, ಹೋಗುವರು. E. omnes (ರಂಗಸ್ಥಳವನ್ನು ಬಿಟ್ಟು) ಎಲ್ಲರೂ ಹೊರಡುವರು, ಹೋಗುವರು.

Exfóliate ಎಕ್ಸ್‌ಫೋಲಿಯೇಟ್ (ಕ್ರಿ. ಅಕ.) (ಎಲುಬು, ಚರ್ಮ, ಖನಿಜ, ಮೊ. ಗಳ ವಿಷಯದಲ್ಲಿ) ಪದರ ಪದರವಾಗಿ, ಪೊರೆ ಪೊರೆಯಾಗಿ, ಸಿಪ್ಪೆ ಸಿಪ್ಪೆಯಾಗಿ, ಎದ್ದು ಬರು. (ಮರದ ವಿಷಯದಲ್ಲಿ) ತೊಗಟೆಯ ಪದರಗಳು ಕಳಚು. **Exfoliátion** (ನಾ.)

Exhále ಎಗ್ಸ್(ಕ್ಸ್)ಹೇಲ್ (ಕ್ರಿ.) (ಹಬೆ, ಮೊ. ನ್ನು) ಆವಿಯಾಗಿ ಹೊರಬಿಡು (ರೂಪ. ಸಹ) ; (ಧೂಮ, ಮೊ. ವು) ಆವಿಯಾಗಿ ಹೊರಬೀಳು. ಬಾಷ್ಪವಾಗು ; — ಮಾಡು. (ವೈ. ಶಾ.) (ಪ್ರಾಣಿದ್ರವಗಳು ಧಮನಿ, ಮೊ. ಗಳ ಮೂಲಕ ಸ್ವಲ್ಪ ಸ್ವಲ್ಪವಾಗಿ) ಒಸರು, ಸ್ರವಿಸು. (ಪ್ರಾಣ, ಮಾತು, ಮೊ.) ಹೊರ ಬಿಡು, ಉಸುರು ಬಿಡು ; ನಿಶ್ವಾಸ ಬಿಡು. (ಕೋಪ, ಮೊ. ನ್ನು) ಊದಿಬಿಟ್ಟಂತೆ ಕಳೆ(ದು ಬಿಡು), ಹೊರಡಿಸಿಬಿಡು. **Exhalátion** ಎಕ್ಸ(ಗ್ಸ)ಲೇಷನ್ (ನಾ.) ನಿಶ್ವಾಸ ; ಉಸುರು ಬಿಡುವುದು ; ಬಾಷ್ಪೀಕರಣ ; ಆವಿಯಾಗಿ ಹೋಗುವುದು. ಆವಿ ; ಮಂಜು ; ನಾತದ ಹಬೆ ; ಉದ್ಗಮ. ಉಲ್ಕಾಪಾತ ; ಜ್ವಾಲೆ. (ಕೋಪ, ಮೊ.) ಥಟ್ಟನೆ ಹೊರಬೀಳುವುದು.

Exhaúst ಎಗ್ಸಾಸ್ಟ್, ಇಕ್ಸಾಸ್ಟ್ (ನಾ., ಕ್ರಿ. ಸಕ.) ಬಳಲಿಸು ; ನಿತ್ರಾಣ ಮಾಡು ; ಶಕ್ತಿ ಕಳೆ ; ಆಯಾಸ ಪಡಿಸು. (ಪಾತ್ರೆಯಲ್ಲಿ ಇರುವುದನ್ನು ತೆಗೆದು) ಖಾಲಿ ಮಾಡು ; ಬರಿದು ಮಾಡು. (ಒಂದು ವಿಷಯವಾಗಿ) ತಿಳಿಯಬೇಕಾದುದೆಲ್ಲವನ್ನೂ ಕಂಡುಹಿಡಿ. ಹೇಳಿಬಿಡು, ಬುಡಮುಟ್ಟ ಶೋಧಿಸಿಬಿಡು. (ಮನುಷ್ಯ, ರಾಜ್ಯ, ಮೊ. ಗಳ) ಶಕ್ತಿ, ಸಂಪತ್ತು, ಮೊ. ನ್ನು ಬಸಿದುಬಿಡು, ತೀರಿಸಿಬಿಡು (ಮು., ಭೂ. ಕೃ. ನಲ್ಲಿ). (ಆವಿಯ ಎಂಜಿನಿನ ಅಥವಾ ಮೋಟಾರು ಎಂಜಿನಿನ) ನಾಳಿಯಲ್ಲಿ ನೀರಾವಿಯ ಅಥವಾ ಚಾಲಕ ಪ್ರವಹಿನಿಯ ಕಾರ್ಯ ಮುಗಿದನಂತರ ಅದರ ಹೊರಡುವಿಕೆ : ಬಹಿರ್ಗಮನ ; ನಿಷ್ಕಾಸ (E.-pipe ನಿಷ್ಕಾಸ ನಾಳ). (ಒಂದು ಪಾತ್ರೆಯಲ್ಲಿಯ ವಾಯುವನ್ನು ಹೊರಹೊರಡಿಸಿ ಪಾತ್ರೆಯನ್ನು) ಬರಿದು ಮಾಡುವುದು. ಸುತ್ತಲೂ ವಾಯುವಿರಳತೆಯನ್ನು ಕಲ್ಪಿಸುವುದರಿಂದ ಒಳವಾಯುವನ್ನು ಹೊರಡಿಸುವುದು ; ಈ ಕಾರ್ಯ ಮಾಡುವ ಸಲಕರಣೆ : ನಿಷ್ಕಾಸಕ. (ಕ್ರಿ.) (ವಾಯುವನ್ನು ಒಂದು ಪಾತ್ರೆಯಿಂದ) ಸೆಳೆದುಬಿಡು, ಹೀರಿಬಿಡು, ಶೋಷಿಸಿಬಿಡು (ರೂಪ. ಸಹ). ಪೂರ್ತಿಯಾಗಿ ಉಪಯೋಗಿಸಿಬಿಡು ; ಮುಗಿಸಿಬಿಡು ; ತೀರಿಸಿಬಿಡು. **Exhaústible** (ಗು.) ತೀರಿಸಿಬಿಡಲಾಗುವ ; ತೆಗೆದುಬಿಡಲಾಗುವ ; ಸೆಳೆದು, ಹೀರಿ, ಬಿಡಲಾಗುವ. **Exhaustibílity** (ನಾ.) ; **Exhaústion** — ಸ್ಚನ್ (ನಾ.) (ಕ್ರಿಯಾರ್ಥಗಳಲ್ಲ). ಬಹಳ ಬಳಲಿಕೆ, ಆಯಾಸ, ದಣಿವು ; ಸುಸ್ತು ; ಶಕ್ತಿ ಶೋಷಣ. ವಿಕಲ್ಪಗಳೆಲ್ಲವನ್ನೂ ಕಳೆದುಹಾಕಿ ಒಂದು ನಿರ್ಣಯಕ್ಕೆ ಬರುವುದು. **Exhaústive** (ಗು.) ಎಲ್ಲವನ್ನೂ ಮುಗಿಸಿಬಿಡುವ ; (ಮು., ಒಂದು ವಿಷಯವನ್ನು) ಮೊದಲಿನಿಂದ ಕೊನೆಯ ವರೆಗೂ ಪೂರ್ತಿಯಾಗಿ ಶೋಧಿಸಿಬಿಡುವ ; ಬುಡಮುಟ್ಟ ಪ್ರತಿಪಾದಿಸುವ ; ಸರ್ವವ್ಯಾಪಕ ; ಸಮಗ್ರ ; ಸಂಪೂರ್ಣ ; ನಿಶ್ಶೇಷ. **Exhaústively** (ಕ್ರಿ. ವಿ.) ; **Exhaústiveness** (ನಾ.)

Exhíbit ಎಗ್ಸಿಬಿಟ್, ಇಕ್ಸಿಬಿಟ್ (ನಾ., ಕ್ರಿ. ಸಕ.) ನ್ಯಾಯಸ್ಥಾನದಲ್ಲಿ ಹಾಜರುಮಾಡಿದ ಮತ್ತು ಲಿಖಿತ ಸಾಕ್ಷ್ಯದಲ್ಲಿ ಸೂಚಿಸಿರುವ ದಸ್ತೈವಜು ಅಥವಾ ವಸ್ತು ; ದಾಖಲೆ. ಪ್ರದರ್ಶನಕ್ಕಾಗಿ ಕಳುಹಿಸಿದ ಪದಾರ್ಥ(ಗಳು) ; ಪ್ರದರ್ಶನ ವಸ್ತು ; ಪ್ರದರ್ಶನ ; ತೋರಿಕೆ ; ತೋರ್ಪಾಟು. (ಕ್ರಿ.) ತೋರಿಸು ; ತೋರ್ಪಡಿಸು ; ಪ್ರದರ್ಶಿಸು ; ಆಲೋಚನೆಗಾಗಿ ಒಪ್ಪಿಸು ; ಅವಗಾಹನೆಗೆ ತರು. (ಗುಣವನ್ನು) ವ್ಯಕ್ತಪಡಿಸು ; ಪ್ರಕಾಶ ಮಾಡು. (ಸ್ಪರ್ಧೆ, ಮೊ. ಗಳಲ್ಲ ವಿನೋದಕ್ಕಾಗಿ) ಬಹಿರಂಗವಾಗಿ ತೋರಿಸು. (ದಾಖಲೆ) ಹಾಜರುಮಾಡು. **Exhibítion** (ನಾ.) ತೋರ್ಕೆ ; ತೋರ್ಪಾಟು ; (ಕಲಾ ವಸ್ತು, ಮೊ. ಗಳ) ಪ್ರದರ್ಶನ (Make an e. of oneself ಸ್ವರೂಪ ತೋರಿಸಿಕೊ ; ಜುಗುಪ್ಸೆ, ತಿರಸ್ಕಾರ, ಹುಟ್ಟಿಸುವಂತೆ ವರ್ತಿಸು). (The Great E. ೧೮೫೧ ರಲ್ಲಿ ಲಂಡನ್ನಿನಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ನಡೆದ ಮೊದಲನೆಯ ಪ್ರದರ್ಶನ). (ಪ್ರೌಢ ವಿದ್ಯಾಶಾಲೆ, ಪಾಠಶಾಲೆ, ಮೊ. ಗಳ ನಿಧಿಯಿಂದ ಕೆಲವು ವರ್ಷಗಳ ಕಾಲ) ವಿದ್ಯಾರ್ಥಿಗೆ ಕೊಡುವ ಗೊತ್ತಾದ ಸಹಾಯ ದ್ರವ್ಯ ; ವಿದ್ಯಾರ್ಥಿವೇತನ ; ಪ್ರವೇತನ. **Exhibítioner** (ನಾ.) ವಿದ್ಯಾರ್ಥಿ ವೇತನಿ. **Exhibítionism** (ನಾ.) ಪ್ರದರ್ಶನ ಸ್ವಭಾವ ; ಅತಿರೇಕ ವರ್ತನೆ. (ವೈ. ಶಾ.) ಅಶ್ಲೀಲವಾಗಿ ಅಂಗಾಂಗ ಪ್ರದರ್ಶನ ಮಾಡುವಂಥ ಮನೋವಿಕಾರ. **Exhíbitor** —ಟರ್ (ನಾ.) ಪ್ರದರ್ಶಕ. **Exhíbitory** (ಗು.) ಪ್ರದರ್ಶಕ ; ಪ್ರದರ್ಶನದ.

Exhílarate ಎಗ್ಸಿಲರೇಟ್, ಇಕ್ಸಿ— (ಕ್ರಿ. ಸಕ.) (ಮನುಷ್ಯನನ್ನು, ಮನಸ್ಸನ್ನು) ಗೆಲವಾಗಿಸು ; ಗೆಲವುತುಂಬು ; ಉಲ್ಲಾಸಗೊಳಿಸು ; ಹರ್ಷಗೊಳಿಸು ; ಹುರಿದುಂಬಿಸು. **Exhílarant** — ರಂಟ್ (ಗು., ನಾ.) ಉಲ್ಲಾಸಕರ ; ಹುರಿದುಂಬಿಸುವ (ಔಷಧ). **Exhilarátion** (ನಾ.) —ವುದು ; —ವ ಸಾಧನ, ಪ್ರಭಾವ. ಉಲ್ಲಾಸ ; ಗೆಲವು. **Exhílarative** — ರ(ರೇ)— (ಗು.)

Exhórt ಎಗ್ಸ್‌ಹಾರ್ಟ್, ಎಗ್ಸಾರ್ಟ್, ಇಕ್ಸಾರ್ಟ್ (ಕ್ರಿ. ಸಕ.) ಆಸಕ್ತಿಯಿಂದ ಎಚ್ಚರಿಕೆ ಕೊಡು ; ಹೃತ್ಪೂರ್ವಕವಾಗಿ ಬುದ್ಧಿವಾದ ಹೇಳು ; ಪ್ರೋತ್ಸಾಹಿಸು ; ಪ್ರೇರೇಪಿಸು ; ಪ್ರಚೋದಿಸು. **Exhórtative** —ಟಟಿವ್ (ಗು.) ; **Exhórtatory** (ಗು.) ; **Exhortátion** (ನಾ.) ಎಚ್ಚರಿಕೆ ; ಪ್ರಚೋದನೆ ; ಪ್ರಬೋಧನೆ. (ಕ್ರೈಸ್ತ) ಧರ್ಮಾನುಶಾಸನ.

Exhúme ಎಕ್ಸ್‌ಹ್ಯೂಮ್ (ಕ್ರಿ. ಸಕ.) (ಹೂಳಿದ್ದುದನ್ನು, ಸಾ., ಶವವನ್ನು) ಅಗೆದು ತೆಗೆ (ರೂಪ. ಸಹ). **Exhumátion** — ಹ್ಯುಮೇಷನ್ (ನಾ.)

Éxigence, -cy ಎಕ್ಸಿಜೆನ್ಸ್, — ಜೆನ್ಸಿ (ನಾ.) ತುರುತು ; ಜರೂರು ; ಆವಶ್ಯಕತೆ ; ಅವಸರ. **Éxigent** (ಗು.) ಅವಸರದ ; ತುರುತಾದ ; ಜರೂರಾದ ; ಹೆಚ್ಚಾಗಿ ಅಪೇಕ್ಷಿಸುವ ; ಅಗತ್ಯವಾದ ; ಬಲಾತ್ಕಾರದಿಂದ ತೆಗೆದುಕೊಳ್ಳುವ. E. of ಒತ್ತಿ ಕೇಳುವ. **Éxigible** (ಗು.) ಒತ್ತಿ ಕೇಳಬಹುದಾದ ; ಕೊಡುವಂತೆ ಬಲವಂತ ಮಾಡಬಹುದಾದ (*Against*, *from*, person)

Exíguous ಎಗ್ಸಿ(ಕ್ಸಿ)ಗ್ಯೂಅಸ್ (ಗು.) ಆಕಾರದಲ್ಲಿ ಅಥವಾ ಸಂಖ್ಯೆಯಲ್ಲಿ ಸ್ವಲ್ಪವಾದ ; ಅತಿ ಸ್ವಲ್ಪ ; ಅಲ್ಪ ; ಸಣ್ಣ ; ಕಿರಿಯ. **Exíguousness** (ನಾ.), **Exigúity** —ಯಿಟಿ (ನಾ.) —ಸ್ಥಿತಿ ; ಅಲ್ಪ ; ಸ್ವಲ್ಪ.

Éxile ಎಕ್ಸೈಲ್, ಎಗ್ಸೈಲ್ (ನಾ., ಕ್ರಿ. ಸಕ.) (ದಂಡನೆಗಾಗಿ) ದೇಶಭ್ರಷ್ಟತೆ, ಗಡೀಪಾರು ; ತನ್ನ ದೇಶ ಬಿಟ್ಟು ಬಹು ಕಾಲ ಹೊರಗಿರುವುದು ; ಪರದೇಶ ವಾಸ (ರೂಪ. ಸಹ). ದೇಶಭ್ರಷ್ಟ ; ಗಡೀಪಾರಾದವನು (ರೂಪ. ಸಹ). (ಕ್ರಿ.) (ಒಬ್ಬನನ್ನು) ದೇಶಭ್ರಷ್ಟನನ್ನಾಗಿ ಮಾಡು, ಗಡೀಪಾರು ಮಾಡು (ರೂಪ. ಸಹ). **Exílian** ಎಕ್ಸಿ(ಗ್ಸಿ)ಲಿಯನ್ (ಗು.), **Exílic** ಎಕ್ಸಿ(ಗ್ಸಿ)ಲಿಕ್ (ಗು.) ಗಡೀಪಾರಿನ ; ದೇಶಭ್ರಷ್ಟತೆಯ (ಸಂಬಂಧವಾದ) (ಮು., ಯೆಹೂದ್ಯರದು, ಬ್ಯಾಬಿಲನ್ನಿನಲ್ಲಿ)

Exílity ಎಕ್ಸಿಲಿಟಿ (ನಾ.) ತೆಳುವು ; ನವಿರು ; ಸೂಕ್ಷ್ಮತೆ.

Exíst ಎಗ್ಸಿಸ್ಟ್ (ಕ್ರಿ. ಅಕ.) (ವಾಸ್ತವವಾಗಿ, ಒಂದು ಗೊತ್ತಾದ ಪರಿಸ್ಥಿತಿಯಲ್ಲಿ) ಇರು ; ಜೀವದಿಂದಿರು ; ಬದುಕಿರು. (E. as —ರೂಪದಲ್ಲಿ

पुस्तकालय
गुरुकुल काँगड़ी

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಿಕ್ಕು, ದೊರೆ). (ಪರಿಸ್ಥಿತಿ, ಮೊ. ಗಳ ವಿಷಯದಲ್ಲಿ) ದೊರೆ, ಸಿಕ್ಕು. **Exístence** (ನಾ.) ಇರವು ; ಇರುವುದು ; ಸ್ಥಿತಿ ; ಅಸ್ತಿತ್ವ ; ಸತ್ ; ಬದುಕು ; ಜೀವನ (Wretched, precarious, e. ನಿರ್ಭಾಗ್ಯ, ಹಾಳಾದ, ಅನಿಶ್ಚಿತ, ಅಬಂದರೆಯ, — ಜೀವನ). ಇರುವ ರೀತಿ, ಸ್ಥಿತಿ ; ಇರುವ ವಸ್ತು ; ಇರುವದು ; ಇರುವುದೆಲ್ಲ. **Existéntial** ಎಗ್ಸಿಸ್ಟೆನ್ಷಲ್ (ಗು.) ಇರುವಿಕೆಯ. (ತರ್ಕ) (ಒಂದು ಪ್ರತಿಜ್ಞೆಯ ವಿಷಯವಾಗಿ) ಅಸ್ತಿತ್ವ ಸಾಧಿಸುವ. **Exístent** (ಗು.) ಇರುವ; ಬದುಕಿರುವ ; ವಾಸ್ತವಿಕವಾದ ; ಚಲಾವಣೆಯಲ್ಲಿರುವ.

Éxit ಎಕ್ಸ(ಗ್ಸಿ)ಟ್ (ನಾ., ಕ್ರಿ. ಅಕ.) ನಟನು ರಂಗದಿಂದ ಹೊರಟು ಹೋಗುವುದು ; ನಿಷ್ಕ್ರಮಣ ; ನಿರ್ಗಮ (ರೂಪ. ಸಹ). ಸಾವು ; ಅಳಿವು ; ಮರಣ. ಹೊರಹೊರಡುವುದು ; ಮುಂದಕ್ಕೆ ಹೋಗುವುದು ; ಹೀಗೆ ಹೋಗಲು ಸ್ವಾತಂತ್ರ್ಯ, ಅವಕಾಶ ; ನಿರ್ಗಮ ಸ್ವಾತಂತ್ರ್ಯ ; ಹೊರಗೆ ಹೋಗುವುದಕ್ಕೆ ಮಾರ್ಗ, ಹಾದಿ. (ಕ್ರಿ.) (ರಂಗಸ್ಥಳದ ಸೂಚನೆ) (ರಂಗಸ್ಥಳ ಬಿಟ್ಟು) ಹೊರಡುತ್ತಾನೆ (ರೂಪ. ಸಹ)

Ex-líbris ಎಕ್ಸ್‌ಲೈಬ್ರಿಸ್ (ನಾ.) (ಪುಸ್ತಕಕ್ಕೆ ಹಚ್ಚಿರುವ) ಒಡೆಯನ ಹೆಸರು, ವಂಶಲಾಂಛನ, ಮೊ. ಗಳುಳ್ಳ ಚೀಟಿ ; (ಪುಸ್ತಕದ ಮೇಲೆ ಹಚ್ಚಿರುವ) ವಿಳಾಸದ. ಚೀಟಿ.

Exo- ಎಕ್ಸೊ— (ಸ. ಪೂ. ಪ.) ಹೊರ—, ಬಹಿರ್—. **-derm** (ನಾ.) ಭ್ರೂಣ ಕವಚದ ಹೊರಪೊರೆ ; (ಸ. ವಿ.) ಹೊರ ಪದರ. **-gamous** ಎಕ್ಸಾಗಮಸ್ (ಗು.) ತನ್ನ ಗೋತ್ರ ಬಿಟ್ಟು ಬೇರೆ ಗೋತ್ರದಲ್ಲಿ ಮದುವೆಯಾಗಬೇಕೆಂದು ನಿರ್ಬಂಧಿಸುವ ಪದ್ಧತಿಯ ; ಭಿನ್ನಗೋತ್ರ ವಿವಾಹದ. **-gamy** (ನಾ.) ಭಿನ್ನ ಗೋತ್ರ ವಿವಾಹ. **-gen** ಎಕ್ಸೊಜೆನ್ (ನಾ.) ಹೊರ ಭಾಗದ ಬೆಳೆವಣಿಗೆಯ ಮರ : ಬಹಿರ್ವರ್ಧಿಷ್ಣು. **-genic** —ಜೆನಿಕ್, **-genous** ಎಕ್ಸಾಜಿನಸ್ (ಗು.) (ಮರದ ವಿಷಯದಲ್ಲಿ) ಬಹಿರ್ವೃದ್ಧಿಯ. **-páthic** ಎಕ್ಸೊಪ್ಯಾತಿಕ್ (ಗು.) (ರೋಗ) ದೇಹದ ಹೊರಗೆ ಹುಟ್ಟುವ. **-phagous** ಎಕ್ಸಾಫಗಸ್ (ಗು.) ತನ್ನ ಕುಲದ ಹೊರಗಿನವರನ್ನು ತಿನ್ನುವ. **-phagy** — ಫಜಿ (ನಾ.) ತನ್ನ ಕುಲದ ಹೊರಗಿನವರನ್ನು, ಸಂಬಂಧಿಗಳಲ್ಲದವರನ್ನು, ತಿನ್ನುವುದು. **-plasm** ಎಕ್ಸೊಪ್ಲ್ಯಾಸ್ಮ್ (ನಾ.) ಜೀವಿಕಣದ ಅತ್ಯಂತ ಹೊರಪೊರೆ. **-skéleton** —ಸ್ಕೆಲಟನ್ (ನಾ.) ಹೊರ ಹೊದಿಕೆ (ಮೂಳೆ ಅಥವಾ ಚರ್ಮ). **Exosmósis** ಎಕ್ಸಾಸ್‌ಮೋಸಿಸ್ (ನಾ.) ಸಚ್ಛಿದ್ರ ಪಟಲದ ಮೂಲಕ ದ್ರವ ಹೊರಸೂಸುವುದು ; ಹೊರ ಹರಿತ ; ಬಹಿಸ್ಸರಣ.

Éxodus ಎಕ್ಸೊಡಸ್ (ನಾ.) ಹೊರ ಹೊರಡುವುದು ; ಹೊರಟು ಹೋಗುವುದು ; ನಿರ್ಗಮನ (ಮು., ವಲಸೆ ಹೋಗುವ ತಂಡದ ವಿಷಯದಲ್ಲಿ). ಈಜಿಪ್ಟಿನಿಂದ ಇಸ್ರೈಲೈಟರು ಹೊರಹೊರಟದ್ದು ; ಈ ವಿಷಯವನ್ನು ಹೇಳುವ (ಕ್ರೈಸ್ತ) ಹಳೆಯ ಒಡಂಬಡಿಕೆಯ ಭಾಗ.

Ex offício (L) ಎಕ್ಸ್ ಅಫಿಷಿಯೋ (ಕ್ರಿ. ವಿ., ಗು.) ಅಧಿಕಾರಪ್ರಯುಕ್ತ; ಅಧಿಕಾರತಃ ; ಅಧಿಕಾರ ಬಲದ (E.-o. members of committee ಮಂಡಲಿಯ ಅಧಿಕಾರ ಪ್ರಯುಕ್ತ ಸದಸ್ಯರು)

Exónerate ಎಗ್ಸಾನೆರೇಟ್ (ಕ್ರಿ. ಸಕ.) (ಒಬ್ಬನನ್ನು ಕರ್ತವ್ಯ, ನಿಂದೆ, ಮೊ. ಗಳಿಂದ) ಬಿಡುಗಡೆ ಮಾಡು ; ದೋಷ ಮುಕ್ತ ಮಾಡು ; ಅಪಾದನೆಯಿಂದ ವಿಮೋಚನೆ ಮಾಡು. **Exonerátion** (ನಾ.) ; **Exónerative** — ರೇ(ರ)ಟಿವ್ (ಗು.) (ಕರ್ತವ್ಯ, ಮೊ. ಗಳಿಂದ) ಬಿಡುಗಡೆ ಮಾಡುವ.

Exórbitant ಎಗ್ಸಾರ್ಬಿಟೆಂಟ್ (ಗು.) (ಬೆಲೆ, ತಗಾದೆ, ಆಶೆ, ಮನುಷ್ಯ — ಈ ವಿಷಯಗಳಲ್ಲಿ) ಅತಿಯಾದ, ವಿಪರೀತ ಹೆಚ್ಚಾದ, ಕೇವಲ ದುಬಾರಿಯಾದ, ಮಿತಿ ಮೀರಿದ, ಹಾಳತ ಮೀರಿದ. **Exórbitance** (ನಾ.) ; **Exórbitantly** (ಕ್ರಿ. ವಿ.)

Éxorcise, -ze ಎಕ್ಸಾ(ಗ್ಸಾ)ರ್‌ಸೈಸ್ (ಕ್ರಿ. ಸಕ.) (ಒಬ್ಬನಿಂದ, ಒಂದು ಸ್ಥಳದಿಂದ,— ದೆವ್ವ, ಭೂತ, ಪಿಶಾಚಗಳನ್ನು) ಮಂತ್ರ ಹಾಕಿ ಹೊರಡಿಸಿಬಿಡು, ಉಚ್ಚಾಟನೆ ಮಾಡು ; ದೆವ್ವ ಬಿಡಿಸು. **Éxorcism** (ನಾ.) ; **Éxorcist** (ನಾ.) ದೆವ್ವ ಬಿಡಿಸುವವನು ; ಮಾಂತ್ರಿಕ.

Exórdium ಎಗ್ಸಾರ್ಡಿಯಂ (ನಾ. ; ಬ. ವ. -iums, -ia) (ಮು., ಒಂದು ಪ್ರಬಂಧದ ಅಥವಾ ಗ್ರಂಥದ) ಆದಿ ಭಾಗ, ಪೀಠಿಕೆ, ಪ್ರಸ್ತಾವನೆ, ಉಪೋದ್ಘಾತ. **Exórdial** (ಗು.)

Exotéric ಎಕ್ಸೊಟೆರಿಕ್ (ಗು., ನಾ.) (ತತ್ತ್ವ, ಭಾಷಣ ರೀತಿ, ಮೊ. ಗಳ ವಿಷಯದಲ್ಲಿ) ಹೊರಗಿನವರಿಗೆ ಅರ್ಥವಾಗುವಂತಿರುವ (Esoteric ಪದದ ಅರ್ಥದೊಡನೆ ಹೋಲಿಸಿ ನೋಡಿ) ; ಸರ್ವಜನ ಗ್ರಾಹ್ಯ ; ಪ್ರಕಟಾರ್ಥಕ. (ಶಿಷ್ಯರ ವಿಷಯದಲ್ಲಿ) ರಹಸ್ಯ ಶಿಕ್ಷಣಕ್ಕೆ, ಸೇರಿಸದ, ಪ್ರವೇಶ ಕೊಡದ. ಸರ್ವ ಸಾಮಾನ್ಯವಾದ ; ಸಾಧಾರಣವಾದ ; ಸಾರ್ವ ಜನಿಕ. (ನಾ ; ಬ. ವ. ದಲ್ಲಿ) ಸರ್ವ ಜನ ಗ್ರಾಹ್ಯ ತತ್ತ್ವಗಳು, ಗ್ರಂಥಗಳು. **Exotérical** (ಗು.) ; **Exotérically** (ಕ್ರಿ. ವಿ.)

Exótic ಎಗ್ಸಾಟಿಕ್ (ಗು., ನಾ.) (ಸಸ್ಯಗಳ, ಪದಗಳ, ರೀತಿಗಳ, ವಿಷಯದಲ್ಲಿ) ಹೊರಗಿನಿಂದ ತಂದು ರೂಢಿಸಿದ, ಪಳಗಿಸಿದ (ಗಿಡ) ; ಪರದೇಶದ (ಗಿಡ)

Expánd ಎಕ್ಸ್‌ಪ್ಯಾಂಡ್ (ಕ್ರಿ.) ಹರಡು ; ಹರವು ; ವಿಸ್ತರಿಸು ; ಹಿಗ್ಗಿಸು ; ಹಿಗ್ಗು ; ಬಿರಿ ; ಅರಳು ; ಅರಳಿಸು ; ವಿಕಸಿಸು ; ದೊಡ್ಡದಾಗು ; ದೊಡ್ಡದು ಮಾಡು ; ಊದು ; ಉಬ್ಬು ; ಉಬ್ಬಿಸು. (ಸಂಕ್ಷೇಪವಾಗಿ ಬರೆದಿರುವುದನ್ನು, ಬೀಜಗಣಿತದ ನಿರೂಪಣೆ, ಮೊ. ನ್ನು) ವಿಸ್ತರಿಸಿ, ವಿಶದವಾಗಿ, ಬರೆ, ವಿವರಿಸು ; ವಿಶದೀಕರಿಸು. ಪ್ರಸನ್ನವಾಗಿರು ; ಉಲ್ಲಾಸದಿಂದಿರು ; ಬಿಗುಮಾನ ಬಿಟ್ಟುಬಿಡು. Expanded metal ಲೋಹದ ಹಾಳೆಯಲ್ಲಿ ಛಿದ್ರಗಳನ್ನು ಮಾಡಿ ಬಲೆಯಂತೆ ವಿಸ್ತರಿಸಿದ ಜಾಲರಿ ; ಲೋಹ ಜಾಲರಿ ; ಲೋಹದ ಬಲೆ. **Expánse** (ನಾ.) ವಿಸ್ತಾರವಾದ ಕ್ಷೇತ್ರ ; ಹರವು ; ಹರಡಿಕೆ ; ವಿಸ್ತಾರ ; ವಿಸ್ತೀರ್ಣ ; ವೈಶಾಲ್ಯ. The e. ಆಕಾಶ ; ಬಾನ್ಬಳ. **Expansibílity** (ನಾ.) ವಿಸ್ತಾರ್ಯತೆ. **Expánsible** (ಗು.) ; **Expánsile** ಎಕ್ಸ್‌ಪ್ಯಾನ್‌ಸಿ(ಸೈ)ಲ್ (ಗು.) ವಿಸ್ತರಿಸಲಾಗುವ ; ವಿಸ್ತಾರ್ಯ ; ವಿಸ್ತರದ. **Expánsion** —ಷನ್ (ನಾ.) (ಕ್ರಿಯಾರ್ಥಗಳಲ್ಲಿ). (ವ್ಯಾಪಾರ) ವಿಸ್ತರಣ ; ವ್ಯಾಪನೆ ; ಪ್ರಸರಣ (E. of the currency ನಾಣ್ಯ ಚಲಾವಣೆಯನ್ನು ಹೆಚ್ಚಿಸುವುದು). ಎಂಜಿನಿನ ಸ್ತಂಭನಾಳಿಯಲ್ಲಿ ಆವಿಯ ಗಾತ್ರದ ಹೆಚ್ಚಿಕೆ. Triple-e. engine ಆವಿಯು ಮೂರು ಸ್ತಂಭನಾಳಿಗಳಲ್ಲಿ ಹಾದು ಹೋಗುವ ಎಂಜಿನು. **Expánsionist** (ನಾ.) ರಾಜ್ಯವನ್ನು ಅಥವಾ ನಾಣ್ಯಚಲಾವಣೆಯನ್ನು ವಿಸ್ತರಿಸಬೇಕೆಂಬ ಪಕ್ಷ ವಾದಿ : ವಿಸ್ತರಣವಾದಿ. **Expánsive** (ಗು.) ವಿಸ್ತಾರವಾಗುವ ; ವಿಸ್ತಾರ ಮಾಡುವ ; — ಶಕ್ತಿಯುಳ್ಳ ; ಹರಡಿಕೊಳ್ಳುವ; ವಿಸ್ತಾರವಾದ ; ವಿಸ್ತರಶೀಲ ; ಬಹು ವ್ಯಾಪಕ. (ಮನುಷ್ಯ, ಮನೋಭಾವ, ಭಾಷಣ — ಇವುಗಳ ವಿಷಯದಲ್ಲಿ) ಉಕ್ಕುವ ; ಉಕ್ಕಿ ಹರಿಯುವ ; ಉಬ್ಬುವ ; ಪಸರಿಸುವ ; ಅತಿಯಾದ ; ಸಂಕೋಚವಿಲ್ಲದ. **Expánsively** (ಕ್ರಿ. ವಿ.) ; **Expánsiveness** (ನಾ.) ; **Expansívity** (ನಾ.) (ಅಪೂರ್ವ) ; **Expánsiveness** (ನಾ.) ವಿಸ್ತಾರವಾಗುವ ಪ್ರಮಾಣ ; ವಿಸ್ತಾರವಾಗುವ ಶಕ್ತಿ ; ವಿಸ್ತಾರಿತೆ.

Ex párte (L) ಎಕ್ಸ್ ಪಾರ್ಟಿ (ಕ್ರಿ. ವಿ., ಗು.) (ನ್ಯಾ. ಶಾ.) ಒಂದೇ ಪಕ್ಷದ (ಪರವಾಗಿ). Ex-p. statement ಏಕ ಪಕ್ಷದ ಹೇಳಿಕೆ.

Expátiate ಎಕ್ಸ್‌ಪೇಷಿಯೇಟ್ (ಕ್ರಿ. ಅಕ.) (ಯಾವುದಾದರೂ ವಿಷಯದ ಮೇಲೆ) ಬಹಳವಾಗಿ, ವಿಸ್ತಾರವಾಗಿ, ವಿಪುಲವಾಗಿ, ಮಾತನಾಡು, ಬರೆ. ದೀರ್ಘವಾಗಿ ವಿವರಿಸು, ಉಪನ್ಯಸಿಸು. ತಡೆಯಿಲ್ಲದೆ ಸುತ್ತಾಡು, ಬಳಸಾಡು (ಸಾ., ರೂಪಕದಲ್ಲಿ) ; ವಿಹರಿಸು. **Expatiátion** (ನಾ.) ; **Expátiatory** —ಯಟ(ಟೋ)ರಿ (ಗು.) ವಿಸ್ತಾರವಾದ ; ಪ್ರಸರಿಸುವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Expátriate ಎಕ್ಸ್‌ಪೇ(ಪ್ಯಾ)ಟ್ರಿಯೇಟ್ (ಕ್ರಿ.) ದೇಶದಿಂದ ಹೊರಕ್ಕೆ ಸಾಗಿಸಿಬಿಡು; ದೇಶಭ್ರಷ್ಟ ಮಾಡು; ವಲಸೆ ಹೋಗು. (ಜನಾಂಗ ನ್ಯಾಯ) ಪ್ರಜೆತನವನ್ನು ತ್ಯಜಿಸು. **Expatriátion** (ನಾ.)

Expéct ಎಕ್ಸ್‌ಪೆಕ್ಟ್ (ಕ್ರಿ. ಸಕ.) ನಿರೀಕ್ಷಿಸು; ಎಣಿಸು; ಎದುರು ನೋಡು; ಸಂಭಾವ್ಯವೆಂದು ತಿಳಿ. I e. him to come; I e. (that) he will come ಅವನು ಬರುವನೆಂದು ನಿರೀಕ್ಷಿಸುತ್ತೇನೆ. Not so bad as I expected (it to be) ನಾನು ಎಣಿಸಿದಷ್ಟು ಕೇಡಾಗಿಲ್ಲ. I shall not e. you till I see you ನಿನ್ನ ಇಷ್ಟಬಂದಾಗ ಬರಬಹುದು. **Expéctancy** — ಟನ್ಸಿ (ನಾ.) ನಿರೀಕ್ಷೆ; ನಿರೀಕ್ಷಣೆ; ಎಣಿಕೆ. (ಮು., ಮುಂದೆ ದೊರೆಯಬಹುದೆಂಬ) ಆಸೆ. **Expéctant** —ಪೆಕ್ಟಂಟ್ (ಗು., ನಾ.) ನಿರೀಕ್ಷಿಸುವ(ವನು); ನಿರೀಕ್ಷಿಸುತ್ತಿರುವ(ವನು); ನಿರೀಕ್ಷಕ. ಅಧಿಕಾರ, ಮೊ. ಕ್ಕೆ ಉಮೇದುವಾರ. (ವೈ. ಶಾ.) ಮುಂದೆ ಬರುವುದನ್ನು ನಿರೀಕ್ಷಿಸುವ (E. method ನಿರೀಕ್ಷಣ ಪದ್ಧತಿ. E. mother ಬಸುರಿ; ಗರ್ಭಿಣಿ). (ನ್ಯಾ. ಶಾ.) ಆಸ್ತಿ ತನಗೇ ಹಿಂದಕ್ಕೆ ಬರಲುಳ್ಳವನು; ಆಸ್ತಿ ನಿರೀಕ್ಷಕ. **Expéctantly** (ಕ್ರಿ. ವಿ.); **Expectátion** — ಟೇಷನ್ (ನಾ.) ನಿರೀಕ್ಷಣೆ; ನಿರೀಕ್ಷೆ; ಹಾರೈಕೆ (Beyond, contrary to, e ನಿರೀಕ್ಷಣೆಗೆ ಮೀರಿ; ನಿರೀಕ್ಷಣೆಗೆ ವಿರುದ್ಧವಾಗಿ). ನಿರೀಕ್ಷಣೆಗೆ ಆಧಾರ. (ಬ. ವ. ದಲ್ಲಿ) ಆಸ್ತಿಯ ಹಕ್ಕು ಬರುವುದೆಂಬ ನಿರೀಕ್ಷಣೆ; ಸಂಭವ; ನಿರೀಕ್ಷಿಸಿದ್ದದ್ದು. E. of life (Life ನೋಡಿ). **Expéctative** — ಟಟಿವ್ (ಗು.) (ಕೊಡುಗೆ, ದಾನ, ಮೊ.) ಹಿಮ್ಮರಳುವ; ತನಗೇ ಹಿಂದಕ್ಕೆ ಬರುವ.

Expéctorant. Expectorate ನೋಡಿ.

Expéctorate ಎಕ್ಸ್‌ಪೆಕ್ಟೊರೇಟ್ (ಕ್ರಿ. ಸಕ.) (ಮು., ಅಮೆ. ಸಂ.) ಕೆಮ್ಮಿ ಅಥವಾ ಉಗುಳಿ (ಶ್ಲೇಷ್ಮ, ಮೊ. ನ್ನು) ವಾಯುಕೋಶದಿಂದ, ಎದೆಯಿಂದ, ಹೊರ ಚೆಲ್ಲು, ಹೊರ ದೂಡು; (ಕಫ) ಉಗುಳು. **Expectorátion** (ನಾ.) ಉಗುಳು; ಕಫ. **Expéctorant** — ರಂಟ್ (ಗು., ನಾ.) ಕಫ ಹೊರಬೀಳುವುದನ್ನು, ಕತ್ತರಿಸುವುದನ್ನು, ವೃದ್ಧಿಮಾಡುವ (ಔಷಧ); ಕಫ ಕತ್ತರಿಸುವ (ಔಷಧ)

Expédient ಎಕ್ಸ್‌ಪೀಡಿಯೆಂಟ್ (ಗು., ನಾ.) ಅನುಕೂಲವಾದ; ತಕ್ಕ; ಯುಕ್ತ; ಉಚಿತ; ಯಥೋಚಿತ; ಸಮಯೋಚಿತ; ವಿಹಿತ (It is e. that he should go ಅವನು ಹೋಗತಕ್ಕದ್ದು ಉಚಿತ). ನ್ಯಾಯ ಮಾರ್ಗಕ್ಕಿಂತಲೂ ಅನುಕೂಲಕ್ಕೆ ಹೆಚ್ಚು ಗಮನ ಕೊಟ್ಟು ನಡೆಯುವ. (ನಾ.) ಸಲಕರಣೆ; ಸಾಧನ; ಯುಕ್ತಿ; ಹೂಟ; ಹಂಚಿಕೆ; ಉಪಾಯ. **Expédience, - ency** (ನಾ.) ಔಚಿತ್ಯ; ಸಂದರ್ಭಕ್ಕೆ ತಕ್ಕಂತೆ ನಡೆಯುವುದು; — ತಕ್ಕ ನಡೆವಳಿ; ಯುಕ್ತತೆ; ಅನುಕೂಲ್ಯ; ಕೇವಲ ನ್ಯಾಯಕ್ಕೇ ಗಮನಕೊಡದೆ ಅನುಕೂಲಕ್ಕೆ ತಕ್ಕಂತೆ ನಡೆಯುವುದು; ಅನುಕೂಲ ಸಿಂಧು. **Expediéntial** — ಷಲ್ (ಗು.) ಸಮಯೋಚಿತವಾದ; ಸಂದರ್ಭಾನುಸಾರವಾದ. **Expédiently** (ಕ್ರಿ. ವಿ.)

Éxpedite ಎಕ್ಸ್‌ಪಿಡೈಟ್ (ಕ್ರಿ. ಸಕ.) (ಪ್ರಯೋಗ, ಪ್ರವೃತ್ತಿ, ಮೊ. ಗಳ) ಪ್ರಗತಿಯನ್ನು ಮುಂದುವರಿಸು; ಬೇಗ, ಶೀಘ್ರ, ಜಾಗ್ರತೆ, — ಮಾಡು. (ವ್ಯವಹಾರವನ್ನು, ಉದ್ಯೋಗವನ್ನು) ಬೇಗ ಕೊನೆಮುಟ್ಟಿಸು; ಮುಗಿಸಿಬಿಡು. **Expedítion** — ಡಿಷನ್ (ನಾ.) ಶೀಘ್ರತೆ; ಕ್ಷಿಪ್ರತೆ; ಜಾಗ್ರತೆ; ತ್ವರೆ. ಯುದ್ಧಯಾತ್ರೆ; ದಂಡಯಾತ್ರೆ; ದಂಡೆತ್ತಿಹೋಗುವುದು; ಒಂದು ಗೊತ್ತಾದ ಉದ್ದೇಶಕ್ಕಾಗಿ ಮಾಡುವ ಪ್ರಯಾಣ, ಸಮುದ್ರಯಾನ; ವಿಶೇಷಕಾರ್ಯ ಯಾತ್ರೆ; ಇದಕ್ಕಾಗಿ ಕಳುಹಿಸಿದ ಬಲ, ನೌಕೆ. **Expedítionary** (ಗು.); **Expedítionist** (ನಾ.); **Expedítious** —ಷಸ್ (ಗು.) ಬೇಗ, ಜಾಗ್ರತೆಯಾಗಿ, ತ್ವರಿತದಿಂದ, ಮಾಡಿದ, ಮಾಡುವ. ಜಾಗ್ರತೆಯಾಗಿ ಮಾಡಲು ತಕ್ಕ, ಯೋಗ್ಯವಾದ. **Expedítiously** (ಕ್ರಿ. ವಿ.); **Expedítiousness** (ನಾ.)

Expedítion. Expedite ನೋಡಿ.

Expél ಎಕ್ಸ್‌ಪೆಲ್ (ಕ್ರಿ. ಸಕ.) (ಒಂದು ಸ್ಥಳದಿಂದ ಮನುಷ್ಯನನ್ನು, ಬಂದೂಕಿನಿಂದ ಗುಂಡನ್ನು, ಮೊ. ಗ) ಬಿರುಸಿನಿಂದ, ಬಲ ಪ್ರಯೋಗದಿಂದ, ಹೊರಡಿಸು. (ಸಂಘ, ಪಂಗಡ, ವಿದ್ಯಾಶಾಲೆ, ಮೊ. ಗಳಿಂದ ಒಬ್ಬನನ್ನು) ಹೊರಡಿಸಿಬಿಡು, ಅಟ್ಟಿಬಿಡು, ಹೊರದೂಡು; ಓಡಿಸಿಬಿಡು; ಆಚೆಗೆ ತಳ್ಳು; ಹೊರಕ್ಕೆ ದಬ್ಬು (He was expelled the school ಅವನನ್ನು ಪಾಠಶಾಲೆಯಿಂದ ಅಟ್ಟಿಬಿಟ್ಟರು). **Expéllent** (ಗು., ನಾ.) ಹೊರ ದೂಡುವ (ಪ್ರವೃತ್ತಿಯ); (ದೇಹದಿಂದ) ಹೊರದೂಡುವ ಔಷಧ. **Expúlsion** —ಪಲ್ಷನ್ (ನಾ.) ಹೊರ ದೂಡುವುದು. **Expúlsive** (ಗು., ನಾ.) — ವ (ಔಷಧ)

Expénd ಎಕ್ಸ್‌ಪೆಂಡ್ (ಕ್ರಿ. ಸಕ.) (ಹಣ, ಶ್ರದ್ಧೆ, ಕಾಲ, ಮೊ. ನ್ನು) ವೆಚ್ಚಮಾಡು, ವ್ಯಯಮಾಡು; ಖರ್ಚುಮಾಡು; ಬಳಸಿಬಿಡು; ಉಪಯೋಗಿಸಿಬಿಡು. (ನಾವೆ) (ಹೆಚ್ಚು ಹಗ್ಗವನ್ನು) ತೊಲೆ, ಮೊ. ಕ್ಕೆ ಸುತ್ತು. **Expénditure** — ಡ್ಯುರ್, — ಚರ್ (ನಾ.) (ಹಣ, ಮೊ. ನ್ನು) ವೆಚ್ಚಮಾಡುವುದು, ಉಪಯೋಗಿಸಿಬಿಡುವುದು; ವ್ಯಯಮಾಡಿದ ಮೊತ್ತ; ಖರ್ಚು; ವ್ಯಯ; ವೆಚ್ಚ. **Expénse** (ನಾ.) ವೆಚ್ಚ; ಖರ್ಚು; ಬೆಲೆ. (ಬ. ವ. ದಲ್ಲಿ) ಕೆಲಸ, ಮೊ. ಕ್ಕೆ ತಗುಲುವ ವೆಚ್ಚಗಳು (He offered me ten rupees and expenses ನನ್ನ ವೆಚ್ಚಗಳನ್ನೂ ಹತ್ತು ರೂಪಾಯಿಗಳನ್ನೂ ನನಗೆ ಕೊಡುವುದಾಗಿ ಹೇಳಿದನು). At the e. of — ನ ವೆಚ್ಚದಲ್ಲಿ; (ರೂಪ.) — ಗೆ ಕೆಟ್ಟ ಹೆಸರು ಬರುವಂತೆ; — ಗೆ ವಿರುದ್ಧವಾಗಿ. You defend his veracity at the e. of his understanding ಅವನು ಸತ್ಯವಂತನೆಂದು ಸಮರ್ಥಿಸಲು ಹೋಗಿ ಬುದ್ಧಿಯಿಲ್ಲದವನೆಂದು ತೋರಿಸುತ್ತೀಯೆ. A laugh at his e. ಅವನನ್ನು ನೋಡಿ ನಗು; ಅವನನ್ನು ಹಾಸ್ಯಮಾಡುವುದು. **Expénsive** (ಗು.) ಬೆಲೆಯಾದ; ಖರ್ಚು ತಗುಲುವ; ದುಬಾರಿ. **Expénsively** (ಕ್ರಿ. ವಿ.); **Expénsiveness** (ನಾ.)

Expénditure, Expénse, etc. Expend ನೋಡಿ.

Expérience ಎಕ್ಸ್‌ಪೀರಿಯೆನ್ಸ್ (ನಾ., ಕ್ರಿ. ಸಕ.) (ವಿಷಯಗಳ ಅಥವಾ ಘಟನೆಗಳ ಪ್ರತ್ಯಕ್ಷ) ಅನುಭವ; ಅನುಭವ ಜ್ಞಾನ; ವ್ಯವಹಾರ ಜ್ಞಾನ (An unpleasant e. ಅಹಿತವಾದ ಅನುಭವ. I learnt by e. ಅನುಭವದಿಂದ ಕಲಿತುಕೊಂಡೆನು). (ಸಾ., ಬ. ವ. ದಲ್ಲಿ) ಆಂತರಿಕ ಅನುಭವಗಳು. [E. table (ಬೇರೆ ಬೇರೆ ವಯಸ್ಸುಗಳಲ್ಲಿ ಜನರು ಮುಂದೆ ಎಷ್ಟು ಕಾಲ ಬದುಕಬಹುದೆಂದು ಜೀವವಿಮೆಯ ಸಂಸ್ಥೆಗಳು ತಮ್ಮ ಅನುಭವದ ನಿರೀಕ್ಷಣೆಯಿಂದ ತಿಳಿದು ತಯಾರಿಸಿದ) ಆಯುರ್ದಾಯದ (ಅನುಭವ) ಪಟ್ಟಿ]. (ಕ್ರಿ.) (ಸಂತೋಷ, ಆದರ, ಅದೃಷ್ಟ, ಮೊ. ನ್ನು) ಪಡೆ, ಅನುಭವಿಸು; ತಿಳಿದುಕೊ; ಕಂಡುಕೊ. **Expérienced** — ಎನ್ಸ್ಟ್ (ಗು.) ಅನುಭವ ಪಡೆದ; ನುರಿತ. **Experiéntial** — ಷಲ್ (ಗು.) ಅನುಭವಾತ್ಮಕ (E. philosophy ಅನುಭವ ತತ್ತ್ವಮಾರ್ಗ). **Experiéntialism** (ನಾ.) ಎಲ್ಲ ಜ್ಞಾನವೂ ಅನುಭವದಿಂದಲೇ ಹುಟ್ಟಿರಬೇಕೆಂಬ ವಾದ: ಅನುಭವ ವಾದ. **Experiéntialist** (ನಾ.) ಅನುಭವ ವಾದಿ. **Experiéntially** (ಕ್ರಿ. ವಿ.)

Expériment ಎಕ್ಸ್‌ಪೆರಿಮೆಂಟ್ (ನಾ., ಕ್ರಿ. ಅಕ.) ಪರೀಕ್ಷೆ; ಪ್ರಯೋಗ; (ಒಂದು ಕಲ್ಪನೆ, ಮೊ. ಗಳ ವಾಸ್ತವಿಕತೆಯನ್ನು ನಿರ್ಧರಿಸುವುದಕ್ಕಾಗಿ ಮಾಡುವ) ಪ್ರಯೋಗ ಪರೀಕ್ಷೆ, ಪರೀಕ್ಷಾ ಪ್ರಯೋಗ. (ಒಂದರಮೇಲೆ, ಒಂದರಿಂದ) ಪ್ರಯೋಗ ನಡಸಿ ಪರೀಕ್ಷೆ ಮಾಡು. **Experimentátion** (ನಾ.) ಪ್ರಯೋಗ ಪರೀಕ್ಷೆ (ಮಾಡುವುದು). **Experiméntal** (ಗು.) ಅನುಭವಾತ್ಮಕ; ಪ್ರಯೋಗಾಧಾರದ (E. philosophy ಪ್ರಾಯೋಗಿಕ ತತ್ತ್ವಶಾಸ್ತ್ರ: ಎಂದರೆ, ತರ್ಕಿಸಿ ಪಡೆದ ನಿರ್ಣಯಗಳಿಗೆ ಪ್ರಯೋಗ ಅಥವಾ ಅನುಭವವು ಆವಶ್ಯಕವಾದ ಆಧಾರವೆಂದು ಪ್ರತಿಪಾದಿಸುವುದು); ಪರೀಕ್ಷಾರ್ಥಕ; ಪ್ರಯೋಗಗಳಲ್ಲಿ ಉಪಯೋಗಿಸುವ; ಪ್ರಾಯೋಗಿಕ. **Experiméntalism** (ನಾ.) (ತತ್ತ್ವಶಾಸ್ತ್ರದಲ್ಲಿಯೇ ಆಗಲಿ ವಿಜ್ಞಾನದಲ್ಲಿಯೇ ಆಗಲಿ) ಪ್ರಯೋಗ ಪರೀಕ್ಷಾ ತತ್ತ್ವಗಳು. **Experiméntalist** (ನಾ.) ಪ್ರಯೋಗಕಾರ; ಪ್ರಯೋಗಪರೀಕ್ಷಕ. **Experiméntalize**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕ್ರಿ. ಅಕ.)ಪ್ರಯೋಗ ಪರೀಕ್ಷೆಗಳನ್ನು ನಡಸು, ಮಾಡು. **Experiméntally** (ಕ್ರಿ. ವಿ.) ಪ್ರಾಯೋಗಿಕವಾಗಿ ; ಪ್ರಯೋಗ ರೀತಿಯಲ್ಲಿ ; ಪ್ರಯೋಗಾರ್ಥವಾಗಿ.

Expért ಎಕ್ಸ್‌ಪರ್ಟ್ (ಗು.), **Éxpert** (ನಾ.) ಅಭ್ಯಾಸ ಮಾಡಿ ತಯಾರಾದ ; ಚತುರ ; ನುರಿತ(ವನು) ; ಅನುಭವಶಾಲಿ ; ವಿಚಕ್ಷಣ ; ನಿಪುಣ ; ಪ್ರವೀಣ (Mining e. ಖನಿಜಕಾರ್ಯ ಪ್ರವೀಣ. E. evidence ಪ್ರವೀಣ ಪ್ರಮಾಣ). **Expértly** (ಕ್ರಿ. ವಿ.) ; **Expértness** (ನಾ.)

Expérto créde (L) ಎಕ್ಸ್‌ಪರ್ಟೊ ಕ್ರೀಡೀ, (ವಾಕ್ಯ), ನಾನು ಹೇಳುವುದನ್ನು ನಂಬು, ಏಕೆಂದರೆ ನಾನು ಅದನ್ನು ಪರೀಕ್ಷಿಸಿದ್ದೇನೆ. ಅನುಭವಶಾಲಿಯ ಮಾತನ್ನು ನಂಬು ; ನುರಿತವನನ್ನು ನಂಬು.

Éxpiate ಎಕ್ಸ್‌ಪಿಯೇಟ್ (ಕ್ರಿ. ಸಕ.) (ಮಾಡಿದ ತಪ್ಪಿಗೆ, ಪಾತಕಕ್ಕೆ) ದಂಡ ತೆರು, ಪರಿಹಾರ ಕೊಡು, ಪ್ರಾಯಶ್ಚಿತ್ತ ಮಾಡಿಕೊ. **Éxpiable** (ಗು.) ಪರಿಹಾರ ಮಾಡಿಕೊಳ್ಳಲಾಗುವ (E. wrong). **Éxpiatory** — ಪಿಯ(ಯೇ)ಟರಿ (ಗು.) ಪರಿಹಾರ ಮಾಡುವ. **Expiátion** (ನಾ.) (ಪಾಪ) ಪರಿಹಾರ (ಮಾಡಿಕೊಳ್ಳುವುದು) ; ಪ್ರಾಯಶ್ಚಿತ್ತ (ಮಾಡಿಕೊಳ್ಳುವುದು). **Éxpiator** (ನಾ.) — ಮಾಡಿಕೊಳ್ಳುವವನು.

Expíre ಎಕ್ಸ್‌ಪಯ್‌ರ್ (ಕ್ರಿ.) (ಶ್ವಾಸಕೋಶದಿಂದ ವಾಯುವನ್ನು) ನಿಶ್ವಸಿಸು ; ಉಸಿರು ಬಿಡು. ಪ್ರಾಣ ಬಿಡು ; ಸಾಯಿ. (ಬೆಂಕಿ, ವೊ. ಗಳ ವಿಷಯದಲ್ಲಿ) ನಂದಿಹೋಗು, ಆರಿಹೋಗು. (ಕಾಲದ ವಿಷಯದಲ್ಲಿ) ಕೊನೆಗಾಣು, ಮುಗಿದುಹೋಗು. (ಕಾನೂನು, ಸ್ವಾಮ್ಯ, ಯುದ್ಧ ವಿರತಿ, ವೊ.) ಅವಧಿ ತೀರಿಹೋಗು, ಪೂರಯಿಸು. (ಬರುದು, ವೊ.) ನಿಂತುಹೋಗು. **Expirátion** — ಪಿರೇಷನ್ (ನಾ) (ವಾಯು, ವೊ. ನ್ನು) ನಿಶ್ವಸಿಸುವುದು ; ಉಸಿರು ಬಿಡುವುದು ; ನಿಶ್ವಾಸ. (ವಾಯಿದೆಯ ಕಾಲ, ಯುದ್ಧ ವಿರತಿ, ವೊ.) ಅವಧಿ ತೀರಿಹೋಗುವುದು ; ಮುಗಿತ ; ಕೊನೆ ; ಅಂತ್ಯ. **Expíratory** — ಪೈರಟರಿ (ಗು.) ನಿಶ್ವಾಸದ. **Expíry** — ಪೈಯ್ರಿ (ನಾ.) (ಅವಧಿ, ಯುದ್ಧ ವಿರತಿ, ವೊ. ಗಳ) ಅಂತ್ಯ, ಮುಗಿತ, ಮುಕ್ತಾಯ, ಸಮಾಪ್ತಿ.

Expíscate ಎಕ್ಸ್‌ಪಿಸ್ಕೇಟ್ (ಕ್ರಿ. ಸಕ.) ಶೋಧಿಸಿ ಕಂಡುಹಿಡಿ ; ಹುಡುಕಿ ತೆಗೆ.

Explaín ಎಕ್ಸ್‌ಪ್ಲೆಯ್‌ನ್ (ಕ್ರಿ. ಸಕ.) (ವಸ್ತು, ವಿವರಾಂಶ, ವೊ. ನ್ನು) ವಿಶದವಾಗಿ ತಿಳಿಸು ; ವಿವರಿಸು ; ಸ್ಪಷ್ಟಮಾಡು ; ಸ್ಪಷ್ಟೀಕರಿಸು ; ಬಿಚ್ಚಿ ಹೇಳು ; ವ್ಯಾಖ್ಯಾನ ಮಾಡು ; ಅರ್ಥ ಹೇಳು ; ನಿರೂಪಿಸು. (ನಡತೆ, ವೊ. ಗಳ ವಿಷಯದಲ್ಲಿ) ಸಮಜಾಯಿಷಿ ಕೊಡು, ಸಮಾಧಾನ ಹೇಳು. E. away (ಮು., ಅಸಮಾಧಾನ ಹುಟ್ಟುವಂತೆ ಹೇಳಿದುದನ್ನು ಸಮಾಧಾನ ಹೇಳಿ) ತಿದ್ದಿ ತೇಲಿಸಿಬಿಡು. E. oneself ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸು ; ತನ್ನ ವರ್ತನೆಗೆ ಕಾರಣ, ಸಮಾಧಾನ, ಹೇಳು. **Explaínable** (ಗು.) ವಿವರಿಸಲಾಗುವ ; ವಿಶದಪಡಿಸಲಾಗುವ. **Explanátion** — ಪ್ಲನೇಷನ್ (ನಾ.) ವಿವರಣೆ ; ಸ್ಪಷ್ಟಪಡಿಸುವುದು ; ಸ್ಪಷ್ಟೀಕರಣ. (ಮು., ಪರಸ್ಪರ ಅಭಿಪ್ರಾಯ ತಿಳಿವಳಿಕೆಗಾಗಿ, ಅಥವಾ ಪರಸ್ಪರ ಸಮಾಧಾನ ಮಾಡುವುದಕ್ಕಾಗಿ) ವಿಶದಪಡಿಸುವುದು ; ಸಮಾಧಾನ ; ಸಮಜಾಯಿಷಿ. ವಿವರಣೆಮಾಡುವ ಹೇಳಿಕೆ, ಸಂದರ್ಭ. **Explánatory** — ಪ್ಲ್ಯಾನಟರಿ (ಗು.) ವಿವರಿಸುವ ; ವಿವರಣಾತ್ಮಕ ; ಸ್ಪಷ್ಟಪಡಿಸುವ. **Explánatorily** (ಕ್ರಿ. ವಿ.)

Explétive ಎಕ್ಸ್‌ಪ್ಲೀಟಿವ್, **Éxpletive** — ಪ್ಲಿಟಿವ್ (ಗು., ನಾ.) (ಮು., ವಾಕ್ಯ, ಪದ್ಯಪಾದ, ವೊ. ಗಳಲ್ಲಿ) ಭರ್ತಿಯ (ಮಾತು) ; ಹೆಚ್ಚಾಗಿ ಸೇರಿಸಿದ್ದು ; ಹೆಚ್ಚು ಪದ : (ಮು., ಆಣೆ ಅಥವಾ ಅರ್ಥವಿಲ್ಲದ ಉದ್ಗಾರ)

Éxplicable. Explicate ನೋಡಿ.

Éxplicate ಎಕ್ಸ್‌ಪ್ಲಿಕೇಟ್ (ಕ್ರಿ. ಸಕ.) (ಭಾವನೆ, ತತ್ತ್ವ, ವೊ. ನ್ನು) ಪ್ರತಿಪಾದಿಸು, ನಿರೂಪಿಸು ; (ಪ್ರಾಚೀ. ಪ್ರ.) ವಿಶದೀಕರಿಸು ; ವಿವರಿಸು. **Explicátion** (ನಾ.) ; **Éxplicative** — ಕೇಟಿವ್ (ಗು.) ವಿವರಣೆ ಮಾಡುವ ; ವಿಶದೀಕರಿಸುವ. **Éxplicatory** — ಕಟರಿ (ಗು.) ; **Éxplicable** (ಗು.) ವಿವರಿಸಲಾಗುವ ; ಸಮಾಧಾನ ಹೇಳಲಾಗುವ.

Éxplicit[1] ಎಕ್ಸ್‌ಪ್ಲಿಸಿಟ್ (ಕ್ರಿ. ಅಕ.) ಇಲ್ಲಿಗೆ ಮುಗಿಯುತ್ತದೆ (ಹಿಂದೆ ಗ್ರಂಥಾಂತದಲ್ಲಿ ಬರೆಯುತ್ತಿದ್ದ ಮಾತು) ; ಸಮಾಪ್ತಿ.

Explícit[2] ಎಕ್ಸ್‌ಪ್ಲಿಸಿಟ್ (ಗು.) (ಊಹೆಗೆ ಸ್ವಲ್ಪವೂ ಬಿಡದೆ) ವಿಶದವಾಗಿ ಹೇಳಿದ ; ಸ್ಪಷ್ಟವಾದ ; ವ್ಯಕ್ತ ; ಪ್ರಕಟ. (ಮನುಷ್ಯರ ವಿಷಯದಲ್ಲಿ) ಮನಸ್ಸಿನಲ್ಲಿಟ್ಟುಕೊಳ್ಳದೆ ಮಾತನಾಡಿಬಿಡುವ ; ಮುಚ್ಚುಮರೆಯಿಲ್ಲದ. E. faith ಒಂದು ತತ್ತ್ವದ ಪೂರ್ವೋತ್ತರಗಳನ್ನು ಸ್ಪಷ್ಟವಾಗಿ ತಿಳಿದು ಅದನ್ನು ನಂಬುವುದು (Implicit ಪದದ ಅರ್ಥದೊಡನೆ ಹೋಲಿಸಿ ನೋಡಿ). **Explícitly** (ಕ್ರಿ. ವಿ.) ; **Explícitness** (ನಾ.)

Explóde ಎಕ್ಸ್‌ಪ್ಲೋಡ್ (ಕ್ರಿ.) (ತತ್ತ್ವ, ತಪ್ಪು ಅಭಿಪ್ರಾಯ, ವೊ. ನ್ನು) ಬಹಿರಂಗ ಮಾಡು, ಬಯಲು ಮಾಡು, ಖಂಡನೆ ಮಾಡು, ಹಾರಿಸಿಬಿಡು, ನಿರಾಕರಿಸು. (ಸುಡುವ ಅನಿಲ, ಕೋವಿಯ ಮದ್ದು, ಎಂಜಿನಿನ ಕುದಿಪಾತ್ರೆ, ವೊ.) ದೊಡ್ಡ ಶಬ್ದ ಮಾಡಿಕೊಂಡು ಸಿಡಿ, ಸಿಡಿಸು ; ಸ್ಫೋಟನವಾಗು. **Explóded** (ಗು.) ಮುರಿದು ಬಿದ್ದ ; ಭಗ್ನವಾದ (ರೂಪ. ಸಹ). **Explósion** — ಷನ್ (ನಾ.) ದೊಡ್ಡ ಶಬ್ದ ಮಾಡಿ ಸಿಡಿಯುವುದು, ಹಾರುವುದು ; ಸಿಡಿತ ; ಸ್ಫೋಟನ ; ಸಿಡಿತದ ಶಬ್ದ. (ಕೋಪ, ವೊ.) ಥಟ್ಟನೆ ಮೂಡುವುದು ; ಕೋಪದ ಸಿಡಿತ ; ಕೆರಳು. **Explósive** — ಸಿವ್ (ಗು., ನಾ.) ದೊಡ್ಡ ಶಬ್ದದೊಡನೆ ಹೊರಗೆಡಹುವ, ಸಿಡಿಸುವ ; ಸ್ಫೋಟಕ ; ಸಿಡಿಯುವ (ರೂಪ. ಸಹ). (ವ್ಯಂಜನ) ನಿರ್ಬಂಧದಿಂದ ತಡೆದ ಉಸಿರನ್ನು ಥಟ್ಟನೆ ಸಿಡಿಸುವುದರಿಂದ ಉಚ್ಚರಿಸುವ (ವರ್ಣ) : ಸ್ಫೋಟಕ ವ್ಯಂಜನ (ಉದಾ., ಕ, ಗ, ಟ, ಡ, ಪ, ಬ). ಸ್ಫೋಟಕ (ವಸ್ತು) ; ಸಿಡಿಮದ್ದು. ಸ್ಫೋಟಕಾಕ್ಷರ. High e. ಬಂದೂಕಿನ ಗುಂಡು, ವೊ. ನ್ನು ಹಾರಿಸುವುದಕ್ಕಲ್ಲದೆ ವಸ್ತುಗಳನ್ನು ಚೂರು ಚೂರು ಮಾಡುವುದಕ್ಕಾಗಿ ಸಿಡಿಗುಂಡುಗಳಲ್ಲಿ ಉಪಯೋಗಿಸುವ ಪ್ರಬಲ ಸ್ಫೋಟಕ ವಸ್ತು. **Explósively** (ಕ್ರಿ. ವಿ.) ; **Explósiveness** (ನಾ.)

Exploít ಎಕ್ಸ್‌ಪ್ಲಾಯ್‌ಟ್ (ನಾ., ಕ್ರಿ. ಸಕ.) ಯಶಸ್ವಿಯಾದ ಕಾರ್ಯಸಿದ್ಧಿ ; ಸಾಹಸ ಕಾರ್ಯ ; ವೀರ ಕೃತ್ಯ. (ಕ್ರಿ.) (ಗಣಿ, ವೊ. ನ್ನು) ಕಾರ್ಯರೂಪಕ್ಕೆ ತರು ; ಉಪಯೋಗವಾಗುವಂತೆ ಮಾಡು. (ವ್ಯಕ್ತಿ, ವೊ. ನ್ನು) ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊ, ದುಡಿಸು ; (ಒಂದರಿಂದ) ಪ್ರಯೋಜನ ಪಡೆ. **Exploítable** (ಗು.) ; **Exploítage** (ನಾ.) ; **Exploitátion** (ನಾ.)

Explóre ಎಕ್ಸ್‌ಪ್ಲೋರ್ (ಕ್ರಿ. ಸಕ.) ಒಳಹೊಕ್ಕು ನೋಡು ; ವಿಚಾರ ಮಾಡು ; (ಪರಿ)ಶೋಧಿಸು. (ಗಾಯವನ್ನು) ಮುಟ್ಟಿನೋಡಿ ಪರೀಕ್ಷಿಸು. (ದೇಶ, ವೊ. ನ್ನು) ಸುತ್ತಿನೋಡಿ ಪರೀಕ್ಷಿಸು. **Explorátion** — ಪ್ಲೊರೇ — (ನಾ.) ; **Explórer** — ಪ್ಲೋ — (ನಾ.) (ದೇಶವನ್ನು ಸುತ್ತಿ ವಿಷಯಗಳನ್ನು) ಕಂಡುಹಿಡಿಯುವವನು. ಗಾಯವನ್ನು ಅಥವಾ ಹಲ್ಲಿನೊಳಗಿನ ಕಂಡಿ, ವೊ. ನ್ನು ಪರೀಕ್ಷಿಸುವ ಸಲಕರಣೆ ; ಪರಿಶೋಧಕ. **Explórative** (ಗು.), **Explóratory** — ಪ್ಲಾ(ಪ್ಲೋ)ರಟರಿ (ಗು.) ಒಳಹೊಕ್ಕು ನೋಡುವ, ಪರೀಕ್ಷಿಸುವ.

Explósion. Explode ನೋಡಿ.

Expónent ಎಕ್ಸ್‌ಪೋನೆಂಟ್ (ಗು., ನಾ.) ಬಿಡಿಸುವ, ವಿವರಿಸುವ, ಪ್ರತಿಪಾದಿಸುವ (ವ್ಯಕ್ತಿ, ವಸ್ತು) ; ಪ್ರತಿಪಾದಕ ; ನಿರೂಪಕ. (ಸಂಗೀತ, ವೊ. ನ್ನು) ಹಾಡುವವನು, ಬಾಜಿಸುವವನು. ಮಾದರಿ. ಪ್ರತಿನಿಧಿ. (ಬೀ. ಗ.) ಗುಣ್ಯ ಪದದ ಯಾವ ಘಾತವನ್ನು ತೆಗೆದುಕೊಳ್ಳಬೇಕೆಂದು ಸೂಚಿಸುವ ದರ್ಶಕ ; ಘಾತ. **Exponéntial** — ಪೊನೆನ್ಷಲ್ (ಗು., ನಾ.) (ಗಣಿತ) ಅಜ್ಞಾತ ಅಥವಾ ಚಲಘಾತವುಳ್ಳ (ಪದ)

Expórt ಎಕ್ಸ್‌ಪೋರ್ಟ್ (ಕ್ರಿ. ಸಕ.), **Éxport** (ನಾ.) (ಸರಕನ್ನು) ಪರದೇಶಕ್ಕೆ ಸಾಗಿಸು, ಕಳುಹಿಸು, ರಫ್ತುಮಾಡು ; ಹೊರ ಮಾರು. ರಫ್ತು ಮಾಡಿದ ಸರಕು ; ಹೊರ ಮಾರು. (ಸಾ., ಬ. ವ. ದಲ್ಲಿ.) ರಫ್ತು ಮಾಡಿದ ಮೊತ್ತ ; ರಫ್ತು. E. duty ರಫ್ತು ಸುಂಕ. **Expórtable** (ಗು.) ; **Exportátion** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Expóse[1] ಎಕ್ಸ್‌ಪೋಸ್ (ಕ್ರಿ. ಸಕ.) (ವ್ಯಕ್ತಿಯನ್ನು, ವಸ್ತುವನ್ನು, ಮು., ವಾಯುಸ್ಥಿತಿಯಿಂದ) ಮರೆಮಾಡದೆ ಇಡು ; ತೆರೆದಿಡು ; ಮುಚ್ಚದೆ ಇಡು ; ಗಾಳಿ, ಮಳೆ, ಬಿಸಿಲು, ಮೊ. ಕ್ಕೆ ಒಡ್ಡು. (ಅಪಾಯಸಂಭವ, ಮೊ. ಕ್ಕೆ) ಗುರಿ, ಆಸ್ಪದ, — ಮಾಡು ; ಅಧೀನವಾಗಿಸು. (ಛಾಯಾಚಿತ್ರ ಫಲಕವನ್ನು) ಬೆಳಕಿಗೆ ಒಡ್ಡು. (ಕೂಸನ್ನು) ಸಾಯಲು ಹೊರಗೆ ಹಾಕು. (ಒಂದು ಗೊತ್ತಾದ ದಿಕ್ಕಿಗೆ) ತೆರೆದಿರು (ಭೂ. ಕೃ. ನಲ್ಲಿ). ಪ್ರದರ್ಶಿಸು ; ತೋರಿಸು ; ನೋಟಕ್ಕಾಗಿಡು ; ಮಾರುವುದಕ್ಕಿಡು. (ರಹಸ್ಯ, ಯೋಜನೆ, ಮೊ. ನ್ನು) ಹೊರಗೆಡವು, ಬಹಿರಂಗ ಮಾಡು, ಪ್ರಕಾಶ ಮಾಡು. (ದುಷ್ಟಾತ್ಮನನ್ನು, ದುಷ್ಟತನವನ್ನು) ಬೆಳಕಿಗೆ ತರು, ಬಯಲು ಮಾಡು, ಮರೆದೆಗೆ. **Exposítion** — ಪೊಸಿಷನ್ (ನಾ.) ನಿರೂಪಣೆ ; ಮುಂದಿಡುವುದು ; ವಿವರಣೆ ; ಪ್ರತಿಪಾದನೆ ; ಸ್ಪಷ್ಟೀಕರಣ ; ವ್ಯಾಖ್ಯಾನ. ಸರಕು, ಮೊ. ಗಳ ಪ್ರದರ್ಶನ. = Exposure. **Expósitive** — ಪಾಸಿಟಿವ್ (ಗು.) ವಿವರಣಾತ್ಮಕ ; ವ್ಯಾಖ್ಯಾನಾತ್ಮಕ. **Expósitor** (ನಾ.) ; **Expósitory** (ಗು.) ವಿವರಣಾತ್ಮಕ ; ವ್ಯಾಖ್ಯಾನಾತ್ಮಕ ; ವಿವರಣೆಯ ; ವ್ಯಾಖ್ಯಾನದ. **Expósure** — ಪೋಷರ್ (ನಾ.) (ಗಾಳಿಗೆ, ಶೀತಕ್ಕೆ, ಅಪಾಯ, ಮೊ. ಕ್ಕೆ) ಒಡ್ಡುವುದು, ಒಡ್ಡಿರುವುದು, ಒಡ್ಡುವಿಕೆ ; ತೆರೆದಿಡುವುದು ; ತೆರೆದಿರುವುದು. (ಕೂಸನ್ನು) ಹೊರಗೆ ಬಿಸುಡುವುದು, ತೊರೆದುಬಿಡುವುದು. (ಮು., ಮಾರಾಟದ ವಸ್ತುಗಳ) ಪ್ರದರ್ಶನ. (ಮೋಸ, ಕಪಟ, ಮೊ. ನ್ನು) ಬಯಲು ಮಾಡುವುದು, ಹೊರಗೆಡಹುವುದು. ದಿಕ್ಕು ; ದೃಷ್ಟಿ ; ಮುಖ ; ಕಡೆ (Southern e. ದಕ್ಷಿಣಕ್ಕೆ ಒಡ್ಡಿರುವುದು). (ಛಾಯಾ ಚಿತ್ರ) ಫಲಕವನ್ನು ಅಥವಾ ಪಟಲವನ್ನು ಬೆಳಕಿಗೆ ಒಡ್ಡುವುದು ; — ಒಡ್ಡುವ ಕಾಲಪ್ರಮಾಣ.

Expósé[2] (F) ಎಕ್ಸ್‌ಪೋ(ಪೊ)ಸೇ (ನಾ.) ವಿಷಯ ನಿರೂಪಣೆ ; ಇರುವುದನ್ನು ಹೇಳುವುದು. (ಅಯೋಗ್ಯತೆಯನ್ನು) ಹೊರಗೆ ಹಾಕುವುದು, ಎತ್ತಿ ತೋರಿಸುವುದು.

Ex post fácto ಎಕ್ಸ್ ಪೋಸ್ಟ್ ಫ್ಯಾಕ್ಟೊ (ಗು.) ಹಿಂದೆ ನಡೆದದ್ದಕ್ಕೂ ಅನ್ವಯಿಸುವ (E. p. f. law)

Expóstulate ಎಕ್ಸ್‌ಪಾಸ್ಚುಲೇಟ್ (ಕ್ರಿ. ಅಕ.) ಸ್ನೇಹ ಭಾವದಿಂದ ಆಕ್ಷೇಪಿಸು ; ಬುದ್ಧಿ(ವಾದ) ಹೇಳು ; ಎಚ್ಚರಿಸು. **Expostulátion** (ನಾ.) ; **Expóstulatory** — ಲಟರಿ (ಗು.)

Expósure. **Expose**[1] ನೋಡಿ.

Expoúnd ಎಕ್ಸ್‌ಪಾಂಡ್ (ಕ್ರಿ. ಸಕ.) (ತತ್ತ್ವ, ಮೊ. ನ್ನು) ತಿಳಿಯಹೇಳು, ವಿಶದವಾಗಿ ಪ್ರತಿಪಾದಿಸು, ನಿರೂಪಿಸು, ವಿವರಿಸು ; ವ್ಯಾಖ್ಯಾನಿಸು. (ಮತ ಗ್ರಂಥಗಳನ್ನು) ವ್ಯಾಖ್ಯಾನ ಮಾಡು.

Expréss[1] ಎಕ್ಸ್‌ಪ್ರೆಸ್ (ಗು., ಕ್ರಿ. ವಿ., ನಾ.) (ಹೋಲಿಕೆಯಲ್ಲಿ) ಪಡಿಯಚ್ಚಾದ, ತದ್ವತ್ತಾದ, ಯಥಾವತ್ತಾದ. ಸ್ಪಷ್ಟವಾಗಿ ಹೇಳಿದ ; ವ್ಯಕ್ತಪಡಿಸಿದ ; ಸ್ಪಷ್ಟ ; ವ್ಯಕ್ತ ; ಪ್ರಕಟ. ಒಂದು ವಿಶೇಷ ಉದ್ದೇಶಕ್ಕಾಗಿ ಮಾಡಿದ, ರಚಿಸಿದ, ಕಳುಹಿಸಿದ. ನಿರ್ದಿಷ್ಟ ; ಪ್ರತ್ಯೇಕ. [E. train ಮಧ್ಯೇ ಬರುವ ಕೆಲವು ನಿಲ್ದಾಣಗಳಲ್ಲಿ ಮಾತ್ರ ನಿಂತು ವೇಗವಾಗಿ ಹೋಗುವ ರೈಲುಬಂಡಿ. E. rifle ಗುಂಡನ್ನು ಹೆಚ್ಚಾದ ಆದ್ಯವೇಗದಿಂದ ಹೊರಡಿಸಿ ಕ್ಷಿತಿಜಕ್ಕೆ ಸರಿಸುಮಾರು ಸಮಾನಾಂತರದಲ್ಲಿ ಹಾರುವಂತೆ ಅಳವಡಿಸಿರುವ ಬಂದೂಕು. E. bullet ಇಂಥ ಬಂದೂಕಿಗೆ ಉಪಯೋಗಿಸುವ ಹಿಗ್ಗುಗುಂಡು. E. delivery ಪ್ರತ್ಯೇಕ ಅಂಚೆಯಾಳಿನೊಡನೆ ಕಳುಹಿಸಿ ಕೂಡಲೆ ಮಾಡಿಸುವ ಅವಸರದ ಬಟವಾಡೆ]. (ಕ್ರಿ. ವಿ.) ವೇಗದ ರೈಲುಬಂಡಿಯ ಮೂಲಕ, ಅಥವಾ ಪ್ರತ್ಯೇಕ ಚಾರನ ಮೂಲಕ. (ನಾ.) ವೇಗವಾಗಿ ಹೋಗುವ ರೈಲುಬಂಡಿ, ಚಾರ ; ಗುಂಡನ್ನು ವೇಗದಿಂದ ಹೊರ ಅಟ್ಟುವ ಬಂದೂಕು. **Expréssly** (ಕ್ರಿ. ವಿ.)

Expréss[2] ಎಕ್ಸ್‌ಪ್ರೆಸ್ (ಕ್ರಿ. ಸಕ.) (ರಸ, ವಾಯು, ಮೊ. ನ್ನು, ಒಂದರಿಂದ) ಹಿಂಡು, ಹಿಸುಕು, ಹಿದುಕು ; ಹೊರ ನೂಸು ; ಹೊರ ಸುರಿಸು ; ಹೊರ ಹೊರಡಿಸು. (ಗಣಿತ) ಸಂಕೇತಗಳ ಮೂಲಕ ನಿರೂಪಿಸು [E. (quantity) in terms of another (ಒಂದು ಮೊತ್ತವನ್ನು) ಮತ್ತೊಂದರ ರೂಪದಲ್ಲಿ ನಿರೂಪಿಸು]. (ಭಾವಗಳನ್ನು, ಗುಣಗಳನ್ನು) ಹೊರಗೆಡವು, ಪ್ರಕಾಶ ಮಾಡು, ಸೂಚಿಸು, ಶೋಧಿಸು. (ಮನೋಭಾವವನ್ನು) ಮಾತಿನಲ್ಲಿ ತಿಳಿಯಪಡಿಸು. E. oneself (ಒಂದು ವಿಷಯವಾಗಿ ತಾನು ಹೇಳತಕ್ಕ ಅಭಿಪ್ರಾಯವನ್ನು ಚೆನ್ನಾಗಿ, ತಕ್ಕಂತೆ, ದೃಢವಾಗಿ) ಹೇಳು. **Expréssible** (ಗು.) ; **Expréssion** (ನಾ.) (ಕ್ರಿಯಾರ್ಥಗಳಲ್ಲಿ). ಪದವಿನ್ಯಾಸ ; ಮಾತಿನ ಜೋಡಣೆ ; ವಾಕ್ಸರಣಿ ; ಹೇಳುವ ರೀತಿ. ಮಾತು ; ವಾಕ್ಯಭಾಗ. (ಬೀ. ಗ.) ಒಂದು ಮೊತ್ತವನ್ನು ಸೂಚಿಸುವ ಸಂಕೇತ ಸಮುದಾಯ, ರಾಶಿ. (ಮುಖ) ಭಾವ, ಭಂಗಿ ; (ಕಂಠ) ಧ್ವನಿ. (ಕಲೆ) ಪಾತ್ರ, ಭಾವ, ಮೊ. ನ್ನು ನಿರೂಪಿಸುವ ರೀತಿ ; ಅಭಿವ್ಯಕ್ತಿ ; ವ್ಯಂಜನ. (ಸಂ.) ಒಂದು ಗೀತೆಯ ಭಾವವನ್ನು ಚೆನ್ನಾಗಿ ತೋರಿಸುವಂಥ ಹಾಡುಗಾರಿಕೆ. **Expréssionless** (ಗು.) ಭಾವ ಶೂನ್ಯ. **Expréssionist** (ನಾ.) (ಕಲೆಯಲ್ಲಿ) ಭಾವ, ಮೊ. ನ್ನು ವ್ಯಕ್ತಪಡಿಸುವವನು ; ಭಾವ ಚಿತ್ರಕ ; ಅಭಿವ್ಯಕ್ತಿ ವಾದಿ. **Expréssional** (ಗು.) ಮಾತಿಗೆ, ಮುಖಭಾವಕ್ಕೆ, ಕಲಾ ಕೃತಿಗೆ, ಸಂಬಂಧಪಟ್ಟ. **Expréssive** (ಗು.) ಭಾವ ಪ್ರದರ್ಶಕ ; ಅಭಿವ್ಯಂಜಕ. (ಮಾತು, ಸಂಜ್ಞೆ, ಮೊ. ಗಳ ವಿಷಯದಲ್ಲಿ) ಭಾವ ಗರ್ಭಿತವಾದ, ಅರ್ಥ ಗರ್ಭಿತವಾದ. **Expréssively** (ಕ್ರಿ. ವಿ.) ; **Expréssiveness** (ನಾ.)

Exprobrátion ಎಕ್ಸ್‌ಪ್ರೊಬ್ರೇಷನ್ (ನಾ.) ದೂಷಣೆಯ ಭಾಷೆ ; ನಿಂದನೆ ; ಬೈಗುಳು.

Exprópriate ಎಕ್ಸ್‌ಪ್ರೋಪ್ರಿಯೇಟ್ (ಕ್ರಿ. ಸಕ.) (ಆಸ್ತಿ, ಮೊ. ಗಳ) ಸ್ವಾಧೀನ ತಪ್ಪಿಸು. (ಸ್ವತ್ತನ್ನು) ಕಿತ್ತುಕೊ, ತೆಗೆದುಕೊ. **Expropriátion** (ನಾ.)

Expúlsion. **Expel** ನೋಡಿ.

Expúnge ಎಕ್ಸ್‌ಪಂಜ್ (ಕ್ರಿ. ಸಕ.) (ಹೆಸರನ್ನು ಒಂದು ಪಟ್ಟಿಯಿಂದ, ಗ್ರಂಥಭಾಗವನ್ನು ಒಂದು ಪುಸ್ತಕದಿಂದ) ತೊಡೆದುಹಾಕು, ತೆಗೆದುಹಾಕು, ಅಳಿಸಿಬಿಡು, ಬಿಟ್ಟುಬಿಡು. **Expúnction** (ನಾ.)

Éxpurgate ಎಕ್ಸ್‌ಪರ್ಗೇಟ್ (ಕ್ರಿ. ಸಕ.) (ಒಂದು ಗ್ರಂಥ, ಮೊ. ಗಳಲ್ಲಿಯ) ಆಕ್ಷೇಪಣೀಯ, ವರ್ಜ್ಯ, ಭಾಗಗಳನ್ನು ತೆಗೆದುಹಾಕಿ ದೋಷ ರಹಿತ ಮಾಡು. ದೋಷ, ವರ್ಜ್ಯ, ಭಾಗಗಳನ್ನು ಕಳೆದುಹಾಕು. **Expurgátion** (ನಾ.) ; **Éxpurgator** (ನಾ.) ; **Expurgatórial** ಎಕ್ಸ್‌ಪರ್ಗಟೋರಿಯಲ್ (ಗು.) ಆಕ್ಷೇಪಣೀಯ ಭಾಗಗಳನ್ನು ತೆಗೆದುಹಾಕಿ ನಿರ್ದೋಷ ಮಾಡುವವರ, ಮಾಡುವವರ. **Expúrgatory** — ಪರ್ಗಟೋ(ಟ)ರಿ (ಗು.) ತಪ್ಪಾದುದನ್ನು, ಅಸಹ್ಯವಾದುದನ್ನು, ತೆಗೆದುಹಾಕಿ ಶುದ್ಧೀಕರಿಸುವ.

Éxquisite ಎಕ್ಸ್‌ಕ್ವಿಸಿಟ್ (ಗು., ನಾ.) ಅತ್ಯಂತ ಉತ್ಕೃಷ್ಟವಾದ, ಅಂದವಾದ ; ಮನೋಜ್ಞ ; ಮನೋಹರ. ಪರಮ ; ತೀವ್ರ ; ಗಾಢ (E. pain, pleasure) ; ತೀಕ್ಷ್ಣ (E. sensibility, etc.). ಸೂಕ್ಷ್ಮ ; ಸೂಕ್ಷ್ಮ ಗ್ರಾಹಿ. ಸೊಗಸುಗಾರ ; ಷೋಕೀಲಾಲ. **Éxquisitely** (ಕ್ರಿ. ವಿ.) ; **Éxquisiteness** (ನಾ.)

Exsánguine ಎಕ್ಸ್‌ಸ್ಯಾಂಗ್ವಿನ್ (ಗು.) ರಕ್ತವಿಲ್ಲದ ; ರಕ್ತ ಹೀನ. **Exsánguinate** — ನೇಟ್ (ಕ್ರಿ. ಸಕ.) ರಕ್ತವಿಲ್ಲದಂತೆ ಮಾಡು ; ರಕ್ತ ಹೀನ ಮಾಡು ; ರಕ್ತ ಹರಿಸಿಬಿಡು.

Exscínd ಎಕ್ಸಿಂಡ್ (ಕ್ರಿ. ಸಕ.) ಕತ್ತರಿಸಿಹಾಕು ; ತೆಗೆದುಹಾಕು (ರೂಪ. ಸಹ)

Exsért ಎಕ್ಸ್‌ಸರ್ಟ್ (ಕ್ರಿ. ಸಕ.) (ಜೀ. ವಿ.) ಹೊರ ಹೊರಡಿಸು ; ಹೊರ ಚಾಚಿಸು.

Ex-sérvice ಎಕ್ಸ್‌ಸರ್ವಿಸ್ (ಗು.) ಹಿಂದೆ (ಮು., ಮಹಾಯುದ್ಧದಲ್ಲಿ) ಸೈನಿಕ ವೃತ್ತಿಯಲ್ಲಿದ್ದ.

Éxsiccate ಎಕ್ಸಿಕೇಟ್ (ಕ್ರಿ. ಸಕ.) ಒಣಗಿಸು ; ಬತ್ತಿಸು ; ಶೋಷಿಸು ; ನೀರು ಹೊರಡಿಸಿ ತೇವ ಆರಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Éxtant, Extánt ಎಕ್ಸ್‌ಟ್ಯಾಂಟ್ (ಗು) ಈಗಲೂ ಇರುವ (ಮು., ದಸ್ತೈವಜು, ಮೊ. ಗಳ. ವಿಷಯದಲ್ಲಿ) ; ಚಾಲ್ತಿ.

Éxtasy = Ecstasy.

Extémpore ಎಕ್ಸ್‌ಟೆಂಪೊರಿ (ಕ್ರಿ. ವಿ., ಗು.) ಮೊದಲು ಸಜ್ಜುಮಾಡಿಕೊಳ್ಳದೆ, ಪೂರ್ವಸಿದ್ಧತೆಯಿಲ್ಲದೆ, ಹೇಳಿದ, ಮಾಡಿದ ; ಅಚಿಂತಿತವಾಗಿ ; ಅಯತ್ನವಾಗಿ ; ಥಟ್ಟನೆ. Speak e. ವಿಷಯ ಗುರುತುಮಾಡಿಕೊಂಡು ಬರದೆ, ಬರೆದುಕೊಂಡು ಬರದೆ, ಗಟ್ಟಿಮಾಡಿಕೊಂಡು ಬರದೆ, ಮುಂದಾಗಿ ಯೋಚಿಸದೆ, ಭಾಷಣ ಮಾಡು. **Extemporáneous** — ರೇ — (ಗು.) ಮೊದಲೇ ಯೋಚನೆ ಮಾಡದ, ಗಟ್ಟಿಮಾಡದ ; ಥಟ್ಟನೆ ಹೇಳಿದ. **Extemporáneously** (ಕ್ರಿ. ವಿ.) ; **Extemporáneousness** (ನಾ.) ; **Extémporary** — ರರಿ (ಗು.) = Extempore ; ಪ್ರಕೃತ ಸಂದರ್ಭಕ್ಕಾಗಿ ರಚಿಸಿದ ; ಆತುರದಿಂದ ಕಲ್ಪಿಸಿದ. **Extémporarily** (ಕ್ರಿ. ವಿ.) ; **Extémporize** (ಕ್ರಿ.) ಪೂರ್ವಸಿದ್ಧತೆಯಿಲ್ಲದೆ ರಚಿಸು, ನಿರ್ಮಿಸು, ಕಲ್ಪಿಸು. (ಮೊದಲು ಯೋಚನೆಮಾಡದೆ) ಥಟ್ಟನೆ, ಸದ್ಯಃಸ್ಫೂರ್ತಿಯಿಂದ, ಭಾಷಣ ಮಾಡು. **Extemporizátion** (ನಾ.) ಪೂರ್ವಸಿದ್ಧತೆಯಿಲ್ಲದ ರಚನೆ, ಕಲ್ಪನೆ, ಭಾಷಣ.

Extén̍d ಎಕ್ಸ್‌ಟೆಂಡ್ (ಕ್ರಿ.) (ಮು., ದೇಹ, ಕೈಕಾಲು, ಮೊ. ನ್ನು ಪೂರ್ತಿಯಾಗಿ) ನೀಡು, ಚಾಚು. (ಶೀಘ್ರಲಿಪಿ, ಮೊ. ನ್ನು ಮೂಲಕ್ಕೆ ಸರಿಯಾಗಿ) ವಿಸ್ತರಿಸಿ ಬರೆ. [E. an invoice ಪ್ರತಿ ಪಂಕ್ತಿಯಲ್ಲೂ ಇರುವ ಪ್ರಕರಣಗಳ ಒಟ್ಟನ್ನು ಉದ್ದಸಾಲುಗಳಲ್ಲಿ ಬರೆ]. ಹಾಯಿ ; ವ್ಯಾಪಿಸು ; ನಿಲುಕು ; ಮುಟ್ಟು ; — ಇಸು. (ಕಾಲ ಪರಿಮಾಣ) ಲಂಬಿಸು, ಬೆಳಸು, ಬೆಳೆ. (ಅವಕಾಶ, ಶಬ್ದಾರ್ಥ, ಮೊ, ನ್ನು) ವಿಸ್ತರಿಸು, ದೊಡ್ಡದು ಮಾಡು, ಪ್ರಸರಿಸು, ಹಿಗ್ಗಿಸು. (ಸೇನೆಯ ಸಾಲು, ಮೊ. ನ್ನು) ಸೈನಿಕರ ಮಧ್ಯೇ ಮಧ್ಯೇ ನಿಯತವಾದ ಸ್ಥಳ ಬಿಟ್ಟು ಶ್ರೇಣಿಯನ್ನು ವಿಸ್ತರಿಸು ; ಹೀಗೆ ವಿಸ್ತಾರವಾಗು. (ಆಟ, ಅಸಂ.) (ಕುದುರೆಯ, ಜಟ್ಟಿಯ) ಪೂರ್ಣ ಶಕ್ತಿಯನ್ನು ಉಪಯೋಗಿಸುವಂತೆ ಮಾಡು ; ಸುಸ್ತು ಮಾಡು ; ತೀರ ಬಳಲಿಸು (ಸಾ., ಭೂ. ಕೃ. ನಲ್ಲಿ). (ದಯೆ, ಸಹಾಯ) ನೀಡು. (ನ್ಯಾ. ಶಾ.) (ಜಮಾನು, ಮೊ. ಕ್ಕೆ) ಬೆಲೆ ಕಟ್ಟು ; (ಜಮಾನು, ಮೊ. ನ್ನು) ಸಾಲಕ್ಕಾಗಿ ಜಪ್ತಿ ಮಾಡು. **Exténdible** (ಗು.); **Exténsible** (ಗು.) ವಿಸ್ತರಿಸಲಾಗುವ ; ವಿಸ್ತಾರ್ಯ. **Extensibílity** (ನಾ.) ವಿಸ್ತರಿಸಲಾಗುವ ಗುಣ ; ವಿಸ್ತಾರ್ಯತೆ. **Exténsile** — ಸಿ(ಸ್ಸೈ)ಲ್ (ಗು.) ವಿಸ್ತರಿಸಲಾಗುವ ; ವಿಸ್ತಾರ್ಯ ; ಹಿಗ್ಗಿಸಲಾಗುವ ; ಲಂಬಿಸಲಾಗುವ. **Exténsion** — ಷನ್ (ನಾ.) (ನ್ಯಾ. ಶಾ. ವಿನಾ ಕ್ರಿಯಾರ್ಥಗಳಲ್ಲಿ). ವಿಸ್ತಾರ ; ವಿಸ್ತರಣ ; ವಿಸ್ತೀರ್ಣ ; ವ್ಯಾಪ್ತಿ ; ಹರವು ; ಅವಕಾಶ ; ಲಂಬನೆ ; ಬಡಾವಣೆ. (ರೈಲುಮಾರ್ಗ, ಯೋಜನೆ, ವಾದ, ಮೊ. ಗಳ) ವಿಸ್ತೃತ ಭಾಗ, ಹೆಚ್ಚಿಸಿದ ಭಾಗ. (ವ್ಯಾ.) ಕರ್ತೃವನ್ನಾಗಲಿ ಕ್ರಿಯೆಯನ್ನಾಗಲಿ ವಿಸ್ತರಿಸುವ ಪದ(ಗಳು) : ಅರ್ಥವಿಸ್ತಾರಕ ಪದ(ಗಳು). University E. ವಿಶ್ವವಿದ್ಯಾನಿಲಯದ ಕೆಲವು ಶಿಕ್ಷಣಭಾಗಗಳಿಗೂ ಪರೀಕ್ಷೆಗಳಿಗೂ ವಿಶ್ವವಿದ್ಯಾನಿಲಯದ ವಾಸವಿಲ್ಲದ ಹೊರಗಿನವರನ್ನು ಸೇರಿಸಿಕೊಳ್ಳುವುದು : ವಿಶ್ವವಿದ್ಯಾನಿಲಯ ಪ್ರಸಾರಣ. **Exténsive** (ಗು.) ವಿಸ್ತಾರವಾದ ; ವ್ಯಾಪಕ ; ದೂರ ಹರಡುವ ; ಹರಡಿದ ; ವಿಶಾಲವಾದ. (ವ್ಯವಸಾಯದ ಉತ್ಪತ್ತಿ, ಮೊ. ವಿಷಯದಲ್ಲಿ) ಜಮೀನಿನ ವಿಸ್ತೀರ್ಣದಮೇಲೆ ಹೋಗುವ ; ವಿಸ್ತಾರ ವ್ಯವಸಾಯದ (Intensive ಪದದ ಅರ್ಥವನ್ನು ಹೋಲಿಸಿ ನೋಡಿ). **Exténsively** (ಕ್ರಿ. ವಿ.) ; **Exténsiveness** (ನಾ.) ; **Exténsor** —ಸರ್ (ನಾ.) (ದೇಹಭಾಗವನ್ನು) ಚಾಚುವ ಸ್ನಾಯು (= E.-muscle). **Extént** (ನಾ.) ವಿಸ್ತಾರ ; ವಿಸ್ತೀರ್ಣ ; ಹರವು ; ವೈಶಾಲ್ಯ (To the full e. of his power ಅವನ ಅಧಿಕಾರ ಬಲ ಪೂರ್ತಿಯಾಗಿ). (ನ್ಯಾ. ಶಾ.) (ಜಮಾನು, ಮೊ. ನ್ನು) ಬೆಲೆ ಕಟ್ಟುವುದು ; — ಜಪ್ತಿ ಮಾಡುವುದು ; ಜಪ್ತಿಯ ಆಜ್ಞೆ.

Exténuate ಎಕ್ಸ್‌ಟೆನ್ಯುಏಟ್ (ಕ್ರಿ. ಸಕ.) (ಅಪರಾಧ, ತಪ್ಪು —ಇವುಗಳ) ಆಧಿಕ್ಯವನ್ನು ಕಡಮೆಯಾಗಿ ತೋರಿಸು (Do not e. his conduct ಅವನ ನಡತೆಯ ಕುಂದನ್ನು ಕಡಮೆಯಾಗಿ ತೋರಿಸಬೇಡ) ; ಕಡಮೆಯಾಗಿ ಗಣಿಸು. (ಪ್ರಾಚೀ. ಪ್ರ.) ಪೇಲವ ಮಾಡು ; ಕಡಮೆ ಮಾಡು ; ದುರ್ಬಲ ಮಾಡು. ತೆಳುವು ಮಾಡು (E. gold into plates ಚಿನ್ನವನ್ನು ತೆಳ್ಳನೆಯ ತಗಡು ಬಡಿ). **Extenuátion** (ನಾ.) ; **Exténuatory** (ಗು.)

Extérior ಎಕ್ಸ್‌ಟೀರಿಯರ್ (ಗು., ನಾ.) ಹೊರಗಿನ ; ಹೊರಗಿರುವ ; ಹೊರಗಿನಿಂದ ಬರುವ ; ಬಾಹ್ಯ (E. angle ಒಂದು ಋಜು ರೇಖಾಕೃತಿಯ ಭುಜ ಒಂದಕ್ಕೂ ಅದರ ಪಕ್ಕ ಭುಜವನ್ನು ಲಂಬಿಸಿ ಎಳೆದ ರೇಖೆಗೂ ಮಧ್ಯೇ ಇರುವ ಕೋನ : ಹೊರ ಕೋನ ; ಬಾಹ್ಯ ಕೋನ.) (ನಾ.) ಹೊರ ತೋರ್ಕೆ ; — ನೋಟ ; — ರೂಪು ; ಬಾಹ್ಯ ಲಕ್ಷಣ. ಹೊರ ಭಾಗ. **Exteriórity** — ಯಾರಿಟಿ (ನಾ.) ಹೊರಗಿನ ಗುಣ ಅಥವಾ ನಡತೆ ; ಬಾಹ್ಯತ್ವ ; ಹೊರ ಮೈ ; ಹೊರತನ. ಆತ್ಮ ಸಾಧನೆಗೆ ಪ್ರಯತ್ನಪಡದೆ ಕೇವಲ ಬಾಹ್ಯಾಚರಣೆಗೆ ಗಮನ ಕೊಡುವುದು; ಬಾಹ್ಯಾಚಾರ. **Extériorly** (ಕ್ರಿ. ವಿ.) ; **Extériorize** (ಕ್ರಿ. ಸಕ.) (ಭಾವನೆಯಲ್ಲಿರುವುದು) ಹೊರಗೆ ರೂಪಗೊಳ್ಳು. (ಭಾವನೆಗಳಿಗೆ) ಬಾಹ್ಯ ಅಸ್ತಿತ್ವವನ್ನು ಆರೋಪಿಸು ; ಮೂರ್ತಸ್ವರೂಪ ಕಲ್ಪಿಸು. **Exteriorizátion** (ನಾ.)

Extérminate ಎಕ್ಸ್‌ಟರ್ಮಿನೇಟ್ (ಕ್ರಿ. ಸಕ.) (ವಂಶ, ಕುಲ, ಮತ, ಅಭಿಪ್ರಾಯ — ಇವನ್ನು) ನಿರ್ಮೂಲ ಮಾಡು, ನಿರ್ನಾಮ ಮಾಡು ; ಬೇರುಮುಟ್ಟ ಕಿತ್ತೊಗೆ ; ಹುಟ್ಟಡಗಿಸು ; ನಾಶ ಮಾಡು. **Exterminátion** (ನಾ.) ; **Extérminator** (ನಾ.) ; **Extérminatory** (ಗು.)

Extérnal ಎಕ್ಸ್‌ಟರ್ನಲ್ (ಗು., ನಾ.) ಹೊರಗಿನ ; ಹೊರಗಿರುವ ; ಬಾಹ್ಯ. (ಔಷಧ, ಮೊ. ಗಳ ವಿಷಯದಲ್ಲಿ) ದೇಹದ ಹೊರ ಭಾಗಕ್ಕೆ ಹಚ್ಚಿದ ; ಮೈಗೆ ಹಚ್ಚುವ. (ದೇವ. ಶಾ.) ಹೊರ ಆಚರಣೆಗಳುಳ್ಳ ; ಬಾಹ್ಯ ಕ್ರಿಯಾತ್ಮಕ. ಗೋಚರ ಪ್ರಪಂಚಕ್ಕೆ ಸೇರಿದ (E. world ಬಾಹ್ಯ ಪ್ರಪಂಚ. E. evidence ಚರ್ಚಾ ವಿಷಯದಿಂದಲ್ಲದೆ ಹೊರಗಿನ ಆಕರದಿಂದ ಪಡೆದ ಸಾಕ್ಷ್ಯ : ಬಾಹ್ಯ ಪ್ರಮಾಣ.) (ನಾ., ಬ. ವ. ದಲ್ಲಿ) ಹೊರ ರೂಪು ; ಬಾಹ್ಯ ಲಕ್ಷಣಗಳು ; ಬಾಹ್ಯಾಚಾರಗಳು ; ಹೊರ ಸಂದರ್ಭಗಳು ; ಅಪ್ರಧಾನವಾದವು ; ಗೌಣ. **Extérnalism** (ನಾ.) (ಮು., ಮತಾಚರಣೆಯಲ್ಲಿ) ಅಪ್ರಧಾನ ವಿಷಯಗಳಲ್ಲಿ ಅತಿಶಯವಾದ ಆಸ್ಥೆ : ಬಾಹ್ಯಾಚಾರ ಪ್ರೀತಿ ; ಬಾಹ್ಯ ಪ್ರಪಂಚದ ಉಪಾಸನೆ. **Externálity** — ನ್ಯಾಲಿಟಿ (ನಾ.) ಹೊರತನ ; ಬಾಹ್ಯತ್ವ. ಜ್ಞಾತೃವಿಗೆ ಹೊರಗಿರುವ ಗುಣ, ಸ್ಥಿತಿ ; ಹೊರ ವಸ್ತು ; ಹೊರ ವೈಲಕ್ಷಣ್ಯ. (ಸಮುದಾಯದಲ್ಲಿ) ಬಾಹ್ಯ ವಸ್ತುಗಳು ; ಬಾಹ್ಯ ಪ್ರಪಂಚ ಮಗ್ನತೆ. **Extérnally** — ನಲಿ (ಕ್ರಿ. ವಿ.) ; **Extérnalize** (ಕ್ರಿ. ಸಕ.) ಹೊರ ಅಸ್ತಿತ್ವವನ್ನು ಕಲ್ಪಿಸು, ಆರೋಪಿಸು ; ಮೂರ್ತ ಸ್ವರೂಪ ಕೊಡು, ಕಲ್ಪಿಸು. **Externalizátion** (ನಾ.)

Exterritórial ಎಕ್ಸ್‌ಟೆರಿಟೋರಿಯಲ್ (ಗು.) (ರಾಯಭಾರಿಗಳು, ಮೊ. ರ ವಿಷಯದಲ್ಲಿ) ತಾನು ವಾಸವಾಗಿರುವ ರಾಜ್ಯದ ಅಧಿಕಾರಕ್ಕೆ ಒಳಪಟ್ಟಿಲ್ಲದ ; ದೇಶಾಧಿಕಾರ ಬಾಹ್ಯ. **Exterritoriálity** — ಆ್ಯಲಿಟಿ (ನಾ.)

Extínct ಎಕ್ಸ್‌ಟಿಂಕ್ಟ್ (ಗು.) (ಬೆಂಕಿ, ಮೊ. ಗಳ ವಿಷಯದಲ್ಲಿ) ನಂದಿಹೋದ, ಆರಿಹೋದ, ತಣ್ಣಗಾದ. (ಜ್ವಾಲಾಮುಖಿ) ಉದ್ರೇಕ, ಜ್ವಾಲೆ, ಚಿಮ್ಮಲು, — ನಿಂತಿರುವ. (ಜೀವ, ಆಶೋತ್ತರ, ಮೊ.) ಅಳಿದುಹೋದ, ನಿಂತುಹೋದ, ಸತ್ತುಹೋದ, ಗತ. (ವರ್ಗ, ಕುಲ, ವಂಶ) ನಷ್ಟವಾದ, ನಿರ್ನಾಮವಾದ, ಹುಟ್ಟಡಗಿಹೋದ. (ಅಧಿಕಾರ, ಮೊ.) ಅಪ್ರಚಲಿತ, ರೂಢಿಯಳಿದ. (ಶ್ರೀಮಂತ ಬಿರುದಿನ ವಿಷಯದಲ್ಲಿ) ಅರ್ಹರಾದ ಉತ್ತರಾಧಿಕಾರಿಗಳಿಲ್ಲದ. **Extínction** (ನಾ.) ನಂದಿಸುವುದು ; ಆರಿಸುವುದು ; ನಂದಿಹೋಗುವುದು ; ಆರಿಹೋಗುವುದು ; ಆರಿಹೋಗಿರುವುದು. (ಸಾಲವನ್ನು) ತೊಡೆದುಹಾಕುವುದು ; ನಿರ್ನಾಮ (ಮಾಡುವುದು) ; ನಿರ್ಮೂಲ (ಮಾಡುವುದು) ; ನಾಶ (ಮಾಡುವುದು) ; ಅಳಿವು. **Extínctive** (ಗು.) ನಂದಿಸುವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Extínguish ಎಕ್ಸ್‌ಟಿಂಗ್ವಿಷ್ (ಕ್ರಿ. ಸಕ.) (ಬೆಳಕು, ಪ್ರತೀಕ್ಷೆ, ಜೀವ, ಬುದ್ಧಿ ಶಕ್ತಿ, ಮೊ. ನ್ನು) ಆರಿಸು, ಅಣೆ ; (ಒಬ್ಬನನ್ನು) ತನ್ನ ಅತಿಶಯವಾದ ಪ್ರಭೆಯಿಂದ, ಮಹಿಮೆಯಿಂದ, — ಮರಸು, ಆಚ್ಛಾದಿಸು. (ಎದು ರಾಳಿಯನ್ನು) ಬಾಯಿ ಮುಚ್ಚಿಸು, ತಣ್ಣಗೆಮಾಡು, ತೆಪ್ಪಗಾಗಿಸು, ಮಾತೆತ್ತದಂತೆ ಮಾಡು ; ನಾಶ ಮಾಡು ; ಹಾಳು ಮಾಡು ; ನಿರ್ಮೂಲ ಮಾಡು. (ಸಾಲವನ್ನು) ತೊಡೆದುಹಾಕು. **Extínguishable** (ಗು.) ; **Extínguisher** (ನಾ.) (ಕ್ರಿಯಾರ್ಥಗಳಲ್ಲಿ). ಮೋಂಬತ್ತಿಯನ್ನು ಆರಿಸುವುದಕ್ಕಾಗಿ ಇಡುವ ಶಂಕುವಿನಾಕಾರದ ಟೋಪಿ : ನಂದಿಗೆ. **Extínguishment** (ನಾ.)

Extirpate ಎಕ್ಸ್‌ಟರ್‌ಪೇಟ್ (ಕ್ರಿ. ಸಕ.) (ಮರ, ಕಳೆ, ವಂಶ, ಜನಾಂಗ, ಗಂತಿ, ಪಾಷಂಡತನ, ಮೊ. ನ್ನು) ನಿರ್ಮೂಲ ಮಾಡು, ಬೇರುಸಹಿತ ಕಿತ್ತೊಗೆ. ಮೂಲೋತ್ಪಾಟನ ಮಾಡು ; ಮಟ್ಟ ಹಾಕು ; ನಾಶ ಗೊಳಿಸು. **Extirpátion** (ನಾ.) ; **Éxtirpator** (ನಾ.)

Extól ಎಕ್ಸ್‌ಟಾಲ್ (ಕ್ರಿ. ಸಕ.) ಮೆಚ್ಚಿ ಕೊಂಡಾಡು ; ಉತ್ಸಾಹಪೂರ್ವಕ ವಾಗಿ ಹೊಗಳು ; ಸ್ತೋತ್ರಮಾಡು ; ಬಹಳ ಶ್ಲಾಘನೆ ಮಾಡು. E. him to the skies ಅಟ್ಟಕ್ಕೆ ಏರಿಸು ; ಅತಿಶಯವಾಗಿ, ಮಿತಿ ಮೀರಿ, ಹೊಗಳು.

Extórt ಎಕ್ಸ್‌ಟಾರ್ಟ್ (ಕ್ರಿ. ಸಕ.) (ಹಣ, ವಾಗ್ದಾನ, ಮೊ. ನ್ನು) ಬಲಾತ್ಕರಿಸಿ, ಒತ್ತಾಯದಿಂದ, ಹೆದರಿಸಿ, ಯಾಚಿಸಿ, —ಹೊಂದು, ಪಡೆ, ಕೀಳು, ಸೆಳೆ, ಸುಲಿ ; ಕಸಿದುಕೊ ; ಕಿತ್ತುಕೊ ; (ಪದಗಳಿಂದ ಅರ್ಥವನ್ನು, ದತ್ತಾಂಶಗಳಿಂದ ಊಹೆಯನ್ನು) ಕ್ಲೇಶಪಟ್ಟು, ಕಷ್ಟದಿಂದ, ಹೊರಡಿಸು. **Extórtion** (ನಾ.) (ಮು., ಹಣವನ್ನು) ಬಲಾತ್ಕಾರದಿಂದ ಪಡೆಯು ವುದು, ಸುಲಿಗೆ ಮಾಡುವುದು ; ಸುಲಿಗೆ ; ನ್ಯಾಯ ವಿರುದ್ಧವಾಗಿ ಹಣ ಕೀಳುವುದು. **Extórtionate** —ನೆಟ್ (ಗು.) ಸುಲಿಗೆ ಮಾಡುವ. (ಬೆಲೆ, ಮೊ. ಗಳ ವಿಷಯದಲ್ಲಿ) ದುಬಾರಿಯಾದ, ಬಹಳ ಹೆಚ್ಚಾದ, ನ್ಯಾಯವಾದ ಧಾರಣೆಗಿಂತ ಅತಿ ಮೀರಿದ. **Extórtioner** (ನಾ.) ; **Extórtive** (ಗು.) ಸುಲಿಗೆಯ ; ಸುಲಿಗೆ ಮಾಡುವ (ಸ್ವಭಾವದ)

Extra ಎಕ್ಸ್‌ಟ್ರ (ಗು., ಕ್ರಿ. ವಿ., ನಾ.) ಸೇರಿಸಿದ ; ಹೆಚ್ಚು ; ಹೆಚ್ಚಿನ ; ಅಧಿಕ ; ಹೆಚ್ಚಿಗೆ(ಯ) ; ವಿಶೇಷ ; ಉತ್ತಮ ಗುಣದ ; ಮೇಲ್ತರದ (E. binding ಮೇಲ್ತರದ ರಟ್ಟುಕಟ್ಟು). ಜೊತೆಗೆ ; ಅಧಿಕವಾಗಿ. (E.-special edition of evening paper ಸಾಯಂಕಾಲದ ವೃತ್ತ ಪತ್ರಿಕೆಯ ಕೊನೆಯ, ವಿಶೇಷ ಮುದ್ರಣ). (ನಾ.) ಹೆಚ್ಚಿನದು ; ಅಧಿಕ ವೆಚ್ಚ ಕೊಡಬೇಕಾದದ್ದು (Dancing is an e. ಕುಣಿತದ್ದು ಬೇರೆ). (ಕ್ರಿಕೆಟ್ ಆಟ) ದಾಂಡಿನಿಂದ ಚೆಂಡು ಹೊಡೆಯದೆ ಬಂದ ಓಟದ ಗಣನೆ ; ಕೂಡಿಬಂದ ಓಟ.

Extra- (ಸ. ಪೂ. ಪ.) ಹೊರಗಿನ —, ಹೊರಗಾದ —, ಆಚಿನ —, ಬಾಹ್ಯ —, ಅತಿ —, ಅತೀತ —. **-atmosphéric** (ಗು.) ವಾತಾವರಣದಿಂದಾಚಿನ (ಪ್ರದೇಶದ). **-cósmical** (ಗು.) ವಿಶ್ವದ ಹೊರಗಡೆ ನಡೆಯುವ ; ವಿಶ್ವ ಬಾಹ್ಯ. **-cránial** (ಗು.) ತಲೆಬುರು ಡೆಯ ಹೊರಗಿನ. **-dótal** (ಗು.) (ನ್ಯಾ. ಶಾ.) ಬಳಿವಳಿಗೆ ಸೇರಿರದ. **-esséntial** (ಗು.) (ಒಂದು ವಸ್ತುವಿನ) ಸತ್ತ್ವಾಂಶದಲ್ಲಿ ಸೇರಿರದ. **-judícial** (ಗು.) ನ್ಯಾಯಸ್ಥಾನದ ಹೊರಗಿನ ; ನ್ಯಾಯಸ್ಥಾನದ ಮುಂದಿರುವ ಮೊಕದ್ದಮೆಗೆ ಸಂಬಂಧಪಟ್ಟಿರದ ; ನ್ಯಾಯಸ್ಥಾನದ ವಿಚಾರಣೆಯಲ್ಲಲ್ಲದೆ ಬೇರೆ ಕಡೆಯಿಂದ ತಿಳಿದುಬಂದ ; ನ್ಯಾಯವಿಹಿತ ಅಧಿಕಾರದಿಂದಲ್ಲದ ; (ತಪ್ಪೊಪ್ಪಿಕೆಯ ವಿಷಯದಲ್ಲಿ) ನ್ಯಾಯಸ್ಥಾನದಲ್ಲಿ ಮಾಡಿಲ್ಲದ. **-múndane** (ಗು.) ಪ್ರಪಂಚದ ಅಥವಾ ವಿಶ್ವದ ಹೊರಗಡೆಯ ; ಪ್ರಪಂಚಾತೀತ. **-múral** (ಗು.)(ಪಟ್ಟಣದ) ಕೋಟೆಯ, ಗಡಿಯ, — ಹೊರಗಿನ. (ಉಪನ್ಯಾಸಕರು, ಮೊ. ರ ವಿಷಯದಲ್ಲಿ) ಒಂದು ವಿಶ್ವವಿದ್ಯಾನಿಲಯದ ಹೊರಗಿನ. **-official** (ಗು.) ಒಂದು ಕಚೇರಿಗೆ, ಅಧಿಕಾರಕ್ಕೆ, ಸೇರಿರದ ; ಅಧಿಕಾರ ಕಾರ್ಯಕ್ಕೆ ಸಂಬಂಧಿ ಸಿರದ. **-paróchial** (ಗು.) (ಕ್ರೈಸ್ತ ಪಾದ್ರಿಯ) ಆಡಳಿತ ಪ್ರಾಂತಕ್ಕೆ, — ಹೊರಗಿನ, ಸಂಬಂಧಿಸಿರದ. **-phýsical** (ಗು.) ಭೌತ ನಿಯಮ ಗಳಿಗೆ ಹೊರಗಾದ ; ಅತಿ ಭೌತ. **-spéctral** (ಗು.) ದೃಶ್ಯ ವರ್ಣಪಟ ದಿಂದ ಹೊರಗಿರುವ. **-terréstrial** (ಗು.) ಭೂಮಿಯ, ಭೂ ವಾತಾ ವರಣದ, — ಹೊರಗಡೆಯ. **-territórial, -territoriálity** (ಗು., ನಾ.) = Exterritorial(ity)

Éxtract ಎಕ್ಸ್‌ಟ್ರ್ಯಾಕ್ಟ್ (ನಾ.), **Extráct** (ಕ್ರಿ. ಸಕ.) ಒಂದು ಪದಾರ್ಥವನ್ನು ಲೀನಕಾರಿಗಳಿಂದ ಸಂಸ್ಕರಿಸಿ, ಬಾಷ್ಪೀಕರಿಸಿ, ಬಂದ ಜಿಗುಟಾದ ಅಥವಾ ಸಾಂದ್ರವಾದ ದ್ರವ್ಯ ; ಸತ್ತ್ವ ; ಸಾರ ; ಕಷಾಯ. ಒಂದು ಗ್ರಂಥ, ಮೊ. ಗಳಿಂದ ಎತ್ತಿ ತೆಗೆದ ಭಾಗ ; ಉದ್ಧೃತ ಭಾಗ ; ಉದ್ಧರಣ. (ಕ್ರಿ.) (ಒಂದು ಪುಸ್ತಕದಲ್ಲಿಯ ವಿಷಯಭಾಗ, ಮೊ. ನ್ನು) ಎತ್ತಿ ಬರೆ, ಪ್ರತಿ ಮಾಡು, ನಕಲು ಮಾಡು. (ಒಂದು ಪುಸ್ತಕ ಮೊ. ಗಳಿಂದ) ಸಂಗ್ರಹ ಮಾಡು. (ಹಲ್ಲು, ಅಥವಾ ಗಟ್ಟಿಯಾಗಿ ಬಂಧಿಸಿರುವ ಯಾವುದನ್ನಾದರೂ) ಬಲವಂತದಿಂದ ಕೀಳು, ಸೆಳೆ, ಕಿತ್ತುಹಾಕು. (ಹಣ, ಒಪ್ಪಿಗೆ, ಮೊ. ನ್ನು) ಬಲವಂತದಿಂದ ಹೊರಡಿಸು. (ರಸ, ಮೊ. ನ್ನು ಹೀರಿಕೆ, ಒತ್ತಡ, ಮೊ. ಗಳಿಂದ) ತೆಗೆ, ಹಿಂಡಿ ತೆಗೆ. (ಸಂತೋಷ, ಮೊ. ನ್ನು, ಒಂದರಿಂದ) ಪಡೆ. — ಇಂದ ತತ್ತ್ವ, ಮೊ. ನ್ನು ಹೊರ ಡಿಸು, ಇಳಿಸು, ನಿಗಮನ ಮಾಡು. (ಗಣಿತ) ಒಂದು ಸಂಖ್ಯೆಯ ಘಾತಮೂಲವನ್ನು ಕಂಡುಹಿಡಿ. **Extráctable** (ಗು.) ; **Extráctor** (ನಾ.) ; **Extráction** (ನಾ.) —ವುದು. ವಂಶ ; ಗೋತ್ರ ; ಕುಲ ; ಹುಟ್ಟು ; ತಳಿ. **Extráctive** (ಗು., ನಾ.) ಹೊರ ಸೆಳೆಯುವ ; — ಸೆಳೆಯಲು ಸಾಧ್ಯವಾದ. ಸಂಗ್ರಹಿಸಿ ತೆಗೆದ ಪದಾರ್ಥ ; ಸಾರ ; ಸಂಗ್ರಹ ; ಕಷಾಯ. E. industries ಸಹಜವಾಗಿ ದೊರೆಯುವ ಪದಾರ್ಥಗಳನ್ನು ಪಡೆಯುವ, ತೆಗೆಯುವ, ಕೈಗಾರಿಕೆ (ವ್ಯವಸಾಯ, ಗಣಿ ಕೆಲಸ, ಮತ್ಸ್ಯಸಂಗ್ರಹ, ಮೊ. ವು)

Éxtradite ಎಕ್ಸ್‌ಟ್ರಡೈಟ್ (ಕ್ರಿ. ಸಕ.) (ತಪ್ಪಿಸಿಕೊಂಡು ಬಂದು ಅಡಗಿ ಕೊಂಡಿರುವ ಪರದೇಶದ ತಕ್ಸೀರುದಾರನನ್ನು) ತಕ್ಕ ಅಧಿಕಾರಿಗಳ ವಶಕ್ಕೆ ಒಪ್ಪಿಸು, ಕೈವರ್ತಿಸು ; — ವಶಕ್ಕೆ ತೆಗೆದುಕೊ ; — ವಶಪಡಿಸಿಕೊ. **Extradítable** (ಗು.) — ಸ್ವಾಧೀನ ಪಡಿಸಬಹುದಾದ ; — ಪಡೆಯ ಬಹುದಾದ ; — ಪಡಿಸುವ ಅಧಿಕಾರವುಳ್ಳ. **Extradítion** — ಡಿಷನ್ (ನಾ.) ಒಪ್ಪಿಸುವುದು. (ಮ. ಶಾ.) ಇಂದ್ರಿಯ ವೇದನೆಯನ್ನು ಅದರ ಉತ್ಪತ್ತಿಸ್ಥಾನ ಬಿಟ್ಟು ಸ್ವಲ್ಪ ದೂರದಲ್ಲಿರುವಂತೆ ಭಾವಿಸಿಕೊಳ್ಳುವುದು.

Extrádos ಎಕ್ಸ್‌ಟ್ರೇಡ(ಡಾ)ಸ್ (ನಾ.) (ಕಟ್ಟಡದ) ಕಮಾನಿನ ಮೇಲ್ಭಾಗು, ಹೊರಬಾಗು.

Extráneous ಎಕ್ಸ್‌ಟ್ರೇನಿಯಸ್ (ಗು.) ಹೊರಗಿನ ; ಬಾಹ್ಯ ; ಹೊರ ಚಾದ ; ಸಂಬಂಧ ಪಡದ ; ಅಪ್ರಕೃತ. **Extráneously** (ಕ್ರಿ. ವಿ.) ; **Extráneousness** (ನಾ.) ; **Extranéity** ಎಕ್ಸ್‌ಟ್ರನೀಯಿಟಿ (ನಾ.) ಬಾಹ್ಯತ್ವ.

Exatraórdinary ಎಕ್ಸ್‌ಟ್ರಾರ್ಡಿನರಿ, ಎಕ್ಸ್‌ಟ್ರಆರ್ಡಿನರಿ (ಗು., ನಾ.) ಸಾಮಾನ್ಯವಲ್ಲದ ; ಅಸಾಮಾನ್ಯ ; ಅಸಾಧಾರಣ ; ಹೆಚ್ಚಿನ ; ಅಧಿಕ ; ವಿಶೇಷ. (ಅಧಿಕಾರಿಗಳು, ಮೊ. ರ ವಿಷಯದಲ್ಲಿ) ಹೆಚ್ಚಿಗೆಯ. ವಿಶೇಷ ಸಂದರ್ಭಕ್ಕಾಗಿ ನಿಯಮಿಸಿದ (Envoy e. ರಾಯಭಾರಿಗೆ ತರುವಾಯದ ಅಧಿಕಾರವುಳ್ಳ ರಾಜ್ಯತಂತ್ರ ಸಚಿವ). ಆಶ್ಚರ್ಯಕರವಾದ ; ಅದ್ಭುತ ವಾದ ; ಅತಿ ದೊಡ್ಡ ; ಮಹಾ. (ಬ. ವ. ದಲ್ಲಿ) ಸೇನಾ ದಳಗಳಿಗೆ ಹೆಚ್ಚಿಗೆಯ ಭತ್ಯ. **Extraórdinarily** (ಕ್ರಿ. ವಿ.) ; **Extraórdinariness** (ನಾ.)

Extrapolátion ಎಕ್ಸ್‌ಟ್ರಪೊಲೇಷನ್ (ನಾ.) (ಗಣಿತ) ಒಂದು ಸಂಖ್ಯಾ ಶ್ರೇಣಿಯಲ್ಲಿಯ ತಿಳಿದ ಪದಗಳಿಂದ ಆ ಶ್ರೇಣಿಯ ಹಿಂದಿನ ಅಥವಾ ಮುಂದಿನ ಇತರ ಪದಗಳನ್ನು ಗುಣಿಸುವುದು ; (ರೂಪ.) ಜ್ಞಾತದಿಂದ ಅಜ್ಞಾತದ ಗಣನೆ.

Extrávagant ಎಕ್ಸ್‌ಟ್ರ್ಯಾವಗಂಟ್ (ಗು.) ಅಮಿತ ; ಮಿತಿ ಮೀರಿದ ; ದುಂದು ವೆಚ್ಚದ ; ಅಳತೆಗೆಟ್ಟ ; ಹಾಳಿತವಿಲ್ಲದ ; (ಬೆಲೆ, ಮೊ. ಗಳಲ್ಲಿ) ದುಬಾರಿಯಾದ ; ವಿವೇಕದ ಎಲ್ಲೆ ಮೀರಿದ ; ಅತಿಯಾದ ; ವಿಪರೀತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾದ ; ವ್ಯರ್ಥವ್ಯಯದ. **Extrávagantly** (ಕ್ರಿ. ವಿ.) ; **Extrávagance** (ನಾ.) ಕಟ್ಟಿಲ್ಲದ ವೆಚ್ಚ ; ಪೋಲು ವೆಚ್ಚ ; ದುಂದು ; (ಮು., ಮರ್ಯಾದೆ, ಸಂಭಾವ್ಯತೆ, ನಿಶ್ಚಯ — ಇವುಗಳಲ್ಲಿ) ಹದ್ದು ಮೀರುವುದು ; ಅತಿವರ್ತನೆ ; ಅಸಂಬದ್ಧವಾದ ಹೇಳಿಕೆ ಅಥವಾ ನಡತೆ ; ವೈಪರೀತ್ಯ. **Extrávagancy** (ನಾ.) = Extravagance.

Extravagánza ಎಕ್‌ಸ್ಟ್ರ್ಯಾವಗ್ಯಾನ್ಸ (ನಾ.) (ಸಾಹಿತ್ಯ, ಸಂಗೀತ, ನಾಟಕ —ಇವುಗಳ ವಿಷಯದಲ್ಲಿ) ಮನಸ್ಸೋ ಇಚ್ಛೆಯ, ವಿಕಟ, ವಿಕಾರ, ಕಾಲ್ಪನಿಕ, ಅತಿಚ್ಛಂದ, — ರಚನೆ, ಭಾಷೆ, ನಡತೆ.

Extrávagate ಎಕ್‌ಸ್ಟ್ರ್ಯಾವಗೇಟ್ (ಕ್ರಿ. ಅಕ.) (ವಿರ. ಪ್ರ.) (ಋಜು ಮಾರ್ಗ ಬಿಟ್ಟು ತಪ್ಪುಹಾದಿಯಲ್ಲಿ) ಅಲೆ ; ಮಾರ್ಗ ತಪ್ಪು ; ಎಲ್ಲೆಕಟ್ಟು ಮೀರು ; ಮಿತಿ ಮೀರು.

Extrávasate ಎಕ್‌ಸ್ಟ್ರ್ಯಾವಸೇಟ್ (ಕ್ರಿ.) (ರಕ್ತ, ಮೊ. ದ್ರವವನ್ನು) ಅದು ಇರತಕ್ಕ ಪಾತ್ರ ಅಥವಾ ನಾಳದಿಂದ ಹೊರಹೊರಡಿಸು ; ಹೊರ ಹರಿ. **Extravasátion** (ನಾ.)

Extréme ಎಕ್‌ಸ್ಟ್ರೀಮ್ (ಗು., ನಾ.) ಅತ್ಯಂತ ಹೊರಗಿನ ; ಕೇಂದ್ರದಿಂದ ಅತ್ಯಂತ ದೂರದಲ್ಲಿಯ ; ಕೊನೆಯಲ್ಲಿರುವ (Divided in e. and mean ratio ಪರಮ ಮತ್ತು ಮಧ್ಯಮ ಅನುಪಾತದಲ್ಲಿ ಭಾಗಿಸಿದ : ಎಂದರೆ, ಒಟ್ಟು ಸಂಖ್ಯೆಯು ಒಂದು ಭಾಗಕ್ಕೆ ಯಾವ ಅನುಪಾತವುಳ್ಳದ್ದಾಗಿದೆಯೊ ಆ ಭಾಗವು ಉಳಿದ ಭಾಗಕ್ಕೆ ಅದೇ ಅನುಪಾತವುಳ್ಳದ್ದಾಗಿರುವ). ಕಟ್ಟಕಡೆಯ ; ಕೊಟ್ಟಕೊನೆಯ ; ತುತ್ತತುದಿಯ ; ಅಂತ ; ಅತ್ಯಂತ ; ಅಂತಿಮ ; ಪರಮಾವಧಿಯ ; ಪರಾಕಾಷ್ಠದ ; ಅತಿ ; ವಿಪರೀತ [E. old age ಹಣ್ಣು ಹಣ್ಣು ಮುಪ್ಪು. An e. case ವಿಪರೀತ ಸಂದರ್ಭ. E. unction (ರೋ. ಕ್ಯಾ.) (ಸಾಯುತ್ತಿರುವವನಿಗೆ ಪುರೋಹಿತನು ಮಾಡಿಸುವ) ಅಂತ್ಯಾಭ್ಯಂಜನ]. (ಕಾರ್ಯಗಳು, ಯೋಜನೆಗಳು) ಕಠಿನ, ದಾರುಣ, ಉತ್ಕಟ, ಪ್ರಚಂಡ. (ಅಭಿಪ್ರಾಯಗಳು, ಮನುಷ್ಯರು, ಮೊ. ವಿಷಯದಲ್ಲಿ) ಅತಿ ದೂರ ಹೋಗುವ, ವಿಪರೀತವಾದ (In the e. ವಿಪರೀತವಾಗಿ). (ನಾ) ಯಾವುದಾದರೂ ವಸ್ತುವಿನ ಕೊನೆಯಲ್ಲಿರುವದು ; ಕೊನೆ ; ತುದಿ ; ಕಡೆ. (ಸಾ., ಬ. ವ. ದಲ್ಲಿ) ಅತ್ಯಂತ ದೂರವಾಗಿಯೊ ಅತ್ಯಂತ ವಿರುದ್ಧ ಸ್ವಭಾವದವಾಗಿಯೊ ಇರುವವು ; ಅತಿ ವಿರುದ್ಧಗಳು [Extremes meet ತೀರ ವಿರುದ್ಧವಾದವುಗಳು (ಒಮ್ಮೊಮ್ಮೆ) ಕೂಡುವುವು, ಸೇರುವುವು, ಒಂದಾಗುವುವು]. (ತರ್ಕ) ಒಂದು ಪ್ರತಿಜ್ಞೆಯಲ್ಲಿಯ ಮೊದಲನೆಯ ಅಥವಾ ಕೊನೆಯ ಅವಯವ. (ಗಣಿತ) ಒಂದು ಶ್ರೇಣಿಯ ಅಥವಾ ಅನುಪಾತದ ಮೊದಲನೆಯ, ಕಡೆಯ, ಪದ. Go to extremes ಅತಿ ಮಾಡು ; ಅತಿಯಾಗಿ ಹೋಗು ; ವಿಪರೀತಕ್ಕೆ ಹೋಗು. **Extrémely** (ಕ್ರಿ. ವಿ.) ; **Extrémeness** (ನಾ.) ; **Extrémism** (ನಾ.) ಅತಿಯಾಗಿ ಹೋಗುವ ಗುಣ, ಸ್ಥಿತಿ ; ಅತಿ ಪಕ್ಷ ; ಉಗ್ರ ಪಕ್ಷ. **Extrémist** (ನಾ.) ಅತಿ ಗಾಮಿ ; ಉಗ್ರಗಾಮಿ. **Extrémity** — ಟ್ರೆಮಿಟಿ (ನಾ.) (ಕಟ್ಟ) ಕಡೆ ; ಕೊನೆ ; (ತುತ್ತ) ತುದಿ ; ಪರಮಾವಧಿ (The extremities ಹಸ್ತಗಳೂ ಪಾದಗಳೂ). ಅತಿ ಕಷ್ಟ ; ಅತ್ಯಂತ ಕ್ಲೇಶ ; ವಿಷಮ ಸ್ಥಿತಿ ; ಕಷ್ಟಾವಸ್ಥೆ ; ಇಕ್ಕಟ್ಟು (Driven to extremity ಕೇವಲ ವಿಷಮ ಸ್ಥಿತಿಗೆ ಸಿಕ್ಕಿ. What can we do in this e. ? ಈ ಇಕ್ಕಟ್ಟಿನಲ್ಲಿ ನಾವೇನು ಮಾಡಬಲ್ಲೆವು ?). (ಸಾ., ಬ. ವ. ದಲ್ಲಿ) ಕಟ್ಟಕಡೆಯ, ತೀವ್ರವಾದ, — ಕಾರ್ಯಭಾಗಗಳು, ವರ್ತನೆ.

Éxtricate ಎಕ್‌ಸ್ಟ್ರಿಕೇಟ್ (ಕ್ರಿ. ಸಕ.) (ತೊಡಕು) ಬಿಡಿಸು ; (ಮನುಷ್ಯ, ವಸ್ತು — ಇವನ್ನು ಸೆರೆಯಿಂದ, ಕಷ್ಟದಿಂದ) ಬಿಡುಗಡೆ ಮಾಡು, ಪಾರು ಮಾಡು, ಪರಿಹಾರ ಮಾಡು, ಉದ್ಧರಿಸು. (ರ. ವಿ.) (ಅನಿಲ, ಮೊ. ನ್ನು) ಸಂಯುಕ್ತ ಸ್ಥಿತಿಯಿಂದ ಬೇರ್ಪಡಿಸು. **Éxtricable** (ಗು.) ; **Extricátion** (ನಾ.)

Extrínsic ಎಕ್‌ಸ್ಟ್ರಿನ್ಸಿಕ್ (ಗು.) ಹೊರಗಿರುವ ; ಹೊರಗಿನ ; ಬಾಹ್ಯ(ಸ್ಥ) ; ಸೇರಿರದ ; ಹೊರಗಿನಿಂದ ಕಾರ್ಯ ನಡಸುವ ; ನೈಜವಲ್ಲದ ; ಪ್ರಧಾನವಲ್ಲದ ; ಅಷ್ಟು ಅವಶ್ಯವಲ್ಲದ. **Extrínsically** (ಕ್ರಿ. ವಿ.)

Extrórse ಎಕ್‌ಸ್ಟ್ರಾರ್ಸ್ (ಗು.) (ಸ. ವಿ.) (ಪರಾಗ ಕೋಶಗಳ ವಿಷಯದಲ್ಲಿ) ಹೊರಗಡೆಗೆ ತಿರುಗಿರುವ.

Éxtrovert ಎಕ್‌ಸ್ಟ್ರೊವರ್ಟ್ (ನಾ.) (ಮ. ಶಾ.) ಅಂತರ್ಮುಖಿಯಲ್ಲದವನು ; ಪ್ರವೃತ್ತಿಪರ ; ಬಾಹ್ಯ ವಸ್ತುಗಳಲ್ಲಿಯೂ ಕ್ರಿಯೆಗಳಲ್ಲಿಯೂ ಪ್ರವೃತ್ತನಾದವನು : ಬಾಹ್ಯ ಪ್ರವೃತ್ತ (ಮು., Introvert ಪದಕ್ಕೆ ವಿರುದ್ಧ ಪದವಾಗಿ)

Extrúde ಎಕ್‌ಸ್ಟ್ರೂಡ್ (ಕ್ರಿ. ಸಕ.) (ಮನುಷ್ಯನನ್ನು, ವಸ್ತುವನ್ನು) ಹೊರ ನೂಕು, ಹೊರಡಿಸು, ದಬ್ಬು. **Extrúsion** — ಷನ್ (ನಾ.) ; **Extrúsive** — ಸಿವ್ (ಗು.) ಹೊರ ದಬ್ಬುವ ; ಹೊರ ನೂಕುವ. (ಭೂ. ವಿ.) ಮೇಲ್ಮೈಗೆ ದಬ್ಬಿದ (E. rocks ಹೊರದೂಡಲ್ಪಟ್ಟ ಬಂಡೆಗಳು)

Exúberant ಎಗ್ಸ್ಯೂಬೆರಂಟ್ (ಗು.) (ಬೆಳೆ) ಸಮೃದ್ಧವಾದ (ರೂಪ. ಸಹ) ; ಸಮೃದ್ಧವಾಗಿ ಬೆಳೆಯುವ ; ಹುಲುಸಾದ ; ಸೊಂಪಾದ ; ಹೊರವಾದ ; ಉರುಬಾದ. (ಆರೋಗ್ಯ, ಮನೋಭಾವಗಳು, ಮೊ.) ಉಕ್ಕಿ ಹರಿಯುವ, ತುಂಬಿ ತುಳುಕುವ. (ಮನುಷ್ಯರು, ಕಾರ್ಯಗಳು, ಮೊ. ವಿಷಯದಲ್ಲಿ) ಉತ್ಸಾಹಪೂರಿತ. (ಭಾಷಾ ವಿಷಯದಲ್ಲಿ) ವಿಶಾಲವಾದ, ಅಲಂಕಾರಾತಿಶಯದ. ಪುಷ್ಕಳ ; ವಿಪುಲ ; ಬಹುಳ. **Exúberance** (ನಾ.) ; **Exúberantly** (ಕ್ರಿ. ವಿ.) ; **Exúberate** — ರೇಟ್ (ಕ್ರಿ. ಅಕ.) ತುಂಬಿರು ; ತುಂಬಿ ತುಳುಕು ; ತುಂಬಿ ಹರಿ ; ಸಮೃದ್ಧವಾಗಿರು ; ತಡೆಯಿಲ್ಲದೆ, ನಿರಾತಂಕವಾಗಿ, ಅದೇ ಅಭ್ಯಾಸವಾಗಿ, — ಪ್ರಯೋಗಿಸು, ವರ್ತಿಸು, ವ್ಯವಹರಿಸು.

Exúde ಎಗ್ಸ್ಯೂ(ಕ್ಸ್ಯೂ)ಡ್ (ಕ್ರಿ.) ಒಸರು ; ಊರು ; ಜಿನುಗು ; ಹೊರ ಸೂಸು ; ಸ್ರವಿಸು ; (ತೇವ, ಮೊ. ನ್ನು ಬೆವರಿನಂತೆ) ಹೊರ ಹರಿಸು. **Exudátion** ಎಕ್ಸ್ಯೂ — (ನಾ.) ; **Exúdative** ಎಕ್ಸ್ಯೂಡಟಿವ್ (ಗು.) ಹೊರ ಹರಿವಿನ ; ಒಸರುವ ; ಸ್ರಾವದ.

Exúlt ಎಗ್ಸಲ್ಟ್ (ಕ್ರಿ. ಅಕ.) ಹಿಗ್ಗು ; ಉಬ್ಬು ; ವಿಜೃಂಭಿಸು ; ಮದಿಸು ; ಅತ್ಯಾನಂದ ಪಡು ; ಜಯೋನ್ಮತ್ತನಾಗು (*At, in, to* ಉಪ. ದೊಡನೆ). **Exúltancy** (ನಾ.) — ಸ್ಥಿತಿ. **Exúltant** (ಗು.) ; **Exúltantly** (ಕ್ರಿ. ವಿ.) ; **Exultátion** (ನಾ.)

Exúviae ಎಗ್ಸ್ಯೂವಿಯಾ (ನಾ., ಬ. ವ.) ಪ್ರಾಣಿಯ ಉಚ್ಚಿದ ಚರ್ಮ, ಚಿಪ್ಪು, ಹೊದಿಕೆ, ಪೊರೆ (ಈಚಿನದು ಅಥವಾ ಪಳೆಯುಳಿಕೆಯದು) (ರೂಪ. ಸಹ). **Exúvial** (ಗು., ನಾ.) — ಗೆ ಸಂಬಂಧಪಟ್ಟ ; — ಸ್ವಭಾವದ. (ನಾ. ; ಬ. ವ. ದಲ್ಲಿ) ಉಚ್ಚಿದ, ಕಳಚಿದ, —ವಸ್ತುಗಳು ; ಕೊಳ್ಳೆ ; ಸುಲಿಗೆ. **Exúviate** (ಕ್ರಿ.) — ಉಚ್ಚು ; — ಕಳಚಿ ಹಾಕು. **Exuviátion** (ನಾ.)

Ex vóto ಎಕ್ಸ್ ವೋಟೋ (ಕ್ರಿ. ವಿ., ನಾ.) ಹರಕೆಯ ಮೇರೆಗೆ (ಒಪ್ಪಿಸಿದ್ದು) ; ಹರಕೆ.

Eýas ಐಯಸ್ (ನಾ.) ಪಳಗಿಸುವುದಕ್ಕಾಗಿ ಗೂಡಿನಿಂದ ತೆಗೆದ ಡೇಗೆಯ ಮರಿ ; ಇನ್ನೂ ಪೂರ್ತಿಯಾಗಿ ಪಳಗಿರದ —.

Eye ಐ (ನಾ.) ಕಣ್ಣು ; ನೇತ್ರ ; ನೋಟ ; ದೃಷ್ಟಿ ; ಗಮನ. (ಕಣ್ಣಿನ) ಕನೀನ ಪಟಲ (Blue, brown, eyes). ಕಣ್ಣಿನ ಪ್ರದೇಶ [Black e. (Black ನೋಡಿ)]. (ರೂಪ.) ಗಣನೆ ; ಅಭಿಪ್ರಾಯ. (ರೂಪು, ಆಕಾರ, ಸ್ಥಾನ —ಇವುಗಳಲ್ಲಿ) ಕಣ್ಣಿನಂತಿರುವ ವಸ್ತು (ಉದಾ., ಗಿಡದ, ಉರುಳುಗೆಡ್ಡೆಯ, — ಎಲೆಮೊಗ್ಗು ; ಸೂಜಿಯ ಕಂಡಿ ; ನವಿಲುಗರಿಯಲ್ಲಿಯ ಕಣ್ಣಿನಂಥ ಮಚ್ಚೆಗಳು ; ಕುಣಿಕೆ ; ಕಂಡಿ ; ತುಂಬು.) All my e. (& Betty Martin) (ಅನಂ.) ಬುರುಡೆ ; ಅಬದ್ಧ ; ಶುದ್ಧ ಸುಳ್ಳು. Apple of the e. (Apple ನೋಡಿ). Be all eyes ಕಣ್ಣಿನಲ್ಲಿ ಕಣ್ಣಿಟ್ಟು ನೋಡು ; ಮೈಯೆಲ್ಲ ಕಣ್ಣಾಗಿರು ; ಬಹು ಜಾಗ್ರತೆಯಿಂದ ನೋಡುತ್ತಿರು. Beam, mote, in one's e. ಕಣ್ಣಿನಲ್ಲಿ ಬಿದ್ದ ಕಸದ ಕಣ (ತನ್ನದರೊಡನೆ ಹೋಲಿಸಿ ನೋಡಿದರೆ ಅತ್ಯಲ್ಪವಾಗಿ ತೋರುವ ಮತ್ತೊಬ್ಬನ ದೋಷ). Bull's e. (Bull[1] ನೋಡಿ). Cast sheep's

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

eyes ಕಾಮದೃಷ್ಟಿಯಿಂದ ನೋಡು ; ಪ್ರಣಯ ಬೀರುವಂತೆ ನೋಡು. Clap, set, eyes on ನೋಡು ; ಕಣ್ಣಿಡು ; ವೀಕ್ಷಿಸು. Evil e. ಕೆಟ್ಟ ಕಣ್ಣು ; ದೋಷ ದೃಷ್ಟಿ. E. of day ಹಗಲಿನ ಕಣ್ಣು : ಸೂರ್ಯ. E. for e. (ಸೇಡು ತೀರಿಸಿಕೊಳ್ಳುವಲ್ಲಿ) ಕಣ್ಣಿಗೆ ಕಣ್ಣು ; ಮುಯ್ಯಿಗೆ ಮುಯ್ಯಿ ; ಪ್ರತೀಕಾರ. (ಸೈನಿಕ) Eyes right, left, front ಕಣ್ಣುಗಳನ್ನು ಬಲಕ್ಕೆ, ಎಡಕ್ಕೆ, ಮುಂದಕ್ಕೆ, ತಿರುಗಿಸಿ ! Glass e. (ಗಾಜು, ಮೊ. ಗಳಿಂದ ಮಾಡಿದ) ಕೃತಕ ಕಣ್ಣು. Have an e. for ಅಭಿರುಚಿಯಿರು ; ದೃಷ್ಟಿಯಿರು. Have an e. to ದೃಷ್ಟಿಯಲ್ಲಿ, ಗುರಿಯಲ್ಲಿ, ಇಟ್ಟುಕೊಂಡಿರು. His eyes are bigger than his belly ಅವನು ತಿನ್ನಲು ಸಾಧ್ಯವಾದುದಕ್ಕಿಂತಲೂ ಹೆಚ್ಚಾಗಿ ತೆಗೆದುಕೊಂಡಿದ್ದಾನೆ. Hook and e. ಉಡುಪಿನ ಒಂದು ತೆರದ ಬಂಧನ (ಕೊಕ್ಕೆ ಮತ್ತು ಅದು ಬೀಳುವ ಉಂಗುರ). If you had half an e. ನೀನು ಪೂರಾ ಕುರುಡನಾಗದೆ ಇದ್ದಿದ್ದರೆ ಅಥವಾ ದಡ್ಡನಾಗದೆ ಇದ್ದಿದ್ದರೆ. In the eyes of ದೃಷ್ಟಿಯಲ್ಲಿ ; ಅಭಿಪ್ರಾಯದಲ್ಲಿ. In the eye of the law ನ್ಯಾಯ(ಶಾಸ್ತ್ರ)ದ ದೃಷ್ಟಿಯಲ್ಲಿ ; ನ್ಯಾಯದ ಮುಂದೆ. In the mind's e. ಮುಂಭಾವನೆಯಲ್ಲಿ ; ಮನೋ ಭಾವನೆಯಲ್ಲಿ. In the wind's e. ಗಾಳಿ ಬೀಸುವ ದಿಕ್ಕಿನಲ್ಲಿ (ಆದರೆ Webster, Brewer ಮೊ. ವರು 'ಗಾಳಿಗೆದುರಾಗಿ' ಎಂದು ಹೇಳುತ್ತಾರೆ). Keep an e. on ಕಣ್ಣಿಟ್ಟಿರು ; ಎಚ್ಚರಿಕೆಯಿಂದ ನೋಡುತ್ತಿರು (ರೂಪ. ಸಹ). Lose an e. (ಅನೇಕ ವೇಳೆ) (ಅದು) ದೃಷ್ಟಿಗೆ ಬೀಳದೆಹೋಗು. Make eyes at ಕಾಮ ದೃಷ್ಟಿಯಿಂದ ನೋಡು ; ಪ್ರಣಯ ಬೀರುವಂತೆ ನೋಡು. Made him open his eyes ಅವನನ್ನು ಕಣ್ಣು ತೆರೆಯುವಂತೆ ಮಾಡಿತು ; — ನಿಜಸ್ಥಿತಿ ತಿಳಿಯುವಂತೆ ಮಾಡಿತು ; — ಬೆರಗಾಗಿ ಆಶ್ಚರ್ಯಪಟ್ಟು ದಿಟ್ಟಿಸಿ ನೋಡುವಂತೆ ಮಾಡಿತು ;—ಆಶ್ಚರ್ಯ ಚಕಿತ ಮಾಡಿತು. Mind your e. ಜೋಕೆಯಿಂದಿರು ; ಎಚ್ಚರಿಕೆಯುಳ್ಳವನಾಗಿರು. My eye(s) ! (ಆಶ್ಚರ್ಯ ಸೂಚಕ). Open one's eyes to ಕಣ್ಣು ತೆರೆಯುವಂತೆ ಮಾಡು ; ಅನುಭವಕ್ಕೆ ತಂದುಕೊಡು. (ತುಚ್ಛೀಕಾರ) Pipe, put one's finger in, one's e. ಅಳು. Saw with half an e. ಅರೆ ಕ್ಷಣದಲ್ಲಿ ನೋಡಿಬಿಟ್ಟನು. See e. to e. (with) ಸಂಪೂರ್ಣವಾಗಿ ಅನುಮೋದಿಸು ; ಏಕಾಭಿಪ್ರಾಯ ಪಡು. Throw dust in the eyes of ಕಣ್ಣಿಗೆ ಮಣ್ಣೆರಚು ; ಮೋಸಗೊಳಿಸು. Up to the eyes (in work) (ಕೆಲಸದಲ್ಲಿ) ಪೂರಾ ಮುಳುಗಿ, ಮಗ್ನನಾಗಿ. View with a jealous e. ಈರ್ಷ್ಯೆಯ ದೃಷ್ಟಿಯಿಂದ ನೋಡು. Wipe the e. of ಕಣ್ಣೊರಸು. ಒಬ್ಬ ಶಿಕಾರಿ ಹೊಡೆಯಲು ತಪ್ಪಿದ ಬೇಟೆಯನ್ನು ತಾನು ಹೊಡೆದು ಕೊಲ್ಲು. With an e. to ದೃಷ್ಟಿಯಿಂದ ; ಉದ್ದೇಶದಿಂದ. With the naked e. (ದೂರದರ್ಶಕ, ಮೊ. ವಿಲ್ಲದೆ) ಬರಿಯ ಕಣ್ಣಿನಿಂದ.

Eyéball ಕಣ್ಣುಗುಡ್ಡೆ. **E.-bath, -cup** ಕಣ್ಣಿಗೆ ದ್ರವ ಔಷಧ ಹಾಕುವುದಕ್ಕಾಗಿ ಉಪಯೋಗಿಸುವ ಸಣ್ಣ ಗಾಜು ಬಟ್ಟಲು. **E.-bolt** ಕೊಕ್ಕೆ, ಮೊ. ಕ್ಕಾಗಿ ಕೊನೆಯಲ್ಲಿ ಕಂಡಿಯಿರುವ ಅಗುಳಿ, ತಾಪಾಳ : ಕಣ್ಣು ತಾಪಾಳ. **Eyébright** (Also, Euphrasy) ಹಿಂದೆ, ದೃಷ್ಟಿ ಕಡಮೆಯಾದ ಕಣ್ಣಿಗೆ ಔಷಧವಾಗಿ ಉಪಯೋಗಿಸುತ್ತಿದ್ದ ಒಂದು ಸಸ್ಯ. **Eyébrow** ಹುಬ್ಬು ; ಭ್ರೂ ; ಕಣ್ಣಿನ ಮೇಲ್ಭಾಗದಲ್ಲಿರುವ ಕೂದಲುಸಾಲು. **E.-glass** ನ್ಯೂನ ದೃಷ್ಟಿಯನ್ನು ತಕ್ಕ ಮಟ್ಟಿಗೆ ಸರಿಪಡಿಸುವುದಕ್ಕಾಗಿ ಉಪಯೋಗಿಸುವ ಭೂತಗನ್ನಡಿ. (ಬ. ವ. ದಲ್ಲಿ) ಇಂಥ ಭೂತಗನ್ನಡಿಯ ಜೊತೆ (ಕೈಯಲ್ಲಿ ತಕ್ಕಂತೆ ಹಿಡಿದುಕೊಳ್ಳುವುದಕ್ಕಾಗಿ ಅಥವಾ ಮೂಗಿನಮೇಲೆ ಇಟ್ಟುಕೊಳ್ಳುವುದಕ್ಕಾಗಿ ಅಳವಡಿಸಿರುವದು) : ಕನ್ನಡಕ ; ಸುಲೋಚನ. **Eyéhole** ನೋಡುಗಂಡಿ ; ಇಣಿಕು ಗಂಡಿ. **Eyélash** ಕಣ್ಣಿರೆಪ್ಪೆಗಳ ಅಂಚಿನಲ್ಲಿಯ ಕೂದಲ ಸಾಲು : ರೆಪ್ಪೆಗೂದಲು ; ಎವೆ ; ಪಕ್ಷ್ಮ. **Eyélid** ರೆಪ್ಪೆ ; (ರೂಪ.) Hang on by the eyelids ಹಿಡಿತ ಸಡಿಲವಾಗಿರು. **E.-opener** ತಿಳಿವು ಕೊಡುವ ಅಥವಾ ಆಶ್ಚರ್ಯವುಂಟುಮಾಡುವ ಸಂದರ್ಭ ; ಕಣ್ದೆರೆ. **Eyépiece** ದೂರದರ್ಶಕ, ಮೊ. ಗಳಲ್ಲಿ ಕಣ್ಣಿಟ್ಟು ನೋಡುವ ಕೊನೆಯಲ್ಲಿಯ ಲೆನ್ಸ್(ಗಳು) : ಕಣ್ಣು ಲೆನ್ಸು. **E.-servant** ಯಜಮಾನನ ಕಣ್ಣೆದುರಿಗೆ ಮಾತ್ರ ಸರಿಯಾಗಿ ಕೆಲಸ ಮಾಡುವ ಆಳು ; ಕಣ್ಣೆದುರಿನ ಆಳು. **E.-service** ಹೀಗೆ ಮಾಡುವ ಕೆಲಸ. **Eyéshot** ನೋಟದ ದೂರ (Beyond, out of, e.s. ಕಣ್ಣಿನ ನೋಟಕ್ಕೆ ಮೀರಿದ ದೂರ). **Eyésight** ಕಣ್ಣ ದೃಷ್ಟಿ ; ದೃಷ್ಟಿಶಕ್ತಿ ; ನೇತ್ರ ಪಾಟವ. **Eyésore** ವಿಕಾರ ವಸ್ತು ; ಕಣ್ಣಿಗೆ ಅಸಹ್ಯವಾದ ವಸ್ತು ; ಕಣ್ಣು ಕಿಚ್ಚು ; ಕರೆ ; ದೋಷ. **E.-splice** ಕಣ್ಣು ಕುಣಿಕೆ ; ಹಗ್ಗದ ಒಂದು ಕೊನೆಯ ತಂತುಗಳನ್ನು ಬಿಡಿಸಿ, ಹಾಗೆಯೇ ಬಿಡಿಸಿದ ಹಗ್ಗದ ಮೇಲ್ಭಾಗದಲ್ಲಿ ಜೋಡಿಸಿ ಹೆಣೆದ ಸೇರಿಕೆ : ತಿರಿ ಕುಣಿಕೆ. **Eyéstrings** ಕಣ್ಣಿನ ತಂತುಗಳು (ಸ್ನಾಯು, ನರ, ಮೃದ್ವಸ್ಥಿ). **E.-tooth** ಕಣ್ಣಿನ ತಳ ಪ್ರದೇಶದಲ್ಲಿರುವ ಮೇಲ್ದವಡೆಯ ಅಥವಾ ಕೆಳದವಡೆಯ ಹಲ್ಲು ; ಕೋರೆ ಹಲ್ಲು. **E.-wash** ಕಣ್ಣು ತೊಳೆಯುವುದಕ್ಕಾಗಿ ಉಪಯೋಗಿಸುವ ದ್ರವ. (ಅಸಂ.) ಕಣ್ಣೊರಸುವ ಮಾತು ; ಬೂಟಾಟಿಕೆಯ ಮಾತು ; ಮೋಸ. **Eyéwater** ಕಣ್ಣೀರು ; ಕಣ್ಣು ತೊಳೆಯುವ ದ್ರವ ; ಕಣ್ಣಿನ ಒಳಗಡೆಯಿರುವ ದ್ರವಗಳು. **Eyéwitness** ಕಣ್ಣಾರ ಕಂಡ ಸಾಕ್ಷಿ ; ಪ್ರತ್ಯಕ್ಷ ಸಾಕ್ಷಿ. (-)**eyed** (ಗು) ; **Eyéless** (ಗು.)

Eye (ಕ್ರಿ. ಸಕ., ವರ್ತಮಾನ ಕೃದ್ವಾಚಿ Eying) ಕಣ್ಣಿಟ್ಟು ನೋಡು ; (ಈರ್ಷ್ಯೆಯಿಂದ, ಅಸಮಾಧಾನದಿಂದ, ಅಸಹ್ಯದಿಂದ) ನೋಡು.

Eyélet ಐಲೆಟ್ (ನಾ.) ಸಣ್ಣ ಕಣ್ಣು ; ಬಟ್ಟೆ, ಪಟ, ಮೊ. ಗಳಲ್ಲಿ ದಾರ, ಹಗ್ಗ, ಉಂಗುರ, ಮೊ. ಕ್ಕಾಗಿ ಮಾಡಿರುವ ಸಣ್ಣ ತೂತು ; ಕುಣಿಕೆ ಕಂಡಿ. **E.-hole** ನೋಡುವುದಕ್ಕೆ ಅಥವಾ ಬಂದೂಕು ಹೊಡೆಯುವುದಕ್ಕೆ ಮಾಡಿರುವ ಸಣ್ಣಕಂಡಿ.

Eyót = Ait.

Eyre ಏರ್ (ನಾ.) (ಚರಿತ್ರೆ) ಸಂಚಾರ ; ಸಂಚಾರ ನ್ಯಾಯಸ್ಥಾನ (Justices in E. ಸಂಚಾರ ನ್ಯಾಯಸ್ಥಾನದಲ್ಲಿಯ ನ್ಯಾಯಾಧಿಪತಿಗಳು.

Eyrie. Aerie ನೋಡಿ.

F

F ಎಫ್. ಇಂಗ್ಲಿಷ್ ವರ್ಣಮಾಲೆಯ ಆರನೆಯ ಅಕ್ಷರ. (ಸಂ.) ಇಂಗ್ಲಿಷ್ ಸ್ವರಕ್ರಮದಲ್ಲಿ ನಾಲ್ಕನೆಯ ಸ್ವರ : ಫಾ ('ಮ'). F. sharp (ಹಾಸ್ಯವಾಗಿ) ಚಿಗಟ.

ಸಂಕ್ಷಿಪ್ತಗಳು : **F** (fine) (ಸೀಸದ ಕಡ್ಡಿಗಳ ವಿಷಯದಲ್ಲಿ) ನಯ ; (Fahrenheit) ಶಾಖ ಮಾಪನದಲ್ಲಿ 'ಫ್ಯಾರನ್‌ಹೈಟ್' ಎಂಬ ಭೌತ ಶಾಸ್ತ್ರಜ್ಞನ ಪದ್ಧತಿ (ದೇಹದ ಶಾಖ 98°·4 F.). **F. M. S.** (Federated Malay States) ಮಲಯ ಸಂಯುಕ್ತ ಸಂಸ್ಥಾನಗಳು. **F. B. I.** (Federation of British Industries) ಬ್ರಿಟಿಷ್ ಕೈಗಾರಿಕೆಗಳ ಸಂಯುಕ್ತ ಸಂಸ್ಥೆ. **F. B. A.** (Fellow of the British Academy) ಬ್ರಿಟಿಷ್ ಸಾಹಿತ್ಯ ಪರಿಷತ್ತಿನ ಸದಸ್ಯ. **F. G. S.** (Fellow of the Geological Society) ಭೂ ವಿಜ್ಞಾನ ಸಂಘದ ಸದಸ್ಯ. **F. R. A. S.** (Fellow of the Royal Astronomical Society) ರಾಜ ಖಗೋಳವಿಜ್ಞಾನ ಸಂಘದ ಸದಸ್ಯ. **F. R. C. P.** (Fellow of the Royal College of Physicians) ರಾಜ ವೈದ್ಯ ಸಂಘದ ಸದಸ್ಯ. **F. R. C. S.** (Fellow of the Royal College of Surgeons) ರಾಜ ಶಸ್ತ್ರವೈದ್ಯ ಸಂಘದ ಸದಸ್ಯ. **F. R. G. S.** (Fellow of the Royal Geographical Society) ರಾಜ ಭೂಗೋಳಶಾಸ್ತ್ರ ಸಂಘದ ಸದಸ್ಯ. **F. R. I. B. A.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(Fellow of the Royal Institute of British Architects) ರಾಜ ಬ್ರಿಟಿಷ್ ವಾಸ್ತುಶಿಲ್ಪ ಸಂಘದ ಸದಸ್ಯ. **F. R. S.** (Fellow of the Royal Society) ರಾಯಲ್ ಸೊಸೈಟಿಯ (ರಾಜ ವಿದ್ವಾಂಸರ ಸಂಘದ) ಸದಸ್ಯ. **F. S. A.** (Fellow of the Society of Antiquaries) ಪ್ರಾಚೀನಾನ್ವೇಷಕ ಸಂಘದ ಸದಸ್ಯ. **F. Z. S.** (Fellow of the Zoological Society) ಪ್ರಾಣಿ ವಿಜ್ಞಾನ ಸಂಘದ ಸದಸ್ಯ. **F. D.** (Fidei Defensor = Defender of the Faith) ಧರ್ಮ ರಕ್ಷಕ. **F. M.** (Field Marshal) ಯುದ್ಧ ರಂಗದ ಅಧಿನಾಯಕ. **F. O.** (Foreign office) ಪರ ರಾಜ್ಯ ವಿಚಾರದ ಕಚೇರಿ. **f.** (Feet, Feminine, Filly, Francs) ಅಡಿ ; ಸ್ತ್ರೀ ; ಹೆಣ್ಣು ಕುದುರೆಮರಿ ; ಫ್ರ್ಯಾಂಕ್ ನಾಣ್ಯ. **f. o. b.** (Free on board) ಹಡಗಿನಮೇಲೆ ಸಾಗುವೆಚ್ಚವಿಲ್ಲದೆ. **f. o. r.** (Free on rail) ರೈಲುಮೇಲೆ ಸಾಗುವೆಚ್ಚವಿಲ್ಲದೆ.

Fahr.(enheit) ; **fcap.** (Foolscap) ; **fig.**(ure, figuratively) ; **fl.**(orins) ; **Fla.** (Florida) ; **foll.**(owing) ; **Fr.** (Father) ; **fr.**(ancs); **ft.**(feet)

Fa ಫಾ (ನಾ.) ಇಂಗ್ಲಿಷ್ ಸ್ವರಕ್ರಮದಲ್ಲಿ ನಾಲ್ಕನೆಯ ಸ್ವರ : 'ಮ'.

Fábian ಫೇಬಿಯನ್ (ಗು.) ಶತ್ರುವನ್ನು ಶಕ್ತಿಗುಂದಿಸುವುದಕ್ಕಾಗಿ, ಹಣ್ಣುಮಾಡುವುದಕ್ಕಾಗಿ, ಬಹು ಜಾಗರೂಕತೆಯಿಂದ, ಕೇವಲ ಸಾವಕಾಶವಾದ ಯುದ್ಧೋಪಾಯ ನಡಸುವ ; ಜಾಗರೂಕತೆಯ ; ಕಾಲ ವಿಳಂಬದ (F. policy ಫೇಬಿಯನ್ ನೀತಿ ; ವಿಳಂಬ ನೀತಿ. F. Society ಥಟ್ಟನೆ ಕ್ರಾಂತಿಯನ್ನು ನಡಸುವುದು ತಪ್ಪೆಂದು ತಿಳಿದು ಚಳವಳಿಯಲ್ಲಿ ಮಂದ ಗತಿಯನ್ನು ಅನುಸರಿಸುವ ಸಮತಾ ವಾದಿಗಳ ಮಂಡಲ). (Fabius ಎಂಬ ರೋಮನ್ ಸೇನಾಧಿಪತಿಯ ಹೆಸರಿನಿಂದ)

Fáble ಫೇಬ್‌ಲ್ (ನಾ., ಕ್ರಿ.) (ಮು., ನಿಜವಾಗಿ ನಡೆದದ್ದಲ್ಲದ, ಪ್ರಕೃತಿ ಸಹಜವಲ್ಲದ, ಅಮಾನುಷ, ಅಲೌಕಿಕ, — ವಿಷಯಗಳ) ಕಟ್ಟು ಕಥೆ ; ಮಿಥ್ಯಾ ಕಥೆ ; ಕಲ್ಪನಾ ಕಥೆ ; ಅದ್ಭುತ ಕಥೆ. (ಸಮೂಹ ವಾಚಕ) ಕಥೆಗಳು ; ಪುರಾಣ ಕಥೆಗಳು. ಗೊಡ್ಡು ಹರಟೆ ; ಕಂತೆಯ ಪುರಾಣ (Old wives' fables ಅಡುಗೂಳಜ್ಜಿಯ ಕಥೆಗಳು). ಸುಳ್ಳು ಹೇಳಿಕೆ ; ಸುಳ್ಳು ; ಬರಿ ಕಥೆ ; ಬುರುಡೆ ; ಕೇವಲ ಊಹನಾ ವಸ್ತು. (ಮು., ಪ್ರಾಣಿಗಳೇ ಪಾತ್ರಗಳಾಗುಳ್ಳ) ಸಣ್ಣ ಕಥೆ ; ನೀತಿ ಕಥೆ. ನಾಟಕ, ವೊ. ಗಳ ಕಥಾ ವಸ್ತು. (ಕ್ರಿ.) (ಪ್ರಾಚೀ. ಪ್ರ., ಕಾವ್ಯ) ಅದ್ಭುತ ಕಥೆ ಕಟ್ಟು ; ಕಟ್ಟು ಕಥೆಗಳನ್ನು ಹೇಳು, ರಚಿಸು. ಕಲ್ಪಿಸಿ, ಇಲ್ಲದ್ದನ್ನು, ಹೇಳು. (ಭೂ. ಕೃ.) ಕಥೆಗಳಲ್ಲಿ, ಪುರಾಣಗಳಲ್ಲಿ, — ಪ್ರಖ್ಯಾತವಾದ ; ಪುರಾಣ ಪ್ರಸಿದ್ಧ ; ಪೌರಾಣಿಕ ; ಕಲ್ಪಿತ ; ಕಾಲ್ಪನಿಕ. **Fábler** (ನಾ.) ; **Fábulist** ಫ್ಯಾಬ್ಯುಲಿಸ್ಟ್ (ನಾ.) ಕಟ್ಟು ಕಥೆಗಳನ್ನು, ನೀತಿ ಕಥೆಗಳನ್ನು, ರಚಿಸುವವನು ; ಕಥೆಗಾರ. ಸುಳ್ಳುಗಾರ. **Fábulous** (ಗು.) ಕಲ್ಪಿತ ಕಥೆಗಳನ್ನು, ಪುರಾಣ ಕಥೆಗಳನ್ನು, ಹೇಳುವ (F. historians ಪೌರಾಣಿಕ ಚರಿತ್ರಕಾರರು) ; ಕಟ್ಟು ಕಥೆಯಲ್ಲಿ ಪ್ರಸಿದ್ಧವಾದ ; ಚಾರಿತ್ರಕವಲ್ಲದ ; ಪೌರಾಣಿಕ. ನಂಬಲಾಗದ ; ಅಸಂಬದ್ಧ ; ಅಸಂಗತ ; ನಿಶ್ಚಯಾಂಶವನ್ನು ಬಹಳ ಮಟ್ಟಿಗೆ ಮೀರಿದ ; ಉತ್ಪ್ರೇಕ್ಷೆ ಮಾಡಿದ. **Fábulousness** (ನಾ.) ; **Fábulously** (ಕ್ರಿ. ವಿ.) ; **Fabulósity** — ಲಾ — (ನಾ.)

Fábliau ಫಾಬ್ಲಿಯೊ (ನಾ. ; ಬ. ವ. -x —ಯೋಸ್) ಫ್ರೆಂಚ್ ಸಾಹಿತ್ಯದ ಆದಿ ಕಾಲದ ಪದ್ಯಕಥೆ (ಮು., ಹಾಸ್ಯದಿಂದ ಕೂಡಿದ್ದು, ಸ್ತ್ರೀಯರನ್ನೂ ಕ್ರೈಸ್ತ ವೈದಿಕರನ್ನೂ ವಿಡಂಬನ ಮಾಡುವಂಥದು)

Fábric ಫ್ಯಾ(ಫೇ)ಬ್ರಿಕ್ (ನಾ.) ಒಟ್ಟುಗೂಡಿಸಿಟ್ಟದ್ದು. ಕಟ್ಟಡ ; ಮಂದಿರ. ಚೌಕಟ್ಟು ; ರಚನೆ (ರೂಪ. ಸಹ). ನೆಯ್ದ ವಸ್ತು ; ವಸ್ತ್ರ ; ಬಟ್ಟೆ (ಅನೇಕ ವೇಳೆ Textile f.). ಕಟ್ಟಡದ ರೀತಿ ; ಬಂಧ ; ನೆಯ್ಗೆ.

Fábricate ಫ್ಯಾಬ್ರಿಕೇಟ್ (ಕ್ರಿ. ಸಕ.) ಕಟ್ಟು ; ರಚಿಸು ; ತಯಾರಿಸು (ಈ ಪ್ರಯೋಗಗಳು ವಿರಳ). (ಸಂಗತಿಗಳನ್ನು) ಕಲ್ಪಿಸು, ಸೃಷ್ಟಿಸು ; (ದಸ್ತೈವಜನ್ನು) ಸೃಷ್ಟನೆ ಮಾಡು, ಕಲ್ಪನೆ ಮಾಡು ; ಖೋಟಾ ತಯಾರಿಸು. **Fabricátion** (ನಾ.) ; **Fábricator** (ನಾ.)

Fábulist, Fábulous. **Fable** ನೋಡಿ.

Facáde ಫಸಾಡ್ (ನಾ.) ಬೀದಿಯ ಕಡೆಗೆ ಅಥವಾ ಬಯಲ ಕಡೆಗೆ ಇರುವ ಕಟ್ಟಡದ ಮುಖ ; ಮುಖಭಾಗ ; ಮುಂಭಾಗ.

Face ಫೇಸ್ (ನಾ.) ಮುಖ ; ಮೋರೆ [Look one in the f. (ಚಲಸದೆ, ಧೈರ್ಯದಿಂದ) ಒಬ್ಬನ ಮುಖವನ್ನು ದಿಟ್ಟಿಸಿ ನೋಡು, ಎದುರಿಸಿ ನೋಡು. Show one's f. ಮುಖ ತೋರಿಸು ; ಕಾಣಿಸಿಕೊ ; ಬರು. F. to f. ಎದುರು ಬದುರಾಗಿ ; ಸಮ್ಮುಖದಲ್ಲಿ ; ಎದುರು ನಿಂತು ; ಪ್ರತ್ಯಕ್ಷದಲ್ಲಿ. F. to f. with ಎದುರೆದುರಿಗೆ ; ಎದುರಿಸಿ. Set one's f. against ಎದುರಿಸು ; ವಿರೋಧಿಸು. With wind, sun, in one's f. ಗಾಳಿಗೆ, ಬಿಸಿಲಿಗೆ, —ಕಟ್ಟೆದುರಾಗಿ ; ಗಾಳಿಯೂ ಬಿಸಿಲೂ ಮುಖಕ್ಕೆ ಹೊಡೆಯುತ್ತ. Fly in the f. of ತಿರುಗಿ ಬೀಳು ; ಎದುರೆದುರಿಗೇ ಅವಿಧೇಯತೆ ತೋರು. In f. of ಎದುರಿಗೆ ; ಅಭಿಮುಖವಾಗಿ. In the f. of, In f. of ಹಾಗಿದ್ದರೂ ; ಹಾಗಾದರೂ. To one's f. ಎದುರೆದುರಿಗೇ ; ಪ್ರತ್ಯಕ್ಷವಾಗಿ ; ಒಬ್ಬನೆದುರಿಗೆ ; ಒಬ್ಬನು ಕೇಳುವಂತೆ. In the f. of day ಬಹಿರಂಗವಾಗಿ. Her f. is her fortune ರೂಪೊಂದೇ ಅವಳಿಗಿರುವ ಐಶ್ವರ್ಯ ; ಸೌಂದರ್ಯವೇ ಅವಳ ಸಂಪತ್ತು]. ಮುಖ ಭಾವ ; —ಲಕ್ಷಣ ; —ಭಂಗಿ ;—ಮುದ್ರೆ (Pull, wear, a long f. ನಿರುತ್ಸಾಹದ ಮೋರೆ ಹಾಕಿಕೊ ; ಜೋಲು ಮುಖ ಹಾಕಿಕೊ ; ಬಿಗುಮುಖ ಮಾಡಿಕೊ. Lose f. ಮುಖ ಕೆಡು ; ಅವಮಾನ ಹೊಂದು ; ಹೆಸರು ಕೆಡಿಸಿಕೊ ; ನಂಬಿಕೆ ಕೆಡು). ಮುಖ ವಿಕಾರ ; ಮುಖ ಚೇಷ್ಟೆ ; ಅಣಕ (Make, pull, a f. or faces ಅಣಕಿಸು). ಧೈರ್ಯ ; ಧೃಷ್ಟತನ ; ಲಜ್ಜಾ ಹೀನತೆ (Have the f. ಮುಖ ಇಟ್ಟುಕೊಂಡಿರು ; ನಿರ್ಲಜ್ಜೆಯಿಂದಿರು. Save one's f. ಬಹಿರಂಗವಾಗಿ ಮರ್ಯಾದೆ ಕಳೆಯದೆ, ಕಳೆದುಕೊಳ್ಳದೆ, ಇರು ; ಮಾನ ಉಳಿಸಿಕೊ). ಹೊರ ತೋರ್ಕೆ ; ಬಾಹ್ಯ ಲಕ್ಷಣ (On the f. of it ಬಾಹ್ಯ ಲಕ್ಷಣದಿಂದ ; ಹೊರ ನೋಟಕ್ಕೆ ; ಸ್ಪಷ್ಟವಾಗಿ. Put a new f. on ಮುಖ ಬದಲಾಯಿಸು ; ಬೇರೆ ರೀತಿ ಕಾಣುವಂತೆ ಮಾಡು. Put a good, bold, f. on matter ಚೆನ್ನಾಗಿ ಕಾಣುವಂತೆ ಮಾಡು ; ಧೈರ್ಯವಾಗಿ ಎದುರಿಸು). ಮೇಲ್ಮೈ ; ಹೊರ ಭಾಗ (From the f. of the earth ಭೂಮಿಯ ಹೊರಮೈಯಿಂದ). ಮುಂಭಾಗ ; ಮುಮ್ಮುಖ ; (ನಾಣ್ಯದ ಅಥವಾ ಪದಕದ) ತಲೆಯಿರುವ ಪ್ರಧಾನ ಭಾಗ, ಮುಖ ಭಾಗ. **F.-ache** ಅರೆದಲೆ ನೋವು. **F.-lifting** ಮುಖದಮೇಲಿನ ಸುಕ್ಕುಗಳನ್ನು ಕಳೆಯುವುದಕ್ಕಾಗಿ ಚರ್ಮವನ್ನು ಬಿಗಿಮಾಡಿ ಯೌವನದ ಕಳೆ ತೋರುವಂತೆ ಮಾಡುವ ಚಿಕಿತ್ಸೆ : ಮುಖ ತಿದ್ದುವುದು. **F. value** (ನಾಣ್ಯ, ಕಾಗದದ ಹಣ, ವೊ. ಗಳಮೇಲೆ ಹಾಕಿರುವ) ಮುಖ ಮೂಲ್ಯ ; ನಮೂದು ಬೆಲೆ. **-faced** (ಗು.) ; **Fácial** ಫೇಷಿಯಲ್, ಫೇಷಲ್ (ಗು., ನಾ.) ಮುಖದ [ಮು., ಅಂ. ರ. ಶಾ. ದಲ್ಲಿ : F. artery ಮುಖದಲ್ಲಿಯ ಅಪಧಮನಿ. F. angle ಮೂಗಿನ ಹೊಳ್ಳೆಯಿಂದ (೧) ಕಿವಿಗೆ, (೨) ಹಣೆಗೆ, ಎಳೆದ ಎರಡು ರೇಖೆಗಳ ಮಧ್ಯದ ಕೋನ]. (ನಾ.) (ಅಮೆ. ಸಂ.) ಮುಖ ನೀವುವುದು ; ಮುಖ ಮರ್ದನ.

Face (ಕ್ರಿ.) ಧೈರ್ಯದಿಂದ ನೋಡು, ಎದುರಿಸು (F. matter out ಧೈರ್ಯವಾಗಿ ನಿರ್ವಹಿಸಿಬಿಡು. F. opponent down ಎದುರಾಳಿಯನ್ನು ಬಾಯಿ ಬಡಿ, ಬೆದರಿಸು). ಎದುರಿಸಿ, ಧೈರ್ಯವಾಗಿ, ನಿಲ್ಲು (F. the music ಪರೀಕ್ಷೆಗೆ, ಬಿಕ್ಕಟ್ಟಿಗೆ, ಬಂದಾಗ ಹೆದರದೆ ನಿಲ್ಲು). ಎದುರಿಗಿರು ; ಕಾಣಿಸಿಕೊ. ಒದಗಿ ಬರು ; ಪ್ರಾಪ್ತವಾಗು (The problem that faces us ನಮ್ಮೆದುರಿಗಿರುವ ಸಮಸ್ಯೆ). (ಇಸ್ಪೀಟೆಲೆಯನ್ನು) ಮುಖ ಮೇಲಕ್ಕೆ ತಿರುಗಿಸು. (ಮನುಷ್ಯರು, ವೊ. ರ ವಿಷಯದಲ್ಲಿ) —ಕಡೆ ನೋಡು, ತಿರುಗು. (ವಸ್ತುಗಳ ವಿಷಯದಲ್ಲಿ) ಒಂದು ಗೊತ್ತಾದ ದಿಕ್ಕಿನಲ್ಲಿರು, ಅಭಿಮುಖವಾಗಿರು (F. on, to, North,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Eastwards, etc.); (ಕಡೆಗೆ) ಮುಖವಾಗಿರು (To face page 20 ಇಪ್ಪತ್ತನೆಯ ಪುಟಕ್ಕೆದುರಾಗಿ). (ಸೈನಿಕ) (ನಿಂತಿರುವ ಸ್ಥಳದಲ್ಲಿಯೇ) ಬೇರೊಂದು ಗೊತ್ತಾದ ದಿಕ್ಕಿಗೆ ತಿರುಗಿಕೊ [Left, about, f. ಎಡಕ್ಕೆ, ಹಿಂದು ಮುಂದಾಗಿ, ತಿರುಗಿಕೊ. He faced his men about ಅವನು ತನ್ನ ಸಿಪಾಯಿಗಳನ್ನು ಹಿಂದು ಮುಂದಾಗಿ ತಿರುಗುವಂತೆ ಮಾಡಿದನು]. (ಉಡುಪಿಗೆ) ಕೈಪಟ್ಟಿ, ಕೊರಳುಪಟ್ಟಿ ಮೊ. ಅಲಂಕಾರದ ಅವಯವಗಳನ್ನು ಹಾಕು. (ಮೇಲ್ಮೈಯನ್ನು) ಮತ್ತೊಂದು ಪದಾರ್ಥವನ್ನು ಹರವಿ ಮುಚ್ಚು, ಹೊದಿಸು. ಒಂದರ ಮೇಲ್ಮೈಯನ್ನು ನಯಮಾಡು. (ತೇ ಎರೆಗೆ) ಬಣ್ಣಕೊಡು. **Fácer** (ನಾ.) ಒಬ್ಬನ ಮುಖದಮೇಲೆ ಏಟು, ಹೊಡೆತ. ಥಟ್ಟನೆ ಒದಗಿದ ದೊಡ್ಡ ಕಷ್ಟ, ಎಡರು, ವಿಪತ್ತು. **Fácing** (ನಾ.) (ಕ್ರಿಯಾರ್ಥಗಳಲ್ಲಿ). (ಬ. ವ. ದಲ್ಲಿ) ಸಿಪಾಯಿಯ ಅಂಗಿಯ ಒಡಲಿನ ಬಣ್ಣಕ್ಕೆ ಬೇರೆಯಾದ ಬಣ್ಣದ ಮಣಿಕಟ್ಟುಪಟ್ಟಿ, ಕೊರಳಪಟ್ಟಿ, ಮೊ. ವು. ಗೋಡೆಯ ಹೊರಮೈಗೆ ಬೇರೆ ಪದಾರ್ಥದಿಂದ (ಮು., ಕಲ್ಲಿನಿಂದ) ಕಟ್ಟಿರುವ ವರಿಸೆ: ಮುಖ ವರಿಸೆ; ಮುಖ ಹೊದಿಕೆ. ಯಾವುದಾದರೊಂದು ದಿಕ್ಕಿನಲ್ಲಿ ತಿರುಗುವುದು, ತಿರುಗಿರುವುದು; ಮುಖ. Put person through his facings ಒಬ್ಬನ ಗುಣಾತಿಶಯ, ಯೋಗ್ಯತೆ, ಮೊ. ನ್ನು ಪರೀಕ್ಷಿಸು. Go through one's facings ಹೀಗೆ ಪರೀಕ್ಷೆ ಹೊಂದು.

Fácet ಫ್ಯಾಸೆಟ್ (ನಾ.) (ಅನೇಕ ಮುಖಗಳುಳ್ಳ ಪದಾರ್ಥದ ಒಂದು) ಮುಖ, ಕಣ (ಮು., ಪಟ್ಟೆಹೊಡೆದ ರತ್ನದ್ದು); (ಪಟ್ಟೆಯ ರತ್ನದ ಒಂದು) ಪಟ್ಟೆ. ಕೂಡುಗಣ್ಣಿನ, ಸಂಯುಕ್ತ ನೇತ್ರದ, ಒಂದು ಭಾಗ. **Fáceted** (ಗು.)

Facétiae ಫಸೀಷಿಯಿ (ನಾ., ಬ. ವ.) ವಿನೋದಗಳು; ಹಾಸ್ಯಗಳು; ಚಮತ್ಕಾರದ ಮಾತುಗಳು. (ಪುಸ್ತಕ ಪಟ್ಟಿಗಳಲ್ಲಿ) ವಿನೋದದ, ಹಾಸ್ಯದ, ಅಶ್ಲೀಲ ವಿಷಯದ, ಪುಸ್ತಕಗಳು. **Facétious** ಫಸೀಷಸ್ (ಗು.) ವಿನೋದ ಮಾಡುವ; ತಮಾಷೆ ಮಾಡುವ; ನಕಲಿ ಮಾಡುವ; ಹಾಸ್ಯಕರ. **Facétiously** (ಕ್ರಿ. ವಿ.); **Facétiousness** (ನಾ.)

Facétious. **Facetiae** ನೋಡಿ.

Fácia ಫ್ಯಾಷಿಯ, ಫ್ಯಾಷ (ನಾ.) (ಅಂಗಡಿಯವನ ಹೆಸರು, ಮೊ. ನ್ನು ಬರೆದು ಅಂಗಡಿಯ ಮುಂಭಾಗದಲ್ಲಿ ಹಾಕಿರುವ) ಹೆಸರುತಗಡು.

Fácile ಫ್ಯಾಸಿಲ್ (ಗು.) ಸುಲಭ ಸಾಧ್ಯ; ಸುಲಭವಾಗಿ ಕೆಲಸ ಮಾಡುವ. ಸರಾಗವಾದ; ತಡೆಯಿಲ್ಲದ; ನಿರರ್ಗಳವಾದ; ಓಡುವ; ಶಾಂತ ಸ್ವಭಾವದ; ಸೌಮ್ಯ; ಸುಲಭ; ಸುಗಮ; ಮೃದು; ಬಗ್ಗುವ. **Facílity** ಫಸಿಲಿಟಿ (ನಾ.) ಸೌಲಭ್ಯ; ಸೌಕರ್ಯ; ಅನುಕೂಲ; ತಡೆ, ಅಡ್ಡಿ, — ಇಲ್ಲದ ಅವಕಾಶ (Give facilities for, of doing ಮಾಡಲು ಸೌಕರ್ಯ ಕೊಡು). (ಭಾಷಣ, ಮೊ. ಗಳ) ಸೌಲಭ್ಯ, ನಿರರ್ಗಳತೆ; ಸಾಮರ್ಥ್ಯ; ಚಾತುರ್ಯ; ಬಗ್ಗುವಿಕೆ; ನಮ್ರತೆ. **Facílitate** (ಕ್ರಿ. ಸಕ.) ಸುಲಭ ಮಾಡು. (ಕಾರ್ಯ, ಫಲ) ಸರಾಗ ಮಾಡು, ಸುಗಮ ಮಾಡು; ಸಹಾಯ, ಅನುಕೂಲ, —ಮಾಡು. **Facilitátion** (ನಾ.)

Fácile prínceps (L) ಫ್ಯಾಸಿಲೀ ಪ್ರಿನ್ಸೆಪ್ಸ್ (ಗು.) ಸುಲಭವಾಗಿ, — ಮೊದಲನೆಯ, ಪ್ರಮುಖ.

Facílity. **Facile** ನೋಡಿ.

Fácing. **Face** ನೋಡಿ.

Facon de parler (F) ಮಾತಿನ ರೀತಿ; ಸಾಂಪ್ರದಾಯಿಕ ರೀತಿ.

Facsímile ಫ್ಯಾಕ್ಸಿಮಿಲಿ (ನಾ., ಕ್ರಿ. ಸಕ.) (ಮು., ಬರಹ, ಮುದ್ರಣ, ಚಿತ್ರ, ಮೊ. ಗಳ) ಯಥಾ ಪ್ರತಿ, ನಕಲು, ಪಡಿಯಚ್ಚು (Reproduced in f. ಹೇಗಿದೆಯೊ ಹಾಗೆ ನಕಲುಮಾಡಿದ; ಯಥಾ ಪ್ರತಿ ಮಾಡಿದ). (ಕ್ರಿ.) ಒಂದರ ಪಡಿಯಚ್ಚು, ಯಥಾ ಪ್ರತಿ, ನಕಲು, —ಮಾಡು.

Fact ಫ್ಯಾಕ್ಟ್ (ನಾ.) (ಕಾರ್ಯ) ಮಾಡಿದ್ದು; (ಕೃತ್ಯ) ನಡೆದದ್ದು [ಈಗ, Before, after, the f., Confess the f. ಎಂಬಲ್ಲಿ ಮಾತ್ರ]. ಕಾರ್ಯ; ಕೃತ್ಯ; ಸಂಗತಿ; ನಿಜ ಸ್ಥಿತಿ; ಸತ್ಯಾಂಶ; ವಾಸ್ತವಾಂಶ; ವಸ್ತುಸ್ಥಿತಿ; ವಿಷಯ. Matter of f. ನಡೆದ ವಿಷಯ; ನಿಶ್ಚಯಾಂಶ. In f., As a matter of f., In point of f., The f. of the matter ನಿಜವಾಗಿ, ವಾಸ್ತವವಾಗಿ, ವಸ್ತುಸ್ಥಿತಿಯೇನೆಂದರೆ. **Fáctual** ಫ್ಯಾಕ್ಚುಅಲ್ (ಗು.) ವಸ್ತುಸ್ಥಿತಿಯನ್ನು ಕುರಿತ; ವಾಸ್ತವಿಕ; ನಡೆದ ಸಂಗತಿಯ. **Fáctually** (ಕ್ರಿ. ವಿ.); **Fáctum** ಫ್ಯಾಕ್ಟಮ್ (ನಾ.) ನಡೆದ ಸಂಗತಿಗಳ, ವಾದ ವಿಷಯಾಂಶಗಳ, — ನಿರೂಪಣೆ; ವಿಷಯ ಪಟ್ಟಿ.

Fáction ಫ್ಯಾಕ್‌ಷನ್ (ನಾ.) ಕಕ್ಷಿ; ಪಕ್ಷ; ಪಂಗಡ (ಮು., ರಾಜಕೀಯದಲ್ಲಿ); ಸ್ವಾರ್ಥಪರ, ಗಲಾಟೆ ಮಾಡುವ, ಅಥವಾ ಅನ್ಯಾಯಕ್ಕೆ ಹೇಸದ, — (ಮು., ರಾಜಕೀಯ) ಪಕ್ಷ. ಒಡಕು; ಕಲಹ; ವಿರೋಧ; ವೈಮನಸ್ಯ. **Fáctional** (ಗು.); **Fáctious** —ಷಸ್ (ಗು.); **Fáctiously** (ಕ್ರಿ. ವಿ.); **Fáctiousness** (ನಾ.)

Factítious ಫ್ಯಾಕ್ಟಿಷಸ್ (ಗು.) ಉದ್ದೇಶ ಪೂರ್ವಕವಾಗಿ ಕಲ್ಪಿಸಿದ; ಅಸ್ವಾಭಾವಿಕ; ಅಸಹಜ; ಕೃತಕ; ಕಲ್ಪಿತ; ಖೋಟಾ. **Factítiously** (ಕ್ರಿ. ವಿ.); **Factítiousness** (ನಾ.); **Fáctitive** (ಗು.) (ವ್ಯಾ.) [F. verb ಮಾಡು, ಕರೆ, ಯೋಚಿಸು — ಈ ಅರ್ಥಗಳುಳ್ಳದ್ದಾಗಿ ಕರ್ಮ ಪದವನ್ನೂ ಪೂರಕ ಪದವನ್ನೂ ಅಪೇಕ್ಷಿಸುವ ಕ್ರಿಯೆ: ವಿಶೇಷಣ ಕ್ರಿಯೆ (He *thought* her mad ಅವಳು ಹುಚ್ಚಿಯೆಂದು ಭಾವಿಸಿದನು)]. ಪ್ರೇರಣಾರ್ಥಕ; ಕಾರಕ. **Fáctitively** (ಕ್ರಿ. ವಿ.)

Fáctor ಫ್ಯಾಕ್ಟರ್ (ನಾ.) ಕಾರ್ಯಭಾರಿ; ಪ್ರತಿನಿಧಿ; ನಿಯೋಗಿ. ದಳ್ಳಾಳಿಯಾಗಿ ಕೊಂಡುಕೊಳ್ಳುವ, ಮಾರುವ, —ವರ್ತಕ: ದಳ್ಳಾಳಿ ವರ್ತಕ; ದಳ್ಳಾಳಿ. (ಸ್ಕಾಟ್ಲೆಂಡಿನಲ್ಲಿ) ಭೂಸ್ಥಿತಿಯ ವ್ಯವಸ್ಥಾಪಕ; ಆಡಳಿತಗಾರ; ಖಾಸಗಿ ಗುಮಾಸ್ತೆ. (ಗಣಿತ) ಒಂದು ಸಂಖ್ಯೆಯ ಅಥವಾ ಪದದ ಗುಣಕ ಅವಯವ; ಅಪವರ್ತನ. ಒಂದು ಪರಿಣಾಮಕ್ಕೆ ಕಾರಣಭೂತವಾದ ಸಂದರ್ಭ, ಸಂಗತಿ, ಪ್ರಭಾವ, ಅಂಶ, ವಿಷಯ. **Fáctorage** (ನಾ.) ದಳ್ಳಾಳಿಯ, ಕಾರ್ಯಭಾರಿಯ, — ಕಾರ್ಯ ಅಥವಾ ವ್ಯಾಪಾರ. ದಳ್ಳಾಳಿ; ದಳ್ಳಾಳಿಗಳು.

Factórial ಫ್ಯಾಕ್ಟೋರಿಯಲ್ (ಗು., ನಾ.) (ಗಣಿತ) ಒಂದು ಗಣಿತ ಶ್ರೇಣಿಯಲ್ಲಿರುವ ಎಲ್ಲ ಸಂಖ್ಯೆಗಳ ಗುಣಲಬ್ಧ: ಶ್ರೇಣಿಲಬ್ಧ; ಒಂದು ಪೂರ್ಣಾಂಕದ ಮತ್ತು ಅದರ ಕೆಳಗಿನ ಎಲ್ಲ ಪೂರ್ಣಾಂಕಗಳ ಗುಣಲಬ್ಧ; ಕ್ರಮಾಪವರ್ತನ ಲಬ್ಧ (F. 4 ಎಂಬುದಕ್ಕೆ ಸಂಕೇತ: $\underline{|4} = 4 \times 3 \times 2 \times 1$)

Fáctory ಫ್ಯಾಕ್ಟೊರಿ (ನಾ.) ಒಂದು ವ್ಯಾಪಾರಿಮಂಡಲಿಯ ಪರದೇಶ ವ್ಯಾಪಾರದ ಕೋಠಿ. ಕಾರ್ಖಾನೆ (F. Acts ಕಾರ್ಖಾನೆಯ ಕೆಲಸಗಾರರ ಕ್ಷೇಮಚಿಂತನೆಗಾಗಿ ಕಾರ್ಖಾನೆಯ ಆಡಳಿತವನ್ನು ವ್ಯವಸ್ಥಪಡಿಸುವ ಕಾನೂನು: ಕಾರ್ಖಾನೆಯ ಕಾನೂನುಗಳು)

Factótum ಫ್ಯಾಕ್ಟೋಟಂ (ನಾ.) ಎಲ್ಲಾ ಕೆಲಸಗಳನ್ನೂ ಮಾಡುವ ಆಳು. ದಣಿಯ ಕೆಲಸಗಳನ್ನೆಲ್ಲ ನಿರ್ವಹಿಸುವ ಸೇವಕ.

Fáctual, Fáctum. **Fact** ನೋಡಿ.

Fácula ಫ್ಯಾಕ್ಯುಲ (ನಾ.; ಬ. ವ. -ae) (ಖ. ವಿ.) ಸೂರ್ಯನ ಒಡಲಿನ ಹೊಳಪುಪ್ರದೇಶ ಅಥವಾ ಹೊಳಪು ಪಟ್ಟೆ. **Fácular** (ಗು.); **Fáculous** (ಗು.)

Fáculty ಫ್ಯಾಕಲ್ಟಿ (ನಾ.) (ಯಾವುದಾದರೂ ಒಂದು ವಿಶೇಷ ಕಾರ್ಯಕ್ಕೆ ಇರುವ) ಸಹಜ ಶಕ್ತಿ, ಯೋಗ್ಯತೆ, ಸಾಮರ್ಥ್ಯ. (ದೇಹದಲ್ಲಿಯ ಅಥವಾ ಒಂದು ಅಂಗದಲ್ಲಿಯ) ಸ್ವಾಭಾವಿಕ ಶಕ್ತಿ. ಮನಶ್ಶಕ್ತಿ (ಉದಾ., ಸಂಕಲ್ಪ ಶಕ್ತಿ, ವಿವೇಚನಾ ಶಕ್ತಿ). ವಿಶ್ವವಿದ್ಯಾನಿಲಯದ ಕಲೆಗಳ ಅಥವಾ ವಿಜ್ಞಾನ ಭಾಗಗಳ ಶಾಖೆ: (The four faculties—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Theology, Law, Medicine, Arts ದೇವತಾಶಾಸ್ತ್ರ, ನ್ಯಾಯ ಶಾಸ್ತ್ರ, ವೈದ್ಯಶಾಸ್ತ್ರ, ಕಲೆಗಳು); ಈ ಭಾಗಗಳ ಯಾವುದಾದರೊಂದರಲ್ಲಿ ಪ್ರವೀಣ ಪದವಿ ಮತ್ತು ಪಂಡಿತ ಪದವಿ ಪಡೆದವರು (ಜನರೂಢಿಯಲ್ಲಿ : The F. ವೈದ್ಯವೃತ್ತಿಯವರು). ಯಾವುದಾದರೂ ಒಂದು ಕಾರ್ಯ ವನ್ನು ಮಾಡಲು ಕಾನೂನಿನಿಂದಾಗಲಿ ಮೇಲಧಿಕಾರಿಯಿಂದಾಗಲಿ ಪಡೆದ ಸ್ವಾತಂತ್ರ್ಯ, ಅಧಿಕಾರ, ಅಪ್ಪಣೆ, ಅನುಮತಿ (ಮು., ಕ್ರೈಸ್ತಧರ್ಮ ಸಂಬಂಧದ್ದು). **Fácultative**—ಕಲ್ಟೇಟಿವ್ (ಗು.) (ಕಾನೂನಿನ ವಿಷಯವಾಗಿ) ಅನುಮತಿ ಕೊಡುವ ; ಆಯ್ದುಕೊಳ್ಳಬಹು ದಾದ ; ಐಚ್ಛಿಕ. ಸಂಭಾವ್ಯ ; ಆಗಬಹುದಾದ. ಮನಶ್ಶಕ್ತಿಯ ಒಂದು ವಿಭಾಗದ.

Fad ಫ್ಯಾಡ್ (ನಾ.) ಅಭಿಮಾನದ ಭಾವನೆ ; ಅತ್ಯಭಿಮಾನ. ಪೈತ್ಯ ; ಹುಚ್ಚು ; ಗೀಳು ; ಖಯಾಲು ; ಗೇಂದಿ. **Fáddish** (ಗು.) ; **Fáddishness** (ನಾ.) ; **Fáddism** (ನಾ.) ; **Fáddist** (ನಾ.) ; **Fáddy** (ಗು.)

Fade ಫೇಡ್ (ಕ್ರಿ.) ಬಾಡು ; ಬತ್ತು ; ಕಂದು ; ಶಕ್ತಿಗುಂದು ; ಕಳೆ ಗುಂದು. (ಬಣ್ಣ, ಮೊ.ಗಳ ವಿಷಯದಲ್ಲಿ) ಕಾಂತಿಹೀನವಾಗು, ಮಂಕಾಗು, ಮಸುಕಾಗು, ಮಾಸಿಹೋಗು ; ಮ್ಲಾನವಾಗು ; ಬಣ್ಣ ಹೋಗು ; ಬಣ್ಣಹೋಗುವಂತೆ ಮಾಡು ; ಕ್ರಮೇಣ ಕಾಣದೆಹೋಗು ; ಅಳಿಸಿಹೋಗು ; ಅದೃಶ್ಯವಾಗು ; ಮರೆಯಾಗು. (ಚಲನ ಚಿತ್ರ) ಚಿತ್ರವು ಪರದೆಯಮೇಲೆ ಕ್ರಮವಾಗಿ ದೃಷ್ಟಿಪಥಕ್ಕೆ ಬರುವಂತೆ, ದೃಷ್ಟಿಪಥದಿಂದ ಸರಿದುಹೋಗುವಂತೆ, ಮಾಡು. (ವಾರ್ತಚಿತ್ರದ ಮತ್ತು ವಾರ್ತಾ ವಿಕಿರಣದ ವಿಷಯದಲ್ಲಿ) (ದನಿಯನ್ನು) ಏನೂ ಕೇಳದೆ ಇರುವ ಸ್ಥಿತಿಯಿಂದ ವೃದ್ಧಿಮಾಡು ಅಥವಾ ಕೇಳದೆಹೋಗುವ ಸ್ಥಿತಿಗೆ ಇಳಿಸು; ಕ್ರಮವಾಗಿ ಏರಿಸು, ಇಳಿಸು. **Fáding** (ನಾ.) ; **Fádeless** (ಗು.) ; **Fádelessly** (ಕ್ರಿ. ವಿ.)

Faéces ಫೀಸೀಸ್ (ನಾ., ಬ. ವ.) (ದ್ರವದ ತಳದಲ್ಲಿ ನಿಲ್ಲುವ) ಗಸಿ, ಚರಟ. (ದೇಹದ) ಮಲ ; ಅಮೇಧ್ಯ ; ಹೇಲು ; ಸಗಣಿ ; ಲದ್ದಿ ; ಹಿಕ್ಕೆ. **Faécal** ಫೀಕಲ್ (ಗು.)

Fáerie, -ry ಫೇ(ಎ)ರಿ (ನಾ., ಗು.) ಗಂಧರ್ವಲೋಕ ; ಗಂಧರ್ವರು (ಮು., ಸ್ಪೆನ್ಸರ್ ಕವಿ ವರ್ಣಿಸಿರುವಂತೆ). (ರೂಪ.) ಕಲ್ಪನೆಯ ; ಭಾವ ನೆಯ ; ಊಹಿತ.

Fag ಫ್ಯಾಗ್ (ಕ್ರಿ., ನಾ.) ಆಯಾಸಪಟ್ಟು, ದಣಿದು, ಶ್ರಮದಿಂದ, —ಕೆಲಸ ಮಾಡು ; ದುಡಿ ; ಬಳಲು ; ಬಳಲಿಸು ; ಆಯಾಸಪಡು ; —ಪಡಿಸು ; ದಣಿ ; ದಣಿಸು. (ಪಾಠಶಾಲೆಗಳಲ್ಲಿ, ಹಿರಿಯ ವಿದ್ಯಾರ್ಥಿ ಗಳ ವಿಷಯದಲ್ಲಿ) ಕಿರಿಯ ವಿದ್ಯಾರ್ಥಿಗಳ ಸೇವೆ, ಕೆಲಸ, —ಪಡೆ, ತೆಗೆದುಕೊ ; (ಕಿರಿಯ ವಿದ್ಯಾರ್ಥಿಗಳ ವಿಷಯದಲ್ಲಿ) ಹಿರಿಯ ವಿದ್ಯಾರ್ಥಿಗಳ ಸೇವೆ, ಕೆಲಸ,—ಮಾಡು. [(ಕ್ರಿಕೆಟ್ ಆಟ) F. out ಮೈದಾನದಲ್ಲಿ ಚೆಂಡುಹಿಡಿಯಲು ಸಿದ್ಧನಾಗಿರು ; ಆಟ ಕಾಯಿ ; — ತೋರಿಸು. F.-end ಕೀಳ್ತರದ, ಉಪಯೋಗವಿಲ್ಲದ, — ಉಳಿಕೆ ; ಕೊನೆಯ ತುಂಡು. ಅಂಚು ; ಕರೆ ; ಕಟ್ಟಕಡೆ ; ಕೊಟ್ಟಕೊನೆ]. (ನಾ.) ಕಷ್ಟದ ದುಡಿತ ; ಮನಸ್ಸಿಗೊಪ್ಪದ, ಬೇಜಾರು, — ಕೆಲಸ (What a f. ? ಎಂಥ ಬೇಜಾರು ಕೆಲಸವಪ್ಪಾ !). ಶಕ್ತಿಗುಂದು ; ಬಳಲಿಕೆ ; ಸೋಲು ; ಆಯಾಸ [Brain-f. (Brain ನೋಡಿ)]. (ಪಾಠಶಾಲೆ ಗಳಲ್ಲಿ) ಹಿರಿಯ ವಿದ್ಯಾರ್ಥಿಯ ಶುಶ್ರೂಷೆ ಮಾಡಬೇಕಾದ ಕಿರಿಯ ವಿದ್ಯಾರ್ಥಿ : ಸೇವಾ ವಿದ್ಯಾರ್ಥಿ. (ಅಸಂ.) ಚುಟ್ಟಾ ; ಸಿಗರೆಟ್ಟು.

Fággot, Fágot ಫ್ಯಾಗೆ(ಗ)ಟ್ (ನಾ., ಕ್ರಿ.) ಸೌದೆಯ ಕಂತೆ, ಕಟ್ಟು, ಹೊರೆ, ಪಿಂಡಿ. ಉಕ್ಕಿನ ಕಂಬಿಗಳ ಕಟ್ಟು. ಪ್ರಾಣಿಯ ಪಿತ್ತ ಕೋಶದ ಮಾಂಸವನ್ನು ತುಂಡುತುಂಡು ಮಾಡಿ, ಸಂಬಾರ ಬೆರಸಿ, ಬೇಯಿಸಿ ಸಿದ್ಧಪಡಿಸಿದ ತಿಂಡಿ. (ಕ್ರಿ.) ಕಂತೆ ಕಟ್ಟು ; ಹೊರೆ ಮಾಡು. F.-vote ಚುನಾವಣೆಮಾಡಲು ಅರ್ಹತೆಯಿಲ್ಲದವನಿಗೆ ತಕ್ಕಷ್ಟು ಆಸ್ತಿ ಯನ್ನು ವರ್ಗಾಯಿಸಿ ತಯಾರಿಸಿಕೊಂಡ ವೋಟು, ಮತ : ತಯಾರಿಕೆಯ ಮತ. F.-voter ಇಂಥ ವೋಟುದಾರ.

Fáhrenheit ಫರನ್‌ಹೈಟ್, ಫ್ಯಾರನ್ಹೈಟ್ (ಗು.) (ಸಂಕ್ಷಿಪ್ತ : F.) F. thermometer ಫ್ಯಾರನ್ಹೈಟ್ ಶಾಖಮಾಪಕ (ನೀರ್ಗಲ್ಲು ಕರಗುವ ಶಾಖವನ್ನು ೩೨° ಎಂದೂ, ಸಮುದ್ರಮಟ್ಟದಲ್ಲಿ ನೀರು ಕುದಿಯುವ ಶಾಖ ವನ್ನು ೨೧೨° ಎಂದೂ ಗುರುತು ಮಾಡಿರುವದು). (ಇದನ್ನು ರಚಿಸಿದ ಪ್ರಷ್ಯಾ ದೇಶದ ಭೌತ ವೈಜ್ಞಾನಿಕನ ಹೆಸರಿನಿಂದ)

Faiénce (F) ಫಾಯಾನ್ಸ್ (ನಾ.) ಮಣ್ಣಿನ ಅಥವಾ ಪಿಂಗಾಣಿಯ ಚೀನೀ ಸಾಮಾನುಗಳು.

Fail ಫೇಯ್‌ಲ್ (ನಾ., ಕ್ರಿ.) [Without f. ತಪ್ಪದೆ ; ಖಂಡಿತವಾಗಿ ; ನಿಸ್ಸಂಶಯವಾಗಿ ; ಯಾವ ಅಡ್ಡಿ ಬಂದರೂ ಲಕ್ಷಿಸದೆ (ಆದೇಶವನ್ನು ಅಥವಾ ವಾಗ್ದಾನವನ್ನು ಒತ್ತಿಹೇಳುವ ಸಂದರ್ಭದಲ್ಲಿ)]. ಸೋಲು ; ತಪ್ಪು ; ತಪ್ಪಿಹೋಗು ; ಇಲ್ಲದಿರು ; ಸಾಲದಿರು ; (ಒಬ್ಬನ) ಆವಶ್ಯಕತೆಗೆ ಸಾಲದೆಬರು, ಸಾಕಾಗದಿರು ; ಕಡಮೆಬೀಳು (Time would f. me to tell ಹೇಳಲು ನನಗೆ ಹೊತ್ತು ಸಾಲದು ; ಎಷ್ಟು ಹೊತ್ತು ಹೇಳಿದರೂ ಮುಗಿಯದು. Words f. me ಹೇಳಲು ಮಾತೇ ಸಿಕ್ಕವು ; ನಾನು ತಕ್ಕಂತೆ ವರ್ಣಿಸಲಾರೆನು. His heart failed him ಅವನು ಎದೆ ಗುಂದಿದನು). ಉದಾಸೀನ ಮಾಡು ; ಅಲಕ್ಷ್ಯ ಮಾಡು ; ಕಡೆಗಣಿಸು ; ಮರೆ ; ಎಣಿಸದಿರು (He failed to appear ಅವನು ಬರಲು ತಪ್ಪಿದನು, ಬರಲಿಲ್ಲ). ನಷ್ಟವಾಗಿಹೋಗು ; ಅಳಿಸಿಹೋಗು ; ಇಲ್ಲದೆ ಹೋಗು ; ಕ್ಷೀಣವಾಗಿಹೋಗು ; ಮುಗಿದುಹೋಗು ; ಸತ್ತುಹೋಗು. ಶಕ್ತಿಗುಂದು ; ಕುಗ್ಗು ; ಕುಸಿ ; ಮುರಿದುಬೀಳು ; ಎಣಿಸಿದಂತೆ ನಡೆಯದಿರು ; ಆಸೆಗೆಡಿಸು ; ನಿರೀಕ್ಷೆಗೆಡಿಸು (The prophecy failed ಭವಿಷ್ಯತ್‌ಸೂಚನೆ ತಪ್ಪಿಹೋಯಿತು ; ಕಾಲಜ್ಞಾನ ಸುಳ್ಳಾಯಿತು. The wind failed us ಗಾಳಿ ನಮ್ಮ ನಿರೀಕ್ಷಣೆಯಂತೆ ಬೀಸದೆ ಹೋಯಿತು). ಅಭಿಲಾಷೆ ಕೈಗೂಡದೆಹೋಗು ; ವಿಫಲವಾಗು. (ಮಾಡುವುದರಲ್ಲಿ) ಜಯಶೀಲನಾಗದಿರು, ತೇರ್ಗಡೆಯಾಗದಿರು ; ನಿರ ರ್ಥಕವಾಗು ; ನಿಷ್ಫಲವಾಗು ; ವ್ಯರ್ಥವಾಗು ; ಗುರಿ ತಪ್ಪು. (ಹಣವನ್ನು) ಕೊಡದೆ ನಿಂತುಬಿಡು ; ಪಾವತಿ ಮಾಡಲು ತಪ್ಪು ; ದಿವಾಳಿ ಯಾಗು. **Fáiling** (ನಾ., ಉಪ.) (ಕ್ರಿಯಾರ್ಥಗಳಲ್ಲಿ). ಕುಂದು ; ಕೊರತೆ ; ನ್ಯೂನತೆ ; ದೌರ್ಬಲ್ಯ. ಇಲ್ಲದೆಹೋದರೆ ; ತಪ್ಪಿದರೆ [Failing this ಇದು ತಪ್ಪಿದರೆ. Failing whom, whom failing ಅವನು ತಪ್ಪಿದರೆ (ಹಾಜರಿಲ್ಲದವನನ್ನು ಆಯುವ ಸಂದರ್ಭದಲ್ಲಿ)]. **Fáilure** ಫೇಯ್ಲ್ಯರ್ (ನಾ.) ನಡೆಯದೆಹೋಗುವುದು ; ಅಸಂಭವ ; ಮಾಡದೆ ಹೋಗುವುದು; ತಪ್ಪಿಹೋಗುವುದು; ತಪ್ಪುವುದು; ಕಡಮೆಬೀಳುವುದು ; ಸಾಲದೆಹೋಗುವುದು ; ಮುರಿದುಬೀಳುವುದು ; ಶಕ್ತಿಗುಂದುವುದು. ಕೊರತೆ ; ನ್ಯೂನತೆ ; ಲೋಪ. ಅಪಜಯ ; ಸೋಲು ; ತೇರ್ಗಡೆ ಯಾಗದೆಹೋಗುವುದು. ಜಯವಾಗದೆಹೋದ ಮನುಷ್ಯ, ವಸ್ತು, ಪ್ರಯತ್ನ. ದಿವಾಳಿತನ ; ಮುಳುಗಿಹೋಗುವುದು.

Fain[1] ಫೆಯ್‌ನ್ (ಗು., ಕ್ರಿ. ವಿ.) ಇಷ್ಟಪಡುವ ; ಒಪ್ಪುವ ; ಬೇರೆ ಮಾರ್ಗ ವಿಲ್ಲದೆ ಒಪ್ಪಬೇಕಾಗಿರುವ. (ಕ್ರಿ. ವಿ.) Would f. ಮನಪೂರ್ತಿ ; ಸಂತೋಷದಿಂದ.

Fain[2], **Fains, Fen(s)** ಫೆಯ್‌ನ್, ಫೇನ್ಸ್, ಫೆನ್(ಸ್) (ಭಾವ. ಅವ್ಯ.) ಮಕ್ಕಳು ಆಟವಾಡುವಾಗ ಆಟವನ್ನು ಸ್ವಲ್ಪ ಹೊತ್ತು ನಿಲ್ಲಿಸುವುದ ಕ್ಕಾಗಲಿ, ತಮಗೆ ಇಷ್ಟವಿಲ್ಲದ ಕೆಲಸದಿಂದ ವಿನಾಯಿತಿ ಕೇಳುವುದ ಕ್ಕಾಗಲಿ, ಕೂಗುವ ಮಾತು : ಅಂಬಾರ್ ! [(ನಾ., ಕ್ರಿ. ಸಕ. ವಾಗಿ) Fains I wicket keeping ! ಗುರಿಕೋಲು ಕಾಯುವುದು ನಾನೊಲ್ಲೆ ! ಅಂಬಾರ್ !]

Faíneant (F) ಫೇನಿಯಂಟ್, **Faineánt** ಫೇನೇಆನ್ (ನಾ., ಗು.) ಸೋಮಾರಿ(ಯಾದ) ; ಚಟುವಟಿಕೆಯಿಲ್ಲದ(ವನು) ; ಮೈಗಳ್ಳ(ನಾದ)

Faint ಫೆಯ್‌ಂಟ್ (ಗು.) ಜಡ ; ಆಲಸ ; ಮಂದ ; ಪಿರಿಕಿ ; ಪುಕ್ಕಲು ; ಬಲಹೀನ ; ದುರ್ಬಲ (A f. show of resistance ಹೆಸರಿಗೆ ಮಾತ್ರ ಮಾಡುವ ಪ್ರತಿಭಟನೆಯ ಪ್ರದರ್ಶನ). ಮಂಕಾದ ; ಮಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾದ ; ಮಬ್ಬಾದ ; ಅಸ್ಪಷ್ಟ ; ಕಳೆಯಿಲ್ಲದ ; ಸೂಕ್ಷ್ಮ (F. or feint lines ಕಾಗದದಮೇಲೆ ಎಳೆದ ಸೂಕ್ಷ್ಮ ಗೆರೆಗಳು. A f. idea ಸೂಕ್ಷ್ಮ, ಅಸ್ಪಷ್ಟ, ಭಾವನೆ). (ಭಯ, ಹಸಿವು, ಮೊ. ಗಳಿಂದ) ತಲೆ ತಿರುಗುವ, ಶಕ್ತಿಗುಂದಿರುವ ; ಬವಳಿ ಬರುವ ; ಮೂರ್ಛೆಹೋಗುವಂತಿರುವ. (ವಾಯು, ವಾಸನಾ ದ್ರವ್ಯಗಳು, ಮೊ.) ಓಕರಿಕೆ ಬರಿಸುವ, ಹಿಂಸೆ ಕೊಡುವ, ಕ್ಲೇಶಕರ. **Faíntish** (ಗು.) ; **Faíntly** (ಕ್ರಿ. ವಿ.) ; **Faíntness** (ನಾ.) ; **Faínt-heart** (ನಾ.) ಹೇಡಿ ; ಅಂಜುಕುಳಿ. **Faint-heárted** (ಗು.) ; **Faint-heártedly** (ಕ್ರಿ. ವಿ.) ; **Faint-heártedness** (ನಾ.)

Faint (ಕ್ರಿ. ಅಕ., ನಾ.) (ಪ್ರಾಚೀ. ಪ್ರ.) ಧೈರ್ಯಗುಂದು ; ಕುಗ್ಗಿಹೋಗು. ಮೂರ್ಛೆಹೋಗು ; ಮೈಮರೆ ; ಸೊಕ್ಕು (He fainted away ಅವನು ಮೂರ್ಛೆಹೋದನು). (ನಾ.) ಮೂರ್ಛೆ ; ಮೈಮರವು. In a dead f. ಸಂಪೂರ್ಣವಾಗಿ ಪ್ರಜ್ಞೆಯಿಲ್ಲದೆ.

Faints ಫೇಯ್‌ಂಟ್ಸ್ (ನಾ., ಬ. ವ.) ಬಟ್ಟಿಯಿಳಿಸುವಾಗ ಮೊದಲಿನಲ್ಲೂ ಕಡೆಯಲ್ಲೂ ಬರುವ ಕಲ್ಮಷಗೂಡಿದ ಅಶುದ್ಧ ಸಾರಾಯಿ.

Fair[1] ಫೇರ್ (ನಾ.) ಸನ್ನದು, ಕಾನೂನು ಅಥವಾ ಮಾಮೂಲು ಅನುಸರಿಸಿ, ಗೊತ್ತಾದ ಸ್ಥಳದಲ್ಲಿ ಮತ್ತು ಗೊತ್ತಾದ ಕಾಲದಲ್ಲಿ ವ್ಯಾಪಾರಕ್ಕಾಗಿ, ಅನೇಕ ವೇಳೆ ಪ್ರದರ್ಶನಗಳು, ಆಟಪಾಟಗಳು, ಮೊ. ಗಳಿಂದ ಕೂಡಿ, ಆಗಾಗ ನೆರೆಯುವ ನೆರವಿ : ಸಂತೆ ; ಜಾತ್ರೆ ; ಪರಿಷೆ ; ಪ್ರದರ್ಶನ (A day after the f. ಕಾಲ ಮೀರಿ ; ಕಾಲಾತೀತವಾಗಿ). Fancy f. (Fancy ನೋಡಿ). **Faíring** (ನಾ.) ಸಂತೆಯಲ್ಲಿ, ಜಾತ್ರೆಯಲ್ಲಿ, ಕೊಂಡು ತಂದ ಇನಾಮು.

Fair[2] ಫೇರ್ (ಗು., ನಾ) ಚೆಲುವಾದ ; ಚೆನ್ನಾದ ; ಅಂದವಾದ ; ಸೊಗಸಾದ ; ಸುಂದರವಾದ [The f. sex, The f. ಹೆಂಗಸರು, ರಮಣಿಯರು, ಸುಂದರಿಯರು. (ಪ್ರಾಚೀ. ಪ್ರ.) A. f. ಒಬ್ಬ ಸ್ತ್ರೀ]. ತೃಪ್ತಿಕರವಾದ ; ಸಮೃದ್ಧವಾದ ; ಯಥೇಚ್ಛವಾದ ; ಸಾಕಷ್ಟು (A f. heritage ತಕ್ಕಷ್ಟು ಪಿತರಾರ್ಜಿತ). ಹೊರಕ್ಕೆ; ಮೇಲೆ, — ಅಂದವಾಗಿ ತೋರುವ, ನ್ಯಾಯವೆಂದು ತೋರುವ (F. speeches). ನಸು ಹೊಂಬಣ್ಣದ ; ಗೌರ ; ಕಪ್ಪಲ್ಲದ (A f. man, complexion, hair ಅಂದವಾದ, ಒಳ್ಳೆಯ ವರ್ಣದ, — ಮನುಷ್ಯ, ಮೈಬಣ್ಣ, ಕೂದಲು) ಚೊಕ್ಕಟವಾದ ; ತಿಳಿಯಾದ ; ನಿರ್ಮಲವಾದ ; ನಿಷ್ಕಳಂಕವಾದ ; ಸ್ವಚ್ಛ ; ಶುಭ್ರ [F. water ತಿಳಿ ನೀರು. F. copy (Copy ನೋಡಿ). F. fame ನಿರ್ಮಲ ಕೀರ್ತಿ ; ಕಳಂಕವಿಲ್ಲದ ಯಶಸ್ಸು ; ಶುಭ್ರ ಯಶಸ್ಸು]. ನ್ಯಾಯಪರನಾದ ; ಪಕ್ಷಪಾತವಿಲ್ಲದ ; ನಿಷ್ಪಕ್ಷಪಾತ; ನ್ಯಾಯ ಸಮ್ಮತ ; ನ್ಯಾಯವಾದ; ಧರ್ಮ [F. & square (ಗು., ಕ್ರಿ. ವಿ.) ಕೃತ್ರಿಮವಿಲ್ಲದ(ದೆ) ; ಅಕೃತ್ರಿಮ(ವಾಗಿ) ; ಮುಚ್ಚುಮರೆಯಿಲ್ಲದ(ದೆ). F. trade ಎರಡು ದೇಶಗಳ ವ್ಯಾಪಾರದಲ್ಲಿ ಪರಸ್ಪರ ಸಮಾನವಾದ ಷರತ್ತುಗಳು ಇರಬೇಕೆಂಬ ನ್ಯಾಯ : ನ್ಯಾಯ ವ್ಯಾಪಾರ. A f. field and no favour ಹೋರಾಟದಲ್ಲಿ ಯಾರೊಬ್ಬರಿಗೂ ಪಕ್ಷಪಾತವಿಲ್ಲದ ಸಮಾನ ಸೌಕರ್ಯಗಳು. All's f. in love and war ಪ್ರೇಮದಲ್ಲೂ ಯುದ್ಧದಲ್ಲೂ ಎಲ್ಲವೂ ನ್ಯಾಯವೇ. F. play ಎಲ್ಲರಿಗೂ ಒಂದೇ ರೀತಿ ; ನಿಷ್ಪಕ್ಷಪಾತ]. ಸಾಮಾನ್ಯ ಗುಣದ ; ಕೆಟ್ಟದ್ದಲ್ಲದ ; ಇದ್ದಮಟ್ಟಿಗೆ ಒಳ್ಳೆಯ ; ತಕ್ಕಮಟ್ಟಿನ. ಅನುಕೂಲವಾದ ; ಹಿತಕರವಾದ ; ಸಾಧಕವಾದ ; ಅನುಕೂಲವಾಗಬಹುದಾದ ; ಮೃದುವಾದ ; ನಯವಾದ ; ಶಾಂತವಾದ ; ಪ್ರಸನ್ನ. ತಡೆ, ನಿರ್ಬಂಧ, — ಇಲ್ಲದ. F. or foul weather ಒಳ್ಳೆಯ ಅಥವಾ ಕೆಟ್ಟ ವಾಯುಸ್ಥಿತಿ ; ಅನುಕೂಲ ಅಥವಾ ಪ್ರತಿಕೂಲ ವಾತಾವರಣ. F.-weather friends ಅನುಕೂಲ ಕಾಲದ ಗೆಳೆಯರು ; ಕಷ್ಟಕ್ಕಾಗದ ಸ್ನೇಹಿತರು. In a f. way to succeed ಜಯಪ್ರದವಾಗುವಂತೆ ತೋರುತ್ತ. By f. means ನ್ಯಾಯ ಮಾರ್ಗದಲ್ಲಿ ; ಮೋಸ ಅಥವಾ ಬಲಾತ್ಕಾರದಿಂದಲ್ಲದೆ. **Fair-haired** (ಗು.) ; **Faírish** (ಗು.) ; **Faírlight** (ನಾ.) ಅಡ್ಡವಾಗಿ ಹಾಕಿರುವ ಮರದ ಪಟ್ಟಿಯುಳ್ಳ, ಅಥವಾ ಬಾಗಿಲ ಮೇಲಿನ ಚಪ್ಪಡಿಯ ಮೇಲಿಟ್ಟಿರುವ, ಕಿಟಿಕಿ. **F.-maid** ಹೊಗೆಯಾಡಿಸಿಟ್ಟ ಒಂದು ಜಾತಿಯ ಸಮುದ್ರದ ಮೀನು. (February Fair-maids ಮಂಜಿನ ಹನಿಗಳು). **Faírway, Fáreway** (ನಾ.) ದೋಣಿ ಹಡಗುಗಳ ಸಂಚಾರಕ್ಕೆ ಯೋಗ್ಯವಾದ ನಾಲೆ ; ಹಡಗಿನ ಕ್ರಮವಾದ ಮಾರ್ಗ. **Faírness** (ನಾ.) ; **Faírly** (ಕ್ರಿ. ವಿ.) (ಗುಣವಾಚಕದ ಅರ್ಥಗಳಲ್ಲಿ). ಸಂಪೂರ್ಣವಾಗಿ ; ಪೂರ್ತಿಯಾಗಿ ; ಪೂರಾ (F. beside himself ಸಂಪೂರ್ಣ ಪರವಶನಾಗಿ ; ತೀರ ಮೈಮರೆತು. F. good ಇದ್ದಮಟ್ಟಿಗೆ ಚೆನ್ನಾಗಿರುವ)

Fair (ಕ್ರಿ. ವಿ.) ಚೆನ್ನಾಗಿ ; ಅಂದವಾಗಿ; ಸೊಗಸಾಗಿ. (Speak one f. ಮರ್ಯಾದೆಯಿಂದ, ನಯವಾಗಿ, ಮಾತನಾಡಿಸು, ಮಾತಾಡು. F.-spoken (ಮನುಷ್ಯನ ವಿಷಯದಲ್ಲಿ) ಒಳ್ಳೆಯ ಮಾತಾಡುವ ; ವಿನಯವುಳ್ಳ ; ಮರ್ಯಾದೆ ತೋರಿಸುವ. Write out f. ಅಂದವಾಗಿ ಬರೆ ; ಅಂದ ಪ್ರತಿ ಮಾಡು ; ಶುದ್ಧ ಪ್ರತಿ ಬರೆ. Hit, fight, f. ನಿಯಮಗಳಿಗನುಸಾರವಾಗಿ, ನ್ಯಾಯವಾಗಿ, ಹೊಡೆ, ಯುದ್ಧ ಮಾಡು. Bid f. (Bid ನೋಡಿ). F. & softly ಮೆಲ್ಲಗೆ ; ಮೃದುವಾಗಿ ; ಅಷ್ಟು ಆತುರಪಡದೆ (ಮು., ತಕ್ಕಷ್ಟು ಆಧಾರವಿಲ್ಲದೆ ಸರಿಯೆಂದು ಭಾವಿಸಿಕೊಂಡು ಹೇಳುವ ಮಾತಿಗೆ ಆಕ್ಷೇಪಣೆಯಾಗಿ). Strike f. ನೆಟ್ಟಗೆ, ಸರಿಯಾಗಿ, ಹೊಡೆ. Fall f. ನೆಟ್ಟಗೆ ಬೀಳು.

Faíring. **Fair**[1] ನೋಡಿ.

Fair Isle ಫೇರ್ ಐಲ್ (ನಾ.) ಷೆಟ್ಲೆಂಡು ದ್ವೀಪ ಸಮುದಾಯದಲ್ಲಿ ಒಂದು ದ್ವೀಪ.

Faíry ಫೇರಿ (ನಾ., ಗು.) ಮಾಯಾಶಕ್ತಿಯುಳ್ಳ ಸಣ್ಣ ಅತಿಮಾನುಷ ವ್ಯಕ್ತಿ ; ಗಂಧರ್ವ ; ವನ ದೇವತೆ ; ಮೋಹಿನಿ ; ಯಕ್ಷ ; ಯಕ್ಷಿಣಿ. (ಗು.) (ನಾಮವಾಚಕಾರ್ಥಗಳಲ್ಲಿ). ಊಹೆಯ ; ಕಲ್ಪಿತ ; ಕಲ್ಪನೆಯ ; ಕೃತಕ ; ವನ ದೇವತೆಯಂಥ ; ಸುಂದರವಾಗಿಯೂ ಸೂಕ್ಷ್ಮವಾಗಿಯೂ ಇರುವ ; ಮುದ್ದಾದ ; ಅಂದವಾದ. F. lamps (ಮು. ಹೊರಗಡೆಯ ಅಲಂಕಾರಕ್ಕಾಗಿ ಉಪಯೋಗಿಸುವ) ಗಾಜಿನ ದೀಪಗಳು. **Faíryland** (ನಾ.) ಗಂಧರ್ವ ಲೋಕ ; ಮಾಯಾ ರಾಜ್ಯ. **F. ring** ಹುಲ್ಲು ಮೈದಾನದಲ್ಲಿ ವನ ದೇವತೆಗಳ, ಮೋಹಿನಿಯರ, ಕುಣಿತದಿಂದಾದುದೆಂದು ಕೆಲವರು ಊಹಿಸುವ ವರ್ತುಲಾಕಾರದ, ಹೆಚ್ಚು ದಟ್ಟವಾದ ಬಣ್ಣವುಳ್ಳ, ಹುಲ್ಲಿನ ಪ್ರದೇಶ (ಇದು ಒಂದು ತೆರದ ಶಿಲೀಂಧ್ರದಿಂದಾದುದು). **F.-tale** ಯಕ್ಷಿಣಿಯ ಕಥೆ ; ಅದ್ಭುತ ಕಥೆ ; ರಂಜನ ಕಥೆ ; ಚಿತ್ರವಿಚಿತ್ರ ವಿಷಯಗಳನ್ನೊಳಕೊಂಡ ಕಥೆ. **Faírydom** (ನಾ.) = Fairyland. **Faíryhood** (ನಾ.) —ಸ್ಥಿತಿ ; —ಸ್ವಭಾವ ; ಮಾಯಗಾರತನ. (ಸಮೂಹ ವಾಚಕ) ಗಂಧರ್ವರು ; ವನದೇವತೆಗಳು ; ಮೋಹಿನಿಯರು. **Faíryism** (ನಾ.) —ಸ್ವಭಾವ ; —ಶಕ್ತಿ ; —ಆಗಿರುವುದು ; —ಅಂತಿರುವುದು ; —ಗಳ ಅಸ್ತಿತ್ವದಲ್ಲಿ ನಂಬಿಕೆ ; —ಗಳ ವಿಷಯದ ಕಥೆಗಳು. **Faírily** (ಕ್ರಿ. ವಿ.) —ಯ ರೀತಿಯಲ್ಲಿ.

Fait accomplí (F) ಫೇಟಾಕಾನ್‌ಪ್ಲೀ (ನಾ.) ಮಾಡಿ ಮುಗಿದು ಹೋದದ್ದು ; ಚರ್ಚೆಗವಕಾಶವಿಲ್ಲದ್ದು ; ಸಿದ್ಧ ಸಂಗತಿ ; ಪ್ರತಿಯಾಗಿ ವಾದ ಮಾಡಿ ಸಾರ್ಥಕವಿಲ್ಲದ್ದು ; ಫೈಸಲಾದ ವಿಷಯ.

Faith ಫೇಯ್ತ್ (ನಾ.) ನಂಬಿಕೆ ; ನೆಚ್ಚಿಕೆ ; ವಿಶ್ವಾಸ ; ಶ್ರದ್ಧೆ ; ಭಕ್ತಿ ; ಆಸ್ಥೆ ; ನಿಷ್ಠೆ ; ಭರವಸೆ (Pin one's f. to or upon ಸಂಶಯಪಡದೆ ನಂಬು). (ದೇವ. ಶಾ.) ಮತ ತತ್ತ್ವಗಳಲ್ಲಿ ನಂಬಿಕೆ (ಮು., ಶೀಲ ಸ್ವಭಾವ, ನಡತೆ —ಇವಕ್ಕೆ ಸಂಬಂಧಪಟ್ಟಂತೆ) ; ದೈವಿಕ ತತ್ತ್ವದಲ್ಲಿ ಪ್ರಮಾಣವನ್ನಪೇಕ್ಷಿಸದೆ ಆಧ್ಯಾತ್ಮ ಗೋಚರವಾದ ತಿಳಿವಳಿಕೆ ; ದರ್ಶನ ; ದೃಷ್ಟಿ ; ಮತಶ್ರದ್ಧೆ ; ಧರ್ಮಶ್ರದ್ಧೆ [The Christian, Jewish, f. ಕ್ರೈಸ್ತ, ಯೆಹೂದ್ಯ, —ಧರ್ಮ, ಮತ. Defender of the F. (Defender ನೋಡಿ). The f. ಸತ್ಯ ಮತ]. ನಂಬ ಬೇಕಾದವು ; ನಂಬಿದವು ; ನಂಬಿದ್ದು (On the f. of ಭರವಸೆಯಮೇಲೆ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗ್ದಾನ; ಕೊಟ್ಟ ಮಾತು; ವಚನ; ಕಾರ್ಯನಿಶ್ಚಯ. Give, pledge, plight, one's f. ಮಾತು ಕೊಡು; ನಂಬಿಕೆ ಕೊಡು; ಪ್ರಮಾಣ ಮಾಡು. Keep one's f. ಮಾತು ಉಳಿಸಿಕೊ; ಕೊಟ್ಟ ಮಾತಿನಂತೆ ನಡೆ. Break, violate, one's f. ಮಾತಿಗೆ ತಪ್ಪು; ಭಾಷೆಗೆ ವಿರುದ್ಧ ವಾಗಿ ನಡೆ. Good f. ಸದ್ಭಾವ; ಪ್ರಾಮಾಣಿಕತೆ. Bad f. ಮೋಸ ಮಾಡುವ ಉದ್ದೇಶ· ದುರುದ್ದೇಶ. Punic f. ದ್ರೋಹ; ವಿಶ್ವಾಸ ಘಾತುಕತನ. **F.-cure, -healing** (ಔಷಧಾದಿಗಳನ್ನು ಉಪಯೋಗಿ ಸದೆ) ಬರಿಯ ದೈವಭಕ್ತಿಯಿಂದ, ದೇವರಲ್ಲಿ ನಂಬಿಕೆಯಿಂದ, ದೇವತಾ ಸ್ತೋತ್ರದಿಂದ, ರೋಗವನ್ನು ವಾಸಿಮಾಡುವುದು: ಭಕ್ತಿ ಚಿಕಿತ್ಸೆ; ಶ್ರದ್ಧಾ ಚಿಕಿತ್ಸೆ. **F.-curer, -healer** ಈ ರೀತಿಯಲ್ಲಿ ರೋಗ ವಾಸಿ ಮಾಡುವವನು: ಶ್ರದ್ಧಾ ಚಿಕಿತ್ಸಕ. **Faithful** (ಗು.) ಸ್ವಾಮಿನಿಷ್ಠೆ ಯುಳ್ಳ; ನಿಷ್ಠೆಯುಳ್ಳ; (ಒಬ್ಬನಿಗೆ, ತನ್ನ ಮಾತಿನಲ್ಲಿ) ದೃಢಬದ್ಧನಾ ಗಿರುವ; ಶ್ರದ್ಧಾಳು; ಅಂತಸ್ಸಾಕ್ಷಿಯಂತೆ ನಡೆಯುವ; ನಂಬಿಕೆ ಗರ್ಹನಾದ; ನಂಬಿಕೆಯ; ಮಾತಿಗೆ ತಪ್ಪದ; ಮೆಚ್ಚಿನ. (ನಡೆವಳಿ, ಅಸಲು, ಮೊ. ಕ್ಕೆ) ಯಥಾರ್ಥವಾಗಿರುವ, ಯಥಾವತ್ತಾಗಿರುವ, ಸ್ವಲ್ಪವೂ ತಪ್ಪದಿರುವ. The f. (ಬ. ವ.) ನಿಜವಾಗಿ ನಂಬುವವರು; ನಿಜವಾದ ಭಕ್ತರು (ಮು., ಮಹಮ್ಮದೀಯರು). Father of the f. ಕಲೀಫ. **Faithfulness** (ನಾ.); **Faithfully** (ಕ್ರಿ. ವಿ.) (ಗುಣವಾಚ ಕದ ಅರ್ಥಗಳಲ್ಲಿ) [Yours f. (ಕಾಗದ ಬರೆಯುವಲ್ಲಿ ಸಮಾಪ್ತಿ ವಾಕ್ಯ) ಇತಿ, ತಮ್ಮ ವಿಶ್ವಾಸಪಾತ್ರ (ಇದು ಅಷ್ಟು ಹೆಚ್ಚಾದ ಪರಸ್ಪರ ಮೈತ್ರಿಯನ್ನು ತೋರಿಸುವುದಿಲ್ಲ)]. Deal f. with (ಒಬ್ಬನಿಗೆ, ಒಂದನ್ನು) ಮನಸ್ಸಿಗೆ ತಟ್ಟುವಂತೆ ಹೇಳು. Promise f. (ಬಳ. ಮಾ.) ದೃಢವಾಗಿ ಮಾತು ಕೊಡು. **Faithless** (ಗು.) ನಂಬದ; ಅಪನಂಬಿಕೆಯ; ನಂಬಿಕೆ ಯಿಲ್ಲದ; ಶ್ರದ್ಧೆಯಿಲ್ಲದ. ವಂಚನೆಯ; ವಿಶ್ವಾಸ ಘಾತದ; ಕೊಟ್ಟ ಮಾತಿನಂತೆ ನಡೆಯದ; ಮಾತಿಗೆ ತಪ್ಪುವ; ನಂಬಿಕೆಗೆ ಅರ್ಹನಲ್ಲದ; ದ್ರೋಹಿಯಾದ. **Faithlessly** (ಕ್ರಿ. ವಿ.); **Faithlessness** (ನಾ.)

Fake[1] ಫೇಕ್ (ಕ್ರಿ. ಸಕ., ನಾ.) (ನಾವೆ) (ಹಗ್ಗವನ್ನು) ಸುತ್ತು, ಸುರುಳಿ ಮಾಡು, ಸಿಂಬೆ ಮಾಡು. (ನಾ.) (ಹಗ್ಗದ) ಸುರುಳಿಯ ಒಂದು ಸುತ್ತು.

Fake[2] ಫೇಕ್ (ಕ್ರಿ. ಸಕ., ನಾ.) (ಅಸಂ.) ನೇರವಾಗಿ ಕಾಣುವಂತೆ ಮಾಡು; ಕುಂದು ಕೊರತೆಗಳು ಕಾಣದಂತೆ ಸರಿಮಾಡು; ಹೊರ ನೋಟಕ್ಕೆ ಅಂದಮಾಡು; ಕ್ಷುಲ್ಲಕ ಪದಾರ್ಥದಿಂದ ತಯಾರಿಸು; ಥಳುಕು ಮಾಡು; ಕಲ್ಪಿಸು; ತಯಾರಿಸು; ಸೃಷ್ಟನೆ ಮಾಡು. (ನಾ.) ಹೊರ ನೋಟಕ್ಕೆ ಸರಿಯಾಗಿ ಕಾಣುವಂತೆ ಮಾಡಿದ ಕೆಲಸ; ಹೀಗೆ ತಯಾರಿಸಿದ ವಸ್ತು. ತಂತ್ರ; ಮೋಸ; ಹೂಟ; ಆಧಾರವಿಲ್ಲದೆ ಕಲ್ಪಿಸಿದ ವರದಿ; ಕಲ್ಪನೆಯ, ಸೃಷ್ಟನೆಯ, ವರದಿ. ಕಲ್ಪನೆ; ಸೃಷ್ಟನೆ. **Fákement** (ನಾ.)

Fakír ಫಕಿಯರ್, ಫೇಕಿಯರ್, ಫಕೀರ್ (ನಾ.) ಮಹಮ್ಮದೀಯ (ಅಥವಾ ಹಿಂದೂ) ವೈರಾಗಿ, ಭಿಕ್ಷು, ಭಕ್ತ; ಫಕೀರ.

Fálcate ಫ್ಯಾಲ್ಕೇಟ್ (ಗು.) (ಅಂ. ರ. ಶಾ., ಸ. ವಿ., ಪ್ರಾ. ವಿ.) ಕೊಕ್ಕುಳ್ಳ; ಕುಡುಗೋಲಿನಾಕಾರದ. **Fálcated** (ಗು.) (ಖ. ವಿ.) (ಚಂದ್ರ, ಮೊ. ಗಳ ವಿಷಯದಲ್ಲಿ) ಕುಡುಗೋಲಿನ ಆಕಾರದ.

Fálchion ಫಾರ್ಷ(ಷ,ಷ್)ನ್ (ನಾ.) ಅಗಲವಾಗಿಯೂ ಕೊಂಕಿ ದ್ದಾಗಿಯೂ ಹೊರ ಉಬ್ಬಿನ ಬಾಯುಳ್ಳದ್ದಾಗಿಯೂ ಇರುವ ಕತ್ತಿ; ಹೊರಬಾಯಿ ಕತ್ತಿ.

Fálciform ಫ್ಯಾಲ್ಸಿಫಾರ್ಮ್ (ಗು.) (ಅಂ. ರ. ಶಾ.) ಕುಡುಗೋಲಿನ ಆಕಾರದ.

Fálcon ಫಾಲ್ಕ(ರ್ಕ)ನ್, ಫಾಕ್(ಕ)ನ್ (ನಾ.) ಹಗಲು ಸಂಚಾರದ ಒಂದು ಹಿಂಸ್ರ ಪಕ್ಷಿ; ಡೇಗೆ; ಗಿಡುಗ; ಶ್ಯೇನ (ಮು., ಪಕ್ಷಿಗಳ ಬೇಟೆ ಗಾಗಿ ಪಳಗಿಸಿದ್ದು; ಈ ಸಂದರ್ಭದಲ್ಲಿ ಹೆಣ್ಣುಹಕ್ಕಿಗೆ ಮಾತ್ರ ಈ ಹೆಸರು). **Fálconry** ಫಾಕನ್ರಿ (ನಾ.) ಡೇಗೆಗಳನ್ನು ಸಾಕಿ ಬೇಟೆಯಾಡುವುದಕ್ಕೆ ಪಳಗಿಸುವ ವಿದ್ಯೆ: ಶ್ಯೇನ ಶಿಕ್ಷಣ; ಡೇಗೆ ಸಾಕಣೆ. **Fálconer** ಫಾಕ (ಕ್)ನರ್ (ನಾ.) ಡೇಗೆಗಳನ್ನು ಸಾಕಿ ಪಳಗಿಸುವವನು: ಶ್ಯೇನ ಶಿಕ್ಷಕ. ಡೇಗೆಗಳ ಸಹಾಯದಿಂದ ಬೇಟೆಯಾಡುವವನು; ಡೇಗೆಗಾರ.

Fálconet ಫಾಕೊನೆಟ್ (ನಾ.) (ಚರಿತ್ರೆ) ಹಗುರವಾದ ಫಿರಂಗಿ; ಲಘು ಫಿರಂಗಿ. 'ಪ್ರೈಕ್' ವಂಶದ ಒಂದು ಬಗೆಯ ಹಕ್ಕಿ.

Fáldstool ಫಾಲ್ಡ್‌ಸ್ಟೂಲ್ (ನಾ.) ಬಿಷಪ್ಪಿನ ತೋಳಿಲ್ಲದ ಕುರ್ಚಿ; ಮೊಳಕಾಲೂರಿ ನಮಸ್ಕಾರ ಮಾಡುವುದಕ್ಕೆ ಉಪಯೋಗಿಸುವ ಇಳಿ ಮೇಜು; 'ಲಟನಿ' ಎಂಬ ಪ್ರಾರ್ಥನೆಯನ್ನು ಹೇಳುವಾಗ ಉಪ ಯೋಗಿಸುವ ಇಳಿಮೇಜು: ಪ್ರಾರ್ಥನೆಯ ಮೇಜು.

Fall ಫಾಲ್ (ಕ್ರಿ. ಅಕ.; ಭೂತ. fell, ಭೂ. ಕೃ. fallen) (ಮೇಲಿನಿಂದ) ಬೀಳು; ಕೆಡೆ (Falling star ಉಲ್ಕೆ; ಉಲ್ಕಾಪಾತ; ಬೀಳು ಚುಕ್ಕಿ); ಉದಿರು (The remark fell from him ಅವನ ಬಾಯಿಂದ ಈ ಮಾತು ಹೊರಬಿದ್ದಿತು. Lambs f. ಕುರಿಮರಿಗಳು ಹುಟ್ಟುತ್ತವೆ, ಭೂಪತನ ವಾಗುತ್ತವೆ). ಕೆಳಕ್ಕುರುಳು; ಪತನವಾಗು; ಅವನತಿ ಹೊಂದು; ಉನ್ನತ ಸ್ಥಾನವನ್ನು ಕಳೆದುಕೊ [Statesmen f. ರಾಜ್ಯತಂತ್ರಜ್ಞರು ಪತನವಾಗುತ್ತಾರೆ. Fallen angel (ಸ್ವರ್ಗದಿಂದ) ಕೆಳಕ್ಕೆ ಬಿದ್ದ ದೇವ ದೂತ; ಸ್ವರ್ಗದಿಂದ ತಳ್ಳಿಬಿಟ್ಟ ದೇವದೂತರಲ್ಲೊಬ್ಬನು: ಪತಿತ ದೇವ ದೂತ]. ಎರಗು; ಮೇಲೆ ಬೀಳು (Vengeance fell ಪ್ರತೀಕಾರ ಮೇಲೆರಗಿತು). ಕಳಚಿ ಬೇರ್ಪಡು; ಜೋಲುಬೀಳು; ತಗ್ಗು ಮಟ್ಟಕ್ಕೆ ಇಳಿ (Barometer falls (ವಾಯು) ಭಾರಮಾಪಕದ ಮಟ್ಟವು ಕೆಳಕ್ಕಿಳಿಯು ತ್ತದೆ. Prices f. ಬೆಲೆ ಇಳಿಯುತ್ತದೆ; ಧಾರಣೆ ತಗ್ಗುತ್ತದೆ). (ನೆಲ) ಕೆಳಗಿಳಿ, ಇಳಿಜಾರಾಗು. (ನದಿ, ಮೊ. ವು ಸಮುದ್ರ, ಮೊ. ಕ್ಕೆ) ಸುರಿ, ಹರಿ. ಇಳಿ; ತಗ್ಗು; ಕಡಮೆಯಾಗು. ನಿರುತ್ಸಾಹಗೊಳ್ಳು; ಕಂಗೆಡು [Faces f. ಮುಖಗಳು ತಗ್ಗುತ್ತವೆ, ಜೋಲುಬೀಳುತ್ತವೆ. Eyes f. ದೃಷ್ಟಿ ತಗ್ಗುತ್ತದೆ. Falling sickness (ಪ್ರಾಚೀ. ಪ್ರ.) ಬೀಳುಜಾಡ್ಯ; ಅಪಸ್ಮಾರ; ಮಲರೋಗ; ಮೂರ್ಛೆರೋಗ]. ಆಗು; ಬರು; ಸಂಭವಿಸು. ಪಾಪ ಮಾಡು; ಪತಿತನಾಗು; ಪರಾಭವ ಹೊಂದು; ಸಾಯಿ (F. prostrate, flat ದಂಡವತ್ತಾಗಿ, ನೆಲಸಮನಾಗಿ, ಬೀಳು; ಅಡ್ಡಬೀಳು. Plans f. to the ground ಏರ್ಪಾಟುಗಳು, ಸಂಕಲ್ಪಗಳು, ಬಿದ್ದು ಹೋಗುತ್ತವೆ, ಮುರಿದುಬೀಳುತ್ತವೆ, ವ್ಯರ್ಥವಾಗುತ್ತವೆ, ಫಲಿಸದೆಹೋಗು ತ್ತವೆ. Accent falls on the first syllable ಸ್ವರಭಾರವು ಮೊದಲನೆಯ ಅಕ್ಷರದಮೇಲೆ ಬೀಳುತ್ತದೆ. Cost falls to you ಖರ್ಚು ನಿನ್ನ ಮೇಲೆ ಬೀಳುತ್ತದೆ. Easter falls early ಈಸ್ಟರ್ ಹಬ್ಬವು (ಹಿಂದಿಗಿಂತಲೂ) ಮೊದಲೇ ಬರುತ್ತದೆ. F. asunder ಬೇರೆ ಬೇರೆಯಾಗಿ ಬೀಳು. . F. a prey or sacrifice to ಬಲಿ ಬೀಳು; ಬಲಿಯಾಗು F. due ಬಾಕಿ ಬೀಳು. F. dumb ಮೂಕನಾಗು. F. in love ಪ್ರೇಮ ಪಡು, ಮಾಡು; ಮೋಹಿಸು; ಅನುರಕ್ತನಾಗು. Fallen on evil times ದುರ್ದಶೆಗೆ, ಕೇಡುಗಾಲಕ್ಕೆ, ಸಿಕ್ಕಿದ; ಕಷ್ಟಕಾಲವೊದಗಿದ. F. into a rage ರೇಗಿ ಬೀಳು; ಉರಿದು ಬೀಳು. F. into error ತಪ್ಪಿಗೆ ಬೀಳು; ತಪ್ಪು ಮಾಡು; ಪಾತಕಕ್ಕಿಳಿ. F. in two ಎರಡಾಗಿ ಒಡೆ; ಇಬ್ಭಾಗವಾಗು. F. on one's sword ತನ್ನ ಕತ್ತಿಯಮೇಲೆ ಬಿದ್ದು ಆತ್ಮಹತ್ಯ ಮಾಡಿಕೊ. F. to pieces ಚೂರುಚೂರಾಗು. Fell amongst thieves ಕಳ್ಳರಿಗೆ ಸಿಕ್ಕಿಬಿದ್ದನು. Fell upon a corrupt age ನೀತಿಗೆಟ್ಟ ಕಾಲಕ್ಕೆ ಸಿಕ್ಕಿದನು. (Seven lions) fell to his rifle (ಏಳು ಸಿಂಹಗಳು) ಅವನ ಕೋವಿಗೆ ಬಿದ್ದುವು. Fortress falls ಕೋಟೆ (ಶತ್ರುಗಳ) ಕೈವಶವಾಗುತ್ತದೆ. His eye fell upon me ಅವನ ಕಣ್ಣು ನನ್ನ ಮೇಲೆ ಬಿದ್ದಿತು. Houses f. ಮನೆಗಳು ಉರುಳಿ ಬೀಳುತ್ತವೆ. It fell in my way ಅದು ನನ್ನ ಮಾರ್ಗದಲ್ಲಿ ಇದ್ದಿತು; ಅದು ನನಗೆ ದೊರೆಯಿತು. It fell to my lot ಅದು ನನ್ನ ಪಾಲಿಗೆ ಬಂದಿತು. Many fell (ಯುದ್ಧದಲ್ಲಿ) ಅನೇಕ ಮಂದಿ ಬಿದ್ದು ಹೋದರು, ಉರುಳಿಹೋದರು, ಮಡಿದರು. Revenues f. to the Crown ವರಮಾನಗಳು ಸರ್ಕಾರಕ್ಕೆ ಹೋಗುತ್ತವೆ, ಸರ್ಕಾರಕ್ಕೆ ಹಿಮ್ಮ ರಳುತ್ತವೆ. Subject falls into three divisions ವಿಷಯವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೂರು ಭಾಗಗಳಾಗಿ ವಿಂಗಡವಾಗುತ್ತದೆ. What now falls to be described ಈಗ ವರ್ಣಿಸಬೇಕಾಗಿರುವದು. Wicket falls ಗುರಿಕೋಲು ಬೀಳುತ್ತದೆ ; ದಾಂಡುಗಾರನ ಆಟ ಹೋಯಿತು. Woman falls ಹೆಂಗಸು ಪತಿತಳಾಗುತ್ತಾಳೆ, ಪಾತಿವ್ರತ್ಯ ಕಳೆದುಕೊಳ್ಳುತ್ತಾಳೆ.

ಉಪ. ಗಳೊಡನೆ :

F. behind ಹಿಂದೆ ಬೀಳು. F. for (ಅಮೆ. ಸಂ., ಅಸಂ.) ಮೋಹಿತನಾಗು; ಮುಗ್ಧನಾಗು; ಮರುಳಾಗು ; ಮಾರುಪೋಗು (ಗ್ರಾಂ.) ; ಮೆಚ್ಚು. F. into line ಸಾಲನಲ್ಲಿ ತನ್ನ ಸ್ಥಾನವನ್ನು ಸೇರಿಕೊ ; ಇತರರೊಡನೆ ಸೇರಿಕೊ ; ಪಂಕ್ತಿಗೂಡು ; ಸಾಲುಗೂಡು. F. into conversation with —ಒಡನೆ ಮಾತಿಗೆ ಆರಂಭಿಸು. F. into habit ಪದ್ಧತಿಗೆ, ಅಭ್ಯಾಸಕ್ಕೆ, ಬೀಳು. F. to ತೊಡಗು ; ಆರಂಭಿಸು. F. to work ಕಾರ್ಯಾರಂಭ ಮಾಡು. F. under —ಲ್ಲಿ ವರ್ಗೀಕೃತವಾಗು. ಆ ವಿಭಾಗದಲ್ಲಿ ಸೇರು. ವೀಕ್ಷಣೆ, ಮೊ. ಕ್ಕೆ ಒಳಗಾಗು, ಒಳಪಡು. F. (up)on ಮೇಲೆ ಬೀಳು ; (ಅಕಸ್ಮಾತ್) ಸಂಧಿಸು. F. (up)on one's feet or legs ಕಷ್ಟದಿಂದ ತೀರ ಪಾರಾಗು. F. within —ಲ್ಲಿ ಸೇರು ; ಅಂತರ್ಗತವಾಗು.

ಕ್ರಿ. ವಿ. ಗಳೊಡನೆ :

F. astern (ಹಡಗಿನ ವಿಷಯದಲ್ಲಿ) ಹಿಂದೆ ಬೀಳು. F. away ಬಿಟ್ಟುಹೋಗು ; ತಿರುಗಿ ಬೀಳು ; ದಂಗೆಯೇಳು ; ಸ್ವಧರ್ಮವನ್ನು ತ್ಯಜಿಸು. ಶಿಥಿಲವಾಗು ; ಮುರಿದು ಬೀಳು ; ನಾಶವಾಗು ; ಹಾಳಾಗು ; ಕಾಣದೆ ಹೋಗು ; ಅದೃಶ್ಯವಾಗು. F. back ಹಿಂದೆ ಬೀಳು ; ಹಿಮ್ಮೆಟ್ಟು ; ಕಾಲ್ದೆಗೆ. F. back upon ಉಳಿಸಿಟ್ಟದ್ದನ್ನೇ ಉಪಯೋಗಿಸು ; ಹಿಡಿ ; ಅವಲಂಬಿಸು ; ಆಶ್ರಯಿಸು. F. behind ಹಿಂದೆ ಬೀಳು. F. foul of ಸಂಘಟಿಸು ; ತಾಗು ; ಜಗಳ ಮಾಡು ; ಆಕ್ರಮಣ ಮಾಡು ; ಮೇಲೆ ಬೀಳು. F. in (ಸ್ಯೆನ್ಯ) ಸಾಲನಲ್ಲಿ ನಿಲ್ಲು, ನಿಲ್ಲಿಸು. (ಕಟ್ಟಡ, ಮೊ. ಗಳ ವಿಷಯದಲ್ಲಿ) ಕುಸಿದುಬೀಳು ; ಒಳಕ್ಕೆ ಕುಸಿ. (ಸಾಲ, ಮೊ. ಗಳ ವಿಷಯದಲ್ಲಿ) ಅವಧಿ ಮುಗಿ, ತೀರಿಸಬೇಕಾಗಿ ಬರು. (ಜಮೀನು, ಮೊ. ಗಳ ವಿಷಯದಲ್ಲಿ) ದೊರೆಯುವಂತಿರು, ಸಿಕ್ಕು. (ಗುತ್ತಿಗೆಯ, ಆಧಾರದ ವಾಯಿದೆ ಮುಗಿದುಹೋಗು. F. in with ಅಕಸ್ಮಾತ್ತಾಗಿ ಸಂಧಿಸು, ಭೇಟಿಯಾಗು. (ಅಭಿಪ್ರಾಯಗಳಿಗೆ) ಒಪ್ಪು, ಸಮ್ಮತಿಸು. (ಒಬ್ಬನೊಡನೆ) ಒಮ್ಮತವುಳ್ಳವನಾಗು ; ಸರಿಹೊಂದು ; ಸರಿಬೀಳು ; ತಾಳೆಬೀಳು. F. off ಹಿಂದಕ್ಕೆ ಹೋಗು ; —ಬರು ; ಹಿಂಜರಿ. ಕಡಮೆಯಾಗು ; ಅವನತಿ ಹೊಂದು [Falling off (ನಾ.) ಕಡಮೆಯಾಗಿ ಹೋಗುವುದು ; ಅವನತಿ ಹೊಂದುವುದು, ಅವನತಿ ; ಪತನ ; ಬೀಳು]. (ಹಡಗಿನ ವಿಷಯದಲ್ಲಿ) ಗಾಳಿಗೆದುರಾಗಿ ನಿಲ್ಲದೆಹೋಗು. (ಪ್ರಜೆಗಳ ವಿಷಯದಲ್ಲಿ) ದಂಗೆಯೇಳು. ಅಗಲಹೋಗು ; ಬಿಟ್ಟುಹೋಗು ; ಕೈಬಿಡು ; ತೊರೆ. F. on ಕಾಳಗಕ್ಕೆ ತೊಡಗು. ಊಟಕ್ಕೆ ಮೊದಲುಮಾಡು. F. out ಜಗಳವಾಡು ; ಕಲಹ ಮಾಡು. ಆಗು ; ಸಂಭವಿಸು ; ಪರಿಣಾಮವಾಗು. (ಸ್ಯೆನ್ಯ) ಸಾಲು ಬಿಟ್ಟು ಹೋಗು. F. out of (ಅಭ್ಯಾಸ, ಚಾಳಿ, ಮೊ. ನ್ನು) ಬಿಟ್ಟುಬಿಡು, ತ್ಯಜಿಸು. F. short ಸಾಲದೆಹೋಗು. (ಕ್ಷಿಪಣಿಯ ವಿಷಯದಲ್ಲಿ) ತಕ್ಕಷ್ಟು ದೂರ ಹೋಗದಿರು. F. short of ಪಡೆಯದೆಹೋಗು ; ಹೊಂದದಿರು ; ಸಾಲದಿರು ; ಗುರಿ ಮುಟ್ಟದಿರು. F. through ತಪ್ಪಿ ಹೋಗು ; ವ್ಯರ್ಥವಾಗು ; ಭಂಗವಾಗು ; ಆಗದಿರು. F. to ಊಟಕ್ಕೆ ಮೊದಲುಮಾಡು ; ಯುದ್ಧವನ್ನು ಆರಂಭಿಸು.

Fall (ನಾ.) ಬೀಳುವುದು ; ಬೀಳು ; ಬೀಳಿಕೆ ; ಪತನ ; ಬಿದ್ದ ಮಳೆ, ಮೊ. ಗಳ ಮೊತ್ತ. (ಮು., ಅಮೆ. ಸಂ.) ಮಾಗಿ ಕಾಲ ; ಎಲೆ ಉದುರುವ ಕಾಲ (F. of the year or leaf). ಹುಟ್ಟಿದ ಕುರಿ ಮರಿಗಳ ಸಂಖ್ಯೆ ; (ಅನೇಕ ಬಾರಿ ಬ. ವ. ದಲ್ಲಿ) ಜಲಪಾತ ; ನೀರು ಬೀಳು. ಕೆಳಗಡೆಗೆ ಪ್ರವಣತೆ ; ಇಳಿವು ; ಪಾತ ; ಇಳಿವಿನ ಮೊತ್ತ. ಕುಸ್ತಿಯ ವರಿಸೆ, ಪಟ್ಟು ; —ಪಟ್ಟಿನಲ್ಲಿ ಬೀಳುವುದು [Try a f. ಕುಸ್ತಿ ಮಾಡು (ರೂಪ. ಸಹ) ; ಹೋರಾಡು]. ಭಾರವೆತ್ತುವ ಸಾಧನದ ಹಗ್ಗ ; ಕಪ್ಪಿಯ ಹಗ್ಗ. ಕತ್ತರಿಸಿಹಾಕಿದ ನಾಟಾಗಳ ಮೊತ್ತ. ವಿಲೋಭನಕ್ಕೆ ಒಳಗಾಗುವುದು ; ಮೋಸದ ಸೆಳೆತಕ್ಕೆ ಬೀಳುವುದು (The F. of man ಆದಮನ ಪಾತಕ ಮತ್ತು ಅದರ ಫಲ ; ಮನುಷ್ಯನ ಪತನ). ಹೆಂಗಸಿನ ಒಂದು ತೆರದ ಮುಖಾವರಣ ; ಮುಖ ಪರದೆ ; ಬುರಕಿ.

Fállacy ಫ್ಯಾಲಸಿ (ನಾ.) ತಪ್ಪು ಅಭಿಪ್ರಾಯ ಕೊಡುವ ವಾದ ; ಹೊರಕ್ಕೆ ಸರಿಯಾಗಿರುವಂತೆ ತೋರುವ, ನಿಜವಾಗಿ ಸರಿಯಲ್ಲದ, ವಾದ. (ತರ್ಕ) ಒಂದು ನ್ಯಾಯವನ್ನು ಅಪ್ರಮಾಣ ಮಾಡುವ ದೋಷ ; ಹೇತ್ವಾಭಾಸ ; ತರ್ಕ ದೋಷ. ಭ್ರಮೆ ; ಭ್ರಾಂತಿ ; ತಪ್ಪು (Pathetic f. ಪ್ರಕೃತಿಗೆ ಮನುಷ್ಯಭಾವಗಳನ್ನು ಆರೋಪಿಸುವುದು). **Fallácious** ಫಲೇಷಸ್ (ಗು.) ; **Falláciously** (ಕ್ರಿ. ವಿ.) ; **Falláciousness** (ನಾ.)

Fallál ಫ್ಯಾಲ್‌ಲ್ಯಾಲ್ (ನಾ.) ಅಂದದ ಸಾಮಾನು ; ಥಳುಕಿನ ವಸ್ತು ; ಸಣ್ಣ ಅಲಂಕಾರ (ಮು., ಉಡುಪಿನಲ್ಲಿ). ಕೃತಕ ವರ್ತನೆ. **Fallállery** (ನಾ.) (ತುಚ್ಛೀಕರಣಕ್ಕಾಗಿ ದ್ವಿರುಕ್ತಿ)

Fállible ಫ್ಯಾಲಿಬ್‌ಲ್ (ಗು.) ತಪ್ಪಬಹುದಾದ ; ತಪ್ಪಿರಬಹುದಾದ ; ತಪ್ಪುಮಾಡುವ ; ಮೋಸಹೋಗಬಹುದಾದ ; ನೆಚ್ಚಲಾಗದ ; ವಿಶ್ವಾಸಾರ್ಹವಲ್ಲದ. **Fallibílity** (ನಾ.)

Fallópian ಫಲೋಪಿಯನ್ (ಗು.) ಇಟಲಿಯ ಶರೀರಶಾಸ್ತ್ರಜ್ಞನಾದ ಫ್ಯಾಲೋಪಿಯಸ್ಸಿನ. F. tubes (ಮನುಷ್ಯನಲ್ಲಿ) ಅಂಡ ನಾಳಗಳು, ಅಂಡವಾಹಿ ನಾಳಗಳು.

Fállow[1] ಫ್ಯಾಲೋ (ನಾ., ಗು., ಕ್ರಿ. ಸಕ.) ಉತ್ತು ಹರತೆಹೊಡೆದು ಒಂದು ವರ್ಷ ಬೆಳೆಯಿಡದೆ ಬಿಟ್ಟ, ಬೀಳುಬಿದ್ದ (ಜಮೀನು). ಸಾಗುವಳಿಯಿಲ್ಲದ (ಜಮೀನು). (ಕ್ರಿ.) (ಬೀಜ) ಬಿತ್ತುವುದಕ್ಕೆ ಅಥವಾ ಕಳೆ ತೆಗೆಯುವುದಕ್ಕೆ ಭೂಮಿಯನ್ನು ಉಳು, ಉತ್ತು ಪಾಳುಬಿಡು.

Fállow[2] ಫ್ಯಾಲೋ (ಗು.) ನಸುಗಂದು ಅಥವಾ ಕೆಂಪು ಛಾಯೆಯ ಹಳದಿ ಬಣ್ಣದ (ಈಗ f.-deer ಎಂಬಲ್ಲಿ ಮಾತ್ರ)

False ಫ್ಲಾರ್ಸ್ (ಗು., ಕ್ರಿ. ವಿ.) ತಪ್ಪಾದ ; ಸರಿಯಲ್ಲದ ; ಅಬದ್ಧ [F. concord (ವ್ಯಾ.) ತಪ್ಪು ಹೊಂದಿಕೆ ; ಅಸಂಬದ್ಧತೆ (ಉದಾ., For you and I. Who did you see ?). F. drawing ತಪ್ಪು ನಕ್ಷೆ; —ರೇಖನ. F. idea, verdict ತಪ್ಪು ಅಭಿಪ್ರಾಯ ; —ತೀರ್ಪು. F. imprisonment ನ್ಯಾಯವಿರುದ್ಧವಾದ ಸೆರೆ ; ಅಕ್ರಮ ಬಂಧನ. F. note (ಸಂ.) ಅಪಸ್ವರ ; ತಪ್ಪು ಸ್ವರ. F. position ತನ್ನ ತತ್ತ್ವಕ್ಕೆ ವಿರುದ್ಧವಾಗಿ ನಡೆಯುವಂತೆ ಮಾಡುವ ಸನ್ನಿವೇಶ. F. pretences ಮೋಸದ ಉದ್ದೇಶದಿಂದ ಮಾಡಿದ ತಪ್ಪು ನಿರೂಪಣೆ, —ಪ್ರತಿಪಾದನೆ ; ಅಪ ನಿರೂಪಣೆ. F. pride, shame ತಪ್ಪುಭಾವನೆಯಿಂದುಂಟಾದ ಅಹಂಕಾರ, ನಾಚಿಕೆ. F. quantity ಪದ್ಯದಲ್ಲಿ ಅಥವಾ ಉಚ್ಚಾರಣೆಯಲ್ಲಿ ಮಾತ್ರೆಗಳ ಹೆಚ್ಚುಕಡಮೆ ; ಮಾತ್ರಾ ದೋಷ. F. start ಓಟದ ಜೂಜಿನಲ್ಲಿ ತಪ್ಪು ಆರಂಭ. F. step ತಪ್ಪು ಹೆಜ್ಜೆ ; ತಪ್ಪು ಅಡಿ ; ತಪ್ಪು ನಡೆ ; ಮುಗ್ಗರಿಕೆ ; ಎಡವು ; ಅತಿಕ್ರಮಣ ; ಅವಿವೇಕ. F. weights ತಪ್ಪು ತೂಕದ ಬಟ್ಟುಗಳು]. ಸುಳ್ಳಾದ ; ಸುಳ್ಳು ಹೇಳುವ ; ಹುಸಿಯ ; ಅಬದ್ಧ ; ಅಸತ್ಯ ; ಅನೃತ ; ಮೋಸದ ; ಮೋಸಕರ ವಾದ ; ವಿಶ್ವಾಸ ಘಾತುಕ ; ನಿಷ್ಠೆಯಿಲ್ಲದ (F. mirror ನಿಜಸ್ಥಿತಿ ತೋರಿಸದ ಕನ್ನಡಿ ; ತಪ್ಪುಗನ್ನಡಿ ; ಆಧಾನ ಕನ್ನಡಿ). ಕೃತಕ ; ಕಲ್ಪಿತ ; ಕೃತ್ರಿಮದ ; ಠಕ್ಕಿನ ; ಖೋಟಾ [F. coin ಖೋಟಾ ನಾಣ್ಯ. F. colours (ಉಪಯೋಗಿಸಲು) ಅಧಿಕಾರವಿಲ್ಲದ ಬಾವುಟ ; ಮೋಸದ ಬಾವುಟ (colour ನೋಡಿ). F. god ಮಿಥ್ಯಾದೈವ. F. hair, teeth ಹುಸಿಗೂದಲು ; ಕಟ್ಟಿಸಿದ ಹಲ್ಲು. F. prophet ತಪ್ಪು ಭವಿಷ್ಯ ಹೇಳುವವನು ; ಸುಳ್ಳು ಪ್ರವಾದಿ]. ತಪ್ಪುಹೆಸರಿನ ; ತೋರ್ಕೆಯ ; ಆಧಾನ (F. bottom ಹುಸಿ ತಳ). (ಕ್ರಿ. ವಿ.) Play person f. ಮೋಸ ಮಾಡು ; ದ್ರೋಹ ಮಾಡು ; ವಂಚಿಸು. **Fálsehood** ಸುಳ್ಳು ; ಸಟೆ ; ಮೋಸ ; ಅಸತ್ಯ ; ಅನೃತ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುಳ್ಳು ಹೇಳುವುದು. **Fálsely** (ಕ್ರಿ. ವಿ.) ; **Fálseness** (ನಾ.) ; **Fálsify** (ಕ್ರಿ. ಸಕ.) (ದಸ್ತಾವೇಜನ್ನು) ಮೋಸದಿಂದ ತಿದ್ದು, ಬದಲಾಯಿಸು, ವ್ಯತ್ಯಾಸ ಮಾಡು ; ತಪ್ಪಾಗಿ ನಿರೂಪಣೆ ಮಾಡು. (ಪ್ರತೀಕ್ಷೆ, ಭಯ, ಮೊ. ನ್ನು) ಭಂಗ ಮಾಡು, ಹುಸಿ ಮಾಡು, ಸುಳ್ಳು ಮಾಡು. (ನ್ಯಾ. ಶಾ.) ಸುಳ್ಳೆಂದು ಸಾಧಿಸು, ದೃಢಪಡಿಸು. **Falsificátion** (ನಾ.) ; **Fálsity** (ನಾ.) ತಪ್ಪು ಸ್ಥಿತಿ, ಗುಣ, ನಡತೆ ; ನಿಜಸ್ಥಿತಿಗೆ, ಸತ್ಯಕ್ಕೆ, ದೂರವಾದದ್ದು, ವಿರುದ್ಧವಾದದ್ದು ; ಸುಳ್ಳು ; ಅಸತ್ಯ ; ಮೋಸ ; ಕಪಟ ; ಕೃತ್ರಿಮ.

Falsétto ಫಾಲ್ಸೆಟೊ (ನಾ.) (ತನ್ನ ಸ್ವಾಭಾವಿಕ ದನಿಯ ಮಿತಿಗೆ ಮೀರಿದ, ಬಲವಂತದಿಂದ ಹೊರಡಿಸಿದ) ಕೀಚಲು, ಕೀರಲು, ಕರ್ಕಶ,—ಧ್ವನಿ [In f. ; A f. tone (ಅನೇಕ ವೇಳೆ) ಹುಸಿಕೋಪ ತೋರಿಸುವ ಕೀಚಲು ದನಿ]

Fálter ಫಾಲ್ಟರ್ (ಕ್ರಿ.) ಎಡವು ; ತಪ್ಪಡಿಯಿಡು ; ತಪ್ಪು ಹೆಜ್ಜೆಯಿಡು ; ತತ್ತರಿಸು ; ತಡವರಿಸು ; ತೂಗಾಡುತ್ತ ನಡೆ ; ತಡವರಿಸುತ್ತ ಮಾತನಾಡು ; ತೊದಲು (F. out ತೊದಲುತ್ತ, ತಡವರಿಸಿ, ಹೇಳಿಬಿಡು) ; ಹಿಂದು ಮುಂದು ನೋಡು ; ಅನುಮಾನಿಸು ; ಧೈರ್ಯಗುಂದು ; ಹಿಂಜರಿ. **Fálteringly** (ಕ್ರಿ. ವಿ.)

Fámble ಫ್ಯಾಂಬ್ಲ್ (ನಾ., ಕ್ರಿ. ಅಕ) (ಅಸಂ.) ಕೈ. (ಕ್ರಿ.) ಬಿಕ್ಕು ; ಉಗ್ಗು (ಈಗ ಪ್ರಾಂ. ಪ್ರ.). (ಪ್ರಾಂ. ಪ್ರ.) ಹಸಿವಿಲ್ಲದೆ ಊಟಮಾಡು, ತಿನ್ನು.

Fame ಫೇಮ್ (ನಾ., ಕ್ರಿ. ಸಕ.) ಜನ ಪ್ರವಾದ; ಜನ ವಾರ್ತೆ; ವದಂತಿ ; ಗಾಳಿಮಾತು ; ಪಡೆಮಾತು (ಗ್ರಾಂ.) ; ಕೀರ್ತಿ ; ಖ್ಯಾತಿ ; ಪ್ರಸಿದ್ಧಿ ; ಹೆಸರು(ವಾಸಿ) ; ನೆಗಳ್ತೆ (ಗ್ರಾಂ.) (House of ill f. ವ್ಯಭಿಚಾರದ ಮನೆ). (ಕ್ರಿ., ಕರ್ಮಣಿ) — ಎಂದು ಪ್ರಸಿದ್ಧಿಹೊಂದಿರು, ಹೇಳಲ್ಪಡು, ಪ್ರಖ್ಯಾತವಾಗಿರು. (ಭೂ. ಕೃ.) (ಶೌರ್ಯ, ಪರಾಕ್ರಮ, ಮೊ. ಕ್ಕೆ) ಪ್ರಸಿದ್ಧ, ಪ್ರಖ್ಯಾತ, ಹೆಸರುಗೊಂಡ. **Fámous** (ಗು.) (ಗುಣ, ಮೊ. ಕ್ಕೆ) ಹೆಸರುಗೊಂಡ, ಹೆಸರುವಾಸಿಯಾದ, ಪ್ರಸಿದ್ಧಿ ಪಡೆದ ; ಕೀರ್ತಿವಂತ ; ಪ್ರಖ್ಯಾತ. (ಬಳ. ಮಾ.) ಅತ್ಯುತ್ತಮ ; ಶ್ರೇಷ್ಠ. **Fámously** (ಕ್ರಿ. ವಿ.)

Famíliar ಫಮಿಲಿಯರ್, —ಲ್ಯರ್ (ಗು., ನಾ.) (ಪ್ರಾಚೀ. ಪ್ರ.) ತನ್ನ ಕುಟುಂಬಕ್ಕೆ ಸೇರಿದ ; ತನ್ನ ಮನೆಯ ; ಬಹು ಬಳಕೆಯ ; ಸಲಿಗೆಯ ; ಆಪ್ತ (ಸ್ನೇಹವುಳ್ಳ) (F. or F. spirit ಮಾಟಗಾತಿ, ಮಂತ್ರವಾದಿ, ಮೊ. ರ, ಅಧೀನದಲ್ಲಿರುವ, ಆಜ್ಞೆಯಂತೆ ನಡೆಯುವ, — ಭೂತ : ಆಪ್ತ ಭೂತ). (ಯಾವುದಾದರೂ ವಿಷಯದಲ್ಲಿ) ಹತ್ತಿರ ಪರಿಚಯವಿರುವ, ಪರಿಶ್ರಮವುಳ್ಳ ; ಪಳಗಿದ ; ಚೆನ್ನಾಗಿ ತಿಳಿದಿರುವ ; ಹೊಸತಲ್ಲದ ; ಸಾಧಾರಣ ; ಸಾಮಾನ್ಯ ; ಬಳಕೆಯ ; ರೂಢಿಯ ; ವಾಡಿಕೆಯ ; ಅನಿರ್ಬಂಧ. ಪ್ರೇಮಾಸಕ್ತ ; ಪ್ರಣಯ ಸಂಬಂಧವುಳ್ಳ. (ನಾ.) (ರೋ. ಕ್ಯಾ. ಧರ್ಮ) ಪೋಪ್ ಗುರುವಿನ ಅಥವಾ ಬಿಷಪ್ಪಿನ ಗೃಹಕೃತ್ಯದಲ್ಲಿ ಸಹಾಯಕ. ಆಪ್ತ ಸ್ನೇಹಿತ. ವಶವರ್ತಿಯಾದ ಭೂತ, ಬೇತಾಳ. **Famíliarly** (ಕ್ರಿ. ವಿ.) ; **Famíliárity** — ಲ್ಯಾರಿಟಿ (ನಾ.) ಸಲಿಗೆ ; ಬಳಕೆ ; ಅನ್ಯೋನ್ಯತೆ ; (ಒಬ್ಬನೊಡನೆ, ಒಂದು ವಿಷಯದಲ್ಲಿ) ಹೆಚ್ಚು ಪರಿಚಯ ; ಪ್ರೇಮ, ಪ್ರಣಯ, — ಸಂಬಂಧ. (ಬ. ವ. ದಲ್ಲಿ) ಮುದ್ದಾಟ, ಮೊ. ; ಲಲ್ಲೆ. ತನಗಿಂತಲೂ ಹೆಚ್ಚು ಗೌರವಸ್ಥರನ್ನೂ ಕಡಮೆಯ ದರ್ಜೆಯವರನ್ನೂ ತನ್ನ ಸಮಾನರಂತೆ ಕಾಣುವುದು (F. breeds contempt ಅತಿ ಸಲಿಗೆ ಅಸಡ್ಡೆ ಹುಟ್ಟಿಸುತ್ತದೆ). **Famíliarize** — ರೈಸ್ (ಕ್ರಿ. ಸಕ.) ಚೆನ್ನಾಗಿ ತಿಳಿಯುವಂತೆ, ಪ್ರಚಾರವಾಗುವಂತೆ, ಮಾಡು ; ಪರಿಚಯ ಮಾಡು ; ಬಳಕೆ ಮಾಡು ; ರೂಢಿ ಮಾಡು ; — ಮಾಡಿಕೊ. **Famíliarizátion** (ನಾ.)

Fámily ಫ್ಯಾಮಿಲಿ (ನಾ.) ಒಂದು ಕುಟುಂಬಕ್ಕೆ ಸೇರಿದವರು ; ಕುಟುಂಬ ; ಒಕ್ಕಲು ; ಮನೆ ; ಮನೆತನ ; ಸಂಸಾರ (ತಂದೆ ತಾಯಿಗಳು, ಮಕ್ಕಳು, ಸೇವಕರು, ಮೊ. ರು). (Happy f. ಒಂದೇ ಬೋನಿನಲ್ಲಿರುವ ಬೇರೆ ಬೇರೆ ಜಾತಿಯ ಪ್ರಾಣಿಗಳು. Holy F. ಪಟಗಳಲ್ಲಿ ಒಟ್ಟಿಗೆ ಚಿತ್ರಿಸಿರುವ ಮೇರಿಕನ್ಯೆ, ಏಸು, ಸೇಂಟ್ ಜೋಸೆಫ್, ಸಾ., ಬ್ಯಾಪ್ಟಿಸ್ಟ್ ಸೇಂಟ್ ಜಾನ್, ಸೇಂಟ್ ಎಲಿಸಬೆತ್ —ಇವರುಗಳು : ಪವಿತ್ರ ಕುಟುಂಬ). ಒಬ್ಬನ ಮಕ್ಕಳು ; ಸಂತಾನ ; ಸಂತತಿ ; ಒಬ್ಬ ಮೂಲ ಪುರುಷನ ಒಟ್ಟು ಸಂತತಿ ; ವಂಶ ; ಗೋತ್ರ ; ಪೀಳಿಗೆ (Of f. ಸದ್ವಂಶದ) ; ಒಂದೇ ಬುಡಕಟ್ಟಿನಿಂದ ಬಂದ ಜನತಂಡ ; ಕುಲ. ರಾಜಕೀಯ ಅಥವಾ ಧಾರ್ಮಿಕ ಬಂಧನದಿಂದ ಕೂಡಿದ ಜನರು, ಜನಾಂಗಗಳು. ಸಮಾನ ಲಕ್ಷಣಗಳಿಂದ ಕೂಡಿದ ವೈಶಿಷ್ಟ್ಯವುಳ್ಳ ವಸ್ತು ಸಮುದಾಯ. ಪರಸ್ಪರ ಸಂಬಂಧವುಳ್ಳ ಜೀವಿಜಾತಿಗಳು (ಮು., ಒಂದು ವರ್ಗದ ಭಾಗಗಳು). F. butcher (ಸೈನ್ಯ, ಮೊ. ಗಳಿಗಲ್ಲದೆ) ಸಂಸಾರಗಳಿಗೆ ಮಾತ್ರ ಆಹಾರದ ಮಾಂಸವನ್ನು ಒದಗಿಸುವ ಮಾಂಸ ವರ್ತಕ. F. hotel ಸಂಸಾರಗಳಿಗೆ ಪ್ರತ್ಯೇಕ ರಿಯಾಯಿತಿ ತೋರಿಸುವ ಆಹಾರದಂಗಡಿ. In a f. way ಒಂದೇ ಮನೆಯವರಂತೆ ಉಪಚಾರ ಹೇಳದೆ, ಹೇಳಿಸಿಕೊಳ್ಳದೆ ; ಸಲಿಗೆಯಿಂದ. In the f. way ಗರ್ಭಿಣಿಯಾಗಿ ; ಬಸಿರಾಗಿ. F. Bible ಜನನ ಮರಣಗಳು, ಮೊ. ನ್ನು ಗುರುತುಮಾಡಲು ಖಾಲಿ ಹಾಳೆಗಳಿರುವ ದೊಡ್ಡ ಬೈಬಲ್ಲು : ಕುಟುಂಬದ ಬೈಬಲ್ಲು. F. coach ಒಂದು ತೆರದ ದೊಡ್ಡ ಮುಚ್ಚು ಸವಾರಿಗಾಡಿ ; ಕುಟುಂಬದ ಸವಾರಿಗಾಡಿ. ಒಂದು ತೆರದ ಜೂಜಾಟ. F. Compact ಕ್ರಿ. ೧೮ನೆಯ ಶತಮಾನದಲ್ಲಿ ಫ್ರಾನ್ಸಿನ ಬೋರ್ಬನ್ ಕುಟುಂಬದವರೂ ಸ್ಪೈಯಿನಿನವರೂ ಮತ್ತು ಎರಡು ಸಿಸಿಲಿಗಳವರೂ (ಮು., ಇಂಗ್ಲೆಂಡಿಗೂ ಆಸ್ಟ್ರಿಯಾಕ್ಕೂ ವಿರುದ್ಧವಾಗಿ) ಮಾಡಿಕೊಂಡ ಕುಟುಂಬದ ಒಡಂಬಡಿಕೆ. F likeness ಒಂದು ಕುಟುಂಬಕ್ಕೆ ಸೇರಿದವರಿಗಿರುವ ಪರಸ್ಪರ ಹೋಲಿಕೆ : ಕುಟುಂಬದ ಹೋಲಿಕೆ ; ದೂರದ ಹೋಲಿಕೆ. F. living ಮನೆಯ ಯಜಮಾನನು ಸ್ವಂತವಾಗಿ ಕೊಡಬಹುದಾದ ಮಠದ ದತ್ತಿ. F. man ಸಂಸಾರಿ ; ಕುಟುಂಬಿ ; ಗೃಹಸ್ಥ ; ಮಕ್ಕಳೊಂದಿಗ. F. tree ವಂಶ ವೃಕ್ಷ.

Fámine ಫ್ಯಾಮಿನ್ (ನಾ.) (ಒಂದು ಪ್ರಾಂತ, ಮೊ. ಗಳಲ್ಲಿ) ಆಹಾರ ಪದಾರ್ಥಗಳ ಅಭಾವ ; ಬರ ; ಕ್ಷಾಮ ; ದುರ್ಭಿಕ್ಷ [Water f. ನೀರಿನ ಕ್ಷಾಮ. F. prices ಬರದ ಧಾರಣೆವಾಸಿ (ಪದಾರ್ಥಗಳ ಅಭಾವದಿಂದ ಏರಿದ ಬೆಲೆ)]. ಹಸಿವು ; ಹೊಟ್ಟೆಗಿಲ್ಲದಿರುವುದು ; ಅನ್ನಾಭಾವ (Die of f. ಹೊಟ್ಟೆಗಿಲ್ಲದೆ ಸಾಯಿ)

Fámish ಫ್ಯಾಮಿಷ್ (ಕ್ರಿ.) ಉಪವಾಸ ಕೆಡವು, ಬೀಳು ; ತಿಂಡಿಯಿಲ್ಲದೆ ಬಹಳ ಹಸಿವಿನಿಂದ, ತಪಿಸು, ತಪಿಸುವಂತೆ ಮಾಡು ; ಹೊಟ್ಟೆಗಿಲ್ಲದೆ ಕೃಶವಾಗು, ಕೃಶ ಮಾಡು. Be famishing (ಬಳ. ಮಾ.) ಹಸಿವಾಗಿರು.

Fámous. **Fame** ನೋಡಿ.

Fámulus ಫ್ಯಾಮ್ಯುಲಸ್ (ನಾ. ; ಬ. ವ. — li ಲೈ) ಮಂತ್ರವಾದಿಯ ಅಥವಾ ವಿದ್ವಾಂಸನ ಪರಿಚರ, ಸೇವಕ.

Fan[1] ಫ್ಯಾನ್ (ನಾ.) ಬೀಸಣಿಗೆ ; ತೂರುವ ಯಂತ್ರ. ಬೀಸಣಿಗೆಯಂತೆ ವಿಸ್ತರಿಸಿದ ವಸ್ತು (ಮು., ಹಕ್ಕಿಯ ತೋಕೆ, ರೆಕ್ಕೆ, ಎಲೆ, ಕಟ್ಟಡದ ಅಲಂಕಾರದ ಕಮಾನು, ಮೊ. ವು. F. tracery ಬೀಸಣಿಗೆಯಾಕಾರದ ಕಮಾನಿನಲ್ಲಿಯ ಅಲಂಕಾರದ ಕೆಲಸ). ಗಾಳಿಯ ಪ್ರಸಾರಣ, ಮೊ. ಕ್ಕೆ ಅನುಕೂಲಿಸುವಂತೆ ಗಾಳಿಯ ಪ್ರವಾಹವನ್ನು ಕಲ್ಪಿಸುವ, ಸುತ್ತುವ ಸಲಕರಣೆ. (ನಾವೆ.) ಚಾಲಕದ ತಿರುಪುಯಂತ್ರ (ಅಥವಾ ಅದರ ಒಂದು ಅಲಗು). (ಗಾಳಿಯಂತ್ರ) ಗಾಳಿಬೀಸುವ ದಿಕ್ಕಿಗೆ ದೊಡ್ಡ ಪಟಗಳನ್ನು ಒಡ್ಡುವಂತೆ ಅಳವಡಿಸಿರುವ ಸಣ್ಣ ಪಟ. **F.-light** ಬಾಗಿಲಮೇಲೆ ಇಟ್ಟಿರುವ ಬೀಸಣಿಗೆಯಾಕಾರದ ಕಿಟಕಿ. **F.-tail** ಬೀಸಣಿಗೆಯಾಕಾರದ ಬಾಲ, ತೋಕೆ ಅಥವಾ ತುದಿ. ಒಂದು ಜಾತಿಯ ಪಾರಿವಾಳ. ಕಲ್ಲಿದ್ದಲೆತ್ತುವವನ ಪರಂಗಿಟೋಪಿ.

Fan (ಕ್ರಿ.) (ಧಾನ್ಯವನ್ನು) ತೂರು, ಕೇರು ; (ಹೊಟ್ಟನ್ನು) ತೂರಿಬಿಡು ; ಬೀಸಿಬಿಡು ; ಬೀಸಣಿಗೆಯಿಂದ (ಗಾಳಿ) ಬೀಸು [F. the flame ಬೀಸಿ ಜ್ವಾಲೆಯನ್ನು ಹೆಚ್ಚಿಸು ; (ರೂಪ.) ಉದ್ರೇಕ, ಮೊ. ನ್ನು ಹೆಚ್ಚಿಸು, ಕೆರಳಿಸು, ಉದ್ದೀಪಿಸು]. (ನಸು ಗಾಳಿ) ಮೆಲ್ಲಗೆ ಬೀಸು, ತಂಪಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೀಸಣಿಗೆಯ ಆಕಾರದಲ್ಲಿ ಹರಡಿಕೊ, ಹರಡು, ಬಿಚ್ಚು, ಕೆದರು. **Fánner** (ನಾ.) ಗಾಳಿ ಬೀಸುವವನು; ತೂರುವ ಸಾಧನ; ತೂರಣಿಗೆ. (ರೂಪ. ಸಹ). ಗಾಳಿಯೊದಗಿಸುವ ಅಥವಾ ತಂಪಿಸುವ ಸಲಕರಣೆ. ಒಂದು ತೆರದ ಡೇಗೆ (ಅದರ ರೆಕ್ಕೆಗಳ ಚಲನೆಯ ತೆರದಿಂದ)

Fan² ಫ್ಯಾನ್ (ನಾ.) (ಅಸಂ.; Fanatic ಪದದ ಸಂಕ್ಷಿಪ್ತ) ಯಾವುದಾದರೂ ಒಂದು ಗೊತ್ತಾದ ವಿನೋದದಲ್ಲಿ ಅಸಕ್ತ; ವಿನೋದಿ (Film fans ಚಲನ ಚಿತ್ರದಲ್ಲಿ ಅಸಕ್ತರು. Football fans ಕಾಲ್ಚೆಂಡಾಟದಲ್ಲಿ ಆಸಕ್ತರು)

Fanám ಫನಾಮ್ (ನಾ.) ದಕ್ಷಿಣ ಇಂಡಿಯಾದಲ್ಲಿ ಹಿಂದೆ ಸಾಮಾನ್ಯವಾಗಿ ಚಲಾವಣೆಯಲ್ಲಿದ್ದ ಒಂದು ಸಣ್ಣ ನಾಣ್ಯ (ತಮಿಳು 'ಪಣಂ' ಎಂಬುದರಿಂದ); ಒಂದು ಹಣ.

Fanátic ಫನ್ಯಾಟಿಕ್ (ಗು., ನಾ.) (ಮು., ಮತವಿಚಾರದಲ್ಲಿ) ಅತಿ ದುರಭಿಮಾನವುಳ್ಳ(ವನು); ಮತಭ್ರಾಂತ; ಉನ್ಮತ್ತಾಭಿಮಾನಿ. **Fanátical** (ಗು.); **Fanátically** (ಕ್ರಿ. ವಿ.); **Fanáticism** (ನಾ.) ಧರ್ಮಾಂಧತೆ; ಉನ್ಮತ್ತಾಭಿಮಾನ. **Fanáticize** (ಕ್ರಿ.) ಧರ್ಮಭ್ರಾಂತ ಮಾಡು; — ನಾಗು.

Fáncier, etc. **Fancy** ನೋಡಿ.

Fáncy ಫ್ಯಾನ್ಸಿ (ನಾ., ಗು.) ಭ್ರಾಂತಿ; ಭ್ರಮೆ; ಬುಡವಿಲ್ಲದ ಭಾವನೆ, ನಂಬಿಕೆ. ಎದುರಿಗಿಲ್ಲದವನ್ನು ಗೋಚರಕ್ಕೆ ತಂದುಕೊಳ್ಳಬಲ್ಲ ಶಕ್ತಿ; ಭಾವನೆ; ಮನಶ್ಚಿತ್ರ; ಆಧಾರವಿಲ್ಲದ ಊಹೆ; ವಿಚಿತ್ರ ಭಾವನೆ; ಅಭಿರುಚಿ; ಒಲವು; ಖಯಾಲು [Take a f. to, for — ರ ಮೇಲೆ ಮನಸ್ಸು ಬೀಳು; — ಲ್ಲ ಅಭಿರುಚಿಯುಳ್ಳವನಾಗು, ಮಮತೆಯುಳ್ಳವನಾಗು; ಮೆಚ್ಚಿಕೊ; ಆಶೆಯುಳ್ಳವನಾಗು. Catch the f. of ಒಬ್ಬನ ಮನ ವೊಲಿಸು, ಮೆಚ್ಚುಗೆ ಪಡೆ. The f. ಒಂದು ಗೊತ್ತಾದ ಹವ್ಯಾಸವುಳ್ಳವರು; = Fanciers (ಮು., ಮುಷ್ಟಿಯುದ್ಧಾಸಕ್ತರು)]. (ಕೆಲವು ಉತ್ತಮ ಗುಣಗಳು ಮೂಡುವಂತೆ ಪ್ರಾಣಿಗಳ) ತಳಿ ಬೆಳಸುವ ಕಲೆ. (F.-free ಪ್ರೇಮ, ಪ್ರಣಯ, — ಇಲ್ಲದ). ಅಲಂಕಾರವುಳ್ಳ (ಸಾದಾ ಅಲ್ಲದ). [F.-ball ವಿಚಿತ್ರ ವೇಷದಲ್ಲಿ ನಡನುವ ನರ್ತನ ಕೂಟ: ವೇಷ ನರ್ತನ. F.-bred ಕಲ್ಪನೆಯಿಂದ ಹುಟ್ಟಿದ; ಕಲ್ಪನಾ ಜನಿತ, ಬೇಕಾದ ಉತ್ಕೃಷ್ಟ ಗುಣಗಳಿರುವ ಸಂತತಿಯಾಗುವಂತೆ ತಯಾರಿಸಿದ (F.-bred dogs, cattle). F. dress ವಿಚಿತ್ರ ವೇಷ. F. work ಚಿತ್ರದ ಹೊಲಿಗೆಯ, ಕಸೂತಿಯ, ಕೆಲಸ. F. fair ವಿಚಿತ್ರ ವಸ್ತುಗಳ ಮಾರಾಟಕ್ಕಾಗಿ ಏರ್ಪಡಿಸಿದ ಸಂತೆ, ಪ್ರದರ್ಶನ]. (ಹೂವು, ಮೊ. ಗಳ ವಿಷಯದಲ್ಲಿ) ಚಿತ್ರ ವರ್ಣದ; ಬಣ್ಣ ಬಣ್ಣದ. ಮನಸೋ ಇಚ್ಛೆಯ; ಚಂಚಲ ಚಿತ್ತ. (F. price ಮೆಚ್ಚು ಬೆಲೆ. F. franchise ಸುಲಭವಾಗಿ ತಿಳಿಯಲಾಗದ ಅಥವಾ, ಮನಸ್ಸಿಗೆ ಬಂದ ಯಾವುದಾದರೂ ಯೋಗ್ಯತೆಯ ಮೇಲೆ ನೆಲಸಿದ, ಚುನಾವಣೆಯ ಹಕ್ಕು). ಕಲ್ಪನೆಯ; ಮನಃಕಲ್ಪಿತ; ಬರಿ ಊಹೆಯ (F. picture ಕಲ್ಪನಾ ಚಿತ್ರ). F. man ಪ್ರಿಯ; ನಲ್ಲ; (ಅಸಂ.) ವ್ಯಭಿಚಾರಿಣಿಯ ಸಂಪಾದನೆಯಿಂದ ಜೀವಿಸುವವನು.

Fáncy (ಕ್ರಿ. ಸಕ.) ಕಲ್ಪಿಸು; ಊಹಿಸು; ಭಾವಿಸು; ಮನಃ ಕಲ್ಪನೆ ಮಾಡು. [F. a blue dahlia ನೀಲ ವರ್ಣದ ಡೇಲಿಹೂವನ್ನು ಕಂಡಂತೆ ಭಾವಿಸು; (ರೂಪ.) ಅಸಾಧ್ಯ ಕಲ್ಪನೆ ಮಾಡು. Fancy! F. his believing it! (ಆಶ್ಚರ್ಯ ಸೂಚಕ ಉದ್ಗಾರ) ಅವನು ನಂಬುವನೆಂದು ಊಹಿಸಲು ಸಾಧ್ಯವೆ!]. ಯೋಚನೆ ಮಾಡು; ಯೋಚಿಸು; ಎಣಿಸು. (ಬಳ. ಮಾ.) (ಸ್ವಂತ ವಿಷಯದಲ್ಲಿ, ತನ್ನ ಆಟ, ಮೊ. ಗಳ ವಿಷಯದಲ್ಲಿ) ಮೆಚ್ಚಿಕೊ, ಮೆಚ್ಚುಗೆಯುಳ್ಳವನಾಗಿರು, ಮೆಚ್ಚುಗೆ ತೋರು; ಮೆಚ್ಚು; ಪ್ರೀತಿಗೊಳ್ಳು. (ಪ್ರಾಣಿಗಳನ್ನೂ ಸಸ್ಯಗಳನ್ನೂ ಕೆಲವು ಗುಣಗಳಿಗೆ ಗಮನಕೊಟ್ಟು) ತಳಿಬೆಳಸು. **Fáncier** (ನಾ.) ಒಂದು ಪದಾರ್ಥದ, ಪ್ರಾಣಿಯ, ವಿಷಯವನ್ನು ಚೆನ್ನಾಗಿ ತಿಳಿದವನು; ಅಂತರಂಗ ತಿಳಿದವನು; ಮರ್ಮಜ್ಞ (Dog-f. ನಾಯಿಗಳ ಮರ್ಮ ಬಲ್ಲವನು; ಶ್ವಾನ ಹೃದಯಜ್ಞ). **Fánciful** (ಗು.) ಕಲ್ಪನೆಗಳಲ್ಲಿ ಮುಳುಗಿದ; ಚಂಚಲ ಬುದ್ಧಿಯ; ಚಪಲ ಚಿತ್ತದ; ಮನಬಂದ ಪ್ರವೃತ್ತಿಯ. ಚಿತ್ರ ವಿಚಿತ್ರವಾಗಿ, — ಕಲ್ಪಿಸಿದ, ಅಲಂಕರಿಸಿದ; ವಿಚಿತ್ರ ರೂಪದ; ಕಾಲ್ಪನಿಕ; ಭ್ರಾಂತಿಯ; ಊಹನೆಯ; ಭಾವನಾ ರಾಜ್ಯದ; ಕಲ್ಪನಾ ಮಯ; ಮನಃಕಲ್ಪಿತ. **Fáncifully** (ಕ್ರಿ. ವಿ.); **Fáncifulness** (ನಾ.)

Fandángle ಫ್ಯಾಂಡ್ಯಾಂಗ್ಲ್ (ನಾ.) ಚಿತ್ರ ವಿಚಿತ್ರದ, ವಿಲಕ್ಷಣ, — ಅಲಂಕಾರ; ವಿಕಟ ರೀತಿ.

Fandángo ಫ್ಯಂಡ್ಯಾಂಗೊ (ನಾ.) ಸ್ಪ್ಯಾನಿಷರ ಒಂದು ಉಲ್ಲಾಸ ನರ್ತನ; ಈ ನರ್ತನದ ರಾಗ, ಹಾಡು.

Fane ಫೇನ್ (ನಾ.) (ಕಾವ್ಯ) ದೇವಾಲಯ; ದೇವಸ್ಥಾನ; ಗುಡಿ.

Fánfare ಫ್ಯಾನ್‌ಫೇರ್, ಫಾನ್‌ಫಾರ್ (ನಾ.) ತುತೂರಿ, ಕಹಳೆ, ಕೊಂಬು, ಮೊ. ವಾದ್ಯಗಳ ಮೊಳಗು, ಘೋಷ. **Fanfaronáde** ಫ್ಯಾನ್‌ಫರಾನೇಡ್, ಫಾನ್‌ಫಾರೊನಾಡ್ (ನಾ.) ಅಹಂಕಾರದ, ಡಂಭದ, — ಮಾತು; ಬಡಾಯಿ. = Fanfare.

Fang ಫ್ಯಾಂಗ್ (ನಾ., ಕ್ರಿ. ಸಕ.) (ಮು., ನಾಯಿಯ ಮತ್ತು ತೋಳದ) ಕೋರೆ ಹಲ್ಲು; ಹಾವಿನ ವಿಷದ ಹಲ್ಲು. ಹಿಡಿಯೊಳಗೆ ಸೇರಿಸಿರುವ ಆಯುಧದ ಮೊಂಡು. ಹಲ್ಲಿನ ಬೇರು, — ಬೇರಿನ ಮೊನೆ. (ಕ್ರಿ.) (ಚೋಷಕ) ಕೆಲಸ ಮಾಡುವಂತೆ ಅದರೊಳಕ್ಕೆ ನೀರು ಸುರಿದು ಚೋದಿಸು. (-) **Fanged** (ಗು.); **Fángless** (ಗು.)

Fantasía ಫಾಂಟಾಸೀಯಾ, **Fantásia** ಫ್ಯಂಟಾಸಿಯ (ನಾ.) ರೂಪನಿರ್ಬಂಧವಿಲ್ಲದೆ ಭಾವಾನುಗುಣವಾಗಿ ಬಾಜಿಸುವ ಗೀತ, ಸಂಗೀತ ಕೃತಿ.

Fántast, etc. **Fantasy** ನೋಡಿ.

Fántasy, Ph- ಫ್ಯಾಂಟಸಿ (ನಾ.) ಮನಸ್ಸಿನಲ್ಲಿ ಕಲ್ಪನಾ ಚಿತ್ರಗಳನ್ನು ನಿರ್ಮಿಸಿಕೊಳ್ಳುವ, ಕಾಣುವ, ಶಕ್ತಿ; ಭ್ರಾಂತಿ; ಭ್ರಮೆ; ವಿಪರೀತ ಭಾವನೆ (ಮು., ಅತಿರೇಕ, ಮನಃ ಕಲ್ಪಿತ, ಸಂದರ್ಭಗಳಲ್ಲಿ); ಮನಶ್ಚಿತ್ರ; ವಿಲಕ್ಷಣವಾದ, ಚಿತ್ರ ವಿಚಿತ್ರವಾದ, — ಸಂವಿಧಾನ. = Fantasia. ವಿಚಿತ್ರ ಕಲ್ಪನೆ **Fántast, Ph**- ಫ್ಯಾಂಟ್ಯಾಸ್ಟ್ (ನಾ.) ಕನಸು ಕಾಣುವವನು; ಭಾವನಾ ಶೀಲ. **Fantástic** ಫ್ಯಂಟ್ಯಾಸ್ಟಿಕ್ (ಗು.) (ವಿರ. ಪ್ರ.) ವಿಪರೀತ ಭಾವನೆಯ; ಭ್ರಾಂತಿ ಮೂಲವಾದ; ಭ್ರಾಮಕ; ಭ್ರಮೆಯ; ಚಂಚಲ; ವಿಲಕ್ಷಣ; ವಿಚಿತ್ರ; ಹುಚ್ಚು ಹುಚ್ಚಾದ; ಸಂವಿಧಾನ, ಮೊ. ಗಳಲ್ಲಿ ವಿಚಿತ್ರವಾದ, ವಿಲಕ್ಷಣವಾದ. **Fantasticálity** (ನಾ.); **Fantástically** (ಕ್ರಿ. ವಿ.); **Fantásticalness** (ನಾ.); **Fantásticism** (ನಾ.) ಕಲೆಯಲ್ಲಿ ಅಥವಾ ಭಾವನೆಯಲ್ಲಿ ವಿಚಿತ್ರ ವರ್ತನೆ.

Fantoccíni (It.) ಫ್ಯಾಂಟಾಚೀನಿ (ನಾ., ಬ. ವ.) ಸೂತ್ರದ ಬೊಂಬೆಗಳು; ಸೂತ್ರದ ಬೊಂಬೆಯಾಟ.

Faquír = Fakir.

Far ಫಾರ್ (ಕ್ರಿ. ವಿ.; ತರ ತಮ ರೂಪಗಳು: Farther, -thest; Further, -thest) ದೂರದಲ್ಲಿ; ದೂರವಾಗಿ (*Away*, *off*, *out* ಉಪ. ಜೊಡನೆ); (ರೂಪ. ಸಹ: F. from doing ಮಾಡುವುದಕ್ಕೆ ಪ್ರತಿಯಾಗಿ; ಮಾಡುವುದು ಹಾಗಿರಲಿ. F. from it ಅದಕ್ಕೆ ಬಹು ದೂರ: ಎಂದರೆ, ಖಂಡಿತವಾಗಿಯೂ ಅದಲ್ಲ; ಅಲ್ಲವೇ ಅಲ್ಲ. F. be it from me to do ನಾನೆಂದಿಗೂ ಹಾಗೆ ಮಾಡುವುದಿಲ್ಲ; ನನ್ನಿಂದ ಎಂದಿಗೂ ಆಗದು). ಬಹು ದೂರಕ್ಕೆ, ಮುಂದಕ್ಕೆ (Driven f. into the ground ನೆಲದೊಳಕ್ಕೆ ಬಹು ದೂರ ಹೋಗಿಸಿ; ಆಳವಾಗಿ ನಟ್ಟು. F. gone ಬಹುದೂರ ಹೋಗಿ, ಮುಂದುವರಿದು). ಬಹು; ಬಹಳ; ವಿಶೇಷ. (He will go f. ಅವನು ಬಹು ದೂರ ಹೋಗುತ್ತಾನೆ, ಸಾಧ್ಯವಿದ್ದಷ್ಟೂ ಮಾಡುತ್ತಾನೆ. It will go f. to effect ನಡಸಲು ಬಹು ದೂರ ಹೋಗುತ್ತದೆ: ಎಂದರೆ, ಮುಕ್ಕಾಲು ಮೂರುವೀಸ ಪಾಲು ಮಾಡಿಯೇಬಿಡುತ್ತದೆ. F. different, better, the best ಎಷ್ಟೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯತ್ಯಾಸವುಳ್ಳ ; ಎಷ್ಟೋ ಮೇಲಾದ ; ಅತ್ಯುತ್ತಮವಾದ. F. & away ಬಹು ದೂರ ; ಬಹಳ ಅಂತರ. So f. ಅಷ್ಟು ದೂರಕ್ಕೆ ; ಅಲ್ಲಿಯ ವರೆಗೆ ; ಈಗಿನ ವರೆಗೆ ; ಇಲ್ಲಿಯ ವರೆಗೆ. How f.? ಎಷ್ಟು ದೂರ? ಎಷ್ಟು ಮಟ್ಟಿಗೆ ? ಎಲ್ಲಿಯ ವರೆಗೆ ? As f. as, So f. as, In so f. as — ವರೆಗೆ ; — ಮಟ್ಟಿಗೆ ; ಅಷ್ಟು ದೂರ. F.-away ಬಹು ದೂರದ ; ಬಹು ಹಿಂದಿನ. (ದೃಷ್ಟಿ,ಮೊ. ಗಳ ವಿಷಯದಲ್ಲಿ) ಶೂನ್ಯ, ಅನವಧಾನ, ಕನಸು ಕಾಣುತ್ತಿರುವ, ಭ್ರಾಂತ, ಅನ್ಯಮನಸ್ಕ. F.-between ಬಹು ಕಾಲ ಬಿಟ್ಟು ಬರುವ ; ಬಹಳ ಅಂತರವಿರುವ ; ಅಪೂರ್ವವಾದ ; ವಿರಳವಾದ. F.-famed ಬಹು ದೂರ ಹೆಸರು ವಾಸಿಯಾದ ; ಎಲ್ಲೆಲ್ಲೂ ಪ್ರಸಿದ್ಧಿ ಪಡೆದ ; ಲೋಕ ವಿಖ್ಯಾತ. F.-fetched (ಉಪಮಾನ, ಉದಾಹರಣೆ, ಮೊ. ಗಳ ವಿಷಯದಲ್ಲಿ) ಬಹು ದೂರ ಎಳೆದ ; ಬಹು ಕಷ್ಟಪಟ್ಟು, ಪ್ರಯಾಸದಿಂದ, ಸಾಧಿಸಿದ ; ಸುಗಮವಲ್ಲದ ; ಕ್ಲಿಷ್ಟ. F.-flung (ಅಲಂ.) ಬಹುದೂರ ವ್ಯಾಪಿಸಿದ, ಹರಡಿದ ; ಬಹಳ ವಿಸ್ತರಿಸಿದ. F. forth (Forth ನೋಡಿ). F. gone ಬಹು ದೂರ ಹೋದ ; ರೋಗ, ಹುಚ್ಚು, ಸಾಲ — ಇವು ಮಿತಿ ಮೀರಿ ಹೋದ. F. off ಬಹು ದೂರದ ; ಬಹಳ ಹಿಂದಿನ. F.-reaching ಬಹು ದೂರ ಮುಟ್ಟುವ, ವ್ಯಾಪಿಸುವ ; ಬಹಳ ವ್ಯಾಪನೆಯುಳ್ಳ ; ವಿಶೇಷ ಪರಿಣಾಮಕಾರಿಯಾದ. F.-seeing, F.-sighted ದೂರ ದೃಷ್ಟಿಯುಳ್ಳ ; ವಿವೇಕವುಳ್ಳ ; ಮುಂಡಾಗರೂಕತೆಯುಳ್ಳ. F.-sighted ಹತ್ತಿರ ವಸ್ತುಗಳು ಕಾಣುವುದಕ್ಕಿಂತಲೂ ದೂರ ವಸ್ತುಗಳು ಹೆಚ್ಚು ಸ್ಪಷ್ಟವಾಗಿ ಕಾಣುವ ; ದೂರ ದೃಷ್ಟಿಯ ; ದೂರ ನೋಟದ.

Far (ನಾ., ಗು. ; ತರ ತಮಗಳು Farther, -est ; Further, -est) ದೂರ (ಸ್ಥಳ) (Do you come from f.? ದೂರದಿಂದ ಬಂದೆಯಾ?) ; ಹೆಚ್ಚು ಮೊತ್ತ ; ಅಧಿಕ ಪ್ರಮಾಣ (By f. —ಇಂತಲೂ ಬಹಳ ಹೆಚ್ಚಾಗಿ). (ಗು.) ದೂರದ ; ದೂರವಾದ [A f. cry (Cry ನೋಡಿ)]. **Fárther** ಫಾರ್‌ದರ್ (ಕ್ರಿ. ವಿ., ಗು., ಕ್ರಿ. ಸಕ.) ಹೆಚ್ಚು ದೂರಕ್ಕೆ ; — ದೂರದಲ್ಲಿ ; ಇನ್ನೂ ಮುಂದೆ ; —ಮುಂದಕ್ಕೆ ; ಹೆಚ್ಚು ಹೆಚ್ಚಾಗಿ [I'll see you f. or further first ನೀನು ನರಕಕ್ಕೆ ಹೋಗು, ಹಾಳಾಗಿ ಹೋಗು (ಎಂಬುದಕ್ಕೆ ನಯ ನುಡಿ. ಬೇಡಿಕೆಗೆ, ಅರಿಕೆಗೆ, ಸಂಪೂರ್ಣ ವಿರೋಧ ತೋರಿಸುವ ಸಂದರ್ಭದಲ್ಲಿ)]. ಮತ್ತು ; ಇದೂ ಅಲ್ಲದೆ ; ಕೂಡ ; ಮೇಲೂ ; ಜೊತೆಗೆ (ಈಗ ಸಾ., Further). (ಗು.) ಹೆಚ್ಚಿನ ; ಮುಂದಿನ ; ಹೆಚ್ಚಾದ ; ಹೆಚ್ಚು ದೂರದ ; ಆಚಿನ. (ಕ್ರಿ. ; ವಿರ. ಪ್ರ.) = Further. **Fárthermost** (ಗು.) ; **Fárthest** (ಗು., ಕ್ರಿ. ವಿ.) ಅತ್ಯಂತ ದೂರದ ; — ದಲ್ಲಿ ; — ಕ್ಕೆ (At the f., At f. ಅತ್ಯಂತ ದೂರದಲ್ಲಿ ; ತೀರ ಹೆಚ್ಚೆಂದರೆ)

Fárad ಫ್ಯಾರಡ್ (ನಾ.) (ವಿದ್ಯುತ್ತು) ವಿದ್ಯುತ್ಕಾಂತ ಧಾರಣಶಕ್ತಿಯ ಏಕಮಾನ (ಅಳತೆ) (ವಿದ್ಯುದ್ವೈಜ್ಞಾನಿಕ 'ಫ್ಯಾರಡೆ' ಎಂಬಾತನ ಹೆಸರಿನಿಂದ). **Faradáic** — ಡೇಯಿಕ್ (ಗು.) (ವಿದ್ಯುತ್ಪ್ರವಾಹ ವಿಷಯದಲ್ಲಿ) ಪ್ರಚೋದಕ, ಪ್ರಚೋದಿತ, ಪ್ರೇರಿತ.

Farce[1] ಫಾರ್ಸ್ (ನಾ.) ನಗು ಹುಟ್ಟಿಸುವುದಕ್ಕಾಗಿಯೇ ರಚಿಸಿದ ನಾಟಕ ; ಪ್ರಹಸನ ; ನಕಲಿ ; ವಿನೋದ ; ತಮಾಷೆ ; ಏನೂ ಉಪಯೋಗವಿಲ್ಲದ ಹಾಸ್ಯಾಸ್ಪದವಾದ ನಡೆವಳಿ ; ನಟನೆ ; ನೆವ ; ಠಕ್ಕು ; ವೇಷ ; ಸೋಗು. **Fárcical** ಫಾರ್ಸಿಕಲ್ (ಗು.) ; **Fárcically** (ಕ್ರಿ. ವಿ.) ; **Farcicálity** — ಕ್ಯಾ — (ನಾ)

Farce[2] ಫಾರ್ಸ್ (ಕ್ರಿ. ಸಕ.) (ಪ್ರಾಚೀ. ಪ್ರ.) (ಅಡಿಗೆಯಲ್ಲಿ) ಒಗ್ಗರಣೆ ಹಾಕು ; ಒಗ್ಗರಿಸು ; ಮಸಾಲೆ ಹಾಕು ; ರುಚಿ ಕಟ್ಟು ; (ರೂಪಕವಾಗಿ, ಸಾಹಿತ್ಯದಲ್ಲಿ) ಬಣ್ಣ ಕೊಡು ; ರಸವತ್ತಾಗಿ ಮಾಡು.

Farceúr (F) ಫಾರ್ಸರ್ (ನಾ.) ತಮಾಷೆಗಾರ ; ಹಾಸ್ಯಗಾರ ; ಪ್ರಹಸನಕಾರ ; ನಕಲಿ ಮಾಡುವವನು. ಸಾಮಾನ್ಯವಾಗಿ ಗೂಢ ರೀತಿಯಲ್ಲೇ ಮಾತನಾಡುವವನು, ವ್ಯವಹರಿಸುವವನು.

Fárcy ಫಾರ್ಸಿ (ನಾ.) (ಮು., ಕುದುರೆಗಳಿಗೆ ಬರುವ) ರಸಗ್ರಂಥಿಗಳ ಒಂದು ರೋಗ. F. bud, button ಈ ರೋಗದಲ್ಲಿ ಕಾಣಿಸಿಕೊಳ್ಳುವ ಸಣ್ಣ ಗಂತಿ.

Fárdel ಫಾರ್ಡೆಲ್, ಫಾರ್ಡ್‌ಲ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) ಕಟ್ಟು ; ಕಂತೆ ; ಮೂಟೆ ; ಹೊರೆ ; ಭಾರ. ಚಿಲ್ಲರೆ ಪಲ್ಲರೆಯ ರಾಶಿ ; ಒಟ್ಟಿಲು. ಬಟ್ಟೆಬರೆ (Women's fardels). (ಕ್ರಿ.) ಕಂತೆ ಕಟ್ಟು ; ಮೂಟೆ ಕಟ್ಟು.

Fare ಫೇರ್ (ನಾ., ಕ್ರಿ. ಅಕ.) (ಪ್ರಯಾಣಿಕನ) ಪ್ರಯಾಣದ ತೆರ, ಮೂಲ್ಯ, ಬಾಡಿಗೆ. ಬಾಡಿಗೆಬಂಡಿಯಲ್ಲಿಯ ಪ್ರಯಾಣಿಕ. ಊಟ ; ತಿಂಡಿ ; ಅನ್ನ ; ಆಹಾರ ; ಭೋಜನ [Good, bad, plentiful, etc. f. Bill of f. (Bill[3] ನೋಡಿ)]. (ಕ್ರಿ.) (ಕಾವ್ಯ) ಪ್ರಯಾಣ ಮಾಡು, — ಹೋಗು ; ಹೋಗು [F. forth (ಪ್ರಯಾಣ) ಹೊರಡು]. ಆಗು ; ಉಂಟಾಗು ; ಸಂಭವಿಸು (How fares it? ಹೇಗಿದೆ? How did you f.? ಏನು ಮಾಡಿದೆ? ಏನು ನಡೆಯಿತು? F.well ಚೆನ್ನಾಗು ; ಚೆನ್ನಾಗಿ ಬಾಳು. F. ill ಕೇಡಾಗು ; ಕೇಡಾಗಿ ಬಾಳು). ಔತಣ ಪಡೆ ; ಊಟ ಮಾಡು (F. well, ill). **Farewéll** (ಭಾವ. ಅವ್ಯ., ನಾ.) ನಿನಗೆ ಒಳ್ಳೆಯದಾಗಲಿ! ಸ್ವಸ್ತಿ! ಶುಭಮಸ್ತು! (F. to ಅದಕ್ಕೆ ನಮಸ್ಕಾರ ; ಅದರ ಗೊಡವೆ ಬೇಡ ; ಅದರ ವಿಷಯ ಸಾಕು). (ನಾ.) ಬೀಳ್ಕೊಳ್ಳುವುದು ; ಬೀಳ್ಕೊಡುವುದು ; ಹೋಗಿಬರುತ್ತೇನೆಂದು ಹೇಳುವುದು ; (ಒಬ್ಬರನ್ನೊಬ್ಬರು ಅಗಲುವಾಗ ಹೇಳುವ) ಆಶಾಸನ, ಸ್ವಸ್ತಿವಾಚನ.

Farína ಫರೈನ, ಫರೀನ (ನಾ.) (ಧಾನ್ಯ, ಚಿಪ್ಪುಗಾಯಿ, ಹಿಟ್ಟುಗೆಡ್ಡೆ — ಇವುಗಳ) ಹಿಟ್ಟು. ಹುಡಿ (ಪದಾರ್ಥ) ; ದೂಳು. (ಸ. ವಿ.) ಪರಾಗ ; ಪುಷ್ಪ ಧೂಳಿ. (ರ. ವಿ.) ಪಿಷ್ಟ. (ಕೀಟ ಶಾಸ್ತ್ರ) ಕೆಲವು ಕೀಟಗಳ ಮೈ ಮೇಲಿರುವ ಹಿಟ್ಟಿನಂಥ ಪುಡಿ. **Farináceous** ಫ್ಯಾರಿನೇಷಸ್ (ಗು.) ಹಿಟ್ಟಿನ ; ಹಿಟ್ಟುಳ್ಳ ; ಹಿಟ್ಟಿನಿಂದ ಮಾಡಿದ ; ಹಿಟ್ಟಿನಂತೆ ಕಾಣುವ ; ಪಿಷ್ಟವಿರುವ. **Fárinose** — ನೋಸ್ (ಗು., ನಾ.) ಹಿಟ್ಟುಳ್ಳ ; ಹಿಟ್ಟಾದ ; ಪಿಷ್ಟದ. ಹುಡಿಯುದುರಿಸಿದ ; ಹುಡಿ ಚೆಲ್ಲಿದ. (ರ. ವಿ.) ಪಿಷ್ಟ ಕಣದ ಒಂದು ಘಟಕ.

Farl ಫಾರ್‌ಲ್ (ನಾ.) (ಸ್ಕಾಟ್ಲೆಂಡಿನಲ್ಲಿ) (ಹಿಂದೆ, 'ಓಟ್ಸ್' ಹಿಟ್ಟಿನ ಕಾಲು ವೃತ್ತದಾಕಾರದ) ತೆಳು ದೋಸೆ.

Farm ಫಾರ್ಮ್ (ನಾ.) ಒಂದು ಹಿಡುವಳಿಯಲ್ಲಿರುವ ವ್ಯವಸಾಯದ ಜಮೀನು ; ಒಕ್ಕಲರುವ ಜಮೀನು ; ಹೊಲ ಗದ್ದೆಗಳು (ಹಿಂದೆ, ಗುತ್ತಿಗೆ, ಮೊ. ಕ್ಕೆ ಪಡೆದು, ಕಂದಾಯ ಕೊಟ್ಟು, ವ್ಯವಸಾಯ ಮಾಡುತ್ತಿದ್ದದ್ದು : ಗುತ್ತಿಗೆಯ, ಕಂದಾಯದ, ಜಮೀನು. Home f. ಜಮೀನ್ದಾರನು ಸ್ವಂತಕ್ಕಿಟ್ಟುಕೊಂಡು ಸ್ವಂತಾರಂಬ ಮಾಡುವ ಜಮೀನು : ಸ್ವಂತಾರಂಬದ ಜಮೀನು). ಜಮೀನಿನಲ್ಲಿರುವ ವಾಸದ ಮನೆ (= F.-house) : ಹೊಲಮನೆ. ಮಕ್ಕಳನ್ನು ಇಟ್ಟುಕೊಂಡು ಅವರನ್ನು ಸಾಕಿ ಸಲಹುವ ಸ್ಥಳ : ಶಿಶು ರಕ್ಷಣ ಮಂದಿರ ; ಮಕ್ಕಳನ್ನು ಬೆಳಸುವ ಬೀಡು. (F.-stead ಕಟ್ಟಡಗಳಿರುವ ಜಮೀನು. F. yard ಹೊಲಮನೆಯ ಅಂಗಳ). ಮೀನು, ಮೊ. ಜಲಚರಗಳನ್ನು ಸಾಕುವ ಜಲಪ್ರದೇಶ.

Farm (ಕ್ರಿ.) ಜಮೀನನ್ನು ಕಂದಾಯಕ್ಕೆ, ಗುತ್ತಿಗೆಗೆ, ತೆಗೆದುಕೊ ಕೊಡು. (ತೆರಿಗೆ, ಉದ್ಯೋಗ, ಮೊ. ಗಳಿಂದ ಬರುವ ವರಮಾನವನ್ನು ಒಂದು ಗೊತ್ತಾದ ಮೊಬಲಗು ಕೊಟ್ಟು) ಗುತ್ತಿಗೆಗೆ ತೆಗೆದುಕೊ (F. out — ಕೊಡು). (ಕೂಲಿಯಾಳುಗಳನ್ನು) ಒಂದು ಗೊತ್ತಾದ ಮೊಬಲಗಿಗೆ ಸರಬರಾಯಿ ಮಾಡು. (ಮು., ಮಕ್ಕಳನ್ನು ಒಂದು ಗೊತ್ತಾದ ಮೊಬಲಗಿಗೆ) ಸಾಕಿ ಸಲಹಲು ಗೊತ್ತುಮಾಡಿಕೊ. ವ್ಯವಸಾಯ ಮಾಡು ; ಆರಂಬ ಮಾಡು ; ಬೇಸಾಯ ಮಾಡು ; ಉಳುಮೆ ಮಾಡು. **Fármer** (ನಾ.) ಒಕ್ಕಲಿಗ ; ರೈತ ; ಬೇಸಾಯಗಾರ. **Fárming** (ನಾ.) ಬೇಸಾಯ (ಮಾಡುವುದು)

Fáro ಫೇರೊ (ನಾ.) ಇಸ್ಪೀಟಿನ ಒಂದು ತೆರದ ಜೂಜಾಟ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Faroúche (F) ಫಾರೂಷ್ (ಗು.) ಖಿನ್ನ ; ವಿಷಣ್ಣ ; ನಿರುತ್ಸಾಹವುಳ್ಳ ; ಸಂಕೋಚ ಪಡುವ ; ಸಂಕೋಚ ಪ್ರಕೃತಿಯ.

Farrágo ಫರೇ(ರಾ)ಗೋ (ನಾ.) ಕಲಬೆರಕೆ. **Farráginous** ಫರೇಜಿನಸ್ (ಗು.)

Fárrier ಫ್ಯಾರಿಯರ್ (ನಾ.) (ಕುದುರೆ, ಮೊ. ಕ್ಕೆ) ಲಾಳ ಕಟ್ಟುವವನು ; ಲಾಳಗಾರ ; ಹಲ್ಲೆಗಾರ ; ಅಶ್ವ ವೈದ್ಯ. ಅಶ್ವದಳದ ಕುದುರೆಗಳ ವಿಚಾರಣಕರ್ತನಾದ ಚೇಸನ್ನದು ಅಧಿಕಾರಿ. **Fárriery** (ನಾ.) ಹಲ್ಲೆವಿದ್ಯೆ ; ಲಾಳಕಟ್ಟುವ ವಿದ್ಯೆ ; ಅಶ್ವ ವೈದ್ಯ ; ಪಶು ಶಸ್ತ್ರ ಚಿಕಿತ್ಸೆ.

Fárrow ಫ್ಯಾರೋ (ನಾ., ಕ್ರಿ.) (ಹಂದಿ) ಮರಿ ಈನು(ವುದು), ಹಾಕು (ವುದು). ಒಂದು ಈನಿನ ಹಂದಿಮರಿಗಳು (20 at one f. ಒಂದು ಈನಿಗೆ ೨೦ ಮರಿ)

Fart ಫಾರ್ಟ್ (ನಾ., ಕ್ರಿ. ಅಕ.) (ಅಸಹ್ಯದ ಮಾತು) ಹೂಸು (ಬಿಡು) ; ವಾಯು ಸಡಿಲಿಸು.

Fárther, -est. **Far** ನೋಡಿ.

Fárthing ಫ(ಫಾ)ರ್ದಿಂಗ್ (ನಾ.) ಕಾಲು ಪೆನಿ ; 'ಫಾರ್ದಿಂಗು' ; ಅತ್ಯಂತ ಸ್ವಲ್ಪ ಮೊತ್ತ ; ಲವ ; ಲೇಶ (Doesn't matter a f. ಕಾಸಿನ ಪ್ರಯೋಜನವೂ ಇಲ್ಲ, — ಬೆಲೆಯೂ ಇಲ್ಲ)

Fárthingale ಫಾರ್ಥಿ(ರ್ದಿ)ಂಗೇಲ್ (ನಾ.) (ಚರಿತ್ರೆ) [ಹೆಂಗಸರ ಉಡುಪಿನ ಕೆಳಭಾಗವನ್ನು ವಿಸ್ತರಿಸಿಡುವುದಕ್ಕಾಗಿ ಹಿಂದೆ ಉಪಯೋಗಿಸುತ್ತಿದ್ದ (ಸಾ., ತಿಮಿಂಗಿಲಾಸ್ಥಿಯಿಂದ ಮಾಡಿದ)] ದುಂಡು ಪಟ್ಟಿಗಳ ಸುತ್ತು ಕಟ್ಟು ; ಬಳೆಯಾಕಾರದ ಕಟ್ಟುಗಳಿಂದ ವಿಸ್ತರಿಸಿರುವ ವೋಟು ಲಂಗ.

Fásces (L) ಫ್ಯಾಸಿ(ೕ)ಸ್ (ನಾ., ಬ. ವ.) (ರೋಮನ್ ಚರಿತ್ರೆ) (ಶ್ರೇಷ್ಠ ದಂಡಾಧಿಕಾರಿಯ ಮುಂದೆ ಅಧಿಕಾರ ಸೂಚನೆಗಾಗಿ ಕಟ್ಟಿಗೆಯವನು ಹಿಡಿದುಕೊಂಡು ಹೋಗುತ್ತಿದ್ದ, ಮಧ್ಯದಲ್ಲಿ ಕೊಡಲಿಯನ್ನು ಅಲಗು ಹೊರಕ್ಕೆ ಹೊರಟಿರುವಂತೆ ಸೇರಿಸಿ ಕಟ್ಟಿದ) ದಂಡಗಳ ಕಟ್ಟು. ಅಧಿಕಾರ ಚಿಹ್ನೆ ; ಅಧಿಕಾರ. **Fáscis** (L) ಫ್ಯಾಸಿಸ್ (ನಾ., ಏ. ವ.) ಕಂತೆ ; ಕಟ್ಟು.

Fáscia (L) ಫ್ಯಾಷಿಯ (ನಾ.) (ವಾ. ಶಾ.) ಸೂರಿನ ಅಥವಾ ಕಪೋತದ ತಳಗಡೆ ಹಾಕಿರುವ ಮರದ ಅಥವಾ ಕಲ್ಲಿನ ಉದ್ದವಾದ ಚಪ್ಪಟೆಯ ಪರಿಸೆ. (ಅಂ. ರ. ಶಾ.) ತಂತುರೂಪದ ಅಂಗಾಂಶದ ಕೋಶ. ಪಟ್ಟೆ ; ಪಟ್ಟಿ ; ವಲಯ ; ವೇಷ್ಟನ. **Fásciated** — ಯೇಟೆಡ್ (ಗು.) (ಸ. ವಿ.) (ಹೊದ್ದಿಕೊಂಡಿರುವ ಭಾಗಗಳು) ಒಂದುಗೂಡಿಸಲ್ಪಟ್ಟ, ಒತ್ತಿಕೂಡಿಸಿದ, ಒಂದಾಗಿ ಬೆಳೆದ. ಪಟ್ಟೆ ಪಟ್ಟೆಯಾಗಿರುವ. **Fasciátion** (ನಾ.) (ಒಂದು ಅಂಗ, ಮೊ. ನ್ನು) ಕಟ್ಟುಗಳಿಂದ ಕಟ್ಟುವುದು ; ಅಂಥ ಕಟ್ಟು ; ಈ ಸ್ಥಿತಿ. (ಸ. ವಿ.) ಅನೇಕ ಕಾಂಡಗಳು ಒಂದುಗೂಡಿ ಬೆಳೆದಂತೆ ದಪ್ಪವಾಗಿಯೂ ಚಪ್ಪಟೆಯಾಗಿಯೂ ಕಾಣುವ ಸಸ್ಯಕಾಂಡದ ಸಾಮಾನ್ಯ ವಿಕಾರ ಬೆಳವಣಿಗೆ.

Fáscicle, -icule, -ículus ಫ್ಯಾಸಿಕ್‌ಲ್, —ಕ್ಯೂರ್, — ಕ್ಯು(ಕ್ಯೂ)ಲಸ್ (ನಾ.) (ಸ. ವಿ., ಮೊ.) ಗೊಂಚಲು ; ಗುಚ್ಛ ; ಕುಚ್ಚು ; ಕಟ್ಟು ; ಕಂತೆ. (ಭಾಗ ಭಾಗವಾಗಿ ಪ್ರಕಟಿಸುವ ಪುಸ್ತಕದ) ಒಂದು ಭಾಗ, ಸಂಚಿಕೆ. **Fáscicled** (ಗು.) ಗೊಂಚಲುಗಳಾಗಿ, ಗುಚ್ಛಗಳಾಗಿ, ಅಳವಡಿಸಿದ. **Fascícular** (ಗು.) ಕಟ್ಟಿಗೆ, ಗುಚ್ಛಕ್ಕೆ, ಸಂಬಂಧಿಸಿದ ; ಕುಚ್ಚುಕುಚ್ಚಾಗಿರುವ. **Fascículate** (ಗು.) = Fascicled. **Fascículated** (ಗು.) ; **Fasciculátion** (ನಾ.) — ಸ್ಥಿತಿ ; — ರೀತಿಯಲ್ಲಿರುವದು ; ಗೊಂಚಲು ; ಗುಚ್ಛ.

Fáscinate ಫ್ಯಾಸಿನೇಟ್ (ಕ್ರಿ. ಸಕ.) (ಮು., ಹಾವುಗಳ ವಿಷಯದಲ್ಲಿ, ಸಿಕ್ಕಿಬಿದ್ದ ಪ್ರಾಣಿಗೆ ತಪ್ಪಿಸಿಕೊಂಡುಹೋಗುವ ಅಥವಾ ಎದುರು ಬೀಳುವ) ಶಕ್ತಿಯನ್ನು ದೃಷ್ಟಿಯಿಂದ ಅಥವಾ ಸನ್ನಿಧಿಯಿಂದ ಕಳೆದುಬಿಡು. ತಡೆಯಲಾಗದಂತೆ ಆಕರ್ಷಿಸು ; ಮೋಹಗೊಳಿಸು ; ಮೋಹನಗೊಳಿಸು ; ಮರುಳುಗೊಳಿಸು ; ಸ್ತಂಭಿಸು ; ಸ್ತಬ್ಧ ಮಾಡು ; ಮುಗ್ಧ ಮಾಡು ; ಮಂಕುಗವಿಸು. **Fáscinating** (ಗು.) ; **Fáscinatingly** (ಕ್ರಿ. ವಿ.) ; **Fáscinátion** (ನಾ.) ಮಂತ್ರ ಹಾಕುವುದು ; ಮಾಟ ಮಾಡುವುದು ; ಮಂತ್ರದಿಂದ ಬಂಧಿಸುವುದು ; ಮೋಹಗೊಳಿಸುವ, ಸ್ತಬ್ಧಮಾಡುವ, — ಗುಣ ; ಆಕರ್ಷಕ ಶಕ್ತಿ ; ಆಕರ್ಷಣ ; ಮೋಹ. **Fáscinator** (ನಾ.) ಆಕರ್ಷಕ ; ಮೋಹಕ. ಹೆಂಗಸಿನ ಒಂದು ತೆರದ ತಲೆಗವಿಸು.

Fascíne ಫ್ಯಾಸೀನ್ (ನಾ. ; ಸಾ., ಬ. ವ. ದಲ್ಲಿ) (ಸೈನ್ಯ) (ಕುರುಚಲು ಗಿಡದ ಕಟ್ಟಿಗೆ, ಮೊ. ನ್ನು ಗಟ್ಟಿಯಾಗಿ ಬಿಗಿದು ಕಟ್ಟಿದ) ಉದ್ದವಾದ ದುಂಡನೆಯ ಕಂತೆ ; ಕುರುಚಲು ಕಂತೆ, — ಕಟ್ಟು (ಕಂದಕಗಳನ್ನು ಮುಚ್ಚುವುದಕ್ಕೂ ಬತೇರಿ, ಮೊ. ನ್ನು ಕಟ್ಟುವುದಕ್ಕೂ ಉಪಯೋಗ). F. dwelling ಚರಿತ್ರಪೂರ್ವದ ಸರೋವರ ಗೃಹ (ಕಟ್ಟಿಗೆಯ ಕಂತೆಗಳನ್ನು ತಾರುಮಾರಾಗಿ ನೀರಿನ ತಳದಲ್ಲಿ ಮುಳುಗಿಸಿ ಅದರ ಆಧಾರದಮೇಲೆ ಕಟ್ಟಿದುದು)

Fáscism ಫ್ಯಾಷಿ(ಸಿ)ಸ್ಸ್‌ಮ್, **Fascísmo** (It.) ಫಾಷೀಸ್ಮೊ (ನಾ.) ಕಳೆದ ಮಹಾಯುದ್ಧ ಕಾಲದಲ್ಲಿ ಇಟಲಿಯಲ್ಲಿ ಸಕಲ ಜನ ಸ್ವಾಮ್ಯ ತತ್ತ್ವಕ್ಕೆ (ಕಮ್ಯೂನಿಸ್ಟ್ ತತ್ತ್ವಕ್ಕೆ) ವಿರೋಧವಾಗಿ ಹುಟ್ಟಿ ಸಿನ್ಯಾರ್ ಮೂಸೊಲೀನಿಯ ನೇತೃತ್ವದಲ್ಲಿ ಬೆಳೆದು ಸರ್ವಾಧಿಕಾರ ಪದ್ಧತಿಯಲ್ಲಿ ಪರ್ಯವಸಾನವಾದ ರಾಜಕೀಯ ಚಳವಳಿಯ ಸೂತ್ರ ಸಂವಿಧಾನಗಳು ; ಇತರ ದೇಶಗಳಲ್ಲೂ ಕಾಣುವ ಇಂತಹ ತತ್ತ್ವ : ಸರ್ವಾಧಿಕಾರ ತತ್ತ್ವ ; 'ಫ್ಯಾಸಿಸ್ಟ್' ತತ್ತ್ವ. **Fáscist** ಫ್ಯಾಷಿ(ಸಿ)ಸ್ಟ್ (ನಾ.) ಫ್ಯಾಸಿಸ್ಟ್ ಪಂಗಡದವನು. **Fascísta** ಫಷಿಸ್ಟ, ಫಾಷೀಸ್ಟಾ (ನಾ.) ; **Fascísti** — ಸ್ಟೀ (ನಾ. : Fascista ಪದದ ಬ. ವ.) 'ಬಾಲ್ಷೆವಿಸ್ಟರು', 'ಕಮ್ಯೂನಿಸ್ಟರು', ಮೊ. ಎಲ್ಲ ತೀವ್ರಗಾಮಿ ಚಳವಳಿಗಾರರನ್ನೂ ಪ್ರತಿಭಟಿಸಲು ಇಟಲಿಯ ದೇಶಾಭಿಮಾನಿಗಳಿಂದ ೧೯೧೯ನೆಯ ಇಸವಿಯಲ್ಲಿ ಇಟಲಿಯಲ್ಲಿ ಏರ್ಪಟ್ಟ ಒಂದು ಸಂಸ್ಥೆ [ಇದು ಬನ್ನಿಟೋ ಮೂಸೊಲೀನಿ ಎಂಬಾತನ ನೇತೃತ್ವದಲ್ಲಿ ರಾಜ್ಯದ ಸರ್ಕಾರವೇ ಆಗಿ ಪರಿಣಮಿಸಿ ಸಾಂಘಿಕ ತತ್ತ್ವಗಳನ್ನೊಳಕೊಂಡ ಅನೇಕ ಹೊಸ ಏರ್ಪಾಡುಗಳನ್ನು ಜಾರಿಗೆ ತಂದಿದೆ. ಪ್ರತಿ ಸ್ಥಾನಿಕ ಶಾಖೆಗೂ 'ಫ್ಯಾಸಿಯೋ' (Fascio) ಎಂದೂ, ಈ ಎಲ್ಲ ಶಾಖೆಗಳನ್ನೂ ಒಳಕೊಂಡ ಒಟ್ಟುಸಂಸ್ಥೆಗೆ 'ಫ್ಯಾಸ್ಕಿ' (Fasci) ಎಂದೂ ಹೆಸರು)]. (ಜರ್ಮನಿ, ಗ್ರೇಟ್‌ಬ್ರಿಟನ್, ಮೆಕ್ಸಿಕೊ, ಜಪಾನ್, ಮೊ.) ಇತರ ದೇಶಗಳಲ್ಲಿಯ ಇಂತಹ ಸಂಸ್ಥೆ.

Fash ಫ್ಯಾಷ್ (ಕ್ರಿ. ಸಕ., ನಾ.) (ಸ್ಕಾ. ಪ್ರ.) ತೊಂದರೆ (ಮಾಡು, ಪಡಿಸು) ; ಕಾಟ (ಕೊಡು) ; ಅನನುಕೂಲ (ಪಡಿಸು) ; ಕ್ಲೇಶ (ಗೊಳಿಸು)

Fáshion ಫ್ಯಾಷ(ಷ್)ನ್ (ನಾ., ಕ್ರಿ. ಸಕ.) ಮಾಟ ; ಮೊಳ್ಳೆ (ಗ್ರಾಂ.). ಆಕಾರ ; ರೀತಿ ; ಮಾದರಿ ; ಬಗೆ ; ಪ್ರಕಾರ ; ಲಕ್ಷಣ (After the f. of ಅಂತೆ, ಆ ರೀತಿಯಲ್ಲಿ. Walk crab-f. ಏಡಿಯಂತೆ ನಡೆ. After a f., In a f. ತೃಪ್ತಿಕರವಲ್ಲದೆ ಹೇಗೋ, ಏನೋ, ಒಂದು ರೀತಿಯಲ್ಲಿ). (ಮು., ಉಡುಪಿನ ವಿಷಯದಲ್ಲಿ) ಬಳಕೆಯಲ್ಲಿರುವ ಪದ್ಧತಿ, ರೀತಿ, ರೂಢಿ, ರೂಢಿಯ ಶೈಲಿ (F.- plate ಉಡುಪಿನ ಶೈಲಿಯನ್ನು ತೋರಿಸುವ ಚಿತ್ರಪಟ). (ಸಮಾಜದಲ್ಲಿ ಉನ್ನತ ತರಗತಿಯವರ ನಡೆವಳಿಯ) ಮರ್ಯಾದೆ, ಸಂಪ್ರದಾಯ [The f. ಕಾಲಾನುಗುಣವಾಗಿ ಅಂಥವರು ಅನುಸರಿಸುವ ಸಂಪ್ರದಾಯಗಳು. Set the f. ಸಂಪ್ರದಾಯ ಹಾಕು. In f. ವ್ಯವಹಾರದಲ್ಲಿರುವ ; ರೂಢಿಯಲ್ಲಿರುವ. Out of f. ರೂಢಿಯಳಿದ. The f. ಸಮಾಜದಲ್ಲಿ ಉಡುಪು, ಮಾತು ಕತೆ, ನಡೆವಳಿ, ಮೊ. ಗಳಲ್ಲಿ ಒಂದು ಕಾಲದಲ್ಲಿ ಅನುಸರಿಸುವ ಶೈಲಿ ; ಶೈಲಿ, ಮೊ. ಗಳಲ್ಲಿ ಇತರರ ಮೆಚ್ಚಿಗೆಗೆ ಪಾತ್ರವಾಗಿರುವ ವಸ್ತು ಅಥವಾ ವ್ಯಕ್ತಿ. Man or woman of f. ಸಮಾಜದ ಮೇಲ್ತರಗತಿಯ ಸಂಪ್ರದಾಯಗಳನ್ನು ಅನುಸರಿಸುವವನು(ಳು) ; ನೀಟುಗಾರ ; ನೀಟುಗಾತಿ ; ಸಮಾಜದಲ್ಲಿ ಮೇಲ್ತರಗತಿಯವನು(ಳು)]. (ಕ್ರಿ.) ಆಕಾರ, ರೂಪು, — ಕೊಡು ; ರೂಪಿಸು ; ಮಾಡು ; ನಿರ್ಮಿಸು (*Into, to* ಉಪ. ದೊಡನೆ). (-) **fashioned** (ಗು.) ; **Fáshionable** (ಗು., ನಾ.) ಸಂಪ್ರದಾಯಗಳನ್ನು ಅನುಸರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುವ ; — ಗಳಿಗೆ ಹೊಂದುವ ; ಸಂಪ್ರದಾಯಾನುವರ್ತಿಗಳ ವೈಲಕ್ಷಣ್ಯದ, ವಿಷಯದ ; ಸಂಪ್ರದಾಯದ ; ರೂಢಿಯ. ನೀಟುಗಾರರ ; ಸೊಗಸುಗಾರರ ; ನೀಟಿನ ; ನೀಟುತನದ. (ನಾ.) ನೀಟುಗಾರ ; ಸೊಗಸುಗಾರ. **Fáshionableness** (ನಾ.) ; **Fáshionably** (ಕ್ರಿ. ವಿ.)

Fast[1] ಫಾಸ್ಟ್ (ಕ್ರಿ. ಅಕ., ನಾ.) (ಮತಾಚರಣೆಗಾಗಲಿ, ವ್ಯಸನ ಸೂಚನೆಗಾಗಲಿ) ಊಟವನ್ನು ಅಥವಾ ಕೆಲವು ಆಹಾರಪದಾರ್ಥಗಳನ್ನು ಬಿಡು, ವರ್ಜಿಸು, ತ್ಯಜಿಸು ; ಉಪವಾಸ (ಮಾಡು) ; ಲಂಘನ (ಮಾಡು) ; ಉಪೋಷಣ(ವಿರು). ಉಪವಾಸದ ದಿನ, ಕಾಲ. F.-day, Fasting-day ಉಪವಾಸದ ದಿನ. Break one's f. (Break ನೋಡಿ)

Fast[2] ಫಾಸ್ಟ್ (ಗು.) ಭದ್ರವಾಗಿ, ಗಟ್ಟಿಯಾಗಿ, ಬಿಗಿಯಾಗಿ, — ಬಂಧಿಸಿದ (Stake f. in the ground ನೆಲದಲ್ಲಿ ಭದ್ರವಾಗಿ ನೆಟ್ಟ ದಸಿ, ಗೂಟ). ಭದ್ರವಾದ ; ಸ್ಥಿರವಾದ ; ದೃಢವಾದ [F. friend or friendship ದೃಢ, ಗಾಢ, — ಸ್ನೇಹಿತ, — ಸ್ನೇಹ, — ಮೈತ್ರಿ. Ship f. aground ಗಾಢವಾಗಿ, ಅಲುಗದಂತೆ, ನೆಲಹತ್ತಿದ ಹಡಗು. F. asleep ಗಾಢ ನಿದ್ರೆಯಲ್ಲಿ. A f. prisoner ಬಂಧಿತನಾಗಿರುವ ಸೆರೆಯಾಳು, ಕೈದಿ : ಕಟ್ಟು ಕೈದಿ. F. colour ಒಗೆದರೂ ಹೋಗದ ಬಣ್ಣ ; ಗಟ್ಟಿ ಬಣ್ಣ. Make f. ಬಿಗಿ ; ಕಟ್ಟಿಹಾಕು ; ಬಂಧಿಸು. Play f. and loose ಪೂರ್ವಾಪರ ಅಸಂಬದ್ಧವಾಗಿ ವರ್ತಿಸು ; ಒಂದು ಆಡಿ ಮತ್ತೊಂದು ಮಾಡು. Door is f. ಬಾಗಿಲು ಭದ್ರವಾಗಿದೆ, ಬಂಧಿಸಿದೆ, ಬೀಗ ಹಾಕಿದೆ. Take f. hold of ಬಿಗಿಯಾಗಿ, ಭದ್ರವಾಗಿ, ಹಿಡಿದುಕೊ. F. with gout ವಾಯುರೋಗದಿಂದ ಅಳ್ಳಾಡದಂತಾಗಿ ; ಕೀಲುಗಳು ಕಟ್ಟಿಕೊಂಡು]. ವೇಗವಾದ ; ವೇಗದಿಂದ ಚಲಿಸುವ ; ಶೀಘ್ರಗಾಮಿ ; ವೇಗ ಗತಿಯನ್ನುಂಟುಮಾಡುವ ; ಜೋರಾದ. F. train ವೇಗವಾಗಿ ಹೋಗುವ ರೈಲುಬಂಡಿ ; ವೇಗದ —. F. cricket-ground, billiard-table ಚೆಂಡು ವೇಗದಿಂದ ಹೋಗುವಂತಿರುವ, ಕ್ರಿಕೆಟ್‌ಬಯಲು, ಬಿಲಿಯರ್ಡ್ಸ್‌ಮೇಜು. Watch is f. ಗಡಿಯಾರ ಮುಂದೆಹೋಗುತ್ತಿದೆ, ಇರುವುದಕ್ಕಿಂತ ಹೆಚ್ಚುಕಾಲವನ್ನು ತೋರಿಸುತ್ತಿದೆ. F. person ದುರ್ವ್ಯಯಿ, ದುರ್ವ್ಯಸನಗಳಿಗೆ ಸಿಕ್ಕಿದವನು ; ಶಕ್ತಿಯನ್ನೂ ಆಯುಸ್ಸನ್ನೂ ಬೇಗ ಬೇಗ ಕಳೆದುಕೊಳ್ಳುತ್ತಿರುವವನು ; ಷೋದಾ ಮನುಷ್ಯ. **Fástish** (ಗು.) ಸುಮಾರು ವೇಗವುಳ್ಳ. **Fásten** ಫಾಸ್‌ನ್ (ಕ್ರಿ.) ಭದ್ರಪಡಿಸು ; ಕಟ್ಟಿಹಾಕು ; ಗಂಟುಹಾಕು ; ಕಟ್ಟು ; ಬಿಗಿ ; ಬಿಗಿಸು ; ಬಂಧಿಸು ; ಅಂಟಿಸು (*To, upon, on* ಉಪ. ದೊಡನೆ) (F. garment, door ಉಡುಪನ್ನು, ಬಾಗಿಲನ್ನು, ಭದ್ರಪಡಿಸು. F. bolt ಅಗುಳಿ, ತಾಪಾಳು, — ಹಾಕು. F. string ದಾರ ಬಿಗಿ. F. off thread, &c. ದಾರ, ಮೊ. ನ್ನು ಗಂಟುಹಾಕಿ, ಅಥವಾ ಇತರ ವಿಧದಲ್ಲಿ, ಬಿಗಿಮಾಡು). (ದೃಷ್ಟಿ, ಆಲೋಚನೆ, ಮೊ. ನ್ನು ಯಾವುದಾದರೊಂದರ ಮೇಲೆ) ಇಡು, ನೆಡು, ನಿಲ್ಲಿಸು (*Upon, on* ಉಪ. ದೊಡನೆ). (ಅಡ್ಡ ಹೆಸರು, ಅಪಾದನೆ, ಮೊ. ನ್ನು) ಇಡು, ಕಟ್ಟು, ಆರೋಪಿಸು (*Upon, on* ಉಪ. ದೊಡನೆ). [F. quarrel upon (ಒಬ್ಬನ, ಒಂದರ, ಮೇಲೆ) ಜಗಳ ತೆಗೆ, ಹೂಡು ; ಕಾಲ್ಕೆರೆದುಕೊಂಡು, ಕೆಣಕಿಕೊಂಡು, —(ಜಗಳಕ್ಕೆ) ಹೋಗು]. ಹಿಡಿದುಕೊ ; ಬಿಗಿಯಾಗು ; ಸೇರಿಕೊ ; ಅಂಟಿಕೊ [Door will not f. ಬಾಗಿಲು ಬಿಗಿಯಾಗಿ ಮುಚ್ಚಿಕೊಳ್ಳುವುದಿಲ್ಲ. Fasten (up)on ಹಿಡಿದುಕೊ ; ಮೇಲೆ ಬೀಳು ; ಮೇಲೆ ಬೀಳಲು ಗುರಿಯಿಟ್ಟುಕೊ ; (ನಿಪ) ತೆಗೆ, ಹೂಡು]. **Fástener** (ನಾ.) ಬಿಗಿ, ಭದ್ರ, ಮಾಡುವವನು ; — ವದು. **Fástening** (ನಾ.) ಬಿಗಿ ಮಾಡಲು, ಭದ್ರಪಡಿಸಲು, ಹಾಕಿರುವ ಸಾಧನ ; ಕಟ್ಟು ; ಕಸೆ ; ಬಂಧನಿ. **Fástness** (ನಾ.) (Fast ಪದದ ಗುಣವಾಚಕಾರ್ಥಗಳಲ್ಲಿ) ; ಕೋಟೆ ; ಕಿಲ್ಲೆ ; ದುರ್ಗ.

Fast (ಕ್ರಿ. ವಿ. ; ತರ ತಮಗಳು : -er, -est) ದೃಢವಾಗಿ ; ಗಟ್ಟಿಯಾಗಿ ; ಭದ್ರವಾಗಿ ; ಗಾಢವಾಗಿ ; ಬಿಗಿಯಾಗಿ ; ಅಳ್ಳಾಡದಂತೆ ; ಸ್ಥಿರವಾಗಿ (Stand, sit, stick, f. ಭದ್ರವಾಗಿ, — ನಿಲ್ಲು, ಕೂಡು ; ಅಂಟಿಕೊ. F. bind, f. find ಭದ್ರವಾಗಿಟ್ಟದ್ದು ಬೇಗನೆ ಸಿಕ್ಕುವುದು ; ಕಳೆದುಕೊಳ್ಳಬಾರದವನ್ನು ಬೀಗ ಹಾಕಿ ಭದ್ರಪಡಿಸು. Eyes f. shut ಕಣ್ಣುಗಳನ್ನು ಭದ್ರವಾಗಿ ಮುಚ್ಚಿಕೊಂಡು. Sleep f. ಗಾಢನಿದ್ರೆ ಮಾಡು). (ಕಾವ್ಯ, ಪ್ರಾಚೀ. ಪ್ರ.) ಪಕ್ಕದಲ್ಲಿಯೇ ; ಹತ್ತಿರದಲ್ಲಿಯೇ ; ಬೆನ್ನ ಹಿಂದೆಯೇ ; ಜಾಗ್ರತೆಯಾಗಿ ; ಬೇಗನೆ ; ಬೇಗಬೇಗನೆ ; ವೇಗವಾಗಿ ; ಬಿರುಸಾಗಿ ; ಬಿರ್ರನೆ ; ಶೀಘ್ರವಾಗಿ ; ತ್ವರಿತದಿಂದ. Live f ಹೆಚ್ಚು ಶಕ್ತಿಯನ್ನು ಬೇಗನೆ ಕಳೆದುಕೊ ; ವ್ಯಭಿಚಾರ, ಮೊ. ದುರ್ವ್ಯಸನಗಳಿಗೆ ಸಿಕ್ಕಿ ಶಕ್ತಿಯನ್ನೂ ಆಯುಸ್ಸನ್ನೂ ನಷ್ಟಮಾಡಿಕೊ.

Fásten. **Fast**[2] (ಗು.) ನೋಡಿ.

Fásti (L) ಫ್ಯಾಸ್ಟೈ (ನಾ., ಬ. ವ.) ಘಟನೆಗಳ ಕಾಲಕ್ರಮದ ದಾಖಲೆಯ ಪುಸ್ತಕ ; ಘಟನೆಗಳ ಪಂಚಾಂಗ ; ವರ್ಷಾನುಚರಿತೆ.

Fastídious ಫ್ಯಸ್ಟಿಡಿಯಸ್ (ಗು.) ಸುಲಭದಲ್ಲಿ ಬೇಸರಗೊಳ್ಳುವ ; ಮೆಚ್ಚಿಸಲು ಕಷ್ಟವಾದ ; ದುರಾರಾಧ್ಯ ; ಸೂಕ್ಷ್ಮ ರುಚಿಯ ; ಅತಿ ಸೂಕ್ಷ್ಮದ ; ತೀವ್ರ ವಿಮರ್ಶೆಯ ; ಅತಿ ನಾಜೂಕಿನ. **Fastídiously** (ಕ್ರಿ. ವಿ.) ; **Fastídiousness** (ನಾ.)

Fastígiate ಫ್ಯಾಸ್ಟಿಜಿಯೆಟ್ (ಗು.) (ಸ. ವಿ.) ಶಂಕುವಿನಾಕಾರದ ; ತುದಿಯಕಡೆಗೆ ಮೊನಚಾಗುತ್ತ ಹೋಗುವ.

Fat ಫ್ಯಾಟ್ (ಗು.) ಕೊಬ್ಬಿದ ; ಕೊಬ್ಬಿಸಿದ ; (ಆಹಾರಕ್ಕಾಗಿ) ಕೊಬ್ಬುವಂತೆ ಬೆಳಸಿದ ; ಪುಷ್ಟಿಗೊಳಿಸಿದ ; ಚೆನ್ನಾಗಿ ಮೇಯಿಸಿದ ; ದುಂಡುದುಂಡಾಗಿರುವ ; ಮೈ ತುಂಬಿಕೊಂಡಿರುವ ; (Cut up f. ಹೆಚ್ಚು ಹಣ ಬಿಟ್ಟುಹೋಗು). ಬೊಜ್ಜು ಬೆಳೆದ ; ಸ್ಥೂಲ ಕಾಯದ ; ದಪ್ಪನಾದ (ಮು., ಅಚ್ಚಿನ ಮೊಳೆಗಳ ವಿಷಯದಲ್ಲಿ) ; ಪುಷ್ಟ. ಜಿಡ್ಡುಳ್ಳ ; ಜಿಡ್ಡಿನ ; ಜಿಡ್ಡಾದ ; ಎಣ್ಣೆಯುಳ್ಳ ; ಎಣ್ಣೆಯ ; ಕೊಬ್ಬುಳ್ಳ ; ಕೊಬ್ಬಿನ ; ಮೇದಸ್ಸುಳ್ಳ ; ಮೇದಸ್ಸಿನ ; (Cut it f. ಪ್ರದರ್ಶನ ಮಾಡು) (ಕಲ್ಲಿದ್ದಲಿನ ವಿಷಯದಲ್ಲಿ) 'ಬಿಟ್ಯುಮೆನ್' ಎಂಬ ರಾಳಪದಾರ್ಥದಿಂದ ಕೂಡಿದ. (ಜೇಡಿಮಣ್ಣು, ಮೊ. ಗಳ ವಿಷಯದಲ್ಲಿ) ಅಂಟಂಟಾಗಿರುವ ; ಜಿಗುಟಾದ. ಫಲವತ್ತಾದ ; ಹುಲುಸಾದ ; ಸಮೃದ್ಧವಾಗಿ ಕೊಡುವ ; ತುಂಬು ಫಲದ [F. lands ಬಹಳ ಫಲವತ್ತಾದ ಜಮೀನುಗಳು. F. benefice ಹೆಚ್ಚು ಆದಾಯದ ಮಠಮಾನ್ಯ. F. job ಹೆಚ್ಚು ವರಮಾನ ಬರುವ ಉದ್ಯೋಗ. A. f. lot (ಅಸಂ.) ಬಹಳ ಹೆಚ್ಚು ; ಯಥೇಷ್ಟ ; ಸಮೃದ್ಧಿ ('ಬಹಳ ಸ್ವಲ್ಪ' ಎನ್ನುವುದಕ್ಕೆ ಸಾ., ವ್ಯಂಗ್ಯಾರ್ಥದಲ್ಲಿ)]. ಮಂದ ಬುದ್ಧಿಯ ; ಜಡ ; ಆಲಸ ; ಸೋಮಾರಿ (F.-head ದಪ್ಪ ತಲೆಯವನು ; ದಡ್ಡ ; ಮಡ್ಡಿ. F.-witted ಮಂದ ಬುದ್ಧಿಯ ; ದಡ್ಡ). F. guts ಸ್ಥೂಲ ಮನುಷ್ಯ ; ಊದಿದ ಮೈಯುಳ್ಳವನು ; ಬೊಜ್ಜು ಬೆಳೆದವನು ; ದಡಿಯ. F.-hen 'ಗೂಸ್‌ಫುಟ್' ಎಂಬ ಜಾತಿಯ ಒಂದು ಗಿಡ. **Fátling** ಫ್ಯಾಟ್ಲಿಂಗ್ (ನಾ.) (ಪ್ರಾಣಿಯ) ಕೊಬ್ಬಿಸಿದ ಮರಿ. **Fátness** (ನಾ.) ; **Fátten** ಫ್ಯಾಟನ್ (ಕ್ರಿ.) ಕೊಬ್ಬಿಸು (ಮು. ಪ್ರಾಣಿಗಳನ್ನು ಆಹಾರಕ್ಕಾಗಿ) ; ಪುಷ್ಟಿಗೊಳಿಸು ; ಕೊಬ್ಬು ; ಕೊಬ್ಬಿ ಬೆಳೆ ; ಬೊಜ್ಜು ಬೆಳೆ ; ಮೈ ತುಂಬಿಕೊ. (ನೆಲವನ್ನು ಗೊಬ್ಬರ ಹಾಕಿ) ಫಲವತ್ತಾಗಿ ಮಾಡು, ಹುಲುಸು ಮಾಡು, ಕಸುವು ಮಾಡು. **Fáttish** (ಗು.) ; **Fátty** (ಗು., ನಾ.) (F. degeneration of heart or kidney ಹೃದಯದಲ್ಲಿ ಅಥವಾ ಮೂತ್ರಜನಕಾಂಗದಲ್ಲಿ ವಿಪರೀತವಾಗಿ ಮೇದಸ್ಸು ಸೇರುವ ರೋಗ). (ನಾ.) ಕೊಬ್ಬು ಬೆಳೆದ, ಮೈ ತುಂಬಿಕೊಂಡಿರುವ, —ಮಗು, ಮೊ. (ಸಾ., ಸಂಬೋಧನೆಯಲ್ಲಿ)

Fat (ನಾ., ಕ್ರಿ.) ಕೊಬ್ಬಿದ, ಪುಷ್ಟ, ಸಾರ, ಉತ್ಕೃಷ್ಟ, — ಭಾಗ (Live on the f. of the land ಎಲ್ಲದರಲ್ಲಿಯೂ ಉತ್ತಮವಾದುದನ್ನು ಅನುಭವಿಸು). (ಪ್ರಾಣಿಗಳ ಪುಷ್ಟಭಾಗಗಳಲ್ಲಿರುವ) ಕೊಬ್ಬು, ಮೇದಸ್ಸು. [The f. is in the fire (ರೂಪ.) ಸ್ವಲ್ಪ ಅಚಾತುರ್ಯದಿಂದ ಗೊಂದಲವೇಳುತ್ತದೆ, ಕೆಲಸ ಕೆಡುತ್ತದೆ (ಕರಿಯುವಾಗ ತುಪ್ಪ ಬೆಂಕಿಯಲ್ಲಿ ಬಿದ್ದರೆ ಆಗುವಂತೆ)]. (ರಂಗ ಭೂಮಿ) ನಟನಿಗೆ ಕಳೆಕಟ್ಟಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಟಕಭಾಗ. (ರ. ವಿ.) 'ಗ್ಲಿಸರಿನ್' ಮತ್ತು ಅಮ್ಲದ ಜೈವಿಕ ಸಂಯುಕ್ತ. (ಕ್ರಿ.) ಕೊಬ್ಬಿಸು; ಬಲಿಸು [Kill the fatted calf for (ಹಿಂದಿರುಗಿ ಬಂದ ದುಂದುಗಾರನನ್ನು) ಸಂತೋಷದಿಂದ ಬರಮಾಡಿಕೊ, ಸ್ವಾಗತಿಸು]. **Fátless** (ಗು.)

Fátal, Fátalism, &c. Fate ನೋಡಿ.

Fáta morgána (It.) ಫಾಟ ಮಾರ್ಗಾನ (ನಾ.) ಒಂದು ತೆರದ ಮರೀಚಿಕೆ, ಬಿಸಿಲ್ಗುದುರೆ (ಮು., ಮೆಸೀನ ಜಲಸಂಧಿಯಲ್ಲಿ ಕಾಣಬರುವದು)

Fate ಫೇಟ್ (ನಾ., ಕ್ರಿ. ಸಕ.) ಅದೃಷ್ಟ; ವಿಧಿ; ನಿಯತಿ; ದೈವ. (ಪುರಾಣ) ಅದೃಷ್ಟದೇವತೆ; ಮೂವರು ವಿಧಿದೇವಿಯರಲ್ಲಿ ಒಬ್ಬಳು. (ನಡೆಯುವಂತೆ) ವಿಧಿನಿಯತವಾದದ್ದು; (ಒಬ್ಬನ) ಹಣೆಯಬರಹ. ಪರಿಣಾಮ, ಗತಿ, ಪಾಡು, ಪಾಲು (Decide, fix, seal, one's f. ಒಬ್ಬನ ಪರಿಣಾಮವನ್ನು ಗೊತ್ತುಮಾಡು, ನಿರ್ಧರಿಸು, ಖಂಡಿತ ಮಾಡು). ಸಾವು; ಮೃತ್ಯು; ನಾಶ. (ಕ್ರಿ., ಸಾ., ಕರ್ಮಣಿಯಲ್ಲಿ) ಮೊದಲೇ ಗೊತ್ತುಮಾಡು, ಗೊತ್ತಾಗಿರು (He was fated to do, to be; It was fated that— ಅವನು ಮಾಡಬೇಕೆಂದು, ಆಗಬೇಕೆಂದು, ವಿಧಿಯಿದ್ದಿತು). (ಭೂ. ಕೃ.) ನಾಶಕ್ಕೀಡಾದ; ವಿನಾಶಕ್ಕೊಳಗಾದ; ನಾಶಹೊಂದಲಿರುವ. **Fátal** (ಗು.) ಅದೃಷ್ಟದಂತೆ, ವಿಧಿಯಂತೆ,— ತಪ್ಪಿಸಿಕೊಳ್ಳಲಾಗದ, ಅಪರಿಹಾರ್ಯ, ಅವಶ್ಯ; ಅದೃಷ್ಟದ; ವಿಧಿಯ; ದೈವಿಕ (F. sisters ಅದೃಷ್ಟದೇವಿಯರು. F. thread ಹಣೆಬರಹದ, ವಿಧಿ ಗೊತ್ತುಮಾಡಿರುವ, — ಜೀವಮಾನ ಕಾಲ, ಆಯುಸ್ಸು. F. shears ಜೀವಗತ್ತರಿ; ಸಾವು; ಮರಣ; ಮೃತ್ಯು). ಅದೃಷ್ಟವಶ; ವಿಧಿ ನಿಯತ. ಮುಖ್ಯವಾದ; ನಿರ್ಧರಿಸುವ; ನಿರ್ಧಾರಕ. ನಾಶಮಾಡುವ; ನಾಶಕಾರಕ; ಕೇಡು ತರುವ; ಹಾನಿಕರ; ವಿನಾಶಕರ; ಅಪಾಯಕರ; ಅಂತಕ; ಸಾವು ತರುವ; ಮಾರಕ; ಖಂಡಿತವಾಗಿ ಕೊಲ್ಲುವ; ಭಯಂಕರವಾದ; (ಅತಿಶಯೋಕ್ತಿಯಲ್ಲಿ) ಬಾಧಕ; ಘಾತಕ; ಕೆಟ್ಟ. **Fátally** (ಕ್ರಿ. ವಿ.); **Fátalism** (ನಾ.) ಎಲ್ಲ ಘಟನೆಗಳೂ ಒಂದು ಗೊತ್ತಾದ ರೀತಿಯಲ್ಲೇ ನಡೆಯಬೇಕೆಂದು ವಿಧಿ ಮೊದಲೇ ಗೊತ್ತುಮಾಡಿರುವುದೆಂಬ ನಂಬಿಕೆ; ಎಲ್ಲವೂ ಅದೃಷ್ಟಕ್ಕೆ ಅಧೀನವೆಂದೂ ಆದಕಾರಣ ಪೇಚಾಡಿ ಫಲವಿಲ್ಲವೆಂದೂ ಹೇಳುವ ವಾದ: ನಿಯತಿ ವಾದ; ಅದೃಷ್ಟ ವಾದ; ದೈವಾಯತ್ತ ವಾದ. **Fátalist** (ನಾ.) ನಿಯತಿ ವಾದಿ; ಅದೃಷ್ಟ ವಾದಿ; ದೈವ ವಾದಿ; ವಿಧಿ ವಾದಿ. **Fatalístic** (ಗು.); **Fatalístically** (ಕ್ರಿ. ವಿ.); **Fatálity** ಫಟ್ಯಾಲಿಟಿ (ನಾ.) ಅದೃಷ್ಟಕ್ಕೆ ಅಧೀನವಾಗುವುದು; ಅದೃಷ್ಟದ ಪ್ರಾಬಲ್ಯ; ಅದೃಷ್ಟವಶ; ದೈವಾಧೀನತೆ; ದೈವ ಯೋಗ; ವಿಧಿ ಪ್ರಾಬಲ್ಯ; ವಿಧಿ; ಅದೃಷ್ಟ; ಅಸಹಾಯತೆ; ದುರದೃಷ್ಟ; ದುಷ್ಪ್ರಭಾವ; ಕೇಡು; ಅಪಾಯ; ಹಾನಿ; ವಿಪತ್ತು; (ಯುದ್ಧ, ಮೊ. ಗಳಲ್ಲಿ, ಅಕಸ್ಮಾತ್ ಕಾರಣಗಳಿಂದ) ಸಾವು. **Fátalize** ಫೇಟಲೈಸ್ (ಕ್ರಿ.) ವಿಧಿ ವಾದದಲ್ಲಿ ನಂಬಿಕೆಯುಳ್ಳವನಾಗಿರು; ವಿಧಿಯ ಅಧೀನಕ್ಕೊಳಗಾಗು. **Fáteful** (ಗು.) ಮುನ್ ಸೂಚನೆಯ; ಭವಿಷ್ಯ ಸೂಚನೆಯುಳ್ಳ; ಭವಿಷ್ಯಗರ್ಭಿತ; ಅದೃಷ್ಟವಶದ. ಮುಖ್ಯವಾದ; ನಿರ್ಧಾರಕ; ವಿಧಿ ನಿಶ್ಚಿತ; ದೈವ ನಿಶ್ಚಿತ; ನಾಶಕರ. ಮಹತ್ತ್ವಪೂರ್ಣ; ವಿಶೇಷ ಪರಿಣಾಮವುಳ್ಳ. **Fátefully** (ಕ್ರಿ. ವಿ.); **Fatídic(al)** — ಟಿಡಿ — (ಗು.) ಭವಿಷ್ಯಜ್ಞಾನ ಶಕ್ತಿಯುಳ್ಳ; ಕಾಲಜ್ಞಾನದ; ಮುಂಗಾಣ್ಕೆಯ.

Fáther ಫಾದರ್ (ನಾ.) ತಂದೆ; ಅಪ್ಪ; ಪಿತ; ಜನಕ (ರೂಪ. ಸಹ) (The wish is f. to the thought ಆಸೆಯಂತೆ ಆಲೋಚನೆ. The child is f. to the man ಮನುಜನಿಗೆ ಮಗು ತಂದೆ; ಬೆಳೆಯುವ ಪೈರು ಮೊಳೆಯಲ್ಲೇ ಕಾಣುತ್ತದೆ). ಮಾವ; ಮಲ ತಂದೆ; ದತ್ತು ತಂದೆ (= Adoptive f.). ಮೂಲ ಪುರುಷ; ಪೂರ್ವಜ; ನಿರ್ಮಾಣಕರ್ತ; ಉತ್ಪಾದಕ; ರಚನೆ ಮಾಡಿದವನು; ಪ್ರಾರಂಭ ಕರ್ತ; ಮೊದಲಿಗ; ಪ್ರಾರಂಭ ಕಾಲದ ಮುಂದಾಳು [F. of English poetry ಇಂಗ್ಲಿಷ್ ಕವಿತೆಯ ಜನಕ, ಮೂಲ ಪುರುಷ. F. of lies ಸುಳ್ಳಿನ ಜನಕ; ಸೈತಾನ. F. of the faithful (Faithful ನೋಡಿ). Fathers of the Church or Fathers ಮೊದಲನ ಐದು ಶತಮಾನ ಕಾಲದ ಕ್ರೈಸ್ತ (ಮತ) ಗ್ರಂಥಕಾರರು, ಲೇಖಕರು]. ತಂದೆಯಂತೆ ಗೌರವಕ್ಕೆ ಅರ್ಹನಾದವನು (F. of his country ತನ್ನ ನಾಡಿನ ತಂದೆ). ಧಾರ್ಮಿಕ ಗುರು. ದೇವರು; ಕ್ರೈಸ್ತ ತ್ರಿಮೂರ್ತಿಗಳಲ್ಲಿ ಆದಿ ವ್ಯಕ್ತಿ. (ಪಾಪ ನಿವೇದನೆ ಕೇಳುವ) ಪಾದ್ರಿ; (ಕ್ರೈಸ್ತ) ಸಂನ್ಯಾಸಿಮಠದ ಹಿರಿಯ; [Right, Most, Reverend F. in God (ಬಿಷಪ್ ಮತ್ತು ಆರ್ಚ್‌ಬಿಷಪ್ಪಿನ ಒಕ್ಕಣೆ). The Holy F. ಪೋಪ್‌ಗುರು]; (ಪಾದ್ರಿಯ ಹೆಸರಿಗೆ ಹಿಂದೆ ಸೇರಿಸುವ ಒಕ್ಕಣೆ); ಪೂಜ್ಯ; ಪುರುಷೋತ್ತಮ; ದೇವರು. [F. Christmas, Thames, Time (ಮನುಷ್ಯತ್ವವನ್ನಾರೋಪಿಸಿದವು, ಮೂರ್ತೀಕರಿಸಿದವು)]. ಅತ್ಯಂತ ಹಿರಿಯ ಸದಸ್ಯ; ಪ್ರಮುಖ ಸದಸ್ಯ (F. of the House of Commons ಬ್ರಿಟಿಷ್ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಅತ್ಯಂತ ಹೆಚ್ಚುಕಾಲ ಸಂತತವಾಗಿ ಸದಸ್ಯನಾಗಿರುವವನು). (ಬ. ವ. ದಲ್ಲಿ) ಮುಂದಾಳುಗಳು; ಪ್ರಮುಖರು; ದೊಡ್ಡವರು; ಹಿರಿಯರು (Fathers of the City ಪುರ ಪ್ರಮುಖರು; ನಗರದ ಹಿರಿಯರು; ಪೌರ ಸಭೆಯ ಸದಸ್ಯರು; ನಗರ ಪಿತರು). Conscript Fathers ರೋಮನ್ ವರಿಷ್ಠ ಸಭೆಯ ಸದಸ್ಯರು (ಸೆನೆಟರುಗಳು). **F.-in-law** ಮಾವ (ಗಂಡನ ಅಥವಾ ಹೆಂಡತಿಯ ತಂದೆ). **Fátherhood** (ನಾ.) ಪಿತೃತ್ವ; ತಂದೆತನ (ರೂಪ. ಸಹ). **Fátherland** (ನಾ.) ಸ್ವದೇಶ; ತಂದೆ ನಾಡು; ಜನ್ಮ ಭೂಮಿ (The F.-l. ಜರ್ಮನಿ). **Fátherless** (ಗು.) ತಂದೆಯಿಲ್ಲದ; (ಪುಸ್ತಕ, ಮೊ. ಗಳ ವಿಷಯದಲ್ಲಿ) ಗೊತ್ತಾದ, ತಿಳಿದ, — ಕರ್ತೃವಿಲ್ಲದ; ಅಕರ್ತೃಕ; ಅಜ್ಞಾತ ಕರ್ತೃಕ. **Fátherlike** (ಗು., ಕ್ರಿ. ವಿ.); **Fátherly** (ಗು., ಕ್ರಿ. ವಿ.); **Fátherliness** (ನಾ.); **Fáthership** (ನಾ.) ತಂದೆಯ ಸ್ಥಾನ; ಪಿತೃತ್ವ; = Fatherhood.

Fáther (ಕ್ರಿ. ಸಕ.) (ಮಗುವಿಗೆ) ಜನ್ಮ ಕೊಡು; ತಂದೆಯಾಗಿರು. (ಹೇಳಿಕೆ, ಮೊ. ಕ್ಕೆ) ಮೂಲಕರ್ತನಾಗಿರು. ಒಂದು ಮಗುವಿಗೆ ತಂದೆಯೆಂದು, ಒಂದು ಪುಸ್ತಕಕ್ಕೆ ಕರ್ತೃವೆಂದು, — ರುಜುವಾಗಿರು, ಒಪ್ಪಿಕೊ; ಪಿತೃತ್ವ, ಕರ್ತೃತ್ವ, — ಒಪ್ಪಿಕೊ. ಒಬ್ಬನಮೇಲೆ (ಒಂದು ಮಗುವಿನ, ಒಂದು ಗ್ರಂಥದ) ಪಿತೃತ್ವವನ್ನು, ಕರ್ತೃತ್ವವನ್ನು, ಹೊರಿಸು, ಆರೋಪಿಸು, ನಿರ್ದೇಶಿಸು. ತಂದೆಯಂತೆ (ವಾತ್ಸಲ್ಯದಿಂದ) ಪಾಲನೆ ಮಾಡು, ಅಧಿಕಾರ ಮಾಡು. ದತ್ತು ತೆಗೆದುಕೊ. ಜವಾಬ್ದಾರಿ ವಹಿಸು.

Fáthom ಫ್ಯಾದಮ್ [ನಾ.; ಬ. ವ. (ಸಂಖ್ಯೆಯೊಡನೆ), ಅನೇಕ ವೇಳೆ Fathom; ಕ್ರಿ. ಸಕ.] (ಮು., ನೀರಿನ ಆಳ ಕಂಡುಹಿಡಿಯುವಲ್ಲಿ) ಆರಡಿಯ ಅಳತೆ; ಸಾ., ಒಂದು ಆಳಿನ ಮಟ್ಟ; ಮಾರು. ಉದ್ದ ಎಷ್ಟೇ ಇರಲಿ, ಅಡ್ಡ ಕೊಯ್ತದ ಅಳತೆಯಲ್ಲಿ ಆರಡಿ ಚಚ್ಚೌಕವಿರುವ ದಾರುವಿನ ಮೊತ್ತ. (ಕ್ರಿ.) (ಪ್ರಾಚೀ. ಪ್ರ.) ತಬ್ಬು; ತಬ್ಬಿಕೊ. (ಅಳತೆಯ ದಾರ, ಮೊ. ಗಳಿಂದ ನೀರಿನ) ಆಳವನ್ನು ಅಳೆ; (ರೂಪ.) ಬುಡಮುಟ್ಟ ನೋಡು; ಆಳ ಅರಿ; ನೆಲೆಗಾಣು; ಶೋಧಿಸು; ಪರೀಕ್ಷಿಸು. **Fáthomless** (ಗು.) ಆಳ ಅರಿಯದ; ನೆಲೆಗಾಣದ; ಅಗಾಧ. **Fáthomlessly** (ಕ್ರಿ. ವಿ.)

Fatídic(al). Fate ನೋಡಿ.

Fatígue ಫಟೀಗ್ (ನಾ., ಕ್ರಿ. ಸಕ.) (ಶ್ರಮಪಟ್ಟಮೇಲೆ, ಕೆಲಸ ಮಾಡಿದ ಮೇಲೆ, ಉಂಟಾಗುವ) ಆಯಾಸ, ಬಳಲಿಕೆ, ದಣಿವು, ಸುಸ್ತು; ಒಂದೇ ಸಮನಾಗಿ ಸುತ್ತಿಗೆಯ ಪೆಟ್ಟು ತಿಂದಮೇಲೆ, ಅಥವಾ ಬಹಳ ಎಳೆತಕ್ಕೆ ಸಿಕ್ಕಿದಮೇಲೆ, ಲೋಹಗಳಲ್ಲಿ ಉಂಟಾಗುವ, ಕಂಡುಬರುವ, ದೌರ್ಬಲ್ಯ: ಲೋಹದ ದಣಿವು. ಬಳಲಿಸುವ, ಆಯಾಸಕರವಾದ, ಕೆಲಸ. ಸಿಪಾಯಿಯ ಸೈನ್ಯೇತರ ಉದ್ಯೋಗ, ಶ್ರಮಗೆಲಸ (F.-party or F. ಇಂತಹ ಉದ್ಯೋಗ ಮಾಡುವುದಕ್ಕಾಗಿ ನಿಯಮಿತವಾದ ಸೈನಿಕ ತಂಡ. F. -dress ಶ್ರಮಗೆಲಸದ ಉಡುಪು). (ಕ್ರಿ.) ದಣಿಸು; ಬಳಲಿಸು; ಆಯಾಸಗೊಳಿಸು; ಸುಸ್ತುಮಾಡು. (ಲೋಹವನ್ನು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಡಿದು, ಎಳೆದು, ದುರ್ಬಲ ಮಾಡು. **Fatígueless** (ಗು.); **Fatíguing** (ಗು.)

Fátuous ಫ್ಯಾಟ್ಯುಅಸ್ (ಗು.) ಬೆಪ್ಪು ಮೋರೆಯ ; ಮಂಕು ಮುಖದ ; ಮಂದ ಬುದ್ಧಿಯ ; ಮೊದ್ದ ; ಮಂಕ ; ಬೆಪ್ಪ ; ಹೆಡ್ಡ ; ಪೆದ್ದ ; ಮೂಢ. ನಿರುದ್ದೇಶದ ; ಅವಿವೇಕದ ; ಮತಿ ಹೀನ. **Fátuously** (ಕ್ರಿ. ವಿ.); **Fátuousness** (ನಾ.); **Fatúity** ಫಟ್ಯೂಯಿಟಿ (ನಾ.) ಮಂಕುತನ.

Faúbourg (F) ಫೋಬುರ್ಗ್, ಫೋಬುರ್ (ನಾ.) ನಗರದ ಹೊರ ಊರು ; ಉಪ ನಗರ (ಮು., ಪ್ಯಾರಿಸ್ಸಿನದು)

Faúcal. **Fauces** ನೋಡಿ.

Faúces ಫಾಸೀಸ್ (ನಾ., ಬ. ವ.) (ಅಂ. ರ. ಶಾ.) ನಾಲಗೆಯ ಬುಡಕ್ಕೂ ಅಂಗುಳಿಗೂ ಮಧ್ಯೇ ಇರುವ ಓಣಿ. ಗಂಟಲೂ ಧ್ವನಿಕೋಶವೂ ತೆರೆದು ಕೊಂಡಿರುವ ಬಾಯಿಯ ಹಿಂಭಾಗದ ಕುಹರ. **Faúcal** ಫಾಕಲ್ (ಗು., ನಾ.) (ಧ್ವನಿ ಶಾಸ್ತ್ರ) ಕಂಠ್ಯ, ಗಂಟಲಿನ (ಮಂದ್ರ ಧ್ವನಿ). **Faúcial** ಫಾಷಲ್ (ಗು.) ಬಾಯಿಯ ಹಿಂಭಾಗದ ಕುಹರದ ; — ದಿಂದ ಹೊರಡುವ.

Faúcet ಫಾಸೆಟ್ (ನಾ.) (ಪ್ರಾಂ. ಪ್ರ. ಮತ್ತು ಅಮೆ. ಸಂ.) ಪೀಪಾಯಿಯ ಹರಿಗೊಳವೆ, ಸುರಿಗೊಳವೆ.

Faugh ಫಾ (ಭಾವ. ಅವ್ಯ.) (ಅಸಹ್ಯತೆಯನ್ನೊ ಬೇಸರಿಕೆಯನ್ನೊ ಸೂಚಿಸುವ ಪದ) ಥತ್ ! ಥೂ ! ಛೀ !

Fault ಫಾಲ್ಟ್ (ನಾ., ಕ್ರಿ.) (ನಡತೆ, ರಚನೆ, ತೋರ್ಕೆ, ಮೊ. ಗಳಲ್ಲಿ) ತಪ್ಪು, ಕೊರತೆ, ಕುಂದು, ನ್ಯೂನತೆ, ಲೋಪ, ದೋಷ [Find f with ತಪ್ಪು ಹಿಡಿ ; ದೂಷಿಸು. Generous to a f. ಮಿತಿ ಮೀರಿದ ಉದಾರ ಗುಣವುಳ್ಳ ; ಅತ್ಯುದಾರಿ. With all faults ಎಲ್ಲ ದೋಷಗಳೊಡನೆ (ಕೊಳ್ಳುವವನ ಜವಾಬ್ದಾರಿಯಮೇಲೆ)]. ಮೀರುವುದು ; ಮೀರಿಕೆ ; ಅತಿಕ್ರಮಣ ; ತಪ್ಪಿತ ; ಅಪರಾಧ ; ತಪ್ಪಾಗಿ ಮಾಡಿದುದು. (ರ್‍ಯಾಕೆಟ್ಸ್, ಟೆನಿಸ್, ಮೊ. ಆಟಗಳಲ್ಲಿ) ತಪ್ಪೆಸೆತದ ಚೆಂಡು, ತಪ್ಪು ಚೆಂಡು. ತಪ್ಪಿಗೆ ಜವಾಬ್ದಾರಿ (The f. was mine ತಪ್ಪು ನನ್ನದು. It will be our own f. ತಪ್ಪು ನಮ್ಮದೇ ಆಗುವುದು. The f. is in the patient ತಪ್ಪು ರೋಗಿಯದು. In f. ತಪ್ಪು ಮಾಡಿ ; ಅಪರಾಧ ಮಾಡಿ ; ದೂಷಣೆ ಹೊತ್ತು. Who is in f.? ಯಾರದು ತಪ್ಪು ? ತಪ್ಪಿತಸ್ಥನು ಯಾರು ?). (ಬೇಟೆ) ವಾಸನೆ ಸಿಕ್ಕದೆಹೋಗುವುದು ; ಸುಳಿವು ತಪ್ಪುವುದು ; ಈ ಕಾರಣದಿಂದಾದ ತಡೆ, ಅಡ್ಡಿ [Be at f. ವಾಸನೆ ಸಿಕ್ಕದೆಹೋಗು ; (ರೂಪ.) ಏನು ಮಾಡಬೇಕೊ ತೋರದಿರು ; ದಿಕ್ಕು ತೋರದಿರು ; ದಿಗ್ಭ್ರಮೆ ಹಿಡಿ]. (ಭೂ. ವಿ.) ಸ್ತರದ ಅಥವಾ ಖನಿಜರೇಖೆಯ ವಿಚ್ಛಿತ್ತಿ (ಮಾಡು, ತೋರು) ; ಸ್ತರ ಭಂಗ. (ತಂತಿ ವರ್ತಮಾನ) ವಿದ್ಯುಚ್ಛಕ್ತಿ ನಿಯತ ಪಥವನ್ನು ಬಿಟ್ಟು ಹೋಗದಂತೆ ತಡೆಯಲಾರದ ನಿರೋಧ ; ಸೋರಿಕೆ ; ಹೊರ ಹರಿತ. **Faúlt-finder** (ನಾ.) ತಪ್ಪು ಹುಡುಕುವವನು. **Faúltfinding** (ನಾ., ಗು.) ತಪ್ಪು ಹುಡುಕುವುದು ; ತಪ್ಪು ಹುಡುಕುವ. **Faúltless** (ಗು.); **Faúltlessly** (ಕ್ರಿ. ವಿ.); **Faúltlessness** (ನಾ.); **Faúlty** (ಗು.); **Faúltily** (ಕ್ರಿ. ವಿ.); **Faúltiness** (ನಾ.)

Faun ಫಾನ್ (ನಾ.) (ಕೊಂಬುಗಳೂ ಬಾಲವೂ ಉಳ್ಳ) ಒಂದು ಬಗೆಯ ಲ್ಯಾಟಿನ್ ಗ್ರಾಮದೇವತೆ.

Faúna ಫಾನ (ನಾ., ಬ. ವ. -ae ಫಾನಿ, -as ಫಾನಸ್) ಒಂದು ಪ್ರಾಂತದ ಅಥವಾ ಯುಗದ ಪ್ರಾಣಿವರ್ಗ ; ಈ ವಿಷಯದ ಗ್ರಂಥ ; ಪ್ರಾಣಿವಿವರಣ ಗ್ರಂಥ. **Faúnal** (ಗು.); **Faúnist** (ನಾ.) ಒಂದು ಪ್ರಾಂತದ ಪ್ರಾಣಿವರ್ಗವನ್ನು ಪರೀಕ್ಷೆ ಮಾಡುವವನು, ಆ ವಿಷಯವಾಗಿ ಬರೆಯುವವನು ; ಪ್ರಾಣಿ ವಿಮರ್ಶಕ. **Faunístic(al)** (ಗು.)

Faúteuil ಫೋಟಿರ್, **Fauteuil** (F) ಫೊಟಿಯ್ (ನಾ.) ತೋಳು ಕುರ್ಚಿ ; ಆರಾಮ ಕುರ್ಚಿ ; ನಾಟಕ ಶಾಲೆಯಲ್ಲಿ ಮೇಲ್ತರಗತಿಯ ಕುರ್ಚಿ ; ಅಧ್ಯಕ್ಷನ ಕುರ್ಚಿ ; ಅಧ್ಯಕ್ಷ ಪೀಠ. (ವಿಶ್ವ ವಿದ್ಯಾನಿಲಯದ) ಪಂಡಿತ ಸ್ಥಾನ. ಫ್ರೆಂಚ್ ಸಾಹಿತ್ಯ ಪರಿಷತ್ತಿನ ಸದಸ್ಯತೆ.

Faux pás (F) ಫೋ ಪಾ (ನಾ.) (ಮು., ಹೆಂಗಸಿನ) ಹೆಸರಿಗೆ ಕಳಂಕ ತರುವ, ಮಸಿ ಹಚ್ಚುವ, — ಕೆಲಸ, ಕಾರ್ಯ ; ಶೀಲಚ್ಯುತಿ ; ದುರ್ನಡತೆ ; ತಪ್ಪು ಹೆಜ್ಜೆ.

Fávour ಫೇವರ್ (ನಾ.) ಸ್ನೇಹದೃಷ್ಟಿ ; ದಯೆ ; ಒಲವು ; ಪ್ರೀತಿ ; ವಿಶ್ವಾಸ ; ಅನುಗ್ರಹ ; ಕೃಪೆ ; ಪ್ರಸಾದ ; ಅನುಮತಿ ; ಒಪ್ಪಿಕೆ ; ಮೆಚ್ಚಿಕೆ [Find f. in the eyes of — ನ ಪ್ರೀತಿಗೆ ಪಾತ್ರನಾಗು. Curry f. (Curry² ನೋಡಿ). Look with f. on ಮೆಚ್ಚಿಕೆಯಿಂದ ನೋಡು. Be, stand, high in person's f. ಒಬ್ಬನ ಮೆಚ್ಚಿಕೆಗೆ ವಿಶೇಷವಾಗಿ ಪಾತ್ರನಾಗಿರು. I should esteem it a f. ಅನುಗ್ರಹವೆಂದು ಭಾವಿಸುತ್ತೇನೆ. By f. of — — ರ ಕೃಪೆಯಿಂದ (ಸ್ನೇಹಿತನೊಡನೆ ಕಳುಹಿಸುವ ಪತ್ರದಮೇಲೆ ಬರೆಯುವ ಮಾತು). Do me the f. of -ing ಕೃಪೆಯಿಟ್ಟು — ಬೇಕು]. ಪ್ರೀತಿಯ ಗುರುತಾಗಿ ಕೊಡುವ ಅಥವಾ ಧರಿಸುವ ವಸ್ತು (ಬಣ್ಣದ ಪಟ್ಟೆಗಳ ಗೊಂಡೆ, ಗುಲಾಬಿಯಾಕಾರದ ಅಲಂಕಾರ, ಅಧಿಕಾರ ಸೂಚಕ ಲಾಂಛನ, ಬಿಲ್ಲೆ, ಮೊ.). ಕಾಗದ ; ಪತ್ರ (Received your f. of yesterday ತಾವು ನಿನ್ನೆ ಅನುಗ್ರಹಿಸಿದ ಪತ್ರ ತಲುಪಿತು). [Woman bestows her favours on lover ಹೆಂಗಸು ತನ್ನ ಪ್ರಿಯನಿಗೆ ಅನುಗ್ರಹ ತೋರಿಸುತ್ತಾಳೆ, ವಶವಾಗುತ್ತಾಳೆ. By your f. (ಪ್ರಾಚೀ. ಪ್ರ.) ತಮ್ಮ ವಿಶ್ವಾಸದಿಂದ, ದಯೆಯಿಂದ ; ತಮ್ಮ ಅಪ್ಪಣೆಯಾದರೆ. Under f. ಹಾಗೆ ಹೇಳಬಹುದಾದರೆ ; — ದಾದ ಪಕ್ಷದಲ್ಲಿ]. ಪಕ್ಷಪಾತ (Without fear or f. ಆಗ್ರಹ ಅನುಗ್ರಹಗಳ ಲಕ್ಷ್ಯವಿಲ್ಲದೆ ; ನಿಷ್ಪಕ್ಷಪಾತವಾಗಿ. Under f. of night ಕತ್ತಲೆಯ ಅನುಕೂಲದಲ್ಲಿ. In f. of (ಒಬ್ಬನ) ಪರವಾಗಿ ; (ಒಬ್ಬನಿಗೆ) ಅನುಕೂಲವಾಗಿ, ಸಹಾಯವಾಗಿ ; (ಒಬ್ಬನ) ಪಕ್ಷವಾಗಿ ; ಒಬ್ಬನಿಗಾಗಿ ; ಒಬ್ಬನ ಹೆಸರಿಗೆ, ಲೆಕ್ಕಕ್ಕೆ. I am in f. of woman's suffrage ಹೆಂಗಸರಿಗೆ ಚುನಾವಣೆಯ ಹಕ್ಕು ದೊರೆಯುವುದು ನನಗೆ ಸಮ್ಮತ. Cheques to be drawn in f. of the treasurer ಹುಂಡಿಗಳನ್ನು ಕೋಶಾಧ್ಯಕ್ಷನ ಹೆಸರಿಗೆ ಬರೆಯಬೇಕು. (ಪ್ರಾಚೀ. ಪ್ರ.) Well-favoured ಸುರೂಪವುಳ್ಳ ; ಸುಮುಖವುಳ್ಳ ; Hard-favoured ಕಠಿನ ಮುಖವುಳ್ಳ.

Fávour (ಕ್ರಿ. ಸಕ.) ದಯೆಯಿಂದ, ಪ್ರೀತಿಯಿಂದ, ನೋಡು ; ಅನುಮತಿ ಕೊಡು ; ಒಪ್ಪು ; ಸಮ್ಮತಿಸು ; ಮೆಚ್ಚು ; ಒಲಿ ; ದಯೆ ತೋರು ; ಅನುಗ್ರಹಿಸು ; ಕೃಪೆ ಮಾಡು ; ದಯೆಮಾಡಿ ಕೊಡು ; ಸಹಾಯ, ಉಪಕಾರ, ಮಾಡು ; ನೆರವಾಗು ; ನ್ಯಾಯ ಮೀರಿ ಸಹಾಯ ಮಾಡು ; ಒತ್ತಾಸೆ ಕೊಡು ; ಪ್ರೋತ್ಸಾಹ ಮಾಡು ; ಬೆಂಬಲವಾಗು. (ಒಂದು ಮತ, ಮೊ. ಕ್ಕೆ) ಸಾಧಕವಾಗು. (ಕ್ರಿಯೆ, ಮೊ. ಕ್ಕೆ) ಸೌಲಭ್ಯ ಕೊಡು. ಮುಖಭಾವ ಮೊ. ಗಳಲ್ಲಿ ಹೋಲು (F. one's father ತಂದೆಯನ್ನು ಹೋಲು). (ಭೂ. ಕೃ. ನಲ್ಲಿ) ಅಸಾಮಾನ್ಯವಾದ ಅನುಕೂಲ್ಯಗಳುಳ್ಳ ; ವಿಶೇಷ ಸೌಕರ್ಯಗಳುಳ್ಳ (Most favoured nation ಒಂದು ಸರ್ಕಾರದಿಂದ ಅತ್ಯಂತ ಕಡಮೆಯಾದ ಆಮದು ಸುಂಕ ಹಾಕಲ್ಪಟ್ಟ ಜನಾಂಗ). Favoured by (ಕಾಗದ ಪತ್ರಗಳ ವಿಷಯದಲ್ಲಿ) = By f. of **Fávouring** (ಗು.); **Fávourable** ಫೇವರಬ್‌ಲ್ (ಗು.) ಅನುಕೂಲ ಮನೋಭಾವವುಳ್ಳ ; ಪ್ರೀತಿ ವಿಶ್ವಾಸಗಳುಳ್ಳ ; ಪ್ರಸನ್ನತೆಯುಳ್ಳ ; ಶ್ಲಾಘಿಸುವ ; ಮೆಚ್ಚಿಕೆ ತೋರಿಸುವ ; ಒಪ್ಪಿಗೆ ಕೊಡುವ ; ಸಮ್ಮತಿ ಸೂಚಕ (F. answer ಅನುಕೂಲವಾದ ಉತ್ತರ). ಶುಭ ಸೂಚನೆಯುಳ್ಳ ; ಶುಭಕರ ; ಮಂಗಳಕರ ; ಭರವಸೆ ತೋರುವ (F. aspect ಶುಭ ಲಕ್ಷಣ). ಸಹಾಯಕ ; ಸಾಧಕ ; ಅನುಕೂಲವಾದ. **Fávourableness** (ನಾ.); **Fávourably** (ಕ್ರಿ. ವಿ.); **Fávourite** — ರಿಟ್ (ನಾ., ಗು.) (ಇತರರಿಗಿಂತ ಹೆಚ್ಚು) ಪ್ರೀತಿಪಾತ್ರ ; ಅಚ್ಚುಮೆಚ್ಚಿನ(ವನು) ; ಮುದ್ದಿನ(ವನು) (The f. of, A f. with *or* of).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ದೊರೆ ಅಥವಾ ದೊಡ್ಡ ಅಧಿಕಾರಿಯಿಂದ ಆಯ್ದುಕೊಳ್ಳಲ್ಪಟ್ಟು) ಅತಿ ಪಕ್ಷಪಾತ ಪಡೆಯುತ್ತಿರುವವನು ; ಅಂತರಂಗಕ್ಕೆ ಸೇರಿದವನು ; ಆಪ್ತ ಮಿತ್ರ. (ಓಟದ ಪಂದ್ಯ) The f. ಜೂಜಿನಲ್ಲಿ ಗೆಲ್ಲುವುದೆಂದು ಸಾಮಾನ್ಯವಾಗಿ ಅಭಿಪ್ರಾಯವಿರುವ ಸ್ಪರ್ಧಿ. **Fávouritism** (ನಾ.) ಸ್ವಪಕ್ಷಪಾತ ; ತಮ್ಮವರೊಲವು.

Fawn[1] ಫಾನ್ (ನಾ., ಗು., ಕ್ರಿ.) ಮೊದಲನೆಯ ವರ್ಷದ, ವರ್ಷ ತುಂಬದ, — ಜಿಂಕೆಯ ಮರಿ (In f. ತನೆಯಾಗಿ ; ಗಬ್ಬವಾಗಿ ; ಗರ್ಭ ಧರಿಸಿ). ನಸು ಹಳದಿ ಛಾಯೆಯು ಕಂದು ಬಣ್ಣ(ದ) [= F. -colour(ed)]. (ಕ್ರಿ.) (ಜಿಂಕೆ) ಮರಿ ಹಾಕು, ಈನು.

Fawn[2] ಫಾನ್ (ಕ್ರಿ. ಅಕ.) [ಪ್ರಾಣಿಗಳ (ಮು., ನಾಯಿಯ) ವಿಷಯದಲ್ಲಿ] (ಬಾಲವಾಡಿಸುವುದು, ನೆಲದಮೇಲೆ ಬಿದ್ದು ಹೊರಳಾಡುವುದು, ಮೊ. ಗಳಿಂದ) ಪ್ರೀತಿ ತೋರಿಸು ; ಲಲ್ಲಯಿಸು (F. on, upon ಮುದ್ದಿಸು ; ಅತಿ ಪ್ರೀತಿಸು). (ಮನುಷ್ಯರ ವಿಷಯದಲ್ಲಿ) ಅಡಿಯಾಳಂತೆ ವರ್ತಿಸು ; ಅತಿ ದೈನ್ಯ ತೋರಿಸು ; ಹಲ್ಲುಗಿರಿ. **Fawning** (ಗು.) ; **Fawningly** (ಕ್ರಿ. ವಿ.)

Fay ಫೇ (ನಾ.) ವನದೇವತೆ ; ಗಂಧರ್ವ ; ಮೋಹಿನಿ ; ಯಕ್ಷ ; ಯಕ್ಷಿಣಿ ; ಜಕ್ಕಣಿ.

Féalty ಫೀಯಲ್ಟಿ (ನಾ.) (ಫ್ಯೂಡಲ್ ಪದ್ಧತಿಯಲ್ಲಿ, ಎಂದರೆ, ಸೈನಿಕ ಸಹಾಯಮಾಡುವ ಷರತ್ತಿನಮೇಲೆ ಜಮೀನನ್ನು ಪಡೆಯುವ ಊಳಿಗಮಾನ್ಯ ಪದ್ಧತಿಯಲ್ಲಿ ರೈತನ ಅಥವಾ ಅಧೀನ ಪಾಳೆಯಗಾರನ ಕೃತಜ್ಞತಾ ಪೂರ್ವಕವಾದ) ಸ್ವಾಮಿನಿಷ್ಠೆ, ಭಕ್ತಿ, ನಂಬಿಕೆ (Do, make, receive, swear, f.). ಪ್ರಮಾಣಪೂರ್ವಕವಾಗಿ ಈ ಸ್ವಾಮಿನಿಷ್ಠೆಯನ್ನು ಅಂಗೀಕರಿಸುವುದು ; ಸ್ವಾಮಿ ಭಕ್ತಿ ಪ್ರಮಾಣ ; ನಿಷ್ಠಾ ವಚನ (ರೂಪ. ಸಹ)

Fear ಫಿಯರ್ (ನಾ.) ಭಯ ; ಹೆದರಿಕೆ ; ಅಂಜಿಕೆ ; ದಿಗಿಲು ; ಭೀತಿ ; ಆತಂಕ; ಶಂಕೆ; ಗಾಬರಿ [Was in f. ಭಯದಿಂದಿದ್ದನು;ಹೆದರಿದ್ದನು. For f. of ಸಂಭವಿಸಬಹುದೆಂಬ ಹೆದರಿಕೆಯಿಂದ ; ಸಂಭವಿಸದಂತಿರುವುದಕ್ಕಾಗಿ. In f. of his life ಪ್ರಾಣಭಯದಿಂದ. No f. ಹೆದರಿಕೆಯಿಲ್ಲ ; ಏನೂ ಭಯವಿಲ್ಲ ; (ಆಗುವ) ಸಂಭವವಿಲ್ಲ. Without f. or favour (Favour ನೋಡಿ)]. ಭಯ ಭಕ್ತಿ (The f. of God). **Feárful** (ಗು.) ಭಯಂಕರವಾದ ; ಘೋರವಾದ ; ಉಗ್ರವಾದ ; ಅತಿಯಾದ ; ರೇಗಿಸುವ ; ಜುಗುಪ್ಸೆಯುಂಟುಮಾಡುವ (F. mess ಅತಿ ಗಲಬಿಲ, ತೊಡಕು, ಫಜೀತಿ). ಗಾಬರಿಗೊಂಡ ; ಭಯಪಟ್ಟ, ದಿಗಿಲುಗೊಂಡ; ಅಂಜಿದ; ಅಂಜುಕುಳಿ ; ಪುಕ್ಕಲು ; ಅಧೈರ್ಯಪಡುವ. ಭಯ ಭಕ್ತಿಯುಳ್ಳ. **Feárfully** (ಕ್ರಿ. ವಿ.) ; **Feárfulness** (ನಾ.) ; **Feárless** (ಗು.) ; **Feárlessly** (ಕ್ರಿ. ವಿ.); **Feárlessness** (ನಾ.) ; **Feársome** (ಗು.) (ಮು., ರೂಪದಲ್ಲಿ, ತೋರ್ಕೆಯಲ್ಲಿ) ಭಯಂಕರವಾದ (ಸಾ., ಹಾಸ್ಯವಾಗಿ). **Feársomely** (ಕ್ರಿ. ವಿ.) ; **Feársomeness** (ನಾ.)

Fear (ಕ್ರಿ.) ಭಯಪಡು ; ದಿಗಿಲುಬೀಳು ; ಹೆದರು ; ಅಂಜು ; ಗಾಬರಿಗೊಳ್ಳು ; ಆತಂಕಪಡು [(ಪ್ರಾಚೀ. ಪ್ರ.) I f. me ಭಯವಾಗುತ್ತದೆ. Never f. ಹೆದರಬೇಡ ; ಭಯವಿಲ್ಲ ; ಅದರಿಂದೇನೂ ಕೇಡಾಗಲಾರದು]. (ಮಾಡಲು) ಸಂಶಯಪಡು ; ಹಿಂದು ಮುಂದು ನೋಡು ; ಮಾಡಲು ಹಿಂದೆಗೆ. (ದೇವರಲ್ಲಿ) ಭಯ ಭಕ್ತಿಯಿಡು. ಅದೀತೆಂದು ಹೆದರು.

Feárnought ಫಿಯರ್‌ನಾಟ್ (ನಾ.) ಯಾವುದಕ್ಕೂ ಹೆದರದವನು ; ನಿರ್ಭೀತ. ಸಮುದ್ರ ಪ್ರಯಾಣದಲ್ಲಿ ಉಡುಪಿಗಾಗಿಯೂ ಗವಾಕ್ಷಿ, ಮೊ. ಗಳ ರಕ್ಷಣೆಗಾಗಿಯೂ ಉಪಯೋಗಿಸುವ ದಪ್ಪವಾದ ಉಣ್ಣೆಯ ಬಟ್ಟೆ.

Feásible ಫೀಸಿಬ್‌ಲ್ (ಗು.) ಕಾರ್ಯರೂಪಕ್ಕೆ ತರಬಹುದಾದ ; (ಕಾರ್ಯ) ಸಾಧ್ಯವಾದ; ಶಕ್ಯವಾದ. (ಶಿಥಿಲವಾಗಿ) ನಡಸಬಹುದಾದ; ಸಂಭವನೀಯ ; ಅನುಕೂಲವಾದ ; ಕೈಯಲ್ಲಾಗುವ ; ಸರಿಯೆಂದು ತೋರುವ. **Feasibílity** (ನಾ.) ಸಾಧ್ಯತೆ.

Feast ಫೀಸ್ಟ್ (ನಾ., ಕ್ರಿ.) ಮತ ಸಂಬಂಧವಾದ ವಾರ್ಷಿಕ ಉತ್ಸವ ; ವರ್ಷಾವಧಿಯ ಹಬ್ಬ ; ಸಂತೋಷ ಸಮಾರಂಭ ; ಹಬ್ಬ ; ಉತ್ಸವ (Movable, immovable, f. ವರ್ಷೇ ವರ್ಷೇ ಬೇರೆ ಬೇರೆ ದಿನ, ಒಂದೇ ಗೊತ್ತಾದ ದಿನ, ಬರುವ ಹಬ್ಬ). ಹಳ್ಳಿಯ ವಾರ್ಷಿಕೋತ್ಸವ ; ವರ್ಷದ ಊರ ಹಬ್ಬ ; ಹೆಡಿಗೆ ಜಾತ್ರೆ. ಸವಿಯೂಟ ; ಸಂತರ್ಪಣೆ ಯೂಟ ; ಔತಣ (ಮು.,ಅನೇಕ ಮಂದಿ ಸೇರುವ ಸಾರ್ವಜನಿಕ ರೀತಿಯದು). ಸಮಾರಾಧನೆ. (ರೂಪ.) ಇಂದ್ರಿಯಗಳಿಗೆ ಅಥವಾ ಮನಸ್ಸಿಗೆ ತೃಪ್ತಿ, ತಣಿವು (F. of reason ಜ್ಞಾನ ಸಂತರ್ಪಣೆ ; ಬುದ್ಧಿಯ ಔತಣ). (ಕ್ರಿ.) ಹಬ್ಬಮಾಡು ; ಹಬ್ಬದ ಊಟಮಾಡು ; ಸವಿಯುಣ್ಣು. (ರಾತ್ರಿ ಕಾಲ, ಮೊ. ನ್ನು) ಹಬ್ಬದ ಸಮಾರಂಭದಲ್ಲಿ ಕಳೆದುಬಿಡು. (ಅತಿಥಿಗಳನ್ನು, ತನ್ನ ಕಣ್ಣುಗಳನ್ನು, ಸೌಂದರ್ಯಾದಿಗಳಿಂದ) ಸಂತೃಪ್ತಿಪಡಿಸು ; ಔತಣ ಮಾಡು. **Feáster** (ನಾ.) ; **Féstal** ಫೆಸ್ಟಲ್ (ಗು.) ಹಬ್ಬದ ; ಉತ್ಸವದ ; ಉಲ್ಲಾಸದ ; ಹರ್ಷದ ; ಗೆಲವಿನ ; ಕುಶಾಲಿನ. **Féstally** (ಕ್ರಿ. ವಿ.) ; **Féstival** (ಗು., ನಾ.) ಹಬ್ಬದ, ಉತ್ಸವದ, — ದಿನ ; ಹಬ್ಬ ; ಉತ್ಸವ. ಆಗಾಗ ನಡಸುವ ಸಂಗೀತ ಕಚೇರಿ(ಗಳು), —ಗೋಷ್ಠಿ(ಗಳು). (ಗು.) ಹಬ್ಬದ ದಿನದ. **Féstive** (ಗು.) ಹಬ್ಬದ ; ಉತ್ಸವದ ; ಸಂತೋಷದ ; ಆನಂದದ ; ಉಲ್ಲಾಸದ; ಗೆಲವಿನ ; ಉತ್ಸವಾಸಕ್ತ ; ಉಲ್ಲಾಸಶೀಲ ; ಹಬ್ಬದೂಟ ಮಾಡಲು ಉತ್ಸಾಹವುಳ್ಳ. **Féstively** (ಕ್ರಿ. ವಿ.) ; **Festívity** (ನಾ.) ಹಬ್ಬ ; ಉತ್ಸವ; ಸಂತೋಷ ಸಮಾರಂಭ. (ಬ. ವ. ದಲ್ಲಿ) ಉತ್ಸವಗಳು ; ಸಂತೋಷ ಸಮಾರಂಭಗಳು.

Feat ಫೀಟ್ (ನಾ., ಗು.) ಶ್ಲಾಘ್ಯವಾದ ಕೆಲಸ ; ಸಾಹಸ ಕಾರ್ಯ (F. of arms ಶಸ್ತ್ರ ಸಾಹಸ). ದಕ್ಷತೆ, ಸಾಮರ್ಥ್ಯ, ಆಶ್ಚರ್ಯಗೊಳಿಸುವ ಹಸ್ತಲಾಘವ, — ಇವನ್ನು ಪ್ರದರ್ಶಿಸುವ ಕಾರ್ಯ ; ಅದ್ಭುತ ಕಾರ್ಯ. (ಗು.) (ಪ್ರಾಚೀ. ಪ್ರ.) ಚಮತ್ಕಾರದ ; ಚಾತುರ್ಯವುಳ್ಳ ; ಕರ ಕೌಶಲದ ; ಚಳಕವುಳ್ಳ ; ಚತುರ ; ದಕ್ಷ ; ಠೀಕಾದ. **Feátly** (ಕ್ರಿ. ವಿ.)

Feáther ಫೆದರ್ (ನಾ.) (ಹಕ್ಕಿಯ) ಗರಿ, ಪುಕ್ಕ [Show the white f. ಪುಕ್ಕಲುತನ, ಹೇಡಿತನ, — ತೋರಿಸು (ಜೂಜಿನ ಹಕ್ಕಿಯ ತೋಕೆಯಲ್ಲಿ ಬಿಳಿಯ ಗರಿ ಇರುವುದು ಕೆಟ್ಟ ತಳಿಯ ಗುರುತು). Crop one's feathers ಪುಕ್ಕ ಕತ್ತರಿಸು ; ಗರ್ವಭಂಗ ಮಾಡು ; ಮಾನ ಕಳೆ ; ತೇಜೋವಧೆ ಮಾಡು]. (ಸಮೂಹ ವಾಚಕ) ಗರಿಗಳು (In high or full f. ಬಹಳ ಉಲ್ಲಾಸದಿಂದ. Birds of a f. ಒಂದೇ ಸ್ವಭಾವದವರು ; ಒಂದೇ ಕೂಟದವರು). ಬೇಟೆಯ ಹಕ್ಕಿ (Fur and f. ಬೇಟೆಯ ಮೃಗಗಳು ಮತ್ತು ಹಕ್ಕಿಗಳು). ಅಂಬಿಗೆ ತೊಡಿಸಿರುವ ಹಕ್ಕಿಯ ಗರಿಯ ತುಂಡು(ಗಳು) ; ಅಂಬುಗರಿ ; ಪುಂಖ. (ಪರಂಗಿ ಟೋಪಿ, ಮೊ. ಗಳಲ್ಲಿ ಧರಿಸುವ) ಗರಿಯ ಅಲಂಕಾರ, ಪಿಂಛ, ತುರಾಯಿ, ಕುಚ್ಚು (A f. in one's cap ಗೌರವ ತರುವ, ಹೆಮ್ಮೆ ಪಡಬಹುದಾದ, ಅಭಿಮಾನದ, ವಿಷಯ). ಬಹಳ ಹಗುರವಾದ ವಸ್ತು. ನೆಟ್ಟಗೆ ನಿಂತಿರುವ ಕೂದಲಿನ ಸಾಲು. ಒಂದು ಪ್ರಶಸ್ತ ಮಣಿಯಲ್ಲಿ ಕಾಣುವ ಗರಿಯಾಕಾರದ ದೋಷ. (ದೋಣಿ ನಡಸುವಲ್ಲಿ) ಹುಟ್ಟಿನ ಏಣು ಗಾಳಿಗೆ ಒಡ್ಡುವಂತೆ ತಿರುಗಿಸುವುದು. **F. bed** ತುಪ್ಪುಳು ತುಂಬಿದ ಮೆತ್ತೆ. **F.-edge** (ನಾ.) ಬೆಣೆಯಾಕಾರದ ಹಲಗೆಯ ಚೂಪೇಣು. (ಕ್ರಿ. ಸಕ.) (ಹಲಗೆಗೆ) ಚೂಪೇಣು ಮಾಡು. **F.-head(ed), -brain(ed), -pate(d)** ದಡ್ಡ ; ಟೊಳ್ಳು ಬುದ್ಧಿ(ಯ). **F.-stitch** ವಕ್ರ ಗತಿಯ ಅಲಂಕಾರದ ಹೊಲಿಗೆ : ಗರಿ ಹೊಲಿಗೆ. **F.-weight** ಅತಿ ಹಗುರವಾದ ವಸ್ತು ಅಥವಾ ಮನುಷ್ಯ [ಮು., ಜೂಜುಕುದುರೆಯ ಸವಾರ ೬೩ ಪೌಂಡು ತೂಕಕ್ಕೆ, (ಕುಸ್ತಿಯ) ಪೈಲವಾನ ೧೨೬ ಪೌಂಡು ತೂಕಕ್ಕೆ, ಮೀರದ]. (-)**fea-thered** (ಗು.) ; **Featherless** (ಗು.) ; **Featherlet** (ನಾ.) ; **Feathery** (ಗು.) ; **Featheriness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Feáther (ಕ್ರಿ.) ಗರಿಗಳಿಂದ ಅಲಂಕರಿಸು ; ಗರಿಗಳನ್ನು ಅಳವಡಿಸು ; ಗರಿಯಿಡು ; ಗರಿಯಿಂದ ಮುಚ್ಚು [F. an arrow ಅಂಬಿಗೆ ಗರಿ ಹಾಕು. F. one's nest ತನಗೆ ಅನುಕೂಲ ಮಾಡಿಕೊ (ಮು., ತನಗೊಪ್ಪಿಸಿರುವ ಇತರರ ಆಸ್ತಿಯಿಂದ). Tar & feather (Tar ನೋಡಿ)]. (ಹಕ್ಕಿಯ) ಗರಿಯಾಕಾರದ ಹೊದಿಕೆ ಅಥವಾ ಅಲಂಕಾರ, — ಆಗು ; ಗರಿ ಬರು ; ಗರಿ ಹುಟ್ಟು. (ಹಕ್ಕಿಯ) ಗರಿಯಂತೆ ತೇಲು, ಚಲಿಸು, ಹರಡು. (ಹುಟ್ಟನ್ನು) ಗಾಳಿಯಲ್ಲಿ ಏಣು ಮುಂದಾಗುವಂತೆ ತಿರುಗಿಸು. (ಬಂದೂಕು ಹೊಡೆಯುವಲ್ಲಿ, ಹಕ್ಕಿಯನ್ನು) ಕೊಲ್ಲದೆ ಗರಿಯುದುರಿಸು. (ಬೇಟೆಯಲ್ಲಿ ಬೇಟೆನಾಯಿ ವಾಸನೆ ನೋಡುತ್ತಿರುವಾಗ ಮೈಯನ್ನೂ ಬಾಲವನ್ನೂ) ನಡುಗಿಸು, ಅದುರಿಸು, ಕಂಪಿಸು. **Feáthering** (ನಾ.) (ಕ್ರಿಯಾರ್ಥಗಳಲ್ಲಿ). (ಅಂಬಿನ) ಗರಿಗಳು ; ಪ್ರಾಣಿಯ ಕೂದಲಿನಲ್ಲಿ ಹಕ್ಕಿಯ ಗರಿಯ ರಚನೆ. (ವಾ. ಶಾ.) ಕಲ್ಲುಗೆಲಸದಲ್ಲಿಯ ವಕ್ರಾಕೃತಿಯಲಂಕಾರದಲ್ಲಿ ಕೋಡಿನಂತಿರುವ ಭಾಗಗಳು. ಹೂವಿನಲ್ಲಿ ಹಕ್ಕಿಯ ಗರಿಯಂತಿರುವ ರಚನೆ.

Feáture ಫೀಟ್ಯು(ಚ)ರ್ (ನಾ., ಕ್ರಿ. ಸಕ.) (ಸಾ, ಬ. ವ. ದಲ್ಲಿ) (ಆಕಾರ ಮತ್ತು ನೋಟದ ಪರಿಣಾಮದ ವಿಷಯವಾಗಿ ಪರಿಗಣಿಸುವ) ಮುಖ ಭಾಗ(ಗಳು) ; ಆಕಾರ ; ಆಕೃತಿ ; ರೂಪ ; ಮುಖ ಭಾವ. (ಒಂದು ವಸ್ತುವಿನ) ವೈಶಿಷ್ಟ್ಯ ಸೂಚಕ ಭಾಗ ; ವೈಶಿಷ್ಟ್ಯ ; ವೈಲಕ್ಷಣ್ಯ [F. film, F. picture ಅನೇಕ ಸುರುಳಿಗಳಲ್ಲಿರುವ ತಕ್ಕಷ್ಟು ದೊಡ್ಡದಾದ ಚಲನಚಿತ್ರ (ನಾಟಕ)]. (ಕ್ರಿ.) (ಒಂದರ) ವೈಶಿಷ್ಟ್ಯ ಸೂಚಕವಾಗಿರು ; ಪ್ರಧಾನವಾಗಿ ಕಾಣುತ್ತಿರು ; ಮುಖ್ಯ ಲಕ್ಷಣವಾಗಿರು ; ವೈಲಕ್ಷಣ್ಯವಾಗಿರು ; ಪ್ರಧಾನ ಲಕ್ಷಣಗಳನ್ನು ಗುರುತು ಮಾಡು, ಚಿತ್ರಿಸು. (ಅಮೆ. ಸಂ.) ಚಲನ ಚಿತ್ರದ ಪರದೆಯಮೇಲೆ ತೋರಿಸು, ಪ್ರದರ್ಶಿಸು ; ಮುಖ್ಯನೋಟವಾಗಿ ಇಡು, ಪ್ರದರ್ಶಿಸು ; (—) ಕ್ಕೆ ಹೆಚ್ಚು ಪ್ರಾಧಾನ್ಯ ಕೊಡು. (-)**feátured** (ಗು.) ; **Feátureless** (ಗು.)

Fébrifuge ಫೆ(ಫೀ)ಬ್ರಿಫ್ಯೂಜ್ (ನಾ.) ಜ್ವರವನ್ನು ತಗ್ಗಿಸುವ ಔಷಧ ; ತಂಪಿಸುವ ಪಾನೀಯ. **Febrífugal** ಫೆಬ್ರಿಫ್ಯು(ಫ್ಯೂ)ಗಲ್ (ಗು.) ; **Fébrile** ಫೀ(ಫೆ)ಬ್ರಿಲ್ (ಗು.) ಜ್ವರದ ; ಜ್ವರ ಲಕ್ಷಣದ.

Fébruary ಫೆಬ್ರುಅರಿ (ನಾ.) ಇಂಗ್ಲಿಷ್ ವರ್ಷದ ಎರಡನೆಯ ತಿಂಗಳು : ಫೆಬ್ರುವರಿ (F. fill-dike ಮಳೆಯಿಂದ ಮತ್ತು ಮಂಜಿನಿಂದ ಹಳ್ಳಕೊಳ್ಳಗಳು ತುಂಬಿಹೋಗುವ ಫೆಬ್ರುವರಿಯ ಕಾಲ)

Fécit ಫೀಸಿಟ್ (ಕ್ರಿ., ಏ. ವ.), **Fecérunt** ಫೀಸಿಯರಂಟ್ (ಕ್ರಿ., ಬ. ವ.) (ಸಂಕ್ಷಿಪ್ತ : Fec.) (ಪ್ರಥಮ ಪುರುಷ) [ಇಂಥವನು(ರು)] ರಚಿಸಿದನು(ರು) (ಚಿತ್ರಗಾರನ ಸಹಿಯೊಡನೆ ಬರೆಯುವ ಮಾತು)

Féckless ಫೆಕ್‌ಲೆಸ್ (ಗು.) ದುರ್ಬಲ ; ಅಶಕ್ತ ; ಬಲ ಹೀನ ; ಶಕ್ತಿ ಹೀನ ; ನಿತ್ರಾಣ ; ಅಸಮರ್ಥ ; ವ್ಯರ್ಥ ; ಪ್ರಯೋಜನವಿಲ್ಲದ. **Fécklessly** (ಕ್ರಿ. ವಿ.) ; **Fécklessness** (ನಾ.)

Féculent ಫೆಕ್ಯುಲೆಂಟ್ (ಗು.) ಕದಡಿದ ; ಕಲಕಿದ ; ಬಗ್ಗಡವಾದ ; ರಾಡಿಯಾದ ; ಕೊಳೆತ ; ನಾರುವ ; ದುರ್ವಾಸನೆಯುಳ್ಳ. **Fécuence** (ನಾ.) ರಾಡಿಯಾಗಿರುವುದು ; ಕೊಳೆತು ನಾರುತ್ತಿರುವುದು ; ಕೊಳೆ ; ಕಶ್ಮಲ ; ಕೊಳೆತ ಪದಾರ್ಥ ; ಚರಟ ; ಗಸಿ ; ಮಷ್ಟು.

Fécund ಫೆ(ಫೀ)ಕಂಡ್ (ಗು.) ಬಹುಸಂತಾನದ ; ಬಹು ಫಲವತ್ತಾದ ; ಬಹು ಫಲವತ್ತು ಮಾಡುವ ; ಹುಲುಸು ಮಾಡುವ. **Fecúndity** ಫಿ — (ನಾ.) ಸಂತಾನಾಭಿವೃದ್ಧಿ ಶಕ್ತಿ ; ಮರಿ ಹಾಕುವ ಚೈತನ್ಯ ; ಉತ್ಪಾದನ ಶಕ್ತಿ ; ಮೊಳೆಯುವ ಶಕ್ತಿ ; ಫಲವತ್ತು. **Fécundate** ಫೆ(ಫೀ) — (ಕ್ರಿ. ಸಕ.) ಫಲವಂತ ಮಾಡು ; ಫಲ ಸಮೃದ್ಧ ಮಾಡು ; ಫಲ ಭರಿತ ಮಾಡು ; ಫಲವತ್ತಾಗಿ ಮಾಡು ; ಗರ್ಭಾಧಾನ ಮಾಡು ; ಗರ್ಭ ಧರಿಸುವಂತೆ ಮಾಡು ; ಬಸಿರು ಮಾಡು. **Fecundátion** (ನಾ.)

Fed. Feed ಧಾತುವಿನ ಭೂತ., ಭೂ. ಕೃ.

Féderal ಫೆಡೆರಲ್ (ಗು.) ಒಪ್ಪಂದದ ; ಕರಾರಿನ ; ಒಡಂಬಡಿಕೆಯ ; ಸಂಧಿಯ [(ಮು., ಕ್ರೈಸ್ತ ದೇವ. ಶಾ.) ದೇವ ಮಾನವ ಕರಾರಿನ ಮೇಲೆ ಸ್ಥಾಪಿತವಾದ]. (ರಾ. ಶಾ.) ಅನೇಕ ರಾಜ್ಯಗಳು ತಮ್ಮ ಒಳ ಆಡಳಿತಗಳಲ್ಲಿ ಸ್ವತಂತ್ರವಾಗಿದ್ದು ತಮಗೆಲ್ಲಕ್ಕೂ ಸಂಬಂಧಪಟ್ಟ ವಿಚಾರಗಳಲ್ಲಿ ಒಟ್ಟು ಏರ್ಪಾಡಿಗೆ ಒಳಪಟ್ಟಿರುವ ; ಇಂಥ ರಾಷ್ಟ್ರ ಮಂಡಲಿಗೆ ಸಂಬಂಧಪಟ್ಟ ; ಸಂಯುಕ್ತ (ರಾಷ್ಟ್ರದ). **Féderalism** (ನಾ.) ಸಂಯುಕ್ತತೆ ; ಸಂಯುಕ್ತ ರಾಷ್ಟ್ರ ತತ್ತ್ವ. **Féderalist** (ನಾ) ಸಂಯುಕ್ತ ರಾಷ್ಟ್ರ ವಾದಿ. **Féderalize** (ಕ್ರಿ. ಸಕ.) ರಾಷ್ಟ್ರ ಸಂಯೋಜನದಲ್ಲಿ ಸೇರು ; ಸಂಯುಕ್ತ ರಾಷ್ಟ್ರದಲ್ಲಿ ಸೇರು. (ಅಂಗ ರಾಷ್ಟ್ರಗಳ ಅಧಿಕಾರದಿಂದ ತೆಗೆದು) ಸಂಯುಕ್ತ ರಾಷ್ಟ್ರ ಸರ್ಕಾರಕ್ಕೆ ವಹಿಸು. **Federalizátion** (ನಾ.) ; **Féderally** (ಕ್ರಿ. ವಿ.) ; **Féderate** — ರೇಟ್ (ಕ್ರಿ.), — ರೆಟ್ (ಗು.) ಒಂದು ಸಮಾನೋದ್ದೇಶದಿಂದ ಒಂದುಗೂಡು ; ಸಂಯುಕ್ತ ರಾಷ್ಟ್ರ ಮಾಡು ; ಸಂಯುಕ್ತ ರಾಷ್ಟ್ರಕ್ಕೆ ಸೇರು. (ಗು.) ಒಪ್ಪಂದದಿಂದ ಒಂದುಗೂಡಿದ ; ಸಂಯುಕ್ತ. **Federátion** (ನಾ.) ಸಂಯುಕ್ತ ಮಾಡುವುದು ; — ವಾಗುವುದು ; ಸಂಯುಕ್ತ ಸಂಘ, (ಮು.,) ಸಂಯುಕ್ತ ಸಾಮ್ರಾಜ್ಯ, ರಾಷ್ಟ್ರ ಸಮುದಾಯ. Imperial f. (Imperial ನೋಡಿ). **Federátionist** (ನಾ.) ; **Féderative** (ಗು.) ಸಂಯುಕ್ತ ರಾಷ್ಟ್ರ ಭಾಗವಾದ ; ಸಂಯುಕ್ತ ರಾಷ್ಟ್ರ ಲಕ್ಷಣವುಳ್ಳ. **Féderatively** (ಕ್ರಿ. ವಿ.)

Fee ಫೀ (ನಾ., ಕ್ರಿ. ಸಕ. ; ಭೂತ., ಭೂ. ಕೃ. Feed) (ಅಧಿಕಾರಿಗೆ ಆತನು ಮಾಡಿದ ಕೆಲಸಕ್ಕಾಗಿ ಕೊಡಬೇಕಾದ) ತೆರ ; ಸಂಬಳ ; (ನ್ಯಾಯವಾದಿ, ವೈದ್ಯ ಅಥವಾ ಇತರ ಉದ್ಯೋಗಿಗೆ ಕೊಡಬೇಕಾದ) ವೇತನ, ರುಸುಮು, ಪ್ರತಿಫಲ, ಸಂಭಾವನೆ (Retaining-f. ನ್ಯಾಯವಾದಿ, ಮೊ. ರ ಸಹಾಯವನ್ನು ಸಂಪಾದಿಸಿ ಇಟ್ಟುಕೊಳ್ಳುವ ಉದ್ದೇಶದಿಂದ ಮೊದಲೇ ಕೊಡುವ ರುಸುಮು : ಮುನ್ನಿಗದಿಯ ರುಸುಮು). ಪರೀಕ್ಷೆ, ಸಂಘ, ಮೊ. ಕ್ಕೆ ಪ್ರವೇಶ ಪಡೆಯಲು ಕೊಡಬೇಕಾದ ಹಣ : ಪ್ರವೇಶ ಧನ ; ವಿದ್ಯಾಭ್ಯಾಸಕ್ಕಾಗಿ ಪಾಠಶಾಲೆಗೆ ಕಾಲ ಕಾಲಕ್ಕೆ ಕೊಡಬೇಕಾದ ತೆರ : ಪಾಠದ ತೆರ. ಬಹುಮಾನ ; ಪಾರಿತೋಷಿಕ ; ಇನಾಮು. (ಚರಿತ್ರೆ) ಊಳಿಗ ಮಾನ್ಯ ; ಸೈನ್ಯಸಹಾಯ ಮಾಡುವ ಕರಾರಿನಮೇಲೆ ಪಡೆದ ಕೊಡುಗೆ. ಉತ್ತರಾಧಿಕಾರದಿಂದ ಪಡೆದ ಆಸ್ತಿ ; ಪರಂಪರಾ ಪ್ರಾಪ್ತವಾದ ಆಸ್ತಿ (F. simple ಒಂದು ಗೊತ್ತಾದ ತರಗತಿಯ ಉತ್ತರಾಧಿಕಾರಿಗಳಿಗೇ ಸಲ್ಲಬೇಕೆಂಬ ನಿರ್ಬಂಧವಿಲ್ಲದ ಆಸ್ತಿ : ನಿರುಪಾಧಿಕ ಆಸ್ತಿ. F.-tail ಗೊತ್ತುಮಾಡಿದ ಉತ್ತರಾಧಿಕಾರಿಗಳಿಗೇ ಸಲ್ಲಬೇಕೆಂಬ ನಿರ್ಬಂಧವುಳ್ಳ ಆಸ್ತಿ : ಸೋಪಾಧಿಕ, ಕ್ರಮ ವಿಹಿತ, ಹಕ್ಕಿನ, ಆಸ್ತಿ. Hold in f. simple or f. ಆಸ್ತಿಯನ್ನು ನಿರ್ಬಂಧ ರಹಿತವಾಗಿ ಅನುಭವಿಸು ; ಸಂಪೂರ್ಣ ಸ್ವಾಮ್ಯ ಪಡೆದಿರು ; ಆಸ್ತಿಯಮೇಲೆ ನಿರಾತಂಕವಾದ ಹಕ್ಕನ್ನು ಪಡೆದಿರು). (ಕ್ರಿ.) (ನ್ಯಾಯವಾದಿ, ಮೊ. ರನ್ನು) ರುಸುಮು ಗೊತ್ತುಮಾಡಿ ನೇಮಿಸಿಕೊ.

Feéble ಫೀಬ್‌ಲ್ (ಗು.) ಅಶಕ್ತ ; ದುರ್ಬಲ ; ಬಲ ಹೀನ ; ಸತ್ವ ಹೀನ ; ನಿಶ್ಶಕ್ತ ; ದಾರ್ಢ್ಯವಿಲ್ಲದ ; ಸ್ಥೈರ್ಯವಿಲ್ಲದ ; ತ್ರಾಣವಿಲ್ಲದ ; ಕುಗ್ಗಿದ ; ಸಡಿಲಿದ ; ಮಂದ ಬುದ್ಧಿಯ. ಅಸ್ಪಷ್ಟ ; ಮಂದ ; ಮಂಕಾದ. **Feébleness** (ನಾ.) ; **Feéblish** (ಗು.) ; **Feébly** (ಕ್ರಿ. ವಿ.)

Feed ಫೀಡ್ (ಕ್ರಿ. ; ಭೂತ., ಭೂ. ಕೃ. Fed) ಆಹಾರ ಕೊಡು ; —ತೆಗೆದುಕೊ ; ಹೊಟ್ಟೆಗೆ ಹಾಕು ; ತಿಂಡಿ ಹಾಕು ; (ತಿಂಡಿ) ತಿನ್ನು ; ತಿನ್ನಿಸು (F. a cold ಶೀತವಾಗಿರುವಾಗ ಅತಿಯಾಗಿ ತಿನ್ನು) ; ಉಣ್ಣು ; ಉಣ್ಣಿಸು ; ಊಡು (Cannot f. himself ತಾನಾಗಿ ತಾನು ಉಣ್ಣಲಾರನು). (ದನಗಳನ್ನು) ಮೇಯಿಸು. (ಅಹಂಭಾವ, ಮೊ. ನ್ನು, ಕಣ್ಣುಗಳು, ಮೊ. ನ್ನು) ತಣಿಸು, ತೃಪ್ತಿ ಪಡಿಸು. (ಒಬ್ಬನಿಗೆ) ಧೈರ್ಯ ಹೇಳಿ ಸಮಾಧಾನಪಡಿಸು. (F. at the high table ಪ್ರಧಾನ ಪಂಕ್ತಿಯಲ್ಲಿ ಭೋಜನ ಮಾಡು. F. high ಶ್ರೇಷ್ಠ ಭೋಜನ ಮಾಡು. F. on ತಿನ್ನು ; ಮೇಯು). ಆಹಾರವಾಗು ; ತಿಂಡಿಯಾಗು. ಪೋಷಿಸು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆಳಸು; ಪುಷ್ಟಿ ಮಾಡು [F. up ಕೊಬ್ಬಿಸು; ಪೂರ್ತಿ ತಣಿಸು; ವೆಗಟಾಗುವಂತೆ ತಿನ್ನಿಸು. Fed up (ಅನಂ.) ಯಾವುದಾದರೂ ಅತಿ ಯಾದುದರಿಂದ ಸಾಕಾಗಿಹೋಗಿ, ಬೇಸರ ಹಿಡಿದು, ತಲೆ ಚಿಟ್ಟುಗಟ್ಟಿಹೋಗಿ, ಬೇಜಾರಾಗಿ]. (ನೀರಿನ ತೊಟ್ಟಿ, ಜಲಾಶಯ, ಮೊ. ನ್ನು) ಭರ್ತಿಯಾಗಿ, ತುಂಬಿ, ಇಟ್ಟಿರು. (ಬೆಂಕಿ, ಮೊ. ಕ್ಕೆ) ಸೌದೆ, ಮೊ. ನ್ನು ಹಾಕು: ಉರುವಲು ಹಾಕು; ಇಂಧನ ಹಾಕು. (ಯಂತ್ರಕ್ಕೆ) ಬೇಕಾದ ಪದಾರ್ಥ ವನ್ನು ಒದಗಿಸುತ್ತಿರು (F.-pipe ಸರಬರಾಯಿ ನಾಳ; ಒದಗು ನಾಳ; ಊಡು ನಾಳ). (ಜಮೀನನ್ನು) ಹುಲ್ಲುಗಾವಲಾಗಿ ಉಪಯೋಗಿಸು, ಮೇಯಿಸು (ಸಾ., F. down, F. close ಪೂರ್ತಿ ಮೇಯಿಸು). ದನಗಳಿಗೆ ಮೇವು ಹಾಕು. (ದನಗಳು ಹುಲ್ಲುಗಾವಲನ್ನು) ಮೇಯಿ, ಮೇದುಬಿಡು. Feeding-bottle ಮಕ್ಕಳಿಗೆ ಆಹಾರ ಕುಡಿಸುವ ಸೀಸೆ; ಹಾಲೂಡುವ ಸೀಸೆ; ಹಾಲು ಬುಡ್ಡಿ.

Feed (ನಾ.) ತಿನ್ನಿಸುವುದು; ಉಣಿಸುವುದು; ಮೇಯಿಸುವುದು; ಆಹಾರ ಕೊಡುವುದು. ಉಣಿಸು; ಆಹಾರ; ತಿಂಡಿ; ಮೇವು [Two biscuits at one f. ಒಂದು ಉಣಿಸಿಗೆ ಎರಡು ಬಿಸ್ಕತ್ತು. Out at f. ಮೇಯುವುದಕ್ಕೆ ಅಟ್ಟಿ, ಬಿಟ್ಟು, ಹೋಗಿ. Off one's f. ಹಸಿವಿಲ್ಲದೆ. On the f. (ಮೀನುಗಳು) ಆಹಾರ ತಿನ್ನುತ್ತ, ಆಹಾರ ಹುಡುಕುತ್ತ]. ಹುಲ್ಲುಗಾವಲು; ಹಸುರು ಪಯಿರು. (ಕುದುರೆಗೆ ಕೊಡುವ 'ಓಟ್ಸ್' ಮೊ.) ದಾಣದ, ಮೇತದ, ಮೊತ್ತ. (ಬಳ. ಮಾ.) ಊಟ; ಹಬ್ಬದೂಟ. ಯಂತ್ರಕ್ಕೆ ಒದಗಿಸುವುದು; —ಒದಗಿಸಿದ ಸಾಮಾನು. ಬಂದೂಕಿಗೆ ಹಾಕುವ ಮದ್ದು, ಮೊ., ಭರ್ತಿ. F.-tank, F.-trough ಸ್ಥಾನಾಂತರ ಚಲಯ ಎಂಜಿನಿನ ನೀರುತೊಟ್ಟಿ. **Feéder** (ನಾ.) (ಕ್ರಿಯಾರ್ಥಗಳಲ್ಲಿ). (Large, gross, f. ಹೆಚ್ಚಾಗಿ ತಿನ್ನುವವನು; —ವದು. Quick f. ಬೇಗ ಬೇಗ ತಿನ್ನುವವನು, —ವದು). ಮಗು ವಿಗೆ ಆಹಾರ ಊಡುವ ಬುಡ್ಡಿ: ಹಾಲು ಬುಡ್ಡಿ. ಮಗುವಿಗೆ ಹಾಕಿದ ಹಾಲು, ಮೊ. ವೂ ಜೊಲ್ಲೂ ಅಂಗಿಯಮೇಲೆ ಬೀಳದಂತೆ ಮೈಗೆ ಹಾಕುವ ಸಣ್ಣ ಚೌಕ, ವಸ್ತ್ರ: ಎಂಜಲು ಚೌಕ, ವಸ್ತ್ರ. ಉಪ ನದಿ (ರೂಪ. ಸಹ). ('ರೌಂಡರ್ಸ್' ಮೊ. ಆಟಗಳಲ್ಲಿ) ದಾಂಡುಗಾರನಿಗೆ ಚೆಂಡನ್ನು ಎಸೆಯುವ ಆಟಗಾರ. ಒಂದು ಯಂತ್ರದಲ್ಲಿ ಅದಕ್ಕೆ ಬೇಕಾದ ಸಾಮಾನನ್ನು ಒದಗಿಸುವ ಸಲಕರಣೆ: ಊಡು ಸಲಕರಣೆ. Feeder line, railway ಪ್ರಧಾನ ಮಾರ್ಗಕ್ಕೆ ಬಂದು ಸೇರುವ ಸುತ್ತು ಪ್ರಾಂತದ ರೈಲು ಮಾರ್ಗ: ಉಪ ರೈಲು. **Feéding** (ಗು.) (ಕ್ರಿಯಾರ್ಥ ಗಳಲ್ಲಿ). F. storm ಎಡೆಬಿಡದೆ ಹೆಚ್ಚುತ್ತಲೇಹೋಗುವ ಬಿರುಗಾಳಿ ಮಳೆ.

Fee-faw-fum ಫೀ ಫಾ ಫಂ (ಭಾವ. ಅವ್ಯ., ನಾ.) ರಾಕ್ಷಸನ ಅಬ್ಬರ; ಗುಮ್ಮನ ಬೆದರಿಕೆ. (ನಾ.) ಏನೂ ಅರಿಯದವರನ್ನೂ ಮಕ್ಕಳನ್ನೂ ಮಾತ್ರ ಹೆದರಿಸತಕ್ಕ ಮಾತು.

Feel ಫೀಲ್ (ಕ್ರಿ.; ಭೂತ., ಭೂ. ಕೃ. Felt; ನಾ.) ಮುಟ್ಟಿನೋಡು; —ತಿಳಿ; ಸ್ಪರ್ಶ ಮಾಡು [F. the pulse of ನಾಡಿ ನೋಡು; (ರೂಪ.) ಅಭಿಪ್ರಾಯವನ್ನು, ಮನೋಭಾವವನ್ನು, ಜಾಗರೂಕತೆಯಿಂದ ಕಂಡುಹಿಡಿ. F. one's way ದಾರಿಯನ್ನು ತಡಕಿಕೊಂಡು ಹೋಗು; ಜೋಕೆಯಿಂದ ನಡೆ]. ಕೈಯಿಂದ ತಡಕಾಡು, ತಡವರಿಸು. (ಸೈನಿಕ) (ಸುತ್ತುಮುತ್ತಲ ಪ್ರದೇಶವನ್ನು, ಶತ್ರುವನ್ನು) ಶೋಧನೆ ಮಾಡು, ಪರೀಕ್ಷಿಸಿ ನೋಡು. ಅನುಭವಿಸು [F. heat, pain, a blow ಶಾಖ ವನ್ನು, ನೋವನ್ನು, ಏಟನ್ನು, ಅನುಭವಿಸು. I felt him move ಅವನು ಚಲಿಸುತ್ತಿದ್ದಂತೆ (ಸಂಪರ್ಕದಿಂದ) ತೋರಿತು. I felt that he was cold ಅವನ ಮೈ ತಣ್ಣಗಿದ್ದಂತೆ (ನನ್ನ ಕೈಗೆ) ತೋರಿತು. F. one's legs or feet ಕಾಲೂರಿ ಭದ್ರವಾಗಿ ನಿಲ್ಲು; (ರೂಪ.) ಆರಾಮವಾಗಿ, ಹಾಯಾಗಿ, ಇರು]. ಸ್ಪರ್ಶಜ್ಞಾನವಿರು; (ಇಂದ್ರಿಯ ಜ್ಞಾನ, ಮನೋ ಭಾವ, ಅಭಿಪ್ರಾಯ —ಇವುಗಳ ವಿಷಯದಲ್ಲಿ) ಮನಸ್ಸಿಗೆ ತಂದುಕೊ, —ತಟ್ಟು; ಸಹಾನುಭೂತಿ ತೋರು; ಮರುಗು (A felt want ಮನವರಿಕೆಯಾದ ಕೊರತೆ). ತೋರು; ಎಣಿಸು; ಭಾವಿಸು (I f. well ನಾನು ಸ್ವಸ್ಥವಾಗಿದ್ದೇನೆ. I f. warm ನನಗೆ ಬೆಚ್ಚಗಿದೆ. F. quite oneself ಸ್ವಸ್ಥಚಿತ್ತನಾಗಿರು; ದಾರ್ಢ್ಯವುಳ್ಳವನಾಗಿರು. F. up to work, etc. ಕೆಲಸ, ಮೊ. ಕ್ಕೆ ಶಕ್ತನಾಗಿರು, ಸಮರ್ಥನಾಗಿರು. F. like doing ಮಾಡಲು ಮನಸ್ಸಿರು. He shall f. my vengeance ಅವನು ನನ್ನ ಸೇಡನ್ನು ಅನುಭವಿಸುವನು; ನನ್ನ ಹಗೆ ಅವನಿಗೆ ತಟ್ಟುತ್ತದೆ. Felt the storm severely ಬಿರುಗಾಳಿಮಳೆ ತೀವ್ರವಾಗಿ ತಟ್ಟಿತು). ಪ್ರಭಾವಕ್ಕೆ ಒಳಗಾಗು [Ship feels her helm ಹಡಗಿಗೆ ಚುಕ್ಕಾ ಣಿಯ ಪ್ರಭಾವ ಕಾಣುತ್ತದೆ. F. the censure keenly ಖಂಡನೆ ಯನ್ನು ಬಹಳವಾಗಿ ಮನಸ್ಸಿಗೆ ಹಚ್ಚಿಕೊ. F. in one's bones (Bone[1] ನೋಡಿ). Air feels chilly ಗಾಳಿ ಕೊರೆಯುತ್ತಿದೆ. Feels like velvet ಮಖಮಲ್ಲಿನಂತೆ ಕೈಗೆ ತೋರುತ್ತದೆ]. (ನಾ.) ಸ್ಪರ್ಶ (ಜ್ಞಾನ) (Firm to the f. ಸ್ಪರ್ಶಕ್ಕೆ ದೃಢವಾಗಿ); ಮುಟ್ಟಿ ಪರೀಕ್ಷಿಸುವುದು; ಸ್ಪರ್ಶ ಪರೀಕ್ಷೆ. (ಮನಸ್ಸಿಗೆ) ತೋರಿಕೆ, ಭಾವನೆ, ಅನುಭವ, ಅರಿವು, ಅನಿಸಿಕೆ. **Feéler** (ನಾ.) (ಕ್ರಿಯಾರ್ಥಗಳಲ್ಲಿ). ಮುಟ್ಟುವುದರಿಂದ ಪದಾರ್ಥಗಳನ್ನು ಪರೀಕ್ಷಿಸಲು, ಅಥವಾ ತಿಂಡಿ ಗಾಗಿ ಹುಡುಕಾಡಲು, ಕೆಲವು ಪ್ರಾಣಿಗಳಿಗಿರುವ ಅಂಗ: ಸ್ಪರ್ಶಾಂಗ. (ಸೈನಿಕ) ಶತ್ರುಗಳ ಸ್ಥಾನ ಬಲಾದಿಗಳನ್ನು ಅನ್ವೇಷಿಸಿಕೊಂಡುಬರುವ ಸೈನಿಕ: ಸುಳಿವು ಸೈನಿಕ. ಒಬ್ಬನ ಅಭಿಪ್ರಾಯ ತಿಳಿಯುವುದಕ್ಕಾಗಿ ಹೊರಕ್ಕೆ ಬಿಟ್ಟ ಸೂಚನೆ; = Ballon d'essai. **Feéling** (ನಾ., ಗು.) (ಕ್ರಿಯಾರ್ಥಗಳಲ್ಲಿ). ಸ್ಪರ್ಶ; ಸ್ಪರ್ಶಜ್ಞಾನ; ವೇದನೆ; ಅನು ಭವ; ಮನೋಭಾವ; ಮನೋರಾಗ; ಚಿತ್ತವೃತ್ತಿ; ಭಾವ; ರಸ. (ಬ. ವ. ದಲ್ಲಿ) ಭಾವನೆಗಳು; ಮನಸ್ಸು; ಹೃದಯ (Hurts my feelings ನನ್ನ ಮನಸ್ಸನ್ನು ನೋಯಿಸುತ್ತದೆ). (ಇತರರ ಕಷ್ಟಕ್ಕಾಗಿ) ಸಹಾನುಭೂತಿ, ಅನುಕಂಪ, ಮರುಕ; (Good f. ಒಳ್ಳೆಯ ಮನಸ್ಸು. Had a f. of safety ಅಪಾಯವಿಲ್ಲವೆಂಬ ಭಾವನೆ ಇದ್ದಿತು. The general f. was against it ಸಾಮಾನ್ಯವಾಗಿ ಎಲ್ಲರ ಭಾವನೆಯೂ ಅದಕ್ಕೆ ವಿರೋಧವಾಗಿದ್ದಿತು). (ಕಲೆ) ಸಾಮಾನ್ಯವಾಗಿ ಆದ ರಸಪರಿಣಾಮ. (ಗು.) ಸೂಕ್ಷ್ಮ ಪ್ರಕೃತಿಯ; ಕೋಮಲಾಂತಃ ಕರಣದ; ಮನಸ್ಸಿಗೆ ಹಚ್ಚಿಕೊಳ್ಳುವ; ಮನಮುಟ್ಟುವ; ಮರುಗುವ; ಮರುಕವುಳ್ಳ (A f. pleasure ಮನಸ್ಸಿಗೆ ನಾಟುವ ಸುಖ). ಸಹಾನು ಭೂತಿಯ; ಅನುಕಂಪವುಳ್ಳ; ಹೃತ್ಪೂರ್ವಕ. **Feélingly** (ಕ್ರಿ. ವಿ.)

Feéler, etc. **Feel** ನೋಡಿ.

Feet ಫೀಟ್ (ನಾ.) Foot ಪದದ ಬ. ವ.

Feign ಫೆಯ್ನ್, ಫೇನ್ (ಕ್ರಿ.) (ಪ್ರಾಚೀ. ಪ್ರ.) (ನೆಪ, ಕಥೆ, ದೂರು —ಇವನ್ನು) ಕಲ್ಪನೆ ಮಾಡು, ಕಲ್ಪಿಸಿ ಹೇಳು; (ದಸ್ತಾವೇಜನ್ನು) ಸೃಷ್ಟನೆ ಮಾಡು; ಸೃಷ್ಟಿಸು. ಕಥೆ ಕಟ್ಟು. ನಟಿಸು; ನಟನೆ ಮಾಡು; ಸೋಗು ಹಾಕಿಕೊ; ವೇಷ ತಾಳು (F. that one is mad; F. one-self mad; F. madness ಹುಚ್ಚುತನದ ಸೋಗು ಹಾಕಿಕೊ; ಹುಚ್ಚ ನಂತೆ ನಟನೆ ಮಾಡು)

Feint ಫೆಯ್‌ಂಟ್, ಫೇಂಟ್ (ನಾ., ಕ್ರಿ. ಅಕ., ಗು., ಕ್ರಿ. ವಿ.) (ಗಮನ ತಿರುಗಿಸಲು ಅಥವಾ ಎದುರಾಳಿಯನ್ನು ಮೋಸಗೊಳಿಸಲು ಮಾಡಿದ) ಹುಸಿ ದಾಳಿ, ಹಾಯಿಕೆ, ಮೇಲ್ನುಗ್ಗು; ನಟನೆಯ (ಏಟು, ಹೊಡೆತ, ಚುಚ್ಚು, ಮೊ. ವು). ನಟನೆ; ಸೋಗು; ವೇಷ; ಕಪಟ; ಕಳ್ಳಾಟ (Make a f. of doing ಮಾಡುವಂತೆ ನಟಿಸು). (ಕ್ರಿ.) ನಟಿಸು; ಸೋಗು ಹಾಕಿಕೊ; ಠಕ್ಕು ಮಾಡು; ಹುಸಿ ದಾಳಿ ಮಾಡು (*At*, *upon*, *against* ಉಪ. ದೊಡನೆ). F. lines, Ruled f. (Faint ನೋಡಿ)

Fél(d)spar ಫೆಲ್(ಡ್)ಸ್ಪಾರ್ (ನಾ.) ಬಿಳಿಯ ಅಥವಾ ನಸುಗೆಂಪಿನ ಸ್ಫಟಿಕಾಕೃತಿಯ ಖನಿಜವಿಶೇಷ: 'ಫೆಲ್‌ಸ್ಪಾರ್'. **Fel(d)spáthic** —ಸ್ಪ್ಯಾತಿಕ್ (ಗು.) ಫೆಲ್‌ಸ್ಪಾರಿನ ಸ್ವಭಾವದ; ಫೆಲ್‌ಸ್ಪಾರ್ ಉಳ್ಳ.

Félicide. **Feline** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Felicífic, Felícitate, etc. **Felicity** ನೋಡಿ.

Felícity ಫಿಲಿಸಿಟಿ (ನಾ.) ಸುಖ(ದಿಂದಿರುವುದು); ಆನಂದ; ಪರಮಾನಂದ; ಪರಮಸುಖ; ಹಿತ; ಪ್ರಸಾದ; ಸುಖ ಸಂತೋಷಗಳನ್ನು ಕೊಡುವಂಥದು; ಒಳ್ಳೆಯ ಅದೃಷ್ಟ; ಸೌಭಾಗ್ಯ. ಮಾತಿನಲ್ಲಿ ಹೃದಯಂಗಮತೆ, ಔಚಿತ್ಯ, ಸೌಲಭ್ಯ. ಔಚಿತ್ಯವುಳ್ಳ ಮಾತು; ಉಚಿತ ವಚನ; ಆಯ್ದ ಮಾತು; ಸೊಗಸಾದ ಪ್ರಯೋಗ. **Felicífic** ಫೀಲಿಸಿಫಿಕ್ (ಗು.) (ನೀತಿ ಶಾಸ್ತ್ರ) ಸುಖ ಕೊಡುವ; ಹಿತಕರ; ಸುಖ ಮಾರ್ಗದ. **Felícitate** ಫಿಲಿಸಿಟೇಟ್ (ಕ್ರಿ. ಸಕ.) ಸುಖವುಂಟು ಮಾಡು; ಆನಂದಗೊಳಿಸು (ಏರ. ಪ್ರ.). ಅಭಿನಂದಿಸು (ಸಾ., *on* ಉಪ. ದೊಡನೆ). **Felicitátion** (ನಾ.; ಸಾ., ಬ. ವ. ದಲ್ಲಿ) ಅಭಿನಂದನೆ. **Felícitous** (ಗು.) ಸುಖಕರ; ಆನಂದಮಯ (ಏರ. ಪ್ರ.); (ಮಾತು, ಉದ್ಧೃತವಾಕ್ಯ, ಮರ್ಯಾದೆಗಳು, ಅಥವಾ ಈ ವಿಷಯಗಳಿಗೆ ಸಂಬಂಧಪಟ್ಟಂತೆ ಒಬ್ಬ ವ್ಯಕ್ತಿ — ಇವುಗಳ ವಿಷಯವಾಗಿ) ಬಹಳ ಉಚಿತವಾದ, ಸಮಯೋಚಿತವಾದ, ತಕ್ಕ, ಒಪ್ಪುವ, ಹಿತವಾದ. **Felícitously** (ಕ್ರಿ. ವಿ.)

Félid. **Feline** ನೋಡಿ.

Féline ಫೀಲೈನ್, —ಲಿನ್ (ಗು., ನಾ.) ಬೆಕ್ಕಿನ (ಜಾತಿಯ); ಬೆಕ್ಕಿನಂಥ; [F. amenities ಬೆಕ್ಕಿನ ಸರಸಗಳು: ಮುಸುಕಿನ ಮತ್ಸರ; ಹೊರಕ್ಕೆ ತೋರದ ದ್ವೇಷ; ಹೊಟ್ಟೆಕಿಚ್ಚು; (ಹೆಂಗಸಿನ ವಿಷಯದಲ್ಲಿ) ಮೇರೆ ನಯವಾಗಿ ತೋರುವ ಚುಚ್ಚುಮಾತು, ಮರ್ಮಭೇದಕ ವಾಕ್ಯ]. (ನಾ.) ಬೆಕ್ಕಿನ ಜಾತಿಯ ಪ್ರಾಣಿ. **Felínity** ಫಿಲಿನಿಟಿ (ನಾ.) ಬೆಕ್ಕಿನಂಥ ಪ್ರವೃತ್ತಿ; ಮಾರ್ಜಾಲ ಪ್ರಕೃತಿ; —ಲಕ್ಷಣ. **Félicide** ಫೀಲಿಸೈಡ್ (ನಾ.) ಬೆಕ್ಕನ್ನು ಕೊಲ್ಲುವುದು; ಬೆಕ್ಕು ಕೊಲೆ; ಮಾರ್ಜಾಲ ಹತ್ಯೆ. **Félid** ಫೀಲಿಡ್ (ನಾ.) ಬೆಕ್ಕಿನ ಜಾತಿಯ ಪ್ರಾಣಿ.

Fell[1] ಫೆಲ್ (ನಾ.) (ಪ್ರಾಣಿಯ) ಕೂದಲಿನಿಂದ ಕೂಡಿದ ಚರ್ಮ; ಅಜಿನ (ಮನುಷ್ಯನ ಚರ್ಮ ಸಹ). ದಟ್ಟವಾದ ಅಥವಾ ಜಡೆಗಟ್ಟಿದ ಕೂದಲು, ಉಣ್ಣೆ; ಗೋಜು ಕೂದಲು, — ಉಣ್ಣೆ; ಕುರಿಯ ಮೈಮೇಲಿನ ತುಪ್ಪಟ. F. of hair ಬಾಚದಿರುವ ತಲೆಗೂದಲು; ಕೆದರಿದ ತಲೆ. F.-monger ಚರ್ಮದ ವ್ಯಾಪಾರಿ (ಮು., ಕುರಿಯ ಚರ್ಮದ ವ್ಯಾಪಾರಿ)

Fell[2] ಫೆಲ್ (ನಾ.) (ಹೆಸರುಗಳಲ್ಲಿ) ಬೆಟ್ಟ, ಗುಡ್ಡ, ಕುಂದ (Bowfell, Scawfell, ಮೊ.). ಉ. ಇಂಗ್ಲೆಂಡಿನ ಕುರುಚಲು ಕಾಡು.

Fell[3] ಫೆಲ್ (ಗು.) (ಕಾವ್ಯ) ಭಯಂಕರ; ಕಠಿನ; ಕಠೋರ; ಕರಾಳ; ಕ್ರೂರ; ಉಗ್ರ; ರೌದ್ರ; ನಿರ್ದಯ; ನಾಶಕರ.

Fell[4] ಫೆಲ್ (ಕ್ರಿ. ಸಕ., ನಾ.) (ಮನುಷ್ಯನನ್ನು, ಪ್ರಾಣಿಯನ್ನು, —ಏಟಿನಿಂದ, ಆಯುಧದಿಂದ) ಹೊಡೆದು ಕೆಡವು, ಕಡಿದುರುಳಿಸು; (ಮರವನ್ನು) ಕಡಿದುಹಾಕು, ಕೆಡವು, ಉರುಳಿಸು, ಬೀಳಿಸು. (ನಾ.) ಕತ್ತರಿಸಿ ಹಾಕಿದ ನಾಟಾಗಳ ಮೊತ್ತ. (ಹೊಲಗೆಯ ಚಾಚುಏಣನ್ನು) ಮಡಿಸಿ ಹೊಲಿ.

Fell[5]. Fall ಧಾತುವಿನ ಭೂತ.

Féllah ಫೆಲ (ನಾ.; ಬ. ವ. Fellaheen ಫೆಲಹೀನ್, Fellahs ಫೆಲಸ್) ಈಜಿಪ್ಟಿನ ರೈತ.

Félloe ಫೆಲೋ, **Félly** ಫೆಲಿ (ನಾ.) ಅರೆಕಾಲುಗಳು ಕೂಡಿಸಿರುವ ಚಕ್ರದ ಹೊರವಲಯ: ನೇಮಿ; ನೇಮಿಯ ಒಂದು ತುಂಡು; ಪುಟ್ಟಿಮರ; ಹೊಟ್ಟೆಮರ.

Féllow ಫೆಲೋ (ನಾ.) ಜೊತೆಗಾರ; ಸಂಗಾತಿ; ಸಂಗಡಿಗ; ಗೆಳೆಯ; ಕೂಡಾಡಿ; ಸಹಚರ [(ಸಾ., ಬ. ವ. ದಲ್ಲಿ) Separated from his fellows ಸಂಗಡಿಗರಿಂದ ಅಗಲಿ; ಜೊತೆಗಾರರಿಂದ ಬೇರ್ಪಟ್ಟು. Good f. ಸರಸಮಿತ್ರ; ಸಲಿಗೆಯ ಗೆಳೆಯ. Hail-f.-well-met ಅತ್ಯಂತ ಸಲಿಗೆಯುಳ್ಳ. F.-feeling ಸಹಾನುಭೂತಿ; ಅನುಕಂಪ; ಭೂತದಯೆ]. ಜೊತೆಯದು; ಜೋಡಿಯಲ್ಲೊಂದು; ಜೊತೆ; ಜೋಡಿ; ಸರಿಹೋಲುವದು; ಸಮವಾದದ್ದು; ಅದೇ ತೆರದ್ದು; ಅದೇ ತರಗತಿಯದು; ಸಜಾತೀಯ; ಒಂದೇ ಕಾಲದವನು; —ಕಾಲದ್ದು; ಸಮಕಾಲಿಕ; —ಕಾಲೀನ (Stone dead hath no f. ಗುಟ್ಟು ರಟ್ಟುಮಾಡದಿರುವುದಕ್ಕೆ ಸತ್ತವನ ಸಮಾನವಿಲ್ಲ. Shall never find his f. ಅವನಂಥವನು, ಅವನ ಸಮಾನನು, ಅವನ ಜೋಡಿ, — ದೊರೆಯುವುದಿಲ್ಲ. Passed all his fellows ಜೊತೆಯವರನ್ನೆಲ್ಲ ಹಿಂದೆ ಹಾಕಿದನು). ಪ್ರೌಢ ವಿದ್ಯಾಶಾಲೆಯ ಸದಸ್ಯ (F. commoner ಪಂಡಿತರ ಪಂಕ್ತಿಯಲ್ಲಿ ಊಟಮಾಡುವ ಮರ್ಯಾದೆ ಪಡೆದಿರುವ ವಿದ್ಯಾರ್ಥಿ). (ಸಂಶೋಧನೆ ನಡಸುವ ಷರತ್ತಿನಮೇಲೆ ಕೆಲವು ವರ್ಷಗಳ ಕಾಲ ವೇತನ ಪಡೆಯುವ) ಚುನಾಯಿತ ಪದವೀಧರ. (ಕೆಲವು ವಿಶ್ವವಿದ್ಯಾನಿಲಯಗಳಲ್ಲಿ) ಅಧಿಕಾರಿ ಮಂಡಲಿಯ ಸದಸ್ಯ; ಪಂಡಿತ ಮಂಡಲಿಯ ಸದಸ್ಯ. ಆಳು; ಆಸಾಮಿ. [Poor f.! ಅಯ್ಯೋ ಪಾಪ! ಎಂತಹ ದುರದೃಷ್ಟಶಾಲಿ! My dear or good f. (ಸಂಬೋಧನೆಯಲ್ಲಿ) ಅಪ್ಪಾ! ಅಣ್ಣಾ! Old f. ಹಳೆಯವನು; ಹಳಬ. A f. ಒಬ್ಬ. A f. can't work all day long ಯಾವನೂ ದಿನವೆಲ್ಲ ದುಡಿಯಲಾರನು. The f. ಅವನು (ತಿರಸ್ಕಾರಭಾವದಿಂದ). F. creature ನಮ್ಮಂತೆಯೇ ಸೃಷ್ಟಿಯಾದವನು; —ಯಾದದ್ದು; ನಮ್ಮಂತಹ ಒಬ್ಬ (ಒಂದು) ಪ್ರಾಣಿ]. (ಒಂದು ಕೆಲಸದಲ್ಲಿ) ಜೊತೆಗಾರ, ಸಹೋದ್ಯೋಗಿ (F. soldier ಜೊತೆಯ ಸಿಪಾಯಿ; ಸಹ ಸೈನಿಕ. F. citizen ಸಹ ರಾಷ್ಟ್ರೀಯ. F.-citizenship ಸಹ ರಾಷ್ಟ್ರೀಯತೆ. F.-countryman ಸ್ವದೇಶದವನು; ಸ್ವದೇಶೀಯ; ದೇಶ ಬಾಂಧವ). **Féllowship** (ನಾ.) ಸಹ ಭಾಗಿತ್ವ; ಪಾಲುಗಾರಿಕೆ; ಸಹಾಸಕ್ತಿ; ಸಹವಾಸ; ಸಾಹಚರ್ಯ; ಸ್ನೇಹ; ಸಖ್ಯ; ಮೈತ್ರಿ; ಜೊತೆ; ಸಂಗ; ಬಳಕೆ (Good f. ಒಳ್ಳೆಯ ಸ್ನೇಹ). ಜೊತೆಗಾರರ ತಂಡ, ಗುಂಪು, ಕೂಟ, ಸಂಘ (Right hand of f. ವಿಶ್ವಾಸದ ಕೈ). (ಕೆಲಸಗಾರರು, ವ್ಯಾಪಾರಿಗಳು, ಮೊ. ರ) ಮಂಡಲಿ, ಸಂಘ; ಭ್ರಾತೃ ಮಂಡಲಿ. ಪ್ರೌಢ ವಿದ್ಯಾಶಾಲಾ ಮಂಡಲಿಯ ಸದಸ್ಯನ ಸ್ಥಾನಮಾನ ಅಥವಾ ವೇತನ.

Félly = Felloe.

Félo de sé ಫೆಲೋ ಡಿ ಸೀ (ನಾ.; ಬ. ವ. Felones- ಫೆಲೋನೀಸ್ —, Felos- ಫೆಲೋಸ್ —) (ನ್ಯಾ. ಶಾ.) ಆತ್ಮಹತ್ಯ ಮಾಡಿಕೊಳ್ಳುವವನು. ಆತ್ಮಹತ್ಯ (ಬ. ವ. ಇಲ್ಲ)

Félon[1] ಫೆಲನ್ [ಗು. (ಕಾವ್ಯ), ನಾ.] ಕ್ರೂರ; ಕಠಿನ; ಘೋರ; ಭಯಂಕರ; ರೌದ್ರ; ಕೆಟ್ಟ; ದುಷ್ಟ; ನೀಚ; ಅಧಮ; ಘಾತುಕ; ಕೊಲೆಪಾತಕದ. (ನಾ.) ಘಾತುಕ ಕೃತ್ಯ ನಡಸಿರುವವನು; ಘಾತುಕ; ಮಹಾ ಪಾತಕಿ; ಘೋರ ಕರ್ಮಿ. **Felónious** ಫೆಲೋನಿಯಸ್ (ಗು.) ಘಾತುಕ ಕೃತ್ಯದ; ಮಹಾ ಪಾತಕದ. **Felóniously** (ಕ್ರಿ. ವಿ.); **Félonry** ಫೆಲನ್ರಿ (ನಾ.) ಮಹಾ ಪಾಪ ಕರ್ಮಿಗಳು; ಮಹಾ ಪಾತಕಿಗಳು; ಘೋರಾಪರಾಧಿಗಳು. **Félony** (ನಾ.) (ನ್ಯಾ. ಶಾ.) ಘೋರಾಪರಾಧ; ಮಹಾ ಪಾಪ ಕರ್ಮ; ಮಹಾ ಪಾತಕ.

Felon[2] ಫೆಲನ್ (ನಾ.) ಉಗುರುಸುತ್ತು.

Félspar = Feldspar.

Félstone ಫೆಲ್‌ಸ್ಟೋ(ೞ)ನ್ (ನಾ.) ಅಸ್ಫಟಿಕ ಶಿಲೆಗಳಲ್ಲಿ ದೊರೆಯುವ ಸಾಂದ್ರ 'ಫೆಲ್‌ಸ್ಪಾರ್' ಖನಿಜ.

Felt[1] ಫೆಲ್ಟ್ (ನಾ., ಗು., ಕ್ರಿ.) ಉಣ್ಣೆಗೆ ಕೆಲವು ಅಂಟುಪದಾರ್ಥಗಳನ್ನು ಸೇರಿಸಿ ಗುಂಡಾಡಿಸಿ, ಗಟ್ಟಿಸಿ ಮಾಡಿದ ಒಂದು ತೆರದ ಬಟ್ಟೆ: 'ಫೆಲ್ಟು' ಬಟ್ಟೆ. (ಗು.) ಫೆಲ್ಟು ಬಟ್ಟೆಯಿಂದ ಮಾಡಿದ (F. cap ಫೆಲ್ಟು ಟೋಪಿ); ಫೆಲ್ಟಿನಂಥ; ಫೆಲ್ಟು ಹಾಕಿದ. (ಕ್ರಿ.) ಫೆಲ್ಟಿನಂತಾಗಿ ಮಾಡು; (ಒತ್ತಿ) ಜಡೆಗಟ್ಟಿಸು; ಜಡೆಗಟ್ಟು; ಫೆಲ್ಟನ್ನು ತೊಡಿಸು, ಹೊದಿಸು. **Félty** (ಗು.) ಫೆಲ್ಟಿನಂಥ; ಫೆಲ್ಟು ಹಾಕಿದ.

Felt[2] ಫೆಲ್ಟ್. Feel ಧಾತುವಿನ ಭೂತ., ಭೂ. ಕೃ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Félteric ಫೆಲ್ಟೆರಿಕ್ (ನಾ.) ಕುದುರೆಯ ಒಂದು ತೆರದ ರೋಗ.

Felúcca ಫೆಲಕ (ನಾ.) ಮೆಡಿಟರೇನಿಯನ್ ಸಮುದ್ರದ ತೀರಪ್ರಯಾಣದ ಒಂದು ತೆರದ ಹಡಗು.

Fémale ಫೀಮೇಲ್ (ಗು., ನಾ.) ಹೆರುವ ಜಾತಿ ; ಹೆಣ್ಣು ; ಹೆಂಗಸು ; ಸ್ತ್ರೀ (ಜಾತಿಗೆ ಸೇರಿದ). (F. child, slave, dog ಹೆಣ್ಣು ಮಗು, ಗುಲಾಮಳು, ಹೆಣ್ಣು ತೊತ್ತು, ದಾಸಿ, ಹೆಣ್ಣು ನಾಯಿ). (ಸಸ್ಯಗಳು ಅಥವಾ ಅವುಗಳ ಅಂಗಗಳ ವಿಷಯದಲ್ಲಿ) ಕಾಯಿ ಬಿಡುವ ; ಕೇಸರ ಗಳಿಲ್ಲದೆ ಶಲಾಕೆ ಮಾತ್ರ ಉಳ್ಳ. ಹೆಂಗಸರ (F sex ಸ್ತ್ರೀ ಜಾತಿ. F. education ಸ್ತ್ರೀ ವಿದ್ಯಾಭ್ಯಾಸ. F. suffrage ಸ್ತ್ರೀಯರ ಚುನಾವಣೆ ಹಕ್ಕು. F. weakness ಸ್ತ್ರೀ ದೌರ್ಬಲ್ಯ). (ಓಜಸ್ಸು, ವೀರ್ಯ, ಮೊ. ಗಳಲ್ಲಿ) ಕೀಳು ತೆರದ ; —ಬಲದ (F. sapphire ಬಿಳುಪು ಛಾಯೆಯ ನೀಲ ಮಣಿ). (ಯಂತ್ರಸಲಕರಣೆ, ಮೊ. ಗಳಲ್ಲಿ ಗಂಡುಭಾಗವನ್ನು ಹೊಂದಿಸಲು ಅನುಕೂಲಿಸುವಂತೆ ಮಾಡಿರುವ) ಹೆಣ್ಣುಭಾಗ (F. screw ಹೆಣ್ಣು ತಿರುಪು ; ತಿರುಪುಗೂಟದ ಬಳೆ). The law is harsh to all females ಎಲ್ಲ ಹೆಂಗಸರ ವಿಷಯದಲ್ಲೂ ಶಾಸನ ಕಠಿನವಾಗಿದೆ. A young f. has called ಒಬ್ಬ ಪ್ರಾಯದ ಹೆಂಗಸು ಬಂದಿದ್ದಾಳೆ. **Feminálity** ಫೆಮಿನ್ಯಾಲಿಟಿ (ನಾ.) ಹೆಣ್ಣು ತನ ; —ಗುಣ ; ಹೆಂಗಸಿನ ವೈಲಕ್ಷಣ್ಯ ; ಸ್ತ್ರೀ ಸ್ವಭಾವ ; ಸ್ತ್ರೀ ಪ್ರಕೃತಿ ; ಸ್ತ್ರೀ ಲಕ್ಷಣ ; ಸ್ತ್ರೀ ವೈಶಿಷ್ಟ್ಯ ; ಸ್ತ್ರೀತ್ವ. ಹೆಂಗಸಿನ ಥಳುಕು ಪಳುಕು ಸಾಮಾನು, ಮೊ. ವು. **Feminéity** —ನೀಯಿಟಿ (ನಾ.) ಹೆಣ್ಣುತನ ; —ಗುಣ ; ಸ್ತ್ರೀತ್ವ ; ಸ್ತ್ರೀ ಸ್ವಭಾವ ; ಹೆಣ್ಣಿಗತನ. **Féminine** —ನಿನ್ (ಗು.) (ವಿರ. ಪ್ರ.) ಸ್ತ್ರೀ ಜಾತಿಯ ; ಹೆಣ್ಣು ; ಹೆಣ್ಣಿನ ; ಹೆಂಗಸಿನ ; ಹೆಂಗಸರ ; ಹೆಂಗಸರಿಗೊಪ್ಪುವ ; ಸ್ತ್ರೀಯ(ರ) ; ಸ್ತ್ರೀ ಸ್ವಭಾವದ ; ಸ್ತ್ರೀ ಸಹಜ ; ಹೆಂಗಸಿನಂಥ ; ಹೆಣ್ಣಿಗ. (ನಿಕೃಷ್ಟ ವಾಗಿ) ಹೆಣ್ಣಿನಂಥ ; ಪುರುಷತ್ವವಿಲ್ಲದ. (ವ್ಯಾ.) ಸ್ತ್ರೀ ಲಿಂಗದ. (ಛಂ.) F. rhyme (ಎರಡು ಅಕ್ಷರಗಳಲ್ಲಿ, ಎರಡನೆಯದಕ್ಕೆ ಸ್ವರಭಾರವಿಲ್ಲದ) ಸ್ತ್ರೀ ಪ್ರಾಸ. F. ending (ಪದ್ಯಪಾದದ ವಿಷಯದಲ್ಲಿ) ಉಪಾಂತಾಕ್ಷರದ ಮೇಲೆ ಕೊನೆಯ ಸ್ವರಭಾರವಿರುವ ಅಂತ. F. caesura ಸ್ವರ ಭಾರವಿರುವ ಅಕ್ಷರವಾದೊಡನೆಯೇ ಬಾರದ ಯತಿ. **Fémininely** (ಕ್ರಿ. ವಿ.); **Fémininеness** (ನಾ.); **Feminínity, Femínity** (ನಾ.) ಸ್ತ್ರೀ ಸ್ವಭಾವ ; —ಲಕ್ಷಣ ; —ಪ್ರಕೃತಿ ; ಹೆಣ್ಣು ಗುಣ ; ಹೆಂಗಸುತನ ; ಹೆಣ್ಣಿಗತನ. ಹೆಂಗಸರು ; ಸ್ತ್ರೀಯರು ; ಸ್ತ್ರೀ ಜಾತಿ. **Féminism** —ನಿಸ್ಮ್ (ನಾ.) ಸ್ತ್ರೀಯರ ಹಕ್ಕುಬಾಧ್ಯತೆಗಳ ಅಂಗೀಕಾರ, ಸಮರ್ಥನ ; ಸ್ತ್ರೀ ಸ್ವಾತಂತ್ರ್ಯ ವಾದ. **Féminist** (ನಾ.) ಸ್ತ್ರೀ ಸ್ವಾತಂತ್ರ್ಯ ವಾದಿ. **Féminize** (ಕ್ರಿ.) ಹೆಣ್ಣಿನಂತೆ, ಹೆಂಗಸಿನಂತೆ, —ಮಾಡು, ಆಗು. **Feminizátion** (ನಾ.)

Feme cóvert ಫೆಮ್ ಕವರ್ಟ್ (ನಾ.) (ನ್ಯಾ. ಶಾ.) ಮದುವೆಯಾದ ಹೆಂಗಸು ; ವಿವಾಹಿತೆ.

Féme sóle ಫೆಮ್ ಸೋಲ್ (ನಾ.) (ನ್ಯಾ. ಶಾ.) ಅವಿವಾಹಿತೆ, ಕನ್ಯೆ ಅಥವಾ ವಿಧವೆ ; ಆಸ್ತಿಯ ವಿಷಯದಲ್ಲಿ ಗಂಡನ ಹಂಗಿಲ್ಲದೆ ಪೂರ್ಣ ಸ್ವಾತಂತ್ರ್ಯವುಳ್ಳ ವಿವಾಹಿತೆ.

Femmé de chámbre (F) ಫ್ಯಾಮ್ ಡ ಷಾನ್‌ಬ್ರ್ (ನಾ.) ಚೇಟಿ ; ದಾಸಿ ; ಪರಿಚಾರಿಕೆ ; ಮನೆಗೆಲಸದವಳು.

Fémur ಫೀಮರ್ (ನಾ. ; ಬ. ವ. -s —ಮರ್ಸ್, Femora ಫೆಮೊರ) ತೊಡೆಯೆಲುಬು ; ಊರ್ವಸ್ಥಿ ; ಕೀಟಗಳಲ್ಲಿ ಇದಕ್ಕೆ ಜವಾಬಾದ ಎಲುಬು. **Fémoral** ಫೆಮೊರಲ್ (ಗು.)

Fen[1] ಫೆನ್ (ನಾ.) ತಗ್ಗಾದ ಜವುಗುಪ್ರದೇಶ ; ನೀರುನಿಲ್ಲುವ ತಗ್ಗು (The fens ಕೇಂಬ್ರಿಜ್‌ಷಯರ್, ಮೊ. ಪ್ರಾಂತಗಳ ತಗ್ಗುಪ್ರದೇಶಗಳು). **F.-fire** ಜವುಗುಪ್ರದೇಶಗಳಲ್ಲಿ ರಾತ್ರಿ ಕಾಣುವ ಉರಿ ; ಕೊಳ್ಳಿಯ ದೆವ್ವ. **F.-man** ಜವುಗುಪ್ರಾಂತದವನು ; —ನಿವಾಸಿ. **F.-pole** ಹಳ್ಳ ಕೊಳ್ಳಗಳನ್ನು ಹಾರಿಹೋಗಲು ಉಪಯೋಗಿಸುವ ದಡಿ, ದಂಡ, ದೋಣ್ಣಿ : ಹಾರುಗೋಲು. **F.-reeve** ಜವುಗುನೆಲಗಳ ಮೇಲ್ವಿಚಾರಕ. **F.-runners** ನೀರ್ಗಲ್ಲಿನಮೇಲೆ ಓಡಾಡಲು ಅನುಕೂಲಿಸುವ ಒಂದು ತೆರದ ಕಾಲ್ಕೊರಡು. **Fénny** (ಗು.) ಜವುಗು ಪ್ರದೇಶದಂಥ ; ಜವುಗಾದ ; ಜವುಗಿನ.

Fen[2], **Fens.** **Fain**[2] ನೋಡಿ.

Fence ಫೆನ್ಸ್ (ನಾ.) ಕತ್ತಿವರಿಸೆ ; ಖಡ್ಗ ವಿದ್ಯೆ [Master of f. ಕತ್ತಿವರಿಸೆಯಲ್ಲಿ ನಿಪುಣ ; (ರೂಪ.) ವಾದ ನಿಪುಣ]. (ಹೊಲ, ಮೊ. ಕ್ಕೆ ನುಗ್ಗಲಾಗದಂತೆ ಹಾಕುವ) ಬೇಲಿ, ಕಟಕಟೆ, ಸುತ್ತುಗೋಡೆ, ಆವರಣ, ಮೊ. ವು. (ಪ್ರಾಚೀ. ಪ್ರ.) ಕೊತ್ತಳ (Sunk f. ಮೇಲಕ್ಕೆ ಕಾಣದಂತೆ ಹಳ್ಳದಲ್ಲಿ ಹಾಕಿರುವ ಆವರಣ. Sit on the f. ವ್ಯಾಜ್ಯದಲ್ಲಿ ಯಾವ ಪಕ್ಷವನ್ನೂ ವಹಿಸದೆ ತಟಸ್ಥನಾಗಿರು ; ಅಡ್ಡಗೋಡೆಯ ಮೇಲಿರು. Come down on right side of f. ಗೆದ್ದವನ ಕಡೆ, ಪಕ್ಷ, ಸೇರು ; ಗೆದ್ದೆತ್ತಿನ ಬಾಲ ಹಿಡಿ. Put horse at f. ಕುದುರೆಯನ್ನು ಬೇಲಿಹಾರಲು ಬಿಡು). (ಅನೇಕ ಯಂತ್ರಗಳಲ್ಲಿ) ಕಾಪು, ನಿಯಂತ್ರಕ. ಕಳವು ಸಾಮಾನನ್ನು ತೆಗೆದುಕೊಳ್ಳುವವನು, —ಮನೆ. F.-month, -season, -time ಮೀನುಹಿಡಿಯುವುದಕ್ಕೂ ಬೇಟೆಯಾಡುವುದಕ್ಕೂ ಅಪ್ಪಣೆ, ಅವಕಾಶ, —ದೊರೆಯದ ಕಾಲ ; ನಿಷಿದ್ಧ ಕಾಲ ; ತಡೆಗಾಲ. **Fénceless** (ಗು.) ಬೇಲಿ ಹಾಕಿರದ ; ಆವರಣವಿಲ್ಲದ ; ಅನಾವೃತ. (ಕಾವ್ಯ) ಕೋಟೆಯಿಲ್ಲದ ; ಅರಕ್ಷಿತ.

Fence (ಕ್ರಿ.) ಕತ್ತಿಯ ವರಿಸೆಯನ್ನು ಅಭ್ಯಾಸಮಾಡು ; ಖಡ್ಗ ವಿದ್ಯೆ ಕಲಿ (F. with question or questioner ಪ್ರಶ್ನೆಗೆ, ಪ್ರಶ್ನೆ ಕೇಳುವವನಿಗೆ, ಉತ್ತರ ಕೊಡದೆ ತಪ್ಪಿಸಿಕೊ, ನುಣುಚಿಕೊ). ಮರೆ ಕೊಡು ; ಆಶ್ರಯ ಕೊಡು ; ರಕ್ಷಣೆ ಕೊಡು (*From, against* ಉಪ. ದೊಡನೆ). ಅಟ್ಟು ; ಓಡಿಸು ; ನಿವಾರಿಸು ; ತಡೆ ; ಹತ್ತಿರ ಸೇರದಂತೆ ಮಾಡು. ಬೇಲಿ ಹಾಕು ; ಬೇಲಿಯಂತೆ ಆವರಣವಾಗಿರು ; ಆವರಣ ಹಾಕು ; ಕೋಟೆ ಕಟ್ಟು (ಅನೇಕ ವೇಳೆ *About, in, round, up* ಉಪ. ದೊಡನೆ). (ಕುದುರೆಯ ವಿಷಯದಲ್ಲಿ) ಎಗುರಿಹೋಗು, ನೆಗೆ, ಹಾರು. ಕಳವುಮಾಲಿನ ವ್ಯಾಪಾರ ಮಾಡು. **Féncer** (ನಾ.) ಬೇಲಿ ಹಾಕುವವನು ; ಬೇಲಿ ಹಾರುವ ಕುದುರೆ. ಕತ್ತಿವರಿಸೆಗಾರ ; ಖಡ್ಗ ಚತುರ. (ಅಸಂ.) ಕಳವು ಮಾಲನ್ನು ತೆಗೆದುಕೊಳ್ಳುವವನು. **Féncible** (ನಾ) (ಚರಿತ್ರೆ) ರಕ್ಷಣಕಾರ್ಯಕ್ಕೆ ಮಾತ್ರವಿರುವ ಸಿಪಾಯಿ : ಕಾಪು ಸಿಪಾಯಿ. **Féncing** (ನಾ.) (ಕ್ರಿಯಾರ್ಥಗಳಲ್ಲಿ). ಕಟಕಟೆ ; ಬೇಲಿ(ಗಳು) ; ಬೇಲಿಗೆ ಬೇಕಾದ ಸಾಮಾನು. **F.-cully** ಕಳವುಮಾಲನ್ನು ತೆಗೆದುಕೊಳ್ಳುವವನು. **F.-ken** ಕಳವುಮಾಲಿನ ಉಗ್ರಾಣ.

Fend ಫೆಂಡ್ (ಕ್ರಿ.) ಹತ್ತಿರಕ್ಕೆ ಬರದಂತೆ ಮಾಡು ; ದೂರ ಮಾಡು ; ತಡೆ ; ತಪ್ಪಿಸಿಕೊ ; ನಿವಾರಿಸು ; ಹಿಮ್ಮೆಟ್ಟಿಸು. ಒದಗಿಸಿಕೊ ; ಹವಣಿಸಿಕೊ. **Fénder** (ನಾ.) ಯಾವುದನ್ನಾದರೂ ಹತ್ತಿರ ಬರದಂತೆ, ಧಕ್ಕಾಮುಕ್ಕಿಯಾಗದಂತೆ, ಮಾಡುವ ಸಲಕರಣೆ : ನಿವಾರಕ ; ತಡೆ ; ಕಾಪು ; ರಕ್ಷಕ ; ರಕ್ಷಣೆ (ಮು., ಒಲೆಯಿಂದ ಕೆಂಡಗಳು ಹೊರಕ್ಕೆ ಉರುಳಿಬಾರದಂತೆ ತಡೆಯುವ ಲೋಹದ ಚೌಕಟ್ಟು) ; ಕೆಂಡ ತಡೆ. **F.-stool** ಕೆಂಡತಡೆಯ ಮುಂದಿಟ್ಟಿರುವ ಉದ್ದವಾದ ಕಾಲು ಮಣೆ. **Fénderless** (ಗು.)

Fenéstrate ಫಿನೆಸ್ಟ್ರೇಟ್ (ಗು.) (ಸ. ವಿ., ಪ್ರಾ. ವಿ.) ಕಿಟಕಿಯಿದ್ದಂತೆ ಸಣ್ಣ ಸಣ್ಣ ರಂಧ್ರಗಳಿರುವ ; ಕಣ್ಣು ಕಣ್ಣಾದ ; ಜಾಲಾಂತರ ; ಜಾಲಂಧರ. **Fenestrátion** ಫೆ— (ನಾ.) (ವಾ. ಶಾ.) ಒಂದು ಕಟ್ಟಡದಲ್ಲಿ ಕಿಟಕಿಗಳನ್ನಿಡುವ ವ್ಯವಸ್ಥೆ : ಕಿಟಕಿ ವ್ಯವಸ್ಥೆ ; ವಾತಾಯನ ಸಂವಿಧಾನ. (ಸ. ವಿ., ಪ್ರಾ. ವಿ.) ಕಿಟಕಿಯಂಥ ಸಣ್ಣ ಸಣ್ಣ ರಂಧ್ರಗಳಿರುವುದು ; ಜಾಲಂಧರತೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Fenks ಫೆಂಕ್ಸ್ (ನಾ., ಬ. ವ.) ತಿಮಿಂಗಿಲದ ಮೇದಸ್ಸಿನಲ್ಲಿ ನಾರು ನಾರಾಗಿ ದೊರೆಯುವ ಭಾಗ; ಈ ಮೇದಸ್ಸನ್ನು ಕರಗಿಸಿದಮೇಲೆ ನಿಲ್ಲುವ ಗಸಿ.

Fénnel ಫೆನೆಲ್ (ನಾ.) ಚಟ್ನಿ, ಮೊ. ನ್ನು ಮಾಡುವುದಕ್ಕಾಗಿ ಉಪಯೋಗಿಸುವ ಸುವಾಸನೆಯುಳ್ಳ, ಕೊತ್ತುಂಬರಿ ಜಾತಿಯ, ಹಳದಿ ಹೂವಿನ, ಒಂದು ಸೊಪ್ಪು.

Fénugreek ಫೆನ್ಯುಗ್ರೀಕ್ (ನಾ.) ಮೆಂತ್ಯ.

Feóff ಫೆ(ಫೀ)ಫ್ (ಕ್ರಿ. ಸಕ. ; ಭೂತ., ಭೂ. ಕೃ. Feoffed ; ನಾ.) (ನ್ಯಾ. ಶಾ.) = Enfeoff. (ನಾ.) = Feud[2]. **Feoffeé** ಫೆಫೀ (ನಾ.) ಮಾನ್ಯದ ಆಸ್ತಿ ಪಡೆದವನು ; ಮಾನ್ಯದಾರ ; ಜಹಗೀರುದಾರ. F. in (*or* of) trust ಮಾನ್ಯದ ಆಸ್ತಿಯ ನ್ಯಾಸದರ್ಶಿ. **Feóffment** ಫೆಫ್— (ನಾ.) ಮಾನ್ಯಕೊಡುವುದು. **Feóffor, -er** ಫೆಫರ್ (ನಾ.) ಮಾನ್ಯ ಕೊಡುವವನು.

Férae natúrae (L) ಫೀರೀ ನಟ್ಯೂರೀ (ಗು.) ಪಳಗಿಸಿಲ್ಲದ ; ಕಾಡು ಸ್ಥಿತಿಯಲ್ಲಿರುವ ; ಕಾಡು (The hare is f. n. ವೊಲ ಕಾಡು ಪ್ರಾಣಿ. Animals f. n. ಕಾಡು ಪ್ರಾಣಿಗಳು). **Féral** ಫಿಯರಲ್ (ಗು.) ಕಾಡು ಸ್ಥಿತಿಯಲ್ಲಿರುವ ; ಕಾಡು ; ಪಳಗಿಲ್ಲದ ; ವ್ಯವಸಾಯ ಮಾಡಿಲ್ಲದ ; ಅಸಂಸ್ಕೃತ ; ಮೃಗದಂಥ ; ಪಾಶವ ; ಒರಟು ; ಕ್ರೂರ. **Férine** ಫಿಯರೈನ್ (ಗು.) = Feral.

Féral, Férine. Ferae naturae ನೋಡಿ.

Ferásh ಫೆರಾಷ್ (ನಾ.) (ಆಂ. ಇಂ.) ಜಮಖಾನಗಳನ್ನು ಹಾಸುವುದು, ಡೇರಾಗಳನ್ನು ಹೊಡೆಯುವುದು, ಮೊ. ಕೆಲಸಗಳನ್ನು ಮಾಡುವ ಚಾಕರ : ಫರಾಸಿ.

Féretory ಫೆರಿಟೊರಿ (ನಾ.) (ಕ್ರೈಸ್ತ) ಸಾಧು ಸಂತರ ಅವಶೇಷಗಳನ್ನಿಟ್ಟಿರುವ, ಸಾ., ವಿಶೇಷ ಅಲಂಕಾರ ಮಾಡಿರುವ, — ಮಂದಿರ, ವಾಹನ. ಸಮಾಧಿ ; ಗೋರಿ ; ಚಟ್ಟ ; ಶವ ಯಾನ. (ಕ್ರೈಸ್ತ) ಸಾಧು ಸಂತರ ಅವಶೇಷಗಳನ್ನಿಡುತ್ತಿದ್ದ ಮಂಟಪ.

Féria ಫಿಯರಿಯ (ನಾ. ; ಬ. ವ. -ae —ಯಾ) (ಪುರಾತನ ರೋಮನರಲ್ಲಿ) ಹಬ್ಬದ, ಉತ್ಸವದ, ದಿನ. (ಕ್ಯಾತೊಲಿಕ್ ಮತದಲ್ಲಿ) ಸಾಮಾನ್ಯ ವಾರದ ದಿನ (ವಿಶೇಷವೇನೂ ಇಲ್ಲದ್ದು). **Férial** (ಗು.) (ಹಬ್ಬವಲ್ಲದ) ವಾರದ ದಿನದ. ಹಬ್ಬದ (ದಿನದ) ; ರಜಾ ದಿನದ.

Feríngheé ಫೆರಿಂಗಿ (ನಾ.) (ಇಂಡಿಯದ ಮಾತು) ಯೂರೋಪಿನವನು (ಮು., ಇಂಡಿಯದಲ್ಲಿ ಹುಟ್ಟಿದ ಪೋರ್ಚುಗೀಸನು) ; ಪರಂಗಿ(ಯವನು) (Frank ಪದದ ಅಪಭ್ರಂಶ)

Férment ಫರ್ಮೆಂಟ್ (ನಾ., ಕ್ರಿ.) ಹುದುಗೆಬ್ಬಿಸುವ ಪದಾರ್ಥ ; ಕಿಣ್ವ ; ಹುದುಗೆಬ್ಬಿಸುವುದು ; ಹುದುಗುವುದು ; ಹುಳಿ ಹಿಡಿಯುವುದು. ಕೆರಳಿಕೆ ; ಉದ್ರೇಕ ; ಉಕ್ಕು ; ಕ್ಷೋಭೆ ; ಗಲಭೆ ; ಗಲಾಟೆ ; ಗೊಂದಲ (ಕ್ರಿ.) ಹುದುಗೇಳು ; ಹುದುಗು ಬರು ; ಹುದುಗೇಳುವಂತೆ ಮಾಡು ; ಉಕ್ಕುವಂತೆ ಮಾಡು. ಉದ್ರೇಕಗೊಳಿಸು ; ಕೆರಳಿಸು ; ರೇಗಿಸು. **Ferméntable** (ಗು.) ಹುಳಿ ಹಿಡಿಯುವ. **Fermentátion** (ನಾ.) ನೀರು ಹಾಕಿ ಕಲಸಿ ಹುದುಗು ಹಾಕಿದ ಹಿಟ್ಟಿನಲ್ಲಿ ಆಗುವ ಪರಿಣಾಮ ; ಹುದುಗುವುದು. ಉದ್ರೇಕ ; ಗಲಾಟೆ ; ಗಲಭೆ ; ಕ್ಷೋಭೆ. **Ferméntative** (ಗು.)

Fern ಫರ್ನ್ (ನಾ.) ಹಕ್ಕಿಯ ಗರಿಗಳಂಥ ಎಲೆಗಳುಳ್ಳ, ರಸ ನಾಳಗಳಿರುವ, ಗುಪ್ತ ಪುಷ್ಪೀಯ ವರ್ಗದ, ಒಂದು ಸಸ್ಯ : ಜರೀ ಗಿಡ. (ಸಾಮುದಾಯಿಕವಾಗಿ : Go through heath and f. ಕುರುಚಲು ಗಿಡಗಳೂ ಜರೀಗಿಡಗಳೂ ಬೆಳೆದಿರುವ ಕಾಡಿನಲ್ಲಿ ಹೋಗು). **F.-seed** ಜರೀಗಿಡದ ಬೀಜ (ಇದು ಕಣ್ಣಿಗೆ ಕಾಣದ ಬೀಜವೆಂದೂ ಇದನ್ನುಳ್ಳವನು ಅದೃಶ್ಯನಾಗಿರುವನೆಂದೂ ಹಿಂದೆ ಜನರಲ್ಲಿ ನಂಬಿಕೆಯಿದ್ದಿತು). **F.-owl** (ನಾ.) ಒಂದು ಜಾತಿಯ ವೋಟುಗಿವಿಯ ಗೂಬೆ, ಗೂಗೆ ; ಒಂದು ಜಾತಿಯ ಹಕ್ಕಿ. **Férnless** (ಗು.) ; **Férny** (ಗು.) ಜರೀಗಿಡಗಳು ತುಂಬಿರುವ ; ಜರೀಗಿಡದ ; ಜರೀಗಿಡದಂತಿರುವ. **Férnery** ಫರ್ನರಿ (ನಾ.) ಜರೀಗಿಡಗಳನ್ನು ಬೆಳಸುವ ಸ್ಥಳ, —ಗಾಜಿನ ಪೆಟ್ಟಿಗೆ.

Ferócious ಫೆರೋಷಸ್ (ಗು.) ಭಯಂಕರ ; ಕ್ರೂರ ; ಕಿರಾತ ; ರೌದ್ರ ; ಉಗ್ರ ; ಹಿಂಸ್ರ. **Feróciously** (ಕ್ರಿ. ವಿ.) ; **Ferócity** ಫೆರಾಸಿಟಿ (ನಾ.) ಕ್ರೌರ್ಯ ; ರೌದ್ರತೆ ; ಉಗ್ರತೆ ; ಭಯಂಕರತೆ ; ಭಯಂಕರ ಕಾರ್ಯ.

-ferous —ಫೆರಸ್ (ಬಳಕೆಯಲ್ಲಿ ಯಾವಾಗಲೂ -iferous) (ಸಮಾಸದಲ್ಲಿ ಪರ ಪದ) —ಧಾರಿ ; —ವಾಹಕ ; —ಉಳ್ಳ ; —ಒಳಕೊಂಡಿರುವ ; —ಗರ್ಭ (ಉದಾ., Auriferous)

Férox ಫೆರಾಕ್ಸ್ (ನಾ.) ಸರೋವರ ವಾಸಿಯಾದ ಒಂದು ಜಾತಿಯ ದೊಡ್ಡ ಮೀನು.

Férrate ಫೆರೇಟ್ (ನಾ.) ಫೆರಿಕ್ ಆಮ್ಲದ ಒಂದು ಲವಣ : 'ಫೆರೇಟು'. **Férreous** ಫೆರಿಯಸ್ (ಗು.) ಕಬ್ಬಿಣದ ; ಕಬ್ಬಿಣವುಳ್ಳ ; ಕಬ್ಬಿಣವನ್ನೊಳಕೊಂಡ. **Ferri-** ಫೆರಿ— (ಸ. ಪೂ. ಪ.) (ಕಬ್ಬಿಣವು 'ಫೆರಿಕ್' ಸ್ಥಿತಿಯಲ್ಲಿರುವುದೆಂದು ಸೂಚಿಸುವ ರೂಪ). **Férric** (ಗು.) ಕಬ್ಬಿಣದ. (ರ. ವಿ.) ತನ್ನ ಮಹತ್ತಮ ಸಂಯೋಗಶಕ್ತಿಯಲ್ಲಿ ಸೇರಿರುವ ಕಬ್ಬಿಣವನ್ನುಳ್ಳ : 'ಫೆರಿಕ್'. **Ferríferous** ಫೆರಿಫೆರಸ್ (ಗು.) ಕಬ್ಬಿಣ ದೊರೆಯುವ ; —ಕೊಡುವ ; ಅಯೋ ಗರ್ಭ. **Ferro-** ಫೆರೊ— (ಸ. ಪೂ. ಪ.) ಕಬ್ಬಿಣ—, ಅಯೋ— (F.-concrete = Reinforced concrete). (ರ. ವಿ.) 'ಫೆರಸ್' ಎಂಬ ಸ್ಥಿತಿಯಲ್ಲಿ ದ್ವಿಯೋಗ ಶಕ್ತಿಯ ಕಬ್ಬಿಣವನ್ನುಳ್ಳ. **Ferro-magnétic** —ಮ್ಯಾಗ್ನೆಟಿಕ್ (ಗು.) ಅಯಸ್ಕಾಂತ ಶಕ್ತಿಯುಳ್ಳ. **Férrotype** (ನಾ.) ತೆಳ್ಳನೆಯ ಕಬ್ಬಿಣದ ತಗಡಿನಮೇಲೆ ತೆಗೆದ ಯಥಾಸ್ಥಿತ ಛಾಯಾಚಿತ್ರ : ಅಯಶ್ಚಿತ್ರ ; ಈ ಛಾಯಾಚಿತ್ರ ವಿಧಾನ. **Férrous** ಫೆರಸ್ (ಗು.) (ರ. ವಿ.) ಕಬ್ಬಿಣವನ್ನು ದ್ವಿಯೋಗ ಶಕ್ತಿರೂಪದಲ್ಲುಳ್ಳ. **Ferrúginous** ಫೆರೂಜಿನಸ್ (ಗು.) ಕಬ್ಬಿಣದ ಅಥವಾ ಕಬ್ಬಿಣದ ತುಕ್ಕಿನ ; ಕಬ್ಬಿಣವನ್ನು ಅಥವಾ ಕಬ್ಬಿಣದ ತುಕ್ಕನ್ನು ರಾಸಾಯನಿಕ ಘಟಕವಾಗುಳ್ಳ : ಅಯಸ್ಸಂಯುಕ್ತ ; ತುಕ್ಕಿನ ಬಣ್ಣದ ; ಕೆಂಪು ಛಾಯೆಯ ಕಂದು ಬಣ್ಣದ : ಕೆಂಪು ಕಂದು. (ಕಬ್ಬಿಣಕ್ಕೆ ಲ್ಯಾಟಿನ್ ಪದವಾದ Ferrum ಎಂಬ ರೂಪದಿಂದ)

Férret[1] ಫೆರೆಟ್ (ನಾ., ಕ್ರಿ.) (ಮೊಲಗಳನ್ನು ಬಿಲಗಳಿಂದ ಹೊರಡಿಸುವುದು, ಇಲಿಗಳನ್ನು ಹಿಡಿದು ಕೊಲ್ಲುವುದು, ಮೊ. ಕೆಲಸಗಳಿಗಾಗಿ ಇಟ್ಟುಕೊಂಡಿರುವ) ಅರೆ ಪಳಗಿಸಿದ ಒಂದು ಜಾತಿಯ ಪ್ರಾಣಿ : 'ಫೆರೆಟು'. ಹುಡುಕುವವನು ; ಅನ್ವೇಷಕ ; ಪತ್ತೇದಾರ. (ಕ್ರಿ.) ಫೆರೆಟುಗಳಿಂದ ಬೇಟೆಯಾಡು (Go ferreting). (ಬಿಲಗಳನ್ನು, ನೆಲವನ್ನು) ಶೋಧಿಸು. (ಮೊಲ, ಮೊ. ನ್ನು) ಫೆರೆಟುಗಳ ಸಹಾಯದಿಂದ ಹಿಡಿ ಅಥವಾ ಹೊರಡಿಸು (*About*, *away*, *out*, ಮೊ. ಉಪ. ದೊಡನೆ). ಹುಡುಕಾಡು ; ಶೋಧಿಸು ; ಅನ್ವೇಷಣ ಮಾಡು (*For* ಉಪ. ದೊಡನೆ). (ಗುಟ್ಟುಗಳನ್ನು, ಅಪರಾಧಿಗಳು, ಮೊ. ನ್ನು) ಪತ್ತೆಮಾಡು, ಬಯಲಿಗೆ ತರು.

Férret[2] ಫೆರೆಟ್ (ನಾ.) (ಹತ್ತಿಯ ದಾರದ ಅಥವಾ ರೇಷ್ಮೆಯ) ದಪ್ಪವಾದ ರಾಡಿ.

Férriage. Ferry ನೋಡಿ.

Férrule, -rel ಫೆರಲ್ (ನಾ.) (ಒಂದು ದಡಿಯ, ಕೋಲಿನ ಅಥವಾ ಕೊಳವಿಯ ಕೊನೆಯನ್ನು ಬಲಪಡಿಸುವುದಕ್ಕಾಗಿ ಹಾಕುವ ಲೋಹದ) ಉಂಗುರ, ಬಳೆ ; ಅಣಸು. (ಸಂಧಿ ಸೇರಿಕೆಗಳನ್ನು ಬಲಪಡಿಸುವುದಕ್ಕಾಗಲಿ, ಸೇರಿಕೆ ಹೊಂದಿಸುವುದಕ್ಕಾಗಲಿ ಉಪಯೋಗಿಸುವ) ಬಳೆ, ವಲಯ, ಪಟ್ಟಿ. **Férruled** (ಗು.)

Férry ಫೆರಿ (ಕ್ರಿ., ನಾ.) ದೋಣಿಯಲ್ಲಿ, ಹರಿಗೋಲಿನಲ್ಲಿ, — ಸಾಗಿಸು, ಸಾಗು, ಹೋಗು : ದೋಣಿ ನಡಸು ; (ದೋಣಿಯ ವಿಷಯದಲ್ಲಿ ನದಿ, ಕಾಲುವೆ, ಜಲಸಂಧಿ, ಮೊ. ಗಳಮೇಲೆ) ಹರಿದಾಡು, ಹೋಗಿಬರು, ಸಂಚರಿಸು. (ನಾ.) ನೀರನ್ನು (ಹರಿಗೋಲಿನಲ್ಲಿ) ದಾಟುವ ಸ್ಥಳ :

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಯ್ಗಡ; ಕಡವು; ಗಡು ; ದೋಣಿದಾಟು ; ದೋಣಿಯ ಏರ್ಪಾಡು. (ನ್ಯಾ. ಶಾ.) ದೋಣಿ ನಡಸುವ ಮತ್ತು ತೆರಿಗೆ ವಸೂಲುಮಾಡುವ ಹಕ್ಕು. **F.-boat** ದೋಣಿ ; ಹರಿಗೋಲು ; ದೋಣಿಬುಟ್ಟಿ ; ಓಡ. **F.-bridge** ಒಟ್ಟು ರೈಲುಬಂಡಿ ಸಾಲನ್ನು ನೀರಿನಮೇಲೆ ಸಾಗಿಸುವ ದೊಡ್ಡ ಓಡ: ರೈಲು ದೋಣಿ. **Férryman** (ನಾ.) ಹರಿಗೋಲು ನಡಸುವವನು ; ಅಂಬಿಗ. **Férriage** ಫೆರಿಯೆಜ್ (ನಾ.) ಹರಿಗೋಲನಲ್ಲಿ ಸಾಗಿಸುವುದು, ಸಾಗುವುದು ; ಹರಿಗೋಲ ಸಾಗಣೆ ; ಹರಿಗೋಲ ಬಾಡಿಗೆ.

Fértile ಫರ್ಟ್‌(ಟೈ)ಲ್ (ಗು.) ಹೆಚ್ಚಾಗಿ ಫಲಬಿಡುವ, ಫಲವಾಗುವ ; ಫಲವತ್ತಾದ (ರೂಪ. ಸಹ) (*Of*, *in* ಉಪ. ದೊಡನೆ). **Fertílity** ಫರ್ಟಿ— (ನಾ.) ಫಲವತ್ತು ; ಫಲಶಕ್ತಿ. **Fértilize** (ಕ್ರಿ. ಸಕ.) (ಮು., ಭೂಮಿಯನ್ನು) ಫಲವತ್ತಾಗಿ ಮಾಡು, ಹೆಚ್ಚು ಫಲ ಕೊಡುವಂತೆ ಮಾಡು. (ಸ. ವಿ., ಮೊ.) (ವ್ಯಕ್ತಿಯನ್ನು, ಅಂಗವನ್ನು) ಫಲವಂತ ಮಾಡು ; ಗರ್ಭ ಮೂಡಿಸು ; ಗರ್ಭಾಧಾನ ಮಾಡು. **Fértilizable** (ಗು.) ; **Fertilizátion** (ನಾ.) ಫಲವತ್ತು ಮಾಡುವುದು ; ಗರ್ಭಾಧಾನ (ಮಾಡುವುದು). **Fértilizer** (ನಾ.) ನೆಲವನ್ನು ಫಲವತ್ತು ಮಾಡುವವನು ; —ವದು (ಮು., ಗೊಬ್ಬರ) ; ಕೃತಕ ಗೊಬ್ಬರ. (ಸಸ್ಯಗಳಲ್ಲಿ) ಗರ್ಭಾಧಾನ ಸಹಕಾರಿ.

Férula ಫೆರ್ಯುಲ, **Férule** ಫೆರ್ಯೂಲ್ (ನಾ.) (ಹುಡುಗರನ್ನು ದಂಡಿಸಲು ಉಪಯೋಗಿಸುವ) ಬೆತ್ತ, ಕೋಲು, ಮೊ. ವು (ಮು., ಚಪ್ಪಟೆಯ ಮರದ ದಬ್ಬೆ). **Férule** (ಕ್ರಿ. ಸಕ.) (ದಬ್ಬೆ, ಮೊ. ಗಳಿಂದ) ಏಟು ಕೊಡು, ಹೊಡೆ. **Férula** (ಸ. ವಿ.) ಒಂದು ಜಾತಿಯ ದೊಡ್ಡ ಸಸ್ಯ.

Férvent ಫರ್ವೆಂಟ್ (ಗು.) ಬಿಸಿಯಾದ ; ಕಾದ ; ಕಾವಿನ ; ಉರಿಯು(ತ್ತಿರು)ವ ; ಕನಲು(ತ್ತಿರು)ವ ; ಉಜ್ಜ್ವಲ ; ಉತ್ಸಾಹ ಪೂರಿತ ; ಉದ್ರಿಕ್ತ ; ತೀವ್ರ (F. soul, lover, hatred ಉತ್ಸಾಹಶೀಲ, ಗಾಢ ಪ್ರೇಮಿ, ಬದ್ಧ ದ್ವೇಷ). **Férvently** (ಕ್ರಿ. ವಿ.) ; **Férvency** (ನಾ.) ; **Férvid** ಫರ್ವಿಡ್ (ಗು.) ಬಿಸಿಯಾದ ; ಕಾದ ; ಕಾವಿನ. **Férvidly** (ಕ್ರಿ. ವಿ.) ; **Férvour** ಫರ್ವರ್ (ನಾ.) ಕನಲುತ್ತಿರುವ, ಪ್ರಜ್ವಲಿಸುತ್ತಿರುವ, —ಸ್ಥಿತಿ ; ಅತ್ಯಂತ ಬಿಸುಪು, ಕಾಯ್ಪು, ಕಾವು ; ಒತ್ತರ ; ರಭಸ ; ಉದ್ರೇಕ ; ತೀವ್ರತೆ ; ಕಟ್ಟಾಸಕ್ತಿ ; ಹುರುಪು ; ಉತ್ಸಾಹ.

Férvid, Férvour. **Fervent** ನೋಡಿ.

Féscennine ಫೆಸೆನ್ನೈನ್ (ಗು.) ಫೆಸೆನಿಯಾ (ಪಟ್ಟಣಕ್ಕೆ) ಸಂಬಂಧಪಟ್ಟ ; (ಸಾ.) ಅಶ್ಲೀಲ, ಬೈಗುಳಿನ. F. verses ಬೈಗುಳ, ಅಶ್ಲೀಲ, ವಿಡಂಬನ, — ಪದ್ಯಗಳು.

Féscue ಫೆಸ್ಕ್ಯೂ (ನಾ.) (ಉಪಾಧ್ಯಾಯನು ಪಾಠ ಹೇಳುವಾಗ ಅಕ್ಷರಗಳನ್ನು ತೋರಿಸಲು ಉಪಯೋಗಿಸುವ) ಸಣ್ಣ ಕೋಲು ; ತೋರುಗೋಲು. ಒಂದು ಜಾತಿಯ ಹುಲ್ಲು (= F.-grass)

Féstal, etc. **Feast** ನೋಡಿ.

Féster ಫೆಸ್ಟರ್ (ಕ್ರಿ., ನಾ.) (ಗಾಯ, ಹುಣ್ಣು) ಕೀವುಗಟ್ಟು ; ಕೀತುಕೊ ; ವ್ರಣವಾಗು. (ವಿಷ, ವ್ಯಾಧಿ, ವ್ಯಥೆ —ಇವುಗಳ ವಿಷಯದಲ್ಲಿ) ಕೀವುಗಟ್ಟಿಸು, ಮನಸ್ಸಿನಲ್ಲಿ ಕೊರೆ ; ವ್ರಣ ಮಾಡು ; —ವಾಗಿಸು ; ಕೊಳೆ(ಯಿಸು) ; ಉರಿಯಾಗು ; —ಗಿಸು. ಚುಚ್ಚು ; ವ್ಯಥೆಪಡಿಸು ; ಸಂಕಟಪಡಿಸು ; ಪೀಡಿಸು. (ನಾ.) ಕೀವುಗಟ್ಟುವುದು ; ಕೊಳೆತ ; ಹುಣ್ಣು.

Festoón ಫೆಸ್ಟೂನ್ (ನಾ., ಕ್ರಿ. ಸಕ.) (ಹೂವು, ಎಲೆ, ಚಿತ್ರಪಟ್ಟಿ, ಮೊ. ಗಳಿಂದ ಮಾಡಿ ತೂಗಕಟ್ಟಿದ) ಹಾರ, ಮಾಲೆ, ತೋರಣ. (ಕ್ರಿ.) ಹಾರ, ಮಾಲೆ, ತೋರಣ, —ಕಟ್ಟು ; ತೋರಣಾಲಂಕಾರ ಮಾಡು. **Festoónery** — ನರಿ (ನಾ.) ತೋರಣಗಳಂತೆ ಅಳವಡಿಸಿದ ವಸ್ತು ಸಮುದಾಯ ; ತೋರಣಾಲಂಕಾರ.

Fetch[1] ಫೆಚ್ (ಕ್ರಿ., ನಾ.) (ಮನುಷ್ಯನನ್ನು, ವಸ್ತುವನ್ನು) ಹೋಗಿ ಕರೆದುಕೊಂಡು ಬಾ, —ತೆಗೆದುಕೊಂಡು ಬಾ, —ತರು [F., Go and f., a doctor ಹೋಗಿ ಒಬ್ಬ ವೈದ್ಯನನ್ನು ಕರೆದುಕೊಂಡು ಬಾ. Far-fetched (Far ನೋಡಿ). F. and carry ಸಾಮಾನು ಹೊತ್ತುಕೊಂಡು ಹಿಂದೆ ಮುಂದೆ ಓಡಾಡು ; ಸೇವಕನಾಗಿರು]. (ರಕ್ತ, ಕಣ್ಣೀರು) ಬರಿಸು, ಸುರಿಸು (F. up ವಾಂತಿಮಾಡು ; ಕಕ್ಕು). ಬೆಲೆ ತರು, ಬರು. ಭಾವೋದ್ರೇಕ ಮಾಡು ; ಭಾವವುಕ್ಕಿಸು ; ಸಂತೋಷಪಡಿಸು. ಸೆಳೆ ; ಆಕರ್ಷಿಸು. ಕೆರಳಿಸು ; ರೇಗಿಸು. (ನಿಟ್ಟುಸಿರು) ಬಿಡು ; (ಉಸಿರು) ಆಡು. (ಏಟು) ಕೊಡು (F. him a box on the ears ಕಪಾಳಕ್ಕೆ ಹೊಡೆ). (F. a compass ಬಳಸಿಕೊಂಡು, ಸುತ್ತಿಕೊಂಡು, ಹೋಗು. F. up ನಿಂತುಬಿಡು). (ನಾ.) (ಪ್ರಾಚೀ. ಪ್ರ.) ಬಹು ದೂರ ಹೋಗುವ ಪ್ರಯತ್ನ ; ಮಹಾ ಪ್ರಯತ್ನ. ನೆಪ ; ಕಪಟ ; ತಂತ್ರ ; ಠಕ್ಕು ; ಮೋಸ. **Fétching** (ಗು.) ಆಕರ್ಷಕ ; ಮನೋಹರ.

Fetch[2] ಫೆಚ್ (ನಾ.) ಮನುಷ್ಯನು ಸಾಯುವುದಕ್ಕೆ ಮುಂಚೆ ಅವನ ಬಂಧು ಮಿತ್ರರಿಗೆ ಕಾಣಿಸಿಕೊಳ್ಳುವುದೆಂದು ಹೇಳುವ ಅವನ ಛಾಯಾ ರೂಪ.

Fete ಫೇಟ್ (ನಾ., ಕ್ರಿ. ಸಕ.) ಉತ್ಸವ ; ದೊಡ್ಡ ಔತಣ ಸಮಾರಂಭ (F.-day ಉತ್ಸವ ದಿನ). ಮಗುವಿಗೆ ಯಾರ ಹೆಸರಿಟ್ಟಿದೆಯೊ ಆ ಸಂತನ ಜಯಂತಿ (ಇದನ್ನು ರೋ. ಕ್ಯಾ. ದೇಶಗಳಲ್ಲಿ ಹುಟ್ಟಿದ ಹಬ್ಬದಂತೆ ಆಚರಿಸುತ್ತಾರೆ). (ಕ್ರಿ.) (ಒಬ್ಬನಿಗೆ) ಉತ್ಸವ ಮಾಡು, ಔತಣ ಮಾಡು, ಪ್ರಾಧಾನ್ಯ ಕೊಡು.

Fete-champétre (F) ಫೇಟ್ ಷಾನ್‌ಪೇಟ್ರ್ (ನಾ.) ಬಯಲು ಉತ್ಸವ, ಪರಿಷೆ, ಔತಣ ; ವನ ಭೋಜನ ; ಹಳ್ಳಿಯ ಹಬ್ಬ.

Fétial ಫೀಷಲ್ (ಗು., ನಾ.) (ರೋ. ಪ್ರಾ.) (F. law ಯುದ್ಧ, ಶಾಂತಿ, ಮೊ. ಗಳಿಗೆ ಸಂಬಂಧಪಟ್ಟ ಶಾಸ್ತ್ರ). (ನಾ.) ಯುದ್ಧ ಘೋಷಣವನ್ನೂ ಶಾಂತಿ ಸ್ಥಾಪನೆಯನ್ನೂ ನಡಸುವಲ್ಲಿ ದೂತನಾಗಿ ಕಾರ್ಯಮಾಡುತ್ತಿದ್ದ ರೋಮನ್ ಪುರೋಹಿತ.

Fétid ಫೆಟಿಡ್, **Foé-** ಫೀ— (ಗು.) ಕೊಳೆತು ನಾರು(ತ್ತಿರು)ವ ; ಗಬ್ಬು ನಾತದ ; ದುರ್ಗಂಧದ. **Fétidly** (ಕ್ರಿ. ವಿ.) ; **Fétidness** (ನಾ.) ; **Fétor, Foé-** ಫೀಟರ್ (ನಾ.) ನಾತ ; ದುರ್ಗಂಧ ; ಗಬ್ಬು ವಾಸನೆ.

Fétish, Fétich(e) ಫೆ(ಫೀ)ಟಿಷ್ (ನಾ.) (ಮಾಂತ್ರಿಕ ಶಕ್ತಿಯಿರುವುದೆಂದಾಗಲಿ, ಒಂದು ಭೂತ ನೆಲಸಿರುವುದೆಂದಾಗಲಿ) ಅಸಂಸ್ಕಾರಿ ಕಾಡುಜನರು ಆರಾಧಿಸುವ ಒಂದು ನಿರ್ಜೀವ ವಸ್ತು ; ಅಂಧ ಶ್ರದ್ಧೆಯ ವಸ್ತು ; ಮೂಢಾರಾಧನೆಯ ವಸ್ತು ; ವಿವೇಚನೆ ಮಾಡದೆ ಅಜ್ಞಾನದಿಂದ ಪೂಜ್ಯವಾಗಿ ಗಣಿಸುವ ತತ್ತ್ವ, ಮೊ. ವು. **Fetisheér** —ಷೀಯರ್, **Fétisher** (ನಾ.) ಮಂತ್ರವೈದ್ಯ ; ಮಾಂತ್ರಿಕ. **Fétishism, -chism** — ಷಿಸ್‌ಮ್ (ನಾ.) ವಸ್ತು ಪೂಜೆ ; ಅಂಧ ಭಕ್ತಿ. **Fétishist, -chist** (ನಾ.) ವಸ್ತು ಪೂಜಕ. **Fetishístic, -chístic** (ಗು.)

Fétlock ಫೆಟ್‌ಲಾಕ್ (ನಾ.) ಕುದುರೆಯ ಗೊರಸಿನ ಮೇಲ್ಗಡೆಯ ಕೀಲಿನ ಮೇಲ್ಭಾಗದಲ್ಲಿ ಕೂದಲು ಕುಚ್ಚು ಕುಚ್ಚಾಗಿ ಬೆಳೆಯುವ ಸ್ಥಳ ; ಕುದುರೆಯ ಚುಂಚುಕಾಲು ; ಈ ಕುಚ್ಚುಗೂದಲು. F.-deep ಕುದುರೆಯ ಚುಂಚುಕಾಲು ಮುಳುಗುವಷ್ಟು ಆಳವಾದ.

Fétor. **Fetid** ನೋಡಿ.

Fétter ಫೆಟರ್ (ನಾ., ಕ್ರಿ. ಸಕ.) ತೊಡರು ; (ಕಾಲು) ಬೇಡಿ ; ಸಂಕಲೆ. (ಬ. ವ. ದಲ್ಲಿ) ಸೆರೆ ; ಬಂಧನ ; ಶೃಂಖಲೆ ; ಕೈದು ; ತಡೆ ; ಅಡ್ಡಿ. (ಕ್ರಿ.) ಬೇಡಿ ಹಾಕು ; ಪಾದ ಸಂಕಲೆ ತೊಡಿಸು ; ಬಂಧಿಸು ; ತಡೆಕಟ್ಟು ; ಅಡ್ಡಿ ಮಾಡು ; ನಿರ್ಬಂಧಪಡಿಸು ; ಕಟ್ಟಿಹಾಕು. **Fétterless** (ಗು.); **Fétterlock** (ನಾ.) ಕುದುರೆ ಓಡಿಹೋಗದಂತೆ ಅದರ ಕಾಲಿಗೆ ತೊಡಿಸುವ D ಆಕಾರದ ಸಲಕರಣೆ ; (ವಂಶಲಾಂಛನದಲ್ಲಿ ಈ ಸಂಕೇತ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Féttle ಫೆಟ್‌ಲ್ (ನಾ.) ಸ್ಥಿತಿ ; ರೀತಿ ; ಲಕ್ಷಣ ; ಅಚ್ಚುಕಟ್ಟು ; ಒಪ್ಪು ; ಓರಣ ; ಐಟಕ್ಕು (In good f.)

Fétus. **Foetus** ನೋಡಿ.

Fétwa ಫೆಟ್ವ (ನಾ.) ಮುಸ್ಲಿಮ್ ನ್ಯಾಯಾಧಿಕಾರಿಯ ತೀರ್ಪು.

Feu ಫ್ಯೂ (ನಾ.) (ಸ್ಕಾ. ಪ್ರ.) (ಒಂದು ಗೊತ್ತಾದ ಕಂದಾಯ ಕೊಡುವ ಷರತ್ತಿನಮೇಲೆ ಪಡೆದ) ಕಾಯಂ ಗುತ್ತಿಗೆ ; ಕಾಯಂ ಗುತ್ತಿಗೆಯ ಜಮೀನು.

Feud[1] ಫ್ಯೂಡ್ (ನಾ.) (ಚಿರ ಕಾಲದ ಪರಸ್ಪರ) ಬದ್ಧ ದ್ವೇಷ, ವೈರ, ವೈಷಮ್ಯ (Be at f. with ವೈರ, ದ್ವೇಷ, ಸಾಧಿಸು. Deadly f. ಎರಡು ಬಣದವರಿಗೆ, ಎರಡು ಕುಟುಂಬದವರಿಗೆ, ಹಿಂದಿನ ಸೇಡು ತೀರಿಸಿ ಕೊಳ್ಳುವ ಉಗ್ರ ವೈರ, ಘೋರ ಕಲಹ : ಕುಲ ಕಲಹ)

Feud[2] ಫ್ಯೂಡ್ (ನಾ.)ಸೇನಾ ಸಹಾಯ ಷರತ್ತಿನ, ಕರಾರಿನ, ಉಂಬಳಿ ; ಊಳಿಗ ಮಾನ್ಯ ; ಜಹಗೀರು. **Feúdal** (ಗು.) ಸೈನಿಕ ಉಂಬಳಿಯ ; ಊಳಿಗ ಮಾನ್ಯದ [F. system ಸೈನಿಕ ಸಹಾಯ, ಮೊ. ಊಳಿಗ ಮಾಡುವ ಕರಾರಿನಮೇಲೆ ಅಧೀನತೆಯನ್ನೊಪ್ಪಿಕೊಂಡು ಸ್ವಾಮಿ ಭೃತ್ಯ ಸಂಬಂಧದಲ್ಲಿ ಜಮೀನನ್ನನುಭವಿಸುವ ಮಧ್ಯಕಾಲದ ಯೂರೋಪಿನ ರಾಜಕೀಯ ಪದ್ಧತಿ ; (ಸ್ವಾಮಿ ಭೃತ್ಯ ಸಂಬಂಧದ) ಊಳಿಗ ಮಾನ್ಯ ಪದ್ಧತಿ]. ಊಳಿಗ ಮಾನ್ಯ ಪದ್ಧತಿಯ ; ಊಳಿಗ ಮಾನ್ಯ ಪದ್ಧತಿಯನ್ನು ಹೋಲುವ; ಆಶ್ರಯ ಆಶ್ರಿತ ಸಂಬಂಧದ. **Feúdally** (ಕ್ರಿ. ವಿ.) ; **Feúdalism** —ಲಿಸ್ಮ್ (ನಾ.) ಊಳಿಗ ಮಾನ್ಯ ಪದ್ಧತಿ, —ತತ್ತ್ವ. **Feúdalist** (ನಾ.) ಊಳಿಗ ಮಾನ್ಯ ವಾದಿ. **Feudalístic** (ಗು.) ; **Feudálity** ಫ್ಯೂಡ್ಯಾಲಿಟಿ (ನಾ.) ಊಳಿಗ ಮಾನ್ಯ ಪದ್ಧತಿ ಅಥವಾ ಇದರ ತತ್ತ್ವಗಳು ; ಊಳಿಗ ಮಾನ್ಯ. **Feúdalize** (ಕ್ರಿ. ಸಕ.) ಊಳಿಗ ಮಾನ್ಯ ಪದ್ಧತಿ ತರು ; (ಜಮೀನುಗಳನ್ನು) ಊಳಿಗ ಮಾನ್ಯಗಳಾಗಿ ವಿಂಗಡಿಸು ; (ಜನರನ್ನು) ಊಳಿಗ ಮಾನ್ಯ ಪದ್ಧತಿಯಮೇರೆಗೆ ಭೃತ್ಯರನ್ನಾಗಿ ಮಾಡು. **Feudalizátion** (ನಾ.) ; **Feúdatory** ಫ್ಯೂಡಟರಿ (ಗು., ನಾ.) ಊಳಿಗ ಮಾನ್ಯ ಪದ್ಧತಿಯ ಮೇರೆಗೆ ಅಧೀನನಾಗಿರುವ ; ಸ್ವಾಮಿಗೆ ಅಧೀನನಾದ ; ಸಾಮಂತ. (ನಾ.) ಸ್ವಾಮಿ ವಶವರ್ತಿಯಾದ ಜಮೀನ್ದಾರ, ಜಹಗೀರುದಾರ ; ಸಾಮಂತ. **Feúdist** (ನಾ.) ಊಳಿಗ ಮಾನ್ಯದ ವಿಷಯವಾಗಿ ಬರೆಯುವವನು ; ಊಳಿಗ ಮಾನ್ಯದ ಕಾನೂನು ತಿಳಿದವನು.

Feu de joié (F) ಫ ಡ ಝ್ವಾ (ನಾ.) (ವಿಶೇಷೋತ್ಸವ ಸಂದರ್ಭಗಳಲ್ಲಿ) ಸಂತೋಷ ಸೂಚಕವಾಗಿ ಗುಂಡು ಹಾರಿಸುವುದು : ಸುರುಟು.

Feuilletón (F) ಫಯ(ಯ್ಯ)ಟಾನ್ (ನಾ.) (ಮು., ಫ್ರೆಂಚ್ ವೃತ್ತ ಪತ್ರಿಕೆಗಳಲ್ಲಿ) ಪುಟದ ತಳಭಾಗದಲ್ಲಿ ಗೆರೆ ಹಾಕಿ ವಿಮರ್ಶೆ, ಲಘು ಸಾಹಿತ್ಯ, ಮೊ. ನ್ನು ಕೊಡುವ ಭಾಗ ; ಈ ಭಾಗದ ಸಾಹಿತ್ಯ.

Féver ಫೀವರ್ (ನಾ., ಕ್ರಿ.) ಜ್ವರ (Scarlet f. ಮೈಮೇಲೆಲ್ಲ ಕೆಂಪು ಗುಳ್ಳೆಗಳೇಳುವ ಒಂದು ತೆರದ ಜ್ವರ : ಕೆಂಜ್ವರ. Typhoid f. ವಿಷಮ ಜ್ವರ ; ಸನ್ನಿಪಾತ ; 'ಟೈಫಾಯ್ಡ್' ಜ್ವರ). F. heat ಜ್ವರದ ತಾಪ, —ಕಾವು. F.-trap ಜ್ವರ ತಗುಲಬಹುದಾದ ಪ್ರದೇಶ ; ಜ್ವರದ ತವರು). ಕೆರಳು ; ತಾಪ ; ರಾಗೋದ್ರೇಕ ; ಮನಃಕ್ಷೋಭೆ. (ಕ್ರಿ.) ಜ್ವರ ಬರಿಸು ; —ಬರು ; —ಬರುವಂತೆ ಮಾಡು (ರೂಪ. ಸಹ). **Féveret** (ನಾ.) ಸ್ವಲ್ಪ ಜ್ವರ. **Féverish** (ಗು.) ಜ್ವರ ಸೂಚನೆಯುಳ್ಳ ; ಮೈ ಬೆಚ್ಚಗಿರುವ ; (ರೂಪ.) ಕೆರಳಿದ ; ರೇಗಿದ ; ಉದ್ರಿಕ್ತ ; ಉದ್ವೇಗಗೊಂಡ. ಜ್ವರದ ; —ಸ್ವಭಾವದ ; —ರೀತಿಯ ; ಜ್ವರದಂಥ ; ಜ್ವರ ಬರಿಸುವ. (ಒಂದು ಸ್ಥಳದ ವಿಷಯದಲ್ಲಿ) ಜ್ವರ ಹರಡಿರುವ. **Féverishly** (ಕ್ರಿ. ವಿ.) ; **Féverishness** (ನಾ.) ; **Féverous** (ಗು.) ಜ್ವರ ಪೀಡಿತ ; ಜ್ವರ ಬರಿಸುವ ; ಜ್ವರ ಸೂಚನೆಯುಳ್ಳ.

Few ಫ್ಯೂ [ಗು. (ತರ ತಮಗಳು Fewer, Fevest) ನಾ.] ಕೆಲವು ; ಕೆಲವರು ; ಸ್ವಲ್ಪ ; ಕೊಂಚ (F. ಗೆ ವಿರುದ್ಧ ಪದ Many ಹಲವು ; A few ಎಂಬುದಕ್ಕೆ ವಿರುದ್ಧ ಪದ None ಒಂದೂ ಇಲ್ಲ, ಒಬ್ಬರೂ ಇಲ್ಲ). A man of f. words ಮಿತ ಭಾಷಿ. He spoke a f. words ಅವನು ಒಂದೆರಡು ಮಾತನ್ನಾಡಿದನು. Visitors are f. ಭೇಟಿಗಾರರು ಕಡಮೆ. In f. (ಪ್ರಾಚೀ. ಪ್ರ.) ಸ್ವಲ್ಪ ಮಾತಿನಲ್ಲಿ ; ಸ್ವಲ್ಪದಲ್ಲಿ ; ಸಂಗ್ರಹವಾಗಿ ; ಸಂಕ್ಷೇಪವಾಗಿ. Some f. ಹೆಚ್ಚು ಸಂಖ್ಯೆ ಇಲ್ಲ. The f. ಅಲ್ಪ ಸಂಖ್ಯಾಕರು ; ಆರಿಸಿದಂಥ ಕೆಲವರು ; ಮುಖ್ಯರಾದ ಕೆಲವರು. Not a f. ಬಹು ಮಂದಿ ; ಬಹಳ. (ಬಳ. ಮಾ.) A good f. ತಕ್ಕ ಮಟ್ಟಿನ ಸಂಖ್ಯೆ. Every f. days ಕೆಲವು ದಿನಗಳಿಗೊಮ್ಮೆ. (ಅಸಂ.) A few ಬಹಳ ಹೆಚ್ಚು ; ಸಂಶಯವೇ ಇಲ್ಲದೆ ; ನಿಸ್ಸಂದೇಹವಾಗಿ. **Féwness** (ನಾ.) ಕಡಮೆ.

Fey ಫೇ (ಗು.) (ಸ್ಕಾ. ಪ್ರ.) ಸಾಯಲುಳ್ಳ ; ಸಾವು ಹಣೆಯಲ್ಲಿ ಬರೆದ ; ಸಾವು ಸಮೀಪಿಸಿರುವ ; ಮರಣೋನ್ಮುಖನಾದ ; ಸಾವು ಸಮೀಪಿಸಿರುವಲ್ಲಿ ಭವಿಷ್ಯತ್‌ಜ್ಞಾನ ಪಡೆದವನಂತೆ ವಿಚಿತ್ರವಾಗಿ ವರ್ತಿಸುವ.

Fez ಫೆಸ್ (ನಾ.) (ತುದಿ ಕತ್ತರಿಸಿದ ಶಂಕುವಿನಾಕಾರದ, ಮಾಸಲು ಕೆಂಪು ಬಣ್ಣದ, ಗೊಂಡೆ ಹಾಕಿದ ಕುಚ್ಚಿನಿಂದ ಕೂಡಿದ) ತುರ್ಕಿ ಟೋಪಿ (Fez ಎಂಬ ಪಟ್ಟಣದಲ್ಲಿ ತಯಾರಾದದ್ದು)

Fiancé (ಪುಲ್ಲಿಂಗ), **Fianceé** (ಸ್ತ್ರೀಲಿಂಗ) ಫೀ(ಫಿ)ಆನ್ಸೇ (ನಾ.) ಮದುವೆ ನಿಶ್ಚಯಮಾಡಿಕೊಂಡವನು(ಳು) : ವರ ; ವಧು.

Fiásco ಫಿಆ್ಯಸ್ಕೋ (ನಾ.) (ಹಿಂದೆ, ಮು., ನಾಟಕ ಅಥವಾ ಸಂಗೀತದಲ್ಲಿ) ಕ್ರಮ ಭಂಗ. ಆಭಾಸ ; ಹಾಸ್ಯಾಸ್ಪದ ; ನಗೆಗೇಡು.

Fíat ಫೈಆ್ಯಟ್ (ನಾ., ಕ್ರಿ. ಸಕ.) ಅಧಿಕಾರ ಕೊಡುವುದು ; —ನಿಯೋಜನೆ ; ಕಟ್ಟಳೆ ; ವಿಧಿ ; ಅಧಿಕಾರ ; ಆಜ್ಞೆ ; ಅಪ್ಪಣೆ ; ಶಾಸನ. (ಕ್ರಿ.) (ವಿರ. ಪ್ರ.) ಅಧಿಕಾರ ಕೊಡು.

Fib[1] ಫಿಬ್ (ನಾ., ಕ್ರಿ. ಅಕ.) ಮನ್ನಿಸಬಹುದಾದ ಸಣ್ಣ ಸುಳ್ಳು (ಹೇಳು) ; ಬುರುಡೆ (ಬಿಡು). **Fíbber** (ನಾ.) ; **Fíbster** (ನಾ.)

Fib[2] ಫಿಬ್ (ನಾ., ಕ್ರಿ. ಸಕ.) (ಮುಷ್ಟಿ ಕಾಳಗ, ಮೊ. ಗಳಲ್ಲಿ) ಏಟು (ಕೊಡು), ಪೆಟ್ಟು (ಹಾಕು), ಗುದ್ದು.

Fíbre ಫೈಬರ್ (ನಾ.) ನಾರು ; ದಾರ ; ನೂಲು ; ಎಳೆ ; ತಂತು ; ಸೂತ್ರ. ನಾರುಪದಾರ್ಥ ; ತಂತುರಚನೆ. ಸತ್ವ ; ಸ್ವಭಾವ ; ಗುಣ (Man of coarse f. ಒರಟು ಸ್ವಭಾವದವನು). ನೂಲಬಹುದಾದ, ನೆಯ್ಯಬಹುದಾದ, ಹೆಣೆಯಬಹುದಾದ, ಜಡೆಗಟ್ಟಿಸಬಹುದಾದ, —ಪದಾರ್ಥ. ಸಣ್ಣ ಬೇರು. (-) **fíbred** (ಗು.) ; **Fíbreless** (ಗು.) ; **Fíbriform** (ಗು.) ; **Fíbrous** (ಗು.) ; **Fíbrously** (ಕ್ರಿ. ವಿ.) ; **Fíbrousness** (ನಾ.) ; **Fibro-** (ಸ. ಪೂ. ಪ.) ; **Fíbril** ಫೈಬ್ರಿಲ್ (ನಾ.) ಸಣ್ಣ ನಾರು, ದಾರ, ತಂತು ; ಸೂಕ್ಷ್ಮ ತಂತು ; ತಂತುವಿನ ಸೀಳು, ಎಳೆ ; ಸೂಕ್ಷ್ಮ ಬೇರು. **Fibrílla** (ನಾ. ; ಬ. ವ. -lae —ಲೀ) = Fibril. **Fibríllar(y)** (ಗು.) (ಸೂಕ್ಷ್ಮ) ತಂತುವಿನ ; —ರೀತಿಯ ; (ಸೂಕ್ಷ್ಮ) ತಂತುಗಳಿಂದ ಕೂಡಿದ. **Fibríllate(d)** (ಗು.) (ಸೂಕ್ಷ್ಮ) ತಂತು ರಚನೆಯುಳ್ಳ. **Fibrillátion** (ನಾ.) (ಸೂಕ್ಷ್ಮ) ತಂತು ರಚನೆಯಾಗುವುದು, —ಯಾಗಿರುವುದು; (ಸೂಕ್ಷ್ಮ) ತಂತು ರಚನೆ(ಯ ಪದಾರ್ಥ). **Fibríl-liform** (ಗು.) ; **Fíbrillose** —ಲೋಸ್ (ಗು.) ಸೂಕ್ಷ್ಮ ತಂತು ರಚನೆಯ ; ಸೂಕ್ಷ್ಮ ತಂತುಗಳುಳ್ಳ ; ಸೂಕ್ಷ್ಮ ಗೆರೆಗಳುಳ್ಳ. **Fíbrin(e)** ಫೈಬ್ರಿನ್ (ನಾ.) (ಮು., ರಕ್ತ ಗೆಡ್ಡೆಕಟ್ಟುವ ಸಂದರ್ಭದಲ್ಲಿ ಅದರಲ್ಲಿ ಹುಟ್ಟುವ) ಬಿಳಿಯ ದಾರದಂಥ ಅಲೀನ ಸಸಾರಜನಕ ಪದಾರ್ಥ: ತಂತು ದ್ರವ್ಯ. **Fíbrino-** (ಸ. ಪೂ. ಪ.) ; **Fíbrinogen** (ನಾ.) ಫೈಬ್ರಿನ್ ಜನಕ. **Fíbrinous** (ಗು.) ಫೈಬ್ರಿನ್ ಪದಾರ್ಥದಿಂದಾದ ; —ಪದಾರ್ಥದ ; —ಸ್ವಭಾವದ. **Fíbroid** (ಗು., ನಾ.) ತಂತು ರಚನೆಯ ; —ಯಂತೆ ಕಾಣುವ. (ನಾ.) ಗರ್ಭಕೋಶದ ತಂತು ರಚನೆಯ ವ್ಯಾಧಿ ಗ್ರಂಥಿ ; ನಾರುಗೆಡ್ಡೆ. **Fíbroin** ಫೈಬ್ರೋಯಿನ್ (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೇಷ್ಮೆ ಮತ್ತು ಚೇಡನ ಬಲೆಯ ಮುಖ್ಯ ಘಟಕವಾದ ರಾಸಾಯನಿಕ ಪದಾರ್ಥ : ತಂತು ಘಟಕ. **Fibróma** ಫೈಬ್ರೋಮ (ನಾ. ; ಬ. ವ. -mata —ಮಟ) ತಂತುರಚನೆಯ ವ್ಯಾಧಿಗ್ರಂಥಿ ; ನಾರುಗೆಡ್ಡೆ.

Fíbril, Fíbrin(e), etc. **Fibre** ನೋಡಿ.

Fíbula ಫಿಬ್ಯುಲ (ನಾ. ; ಬ. ವ. -ae — ಲೀ, -as — ಲಸ್) (ಅಂ. ರ. ಶಾ.) ಕಣಕಾಲಿನಲ್ಲಿಯ ಹೊರಗಡೆಯ ಎಲುಬು. **Fíbular** (ಗು.)

Fíchu ಫಿಷೂ(ಷ್ಯೂ) (ಹೆಂಗಸರು ಭುಜ ಮತ್ತು ಕುತ್ತಿಗೆ ಮುಚ್ಚುವಂತೆ ಹೊದೆದುಕೊಳ್ಳುವ, ಕಸೂತಿ ಕೆಲಸ ಮಾಡಿದ) ತ್ರಿಕೋನಾಕಾರದ ಸಣ್ಣ ಶಾಲು ; ಭುಜ ವಸ್ತ್ರ.

Fíckle ಫಿಕ್ಲ್ (ಗು.) ಚಂಚಲ ; ಚಪಲ ; ಒಂದು ಗೊತ್ತಿಲ್ಲದ ; ನೆಚ್ಚಿಕೆಯಿಲ್ಲದ. **Fíckleness** (ನಾ.) ಚಂಚಲತೆ ; ಚಾಂಚಲ್ಯ ; ಚಪಲತೆ.

Fíctile ಫಿಕ್ಟಿ(ಕ್ಟೈ)ಲ್ (ಗು.) ರೂಪು ಕೊಟ್ಟ ; ರೂಪು ಕೊಡಬಹುದಾದ. ಕುಂಬಾರನು ಮಾಡಿದ ; ಕುಂಬಾರಗೆಲಸದ ; ಕುಂಬಾರ ವಸ್ತುಗಳ.

Fíction ಫಿಕ್‌ಷನ್ (ನಾ.) ಕಲ್ಪಿಸುವುದು ; ಕಲ್ಪನೆ ; ಸೃಷ್ಟಿಸುವುದು ; ಸೃಷ್ಟನೆ ; ಕಲ್ಪಿಸಿದುದು ; ಸೃಷ್ಟಿಸಿದುದು ; ಕಲ್ಪಿತ ಕಥನ ; ಕಲ್ಪಿಸಿದ ಹೇಳಿಕೆ ; ಕಲ್ಪನಾ ಕಥೆ ; ಕಟ್ಟು ಕಥೆ ; ಕಾದಂಬರಿ ; ವಾಸ್ತವವಲ್ಲದಿದ್ದರೂ ವ್ಯಾವಹಾರಿಕವಾಗಿ ಅಂಗೀಕರಿಸಿರುವ ವಿಷಯ [ಮು., Legal f. ಕಾಲ್ಪನಿಕ ಸಂಕೇತ ; ಕಾನೂನಿನ ಕಲ್ಪನೆ : ಒಂದು ಸಂಗತಿ ನಡೆಯದಿದ್ದರೂ ಅದು ನಡೆದಂತೆ ಇಟ್ಟುಕೊಳ್ಳುವುದು : ಉದಾ., ಒಬ್ಬನ ವಿಳಾಸ ತಿಳಿಯದಿರುವಾಗ ಅವನಮೇಲೆ ಜಾರಿಮಾಡಬೇಕಾದ 'ಸಮನ್ಸ'ನ್ನು (ನ್ಯಾಯಸ್ಥಾನದ ಕರೆಯನ್ನು) ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿ ಅದು ಜಾರಿಯಾದಂತೆ ಭಾವಿಸುವುದು. Polite f. ಔಪಚಾರಿಕ ಮಿಥ್ಯೆ]. **Fíctional** (ಗು.) ಕಲ್ಪನೆಯ ; ಕಾಲ್ಪನಿಕ. **Fíctionist** (ನಾ.) ಕಾದಂಬರಿಕಾರ. **Fictítious** ಫಿಕ್ಟಿಷಸ್ (ಗು.) ಕೃತಕ ; ಕೃತ್ರಿಮ ; ಕಾಲ್ಪನಿಕ ; ಸೃಷ್ಟನೆಯ ; ಅಸಹಜ ; ನಿಜವಲ್ಲದ ; ಖೋಟಾ ; (ಹೆಸರು ಅಥವಾ ನಡತೆ) ನಟನೆಯ, ಸೋಗಿನ ; ಬರಿ ಊಹೆಯ ; ನಿಜವಲ್ಲದ ; ಕಥೆ ಕಾದಂಬರಿಗಳ ; —ಗಳಲ್ಲಿಯ ; ಕಾನೂನು ಕಲ್ಪನೆಯ. **Fictítiously** (ಕ್ರಿ. ವಿ.) ; **Fictítiousness** (ನಾ.) ; **Fíctive** ಫಿಕ್ಟಿವ್ (ಗು.) ಮನಃಕಲ್ಪಿತ ; ಕಲ್ಪನೆಯ ; ಕಾಲ್ಪನಿಕ ; ಬೂಟಾಟಿಕೆಯ (F. tears ಬೂಟಾಟಿಕೆಯ ಅಳು)

Fictítious, Fíctive. **Fiction** ನೋಡಿ.

Fid ಫಿಡ್ (ನಾ.) (ನಾವೆ) ಹಗ್ಗಗಳ ಕೊನೆಗಳನ್ನು ಒಟ್ಟಿಗೆ ಹೆಣೆಯುವುದಕ್ಕಾಗಿ ತಿರಿ ಬಿಡಿಸುವ ಮರದ ಗೂಟ. ಹಡಗಿನ (ಅಥವಾ ದೋಣಿಯ) ಮೇಲ್ಗೂವೆಗೆ ಆಸರೆಯಾಗಿ ಕೊಡುವ ಮರದ ಅಥವಾ ಕಬ್ಬಿಣದ ಚದುರಗಂಬಿ. ಸಣ್ಣ, ದಪ್ಪತುಂಡು ಅಥವಾ ಬೆಣೆ.

Fíddle ಫಿಡ್ಲ್ (ನಾ., ಭಾವ. ಅವ್ಯ., ಕ್ರಿ.) ಪಿಟೀಲು [Fit as a f. ಆರೋಗ್ಯ ಸ್ಥಿತಿಯಲ್ಲಿ ; ಉತ್ತಮ ಸ್ಥಿತಿಯಲ್ಲಿ ; ಉತ್ಸಾಹದಿಂದ ; ಚಟುವಟಿಕೆಯಾಗಿ. Hang up one's f. when one comes home ಹೊರಗಿರುವಾಗ ಉತ್ಸಾಹದಿಂದಲೂ ಮನೆಗೆ ಬಂದಮೇಲೆ ಮಂಕಾಗಿಯೂ ಇರು ; ಹೊರಗೆ ಹುರುಪು ಮನೆಯಲ್ಲಿ ಮಂಕು. Play first f. ಮುಖ್ಯ, ಪ್ರಧಾನ, —ಭಾಗ ವಹಿಸು ; Play second f. ಅಧೀನ ಪಾತ್ರ ವಹಿಸು. Face as long as a f. ಅಳು ಮೋರೆ ; ಜೋಲು ಮುಖ]. (ನಾವೆ) ಮೇಜಿನ ಮೇಲಿನಿಂದ ಪದಾರ್ಥಗಳು ಉರುಳಿಹೋಗದಂತೆ ತಡೆಯುವ ಸಲಕರಣೆ : ಉರುಳು ತಡೆ. (ಭಾವ. ಅವ್ಯ.) = Fiddlestick. (ಕ್ರಿ.) ಪಿಟೀಲು ನುಡಿಸು. ಸೋಮಾರಿ ತನದಿಂದಿರು ; ವ್ಯರ್ಥವಾಗಿ ಕಾಲ ಕಳೆ ; ಕಳೆದುಬಿಡು. ಸುಮ್ಮನೆ ಕೈಯಾಡಿಸುತ್ತಿರು (*About, at, with* ಉಪ. ಜೊಡನೆ). **F.-bow** ಪಿಟೀಲು ಕಮಾನು. **F.-case** ಪಿಟೀಲು ಪೆಟ್ಟಿಗೆ. **F.-fáddle** (ನಾ., ಗು., ಭಾವ. ಅವ್ಯ., ಕ್ರಿ. ಅಕ.) ಅಲ್ಪ ವಿಷಯಗಳು. ಸೋಮಾರಿ. (ಗು.) ಅಲ್ಪ ; ಕ್ಷುಲ್ಲಕ ; ಬರಿ ಗದ್ದಲದ ; ಗಡಿಬಿಡಿಯ. (ಭಾವ. ಅವ್ಯ.) ಅಸಂಬದ್ಧ ; ಅರ್ಥವಿಲ್ಲದ್ದು. (ಕ್ರಿ.) ಬರಿ ಗದ್ದಲ ಮಾಡು ; ಗಡಿಬಿಡಿ ಮಾಡು ; ಗಲಾಟೆಮಾಡು ; ಹುಡುಗಾಟವಾಡು. **F.-head** ಹಡಗಿನ ಮೂತಿಯಲ್ಲಿ ಕೆತ್ತಿರುವ ಪಿಟೀಲು ತಲೆಯಂಥ ಆಕಾರ. F. pattern (ಚಮಚಗಳ ಮತ್ತು ಮುಳ್ಳುಚಮಚಗಳ ವಿಷಯದಲ್ಲಿ) ಪಿಟೀಲುತಲೆಯ ಮಾದರಿಯುಳ್ಳ. **Fiddle-dedeé** (ಭಾವ. ಅವ್ಯ., ನಾ.) ಅಸಂಬದ್ಧ ಪ್ರಲಾಪ ; ಅರ್ಥವಿಲ್ಲದ ಮಾತು. **Fíddler** (ನಾ.) ಪಿಟೀಲು ನುಡಿಸುವವನು ; ಪಿಟೀಲುಗಾರ (F.'s Green ನಾವಿಕನ ಸ್ವರ್ಗ). ಒಂದು ಜಾತಿಯ ಸಣ್ಣ ಏಡಿ. **Fíddling** (ಗು.) (ಕ್ರಿಯಾರ್ಥಗಳಲ್ಲಿ). ಅಲ್ಪ ; ಕ್ಷುಲ್ಲಕ ; ನಿರರ್ಥಕ ; ನಿಷ್ಫಲ ; ತುಚ್ಛ ; ನಿಕೃಷ್ಟ ; ಹೇಯ. **Fíddlestick** (ನಾ., ಭಾವ. ಅವ್ಯ.) ಪಿಟೀಲು ಕಮಾನು. ಗಣನೆಗೆ ಬಾರದ್ದು ; ಅತ್ಯಲ್ಪ ವಿಷಯ ; ಅಸಂಬದ್ಧ (=Fiddlestick end)

Fidélity ಫೈ(ಫಿ)ಡೆಲಟಿ (ನಾ.) ನಿಷ್ಠೆ ; ಭಕ್ತಿ ; ನಂಬಿಕೆ ; ಸ್ವಾಮಿ ಭಕ್ತಿ ; ಪತಿ(ಪತ್ನಿ) ನಿಷ್ಠೆ (*To* ಉಪ. ಜೊಡನೆ). ಯಥಾರ್ಥತೆ ; ಸತ್ಯ ; ನಿಶ್ಚಯ. ಅಸಲಿಗೆ ಸರಿಯಾದ ಹೋಲಿಕೆ ; ಪಡಿಯಚ್ಚು.

Fídget ಫಿಜ್‌ಜೆಟ್ (ನಾ.) ಅಸ್ತಿಮಿತವಾಗಿ ಅಂಗಚಲನೆ ಮಾಡುವ ಅಸ್ವಸ್ಥತೆ (ಅನೇಕ ವೇಳೆ The fidgets) ; ಅಸ್ತಿಮಿತ ಸ್ಥಿತಿ ; ಚಡಪಡಿಕೆ ; ಚಡಪಡಿಸುತ್ತಿರುವವನು ; ಚಡಪಡಿಸುವಂತೆ ಮಾಡುವವನು ; ಗಡಿಬಿಡಿ. ಉಡುಪು, ಮೊ. ಗಳ ಮುರ ಮುರ (ಶಬ್ದ). **Fídgety** (ಗು.) ; **Fídgetiness** (ನಾ.)

Fídget (ಕ್ರಿ.) ಸ್ವಸ್ಥವಾಗಿ ಕೂಡದೆ ಇರು ; ಚಪಲದಿಂದ ಅಲುಗಾಡುತ್ತಿರು (ನಾ., *about* ಉಪ. ಜೊಡನೆ) ; ನೆಮ್ಮದಿಯಿಲ್ಲದೆ ಒದ್ದಾಡು ; ಸ್ತಿಮಿತವಿಲ್ಲದಿರು ; ಸ್ತಿಮಿತವಿಲ್ಲದಂತೆ ಮಾಡು ; ನೆಮ್ಮದಿ ಕೆಡಿಸು.

Fídibus ಫೀಡಿಬುಸ್ (ನಾ.) ಮೋಂಬತ್ತಿ, ಚುಂಗಾಣಿ, ಮೊ. ನ್ನು ಹೊತ್ತಿಸುವುದಕ್ಕೆ ಉಪಯೋಗಿಸುವ ಕಾಗದದ ಸುರುಳಿ.

Fidúcial ಫೈಡ್ಯೂಷಿಯಲ್, ಫಿಡ್ಯೂಷಲ್ (ಗು.) (ಮೋಜಣಿ, ಖ. ವಿ., ಮೊ.) F. line, point ಅಳತೆಯಲ್ಲಿ ಸ್ಥಿರ ಆಧಾರವೆಂದು ಸಂಕೇತಮಾಡಿಕೊಂಡ ರೇಖೆ, ಬಿಂದು : ಪ್ರಮಾಣ ರೇಖೆ, —ಬಿಂದು. **Fidúciary** ಫೈಡ್ಯೂಷಿಅರಿ, ಫಿಡ್ಯೂಷರಿ (ಗು., ನಾ.) ನಂಬಿಕೆಯ ; ನ್ಯಾಸ ರಕ್ಷಕನ ; —ರಕ್ಷಣೆಯ ; ನ್ಯಾಸವಾಗಿ ವಹಿಸಿದ. (ಕಾಗದದ ನಾಣ್ಯ) ಸಾರ್ವಜನಿಕ ಭರವಸೆಯನ್ನೊ ಇತರ ಆಧಾರಗಳನ್ನೊ ಅವಲಂಬಿಸಿದ ಬೆಲೆಯುಳ್ಳ ; ವಿಶ್ವಾಸಾವಲಂಬಿ. (ನಾ.) ನ್ಯಾಸ ರಕ್ಷಕ.

Fídus Achátes ಫೈಡಸ್ ಅಕೇಟೀಸ್ (ನಾ.) ನಚ್ಚಿನ ಹಿಂಬಾಲಕ ; ಸ್ವಾಮಿ ಭಕ್ತ ; ನಿಜವಾದ ಸ್ನೇಹಿತ ; ಆಪ್ತ ಮಿತ್ರ.

Fie ಫೈ (ಭಾವ. ಅವ್ಯ.) (ಅಸಮಾಧಾನ ಸೂಚಕ ಉದ್ಗಾರ) : ಛೆ ಛೆ ! ಧಿಕ್ ! ಥೂ ! (F. upon you !)

Fief ಫೀಫ್ (ನಾ.) = Feud[2].

Fié-fie ಫೈ ಫೈ (ಗು.) ಅಕ್ರಮ ; ಅನುಚಿತ ; ದೂಷ್ಯ ; ನಿಂದ್ಯ ; ಕುತ್ಸಿತ.

Field ಫೀಲ್ಡ್ (ನಾ.) ನೆಲ ; ಭೂಮಿ ; ಜಮೀನು ; ಕ್ಷೇತ್ರ ; ಹೊಲ ; ಗದ್ದೆ ; ಹುಲ್ಲುಗಾವಲು. ಯಾವುದಾದರೂ ವಸ್ತು ಸ್ವಾಭಾವಿಕವಾಗಿ ಹೆಚ್ಚುಮೊತ್ತದಲ್ಲಿ ದೊರೆಯುವ ಪ್ರದೇಶ (Diamond-f., Coal-f.). ಯುದ್ಧ ಭೂಮಿ ; ರಣ ರಂಗ ; ಕಳ ; ಕಣ (ಅನೇಕ ವೇಳೆ Battle-f.) ; [(ರೂಪ.) left his rival in possession of the f. ಎದುರಾಳಿಗೆ ಕಳವನ್ನೊಪ್ಪಿಸಿಬಿಟ್ಟನು ; ಸೋತುಹೋದನು. Fair f. and no favour ಪಕ್ಷಪಾತವಿಲ್ಲದ ಸಮ ವರ್ತನೆ. Hold the f. (ಕಳವನ್ನು) ಬಿಟ್ಟುಕೊಡದಿರು ; (ರೂಪ.) ಸೋಲದಿರು ; ಬಿಟ್ಟು ಕದಲದಿರು ; ಸ್ಥಿರವಾಗಿ ನಿಂತಿರು ; ಪದಚ್ಯುತನಾಗದಿರು]. ಯುದ್ಧ ; ಕಾಳಗ (In the f. ಯುದ್ಧ ಭೂಮಿಯಲ್ಲಿ ; ಕಾಳಗದಲ್ಲಿ. Take, keep, the f. ಯುದ್ಧಾರಂಭ ಮಾಡು ; ಕಾಳಗ ನಡಸುತ್ತಿರು. Hard-fought f. ಕಠಿನ ಯುದ್ಧ). [F. of Cloth of Gold ಕ್ರಿ. ಶ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೧೫೦೦ರಲ್ಲಿ ಇಂಗ್ಲೆಂಡಿನ ೮ನೆಯ ಹೆನ್ರಿಗೂ ಫ್ರಾನ್ಸಿನ ೧ನೆಯ ಫ್ರಾನ್ಸಿಸ್ಸಿಗೂ ಸಮಾಗಮ ನಡೆದ ಸ್ಥಳ (ಅಗ ಕಾಣಬಂದ ರಾಜ ವೈಭವ ಪ್ರದರ್ಶನದಿಂದ)]. (ಕ್ರಿಕೆಟ್, ಕಾಲ್ಚೆಂಡು, ಮೊ. ಆಟಗಳ) ಮೈದಾನ, ಬಯಲು. ಬಯಲಿನ ಆಟಗಳಲ್ಲಿ ಭಾಗ ವಹಿಸುವವರು, ಆಟಗಾರರು (A good f. ಒಳ್ಳೆಯ, ಅನೇಕ, ಸ್ಪರ್ಧಿಗಳು). (ಕ್ರಿಕೆಟ್ ಆಟ) ದಾಂಡುಪಕ್ಷವಲ್ಲದವರು ; ಆಟ ತೋರುವ, ಆಟ ಕಾಯುವ, ಪಕ್ಷದವರು ; ಆ ಪಕ್ಷದವರಲ್ಲೊಬ್ಬನು. (ಸಮುದ್ರ, ನೀರ್ಗಲ್ಲು ಮಂಜು, ಮೊ. ಗಳ) ವಿಸ್ತರ, ಹರವು (ರೂಪ. ಸಹ) ; (The whole f. of history ಚರಿತ್ರೆಯ ಕ್ಷೇತ್ರವೆಲ್ಲ ; ಸಮಗ್ರ ಚರಿತ್ರೆ). (ವಂಶಲಾಂಛನ) ಗುರಾಣಿಯ ಮೇಲ್ಮೈ, ಒಡಲು, ಅಥವಾ ಒಡಲಿನ ಭಾಗಗಳಲ್ಲೊಂದು. (ಚಿತ್ರ, ನಾಣ್ಯ, ಬಾವುಟ, ಮೊ. ಗಳ) ಹಿನ್ನೆಲೆ, ಒಡಲು, ಮೈದಾನ. ಕಾರ್ಯ ಕ್ಷೇತ್ರ ; ವ್ಯವಹಾರ ಕ್ಷೇತ್ರ ; ಪ್ರಭಾವ ಕ್ಷೇತ್ರ ; ವೀಕ್ಷಣ ಕ್ಷೇತ್ರ [Each supreme in his own f. ಪ್ರತಿಯೊಬ್ಬನೂ ತನ್ನ ತನ್ನ ಕ್ಷೇತ್ರದಲ್ಲಿ ಅಸಮಾನನಾಗಿ. Filled the f. of the telescope ದೂರದರ್ಶಕದ ದೃಷ್ಟಿಕ್ಷೇತ್ರವನ್ನೆಲ್ಲ ತುಂಬಿತು. Wide f. of vision ವಿಶಾಲ ದೃಷ್ಟಿಕ್ಷೇತ್ರ. Outside the magnetic f. ಕಾಂತ ಕ್ಷೇತ್ರದ ಹೊರಗಡೆ (ಆಕರ್ಷಣೆಗೆ ಒಳಪಡುವಷ್ಟು ಹತ್ತಿರದಲ್ಲಿರದೆ)]. (ಪ್ರಾಣಿ, ಮೊ. ಗಳ ಹೆಸರುಗಳಲ್ಲಿ ವಿಶೇಷಣವಾಗಿ : F.-mouse ಹೊಲದ ಇಲಿ ; ಕಾಡಿಲಿ ; F.-ash ಕಾಡು 'ಆ್ಯಷ್' ಮರ). **F.-allowance** ಕಾಳಗದ ಭತ್ಯ (ಸೈನ್ಯಾಧಿಕಾರಿಗಳಿಗೆ ಯುದ್ಧಸಂದರ್ಭದಲ್ಲಿ ಆಗುವ ಹೆಚ್ಚು ವೆಚ್ಚಗಳಿಗಾಗಿ ಕೊಡುವದು). **F.-artillery, -battery, -gun, -piece** ಯುದ್ಧದಲ್ಲಿ ಸಾಗಿಸಲು ಅನುಕೂಲಿಸುವ ಹಗುರವಾದ ಫಿರಂಗಿ, ಫಿರಂಗಿತಂಡ, ಬಂದೂಕು, ಮೊ. **F.-book** ಮೋಜಣಿದಾರರು ಕ್ಷೇತ್ರದಲ್ಲಿ ತಮ್ಮ ಕಾರ್ಯಸಂಬಂಧದ ಟಿಪ್ಪಣಿ ಬರೆದುಕೊಳ್ಳುವ ಪುಸ್ತಕ : ಕ್ಷೇತ್ರ ಟಿಪ್ಪಣಿ ಪುಸ್ತಕ. **F.-cornet** (ಕೇಪ್‌ಕಾಲೊನಿ, ಮೊ. ಪ್ರಾಂತಗಳಲ್ಲಿ) ಪಟ್ಟಣದ ದಂಡಾಧಿಕಾರಿ. **F.-day** (ಸೈನಿಕ) ವ್ಯೂಹ ಚಲನಾಭ್ಯಾಸ ; —ಚಲನ ಪ್ರದರ್ಶನ. ಕ್ಷೇತ್ರೋತ್ಸವ ದಿನ. (ರೂಪ.) ಮಹತ್ತ್ವದ ದಿನ ; ಉತ್ಸವ ದಿನ ; ದೊಡ್ಡ ಸಮಾರಂಭ. ಮಹತ್ತ್ವಾದ ವಾದ, ಚರ್ಚೆ. **F. dressing** ಯುದ್ಧದಲ್ಲಿ ಗಾಯಕ್ಕೆ ಉಪಯೋಗಿಸುವ ಸಲಕರಣೆಗಳು. **F. events** (ಜೂಜೋಟ, ಮೊ. ವನು ಳಿದ, ಭಾರವೆಸೆತ, ನೆಗೆತ, ಬಳೆಯೆಸೆತ, ಮೊ.) ಕ್ಷೇತ್ರ ಕ್ರೀಡೆಗಳು. **F.-glass** ಹೊರಗೆ ಉಪಯೋಗಿಸುವ ಎರಡು ಕಣ್ಣಿನ ದೂರದರ್ಶಕ ; ದುರ್ಬೀನು ; ಖಗೋಳೀಯ ದೂರದರ್ಶಕದ ಅಥವಾ ಸಂಯುಕ್ತ ಸೂಕ್ಷ್ಮದರ್ಶಕದ ಲೆನ್ಸುಗಳಲ್ಲೊಂದು. **F. greys** ಸೈನಿಕ ಉಡುಪನ್ನು ತೊಟ್ಟ ಜರ್ಮನ್ ಸಿಪಾಯಿಗಳು. **F. hospital** ಚರ ಚಿಕಿತ್ಸಾಲಯ ; ಕಳದ ಬಳಿ ಇರುವ ಹಂಗಾಮಿ ಆಸ್ಪತ್ರೆ. **F. Marshal** ಅತ್ಯುನ್ನತ ದರ್ಜೆಯ ಸರ್ವಾಧಿಕಾರದ ದಳಪತಿ. **F.-night** = F.-day (ರೂಪಕಾರ್ಥದಲ್ಲಿ). **F.-officer** 'ಜನರಲ್' ಎಂಬ ಅಧಿಕಾರಿಗೂ 'ಕ್ಯಾಪ್ಟನ್' ಎಂಬ ಅಧಿಕಾರಿಗೂ ನಡುವಣ ಸೇನಾಧಿಕಾರಿ. **F.-preacher, -ing** ಬಯಲು ಉಪದೇಶಿ ; —ಉಪದೇಶ. **F. punishment** ಯುದ್ಧದಲ್ಲಿ ಮಾಡಿದ ಅಕೃತ್ಯಗಳಿಗಾಗಿ ಕೊಡುವ ಕಠಿನ ಶಿಕ್ಷೆ. **Fiéldsman** (ಕ್ರಿಕೆಟ್) ಚೆಂಡು ಹಿಡಿಯುವವನು, ಆಟ ತೋರಿಸುವವನು. **F.-sports** ಬಯಲಿನ, ಮೈದಾನದ, ಆಟಗಳು ; —ವ್ಯಾಯಾಮ (ಮು., ಬೇಟೆ, ಬಂದೂಕು ಹಾರಿಸುವುದು, ಮೀನು ಹಿಡಿಯುವುದು). **F. telegraph** ಯುದ್ಧರಂಗದಲ್ಲಿ ಉಪಯೋಗಿಸುವ ಚರ ದೂರಲೇಖಕ, ಚರ ಟೆಲಿಗ್ರಾಫು. **F.-work** ಹಂಗಾಮಿ ಕೋಟೆಕೊತ್ತಲಗಳು. ಬಯಲುಗೆಲಸ ; ಹೊಲಗೆಲಸ ; ಹೊರಗೆಲಸ. **Fiéldward(s)** (ಕ್ರಿ.ವಿ.) —ಮಾರ್ಗವಾಗಿ.

Field (ಕ್ರಿ.) (ಕ್ರಿಕೆಟ್, ಬೇಸ್‌ಬಾಲ್, ಮೊ. ಆಟಗಳಲ್ಲಿ) ಆಟ ತೋರಿಸು, ಆಟ ಕಾಯಿ ; ಚೆಂಡನ್ನು ತಡೆ(ದು ಹಿಂದಕ್ಕೆ ಹಾಕು). (ಕಾಲ್ಚೆಂಡಿನ ಆಟದ ದಳ, ಮೊ. ನ್ನು) ಬಯಲಿಗಿಳಿಸು, ಆಟಕ್ಕೆ ನಿಲ್ಲಿಸು. (ಕುದುರೆಯ ಜೂಜಿನಲ್ಲಿ) ಸಾಮಾನ್ಯ ಮೆಚ್ಚಿಕೆಯುಳ್ಳದ್ದಕ್ಕೆ ವ್ಯತಿರಿಕ್ತವಾಗಿ ಬೇರೆಯದನ್ನು ಪ್ರೋತ್ಸಾಹಿಸು. **Fiélder** (ನಾ.) ಆಟ ತೋರಿಸುವವನು.

Fiend ಫೀಂಡ್ (ನಾ.) ಸೈತಾನ ; ದೆವ್ವ ; ಭೂತ ; ಪಿಶಾಚ ; ರಾಕ್ಷಸ ; ಅಮಾನುಷ ಕ್ರೂರ ಪುರುಷ ; ನರ ರಾಕ್ಷಸ (ಅನೇಕ ವೇಳೆ ಹಾಸ್ಯಕ್ಕಾಗಿ : The interviewer-f. ಭೇಟಿಗೆ ಬಂದಿರುವ ಪಿಶಾಚಿ). ಅತ್ಯಾಸಕ್ತ ; ಭಕ್ತ ; ದಾಸ ; ವ್ಯಸನಿ (Fresh-air f. ನಿರ್ಮಲ ವಾಯು ಸೇವಾಸಕ್ತ. Morphia f. ಅಫೀಮು ದೆವ್ವ ; ಅಫೀಮಿಗೆ ದಾಸ). **Fiéndish** (ಗು.) ಪಿಶಾಚದಂಥ ; ಪೈಶಾಚಿಕ ; ಅಮಾನುಷ ಕ್ರೌರ್ಯದ. **Fiéndishly** (ಕ್ರಿ. ವಿ.) ; **Fiéndishness** (ನಾ.) ; **Fiéndlike** (ಗು.)

Fierce ಫಿಯರ್ಸ್ (ಗು.) ಉಗ್ರ ; ಕ್ರೂರ ; ಘೋರ ; ಭೀಷಣ ; ಭಯಂಕರ ; ತೀವ್ರ ; ತೀಕ್ಷ್ಣ ; ಚಂಡ ; ಆತುರವುಳ್ಳ ; ಕಾತರ. **Fiércely** (ಕ್ರಿ. ವಿ.) ; **Fiérceness** (ನಾ.)

Fíery. **Fire** (ನಾ.) ನೋಡಿ.

Fíesta ಫೀಎಸ್ಟಾ (ನಾ.) ಹಬ್ಬ ; ಉತ್ಸವ ; ಸಂತೋಷ ದಿನ.

Fife ಫೈಫ್ (ನಾ., ಕ್ರಿ.) ಸಮರ ಸಂಗೀತದಲ್ಲಿ ಭೇರಿವಾದ್ಯದೊಡನೆ ಊದುವ ಕೀಚು ದನಿಯ ಒಂದು ತೆರದ ಸಣ್ಣ ಕೊಳಲು : ರಣಗೊಳಲು; ರಣಗೊಳಲೂದುವವನು. (ಕ್ರಿ.) ರಣಗೊಳಲೂದು. **Fífer** (ನಾ.)

Fífe-rail ಫೈಫ್ ರೇಲ್ (ನಾ.) (ನಾವೆ) ಪ್ರಧಾನ ಕೂವೆಯ ಸುತ್ತಲೂ ಇರುವ, ಹಗ್ಗ ಸುತ್ತುವ ಗೂಟಗಳಿಂದ ಕೂಡಿದ, ಕಟಕಟೆ.

Fifteén, Fifth, Fífty, etc. **Five** ನೋಡಿ.

Fig[1] ಫಿಗ್ (ನಾ.) ಅಂಜೂರ(ದ ಹಣ್ಣು) ; ಅಂಜೂರದ ಮರ (ಸಾ., F.-tree) ; ಅತ್ತಿ(ಯ ಹಣ್ಣು, ಮರ). [Green figs ಹಸಿಯ ಅಂಜೂರ. Dried figs ಒಣಗಿಸಿದ ಅಂಜೂರ (ಮು., Turkey or Smyrna figs). Pulled figs ಕಿತ್ತ, ಉತ್ತಮತೆರದ ಟರ್ಕಿಅಂಜೂರ. Under one's vine & f.-tree ಮನೆಯಲ್ಲಿ ನೆಮ್ಮದಿಯಾಗಿದ್ದುಕೊಂಡು]. ಉಪಯೋಗವಿಲ್ಲದ್ದು ; ಬೆಲೆಯಿಲ್ಲದ್ದು ; ಕೆಲಸಕ್ಕೆ ಬಾರದ್ದು [Don't care a f. for ಕಡ್ಡಿಗೂ ಕಡೆ. (ಭಾವ. ಅವ್ಯ.) A. f. for—!] **F.-leaf** ಅಂಜೂರದೆಲೆ ; ಮಾನ ಮುಚ್ಚುವ ಸಾಧನ ; ಮಾನದ ತಾಳಿ ; ಅರೆ ಮರೆ.

Fig[2] ಫಿಗ್ (ನಾ., ಕ್ರಿ. ಸಕ.) ಉಡುಪು ; ಉಡಿಗೆ ; ಉಡಿಗೆ ತೊಡಿಗೆಗಳು ; ಸಜ್ಜು (In full f. ಪೂರ್ತಿ ಸಜ್ಜುಮಾಡಿಕೊಂಡು). ಸ್ಥಿತಿ (In good f. ಸರಿಯಾದ ಸ್ಥಿತಿಯಲ್ಲಿ). (ಕ್ರಿ.) F. out or up (horse) (ಕುದುರೆಯನ್ನು) ಗೆಲುವಾಗಿಸು, ಚುರುಕು ಮಾಡು, ಚಟುವಟಿಕೆ ಮಾಡು. F. out (person) (ಒಬ್ಬನನ್ನು) ಅಲಂಕಾರ ಮಾಡು, ಸಿಂಗರಿಸು.

Fight ಫೈಟ್ (ಕ್ರಿ. ; ಭೂತ., ಭೂ. ಕೃ. Fought ಫಾಟ್) ಯುದ್ಧ ಮಾಡು ; ಹೋರಾಡು ; ಕಾದು ; ಕಾದಾಡು ; ಸೆಣಸು (*Against, with* ಉಪ. ದೊಡನೆ). (F. for ಒಬ್ಬನಿಗಾಗಿ, ಒಂದಕ್ಕಾಗಿ, ಹೋರಾಡು). (ಪ್ರತಿಕಕ್ಷಿಯೊಡನೆ) ಜಗಳ, ವ್ಯಾಜ್ಯ, ಮೊಕದ್ದಮೆ, —ನಡಸು, ಮಾಡು. (ಹುಂಜಗಳನ್ನು, ನಾಯಿಗಳನ್ನು) ಕಾದಾಟಕ್ಕೆ, ಕಾಳಗಕ್ಕೆ, ಬಿಡು [Fighting-cock ಕಾಳಗದ ಹುಂಜ (ರೂಪ. ಸಹ)]. (ಸೈನ್ಯ, ಹಡಗು —ಇವನ್ನು) ಯುದ್ಧದಲ್ಲಿ ನಡಸು. F. off ಕಾದಿ ಪ್ರಯತ್ನಪಟ್ಟು ಓಡಿಸು, ಅಟ್ಟಿಬಿಡು. F. (it) out (ವ್ಯಾಜ್ಯ, ಮೊ.) ಕಾದಾಡಿ ಬಗೆಹರಿಸು ; ತೀರ್ಮಾನವಾಗುವ ವರೆಗೂ ಕಾದಾಡು. F. shy of (ಒಬ್ಬನಿಂದ, ಒಂದು ಕಾರ್ಯ, ಮೊ. ಗಳಿಂದ) ದೂರವಾಗಿರು ; ಅಳುಕು ; ಹಿಂಜರಿ. **Fíghter** (ನಾ.)

Fight (ನಾ.) (ಕ್ರಿಯಾರ್ಥಗಳಲ್ಲಿ). ಹೋರಾಟ ; ಕಾಳಗ ; ಯುದ್ಧ ; ಕದನ [Give, make a, f. ಕಾಳಗ ಕೊಡು ; ಹೋರಾಡು. Valiant in f. ಹೋರಾಟದಲ್ಲಿ ಶೂರ. Running f. ಅಟ್ಟಿಸಿಕೊಂಡು ಹೋಗಿ ಮಾಡುವ ಕದನ. Sham f. (ಅಭ್ಯಾಸಕ್ಕಾಗಿ, ಪ್ರದರ್ಶನಕ್ಕಾಗಿ, ಮಾಡುವ) ಹುಸಿ ಕಾಳಗ. Stand-up f. ಎದುರು ನಿಂತು, ವಿಧ್ಯುಕ್ತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಿ, ಮಾಡುವ ಯುದ್ಧ.] (ರೂಪ.) ಕಲಹ ; ಜಗಳ ; ಹೋರಾಡುವ ಶಕ್ತಿ, ಆಸೆ (Has f. in him yet ಅವನಿಗಿನ್ನೂ ಹೋರಾಡುವ ಕೆಚ್ಚು ಇದೆ. Show f. ಸುಲಭವಾಗಿ ಜಗ್ಗದೆ ಎದುರಿಸು)

Fígment ಫಿಗ್ಮೆಂಟ್ (ನಾ.) ಕಲ್ಪನೆಯ ಹೇಳಿಕೆ ; ಕಲ್ಪನೆ ; (ವಸ್ತುತಃ ಇಲ್ಲದ) ಮನಃಕಲ್ಪನೆ ; ಮನೋಭ್ರಾಂತಿ.

Fígurant (F) ಫಿಗ್ಯುರ್ಯಾಂಟ್, **Figuránt** ಫೀಗುರಾನ್ (ಪುಲ್ಲಿಂಗ), **-ánte** ಫಿಗ್ಯುರಾಂಟೆ (ಸ್ತ್ರೀ.) (ನಾ.) ನರ್ತಕ ; ನರ್ತಕಿ ; (ರಂಗದಮೇಲೆ ಗುಂಪಿನಲ್ಲಿ ಬಂದು, ಸಾ. ಮಾತಾಡದ) ಮೂಕ ಪಾತ್ರ, ಸಹಾಯ ಪಾತ್ರ.

Figurátion, Fígurative. **Figure** ನೋಡಿ.

Fígure ಫಿಗರ್, —ಗ್ಯುರ್ (ನಾ.) ಹೊರ ರೂಪ ; ಆಕಾರ ; ಆಕೃತಿ. (ಜ್ಯಾ.) ರೇಖೆಯಿಂದ (ಗಳಿಂದ) ಆವೃತವಾದ ಕ್ಷೇತ್ರ (ವೃತ್ತ, ತ್ರಿಕೋನ, ಮೊ.) ; ಕ್ಷೇತ್ರದಿಂದ (ಗಳಿಂದ) ಆವೃತವಾದ ಘನಾಕೃತಿ (ಗೋಲ, ಶಂಕು, ಮೊ.). ದೇಹಾಕೃತಿ ; ಶರೀರದ ಆಕಾರ ; ಮೈಕಟ್ಟು (He has a well-developed f. ಅವನ ಮೈಕಟ್ಟು ಚೆನ್ನಾಗಿದೆ. Keep one's f. ಮೈಯನ್ನು ದಪ್ಪವಾಗಿ ಬೆಳಸದಿರು ; ದಪ್ಪವಾಗಿ ಬೆಳೆಯದಿರು). ಮನುಷ್ಯಾಕೃತಿ (Saw a f. leaning against the door ಬಾಗಿಲಿಗೆ ಒರಗಿಕೊಂಡಿರುವ ಒಬ್ಬ ಮನುಷ್ಯನನ್ನು ಕಂಡೆನು. F. of fun ವಿಕಟಾಕೃತಿ ; ವಿಕಾರ ಮನುಷ್ಯ). (ಮನಸ್ಸಿನಲ್ಲಿ ರೂಪಿಸಿಕೊಂಡ) ವ್ಯಕ್ತಿ (The most terrible f. in our history ನಮ್ಮ ಇತಿಹಾಸದಲ್ಲಿ ಕಾಣಬರುವ ಅತ್ಯಂತ ಭಯಂಕರ ವ್ಯಕ್ತಿ. Make or cut a brilliant, poor, f. ಉಜ್ಜ್ವಲವಾಗಿ, ನಿಕೃಷ್ಟವಾಗಿ, ಕಾಣು. Person of f. ಆಕಾರ ಪುರುಷ). ಬಿಂಬ ; ಪ್ರತಿ ಬಿಂಬ ; ಹೋಲಿಕೆ ; ಮರುಪಡಿ ; ಶಿಲ್ಪದಲ್ಲಿ, ಚಿತ್ರದಲ್ಲಿ, ರೂಪಿಸಿದ ಮನುಷ್ಯಾಕೃತಿ ; ಚಿತ್ರ ; ಪ್ರತಿಮೆ ; ಮೂರ್ತಿ ; ಸಂಕೇತ ; ಲಾಂಛನ ; ಜಾತಿ ರೂಪ ; ಪ್ರತಿ ರೂಪ ; ಅಚ್ಚು ; ಮಾದರಿ ; ರೇಖಾಕೃತಿ ; ನಿದರ್ಶಕ ಚಿತ್ರ (ಸಂಕ್ಷಿಪ್ತ : fig.). ಉಪಮೆ. (ಜ್ಯೋ.) ಜಾತಕ ; ಕುಂಡಲಿ. ಅಲಂಕಾರದ ಮಾದರಿ ; ರೇಖಾಲಂಕಾರ. ನರ್ತನದ ಸುತ್ತಾಟ, ಚಲನ ವಲನ. 'ಸ್ಕೇಟಿಂಗ್' ಎಂಬ ಜಾರುವ ಆಟದಲ್ಲಿಯ ಚಲನ ವಲನಗಳು ; ಕೇಂದ್ರದಲ್ಲಿ ಆರಂಭವಾಗಿ ಅಲ್ಲಿಯೇ ಕೊನೆಮುಟ್ಟುವ ಚಲನ ವಲನಗಳು. ಅಂಕಿ ; ಅಂಕ [ಮು., ಬಳಕೆಯಲ್ಲಿರುವ ಹತ್ತು ಅಂಕಿಗಳಲ್ಲಿ ಒಂದು. Double figures ೧೦ಕ್ಕೂ ೧೦೦ಂಕ್ಕೂ ಮಧ್ಯೇ ಇರುವ ಅಂಕಿಗಳು. Income of five figures ಐದು ಅಂಕಿಗಳ ವರಮಾನ (೧,೦೦೦ಕ್ಕೂ ಲಕ್ಷಕ್ಕೂ ಮಧ್ಯೇ ಇರುವದು). Reach three figures (ಕ್ರಿಕೆಟ್ ಓಟದಲ್ಲಿ) ನೂರರ ಸಂಖ್ಯೆಗೆ ಬರು, ಮೂರಂಕಿ ಮುಟ್ಟು. Got it at a low, high, f. ಅಗ್ಗವಾಗಿ ದೊರೆಯಿತು, ಹೆಚ್ಚುಬೆಲೆ ಕೊಡಬೇಕಾಯಿತು]. (ಅಲಂ.) ಅಲಂಕಾರ ; ರೂಪಕ (= F. of speech). (ವ್ಯಾ.) ವಾಕ್ಯರಚನೆಯಲ್ಲಿ ಸಾಮಾನ್ಯ ನಿಯಮಗಳಿಂದ ಬೇರೆಯಾಗಿರುವ ರೂಢಿ ಪ್ರಯೋಗ (ಉದಾ., ಅಧ್ಯಾಹಾರ). (ಸಂ.) ಅನೇಕ ಸ್ವರಗಳು ಹತ್ತಿರ ಹತ್ತಿರ ಬರುವುದರಿಂದ ಒಂದೇ ಎಂಬ ಭಾವನೆಯನ್ನುಂಟುಮಾಡುವ ಸ್ವರ ಸರಣಿ. **F.-dance** ಸ್ಪಷ್ಟ ಭಾಗಗಳಿಂದ ಕೂಡಿದ ನೃತ್ಯ, ನರ್ತನ ಅಥವಾ ನರ್ತನ ಪ್ರದರ್ಶನ : ಚಿತ್ರ ನಾಟ್ಯ. **F.-dancer** ಚಿತ್ರ ನರ್ತಕ(ಕಿ). **F.-head** ಹಡಗಿನ ಮೂತಿಯಮೇಲೆ ಕೆತ್ತಿರುವ ಎದೆಮಟ್ಟದ ಅಥವಾ ಪೂರ್ಣ ರೂಪದ ಆಕೃತಿ ; (ರೂಪ.) (ನಿಜವಾಗಿ ಅಧಿಕಾರವೇನೂ ಇಲ್ಲದೆ) ಹೆಸರಿಗೆ ಮಾತ್ರವಿರುವ ಮುಂದಾಳು, ಮುಖಂಡ, ಅಧ್ಯಕ್ಷ : ನಾಮ ಮಾತ್ರ ನಾಯಕ. (ಹಾಸ್ಯವಾಗಿ) ಮೂತಿ. **Fígureless** (ಗು.) ; **Figuríne** ಫಿಗ್ಯು(ಗ್ಯೂ, ಗ)ರೀನ್ (ನಾ.) ಸಣ್ಣ (ಶಿಲಾ) ಪ್ರತಿಮೆ.

Fígure (ಕ್ರಿ.) ರೇಖಿಸು ; ಚಿತ್ರಿಸು ; ರೂಪಿಸು. ಮನಸ್ಸಿನಲ್ಲಿ ಚಿತ್ರಿಸಿಕೊ, ಭಾವಿಸು, ಕಲ್ಪಿಸು ; ಊಹಿಸು (ಸಾ., ಊಹಿಸಿಕೊ). ಲಕ್ಷಣ, ಸಂಕೇತ, —ಆಗಿರು ; ಉಪಲಕ್ಷಿಸು ; ನಮೂನೆಗಳಿಂದ ಅಲಂಕರಿಸು (Figured satin ಚಿತ್ರನೆಯ್ಗೆ ಬಟ್ಟೆ). ಅಂಕಿಗಳಿಂದ ಗುರುತುಮಾಡು ; ಬೆಲೆ ಗುರುತುಮಾಡು ; ಅಂಕಿ ಹಾಕು ; ಲೆಕ್ಕ ಮಾಡು ; ಗಣಿತ ಮಾಡು [F. up ಕೂಡು ; ಮೊತ್ತ ಕಂಡುಹಿಡಿ. F. out ಫಲವನ್ನು ಸಂಖ್ಯೆಯಲ್ಲಿ ಹೇಳು (It figures out at 45 rupees ನಲವತ್ತೈದು ರೂಪಾಯಿ ಲೆಕ್ಕವಾಗುತ್ತದೆ)]. ಕಾಣಿಸಿಕೊ ; ತೋರಿಸಿಕೊ ; ತೋರು ; ಬರು (F. as ಬೇರೆ ವ್ಯಕ್ತಿಯೆಂದು ತೋರಿಸಿಕೊ ; ಪಾತ್ರ ವಹಿಸು). ಸುವ್ಯಕ್ತವಾಗಿರು ; ಎದ್ದು ಕಾಣು. **Figurátion** ಫಿಗ್ಯು(ಗ)ರೇಷನ್ (ನಾ.) ಒಂದು ಗೊತ್ತಾದ ರೂಪವಾಗುವಂತೆ ನಿರ್ಣಯ ಮಾಡುವುದು ; ರೂಪ ನಿಷ್ಕರ್ಷೆ ; —ನಿರ್ಣಯ ; ರೂಪಣ. ನಿರ್ಣಯವಾದ ರೂಪ ; ಆಕಾರ ; ಆಕೃತಿ ; ರೂಪ. ಸಾಂಕೇತಿಕ ನಿರೂಪಣೆ. ಮಾದರಿ ಚಿತ್ರಗಳಿಂದ ಅಲಂಕಾರ. **Fígurative** —ರಟಿವ್ (ಗು.) ಸಾಂಕೇತಿಕ ; ಮಾದರಿಯಾದ ; ಚಿತ್ರರಚನೆಯ. (ಜೇಡುಮಣ್ಣಿನಂಥ) ಮೆತು ಪದಾರ್ಥದಿಂದ ರಚಿಸಿದ. ಆಲಂಕಾರಿಕ ; ಆಲಂಕಾರಿಕವಾಗಿ ಹೇಳಿದ ; ಔಪಚಾರಿಕ ; ಅಲಂಕಾರಮಯ ; ಅಲಂಕಾರಾಸಕ್ತ. **Fíguratively** (ಕ್ರಿ. ವಿ.) ; **Fíguratíveness** (ನಾ.)

Figuríne. **Figure** (ನಾ.) ನೋಡಿ.

Fílament ಫಿಲಮೆಂಟ್ (ನಾ.) (ಮು., ಪ್ರಾಣಿಯ ಅಥವಾ ಸಸ್ಯದ ರಚನೆಯಲ್ಲಿ) ನವಿರಾದ ದಾರದಂತಿರುವ ವಸ್ತು ; ನಾರು ; ದಾರ ; ತಂತು ; ಎಳೆ. ವಿದ್ಯುತ್ಪ್ರವಾಹ ಹರಿದು ಪ್ರಕಾಶ ಕೊಡುವ, ಕರಗದ, ವಿದ್ಯುದ್ದೀಪದ ಬುರುಡೆಯೊಳಗಿನ ತಂತು. (ವಾಯು, ಬೆಳಕು, ಮೊ. ಗಳ ವಿಷಯದಲ್ಲಿ) ಪ್ರವಾಹ ಭಾಗ, ಧಾರೆ, ಸಂತತ ಕಣಪ್ರವಾಹ. (ಸ ವಿ.) ಪರಾಗಕೋಶ ಧಾರಿಯ ಕೇಸರ ಭಾಗ ; ಕೇಸರ ತಂತು. **Filaméntary** (ಗು.) ತಂತುಗಳ ; ತಂತುಸ್ವಭಾವದ. **Fílamented** (ಗು.) ತಂತು(ಗಳು) ಉಳ್ಳ. **Filaméntous** (ಗು.) ತಂತುಗಳಿಂದಾದ ; ತಂತುಗಳುಳ್ಳ ; ತಂತುಮಯ ; ದಾರದಂತಿರುವ. **Fílar** ಫೈಲರ್ (ಗು.) ದಾರದ ; ತಂತುವಿನ ; —ಕ್ಕೆ(ಗೆ) ಸಂಬಂಧಪಟ್ಟ (ಮು., ಸೂಕ್ಷ್ಮದರ್ಶಕದ ದೃಷ್ಟಿಕ್ಷೇತ್ರದಲ್ಲಿರುವ ಸೂಕ್ಷ್ಮ ತಂತುಗಳ). **Fílatory** ಫಿಲಟರಿ (ನಾ.) ದಾರ ಮಾಡುವ ಅಥವಾ ದಾರ ನೂಲುವ ಯಂತ್ರ : ನೂಲು ಯಂತ್ರ.

Fílar. **Filament** ನೋಡಿ.

Filárial ಫಿಲೇರಿಯಲ್ (ಗು.) 'ಫಿಲೇರಿಯ' ಎಂಬ ಜಾತಿಯ ಪರೋಪಜೀವಿ ಕೀಟಗಳ ; —ಸಂಬಂಧದ. **Filárious** (ಗು.) ಫಿಲೇರಿಯಾ ಕೀಟಗಳಿಂದ ತುಂಬಿದ.

Fílature ಫಿಲಟ್ಯು(ಚ)ರ್ (ನಾ.) ರೇಷ್ಮೆಗೂಡುಗಳಿಂದ ರೇಷ್ಮೆ ತೆಗೆದು ಸುತ್ತುವುದು ; —ಸುತ್ತುವ ಕಾರ್ಖಾನೆ.

Fílbert ಫಿಲ್ಬರ್ಟ್ (ನಾ.) ವ್ಯವಸಾಯ ಮಾಡಿ ಬೆಳಸಿದ ಹೇಸ್ಲ್‌ಲ್ ಮರ ; ಅದರ ಕರಟಕಾಯಿ (F.-nut ಎಂಬುದರ ಸಂಕ್ಷಿಪ್ತ)

Filch ಫಿಲ್ಷ್, ಫಿಲ್ಚ್ (ಕ್ರಿ. ಸಕ.) ಕದಿ ; ಕದ್ದುಕೊಂಡುಹೋಗು (ಮು., ಸ್ವಲ್ಪಬೆಲೆಯ ವಸ್ತುಗಳನ್ನು) ; ಎಗುರಿಸು ; ಅಪಹರಿಸು.

File[1] ಫೈಲ್ (ನಾ., ಕ್ರಿ. ಸಕ.) (ವಸ್ತುಗಳ ಮೇಲ್ಭಾಗವನ್ನು ಉಜ್ಜಿ ನಯ ಮಾಡುವುದಕ್ಕಾಗಲಿ ಅವುಗಳ ಗಾತ್ರ ಕಡಮೆಮಾಡುವುದಕ್ಕಾಗಲಿ ಉಪಯೋಗಿಸುವ, ಸಾ., ಉಕ್ಕಿನಿಂದ ಮಾಡಿದ, ಒರಟು ಮೈಯುಳ್ಳ) ಅರ (Bite, gnaw, f. ವ್ಯರ್ಥ ಕೆಲಸ ಮಾಡು). (ಅಸಂ.) ಉಪಾಯಗಾರ ; ತಂತ್ರಿ ; ನುಣುಚಿಕೊಳ್ಳುವವನು (ಸಾ., Old, deep, f. ನುರಿತ, ಪಕ್ಕಾ, —ತಂತ್ರಿ). (ಕ್ರಿ.) ಅರದಿಂದ ಉಜ್ಜಿ ಹಾಕು, ಉಜ್ಜಿ ನಯ ಮಾಡು. (ಮು., ಸಾಹಿತ್ಯ ಕೃತಿಯನ್ನು) ತಿದ್ದಿ ತಿದ್ದಿ ನಯಮಾಡು, ಉತ್ತಮಗೊಳಿಸು. F. away (ಒರಟು ಮೈ, ಮೊ. ನ್ನು) ಅರದಿಂದ ಉಜ್ಜಿ ಹಾಕು. **Fíling** (ನಾ.) (ಕ್ರಿಯಾರ್ಥಗಳಲ್ಲಿ). (ಬ. ವ. ದಲ್ಲಿ) ಅರದಿಂದ ಉಜ್ಜಿ ಬಂದ ಪುಡಿ : ಅರ ಪುಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

File[2] ಫ್ಯೈಲ್ (ನಾ., ಕ್ರಿ. ಸಕ.) (ಕಾಗದ ಪತ್ರಗಳನ್ನು ಪೋಣಿಸಿಡುವ) ಚೂಪು ಕೊನೆಯ ಬಗ್ಗದ ತಂತಿ. (ಬೇಕಾದಾಗ ನೋಡುವುದಕ್ಕೆ ದೊರೆಯುವಂತೆ ಕಾಗದ ಪತ್ರಗಳನ್ನು) ಒಂದು ಕ್ರಮದಲ್ಲಿ ಬಂಧಿಸಿಟ್ಟು ಕೊಂಡಿರುವ ಸಾಧನ: ಕಟ್ಟು. (ಮು., ನ್ಯಾಯಸ್ಥಾನದಲ್ಲಿ, ಒಂದು ಮೊಕದ್ದಮೆಗೆ ಸಂಬಂಧಪಟ್ಟ) ಹೀಗೆ ಜೋಡಿಸಿಟ್ಟಿರುವ ಕಾಗದ ಪತ್ರ ಗಳು, ಕಟ್ಟು. ಕ್ರಮವಾಗಿ ಜೋಡಿಸಿಟ್ಟಿರುವ (ಒಂದು ವೃತ್ತಪತ್ರಿಕೆಯ ಸಂಚಿಕೆಗಳ) ಕಟ್ಟು. (ಕ್ರಿ.) (ಕಾಗದ ಪತ್ರಗಳನ್ನು) ಕಟ್ಟಿನಲ್ಲಿ, ದಫ್ತರ ದಲ್ಲಿ ಅಥವಾ ಪತ್ರಕೋಶದಲ್ಲಿ, ಇಡು ; —ಗೆ (ಕ್ಕೆ) ಸೇರಿಸು.

File[3] ಫ್ಯೈಲ್ (ನಾ., ಕ್ರಿ.) (ಸೈನ್ಯ) ಒಬ್ಬರ ಹಿಂದೆ ಒಬ್ಬರಂತೆ ನಿಂತಿರುವ ಸೈನಿಕರ ಸಾಲು [In f. ಒಬ್ಬನ ಹಿಂದೊಬ್ಬನಂತೆ ಎರಡು ಸಾಲುಗಳಲ್ಲಿ ನಡೆದುಹೋಗುತ್ತ. Single, Indian, f. ಒಬ್ಬನ ಹಿಂದೆ ಒಬ್ಬನಂತೆ ನಡೆದುಹೋಗುವ ಒಂದೇ ಸಾಲು. Rank and f. (Rank ನೋಡಿ). A f. of men ಒಂದು ಉದ್ದೇಶಕ್ಕಾಗಿ ಹೋಗುವಂತೆ ನಿಯಮಿತರಾದ ಇಬ್ಬರು]. (ಒಂದರ ಹಿಂದೊಂದರಂತೆ ಇರುವ, ಒಬ್ಬನ ಹಿಂದೊಬ್ಬನಂತೆ ಇರುವ) ವಸ್ತುಗಳ, ಮನುಷ್ಯರ, —ಸಾಲು. (ಚದುರಂಗ) (ಒಬ್ಬ ಆಟ ಗಾರನ ಕಡೆಯಿಂದ ಮತ್ತೊಬ್ಬ ಆಟಗಾರನ ಕಡೆಗೆ ಹೋಗುವ) ಮನೆಗಳ ಸಾಲು ; ಉದ್ದಸಾಲು. (ಕ್ರಿ.) ಉದ್ದಸಾಲಿನಲ್ಲಿ ನಡೆ, ಹೋಗು (F. off, away) ; ಉದ್ದಸಾಲುಗಳಲ್ಲಿ ಹೋಗುವಂತೆ (ಸಿಪಾಯಿಗಳಿಗೆ) ಆಜ್ಞೆಮಾಡು.

Fílemot ಫಿಲಿಮಾಟ್ (ಗು., ನಾ.) ಬಾಡಿಹೋದ ಎಲೆಯ ಬಣ್ಣ(ದ) ; ಕಂದುಛಾಯೆಯ ಹಳದಿಯ ಬಣ್ಣ(ದ)

Fílial ಫಿಲಿಯಲ್ (ಗು.) ಮಗನ ಅಥವಾ ಮಗಳ ; ಮಕ್ಕಳ ; ಮಕ್ಕಳು ತಂದೆ ತಾಯಿಗಳ ವಿಷಯದಲ್ಲಿ ನಡೆದುಕೊಳ್ಳಬೇಕಾದ ; ಪುತ್ರೀಯ ; ಪುತ್ರ ಧರ್ಮದ. **Fílially** (ಕ್ರಿ. ವಿ.) ; **Fíliate** ಫಿಲಿಯೇಟ್ (ಕ್ರಿ. ಸಕ.) (Affiliate ಎಂಬುದಕ್ಕೆ ಬದಲಾಗಿ ವಿರ. ಪ್ರ.). **Filiátion** (ನಾ.) (ಒಬ್ಬನ) ಮಗನಾಗಿರುವುದು ; ಪುತ್ರತ್ವ ; ಮಗತನ. ಕವಲೊಡೆಯುವುದು. (ಒಂದು ಸಂಘದ ಅಥವಾ ಭಾಷೆಯ) ಶಾಖೆ. ವಂಶಾನುಕ್ರಮ ; ವಂಶಾನುಸರಣಿ ; ವಂಶ ಸಂಬಂಧ ; ವಂಶ ವೃಕ್ಷ.

Fíliate. **Filial** ನೋಡಿ.

Fílibeg ಫಿಲಿಬೆಗ್ (ನಾ.) ಸ್ಕಾಟ್ಲೆಂಡಿನ ಆಧುನಿಕ ಮೇಲ್ನಾಡಿಗರ ಉಡುಪಿನ ಒಂದು ಭಾಗ (ಸೊಂಟದಿಂದ ಮೊಣಕಾಲ ವರೆಗಿನ ಮೋಟು ಲಂಗ)

Fílibuster ಫಿಲಿಬಸ್ಟರ್ (ನಾ., ಕ್ರಿ. ಅಕ.) ನ್ಯಾಯಕ್ಕೊಳಪಡದೆ ಸ್ವಾರ್ಥಕ್ಕಾಗಿ ಯುದ್ಧ ಮಾಡು(ವವನು) ; ದುಂಡಾವರ್ತಿ ಮಾಡು (ವವನು) ; ಲೂಟಿಗಾರ ; ಕೊಳ್ಳೆ ಹೊಡೆಯುವವನು. (ಅಮೆ. ಸಂ., ರಾಜ ನೀತಿ) ತಡೆಗಾರ ; ತಡೆಯೊಡ್ಡು(ವವನು) ; ವಿಘ್ನಕಾರಿ.

Fílicide ಫಿಲಿಸ್ಯೈಡ್ (ನಾ.) ಮಗನ, ಮಗಳ, —ಕೊಲೆ ; —ಕೊಲೆ ಗಾರ.

Filíferous ಫ್ಯೈಲಿಫೆರಸ್ (ಗು.) ದಾರದಂಥ ಭಾಗಗಳುಳ್ಳ.

Fíliform ಫ್ಯೈಲಿಫಾರ್ಮ್ (ಗು.) ತಂತು ರೂಪದ.

Fíligree, Fíla- ಫಿಲಿಗ್ರೀ, ಫಿಲಗ್ರೀ (ನಾ.) (ಚಿನ್ನ, ಬೆಳ್ಳಿ ಅಥವಾ ತಾಮ್ರದ ಸೂಕ್ಷ್ಮ ತಂತಿಯಿಂದ ಮಾಡಿದ) ಬಳ್ಳಿಕೆಲಸದ ಅಲಂಕಾರ ; ಬಳ್ಳಿಕೆಲಸ ; (ಸೂಕ್ಷ್ಮ ತಂತಿಯಿಂದ ಮಾಡಿದ) ತೆರಪು ಚಿತ್ರಗೆಲಸ. ಸೂಕ್ಷ್ಮವಾಗಿಯೂ ಲಘುವಾಗಿಯೂ ನಯವಾಗಿಯೂ ಇರುವ ವಸ್ತು : ನಾಜೂಕು ವಸ್ತು. **Fíligreed** (ಗು.)

Fill ಫಿಲ್ (ಕ್ರಿ.) ತುಂಬು ; ತುಂಬಿಹೋಗು ; ಭರ್ತಿ ಮಾಡು ; ಭರ್ತಿ ಯಾಗು [*With* ಉಪ. ದೊಡನೆ. Sails f. (ಹಡಗಿನ) ಪಟಗಳು ಗಾಳಿ ಯಿಂದ ಉಬ್ಬಿಕೊಳ್ಳುತ್ತವೆ]. ಹೆಚ್ಚಾಗಿ ಶೇಖರಿಸಿಡು ; ಸಂಚಯ ಮಾಡು; ಕೂಡಹಾಕು ; ಪೂರ್ತಿಯಾಗಿ ತುಂಬು ; ತುಂಬಿಕೊಂಡಿರು ; ವ್ಯಾಪಿಸು ; ಹರಡು ; ಆವರಿಸು [F. the bill (ಅದೊಂದೇ) ಪ್ರಮುಖ ವಿಷಯವಾಗಿರು. (ಅಮೆ. ಸಂ.) ಆಗಬೇಕಾದುದನ್ನೆಲ್ಲ ಮಾಡು ; ಸಾಕಾ ಗಿರು]. (ದಂತವೈದ್ಯ) [ಟೊಳ್ಳು ಹಲ್ಲನ್ನು, (ಹಲ್ಲುಗಳ ಮಧ್ಯದ) ಕಂಡಿ ಯನ್ನು, ಚಿನ್ನ, ಮೊ. ಗಳಿಂದ] ತುಂಬು. (ಮು., ವಿಶೇಷ ಆಹಾರವಸ್ತು ಗಳಿಂದ) ತೃಪ್ತಿಪಡಿಸು, ತಣಿಸು. (ಅಧಿಕಾರ) ವಹಿಸು ; (ಅಧಿಕಾರದಲ್ಲಿ, ಸ್ಥಾನದಲ್ಲಿ) ಇರು ; (ಉದ್ಯೋಗದ) ಕಾರ್ಯ ನಡಸು ; (ಬಿಡುಹೊತ್ತಿ ನಲ್ಲಿ) ಕೆಲಸವಾಗಿರು ; (ಖಾಲಿಯಿರುವ ಸ್ಥಾನಕ್ಕೆ) ನೌಕರನನ್ನು ನೇಮಿಸು ; ಸ್ಥಳ ಭರ್ತಿ ಮಾಡು. (ಮು., ಹತ್ತಿಯ ಬಟ್ಟೆ ನೆಯ್ಯುವುದ ರಲ್ಲಿ, ಕೀಳ್ತರದ ನೂಲನ್ನು) ಬೆರಕೆ ಮಾಡು (ಸಾ., ಭೂ. ಕೃ. ಪ್ರಯೋಗ). [F. in (ಹೊರ ಆಕಾರ ಸೂಚಿಸಿರುವುದನ್ನು, ದಿಗ್ದರ್ಶನ ಮಾಡಿರುವುದನ್ನು) ತುಂಬು, ಪೂರ್ತಿಮಾಡು, ಭರ್ತಿಮಾಡು ; (ಪೂರ್ತಿಯಾಗದ ದಸ್ತೈವಜು, ಖಾಲಿ ಚೆಕ್ಕು, ಮೊ. ಗಳಲ್ಲಿ ಪೂರ್ತಿಮಾಡದೆ) ಬಿಟ್ಟಿರುವ ಅಂಶಗಳನ್ನು ತುಂಬು. F. out (ತಕ್ಕ ಮಿತಿಯ ವರೆಗೆ) ಹರಡು, ವಿಸ್ತರಿಸು, ವಿಸ್ತಾರವಾಗು ; ಉಬ್ಬು ; ಉಬ್ಬಿಸು ; ಹಿಗ್ಗು ; ಹಿಗ್ಗಿಸು. F. up ಖಾಲಿಯಿರುವ ಭಾಗಗಳನ್ನು ಅಥವಾ ಸ್ಥಳಗಳನ್ನು ಅಥವಾ ನ್ಯೂನತೆಗಳನ್ನು ಪೂರ್ತಿಯಾಗಿ ಭರ್ತಿಮಾಡು : ಖಾಲಿ ಭರ್ತಿಮಾಡು. (ಕೊಳ, ಮೊ. ನ್ನು) ಮುಚ್ಚಿಬಿಡು. ಪೂರ್ತಿಯಾಗಿ, ತುಂಬ, ಬೆಳೆ. February f.-dike (February ನೋಡಿ)]. (ಸರಕನ್ನು ಕೇಳಿಕೆಯಂತೆ, ಅಪೇಕ್ಷೆಯಂತೆ) ಒದಗಿಸು. **Fíller** (ನಾ.) ತುಂಬುವವನು ; —ವದು ; ತುಂಬಲು ಉಪಯೋಗಿಸುವ ಸಾಧನ (Fountain-pen f.). **Fílling** ಫಿಲಿಂಗ್ (ನಾ.) ತುಂಬುವುದು. (ಬ. ವ. ದಲ್ಲಿ) ತುಂಬುವ ಪದಾರ್ಥ ; ಒಂದು ಡೊಗರನ್ನು, ಹಳ್ಳವನ್ನು, ತುಂಬುವ, ಕಂಡಿಯನ್ನು ಮುಚ್ಚುವ, ಕಟ್ಟೆಗೆ ಅಥವಾ ರಸ್ತೆಗೆ ಭರ್ತಿಯಾಗುವ, ಗೋಡೆಯ ಒಳಭಾಗವನ್ನು ಮುಚ್ಚುವ, —ಪದಾರ್ಥ : ತುಂಬು ; ಭರ್ತಿ ; ಪೂರಣ. ಅವಕಾಶ ವನ್ನು ತುಂಬುವುದಕ್ಕೆ ಉಪಯೋಗಿಸುವ ಯಾವುದಾದರೂ ಕೀಳ್ತರದ ಪದಾರ್ಥ.

Fill (ನಾ.) ಭರ್ತಿಯಾಗುವಷ್ಟು ; ತೃಪ್ತಿಯಾಗುವಷ್ಟು (ಆಹಾರ, ಪಾನ). (Drink, have, one's f. ಯಥೇಷ್ಟವಾಗಿ ಕುಡಿ, ತಣಿ ಯುಣ್ಣು). ಯಾವುದನ್ನಾದರೂ ತುಂಬಲು ಸಾಕಾಗುವಷ್ಟು ; ತುಂಬು ; ಭರ್ತಿ (A. f. of tobacco ತಂಬಾಕಿನ ಒಂದು ತುಂಬು)

Fílle (F) ಫೀಯ್ (ನಾ.) ಮಗಳು ; ಹುಡುಗಿ. F. de chambre ಪರಿಚಾರಿಕೆ. F. de joie ಹಾದರಗಿತ್ತಿ ; ವ್ಯಭಿಚಾರಿಣಿ.

Fíllet ಫಿಲೆಟ್ (ನಾ., ಕ್ರಿ. ಸಕ.) ತಲೆಗೂದಲನ್ನು ಕಟ್ಟುವುದಕ್ಕೆ ಉಪ ಯೋಗಿಸುವ, ತಲೆಯ ಸುತ್ತಲೂ ಧರಿಸುವ, —ಕಿರಿದಾದ ಪಟ್ಟಿ, ದಾರ, ಅಥವಾ ಅಲಂಕಾರ ಪಟ್ಟಿ : ಕೂದಲುಗಟ್ಟು ; ತಲೆಗಟ್ಟು ; ಸುತ್ತು ಪಟ್ಟಿ ; ಕಟ್ಟುಪಟ್ಟಿ ; (ಯಾವುದಾದರೂ ಪದಾರ್ಥದ) ತೆಳುವಾದ, ಕಿರಿ ದಾದ, ಪಟ್ಟಿ. (ಬ. ವ. ದಲ್ಲಿ) ಪ್ರಾಣಿಯ ಸೊಂಟದ ಭಾಗ, ಕಟಿ ಪ್ರದೇಶ. ಪ್ರಾಣಿಯ ಕಟಿ ಪ್ರದೇಶದ ಅಥವಾ ಪಕ್ಕೆಲುಬುಗಳ ಪ್ರಾಂತದ, ಪ್ರತ್ಯೇಕಿಸಬಹುದಾದ, ಮಾಂಸದ ತುಂಡು. (ಮೀನನ್ನು ಕತ್ತರಿಸಿ ಸುಲಭವಾಗಿ ತೆಗೆಯಬಹುದಾದ) ದಪ್ಪ ಹೋಳು. (ಎಲುಬು ತೆಗೆದು, ಸುರುಳಿ ಸುತ್ತಿ, ಕಟ್ಟಿ ತಯಾರಿಸಿದ) ಕೊಂದ ಕರುವಿನ ಕಾಲಿನ ಮಧ್ಯಭಾಗ ; ಇದೇ ರೀತಿಯಲ್ಲಿ ತಯಾರಿಸಿದ ದನ, ಮೀನು, ಮೊ. ಗಳ ಮಾಂಸ. (ವಾ. ಶಾ.) ಎರಡು ಗೋಲುಗಳ ನಡುವೆಯಿರುವ ಕಿರಿದಾದ, ಚಪ್ಪಟೆಯ ಪಟ್ಟೆ : ಗೋಲು ಪಟ್ಟೆ ; ಕಂಬದ ಅಲಂಕಾರದ ಗಾಡಿಗಳ ಮಧ್ಯೇ ಇರುವ ಸಣ್ಣ ಪಟ್ಟಿ. (ವಂಶ ಲಾಂಛನ) ಗುರಾಣಿಯ ಅಡ್ಡಸಾಲಿನ ಭಾಗಗಳು. ಎತ್ತಿದ ಏಣು. ಯಾವುದಾದರೂ ವಸ್ತು ವಿನಮೇಲೆ ಹಾಕಿರುವ ಉಬ್ಬುಪಟ್ಟಿ. (ಪುಸ್ತಕದ ರಟ್ಟುಕಟ್ಟು) ರಟ್ಟಿನ ಮೇಲೆ ಒತ್ತಿ ಮಾಡಿದ ಸಾದಾ ಗೆರೆ. (ಕ್ರಿ.) (ಕೂದಲನ್ನು) ಪಟ್ಟಿಯಿಂದ ಕಟ್ಟು ; ಅಲಂಕಾರ ಪಟ್ಟಿಯಿಂದ ಸುತ್ತುವರಿ. (ಮೀನನ್ನು) ಹೋಳು ಮಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Fíllip ಫ಼ಿಲಿಪ್ (ನಾ., ಕ್ರಿ.) ಮಿಡಿತ ; ಚಿಮ್ಮುವುದು (ಬಗ್ಗಿಸಿಟ್ಟ ಬೆರಳನ್ನು ಥಟ್ಟನೆ ಒದರುವುದು) ; ಬೆರಳಿನ ಸೂಕ್ಷ್ಮವಾದ ಥಟ್ಟನೆಯ ಹೊಡೆತ. ಪ್ರೋತ್ಸಾಹ ; ಪ್ರೇರಣೆ ; ಉತ್ತೇಜನ ; ಬೆಂಬಲ. ಕೇವಲ ಅಲ್ಪವಾದದ್ದು (Not worth a f. ಕವಡೆಗೆ ಕಡೆ). (ಕ್ರಿ.) (ನಾಣ್ಯ, ಗೋಲ, ಮೊ. ನ್ನು) ಥಟ್ಟನೆ ಮಿಡಿ, ಚಿಮ್ಮು. ಚುರುಕು ಮಾಡು ; ಪ್ರೇರಿಸು ; ಪ್ರೋತ್ಸಾಹಿಸು (F. one's memory or wits ಜ್ಞಾಪಕ ಶಕ್ತಿಯನ್ನು, ಬುದ್ಧಿಶಕ್ತಿಯನ್ನು, ಚುರುಕು ಮಾಡು). ಸೂಕ್ಷ್ಮವಾಗಿ ಥಟ್ಟನೆ ಹೊಡೆ ; ಚಿಟಿಕೆ ಹಾಕು.

Fíllister ಫ಼ಿಲಿಸ್ಟರ್ (ನಾ.) ಕಿಟಕಿಯ ಚೌಕಟ್ಟು, ಮೊ. ಗಳಲ್ಲಿ ಕನ್ನಡಿ ಹಲಗೆ, ಮೊ. ಗಳಿಗಾಗಿ ಗಾಡಿಮಾಡುವ ಹತ್ತರಿ. ಕನ್ನಡಿಹಲಗೆಯನ್ನೂ ಮೆತ್ತಡವನ್ನೂ ಒಳಕೊಳ್ಳುವ ಗಾಡಿ.

Fílly ಫ಼ಿಲಿ (ನಾ.) ಹೆಣ್ಣು ಕುದುರೆಮರಿ. ಚಟುವಟಿಕೆಯಾದ ಹುಡುಗಿ.

Film ಫ಼ಿಲ್ಮ್ (ನಾ., ಕ್ರಿ.) ತೆಳುವಾದ ಚರ್ಮ, ಸಿಪ್ಪೆ, ತಗಡು, ಲೇಪ, ಪೊರೆ. (ಛಾಯಾ ಚಿತ್ರ) ಛಾಯಾ ಚಿತ್ರಕಾಗದದ ಅಥವಾ ಹಲಗೆಯ ಮೇಲೆ ಬಳಿದ 'ಕಲೋಡಿಯನ್,' 'ಜೆಲಟಿನ್,' ಮೊ. ಪದಾರ್ಥಗಳ ಪೊರೆ, ಅಥವಾ ಹಲಗೆಗೆ ಬದಲಾಗಿ ಈ ಕಾರ್ಯಕ್ಕೆ ಉಪಯೋಗಿಸುವ ಕಲೋಡಿಯನ್, ಜೆಲಟಿನ್, ಮೊ. ಗಳ ಪೊರೆ ; ಪಟಲ. ಚಲಚ್ಚಿತ್ರ ತೆಗೆಯುವುದಕ್ಕಾಗಿ ಉಪಯೋಗಿಸುವ 'ಸೆಲ್ಯುಲಾಯ್ಡ್'ನ ಸುರುಳಿ ; ಚಲಚ್ಚಿತ್ರ ಪಟಲ ; ಪ್ರದರ್ಶನ ಮಾಡಿದ ಚಲಚ್ಚಿತ್ರ. (ಬ. ವ. ದಲ್ಲಿ) ಚಲಚ್ಚಿತ್ರ ; ಸಿನಿಮ [**F.-fan** ಸಿನಿಮಾಸಕ್ತ. **F. star** ಪ್ರಸಿದ್ಧ ಸಿನಿಮಾ ನಟ, ನಟಿ ; ಸಿನಿಮಾ ತಾರೆ. The films ಚಲಚ್ಚಿತ್ರ ಪ್ರದರ್ಶನ. **F.-pack** ಛಾಯಾಚಿತ್ರ ಪಟಲ ಸಂಪುಟ (ಸಾ., ಹನ್ನೆರಡು ಉಳ್ಳದ್ದು). **F.-test** (ಚಲಚ್ಚಿತ್ರ ನಟನಾಗುವ ಸಂಭವವುಳ್ಳವನ) ಛಾಯಾಚಿತ್ರ ಪರೀಕ್ಷೆ]. ಕಣ್ಣಮೇಲೆ ಕವಿದುಕೊಳ್ಳುವ ಮಂಜು : ಕಣ್ಣುಮಂಜು ; ಮಸುಕು. ಸೂಕ್ಷ್ಮ ದಾರ, ತಂತು. (ಕ್ರಿ.) ಪೊರೆ ಕಟ್ಟು ; ಪೊರೆ(ಯಂತೆ) ಕವಿ, ಕವಿಸು. ಚಲಚ್ಚಿತ್ರಕ್ಕಾಗಿ (ದೃಶ್ಯ, ಮೊ. ನ್ನು) ಛಾಯಾ ಗ್ರಹಣ ಮಾಡು ; ಚಲಚ್ಚಿತ್ರ ತೆಗೆ, ತಯಾರಿಸು. F. well ಚಲಚ್ಚಿತ್ರಕ್ಕೆ ಅನುಕೂಲವಾಗಿರು. **Fílmy** (ಗು.) ; **Fílmily** (ಕ್ರಿ. ವಿ.) ; **Fílminess** (ನಾ.)

Filóse ಫ಼ೈಲೋಸ್ (ಗು.) (ಸ. ವಿ., ಪ್ರಾ. ವಿ.) ದಾರದಂತಿರುವ ಕೊನೆಯುಳ್ಳ.

Filoselle ಫ಼ಿಲೊಸೆಲ್ (ನಾ.) ರೇಷ್ಮೆಗೂಡಿನ ಮೇಲ್ಭಾಗದಲ್ಲಿರುವ ಒರಟು ರೇಷ್ಮೆ.

Fils (F) ಫ಼ೀಸ್ (ನಾ.) ಮಗ ; ಚಿಕ್ಕವ (ತಂದೆ ಮಕ್ಕಳ ಹೆಸರು ಒಂದೇ ಆಗಿರುವಾಗ ಅವರಿಬ್ಬರಿಗೂ ವ್ಯತ್ಯಾಸ ತೋರಿಸುವುದಕ್ಕಾಗಿ ಮಗನ ಹೆಸರ ಮುಂದೆ ಸೇರಿಸುವ ಮಾತು)

Fílter ಫ಼ಿಲ್ಟರ್ (ನಾ., ಕ್ರಿ.) (ಮು., ಮರಳು, ಇದ್ದಲು, ಮೊ. ಗಳ ಪದರದ ಮೂಲಕ ದ್ರವವನ್ನು ಹರಿಸಿ) ದ್ರವದಲ್ಲಿ ತೇಲಾಡುತ್ತಿರುವ ಕಲುಷ ಪದಾರ್ಥವನ್ನು ಆ ದ್ರವದಿಂದ ಬೇರ್ಪಡಿಸುವ ಸಾಧನ ; (ದ್ರವ) ಸೋಸುವ ಸಲಕರಣೆ ; (ದ್ರವ) ಶೋಧಕ [**F.-bed** (ಹೆಚ್ಚು ಮೊತ್ತದ ದ್ರವವನ್ನು ಶೋಧಿಸುವುದಕ್ಕಾಗಿ) ಮರಳು, ಮೊ. ಪದಾರ್ಥಗಳನ್ನು ದಪ್ಪವಾಗಿ ಹರಡಿರುವ, ಕಳಚಲಾಗುವ ತಳವುಳ್ಳ, ದೊಡ್ಡ ತೊಟ್ಟಿ, ಕೊಳ : ಸೋಸು ಕೊಳ. **F.-paper** ಸೋಸು ಕಾಗದ. **F.-press** ಒತ್ತಡದಿಂದ ದ್ರವವನ್ನು ಹಾಯಿಸುವ ಸೋಸು ಯಂತ್ರ : ಒತ್ತಡದ ಸೋಸು ಯಂತ್ರ. ಮಾನಿನಿಂದ ಎಣ್ಣೆ ತೆಗೆಯುವ ಯಂತ್ರ]. (ಕ್ರಿ.) (ದ್ರವವನ್ನು) ಶೋಧಕದ ಮೂಲಕ ಹರಿಸು ; (ದ್ರವ) ಶೋಧಕದ ಮೂಲಕ ಹರಿ. (ಶೋಧಕದ ವಿಷಯದಲ್ಲಿ, ದ್ರವವನ್ನು) ಶೋಧಿಸು, ಸೋಸು. — ಮೂಲಕ, ಒಳಕ್ಕೆ, —ಹರಿ, ಜಿನುಗು, ಒಸರು. (ಸಮಾಚಾರ, ಮೊ. ಗಳ ವಿಷಯದಲ್ಲಿ) ಹೊರಬೀಳು, ಹೊರಬರು, ಹಾದು ಬರು. **Fíltrate** ಫ಼ಿಲ್ಟ್ರೇಟ್ (ನಾ., ಕ್ರಿ.) ಸೋಸಿ ಬಂದ ದ್ರವ ; ಸೋಸು ; ಶೋಧಿಸು. **Filtrátion** (ನಾ.) ಸೋಸುವುದು.

Filth ಫ಼ಿಲ್ತ್ (ನಾ.) ಕೊಳೆ ; ಕೊಳಕು ; ಹೊಲಸು ; ರೊಚ್ಚು ; ಹೇಸಿಕೆ ; ಕಶ್ಮಲ ; ಮಲ ; ಅಮೇಧ್ಯ ; ಅಸಹ್ಯವಾದ ಆಹಾರ ; ಹೊಲಸು ತಿಂಡಿ ; ಕೊಳೆತು ನಾರುವ ಜೈವಾವಶೇಷ. ಮಾಲಿನ್ಯ ; ಕಲ್ಮಷ. ಧಂಡತನ ; ದುರ್ಭಾಷೆ ; ಹೊಲಸು ಮಾತು ; ಅಶ್ಲೀಲತೆ. **Fílthy** (ಗು.) [F. lucre ಭಂಡ, ಅನ್ಯಾಯ, ಕೊಳಕು, — ಸಂಪಾದನೆ ; (ಹಾಸ್ಯವಾಗಿ) ಹಣ]. **Fílthily** (ಕ್ರಿ. ವಿ.) ; **Fílthiness** (ನಾ.)

Fímbriate(d) ಫಿಂಬ್ರಿಯೇಟ್(ಟೆಡ್) (ಗು.) (ಸ. ವಿ., ಪ್ರಾ. ವಿ.) (ಕೂದಲು, ಮೊ. ಗಳಿಂದ) ಅಂಚುಗಟ್ಟಿದ, ಕರೆಗಟ್ಟಿದ. (ವಂಶ ಲಾಂಛನ : -ted) ಒಂದು ಗೊತ್ತಾದ ಬಣ್ಣದ ಕಿರಿಯಗಲದ ಅಂಚುಳ್ಳ.

Fin ಫ಼ಿನ್ (ನಾ.) (ಮೀನುಗಳೂ ಈ ಜಾತಿಯ ಇತರ ಜಲಪ್ರಾಣಿಗಳೂ ಈಜುವುದಕ್ಕೂ ದಿಕ್ಕು ದಿಕ್ಕಿಗೆ ತಿರುಗುವುದಕ್ಕೂ ಅನುಕೂಲಿಸುವಂತೆ ಅವುಗಳ ದೇಹದ ನಾನಾ ಭಾಗಗಳಲ್ಲಿರುವ) ಈಜುರೆಕ್ಕೆ [Anal ಗುದ ದ್ವಾರದ, Caudal ಬಾಲದ, Dorsal ಬೆನ್ನಿನ, Pectoral ಎದೆಯ, Ventral ಹೊಟ್ಟೆಯ (f. ಈಜುರೆಕ್ಕೆ)]. (ಅಸಂ.) ಕೈ ; ತೋಳು ; ಹಸ್ತ (Tip us your f. ಕೈ ಕುಲುಕು). (-) **finned** (ಗು.) ; **Fínless** (ಗು.) ; **Fínny** ಫ಼ಿನಿ (ಗು.) ಈಜುರೆಕ್ಕೆಗಳುಳ್ಳ ; ಈಜುರೆಕ್ಕೆಯ ; ಈಜುರೆಕ್ಕೆಯಂಥ.

Fínal ಫ಼ೈನಲ್ (ಗು., ನಾ.) ಕಡೆಯ ; ಕೊನೆಯ ; ತುದಿಯ ; ಕಟ್ಟಕಡೆಯ ; ಅಂತ್ಯದ ; ಅಂತಿಮ ; ಆಖೈರು. ಸಂದೇಹ ನಿವಾರಕ ; ತೀರ್ಮಾನಿಸುವ ; ನಿರ್ಧಾರಕ ; ಬದಲಾಯಿಸದ ; ಉದ್ದೇಶ ಸಾಧಕವಾದ [F. cause (Cause ನೋಡಿ). F. clause (ವ್ಯಾ.) ಉದ್ದೇಶ ಸೂಚಕ ಉಪವಾಕ್ಯ (In order that, lest, ಮೊ. ಗಳಿಂದ ಆರಂಭವಾಗುವದು)]. (ನಾ.) (ಪೇರಾ ಪಂದ್ಯಗಳಲ್ಲಿ) ಕೊನೆಯ ಅಥವಾ ತೀರ್ಮಾನದ ಆಟ. (ಏ. ವ., ಅಥವಾ ಬ. ವ.) ಪರೀಕ್ಷಾ ಶ್ರೇಣಿಯಲ್ಲಿ ಕೊನೆಯದು : ಕೊನೆಯ ಪರೀಕ್ಷೆ. (ಬಳ. ಮಾ.) ದಿನಾಂತದಲ್ಲಿ ಪ್ರಕಟಿಸಿದ ವೃತ್ತಪತ್ರಿಕೆಯ ಮುದ್ರಣ : ಕಡೆಯ ಮುದ್ರಣ. **Fínalist** (ನಾ.) ಕಟ್ಟಕಡೆಯ ಪಂದ್ಯಕ್ಕೆ ಉಳಿದ ಸ್ಪರ್ಧೆಗಾರ ; ಕಟ್ಟಕಡೆಯ ಸ್ಪರ್ಧಿ. **Finálity** ಫ಼ೈನ್ಯಾಲಿಟಿ (ನಾ.) ಅಂತ್ಯ ; ಕೊನೆ ; (ಅದೇ) ಕೊನೆಯೆಂಬ ನಂಬಿಕೆ ; ಕೊನೆಯ ಕಾರ್ಯ, ಸ್ಥಿತಿ, ಮಾತು ; ತೀರ್ಮಾನ. (ಪ್ರಪಂಚದಲ್ಲಿ ಕರ್ಮಕಾರಿಯೆಂದು ಪರಿಗಣಿಸುವ) ಪ್ರಯೋಜನ ಕಾರಣ ತತ್ತ್ವ. **Fínally** (ಕ್ರಿ. ವಿ.) ; **Finále** ಫ಼ಿನಾಲೇ(ಲಿ) (It.) (ಸಂ.) (ವಾದ್ಯದ) ಸಂಗೀತ ರಚನೆಯ ಅಂತ್ಯಗತಿ. ಅಂಕದ ಕೊನೆಯ ಗೀತ, ಹಾಡು ; ಮುಕ್ತಾಯ ಗೀತ. (ನಾಟಕ, ಮೊ. ಗಳ) ಅಂತ್ಯ, ಮುಕ್ತಾಯ, ಸಮಾಪ್ತಿ. ನಾಟಕದ ನಿರ್ವಹಣ ಸಂಧಿ. ಮುಡಿವು ; ಅಂತ.

Finánce ಫಿ(ಫೈ)ನ್ಯಾನ್ಸ್ (ನಾ., ಕ್ರಿ.) (ಬ. ವ. ದಲ್ಲಿ) (ರಾಜನ, ರಾಜ್ಯದ, ಒಂದು ಸಂಘದ ಅಥವಾ ಒಬ್ಬ ಮನುಷ್ಯನ, ದ್ರವ್ಯರೂಪದ) ವರಮಾನ, ಆಯ ; ಹಣಕಾಸು ; (ಮು., ಸಾರ್ವಜನಿಕ) ಹಣಕಾಸಿನ ಆಡಳಿತ. ಆಯವ್ಯಯ ಶಾಸ್ತ್ರ. (ಕ್ರಿ.) ಹಣಕಾಸು ಒದಗಿಸು ; ಬಂಡವಾಳ ಒದಗಿಸು ; (ಬೇಕಾಗುವ) ದ್ರವ್ಯ ಒದಗಿಸು ; ಹಣಕಾಸಿನ ಆಡಳಿತ ನಡಸು. **Fináncial** ಫಿನ್ಯಾನ್ಷಲ್ (ಗು.) ವರಮಾನದ ; ಹಣಕಾಸಿನ ವಿಚಾರದ (F. year ಹಣಕಾಸಿನ ಲೆಕ್ಕಾಚಾರದ ವರ್ಷ). **Fináncially** (ಕ್ರಿ. ವಿ.) ಹಣಕಾಸಿನ ದೃಷ್ಟಿಯಿಂದ. **Fináncier** ಫಿ(ಫೈ)ನ್ಯಾನ್ಸಿಯರ್ (ನಾ.) ಸಾರ್ವಜನಿಕ ಹಣದ ಆಡಳಿತದಲ್ಲಿ ದಕ್ಷನಾದವನು ; ಬಂಡವಾಳಗಾರ ; ಧನ ವಿಚಕ್ಷಣ. **Financiér** ಫಿ— (ಕ್ರಿ.) ಹಣಕಾಸಿನ ಆಡಳಿತ ನಡಸು ; ದ್ರವ್ಯ ನಿರ್ವಾಹ ಕಾರ್ಯ ನಡಸು (ಸಾ., ತುಚ್ಛವಾಗಿ). ಹಣಕಾಸು ಒದಗಿಸು. (ಅಮೆ. ಸಂ.) ಮೋಸ ಮಾಡು ; ವಂಚಿಸು ; ಹಣ ಕಸಿದುಕೊ ; ದಗಾ ಹಾಕು (F. money away, F. one out of ಮೋಸದಿಂದ ಹಣ ಕಸಿದುಕೊ, ಸೆಳೆದುಕೊ ; ವಂಚಿಸು)

Finch ಫ಼ಿನ್ಚ್ (ನಾ.) ಒಂದು ಜಾತಿಯ ಪಕ್ಷಿ (ಸಾ., ವಿಶೇಷ್ಯ ಪದದೊಡನೆ : Bull- f., Mountain f.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Find ಫೈಂಡ್ (ಕ್ರಿ. ಸಕ. ; ಭೂತ., ಭೂ. ಕೃ. Found ಫೌಂಡ್) ಕಾಣು ; ಕಂಡುಕೊ ; ಗೋಚರವಾಗು ; ತಿಳಿ ; ಅರಿ. ಸಂಧಿಸು ; ಸಿಕ್ಕು ; ದೊರೆ ; ಕಂಡುಹಿಡಿ ; ಪತ್ತೆಮಾಡು ; ನಿರ್ಣಯಿಸು (Was found dead ಸತ್ತಿದ್ದದ್ದು ಕಂಡುಬಂದಿತು. Administer the law as you f. it ಕಾನೂನು ಹೇಗಿದೆಯೊ ಹಾಗೆ ಅದನ್ನು ಬಳಸು, ಅನ್ವಯಿಸು. He has been found wanting ಅವನಿಗೆ ಯೋಗ್ಯತೆ ಸಾಲದೆಂದು ಕಂಡುಬಂದಿತು. He finds rest agreeable ಅವನಿಗೆ ವಿಶ್ರಾಂತಿ ಹಿತಕರವಾಗಿದೆ. It is found to pay ; I f. it pays, pay, to pay, that it pays ಅದು ಲಾಭಕರವೆಂದು ಗೊತ್ತಾಗಿದೆ. F. oneself ತನ್ನ ಸಾಮರ್ಥ್ಯವೇನೆಂಬುದನ್ನು, ಯೋಗ್ಯತೆಯನ್ನು, ಕಂಡುಕೊ. ತನ್ನ ಅನುಕೂಲಕ್ಕೆ ಬೇಕಾದುದನ್ನು ಹವಣಿಸಿಕೊ. F. expression, place, vent ಮಾತು, ಅವಕಾಶ, ಮಾರ್ಗ, ದೊರೆ). ಪಡೆ ; ಹೊಂದು ; ಸಂಪಾದಿಸು (F. favour, mercy ಅನುಗ್ರಹ, ದಯೆ —ಪಡೆ, ಸಂಪಾದಿಸು. F. one's account in —ಇಂದ ಆದಾಯ ಪಡೆ, ಲಾಭ ಹೊಂದು. F. one's feet ಕಾಲನ್ನು ಉಪಯೋಗಿಸಲು ಬರು ; ಅಡಿಯಿಡು. ತನ್ನ ಶಕ್ತಿಯನ್ನು ತಿಳಿದುಕೊ ; ಅಭಿವೃದ್ಧಿಗೊಳಿಸಿಕೊ). ಒದಗಿಸು ; ಹವಣಿಸು [They found him in clothes ಅವರು ಅವನಿಗೆ ಉಡುಪು ಒದಗಿಸಿದರು. Hotel does not f. tea ತಿಂಡಿಯಂಗಡಿಯಲ್ಲಿ ಟೀ ದೊರೆಯುವುದಿಲ್ಲ. All found (ಆಳುಗಳ ಸಂಬಳದ ವಿಷಯದಲ್ಲಿ) ಆವಶ್ಯಕವಾದವುಗಳನ್ನೆಲ್ಲ ಒದಗಿಸಿ ಕೊಟ್ಟು]. (ನ್ಯಾ. ಶಾ.) (ವಿಮರ್ಶಿಸಿ) ತೀರ್ಪು ಹೇಳು, ನಿರ್ಣಯ ಕೊಡು. [How do you f. yourself? ನೀನು ಹೇಗಿದ್ದೀಯೆ? You must take us as you f. us ನಾವು ಇದ್ದಂತೆ ನಮ್ಮನ್ನು ತೆಗೆದುಕೊಳ್ಳಬೇಕು. Found courage to —ಕ್ಕೆ ಧೈರ್ಯ ಬಂದಿತು. Could f. it in my heart to —ಮನಸ್ಸು ಬರು ; ಮನಸ್ಸಿರು. F. one's way to ಪ್ರಯಾಸಪಟ್ಟು, ಹಾಗೂ ಹೀಗೂ, ಬಂದು ಮುಟ್ಟು, ಸೇರು, ತಲಪು. F. out ಕಂಡುಹಿಡಿ ; ಕಲ್ಪನೆ ಮಾಡು ; ಕಲ್ಪಿಸು. (ಅಪರಾಧಕೃತ್ಯ ಮಾಡುತ್ತಿರುವಾಗ) ಕಂಡುಹಿಡಿ]. **Fíndable** (ಗು.) ; **Fínder** (ನಾ.) (ಕ್ರಿಯಾರ್ಥಗಳಲ್ಲಿ). (ನೋಡಬೇಕಾದ ವಸ್ತುವನ್ನು ಮೊದಲು ಸುಲಭವಾಗಿ ಗುರುತಿಸಲು ದೊಡ್ಡ ದೂರದರ್ಶಕಕ್ಕೆ ಬಂಧಿಸಿರುವ) ಸಣ್ಣ ದೂರದರ್ಶಕ : ಅನ್ವೇಷಕ (ಸೂಕ್ಷ್ಮದರ್ಶಕದಲ್ಲೂ ಛಾಯಾಚಿತ್ರಗ್ರಾಹಕದಲ್ಲೂ ಇದೇ ತೆರದ ಅನ್ವೇಷಕ). **Fínding** (ನಾ.) ಕಾಣುವುದು ; ಕಂಡುಹಿಡಿಯುವುದು ; ಕಂಡುಹಿಡಿದದ್ದು. ಘೋಷಣೆ. ನ್ಯಾಯವಿಚಾರಣೆಯ ಫಲ ; ಋಜುವಾತಾದದ್ದು ; (ಪಂಚಾಯಿತರ, ನ್ಯಾಯದರ್ಶಿಗಳ) ತೀರ್ಪು.

Find (ನಾ.) (ನರಿಯನ್ನು) ಪತ್ತೆಮಾಡುವುದು. (ನಿಧಿ, ಖನಿಜಗಳು, ಮೊ. ನ್ನು) ಕಂಡುಹಿಡಿಯುವುದು ; ಕಂಡುಹಿಡಿದದ್ದು ; ನಿಧಿ. Sure f. ಗೊತ್ತಾದ ಯಾವುದಾದರೂ ಒಂದು ವಸ್ತು (ಮು., ನರಿ) ಖಂಡಿತವಾಗಿ ದೊರೆಯುವ ಸ್ಥಳ : ಗೊತ್ತು.

Fin de Siécle (F) ಫ್ಯಾನ್ ಡ ಸ್ಯೇಕ್‌ರ್ (ಗು.) ಹತ್ತೊಂಬತ್ತನೆಯ ಶತಮಾನದ ಅಂತ್ಯಕಾಲ ವೈಲಕ್ಷಣ್ಯದ. ಮುಂದುವರಿದ ; ಆಧುನಿಕ. ಇಳಿಗಾಲದ ; ಅವನತಿಯ.

Fine[1] ಫೈನ್ (ನಾ., ಕ್ರಿ.) ಕೊನೆ ; ಕಡೆ ; ಅಂತ್ಯ [ಈಗ, In f. (ಕೊನೆಯಲ್ಲಿ, ಕಡೆಯ ಮಾತಾಗಿ, ಸಂಕ್ಷೇಪವಾಗಿ, ಒಟ್ಟಿನಲ್ಲಿ) ಎಂಬಲ್ಲಿ ಮಾತ್ರ]. (ಉಳಿಗಮಾನ್ಯದ ನ್ಯಾಯ) (ಹಿಡುವಳಿಯ ಹಕ್ಕು, ಮೊ. ನ್ನು ತನಗೆ ವಹಿಸಿದಾಗ ಹಿಡುವಳಿದಾರನು ಅಥವಾ ಉಳಿಗದಾರನು ಆ ಕ್ಷೇತ್ರದ ಯಜಮಾನನಿಗೆ ಕೊಡುವ) ರುಸುಮು (ಕಂದಾಯವಲ್ಲ). (ಆಧುನಿಕ ನ್ಯಾ. ಶಾ.) (ತನ್ನ ಕಂದಾಯದ ಮೊಬಲಗು ಕಡಮೆಯಾಗಿಯೊ, ಹೆಸರಿಗೆ ಮಾತ್ರವೊ ಇರುವುದಕ್ಕಾಗಿ ಹಿಡುವಳಿದಾರನು ತನ್ನ ಹಿಡುವಳಿ ಆರಂಭವಾದಾಗ) ಕ್ಷೇತ್ರದ ಯಜಮಾನನಿಗೆ ಕೊಡುವ ಹಣ. (ತಪ್ಪು ಅಥವಾ ಅಪರಾಧ ಮಾಡಿದುದಕ್ಕಾಗಿ) ದಂಡವಾಗಿ ವಿಧಿಸಿದ ಮೊತ್ತ : ದಂಡ ; ಜುಲ್ಮಾನೆ. (ಕ್ರಿ.) (ವಿಶೇಷಾನುಕೂಲತೆಗಾಗಿ ಅಥವಾ ಅಧಿಕಾರ ಸಂಪಾದನೆಗಾಗಿ) ರುಸುಮು ಕೊಡು ; ದಂಡ, ಪರಿಹಾರ, ಕೊಡು. ಜುಲ್ಮಾನೆ ಹಾಕು ; ದಂಡ ಹೊರಿಸು. **Fínable** (ಗು.)

Fine[2] ಫೈನ್ (ಗು., ನಾ., ಕ್ರಿ. ವಿ., ಕ್ರಿ.) ಉತ್ತಮ ತೆರದ, ಗುಣದ ; ಮೇಲಾದ ; ಶ್ರೇಷ್ಠ ; ಉತ್ಕೃಷ್ಟ. ನಿರ್ಮಲ ; ಸ್ವಚ್ಛ ; ಶುಭ್ರ ; ಶುದ್ಧ ; ಅಪ್ಪಟ ; ಶುದ್ಧ ಮಾಡಿದ ; ಸಂಸ್ಕರಿಸಿದ ; (ಚಿನ್ನ ಅಥವಾ ಬೆಳ್ಳಿಯ ವಿಷಯದಲ್ಲಿ) ಚೊಕ್ಕ ; ಒಂದು ನಿರ್ದಿಷ್ಟ ಪ್ರಮಾಣದ ಶುದ್ಧ ಲೋಹವುಳ್ಳ (Gold 22 carats f. ಇಪ್ಪತ್ತನಾಲ್ಕು ಭಾಗದಲ್ಲಿ ಇಪ್ಪತ್ತೆರಡು ಭಾಗ ಶುದ್ಧ, ಚೊಕ್ಕ, ಬಂಗಾರ ಅಥವಾ ಅಪರಂಜಿ ಉಳ್ಳ. Silver 11 oz. f. ಪೌಂಡಿನಲ್ಲಿ ೧೧ ಔನ್ಸು ಶುದ್ಧಲೋಹವಿರುವ ಬೆಳ್ಳಿ). ಸೂಕ್ಷ್ಮವಾದ ; ನಯವಾದ ; ಕೋಮಲವಾದ ; ಸೊಗಸಾದ ; ಚೆನ್ನಾದ ; ನಾಜೂಕಾದ. (ಭಾವಗಳು) ಉಚ್ಚ ; ಉನ್ನತ. ನವಿರಾದ ಎಳೆಯ. ಸೂಕ್ಷ್ಮಕಣಗಳಿಂದ ಕೂಡಿದ. ತೆಳುವಾದ ; ನವಿರಾದ ; ನುಣ್ಣಾದ [F. pencil (ಸೂಕ್ಷ್ಮಗೆರೆಗಳನ್ನು ಹಾಕಲು ಅನುಕೂಲಿಸುವಂತೆ, ಮೆತುವಲ್ಲದ ಬರೆಯುವ ಸೀಸದಿಂದ ಮಾಡಿದ) ನವಿರುಗೆರೆಯ ಸೀಸದಕಡ್ಡಿ]. ಚೂಪಾದ ; ಮೊನಚಾದ (F. pen ಚೂಪು ಮೊನೆಯ ಲೇಖನಿ). (ವ್ಯಾಯಾಮ) ಬೊಜ್ಜು ಕರಗಿ ಉತ್ತಮ ಸ್ಥಿತಿಗೆ ಬಂದ ; ಅಂಗ ಸೌಷ್ಠವವುಳ್ಳ. ಸೂಕ್ಷ್ಮಗ್ರಹಣ ಶಕ್ತಿಯುಳ್ಳ ; ಸೂಕ್ಷ್ಮ ವಿವೇಚನಾ ಶಕ್ತಿಯುಳ್ಳ. ಸುಲಭವಾಗಿ ಕಾಣಿಸದ, ಗೋಚರವಾಗದ (A f. distinction ಬಹು ಸೂಕ್ಷ್ಮ ವ್ಯತ್ಯಾಸ). ಅತ್ಯುತ್ತಮವಾದ ; ವಿಶೇಷ ಯೋಗ್ಯತೆಯುಳ್ಳ ; ಒಳ್ಳೆಯ ; ತೃಪ್ತಿಕರವಾದ (Had f. sport ಒಳ್ಳೆಯ ಬೇಟೆ ದೊರೆಯಿತು). [(ಅನೇಕ ವೇಳೆ ವ್ಯಂಗ್ಯವಾಗಿ) A. f. friend you have been! ಒಳ್ಳೆ ಗೆಳೆಯನಯ್ಯಾ !]. (ನೋಡುವುದಕ್ಕೆ) ಅಂದವಾದ ; ಸುಂದರ ; ಗಂಭೀರ ; ಪ್ರಸನ್ನ ; ಒಳ್ಳೆಯ ಆಕಾರದ (F. potatoes ಸೊಗಸಾದ ಉರುಳುಗೆಡ್ಡೆ. A man of f. presence ಗಂಭೀರಾಕಾರವುಳ್ಳ ಮನುಷ್ಯ). ಶುಭ್ರವಾದ ; ಮೋಡವಿಲ್ಲದ ; ಮಳೆಯಿಲ್ಲದ [F. weather ಹಿತವಾದ ವಾಯುಸ್ಥಿತಿ. One f. day ಒಂದಾನೊಂದು ಕಾಲದಲ್ಲಿ. One of these f. days ಎಂದೋ ಒಂದು ದಿನ (ಕಾಲಜ್ಞಾನ ವಚನಗಳಲ್ಲಿ)]. ಅಲಂಕಾರವಾದ ; ನೀಟಾದ ; ಠೀಕಾದ [F. feathers ಸೊಗಸಾದ ಗರಿಗಳು (ರೂಪ. ಸಹ) : F. feathers make f. birds (ವ್ಯಂಗ್ಯವಾಗಿ) ರೆಕ್ಕೆ ಚೆನ್ನಾಗಿದ್ದರೆ ಸರಿ, ಹಕ್ಕಿ ಚೆನ್ನ ("ತೋಟ ಶೃಂಗಾರ, ಒಳಗೆ ಗೋಣಿ ಸೊಪ್ಪು" ಎಂಬಂತೆ)]. ಮೆಚ್ಚಿಸಲು ಕಷ್ಟವಾದ ; ಅತಿ ನಾಜೂಕಿನ ; ಸೊಗಸಿನ ; ಠೀಕಿನ. (ಭಾಷೆ, ಬರವಣಿಗೆ) ಅತಿ ಅಲಂಕಾರಿಕ. ಔಪಚಾರಿಕ ; ನಯ ನುಡಿಯ (Say f. things about a person ಒಬ್ಬನ ವಿಷಯದಲ್ಲಿ ಅಂದವಾದ ಮಾತುಗಳನ್ನಾಡು. Call things by f. names —ಅಂದವಾದ ಹೆಸರಿಟ್ಟು ಕರೆ). [F. arts (ಕಾವ್ಯ, ಸಂಗೀತ, ಮು., ಚಿತ್ರಕಲೆ, ಶಿಲ್ಪ, ವಾಸ್ತುಶಿಲ್ಪ, ಮೊ. ಮನಸ್ಸಿಗೆ ರಮಣೀಯತೆ ತೋರುವ) ಲಲಿತ ಕಲೆಗಳು. F.-draw (ಎರಡು ತುಂಡುಬಟ್ಟೆಗಳನ್ನು, ಹರಿದುಹೋಗಿರುವುದನ್ನು, ಉಡುಪನ್ನು) ಹೊಲಿಗೆ ಕಾಣದಂತೆ ಹೊಲಿ ; ನೀಟಾಗಿ ಹೊಲಿ. F.-drawn ಬಹಳ ಸೂಕ್ಷ್ಮವಾಗಿ (ತಂತಿ) ಎಳೆದ ; ಸೂಕ್ಷ್ಮವಾದ ; ಅತ್ಯಂತ ನವಿರಾದ. (ವ್ಯಾಯಾಮ) ಅಂಗಸಾಧನೆಯಿಂದ ತೂಕ ಕಡಮೆಯಾದ, ಬೊಜ್ಜು ಕರಗಿದ. F. gentleman, lady ನೀಟುಗಾರ ; ನೀಟುಗಾತಿ ; ಕೆಲಸಮಾಡುವುದು ಗೌರವಕ್ಕೆ ಕಡಮೆಯೆಂದು ಭಾವಿಸುವವನು(ಳು). F.-spun ಬಹಳ ಸೂಕ್ಷ್ಮವಾಗಿ ನೂತ ; ಸೂಕ್ಷ್ಮವಾದ ; ನವಿರಾದ ; ನಯವಾದ ; ಬಲವಿಲ್ಲದ. (ತತ್ತ್ವ, ವಾದ, ಮೊ. ಗಳಲ್ಲಿ) ಅತ್ಯಂತ ಚಾತುರ್ಯದಿಂದ ಕೂಡಿದ, ಅತಿ ಸೂಕ್ಷ್ಮವಾದ ; ಕಾರ್ಯಾತ್ಮಕವಲ್ಲದ]. (ನಾ.) ಪ್ರಸನ್ನ ವಾಯುಸ್ಥಿತಿ [In rain or f. ಮಳೆಯಲ್ಲಾಗಲಿ ತಿಳಿ(ಪ್ರಸನ್ನ ವಾಯುಸ್ಥಿತಿ)ಯಲ್ಲಾಗಲಿ]. (ಕ್ರಿ. ವಿ.) ಅಂದವಾಗಿ ; ಸೊಗಸಾಗಿ (Talk f. ಅಂದವಾಗಿ ಮಾತಾಡು). (ಕ್ರಿ.) ('ಬಿಯರ್' ಮದ್ಯವನ್ನು) ತಿಳಿ ಮಾಡು, ಸ್ವಚ್ಛ ಮಾಡು (ಅನೇಕ ವೇಳೆ *down* ಉಪ. ದೊಡನೆ). (ದ್ರವದ ವಿಷಯದಲ್ಲಿ) ತಿಳಿಯಾಗು. F. away, down, off ಹೆಚ್ಚುಸೂಕ್ಷ್ಮವಾಗಿ, ನವಿರಾಗಿ, ತೆಳುವಾಗಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಯವಾಗಿ, —ಮಾಡು, ಆಗು. ತುದಿಯ ಕಡೆಗೆ ಚೂಪಾಗುತ್ತ ಹೋಗು, — ಹೋಗುವಂತೆ ಮಾಡು ; ನಣ್ಣದು ಮಾಡು. **Finely** (ಕ್ರಿ. ವಿ.) ; **Fíneness** (ನಾ.) ; **Fínery**[1] ಫ್ಲೈನೆರಿ (ನಾ.) (ವಿರ. ಪ್ರ.) ನೀಟು ಗಾರಿಕೆ ; ಸೊಗಸುಗಾರಿಕೆ ; ಆಡಂಬರದ, ಅಲಂಕಾರದ, ಉಡಿಗೆ ತೊಡಿಗೆಗಳು. **Finish**[1] ಫ್ಲೈನಿಷ್ (ಗು.) ಉತ್ತಮ ತೆರದ, ಗುಣದ (F. carpentry)

Fine champagne (F) ಫೀನ್ ಷಾಂಪಾನ್ಯ್ (ನಾ.) ಬ್ರಾಂದಿ ಪಾನಕ.

Fínery[2] ಫ್ಲೈನೆರಿ (ನಾ.) ತಾಂಡವಾಳವನ್ನು ಮೆತುಕಬ್ಬಿಣವನ್ನಾಗಿ ಮಾಡುವ, ಅಥವಾ ಮುದ್ದೆಕಬ್ಬಿಣದಿಂದ ಉಕ್ಕನ್ನು ತಯಾರಿಸುವ, ಒಲೆ, ಕುಲುಮೆ.

Finésse ಫಿನೆಸ್ (ನಾ., ಕ್ರಿ.) ಸೂಕ್ಷ್ಮ ಹಸ್ತಕೌಶಲ ; ಕೈ ಚಳಕ. ಸೂಕ್ಷ್ಮ ವಿವೇಚನೆ. ಯುಕ್ತಿ ; ತಂತ್ರ ; ಉಪಾಯ. (ವ್ಹಿಸ್ಟ್ ಆಟ) ಭಾರಿ ಎಲೆಯನ್ನು ಉಳಿಸಿಕೊಂಡು ಕಡಮೆಯೆಲೆಯಿಂದ ಪಟ್ಟನ್ನು ತೆಗೆದು ಕೊಳ್ಳಬೇಕೆಂಬ ಪ್ರಯತ್ನ. (ಕ್ರಿ.) ತಂತ್ರ ನಡಸು ; ಯುಕ್ತಿ ಹೂಡು ; ಹಳ್ಳಕ್ಕೆ ಕೆಡವು (ರೂಪ) ; ಉಪಾಯದಿಂದ ಸಾಧಿಸು ; ಉಪಾಯ ಮಾಡು. (ವ್ಹಿಸ್ಟ್ ಆಟ) (ಮೇಲೆ ಹೇಳಿದ) ಉಪಾಯದ ಆಟವಾಡು.

Fínger ಫಿಂಗರ್ (ನಾ.) ಬೆರಳು ; ಬೆಟ್ಟು [Thumb ಹೆಬ್ಬೆಟ್ಟು ; ಅಂಗುಷ್ಠ. Index f. ತೋರುಬೆರಳು ; ತರ್ಜನಿ. Middle f. ನಡು ಬೆರಳು ; ಮಧ್ಯಮ. Ring f. ಉಂಗುರದ ಬೆರಳು ; ಅನಾಮಿಕ. Little f. ಕಿರು ಬೆರಳು ; ಕನಿಷ್ಠಿಕೆ. Fourth f. (ಕ್ರೈಸ್ತ ವಿವಾಹ ವಿಧಿಯಲ್ಲಿ) ಉಂಗುರದ ಬೆರಳು]. [Done by the f. of God ಭಗವತ್ಪ್ರೇರಣೆಯಿಂದಾದ. More wit in his little f. than in your whole body ಅವನ ಕಿರುಬೆರಳಿನಲ್ಲಿರುವ ಜಾಣತನ ನಿನ್ನ ಮೈಯೆಲ್ಲ ತೆಗೆದುಕೊಂಡರೂ ಇಲ್ಲ. Lay, put, a f. upon ಸೂಕ್ಷ್ಮವಾಗಿ ಮುಟ್ಟು. Lay, put, one's f. on ನೋವಾಗುವ ಸ್ಥಳವನ್ನು, ಕೇಡಿಗೆ ಕಾರಣವಾದುದನ್ನು, ಬೆರಳಿಟ್ಟು ತೋರಿಸು ; ಸರಿಯಾಗಿ, ನಿಷ್ಕೃಷ್ಟವಾಗಿ, ತೋರಿಸು. Look through one's fingers at ನೋಡದವನಂತೆ ನಟಿಸು. Stir a f. ಬೆರಳಲುಗಿಸು ; ಅತ್ಯಲ್ಪ ಪ್ರಯತ್ನವಾದರೂ ಮಾಡು. Turn or twist person round one's (little) finger ಪುಸಲಾಯಿಸು ; ಒಳ್ಳೆಯ ಮಾತಾಡು ; ಹೇಗೆಂದರೆ ಹಾಗೆ ಆಡಿಸು. My fingers itch ಕೈ ಕಡಿಯುತ್ತದೆ ; ಮಾಡಲು ತವಕಪಡುತ್ತಿದ್ದೇನೆ. His fingers are all thumbs ಕೈ ಪಳಗಿಲ್ಲದವನು ; ಮಡ್ಡಿ ಕೈ. With a wet f. ಸಲೀಸಾಗಿ ; ಸರಾಗವಾಗಿ. Burn one's fingers (Burn[2] ನೋಡಿ). Have a f. in the pie (ಸಾ., ತನಗೆ ಸಂಬಂಧವಿಲ್ಲದುದರಲ್ಲಿ) ಕೈ ಹಾಕು, ಭಾಗ ವಹಿಸು. Let slip through one's fingers ಹಿಡಿತ ತಪ್ಪು ; ಕೈ ಬಿಟ್ಟುಬಿಡು. Have at one's f.-tips, f.-ends ಕರತಲಾಮಲಕವಾಗಿರು ; ಚೆನ್ನಾಗಿ ತಿಳಿದಿರು ; ಪ್ರವೀಣನಾಗಿರು. To the f.-nails ಪೂರ್ತಿಯಾಗಿ ; ಸಂಪೂರ್ಣವಾಗಿ]. ಕೈಚೀಲದ ಬೆರಳ ಭಾಗ. ಬೆರಳಿನಂಥ ವಸ್ತು (ಮು., ಹಣ್ಣಿನಲ್ಲಿ, ಅನೇಕ ಯಂತ್ರಗಳಲ್ಲಿ, ಅಂತಹ ಭಾಗ). **F.-alphabet, -language** ಮೂಕರೊಡನೆ ಮಾತನಾಡಲು ಉಪಯೋಗಿಸುವ ಸಂಕೇತ ಚಿಹ್ನೆಗಳು ; ಬೆರಳು ಸನ್ನೆ. **F.-bowl, -glass** ತಿಂಡಿ ತಿಂದಮೇಲೆ ಬೆರಳುಗಳನ್ನು ತೊಳೆದುಕೊಳ್ಳುವ ಬೋಗುಣಿ, (ಗಾಜು) ಲೋಟ. **F.-fern** ಒಂದು ಬಗೆಯ ಜರೀ ಗಿಡ. **F.-fish** ನಕ್ಷತ್ರ ಮೀನು. **F.-plate** ಬೆರಳ ಗುರುತು ಹತ್ತದಂತೆ ಬಾಗಿಲಿಗೆ ಮಡಾಯಿಸಿರುವ ತಗಡು. **F.-post** (ರಸ್ತೆ ಕವಲೊಡೆಯುವ ಸ್ಥಳದಲ್ಲಿ ಯಾವ ರಸ್ತೆಯೆಂದು ಗುರುತು ತೋರಿಸುವ) ಕೈಗಂಬ, ಕೈಮರ. **F.-print** (ತಕ್ಸೀರುದಾರರು, ಮೊ. ನ್ನು ಗುರುತಿಸುವುದಕ್ಕಾಗಿ ತೆಗೆದುಕೊಳ್ಳುವ ಅವರ) ಬೆರಳೊತ್ತು. **F.-stall** [ಬೆರಳು ಗಾಯವಾದಾಗ ಅಥವಾ (ವೈದ್ಯಕರ್ಮದಲ್ಲಿ) ಅಂಗ ವಿಚ್ಛೇದನ ಮಾಡುವಾಗ ಬೆರಳಿಗೆ ಅಪಾಯ ತಾಕದಂತೆ ಉಪಯೋಗಿಸುವ ತೊಗಲಿನ ಅಥವಾ ರಬ್ಬರಿನ] ಬೆರಳು ಗವುಸು. **Fíngerless** (ಗು.) ; (-)**fíngered** (ಗು.) (—)ಬೆರಳುಗಳುಳ್ಳ [Light -f. ಕೈಚಳಕವುಳ್ಳ (ಎಂದರೆ, ಐಬು ಕೊಡದಂತೆ ಕದಿಯುವ)]. (ಸ. ವಿ.) (ಎಲೆ ಅಥವಾ ಗಿಡ) ಬೆರಳಿನಾಕಾರದ ಭಾಗಗಳುಳ್ಳ ; (ಕಾಯಿ ಅಥವಾ ಬೇರು) ಬೆರಳಿನಾಕಾರವುಳ್ಳ.

Fínger (ಕ್ರಿ. ಸಕ.) ಬೆರಳುಗಳಿಂದ ಮುಟ್ಟು, ಹಿಡಿದುಕೊ, ತಿರುಗಿಸು, ಆಡಿಸು ; ಸುಟ್ಟಿ ತೋರಿಸು. (ಲಂಚ, ಮೊ. ನ್ನು) ತೆಗೆದುಕೊ ; ಲಂಚಕ್ಕೆ ಕೈಯೊಡ್ಡು ; ಕದಿ. ಬೆರಳುಗಳಿಂದ (ವಾದ್ಯವನ್ನು) ನುಡಿಸು, ಬಾಜಿಸು ; (ಬೆರಳುಗಳನ್ನು ಒಂದು ಗೊತ್ತಾದ ರೀತಿಯಲ್ಲಿ ಉಪಯೋಗಿಸಿ ಸಂಗೀತವನ್ನು) ನುಡಿಸು, ಬಾಜಿಸು. (ಸಂಗೀತವನ್ನು) ಯಾವ ಬೆರಳುಗಳಿಂದ ನುಡಿಸಬೇಕೆಂಬುದನ್ನು ಗುರುತುಮಾಡು. **Fíngering**[1](ನಾ.)

Fíngering[2] ಫಿಂಗರಿಂಗ್ (ನಾ.) ಕಾಲುಚೀಲಕ್ಕೆ ಉಪಯೋಗಿಸುವ ಉಣ್ಣೆ ಅಥವಾ ದಾರ.

Fínial ಫಿ(ಫ್ಲೈ)ನಿಯಲ್ (ನಾ.) (ವಾ. ಶಾ.) (ಚಾವಣಿ, ತ್ರಿಕೋಣಾಕಾರದ ಕಮಾನು, ಇಪ್ಪಾರು ಗೋಪುರ, ಗೋಪುರದ ಮೂಲೆಗಳು, ವಿತಾನ —ಇವೇ ಮೊ. ಗಳ) ಮೇಲ್ತುದಿಯಲ್ಲಿ ಇಡುವ ಅಲಂಕಾರ : ಶಿಖರಾಲಂಕಾರ ; ಕಳಶ.

Fínical ಫಿನಿಕಲ್ (ಗು.) ಅತಿ ನಾಜೂಕಿನ ; ಅತಿ ಸೂಕ್ಷ್ಮದ ; ಸುಲಭವಾಗಿ ತೃಪ್ತಿಪಡಿಸಲಾಗದ ; ಅತಿ ಸೂಕ್ಷ್ಮ ಕೆಲಸ ಮಾಡಿದ. **Fínically** (ಕ್ರಿ. ವಿ.) ; **Fínicalness** (ನಾ.) ; **Finicálity** — ಕ್ಯಾ — (ನಾ.)

Fínicking ಫಿನಿಕಿಂಗ್, **Fínikin** — ಕಿನ್ (ಗು.) = Finical.

Fínis (L) ಫ್ಲೈನಿಸ್ (ನಾ.) (ಪುಸ್ತಕದ ಕೊನೆಯಲ್ಲಿ ಬರೆಯುವ ಮಾತು) ಸಂಪೂರ್ಣ ; ಸಮಾಪ್ತಿ. ಕೊನೆ ; ಮುಡಿವು ; ಅಂತ ; ಮುಕ್ತಾಯ ; ಅವಸಾನ (ಮು., ಜೀವದ್ದು)

Fínish[1]. **Fine**[2] ನೋಡಿ.

Fínish[2] ಫಿನಿಷ್ (ಕ್ರಿ., ನಾ.) ಮುಗಿಸು ; ಮುಡಿವು (ಗ್ರಾಂ.) ; ಕೊನೆ ಮುಟ್ಟಿಸು ; ಕೊನೆಗಾಣಿಸು ; ಪೂರ್ತಿಮಾಡು ; ಪೂರಯಿಸು (ಅನೇಕ ವೇಳೆ f. doing ಮಾಡಿ ಮುಗಿಸು. F. off ಮುಕ್ತಾಯ ಕೊಡು). (ಪೂರ್ತಿಯ ಅಥವಾ ಮಿಕ್ಕಿರುವ ಆಹಾರವನ್ನು) ತಿಂದು ಮುಗಿಸಿಬಿಡು ; (ಪುಸ್ತಕವನ್ನು ಪೂರ್ತಿಯಾಗಿ ಅಥವಾ ಉಳಿದಿರುವುದನ್ನು) ಓದಿ ಮುಗಿಸಿಬಿಡು. ತೀರಿಸಿಬಿಡು ; ಕೊಂದುಹಾಕು. ಪರಿಷ್ಕರಿಸು ; ಸಂಸ್ಕರಿಸು ; ಒಪ್ಪವಿಡು (Finished manners ಪರಿಷ್ಕೃತ ನಡೆವಳಿ. Finished gentleman ಸುಸಂಸ್ಕೃತಿ ಪಡೆದ ದೊಡ್ಡಮನುಷ್ಯ). ವಿದ್ಯಾಭ್ಯಾಸ ಮುಗಿಸು. ಕೊನೆ ಮುಟ್ಟು ; ಕೊನೆಗಾಣು ; ನಿಂತುಹೋಗು ; ಮುಗಿ ; ಮುಗಿದುಹೋಗು ; ಮಾಡಿ ಮುಗಿಸು ; ಮುಕ್ತಾಯವಾಗು. (ನಾ.) (ಮು., ನರಿಯ ಬೇಟೆಯ) ಕೊನೆಯ ಮಜಲು, ಅಂತ್ಯ [Be in at the f. ನರಿಯ ಬೇಟೆಯ ಅಂತ್ಯಕಾಲದಲ್ಲಿ ಇರು (ಅನೇಕ ವೇಳೆ ರೂಪಕವಾಗಿ)]. (Fight to a f. ಕಡೆಯತನಕ ಹೋರಾಡು ; ಒಂದು ಪಕ್ಷ ಪೂರ್ತಿ ಸೋಲುವ ವರೆಗೂ ಕಾದಾಡು). ಪೂರ್ಣತ್ವ ಕೊಡುವಂಥದು. ಕೊನೆಯ ನಯಗೆಲಸದ ಸಂಸ್ಕಾರ ; ಮೆರುಗು ; ಒಪ್ಪ (ಮು., ಬೈಟಕ್ಕು ಸಾಮಾನಿನದು. Mahogany f. ಮಹೋಗನಿ ಹಲಗೆಯ ಮೇಲ್ಮೈಯ ಹಾಗೆ ಕಾಣುವಂತೆ ಮಾಡುವ ಸಂಸ್ಕಾರ). **Fínisher** (ನಾ.) (ಕ್ರಿಯಾರ್ಥಗಳಲ್ಲಿ). (ಸಾಮಾನಿನ ರಚನೆಯಲ್ಲಿ) ಕಟ್ಟಕಡೆಯ ಒಪ್ಪಗೆಲಸ ಮಾಡುವವನು, — ಮಾಡುವ ಯಂತ್ರ. ತೀರಿಸಿಬಿಡುವದು ; ಜಜ್ಜುಬಡಿಯುವ, ಆದುಮಿಬಿಡುವ, — ಹೊಡೆತ, ವಿಪತ್ತು.

Fínite ಫ್ಲೈನೈಟ್ (ಗು.) ಮೇರೆಯುಳ್ಳ ; ಎಲ್ಲೆಯುಳ್ಳ ; ಮಿತಿಯುಳ್ಳ ; ಹದ್ದುಳ್ಳ ; ಸಾವಧಿಕ ; ಪರಿಮಿತ ; ನಿಯತ. (ವ್ಯಾ) ವಚನ, ಪುರುಷ — ಇವುಗಳಿಂದ ನಿರ್ದಿಷ್ಟವಾದ. **Fíniteness** (ನಾ.)

Fin(n) ಫಿನ್ (ನಾ.) ಯೂರೋಪಿನ ಈಶಾನ್ಯ ಭಾಗದಲ್ಲಿ ವಾಸಮಾಡುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಸುಓಮಿ' ಎಂದು ಕರೆದುಕೊಳ್ಳುವ ಜನ. **Fínnic** ಫಿನಿಕ್ (ಗು.) 'ಫಿನ್' ಜನರ ಸಂಬಂಧವುಳ್ಳ ಜನವರ್ಗದ ; = Finnish.

Fínnish ಫಿನಿಷ್ (ಗು., ನಾ.) ಫಿನ್ನರ (ಭಾಷೆ) ; = Finnic.

Fínny. **Fin** ನೋಡಿ.

Fínsen light ಫಿನ್ಸೆನ್ ಲೈಟ್ (ನಾ.) (ಮಾಂಸವನ್ನು ತಿಂದುಹಾಕಿ ಮುಖ, ವೊ. ಅಂಗಗಳಮೇಲೆ ಗಾಯಗಳನ್ನು ಮಾಡುವ ಒಂದು ತೆರದ ಕುಷ್ಠ ರೋಗ, ವೊ. ನ್ನು ವಾಸಿಮಾಡುವುದಕ್ಕಾಗಿ ಉಪಯೋಗಿಸುವ) ನೇರಿಲ ವರ್ಣಾತೀತ ತೇಜಸ್ಸು (Ultra-violet light) ; ಆ ತೇಜಸ್ಸನ್ನು ಉತ್ಪತ್ತಿ ಮಾಡುವ ಸಲಕರಣೆ. (ಡೆನ್ಮಾರ್ಕಿನ Finsen ಎಂಬ ವೈದ್ಯನ ಹೆಸರಿನಿಂದ)

Fiord, Fjord ಫ್ಯೋರ್ಡ್ (ನಾ.) (ನಾರ್ವೆಯಲ್ಲಿರುವಂತೆ ಎತ್ತರವಾದ ಕಡಿದುಬಂಡೆಗಳ ಮಧ್ಯೆ ಉದ್ದವಾಗಿಯೂ ಕಿರಿದಾಗಿಯೂ ನೆಲಸಿರುವ) ಸಮುದ್ರದ ಚಾಚು ; ಕಡಲ ತೋಳು.

Fir ಫರ್ (ನಾ.) (Also f.-tree) (ಮರದ ಹೊಡೆಗಳಮೇಲೆ ಸೂಜಿಗಳಂತಿರುವ ಸಸ್ಯಾಂಗಗಳನ್ನು (ಎಲೆಗಳನ್ನು) ಪ್ರತ್ಯೇಕ ಪ್ರತ್ಯೇಕವಾಗಿ ಪಡೆದಿರುವ, ಶಂಕುವಿನಾಕಾರದ ಕಾಯಿಗಳುಳ್ಳ) ಒಂದು ಜಾತಿಯ ಮರ ; ಶಂಕುಫಲಿ ; ಫರ್ ಮರ (Scotch, Silver, Spruce, F. ಬೇರೆ ಬೇರೆ ತೆರದ ಶಂಕುಫಲಿ ಮರಗಳು) ; ಫರ್ ಮರದ ದಾರು. **F.-apple, -ball, -cone** ಫರ್ ಮರದ ಕಾಯಿ. **F.-needle** ಫರ್ ಮರದ ಸೂಜಿಯಾಕಾರದ ಎಲೆ. **Fírry** ಫರಿ (ಗು.) ಫರ್ ಮರದ ; ಫರ್ ಮರಗಳು ತುಂಬಿರುವ.

Fire ಫೈಅರ್ (ನಾ.) ಬೆಂಕಿ ; ಕಿಚ್ಚು ; ಉರಿ ; ಅಗ್ನಿ [Set f. to ಬೆಂಕಿ ಹಚ್ಚು ; ಕಿಚ್ಚಿಡು. Strike f. ಘರ್ಷಣದಿಂದ ಅಥವಾ ಘಟ್ಟನೆಯಿಂದ ಕಿಡಿ ಹೊರಡಿಸು. No smoke without f. ಬೆಂಕಿಯಿಲ್ಲದೆ ಹೊಗೆ ಹುಟ್ಟದು ; (ರೂಪ.) ಆಧಾರವಿಲ್ಲದೆ ಸುದ್ದಿ ಹುಟ್ಟದು]. ಉರಿತ ; ದಹನ ; [On f. ಉರಿಯುತ್ತ ; ಹೊತ್ತಿಕೊಂಡು ; (ರೂಪ.) ಉದ್ರೇಕಗೊಂಡು ; ಕೆರಳಿ. Set on f. ಬೆಂಕಿ ಹಚ್ಚು ; ಉರಿಯೆಬ್ಬಿಸು. ಕೆರಳಿಸು ; ರೇಗಿಸು. Set Thames on f. ಅಸಾಮಾನ್ಯವಾದ, ಅದ್ಭುತವಾದ, ಕೆಲಸವೇನನ್ನಾದರೂ ಮಾಡು. Catch, take, f. ಬೆಂಕಿ ಹೊತ್ತಿಕೊ, ತಗುಲು ; ಉರಿ ತಾಕು]. (ಅಗ್ಗಿಷ್ಟಿಗೆ, ಕುಲುಮೆ, ವೊ. ಗಳಲ್ಲಿ) ಉರಿಯುತ್ತಿರುವ ಸೌದೆ, ಕೆಂಡ [Heap coals of f. (Coal ನೋಡಿ). Burnt child dreads the f. ಕೈ ಸುಟ್ಟುಕೊಂಡ ಮಗು ಬೆಂಕಿ ನೋಡಿ ಹೆದರುತ್ತದೆ ; (ರೂಪ.) ಒಂದು ಸಲ ನಷ್ಟ, ಕಷ್ಟ, ಅನುಭವಿಸಿದವನು ಮುಂದಕ್ಕೆ ಅಂಥ ಕೆಲಸ ಮಾಡಲು ಹೆದರುತ್ತಾನೆ. Out of frying-pan into f. (Fry ನೋಡಿ). Fat is in the f. (Fat ನೋಡಿ)]. ದಳ್ಳುರಿ ; ನಾಶದುರಿ [Fire ! ಬೆಂಕಿ ! ಬೆಂಕಿ ! (ಬೆಂಕಿ ಬಿದ್ದಾಗ ಸಹಾಯಕ್ಕಾಗಿ ಕೂಗುವ ಕೂಗು). Pour oil on f. (ಬೆಂಕಿಯನ್ನು ಆರಿಸಲು) ಬೆಂಕಿಗೆ ಎಣ್ಣೆ ಸುರಿ ; (ರೂಪ.) ರೇಗನ್ನು ಶಮನ ಮಾಡಲುಹೋಗಿ ಹೆಚ್ಚು ಕೆರಳಿಸು. Go through f. and water ಎಲ್ಲ ವಿಧದ ಗಂಡಾಂತರಗಳನ್ನೂ ಹಾಯ್ದುಹೋಗು, ಅನುಭವಿಸು. F. and sword ಕಿಚ್ಚು, ಕತ್ತಿ ; ಧ್ವಂಸ ; ನಾಶ]. ಉರಿ ಹೊತ್ತಿಸುವ ಪದಾರ್ಥ ; ದಾಹಕ (Greek f. ಶತ್ರುಗಳ ಹಡಗುಗಳು, ವೊ. ಕ್ಕೆ ಬೆಂಕಿ ಹೊತ್ತಿಸುವ ದಾಹ್ಯ ಪದಾರ್ಥ). ಪ್ರಭೆ ; ಪ್ರಕಾಶ ; ಕಾಂತಿ ; ತೇಜಸ್ಸು (St Elmo's f. = Corposant). ಸುಡುಗಾವು ; ತಾಪ ; ಜ್ವರ (St Anthony's f. = Erysipelas). ಭಾವೋದ್ರೇಕ ; ರಾಗೋದ್ರೇಕ ; ಕಾವು ; ಉತ್ಸಾಹ ; ತೀವ್ರತೆ ; ತೀಕ್ಷ್ಣತೆ ; ರಭಸ ; ಉತ್ಸುಕತೆ ; ಆವೇಶ ; ಕವಿತಾವೇಶ. ಗುಂಡು ಹಾರಿಸುವುದು [Open, cease, f. ಗುಂಡು ಹಾರಿಸು, ಗುಂಡು ನಿಲ್ಲಿಸು. Running f. ಸೈನಿಕರ ಸಾಲು, ವೊ. ವು ಎಡೆಬಿಡದೆ ಹಾರಿಸುವ ಗುಂಡಿನ ಮಳೆ ; (ರೂಪ.) ಟೀಕೆ, ಆಕ್ಷೇಪಣೆ, ವೊ. ಗಳ ಸುರಿಮಳೆ, ಪರಂಪರೆ. Between two fires ಎರಡು ಉರಿಗಳ ನಡುವೆ ; ಎರಡು ಕಡೆಯ ಹೊಡೆತಕ್ಕೆ ಸಿಕ್ಕಿ ; ಉಭಯ ಸಂಕಟಕ್ಕೆ ಸಿಕ್ಕಿ. Line of f. (ಹೊಡೆಯಲಿರುವ) ಗುಂಡಿನ ಹಾದಿ. Under f. ಹೊಡೆತಕ್ಕೆ ಸಿಕ್ಕಿ ; ಗುಂಡಿಗೆ ಗುರಿಯಾಗಿ. Hang, miss, f. (Hang, Miss ನೋಡಿ)]. **F.-alarm** ಬೆಂಕಿ ಬಿದ್ದದ್ದನ್ನು ತಾನಾಗಿಯೇ ಸೂಚಿಸುವ ಸಾಧನ : ಅಗ್ನಿ ಸೂಚಕ. **F.-arm** (ಸಾ., ಬ. ವ. ದಲ್ಲಿ) ಫಿರಂಗಿ, ಬಂದೂಕು, ವೊ. ವು. **Fíreback** (ಸುಮಾತ್ರಾ ದ್ವೀಪದ) ಒಂದು ಪಕ್ಷಿಜಾತಿ. **F.-ball** ಅಗ್ನಿಗೋಳ ; ದೊಡ್ಡ ಉಲ್ಕೆ ; ಗೋಳಾಕಾರದ ಸಿಡಿಲು ಮಿಂಚು. (ಸೈನಿಕ) ಸಿಡಿತದ ಪದಾರ್ಥಗಳನ್ನು ತುಂಬಿರುವ ಗುಂಡು. **F.-balloon** (ಬಾಯಿ ಬಳಿ ಬೆಂಕಿ ಉರಿಸುವುದರಿಂದ ಒಳಗಿನ ವಾಯು ಹಗುರವಾಗಿ ಮೇಲೇರುವ) ಬೆಂಕಿ ಆಕಾಶಬುಟ್ಟಿ. **F.-bird** (ಜೇನು ನೊಣಗಳನ್ನು ತಿನ್ನುವ) ಒಂದು ಜಾತಿಯ ಹಕ್ಕಿ. **F.-blast** ಒಂದು ತೆರದ ಸಸ್ಯರೋಗ. **F.-blight** 'ಹಾಪ್ಸ್' ಬಳ್ಳಿಯ ಒಂದು ರೋಗ. **F.-box** (ಆವಿಯಂತ್ರದ ಕುದಿಪಾತ್ರೆಯೊಳಗಿನ) ಉರುವಲಿನ ಕೋಣೆ. **F.-brand** (ಉರಿಯುವ) ಕೊಳ್ಳಿ ; (ರೂಪ.) ಜಗಳ ಹಚ್ಚುವವನು ; — ವದು ; ಉದ್ರೇಕಕಾರಿ. **F.-brick** (ಅಗ್ಗಿಷ್ಟಿಗೆ, ಒಲೆ, ವೊ. ಗಳಲ್ಲಿ ಉಪಯೋಗಿಸುವ) ಕಾವು ತಡೆಯಬಲ್ಲ ಇಟ್ಟಿಗೆ : ಕಾವಿಟ್ಟಿಗೆ. **F.-brigade** ಬೆಂಕಿ ಆರಿಸಲು ಏರ್ಪಟ್ಟ ದಳ : ಬೆಂಕಿ ದಳ. **F.-clay** ಕಾವಿಟ್ಟಿಗೆ ಮಾಡಲು ಉಪಯೋಗಿಸುವ ಜೇಡು ಮಣ್ಣು : ಕಾವು ಜೇಡು. **F.-control** (ಹಡಗಿನ ಅಥವಾ ಕೋಟೆಯ ಫಿರಂಗಿಗಳು) ಗುಂಡುಹಾರಿಸುವುದನ್ನು ಹತೋಟಿಯಲ್ಲಿಟ್ಟುಕೊಂಡಿರುವ ಏರ್ಪಾಡು : ಗುಂಡುಹಾರಿಸುವ ಕಟ್ಟುಪಾಡು. **F.-cross** = Fiery cross [Cross (ನಾ.) ನೋಡಿ]. **F.-damp** (ನಾ.) (ವಾಯುವಿನೊಡನೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಬೆರೆತಾಗ) ಸಿಡಿಯುವ ಇಂಗಾಲ ಜಲಜನಕ ಸಂಯುಕ್ತದ ಅನಿಲ ; (ಈ ಅನಿಲಕ್ಕೆ ಗಣಿಯ ಕೆಲಸಗಾರರು ಇಟ್ಟಿರುವ ಹೆಸರು). **F.-dog** = Andiron ; (Dog ನೋಡಿ). **F.-drake** ಉಲ್ಕೆ ; 'ಡ್ರ್ಯಾಗನ್' ಎಂಬ ಬೆಂಕಿ ಕಾರುವ ಭಯಂಕರವಾದ ಒಂದು ಪೌರಾಣಿಕ ಪ್ರಾಣಿ. **F.-eater** ಬೆಂಕಿ ನುಂಗುವ ಯಕ್ಷಿಣಿಗಾರ : ಅಗ್ನಿ ಭಕ್ಷಕ. (ರಾಜಕೀಯ, ವೊ. ಸುಧಾರಣೆಯ ವಿಷಯಗಳಲ್ಲಿ ಉದ್ರೇಕದಿಂದ ಮಾತನಾಡುವ) ಉಗ್ರಗಾಮಿ ; ಹೋರಾಟಕ್ಕೆ ಕಾಲುಕೆರೆದು ಮೇಲೆಬೀಳುವವನು. **F.-engine** ನೀರು ಎರಚಿ ಬೆಂಕಿ ಆರಿಸುವ ಎಂಜಿನು ; ಬೆಂಕಿ ಆರಿಸುವ ಯಂತ್ರ. **F.-escape** ಉರಿಯುತ್ತಿರುವ ಮನೆಯಿಂದ ಅದರಲ್ಲಿರುವವರನ್ನು ಉಳಿಸುವ ಸಾಧನ : ಉರಿ ಪಾರು. **F.-eyed** (ಕಾವ್ಯ) ಹೊಳಪುಗಣ್ಣಿನ ; ಉರಿಗಣ್ಣಿನ. **F.-flair** ಒಂದು ಮೀನ ಜಾತಿ. **F.-fly** ಭಾಸ್ವರ ಕಾಂತಿಯನ್ನು ಬೀರುವ ಒಂದು ಹಾರುಹುಳು : ಮಿಣುಕು ಹುಳು ; ಮಿಂಚಿನ ಹುಳು. **F.-guard** ಬೆಂಕಿ ತಡೆ (ಮಕ್ಕಳು ಬೆಂಕಿಗೆ ಬೀಳದಂತೆ, ಇದ್ದಲು, ಕೆಂಡ, ವೊ. ವು ಹೊರಕ್ಕೆ ಚೆಲ್ಲದಂತೆ, ಒಲೆಗೂಡಿನ ಮುಂದೆ ಹಾಕಿರುವ ಕಂಬಿಯ ಚೌಕಟ್ಟು ಅಥವಾ ಜಾಲರಿ). **F.-hose** ಬೆಂಕಿ ಆರಿಸುವುದಕ್ಕೆ ನೀರೆರಚಲು ಉಪಯೋಗಿಸುವ ಮೆತುವ್ಮೈಯ ನೀರ್ಗೊಳವಿ. **F.-insurance** (ಬೆಂಕಿ ಬಿದ್ದು ನಾಶವಾಗುವ ಸಂಭವದಲ್ಲಿ ನಷ್ಟ ಕಟ್ಟಿಕೊಡುವ) ಅಗ್ನಿ ವಿಮೆ. **F.-irons** ಬೆಂಕಿಯ ಲೋಹ ಸಲಕರಣೆಗಳು : ತಂಡಸ, ಚುಚ್ಚುಗೋಲು, ಎಸೆ ಗುದ್ದಲಿ. **F.-light** ಒಲೆಯ ಬೆಳಕು ; ಬೆಂಕಿಯ ಬೆಳಕು. **F.-lighter** ಬೆಂಕಿ ಹೊತ್ತಿಸಲು ತಯಾರಿಸಿದ ಉರುವಲು. **Fírelock** (ಬೆಂಕಿಯ ಕಿಡಿಗಳಿಂದ ಹೊತ್ತಿಸುತ್ತಿದ್ದ) ಹಳೆಯ ಕಾಲದ ಬಂದೂಕು. **Fíreman** (ಕುಲುಮೆಯ ಅಥವಾ ಆವಿಯೆಂಜಿನಿನ) ಉರಿಯನ್ನು ನೋಡಿಕೊಳ್ಳುವವನು. ಬೆಂಕಿಯನ್ನು ಆರಿಸಲು ನಿಯಮಿತನಾದ ಕೆಲಸಗಾರ ; ಬೆಂಕಿ ಆರಿಸುವವನು. **F.-new** (ಪ್ರಾಚೀ. ಪ್ರ.) = Brand new. **F.-office** ಅಗ್ನಿವಿಮೆಯ ಕಚೇರಿ. **F.-opal** ಆಂತರಿಕ ಪ್ರತಿಫಲನ ಪರಂಪರೆಯಿಂದ ಉರಿಯ ಕಾಂತಿಯಂತೆ ಬೆಳಗುವ ಒಂದುಜಾತಿಯ ಕ್ಷೀರಸ್ಫಟಿಕ. **F.-pan** ಕೆಂಡ ಇಟ್ಟಿರುವ ತಟ್ಟೆ. **F.-place** (ಸಾ., ಕೊಠಡಿಯನ್ನು ಬೆಚ್ಚಗಿಟ್ಟಿರುವುದಕ್ಕಾಗಿ ಕಟ್ಟಿರುವ) ಬೆಂಕಿಗೂಡು ಅಥವಾ ಅಗ್ಗಿಷ್ಟಿಗೆ ; ಒಲೆ. **F.-plug** (ಸಂಕ್ಷಿಪ್ತ : F. P.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಬೆಂಕಿ ಆರಿಸಲು ಉಪಯೋಗಿಸುವ ಮೆತುನಾಳಿಯನ್ನು ನೀರುನರಬರಾಯಿಯ ಕೊಳಾಯಿಗೆ ಸೇರಿಸಲಾಗುವಂತೆ ಹಾಕಿರುವ) ಬೆಂಕಿಬಿರಡೆ. **F.-policy** ಅಗ್ನಿವಿಮೆಯ ಖಾತರಿಪತ್ರ. **Fíreproof** (ಗು.) ಬೆಂಕಿಯನ್ನು ತಡೆಯುವ ; ಸುಡದ ; ಅಗ್ನಿ ನಿರೋಧಕ. **F.-raising** (ಮಾತ್ಸರ್ಯದಿಂದ) ಕಿಚ್ಚಿಡುವುದು. **F.-screen** ಬೆಂಕಿಯ ಕಾವನ್ನು ತಡೆಯುವ ತೆರೆ : ಕಾವು ತೆರೆ. **F.-ship** (ಬೆಂಕಿ ಹೊತ್ತಿಕೊಳ್ಳುವ ಪದಾರ್ಥಗಳನ್ನು ತುಂಬಿ ಶತ್ರುಗಳ ಹಡಗುಗಳು, ಮೊ. ಕ್ಕೆ ಬೆಂಕಿ ಹೊತ್ತಿಸುವಂತೆ ಸಮುದ್ರದಲ್ಲಿ ಅಲೆದಾಡಲು ಬಿಟ್ಟು ಬಿಟ್ಟ) ಬೆಂಕಿ ಹಡಗು. **Fíre-side** ಬೆಂಕಿಗೂಡಿನ ಸುತ್ತಲಿರುವ ಸ್ಥಳ ; ಒಲೆಯ ಪಕ್ಕ ; (ರೂಪ.) ಮನೆಬಾಳು ; ಗೃಹಜೀವನ. **F.-step** (ನೆಲದಲ್ಲಿ ಮಾಡಿರುವ ಕಂದಕದಲ್ಲಿ ಸಿಪಾಯಿ ನಿಂತು) ಗುಂಡುಹಾರಿಸುವ ಮೆಟ್ಟಲು. **F.-stone** (ಕುಲುಮೆ, ಮೊ. ನ್ನು ಕಟ್ಟಲು ಉಪಯೋಗಿಸುವ) ಬೆಂಕಿಗೆ ಸಗ್ಗದ ಕಲ್ಲು: ಬೆಂಕಿಗಲ್ಲು. **F.-teazer** (ಕುಲುಮೆ, ಮೊ. ಗಳಲ್ಲಿ) ಬೆಂಕಿ ಸರಿಯಾಗಿ ಉರಿಯುವಂತೆ ನೋಡಿಕೊಳ್ಳುವವನು. **F.-trap** ಬೆಂಕಿ ಬಿದ್ದರೆ ತಪ್ಪಿಸಿಕೊಂಡು ಹೋಗಲು ತಕ್ಕ ಮಾರ್ಗಗಳಿಲ್ಲದಂತೆ ಕಟ್ಟಿರುವ ಕಟ್ಟಡ : ಬೆಂಕಿ ಬೋನು. **F.-walking** ಬೆಂಕಿಯಿಂದ ಬೆಳ್ಳಗೆ ಕಾದ ಕಲ್ಲುಗಳಮೇಲೆ ಅಥವಾ ಖಣಖಣನೆ ಕಾದ ಕೆಂಡಗಳಮೇಲೆ ಬರಿಗಾಲಿನಲ್ಲಿ ನಡೆಯುವ ವ್ರತಾಚರಣೆ : ಬೆಂಕಿ ತುಳಿಯುವುದು. **F.-water** ತೀಕ್ಷ್ಣ, ತೀವ್ರ, ಮದ್ಯ. **Fírewood** ಸೌದೆ ; ಅಡಿಗಬ್ಬು ; ಉರುವಲು. **Fírework** ಬಾಣ ಬಿರುಸು, ಪಟಾಕಿ, ತಾರಾಮಂಡಲ, ಮೊ. ವು : ಸುಡುಮದ್ದಿನ ವಿನೋದ. (ರೂಪ., ಬ. ವ. ದಲ್ಲಿ) ಚಾತುರ್ಯ, ಆವೇಶ, ಮೊ. ಗಳ ಪ್ರದರ್ಶನ. **F.-worship** ಅಗ್ನಿಪೂಜೆ. **Fíreless** (ಗು.) ಬೆಂಕಿ ಇಲ್ಲದ (ರೂಪ. ಸಹ). **Fíery** ಫೈಅರಿ (ಗು.) ಬೆಂಕಿಯಿಂದ ಕೂಡಿದ ; ಬೆಂಕಿಯುಳ್ಳ ; ಉರಿಯುತ್ತಿರುವ. (ಅಂಬು, ಮೊ. ಗಳ ವಿಷಯದಲ್ಲಿ) ಬೆಂಕಿ ಹೊತ್ತಿರುವ ; ಉರಿ ಕಾರುವ ; ಬೆಂಕಿಯಂತೆ, ಉರಿಯಂತೆ, ಕಾಣುವ ; ಕೆಂಪಗೆ ಜ್ವಲಿಸುವ. (ಕಣ್ಣು) ಕಿಡಿ ಕಾರುತ್ತಿರುವ. ಉಜ್ವಲವಾದ ; ಕೆರಳಿದ ; ಕೆರಳಿಸುವ ; ಬೆಂಕಿಯಂತೆ ಕಾಯುತ್ತಿರುವ, ಸುಡುತ್ತಿರುವ ; ಬೆಂಕಿಯಂಥ (F. taste ಬಹಳ ಖಾರವಾದ ರುಚಿ). ಕುತೂಹಲವುಳ್ಳ ; ಉತ್ಸಾಹವುಳ್ಳ ; ಮೇಲೆ ಬೀಳುವ ಸ್ವಭಾವದ ; ರೇಗು ಸ್ವಭಾವದ ; ವೀರ್ಯವತ್ತಾದ ; ಆವೇಶದ ; ತೀಕ್ಷ್ಣ ; ತೀವ್ರ. (ಕುದುರೆ) ಜೋರಿನ, ಮಿಡುಕಿನ. (ಅನಿಲ, ಗಣಿ, ಮೊ.) ಉರಿ ಹೊತ್ತಿಕೊಳ್ಳುವ ; ಸಿಡಿಯುವ. (ಕ್ರಿಕೆಟ್ ಆಟ) ಚೆಂಡನ್ನು ಅಪಾಯಕರವಾಗಿ ಪುಟಿಬೆಬ್ಬಿಸುವ. F. cross (Cross ನೋಡಿ). **Fíerily** (ಕ್ರಿ.ವಿ.) ; **Fíeriness** (ನಾ.)

Fire (ಕ್ರಿ.) (ನಾಶಮಾಡುವ ಉದ್ದೇಶದಿಂದ) ಕಿಚ್ಚಿಡು, ಬೆಂಕಿ ಹಚ್ಚು ; (ಸಿಡಿಮದ್ದು) ಹೊತ್ತಿಸು. (ಸಿಡಿಮದ್ದು, ಸಿಡಿಮದ್ದಿನ ಸುರಂಗಗಳು) ಬೆಂಕಿ ಹೊತ್ತಿಕೊ, ಸಿಡಿ ; ಕಾಯಿ ; ಕಾವೇರು ; (ರೂಪ.) ಕೆರಳು ; ಉದ್ರೇಕಗೊಳ್ಳು ; (ಭಾವವನ್ನು) ಉದ್ರೇಕಿಸು, ಉತ್ತೇಜಿಸು, ಹುರಿದುಂಬಿಸು ; ಪ್ರೋತ್ಸಾಹಿಸು (F. up ಥಟ್ಟನೆ ಕೋಪವೇರು, ಕಿಡಿ ಕಿಡಿಯಾಗು). ಕೆಂಪೇರು ; ಕೆಂಪೇರಿಸು. (ಮಣ್ಣಿನ ಪಾತ್ರೆ, ಇಟ್ಟಿಗೆ, ಮೊ. ನ್ನು) ಸುಡು. (ತೇ ಎಲೆಯನ್ನು, ಹೊಗೆಯ ಸೊಪ್ಪನ್ನು) ಕೃತಕ ಶಾಖದಿಂದ ಸಂಸ್ಕರಿಸು, ಹದವಾಗಿ ಒಣಗಿಸು. (ಅಶ್ವವೈದ್ಯ) ಬರೆ ಹಾಕು ; ಸೂಡು ಹಾಕು. (ಕುಲುಮೆಗೆ, ಎಂಜಿನಿಗೆ) ಸೌದೆಯನ್ನು, ಉರುವಲನ್ನು, ಹಾಕು. (ಸಿಡಿಮದ್ದು, ಬಂದೂಕು) ಸಿಡಿಸು, ಹಾರಿಸು (ಅನೇಕ ವೇಳೆ *off* ಉಪ. ದೊಡನೆ). (F. salute ವಂದನಾರ್ಥವಾಗಿ ಅನೇಕ ಬಂದೂಕುಗಳಿಂದ ಒಂದೇ ಬಾರಿ ಗುಂಡು ಹಾರಿಸು. ಸುರುಟು ಹೊಡೆ. F. broad-side ಹಡಗಿನ ಒಂದು ಪಕ್ಕದ ಫಿರಂಗಿಗಳನ್ನೆಲ್ಲ ಹಾರಿಸಿಬಿಡು). ಗುಂಡು ಹೊಡೆ ; ಬಂದೂಕು, ಮೊ. ನ್ನು ಉಡಾಯಿಸು (*At, into, on, upon* ಉಪ. ದೊಡನೆ). [(ರೂಪ.) F. away ಹೊಡೆ ; ಲಗಾಯಿಸು.] (ಬಂದೂಕು, ಮೊ. ಗಳ ವಿಷಯದಲ್ಲಿ) ಹಾರು, ಸಿಡಿ. (ಬಂದೂಕು, ಮೊ. ಗಳಿಂದ ಕ್ಷಿಪಣಿಯನ್ನು) ಹಾರಿಸು ; (ರೂಪ.) F. off a postcard, remark ಅಂಚೆಯ ರುಟ್ಟುಚೀಟಿಯನ್ನು ಬರೆದುಹಾಕು ; ಟೀಕೆ ಮಾಡಿಬಿಡು. (ಅಮೆ. ಸಂ.) F. out or f. ಅಟ್ಟಿಬಿಡು ; ಓಡಿಸಿಬಿಡು ; ಕೆಲಸದಿಂದ ತೆಗೆದುಬಿಡು ; ತಿರಸ್ಕರಿಸು ; ಅಂಗೀಕರಿಸದಿರು. Firing-party ಗುಂಡು ಹಾರಿಸುವ ದಳ. Firing-step = F.-step. **Fírer** (ನಾ.) (ಕ್ರಿಯಾರ್ಥಗಳಲ್ಲಿ). Double-f. (ಮರಳಿ ಮದ್ದೂ ಗುಂಡೂ ತುಂಬದೆ) ಎರಡು ಬಾರಿ ಗುಂಡು ಹಾರಿಸುವದು. **Fíring** (ನಾ.) ಬೆಂಕಿ ಹಚ್ಚುವುದು ; ಗುಂಡು ಹಾರಿಸುವುದು. (ಅಶ್ವವೈದ್ಯ) ಬರೆಹಾಕುವುದು. ತಂಬಾಕು, ಸಣಬು —ಇವಕ್ಕೆ ಬರುವ ಒಂದು ರೋಗ. ಬೆಂಕಿಯನ್ನು ಅಥವಾ ಕುಲುಮೆಯನ್ನು ಉರಿಯುವಂತೆ ನೋಡಿಕೊಳ್ಳುವುದು. ಸೌದೆ ; ಉರುವಲು.

Fírkin ಫರ್ಕಿನ್ (ನಾ.) (ದ್ರವಗಳು, ಬೆಣ್ಣೆ, ಮೀನು, ಮೊ. ನ್ನು ಹಾಕಿಡುವ) ಸಣ್ಣ ಪೀಪಾಯಿ. (ಅಳತೆ) ಎಂಟು ಅಥವಾ ಒಂಬತ್ತು ಗ್ಯಾಲನ್ನುಗಳು.

Firm[1] ಫರ್ಮ್ (ನಾ.) ವ್ಯಾಪಾರ, ವಾಣಿಜ್ಯ, ಕಸಬು, ಮೊ. ಗಳ ಸಂಸ್ಥೆ ; ವ್ಯವಹಾರ ಸಂಸ್ಥೆ ; ವ್ಯಾಪಾರ ನಡಸುವ ಇಬ್ಬರ ಅಥವಾ ಹೆಚ್ಚು ಮಂದಿಯ ಪಾಲುಗಾರಿಕೆ (Long f. ಸರಕನ್ನು ಪಡೆದು ಅದರ ಬೆಲೆ ಕೊಡದೆ ಮೋಸಮಾಡುವ ವಂಚಕರ ತಂಡ : ಗಂಟುಕಳ್ಳರ ತಂಡ)

Firm[2] ಫರ್ಮ್ (ಗು., ಕ್ರಿ. ವಿ., ಕ್ರಿ.) ಗಟ್ಟಿಯಾದ, ನೆಟ್ಟ, ದೃಢವಾದ, ಭದ್ರವಾದ (ಕಟ್ಟಡದ) ; ಸ್ಥಿರ ; ಶಾಶ್ವತ ; ನಾಟದ ; ಅಳ್ಳಾಡದ ; ಕದಲದ ; ಅಚಲ ; ಸುಸ್ಥಾಪಿತ ; ನೆರೆಯ ; ನಿರ್ವಿಕಾರ. (ಏರ್ಪಾಟಿನ ಅಥವಾ ಕರಾರಿನ ವಿಷಯದಲ್ಲಿ) ಒಪ್ಪಿತವಾದಮೇಲೆ ರದ್ದಾಗದ, ತೆಗೆದು ಹಾಕದ. ದೃಢ ನಿಶ್ಚಯದ ; ಹಿಂದೆಗೆಯದ ; ಅಚಂಚಲ ; ಸ್ಥಿರ ಸಂಕಲ್ಪದ ; ನಿಷ್ಠೆಯ ; ನಚ್ಚಿನ. (ವಾಣಿಜ್ಯ, ಬೆಲೆಗಳು, ಸರಕು) ಒಂದೇ ಮಟ್ಟದಲ್ಲಿ ಅಥವಾ ಬೆಲೆಯಲ್ಲಿ ಇರುವ. (ಕ್ರಿ. ವಿ.) = Firmly ; (Stand f. ದೃಢವಾಗಿ ನಿಲ್ಲು. Hold f. to ಭದ್ರವಾಗಿ ಹಿಡಿದಿರು). (ಕ್ರಿ.) ಗಟ್ಟಿಯಾಗು ; ಗಟ್ಟಿಮಾಡು ; ಘನೀಭವಿಸು ; — ಕರಿಸು ; (ಗಿಡ ನೆಟ್ಟಮೇಲೆ ನೆಲವನ್ನು, 'ಚೀಸ್'ನ್ನು) ದಟ್ಟವಾಗಿಸು. (ಸಸಿಯನ್ನು ನೆಲದಲ್ಲಿ) ಭದ್ರವಾಗಿ ಹೂಳು, ನೆಡು, ನೆರೆಗೊಳಿಸು. **Fírmly** (ಕ್ರಿ. ವಿ.) ; **Fírmness** (ನಾ.)

Fírmament ಫರ್ಮಮೆಂಟ್ (ನಾ.) ಆಕಾಶ ; ಗಗನ ಮಂಡಲ ; ಅಂತರಿಕ್ಷ ; ಬಾಂದಳ. **Firmaméntal** (ಗು.)

Fírman ಫರ್ಮನ್, ಫರ್ಮಾನ್ (ನಾ.) (ಪೌರಸ್ತ್ಯ ರಾಜರ) ಆಜ್ಞೆ, ಶಾಸನ, ಸನ್ನದು, ರಹದಾರಿ, ಅನುಜ್ಞಾ ಪತ್ರ.

First ಫರ್ಸ್ಟ್ (ಗು.) ಮೊದಲನೆಯ ; ಪ್ರಥಮ ; ಆದಿಯ ; ಅಗ್ರಗಣ್ಯ [At f. sight, view, blush ಮೊದಲ ನೋಟದಲ್ಲಿಯೇ ; ಪ್ರಥಮ ದರ್ಶನದಲ್ಲಿಯೇ ; ಆರಂಭದಲ್ಲಿಯೇ. F. Cause (Cause ನೋಡಿ). Come in f. ಮೊದಲು ಬರು ; ಮೊದಲನೆಯವನಾಗು ; ಪಂದ್ಯದಲ್ಲಿ (ಮೊದಲನೆಯವನಾಗಿ) ಗೆಲ್ಲು. Shall do it f. thing (ಬಳ. ಮಾ.) ಒಡನೆಯೇ ಮಾಡುತ್ತೇನೆ. In the f. place ಮೊದಲನೆಯದಾಗಿ ; ಮೊದಲೇ. The f. two ಮೊದಲನೆಯವೆರಡೂ ; — ಯವರಿಬ್ಬರೂ ; ಮೊದಲನೆಯದು (ಯವನು) ಮತ್ತು ಎರಡನೆಯದು (ಯವನು)]. (ಸ್ಥಾನ ಮಾನಗಳಲ್ಲಿ, ಅಧಿಕಾರದಲ್ಲಿ, ಘನತೆಯಲ್ಲಿ) ಪ್ರಮುಖ, ಅಗ್ರಗಣ್ಯ [The f. men in the country ನಾಡಿನ ಮುಂದಾಳುಗಳು ; ದೇಶದ ಪ್ರಮುಖರು]. **F. aid** (ಗಾಯಪಟ್ಟವನಿಗೆ ವೈದ್ಯನು ಬರುವುದಕ್ಕೆ ಮೊದಲು ಮಾಡುವ) ಪ್ರಥಮ ಚಿಕಿತ್ಸೆ. **F.-born** ಚೊಚ್ಚಲು (ಮಗು) ; ಹಿರಿಯ (ಮಗು). **F.-chop** (Chop[4] ನೋಡಿ). **F. class** ಉತ್ತಮ ತರಗತಿ(ಯವರು, — ಯವು). ರೈಲುಬಂಡಿಯಲ್ಲಿ ಉತ್ತಮ ತೆರದ ಸೌಕರ್ಯಗಳುಳ್ಳ ತರಗತಿ : ಮೊದಲನೆಯ ತರಗತಿ. (ಪರೀಕ್ಷೆಯಲ್ಲಿ ತೇರ್ಗಡೆಯಾದವರಲ್ಲಿ) ಉತ್ತಮ ತರಗತಿಯವರು, ಮೊದಲನೆಯ ತರಗತಿಯವರು ; ಮೊದಲನೆಯ ತರಗತಿ(ಯ ಸ್ಥಾನ). **F.-class** (ಗು.) ಉತ್ತಮ ತರಗತಿಯ ; ಮೊದಲನ — ; ಉತ್ತಮೋತ್ತಮ ; ಸರ್ವೋತ್ಕೃಷ್ಟ ; ಶ್ರೇಷ್ಠ ; ಬಹಳ ಒಳ್ಳೆಯ. (ಕ್ರಿ. ವಿ.) ಮೊದಲನೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತರಗತಿಯಲ್ಲಿ (Travels f.-c.). **F. coat** (ಬಣ್ಣ, ಸುಣ್ಣ, ಬಳಿಯುವುದರಲ್ಲಿ) ಮೊದಲನೆಯ ತೊಡೆತ, ಮ್ಯೆ. **F. cost** ಮೊದಲ ಬೆಲೆ ; (ಲಾಭ ಸೇರಿರದ) ಅಸಲು ಬೆಲೆ. **F.-day** (ವಾರದ) ಮೊದಲ ದಿನ ; ಭಾನುವಾರ ; ಆದಿವಾರ. **F. floor** (ನೆಲಅಂತಸ್ತಿನ ಮೇಲಿನ) ಮೊದಲನೆಯ ಅಂತಸ್ತು, ಮಹಡಿ. **F. form** (ಮಾಧ್ಯಮಿಕ ಪಾಠಶಾಲೆಗಳಲ್ಲಿ) ಮೊದಲನೆಯ ತರಗತಿ, ಪ್ರಥಮ ವರ್ಗ. **F.-fruit** (ಸಾ., ಬ. ವ. ದಲ್ಲಿ) (ಆ ವರ್ಷದ ಭೂವ್ಯವಸಾಯದ) ಮೊದಲ ಫಲ, ಪ್ರಥಮ ಫಲ (ಮು., ದೇವರಿಗೆ ಸಮರ್ಪಿಸಿದ್ದು) ; (ಕೆಲಸ, ಮೊ. ಗಳ) ಮೊದಲ ಫಲಿತಾಂಶ, — ಪ್ರಯೋಜನ. (ಚರಿತ್ರೆ) (ಒಂದು ಅಧಿಕಾರಕ್ಕೆ ಹೊಸದಾಗಿ ಬಂದವನು ತನ್ನ ಮೇಲಿನ ಹುದ್ದೇದಾರನಿಗೆ ಕೊಡಬೇಕಾದ) ರುಸುಮು, ಮೊದಲ ಫಲ. **F.-hand** ನೇರವಾದ ; ನೇಟಾದ ; ಸಾಕ್ಷಾತ್ತಾಗಿ ಬಂದ ; ಮತ್ತೊಬ್ಬರ ಮೂಲಕ ಬಂದದ್ದಲ್ಲದ (At f. hand ನೇರವಾಗಿ). **F.-night(er)** ನಾಟಕದ ಮೊದಲನೆಯ ಪ್ರದರ್ಶನ (ಕ್ಕೆ ಸಾ., ತಪ್ಪದೆ ಹೋಗುವವನು). **F.-offender** (ಹಿಂದೆ ಯಾವ ಅಪರಾಧವೂ ಮಾಡಿದಂತೆ ದಾಖಲೆಯಿಲ್ಲದ) ಪ್ರಥಮಾಪರಾಧಿ. **F.-rate** (ಗು.) ಅತ್ಯುತ್ತಮ ತರಗತಿಯ ; ಸರ್ವೋತ್ಕೃಷ್ಟ ; ಮೊದಲನೆಯ ದರ್ಜೆಯ [The f.-r. Powers (ಬಲದಲ್ಲಿ) ಪ್ರಥಮ ಶ್ರೇಣಿಯ ರಾಷ್ಟ್ರಗಳು ; ಪ್ರಮುಖ ರಾಷ್ಟ್ರಗಳು]. ಅತ್ಯುತ್ತಮವಾದ ; ಬಹಳ ಒಳ್ಳೆಯ (A f.-r. machine ಬಹಳ ಒಳ್ಳೆಯ ಯಂತ್ರ. Feeling f.-r. ಬಹಳ ಚೆನ್ನಾಗಿದ್ದೇನೆ). (ನಾ.) (ನೌಕ) ಹಳೆಯ ಮಾದರಿಯ (ಪ್ರಥಮ ಶ್ರೇಣಿಯ) ಯುದ್ಧದ ಹಡಗು ; ಮೂರಂತಸ್ತಿನ ಯುದ್ಧನೌಕೆ. **Firstly** (ಕ್ರಿ. ವಿ.) ಮೊದಲನೆಯದಾಗಿ ; ಮೊದಲು (ವಿಷಯಗಳನ್ನು ಒಂದಾದಮೇಲೊಂದರಂತೆ ಹೇಳುವಾಗ ಮಾತ್ರ. ಅನೇಕ ಲೇಖಕರು ಈಗಲೂ First ರೂಪವನ್ನೇ ಮೇಲೆಂದೆಣಿಸುತ್ತಾರೆ)

First (ನಾ.) [The f. ಮೊತ್ತ ಮೊದಲನೆಯವನು ; — ಯದು ; ಮೊದಲು ಹೇಳಿದ್ದು. From the f. ಮೊದಲನಿಂದಲೂ; ಆದಿಯಿಂದಲೂ. From f. to last ಮೊದಲಿಂದ ಕೊನೆಯ ವರೆಗೂ ; ಆದ್ಯಂತವಾಗಿ ; ಉದ್ದಕ್ಕೂ. At f. ಮೊದಮೊದಲು ; ಆದಿಯಲ್ಲಿ ; ಆರಂಭದಲ್ಲಿ]. (ಯಾವುದಾದರೂ) ತಿಂಗಳ ಮೊದಲನೆಯ ತಾರೀಖು; ಗುರ್ರೇ ತಾರೀಖು (First of January, etc.). [The F. ಸೆಪ್ಟೆಂಬರು ಮೊದಲನೆಯ ತಾರೀಖು (ಚಕೋರ ಅಥವಾ ತಿತ್ತಿರಿಜಾತಿ ಪಕ್ಷಿಯ ಬೇಟೆಯ ಆರಂಭದ ದಿನ)]. [(ವಾಣಿಜ್ಯ) F. of exchange (Exchange ನೋಡಿ)]. (ಪರೀಕ್ಷೆ ತೇರ್ಗಡೆಯಲ್ಲಿ) ಮೊದಲನೆಯ ಸ್ಥಾನ, ಮೊದಲನೆಯವನು, — ಯದು. (ಬ. ವ. ದಲ್ಲಿ) (ಹಿಟ್ಟು, ಬೆಣ್ಣೆ, ಮೊ. ಗಳ ವಿಷಯದಲ್ಲಿ) ಅತ್ಯುತ್ತಮ ತೆರದ್ದು ; ಮೊದಲನೆಯ ರಖಮಿನದು ; ಅವ್ವಲ್. **Firstling** ಫರ್ಸ್ಟ್‌ಲಿಂಗ್ (ನಾ., ಸಾ., ಬ. ವ. ದಲ್ಲಿ) (ಯಾವುದಾದರೂ ಒಂದರ) ಪ್ರಥಮ ಫಲ ; ಮೊದಲ ಬೆಳೆ ; ಮೊದಲ ಆದಾಯ. ಮೊದಲು ಹುಟ್ಟಿದ್ದು ; ಚೊಚ್ಚಲು (ಕರು, ಮರಿ, ಮೊ. ವು)

First (ಕ್ರಿ. ವಿ.) (ಎಲ್ಲರಿಗಿಂತ, ಎಲ್ಲಕ್ಕಿಂತ) ಮೊದಲು (ಅನೇಕ ವೇಳೆ F. of all, F. and foremost. F. come f. served ಮೊದಲು ಬಂದವರಿಗೆ ಮೊದಲು ಉಪಚಾರ. F. and last ಒಟ್ಟಿನಲ್ಲಿ ; ಮೊತ್ತದಲ್ಲಿ. F. or last ಮೊದಲೋ ಕೊನೆಗೋ ; ಎಂದಾದರೂ)

Firstling, etc. First (ನಾ.) ನೋಡಿ.

Firth ಫರ್ತ್, **Frith** ಫ್ರಿತ್ (ನಾ.) ಕಡಲ ತೋಳು ; ಅಳಿವೆ ; ನದೀಮುಖ.

Fisc, Fisk ಫಿಸ್ಕ್ (ನಾ.) ಪುರಾತನ ರೋಮಿನ ಖಜಾನೆ, ಬೊಕ್ಕಸ, ಭಂಡಾರ ; ರೋಮನ್ ಚಕ್ರವರ್ತಿಯ ಸ್ವಂತ ಬೊಕ್ಕಸ. (ಅಪೂರ್ವವಾಗಿ) ಸರ್ಕಾರದ ಬೊಕ್ಕಸ ; ಖಜಾನೆ ; ರಾಜ್ಯ ಕೋಶ. **Fiscal** (ಗು., ನಾ.) ರಾಜ್ಯಾದಾಯದ ; ಹಣಕಾಸಿನ. (ನಾ.) (ಇಂಗ್ಲೆಂಡು ಹೊರತು ಕೆಲವು ಪರ ರಾಷ್ಟ್ರಗಳಲ್ಲಿ) ನ್ಯಾಯಾಧಿಕಾರಿ. **Fiscally** (ಕ್ರಿ. ವಿ.)

Fiscal, etc. Fisc ನೋಡಿ.

Fish[1] ಫಿಷ್ (ನಾ ; ಬ. ವ. ದಲ್ಲಿ ಸಾ., fish) (ಜನರೂಢಿಯಲ್ಲಿ) ನೀರಿನಲ್ಲಿ ವಾಸಮಾಡುವ ಪ್ರಾಣಿ ; ಜಲಚರ ; ನೀರುಸಿರಿ ; ನೀರ್ವಾಳೆ ; (ನಿಷ್ಕೃಷ್ಟವಾಗಿ) ಜೀವಾವಧಿಯಾಗಿ ಜಲಪುಪ್ಪುಸಗಳೂ ಈಜುರೆಕ್ಕೆಗಳೂ ಉಳ್ಳ, ಶೀತ ರಕ್ತದ, ಕಶೇರುಕ ಪ್ರಾಣಿ : ಮೀನು ; ಮತ್ಸ್ಯ [Pretty kettle of f. ಗೊಂದಲ ; ಅವ್ಯವಸ್ಥೆ. F. out of water ನೀರಿನಿಂದ ಹೊರಗೆ ಹಾಕಿದ ಮೀನು ; ತನ್ನ ಸ್ವಾಭಾವಿಕ ಆವರಣದಿಂದ ಹೊರಗಾದವನು ; ನೆಲೆ ತಪ್ಪಿದವನು. Drunk, dull, mute, as a f. ಮೀನಿನಂತೆ ಕುಡಿದ, ಜಡ, ಮೂಕ. Drink like a f. ಮಿತಿ ಮೀರಿ ಕುಡಿ. Feed the fishes ನೀರಿನಲ್ಲಿ ಮುಳುಗಿಹೋಗು ; ಸಮುದ್ರಪ್ರಯಾಣದ ಓಕರಿಕೆ ಬರು ; ಕಡಲ ಕಾಯಿಲೆ ಅನುಭವಿಸು. All's f. that comes to his net ಬಂದದ್ದನ್ನೆಲ್ಲ ಬಾಚಿಕೊಳ್ಳುತ್ತಾನೆ ; ಅವನಿಗೆ ಬಂದದ್ದೆಲ್ಲ ಲಾಭವೇ. There's as good f. in the sea as ever came out of it ಸಮುದ್ರದಿಂದ ಎಷ್ಟು ಉತ್ತಮವಾದ ಮೀನನ್ನು ತೆಗೆದರೂ ಅದಕ್ಕೆ ಸಮನಾದದ್ದು ಇನ್ನೂ ಎಷ್ಟೋ ಅಲ್ಲಿ ಇದ್ದೇ ಇರುತ್ತದೆ ("ಬಹುರತ್ನಾ ವಸುಂಧರಾ" ಎಂಬಂತೆ). Flat, Flying, Gold, Jelly, Shell, Sun, Sword, etc., - f. (ಆಯಾ ಶಬ್ದಗಳನ್ನು ನೋಡಿ)]. (ಒಬ್ಬನ) ಗಾಳಕ್ಕೆ ಸಿಕ್ಕುವವನು, ಮೋಸಕ್ಕೊಳಗಾಗುವವನು. (ಬಳ. ಮಾ.) ವ್ಯಕ್ತಿ (Cool, loose, queer, f. ಶಾಂತ, ಸಡಿಲ ನಡತೆಯ, ವಿಚಿತ್ರ, — ವ್ಯಕ್ತಿ). ಮೀನಿನ ಮಾಂಸ. F., flesh, and fowl ಮೀನು, ಮಾಂಸ, ಹಕ್ಕಿ(ಯ ಮಾಂಸ). Make f. of one and flesh of the other ಒಬ್ಬರಿಗೊಂದು ಮತ್ತೊಬ್ಬರಿಗೊಂದು ಮಾಡು : ಪಕ್ಷಪಾತ ತೋರು. Neither f., flesh, nor good red herring ಒಂದು ಗೊತ್ತಾದ ಗುಣವಿಲ್ಲದ್ದು ; ಯಾವುದಕ್ಕೂ ಯಾರಿಗೂ ಉಪಯೋಗವಿಲ್ಲದ್ದು ; ಇದೂ ಅಲ್ಲ ಅದೂ ಅಲ್ಲ. Other f. to fry ಹೆಚ್ಚು ಆವಶ್ಯಕವಾಗಿ ಮಾಡಬೇಕಾದ ಇತರ ಕೆಲಸ. The F. or Fishes ಮೀನ ರಾಶಿ. **F.-carver** ಬಡಿಸಲು ಮೀನು ಕತ್ತರಿಸುವ ಚೂರಿ. **F.-globe** ಹೊಂಬಣ್ಣದ ಮೀನು, ಮೊ. ವನ್ನಿಡುವ (ಗಾಜಿನ) ಗೋಳ. **F.-glue** 'ಐಸಿಂಗ್ಲಾಸ್' ಎಂಬ ಮೀನಂಟು ವಜ್ರ. **F.-hook** (ಮೀನು ಹಿಡಿಯಲು ಉಪಯೋಗಿಸುವ) ಗಾಳದ ಕೊಕ್ಕೆ ; (ನಾವೆ) ಲಂಗರನ್ನು ಎತ್ತುವ ಸಲಕರಣೆಯ ಕೊಕ್ಕೆ. **F.-kettle** ಮೀನನ್ನು ಬೇಯಿಸಲು ಉಪಯೋಗಿಸುವ ಪಾತ್ರೆ. **F.-knife** ಮೀನನ್ನು ತಿನ್ನುವುದಕ್ಕಾಗಿ ಕತ್ತರಿಸುವ (ಬೆಳ್ಳಿ, ಮೊ. ಗಳಿಂದ ಮಾಡಿದ) ಚೂರಿ : ಮೀನುಚೂರಿ. **F.-pond** ಮೀನನ್ನಿಟ್ಟಿರುವ ಕೊಳ : ಮೀನು ಕೊಳ ; (ಹಾಸ್ಯವಾಗಿ) ಸಮುದ್ರ. **F.-pot** ಹಾವು-ಮೀನು, ನಳ್ಳಿ, ಮೊ. ನ್ನು ಹಿಡಿಯುವ ಬಿದಿರು ಕುಕ್ಕೆ : ಮೀನು ಕುಕ್ಕೆ. **F.-slice** ಮೀನು ಕತ್ತರಿಸುವ ಚೂರಿ ; ಮೀನನ್ನು ಮಗುಚಿಹಾಕುವ ಅಥವಾ ಹೊರಕ್ಕೆ ತೆಗೆಯುವ ಅಡಿಗೆಯ ಸಾಧನ: ಮೀನು ಮಗುಚುಕೈ. **F.-sound** ಮೀನಿನ ಈಜುಬುರುಡೆ. **F.-tail** (ಅನಿಲದ ಜ್ವಾಲೆ) ಮೀನುಬಾಲದ ಆಕಾರದ (F.-t. burner ಮೀನುಬಾಲದ ಜ್ವಾಲಕ). **F.-torpedo** ಮೀನಿನಾಕಾರದ, ಸ್ವಯಂಚಲಿಯಾದ, ನೌಕಾ ಶಸ್ತ್ರ : ಮೀನಾಕಾರದ ಕ್ಷಿಪಣಿ. **Fishwife** (ನಾ.) ಮೀನು ಮಾರುವವಳು. **Fishlet** (ನಾ.) ಸಣ್ಣ ಮೀನು. **Fishmonger** (ನಾ.) ಮೀನು ಮಾರುವವನು.

Fish (ಕ್ರಿ.) ಮೀನು ಹಿಡಿಯಲು ಯತ್ನಿಸು ; ಮೀನು ಹಿಡಿ (F. in troubled waters ಗಲಾಟೆಯ ಸಂದರ್ಭದಲ್ಲಿ ಲಾಭ ಸಂಪಾದಿಸು ; ಗೊಂದಲದ ಮಧ್ಯೆ ಪ್ರಯೋಜನ ಹುಡುಕು). ಯಾವುದಾದರೂ ವಸ್ತುವಿಗಾಗಿ ನೀರಿನಲ್ಲಿ ಹುಡುಕಾಡು ; ಗಾಳ ಹಾಕು ; ಬಲೆ ಬೀಸು ; (ಗುಟ್ಟುಗಳು, ಮರ್ಯಾದೆಗಳು, ಮೊ. ಕ್ಕಾಗಿ) ಅಡ್ಡಮಾರ್ಗದಿಂದ ಪ್ರಯತ್ನಿಸು. (ನೀರಿನೊಳಗಿನಿಂದ, ಜೇಬು, ಮೊ. ಗಳಿಂದ) ಹೊರಸೆಳೆ. [F. the anchor (ನಾವೆ) ಲಂಗರಿನ ತಗಡುಭಾಗ ಹಡಗಿನ ಅಂಚಿನ ವರೆಗೂ ಬರುವಂತೆ ಎತ್ತು. F. out ಇರುವ ಮೀನನ್ನೆಲ್ಲ ಹಿಡಿದು ಮುಗಿಸಿಬಿಡು]. (ಸಂಗತಿ, ಅಭಿಪ್ರಾಯ, ಗುಟ್ಟು) ಹೊರಡಿಸು, ತಿಳಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದುಕೊ. Fishing-rod (ಗಾಳದ ದಾರವನ್ನು ಕಟ್ಟಿರುವ) ಮೀನು ಗೋಲು. **Físhable** (ಗು.) ; **Físher**[1] (ನಾ.) (ಪ್ರಾಚೀ. ಪ್ರ.) ಮೀನು ಹಿಡಿಯುವವನು ; ಬೆಸ್ತರವನು (F. of men ಕ್ರೈಸ್ತ ಸುವಾರ್ತಾ ಬೋಧಕ) ; ಮೀನು ಹಿಡಿಯುವ ಪ್ರಾಣಿ. **Físherman** (ನಾ.) ಬೆಸ್ತರವನು. (ವಿರ. ಪ್ರ.) ಮೀನು ಹಿಡಿಯುವವನು ; ಮೀನು ಹಿಡಿಯುವ ದೋಣಿ. **Físhery** (ನಾ.) ಮೀನು ಮೊದಲಾದ ನೀರಿನಲ್ಲಿ ದೊರೆಯುವ ಪದಾರ್ಥಗಳನ್ನು ಸಂಗ್ರಹಿಸುವ ಉದ್ಯೋಗ, ಸ್ಥಳ, ಸಂಸ್ಥೆ : ಜಲವಸ್ತು ಸಂಗ್ರಹ ಕಾರ್ಯ, ಸ್ಥಳ, ಸಂಸ್ಥೆ. (ನ್ಯಾ. ಶಾ.) ಕೆಲವು ಜಲಪ್ರಾಂತಗಳಲ್ಲಿ ಜಲವಸ್ತು ಸಂಗ್ರಹಮಾಡುವ ಹಕ್ಕು, ಅಧಿಕಾರ. **Físhing** (ಗು.) ಮೀನು ಹಿಡಿಯುವ ; ಜಲವಸ್ತು ಸಂಗ್ರಹ ಮಾಡುವ. **Físhy** (ಗು.) ಮೀನು ತುಂಬಿರುವ ; ಮೀನಿನಂಥ (F. eye ಶೂನ್ಯ, ಜಡ, —ದೃಷ್ಟಿ) ; ಮೀನಿನ ವಾಸನೆ ಅಥವಾ ರುಚಿ ಇರುವ ; ಮೀನಿನಿಂದ ಕೂಡಿರುವ ; ಮೀನಿರುವ (A f. repast ಮೀನಿನೂಟ). (ಅಸಂ.) ಸಂಶಯಾಸ್ಪದ ಗುಣವುಳ್ಳ ; ನಂಬಿಕೆಗರ್ಹವಲ್ಲದ ; ಸಂದೇಹಾಸ್ಪದವಾದ. **Físhily** (ಕ್ರಿ. ವಿ.) ; **Físhiness** (ನಾ.)

Fish[2] ಫಿಷ್ (ನಾ., ಕ್ರಿ. ಸಕ.) (ನಾವೆ) (ಕೂವೆ, ಮೊ. ನ್ನು ಬಲಪಡಿಸಲು ಉಪಯೋಗಿಸುವ) ಹೊರಉಬ್ಬು ಒಳಉಬ್ಬುಗಳುಳ್ಳ ಮರದ ತುಂಡು ; (ದೂಲ, ಸೇರುವೆ, ಮೊ. ನ್ನು ಬಲಪಡಿಸಲು ಉಪಯೋಗಿಸುವ ಮರ, ಕಬ್ಬಿಣ, ಮೊ. ಗಳ) ಚಪ್ಪಟೆಯ ಹಲಗೆ, ಪಟ್ಟಿ : ಬಿಗಿಪಟ್ಟಿ. (F.-plate ಎರಡು ರೈಲುಕಂಬಿಗಳ ಸೇರಿಕೆಯನ್ನು ಬಂಧಿಸುವ ಪಟ್ಟಿಗಳಲ್ಲೊಂದು). (ಕ್ರಿ.) (ದಿಮ್ಮಿ, ಮೊ. ನ್ನು ಬಗಿಪಟ್ಟಿ ಹಾಕಿ) ಭದ್ರಪಡಿಸು, ಬಲಗೊಳಿಸು ; ರೈಲುಕಂಬಿಗಳನ್ನು ಬಿಗಿಪಟ್ಟಿಗಳಿಂದ ಸೇರಿಸು.

Fish[3] ಫಿಷ್ (ನಾ.) ಆಟಗಳಲ್ಲಿ ಲೆಕ್ಕವಿಡಲು ಉಪಯೋಗಿಸುವ ದಂತ, ಮೊ. ಗಳಿಂದ ಮಾಡಿದ ಕಾಯಿ : ದಚ್ಚಿಕಾಯಿ.

Fisher[1]. **Fish**[1] ನೋಡಿ.

Fisher[2] ಫಿಷರ್ (ನಾ.) (ಅಸಂ.) (ಮು., ಒಂದು ಪೌಂಡಿನ) ಹಣದ ನೋಟು (ಖಜಾನೆಯ ಸೆಕ್ರೆಟರಿ Fisher ಎಂಬಾತನ ಸಹಿಯಿಂದ)

Fisk. **Fisc** ನೋಡಿ.

Fissi- ಫಿಸಿ— (ಸ. ಪೂ. ಪ.) ಸೀಳಿದ— ; ಬಿರಿದ—. **Fissidáctyl** ಫಿಸಿಡ್ಯಾಕ್ಟಿಲ್ (ಗು.) ಬೆರಳುಗಳು ಪ್ರತ್ಯೇಕ ಪ್ರತ್ಯೇಕವಾಗಿರುವ ; ವಿಂಗಡ ಬೆರಳಿನ ; ಬಿಡು—. **Fissíparous** ಫಿಸಿಪರಸ್ (ಗು.) ಬಿರಿದು ಬೇರೆ ಬೇರೆ ಪ್ರಾಣಿಯಾಗುವ ; ವಿದಲ ಜನನದ ; ವಿದಲ ಜನ್ಯ.

Físsile ಫಿಸಿಲ್ (ಗು.) ಸೀಳುವ ; ಬಿರಿಯುವ. **Fissílity** (ನಾ.) ; **Físsion** ಫಿಷ(ಷ್)ನ್ (ನಾ.) ಒಡೆಯುವುದು ; ಬಿರಿಯುವುದು ; ಸೀಳುವುದು ; ಬಿರಿತ ; ಸೀಳಿಕೆ. (ಜೀ. ವಿ.) (ಸಂತಾನಾಭಿವೃದ್ಧಿಗಾಗಿ ಒಂದು ಜೀವಾಣು ಪ್ರತ್ಯೇಕವಾದ ಹೊಸ ಜೀವಾಣುಗಳಾಗಿ) ಒಡೆಯುವುದು : ಜೀವಾಣು ವಿದಳನ. ಭಾಗವಾಗುವುದು. **Físsure** ಫಿಷ್ಯು(ಷ)ರ್ (ನಾ., ಕ್ರಿ.) (ಒಡೆದು, ಸೀಳಿ, ಆದ) ಬಿರುಕು ; ಸೀಳಿಕೆ. (ಸ. ವಿ., ಅಂ. ರ. ಶಾ.) (ಒಂದು ಅಂಗ, ಮೊ. ಗಳಲ್ಲಿಯ) ಕಿರಿದಾದ ಬಿಡುವು, ಬಿರುಕು, ಸಂದು, ಛಿದ್ರ (ಮು., ಮಿದುಳಿನ ಸುರುಳಿಗಳ ಮಧ್ಯೇ ಇರುವದು) ; ಸೀಳುಬಿಟ್ಟಿರುವದು. (ಕ್ರಿ.) ಸೀಳು ; ಒಡೆ ; ಬಿರಿ.

Físsion, Físsure. **Fissile** ನೋಡಿ.

Fist ಫಿಸ್ಟ್ (ನಾ., ಕ್ರಿ. ಸಕ.) ಮುಷ್ಟಿ ; ಹಿಡಿ (ಮು., ಮುಷ್ಟಿಯುದ್ಧದಲ್ಲಿ). (F. law ಮುಷ್ಟಿನ್ಯಾಯ ; ದೊಣ್ಣೆನ್ಯಾಯ ; ಬಲಿಷ್ಠರ ಹಕ್ಕು). (ಹಾಸ್ಯವಾಗಿ) ಕೈ (Give us your f. ಹಸ್ತಲಾಘವ ಕೊಡು ; ಕೈ ಕುಲುಕು). ಬರೆವಣಿಗೆ (Writes a good f. ಒಳ್ಳೆಯ ಕೈ ಬರೆಯುತ್ತಾನೆ. I know his f. ಅವನ ಬರೆವಣಿಗೆ ನನಗೆ ಗೊತ್ತು.) (ಕ್ರಿ.) ಮುಷ್ಟಿಯಿಂದ ಹೊಡೆ ; ಗುದ್ದು. (ನಾವೆ) (ಪಟ, ಹುಟ್ಟು, ಮೊ. ನ್ನು) ಹಿಡಿದುಕೊ. **-fisted** (ಗು.) (Close-f., hard-f. ಹಿಡಿತ ಸ್ವಭಾವದ ; ಜಿಪುಣನಾದ). **Fístic(al)** (ಗು.) (ಹಾಸ್ಯವಾಗಿ) ಮುಷ್ಟಿಯುದ್ಧದ ; ಗುದ್ದಾಟದ. **Físticuffs** (ನಾ., ಬ. ವ.) ಮುಷ್ಟಿಯುದ್ಧ ; ಮುಷ್ಟಾಮುಷ್ಟಿ.

Físticuffs. **Fist** ನೋಡಿ.

Fístula ಫಿಸ್ಟ್ಯು(ಸ್ಟ್ಯೂ)ಲ (ನಾ.) ಕಿರಿದಾದ ಬಾಯುಳ್ಳ, ಕೊಳವಿಯಂತೆ ಉದ್ದವಾದ, ವ್ರಣ ; ಭಗಂದರ. (ತಿಮಿಂಗಿಲ, ಕೀಟಗಳು, ಮೊ. ಗಳಲ್ಲಿ ಸ್ವಾಭಾವಿಕವಾಗಿರುವ) ನಾಳ, ಮೂತಿ. **Fístular** (ಗು.) (ಸ. ವಿ.) ನಾಳದಂತೆ ಟೊಳ್ಳಾದ, ಕೊಳವೆಯಾದ. (ರೋಗ) ನಾಳಿ ವ್ರಣದ. **Fístulous** (ಗು.) = Fistular ; ಕೊಳವಿಯಾಕಾರದ.

Fit[1], **Fytte** ಫಿಟ್ (ನಾ.) (ಪ್ರಾಚೀ. ಪ್ರ.) ಪದ್ಯಕಾವ್ಯದ ಒಂದು ಭಾಗ.

Fit[2] ಫಿಟ್ (ನಾ.) (ಬಿಟ್ಟು ಬಿಟ್ಟು ಬರುವ) ರೋಗದ ಕೆರಳು ; ಉದ್ರೇಕ ; (ಒಂದು ರೋಗದ ತಾತ್ಕಾಲಿಕವಾದ) ಥಟ್ಟನೆಯ ಕೆರಳಿಕೆ ; ಬೀಳುರೋಗ, ಪಾರ್ಶ್ವವಾಯು, ಮೂರ್ಛೆ, ತೀಕ್ಷ್ಣವಾಯು, ಗರ್ಭೋನ್ಮಾದ —ಇವುಗಳ ಥಟ್ಟನೆಯ ಕೆರಳಿಕೆ ಮತ್ತು ಪ್ರಜ್ಞೆತಪ್ಪುವುದು (Give one a f. ಒಬ್ಬನನ್ನು ಬೆರಗುಮಾಡು, ಚಕಿತನನ್ನಾಗಿ ಮಾಡು ; ಅತ್ಯಾಚಾರ ನಡಸು. Beat one into, give one, fits ಸುಲಭವಾಗಿ ಸೋಲಿಸಿಬಿಡು ; ಉರುಳಿಸಿಬಿಡು). ಥಟ್ಟನೆ ಉಂಟಾದ ತಾತ್ಕಾಲಿಕ ಸ್ಥಿತಿ ; ಆವೇಶ (A f. of energy, idleness, devotion, indifference, etc. ಚೈತನ್ಯ, ಸೋಮಾರಿತನ, ಶ್ರದ್ಧೆ, ಔದಾಸೀನ್ಯ, ಮೊ. ಗಳ ಕೆರಳು). ಹುಚ್ಚು ; ಮನೋಭಾವ (When the f. was on him ಆ ಮನೋಭಾವ ಅವನಿಗಿದ್ದಾಗ ; ಹುಚ್ಚು ಕೆರಳಿದಾಗ). By fits (and starts) ಒಂದು ಕ್ರಮವಿಲ್ಲದೆ ; ಹುಚ್ಚು ರೇಗಿದಾಗ. **Fítful** (ಗು.) (ಪ್ರಾಚೀ. ಪ್ರ.) ಒಂದು ಗೊತ್ತಿಲ್ಲದ ; ಒಂದು ಕ್ರಮವಿಲ್ಲದ ; ಮನಬಂದಂತೆ ಬದಲಾಯಿಸುವ ; ಚಂಚಲ. **Fítfully** (ಕ್ರಿ. ವಿ.) ; **Fítfulness** (ನಾ.)

Fit[3] ಫಿಟ್ (ಗು.) ತಕ್ಕ ; ಸರಿಯಾದ ; ಒಪ್ಪುವ ; ಹೊಂದುವ ; ಹೊಂದಿಕೆಯುಳ್ಳ ; ಯೋಗ್ಯ ; ಯುಕ್ತ ; ಉಚಿತ ; ಅರ್ಹ ; ಸಮರ್ಥ [Survival of the fittest (Survival ನೋಡಿ). See or think f. to ಉಚಿತವೆಂದು ತಿಳಿ, ಅರಿ ; —ಮಾಡಲು ನಿಶ್ಚಯಿಸು, ತೀರ್ಮಾನಿಸು. Not f. to hold a candle to (Candle ನೋಡಿ). Crying f. to burst himself ಎದೆ ಬಿರಿಯುವಂತೆ ಅಳುತ್ತ]. ಉಗ್ರ ಕಾರ್ಯ ಮಾಡುವಷ್ಟು ರೇಗಿದ ; ಧೂಮಿಗಿಳಿಯುವಷ್ಟು ತೊಂದರೆಗೆ ಸಿಕ್ಕಿದ, ಬಳಲಿದ. ಸಿದ್ಧವಾದ. ಒಳ್ಳೆಯ ದೇಹ ದಾರ್ಢ್ಯವಿರುವ ; ಒಳ್ಳೆಯ ಆರೋಗ್ಯಸ್ಥಿತಿಯಿರುವ [F. as a fiddle (Fiddle ನೋಡಿ)]. **Fítly** (ಕ್ರಿ. ವಿ.)

Fit (ಕ್ರಿ., ನಾ.) ಹೊಂದಿಕೆಯಾಗಿರು ; ಹೊಂದಿಕೊಂಡಿರು ; ಹೊಂದಿಕೊ ; ಹೊಂದು ; ಒಪ್ಪಿಗೆಯಾಗಿರು ; ಒಪ್ಪು ; ಉಚಿತವಾಗು ; ಯೋಗ್ಯವಾಗು. (ಮು., ಉಡುಪಿನ ವಿಷಯದಲ್ಲಿ) ತಕ್ಕ ಅಳತೆ, ಆಕಾರ, ಗಾತ್ರ, ಉಳ್ಳದ್ದಾಗಿರು [The cap fits (Cap ನೋಡಿ)]. (ಹೊಂದಿಕೆಯ ಭಾಗ, ಮೊ. ವು) ಹಿಡಿಸು, ಹೊಂದು, ಹೊಂದಿಕೆಯಾಗು (ಅನೇಕ ವೇಳೆ *in, into, in with* ಉಪ. ದೊಡನೆ) ; ಹೊಂದಿಕೆ ಮಾಡು ; ಹೊಂದಿಸು ; ಜೋಡಿಸು ; ಕೂಡಿಸು ; ಸೇರಿಸು ; ಯೋಜಿಸು ; ತಕ್ಕದ್ದನ್ನಾಗಿ ಮಾಡು ; ಯೋಗ್ಯ, ಸಮರ್ಥ, —ಮಾಡು [F. on (ಉಡುಪನ್ನು) ತೊಡಿಸಿ, ತೊಟ್ಟು, ನೋಡು]. (ಹಡಗು, ಮೊ. ಕ್ಕೆ) ಹವಣಿಸು, ಒದಗಿಸು (F. out, up ಸಜ್ಜುಮಾಡು ; ಅಳವಡಿಸು). (ನಾ.) ಹೊಂದಿಕೆ ; ಜೋಡಣೆ ; ಉಡುಪಿನ ಹೊಂದಿಕೆಯ ರೀತಿ (A tight, bad, excellent, f. ಬಿಗಿಯ, ಚೆನ್ನಾಗಿಲ್ಲದ, ಅತ್ಯುತ್ತಮವಾದ, — ಹೊಂದಿಕೆ). **F.-out** ಸಜ್ಜು ; ಸಾಧನ ಸಂಪತ್ತು ; ಉಪಕರಣಗಳು. **F.-up** (ಬಳ. ಮಾ.) ತಾತ್ಕಾಲಿಕ ಅಥವಾ ಚರ ನಾಟಕರಂಗ ಮತ್ತು ಅದರ ಅಳವಡಿಕೆಗಳು ; ರಂಗ ಪರಿಕರ (F.-up Company ತಾತ್ಕಾಲಿಕವಾಗಿ ಹೊಂದಿಸಿಕೊಳ್ಳಲಾಗುವ ಪರದೆ, ಮೊ. ನ್ನು ತೆಗೆದುಕೊಂಡುಹೋಗುವ ಸಣ್ಣ ನಾಟಕ ಮಂಡಲಿ). **Fítment** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೀಠ ಸಾಮಗ್ರಿ ; ಸಜ್ಜು. **Fítness** (ನಾ.) ತಕ್ಕದ್ದಾಗಿರುವುದು ; ಯುಕ್ತವಾಗಿರುವುದು ; ಯೋಗ್ಯತೆ ; ಔಚಿತ್ಯ ; ಯುಕ್ತತೆ; ಹೊಂದಿಕೆ (The f. of things ಯೋಗ್ಯವಾದದ್ದು ; ಉಚಿತವಾದದ್ದು ; ತಕ್ಕದ್ದು). **Fítter** (ನಾ.) (ಕ್ರಿಯಾರ್ಥಗಳಲ್ಲಿ). (ಉಡುಪು ಮಾಡುವಲ್ಲಿ) ಕತ್ತರಿಸುವುದು, ಹೊಂದಿಸುವುದು, ಬದಲಾಯಿಸುವುದು, ಮೊ. ಕೆಲಸಗಳನ್ನು ನೋಡಿಕೊಳ್ಳುವವನು. ಯಂತ್ರ ಜೋಡಿಸುವವನು. **Fítting** (ಗು., ನಾ.) (ಕ್ರಿಯಾರ್ಥಗಳಲ್ಲಿ). ಯೋಗ್ಯ ; ತಕ್ಕ ; ಉಚಿತ ; ಒಪ್ಪುವ ; ಸರಿಯಾದ. (ಸಾ., ಬ. ವ. ದಲ್ಲಿ) ಅಳವಡಿಸಿರುವ, ಹೊಂದಿಸಿರುವ, —ವಸ್ತುಗಳು ; ಹೊಂದಾವಣೆಗಳು ; ಸಲಕರಣೆಗಳು ; ಪೀಠ ಸಾಮಗ್ರಿ (F.-shop ಯಂತ್ರಭಾಗಗಳನ್ನು ಜೋಡಿಸುವ ಕಾರ್ಯಾಲಯ). **Fíttingly** (ಕ್ರಿ. ವಿ.)

Fitch ಫಿಚ್ (ನಾ.) 'ಪೋಲ್‌ಕ್ಯಾಟ್' ಎಂಬ ಒಂದು ಪ್ರಾಣಿಯ ಕೂದಲು; ಇದರಿಂದ ಮಾಡಿದ ಕುಂಚಿಗೆ, ಕೂರ್ಚಕ. **Fítchew** ಫಿಚ್ಯೂ (ನಾ.) 'ಪೋಲ್‌ಕ್ಯಾಟ್' ಎಂಬ ಪ್ರಾಣಿ.

Fítchew. **Fitch** ನೋಡಿ.

Fítment, etc. **Fit**[3] (ಕ್ರಿ.) ನೋಡಿ.

Five ಫೈವ್ (ಗು., ನಾ.) ಐದು (೫, 5, V) (Twenty-f., F.- & -twenty ಇಪ್ಪತ್ತೈದು. How old are you ? —F. ನಿನಗೆ ಎಷ್ಟು ವಯಸ್ಸು ? —ಐದು). ಐದು ವಸ್ತುಗಳ, ಐದರ, —ತಂಡ, ಗುಂಪು : ಪಂಚಕ (Sort them into fives ಐದೈದರಂತೆ ವಿಂಗಡಿಸು) ; ಐದು ಗುರುತುಗಳುಳ್ಳ ಇಸ್ಪೀಟೆಲೆ, ದಾಳ, ಕಾಯಿ. (ಕ್ರಿಕೆಟ್ಟಿನಲ್ಲಿ) ಐದು ಓಟ ಮಾಡಲಾಗುವ (ಚೆಂಡಿನ) ಹೊಡೆತ ; ಐದರ ಹೊಡೆತ. ಐದು ಪೌಂಡಿನ ನೋಟು (ಕಾಗದದ ಹಣ). (Bunch of fives ಕೈ ; ಹಸ್ತ). (ಬ. ವ. ದಲ್ಲಿ) ಐದನೆಯ ಅಳತೆಯ ಕೈಚೀಲ, ಜೋಡು, ಮೊ. ವು (ಬ. ವ. ದಲ್ಲಿ) ಸೇಕಡ ಐದರ ದರದ ಬಂಡವಾಳ ಪತ್ರಗಳು. F.-finger ಒಂದು ಜಾತಿಯ ಗಿಡ ; ನಕ್ಷತ್ರ ಮೀನು. F.-finger exercise ಎಲ್ಲ ಬೆರಳುಗಳಿಗೂ ಅಭ್ಯಾಸ ಕೊಡುವ ಪಿಯಾನೊ ವಾದ್ಯದ ಬಜಾವಣೆ. F.-line(d) whip (ಪಾರ್ಲಿಮೆಂಟಿಗೆ ಹಾಜರಾಗಬೇಕೆಂದು ಕಳುಹಿಸುವ) ಐದು ಗೆರೆಯ ಜರೂರು ಕರೆ (ಈಗ್ನ ಅರೂಢಿ). F.-o'clock tea ಸಾಯಂಕಾಲದ ಲಘು ಆಹಾರ. F.-per-cents ಸೇಕಡ ಐದರಂತೆ ಬಡ್ಡಿ ಕೊಡುವ ಬಂಡವಾಳ ಪತ್ರಗಳು, ಸಾರ್ವಜನಿಕ ಸಾಲ ಪತ್ರಗಳು. F.-year plan (ರಷ್ಯದ ಆರ್ಥಿಕ ಅಭಿವೃದ್ಧಿಗಾಗಿ ೧೯೫೧ನೆಯ ಇಸವಿಯಲ್ಲಿ ಆರಂಭಿಸಿದ) ಪಂಚ ವಾರ್ಷಿಕ ಯೋಜನೆ. **Fívefold** (ಗು., ಕ್ರಿ. ವಿ.) ಐದು ಒಟ್ಟಿಗಿರುವ ; ಐದರಷ್ಟು ; ಐವಡಿ. **Fívepenny** (ಫೈವ್‌ಪೆನಿ, ಫಿಪೆನಿ) (ಗು.) ಐದು ಪೆನಿ ಬೆಲೆಯ ; ಐದು ಪೆನಿ ದರದ. ('ಗರ್ನ್‌ಸಿ,' ಮೊ. ಪ್ರಾಂತಗಳಲ್ಲಿ) ಅರ್ಧ ಫ್ರ್ಯಾಂಕು ನಾಣ್ಯ. **Fíver** (ನಾ.) (ಬಳ. ಮಾ.) ಐದು ಪೌಂಡಿನ ನೋಟು (ಕಾಗದದ ಹಣ) ; (ಅಮೆ. ಸಂ.) ಐದು ಡಾಲರಿನ ನೋಟು ; ಐದೆಂದು ಎಣಿಕೆಗೆ ಬರುವ ಯಾವುದಾದರೂ ಒಂದು (ಉದಾ., ಕ್ರಿಕೆಟ್ಟಿನಲ್ಲಿ ಐದರ ಹೊಡೆತ). **Fives** ಫೈವ್ಸ್ (ನಾ.) (ಎರಡು, ಮೂರು ಅಥವಾ ನಾಲ್ಕು ಗೋಡೆಗಳುಳ್ಳ ಅಂಗಳದಲ್ಲಿ ಕೈಯಿಂದ ಅಥವಾ ದಾಂಡಿನಿಂದ ಆಡುವ) ಒಂದು ಚೆಂಡಾಟ.

Fifth (ಗು., ನಾ.) ಐದನೆಯ(ದು) (Smite under the f. rib ಕೊಲ್ಲು. F. wheel of coach ಆವಶ್ಯಕವಿಲ್ಲದೆ ಹೆಚ್ಚಾದದ್ದು ; ಅನಾವಶ್ಯಕ ಸಲಕರಣೆ. F. part ಐದನೆಯ ಭಾಗ ; ಐದರಲ್ಲೊಂದು ಭಾಗ). (ನಾ.) = F. part. (ಸಂ.) ಮೂರು ಸ್ವರಗಳೂ ಒಂದು ಅರ್ಧಸ್ವರವೂ ಸೇರಿದ ಅಂತರ; ಈ ಅಂತರವುಳ್ಳ ಸ್ವರಗಳ ಸ್ವರ ಮೈತ್ರಿ. (ಬ. ವ. ದಲ್ಲಿ) ಐದನೆಯ ದರ್ಜೆಯ ಪದಾರ್ಥ. F. Monarchy ಐದು ದೊಡ್ಡ ಚಕ್ರಾಧಿಪತ್ಯಗಳಲ್ಲಿ ಕೊನೆಯದು (F.-m.-man ಕ್ರಿಸ್ತನು ಕೂಡಲೆ ಎರಡನೆಯ ಸಲ ಅವತರಿಸುವನೆಂದು ಇತರ ರಾಷ್ಟ್ರಾಧಿಕಾರಗಳನ್ನೆಲ್ಲ ಧಿಕ್ಕರಿಸುತ್ತಿದ್ದ ೧೭ನೆಯ ಶತಮಾನದ ಉತ್ಸಾಹಿ).

Fífthly (ಕ್ರಿ. ವಿ.) (ಎಣಿಕೆಯಲ್ಲಿ) ಐದನೆಯದಾಗಿ.

Fifteén, Fífteen ಫಿಫ್‌ಟೀನ್ (ಗು., ನಾ.) ಹದಿನೈದು (೧೫, 15, XV). (ರಗ್ಬಿ ಕಾಲ್ಚೆಂಡಾಟದಲ್ಲಿ) ಹದಿನೈದು ಮಂದಿ ಆಟಗಾರರಿರುವ ಪಕ್ಷ. (The F. ೧೭೧೫ನೆಯ ಇಸವಿಯ 'ಜಾಕೊಬೈಟ್' ದಂಗೆ). **Fifteénth** (ಗು., ನಾ.) ಹದಿನೈದನೆಯ(ದು). **Fífty** (ಗು., ನಾ.) ಐವತ್ತು (೫೦, 50, L, ; f.-one, f.-three, etc., f.-first, f.-third, etc.). F.-F. (ಅಮೆ. ಸಂ.) ಅರ್ಧ ಅರ್ಧ ; ಸಮ ಭಾಗ (Go f.-f. ಸಮ ಭಾಗ ಮಾಡಿಕೊ. On a f.-f. basis ಸಮ ಭಾಗದ ಆಧಾರದಮೇಲೆ). ಅನೇಕ (Have fifty things to tell you ಅನೇಕ ವಿಷಯಗಳನ್ನು ನಿನಗೆ ಹೇಳಬೇಕಾಗಿದೆ). (ನಾ.) ಐವತ್ತರ ತಂಡ (Hid them by fifties in a cave ಅವನ್ನು ಒಂದು ಗವಿಯಲ್ಲಿ ಐವತ್ತು ಐವತ್ತರಂತೆ ಬಚ್ಚಿಟ್ಟನು). The fifties ಜೀವಮಾನದಲ್ಲಿ ಅಥವಾ ಶತಮಾನದಲ್ಲಿ ೪೯ ಮತ್ತು ೬೦ರ ಮಧ್ಯೇ ಇರುವ ಸಂವತ್ಸರಗಳು. **Fíftieth** (ಗು.; ನಾ.) ಐವತ್ತನೆಯ(ದು). **Fíftyfold** (ಗು. ಕ್ರಿ. ವಿ.,) ಐವತ್ತರಷ್ಟು ; —ರಷ್ಟರ.

Fix ಫಿಕ್ಸ್ (ಕ್ರಿ.) (ತತ್ತ್ವಗಳು, ಜ್ಞಾಪಕಶಕ್ತಿ, ಮೊ. ನ್ನು) ಸ್ಥಿರಪಡಿಸು, ಭದ್ರಪಡಿಸು, ನೆಲೆಗೊಳಿಸು, ಬಂಧಿಸು, ದೃಢಪಡಿಸು ; ನೆಡು (*In, on, to* ಉಪ. ದೊಡನೆ). (ಕಣ್ಣು, ನೋಟ, ಪ್ರೀತಿ, ಗಮನ —ಇವನ್ನು) ನಿಶ್ಚಲವಾಗಿ ನಿಲ್ಲಿಸು, ಇಡು, ನೆಡು, ನಾಟು (*On, upon* ಉಪ. ದೊಡನೆ). (ವಸ್ತುವಿನ ವಿಷಯದಲ್ಲಿ) ಗಮನವನ್ನು, ಕಣ್ಣನ್ನು,—ಹಿಡಿದು, ಸೆಳೆದು, ನಿಲ್ಲಿಸು. (ಕಣ್ಣು, ಮುಖಭಾವ) ನಿಶ್ಚಲವಾಗು, —ವಾಗಿಸು. ಚಂಚಲತೆ ಅಥವಾ ಪ್ರವಾಹತೆ, —ಕಳೆ, ಕಳೆದು ಹೋಗು. ಗೆಡ್ಡೆಕಟ್ಟು ; ಘನೀಭವಿಸು. (ಬಣ್ಣವನ್ನು, ಛಾಯಾಚಿತ್ರ ಬಿಂಬವನ್ನು) ಅಳಿಯದಂತೆ, ಸ್ಥಾಯಿಯಾಗಿ ನಿಲ್ಲುವಂತೆ, ಮಾಡು. (ನೋಟ, ಮೊ. ಗಳಿಂದ ಒಬ್ಬನನ್ನು) ಪ್ರತ್ಯೇಕಿಸು, ಗುರುತಿಸು. ಗೊತ್ತಾಗಿ ಅಥವಾ ಸ್ಥಿರವಾಗಿ ನಿಲ್ಲಿಸು ; ನೆಲೆಗೊಳಿಸು ; ಸ್ಥಾಪಿಸು ; ಒಂದು ಗೊತ್ತಾದ ನೆಲೆಯನ್ನು ಹಿಡಿ; ನೆಲೆ ನಿಲ್ಲು. ಆಯ್ಕೆಯನ್ನು ನಿರ್ಧರಿಸು ; ನಿಶ್ಚಯಿಸು ; ನಿರ್ಣಯಿಸು ; ಗೊತ್ತುಮಾಡು ; ತೀರ್ಮಾನಿಸು ; ಸರಿಯಾದ ಸ್ಥಾನನಿರ್ದೇಶ ಮಾಡು. (ಒಂದು ವಸ್ತುವನ್ನು, ವ್ಯಕ್ತಿಯನ್ನು) ಒಂದು ಗೊತ್ತಾದ ಸ್ಥಳಕ್ಕೆ ಅಥವಾ ಕಾಲಕ್ಕೆ ನಿರ್ದೇಶ ಮಾಡು. (ದೇಣಿ, ಮೊ. ಗಳ) ಹೊರೆಯನ್ನು ಗೊತ್ತುಮಾಡು. (ಬೆಲೆ, ತೇದಿ, ಸ್ಥಳ —ಇವನ್ನು) ನಿರ್ಧರಿಸು, ಗೊತ್ತಾಗಿ ಹೇಳು, ಗೊತ್ತು ಮಾಡು. (ಭಾಷೆಯಲ್ಲಿ, ಸಾಹಿತ್ಯದಲ್ಲಿ) ಮಾರ್ಪಾಡುಗಳನ್ನು, ಬೆಳವಣಿಗೆಯನ್ನು, ತಡೆ, ನಿರೋಧಿಸು. ಸ್ಥಿರೀಕರಿಸು. (ಅಮೆ. ಸಂ., ಸಾ., *up* ಉಪ. ದೊಡನೆ) ಅಳವಡಿಸು ; ಕ್ರಮಗೊಳಿಸು ; ವ್ಯವಸ್ಥೆಮಾಡು ; ಸಿದ್ಧಪಡಿಸು ; ತಯಾರಿಸು. **Fixátion** (ನಾ.) ಸ್ಥಿರೀಕರಣ ; ಸ್ಥಾಪನೆ ; ನೆಲೆಗೊಳಿಸುವುದು ; ನೆಲೆಗೊಂಡಿರುವುದು. ಘನೀಕರಣ ; ಘನೀಭವನ ; ಹೆಪ್ಪುಕಟ್ಟುವುದು ; ಹೆತ್ತುಕೊಳ್ಳುವುದು. ಒಂದು ಅನಿಲವು ಒಂದು ಘನವಸ್ತುವಿನೊಡನೆ ಸಂಯುಕ್ತವಾಗುವಂತೆ ಮಾಡುವುದು. **Fíxative** ಫಿಕ್ಸಟಿವ್ (ಗು., ನಾ.) ಗಟ್ಟಿಮಾಡುವ ; ಸ್ಥಿರೀಕರಿಸುವ ; ಸ್ಥಾಪನೆ ಮಾಡುವ. (ನಾ.) ಬಣ್ಣಗಳನ್ನು ಅಥವಾ ರೇಖನಗಳನ್ನು ನೆಲೆಗೊಳಿಸುವುದಕ್ಕಾಗಿ ಉಪಯೋಗಿಸುವ ಪದಾರ್ಥ: ವರ್ಣಸ್ಥಾಪಕ ; ರೇಖನ ಸ್ಥಾಪಕ. **Fíxature** ಫಿಕ್ಸಟ್ಯು(ಚ)ರ್ (ನಾ.) ಕೂದಲನ್ನು ಬಂಧಿಸುವ ಅಂಟುಪದಾರ್ಥ : ಕೂದಲ ಅಂಟು. **Fixed** ಫಿಕ್ಸ್ಟ (ಗು.) (ಕ್ರಿಯಾರ್ಥಗಳಲ್ಲಿ). F. idea ಮೊದಲೇ ನಿಶ್ಚಯಿಸಿಕೊಂಡಿರುವ ಭಾವ ; ಮನಸ್ಸನ್ನು ತಾನೇ ತಾನಾಗಿ ವ್ಯಾಪಿಸಿರುವ ಭಾವ ; ಒಂದೇ ವಿಷಯದ ಗೀಳು. F. acid or oil ವಿಘಟನವಾಗದೆ ಬಾಷ್ಪಭೂತವಾಗದ ಆಮ್ಲ ಅಥವಾ ಎಣ್ಣೆ : ಸ್ಥಿರ ಆಮ್ಲ, ತೈಲ. F. point ಪೊಲೀಸಿನವನನ್ನು ಕಾಯಂ ಆಗಿ ನಿಲ್ಲಿಸಿರುವ, ಇಟ್ಟಿರುವ, ಸ್ಥಳ. F. star (ಇತರ ನಕ್ಷತ್ರಗಳ ಸ್ಥಾನಕ್ಕೆ ಯಾವಾಗಲೂ ಒಂದೇ ದೂರದಲ್ಲಿರುವಂತೆ ತೋರುವ) ಸ್ಥಿರ ನಕ್ಷತ್ರ (ಶುಕ್ರ, ಮೊ. ಗ್ರಹಗಳಂತೆ ಚಲನವುಳ್ಳದ್ದಲ್ಲ). F. capital (Capital[2] ನೋಡಿ). F. property

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಜಮಿನಾನು, ಮನೆ, ಮೊ.) ಸ್ಥಿರಾಸ್ತಿ. **Fíxedly** ಫಿಕ್ಸೆಡ್ಲಿ (ಕ್ರಿ. ವಿ.) ಸ್ಥಿರವಾಗಿ; ನೆಟ್ಟು; (ಮು., ದೃಷ್ಟಿ ವಿಷಯದಲ್ಲಿ) ಅಚಲವಾಗಿ; ಚಲಿಸದೆ; ಏಕಾಗ್ರತೆಯಿಂದ. **Fíxedness** (ನಾ.) ಸ್ಥಿರತೆ; ಅಚಂಚಲತೆ; ಅಚಲತೆ; ನಿಶ್ಚಲತೆ; ದೃಢತೆ; ಸ್ಥಾಯಿತ್ವ; ಶಾಶ್ವತತೆ; ನೆಲೆಪಾಡು; ನಿಷ್ಠೆ. **Fíxings** (ನಾ., ಬ. ವ.) (ಅಮೆ. ಸಂ) ಸಲಕರಣೆಗಳು, ಸಾಧನಗಳು; ಉಪಕರಣಗಳು; ಅನುಬಂಧಗಳು. ಉಡುಪಿನ ಅಲಂಕಾರ. **Fíxity** (ನಾ.) ಸ್ಥಾಯಿತ್ವ; ಸ್ಥಿರಸ್ಥಿತಿ; ಸ್ಥಿರತೆ; ಶಾಶ್ವತತೆ; ದೃಢತೆ; ನೆಲೆ. (ಭೌ. ವಿ.) ಆವಿಯಾಗಿ ಹೋಗದೆ ಅಥವಾ ತೂಕ ಕಡಮೆಯಾಗದೆ ಕಾವುತಡೆದುಕೊಳ್ಳುವ ಗುಣ: ಉಷ್ಣಸ್ಥೈರ್ಯ. **Fíxture** ಫಿಕ್ಸ್ಟ್ಯು(ಚ)ರ್ (ನಾ.) (ಅದರ) ಸ್ಥಳದಲ್ಲಿ ಬಂಧಿಸಿದ, ನೆಲೆಗೊಳಿಸಿದ, ವಸ್ತು. (ನ್ಯಾ. ಶಾ., ಬ. ವ. ದಲ್ಲಿ) ಹಿಡುವಳಿ ಜಮಿನಿಗೆ ಸಂಬಂಧಿಸಿರುವ ವ್ಯಕ್ತಿಸ್ವಾಮ್ಯ ಸ್ವಭಾವದ ವಸ್ತುಗಳು. ನೆಲೆಯಾದವನು; ನೆಲೆಯಾದದ್ದು (Seems to be a f. ಕಾಯಂದಾರನೆಂದು, ನೆಲೆಯಾದುದೆಂದು, ಕಾಣುತ್ತದೆ). ಬೇಟೆಗಾಗಿ ಒಟ್ಟುಗೂಡುವುದು, ಕುದುರೆಯ ಜೂಜು (ವೊ. ಕ್ಕೆ ಗೊತ್ತುಮಾಡಿದ ತಾರೀಖು); ಗೊತ್ತುಪಾಡು.

Fix (ನಾ.) ಉಭಯ ಸಂಕಟ; ಇಕ್ಕಟ್ಟು; ಸಂದುಕಟ್ಟು; ತಪ್ಪಿಸಿಕೊಳ್ಳಲಾಗದ ಸಂದರ್ಭ.

Fixátion, Fíxture, etc. Fix (ಕ್ರಿ.) ನೋಡಿ.

Fízgig ಫಿಸ್‌ಗಿಗ್ (ನಾ., ಗು.) ತಲೆ ತಿರುಗಿಹೋದ, ಹಾವಭಾವ ಚೇಷ್ಟೆಮಾಡುವ, —ಯುವತಿ; ವಿಲಾಸಿನಿ. (ಗು.) ಚಂಚಲ; ಚಪಲ. ಒಂದು ಬಗೆಯ ಸಣ್ಣ ಬಾಣಬಿರುಸು, ಪಟಾಕಿ.

Fizz ಫಿಜ಼್ (ಕ್ರಿ. ಅಕ., ನಾ.) ಹಿಸ್ಸೆಂಬ ಅಥವಾ ಚಟ ಚಟ ಎಂಬ ಶಬ್ದ (ಮಾಡು). ಷಾಂಪೇನ್ ಮದ್ಯ. **Fízzy** (ಗು.); **Fízzle** ಫಿಜ಼್‌ಲ್ (ಕ್ರಿ. ಅಕ., ನಾ.) = Fizz. (F. out ಸರಿಯಾಗಿ ಆರಂಭಮಾಡಿ ಫಲಿಸದೆಹೋಗು; ವ್ಯರ್ಥವಾಗು; ಪುಸ್ಸೆಂದುಹೋಗು). ಪುಸ್ಸೆಂಬ ಶಬ್ದ; ಅಭಾಸ; ವ್ಯರ್ಥ; ಹಾಸ್ಯಾಸ್ಪದ; ನಗೆಗೇಡು.

Flábbergast ಫ್ಲ್ಯಾಬರ್‌ಗಾಸ್ಟ್ (ಕ್ರಿ. ಸಕ.) ಮಂಕು ಹಿಡಿಸು; ದಂಗು ಬಡಿಸು; ಆಶ್ಚರ್ಯಚಕಿತ ಮಾಡು; ಬೆರಗುಗೊಳಿಸಿ ಸ್ತಬ್ಧ ಮಾಡು.

Flábby ಫ್ಲ್ಯಾಬಿ (ಗು.) (ಸಾ., ದೇಹದ ಮಾಂಸಭಾಗ) ಜೋಲು ಬಿದ್ದಿರುವ; ಸತ್ವವಿಲ್ಲದ; ಸಡಿಲವಾದ; ಜಬ್ಬಲಾದ; ದೃಢವಲ್ಲದ. (ಭಾಷೆ, ನಡತೆ) ದಾರ್ಢ್ಯವಿಲ್ಲದ, ಸತ್ವಹೀನ, ನಿಸ್ಸತ್ವ. **Flábbiness** (ನಾ.)

Flabéllate ಫ್ಲಬೆಲೆಟ್, **Flabélliform** ಫ್ಲಬೆಲಿಫಾರ್ಮ್ (ಗು.) (ಸ. ವಿ., ಪ್ರಾ. ವಿ.) ಬೀಸಣಿಗೆಯಾಕಾರದ.

Fláccid ಫ್ಲ್ಯಾಕ್ಸಿಡ್ (ಗು.) ಜೋತುಬಿದ್ದಿರುವ; ಜೋಲಾಡುತ್ತಿರುವ; ಸುಕ್ಕುಬಿದ್ದಿರುವ; ಸಡಿಲವಾದ; ದೃಢವಲ್ಲದ (ಸಾ., ದೇಹದ ಮಾಂಸಭಾಗದ ವಿಷಯದಲ್ಲಿ); ದಾರ್ಢ್ಯಗೆಟ್ಟ; ಶಿಥಿಲವಾದ; ಇಳಿಯಬಿದ್ದಿರುವ; ನಿಸ್ಸತ್ವ; ಚುರುಕಿಲ್ಲದ; ನಿಶ್ಶಕ್ತ. **Flaccídity** (ನಾ.)

Flag[1] ಫ್ಲ್ಯಾಗ್ (ನಾ.) ಜವುಗುಭೂಮಿಯಲ್ಲಿ ಬೆಳೆಯುವ ಒಂದು ಜಾತಿಯ ಗಿಡ. [Flags or F. (ಸಮೂಹ ವಾಚಕ) ಒಂದು ಜಾತಿಯ ಒರಟು ಹುಲ್ಲು]. (ಕೆಲವು ಸಸ್ಯಗಳ ಉದ್ದವಾಗಿಯೂ ತೆಳುವಾಗಿಯೂ ಇರುವ) ಎಸಳು, ಎಲೆ, ಗರಿ. **Flággy** (ಗು.)

Flag[2] ಫ್ಲ್ಯಾಗ್ (ನಾ., ಕ್ರಿ. ಸಕ.) ನೆಲಕ್ಕೆ ಹಾಸುವ ಕಲ್ಲುಚಪ್ಪಡಿ; ಹಾಸುಗಲ್ಲು (= Flagstone); (ಬ. ವ. ದಲ್ಲಿ) ಚಪ್ಪಡಿ ಹಾಸಿದ ನೆಲ. (ಕ್ರಿ.) ನೆಲಕ್ಕೆ ಚಪ್ಪಡಿ ಹಾಸು. **Flágging** (ನಾ.) ನೆಲಕ್ಕೆ ಚಪ್ಪಡಿ ಹಾಸುವುದು; ನೆಲಕ್ಕೆ ಹಾಸುವ ಚಪ್ಪಡಿ; ಹಾಸುಗಲ್ಲು; ಚಪ್ಪಡಿ ಹಾಸಿದ ನೆಲಗಟ್ಟು.

Flag[3] ಫ್ಲ್ಯಾಗ್ (ನಾ.) ಹಕ್ಕಿಯ ರೆಕ್ಕೆಯ ಗರಿ (= F.-feather)

Flag[4] ಫ್ಲ್ಯಾಗ್ (ನಾ.) (ಧ್ವಜ, ಲಾಂಛನ, ಸಂಕೇತ —ಇವಕ್ಕಾಗಿ ಉಪಯೋಗಿಸುವ) ಬಾವುಟ; ಧ್ವಜ; ಪತಾಕೆ; ನಿಶಾನಿ; ಝಂಡ; ಕೇತನ; ಕೇತು; ಗುಡಿ (ಗ್ರಾಂ.) [Black f. (Black ನೋಡಿ). Black flags ಟಾಂಕಿನ್ ಪ್ರದೇಶದಲ್ಲಿ ಹಿಂದೆ ದರೋಡೆಕೋರರಾಗಿದ್ದು, ಈಗ ಅನಿಯತ ಸೈನಿಕರಾಗಿರುವ ಚೀನಿ ಸಿಪಾಯಿಗಳು: ಕಾಳ ಧ್ವಜರು; ಕಪ್ಪು ನಿಶಾನಿಗಳು. White f. ಬಿಳಿಯ ಬಾವುಟ; ಶ್ವೇತ ಧ್ವಜ (ಹಗೆತನವಿಲ್ಲವೆಂದೂ ಸಂಧಿಗೆ ಒಪ್ಪುವೆವೆಂದೂ ಸೂಚಿಸಲು ಉಪಯೋಗಿಸುವದು): ಸಂಧಿ ಧ್ವಜ; ಶಾಂತಿ ಧ್ವಜ. Yellow f. (ಹಡಗಿನಲ್ಲಿ ಅಂಟುರೋಗವಿದೆಯೆಂದಾಗಲಿ, ಆಸ್ಪತ್ರೆಯ ಹಡಗೆಂದಾಗಲಿ, ತನ್ನಲ್ಲಿರಬಹುದಾದ ಅಂಟುರೋಗದ ನಿಯತಿಕಾಲ ಕಳೆಯುವ ವರೆಗೂ ನಿರ್ಬಂಧದಲ್ಲಿರುವ ಹಡಗೆಂದಾಗಲಿ, ಸೂಚಿಸುವ) ಹಳದಿಯ ಬಾವುಟ: ರೋಗದ ಬಾವುಟ. F. of truce ಸಂಧಿಸೂಚಕ (ಬಿಳಿಯ) ಬಾವುಟ. Dip f. ನಿಶಾನಿ ಇಳಿಸು. Lower or strike one's f. (ವಂದನೆಗಾಗಲಿ ಅಧೀನತೆ ಒಪ್ಪಿಕೊಳ್ಳುವುದಕ್ಕಾಗಲಿ) ಬಾವುಟ ತಗ್ಗಿಸು ಅಥವಾ ಕೆಳಕ್ಕಿಳಿಸು]. (ನಾವೆ) (ನೌಬಲಾಧಿಪತಿಯ ಅಧಿಕಾರ ಸೂಚನೆಗಾಗಿ ಆ ಅಧಿಕಾರಿಯಿರುವ ಪ್ರಯಾಣದ ಹಡಗಿನಮೇಲೆ ಹಾರಿಸುವ) ನೌಕಾಧ್ಯಕ್ಷ ಪತಾಕೆ [Hoist, strike, one's f. (ನೌಕೆಯ) ಅಧ್ಯಕ್ಷತೆ ಸ್ವೀಕರಿಸುವ ಚಿಹ್ನೆಯಾಗಿ ಪತಾಕೆಯೇರಿಸು, — ತ್ಯಜಿಸುವ ಚಿಹ್ನೆಯಾಗಿ ಪತಾಕೆಯಿಳಿಸು]. (ಒಂದು ಬೇಟೆಯಾಡುವ ಜಾತಿಯ ಅಥವಾ ನ್ಯೂಫೌಂಡ್‌ಲೆಂಡ್ ತಳಿಯ) ನಾಯಿಯ ಬಾಲ. **F.-boat** ದೋಣಿಪಂದ್ಯಗಳಲ್ಲಿ ಗುರಿಯಾಗಿಟ್ಟಿರುವ ದೋಣಿ; ನಿಶಾನಿ ದೋಣಿ; ಗುರಿ ದೋಣಿ. **F.-captain** ನೌಕಾಧ್ಯಕ್ಷನಿರುವ ಹಡಗಿನ ನಾಯಕ. **F.-day** (ಯಾವುದಾದರೂ ಸಾರ್ವಜನಿಕ ಕಾರ್ಯಕ್ಕಾಗಿ ಹಣವೆತ್ತುವ ಸಂದರ್ಭದಲ್ಲಿ ದಾನಸೂಚನೆಗಾಗಿ ದಾನಿಗಳು ಧರಿಸಲು) ಬಾವುಟ ಮಾರುವ ದಿನ; ಬಾವುಟದ ದಿನ. **F.-lieutenant** ನೌಬಲಾಧಿಪತಿಯ ಹಸ್ತಕ, ಸಹಾಯಾಧಿಕಾರಿ. **F.-list** ಧ್ವಜಾಧಿಕಾರಿಗಳ ಪಟ್ಟಿ. **Flágman** (ಪಂದ್ಯ, ಮೊ. ಗಳಲ್ಲಿ ಸಂಕೇತ ಕೊಡುವ) ಬಾವುಟದವನು, ಬಾವುಟಿಗ. **F.-officer** (ತನ್ನ ಸ್ಥಾನವನ್ನು ಸೂಚಿಸುವ ಪತಾಕೆಯನ್ನು ನೌಕೆಯಮೇಲೆ ಏರಿಸುವ ಅಧಿಕಾರವುಳ್ಳ) ಧ್ವಜಾಧಿಕಾರಿ. **F.-rank** ಧ್ವಜಾಧಿಕಾರಿಯ ಸ್ಥಾನ, ಪದವಿ. **Flágship** ನೌಬಲಾಧಿಪತಿ ಪ್ರಯಾಣಮಾಡುತ್ತಿರುವ ಹಡಗು. **Flágstaff** ಕೇತುದಂಡ; ಧ್ವಜಸ್ತಂಭ; ಬಾವುಟದ ಕಂಬ. **F.-station** ಬಾವುಟದ ಸಂಕೇತವಾದಲ್ಲಿ ಮಾತ್ರ ರೈಲು ಬಂಡಿ ನಿಲ್ಲುವ ನಿಲ್ದಾಣ: ನಿಶಾನಿ ನಿಲ್ದಾಣ. **F.-wagging** (ಸೈನಿಕ ಅಸಂ.) ನಿಶಾನಿಯಾಡಿಸುವುದು; ಸಂಕೇತ ಕೊಡುವುದು. **F.-waver** ಚಳವಳಿಗಾರ.

Flag (ಕ್ರಿ. ಸಕ.) ಬಾವುಟ ಹಾಕು; — ಏರಿಸು; — ನೆಟ್ಟು ಗುರುತುಮಾಡು; ಗುಡಿಗಟ್ಟು. [ಬಾವುಟದ ಸಂಕೇತದ ಮೂಲಕ (ಒಬ್ಬನಿಗೆ)] ಸಮಾಚಾರ ಕೊಡು, ತಿಳಿಸು.

Flag[5] ಫ್ಲ್ಯಾಗ್ (ಕ್ರಿ. ಅಕ.) ಜೋಲುಬೀಳು; ತೊಂಗು; ಇಳಿಯಬೀಳು; ಸಡಿಲವಾಗಿ ಹಿಂದು ಮುಂದಕ್ಕೆ ಚಲಿಸು; ತಲೆಬಾಗು. ಬಾಡು; ಶಕ್ತಿಗುಂದು; ಹಿಂದೆ ಬೀಳು; ಸೊರಗು; ಬಳಲಿಹೋಗು; ಸೋತುಬೀಳು; ಉತ್ಸಾಹ ಕುಗ್ಗು; ನಿಸ್ಸಾರವಾಗು; ಸಪ್ಪೆಯಾಗು; ಮ್ಲಾನವಾಗು; ಖಿನ್ನವಾಗು.

Flagéllant. Flagellate ನೋಡಿ.

Flágellate ಫ್ಲ್ಯಾಜೆಲೇಟ್ (ಕ್ರಿ. ಸಕ.), —ಲೆಟ್ (ಗು.) ಚಾವಟಿಯಿಂದ, ಚಬುಕಿನಿಂದ, ಕೊರಡೆಯಿಂದ, ಹೊಡೆ; ಕಶಾ ಪ್ರಹಾರ ಮಾಡು. (ಗು.) (ಜೀ. ವಿ.) ಅದಿರಾಡುವ ಕಶಾಂಗವುಳ್ಳ. (ಸ. ವಿ.) ಬಳ್ಳಿಗಳು ಅಥವಾ ಬಳ್ಳಿಗಳಂಥ ರೆಂಬೆಗಳು ಉಳ್ಳ. **Flagellátion** (ನಾ.); **Flágellator** (ನಾ.); **Flágellatory** —ಜೆಲಟೊರಿ (ಗು.) ಕಶಾ ಪ್ರಹಾರದ. **Flagéllant, Flágellant** ಫ್ಲ(ಫ್ಲ್ಯಾ)ಜೆಲಂಟ್ (ನಾ., ಗು.) (ಹರಕೆ ತೀರಿಸುವುದಕ್ಕಾಗಲಿ, ಪ್ರಾಯಶ್ಚಿತ್ತವಾಗಿ ಆಗಲಿ) ಚಾವಟಿಯಿಂದ ಹೊಡೆದುಕೊಳ್ಳುವ (ಮತಭ್ರಾಂತ). ಚಾವಟಿಯಿಂದ ಹೊಡೆಯುವ(ವನು); ಕಶಾ ಪ್ರಹಾರಿ. **Flagéllum** ಫ್ಲಜೆಲಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ನಾ.; ಬ. ವ. -lla) (ಸ. ವಿ.) ಬಳ್ಳಿ ; ಹಂಬು ; ಹಬ್ಬುಹೊಡೆ. (ಜೀ. ವಿ., ಪ್ರಾ. ವಿ.) ಚಾವಟಿಯಂಥ ಅನುಬಂಧ ; ಕಶಾಂಗ. **Flagélliform** (ಗು.) —ಆಕಾರದ.

Flagéllum. **Flagellate** ನೋಡಿ.

Flageolét[1], **Flágeolet** ಫ್ಲ್ಯಾಜೊಲೆಟ್ (ನಾ.) (ಆರು ಕಂಡಿಗಳೂ, ಕೆಲವು ವೇಳೆ ಕೀಲಕೈಗಳೂ, ತುಟಿಗಿಟ್ಟುಕೊಳ್ಳಲು ಅಳವಡಿಸಿರುವ ತುದಿ ಬಾಯಿಯೂ ಉಳ್ಳ) ಒಂದು ತೆರದ ಸಣ್ಣ ಗಾಳಿವಾದ್ಯ.

Flageolét[2] ಫ್ಲ್ಯಾಜೊಲೆಟ್ (ನಾ.) ಒಂದು ಬಗೆಯ ಅವರೆ.

Flagítious ಫ್ಲಜಿಷಸ್ (ಗು.) ಅತಿ ಪಾಪಕರ್ಮಿಯಾದ ; ಘೋರ ಕೃತ್ಯ ನಡಸುವ ; ಪರಮ ನೀಚ ; ಮಹಾ ಪಾತಕದ ; ಅತಿ ದುಷ್ಟ ; ದುರಾತ್ಮನಾದ. **Flagítiously** (ಕ್ರಿ. ವಿ.) ; **Flagítiousness** (ನಾ.)

Flágon ಫ್ಲ್ಯಾಗನ್ (ನಾ.) (ಸಾ., ಹಿಡಿಯೂ ಮೂತಿಯೂ ಮುಚ್ಚಳವೂ ಇರುವ, ಭೋಜನಕ್ಕೆ ಮದ್ಯ ಹಾಕಿಡುವ) ದೊಡ್ಡ ಪಾತ್ರೆ ; ಮದ್ಯ ಪಾತ್ರೆ. (ಪ್ರಥುಭೋಜನ ಸಮಾರಂಭದಲ್ಲಿ ಉಪಯೋಗಿಸುವ) ಮದ್ಯ ಕಲಶ. (ಮದ್ಯದ ವ್ಯಾಪಾರದಲ್ಲಿ)ಸುಮಾರು ಎರಡು ಸೀಸೆ ಅಳತೆಯ, ಚಪ್ಪಟೆಮಾಡಿರುವ, ದುಂಡು ಗಾಜು ಸೀಸೆ.

Flágrant ಫ್ಲೇಗ್ರೆಂಟ್ (ಗು.) (ತಪ್ಪಿತ, ತಪ್ಪಿತಸ್ಥ —ಇವರ ವಿಷಯದಲ್ಲಿ) ಎದ್ದು ಕಾಣುವ ; ಕಣ್ಣಿಗೆ ಹೊಡೆಯುವಂತಿರುವ. ಅಪಪ್ರಸಿದ್ಧ ; ಅಪಕೀರ್ತಿಕಾರಕ ; ದೂಷಣೀಯ ; ಕುತ್ಸಿತ. **Flágrancy** (ನಾ.) ಗರ್ಹಣೀಯತೆ ; ದಾರುಣತೆ. **Flágrantly** (ಕ್ರಿ. ವಿ.)

Flail ಫ್ಲೇಲ್ (ನಾ.) (ಕೊನೆಯಲ್ಲಿ ಭಾರವಾದ ಮೋಟುದೊಣ್ಣೆ ತೂಗಾಡುತ್ತಿರುವ) ತೆನೆಬಡಿಯುವ ಕೋಲು ; ಬಡಿಗೋಲು ; ಒಕ್ಕುಗೋಲು.

Flair ಫ್ಲೇರ್ (ನಾ.) ಉತ್ತಮವಾದದ್ದು, ಲಾಭಕರವಾದದ್ದು, ಮೊ. ನ್ನು ಆಯ್ದುಕೊಳ್ಳುವ ಹುಟ್ಟುಬುದ್ಧಿ ; ಸಹಜ ಸಾಮರ್ಥ್ಯ ; ಸೂಕ್ಷ್ಮಗ್ರಹಣ ಶಕ್ತಿ.

Flake[1] ಫ್ಲೇಕ್ (ನಾ.) ('ಓಟ್' ರೊಟ್ಟಿ ಮೊ. ನ್ನು ಇಡುವ) ಗಡಗಂಚಿ ; (ಮೀನು, ಮೊ. ನ್ನು ಒಣಗಿಸುವ) ಕಾಲಟ್ಟ, ನಿಲು ಚೌಕಟ್ಟು.

Flake[2] ಫ್ಲೇಕ್ (ನಾ., ಕ್ರಿ.) (ಮು., ಘನಹಿಮದ) ಉಣ್ಣೆಯಂಥ ಹಗುರವಾದ ಪೊರೆ, ಹರ್ದೆ. ಉರಿಯುತ್ತಿರುವ ಪದಾರ್ಥದಿಂದ ಸಿಡಿದುಬಂದ ಚೂರು ; ಉರಿಚೂರು. (ಚಕ್ಕೆಯದ್ದ) ಅಗಲವಾದ ತೆಳುಚಕ್ಕೆ. ಮೀನು ಮಾಂಸದ ಸಹಜ ವಿಭಾಗ. ಪದರ ; ಸ್ತರ. ಗೀರು ಗೀರಿನ ದಳಗಳುಳ್ಳ 'ಕಾರ್ನೇಷನ್' ಎಂಬ ಹೂವು. (ಕ್ರಿ.) ಘನಹಿಮದಂತೆ ಬೀಳು, ಸುರಿ, ಉದುರಿಸು ; ಹರ್ದೆ ಹರ್ದೆಗಳಾಗಿ ತೆಗೆ, ಬರು. **F.-white** ಅತಿ ಪರಿಶುದ್ಧವಾದ 'ವ್ಹೈಟ್‌ಲೆಡ್' ಬಣ್ಣದಿಂದ ಹರ್ದೆ ಹರ್ದೆಗಳಾಗಿ, ಪೊರೆ ಪೊರೆಯಾಗಿ, ತಯಾರಿಸಿದ ವರ್ಣಪದಾರ್ಥ. **Fláky** (ಗು.)

Flam ಫ್ಲ್ಯಾಮ್ (ನಾ.) ಸುಳ್ಳು ಕಥೆ ; ಕಲ್ಪಿತ ಕಥೆ ; ಕಲ್ಪನೆ ; ಸೃಷ್ಟನೆ ; ತಂತ್ರ ; ಮೋಸ ; ಕಪಟ.

Flámbeau ಫ್ಲ್ಯಾಂಬೋ (ನಾ. ; ಬ. ವ. -s or -x —ಬೋಸ್) (ಮು., ಮೇಣದಲ್ಲದ್ದಿದ ಅನೇಕ ದಪ್ಪಬತ್ತಿಗಳಿಂದ ಮಾಡಿದ) ಪಂಜು, ಮಷಾಲು. **Flamboýant** ಫ್ಲ್ಯಾಂಬಾಯಂಟ್ (ಗು., ನಾ.) (ಕ್ರಿ. ಶ. ೧೫-೧೬ನೆಯ ಶತಮಾನದ ಫ್ರೆಂಚ್ ವಾಸ್ತುಶಿಲ್ಪದಲ್ಲಿ) ಅಲೆಗಳಾಕಾರದ, ಜ್ವಾಲಾ ಮಾಲೆಯಂತಿರುವ, ಗೆರೆಗಳಿಂದ ಚಿತ್ರಿಸಿದ ; ಆಡಂಬರವಾಗಿ ಅಲಂಕರಿಸಿದ, ಬಣ್ಣಹಾಕಿದ. (ನಾ.) ಉರಿಬಣ್ಣದ ಒಂದು ಜಾತಿಯ ಹೂವು.

Flamboýant. **Flambeau** ನೋಡಿ.

Flame ಫ್ಲೇಮ್ (ನಾ.) ಹೊತ್ತಿಕೊಂಡು ಉರಿಯುವ ಅನಿಲ (ಭಾಗ) ; ಉರಿ ; ಜ್ವಾಲೆ [The flames (ಮು., ಸುಟ್ಟುಹಾಕುವ) ಬೆಂಕಿಯ ಜ್ವಾಲೆ]. ಉರಿತ ; ಸುಡುತ (In flames ಹೊತ್ತಿಕೊಂಡು ಉರಿಯುತ್ತ. Burst into f. or flames ಉರಿಯೆದ್ದು). ಪ್ರಕಾಶಮಾನವಾದ ಬೆಳಕು, ಪ್ರಭೆ ; ಉಜ್ಜ್ವಲ ವರ್ಣ. (ಮು., ಪ್ರಣಯದ) ಆವೇಗ (Fan the f. ಬೆಂಕಿಯನ್ನು ಬೀಸು ; ಉದ್ರೇಕಗೊಳಿಸು ; ಕೆರಳಿಸು). (ಹಾಸ್ಯವಾಗಿ) ನಲ್ಲ ; ನಲ್ಲೆ ; ಪ್ರಿಯ ; ಪ್ರಿಯೆ (An old f. of mine ನನ್ನ ಒಬ್ಬ ಹಳೆಯ ನಲ್ಲ, ನಲ್ಲೆ). ಹಲವು ಪತಂಗಜಾತಿ ಹುಳುಗಳಲ್ಲೊಂದು. **F.-projector, -thrower** = Flammenwerfer. **Flámeless** (ಗು.) ; **Flámy** (ಗು.)

Flame (ಕ್ರಿ.) ಉರಿಯೇಳು ; ಉರಿಯೆಬ್ಬಿಸು ; ಹೊತ್ತಿಕೊ ; ಹೊತ್ತಿಸು (ಅನೇಕ ವೇಳೆ *away*, *forth*, *out*, *up* ಉಪ. ದೊಡನೆ). (ಮನೋರಾಗ) ಕೆರಳು ; ಕನಲು ; ಉದ್ರೇಕಗೊಳ್ಳು ; ಭಗ್ಗನೆ ಹೊರಹೊಮ್ಮು. (ಮನುಷ್ಯರ ವಿಷಯದಲ್ಲಿ) ಕೋಪೋದ್ರೇಕಗೊಳ್ಳು ; ಸಿಟ್ಟಿನಿಂದ ಕಿಡಿ ಕಿಡಿಯಾಗು ; — ಉರಿದುಬೀಳು. ಹೊಳೆ ; ಬೆಳಗು ; ಜ್ವಲಿಸು (F. up ಅತಿಯಾಗಿ ಮುಖ ಕೆಂಪೇರು). ಉರಿಯಂತೆ ಮುಂದುವರಿ, ಹರಡು. ಜ್ವಾಲೆಯ ಮೂಲಕ (ಸಂಕೇತ) ಕಳುಹಿಸು. ಬೆಂಕಿಯ ಜ್ವಾಲೆಗೆ ಒಡ್ಡು (Sterilized by flaming ಉರಿಯಾಡಿಸಿ ವಿಷಾಣುಗಳನ್ನು ನಿರ್ಮೂಲ ಮಾಡಿದ). **Fláming** (ಗು.) (ಕ್ರಿಯಾರ್ಥಗಳಲ್ಲಿ). ಬಹು ಶಾಖದ ; ಸುಡುತ್ತಿರುವ (A f. sun ಸುಡುತ್ತಿರುವ ಸೂರ್ಯ ; ಉರಿ ಬಿಸಿಲು). ಉಜ್ಜ್ವಲ ವರ್ಣದ ; ಅತ್ಯುಜ್ಜ್ವಲ. ಅತಿಶಯೋಕ್ತಿಯ ; ಮಿತಿ ಮೀರಿದ ಹೊಗಳಿಕೆಯ (A f. description ಬಹಳ ಉಜ್ಜ್ವಲ ವರ್ಣನೆ). **Flámmable** ಫ್ಲ್ಯಾಮಬ್‌ಲ್ (ಗು.) (ವಿರ. ಪ್ರ., ಮು., Non-f. ಎಂಬಲ್ಲಿ) ಸುಲಭವಾಗಿ ಉರಿ ಹೊತ್ತಿಕೊಳ್ಳುವ (Inflammable)

Flámen (L) ಫ್ಲೇಮೆನ್ (ನಾ.) (ರೋ. ಪ್ರಾ.) (ಒಂದು ದೇವತೆಯ) ಪೂಜಾರಿ, ಅರ್ಚಕ.

Fláming, etc. **Flame** ನೋಡಿ.

Flamíngo ಫ್ಲಮಿಂಗೊ (ನಾ.) (ಉದ್ದಗಾಲಿನ, ನೀಳು ಕತ್ತಿನ, ಬಲವಾದ ಕೊಕ್ಕಿನ, ಉಜ್ಜ್ವಲ ಕೆಂಪುಬಣ್ಣದ ಗರಿಗಳುಳ್ಳ) ಒಂದು ಜಾತಿಯ ಪಕ್ಷಿ.

Flámmenwerfer (G) ಫ್ಲಾಮೆನ್‌ವೆರ್‌ಫರ್ (ನಾ.) ಯುದ್ಧದಲ್ಲಿ ದ್ರವ ರೂಪದ ಕಿಚ್ಚನ್ನು ಎರಚುವ ಯಂತ್ರ ; ಉರಿ ಕಾರುವ ಯಂತ್ರ.

Flanerié, Flaneúr (F) ಫ್ಲಾನ್‌ರೀ, ಫ್ಲಾನರ್ (ನಾ.) (ಪದಶಃ) ಗುರಿಯಿಲ್ಲದೆ ಅಲೆಯುವುದು ; ಸೋಮಾರಿತನ ; ಸೋಮಾರಿ ; ಅಲಸ ; ಉಂಡಾಡಿಗ.

Flange ಫ್ಲ್ಯಾಂಜ್ (ನಾ., ಕ್ರಿ. ಸಕ.) ಹೊರ ಚಾಚಿರುವ ಚಪ್ಪಟೆಯ ಅಂಚು, ಕಂಠ, ಪಕ್ಕಪಟ್ಟಿ (ಇಡು)

Flank ಫ್ಲ್ಯಾಂಕ್ (ನಾ., ಕ್ರಿ. ಸಕ.) ಪಕ್ಕೆಲುಬುಗಳಿಗೂ ಸೊಂಟಕ್ಕೂ ಮಧ್ಯೇ ಇರುವ ಪಕ್ಕೆಯ ಮಾಂಸಭಾಗ ; ಪಕ್ಕೆ ; ಅಳ್ಳೆ. (ಕಟ್ಟಡ, ಬೆಟ್ಟ, ಸೈನ್ಯ, ಮೊ. ಗಳ) ಪಕ್ಕ, ಪಾರ್ಶ್ವ [In f. ಪಕ್ಕದಲ್ಲಿ. Turn f. of (Turn ನೋಡಿ)]. (ಕ್ರಿ.) ಪಕ್ಕವನ್ನು ಕಾಪಿಡು, ಬಲಪಡಿಸು ; ಪಾರ್ಶ್ವರಕ್ಷಣೆ ಮಾಡು. (ಶತ್ರುಸೈನ್ಯದ) ಪಕ್ಕದಮೇಲೆ ಬೀಳು ; ಪಾರ್ಶ್ವಾಕ್ರಮಣ ಮಾಡು ; ಸಾಲಿನ ಉದ್ದಕ್ಕೂ ಗುಂಡಿನ ಮಳೆ ಕರೆ. ಪಕ್ಕದಲ್ಲಿರು ; ಪಕ್ಕದಲ್ಲಿ ಬಳಸಿಕೊಂಡು ಹೋಗು. **Flánker** (ನಾ.) (ಸೈನ್ಯದ ಪಕ್ಕವನ್ನು ರಕ್ಷಿಸುವ ಅಥವಾ ಅದನ್ನು ಅಪಾಯಕ್ಕೊಳಪಡಿಸುವ) ಸೈನಿಕ ರಕ್ಷಣೆಗಳು : ಪಾರ್ಶ್ವಕ. (ಸೈನಿಕ) (ಸಾ., ಬ. ವ. ದಲ್ಲಿ) ಸೇನೆಯ ಪಕ್ಕಭಾಗದಲ್ಲಿ ಕದನಮಾಡುವವನು(ರು). ಯಾವುದಾದರೂ ವಸ್ತುವಿನ ಪಕ್ಕದಲ್ಲಿ, ಮಗ್ಗುಲಲ್ಲಿ, — ಇರುವದು ; ಮಗ್ಗುಲನದು ; ಪಾರ್ಶ್ವಸ್ಥ.

Flánnel ಫ್ಲ್ಯಾನೆ(ನ್)ಲ್ (ನಾ., ಗು, ಕ್ರಿ. ಸಕ) ಸಡಿಲ ನೆಯ್ಗೆಯ ಉಣ್ಣೆಯ ಬಟ್ಟೆ (ಸಾ., ಜುಂಗು ಇಲ್ಲದಿರುವದು) : ಫ್ಲ್ಯಾನೆಲ್ ಬಟ್ಟೆ. (ಬ. ವ. ದಲ್ಲಿ) ತೆರ ತೆರದ ತುಪಟದ ಬಟ್ಟೆಗಳು ; ಉಣ್ಣೆಯ ಸರಕು ; (ಬ. ವ. ದಲ್ಲಿ) ಫ್ಲ್ಯಾನೆಲಿನಿಂದ ಮಾಡಿದ ಒಳಉಡುಪು. ಫ್ಲ್ಯಾನೆಲಿನ ಕಟ್ಟುಪಟ್ಟಿಗಳು, ಉಡುಪುಗಳು (ಮು., ಆಟವಾಡುವಾಗ ತೊಡುವ ಫ್ಲ್ಯಾನೆಲಿನ ಷರಾಯಿ). ಮೈಯುಜ್ಜಿಕೊಳ್ಳುವ ಅಥವಾ ನೆಲವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಜ್ಜುವುದಕ್ಕಾಗಿ ಉಪಯೋಗಿಸುವ ಫ್ಲ್ಯಾನೆಲಿನ ತುಂಡು. (ಗು.) ಫ್ಲ್ಯಾನೆಲಿನಿಂದ ಮಾಡಿದ. (ಕ್ರಿ.) ಫ್ಲ್ಯಾನೆಲಿನಲ್ಲಿ ಸುತ್ತು ; ಫ್ಲ್ಯಾನೆಲಿನಿಂದ ಉಜ್ಜು. **Flánnelled** (ಗು.) ಫ್ಲ್ಯಾನೆಲ್ ಉಡುಪು ತೊಟ್ಟಿರುವ ; ಆಟಗಳಲ್ಲಿ (ಮು., ಕ್ರಿಕೆಟ್ಟಿನಲ್ಲಿ) ಆಸಕ್ತನಾಗಿರುವ. **Flannelétte** — ಲೆಟ್ (ನಾ.) ಹತ್ತಿಯ ದಾರದಿಂದ ಮಾಡಿದ ಕೃತಕ ಫ್ಲ್ಯಾನೆಲು ಬಟ್ಟೆ. **Flánnelly** (ಗು.) ಫ್ಲ್ಯಾನೆಲಿನಂಥ.

Flap ಫ್ಲ್ಯಾಪ್ (ಕ್ರಿ., ನಾ.) (ಅಗಲವಾದ ವಸ್ತುವಿನಿಂದ) ಹೊಡೆ, ಬಡಿ. (ನೊಣ, ಮೊ. ನ್ನು) ಓಡಿಸಿಬಿಡು. (ಹಕ್ಕಿ, ತನ್ನ) ರೆಕ್ಕೆಯ ಚಪ್ಪಟೆಯ ಭಾಗದಿಂದ ಹೊಡೆ. ಜೋಲಾಡು ; ತೂಗಾಡು ; ಹಿಂದಕ್ಕೂ ಮುಂದಕ್ಕೂ ಬಡಿದಾಡು ; (ರೆಕ್ಕೆಗಳು, ರೆಕ್ಕೆಗಳನ್ನು) ಮೇಲಕ್ಕೂ ಕೆಳಕ್ಕೂ ಚಲಿಸು ; ರೆಕ್ಕೆ ಹೊಡೆ. (ನಾ.) (ಅಗಲವಾದ ವಸ್ತುವಿನಿಂದ ಕೊಟ್ಟ ಹಗುರವಾದ) ಏಟು, ಹೊಡೆತ ; ರೆಕ್ಕೆ, ಮೊ. ಗಳ ಬಡಿತ ; ಆಸ್ಫಾಲನ. ಒಂದು ಕಡೆ ಕೀಲಿಟ್ಟು ಅಥವಾ ಕೀಲಿಡದೆ ತಗುಲಿಸಿ, ತೆರೆಯಲೂ ಮುಚ್ಚಲೂ ಆಗುವಂತೆ ಅಳವಡಿಸಿರುವ, ಅಗಲವಾದ ಚಪ್ಪಟೆಯ ತುಂಡು, ಮುಚ್ಚಳ : ಬೀಳುಮುಚ್ಚಳ (ಉದಾ., ಬೋನುಬಾಗಿಲು, ಜೇಬುಮುಚ್ಚಳ, ತೆರೆಪಟ್ಟಿ, ಪರಂಗಿಟೋಪಿಯ ಅಂಚು, ಮೇಜಿನ ಮಡಿಚು ಹಲಗೆ, ಒಂದು ದ್ವಾರದ ಕವಾಟ, ಮೀನುಕಿವಿರಿನ ಮುಚ್ಚಳ, ಶಸ್ತ್ರ ವಿಚ್ಛೇದನದಲ್ಲಿ ಬಿಟ್ಟಿರುವ ಚರ್ಮದ ತುಂಡು). ಮಡಿಪು; ಪದರ; ಅರಳಿರುವ ನಾಯಿಕೊಡೆಯ ಮೇಲ್ಭಾಗ, ಅಥವಾ ಟೋಪಿ. **Flápjack** (ನಾ.) ಕೊಬ್ಬಿನಲ್ಲಿ ಕರಿದ ಹಿಟ್ಟಿನ ಸಣ್ಣ ದೋಸೆ. **Flápper** (ನಾ.) (ನೊಣಗಳನ್ನು ಕೊಲ್ಲಲು ಉಪಯೋಗಿಸುವ) ಚಪ್ಪಟೆಯ ಸಲಕರಣೆ ; (ಹಕ್ಕಿಗಳನ್ನು ಬೆದರಿಸುವ) ಬಡಿಬಡಿ, ಗಲಗಲಿ. ಕಾಡುಬಾತಿನ ಅಥವಾ ತಿತ್ತಿರಿ ಪಕ್ಷಿಯ ಮರಿ. (ಅಸಂ.) (ತಲೆಗೂದಲನ್ನು ಉದ್ದವಾಗಿ ಬಿಟ್ಟುಕೊಂಡಿರುವ) ಇನ್ನೂ ಸಮಾಜಕ್ಕೆ ಪ್ರವೇಶ ಪಡೆಯದ ಹುಡುಗಿ. ಕೀಲಿನಿಂದ ತಗುಲಿಸಿದ ಅಥವಾ ಜೋಲಬಿಟ್ಟಿರುವ ಮುಚ್ಚಳ. ಅಗಲವಾದ ಈಜು ರೆಕ್ಕೆ. ವಲ್ಕವಂತ ಪ್ರಾಣಿಯ ತೋಕೆ. (ಅಸಂ.) ಕೈ. (Gulliver's Travels ಎಂಬ ಕಥೆಯಲ್ಲಿಯ 'ಲಪೂಟ'ನ್ನರ ವಿಷಯವಾಗಿ) ಒಬ್ಬನ ನೆನಪನ್ನಾಗಲಿ ಬುದ್ಧಿಯನ್ನಾಗಲಿ ಚುರುಕುಮಾಡುವ ವ್ಯಕ್ತಿ, ವಸ್ತು ; ಪ್ರಚೋದಕ.

Flápdoódle ಫ್ಲ್ಯಾಪ್‌ಡೂಡ್‌ಲ್ (ನಾ.) ಅಸಂಬದ್ಧತೆ ; ಅವಿವೇಕ ; ಸುಳ್ಳು ಕಂತೆ.

Flápjack, etc. **Flap** ನೋಡಿ.

Flare ಫ್ಲೇರ್ (ಕ್ರಿ., ನಾ.) (ಹಡಗಿನ ಪಕ್ಕಗಳು) ಮೇಲ್ಮುಖವಾಗಿ ಕ್ರಮೇಣ ಉಬ್ಬುತ್ತಹೋಗು, — ಹೋಗುವಂತೆ ಮಾಡು. ಭಗ್ಗನೆ ಉರಿ ಹೊತ್ತಿಕೊ ; (ಚಂಚಲ ಜ್ವಾಲೆಯಿಂದ) ಧಗಧಗಿಸು ; ಉರಿಯಂತೆ ಪ್ರಜ್ವಲಿಸು (ಅನೇಕ ವೇಳೆ *about*, *away*, *out* ಉಪ. ದೊಡನೆ). (F. up ಭಗ್ಗನೆ ಹೊತ್ತಿಕೊ ; ಫಕ್ಕನೆ ರೇಗು, ಕೆರಳು). (ನಾ.) ಕಣ್ಣು ಕೋರೈಸುವ ಚಂಚಲವಾದ ಬೆಳಕು ; ಬಯಲಿನಲ್ಲಿ ಮರೆಯಿಲ್ಲದೆ ಪ್ರಜ್ವಲಿಸುವ ಉರಿ ; ಭಗ್ಗನೆ ಹೊತ್ತಿಕೊಂಡ ಉರಿ. ಸಮುದ್ರದಲ್ಲಿ ಸಂಕೇತಕ್ಕಾಗಿ ಉಪಯೋಗಿಸುವ ಬೆಳಕು. ಆಡಂಬರ. ಹಡಗಿನ ಪಕ್ಕಗಳ ಮೇಲುಬ್ಬು. (F.-up ಭಗ್ಗನೆ ಹೊತ್ತಿಕೊಳ್ಳುವುದು ; ಫಕ್ಕನೆ ಎದ್ದ ಉರಿ. ಸ್ವಲ್ಪ ಕಾಲದ ಉಜ್ಜ್ವಲ ಜನಾನುರಾಗ ; ಆಡಂಬರ ಪ್ರದರ್ಶನ. ಕೋಪೋದ್ರೇಕ. ಕೋಲಾಹಲದ ವಿನೋದ ಸಂಭ್ರಮ). **Fláring** (ಗು.) ಆಡಂಬರದ ; ಬೆಡಗಿನ ; ಕಣ್ಣಿಗೆ ಹೊಡೆಯುವ ; ಕಣ್ಣು ಕೋರೈಸುವ.

Flash ಫ್ಲ್ಯಾಷ್ (ಕ್ರಿ.) ಥಟ್ಟನೆ ಉರಿ ಹೊತ್ತಿಕೊ ; ಧಗ್ಗನೆ ಉರಿಯೇಳು ; ಕಿಡಿಗೆದರು (F. in the pan ಆಡಂಬರ ಪ್ರಯತ್ನ ವ್ಯರ್ಥವಾಗು ; ಪುಸ್ಸೆಂದುಹೋಗು). ಬೆಳಕು ಕೊಡು ; ಬೆಳಗು ; ಪ್ರತಿಫಲಿಸು ; ಹೊಳೆ ; ಪ್ರಕಾಶಿಸು ; ಜ್ವಲಿಸು; ಮಿಂಚಿನಂತೆ ಮಿನುಗು, ಥಳಥಳಿಸು (Eyes f. fire ಕಣ್ಣುಗಳು ಕಿಡಿ ಸೂಸುತ್ತವೆ. F. back defiance ಥಟ್ಟನೆ ಎದುರುಬೀಳು). ಥಟ್ಟನೆ ಕಾಣಿಸಿಕೊ, ಸ್ಫುರಿಸು, ಹೊಳೆ (Flashed upon me that— —ಎಂದು ನನಗೆ ಥಟ್ಟನೆ ಹೊಳೆಯಿತು). ವೇಗದಿಂದ ಚಲಿಸು. (F. up or out ಥಟ್ಟನೆ ರೇಗಿಬೀಳು. Flashed his sword ಕತ್ತಿಯನ್ನು ಝಳಪಿಸಿದನು. Had a lantern flashed in my face ಲಾಂದ್ರದ ಬೆಳಕನ್ನು ನನ್ನ ಮುಖದ ಮೇಲೆ ಬೆಳಗಿದನು). ಟೆಲಿಗ್ರಾಂ ಕಳುಹಿಸು ; ತಂತಿ ಕೊಡು (News was flashed over England ಸುದ್ದಿಯನ್ನು ತಂತಿಯ ಮೂಲಕ ಇಂಗ್ಲೆಂಡಿನಲ್ಲೆಲ್ಲ ಹೊಳಪಿಸಲಾಯಿತು). (ಗಾಜು ಮಾಡುವುದರಲ್ಲಿ) ಹಲಗೆಯಾಗಿ ಹರಡು, — ಹರಡಿಕೊ ; (ಸಾದಾ ಗಾಜಿನಮೇಲೆ) ಬಣ್ಣದ ಪೊರೆ ಹರಡುವಂತೆ ಮಾಡು. (ನೀರು) ನುಗ್ಗಿ ಹರಿ, ಜೋರಾಗಿ ಪ್ರವಹಿಸು. (ಹೊಳೆ, ಮೊ. ನ್ನು) ನೀರಿನಿಂದ ತುಂಬು. ನೆರೆ ಉಕ್ಕುವಂತೆ ಮಾಡು. **F.-board** (ತಿರುಗುಯಂತ್ರದ ಪ್ರವಾಹಕ್ಕೆ ಹೆಚ್ಚು ನೀರನ್ನು ಕಟ್ಟೆಯಿಂದ ಹರಿಯುವಂತೆ ಮಾಡಲಾಗುವ) ಪ್ರವಾಹದ ಹಲಗೆ. **F.-pipe** ಎತ್ತರವಾಗಿರುವ ಅನಿಲದೀಪವನ್ನು ಹೊತ್ತಿಸುವ, ಸಾಲು ತೂತುಗಳುಳ್ಳ ನಾಳಿ. Flashing-point ಎಣ್ಣೆ, ಮೊ. ಗಳಿಂದ ಹೊರಡುವ ಆವಿ ಹೊತ್ತಿಕೊಳ್ಳುವ ಕಾವು.

Flash (ನಾ.) ಥಟ್ಟನೆ ಎದ್ದ ಉರಿ ; ಕ್ಷಣಿಕ ಪ್ರಕಾಶ (F. in the pan ಪುಸ್ಸೆಂದು ಹೋಗುವುದು). ಮಿಂಚಿನ ಹೊಳಪಿನಷ್ಟು ಕಾಲ ; ಕ್ಷಣ (In a flash ರೆಪ್ಪೆ ಹೊಡೆಯುವುದರಲ್ಲಿ ; ಒಂದು ಕ್ಷಣದಲ್ಲಿ). ಆಡಂಬರ ; ವಿಜೃಂಭಣೆ ; ಸಡಗರ. ಹೊಳಪು ; ಸ್ಫುರಣ (A f of hope ಆಸೆಯ ಒಂದು ಹೊಳಪು). ಮಾದಕ ದ್ರವಗಳಿಗೆ ಬಣ್ಣ ಕಟ್ಟಲು ಉಪಯೋಗಿಸುವ ಒಂದು ಸಾಮಗ್ರಿ, ತಯಾರಿಕೆ. (ನೀರು ಆಳವಾಗಿಲ್ಲದ ಸ್ಥಳದಲ್ಲಿ ದೋಣಿಯನ್ನು ನಡಸಲು ಅಣೆಯಮೇಲೆ ನುಗ್ಗುವಂತೆ ಬಿಟ್ಟ) ನೀರಿನ ಪ್ರವಾಹ ; ಹೀಗೆ ಮಾಡಲಾಗುವ ಸಲಕರಣೆ. **F.-light** (ಸಂಕೇತಗಳಿಗೂ, ಸಮುದ್ರ ದೀಪಗೃಹಗಳಲ್ಲಿಯೂ, ರಾತ್ರಿ ಛಾಯಾಚಿತ್ರ ತೆಗೆಯುವುದಕ್ಕೂ, ಉಪಯೋಗಿಸುವ) ಹೊಳಪುಬೆಳಕು. ವಿದ್ಯುತ್ಪುಂಜ. **F.-point** (ಆಧುನಿಕ ಪ್ರ.) = Flashing-point. **Fláshy** (ಗು.) ಹೊರ ಹೊಳಪಿನ ; ಕ್ಷಣಿಕವಾದ ; ಥಳುಕಿನ ; ಆಡಂಬರದ; ಡಬ್ಬಾಬ; ತೋರ್ಕೆಯ; ಪ್ರದರ್ಶನಾಭಿಪ್ರಾಯದ. **Fláshily** (ಕ್ರಿ. ವಿ.) ; **Fláshiness** (ನಾ.)

Flash (ಗು.) ಆಡಂಬರದ ; ಹೊರ ಹೊಳಪಿನ ; ತೋರ್ಕೆಯ ; ಕೃತಕ ; ಖೋಟಾ (F. notes, money ಖೋಟಾ ನೋಟುಗಳು, ನಾಣ್ಯ). ಕಳ್ಳರು, ತಿರುಕರು, ಮೊ. ರ ಸಂಬಂಧವುಳ್ಳ. ಅಸಂಸ್ಕಾರಿ ಪ್ರಯೋಗದ.

Fláshing ಫ್ಲ್ಯಾಷಿಂಗ್ (ನಾ.) ಛಾವಣಿಯಲ್ಲಿಯ ಸೇರಿಕೆ, ಮೊ. ಗಳಲ್ಲಿ ನೀರು ಸೋರದಂತೆ ತಡೆಯುವ ಲೋಹದ ತಗಡು.

Flask ಫ್ಲಾಸ್ಕ್ (ನಾ.) (ಸಾ., Powder-f.) (ಬೇಟೆಗಾರನ ಬಂದೂಕು ಮದ್ದನ್ನು ಇಟ್ಟಿರುವ ಚರ್ಮದ ಅಥವಾ ಲೋಹದ) ಕೋಶ, ಸಂಪುಟ, ಬುಡ್ಡಿ ; (ಬೆತ್ತ ಹೆಣೆದ, ಕಿರುಗುತ್ತಿಗೆಯ, ಮದ್ಯದ ಅಥವಾ ಎಣ್ಣೆಯ) ಇಟಲಿಯ ಸೀಸೆ ; ಬುದ್ದಲಿ. [(ದ್ರಾಕ್ಷಾ ಮದ್ಯ, ಮೊ. ನ್ನು ತುಂಬಿ ಪ್ರಯಾಣಿಕರು ತಮ್ಮ ಜೇಬಿನಲ್ಲಿ ತೆಗೆದುಕೊಂಡು ಹೋಗಲಾಗುವ ಲೋಹದ ಅಥವಾ (ಸಾ., ತೊಗಲು ಕವಚವುಳ್ಳ) ಗಾಜಿನ] ಸೀಸಾಯಿ. **Flásker** (ನಾ.) (ಪ್ರಾಚೀ. ಪ್ರ.) ಉದ್ದವಾಗಿಯೂ, ಹೆಚ್ಚು ಆಳವಿಲ್ಲದೆಯೂ ಇರುವ ಬುಟ್ಟಿ ; ಬಟ್ಟೆ ಹಾಕುವ ಬುಟ್ಟಿ. ಉದ್ದವಾದ ಕತ್ತುಳ್ಳ ಸಣ್ಣ ಸೀಸಾಯಿ.

Flásket. **Flask** ನೋಡಿ.

Flat ಫ್ಲ್ಯಾಟ್ (ಗು., ಕ್ರಿ. ವಿ.) ಸಮತಲವಾಗಿರುವ ; ಚಪ್ಪಟೆಯಾದ ; ಸಪಾಟಾದ; ಮಟ್ಟವಾಗಿರುವ; ತಟ್ಟೆಯಾಗಿರುವ; ಹರಡಿಕೊಂಡಿರುವ; ವಿಸ್ತರಿಸಿರುವ ; ಉದ್ದಕ್ಕೂ ಬಿದ್ದಿರುವ (Fell f. ನೆಲಸಮವಾಗಿ ಬಿದ್ದಿತು. F. against the wall ಗೋಡೆಗೆ ಹತ್ತನಾಗಿ. With the f. hand ಅಂಗೈಯಿಂದ). ಸಮವಾದ ; ನಯವಾದ ; ಹಳ್ಳ ದಿಣ್ಣೆಗಳಿಲ್ಲದ ; ಉಬ್ಬುಗಳಿಲ್ಲದ (F. tint ಒಂದೇ ಸಮವಾದ ವರ್ಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚ್ಛಾಯೆ). ಸುವ್ಯಕ್ತ; ಸ್ಪಷ್ಟ; ಸ್ಫುಟ; ಶುದ್ಧ; ಕೇವಲ (F. denial, refusal ನಿರ್ದಾಕ್ಷಿಣ್ಯ ನಿರಾಕರಣೆ; ಪೂರ್ತ ತಿರಸ್ಕಾರ. F. nonsense ಶುದ್ಧ ಅಸಂಬದ್ಧ. That's f. ಆ ವಿಷಯದಲ್ಲೇನೂ ಸಂಶಯ ಬೇಡ; ಅದು ಖಂಡಿತ). ಜಡ; ನಿರ್ಜೀವ; ನೀರಸ; ಸಪ್ಪೆ; ಪೇಲವ; ಒಂದೇ ರಾಗದ; ಬೇಸರದ (Fall f. ನೀರಸವಾಗಿ, ಸಪ್ಪೆಯಾಗಿ, — ಪರಿಣಮಿಸು; ಮೆಚ್ಚಿಕೆ ಪಡೆಯದೆಹೋಗು; ಉತ್ಸಾಹ ಹುಟ್ಟಿಸದೆಹೋಗು; ವ್ಯರ್ಥವಾಗು. Market is, prices are, f. ವ್ಯಾಪಾರ ಮಂಕಾಗಿದೆ, ಬೆಲೆಗಳು ಬಿದ್ದುಹೋಗಿವೆ). ಮಂದ ಬುದ್ಧಿಯ; ಖಿನ್ನ; ಗೆಲವಿಲ್ಲದ; ಶಕ್ತಿಗುಂದಿದ (F. beer ಉಕ್ಕಿಳಿದ, ಸಪ್ಪೆಯ, ಬಿಯರ್ ಮದ್ಯ). (ಸಂ.) ನೈಜ ಸ್ವರಕ್ಕೆ ಕಡಮೆ ಮಟ್ಟದ (B f. 'ಬಿ' ಸ್ವರಕ್ಕೆ ಅರ್ಧ ಸ್ವರ ಕಡಮೆಯಾದ. Sings f. ಮಟ್ಟ ಸ್ವರದಲ್ಲಿ ಹಾಡುತ್ತಾನೆ). (ನಾವೆ ಮತ್ತು ರೂಪ.) F. aback ಸಂಪೂರ್ಣ ಹಿಂದಕ್ಕೆ. **F.-boat** (ಆಳವಿಲ್ಲದ ನೀರಿನಲ್ಲಿ ಸಾಗಿಹೋಗಲು ಅನು ಕೂಲವಿರುವಂತೆ) ಚಪ್ಪಟೆಯ ತಳವುಳ್ಳ ದೋಣಿ: ಚಪ್ಪಟೆ ದೋಣಿ. **F. candlestick** (ಕೈಯಲ್ಲಿ ಹಿಡಿದುಕೊಂಡು ತಿರುಗಾಡಲು ಅನು ಕೂಲಿಸುವಂತೆ) ಅಗಲವಾದ ತಳವೂ ಗಿಡ್ಡ ಕಾಂಡವೂ ಉಳ್ಳ ಮೋಂಬತ್ತಿ ದೀವಿಗೆ. **F.-fish** ಒಂದು ಮೀನ ಜಾತಿ: ಚಪ್ಪಟೆ ಮೀನು. **F.-foot(ed)** ಚಪ್ಪಟೆ ಅಡಿ(ಯ). **F.-iron** (ಬಟ್ಟೆ ಇಸ್ತ್ರಿಮಾಡುವ) ಚಪ್ಪಟೆ ತಳದ ಕಬ್ಬಿಣದ ಪೆಟ್ಟಿ: ಇಸ್ತ್ರಿ ಪೆಟ್ಟಿ. **F. race** ಮಟ್ಟ ನೆಲದ ಜೂಜೋಟ (ತಡಕೆ ಹಾರುವುದು, ಮೊ. ವು ಅಲ್ಲ). **F. rate** (ಪ್ರಮಾಣಕ್ಕೆ ತಕ್ಕಂತೆ ಹಾಕದ) ಒಂದೇ ಮಟ್ಟದ ದರ: ಮಟ್ಟ ದರ. **Flátly** (ಕ್ರಿ. ವಿ.); **Flátness** (ನಾ.); **Flátten** (ಕ್ರಿ.); **Fláttish** (ಗು.) ಸ್ವಲ್ಪ ಚಪ್ಪಟೆಯಾದ. **Flátways, Flátwise** (ಕ್ರಿ. ವಿ.) ಚಪ್ಪಟೆ ಮುಖ ಮೇಲಾಗಿ, ಮುಂದಾಗಿ, ಅಥವಾ ಮತ್ತೊಂದರ ಮುಖಕ್ಕೆ ಸೇರಿ; ಚಪ್ಪಟೆ ಮುಖವಾಗಿ (ಏಣು ಮುಂದಾಗಿ ಅಲ್ಲ)

Flat (ನಾ.) ಚಪ್ಪಟೆಯಾಗಿರುವದು; ತಟ್ಟೆಯಂತಿರುವದು; ಸಮತಲವಾಗಿರುವದು [On, from, the f. ಸಮ ತಲದಲ್ಲಿ (ರೇಖನ, ಮೊ. ಗಳ ವಿಷಯವಾಗಿ; ಕೆತ್ತನೆಯ ಕೆಲಸದಲ್ಲಿಯಂತೆ ಅಲ್ಲ)]. ಚಪ್ಪ ಟೆಯ ಭಾಗ (The f. of the hand ಅಂಗೈ. With the f. of his sword ತನ್ನ ಕತ್ತಿಯ ಚಪ್ಪಟೆಯ ಭಾಗದಿಂದ). ಮಟ್ಟ ನೆಲ; ಸಮ ನೆಲ; ಬಯಲು; ಮೈದಾನ; ತಗ್ಗು ಭೂಮಿ; ಜವುಗು ಪ್ರದೇಶ. ಮಹಡಿ; ಅಟ್ಟ; ಒಂದು ಮಹಡಿಯಮೇಲಿನ ವಾಸದ ಕೋಣೆಗಳು. ಚಪ್ಪಟೆ ತಳದ ದೋಣಿ. ಆಳವಿಲ್ಲದ ಕುಕ್ಕೆ, ಬುಟ್ಟಿ. (ರಂಗ ಭೂಮಿ) ಚೌಕಟ್ಟಿನಮೇಲೆ ಅಳವಡಿಸಿರುವ ದೃಶ್ಯ, ಪರದೆ. (Join the flats ಒಂದು ವಸ್ತುವನ್ನು ಒಂದುಗೂಡುವಂತೆ, ಅಖಂಡವಾಗಿರುವಂತೆ, ಜೋಡಿಸು; ಸಂಘಟಿತ ಮಾಡು; ಒಂದು ಸಮರಸ ಭಾವ ತೋರುವಂತೆ ಮಾಡು). (ಅಸಂ.) ದಡ್ಡ; ಮೊದ್ದ; ಮುಟ್ಠಾಳ; ಸುಲಭವಾಗಿ ಮೋಸಹೋಗು ವವನು. (ಸಂ.) ನೈಜ ಸ್ವರದಲ್ಲಿ ಅರ್ಧಸ್ವರ ಇಳಿಸಿದ ಸ್ವರ; ಈ ಇಳಿತದ ಚಿಹ್ನೆ. Sharps and flats ಪಿಯಾನೊ ವಾದ್ಯದಲ್ಲಿ ಕಪ್ಪು ಬಣ್ಣದ ಕೀಲಿಕೈಗಳಿರುವ ಸ್ವರಗಳು.

Flat (ಕ್ರಿ. ಸಕ.) (ಮು., ಕಾರ್ಖಾನೆಯ ತಯಾರಿಕೆಯಲ್ಲಿ) ಚಪ್ಪಟೆ ಮಾಡು (ಇತರ ಸಂದರ್ಭಗಳಲ್ಲಿ Flatten)

Flátter ಫ್ಲ್ಯಾಟರ್ (ಕ್ರಿ. ಸಕ.) (ದಯೆ ಸಂಪಾದಿಸಲು) ಅನುಸರಣೆ ಮಾಡು; ಮರ್ಜಿ ಅನುಸರಿಸು; ಮಿತಿಮೀರಿದ ನಮ್ರತೆ ತೋರಿಸು; ದಾಸಾನುದಾಸನಂತೆ ವರ್ತಿಸು; ಕೈ ಕಟ್ಟಿಕೊಂಡು ಹಿಂದೆ ಮುಂದೆ ಓಡಾಡು; ಮುಖಸ್ತುತಿ ಮಾಡು; ಮಿತಿಮೀರಿ ಹೊಗಳು; ಯೋಗ್ಯತೆ ಇಲ್ಲದಿದ್ದರೂ ಶ್ಲಾಘನೆ ಮಾಡು; ಅಹಂಭಾವನೆಗೆ ಪ್ರೋತ್ಸಾಹ ಕೊಡು (I consider myself flattered ಗೌರವಿಸಲ್ಪಟ್ಟಂತೆ ಭಾವಿ ಸುತ್ತೇನೆ). (ಮು., ಆಧಾರವಿಲ್ಲದ) ಪ್ರತೀಕ್ಷೆ ಹುಟ್ಟಿಸು. (ಎಂಬ) ನಂಬಿಕೆ ಯಿಂದ ಸಂತೋಷಪಟ್ಟುಕೊ. (ಕಣ್ಣು, ಕಿವಿ, ಮೊ. ನ್ನು) ತಣಿಸು, ತೃಪ್ತಿಪಡಿಸು (Flattering unction ಆತ್ಮತೃಪ್ತಿಗಾಗಿ ಮಾಡಿಕೊಳ್ಳುವ ಸಮಾಧಾನ). (ಪ್ರತಿರೂಪ, ಚಿತ್ರಕಾರ, ಮೊ. ವಿಷಯದಲ್ಲಿ) ಹೆಚ್ಚು ಅಂದವಾಗಿ ಕಾಣುವಂತೆ ತೋರಿಸು. **Flátterer** (ನಾ.) ಮುಖ ಸ್ತುತಿ ಮಾಡುವವನು; ಹೊಗಳುಭಟ್ಟ. **Fláttery** (ನಾ.) ಮುಖ ಸ್ತುತಿ; ಅತಿ ಪ್ರಶಂಸೆ; ಹುಸಿ ಹೊಗಳಿಕೆ; ಮಿಥ್ಯಾ ಪ್ರಶಂಸೆ. **Fláteringly** (ಕ್ರಿ. ವಿ.)

Flátulent ಫ್ಲ್ಯಾಟ್ಯುಲೆಂಟ್ (ಗು.) ಆಹಾರನಾಳದಲ್ಲಿ ವಾಯುವನ್ನು ಹುಟ್ಟಿಸುವ; — ವಾಯು ಕೂಡುವುದರಿಂದುಂಟಾದ; — ವಾಯು ಕೂಡುವ; — ವಾಯು ಕೂಡಿ ತೊಂದರೆಯಾಗುವ. (ರೂಪ.) ಉಬ್ಬಿದ; ಊದಿದ; ವಾಯು ತುಂಬಿದ; ಪೊಳ್ಳಾದ; ಬರಿ ಆಡಂಬರದ. **Flátulence** (ನಾ.) ವಾಯು ಸೇರಿದ ಸ್ಥಿತಿ; ವಾಯು ತುಂಬಿರು ವುದು; ವಾಯು. (ರೂಪ.) ಡಂಭ; ಆಡಂಬರ. **Flátulency** (ನಾ.) = Flatulence. **Flátulently** (ಕ್ರಿ. ವಿ.); **Flátus** (L) ಫ್ಲೇಟಸ್ (ನಾ.; ಬ. ವ. Flatuses) ಜಠರದಲ್ಲಿ ಅಥವಾ ಕರುಳಿನಲ್ಲಿ ಸೇರಿದ ವಾಯು, ವಾತ; ಜಠರ ವಾಯು.

Flátus. **Flatulent** ನೋಡಿ.

Flaunt ಫ್ಲಾಂಟ್ (ಕ್ರಿ., ನಾ.) ಅಹಂಕಾರದಿಂದ, ಗರ್ವದಿಂದ, ಒಲೆ ದಾಡು, ತೂಗಾಡು, ತೂಗಾಡಿಸು; ಬೆಡಗು ತೋರಿಸಿಕೊ; (ತನ್ನನ್ನು, ತನ್ನ ಅಲಂಕಾರವನ್ನು) ತೋರಿಸಿಕೊ, ಪ್ರದರ್ಶಿಸು, ಮೆರೆ. (ನಾ.) ಪ್ರದರ್ಶನ ಶೀಲತೆ; ಒಲಪು; ಒಯ್ಯಾರ. **Flaúntingly** (ಕ್ರಿ. ವಿ.); **Flaúnty** (ಗು.) ಅಹಂಕಾರದಿಂದ ಮೆರೆಯುವ; ಬೆಡಗಿನ; ಒಯ್ಯಾರದ.

Flaútist ಫ್ಲಾಟಿಸ್ಟ್ (ನಾ.) ಕೊಳಲೂದುವವನು; ಕೊಳಲುಗಾರ.

Flavéscent ಫ್ಲೇವೆಸೆಂಟ್ (ಗು.) ಹಳದಿಗೆ ತಿರುಗುವ; ನಸು ಹಳದಿಯ; ಪೀತಚ್ಛಾಯೆಯ.

Flávin ಫ್ಲೇ(ಫ್ಲ್ಯಾ)ವಿನ್ (ನಾ.) 'ಓಕ್' ಮರದಿಂದ ಪಡೆದ, ಶಸ್ತ್ರ ಚಿಕಿತ್ಸೆಯಲ್ಲಿ ಪೂತಿನಾಶಕವಾಗಿ ಉಪಯೋಗಿಸುವ, ಮತ್ತು ಹಳದಿಯ ಬಣ್ಣ ಕೊಡುವ, ಒಂದು ಬಗೆಯ ಪದಾರ್ಥ.

Flávour ಫ್ಲೇವರ್ (ನಾ., ಕ್ರಿ. ಸಕ.) (ಆಹಾರ ವಸ್ತುವಿನ) ಸುವಾಸನೆ, ರುಚಿ, ರಸ. ವಾಸನೆಯೂ ರುಚಿಯೂ ಕೂಡಿರುವ ಇಂದ್ರಿಯಾನು ಭವ. (ಸ್ಪಷ್ಟಗೊಳಿಸಲಾಗದ ಯಾವುದಾದರೂ) ವಿಶಿಷ್ಟ ಗುಣ. ಅಭಿ ರುಚಿ. (ಕ್ರಿ.) ರುಚಿ ಕಟ್ಟು; — ಕೊಡು; ಒಗ್ಗರಣೆ ಹಾಕು; ಒಗ್ಗ ರಿಸು. **Flávouring** (ನಾ.) ರುಚಿ ಕೊಡುವುದು; ರುಚಿ ಕೊಡುವುದ ಕ್ಕಾಗಿ ಉಪಯೋಗಿಸುವ ಪದಾರ್ಥ; ರುಚಿಕಾರಕ. **Flávorous, Flávourous** (ಗು.) ರುಚಿಕೊಡುವ; ರುಚಿಯಾಗಿರುವ; ನಾಲಗೆ ಗಾಗಲಿ ಮೂಗಿಗಾಗಲಿ ಹಿತವಾಗಿರುವ. **Flávourless** (ಗು.); **Flávoursome** (ಗು.) = Flavorous.

Flaw[1] ಫ್ಲಾ (ನಾ., ಕ್ರಿ.) ಒಡಕು; ಬಿರುಕು; ಸೀಳು; ಛಿದ್ರ; ಕುಂದು; ಕೊರತೆ; ನ್ಯೂನತೆ; ಲೋಪ; ದೋಷ; ಕಳಂಕ; ತಪ್ಪು; ಐಬು. (ಕ್ರಿ.) ಒಡೆ; ಸೀಳು; ಬಿರಿ; ಛಿದ್ರಿಸು; ಕೆಡಿಸು; ಕುಂದು ತರು; ಹಾಳುಮಾಡು. **Flawless** (ಗು.); **Flawlessly** (ಕ್ರಿ. ವಿ.); **Flawlessness** (ನಾ.)

Flaw[2] ಫ್ಲಾ (ನಾ.) ಗಾಳಿಯ ಬಿರುಸಾದ ಬೀಸು; ಬಿರುಸು ಗಾಳಿ; ಸುಂಟರ ಗಾಳಿ; ಅಲ್ಪಕಾಲದ ಬಿರುಗಾಳಿ.

Flawn ಫ್ಲಾನ್ (ನಾ.) (ಪ್ರಾಚೀ. ಪ್ರ.) (ಮೊಟ್ಟೆ, ಹಾಲು, ಮೊ. ಗಳಿಂದ ಮಾಡಿದ) ಒಂದು ತೆರದ ಭಕ್ಷ್ಯ.

Flax ಫ್ಲ್ಯಾಕ್ಸ್ (ನಾ.) ನಾರಿಗಾಗಿ ಬೆಳಸುವ, ನೀಲಿಯ ಹೂವಿನ, 'ಲನ್ಸೀಡ್' ಎಂಬ ಬೀಜವಾಗುವ, ಒಂದು ತೆರದ ಸಸ್ಯ; ಒಂದು ತೆರದ 'ಅಗಸೆ' ಗಿಡ; ಇದೇ ಬಗೆಯ ಇತರ ಸಸ್ಯಗಳು (ವಿಶೇಷ ಪದ ದೊಡನೆ: Dwarf-f., Toad-f., F.-lily, F.-dodder). (ನಯ ಮಾಡಿದ ಅಥವಾ ಮಾಡದ) ಅಗಸೆಯ ನಾರು; ನಯ ಮಾಡಿದ ಅಗಸೆಯ ನಾರಿನ ಬಟ್ಟೆ: ನಾರು ಬಟ್ಟೆ. **F.-seed** 'ಲನ್ಸೀಡ್'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂಬ ಸೀಮೆ ಅಗಸೆಯ ಬೀಜ. **Fláxen** ಫ್ಲ್ಯಾಕ್ಸೆ(ಕ್ಸ್)ನ್ (ಗು.) ಅಗಸೆಯ ನಾರಿನ. (ಕೂದಲು) ನಯ ಮಾಡಿದ ಅಗಸೆಯ ನಾರಿನ ಬಣ್ಣದ ; ಮಾಸಲು ಹಳದಿ ಛಾಯೆಯ ಕಂದು ಬಣ್ಣದ.

Flay ಫ್ಲೇ (ಕ್ರಿ. ಸಕ.) (ಮನುಷ್ಯನ ಅಥವಾ ಮೃಗದ) ಚರ್ಮ ಸುಲಿ. (ರೂಪ.) ಕಟುವಾಗಿ ಟೀಕಿಸು ; ಕಠಿನ ವಿಮರ್ಶೆ ಮಾಡು ; ಉಗ್ರವಾಗಿ ಖಂಡಿಸು. (ಒಬ್ಬನನ್ನು) ಕೊಳ್ಳೆ ಹೊಡೆ, ಸುಲಿಗೆ ಮಾಡು, ಸುಲಿ(ದುಕೊ), ಸೂರೆ ಮಾಡು. (ಚರ್ಮ, ತೊಗಟೆ, ಸಿಪ್ಪೆ) ಸುಲಿದುಹಾಕು. (ಹುಲ್ಲಿನ ತೆಂಡೆಯನ್ನು) ಹೆರೆದು ಸಮ ಮಾಡು. **F.-flint** ಸುಲಿಗೆಗಾರ ; ಲೋಭಿ ; ಜಿಪುಣ ; ಕೃಪಣ.

Flea ಫ್ಲೀ (ನಾ.) (ಮನುಷ್ಯನ ಮತ್ತು ಇತರ ಪ್ರಾಣಿಗಳ ರಕ್ತ ಕುಡಿದು ಜೀವಿಸುವ) ರೆಕ್ಕೆಯಿಲ್ಲದ ಒಂದು ಸಣ್ಣ ನೆಗೆಹುಳು : ಚಿಗಟ ; ಚಿಕ್ಕಾಡು (Send one away with a f. in his ear ಆಕ್ಷೇಪಣೆಯಿಂದ, ನಿರಾಕರಣೆಯಿಂದ, ಮುಖಗೆಡಿಸಿ ಕಳುಹಿಸಿಬಿಡು). = F.-beetle ; ಸಣ್ಣ ಅಥವಾ ಅಲ್ಪ ಜಂತು ; ಕೀಟ (Sand-f. ಮರಳು ಚಿಗಟ. Water-f. ನೀರು ಚಿಗಟ). **F.-bane, F.-wort** ಸಸ್ಯ ಜಾತಿಗಳು. **F.-beetle** ('ಹಾಪ್ಸ್' ಬೆಳೆಯನ್ನು ನಾಶಮಾಡುವ) ಒಂದು ಜಾತಿಯ ಜಿಗಿ ಕೀಟ. **F.-bite** ಚಿಗಟದ ಕಡಿತ ; (ರೂಪ.) ಅಲ್ಪ ಶ್ರಮ ; ಸಣ್ಣ ತೊಂದರೆ ; ಅಲ್ಪ ವೆಚ್ಚ ; ಕೇವಲ ಅಲ್ಪವಾದದ್ದು. (ಒಂದು ಪ್ರಾಣಿಯ ಮೈಬಣ್ಣದಲ್ಲಿ) ಸಣ್ಣ ಕೆಂಪು ಚುಕ್ಕೆ. **F.-bitten** ಚಿಗಟ ಕಡಿದ ; ಚಿಗಟ ತುಂಬಿರುವ. (ಕುದುರೆ, ಮೊ. ಗಳ ಬಣ್ಣದ ವಿಷಯದಲ್ಲಿ) ನಸು ಬಣ್ಣದ ದೇಹದಮೇಲೆ ಸಣ್ಣ ಸಣ್ಣ ಕೆಂಪು ಚುಕ್ಕೆಗಳು ಅಲ್ಲಲ್ಲಿ ಹರಡಿರುವ. **F.-dock** ಒಂದು ಜಾತಿಯ ಸಸ್ಯ. **F.-louse** ನೆಗೆಯುವ ಗಿಡಹೇನು.

Fleam ಫ್ಲೀಮ್ (ನಾ.) (ಕುದುರೆಯ ಮೈಯಿಂದ ರಕ್ತಹೊರಡಿಸಲು ಉಪಯೋಗಿಸುವ) ಎರಡು ಏಣಿನ ಚೂಪಾದ ಶಸ್ತ್ರ.

Fleche (F) ಫ್ಲೇಷ್, ಫ್ಲೆಷ್ (ನಾ.) (ಕ್ರೈಸ್ತ ಆರಾಧನ ಮಂದಿರದಲ್ಲಿಯ ಚೂಪು ಕೊನೆಯ ಒಂದು) ತೆಳುಗೋಪುರ.

Fleck ಫ್ಲೆಕ್ (ನಾ., ಕ್ರಿ. ಸಕ.) ಮಚ್ಚೆ ; ಕಲೆ ; ಮತ್ತಿ. ಬಣ್ಣದ ಅಥವಾ ಬೆಳಕಿನ ಮಚ್ಚೆ. ಸಣ್ಣ ಕಣ ; ಅಣು. (ಕ್ರಿ.) ಮಚ್ಚೆಗಳಿಂದ ಗುರುತು ಮಾಡು ; ಮಚ್ಚೆ ಮಚ್ಚೆ ಮಾಡು ; ಬಣ್ಣ ಬಣ್ಣ ಮಾಡು. **Flécker** (ಕ್ರಿ. ಸಕ.) = Fleck. **Fléckless** (ಗು.)

Flécker = Fleck.

Fled ಫ್ಲೆಡ್. Flee ಧಾತುವಿನ ಭೂತ., ಭೂ. ಕೃ.

Fledge ಫ್ಲೆಜ್ (ಕ್ರಿ.) ಗರಿ, ಪುಕ್ಕ, ಹಾರುರೆಕ್ಕೆ, — ಬರು, ಬರಿಸು ; ಗರಿ ಮೂಡು, ಮೂಡಿಸು ; ರೆಕ್ಕೆ ಬರು, ಬರಿಸು ; ಗರಿಗಳಿಂದ ಅಥವಾ ತುಪ್ಪುಳಿನಿಂದ ಅಲಂಕರಿಸು. Full-fledged ಪೂರ್ತಿಯಾಗಿ ಗರಿ ಮೂಡಿದ ; ರೆಕ್ಕೆ ಪುಕ್ಕ ಬೆಳೆದ ; ಸರ್ವಾಂಗ ಪರಿಪೂರ್ಣವಾದ. **Flédgeless** (ಗು.) ; **Flédg(e)ling** (ನಾ.) (ಗರಿ ಮೂಡುತ್ತಿರುವ) ಮರಿ ಹಕ್ಕಿ. (ರೂಪ.) ಅನುಭವವಿಲ್ಲದವನು ; ಅನನುಭವಿ.

Flee ಫ್ಲೀ (ಕ್ರಿ. ; ಭೂತ., ಭೂ. ಕೃ. Fled. ಈಗ ಸಾ., Flee, Fleeing ಗೆ ಬದಲಾಗಿ Fly, Flying ಎಂಬವು ಪ್ರಯೋಗ. Is fled or has fled) ಓಡಿಹೋಗು ; ಪಲಾಯನ ಮಾಡು ; ಓಡಿ ಹೋಗಿ ತಲೆ ತಪ್ಪಿಸಿಕೊ (*From, before* ಉಪ. ದೊಡನೆ) ; ಮರೆಯಾಗು ; ಮೈಗರೆ ; ಅದೃಶ್ಯವಾಗು ; ಮಾಯವಾಗು ; ನಿಂತುಹೋಗು ; ಮುಗಿದುಹೋಗು ; ತೀರಿಹೋಗು ; ಹೋಗಿಬಿಡು ; ಬಿಟ್ಟು ಓಡಿಹೋಗು ; ಫಕ್ಕನೆ ಬಿಟ್ಟುಹೋಗು ; ಕಂಬಿ ಕೀಳು ; ತೊರೆದುಬಿಡು ; ಉಳಿ ; ತ್ಯಜಿಸು.

Fleece ಫ್ಲೀಸ್ (ನಾ., ಕ್ರಿ. ಸಕ.) ಕುರಿ, ಮೊ. ಪ್ರಾಣಿಗಳ ತುಪ್ಪಟದ, ಉಣ್ಣೆಯ, — ಹೊದಿಕೆ, ತೊವಲು. (Golden F. ಚಿನ್ನದ ಉಣ್ಣೆ, ತುಪ್ಪಟ. ಆಸ್ಟ್ರಿಯದ, ಸ್ಪೈನಿನ, 'ನೈಟ್' ಪದವಿಯ ಒಂದು ದರ್ಜೆ). ಒಂದು ಕುರಿಯಿಂದ ಒಂದು ಸಲ ಕತ್ತರಿಸಿದ ಉಣ್ಣೆಯ ಮೊತ್ತ. ಒರಟಾದ, ಸಮೃದ್ಧವಾದ ಅಥವಾ ಉಣ್ಣೆಯಂತಿರುವ, ತರೆಗೂದಲು : ಬಿರುಗೂದಲು ; ಪೊದೆಗೂದಲು ; ಉಣ್ಣೆಗೂದಲು. ಉಣ್ಣೆಯಂತಿರುವದು (ಬಿಳಿ ಮೋಡ, ಬೀಳುವ ಘನಹಿಮ, ಮೊ. ವು). (ಎಕ್ಕುವುದರಲ್ಲಿ) ಹತ್ತಿಯ ಅಥವಾ ಉಣ್ಣೆಯ ಎಳೆಗಳ ತೆಳುವಾದ ಪಟ್ಟೆ. (ಕ್ರಿ.) (ಕುರಿಯ) ತುಪ್ಪಟ ಕತ್ತರಿಸು (ವಿರ. ಪ್ರ.). ಹಣ, ಆಸ್ತಿ, ಮೊ. ನ್ನು ಸುಲಿದುಕೊ, ಅಪಹರಿಸು, ಲೂಟಿಮಾಡು, ಲುಟಾಯಿಸು. ಉಣ್ಣೆಯಂತೆ ಹರಡಿರು (Sky fleeced with clouds). **Fleéceable** (ಗು.) ; (-) **fleeced** (ಗು.) ಉಣ್ಣೆಯ ತೊವಲುಳ್ಳ. **Fleécy** (ಗು.) ಉಣ್ಣೆದೊವಲುಳ್ಳ ; ಉಣ್ಣೆದೊವಲಿನಿಂದ ಮಾಡಿದ ; ಉಣ್ಣೆಯಂತಿರುವ ಜುಂಗುಳ್ಳ ; ಉಣ್ಣೆಯಂಥ.

Fleer ಫ್ಲಿಯರ್ (ಕ್ರಿ. ಅಕ., ನಾ.) ಲಕ್ಷ್ಯವಿಲ್ಲದೆ ಅಥವಾ ಹಾಸ್ಯಕ್ಕೀಡು ಮಾಡುವಂತೆ ನಗು, ಮುಖ ಸೊಟ್ಟಗೆ ಮಾಡು, ಅಣಕಿಸು ; ಗೇಲಿ ಮಾಡು ; ರೇವಡಿಯೆಬ್ಬಿಸು ; ಪರಿಹಾಸ್ಯ ಮಾಡು ; ತಿರಸ್ಕಾರದಿಂದ ನೋಡು. (ನಾ.) ಅಣಕ(ದ ನೋಟ, ಮಾತು) ; ಪರಿಹಾಸ.

Fleet[1] ಫ್ಲೀಟ್ (ನಾ.) ನೌಕಾ ಬಲ ; ಹಡಗು ಪಡೆ ; ಒಬ್ಬ ನೌಕಾಧಿಪತಿಯ ಅಧೀನದಲ್ಲಿರುವ ಯುದ್ಧದ ಹಡಗುಗಳು (The f. ನೌಬಲ). ಒಟ್ಟಿಗೆ ಹೋಗುವ ಅನೇಕ ಹಡಗುಗಳು ಅಥವಾ ದೋಣಿಗಳು ; ಹಡಗು ಸಾಲು ; ದೋಣಿ ತಂಡ ; ನೌಕಾ ಪಂಕ್ತಿ. F. of cabs, taxis, etc. ಒಬ್ಬ ಮಾಲೀಕನಿಗೆ ಸೇರಿದ ಬಾಡಿಗೆ ಬಂಡಿಗಳ, ಮೋಟಾರು ಬಂಡಿಗಳ, ತಂಡ.

Fleet[2] ಫ್ಲೀಟ್ (ನಾ.) ಕಡಲ ಚಾಚು ; ಖಾರಿ. The F. ಲಂಡನ್ನಿನಲ್ಲಿ ತೇಮ್ಸ್ ನದಿಗೆ ಬೀಳುವ ಒಂದು ಹಳ್ಳ (ಈಗ, ಮುಚ್ಚುಚರಂಡಿ) ; ಇದರ ಬಳಿಯ ಸೆರೆಮನೆ. F. marriage ಈ ಸೆರೆಮನೆಯ ಅಕ್ಕಪಕ್ಕದಲ್ಲಿರುವ (ಎಂದರೆ, ಅಪಯಶಸ್ಸಿನ) ಪಾದ್ರಿ ಗೋಪ್ಯವಾಗಿ ನಡಸಿದ ಮದುವೆ. F. Street ವಾರ್ತಾ ಪತ್ರಿಕೆಗಳು ಮತ್ತು ಪತ್ರಿಕಾ ಕರ್ತರು.

Fleet[3] ಫ್ಲೀಟ್ (ಗು., ಕ್ರಿ. ವಿ., ಕ್ರಿ. ಅಕ.) (ಕಾವ್ಯ) ವೇಗವಾದ ; ಬೇಗನೆ ; ಶೀಘ್ರ ; ಕ್ಷಿಪ್ರ ; ಚುರುಕಾದ ; ಚುರುಕಾಗಿ. ಕ್ಷಣಿಕ ; ಕ್ಷಣ ಭಂಗುರ. (ಕ್ರಿ.) ಜಾರಿಹೋಗು ; ಕಾಣದೆ ಹೋಗು ; ಮಾಯವಾಗು ; ಕ್ಷಣಿಕವಾಗಿರು ; ಬೇಗ ಬೇಗ ಹೋಗು ; ತಿಳಿಯದಂತೆ ಜಾರಿಕೊ ; ನುಸುಳಿಹೋಗು ; ಹಾರಿಹೋಗು ; ಅದೃಶ್ಯವಾಗು. **Fleéting** (ಗು.) ; **Fleétingly** (ಕ್ರಿ. ವಿ.) ; **Fleétly** (ಕ್ರಿ. ವಿ) ; **Fleétness** (ನಾ.)

Fleet[4] ಫ್ಲೀಟ್ (ಗು., ಕ್ರಿ. ವಿ.) (ನೀರು) ಆಳವಿಲ್ಲದ ; ಮೇಲೆ ಮೇಲೆಯೇ ; ಹೆಚ್ಚು ಆಳಕ್ಕೆ ಹೋಗದೆ (Plough or sow f. ಮೇಲೆ ಮೇಲೆಯೇ ಉಳು, ಬಿತ್ತು)

Fléming ಫ್ಲೆಮಿಂಗ್ (ನಾ.) ಫ್ಲ್ಯಾಂಡರ್ಸಿನ ಪ್ರಜೆ, ನಿವಾಸಿ. **Flémish**[1] (ಗು., ನಾ.) ಫ್ಲ್ಯಾಂಡರ್ಸಿನ ಅಥವಾ ಫ್ಲೆಮಿಂಗರ ; ಫ್ಲೆಮಿಷ್ ಭಾಷೆ.

Flémish[2] ಫ್ಲೆಮಿಷ್ (ಕ್ರಿ. ಅಕ.) (ಬೇಟೆನಾಯಿಯ ವಿಷಯದಲ್ಲಿ) ಬೇಟೆಯನ್ನು ಹುಡುಕುತ್ತಿರುವಾಗ ಬಾಲವನ್ನೂ ಮೈಯನ್ನೂ ಕಂಪಿಸು, ನಡುಗಿಸು.

Flench, Flinch[1], **Flense** ಫ್ಲೆನ್ಚ್, ಫ್ಲಿನ್ಚ್, ಫ್ಲೆನ್ಸ್ (ಕ್ರಿ. ಸಕ.) (ತಿಮಿಂಗಿಲವನ್ನು) ತುಂಡು ತುಂಡಾಗಿ ಕತ್ತರಿಸು. (ಸೀಲ್ ಜಲಚರವನ್ನು) ಚರ್ಮ ಸುಲಿ.

Flesh ಫ್ಲೆಷ್ (ನಾ.) ಮಾಂಸ ; ಬಾಡು ; ಅಡಗು [F. and blood (ನಾ.) ದೇಹ ; ಶರೀರ ; ಮೈ ; ದೇಹಪದಾರ್ಥ ; ಮನುಷ್ಯರು ; ಮನುಷ್ಯ ವರ್ಗ ; (ಮನೋವಿಕಾರಗಳು, ದೌರ್ಬಲ್ಯಗಳು, ಮೊ. ಗಳಿಂದ ಕೂಡಿದ) ಮನುಷ್ಯ ಸ್ವಭಾವ ; ಮಾನವ ಪ್ರಕೃತಿ ; ಮನುಷ್ಯತ್ವ. (ಗು.) ಜೀವಂತ ; ಜೀವ ತುಂಬಿರುವ (ಅಸ್ವಾಭಾವಿಕ ಅಥವಾ ಕಲ್ಪನಾ ಮಾತ್ರದ್ದಲ್ಲ). One's own f. and b. ಹತ್ತಿರ ಸಂಬಂಧಿಗಳು ; ರಕ್ತ ಸಂಬಂಧಿಗಳು ; (ತನ್ನ) ಸಂತತಿಯವರು. F. and fell ಒಟ್ಟು ದೇಹ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶರೀರವೆಲ್ಲ ; ಮೈಯೆಲ್ಲ. (ಕ್ರಿ. ವಿ.) ಪೂರ್ತಿಯಾಗಿ ; ಸಂಪೂರ್ಣವಾಗಿ. One f. ಒಂದೇ ವ್ಯಕ್ತಿಯಂತೆ ಒಟ್ಟುಗೂಡಿರುವ ; ಒಂದೇ ದೇಹದಂತಿರುವ. Proud f. ಗಾಯದಮೇಲೆ ಏಳುವ ಗುಳ್ಳೆಗಳು. Make his f. creep ಮೈ ಜುಮ್ಮೆನ್ನುವಂತೆ ಮಾಡು. (ಮು., ಅತಿಮಾನುಷ ವಿಷಯದ ಭೀತಿಯಿಂದ) ಭಯಪಡಿಸು, ಭೀತಿಗೊಳಿಸು, ದಿಗಿಲುಬೀಳಿಸು, ಗಾಬರಿಪಡಿಸು]. (ಹಣ್ಣಿನ ಅಥವಾ ಸಸ್ಯದ) ಮೆತು ತಿರುಳು. ಮೈತುಂಬು ; ಮಾಂಸಲತ್ವ ; ಬೊಜ್ಜು ; ಸ್ಥೂಲತೆ (Lose, put on, f. ಮೈ ಕರಗು, ಬೊಜ್ಜು ಕರಗು ; ಮೈ ತುಂಬಿಕೊ, ಬೊಜ್ಜು ಬೆಳೆ. In f. ಮೈ ತುಂಬಿಕೊಂಡು ; ಕೊಬ್ಬಿ ; ಮಾಂಸಲವಾಗಿ). (ಮೀನನ್ನು, ಕೆಲವು ವೇಳೆ ಕುಕ್ಕುಟ ವರ್ಗವನ್ನೂ, ಬಿಟ್ಟು) ಪ್ರಾಣಿದೇಹದಲ್ಲಿಯ ಆಹಾರಪದಾರ್ಥ, ಮಾಂಸ [F.-feeding ಮಾಂಸ ತಿನ್ನುವುದು. F.-eater ಮಾಂಸಾಹಾರಿ. Neither f., fowl, nor, etc. (Fish[1] ನೋಡಿ)]. ಮನುಷ್ಯನ ಮೈ, ದೇಹ [F.-colour(ed) ಪೀತಚ್ಛಾಯೆಯ ನಸುಗೆಂಪು ಬಣ್ಣ(ದ)]. = F. and blood (ಮೇಲೆ ನೋಡಿ). (All f. ಪ್ರಾಣವಿರುವ ಯಾವುದಾದರೂ. In the f. ದೇಹದೊಡನೆ ; ಸಶರೀರವಾಗಿ; ದೇಹ ಧರಿಸಿ ; ಮೂರ್ತಿಮತ್ತಾಗಿ ; ಜೀವದಿಂದ ; ಜೀವಂತವಾಗಿ. After the f. ಶಾರೀರಕವಾಗಿ ; ದೈಹಿಕವಾಗಿ). ವಿಷಯ ಭೋಗಗಳು ; ವಿಷಯಾಸಕ್ತಿ ; ಕಾಮ ಕ್ರೋಧಗಳು (Sins of the f. ವ್ಯಭಿಚಾರ). **F.-brush, F.-glove** ಮೈಯುಜ್ಜಿ ರಕ್ತಪರಿಚಲನೆಯನ್ನು ಚುರುಕುಗೊಳಿಸುವುದಕ್ಕಾಗಿ ಉಪಯೋಗಿಸುವ ಕೂರ್ಚ, ಕೈಚೀಲ: ಉಜ್ಜು ಕೂರ್ಚ ; — ಕೈಚೀಲ. **F.-fly** ಸತ್ತ ಮಾಂಸದಲ್ಲಿ ತತ್ತಿಯನ್ನು ಅಥವಾ ಹುಳುಮರಿಗಳನ್ನು ಇಡುವ ನೊಣ. **F.-pots** (ಬೈಬಲ್ಲಿನಲ್ಲಿ) ಭೋಗ ಜೀವನ. **F. side** or f. ಮಾಂಸಕ್ಕೆ ಅಂಟಿಕೊಂಡಿದ್ದ ಚಕ್ಕಳದ ಕಡೆ. **F. tints** (ವರ್ಣಕರೆಯಲ್ಲಿ) ಮಾಂಸವರ್ಣ. **F. tights** (ನಟರೂ ನಾಟ್ಯಕಾರರೂ ಧರಿಸುವ) ದೇಹದ ಬಣ್ಣದಂತೆ ಕಾಣುವ ಉಡುಪು. **F.-wound** (ಎಲುಬನ್ನಾಗಲಿ, ಮರ್ಮಸ್ಥಾನವನ್ನಾಗಲಿ ಮುಟ್ಟದೆ ಇರುವ) ಮಾಂಸದ ಗಾಯ. **Flésher** (ನಾ.) (ಸ್ಕಾ. ಪ್ರ.) ಕಟುಕ ; ಕಸಾಯಿ. (ಅಮೆ. ನಂ.) ಚರ್ಮದಿಂದ ಮಾಂಸ ಹೆರೆಯುವ ಕತ್ತಿ. **Fléshings** (ನಾ., ಬ. ವ.) (ಸಹಜವಾದ ಚರ್ಮದಂತೆ ತೋರಲು ರಂಗಭೂಮಿ, ಮೊ. ಗಳಲ್ಲಿ ಬಿಗಿಯಾಗಿರುವಂತೆ ತೊಟ್ಟಿರುವ, ಸಾ., ರೇಷ್ಮೆಯ) ಮಾಂಸ ವರ್ಣದ ಉಡುಪು. **Fléshless** (ಗು.) ; **Fléshly** (ಗು.) (ಮು., ಇಂದ್ರಿಯಗಳ ವಿಷಯದಲ್ಲಿ ; ವ್ಯಕ್ತಿಗಳ ವಿಷಯದಲ್ಲಿ ವಿರ. ಪ್ರ.) ದೈಹಿಕ ; ಭೋಗಾಸಕ್ತಿಯ ; ಇಂದ್ರಿಯ ವಶ. ದೇಹ ಸಂಬಂಧವಾದ ; ಶಾರೀರಿಕ ; ಮಾನುಷ ; ಮರ್ತ್ಯ (ದೇವತ್ವವಲ್ಲದ, ಆಧ್ಯಾತ್ಮಿಕವಲ್ಲದ) ; ಪ್ರಾಪಂಚಿಕ. **Fléshliness** (ನಾ.) ; **Fléshy** (ಗು.) ಮೈ ತುಂಬಿಕೊಂಡಿರುವ ; ಮಾಂಸಲ ; ಬೊಜ್ಜು ಬೆಳೆದಿರುವ. (ಸಸ್ಯದ ಅಥವಾ ಹಣ್ಣಿನ ಭಾಗ) ಮೆತು ತಿರುಳಿನಿಂದ ಕೂಡಿದ ; ಮಾಂಸದಂಥ. **Fléshiness** (ನಾ.)

Flesh (ಕ್ರಿ. ಸಕ.) (ಬೇಟೆನಾಯಿ, ಮೊ. ನ್ನು) ರಕ್ತದ ರುಚಿ ತೋರಿಸಿ ಹುರುಪುಗೊಳಿಸು, ಹುರಿದುಂಬಿಸು ; ರಕ್ತಪಾತಕ್ಕೆ ತೊಡಗಿಸು; ಕೊಲೆಗೆ ಪಳಗಿಸು ; ಕಠಿನ ಮಾಡು. ಗೆಲವಿನ ಮುನ್ಸೂಚನೆ ತೋರಿಸಿ ಉದ್ರೇಕಿಸು, ಕೆರಳಿಸು. (ಖಡ್ಗಕ್ಕೆ) ಮೊದಲನೆಯ ಸಲ ಮಾಂಸದ ರುಚಿ ತೋರಿಸು ; (ರೂಪ.) (ಲೇಖನಿ, ಬುದ್ಧಿ ಚಾತುರ್ಯ, ಮೊ. ನ್ನು) ಮೊದಲನೆಯ ಸಲ ಉಪಯೋಗಿಸು.

Fleúr-de-lís (F) ಫ್ಲರ್ ಡ ಲೀ, — ಲೀಸ್ [ನಾ.; ಬ. ವ. Fleurs- (ಉಚ್ಚಾರಣೆ ಏ. ವ. ದಂತೆಯೇ)], **Flower-de-lúce** ಫ್ಲವರ್ ಡಿ ಲೂಸ್ (ಪ್ರಾಚೀ. ಪ್ರ., ಅಮೆ. ಸಂ.) (ನಾ.) 'ಐರಿಸ್' ಎಂಬ ಹೂವು. (ವಂಶಲಾಂಛನದಲ್ಲಿ) ನೈದಿಲೆ, ಲಿಲಿ. (ಏ. ವ. ಅಥವಾ ಬ. ವ. ದಲ್ಲಿ) ಫ್ರಾನ್ಸ್ ದೇಶದ ರಾಜ ಬಿರುದಾವಳಿಗಳ ಲಾಂಛನ, ಫಲಕ, ಕವಚ. ಫ್ರಾನ್ಸ್ ದೇಶದ ರಾಜ ಕುಟುಂಬ. ಫ್ರಾನ್ಸ್ ದೇಶ.

Fleúret ಫ್ಲೂರೆಟ್ (ನಾ.) ಸಣ್ಣ ಹೂವಿನಂಥ ಆಭರಣ. ಕತ್ತಿಯ ಸಾಧನೆಯಲ್ಲಿ ಉಪಯೋಗಿಸುವ (ಮೊಂಡು ಮೊನೆಯ ಅಥವಾ ಮೊನೆಗೆ ಗುಂಡು ಸಿಕ್ಕಿಸಿರುವ) ಸಣ್ಣ ಕತ್ತಿ.

Fleurón (F) ಫ್ಲರಾನ್ (ನಾ.) (ವಾಸ್ತುಶಿಲ್ಪದಲ್ಲಿಯ ನಾಣ್ಯ, ಮೊ. ಗಳ ಮೇಲಿನ) ಹೂವಲಂಕಾರ.

Fleúry ಫ್ಲೂರಿ, **Flóry** ಫ್ಲೋರಿ (ಗು.) (ವಂಶಲಾಂಛನ) ನೈದಿಲೆ ಚಿತ್ರಿಸಿದ.

Flew. Fly ಧಾತುವಿನ ಭೂತ.

Flews ಫ್ಲೂಸ್ (ನಾ., ಬ. ವ.) ನೆತ್ತರುನಾಯಿ, ಮೊ. ಗಳ ಜೋಲಾಡುವ ತುಟಿಗಳು, ಜೋಲ್ದುಟಿಗಳು.

Flex ಫ್ಲೆಕ್ಸ್ (ಕ್ರಿ. ಸಕ., ನಾ.) (ಶಾಸ್ತ್ರ ಪ್ರ.) (ಕೈ ಕಾಲು, ಮೊ. ನ್ನು ಸ್ನಾಯುವಿನ ಸಂಕೋಚನದಿಂದ) ಬಗ್ಗಿಸು. (ಭೂ. ವಿ.) (ಭೂ ಪದರಗಳನ್ನು) ಬಗ್ಗಿಸು, ಬಾಗಿಸು. (ನಾ.) (ವಿದ್ಯುದ್ದೀಪಗಳಲ್ಲಿ ಉಪಯೋಗಿಸುವ ರಕ್ಷಾ ಕವಚವುಳ್ಳ) ಬಾಗುವ ತಂತಿ. **Fléxible** (ಗು.) ಮುರಿಯದಂತೆ ಬಗ್ಗುವ ; ಬಾಗುವ ; ಮೆತುವಾದ ; ಮಣಿಯುವ ; ಬಗ್ಗಿಸಲಾಗುವ. ಸುಲಭವಾಗಿ ನಡಸಲಾಗುವ ; ನಿರ್ವಹಿಸಲಾಗುವ. ದಾಕ್ಷಿಣ್ಯಪರ ; (ಸಂದರ್ಭಕ್ಕೆ ತಕ್ಕಂತೆ) ಹೊಂದಿಕೊಳ್ಳುವ ; ಬೇಕಾದಂತೆ ತಿರುಗಿಸಿಕೊಳ್ಳಲಾಗುವ. **Flexibílity** (ನಾ.) ; **Fléxibly** (ಕ್ರಿ. ವಿ.); **Fléxile** ಫ್ಲೆಕ್ಸಿಲ್ (ಗು.) ಮೆತುವಾದ ; ತಿದ್ದಬಹುದಾದ ; ನಡಸಲಾಗುವ. ಒಂದರಿಂದೊಂದಕ್ಕೆ ತಿರುಗುವ ; ಬಹುಮುಖ ಚತುರನಾದ. **Flexílity** (ನಾ.) ; **Fléxion** ಫ್ಲೆಕ್‌ಷನ್ (ನಾ.) ಬಾಗುವುದು ; ಬಗ್ಗುವುದು ; ಬಾಗು ; ವಕ್ರ(ತೆ) ; ಡೊಂಕು ; ಕೊಂಕು ; (ಮು., ಕೈಕಾಲಿನ, ಕೀಲಿನ) ಬಾಗಿದ ಸ್ಥಿತಿ ; ಬಗ್ಗಿದ ಭಾಗ. (ವ್ಯಾ.) (ವಿಭಕ್ತಿ, ಧಾತು) ರೂಪ (ನಡಸುವುದು). (ಗಣಿತ) = Flexure. **Fléxional** (ಗು.) ; **Fléxionless** (ಗು.) ; **Fléxor** ಫ್ಲೆಕ್ಸ(ಕ್ಸಾ)ರ್ (ನಾ.) ಯಾವುದಾದರೂ ಅಂಗಭಾಗವನ್ನು ಬಗ್ಗಿಸುವ ಸ್ನಾಯು : ನಮಕ ಸ್ನಾಯು (= F. muscle, tendon). **Fléxuose** ಫ್ಲೆಕ್ಸ್ಯುಓಸ್ (ಗು.) (ಸ. ವಿ.) ಹಾವಿನಂತೆ ಸುತ್ತಿ ಸುತ್ತಿ ಹೋಗುವ ; ಡೊಂಕು ಡೊಂಕಾದ ; ತಿರುವು ಮುರಿವಿನ ; ವಕ್ರ. **Flexuóso-** (ಸ. ಪೂ. ಪ.) ; **Fléxuous** — ಅಸ್ (ಗು.) ಬಾಗುಗಳುಳ್ಳ ; ಸುತ್ತಿ ಬಳಸುವ ; ಡೊಂಕು ಡೊಂಕಾದ. **Flexuósity** — ಆಸಿಟಿ (ನಾ.) — ಗುಣ ; ವಕ್ರತೆ ; ತಿರುವು ; ಬಾಗು. **Fléxuously** — ಅಸ್ಲಿ (ಕ್ರಿ. ವಿ.) ; **Fléxure** ಫ್ಲೆಕ್‌ಸ್ಯುರ್, — ಷರ್ (ನಾ.) ಬಗ್ಗುವುದು ; ಬಾಗುವುದು ; ಬಗ್ಗಿರುವುದು ; ಬಾಗು ; ತಿರುವು ; ಮುರಿವು. (ಗಣಿತ) (ಒಂದು ರೇಖೆಯ ಅಥವಾ ಕ್ಷೇತ್ರದ) ವಕ್ರತೆ. (ಸ್ಥಿತಿಸ್ಥಾಪಕ ತತ್ತ್ವ) (ಮೇಲ್ಮೈಯ ಅಥವಾ ಘನಾಕೃತಿಯ) ವಕ್ರತೆ, ಬಾಗು (F. of a curve ಋಜುರೇಖೆಯಿಂದ ಒಂದು ವಕ್ರಾಕೃತಿಯ ಬಾಗು ; ವಕ್ರ ರೇಖೆಯ ವಕ್ರತೆ). (ಭೂ. ವಿ.) ಒತ್ತಡದಿಂದ ಭೂಸ್ತರಗಳ ಬಾಗುವಿಕೆ ; ಸ್ತರದ ಬಾಗು.

Fléxion, Fléxor, etc. **Flex** ನೋಡಿ.

Flíbbertigíbbet ಫ್ಲಿಬರ್ಟಿಜಿಬೆಟ್ (ನಾ.) ಹರಟೆಹೊಡೆಯುವ, ಮನಬಂದಂತೆ ವರ್ತಿಸುವ, ಗಾಂಭೀರ್ಯವಿಲ್ಲದ, ಮನುಷ್ಯ ; ಹರಟೆಯ ಮಲ್ಲ ; ತರೆಹುಳುಕ. (ಅನುಕರಣ ಪದ)

Flick ಫ್ಲಿಕ್ (ನಾ., ಕ್ರಿ. ಸಕ.) (ಚಾವಟಿ, ಮೊ. ಗಳಿಂದ ಕೊಟ್ಟ) ಛಟೀರೆಂಬ ಏಟು, ಹೊಡೆತ. ಥಟ್ಟನೆಯ ಚಲನೆ ; ಥಟ್ಟನೆ ಚಿಮ್ಮಿಬಿಟ್ಟದ್ದು ; ಮಿಡಿತ ; ಚಿಮ್ಮು ; ಚಿಟಿಕೆ. ಚೆಟ್ ಎಂಬ ಶಬ್ದ. (ಬ. ವ. ದಲ್ಲಿ, ಅಸಂ.) ಚಲನ ಚಿತ್ರಗಳು. (ಕ್ರಿ.) ಛಟೀರೆಂದು, ಥಟ್ ಎಂದು, ಹೊಡೆ ; (ದೂಳು, ಮೊ. ನ್ನು) ಒದರಿಬಿಡು, ಕೊಡವಿಬಿಡು, ಜಾಡಿಸು (*Away*, *off* ಉಪ. ದೊಡನೆ). (ಚಾವಟಿ, ಚೌಕ, ಮೊ. ನ್ನು) ಥಟ್ಟನೆ ಜಾಡಿಸು. ಸಿಡಿಸು ; ಹಾರಿಸು.

Flícker ಫ್ಲಿಕರ್ (ಕ್ರಿ. ಅಕ., ನಾ.) ಅಲುಗು ; ಅಲುಗಾಡು ; ಅಲ್ಲಾಡು ; (ಹಿಂದಕ್ಕೆ ಮುಂದಕ್ಕೆ) ತೂಗಾಡು ; ಒಲೆದಾಡು ; ಅಡು ; ಅದಿರು ; ಕಂಪಿಸು ; ಸ್ಪಂದಿಸು. (ಜ್ವಾಲೆ, ಮೊ. ವು) ಹೊಳೆಯುತ್ತ ಅಳಿಯುತ್ತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೋಗು ; ಮಿನುಗು ; ಮಿಣುಕು. ರೆಕ್ಕೆ ಬಡಿ, ಒದರು. (ನಾ.) ಅಲುಗಾಟ ; ಮಿಣುಕಾಟ ; ಮಿನುಗು.

Flíer = Flyer.

Flight ಫ್ಲೈಟ್ (ನಾ., ಕ್ರಿ. ಸಕ.) ಹಾರಾಟ ; ಹಾರಿಕೆ (Take one's f., Wing one's f. ಹಾರಿಹೋಗು). ವೇಗೆ ಬೇಟೆಯನ್ನು ಅಟ್ಟಿಕೊಂಡು ಹೋಗುವುದು. ಸ್ಥಳ ಬಿಟ್ಟು ಬೇರೆ ಸ್ಥಳಕ್ಕೆ ಹೋಗುವುದು ; ಓಡಿಹೋಗುವುದು ; ಓಟ ; ಪಲಾಯನ ; ಆತುರದಿಂದ ಹಿಂದಕ್ಕೆ ಓಡಿಹೋಗುವುದು (Take, take to, betake oneself to, f. ಓಡಿಹೋಗು ; ತಲೆ ತಪ್ಪಿಸಿಕೊಂಡು ಹೋಗು. Put to f. ಓಡಿಸು ; ಓಡಿಹೋಗುವಂತೆ ಮಾಡು). ಸ್ಥಳಾಂತರ ಪ್ರಯಾಣ ಮಾಡು(ತ್ತಿರು)ವ ಹಕ್ಕಿಗಳ, ಕೀಟಗಳ, — ತಂಡ, ಹಿಂಡು. (ಕ್ಷಿಪಣಿ ಮೊ. ಗಳ) ವೇಗವಾದ ಚಲನೆ. (ಕಾಲದ ವಿಷಯದಲ್ಲಿ) ಬೇಗ ಕಳೆದುಹೋಗುವುದು. (ಬುದ್ಧಿ, ಕಲ್ಪನೆ, ಹೆಬ್ಬಯಕೆ, ಮೊ. ಗಳ) ಮೇಲೇರುವಿಕೆ, ಮೇಲೋಟ. (ಹಕ್ಕಿ, ವಿಮಾನ, ಕ್ಷಿಪಣಿ —ಇವು) ಹಾರಲಾಗುವ ದೂರ ; ಹಾರುದೂರ. (ಬಾಣ, ಮೊ. ಗಳ) ಕರೆತ, ಸುರಿತ, ಸುರಿಮಳೆ. (ದಿಕ್ಕು ಬದಲಾಯಿಸದೆ ಏರುವ) ಮೆಟ್ಟಲು, ಮೊ. ಗಳ ಪರಂಪರೆ, ಸಾಲು, ಪಂಕ್ತಿ (In the first f. ಮುಂದಿನ ಸಾಲಿನಲ್ಲಿ ; ಅಗ್ರಸ್ಥಾನದಲ್ಲಿ). 'ಓಟ್ಸ್' ಧಾನ್ಯದ ಹೊಟ್ಟು. (**F.-feather, - muscle** ಹಾರು ಗರಿ, ಹಾರು ಸ್ನಾಯು. **F.-lieutenant** ವಾಯುಸೈನ್ಯದ ಅಧಿಕಾರಿ). (ಕ್ರಿ.) ಹಾರಿಸು ; ಓಡಿಸು ; ಬೆದರಿಸು ; (ಹಾರುತ್ತಿರುವ ಕಾಡುಕೋಳಿಯನ್ನು, ಹಾರುತ್ತಿರುವ ಹಕ್ಕಿಯನ್ನು) ಗುಂಡಿನಿಂದ ಹೊಡೆ. **Flíghty** (ಗು.) ದುಡುಕಿನ ; ಚಪಲತೆಯ; ಅರೆ ಮರುಳಾದ; ಬುದ್ಧಿಭ್ರಾಂತ ; ತಿಕ್ಕಲು ; ಏಲು. **Flíghtily** (ಕ್ರಿ. ವಿ.) ; **Flíghtiness** (ನಾ.)

Flím-flam ಫ್ಲಿಮ್ ಫ್ಲ್ಯಾಮ್ (ನಾ.) ಅಲ್ಪವಾದದ್ದು ; ಕೆಲಸಕ್ಕೆ ಬಾರದ್ದು ; ಅರ್ಥವಿಲ್ಲದ್ದು ; ಗೊಡ್ಡು ಹರಟೆ. ಕಪಟ ; ಮೋಸ ; ಮೋಸ ಕೃತ್ಯ.

Flímsy ಫ್ಲಿಮ್ಸಿ (ಗು., ನಾ.) ಸುಲಭವಾಗಿ ಅಳಿದುಹೋಗುವ; ಕೇವಲ ಸೂಕ್ಷ್ಮವಾದ ; ಹುರುಳಿಲ್ಲದ ; ನಿಸ್ಸಾರವಾದ ; ನಾಜೂಕಾದ ; ನವಿರಾದ ; ಜಾಳಾದ ; ಸಡಿಲವಾದ ; ಸುಲಭವಾಗಿ ಬಿಟ್ಟುಹೋಗುವ. ಅಲ್ಪ ; ಕ್ಷುಲ್ಲಕ ; ಕೆಲಸಕ್ಕೆ ಬಾರದ ; ತಿರುಳಿಲ್ಲದ ; ದುರ್ಬಲ ; ನಿಸ್ಸತ್ವ. ಮೇಲ್ಮೇಲಿನ. (ನಾ.) (ಅಸಂ.) ಬ್ಯಾಂಕು ನೋಟು(ಗಳು) ; ಕಾಗದದ ಹಣ. ನವಿರು ಕಾಗದ. ವರದಿಗಾರನ ಕರಡು ಪ್ರತಿ. **Flímsily** (ಕ್ರಿ. ವಿ.) ; **Flímsiness** (ನಾ.)

Flinch[1]. **Flench** ನೋಡಿ.

Flinch[2] ಫ್ಲಿಂಚ್, ಫ್ಲಿನ್ಷ್ (ಕ್ರಿ. ಅಕ.) (ಕರ್ತವ್ಯ, ಮಾರ್ಗ, ಮೊ. ಗಳಿಂದ) ಹಿಂದೆಗೆ, ಹಿಂಜರಿ, ಹಿಮ್ಮೆಟ್ಟು ; ಸೆಡೆ ; ಅಳುಕು.

Flínders ಫ್ಲಿಂಡರ್ಸ್ (ನಾ., ಬ. ವ.) ಚೂರುಗಳು ; ಚೆಕ್ಕೆಗಳು ; ಸಿಗುರುಗಳು ; ಸಿಬುರುಗಳು ; ಒಡಕುಗಳು (Break, fly, in f. ಚೂರು ಚೂರಾಗಿ ಒಡೆ, ಸಿಡಿ)

Fling ಫ್ಲಿಂಗ್ (ಕ್ರಿ. ; ಭೂತ., ಭೂ. ಕೃ. Flung) (ರಭಸದಿಂದ) ಎಸೆ ; ಎಸೆದುಬಿಡು ; ಬೀರು ; ಬೀಸು ; ಬೀಸಾಡು ; ಒಗೆ ; ಬಿಡು ; ಹಾಕು (ಅನೇಕ ವೇಳೆ *about, aside, away, by, out, up, at* ಉಪ. ದೊಡನೆ) ; ಕೆರಳಿ, ದುಡ ದುಡನೆ, ರಭಸದಿಂದ, — ಹೊರಟು ಹೋಗು (F. *away* in a rage ರೇಗಿ ದುಡ ದುಡನೆ ಹೊರಟು ಹೋಗು. F. *out* of the room). (ಶಬ್ದ, ವಾಸನೆ, ಬೆಳಕು —ಇವನ್ನು) ಹೊರಡಿಸು, ಸೂಸು, ಚೆಲ್ಲು, ಎರಚು. (ಜಟ್ಟಿ, ಎದುರಾಳಿಯನ್ನು —ಕುದುರೆ, ಸವಾರನನ್ನು) ನೆಲಕ್ಕೆ ಕೆಡವು. F. fact, etc , *in* one's teeth ನಿಜಾಂಶ, ಮೊ. ನ್ನು, ಮುಖದಮೇಲೆ ಎಸೆ, ಎದುರಿಗೆ ಹೊರಗೆಡಹು, ಎದುರೆದುರಿಗೆ ಖಂಡಿಸು. F. *into* an enterprise ಒಂದು ಉದ್ಯಮಕ್ಕೆ ನುಗ್ಗು ; ಶಕ್ತಿಮೀರಿ ಸಾಹಸಮಾಡು. F. *into* one's arms, a boat, etc. ಒಬ್ಬನ ತೆಕ್ಕೆಗೆ, ದೋಣಿ, ಮೊ. ಕ್ಕೆ, ಹಾರಿಕೊ, ಬೀಳು. F. one *into* prison ಒಬ್ಬನನ್ನು ಒತ್ತರದಿಂದ ಸೆರೆಮನೆಗೆ ದಬ್ಬು. F. troops, etc., *on* enemy or *against* fortress or enemy ಸೇನಾ ದಳಗಳು, ಮೊ. ನ್ನು ಶತ್ರುವಿನಮೇಲೆ, ದುರ್ಗದಮೇಲೆ, ನುಗ್ಗಿಸು. F. *on* person's compassion ಒಬ್ಬನ ದಯೆ ಸಂಪಾದಿಸಲು ಕಾಲಿಗೆ ಬೀಳು, ಕಾಲು ಕಟ್ಟಿಕೊ. F. door, etc., *open* ಬಾಗಿಲು, ಮೊ. ನ್ನು (ರಭಸದಿಂದ) ಹಾರಬಡಿ. F. *out* (ಕುದುರೆ, ಮೊ. ಗಳ ವಿಷಯದಲ್ಲಿ) ಒದೆಯುತ್ತ ರಭಸದೊಡನೆ ಮುನ್ನುಗ್ಗು, ಹಿಡಿತಕ್ಕೆ ಸಿಕ್ಕದೆ ಅಗಡಾಗಿರು, ತಂಟೆ ಮಾಡು, ಎತ್ತಿಹಾಕು ; (ಮನುಷ್ಯನ ವಿಷಯದಲ್ಲಿ) ರೇಗಿಬೀಳು, ಬಯ್ಗುಳ ಮಳೆ ಕರೆ. F. *out* one's arms ತೋಳನ್ನು ಬೀಸು. F. *up* one's heels ಕಾಲನ್ನು ಜಾಡಿಸು. F. one's eye (*up*)*on* ಒಬ್ಬನ ಮೇಲೆ ಅಲಕ್ಷ್ಯದಿಂದ ಕಣ್ಣಿಸೆ.

Fling (ನಾ.) ಎಸೆತ ; ಒಗೆತ ; ಬೀಸು (Have a f. at ಮೇಲೆ ಬೀಳು ; ಚುಚ್ಚು, ಅಣಕಿಸಿ, ಮಾತನಾಡು). ಉದ್ರೇಕದ ಕುಣಿತ (ಮು., Highland f.) ; ರಭಸದ ಚಲನೆ ; ನುಗ್ಗು ; ನುಗ್ಗಾಟ ; (ಕುದುರೆ) ಒದ್ದು ಓಡುವುದು. ಮನಸ್ಸಿಗೆ ತೋರಿದಂತೆ ದುಡುಕುವ ಆವೇಶ (Have one's f. ಇಷ್ಟಾಪೂರ್ತಿ ಮಾಡಿಕೊ ; ಮನಃಪೂರ್ತಿಯಾಗಿ ನಡೆದುಕೊ)

Flint ಫ್ಲಿಂಟ್ (ನಾ.) (ಸರಿ ಸುಮಾರಾಗಿ ಎಲ್ಲವೂ ಮರಳುಧಾತುವಿನಿಂದ ರಚನೆಯಾಗಿ, ಸಣ್ಣ ಸಣ್ಣ ಉಂಡೆಗಳ ರೂಪದಲ್ಲಿ ದೊರೆಯುವ, ಒಳಗಡೆ ಉಕ್ಕಿನ ಬೂದುಬಣ್ಣವೂ ಹೊರಗಡೆ ಬಿಳಿಯಬಣ್ಣವೂ ಉಳ್ಳ) ಒಂದು ಜಾತಿಯ ಗಡುಸು ಕಲ್ಲು : ಚಕಮುಕಿ ಕಲ್ಲು (F. & steel). ಗಡುಸು ಪದಾರ್ಥ [Wring water from a f. ಕಲ್ಲಿನಲ್ಲಿ ನೀರು ತೆಗೆ ; ಮರಳು ಹಿಂಡಿ ಎಣ್ಣೆ ತೆಗೆ ; ಅಸಾಧ್ಯ ಕಾರ್ಯ ಮಾಡು ; ಅದ್ಭುತ ಕೆಲಸ ಸಾಧಿಸು. Skin a f. (ರೂಪ.) ಕಾಸಿನ ಕಿಲುಬನ್ನೂ ಬಿಡದಿರು ; ಜಿಪುಣನಾಗಿರು ; ಅತ್ಯಾಶೆ ಪಡು. Set one's face like a f. ಕಲ್ಲು ಮನಸ್ಸು ಮಾಡು ; ದೃಢ ಮನಸ್ಕನಾಗಿರು]. **F.-glass** (ಚಕಮುಕಿ ಕಲ್ಲಿನಿಂದ ಹಿಂದೆ ತಯಾರಿಸುತ್ತಿದ್ದ) ಶುದ್ಧ ಹೊಳಪು ಗಾಜು. **F.-lock** ಚಕಮುಕಿಯ ಕಿಡಿಯಿಂದ ಹೊತ್ತಿಕೊಂಡು ಹಾರುವ ತುಪಾಕಿ(ಯ ಚಾಪು). **Flínty** (ಗು.) ; **Flíntiness** (ನಾ.)

Flip[1] ಫ್ಲಿಪ್ (ಕ್ರಿ., ನಾ.) (ಚಿಕ್ಕ ಗುಂಡು, ನಾಣ್ಯ, ಮೊ. ನ್ನು) ಮಿಡಿ, ಮೀಟು. (ಒಬ್ಬನ ಕಿವಿ, ಕೆನ್ನೆ, ಮೊ. ನ್ನು) ತಟ್ಟು ; ಲಘುವಾಗಿ ಹೊಡೆ ; ಬೆರಳು ಮಿಡಿ. (ಬೀಸಣಿಗೆ, ಚಾವಟಿ, ಗಾಳದ ನೊಣ —ಇವನ್ನು) ಮಿಡಿದು ಮಿಡಿದು ಆಡಿಸು ; ಚಾವಟಿ, ಮೊ. ಗಳಿಂದ ಥಟ್ಟನೆ ಹೊಡೆ, ಬಾರಿಸು. (ನಾ.) (ಚುರುಕಾಗಿಯೂ ಹಗುರವಾಗಿಯೂ ಕೊಟ್ಟ) ಏಟು, ಹೊಡೆತ, ಮಿಡಿತ, ಚಿಮ್ಮು.

Flip[2] ಫ್ಲಿಪ್ (ನಾ.) ಬಿಯರ್ ಮದ್ಯಕ್ಕೆ ಮದ್ಯಸಾರ ಬೆರಸಿ, ಸಕ್ಕರೆ ಹಾಕಿ, ಕಾದ ಕಬ್ಬಿಣದಿಂದ ಕಾಯಿಸಿದ, ಪಾನೀಯ. Egg-f. (Egg[1] ನೋಡಿ)

Flíp-Flap ಫ್ಲಿಪ್ ಫ್ಲ್ಯಾಪ್ (ನಾ.) ಒಂದು ತೆರದ ಲಾಗ, ಪಲ್ಟಿ. ಒಂದು ತೆರದ ಬಾಣಬಿರುಸು, ಪಟಾಕಿ. ರಂಕ ರಾಟೆ.

Flíppant ಫ್ಲಿಪಂಟ್ (ಗು.) ಗೇಲಿ ಮಾಡುವ ; ರೇವಡಿ ಮಾಡುವ ; ಗಾಂಭೀರ್ಯವಿಲ್ಲದ ; ಹುಡುಗಾಟಿಕೆಯ ; ಗಂಭೀರ ವಿಷಯಗಳನ್ನು ಹಗುರವಾಗಿ ವಿಚಾರಮಾಡುವ ; ಮರ್ಯಾದೆ ತೋರದ ; ಲಾಘವದಿಂದ ಕಾಣುವ. ಗಳಹುವ ; ತಲೆಹರಟೆಯ. **Flíppancy** (ನಾ.) ; **Flíppantly** (ಕ್ರಿ. ವಿ.)

Flípper ಫ್ಲಿಪರ್ (ನಾ.) (ಆಮೆ, ಪೆಂಗ್ವಿನ್ ಎಂಬ ಈಜುಹಕ್ಕಿ —ಇವುಗಳಲ್ಲಿರುವ) ಈಜುವ ಅಂಗ. (ಅಸಂ.) ಕೈ.

Flípperty-flópperty ಫ್ಲಿಪರ್ಟಿ ಫ್ಲಾಪರ್ಟಿ (ಗು.) ಸಡಿಲವಾದ ; ಜೋಲಾಡುತ್ತಿರುವ ; ನೇತಾಡುತ್ತಿರುವ ; ತೊಂಗುತ್ತಿರುವ ; ತೂಗಾಡುತ್ತಿರುವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Flirt ಫ್ಲರ್ಟ್ (ಕ್ರಿ., ನಾ.) ಚಿಮ್ಮು ; ಮಿಡಿ ; ಸಿಡಿಸು ; (ಬೀಸಣಿಗೆ, ಹಕ್ಕಿಯ ತೋಕೆ —ಇವನ್ನು) ಹಿಂದಕ್ಕೆ ಮುಂದಕ್ಕೆ ಆಡಿಸು; (ಒಬ್ಬರೊಡನೆ) ಪ್ರಣಯ ವಿಲಾಸ ನಡಸು ; ಪ್ರಣಯಚೇಷ್ಟೆ ತೋರಿಸು ; ಲಲ್ಲೆಹೊಡೆ ; ಹುಬ್ಬಿಕ್ಕು. (ನಾ.) ಥಟ್ಟನೆಯ ಚಿಮ್ಮು, ಮಿಡಿತ, ಮಾಟು. ವಿನೋದಗ್ಗಾಗಿ ಪ್ರಣಯ ತೋರಿಸುವವನು ; ಅಂಥ ಪ್ರಣಯವನ್ನು ಆಕರ್ಷಿಸಿ ಅಂಗೀಕರಿಸುವವಳು : ಪ್ರಣಯ ವಿಲಾಸಿ(ನಿ) ; ಲಲ್ಲೆಗಾರ ; ಲಲ್ಲೆಕಾತಿ. **Flirtátion** (ನಾ.) ; **Flirtátious** (ಗು.) ; **Flírtish** (ಗು.) ; **Flírty** (ಗು.)

Flit ಫ್ಲಿಟ್ (ಕ್ರಿ. ಅಕ., ನಾ.) ಬೇರೆ ಸ್ಥಳಕ್ಕೆ ಹೋಗು ; ಹೊರಟುಹೋಗು ; ಬಿಟ್ಟುಹೋಗು ; ಹೊರಡು ; ಸ್ಥಳ ಬದಲಾಯಿಸು ; —ವುದು ; (ಹಗುರವಾಗಿ, ವೇಗವಾಗಿ) ಚಲಿಸು, ಓಡಾಡು, ತಾರಾಡು, ಸುಳಿದಾಡು (ಅನೇಕ ವೇಳೆ *about, by, to & fro* ಉಪ. ದೊಡನೆ) ; ಹಗುರವಾಗಿ ಹಾರಾಡು ; (ಹಕ್ಕಿ, ಬಾವಲಿ, ಮೊ. ವು) ಅಲ್ಲಲ್ಲೇ ಹಾರಾಡು. (ನಾ.) ವಾಸಸ್ಥಾನದ ಬದಲಾವಣೆ ; ನೆರೆ ಮಾರ್ಪು. **Flítter** (ಕ್ರಿ. ಸಕ.) ಪರೆದಾಡು ; ಹಾರಾಡು ; ಒದರಾಡು ; ರೆಕ್ಕೆ ಬಡಿದಾಡು. **F.-mouse** ಬಾವಲಿ ; ಕಣ್ಕಪಟ.

Flívver ಫ್ಲಿವರ್ (ನಾ.) (ಅಮೆ. ಸಂ., ಅಸಂ.) ಅಗ್ಗವಾದ ಮೋಟಾರು ಬಂಡಿ.

Flix ಫ್ಲಿಕ್ಸ್ (ನಾ.) (ನಾನಾ ತರದ) ತುಪ್ಪುಳು ಚರ್ಮ ; 'ಬೀವರ್' ಪ್ರಾಣಿಯ ತುಪ್ಪುಳು.

Float ಫ್ಲೋಟ್ (ನಾ.) (ಪಿರ. ಪ್ರ.) ತೇಲುವುದು ; ತೇಲಿಕೆ ; ಪ್ಲವನ (On the f. ತೇಲಾಡುತ್ತ). ತೇಲಾಡುತ್ತಿರುವ ಕಳೆ, ನೀರ್ಗಲ್ಲು, ಮೊ. ಗಳ ಗುಂಪು. ತೇಲುವೆ ; ತೆಪ್ಪ. ಸೂಚನೆ ಕೊಡುವುದಕ್ಕಾಗಿ ಗಾಳದ ದಾರಕ್ಕೆ ಸಿಕ್ಕಿಸಿರುವ ಬೆಂಡು ಅಥವಾ ಗರಿ ; ಮೀನುಬಲೆಯ ಅಂಚನ್ನು ಎತ್ತಿಹಿಡಿದಿರುವುದಕ್ಕಾಗಿ ಹಾಕಿರುವ ಬೆಂಡು. (ಮೀನು, ಮೊ. ಗಳ) ಈಜುಬುರುಡೆ. ನೀರುತೊಟ್ಟಿಯ ನಾಳದಲ್ಲಿ ಹರಿತವನ್ನು ಅಳವಡಿಸುವ ಪೊಳ್ಳು ಬೆಂಡು : ತೇಲು ಬೆಂಡು. (ರಂಗಭೂಮಿ : ಏ. ವ. ಅಥವಾ ಬ. ವ. ದಲ್ಲಿ) (ಮರಸಲಾಗುವ) ಅಡಿ ದೀಪಗಳು. ನೀರ್ಗಾಲಿಯ ಪರಿಧಿಯಲ್ಲಿಯ ಹಲಗೆ(ಗಳಲ್ಲೊಂದು) (=F.-board). ಒಂದು ತೆರದ ಗಿಡ್ಡನೆಯ ಗಾಡಿ. (ಪ್ರದರ್ಶನ ವಸ್ತುಗಳನ್ನು ಮೆರವಣಲು ಉಪಯೋಗಿಸುವ) ಗಾಲಿಹಾಕಿದ ವೇದಿಕೆ : ಪ್ರದರ್ಶನದ ಬಂಡಿ. ಗಾರೆಕೆಲಸದ ಉಜ್ಜುಮಣೆ ; ಗಾರೆಮಣೆ (F.-stone ಇಟ್ಟಿಗೆ ಕೆಲಸದವನ ಉಜ್ಜುಕಲ್ಲು). ಒಕ್ಕೊಯ್ತದ ಅರ. (ನೆಯ್ಗೆಯಲ್ಲಿ) ಹೊಕ್ಕಿನ ದಾರಗಳನ್ನು ಹಾಸಿನ ಒಂದು ಭಾಗದಲ್ಲಿ, ಆದರ ದಾರಗಳ ಮಧ್ಯೆ ನೆಯ್ಯದಂತೆ, ಮೇಲೆಹಾಯಿಸುವುದು ; ಹೀಗೆ ಹಾಯಿಸಿದ ದಾರ : ದಾಟುಹೊಕ್ಕು. **F.-bridge** (ಮರದ ತೊಲೆಗಳಿಂದ ಅಥವಾ ಹಲಗೆಗಳಿಂದ ಮಾಡಿದ) ತೇಲುಸೇತುವೆ, ತೆಪ್ಪಸೇತುವೆ. **F.-grass** ಒಂದು ಹುಲ್ಲುಜಾತಿ.

Float (ಕ್ರಿ.) ತೇಲು ; ತೇಲಾಡು ; ತೇಲಿಸು ; (ಎಲ್ಲೆಂದರಲ್ಲಿ) ತೇಲಿಕೊಂಡು, ಕೊಚ್ಚಿಕೊಂಡು, ಹೋಗು. ಒಂದು ದ್ರವದೊಳಗೆ ನಿರಾತಂಕವಾಗಿ ನಿಂತಿರು, ತೂಗಾಡು ; ವಾಯುವಿನಲ್ಲಿ (ಎತ್ತಿಹಿಡಿದಂತೆ) ಚಲಿಸು ; (ಕಣ್ಣೆದುರಿಗೆ, ಮನದೆದುರಿಗೆ) ಸುಳಿದಾಡು, ಹಾರಾಡು. (ವ್ಯಾಪಾರ : ಒಪ್ಪಿಗೆಪಡೆದ ಹುಂಡಿಯ ವಿಷಯದಲ್ಲಿ) ಹಣಪಾವತಿಯ ಕಾಲ ಬರುವ ವರೆಗೂ ಚಲಾವಣೆಯಲ್ಲಿರು ; ಚಲಾವಣೆಗೆ ಬರು. (ಒಂದು ಮಂಡಲಿ, ಸಂಸ್ಥೆ, ಏರ್ಪಾಡು —ಇವನ್ನು) ಒಪ್ಪಿಗೆ ಪಡೆಯುವಂತೆ ಮಾಡು, ಚಲಾವಣೆಗೆ ತರು, ಹೂಡು, ಏರ್ಪಡಿಸು, ಆರಂಭಿಸು ; (ಮಂಡಲಿ, ಏರ್ಪಾಡು, ಮೊ. ವು) ಚಲಾವಣೆ ಪಡೆ, ಆರಂಭವಾಗು. ದ್ರವ ಹರಿಸು ; ನೀರು ಹಾಯಿಸು. (ನೀರು, ಮೊ. ಗಳ ವಿಷಯದಲ್ಲಿ) ತೇಲುವ ವಸ್ತುವನ್ನು ಧರಿಸು, ತೇಲಿಸಿಕೊಂಡು ಹೋಗು ; ತೇಲುವಂತೆ ಮಾಡು ; ತೇಲಿಸು. (ಸುದ್ದಿಯನ್ನು) ಹರಡು, ಹಬ್ಬಿಸು. ಗಾಳಿಯಲ್ಲಿ ತೇಲಿಕೊಂಡು ಹೋಗು. **F.-stone** ತೇಲುವ ಹಗುರವಾದ ಕಲ್ಲು ಜಾತಿ : ತೇಲುಗಲ್ಲು. **Floátable** (ಗು.) ತೇಲುವ ; ತೇಲಿಸುವ. (ಹೊಳೆಯ ವಿಷಯದಲ್ಲಿ) ತೆಪ್ಪ, ಮೊ. ವು ತೇಲುವ ; ದೋಣಿಸಂಚಾರಕ್ಕೆ ತಕ್ಕ. **Floátage** —ಟೆಜ್ (ನಾ.) ತೇಲುವುದು ; ತೇಲ್ಮೆ. ನಷ್ಟವಾದ ಹಡಗಿನಿಂದ ತೇಲಿಬಂದ ಸಾಮಾನು(ಗಳನ್ನು ಸ್ವಂತಪಡಿಸಿಕೊಳ್ಳುವ ಹಕ್ಕು). ನದಿಯಲ್ಲಿ ತೇಲುತ್ತಿರುವ ಹಡಗು, ಮೊ. ವು ; ತೇಲಾಡುತ್ತಿರುವ ವಸ್ತುಸಮೂಹ. ತೇಲುವ (ತೇಲಿಸುವ) ಶಕ್ತಿ. ನೀರಿನ ಮಟ್ಟದ ಮೇಲ್ಭಾಗದಲ್ಲಿರುವ ಹಡಗಿನ ಭಾಗ : ತೇಲುಭಾಗ. **Floatátion, Flot-** ಫ್ಲೊ — (ನಾ.) ತೇಲುವುದು ; ತೇಲಿಕೆ ; ಪ್ಲವನ (Centre of f. ತೇಲುವವಸ್ತುವಿನಲ್ಲಿಯ ಗುರುತ್ವ ಕೇಂದ್ರ ; ಪ್ಲವನ ಕೇಂದ್ರ). ಒಂದು ಮಂಡಲಿಯನ್ನು, ಉದ್ಯಮವನ್ನು, ಆರಂಭಿಸುವುದು ; —ಆರಂಭ, ಸ್ಥಾಪನೆ. **Floáter** ಫ್ಲೋ— (ನಾ.) (ಕ್ರಿಯಾರ್ಥಗಳಲ್ಲಿ). (ಬಂಡವಾಳ ಪತ್ರಗಳ ಮಾರುವೆಯಲ್ಲಿ) ಆಧಾರವಾಗಿ ಪರಿಗಣಿಸುವ ಸರ್ಕಾರದ, ರೈಲ್ವೆ, ಮೊ. ಗಳ, ಸಾಲಪತ್ರ. **Floáting** (ಗು.) (ಕ್ರಿಯಾರ್ಥಗಳಲ್ಲಿ). (ವ್ಯಾಪಾರ : ಸರಕಿನ ವಿಷಯದಲ್ಲಿ) ಸಮುದ್ರದ ಮೇಲಿರುವ (F. trade, rates, etc. ಸಮುದ್ರದಮೇಲಿನ ಹಡಗುಗಳಲ್ಲಿಯ ಸರಕಿನ ವ್ಯಾಪಾರ, ದರಗಳು, ಮೊ. ವು). F. capital, debt, rib (ಆಯಾ ಪದಗಳನ್ನು ನೋಡಿ). ಬದಲಾಯಿಸುತ್ತಿರುವ ; ಅಸ್ಥಾಯಿಯಾದ ; ಚರ [The f. population ಚಲ ಜನ(ಸಂಖ್ಯೆ)]. F. anchor = Drag anchor). F. dock (Dock[4] ನೋಡಿ). F. bridge ತೇಲುಸೇತುವೆ ; ದೋಣಿಸೇತುವೆ. F. kidney (ಸಹಜ ಸ್ಥಿತಿ ತಪ್ಪಿ ಚಲಿಸಿ ಆಡುವ) ಚಲ ಮೂತ್ರಪಿಂಡ. F. light ದೀಪದ ಹಡಗು ; —ತೇಲುವೆ.

Floátage, etc. **Float** ನೋಡಿ.

Floccóse ಫ್ಲಾಕೋಸ್ (ಗು.) (ಸ. ವಿ.) ಜುಟ್ಟುಳ್ಳ ; ಚುಂಗುಳ್ಳ ; ಉಣ್ಣೆಯಂಥ ಕೂದಲುಳ್ಳ.

Flóccule ಫ್ಲಾಕ್ಯೂಲ್ (ನಾ.) (ಉಣ್ಣೆಯ ಕೂದಲಂತಿರುವ ನಾರು ಪದಾರ್ಥದ) ಕುಚ್ಚು, ಕಟ್ಟು, ಬೊಂತೆ. **Flócculent, -lose, -lous** — ಕ್ಯು — (ಗು.) ಉಣ್ಣೆಯ ಕುಚ್ಚಿನಂತಿರುವ ; ತುಪ್ಪುಳು ತುಪ್ಪುಳಾದ ; ಬೊಂತೆ ಬೊಂತೆಯಾದ. **Flócculence** (ನಾ.) ; **Flócculus** (ನಾ. ; ಬ. ವ. -li —ಲೈ) = Floccule. (ಅಂ. ರ. ಶಾ.) ಉಪಮಸ್ತಿಷ್ಕದ ತಳಮೈಯಲ್ಲಿಯ ಹಾಲೆ. **Flóccus** — ಕಸ್ (ನಾ. ; ಬ. ವ. -ci ಫ್ಲಾಕ್ಸೈ) ಉಣ್ಣೆಯ ಕೂದಲಿನ ಅಥವಾ ತಂತುಗಳ ಕುಚ್ಚು ; ಕೂದಲಿನ ಕಂತೆ, ಬೊಂತೆ.

Flócculent, etc. **Floccule** ನೋಡಿ.

Flock[1] ಫ್ಲಾಕ್ (ನಾ.) (ಉಣ್ಣೆ, ಹತ್ತಿ, ಮೊ. ಗಳ ಎಳೆಗಳ) ಕುಚ್ಚು, ಕಂತೆ, ಬೊಂತೆ. (ಬ. ವ. ದಲ್ಲಿ) (ರಜಾಯಿ, ದಿಂಬು, ಮೊ. ಗಳಿಗೆ ತುಂಬುವ) ಕಳಪೆ ಉಣ್ಣೆ, ಬಟ್ಟೆ ಚೂರು, ಮೊ. ಪದಾರ್ಥ : ರಜಾಯಿ ತುಂಬು. (ಜಾತ್ಯೇಕ ವಚನದಲ್ಲಿ ಅಥವಾ ಬ. ವ. ದಲ್ಲಿ) (ಗೋಡೆಗೆ ಅಲಂಕಾರಕ್ಕಾಗಿ ಅಂಟಿಸುವ ಕಾಗದವನ್ನು ತಯಾರಿಸುವುದರಲ್ಲಿ ಉಪಯೋಗಿಸುವ) ಪುಡಿತುಪಟ ಅಥವಾ ಚಿಂದಿ. (ರ. ವಿ., ಬ. ವ. ದಲ್ಲಿ) (ದ್ರವದಲ್ಲಿ ಲೀನವಾಗಿರುವ ಪದಾರ್ಥವನ್ನು ರಾಸಾಯನಿಕ ಕ್ರಿಯೆಯಿಂದ ಅಲೀನ ಪದಾರ್ಥವನ್ನಾಗಿ ಮಾಡುವುದರಿಂದ ದ್ರವದಲ್ಲಿ ಕಾಣಿಸಿಕೊಂಡು ಕೆಳಕ್ಕಿಳಿಯುವ) ಹಗುರವೂ ವಿರಳವೂ ಆದ ಪುಡಿ : ಶಿಥಿಲ ಪ್ರಕ್ಷೇಪ. **F.-bed** ಕಳಪೆ ಉಣ್ಣೆ, ಮೊ. ಪದಾರ್ಥಗಳಿಂದ ತುಂಬಿದ ಹಾಸಿಗೆ, ಲೇಪು. **F.-paper** ನುಣುಪು ಲೇಪ ಬಳಿದು ತುಪಟದ ಪುಡಿ, ಮೊ. ನ್ನು ಒಂದೇ ಸಮನಾಗಿ ಅಥವಾ ಚಿತ್ರಗಳಾಗಿ ಹರಡಿದ ಗೋಡೆಯ ಕಾಗದ : ತುಪ್ಪುಳು ಕಾಗದ. **Flócky** (ಗು.)

Flock[2] ಫ್ಲಾಕ್ (ನಾ., ಕ್ರಿ. ಅಕ.) ಜನ ಸಮೂಹ, —ತಂಡ (Come in flocks ಹಿಂಡು ಹಿಂಡಾಗಿ ಬರು) ; ಒಂದೇ ಜಾತಿಯ ಪ್ರಾಣಿಗಳ ತಂಡ (ಮು., ಮೇವಿಗಾಗಿ ಒಟ್ಟುಗೂಡಿರುವ ಅಥವಾ ಒಟ್ಟಿಗೆ ಪ್ರಯಾಣ ಮಾಡುತ್ತಿರುವ ಹಕ್ಕಿಗಳು) ; ಹಿಂಡು ; ಮಂದೆ ; ತಂಡ ; ಗುಂಪು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೃಂದ. (Flocks and herds ಕುರಿಯ ಹಿಂಡು, ದನದ ಮಂದೆ ; ದನ ಕುರಿಗಳು. F.-master ಕುರುಬ). ಕ್ರೈಸ್ತ ಸಮುದಾಯ ; ಕ್ರೈಸ್ತ ಸಭೆ (ಮು., ಆ ನಭೆಯ ಪುರೋಹಿತನ ಸಂಬಂಧದಲ್ಲಿ). ಒಂದು ಕುಟುಂಬದ ಮಕ್ಕಳು ; ಶಿಷ್ಯವರ್ಗ. (ಕ್ರಿ.) ಒಟ್ಟುಗೂಡು ; ಮಂದೆಗೂಡು ; ಹಿಂಡುಗೂಡು ; ಗುಂಪುಗೂಡು (ಅನೇಕ ವೇಳೆ *about, after, into, to, in, out, together* ಉಪ. ದೊಡನೆ)

Floe ಫ್ಲೋ (ನಾ.) ತೇಲುತ್ತಿರುವ ನೀರ್ಗಲ್ಲಿನ ಚಪ್ಪಡಿ.

Flog ಫ್ಲಾಗ್ (ಕ್ರಿ. ಸಕ.) (ಬೆತ್ತ, ಚಾವಟಿ, ಚಡಿ, ಮೊ. ಗಳಿಂದ) ಹೊಡೆ, ಬಾರಿಸು, ತೀಡು ; ಹೊಡೆದು, — ಕಲಿಸು, ಬಿಡಿಸು (F. learning into ಹೊಡೆದು ವಿದ್ಯೆ ಕಲಸು. F. laziness out of ಹೊಡೆದು ಸೋಮಾರಿತನ ಬಿಡಿಸು). (ಕುದುರೆ, ಮೊ. ನ್ನು) ಚಾವಟಿಯಿಂದ ಹೊಡೆದು ಚುರುಕುಮಾಡು [F. a dead horse ಸತ್ತ ಕುದುರೆಯನ್ನು ಚಾವಟಿಯಿಂದ ಹೊಡೆ ; (ರೂಪ.) ಶಕ್ತಿಯನ್ನು ಅಪವ್ಯಯ ಮಾಡು]. (ಅಸಂ.) ಸೋಲಿಸು ; ಮಾರಿಸು. (ಹೊಳೆಯಲ್ಲಿ) ಮೇಲಿಂದ ಮೇಲೆ ಗಾಳವನ್ನು ಬೀಸು. **Flógging** (ನಾ.)

Flong ಫ್ಲಾಂಗ್ (ನಾ.) ಮುದ್ರಣದ ನೆಲೆಯಚ್ಚನ್ನು ತಯಾರಿಸುವುದಕ್ಕಾಗಿ ಏರಕಹೊಯ್ಯಲು ತಕ್ಕಂತೆ ಅಳವಡಿಸಿದ ನವಿರು ಕಾಗದಗಳ ಮೆತುವಾದ ರಟ್ಟು : ನೆಲೆಯಚ್ಚಿನ ರಟ್ಟು.

Flood ಫ್ಲಡ್ (ನಾ.) (ನೀರಿನ) ಒಳ ನುಗ್ಗು, ಉಬ್ಬರ (= F.-tide). (ಕಾವ್ಯ) ನದಿ ; ಹೊಳೆ ; ಸಮುದ್ರ (F. & field ನೀರೂ ನೆಲ) ; ನೆರೆ ; ಹೊನಲು ; ಪ್ರವಾಹ ; ಜಲಪ್ರಳಯ (The F., Noah's F. ಬೈಬಲ್ಲಿನಲ್ಲಿ ಹೇಳಿರುವ ನೋವನ ಜಲಪ್ರಳಯ, ಮಹಾ ಪ್ರಳಯ). ನೀರಿನ ಸುರಿತ ; ಸುರಿಮಳೆ ; ಹುಚ್ಚು ಹೊಳೆ (Floods of rain ಮಳೆಯ ಪ್ರವಾಹ. A f. of tears or words ಕಣ್ಣೀರಿನ ಪ್ರವಾಹ, ಮಾತಿನ ಸುರಿಮಳೆ). **F.-gate** (ನೀರನ್ನು ಬಿಡಲು ಅಥವಾ ತಡೆಯಲು ಕಟ್ಟಿರುವ) ಹೊನಲಿನ ಬಾಗಿಲು ; ತೂಬು. **Floódlight** (ನಾ.) ಪ್ರವಾಹ ದೀಪ ; ಹೊನಲು ಬೆಳಕು. **Floodómeter** ಫ್ಲಡಾಮಿಟರ್ (ನಾ.) ಪ್ರವಾಹ ಮಾಪಕ.

Flood (ಕ್ರಿ.) ಪ್ರವಾಹ ಬರು ; ನೆರೆ ಬರು ; ಕೊಚ್ಚಿಹೋಗು ; (ನೆರೆಯಿಂದ) ಮುಳುಗಿಸು. [(ರೂಪ.) Was flooded with letters ಕಾಗದಗಳು ಪ್ರವಾಹದಂತೆ ಬಂದುವು]. ನೀರು ಹಾಯಿಸು ; (ಬೆಂಕಿ ಹೊತ್ತಿ ಉರಿಯುವ ಮನೆ, ಗಣಿ, ಮೊ. ಕ್ಕೆ) ನೀರಿನ ಪ್ರವಾಹ ಹರಿಸು ; (ಮಳೆಯ ವಿಷಯದಲ್ಲಿ, ನದಿಯನ್ನು) ಉಕ್ಕಿ ಹರಿಯುವಂತೆ ತುಂಬು ; ತುಂಬಿ ಹರಿಸು ; ಉಕ್ಕಿಸು; ಹೆಚ್ಚು ಹೆಚ್ಚಾಗಿ, ಒಟ್ಟೊಟ್ಟಾಗಿ, ಬರು (ಸಾ., *in* ಉಪ. ದೊಡನೆ). ಗರ್ಭ ರಕ್ತಸ್ರಾವವಾಗು.

Floor ಫ್ಲೋರ್ (ನಾ.) ನೆಲ ; ನೆಲಕ್ಕೆ ಹಾಸಿರುವ ಹಲಗೆ, ಮೊ. ವು ; ನೆಲಗಟ್ಟು ; ನೆಲಹಾಸು (= Flooring). (ಸಮುದ್ರ, ಗವಿ, ಮೊ. ಗಳ) ತಳ. ಶಾಸನ ಸಭೆಯಲ್ಲಿ ಸದಸ್ಯರು ಕುಳಿತು ಚರ್ಚೆ ನಡಸುವ ಭಾಗ : ಸಭಾಂಗಣ ; (ರೂಪ.) ಮಾತನಾಡುವ ಹಕ್ಕು [Take the f. (ಮು., ಅಮೆ. ಸಂ.) ಚರ್ಚೆಯಲ್ಲಿ ಭಾಗ ವಹಿಸು]. ಒಂದೇ ಮಟ್ಟದಲ್ಲಿರುವ ಕೋಣೆ, ಮೊ. ಗಳ ತಂಡ (Ground f. ನೆಲದ ಅಂತಸ್ತು. First f. ಮೊದಲನೆಯ ಮಹಡಿ, ಅಟ್ಟ). ಅಂತಸ್ತು ; ಮಹಡಿ. ಮಟ್ಟ ಪ್ರದೇಶ ; ಸಮ ತಲ. **F.-cloth** (ಜಮಖಾನಕ್ಕೆ ಬದಲಾಗಿ ಹಾಸುವ) ಹಾಸುಬಟ್ಟೆ. **F.-lamp** ನೆಲದಮೇಲೆ ನಿಂತಿರುವ ಕಂಬದಮೇಲೆ ಅಳವಡಿಸಿರುವ ದೀಪ : ದೀವಿಗೆ ಕಂಬ. **Floórless** (ಗು.) ನೆಲಗಟ್ಟಿಲ್ಲದ.

Floor (ಕ್ರಿ. ಸಕ.) ನೆಲಗಟ್ಟು ಹಾಕು ; ನೆಲಕ್ಕೆ ಕಲ್ಲು, ಮೊ. ನ್ನು ಹಾಸು ; ನೆಲಗಟ್ಟಾಗಿರು. ನೆಲಕ್ಕೆ ಕೆಡವು ; ಕೆಳಕ್ಕುರುಳಿಸು. ಬೆರಗು ಮಾಡು ; ದಿಕ್ಕು ತೋರದಂತೆ ಮಾಡು ; ದಿಗ್ಭ್ರಾಂತ ಮಾಡು. (ಪಾಠಶಾಲೆಯಲ್ಲಿ) ಪಾಠ ಬಾರದುದರಿಂದ (ಹುಡುಗನನ್ನು) ಕುಕ್ಕರಿಸುವಂತೆ ಹೇಳು. ಸಾಧಿಸು ; ಪೂರಯಿಸು ; ಗೆಲ್ಲು ; ಜಯಿಸು (F. the paper ಪ್ರಶ್ನಪತ್ರದಲ್ಲಿಯ ಎಲ್ಲ ಪ್ರಶ್ನೆಗಳಿಗೂ ಸರಿಯಾದ ಉತ್ತರ ಬರೆದುಬಿಡು). **Floórer** (ನಾ.) ಕೆಳಕ್ಕುರುಳಿಸುವ ಏಟು ; ದಿಕ್ಕು ತೋರದಂತೆ ಮಾಡುವ ಸಮಾಚಾರ, ವಿಚಾರ. ತಕ್ಕ ಉತ್ತರ ಕೊಡಲು ಕಷ್ಟವಾದ ಪ್ರಶ್ನಪತ್ರ ಅಥವಾ ಪ್ರಶ್ನೆ : ಕಷ್ಟ ಪ್ರಶ್ನೆ.

Flop ಫ್ಲಾಪ್ (ಕ್ರಿ., ನಾ., ಭಾವ. ಅವ್ಯ., ಕ್ರಿ. ವಿ.) ಭಾರವಾಗಿ ತೂಗಾಡು, ಓಲಾಡು ; ತುಯ್ದಾಡು ; ವಕ್ರ ವಕ್ರವಾಗಿ ನಡೆದಾಡು ; ವಿಕಾರವಾಗಿ, — ಕುಳಿತುಕೊ, ಮೊಣಕಾಲೂರಿಕೊ, ಮಲಗಿಕೊ ; ದೊಪ್ಪೆಂದು ಬಿದ್ದುಕೊ, ಕೆಡೆ; ದೊಪ್ಪೆಂದು ಕೆಳಕ್ಕೆಸೆ, ಬಿಸುಡು. ದೊಪ್ ದೊಪ್ ಎಂದು ಶಬ್ದ ಮಾಡು. (ನಾ.) ತೂಗಾಟ ; ಓಲಾಟ. ದೊಪ್ಪೆಂಬ ಶಬ್ದ. (ಭಾವ. ಅವ್ಯ.) ದೊಪ್ ! (ಕ್ರಿ. ವಿ.) ದೊಪ್ಪನೆ. **Flóppy** (ಗು.)

Flóra ಫ್ಲೋರ (ನಾ.) ಪುಷ್ಪ ದೇವತೆ ; ಒಂದು ನಿರ್ದಿಷ್ಟ ಪ್ರಾಂತದ ಅಥವಾ ಯುಗದ ಸಸ್ಯವರ್ಗ, —ಸಸ್ಯಗಳ ಪಟ್ಟಿ. **Flóral** (ಗು.) ಸಸ್ಯಗಳ (F. zone ಸಸ್ಯ ವೈಶಿಷ್ಟ್ಯವುಳ್ಳ ಭೂಭಾಗ ; ಸಸ್ಯ ವಲಯ). ಹೂವಿನ ; ಪುಷ್ಪದ. **Floréscence** ಫ್ಲೋ(ೀ)ರೆಸೆನ್ಸ್ (ನಾ.) ಹೂಪು ಬಿಡುವ ಕಾಲ, ಸ್ಥಿತಿ ; ಪುಷ್ಪಾವಸ್ಥೆ ; ಪುಷ್ಪ ಕಾಲ. (ಸಮೂಹ ವಾಚಕ) ಹೂವು. **Floréscent** (ಗು.) ಹೂವು ಬಿಡುವ, ಅರಳುವ. **Flóret** ಫ್ಲೋರೇಟ್ (ನಾ.) (ಸ. ವಿ.) ಸಂಕೀರ್ಣ ಪುಷ್ಪದಲ್ಲಿಯ ಒಂದು ಹೂವು (F. of the disk ಕೇಂದ್ರ ಪುಷ್ಪ. F. of the ray ಪರಿಧಿ ಪುಷ್ಪ) ; ಸಣ್ಣ ಹೂವು ; ಕಿರು ಹೂವು. **Flóriate** ಫ್ಲೋರಿಯೇಟ್ (ಕ್ರಿ. ಸಕ.) ಪುಷ್ಪಚಿತ್ರ, ಮೊ. ಗಳಿಂದ ಅಲಂಕರಿಸು. **Flóriculture** ಫ್ಲಾ(ಫ್ಲೋ)ರಿಕಲ್ಚರ್ (ನಾ.) ಪುಷ್ಪ ಕೃಷಿ ; — ವ್ಯವಸಾಯ ; ಹೂ ಬೇಸಾಯ. **Floricúltural** (ಗು.) ; **Floricúlturist** (ನಾ.) ಹೂ ಬೇಸಾಯಗಾರ. **Flórid** ಫ್ಲಾರಿಡ್ (ಗು.) (ಸಾಹಿತ್ಯ, ಕಲೆ, ಸಂಗೀತ, ಮೊ. ಗಳ ಶೈಲಿಯ ವಿಷಯದಲ್ಲಿ) ಅತ್ಯಲಂಕಾರದ (F. speech ಪುಷ್ಪಿತ ವಾಕ್ಕು). ಆಡಂಬರದ ; ತೋರ್ಕೆಯ. ರಂಗು ಹೊಡೆಯುವ ; ಕೆಂಪಿಡಿದ ; ರಕ್ತವರ್ಣದ ; ಉಜ್ಜ್ವಲ ವರ್ಣದ. **Florídity** (ನಾ.) ; **Flóridness** (ನಾ.) ; **Flóridly** (ಕ್ರಿ. ವಿ) ; **Floríferous** ಫ್ಲೋ(ೀ)— (ಗು.) (ಬೀಜಗಳ ಅಥವಾ ಸಸ್ಯಗಳ ವಿಷಯದಲ್ಲಿ) ತುಂಬ ಹೂವು ಬಿಡುವ ; ಪುಷ್ಪ ಭರಿತ. **Flórist** ಫ್ಲಾ(ಫ್ಲೋ)ರಿಸ್ಟ್ (ನಾ.) ಹೂವಾಡಿಗ ; ಹೂವಿನ ಬೇಸಾಯಗಾರ ; ಪುಷ್ಪ ಶಾಸ್ತ್ರಜ್ಞ. **Flóscular, -lous** ಫ್ಲಾ— (ಗು.) ಕಿರು ಹೂವುಗಳುಳ್ಳ ; ಸಂಕೀರ್ಣ ಪುಷ್ಪ ಬಿಡುವ.

Flórentine ಫ್ಲಾರೆಂಟೈನ್ (ಗು., ನಾ.) ಫ್ಲಾರೆನ್ಸಿನ (ನಿವಾಸಿ). ಮೂರೆನೆಯ್ಗೆಯ ಒಂದು ತೆರದ ರೇಷ್ಮೆ ಬಟ್ಟೆ.

Flórid, etc. **Flora** ನೋಡಿ.

Flórida ಫ್ಲಾರಿಡ (ನಾ.) ಅಮೆ. ಸಂ. ಗಳಲ್ಲಿಯ ಒಂದು ಸಂಸ್ಥಾನ. F. water ಒಂದು ಪರಿಮಳ ದ್ರವ. F. wood ಕೆತ್ತನೆಯ ಕೆಲಸಕ್ಕೆ ಉಪಯೋಗಿಸುವ ಒಂದು ಮರದ ಜಾತಿ.

Florilégium (L) ಫ್ಲೋರಿಲೀಜಿಯಂ (ನಾ., ಬ. ವ. -ia) ಕಾವ್ಯ ಮಂಜರಿ.

Flórin ಫ್ಲಾರಿನ್ (ನಾ.) (ಯೂರೋಪಿನ ಹಲವು ದೇಶಗಳಲ್ಲಿ ನಾನಾ ಕಾಲಗಳಲ್ಲಿ ಚಲಾವಣೆಯಲ್ಲಿದ್ದ ಬೆಳ್ಳಿಯ ಅಥವಾ ಚಿನ್ನದ) ಒಂದು ನಾಣ್ಯ. (ಚರಿತ್ರೆ) [ಮೂರನೆಯ ಎಡ್ವರ್ಡಿನ ($\frac{1}{3}$ ಪೌಂಡು ಬೆಲೆಯ)] ಒಂದು ಇಂಗ್ಲಿಷ್ (ಚಿನ್ನದ) ನಾಣ್ಯ ; (ಈಗ ಚಲಾವಣೆಯಲ್ಲಿರುವ ೨ ಷಿಲಿಂಗು ಬೆಲೆಯ) ಬೆಳ್ಳಿಯ ಒಂದು ಇಂಗ್ಲಿಷ್ ನಾಣ್ಯ : 'ಫ್ಲಾರಿನ್'.

Flórist. **Flora** ನೋಡಿ.

Flóruit ಫ್ಲೋರ್ಯುಇಟ್(ರು)ಇಟ್ (ನಾ.) (ಹುಟ್ಟಿದ ಮತ್ತು ಸತ್ತ ನಿಷ್ಕೃಷ್ಟ ತೇದಿಗಳು ದೊರೆಯದ ಸಂದರ್ಭದಲ್ಲಿ) ಒಬ್ಬನ ಜೀವಿತದ ಕಾಲ.

Flóry = Fleury.

Flóscular, etc. **Flora** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Floss ಫ್ಲಾಸ್ (ನಾ.) (ರೇಷ್ಮೆಯ ಗೂಡಿನ ಹೊರ ಭಾಗದಲ್ಲಿರುವ) ಮಡ್ಡಿ ರೇಷ್ಮೆ (F. silk ಅಗ್ಗದ ರೇಷ್ಮೆಬಟ್ಟೆಯನ್ನು ಮಾಡಲು ಉಪಯೋಗಿಸುವದು.) **Flóssy** (ಗು.) ಮಡ್ಡಿ ರೇಷ್ಮೆಯಂಥ.

Flotátion = Floatation.

Flotilla ಫ್ಲೊಟಿಲ (ನಾ.) ಲಘು ನೌಕಾವ್ಯೂಹ; ದೋಣಿಗಳ ಅಥವಾ ಸಣ್ಣ ಹಡಗುಗಳ ತಂಡ.

Flótsam ಫ್ಲಾಟ್ಸಮ್ (ನಾ.) ನಾಶವಾದ ಹಡಗಿನಿಂದ ತೇಲಿಬಂದ ಸಾಮಾನು. ಸಮುದ್ರ ವಾಸಿಯಾದ 'ಆಯ್ಸ್ಟರ್' ಎಂಬ ಚಿಪ್ಪುಳ್ಳ ಮೃದ್ವಂಗಿ ಜಾತಿಯ ತತ್ತಿಸಮೂಹ: 'ಆಯ್ಸ್ಟರ್' ತತ್ತಿ.

Flounce[1] ಫ್ಲೌನ್ಸ್ (ಕ್ರಿ. ಅಕ., ನಾ.) ರಭಸದಿಂದ, ಕಲಕಿದ ಮನಸ್ಸಿನಿಂದ, ಕ್ಷುಬ್ಧನಾಗಿಹೋಗು; ಓಲಾಡು; ತೂಗಾಡು; ಒದರು; ಜಾಡಿಸು; ನುಗ್ಗು; ಮೈ ಕೈ ಒದರಾಡು (*Away, out, about, down, up* ಉಪ. ದೊಡನೆ). (ನಾ.) ಮಿಡಿತ; ಎಸೆತ; (ದೇಹದ ಅಥವಾ ಕೈ ಕಾಲಿನ) ಒದರಾಟ.

Flounce[2] ಫ್ಲೌನ್ಸ್ (ನಾ., ಕ್ರಿ. ಸಕ.) (ತಳಭಾಗವನ್ನು ಅಲಂಕಾರಕ್ಕಾಗಿ ನೇಲುವಂತೆ ಬಟ್ಟು ಮೇಲ್ಭಾಗದ ಅಂಚನ್ನು ನಿರಿಹಿಡಿದು) ಲಂಗದ ಅಂಚಿಗೆ ಸೇರಿಸಿ ಹೊಲಿದ ಪಟ್ಟಿ: ನಿರಿಪಟ್ಟಿ. (ಕ್ರಿ.) ನಿರಿಪಟ್ಟಿಯಿಂದ(ಗಳಿಂದ) ಅಲಂಕರಿಸು; ನಿರಿಪಟ್ಟಿ ಹಾಕು.

Floúnder[1] ಫ್ಲೌಂಡರ್ (ನಾ.) ಒಂದು ಸಣ್ಣ ಚಪ್ಪಟೆಮೀನು.

Floúnder[2] ಫ್ಲೌಂಡರ್ (ಕ್ರಿ. ಅಕ., ನಾ.) (ಕೆಸರಿನಲ್ಲಿ ಅಥವಾ ನೀರಿನಲ್ಲಿ ನಡೆಯುವಾಗ, ನಡೆಯುವಲ್ಲಿಯಂತೆ) ಒದ್ದಾಡು, ಹೊರಳಾಡು. ತಪ್ಪು ತಪ್ಪಾಗಿ ಮಾಡು; (ಉದ್ಯಮವನ್ನು) ಅವ್ಯವಸ್ಥೆ ಮಾಡು, ನಡಸಲು ತೊಂದರೆಪಡು; ಒದ್ದಾಡು. (ನಾ.) ಒದ್ದಾಟ; ಅವ್ಯವಸ್ಥೆ

Flour ಫ್ಲೌರ್ (ನಾ., ಕ್ರಿ. ಸಕ.) (ಸೋಸಿದ, ನಯವಾದ, ಧಾನ್ಯದ) ಹಿಟ್ಟು; ಗೋಧಿಯ ಹಿಟ್ಟು; ನಯವಾದ ನುಣ್ಣನೆಯ ಪುಡಿ. (F.-box ಹಿಟ್ಟುಸೂಸುವ ಟಿನ್‌ತಗಡಿನ ಡಬ್ಬಿ). (ಕ್ರಿ.) ಹಿಟ್ಟು ಸೂಸು, ಉದುರಿಸು. (ಅಮೆ. ಸಂ.) ಬೀಸಿ ಹಿಟ್ಟುಮಾಡು; ಹಿಟ್ಟು ಬೀಸು. **Floúry** (ಗು.)

Floúrish ಫ್ಲರಿಷ್ (ಕ್ರಿ., ನಾ.) ಹುಲುಸಾಗಿ, ಸೊಂಪಾಗಿ, ಹಸನಾಗಿ, ಬೆಳೆ. ಚೆನ್ನಾಗಿ ಬಾಳು; ಪ್ರವರ್ಧಮಾನಕ್ಕೆ ಬರು; ಮುಂದಕ್ಕೆ ಬರು; ಏಳಿಗೆ ಹೊಂದು; ಅಭಿವೃದ್ಧಿ ಪಡೆ; ಉಚ್ಛ್ರಾಯ ಸ್ಥಿತಿಗೇರು; ಜಯಶಾಲಿಯಾಗು. ಒಳ್ಳೆಯ ಪ್ರಾಯದಲ್ಲಿರು; ಚಟುವಟಿಕೆಯಿಂದಿರು. (ಬರವಣಿಗೆಯಲ್ಲಿ, ಸಾಹಿತ್ಯ ಕೃತಿಯಲ್ಲಿ, ಭಾಷಣದಲ್ಲಿ) ಅಲಂಕಾರದ, ಆಡಂಬರದ, — ಶೈಲಿ ತೋರು, ವೈಖರಿ ತೋರು; ಆಟೋಪ, ಆಡಂಬರ, — ತೋರು; ಮೆರೆ. (ಆಯುಧವನ್ನು) ಝಳಪಿಸು, ಬೀಸು. (ಕೈ ಕಾಲು) ಒದರು, ಜಾಡಿಸು. (ಸಂಗೀತ, ಮೊ. ಗಳಲ್ಲಿ) ಆಡಂಬರದಿಂದ ಆಲಾಪನೆ ಮಾಡು, ರಾಗ ಎಳೆ. (ನಾ.) (ಏರ. ಪ್ರ.) ಏಳಿಗೆ; ಉಚ್ಛ್ರಾಯ; ಅಭಿವೃದ್ಧಿ; ಸೊಂಪು; ಹುಲುಸು; ವೀರ್ಯ [In full f. (ಪೂರ್ಣ ಉಚ್ಛ್ರಾಯ ಸ್ಥಿತಿಯಲ್ಲಿ) ಎಂಬಲ್ಲಿ ಮಾತ್ರ ರೂಢಿ]. ಬರವಣಿಗೆಯ ಅಕ್ಷರದ ಅಥವಾ ಪದದ ಸುತ್ತಲೂ ರಚಿಸುವ ವಕ್ರಾಕೃತಿಯ ಚಿತ್ರ, ಅಲಂಕಾರ; ಮಾತಿನ ಅಲಂಕಾರ, ವೈಖರಿ; ಅತ್ಯಲಂಕಾರದ ಮಾತು, ವಚನ. (ಆಯುಧದ, ಕೈಯ) ಆಡಂಬರದ ಝಳಪು, ಬೀಸು. (ಸಂ.) (ಪ್ರಸಿದ್ಧ ಪುರುಷನ ಆಗಮನ ಸೂಚನೆಗಾಗಿ ಮಾಡುವ ಕಹಳೆ, ಮೊ. ಗಳ) ಘೋಷ, ಮೊಳಗು; ಆಲಾಪನೆ; ಆಡಂಬರದ ಗಾಯನ. **Floúrishy** (ಗು.) ಚಿತ್ರಾಡಂಬರವುಳ್ಳ. ಉಚ್ಛ್ರಾಯ ಸ್ಥಿತಿಯಲ್ಲಿರುವ; ವೈಭವಯ.

Flout ಫ್ಲೌಟ್ (ಕ್ರಿ., ನಾ.) ತಿರಸ್ಕಾರ ಮಾಡು; (ಮಾತಿನಿಂದ, ಕಾರ್ಯದಿಂದ) ಧಿಕ್ಕರಿಸು, ಕಡೆಗಣಿಸು; ಅಪಮಾನ ಮಾಡು; ಅಪಹಾಸ್ಯ ಮಾಡು; ಅಣಕಿಸು. (ನಾ.) ತಿರಸ್ಕಾರ; ಕಡೆಗಣಿಕೆ; ಧಿಕ್ಕಾರ; ಅಪಹಾಸ್ಯ.

Flow ಫ್ಲೋ (ಕ್ರಿ. ಅಕ., ನಾ.) ಹರಿ; ಪ್ರವಹಿಸು; ಹೊನಲಿಡು. (ರಕ್ತ) ಪರಿಚಲಿಸು. (ವ್ಯಕ್ತಿಗಳ ಅಥವಾ ವಸ್ತುಗಳ ವಿಷಯದಲ್ಲಿ) ಗುಂಪು ಗುಂಪಾಗಿ, ತಂಡ ತಂಡವಾಗಿ, — ಬರು, ಹೋಗು. (ಭಾಷಣ, ಸಾಹಿತ್ಯಶೈಲಿ, ಮೊ. ವು) ಲಲಿತವಾಗಿ, ಸರಾಗವಾಗಿ, ಓಡು. (ಉಡುಪು, ಕೂದಲು, ಮೊ.) ಇಳಿಬೀಳು, ತೊಂಗು, ಈಜಾಡು, ತೆರೆಗಳಂತೆ ಓಲಾಡು. (ಗಣಿತ: ಸಂಖ್ಯೆಗಳು) ಸೂಕ್ಷ್ಮ ಪರಿಮಾಣದಿಂದ ಅವಿಚ್ಛಿನ್ನವಾಗಿ ಏರುತ್ತ ಇಳಿಯುತ್ತ ಹೋಗು. ಉಕ್ಕಿ ಬರು; ಚಿಮ್ಮು; ಒರತೆಯಿಡು; (ರಕ್ತ) ಚೆಲ್ಲು, ಸುರಿ, ಬಸಿ, ಸ್ರವಿಸು. ಪರಿಣಾಮವಾಗಿ ಬರು. ತುಂಬಿ ಹರಿ; ಪ್ರವಾಹ ಬರು (Ebb and f. ಇಳಿ, ಏರು. Flowing tide ಏರುಪ್ರವಾಹ; ಮುಂದುವರಿಯುವ ಓಟ). (ದ್ರಾಕ್ಷಾಮದ್ಯ) ನಿರರ್ಗಳವಾಗಿ, ಯಥೇಚ್ಛವಾಗಿ, ಸುರಿ; ಬೇಕಾದಷ್ಟು ಸರಬರಾಯಿ ಆಗು. (ಪ್ರಾಚೀ. ಪ್ರ.) ಸಮೃದ್ಧಿಯಾಗಿರು; ತುಂಬಿ ತುಳುಕು (Land flowing with milk and honey ಹಾಲೂ ಜೇನೂ ಸಮೃದ್ಧವಾಗಿ ಹರಿಯುವ ನಾಡು; ಸಿರಿ ತುಂಬಿ ತುಳುಕುವ ನಾಡು). (ನಾ.) (ಹೊಳೆಯ) ಹರಿವು, ಹರಿತ, ಓಟ, ಪ್ರವಾಹ; ಹರಿದ (ನೀರಿನ) ಮೊತ್ತ; ಹರಿವ ದ್ರವ. (ಉಡುಪು, ಆಕೃತಿ, ಮೊ. ಗಳಲ್ಲಿ) ಅಲೆಗಳ ಆಕಾರವಾಗಿರುವುದು; ನಿರಿ; ನಿರಿಗೆ. ತುಂಬು ಹರಿವು; ಪ್ರವಾಹ; ಸಮೃದ್ಧಿ. (ನೀರಿನ) ಏರು, ಉಬ್ಬರ, ಬರುತ (ಭರಿತ). F. of spirits ಸಹಜವಾದ ಉತ್ಸಾಹ, ಉಲ್ಲಾಸ, ಗೆಲವು. F. of soul ಹಿತ ಸಂಭಾಷಣೆ. **Flowing** (ಗು.) (ಕ್ರಿಯಾರ್ಥಗಳಲ್ಲಿ). (ಶೈಲಿಯ ವಿಷಯದಲ್ಲಿ) ತಡೆಯಿಲ್ಲದೆ ಓಡುವ; ಸರಾಗವಾಗಿ ಹರಿಯುವ; ನಿರರ್ಗಳವಾದ. (ರೇಖೆ, ವಕ್ರಾಕೃತಿ, ಸುತ್ತುಗೆರೆ) ಲಲಿತವಾಗಿ ಹರಿಯುವ, ನಯವಾಗಿ ಹೋಗುವ, ಥಟ್ಟನೆಯ ವ್ಯತ್ಯಾಸಗಳಿಲ್ಲದ. **Flowingly** (ಕ್ರಿ. ವಿ.); **Flown**[1] (ಗು.) (ಪ್ರಾಚೀ. ಪ್ರ.) ಊದಿದ; ಉಬ್ಬಿದ; ಸೊಕ್ಕಿದ (F. with insolence and wine ಅಹಂಕಾರದಿಂದಲೂ ಮದ್ಯದಿಂದಲೂ ಸೊಕ್ಕಿದ)

Flower ಫ್ಲವರ್, ಫ್ಲೌರ್ (ನಾ.) (ಸ. ವಿ.) ಒಂದು ಅಥವಾ ಹೆಚ್ಚು ಶಲಾಕೆಗಳು ಅಥವಾ ಕೇಸರಗಳು ಅಥವಾ ಎರಡೂ ಉಳ್ಳ, ಮತ್ತು ಸಾ., ದಳವಲಯ ಪುಷ್ಪಪಾತ್ರಗಳೊಡನೆ ಕೂಡಿರುವ, ಸಸ್ಯದ ಜನನಾಂಗ; (ಜನರೂಢಿಯಲ್ಲಿ) ಹಸುರಲ್ಲದ ಬಣ್ಣದಿಂದ ಕೂಡಿ ಮುಂದೆ ಬೀಜೋತ್ಪತ್ತಿಯಾಗುವ ಸಸ್ಯಭಾಗ: ಹೂವು; ಅಲರು; ಅರಳು; ಕುಸುಮ; ಪುಷ್ಪ [No flowers (ಒಬ್ಬನ) ಅಂತ್ಯಕ್ರಿಯೆಯಲ್ಲಿ ಹೂವಿನ ದಂಡೆ, ಮೊ. ವು ಬೇಡವೆಂದು ತಿಳಿಸುವ ಸೂಚನೆ]. (ಹಳೆಯ ರ. ವಿ., ಬ. ವ. ದಲ್ಲಿ) (ಶಾಖದ ಮೂಲಕ ಘನರೂಪ ಬಿಟ್ಟು ಹಬೆಯಾಗಿ ಹೊರಟು ಆ ಹಬೆ ಆರಿದಮೇಲೆ ಬರುವ) ನುಣ್ಣನೆಯ ಪುಡಿ (Flowers of sulphur ಗಂಧಕದ ಹಬೆಹುಡಿ, ಧೂಳಿ). [ಒಂದು ದ್ರವದಲ್ಲಿ ಕಿಣ್ವೋತ್ಪತ್ತಿಯಾಗುವುದರಿಂದ (ಹುಳಿ ಹುಟ್ಟುವುದರಿಂದ) ಉಂಟಾದ] ಮಂಡ, ನೊರೆ (Flowers of tan ತೊಗಲು ಹದಮಾಡುವಲ್ಲಿ ಉಪಯೋಗಿಸುವ ದ್ರವದ ಮಂಡ). ಹೂವುಬಿಡುವ ಗಿಡ. (ಬ. ವ. ದಲ್ಲಿ) (ಭಾಷೆಯ) ಅಲಂಕಾರ [ಸಾ., Flowers of speech (ಅನೇಕ ವೇಳೆ, ವ್ಯಂಗ್ಯವಾಗಿ)]. ಆಯ್ದುದ್ದು; ಅತ್ಯುತ್ತಮವಾದದ್ದು; ಸಾರ; ತಿರುಳು. ಅರಳುವ ಸ್ಥಿತಿ; ವಿಕಾಸ (In f. ಹೂವು ಬಿಟ್ಟು). ಪ್ರಾಯ; ಯೌವನ (In the f. of his age ಅವನ ಅರಳುವ ಪ್ರಾಯದಲ್ಲಿ). **F.-de-luce** (Fleur-de-lis ನೋಡಿ). **F.-girl** ಹೂವು ಮಾರುವವಳು; ಹೂವಾಡಿಗಿತ್ತಿ; ಮಾಲೆಗಾತಿ. **F.-piece** ಹೂವಿನ ಚಿತ್ರ. **Flowérpot** (ನಾ.) ಹೂವಿನ ಕುಂಡ. **F.-show** ಪುಷ್ಪ ಪ್ರದರ್ಶನ. **Flowerage** —ರೆಜ್ (ನಾ.) (ಸಮೂಹ ವಾಚಕ) ಹೂವು; ಹೂವಿನ ಅಲಂಕಾರ (ರೂಪ. ಸಹ). ಹೂವು ಬಿಡುವುದು; ವಿಕಾಸ (ರೂಪ. ಸಹ). (-) **flowered** (ಗು.); **Flowérless** (ಗು.); **Floweret** (ನಾ.) (ಸಾ., ಕಾವ್ಯದಲ್ಲಿ) ಸಣ್ಣ ಹೂವು. **Flowery** (ಗು.) ಹೂವು ತುಂಬಿರುವ; ಪುಷ್ಪ ಸಮೃದ್ಧ, ಅಂದವಾದ ಮಾತುಗಳು, ವಿನಯೋಕ್ತಿಗಳು, ಭಾಷಾಲಂಕಾರಗಳು, ಮೊ. ವು ತುಂಬಿರುವ; ಅಲಂಕಾರ ಭರಿತ. **Flowériness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Flowér (ಕ್ರಿ.) ಹೂವು ಬಿಡು ; ಅರಳು ; ವಿಕಾಸವಾಗು ; ವಿಕಸಿಸು ; (ತೋಟಗಾರಿಕೆ) ಹೂವು ಬಿಡುವಂತೆ ಮಾಡು. ಹೂವಲಂಕಾರ ಮಾಡು. **Flowérer** (ನಾ.) ಒಂದು ಗೊತ್ತಾದ ಕಾಲದಲ್ಲಿ, ರೀತಿಯಲ್ಲಿ, ಹೂವು ಬಿಡುವ ಗಿಡ (Late f. ನಿಧಾನವಾಗಿ ಹೂವುಬಿಡುವ ಗಿಡ. Abundant f. ತುಂಬ ಹೂವುಬಿಡುವ ಗಿಡ). **Flowering** (ಗು., ನಾ.)

Flown. Fly ಧಾತುವಿನ ಭೂ. ಕೃ.; ಮತ್ತು .Flow ನೋಡಿ.

Flúctuate ಫ್ಲಕ್ಚ್ಯುಏಟ್ (ಕ್ರಿ. ಅಕ.) (ವಿರ. ಪ್ರ.) ಅಲೆಗಳಂತೆ ಮೇಲಕ್ಕೂ ಕೆಳಕ್ಕೂ ಚಲಿಸು. (ಒಂದು ಕ್ರಮವಿಲ್ಲದೆ) ಬದಲಾಯಿಸು, ಬದಲಾಯಿಸುತ್ತಿರು, ಹೆಚ್ಚುಕಡಮೆಯಾಗು ; ಏಳು ಬೀಳು ; ಸ್ಥಿರವಿಲ್ಲದಿರು ; ತೂಗಾಡು ; ಡೋಲಾಯಮಾನವಾಗು ; ಉಯ್ಯಾಲಾಡು ; ನಿಶ್ಚಯವಿಲ್ಲದಿರು. **Fluctuátion** (ನಾ.)

Flue[1] ಫ್ಲೂ (ನಾ.) ಒಂದು ತೆರದ ಮೀನುಬಲೆ.

Flue[2] ಫ್ಲೂ (ನಾ.) ಹತ್ತಿ, ಮೊ. ಗಳ ಬಿಡಿಕಣಗಳಿಂದಾದ ಪದಾರ್ಥ ; ತೂಲ ; ತುಪ್ಪುಳು ; ಜುಂಗು. **Fluéy** (ಗು.)

Flue[3] ಫ್ಲೂ (ನಾ.) ಹೊಗೆಕೊಳವೆ ; ಶಾಖ ಸಾಗಿಸಲು ಮಾಡಿರುವ ಮಾರ್ಗ (ಮು., ಬಿಸಿಗಾಳಿಯನ್ನು ಸಾಗಿಸಲು ಗೋಡೆಯಲ್ಲಿ ಮಾಡಿರುವದು): ಕಾವುಮಾರ್ಗ ; ಕೆಲವು ತೆರದ ಕುದಿಪಾತ್ರೆಗಳಲ್ಲಿ ನೀರು ಕಾಯಿಸುವುದಕ್ಕಾಗಿ ಅಳವಡಿಸಿರುವ ಕೊಳವೆ. ಕೊಳವಿ ವಾದ್ಯಗಳಲ್ಲಿ ಬಾಯಿಯ ಭಾಗದಲ್ಲಿರುವ ಕಂಡಿ (F.-pipes ಬಾಯಿಗಂಡಿಗಳಿರುವ ವಾದ್ಯದ ಕೊಳವಿಗಳು)

Flu(e)[4] ಫ್ಲೂ (ನಾ.) (ಬಳ. ಮೂ.) Influenza (ಪದದ ಸಂಕ್ಷಿಪ್ತ)

Flue[5] ಫ್ಲೂ (ಕ್ರಿ.) (ಗೋಡೆ, ಮೊ. ಗಳಲ್ಲಿಯ) ತೆರಪನ್ನು ಒಳಕ್ಕೆ ಅಥವಾ ಹೊರಕ್ಕೆ ಹೋಗುತ್ತ ಹೋಗುತ್ತ ಅಗಲವಾಗಿ ಮಾಡು ; ಮಾರ್ದಾಲೆ ಮಾಡು.

Flúent ಫ್ಲೂಎಂಟ್ (ಗು., ನಾ.) (ವಿರ. ಪ್ರ.) ಹರಿಯುವ, ಪ್ರವಾಹಿ, — ದ್ರವ. ಸ್ತಿಮಿತಕ್ಕೆ ಬಂದಿರದ ; ಮಾರ್ಪಾಡು ಹೊಂದಬಹುದಾದ. (ಚಲನೆ, ವಕ್ರಾಕೃತಿ, ಮೊ. ಗಳ ವಿಷಯದಲ್ಲಿ) ಲಲಿತ, ನಯ, ಸರಳ. (ಭಾಷಣ, ಶೈಲಿ — ಇವುಗಳ ವಿಷಯದಲ್ಲಿ) ಪುಷ್ಕಳ, ನಿರರ್ಗಳ, ಸುಲಭವಾಗಿ ಬರುವ, ಧಾರಾಳವಾದ ; (ವಿಷಯವನ್ನು) ಸುಲಭವಾಗಿಯೂ ವೇಗಲೂ ಹೇಳುವ ; ತಡವರಿಸದ ; ವಾಗ್ಮಿರಿಯುಳ್ಳ. (ಗಣಿತ) ಬಹು ಸೂಕ್ಷ್ಮ ಪರಿಮಾಣಗಳಿಂದ ಸಂತತವಾಗಿ ಏರುತ್ತ ಅಥವಾ ಇಳಿಯುತ್ತ ಹೋಗುವ (ಪರಿಮಾಣ). **Flúently** (ಕ್ರಿ. ವಿ.) ; **Flúency** (ನಾ.) (ಮು., ಭಾಷಣದಲ್ಲಿ) ನಯವಾದ ಮತ್ತು ಸರಳವಾದ ಹರಿವು ; ಮಾತಿನ ಓಟ, ಪ್ರವಾಹ ; ನಿರರ್ಗಳ ಭಾಷಣ ; ವಾಗ್ಮಿರಿ.

Fluff ಫ್ಲಫ್ (ನಾ., ಕ್ರಿ. ಸಕ.) ಕಂಬಳಿ, ಮೊ. ಗಳಿಂದ ಏಳುವ ಹಗುರವಾದ ತುಪ್ಪುಳು, ತೂಲ ; ಮೃದುವಾದ ತುಪ್ಪುಳಿನ, ತೂಲದ, ಗುಚ್ಛ ; ಕೆನ್ನೆಯಮೇಲಿನ ಮೃದುವಾದ ನವಿರುಗೂದಲು. (ಅಸಂ.) (ನಾಟಕ) ಸರಿಯಾಗಿ ಪಾಠಮಾಡಿರದ ಪಾತ್ರದ ಮಾತು ; ಮಾತು ಮರೆತಿರುವುದು. (ಕ್ರಿ.) (ತೊಗಲಿನ ಮಾಂಸದ ಕಡೆಯ ಭಾಗದ ಮೇಲ್ಮೈಯನ್ನು) ನಯ ಮಾಡು. ತುಪ್ಪುಳು ತುಪ್ಪುಳಾಗಿ ಮಾಡು. ಪುಕ್ಕ ಕೆದರು, ಕೊಡವು, ಕೊಡವಿಕೊ. (ಅಸಂ.) ನಾಟಕದ ಪಾತ್ರ ವಹಿಸಿರುವಾಗ ಆಡಬೇಕಾದ ಮಾತನ್ನು ಮರೆತುಬಿಡು, ತಪ್ಪುತಪ್ಪಾಗಿ ಮಾತನಾಡಿಬಿಡು. **Flúffy** (ಗು.) ; **Flúffiness** (ನಾ.)

Flúid ಫ್ಲೂಇಡ್ (ಗು., ನಾ.) ನಿರಾತಂಕವಾಗಿ ತಮ್ಮ ತಮ್ಮಲ್ಲಿಯೇ ಹರಿದಾಡುತ್ತ, ಸ್ವಲ್ಪ ಒತ್ತಡ ಕೊಟ್ಟರೂ ಸ್ಥಳ ಬದಲಾವಣೆ ಹೊಂದುವ ಕಣಗಳನ್ನುಳ್ಳ (ಪದಾರ್ಥ) [ದ್ರವಗಳು, ಅನಿಲಗಳು ಮತ್ತು (ಸರ್ವವ್ಯಾಪಕವಾಗಿಯೂ ಗುರುತ್ವ ರಹಿತವಾಗಿಯೂ ಇರುವುದೆಂದು ಭಾವಿಸುವ) ಬೆಳಕು, ವಿದ್ಯುತ್ತು, ಮೊ. ಗಳ ವಾಹಕವಾದ 'ಈಥರ್' — ಇವೆಲ್ಲವೂ ಸೇರಿದ್ದು] : ಪ್ರವಾಹಿ. ಸುಲಭವಾಗಿ ಹರಿಯುವ ; ಘನವಲ್ಲದ ; ದೃಢವಲ್ಲದ ; ಅಸ್ಥಿರ. ದ್ರವಭಾಗ ; ಸ್ರಾವ. **Fluídify** (ಕ್ರಿ. ಸಕ.) ; **Fluídity** (ನಾ.)

Fluke[1] ಫ್ಲೂಕ್ (ನಾ.) (ವಿರ. ಪ್ರ.) ಚಪ್ಪಟೆ ಮೀನ ಜಾತಿ. ಕುರಿಯ ಯಕೃತ್ತಿನಲ್ಲಿ ದೊರೆಯುವ ಒಂದು ಪರೋಪಜೀವಿ ಕ್ರಿಮಿಜಾತಿ : ಯಕೃತ್ ಸಪಾಟಿ. ಒಂದು ಜಾತಿಯ ಉರುಳುಗಡ್ಡೆ.

Fluke[2] ಫ್ಲೂಕ್ (ನಾ.) ಲಂಗರಿನ ತೋಳಿನಲ್ಲಿಯ ಅಗಲವಾದ ತ್ರಿಕೋಣಾಕಾರದ ತಗಡು ; ಲಂಗರು ಹಲ್ಲು. ಈಟಿ, ಮೊ. ಗಳಲ್ಲಿಯ ಮುಳ್ಳು ತಲೆ. (ಬ. ವ. ದಲ್ಲಿ) ತಿಮಿಂಗಿಲದ ತೋಕೆ.

Fluke[3] ಫ್ಲೂಕ್ (ನಾ., ಕ್ರಿ.) ಅಕಸ್ಮಾತ್ತಾಗಿ ಬಿದ್ದ ಸರಿಯಾದ ಏಟು ; ಅದೃಷ್ಟ. ಅಕಸ್ಮಾತ್ತಾಗಿ ಸರಿಯಾದ ಏಟು ಬೀಳು, ಹೊಡೆ. ಅಕಸ್ಮಾತ್ತಾಗಿ ಪಡೆ. **Flúky** (ಗು.); **Flúkily** (ಕ್ರಿ. ವಿ.) ; **Flúkiness** (ನಾ.)

Flume ಫ್ಲೂಮ್ (ನಾ., ಕ್ರಿ.) (ಮು., ಅಮೆ. ಸಂ.) ಕಾರ್ಖಾನೆಯ ಕೆಲಸಕ್ಕಾಗಿ ನೀರನ್ನು ಸಾಗಿಸುವ ಕಾಲುವೆ. ಹೊಳೆ ಹರಿಯುತ್ತಿರುವ ಕಮರಿ. (ಕ್ರಿ.) (ಕೈಗಾರಿಕೆಯ) ಕಾಲುವೆಗಳನ್ನು ತೋಡು ; —ಗಳಲ್ಲಿ ನೀರು ಸಾಗಿಸು.

Flúmmery ಫ್ಲಮರಿ (ನಾ.) (ಪ್ರಾಚೀ. ಪ್ರ. ಅಥವಾ ಪ್ರಾಂ. ಪ್ರ.) (ಆಹಾರಕ್ಕಾಗಿ) 'ಓಟ್' ಹಿಟ್ಟನ್ನು ಬೇಯಿಸಿ ಮಾಡಿದ ಅಂಬಲಿ. ಹಾಲು, ಹಿಟ್ಟು, ಮೊಟ್ಟೆ, ಮೊ. ಗಳಿಂದ ಮಾಡಿದ ಒಂದು ತೆರದ ಸೀ ಭಕ್ಷ್ಯ. ಒಣ ಉಪಚಾರ ; ಬೂಟಾಟಿಕೆ. ಕೆಲಸಕ್ಕೆ ಬಾರದವು ; ಅರ್ಥವಿಲ್ಲದ ಮಾತು ; ಅವಿವೇಕ ; ಜಳ್ಳು ಪೊಳ್ಳು.

Flúmmox ಫ್ಲಮಕ್ಸ್ (ಕ್ರಿ. ಸಕ.) (ಅಸಂ.) ದಿಕ್ಕು ತೋರದಂತೆ ಮಾಡು; ದಿಗ್ಭ್ರಮೆ ಹಿಡಿಸು ; ತಬ್ಬಿಬ್ಬು ಮಾಡು.

Flump ಫ್ಲಂಪ್ (ಕ್ರಿ., ನಾ.) ದೊಪ್ಪೆಂದು ಬೀಳು, ಬೀಳಿಸು ; ಭಾರದಿಂದ, ಭಾರ ಹೊತ್ತಂತೆ, ನಡೆ ; ದೊಪ್ಪನೆ ಕೆಡವು, ಬಿಸುಡು ; ಕುಕ್ಕು. (ನಾ.) — ವುದು ; — ವ ಶಬ್ದ.

Flung. Fling ಧಾತುವಿನ ಭೂತ., ಭೂ. ಕೃ.

Flúnkey ಫ್ಲಂಕಿ (ನಾ.) ಪೋಷಾಕು ತೊಟ್ಟಿರುವ ಜವಾನ, ಕಾಲಾಳು (ಸಾ., ತುಚ್ಛವಾಗಿ). ತನ್ನ ಮೇಲಿನವರ ಎದುರಿಗೆ ಅತಿ ದೈನ್ಯದಿಂದ ವರ್ತಿಸುವವನು ; ದಾಸಾನುದಾಸನೆಂದು ಹೇಳಿಕೊಳ್ಳುವವನು ; ಹೊಗಳುಭಟ್ಟ ; ಗೌರವಸ್ಥನಂತೆ ನಟಿಸುವವನು. **Flúnkeydom** (ನಾ.) — ಸ್ಥಿತಿ; — ರೀತಿ. **Flúnkeyism** (ನಾ.) — ಗುಣ ; — ವೈಶಿಷ್ಟ್ಯ ; ಅತಿ ದೈನ್ಯಾನುವರ್ತನೆ.

Flúor ಫ್ಲೂಅರ್ (ನಾ.) ಶಾಖದಿಂದ ಸುಲಭವಾಗಿ ಕರಗುವ, ಪ್ರಶಸ್ತ ಮಣಿಯಂತಿರುವ, 'ಫ್ಲುಒರಿನ್' ಧಾತು ಸಂಯೋಗದ, ಒಂದು ಖನಿಜ. **F.-spar** 'ಕ್ಯಾಲ್ಸಿಯಂ ಫ್ಲುಒರೈಡ್' ಲವಣ.

Fluoréscence ಫ್ಲೂಒರೆಸೆನ್ಸ್ (ನಾ.) ಬೆಳಕಿನ ಕಿರಣಗಳ (ಮು., ನೇರಿಲ ವರ್ಣದ, ನೇರಿಲಾತೀತ ವರ್ಣದ, ಕಿರಣಗಳ) ನೇರವಾದ ಕಾರ್ಯದಿಂದ ಕೆಲವು ಪಾರದರ್ಶಕ ಪದಾರ್ಥಗಳಲ್ಲಿ ಉಂಟಾಗುವ ವರ್ಣಪ್ರಭೆ ; ಅಗೋಚರವಾದ ನೇರಿಲಾತೀತ ವರ್ಣ ಕಿರಣಗಳನ್ನು ದೃಗ್ಗೋಚರ ಮಾಡುವ ಗುಣ, ಧರ್ಮ : ಅಗೋಚರ ಕಿರಣ ಸ್ಫುರಣ. **Fluorésce** (ಕ್ರಿ. ಅಕ.) ಅಗೋಚರ ಕಿರಣ ಸ್ಫುರಣವಾಗು. **Fluoréscent** (ಗು.) — ಸ್ಫುರಣಮಾಡುವ ಗುಣವುಳ್ಳ ; — ಸ್ಫುರಣದಿಂದ ಹೊರಡುವ. **Fluoréscein** — ರೆಸಿಇನ್ (ನಾ.) (ರ. ವಿ.) ಕೆಲವು ನಿರ್ದಿಷ್ಟ ಪದಾರ್ಥಗಳು ದ್ರವಲೀನವಾಗುವುದರಿಂದ ಅಗೋಚರ ಕಿರಣ ಸ್ಫುರಣ ಮಾಡುವ ದ್ರವ. **Flúoroscope** ಫ್ಲೂಒರೊಸ್ಕೋಪ್ (ನಾ.) 'ರಾಂಟ್ಜನ್' ಕಿರಣಗಳ ಪರಿಣಾಮವನ್ನು ತೋರಿಸುವುದಕ್ಕಾಗಿ (ಕತ್ತಲೆಕೋಣೆಗೆ ಬದಲಾಗಿ ಉಪಯೋಗಿಸುವ) ಅಗೋಚರ ಕಿರಣ ಸ್ಫುರಣ ಶಕ್ತಿಯ ಯವನಿಕೆಯನ್ನು ಅಳವಡಿಸಿರುವ ಸಲಕರಣೆ : ಅಗೋಚರ ಕಿರಣ ದರ್ಶಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Flúorine ಫ್ಲೂಒರಿ(ರೈ)ನ್ (ನಾ.) ಕ್ಲೋರಿನ್, ಬ್ರೋಮಿನ್, ಅಯೊಡಿನ್ — ಈ ಅಲೋಹ ಮೂಲಧಾತುಗಳ ವರ್ಗಕ್ಕೆ ಸೇರಿದ ಒಂದು ಮೂಲಧಾತು: 'ಫ್ಲೂಒರಿನ್'. **Flúoride** ಫ್ಲೂಒರಿ(ರೈ)ಡ್ (ನಾ.) ಫ್ಲೂಒರಿನ್ ಧಾತು ಮತ್ತೊಂದು ಮೂಲಧಾತುವಿನೊಡನೆ ಸಂಯುಕ್ತವಾಗುವುದರಿಂದ ಹುಟ್ಟಿದ ದ್ವಿಸಂಯುಕ್ತ: 'ಫ್ಲೂಒರೈಡ್'.

Flúrry ಫ್ಲರಿ (ನಾ., ಕ್ರಿ. ಸಕ.) ಗಾಳಿಯ ಬೀಸು, ತೀಟ, ರಭಸ. ಉದ್ರೇಕ; ಗಾಬರಿ; ಕೆರಳು; ಕಲಕ; ಕ್ಷೋಭೆ; ಕಳವಳ; ಸಂಭ್ರಮ; ಆತುರ. ತಿಮಿಂಗಿಲದ ಮರಣ ಸಂಕಟ. (ಕ್ರಿ.) ಆತುರದಿಂದ, ಗಲಭೆಯಿಂದ, ತಬ್ಬಿಬ್ಬು ಮಾಡು, ಭ್ರಾಂತಿಗೊಳಿಸು.

Flush[1] ಫ್ಲಷ್ (ಕ್ರಿ., ನಾ., ಗು.) ನುಗ್ಗು; ನುಗ್ಗಿಸು; (ನೀರನ್ನು) ಬಲವಾಗಿ ಹೊರ ಹೊರಡಿಸು; (ಚರಂಡಿ, ಮೊ. ನ್ನು) ನೀರು ಹರಿಸಿ ಚೊಕ್ಕಟಮಾಡು. (ತಗ್ಗು ಹುಲ್ಲುಮೈದಾನಕ್ಕೆ) ನೀರು ಹಾಯಿಸು. (ಹಕ್ಕಿ) ಹಾರಿಹೋಗು; — ವಂತೆ ಮಾಡು; ಹಾರಿಸು. (ಸಸ್ಯ) ಕುಡಿಯಿಡು, ಚಿಗುರು, — ರಿಸು (ಪ್ರೇರಣಾರ್ಥದಲ್ಲಿ: Rain flushes the plants ಮಳೆ ಸಸಿಗಳನ್ನು ಚಿಗುರಿಸುತ್ತದೆ). ಹೊಳೆ; ಪ್ರಜ್ವಲಿಸು. (ರಕ್ತ) ನುಗ್ಗಿ ಮುಖವನ್ನು ಕೆಂಪೇರಿಸು; (ಮುಖ ರಕ್ತದಿಂದ) ಕೆಂಪೇರು, ಬಿಸುಪೇರು, ನಾಚು; (ಮುಖ) ಕೆಂಪೇರಿಸು; ನಾಚಿಸು. ಉಜ್ಜ್ವಲ ವರ್ಣ ಹರಡು; ಹೊಳಪುಬಣ್ಣ ಕೊಡು; ಬಣ್ಣವೇರು; ಬಣ್ಣವೇರಿಸು; ಕಳೆಯೇರು; ಕಳೆಯೇರಿಸು. (ಅಹಂಭಾವ, ಭಾವೋದ್ರೇಕ) ಕೆರಳಿಸು; ಪ್ರೋತ್ಸಾಹಿಸು; ಹುರಿದುಂಬಿಸು (Flushed with exercise, joy, victory, insolence, etc. ವ್ಯಾಯಾಮ, ಸಂತೋಷ, ಗೆಲವು, ಧಾರ್ಷ್ಟ್ಯ, ಮೊ. ಗಳಿಂದ ಕೆಂಪೇರಿದ, ಕೆರಳಿದ). ಮಟ್ಟ ಮಾಡು; (ಸೇರಿಕೆಯನ್ನು ಮೇಲ್ಮಟ್ಟಕ್ಕೆ ಸರಿಯಾಗಿ ಮುಚ್ಚಿ) ಸಮ ಮಾಡು. (ನಾ.) ನೀರಿನ ನುಗ್ಗು, ನುಗ್ಗಲು. ಥಟ್ಟನೆ ಒದಗಿದ ಸಮೃದ್ಧಿ, ಹೆಚ್ಚಳ. ಬೀಸುವ ಯಂತ್ರದ ಚಕ್ರದಿಂದ ಹೊರಟ ಪ್ರವಾಹ. ಭಾವೋದ್ರೇಕ; (ಭಾವೋದ್ರೇಕ, ಗೆಲವು, ಮೊ. ಗಳಿಂದ ಉಂಟಾದ) ಉತ್ಸಾಹ, ಹುರುಪು. (ಹುಲ್ಲು, ಮೊ. ಗಳ) ಹೊಸ ಚಿಗುರು. ಒಟ್ಟಿಗೆ ಹಾರಬಿಟ್ಟ ಹಕ್ಕಿಗಳ ತಂಡ. (ಚರಂಡಿ, ಮೊ. ನ್ನು) ನೀರು ಕೊಚ್ಚಿಸಿ ತೊಳೆಯುವುದು. (ಬೆಳಕಿನ ಅಥವಾ ಬಣ್ಣದ) ಹೊಳಪು, ಪ್ರಕಾಶ, ಕಾಂತಿ. ಮುಖಕ್ಕೆ ರಕ್ತ ನುಗ್ಗುವುದು; ಇದರಿಂದ ಮುಖ ಕೆಂಪೇರುವುದು. ಜ್ವರದಲ್ಲಿ ಕಾವೇರುವುದು. ಕಳೆ; ಗೆಲವು. (ಗು.) ತುಂಬಿ ತುಳುಕುವ; ತುಂಬಿ ಹರಿಯುವ; ಪ್ರವಾಹ ಹರಿಯುವ. (ಹಣ, ಮೊ. ವು) ಸಮೃದ್ಧವಾಗಿರುವ. ಮಟ್ಟವಾದ; ಒಂದೇ ಸಮಕ್ಷೇತ್ರದಲ್ಲಿರುವ; ಚಾಚುಗಳು ಅಥವಾ ಎದ್ದಿರುವ ಏಣುಗಳು ಇಲ್ಲದ.

Flush[2] ಫ್ಲಷ್ (ನಾ.) (ಎಲ್ಲವೂ) ಒಂದೇ ರಂಗಿನ ಇಸ್ಪೀಟೆಲೆಗಳು.

Flúster ಫ್ಲಸ್ಟರ್ (ಕ್ರಿ., ನಾ.) ಮದ್ಯ ಕುಡಿದು ಅಮಲೇರು; ಮದ್ಯ ಕುಡಿಸಿ ಅಮಲೇರಿಸು; ಅರೆ ಮರುಳು ಮಾಡು; ಉದ್ರೇಕಗೊಳ್ಳು; ಉದ್ರೇಕಿಸು; ಸಂಭ್ರಮಗೊಳ್ಳು; — ಗೊಳಿಸು; ಕೆರಳು; ಕೆರಳಿಸು; ಕ್ಷೋಭೆಗೊಳ್ಳು; ಮನ ಕಲಕು; ಗಡಿಬಿಡಿ ಮಾಡು; — ಗೊಳ್ಳು. ಉದ್ರೇಕ; ಸಂಭ್ರಮ; ಕೆರಳು; ಕಲಕ.

Flústra ಫ್ಲಸ್ಟ್ರ (ನಾ.; ಬ. ವ. -ae, -as) (ಸಮುದ್ರದ ಕಳೆಯನ್ನು ಹೋಲುವ) ಕಡಲಿನ ಒಂದು ಸೂಕ್ಷ್ಮಪ್ರಾಣಿ ಸಮುದಾಯ: ಕಡಲ ಚಾಪೆ.

Flute ಫ್ಲೂಟ್ (ನಾ., ಕ್ರಿ.) ಕೊಳಲು; ವೇಣು; ಮುರಲಿ. ಕೊಳಲೂದುವವನು; ಕೊಳಲುಗಾರ. ಕಂಬ, ಮೊ. ಗಳಲ್ಲಿ ಅರೆಗೊಳವಿಯ ಆಕಾರದ ಉದ್ದನೆಯ ಗಾಡಿ: ಅರೆಗೊಳವಿ. (ಕ್ರಿ.) ಕೊಳಲೂದು; ಕೊಳಲಿನಂಥ ನಾದದಲ್ಲಿ ಶಿಳ್ಳೆಹಾಕು, ಹಾಡು, ಮಾತನಾಡು. ಅರೆಗೊಳವಿ ಮಾಡು. **Flútist** (ನಾ.) ಕೊಳಲೂದುವವನು; ಕೊಳಲುಗಾರ; ವೇಣು ವಾದಕ. **Flúting** (ನಾ.) ಅರೆಗೊಳವಿಯಾಕಾರದ ಗಾಡಿ (ಮಾಡುವುದು). **Flúty** (ಗು.) ನಾದದಲ್ಲಿ ಕೊಳಲಿನಂತೆ ಮೃದುವಾಗಿಯೂ ಸ್ಫುಟವಾಗಿಯೂ ಇರುವ; ಕೊಳಲು ನಾದದ.

Flútter ಫ್ಲಟರ್ (ಕ್ರಿ. ನಾ.) ರೆಕ್ಕೆಯೊದರು; (ಹಾರದೆ ಅಥವಾ ಅಲ್ಲಲ್ಲ ಹಾರಾಡುತ್ತ ರೆಕ್ಕೆಗಳನ್ನು) ಬಡಿ, ಒದರು. (ಸಾ., ನೆಲಕ್ಕೆ) ತತ್ತರಿಸುತ್ತ, ಕಂಪಿಸುತ್ತ, ಬರು. (ಸ್ತಿಮಿತವಿಲ್ಲದೆ) ಅಲೆದಾಡು; ಓಡಾಡು; ಬಳಸಾಡು; ಸುಳಿದಾಡು. ಸ್ಪಂದಿಸು; ಕಂಪಿಸು; ತುಡಿ; ಮಿಡಿ. (ನಾಡಿ) ಮೆತುವಾಗಿ, ಕ್ರಮ ತಪ್ಪಿ, — ಅಡು, ಹೊಡೆದುಕೊ. ಉದ್ರೇಕದಿಂದ ನಡುಗು; ಮನ ಕಲಕು; ಕ್ಷೋಭೆಗೊಳ್ಳು; ಕಳವಳಗೊಳ್ಳು. (ಬಾವುಟ, ಮೊ. ನ್ನು ಒಂದು ಕ್ರಮವಿಲ್ಲದೆ) ಅಲ್ಲಾಡಿಸು; (ಬಾವುಟ) ರಪರಪನೆ ಹಾರಾಡು. ಉದ್ರೇಕಿಸು; ಉದ್ರೇಕಗೊಳ್ಳು; ಭ್ರಾಂತಿಗೊಳಿಸು; ದಿಕ್ಕು ತೋರದಂತೆ ಮಾಡು. (ನಾ.) ಬಡಿದಾಟ; ರಪರಪನೆ ಹೊಡೆದಾಟ; ಹಾರಾಟ. ತುಡಿತ; ಸ್ಪಂದನ; ಸ್ಫುರಣ. ಉದ್ರೇಕ; ಸಂಭ್ರಮ; ನಡುಕ (Be, put, in a f. ಸಂಭ್ರಮಗೊಳ್ಳು, — ಗೊಳಿಸು). ಗಡಿಬಿಡಿ (Make a f. ಗಡಿಬಿಡಿ ಮಾಡು). (ಅಸಂ.) ಜೂಜಿನಲ್ಲಿ ಒಡ್ಡುವುದು; ಹೆಚ್ಚು ಲಾಭದಾಶೆಯ ವ್ಯಾಪಾರ.

Flúvial ಫ್ಲೂವಿಯಲ್, **Flúviatile**— ಟಿ(ಟೈ)ಲ್ (ಗು.) ನದಿಯ; ನದಿಯಲ್ಲಿ ದೊರೆಯುವ, ವಾಸಮಾಡುವ, ಬೆಳೆಯುವ; ನದಿಯ ಕಾರ್ಯದಿಂದಾದ. **Flúvio-** (ಸ. ಪೂ. ಪ.) ನದಿಯ —. **Fluvio-maríne** —ಮರೀನ್ (ಗು.) (ಭೂ. ವಿ.) ನದಿಯ ಮತ್ತು ಸಮುದ್ರದ ಕಾರ್ಯದಿಂದಾದ (F.-m. deposit ನದೀಮುಖದಲ್ಲಿ ನಿಕ್ಷಿಪ್ತವಾದ ಪದಾರ್ಥ). **Fluviómeter** — ಯಾಮಿಟರ್ (ನಾ.) ನದಿಯ ಏರಿಳಿತಗಳನ್ನು ತಾನಾಗಿ ಅಳೆಯುವ ಸಲಕರಣೆ: ಏರಿಳಿತ ಮಾಪಕ.

Flux ಫ್ಲಕ್ಸ್ (ನಾ., ಕ್ರಿ.) (ರಕ್ತ, ಮಲ, ಮೊ. ವು) ರೋಗಕಾರಣದಿಂದ ಅತಿಯಾಗಿ ಹೋಗುವುದು: ಅತಿಸಾರ; ಉಚ್ಚಾಟ. (ಹಿಂದಿನ ಪ್ರ.) ಆಮಶಂಕೆ. (ಹೊರ) ಹರಿಯುವುದು; (ಹೊರ) ಹರಿವು; ಹೊನಲು; ಪ್ರವಾಹ. (ನದಿಯ ಉಬ್ಬರದ) ಒಳ ಹರಿವು [ಸಾ., F. & reflux ಹರಿವೂ ಮರುಹರಿವೂ; ಉಬ್ಬರವಿಳಿತ (ರೂಪ. ಸಹ)]. ಮಾತು, ಮೊ. ಗಳ ಪ್ರವಾಹ; ವಾಕ್‌ಪ್ರವಾಹ. ನಿರಂತರವಾದ ವ್ಯತ್ಯಾಸ ಪರಂಪರೆ (In a state of f.). (ಗಣಿತ) ನಿರಂತರ ಚಲನೆ (Line is the f. of a point ರೇಖೆ ಬಿಂದುವಿನ ನಿರಂತರ ಚಲನೆಯ ಫಲ). (ಭೌ. ವಿ.) ಯಾವುದಾದರೂ ಪ್ರವಾಹಿಯು ಒಂದು ನಿರ್ದಿಷ್ಟ ಕ್ಷೇತ್ರ ಮಾನಕ್ಕೆ ಅಡ್ಡವಾಗಿ ಹರಿಯುವ ದರ, ಮೊತ್ತ. ಶಾಖದಿಂದ ಸುಲಭವಾಗಿ ಕರಗುವಂತೆ ಮಾಡುವುದಕ್ಕಾಗಿ ಲೋಹ, ಮೊ. ಗಳೊಡನೆ ಬೆರಸುವ ವಸ್ತು: ಸ್ರಾವಕ ವಸ್ತು. (ಕ್ರಿ.) ಹೊರ ಹರಿ; ಪ್ರವಹಿಸು; ದ್ರವವಾಗಿಸು; ದ್ರವೀಕರಿಸು; ದ್ರವೀಭವಿಸು; ಕರಗು; ಕರಗಿಸು; ಸ್ರಾವಕ ವಸ್ತುವಿನಿಂದ ಭಾವನೆ ಮಾಡು. **Flúxion** ಫ್ಲಕ್‌ಷನ್ (ನಾ.) (ವಿರ. ಪ್ರ.) ಹರಿವು; ನಿರಂತರ ವ್ಯತ್ಯಾಸ. (ಗಣಿತ) ಬಹು ಸೂಕ್ಷ್ಮ ಪ್ರಮಾಣದಲ್ಲಿ ನಿರಂತರ ವ್ಯತ್ಯಾಸ ಹೊಂದುತ್ತಿರುವ ಮೊತ್ತದ ವ್ಯತ್ಯಾಸ ದರ: ಪ್ರವಾಹದ ಪ್ರಮಾಣ (Method of fluxions ನ್ಯೂಟನ್ನಿನ ಕಲನ ಶಾಸ್ತ್ರ). **Flúxional** (ಗು.); **Flúxionary** (ಗು.)

Fly[1] ಫ್ಲೈ (ನಾ.) ಎರಡು ರೆಕ್ಕೆಗಳುಳ್ಳ ಕೀಟ; ನೊಣ [F. in amber ಅಂಬರ್ ಗಟ್ಟಿಯೊಳಗಡೆ ನೊಣವಿರುವ ವಿಚಿತ್ರ ಪಳೆಯುಳಿಕೆ. F. on wheel (ತನ್ನ ಪ್ರಭಾವದ ವಿಷಯದಲ್ಲಿ) ಮಿತಿಮೀರಿದ ಅಹಂಭಾವವುಳ್ಳವನು; ತಾನು ಮಹಾ ಗಣ್ಯನೆಂದು ಭಾವಿಸಿಕೊಂಡಿರುವವನು. Break f. on wheel ಅನವಶ್ಯವಾಗಿ ಶಕ್ತಿಯನ್ನು ಪ್ರಯೋಗಿಸು; (ಗುಬ್ಬಿಯಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸು; ಉಗುರಿನಿಂದ ಹೋಗುವುದಕ್ಕೆ ಕೊಡಲಿಯನ್ನು ಪ್ರಯೋಗಿಸು). A f. in the ointment ಸಂತೋಷಕ್ಕೆ ಅಡ್ಡಿಯಾದ ಅಲ್ಪ ವಿಷಯ. No flies on him (ಅಸಂ.) ಅವನಲ್ಲಿ ಯಾವ ಕುಂದೂ ಇಲ್ಲ; ಅವನು ಚುರುಕಾಗಿ, ಹುಷಾರಾಗಿ, ಇದ್ದಾನೆ; ಅವನನ್ನು ನಂಬಬಹುದು; ಅವನು ಯಾರನ್ನೂ ಬಿಟ್ಟುಕೊಡುವುದಿಲ್ಲ. Hessian, Spanish, Tsetse, f. (ಆಯಾ ಪದಗಳನ್ನು ನೋಡಿ)]. ಅನೇಕ ತೆರದ ನೊಣಗಳಿಂದುಂಟಾದ ಸಸ್ಯ ವ್ಯಾಧಿಗಳು: ನೊಣರೋಗ (A good deal of f. exists ಬಹಳ ನೊಣರೋಗವಿದೆ). (ಮಾನಿನ ಗಾಳದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಪಯೋಗಿಸುವ ಸಹಜ ಅಥವಾ ಕೃತಕ) ನೊಣ: ಗಾಳದ ನೊಣ. **F.-bane** ಒಂದು ಸಸ್ಯಜಾತಿ (ಮು., Catch-f. ಎಂಬ ಸಸ್ಯ). **F.-blow** (ನಾ.) ಮಾಂಸ, ಮೊ. ಗಳಲ್ಲಿಯ ನೊಣದ ತತ್ತಿ. (ಕ್ರಿ. ಸಕ.) —ಲ್ಲ ತತ್ತಿಯಿಡು ; ಹೊಲೆಗೆಲಸು [F.-blown ಹೊಲೆಗೆಲಸಿದ ; ಕಲ್ಮಷಗೂಡಿದ ; ಕಲುಷಿತವಾದ (ರೂಪ. ಸಹ)]. **F.-book** ಗಾಳದ ನೊಣಗಳನ್ನಿಡುವ ಸಂಪುಟ, ಕೋಶ. **F.-catcher** ನೊಣ ಹಿಡಿಯುವ ಜಾಲ, ಸಾಧನ. ಒಂದು ಪಕ್ಷಿಜಾತಿ ; ನೊಣಹಿಡುಕ. **F.-fish** (ಕ್ರಿ. ಅಕ.) ನೊಣದಿಂದ ಮಾನುಹಿಡಿ. **F.-flap** ನೊಣಗಳನ್ನೋಡಿಸುವ ಬೀಸುಪಟ್ಟಿ. **F.-net** ಕುದುರೆಗೆ ನೊಣ ಮುತ್ತದಂತೆ ಹಾಕುವ ಬಲೆ : ನೊಣ ಬಲೆ. **F.-paper** ನೊಣಹಿಡಿಯುವ, ಅಥವಾ ಅವಕ್ಕೆ ನಂಜೂಡುವ, (ಅಂಟು ಬಳಿದ) ಕಾಗದ. **F.-trap** ನೊಣದ ಜಾಲ ; ನೊಣಹಿಡುಕ. ಒಂದು ಸಸ್ಯಜಾತಿ (ಮು., Venus's f.-t.). **F.-weight** ೧೧೨ ಪೌಂಡು ತೂಕಕ್ಕೆ ಹೆಚ್ಚಿಲ್ಲದ ಜಟ್ಟಿ. **F.-whisk** ನೊಣಗಳನ್ನೋಡಿಸುವ ಚೌರಿ.

Fly[2] ಫ್ಲೈ [ಕ್ರಿ. ; ಭೂತ. Flew, ಭೂ. ಕೃ. Flown ಫ್ಲೋನ್. Is, has, flown. ಮಾತಿನಲ್ಲೂ ಸಾಮಾನ್ಯ ಗದ್ಯದಲ್ಲೂ Fly ರೂಪ Flee ರೂಪಕ್ಕಿಂತ ಹೆಚ್ಚುವಾಡಿಕೆಯಲ್ಲದೆ ; ಆದರೆ Flew, Flown ರೂಪಗಳನ್ನು Fled ರೂಪಕ್ಕೆ ಬದಲಾಗಿ ಸಾಮಾನ್ಯವಾಗಿ ಬಳಸುವುದಿಲ್ಲ]. (ಹಕ್ಕಿ, ಪಟ, ಬಾವುಟ, ವಿಮಾನ, ಮೊ. ವು) ಹಾರು, ಹಾರಿಹೋಗು ; ವಿಮಾನದಲ್ಲಿ ಹಾರು [F. high ಮುಗಿಲುಮುಟ್ಟಲು ಹೋಗು ; ಹೆಬ್ಬಯಕೆಯುಳ್ಳವನಾಗಿರು. High-flown ಆಡಂಬರದ ; ಪ್ರೌಢಿಮಾ ಪ್ರದರ್ಶನದ ; ಉದ್ದಂಡ. As the crow flies (Crow[1] ನೋಡಿ). The bird is flown (Bird ನೋಡಿ). (ಅನೇಕ ವೇಳೆ *about*, *away*, *forth*, *off*, *out* ಉಪ. ದೊಡನೆ)]. (ಪಾರಿವಾಳವನ್ನು, ಡೇಗೆಯನ್ನು) ಹಾರಿಸು, ಹಾರಬಿಡು ; (ಡೇಗೆ, ಹಕ್ಕಿಯನ್ನು ಅಟ್ಟಿಸಿಕೊಂಡು) ಮೇಲಕ್ಕೆ ಹಾರು ; [(ರೂಪ. F. at higher game ಮಹತ್ವಾಕಾಂಕ್ಷಿಯಾಗಿರು]. ವಾಯುಮಂಡಲದಲ್ಲಿ ಬೇಗನೆ ಮೇಲೇರು. (ಬೇಲಿ, ಮೊ. ಗಳ ಮೇಲೆ) ಸ್ವಲ್ಪವೂ ಸೋಕದಂತೆ ನೆಗೆ, ಹಾರಿಕೊಂಡು ಹೋಗು. (ಗಾಳಿಪಟವನ್ನು) ಹಾರಿಸಿ ಎತ್ತರದಲ್ಲಿ ನಿಲ್ಲುವಂತೆ ಮಾಡು (F. a kite ದರದು ಹುಂಡಿಯ ಮೂಲಕ ಹಣವೆತ್ತು. ಗಾಳಿ ಹೇಗೆ ಬೀಸುತ್ತಿರುವುದೆಂಬುದನ್ನು ನೋಡು ; ಸಂದರ್ಭಗಳು ಹೇಗಿರುವುವೆಂದು ತಿಳಿದುಕೊ ; ಇಂಗಿತ ಪರೀಕ್ಷೆ ಮಾಡು). (ಬಾವುಟ, ಕೂದಲು, ಉಡುಪು, ಮೊ.) ಬಡಿದಾಡು, ಅಲುಗಾಡು, ಒಲೆದಾಡು, ಹಾರಾಡು ; (ಬಾವುಟವನ್ನು) ಹಾರಾಡುವಂತೆ ಇಡು, ನೆಡು ; (ಬಾವುಟ) ಹಾರಿಸು. ಅತಿ ವೇಗದಿಂದ ಪ್ರಯಾಣಮಾಡು, ಹಾದುಹೋಗು ; ರಭಸದಿಂದ ನುಗ್ಗು ; ನೆಗೆ ; ತ್ವರೆಮಾಡು [F. to arms ಆತುರದಿಂದ ಆಯುಧ ತೊಡು ; ಕೈದು ತುಡುಕು. F. in the face of (Face ನೋಡಿ). F. at, upon ರಭಸದಿಂದ ಆಕ್ರಮಣ ಮಾಡು, ಮೇಲೆ ಬೀಳು. F. into a passion, raptures, etc. ರಾಗೋದ್ರಿಕ್ತನಾಗು ; ಆವೇಶವೇರು ; ಆನಂದ ಪರವಶನಾಗು. F. out ರೇಗಿಬೀಳು ; ಉರಿದುಬೀಳು ; ದುರ್ಭಾಷೆಯಾಡು. Make sparks f. ಕಿಡಿಗೆದರುವಂತೆ ಮಾಡು ; ಕಿಡಿ ಹಾರಿಸು. Send flying ರಭಸದಿಂದ ಓಡಿಸು, ಹಾರಿಹೋಗುವಂತೆ ಮಾಡು. Make the money f. ಹಣವನ್ನು ನೀರಿನಂತೆ ಚೆಲ್ಲು. Door flew open ಕದ ಹಾರಬಡಿಯಿತು. Glass, etc. flies ಗಾಜು, ಮೊ. ದು ಒಡೆದು ಚೂರು ಚೂರಾಗಿ ಸಿಡಿಯುತ್ತದೆ. Let f. (ಕ್ಷಿಪಣಿಯನ್ನು) ಹಾರಿಸು ; ಗುಂಡಿನಿಂದ ಹೊಡೆ. ಹೊಡೆ ; ದುರ್ಭಾಷೆಯಾಡು ; ಕಟುವಾಗಿ ಮಾತನಾಡು (*At* ಉಪ. ದೊಡನೆ)]. ಓಡಿಹೋಗು ; ಬಿಟ್ಟೋಡು ; ಪಲಾಯನ ಮಾಡು (Must f. the country ದೇಶಬಿಟ್ಟು ಓಡಿಹೋಗಬೇಕು). **F.-away** (ಉಡುಪಿನ ವಿಷಯದಲ್ಲಿ) ಸಡಿಲಗೆಯುಡುಪಿನ ; ಮನೆಯುಡುಪಿನ. (ವ್ಯಕ್ತಿವಿಷಯದಲ್ಲಿ) ದುಡುಕು ಸ್ವಭಾವದ ; ವಿಚಾರಪರನಲ್ಲದ. **F.-by-night** ರಾತ್ರಿ ಸಂಚಾರಿ ; ರಾತ್ರಿ ಪಲಾಯನ ಮಾಡುವವನು. **F.-the-garter** ಒಂದು ಬಗೆಯ ಕಪ್ಪೆಕುಪ್ಪಳು ಆಟ. **Flýer, Flíer** ಫ್ಲಯರ್ (ನಾ.) ಹಾರಾಡುವ ಹಕ್ಕಿ, ಮೊ. ವು (ಸಾ., High, poor, f. ಬಹು ವೇಗವಾಗಿ, ಬಹು ಸಾವಕಾಶವಾಗಿ, ಹಾರಾಡುವದು). ಅತಿ ವೇಗದಿಂದ ಹೋಗುವ ಪ್ರಾಣಿ, ಬಂಡಿ, ಮೊ. ವು ; ವೈಮಾನಿಕ. ಹಾರುನೆಗೆತ. **Flýing** (ಗು.) (ಕ್ರಿಯಾರ್ಥಗಳಲ್ಲಿ). ಹಾರುವಂತೆ ಚಲಿಸುವ, ಓಡುವ [With f. colours (Colour ನೋಡಿ)]. F. boat (ದೋಣಿಯ ಭಾಗವು ನೀರಿನ ಮೇಲೆ ತೇಲುವುದಕ್ಕೂ ವಿಮಾನದ ಕಟ್ಟಡಕ್ಕೂ ಅನುಕೂಲಿಸುವಂತೆ ಕಟ್ಟಿರುವ) ಸಮುದ್ರ ಫಲಕಯಾನ : ಹಾರುದೋಣಿ. F. bridge ಹಂಗಾಮಿ ಸೇತುವೆ. F. buttress (ಸಾಮಾನ್ಯವಾಗಿ ಹಾಕುವ ಆಸರೆಗೋಡೆ ಅನುಕೂಲವಿಲ್ಲದ ಸಂದರ್ಭದಲ್ಲಿ, ಎಂದರೆ ಚಾವಣಿ, ಮೊ. ಗಳ ತಳ್ಳತವನ್ನು ತಡೆಯಬೇಕಾದ ಸಂದರ್ಭದಲ್ಲಿ) ಒಂದು ಸ್ಥಿರ ಆಧಾರದಿಂದ (ಸಾ., ಒಂದು ಕಮಾನಿನ ಭಾಗದಿಂದ) ಹೊರಟು ಕಟ್ಟಡವನ್ನು ಒದೆಯುವಂತೆ ಇಳಿಜಾರಾಗಿ ಕಟ್ಟಿದ ಆಸರೆಗೋಡೆ. F. column, squadron ಅತಿ ವೇಗದಿಂದ ಚಲಿಸುವುದಕ್ಕಾಗಿ ಏರ್ಪಡಿಸಿದ ಸೈನ್ಯದಳ. F. dog ರಕ್ತ ಹೀರುವ ಒಂದು ಬಗೆಯ ಬಾವಲ. F. dutchman (Dutchman ನೋಡಿ). F. fish ಎದೆಯಲ್ಲಿಯ ಈಜುರೆಕ್ಕೆಗಳು ಹಾರುರೆಕ್ಕೆಗಳಂತಿದ್ದು ವಾಯುಮಂಡಲಕ್ಕೆ ನೆಗೆಯುವ ಒಂದು ಮಾನ ಜಾತಿ : ಹಾರುಮಾನು. ಬಾರ್ಬಡೋಸ್ ದ್ವೀಪ ನಿವಾಸಿ(ಯ ಅಡ್ಡಹೆಸರು). F. fox ಹಣ್ಣು ತಿಂದುಹಾಕುವ ಬಾವಲಿಯ ಜಾತಿ : ತೊಗಲ ಬಾವಲ ; ಚಕ್ಕಳದ ಹಕ್ಕಿ. F. jump ಓಡಿಬಂದು ಕೂಡಲೆ ಹಾರುವ ನೆಗೆತ : ಹಾರು ನೆಗೆತ. F. man ವೈಮಾನಿಕ. F. officer ವೈಮಾನಿಕ ಸೈನ್ಯದ ಅಧಿಕಾರಿ. F. pig (ಅಸಂ.) ಸೈನ್ಯಸುರಂಗದ ಫಿರಂಗಿಯ ಗುಂಡು. F. squad ವೇಗದಿಂದ ಅಟ್ಟಿಸಿಕೊಂಡು ಹೋಗುವುದಕ್ಕಾಗಿ ಮೋಟಾರು ಬಂಡಿ, ಮೊ. ಗಳಲ್ಲಿ ಹೋಗುವ ಪೋಲೀಸು ದಳ : ವೇಗ ದಳ ; ಹಾರು ದಳ. F. squirrel ಮುಂದಿನ ಮತ್ತು ಹಿಂದಿನ ಕಾಲುಗಳಿಗೆ ಮಧ್ಯೆ ಹರಡಿರುವ ಚರ್ಮದ ಸಹಾಯದಿಂದ ವಾಯುವಿನಲ್ಲಿ ತೇಲಾಡುವ, ನೆಗೆಯುವ, ಅಳಿಲುಜಾತಿ : ಹಾರುವಳಿಲು. F. start ಪೂರ್ತಿ ವೇಗದಲ್ಲಿ ಆರಂಭದ ಕಂಬವನ್ನು ದಾಟಿಹೋಗುವುದು. F. visit ಅವಸರದ ಭೇಟಿ.

Fly (ನಾ.) ಹಾರುವುದು ; ಹಾರಾಡುವುದು ; ಹಾರಾಟ ; ಹಾರು ; ಹಾರಿಕೆ ; ಹಾರುದೂರ (On the f. ಹಾರಾಡುತ್ತ, ಚಲಿಸುತ್ತ). ಒಂಟಿ ಕುದುರೆಯ ಬಾಡಿಗೆಬಂಡಿ. (ಅಂಗಿಯಲ್ಲಿಯ ಕಾಜಾಗಳನ್ನೊಳಕೊಂಡ ಅಥವಾ ಅವನ್ನು ಮುಚ್ಚುವ) ಮುಚ್ಚುಪಟ್ಟಿ. (ಡೇರೆಯ ಬಾಗಿಲನಲ್ಲಿಯ) ಹಾರು ಕದ. (ಬಾವುಟದ) ಹಾರು ಭಾಗ. (ಸ್ತಂಭದಿಂದ ಕಡೆಯ ವರೆಗಿನ) ಬಾವುಟದ ಅಗಲ. (ರಂಗಭೂಮಿ : ಬ. ವ. ದಲ್ಲಿ) ಮುಂದುರಂಗದ ಮೇಲ್ಭಾಗದಲ್ಲಿಯ ಅವಕಾಶ. (ಗಡಿಯಾರದಲ್ಲೂ ಇತರ ಯಂತ್ರಗಳಲ್ಲೂ) ವೇಗ ನಿಯಂತ್ರಕ. **F.-leaf** (ಪುಸ್ತಕದ ಮೊದಲನಲ್ಲಾಗಲಿ ಕೊನೆಯಲ್ಲಾಗಲಿ ಇರುವ, ಅಥವಾ ಸುತ್ತೋಲೆ, ಮೊ. ಗಳಲ್ಲಿರುವ) ಬರಿಯ ಹಾಳೆ : ಹಾರು ಹಾಳೆ ; ರೆಕ್ಕೆ ಹಾಳೆ. **Flýman** ಒಂಟಿ ಕುದುರೆಯ ಬಂಡಿ ಹೊಡೆಯುವವನು. ನಾಟಕ ರಂಗದ ಮೇಲ್ಭಾಗದಲ್ಲಿ ಪರದೆಗಳ ಹಗ್ಗ, ಮೊ. ನ್ನು ಎತ್ತಿ ಬಿಡುವವನು. **F.-sheet** ಎರಡು ಅಥವಾ ನಾಲ್ಕು ಪುಟದ ಸುತ್ತೋಲೆ, ಹಂಚೋಲೆ, ಪ್ರಕಟನ ಪತ್ರ, ಮೊ. ವು. **F.-wheel** ಯಂತ್ರಗಳ ಚಲನೆಯನ್ನು ಕ್ರಮಪಡಿಸುವುದಕ್ಕಾಗಿ ಅಥವಾ ಶಕ್ತಿಸಂಗ್ರಹಕ್ಕಾಗಿ ಯಂತ್ರಗಳ ಚಾಲಕ ದಂಡಕ್ಕೆ ಬಂಧಿಸಿರುವ ಭಾರ ಪರಿಧಿಯ ಚಕ್ರ : (ಗತಿ) ನಿಯಂತ್ರಕ ಚಕ್ರ.

Fly[3] ಫ್ಲೈ (ಗು.) (ಅಸಂ.) ತಿಳಿದಿರುವ ; ಪೂರ್ತಿ ಎಚ್ಚತ್ತಿರುವ ; ಹುಷಾರಾಗಿರುವ. (ಬೆರಳುಗಳ ವಿಷಯದಲ್ಲಿ) ಚಾಕಚಕ್ಯವುಳ್ಳ ; ಚುರುಕಾದ ; ಕುಶಲತೆಯುಳ್ಳ.

Flýing, etc. **Fly[2]** (ಕ್ರಿ.) ನೋಡಿ.

Foal ಫೋಲ್ (ನಾ., ಕ್ರಿ.) ಕುದುರೆ, ಕತ್ತೆ, ಮೊ. ಗಳ ಮರಿ (In, with, f. ಕುದುರೆ, ಮೊ. ವು ಗಬ್ಬವಾಗಿ). (ಕುದುರೆ, ಮೊ.) ಮರಿ ಹಾಕು, ಈನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Foam ಫೋಮ್ (ನಾ., ಕ್ರಿ. ಅಕ.) ನೊರೆ; ಬುರುಗು (ದ್ರವದಲ್ಲಿ ಕಲಕಾಟದಿಂದ ಅಥವಾ ಕಿಣ್ವಕ್ರಿಯೆ, ಮೊ. ಗಳಿಂದ ಹುಟ್ಟಿದ್ದು). ಜೊಲ್ಲಿನ ನೊರೆ. (ಕಾವ್ಯ) ಸಮುದ್ರ (ಕ್ರಿ.) ನೊರೆಗರೆ; ನೊರೆ ಸೂಸು; ಬಾಯಲ್ಲಿ ನೊರೆ ಕೂಡು, — ಕಟ್ಟು, —ಕೀಳು, — ಕಾರು; (ನೀರು, ಮೊ. ವಿಷಯದಲ್ಲಿ) ನೊರೆಯಾಗು, ನೊರೆಗೂಡು, ನೊರೆಗರೆಯುತ್ತ ವೇಗವಾಗಿ ಹರಿ (*Along, down, over*, ಉಪ. ದೊಡನೆ); ನೊರೆಯಲ್ಲಿ ಪರಿಣಾಮವಾಗು (*Off, away* ಉಪ. ದೊಡನೆ); (ರೂಪ.) ಕಾರ್ಯ ಫಲಕಾರಿಯಾಗದೆಹೋಗು. (ಬಟ್ಟಲು, ಮೊ.) ನೊರೆಗೂಡಿದ ಮದ್ಯ ದಿಂದ ತುಂಬಿರು. **Foámless** (ಗು.); **Foámy** (ಗು.)

Fob[1] ಫಾಬ್ (ನಾ., ಕ್ರಿ. ಸಕ) ಗಡಿಯಾರ, ಮೊ. ಕ್ಕಾಗಿ ಮಾಡಿರುವ ಸಣ್ಣ ಜೇಬು, ಕಿಸೆ (ಹಿಂದೆ ಷರಾಯಿಯ ನಡುಪಟ್ಟಿಯಲ್ಲಿ ಮಾಡು ತ್ತಿದ್ದದ್ದು). (ಕ್ರಿ.) ಸಣ್ಣ ಕಿಸೆಯಲ್ಲಿಡು.

Fob[2] ಫಾಬ್ (ಕ್ರಿ. ಸಕ.) ವಂಚಿಸು; ಮೋಸ ಮಾಡು; ಮರುಳು ಮಾಡು; ಕೀಳು ಪದಾರ್ಥವನ್ನು ಮೇಲು ಪದಾರ್ಥವೆಂದು ಮೋಸ ಮಾಡಿ ತಗುಲಗಟ್ಟು (*Off upon* ಉಪ. ದೊಡನೆ); (ಒಬ್ಬನನ್ನು) ಮೇಲು ಪದಾರ್ಥಕ್ಕಾಗಿ ಕೀಳು ಪದಾರ್ಥಕೊಟ್ಟು ವಂಚಿಸು; ಟೋಪಿ ಹಾಕು (*Off with* ಉಪ. ದೊಡನೆ)

Fócal, etc. `**Focus** ನೋಡಿ.

Fo'c's'le = Forecastle.

Fócus ಫೋಕಸ್ (ನಾ.; ಬ. ವ. Foci ಫೋಸೈ, Focuses ಫೋಕ ಸೆಸ್; ಕ್ರಿ.) (ಕ್ಷೇತ್ರ ಜ್ಯಾ.) ಒಂದು ನಿರ್ದಿಷ್ಟ ವಕ್ರರೇಖೆಯಲ್ಲಿ ನೆಲ ಸಿರುವ ಬಿಂದುಗಳಿಗೆ ಯಾವ ಬಿಂದುವಿನಿಂದ ಇರುವ ದೂರಗಳು ಒಂದು ಗೊತ್ತಾದ ರೇಖಾಂಕ ಸಂಬಂಧವುಳ್ಳವಾಗಿರುವುವೋ ಆ ಬಿಂದು; ನಾಭಿ. (ದ್ಯ. ವಿ., ಉಷ್ಣ ವಿಜ್ಞಾನ, ಮೊ.) ಕಿರಣಗಳು ಪ್ರತಿಫಲನದಿಂದ ಅಥವಾ ವಕ್ರೀಭವನದಿಂದ ಒಟ್ಟುಗೂಡಿ ಸಂಧಿಸುವ ಬಿಂದು; ಕಿರಣ ಗಳು (ಅಲ್ಲಿಂದ) ನಾನಾ ದಿಕ್ಕುಗಳಿಗೆ ಹೊರಡುವಂತೆ ತೋರುವ ಬಿಂದು. ಒಂದು ಲೆನ್ಸಿನ ಮೂಲಕ ರಚನೆಯಾದ ಪ್ರತಿಬಿಂಬವು ಸ್ಫುಟವಾಗಿ ಕಾಣಬೇಕಾದರೆ ಮೂಲ ವಸ್ತು ನೆಲಸಿರಬೇಕಾದ ಬಿಂದು (In f. ನಾಭಿಯಲ್ಲಿ. Out of f. ನಾಭಿ ತಪ್ಪಿ. Bring into f. ನಾಭಿಗೆ ತರು). ಒಂದು ಲೆನ್ಸಿನ ನಾಭಿದೂರ. ದೃಷ್ಟಿಪಟದ ಮೇಲೆ ಬಿಂಬವು ಸ್ಫುಟವಾಗಿ ಬೀಳಬೇಕಾದರೆ ಮಾಡಬೇಕಾದ ಕಣ್ಣಿನ ಅಥವಾ ಕನ್ನಡ ಕದ ಹೊಂದಾವಣೆ. ಧ್ವನಿತರಂಗಗಳು ಒಟ್ಟುಗೂಡುವ ಬಿಂದು: ಧ್ವನಿ ನಾಭಿ. (ರೋಗ, ಕಾರ್ಯಕಲಾಪ, ಮೊ. ಗಳ) ಕೇಂದ್ರ. (ಕ್ರಿ.) ನಾಭಿಗೂಡು; ನಾಭಿಗೂಡಿಸು. (ಲೆನ್ಸಿನ, ಕಣ್ಣಿನ) ನಾಭಿಯನ್ನು ತಕ್ಕಂತೆ ಅಳವಡಿಸು, ಸರಿಹೊಂದಿಸು; ನಾಭಿಗೆ ತರು. **Fócal** (ಗು.) ನಾಭಿಯ; ನಾಭಿಯಲ್ಲಿರುವ; ನಾಭಿಸ್ಥ; ನಾಭಿಗೂಡಿರುವ. (ದ್ಯ. ವಿ.) F. distance or length ದರ್ಪಣದ ಅಥವಾ ಲೆನ್ಸಿನ ಕೇಂದ್ರಕ್ಕೂ ಅದರ ನಾಭಿಗೂ ಇರುವ ದೂರ: ನಾಭಿ ದೂರ. **Fócalize** (ಕ್ರಿ. ಸಕ.) = Focus (ಕ್ರಿ.). **Focalizátion** (ನಾ.)

Fódder ಫಾಡರ್ (ನಾ.; ಕ್ರಿ. ಸಕ.) (ದನ ಕರುಗಳಿಗೆ) ಒಣ ಹುಲ್ಲು, ಒಣ ಮೇವು (ಹಾಕು, ತಿನ್ನಿಸು). **Fódderless** (ಗು.)

Foe ಫೋ (ನಾ.) (ಕಾವ್ಯ, ಮೊ.) ಶತ್ರು; ಹಗೆ; ವೈರಿ; ಪ್ರತಿ ಕಕ್ಷಿ; ವಿರೋಧಿ; ಆಗದವನು; ಎದುರಾಳಿ. **Foéman** (ಪ್ರಾಚೀ. ಪ್ರ.) ಯುದ್ಧಶತ್ರು.

Foétus, Fétus ಫೀಟಸ್ (ನಾ.) (ಗರ್ಭದಲ್ಲಿ, ತತ್ತಿಯಲ್ಲಿ, ಪೂರ್ತಿ ಬೆಳೆದ) ಭ್ರೂಣ. **F(o)étal** (ಗು.); **F(o)éticide** (ನಾ.) ಭ್ರೂಣ ಹತ್ಯೆ.

Fog[1] ಫಾಗ್ (ನಾ.; ಕ್ರಿ. ಸಕ.) ಕೂಳೆ ಹುಲ್ಲು; ಚಳಿಗಾಲದಲ್ಲಿ ಕೊಯ್ಯದೆ ಹಾಗೆಯೇ ಬಿಟ್ಟಿರುವ ಉದ್ದವಾದ ಹುಲ್ಲು; ಒರಟು ಹುಲ್ಲು. (ಕ್ರಿ.) — ಹುಲ್ಲುದೆಳೆ ನಿಲ್ಲಿಸು; —ಮೇಯಿಸು.

Fog[2] ಫಾಗ್ (ನಾ., ಕ್ರಿ.) ವಾಯುಮಂಡಲದಲ್ಲಿ ಭೂಮಿಗೆ ಹತ್ತಿರವೇ ತೇಲಾಡುತ್ತಿರುವ ನೀರಾವಿಯ ಕಣಗಳು: ಮಂಜು; ಕಾವಳ; ಈ ಕಾವಳದಿಂದಾದ ಮಬ್ಬು (In a f. ದಿಕ್ಕು ತೋರದೆ; ಕಣ್ಣು ಕಾಣದೆ; ದಿಗ್ಭ್ರಮೆ ಹಿಡಿದು). ವಾಯುಮಂಡಲ ಅಸ್ವಾಭಾವಿಕವಾಗಿ ಮಬ್ಬು ಕವಿಯುವುದು; ಮಬ್ಬು. (ಛಾಯಾ ಚಿತ್ರ) ಸ್ಫುಟೀಕರಿಸಿದ ಫಲಕದ ಮೇಲಿನ ಮಬ್ಬು. [**F.b-ow** ಮಂಜಿನಮೇಲೆ ಬಿಸಿಲು ಬಿದ್ದು ಹುಟ್ಟಿದ ಕಾಮನ ಬಿಲ್ಲು. **F.-horn** ಕಾವಳದಲ್ಲಿ, ಮಂಜಿನಲ್ಲಿ, ಸಿಕ್ಕಿದ ಹಡಗು ಗಳಿಗೆ ಎಚ್ಚರಿಕೆ ಕೊಡುವ ಕಹಳೆ: ಕಾವಳದ ಕಹಳೆ. **F.-signal** ರೈಲು ಬಂಡಿ ನಡಸುವವನಿಗೆ ಮಾರ್ಗತೋರಿಸುವುದಕ್ಕಾಗಿ ರೈಲುಮಾರ್ಗದಲ್ಲಿ ಇಟ್ಟ ಸ್ಫೋಟಕ, ಸಿಡಿಮದ್ದು: ಕಾವಳ ಸಂಜ್ಞೆ]. (ಕ್ರಿ.) ಕಾವಳ ಕವಿ; ಮಂಜು ಮುಸುಕು; ಕಾವಳದಂತೆ ಮಬ್ಬುಗವಿ. ದಿಗ್ಭ್ರಮೆ ಹಿಡಿಸು; ದಿಕ್ಕುತೋರದಂತೆ ಮಾಡು. (ತೋಟಗಾರಿಕೆ) (ಸಸ್ಯ) ತೇವ ಹೆಚ್ಚಿ ಸತ್ತುಹೋಗು. (ಛಾಯಾ ಚಿತ್ರ) (ವಿಷಮ ಪ್ರತಿಯನ್ನು) ಮಬ್ಬುಗವಿಸು, ಅಸ್ಪಷ್ಟ ಮಾಡು. (ರೈಲುಮಾರ್ಗ) ಕಾವಳದ ಸಂಜ್ಞೆಯನ್ನು (ಸ್ಫೋಟಕ ವನ್ನು) ರೈಲುಮಾರ್ಗದಲ್ಲಿರಿಸು. **Fógger** (ನಾ.) (ರೈಲುಮಾರ್ಗದಲ್ಲಿ) ಕಾವಳ ಸಂಜ್ಞೆ ಇಡುವವನು. **Fóggy** (ಗು.) ಮಂಜು ಕವಿದ(ಂತೆ ಇರುವ); ಕಾವಳದ(ಂತಿರುವ); ದಟ್ಟವಾದ; ಮಬ್ಬಾದ; ಮಸುಕಾದ; ಮಂಕಾದ; ಮೋಡ ಕವಿದ. ಜಡವಾದ; ಅಸ್ಪಷ್ಟ (Has only a f. idea of it ಅದರ ವಿಷಯವಾಗಿ ಅಸ್ಪಷ್ಟ ಭಾವನೆ ಮಾತ್ರ ಇದೆ). **Fóggily** (ಕ್ರಿ. ವಿ.); **Fógginess** (ನಾ.)

Fógle ಫೋಗ್ಲ್ (ನಾ.) (ಕಳ್ಳರ ಅಸಂ.) ರೇಷ್ಮೆಯ ಕರವಸ್ತ್ರ.

Fóg(e)y ಫೋಗಿ (ನಾ.) (ಸಾ., Old f.) ಹಳೆಯ ಸಂಪ್ರದಾಯ ದವನು; ಹಳೆಯ ಕಂದಾಚಾರದವನು; ಹಳೆಯ ಕಾಲದವನು; ಓಬೀರಾಯನ ಕಾಲದವನು. **Fóg(e)ydom** (ನಾ.) — ಸ್ಥಿತಿ; ಹಳೆಯ ಕಾಲದವರು. **Fógyism** (ನಾ.) ಹಳೆಯ ಕಂದಾಚಾರ; ಹಳೆಯ ಕಂದಾಚಾರದವರ ವೈಲಕ್ಷಣ್ಯ. **Fógyish** (ಗು.) ಸ್ವಲ್ಪ ಮಟ್ಟಿಗೆ ಹಳೆಯ ಕಂದಾಚಾರದ.

Foíble ಫಾಯ್‌ಬ್ಲ್ (ನಾ.) ಕುಂದು; ಕೊರತೆ; ನ್ಯೂನತೆ; ಊನ. (ಒಬ್ಬನು) ಶ್ಲಾಘ್ಯವೆಂದು ಭ್ರಮಿಸಿ ಹೆಮ್ಮೆ ಪಡುವ (ತನ್ನ) ಒಂದು ಗುಣ. (ಕತ್ತಿವರಿಸೆ) ಮಧ್ಯದಿಂದ ಮೊನೆಯ ವರೆಗಿನ ಕತ್ತಿಯ ಅಲಗಿನ ಭಾಗ.

Foil[1] ಫಾಯ್ಲ್ (ನಾ., ಕ್ರಿ. ಸಕ.) (ವಾ. ಶಾ.) ಕಿಟಕಿಯ ಕಮಾನಿನ ಶೃಂಗಗಳ ಮಧ್ಯೇ ಇರುವ ಅವಕಾಶ ಅಥವಾ ವೃತ್ತಭಾಗ. [(ಕ್ರಿ.) ಶೃಂಗಗೂಡಿದ ವೃತ್ತಭಾಗಗಳಿಂದ ಅಲಂಕರಿಸು. Foiled arch ಶೃಂಗಗೂಡಿದ ವೃತ್ತಭಾಗಗಳುಳ್ಳ ಕಮಾನು]. ಬಡಿದು ಅಥವಾ ಉರುಳೆ ಯಾಡಿಸಿ ಮಾಡಿದ ಲೋಹದ ತೆಳುಹಾಳೆ; ವರ್ತಿರೇಕು (ಸಾ., ಚಿನ್ನ, ತಾಮ್ರ, ತವರ, ಮೊ. ಗಳದು). ಕನ್ನಡಿಯ ಹಿಂಭಾಗದಲ್ಲಿ ಹಚ್ಚಿರುವ ತವರ ಮತ್ತು ಪಾದರಸ ಮಿಶ್ರಣದ ಲೇಪ; ಹಿಂಬಳಿತ. (ರತ್ನಗಳ ಹೊಳಪನ್ನು ವೈದೃಶ್ಯದಿಂದ ಹೆಚ್ಚಿಸುವುದಕ್ಕಾಗಿ ಅಥವಾ ಅವಕ್ಕೆ ಬಣ್ಣ ಕೊಡುವುದಕ್ಕಾಗಿ ಅವುಗಳ ಹಿಂದೆ ಇಡುವ) ವರ್ತಿರೇಕು; ಕಾಂತಿವರ್ಧಕ; ಯಾವುದನ್ನಾದರೂ ವೈದೃಶ್ಯದಿಂದ ಪ್ರಭೆಹೆಚ್ಚಿಸುವ ವಸ್ತು. (ಕ್ರಿ.) ವರ್ತಿರೇಕಿಡು; ವೈದೃಶ್ಯದಿಂದ ಪ್ರಭೆ ಹೆಚ್ಚಿಸು.

Foil[2] ಫಾಯ್ಲ್ (ಕ್ರಿ., ನಾ.) (ಬೇಟೆಯಲ್ಲಿ ವಾಸನೆ, ಸುಳಿವು, ಸಿಕ್ಕದಂತೆ) ನಾಯಿಯನ್ನು ದಿಗ್ಭ್ರಮೆಗೊಳಿಸಲು ಅದೇ ಹಾದಿಯಲ್ಲಿ ಹಿಂದಿರುಗಿ ಅಥವಾ ಆ ದಾರಿಗೆ ಅಡ್ಡವಾಗಿ ಬೇಟೆಯ ಪ್ರಾಣಿ ಓಡಿಹೋಗುವುದು; ಈ ರೀತಿಯಾಗಿ ವಾಸನೆಯನ್ನು ಕೆಡಿಸಿಬಿಡು; ಸುಳಿವು ತಪ್ಪಿಸು. ಹೊಡೆದೋಡಿಸು; ಸಾಗದಂತೆ ಮಾಡು; ವ್ಯರ್ಥ ಮಾಡು; ಸೋಲಿಸು; (ಉದ್ದೇಶ) ಭಂಗ ಮಾಡು; ನಿವಾರಿಸು; ದಿಗ್ಭ್ರಮೆಗೊಳಿಸು. (ನಾ.) ಬೇಟೆಯ ಪ್ರಾಣಿಯ ಜಾಡು, ಸುಳಿವು (Run, run upon, the f. ಅದೇ ಜಾಡಿನಮೇಲೆ ಎರಡನೆಯ ಸಾರಿ ಓಡು). (ಪ್ರಾಚೀ. ಪ್ರ.) ಹಿಂದಟ್ಟು; ಸೋಲಿಸು; ತಡೆ.

Foil[3] ಫಾಯ್ಲ್ (ನಾ.) (ಕತ್ತಿವರಿಸೆಯಲ್ಲಿ ಉಪಯೋಗಿಸುವ, ತುದಿಗೆ ಗುಂಡಿಹಾಕಿದ) ಮೊಂಡು ಕತ್ತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Foison ಫಾಯ್‌ಸ್‌ನ್ (ನಾ.) (ಪ್ರಾಚೀ. ಪ್ರ.) ಸಮೃದ್ಧಿ ; ತುಂಬು ; ತುಂಬು ಬೆಳೆ. ಸತ್ವ ; ವೀರ್ಯ.

Foist ಫಾಯ್‌ಸ್ಟ್ (ಕ್ರಿ. ಸಕ.) ಅಧಿಕಾರವಿಲ್ಲದೆ ಅಥವಾ ತಿಳಿಯದಂತೆ (ಒಂದರೊಳಕ್ಕೆ) ತೂರಿಸು, ಸೇರಿಸು, ನುಸುಳಿಸು. ವಂಚಿಸು ; ಮೋಸಗೊಳಿಸು. (ಗ್ರಂಥ ರಚನೆಯನ್ನು) ಒಬ್ಬನಮೇಲೆ ಆರೋಪಿಸು, ಹೊರಿಸು.

Fókker ಫಾಕರ್ (ನಾ) (ಜರ್ಮನರು ಉಪಯೋಗಿಸುವ ಒಂದು ತೆರದ) ಯುದ್ಧದ ಫಲಕ ವಿಮಾನ.

Fold[1] ಫೋಲ್ಡ್ (ನಾ., ಕ್ರಿ. ಸಕ.) (ಕುರಿಯ) ದೊಡ್ಡಿ, ರೊಪ್ಪ (= Sheep-f.). (ರೂಪ.) ಕ್ರೈಸ್ತ ಸಭೆ, ಸಮಾಜ. (ಕ್ರಿ.) ಕುರಿ, ಮೊ. ನ್ನು ರೊಪ್ಪದಲ್ಲಿ ಕೂಡು ; (ಜಮೀನಿನಮೇಲೆ ಗೊಬ್ಬರಕ್ಕಾಗಿ) ಮಂದೆ ಮಲಗಿಸು, —ತಡೆ.

Fold[2] ಫೋಲ್ಡ್ (ಕ್ರಿ., ನಾ.) ಮಡಿಸು ; ಮಡಿಸಿಕೊ (*In, over, together* ಉಪ. ಮೊದನೆ ಸಹ. F. up ಮಡಿಸಿ ಅಡಕಮಾಡು) ; ಮಡಿಸಲಾಗು [Folding door(s) ಮಡಿಕೆಯ ಕದ(ಗಳು)]. (ತೋಳು, ಮೊ.) ಸುತ್ತು, ಬಳಸು, ಸುತ್ತಿಕೊ, ಬಳಸಿಕೊ, ತಬ್ಬಿಕೊ, ಅಪ್ಪಿಕೊ (*About, round* ಉಪ. ದೊಡನೆ) ; (ತೋಳು) ತೆಕ್ಕೆಹಾಕು ; (ಕೈ) ಮುಗಿ. (Hills folded in mist ಮಂಜು ಕವಿದಿರುವ ಗುಡ್ಡಗಳು). (ಭೂ. ವಿ.) (ಪದರ, ಸ್ತರ) ಬಾಗು. (ನಾ.) ಮಡಿಸುವುದು ; ಮಡಿಕೆ ; ಮಡಿಲು ; ಪದರ (Carried it in a f. of her dress ತನ್ನ ಉಡುಪಿನ ಮಡಿಕೆಯಲ್ಲಿ ಇಟ್ಟುಕೊಂಡು ಹೋದಳು). (ಬೆಟ್ಟ, ಮೊ. ಗಳಲ್ಲಿಯ) ದರಿ, ಗೊಂದಿ. (ಹಾವು, ಹಗ್ಗ, ಮೊ. ಗಳ) ಸುರುಳಿ. ಮಡಿಸಿದುದರಿಂದಾದ ಸುಕ್ಕು ; ನಿರಿಗೆ ; ಗಳಿಗೆ. (ಭೂ. ವಿ.) ಭೂಸ್ತರ ಗಳ ಮಡಿಕೆ, ಬಾಗು. **Fólder** (ನಾ.) (ಕ್ರಿಯಾರ್ಥಗಳಲ್ಲಿ). ಕಾಗದ ಮಡಿಸುವ ಸಲಕರಣೆ ; ಮಡಿಸಿದ ಪ್ರಕಟನಪತ್ರ, ಸುತ್ತೋಲೆ, ಮೊ. ವು. (ಬ. ವ. ದಲ್ಲಿ) ಮಡಿಚುಗನ್ನಡಕ.

-fold —ಫೋಲ್ಡ್ (ಉ. ಪ್ರ.) —ಮಡಿ. Tenfold ಹತ್ತುಮಡಿ ; ಹತ್ತರಷ್ಟು. Twofold sense ಎರಡು ಬಗೆಯ ಅರ್ಥ.

Foliáceous. Foliage ನೋಡಿ.

Fóliage ಫೋಲಿಯೆಜ್ (ನಾ.) ಎಲೆಗಳು ; ಎಲೆಗುಂಪಲು. F. leaf (ಪುಷ್ಪದಳ, ಮೊ. ವಲ್ಲದ) ಎಲೆ. F. plant (ಹೂವುಗಳಿಗಲ್ಲದೆ, ಅಂದ ವಾದ) ಎಲೆಗಳಿಗಾಗಿ ಬೆಳಸಿದ ಗಿಡ : ಎಲೆಗಿಡ. (-)**fóliaged** (ಗು.) ; **Foliáceous** —ಯೇಷಸ್ (ಗು.) ಎಲೆಯಂಥ ; ಎಲೆಯಂತಿರುವ ; ಎಲೆಯಂಥ ಅಂಗಗಳುಳ್ಳ ; ಎಲೆಗಳ. ತೆಳುರೇಕುಗಳಾಗಿ, ಪದರ ಪದರಗಳಾಗಿ, ಇರುವ ; ಎಲೆ ಎಲೆಯಾದ. **Fóliar** —ಯರ್ (ಗು.) ಎಲೆಯ(ಗಳ). **Fóliate** —ಯೆಟ್ (ಗು.), —ಯೇಟ್ (ಕ್ರಿ.) ಎಲೆಯಂಥ ; ಎಲೆಗಳುಳ್ಳ ; ಒಂದು ಗೊತ್ತಾದ ಸಂಖ್ಯೆಯ ಕೂಡೆರೆ ಗಳುಳ್ಳ (3, 5, etc., -f.). (ಕ್ರಿ.) ಪದರ ಪದರಗಳಾಗಿ, ರೇಕು ರೇಕುಗಳಾಗಿ, ಒಡೆ. ಎಲೆ ಬಿಡು. (ಬಾಗಿಲಿನ ಅಥವಾ ಕಿಟಕಿಯ ತಲೆಯ ಕಮಾನಿನಲ್ಲಿ) ಪತ್ರಾಕೃತಿಯ ಅಲಂಕಾರ ಮಾಡು. (ಪುಸ್ತಕದ) ಹಾಳೆಗಳಿಗೆ (ಪುಟಗಳಿಗಲ್ಲ) ಕ್ರಮಸಂಖ್ಯೆ ಹಾಕು : ಪತ್ರಸಂಖ್ಯೆ ಹಾಕು. **Foliátion** (ನಾ.) ಎಲೆ ಬಿಡುವುದು ; ಎಲೆ ಬಿಟ್ಟಿರುವುದು ; (ಸ. ವಿ.) ಎಲೆಮೊಗ್ಗಿನಲ್ಲಿಯ ಪತ್ರವಿನ್ಯಾಸ. ರೇಕು ಬಡಿಯುವುದು. (ಭೂ. ವಿ.) ಪದರ ಪದರಗಳಾಗುವುದು ; ಪದರಗಳು. (ವಾ. ಶಾ.) ಶೃಂಗ ವೃತ್ತಾಲಂಕಾರ. ಪುಸ್ತಕದ ಹಾಳೆಗಳಿಗೆ ಕ್ರಮಸಂಖ್ಯೆ ಹಾಕುವುದು. (ಕನ್ನಡಿಗಳಿಗೆ ಹಾಕುವಂತೆ) ತವರಮಿಶ್ರದ ಪಾದರಸ ಹಾಕುವುದು. **Fóliole** —ಯೋಲ್ (ನಾ.) ಸಂಯುಕ್ತ ಪತ್ರದ (ಎಲೆಯ) ಅಂಗ, ಭಾಗ ; ಅಂಗ ಪತ್ರ.

Fólio ಫೋಲಿಯೊ (ನಾ. ; ಬ. ವ. -os) (ಮುಂಭಾಗದಲ್ಲಿ ಮಾತ್ರ ಪುಟ ಸಂಖ್ಯೆ ಹಾಕಿರುವ ಕಾಗದ, ಚರ್ಮಕಾಗದ, ಮೊ. ಗಳ) ಹಾಳೆ. (ಜಮಾ ಖರ್ಚು ಲೆಕ್ಕ) ಲೆಕ್ಕಪುಸ್ತಕದಲ್ಲಿ ಒಟ್ಟಿಗೆ ಉಪಯೋಗಿಸುವ ಎದುರು ಬದುರು ಪುಟಗಳು : ಪಾನು ; ಜಮಾ ಖರ್ಚುಗಳೆರಡನ್ನೂ ಒಂದೇ ಕಡೆ ಬರೆಯುವ ಲೆಕ್ಕಪುಸ್ತಕ, ಮೊ. ಗಳ ಪುಟ ; ಅಚ್ಚುಪುಸ್ತಕದ ಪುಟ ಸಂಖ್ಯೆ. ಒಂದು ದಸ್ತೈವಜಿನ ಉದ್ದವನ್ನು ಗೊತ್ತುಮಾಡುವುದಕ್ಕೆ ಒಂದು ಮಾನವಾಗಿ ಪರಿಗಣಿಸುವ ಪದಸಂಖ್ಯೆ (ಒರಿಂದ ೮೦ರ ವರೆಗೆ). ಒಮ್ಮಡಿಕೆ ಕಾಗದ ; ದ್ವಿಪತ್ರ [In f. (ಪುಸ್ತಕ) ಒಮ್ಮಡಿಕೆಯ ಹಾಳೆ ಗಳಲ್ಲಿ (ಮಾಡಿದ). A f. book ಅತ್ಯಂತ ದೊಡ್ಡ ಪ್ರಮಾಣದ ಹಾಳೆಗಳ ಪುಸ್ತಕ. In six volumes f. —ಗಳ ಆರು ಸಂಪುಟಗಳಲ್ಲಿ]

Folk ಫೋಕ್ (ನಾ.) (ಪ್ರಾಚೀ. ಪ್ರ.) ಜನ ; ಮಂದಿ ; ಜನಾಂಗ ; ಜನತೆ ; ಕುಲ ; ಪಡೆ (ಗ್ರಾಂ.). (ಬ. ವ. ದಲ್ಲಿ) ಜನಸಾಮಾನ್ಯ ; ಒಂದು ಗೊತ್ತಾದ ವರ್ಗದ ಜನರು (ಏ. ವ., ಪ್ರಾಚೀ. ಪ್ರ. ಅಥವಾ ಪ್ರಾಂತ ಪ್ರ. ; ಈಗ People ಪದ ರೂಢಿ). **F.-custom** ಜನ ಸಂಪ್ರದಾಯ. **F.-etymology** (ಸರಿಯಾದ ನಿಷ್ಪತ್ತಿ ತಿಳಿಯದೆ, ಅರ್ಥ ಬರುವಂತೆ ನಿಷ್ಪತ್ತಿ ಕಲ್ಪಿಸಿಕೊಂಡು) ಜನರು ಪ್ರಯೋಗಿಸುವ ಶಬ್ದದ ತಿರಿಚು ರೂಪ : ಪಾಮರ ನಿರುಕ್ತಿ. **F.-lore** ಪಾರಂಪರ್ಯವಾಗಿ ಬಂದ ನಂಬಿಕೆಗಳು, ಅಭಿಪ್ರಾಯಗಳು, ಕಥೆಗಳು ; ಐತಿಹ್ಯ ; ಜನ ಶ್ರುತಿ. **F.-song** ಜನಪದ ಗೀತ ; ನಾಡು ಪದ ; ಹಳ್ಳಿಯ ಹಾಡು.

Fóllicle ಫಾಲಿಕ್‌ಲ್ (ನಾ.) (ಗಾಳಿ ತುಂಬಿದ) ಸಣ್ಣ ಚೀಲ ; ಸಣ್ಣ ಕೋಶ, ಕುಹರ (Hair f. ಕೂದಲು ಬೆಳೆದುಬರುವ ರಂಧ್ರ : ರೋಮ ಕೂಪ). (ಕೆಲವು ಹುಳುಗಳು ತಮ್ಮ ಸುತ್ತಲೂ ಕಟ್ಟಿಕೊಳ್ಳುವ) ರೇಷ್ಮೆಯ ಗೂಡು. **Follícular** (ಗು.) —ಸ್ವಭಾವದ ; —ಅಂತಿರುವ ; —ಇಂದ ಕೂಡಿದ. (ರೋಗ) ಒಂದು ನಿರ್ದಿಷ್ಟ ಅಂಗದ ಕುಹರಗಳನ್ನು ಬಾಧಿಸುವ. **Follículated** (ಗು.) —ಇರುವ ; ರೇಷ್ಮೆಯ ಗೂಡಿ ನಲ್ಲಿರುವ.

Fóllow ಫಾಲೋ (ಕ್ರಿ.) (ವಸ್ತುವಿನ ಅಥವಾ ವ್ಯಕ್ತಿಯ) ಹಿಂದೆ ಹೋಗು, ಬರು ; ಅನುಸರಿಸು ; ಅನುಸರಿಸಿ ಹೋಗು ; ಬೆನ್ನು ಹತ್ತು ; —ಹಿಡಿ ; ಹಿಂಬಾಲಿಸು. (F. the hounds ಬೇಟೆಯಾಡು. F. my leader ಮುಂದಾಳು ಆಡುವಂತೆ ಪ್ರತಿ ಆಟಗಾರನೂ ಆಡಬೇಕಾದ ಒಂದು ತೆರದ ಆಟ. F. one's nose ಒಂದು ನಿರ್ಧಾರವಿಲ್ಲದೆ, ತೋರಿದ ದಾರಿ ಹಿಡಿದು ಹೋಗು ; ಮೂಗಿನ ನೇರಕ್ಕೆ ಹೋಗು). ಹಾದಿ ಹಿಡಿ ; ಒಂದು ಮಾರ್ಗದಲ್ಲಿ ಹೋಗು, ನಡೆ (F. in one's steps ಒಬ್ಬನ ಹೆಜ್ಜೆ ಹಿಡಿದು ಹೋಗು. F. in the wake of ಒಂದರ ಮಾರ್ಗವನ್ನನುಸರಿಸಿ ಹೋಗು, ಬರು). (ಕ್ರಮದಲ್ಲಿ, ಕಾಲದಲ್ಲಿ) ತರುವಾಯ, ಹಿಂದಿನಿಂದ, ಆಮೇಲೆ, —ಬರು (His arguments are as follows ಅವನ ವಾದಸರಣಿ ಮುಂದೆ ಹೇಳುವಂತಿದೆ). ಒಡನೆ ಬರು, ಹೋಗು ; ಅನುಗತ ವಾಗು ; ಅನುಸರಿಸು ; ಸೇವಿಸು ; (ಒಬ್ಬನ) ಅನುಚರನಾಗಿ ಹೋಗು ; (ಒಂದರ) ಫಲವಾಗಿ, ಪರಿಣಾಮವಾಗಿ, ಬರು (It follows that he was not there ಅವನು ಅಲ್ಲಿರಲಿಲ್ಲವೆಂದು ಸಿದ್ಧಿಸುತ್ತದೆ). ಸಾಧಿ ಸಲು ಯತ್ನಿಸು ; ಗುರಿಯಲ್ಲಿಟ್ಟುಕೊ. ಅನುಯಾಯಿಯಾಗು ; ಶಿಷ್ಯ ನಾಗು ; ಹೇಳಿದಂತೆ ಕೇಳು ; (ಒಬ್ಬನ ಅಭಿಪ್ರಾಯಗಳನ್ನು, ಪಕ್ಷವನ್ನು) ಹಿಡಿ, ಅವಲಂಬಿಸು [F. suit (Suit ನೋಡಿ)] ; (ಒಂದು ವೃತ್ತಿ, ಮೊ. ನ್ನು) ಅವಲಂಬಿಸು, ಆಚರಿಸು, ಹಿಡಿ (F. the drum ಸೇನಾ ವೃತ್ತಿ ಹಿಡಿ ; ಸೈನಿಕನಾಗು. F. the plough ನೇಗಿಲು ಹಿಡಿ ; ಬೇಸಾಯಗಾರನಾಗು. F. the sea ನಾವಿಕನಾಗು). ಮನಸ್ಸಿಗೆ ಹಿಡಿ ; (ವಾದದ, ಭಾಷಣಕಾರನ, ಅರ್ಥವನ್ನು) ಗ್ರಹಿಸು. F. after (ಉಪ., ಕ್ರಿ. ವಿ.) = F. ; F. on ಮುಂದುವರಿ ; (ಕ್ರಿಕೆಟ್) ಸರದಿ ಯಂತೆ ಆಟಕಾಯದೆ ಮರಳಿ ದಾಂಡುಹಿಡಿದು ಆಟ ಮುಂದುವರಿಸು. F. out ಕಡೆಯ ವರೆಗೂ ನೋಡಿಬಿಡು ; ಕಡೆಗಾಣಿಸು. F. up (ಕ್ರಿ.) ಬಿಡದೆ ಅನುಸರಿಸು ; ಬೆನ್ನುಹತ್ತು. (ಹಿಂದಿನ ಏಟು, ಮೊ. ಕ್ಕೆ) ಮತ್ತೊಂದು ಹಾಕು ; ಮೇಲಿಂದ ಮೇಲೆ ಹೊಡೆ ; ಕಡೆಯ ವರೆಗೂ ಸಾಧಿಸು. (ಕಾಲ್ಚೆಂಡಾಟ, ಮೊ. ಗಳಲ್ಲಿ) ಚೆಂಡನ್ನು ಉರುಳಿಸಿಕೊಂಡು ಹೋಗುವವನ ಸಹಾಯಕ್ಕಾಗಿ ಅವನ ಹಿಂದೆಯೇ ಹೋಗು. (ನಾ.) (ಒಂದು ಕಾರ್ಯದ) ಮುಂಬರಿವು (ಮು., ಹಿಂದಿನವನ್ನು ಪ್ರಸ್ತಾವಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡಿದ ಎರಡನೆಯ ಪ್ರಕಟನೆ). **Fóllower** (ನಾ.) (ಕ್ರಿಯಾರ್ಥಗಳಲ್ಲಿ). ಅನುಯಾಯಿ ; ಅನುಚರ ; ಶಿಷ್ಯ ; ಹಿಂಬಾಲಕ. **Fóllowing** (ನಾ.) (ಕ್ರಿಯಾರ್ಥಗಳಲ್ಲಿ). ಅನುಯಾಯಿ ವರ್ಗ ; ಅನುಯಾಯಿಗಳು. (ಗು.) (ಕ್ರಿಯಾರ್ಥಗಳಲ್ಲಿ). ಮುಂದೆ ಹೇಳುವ, ಬರುವ ; ಮುಂದಿನ. (ಸರ್ವನಾಮವಾಗಿ, ಬ. ವ. ಅಥವಾ ಏ. ವ. ದಲ್ಲಿ) The f. are noteworthy ಮುಂದೆ ಹೇಳುವವು ಗಮನಾರ್ಹವಾದವು.

Fólly ಫಾಲಿ (ನಾ.) ಮರುಳು(ತನ) ; ಹುಚ್ಚು(ತನ) ; ಅವಿವೇಕ ; ಮೌಢ್ಯ ; ಮೂರ್ಖತನ ; ಮುಟ್ಠಾಳತನ ; ಬುದ್ಧಿಯಿಲ್ಲದ ನಡತೆ ; ಹುಚ್ಚು ಕೆಲಸ, ಭಾವನೆ, ನಡವಳಿ ; ನಗೆಗೇಡು. ದುಬಾರಿಯಾದ ನಿಷ್ಫಲ ಕಾರ್ಯ ; ಬಹಳ ಹಣ ವೆಚ್ಚಮಾಡಿ ಅನುಪಯೋಗವಾಗಿ ಪರಿಣಮಿಸಿದ ಉದ್ಯಮ : ಮು., ಅನುಪಯೋಗವೆಂದು, ಅವಿವೇಕವೆಂದು, ಇತರರು ಪರಿಗಣಿಸುವ, ಬಹಳ ವೆಚ್ಚಮಾಡಿ ಕಟ್ಟಿದ ಭಾರಿ ಕಟ್ಟಡ (ಸಾ., ಕರ್ತನ ಹೆಸರಿನೊಡನೆ : ಉದಾ., Smith's F.)

Fomént ಫೊಮೆಂಟ್ (ಕ್ರಿ. ಸಕ.) (ಬಿಸಿ ನೀರಿನಿಂದ, ಔಷಧ ದ್ರವದಿಂದ) ಕಾವು ಕೊಡು ; ಶಾಖ ಕೊಡು. (ಮನೋವೃತ್ತಿ, ನಡತೆ, ರಾಜದ್ರೋಹ, ಮೊ. ನ್ನು) ಉತ್ತೇಜಿಸು, ಪ್ರೇರಿಸು, ಚೋದಿಸು, ಎಬ್ಬಿಸು, ಕೆರಳಿಸು ; ಕಾವೆಬ್ಬಿಸು. **Foménter** (ನಾ.) ; **Fomentátion** ಫೋ— (ನಾ.) (ಕ್ರಿಯಾರ್ಥಗಳಲ್ಲಿ). ಶಾಖ ಕೊಡುವುದು ; ಇದಕ್ಕಾಗಿ ಉಪಯೋಗಿಸುವ ಫ್ಲಾನೆಲ್ ಬಟ್ಟೆ.

Fond ಫಾಂಡ್ (ಗು.) ಅತಿ ಪ್ರೀತಿಯ ; ಅತಿ ರಾಲಸೆಯ ; ಲೋಲ ; ಪ್ರೀತಿಯ ; ಮಮತೆಯ ; ಪ್ರೇಮದ ; ಮುದ್ದಿನ ; ಮೆಚ್ಚಿನ. ಹುಚ್ಚು ನಂಬಿಕೆಯ ; ಹುಚ್ಚು ಧೈರ್ಯದ (F. of ಹೆಚ್ಚು ಪ್ರೀತಿಯುಳ್ಳ ; ಹೆಚ್ಚು ಒಲುಮೆಯುಳ್ಳ ; ಇಷ್ಟ, ಅಕ್ಕರೆ, —ಉಳ್ಳ). **Fóndly** (ಕ್ರಿ. ವಿ.) ; **Fóndness** (ನಾ.) ; **Fóndle** ಫಾಂಡ್‌ಲ್ (ಕ್ರಿ.) ಮುದ್ದಿಸು ; ಲಾಲನೆ ಮಾಡು ; (ಪ್ರಣಯದಲ್ಲಿ) ಮುದ್ದಾಡು (*With, together* ಉಪ. ದೊಡನೆ)

Fóndant ಫೊ(ಫಾ)ಂಡಂಟ್ (ನಾ.) ಒಂದು ತೆರದ ಮಿಠಾಯಿ.

Fóndle. **Fond** ನೋಡಿ.

Fons et orígo (L) ಫಾನ್ಸ್ ಎಟ್ ಒರೈಗೋ (ಪದಪುಂಜ) : ಆದಿ ಮೂಲ.

Font[1] ಫಾಂಟ್ (ನಾ.) (ಕ್ರೈಸ್ತ) ಜ್ಞಾನ ಸ್ನಾನದ ತೊಟ್ಟಿ ; ಪವಿತ್ರೋದಕ ಪಾತ್ರೆ ; ತೀರ್ಥ ಪಾತ್ರೆ. ದೀಪದಲ್ಲಿ ಎಣ್ಣೆಯಿರುವ ಭಾಗ : ತೈಲ ದಾನಿ. **Fóntal** (ಗು.) ಆದಿಯ ; ಮೂಲದ ; ಮೊತ್ತ ಮೊದಲನ. ಜ್ಞಾನ ಸ್ನಾನದ.

Font[2] = Fount[2].

Fontanél(le) ಫಾಂಟನೆಲ್ (ನಾ.) ಭ್ರೂಣದ ಮತ್ತು ಎಳೆಮಗುವಿನ ತಲೆಬುರುಡೆಯ ಗೋಡೆಮೂಳೆಗಳ ಪಕ್ಕಕೋನಗಳಲ್ಲಿ ಸೂಕ್ಷ್ಮ ಚರ್ಮಾವರಣವುಳ್ಳ ಅವಕಾಶ : ಅಳಿನೆತ್ತಿ ; ಸುಳಿನೆತ್ತಿ.

Food ಫೂಡ್ (ನಾ.) ಆಹಾರ ; ತಿಂಡಿ ; ತೀನಿ ; ಉಣಿಸು ; ಊಟ ; ಗ್ರಾಸ. ಪೋಷಕ ದ್ರವ್ಯ ; ಆಹಾರ ವಸ್ತು. Be f. for worms ಹುಳುಗಳ ಪಾಲಾಗು ; ಸಾಯಿ. Be f. for fishes ನೀರಿನಲ್ಲಿ ಮುಳುಗಿ ಸಾಯಿ. F. for powder ಬಂದೂಕಿಗೆ ಆಹಾರ, ಆಹುತಿ : ಸೈನಿಕರು. F. & drink ಅನ್ನ ಪಾನ ; ತಿಂಡಿ ತೀರ್ಥ. Mental, intellectual, f. ಬುದ್ಧಿಗೆ ಆಹಾರ. **F.-card** (ಆಹಾರವಸ್ತುಗಳ ಪಾರಾಟ ಸರ್ಕಾರದ ಅಧೀನದಲ್ಲಿದ್ದಾಗ) ಆಹಾರ ವಸ್ತುಗಳನ್ನು ಪಡೆಯಲು ಅಧಿಕಾರ ಕೊಡುವ ಚೀಟಿ : ಆಹಾರದ ಚೀಟಿ. **F.-controller** ಯುದ್ಧಕಾಲದಲ್ಲಿ ಆಹಾರ ಪದಾರ್ಥಗಳ ಸರಬರಾಯಿಯನ್ನು ನಿಯಂತ್ರಿಸುವ ಸಚಿವ : ಆಹಾರ ನಿಯಂತ್ರಕ. **F.-stuff** ಆಹಾರ ಪದಾರ್ಥ. **Foódless** (ಗು.)

Fool[1] ಫೂಲ್ (ನಾ.) ಅವಿವೇಕಿ ; ಬುದ್ಧಿ ಹೀನ ; ತಿಳಿಗೇಡಿ ; ಅಜ್ಞ ; ಮುಟ್ಠಾಳ ; ಮೂಢ ; ಮೂರ್ಖ ; ದಡ್ಡ ; ಎಗ್ಗ ; ಮಂಕ ; ಹುಚ್ಚ [Be a f. to —ಒಡನೆ ಹೋಲಿಕೆ ಸ್ವಲ್ಪವೂ ಇಲ್ಲದಿರು ; ಬಹು ಕೀಳಾಗಿರು. Play the f. ಅವಿವೇಕವಾಗಿ ನಡೆ ; ಹುಡುಗಾಟಕೆ ಮಾಡು. ನಕಲ ಮಾಡು ; ವಿದೂಷಕನ ಪಾತ್ರವಾಡು. No f. like an old f. (ಮುದಿ ನಲ್ಲನ ವಿಷಯದಲ್ಲಿ) ಮುದಿ ಮಡೆಯನಿಗಿಂತಲೂ ದೊಡ್ಡ ಮಡೆಯನಿಲ್ಲ. F.'s bolt is soon shot (Bolt[1] ನೋಡಿ). Man is f. or physician at forty ಒಬ್ಬನು ನಲವತ್ತಕ್ಕೆ ವೈದ್ಯ, ಇಲ್ಲವೆ ದಡ್ಡ]. (ಯೂರೋಪಿನ ಮಧ್ಯಕಾಲದ ದೊಡ್ಡವರ ಮನೆಗಳಲ್ಲಿ) ಹಾಸ್ಯಗಾರ ; ವಿದೂಷಕ ; ನಕಲಿಯವನು ; ನಗೆಗಾರ ; ಕೋಡಂಗಿ. ಸುಲಭವಾಗಿ ಮೋಸಹೋಗುವವನು ; ಮಂಕ ; ಬೆಪ್ಪ ; ಮರುಳ [Make a f. of (ಮನುಷ್ಯನನ್ನು) ಹಾಸ್ಯಾಸ್ಪದ ಮಾಡು ; ಲೇವಡಿ ಮಾಡು ; ಹುಚ್ಚನಾಗಿ ಮಾಡು. Be a f. for one's pains ಮೈ ನೋಯಿಸಿಕೊಂಡೂ ಮುಟ್ಠಾಳನಾಗು ; ವ್ಯಥಾ ಕಷ್ಟಪಡು. All Fools' day ಏಪ್ರಿಲ್ ಮೊದಲನೆಯ ತಾರೀಖು. April f. ಏಪ್ರಿಲ್ ಮೊದಲನೆಯ ತಾರೀಖಿನ ದಿನ ಹುಚ್ಚೆಬ್ಬಿಸಲ್ಪಟ್ಟವನು, ಅಥವಾ ಹುಚ್ಚುಕೆಲಸಕ್ಕಾಗಿ ಕಳುಹಿಸಲ್ಪಟ್ಟವನು. F.'s errand ಪ್ರಯೋಜನವಿಲ್ಲದ ಕೆಲಸ ; ವ್ಯರ್ಥ ಕಾರ್ಯ (Send, go, on f.'s errand). F.'s mate (Mate[1] ನೋಡಿ). F.'s paradise ಭ್ರಾಂತಿ ಸ್ವರ್ಗ ; ಭ್ರಮೆ]. **F.'s-cap, Foólscap** ಮಂಕು ಟೋಪಿ. (೧೬ನೆಯ ಶತಮಾನದಲ್ಲಿ ಕೆಲವು ತೆರದ ಕಾಗದಗಳ ರಚನೆಯಲ್ಲಿ ಗುರುತಿಸುತ್ತಿದ್ದ) ಸ್ವಾಮ್ಯದ ಅಥವಾ ವ್ಯಾಪಾರದ ಮುದ್ರೆ ; ಒಂದು ಗೊತ್ತಾದ ಅಳತೆಯ ಕಾಗದ (೧೫ ರಿಂದ ೧೭ ಅಂಗುಲ ಉದ್ದ, ೧೨ರಿಂದ ೧೩½ ಅಂಗುಲ ಅಗಲ). **Foólery** (ನಾ.) (ಒಬ್ಬನನ್ನು) ಹುಚ್ಚೆಬ್ಬಿಸುವುದು, ಲೇವಡಿ ಮಾಡುವುದು ; ಹುಚ್ಚುಹುಚ್ಚಾಗಿ ನಡೆಯುವುದು ; ಹಾಸ್ಯಾಸ್ಪದವಾದ ಕೆಲಸ, ನಡತೆ ; ಹಾಸ್ಯಾಸ್ಪದವಾದದ್ದು ; ಅವಿವೇಕ ; ಮುಟ್ಠಾಳತನ. ಹುಚ್ಚರು ; ಅವಿವೇಕಿಗಳು ; ದಡ್ಡರು. **Foólish** (ಗು.) ; **Foólishly** (ಕ್ರಿ. ವಿ.) ; **Foólishness** (ನಾ.) ; **Foolócracy** ಫೂಲಾಕ್ರಸಿ (ನಾ.) ಹುಚ್ಚರ ದೌಲತ್ತು ; ಮೂರ್ಖರ ಪ್ರಭುತ್ವ. ಮುಟ್ಠಾಳ ಪ್ರಭುಗಳು. **Foól-proof** (ಗು.) (ಯಂತ್ರ, ನಿಯಮ, ಮೊ. ಗಳ ವಿಷಯದಲ್ಲಿ) ತಪ್ಪು ಮಾಡಲು ಸಾಧ್ಯವಿಲ್ಲದ. **Foólhardy** (ಗು.) ಹುಚ್ಚು ಸಾಹಸದ ; ಅವಿವೇಕ ಶೂರನಾದ. **Foólhardiness** (ನಾ.)

Fool (ಕ್ರಿ.) ಹುಚ್ಚನಂತೆ, ಅವಿವೇಕಿಯಂತೆ, ನಡೆ ; ನಿರ್ಲಕ್ಷ್ಯವಾಗಿ ವರ್ತಿಸು [F. about ; (ಅಮೆ. ಸಂ.) F. around] ; ಮರುಳುಗೊಳಿಸು ; ವಂಚಿಸು ; ಟೋಪಿ ಹಾಕು ; ಪುಸಲಾಯಿಸಿ ಕೀಳು (F. one out of money, etc. F. one into doing ಮಾಡುವಂತೆ ಮರುಳುಗೊಳಿಸು). (ಕಾಲ, ಮೊ. ನ್ನು) ವ್ಯರ್ಥವಾಗಿ ಕಳೆ, ಹಾಳುಮಾಡು (F. away)

Foot ಫುಟ್ (ನಾ. ; ಬ. ವ. Feet ಫೀಟ್) ಅಡಿ ; ಪಾದ [Find one's f. (Find ನೋಡಿ). Have feet of clay ಬುಡ ಭದ್ರವಿಲ್ಲದಿರು ; ದೋಷದಿಂದ ಕೂಡಿರು]. ಹೆಜ್ಜೆ ; ನಡೆ ; ನಡಗೆ (Swift of f. ಕಾಲು ಚುರುಕಾದ. Light f. ಹಗುರವಾದ ಹೆಜ್ಜೆ). ಕಾಲ್ಬಲ ; ಪದಾತಿದಳ (F.-soldier ಕಾಲಾಳು ; ಪದಾತಿ. A captain of f. ಪದಾತಿ ದಳಾಧಿಕಾರಿ. F. & horse ಪದಾತಿ ಮತ್ತು ಅಶ್ವ ಸೈನ್ಯ). (ಹಾಸಿಗೆ, ಮೆತ್ತೆ, ಗೋರಿ, ಮೊ. ಗಳ) ಕಾಲ್ಕಡೆ ; (ಕಾಲುಚೀಲ, ಮೊ. ಗಳ) ಪಾದದ, ಹೆಜ್ಜೆಯ, ಭಾಗ. (ಛಂ.) ಗಣ. (ಅಳತೆ) ಒಂದು ಅಡಿ (೧೨ ಅಂಗುಲ ಉದ್ದ ; 10 feet long ; A ten-f. pole ; six f. three, or six feet three ಆರಡಿ ಮೂರಂಗುಲ. Square f. ; cubic f.). (ಸಾ., ಚಾಚಿಕೊಂಡಿರುವ) ತಳ (ಭಾಗ), ಬುಡ, ಅಡಿ. (ಪ್ರಾ. ವಿ.) ಅಕಶೇರುಕ ಪ್ರಾಣಿಗಳ ಚಲನಾಂಗ, ಅಥವಾ (ಯಾವುದಕ್ಕಾದರೂ) ಅಂಟಿಕೊಳ್ಳುವ ಅಂಗ. (ಸ. ವಿ.) ಪುಷ್ಪ ಪಾತ್ರಕ್ಕೆ ಹತ್ತಿಕೊಂಡಿರುವ ದಳದ ಭಾಗ ; ದಳದ ಬುಡ. ಕೂದಲಿನ ಬೇರು, ಮೂಲ. (ಗುಡ್ಡ, ಏಣಿ, ಗೋಡೆ, ಪಟ್ಟಿ, ಪುಟ, ತರಗತಿ, ಮೊ. ಗಳ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅತ್ಯಂತ ತಳಭಾಗ, ಕೆಳ ಕೊನೆ, ಅಡಿ, ಬುಡ. (ದ್ರವದ) ಅಡಿಯಲ್ಲಿ ನಿಂತಿರುವದು : ಮಷ್ಟು ; ಗಸಿ ; ಚರಟ ; ಮಡ್ಡಿ (ಬ. ವ. Foots). Have one f. in grave ಸಾವು ಸಮೀಪಿಸಿರು (' ಊರುಹೋಗು ಕಾಡು ಬಾ ' ಎನ್ನುವ ಸ್ಥಿತಿಯಲ್ಲಿರು). (With one's) feet foremost ಅಡಿ(ಪಾದ) ಮುಂದಾಗಿ ; ಶ್ಮಶಾನಕ್ಕೆ ಸಾಗುತ್ತ. Find, know, length of one's f. (ಒಬ್ಬನ) ಬಲಾಬಲಗಳನ್ನು ಅರಿ(ತಿರು), ತಿಳಿ(ದಿರು) ; (ಒಬ್ಬನನ್ನು) ನಿರ್ವಹಿಸುವ ಗುಟ್ಟು ತಿಳಿದಿರು. Measure another's f. by one's own last ತನ್ನ ನಡತೆಯಿಂದ, ಯೋಗ್ಯತೆ ಯಿಂದ, ಇತರರನ್ನು ಅಳತೆಮಾಡು. Set, put, have, one's f. on the neck of ಒಬ್ಬನ ಕುತ್ತಿಗೆಯಮೇಲೆ ತನ್ನ ಕಾಲನ್ನು ಮೆಟ್ಟು ; ಅದುಮಿಬಿಡು ; ಅದುಮಿಟ್ಟಿರು ; ಪೂರ್ತಿ ಸೋಲಿಸು ; ವಶವರ್ತಿಯನ್ನಾಗಿ ಮಾಡಿಕೊ ; ಹಿಡಿತದಲ್ಲಿಟ್ಟುಕೊಂಡಿರು. On one's feet ನಿಂತು ಕೊಂಡು ; ತನ್ನ ಕಾಲಮೇಲೆ ತಾನು ನಿಂತು ; ಜೀವನಕ್ಕಿದ್ದು ; ಆರೋಗ್ಯ ವುಳ್ಳವನಾಗಿ. Carry one off his feet ಉತ್ಸಾಹ ಭರಿತನನ್ನಾಗಿ ಮಾಡು ; ಉದ್ರೇಕಿಸು ; ಮೈಮರಸು ; ಪರವಶ ಮಾಡು. Fall on one's feet (Fall ನೋಡಿ). Keep one's feet ಕಾಲು ಭದ್ರ ವಾಗಿರು ; ಬೀಳದಂತೆ ದೃಢವಾಗಿ ನಿಂತಿರು. Put one's f. down ದೃಢವಾಗಿ ನಿಲ್ಲು ; ಕದಲದಿರು (ರೂಪ.). Put one's f. in it ಅವಿವೇಕ ಮಾಡಿಕೊ ; ಸಿಕ್ಕಿಹಾಕಿಕೊ. Best f. (Best ನೋಡಿ). Change f. or feet (Change ನೋಡಿ). At one's feet ಒಬ್ಬನ ಕಾಲಡಿಯಲ್ಲಿ ; ಶಿಷ್ಯನಾಗಿ ; ಅಧೀನನಾಗಿ ; ಆಶ್ರಿತನಾಗಿ ; ಶರ ಣಾಗತನಾಗಿ. Have ball at one's feet (Ball[1] ನೋಡಿ). With foal at f. (ಕುದುರೆ) ಮರಿ ಹಾಕಿ. On f. ಕಾಲುನಡೆಯಲ್ಲಿ ; ಪಾದಚಾರಿಯಾಗಿ ; ಚಲನೆಯಲ್ಲಿ (Set agitation, movement, etc., on f. ಚಳವಳಿಯೆಬ್ಬಿಸು; ಉದ್ಯಮ, ಮೊ. ನ್ನು ಆರಂಭಿಸು). ಕಾರ್ಯದಲ್ಲಿ ತೊಡಗಿ ; ಆರಂಭವಾಗಿ ; ನಡೆಯುತ್ತ. Tread under f. ತುಳಿದುಹಾಕು ; ಕಾಲಕೆಳಗೆ ಹೊಸಕಿಹಾಕು ; ಕಾಡಿಸು ; ಪೀಡಿಸು ; ಹಿಂಸಿಸು. Wet under f. ನೆಲ ಒದ್ದೆ. **F.-&-mouth** (disease) (ಮು., ದನಗಳಿಗೆ ಬರುವ) ಒಂದು ತೆರದ ಜ್ವರ : ಕಾಲು ಬಾಯಿ ಜ್ವರ. **Fóotball** ಕಾಲ್ಚೆಂಡು; ಕಾಲ್ಚೆಂಡಾಟ. **Fóotballer** ಕಾಲ್ಚೆಂ ಡಾಟಗಾರ. **F.-bath** ಕಾಲು ತೊಳೆಯುವುದು ; ಪಾದ ಸ್ನಾನ ; ಕಾಲು ತೊಳೆಯುವ ಪಾತ್ರೆ. **Fóotboard** ಗಾಡಿಯ ಹಿಂಭಾಗದ ಲ್ಲಿರುವ ಕಾಲಾಳಿನ ಪೀಠ ; ಗಾಡಿ ಹತ್ತಿ ಇಳಿಯಲು ಗಾಡಿಗೆ ಹಾಕಿ ರುವ ಹಲಗೆ ; ಬಂಡಿಹೊಡೆಯುವವನು ಕಾಲಿಟ್ಟುಕೊಳ್ಳಲು ಬಂಡಿಗೆ ಹಾಕಿರುವ ಇಳುಕಲು ಹಲಗೆ ; ಕಾಲು ಹಲಗೆ ; ಮೆಟ್ಟು ಹಲಗೆ. **Fóotboy** (ಪೋಷಾಕು ತೊಟ್ಟ) ಜವಾನ. **F.-bridge, -path, -road, -way** ಕಾಲುನಡಗೆಯ ಸೇತುವೆ, ಹಾದಿ, ರಸ್ತೆ, ಮಾರ್ಗ. **F.-drill** ಕಾಲೊತ್ತುವುದರಿಂದ ಕಂಡಿ ಕೊರೆಯಲಾಗುವ ಸಲಕರಣೆ : ಕಾಲು ಬೈರಿಗೆ. **Fóotfall** ಕಾಲ ಸಪ್ಪಳ ; ಹೆಜ್ಜೆಯ ಶಬ್ದ. **F.-gear** ಕಾಲಿಗೆ ಹಾಕಿಕೊಳ್ಳುವ, ತೊಡುವ, ವಸ್ತುಗಳು (ಪಾದರಕ್ಷೆ, ಕಾಲ್ಚೀಲ, ಮೊ.) : ಕಾಲ್ತೊಡಿಗೆ. **Fóotguards** ರಕ್ಷಣ ಕಾರ್ಯಕ್ಕಾಗಿಯೇ ಪ್ರತ್ಯೇಕವಾಗಿ ಆರಿಸಿದ Guards ಎಂಬ ದಳಗಳ ಪದಾತಿ ಸಿಪಾಯಿ ಗಳು (Grenadier, Coldstream, Scots, Irish, Welsh, Guards). **F.-hill** ಬೆಟ್ಟದ ಅಡಿಯಲ್ಲಿರುವ ಗುಡ್ಡ : ಅಡಿ ಗುಡ್ಡ. **Fóothold** ಪಾದಾಧಾರ ; ಕಾಲೂರೆ ; ನಿಂತುಕೊಳ್ಳಲು ಬೇಕಾದ ಸ್ಥಳ ; ಆಶ್ರಯ ; ಆಸರೆ ; ನೆಲೆ. **Fóotlights** (ನಾಟಕರಂಗದ ಮುಂಭಾಗದಲ್ಲಿ ಮರೆಸಿಟ್ಟಿರುವ) ಅಡಿದೀಪಗಳು [Get across the f.-l. (Get ನೋಡಿ)]. **Fóotman** ಪದಾತಿ ; ಕಾಲಾಳು ; (ಸವಾರಿ ಗಾಡಿಯ, ಬಾಗಿಲಿನ, ಊಟದಮೇಜು ಬಳಿಯ, —ಪೋಷಾಕು ತೊಟ್ಟ) ಆಳು. (ಬೆಂಕಿಯ ಮುಂದೆ ಯಾವುದಾದರೂ ವಸ್ತುವಿಗೆ ಆಧಾರವಾಗಿರುವ) ಲೋಹದ ನಿಲುವು ; (ಒಲೆಯ ಕಂಬಿಗಳಿಗೆ ತಗುಲಹಾಕಲಾಗುವ) ಅಡಿಗೆಯ ಪಾತ್ರೆಯ ಆಧಾರ. **F.-mark** ಹೆಜ್ಜೆಗುರುತು. **F.-muff** (ಪಾದ ಗಳನ್ನು ಬೆಚ್ಚಗಿಟ್ಟಿರುವುದಕ್ಕಾಗಿ ಉಪಯೋಗಿಸುವ) ಕಾಲುಗವುಸು. **F.-note** ಪುಟದ ಕೆಳಭಾಗದಲ್ಲಿ ಬರೆಯುವ ಟಿಪ್ಪಣಿ : ಅಡಿ ಟಿಪ್ಪಣಿ. **F.-pace** ಹೆಜ್ಜೆ (ಹಾಕುವ ಪ್ರಮಾಣ) ; ನಡಗೆಯ ಗತಿ, ವೇಗ. ವೇದಿಕೆ ; ಜಗಲಿ. **Fóotpad** ಕಾಲುನಡಗೆಯ ದಾರಿಗಳ್ಳ. **F.-page** ಕೆಲಸದ ಹುಡುಗ ; ಜವಾನ. **F.-pan** ಕಾಲು ತೊಳೆಯುವ ತಟ್ಟೆ. **F.-passenger** ಕಾಲು ಪ್ರಯಾಣಿಕ ; ಪಾದಚಾರಿ ಪ್ರಯಾಣಿಕ. **F.-path** (ಕಾಲು ನಡಗೆಯವರ) ಕಾಲುಹಾದಿ. **F.-plate** ಸ್ಥಳಾಂ ತರ ಚಲ ಎಂಜಿನಿನಲ್ಲಿ ಚಾಲಕನ ಮತ್ತು ಉರಿಹಾಕುವವನ ಪೀಠ. **F.-pound** ಒಂದು ಪೌಂಡು ದ್ರವ್ಯಪರಿಮಾಣವನ್ನು ಒಂದು ಅಡಿ ಎತ್ತರಕ್ಕೆ ಎತ್ತಲು ಬೇಕಾಗುವ ಶಕ್ತಿಯ ಮೊತ್ತ : ಅಡಿಪೌಂಡು. **Fóotprint** ಹೆಜ್ಜೆಗುರುತು. **F.-pump** ಕಾಲೊತ್ತಿನಿಂದ ನಡಸ ಲಾಗುವ (ವಾಯುವಿನ ಅಥವಾ ದ್ರವದ) ಚೋಷಕ, ಪೂರಕ, ' ಪಂಪು ' : ಕಾಲು ಪಂಪು. **F.-race** ಓಟದ ಪಂದ್ಯ. **F.-rot** (ದನಗಳಿಗೂ ಕುರಿಗಳಿಗೂ ಬರುವ) ಕಾಲುವ್ರಣದ ರೋಗ : ಕಾಲು ಜರಸು. **F.-rule** (ಅಳತೆಯ) ಅಡಿಕಡ್ಡಿ ; ಅಡಿಗೋಲು. **F.-slogger** (ಅಸಂ.) ನಡೆಯುವವನು ; ಪಾದಚಾರಿ ; ಪದಾತಿ. **F.-slogging** (ನಾ., ಗು.) ; **Fóotsore** (ಮು., ನಡೆದದ್ದರಿಂದಾದ) ಹೆಜ್ಜೆನೋವು, ಕಾಲೊತ್ತು ; ಮೆತುಗಾಲು. **Fóotstalk** (ಸ. ವಿ.) (ಎಲೆಯ ಅಥವಾ ಹೂವಿನ) ಕಾವು ; ವೃಂತ. (ಪ್ರಾ. ವಿ.) (ಹಡಗಿನ ತಳಕ್ಕೆ ಹತ್ತಿಕೊಳ್ಳುವ ' ಬಾರ್ನಕಲ್ ' ಎಂಬ ಪ್ರಾಣಿ, ಮೊ. ಗಳ) ವೃಂತದಂಥ ಅಂಗ. **Fóotstep** ಹೆಜ್ಜೆ ; ಹೆಜ್ಜೆಯ ಗುರುತು ; ಹೆಜ್ಜೆ ಹಾಕುವುದು ; ಹೆಜ್ಜೆ ಹಾಕುವ ದೂರ [Follow in one's footsteps ಒಬ್ಬನು ಹೋದ ದಾರಿಯಲ್ಲಿ ಹೋಗು ; ಒಬ್ಬನ ಹೆಜ್ಜೆ ಹಿಡಿದು ಹೋಗು ; ಒಬ್ಬನು ನಡೆದಂತೆ ನಡೆ (ರೂಪ.)]. **F.-stone** ಅಡಿಗಲ್ಲು ; ಪಾಯದ ಕಲ್ಲು ; ಗೋರಿಯ ಕಾಲುಕಡೆಯ ಕಲ್ಲು. **Fóotstool** (ಕಾಲನ್ನು ಇಟ್ಟುಕೊಳ್ಳುವ) ಕಾಲು ಮಣೆ : ಕಾಲೂರಿ ; ಪಾದ ಪೀಠ. **Fóotwarmer** ಪಾದಗಳನ್ನು ಬೆಚ್ಚಗಿಟ್ಟಿರುವುದಕ್ಕಾಗಿ ಉಪಯೋಗಿಸುವ ಸಾಧನ (ಮು., ರೈಲು ಬಂಡಿಗಳಲ್ಲಿ ಉಪಯೋಗಿಸುವ ಬಿಸಿ ನೀರಿನ ಚಪ್ಪಟೆಯ ಟಿನ್‌ಡಬ್ಬ) : ಅಡಿ ಕಾವಿಗೆ. **F.-wear** = F.-gear. **(-)footed** (ಗು.) ; **Fóotless** (ಗು.) ; **Fóoter** (ನಾ.) (ಅಸಂ.) ಕಾಲ್ಚೆಂಡಾಟ. **Fóoting** (ನಾ.) ಕಾಲಿಡುವುದು ; ಕಾಲೂರುವುದು ; ಕಾಲಿಡಲು ನೆಲೆ ; ಅವಕಾಶ ; ಎಡೆ ; ಆಸ್ಪದ ; ಆಧಾರ ; ಭದ್ರವಾದ, ಸುರಕ್ಷಿತ, ಸ್ಥಾನ (ರೂಪ. ಸಹ). (ಒಬ್ಬನಿಗೆ ಇತರರೊಡನಿರುವ) ಸಂಬಂಧ, — ಸ್ಥಾನ ಮಾನಗಳು. (ಉದ್ಯೋಗ, ಸಂಘ, ಮೊ. ಗಳಿಗೆ) ಪ್ರವೇಶ [Pay for or pay one's f. (ಸಂಸ್ಥೆ, ಮೊ. ಕ್ಕೆ ಸೇರಲು ಪ್ರವೇಶ ಧನ ಕೊಡು) ಎಂಬಲ್ಲಿ ಮಾತ್ರ]. ಗೋಡೆ, ಮೊ. ಗಳ ಅಡಿಯಲ್ಲಿ ಮುಂದಕ್ಕೆ ಚಾಚಿಕೊಂಡಿರುವ ವರಿಸೆ : ಅಡಿ ವರಿಸೆ. ಅಂಕಿ, ಮೊ. ಗಳ ಸಾಲಿನ ಒಟ್ಟು (ಕೂಡುವುದು)

Foot (ಕ್ರಿ.) [F. it ಕುಣಿ ; (ವಿರ. ಪ್ರ.) ಹೆಜ್ಜೆ ಹಾಕು, ನಡೆ]. (ವಿರ. ಪ್ರ.) ಅಡಿಯಿಡು ; ತುಳಿ ; ಕಾಲ್ನಡೆಯಲ್ಲಿ ಪ್ರಯಾಣಮಾಡು. ಕಾಲ್ಚೀಲಕ್ಕೆ ಹೊಸ ಪಾದ ಹಾಕು ; (ಲೆಕ್ಕವನ್ನು) ಒಟ್ಟುಗೂಡು (= F. up). (ಬೆರೆಪಟ್ಟಿಯ) ಹಣ ಕೊಡು. (ಬೆರೆಪಟ್ಟಿ, ಲೆಕ್ಕದ ಬಾಬು ಗಳು, ಮೊ. ಗಳ ವಿಷಯದಲ್ಲಿ) ಮೊತ್ತವಾಗು, ಒಟ್ಟು ಆಗು. F. the bill ಖರ್ಚು ಕೊಡು ; ಬಂದದ್ದಕ್ಕೆ, ನಷ್ಟಕ್ಕೆ, ತರೆಕೊಡು.

Foótle ಫೂ(ಫು)ಟ್‌ಲ್ (ಕ್ರಿ. ಅಕ., ನಾ.) (ಅಸಂ.) ವ್ಯಥಾ ಕಾಲಹರಣ ಮಾಡು ; ಅಲಕ್ಷ್ಯವಾಗಿರು ; ಅಸಡ್ಡೆಯಿಂದಿರು ; ಅವಿವೇಕವಾಗಿ ನಡೆ, ಮಾತನಾಡು. (ನಾ.) ಅವಿವೇಕವಾದ, ಅನುಪಯೋಗವಾದ, ಮಾತು ; ಅವಿವೇಕ(ದ ನಡತೆ). **Foótling** (ಗು.)

Foózle ಫೂಸ್‌ಲ್ (ಕ್ರಿ. ಸಕ., ನಾ.) (ಅಸಂ., ಮು., ಗಾಲ್ಫ್ ಆಟದಲ್ಲಿ) ತಪ್ಪು ತಪ್ಪು (ಮಾಡು) ; ಅವ್ಯವಸ್ಥೆ (ಮಾಡು) ; ಅಡ್ಡಾದಿಡ್ಡಿ (ಮಾಡು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Fop ಫಾಪ್ (ನಾ.) ಸೊಗಸುಗಾರ ; ಷೋಕಿ ಲಾಲ ; ಠೀವಿಗಾರ ; ಮೋಜುಗಾರ ; ನೀಟುಗಾರ. **Fópling** (ನಾ.); **Fóppery** (ನಾ.) ಸೊಗಸುಗಾರಿಕೆ ; ಷೋಕಿ. **Fóppish** (ಗು.) ; **Fóppishly** (ಕ್ರಿ. ವಿ.) ; **Fóppishness** (ನಾ.)

For ಫಾರ್, ಫರ್ (ಸ್ಥಾನ ಅಥವಾ ಅರ್ಥಪ್ರಧಾನತೆಯ ಪ್ರಕಾರ ಉಚ್ಚಾರ) (ಉಪ.) —ಗೆ, —ಕ್ಕೆ, —ಕ್ಕಾಗಿ, —ಓಸ್ಕರ, —ಇಂದ, —ದೆಸೆಯಿಂದ, —ನಿಮಿತ್ತ ; ಬದಲು ; ಪ್ರತಿಯಾಗಿ ; ಪರವಾಗಿ ; ಸಲವಾಗಿ ; ಅನುಕೂಲವಾಗಿ ; ಉದ್ದೇಶದಿಂದ. [Sits f., member f., Bangalore ಬೆಂಗಳೂರಿನ ಪರವಾದ ಸದಸ್ಯ. Once f. all (ಅನೇಕ ಬಾರಿ ನಡಸದೆ) ಒಂದೇ ಬಾರಿ ; ಕೊನೆಯದಾಗಿ ; ಒಟ್ಟಿಗೆ. Agent for —ಪರವಾಗಿ ಕಾರ್ಯಭಾರಿ. Do you take me f. a fool? ನನ್ನನ್ನು ಮುಟ್ಠಾಳನೆಂದು ಎಣಿಸುವೆಯಾ? Take my word f. it ಆ ವಿಷಯದಲ್ಲಿ ನಾನು ಹೇಳುವುದನ್ನು ನಂಬು, ಸಂಶಯ ಪಡಬೇಡ. I am f. tariff-reform ನಾನು ಆಮದು ರಃಪ್ತು ಸುಂಕದ ಸುಧಾರಣೆಯ ಪರವಾಗಿದ್ದೇನೆ. Went f. a soldier ಸೈನಿಕನಾಗಲು ಹೋದನು. F. sale ಮಾರಾಟಕ್ಕೆ. Send f. a cab ಬಾಡಿಗೆ ಬಂಡಿಗೆ ಹೇಳಿಕಳುಹಿಸು. Would not do it f. the world ಎಷ್ಟೇ ಲಾಭ ಬಂದರೂ ಆ ಕೆಲಸ ಮಾಡೆನು. Not paid f. ಅದಕ್ಕೆ ಬೆಲೆ ಕೊಟ್ಟಿಲ್ಲ. Was tried f. his life ಪ್ರಾಣದಂಡನೆಗಾಗಿ ಅವನನ್ನು ವಿಚಾರಣೆ ಮಾಡಿದರು. I cannot do it f. the life of me ಪ್ರಾಣ ಹೋದರೂ ಅದನ್ನು ಮಾಡಲಾರೆ. Run f. it ಅದಕ್ಕಾಗಿ ಓಡು. He sailed f. Europe ಹಡಗು ಹತ್ತಿ ಯೂರೋಪಿಗೆ ಪ್ರಯಾಣಮಾಡಿದನು. Made f. shelter ರಕ್ಷಣೆಗಾಗಿ ಮಾಡಿದ್ದು. Go f. (ಅಸಂ.) ಮೇಲೆ ಬೀಳು. Getting on f. two o'clock ಎರಡು ಗಂಟೆಯ ಹತ್ತಿರಕ್ಕೆ ಬರುತ್ತಿದೆ. I don't care f. games ನನಗೆ ಆಟಗಳು ಬೇಕಾಗಿಲ್ಲ. Fit f. nothing ಯಾವ ಕೆಲಸಕ್ಕೂ ಬಾರದ ; ಕೇವಲ ಅಪ್ರಯೋಜಕ. Oh f. wings! ಅಯ್ಯೋ! ರೆಕ್ಕೆಗಳಿದ್ದಿದ್ದರೆ! Now f. it! ಈಗ ಅದಕ್ಕೆ ಹೋಗೋಣ! Too beautiful f. words ಅದರ ಸೌಂದರ್ಯವು ಮಾತಿಗೆ ಮೀರಿದೆ, ವರ್ಣನಾತೀತವಾಗಿದೆ. He is not long f. this world ಅವನು ಬಹು ಕಾಲ ಬದುಕಿರಲಾರ ; ಅವನಿಗೆ ಸಾವು ಸಮೀಪಿಸಿದೆ. Nothing f. it but to submit ತಲೆ ಬಾಗದೆ, ಅಂಗೀಕರಿಸದೆ, ಉಪಾಯವಿಲ್ಲ. All out for 44 (ಕ್ರಿಕೆಟ್) ೪೪ ಓಟಗಳಿಗೆ ಎಲ್ಲರೂ ಬಿದ್ದುಹೋದರು. I drew on him f. Rs. 100 ಆತನಮೇಲೆ ನೂರು ರೂಪಾಯಿಗೆ ಹುಂಡಿ ಬರೆದೆನು. They live f. each other ಅವರು ಪರಸ್ಪರ ಒಬ್ಬನಿಗಾಗಿ ಮತ್ತೊಬ್ಬನು ಜೀವಿಸುತ್ತಿದ್ದಾರೆ. I can shift f. myself ನನ್ನ ಪಾಡು ನಾನು ನೋಡಿಕೊಳ್ಳಬಲ್ಲೆ. It is bad f. him to smoke ಚುಟ್ಟಾ ಸೇದುವುದು ಅವನಿಗೆ ಕೆಟ್ಟದ್ದು. It is usual f. hats to be worn ಟೊಪ್ಪಿಗೆಯಿಟ್ಟುಕೊಳ್ಳುವುದು ವಾಡಿಕೆ. Hold it f. certain ನಿಶ್ಚಯವೆಂದು ತಿಳಿ. Mistaken f. him ಅವನೆಂದು ತಪ್ಪಾಗಿ ಭಾವಿಸಿ. Be hanged f. a pirate ಕಡಲುಗಳ್ಳನೆಂದು ಗಲ್ಲಿಗೇರಿಸಲ್ಪಡು. Take f. granted ಸಿದ್ಧವೆಂದು ಭಾವಿಸಿಕೊ. I f. one do not believe it ನಾನಂತೂ ಅದನ್ನು ನಂಬುವುದಿಲ್ಲ. He did it f. the second time ಅವನು ಎರಡನೆಯ ಸಲ ಹೀಗೆ ಮಾಡಿದ್ದು. F. good ಸಂಪೂರ್ಣವಾಗಿ ; ಹಿಂದಿರುಗುವ ಅಭಿಪ್ರಾಯವಿಲ್ಲದೆ ; ಶಾಶ್ವತವಾಗಿ ; ನಿಶ್ಚಿತವಾಗಿ. Did it f. pure wantonness ಬರಿ ಚೇಷ್ಟೆಗಾಗಿ ಮಾಡಿದನು. I tremble f. him ಅವನಿಗೇನಾಗುತ್ತದೆಯೊ ಎಂದು ನಡುಗುತ್ತೇನೆ. Notorious f. parsimony ಜಿಪುಣತನಕ್ಕೆ ಪ್ರಸಿದ್ಧ. Fie f. shame! ಛೆ! ನಾಚಿಕೆಗೇಡು! Alas f. him! ಅಯ್ಯೋ ಪಾಪ! ಅವನ ಗತಿ ಹೀಗಾಯಿತೇ! F. all he seems to dislike me I still like him ಅವನಿಗೆ ನನ್ನಲ್ಲಿ ಅವಿಶ್ವಾಸವಿರುವಂತೆ ತೋರುತ್ತಿದ್ದರೂ ನನಗೇನೊ ಅವನಲ್ಲಿ ವಿಶ್ವಾಸ. Were it not, but, except, f. one thing I might be happy ಆ ವಿಷಯವೊಂದಕ್ಕಲ್ಲದಿದ್ದಗೆ ನಾನು ಸುಖವಾಗಿರಬಹುದಾಗಿದ್ದಿತು. F. one enemy he has a hundred friends ಅವನಿಗೆ ಆಗದವನೊಬ್ಬನಿದ್ದರೆ ಆಗುವವರು ನೂರಾರು ಮಂದಿ (ಇರುವರು). Bulk f. bulk ಗಾತ್ರಕ್ಕೆ ಗಾತ್ರ (ತೆಗೆದುಕೊಂಡರೆ) ; ಒಂದೇ ಗಾತ್ರದವನ್ನು ತೆಗೆದುಕೊಂಡರೆ. Word f. word ಮಾತಿಗೆ ಮಾತು ; ಪದಶಃ. F. the rest ಮಿಕ್ಕವುಗಳ ವಿಷಯದಲ್ಲಿ. F. my part ನಾನಾದರೊ. F. all, aught, I know ನನಗೆ ತಿಳಿದ ಮಟ್ಟಿಗೆ. He is hard up f. money ಅವನಿಗೆ ದುಡ್ಡಿನ ತೊಂದರೆ ಬಹಳವಾಗಿದೆ. Wants f. nothing ಅವನಲ್ಲಿ ಯಾವುದಕ್ಕೂ ಕೊರತೆ ಇಲ್ಲ. A humane man f. an executioner ಗಲ್ಲಿಗೆ ಹಾಕುವವನಲ್ಲಿ ಇಷ್ಟು ಕನಿಕರ ಅತಿಶಯ. Very bright f. a winter day ಚಳಿಗಾಲಕ್ಕೆ ಈ ಪ್ರಕಾಶ ಬಹಳ ಹೆಚ್ಚು. Has been so f. months ತಿಂಗಳುಗಟ್ಟಲೆ ಹೀಗೆಯೇ ಇದೆ. F. the present ಸದ್ಯಕ್ಕೆ. I left him alone f. once ಒಂದು ಸಲಕ್ಕೆ ಅವನನ್ನು ಅವನಷ್ಟಕ್ಕೇ ಬಿಟ್ಟೆನು. F. all the world (ಹೋಲಸುವಾಗ) ಸಂಶಯಕ್ಕೆಡೆಯಿಲ್ಲದೆ ; ಖಂಡಿತವಾಗಿ ; ನಿಸ್ಸಂದೇಹವಾಗಿ (Looked f. all the world like a tortoise ಸ್ವಲ್ಪವೂ ಸಂಶಯಕ್ಕೆಡೆಯಿಲ್ಲದೆ ಆಮೆಯಂತೆಯೇ ಕಂಡಿತು). Be f. it (ಸೈನಿಕ ಅಸಂ.) ಶಿಕ್ಷೆ ಹಣೆಯಲ್ಲಿ ಬರೆದಿರು.

For (ಸಂ. ಅವ್ಯ.) ಏಕೆಂದರೆ.

Fórage ಫಾರೆ(ರಿ)ಜ್ (ನಾ., ಕ್ರಿ.) (ಕುದುರೆಗಳ ಮತ್ತು ದನಗಳ) ಮೇವು, ಗ್ರಾಸ (ಮು., ಸೈನ್ಯದ ಕುದುರೆಗಳದು). ಮೇವು ಸಂಗ್ರಹಿಸುವುದು (On the f. ಮೇವು ಸಂಗ್ರಹಿಸುತ್ತ). (F.-cap ಪದಾತಿಯ ಮನೆಯುಡುಪಿನ ಟೋಪಿ). (ಕ್ರಿ.) ಮೇವು ಹುಡುಕು, ಸಂಗ್ರಹಿಸು. ಕೊಳ್ಳೆ ಹೊಡೆ ; ಸೂರೆ ಮಾಡು ; ಹಾಳೆಬ್ಬಿಸು. (ರೂಪ.) (ಯಾವುದಕ್ಕಾದರೂ) ಹುಡುಕಾಡು; ಸೋಸಿ ಹುಡುಕು. ಅರಸಿಕೊಂಡು ಹೋಗು. ಮೇವನ್ನು ಸರಬರಾಯಿ ಮಾಡು. ಸೂರೆ ಮಾಡಿ, ಕೊಳ್ಳೆ ಹೊಡೆದು, ಕಿತ್ತುಕೊ. **Fórager** (ನಾ.) ; **Fóray** ಫಾರೇ (ನಾ., ಕ್ರಿ. ಅಕ.) ದಾಳಿ(ಯಿಡು) ; ಲೂಟಿಗಾಗಿ ನುಗ್ಗು(ವುದು), ಆಕ್ರಮಣ ಮಾಡು(ವುದು) ; ಕೊಳ್ಳೆ, ಸೂರೆ (ಹೊಡೆ)

Forámen ಫೊರೇಮೆನ್ (ನಾ. ; ಬ. ವ. -mina —ರ್‍ಯಾಮಿನ) ಕಂಡಿ ; ತೂತು ; ಬಾಯಿ ; ರಂಧ್ರ ; ದಾರಿ (ಮು., ಅಂ. ರ. ಶಾ., ಪ್ರಾ. ವಿ., ಸ. ವಿ. ಗಳಲ್ಲಿ). **Foráminate** ಫೊರ್‍ಯಾಮಿನೆಟ್, **Foráminated** —ನೇಟೆಡ್ (ಗು.) ಕಂಡಿ ಕೊರೆದಿರುವ ; ತೂತು ಮಾಡಿರುವ ; ತೊಳೆ ಹಾಕಿರುವ ; ರಂಧ್ರವಿರುವ. **Foráminate** —ನೇಟ್ (ಕ್ರಿ. ಸಕ.) — ಕೊರೆ.

Forasmúch as ಫಾರ್ಅಸ್‌ಮಚ್ ಅಸ್ (ಸಂ. ಅವ್ಯ) ಆದಕಾರಣ ; ಆದುದರಿಂದ.

Fóray. **Forage** ನೋಡಿ.

Forbeár ಫಾರ್‌ಬೇರ್ (ಕ್ರಿ. ; ಭೂತ. -bore, ಭೂ. ಕೃ. -borne —ಬೋರ್‌ನ್) ಉಪಯೋಗಿಸದಿರು ; ಬಳಸದಿರು ; ಉಳಿ ; ವರ್ಜಿಸು ; ತ್ಯಜಿಸು (*From* ಉಪ. ದೊಡನೆ ಸಹ). ಹೇಳದಿರು ; ಮಾಡದಿರು ; ತಾಳಿಕೊ ; ತಾಳ್ಮೆಯಿಂದಿರು ; ತಡೆದುಕೊ ; ಸಹನೆ ತಾಳು ; ಸಹಿಸಿಕೊ ; ಸೈರಿಸಿಕೊ. **Forbeárance** ಫರ್‌ಬೇರನ್ಸ್ (ನಾ.) ; **Forbeáringly** (ಕ್ರಿ. ವಿ.)

Forbeárs ಫಾರ್‌ಬೇರ್ಸ್, **Forébears** ಫೋರ್— (ನಾ., ಬ. ವ.) ಪೂರ್ವಿಕರು ; ಪಿತೃಗಳು ; ಮೂಲ ಪುರುಷರು ; ಮೊದಲಿಗರು ; ಹಿರಿಯರು.

Forbíd ಫರ್‌ಬಿಡ್ (ಕ್ರಿ. ಸಕ.; ಭೂತ. -bad, -bade -ಬ್ಯಾಡ್; ಭೂ. ಕೃ. -bidden) ಮಾಡಕೂಡದೆಂದು ಅಪ್ಪಣೆಮಾಡು ; ಬೇಡವೆಂದು ನಿರೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧಿಸು ; ನಿಷೇಧಿಸು ; ಅಡ್ಡಿ ಮಾಡು ; ತಡೆ ; ಆಗಗೊಡದಿರು (F. him to go ಹೋಗಕೂಡದೆಂದು ನಿಷೇಧಿಸು. F. him the court ಅವನು ಆಸ್ಥಾನ ಪ್ರವೇಶ ಮಾಡಕೂಡದೆಂದು ಕಟ್ಟುಮಾಡು. God f. ! ದೇವರು ತಪ್ಪಿಸಲಿ ! ಆಗದಿರಲಿ ! ಸಂಭವಿಸದಿರಲಿ !). Forbidden or prohibited degrees (Degree ನೋಡಿ). Forbidden fruit ತಿನ್ನ ಕೂಡದೆಂದು ಹೇಳಿದ ಹಣ್ಣು ; ನಿಷಿದ್ಧ ಫಲ ; ಬೇಡವೆಂದು ತಡೆಮಾಡಿದುದ ರಿಂದಲೇ ಹೆಚ್ಚು ಅಪೇಕ್ಷೆ ಹುಟ್ಟುವ ವಸ್ತು. **Forbídding** (ಗು.) ಅಸಹ್ಯವಾದ ; ವಿಕಾರವಾದ ; ಬಿಟ್ಟು ದೂರಹೋಗುವಂತೆ ಮಾಡುವ ; ಹತ್ತಿರ ಹೋಗಲು ಮನಸ್ಸು ಬಾರದ ; ನಿಷೇಧಕ. **Forbíddingly** (ಕ್ರಿ. ವಿ.) ; **Forbíddingness** (ನಾ.)

Forby(é) ಫರ್‌ಬೈ (ಉಪ., ಕ್ರಿ. ವಿ.) (ಸ್ಕಾ. ಪ್ರ. ಮತ್ತು ಪ್ರಾಚೀ. ಪ್ರ.) ಅಲ್ಲದೆ ; ಬಿಟ್ಟು ; ಮತ್ತೆ ; ಜೊತೆಗೆ ; ಇನ್ನೂ.

Force[1] ಫೋರ್ಸ್ (ನಾ.) ಬಲ ; ರಭಸ ; ಜೋರು ; ತ್ರಾಣ ; ಒತ್ತರ ; ಕಡುಪು ; ಕಡ್ಡಾಯ ; ಬಲವಂತ ; ಬಲಾತ್ಕಾರ ; ನಿರ್ಬಂಧ. (By f. ಬಲಾತ್ಕಾರದಿಂದ). ಸೇನಾ ಬಲ ; ಸೇನೆ ; ಬಲ. (ಬ. ವ. ದಲ್ಲಿ) ದಳಗಳು. ಪೊಲೀಸು ದಳ (The f. ಪೊಲೀಸಿನವರು). ಪ್ರೇರಣೆ ; ಪ್ರಭಾವ ; ಪ್ರಾಬಲ್ಯ (The f. of circumstances ಸಂದರ್ಭದ ನಿರ್ಬಂಧ. There is f. in what you say ನೀನು ಹೇಳುವುದರಲ್ಲಿ ಬಲವಿದೆ. Described it with much f. ಬಹಳ ಶಕ್ತಿವತ್ತಾಗಿ ವರ್ಣಿಸಿದನು). (ಶಿಥಿಲ ಪ್ರ.) ವಿವೇಚನೆ ; ಔಚಿತ್ಯ (Can't see the f. of doing what one dislikes ಇಷ್ಟವಿಲ್ಲದ್ದನ್ನು ಮಾಡುವುದ ರಲ್ಲಿ ಸಾರ್ಥಕತೆ ಕಾಣುವುದಿಲ್ಲ). ಆಚರಣೆ ; ಜಾರಿ ; ಚಾಲ್ತಿ (Law remains in, comes into, f. ಕಾನೂನು ಜಾರಿಯಲ್ಲಿರುತ್ತದೆ, ಜಾರಿಗೆ ಬರುತ್ತದೆ. Put in f. ಜಾರಿಗೆ, ಆಚರಣೆಗೆ, ತರು). ನಿಜ ವಾದ, ನಿಷ್ಕೃಷ್ಟವಾದ, —ಅರ್ಥ, ಭಾವ. (ಭೌ. ವಿ.) ಒಂದು ಕಾಯ ವನ್ನು ಚಲನಗೊಳಿಸುವ, ಅಳೆಯಲಾಗುವ, ಒಂದು ಪ್ರಭಾವ ; ಬಲ. (ಹಿಂದೆ) ಚಲನ ಶಕ್ತಿ. (Conservation of f. ಬಲ ಸ್ಥಾಯಿತ್ವ). (ಹಿಂದೆ) ಯಾವುದಾದರೂ ಒಂದು ಭೌತ ಗೋಚರಾನು ಭವದ (ಉದಾ., ಪದಾರ್ಥದಲ್ಲಿ ಸಹಜವಾಗಿರುವುದೆಂದು ಭಾವಿಸಿದ ಉಷ್ಣದ ಅಥವಾ ಚಲನದ) ಹೇತು, ಕಾರಣ. (ರೂಪ.) Considers himself a f. in the world ಪ್ರಪಂಚದಲ್ಲಿ ತಾನೊಂದು ಶಕ್ತಿಯೆಂದು ಎಣಿಸಿಕೊಂಡಿದ್ದಾನೆ. By f. of —ಮೂಲಕ, —ಇಂದ. (ಸೈನ್ಯ) In f. ಹೆಚ್ಚು ಸಂಖ್ಯೆಯಲ್ಲಿ. In great f. ಬಹಳ ಜೋರಾಗಿ ; ಚಟು ವಟಿಕೆಯಾಗಿ ; ಬಹಳ ಹುರುಪಿನಿಂದ. **F.-pump** (ವಾಯುಭಾರವು ಧರಿಸಲು ಶಕ್ತಿಯುಳ್ಳ ಎತ್ತರಕ್ಕಿಂತಲೂ ಹೆಚ್ಚು ಎತ್ತರಕ್ಕೆ ದ್ರವವನ್ನು ಕಳು ಹುವ) ಒತ್ತಡದ ಪಂಪು. **Fórceless** (ಗು.)

Force (ಕ್ರಿ. ಸಕ.) ಬಲಾತ್ಕಾರ ಮಾಡು ; ಒತ್ತಾಯ ಪಡಿಸು ; ಬಲವಂತ ಮಾಡು ; ಬಲಪ್ರಯೋಗ ಮಾಡು ; ಕಡ್ಡಾಯ ಮಾಡು ; ನಿರ್ಬಂಧಿಸು (F. one's hand ಯುಕ್ತ ಕಾಲಕ್ಕೆ ಮೊದಲೇ ಕಾರ್ಯ ನಡಸುವಂತೆ, ಇಷ್ಟವಿಲ್ಲದ ನೀತಿಯನ್ನು ಹಿಡಿಯುವಂತೆ, ಬಲಾತ್ಕರಿಸು ; ಕೈ ಕಟ್ಟು) ; (ಹೆಂಗಸಿನಮೇಲೆ) ಅತ್ಯಾಚಾರ ನಡಸು ; ಕೈ ಮಾಡು. (ಪದ ಗಳಿಗೆ, ನೇರವಾದ ಅರ್ಥ ಬಿಟ್ಟು) ಕಷ್ಟಪಟ್ಟು, ತಿರಿಚಿ, ಅರ್ಥ ಕೊಡು. (ಇಸ್ಪೀಟಾಟ) (ಆಟಗಾರನನ್ನು) ತುರುಪು ಆಡುವಂತೆ, ಅಥವಾ ತನ್ನ ಬಲ ತೋರಿಸಿಕೊಳ್ಳುವಂತೆ, ಮಾಡು ; (ಆಟಗಾರನು) ಒಂದು ಗೊತ್ತಾದ ಎಲೆಯನ್ನು ಇಳಿಯುವಂತೆ ನಿರ್ಬಂಧಗೊಳಿಸು. ಬಲವನ್ನೆಲ್ಲ ಪ್ರಯೋ ಗಿಸು ; ಸರ್ವ ಪ್ರಯತ್ನ ಮಾಡು (F. the pace or running ಓಟದ ಜೂಜಿನಲ್ಲಿ ಎದುರಾಳಿಯನ್ನು ಬೇಗನೆ ದಣಿಸುವುದಕ್ಕಾಗಿ ಹೆಚ್ಚಿನ ವೇಗದಿಂದ ಓಡು, ಓಡಿಸು. F. the bidding at auction ಹರಾಜಿನಲ್ಲಿ ಇತರರು ಬೆಲೆ ಏರಿಸುವಂತೆ ಮಾಡಲು ತಾನು ಏರಿಸುತ್ತ ಹೋಗು. F. one's voice ದನಿಯನ್ನು ಮಿತಿ ಮೀರಿ ಎತ್ತರಿಸು. Forced march ಬಹಳ ಕಷ್ಟಪಟ್ಟು ಸಾಗಿಸುವ ಪ್ರಯಾಣ. Forced draught (Draught ನೋಡಿ). F. the game ಆಟದಲ್ಲಿ ಹೆಚ್ಚು ಸಂಖ್ಯೆ ಬೇಗ ಗಳಿಸಬೇಕೆಂಬ ಆಶೆಯಿಂದ ನಷ್ಟಸಂಭವಕ್ಕೆ ಸಿದ್ಧನಾಗು. F. an analogy, simile ಸಾದೃಶ್ಯವನ್ನು, ಉಪಮಾನವನ್ನು, ಮಿತಿ ಮೀರಿ ಎಳೆ, ಒತ್ತು, ಹೆಚ್ಚಾಗಿ ತಿರಿಚು). ಹೆಚ್ಚು ಬಲಪ್ರಯೋಗ ಮಾಡಿ ವಶ ಪಡಿಸಿಕೊ ; ಸೆರೆ ಹಿಡಿ. (ಕೋಟೆ, ರಕ್ಷಣೆಗಳು, ಮಾರ್ಗ, ಬೀಗ, ಬಾಗಿಲು —ಇವನ್ನು) ಬಲವಂತದಿಂದ, ಒಡೆದು, ದಾರಿ ಬಿಡಿಸಿಕೊಂಡು, ಹೋಗು ; ಒಡೆದು ನುಗ್ಗು ; ಭೇದಿಸು. ನಡಸು ; ಚೋದಿಸು ; ಪ್ರೇರಿಸು (F. a card ಕಣ್ಣುಕಟ್ಟು ಆಟದಲ್ಲಿ ಒಂದು ಗೊತ್ತಾದ ಇಸ್ಪೀಟೆಲೆಯನ್ನು ಒಬ್ಬನು ತನಗೇ ತಿಳಿಯದಂತೆ ಆರಿಸಿ ತೆಗೆಯುವಹಾಗೆ ಪ್ರೇರಿಸು). ಪ್ರಯತ್ನದಿಂದ ಆಗಮಾಡು, ಉಂಟುಮಾಡು, ಮಾಡಿಸು, ತರು, ತರಿಸು (F. a smile ಪ್ರಯತ್ನಪಟ್ಟು, ಬಲವಂತದಿಂದ, ನಗು, ನಗಿಸು. F. one's way ಬಲವಂತದಿಂದ, ಪ್ರಯತ್ನಪಟ್ಟು, ದಾರಿ ಮಾಡಿ ಕೊಂಡು ಹೋಗು). ಬಲಾತ್ಕಾರದಿಂದ ಕಿತ್ತುಕೊ ; ಕಸಿದುಕೊ ; ಸುಲಿದುಕೊ (F. it out of his hands ಅವನ ಕೈಯಿಂದ ಕಿತ್ತುಕೊ. Forced loan ಬಲಾತ್ಕಾರದಿಂದ ಪಡೆದ ಸಾಲ ; ಬಲವಂತದ ಸಾಲ. F. the facts out of him ನಿಜ ಸ್ಥಿತಿಯನ್ನು ಅವನಿಂದ ಹೊರಡಿಸು). (ಸಸ್ಯದ, ವಿದ್ಯಾವ್ಯಾಸಂಗಿಯ) ಪರಿಣತಿಯನ್ನು ಕೃತಕ ರೀತಿಯಿಂದ ಕಾಲಕ್ಕೆ ಮೊದಲೇ ಉಂಟಾಗುವಂತೆ ಮಾಡು : ಬಲವಂತದ ಬೆಳವಣಿಗೆ ಉಂಟುಮಾಡು. **Fórcedly** — ಸೆಡ್ಲಿ (ಕ್ರಿ. ವಿ.) ; **Fórceful** (ಗು.) (ಪ್ರಾಚೀ. ಪ್ರ. ಅಥವಾ ಕಾವ್ಯ ಪ್ರ. ಅಥವಾ ಕೃತಕ ಪ್ರ.) = Forcible. **Fórcefully** (ಕ್ರಿ. ವಿ.) ; **Fórcefulness** (ನಾ.) ; **Fórcible** (ಗು.) ಬಲವಂತದಿಂದ ಮಾಡಿದ ; ಬಲಾತ್ಕಾರದ ; ಬಲವತ್ತಾದ ; ಬಲವಂತದ. (ಕಾರ್ಯ, ಮಾತು, ಶೈಲಿ, ಕುಶಲ ಕರ್ಮಿ, ವೊ. ವಿಷಯದಲ್ಲಿ) ಪ್ರಬಲ, ಸ್ಫುಟ, ಪ್ರಭಾವ ಯುಕ್ತ. **F.-feeble** ಬಲದ ತೋರ್ಕೆಯಿಂದ (ಸಹಜ ವಾಗಿರುವ) ದೌರ್ಬಲ್ಯವನ್ನು ಮರೆಮಾಜುವ ; ಹೊರಗೆ ಜೋರು ಒಳಗೆ ಸಪ್ಪೆ ಆದ. **Fórcibleness** (ನಾ.) ; **Fórcibly** (ಕ್ರಿ. ವಿ.)

Force[2] ಫೋರ್ಸ್ (ನಾ.) ಜಲಪಾತ ; ನೀರುಬೀಳು.

Force majeúre (F) ಫೋರ್ಸ್ ಮಾಝರ್ (ನಾ.) ತಡೆಯಲಾಗದ ಬಲವಂತ ; ಅನಿವಾರ್ಯ ಬಲಾತ್ಕಾರ ; ಅಪ್ರತ್ಯಕ್ಷವಾದ ರಾಜಕೀಯ ಸಂಧಾನದ ಒತ್ತಾಯ. (ಒಪ್ಪಂದ, ಕರಾರು, ವೊ. ನ್ನು ನಡಸದೆ ಹೋಗಲು ನೆರವಾಗುವ ಯುದ್ಧ, ಮುಷ್ಕರ, ದೈವಿಕ, ವೊ.) ಅನಿ ವಾರ್ಯ ಘಟನೆ.

Fórce-meat ಫೋರ್ಸ್‌ಮೀಟ್ (ನಾ.) ಹೂರಣವಾಗಿ ಉಪಯೋಗಿಸಲು ಚೂರು ಚೂರಾಗಿ ಕತ್ತರಿಸಿ, ಸಂಬಾರ ಬೆರಸಿ, ಒಗ್ಗರಿಸಿದ, ಮಾಂಸ : ಹೂರಣ ಮಾಂಸ.

Fórceps ಫಾರ್ಸೆಪ್ಸ್ (ನಾ., ಏ. ವ. ಮತ್ತು ಬ. ವ.) ಶಸ್ತ್ರಚಿಕಿತ್ಸೆಯ ಚಿಮುಟ, ಪಟಕಾರು, ಶ್ರವಣ, ಇಕ್ಕುಳ. (ಅಂ. ರ. ಶಾ., ಕ್ರಿಮಿ ಶಾಸ್ತ್ರ, ಪ್ರಾ. ವಿ.) ಚಿಮುಟದಂಥ ಅಂಗ : ಚಿಮುಟಾಂಗ. **Fórcipate** ಫಾರ್ಸಿಪೇಟ್ (ಗು.) ಚಿಮುಟದ ರಚನೆಯುಳ್ಳ ; ಚಿಮುಟದ ಆಕಾರದ.

Fórcible, etc. **Force** ನೋಡಿ.

Fórcite ಫೋರ್ಸೈಟ್ (ನಾ) ಒಂದು ತೆರದ 'ಡೈನಮೈಟು', ಸಿಡಿ ಮದ್ದು.

Ford[1] ಫೋರ್ಡ್ (ನಾ., ಕ್ರಿ.) ನದಿ, ವೊ. ನ್ನು ಕಾಲ್ನಡಗೆಯಿಂದ ಹಾಯಬಹುದಾದಷ್ಟು ಮಟ್ಟದ ನೀರುಳ್ಳ ಸ್ಥಳ : ಹಾಯ್ಗಡ ; ಗಡು ; ಕಾಲುಹೊಳೆ. (ಕಾವ್ಯ) ನದಿ ; ಹೊಳೆ. (ಕ್ರಿ.) (ನದಿ, ವೊ. ನ್ನು) ನಡಗೆಯಿಂದ ದಾಟಿಹೋಗು ; ಗಡು ಹಾಯಿ. **Fórdable** (ಗು.) ; **Fórdless** (ಗು.)

Ford[2] ಫೋರ್ಡ್ (ನಾ.) ಅಮೆರಿಕದ ಹೆನ್ರಿ ಫೋರ್ಡ್ ಎಂಬಾತನ ತಯಾರಿಕೆಯ ಮೋಟಾರು ಬಂಡಿ(ಗೆ ಕೊಟ್ಟ ಹೆಸರು)

Fordó ಫ(ಫೋ)ರ್ಡೂ (ಕ್ರಿ. ಸಕ. ; ಭೂತ. —did, ಭೂ. ಕೃ. —done) (ಪ್ರಾಚೀ. ಪ್ರ.) ಕೊಲ್ಲು ; ನಾಶಮಾಡು ; ಹಾಳುಮಾಡು. **Fordóne** (ಗು.) ಬಳಲಹೋದ ; ಸಾಕಾಗಿಹೋದ ; ಪೂರ್ತಿ ಆಯಾಸಗೊಂಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Fore ಫೋರ್ (ಗು., ನಾ., ಕ್ರಿ. ವಿ., ಉಪ., ಭಾವ. ಅವ್ಯ.) ಮುಂದುಗಡೆಯ ; ಮುಂದಿರುವ ; ಮುಂದಿನ ; ಅಗ್ರ. (ನಾ.) ಮುಂದುಗಡೆ ; ಮುಂಭಾಗ; ಹಡಗಿನ ಮುಂಭಾಗ. [At the f. (ನಾವೆ) (ಮು., ಹಡಗು ಹೊರಡುವುದನ್ನು ಸೂಚಿಸುವುದಕ್ಕಾಗಿ) ಮುಂಗೂವೆಯಮೇಲೆ ಹಾರಿಸಿದ. To the f. ಎದುರಿನಲ್ಲೇ ; ಕೈಗೆ ಸಿಕ್ಕುವ ಹಾಗೆ ; ಸಿದ್ಧವಾಗಿ ; ದೊರೆಯುವುದಾಗಿ. ಜೀವಂತವಾಗಿ. ಮುಂದಕ್ಕೆ ; ಮುಂದಾಗಿ ; ಎದುರಿಗೆ ; ಸ್ಪಷ್ಟವಾಗಿ ; ಎದ್ದು ಕಾಣುವಂತೆ ; ಮುಂದಾಳಾಗಿ. (ಆಧುನಿಕ ಪ್ರ.) ಪ್ರಸಿದ್ಧಿಗೆ ಬಂದು (Come to the f. ಮುಂದಕ್ಕೆ ಬರು ; ಪ್ರಾಮುಖ್ಯತೆಗೆ ಬರು ; ಮುಂದಾಳಾಗು)]. (ಕ್ರಿ. ವಿ.) ಎದುರಿನಲ್ಲಿ ; ಮುಂದೆ [F.-&-aft ಹಡಗಿನಲ್ಲಿ ಮುಂಭಾಗದಲ್ಲೂ ಹಿಂಭಾಗದಲ್ಲೂ ; ಹಡಗಿನ ಮೇಲೆಲ್ಲ ; ಹಡಗಿನಲ್ಲಿ ಹಿಂದಕ್ಕೂ ಮುಂದಕ್ಕೂ ; ಹಡಗಿನ ಉದ್ದಕ್ಕೂ. F.-&-aft rigged ಹಡಗಿನ ಉದ್ದಸಾಲನಲ್ಲಿ ಹಾರಾಡುವ ಪಟಗಳುಳ್ಳ (ಅಡ್ಡ ಸಾಲನಲ್ಲಲ್ಲ)]. (ಉಪ.) (ಆಣೆಯಿಟ್ಟು ಹೇಳುವಲ್ಲಿ : ಉದಾ., F. God! ದೇವರ ಮುಂದೆ!). (ಭಾವ. ಅವ್ಯ.) (ಗಾಲ್ಫ್ ಆಟ) (ಮುಂದೆ ನಿಂತಿರುವವರಿಗೆ ಚೆಂಡಿನ ಹೊಡೆತಕ್ಕೆ ಮುಂಚೆ ಕೊಡುವ ಎಚ್ಚರಿಕೆ) : ಮುಂದೆ ! ಹುಷಾರ್ !

Fore- ಫೋರ್— (ಸ. ಪೂ. ಪ.) ಮುನ್—, ಅಗ್ರ—, ಮೊದಲೇ—, ಪೂರ್ವಭಾವಿ— .

Fórearm[1] (ನಾ.) ಮುಂದೋಳು (ಮೊಣಕೈಯಿಂದ ಮಣಿಕಟ್ಟಿನ ವರೆಗಿನ ಅಥವಾ ಬೆರಳ ತುದಿಯ ವರೆಗಿನ ಭಾಗ) ; (ಇತರ ಪ್ರಾಣಿಗಳಲ್ಲಿ ಇದಕ್ಕೆ ಜವಾಬಾದ) ಮುಂಗಾಲಿನ, ರೆಕ್ಕೆಯ, ಭಾಗ. **Foreárm**[2] (ಕ್ರಿ. ಸಕ.) ಮೊದಲೇ ಶಸ್ತ್ರಸಜ್ಜಿತನಾಗು ; ಪೂರ್ವಸಿದ್ಧವಾಗು. **Forebóde** ಫೋ(ಫ)ರ್‌ಬೋಡ್ (ಕ್ರಿ. ಸಕ.) (ವಿರ. ಪ್ರ.) ಭವಿಷ್ಯ ಹೇಳು ; (ಸಾ., ಕೇಡಿನ) ಮುನ್‌ಸೂಚನೆ ಕೊಡು, ತೋರು, ಕಾಣು ; ಅಶುಭ ಸೂಚಿಸು ; ಉತ್ಪಾತ ಸೂಚಿಸು. **Forebóding** (ನಾ.) (ವಿರ. ಪ್ರ.) ಭವಿಷ್ಯ ಹೇಳುವುದು ; (ಮು., ಕೇಡಿನ) ಮುನ್‌ಸೂಚನೆ ; ಶಕುನ. **Forebódingly** (ಕ್ರಿ. ವಿ.) ; **Fóre-cábin** (ನಾ.) (ಸಾ., ಎರಡನೆಯ ತರಗತಿಯ ಪ್ರಯಾಣಿಕರಿಗಾಗಿರುವ) ಹಡಗಿನ ಮುಂಭಾಗದಲ್ಲಿಯ ಕೋಣೆ : ಮುಂಗೋಣೆ. **Forecást** (ಕ್ರಿ. ಸಕ. ; ಭೂತ., ಭೂ. ಕೃ. Forecast, Forecasted ; ನಾ.) ಮೊದಲೇ ಅಂದಾಜು ಮಾಡು ; ಗುಣಿಸು ; ಊಹಿಸು ; ಮುಂದಾಗಿ ಹೇಳು. (ನಾ.) ಮುನ್‌ಸೂಚನೆ (ಮು., ವಾಯುಸ್ಥಿತಿಯ ವಿಷಯದಲ್ಲಿ). (ವಿರ. ಪ್ರ.) ದೂರದೃಷ್ಟಿ. ಮುಂದೆ ಬರಬಹುದಾದುದರ ಊಹಾತ್ಮಕವಾದ ಅಂದಾಜು : ಮುನ್ ಅಂದಾಜು. **Fórecastle** ಫೋರ್‌ಕ್ಯಾಸ್‌ಲ್, **Fo'c's'le** ಫೋಕ್‌ಸ್‌ಲ್ (ನಾ.) (ಚರಿತ್ರೆ) ಹಡಗಿನ ಮುಂಭಾಗದಲ್ಲಿ ಎತ್ತರಿಸಿದ ಸಣ್ಣ ಅಟ್ಟ : ಮುನ್ನಟ್ಟ .(ಯುದ್ಧದ ಹಡಗುಗಳಲ್ಲಿ) ಮೇಲಿನ ಅಟ್ಟದ ಮುಂಭಾಗ (ಅರೂಢಿ). (ವ್ಯಾಪಾರದ ಹಡಗುಗಳಲ್ಲಿ ನಾವೆಯ ಚಾಕರರು ವಾಸಮಾಡುವ) ಮೇಲಟ್ಟದ ತಳದಲ್ಲಿಯ ಮುಂಭಾಗ. **Foreclóse** (ಕ್ರಿ.) ತಡೆಗಟ್ಟು ; ನಿವಾರಿಸು ; ಪ್ರತಿಬಂಧಿಸು ; ಅಡ್ಡಿ ಮಾಡು. [(ಭೋಗ್ಯಾಧಾರದ ಕಾನೂನು) : ಕೊಡಬೇಕಾದ ಹಣ ಕೊಡದೆ ತಪ್ಪಿದ್ದರಿಂದ] ಆಧಾರದ ಸ್ವತ್ತು ಬಿಡಿಸಿಕೊಳ್ಳುವ ಹಕ್ಕನ್ನು ರದ್ದುಮಾಡು, ಕಿತ್ತುಕೊ. (ವಾದಾರ್ಹವಾದ ವಿಷಯ, ಮೊ. ನ್ನು) ಮುಂಭಾವನೆಯಿಂದ ತೀರ್ಮಾನಿಸಿಬಿಡು. **Foreclósure** (ನಾ.) ; **Fórecourt** (ನಾ.) ಕಟ್ಟಡದ ಮುಂಭಾಗದಲ್ಲಿಯ ಅಂಗಳ : ಮುನ್ನಂಗಳ. **Fóre-edge** (ನಾ.) (ಮು., ಪುಸ್ತಕದ) ಬೆನ್ನಿಗೆ ಎದುರಾಗಿರುವ ಹೊರಗಿನ ಅಂಚು : ಮುನ್ನಂಚು. **Fórefather** (ನಾ.) (ಬ. ವ. ದಲ್ಲಿ) ಒಬ್ಬನ ತಂದೆಯ ಅಥವಾ ತಾಯಿಯ ಪೂರ್ವಪಿತೃಗಳು, ಪೂರ್ವಜರು. (ಶಿಥಿಲವಾಗಿ) (ಒಂದು ಕುಟುಂಬದ ಅಥವಾ ಕುಲದ) ಹಿಂದಿನ ತಲೆಮೊರೆಗಳು. (ಏ. ವ. ದಲ್ಲಿ) (ವಿರ. ಪ್ರ.) ಒಬ್ಬನ ಮೂಲಪುರುಷ. **Fórefinger** (ನಾ.) ಹೆಬ್ಬೆಟ್ಟಿನ ಪಕ್ಕದ ಬೆರಳು : ತೋರು, ಸುಟ್ಟು, —ಬೆರಳು ; ತರ್ಜನಿ. **Fórefoot** (ನಾ.) ಮೃಗದ ಮುನ್ನಡಿ. **Fórefront** (ನಾ.) ಕೇವಲ ಮುಂದೆ ; ಮುಂದುಗಡೆ ; ಮುಂಭಾಗ ; ಅಗ್ರಭಾಗ (In the f. of the battle ಕಾಳಗದ ಚೂಣಿಯಲ್ಲಿ). **Foregáther** = Forgather. **Fóregift** (ನಾ.) (ನ್ಯಾ. ಶಾ.) ಭೋಗ್ಯಾಧಾರವನ್ನು ಮುಂದುವರಿಸುವುದಕ್ಕಾಗಿ ಕೊಡಬೇಕಾದ ಹೆಚ್ಚು ಹಣ. **Foregó**[1] (ಕ್ರಿ. ; ಭೂತ. -went, ಭೂ. ಕೃ. -gone) (ಸ್ಥಳದಲ್ಲಿ, ಕಾಲದಲ್ಲಿ) ಮೊದಲೇ, ಮುಂಚೆಯೇ, —ಬರು, ಹೋಗು. Foregone conclusion ತಕ್ಕ ಸಾಕ್ಷ್ಯವನ್ನು ಅಥವಾ ಅಂಶಗಳನ್ನು ಪರಿಗಣಿಸುವುದಕ್ಕೆ ಮೊದಲೇ ಮಾಡಿದ ತೀರ್ಮಾನ, ಪಟ್ಟ ಅಭಿಪ್ರಾಯ : ಮುನ್ನಿಶ್ಚಿತ ತೀರ್ಮಾನ, ಅಭಿಪ್ರಾಯ ; ಪೂರ್ವಭಾವನೆ ; ಮೊದಲೇ ತಿಳಿಯಬಹುದಾದ, ತಿಳಿಯಬಹುದಾಗಿದ್ದ, ಪರಿಣಾಮ ; ಎಲ್ಲರೂ ತಿಳಿದ ವಿಷಯ ; ಖಂಡಿತವಾದದ್ದು. **Foregóer** (ನಾ.) ಮುಂದೆ ಹೋಗುವವನು ; ಅಗ್ರಗಾಮಿ ; ಮುಂದಾಳು ; ಆದರ್ಶಪ್ರಾಯನಾದವನು ; ಮಾದರಿ. ಪೂರ್ವಜ ; ಪೂರ್ವಿಕ ; ಹಿಂದಿನವನು. **Foregóing** (ಗು.) ಮೊದಲೇ ಹೇಳಿದ. **Foregó**[2] = Forgo. **Fóreground** (ನಾ.) (ಮು., ಒಂದು ಚಿತ್ರದಲ್ಲಿ) ನೋಟಕನಿಗೆ ಕೇವಲ ಹತ್ತಿರದ ದೃಶ್ಯಭಾಗ : ಮುನ್ನೆಲೆ. ಪ್ರಮುಖ ಸ್ಥಾನ. **Fórehand** (ನಾ., ಗು.) (ಸವಾರನ ಮುಂಭಾಗದಲ್ಲಿಯ) ಕುದುರೆಯ ಮುಂಭಾಗ. (ಗು.) (ಟೆನಿಸ್, ಮೊ. ಆಟಗಳಲ್ಲಿ ಚೆಂಡಿಗೆ ಕೊಟ್ಟ) ಮುಂಗೈಯ ಏಟು (ಹಿಂಗೈಯಿನದಲ್ಲ). **Fórehead** ಫಾರೆಡ್ (ನಾ.) ಹಣೆ ; ನೊಸಲು ; ಲಲಾಟ. **Forejúdge** (ಕ್ರಿ. ಸಕ.) ವಿಚಾರಣೆಗೆ ಮೊದಲೇ ತೀರ್ಮಾನಿಸು, ನಿರ್ಣಯಿಸು ; ಮುನ್‌ತೀರ್ಮಾನ ಮಾಡು. **Foreknów** (ಕ್ರಿ. ಸಕ. ; ಭೂತ. -knew, ಭೂ. ಕೃ. -known) ಮೊದಲೇ ತಿಳಿ(ದಿರು) ; ಮುನ್ ತಿಳಿ ; ಭವಿಷ್ಯ ತಿಳಿದಿರು. **Foreknówledge** (ನಾ.) ಮುನ್‌ಅರಿವು. **Fóreland** (ನಾ.) ಭೂಶಿರ ; ಚಾಚು ಭೂಮಿ ; (ಯಾವುದಾದರೂ ಒಂದರ ಎದುರಿಗಿರುವ) ಮುನ್ನೆಲ, ಎದುರು ಭೂಮಿ. **Fóreleg** (ನಾ.) ಮೃಗದ ಮುಂಗಾಲು. **Fórelock**[1] (ನಾ.) ಮುಂದಲೆಯಮೇಲಿನ ಜುಟ್ಟು : ಮುಂಜುಟ್ಟು ; ಮುಂಗುರುಳು (Take time, occasion, by the f. ಸಿಕ್ಕಿದ ಸಮಯವನ್ನು ಬಿಡದೆ ಹಿಡಿದುಕೊ). **Fórelock**[2] (ನಾ., ಕ್ರಿ. ಸಕ.) (ಕಬ್ಬಿಣದ) ಬೆಣೆಯನ್ನು ಭದ್ರಪಡಿಸುವುದಕ್ಕಾಗಿ ಅದರ ಕೊನೆಯಲ್ಲಿಯ ಕಂಡಿಗೆ ಹೊಡೆಯುವ (ಕಬ್ಬಿಣದ ಅಥವಾ ಮರದ) ಬೆಣೆ : ಕಡಾಣಿ. (ಕ್ರಿ.) ಕಡಾಣಿ ಹಾಕು. **Fóreman** (ನಾ.) ನ್ಯಾಯಸ್ಥಾನದಲ್ಲಿ ನ್ಯಾಯದರ್ಶಿಗಳ ಅಧ್ಯಕ್ಷ, ಮುಖ್ಯಸ್ಥ. (ಉಳಿದ ಕೆಲಸಗಾರರ ಮೇಲ್ವಿಚಾರಣಾ ಕರ್ತನಾದ) ಮುಖ್ಯ ಕಾರೇಗಾರ (Working f. ತಾನೂ ಕೆಲಸಮಾಡುತ್ತ ಉಳಿದವರ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳುತ್ತಿರುವವನು) ; ಮೇಲ್ವಿಚಾರಕ. **Fóremast** (ನಾ.) ಹಡಗಿನ ಮುಂಭಾಗದಲ್ಲಿರುವ ಕೆಳ ಕೂವೆಯ ಕಂಬ : ಮುನ್‌ಕೂವೆ. **Fóremost** (ಗು., ಕ್ರಿ. ವಿ., ತಮ ರೂಪ) ಅತ್ಯಂತ ಮುಂದಿರುವ ; ಮುಂಭಾಗದ ; ಅಗ್ರ (Head f. ತಲೆ ಮುಂದಾಗಿ). ಮುಖ್ಯ ; ಅತ್ಯುತ್ತಮ ; ಅಗ್ರಗಣ್ಯ ; ಪ್ರಮುಖ ; ಪ್ರಧಾನ ; ಅತ್ಯಂತ ಪ್ರಸಿದ್ಧ. (ಕ್ರಿ. ವಿ.) ಸ್ಥಾನದಲ್ಲಿ ಅತ್ಯಂತ ಮುಂದೆ ; ಅಗ್ರಸ್ಥಾನದಲ್ಲಿ (ಸಾ., First & f. ಮೊತ್ತಮೊದಲು). **Fórenoon** (ನಾ.) ಮಧ್ಯಾಹ್ನಕ್ಕೆ ಮೊದಲಿನ ಹಗಲು : ಪೂರ್ವಾಹ್ನ ; ಬೆಳಗ್ಗೆ ; ಪ್ರಾತಃಕಾಲ. **Foreordaín** (ಕ್ರಿ. ಸಕ.) ಮೊದಲೇ ನಿಯತ ಮಾಡು, ಗೊತ್ತುಮಾಡು ; ಪೂರ್ವನಿಶ್ಚಯ ಮಾಡು ; ಮೊದಲೇ ವಿಧಿಸಿರು. **Foreordinátion** (ನಾ.) ; **Fóreplane** (ನಾ.) [ಮರವನ್ನು (ಗರಗಸದಿಂದ) ಕೊಯ್ದುಮೇಲೆ, ಅಥವಾ (ಬಾಚಿಯಿಂದ) ಕೆತ್ತಿದಮೇಲೆ ನಯಮಾಡಲು ಉಪಯೋಗಿಸುವ] ಮೊದಲ ತೋಬಡ, — ಹತ್ತರಿ. **Fore-reách** (ಕ್ರಿ.) (ನಾವೆ) (ಒಂದನ್ನು) ದಾಟಿ ಹೋಗು, ಮುಂದುವರಿ (ರೂಪ. ಸಹ). **Fore-rún** (ಕ್ರಿ. ಸಕ. ; ಭೂತ. -ran, ಭೂ. ಕೃ. -run) ಅಗ್ರಗಾಮಿಯಾಗು(ಗಿರು) ; ಮುನ್‌ಸೂಚನೆ ಕೊಡು. **Forerúnner** (ನಾ.) ಮುಂದೆ ಓಡುತ್ತಹೋಗುವವನು (ಮು., ಒಬ್ಬ ದೊಡ್ಡ ಮನುಷ್ಯನ ಆಗಮನವನ್ನು ಸೂಚಿಸಿ ದಾರಿ ಬಿಡಿಸುವುದಕ್ಕಾಗಿ ಮುಂದೆ ಹೋಗಲು ನಿಯಮಿತನಾದವನು) : ಅಗ್ರಗಾಮಿ ; ಮಾರ್ಗದರ್ಶಿ (ರೂಪ. ಸಹ). ಹಿಂದಿನವನು ; ಪೂರ್ವಿಕ. ಮುಂದೆ ಬರುವುದನ್ನು ಸೂಚಿಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವದು : ಮುನ್‌ಸೂಚಕ ; ಭವಿಷ್ಯ ಸೂಚಕ. **Fóresail** (ನಾ.) (ಹಡಗಿನ) ಮುನ್‌ಕೂವೆಯಮೇಲಿನ ಮುಖ್ಯ ಪಟ : ಮೊಗ ಪಟ ; ಮುಂಪಟ. **Foreseé** (ಕ್ರಿ. ಸಕ. ; ಭೂತ. -saw, ಭೂ. ಕೃ. -seen) ಮೊದಲೇ ನೋಡು ; ಮುಂಗಾಣು ; ಮುನ್ನರಿತಿರು ; ಮುನ್ ತಿಳಿ ; ಪೂರ್ವಭಾವಿಯಾಗಿ ತಿಳಿದಿರು. **Foreseeíng** (ನಾ.) ಮುನ್ನರಿಯುವುದು. **Foreseeíngly** (ಕ್ರಿ. ವಿ.); **Foreshádow** (ಕ್ರಿ. ಸಕ.) ಮುನ್ ಬಿಂಬಿಸು ; ಮುನ್ ಛಾಯೆಯಾಗಿರು ; ಛಾಯೆಗಾಣು —ಗಾಣಿಸು ; ಮುನ್‌ಸೂಚನೆಯಾಗಿರು ; ಮುನ್‌ಚಿತ್ರಿಸು. **Fóreshore** (ನಾ.) ಸಮುದ್ರದ ಏರುಮಟ್ಟಕ್ಕೂ ಇಳಿಮಟ್ಟಕ್ಕೂ, ಅಥವಾ ನೀರಿನ ಮಟ್ಟಕ್ಕೂ ಆರಂಬದ ಜಮೀನುಗಳ ಅಥವಾ ಕಟ್ಟಡಗಳ ನೆಲಮಟ್ಟಕ್ಕೂ ಮಧ್ಯೇ ಇರುವ, ಕರೆಯ ಪ್ರದೇಶ : ಮುಂಗರೆ. **Foreshórten** (ಕ್ರಿ. ಸಕ.) (ದೃಷ್ಟಿಭಾವನೆಗೆ ಅನುಸಾರವಾಗಿ, ವಸ್ತುವನ್ನು) ಚಿಕ್ಕದಾಗಿ ತೋರಿಸು, ಚಿತ್ರಿಸು. **Foreshów** (ಕ್ರಿ. ಸಕ. ; ಭೂ. ಕೃ. -shown) ಮುನ್ ತೋರು, ಮುಂದುಗಾಣಿಸು ; ಮೊದಲೇ ತಿಳಿಸು, — ಸೂಚಿಸು ; ಮುನ್‌ಸೂಚಿಸು ; ಮುನ್‌ಚಿತ್ರಿಸು ; ಮುನ್‌ಸೂಚನೆ ಕೊಡು, ತೋರು. **Fóresight** (ನಾ.) ಮುನ್ನರಿವು ; ಭವಿಷ್ಯತ್ ಜ್ಞಾನ ; ಮುಂಗಾಣ್ಕೆ ; ಮುಂದಾಲೋಚನೆ ; ದೂರದೃಷ್ಟಿ. ಬಂದೂಕಿನ ಮುನ್‌ದರ್ಶನಿ, ಮುಂಗಾಣಿ. **Fóreskin** (ನಾ.) (ಶಿಶ್ನದ) ಮುಂದೊವಲು. **Forestáll** (ಕ್ರಿ. ಸಕ.) (ಚರಿತ್ರೆ) (ಬೆಲೆಯೇರುವುದರಿಂದ ಲಾಭಪಡೆಯಲು ಸರಕನ್ನು) ಮೊದಲೇ ಕೊಂಡುಹಾಕು. ಕೆಲಸವನ್ನು ಮೊದಲೇ ನಡಸಿಬಿಟ್ಟಿರು; ಮೊದಲೇ ಅರಿತು, ಮಾಡಿ, (ಒಬ್ಬನ ಪ್ರಯತ್ನವನ್ನು) ಭಗ್ನಗೊಳಿಸು, ಸಾಗದಂತೆ ಮಾಡು. ಮೊದಲೇ ತಿಳಿದಿರು ; ಸಿದ್ಧವಾಗಿರು. **Fórestay** (ನಾ.) ಮುಂಕೂವೆಯ ತಲೆಯಿಂದ ಹಡಗಿನ ಮೈಗೆ ಬಿಗಿದ ಹೊರಜಿ : ಮುನ್‌ಹೊರಜಿ ; ಇದರ ಮೇಲೆ ಹಾರಿಸಿದ ಬಾವುಟ. **Fóretaste** (ನಾ.), **Foretáste** (ಕ್ರಿ. ಸಕ.) (ಸುಖ, ದುಃಖ, ಮೊ. ಗಳ) ಮುನ್‌ರುಚಿ, ಮುನ್‌ಅನುಭೋಗ, ಪೂರ್ವಾನುಭವ ; ಮುನ್ನರಿವು ; ಮುನ್‌ಸೂಚನೆ. (ಕ್ರಿ.) ಮೊದಲೇ ರುಚಿನೋಡು, ಅನುಭವಿಸು. **Foretéll** (ಕ್ರಿ. ಸಕ. ; ಭೂತ., ಭೂ. ಕೃ. - told) (ಮುಂದಾಗುವುದನ್ನು) ಮೊದಲೇ ಹೇಳು ; ಭವಿಷ್ಯ ನುಡಿ ; ಕಣಿ ಹೇಳು ; ಮುನ್‌ಸೂಚನೆ ಕೊಡು ; ಮುನ್‌ಸೂಚಕನಾಗಿರು. **Fórethought** (ನಾ.) ಮುಂದಾಲೋಚನೆ ; ದೂರಾಲೋಚನೆ ; ಮುನ್ನೆಣಿಕೆ ; ದೂರ ದೃಷ್ಟಿ ; ಪೂರ್ವ ಯೋಚನೆ ; ಪೂರ್ವೋದ್ದೇಶ ; ಎಚ್ಚರಿಕೆ; ಮುನ್ನೆಚ್ಚರಿಕೆ. **Fóretime** (ನಾ.) ಹಿಂದಿನ, ಗತ, ಪೂರ್ವ, — ಕಾಲ ; ಹಳೆಗಾಲ. **Fóretoken** (ನಾ.), **Foretóken** (ಕ್ರಿ. ಸಕ.) ಮುಂದೆ ಬರುವುದರ ಸೂಚನೆ ; ಮುನ್‌ಸೂಚನೆ ; ಪೂರ್ವ ಚಿಹ್ನೆ, ಲಕ್ಷಣ. (ಕ್ರಿ.) ಮುನ್‌ಸೂಚಿಸು ; ಪೂರ್ವಸೂಚನೆ ಕೊಡು ; ಮುಂದೋರು. **Fóretop** (ನಾ.) ಮುನ್‌ಕೂವೆಯ ನೆತ್ತಿ. **Fóretype** (ನಾ.) ಮುಂದೆ ಬರುವುದರ ಆದರ್ಶ, ಮಾದರಿ : ಮುಮ್ಮಾದರಿ. **Forewárn** (ಕ್ರಿ. ಸಕ.) ಮೊದಲೇ ಎಚ್ಚರಿಕೆ ಕೊಡು, ಎಚ್ಚರಿಸು ; ಮುನ್ನೆಚ್ಚರಿಸು [ಮು., Forewarned is forearmed (ಎಂಬಲ್ಲಿ) ಮುನ್‌ಎಚ್ಚರಿಕೆಯಿದ್ದಲ್ಲಿ ಮುನ್‌ಸಜ್ಜಿತನಾದಂತೆ]. **Fórewoman** (ನಾ.) ನ್ಯಾಯಸ್ಥಾನದಲ್ಲಿ ನ್ಯಾಯದರ್ಶಿನಿಯರ ಅಧ್ಯಕ್ಷಿಣಿ. (ಉಳಿದ ಹೆಣ್ಣಾಳುಗಳ ಮೇಲ್ವಿಚಾರಣೆ ನೋಡಿಕೊಳ್ಳುವ) ಮುಖ್ಯ ಕೆಲಸಗಾತಿ. **Fóreword** (ನಾ.) (ಸಾ., ಗ್ರಂಥಕರ್ತನದಲ್ಲದೆ ಇತರರ) ಮುನ್ನುಡಿ. **Fóreyard** (ನಾ.) ಮುಂಕೂವೆಯ ಅಡಿಯಲ್ಲಿಯ ಅಡ್ಡತೊಲೆ.

Fóreign ಫಾರೆ(ರಿ)ನ್ (ಗು.) ಇತರ; ಅನ್ಯ; ಪರಕೀಯ; ಹೆರ; ಹೊರ ; ಪರ ; ಹೊರಗಿನ (*From, to* ಉಪ. ದೊಡನೆ). ಇತರ ವ್ಯಕ್ತಿಗಳಿಗೆ ಅಥವಾ ವಸ್ತುಗಳಿಗೆ ಸೇರಿದ, ಸಂಬಂಧಪಟ್ಟ. ಅಸಂಗತ ; ಸಂಬಂಧವಿಲ್ಲದ ; ವಿಜಾತೀಯ ; ಅನುಚಿತ ; ಅಪ್ರಕೃತ ; ಅಪ್ರಸ್ತುತ (*To* ಉಪ. ದೊಡನೆ). ಹೊರಗಿನಿಂದ ತಂದು ಸೇರಿಸಿದ, ಬಂದು ಸೇರಿದ ; ಬಾಹ್ಯ [F. body or substance (ಮು., ಅಂಗಾಂಶಗಳಲ್ಲಿ) ಹೊರ ವಸ್ತು, ಬಾಹ್ಯ ಪದಾರ್ಥ]. ಹೊರ ನಾಡಿನ ; ಪರ ದೇಶದ ; ವಿದೇಶೀಯ ; ಅನ್ಯದೇಶ್ಯ ; ಸ್ವದೇಶಿಯಲ್ಲದ ; ಬೇರೆ ಸಮಾಜ, ಪ್ರಾಂತ, ಮೊ. ಗಳಿಂದ ಬಂದ. F. parts ಪರ ದೇಶಗಳು. F. Office ಪರ ರಾಜ್ಯಗಳಿಗೆ ಸಂಬಂಧಪಟ್ಟ ವಿಚಾರ ನಡಸುವ ಕಚೇರಿ : ಪರರಾಜ್ಯ ಕಚೇರಿ. F. letter-paper (ಅಂಚೆವೆಚ್ಚ ಕಡಮೆಮಾಡಿಕೊಳ್ಳಲು ಉಪಯೋಗಿಸುವ) ಹೊರ ಅಂಚೆಯ ತೆಳುಕಾಗದ. F. Railway ಬೇರೆ ಸಂಸ್ಥೆಗೆ ಸೇರಿದ ರೈಲುಮಾರ್ಗ. **Fóreigner** (ನಾ.) ಹೊರ ನಾಡಿಗ ; ಪರ ದೇಶದವನು ; ವಿದೇಶಿ ; ಪರ ಭಾಷೆಯವನು ; ಅನ್ಯ ಭಾಷಿ. ಪರ ದೇಶದ ಹಡಗು ; ಪರ ದೇಶದಿಂದ ತರಿಸಿದ ಪ್ರಾಣಿ ; ಪರದೇಶದ್ದು. **Fóreignism** (ನಾ.) ಪರ ದೇಶದ್ದರ ಅನುಕರಣೆ ; ಅನ್ಯದೇಶೀಯತೆ ; ಪರ ಭಾಷಾ ಪ್ರಯೋಗ. **Fóreignize** (ಕ್ರಿ.) ಅನ್ಯದೇಶೀಯ ಮಾಡು, — ಆಗು.

Fórel, Fórrel ಫಾರೆಲ್ (ನಾ.) (ಲೆಕ್ಕಪುಸ್ತಕಗಳ ರಕ್ಷಾವರಣವಾಗಿ ಉಪಯೋಗಿಸುವ) ಒಂದು ತೆರದ ಚರ್ಮಕಾಗದ.

Forénsic ಫರೆನ್ಸಿಕ್ (ಗು.) ನ್ಯಾಯಸ್ಥಾನದ ; ನ್ಯಾಯ ವ್ಯವಹಾರದ ; — ಕ್ಕೆ ಸಂಬಂಧಪಟ್ಟ (F. medicine ವೈದ್ಯ ನ್ಯಾಯಶಾಸ್ತ್ರ). ಕೇವಲ ವಾದಪ್ರಯುಕ್ತವಾದ ; ತಾರ್ಕಿಕ ; ವಾದಶೀಲ (F. eloquence). **Forénsically** (ಕ್ರಿ. ವಿ.)

Fórest ಫಾರೆಸ್ಟ್ (ನಾ., ಕ್ರಿ. ಸಕ.) ಕಾಡು ; ಅಡವಿ ; ಅರಣ್ಯ ; ವನ ; ಹಳುವು (ಗ್ರಾಂ.) (ರೂಪ. A. f. of masts). ಹಿಂದೆ ಕಾಡಾಗಿದ್ದು ಈಗ ಊರಾಗಿರುವ ಸ್ಥಳ (ಹೆಸರುಗಳಲ್ಲಿ : ಉದಾ., Sherwood F.; ತಲಕಾಡು). (ನ್ಯಾ. ಶಾ.) (ಬೇಟೆಯಾಡುವುದಕ್ಕಾಗಿ ಬಿಟ್ಟಿರುವ, ಸಾ., ದೊರೆಯ ಸ್ವಾಮ್ಯವಾದ) ಆವರಣ ರಹಿತ ಕಾಡುಪ್ರದೇಶ : ಬೇಟೆಯ ಕಾಡು. (ಕ್ರಿ.) ಮರಗಳನ್ನು ಬೆಳಸು ; ಕಾಡು ಬೆಳಸು, ಮಾಡು. **F.-tree** ಅರಣ್ಯಕ್ಕೆ ತಕ್ಕ ದೊಡ್ಡ ಬೆಳವಣಿಗೆಯ ಮರ : ಕಾಡು ಮರ. **Fórester** (ನಾ.) ಅರಣ್ಯಾಧಿಕಾರಿ ; ವನಾಧಿಕಾರಿ ; ಚೌಬೀನೆಗಾಗಿ ಮರಗಳನ್ನು ಬೆಳಸುವ ಉದ್ಯೋಗವುಳ್ಳ ಅಧಿಕಾರಿ. ಅರಣ್ಯವಾಸಿ ; ಕಾಡು ನಿವಾಸಿ. ಅಡವಿಯ ಪಕ್ಷಿ ಅಥವಾ ಮೃಗ. ಕೆಲವು ಜಾತಿಯ ಚಿಟ್ಟೆ. **Fórestry** (ನಾ.) ಕಾಡು ಪ್ರದೇಶ ; ಮರಗಾಡುಗಳು. ಅರಣ್ಯ ಶಾಸ್ತ್ರ, ಕಲೆ.

Fórfars ಫಾರ್‌ಫ(ಫಾ)ರ್ಸ್ (ನಾ.) ತೊಳೆಯದ ನಾರಿನಿಂದ ಮಾಡಿದ, ನೆಯ್ದ, — ಒರಟು ಬಟ್ಟೆ (ಸ್ಕಾಟ್ಲೆಂಡಿನಲ್ಲಿಯ Forfar ಎಂಬ ಸ್ಥಳದ ಹೆಸರಿನಿಂದ)

Fórfeit ಫಾರ್‌ಫಿಟ್ (ನಾ., ಗು., ಕ್ರಿ. ಸಕ.) (ತಪ್ಪಿನಿಂದ ಅಥವಾ ತಪ್ಪಿತದಿಂದ) ದಂಡ ತೆತ್ತ (ವಸ್ತು) [His life was (the) f. ಅವನ ಪ್ರಾಣ (ಅದಕ್ಕೆ) ದಂಡ ; ಅವನಿಗೆ ಪ್ರಾಣದಂಡನೆಯಾಯಿತು. His f. life ಮರಣದಂಡನೆಗೆ ಗುರಿಯಾದ ಅವನ ಜೀವ]. (ಒಪ್ಪಂದ ತಪ್ಪಿದುದಕ್ಕೆ ಅಥವಾ ಅಲಕ್ಷ್ಯಮಾಡಿದುದಕ್ಕೆ ತೆರಬೇಕಾದ) ದಂಡ, ಜುಲ್ಮಾನೆ ; ಮುಟ್ಟುಗೋಲು. (ವಿಹಾರ ಸಂಘ, ಮೊ. ಗಳಲ್ಲಿ ಆಟವಾಡುವಾಗ ನಿಯಮಗಳನ್ನು ಮುರಿದುದಕ್ಕಾಗಿ ತೆರಬೇಕಾದ) ದಂಡ. (Play forfeits ಅಲ್ಪ ದಂಡ ತೆರಬೇಕಾಗುವ ಒಂದು ತೆರದ ಆಟ ಆಡು); ('ಫಾರ್‌ಫಿಟ್ಸ್' ಆಟದಲ್ಲಿ ಆಟಗಾರನು) ಅಡವಾಗಿ ಒಪ್ಪಿಸಿದ ಪದಾರ್ಥ (ಇದನ್ನು ಹಿಂದಕ್ಕೆ ಪಡೆಯಲು ದಂಡರೂಪವಾಗಿ ಯಾವುದಾದರೂ ನಗೆಗೀಡಾದ ಕಾರ್ಯ ಮಾಡಬೇಕು). (ಕ್ರಿ.) ಹಕ್ಕು ಕಳೆದುಕೊ ; (ಅಪರಾಧ, ಅಶ್ರದ್ಧೆ, ಮೊ. ಕ್ಕೆ) ದಂಡ ತೆರು. **Fórfeitable** (ಗು.) ; **Fórfeiture** ಫಾರ್‌ಫಿಟ್ಯು(ಚ)ರ್ (ನಾ.) (ತಪ್ಪಿತ, ಅಪರಾಧ, ಒಪ್ಪಂದ ನಡಸದೆಹೋಗುವುದು — ಇವಕ್ಕಾಗಿ ಆಸ್ತಿ, ಸರಕು, ಅಧಿಕಾರ, ಹಕ್ಕು, ಮೊ. ನ್ನು) ಕಳೆದುಕೊಳ್ಳುವುದು, ಕಳೆದುಕೊಳ್ಳುವ ಸಂಭವ ; ಮುಟ್ಟುಗೋಲು ; ದಂಡ (ತೆತ್ತದ್ದು)

Forfénd ಫ(ಫಾ)ರ್‌ಫೆಂಡ್, **Forefénd** ಫೋರ್‌ಫೆಂಡ್ (ಕ್ರಿ. ಸಕ.) ನಿವಾರಿಸು ; ತಪ್ಪಿಸು [ಸಾ., God f. ! (ದೇವರು ನಿವಾರಣೆಮಾಡಲಿ !) ಎಂಬಲ್ಲಿ]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Fórficate ಫಾರ್‌ಫ್ಲಿಕೆಟ್ (ಗು.) (ಪ್ರಾ. ವಿ.) ಕತ್ತರಿಯಾಕಾರದ.

Forgáther ಫರ್‌ಗ್ಯಾದರ್ (ಕ್ರಿ. ಅಕ.) ಒಟ್ಟು ಸೇರು ; ಸಭೆ ಸೇರು ; ಒಟ್ಟುಗೂಡು ; (ಅಕಸ್ಮಾತ್ತಾಗಿ) ಸಂಧಿಸು ; ಜೊತೆ ಸೇರು.

Forgáve. Forgive ಧಾತುವಿನ ಭೂತ.

Forge[1] ಫೋರ್ಜ್ (ನಾ., ಕ್ರಿ.) ಕಮ್ಮಾರ ಸಾಲೆ ; ತಿದಿಯಿಂದ ಕೂಡಿದ ಕಮ್ಮಾರನ ಒಲೆ ; ಕುಲುಮೆ ; ಲೋಹವನ್ನು ಕರಗಿಸಲು ಅಥವಾ ಶುದ್ಧಿಮಾಡಲು ಉಪಯೋಗಿಸುವ ಒಲೆ ಅಥವಾ ಕುಲುಮೆ ; ಕುಲುಮೆಯ ಕಾರಖಾನೆ. (ಕ್ರಿ.) (ಬೆಂಕಿಯಲ್ಲಿ ಕಾಯಿಸಿ, ಬಡಿದು) ಆಕಾರ ಕೊಡು, ತಯಾರಿಸು, ರಚನೆ ಮಾಡು. (ಕಥೆ, ಸುಳ್ಳು, ಮೊ. ನ್ನು) ಕಲ್ಪನೆಮಾಡು, ಹೊಸೆ. (ದಸ್ತ್ರವಜು, ಸಹಿ, ಮೊ. ನ್ನು) ಸೃಷ್ಟನೆ ಮಾಡು ; ಸುಳ್ಳು ಪತ್ರ ಸೃಷ್ಟಿಸು ; ಕಳ್ಳ ರುಜು ಮಾಡು. **Fórger** (ನಾ.) ; **Fórgeable** — ಜಬ್‌ಲ್ (ಗು.) ; **Fórgery** — ಜೆರಿ (ನಾ.) ದಸ್ತೈವಜನ್ನು ಸೃಷ್ಟನೆ ಮಾಡುವುದು ; ಅಸಲಿನಂತೆಯೇ ತೋರುವ ಹಾಗೆ ಮೋಸಕ್ಕಾಗಿ ತಯಾರಿಸುವುದು ; ಸುಳ್ಳು ಪತ್ರ (ತಯಾರಿಸುವುದು) ; ಕಳ್ಳ ರುಜು (ಹಾಕುವುದು). ಖೋಟಾ ವಸ್ತು ; ಸೃಷ್ಟನೆ (ಮು., ದಸ್ತೈವಜು ಅಥವಾ ರುಜು)

Forge[2] ಫೋರ್ಜ್ (ಕ್ರಿ. ಅಕ.) ಕ್ರಮೇಣ ಅಥವಾ ಕಷ್ಟಪಟ್ಟು ದಾರಿ ಮಾಡಿಕೊಂಡು ಹೋಗು, ಮುಂದುವರಿ ; ನುಗ್ಗಿ ನಡೆ ; ನುಗ್ಗು (ಮು., F. ahead ಎಂಬಲ್ಲಿ)

Forgét ಫರ್‌ಗೆಟ್ [ಕ್ರಿ. ; ಭೂತ. -got, ಭೂ. ಕೃ. -gotten, (ಕಾವ್ಯ) -got] ಮರೆ ; ಮರೆತುಬಿಡು ; — ಹೋಗು ; ನೆನಪಿಲ್ಲದೆ ಹೋಗು ; (ಮಾಡಲು) ನಿರ್ಲಕ್ಷಿಸು, ಉಪೇಕ್ಷಿಸು, ಕಡೆಗಣಿಸು. ನೆನೆಯದಿರು [ಮು., Forgive & f. (ಕ್ಷಮಿಸಿ ತಪ್ಪನ್ನು ಮರೆತುಬಿಡು) ಎಂಬಲ್ಲಿ]. F. oneself ತನ್ನನ್ನು ತಾನೇ ಮರೆತುಬಿಡು ; ತನ್ನ ಹಿತವನ್ನೇ ನಿರ್ಲಕ್ಷಿಸು ; ಅಯೋಗ್ಯವಾಗಿ, ಅನುಚಿತವಾಗಿ, ವರ್ತಿಸು. ಪ್ರಜ್ಞೆ ತಪ್ಪು ; ಮೈ ಮರೆ. **F.-me-not** ಒಂದು ಜಾತಿಯ ಹೂವಿನ ಗಿಡ (ಮು. ಹಳದಿಯ ಕಣ್ಣುಳ್ಳ ನೀಲ ಬಣ್ಣದ ಒಂದು ಸಣ್ಣ ಹೂವು ಬಿಡುವದು). F.-m.-n. blue ಒಂದು ತೆರದ ನೀಲ ಬಣ್ಣ. **Forgétful** (ಗು.) ಮರೆತುಹೋಗುವ ; ಮರೆಯುವ ಸ್ವಭಾವದ. **Forgétfully** (ಕ್ರಿ. ವಿ.) ; **Forgétfulness** (ನಾ.) ; **Forgéttable** (ಗು.)

Forgíve ಫರ್‌ಗಿವ್ (ಕ್ರಿ. ಸಕ. ; ಭೂತ. -gave, ಭೂ. ಕೃ. -given) (ಅಪರಾಧವನ್ನು, ಅಪರಾಧಿಯನ್ನು) ಕ್ಷಮಿಸು, ಮನ್ನಿಸು, 'ಮಾಫು' ಮಾಡು ; ತಪ್ಪು ಮರೆ. (ಸಾಲ, ಮೊ. ಗಳಿಂದ) ಬಿಡುಗಡೆ ಮಾಡು, ವಿಮೋಚನೆ ಮಾಡು, ಬಿಟ್ಟುಬಿಡು. **Forgívable** — ಅಬ್‌ಲ್ (ಗು.) ; **Forgíveness** (ನಾ.) ; **Forgíving** (ಗು.) ; **Forgívingly** (ಕ್ರಿ. ವಿ.) ; **Forgívingness** (ನಾ.)

Forgó ಫರ್‌ಗೋ, **Foregó** ಫೋರ್‌ಗೋ (ಕ್ರಿ. ಸಕ. ; ಭೂತ. -went, ಭೂ. ಕೃ. -gone) ಬಳಸದಿರು ; ಉಪಯೋಗಿಸದಿರು ; ಬಿಟ್ಟುಬಿಡು ; ವರ್ಜಿಸು ; ತ್ಯಜಿಸು ; ತೊರೆ.

Fork ಫಾರ್ಕ್ (ನಾ., ಕ್ರಿ.) (ಕೊತ್ತುವುದಕ್ಕೆ, ಎತ್ತುವುದಕ್ಕೆ, ಎತ್ತಿಕೊಂಡು ಹೋಗುವುದಕ್ಕೆ, ಎತ್ತಿ ಎಸೆಯುವುದಕ್ಕೆ, — ಭೂವ್ಯವಸಾಯದಲ್ಲಿ ಉಪಯೋಗಿಸುವ) ಕವಲುಗೋಲು, ಕವಲು ಗುದ್ದಲಿ. (ಮೇಜಿನ ಊಟ ಮಾಡುವಾಗ ಅಥವಾ ಅಡಿಗೆಮಾಡುವಾಗ ಉಪಯೋಗಿಸುವ) ಮುಳ್ಳು ಚಮಚ ; (ಬಡಿದರೆ ಒಂದು ನಿರ್ದಿಷ್ಟ ನಾದ ಕೊಡುವ, ಉಕ್ಕಿನ) ನಾದ ದ್ವಿಕಾಂಡ (= Tuning- f.) ; (ದ್ರಾಕ್ಷಿಚಪ್ಪರ, ಮೊ. ಕ್ಕೆ ಆಸರೆಯಾಗಿ ನೆಡುವ) ಕವಲುಗಡ್ಡಿ, ಕವೆ, ಕವೆಗೋಲು, ಕವೆ ಮರ. ಕವಲೊಡೆಯುವುದು ; ಕವಲೊಡೆತ ; ಎರಡು ಶಾಖೆಗಳಾಗಿ ಒಡೆಯುವುದು (ಉದಾ., ಮರದ ಕೊಂಬೆ, ರಸ್ತೆ, ಮನುಷ್ಯನ ಕಾಲುಗಳು). ಕವಲು ಮಿಂಚು. (ಕ್ರಿ.) ಕವಲು, ಶಾಖೆ, ಕೊಂಬೆ, — ಒಡೆ, ಆಗು. ಕವಲುಗೋಲಿನಿಂದ ಕೊತ್ತು, ಎತ್ತು, ಎತ್ತಿಕೊಂಡುಹೋಗು, ಎತ್ತಿ ಹಾಕು. (ಅಸಂ) F. out or over (ಒಬ್ಬನಿಗೆ) ಒಪ್ಪಿಸಿಬಿಡು, ಕೊಟ್ಟುಬಿಡು, ಪಾವತಿ ಮಾಡು. **Forked** ಫಾರ್ಕ್ಟ್ (ಗು.) ಕವಲೊಡೆದಿರುವ ; ಕವಲುಗಳುಳ್ಳ ; ಕವಲು ಕೊನೆಯುಳ್ಳ ; ರೆಂಬೆಯೊಡೆದಿರುವ ; ಅಗಲುತ್ತ ಹೋಗುವ ; ಸೀಳು ಬಿಟ್ಟಿರುವ (Three - f. ತ್ರಿಶೂಲಾಕಾರದ) ; ಎರಡು ಕಾಲಿನ. **Fórky** ಫಾರ್ಕಿ (ಗು.) ಕವಲುಗೋಲಿನಾಕಾರದ ; ಕವಲುಳ್ಳ.

Forlórn ಫಾರ್‌ಲಾರ್ನ್ (ಗು.) ನಿರಾಶೆಯ ; ಹತಾಶ ; ತೊರೆದುಬಿಟ್ಟ ; ಕೈ ಬಿಟ್ಟ ; ಬಿಟ್ಟುಬಿಟ್ಟ. (ಕಾವ್ಯ) ಇಲ್ಲದ ; ಶೂನ್ಯ ; ರಹಿತ. ದೈನ್ಯ ಸ್ಥಿತಿಯಲ್ಲಿರುವ ; ಅತಿ ದೀನ ; ದರಿದ್ರ ; ನಿರ್ಗತಿಕ ; ಅನಾಥ ; ದಿಕ್ಕಿಲ್ಲದ. Forlorn hope ಕೋಟೆಯನ್ನು ದಾಳಿಯಿಡಲು ಕಳುಹಿಸಿದ ಸೈನ್ಯ : ದಾಳಿ ದಳ, ಪಡೆ. ಜೀವದ ಹಂಗು ತೊರೆದ, ಅಪಾಯ ಲಕ್ಷಿಸದ, — ಉದ್ಯಮ. ಕೊನೆಯ ನಚ್ಚು.

Form ಫಾರ್ಮ್ (ನಾ.) ಆಕಾರ ; ಆಕೃತಿ ; ರೂಪ ; ಮೂರ್ತಿ (Face & f. ಮುಖವೂ ಆಕಾರವೂ. Saw a f. before me ನನ್ನ ಮುಂದೆ ಒಂದು ಆಕೃತಿಯನ್ನು ಕಂಡೆನು). ತೆರ ; ಬಗೆ ; ವಿಧ ; ರೀತಿ ; ಸ್ವರೂಪ ; ನಮೂನೆ ; ಮಾದರಿ ; ಮಾಟ ; ಅಚ್ಚು ; ತಃಖ್ತೆ. (ವಿದ್ಯಾ ಶಾಲೆಯಲ್ಲಿ) ತರಗತಿ, ವರ್ಗ. (ಜೀ. ವಿ.) ಜಾತಿ, ಪ್ರಭೇದ. ಅಣಿ ; ಒಪ್ಪ ; ವ್ಯವಸ್ಥೆ ; ರಚನೆ ; ಬಂಧ ; ರೂಪ (Literary f.). ಸಂಪ್ರದಾಯ ; ಪದ್ಧತಿ ; ಆಚಾರ ; ವಿಧಿ ; ವಿಹಿತ ರೀತಿ ; ಕ್ರಮ (In due f. ಸಂಪ್ರದಾಯಾನುಸಾರವಾಗಿ ; ಯಥಾ ವಿಧಿಯಾಗಿ. For f.'s sake ಕ್ರಮಾನುಸರಣೆಗಾಗಿ ; ಶಾಸ್ತ್ರಕ್ಕಾಗಿ. That is common f. ಅದು ಸಾಮಾನ್ಯವಾದದ್ದೇ, ಅತಿಶಯವೇನೂ ಇಲ್ಲ). ಔಚಿತ್ಯ ; ಮರ್ಯಾದೆ [Good, bad, f. ಉಚಿತ, ಅನುಚಿತ, (ಕಾಲ ಮರ್ಯಾದೆಗೆ) ತಕ್ಕ, ತಗದ, — ನಡತೆ]. ಗೆಲವು ; ಹುರುಪು ; ಉತ್ಸಾಹ ; ಉಲ್ಲಾಸ ; ಕಳೆ ; ದಾರ್ಢ್ಯ ; ಸೌಷ್ಠವ (In great f. ಉದ್ದಾಮ ಸ್ಥಿತಿಯಲ್ಲಿ. In, out of, f. ತಕ್ಕ ಸ್ಥಿತಿಯಲ್ಲಿರುವ, — ಇಲ್ಲದ. Lose one's f. ಸ್ಥಿತಿ ಗೆಡು ; ಸೌಷ್ಠವ ಕೆಡು). ಬೆನ್ನಿಲ್ಲದ, ಉದ್ದವಾದ, — ಕಾಲುಮಣೆ ; ಬೆಂಚು. (ಮುದ್ರಣ) ಒಟ್ಟಿಗೆ ಮುದ್ರಿಸಲು ಚೌಕಟ್ಟಿನಲ್ಲಿ ಬಂಧಿಸಿ ಅಣಿ ಮಾಡಿ ಇಟ್ಟಿರುವ ಮೊಳೆಗಳ ಜೋಡಣೆ (= Forme) ; ಅಣಿಗೆ. ಮೊಲದ ಹಕ್ಕೆ. (ವ್ಯಾ.) (ಒಂದು ಶಬ್ದವು ರಚನೆಯಲ್ಲಿ, ಉಚ್ಚಾರಣೆಯಲ್ಲಿ, ವಿಭಕ್ತಿ, ಮೊ. ಗಳಲ್ಲಿ, ಪಡೆಯುವ) ರೂಪ ; ಶಬ್ದ ರೂಪ. (ತತ್ತ್ವ ಶಾಸ್ತ್ರ) (೧) ವಸ್ತುವಿನ ನೈಜ ತತ್ತ್ವ ; ಮೂಲ ಸ್ವರೂಪ. (೨) ನೋಡತಕ್ಕವನಿಗೆ ಗ್ರಹಿಕೆಯಾಗುವ ಆಕಾರ.

Form (ಕ್ರಿ.) ಆಕಾರ ಕೊಡು ; ರೂಪು ಕೊಡು ; ರೂಪಿಸು ; ಆಕಾರಕ್ಕೆ ತರು ; ಆಕಾರ ಪಡೆ ; ಆಕೃತಿ ಹೊಂದು ; ರೂಪುಗೊಳ್ಳು ; (ಒಂದು ಆಕಾರಕ್ಕೆ, ಮಾದರಿಗೆ) ತಿದ್ದು (*After, by, from, upon* ಉಪ. ದೊಡನೆ ಸಹ). (ವ್ಯಕ್ತಿ, ಬುದ್ಧಿ, ಮೊ. ನ್ನು) ತಿದ್ದು, ತರಬಿಯತ್ತು ಮಾಡು ; ಶಿಕ್ಷಣ ಕೊಡು. ಸಂಸ್ಥೆ, ಮೊ. ವನ್ನಾಗಿ ಸೇರಿಸು, ರಚಿಸು, ರಚನೆ ಮಾಡು, ವ್ಯವಸ್ಥೆ ಮಾಡು, — ಆಗು ; ಉಂಟುಮಾಡು ; ಮಾಡು. (ಶಬ್ದವನ್ನು) ಸ್ಪಷ್ಟವಾಗಿ ಉಚ್ಚರಿಸು. (ಭಾವ, ವಿಮರ್ಶೆ) ಕಲ್ಪಿಸಿಕೊ, ಮಾಡಿಕೊ. (ಪದ್ಧತಿಯನ್ನು, ಸಂಬಂಧವನ್ನು) ಬೆಳಸು, ಅಭ್ಯಾಸ ಮಾಡು. ರಚನೆಯಲ್ಲಿ ಸೇರಿರು, ಭಾಗವಾಗಿ ಇರು. (ವ್ಯಾ.) (ವ್ಯುತ್ಪತ್ತಿ ಹಿಡಿದು, ಪ್ರತ್ಯಯ, ಮೊ. ನ್ನು ಸೇರಿಸಿ) ಪದ ರಚಿಸು ; ಶಬ್ದ ರಚನೆ ಮಾಡು. (ಸೈನ್ಯ) ವ್ಯೂಹ ರಚಿಸು ; ವ್ಯೂಹವಾಗು (F. fours, line, column ಒಬ್ಬರ ಹಿಂದೊಬ್ಬರಂತೆ ನಾಲ್ಕು ನಾಲ್ಕು ಮಂದಿ ಕೂಡಿದ ದಳವಾಗಿ, ಉದ್ದಸಾಲಾಗಿ, ಅಡ್ಡಸಾಲಾಗಿ, ವ್ಯೂಹ ರಚಿಸು, — ಆಗು)

Fórmal (ಗು.) ಹೊರ ರೂಪಿನ, — ಆಕಾರದ, — ಆಕೃತಿಯ ; ಬಾಹ್ಯ ಸ್ವರೂಪದ. ಸ್ಪಷ್ಟವೂ ನಿಷ್ಕೃಷ್ಟವೂ ಆದ. ಸಾಂಪ್ರದಾಯಿಕ ; ವಿಧಿ ವಿಹಿತ ; ಕೇವಲ ಶಾಸ್ತ್ರಾರ್ಥದ ; ಔಪಚಾರಿಕ (A f. call ಔಪಚಾರಿಕವಾದ ಭೇಟಿ). ಬಾಹ್ಯ ವಿಷಯಗಳಿಗೆ ಮಾತ್ರ ಗಮನ ಕೊಡುವ ; ಬಹಿರಾಚರಣೆಯ ; ಸಂಪ್ರದಾಯ ಬದ್ಧ. ಅತಿ ಕಟ್ಟುನಿಟ್ಟಿನ ; ಅತ್ಯಂತ ಕ್ರಮಬದ್ಧವಾದ. ಅಂಗಾಂಗ ಸಮಪ್ರಮಾಣದ, ಬಿಗುಮಾನದ. ಅತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಯಮ ನಿಷ್ಠ. (ತತ್ತ್ವಶಾಸ್ತ್ರ) ನೈಜ ತತ್ತ್ವದ; ಮೂಲ ಸ್ವರೂಪದ [F. cause (Cause ನೋಡಿ)]. (ತರ್ಕ ಶಾಸ್ತ್ರ) (ಅರ್ಥಾತ್ಮಕವಲ್ಲದೆ) ಕೇವಲ ಶಬ್ದಾತ್ಮಕವಾದ. **Fórmalism** (ನಾ.) ಅತಿ ನಿಯಮ ಬದ್ಧತೆ; ಬಾಹ್ಯ ನಿಷ್ಠೆ. **Fórmalist** (ನಾ.) ಆಚಾರಗಳು, ಮರ್ಯಾದೆ ಗಳು, ಸಂಪ್ರದಾಯಾನುಸರಣೆ, ಬಾಹ್ಯೋಪಚಾರ — ಇವಕ್ಕೆ ಕಟ್ಟು ಬಿದ್ದಿರುವವನು: ಆಚಾರ ಬದ್ಧ; ಬಾಹ್ಯ ನಿಷ್ಠ. **Formalístic** (ಗು.); **Fórmally** (ಕ್ರಿ. ವಿ.) ವಿಧಿ ವಿಹಿತವಾಗಿ; ಸ್ಪಷ್ಟವಾಗಿ ಹೇಳಿರುವಂತೆ; ಔಪಚಾರಿಕವಾಗಿ; ನಿಯಮಾನುಸರಣೆಗಾಗಿ. **Formálity** ಫಾರ್‌ಮ್ಯಾಲಿಟಿ (ನಾ.) ಶಾಸ್ತ್ರಾಚಾರ; ಶಾಸ್ತ್ರ ಕ್ರಮ; ನಿಯಮಾನುಸರಣೆ; ವಿಹಿತಾಚರಣೆ; ಔಚಿತ್ಯ; ಸಂಪ್ರದಾಯ; ಪದ್ಧತಿ; ಮರ್ಯಾದೆ; ಬಾಹ್ಯೋಪಚಾರ; ಬಾಹ್ಯಾಡಂಬರ; ಔಪ ಚಾರಿಕ ಅಥವಾ ಸಾಂಪ್ರದಾಯಿಕ ಕಾರ್ಯ; ಮರ್ಯಾದೆಗೆ ಅಥವಾ ಸಂಪ್ರದಾಯಕ್ಕೆ ಬೇಕಾದದ್ದು. ಅತಿ ನಿಷ್ಠೆ; ಮರ್ಯಾದೆಯಲ್ಲಿ ಅತಿ ಕಟ್ಟುನಿಟ್ಟು. **Fórmalize** (ಕ್ರಿ. ಸಕ.) ನಿರ್ದಿಷ್ಟ ರೂಪ ಕೊಡು; ನ್ಯಾಯವಿಹಿತ ಮಾಡು; ಔಪಚಾರಿಕ, ನಿಯಮಬದ್ಧ, — ಮಾಡು. **Formalizátion** (ನಾ.); **Fórmat** (F) ಫೊ(ಫಾ)ರ್ಮಾ, ಫಾರ್ಮ್ಯಾಟ್ (ನಾ.) ಪುಸ್ತಕದ ಆಕಾರ, ಗಾತ್ರ, ಮಾಟ. **Formátion** ಫಾ —(ನಾ.) ಮಾಡುವುದು; ರಚನೆ; ನಿರ್ಮಾಣ; ಆಗುವುದು; ಆಗುತ್ತಿರುವುದು; ಆದದ್ದು; ಘಟನೆ; (ರೂಪ.) ಮಾಟ. (ಭಾಗಗಳ) ಜೋಡಣೆ; ಕಟ್ಟಡ. (ಸೇನೆ) ವ್ಯೂಹ, ಒಡ್ಡು, ವಿನ್ಯಾಸ. (ಭೂ. ವಿ.) (ಸಮಾನ ವೈಲಕ್ಷಣ್ಯವುಳ್ಳ) ಶಿಲಾ ರಚನೆ, ಸ್ತರಗಳ ರಚನೆ. **Fórmative** — ಮಟಿವ್ (ಗು., ನಾ.) ರಚನೆಯ; ರಚಿಸುವ; ರೂಪುಗೊಳ್ಳುವ; ನಿರ್ಮಾಪಕ. ಬೆಳವಣಿಗೆಯ; ಬೆಳೆಯುವ. (ವ್ಯಾ.) (ಕೃತ್ ತದ್ಧಿತಾದಿ ಪ್ರತ್ಯಯಗಳ ವಿಷಯದಲ್ಲಿ) ಪದಗಳನ್ನು ರಚನೆಮಾಡುವ; (ನಾ.) ಪದ ಗಳನ್ನು ರಚಿಸುವ ಪ್ರತ್ಯಯ; ಹೀಗೆ ರಚಿತವಾದ ಪದ. **Forme** ಫಾರ್ಮ್ (ನಾ.) (ಮುದ್ರಣ) (Form ನೋಡಿ). **Fórmless** (ಗು.) ರೂಪವಿಲ್ಲದ; ಅಮೂರ್ತ; ನಿರಾಕಾರ. **Fórmlessly** (ಕ್ರಿ. ವಿ.); **Fórmlessness** (ನಾ.)

Fórmal, Fórmat, Forme, &c. Form ನೋಡಿ.

Fórmene. Fórmic ನೋಡಿ.

Fórmer ಫಾರ್ಮರ್ (ಗು., ಸ. ನಾ.) ಪೂರ್ವ ಕಾಲದ; ಗತ ಕಾಲದ; ಪೂರ್ವದ; ಮುನ್ನಿನ; ಹಿಂದಿನ; ಪ್ರಾಚೀನ [In f. times ಪೂರ್ವ ಕಾಲದಲ್ಲಿ. Her f. self ಅವಳು ಮೊದಲಿದ್ದಂತೆ, ಪೂರ್ವ ರೀತಿಯಲ್ಲಿ. Our f. haunts ನಾವು ಹಿಂದೆ ಓಡಾಡುತ್ತಿದ್ದ, ವಿಹರಿಸುತ್ತಿದ್ದ, ಸ್ಥಳ ಗಳು. The f. ಮೊದಲನದು; ಎರಡರಲ್ಲಿ ಮೊದಲು ಹೇಳಿದುದು (Latter ಪದಕ್ಕೆ ವಿರುದ್ಧ ಪದ)]. **Fórmerly** (ಕ್ರಿ. ವಿ.)

Fórmic ಫಾರ್ಮಿಕ್ (ಗು.) [(ರ. ವಿ.) F. acid ಇರುವೆಗಳು ಹೊರ ಸೂಸುವ ದ್ರವದಲ್ಲಿರುವ, ಬಣ್ಣವಿಲ್ಲದ, ಕಡಿತವುಂಟುಮಾಡುವ ಮತ್ತು ಗುಳ್ಳೆ ಯೆಬ್ಬಿಸುವ, ಒಂದು ಚಂಚಲ ಆಮ್ಲ: 'ಫಾರ್ಮಿಕ್' ಆಮ್ಲ]. (ವಿರ. ಪ್ರ.) ಇರುವೆಯ; ಇರುವೆಗೆ ಸಂಬಂಧಪಟ್ಟ. **Formicátion** (ನಾ.) ಮೈಮೇಲೆ ಇರುವೆ ಹರಿದಾಡಿದಂತಾಗುವುದು. **Fórmate** ಫಾರ್ಮೇಟ್ (ನಾ.) (ರ. ವಿ.) ಫಾರ್ಮಿಕ್ ಆಮ್ಲದ ಒಂದು ಲವಣ: 'ಫಾರ್ಮೇಟ್'. **Fórmene** —ಮೀನ್ (ನಾ.) ಜೌಗಿನ ('ಮಾರ್ಷ್') ಅನಿಲ; 'ಮೆತೀನ್' ಅನಿಲ. **Fórmyl** —ಮಿಲ್ (ನಾ.) ಫಾರ್ಮಿಕ್ ಆಮ್ಲದ ಊಹಿತ ಘಟಕ (CHO): 'ಫಾರ್ಮಿಲ್'.

Fórmidable ಫಾರ್ಮಿಡಬ್‌ಲ್ (ಗು.) ಭಯಂಕರ; ಭೀಕರ; ದಿಗಿಲು ಹುಟ್ಟಿಸುವ; ಎದುರಿಸಲಾಗದ; ಪೆಡಂಭೂತವಾದ; ಕಷ್ಟಸಾಧ್ಯ; ದುಸ್ಸಾಧ್ಯ; ದುರ್ದಮ; ದುರ್ಘಟ. **Fórmidableness** (ನಾ.); **Fórmidably** (ಕ್ರಿ. ವಿ.)

Fórmula ಫಾರ್ಮ್ಯುಲ (ನಾ.; ಬ. ವ. -ae —ಲೀ, -as —ಲಸ್) ಸೂತ್ರ; ತತ್ತ್ವವಾಕ್ಯ; (ಅರ್ಥ ತಿಳಿಯದೆ ಅನುಸರಿಸುವ) ನಿಯಮ, ವಿಧಿ; ಸಂಪ್ರದಾಯ; ವಿಹಿತ ಕ್ರಮ. ಔಷಧ ಸಾಮಗ್ರಿಗಳ ಪಟ್ಟಿ. ಭಿನ್ನೋದ್ದೇಶಗಳನ್ನು, ಭಿನ್ನಾಭಿಪ್ರಾಯಗಳನ್ನು, ಸರಿಹೊಂದಿಸುವ, ಸಮ್ಮತ ಸೂತ್ರ, ವಾಕ್ಯ, ತತ್ತ್ವ (Diplomatists seeking a f. ರಾಯಭಾರ ಕುಶಲಗಳು ಸರ್ವಪಕ್ಷ ಸಮ್ಮತವಾದ ತತ್ತ್ವವನ್ನು ಹುಡು ಕುತ್ತ). (ಗಣಿತ) ಬೀಜಾಂಕ ರೂಪದಲ್ಲಿರುವ ಸೂತ್ರ. (ರ. ವಿ.) ಒಂದು ಪದಾರ್ಥದ ರಚನೆಯ ಸಂಕೇತ; ಘಟನ ಸೂತ್ರ. ಸಂಕೇತಗಳ ಮತ್ತು ಅಂಕಗಳ ಮೂಲಕ ಕೆಲವು ವಿಷಯಗಳ ಕ್ರೋಢೀಕರಣ. **Fórmular** (ಗು.) ಸೂತ್ರಕ್ಕೆ ಸಂಬಂಧಿಸಿದ; ಸೂತ್ರ ರೂಪದ; ವಿಹಿತ. **Fórmulary** (ನಾ., ಗು.) (ಮು., ಅನುಷ್ಠಾನಕ್ಕೆ, ಮತ ಜ್ಞಾನಕ್ಕೆ, ಅನುಕೂಲವಾಗುವಂತೆ ರಚಿಸಿದ) ಸೂತ್ರ ಸಂಹಿತೆ, ವಿಧಿ ಗ್ರಂಥ. (ಗು.) ಸೂತ್ರಸಂಕೇತದ(ಲ್ಲಿರುವ); ಸೂತ್ರಸಂಕೇತಾನುಯಾಯಿ ಯಾದ. **Fórmularize, Fórmulize** (ಕ್ರಿ. ಸಕ.); **Formularizátion** (ನಾ.); **Formulizátion** (ನಾ.); **Fórmulate** —ಲೇಟ್ (ಕ್ರಿ. ಸಕ.) ಸೂತ್ರೀಕರಿಸು; ಸೂತ್ರರೂಪಕ್ಕೆ ತರು, ಇಳಿಸು; ನಿರ್ದಿಷ್ಟ ರೂಪದಲ್ಲಿ ಹೇಳು. **Formulátion** (ನಾ.); **Fórmulism** (ನಾ.) ಸೂತ್ರಾಚರಣೆ; ಸೂತ್ರಾವಲಂಬನೆ. **Fórmulist** (ನಾ.) ಸೂತ್ರ ಪ್ರಿಯ; ಸೂತ್ರಾಚಾರಿ. **Formulístic** (ಗು.)

Fórmyl. Formic ನೋಡಿ.

Fornicate[1] ಫಾರ್ನಿಕೇಟ್ (ಕ್ರಿ. ಅಕ.) ಅವಿವಾಹಿತ ಸ್ತ್ರೀ ಸಂಭೋಗ ಮಾಡು (ಕೆಲವು ಸಂದರ್ಭಗಳಲ್ಲಿ ಅವಿವಾಹಿತ ಪುರುಷನಿಗೆ ಮಾತ್ರ ಅನ್ವಯಿ ಸುವುದು). **Fornicátion**[1] (ನಾ.) ಅವಿವಾಹಿತರ ಸಂಭೋಗ (ಬೈಬಲ್ಲಿನಲ್ಲಿ ಇದು ವ್ಯಭಿಚಾರ ದೋಷ). (ರೂಪ., ಮು., ಬೈಬಲ್ಲಿನಲ್ಲಿ: ನಿಜವಾದ ದೇವರನ್ನು ಬಿಟ್ಟು) ವಿಗ್ರಹಾರಾಧನೆ ಮಾಡುವುದು. **Fórnicator** (ನಾ.); **Fórnicatress** (ನಾ., ಸ್ತ್ರೀ.)

Fórnicate[2]**(d)** ಫಾರ್ನಿಕೆಟ್, —ಕೇಟೆಡ್ (ಗು.) (ಕಟ್ಟಡ) ಕಮಾನಿ ನಾಕಾರದ. (ಸ. ವಿ.) ಕಮಾನಿನಂತೆ ಬಾಗಿರುವ ಅನುಬಂಧಗಳುಳ್ಳ. **Fornicátion**[2] (ನಾ.)

Forpíned ಫರ್‌ಪೈಂಡ್ (ಗು.) (ಪ್ರಾಚೀ. ಪ್ರ.) (ಹಸಿವು, ಯಾತನೆ, ಮೊ. ಗಳಿಂದ) ಕೃಶವಾದ, ಬಡವಾದ.

Fórrel = Forel.

Forsáke ಫರ್‌ಸೇಕ್ (ಕ್ರಿ. ಸಕ.; ಭೂತ. -sook —ಸುಕ್, ಭೂ. ಕೃ. -saken —ಸೇಕ್‌ನ್) ಬಿಟ್ಟುಬಿಡು; ತೊರೆ(ದುಬಿಡು); ಉಳಿ; ಕೈಬಿಡು; ವರ್ಜಿಸು; (ಪರಿ)ತ್ಯಜಿಸು.

Forsoóth ಫರ್‌ಸೂತ್ (ಕ್ರಿ. ವಿ.) (ವ್ಯಂಗ್ಯಾರ್ಥದಲ್ಲಿ) ದಿಟವಾಗಿ; ನಿಜ ವಾಗಿ; ನಿಸ್ಸಂಶಯವಾಗಿ; ಸಂದೇಹವಿಲ್ಲದೆ; ಸತ್ಯವಾಗಿ.

Forspént ಫರ್‌ಸ್ಪೆಂಟ್ (ಗು.) ಸುಸ್ತು ಬಿದ್ದ; ಸೋತುಹೋದ; ಬಳಲಿ ಹೋದ; ಸೊರಗಿಹೋದ.

Forswéar ಫರ್‌ಸ್ವೇರ್ (ಕ್ರಿ. ಸಕ., ಭೂತ. -swore, ಭೂ. ಕೃ. -sworn) ಶಪಥ ಮಾಡಿ, ಆಣೆಯಿಟ್ಟು, ಪ್ರಮಾಣ ಮಾಡಿ, ಪರಿತ್ಯಜಿಸು, ಬಿಟ್ಟುಬಿಡು [F. oneself ಸುಳ್ಳು ಪ್ರಮಾಣ ಮಾಡು; ಪ್ರಮಾಣ ಮಾಡಿ ಸುಳ್ಳು(ಸಾಕ್ಷಿ) ಹೇಳು]. (ಭೂ. ಕೃ.) ಸುಳ್ಳುಪ್ರಮಾಣ ಮಾಡಿದ.

Fort ಫೋರ್ಟ್ (ನಾ.) ಕೋಟೆ; ರಕ್ಷಣಾವರಣವುಳ್ಳ ಸ್ಥಳ (ಮು., ಒಂದು ಕಟ್ಟಡ ಅಥವಾ ಒಟ್ಟಗಿರುವ ಅನೇಕ ಸೈನಿಕ ಕಟ್ಟಡಗಳು). ವ್ಯಾಪಾರ ಕೋಠಿ (ಉ. ಅಮೆರಿಕದಲ್ಲಿ ಹಿಂದೆ ಕೋಟೆಯಿಂದ ಸಂರಕ್ಷಿತವಾಗಿದ್ದದ್ದು). **Fórtalice** ಫಾರ್ಟಲಿಸ್ (ನಾ.) (ಪ್ರಾಚೀ. ಪ್ರ., ಕಾವ್ಯ) ಕೋಟೆ, ದುರ್ಗ; ಕೋಟೆಯ ಮುಂಭಾಗದ ಸಣ್ಣ ಹೊರ ರಕ್ಷಣೆ; ಸಣ್ಣ ಕೋಟೆ; ಪೌಳಿ. **Fortificátion** (ನಾ.) (ಸೈನ್ಯ) ರಕ್ಷಣಾರ್ಥವಾಗಿ ಕೋಟೆ; ಮೊ. ನ್ನು ಕಟ್ಟುವುದು; —ಕಟ್ಟುವ ಕಲೆ, ಶಾಸ್ತ್ರ: ದುರ್ಗಶಿಲ್ಪ. (ನಾ., ಬ. ವ. ದಲ್ಲಿ) ರಕ್ಷಣ ಸಾಧನಗಳು (ಕೋಟೆಯ ಗೋಡೆ, ಅಳು ವೇರಿ, ಬತೇರಿ, ಮೊ.); ಕೋಟೆ ಬಲಪಡಿಸುವುದು. ದ್ರಾಕ್ಷಾ ರಸಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮದ್ಯಸಾರವನ್ನು ಸೇರಿಸಿ ಅದರ ಶಕ್ತಿಯನ್ನು ಹೆಚ್ಚಿಸುವುದು. **Fórtify** (ಕ್ರಿ.) (ಕಟ್ಟಡವನ್ನು, ಸ್ಥಳವನ್ನು) ಬಲಪಡಿಸು, ಭದ್ರಪಡಿಸು. ವೀರ್ಯವತ್ತಾಗಿ, ಬಲಯುತವಾಗಿ, ಕಷ್ಟ ಸಹಿಷ್ಣುವಾಗಿ, —ಮಾಡು. ಹುರಿದುಂಬಿಸು ; ಪ್ರೋತ್ಸಾಹಿಸು ; ಉತ್ತೇಜನ ಕೊಡು. (ಮಾದಕ ದ್ರವಗಳಿಗೆ) ಮದ್ಯಸಾರ ಸೇರಿಸಿ ಬಲಪಡಿಸು, ಸಾರ ಹೆಚ್ಚಿಸು. (ಹೇಳಿಕೆಯನ್ನು) ದೃಢಪಡಿಸು, (ತಕ್ಕ ಪ್ರಮಾಣಗಳಿಂದ, ಸಾಕ್ಷ್ಯಗಳಿಂದ) ಸಮರ್ಥಿಸು. (ಊರಿಗೆ, ಸೈನ್ಯಕ್ಕೆ, ತನಗೆ) ರಕ್ಷಣೆ ಒದಗಿಸು, ಒದಗಿಸಿಕೊ. ಕೋಟೆ ಕೊತ್ತಳಗಳನ್ನು ಕಟ್ಟು. **Fórtifiable** (ಗು.) ; **Fórtress** (ನಾ., ಕ್ರಿ. ಸಕ.) ಸೈನಿಕ ರಕ್ಷಾವರಣ (ಮು., ದೊಡ್ಡ ಸೈನ್ಯವಿರಲು ಅನುಕೂಲಸುವಂಥ ಬಲವಾದ ಕೋಟೆಯಿಂದ ಕೂಡಿದ ಪಟ್ಟಣ) ; ಕೋಟೆ ; ದುರ್ಗ. (ಕ್ರಿ.) (ಕಾವ್ಯ) ರಕ್ಷಣೆ, ದುರ್ಗ, —ಆಗಿರು ; ರಕ್ಷಣೆ ಕೊಡು ; ರಕ್ಷಿಸು.

Fórtalice. Fort ನೋಡಿ.

Forte[1] ಫೋರ್ಟ್ (ನಾ.) (ಒಬ್ಬನ) ಬಲ, ವೈಶಿಷ್ಟ್ಯ, ಶ್ರೇಷ್ಠತೆ. (ಕತ್ತಿಯ ವರಿಸ) ಹಿಡಿಯಿಂದ ಮಧ್ಯದ ವರೆಗಿನ ಕತ್ತಿಯ ಅಲಗು.

Fórte[2] (It.) ಫೋರ್ಟೇ (ಗು., ಕ್ರಿ. ವಿ.) (ಸಂ. ಸೂಚನೆ) ದೊಡ್ಡ ಧ್ವನಿಯ(ಲ್ಲಿ) ; ಉಚ್ಚ ಸ್ವರದ(ಲ್ಲಿ) (ಸಂಕ್ಷಿಪ್ತ : f.) ; Forte forte (ಸಂಕ್ಷಿಪ್ತ: ff.) ಬಹಳ ದೊಡ್ಡ ಧ್ವನಿಯ(ಲ್ಲಿ). Forte piano (ಸಂಕ್ಷಿಪ್ತ : fp.) ದೊಡ್ಡ ಧ್ವನಿಯೂ ಒಡನೆಯೇ ಸಣ್ಣ ಧ್ವನಿಯೂ ಆದ, ಆಗಿ. **Fortíssimo** (It.) ಫೋರ್ಟಿಸಿಮೋ (ಕ್ರಿ. ವಿ., ಗು.) (ಸಂ. ಸೂಚನೆ) (ಸಂಕ್ಷಿಪ್ತ : ff., ffor., fortiss.) ಬಹಳ ದೊಡ್ಡ ಧ್ವನಿಯ(ಲ್ಲಿ)

Forth ಫೋರ್ತ್ (ಕ್ರಿ. ವಿ., ಉಪ.) ಮುಂದುಗಡೆಗೆ [ಈಗ Back & f. (ಹಿಂದಕ್ಕೂ ಮುಂದಕ್ಕೂ) ಎಂಬಲ್ಲಿ ಮಾತ್ರ]. (ಕಾಲ) (ಆ)ಮೇಲೆ ; ಮುಂದೆ [ಈಗ From this time f. (ಇಲ್ಲಿಂದ ಮುಂದೆ), Hence f. (ಇನ್ನು ಮುಂದೆ) ಎಂಬಲ್ಲಿ ಮಾತ್ರ] ; ಮುಂದಕ್ಕೆ ; ದೃಷ್ಟಿಗೆ ; ಕಣ್ಣು ಮುಂದಕ್ಕೆ (Bring, come, show, f. ಮುಂದಕ್ಕೆ ತರು, ಬರು, ತೋರು) ; (ಮನೆ, ಮೊ. ಗಳಿಂದ) ಹೊರಕ್ಕೆ, ಈಚೆಗೆ, ಬೀದಿಗೆ (Sail f. ಹಡಗು ಹತ್ತಿ ಹೋಗು. Issue f. ಹೊರಡು ; ಹೊರ ಹೊರಡು. Cast f. ಹೊರಕ್ಕೆ, ಬೀದಿಗೆ, ಎಸೆದುಬಿಡು). (And so f. ಹೀಗೆಯೇ ; ಇನ್ನು ಮುಂತಾಗಿ ; ಇತ್ಯಾದಿ. So far f. ಅಲ್ಲಿಯ ವರೆಗೆ ; ಅಷ್ಟು ಮಟ್ಟಿಗೆ. So far f. as ಎಲ್ಲಿಯ ವರೆಗೋ ಅಲ್ಲಿಯ ವರೆಗೆ ; ಎಷ್ಟು ಮಟ್ಟಿಗೋ ಅಷ್ಟು ಮಟ್ಟಿಗೆ). (ಉಪ., ಪ್ರಾಚೀ. ಪ್ರ.) — ಇಂದ. **Forthcóming** (ಗು.) ಬರಲಿರುವ ; ಬರುವ ; ಬರುತ್ತಿರುವ ; (ಕಾಲ) ಸಮೀಪಿಸುತ್ತಿರುವ ; (ಬೇಕೆಂದಾಗ) ಸಿದ್ಧವಾಗಿರುವ. **Forthríght** (ಕ್ರಿ. ವಿ.), **Fórthright** (ಗು., ನಾ.) (ಪ್ರಾಚೀ. ಪ್ರ.) ನೇರವಾಗಿ ಮುಂದಕ್ಕೆ ; ಮುನ್ನೇರಕ್ಕೆ ; ನೆಟ್ಟಗೆ. ತತ್‌ಕ್ಷಣ ; ಕೂಡಲೆ ; ಒಡನೆಯೇ. (ಗು.) ನೇರವಾಗಿ, ನೆಟ್ಟಗೆ, —ಹೋಗುವ ; ಋಜು ಮಾರ್ಗದ ; ಮಾರ್ಗ ಬಿಟ್ಟು ನಡೆಯದ. ಮುಚ್ಚುಮರೆಯಿಲ್ಲದ ; ಖಂಡಿತದ ಮಾತಿನ ; ನಿರ್ದಾಕ್ಷಿಣ್ಯದ ; ದೃಢ ನಿಶ್ಚಯದ. ಕೈಚಳಕದ ; ಕರ ಕೌಶಲದ. (ನಾ.) ನೇರವಾದ ಮಾರ್ಗ (Forthrights and meanders ನೇರವಾದ ಮತ್ತು ಬಳಸು ಮಾರ್ಗಗಳು). **Forthwith** —ವಿತ್(ದ್) (ಕ್ರಿ. ವಿ.) ಒಡನೆಯೇ ; ಕೂಡಲೆ ; ತತ್‌ಕ್ಷಣವೇ ; ಸಾವಕಾಶ ಮಾಡದೆ.

Fortify, etc. Fort ನೋಡಿ.

Fortíssimo. Forte[2] ನೋಡಿ.

Fórtiter (L). **Suaviter** ನೋಡಿ.

Fórtitude ಫೋರ್ಟಿಟ್ಯೂಡ್ (ನಾ.) (ನೋವಿನಲ್ಲಿ, ಎಡರಿನಲ್ಲಿ, ವಿಪತ್ತಿನಲ್ಲಿ) ಧೈರ್ಯ, ಸ್ಥೈರ್ಯ, ಧೃತಿ, ಎದೆ, ತಾಳ್ಮೆ, ಸೈರಣೆ, ಕಷ್ಟ ಸಹಿಷ್ಣುತೆ.

Fórtnight ಫೋರ್ಟ್‌ನೈಟ್ (ನಾ.) ಎರಡು ವಾರ ; ಪಕ್ಷ. Today, this day, Monday, f. ಈ ದಿನಕ್ಕೆ, ಸೋಮವಾರಕ್ಕೆ, —ಒಂದು ಪಕ್ಷ ಬಿಟ್ಟು. Would rather keep him a week than a f. ಅವನು ದೊಡ್ಡ ಹೊಟ್ಟೆಯವನು, ಹೊಟ್ಟೆಬಾಕ ; ಅವನ ಹೊಟ್ಟೆಗೆ ಹಾಕುವುದು ಕಷ್ಟ. **Fórtnightly** (ಗು., ಕ್ರಿ. ವಿ.) ಪಕ್ಷಕ್ಕೊಂದು ಸಲ ಬರುವ, ಸಂಭವಿಸುವ ; ಪಕ್ಷಕ್ಕೊಮ್ಮೆ.

Fórtress. Fort ನೋಡಿ.

Fortúitous ಫಾರ್‌ಟ್ಯೂಯಿಟಸ್ (ಗು.) ಆಕಸ್ಮಿಕ ; ಅನುದ್ದಿಷ್ಟ ; ಅದೃಷ್ಟವಶ. **Fortúitously** (ಕ್ರಿ. ವಿ.) ; **Fortúitousness** (ನಾ.) ; **Fortúitism** (ನಾ.) ಪ್ರಕೃತಿಯಲ್ಲಾಗುವ ಹೊಂದಿಕೆಗಳು ಸಂಕಲ್ಪಿತಗಳಲ್ಲವೆಂಬ, ಆಕಸ್ಮಿಕವಾಗಿ ಅಥವಾ ಸಹಜ ಕಾರಣಗಳಿಂದ ಆದುವೆಂಬ, ನಂಬಿಕೆ. ಆಕಸ್ಮಿಕ ವಾದ ; ಅದೃಷ್ಟ ವಾದ. **Fortúitist** (ನಾ.) ಅದೃಷ್ಟ ವಾದಿ ; ಆಕಸ್ಮಿಕತಾ ವಾದಿ. **Fortúity** (ನಾ.) ಆಕಸ್ಮಿಕ (ಘಟನೆ) ; ಅನಿರೀಕ್ಷಿತವಾದದ್ದು ; ಅದೃಷ್ಟವಶವಾದದ್ದು ; ಅನುದ್ದಿಷ್ಟವಾದದ್ದು ; ಅಚಿಂತಿತ ಸ್ವಭಾವದ್ದು.

Fórtunate. Fortune ನೋಡಿ.

Fórtune ಫಾರ್‌ಟ್ಯೂ(ಚು)ನ್ (ನಾ.) ಒಳ್ಳೆಯ ಅದೃಷ್ಟ, ದೆಸೆ ; ಭಾಗ್ಯ. (F. ಭಾಗ್ಯ ದೇವತೆ, ಅದೃಷ್ಟ ದೇವತೆ) ; ಮನುಷ್ಯನಿಗೆ ಅಥವಾ ಕೈಕೊಂಡ ಪ್ರಯತ್ನಕ್ಕೆ ಒದಗುವ ಒಳ್ಳೆಯ ಅಥವಾ ಕೆಟ್ಟ ಅದೃಷ್ಟ [Try one's f. ಅದೃಷ್ಟಪರೀಕ್ಷೆ ಮಾಡಿಬಿಡು. Try the f. of war ಯುದ್ಧದಲ್ಲಿ ಅದೃಷ್ಟವನ್ನು ಪರೀಕ್ಷಿಸಿಬಿಡು. Soldier of f. (Soldier ನೋಡಿ)]. ಮುಂದಿನ ಯೋಗ ; ಭವಿಷ್ಯ (Tell person his f. ; Tell fortunes ಅದೃಷ್ಟ, ಭವಿಷ್ಯ, ಕಣಿ, —ಹೇಳು). ಪುಣ್ಯೋದಯ ; ಸೌಭಾಗ್ಯ ; ಐಶ್ವರ್ಯ (Make one's f. ಸಂಪತ್ತು, ಆಸ್ತಿ, —ಗಳಿಸು ; ಏಳಿಗೆ ಹೊಂದು. Make a f. ಐಶ್ವರ್ಯ ಗಳಿಸು, ಪಡೆ ; ಆಸ್ತಿಮಾಡು. Spent a small f. on it ಅದರಮೇಲೆ ಬಹಳ ಹಣ ವೆಚ್ಚಮಾಡಿದೆನು. Marry a f. ಸ್ಥಿತಿವಂತಳನ್ನು ಮದುವೆಯಾಗು. F.-hunter ಶ್ರೀಮಂತ ಹೆಣ್ಣನ್ನು ಹುಡುಕುವವನು. F.-teller ಅದೃಷ್ಟ ಹೇಳುವವನು ; ಭವಿಷ್ಯ ವಾದಿ ; ದೈವಜ್ಞ ; ಕಣಿ ಹೇಳುವವನು ; ಕಣಿಗಾರ, —ಗಾತಿ. **Fórtuneless** (ಗು.) ; **Fórtunate** —ಟ್ಯು(ಚು)ನೆಟ್ (ಗು.) ಅದೃಷ್ಟಶಾಲಿಯಾದ ; ದೆಸೆ ತಿರುಗಿದ ; ಧನ್ಯ ; ಭಾಗ್ಯಶಾಲಿಯಾದ ; ಪುಣ್ಯವಂತನಾದ. ಶುಭ ಸೂಚಕ ; ಮಂಗಳಕರ ; ಶ್ರೇಯಸ್ಕರ ; ಅನುಕೂಲವಾದ. **Fórtunately** (ಕ್ರಿ. ವಿ.) ಅದೃಷ್ಟ ವಶದಿಂದ ; ಜಯ ಯೋಗದಿಂದ ; ಸುಯೋಗದಿಂದ.

Fórtune ಫಾರ್‌ಟ್ಯು(ಚು)ನ್ (ಕ್ರಿ. ಅಕ.) (ಪ್ರಾಚೀ. ಪ್ರ., ಕಾವ್ಯ) ಸಂಭವಿಸು ; ಆಗು ; ಆಕಸ್ಮಿಕವಾಗಿ ಬರು, ದೊರೆ, ಒದಗು, ಸಂಧಿಸು. (ಮು., ಅಕರ್ತೃಕ ಪ್ರ.) It fortuned that, —ಸಂಭವಿಸಿತು ; —ಒದಗಿ ಬಂದಿತು.

Fórty. Four ನೋಡಿ.

Fórum (L) ಫೋರಮ್ (ನಾ.) (ರೋ. ಪ್ರಾ.) ಒಂದು ಪಟ್ಟಣದ ಸಾರ್ವಜನಿಕ, —ಸ್ಥಳ, ಅಂಗಡಿ ಚೌಕ, ಪೇಟೆ; (ಮು., ಪುರಾತನ ರೋಮ್ ಪಟ್ಟಣದಲ್ಲಿ) ನ್ಯಾಯ ವಿಚಾರಣೆ, ಮೊ ಸಾರ್ವಜನಿಕ ಕಾರ್ಯಗಳಿಗೆ ಸಭೆಸೇರುವ ಸ್ಥಳ : ಸಾರ್ವಜನಿಕ ಸಭಾ ಸ್ಥಾನ ; ವಾದ ಸ್ಥಾನ ; ನ್ಯಾಯಸ್ಥಾನ ; ನ್ಯಾಯಸ್ಥಾನದ ಕಚೇರಿಗಳು. (ರೂಪ.) The f. of conscience ಆತ್ಮಸಾಕ್ಷಿಯ ನ್ಯಾಯಸ್ಥಾನ.

Fórward ಫಾರ್‌ವರ್ಡ್ (ಗು., ನಾ.) ಮುಂದುಗಡೆಯ ; ಮುಂದಿನ; ಮುಂಭಾಗದ ; ನೇರೆದುರಿನ ; ಅಗ್ರ (The f. horizon ಎದುರಿಗೆ ಕಾಣುವ ದಿಗಂತ, ಕ್ಷಿತಿಜ). (ನಾವೆ) ಹಡಗಿನ ಮುಂಭಾಗದ. ಮುಂದುವರಿವ ; ಮುನ್ನಡೆಯ ; ಮುಂಭಾಗಕ್ಕೆ ಹೋಗುವ ; ಪ್ರಗತಿಯ [The f. path ಪ್ರಗತಿ ಮಾರ್ಗ ; ಮುಂದುವರಿವ ಮಾರ್ಗ. F. play (ಕ್ರಿಕೆಟ್) ಮುಂದೆ ನುಗ್ಗಿ ಹೊಡೆಯುವ ಆಟ. F. movement (ರಾಜಕೀಯ, ಮೊ. ಗಳ ಪುರೋವೃದ್ಧಿಗಾಗಿ ವಿಶೇಷಪ್ರಯತ್ನ ನಡಸುವ) ಮುನ್ನಡೆಯ ಚಳವಳಿ, F. school, party, opinions ಪ್ರಗತಿಪರರ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತ್ವರಿತಗಾಮಿಗಳ, — ಮತ, ಪಕ್ಷ, ಅಭಿಪ್ರಾಯಗಳು]. (ವ್ಯಾಪಾರ) ಮುಂದಿನ ಉತ್ಪನ್ನಗಳಿಗೆ ಸಂಬಂಧಿಸಿದ ; ಮುಂದಿನ ; ಭಾವಿ (F. contract ಮುಂಗಡದ ಒಪ್ಪಂದ ; ಮುನ್‌ಗುತ್ತಿಗೆ). ಮುಂದುವರಿದ ; (ಪಕ್ವಕ್ಕೆ ಅಥವಾ ಪೂರ್ಣತೆಗೆ) ಮುಂದುವರಿಯುತ್ತಿರುವ ; (ಸಸ್ಯ, ಫಸಲು, ಕಾಲ) ಹೆಚ್ಚು ಮುಂದುವರಿದಿರುವ, ಕಾಲಕ್ಕೆ ಮೊದಲೇ ಪಕ್ವವಾದ. (ಮಾಡಲು) ಸಿದ್ಧವಾದ, ಉತ್ಸಾಹಗೂಡಿದ, ಮುಂದಾಗಿ ಹೋಗುವ ; ವಯಸ್ಸಿಗೆ ಮೀರಿದ ಬುದ್ಧಿಯುಳ್ಳ ; ಅಕಾಲ ಪ್ರೌಢ. ದಾಷ್ಟಿಕದ ; ಧಾರ್ಷ್ಟ್ಯದ ; ಮುಂದೆಬಿದ್ದು ಹೋಗುವ ; ಲಜ್ಜೆ, ಮರ್ಯಾದೆ, — ಮೀರಿದ. (ನಾ.) (ಕಾಲ್ಚೆಂಡಾಟ, ಹಾಕಿ, ಮೊ. ಗಳಲ್ಲಿ) ಮುನ್‌ಸಾಲಿನ ಆಟಗಾರ(ರಲ್ಲಿ ಒಬ್ಬ). **Fórwardly** (ಕ್ರಿ. ವಿ.) ; **Fórwardness** (ನಾ.)

Fórward(s) (ಕ್ರಿ. ವಿ.) (ಕಾಲದಲ್ಲಿ) ಮುಂದಕ್ಕೆ, ಮುಂದು ಮುಂದಕ್ಕೆ [From this time f.(-d) ಇಲ್ಲಿಂದ ಮುಂದಕ್ಕೆ ; ಇನ್ನು ಮುಂದಕ್ಕೆ. Look f.(-d) ಮುಂದಕ್ಕೆ ನೋಡು ; ಮುನ್ನೋಟವಿಡು ; ನಿರೀಕ್ಷಿಸು. Carriage f.(-d) (Carriage ನೋಡಿ). Date f.(-d) (ವ್ಯಾಪಾರದ ಕೋರಿಕೆಯ ಪತ್ರಗಳಲ್ಲಿ) ಮುಂದಿನ ತೇದಿ, ತಾರೀಖು, —ಹಾಕು. (ಕ್ರಿಕೆಟ್) Play f.(-d) ಮುಂದೆ ನುಗ್ಗಿ ಹೊಡೆ]. ಎಡೆ ಬಿಡದೆ ಮುಂದೆ ನುಗ್ಗುತ್ತ ; ಮುಂದು ಮುಂದಕ್ಕೆ ನುಗ್ಗುತ್ತ (Rushing f.). [(ಸೈನ್ಯ : ಆಜ್ಞೆಯ ಮಾತು) Forward ! ಮುಂದಕ್ಕೆ ! ಮುಂದ ನುಗ್ಗಿ !]. [ನಾವೆ, (-d)] ಹಡಗಿನ ಮುಂಭಾಗಕ್ಕೆ, ಮುಂಭಾಗದಲ್ಲಿ, ಮುಂಭಾಗದ ಕಡೆಗೆ. Send him f.(-d) ಅವನನ್ನು ಮುಂದಾಗಿ, ಮುಂಚಿತವಾಗಿ, ಮೊದಲೇ, —ಕಳುಹಿಸು. Backward(s) & f. ಹಿಂದಕ್ಕೂ ಮುಂದಕ್ಕೂ. Bring f.(-d) ಮುಂದಕ್ಕೆ ತರು ; ಮುಂದಿಡು ; ಗಮನ ಸೆಳೆ. Come f.(-d) ಕೆಲಸ, ಉದ್ಯೋಗ, ಮೊ. ಕ್ಕೆ ಮುಂದೆ ಬರು. Put or set f.(-d) ಆರೋಪಿಸು; ಎಲ್ಲರ ದೃಷ್ಟಿಗೂ ಹೆಚ್ಚಾಗಿ ಬೀಳುವಂತೆ ಒಡಾಡು. Go f.(-d) ಮುಂದುವರಿಯುತ್ತಿರು ; ಪ್ರಗತಿ ಹೊಂದು. Can't get any forwarder *or* (ಬಳ. ಮಾ.) forrader ಮುಂದುವರಿಯಲಾಗುವುದಿಲ್ಲ ; ಮುಂದೆ ಹೋಗುವಂತೆ, ಅಭಿವೃದ್ಧಿ ಹೊಂದುವಂತೆ, ಇಲ್ಲ.

Fórward (ಕ್ರಿ. ಸಕ.) ಮುಂದುವರಿಯಲು ಸಹಾಯಮಾಡು ; ಮುಂದಕ್ಕೆ ತರು ; ನೆರವಾಗು ; ಬೆಳವಣಿಗೆಯನ್ನು ತ್ವರೆಪಡಿಸು. (ಕಾಗದ, ಮೊ. ನ್ನು) ಮುಂದಕ್ಕೆ ಕಳುಹು, ಸಾಗಿಸು ; (ಶಿಥಿಲವಾಗಿ) (ಸರಕು, ಮೊ. ನ್ನು) ರವಾನಿಸು.

Forweáried ಫರ್‌ವಿಯರಿಡ್, **Forwórn** ಫರ್‌ವಾರ್‌ನ್ (ಪ್ರಾಚೀ. ಪ್ರ.) ಬಳಲಿಹೋದ ; ದಣಿದ ; ಸುಸ್ತಾದ ; ನಿತ್ರಾಣಗೊಂಡ.

Fosse ಫಾಸ್ (ನಾ.) ಉದ್ದವೂ ಕಿರಿದೂ ಆದ ತೋಡುಕಾಲುವೆ, ಚರಂಡಿ. (ಮು., ಕೋಟೆ, ಮೊ. ರಕ್ಷಣಾವರಣದ) ಅಗಳು, ಕಂದಕ. (ಅಂ. ರ. ಶಾ.) ಕುಳಿ ; ಗಾಡಿ. **Fossétte** ಫಾಸೆಟ್ (ನಾ.) ಸಣ್ಣ ಕುಳಿ.

Fóssick ಫಾಸಿಕ್ (ಕ್ರಿ. ಅಕ.) (ಅನಂ. : ಆಸ್ಟ್ರೇಲಿಯದ ಚಿನ್ನದ ಗಣಿಗಳ ಪ್ರಾಂತದ ಪದ) ಸಂದು ಸಂದಿನಲ್ಲೂ ಹುಡುಕು ; ಸೋಸಿ ಹುಡುಕು.

Fóssil ಫಾಸಿ(ಸ್)ಲ್ (ಗು., ನಾ.) ಹೂತುಹೋಗಿದ್ದ ; ಅಗೆದು ತೆಗೆದ [F. fuel (ವಿರ. ಪ್ರ.) ಅಗೆದು ತೆಗೆದ ಉರುವಲು]. ಭೂ ಪದರದಲ್ಲಿ ಸಿಕ್ಕಿ ರಾಸಾಯನಿಕ ಅಥವಾ ಇತರ ಮಾರ್ಪಾಟನ್ನು ಹೊಂದಿದ (ನಾ., ಚರಿತ್ರಪೂರ್ವ ಯುಗದ) ಸಸ್ಯ ಅಥವಾ ಪ್ರಾಣಿಯ ಅವಶೇಷವೆಂದು ಗುರುತಿಸಬಹುದಾದ ಪದಾರ್ಥ(ದ) : ಪಳೆಯುಳಿಕೆ(ಯ) ; ಜೀವ್ಯವಶೇಷ(ದ) [F. bones, shells, ivory ಪಳೆಯುಳಿಕೆಯ ಎಲುಬುಗಳು, ಚಿಪ್ಪುಗಳು, ದಂತ. Hunting for fossils ಪಳೆಯುಳಿಕೆಗಳಿಗಾಗಿ ಹುಡುಕುವುದು. (ರೂಪ.) Words are f. thoughts ಮಾತುಗಳು ಭಾವಗಳ ಪಳೆಯುಳಿಕೆಗಳು]. ಪುರಾತನ ಕಾಲದ, ಜನಮೇಜಯನ ಕಾಲದ (ಮನುಷ್ಯ, ವಸ್ತು) ; ಮುಂದೆ ಅಭಿವೃದ್ಧಿಯಾಗಲಾರದ ಗೊಡ್ಡು ; ಮುದಿ ಗೊಡ್ಡು. **Fóssilate** —ಲೇಟ್ (ಕ್ರಿ. ಸಕ.) ಪಳೆಯುಳಿಕೆ ಮಾಡು. **Fossilátion** (ನಾ.) ; **Fossilíferous** (ಗು.) (ಪ್ರಾಚೀನ) ಅವಶಿಷ್ಟಗಳುಳ್ಳ ; ಪಳೆಯುಳಿಕೆಗಳಿರುವ. **Fóssilize** (ಕ್ರಿ.) ಪಳೆಯುಳಿಕೆ ಮಾಡು, ಆಗು. (ರೂಪ.) ಪುರಾತನದ್ದನ್ನಾಗಿ, ಜಡವಾಗಿ, ಅಭಿವೃದ್ಧಿಗೆ ಅವಕಾಶವಿಲ್ಲದಂತೆ, ಮಾಡು. **Fossilizátion** (ನಾ.)

Fossórial ಫಾಸೋರಿಯಲ್ (ಗು.) (ಪ್ರಾ. ವಿ.) ಬಿಲ ತೋಡುವ ; ಬಿಲ ತೋಡುವುದಕ್ಕೆ ತಕ್ಕ, ಉಪಯೋಗಿಸುವ.

Fóster ಫಾಸ್ಟರ್ [ನಾ. (ಅರೂಢಿ), ಗು.] ಅನ್ನ ; ಆಹಾರ ; ಪೋಷಣೆ ; ಪಾಲನೆ (ಸಮಾಸ ಪದಗಳಲ್ಲಿ ಮಾತ್ರ) : **F.-child** ಸಾಕು ಮಗು. **F.-father** ಸಾಕು ತಂದೆ. **F.-mother**[1] ಸಾಕು ತಾಯಿ. **F.-brothers** ಒಂದೇ ತಂದೆ ತಾಯಿಗಳ ಹೊಟ್ಟೆಯಲ್ಲಿ ಹುಟ್ಟದೆ, ಒಂದೇ ಸಂಸಾರದಲ್ಲಿದ್ದು ಅಥವಾ ಒಂದೇ ಹೆಂಗಸಿನ ಮೊಲೆಹಾಲು ಕುಡಿದು ಬೆಳೆದ ಸೋದರರು : ಸಾಕು ಸೋದರರು. **F.-sisters** ಸಾಕು ಸೋದರಿಯರು. **F.-mother**[2] = Incubator.

Fóster (ಕ್ರಿ. ಸಕ.) (ಪ್ರಾಚೀ. ಪ್ರ.) ಪ್ರೀತಿಯಿಂದ ಸಾಕು, ಸಲಹು, ಪೋಷಿಸು, ಪಾಲಿಸು, ಬೆಳಸು, ಆದರಿಸು ; (ಎದೆಗೆ ಅಪ್ಪಿಕೊಂಡು) ಬೆಚ್ಚಗೆ ಇಟ್ಟಿರು ; ಬೆಳವಣಿಗೆ ಅಭಿವೃದ್ಧಿ ಮಾಡು ; (ಮನೋಭಾವನೆಗೆ) ಪ್ರೋತ್ಸಾಹ ಕೊಡು, ಇಂಬುಗೊಡು. (ಸಂದರ್ಭ, ಪರಿಸ್ಥಿತಿ) ಅನುಕೂಲವಾಗಿರು. **Fósterer** (ನಾ.) ; **Fóstress** (ನಾ., ಸ್ತ್ರೀ.). **Fósterage** ಫಾಸ್ಟರೆ(ರಿ)ಜ್ (ನಾ.) (ಇತರರ ಮಗುವನ್ನು) ಸಾಕುವುದು, ಸಾಕುವ ಜವಾಬ್ದಾರಿ ; ಪಾಲನೆ ; ಸಾಕುಮಗುವಾಗಿರುವುದು ; (ಮಗುವಿಗೆ) ಸಾಕುತಾಯನ್ನಿಡುವ ಪದ್ಧತಿ. (ಬೆಳವಣಿಗೆಗೆ) ಉತ್ತೇಜನ ಕೊಡುವುದು. **Fósterling** (ನಾ.) ಸಾಕು ಮಗು ; ದಾದಿಯ ಪೋಷಣೆಯಲ್ಲಿರುವ ಕೂಸು ; ಇತರರ ಪರಾಮರಿಕೆಯಲ್ಲಿ, ಪೋಷಣೆಯಲ್ಲಿ, ಇರುವವನು.

Fought. Fight ಧಾತುವಿನ ಭೂತ., ಭೂ. ಕೃ.

Foul ಫೌಲ್ (ಗು., ನಾ., ಕ್ರಿ. ವಿ., ಕ್ರಿ.) ಹೊಲಸು ; ನಾರುವ ; ಗಬ್ಬುನಾತ (ಬಡಿಯುವ) ; ಹೇಸಿಕೆಯಾದ ; ಅಸಹ್ಯಕರವಾದ ; (F. brood ಜೇನು ಮರಿಹುಳುಗಳಿಗೆ ತಗುಲುವ ಒಂದು ರೋಗ) ; ಕೊಳಕಾದ ; ಮಲಿನವಾದ ; ಮಾಸಿದ ; ಮೈಲಿಗೆಯ (F. linen ಕೊಳಕು, ಮಾಸಿದ, ಮೈಲಿಗೆ, —ಬಟ್ಟೆ) ; ಹಲವು ತಿದ್ದುಗಳಿಂದ ವಿಕಾರವಾದ, ಚಿತ್ತಾದ (F. copy ಚಿತ್ತು ಪ್ರತಿ) ; ಹಾನಿಕರ ಪದಾರ್ಥದಿಂದ ಕೂಡಿದ (F. air, water ಕೆಟ್ಟ, —ಗಾಳಿ, ನೀರು). ಅಡಚಿಕೊಂಡಿರುವ ; ರಂಧ್ರ ಮುಚ್ಚಿಕೊಂಡಿರುವ (F. gun-barrel ಅಡಚಿಕೊಂಡಿರುವ ಬಂದೂಕಿನ ನಳಿಕೆ). (ಹಡಗಿನ ತಳ) ಕಳೆ, ಚಿಪ್ಪಿನ ಪ್ರಾಣಿ, ಮೊ. ಕಸ ಬೆಳೆದುಹೋದ. ನೀತಿಗೆಟ್ಟ ; ಕೆಟ್ಟ ; ಅಶ್ಲೀಲ ; ಅಸಹ್ಯವಾದ ; ಥಂಡ ಮಾತು ಬಯ್ಯುವ ; ದುರ್ಭಾಷೆಯಾಡುವ. (ಅನಂ.) ಜುಗುಪ್ಸೆಯುಂಟುಮಾಡುವ (The f. fiend ಸೈತಾನ. F. deed, motive, talk ದುಷ್ಕೃತ್ಯ, ದುರುದ್ದೇಶ, ದುರ್ಭಾಷೆ. F.-mouthed, -tongued ಥಂಡ ಬಾಯಿಯ ; ಹೊಲಸು ನಾಲಗೆಯ). ಕುರೂಪಿನ ; ವಿಕಾರದ [Fair or f. (ಸುರೂಪಿ ಅಥವಾ ಕುರೂಪಿ) ಎಂಬಲ್ಲಿ ಮಾತ್ರ]. ನೀತಿ ವಿರುದ್ಧ ; ನಿಯಮ ವಿರುದ್ಧ ; ಅನ್ಯಾಯ ; ಅಕ್ರಮ ; ಥಂಡ ; ಥಂಡಾಟದ [F. blow, stroke ಅನ್ಯಾಯದ ಏಟು, ಹೊಡೆತ. F. riding (ಕುದುರೆಯ ಸವಾರಿ) ಡಿಕ್ಕಿಹೊಡೆಯುವುದು, ತೊಡರಿಸುವುದು. F. play ಥಂಡ ಆಟ ; (ರೂಪ.) ಅನ್ಯಾಯ ; ದ್ರೋಹ ; ವಿಶ್ವಾಸ ಘಾತಕತನ]. (ವಾಯುಸ್ಥಿತಿ) ತಂಡಿಯಾದ, (ಬಿರು) ಗಾಳಿ ಮಳೆಯ. (ಗಾಳಿ) ಪ್ರತಿಕೂಲವಾದ ; ಎದುರು ಬೀಸುವ. ಡಿಕ್ಕಿಹೊಡೆದ ; ಮೇಲೆ ಬಿದ್ದ [Fall f. of (Fall ನೋಡಿ). Rope is f. ಹಗ್ಗ ತೊಡಕುಬಿದ್ದಿದೆ, ಸಿಕ್ಕುಬಿದ್ದಿದೆ]. (ನಾ.) ಹೊಲಸು ; ಅನ್ಯಾಯ ; ಅಧರ್ಮ (Through f. & fair ಎಲ್ಲ ಸ್ಥಿತಿ ಗತಿಗಳಲ್ಲೂ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಮು., ಕುದುರೆ ಸವಾರಿ, ದೋಣಿ ನಡಸುವುದು, ಓಟ —ಇವುಗಳಲ್ಲಿ) ಡಿಕ್ಕಿ (ಹೊಡೆಯುವುದು), ತೊಡರು(ವುದು). (ಆಟದಲ್ಲಿ) ಅಕ್ರಮದ ಹೊಡೆತ, ಆಟ ; ಬಂಡು ; ಧಂಡಾಟ. (ಕ್ರಿ. ವಿ.) ಅಕ್ರಮವಾಗಿ ; ಅನ್ಯಾಯವಾಗಿ ; ಗೈರಾಗಿ [Hit him f. ಅನ್ಯಾಯವಾಗಿ ಹೊಡೆ. Play one f. (ಒಬ್ಬನಿಗೆ) ದ್ರೋಹ ಮಾಡು, ವಿಶ್ವಾಸ ಘಾತ ಮಾಡು]. (ಕ್ರಿ.) ಹೊಲಸಾಗು ; ಹೊಲೆ ಮಾಡು ; ಅಡಚಿಕೊ. ಕೊಳೆ ಮಾಡು ; ಮಲಿನಗೊಳಿಸು ; ಕಳಂಕಿತ, ಕಲುಷಿತ, —ಮಾಡು ; (ಅಕೃತ್ಯದ) ಕಳಂಕ ಹುಟ್ಟು; ಹೆಸರು, ಮರ್ಯಾದೆ,—ಕೆಡಿಸು. (ಲಂಗರು, ಹೊರಜಿ, ಮೊ. ನ್ನು) ಸಿಕ್ಕು, ಗೋಜು, —ಬೀಳಿಸು ; ತೊಡರಿಕೊಳ್ಳುವಂತೆ ಮಾಡು. (ಅಡ್ಡಹಾದಿ, ರೈಲುಮಾರ್ಗ, ಸಂಚಾರ ಶ್ರೇಣಿ —ಇವನ್ನು) ಕಿಕ್ಕಿರಿಸು, ಅಡಚಿಕೊಳ್ಳುವಂತೆ, ಮುಂದುವರಿಯಲಾಗದಂತೆ, ಮಾಡು. ಸಿಕ್ಕುಬೀಳು ; ತೊಡಕು ಬೀಳು ; ಡಿಕ್ಕಿ ಹೊಡೆ ; ಮೇಲೆ ಬೀಳು. ಧಂಡಾಟವಾಡು. **Foúlly** ಫೌಲ್‌ಲಿ (ಕ್ರಿ. ವಿ.) ಅನ್ಯಾಯವಾಗಿ ; ಅಸಹ್ಯವಾಗಿ ; ಹೇಸಿಕೆಯಾಗುವಂತೆ ; ಕಟುವಾಗಿ ; ಕ್ರೌರ್ಯದಿಂದ ; ನೀಚತನದಿಂದ. Was f. murdered ಘೋರವಾಗಿ ಕೊಲೆಯಾದನು. F. slandered ಅನ್ಯಾಯವಾಗಿ ದೋಷಾರೋಪಣೆಗೊಳಗಾದನು. **Foúlness** (ನಾ.) ಹೊಲಸು ; ಅನ್ಯಾಯ ; ಹೊಲಸು ಪದಾರ್ಥ, ವಿಷಯ ; ಅಸಹ್ಯ ಹುಟ್ಟಿಸುವ ದುಷ್ಟತನ.

Foúlard ಫೂಲಾರ್(ಡ್) (ನಾ.) ರೇಷ್ಮೆಯ ಅಥವಾ ರೇಷ್ಮೆ ಮತ್ತು ಹತ್ತಿಯ ಬೆರಕೆಯ ತೆಳುಬಟ್ಟೆ ; ಇದರ ಕರವಸ್ತ್ರ.

Foúmart ಫೂಮಾರ್ಟ್ (ನಾ.) =Polecat.

Found[1] ಫೌಂಡ್ (ಕ್ರಿ.) (ಕಟ್ಟಡ, ಮೊ. ಗಳ) ಪಾಯ, ಅಸ್ತಿಭಾರ, —ಹಾಕು ; (ಊರು, ದೊಡ್ಡ ಕಟ್ಟಡ, ಮೊ. ನ್ನು) ಸ್ಥಾಪನೆ ಮಾಡು, ಕಟ್ಟುವುದಕ್ಕೆ ಆರಂಭಿಸು. (ಮು., ದತ್ತಿ, ಮಾನ್ಯ, ಮೊ. ನ್ನು ಬಿಟ್ಟು) ಒಂದು ಸಂಸ್ಥೆಯನ್ನು ಸ್ಥಾಪಿಸು, ಆರಂಭಿಸು, ಪ್ರವರ್ತನೆ ಮಾಡು. (ಕಥೆ, ಸಂಪತ್ತು, ವರ್ಗೀಕರಣ, ನಿಯಮ, ಮೊ.) ಒಂದು ನಿರ್ದಿಷ್ಟ ಆಧಾರ, ತತ್ತ್ವ, ಮೊ. ಗಳಮೇಲೆ ನಿಲ್ಲಿಸು, ಏರ್ಪಡಿಸು, ಕಟ್ಟು, ಏರ್ಪಡು, ನಿಲ್ಲು ; ಅವಲಂಬಿಸು ; (ವಾದ, ಮೊ. ಕ್ಕೆ) ಆಧಾರವಾಗಿಟ್ಟುಕೊ, ಆಧಾರವಾಗಿರು (Is founded in justice ನ್ಯಾಯದ ಮೇಲೆ ನಿಂತಿದೆ. Well, ill, founded ಸಾಧಾರವಾದ, ನಿರಾಧಾರವಾದ). **Foundátion** (ನಾ.) ಸ್ಥಾಪನೆ ; (ಮು., ದತ್ತಿ, ಉಂಬಳಿ, ಮಾನ್ಯ, ಮೊ. ನ್ನು ಒದಗಿಸಿ) ಒಂದು ಸಂಸ್ಥೆಯನ್ನು ಶಾಶ್ವತವಾಗಿ ಸ್ಥಾಪಿಸುವುದು ; ಹೀಗೆ ಸ್ಥಾಪಿಸಿದ ಸಂಸ್ಥೆ (ಸಂನ್ಯಾಸಿ ಮಠ, ಪ್ರೌಢ ವಿದ್ಯಾಶಾಲೆ, ವೈದ್ಯಶಾಲೆ, ಮೊ.) ; ಅಂಥ ಸಂಸ್ಥೆಯ ವರಮಾನ, ದತ್ತಿ, ಮೊ. ವು (On the f. ಅಂಥ ದತ್ತಿ, ಮೊ. ಗಳಿಂದ ಪ್ರಯೋಜನ ಪಡೆಯುವ). ಕಟ್ಟಡ ನಿಂತಿರುವ, ಸಹಜವಾದ ಅಥವಾ ಕೃತಕವಾದ, ಗಟ್ಟಿನೆಲ ; ಪಾಯ, ಅಸ್ತಿಭಾರ ; ಬುಡ ; ಮೂಲ ; ತಳ ; ಆಧಾರ ; ಮೂಲ ತತ್ತ್ವ (Report has no f. ಸುದ್ದಿಗೆ ಬುಡವಿಲ್ಲ ; ಸುದ್ದಿ ನಿರಾಧಾರವಾದದ್ದು. Base religion on a moral f. ಮತಧರ್ಮವನ್ನು ನೀತಿಯ ತಳಪಾಯದಮೇಲೆ ಸ್ಥಾಪಿಸು). ಇತರ ಭಾಗಗಳು ಮೇಲೆ ನಿಲ್ಲಲು ಆಧಾರವಾದ ತಳ, ಒಡಲು, ಮೈ (ಉದಾ., 'ಕ್ರೋಷೇ' ಮತ್ತು ಕಸೂತಿ ಕೆಲಸದಲ್ಲಿ). **F.-muslin, -net** ಉಡುಪು, ಮೊ. ವು (ಮಡಿಸಿಹೋಗದೆ) ದೃಢವಾಗಿ ನಿಲ್ಲುವಂತೆ ಮಾಡಲು ಉಪಯೋಗಿಸುವ ಅಂಟುಸವರಿದ ಬಿರುಸುಬಟ್ಟೆ. **F.-school** ದತ್ತಿಬಿಟ್ಟಿರುವ ವಿದ್ಯಾಶಾಲೆ. **F.-stone** ಮಂದಿರ, ಮೊ. ಗಳ ಸ್ಥಾಪನೆಯಲ್ಲಿ ಉತ್ಸವದೊಡನೆ ಹಾಕಿದ ಅಡಿಗಲ್ಲು, ಅಸ್ತಿಭಾರ ಶಿಲೆ ; ಮುಹೂರ್ತ ಕಲ್ಲು. **Foundátioner** (ನಾ.) ದತ್ತಿ ವಿದ್ಯಾಶಾಲೆಯ ನಿಧಿಯಿಂದ ಸಹಾಯ ಪಡೆಯು(ತ್ತಿರು)ವವನು : ದತ್ತಿ ವೇತನಿ. **Foúnder**[1] (ನಾ.) (ಕ್ರಿಯಾರ್ಥಗಳಲ್ಲಿ). ಸ್ಥಾಪಕ ; ಪ್ರವರ್ತಕ. F.'s kin (ಚುನಾವಣೆಗೆ ಅಥವಾ ಪ್ರಥಮ ಗೌರವಕ್ಕೆ ಹಕ್ಕುಳ್ಳ) ಸ್ಥಾಪಕನ ಬಂಧುಗಳು. F.'s shares (ಸಾಮಾನ್ಯ ಬಂಡವಾಳದ ಪಾಲುಗಳಲ್ಲದೆ ಬೇರೆಯಾಗಿ ಕೊಟ್ಟ) ಸ್ಥಾಪಕರ ಪಾಲುಗಳು (ಷೇರುಗಳು). **Foúndership** (ನಾ.) ಸ್ಥಾಪಕತ್ವ. **Foúndress** (ನಾ., ಸ್ತ್ರೀ.)

Found[2] ಫೌಂಡ್ (ಕ್ರಿ. ಸಕ.) (ಲೋಹವನ್ನು) ಕರಗಿಸಿ ಎರಕಹೊಯ್ಯಿ ; (ಗಾಜುತಯಾರಿಕೆಗೆ ಸಾಮಗ್ರಿಗಳನ್ನು ಸೇರಿಸಿ) ಕರಗಿಸು ; (ಲೋಹದ ಅಥವಾ ಗಾಜಿನ ವಸ್ತುವನ್ನು) ಕರಗಿಸಿ, ಎರಕ ಹೊಯ್ದು, ತಯಾರಿಸು. **Foúnder**[2] (ನಾ.) ಎರಕಗಾರ ; ಎರಕದ ಲೋಹದ ಕೆಲಸಗಾರ ; ಗಾಜು ಎರಕಹೊಯ್ಯುವವನು. **Foúndry** ಫೌಂಡ್ರಿ (ನಾ.) ಎರಕ ಹೊಯ್ಯುವ ಕಲೆ, ಕಸಬು ; ಎರಕದ ಕೆಲಸ ; ಎರಕ ಹೊಯ್ದ ಸಾಮಾನು ; ಎರಕ ಹೊಯ್ಯುವ ಕಾರಖಾನೆ (ರೂಪ. ಸಹ)

Found[3] ಫೌಂಡ್. Find ಧಾತುವಿನ ಭೂತ., ಭೂ. ಕೃ.

Foundátion. **Found**[1] ನೋಡಿ.

Foúnder[3] ಫೌಂಡರ್ (ಕ್ರಿ., ನಾ.) (ಮಣ್ಣು, ಕಟ್ಟಡ, ಮೊ.) ಕೆಡೆದು ಬೀಳು, ಕುಸಿದು ಬೀಳು, ಸಡಿಲ ಬೀಳು, ಉರುಳು. (ಕುದುರೆ, ಸವಾರ) ಹೆಚ್ಚುದಣಿವಿನಿಂದ ಕುಸಿದು, ಸುಸ್ತು, ಬೀಳು, —ಬೀಳಿಸು ; ಸೋತು ಬೀಳು ; ಕುಂಟಾಗಿ ಬೀಳು. (ಬದಿನೆಲ, ಉಸುಬು, ಮೊ. ಗಳಲ್ಲಿ) ಸಿಕ್ಕಿಕೊ, ಹೂತುಕೊ. (ಹಡಗು) ನೀರು ತುಂಬಿ ಮುಳುಗಿಹೋಗು, ಮುಳುಗಿಸು. (ನಾ.) ಹೆಚ್ಚು ದುಡಿತದಿಂದ ಕುದುರೆಯ ಪಾದ ಊದಿಕೊಳ್ಳುವುದು ; ಕುದುರೆಯ ಎದೆಚಳುಕು, ವಾತ (= Chest, body, -f.). **Foúnderous** (ಗು.) ಮುಳುಗಿಹೋಗುವಂತೆ, ಹೂತುಹೋಗುವಂತೆ, ಮಾಡುವ ; (ಬಂಡಿಯ) ಚಕ್ರದ ಜಾಡುಗಳೂ ಹಳ್ಳಗಳೂ ತುಂಬಿರುವ.

Foúndling (ನಾ.) ತಂದೆ ತಾಯಿ ಗೊತ್ತಿಲ್ಲದ, ತೊರೆದುಬಿಟ್ಟ, ಬೀದಿಯಲ್ಲಿ ಸಿಕ್ಕಿದ, —ಕೂಸು ; ಬಿಸುಟ, ತಬ್ಬಲಿ, —ಕೂಸು.

Fount[1] ಫೌಂಟ್ (ನಾ.) (ಕಾವ್ಯ, ಅಲಂ.) ಊಟೆ ; ಒರತೆ ; ಬುಗ್ಗೆ. ಮೂಲ, ಉತ್ಪತ್ತಿ, ಉಗಮ, —ಸ್ಥಾನ ; ಜನ್ಮಸ್ಥಳ ; ಆಕರ (ರೂಪ. ಸಹ) ; = Fountain. ದೀಪದ(ಲ್ಲಿ) ಎಣ್ಣೆ(ಯಿರುವ) ಬುಡ್ಡಿ : ತೈಲದಾನಿ ; ಲೇಖನಿಯ(ಲ್ಲಿ) ಮಸಿ (ತುಂಬಿರುವ) ಕೊಳವೆ. **Foúntain** ಫೌಂಟೆ(ಟಿ)ನ್ (ನಾ.) ನೀರುಬುಗ್ಗೆ ; ಊಟೆ ; ಒರತೆ ; ಚಿಲುಮೆ ; (ನದಿ, ಮೊ. ಗಳ) ಮೂಲ [(ರೂಪ.) : Crown is the f. of honour ರಾಜತ್ವವು ಗೌರವಕ್ಕೆ ಮೂಲಸ್ಥಾನ. Poison the fountains of trust ನಂಬಿಕೆಯ ಚಿಲುಮೆಗೆ ನಂಜಿಡು ; ನಂಬಿಕೆ ಹಾಳುಮಾಡು)]. ನೀರಿನ ಜೀರ್ಕೊಳವಿ, ಕಾರಂಜಿ ; ಧಾರಾ ಯಂತ್ರ ; (ಕುಡಿಯುವ) ನೀರಿನ ಕೊಳಾಯಿ (= Drinking-f.). ದೀಪದಲ್ಲಿ ಎಣ್ಣೆಗೆ, ಮುದ್ರಣ ಯಂತ್ರದಲ್ಲಿ ಮಸಿಗೆ, ಇರುವ ಸಂಚಯ ಪಾತ್ರೆ : ತೈಲದಾನಿ ; ಮಸಿದಾನಿ. **F.-pen** ಮಸಿಗೊಳವೆಯಿರುವ ಲೇಖನಿ ; ಚಿಲುಮೆ ಲೇಖನಿ. **F.-head** ಮೂಲ ಉಗಮಸ್ಥಾನ ; ಆದಿ ಮೂಲ. (-)**fountained** (ಗು.)

Fount[2] ಫೌಂಟ್ (ನಾ.) (ಮುದ್ರಣ) ಒಂದೇ ಮಾಟದ ಮುಖವೂ ಒಂದೇ ಅಳತೆಯೂ ಉಳ್ಳ ಅಚ್ಚಿನ ಮೊಳೆಗಳು.

Four ಫೋರ್ (ಗು.) ನಾಲ್ಕು (೪, 4, IV) (F. corners of the earth ಪೃಥಿವಿಯ ಮೂಲೆ ಮೂಲೆಗಳೂ ; ದಿಗ್ದೇಶಗಳು ; ಅತ್ಯಂತ ದೂರ ಪ್ರಾಂತಗಳು. F. corners of document ದಸ್ತ್ರವೇಜಿನ ವ್ಯಾಪ್ತಿ, ವಿಸ್ತಾರ, ಎಲ್ಲೆಕಟ್ಟು, ಪರಿಮಿತಿ. Within the f. seas ಗ್ರೇಟ್ ಬ್ರಿಟನ್ನಿನಲ್ಲಿ. F. figures ೧,೦೦೦ ದಿಂದ ೯,೯೯೯ ರ ವರೆಗಿನ ಯಾವುದಾದರೂ ಸಂಖ್ಯೆ ; ನಾಲ್ಕು ಅಂಕಿಗಳುಳ್ಳ ಸಂಖ್ಯೆ. F.-foot way ಕಂಬಿಗಳ ನಡುವೆ ೪ ಅಡಿ ೮॥ ಅಂಗುಲ ಅಂತರವುಳ್ಳ ರೈಲುದಾರಿ. Twenty-f., F.-&-twenty ಇಪ್ಪತ್ತನಾಲ್ಕು. F.-&-twentieth ಇಪ್ಪತ್ತ ನಾಲ್ಕನೆಯ). (ಅಧ್ಯಾಹಾರ) (ಗಡಿಯಾರದಲ್ಲಿ) ನಾಲ್ಕು ಗಂಟೆ (= F. o'clock). Carriage & four ನಾಲ್ಕು ಕುದುರೆ ಕಟ್ಟಿದ ಸಾರೋಟು. **F.-coupled** (locomotive) ನಾಲ್ಕು ಜೋಡು ಚಕ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳುಳ್ಳ (ಸ್ಥಾನಾಂತರ ಚಲ). **F.-course** ಒಂದು ಜಮೀನಿನಲ್ಲಿ ವರ್ಷಂಪ್ರತಿ ಒಂದೇ ಬೆಳೆಯನ್ನಿಡದೆ ವರ್ಷೇ ವರ್ಷೇ ಬೇರೆ ಬೇರೆ ಬೆಳೆಯಿಟ್ಟು ಪ್ರತಿ ಬೆಳೆಯೂ ನಾಲ್ಕು ವರ್ಷಕ್ಕೊಮ್ಮೆ ಬರುವಂತೆ ಪರಿವರ್ತಿಸುವುದು; ನಾಲ್ಕು ಬದಲಿನ ಬೆಳೆ. **F.-dimension(al)** (Dimension ನೋಡಿ). **F.-footed** ನಾಲ್ಕು ಕಾಲುಗಳುಳ್ಳ; ಚತುಷ್ಪಾದಿ. **F.-handed** (ಕೋತಿಗಳ ವಿಷಯದಲ್ಲಿ) ನಾಲ್ಕು ಕೈಗಳುಳ್ಳ. (ಆಟ) ನಾಲ್ಕು ಮಂದಿ ಆಡುವ. (ಸಂ.) ಇಬ್ಬರು ಬಾಜಿಸುವ, ನುಡಿಸುವ. **F.-horse(d)** ನಾಲ್ಕು ಕುದುರೆ ಹೂಡಿದ. **F.-in-hand** (ನಾ.) ಒಬ್ಬನೇ ಬಂಡಿಯಾಳು ಹೊಡೆಯುವ ನಾಲ್ಕು ಕುದುರೆಯ ಗಾಡಿ. (ಕ್ರಿ. ವಿ.) ಇಂಥ ಗಾಡಿಯಲ್ಲಿ (Drive f.-in-hand). **F.-oar** ನಾಲ್ಕು ಹುಟ್ಟುಗಳ (ದೋಣಿ). **F. o'clock** (flower) ಒಂದು ಜಾತಿಯ ಹೂವಿನ ಗಿಡ. **F.-part** ನಾಲ್ಕು ದನಿಗಳಲ್ಲಿ ಹಾಡುವುದಕ್ಕೆ ಅಳವಡಿಸಿದ. **Fóurpence** ನಾಲ್ಕು ಪೆನಿ; ನಾಲ್ಕು ಪೆನಿ ನಾಣ್ಯ. **Fóurpenny** ನಾಲ್ಕು ಪೆನಿ ಬೆಲೆಯ; ನಾಲ್ಕು ಪೆನಿ ನಾಣ್ಯ. **F.-post** (ಮಂಚದ ಪರದೆಗಾಗಿ) ನಾಲ್ಕು ಚಪ್ಪರಗಾಲಿನ. **F.-poster** ಚಪ್ಪರಗಾಲಿನ ಮಂಚ. ನಾಲ್ಕು ಕೂವೆಯ ಹಡಗು. **F.-pounder** ನಾಲ್ಕು ಪೌಂಡು ತೂಕದ ಗುಂಡನ್ನು ಹಾರಿಸುವ ಫಿರಂಗಿ. **Fóurscore** ಎಂಬತ್ತು; ಎಂಬತ್ತು ವರ್ಷ ವಯಸ್ಸು. **F.-square** ಚಚ್ಚೌಕ(ದ); ಭದ್ರ ಬುಡದ; ದೃಢವಾದ; ಕದಲದ; ಸ್ಥಿರ. **F.-wheel** ನಾಲ್ಕು ಚಕ್ರದ ಬಂಡಿ. **F.-wheeler** ನಾಲ್ಕು ಚಕ್ರದ ಬಾಡಿಗೆ ಬಂಡಿ.

Four (ನಾ.) ನಾಲ್ಕು; ನಾಲ್ಕು ಜನರ ವಸ್ತುಗಳ,—ತಂಡ [ಮು., ಇಸ್ಪೀಟಿನ ನಾಲ್ಕನೆಯ ಬಂದು, ದಾಳದ ನಾಲ್ಕು ಗುರುತಿರುವ ಮುಖ, (ದಾಳದ) ನಾಲ್ಕರ ಗರ]. ನಾಲ್ಕು ಹುಟ್ಟುಗಳ ದೋಣಿ; ಈ ದೋಣಿ ನಡಸುವ ನಾಲ್ವರು ಅಂಬಿಗರು (**Fours** ಇಂಥ ದೋಣಿಗಳ ಪಂದ್ಯ). (ಕ್ರಿಕೆಟ್) ನಾಲ್ಕು ಓಟಗಳ ಹೊಡೆತ. [On all fours (ಹಿಂದೆ, Four = ಕೈಕಾಲುಗಳು ನಾಲ್ಕು) ಅಂಬೆಗಾಲಿಕ್ಕಿ (ಕೈಕಾಲೂ ಮಂಡಿಯೂ ಊರಿ); (ರೂಪ.) ಸಂಪೂರ್ಣವಾದ ಸಾಮ್ಯ, ಸಾದೃಶ್ಯ, ಹೋಲಿಕೆ, —ಉಳ್ಳ (The cases are not on all fours ಆ ಸಂದರ್ಭಗಳಿಗೆ, ವಿಚಾರಗಳಿಗೆ, ವಿಷಯಗಳಿಗೆ, —ಪರಸ್ಪರ ಸಂಪೂರ್ಣ ಸಾದೃಶ್ಯವಿಲ್ಲ. Is the simile on all fours with the thing illustrated? ಉಪಮಾನ ಉಪಮೇಯಗಳಿಗೆ ಬಿಂಬ ಪ್ರತಿಬಿಂಬ ಭಾವ (ಸಂಪೂರ್ಣ ಸಾದೃಶ್ಯ) ಇದೆಯೇ?]. (ಸೈನ್ಯ) (ಬ. ವ. ದಲ್ಲಿ) (ಒಂದರ ಹಿಂದೊಂದರಂತೆ) ನಾಲ್ಕು ಸಾಲು (ಮುಂದಕ್ಕೆ ಸಾಗಲು, ಸಾ., ಪಕ್ಕಕ್ಕೆ ಅಭಿಮುಖವಾಗಿ) (Fours right or left). [Form fours (Form ನೋಡಿ)]. ನಾಲ್ಕು ಪೆನಿಯ ಮದ್ಯ. (ಬ. ವ. ದಲ್ಲಿ) ಸರ್ಕಾರದ ಅಥವಾ ಒಂದು ಸಂಸ್ಥೆಯ ಸೇಕಡ ನಾಲ್ಕರ ಋಣಸಂಚಯ, ಬಂಡವಾಳ. **Fóurfold** (ಗು., ಕ್ರಿ. ವಿ.) ನಾಲ್ಕು ಮಡಿಯ; ನಾಲ್ಕರಷ್ಟು. **Fóursome** (ನಾ.) ಎರಡು ಜೊತೆ ಆಟಗಾರರು ಆಡುವ ಗಾಲ್ಫ್ ಆಟ. **Fourth** ಫೋರ್ತ್ (ಗು., ನಾ.) ನಾಲ್ಕನೆಯ(ದು, ವನು, ವಳು); [The f. ನಾಲ್ಕನೆಯ ತಾರೀಖು. A f., f. part ಕಾಲು, ಕಾಲು ಭಾಗ]. (ನಾ.) ನಾಲ್ಕನೆಯ ಒಂದು ಭಾಗ; ಕಾಲು ಭಾಗ. (ಸಂ.) (ಒಂದು ಸ್ವರಗ್ರಾಮದಲ್ಲಿ) ಒಂದು ನಿರ್ದಿಷ್ಟ ಸ್ವರಕ್ಕೆ ಮೇಲಿನ ಅಥವಾ ಕೆಳಗಿನ ನಾಲ್ಕನೆಯ ಅಂತರದ ಸ್ವರ; ಈ ಅಂತರ; ಒಂದು ಸ್ವರದ ಮತ್ತು ಅದರ ಚತುರ್ಥಾಂತರ ಸ್ವರದ ಸ್ವರಮೈತ್ರಿ. (F. of July ಅಮೆ. ಸಂ.ಗಳ ಸ್ವಾತಂತ್ರ್ಯ ದಿನಾಚರಣೆಯ ತಾರೀಖು). (ಬ. ವ. ದಲ್ಲಿ) ನಾಲ್ಕನೆಯ ದರ್ಜೆಯ (ಕೀಳು ತರದ) ಸಾಮಾನುಗಳು. **Fóurthly** (ಕ್ರಿ. ವಿ.) (ಎಣಿಕೆಯಲ್ಲಿ) ನಾಲ್ಕನೆಯದಾಗಿ.

Fourteén (ಗು., ನಾ.) ಹದಿನಾಲ್ಕು (೧೪, 14, XIV). **Fourteénth** (ಗು., ನಾ.) ಹದಿನಾಲ್ಕನೆಯ(ದು, ವನು, ವಳು)

Fórty ಫಾರ್ಟಿ (ಗು., ನಾ.) ನಲವತ್ತು (೪೦, 40, XL); [F.-one, F.-first, etc. The forty-five ಕ್ರಿ. ಶ. ೧೭೪೫ರಲ್ಲಿ ನಡೆದ 'ಜ್ಯಾಕೊಬೈಟ್' ದಂಗೆ. F. winks (ಮು., ಮಧ್ಯಾಹ್ನದ ಊಟವಾದಮೇಲೆ ಮಾಡುವ) ಸಣ್ಣ ನಿದ್ದೆ, ಜೊಂಪು]. ನಲವತ್ತು ವರ್ಷ ವಯಸ್ಸು (The forties ೪೦ರಿಂದ ೪೯ರ ವರೆಗಿನ ಜೀವನ ಕಾಲ, ಅಥವಾ ಶತಮಾನದ ಕಾಲ). Roaring forties ಉ. ಮತ್ತು ದ. ೪೦° ಯಿಂದ ೫೦° ವರೆಗಿನ ಅಕ್ಷಾಂಶಗಳಲ್ಲಿರುವ ಸಂಕ್ಷುಬ್ಧ ಸಾಗರಭಾಗಗಳು. **Fórtieth** (ಗು., ನಾ.) ನಲವತ್ತನೆಯ(ದು)

Fóursome. **Four** (ನಾ.) ನೋಡಿ.

Fourgón ಫೂರ್‌ಗಾನ್ (ನಾ.) ಸಾಮಾನು, ಮದ್ದು ಗುಂಡು, ಮೊ.ನ್ನು ಸಾಗಿಸಿಕೊಂಡು ಹೋಗುವ ಮುಚ್ಚುಗಾಡಿ; ಪ್ರಯಾಣಿಕರ ಸಾಮಾನನ್ನಿಡುವ ಮುಚ್ಚು ರೈಲು ಬಂಡಿ, ಗಾಡಿ: ಸಾಮಾನು ಡಬ್ಬಿ.

Foúrierism ಫೂ(ಫು)ರಿಯರಿಸ್ಮ್ (ನಾ.) (ಸಮಾಜದ ಪುನರ್ವ್ಯವಸ್ಥೆಗಾಗಿ ಮಾಡಿದ) ಫೂರಿಯರಿನ ಪದ್ಧತಿ (= Phalanstery). **Foúrierist** (ನಾ.); **Foúrierite** (ನಾ.) ಫೂರಿಯರಿನ ಪಂಥದವನು. (Fourier ಎಂಬ ೧೯ನೆಯ ಶತಮಾನದ ಫ್ರೆಂಚ್ ಸಮತಾವಾದಿಯ ಹೆಸರಿನಿಂದ)

Fowl ಫೌಲ್ (ನಾ., ಕ್ರಿ. ಅಕ.) (ವಿರ. ಪ್ರ.) ಪಕ್ಷಿ(ಗಳು) [Wild-f. (ಕಾಡು ಹಕ್ಕಿಗಳು) ಎಂಬಲ್ಲಿ ಮಾತ್ರ]; (ಆಹಾರಕ್ಕಾಗಿ ಉಪಯೋಗಿಸುವ) ಹಕ್ಕಿಯ ಮಾಂಸ [Fish, flesh & f. (ಮೀನು, ಮಾಂಸ, ಹಕ್ಕಿಯ ಮಾಂಸ) ಎಂಬಲ್ಲಿ ಮಾತ್ರ]; ಕೋಳಿ, ಹುಂಜ [Barndoor-f. ಕಣಜದ ಕೋಳಿ. Game-f. ಕಾಳಗದ ಹುಂಜ. Guinea-f. (ನವಿಲು ಜಾತಿಯ) ಒಂದು ಬಗೆಯ ಕೋಳಿ. F.-run ಕೋಳಿಗಳ ಓಡಾಟದ ಸ್ಥಳ; ಕೋಳಿಗಳನ್ನು ಬೆಳಸುವ ಸ್ಥಳ]; (ಆಹಾರಕ್ಕಾಗಿ ಉಪಯೋಗಿಸುವ) ಕೋಳಿಯ ಮಾಂಸ. (ಕ್ರಿ.) ಕಾಡು ಕೋಳಿಯನ್ನು ಅಥವಾ ಕಾಡು ಹಕ್ಕಿಯನ್ನು ಹಿಡಿ, ಬೇಟೆಯಾಡು, ಗುಂಡಿನಿಂದ ಹೊಡೆ, ಬಲೆಯಲ್ಲಿ ಕೆಡವು. **Fówler** (ನಾ.) (ವಿರ. ಪ್ರ.) (ಮು., ಬಲೆ ಬೀಸಿ) ಕಾಡುಹಕ್ಕಿ ಹಿಡಿಯುವವನು; ಹಕ್ಕಿಯ ಬೇಡ. **Fówling** (ನಾ.) ಕಾಡುಹಕ್ಕಿಯ ಬೇಟೆ. **F.-piece** ಕಾಡುಹಕ್ಕಿ ಬೇಟೆಯ ಹಗುರವಾದ ಬಂದೂಕು. (ಶಿಕಾರಿ) ಹಕ್ಕಿ ಶಿಕಾರಿಯ ಚಿತ್ರ.

Fox ಫಾಕ್ಸ್ (ನಾ.; ಸ್ತ್ರೀ. Vixen, Bitch-f.) ಕೆಂಚು ಕೂದಲಿನ, ಮೊನೆ ಮುಸುಡಿಯ, ಪೊದೆಗೂದಲ ಬಾಲದ, ಒಂದು ಚತುಷ್ಪಾದಿ: ನರಿ; ಗುಳ್ಳನರಿ; ಕಂಕ ನರಿ (ಇದು ತಂತ್ರಕ್ಕೆ ಹೆಸರುಗೊಂಡದ್ದು. ಇಂಗ್ಲೆಂಡಿನಲ್ಲಿ ಇದು ಬೇಟೆಯ ಮೃಗ). (ರೂಪ.) ತಂತ್ರಿ; ಕಪಟಿ; ಕುಯುಕ್ತಿಗಾರ. ಉತ್ತರ ದಿಕ್ಕಿನ ಒಂದು ನಕ್ಷತ್ರಪುಂಜ. Flying f. (Fly[2] ನೋಡಿ). F. & geese ಮಣೆಯಮೇಲೆ ಆಡುವ ಒಂದು ತರದ ಆಟ. F. & hounds ಹುಡುಗರು ಆಡುವ ಒಂದು ತರದ (ಹಿಡಿಯುವ) ಆಟ. **F.-brush** ನರಿಯ ಬಾಲ. **F.-earth** ನರಿಯ ಬಿಲ. **Fóxglove** ಒಂದು ಬಗೆಯ ಹೂವಿನ ಗಿಡ. **Fóxhound** ನರಿಯ ಬೇಟೆಯ ನಾಯಿ. **F.-hunt** (ನಾ., ಕ್ರಿ. ಅಕ.) ನರಿಯ ಬೇಟೆ(ಯಾಡು). **F.-hunter** ನರಿಬೇಟೆಗಾರ. **F.-hunting** (ನಾ., ಗು.) ನರಿಯ ಬೇಟೆ(ಯಾಡುವ). **Fóxtail** ನರಿಯ ಬಾಲ. ಒಂದು ಹುಲ್ಲುಜಾತಿ. **F.-terrier** (ನರಿಯನ್ನು ಬಿಲದಿಂದ ಹೊರಡಿಸಲು ಉಪಯೋಗಿಸುವ) ಮೋಟು ಕೂದಲಿನ ನಾಯಿಜಾತಿ (ಸಾ., ಮುದ್ದಿಗಾಗಿ ಮಾತ್ರ ಸಾಕುವದು). **Fóxtrot** ಅಮೆರಿಕನರ ಒಂದು ಬಗೆಯ ಕುಣಿತ. **Fóxy** (ಗು.) ನರಿಯಂಥ; ತಂತ್ರಿಯಾದ; ಕುಯುಕ್ತಿಯ; ಉಪಾಯಗಾರನಾದ; ತಂತ್ರಿಯಾಗಿ ಕಾಣುವ. ಕೆಂಗೆಂದು ಬಣ್ಣದ; (ಬಣ್ಣಹಾಕುವುದರಲ್ಲಿ) ಹೆಚ್ಚು ಉಜ್ವಲವಾದ. (ಹೆಚ್ಚು ಕಾಲ, ಕೊಳೆತ, ಕಾಡಿಗೆ ರೋಗ, ಮೊ. ಗಳಿಂದ) ಬಣ್ಣ ಅಥವಾ ಗುಣ ಕೆಟ್ಟುಹೋದ. **Fóxiness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Fox (ಕ್ರಿ.) ತಂತ್ರಿಯಾಗಿ ವರ್ತಿಸು ; ಸೋಗು ಹಾಕು ; ಕಪಟಾಚರಣೆ ಮಾಡು. (ಪುಸ್ತಕದ ಹಾಳೆ, ಕೊರೆದ ಅಥವಾ ಕೆತ್ತನೆಯ ಚಿತ್ರ, ಮೊ. ವು ಕಂದು ಚುಕ್ಕೆಗಳಿಂದ) ಬಣ್ಣಗೆಡು, ಬಣ್ಣಗೆಡಿಸು. (ಮದ್ಯ, ಮೊ.) ಹುಳಿತು ಕೆಟ್ಟುಹೋಗು.

Fóyer (F) ಫ್ವಾಯೇ (ನಾ.) ನಾಟಕಶಾಲೆ, ಮೊ. ಗಳಲ್ಲಿ ನೋಟಕರು ವಿರಾಮ ಕಾಲದಲ್ಲಿ ಉಪಯೋಗಿಸುವ ದೊಡ್ಡ ಕೋಣೆ : ಆರಾಮ ಕೋಣೆ.

Fra (It.) ಫ್ರಾ (ನಾ.) = Frate (ಕ್ರೈಸ್ತ ಸಂನ್ಯಾಸಿಯ ಹೆಸರಿನ ಹಿಂದೆ ಸೇರಿಸುವ ಗೌರವ ಸೂಚಕ ಪದ)

Frácas (F) ಫ್ರಾ(ಫ್ರ್ಯಾ)ಕಾ, (ಅಮೆ. ಸಂ.) ಫ್ರೇಕಸ್ (ನಾ. ; ಬ. ವ. ಅದೇ) ಕೂಗಾಟದ ಜಗಳ ; ಗಲಾಟೆ ; ಗೊಂದಲ ; ಗದ್ದಲ ; ದೊಂಬಿ.

Fráction ಫ್ರ್ಯಾಕ್‌ಷನ್ (ನಾ.) (ಗಣಿತ) ಅಪೂರ್ಣಾಂಕ ; ಭಿನ್ನಾಂಕ; ಭಿನ್ನರಾಶಿ (Vulgar f. ಸಾಮಾನ್ಯ ಭಿನ್ನರಾಶಿ : ಮಧ್ಯೆ ಅಡ್ಡಗೆರೆ ಹಾಕಿದ ಅಂಶ ಮತ್ತು ಛೇದವುಳ್ಳ ಭಿನ್ನಾಂಕ. Decimal f. ದಶಮಾಂಶ ಭಿನ್ನರಾಶಿ. Proper f. ಶುದ್ಧ ಭಿನ್ನಾಂಕ : ಛೇದಕ್ಕಿಂತ ಅಂಶ ಕಡಮೆಯಾಗಿರುವ ಭಿನ್ನರಾಶಿ. Improper f. ವಿಷಮ ಭಿನ್ನಾಂಕ : ಛೇದಕ್ಕಿಂತ ಅಂಶ ಹೆಚ್ಚಾಗಿರುವ ಭಿನ್ನರಾಶಿ. Simple f. ಸರಳ ಭಿನ್ನರಾಶಿ. Compound f. ಸಂಯುಕ್ತ, ಮಿಶ್ರ, ಭಿನ್ನರಾಶಿ). ಪಾಲು ; ಭಾಗ ; ಅಂಶ ; ಕೊಂಚ ಭಾಗ ; ಲವ ; ಲೇಶ ; ಒಂದು ಚೂರು [ಮು., It is not a f. (ಅದು ಅಂಶಮಾತ್ರವಲ್ಲ, ಸ್ವಲ್ಪಮಾತ್ರವಲ್ಲ) ಎಂಬಲ್ಲಿ] ; ಮುರಿಯುವುದು ; ಮುರಿತ ; ಒಡೆತ. (ಕ್ರೈಸ್ತ) ಪ್ರಭು ಭೋಜನ ಸಂಸ್ಕಾರದ ರೊಟ್ಟಿಯನ್ನು ಮುರಿಯುವುದು. **Fráctional** (ಗು.) ಭಿನ್ನರಾಶಿಯ ; ಭಿನ್ನರಾಶಿಗೆ ಸಂಬಂಧಪಟ್ಟ ; ಒಂದು ಅಂಶವನ್ನುಳ್ಳ ; ಅಂಶವಾಗಿರುವ ; ಅಂಶ ರೂಪದ ; ಅಪೂರ್ಣ ; ಅಸಮಗ್ರ ; ಅತ್ಯಲ್ಪ. F. crystallization (ರ. ವಿ.) ಪ್ರತ್ಯೇಕ ಪ್ರತ್ಯೇಕ ಶಾಖಗಳಲ್ಲಿ ಸ್ಫಟಿಕೀಕೃತವಾಗುವ ದ್ರವಲೀನ ಘನಪದಾರ್ಥಗಳನ್ನು ಬೇರ್ಪಡಿಸುವುದು : ಅಂಶಕ ಸ್ಫಟಿಕೀಕರಣ. F. distillation (ರ. ವಿ.) ಪ್ರತ್ಯೇಕ ಪ್ರತ್ಯೇಕ ಕುದಿಶಾಖಗಳುಳ್ಳ ಮಿಶ್ರ ಚಂಚಲ ದ್ರವಗಳನ್ನು ಬೇರ್ಪಡಿಸುವುದು ; ಅಂಶಕ ಬಾಷ್ಪ ಸಾಂದ್ರೀಕರಣ. **Fráctionary** (ಗು.) = Fractional; ಅಂಶ ಕ್ರಮವಾಗಿ ನಡಸುವ ; ಭಿನ್ನಾಂಶಗಳಾಗುವ. **Fráctionate** — ನೇಟ್ (ಕ್ರಿ. ಸಕ.) ಒಂದು ಮಿಶ್ರಣದಲ್ಲಿಯ ಬೇರೆ ಬೇರೆ ಅಂಶಗಳನ್ನು ಬಾಷ್ಪ ಸಾಂದ್ರೀಕರಣದಿಂದಾಗಲಿ, ಇತರ ಮಾರ್ಗದಿಂದಾಗಲಿ, ಪ್ರತ್ಯೇಕಿಸು. **Fráctionize** (ಕ್ರಿ. ಸಕ.) (ಗಣಿತ) ಭಿನ್ನರಾಶಿಗಳಾಗಿ ವಿಭಾಗಿಸು ; ಭಿನ್ನಾಂಶಗಳನ್ನಾಗಿ ಒಡೆ.

Fráctious ಫ್ರ್ಯಾಕ್‌ಷಸ್ (ಗು.) ಕಟ್ಟಿಗೆ ಸಗ್ಗದ; ಹಠಮಾರಿದ ; (ಈಗ ಮು., ಮಕ್ಕಳ ವಿಷಯದಲ್ಲಿ) ಸಮಾಧಾನಗೆಟ್ಟ ; ಸಿಡಿಗುಟ್ಟುವ ; ಸಿಡುಕಿನ ; ಕೋಪದ ; ರೇಗಾಡುವ ; ಹಾರಾಡುವ. **Fráctiously** (ಕ್ರಿ. ವಿ.) ; **Fráctiousness** (ನಾ.)

Frácture ಫ್ರ್ಯಾಕ್ಚ್ಯು(ಚ)ರ್ (ನಾ., ಕ್ರಿ.) (ಮು., ಮೂಳೆಯ ಅಥವಾ ಮೃದ್ವಸ್ಥಿಯ) ಮುರಿತ, ಒಡೆತ : ಅಸ್ಥಿಭಂಗ [Compound f., Simple f. (ಆಯಾ ಪದಗಳನ್ನು ನೋಡಿ)]. (ಗಾಜು, ಮೊ. ಗಳ) ಸೀಳಿಕೆ, ಬಿರಿತ. (ಸುತ್ತಿಗೆಯಿಂದ ಒಡೆದಾಗ ತೋರುವ) ಖನಿಜದ ಹೊಸ ಮೇಲ್ಮೈ. ಮುಂದಿನ ವ್ಯಂಜನದ ಪ್ರಭಾವದಿಂದ ಸರಳ ಸ್ವರ ಸಂಯುಕ್ತ ಸ್ವರವಾಗುವುದು : ಇಂಥ ಸಂಯುಕ್ತ ಸ್ವರ. (ಕ್ರಿ.) (ಮೂಳೆ, ಮೊ.) ಮುರಿ, ಒಡೆ, ಬಿರಿ(ಯಿಸು), ಸೀಳು.

Fraénum, Fré- ಫ್ರೀನಮ್ (ನಾ., ಬ. ವ. -na) ಒಂದು ಅಂಗದ ಚಲನೆಯನ್ನು ತಡೆಯುವ ನಿರೋಧಕ ಅಸ್ಥಿರಜ್ಜು.

Frágile ಫ್ರ್ಯಾಜಿ(ಜೈ)ಲ್ (ಗು.) ಸುಲಭವಾಗಿ ಒಡೆಯುವ, ತುಂಡು ತುಂಡಾಗುವ ; ಭಿದುರ ; ಭಂಗುರ ; ದುರ್ಬಲ ; ನಶ್ವರ ; ಅದೃಢಾಂಗದ ; ಸೂಕ್ಷ್ಮ ; ನಾಜೂಕು ರಚನೆಯ. **Fragílity** ಫ್ರಜಿಲಿಟಿ (ನಾ.)

Frágment ಫ್ರ್ಯಾಗ್‌ಮೆಂಟ್ (ನಾ.) (ಒಡೆದ, ಮುರಿದ, ಕಳಚಿಹೋದ) ತುಂಡು, ಚೂರು, ಮುರುಕು, ಖಂಡ. ನಷ್ಟವಾಗಿಹೋದ ಒಂದು ಪೂರ್ಣಕೃತಿಯ ಉಳಿಕೆ, ಅವಶೇಷ (ಮು., ಒಂದು ಗ್ರಂಥದ, ಲೇಖನದ, ಕಲಾ ಕೃತಿಯ, —ಅವಶಿಷ್ಟ). **Frágmentary** (ಗು.) ; **Fragmentátion** (ನಾ.) ತುಂಡು ತುಂಡಾಗಿ ಒಡೆದುಹೋಗುವುದು, ಭಾಗ ಮಾಡುವುದು. (ಜೀ. ವಿ.) ಹೊಸ ವ್ಯಕ್ತಿಗಳಾಗಿ ಒಡೆಯುವುದು. **Frágmented** (ಗು.)

Frágrant ಫ್ರೇಗ್ರಂಟ್ (ಗು.) ಸುಗಂಧ ಸೂಸುವ ; ಸುವಾಸನೆಯ ; ಪರಿಮಳದ ; ನರುಗಂಪಿನ. **Frágrance** (ನಾ.)

Frail[1] ಫ್ರೆಯ್‌ಲ್ (ನಾ.) (ಅಂಜೂರ, ದ್ರಾಕ್ಷಿ, ಮೊ. ವನ್ನು ತುಂಬುವ) ಜಂಬು, ಜೊಂಡು, ಅಪು, ಮೊ. ಗಳಿಂದ ಮಾಡಿದ ಬುಟ್ಟಿ.

Frail[2] ಫ್ರೆಯ್‌ಲ್ (ಗು.) ಸುಲಭವಾಗಿ ಒಡೆದುಹೋಗುವ. ಕ್ಷಣಿಕ ; ನಶ್ವರ ; ಭಂಗುರ (F. life, bliss ಕ್ಷಣಿಕ ಜೀವ, —ಸುಖ) ; ದುರ್ಬಲ ; ಅದೃಢ ; ಅಲ್ಪಾರೋಗ್ಯದ ; ನೈತಿಕ ದೌರ್ಬಲ್ಯದ ; ಸುಲಭವಾಗಿ ಮನ ಸೋಲುವ ; ದುರ್ಮೋಹವನ್ನು ತಡೆಯಲಾಗದ ; ದುಷ್ಪ್ರೇರಣೆಗೊಳಗಾಗುವ. (ಹೆಂಗಸಿನ ವಿಷಯದಲ್ಲಿ, ನಯ ನುಡಿ) ದೃಢ ಮನಸ್ಸಿಲ್ಲದ ; ಕೆಟ್ಟ ನಡತೆಯ. **Fráilty** ಫ್ರೆಯ್‌ಲ್ಟಿ (ನಾ.) (ಗುಣವಾಚಕಾರ್ಥಗಳಲ್ಲಿ). ಚಾಂಚಲ್ಯ ; ದೌರ್ಬಲ್ಯ ; ಕುಂದು ; ಕೊರತೆ ; ದೋಷ.

Fraise[1] ಫ್ರೆಯ್ಸ್ (ನಾ., ಕ್ರಿ.) ಕೋಟೆಯ ತಳಕ್ಕೂ ಅಗಳ್ತೆಗೂ ಮಧ್ಯದಲ್ಲಿ ರಕ್ಷಣಾರ್ಥವಾಗಿ ಕೋಟೆಯ ಗೋಡೆಗೆ ಹೊಡೆದು ಮಾಡಿದ ದಸಿಯ ಬೇಲಿ (ಹಾಕು)

Fraise[2] ಫ್ರೆಯ್ಸ್ (ನಾ.) ಗುಂಡು ರಂಧ್ರವನ್ನು ಅಗಲಮಾಡುವ ಆಯುಧ ; ಗಡಿಯಾರದ ಚಕ್ರದ ಹಲ್ಲನ್ನು ಕೆತ್ತುವ ಆಯುಧ.

Frame ಫ್ರೇಮ್ (ಕ್ರಿ.) ರೂಪಿಸು ; ಆಕಾರ ಮಾಡು ; (ಒಂದು ಉದ್ದೇಶಕ್ಕೆ, ಕೆಲಸಕ್ಕೆ, —ಆಲೋಚನೆಗಳನ್ನು, ಕಾರ್ಯಕ್ರಮವನ್ನು, ಮತ್ತೊಬ್ಬನನ್ನು) ಅಳವಡಿಸು, ಹೊಂದಿಸು, ನಿಯೋಜಿಸು (*For, to* ಉಪ. ದೊಡನೆ). ಜಾಣತನದ, ಕುಶಲತೆಯ, —ಕುರುಹು ತೋರು (ಸಾ., *well* ಪದದೊಡನೆ) ; ಜೋಡಿಸು ; ರಚಿಸು ; ಘಟಿಸು (*To, into* ಉಪ. ದೊಡನೆ). ಭಾಗಗಳನ್ನು ಜೋಡಿಸಿ, ಮಾದರಿಯನ್ನನುಸರಿಸಿ, —ತಯಾರಿಸು, ರಚಿಸು, ನಿರ್ಮಿಸು ; (ಕಥಾವಸ್ತು, ನಿಯಮ, ಕಥೆ, ತತ್ತ್ವ, ಮೊ. ನ್ನು) ಯೋಜಿಸು, ಕಲ್ಪಿಸು, ರಚನೆ ಮಾಡು, ಕಟ್ಟು, ಹೇಳು. (ಮಾತುಗಳನ್ನು) ಉಚ್ಚರಿಸು (He could not frame to pronounce it right ಅದನ್ನು ಸರಿಯಾಗಿ ಉಚ್ಚರಿಸಲು ಅವನು ಸಮರ್ಥನಾಗಲಿಲ್ಲ). ಮನಸ್ಸಿನಲ್ಲಿ ಭಾವಿಸು, ರೂಪಿಸು, ಕಲ್ಪಿಸು, ಊಹಿಸು. ಚೌಕಟ್ಟಿನಲ್ಲಿ ಹಾಕು ; ಚೌಕಟ್ಟಾಗಿರು. **Frámable** (ಗು.) ; **Frámer** (ನಾ.) ; **Fráming** (ನಾ.) (ಕ್ರಿಯಾರ್ಥಗಳಲ್ಲಿ). ಚೌಕಟ್ಟು ; ಚೌಕಟ್ಟು ಹಾಕಿದ ವಸ್ತು.

Frame (ನಾ.) ಕಟ್ಟು ; ರಚನೆ ; ಜೋಡಣೆ ; ಕಟ್ಟಡ ; ಬಂಧ. ಘಟನೆ ; (ರೂಢಿಗೆ ಬಂದ, ಸ್ಥಾಪಿತವಾದ) ವ್ಯವಸ್ಥೆ ; ಕ್ರಮ ; ರೀತಿ (The f. of society or government ಸಮಾಜದ ಅಥವಾ ಸರ್ಕಾರದ ವ್ಯವಸ್ಥೆ, ರಚನೆ) ; (ಮನಸ್ಸಿನ ತಾತ್ಕಾಲಿಕ) ಸ್ಥಿತಿ, ಭಾವ ; (The f. of heaven or earth ಆಕಾಶದ ಅಥವಾ ಭೂಮಿಯ ಕಟ್ಟು). ಮನುಷ್ಯನ ಅಥವಾ ಪ್ರಾಣಿಯ ಮೈಕಟ್ಟು, ಒಡಲು, ದೇಹ, ಆಕಾರ (Sobs shook her f. ಬಿಕ್ಕಿ ಬಿಕ್ಕಿ ಅಳುವಲ್ಲಿ ಅವಳ ಮೈ ಕುಲುಕಿತು. Man of gigantic f. ರಾಕ್ಷಸ ಮೈಕಟ್ಟಿನ ಮನುಷ್ಯ). ಕಟ್ಟಡದ ಪಂಜರ ; ತಳ, ಅಡಿ, ಆಧಾರ, —ಕಟ್ಟು ; (ಪಟ, ಮೊ. ಗಳ) ಕಟ್ಟು, ಚೌಕಟ್ಟು. (ತೋಟಗಾರಿಕೆ) ಸಸ್ಯಗಳನ್ನು ಚಳಿಯಿಂದ ರಕ್ಷಿಸುವ ಗಾಜುಕಟ್ಟಡ. (ಗಣಿ) ಅದುರು ತೊಳೆಯುವ ಇಳಿಜಾರು ಹಲಗೆ. **F. aerial** ನಿಸ್ತಂತು ವಾರ್ತಾ ಗ್ರಾಹಕದಲ್ಲಿ ತರಂಗಗಳು ಬರುವ ದಿಕ್ಕಿಗೆ ಅಳವಡುವ ಚತುರಸ್ರಾಕಾರದ ಅಥವಾ ಸುರುಳಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಾಕಾರದ ತಂತಿಯ ಸುತ್ತುಗಳುಳ್ಳ ತಂತಿಜಾಲ. **F.-house** ಹಲಗೆ ಮುಚ್ಚಿದ ಮರದ ಚೌಕಟ್ಟಿನ ಮನೆ. **F.-saw** ಚೌಕಟ್ಟಿನಲ್ಲಿ ಬಿಗಿದ ತೆಳುಗರಗಸ. **F.-up** (ಅಮೆ. ಸಂ.) ಒಳಸಂಚು ; ಪಿತೂರಿ. **Framework** = Frame ; ಕಟ್ಟಡದ ಪಂಜರ ; ಆಧಾರಕಟ್ಟು ; ಚೌಕಟ್ಟು (ರೂಪ. ಸಹ). **Frámeless** (ಗು.)

Franc ಫ್ರ್ಯಾಂಕ್ (ನಾ.) (ಏಕಮಾನವಾಗಿ ಪರಿಗಣಿಸುವ) ಫ್ರೆಂಚರ ಒಂದು ನಾಣ್ಯ: 'ಫ್ರ್ಯಾಂಕು' (ಇದರ ಈಗಿನ ಬೆಲೆ ಸುಮಾರು ೨ ಪೆನಿ)

Fránchise ಫ್ರಾ(ಫ್ರ್ಯಾ)ಂಚಿ(ಚೈ)ಸ್ (ನಾ.) (ಮು., ಚರಿತ್ರೆ) ಒಬ್ಬ ವ್ಯಕ್ತಿಗೆ ಅಥವಾ ಒಂದು ಸಂಸ್ಥೆಗೆ ಕೆಲವು ಹೊರೆಗಳು ಅಥವಾ ಕಾನೂನಿನ ಅಧೀನತೆ ಇಲ್ಲದಂತೆಯೂ, ಒಂದು ವಿಶಿಷ್ಟಹಕ್ಕು ಅಥವಾ ವಿಶೇಷಾಧಿಕಾರ ಇರುವಂತೆಯೂ, ಕಾನೂನುಮೂಲಕ ಕೊಟ್ಟ ರಿಯಾಯಿತಿ ; ವಿಶೇಷ ಹಕ್ಕು ; ಬಿಡುತಿ ; ವಿನಾಯಿತಿ. ಒಂದು ಸಂಸ್ಥೆಯ ಅಥವಾ ರಾಜ್ಯದ ಸಂಪೂರ್ಣ ಸದಸ್ಯತ್ವ, ಪ್ರಜೆತನ ; ಪೌರತನ ; ಪೌರತ್ವ. ಸಾರ್ವಜನಿಕ ಚುನಾವಣೆಗಳಲ್ಲಿ ಮತ ಕೊಡುವ ಹಕ್ಕು ; ಚುನಾವಣೆಯ ಹಕ್ಕು ; ಆಯ್ಕೆಯ ಹಕ್ಕು ; ಚುನಾವಣೆಗೆ ಅರ್ಹನಾಗಲು ವಿಧಿಸಿರುವ ನಿಯಮಗಳ ತತ್ತ್ವ: ಚುನಾವಣೆಯ ತತ್ತ್ವ. Fancy f. (Fancy ನೋಡಿ)

Francíscan ಫ್ರ್ಯಾನ್ಸಿಸ್ಕನ್ (ಗು., ನಾ.) ಸೆಯಿಂಟ್ ಫ್ರ್ಯಾನ್ಸಿಸ್ ಪಂಥಕ್ಕೆ ಸೇರಿದ ; — ಮತ ಸಂಪ್ರದಾಯದ (ಸಂನ್ಯಾಸಿ, ಭಿಕ್ಷು) ; ಫ್ರ್ಯಾನ್ಸಿಸ್ಕನ್ ಸಂನ್ಯಾಸಿಗಳ, ಭಿಕ್ಷುಗಳ.

Fránco- ಫ್ರ್ಯಾಂಕೊ— (ಸ. ಪೂ. ಪ.) ಫ್ರೆಂಚ್ ಮತ್ತು — . **F.-German** ಫ್ರೆಂಚ್ ಮತ್ತು ಜರ್ಮನ್. **Fráncophil(e)** — ಫಿಲ್ (ನಾ., ಗು.) ಫ್ರೆಂಚ್ ಪಕ್ಷಪಾತಿ, — ಅಭಿಮಾನಿ ; — ಪಕ್ಷಪಾತ, ಅಭಿಮಾನ, ಉಳ್ಳ. **Fráncophobe** — ಫೋಬ್ (ನಾ., ಗು.) ಫ್ರೆಂಚ್ ಭೀತ ; ಫ್ರೆಂಚ್ ಭೀತಿಯುಳ್ಳ. **Francophóbia** (ನಾ.) ಫ್ರೆಂಚ್ ಭೀತಿ.

Frángible ಫ್ರ್ಯಾಂಜಿಬ್‌ಲ್ (ಗು.) = Fragile.

Frank[1] ಫ್ರ್ಯಾಂಕ್ (ನಾ.) ಆರನೆಯ ಶತಮಾನದಲ್ಲಿ ಫ್ರಾನ್ಸ್ ದೇಶವನ್ನು ಜಯಿಸಿದ ಜರ್ಮನ್ ಜನಾಂಗದವನು, ಅಥವಾ ಸಂಯುಕ್ತ ಜರ್ಮನ್ ಜನಾಂಗದವನು. (ಪೂರ್ವದೇಶಗಳ ಪ್ರ.) ಪಾಶ್ಚಾತ್ಯ ಜನಾಂಗದವನು. **Fránkish** (ಗು., ನಾ.) ಫ್ರ್ಯಾಂಕರ ; ಪಾಶ್ಚಾತ್ಯ ಜನಾಂಗದವರ. (ನಾ.) ಫ್ರ್ಯಾಂಕರ ಭಾಷೆ.

Frank[2] ಫ್ರ್ಯಾಂಕ್ (ಗು.) ಮುಚ್ಚುಮರೆ ಇಲ್ಲದ ; ಮರೆಮಾಜದ ; ಸರಳ ; ಯಥಾರ್ಥವಾದ ; ಅಕೃತ್ರಿಮ ; ಅಕುಟಿಲ ; ನಿಷ್ಕಪಟ ; ಸಾಚಾ ; ಋಜು ; ಸ್ಪಷ್ಟ(ವಾದ). **Fránkly** (ಕ್ರಿ. ವಿ.) ; **Fránkness** (ನಾ.)

Frank[3] ಫ್ರ್ಯಾಂಕ್ (ಕ್ರಿ. ಸಕ., ನಾ.) (ಚರಿತ್ರೆ) (ಕಾಗದಪತ್ರ, ವೊ. ನ್ನು) ಹಾಸಲಿಲ್ಲದೆ ಅಂಚೆಯಲ್ಲಿ ಪುಕ್ಕಟೆ ರವಾನಿಸುವಂತೆ ಲಕೋಟೆಗಳ ಮೇಲೆ) ಬಿಡುತಿ ರುಜು, ಸಹಿ, ಹಾಕು ; ರವಾನೆಯ ರುಜು ಹಾಕು. (ಒಬ್ಬನು) ಹೋಗಿಬರುವುದಕ್ಕೆ ಅನುಕೂಲಪಡಿಸು ; (ಒಬ್ಬನಿಗೆ) ಸಾಮಾಜಿಕ ವ್ಯವಹಾರ ಕೊಡು ; (ಒಬ್ಬನನ್ನು) ಬಾಡಿಗೆ ತೆಗೆದುಕೊಳ್ಳದೆ (ಬಂಡಿಯಲ್ಲಿ) ಪುಕ್ಕಟೆ ಕರೆದುಕೊಂಡು ಹೋಗು ; ಮುಂದೆ ಕೊಡಬೇಕಾದ ತೆರಿಗೆ, ವೊ. ಗಳಿಂದ ವಿನಾಯಿತಿ ಕೊಡು, ಬಿಡುಗಡೆ ಮಾಡು (A franking duty, imposition ಸಾಗಿಸುವುದಕ್ಕೆ ಕೊಡಬೇಕಾದ ಸುಂಕ, ತೆರಿಗೆ). (ನಾ.) (ರವಾನೆಯ) ಬಿಡುತಿ ಸಹಿ, ರುಜು ; ಬಿಡುತಿ ರುಜು ಹಾಕಿದ ಲಕೋಟೆ.

Fránkenstein ಫ್ರ್ಯಾಂಕೆನ್‌ಸ್ಟೈನ್ (ನಾ.) F.'s monster ಕರ್ತೃವನ್ನೇ ನಾಶಮಾಡುವ ಭೂತ ; ಕರ್ತೃವಿನ ಹತೋಟಿಗೆ ಮೀರಿದ, ಕರ್ತೃವಿಗೆ ವಿಪತ್ತು ತರುವ, ಕಾರ್ಯ. (ಒಂದು ಕಾದಂಬರಿಯ ನಾಯಕನ ಹೆಸರಿನಿಂದ)

Fránkincense ಫ್ರ್ಯಾಂಕಿನ್ಸೆನ್ಸ್ (ನಾ.) ಗುಗ್ಗುಲ ; ಧೂಪ ; ಸಾಂಬ್ರಾಣಿ ; ಹಾಲುಮಡ್ಡಿ ; ಲೋಬಾನ.

Fránklin ಫ್ರ್ಯಾಂಕ್ಲಿನ್ (ನಾ.) (ಚರಿತ್ರೆ) (೧೪, ೧೫ನೆಯ ಶತಮಾನಗಳಲ್ಲಿದ್ದ) ಶ್ರೀಮಂತವರ್ಗಕ್ಕೆ ಸೇರದ, ಆದರೆ ದಾಸ್ಯವರ್ಗದವನಲ್ಲದ (ಸ್ವತಂತ್ರ ಪ್ರಜೆಯಾದ), ಜಮೀನ್ದಾರ.

Frántic ಫ್ರ್ಯಾಂಟಿಕ್ (ಗು.) ಉದ್ರೇಕಗೊಂಡ ; ಹುಚ್ಚುಹುಚ್ಚಾಗಿ ಕೆರಳಿದ ; ರೋಷೋನ್ಮತ್ತ ; (ಕೋಪ, ನೋವು, ದುಃಖ, ವೊ. ಗಳಿಂದ) ಮೈಮರೆತ, ಹುಚ್ಚುಹುಚ್ಚಾದ ; ಕೋಪಾಂಧನಾದ ; ಹತೋಟಿ ಮೀರಿದ. **Fránticaliy** (ಕ್ರಿ. ವಿ.) ; **Fránticly** (ಕ್ರಿ. ವಿ.)

Frap ಫ್ರ್ಯಾಪ್ (ಕ್ರಿ. ಸಕ.) (ನಾವೆ) ಗಟ್ಟಿಯಾಗಿ ಬಿಗಿ ; ಬಿಗಿಯಾಗಿ ಕಟ್ಟು.

Frass ಫ್ರ್ಯಾಸ್ (ನಾ.) ಮರಿಹುಳುಗಳ ಹಿಕ್ಕೆ ; ಕೊರೆವ ಕೀಟಗಳು ಉದುರಿಸಿದ ಕಸ.

Fráte (It.) ಫ್ರಾಟೇ (ನಾ. ; ಬ. ವ. - ti — ಟೀ) (ಮು., ಫ್ರಾನ್ಸಿಸ್ಕನ್ ಸಂಪ್ರದಾಯದ) ಸಂನ್ಯಾಸಿ, ಭಿಕ್ಷು.

Fráter ಫ್ರೇಟರ್ (ನಾ.) (ಕ್ರೈಸ್ತ) ಸಂನ್ಯಾಸಿಮಠದ ಊಟದ ಮನೆ.

Fratérnal ಫ್ರಟರ್ನಲ್ (ಗು.) ಅಣ್ಣತಮ್ಮಂದಿರ(ಂಥ) ; ಒಡಹುಟ್ಟಿದವರ(ಂಥ) ; ಭ್ರಾತ್ರೀಯ ; ಸೋದರಿಕೆಯ ; ಸೌಭ್ರಾತ್ರದ. **Fratérnity** (ನಾ.) ಸಹೋದರತ್ವ ; ಭ್ರಾತೃಭಾವ ; ಸೌದರ್ಯ. ಬಿರಾದಾರಿ ; ಸಂಘ ; ಮಂಡಲ ; ಸಂಸ್ಥೆ ; ಧಾರ್ಮಿಕ ಸಂಸ್ಥೆ ; ಸಮಾನ ಹಿತಶ್ರೇಯಸ್ಸಾಧನೆಗಾಗಿ ಏರ್ಪಟ್ಟ ಸಂಘ ; ಒಂದೇ ವೃತ್ತಿಯವರು, ಕಸಬಿನವರು, ತರಗತಿಯವರು : ಸೌಭ್ರಾತೃ ಸಂಘ. **Fráternize** ಫ್ರ್ಯಾ(ಫ್ರೇ)ಟರ್ನೈಸ್ (ಕ್ರಿ. ಅಕ.) ಅಣ್ಣತಮ್ಮಂದಿರಂತೆ, ಆಪ್ತರಂತೆ, — ವರ್ತಿಸು ; ಜೊತೆಗೂಡು ; ಸ್ನೇಹಬೆಳಸು (*With, together* ಉಪ. ಜೊಡನೆ ಸಹ). **Fráternizátion** (ನಾ.) ; **Frátricide** — ಟ್ರಿಸೈಡ್ (ನಾ.) ಒಡಹುಟ್ಟಿದವನ (ಸೋದರನ ಅಥವಾ ಸೋದರಿಯ) ಕೊಲೆ(ಗಾರ) ; ಭ್ರಾತೃಘಾತಕ. **Frátricidal** (ಗು.)

Fratérnity, Frátricide, etc. **Fraternal** ನೋಡಿ.

Frau (G) ಫ್ರೌ (ನಾ.) (ಜರ್ಮನಿಯಲ್ಲಿ) ಸ್ತ್ರೀ ; ವಿವಾಹಿತ ಸ್ತ್ರೀ ; ಹೆಂಡತಿ ; (ಒಕ್ಕಣೆಯಲ್ಲಿ) ಶ್ರೀ, ಶ್ರೀಮತಿ.

Fraud ಫ್ರಾಡ್ (ನಾ.) (ದಂಡನಾರ್ಹವಾದ) ವಂಚನೆ, ಮೋಸ ; ಸುಳ್ಳು ನಿರೂಪಣೆ. [(ನ್ಯಾ. ಶಾ.) In f. of, To the f. of ಮೋಸಗೊಳಿಸುವುದಕ್ಕಾಗಿ ; ವಂಚಿಸುವುದಕ್ಕಾಗಿ ; (ಒಬ್ಬನ, ಒಂದರ) ಕೆಡುಕಿಗೆ, ಅಡಚಣೆಗೆ] ; ಕೃತ್ರಿಮೋಪಾಯ ; ಕುಟಿಲ ತಂತ್ರ ; ಕುಯುಕ್ತಿ ; ಕಪಟ ; ಠಕ್ಕು [Pious f. ಮೋಸಮಾಡಲ್ಪಡುವವನ ಹಿತಕ್ಕಾಗಿ ಉದ್ದೇಶಿಸಿದ ವಂಚನೆ (ಮು., ಧರ್ಮಶ್ರದ್ಧೆ ಬಲಪಡಿಸುವುದಕ್ಕೆ) : ಧಾರ್ಮಿಕ ವಂಚನೆ] ; ನಿರೀಕ್ಷಣೆಗೆ ಅಥವಾ ಕೊಟ್ಟ ವರ್ಣನೆಗೆ ಸರಿತೂಗದ ವ್ಯಕ್ತಿ, ವಸ್ತು ; ಮೋಸಗಾರ ; ಮೋಸ. **Fraúdulent** (ಗು.) ಮೋಸದ ; ವಂಚನೆಯ ; ಮೋಸದಿಂದ ಮಾಡಿದ ; — ಕೂಡಿದ. **Fraúdulently** (ಕ್ರಿ. ವಿ.) ; **Fraúdulence** (ನಾ.)

Fraught ಫ್ರಾಟ್ (ಗು.) (ಕಾವ್ಯ) ತುಂಬಿದ ; ಭರಿತ ; ನಿಬಿಡ ; (ರೂಪ.) F. with (ಕೇಡು, ಅಪಾಯ, ಅರ್ಥ, ವೊ.) ತುಂಬಿದ ; (ಕೇಡಿಗೆ) ಗುರಿಯಾದ ; (ಅಪಾಯ) ಸಂಭವಿಸಬಹುದಾದ.

Fraúlein ಫ್ರಾಯ್‌ಲೈನ್ (ನಾ.) (ಜರ್ಮನಿಯಲ್ಲಿ) ಅವಿವಾಹಿತೆ ; ಕನ್ಯೆ ; ಮಕ್ಕಳ ವಿಚಾರಣೆ ನೋಡಿಕೊಳ್ಳುವವಳು. (ಒಕ್ಕಣೆಯಲ್ಲಿ) ಶ್ರೀ, ಶ್ರೀಮತಿ.

Fraúnhofer lines ಫ್ರೌನ್‌ಹೋಫರ್ ಲೈನ್ಸ್ (ನಾ., ಬ. ವ.) ಸೌರ ವರ್ಣಪಟಲದಲ್ಲಿ ಕಾಣುವ ಕಪ್ಪುಗೆರೆಗಳು. (ಬವೇರಿಯಾ ದೇಶದ ಭೌತಶಾಸ್ತ್ರಜ್ಞನ ಹೆಸರಿನಿಂದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Fray[1] ಫ್ರೇ (ನಾ.) ಗಲಾಟೆ ; ದೊಂಬಿ ; (ಬೀದಿಯ) ಜಗಳ ; ಹುಯಿಲು ; ಹೊಡೆದಾಟ ; ಕಾದಾಟ ; ಮಾರಾಮಾರಿ ; ತಿಕ್ಕಾಟ (ರೂಪ. ಸಹ). Eager for the f. ಹೋರಾಟಕ್ಕೆ ತವಕಿಸುತ್ತ.

Fray[2] ಫ್ರೇ (ಕ್ರಿ.) [ಜಿಂಕೆಯ (ಟಗರಿಯ) ವಿಷಯದಲ್ಲಿ : F. head or F. ಹೊಸ ಕೊಂಬುಗಳ ಮಖಮಲ್ಲಿನಂಥ ಮೇಲ್ಮೈಯನ್ನು ಉಜ್ಜಿಹಾಕು] ; ಉಜ್ಜು ; ತಿಕ್ಕಿ ಸವೆಯಿಸು ; (ಸಾ., ನೆಯ್ದ ಸನಗಿನ) ಅಂಚನ್ನು ಅಥವಾ ಕೊನೆಯನ್ನು ಬಂಧ, ಹೆಣಿಗೆ, ನೆಯ್ಗೆ, —ಬಿಡಿಸು. F. out ಸವೆದು ಅಂಚಿನಲ್ಲಿ ದಾರ ದಾರವಾಗಿ ಬಿಟ್ಟುಹೋಗು. **Fráying** (ನಾ.)

Frázzle ಫ್ರ್ಯಾಸ್‌ಲ್ (ನಾ.) (ಅಮೆ. ಸಂ.) ಸವೆದುಹೋದ, ಬಳಲಿ ಹೋದ, —ಸ್ಥಿತಿ. Worn to a f. ದಾರ ದಾರವಾಗುವಂತೆ ಸವೆದು ಹೋಗಿ.

Freak[1] ಫ್ರೀಕ್ (ನಾ.) ಮನಬಂದ ಚರ್ಯೆ ; ವಿಚಿತ್ರ ವರ್ತನೆ ; ಪೈತ್ಯ ; ಹುಚ್ಚು ; ಲೀಲೆ ; ಹುಚ್ಚಾಟಿಕೆ (Out of mere f. ಮನಸ್ಸಿಗೆ ಹುಚ್ಚು ತಿರುಗಿ) ; ಮನೋವಿಕಾರ ಜನ್ಯ ; ಅಸಹಜವಾದದ್ದು ; ವಿಜಾತೀಯ ವಾದದ್ದು ; ವಿಚಿತ್ರವಾದದ್ದು ; ವಿಲಕ್ಷಣವಾದದ್ದು. ಸ್ವಭಾವ ವ್ಯತಿರಿಕ್ತವಾಗಿ ಬೆಳೆದದ್ದು ; ವಿಕಾರವಾದದ್ದು (= F. of nature). **Freákish** (ಗು.) ಅಸಹಜ ವರ್ತನೆಯ ; ಮನಬಂದಂತೆ ನಡೆಯುವ ; ವಿಜಾತೀಯವಾದ ; ವಿಲಕ್ಷಣವಾದ ; ವಿಚಿತ್ರವಾದ ; ಹುಚ್ಚಾಬಟ್ಟೆಯ. **Freákishly** (ಕ್ರಿ. ವಿ.) ; **Freákishness** (ನಾ.)

Freak[2] ಫ್ರೀಕ್ (ನಾ.) ಬಣ್ಣದ ಮಚ್ಚೆ, ಕಲೆ, ಗೆರೆ, ಗೀರು. **Freaked** (ಗು.) ಚಿತ್ರ ವಿಚಿತ್ರವಾದ ಮಚ್ಚೆ, ಕಲೆ, ಗೆರೆ, ಗೀರು, — ಉಳ್ಳ.

Fréckle ಫ್ರೆಕ್‌ಲ್ (ನಾ., ಕ್ರಿ.) ಚರ್ಮದಮೇಲಿನ ನಸುಗಂದು ಮಚ್ಚೆ. (ಕ್ರಿ.) ಮಚ್ಚೆಗಳಿಂದ ಗುರುತು ಮಾಡು ; ಮಚ್ಚೆ ಹೊಯ್ದಿರು ; ಮಚ್ಚೆ ಮಚ್ಚೆಯಾಗಿರು. (ಬ. ವ. ದಲ್ಲಿ) ಮೈಮೇಲೆ ಬಿಸಿಲಿನಿಂದ ಅಲ್ಲಲ್ಲಾದ ಕಂದು ಬಣ್ಣ. **Fréckled** (ಗು.)

Free ಫ್ರೀ [ಗು. ; ತರ ರೂಪ Freer — ಅರ್, ತಮ ರೂಪ Freest —ಎ(ಇ)ಸ್ಟ್] (ವ್ಯಕ್ತಿ, ಸಂಸ್ಥೆ, ರಾಷ್ಟ್ರ, ಮೊ.) ಸ್ವತಂತ್ರವಾದ, ಸ್ವಾತಂತ್ರ್ಯವುಳ್ಳ, ಅನಧೀನ, ಪರಾಧೀನವಲ್ಲದ ; ಬಿಡಿಯಾದ ; ಬಿಡುತೆಯಾದ. ಬಂಧಿತವಲ್ಲದ ; ಯಾವ ಕಡೆಗೆ ಬೇಕಾದರೂ ತಿರುಗುವ (F. wheel ಕಾರೊತ್ತು ತಿರುಗದಿದ್ದರೂ ತಾನು ಸುತ್ತಬಲ್ಲ ಚಾಲಕ ಚಕ್ರ). ನಿರ್ಬಂಧ, ತಡೆ, ಅಡ್ಡಿ, ಅಡಚಣೆ, ಪ್ರತಿಬಂಧಕ, ಅಂಕೆ, ಕಟ್ಟು,—ಇಲ್ಲದ [F. love (ಮದುವೆಯ ನಿರ್ಬಂಧವಿಲ್ಲದ) ಸ್ವೇಚ್ಛಾ ಪ್ರೇಮ] ; ಸ್ವತಂತ್ರದಲ್ಲಿರುವ ; ನಿರುಪಾಧಿಕ ; ನಿರ್ಬಾಧಿತ ; ಕಟ್ಟುಗಳಿಂದಲೂ ಕರ್ತವ್ಯಗಳಿಂದಲೂ ವಿಮುಕ್ತನಾದ ; ತಡೆಯಿಲ್ಲದ. (ಗಾಳಿ) ಪ್ರತಿಕೂಲವಲ್ಲದ. ಸೇರಿಕೊಂಡಿರದ ; ಹತ್ತಿಕೊಂಡಿರದ ; ಸಂಪರ್ಕವಿಲ್ಲದ. (ರ. ವಿ.) ಸಂಯುಕ್ತವಾಗಿಲ್ಲದ ; ಅಸಂಯುಕ್ತ. (ಶಕ್ತಿ, ಸಾಮರ್ಥ್ಯ) ಬಿಡುವಾಗಿರುವ, ದೊರೆಯುವ. ಸ್ವತಃ ಪ್ರವರ್ತಿತ ; ಉಚಿತವಾಗಿ, ಬಿಟ್ಟಿಯಾಗಿ, ಪುಕ್ಕಟೆ, — ಬಂದ (Carriage-f. ರವಾನೆ ಪುಕ್ಕಟೆ). ಬಲಾತ್ಕಾರವಲ್ಲದ ; ಮನಃಪೂರ್ತಿಯಾದ (F. grace ದೇವರ ಅವ್ಯಾಜ ಪ್ರಸಾದ). ಅತಿ ಧಾರಾಳದ ; ಬಿಚ್ಚುಗೈಯ ; ಹಿಡಿತವಿಲ್ಲದ ; ಉದಾರ ; ಪುಷ್ಕಳ ; ನಿರರ್ಗಳ (F. of his money ಹಣದ ವಿಷಯದಲ್ಲಿ ಬಹಳ ಧಾರಾಳಿಯಾದ ; ಹಿಡಿತವಿಲ್ಲದೆ ವೆಚ್ಚ ಮಾಡುವ. F. flow of water ತಡೆಯಿಲ್ಲದ ನೀರಿನ ಹರಿವು). ಮುಚ್ಚುಮರೆಯಿಲ್ಲದ ; ನಿಷ್ಕಪಟ ; ಸರಳ (F.- spoken ಮನಸ್ಸಿನಲ್ಲಿರುವುದನ್ನು ಮುಚ್ಚಿಡದೆ ಹೇಳಿಬಿಡುವ ; ಇದ್ದದ್ದು ಇದ್ದಂತೆ ಹೇಳುವ ; ಖಂಡಿತ ವಾದಿಯಾದ ; ನಿರ್ದಾಕ್ಷಿಣ್ಯ ಪ್ರಕೃತಿಯ). ಮುಂದೆಬಿದ್ದು ಹೋಗುವ ; ಸಲಿಗೆಯ ; ಧಾರ್ಷ್ಟ್ಯದ ; ದಾಷ್ಟಿಕದ. (ಮಾತು, ಕಥೆ, ಮೊ. ಗಳಲ್ಲಿ) ಗಂಭೀರವಲ್ಲದ ; ಅಶ್ಲೀಲ. ಬಿಡುಗಡೆಯಾದ ; ವಿನಾಯಿತಿ ಪಡೆದ ; ಮುಕ್ತ ; ಇಲ್ಲದ (F. from the ordinary rules ಸಾಮಾನ್ಯ ನಿಯಮಗಳಿಂದ ವಿನಾಯಿತಿ ಪಡೆದ. F. from disease ರೋಗ ಬಿಟ್ಟ ; ರೋಗದಿಂದ ಬಿಡುಗಡೆಯಾದ ; ರೋಗವಿಲ್ಲದ). I am f. to confess ಒಪ್ಪಿಕೊಳ್ಳಲು ನಾನು ಸಿದ್ಧವಾಗಿದ್ದೇನೆ ; ಮನಃಪೂರ್ತಿಯಾಗಿ ಒಪ್ಪಿಕೊಳ್ಳುತ್ತೇನೆ. It is f. for, *or* to him to do so ಅವನು ಹಾಗೆ ಮಾಡಲು ಅವಕಾಶವುಂಟು. Made f. of the city ಪೌರತನದ ಹಕ್ಕು ಪಡೆದ. F. from difficulty ತೊಂದರೆ ಕಳೆದುಹೋದ, — ಇಲ್ಲದ. F. of the house ಮನೆಗೆ ಪ್ರವೇಶಾಧಿಕಾರವೂ ಅದನ್ನು ಉಪಯೋಗಿಸುವ ಹಕ್ಕೂ ಉಳ್ಳ. Have or give a f. hand ವರ್ತನ ಸ್ವಾತಂತ್ರ್ಯ ಇರು, ಕೊಡು. Make or be f. (with) ಸಲಿಗೆ ತೆಗೆದುಕೊ. The picture gallery is open f. ರುಸುಮಿಲ್ಲದೆ ಚಿತ್ರಶಾಲೆಗೆ ಪ್ರವೇಶವುಂಟು.

F.-board ಹಡಗಿನ ತೇಲುಮಟ್ಟಕ್ಕೂ ಅದರ ಮೇಲ್ಮಟ್ಟಕ್ಕೂ ಮಧ್ಯೆ ಇರುವ ಹಡಗಿನ ಪಕ್ಕ. **Freébooter** (ನಾ.) ಕಡಲುಗಳ್ಳ ; ಕೊಳ್ಳೆಗಾರ ; ದರೋಡೆಕೋರ. **Freéboot** (ಕ್ರಿ. ಅಕ.) ಕಡಲುಗಳ್ಳತನ ಮಾಡು ; ಕೊಳ್ಳೆ ಹೊಡೆ. **Freébooting** (ನಾ., ಗು.) ; **F.-born** ನಾಗರಿಕ ಹಕ್ಕುಗಳನ್ನೂ ಸ್ವಾತಂತ್ರ್ಯವನ್ನೂ ಹುಟ್ಟಿನಿಂದ, ಜನ್ಮಸಿದ್ಧವಾಗಿ, ಪಡೆದ ; ಸ್ವತಂತ್ರ ಪ್ರಜೆಯಾಗಿ ಹುಟ್ಟಿದ. **F. Church** (ರಾಜ್ಯಾಡಳಿತಕ್ಕೆ ಒಳಪಡದ) ಸ್ವತಂತ್ರ (ಕ್ರೈಸ್ತ) ಧರ್ಮ ಸಂಸ್ಥೆ. The F. Churches [ರಾಜ್ಯಸ್ಥಾಪಿತ (ಕ್ರೈಸ್ತ) ಧರ್ಮ ಸಂಸ್ಥೆಗೆ ಸೇರದ] ಸ್ವತಂತ್ರ (ಕ್ರೈಸ್ತ) ಧರ್ಮ ಸಂಸ್ಥೆಗಳು, ಧರ್ಮಾನುಯಾಯಿಗಳು. **F. & easy** (ಗು.) ಸಂಪ್ರದಾಯವನ್ನು ಲಕ್ಷಿಸದ ; ಸಲೀಸಾದ ; ಸರಾಗವಾದ. (ನಾ.) ಚುಟ್ಟಾ ಸೇದಲು, ಮದ್ಯ ಕುಡಿಯಲು, ಅನುಮತಿಯುಳ್ಳ ಸಂಗೀತ ಕಚೇರಿ. **F. fight** ಯಾರೆಂದರೆ ಅವರು ಭಾಗವಹಿಸುವ ಕದನ, ಕಾದಾಟ. **F. gift** ಧರ್ಮಾರ್ಥವಾಗಿ ಪ್ರತಿಫಲಾಪೇಕ್ಷೆಯಿಲ್ಲದೆ ಕೊಟ್ಟದ್ದು : ದಾನ ; ಧರ್ಮಾರ್ಥ ; ಕೊಡುಗೆ. **F.-hand** (ರೇಖನ) (ಯಾವ ಸಲಕರಣೆಯ ಸಹಾಯವೂ ಇಲ್ಲದೆ) ಕೈಯಿಂದ ಬರೆದ. **F.-handed** (ಗು.) ಉದಾರಿಯಾದ. **Freéhold** (ಮಾನ್ಯ, ಅಧಿಕಾರ, ಪದವಿ) ನಿರುಪಾಧಿಕವಾಗಿ, ಅಥವಾ ಸೋಪಾಧಿಕವಾಗಿ, ಅಥವಾ ಯಾವಜ್ಜೀವವೂ, ಪಡೆದಿರುವ. **Freéholder** ಇಂಥ ಮಾನ್ಯವನ್ನು ಪಡೆದಿರುವವನು. **F. labour** ಸ್ವತಂತ್ರರ ದುಡಿಮೆ (ಗುಲಾಮರದಲ್ಲ) ; (ಕೆಲಸಗಾರರ ಸಂಘಕ್ಕೆ ಸೇರಿರದ) ಸ್ವತಂತ್ರರ ದುಡಿಮೆ. **F. lance** (ಯೂರೋಪಿನ ಚರಿತ್ರೆಯಲ್ಲಿ, ಮಧ್ಯಯುಗದ) ಕೂಲಿ ಸಿಪಾಯಿ. ಶಸ್ತ್ರ ಜೀವಿ. ಯಾವ ಒಂದು ಪಕ್ಷಕ್ಕೂ ಸೇರಿರದ ರಾಜ್ಯನೀತಿಜ್ಞ, ವಾದ ಚತುರ, ಪತ್ರಿಕೋದ್ಯೋಗಿ ; ಸ್ವಯಂ ನಾಯಕ. **F.-list** ಪುಕ್ಕಟೆ ಪ್ರವೇಶಪಡೆಯುವವರ ಪಟ್ಟಿ ; ಸುಂಕ ವಿನಾಯಿತಿಯ ಪಟ್ಟಿ. **F. liver** ಭೋಗಾಸಕ್ತ (ಮು., ಭೋಜನ ಪ್ರಿಯ). **F. living** ಭೋಗ ಲಾಲಸೆ. **Freéman** —ಮ್ಯನ್ (ನಾ.) ಸ್ವತಂತ್ರ ಪ್ರಜೆ (ಗುಲಾಮನಲ್ಲ) ; ಸ್ವತಂತ್ರ ರಾಜ್ಯದ ಪ್ರಜೆ ; ಪೌರ ಹಕ್ಕು, ಸಂಘ ಸದಸ್ಯತ್ವ, ಮೊ. ನ್ನು ಪಡೆದಿರುವವನು. **Freémason** —ಮೇಸ(ಸ್)ನ್ (ನಾ.) (ಸವಿಸ್ತಾರವಾದ ವಿಧಿ ಸಂಸ್ಕಾರಗಳಿಂದಲೂ ಗುಪ್ತ ಸಂಕೇತ ಪದ್ಧತಿಯಿಂದಲೂ ಕೂಡಿದ) ಒಂದು ಸಹಕಾರ ಸೌಭ್ರಾತೃ ಮಂಡಲಿ : 'ಫ್ರೀಮೇಸನ್'. **Freémasonry** —ಸ್‌ನ್ರಿ (ನಾ.) ಈ ಸಂಘದವರ ಪದ್ಧತಿಗಳು, ತತ್ತ್ವಗಳು, ಸಂಸ್ಥೆಗಳು ; (ರೂಪ.) ಗುಪ್ತ ಭ್ರಾತೃ ವರ್ಗ ; ಸ್ವಯಂಪ್ರೇರಿತ, ನೈಸರ್ಗಿಕ, ಸಹಾನುಭೂತಿ **F. pass** ಉಚಿತ ಅಪ್ಪಣೆಚೀಟಿ ; ಬಿಡುತಿ ಚೀಟಿ. **F. port** ಎಲ್ಲ ವ್ಯಾಪಾರಿಗಳಿಗೂ ಭೇದವಿಲ್ಲದೆ ತೆರೆದಿರುವ ಬಂದರು ; ನಿರುಪಾಧಿಕ ವ್ಯಾಪಾರದ ಬಂದರು. **F. quarters** ಪುಕ್ಕಟೆಯ ಅನ್ನ ವಸತಿ. **F. school** ಉಚಿತ, ಧರ್ಮ, ಪಾಠಶಾಲೆ. **F.-stone, Freéstone** (ಮಾಗಿದಮೇಲೆ) ಓಟೆ ಸಡಿಲವಾಗಿರುವ ಒಂದು ಜಾತಿಯ ಪೀಚ್‌ಹಣ್ಣು. ನಯವಾದ ಕಣಗಳಿಂದ ಕೂಡಿ, ಗರಗಸದಿಂದ ಸುಲಭವಾಗಿ ಕೊಯ್ಯಲಾಗುವ ಮರಳುಗಲ್ಲು ಅಥವಾ ಸುಣ್ಣಗಲ್ಲು. **F.-thinker** ಮತಧರ್ಮದ ವಿಷಯದಲ್ಲಿ ಯಾವ ಅಧಿಕಾರವನ್ನೂ ನಿಯಮವನ್ನೂ ಒಪ್ಪದವನು ; ಸ್ವತಂತ್ರ ವಿಚಾರಿ. **F.-thinking** (ನಾ., ಗು.) ; **F.-thought** (ನಾ.) ; **F.-trade** (ಅಮದು ತಡೆಯಲು, ಅಥವಾ ಸ್ವದೇಶದ ಕೈಗಾರಿಕೆಗಳಿಗೆ ರಕ್ಷಣೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊಡಲು, ಪರದೇಶದ ಸರಕುಗಳಮೇಲೆ ಹಾಕಬೇಕಾದ ಸುಂಕ ಹಾಕದೆ) ಸಲೀಸಾಗಿ ನಡೆಯುವಂತೆ ಬಿಟ್ಟ ವ್ಯಾಪಾರ (ತತ್ತ್ವ) : ನಿರುಪಾಧಿಕ ವ್ಯಾಪಾರ (ತತ್ತ್ವ) ; ಸುಂಕವಿಲ್ಲದ ವ್ಯಾಪಾರ. **F.-trader** ನಿರುಪಾಧಿಕ ವ್ಯಾಪಾರಿ, ವ್ಯಾಪಾರ ವಾದಿ. **F.-translation** ಸರಳಾನುವಾದ. **F. verse** ನಿಯಮಬದ್ಧವಲ್ಲದ ವೃತ್ತ ; ಬಿಡಿ ವೃತ್ತ. **F. will** (ನಾ.) ಅನಿವಾರ್ಯದಿಂದ, ವಿಧಿವಶದಿಂದ, ನಿರ್ಬಂಧವಾಗದೆ ನಮ್ಮ ಕಾರ್ಯಗಳನ್ನು ನಮ್ಮ ಇಷ್ಟದಂತೆ ನಡಸಲಾಗುವ ಶಕ್ತಿ ; ಇಚ್ಛಾ ಸ್ವಾತಂತ್ರ್ಯ (Did it of my own f. will ನನ್ನ ಇಚ್ಛಾ ಸ್ವಾತಂತ್ರ್ಯದಿಂದ, ಖುದ್ದು ರಾಜಿಯಿಂದ, ಮಾಡಿದೆನು). **F.-will** (ಗು.) ಸ್ವಪ್ರೇರಣೆಯ ; ಆತ್ಮ ಸಂತೋಷದ ; ಖುದ್ದು ರಾಜಿನ.

Freédom — ಡಮ್ (ನಾ.) ಬಿಡುಗಡೆ ; ಬಿಡುತೆ ; ಬೀಡು ; ಮುಕ್ತಿ ; ಮೋಕ್ಷ ; ಸ್ವಾಧೀನತೆ ; ವಿಮೋಚನೆ ; ವ್ಯಕ್ತಿ ಸ್ವಾತಂತ್ರ್ಯ ; ಪ್ರಜಾ ಸ್ವಾತಂತ್ರ್ಯ ; ಅಪಾರತಂತ್ರ್ಯ ; ವಿಧಿಯ ಅಥವಾ ಆವಶ್ಯಕತೆಯ ಅನಧೀನತೆ. ನಿಷ್ಕಾಪಟ್ಯ ; ಸರಳತೆ ; ಯಾವುದನ್ನೂ ಮರೆಮಾಜದೆ ಹೇಳಿಬಿಡುವ ಗುಣ ; ಖಂಡಿತ ವಾದಿತ್ವ ; ಅತಿ ಸಲಿಗೆ (Take freedoms with —ಒಡನೆ ಅತಿ ಸಲಿಗೆಯಿಂದ ವರ್ತಿಸು). ಸರಾಗ ; (ಕಾರ್ಯ) ಸೌಲಭ್ಯ ; ಚಳಕ. ಕಲ್ಪನೆಯಲ್ಲಾಗಲಿ ಕಾರ್ಯದಲ್ಲಾಗಲಿ ಧಾತಿ. (ಭೌ. ವಿ.) ಚಲನ ಸಾಧ್ಯತೆ. (ಕೊರತೆ, ಅನಾನುಕೂಲ, ಹೊರೆ, ಕರ್ತವ್ಯ, ಮೊ. ಗಳಿಂದ) ವಿನಾಯಿತಿ, ಬಿಡುಗಡೆ ; ನಿರುಪಾಧಿಕತೆ ; ನಿರ್ಬಾಧಕತೆ. ಒಂದು ನಗರ ಅಥವಾ ಪೌರ ಸಂಸ್ಥೆ ಪಡೆದಿರುವ ವಿಶೇಷ ಹಕ್ಕು, ವಿಶೇಷಾಧಿಕಾರ ; ಪೌರತನದ, ಸದಸ್ಯತ್ವದ, — ಹಕ್ಕು. (ಒಂದರ) ಉಪಯೋಗ ಸ್ವಾತಂತ್ರ್ಯ (Has the f. of the library ಪುಸ್ತಕ ಭಂಡಾರವನ್ನು ಉಪಯೋಗಿಸಲು ಅನಿರ್ಬಂಧ ಸ್ವಾತಂತ್ರ್ಯವಿದೆ). **Freély** (ಕ್ರಿ. ವಿ.)

Free (ಕ್ರಿ. ಸಕ. ; ಭೂತ., ಭೂ. ಕೃ. Freed) ಬಿಡುಗಡೆ ಮಾಡು ; ಬಿಟ್ಟುಬಿಡು ; ಸ್ವಾತಂತ್ರ್ಯ ಕೊಡು. — ಇಂದ ತಪ್ಪಿಸು ; ಪರಿಹರಿಸು ; ಇಲ್ಲದಂತೆ ಮಾಡು ; ಪ್ರತ್ಯೇಕಿಸು ; ಬೇರ್ಪಡಿಸು ; ತೊಡಕಿನಿಂದ ಬಿಡಿಸು ; ಬಂಧನ ಬಿಡಿಸು. **Freédman** — ಮನ್ (ಮು., ರೋಮನ್ ಚರಿತ್ರೆಯಲ್ಲಿ) ಬಿಡುಗಡೆ ಪಡೆದ ಗುಲಾಮ : ಮುಕ್ತ ದಾಸ.

Freémartin ಫ್ರೀಮಾರ್ಟಿನ್ (ನಾ.) ದನದ ಜಾತಿಯ ದ್ವಿಲಿಂಗಿ ಪ್ರಾಣಿ ಅಥವಾ ಅಪೂರ್ಣ ಸ್ತ್ರೀಪ್ರಾಣಿ ; (ಹೋರಿಗರುವಿನೊಡನೆ ಅವಳಿಯಾಗಿ ಹುಟ್ಟಿದ) ಲಿಂಗ ಅಪೂರ್ಣತೆಯಿರುವ, ಸಾ., ಬರಡಾದ, ಹೆಂಗರು.

Freeze ಫ್ರೀಸ್ [ಕ್ರಿ. (ಭೂತ. Froze, ಭೂ. ಕೃ. Frozen) ; ನಾ.] ನೀರ್ಗಲ್ಲಾಗು ; ಗಡ್ಡೆಕಟ್ಟು ; ಹೆಪ್ಪುಗಟ್ಟು ; ಹೆತ್ತುಕೊ ; ಘನೀಭವಿಸು ; ಗಡ್ಡೆಕಟ್ಟಿಸು ; ನೀರ್ಗಲ್ಲಾಗಿಸು (ಸಾ., *in*, *over*, *up* ಉಪ. ದೊಡನೆ). ನೀರ್ಗಲ್ಲು ಮುಚ್ಚು ; ನೀರ್ಗಲ್ಲಿನಿಂದ ಮುಚ್ಚಿಹೋಗು. (ಚಳಿಯಿಂದ) ಸೆಡೆತುಕೊ ; ಹಿಮದ ಕೊರೆತದಿಂದ ಯಾವುದಕ್ಕಾದರೂ, ಅಥವಾ ಒಟ್ಟಿಗೆ, ಅಂಟಿಕೊ. [(ಅಸಂ.) F. on to ಬಿಗಿಯಾಗಿ ಕಟ್ಟಿಕೊ, ಅಂಟಿಕೊ. F. to death ಹಿಮದ ಕೊರೆತದಿಂದ ಸೆಡೆತು ಸಾಯಿ]. ಭಯದಿಂದ ಮೈ ತಣ್ಣಗಾಗು, ಮೈ ಸಡೆತುಕೊ. (ಮಾಂಸ, ಮೊ. ನ್ನು) ಶೀತಾವರಣದಲ್ಲಿಟ್ಟು ಕೆಡದಂತೆ ರಕ್ಷಿಸು. (F. one's blood ಭಯಭ್ರಾಂತಿಗೊಳಿಸು ; ಸ್ತಂಭೀಭೂತನಾಗಿಸು). (ಉಲ್ಲಾಸ, ಉತ್ಸಾಹ, ಮೊ. ಭಾವಗಳನ್ನು) ಕುಂದಿಸು, ನಂದಿಸು. (ಶಕ್ತಿಯನ್ನು) ಸ್ತಬ್ಧ ಮಾಡು. ಚಳಿಯಿಂದ,— ಸೆಡಸು, ಜಡ ಮಾಡು, ಘನೀಕರಿಸು, ಹಾನಿ ಮಾಡು, ನಾಶ ಮಾಡು, ಕೊಲ್ಲು. [F. out (ಅಸಂ.) ಬೈಕಾಟು, ವ್ಯವಹಾರ ಬಹಿಷ್ಕಾರ, ಮೊ. ಗಳ ಮೂಲಕ, — ವ್ಯಾಪಾರ, ಸಮಾಜ, ಸಂಘ, ಮೊ. ಗಳಿಂದ, ಹೊರ ಹಾಕು **Freezing-mixture** ದ್ರವಗಳನ್ನು ಘನೀಕರಿಸುವುದಕ್ಕಾಗಿ ಉಪಯೋಗಿಸುವ, ಉಪ್ಪು ಮತ್ತು ನೀರ್ಗಲ್ಲಿನ, ಅಥವಾ ಇತರ ಪದಾರ್ಥಗಳ, ಮಿಶ್ರಣ : ಶೀತ ಘನೀಕರಣ ಮಿಶ್ರಣ. Freezing-point ಒಂದು ದ್ರವ (ಮು., ನೀರು) ಘನೀಭವಿಸುವ ಶಾಖಾಂಕ: ಘನೀಭವನ ಶಾಖಾಂಕ] (ನಾ.) ಘನಹಿಮದ ಸ್ಥಿತಿ, ಕಾಲ ; ಹಿಮಾನಿ ಕಾಲ. **Freézing** (ಗು.) (ಕ್ರಿಯಾರ್ಥಗಳಲ್ಲಿ). ಕೊರೆಯುವ ಚಳಿಯ (ಎಂಬುದಕ್ಕೆ ಉತ್ಪ್ರೇಕ್ಷೆ). (ವರ್ತನೆ, ನಡೆವಳಿ) ಉತ್ಸಾಹ ಭಂಗದ, ಅನಾದರದ, ಉದಾಸೀನ ಭಾವದ. **Freézingly** (ಕ್ರಿ. ವಿ.); **Frózen** ಫ್ರೋಸ್ನ್ (ಗು.) ಗಡ್ಡೆ ಕಟ್ಟಿದ ; ಹೆತ್ತುಕೊಂಡ ; ಘನೀಭವಿಸಿದ. (ಬರಬೇಕಾದ ಹಣ, ಆಸ್ತಿ, ಮೊ. ಗಳ ವಿಷಯದಲ್ಲಿ) ಸದ್ಯಕ್ಕೆ ಅಥವಾ ಎಂದಿಗೂ ಪಡೆಯಲಾಗದ, ವಸೂಲಾಗುವ ಸಂಭವವಿಲ್ಲದ ; ಉಪಯೋಗಕ್ಕೆ ದೊರೆಯದ (F. Capital). F. limit (ಬಳ. ಮಾ.) ಆಕ್ಷೇಪಣೀಯವಾದುದರ ಅಥವಾ ಅಸಹನೀಯವಾದುದರ ತುತ್ತತುದಿ.

Freight ಫ್ರೆಯ್ಟ್, ಫ್ರೇಟ್ (ನಾ., ಕ್ರಿ. ಸಕ.) (ಸರಕು ರವಾನೆಗೆ) ಹಡಗು ಬಾಡಿಗೆ ; (ನೀರಿನಮೇಲೆ ಅಥವಾ ಭೂಮಿಯಮೇಲೆ) ಸರಕು ರವಾನೆ (ಯ ಬಾಡಿಗೆ) ; (ಹಡಗಿನ) ಸರಕು ; ಹಡಗು ಭರ್ತಿ. ಹೇರು ; ಹೊರೆ ; ಭಾರ. (ಕ್ರಿ.) (ಹಡಗಿಗೆ) ಸರಕು ತುಂಬು, ಭರ್ತಿ ಮಾಡು ; (ಹಡಗನ್ನು) ಬಾಡಿಗೆಗೆ ತೆಗೆದುಕೊ, —ಕೊಡು. **Freíghtage** ಫ್ರೆಯ್‌ಟಿ(ಟ)ಜ್ (ನಾ.) (ಸಾಮಾನು ಸಾಗಣೆಗೆ) ಹಡಗುಬಾಡಿಗೆ ; ಸರಕು ಸಾಗಣೆಯ ಬಾಡಿಗೆ ; ರವಾನೆಬಾಡಿಗೆ ; ಹಡಗಿಗೆ ಸರಕು ತುಂಬುವುದು ; ಹಡಗನ್ನು ಬಾಡಿಗೆಗೆ ತೆಗೆದುಕೊಳ್ಳುವುದು, — ಕೊಡುವುದು ; ಹಡಗಿನ ಸರಕು. **Freíghter** ಫ್ರೆಯ್ಟರ್, ಫ್ರೇಟರ್ (ನಾ.) ಹಡಗುಬಾಡಿಗೆದಾರ ; ಹಡಗುಭರ್ತಿಗಾರ ; ಸರಕನ್ನು ಒಳ ಪ್ರಾಂತಕ್ಕೆ ಕಳುಹಿಸುವ ರವಾನೆಗಾರ ; ಸರಕನ್ನು ವಶಕ್ಕೆ ತೆಗೆದುಕೊಂಡು ರವಾನಿಸುವ ಅಧಿಕಾರಿ: ರವಾನೆಯ ಅಧಿಕಾರಿ. ಸಾಮಾನು ಹಡಗು.

French ಫ್ರೆನ್ಷ್(ಚ್) (ಗು., ನಾ.) ಫ್ರಾನ್ಸಿನ ; ಫ್ರೆಂಚರ ; ಫ್ರೆಂಚರ ಗುಣಗಳುಳ್ಳ. ಫ್ರೆಂಚು ಭಾಷೆ; (F. lesson, master). The F. (ಬ .ವ.) ಫ್ರೆಂಚರು. **F. bean** ಮನೆಹುರುಳಿ ಕಾಯಿ. **F. bread** ಅಲಂಕಾರವಾಗಿ ತಯಾರಿಸಿದ ಒಂದು ಬಗೆಯ ರೊಟ್ಟಿ. **F. chalk** [ಬಟ್ಟೆಯಮೇಲೆ ಗೆರೆಯೆಳೆಯುವುದಕ್ಕೂ, ಜಿಡ್ಡು ತೆಗೆಯುವುದಕ್ಕೂ, ಚಲನ ಸೌಲಭ್ಯಕ್ಕಾಗಿ ಒಣಚರಬಿ (ಚಿಕ್ಕಣ) ಆಗಿಯೂ ಉಪಯೋಗಿಸುವ] ಒಂದು ಬಗೆಯ ಬಳಪದ ಕಲ್ಲು. **F. drain** (ಕಲ್ಲಿನ ಮತ್ತು ಇಟ್ಟಿಗೆಯ ಚೂರುಗಳು ಹಾಕಿ) ನೀರು ಹೀರುವಂತೆ ಮಾಡಿದ ಚರಂಡಿ : ಹೀರು ಚರಂಡಿ. **F. grey** (ಬಿಳುಪು, ದಂತ ಕಜ್ಜಲ, ಇಂಡಿಯನ್ ಕೆಂಪು, ಚೀನಾ ನೀಲ —ಇವುಗಳನ್ನು ಬೆರಸಿ ಮಾಡಿದ) ಫ್ರೆಂಚು ಬೂದುಬಣ್ಣ ; ಹೆಚ್ಚು ಹೊಳಪಿನ ನಸು ಹಸುರು ಛಾಯೆಯ ಬಣ್ಣ. **F. horn** (Horn ನೋಡಿ). Take **F. leave** ಅಪ್ಪಣೆ ಪಡೆಯದೆ, ತಿಳಿಸದೆ, ಹೇಳದೆ ಕೇಳದೆ, ಹೊರಟು ಹೋಗು ; — ವರ್ತಿಸು ; ಸಾಲ ತೀರಿಸದೆ ಕದ್ದು ಹೊರಟುಹೋಗು. **F. letter** ಗರ್ಭ ನಿರೋಧಕ ಚೀಲ. **Frénchman** — ಮ್ಯನ್ (ಜನ್ಮತಃ) ಫ್ರೆಂಚಿನವನು; ಫ್ರೆಂಚು ಜನಾಂಗದವನು (Good F. ಫ್ರೆಂಚು ವಾಗ್ಮಿ ;—ಪಂಡಿತ) ; ಫ್ರೆಂಚು ಹಡಗು. **F. polish** (ಮರದ ಸಾಮಾನುಗಳಿಗೆ ಹಾಕುವ) ಫ್ರೆಂಚು ಮೆರುಗು. **F.-polish** (ಕ್ರಿ. ಸಕ.) ಫ್ರೆಂಚು ಮೆರುಗು ಕೊಡು. **F.-polisher** (ನಾ.) ; **F. roof** ಪ್ರತಿ ಕಡೆಯಲ್ಲೂ ಎರಡು ಇಳಿಜಾರುಗಳುಳ್ಳ ಮೇಲ್ಚಾವಣಿ (ಕೆಳ ಭಾಗವು ಮೇಲ್ಭಾಗಕ್ಕಿಂತ ಹೆಚ್ಚು ಇಳಿಜಾರಾಗಿರುವುದು) : ಇಜ್ಜಾರು ಚಾವಣಿ. **F. toast** ಹುರಿದ ರೊಟ್ಟಿ. **F. window** ಕಿಟಕಿಯಾಗಿಯೂ ಬಾಗಿಲಾಗಿಯೂ ಉಪಯೋಗಿಸಲಾಗುವ, ಗಾಜು ಹಾಕಿದ ಮಡಿಚು ಕದವುಳ್ಳ, ಉದ್ದ ಕಿಟಕಿ. **Frénchwoman** ಫ್ರೆಂಚು ಹೆಂಗಸು. **Frénchless** (ಗು.) ಫ್ರೆಂಚು (ಭಾಷೆ) ತಿಳಿಯದ. **Frénchness** (ನಾ.) ಫ್ರೆಂಚು ರೀತಿ ನೀತಿಗಳು. **Frénchy** (ಗು., ನಾ.) ಫ್ರೆಂಚರನ್ನು ಹೋಲುವ ; ಫ್ರೆಂಚು ಲಕ್ಷಣದ, ವೈಶಿಷ್ಟ್ಯದ ; (ನಿಕೃಷ್ಟವಾಗಿ) ಫ್ರೆಂಚಿನವನು. **Frénchify** (ಕ್ರಿ. ಸಕ.) (ರೂಪ, ಗುಣ, ವರ್ತನೆ, ನಡೆ ನುಡಿ, ಮೊ. ನ್ನು) ಫ್ರೆಂಚೀಕರಿಸು ; (ಭಾವಗಳಲ್ಲಿ, ನಡೆ ನುಡಿಗಳಲ್ಲಿ) ಫ್ರೆಂಚಾಗು ; ಫ್ರೆಂಚ್ ಅಭಿಮಾನಿಯಾಗು. **Frenchificátion** (ನಾ.) ಫ್ರೆಂಚೀಕರಣ.

Frénum = Fraenum.

Frénzy ಫ್ರೆನ್ಸಿ (ನಾ., ಕ್ರಿ. ಸಕ.) ಮನೋ ವೈಕಲ್ಯ ; ತಾತ್ಕಾಲಿಕ ಬುದ್ಧಿ ಭ್ರಂಶ ; ಭ್ರಮಾವೇಶ. (ವಿರ. ಪ್ರ.) ಹುಚ್ಚುಕೆರಳು ; ಉನ್ಮಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಾವೇಗ ; ರೋಷಾವೇಶ ; ಚಿತ್ತಕ್ಷೋಭೆ ; ಹುಚ್ಚುಹುಚ್ಚು. (ಕ್ರಿ. ; ಸಾ., ಭೂ. ಕೃ. ನಲ್ಲ) ಹುಚ್ಚು ಕೆರಳಿಸು ; ಉನ್ಮಾದಗೊಳಿಸು ; ಉದ್ರೇಕಗೊಳಿಸು ; ರೋಷಾವೇಶಗೊಳ್ಳು. Frenzied rage ಹುಚ್ಚು ಕೋಪ.

Fréquency. **Frequent** ನೋಡಿ.

Fréquent ಫ್ರೀಕ್ವೆಂಟ್ (ಗು.) ಸ್ವಲ್ಪ ಅಂತರದಲ್ಲಿ ಮರಳಿ ಮರಳಿ ಬರುವ; ಅಡಿಗಡಿಗೆ, ಮೇಲಿಂದ ಮೇಲೆ, ಪದೇ ಪದೇ, — ಬರುವ, ಸಂಭವಿಸುವ. ಒತ್ತಾಗಿರುವ ; ಬಹು ಸಂಖ್ಯೆಯ ; ಅನೇಕ ; ಹೇರಳ. ಸಾಧಾರಣವಾದ ; ವಾಡಿಕೆಯ ; ಪದ್ಧತಿಯ ; ರೂಢಿಯ ; ಬಳಕೆಯ [It is a f. practice to (ಹಾಗೆ) ಮಾಡುವುದು ಸಾಧಾರಣ ವಾಡಿಕೆ. A f. caller ಅಡಿಗಡಿಗೆ, ರೂಢಿಯಾಗಿ, ಬಂದು ಹೋಗುವವನು]. (ನಾಡಿ) ವೇಗದ. **Fréquently** (ಕ್ರಿ. ವಿ.) ; **Fréquency** ಫ್ರೀಕ್ವೆನ್ಸಿ (ನಾ.) (ಕ್ರಿಯಾರ್ಥಗಳಲ್ಲಿ). (ನಾಡಿಯ) ವೇಗ. (ಭೌ. ವಿ.) (ಕಂಪನ, ಮೊ. ಗಳು) ಒಂದು ನಿರ್ದಿಷ್ಟ ಕಾಲದಲ್ಲಾಗುವ ಆವೃತ್ತಿಸಂಖ್ಯೆ. [ಧ್ವನಿ ತರಂಗಗಳು, ವಿದ್ಯುತ್ಪ್ರವಾಹ, ಮೊ. ವಿಷಯದಲ್ಲಿ : High f (ಸಂಕ್ಷಿಪ್ತ : H. F.) ದ್ರುತ,— ಕಂಪನ, ಸ್ಪಂದನ. Low f. (ಸಂಕ್ಷಿಪ್ತ : L. F.) ಮಂದ, — ಕಂಪನ, ಸ್ಪಂದನ]. (ಸ್ಥಿತಿ ಸಂಖ್ಯಾನಿರೂಪಣ) ಒಂದು ಘಟನೆಯ ವಾಸ್ತವಿಕ ಸಂಭವಗಳಿಗೂ ಸಾಧ್ಯ ಸಂಭವಗಳಿಗೂ ಇರುವ ಪ್ರಮಾಣ : ಸಂಭವ ಪ್ರಮಾಣ.

Frequént ಫ್ರಿಕ್ವೆಂಟ್ (ಕ್ರಿ. ಸಕ.) (ಒಂದು ಸ್ಥಳಕ್ಕೆ, ಸಭೆಗೆ, ನಹವಾಸ ಕೂಟಕ್ಕೆ, ಮನೆಗೆ) ಪದೇ ಪದೇ, ವಾಡಿಕೆಯಾಗಿ, ಆಗಿಂದಾಗ್ಗೆ, ಹೋಗು(ತ್ತಿರು). **Frequentátion** (ನಾ.) ; **Frequéntative** — ಟಟಿವ್ (ಗು., ನಾ.) (ವ್ಯಾ.) ವೀಪ್ಸಾರ್ಥಕ (ಕ್ರಿಯೆ, ಧಾತುರೂಪ) [ಕ್ರಿಯೆ ಪದೇ ಪದೇ ನಡೆಯಿತು ಎಂಬುದನ್ನು ಅಥವಾ ಕ್ರಿಯೆಯ ತೀವ್ರತೆಯನ್ನು ಹೇಳುವಲ್ಲ (ಉದಾ., ಹೊಡೆದು ಹೊಡೆದು, ಚೂರು ಚೂರು ಮಾಡಿದನು)]

Frésco ಫ್ರೆಸ್ಕೊ [ನಾ. ; ಬ. ವ. -os, -oes -ಓಸ್ ; ಕ್ರಿ. ಸಕ.] (ಗೋಡೆಯ, ಚಾವಣಿಯೊಳಮೈಯ) ಗಾರೆ ಒಣಗುವುದಕ್ಕೆ ಮೊದಲೇ ಅದರಮೇಲೆ ನೀರುಬಣ್ಣಗಳಿಂದ ಬರೆದ ಚಿತ್ರ : ಮಂಡೋದಕ ಚಿತ್ರ ; ಭಿತ್ತಿ ಚಿತ್ರ. (ಕ್ರಿ.) ಇಂಥ ಚಿತ್ರ ಬರೆ.

Fresh ಫ್ರೆಷ್ (ಗು., ಕ್ರಿ. ವಿ., ನಾ.) ಹೊಸ ; ನವ ; ನವೀನ ; ಹಿಂದೆ, — ತಿಳಿದಿರದ, ಉಪಯೋಗಿಸಿರದ, ಸಂಧಿಸಿರದ, ಪ್ರವೇಶ ಪಡೆದಿರದ (Break f. ground ಹೊಸ ವಿಷಯ ಹಿಡಿ; ಹಳಸಲಲ್ಲದ್ದನ್ನು ಮಾಡು, ಯತ್ನಿಸು). ಮತ್ತೊಂದು ; ಬೇರೆ ; ಮುಂದಿನ (Begin. a f. chapter ಬೇರೆ, ಮುಂದಿನ, — ಅಧ್ಯಾಯ ಆರಂಭಿಸು). ಈಚಿನ ; ಈಗ ತಾನೆ ಮಾಡಿದ, ಇಳಿದ, ಬಂದ ; ನೂತನ (F. from Bengal ಬಂಗಾಳದಿಂದ ಈಗತಾನೆ ಬಂದ); ಪಳಗಿಲ್ಲದ ; ನುರಿತಿಲ್ಲದ; ಅನನುಭವಿಯಾದ [**Frésh-man, Frésher** (ಅನಂ.) ವಿಶ್ವ ವಿದ್ಯಾನಿಲಯದ ಮೊದಲನೆಯ ವರ್ಷದ ವಿದ್ಯಾರ್ಥಿ : ಹೊಸ ವಿದ್ಯಾರ್ಥಿ]. ಉಪ್ಪಿಡುವುದು, ಹೊಗೆಯಾಡಿಸುವುದು, ಡಬ್ಬಿ ತುಂಬುವುದು, ಮೊ. ಕ್ರಿಯೆಗಳಿಂದ ಉಳಿಸಿಟ್ಟದ್ದಲ್ಲದ ; ಪೊಚ್ಚ ಪೊಸ (F. meat, fruit, etc., ಪೊಚ್ಚ ಪೊಸ, — ಮಾಂಸ, ಹಣ್ಣು, ಮೊ.). ಉಪ್ಪಿಲ್ಲದ ; ಕಹಿಯಿಲ್ಲದ ; ಕುಡಿಯಬಹುದಾದ ; ಸೀಯಾದ [F. water (ನಾ.) ಸೀ ನೀರು. Fresh-water (ಗು.) ಸೀನೀರಿನ (F. w. fish). F. butter (ಉಪ್ಪು ಹಾಕಿರದ) ಅಪ್ಪಟ ಬೆಣ್ಣೆ]. (ಗಾಳಿ, ನೀರು) ನಿರ್ಮಲ ; ನಿಷ್ಕಲ್ಮಷ ; ಹುರಿದುಂಬಿಸುವ ; ಆಯಾಸ ಪರಿಹಾರಕ ; ಆಹ್ಲಾದಕರ ; ಆಪ್ಯಾಯಮಾನ ; ಚೈತನ್ಯ ಕೊಡುವ; ತಂಪಾದ. ಹಳಸಿಲ್ಲದ; ಮುಗ್ಗಿಲ್ಲದ ; ನೀರಸವಲ್ಲದ (F. fish, meat, fruit, egg, etc.). ಮಾಸಿಲ್ಲದ ; ಬಾಡಿಲ್ಲದ (F. flowers ಹೊಸ, ಪೊಚ್ಚ, ಹೂವುಗಳು. F. memories ಕುಂದಿಹೋಗಿರದ, ಮರೆತಿಲ್ಲದ, — ನೆನಪುಗಳು). ಕೊಳೆಯಾಗಿರದ ; ಶುಭ್ರ ; ಸ್ವಚ್ಛ ; ಉಜ್ಜ್ವಲ (ವರ್ಣದ) (A f. complexion ಸ್ವಚ್ಛ ದೇಹಕಾಂತಿ ; ಲಾವಣ್ಯ). ಆರೋಗ್ಯವಾಗಿ, ಗೆಲುವಾಗಿ, — ಕಾಣುವ ; ತಾರುಣ್ಯದ ಕಳೆಯಿರುವ ; ಕಳೆದುಂಬಿದ ; ಪ್ರಫುಲ್ಲ ; ಬಳಲಿರದ ; ಲವಲವಿಕೆಯುಳ್ಳ ; ಚಟುವಟಿಕೆಯ ; ಉತ್ಸಾಹ ಭರಿತ ; ಹುರುಪುಳ್ಳ (Never felt fresher ಹಿಂದೆ ಎಂದೂ ಇಷ್ಟು ಲವಲವಿಕೆ, ಹುಮ್ಮಸ್ಸು, — ಇರಲಿಲ್ಲ. As f. as paint ಬಹಳ ಚುರುಕಾದ. A f. wind ಸ್ವಲ್ಪ ಬಿರುಸಾದ ಗಾಳಿ). ಮದ್ಯದ ಅಮಲೇರಿದ ; ಕುಡಿದು ಮತ್ತೇರಿದ. (ಅಮೆ. ಸಂ.) ಮುಂದೆಬಿದ್ದು ಹೋಗುವ ; ಧಾರ್ಷ್ಟ್ಯದ ; ದಾಷ್ಟಿಕದ. (ಕ್ರಿ. ವಿ.) ಹೊಸದಾಗಿ ; ಈಗ ತಾನೆ (F.-caught ಈಗ ತಾನೆ ಹಿಡಿದ. F.-coined ಹೊಸದಾಗಿ ಟಂಕಹಾಕಿದ ; — ನಿರ್ಮಿಸಿದ). (ನಾ.) (ದಿನ, ವರ್ಷ, ಮೊ. ಗಳ) ಹೊಸತು (In the f. of the morning ಬೆಳಗಿನ ಹೊಸ ಕಳೆಯಲ್ಲಿ). (ನದಿಯಲ್ಲಿ) ನೀರುನುಗ್ಗು ; ನೆರೆ ; ಪ್ರವಾಹ. ಸೀನೀರಿನ ಮಡು, ತೊರೆ, ಊಟೆ. **Fréshen** ಫ್ರೆಷ(ಷ್)ನ್ (ಕ್ರಿ.) ಹೊಸದಾಗು ; ಶಕ್ತಿಗೂಡು ; ಕಳೆಯೇರು ; —ಇಸು ; ಹುರುಪೇರು ; ಉಪ್ಪು ಕಳೆ. **Fréshet** (ನಾ.) ಸಮುದ್ರದೊಳಕ್ಕೆ ನುಗ್ಗುವ ಸೀನೀರಿನ ಪ್ರವಾಹ ; ನದಿಯ ನುಗ್ಗು. (ಅತಿವೃಷ್ಟಿಯಿಂದ ಅಥವಾ ಕರಗಿದ ನೀರ್ಗಲ್ಲಿನಿಂದ ಉಂಟಾದ) ನದಿಯ ದೊಡ್ಡ ಪ್ರವಾಹ. **Fréshly** (ಕ್ರಿ. ವಿ.) ಈಚೆಗೆ ; (ವಿರ. ಪ್ರ.) ಹೊಸದಾಗಿ ; ಮತ್ತೆ ; ಪುನಃ. ಕುಂದದ ಶಕ್ತಿಯಿಂದ ; ಹೊಸ ಕಳೆಯಿಂದ. **Fréshness** (ನಾ.)

Frésher, Fréshet. **Fresh** ನೋಡಿ.

Fret[1] ಫ್ರೆಟ್ (ನಾ., ಕ್ರಿ. ಸಕ.) (ಸರಳ ರೇಖೆಗಳನ್ನು, ಸಾ., ಸಮಕೋನಗಳಾಗುವಂತೆ, ಎಡೆಬಿಡದೆ ಉದ್ದಕ್ಕೆ ಜೋಡಿಸಿ ಮಾಡಿದ) ರೇಖಾಲಂಕಾರ (Greek f.). (ಮು., ಚಿನ್ನ ಮತ್ತು ಬೆಳ್ಳಿಯ ದಾರದಿಂದ ಮಾಡಿ, ಅನೇಕ ವೇಳೆ ಹರಳುಗಳಿಂದಲಂಕರಿಸಿ) ಬಲೆಯಂತೆ ಹೆಣೆದಿರುವ ಅಲಂಕಾರದ ಕೆಲಸ. (ಕ್ರಿ.) ಹೀಗೆ ಅಲಂಕಾರ ಮಾಡು ; ಪಪ್ಪಳಿ ನಮೂನೆಯ ಅಲಂಕಾರ ಮಾಡು ; ಬಣ್ಣ ಬಣ್ಣದ ಅಲಂಕಾರ ಮಾಡು ; ವಿವಿಧಾಲಂಕಾರ ಮಾಡು. (ವಾ. ಶಾ.) ಕೆತ್ತನೆಯ ಕೆಲಸದಿಂದ, ಉಬ್ಬು ಚಿತ್ರಗಳಿಂದ (ಮು., ಮಾಳಿಗೆಯ ಒಳಮೈಯನ್ನು) ಅಲಂಕರಿಸು ; (ಮಾಳಿಗೆಯ ಒಳಮೈಯಲ್ಲಿ) ಚಿತ್ರ ಕೆತ್ತು, ಬಿಡಿಸು. **F.-saw** ತೆಳು ಮರವನ್ನು ಚಿತ್ರಾಕಾರಗಳಲ್ಲಿ ಕೊಯ್ಯುವುದಕ್ಕಾಗಿ ಚೌಕಟ್ಟಿನಲ್ಲಿ ಅಳವಡಿಸಿದ ಬಹು ಕಿರಿದಾದ ಗರಗಸ : ಚಿತ್ರಗೆಲಸದ ಗರಗಸ. **Frétwork** (ನಾ.) (ಮು., ಸರಳ ರೇಖಾಕೃತಿಗಳ ಅಲಂಕಾರ ಮಾದರಿಗಳನ್ನು) ಕೆತ್ತಿ ಮಾಡಿದ ಚಿತ್ರಗೆಲಸ ; ಚಿತ್ರಗರಗಸದಿಂದ ಕೊಯ್ದು ಚಿತ್ರಗೆಲಸ ಮಾಡಿದ ಮರ ; ರೇಖಾಚಿತ್ರದ ಕೆಲಸ.

Fret[2] ಫ್ರೆಟ್ (ಕ್ರಿ., ನಾ.) ಅಗಿ ; ಅಗಿದುಹಾಕು ; ಕಡಿ ; ಕಡಿದುಹಾಕು ; (ಚಿಟ್ಟೆ, ಮೊ. ವು) ತಿಂದುಹಾಕು ; (ಕುದುರೆ, ಕಡಿವಾಣವನ್ನು) ಕಡಿ ; (ಹಿಮಶೀತ) ಕೊರೆ. (ತುಕ್ಕು, ಕಿಲುಬು, ಕ್ಷಾಯಿಕ ಪದಾರ್ಥಗಳು, ಘರ್ಷಣ, ರಾಗ ದ್ವೇಷಗಳು, ಮೊ. ವಿಷಯದಲ್ಲಿ) ಕ್ರಮೇಣ ತಿಂದುಹಾಕು, ತಿಂದುಹೋಗು, ಸವೆಯಿಸು, ಕ್ಷಯಿಸು. ಅಗಿದಗಿದು ಯಾತನೆ ಕೊಡು. ಜೀರ್ಣಿಸಿ, ಸವೆಯಿಸಿ, (ದಾರಿ, ಮೊ. ನ್ನು) ಮಾಡು (ರೂಪ. ಸಹ). ರೇಗು ; ರೇಗಿಸು ; ಮಸಗು ; ಸಿಡಿಮಿಡಿಗೊಳ್ಳು ; ಕೆರಳು ; ಕೆರಳಿಸು ; ಕಾಡು ; ಕಾಡಿಸು ; ಪೀಡಿಸು ; ಸಂಕಟಪಡು, —ಪಡಿಸು. (ಪಶ್ಚಾತ್ತಾಪದಿಂದ, ಅತೃಪ್ತಿ, ಮೊ. ಗಳಿಂದ) ಪರಿತಪಿಸು, ಜಿಗಿಲು (F. *at* ; F. *away* or *out* one's life ಸಂಕಟ ಪಟ್ಟು ಪಟ್ಟು, ಕೊರಗಿ ಕೊರಗಿ, ಕೃಶಿಸಿಹೋಗು. F. & fume ಉರಿದುಬೀಳು ; ರೇಗಿ ಬೀಳು ; ಕಿಡಿ ಕಿಡಿಯಾಗು). (ತೊರೆ, ಮೊ.) ಕಿರುದೆರೆಗಳೆದ್ದು ಪ್ರವಹಿಸು, ಉಕ್ಕು, ತೀಡು. (ನೀರು) ಕಲಕಾಡು, ತಳಮಳಗುಟ್ಟು. (ನಾ.) ರೇಗು ; ಕೆರಳು ; ಕಿರಿಕಿರಿ ; ಉದ್ವೇಗ ; ಉಪದ್ರವ; ಕಾಟ ; ಚಿತ್ತಕ್ಷೋಭೆ (In a f. ಕೆರಳಿ ; ರೇಗಿ. F. & fume ; On the f. ತಳಮಳಗುಟ್ಟುತ್ತ ; ಸಿಡಿಸಿಡಿಗುಟ್ಟುತ್ತ). **Frétful** (ಗು.) ; **Frétfully** (ಕ್ರಿ. ವಿ.) ; **Frétfulness** (ನಾ.) ; **Frétty** (ಗು.)

Fret[3] ಫ್ರೆಟ್ (ನಾ.) ತಂತಿವಾದ್ಯಗಳಲ್ಲಿ ಬೆರಳಾಡಿಸುವ ಭಾಗದಲ್ಲಿರುವ ಮೆಟ್ಟು, ಮೆಟ್ಟಿಲು ; ಸಾರಿಕೆ. **Frétted** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Freúdian ಫ್ರಾಯ್ಡಿಯನ್ (ಗು., ನಾ.) Sigmund Freud ಎಂಬ ಮನಶ್ಶಾಸ್ತ್ರಜ್ಞನ (ಶಿಷ್ಯ); (ಕಾಮ ಪ್ರವೃತ್ತಿಯ ಮತ್ತು ಸುಪ್ತ ಪ್ರಜ್ಞಾ ತತ್ತ್ವಗಳ ಆಧಾರದಮೇಲೆ, ಮು., ಗರ್ಭೋನ್ಮಾದ, ಮೊ. ಮತಿಭ್ರಂಶ ವಿಷಯ ಕಾರಣಗಳನ್ನೂ ಅವುಗಳ ಚಿಕಿತ್ಸೆಯನ್ನೂ ಮತ್ತು ಸ್ವಪ್ನ, ಮೊ. ಮನೋವಿಕಾರಗಳ ತತ್ತ್ವನಿರೂಪಣೆಯನ್ನೂ ಮಾಡುವ) ಫ್ರಾಯ್ಡನ ತತ್ತ್ವಗಳ (ಅನುಯಾಯಿ) : ಸುಪ್ತ ಪ್ರಜ್ಞಾ ವಾದಿ ; ಕಾಮಚೈತನ್ಯ ವಾದಿ (Psycho-analysis ನೋಡಿ)

Fríable ಫ್ರೈಅಬ್‌ಲ್ (ಗು.) ಸುಲಭವಾಗಿ ಪುಡಿಪುಡಿಯಾಗುವ ; —ಪುಡಿ ಮಾಡಬಹುದಾದ. **Friability** (ನಾ.) ; **Fríableness** (ನಾ.)

Fríar ಫ್ರೈಅರ್ (ನಾ.) ಕೆಲವು ಕ್ರೈಸ್ತ ಮಠಗಳಿಗೆ (ಮು., ಒಂದು ಕ್ರೈಸ್ತ ಭಿಕ್ಷುವರ್ಗಕ್ಕೆ) ಸೇರಿದವನು : ಕ್ರೈಸ್ತ ಭಿಕ್ಷು, ಸಂನ್ಯಾಸಿ. F.'s balsam (ಹುಣ್ಣಿಗೂ ಗಾಯಕ್ಕೂ ಹಚ್ಚುವ ಒಂದು ಬಗೆಯ) ಸಾಂಬ್ರಾಣಿಧಾತುವಿನ ಧೃತಿ. **Fríarly** (ಗು., ಕ್ರಿ. ವಿ.) (ಕ್ರೈಸ್ತ) ಭಿಕ್ಷುಗಳ ; — ಎಂಥ ; —ಳಿಗೆ ಸಂಬಂಧಪಟ್ಟ ; —ಗಳ ರೀತಿಯಲ್ಲಿ. **Fríary** (ನಾ.) (ಕ್ರೈಸ್ತ) ಭಿಕ್ಷುಗಳ ಮಠ, ಮಂಡಲಿ, ಸಂಘ.

Fríbble ಫ್ರಿಬ್‌ಲ್ (ಕ್ರಿ. ಅಕ., ನಾ.) ಹುಡುಗಾಟಿಕೆಯಾಡು(ವವನು)

Fricasseé ಫ್ರಿಕಸೀ (ನಾ.) ಮಾಂಸ ಭಕ್ಷ್ಯವಿಶೇಷ.

Fricative ಫ್ರಿಕಟಿವ್ (ಗು., ನಾ.) ಸಂಕುಚಿತ (ಶ್ವಾಸ) ದ್ವಾರದಲ್ಲಿ ವಾಯು (ಉಸುರಿನ)ಘರ್ಷಣದಿಂದ ಉಚ್ಚರಿಸಿದ (ವ್ಯಂಜನ) : ಘರ್ಷಣ ವ್ಯಂಜನ ; ಘರ್ಷ್ಯ (ಫ್, ಸ್, ತ್, ಖ್, ಮೊ.)

Fríction ಫ್ರಿಕ್‌ಷನ್ (ನಾ.) (ಎರಡು ಕಾಯಗಳ) ಉಜ್ಜಾಟ, ತಿಕ್ಕಾಟ, ಘರ್ಷಣೆ. ಸಮೆತ ; ತೇಯ್ತ ; ಘರ್ಷಣ ಕ್ಷಯ. (ರೂಪ.) ಮತ ಭೇದ ; ವಿರೋಧ. (ವೈ. ಶಾ.) (ದೇಹದ, ಅಂಗಾಂಗಗಳ) ಮರ್ದನ. (ಭೌ. ವಿ.) ಒಂದು ಕಾಯವು ಮತ್ತೊಂದರಮೇಲೆ ಚಲಿಸುವಲ್ಲಿ ಉಂಟಾಗುವ ತಡೆ. Angle of f. ಒಂದು ಕಾಯದ ಮೈಮೇಲೆ ನಿಂತಿರುವ ಮತ್ತೊಂದು ಕಾಯವು ಜಾರಿ ಸರಿಯದೆ ನಿಂತಿರಬಹುದಾದ ಪರಮಾವಧಿ ಕೋನ : ಘರ್ಷಣ ಕೋನ. **F.-ball** ಅಚ್ಚಿನ ತಿರುಗುವ ಭಾಗಗಳಲ್ಲಿ ಘರ್ಷಣವನ್ನು ತಗ್ಗಿಸಲು ಉಪಯೋಗಿಸುವ ಉಕ್ಕಿನಗುಂಡು : ಹೊರಳುಗುಂಡು ; ಘರ್ಷಣ ಗುಂಡು. **F.-clutch, -cone, -coupling, -disc, -gear(ing)** ಘರ್ಷಣ ನಿಯಂತ್ರಕ, —ಶಂಕು, —ಸಂಯೋಜಕ, — ವೃತ್ತ ಫಲಕ, — ಚಾಲಕ (ಮೊ. ದ ಘರ್ಷಣದಿಂದ ಚಲನೆ ಕೊಡುವ ಯಂತ್ರಸಾಧನಗಳು). **Fríctional** (ಗು.) ; **Fríctionless** (ಗು.)

Fríday ಫ್ರೈಡೆ(ಡಿ) (ನಾ.) ವಾರದ ಆರನೆಯ ದಿನ : ಶುಕ್ರವಾರ. Good F. ಈಸ್ಟರ್ ಹಬ್ಬದ ಹಿಂದಿನ ಶುಕ್ರವಾರ : ಏಸುಕ್ರಿಸ್ತನ ಕ್ರೂಶಾರೋಹಣದ ಸ್ಮಾರಕೋತ್ಸವ ದಿನ. Black F. ಅನಿಷ್ಟ, ಕೇಡು, — ಶುಕ್ರವಾರ (ಇಂಗ್ಲೆಂಡಿನ ಇತಿಹಾಸದಲ್ಲಿ ಶುಕ್ರವಾರದ ದಿನ ಸಂಭವಿಸಿದ ಹಲವು ಅನಿಷ್ಟಗಳ ದೆಸೆಯಿಂದ)

Friend ಫ್ರೆಂಡ್ (ನಾ., ಕ್ರಿ. ಸಕ.) ಗೆಳೆಯ ; ಗೆಳತಿ ; ಸ್ನೇಹಿತ ; ಮಿತ್ರ ; ಸಖ ; ಸಖಿ (ಸಾ., ಪ್ರಣಯಸಂಬಂಧ ರಕ್ತಸಂಬಂಧಗಳ ಪರಿಗಣನೆಯಿಲ್ಲದೆ ಪ್ರ.). ಮತ್ತೊಬ್ಬನ ಕಾರ್ಯಭಾರಿ (ಉದಾ., ದ್ವಂದ್ವ ಯುದ್ಧದಲ್ಲಿ ಸಹಾಯಕ). (ಶಿಥಿಲವಾಗಿ) ಪರಿಚಿತ. (ಅಪರಿಚಿತ, ಪರಕೀಯ, ಸಭಿಕ, ಮೊ. ರನ್ನು ಉದ್ದೇಶಿಸಿ ಮಾತನಾಡುವಾಗ ಪ್ರಯೋಗಿಸುವ ಪದ : My friend in the brown hat ಕಂದುಟೋಪಿಯ ನನ್ನ ಸ್ನೇಹಿತ. ಸಂಬೋಧನೆ ಮಾಡುವಾಗ ಮರ್ಯಾದೆಯಾಗಿ ಅಥವಾ ವ್ಯಂಗ್ಯವಾಗಿ : "ಮಿತ್ರನೇ ! ಸ್ನೇಹಿತನೇ !". "ಆಹಾ ! ಎಂಥ ಸ್ನೇಹಿತನಯ್ಯಾ !" ಹೆಸರಿನ ಹಿಂದೆ ಪ್ರ. : F. Jones. ಶಾಸನ ಸಭೆಯಲ್ಲಿ ಸದಸ್ಯರು ಪರಸ್ಪರ ಸಂಬೋಧಿಸುವಾಗ : My honourable f. ; ನ್ಯಾಯಸ್ಥಾನದಲ್ಲಿ ನ್ಯಾಯವಾದಿಗಳು ಪರಸ್ಪರ ಸಂಬೋಧಿಸುವಾಗ : My learned f.). (ಬ. ವ. ದಲ್ಲಿ) ಒಬ್ಬನ ಸಮೀಪ ಬಂಧುಗಳು, ನೆಂಟರಿಷ್ಟರು, ಹೊಣೆಗಾರರು. ಹಿತ ಚಿಂತಕ ; ಆಪ್ತ ; ಪಕ್ಷಪಾತಿ ; ಸಹಾನುಭೂತಿ ತೋರುವವನು ; ಸಹಾಯಕ ; ಆಶ್ರಯ ದಾತ (No f. of virtue ಸೌಶೀಲ್ಯದ ಪಕ್ಷಪಾತಿಯಲ್ಲ. A f. at court ರಾಜಾಸ್ಥಾನದಲ್ಲಿ ಪ್ರಾಬಲ್ಯವುಳ್ಳ ಸ್ನೇಹಿತ). ಸಹಾಯಕವಾದದ್ದು ; ನೆರವು (My shyness was here my best f. ಇಲ್ಲಿ ನನ್ನ ಲಜ್ಜಾಭಾವವೇ, ಸಂಕೋಚವೇ, ನನಗೆ ನೆರವಾಯಿತು. Be, keep, make, friends ಸ್ನೇಹದಿಂದಿರು ; ಸ್ನೇಹ ಉಳಿಸಿಕೊ, ಸ್ನೇಹ ಮಾಡು, ಒಲಿಸಿಕೊ). 'ಕ್ವೇಕರ್' ಎಂಬ ಕ್ರೈಸ್ತ ಮತದ ಒಳಪಂಗಡದವನು (Society of Friends ಕ್ವೇಕರ್ ಸಮಾಜ). (ಕ್ರಿ.) (ಕಾವ್ಯ) ಸ್ನೇಹ ಮಾಡು ; ನೆರವಾಗು. **Friéndless** (ಗು.) ; **Friéndlessness** (ನಾ.) ; **Friéndly** (ಗು., ನಾ., ಕ್ರಿ. ವಿ.) ಕೆಳೆತನದ ; ಸ್ನೇಹದ ; ಮೈತ್ರಿಯ ; ಸ್ನೇಹ ಭಾವದ ; ಹಿತೈಷಿಯಾದ ; ಸದಯ (F. lead ಲಂಡನ್ನಿನ ಬಡಪ್ರಜೆಗಳು ತಮ್ಮಲ್ಲಿ ಕಷ್ಟಕ್ಕೊಳಗಾದವನ ಸಹಾಯಕ್ಕಾಗಿ ಏರ್ಪಡಿಸುವ ವಿನೋದ ಕೂಟ). ವಿರೋಧವಿಲ್ಲದ ; ವಿಶ್ವಾಸದಿಂದಿರುವ [A f. nation ಮಿತ್ರ ಜನಾಂಗ. A f. action (ನ್ಯಾ. ಶಾ.) ಕೇವಲ ನ್ಯಾಯಸಮಸ್ಯೆಯ ಪರಿಹಾರಕ್ಕಾಗಿ ಮಿತ್ರಭಾವದಿಂದ ಹೂಡಿದ ದಾವೆ : ಸ್ನೇಹಭಾವದ ದಾವೆ. F. match (ಪಾರಿತೋಷಿಕ ಪಡೆಯುವ ಸ್ಪರ್ಧೆಯಲ್ಲದ) ಸ್ನೇಹದ ಪಂದ್ಯ]. ಅನುಕೂಲವಾಗಿರುವ ; ಒಲವಿರುವ ; ಒಪ್ಪುವುದಕ್ಕೆ, ಸಹಾಯ ಮಾಡುವುದಕ್ಕೆ, —ಸಿದ್ಧವಾಗಿರುವ; ಅನುಮೋದಿಸುವ. (ವಸ್ತು) ಉಪಯೋಗವಾದ, ಸಹಾಯಕ, ಹಿತಕಾರಕ, ಅನುಕೂಲವಾದ, ಸಮಯೋಚಿತ (F. Society ರೋಗ ರುಜಿನ, ಮುಪ್ಪು, ಸಾವು, ಮೊ. ಗಳಲ್ಲಿ ಸಹಾಯವಾಗುವಂತೆ ಪರಸ್ಪರ ಸಹಾಯ ನಿಯಮಗಳುಳ್ಳ ಮಿತ್ರಮಂಡಲಿ). (ನಾ. ; ಬ. ವ. -ies — ಲೀಸ್) ಸ್ನೇಹಿತ (ಮು., ವಲಸೆಬಂದವರಿಗೆ ಅನುಕೂಲರಾದ ದೇಶೀಯರು) ; ಸ್ನೇಹ ಭಾವದ್ದು. (ಕ್ರಿ. ವಿ.) (ವಿರ. ಪ್ರ.) ಸ್ನೇಹದಿಂದ (Used, received, us f.). **Friéndliness** (ನಾ.) ; **Friéndlily** (ಕ್ರಿ. ವಿ.) (ವಿರ. ಪ್ರ.) ; **Friéndship** (ನಾ.) ಕೆಳೆ(ತನ) ; ಸ್ನೇಹ ; ಮೈತ್ರಿ ; ಸಖ್ಯ ; ಸ್ನೇಹದಿಂದಿರುವುದು ; ಸೌಹಾರ್ದ ; ಪ್ರೀತಿ.

Frieze[1] ಫ್ರೀಸ್ (ನಾ.) (ಸಾ., ಒಂದು ಕಡೆ ಮಾತ್ರ ತುಪ್ಪುಳು ತುಪ್ಪುಳಾಗಿರುವಂತೆ ಮಾಡಿದ) ಒರಟು ಉಣ್ಣೆಯ ಬಟ್ಟೆ, ಉಜ್ಜುಗಂಬಳಿ.

Frieze[2] ಫ್ರೀಸ್ (ನಾ.) ಕಂಬದ ಮೇಲ್ಗಡೆಯ ವರಿಸೆಯಲ್ಲಿ ಕಾರ್ನಿಸಿನ ಕೆಳಗಿರುವ ಭಾಗ ; ಈ ಭಾಗದಲ್ಲಿಯ ಶಿಲ್ಪದ ಅಗಲವಾದ ಅಲಂಕಾರಪಟ್ಟಿ ; ಇತರ ಕಡೆ ಮಾಡಿದ ಈತೆರದ ಅಲಂಕಾರಪಟ್ಟಿ.

Frígate ಫ್ರಿಗೆಟ್ (ನಾ.) (ಚರಿತ್ರೆ) ಎರಡನೆಯ ದರ್ಜೆಯ ಯುದ್ಧದ ಹಡಗು ; (ಈಗ, ಶಿಥಿಲವಾಗಿ) ಕಾವಲು ಹಡಗು. ಉಷ್ಣವಲಯದ ತೀವ್ರಗಮನದ ಒಂದು ದೊಡ್ಡ ಮಾಂಸಾಹಾರದ (ಹಿಂಸ್ರ) ಪಕ್ಷಿ (= F.-bird)

Fright ಫ್ರೈಟ್ (ನಾ., ಕ್ರಿ. ಸಕ.) ಥಟ್ಟನೆ ಆದ ಬೆದರಿಕೆ, ದಿಗಿಲು ; ಅತಿ ಗಾಬರಿ ; ತೀವ್ರ ಭಯ. ಕರಾಳ ಮೂರ್ತಿ ; ಅತಿ ವಿಲಕ್ಷಣ ವ್ಯಕ್ತಿ. (ಕ್ರಿ.) (ಕಾವ್ಯ) ಭಯಗೊಳಿಸು; ಗಾಬರಿಪಡಿಸು. **Fríghten** — ಟ್‌ನ್ (ಕ್ರಿ. ಸಕ.) ಭಯ, ದಿಗಿಲು, ಗಾಬರಿ, —ಪಡಿಸು ; ಬೆದರಿಸು (ಅನೇಕ ವೇಳೆ *out of, into* ಉಪ. ದೊಡನೆ.). F. *away, out of* ಒಂದು ಸ್ಥಳ, ಮೊ. ಗಳಿಂದ ಹೆದರಿಸಿ ಓಡಿಸಿಬಿಡು, ಅಟ್ಟಿಬಿಡು. F. *into* submission ಹೆದರಿಸಿ ಅಧೀನಪಡಿಸಿಕೊ, ವಿಧೇಯನನ್ನಾಗಿ ಮಾಡಿಕೊ. Frightened *at* his own thoughts ; — *of* doing the wrong thing. **Fríghtful** (ಗು.) ಅತಿ ಭಯಂಕರ ; ಘೋರ ; ಸಹಿಸಲಾಗದ ; ದುಸ್ಸಹ ; ಅತಿ ವಿಕಾರದ ; ಕರಾಳ ರೂಪದ ; ಭೈರವ ; ದಾರುಣ. (ಅಸಂ.) ಅತಿ ದೊಡ್ಡ ; ಅತಿರೇಕ. **Fríghtfully** (ಕ್ರಿ. ವಿ.) ; **Fríghtfulness** (ನಾ.)

Frígid ಫ್ರಿಜಿಡ್ (ಗು.) (ಮು., ಹವಾ ಅಥವಾ ವಾಯುಸ್ಥಿತಿ) ಕೊರೆಯುವ ಚಳಿಯ, —ಶೀತದ (F. zone ಉ., ದ., ಶೀತ ವಲಯ). (ರೂಪ.) ಕಾವಿಲ್ಲದ ; ಉತ್ಸಾಹ ಶೂನ್ಯ ; ನಿರುತ್ಸಾಹದ ; ತಾತ್ಸಾರದ ; ಜಡ ; ಉದಾಸೀನ ಭಾವದ ; ಬಲಾತ್ಕಾರದ. ಉತ್ಸಾಹ ಕುಗ್ಗಿಸುವ, — ಕೆಡಿಸುವ ; ನೀರಸ ; ನಿಸ್ಸಾರವಾದ. **Frigídity** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಗುಣವಾಚಕಾರ್ಥಗಳಲ್ಲಿ). (ರೂಪ.) ಕಾಮೋದ್ರೇಕವಿಲ್ಲದಿರುವುದು ; ನಪುಂಸಕತ್ವ. **Frígidly** (ಕ್ರಿ. ವಿ.) ; **Frígidness** (ನಾ.) ; **Frigorífic** ಫ್ರಿಗೊರಿಫಿಕ್ (ಗು.) ಶೈತ್ಯಕಾರಕ ; ತಂಪಿಸುವ ; ಕೊರೆತ ವುಂಟುಮಾಡುವ ; (ದ್ರವವನ್ನು) ಘನೀಕರಿಸುವ.

Frill ಫ್ರಿಲ್ (ನಾ.) ಅಲಂಕಾರಕ್ಕಾಗಿ ನಿರಿನಿರಿ ಮಾಡಿದ ನೆಯ್ದ ವಸ್ತುವಿನ ಅಂಚು ; ಇದೇ ತೆರದ ಇತರ ಅಲಂಕಾರ : ನಿರಿ ; ನೆರಿಗೆ. (ಪಕ್ಷಿ, ಪ್ರಾಣಿ, ಸಸ್ಯ, ಮೊ. ಗಳಲ್ಲ, —ಪುಕ್ಕ, ಕೂದಲು, ಮೊ. ಗಳ) ಸ್ವಾಭಾವಿಕ ಕುಚ್ಚುಪಟ್ಟಿ. (ಬ. ವ. ದಲ್ಲಿ) ಗತ್ತು ; ಠೀವಿ ; ಬೆಡಗು ; ಒಯ್ಯಾರ ; ಡಂಭ ; ಪ್ರತಿಷ್ಠೆ (He puts on frills ಅವನು ಡಂಭ ಮೆರೆಯುತ್ತಾನೆ). (ಪ್ರಾಣಿಗಳ ವಿಷಯದಲ್ಲಿ) = Mesentery. (ಛಾಯಾ ಗ್ರಾಹಕ) ಫಲಕದ ಅಂಚಿನಲ್ಲಿಯ ತೆರೆತೆರೆಯಾದ ಜೆಲೆಟಿನ್ ಪೊರೆ. (ಕ್ರಿ) ನೆರಿಗೆ ಕಟ್ಟು ; ನೆರಿಗೆಯಾಗಿರು ; ನೆರಿಗೆಯಿಂದ ಅಲಂಕರಿಸು. **Frilled** (ಗು.) ; **Fríllery** (ನಾ.) ನೆರಿಗೆಗಳು ; ನೆರಿಗೆ ಕಟ್ಟುವುದು. **Frílling** (ನಾ.) (ಉಡುಪಿಗೆ) ನೆರಿಗೆ ಕಟ್ಟುವುದು ; ನೆರಿಗೆ ಕಟ್ಟಿದ ಅಂಚು ; ನೆರಿಗೆಗಳು. **Fríllies** ಫ್ರಿಲೀಸ್ (ನಾ., ಬ. ವ.) (ಬಳ. ಮಾ.) ನೆರಿಗೆಯಿರುವ ಕುಪ್ಪಸ, ಮೊ.

Fringe ಫ್ರಿಂಜ್ (ನಾ., ಕ್ರಿ. ಸಕ.) ಅಂಚು ; ಕರೆ ; ಸೆರಗು ; ಅರುಗು (— ಕಟ್ಟು, ಆಗಿರು) ; (F. of a subject ಒಂದು ವಿಷಯದ ಕೇವಲ ಆರಂಭ). (ಅಂಚಿನಲ್ಲಿ) ರೇಷ್ಮೆಯ ಅಥವಾ ದಾರದ ಎಳೆಗಳನ್ನು ಬಿಡಿ ಬಿಡಿಯಾಗಿ, ಅಥವಾ ಹೆಣೆದು, ಬಿಟ್ಟಿರುವ ಅಲಂಕಾರದ ಪಟ್ಟಿ ; ಇದನ್ನು ಹೋಲುವಂಥದು ; ಹಣೆಯಮೇಲೆ ತೊಂಗುವಂತೆ ಕತ್ತರಿಸಿದ ಮುಂಗುರುಳು : ಹಣೆಗುರುಳು ; (ಪ್ರಾಣಿ, ಗಿಡ, ಮೊ. ಗಳ) ಸ್ವಾಭಾವಿಕವಾದ ಕೂದಲು, ಮೊ. ಗಳ ಕುಚ್ಚುಪಟ್ಟಿ, ಜಾಲರ. (ರೂಪ.) ಅನುಬಂಧ. (ಬಳ. ಮಾ.) ಅಸಂಬದ್ಧ ವಿಷಯ. (ದೃ. ವಿ.) ವಕ್ರ ವಿಯೋಜನದಿಂದಾದ ವರ್ಣಪಟಲದಲ್ಲಿಯ ಒಂದು ಪಟ್ಟಿ. **Fríngeless** (ಗು.) ; **Fríngy** (ಗು.) ಅಂಚಿನಂಥ ; ಅಂಚು(ಗಳು)ಳ್ಳ. **Fringing** (ನಾ.)

Fríppery ಫ್ರಿಪೆರಿ (ನಾ.) (ಮು., ಉಡುಪಿನಲ್ಲಿ) ಅತಿ ಸೊಗಸು, ಷೋಕಿ, ನಾಜೂಕು. ಅನಾವಶ್ಯಕವಾದ ಅಲಂಕಾರ ; ಹುಚ್ಚಲಂಕಾರ. (ಮು., ಬರವಣಿಗೆಯ, ಮಾತಿನ, — ಶೈಲಿಯಲ್ಲಿ) ಬರಿಯ ಆಡಂಬರ ; ಥಳುಕು ಪಳುಕು ; ಚೂಪುಗಾರಿಕೆಯ ವಸ್ತುಗಳು.

Frísco ಫ್ರಿಸ್ಕೋ (ನಾ.) (ಅಮೆ. ಸಂ. ಅಸಂ.) San Fransisco (ಎಂಬುದರ ಸಂಕ್ಷಿಪ್ತ)

Frisétte (F) ಫ್ರಿಸೆಟ್ (ನಾ.) ಹಣೆಯ ಮೇಲ್ಗಡೆ ಬಿಟ್ಟಿರುವ ಸಣ್ಣದಾದ ಗುಂಗುರು ಕೂದಲ ಗೊಂಚಲು ; ತಿದ್ದಿದ ಹಣೆಗುರುಳು ; ಭ್ರಮರಕ.

Friséur (F) ಫ್ರಿಸರ್ (ನಾ.) ಕೇಶಾಲಂಕಾರ ಮಾಡುವವನು ; ಕೇಶ ಪ್ರಸಾಧಕ.

Frísian ಫ್ರಿಸಿಯನ್ (ಗು., ನಾ.) ಫ್ರೀಸ್‌ಲೆಂಡಿನ(ವನು, ಭಾಷೆ)

Frisk ಫ್ರಿಸ್ಕ್ (ಕ್ರಿ. ಅಕ., ನಾ.) ಕುಣಿದಾಡು ; ನೆಗೆದಾಡು ; ಎಗುರಾಡು. (ನಾ.) ಕುಣಿದಾಟ ; ನೆಗೆದಾಟ. **Frísky** (ಗು.) ; **Fréskily** (ಕ್ರಿ. ವಿ.) ; **Fréskiness** (ನಾ.)

Frísket ಫ್ರಿಸ್ಕೆಟ್ (ನಾ.) ಮುದ್ರಣ ಮಾಡುವಾಗ ಹಾಳೆಯನ್ನು ಕದಲದಂತಿಡುವುದಕ್ಕಾಗಿ ದಾರದ ಅಡ್ಡಪಟ್ಟಿ ಬಿಗಿದಿರುವ ಕಬ್ಬಿಣದ ಚೌಕಟ್ಟು : ಮುದ್ರಣ ಕಾಗದದ ಹಿಡಿಕೆ.

Frit ಫ್ರಿಟ್ (ನಾ., ಕ್ರಿ. ಸಕ.) ಗಾಜು ತಯಾರಿಸಲು ಉಪಯೋಗಿಸುವ ಮರಳು ಮತ್ತು ಸ್ರಾವಕ ವಸ್ತುಗಳ ಮಿಶ್ರಣ : ಕಾಚ ದ್ರವ್ಯ. ಮೆತು ಪಿಂಗಾಣಿಯನ್ನು ತಯಾರಿಸುವ ಕಾಚದ್ರವ್ಯಮಿಶ್ರಣ. (ಕ್ರಿ.) ಕಾಚ ದ್ರವ್ಯವನ್ನಾಗಿ ಮಾಡು ; ಅರೆವಾಸಿ ಕರಗಿಸು ; ಭಸ್ಮ ಮಾಡು.

Frit-fly ಫ್ರಿಟ್ ಫ್ಲೈ (ನಾ.) ಗೋಧಿಗೆ (ತಗುಲುವ) ಹಾನಿಕರವಾದ ಒಂದು ಬಗೆಯ ಸಣ್ಣ ನೊಣ.

Frith. **Firth** ನೋಡಿ.

Frítter[1] ಫ್ರಿಟರ್ (ನಾ.) ಹಣ್ಣು, ಮೊ. ಗಳ ಚೂರುಗಳನ್ನಿಟ್ಟು ಕರಿದ ಕಣಕದ ಭಕ್ಷ್ಯ : ಪನಿಯಾಣ (Apple f., Oyster f., etc.)

Frítter[2] ಫ್ರಿಟರ್ (ಕ್ರಿ. ಸಕ.) ಚೂರು ಚೂರು ಮಾಡು ; ಪುಡಿ ಪುಡಿ ಮಾಡು ; (ಕಾಲ, ಹಣ, ಶಕ್ತಿ, ಮೊ. ನ್ನು ಸಂಬಂಧವಿಲ್ಲದ ಬೇರೆ ಬೇರೆ ಕಾರ್ಯಗಳಿಗೆ, ಹತ್ತಾರು ಕೆಲಸಗಳಿಗೆ) ಸ್ವಲ್ಪ ಸ್ವಲ್ಪವಾಗಿ ಕಳೆದುಬಿಡು, ಪೋಲು ಮಾಡು, ಹಾಳು ಮಾಡು, ಅಪವ್ಯಯ ಮಾಡು (= F. away). F. down ಸ್ವಲ್ಪ ಸ್ವಲ್ಪವಾಗಿ ಕಳೆ, ಸವೆಯಿಸು, ಕ್ಷಯಿಸು.

Fritz ಫ್ರಿಟ್ಸ್ (ನಾ.) ಜರ್ಮನರ, ಜರ್ಮನನ, — ಅಡ್ಡಹೆಸರು.

Frívol ಫ್ರಿವ(ವ್)ಲ್ (ಕ್ರಿ.) ಹುಡುಗಾಟವಾಡು ; ವಿನೋದವಾಡು. (ಹಣ, ಕಾಲ, ಮೊ. ನ್ನು) ಅವಿವೇಕವಾಗಿ ಪೋಲುಮಾಡು, ನೀಗಾಡು. **Frívolous** ಫ್ರಿವೊಲಸ್ (ಗು.) ಅತ್ಯಲ್ಪದ ; ಬೆಲೆ ಬಾಳದ ; ತಿರುಳಿಲ್ಲದ ; ಕ್ಷುದ್ರ ; ನಿಷ್ಫಲವಾದ ; ಹುಡುಗಾಟಿಕೆಯ ; ತಿಳಿಗೇಡಿತನದ. **Frívolously** (ಕ್ರಿ. ವಿ.) ; **Frívolousness** (ನಾ.) ; **Frivólity** ಫ್ರಿವಾಲಿಟಿ (ನಾ.)

Fríz(z)[1] ಫ್ರಿಸ್ (ಕ್ರಿ. ಸಕ., ನಾ.) (ಕೂದಲನ್ನು, ಕುರುಳನ್ನು) ಗುಂಗುರು ಮಾಡು, ಸುರುಳಿ ಸುರುಳಿ ಮಾಡು. (ಮೃದು ಚರ್ಮ, ಮೊ. ನ್ನು ಉಜ್ಜುಗಲ್ಲಿನಿಂದ, ಹೆರೆಗತ್ತಿಯಿಂದ) ನಯ ಮಾಡು. ಪರಿಷ್ಕರಿಸು. (ನಾ.) — ಮಾಡಿದ ಸ್ಥಿತಿ. ಗುಂಗುರು ಕೂದಲು ; ಗುಂಗುರು ; — ಕೂದಲ ಸಾಲು. **Frízzle**[1] (ಕ್ರಿ., ನಾ.) ಗುಂಗುರು ಗುಂಗುರಾಗು ; —ಮಾಡು (ಮು., *up* ಉಪ. ದೊಡನೆ). (ನಾ.) ಗುಂಗುರು (ಕೂದಲು). **Frízzly** (ಕ್ರಿ. ವಿ.) ; **Frízzy** (ಗು.)

Frízz[2] ಫ್ರಿಸ್ (ಕ್ರಿ. ಅಕ.) (ಹುರಿಯುವಾಗ) ಚಟಪಟಗುಟ್ಟು. **Frízzle**[2] (ಕ್ರಿ.) ಚಟಪಟಗುಟ್ಟುವಂತೆ ಹುರಿ, ಸುಡು.

Fro ಫ್ರೋ (ಕ್ರಿ. ವಿ., ಉಪ.) (ಒಂದು ಸ್ಥಳದಿಂದ) ಮುಂದಕ್ಕೆ, ದೂರಕ್ಕೆ [To & fro (ಹಿಂದಕ್ಕೂ ಮುಂದಕ್ಕೂ ; ಒಂದು ಸ್ಥಳದಿಂದ ಮತ್ತೊಂದಕ್ಕೆ ; ಪದೇ ಪದೇ) ಎಂಬಲ್ಲಿ ಮಾತ್ರ]. (ಉಪ.) = From.

Frock ಫ್ರಾಕ್ (ನಾ., ಕ್ರಿ. ಸಕ.) ಮಗುವಿನ ಒಂದು ಬಗೆಯ ಲಂಗ (ಈಗ, ಪಾಶ್ಚಾತ್ಯಸ್ತ್ರೀಯರ ಲಂಗ ಸಹ) ; (ಮುಂಭಾಗ ಸೀಳಿಲ್ಲದ) ಗಂಡಸಿನ ನಿಲುವಂಗಿ (= F.-coat); ಇದೇ ರೂಪಿನ ಸೈನಿಕನ ಅಂಗಿ. ಬೇಸಾಯಗಾರನ ಜುಬ್ಬ (= Smock-f.) ; ನಾವಿಕನ ಉಣ್ಣೆಯ ಜುಬ್ಬ. (ಕ್ರೈಸ್ತ) ಸಂನ್ಯಾಸಿಯ ಅಗಲತೋಳುಗಳುಳ್ಳ ನಿಲುವಂಗಿ. (ರೂಪ.) ಪಾದ್ರಿಗುಣ ; ಪಾದ್ರಿಧರ್ಮ. (ಕ್ರಿ.) ಪಾದ್ರಿಯ ಅಧಿಕಾರ ಕೊಡು.

Froébelism ಫ್ರುಬೆಲಿಸ್‌ಮ್ (ನಾ.) 'ಕಿಂಡರ್‌ಗಾರ್ಟನ್' ಪದ್ಧತಿಯಲ್ಲಿ ನಡಸುವ ಚಿಕ್ಕ ಮಕ್ಕಳ ವಿದ್ಯಾಭ್ಯಾಸ : ಕಿಂಡರ್‌ಗಾರ್ಟನ್ ವಿದ್ಯಾಭ್ಯಾಸ ಪದ್ಧತಿ (Froebel ಎಂಬ ಜರ್ಮನ್ ಶಿಕ್ಷಣ ಪಂಡಿತನ ಹೆಸರಿನಿಂದ). (Kindergarten ನೋಡಿ)

Frog[1] ಫ್ರಾಗ್ (ನಾ.) ಕಪ್ಪೆ. (ತುಚ್ಛವಾಗಿ) ಫ್ರೆಂಚಿನವನು (ಕಪ್ಪೆಗಳನ್ನು ತಿನ್ನುವ ಕಾರಣದಿಂದ). **F.-eater** ಫ್ರೆಂಚಿನವನು. **F.-in-the-throat** ಗಂಟಲು ಕಟ್ಟಿಕೊಳ್ಳುವ ರೋಗ ; ಗಂಟಲು ಒಡೆದಿರುವುದು ; ಗಂಟಲೊಡೆದ ಧ್ವನಿ. **F.'s, F., -march** ಬಂದಿಯನ್ನು ಕೆಳಮೊಗನಾಗಿ ಮಲಗಿಸಿ ಕೈಯೊಬ್ಬ ಕಾಲೊಬ್ಬನಂತೆ ನಾಲ್ವರು ಹಿಡಿದು ಹೊತ್ತುಕೊಂಡು ಹೋಗುವುದು. **F.-spawn** ಕಪ್ಪೆ ಮೊಟ್ಟೆ ; ಸೀನೀರಿನ ಶೈವಲ ಜಾತಿ(ಗಳ ಹೆಸರು). **Fróggy** (ನಾ., ಗು.) ಕಪ್ಪೆ (ಆಟದ, ಮುದ್ದಿನ, ಹೆಸರು) ; (ಅಸಂ.) ಫ್ರೆಂಚಿನವನು. (ಗು.) ಕಪ್ಪೆಗಳಿಂದ ಕೂಡಿದ ; ಕಪ್ಪೆಯಂಥ.

Frog[2] ಫ್ರಾಗ್ (ನಾ.) ಕುದುರೆಯ ಅಂಗಾಲಿನ ಮಧ್ಯದಲ್ಲಿ ಬೆಳೆಯುವ ಸ್ಥಿತಿಸ್ಥಾಪಕ ಗುಣವುಳ್ಳ ಕೊಂಬಿನ ಪದಾರ್ಥ.

Frog[3] ಫ್ರಾಗ್ (ನಾ.) ಕತ್ತಿ, ಸನೀನು, ಮೊ. ನ್ನು ಇಟ್ಟುಕೊಳ್ಳುವುದಕ್ಕೆ ನಡುಪಟ್ಟಿಯಲ್ಲಿಯ ಚರ್ಮದ ಹಿಡಿಕೆ. ಸೈನಿಕರ ಅಂಗಿಯಲ್ಲಿಯ ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೆರದ ಗುಂಡಿಯ ಬಂಧನಿ ; ಗುಂಡಿಕುಣಿಕೆ. **Frogged** ಫ್ರಾಗ್ಡ್ (ಗು.) ಇಂಥ ಬಂಧನಿಗಳಿರುವ ; —ಗಳಿಂದ ಅಲಂಕೃತವಾದ.

Frog[4] ಫ್ರಾಗ್ (ನಾ.) ಎರಡು ರೈಲುದಾರಿಗಳು ಒಂದನ್ನೊಂದು ಅಡ್ಡ ಹಾಯುವ ಕಡೆ ಕಂಬಿಗಳು ಸೇರುವ ಸ್ಥಳದಲ್ಲಿ ಹಾಕಿರುವ ಗಾಡಿ ತೋಡಿದ ಕಬ್ಬಿಣದ ಹಲಗೆ.

Frólic ಫ್ರಾಲಿಕ್ (ಗು., ಕ್ರಿ. ಅಕ., ನಾ.) (ಪ್ರಾಚೀ. ಪ್ರ.) ಸಂತೋಷದ ; ನಗು ನಗುತ್ತಿರುವ ; ಉಲ್ಲಾಸದ ; ನಲಿದಾಟದ. (ಆಧುನಿಕ ಪ್ರ.) ಕುಣಿದಾಡುವ ; ನೆಗೆದಾಡುವ ; ಲೀಲೆಯ ; ಹುಡುಗಾಟದ ; ವಿನೋದದ ; ಕುಚೇಷ್ಟೆಯ. (ಕ್ರಿ.) ಕುಣಿದಾಡು ; ನೆಗೆದಾಡು ; ಹುಡುಗಾಟವಾಡು ; ವಿನೋದ ಮಾಡು ; ಕುಚೇಷ್ಟೆ ಮಾಡು . (ನಾ.) ವಿನೋದ ; ಲೀಲೆ ; ಉಲ್ಲಾಸ ; ಸಂತೋಷ ಲಹರಿ ; ಹುಡುಗಾಟಿಕೆ ; ಕುಚೇಷ್ಟೆ ; ತಮಾಷೆ ; ಖುಷಿ ; ವಿನೋದ ಕೂಟ. **Frólicsome** —ಸಮ್ (ಗು.) ; **Frólicsomely** (ಕ್ರಿ. ವಿ.) ; **Frólicsomeness** (ನಾ.)

From ಫ್ರಾಮ್ (ಉಪ.) —ಇಂದ —ದೆಸೆಯಿಂದ ; —ಕಡೆಯಿಂದ ; —ಇಂದ ಹಿಡಿದು ; —ಮೊದಲುಗೊಂಡು. Repeated f. mouth to mouth ಬಾಯಿಂದ ಬಾಯಿಗೆ ಹರಡಿ. F. title to colophon ಪುಸ್ತಕದ ಮೊದಲಿಂದ ಹಿಡಿದು ಕೊನೆಯ ವರೆಗೂ ; ಆದ್ಯಂತವಾಗಿ. F. day to day ದಿನದಿಂದ ದಿನಕ್ಕೆ ; ನಿತ್ಯವೂ. F. time to time ಆಗಿಂದಾಗ್ಗೆ. F. a child ಮಗುತನದಿಂದ ; ಬಾಲ್ಯಾರಭ್ಯ. Saw f. 10 to 20 boats ಹತ್ತರಿಂದ ಇಪ್ಪತ್ತು ದೋಣಿಗಳನ್ನು ಕಂಡೆನು. Am far f. saying (ಅದನ್ನು) ಹೇಳುವವನಲ್ಲ, ಎಂದಿಗೂ ಹೇಳೆನು. F. home ಮನೆಯಿಂದ ಹೊರಗೆ, ದೂರವಾಗಿ. Apart f. its moral aspect ಅದರ ನೈತಿಕ ದೃಷ್ಟಿಯನ್ನು ಗಣಿಸದೆ. I cannot refrain f. laughing ನಗದೆ ಇರಲಾರೆ ; ನಗು ತಡೆಯಲಾರೆ. Appeal f. lower court ಕೆಳಗಿನ ನ್ಯಾಯಸ್ಥಾನದಿಂದ ಮೇಲರ್ಜಿ (ಕೊಡು). Dissuade f. folly ಅವಿವೇಕಕ್ಕೆ ಬೀಳದಂತೆ ತಿರುಗಿಸು. F. being attacked became the aggressor ಏಟಿಗೆ ಸಿಕ್ಕಿದ್ದವನು ಮೇಲೆ ಬೀಳುವುದಕ್ಕೆ ಸಿದ್ಧನಾದನು. Raise penalty f. banishment to death ಗಡೀಪಾರು ದಂಡನೆಯನ್ನು ಮರಣ ದಂಡನೆಗೆ ಏರಿಸು. Doesn't know black f. white ಕಪ್ಪಿಗೂ ಬಿಳುಪಿಗೂ ವ್ಯತ್ಯಾಸ ತಿಳಿಯದು. Draw conclusion f. premises ಪ್ರತಿಜ್ಞೆಗಳಿಂದ ಅನುಮಾನ ಮಾಡು, ನಿರ್ಣಯಕ್ಕೆ ಬರು. F. his point of view ಅವನ ದೃಷ್ಟಿಯಿಂದ. Gifts f. Providence ದೇವರಿಂದ ಬಂದ ವರಗಳು. Things not required f. me ನನ್ನಿಂದ ಬೇಡವಾದ ವಸ್ತುಗಳು. Painted f. nature ಪ್ರಕೃತಿಯನ್ನು ನೋಡಿ ವರ್ಣಚಿತ್ರ ಮಾಡಿದ್ದು, ಚಿತ್ರಿಸಿದ್ದು. Died f. fatigue ಬಳಲಿಕೆಯಿಂದ ಸತ್ತನು. F. long ago ಬಹಳ ಕಾಲದಿಂದ ; ಬಹಳ ಹಿಂದಿನಿಂದ. F. out the bed ಹಾಸಿಗೆಯಿಂದ.

Frond ಫ್ರಾಂಡ್ (ನಾ.) (ಸ. ವಿ.) [ಹೂವು ಬಿಡದ ಕೆಲವು ಗಿಡಗಳಲ್ಲಿ (ಮು., ಜರೀಗಿಡಗಳಲ್ಲಿ) (ಸಾ., ಎಲೆಗಳಿಗಿಲ್ಲದಿರುವ) ವಂಶಾಭಿವೃದ್ಧಿಯ ಅಂಗಗಳುಳ್ಳ ತಾಳು ಮತ್ತು ಎಲೆಗಳು ಸೇರಿ ಆದ] ಎಲೆಯಂಥ ಅಂಗ : ಪರ್ಣಾಂಗ. (ಶಿಥಿಲ ಪ್ರ.) ಗರಿ. (ಪ್ರಾ. ವಿ.) (ಕೆಲವು ಪ್ರಾಣಿಗಳಲ್ಲಿ ಬೆಳೆಯುವ) ಎಲೆಯಂಥ ಅಂಗ : ಪರ್ಣಾಂಗ. **Fróndage** (ನಾ.) ಗರಿಗಳು ; (ತಪ್ಪಾಗಿ) ಎಲೆಗುಂಪಲು. **Frondóse** (ಗು.) ಪರ್ಣಾಂಗ ಭರಿತ ; ಗರಿಗುಂಪಲಿನ ; ಪರ್ಣಾಂಗದಂಥ ; ಗರಿಯಂಥ.

Fronde ಫ್ರಾಂಡ್ (ನಾ.) (ಚರಿತ್ರೆ) ಫ್ರಾನ್ಸಿನ ೧೪ನೆಯ ಲ್ಯೂಯಿಯು ಅಪ್ರಾಪ್ತ ವಯಸ್ಕನಾಗಿದ್ದಾಗ ಮುಖ್ಯ ಮಂತ್ರಿ ಮ್ಯಾಜರಿನ್ನನ ಮೇಲೂ ರಾಜಪರಿವಾರದ ಮೇಲೂ ದಂಗೆಯೆದ್ದ ಪಕ್ಷ ; (ಈ ಕಾರಣದಿಂದ) ಅತೃಪ್ತ(ರ) ಪಕ್ಷ ; ಅಸಂತುಷ್ಟ ಪಕ್ಷ; ಅಸಮಾಧಾನ ಪಕ್ಷ. ರಾಜಕೀಯ ಉಗ್ರ ವಿರೋಧ.

Front ಫ್ರಂಟ್ (ನಾ., ಗು., ಕ್ರಿ.) (ಕಾವ್ಯ) ಹಣೆ ; ಮುಖ ; ಮೋರೆ [Head & f. ಮುಖ್ಯಾಂಶ ; ಮುಖ್ಯ ವಿಷಯ. F. to f. ಎದುರೆದುರಿಗೆ. Have the f. (ಮಾಡುವುದಕ್ಕೆ, ಹೇಳುವುದಕ್ಕೆ) ಮುಖವಿರು, ಧಾರ್ಷ್ಟ್ಯವಿರು. Present, show, a bold f. ಧೈರ್ಯದಿಂದ ಮುಖ ಕೊಡು, ಎದೆಗೊಟ್ಟು ನಿಲ್ಲು ; ಎದುರಿಸು ; ಎದುರಿಸಿ ನಿಲ್ಲು] . (ಸೈನ್ಯ, ಮೊ. ಗಳ) ಮುಂಭಾಗ, ಮುಂದು ಸಾಲು, ಅಗ್ರ, ಮೊನೆ, ಚೂಣಿ ; ಸಂಗ್ರಾಮ ಮುಖ, ಪಂಕ್ತಿ ; ಶತ್ರುವಿನ ಕಡೆಗಿರುವ (ಸಂಗರ) ಭೂಮಿ; ರಣರಂಗ ; ಕಳ (Go to the f. ಯುದ್ಧರಂಗದಲ್ಲಿರುವ ಸೈನ್ಯಕ್ಕೆ ಸೇರಿಕೊ). ಸೇನಾ ಮುಖ ; ಸೇನೆ ಮುಖಮಾಡಿಕೊಂಡಿರುವ ದಿಕ್ಕು [Change f. ಬೇರೆ ಮುಖವಾಗು ; ದಿಕ್ಕು ಬದಲಾಯಿಸು (Change ನೋಡಿ)]. (ವಾ. ಶಾ.) ಕಟ್ಟಡದ ಯಾವುದಾದರೂ ಮುಖ (ಮು., ಮುಂಬಾಗಿಲ ಕಡೆಯದು) ; ಮುಂಭಾಗ ; ಮುಮ್ಮುಖ. (ಯಾವುದಾದರೂ ವಸ್ತುವಿನ) ಮುಂಭಾಗ. (ಪಾಶ್ಚಾತ್ಯ) ಹೆಂಗಸು ಹಣೆಯ ಮೇಲ್ಗಡೆ ಧರಿಸಿರುವ ಕೃತಕ ಕೂದಲ ಪಟ್ಟಿ, ಮುಂಗುರುಳು ಬಂಧ. ಗಂಡಸಿನ ಜುಬ್ಬದ (ಷರ್ಟಿನ) ಎದೆಭಾಗ. (In f. of, In f. ಮುಂದುಗಡೆಯಲ್ಲಿ ; ಮುಂದಾಗಿ ; ಎದುರಾಗಿ. Come to the f. ಮುಂದಕ್ಕೆ ಬರು ; ಪ್ರಮುಖನಾಗು ; ಪ್ರಾಶಸ್ತ್ಯ ಪಡೆ. Were beset f. & rear ಹಿಂದೆಯೂ ಮುಂದೆಯೂ ಮುತ್ತಲ್ಪಟ್ಟರು. Two-pair f. ಎರಡನೆಯ ಮಹಡಿಯಲ್ಲಿಯ ಮುಂಕೋಣೆ). (ಗು.) ಮುಂಭಾಗದ ; ಮುಂದುಗಡೆಯಿರುವ ; ಮುಂದಿನ ; ಎದುರಿನ (F. bench ಶಾಸನ ಸಭೆಗಳಲ್ಲಿ ಸರ್ಕಾರದ ಮಂತ್ರಿಗಳಿಗೆ, ಮಾಜಿ ಮಂತ್ರಿಗಳಿಗೆ, ಮೀಸಲಾಗಿರುವ ಪೀಠ ಪಂಕ್ತಿ ; ಅಗ್ರ ಪಂಕ್ತಿ. F. door ತಲೆಬಾಗಿಲು ; ಮುಂಬಾಗಿಲು). (ಕ್ರಿ.) ಮುಖನಾಗು ; ಕಡೆಗೆ,— ತಿರುಗು, ನೋಡು ; ಎದುರಿಗೆ ನಿಲ್ಲು ; ಅಭಿಮುಖನಾಗು. (ಬೀದಿ, ಮೊ. ಗಳ ಕಡೆಗೆ) ಮುಖ ಮಾಡು ; ಮುಖ ಕೊಟ್ಟು ನಿಲ್ಲು ; ಎದುರು ನಿಲ್ಲು ; ಎದುರಿಸು ; ವಿರೋಧಿಸು ; ಸಂಧಿಸು ; ಮುಖಕಟ್ಟಡ ಹಾಕು (Fronted with stone ಕಲ್ಲಿನ ಮುಖಕಟ್ಟಡ ಹಾಕಿದ). (ಸೈನ್ಯ : ಸಾ., ಆಜ್ಞೆ) ಎದುರು ಮುಖವಾಗು ! ಎದುರಿಗೆ ತಿರುಗು, ತಿರುಗಿಸು. **Fróntage** ಫ್ರಂಟೆ(ಟಿ)ಜ್ (ನಾ.) ಬೀದಿಗೆ, (ಜಲಾಶಯದ) ನೀರಿಗೆ, ಹೊದ್ದಿಕೊಂಡಿರುವ ನೆಲ ; ಮನೆಯ ಮುಂಭಾಗಕ್ಕೂ ರಸ್ತೆಗೂ ಮಧ್ಯೆ ಇರುವ ಸ್ಥಳ ; ಮುನ್ನೆಲ. ಮುಖ ವಿಸ್ತಾರ ; ಕಟ್ಟಡದ ಮುಂಭಾಗ ; ಮುಖಕಟ್ಟಡದ ಮಾಟ, ನೋಟ. (ಪಾಳೆಯದಲ್ಲಿ, ಪ್ರದರ್ಶನ ಭೂಮಿಯಲ್ಲಿ) ಸೇನೆಯ ಬೀಡು ನೆಲ. ಒಂದು ದಿಕ್ಕಿಗೆ ತಿರುಗಿಕೊಂಡಿರುವುದು. (ಗಾಳಿ, ಬೆಳಕು, ಮಳೆ, ಮೊ. ಕ್ಕೆ) ಒಡ್ಡಿರುವುದು. **Fróntager** (ನಾ.) ಮುನ್ನೆಲದ ಹಕ್ಕುದಾರ, ಮಾಲೀಕ, ಯಜಮಾನ. **Fróntal** (ಗು., ನಾ.) ಹಣೆಯ (F. bone ಹಣೆಯ ಎಲುಬು) ; ಎದುರಿನ ; ಎದುರಿಗಿರುವ ; ಮುಂದುಗಡೆಯ (F. attack ನೇರೆದುರಾಗಿ ಮೇಲೆ ಬೀಳುವುದು ; ಮುಖಾಕ್ರಮಣ ; ಚೂಣಿ ಕಾಳಗ). (ನಾ.) ಬಲಿಪೀಠದ ಮುಖಾವರಣ. ಬೀದಿಯ ಕಡೆ ಇರುವ ಮನೆಯ ಮುಖಭಾಗ. **Fróntier** ಫ್ರಾಂ(ಫ್ರಂ)ಟಿಯರ್ (ನಾ.) ಪರದೇಶದ ಎಲ್ಲೆಯನ್ನು ಹೊದ್ದಿರುವ ದೇಶಭಾಗ ; ಗಡಿನಾಡು ; ಸರಹದ್ದು. (ಗು.) ಗಡಿನಾಡಿನ(ಲ್ಲಿಯ). **Fróntispiece** ಫ್ರಂ(ಫ್ರಾಂ)ಟಿಸ್‌ಪೀಸ್ (ನಾ., ಕ್ರಿ. ಸಕ.) (ವಾ. ಶಾ.) ಕಟ್ಟಡದ ಮುಂಭಾಗ; ಗೃಹ ಮುಖ. ಅಲಂಕಾರ ಮಾಡಿದ ಮುಂಬಾಗಿಲು; ಚಿತ್ರ ಮುಖದ್ವಾರ ; ಬಾಗಿಲು, ಮೊ. ಗಳ ಮೇಲಿನ ತ್ರಿಕೋಣಾಕೃತಿಯ ಅಲಂಕಾರ ; ಪುಸ್ತಕದ ಮುಖಪತ್ರಕ್ಕೆ, ಅಥವಾ ಪುಸ್ತಕದ ಒಂದು ಭಾಗಕ್ಕೆ, ಎದುರಾಗಿರುವ ಚಿತ್ರ : ಮುಖ ಚಿತ್ರ. (ಮುಷ್ಟಿಯುದ್ಧದ ಅಸಂ.) ಮುಖ ; ಮೋರೆ. (ಕ್ರಿ.) ಮುಖಚಿತ್ರ ಹಾಕು ; ಮುಖಚಿತ್ರದಲ್ಲಿ ತೋರಿಸು ; ಮುಖಚಿತ್ರವಾಗಿರು. **Fróntless** (ಗು.) ಮುಖ, ಮುಂಭಾಗ, —ಇಲ್ಲದ. (ರೂಪ., ವಿರ. ಪ್ರ.) ಮುಖ ಕೆಡದ ; ನಾಚದ ; ನಿರ್ಲಜ್ಜೆಯ. **Fróntlet** (ನಾ.) ಹಣೆಪಟ್ಟಿ ; ಹಣೆಯಮೇಲೆ ಧರಿಸುವ ಆಭರಣ. ಯೆಹೂದ್ಯರ ವೇದಗ್ರಂಥವಿಡುವ ಸಣ್ಣ ತೊಗಲುಸಂಪುಟ. (ಪ್ರಾಣಿಯ) ಹಣೆ. ಬಲಿಪೀಠದ ಮುಖಾವರಣದ ಮೇಲ್ಭಾಗದಲ್ಲಿ ಇಳಿಯಬಿಟ್ಟಿರುವ ವಸ್ತ್ರ. **Frónto-** ಫ್ರಾಂಟೊ — (ಸ. ಘ. ಪ.) ಹಣೆಯ—(**F.-nasal** ಹಣೆಗೂ ಮೂಗಿಗೂ ಸಂಬಂಧಿಸಿದ). **Frónton** ಫ್ರಂಟನ್ (ನಾ.) ಬಾಗಿಲು, ಕಿಟಕಿ, ಮೊ. ಗಳ ಮೇಲಿನ ತ್ರಿಕೋಣಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾರದ ಚಿತ್ರಾಲಂಕಾರ. (ಗ್ರೀಷನ್ ರೀತಿಯ) ಮನೆಯ ಮುಂದಿನ ತ್ರಿಕೋನಾಕಾರದ ನೆತ್ತಿಕಟ್ಟಡ. **Fróntsman** ಅಂಗಡಿಯ ಮುಂದಿನ ನೆಲಗಟ್ಟಿನಮೇಲೆ ವ್ಯಾಪಾರ ಮಾಡುವವನು. **Fróntward** (ಗು., ಕ್ರಿ. ವಿ.); **Fróntwards** (ಕ್ರಿ. ವಿ.)

Frore ಫ್ರೋರ್ (ಗು.) (ಕಾವ್ಯ) ನೀರ್ಗಲ್ಲಾದ ; ಗಡ್ಡೆಕಟ್ಟಿದ ; ಮಂಜು ಗರೆಯುವ ; ಚಳಿ ಕೊರೆತದ. [Freeze ಧಾತುವಿನ ಭೂ. ಕೃ. (ಪ್ರಾಚೀ. ಪ್ರ.)]

Frost ಫ್ರಾಸ್ಟ್ (ನಾ., ಕ್ರಿ. ಸಕ.) ನೀರು ಗಡ್ಡೆಕಟ್ಟುವುದು ; ನೀರ್ಗಲ್ಲ ಸ್ಥಿತಿ ; ನೀರ್ಗಲ್ಲ ಶಾಖಕ್ಕಿಂತ ಕಡಮೆಯಿರುವ ಶಾಖ [Ten degrees of f. ನೀರ್ಗಲ್ಲ ಶಾಖದಿಂದ ಹತ್ತು ಡಿಗ್ರೀ ಇಳಿದಿರುವ ಶಾಖ. Hard, sharp, f. ಕಡು, ಕಠಿನ, — ಹಿಮ. White or hoar f. ಹಿಮಶೀತ ವಸ್ತುಗಳ ಮೈಮೇಲೆ ನೀರಾವಿ ಸೂಕ್ಷ್ಮ ಸ್ಫಟಿಕಾಕೃತಿಗಳಾಗಿ ಘನೀಭವಿಸಿದ ಬಿಳಿಯ ಘನಹಿಮ ; ಹಳುಕು ಹಿಮ. Black f. ಸಾ., ಬಿಳಿಯ ಘನಹಿಮ ಕೂಡದೆಯೇ ಅತ್ಯಧಿಕ ಶೈತ್ಯದಿಂದ ಸಸ್ಯಸಮುದಾಯ ವನ್ನು ಕಪ್ಪಾಗಿಸುವ ಹಿಮ. Jack F. (ವ್ಯಕ್ತಿತ್ವವನ್ನು ಆರೋಪಿಸಿ) ಹೇಮಂತ. There is still f. in the ground ನೆಲವು ಶೀತದಿಂದ ಇನ್ನೂ ಗಡ್ಡೆಕಟ್ಟಿಕೊಂಡಿದೆ]. ಘನೀಭವಿಸಿದ ಮಂಜು ಅಥವಾ ಆವಿ (Windows covered with f. ಘನಹಿಮ ಕೂಡಿರುವ ಕಿಟಕಿಗಳು). ಅತಿ ತಣ್ಣಗಾಗಿಸುವ, ನರೆಯುಂಟುಮಾಡುವ, — ಪ್ರಭಾವ,ಪರಿಣಾಮ. (ರೂಪ.) ಉತ್ಸಾಹ ಭಂಜಕ ; ಅನಾದರಣೆ ; ಔದಾಸೀನ್ಯ ; ಸೆಡೆತ ; ಜಡತೆ. (ಅಸಂ.) ಸೋಲು. [**F.-bite** ವಿಪರೀತ ಚಳಿಯಿಂದ ಚರ್ಮದ ತಳದರಲ್ಲಾದ ಊತ, ಕೊಳೆಯುವ ವ್ರಣ: ಹಿಮವ್ರಣ. **F.-bitten** (ಗು.) ಹಿಮ ವ್ರಣವಾದ. **F.-work** ಗಾಜು, ಮೊ. ಗಳ ಮೇಲೆ ಶೈತ್ಯದಿಂದ ಹಿಮಸ್ಫಟಿಕ ರಾಶಿ ಕೂಡಿ ಆದ ಚಿತ್ತಾರ: ಘನಹಿಮ ಚಿತ್ರ]. (ಕ್ರಿ.) ಹಿಮ ಬಿದ್ದು (ಸಸ್ಯ, ಮೊ. ನ್ನು) ಹಾನಿಗೊಳಿಸು, ಸಾಯಿಸು. ಹಿಮದ ಹರಳುಗಳಿಂದ(ಳಂತೆ) ಕವಿ, ಹರಡು. (ದೋಸೆ, ಮೊ. ಗಳ ಮೇಲೆ) ಸಕ್ಕರೆ, ಮೊ. ನ್ನು ಅಲಂಕಾರವಾಗಿ ಉದುರಿಸಿ ಹರಡು. (ಗಾಜಿಗೆ, ರೋಹಕ್ಕೆ) ತರಕಲಾದ ಅಥವಾ ಸೂಕ್ಷ್ಮ ಕಣಗಳೆದ್ದಿರುವ ಮೇಲ್ಮೈ ಕೊಡು. (ಕೂದಲನ್ನು) ಬೆಳ್ಳಗಾಗಿಸು, ನರೆದಿರುಗಿಸು. (ಕುದುರೆಯ ರಾಳಕ್ಕೆ ಮೊಳೆಹೊಡೆದು) ನೀರ್ಗಲ್ಲಮೇಲೆ ಜಾರದಂತೆ ರಕ್ಷಣೆ ಕೊಡು. **Fróstless** (ಗು.) ; **Frósting** (ನಾ.) (ಕ್ರಿಯಾರ್ಥಗಳಲ್ಲಿ). ಹಿಮಸ್ಫಟಿಕಾಕೃತಿಯಂತೆ ಕಾಣುವುದಕ್ಕಾಗಿ ಉದುರಿಸುವ ಸಕ್ಕರೆಪುಡಿ, ಮೊ. ವು. **Frósty** (ಗು.) ಹಿಮದಿಂದ ಕೊರೆಯುವ ; ಚಳಿ ಕೊರೆಯುವ ; ಶೀತಲವಾದ ; ಶೈತ್ಯವುಂಟುಮಾಡುವ ; ಸೆಡೆತುಕೊಂಡ ; ಜಡ. (ರೂಪ.) ಉತ್ಸಾಹ ಶೂನ್ಯವಾದ ; ಅನಾದರಣೆಯ. ಘನಹಿಮ ಕವಿದ ; — ದಂತಿರುವ. (ಕೂದಲು) ಬಿಳುಪೇರಿದ, ನರೆತ ; ಮುದಿತನದ ಲಕ್ಷಣವಾದ. **Fróstily** (ಕ್ರಿ. ವಿ.) ; **Fróstiness** (ನಾ.)

Froth ಫ್ರಾತ್ (ನಾ., ಕ್ರಿ.) ಸಣ್ಣ ಸಣ್ಣ ನೀರ್ಗುಳ್ಳೆಗಳ ತಂಡ ; ನೊರೆ ; ಬುರುಗು ; ದ್ರವದಮೇಲೆ ತೇಲುತ್ತಿರುವ ಕಲ್ಮಷ ; ಮಷ್ಟು. ತಿರುಳಿಲ್ಲದ, ಸಾರವಿಲ್ಲದ, — ವಸ್ತು, ವಿಚಾರ ; ನಿಸ್ಸಾರವಾದದ್ದು ; ಕ್ಷುಲ್ಲಕ ವಿಷಯ ; ಗೊಡ್ಡು ಹರಟೆ. (ಕ್ರಿ.) ನೊರೆ ಸೂಸು ; ನೊರೆಗರೆ ; ನೊರೆಗೂಡಿಸು ; ನೊರೆಗಟ್ಟು ; — ಗಟ್ಟಿಸು. (ಬಿಯರ್ ಮದ್ಯ, ಮೊ.) ನೊರೆಗಟ್ಟುವಂತೆ ಮಾಡು. **Fróthy** (ಗು.) ನೊರೆಗೂಡಿದ ; ನೊರೆ ತುಂಬಿದ ; ನೊರೆಯಾದ ; ನೊರೆಯಂತಿರುವ. (ರೂಪ.) ಜಂಬದ ; ಬಡಾಯಿಯ ; ಪೊಳ್ಳಾದ ; ಹುರುಳಿಲ್ಲದ. **Fróthily** (ಕ್ರಿ. ವಿ.) ; **Fróthiness** (ನಾ.)

Froú-frou ಫ್ರೂಫ್ರೂ (ನಾ.) (ಮು., ಉಡುಪಿನ) ಮುರ ಮುರ (ಶಬ್ದ)

Frow ಫ್ರೌ (ನಾ.) ಡಚ್ (ಹಾಲೆಂಡಿನ) ಹೆಂಗಸು.

Fróward ಫ್ರೋವ(ಅ)ರ್ಡ್ (ಗು., ಪ್ರಾಚೀ. ಪ್ರ.) ವಕ್ರ (ಬುದ್ಧಿಯ) ; ಚಂಡಿ(ತನದ) ; ಮೊಂಡು(ತನದ) ; ಕೊಂಕು(ತನದ) ; ಶಠ ; ಮೂರ್ಖ (ಸ್ವಭಾವದ). **Frówardly** (ಕ್ರಿ. ವಿ.) ; **Frówardness** (ನಾ.)

Frown ಫ್ರೌನ್ (ಕ್ರಿ., ನಾ.) (ಮು., ಅಸಮಾಧಾನ, ಕಾಠಿನ್ಯ, ತೋರಿಸುವುದಕ್ಕೆ, ಅಥವಾ ಗಮನ ನೆಡುವುದಕ್ಕೆ) ಹುಬ್ಬು ಗಂಟಿಕ್ಕು, ಮುಖ ಗಂಟು ಹಾಕಿಕೊ, — ಸಿಂಡರಿಸು. (ಪದಾರ್ಥ, ಮೊ. ವು) ನಿರುತ್ಸಾಹ ಜನಕವಾಗಿರು ; ಕಳೆಯಿಲ್ಲದಿರು ; ಉತ್ಪಾತ ಸೂಚಕವಾಗಿರು ; ಅಸಮ್ಮತಿ, ಅಸಂತುಷ್ಟಿ, — ತೋರು (*At*, *on*, *upon* ಉಪ. ದೊಡನೆ). (ತಡೆಯನ್ನು, ತಡೆಮಾಡುವವನನ್ನು) ಹುಬ್ಬುಜರ್ಬಿನಿಂದ ಅಣಚಿಬಿಡು. (ನಿರ್ಲಕ್ಷ್ಯತೆ, ಪ್ರತಿಭಟನೆ, ಮೊ. ನ್ನು) ಹುಬ್ಬುಜರ್ಬಿನಿಂದ ತೋರಿಸು. (ನಾ.) ಹುಬ್ಬುಗಂಟು ; ಮುಖಗಂಟು. ಕಾಠಿನ್ಯ, ಅಸಮ್ಮತಿ, ಗಾಢಾಲೋಚನೆ — ಇವನ್ನು ಸೂಚಿಸುವ ದೃಷ್ಟಿ, ಮುಖಭಾವ ; ಅಸಂತೋಷ ದೃಷ್ಟಿ ; ಕೋಪದೃಷ್ಟಿ. **Frówningly** (ಕ್ರಿ. ವಿ.)

Frowst ಫ್ರೌಸ್ಟ್ (ನಾ., ಕ್ರಿ. ಅಕ.) ಕೋಣೆಯಲ್ಲಿ ಗಬ್ಬು ವಾಸನೆ, ಮಲೆತ ಗಾಳಿ. (ಕ್ರಿ.) — ಯಲ್ಲಿರು ; — ಯನ್ನು ಅನುಭವಿಸು. **Frówsty** (ಗು.)

Frówzy ಫ್ರೌಸಿ (ಗು.) ಕೆಟ್ಟ ನಾತದ ; ನಾರುವ ; ಮುಗ್ಗಿದ ; ಮಲೆತ ; ಗಬ್ಬು ವಾಸನೆಯ ; ಗಾಳಿ ಬೆಳಕುಗಳಿಲ್ಲದ ; ಮುಬ್ಬು ಗಬ್ಬುಗಳುಳ್ಳ ; ಅಸಹ್ಯದ ; ಒಪ್ಪವಿಲ್ಲದ ; ಚೊಕ್ಕಟವಿಲ್ಲದ **Frówsiness** (ನಾ.)

Fróze(n). Freeze ಧಾತುವಿನ ಭೂತ., ಭೂ. ಕೃ.

Fructíferous ಫ್ರುಕ್ಟಿಫೆರಸ್ (ಗು.) ಹಣ್ಣು ಬಿಡುವ ; ಫಲ ಕೊಡುವ. **Fructificátion** (ನಾ.) (ಸ. ವಿ.) ಹಣ್ಣು ಬಿಡುವುದು. ಸಸ್ಯಗಳ (ಮು., ಜರೀಗಿಡಗಳ ಮತ್ತು ಪಾಚಿಗಳ) ಉತ್ಪಾದಕ ಅಂಗಗಳು, ಜನನಾಂಗಗಳು. **Frúctify** (ಕ್ರಿ.) ಹಣ್ಣು ಬಿಡು ; ಫಲವಂತವಾಗು (ರೂಪ. ಸಹ) ; ಫಲಿಸು(ವಂತೆ ಮಾಡು) ; ಫಲೋತ್ಪಾದನ ಮಾಡು ; ಫಲವತ್ತು ಮಾಡು (F. the earth ನೆಲವನ್ನು ಫಲವತ್ತು ಮಾಡು). **Frúctose** (ನಾ.) ಹಣ್ಣು ಸಕ್ಕರೆ; ಫಲಶರ್ಕರ. **Frúctuous** ಫ್ರುಕ್ಚುಅಸ್ (ಗು.) ತುಂಬ ಹಣ್ಣು ಬಿಟ್ಟಿರುವ ; ಫಲ ಭರಿತ ; ಫಲ ಬಿಡುವ ; ಫಲಕಾರಿಯಾದ (ರೂಪ. ಸಹ)

Frúctify, Frúctose, etc. **Fructiferous** ನೋಡಿ.

Frúgal ಫ್ರೂಗಲ್ (ಗು.) ಜಾಗರೂಕ ; ಎಚ್ಚರಿಕೆಯಿಂದಿರುವ ; ಮಿತ ; ಮಿತ ವ್ಯಯದ ; ಹಾಳತವಾದ ; ಹಿಡಿತದ ; ಹಿಡಿಗ್ಗೆಯ (ಮು., ಆಹಾರ ವಿಷಯದಲ್ಲಿ) ; ಮಿತವಾಗಿ ಬಳಸಿದ, ಒದಗಿಸಿದ ; ಅಲ್ಪ ಬೆಲೆಯ. **Frúgally** (ಕ್ರಿ. ವಿ.) ; **Frugálity** ಫ್ರುಗ್ಯಾಲಿಟಿ (ನಾ.)

Frugívorous ಫ್ರೂಜಿವೊರಸ್ (ಗು.) ಹಣ್ಣು ತಿಂದು ಜೀವಿಸುವ ; ಹಣ್ಣು ತಿನ್ನುವ ; ಫಲಾಹಾರಿಯಾದ ; ಹಣ್ಣುಣಿಯಾದ.

Fruit ಫ್ರೂಟ್ (ನಾ.) ಹಣ್ಣು ; ಕಾಯಿ ; ಫಲ (ಸಮೂಹ ವಾಚಕ, ಏ. ವ. Feeds on f. ಹಣ್ಣು ತಿಂದು ಜೀವಿಸುತ್ತದೆ) ; ಆಹಾರ ಯೋಗ್ಯವಾದ ಸಸ್ಯೋತ್ಪನ್ನಗಳು ; (ಸಾ., ಬ. ವ. ದಲ್ಲಿ) ಬೆಳೆ (Fruits of the earth ಭೂಮಿಯ ಬೆಳೆ) ; (ಸಸ್ಯಸಂತಾನ ಬೆಳಸುವ, ಹೊದಿಕೆಯುಳ್ಳ) ಸಸ್ಯಬೀಜ. (ಬೈಬಲ್) ಸಂತಾನ ; ಮಕ್ಕಳು (ಸಾ., F. of the body, loins, womb). (ಬ. ವ. ದಲ್ಲಿ) ಆದಾಯ ; ಆಯ ; ಉತ್ಪತ್ತಿ (The fruits of industry ಕೈಗಾರಿಕೆಯ ಹುಟ್ಟುವಳಿ). (ಏ. ವ. ಅಥವಾ ಬ. ವ. ದಲ್ಲಿ) ಫಲ ; ಪರಿಣಾಮ ; ಲಾಭ ; ಉಪಭೋಗ. **F.-cake** ದ್ರಾಕ್ಷಿ, ಮೊ. ನ್ನು ಹಾಕಿ ಮಾಡಿದ ದೋಸೆ, ರೊಟ್ಟಿ. **F. clipper** (ವೇಗವಾಗಿ ಹೋಗುವ) ಹಣ್ಣಿನ ಹಡಗು. **F.-knife** (ಹುಳಿಯಿಂದ ಕೆಡದಿರಲು ಬೆಳ್ಳಿ, ಮೊ. ಗಳಿಂದ ಮಾಡಿದ ಅಲಗುಳ್ಳ) ಹಣ್ಣು(ಕೊಯ್ಯುವ) ಚೂರಿ. **F.-piece** ಚಿತ್ರದ, ಶಿಲ್ಪದ, — ಹಣ್ಣು ; ಹಣ್ಣಿನ ಚಿತ್ರ. **F. salad** (ಹಲವು ಹಣ್ಣುಗಳ ಚೂರುಗಳನ್ನು ಬೆರಸಿ ಹಾಲನಕೆನೆ ಸೇರಿಸಿ ಮಾಡಿದ) ಹಣ್ಣಿನ ರಸಾಯನ. **F.-sugar** (Glucose, levulose, fructose ಎಂಬ) ಹಣ್ಣುಸಕ್ಕರೆ. **F.-tree** ಹಣ್ಣುಗಿಡ, — ಮರ ; ಫಲವೃಕ್ಷ. **Fruítage** ಫ್ರೂಟೆ(ಟಿ)ಜ್ (ನಾ.) ಫಲ ಬಿಡುವ ವಿಧಾನ, ಕಾಲ, ಸ್ಥಿತಿ ; (ಸಮೂಹ ವಾಚಕ) ಹಣ್ಣುಗಳು ; (ರೂಪ.) ಫಲ ; ಬೆಳೆ ; ಪರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಣಾಮ. **Fruitárian** ಫ್ರೂಟೇರಿಯನ್ (ನಾ.) ಮು., ಹಣ್ಣನ್ನೇ ತಿಂದು ಜೀವಿಸುವವನು ; ಫಲಾಹಾರಿ ; ಹಣ್ಣುಣಿ. (-)**fruited** (ಗು.) ; **Fruíter** (ನಾ.) ಹಣ್ಣು ಹಡಗು ; ಹಣ್ಣು ಬಿಡುವ ಗಿಡ, ಮರ ; ಫಲವೃಕ್ಷ (A sure f. ತಪ್ಪದೆ ಹಣ್ಣು ಬಿಡುವ ಗಿಡ, ಮರ) ; ಹಣ್ಣು ಬೆಳೆಯುವವನು ; ಹಣ್ಣು ಬೇಸಾಯಗಾರ. **Fruíterer** (ನಾ.) ಹಣ್ಣು ಮಾರುವವನು ; ಹಣ್ಣು ವ್ಯಾಪಾರಿ. **Fruítful** (ಗು.) ಫಲ ಬಿಡುವ ; ಫಲವತ್ತಾದ ; ಫಲವತ್ತು ಮಾಡುವ ; ಫಲೋತ್ಪಾದಕ ; ಸಂತಾನವುಂಟುಮಾಡುವ ; ಬಹು ಫಲಪ್ರದವಾದ ; ಹುಲುಸಾದ ; (ಗ್ರಾಂ. ಮತ್ತು ರೂಪ. A session f. in great measures ದೊಡ್ಡ ವಿಚಾರಗಳ ನಿರ್ವಹಣದಿಂದ ಬಹು ಫಲಪ್ರದವಾದ ಸಭಾಧಿವೇಶನ). ಪ್ರಯೋಜನಕರ ; ಲಾಭಕರ ; ಫಲದಾಯಕ ; ಫಲಕಾರಿ. **Fruítfully** (ಕ್ರಿ. ವಿ.) ; **Fruítfulness** (ನಾ.) ; **Fruítless** (ಗು.) ಹಣ್ಣು ಬಿಡದ ; ಗೊಡ್ಡು ; ಲಾಭ ಕೊಡದ ; ನಿಷ್ಫಲ ; ನಿಷ್ಪ್ರಯೋಜಕ ; ವ್ಯರ್ಥ ; ನಿರರ್ಥಕ. **Fruítlessly** (ಕ್ರಿ. ವಿ.) ; **Fruítlessness** (ನಾ.) ; **Fruítlet** (ನಾ.) ಚಿಕ್ಕ ಹಣ್ಣು ; (ಸ. ವಿ.) = Drupel. **Fruíty**(ಗು.) ಹಣ್ಣಿನ ; ಹಣ್ಣಿನಂಥ ; (ದ್ರಾಕ್ಷಾ ಮದ್ಯ) ದ್ರಾಕ್ಷಿ ರುಚಿಯ. **Fruítiness** (ನಾ.)

Fruit (ಕ್ರಿ.) ಹಣ್ಣು ಬಿಡು, — ಬಿಡುವಂತೆ ಮಾಡು ; —ಬಿಡಿಸು. ಹಣ್ಣು ಬಿಡುವ ಸ್ಥಿತಿಗೆ (ವ್ಯವಸಾಯದಿಂದ) ತರು ; ಫಲವತ್ತು ಮಾಡು (ರೂಪ. ಸಹ)

Fruítion ಫ್ರೂಯಿಷನ್ (ನಾ.) (ಆಶಿಸಿದ) ಫಲಾನುಭವ ; ಫಲ ಸಾಧನೆ ; (ಆಸ, ನಿರೀಕ್ಷಣೆ, ಮೊ. ಗಳ) ಸಿದ್ಧಿ ; ಅಭೀಷ್ಟ ಸಿದ್ಧಿ.

Frúmenty ಫ್ರೂಮೆಂಟಿ, **Fúrmety** ಫರ್ಮೆಟಿ (ನಾ.) ಹೊಟ್ಟು ತೆಗೆದ ಗೋಧಿಯನ್ನು ಹಾಲಿನಲ್ಲಿ ಬೇಯಿಸಿ, ದಾಲ್ಚಿನ್ನಿ, ಸಕ್ಕರೆ, ಮೊ. ನ್ನು ಹಾಕಿ ಮಾಡಿದ್ದು : ಗೋಧಿಯ ಪಾಯಸ.

Frump ಫ್ರಂಪ್ (ನಾ.) ಒಡ್ಡೊಡ್ಡಾಗಿ ಉಡುಪು ಹಾಕಿಕೊಂಡಿರುವ ಹಳೆಯ ಕಂದಾಚಾರದ, ಸಿಡುಕಿ ಹೆಂಗಸು ; ಮುದಿ ಗೊಡ್ಡು. **Frúmpish** (ಗು.) ಹಳೆಯ ಪದ್ಧತಿಯ (ಉಡುಪಿನ). ಅಣಕಿಸುವ ; ತಿರಸ್ಕಾರ ಭಾವದ ; ಸಿಡುಕಿನ. **Frúmpy** (ಗು.) = Frumpish.

Frustráte, Frústrate ಫ್ರಸ್ಟ್ರೇಟ್ (ಕ್ರಿ. ಸಕ.) ತಡೆ ಮಾಡು ; ಅಡ್ಡಿ ಪಡಿಸು ; ಮುರಿ ; ನಿಷ್ಫಲಗೊಳಿಸು ; ವ್ಯರ್ಥಮಾಡು ; ಸಾಗದಂತೆ ಮಾಡು ; ಪ್ರತಿಕೂಲ ಮಾಡು ; ಕೆಡಿಸು ; ಆಶಾಭಂಗ ಮಾಡು. **Frustrátion** (ನಾ.)

Frústrate (ಗು.) (ಪ್ರಾಚೀ. ಪ್ರ.) ಆಶಾ ಭಂಗ ಹೊಂದಿದ ; ವಿಫಲವಾದ ; ಭಗ್ನ.

Frústum ಫ್ರಸ್ಟಮ್ (ನಾ. ; ಬ. ವ. - ta, - tums) (ಗಣಿತ) ಶಂಕು, ಗೋಪುರಾಕೃತಿ, ಮೊ. ಸಮರೂಪದ ಘನಾಕೃತಿಯ ಮೇಲ್ಭಾಗವನ್ನು ಆಧಾರಕ್ಷೇತ್ರಕ್ಕೆ ಸಮಾನಾಂತರವಾಗಿ ಕತ್ತರಿಸಿಹಾಕಿ ಉಳಿದ ಭಾಗ ; ಇಂತಹ ಕತ್ತರಿಕೆಯ ಎರಡು ಸಮಕ್ಷೇತ್ರಗಳ ಮಧ್ಯಭಾಗ. F. of cone ಛಿನ್ನಾಗ್ರ ಶಂಕು.

Frutéscent ಫ್ರೂಟೆಸೆಂಟ್ (ಗು.) (ಸ. ವಿ.) ಕುರುಚಲು ಗಿಡದಂಥ ; ಪೊದರಿನಂಥ. **Frutéscence** (ನಾ.). ಪೊದರು ಪೊದರಾಗಿರುವುದು. **Frútex** (ನಾ.) ಕುರುಚಲು ಗಿಡ ; ಪೊದರು ; ಗುಲ್ಮ. **Frúticose** (ಗು.) (ಸ. ವಿ.) ಪೊದರಿನಂಥ ; ಪೊದರು ಪೊದರಾದ. (ಖನಿಜ, ಸಸ್ಯ ಸದೃಶ ಪ್ರಾಣಿ, ಮೊ. ಗಳ ವಿಷಯದಲ್ಲಿ) ಪೊದರಿನಂತೆ ಕಾಣುವ ; ಗುಲ್ಮಾಕೃತಿಯ.

Frútex, Frúticose. Frutescent ನೋಡಿ.

Fry[1] ಫ್ರೈ (ನಾ.) ಆಗ ತಾನೆ ಮೊಟ್ಟೆಯೊಡೆದು ಹೊರಕ್ಕೆ ಬಂದ ಮೀನು ಮರಿಗಳು. (ಜೇನು ಹುಳು, ಕಪ್ಪೆ, ಮೊ.) ಪ್ರಾಣಿಗಳ ವಿಪುಲ ಸಂತತಿ. Small f. (ಚಿಕ್ಕ, ಲೆಕ್ಕಕ್ಕೆ ಬಾರದ) ಚಿಳ್ಳೆಪಿಳ್ಳೆಗಳು.

Fry[2] ಫ್ರೈ (ಕ್ರಿ., ನಾ.) (ಎಣ್ಣೆ, ತುಪ್ಪ, ಕೊಬ್ಬು, ಮೊ. ಗಳಲ್ಲಿ) ಕರಿ ; ಹುರಿ [Other fish to f. (Fish ನೋಡಿ). **Frýing-pan** ಹುರಿಯುವ ಬಾಣಲಿ (Out of f.-p. into fire ಸಾಮಾನ್ಯ ತೊಂದರೆಯಿಂದ ತಪ್ಪಿಸಿಕೊಳ್ಳಲು ಯತ್ನಿಸಿ ಹೆಚ್ಚು ತೊಂದರೆಗೆ ಈಡಾಗು ; ಹುಸಿಗೆ ಹೆದರಿ ಹೊಳೆಗೆ ಹಾರು]. (ನಾ.) ಕರಿದದ್ದು ; ಹುರಿದದ್ದು ; ಕರಿದ ಮಾಂಸ (Lamb's f.). **Frýer, Fríer** ಫ್ರೈಅರ್ (ನಾ.) (ಮೀನು) ಕರಿಯುವ ಪಾತ್ರೆ, ಬಾಣಲಿ ; (ಮೀನು) ಕರಿಯುವವನು.

Fúbsy ಫಬ್ಸಿ (ಗು.) ಕೊಬ್ಬು ಬೆಳೆದ ; ದುಂಡು ದುಂಡಾದ ; ದೊಣ್ಣೆ ದೊಣ್ಣೆಯಾದ ; ಕೋಣೆಯ ; ಗಿಡ್ಡಾಗಿಯೂ ದೊಣ್ಣೆಯಾಗಿಯೂ ಇರುವ.

Fúchsia ಫ್ಯೂಷ (ನಾ.) ಜೋಲುಹೂವು ಬಿಡುವ ಒಂದು ಪೊದರುಗಿಡ.

Fúchsine ಫ್ಯೂ(ಫೂ)ಕ್ಸಿನ್ (ನಾ.) (ನೀರಿನಲ್ಲಿ ಕರಗಿದರೆ) ಕಡುಗೆಂಪಾಗುವ 'ರೋಸ್ಯಾನಿಲೈನ್' ಲವಣ (ಬಟ್ಟೆ, ಮೊ. ಕ್ಕೆ ಬಣ್ಣಹಾಕುವುದರಲ್ಲಿ ಉಪಯೋಗ) : 'ಫ್ಯೂಕ್ಸಿನ್.'

Fúddle ಫಡ್ಲ್ (ಕ್ರಿ., ನಾ.) (ಮದ್ಯವನ್ನು) ಮಿತಿ ಮೀರಿ ಕುಡಿ ; (ಕುಡಿದು) ಅಮಲೇರು ; ಅಮಲೇರಿಸು ; ಪ್ರಜ್ಞೆ ತಪ್ಪು, —ತಪ್ಪಿಸು ; ಮೈಮರೆ ; ದಿಗ್ಭ್ರಮೆ ಹಿಡಿ(ಸು) ; ಮಂಕು ಹಿಡಿ(ಸು). (ನಾ.) ಕುಡಿತದ ಹುಚ್ಚು, ಆವೇಶ ; ಅಮಲು ; ಮದಿರೋನ್ಮಾದ ; ದಿಗ್ಭ್ರಮೆ ; ಮಂಕು.

Fudge[1] ಫಜ್ (ಭಾವ. ಅವ್ಯ., ನಾ.) ಬುರುಡೆ ! ಬಗುಳೆ ! ಶುದ್ಧ ಅಸಂಬದ್ಧ ! ಸುಳ್ಳು ; ಅಸಂಬದ್ಧ.

Fudge[2] ಫಜ್ (ಕ್ರಿ., ನಾ.) (ಸದ್ಯಕ್ಕೆ ಕೆಲಸ ನಡೆಯುವುದಕ್ಕಾಗಿ, ಅಥವಾ ಮೋಸವಾಗಿ) ಹೇಗೋ ಹಾಗೆ ಜೋಡಿಸು, ತೇಪೆ ಹಾಕು, ಹೊಂದಿಸು ; ಸೃಷ್ಟನೆ ಮಾಡು ; ಠಕ್ಕು ಮಾಡು. (ನಾ.) ಸೃಷ್ಟನೆ ; ದಗಲಬಾಜಿತನ. (ಮುದ್ರಣ) ವಾರ್ತಾಪತ್ರಿಕೆಯಲ್ಲಿ ಹೊತ್ತು ಮೀರಿ ಬಂದ ವರ್ತಮಾನವನ್ನು ಅಚ್ಚುಹಾಕಲು ಬಿಟ್ಟಿರುವ ಸ್ಥಳದಲ್ಲಿ ಹಾಕಿದ ಮುದ್ರಣ ; [(ಕ್ರಿ.) ಹೀಗೆ ಮುದ್ರಿಸು]. ಈ ಮುದ್ರಣ ಮಾಡಲು ಮುದ್ರಣ ಯಂತ್ರದಮೇಲೆ ಉಪಯೋಗಿಸುವ ಸಲಕರಣೆ.

Fúel ಫ್ಯೂಯೆಲ್ (ನಾ., ಕ್ರಿ) (ಇದ್ದಲು, ಕಲ್ಲಿದ್ದಲು, ಕಟ್ಟಿಗೆ, ಸೌದೆ, ಮೊ. ದ) ಸುಡುವ, ಉರಿಸುವ, — ಸಾಮಗ್ರಿ ; ಉರುವಲು ; ಅಡಿಗಬ್ಬು ; ಇಂಧನ. (ರಾಗ ದ್ವೇಷಾದಿಗಳ) ಉದ್ರೇಕಕಾರಿ, ಉದ್ದೀಪಕ. (ಕ್ರಿ.) (ಒಲೆಗೆ, ಬೆಂಕಿಗೆ) ಸೌದೆ ಹಾಕು ; ಸೌದೆ ಕೂಡಹಾಕು.

Fug ಫಗ್ (ನಾ.) (ಕೊಠಡಿಯಲ್ಲಿಯ) ವಾಯುವಿನ ಮುಚ್ಚಿದ ಸ್ಥಿತಿ ; ಮೂಲೆಗಳಲ್ಲಿ ಸೇರುವ ಜಾಲೂ ದೂಳೂ. **Fúggy** (ಗು.)

Fugácious ಫ್ಯುಗೇಷಸ್ (ಗು.) ಕ್ಷಣಿಕ ; ಅಸ್ಥಿರ ; ಚಂಚಲ ; ನಶ್ವರ ; ಹಿಡಿಯಲು, ಇಡಲು, ಕಷ್ಟವಾದ. **Fugácity** — ಗ್ಯಾ — (ನಾ.)

Fúgitive ಫ್ಯೂಜಿಟಿವ್ (ಗು., ನಾ.) ಹಾರಿಹೋಗುವ ; ಓಡಿಹೋಗುವ ; ಪಲಾಯನ ಮಾಡಿದ ; ಎಡೆಯಿಂದೆಡೆಗೆ ಹೋಗುವ ; ಸ್ಥಳ ಬದಲಾಯಿಸುತ್ತಿರುವ. ಅಲ್ಪಕಾಲಿಕ ; ಕ್ಷಣಿಕ ; ಭಂಗುರ ; ಚಂಚಲ ; ಅಳಿದು ಹೋಗುವ. (ಸಾಹಿತ್ಯ) ತಾತ್ಕಾಲಿಕ ಆಸಕ್ತಿಯ ; ಅಪರೂಪದ ; ಒಮ್ಮೊಮ್ಮೆಯ. (ನಾ.) (ಮು., ಅಪಾಯ, ಶತ್ರು, ನ್ಯಾಯ ದಂಡನೆ, ಒಡೆಯ — ಇವರಿಂದ) ಓಡಿಹೋಗುವವನು, ಓಡಿಹೋದವನು ; ತಲೆ ತಪ್ಪಿಸಿಕೊಂಡಿರುವವನು ; ದೇಶ ಭ್ರಷ್ಟ ; ಪರದೇಶದಲ್ಲಿ ಆಶ್ರಯ ಪಡೆದವನು.

Fúgleman ಫ್ಯೂಗ್ಲ್‌ಮ್ಯನ್ (ನಾ.) (ಕವಾಯತಿನಲ್ಲಿ ಚಲನ ವಲನಗಳನ್ನೂ, ತಾಳಗತಿಯಲ್ಲಿ ಹೆಜ್ಜೆಹಾಕುವುದನ್ನೂ, ತೋರಿಸಿಕೊಡಲು) ದಳದ ಮುಂದಿರುವ ಶಿಕ್ಷಕ ಸಿಪಾಯಿ. ಮುಂದಾಳು ; ನಾಯಕ ; ವ್ಯವಸ್ಥಾಪಕ. **Fúgle** (ಕ್ರಿ. ಅಕ.) ಶಿಕ್ಷಕ ಸಿಪಾಯಿ, ಮೊ., ಆಗು.

Fugue ಫ್ಯೂಗ್ (ನಾ.) ಯೂರೋಪ್ ಸಂಗೀತದಲ್ಲಿ ಒಂದು ರೀತಿಯ ರಚನೆ.

-ful — ಫುಲ್ (ಉ. ಪ್ರ.) —ಪೂರ್ಣ ; —ಭರಿತ ; —ತುಂಬಿದ ; —ಕೂಡಿದ ; —ಉಳ್ಳ ; —ಆದ (ಉದಾ., Beautiful, Masterful, Grateful, Forgetful, Helpful, Handful)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Fúlcrum ಫುಲ್‌ಕ್ರಮ್ (ನಾ; ಬ. ವ. -ra) (ಯಂತ್ರಸಾಧನೆಗಳಲ್ಲಿ) ಶಕ್ತಿಲಾಭ ಪಡೆಯುವುದಕ್ಕಾಗಿ ಸನ್ನೆಗೆ ಆನಿಕೆ ಕೊಡುವ ಬಿಂದು; ಸನ್ನೆಗೋಲು ತಿರುಗುವ, —ಆಧಾರಬಿಂದು, ಆನಿಕೆ, ಅವಲಂಬ; ಕೀಲಕ. ಪ್ರಭಾವ, ಪ್ರಾಬಲ್ಯ, ಶಕ್ತಿ — ಇವು ಫಲಕಾರಿಯಾಗುವಂತೆ ಮಾಡುವ ಸಾಧನ, ಉಪಾಯ. (ಸ. ವಿ.) (ಸಾ., ಬ. ವ. ದಲ್ಲಿ) ಉಪಾಂಗಗಳು; ಅನುಬಂಧಗಳು (ಉದಾ., ಉಪ ಪತ್ರಗಳು, ಅಡರು ಕುಡಿ)

Fulfil ಫುಲ್‌ಫಿಲ್ (ಕ್ರಿ. ಸಕ.) ನೆರವೇರಿಸು; ನಡಸು; ಪೂರಯಿಸು; ಈಡೇರಿಸು; ಆಗಮಾಡು. (ಭವಿಷ್ಯತ್ ಸೂಚನೆ, ವಾಗ್ದಾನ) ಸಫಲಗೊಳಿಸು, ಕೈಗೂಡಿಸು, ಈಡೇರಿಸು. (ಬಯಕೆಯನ್ನು, ಪ್ರಾರ್ಥನೆಯನ್ನು) ನೆರವೇರಿಸಿಕೊಡು, ನಡಸಿಕೊಡು. (ಆಜ್ಞೆ, ನ್ಯಾಯ, ವಿಧಿ, ಷರತ್ತು, ಕಾನೂನು, ಮೊ. ನ್ನು) ಪಾಲಿಸು, ನಡಸು, ಅನುಸರಿಸು, ಆಚರಣೆಗೆ ತರು. (ಉದ್ದೇಶಕ್ಕೆ) ಹೊಂದುವಂತಿರು, ಸಾಕಾಗಿರು, ಅನುಗುಣವಾಗಿರು. (ಕಾಲ, ಕೆಲಸ) ಕೊನೆಮುಟ್ಟಿಸು, ಮುಗಿಸು, ಪೂರ್ತಿ ಮಾಡು. **Fulfilment** (ನಾ.)

Fúlgent ಫಲ್ಜೆಂಟ್ (ಗು.) (ಕಾವ್ಯ ಮತ್ತು ಅಲಂ.) ಹೊಳೆಯುವ; ಮಿರುಗುವ; ಥಳ ಥಳಿಸುವ; ಪ್ರಜ್ವಲಿಸುವ; ಪ್ರಕಾಶಮಾನವಾದ.

Fúlgurite ಫಲ್ಗ್ಯುರೈಟ್ (ನಾ.) (ಭೂ. ವಿ.) ಸಿಡಿಲು ಬಿದ್ದು ಕರಗಿ ಗಾಜಿನಂತಾದ ಶಿಲಾ ವಸ್ತು: ಸಿಡಿಲುಗಲ್ಲು. ಮರಳಿನಲ್ಲಿ ಸಿಡಿಲು ತೂರಿ ಮಾಡಿದ ನಾಳ, ಡೊಗರು: ಸಿಡಿಲು ಡೊಗರು. ಸಿಡಿ ಮದ್ದು; ಸ್ಫೋಟಕ.

Fúlham ಫುಲಮ್ (ನಾ.) (ಚರಿತ್ರೆ) ಒಂದು ಕೊನೆಯಲ್ಲಿ ಹೆಚ್ಚು ತೂಕವಿಟ್ಟ ದಾಳ: ಭಾರ ಹೇರಿದ ದಾಳ.

Fúlham Pálace ಫುಲಮ್ ಪ್ಯಾಲೆಸ್ (ನಾ.) ಲಂಡನ್ ಬಿಷಪ್ಪಿನ ಅಧಿಕಾರದ ವಾಸಸ್ಥಾನ.

Fulíginous ಫ್ಯೂಲಿಜಿನಸ್ (ಗು.) ಕಪ್ಪು, ಮಸಿ, — ಕೂಡಿದ; ಇಲ್ಲಣ ಕಟ್ಟಿದ; ಇಲ್ಲಣದ; ಹೊಗೆ ಕಪ್ಪಿನ; — ಅಂಥ. ಮಸಕಾದ; ಮಬ್ಬಾದ.

Full[1] ಫುಲ್ (ಗು., ಕ್ರಿ. ಸಕ., ಕ್ರಿ. ವಿ.) (ಪೂರ್ತಿ, ಹಿಡಿಸುವಷ್ಟು) ತುಂಬಿದ; ಭರಿತ; ಇಡಿದ; ನೆರೆದ; ಪೂರ್ಣ; ಪರಿಪೂರ್ಣ; ಸಂಪೂರ್ಣ; ಪೂರ; ಪೂರ್ತ [F. to the brim, to overflowing. (ಬಳ. ಮೊ.) F. up ತುಂಬಿ ತುಳುಕುವ. F.-hearted ಭಾವಾತಿಶಯದಿಂದ ಕಲಕಿದ; ಶ್ರದ್ಧಾಸಕ್ತಿಗಳುಳ್ಳ; ಬದ್ಧಾದರವುಳ್ಳ; ಭರವಸೆಯುಳ್ಳ; ಧೈರ್ಯವುಳ್ಳ]. ಹೇರಳ; ಸಮೃದ್ಧ; ಇಡಿಕಿರಿದ; ಕಿಕ್ಕಿರಿದ [In a f. house ಬಹು ಮಂದಿ ಸದಸ್ಯರು ಹಾಜರಿರುವ ಸಭೆಯಲ್ಲಿ: ತುಂಬಿದ ಸಭೆಯಲ್ಲಿ. F. of vitality ಚೈತನ್ಯ ಹೊಮ್ಮುತ್ತಿರುವ. F. of himself ಸ್ವವಿಷಯದಲ್ಲಿ ಮಗ್ನನಾದ. F. of the news ಹೇಳದೆ ಇರಲಾಗದಷ್ಟು ಸಮಾಚಾರಗಳಿಂದ ತುಂಬಿರುವ. A f. stomach ತುಂಬಿದ ಹೊಟ್ಟೆ. (ಮು., ಬೈಬಲ್ಲಿನಲ್ಲಿ ಹೇಳಿರುವಂತೆ) F. of years and honours ಪೂರ್ಣಾಯುಸ್ಸಿನಿಂದಲೂ ಸಕಲ ಗೌರವಗಳಿಂದಲೂ ಕೂಡಿದ. A f. meal ಹೊಟ್ಟೆತುಂಬ ಊಟ; ಪುಷ್ಕಳ ಭೋಜನ. Turned it to f. account ಸಂಪೂರ್ಣ ಪ್ರಯೋಜನ ಪಡೆಯುವಂತೆ ಅದನ್ನು ಉಪಯೋಗಿಸಿಕೊಂಡನು. He is very f. on this point ಈ ವಿಚಾರವಾಗಿ ಅವನಲ್ಲಿ ಸಂಪೂರ್ಣ ವಿಷಯ ಸಂಗ್ರಹವಿದೆ. F. membership ಸಂಪೂರ್ಣ ಸದಸ್ಯತ್ವ. Of the f. blood ಶುದ್ಧ ತಳಿಯ; —ವಂಶದ (ಬೆರಕೆಯ ಜಾತಿಯಲ್ಲದ). At f. length ಕೈಕಾಲುಗಳು ಪೂರ್ತಿ ಚಾಚಿಕೊಂಡು ಮಲಗಿ. ಸವಿಸ್ತಾರವಾಗಿ; ಸಂಕ್ಷೇಪಿಸದೆ. F.-length portrait ಪೂರ್ತಿಯಾಕಾರದ ಭಾವ ಚಿತ್ರ. Waited a f. hour ಒಂದು ಗಂಟೆ ಪೂರ್ತಿ ಕಾದೆನು. A f. pulse ಬಲವಾಗಿ ಆಡುವ ನಾಡಿ. A. f. gallop ಜೋರಾದ ನಾಗಾಲೋಟ; ಭರದಾಂಡು. I cannot tell you the f. of it ಎಲ್ಲವನ್ನೂ ಪೂರ್ತಿಯಾಗಿ ಹೇಳಲಾರೆ. In f. ಸಂಕ್ಷೇಪಿಸದೆ; ಸಮಗ್ರವಾಗಿ; ಪೂರ್ತಿಯಾಗಿ. To the f. ಪರಮಾವಧಿಯ ವರೆಗೆ; ತುದಿಯ ವರೆಗೆ; ಸಮಗ್ರವಾಗಿ. Moon is past the f. ಹುಣ್ಣಿಮೆ ಕಳೆದಿದೆ]. (ಕ್ರಿ.) (ಉಡುಪು, ಮೊ.) ತುಂಬುಮಾಡು; ನಿರಿಗೆಗೂಡಿಸು. (ಕ್ರಿ. ವಿ.) F. many a gem ಅನೇಕಾನೇಕ ರತ್ನಗಳು. I know it f. well ಅದು ನನಗೆ ಬಹಳ ಚೆನ್ನಾಗಿ ತಿಳಿಯುವುದು. F. six miles ಪೂರಾ ಆರು ಮೈಲಿ. Hit him f. on the nose ಮೂಗಿನಮೇಲೆ ನೇರವಾಗಿ ಹೊಡೆ. This chair is f. high ಈ ಕುರ್ಚಿ ಎತ್ತರ ಮೀರಿದೆ. **F. age** ಪ್ರಾಪ್ತ ವಯಸ್ಸು; ವ್ಯವಹಾರದ ವಯಸ್ಸು. **F.-back** ಕಾಲ್ಚೆಂಡಾಟದಲ್ಲಿ ಪೂರ್ತಿ ಹಿಂದೆ ನಿಂತು ಆಡುವ ಆಟಗಾರ. **F.-blooded** ಶುದ್ಧ ರಕ್ತ ಸಂಬಂಧದ. ಚೈತನ್ಯ ತುಂಬಿದ; ಉತ್ಸಾಹ ಭರಿತ; ವಿಷಯಾಸಕ್ತ. **F.-blown** ಪೂರ್ತಿ ಅರಳಿದ (ರೂಪ. ಸಹ). F.blown dignity ಸಂಪೂರ್ಣ ಗೌರವ. **F.-bodied** (ಮು., ಮದ್ಯ) ಸಾರವತ್ತಾದ. **F. brother, sister** ಒಂದೇ ತಾಯಿ ತಂದೆಗಳುಳ್ಳ ಸೋದರ, ಸೋದರಿ **F. dress** (Dress[2] ನೋಡಿ). F.-dress rehearsal ವೇಷಗಳನ್ನು ಪೂರ್ತಿಯಾಗಿ ಹಾಕಿಕೊಂಡು ಅಭಿನಯಿಸುವ ಮುಂಪ್ರಯೋಗದ ಆಟ: ಮುಂಪ್ರಯೋಗ. F.-dress debate (ಶಾಸನ ಸಭೆಗಳಲ್ಲಿ ಮೊದಲೇ ನಿಶ್ಚಯಿಸಿ ಏರ್ಪಡಿಸಿದಂತೆ ಯಾವುದಾದರೂ ಪ್ರಧಾನ ವಿಷಯದ ಮೇಲೆ ಮಾಡುವ) ಕ್ರಮವಾದ ಚರ್ಚೆ. **F. grown** ಪೂರ್ತಿ ಬೆಳೆದ; ಫಲಕ್ಕೆ ಬಂದ. **F. moon** ಪೂರ್ಣ ಚಂದ್ರ; ಹುಣ್ಣಿಮೆ. **F.-mouthed** (ದನಗಳ ವಿಚಾರದಲ್ಲಿ) ಹಲ್ಲುಗಳೆಲ್ಲವೂ ಬಂದಿರುವ: ಬಾಯಿಗೂಡಿರುವ. (ನಾಯಿಯ ವಿಚಾರದಲ್ಲಿ) ಗಟ್ಟಿಯಾಗಿ ಬಗುಳುವ. (ಭಾಷಣ, ಶೈಲಿ, ಮೊ. ವಿಷಯದಲ್ಲಿ) ವಾಗ್ಸೋರಣೆಯುಳ್ಳ; ಗಂಭೀರ ಘೋಷವುಳ್ಳ. A f.-mouthed welcome ಮುಕ್ತ ಕಂಠದಿಂದ ಕೊಟ್ಟ ಸ್ವಾಗತ. **F. pay** (ಕೆಲಸದಮೇಲಿರುವಾಗ ದೊರೆಯುವ) ಪೂರ್ತಿ ಸಂಬಳ. **F. point** *or* **stop** (ವಿರಾಮ ಚಿಹ್ನೆಗಳಲ್ಲಿ) ಪೂರ್ಣ ವಿರಾಮ. **F.speed** ತುಂಬು ವೇಗ. F. speed ahead! (ಆಜ್ಞೆ) ತುಂಬು ವೇಗದಿಂದ ನಡೆ, ನುಗ್ಗು! **F. swing** (Swing ನೋಡಿ). **F.-timer** ಪಾಠಶಾಲೆ ನಡೆಯುವ ಕಾಲದಲ್ಲೆಲ್ಲ ಹಾಜರಿರುವ ವಿದ್ಯಾರ್ಥಿ: ಪೂರ್ತಿ ಹೊತ್ತಿನ ವಿದ್ಯಾರ್ಥಿ (Half-timer ಒಪ್ಪೊತ್ತಿನ ವಿದ್ಯಾರ್ಥಿ). **Fúllish** (ಗು.) ಸರಿಸುಮಾರು ತುಂಬಿರುವ; — ಪೂರ್ತಿಯಾದ. **Fúl(l)ness** (ನಾ.) ತುಂಬಿರುವುದು; ಪೂರ್ಣತೆ; [(ಬೈಬಲ್) In the f. of the heart ಹೃತ್ಪೂರ್ತಿಯಾಗಿ. The f. of time ಯಥಾಕಾಲ]. (ನಾದ, ಬಣ್ಣ, ಮೊ. ಗಳ) ಆಧಿಕ್ಯ, ಪುಷ್ಕಳತೆ, ಶೋಭೆ, ಸಾಂದ್ರತೆ. **Fúlly** (ಕ್ರಿ. ವಿ.) ಪೂರ್ತಿಯಾಗಿ, ಸಮಗ್ರವಾಗಿ; ಸ್ವಲ್ಪವೂ ಬಿಡದೆ.

Full[2] ಫುಲ್ (ಕ್ರಿ. ಸಕ.) (ಬಟ್ಟೆಯನ್ನು) ತೊಳೆದು ದಟ್ಟವಾಗಿ ಮಾಡು. **Fúller**[1] (ನಾ.) — ವವನು. [F.'s earth ಚವುಳು (ಮಣ್ಣು)]. **Fúllery** (ನಾ.) ಈ ಕೆಲಸದ ಕಾರ್ಖಾನೆ.

Fuller[2] ಫುಲರ್ (ನಾ., ಕ್ರಿ. ಸಕ.) ಕಬ್ಬಿಣಕ್ಕೆ (ತಕ್ಕಂತೆ) ಆಕಾರ ಕೊಡುವ ಗಾಡಿಯುಳ್ಳ ಒಂದು ಉಪಕರಣ; (ಮು., ಕುದುರೆಯ ಲಾಳದಲ್ಲಿ) ಈ ಉಪಕರಣದಿಂದ ಮಾಡಿದ ಗಾಡಿ. (ಕ್ರಿ.) ಇದರಿಂದ ಒತ್ತಿ ಹೊಡೆ.

Fúlminant. Fulminate ನೋಡಿ.

Fúlminate ಫಲ್ಮಿನೇಟ್ (ಕ್ರಿ.) ಮಿಂಚಿನಂತೆ ಹೊಳೆ; ಸಿಡಿ; ಸ್ಫೋಟನವಾಗು. ಮೊಳಗು; ಗರ್ಜನೆ ಮಾಡು; ಆರ್ಭಟ ಮಾಡು; ಕಟುವಾಗಿ ಖಂಡಿಸು; ವಿಷ ಕಾರು. (ಮು., ಪೋಪಿನ ಅಧಿಕಾರಯುಕ್ತ) ಖಂಡನಾಜ್ಞೆಯನ್ನು ಹೊರಡಿಸು. **Fulminátion** (ನಾ.); **Fúlminatory** — ನ(ನೇ)ಟರಿ (ಗು.), **Fúlminant** — ನಂಟ್ (ಗು.) ಸಿಡಿಯುವ; ಸ್ಫೋಟಿಸುವ. (ವ್ಯಾಧಿ) ಥಟ್ಟನೆ ಹೊಮ್ಮುವ. **Fúlmine** ಫಲ್ಮಿನ್ (ಕ್ರಿ.) (ಕಾವ್ಯ) = Fulminate. **Fulmínic** (ಗು.) (ರ. ವಿ.) F. acid ಕೆಲವು ಲೋಹಗಳೊಡನೆ ಸಂಯುಕ್ತವಾಗುವುದರಿಂದ ಸಿಡಿಯುವ ಲವಣಗಳು ಹುಟ್ಟುವ ಒಂದು ಆಮ್ಲ: 'ಫಲ್ಮಿನಿಕ್, ಆಮ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Fúlminate (ನಾ.) 'ಫಲ್ಮಿನೇಟ್' ಲವಣ (ಉದಾ., Gold f., Mercury f.)

Fúlmine, etc. **Fulminate** ನೋಡಿ.

Fúlsome ಫ(ಫು)ಲ್ಸಮ್ (ಗು.) (ಮುಖಸ್ತೋತ್ರ, ದಾಸ್ಯಾನುಸರಣೆ, ಮಿತಿ ಮೀರಿದ ತೋರ್ಕೆಯ ಪ್ರೇಮ — ಇವುಗಳ ವಿಷಯದಲ್ಲಿ) ವೆಗಟಾಗುವ, ಬೇಸರ ಹಿಡಿಸುವ, ವಿಪರೀತವಾದ, ಅಸಹ್ಯ ಹುಟ್ಟಿಸುವ. **Fúlsomely** (ಕ್ರಿ. ವಿ.); **Fúlsomeness** (ನಾ.)

Fúlvous ಫಲ್ವಸ್ (ಗು.) ನಸುಗೆಂಪು ಕೂಡಿದ ಹಳದಿಯ ಬಣ್ಣದ; ಕಂದು ಬಣ್ಣದ. **Fulvéscent** —ವೆಸೆಂಟ್ (ಗು.) ಸ್ವಲ್ಪಮಟ್ಟಿಗೆ —.

Fúmarole ಫ್ಯೂಮರೋಲ್ (ನಾ.) ಅಗ್ನಿಪರ್ವತದ ಶಿಖರದಿಂದ ಆವಿ ಹೊರಡುವ ಬಿರುಕು, ಸೀಳಿಕೆ: ಧೂಮ ರಂಧ್ರ.

Fúmble ಫಂಬ್‌ಲ್ (ಕ್ರಿ., ನಾ.) ಕೈಗಳನ್ನು ಒಂದು ವ್ಯವಸ್ಥೆಯಿಲ್ಲದೆ, ವಿಲಕ್ಷಣವಾಗಿ, ಆಡಿಸು; ತಡಕಾಡು (ಅಗುಳಿ, ಮೊ. ಗಳ ವಿಷಯದಲ್ಲಿ *at*, *with* ಉಪ. ದೊಡನೆ; ಹುಡುಕುವ ವಸ್ತುಗಳ ವಿಷಯದಲ್ಲಿ *for*, *after* ಉಪ. ದೊಡನೆ). (ಮಾತು) ತಡವರಿಸು. (F. the ball ಚೆಂಡನ್ನು ಥಟ್ಟನೆ ನಿಲ್ಲಿಸಲಾಗದೆ ಅವ್ಯವಸ್ಥೆಯಿಂದ ಕೈಯಾಡಿಸು). (ನಾ.) ತಡಕಾಟ; ಅವ್ಯವಸ್ಥೆ. **Fúmbler** (ನಾ.)

Fume ಫ್ಯೂಮ್ (ನಾ., ಕ್ರಿ.) (ವಾಸನೆಯುಳ್ಳ) ಹೊಗೆ, ಧೂಮ, ಧೂಪ, ಆವಿ, ಹಬೆ; ನೀರಿನ ಆವಿ; (ಜಠರದಿಂದ ಮೆದುಳಿಗೆ ಏರಿಹೋಗುವುದೆಂದು ಊಹಿಸಿರುವ) ಕೆಡುಕಿನ ಹಬೆ [The fumes of wine, etc. (ರೂಪ.) The fumes of excitement, enthusiasm ನೆತ್ತಿಗೇರುವ ಉದ್ರೇಕ, ಉತ್ಸಾಹ]. ಕೋಪದ ಆವೇಶ (In a f. ಕೋಪಾವೇಶದಲ್ಲಿ). (ಕ್ರಿ.) ಧೂಪ ಹಾಕು; ಹೊಗೆ ಹಾಕು; (ಛಾಯಾಚಿತ್ರ ಪಟಲ, ಓಕ್ ದಾರು, ಮೊ. ನ್ನು ಬಣ್ಣವೇರಲು) ರಾಸಾಯನಿಕ ಹಬೆಗಳಿಗೆ (ಮು., ಅಮೋನಿಯದ ಹಬೆಗೆ) ಒಡ್ಡು; ಹಬೆ ಹಾಯಿಸು; ಹಬೆ ಸೂಸು; ಹಬೆಯಾಡು; ಹೊಗೆಯಾಡು; (ಹಬೆ, ಮೊ.) ಏಳು, ಮೇಲೇರು, ಹೊರ ಸೂಸು. ರೇಗು; ಸಿಡಿಗುಟ್ಟು; ಸಿಡುಕುಗೊಳ್ಳು; ಸಿಡಿಮಿಡಿಗೊಳ್ಳು; ಚಡಪಡಿಸು (*At* ಉಪ. ದೊಡನೆ). **Fúmy** (ಗು.); **Fúmigate** (ಕ್ರಿ. ಸಕ.) ಹೊಗೆ, ಧೂಪ, — ಹಾಕು; ಹೊಗೆಯಾಡಿಸು; ಹೊಗೆ ಹಾಯಿಸು; ಹಬೆಗೆ ಒಡ್ಡು. ಧೂಮದಿಂದ, ಹಬೆಯಿಂದ, ವಿಷ ಕ್ರಿಮಿ ನಾಶ ಮಾಡು. ಶುದ್ಧಿಗೊಳಿಸು. ಪರಿಮಳಗೊಳಿಸು; ಸುವಾಸನೆ ತುಂಬು. **Fumigátion** (ನಾ.) ಹಬೆಯಾಡಿಸುವುದು; ಧೂಪ ಹಾಕುವುದು; ಧೂಪನ; ಧೂಪ. **Fúmigator** (ನಾ.) ಧೂಪ ಹಾಕುವವನು; —ವದು; ಧೂಪಕ.

Fúmitory ಫ್ಯೂಮಿಟರಿ (ನಾ.) ಹಿಂದೆ ವೈದ್ಯದಲ್ಲಿ ಉಪಯೋಗಿಸುತ್ತಿದ್ದ ಒಂದು ಸೊಪ್ಪು, ಮೂಲಿಕೆ.

Fun ಫನ್ (ನಾ., ಕ್ರಿ. ಅಕ.) ಹುಡುಗಾಟ; ತಮಾಷೆ; ವಿನೋದ; ಹಾಸ್ಯ; ಪರಿಹಾಸ; ಕುಚೇಷ್ಟೆ; ಕುಚೋದ್ಯ; ಗೇಲಿ; ನಕಲಿ [Make f. of, Poke f. at ತಮಾಷೆ ಮಾಡು; ಪರಿಹಾಸ ಮಾಡು; ಗೇಲಿಯೆಬ್ಬಿಸು. For *or* in f. ತಮಾಷೆಯಾಗಿ; ವಿನೋದಕ್ಕಾಗಿ. Is good, great, f. ಒಳ್ಳೆಯ ವಿನೋದ, ಬಹು ತಮಾಷೆ. Like f. (ಆಟವಾಡುವಂತೆ) ಚಟುವಟಿಕೆಯಿಂದ; ಲೀಲಾ ಜಾಲವಾಗಿ; ನೀರು ಕುಡಿದಂತೆ; ಜೋರಾಗಿ; ಬೇಗ ಬೇಗನೆ; ಹೆಚ್ಚಾಗಿ. What f.! ಏನು ತಮಾಷೆ! ಎಷ್ಟು ವಿನೋದ!]. (ಕ್ರಿ.) (ವಿರ. ಪ್ರ.) ವಿನೋದ ಮಾಡು; ಗೇಲಿ ಮಾಡು; ಹಾಸ್ಯ ಮಾಡು. **Fúnny**[1] ಫನಿ (ಗು.). ತಮಾಷೆಯಾದ; ನಗುವುಂಟುಮಾಡುವ; ವಿನೋದದ; ಹಾಸ್ಯಕರ; ಕುಚೋದ್ಯದ; ವಿಚಿತ್ರದ; ವಿಲಕ್ಷಣವಾದ; ತಬ್ಬಿಬ್ಬಾಗುವ; ಬುದ್ಧಿಗೆ ಹರಿಯದ; ಕಾರಣ ಹೇಳಲು ಕಷ್ಟವಾದ. **F.-bone** 'ಅಲ್ನಾರ್' ನರ ಹಾದುಹೋಗುವ ಮೊಣಕೈಯ ಭಾಗ. **F.-man** (ಕಸಬುಗಾರನಾದ) ಹಾಸ್ಯಗಾರ; ವಿದೂಷಕ; ನಕಲಿ. **Fúnnily** (ಕ್ರಿ. ವಿ.); **Fúnniness** (ನಾ.); **Fúnniment** (ನಾ.) ತಮಾಷೆ; ಹಾಸ್ಯ; ಕುಚೋದ್ಯ; ವಿನೋದ.

Funámbulist ಫ್ಯೂ(ಫ್ಯು)ನ್ಯಾಂಬ್ಯುಲಿಸ್ಟ್ (ನಾ.) (ಎಳೆದು ಕಟ್ಟಿದ) ಹಗ್ಗದ ಮೇಲೆ ನಡೆಯುವವನು.

Fúnction ಫಂಕ್‌ಷನ್ (ನಾ., ಕ್ರಿ. ಅಕ.) (ಯಾವುದಾದರೂ ಒಂದರ) ಸ್ವಾಭಾವಿಕ ಕ್ರಿಯೆ; ವ್ಯಾಪಾರ; ಧರ್ಮ; ಕೆಲಸ; ಎಸಕ (ಗ್ರಾಂ.); ನೆಗಳ್ತೆ (ಗ್ರಾಂ); (ಅಧಿಕಾರಿಯ) ಕರ್ತವ್ಯ; ಉದ್ಯೋಗ; ವೃತ್ತಿ; ಕಸಬು. (ಮತ ಸಂಬಂಧದ, ಅಥವಾ ಇತರ ಸಾರ್ವಜನಿಕ) ಉತ್ಸವ, ಸಮಾರಂಭ; ಸಮಾಜ ಕೂಟ. (ಗಣಿತ) ಒಂದು ಅಥವಾ ಹೆಚ್ಚಾದ ಚಲ ಪರಿಮಾಣಗಳಿಗೆ ಸಂಬಂಧಿಸಿದ್ದು ಆ ಪರಿಮಾಣಗಳಿಗೆ ಹೊಂದಿದಂತೆ ನಿರೂಪಿಸಲಾಗುವ, ಅಥವಾ ತನ್ನ ಬೆಲೆ ಆ ಪರಿಮಾಣಗಳ ಬೆಲೆಯನ್ನನುಸರಿಸಿಹೋಗುವ, ಒಂದು ಚಲ ಪರಿಮಾಣ: ಅವಲಂಬಿ ಪರಿಮಾಣ; ಫಲ. (ಕ್ರಿ.) (ನಿಯಮಿತ) ಕಾರ್ಯ, ಕೆಲಸ, ವ್ಯಾಪಾರ,— ಮಾಡು, ನಡೆ. ಪ್ರಯೋಜನವಾಗು; ಕೆಲಸಕ್ಕೆ ಬರು. **Fúnctional** (ಗು.) (ವಿರ. ಪ್ರ.) ಅಧಿಕಾರ ಸಂಬಂಧದ; ಕೇವಲ ಔಪಚಾರಿಕ; ಆಚಾರಾರ್ಥಕ. (ಶ. ವಿ., ಮು., ವ್ಯಾಧಿಗಳ ವಿಷಯದಲ್ಲಿ) ಒಂದು ಅಂಗ, ಮೊ. ಗಳ ವ್ಯಾಪಾರಕ್ಕೆ ಸಂಬಂಧಿಸಿದ (ರಚನೆಗೆ ಅಲ್ಲ). (ಅಂಗ) ನಿಯಮಿತ ಕಾರ್ಯವಿರುವ (ಕಾರ್ಯವಿಲ್ಲದೆ ಆಕಾರಮಾತ್ರದ್ದಲ್ಲ). (ಗಣಿತ) ಅವಲಂಬಿ ಪರಿಮಾಣದ; ಫಲದ. **Fúnctionally** (ಕ್ರಿ. ವಿ.); **Fúnctionary** (ನಾ., ಗು.) ಅಧಿಕಾರಿ; ನೌಕರ. (ಗು.) = Functional (ಗಣಿತಾರ್ಥ ವಿನಾ). **Fúnctionate** — ನೇಟ್ (ಕ್ರಿ. ಅಕ.) = Function (ಕ್ರಿ.). **Fúnctionless** (ಗು.)

Fund ಫಂಡ್ (ನಾ., ಕ್ರಿ. ಸಕ.) (ಬೇಕಾದಂತೆಲ್ಲ ಬಳಸಿಕೊಳ್ಳಲು ಒದಗುವ, ಸ್ಥಿರ) ನಿಧಿ; ಪುದುವಟ್ಟು; ಗಂಟು (A f. of common sense ವ್ಯವಹಾರ ಬುದ್ಧಿಯ ನಿಧಿ. A f. of tenderness ದಯಾ ನಿಧಿ; ಕರುಣಾ ನಿಧಿ. A f. of labour ದುಡಿಮೆಯ ಸಮೃದ್ಧಿ. A f. of knowledge ಜ್ಞಾನ ರಾಶಿ; ವಿದ್ಯಾ ನಿಧಿ). (ಮು., ಒಂದು ಉದ್ದೇಶಕ್ಕಾಗಿ ಮೀಸಲಟ್ಟಿರುವ) ಹಣದ ಮೊತ್ತ, ಪುದುವಟ್ಟು (Sinking f. ಸಾಲ ತೀರುವೆಯ ನಿಧಿ; ಋಣಪರಿಹಾರ ನಿಧಿ). (ಬ. ವ. ದಲ್ಲಿ) ಧನ ಚೈತನ್ಯ; ಬಂಡವಾಳ; ಹಣ (In funds ಹಣವಿದ್ದು; ದ್ರವ್ಯಾನುಕೂಲತೆಯಿದ್ದು). [The funds (ಹಣ ಹಾಕಿ ಬಡ್ಡಿ ಪಡೆಯಬಹುದಾದ) ಸಾರ್ವಜನಿಕ ಸಾಲ (Has a lakh of rupees in the funds). F.-holder ಸಾರ್ವಜನಿಕ ಸಾಲದಲ್ಲಿ ಹಣ ಹಾಕಿರುವವನು; ಸರ್ಕಾರದ ಸಾಲಪತ್ರದಾರ]. (ಕ್ರಿ.) ಚಲ ಋಣವನ್ನು (ಕ್ಲುಪ್ತ ಬಡ್ಡಿಯ ದರದಮೇಲೆ) ಹೆಚ್ಚುಕಡಮೆ ಶಾಶ್ವತ ಋಣವನ್ನಾಗಿ ಮಾರ್ಪಡಿಸು; ನಿಧಿಗೆ ಹಾಕು. ಸರ್ಕಾರದ ಸಾಲಪತ್ರಗಳಲ್ಲಿ ಹಣ ಹಾಕು, ಇಡು. (ವಿರ. ಪ್ರ.) ಸಂಗ್ರಹಿಸು; ಕೂಡಹಾಕು.

Fúndament ಫಂಡಮೆಂಟ್ (ನಾ.) ಪಿರ್ರೆ; ಅಂಡು; ಕುಂಡಿ; ಗುದ. ಆಧಾರ.

Fundaméntal ಫಂಡಮೆಂಟಲ್ (ಗು., ನಾ.) ತಳಹದಿಯಾದ; ಆಧಾರಭೂತವಾದ; ಬುಡಮುಟ್ಟ ಹೋಗುವ; ಪಾಯವಾದ; ಅತ್ಯಾವಶ್ಯಕವಾದ; ಮೂಲ; ಪ್ರಧಾನ; ಆದಿಯಾಗಿರುವ; ಮೊತ್ತಮೊದಲನ; (ಮಿಕ್ಕವುಗಳಿಗೆ) ಮೂಲಸ್ಥಾನವಾದ (A f. change ಬುಡಮುಟ್ಟ ವ್ಯತ್ಯಾಸ; ಬಹಳ ಮುಖ್ಯವಾದ ಮಾರ್ಪಾಟು. The f. rules ಪ್ರಧಾನ ನಿಯಮಗಳು. The f. form ಮೂಲ ರೂಪ). [(ಸಂ.) F. note (ಸ್ವರಮೇಳದಲ್ಲಿ) ಮೂಲ ಸ್ವರ. F. tone ಧ್ವನಿ ಕೊಡುವ ವಾದ್ಯದ ಅತ್ಯಂತವೂ ಒಟ್ಟಿಗೆ ಕಂಪನ ಮಾಡುವುದರಿಂದ ಹುಟ್ಟುವ ನಾದ: ಮೂಲ ನಾದ (Harmonics ಉಪ ನಾದಗಳು; ವಾದ್ಯದ ಭಾಗಗಳ ಕಂಪನದಿಂದ ಹೊರಟ ನಾದಗಳು)]. (ನಾ.; ಸಾ., ಬ. ವ. ದಲ್ಲಿ) ಮೂಲ, — ತತ್ತ್ವ, ನಿಯಮ, ವಿಧಿ, ಸೂತ್ರ. (ಸಂ.) ಮೂಲ ಸ್ವರ;—ನಾದ. **Fundaméntally** (ಕ್ರಿ. ವಿ.); **Fundaméntalism** (ನಾ.) (ಅಮೆ. ಸಂ.) ಬೈಬಲ್ಲಿನ ವಾಕ್ಯಗಳಲ್ಲಿಯೂ ಅದರಲ್ಲಿ ಹೇಳಿರುವ ಕನ್ಯಾಪ್ರಸವನ ಮತ್ತು ಕ್ರಿಸ್ತನ ಸಶರೀರ ಪುನರುತ್ಥಾನ — ಇವೇ ಮೊದಲಾದ ಲೋಕೋತ್ತರ ಕ್ರಿಯೆಗಳಲ್ಲಿಯೂ, ಪ್ರಾತಿನಿಧ್ಯ ಪ್ರಾಯಶ್ಚಿತ್ತದಲ್ಲಿಯೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಲ್ಪವೂ ಅಸತ್ಯವಿಲ್ಲವೆಂಬ ಸಾಂಪ್ರದಾಯಿಕ ನಂಬಿಕೆ ಕ್ರೈಸ್ತ ಮತಕ್ಕೆ ಮೂಲಾಧಾರವೆಂದು ಪುನಶ್ಚ ಒತ್ತಿಹೇಳಿ, ಆಧುನಿಕ ಪ್ರವೃತ್ತಿಗೆ ವ್ಯತಿರಿಕ್ತವಾಗಿ ವರ್ತಿಸುವ ಅಮೆರಿಕನ್ ಪ್ರಾಟೆಸ್ಟಂಟು ಮತೀಯರ ಹೊಸತತ್ತ್ವ, ವಾದ; ಕ್ರೈಸ್ತವೇದ ಪ್ರಾಮಾಣ್ಯವಾದ. **Fundaméntalist** (ನಾ.) ; **Fundamentálity** (ನಾ.)

Funébrial. **Funeral** ನೋಡಿ.

Fúneral ಫ್ಯೂನೆರಲ್ (ಗು., ನಾ.) ಶವಸಂಸ್ಕಾರ(ದ) ; ಉತ್ತರ ಕ್ರಿಯೆ(ಯ) (F. pile, pyre ಹೆಣವನ್ನು ಸುಡುವುದಕ್ಕೆ ಒಟ್ಟಿದ ಸೌದೆ, ಮೊ. ಗಳ ರಾಶಿ: ಚಿತಿ. F. urn ಹೆಣಸುಟ್ಟ ಬೂದಿಯನ್ನುಳ್ಳ ಭಾಂಡ ; ಶವಭಸ್ಮ ಭಾಂಡ. F. oration ಶವಸಂಸ್ಕಾರ ಸಂದರ್ಭದಲ್ಲಿ ಮಾಡುವ ಭಾಷಣ: ಶವಸಂಸ್ಕಾರ ಭಾಷಣ). (ನಾ.) ಹೆಣದ ಮೆರವಣಿಗೆ ; ಶ್ಮಶಾನ ಯಾತ್ರೆ. (ಒಬ್ಬನಿಗೆ) ಸಂಬಂಧಪಟ್ಟದ್ದು ; (ಒಬ್ಬನ) ತಲೆಯ ಮೇಲೆ ಬಿದ್ದದ್ದು (His own f. ಅವನ ಪಾಡು, ಹಣೆಯ ಬರಹ). **Funébrial** ಫ್ಯೂನೀಬ್ರಿಯಲ್ (ಗು.) (ವಿರ. ಪ್ರ.) ಶವ ಸಂಸ್ಕಾರದ (This custom is f. in origin ಈ ಪದ್ಧತಿ ಶವಸಂಸ್ಕಾರದಿಂದ ಹುಟ್ಟಿದ್ದು). **Fúnerary** ಫ್ಯೂನೆರರಿ (ಗು.) = Funebrial. **Funéreal** ಫ್ಯೂನೀರಿಯಲ್ (ಗು.) ಶವಸಂಸ್ಕಾರದ ; —ಕ್ಕೆ ತಕ್ಕ. ಮಂಕು ಕವಿದ ; ವಿಷಣ್ಣ ; ಹರ್ಷರಹಿತ ; ವಿಷಾದಕರ ; ದುಃಖಕರ. **Funéreally** (ಕ್ರಿ. ವಿ.)

Fúngible ಫಂಜಿಬ್‌ಲ್ (ಗು.) (ನ್ಯಾ. ಶಾ.) (ಮು., ಸಾಮಾನು, ಮೊ. ನ್ನು ಸರಬರಾಯಿಮಾಡಲು ಒಪ್ಪಂದ ಮಾಡಿಕೊಂಡಿರುವಾಗ ಒಂದು ನಿರ್ದಿಷ್ಟ ಮಾದರಿಯದನ್ನು ಗೊತ್ತಾಗಿ ಹೇಳದಿರುವ ಸಂದರ್ಭದಲ್ಲಿ) ಅದೇ ವಿವರಣೆಗೆ ಸರಿಹೋಲುವ ಯಾವುದನ್ನಾದರೂ ಕೊಡಬಹುದಾದ: ತತ್ಸದೃಶವಾದ.

Fúngicide, Fúngin, etc. **Fungus** ನೋಡಿ.

Fúngus ಫಂಗಸ್ [ನಾ.; ಬ. ವ. -gi —ಜೈ, -uses —ಗಸ(ಸಿ)ಸ್] ನಾಯಿಕೊಡೆ ; ಅಣಬೆ ; ಶಿಲೀಂಧ್ರ ; ಬೂಷ್ಟು, ಮೊ. ವು. (ಸ. ವಿ.) ಪತ್ರಹರಿತ್ತಿಲ್ಲದ, ಜೈವಿಕ ಪದಾರ್ಥಗಳಿಂದ ಜೀವಿಸುವ, ಒಂದು ಸಸ್ಯ. ಇದ್ದಕ್ಕಿದ್ದಂತೆ ಥಟ್ಟನೆ ಬೆಳೆದುಬರುವ ಒಂದು ವಸ್ತು. (ವೈ. ಶಾ.) ಸ್ಪಂಜಿನಂತೆ ಬೆಳೆಯುವ ದುರ್ಮಾಂಸ. ಮೀನಿನ ಚರ್ಮರೋಗ. **Fúngal** (ಗು.) ಅಣಬೆಯ ; ಅಣಬೆಯಂಥ. **Fúngicide** ಫಂಜಿಸೈಡ್ (ನಾ.) ಅಣಬೆನಾಶಕ ವಸ್ತು ; ಶಿಲೀಂಧ್ರ ನಾಶಕ. **Fúngin** ಫಂಜಿನ್ (ನಾ.) ಅಣಬೆಯ ಜೀವಾಣುಗಳ ಆವರಣ ಪದಾರ್ಥ. **Fúngous** ಫಂಗಸ್ (ಗು.) ಅಣಬೆಯ ; ಅಣಬೆಯ ಲಕ್ಷಣವುಳ್ಳ ; ನಾಯಿಕೊಡೆಯ ಹಾಗೆ ಇದ್ದಕ್ಕಿದ್ದಂತೆ ಬೆಳೆಯುವ. ಕ್ಷಣಿಕ ; ಭಂಗುರ. **Fúngiform** ಫಂಜಿಫಾರ್ಮ್ (ಗು.) ಅಣಬೆಯಾಕಾರದ. **Fungívorous** (ಗು.) ಅಣಬೆಯನ್ನು ತಿನ್ನುವ. **Fúngoid** ಫಂಗಾಯ್ಡ್ (ಗು.) ಅಣಬೆಯನ್ನು ಹೋಲುವ ; — ಯ ಸ್ವಭಾವದ (ಮು., ವ್ಯಾಧಿಯಲ್ಲಿ). **Fúngusy** ಫಂಗಸಿ (ಗು.) ಅಣಬೆರೋಗದ ; ಅಣಬೆ ಬೆಳೆದ.

Funícular ಫ್ಯುನಿಕ್ಯುಲರ್ (ಗು.) ಹಗ್ಗದ ; ಹೊರಜಿಯ ; — ಬಿಗಿಯ ; — ಬಿಗುಪಿನ ; — ಎಳೆತದ (F. railway ಸ್ಥಾಯಿ ಎಂಜಿನಿನಿಂದ ಹೊರಜಿಯ ಮೂಲಕ ಬಂಡಿಗಳು ಸಂಚರಿಸುವಂತೆ ಮಾಡುವ ರೈಲುಮಾರ್ಗ : ಹೊರಜಿ ರೈಲುಮಾರ್ಗ)

Funk ಫಂಕ್ (ನಾ., ಕ್ರಿ.) (ಅಸಂ.) ದಿಗಿಲು ; ಭಯ ; ಗಾಬರಿ (Blue f. ಅತಿ ಗಾಬರಿ). ಹೇಡಿ ; ಹಂದೆ ; ಪುಕ್ಕಲು; ಅಂಜುಕುಳಿ ; ಪಿರಿಕಿ. [F.-hole (ಸೈನಿಕರು ಅವಿತುಕೊಂಡು ಯುದ್ಧಮಾಡುವ) ತೋಡು ಕಾಲುವೆ, ಅಗಳು. ಸೈನಿಕೋದ್ಯೋಗವನ್ನು ತಪ್ಪಿಸಿಕೊಳ್ಳಲು ನೆಪವಾಗಿ ಒಡ್ಡಿದ ಉದ್ಯೋಗ]. (ಕ್ರಿ.) ಹಿಂದೆಗೆ ; ಹಿಂಜರಿ ; ಹೆದರು ; ಹೇಡಿತನ ತೋರು ; ಹೆದರಿಸು ; ಭಯ ಹುಟ್ಟಿಸು. (ಕೆಲಸ) ತಪ್ಪಿಸಿಕೊಳ್ಳಲು ಪ್ರಯತ್ನಿಸು ; ಜಾರಿಕೊ. **Fúnky** (ಗು.)

Fúnnel ಫನೆಲ್ (ನಾ.) (ದ್ರವ, ಹುಡಿ, ಮೊ. ನ್ನು ಕಿರಿದಾದ ಬಾಯೊಳಕ್ಕೆ ಸಾಗಿಸಲು ಉಪಯೋಗಿಸುವ) ಅಗಲ ಕಿರಿದಾಗುತ್ತಹೋಗುವ ಕೊಳವೆ ; ಕೊಳವೆಗೂಡಿದ ಛಿನ್ನ ಶಂಕುಪಾತ್ರೆ ; ಬುದ್ಧಿವಂತ ; ಲಾಳಿಕೆ ; ಆಲಿಕಿ ; ಪನ್ನಾಲೆ. ಗಾಳಿ ಬೆಳಕುಗಳಿಗಾಗಿ ಇರುವ ನಾಳಮಾರ್ಗ, ದಾರಿ ; (ಆವಿಯೆಂಜಿನಿನ, ಹಡಗಿನ, —ಲೋಹದ) ಹೊಗೆಕೊಳವೆ ; ಹೊಗೆ ಸಾಗುವ ಚಿಮ್ನಿಯ ಲಾಳಿಕೆಯಾಕಾರದ ಕೆಳ ಭಾಗ. (-) **funnelled** (ಗು.)

Fúnniment, **Fúnny**[1]. **Fun** ನೋಡಿ.

Fúnny[2] ಫನಿ (ನಾ.) ಒಂದುಬಗೆಯ ಹಗುರವಾದ ವಿನೋದದ ದೋಣಿ.

Fur ಫರ್ (ನಾ., ಕ್ರಿ.) (ಅರ್ಮಿನ್, ಬೀವರ್, ಮೊ. ಪ್ರಾಣಿಗಳ) ಹದ ಮಾಡಿದ ತುಪ್ಪುಳುಚರ್ಮ(ದ ಅಲಂಕಾರ ಪಟ್ಟಿ ಅಥವಾ ಅಸ್ತರಿ). (ಕೆಲವು ಪ್ರಾಣಿಗಳ) ನಯವಾದ ಮೋಟು ಮೆತುಗೂದಲು ; ಮೃದು ರೋಮ ; (ಸಾ., ಬ. ವ. ದಲ್ಲಿ) ತುಪ್ಪುಳು(ಳ್ಳ) ಉಡುಪು ; ತುಪ್ಪುಳು ಚರ್ಮಗಳು ; (ಸಮೂಹಾರ್ಥ) ತುಪ್ಪುಳು ಪ್ರಾಣಿಗಳು (ಮು., F. & feather ತುಪ್ಪುಳುಪ್ರಾಣಿಗಳೂ ಪಕ್ಷಿಗಳೂ. Hunt f. ಮೊಲಗಳ ಬೇಟೆಯಾಡು). ಮೇಲ್ಮೈಗೆ ಹತ್ತಿಕೊಂಡ ಹಕ್ಕು, ಪೊರೆ (ಉದಾ., ದ್ರಾಕ್ಷಾಮದ್ಯದ ಹಕ್ಕು, ಪೊರೆ) ; (ಕಾಯಿಲೆಯಲ್ಲಿ) ನಾಲಗೆಯ ಮೇಲೆ ಕಟ್ಟುವ ಲೇಪ, ದೋಷ. ನೀರಿನ ಕುದಿಪಾತ್ರೆ, ಮೊ. ಗಳ ಒಳಮೈಮೇಲೆ ಕಟ್ಟುವ ಸುಣ್ಣದ ಹಕ್ಕು, ಪೊರೆ. (ಕ್ರಿ., ಮು., ಭೂ. ಕೃ. ನಲ್ಲಿ) ತುಪ್ಪುಳಿನ ಹೊದಿಕೆ, ಅಸ್ತರಿ, ಅಲಂಕಾರಪಟ್ಟಿ, ಮೊ. ನ್ನು ಹವಣಿಸು (Furred robes ತುಪ್ಪುಳು ಅಲಂಕರಿಸಿದ ನಿಲುವಂಗಿಗಳು). (ವ್ಯಕ್ತಿಗೆ) ತುಪ್ಪುಳಿನ ಉಡುಪು ಹಾಕು. (ನಾಲಗೆ, ಕುದಿಪಾತ್ರೆಯ ಒಳಮೈ, ಇವಕ್ಕೆ) ಲೇಪ, ಹಕ್ಕು, ಪೊರೆ, — ಕಟ್ಟು ; (ಕುದಿಪಾತ್ರೆಯ ಒಳಮೈಯಿಂದ) ಹಕ್ಕು ತೆಗೆದು ಶುದ್ಧಿಮಾಡು. (ಮರಗೆಲಸ) ನೆಲಗಟ್ಟಿನ ಮರಗಳನ್ನು ಚಕ್ಕೆಚೂರು ಕಟ್ಟಿ ಮಟ್ಟಮಾಡು. **Fúrrier** ಫರಿಯರ್ (ನಾ.) ತುಪ್ಪುಳು ವ್ಯಾಪಾರಿ ; ತುಪ್ಪುಳಿಗ ; ತುಪ್ಪುಳು ಚರ್ಮ ಹದ ಮಾಡುವವನು. **Fúrring** (ನಾ.) (ಕ್ರಿಯಾರ್ಥಗಳಲ್ಲಿ). (ಹಡಗು ಕಟ್ಟಡದಲ್ಲಿ) ಪಕ್ಕಕ್ಕೆ ಜೋಡುಹಲಗೆಗಳನ್ನು ಹಾಕುವುದು ; ಇಂಥ ಜೋಡುಹಲಗೆ. **Fúrry** (ಗು.)

Fúrbelow ಫರ್‌ಬಿಲೊ (ನಾ., ಕ್ರಿ. ಸಕ.) ನಿರಿ ಪಟ್ಟಿ ; (ಲಂಗದ ಅಥವಾ ಮೋಟು ಲಂಗದ) ನಿರಿಹಿಡಿದ ಅಂಚು. (ಬ. ವ. ದಲ್ಲ, ತುಚ್ಛವಾಗಿ) ಥಳುಕು ಪಳುಕು ಒಡವೆಗಳು. ಮುದುರು ಬಿದ್ದಿರುವ ಒಂದು ಬಗೆಯ ಸಮುದ್ರದ ಕಳೆ. (ಕ್ರಿ.) ನಿರಿ ಪಟ್ಟಿ, ಥಳುಕು ಪಳುಕು ಒಡವೆಗಳು, ಮೊ. ಗಳಿಂದ ಅಲಂಕರಿಸು.

Fúrbish ಫರ್ಬಿಷ್ (ಕ್ರಿ. ಸಕ.) ತುಕ್ಕು ತೆಗೆ ; ಹೊಳಪು ಕೊಡು ; ಮೆರುಗು ಹಾಕು ; ಒಪ್ಪವಿಡು ; (ಯಾವುದಾದರೂ ಪುರಾತನವಾದದ್ದಕ್ಕೆ) ಹೊಸ ರೂಪ, ಹೊಸ ಕಳೆ, ಕೊಡು ; ಹೊಸದು ಮಾಡು ; ನವೀಕರಿಸು (ಮು., *up* ಉಪ. ದೊಡನೆ)

Fúrcate ಫರ್ಕೆ(ೕ)ಟ್ (ಗು.), **Furcáte** ಫರ್ಕೇಟ್ (ಕ್ರಿ. ಅಕ.) ಕವಲೊಡೆ(ದ) ; ಶಾಖೆಗಳುಳ್ಳ. (ಕ್ರಿ.) ಕವಲಾಗು ; ಭಾಗವಾಗು. **Furcátion** (ನಾ.) ಕವಲೊಡೆತ ; ಕವಲಿನಂಥ ಭಾಗ, ಶಾಖೆ. **Furcáto-** (ಸ. ಪೂ. ಪ.)

Fúrious. **Fury** ನೋಡಿ.

Furl ಫರ್ಲ್ (ಕ್ರಿ.) (ಹಡಗಿನ ಪಟ) ಸುತ್ತಿ ಪಟದ ದಿಮ್ಮಿಗೆ ಬಿಗಿ ; (ಹಡಗಿನ ಪಟ) ಸುತ್ತು. (ಬೀಸಣಿಗೆ, ಕೊಡೆ, ರೆಕ್ಕೆ, ಪರದೆ, ಮೊ. ನ್ನು) ಮಡಿಸು, ಮುಚ್ಚು, ಸುತ್ತು, ಕಟ್ಟಿಡು, ಸುತ್ತಿ ಕಟ್ಟು. (ಪ್ರತೀಕ್ಷೆ) ತೊರೆದು ಬಿಡು, ಕುಗ್ಗಿಹೋಗು. ಸುರುಳಿ ಸುತ್ತಿಕೊ. ಮೋಡಗಳಂತೆ ಸರಿದು ಹೋಗು.

Fúrlong ಫರ್ಲಾಂಗ್ (ನಾ.) ಒಂದು ಮೈಲಿಯ ಎಂಟನೆಯ ಒಂದು ಭಾಗ: ಫರ್ಲಾಂಗು (ಆದಿಯಲ್ಲಿ, ಹತ್ತು ಎಕರೆಯ ಚಚ್ಚೌಕದ ಹೊಲದಲ್ಲಿಯ ಒಂದು ಉಳುಮೆಯ, ರೆಂಟೆಯ, ಸಾಲಿನ ಉದ್ದ)

Fúrlough ಫರ್ಲೋ (ನಾ., ಕ್ರಿ. ಸಕ.) (ಮು., ಸೈನಿಕನಿಗೆ ಕೊಟ್ಟ) ಗೈರಹಾಜರಿಯ ರಜ. (ಕ್ರಿ.) ಇಂಥ ರಜ ಕೊಡು.

CC-0. In Public Domain, Gurukul Kangri Collection, Haridwar

Digitized by Arya Samaj Foundation Chennai and eGangotri

Fúrmety. Frumenty ನೋಡಿ.

Fúrnace ಫರ್ನೆ(ರ್ನಿ)ಸ್ (ನಾ., ಕ್ರಿ. ಸಕ.) ಖನಿಜಗಳು, ಲೋಹಗಳು, ಮೊ. ಕ್ಕೆ ಸಂತತವಾಗಿ ಅತ್ಯಧಿಕ ಶಾಖ ಕೊಡಬಹುದಾದ ಉರಿಕೋಣೆ ಯುಳ್ಳ ಒಂದು ಸಲಕರಣೆ, ಸಾಧನ: ಕುಲುಮೆ. ಅಧಿಕ ಶಾಖವುಳ್ಳ ಸ್ಥಳ. ಕಠಿನ ಪರೀಕ್ಷೆ; ಅಗ್ನಿ ಪರೀಕ್ಷೆ (Tried in the f. ಕಠಿನ ಪರೀಕ್ಷೆಗೊಳಗಾಗಿ; ವಿಷಮ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ). (ಶಾಖದ ಕೊಳವೆಗಳಿಂದ ಮನೆಯನ್ನು ಬೆಚ್ಚಗಿಟ್ಟಿರುವುದಕ್ಕಾಗಿ ಉಪಯೋಗಿಸುವ) ಮುಚ್ಚಿದ ಅಗ್ನಿಕುಂಡ, ಒಲೆ. (ಕ್ರಿ.) ಕುಲುಮೆಯಲ್ಲಿ ಕಾಯಿಸು.

Fúrnish ಫರ್ನಿಷ್ (ಕ್ರಿ. ಸಕ.) ಹವಣಿಸು; ಒದಗಿಸು (Furnished with); (ಮನೆಯನ್ನು, ಕೊಠಡಿಯನ್ನು, ಆವಶ್ಯಕವಾದ ಗೃಹಕೃತ್ಯದ ಎಲ್ಲ ಉಪಕರಣಗಳಿಂದ, ಮು., ಕುರ್ಚಿ, ಮೇಜು, ಮೊ. ಸಾಮಾನು ಗಳಿಂದ) ಅಣಿ ಮಾಡು, ಸಜ್ಜುಗೊಳಿಸು [Furnished house, rooms (ಹೀಗೆ) ಸಜ್ಜುಗೊಳಿಸಿದ ಮನೆ, ಕೋಣೆಗಳು (ಮು., ಬಾಡಿಗೆಗೆ ಕೊಟ್ಟವುಗಳ ವಿಷಯದಲ್ಲಿ)]. (ಫಲ, ಆದಾಯ) ಕೊಡು.

Fúrniture ಫರ್ನಿಟ್ಯು(ಚ)ರ್ (ನಾ.) (ಮನೆಯ, ಕೊಠಡಿಯ, — ಕುರ್ಚಿ, ಮೇಜು, ಮೊ. ದ) ಪೀಠೋಪಕರಣ; (ಮನೆಯ, ಕೋಣೆಯ) ಅಣಿಕಟ್ಟು. (ಒಂದರಲ್ಲಿ ಅಡಕವಾಗಿರುವ) ವಸ್ತು, ಸಾಮಗ್ರಿ (F. of his pocket ಹಣ. F. of my shelves ನನ್ನ ಪುಸ್ತಕಗಳು. F. of one's mind ಜ್ಞಾನ ಸಾಮಗ್ರಿ; ಬುದ್ಧಿಶಕ್ತಿ). (ಪ್ರಾಚೀ. ಪ್ರ.) ಕುದುರೆ, ಮೊ. ಗಳ ಸಜ್ಜು; ಅಶ್ವ ಸಜ್ಜು.

Furóre ಫ್ಯೂ(ಫ್ಯು)ರಾರೆ, ಫ್ಯುರೋರಿ, **Fúrore** ಫ್ಯೂರೋರ್ (ನಾ.) ಅತ್ಯುತ್ಸಾಹದ, ಸಂಭ್ರಮದ, — ಹೊಗಳಿಕೆ, ಮೆಚ್ಚಿಕೆ; ಹುಚ್ಚು ಉತ್ಸಾಹ; ಹುಚ್ಚು.

Fúrrier. Fur ನೋಡಿ.

Fúrrow ಫರೋ (ನಾ., ಕ್ರಿ. ಸಕ.) ನೇಗಿಲ ಸಾಲು; ಉತ್ತ ಗೆರೆ; ಉಕ್ಕೆಸಾಲು. ಹಡಗಿನ ಜಾಡು; ಬಂಡಿಯ (ಚಕ್ರದ) ಜಾಡು. ಕಾಲುವೆ. ಆಳವಾದ ಮಡಿಕೆ; (ಮುಖದ) ಸುಕ್ಕು; ಎರಡು ತೆವರುಗಳ ಮಧ್ಯದ ಹಳ್ಳ. (F.-slice ನೇಗಿಲ ರೆಕ್ಕೆ ತಿರುವಿಹಾಕಿದ ಮಣ್ಣು). (ಕ್ರಿ.) ಉಳು; ನೇಗಿಲ ಸಾಲು ಮಾಡು; ನೇಗಿಲ ಸಾಲು ಹೊಡೆ; ನೇಗಿಲ ಸಾಲಿನಂತೆ ಕಾಲುವೆ, ಜಾಡು, — ಮಾಡು. ಸುಕ್ಕು ಸುಕ್ಕು ಮಾಡು. **Fúrrowless** (ಗು.); **Fúrrowy** (ಗು.)

Fúrther ಫರ್ದರ್ (ಕ್ರಿ. ವಿ., ಗು., ಕ್ರಿ. ಸಕ.) (ಸ್ಥಳದಲ್ಲಿ, ಕಾಲದಲ್ಲಿ) ಮುಂದಕ್ಕೆ, ಇನ್ನೂ ಮುಂದೆ; ಅದೂ ಅಲ್ಲದೆ (Unsafe to proceed f. ಇನ್ನು ಮುಂದಕ್ಕೆ ಹೋಗುವುದು ಅಪಾಯಕರ. Unless f. continued ಇನ್ನು ಮುಂದೆಯೂ ನಡಸದಿದ್ದರೆ). ಇನ್ನೂ; ಇದಲ್ಲದೆ; (ಇನ್ನೂ) ಹೆಚ್ಚಾಗಿ; ಇನ್ನಷ್ಟು ದೂರ (Inquire f.); ಜೊತೆಗೆ; ಮತ್ತೂ; ಇಷ್ಟೇ ಅಲ್ಲದೆ (ಮು., ವಾದದಲ್ಲಿ ಹೊಸ ವಿಚಾರವನ್ನು ಸೇರಿಸು ವಾಗ) (= Furthermore); ಬಹಳ ದೂರದಲ್ಲಿ [I'll see you f. first (Far ನೋಡಿ)]. (ಗು.) (ಈಗಿರುವುದಕ್ಕಿಂತ, ಈಗ ಮಾಡಿರುವು ದಕ್ಕಿಂತ) ಇನ್ನೂ ಮುಂದಕ್ಕೆ ಹೋಗುವ, ಹೆಚ್ಚಾದ [Threats of f. punishment ಇನ್ನೂ ಹೆಚ್ಚಿನ ದಂಡನೆಯಾಗುವುದೆಂಬ ಬೆದರಿಕೆ. Till f. notice ಮುಂದೆ (ಇನ್ನೊಂದು) ತಿಳಿವಳಿಕೆ ಕೊಡುವ ವರೆಗೂ]; (On the f. side ಆಚೆಯ ಕಡೆ; ದೂರದ ಕಡೆ). (ಕ್ರಿ.) (ಹಿಡಿದ ಕೆಲಸ, ಉದ್ದೇಶ ಸಾಧನೆ, ಮೊ. ಗಳ ವಿಷಯದಲ್ಲಿ) ಸಹಾಯ ಮಾಡು; ನೆರ ವಾಗು; ಅನುಕೂಲವಾಗು; ಮುಂದುವರಿಸು; ಅಭಿವೃದ್ಧಿಗೊಳಿಸು. **Fúrtherance** — ರನ್ಸ್ (ನಾ.) ಮುನ್ನಡೆ; ಅಭಿವೃದ್ಧಿ; ಪುರೋಭಿ ವೃದ್ಧಿ. **Fúrthermost** — ಮೋಸ್ಟ್ (ಗು.) ಅತ್ಯಂತ ದೂರದ. **Fúrthersome** — ಸಮ್ (ಗು.) ಮುಂದುವರಿಸಲು, ಸಹಾಯ ಮಾಡಲು, — ಅನುಕೂಲವಾದ, ಸಹಾಯಕವಾದ. **Fúrthest** (ಗು., ಕ್ರಿ. ವಿ.) = Farthest.

Fúrtive ಫರ್ಟಿವ್ (ಗು.) ಕದ್ದು ಮಾಡಿದ; ಗುಟ್ಟಾದ; ಮುಚ್ಚುಮರೆಯ; ಮರೆಮಾಚಿದ; ರಹಸ್ಯವಾದ; ಇತರರ ಗಮನಕ್ಕೆ ಬರಬಾರದೆಂದು ಮಾಡಿದ; ಒಳಗೊಳಗೇ ನಡಸಿದ; ಕಪಟದ; ಕಳ್ಳತನದ; ಕದ್ದ; ಅಪ ಹರಿಸುವ; ಚೌರ್ಯದ. **Fúrtively** (ಕ್ರಿ. ವಿ.); **Fúrtiveness** (ನಾ.)

Fúruncle ಫ್ಯೂರಂಕ್‌ಲ್ (ನಾ.) ಗುಳ್ಳೆ; ಬೊಕ್ಕೆ; ಕುರು; ಬಾವು; ಊತ; ಸ್ಫೋಟ. **Furúncular** (ಗು.); **Furúnculous** (ಗು.)

Fúry ಫ್ಯೂರಿ (ನಾ.) ರೋಷ; ಆವೇಶ; ರೋಷಾವೇಶ; ಹುಚ್ಚು ಕೋಪ; ರೇಗು (In a f. ರೋಷಾವೇಶದ ಭರದಲ್ಲಿ); (ಯುದ್ಧ, ಮೊ. ಗಳಲ್ಲಿ) ಉದ್ರೇಕ, ಉರವಣೆ (The Spanish F. ೧೫೭೬ರಲ್ಲಿ ಸ್ಪ್ಯಾನಿಷರು ಆ್ಯಂಟ್‌ವರ್ಪಿನಲ್ಲಿ ಮಾಡಿದ ಭಯಂಕರ ಕೊಲೆ). (ವಾಯುಸ್ಥಿತಿ, ರೋಗ, ಮೊ. ಗಳ) ರಭಸ, ಪ್ರಚಂಡತೆ, ಉಗ್ರತೆ (Like f. ಹುಚ್ಚು ಹುಚ್ಚಾಗಿ; ಉಗ್ರವಾಗಿ; ಭಯಂಕರವಾಗಿ). (ಸಾ., ಬ. ವ. ದಲ್ಲಿ) (ಗ್ರೀಕ್ ಪುರಾಣ) ಪಾತಕದ ದಂಡನೆಗಾಗಿ ಅಧೋಲೋಕದಿಂದ ಕಳುಹಿಸಿದ ಹಾವುಗೂದಲಿನ ಸ್ತ್ರೀದೇವತೆ(ಗಳು): ರೌದ್ರಿಯರು; ಉಗ್ರ ಕನ್ಯಕೆ(ಯರು). (ರೂಪ.) ಉಗ್ರ ಪಿಶಾಚದಂಥವಳು(ಳು) (ಮು., ಭಯಂಕರ ಕೋಪದ ಅತಿಮತ್ಸರದ ಹೆಂಗಸು). ಪಶ್ಚಾತ್ತಾಪದ ಬೇಗೆ, ಕುದಿ, ಸಂಕಟ (Haunted by the furies of her father's blood ಅವಳ ತಂದೆಯ ಕೊಲೆಯ ಸೇಡನ್ನು ತೀರಿಸಿಕೊಳ್ಳುವ ಉಗ್ರ ಪಿಶಾಚಗಳು ಹಿಡಿದು). ಗಂಡುಬೀರಿ; ಚಂಡಿ; ಹೆಮಾರಿ; ಸಿಡುಕಿ; ಮತ್ಸರ ಸ್ವಭಾವದವಳು. **Fúrious** (ಗು.) ರೋಷಾವೇಶದ; ಹುಚ್ಚುಕೋಪದಿಂದ ಕೆರಳಿದ; ಹುಚ್ಚು ಹುಚ್ಚಾದ; ಅತ್ಯುಗ್ರವಾದ (Fast & f. ವೇಗ ಮತ್ತು ರಭಸದಿಂದ ಕೂಡಿದ). (ಉಲ್ಲಾಸ, ಮೊ. ಗಳಲ್ಲಿ) ಉದ್ರೇಕದ; ಕೋಲಾಹಲದ; ಪ್ರಚಂಡ; ರಭಸವಾದ. **Fúriously** (ಕ್ರಿ. ವಿ.)

Furze ಫರ್ಜ್ (ನಾ.) ಯೂರೋಪಿನ ಕಾಡುಭೂಮಿಯಲ್ಲಿ ಬೆಳೆಯುವ, ಹಳದಿಹೂವು ಬಿಡುವ, ಮುಳ್ಳಿನಿಂದ ಕೂಡಿದ, ನಿತ್ಯಹಸುರಾದ, ಒಂದು ಕುರುಚಲು ಗಿಡ, ಹೊದರು, ಗುಲ್ಮ. **Fúrzy** (ಗು.)

Fúscous ಫಸ್ಕಸ್ (ಗು.) ಮಬ್ಬು, ಮಸುಕು, ಕಪ್ಪು, — ಬಣ್ಣದ. **Fúsco-** (ನ. ಪೂ. ಪ.)

Fuse[1] ಫ್ಯೂಸ್ (ಕ್ರಿ.) ಅಧಿಕ ಶಾಖದಿಂದ ಕರಗು, ಕರಗಿಸು; ಬೆಸೆ; (ಲೋಹ ಗಳ ವಿಷಯದಲ್ಲಿ) ಕರಗಿಸಿ ಒಂದುಗೂಡಿಸು, ಕರಗಿ ಒಂದುಗೂಡು. (ನಜೀವವಾದ ಎಲುಬುಗಳು, ಸಂಸ್ಥೆಗಳು, ಅಭಿಪ್ರಾಯಗಳು, ಮೊ.) ಒಂದುಗೂಡಿಸು, ಒಂದಾಗು, ಏಕೀಭವಿಸು, ಐಕ್ಯವಾಗು, —ಮಾಡು. **Fúsible** ಫ್ಯೂಸಿಬ್‌ಲ್ (ಗು.); **Fusibílity** (ನಾ.); **Fúsion** ಫ್ಯೂಷ(ಷ್)ನ್ (ನಾ.) (ಶಾಖದಿಂದ) ಕರಗುವುದು, ಕರಗಿಸುವುದು; ಕರಗಿ ಮುದ್ದೆಯಾದದ್ದು. ಬೆಸುಗೆ; ಐಕ್ಯ; ವಿವಿಧ ವಸ್ತುಗಳನ್ನು ಒಂದುಗೂಡಿಸುವುದು; ಒಂದುಗೂಡಿಕೆ; ಒಕ್ಕೂಟ. **Fúsionist** (ನಾ.) (ರಾಜ್ಯತಂತ್ರ) ಐಕ್ಯ ವಾದಿ.

Fuse[2] ಫ್ಯೂಸ್ (ನಾ., ಕ್ರಿ. ಸಕ.) [ಸಿಡಿಗುಂಡಿಗೂ, (ಬಂಡೆ, ಮೊ. ವನ್ನು ಒಡೆಯುವ) ಸಿಡಿಮದ್ದು, ಮೊ. ಗಳಿಗೂ ಬೆಂಕಿಯಿಡುವುದಕ್ಕಾಗಿ ಮಾಡಿ ರುವ] ದಾಹ್ಯವಸ್ತುಗಳನ್ನೊಳಕೊಂಡ ಕೊಳವೆ, ಬತ್ತಿ, ಮೊ. ವು: ಜಾವಿಗೆ ಬತ್ತಿ; ಸರ ಬತ್ತಿ; 'ಫ್ಯೂಸು'. ವಿದ್ಯುತ್ಪ್ರವಾಹವು ನಿರಪಾಯದ ಮಿತಿಯನ್ನು ಮೀರಿದಾಗ ಆ ಶಾಖದಿಂದ ಕರಗಿ ಪ್ರವಾಹ ವಿಚ್ಛಿತ್ತಿ ಮಾಡಲು ಪ್ರವಾಹಮಾರ್ಗದಲ್ಲಿ ಸೇರಿಸಿರುವ ತಂತಿ, ಕಂಬಿ, ತಗಡು, ಮೊ. ವು: ರಕ್ಷಾ ತಂತು; ಕಾಪು; 'ಫ್ಯೂಸು'.

Fuseé ಫ್ಯೂಸೀ (ನಾ.) (ಮು., ಗಡಿಯಾರದಲ್ಲಿರುವ) ಶಂಕುವಿನಾಕಾರದ ಚಕ್ರ ಅಥವಾ ಕಪ್ಪಿ. ಕುದುರೆಯ ಗೊರಸಿನಲ್ಲಿಯ ಮೂಳೆಯಮೇಲೆ ಬೆಳೆಯುವ ಎಲುಬಿನ ಗಡ್ಡೆ. (ಗಾಳಿಯಲ್ಲಿ ಆರಿಹೋಗದಂತೆ ಚುಟ್ಟಾ ಹಚ್ಚುವುದಕ್ಕೆ ಉಪಯೋಗಿಸುವ) ದಪ್ಪತಲೆಯ ಬೆಂಕಿಕಡ್ಡಿ.

Fúselage ಫ್ಯೂಸಲೇಜ್, **Fuseláge** ಫ್ಯೂಸೆಲಾಷ್ (ನಾ.) ಫಲಕ ವಿಮಾನದ ಮೈಕಟ್ಟು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Fúsel oil ಫ್ಯೂಸ್ಲ‌ರ್ ಆಯ್‌ರ್ (ನಾ.) ಕೆಲವು ಗಟ್ಟಿಮದ್ಯಗಳ ತಯಾರಿಕೆಯಲ್ಲಿ ಹಲವು ಮದ್ಯಸಾರಗಳ (ಮು., 'ಅಮಿಲಿಕ್' ಮದ್ಯಸಾರದ) ಮಿಶ್ರಣ.

Fúsiform ಫ್ಯೂಸಿ(ಸಿ)ಫಾರ್ಮ್ (ಗು.) (ಎರಡು ತುದಿಗಳಲ್ಲಿಯೂ ಮೊನಚಾಗಿದ್ದು) ಕದಿರಿನ ಅಥವಾ ಚುಟ್ಟದ ಆಕಾರದಲ್ಲಿರುವ.

Fúsil ಫ್ಯೂಸಿಲ್ (ನಾ.) ಹಿಂದಿನ ಕಾಲದ ಒಂದು ತೆರದ ಹಗುರ ಬಂದೂಕು. **Fusiliér** — ಲಿಯರ್ (ನಾ. ; ಸಾ., ಬ. ವ. ದಲ್ಲಿ) (ಹಿಂದೆ) ಇಂಥ ಬಂದೂಕುಗಳುಳ್ಳ ಸೇನಾದಳ(ಗಳು) ; — ದಳಗಳ ಸಿಪಾಯಿ; (ಈಗ) ಗೊತ್ತಾದ ಕೆಲವು ಸೇನಾದಳಗಳು ; — ದಳಗಳ ಸಿಪಾಯಿ. **Fusilláde** — ಲೇಡ್ (ನಾ., ಕ್ರಿ. ಸಕ.) ಅನೇಕ ಬಂದೂಕುಗಳನ್ನು ಒಂದೇಸಾರಿ ಹಾರಿಸುವುದು ; ಅಥವಾ, ಎಡೆಬಿಡದೆ ಗುಂಡುಹಾರಿಸು(ವುದು) ; ಹೀಗೆ ಗುಂಡುಹಾರಿಸುವುದರಿಂದ ಸಾಲು ಸಾಲನ್ನೇ ಒಟ್ಟಿಗೆ ಮರಣದಂಡನೆಗೆ ಗುರಿಪಡಿಸುವುದು ; ಗುಂಡಿನ ಸುರಿಮಳೆ. (ಕ್ರಿ.) (ಸ್ಥಳವನ್ನು) ಗುಂಡಿನ ಸುರಿಮಳೆಯಿಂದ ಆಕ್ರಮಣ ಮಾಡು, ದಾಳಿಮಾಡು ; (ಜನರನ್ನು) ಗುಂಡಿನ ಸುರಿಮಳೆಗರೆದು ಉರುಳಿಸಿಬಿಡು.

Fúsion. Fuse[1] ನೋಡಿ.

Fuss ಫಸ್ (ನಾ., ಕ್ರಿ.) ಗಡಿಬಿಡಿ ; ಗಲಿಬಿಲಿ ; ಗಲಾಟೆ; ಗೊಂದಲ; ರಂಪ ; ಸಂಭ್ರಮ ; (ಅತಿ) ಸಡಗರ ; ಆಡಂಬರದ ಅಥವಾ ಕಾತರದ ಓಡಾಟ. ಅಲ್ಪ ವಿಚಾರಗಳನ್ನು ಅತಿ ಮುಖ್ಯವಾದುವಾಗಿ ಪರಿಗಣಿಸುವುದು ; ಸಣ್ಣ ಪುಟ್ಟ ವಿಷಯ ವಿವರಗಳಿಗೆ ಅನಾವಶ್ಯಕವಾದ ಹೆಚ್ಚು ಗಮನ. (ಕ್ರಿ.) ಗಡಿಬಿಡಿ ಮಾಡು ; ಅಲ್ಪವಿಚಾರಗಳಲ್ಲೇ ಯಾವಾಗಲೂ ಪ್ರವರ್ತಿಸು(ತ್ತಿರು) ; ಅಲ್ಲಿಂದಿಲ್ಲಿಗೆ ಸಡಗರದಿಂದ ಓಡಾಡು (*About, up & down* ಉಪ. ದೊಡನೆ). (ವ್ಯಕ್ತಿಯನ್ನು) ಕೆರಳಿಸು, ಕ್ಲೇಶಪಡಿಸು ; ತೊಂದರೆ ಕೊಡು ; ಪೀಡಿಸು. **Fússy** (ಗು.) ; **Fússily** (ಕ್ರಿ. ವಿ.) ; **Fússiness** (ನಾ.)

Fustanélla ಫಸ್ಟನೆಲ (ನಾ.) ಗ್ರೀಸ್ ದೇಶದಲ್ಲಿ ಈಗ ಗಂಡಸರು ಧರಿಸುವ ಒಳ ಅಂಗಿ.

Fústian ಫಸ್ಟಿಯನ್ (ನಾ.) ಹುರಿನೂಲಿನ ಮೂರೆನೆಯ್ಗೆಯ, ಮೋಟು ಜುಂಗಿನ, ಸಾ., ಮಬ್ಬುಬಣ್ಣದ, ಒಂದು ಬಗೆಯ ದಪ್ಪ ಹತ್ತಿಬಟ್ಟೆ : 'ಫಸ್ಟಿಯನ್'. ಆಡಂಬರದ ಭಾಷಣ, ಬರವಣಿಗೆ ; ವಾಗಾಡಂಬರ. (ಗು.) ಫಸ್ಟಿಯನ್ ಬಟ್ಟೆಯಿಂದ ಮಾಡಿದ. (ರೂಪ.) ಆಡಂಬರದ ; ಆಟೋಪದ ; ಬರಿ ಡೌಲಿನ ; ಹುರುಳಿಲ್ಲದ ; ವ್ಯರ್ಥವಾದ ; ಕ್ಷುಲ್ಲಕ.

Fústic ಫಸ್ಟಿಕ್ (ನಾ.) ಹಳದಿ ಬಣ್ಣ ಕೊಡುವ (ಎರಡು ಜಾತಿಯ) ಮರ (Young f., f. *or* old f). ; ಇವುಗಳಿಂದ ಆದ ಬಣ್ಣ.

Fústigate ಫಸ್ಟಿಗೇಟ್ (ಕ್ರಿ. ಸಕ.) (ಹಾಸ್ಯ ಪ್ರ.) ದೊಣ್ಣೆಯಿಂದ ಹೊಡೆ, ಬಡಿ, ಚಚ್ಚು. **Fustigátion** (ನಾ.)

Fústy ಫಸ್ಟಿ (ಗು.) ಹಳಸಲು, ಮುಗ್ಗುಲು, —ವಾಸನೆಯ ; ಮಲೆತ ಬಿಸಿಗಾಳಿಯ ; ಉಸಿರುಕಟ್ಟುವ; ಮಬ್ಬುಗಬ್ಬುಗಳ. ಹಳೆಯ ರೀತಿಯ; —ಕಂದಾಚಾರದ ; ಓಬೀರಾಯನ ಕಾಲದ. **Fústiness** (ನಾ.)

Fútchel(l) ಫಚೆಲ್ (ನಾ.) ಬಂಡಿಯ ಮೂಕಿಮರ, ಇರಿಚಿ, ಮೊ. ಕ್ಕೆ ಆಧಾರವಾಗಿರುವ ಮರದ ದಿಮ್ಮಿ

Fúthorc ಫೂತಾರ್ಕ್ (ನಾ.) 'ರ್‍ಯೂನಿಕ್' ವರ್ಣಮಾಲೆ (ಅದರ ಮೊದಲ ಆರು ಅಕ್ಷರಗಳಿಂದ ಆದ ಮಾತು)

Fútile ಫ್ಯೂಟೈ(ಟಿ)ಲ್ (ಗು.) ನಿಷ್ಪ್ರಯೋಜಕ ; ನಿಷ್ಫಲ ; ನಿರರ್ಥಕ ; ವ್ಯರ್ಥ ; ಕೆಲಸಕ್ಕೆ ಬಾರದ ; ಹುರುಳಿಲ್ಲದ. **Fútilely** (ಕ್ರಿ. ವಿ.), (ವಿರ. ಪ್ರ.) ; **Futility** ಫ್ಯುಟಿಲಿಟಿ (ನಾ.)

Fúture ಫ್ಯೂಚ್ಯು(ಚ)ರ್ (ಗು., ನಾ.) ಆಗಲಿರುವ ; ಬರಲಿರುವ ; ಇನ್ನು ಮುಂದೆ ಬರುವ, ಇರುವ ; ಮುಂದಿನ ; ಭವಿಷ್ಯತ್ತು (F. life, state ಸತ್ತಮೇಲಿನ ಬಾಳು, ಸ್ಥಿತಿ. My f. wife ಮುಂದೆ ನನಗೆ ಹೆಂಡತಿಯಾಗಲಿರುವವಳು). (ವ್ಯಾ.) ಭವಿಷ್ಯತ್ಕಾಲದ. (ನಾ.) ಭವಿಷ್ಯ ; ಭವಿಷ್ಯತ್ಕಾಲ ; (ಇನ್ನು) ಮುಂದಿನದು [For the f., in f. (ಇನ್ನು) ಮುಂದಕ್ಕೆ, ಮುಂದೆ. Past, present & f. ಭೂತ, ವರ್ತಮಾನ, ಭವಿಷ್ಯತ್ತು] ; ಮುಂದೆ ನಡೆಯಹೋಗುವುದು ; (ವ್ಯಕ್ತಿಯ, ದೇಶದ) ಭವಿಷ್ಯ ಸ್ಥಿತಿ. ನಿಶ್ಚಿತ ಪತಿ, ಪತ್ನಿ. (ವಾಣಿಜ್ಯ, ಬ. ವ. ದಲ್ಲಿ) ಮುಂದೆ ಸಲ್ಲಿಸುವುದಾಗಿ ಈಗಲೇ ಮಾರಿದ,— ಸರಕು, ಸಾರ್ವಜನಿಕ ಸಾಲ ಪತ್ರಗಳು ; ಮುಂಮಾರಿಕೆ ; ಮುಂಮಾರಿಕೆಯ ಒಪ್ಪಂದ. **Fútureless** (ಗು.) ; **Fúturist** (ಗು., ನಾ.) (ದೇವ. ಶಾ.) ಬೈಬಲ್ಲಿನ ಭವಿಷ್ಯ ಸೂಚನೆಯಲ್ಲಿ ನಂಬಿಕೆಯುಳ್ಳ(ವನು) ; (ಬೈಬಲ್ಲಿನ) ಭವಿಷ್ಯತಾ ವಾದಿ. **Fúturism** (ನಾ.) (ಮು., ಇಟ್ಯಾಲಿಯನ್) ಕಲೆ, ಸಾಹಿತ್ಯ, ಮೊ. ಗಳಲ್ಲಿ ಹಿಂದಿನ ಲಕ್ಷ್ಯಲಕ್ಷಣ ನಿಯಮಗಳನ್ನೆಲ್ಲ ಕಿತ್ತೊಗೆದು ಭಾವ ನಿರೂಪಣೆಯಲ್ಲಿ ಸ್ವೇಚ್ಛಾ ಸಂಕೇತಗಳನ್ನು ಉಪಯೋಗಿಸುವ ನೂತನ ಸಂಪ್ರದಾಯ ; ಸ್ವೇಚ್ಛಾ ಸಂಕೇತಾನುವರ್ತನ. **Futúrity** ಫ್ಯುಟ್ಯೂರಿಟಿ (ನಾ.) ಭವಿಷ್ಯತ್ಕಾಲ ; (ಏ. ವ. ಅಥವಾ ಬ. ವ. ದಲ್ಲಿ) ಮುಂದಾಗುವ ಘಟನೆಗ(ಳು) ; ಮುಂದಿನ ಸ್ಥಿತಿ ; ಭವಿಷ್ಯ ; ಸತ್ತ ಮೇಲಿನ ಸ್ಥಿತಿ , ಬಾಳು.

Fuzz ಫಸ್ (ನಾ.) ಬಿಡಿ ಬಿಡಿಯಾಗಿದ್ದು ಸುಲಭವಾಗಿ ಹಾರಿಹೋಗುವ ಪದಾರ್ಥ ; ಜಾಳು ದೂಳು ; ತುಪ್ಪುಳಿನ ಮೃದುರೋಮಗಳ ಜಾಳು. **F.-ball** ಚೆಂಡಿನಾಕಾರದ ಅಣಬೆ. **Fúzzy** (ಗು.) ಜಾಳು ಜಾಳಾದ ; ದಾರ ಬಿಟ್ಟುಕೊಂಡ. ಅಸ್ಪಷ್ಟವಾದ ; ಮಸುಕು ಮಸುಕಾದ. ಗುಂಗುರು ಗುಂಗುರಾದ. **F.-wuzzy** ಸೂಡಾನ್ ದೇಶದ ಯೋಧ. **Fúzzily** (ಕ್ರಿ. ವಿ.) ; **Fúzziness** (ನಾ.)

Fy(e). Fie ನೋಡಿ.

- fy — ಫೈ (ಕ್ರಿಯಾಪದಗಳನ್ನು ಮಾಡುವ ಉ. ಪ್ರ.) — ಮಾಡು, —ಪಡಿಸು, —ಕರಿಸು, —ಭವಿಸು (ಉದಾ., Satisfy, Speechify, Frenchify, Solidify, Pacify)

Fýlfot ಫಿಲ್‌ಫಾಟ್ (ನಾ.) ಒಂದೇ ಉದ್ದದ ಬಾಹುಗಳದ್ದು ಈ ಬಾಹುಗಳ ತುದಿಗಳು ಎಲ್ಲವೂ ಪ್ರದಕ್ಷಿಣವಾಗಿಯೊ, ಅಥವಾ ಎಲ್ಲವೂ ಅಪ್ರದಕ್ಷಿಣವಾಗಿಯೊ, ಸಮಕೋನವಾಗಿ ಬಗ್ಗಿರುವ ಶಿಲುಬೆ : ಸ್ವಸ್ತಿಕ.

Fytte. Fit[1] ನೋಡಿ.

G

G ಜೀ. ಇಂಗ್ಲಿಷ್ ವರ್ಣಮಾಲೆಯ ಏಳನೆಯ ಅಕ್ಷರ. ಒಂದು ಶ್ರೇಣಿಯಲ್ಲಿ ಏಳನೆಯ ಸ್ಥಾನದ್ದನ್ನು ಸೂಚಿಸುವ ಚಿಹ್ನೆ. (ಸಂ.) ಇಂಗ್ಲಿಷ್ ಸ್ವರಗ್ರಾಮದಲ್ಲಿ ಐದನೆಯ ಸ್ವರ ; "ಪ".

ಸಂಕ್ಷಿಪ್ತಗಳು : (1) **G. O. C.** (General Officer Commanding) ಪ್ರಧಾನ ಸೇನಾಪತಿ. **G. P. O.** (General Post Office) ಪ್ರಧಾನ ಅಂಚೆಕಚೇರಿ. **G. O. M.** (Grand Old Man) ಪೂಜ್ಯ ಪಿತಾಮಹ. **G. I. P. R.** (Great Indian Peninsular Railway) ಇಂಡಿಯಾ ದೇಶದ ರೈಲುಮಾರ್ಗಗಳಲ್ಲಿ ಒಂದು. **G. C. F.** *or* **G. C. M.** (Greatest Common Factor, Measure) ಮಹತ್ತಮ ಸಾಮಾನ್ಯ ಅಪವರ್ತನ. **G. M. T.** (Greenwich mean time) (ಕಾಲಗಣನೆಯಲ್ಲಿ) ಗ್ರೀನಿಚ್ಚಿನ ಸರಾಸರಿ ಕಾಲ.

(2) **gal.** [gallon(s)] ಗ್ಯಾಲನ್ನು(ಗಳು). **Gen.** (General) ದಳಪತಿ. **Gen.** (Genesis) ಸೃಷ್ಟಿಯನ್ನು ವಿವರಿಸುವ ಬೈಬಲ್ಲಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊದಲನೆಯ ಪರ್ವ. **Geo.** (George) ಜಾರ್ಜ್. **Geog.** (Geography) ಭೂವಿವರಣೆ. **Geol.** (Geology) ಭೂ ವಿಜ್ಞಾನ. **Geom.** (Geometry) ಜ್ಯಾಮಿತಿ. **gr.** [grain(s)] (ತೂಕ) ಗ್ರೇನು(ಗಳು). **grm.** [gramme(s)] (ತೂಕ) ಗ್ರ್ಯಾಮು(ಗಳು). **Gym.** (Gymnasium, -nastics) ವ್ಯಾಯಾಮ ಶಾಲೆ; —ವಿದ್ಯೆ; ಅಂಗ ಸಾಧನೆ.

Gab ಗ್ಯಾಬ್ (ನಾ.) (ಬಳ. ಮಾ.) (ವ್ಯರ್ಥ) ಮಾತು ; ಹರಟೆ ; ಗಪ್ಪಿ. Stop your g. ಹರಟೆ ನಿಲ್ಲಿಸು ; ಬಾಯಿ ಮುಚ್ಚು. Gift of the g. ಮಾತನಾಡುವ ಶಕ್ತಿ ; ಭಾಷಣ ಶಕ್ತಿ ; ವಾಕ್ ಶಕ್ತಿ ; ವಾಚಾಳತೆ ; ಹರಟೆಯಮಲ್ಲತನ.

Gábble ಗ್ಯಾಬ್‌ಲ್ (ಕ್ರಿ., ನಾ.) ಲೊಟಗುಟ್ಟು ; ಬಡಬಡಿಸು ; ಬಡಬಡನೆ ಅರ್ಥವಾಗದಂತೆ ಮಾತನಾಡು ; ಬೇಗ ಬೇಗನೆ ಗಟ್ಟಿಯಾಗಿ ಓದು, ಮಾತನಾಡು. (ನಾ.) ಅರ್ಥವಾಗದಂತೆ ಬಡಬಡನೆ ಆಡುವ ಮಾತು ; ಪ್ರಾಣಿಗಳು ಮಾಡುವ ಅಸ್ಫುಟ ಧ್ವನಿ (ಅನುಕರಣ)

Gabélle ಗಾಬೆಲ್ (ನಾ.) ತೆರಿಗೆ ; ಕರ (ಸಾ., ಪರದೇಶದ ಸಾಮಾನಿನ ಮೇಲಿನ ತೆರಿಗೆ : ಮು., ಫ್ರಾನ್ಸ್‌ದೇಶದಲ್ಲಿ ಕ್ರಾಂತಿಗೆ ಮೊದಲದ್ದ ಉಪ್ಪಿನ ತೆರಿಗೆ)

Gáberdine ಗ್ಯಾಬರ್ಡೀನ್ (ನಾ.) ಯೆಹೂದ್ಯರೂ ಭಿಕ್ಷುಕರೂ ಹಾಕಿಕೊಳ್ಳುವ ಸಡಿಲವೂ ಉದ್ದವೂ ಆದ ಒರಟುಬಟ್ಟೆಯ ದಗಲೆ ; ನಯವಾದ ಗಟ್ಟಿಹುರಿಯ ಬಟ್ಟೆ ; (ರೂಪ.) ಉಡುಪು ; ಹೊದಿಕೆ ; ಕವಚ ; (ಮೈಗೆ) ರಕ್ಷಣೆ.

Gábion ಗೇಬಿಯನ್ (ನಾ.) ಹೊದರುಕಡ್ಡಿ, ಬೆತ್ತ, ಮೊ. ಗಳಿಂದಾಗಲಿ ಕಬ್ಬಿಣದ ಪಟ್ಟಿಗಳಿಂದಾಗಲಿ ಗೆರಸೆಯಂತೆ ಹೆಣೆದು ಮಾಡಿ ಮಣ್ಣು ತುಂಬಿ ಸೇನಾರಕ್ಷಣೆಗಾಗಲಿ ಕಾಮಾಟಿ ಕೆಲಸದಲ್ಲಾಗಲಿ ಉಪಯೋಗಿಸುವ ತೊಂಬೆ. **Gabionáde** — ನೇಡ್ (ನಾ.) ಇಂಥ ತೊಂಬೆಗಳ ಸಾಲು.

Gáble ಗೇಬ್‌ಲ್ (ನಾ.) ಇಪ್ಪಾರು ಚಾವಣಿಯ ಕೊನೆಯಲ್ಲಿರುವ ಗೋಡೆಯ ತ್ರಿಕೋಣಾಕಾರದ ಭಾಗ ; ಚಂದಾಯ ; — ದ ಗೋಡೆ ; 'ಗೇಬಲ್ಲು' ; ಮೇಲೆ ಗೇಬಲ್ಲಿರುವ ಗೋಡೆ ; ಗೇಬಲ್ಲು ಗೋಡೆ (= G.-end). (ಕಿಟಕಿಯ ಅಥವಾ ಬಾಗಿಲ ಮೇಲಿನ) ಗೇಬಲ್ ಆಕಾರದ ಚಪ್ಪರ. **Gáblet** (ನಾ.) ಚಿಕ್ಕ ಗೇಬಲ್ಲು (ಸಾ., ಅಲಂಕಾರಕ್ಕಾಗಿ ಮಾಡಿದ್ದು). (-) **gábled** (ಗು.)

Gáby ಗೇಬಿ (ನಾ.) (ಬಳ. ಮಾ. ಮತ್ತು ಪ್ರಾಂ. ಪ್ರ.) ತಿಳಿಗೇಡಿ ; ಬೆಪ್ಪ ; ಹೆಡ್ಡ ; ಗಾಂಪ ; ಏನೂ ಅರಿಯದವನು ; ವ್ಯವಹಾರ ಜ್ಞಾನವಿಲ್ಲದವನು.

Gad[1] ಗ್ಯಾಡ್ (ಭಾವ. ಅವ್ಯ.) (ಆಶ್ಚರ್ಯ ಸೂಚಿಸುವುದು, ಆಣೆ, ಭಾಷೆಯಿಟ್ಟು ಹೇಳುವುದು, ಮೊ. ಸಂದರ್ಭಗಳಲ್ಲಿ ಉಪಯೋಗಿಸುವ ಪದ) : ದೇವರೇ ! ದೇವರಾಣೆ ! (By gad, Begad)

Gad[2] ಗ್ಯಾಡ್ (ಕ್ರಿ. ಅಕ., ನಾ.) ಅಲೆದಾಡು ; ಕೆಲಸವಿಲ್ಲದೆ ಸುತ್ತಾಡು ; ತಿರಿ(ದಾಡು) (ಸಾ., *about*, *abroad*, *out* ಪದದೊಡನೆ). (ಸಸ್ಯಗಳ ವಿಷಯದಲ್ಲಿ) (ನೇರವಾಗಿ ಹೋಗದೆ) ಅತ್ತ ಇತ್ತ ಹರಡು, ಹಬ್ಬು. (ನಾ.) ಅಲೆತ ; ಅಲೆದಾಟ ; ಸುತ್ತಾಟ. (Up)on the g. ಸುತ್ತಾಟದಲ್ಲಿ ; ಅಲೆದಾಟದಲ್ಲಿ ; ಸುತ್ತುತ್ತ ; ಅಲೆಯುತ್ತ. **Gádabout** (ಗು., ನಾ.) ಅಲೆದಾಡುವ (ಮನುಷ್ಯ) ; ಅಲೆಮಾರಿ.

Gád-fly ಗ್ಯಾಡ್‌ಫ್ಲೈ (ನಾ.) ದನಗಳನ್ನು ಕಚ್ಚುವ ನೊಣ ; ತೊಣಚಿ. ರೇಗಿಸುವ ಅಥವಾ ಪೀಡಿಸುವ ಮನುಷ್ಯ : ಕಾಟಗಾರ ; ಪೀಡಕ. ಉದ್ರೇಕ ; ಅತ್ಯಾವೇಶ ; ಕೆರಳು ; ಹುಚ್ಚು ಹುಚ್ಚು.

Gádget ಗ್ಯಾಡ್‌ಜೆಟ್ (ನಾ.) (ಬಳ. ಮಾ.) ಯಂತ್ರ, ಮೊ. ಗಳಲ್ಲಿಯ ಒಂದು ಸಣ್ಣ ಹೊಂದಿಕೆ ಅಥವಾ ಸಲಕರಣೆ ; (ರೂಪ.) ತಂತ್ರ ; ಹೂಟ ; ಸಾಧನ ; ಯುಕ್ತಿ.

Gad(d)i ಗಡಿ (ನಾ.) ಸಿಂಹಾಸನ ; ಗದ್ದುಗೆ ; ಗಾದಿ. ದೊರೆತನ ; ರಾಜತ್ವ ; ಆಳಿಕೆ.

Gadhélic ಗಡೆಲಿಕ್ (ಗು., ನಾ.) = Gælic (ಈ ಪದದ ವಿಸ್ತಾರಾರ್ಥದಲ್ಲಿ)

Gael ಗೇಲ್ (ನಾ.) ಸ್ಕಾಟ್ಲೆಂಡಿನ ಕೆಲ್ಟ್ ಕುಲದವನು ; (ಐರ. ಪ್ರ.) ಐರ್ಲೆಂಡಿನ ಕೆಲ್ಟ್ ಕುಲದವನು. **Gaélic** (ಗು., ನಾ.) ಸ್ಕಾಟ್ಲೆಂಡಿನ (ಐರ್ಲೆಂಡ್ ಮತ್ತು ಮ್ಯಾನ್ ದ್ವೀಪದ) ಕೆಲ್ಟ್ ಜನರ (ಭಾಷೆ)

Gaff[1] ಗ್ಯಾಫ್ (ನಾ., ಕ್ರಿ. ಸಕ.) ಕೊಕ್ಕೆಮುಳ್ಳುಳ್ಳ ಮೀನುಈಟಿ ; ದೊಡ್ಡ ಮೀನುಗಳನ್ನು ಚುಚ್ಚಿ ದಡಕ್ಕೆ ತರಲಾಗುವ, ಕಬ್ಬಿಣದ ಕೊಕ್ಕೆ ಹಾಕಿದ, ದಡಿ ; ಕೊಕ್ಕೆ. ಹಡಗಿನ ಹಿಂದುಮುಂದು ದಿಕ್ಕಿನ ಪಟದ ಮೇಲ್ಭಾಗವನ್ನು ವಿಸ್ತರಿಸಿ ಕಟ್ಟುವ ದಂಡ. (ಕ್ರಿ.) ಕೊಕ್ಕೆಯೀಟಿಯಿಂದ (ಮೀನು) ಹಿಡಿ.

Gaff[2] ಗ್ಯಾಫ್ (ನಾ.) (ಅಸಂ.) Blow the g. ಪಿತೂರಿಯನ್ನು ಬಯಲು ಮಾಡು ; ಒಳಸಂಚನ್ನು ಹೊರಗೆಡವು.

Gaff[3] ಗ್ಯಾಫ್ (ನಾ.) (ಅಸಂ.) ಸಾರ್ವಜನಿಕ ವಿನೋದ ಸ್ಥಳ [ಮು., ಕೆಳದರ್ಜೆಯ ಅಗ್ಗದ ನಾಟಕಶಾಲೆ ಅಥವಾ ಸಂಗೀತ ಮಂದಿರ (ಸಾ., Penny g.)]

Gáffer ಗ್ಯಾಫರ್ (ನಾ.) ಹಿರಿಯ (ಹಳ್ಳಿಗ) ; (ಹಳ್ಳಿಯ) ಮುದುಕ. [(ಮನುಷ್ಯ, ಅಧಿಕಾರ, ಮೊ. ಗಳ) ಹೆಸರ ಹಿಂದೆ ಮರ್ಯಾದೆಗಾಗಿ ಸೇರಿಸುವ ಪದ]. ಒಂದು ಗುಂಪಿನ ಅಥವಾ ತಂಡದ ಮುಂದಾಳು, ಮುಖಂಡ, ನಾಯಕ. (Gammer ಪದದೊಡನೆ ಹೋಲಿಸಿ)

Gag ಗ್ಯಾಗ್ (ನಾ., ಕ್ರಿ.) [ಮಾತನಾಡದಂತೆ ಅಥವಾ ಕೂಗಿಕೊಳ್ಳದಂತೆ ಅಥವಾ (ಶಸ್ತ್ರಚಿಕಿತ್ಸೆಯಲ್ಲಿ) ಚಿಕಿತ್ಸೆಯ ಸೌಲಭ್ಯಕ್ಕೆ, ಬಾಯನ್ನು ತೆರೆದಿರುವುದಕ್ಕಾಗಿ] ಬಾಯಿಗೆ ತುರುಕಿದ ಪದಾರ್ಥ : ಬಾಯಿ ಗಿಡುಗು, ಗಿಡಿ. (ಶಾಸನ ಸಭೆ) ಚರ್ಚೆ ಸಾಕುಮಾಡಬೇಕೆಂಬ ತಡೆ. [(ಕ್ರಿ.) ಬಾಯಿ ಗಿಡುಗು ; ಬಾಯಿ ಕಟ್ಟು ; ಭಾಷಣಸ್ವಾತಂತ್ರ್ಯಕ್ಕೆ ಅವಕಾಶ ಕೊಡದಿರು ; ಮಾತಿಗೆ ತಡೆಯೊಡ್ಡು]. ನಾಟಕಸಂಭಾಷಣೆಯಲ್ಲಿ ನಟನು ಸೇರಿಸುವ ಮಾತುಗಳು (ಪ್ರಕ್ಷಿಪ್ತಗಳು) ; ಗಿಡಿ ನುಡಿ. [(ಕ್ರಿ.) ಇವನ್ನು ಸೇರಿಸು]. (ಮು., ಅಮೆ. ಸಂ. ; ನಾಟಕ, ಚಲನ ಚಿತ್ರ, ಮೊ. ಗಳಲ್ಲಿ ನಡುವೆ ಒಡ್ಡಿದ) ನಕಲಿ, ಹಾಸ್ಯ, ಪ್ರಸಂಗ. (ಅಸಂ.) ಸುಳ್ಳು ; ಮೋಸ ; ವಂಚನೆ. (ಕ್ರಿ.) ವಂಚಿಸು ; ಮೋಸ ಮಾಡು. ಗಿಡುಗು ಕಡಿವಾಣ ಹಾಕು. G.-bit (ಕುದುರೆಗಳನ್ನು ಪಳಗಿಸುವುದಕ್ಕಾಗಿ ಹಾಕುವ ಬಲವಾದ) ಗಿಡುಗು ಕಡಿವಾಣ. G.-man ಗಿಡುಗು ವಿನೋದಕರ್ತ. G.-rein (ಕುದುರೆಯ) ಬಿಗಿ ಲಗಾಮು.

Gage[1] ಗೇಜ್ (ನಾ., ಕ್ರಿ. ಸಕ.) ಒತ್ತೆ ; ಓಲು ; ಅಡವು ; ಗಿರವಿ ; ಈಡು ; ಹೊಣೆ. ಪಣ ; ಪೈಜೆ ; ಕಾಳಗಕ್ಕೆ ಆಹ್ವಾನ (ಇದಕ್ಕಾಗಿ ಎಸೆದ ಕೈಕಾಪು, ತೊಡರು, ಮೊ). (ಕ್ರಿ.) ಒತ್ತೆಯಿಡು ; ಓಲು ಕೊಡು ; ಈಡು ಮಾಡು ; ಪಣವಾಗಿಡು.

Gage[2] = Gauge.

Gage[3] ಗೇಜ್ (ನಾ.) (ಪೇಟೆಮಾತು : Greengage ಎಂಬ ಪದದ ಸಂಕ್ಷಿಪ್ತ)

Gággle ಗ್ಯಾಗ್‌ಲ್ (ಕ್ರಿ. ಅಕ.) (ಬಾತು) ಕ್ಲಕ್ ಕ್ಲಕ್ ಎನ್ನು.

Gaíety ಗೇಯೆಟಿ (ನಾ.) ಉಲ್ಲಾಸ ; ಹರ್ಷ ; ಗೆಲವು ; ನಲವು ; ನಲಿದಾಟ ; (ಸಾ., ಬ. ವ. ದಲ್ಲಿ) ವಿನೋದ ಕೇಳಿ ; ಕ್ರೀಡೆ ; ವಿಲಾಸ ; ಉತ್ಸವ ಸಮಾರಂಭಗಳು. ಬೆಡಗು ; ಥಳುಕು ; ಸೊಗಸುಗಾರಿಕೆ ; ಠೀಕಾದ ಉಡುಪು.

Gaíkwar, Gaék- ಗೈಕ್‌ವಾರ್ (ನಾ.) ಬರೋಡ ಸಂಸ್ಥಾನದ ದೊರೆ : ಗಾಯಕವಾಡ.

Gaíly. **Gay** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Gain ಗೇಯ್ನ್ (ನಾ., ಕ್ರಿ.) (ಆಸ್ತಿ, ಮೊ. ಗಳ) ಅಭಿವೃದ್ಧಿ ; ಲಾಭ ; ಸಂಪಾದನೆ ; ಪಡಪು (ಗ್ರಾಂ.) ; ಫಾಯಿದೆ. ಮುಂದುವರಿಯುವುದು ; ಉತ್ತಮಗೊಳ್ಳುವುದು ; ಐಶ್ವರ್ಯಸಂಪಾದನೆ ; ಹಣ, ಮೊ. ಗಳ ಗಳಿಕೆ ; (ಬ. ವ. ದಲ್ಲಿ) ವ್ಯಾಪಾರ, ಮೊ. ಗಳಿಂದ ಸಂಪಾದಿಸಿದ ಹಣ ; ಸಂಬಳ ಸಾರಿಗೆ ; ವರಮಾನ ; ಆದಾಯ ; ಗೆದ್ದುಕೊಂಡದ್ದು ; (ಮೊತ್ತದಲ್ಲಿ) ವೃದ್ಧಿ. (ಕ್ರಿ.) (ಅಪೇಕ್ಷಿಸಿದ ಅಥವಾ ಅಪೇಕ್ಷಣೀಯ ವಸ್ತುವನ್ನು) ಪಡೆ, ಹೊಂದು, ಸಂಪಾದಿಸು ; [G. time ನೆಪ ಹೇಳುತ್ತ ಅಥವಾ ನಿಧಾನ ಕಾರ್ಯಕ್ರಮದಿಂದ ಕಾಲ ತಳ್ಳು. G. the ear of ಸುಮುಖನಾಗಿ ಕೇಳುವಂತೆ (ಒಬ್ಬನನ್ನು) ಒಲಿಸಿಕೊ ; ಹೇಳಿದುದಕ್ಕೆ ಕಿವಿಗೊಡುವಂತೆ ಮಾಡಿಕೊ]. ನಷೆ ಹೊಂದು ; ಲಾಭ ಗಳಿಸು ; ಪ್ರಯೋಜನ ಪಡೆ ; (ಯಾವುದರಲ್ಲಾಗಲಿ) ಅನುಕೂಲ, ಅಭಿವೃದ್ಧಿ, — ಪಡೆ ; (ತಾರತಮ್ಯದಿಂದ) ಮೇಲಾಗು ; ಹೆಚ್ಚಳಿಕೆ ಪಡೆ (G. the upper hand ಮೇಲುಗೈಯಾಗು ; ಜಯಶಾಲಿಯಾಗು)); ತನ್ನ ಕಡೆಗೆ, ಅಭಿಪ್ರಾಯಕ್ಕೆ, ಬರುವಂತೆ ಮಾಡಿಕೊ ; ಒಲಿಸಿಕೊ ; ಒಡಂಬಡಿಸು ; ಒಪ್ಪುವಂತೆ ಮಾಡು ; (ಉದ್ದೇಶಿಸಿದ ಸ್ಥಳವನ್ನು) ಸೇರು, ಮುಟ್ಟು, ತಲುಪು. G. ground ಮುಂದುವರಿ ; ಮುಂದೆ ಸಾಗು ; ಮುಂದೊತ್ತು. G. (ground) (up)on (ತಾನು ಬೆನ್ನಹತ್ತಿ ಹೋಗುತ್ತಿರುವ ಮನುಷ್ಯನನ್ನು ಅಥವಾ ವಸ್ತುವನ್ನು) ಸಮೀಪಿಸು. (ಸಮುದ್ರದ ವಿಷಯದಲ್ಲಿ) ನೆಲವನ್ನು ಆಕ್ರಮಿಸು. G. (up)on ಒಬ್ಬನ ಒಲವು, ಅನುಗ್ರಹ, ದಯೆ,— ಸಂಪಾದಿಸು. **Gaínable** (ಗು.) ; **Gaíner** (ನಾ.) ; **Gaínful** (ಗು.) ಲಾಭದಾಯಕ ; ಆದಾಯಕರ ; ಲಾಭಾಕಾಂಕ್ಷೆಯ. **Gaínings** (ನಾ., ಬ. ವ.) ಗಳಿಕೆ ; ಸಂಪಾದನೆ.

Gainsaý ಗೇಯ್ನ್‌ಸೇ [ಕ್ರಿ. ಸಕ. ; ಭೂತ., ಭೂ. ಕೃ. -said — ಸೇ(ಸ)ಡ್] ಅಲ್ಲವೆನ್ನು ; ಇಲ್ಲವೆನ್ನು ; ವಿರುದ್ಧವಾಗಿ ಹೇಳು ; ಪ್ರತಿವಾದಿಸು ; ಪ್ರತಿ ಹೇಳು ; ಎದುರಿಸು. **Gainsaýer** (ನಾ.)

Gainst, 'gainst ಗೆನ್‌ಸ್ಟ್, ಗೇಯ್ನ್‌ಸ್ಟ್ (Against ಪದದ ಕಾವ್ಯ ರೂಪ)

Gait ಗೇಯ್ಟ್ (ನಾ.) ನಡೆಯುವ ರೀತಿ, ಧಂಗಿ ; ನಡಗೆ ; ನಡೆ ; ಗಮನ.

Gaiter ಗೆಯ್ಟರ್ (ನಾ.) ಕಣಕಾಲಿಗೆ ಅಥವಾ ಕಾಲಿನ ಹರಡಿಗೆ ರಕ್ಷಣಾರ್ಥವಾಗಿ ಕಟ್ಟುವ ಬಟ್ಟೆಯ ಅಥವಾ ತೊಗಲಿನ ಪಟ್ಟಿ : ಕಣಕಾಲ ಕಾಪು. Ready to the last g. button ಸಂಪೂರ್ಣ (ಸಿದ್ಧ)ವಾಗಿ. **Gaítered** (ಗು.)

Gála ಗೇಲ (ನಾ.) ಉತ್ಸವ (ಸಮಾರಂಭ) ; ವೈಭವ. G. day ಉತ್ಸವ ದಿನ. G. dress ಹಬ್ಬದುಡಿಗೆ ; ಉತ್ಸವದುಡುಪು ; ಸೊಗಸಿನ, ಶೋಭೆಯ, — ಉಡುಪು.

Galáctic. **Galaxy** ನೋಡಿ.

Galácto- ಗಲ್ಯಾಕ್ಟೊ— (ಸ. ಪೂ. ಪ.) ಹಾಲು— ; ಕ್ಷೀರ —. **Galáctogogue, Galácta-** ಹಾಲು ಬರಿಸುವ ; ಕ್ಷೀರ ಸ್ರಾವಕ (ವಸ್ತು)

Galánty show ಗಲ್ಯಾಂಟಿ ಷೋ (ನಾ.) ಪರದೆಯಮೇಲೆ ಬೊಂಬೆಗಳ ನೆರಳು ಬೀಳಿಸಿ ತೋರಿಸುವ ಅಭಿನಯ ; ನೆರಳುಬೊಂಬೆಯಾಟ.

Gálaxy ಗ್ಯಾಲಕ್ಸಿ (ನಾ.) (ಅಸಂಖ್ಯಾತ ನಕ್ಷತ್ರಗಳು ಬಹು ಒತ್ತೊತ್ತಾಗಿರುವುದರಿಂದ) ಆಕಾಶದಲ್ಲಿ ಹಾಲು ಚೆಲ್ಲಿದಂತೆ ಕಾಣುವ ತೇಜಸ್ಸಿನ ಪ್ರವಾಹ : ಆಕಾಶ ಗಂಗೆ ; ಛಾಯಾ ಪಥ ; ಕ್ಷೀರ ಪಥ. (ಸೌಂದರ್ಯವತಿಯರು, ಪ್ರತಿಭಾವಂತರು, ಮೊ.) ತೇಜಸ್ವಿಗಳ ಪುಂಜ ; ತೇಜೋರಾಶಿ. **Galáctic** ಗಲ್ಯಾಕ್ಟಿಕ್ (ಗು.) (ಖ. ವಿ.) ಆಕಾಶ ತೇಜಃಪ್ರವಾಹದ ; ಆಕಾಶ ಗಂಗೆಯ ; ಕ್ಷೀರ ಪಥದ ; ಛಾಯಾ ಪಥದ.

Gálbanum ಗ್ಯಾಲ್ಬನಂ (ನಾ.) ಪರ್ಷಿಯಾ ದೇಶದ ಒಂದು ಜಾತಿಯ ಮರದ ಹಾಲುಗುಗ್ಗುಲ.

Gale[1] ಗೇಲ್ (ನಾ.) ಒಂದು ಜಾತಿಯ ಸುವಾಸನೆಯ ಸಸ್ಯ (= Sweet-g.)

Gale[2] ಗೇಲ್ (ನಾ.) ಕೊಂಚ ಬಿರುಸು ಗಾಳಿ ; (ನಾವೆ) ಬಿರುಗಾಳಿ ; ಕಡು ಗಾಳಿ ; ಚಂಡ ಮಾರುತ ; (ಕಾವ್ಯ) ಮಂದ ಮಾರುತ ; ನಸು ಗಾಳಿ.

Gale[3] ಗೇಲ್ (ನಾ.) (ಕಾಲ ಕಾಲಕ್ಕೆ ಕೊಡಬೇಕಾದ) ಬಾಡಿಗೆ, ಕಂದಾಯ. Hanging g. ಬಾಡಿಗೆಯ ಬಾಕಿ.

Gálea ಗೇಲಿ(ಲೆ)ಯ (ನಾ.) (ಸ. ವಿ., ಪ್ರಾ. ವಿ.) (ಆಕಾರದಲ್ಲಿ, ಕಾರ್ಯದಲ್ಲಿ, ಅಥವಾ ಸ್ಥಾನದಲ್ಲಿ) ಸೀಸಕವನ್ನು ಹೋಲುವ ರಚನೆ : ಶೀರ್ಷಕ ರಚನೆ. **Gáleate, -ated** (ಗು.)

Galeény ಗಲೀನಿ (ನಾ.) ಒಂದು ಬಗೆಯ ಬಾತುಕೋಳಿ ; ಗಿನಿ ಬಾತು.

Gálen ಗೇಲೆನ್ (ನಾ.) (ಹಾಸ್ಯ ಪ್ರ.) ವೈದ್ಯ [ಕ್ರಿ. ಶ. ೨ನೆಯ ಶತಮಾನದಲ್ಲಿದ್ದ Galen(os) ಎಂಬ ಪ್ರಸಿದ್ಧ ವೈದ್ಯನ ಹೆಸರಿನಿಂದ]. **Galénic** ಗಲೆನಿಕ್ (ಗು.), **Galénical** — ಕಲ್ (ಗು., ನಾ.) ಗೇಲೆನ್ ಎಂಬ ವೈದ್ಯನ ; —ವೈದ್ಯನ ಪದ್ಧತಿಯ (ಸಸ್ಯಸಂಬಂಧ ಔಷಧಗಳು) ; (ಹಾಸ್ಯ ಪ್ರ.) ವೈದ್ಯ(ಶಾಸ್ತ್ರ)ದ.

Galéna ಗಲೀನ (ನಾ.) (ಸಾಮಾನ್ಯವಾಗಿ ದೊರೆಯುವ) ಸೀಸದ ಅದುರು ; ' ಲೆಡ್ ಸಲ್ಫೈಡ್ ' (ಅದುರು)

Galiléan[1] ಗ್ಯಾಲಿಲೀಯನ್ (ಗು., ನಾ.) (ಹಿಂದೆ ರೋಮನರ ಆಳಿಕೆಯಲ್ಲಿದ್ದ ಪ್ಯಾಲೆಸ್ಟೈನಿನ ಉತ್ತರ ಪ್ರಾಂತವಾದ) ಗ್ಯಾಲಿಲಿಯ ; —ಗೆ ಸಂಬಂಧಪಟ್ಟ. (ನಾ.) ಗ್ಯಾಲಿಲೀ ಪ್ರಾಂತದವನು ; (ಆದಕಾರಣ) ಕ್ರೈಸ್ತ : (ಕ್ರೈಸ್ತ ಬಾಹಿರರು ಕ್ರಿಸ್ತನನ್ನು ತುಚ್ಛವಾಗಿ ಕರೆಯುತ್ತಿದ್ದ ವಿಶೇಷಣದಿಂದ)

Galiléan[2] ಗ್ಯಾಲಿಲೀಯನ್ (ಗು.) ಖಗೋಳ ಶಾಸ್ತ್ರಜ್ಞನಾದ ಇಟಲೀ ದೇಶಸ್ಥ ಗ್ಯಾಲಿಲಿಯೋವಿನ ; —ವಿಗೆ ಸಂಬಂಧಪಟ್ಟ. G. telescope ಗ್ಯಾಲಿಲಿಯೋವಿನ ದೂರದರ್ಶಕ.

Gálilee ಗ್ಯಾಲಿಲೀ (ನಾ.) ಚರ್ಚಿನ ಮಹಾದ್ವಾರದ ಮುಂಭಾಗದಲ್ಲಿರುವ ಮುಖ ಮಂಟಪ ಅಥವಾ ಆರಾಧನ ಮಂದಿರ.

Galimátias (F) ಗ್ಯಾಲಿಮ್ಯಾಟಿಯಸ್, — ಮೇಷಿಯಸ್ (ನಾ.) ಅರ್ಥವಿಲ್ಲದ ಮಾತು ; ಅಸಂಬದ್ಧ ಪ್ರಲಾಪ.

Gálingale ಗ್ಯಾಲಿಂಗೇಲ್ (ನಾ.) ಅಡಿಗೆಯಲ್ಲೂ ವೈದ್ಯದಲ್ಲೂ ಉಪಯೋಗಿಸುವ ಈಸ್ಟ್ ಇಂಡೀಸ್ ದ್ವೀಪಗಳ ಒಂದು ಸುಗಂಧದ ಬೇರು ; ದುಂಪರಾಸ್ಮೆ ; ಸುಗಂಧವಾಚಿ ಗಿಡ ; ಕಚ್ಚೂರ. ಒಂದು ಜಾತಿಯ ನೊದೆಹುಲ್ಲು ; ಮುಂಜ (= English g.)

Gáliot = Galliot.

Gálipot ಗ್ಯಾಲಿಪಾಟ್ (ನಾ.) ಗಡ್ಡೆಕಟ್ಟಿದ ಒಂದು ಬಗೆಯ ಕರ್ಪೂರ ತೈಲ.

Gall[1] ಗಾಲ್ (ನಾ.) ಪಿತ್ತ ; ಪಿತ್ತ ರಸ (ಈಗ, ಕೀಳ್ತರದ ಪ್ರಾಣಿಗಳದು ಮಾತ್ರ : ಮು., ಎತ್ತಿನದು) ; ಕಡು ಕಹಿ(ಯಾದ ವಸ್ತು) [G. & wormwood ಕಡು ಕಹಿ (ವಸ್ತು)] ; ಪಿತ್ತಕೋಶ. (ರೂಪ) ಕಟು ಭಾವನೆ ; ಉಗ್ರತೆ ; ಕಾಠಿನ್ಯ ; ನಿಷ್ಠುರತೆ ; ದ್ವೇಷ ; ವೈರ. (ಅಮೆ. ಸಂ., ಅಸಂ.) ಧಾರ್ಷ್ಟ್ಯ ; ದುರಹಂಕಾರ. Dip one's pen in gall ವಿಷದಲ್ಲಿ ಅದ್ದಿ ಬರೆ ; ಬಹಳ ಕಟುವಾಗಿ ಬರೆ ; ಆಕ್ರೋಶದಿಂದ ಬರೆ. G.-bladder ಪಿತ್ತಕೋಶ. G.-stone ಪಿತ್ತಕೋಶದಲ್ಲಿ ಬೆಳೆದ ಅಶ್ಮರಿ : ಪಿತ್ತಾಶ್ಮರಿ. **Gáll-less** (ಗು.) ಕಟುವಲ್ಲದ ; ದ್ವೇಷವಿಲ್ಲದ ; ಕ್ರೋಧವಿಲ್ಲದ.

Gall[2] ಗಾಲ್ (ನಾ., ಕ್ರಿ.) ನೋವು ಕೊಡುವ ಬಾವು ; ಕುರು ; ಕೀವು ತುಂಬಿದ ಗುಳ್ಳೆ ; ಬೊಬ್ಬೆ (ಮು., ಕುದುರೆಯದು) ; ಉಜ್ಜುಹುಣ್ಣು. ಮನೋವೇಧೆ ; — ವೇಧಕ. (ಏನೂ ಇಲ್ಲದಂತೆ) ಉಜ್ಜಿಹಾಸಿದ ಸ್ಥಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೋಷ ; ಊನ. (ಕುರುಚಲು ಕಾಡಿನಲ್ಲಿಯ ಅಥವಾ ಹೊಲದಲ್ಲಿಯ) ಬೋಳು ಪ್ರದೇಶ, ಖಾಲಿ ಜಾಗ. (ಕ್ರಿ.) ಹುಣ್ಣಾಗುವಂತೆ ಉಜ್ಜು, ತಿಕ್ಕು ; ಉಜ್ಜಿ ಹುಣ್ಣು ಹುಣ್ಣು ಮಾಡಿಕೊ, — ಮಾಡು. ರೇಗು ; ರೇಗಿಸು ; ಪೀಡಿಸು ; ಕಾಟ ಕೊಡು ; ಗೋಳುಹೊಯ್ದುಕೊ ; ಮಾನ ಕಳೆ ; ತರೆಯೆತ್ತದಂತೆ ಅವಮಾನ ಮಾಡು ; ಹೀನಾಯಗೊಳಿಸು. **Gálling** (ಗು.)

Gall[3] ಗಾಲ್ (ನಾ.) (ಮು., ಓಕ್) ಮರದಲ್ಲಿ ಒಂದು ಜಾತಿಯ ಕ್ರಿಮಿಯಿಂದಾದ (ಅಳಲೆಕಾಯಿಯ ಗುಣವುಳ್ಳ, ಅಳಲೆ ಕಾಯಿಯಂಥ) ಗಂಟು (= G. nut); Oak-g. (ಮಸಿತಯಾರಿಕೆ, ಚರ್ಮ ಹದಮಾಡುವುದು, ಬಣ್ಣಕಟ್ಟುವುದು, ಔಷಧಗಳ ತಯಾರಿಕೆ — ಇವುಗಳಲ್ಲಿ ಉಪಯೋಗ). G.-fly ಇಂಥ ಗಂಟನ್ನು ಮಾಡುವ ಕ್ರಿಮಿ. **Gállic**[1] (ಗು.)

Gállant ಗ್ಯಾಲಂಟ್, **Gallánt** ಗಲ್ಯಾಂಟ್ (ಗು., ನಾ., ಕ್ರಿ.) (ಪ್ರಾಚೀ. ಪ್ರ.) ಆಡಂಬರದ ; ಠೀಕು ಉಡುಪಿನ ; ಬೆಡಗಿನ. (ಹಡಗು, ಕುದುರೆ, ಮೊ. ಗಳ ವಿಷಯದಲ್ಲಿ) ಅತಿಶಯವಾದ ; ಘನವಾದ ; ಮಹಾ ; ಉತ್ಕೃಷ್ಟವಾದ ; ಗಂಭೀರವಾದ ; ಠೀವಿಯಿಂದ ಕೂಡಿದ. ಧೀರ ; ವೀರ ; ವಿಕ್ರಮ ; ಪ್ರತಾಪಶಾಲಿ ; ವೀರ ಧರ್ಮಿ ; ದಯಾ ವೀರ. (ಪಾರ್ಲಿಮೆಂಟಿನಲ್ಲಿ, ಸೇನೆಯ ಅಥವಾ ನೌಬಲದ ಸದಸ್ಯನಿಗೆ ಸಂಪ್ರದಾಯ ವಾಗಿ ಬಂದ ವಿಶೇಷಣ: ಉದಾ., The honourable & g. member). (- ánt) ಸ್ತ್ರೀ ಪರಾಯಣನಾದ ; ರಸಿಕ ; ಪ್ರಣಯಶೀಲ ; ಕಾಮಾಸಕ್ತ. (ನಾ.) ನೀಟುಗಾರ ; ಸೊಗಸುಗಾರ. (- ánt) ಹೆಂಗಸರಲ್ಲಿ ಆಸಕ್ತ ; ನಲ್ಲ ; ಕಾದಲ ; ಉಪ ಪತಿ ; ವಿಟ ; ಮಿಂಡ. (ಕ್ರಿ. ; - ánt) (ಹೆಂಗಸಿನೊಡನೆ) ಪ್ರಣಯವಾಡು, ಸರಸವಾಡು (*With* ಉಪ. ದೊಡನೆ ಸಹ). (ಮಹಿಳೆಯ) ರಕ್ಷಕನಾಗಿ ಜೊತೆಯಲ್ಲಿ ಹೋಗು. **Gállantly, Gallántly** (ಕ್ರಿ. ವಿ.) ; **Gállantry** ಗ್ಯಾಲಂಟ್ರಿ (ನಾ.) ಧೈರ್ಯ ; ಎದೆಗಾರಿಕೆ ; ಶೌರ್ಯ ; ನುಗ್ಗುವ ಕೆಚ್ಚು ; ಪೌರುಷ ; ಸಾಹಸ. (ನಡೆ ನುಡಿಗಳಲ್ಲಿ) ನಯ ವಿನಯ. ಸ್ತ್ರೀ ಪರಾಯಣತೆ ; ವಿನಯ, ಪ್ರಣಯ, —ವರ್ತನೆ, ಭಾಷಣ; ಕಾಮುಕ ನಡತೆ; ಪ್ರಣಯ ಸಂಧಾನ, — ಸಂಬಂಧ ; ವ್ಯಭಿಚಾರ.

Gálleon ಗ್ಯಾಲಿಯನ್ (ನಾ.) (ಚರಿತ್ರೆ) 'ಗ್ಯಾಲಿ' ಹಡಗಿಗಿಂತ ಚಿಕ್ಕದೂ ಎತ್ತರದ್ದೂ ಆದ ಹಡಗು ; (ಸಾ., ಸ್ಪೆಯ್ನ್ ದೇಶದ) ಯುದ್ಧದ ಹಡಗು ; ಅಮೆರಿಕದೊಡನೆ ವ್ಯಾಪಾರ ನಡಸುವ ಸ್ಪೆಯ್ನ್ ದೇಶದ ದೊಡ್ಡ ಹಡಗು.

Gállery ಗ್ಯಾಲರಿ (ನಾ., ಕ್ರಿ. ಸಕ.) ಪಕ್ಕಗಳಲ್ಲಿ ಅರೆತೆರೆದಿರುವ, ಮೇಲೆ ಚಾವಣಿಯುಳ್ಳ, ನಡೆದಾಟಕ್ಕಾಗಿ ಮಾಡಿದ, ಹಾದಿ ; ಧನ್ವ ಪಥ ; ಚಾವಣಿ ಹಾದಿ ; ಕಂಬಸಾಲಿನ ಹಾದಿ ; ದ್ವಾರ ಮಂಟಪ. ಉಪ್ಪರಿಗೆಯ ಮೊಗಸಾಲೆ ; (ಕಟ್ಟಡದ ಒಳ ಭಾಗಗಳಿಗೆ ಹೋಗಲು ಹೆಚ್ಚು ಮಂದದ ಗೋಡೆಯಲ್ಲಿ ಮಾಡಿದ ಅಥವಾ ಚಾಚುಊರೆಗಳ ಆಧಾರದ ಮೇಲೆ ಕಟ್ಟಿದ) ಉದ್ದನೆಯ ಕಿರುಹಾದಿ. [ಚರ್ಚು, ಸಭಾಮಂದಿರ, ಮೊ. ಗಳಲ್ಲಿ ಒಳಗೋಡೆಯಿಂದ ಸಭಾಂಗಣದ ಕಡೆಗೆ ಚಾಚಿಕೊಂಡು ಹೆಚ್ಚು ಮಂದಿ ಸಭಿಕರಿಗೆ ಸ್ಥಳ ಒದಗಿಸುವ, ಅಥವಾ ಗಾಯಕರು, ವರದಿಗಾರರು, ಆಗಂತುಕರು (ಅಭ್ಯಾಗತರು), ಮೊ. ರಿಗೆ ಮೀಸಲಾಗಿಟ್ಟಿರುವ] ವೇದಿಕೆ ; 'ಗ್ಯಾಲರಿ'. ಉಪ್ಪರಿಗೆಯ ಕೈಸಾಲೆ. (ನಾಟಕ ಶಾಲೆಯಲ್ಲಿ) ಮೇಲ್ಭಾಗದಲ್ಲಿಯ ಕೈಸಾಲೆ, ವೇದಿಕೆ; ಸೋಪಾನ ಪೀಠ ; ಅಲ್ಲಿ ಕುಳಿತಿರುವವರು ; ಪ್ರೇಕ್ಷಕರಲ್ಲಿ ಅಸಂಸ್ಕೃತ ವರ್ಗ, ಕೆಳ ದರ್ಜೆಯವರು (Play to the g. ಕೆಳ ದರ್ಜೆಯವರನ್ನು ಒಲಿಸಿಕೊಳ್ಳಲು ಯತ್ನಿಸು ; ಪಾಮರ ರಂಜನೆ ಮಾಡು). ಕಿರಿದಗಲದ ನಿಡುಕೋಣೆ (Shooting-g. ಮನೆಯೊಳಗೆಯೇ ಬಂದೂಕು ಅಭ್ಯಾಸ ಮಾಡುವುದಕ್ಕಾಗಿ ಅಥವಾ ಪಂದ್ಯಗಳಿಗಾಗಿ ಉಪಯೋಗಿಸುವ ನಿಡುಕೋಣೆ) ; ಒಳಹಾದಿ ; ನಡವೆ. ಕಲಾವಸ್ತು ಪ್ರದರ್ಶನ ಮಂದಿರ ; ಚಿತ್ರ ಶಾಲೆ. (ದೀಪದ ಮೇಲಿಡುವ) ಚಿಮ್ನಿಯ ಹಿಡಿಕೆ. (ಸ್ಯೆನ್ಯ, ಗಣಿಕೆಲಸ) (ನೇರವಾಗಿ ಸಮ ತಲದಲ್ಲಿ ಹೋಗುವ) ಸುರಂಗ ಮಾರ್ಗ. [ಕ್ರಿಕೆಟ್ ಆಟ, ನಾಟಕ ಮಂದಿರ — ಇವುಗಳ ವಿಷಯದಲ್ಲಿ (ರೂಪ.) G. hit, shot, stroke ಗತ್ತಿನ ಹೊಡೆತ ; ಜನ ರಂಜನೆಯ, ಡವುಲನ, ಆಟ]. (ಕ್ರಿ.) ಗ್ಯಾಲರಿಯನ್ನು(ಗಳನ್ನು) ಒದಗಿಸು, ಅಳವಡಿಸು. (ಸ್ಯೆನ್ಯ) ಸುರಂಗಮಾರ್ಗ ಮಾಡು. **Gálleryful** (ನಾ.)

Gálley ಗ್ಯಾಲಿ (ನಾ.) (ಮು., ಚರಿತ್ರೆ) (ಹಾಯಿಗಳನ್ನೂ ಹುಟ್ಟುಗಳನ್ನೂ ಉಪಯೋಗಿಸುವ, ಸಾ., ಗುಲಾಮರೊ ಕೈದಿಗಳೊ ನಡಸುವ) ಒಂದಂತಸ್ತಿನ ತಗ್ಗಾದ ಚಪ್ಪಟೆಯ ಹಡಗು ; (ಒಂದು ಅಥವಾ ಹೆಚ್ಚು ಅಂತಸ್ತುಗಳಲ್ಲಿ ಹುಟ್ಟು ಹಾಕಿ ನಡಸುವ) ಪ್ರಾಚೀನ ರೋಮನ್ ಅಥವಾ ಗ್ರೀಕ್ ಯುದ್ಧದ ಹಡಗು ; ತೆರಪಾಗಿರುವ ದೊಡ್ಡ ಹುಟ್ಟು ದೋಣಿ (ಉದಾ., ಯುದ್ಧದ ಹಡಗಿನ ಯಜಮಾನನು ಉಪಯೋಗಿಸುವಂಥದು) ; ಹಡಗಿನ ಅಡಿಗೆಯ ಮನೆ. (ಮುದ್ರಣ) ಜೋಡಿಸಿದ ಮುದ್ರಣದ ಮೊಳೆಗಳ ಸಾಲುಗಳನ್ನು ಇಡುವ ಮೂರಂಚುಗಳುಳ್ಳ ತಟ್ಟೆ : 'ಗ್ಯಾಲಿ.' (G. proof ಒಂದು ಗೊತ್ತಿನ ಆಕಾರದ ಪುಟಗಳಲ್ಲಿಯೊ ಹಾಳೆಗಳಲ್ಲಿಯೊ ತೆಗೆಯದೆ ಹೆಚ್ಚು ಕಡಮೆಯ ಉದ್ದದ ಕಾಗದಗಳಲ್ಲಿ ತೆಗೆದ ಕರಡುಪ್ರತಿ). **G.-slave** ಗ್ಯಾಲಿ ಹಡಗಿನಲ್ಲಿ ಹುಟ್ಟು ಹಾಕುವ ದಂಡನೆ ವಿಧಿಸಲ್ಪಟ್ಟವನು : ಗ್ಯಾಲಿ ಗುಲಾಮ ; (ರೂಪ.) ವಿರಾಮವಿಲ್ಲದೆ ದುಡಿಯಬೇಕಾದವನು ; ದುಡಿತದ ಕತ್ತೆ. **Gálleyworm** (ನಾ.) ಅನೇಕ ಕಾಲುಗಳುಳ್ಳ ಒಂದು ಬಗೆಯ ಹುಳು (ಹುಟ್ಟನ್ನು ಹೋಲುವ ಕಾಲುಗಳುಳ್ಳ ಕಾರಣದಿಂದ)

Gállic[1]. **Gall**[3] ನೋಡಿ.

Gállic[2] ಗ್ಯಾಲಿಕ್ (ಗು.) ಗಾಲ್ ಜನರ ; (ಹಾಸ್ಯವಾಗಿ) ಫ್ರೆಂಚರ. **Gállican** — ಕನ್ (ಗು., ನಾ.) ಗಾಲಿನ ಅಥವಾ ಫ್ರಾನ್ಸಿನ ಪ್ರಾಚೀನ ಚರ್ಚಿನ. ಸ್ವಲ್ಪಮಟ್ಟಿಗೆ ಸ್ವಯಮಾಧಿಪತ್ಯವನ್ನು ಸಾಧಿಸುವ ಒಂದು ಫ್ರೆಂಚ್ ರೋ. ಕ್ಯಾ. ಪಂಗಡದ (ಮತಾನುಯಾಯಿ). **Gállicanism** (ನಾ.) ; **Gállicanist** (ನಾ.) ; **Gállice** (L) ಗ್ಯಾಲಿಸೀ (ಕ್ರಿ. ವಿ.) ಫ್ರೆಂಚಿನಲ್ಲಿ ; ಫ್ರೆಂಚ್ ರೀತಿಯಲ್ಲಿ (ಇಂಗ್ಲಿಷ್ ಮಾತು, ಮೊ. ಕ್ಕೆ ಹೊಂದುವ ಫ್ರೆಂಚ್ ಮಾತು, ಮೊ. ನ್ನು ಹೇಳುವಲ್ಲಿ). **Gállicism** — ಸಿಸ್ಮ್ (ನಾ.) ಫ್ರೆಂಚ್ ಭಾಷಾ ಸಂಪ್ರದಾಯ, — ದ ವಾಕ್ಸರಣಿ (ಮು., ಬೇರೆ ಭಾಷೆಯ ಭಾಷಣಕಾರ ಅಥವಾ ಲೇಖಕ ಉಪಯೋಗಿಸುವಂಥದು) ; ಧಾರಾಳವಾಗಿ ಫ್ರೆಂಚನ್ನು ಪ್ರಯೋಗಿಸುವುದು ; ಫ್ರೆಂಚರ ವೈಲಕ್ಷಣ್ಯ, ವೈಶಿಷ್ಟ್ಯ, ಪದ್ಧತಿ, ಆಲೋಚನಾ ರೀತಿ. **Gállicize** (ಕ್ರಿ.) ಪದ್ಧತಿಗಳಲ್ಲಿ, ಮಾತಿನಲ್ಲಿ, — ಫ್ರೆಂಚರಂತೆ ಅಥವಾ ಗಾಲರಂತೆ ವರ್ತಿಸು ; ಫ್ರೆಂಚರಂತೆ ಮಾಡು.

Galligáskins ಗ್ಯಾಲಿಗ್ಯಾಸ್ಕಿನ್ಸ್ (ನಾ., ಬ. ವ.) (ಹಾಸ್ಯವಾಗಿ) ಷರಾಯಿ ; ಚಲ್ಲಣ.

Gallimaúfry ಗ್ಯಾಲಿಮಾಫ್ರಿ (ನಾ.) ವಿಜಾತೀಯ ಮಿಶ್ರಣ ; ಕಲಬೆರಕೆ ; ತೊಳಸುಂಬಳಸು.

Gallináceous ಗ್ಯಾಲಿನೇಷಸ್ (ಗು.) ಕುಕ್ಕುಟ ಜಾತಿಯ. **Gallinácean** — ಷನ್ (ಗು., ನಾ.) ಕುಕ್ಕುಟ ಜಾತಿಯ (ಪಕ್ಷಿ)

Gallinázo ಗ್ಯಾಲಿನಾಸೊ (ನಾ.) ಅಮೆರಿಕದ ಒಂದು ಜಾತಿಯ ರಣಹದ್ದು ; ತುರ್ಕಿ ದೇಶದ ಒಂದು ಜಾತಿಯ ಡೇಗೆ.

Gállio ಗ್ಯಾಲಿಯೋ (ನಾ.) ತನ್ನ ಅಧಿಕಾರಕ್ಕೆ ಸಂಬಂಧಪಡದ ವಿಷಯದಲ್ಲಿ ಕೈ ಹಾಕಲೊಲ್ಲದವನು (ಮು., ಅಧಿಕಾರಿ). ಉದಾಸೀನ ಭಾವದಿಂದಿರುವವನು.

Gálliot ಗ್ಯಾಲಿಯೊಟ್ (ನಾ.) ಸಾಮಾನು ಸಾಗಿಸುವ ಅಥವಾ ಮೀನು ಹಿಡಿಯುವ ಡಚ್ಚರ ಹಡಗು ; (ಸಾ., ಮೆಡಿಟರೇನಿಯನ್ನಿನ) ಚಿಕ್ಕ ಗ್ಯಾಲಿ ಹಡಗು.

Gállipot ಗ್ಯಾಲಿಪಾಟ್ (ನಾ.) ಮುಲಾಮು, ಮೊ. ನ್ನು ಹಾಕಿಡುವ ನುಣುಪು ಪಿಂಗಾಣಿಯ ಕುಡಿಕೆ.

Gállium ಗ್ಯಾಲಿಯಂ (ನಾ.) ನೀಲ ಛಾಯೆಯ ಬಿಳುಪು ಬಣ್ಣದ ಒಂದು ಮೃದು ಲೋಹಧಾತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Gállivánt ಗ್ಯಾಲವ್ಯಾಂಟ್ (ಕ್ರಿ. ಅಕ.) ಸುತ್ತಾಡು ; ಅಲೆದಾಡು ; ವಿಹರಿಸು (ಮು., ಅನ್ಯ ಲಿಂಗದ ವ್ಯಕ್ತಿಗಳೊಡನೆ)

Gállo- ಗ್ಯಾಲೊ— (ಸ. ಪೂ. ಪ.) ಫ್ರೆಂಚ್—. **-Briton** ಫ್ರೆಂಚ್ ಬ್ರಿಟನ್. **-German** ಫ್ರೆಂಚ್ ಜರ್ಮನ್. **Gálloman** (ನಾ.) = Gallomaniac. **Gallománia** (ನಾ.) ಫ್ರಾನ್ಸಿನ ಅಥವಾ ಫ್ರೆಂಚರ ವಿಚಾರದಲ್ಲಿ ಹುಚ್ಚು ಮೋಹ, ಅಭಿಮಾನ. **Gallomániac** (ಗು., ನಾ.); **Gállophil** (ನಾ.) ಫ್ರೆಂಚಭಿಮಾನಿ ; ಫ್ರಾನ್ಸಿನ ಮಿತ್ರ. **Gallophóbia** (ನಾ.) ಫ್ರೆಂಚರ ಅಥವಾ ಫ್ರೆಂಚ್ ಸಂಬಂಧದ ವಿಷಯವಾಗಿ ಹುಚ್ಚು ಭಯ, ಅತಿ ಭೀತಿ; ಫ್ರೆಂಚ್ ಭೀತಿ. **Gállophobe** (ನಾ.) —ಉಳ್ಳವನು : ಫ್ರೆಂಚ್ ಭೀತ.

Gállon ಗ್ಯಾಲನ್ (ನಾ.) ದ್ರವ, ಕಾಳು, ಮೊ. ಗಳ ಒಂದು ಗೊತ್ತಾದ ಅಳತೆ. Imperial g. = ೨೭೭।೦ ಘನ ಅಂಗುಲಗಳು ; Wine g. = ೨೩೧ ಘನ ಅಂಗುಲಗಳು.

Galloón ಗಲೂನ್ (ನಾ.) ಉಡುಪುಗಳಿಗೆ ಅಲಂಕಾರಕ್ಕಾಗಿ ಹಾಕುವ (ಚಿನ್ನ, ಬೆಳ್ಳಿ, ರೇಷ್ಮೆ, ಅಥವಾ ಹತ್ತಿಯ ದಾರ —ಇವುಗಳಿಂದ) ಒತ್ತಾಗಿ ಹೆಣೆದು ಮಾಡಿದ ಕಿರಿದಾದ ಅಂಚುಪಟ್ಟಿ ; ಇಂಥ ಪಟ್ಟಿಯ ಅಲಂಕಾರ.

Gállop ಗ್ಯಾಲಪ್ (ನಾ., ಕ್ರಿ.) (ಕುದುರೆ, ಮೊ. ಗಳ) ನಾಗಾಲೋಟ (ನಾಲ್ಕು ಕಾಲುಗಳೂ ಒಂದೇ ಬಾರಿ ನೆಲ ಬಿಟ್ಟು ಎಗುರುವ ಓಟ); ದೌಡು ; ನಾಗಾಲೋಟದ ಸವಾರಿ (Full g. ಭರದಾಂಡು. At a g. ನಾಗಾಲೋಟದಲ್ಲಿ). (ಕ್ರಿ.) ನಾಗಾಲೋಟದಲ್ಲಿ ಬಿಡು, ಓಡಿಸು ; ದೌಡಾಯಿಸು ; ಭರದಾಂಡು ಬಿಡು. ವೇಗವಾಗಿ, —ಓದು, (ಬಾಯಿಪಾಠ) ಹೇಳು, ಮಾತಾಡು (ಅನೇಕ ವೇಳೆ *through*, *over* ಉಪ. ದೊಡನೆ) ; ವೇಗವಾಗಿ ಹೋಗು ; ಹೆಚ್ಚಾಗು ; ಪ್ರಬಲವಾಗು (Galloping consumption ದೌಡೋಡುವ, ತೀವ್ರ, — ಕ್ಷಯ ರೋಗ). **Gálloper** (ನಾ.) (ಕ್ರಿಯಾರ್ಥಗಳಲ್ಲಿ). (ಸೈನಿಕ) ಸೇನಾಪತಿ, ಮೊ. ರ ಸಹಾಯಕ. ಬೇಗ ಒಯ್ಯಬಹುದಾದ ಹಗುರ ಫಿರಂಗಿ.

Gallopáde ಗ್ಯಾಲೊಪೇಡ್ (ನಾ.) (ಹಿಂದೆ, ಹಂಗೇರಿಯನ್ನರ) ಒಂದು ತೆರದ ಉಲ್ಲಾಸ ನರ್ತನ, ಗೆಲವಿನ ಕುಣಿತ.

Gallovídian ಗ್ಯಾಲೊವಿಡಿಯನ್ (ಗು., ನಾ.) ಗ್ಯಾಲೊವೇ ಪ್ರಾಂತದ(ವನು)

Gálloway ಗ್ಯಾಲೊವೇ (ನಾ.) ಸ್ಕಾಟ್ಲೆಂಡಿನ ಗ್ಯಾಲೊವೇ ಎಂಬ ಪ್ರಾಂತದ ಬಲವಾದ ಗಿಡ್ಡ ಕುದುರೆ; ಗಿಡ್ಡು ಕುದುರೆ. ಗ್ಯಾಲೊವೇ ತಳಿಯ ದನ.

Gállows ಗ್ಯಾಲೋಸ್ (ನಾ., ಬ. ವ.; ಸಾ., ಏ.ವ. ದಂತೆ ಪ್ರ.) (ಅಪರಾಧಿಗಳಿಗೆ ಮರಣದಂಡನೆ ಮಾಡಲು, ಎರಡು ಮರದ ನಿಲವುಗಳ ಮೇಲೆ ಅಡ್ಡ ಕೊರೆ ಹಾಕಿ ಮಾಡಿದ) ಗಲ್ಲುಮರ ; ಗಲ್ಲು ; ಗಲ್ಲಿಗೆ ಹಾಕುವ ಶಿಕ್ಷೆ ; ಮರಣ ದಂಡನೆ ; ಫಾಸಿ ಸಜ (A g. look ಘಾತುಕ ಮುಖಭಾವ. Have the g. in one's face ಮುಖದಲ್ಲಿ ಕೊಲೆಪಾತಕ ದೃಷ್ಟಿ ಇರು). ಅಡಿಗೆ, ವ್ಯಾಯಾಮ, ಮೊ. ಗಳಿಗಾಗಿ ಉಪಯೋಗಿಸುವ ಗಲ್ಲುಮರದಂಥ ರಚನೆ. G.-bird ಗಲ್ಲಿಗೆ (ಹೋಗಲು) ತಕ್ಕವನು. G.-ripe ಗಲ್ಲಿಗೆ ಸಿದ್ಧವಾಗಿರುವ. G.-tree (= G.) ಗಲ್ಲು ಮರ.

Gálop ಗ್ಯಾಲಪ್ (ನಾ., ಕ್ರಿ. ಅಕ.) ಒಂದು ಬಗೆಯ ಗೆಲವಿನ ಕುಣಿತ, ನರ್ತನ. ಇಂಥ ನರ್ತನ ಮಾಡು.

Galóre ಗಲೋರ್ (ಕ್ರಿ. ವಿ., ನಾ.) ಸಮೃದ್ಧಿ(ಯಾಗಿ) ; ಪುಷ್ಕಳ(ವಾಗಿ) ; ದಂಡಿ(ಯಾಗಿ) ; ಹೇರಳ(ವಾಗಿ). With beef & ale g. ಮಾಂಸ ಮದ್ಯಗಳು ಸಮೃದ್ಧಿಯಾಗಿ. G. of alcohol ಮದ್ಯಸಾರ ಸಮೃದ್ಧಿಯಾಗಿ ; ಮದ್ಯದ ಕೋಡಿ ಹರಿಯುವಂತೆ. In g. ಸಮೃದ್ಧಿಯಾಗಿ ; ಪುಷ್ಕಳವಾಗಿ.

Galósh ಗಲಾಷ್, **Golósh** ಗೊಲಾಷ್ (ನಾ.) (ಪಾದರಕ್ಷೆ ಮಣ್ಣಾಗದಂತೆಯೂ ನೆನೆಯದಂತೆಯೂ ಅದರ ಮೇಲೆ ತೊಡುವ ಸಾ., ರಬ್ಬರಿನ) ಮೇಲ್ಜೋಡು ; ಪಾದರಕ್ಷಾವರಣ. **Galóshed, Gol-** (ಗು.)

Galúmph ಗಲಂಫ್ (ಕ್ರಿ. ಅಕ.) ಗೆಲವಿನಿಂದ ನೆಗೆಯುತ್ತ, ಕುಣಿಯುತ್ತ, — ಹೋಗು.

Galvánic ಗ್ಯಾಲ್ವ್ಯಾನಿಕ್ (ಗು.) ಗ್ಯಾಲ್ವ್ಯಾನಿಯ ; ಪ್ರವಾಹ ವಿದ್ಯುತ್ತಿನ ; ರಾಸಾಯನಿಕ ವಿದ್ಯುತ್ತಿನ ; —ನಂಥ ; —ನಿಂದಾದ. [G. battery, pile ಪ್ರವಾಹ ವಿದ್ಯುತ್ಕೋಶ ಮಾಲೆ. G. belt ಪ್ರವಾಹ ವಿದ್ಯುತ್ತು ಹರಿಯುವ ಪಟ್ಟಿ ; ದೇಹದಲ್ಲಿ ಪ್ರವಾಹ ವಿದ್ಯುತ್ತನ್ನು ಹರಿಸುವುದಕ್ಕಾಗಿ ಧರಿಸುವ ವೈದ್ಯಪಟ್ಟಿ. G. electricity ಪ್ರವಾಹ (ರಾಸಾಯನಿಕ) ವಿದ್ಯುತ್ತು]. (ರೂಪ.) (ಕಿರು ನಗೆ, ಮೊ. ಗಳ ವಿಷಯದಲ್ಲಿ) ಥಟ್ಟನೆ, ಬಲಾತ್ಕಾರವಾಗಿ, — ಬಂದ, ಬರಿಸಿದ. **Galvánically** (ಕ್ರಿ. ವಿ.) ; **Gálvanism** ಗ್ಯಾಲ್ವನಿಸ್ಮ್ (ನಾ.) ರಾಸಾಯನಿಕ ಕ್ರಿಯೆಯಿಂದ ಹುಟ್ಟಿದ ವಿದ್ಯುತ್ತು ; ಪ್ರವಾಹ ವಿದ್ಯುತ್ತು ; (ವೈದ್ಯಕಾರ್ಯಕ್ಕಾಗಿ) ಪ್ರವಾಹ ವಿದ್ಯುತ್ಪ್ರಯೋಗ. **Gálvanist** (ನಾ.) ಪ್ರವಾಹ ವಿದ್ಯುಚ್ಛಾಸ್ತ್ರ ಪಂಡಿತ. **Gálvanize** (ಕ್ರಿ. ಸಕ.) ಪ್ರವಾಹ ವಿದ್ಯುತ್ತನ್ನು ಪ್ರಯೋಗಿಸು ; ಈ ಪ್ರಯೋಗದಿಂದ (ಪ್ರ)ಚೋದಿಸು ; [(ರೂಪ.) G. into life (ಧಕ್ಕೆಯಿಂದ ಅಥವಾ ಉದ್ರೇಕದಿಂದ) ಹುರಿದುಂಬು, ನವ ಚೈತನ್ಯವುಂಟುಮಾಡು]. ವಿದ್ಯುನ್ಮುಲಾಮು ಮಾಡು. [Galvanized iron (ಸತುವು ಬಳಿದ ಕಬ್ಬಿಣದ ತಗಡು) ಎಂಬಲ್ಲಿ Galvanized ಎಂಬುದು ತಪ್ಪು ಪ್ರಯೋಗ ; ಏಕೆಂದರೆ ಈ ಕಾರ್ಯವು ವಿದ್ಯುತ್ತಿನಿಂದಾದುದಲ್ಲ]. **Galvanizátion** (ನಾ.) ; **Gálvanizer** (ನಾ.) ; **Gálvano-** ಗ್ಯಾಲ್ವನೊ— (ಸ. ಪೂ. ಪ.) ಪ್ರವಾಹ ವಿದ್ಯುತ್—. **-graphy** ಮುದ್ರಣ ಮಾಡುವುದಕ್ಕಾಗಿ ತಾಮ್ರದ ತಗಡಿನ ಮೇಲೆ (ಕೆತ್ತದ) ಪ್ರವಾಹ ವಿದ್ಯುತ್ತಿನ ಮೂಲಕ ಚಿತ್ರ ರೇಖನಗಳ ಪಡಿಯಚ್ಚು ತೆಗೆಯುವುದು : ವಿದ್ಯುಲ್ಲೇಖನ. **-plasty** ವಿದ್ಯುತ್ತಿನ ಮೂಲಕ ಲೋಹದ ಮುಲಾಮು ಮಾಡುವುದು : ವಿದ್ಯುಲ್ಲೇಪನ. **-meter** ಪ್ರವಾಹ ವಿದ್ಯುನ್ಮಾಪಕ. **-scope** ಪ್ರವಾಹ ವಿದ್ಯುದ್ದರ್ಶಕ. (ಪ್ರವಾಹ ವಿದ್ಯುತ್ತನ್ನು ಕಂಡುಹಿಡಿದ Galvani ಎಂಬ ಇಟ್ಯಾಲಿಯನ್ ಭೌತಶಾಸ್ತ್ರಜ್ಞನ ಹೆಸರಿನಿಂದ)

Galwégian ಗ್ಯಾಲ್ವೀಜಿಯನ್ (ಗು., ನಾ.) = Gallovidian.

Gámba ಗ್ಯಾಂಬ (ನಾ.) ಫಿಟೀಲಿನ ಧ್ವನಿಯಂತೆ ಧ್ವನಿ ಕೊಡುವ ಒಂದು ಬಗೆಯ ತಿದಿಕೊಳಲು (=G. stop)

Gambáde, Gambádo ಗ್ಯಾಂಬೇಡ್, —ಡೊ (ನಾ. ; ಬ. ವ. -oes — ಡೋಸ್) ಕುದುರೆಯ ನೆಗೆತ. ವಿಲಕ್ಷಣ ಚಲನೆ ; ಹುಚ್ಚಾಟ ; ಹುಚ್ಚು ಸಾಹಸ.

Gámbier ಗ್ಯಾಂಬಿಯರ್ (ನಾ.) ಚರ್ಮ ಹದಮಾಡುವುದು, ರಂಗು ಹಾಕುವುದು, ಮೊ. ಗಳಲ್ಲಿ ಉಪಯೋಗಿಸುವ, ಪೂರ್ವದೇಶಗಳಲ್ಲಿ ಬೆಳೆಯುವ, ಒಂದು ಸಸ್ಯದ ಸಾರ. ಒಂದು ಬಗೆಯ ಹಳದಿಯ ಬಣ್ಣದ ಕಾಚು (ಎಲೆಯಡಿಕೆ ಹಾಕಿಕೊಳ್ಳುವುದರಲ್ಲಿ ಉಪಯೋಗಿಸುವುದು)

Gámbit ಗ್ಯಾಂಬಿಟ್ (ನಾ.) (ಚದುರಂಗದ ಆಟದಲ್ಲಿ) ಸ್ಥಾನಬಲ ಪಡೆಯುವುದಕ್ಕಾಗಿ ಪ್ಯಾದೆ ಅಥವಾ ಇತರ ಕಾಯನ್ನು(ಗಳನ್ನು) ಉದ್ದೇಶಪೂರ್ವಕವಾಗಿ ಬಲಿಕೊಟ್ಟು ಆರಂಭಿಸುವ ಆಟದ ಒಂದು ಪದ್ಧತಿ. (ರೂಪ.) ಚರ್ಚೆಗೆ ಅವಕಾಶ ಕೊಡಲು ಒಪ್ಪಿಕೊಳ್ಳುವ ಅಂಶಗಳು.

Gámble ಗ್ಯಾಂಬ್ಲ್ (ಕ್ರಿ., ನಾ.) [ದುಡ್ಡಿಟ್ಟು (ಮು., ಹೆಚ್ಚಾಗಿ ಒಡ್ಡಿ)] ಜೂಜಾಡು, ದ್ಯೂತವಾಡು (G. away ಜೂಜಾಡಿ ಕಳೆದುಕೊ). ಯುದ್ಧ, ಹಣಕಾಸಿನ ವ್ಯವಹಾರ, ಮೊ. ಗಳಲ್ಲಿ ಮಹತ್ಫಲ ಪಡೆಯಲು ವಿಶೇಷ ನಷ್ಟಕ್ಕೆ ಸಿಕ್ಕಬಹುದಾದ ಪ್ರಯತ್ನಗಳನ್ನು ಕೈಕೊಳ್ಳು ; ನಷ್ಟಕರ ಸಾಹಸಕ್ಕೆ ಕೈಹಾಕು. (ನಾ.) ಜೂಜು ; ದ್ಯೂತ; ನಷ್ಟಕ್ಕೆ, ಅಪಾಯಕ್ಕೆ, ಸಿಕ್ಕಬಹುದಾದ ಉದ್ಯಮ, ಪ್ರಯತ್ನ. **Gámbler** (ನಾ.) ಜೂಜುಕೋರ ; ಜೂದಾಳಿ. **Gámblesome** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Gambóge ಗ್ಯಾಂಬೋ(ಬೂ)ಜ್, — ಬೂಷ್ (ನಾ.) ಹಳದಿಯ ಬಣ್ಣ ಮಾಡುವುದಕ್ಕೆ ಉಪಯೋಗಿಸುವ ಕಾಂಬೋಡಿಯದ ಮತ್ತು ಸಯಾಮಿನ ಕೆಲವು ಮರಗಳ ಅಂಟು ರಾಳ.

Gámbol ಗ್ಯಾಂಬೊ(ಬ್)ಲ್ (ನಾ., ಕ್ರಿ. ಅಕ.) ಕುಣಿದಾಟ ; ನೆಗೆದಾಟ. ಕುಣಿ(ದಾಡು) ; ನೆಗೆ(ದಾಡು)

Game[1] ಗೇಮ್ (ನಾ.) ಆಟ ; ಕ್ರೀಡೆ ; ಕೇಳಿ ; ವಿನೋದ ; ಹಾಸ್ಯ ; ತಮಾಷೆ (A game of ball ಚೆಂಡಾಟ. What a game ! ಏನು ತಮಾಷೆ ! ಏನು ವಿಚಿತ್ರ !). (ಜಾಣತನ, ಶಕ್ತಿ, ಅದೃಷ್ಟ — ಇವುಗಳಿಂದ ಗೆಲ್ಲಬಹುದಾದ, ನಿಯಮಾನುಸಾರವಾಗಿ ಆಡುವ) ಆಟದಪಂದ್ಯ [Round, Square, g. (ಆಯಾ ಪದಗಳನ್ನು ನೋಡಿ)]. [Have the g. in one's hands ಗೆಲ್ಲುವ ನೆಚ್ಚಿಕೆ ಇರು ; ಆಟವನ್ನು ತಕ್ಕಂತೆ ತಿರುಗಿಸುವ ಶಕ್ತಿಯುಳ್ಳವನಾಗಿರು ; ಆಟದ ಸೂತ್ರಗಳನ್ನು ಕೈಯಲ್ಲಿಟ್ಟುಕೊಂಡಿರು. Play the g. ನ್ಯಾಯಸಮ್ಮತವಾಗಿ, ಧರ್ಮವಾಗಿ, ಆಡು, ನಡೆದುಕೊ. ನಿಯಮಗಳನ್ನು ಪಾಲಿಸು. ಸಭ್ಯ ರೀತಿಯಲ್ಲಿ, ಗೌರವದಿಂದ, ವರ್ತಿಸು. Play a good g. ಒಳ್ಳೆಯ ಆಟವಾಡು. ಚಾತುರ್ಯದಿಂದ ವರ್ತಿಸು. Play a poor g. ಕಳಪೆಯ ಆಟವಾಡು ; ಚಾತುರ್ಯವಿಲ್ಲದೆ ವರ್ತಿಸು]. (ಗ್ರೀಕ್ ಮತ್ತು ರೋಮನ್ ಪ್ರಾಚೀನ ; ಬ. ವ. ದಲ್ಲಿ) ವ್ಯಾಯಾಮ, ನಾಟಕ, ಸಂಗೀತ, ಮೊ. ಗಳ ಪಂದ್ಯಗಳು, ಶರ್ಯತ್ತುಗಳು. ಖಡ್ಗಾಖಡ್ಗಿ ಪಂದ್ಯ, ಮಲ್ಲಗಾಳಗ, ಮೊ. ಪ್ರದರ್ಶನಗಳು. (ಆಟದಂತೆಯೇ, ಆಸಕ್ತಿವಹಿಸಿ ನಡಸುವ) ಉದ್ಯಮ, ಕಾರ್ಯಕ್ರಮ, ಹೂಟ, ಹಂಚಿಕೆ, ಒಳಸಂಚು [(A deep g. ಗೂಢವಾದ ಒಳಸಂಚು. A double g. ಒಳಗೊಂದು ಹೊರಗೊಂದು ಯೋಜಿಸುವ ಹೂಟ ; ಇಬ್ಬಂದಿಯಾಟ ; ಮೋಸದ ಹೂಟ. Winning g. ಗೆಲ್ಲುವ ಆಟ, ಉದ್ಯಮ. Losing g. ಸೋಲುವ ಆಟ, ಉದ್ಯಮ, ಪ್ರಯತ್ನ. The g. is up ಈಗ ಆಟ ಕೆಟ್ಟಿತು ; ಗೆಲುವು ಅಸಾಧ್ಯ. So that's your little g. ಸರಿ, ಅದೋ ನಿನ್ನ ಹಂಚಿಕೆ, ತಂತ್ರ ! Play one's g. ಮತ್ತೊಬ್ಬನ ಕಾಯಿ ನಡಸು ; ಮತ್ತೊಬ್ಬನ ಕಾರ್ಯಕ್ರಮವನ್ನು, ಹಂಚಿಕೆಯನ್ನು, ತಾನು ಉದ್ದೇಶಪಡದೆಯೇ ಮುಂದುವರಿಸು. G. not worth the candle (Candle ನೋಡಿ)]. (ಬ. ವ. ದಲ್ಲಿ) ಮೋಸವಿದ್ಯೆ ; ಕುಟಿಲ ತಂತ್ರಗಳು ; ಹೂಟಗಳು (None of your games ನಿನ್ನ ಹೂಟವನ್ನು, ತಂತ್ರಗಳನ್ನು, ಕುಯುಕ್ತಿಗಳನ್ನು, ತೋರಿಸಬೇಡ). (ಇಸ್ಪೀಟು, ಟೆನಿಸ್ಸು, ಮೊ. ಪಂದ್ಯಗಳಲ್ಲಿ) ಒಂದು ಸೂಳು, ಸರದಿ, ಸುತ್ತು, — ಆಟ (G. & g. ಪ್ರತಿ ಕಡೆಗೂ ಒಂದೊಂದು ಗೆಲುವು). (ವ್ಯಾಪಾರ) ಆಟದ ಸಾಮಾನು ; ಕ್ರೀಡೋಪಕರಣ. ಆಟದಲ್ಲಿ ಗೆಲುವುಗಳ ಸಂಖ್ಯೆ, ಅಂಕ [G. and (ಟೆನಿಸ್ಸಿನಲ್ಲಿ G. & set ಎಂಬುದಕ್ಕೆ ಸಂಕ್ಷಿಪ್ತ) ಆಟ ಗೆದ್ದು ಸುತ್ತು ಮುಗಿಯಿತು. The g. is four all ಎರಡು ಪಕ್ಷದವರಿಗೂ ನಾಲ್ಕು ನಾಲ್ಕು ಗೆಲುವು]. ಬೇಟೆಯ ಪ್ರಾಣಿ ; ಅಟ್ಟಿಕೊಂಡುಹೋದ ಬೇಟೆ ; (ರೂಪ.) ಸಾಧಿಸಬೇಕಾದ ಉದ್ದೇಶ ; ಗುರಿ (Fair g. ಹೊಡೆಯುವುದಕ್ಕೆ ನ್ಯಾಯವಾದ ಗುರಿ. Forbidden g. — ನಿಷಿದ್ಧವಾದ ಗುರಿ). (ವಿನೋದಕ್ಕಾಗಿ, ಆಹಾರಕ್ಕಾಗಿ) ಮನುಷ್ಯನು ಬೇಟೆಯಾಡುವ ಕಾಡುಮೃಗಗಳು, ಪಕ್ಷಿಗಳು, ಮೊ. ವು ; ಇವುಗಳ ಮಾಂಸ. ವಿನೋದಕ್ಕಾಗಿ ಸಾಕಿಕೊಂಡಿರುವ ಹಂಸಪಕ್ಷಿಗಳ ಹಿಂಡು. **G.-act, G.-law** (ಸಾ., ಬ. ವ. ದಲ್ಲಿ) (ಮೃಗಗಳನ್ನು ಬೇಟೆಯಾಡುವುದಕ್ಕೂ ಸಂರಕ್ಷಿಸುವುದಕ್ಕೂ ಮಾಡಿದ) ಬೇಟೆಯ ಕಾನೂನು, ಶಾಸನ. **G.-bag** ಬೇಟೆಯಾಡಿದ ಪ್ರಾಣಿಗಳನ್ನು ಹಾಕುವ ಚೀಲ : ಶಿಕಾರಿ ಚೀಲ. **G. ball** ಟೆನಿಸ್ ಮೊ. ಆಟಗಳಲ್ಲಿ ಗೆಲುವಿಗೆ ಒಂದು ಸಂಖ್ಯೆ ಮಾತ್ರ ಉಳಿದಿರುವ ಸಂದರ್ಭ. **G.-cock** ಕಾಳಗದ ಹುಂಜ. **G.-fowl, -chicken, -egg** ಕಾಳಗದ ಕೋಳಿ, — ಕೋಳಿಮರಿ, — ಮೊಟ್ಟೆ. **Gámekeeper** ಬೇಟೆಯ ಪ್ರಾಣಿಗಳನ್ನು ಅಭಿವೃದ್ಧಿಮಾಡುವುದಕ್ಕೂ ಬೇಟೆ ಕಳವಾಗದಂತೆ ನೋಡಿಕೊಳ್ಳುವುದಕ್ಕೂ ನಿಯಮಿತನಾದವನು : ಬೇಟೆ ಕಾವಲುಗಾರ. **G.-licence** ಬೇಟೆಯ ಅಪ್ಪಣೆಚೀಟಿ, ಅನುಮತಿ ಪತ್ರ. **G.-preserve** ಬೇಟೆಗಾಗಿ ಪ್ರಾಣಿಗಳನ್ನು ರಕ್ಷಿಸಿಟ್ಟಿರುವ ಪ್ರದೇಶ : ಬೇಟೆಗಾವಲು. **G.-preserver** ಬೇಟೆಯ ಪ್ರಾಣಿಗಳನ್ನು ಅಭಿವೃದ್ಧಿಮಾಡುವ, ಮತ್ತು ಬೇಟೆಯ ಕಾನೂನನ್ನು ನಿಯತವಾಗಿ ಜಾರಿಯಲ್ಲಿಟ್ಟುಕೊಂಡಿರುವ, ಜಮೀನ್ದಾರ, ಮೊ. ವರು. **G.-tenant** ಒಂದು ಪ್ರದೇಶದಲ್ಲಿ ಬೇಟೆಯಾಡಲು ಅಥವಾ ಮೀನುಹಿಡಿಯಲು ಗುತ್ತಿಗೆಪಡೆದವನು : ಬೇಟೆ ಗುತ್ತಿಗೆದಾರ. **Gámesome** (ಗು.) ಕ್ರೀಡಾ ವಿನೋದಿ ; ಆಟಗುಳಿ ; ಚೆಲ್ಲಾಟದ ; ನೆಗೆದಾಡುವ ; ಉಲ್ಲಾಸದ. **Gámesomely** (ಕ್ರಿ. ವಿ.) ; **Gámesomeness** (ನಾ.); **Gámy** (ಗು.) ಬೇಟೆ ಸಮೃದ್ಧಿಯಾಗಿರುವ ; ಮೃಗಯಾಸಕ್ತಿಯುಳ್ಳ. (ವಿರ. ಪ್ರ.) ಹುರುಪಿನ ; ಉತ್ಸಾಹ ಭರಿತ ; ಹುಮ್ಮಸ್ಸುಳ್ಳ. (ಮು., ಕೆಡುವ ಸಂಭವ ಬರಬಹುದೆನ್ನುವ ವರೆಗೂ ಅಡಿಗೆಮಾಡದೆ ಹಾಗೆಯೇ ಇಟ್ಟಿದ್ದ ಬೇಟೆಯ ವಿಷಯದಲ್ಲಿ) ಬೇಟೆಯ ಗಂಧವುಳ್ಳ.

Game (ಗು.) ಕಾಳಗದ ಹುಂಜದಂಥ. ಉತ್ಸಾಹ ಭರಿತ ; ಹುಮ್ಮಸ್ಸುಳ್ಳ ; ಹುರುಪಿನ. (ಯಾವುದಾದರೂ ಒಂದು ಕಾರ್ಯಕ್ಕೆ) ಸಿದ್ಧವಾಗಿರುವ, ಮನಸ್ಸುಳ್ಳ. Die g. (Die[2] ನೋಡಿ). **Gámely** (ಕ್ರಿ. ವಿ.) ಹುಮ್ಮಸ್ಸಿನಿಂದ ; ಬಹು ಧೈರ್ಯದಿಂದ. **Gámeness** (ನಾ.) ಬೇಟೆಯ ಗುಣ. ತಾಳ್ಮೆ ; ಸಹಿಸುವ ಶಕ್ತಿ ; ಸಹಿಷ್ಣುತೆ ; ಧೈರ್ಯ ; ಸಾಹಸ.

Game (ಕ್ರಿ.) ಹಣದಾಸೆಯಿಂದ ಲಾಭ ನಿಶ್ಚಯವಿಲ್ಲದ ಆಟವಾಡು; ಜೂಜಾಡು ; ಜೂಜಾಡಿ ಕಳೆದುಕೊ (*Away* ಉಪ. ದೊಡನೆ). Gaming-house ಜೂಜಿನ ಮನೆ ; ಜೂಜು ಕಟ್ಟೆ. Gaming-table ಜೂಜಾಟದ ಮೇಜು. **Gámester** (ನಾ.) ಜೂಜು ಕೋರ ; ಜೂದಾಳಿ.

Game[2] ಗೇಮ್ (ಗು.) (ಕಾಲು, ಕೈ, ಮೊ.) ಕುಂಟಾದ.

Gaméte ಗ್ಯಾಮೀಟ್ (ನಾ.) (ಜೀ. ವಿ.) ಭಿನ್ನ ಲಿಂಗದ ಜೀವಾಣು ವಿನೊಡನೆ ಸಂಯೋಗ ಹೊಂದಿ ಗರ್ಭೋತ್ಪತ್ತಿ ಮಾಡುವ ಗಂಡು ಅಥವಾ ಹೆಣ್ಣು ಜೀವಾಣು : ಜಂಪತಿ.

Gamin (F) ಗಾಮ್ಯಾನ್, ಗ್ಯಾಮಿನ್ (ನಾ.) ನೋಡಿಕೊಳ್ಳದೆ, ಅಲೆಯಲು ಬಿಟ್ಟ ಹುಡುಗ ; ಬೀದಿಯ ಹುಡುಗ ; ಪೋಲಿ ಹುಡುಗ ; ಭಿಕಾರಿ ಹುಡುಗ ; ತಿರುಕುಳಿ.

Gámma ಗ್ಯಾಮ (ನಾ.) ಗ್ರೀಕ್ ವರ್ಣಮಾಲೆಯ ಮೂರನೆಯ ಅಕ್ಷರ (= G) (ಕೆಲವು ಸಂದರ್ಭಗಳಲ್ಲಿ ಸಂಖ್ಯಾ ಸಂಕೇತವಾಗಿ ಉಪಯೋಗ). ಒಂದು ಬಗೆಯ ಪತಂಗದ ಹುಳು. G. rays ರೇಡಿಯಂ, ಮೊ. ಸ್ವಯಂ ಪ್ರಕಾಶ ಪದಾರ್ಥಗಳು ಸೂಸುವ, ವಿಶೇಷ ಪ್ರವೇಶಶಕ್ತಿಯುಳ್ಳ ಕಿರಣಗಳು : ಗ್ಯಾಮ ರಶ್ಮಿ.

Gammádion ಗ್ಯಮೇಡಿಯಾನ್ (ನಾ.) = Fylfot.

Gámmer ಗ್ಯಾಮರ್ (ನಾ.) ಅಜ್ಜಿ ; ಮುದುಕಿ. (ಹಳೆಯ ಮಾತು)

Gámmon[1] ಗ್ಯಾಮನ್ (ನಾ.) ಉಪ್ಪು ಹಾಕಿ ಒಣಗಿಸಿದ ಹಂದಿಯ ತೊಡೆಯ ಮಾಂಸ.

Gámmon[2] ಗ್ಯಾಮನ್ (ನಾ., ಕ್ರಿ. ಸಕ.) Backgammon ಎಂಬ ಆಟದಲ್ಲಿ ಪಡೆದ ಪೂರ್ತಿ ಜಯ. (ಕ್ರಿ.) ಎದುರಾಳಿಯನ್ನು ಹೀಗೆ ಪೂರ್ತಿ ಸೋಲಿಸು.

Gámmon[3] ಗ್ಯಾಮನ್ (ನಾ., ಭಾವ. ಅವ್ಯ., ಕ್ರಿ.) ಠಕ್ಕು ; ಶುದ್ಧ ಮೋಸ. ಅವಿವೇಕ ! ಅಸಂಬದ್ಧ ! (ಕ್ರಿ.) ನಂಬಿಕೆ ತೋರುವಂತೆ ಮಾತನಾಡು ; ನಟನೆ ಮಾಡು ; ಸೋಗು ಹಾಕು ; ಮೋಸ ಮಾಡು ; ವಂಚಿಸು.

Gámmon[4] ಗ್ಯಾಮನ್ (ಕ್ರಿ. ಸಕ., ನಾ.) ಹಡಗಿನ ಮೂತಿಯ ಮೂಕಿಯನ್ನು ಹಡಗಿನ ಮುಂಭಾಗಕ್ಕೆ ಹಗ್ಗಗಳಿಂದ ಬಿಗಿ(ಯುವುದು)

Gámo- ಗ್ಯಾಮೊ— (ಸ. ಪೂ. ಪ.) ಮದುವೆಯ—, ವಿವಾಹದ—. **-génesis** (ನಾ.) ಪುಂ ಸ್ತ್ರೀ ಸಂಯೋಗ ಜನನ. **-pétalous** (ಗು.) (ಸ. ವಿ.) ಸಂಯುಕ್ತ ದಳಗಳುಳ್ಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Gamp ಗ್ಯಾಂಪ್ (ನಾ.) (ಹಾಸ್ಯವಾಗಿ) ಕೊಡೆ ; ಛತ್ರಿ (ಮು., ಒಡ್ಡೊಡ್ಡಾಗಿರುವ ದೊಡ್ಡ ಕೊಡೆ)

Gámut ಗ್ಯಾಮಟ್ (ನಾ.) (ಅಂಗೀಕೃತವಾಗಿರುವ ಎಲ್ಲ ಸ್ವರಗಳ) ಪೂರ್ಣ ಸ್ವರ ಶ್ರೇಣಿ; ಸ್ವರ ಗ್ರಾಮ ; ವರೀಯ ಸ್ವರಾಷ್ಟಕ ಶ್ರೇಣಿ ; (ಶಾರೀರದ ಅಥವಾ ವಾದ್ಯದ) ಧ್ವನಿಯ ವ್ಯಾಪ್ತಿ. (ಯಾವುದಾದರೂ ವಿಷಯದ, ವಸ್ತುವಿನ) ಪೂರ್ಣ ವ್ಯಾಪ್ತಿ, ಪ್ರಸರ ; (The whole g. of crime ಸಕಲ ವಿಧವಾದ ಪಾತಕ ಕೃತ್ಯಗಳು, ಅಕೃತ್ಯಗಳು. Run up and down the g. ಬುಡದಿಂದ ತುದಿಯ ವರೆಗೂ, ಆಮೂಲಾಗ್ರವಾಗಿ, ನೋಡಿಬಿಡು)

Gámy. **Game**[1] ನೋಡಿ.

Gánder ಗ್ಯಾಂಡರ್ (ನಾ.) ಗಂಡು ಬಾತು [Sauce for the goose is sauce for the g. ಒಂದಕ್ಕೆ ಅನ್ವಯಿಸುವ ಪ್ರಮಾಣ ಮತ್ತೊಂದಕ್ಕೂ ಅನ್ವಯಿಸುತ್ತದೆ ; ಇಬ್ಬರಿಗೂ ಒಂದೇ ನ್ಯಾಯ (ವಾದ ವಿವಾದಗಳಲ್ಲಿ ವಾದಿಯ ಪ್ರಮಾಣಗಳನ್ನೇ ಪ್ರತಿವಾದಿ ವಾದಿಗೆ ಅನ್ವಯಿಸುವಲ್ಲಿ ಹೇಳುವ ಮಾತು)]. ಅಜ್ಞ ; ಗಾಂಪ ; ಹೆಡ್ಡ ; ಪೆದ್ದ.

Gang ಗ್ಯಾಂಗ್ (ನಾ., ಕ್ರಿ. ಅಕ.) (ಕೆಲಸಗಾರರ, ಗುಲಾಮರ, ಅಥವಾ ಕೈದಿಗಳ) ತಂಡ, ಗುಂಪು, ಕೂಟ ; (ಕಳ್ಳತನ, ದರೋಡೆ, ಮೊ. ಅಕೃತ್ಯಗಳಿಗಾಗಿ) ಒಮ್ಮತದಿಂದ ನಡೆಯುವ, ಅಥವಾ ಒಟ್ಟಿಗೆ ಕಾರ್ಯ ಮಾಡುವ, ಜನರ ತಂಡ, ಪಟಾಲಂ ; ಒಟ್ಟಿಗೆ ಕೆಲಸಮಾಡುವಂತೆ ಅಳವಡಿಸಿದ ಆಯುಧ, ಮೊ. ಗಳ ತಂಡ. [G.-board (ದೋಣಿಯೊಳಕ್ಕೆ ಹೋಗಲು, ಅಥವಾ ಅದರಿಂದ ಹೊರಕ್ಕೆ ಬರಲು, ಜಾರದಂತೆ ಪಟ್ಟಿಗಳನ್ನು ಹೊಡೆದು ಮಾಡಿರುವ) ಹಾದಿ ಹಲಗೆ, ನಡೆ ಹಲಗೆ]. (ಕ್ರಿ.) (ಸ್ಕಾ. ಪ್ರ.) ಹೋಗು ; ನಡೆ [G. agley ಸೊಟ್ಟ ಸೊಟ್ಟಗೆ ಹೋಗು ; ವಕ್ರವಾಗಿ ನಡೆ ; (ಉದ್ದೇಶ, ಮೊ. ವು) ಎಣಿಸಿದಂತೆ ನಡೆಯದೆಹೋಗು, ತಪ್ಪಿಹೋಗು. G. one's ain gait ತನ್ನ ದಾರಿ ಹಿಡಿದು ತಾನು ಹೋಗು]. **Gánger** (ನಾ.) ಪಾದ ಚಾರಿ ; ಕಾಲುನಡಗೆಯಲ್ಲಿ ಹೋಗುವವನು. ವೇಗದಿಂದ ಹೋಗುವ ಕುದುರೆ. ಕೆಲಸಗಾರರ ದಳದ ಮುಖಂಡ, ಮೇಸ್ತ್ರಿ. **Gángster** (ನಾ.) ಕಳ್ಳರು, ದರೋಡೆಕೋರರು, ಮೊ. ಕ್ರೂರ ಪಾಪಕರ್ಮಿಗಳ ತಂಡಕ್ಕೆ ಸೇರಿದವನು.

Gange ಗ್ಯಾಂಜ್ (ಕ್ರಿ. ಸಕ.) (ಗಾಳದ ಕೊಕ್ಕೆಯನ್ನು, ಅದರ ದಾರದ ಭಾಗವನ್ನು) ಸೂಕ್ಷ್ಮ ತಂತಿಯಿಂದ ಭದ್ರಪಡಿಸು. **Gánging** (ನಾ.)

Gánges ಗ್ಯಾಂಜೀಸ್ (ನಾ.) ಗಂಗಾ ನದಿ. **Gangétic** ಗ್ಯಾಂಜೆಟಿಕ್ (ಗು.) ಗಂಗಾ ನದಿಯ.

Gánglion ಗ್ಯಾಂಗ್ಲಿಯನ್ (ನಾ. ; ಬ. ವ. -lia) [ನರತಂತುಗಳು (ಅಲ್ಲಿಂದ) ಸುತ್ತಲೂ ಹೊರಡುವ] ನರದಮೇಲಿನ ಉಬ್ಬು ಅಥವಾ ಗಂಟು : ನರ ಗ್ರಂಥಿ ; ನರವ್ಯೂಹದ ಕೇಂದ್ರಸಂಸ್ಥೆಯಲ್ಲಿರುವ ಗರ್ಭಪ್ರಾಯವಾದ, ಬೀಜಪ್ರಾಯವಾದ, ಬೂದು ಬಣ್ಣದ ನರಪದಾರ್ಥ (G-cell, - corpuscule, - globule ಈ ಪದಾರ್ಥದಲ್ಲಿಯ ನರದ ಜೀವ ಕಣ). (ರೂಪ.) ಶಕ್ತಿ, ಕಾರ್ಯ ಕಲಾಪ, ಆಸಕ್ತಿ, ಮೊ. ಗಳ ಕೇಂದ್ರ. **Gángliated, Gánglionated** (ಗು.) ನರಗ್ರಂಥಿಗಳುಳ್ಳ, —ಳಿಂದ ಕೂಡಿದ. **Gángliform** (ಗು.) — ಆಕಾರದ. **Gang-liónic** (ಗು.) ನರಗ್ರಂಥಿಯ ; —ಯಿಂದ ರಚಿತವಾದ ; — ಯುಳ್ಳ.

Gángrene ಗ್ಯಾಂಗ್ರೀನ್ (ನಾ., ಕ್ರಿ.) ದೇಹಭಾಗದ ಅಂಗರಚನಾ ಸಾಮಗ್ರಿ (ಮು., ಎಲುಬು) ಸತ್ತು ಕೊಳೆತುಹೋಗುವುದು : ಅಂಗ ಕ್ಷಯ (ರೂಪ. ಸಹ) ; ಆರ್ಬುದ ವ್ಯಾಧಿ ; ಕೋಥ ವ್ಯಾಧಿ ; ಏಡಿಹುಣ್ಣು. (ಕ್ರಿ.) ಸತ್ತು ಕೊಳೆತುಹೋಗು ; ಕ್ಷಯಿಸು ; ಕೊಳೆಯಿಸು. **Gáng-renous** ಗ್ಯಾಂಗ್ರಿನಸ್ (ಗು.)

Gangue ಗ್ಯಾಂಗ್ (ನಾ.) ಅದುರು ಸಿಕ್ಕುವ (ಇರುವ) ಮಣ್ಣುಗಟ್ಟಿ ಅಥವಾ ಶಿಲೆ.

Gángway ಗ್ಯಾಂಗ್‌ವೇ (ನಾ.) (ಮು., ಪೀಠಪಂಕ್ತಿಗಳ) ಮಧ್ಯೆ ತಿರುಗಾಡಲು ಬಿಟ್ಟಿರುವ ದಾರಿ ; (House of Commons ಸಭೆಯಲ್ಲಿ ಹಿಂದಿನ ಪೀಠಗಳಿಗೆ ಹೋಗಲು ಅರ್ಧ ದೂರದಲ್ಲಿ ಅವಕಾಶಕೊಡುವ ಅಡ್ಡದಾರಿ)

Gánnet ಗ್ಯಾನೆಟ್ (ನಾ.) ಒಂದು ಜಾತಿಯ ಕಡಲು ಹಕ್ಕಿ.

Gánoid ಗ್ಯಾನಾಯ್ಡ್ (ಗು., ನಾ.) (ಮೀನಿನ ಪೊರೆಗಳ ವಿಷಯದಲ್ಲಿ) 'ಎನ್ಯಾಮೆಲ' ನಂತೆ (ಗಾಜುಲೇಪದಂತೆ) ಗಡುಸೂ ನುಣುಪೂ ಹೊಳಪೂ ಉಳ್ಳ. (ಮೀನು) ಇಂಥ ಪೊರೆಗಳುಳ್ಳ. (ನಾ.) ಒಂದು ಬಗೆಯ ಮೀನು.

Gántry ಗ್ಯಾಂಟ್ರಿ, **Gaúntry** ಗಾಂಟ್ರಿ (ನಾ.) ಪೀಪಾಯಿ ಇಡುವ ಮರದ ನಾಗಾಲು ಪೀಠ, ಕಾಲ್ಮಣೆ. (ಸಾಗು ಕ್ರೇನ್‌ಯಂತ್ರ, ರೈಲು ಸಂಜ್ಞೆ, ಸಂಕೇತ, ಮೊ. ಗಳ) ಆಧಾರ ಪೀಠ.

Gánymede ಗ್ಯಾನಿಮೀಡ್ (ನಾ.) (ಹಾಸ್ಯವಾಗಿ) (ಮದ್ಯದಂಗಡಿಯ) ಪರಿಚಾರಕ. (ಖ. ವಿ.) ಬೃಹಸ್ಪತಿ ಗ್ರಹದ ಅತ್ಯಂತ ದೊಡ್ಡ ಉಪ ಗ್ರಹ(ದ ಹೆಸರು)

Gaol, Jail ಜೆಯ್ಲ್ (ನಾ., ಕ್ರಿ. ಸಕ.) (G. ಎಂಬುದು ಸರ್ಕಾರ ಪ್ರ. ; ಎರಡು ರೂಪಗಳೂ ಸಾಹಿತ್ಯದಲ್ಲಿ, ಒಂದು ನಿಷ್ಕರ್ಷೆಯಿಲ್ಲದೆ, ಪ್ರ.) ಸೆರೆ ಮನೆ ; ಬಂದೀಖಾನೆ ; ಜೈಲು ; ತುರಂಗ ; ಕಾರಾಗೃಹ. ಸೆರೆ ; ಬಂಧನ. (ಕ್ರಿ.) ಸೆರೆ ಹಾಕು ; ಬಂಧನದಲ್ಲಿಡು ; ಜೈಲಿಗೆ ಸೇರಿಸು. G., J., -bird ಕೈದಿ ; ಚಾಳಿಬಿದ್ದ ತಕ್ಸೀರುದಾರ ; ಜೈಲುಚಾಳಿ ; ಮೋಸಗಾರ ; ಠಕ್ಕ ; ದಗಲ್ಬಾಜಿ. G., J., -delivery ಜೈಲು ಖುಲಾಸೆ (ಮು., ನ್ಯಾಯದರ್ಶಿಗಳ ಸಮಕ್ಷಮ ವಿಚಾರಣೆಯಲ್ಲಿ, ಜೈಲಿನಲ್ಲಿರುವ ವಿಚಾರಣೆಯಾಗಬೇಕಾದ ಕೈದಿಗಳನ್ನೆಲ್ಲ ವಿಚಾರಣೆಮಾಡಿ ತಪ್ಪು ಹೊರದೆ ಇರುವವರನ್ನು ಬಿಟ್ಟುಬಿಟ್ಟು ಮಿಕ್ಕವರಿಗೆ ಶಿಕ್ಷೆ ವಿಧಿಸುವುದು). G., J., fever ಹಿಂದೆ ಜೈಲುಗಳಲ್ಲಿ ಸ್ಥಳೀಯವಾಗಿ ತಪ್ಪದೆ ತಲೆದೋರುತ್ತಿದ್ದ ಉಗ್ರ ವಿಷಮ ಜ್ವರ. **Gaóler, Jaíler, Jaílor** (ನಾ.) ಸೆರೆ ಮನೆಯ ಅಥವಾ ಅದರಲ್ಲಿಯ ಸೆರೆಯಾಳುಗಳ ಜವಾಬ್ದಾರಿಯುಳ್ಳ ಅಧಿಕಾರಿ ; ಸೆರೆಮನೆಯ ಅಧಿಪತಿ. **Gaóleress, Jaíleress, Jaíloress** (ನಾ., ಸ್ತ್ರೀ.)

Gap ಗ್ಯಾಪ್ (ನಾ.) (ಗೋಡೆಯಲ್ಲಿ ಅಥವಾ ಬೇಲಿಯಲ್ಲಿ) ಕಂಡಿ, ಸಂದು, ಅವಕಾಶ, ಅಂತರ ; (ಗ್ರಂಥ) ಪಾತ. ತೆರಪು ; ಖಾಲಿ ಜಾಗ (Stop, fill, supply, a g. ಖಾಲಿಬಿದ್ದುದನ್ನು ತುಂಬು, ಭರತಿ ಮಾಡು). ಕಣಿವೆ ; ಘಾಟಿ. (ಅಭಿಪ್ರಾಯ, ಸಹಾನುಭೂತಿ, ಮೊ. ಗಳಲ್ಲಿ ಬಹಳ) ಅಂತರ. **Gapped, Gáppy** (ಗು.) ತೆರಪುಳ್ಳ ; ಸಂದುಗಳುಳ್ಳ ; ಅಲ್ಲಲ್ಲಿ ಬಿಡುವುಗಳುಳ್ಳ ; ಸೇರಿಕೊಂಡಿರದ.

Gape ಗೇಪ್ (ಕ್ರಿ. ಅಕ., ನಾ.) (ಬಾಯಿ, ಮುತ್ತಿನ ಚಿಪ್ಪು, ಗಾಯ, ದೊಡ್ಡ ಬಿರುಕು, ಮೊ.) ಅಗಲವಾಗಿ ಬಾಯಿ, — ಬಿಡು, ತೆರೆ, ತೆರೆದಿರು, ಬಿಟ್ಟಿರು ; ಸೀಳು ; ಬಿರಿ ; ಬಾಯಿ ಬಿಟ್ಟುಕೊಂಡು ನೋಡು ; ದಿಟ್ಟಿಸಿ ನೋಡು ; ದುರದುರನೆ ನೋಡು ; ಕುತೂಹಲದಿಂದ ರೆಪ್ಪೆಹಾಕದೆ ನೋಡು (*At* ಉಪ. ದೊಡನೆ). ಆಕಳಿಸು. (ನಾ.) ಆಕಳಿಕೆ ; ಬಾಯಿ ಬಿಟ್ಟುಕೊಂಡು ನೋಡುವುದು ; (The gapes ಕೋಳಿಗಳ ಆಕಳಿಕೆ ರೋಗ) ; (ಹಾಸ್ಯವಾಗಿ) ಆಕಳಿಕೆಯ ಹೊಡೆತ. ತೆರೆದ ಬಾಯಿಯ ಅಥವಾ ಕೊಕ್ಕಿನ ವಿಸ್ತಾರ ; ತೆರೆದಿರುವ ಕೊಕ್ಕಿನ ಭಾಗ. ಹರುಕು ಗಂಡಿ ; ಬಿರುಕು ; ತೆರಪು. **G.-seed** (ಹಾಸ್ಯವಾಗಿ) ದಿಟ್ಟಿಸಿ ನೋಡುವುದು ; —ವ ಸಂದರ್ಭ ; ದೃಷ್ಟಿ ನೆಟ್ಟ ವಸ್ತು. **Gáper** (ನಾ.) (ಕ್ರಿಯಾರ್ಥಗಳಲ್ಲಿ). ಕೆಲವು ಪಕ್ಷಿಜಾತಿ. ಚಿಪ್ಪುಳ್ಳ ಒಂದು ಜಾತಿಯ ಮೃದ್ವಂಗಿ.

Gárage (F) ಗ್ಯಾರಾಝ್, —ರೆ(ರಿ)ಜ್ (ನಾ., ಕ್ರಿ. ಸಕ.) ಕುದುರೆ, ಮೊ. ದ ಎಳೆಯುವ ಪ್ರಾಣಿಗಳ ಆವಶ್ಯಕತೆಯಿಲ್ಲದ ಬಂಡಿಗಳನ್ನು (ಮು., ಮೋಟಾರು ಬಂಡಿಗಳನ್ನು) ಬಿಟ್ಟಿರುವ, ಅಥವಾ ಸರಿಮಾಡುವ, ಕಟ್ಟಡ, ಜೋಪಡಿ : ಮೋಟಾರು ಖಾನೆ .(ಕ್ರಿ.) (ಮೋಟಾರು ಬಂಡಿಯನ್ನು) ಮೋಟಾರು ಖಾನೆಯಲ್ಲಿ ಬಿಡು.

Garb ಗಾರ್ಬ್ (ನಾ., ಕ್ರಿ. ಸಕ.) (ಮು., ವಿಶೇಷ ರೀತಿಯ) ಉಡುಪು, ಉಡಿಗೆ ; (ಒಬ್ಬನ) ಉಡಿಗೆಯ ರೀತಿ ; ವೇಷ. (ಕ್ರಿ.) ಉಡುಪು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೊಡಿಸು, ತೊಟ್ಟುಕೊ ; (ಒಬ್ಬನಿಗೆ, ಮು., ವೈಶಿಷ್ಟ್ಯದ) ಉಡುಪು ಹಾಕು (ಸಾ., ಭೂ. ಕೃ. ನಲ್ಲಿ ಅಥವಾ ಸ್ವಾರ್ಥಕವಾಗಿ)

Gárbage ಗಾರ್‌ಬೆ(ಬಿ)ಜ್ (ನಾ.) ಕೊಳೆತ ಮಾಂಸ ; ಹೊಲಸು ತಿಂಡಿ ; ಕಸ ; ಕೊಳೆ. ಹೊಲಸಾದ, ಕೆಲಸಕ್ಕೆ ಬಾರದ, —ಓದು, ಗ್ರಂಥ.

Gárble ಗಾರ್‌ಬ್‌ಲ್ (ಕ್ರಿ. ಸಕ.) (ವಿರ. ಪ್ರ.) ಅತ್ಯುತ್ತಮವಾದದ್ದನ್ನು ಆರಿಸು, ಚುನಾಯಿಸು. (ವಿಷಯಗಳು, ಹೇಳಿಕೆಗಳು, ಮೊ. ಗಳಿಂದ ತನಗೆ ಬೇಕಾದವನ್ನು ಮಾತ್ರ, ಸಾ., ದುರುದ್ದೇಶದಿಂದ) ಆಯ್ಕೆಮಾಡು ; ತಪ್ಪು ಅಭಿಪ್ರಾಯ ಕೊಡುವುದಕ್ಕಾಗಿ (ಹೇಳಿಕೆಯಲ್ಲಿ) ಕೆಲವು ಭಾಗ ಬಿಟ್ಟು ಉದಾಹರಿಸು, ತೋರಿಸು ; ತಿರಿಚು ; ತಿರಿಚಿ ಹೇಳು ; ಅಭಾಸ ಮಾಡಿ ಹೇಳು.

Gárboard (strake) ಗಾರ್‌ಬೋರ್ಡ್ (ಸ್ಟ್ರೇಕ್) (ನಾ.) ಹಡಗಿನ ತಳದಮೇಲೆ ಹಾಕಿರುವ ಹಲಗೆಗಳ ಮೊದಲನೆಯ ಸಾಲು ; ಕಬ್ಬಿಣದ ಹಡಗಿನಲ್ಲಿ ಇದರಂತೆ ಹಾಕಿರುವ ಕಬ್ಬಿಣದ ತಗಡುಗಳು.

Garcón (F) ಗಾರ್ಸಾನ್ (ನಾ.) ಫ್ರೆಂಚ್ ಆಹಾರದಂಗಡಿ, ಮೊ. ಗಳಲ್ಲಿಯ ಪರಿಚಾರಕ, ಮಾಣಿ.

Gárden ಗಾರ್ಡ್‌ನ್ (ನಾ.,ಗು.) (ಹೂವು, ಹಣ್ಣು, ಕಾಯಿಪಲ್ಯ, — ಬೆಳೆಯುವ) ತೋಟ. [Kitchen, market, g. (ಆಯಾ ಪದಗಳನ್ನು ನೋಡಿ)]. (ಬ. ವ. ದಲ್ಲಿ) (ಸಾರ್ವಜನಿಕ ವಿಹಾರಕ್ಕಾಗಿ ಮಾಡಿರುವ) ವನ, ಉದ್ಯಾನ, ಉಪ ವನ (Botanical, Zoological, gardens ಸಸ್ಯವೈಜ್ಞಾನಿಕ, ಪ್ರಾಣಿವೈಜ್ಞಾನಿಕ, ವನ). ವಿಹಾರ ಭೂಮಿ ; ಆಡುಂಬೊಲ (ಗ್ರಾಂ.). ವಿಶೇಷ ಫಲವತ್ತಾದ ಪ್ರಾಂತ (The g. of England ಇಂಗ್ಲೆಂಡಿನ ಕೆಂಟ್, ಮೊ. ಕೆಲವು ಪ್ರಾಂತಗಳು). (ಬ. ವ. ದಲ್ಲಿ) (ಕೆಲವು ಪೂರ್ವಪದಗಳೊಡನೆ ಸೇರಿ : ಬೀದಿ, ಚೌಕ, ಮೊ. ಗಳಲ್ಲಿಯ) ತೋಟವೆಂದು ಹೆಸರಿಟ್ಟ ಮನೆಗಳ ತಂಡ, ಶ್ರೇಣಿ (Spring Gardens, etc.). ವಾಟಿ ; ವೃಕ್ಷ ವಾಟಿ ; ತೋಪು. [The G. ಎಪಿಕ್ಯೂರಸ್ ಎಂಬ ತತ್ತ್ವಜ್ಞಾನಿಯ ತತ್ತ್ವ ಅಥವಾ ಮತ (ಅತನು ಉದ್ಯಾನದಲ್ಲಿ ಬೋಧೆಮಾಡುತ್ತಿದ್ದ ಕಾರಣದಿಂದ)]. (ಗು.) ಕೃಷಿ ಮಾಡಿ ಬೆಳಸಿದ, (ಕಾಡಿನದಲ್ಲ) (G. plants ತೋಟದಲ್ಲಿ ಬೆಳಸಿದ ಗಿಡಗಳು) [Common or g. (ಅನಂ.) ಸಾಮಾನ್ಯ ; ಸಾಧಾರಣ]. ತೋಟದಲ್ಲಿ ವಾಸಮಾಡುವ ; ತೋಟದ. **G.-spider** ತೋಟದ ಜೇಡ. **G.-warbler** ಒಂದು ಜಾತಿಯ ಚಿಲಿಪಿಲಿಗುಟ್ಟುವ ಪಕ್ಷಿ. **G. city** ಹುಲ್ಲು ಮೈದಾನಗಳು ಉಪ ವನಗಳು, ಮೊ. ವನ್ನೊಳಕೊಂಡು ಆಕರ್ಷಕ ವಾಗಿರುವಂತೆ ಒಂದು ಗೊತ್ತಾದ ಕ್ರಮದಲ್ಲಿ ವಿಸ್ತಾರವಾಗಿ ಕಟ್ಟಿದ (ಕೈಗಾರಿಕೆಯ ಅಥವಾ ಇತರ) ಪಟ್ಟಣ : ಉದ್ಯಾನ ನಗರ. **G. suburb** ಉದ್ಯಾನ ಉಪ ನಗರ. **G.-engine** ತೋಟಕ್ಕೆ (ನೀರು ಹಾಕಲು ಉಪಯೋಗಿಸುವ) ನೀರೆರೆಯುವ ಸಾಗುಯಂತ್ರ. **G.-frame** ಹಿಮ ತಟ್ಟದಂತೆ ಸಣ್ಣ ಸಸ್ಯಗಳನ್ನೂ ಬಿತ್ತನೆಯನ್ನೂ ಶಾಖವಾಗಿಟ್ಟು ಬೇಗ ಬೆಳೆಯುವಂತೆ ಮಾಡುವ ಗಾಜಿನ ಪೆಟ್ಟಿಗೆ, ಚೌಕಟ್ಟು. **G.-glass** ಸಸ್ಯದಮೇಲೆ ಮುಚ್ಚುವ ಗಂಟೆಯಾಕಾರದ ಗಾಜುಪಾತ್ರೆ. **G.-house** ತೋಟದಲ್ಲಿರುವ ಚಿಕ್ಕ ವಾಸದ ಮನೆ, ಅಥವಾ ಇತರ ಕೆಲಸಕ್ಕಾಗಿ ಉಪಯೋಗಿಸುವ ತೋಟದ ಸಣ್ಣ ಮನೆ. **G.-party** [ಹುಲ್ಲು ಮೈದಾನದಲ್ಲಿ ಅಥವಾ ಉದ್ಯಾನದಲ್ಲಿ (ಫಲಾಹಾರ, ಮೊ. ಗಳೊಂದಿಗೆ) ನಡಸುವ] ಉದ್ಯಾನ ಗೋಷ್ಠಿ. **G.-plot** ತೋಟ ಮಾಡಿರುವ ಪ್ರದೇಶ ; ಬಾಗಾಯತು ಜಮೀನು. **G. seat** ತೋಟದಲ್ಲಿ ಕುಳಿತುಕೊಳ್ಳಲು ಹಾಕಿರುವ ಬೆಂಚು, ಮೊ. ಆಸನ ; ಕೆಲವು ಬಸ್ಸುಗಳ ಮೇಲ್ಭಾಗದಲ್ಲಿ ಒಬ್ಬೊಬ್ಬರಿಗಾಗಿ ಮಾಡಿರುವ ಈ ತೆರದ ಆಸನ **G.-stuff** ಕಾಯಿಪಲ್ಯ ಮತ್ತು ಹಣ್ಣುಹಂಪಲು ; ತೋಟದ ಬೆಳೆ. **Gardenésque** (ಗು.) ತೋಟದ ರೀತಿಯಲ್ಲಿರುವ.

Gárden (ಕ್ರಿ. ಅಕ.) ತೋಟ ಮಾಡು ; ತೋಟದ ಕೆಲಸ ಮಾಡು ; ತೋಟಗಾರನಾಗಿ ಕೆಲಸಮಾಡು. **Gárdened** (ಗು.) ತೋಟವುಳ್ಳ ; —ಗಳುಳ್ಳ ; ತೋಟದಂತೆ, ತೋಟವಾಗಿ, ಮಾಡಿದ. **Gárdening** (ನಾ.) ತೋಟಗಾರಿಕೆ. **Gárdener** (ನಾ.) ತೋಟಗಾರ ; ತೋಟಿಗ ; ವನ ಪಾಲಕ ; ತೋಟದ ಆಳು ; ಮಾಲಿ.

Gardénia ಗಾರ್ಡೀನಿಯ (ನಾ.) ಸಾ., ಸುವಾಸನೆಯುಳ್ಳ ಬಿಳಿಯ ಅಥವಾ ಹಳದಿಯ ದೊಡ್ಡ ಹೂವು ಬಿಡುವ ಒಂದು ಗಿಡದ ಅಥವಾ ಪೊದರಿನ ಜಾತಿ.

Gargántuan ಗಾರ್ಗ್ಯಾನ್‌ಟ್ಯುಅನ್ (ಗು.) ಬೃಹದಾಕಾರದ ; ರಾಕ್ಷಸಾಕಾರದ ; ದೈತ್ಯಾಕಾರದ ; ವಿಪರೀತ ದೊಡ್ಡ. (Rabelais ಎಂಬ ಫ್ರೆಂಚ್ ಕವಿಯ ಕೃತಿಯಲ್ಲಿ ಬರುವ Gargantua ಎಂಬ ರಾಕ್ಷಸನ ಹೆಸರಿನಿಂದ)

Gárget ಗಾರ್ಗೆಟ್ (ನಾ.) (ದನ, ಹಂದಿ, ಕೋಳಿ, ಮೊ. ಗಳಲ್ಲಿ) ತಲೆಯ, ಗಂಟಲ, — ಊತ ; (ಹಸುವಿನ ಅಥವಾ ಕುರಿಯ) ಕೆಚ್ಚಲ ಊತ.

Gárgle ಗಾರ್ಗ್‌ಲ್ (ಕ್ರಿ., ನಾ.) (ಗಂಟಲನ್ನು) ದ್ರವಮುಕ್ಕುಳಿಸಿ ತೊಳೆ ; ಮುಕ್ಕುಳಿಸು. (ನಾ.) ಮುಕ್ಕುಳಿಸುವ ದ್ರವ ; ಗಂಡೂಷ.

Gárgoyle, Gúr- ಗಾ(ಗ)ರ್‌ಗಾಯ್ಲ್ (ನಾ.) (ಮಾಳಿಗೆಯ ಮೇಲಿನಿಂದ ಸುರಿಯುವ ನೀರು ಗೋಡೆಗೆ ತಾಕದೆ ಕೆಳಗೆ ಬೀಳುವುದಕ್ಕಾಗಿ ಮಾಡಿರುವ ಮನುಷ್ಯನ ಅಥವಾ ಒಂದು ಪ್ರಾಣಿಯ ಮುಖ, ಬಾಯಿ, ದೇಹ, — ಇವುಗಳ ರೂಪಿನ) ವಿಕಟಾಕೃತಿಯ ದೋಣಿಮುಖ.

Garibáldi ಗ್ಯಾರಿಬ್ಯಾ(ಬಾ)ಲ್ಡಿ (ನಾ.) ಹೆಂಗಸಿನ ಅಥವಾ ಮಗುವಿನ ರವಿಕೆ, ಕುಪ್ಪಸ, ಜುಬ್ಬ (ಹಿಂದೆ, ಉಜ್ಜ್ವಲ ಕೆಂಪು ಬಣ್ಣದ್ದು). (Garibaldi ಎಂಬ ಇಟಲಿಯ ಪ್ರಸಿದ್ಧ ದೇಶಾಭಿಮಾನಿಯ ಅನುಯಾಯಿಗಳು ಧರಿಸುತ್ತಿದ್ದ ಕೆಂಪು ಷರ್ಟುಗಳ ಅನುಕರಣದಿಂದ)

Gárish ಗೇರಿಷ್ (ಗು.) ಕಣ್ಣು ಕೋರೈಸುವ ; ಅತ್ಯುಜ್ಜ್ವಲ ; ಅತಿ ಪ್ರಕಾಶದ ; ರಾವು ಬಡಿಯುವ ; ಆಡಂಬರದ ; ಅತಿ ಡಂಭದ ; ಬಹಳ ಬೆಡಗಿನ ; ವಿಪರೀತ ಅಲಂಕಾರದ. **Gárishly** (ಕ್ರಿ. ವಿ.) ; **Gárishness** (ನಾ.)

Gárland ಗಾರ್ಲೆಂಡ್ (ನಾ., ಕ್ರಿ. ಸಕ.) (ಅಲಂಕಾರಕ್ಕಾಗಿ ತಲೆಯ ಸುತ್ತಲೂ ಧರಿಸುವ ಅಥವಾ ಯಾವುದಕ್ಕಾದರೂ ಇಳಿಯಬಿಡುವ, ಎಲೆ, ಹೂವು, ಮೊ. ಗಳ) ದಂಡೆ, ಸರ, ಮಾಲೆ, ಹಾರ ; (ಜಯ, ಮೊ. ಗಳಿಗಾಗಿ ಕೊಡುವ) ಘನತೆ, ಪ್ರಶಸ್ತಿ, ಬಿರುದು, ಬಹುಮಾನ (ಹಾರ, ಪದಕ, ಮೊ.). (ಪ್ರಾಚೀ. ಪ್ರ.) ಕಾವ್ಯ ಮಾಲೆ ; ಗ್ರಂಥ ಸಂಗ್ರಹ ; (ಬೆಳ್ಳಿ, ಚಿನ್ನ, ಮೊ. ಗಳಿಂದ ಮಾಡಿದ) ಹಾರ, ಸರ. (ಕ್ರಿ.) ದಂಡೆ ಮುಡಿಸು ; ಮಾಲೆ ಹಾಕು ; (ಅಲಂಕಾರದ) ಹಾರವಾಗಿರು.

Gárlic ಗಾರ್ಲಿಕ್ (ನಾ.) (ಅಡಿಗೆಯಲ್ಲಿ ಮಸಾಲೆಗಾಗಿ ಉಪಯೋಗಿಸುವ) ಬಹಳ ಕಟುವಾದ ವಾಸನೆಯೂ ರುಚಿಯೂ ಉಳ್ಳ ಗಡ್ಡೆ ಬಿಡುವ ಒಂದು ಸಸ್ಯ : ಬೆಳ್ಳುಳ್ಳಿ ; ಲಶುನ. **Gárlicky** (ಗು.) (ಮು.) ಬೆಳ್ಳುಳ್ಳಿ ವಾಸನೆಯ.

Gárment ಗಾರ್ಮೆಂಟ್ (ನಾ., ಕ್ರಿ. ಸಕ.) ಉಡುಪು ; ಉಡಿಗೆ ; ಹೊದಿಕೆ (ಮು., ನಿಲುವಂಗಿ, ಮೇಲಂಗಿ, ದಗಲೆ) ; (ಬ. ವ. ದಲ್ಲಿ) ಉಡುಪು ; ಬಟ್ಟೆಬರೆ ; ವಸ್ತ್ರ ; (ಯಾವುದಾದರೂ ವಸ್ತುವಿನ) ಕಾಣುವ ಹೊರ ಹೊದಿಕೆ. (ಕ್ರಿ., ಸಾ., ಭೂ. ಕೃ. ನಲ್ಲಿ) (ಕಾವ್ಯ) ಬಟ್ಟೆ ಹಾಕು ; ಉಡುಪು ತೊಡಿಸು.

Gárner ಗಾರ್ನರ್ (ನಾ., ಕ್ರಿ. ಸಕ.) (ಕಾವ್ಯ, ಅಲಂ.) (ಕಾಳು ತುಂಬುವ) ಕಣಜ, ಹಗೇವು ; ದವಸದ ಉಗ್ರಾಣ ; ಧಾನ್ಯಾಗಾರ (ರೂಪ. ಸಹ). (ಕ್ರಿ.) ಕೂಡಹಾಕು ; ಶೇಖರಿಸು ; ಸಂಚಯಿಸು.

Gárnet ಗಾರ್ನೆಟ್ (ನಾ.) ಗಾಜಿನಂಥ ಒಂದು ಬಗೆಯ ಖನಿಜ (ಇದರ ಪಾರದರ್ಶಕವಾದ ದಟ್ಟಕೆಂಪು ಜಾತಿಯದನ್ನು ರತ್ನವನ್ನಾಗಿ ಬಳಸುತ್ತಾರೆ) ; ರಕ್ತ ಮಣಿ ; ಪದ್ಮರಾಗ ; 'ಗಾರ್ನೆಟ್'.

Gárnish ಗಾರ್ನಿಷ್ (ಕ್ರಿ. ಸಕ., ನಾ.) (ಮು., ಭೋಜನಪದಾರ್ಥಗಳನ್ನು) ಆಕರ್ಷಕವಾಗಿ ಅಲಂಕರಿಸು ; ಅಂದವಾಗಿ ಅಣಿಮಾಡು. (ನ್ಯಾ. ಶಾ.) (ಒಬ್ಬ ಸಾಲಗಾರನ ಹಣವನ್ನಿಟ್ಟುಕೊಂಡಿರುವವನಿಗೆ ಆ ಸಾಲಗಾರನ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಣವನ್ನು ಜಪ್ತಿಮಾಡುವುದಾಗಿ ಬರಹದ ಎಚ್ಚರಿಕೆ, ತಿಳಿವಳಿಕೆ (ನೋಟೀಸು), ಕೊಡು ; ಅವನಮೇಲೆ ತಿಳಿವಳಿಕೆಯನ್ನು ಜಾರಿ ಮಾಡು. ಆಗಲೇ ನಡೆಯುತ್ತಿರುವ ದಾವೆಗೆ (ಒಬ್ಬನನ್ನು) ಕಕ್ಷಿಯನ್ನಾಗಿ (ಕೋರ್ಟುಮೂಲಕ) ಕರಸು. (ನಾ.) ಭೋಜನ ಪದಾರ್ಥಗಳನ್ನು ಅಲಂಕರಿಸಲು ಉಪಯೋಗಿಸುವ ವಸ್ತುಗಳು (= **Gárnishing**). ಅಲಂಕಾರ ವಸ್ತು ; ಅಲಂಕಾರ. **Garnisheé** (ನಾ.) ಹಣಜಪ್ತಿಗೆ ಗುರಿಯಾದ ಸಾಲಗಾರನ ಹಣವನ್ನಿಟ್ಟುಕೊಂಡಿರುವವನು. **Gárnisher** (ನಾ.) ; **Gárnishment** (ನಾ.) ; **Gárniture** —ಟ್ಯು(ಚ)ರ್ (ನಾ.) ಸಾಧನ ಸಾಮಗ್ರಿ ; ಉಪಕರಣಗಳು. ಅಂದಗೊಳಿಸುವುದು; ಅಲಂಕರಿಸುವುದು (ಮು., ಭೋಜನ ಪದಾರ್ಥವನ್ನು) ; ಅಣಿಮಾಡುವುದು ; ಅಣಿ ; ಅಲಂಕಾರ ; ಉಡಿಗೆ ತೊಡಿಗೆ ; ಪೋಷಾಕು.

Garótte = Garrotte.

Gárret[1] ಗ್ಯಾರೆಟ್ (ನಾ.) ಅಟ್ಟದ ಕೋಣೆ ; ಮನೆಯ ಮೇಲ್ಛಾವಣಿಗೆ ಹೊದ್ದಿಕೊಂಡಿರುವ ಕೋಣೆ ; ಮೇಲಟ್ಟ. (ಅಸಂ.) ತಲೆ (Be wrong in the g. ತಲೆ ಕೆಟ್ಟಿರು. Have one's g. unfurnished ತಲೆ ಬರಿದಾಗಿರು ; ದಡ್ಡನಾಗಿರು). **Garreteér** — ಟಿಯರ್ (ನಾ.) ಮೇಲಟ್ಟದಲ್ಲಿ ವಾಸಿಸುವವನು (ಮು., ಬಡ ಕೂಲಿಸಾಹಿತಿ)

Gárret[2] ಗ್ಯಾರೆಟ್ (ಕ್ರಿ. ಸಕ.) (ವಾ. ಶಾ.) ಒರಟು ಕಲ್ಲುಕಟ್ಟಡದಲ್ಲಿಯ ಸಂದುಗಳಿಗೆ ಕಲ್ಲುಚಕ್ಕೆ ಇಡುಕು.

Gárrison ಗ್ಯಾರಿಸನ್ (ನಾ., ಕ್ರಿ. ಸಕ.) ದುರ್ಗ, ಕೋಟೆ, ಕಿಲ್ಲೆ, ಪಟ್ಟಣ, ಮೊ. ಗಳಲ್ಲಿ (ಅವುಗಳ) ರಕ್ಷಣೆಗಾಗಿ ಪಾಳೆಯವಿರುವ ಸೈನ್ಯ ; (ದುರ್ಗ) ರಕ್ಷಕ ಸೈನ್ಯ ; ಕಾವಲು ದಂಡು (G. town ರಕ್ಷಕ ಸೈನ್ಯವಿರುವ ಪಟ್ಟಣ). (ಕ್ರಿ.) ರಕ್ಷಕ ಸೈನ್ಯವಿಡು ; —ವಿರು ; ಠಾಣ್ಯ ಹಾಕು ; ಠಾಣ್ಯವಿರು. ಸೈನಿಕರ(ನ)ನ್ನು ಕಾವಲಿಗೆ, ರಕ್ಷಣೆಗೆ, ಇಡು, ನಿಯಮಿಸು.

Gárron ಗ್ಯಾರನ್ (ನಾ.) (ಸ್ಕಾಟ್ಲೆಂಡು ಮತ್ತು ಐರ್ಲೆಂಡು ದೇಶಗಳಲ್ಲಿ ಬೆಳಸಿದ) ಕೀಳ್ತರದ (ಕುದುರೆ) ತಟ್ಟು, ಚಿಕ್ಕ ಕುದುರೆ.

Gárrot ಗ್ಯಾರಟ್ (ನಾ.) ಒಂದು ಜಾತಿಯ ಕಡಲ ಬಾತು.

Gar(r)ótte ಗರಾಟ್ (ನಾ., ಕ್ರಿ. ಸಕ.) ತಕ್ಕ ಸಲಕರಣೆಯ ಮೂಲಕ ಕತ್ತು ಕಿವಿಚಿ, ಹಿಚುಕಿ, ಕೊಲ್ಲುವ ಸ್ಪೇಯ್ನ್ ದೇಶದ ಗಲ್ಲುಶಿಕ್ಷೆ, ಮರಣ ದಂಡನೆ ; ಈ ದಂಡನೆಗಾಗಿ ಉಪಯೋಗಿಸುವ ಸಲಕರಣೆ ; (ಬಲಿಯಾಗಿ ಹಿಡಿದವನನ್ನು) ಕತ್ತುಕಿವಿಚಿ ಉಸಿರುಬಿಗಿದು ಮಾಡುವ ದಾರಿಗಳ್ಳತನ. (ಕ್ರಿ.) (ದಂಡನೆಗಾಗಿ) ಕತ್ತು ಅದುಮಿ ಕೊಲ್ಲು ; (ಸುಲಿಗೆ ಮಾಡಲು) ಕತ್ತು ಕಿವಿಚು. **Gar(r)ótter** (ನಾ.)

Gárrulous ಗ್ಯಾರುಲಸ್ (ಗು.) ಬಹು ಮಾತಾಡುವ ; ಗಳಹುವ ; ಹರಟುವ ; (ಹಕ್ಕಿ, ಹೊಳೆ, ಮೊ.) ಚಿಲಿಪಿಲಿಗುಟ್ಟುವ, ಗುಳುಗುಳೆನ್ನುವ. **Gárrulously** (ಕ್ರಿ. ವಿ.) ; **Gárrulousness** (ನಾ.) ; **Garrúlity** ಗರೂ — (ನಾ.)

Gárter ಗಾರ್ಟರ್ (ನಾ., ಕ್ರಿ. ಸಕ.) ಕಾಲ್ಚೀಲವನ್ನು ಎತ್ತಿಹಿಡಿದುಕೊಳ್ಳುವುದಕ್ಕಾಗಿ ಮಂಡಿಯ ಮೇಲ್ಗಡೆ ಅಥವಾ ಕೆಳಗಡೆ ಕಟ್ಟುವ ಪಟ್ಟಿ : ಕಾಲ್ಚೀಲದ ಬಿಗಿಪಟ್ಟಿ. [The G. ಇಂಗ್ಲಿಷ್ ' ನೈಟ್ ' (Knight) ಪದವಿಯಲ್ಲಿ ಅತ್ಯಂತ ಉಚ್ಚ ಶ್ರೇಣಿ(ಯ ರಾಂಥನ) ; ಇದರ ಸದಸ್ಯತ್ವ]. (ಕ್ರಿ.) ಕಾಲ್ಚೀಲಪಟ್ಟಿಯಿಂದ (ಕಾಲ್ಚೀಲವನ್ನು) ಬಿಗಿ, ಕಾಲನ್ನು ಸುತ್ತುವರಿ.

Garth ಗಾರ್ಥ್ (ನಾ.) (ಪ್ರಾಚೀ. ಪ್ರ., ಪ್ರಾಂ. ಪ್ರ.) ಬಯಲು; ಅಂಗಳ; ತೋಟ ; ಕುದುರೆಯ ಬಯಲು ; (ಅನೇಕ ವೇಳೆ, ವಿಶೇಷಣ ಪದದೊಡನೆ: ಉದಾ., Cloister-g. ವಿರಕ್ತಮಠದ ಅಂಗಳ ; Willow-g. ವಿಲೋ ಮರಗಳ ಬಯಲು)

Gas ಗ್ಯಾಸ್ (ನಾ. ; ಬ. ವ. -es —ಸಸ್) (ಮು., ಸಾಮಾನ್ಯ ಶಾಬುದಲ್ಲಿ ದ್ರವರೂಪಕ್ಕೆ ಅಥವಾ ಘನರೂಪಕ್ಕೆ ತಿರುಗದ, ಪೂರ್ಣ ಸ್ಥಿತಿಸ್ಥಾಪಕ ಗುಣವುಳ್ಳ) ವಾಯುರೂಪದ ವಸ್ತು, ದ್ರವ್ಯ : ಅನಿಲ (ಇತರ ವಾಯುರೂಪದ ವಸ್ತುಗಳನ್ನು ಆವಿ ಅಥವಾ ಬಾಷ್ಪ ಎನ್ನುತ್ತಾರೆ). ಉರಿಗಾಗಿ ಅಥವಾ ಬೆಳಕಿಗಾಗಿ ಉಪಯೋಗಿಸುವ Coal-g. (Coal ನೋಡಿ) ಮೊದಲಾದ ಇಂಗಾಲಸಂಯುಕ್ತ ಜಲಜನಕವುಳ್ಳ ಇತರ ಮಿಶ್ರಣಗಳು. (ಗಣಿಕೆಲಸ) ಗಣಿಯಲ್ಲಿಯ ಸುಡುಗಾಳಿಯೂ ವಾಯುವೂ ಸೇರಿ ಆದ ಸಿಡಿಗಾಳಿ, ಸ್ಫೋಟಾನಿಲ ; (ಆಕಾಶಬುಟ್ಟಿ, ಮೊ. ಗಳಿಗೆ ತುಂಬುವುದಕ್ಕಾಗಿ ಉಪಯೋಗಿಸುವ) ಜಲಜನಕ, ಮೊ. ವು. ಸ್ಪರ್ಶಜ್ಞಾನವಿಲ್ಲದಂತೆ ಮಾಡಲು ಉಪಯೋಗಿಸುವ ' ನೈಟ್ರಸ್ ಆಕ್ಸೈಡ್ ' ಅನಿಲ (=Laughing-g.) ; ಯುದ್ಧದಲ್ಲಿ ಶತ್ರುವಿನಾಶಕ್ಕಾಗಿ ಉಪಯೋಗಿಸುವ ನಂಜುಗಾಳಿ, ವಿಷಗಾಳಿ (=Poison -g.) ; ದೀಪಹೊತ್ತಿಸಲು ಉಪಯೋಗಿಸುವ ಅನಿಲಧಾರೆ. (ಅಮೆ. ಸಂ.) ' ಪೆಟ್ರೋಲ್ 'ಎಣ್ಣೆ (Gasolene ಪದದ ಸಂಕ್ಷಿಪ್ತ). [Step on the gas (ಅಮೆ. ಸಂ.) (ವೇಗವನ್ನು ಹೆಚ್ಚಿಸುವುದಕ್ಕಾಗಿ) ಮೋಟಾರು ಎಂಜಿನಿನ ವೇಗವರ್ಧಕದ ಮೆಟ್ಟನ್ನು ಮೆಟ್ಟು (ರೂಪ. ಸಹ)]. ಬರಿಯ ಮಾತು ; ಹರಟೆ ; ಜಂಬ ಹೊಡೆಯುವುದು; ಪೊಳ್ಳು ಮಾತು; ಬುರುಡೆ (ಹೊಡೆಯುವುದು); (ವಿಷಯ ವಿಚಾರವಿಲ್ಲದ) ಗೊಡ್ಡು ಹರಟೆ ; ಬಗುಳೆ. **G.-bag** ಅನಿಲ ತುಂಬಿದ ಚೀಲ. ಬುರುಡೆಕೋರ ; ಹರಟೆಯಮಲ್ಲ ; ಬಗುಳೆ. ವಾಯುಹಡಗಿನಲ್ಲಿ ಅನಿಲಪಾತ್ರೆ. (ತಿರಸ್ಕಾರವಾಗಿ) (ಫಲಕ ವಿಮಾನವಲ್ಲದ) ಗಾಳಿ ಹಡಗು, ಆಕಾಶಬುಟ್ಟಿ. **G.-bracket** (ಗೋಡೆಯಿಂದ ಚಾಚಿಕೊಂಡಿರುವ) ಅನಿಲದೀಪದ ಕೊಳವೆ, ಮೊ. ಸಲಕರಣೆ. **G.-coal** ಅನಿಲವನ್ನು ತಯಾರಿಸುವ ' ಬಿಟ್ಯುಮಿನ್ ' ಕಲ್ಲಿದ್ದಲು. **G.-coke** (ಕಲ್ಲಿದ್ದಲಿನಿಂದ ಅನಿಲ ತಗೆದಮೇಲೆ ಉಳಿಯುವ) ಕಲ್ಲಿದ್ದಲ ಕಿಟ್ಟ. **G.-engine, -motor** (ಮುಚ್ಚಿರುವ ನಾಳಿಪಾತ್ರೆಯೊಳಗಡೆ ತಾಳಕ್ರಮದಲ್ಲಿ ದಹನವಾಗಿ ಸಿಡಿಯುವುದರಿಂದ ಹುಟ್ಟುವ ಶಕ್ತಿಯನ್ನುಪಯೋಗಿಸಿಕೊಂಡು ನಡೆಯುವ) ಅನಿಲಚಾಲಿತ ಎಂಜಿನ್ನು, ಮೋಟಾರು. **G.-fittings** ಅನಿಲದಿಂದ ಬೆಳಕನ್ನು ಅಥವಾ ಶಾಖವನ್ನು ಮನೆಗೆ ಒದಗಿಸುವುದಕ್ಕಾಗಿ ಅಳವಡಿಸುವ ಸಾಧನ : ಅನಿಲಜ್ವಲನದ ಹೊಂದಾವಣೆಗಳು. **G.-fitter** ಇವನ್ನು ಅಳವಡಿಸುವ ಕೆಲಸಗಾರ, ವ್ಯಾಪಾರಿ. **G.-helmet, -mask** ವಿಷಬೆರಸಿದ ಗಾಳಿಯಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಧರಿಸುವ, ಶ್ವಾಸಾನುಕೂಲ ಸಲಕರಣೆಯುಳ್ಳ, ಒಂದು ತೆರದ ಮೊಗವಾಡ : ವಿಷಾನಿಲ ಮುಖರಕ್ಷೆ. **G.-light** ಅನಿಲದ ಬೆಳಕು. Gaslight paper, plates (ರಾಸಾಯನಿಕ ತೇಜಸ್ಸುಳ್ಳ) ನಸು ಕಾಂತಿಯ ಕೃತಕ ಪ್ರಭೆಯಲ್ಲಿ ಚಿತ್ರಸ್ಫುಟಗೊಳಿಸರಾಗುವ ಛಾಯಾಚಿತ್ರ ಪತ್ರ, ಫಲಕ : (ಛಾಯಾಚಿತ್ರ) ಅನಿಲ ಪ್ರಭಾಪತ್ರ, ಫಲಕ. **G.-main** ಜ್ವಲನಾನಿಲವನ್ನು ಒದಗಿಸುವ ಪ್ರಧಾನ ಕೊಳವೆ. **G.-man** ಜ್ವಲನಾನಿಲವನ್ನು ತಯಾರಿಸುವವನು ; ಅನಿಲ ತಯಾರಿಗ ; ಅನಿಲ ಸರಬರಾಯಿ ಮಾಡುವವನು ; ನಾಟಕ ಶಾಲೆಯಲ್ಲಿ ಅನಿಲ ದೀಪಗಳನ್ನು ನೋಡಿಕೊಳ್ಳುವವನು ; (ಕಲ್ಲಿದ್ದಲ ಗಣಿಕೆಲಸ ; ಅಮೆ. ಸಂ.) ಸಿಡಿಗಾಳಿಗಾಗಿ ಕೆಲಸದ ಗಣಿಯನ್ನು ಪರೀಕ್ಷಿಸುವವನು : ಸರಬರಾಯಿಮಾಡಿದ ಅನಿಲದ ಮೂಲ್ಯವನ್ನು ವಸೂಲುಮಾಡುವವನು: ಅನಿಲ ಮೂಲ್ಯ ವಸೂಲಿಗಾರ. **G.-meter** (ಬಳಸಿಕೊಂಡ ಅನಿಲದ ಮೊತ್ತವನ್ನು ಗುರುತುಮಾಡುವ) ಅನಿಲ ಮಾಪಕ (He lies like a g.-meter ಅವನು ವಿಪರೀತ ಸುಳ್ಳು ಹೇಳುತ್ತಾನೆ). **G.-oven** ಜ್ವಲನಾನಿಲದ ಒಲೆ (ಈಚೆಗೆ, ಆತ್ಮಹತ್ಯ ಸಾಧನವೆಂದು ದುಷ್ಪ್ರತೀತಿ). **G.-plant** (ನಾ.) ಅನಿಲ ತಯಾರಿಯ ಯಂತ್ರಸಲಕರಣೆಗಳು. **G.-ring** (ಅಡಿಗೆ, ಮೊ. ಕೆಲಸಗಳಿಗಾಗಿ ಅನಿಲ ನುಗ್ಗಿಬರಲು ಸಣ್ಣ ಸಣ್ಣ ರಂಧ್ರಗಳುಳ್ಳ) ಬಳೆಯಾಕಾರದ ಜ್ವಲನಾನಿಲದ ಕೊಳವೆ. **G.-shell** ವಿಷಗಾಳಿ ತುಂಬಿದ ಸಿಡಿಗುಂಡು. **G.-tar** (ಕಲ್ಲಿದ್ದಲ ಅನಿಲದ ತಯಾರಿಕೆಯಲ್ಲಿ ಹುಟ್ಟುವ) ಟಾರೆಣ್ಣೆ ; ಕೀಲೆಣ್ಣೆ ; ಡಾಂಬರೆಣ್ಣೆ. **G.-works** ಅನಿಲ ಕಾರ್ಖಾನೆ, ಕಾರ್ಯಾಲಯ. **Gaséity** ಗ್ಯಾಸೀಯಿಟಿ (ನಾ.) ಅನಿಲಸ್ಥಿತಿ. **Gaselíer** ಗ್ಯಾಸೆಲಿಯರ್ (ನಾ.) ಛಾವಣಿಯಿಂದ ತೂಗಹಾಕಿದ ಅನಿಲದೀಪದ ಗೊಂಚಲು. **Gáseous** ಗ್ಯಾ(ಗೇ)ಸಿಯಸ್ (ಗು.) ಅನಿಲ ರೂಪದ, — ಸ್ವಭಾವದ (ರೂಪ. ಸಹ). **Gásiform** ಗ್ಯಾಸಿಫಾರ್ಮ್ (ಗು.) ಅನಿಲರೂಪದ(ಲ್ಲಿರುವ). **Gásify** (ಕ್ರಿ.) ಅನಿಲ ರೂಪಕ್ಕೆ ತರು, ಬರು. **Gásifiable** (ಗು.) ; **Gasificátion** (ನಾ.) ; **Gásless** (ಗು.) ; **Gássy** (ಗು.) ಅನಿಲದ ; ಅನಿಲದಂಥ ; ಅನಿಲ ಭರಿತ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಮಾತು, ಮೊ. ಗಳಲ್ಲಿ) ಬರಿ ಬುರುಡೆಯ ; ಹುರುಳಿಲ್ಲದ ; ಶಬ್ದಜಾಲದ. **Gássiness** (ನಾ.) ; **Gasómeter** ಗ್ಯಾಸಾಮಿಟರ್ (ನಾ.) (ರ. ವಿ.) ಅನಿಲ ಪಾತ್ರೆ ; (ಕೊಳವೆಗಳ ಮೂಲಕ ಸಾಗಿಸುವುದಕ್ಕಾಗಿ ಜ್ವಲನಾನಿಲವನ್ನು ಶೇಖರಿಸಿಟ್ಟಿರುವ) ದೊಡ್ಡ ಅನಿಲ ಭಾಂಡ ; ಅನಿಲ ಮಾಪಕ. **Gasómetry** ಗ್ಯಾಸಾಮೆಟ್ರಿ (ನಾ.) ಅನಿಲಮಾಪನ (ಶಾಸ್ತ್ರ, ವಿದ್ಯೆ)

Gas (ಕ್ರಿ.) (ಕೋಣೆ, ರೈಲುಬಂಡಿ, ಮೊ. ಕ್ಕೆ) ಅನಿಲವೊದಗಿಸು ; (ಶತ್ರುವಿನಮೇಲೆ, ಒಂದು ಸ್ಥಳದಮೇಲೆ) ವಿಷಗಾಳಿ ಬಿಡು, ನುಗ್ಗಿಸು, ಪ್ರಯೋಗಿಸು ; ಉರಿಗಾಳಿಯಿಂದ, ವಿಷಗಾಳಿಯಿಂದ, ನಂಜೇರು. (ನೂತ ದಾರ, ಬಟ್ಟೆ, ಮೊ. ಗಳ ಬಿಡಿಯೆಳೆಗಳನ್ನು ಕಳೆಯಲು) ಅನಿಲ ದೀಪದಲ್ಲಿ ಆಡಿಸು. ಬುರುಡೆ ಹೊಡೆ ; ಬಡಾಯಿ ಕೊಚ್ಚಿಕೊ. **Gásser** (ನಾ.) ಅನಿಲ ಹೊರಡಿಸುವವನು, —ವದು ; (ಅಸಂ.) ಹರಟೆಯಮಲ್ಲ ; ಬುರುಡೆಕೋರ ; ಬಡಾಯಿಗಾರ. ಅನಿಲ ಹೊರಡುವ ಬಾವಿ (ಮು., ಎಣ್ಣೆಯ ಬಾವಿ). (ಬಟ್ಟೆ, ನೂಲು, ಮೊ. ಗಳಮೇಲಿನ ಗುಂಜನ್ನು) ಉರಿಯಾಡಿಸಿ ಕಳೆಯುವವನು.

Gáscon ಗ್ಯಾಸ್ಕನ್ (ನಾ.) ಗ್ಯಾಸ್ಕೊನಿ ದೇಶದವನು ; ಬಡಾಯಿಕೋರ ; ಜಂಬಗಾರ. **Gasconáde** (ನಾ., ಕ್ರಿ. ಅಕ.) ಬಡಾಯಿ (ಕೊಚ್ಚಿಕೊ)

Gash ಗ್ಯಾಷ್ (ನಾ., ಕ್ರಿ. ಸಕ.) ಉದ್ದವೂ ಆಳವೂ ಆದ ಕಡಿತ ; ಗಾಯ ; ಸೀಳುಗಾಯ ; ಕಡಿತದಿಂದಾಗುವಂಥ ಸೀಳಿಕೆ ; ಇಂಥ ಗಾಯ ಮಾಡು ; ಕೊಚ್ಚು.

Gásket ಗ್ಯಾಸ್ಕೆಟ್ (ನಾ.) (ಹಡಗಿನ) ಸುತ್ತಿದ ಪಟವನ್ನು ಕಂಬದ ಕೈಗೆ ಬಿಗಿಯುವ ಸಣ್ಣ ಹುರಿ. ಆಡುಬೆಣೆಯ (ಪಿಸ್ಟನ್ನಿನ) ಸುತ್ತಲೂ ಸಂದಿಲ್ಲದಂತೆ ಸುತ್ತುವ, ಅಥವಾ ಹಡಗಿನ ಹಲಗೆಗಳ ಮಧ್ಯೆ ಸಂದು ಮುಚ್ಚುವಂತೆ ತುರುಕುವ, ಕಳಪೆಯ ನಾರುಚೂರು.

Gásogene = Gazogene.

Gásolene, -ine ಗ್ಯಾಸೊಲೀನ್ (ನಾ.) (ಅಮೆ. ಸಂ.) ಕಚ್ಚಾ ಪೆಟ್ರೋಲಿಯಂ ಎಣ್ಣೆಯಿಂದ ಬಟ್ಟಿಯಿಳಿಸಿ ತೆಗೆದು ಉರಿಗೂ ದೀಪಕ್ಕೂ ಉಪಯೋಗಿಸುವ ಚಂಚಲ ಉರಿದ್ರವ : 'ಗ್ಯಾಸೊಲೀನ್'.

Gasómeter. Gas (ನಾ.) ನೋಡಿ.

Gasp ಗಾಸ್ಪ್ (ಕ್ರಿ., ನಾ.) ಶ್ವಾಸವೆಳೆ ; ಉಸಿರೆಳೆ ; ಮೇಲುಸಿರು ಸೆಳೆ ; ಏದು ; ಮೇಲುಬ್ಬಸ ಬರು ; (ಬಳಲ ಶಕ್ತಿಗುಂದಿದಾಗ, ಆಶ್ಚರ್ಯ ಚಕಿತನಾದಾಗ) ಉಸಿರಿಗಾಗಿ ಬಾಯಿ ಬಿಡು. (G. life away or out ಉಸಿರುಡುಗು ; ಪ್ರಾಣ ಬಿಡು ; ಸಾಯಿ. G. out ಏದುತ್ತ ಹೇಳು). (ನಾ.) ಏದು ; ದಮ್ಮು ; ಮೇಲುಸಿರು (At one's last g. ಮರಣ ಮುಖದಲ್ಲಿ ; ಕೊನೆಯುಸಿರು ಬಿಡುತ್ತ ; ಸಾಯುವ ಸ್ಥಿತಿಯಲ್ಲಿ). **Gáspingly** (ಕ್ರಿ. ವಿ.) ; **Gásper** (ನಾ.) ಮೇಲುಸಿರು ಬಿಡುವವನು. (ಅಸಂ.) ಅಗ್ಗದ ಸಿಗರೆಟ್ಟು, ಚುಟ್ಟ.

Gást(e)ropod ಗ್ಯಾಸ್ಟ್ರೊಪಾಡ್, ಗ್ಯಾಸ್ಟೆರೊ — (ನಾ.) ಚಲನಾಂಗವು ಹೊಟ್ಟೆಯ ಭಾಗದಲ್ಲಿರುವ, ಒಂದೇ ಚಿಪ್ಪುಳ್ಳ, ಮೃದ್ವಂಗಿ (ಬಸವನ ಹುಳು, ಮೊ.) ; ಉದರ ಪಾದಿ. **Gast(e)rópodous** ಗ್ಯಾಸ್ಟ್ರಾ(ಸ್ಟೆರಾ)ಪೊಡಸ್ (ಗು.)

Gastraéa ಗ್ಯಾಸ್ಟ್ರೀಯ (ನಾ.) (ಸಕಲ ಪ್ರಾಣಿವರ್ಗದ ಮೂಲಪ್ರಾಣಿಯೆಂದು ಕೆಲವರು ವೈಜ್ಞಾನಿಕರು ಊಹಿಸುವ) ಎರಡು ಜೀವಾಣುಪದರಗಳುಳ್ಳ, ಚೀಲದಂಥ ಒಂದು ಪ್ರಾಚೀನ ಪ್ರಾಣಿ.

Gástric ಗ್ಯಾಸ್ಟ್ರಿಕ್ (ಗು.) ಜಠರದ. G. fever ಆಂತ್ರಜ್ವರ ; ವಿಷಮಶೀತ ಜ್ವರ. G. juice ಆಹಾರಜೀರ್ಣಕ್ಕಾಗಿ ಜಠರಗ್ರಂಥಿಗಳು ಸ್ರವಿಸುವ, ಬಣ್ಣವಿಲ್ಲವೆಂದು ಹೇಳಬಹುದಾದ, ತಿಳಿಯ, ತೆಳು, ಆಮ್ಲದ್ರವ : ಜಠರ ರಸ.

Gástr(o)- ಗ್ಯಾಸ್ಟ್ರ —, ಗ್ಯಾಸ್ಟ್ರೊ — (ಸ. ಪೂ. ಪ.) ಜಠರ —. **Gastro-entéric** (ಗು.) ಜಠರದ ಮತ್ತು ಕರುಳಿನ ; ಜಠರಾಂತ್ರ. **Gástrocele** — ಸೀಲ್ (ನಾ.) ಜಠರ ಗ್ರಂಥಿ. **Gastrótomy** ಗ್ಯಾಸ್ಟ್ರಾಟೊಮಿ (ನಾ.) ಕಿಬ್ಬೊಟ್ಟೆಯನ್ನು, ಅಥವಾ ಅದರ ಮೂಲಕ ಜಠರವನ್ನು, ಶಸ್ತ್ರದಿಂದ ಕೊಯ್ದು ತೆರೆಯುವುದು : ಜಠರ ವಿಚ್ಛೇದನ. **Gastrítis** ಗ್ಯಾಸ್ಟ್ರೈಟಿಸ್ (ನಾ.) ಜಠರಚರ್ಮಗಳ ಊತ. **Gastrólogy** ಗ್ಯಾಸ್ಟ್ರಾಲಜಿ (ನಾ.) ಅಡಿಗೆಯ ವಿದ್ಯೆ ; ಪಾಕ ಶಾಸ್ತ್ರ. **Gastróloger** (ನಾ.) ; **Gastrólogist** (ನಾ.) ; **Gástronome** ಗ್ಯಾಸ್ಟ್ರೊನೋಮ್ (ನಾ.) ಅಡಿಗೆಯರುಚಿ ಬಲ್ಲವನು ; ಪಾಕ ಪರೀಕ್ಷಕ ; ಪಾಕ ಭೋಗಿ. **Gastrónomy** ಗ್ಯಾಸ್ಟ್ರಾನೊಮಿ (ನಾ.) ಸುಖಭೋಜನ ಕಲೆ, ವಿದ್ಯೆ, ಶಾಸ್ತ್ರ. **Gastrónomer** (ನಾ.) = Gastronome. **Gastronómic(al)** ಗ್ಯಾಸ್ಟ್ರೊನಾಮಿಕಲ್ (ಗು.) ; **Gastronómically** (ಕ್ರಿ. ವಿ.) ; **Gastrónomist** ಗ್ಯಾಸ್ಟ್ರಾನೊಮಿಸ್ಟ್ (ನಾ.)

Gate[1] ಗೇಟ್ (ನಾ.) ಊರ ಬಾಗಿಲು ; ಹೆಬ್ಬಾಗಿಲು ; ಹೊರ ಬಾಗಿಲು ; ಅಗಸೆ (ಬಾಗಿಲು) ; ಪುರ ದ್ವಾರ ; ಮಹಾ ದ್ವಾರ. (ಬೈಬಲ್) ಪಟ್ಟಣದ ನ್ಯಾಯಸಭೆ ಸೇರುವ ಸ್ಥಳ ; ಊರ ಚಾವಡಿ. ಬೆಟ್ಟದ ಕಣಿವೆ ; ಕಣಿವೆಮಾರ್ಗ ; (ಒಂದು ಸ್ಥಳದ) ಒಳಕ್ಕೆ ಬರುವ, ಹೊರಕ್ಕೆ ಹೋಗುವ, — ದ್ವಾರ, ಹಾದಿ, ಮಾರ್ಗ, ಪ್ರವೇಶ. (ಗ್ರೀಕ್ ಪುರಾಣ) (G. of ivory, horn ಸುಳ್ಳು ಕನಸು, ನಿಜದ ಕನಸು, — ಬೀಳುವ ಮಾರ್ಗ). (Bosphorus and Hellespont are the two gates of Constantinople ಬಾಸ್ಫೊರಸ್ ಮತ್ತು ಹೆಲೆಸ್‌ಪಾಂಟ್ ಎಂಬ ಜಲಸಂಧಿಗಳು ಕಾನ್‌ಸ್ಟಾಂಟಿನೋಪಲ್ಲಿನ ಎರಡು ಪ್ರವೇಶಗಳು) ; ಪ್ರಾಕಾರ ದ್ವಾರದ ಕದ(ಗಳು) ; 'ಗೇಟು'. ನೀರಿನ ಹರಿತವನ್ನು ಹತೋಟಿಯಲ್ಲಿಡುವ ರಚನೆ, ಸಾಧನ, ಸಲಕರಣೆ : ನೀರ ಬಾಗಿಲು ; ತೂಬಿನ ಕದ. ಕಾಲ್ಚೆಂಡಾಟದ ಪಂದ್ಯ, ಮೊ. ನ್ನು ನೋಡುವುದಕ್ಕೆ ಬಾಗಿಲಲ್ಲಿ ದುಡ್ಡು ಕೊಟ್ಟು ಪ್ರಾಕಾರದೊಳಕ್ಕೆ ಬಂದವರ ಸಂಖ್ಯೆ ; ಹೀಗೆ ವಸೂಲಾದ ಹಣ (= G.-money). **G.-bill** (ಆಕ್ಸ್‌ಫರ್ಡಿನ ವಿದ್ಯಾರ್ಥಿ ವೇಳೆಮೀರಿ ಬಂದ ದಿನಗಳ ದಾಖಲೆ ; ಇದಕ್ಕಾಗಿ ವಿಧಿಸಿದ ಜುರ್ಮಾನೆ. **G.-crasher** (ಅಸಂ.) ನೃತ್ಯ ಗೋಷ್ಠಿ, ಮೊ. ಕ್ಕೆ ಕರೆಯದೆ ನುಗ್ಗುವವನು (=Crasher). **Gátehouse** ವನ, ಮೊ. ಗಳಲ್ಲಿಯ (ಕಾವಲು) ಮನೆ ; ಮಹಾ ದ್ವಾರದ ಬಳಿಯ, ಅಥವಾ ಅದರ ಮೇಲಿನ, (ಆಳಿನ) ಮನೆ ; ಕಾವಲು ಮನೆ ; ಅರಮನೆಯ, ಊರಬಾಗಿಲ, — ಗೋಪುರದಲ್ಲಿಯ ಕೋಣೆ (ಹಲವು ವೇಳೆ ಸೆರೆಮನೆಯಾಗಿ ಬಳಸುವುದುಂಟು) ; ಅಗಸೆ ಮನೆ. **G.-keeper** ಬಾಗಿಲು ಕಾಯುವವನು ; ದ್ವಾರ ಪಾಲಕ ; ಪ್ರತೀಹಾರ. ಒಂದು ಬಗೆಯ ಚಿಟ್ಟೆ. **G.-meeting** ದುಡ್ಡುಕೊಟ್ಟು ಹೋಗಬೇಕಾದ ಸಭೆ. **G.-post** ಹೊರಬಾಗಿಲ ಕಂಬ ; ಮಹಾದ್ವಾರ ಸ್ತಂಭ. (Between you & me & the g.-p. or bedpost ಕಟ್ಟೇಕಾಂತದಲ್ಲಿ ; ಬಹಳ ಗುಟ್ಟಿನಲ್ಲಿ). **Gáteway** ಊರ ಬಾಗಿಲು ; ಹೆಬ್ಬಾಗಿಲು ; ಮಹಾದ್ವಾರದ ಚೌಕಟ್ಟು ; ಮಹಾದ್ವಾರದಮೇಲೆ ಕಟ್ಟಿರುವ ಕಟ್ಟಡ. ಹೋಗಿಬರುವ ಹಾದಿ, ಮಾರ್ಗ. **Gáteless** (ಗು.)

Gate (ಕ್ರಿ. ಸಕ.) (ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್) ಪೂರ್ತಿಯಾಗಿ ಅಥವಾ ನಿಯತ ಕಾಲದ ತರುವಾಯ (ವಿದ್ಯಾರ್ಥಿಯನ್ನು) ಶಾಲೆಯಲ್ಲೇ ಇರುವಂತೆ ನಿರ್ಬಂಧಿಸು.

Gate[2] ಗೇಟ್ (ನಾ.) (ಯಾವುದಾದರೂ ಪೂರ್ವ ಪದದೊಡನೆ ಸೇರಿ) ಬೀದಿ, ರಸ್ತೆ (Gallowgate ಗ್ಯಾಲೊ ರಸ್ತೆ)

Gáther ಗ್ಯಾದರ್ (ಕ್ರಿ.) ಒಟ್ಟುಗೂಡಿಸು ; ಸೇರಿಸು ; ಒಟ್ಟೈಸು (Be gathered to one's fathers ಪಿತೃಲೋಕ ಸೇರು ; ಸಾಯಿ) ; ಕೂಡಹಾಕು ; ಗಳಿಸು ; ಸಂಗ್ರಹಿಸು ; ಸಂಚಯಿಸು ; ಶೇಖರಿಸು. (ಹೂವು, ಮೊ.) ಕೊಯ್ಯಿ, ಕೀಳು, ಬಿಡಿಸು. ಆಯಿ ; (ಕಾಳು, ಮೊ. ನ್ನು ನುಗ್ಗಿಯ ಕಾಲದಲ್ಲಿ) ಒಟ್ಟುಹಾಕು ; [Rolling stone gathers no moss ಉರುಳುತ್ತಿರುವ ಗುಂಡಿನಮೇಲೆ ಪಾಚಿ ಕಟ್ಟಲಾರದು. (ರೂಪ.) ಕಸುಬು, ವೃತ್ತಿ, — ಬದಲಾಯಿಸುತ್ತ ಹೋದರೆ ಫಲ ದೊರೆಯಲಾರದು, ಲಾಭವಾಗದು. ನೆಲೆಯಾಗಿ ನೆಲಸದವನು ಏನೂ ಗಳಿಸಲಾರ. Com-

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

plexion gathers colour ಮುಖ ಬಣ್ಣವೇರುತ್ತದೆ, ಕಾಂತಿಗೂಡುತ್ತದೆ. Invalid gathers strength ರೋಗಿಗೆ ತ್ರಾಣ ಬರುತ್ತದೆ. G. head ಶಕ್ತಿಗಳಿಸು. (ಕೀವುಗಟ್ಟಿದ ಕುರು) ಹೊಮ್ಮು, ಮೂತಿಯಿಡು, ಮುಖವಾಗು; ಕೀವು ತುಂಬು (= Gather). G. way (ಹಡಗು) ಚಲನತೊಡಗು]. (ಶಕ್ತಿಯನ್ನೆಲ್ಲ) ತಂದುಕೊ; (ಉಸಿರು) ತಂದುಕೊ; ಅನುಮಾನಿಸು; ನಿಗಮನ ಮಾಡು; ಗ್ರಹಿಸು. (ವಸ್ತ್ರ, ಉಡುಪು, ಮೊ. ನ್ನು) (ದಾರ ಪೋಣಿಸಿ) ತೆರೆ ತೆರೆಯಾಗಿ, ಪದರ ಪದರಗಳಾಗಿ, ಜೋಡಿಸು; ನಿರಿ ಮಾಡು; ನಿರಿ ಕಟ್ಟು. (ಹುಬ್ಬು) ಗಂಟುಹಾಕಿಕೊ. ನೆಲದಿಂದ ಎತ್ತಿಕೊ; ಆಯ್ದುಕೊ. (ಕೈಕಾಲು, ಮೊ. ನ್ನು) ಮಡಿಚು, ಮುದುರು (*Up* ಉಪ. ದೊಡನೆ). (ಅಲ್ಲಲ್ಲಿರುವ ವಿಷಯಗಳನ್ನು) ಒಂದುಗೂಡಿಸು; ಒಟ್ಟಿಗೆ ಸೇರಿಸು. ಒಂದು ಪ್ರಯತ್ನಕ್ಕಾಗಿ (ಆಲೋಚನೆ, ಶಕ್ತಿ, ಮೊ. ನ್ನು) ಕೂಡಿಸಿಕೊ (*Up* ಉಪ. ದೊಡನೆ); ಒಟ್ಟುಗೂಡು; ಗುಂಪು ಸೇರು; ಒಂದಾಗು; ಮುದ್ದೆಯಾಗು; ಏಕತ್ರವಾಗು; ಕೂಡಿಕೊಳ್ಳು(ತ್ತ ಹೋಗು); ಬೆಳೆ(ಯುತ್ತ ಹೋಗು) (The tale gathered like a snowball ಹಿಮದುರುಳೆಯಂತೆ ಕಥೆ ದೊಡ್ಡದಾಗಿ ಬೆಳೆಯುತ್ತ ಹೋಯಿತು). **Gáthering** (ನಾ.) (ಕ್ರಿಯಾರ್ಥಗಳಲ್ಲಿ). ಕೀವು ತುಂಬಿದ ಬಾವು. ಸಭೆ; ನೆರವಿ; ಕೂಟ. **G.-coal** (ರಾತ್ರಿ ಬೆಂಕಿಯಾರದಿರಲು ಒಲೆಯ ಬೆಂಬೂದಿಯಲ್ಲಿ) ಹೂತಿಟ್ಟ ದೊಡ್ಡ ಕಲ್ಲಿದ್ದಲ ತುಂಡು. **G.-cry** ಯುದ್ಧಕ್ಕೆ ಸೇರಿರೆಂದು ಕೂಗುವ ಕರೆ; ಕಾಳಗದ ಕರೆ. **G.-ground** ಜರಾನಯನ ಭೂಮಿ. **Gáthers** (ನಾ., ಬ. ವ.) ನಿರಿಗೆ ಮಾಡಿದ, ಕೂಡಿಸಿದ, — ಉಡುಪಿನ ಭಾಗ; ನಿರಿಗೆ.

Gátling ಗ್ಯಾಟ್ಲಿಂಗ್ (ನಾ.) (ಗೊಂಚಲಂತೆ ಒಟ್ಟಗಿರುವ ಕೊಳವಿಗಳಿಂದ ಕೂಡಿದ) ಯಂತ್ರಫಿರಂಗಿ (= G. gun; ನಿಮಿಷಕ್ಕೆ ಸಾವಿರಗಟ್ಟಳೆ ಗುಂಡು ಹಾರಿಸುವುದು). (Gatling ಎಂಬ ನಿರ್ಮಾಪಕನ ಹೆಸರಿನಿಂದ)

Gauche (F) ಗೋಷ್ (ಗು.) ಔಚಿತ್ಯವರಿತು ನಡೆಯದ; ನಯ ನಾಜೂಕಿಲ್ಲದ; ಮಡ್ಡಿ; ಗುಗ್ಗು; ಗೊಡ್ಡು; ಒರಟ. **Gaucherié** (F) ಗೋಷರೀ (ನಾ.) ಒರಟು ನಡತೆ; ಒಡ್ಡ ನಡತೆ, ಕಾರ್ಯ.

Gaud ಗಾಡ್ (ನಾ.) ಆಡಂಬರದ ವಸ್ತು; ಬೆಡಗಿನ, ಥಳುಕಿನ, ಒಡವೆ; ಥಳುಕು ಪಳುಕು. (ಬ. ವ. ದಲ್ಲಿ) ಆಡಂಬರದ ಉತ್ಸವ, ಪ್ರದರ್ಶನ, ವಿನೋದಗಳು. **Gaúdy** (ನಾ., ಗು.) ದೊಡ್ಡ ಸಂತೋಷ ಸಮಾರಂಭ (ಮು., ಪ್ರೌಢ ವಿದ್ಯಾಶಾಲೆಗಳಲ್ಲಿ ಹಳೆಯ ವಿದ್ಯಾರ್ಥಿಗಳು, ಮೊ. ರಿಗಾಗಿ ಏರ್ಪಡಿಸಿದ ವಾರ್ಷಿಕ ಭೋಜನ ಸಮಾರಂಭ) (G.-day ಸಂತೋಷ ಸಮಾರಂಭದ ದಿನ; ಪ್ರೌಢ ವಿದ್ಯಾಶಾಲೆಯ ವಾರ್ಷಿಕೋತ್ಸವ ದಿನ). (ಗು.) ಔಚಿತ್ಯವೂ ಅಂದ ಚೆಂದವೂ ಇಲ್ಲದ ಅಲಂಕಾರದಿಂದ ಕೂಡಿದ; ವಿಪರೀತ ಅಲಂಕಾರದ. (ಉಡುಪು, ಅಲಂಕಾರ, ಕಾವ್ಯ, ಶೈಲಿ, ಮೊ.) ಆಡಂಬರದ, ಥಳುಕಿನ, ಡಬ್ಬಾದ. **Gaúdily** (ಕ್ರಿ. ವಿ.); **Gaúdiness** (ನಾ.)

Gaúffer = Goffer.

Gauge ಗೇಜ್, **Gage**[2] (ನಾವೆಯ ಅರ್ಥದಲ್ಲಿ) (ನಾ., ಕ್ರಿ. ಸಕ.) ನಿಗದಿಯ ಅಳತೆ; ಪ್ರಮಾಣ (ಮು., ಪೀಪಾಯಿಗಳು ಹಿಡಿಸುವ ಪ್ರಮಾಣ, ತುಪಾಕಿ ಗುಂಡುಗಳ ವ್ಯಾಸ, ಕಟ್ಟಣದ ತಗಡುಗಳ ಮಂದ). ವಿಸ್ತಾರ; ವ್ಯಾಪ್ತಿ; ಹರವು (Take the g. of ಅಂದಾಜು ಮಾಡು). ರೈಲುಮಾರ್ಗದ ಕಂಬಿಗಳ ಮಧ್ಯೆ ಇರುವ ಅಗಲ. [Standard g. ನಿಗದಿ ಪ್ರಮಾಣ ೪ ಅಡಿ ೮½ ಅಂಗುಲ). Broad g. (ಇದಕ್ಕಿಂತ ಹೆಚ್ಚಿನ) ಅಗಲ ಪ್ರಮಾಣ. Narrow g. (ಇದಕ್ಕಿಂತ ಕಡಮೆಯ) ಕಿರಿಯ ಪ್ರಮಾಣ]. (ನಾವೆ: Gage) (ಗಾಳಿ ಬೀಸುವ ದಿಕ್ಕಿಗೂ ಮತ್ತೊಂದು ಹಡಗಿಗೂ ಸಂಬಂಧಿಸಿದಂತೆ) ಹಡಗಿನ ಸ್ಥಾನ [Have the weather g. of (ಅದರ ಕಡೆಯಿಂದ) ಗಾಳಿಬೀಸುವ ದಿಕ್ಕಿಗಿರು. (ರೂಪ.) ಅನುಕೂಲ ಸ್ಥಾನದಲ್ಲಿರು; ಪ್ರಯೋಜನ ಪಡೆಯುವಂತಿರು]. ಮಳೆಯ ಮೊತ್ತವನ್ನೂ ಹೊಳೆ, ಉಬ್ಬರವಿಳಿತ, ಬೀಸುವ ಗಾಳಿ, ಮೊ. ಗಳ ಬಲವನ್ನೂ ಅಳೆಯುವ ಅಳತೆಗುರುತುಗಳುಳ್ಳ ಸಲಕರಣೆ; ಮಾಪಕ; ಅಳೆಪಿಡಿ. ದ್ರವ, ಮೊ. ಗಳ ಮಟ್ಟವನ್ನು ತಿಳಿಸುವುದಕ್ಕಾಗಿ ಪಾತ್ರೆಗೆ ಸೇರಿಸುವ ಸಾಧನ; ಮಟ್ಟದ ಅಳೆಪಿಡಿ. (ಶಿಲ್ಪ) ಆಯುಧೋಪಕರಣಗಳು. ತಂತಿ, ಮೊ. ಗಳ ಪ್ರಮಾಣಗಳನ್ನು ಪರೀಕ್ಷೆಮಾಡಿ ಸರಿನೋಡುವ ಉಪಕರಣ. ಸಮಾನಾಂತರ ಗೆರೆಗಳನ್ನೆಳೆಯುವುದಕ್ಕಾಗಿ ಹೊಂದಿಕೆಗೊಳಿಸಲಾಗುವ ಬಡಗಿಯ ಆಯುಧ. (ಮುದ್ರಣದ ಪುಟಗಳ) ಅಂಚಿನ ಅಗಲ, ಮೊ. ವನ್ನು ತಕ್ಕಂತೆ ಅಳವಡಿಸುವ ಅಳತೆಯ ಪಟ್ಟಿ. ಅಂದಾಜು ಮಾಡುವುದಕ್ಕೆ ಸಾಧನ; ನಿರ್ಣಾಯಕ; ಪ್ರಮಾಣ; ಮಾನ ದಂಡ; ಅಳತೆಕಡ್ಡಿ. (ಕ್ರಿ.) (ಮು., ತಂತಿ, ಬಿಗಿಮೊಳೆ, ಮೊ. ನಿಗದಿ ಪ್ರಮಾಣದ ಅಳತೆಗಳುಳ್ಳ ವನ್ನು ಗಳನ್ನು) ನಿಷ್ಕೃಷ್ಟವಾಗಿ ಅಳತೆಮಾಡು, ಅಳೆ. (Gauging-rod ಸೇಂದಿಯ ಪರಿಮಾಣವನ್ನು ಕಂಡುಹಿಡಿಯುವ ಸಲಕರಣೆ). (ವ್ಯಕ್ತಿ, ಶೀಲ, ಸ್ವಭಾವ, ಮೊ. ಗಳ ಯೋಗ್ಯತೆಯನ್ನು) ಕಂಡುಹಿಡಿ, ಅಳತೆ ಮಾಡು; ಅಳ ಕಂಡುಹಿಡಿ. ನಿರ್ದಿಷ್ಟ ಪ್ರಮಾಣಕ್ಕೆ, ಆಕಾರಕ್ಕೆ, ತರು. **Gaúgeable** ಗೇಜಬಲ್ (ಗು.); **Gaúger** (ನಾ.)

Gaul ಗಾಲ್ (ನಾ.) ಪುರಾತನ ಗಾಲ್ ಪ್ರಾಂತದವನು; (ಹಾಸ್ಯವಾಗಿ) ಫ್ರೆಂಚಿನವನು. **Gaúlish** (ಗು., ನಾ.) ಪುರಾತನ ಗಾಲರ (ಭಾಷೆ); (ಹಾಸ್ಯವಾಗಿ) ಫ್ರೆಂಚಿನ.

Gault ಗಾಲ್ಟ್ (ನಾ.) (ಭೂ. ವಿ.) ಮೇಲಿನ ಮತ್ತು ಕೆಳಗಿನ ಮರಳಿನ ಪದರಗಳ ಮಧ್ಯೆ ಇರುವ ಜೇಡಿನ ಮತ್ತು 'ಮಾರ್ಲ್' ಎಂಬ ಸುಣ್ಣಕಲ್ಲು ಸೇರಿದ ಮಣ್ಣಿನ ಸ್ತರಶ್ರೇಣಿ.

Gaunt ಗಾಂಟ್ (ಗು.) ಸಣಕಲಾದ; ಬಡಕಲಾಗಿರುವ; ಕೃಶವಾಗಿರುವ; ಮೂಳೆ ಬಿಟ್ಟುಕೊಂಡಿರುವ; ನರಪೇತ(ಲ). ವಿಷಣ್ಣ; ಜೋಲು ಮೋರೆಯ; ಹೆಣಮುಖದ; ಕಂಗೆಟ್ಟ; ಉತ್ಸಾಹ ಶೂನ್ಯ. **Gaúntness** (ನಾ.)

Gaúntlet ಗಾಂಟ್ಲೆಟ್ (ನಾ.) (ಚರಿತ್ರೆ) (ಉಕ್ಕುಬಿಲ್ಲೆ, ಮೊ. ಗಳಿಂದ ಮಾಡಿದ) ರಕ್ಷಾಕವಚವುಳ್ಳ ಕೈಚೀಲ; ಹಸ್ತತ್ರಾಣ; ಕೈಪೊಡ [Fling, throw, down the g. ಸಣಸಾಟಕ್ಕೆ, ಯುದ್ಧಕ್ಕೆ, ಕರೆ ಕೊಡು; ಪೈಜೆ ಹೂಡು; ಮುಡಿಗೆಯಿಕ್ಕು (ಗ್ರಾಂ.). Pick, take, up the g. ಸಣಸಾಟದ, ಯುದ್ಧದ, ಕರೆಯನ್ನು ಅಂಗೀಕರಿಸು; ಯುದ್ಧ, ಮೊ. ಗಳ ಆಹ್ವಾನ ಸ್ವೀಕರಿಸು]. (ಕ್ರಿಕೆಟ್, ಮೊ. ಆಟಗಳಲ್ಲಿ ಜೋರಾಗಿ ಹೊಡೆಯುವುದಕ್ಕೂ ಚೆಂಡುಹಿಡಿಯಲು ಗುರಿಕೋಲ ಹಿಂದೆ ನಿಲ್ಲುವುದಕ್ಕೂ ಕತ್ತಿವರಿಸೆಗೂ ತೊಡುವ ಉದ್ದ ಮಣಿಕಟ್ಟುಳ್ಳ, ದಪ್ಪನಾದ) ಕೈಚೀಲ, ಕೈಕಾಪು. Run the g. (ಸೇನೆಯ, ನಾವೆಯ, ವಿದ್ಯಾಶಾಲೆಯ, — ಶಿಕ್ಷೆಯಾಗಿ) ಎರಡು ಕಡೆಗಳಲ್ಲೂ ಕೋಲು, ಹಗ್ಗ, ಮೊ. ಗಳಿಂದ ಹೊಡೆಯುವ ಜನರ ಸಾಲಿನ ಮಧ್ಯೆ ಓಡು; ಎರಡೂ ಕಡೆಯ ಏಟಿಗೆ, ಹೊಡೆತಕ್ಕೆ, ಸಿಕ್ಕು; (ರೂಪ.) ಉಗ್ರ ಟೀಕೆಗೆ ಒಳಗಾಗು,. **Gaúntleted** (ಗು.)

Gaúntry, -tree = Gantry.

Gauze ಗಾಸ್ (ನಾ.) ರೇಷ್ಮೆ, ನೂಲು, ತಂತಿ, ಮೊ. ಗಳಿಂದ ಮಾಡಿದ ಬಹಳ ನವಿರಾದ, ಪಾರದರ್ಶಕವಾದ, ನೆಯ್ಗೆ; ನವಿರು ಜಾಲರಿ. **G.-lamp** ನವಿರು ತಂತುಜಾಲರಿಯ ಆವರಣವುಳ್ಳ ಉರಿದೀಪ: ಜಾಲರಿ ಲಾಂದ್ರ (= Safety-lamp). **Gaúzy** (ಗು.); **Gaúziness** (ನಾ.)

Gável ಗ್ಯಾವೆಲ್ (ನಾ.) (ಅಮೆ. ಸಂ.) ಹರಾಜುಗಾರನ, ಸಭಾಧಿಪತಿಯ, — ಕೊಡತಿ.

Gávelkind ಗ್ಯಾವೆಲ್‌ಕೈಂಡ್ (ನಾ.) (ನ್ಯಾ. ಶಾ.) ಅಂತಿಮ ಇಷ್ಟಪತ್ರ ಬರೆಯದೆ ಸತ್ತವನ ಆಸ್ತಿ ಎಲ್ಲ ಗಂಡುಮಕ್ಕಳಿಗೂ ಸಮಭಾಗವಾಗಿ ಹಂಚಿಕೆಯಾಗುವ ಜಮಾನುಹಿಡುವಳಿ ಪದ್ಧತಿ: ಸಮಪಾಲಿನ ಹಿಡುವಳಿ ಪದ್ಧತಿ (ಮು., ಇಂಗ್ಲೆಂಡಿನ ಕೆಂಟ್ ಪ್ರಾಂತದಲ್ಲಿರುವದು)

Gavótte ಗವಾಟ್ (ನಾ.) ಒಂದು ಬಗೆಯ ಉಲ್ಲಾಸ ನೃತ್ಯ; ಇದಕ್ಕೆ ಹೊಂದುವ ಸಂಗೀತ.

Gawk ಗಾಕ್ (ನಾ.) ಮುಖಹೇಡಿ. **Gawky** (ಗು., ನಾ.) ಒಡ್ಡೊಡ್ಡಾದ; ಅಂದಗೇಡಿಯಾದ; ಮುಖಹೇಡಿಯಾದ; —ವನು. **Gawkiness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Gay ಗೇ (ಗು. ; ತರ ತಮಗಳು -er, -est) ಉಲ್ಲಾಸ ಭರಿತ ; —ಶೀಲ ; ಉಲ್ಲಾಸದ ; ಗೆಲವಿನ ; ನಲವಿನ ; ನಗು ಮುಖದ ; ಹರ್ಷ ಸ್ವಭಾವದ ; ಆಟಗಾರಿಕೆಯ ; ಆಟ ಬುದ್ಧಿಯ ; ವಿನೋದದಿಂದ ಕೂಡಿದ ; ಲೀಲೆಯ ; ನಿರಾಲೋಚನೆಯ ; ನಿಶ್ಚಿಂತೆಯ. (ನಯ ನುಡಿ) ಸ್ವೇಚ್ಛಾ ವಿಹಾರಿಯಾದ ; ವಿಲಾಸಿಯಾದ ; ವಿಷಯ ಲಂಪಟನಾದ ; ವ್ಯಭಿಚಾರದಿಂದ ಜೀವಿಸುವ. ಬೆಡಗಿನ ; ಆಡಂಬರದ ; ಠೀವಿಯ ; ಷೋಕಾದ ; ಪ್ರಕಾಶಮಾನವಾದ ; ಉಜ್ಜ್ವಲ ವರ್ಣದ ; ಸೊಗಸು ಉಡುಪಿನ (*With* ಉಪ. ಡೊಡನೆ). (ಅಮೆ. ಸಂ., ಅಸಂ.) ಧಾರ್ಷ್ಟ್ಯದ ; ಅತಿ ಪ್ರತಿಷ್ಠೆಯ ; ದುರಹಂಕಾರದ ; ಪಳಗಿಲ್ಲದ ; ಅನುಭವವಿಲ್ಲದ . **Gaily** (ಕ್ರಿ. ವಿ.)

Gaze ಗೇಸ್ (ಕ್ರಿ. ಅಕ., ನಾ.) ದಿಟ್ಟಿಸಿ ನೋಡು ; ಎವೆಯಿಕ್ಕದೆ ನೋಡು (*At, on, upon* ಉಪ. ಡೊಡನೆ). (ನಾ.) ನೆಟ್ಟ ನೋಟ (Stand at g. ಎವೆಯಿಕ್ಕದೆ, ದಿಟ್ಟಿಸಿ, ನೋಡುತ್ತ ನಿಲ್ಲು). **Gázer** (ನಾ.)

Gazébo ಗಸೀಬೊ (ನಾ.) (ಮೇಲೆ ನಿಂತು) ದೂರ ನೋಡಲು ಅನುಕೂಲಿಸುವ ಕಟ್ಟಡ ; ಉಪ್ಪರಿಗೆಮನೆಯ ಶಿಖರ ; ಗೋಪುರ ; ಉಪ್ಪರಿಗೆಯ ಮೊಗಸಾಲೆ.

Gazélle ಗಸೆಲ್ (ನಾ.) (ಚಿಕ್ಕದಾಗಿಯೂ ಕೋಮಲವಾಗಿಯೂ ಮೆಲು ನೋಟವುಳ್ಳದ್ದಾಗಿಯೂ ಇರುವ) ಒಂದು ಜಿಂಕೆಯ ಜಾತಿ.

Gazétte ಗಸೆಟ್ (ನಾ., ಕ್ರಿ. ಸಕ.) (ಚರಿತ್ರೆ) ಸುದ್ದಿಯ ಹಾಳೆ ; (ಆಯಾ ಕಾಲದ ಸುದ್ದಿಗಳನ್ನು ತಿಳಿಸುವ) ವೃತ್ತ ಪತ್ರಿಕೆ ; (ಸರ್ಕಾರದ ಅಧಿಕಾರಿಗಳ ವಿಚಾರಗಳನ್ನೂ ದಿವಾಳಿಯಾದವರ ಮತ್ತು ಇತರ ಸಾರ್ವಜನಿಕ ವಿಚಾರಗಳನ್ನೂ ತಿಳಿಸುವ) ಸರ್ಕಾರದ ಪ್ರಕಟನ ಪತ್ರಿಕೆ : 'ಗಸೆಟ್ಟು'. (ಕೆಲವು ವೃತ್ತಪತ್ರಿಕೆಗಳ ಅಂಕಿತ ನಾಮ : ಉದಾ., Westminster G., Pall Mall G.). (ಕ್ರಿ.) ಸರ್ಕಾರದ ಗಸೆಟ್ಟಿನಲ್ಲಿ ಪ್ರಕಟಿಸು (ಮು., ಭೂ. ಕೃ. ನಲ್ಲಿ). **Gazetteér** ಗ್ಯಾಸೆಟಿಯರ್ (ನಾ.) ಭೂವಿವರ ನಿಘಂಟು ; ದೇಶ ವಿಚಾರ ಕೋಶ.

Gázogene, Gás- ಗ್ಯಾಸೊಜೀನ್ (ನಾ.) (ಸೋಡ, ಲೆಮನೆಡ್ ಮೊ.) ಅನಿಲಪೂರಿತ ಪಾನೀಯಗಳನ್ನು ತಯಾರಿಸುವ ಯಂತ್ರ ಸಲಕರಣೆ ; ಅನಿಲಪೂರಕ ಯಂತ್ರ.

Gear ಗಿಯರ್ (ನಾ., ಕ್ರಿ.) (ಪ್ರಾಚೀ. ಪ್ರ.) ಸಜ್ಜು ; ಉಡಿಗೆ ತೊಡಿಗೆ, ಮೊ. ವು. (ಭಾರವಹೆಯುವ ಪ್ರಾಣಿಗಳ) ಸಜ್ಜು, ಸರಂಜಾಮು ; ಜತ್ತಿಗೆ ; ಯೋಕ್ತ್ರ. ಸಲಕರಣೆಗಳು ; ಉಪಕರಣಗಳು ; ಸಾಧನ ಸಾಮಗ್ರಿ ; ಅಚ್ಚುಕಟ್ಟು. (ಶಿಲ್ಪದ) ಆಯುಧಗಳು ; ಚಕ್ರಗಳು, ಸನ್ನೆಗಳು, ಮೊ. ಗಳ ಸಂಯೋಜನೆ ; ಹಲ್ಲು, ಮೊ. ಗಳ ಮೂಲಕ ಒಂದೊಂದಕ್ಕೆ ಜೋಡಣೆಯಾಗಿ ಚಲಿಸುವ ಚಕ್ರಗಳು. ಚಾಲಕ ಯಂತ್ರವನ್ನು (ಮೋಟಾರನ್ನು) ಅದರ ಕಾರ್ಯಭಾಗಗಳಿಗೆ ಸಂಬಂಧಿಸುವ ಅಣಿ, ಅಳವಡಿಕೆ [In g. (ಯಂತ್ರ) ಚಾಲಕಕ್ಕೆ ಕೂಡಿ(ಸಿ) ; ಕೆಲಸ ಮಾಡುತ್ತ ; (ರೂಪ.) ವ್ಯವಸ್ಥೆಗೂಡಿ. Out of g. ಚಾಲಕಸಂಬಂಧ ತಪ್ಪಿ(ಸಿ) ; ಕೆಲಸ ಮಾಡದೆ. (ರೂಪ.) Thrown out of g. ವ್ಯವಸ್ಥೆ ಕೆಟ್ಟು. High, low, g. ಬೈಸಿಕಲ್, ಮೋಟಾರು ಬಂಡಿ, ಮೊ. ಗಳಲ್ಲಿ ಚಾಲಿತ ಭಾಗಗಳು ಚಾಲಕಭಾಗಗಳಿಗಿಂತ ಹೆಚ್ಚುವೇಗದಲ್ಲಿ, ಕಡಮೆವೇಗದಲ್ಲಿ, ಸುತ್ತುತ್ತಿರುವುದು. Top, bottom, g. (ಸಾಧ್ಯ ವೇಗಗಳ) ಉಚ್ಚ, ಕನಿಷ್ಠ, ಅಳವಡಿಕೆ]. ಹಡಗಿನ ಧ್ವಜಸ್ತಂಭಕ್ಕೆ ಸಂಬಂಧಿಸಿದ ಹಗ್ಗಗಳು. ಸಾಮಾನುಗಳು ; ಮನೆಯ ಪಾತ್ರೆ ಪದಾರ್ಥಗಳು. (ಕ್ರಿ.) (ಭಾರವಹೆಯುವ ಪ್ರಾಣಿಗೆ) ಜತ್ತಿಗೆ ಹಾಕು ; ಸಜ್ಜು, ಸರಂಜಾಮು,— ತೊಡಿಸು, ಅಳವಡಿಸು (*Up* ಉಪ. ಡೊಡನೆ ಸಹ). (ಯಂತ್ರಕ್ಕೆ) ಚಾಲಕದ ಸಂಬಂಧ ಕಲ್ಪಿಸು, ಚಾಲಕ ಹವಣಿಸು (G. up, down ಹೆಚ್ಚಿನ, ತಗ್ಗಿನ, ಚಾಲಕ ಸಲಕರಣೆಗಳನ್ನು ಹವಣಿಸು). ಹಲ್ಲುಚಕ್ರವನ್ನು ಸರಿಯಾಗಿ ಕೂರುವಂತೆ ಹೊಂದಿಸು ; (ಹಲ್ಲುಚಕ್ರ) ಸರಿಯಾಗಿ ಹೊಂದಿಕೊ (*Into, with* ಉಪ. ಡೊಡನೆ). **G.-box, -case** ಬೈಸಿಕಲ್, ಮೊ. ಗಳ ಚಾಲಕಭಾಗಗಳುಳ್ಳ ಪೆಟ್ಟಿಗೆ. **G.-wheel** (ಮು., ಬೈಸಿಕಲ್ಲಿನಲ್ಲಿ ಕಾಲೊತ್ತಿನ ಚಲನೆಯನ್ನು ಅಚ್ಚಿಗೆ ಒಯ್ಯುವ) ಹಲ್ಲುಚಕ್ರ. **Geáring** (ನಾ.) ಚಾಲಕ ಸಲಕರಣೆ (ಅಳವಡಿಸುವುದು). **Geárless** (ಗು.)

Gécko ಗೆಕೊ (ನಾ. ; ಬ. ವ. -os, -oes, —ಸ್) (ಉಷ್ಣದೇಶಗಳಲ್ಲಿ) ಮನೆಯ ಹಲ್ಲಿ.

Gee, Geé-Gee ಜೀ, ಜೀ ಜೀ (ನಾ.) (ಬಳ. ಮಾ.) ಕುದುರೆ (ಆದಿಯಲ್ಲಿ, ಮಕ್ಕಳ ಮಾತು). **Gee, Geé-hó, Geé -(h)úp, Geé-wó** (ಭಾವ. ಅವ್ಯ.) (ಕುದುರೆ, ಮೊ. ಗಳಿಗೆ ಕೊಡುವ ಆಜ್ಞೆ) ನಡೆ ! ವೇಗ ನಡೆ ! (ಕೆಲವು ವೇಳೆ) ಬಲಕ್ಕೆ ತಿರುಗು !

Geese. Goose ಪದದ ಬ. ವ.

Geézer ಗೀಸರ್ (ನಾ.) (ಅಸಂ.) ಮುದುಕ ; ಮುದಿ ಪ್ರಾಣಿ ; (ವಿಲಕ್ಷಣದ) ಮುದಿಗೊಡ್ಡು ; ಮುದಿಗೊರಡು ; ಮುದುಕಿ.

Gehénna ಗಿಹೆನ (ನಾ.) ನರಕ ; ದಹಿಸುವ, ಚಿತ್ರಹಿಂಸೆ ಕೊಡುವ, ಸಂಕಟಪಡಿಸುವ, — ಸ್ಥಳ.

Geísha ಗೇಷ (ನಾ.) ಜಪಾನಿನ ಗಾಯಕಿ, ನರ್ತಕಿ, ವಿನೋದಗಾತಿ.

Geíssler tube ಗೈಸ್ಲರ್ ಟ್ಯೂಬ್ (ನಾ.) ಬಹಳ ವಿರಳ ಸ್ಥಿತಿಯಲ್ಲಿರುವ ಅನಿಲವುಳ್ಳ, ಅದರಲ್ಲಿ ವಿದ್ಯುತ್ಪ್ರವಾಹ ಹರಿಸಿದಾಗ ಹೊಳೆಯುವ, ನಾನಾ ಆಕಾರಗಳಲ್ಲಿ ಮಾಡಿದ ಮುಚ್ಚಿದ ಗಾಜುಕೊಳವೆ.

Geist (G) ಗೈಸ್ಟ್ (ನಾ.) ಪ್ರಜ್ಞಾ (ಸಾಮರ್ಥ್ಯ) ; ಉತ್ಸಾಹ ಶಕ್ತಿ ; ವಿವೇಚನ ಶಕ್ತಿ. ಹುಮ್ಮು ; ಉಸಿರು ; ಹುರುಪು.

Gel ಜೆಲ್ (ನಾ.) ಅರ್ಧ ಘನಸ್ಥಿತಿಯ ಒಂದು ಅಸ್ಫಟಿಕ ದ್ರಾವಣ (Gelatin ಪದದ ಮೊದಲಕ್ಷರಗಳು)

Gélatin(e) ಜೆಲಟಿನ್, — ಟೀನ್ (ನಾ.) ಚರ್ಮ, ಮೃದ್ವಸ್ಥಿ, ಅಸ್ಥಿರಜ್ಜು, ಮೊ. ಗಳನ್ನು ಸಾವಕಾಶವಾಗಿ ಬೇಯಿಸುವುದರಿಂದ ಹುಟ್ಟುವ, ಅಸ್ಫಟಿಕವೂ ಭಿದುರವೂ ಪಾರದರ್ಶಕವೂ ನೀರುಚಿಯೂ ಹಳದಿ ಛಾಯೆಯದೂ ಆದ, ಪದಾರ್ಥ : ಜೆಲಟಿನ್. [Vegetable g. (ಗೋಧಿ, ಅಕ್ಕಿ, ಮೊ. ಧಾನ್ಯಗಳ 'ಗ್ಲೂಟನ್' ಎಂಬ ಪಿಷ್ಟಪದಾರ್ಥದಲ್ಲಿರುವ) ಪ್ರಾಣಿಜೆಲಟಿನ್ನಿನಂಥ ಪದಾರ್ಥ: ಸಸ್ಯ ಜೆಲಟಿನ್. Blasting-g. (ಬಂಡೆ, ಮೊ. ನ್ನು ಒಡೆಯಲು ಉಪಯೋಗಿಸುವ 'ನೈಟ್ರೊಗ್ಲಿಸರಿನ್ ಸಂಯುಕ್ತ) ಸ್ಫೋಟಕ ಜೆಲಟಿನ್. G. paper (ಛಾಯಾಚಿತ್ರಕ್ಕಾಗಿ ಉಪಯೋಗಿಸುವ, ಕ್ಷಿಪ್ರಗ್ರಾಹಿಯಾಗಿ ಮಾಡಿದ ಜೆಲಟಿನ್ನನ್ನು ಸವರಿದ) ಜೆಲಟಿನ್ ಕಾಗದ. **Gelatíniform** (ಗು.) ಜೆಲಟಿನ್ ಆಕಾರದ. **Gelátino-** ಜೆಲ್ಯಾಟಿನೊ—, **Gélatino-** ಜೆಲಟೀನೊ— (ಸ. ಪೂ. ಪ.) (ಉದಾ., G.-bromide ಜೆಲಟಿನ್ ಅಂತರ್ಗತವಾದ ಬ್ರೋಮೈಡ್). **Gelátinous** ಜೆಲ್ಯಾಟಿನಸ್ (ಗು.) ಸಾಂದ್ರತೆ, ಮೊ. ಗಳಲ್ಲಿ ಮೆತು ಪಾಕದಂತಿರುವ ; ಜೆಲಟಿನ್ನಿನ ; ಜೆಲಟಿನ್ನಿನಂಥ. **Gelátinize** (ಕ್ರಿ.) ಜೆಲಟಿನ್ನಿನಂತಾಗು ; — ನಂತೆ ಮಾಡು ; ಜೆಲಟಿನ್ ಸವರು. **Gelátinoid** —ನಾಯ್ಡ್ (ಗು., ನಾ.) ಜೆಲಟಿನ್ನಿನಂಥ (ಪದಾರ್ಥ)

Gelátion ಜೆಲೇಷನ್ (ನಾ.) (ಶೀತ ಘನೀಕರಣದಿಂದ) ಗಡ್ಡೆ ಕಟ್ಟುವುದು.

Geld ಗೆಲ್ಡ್ (ಕ್ರಿ. ಸಕ.) (ಸಾ., ಗಂಡುಪ್ರಾಣಿಗೆ) ಜನಕ ಶಕ್ತಿಯನ್ನು ಕಳೆ ; ಬೀಜವೊಡೆ ; ಹಿಡ ಮಾಡು ; ಪ್ರಾಣಿಯ ಬೀಜಗಳನ್ನಾಗಲಿ ಅಂಡಾಶಯಗಳನ್ನಾಗಲಿ ಶಸ್ತ್ರಚಿಕಿತ್ಸೆ ಮಾಡಿ ತೆಗೆದುಬಿಡು. ಸತ್ತ್ವ ಗುಂದಿಸು. (-) **gélder** (ನಾ.) ; **Gélding** (ನಾ.) ಬೀಜವೊಡೆದ ಕುದುರೆ, ಪ್ರಾಣಿ.

Gélid ಜೆಲಿಡ್ (ಗು.) ನೀರ್ಗಲ್ಲ ಚಳಿಯ ; — ಕೊರೆತದ ; ಅತಿ ತಣ್ಣಗಿರುವ ; ಹಿಮ ಶೀತಲದ (ರೂಪ. ಸಹ)

Gélignite ಜೆಲಿಗ್ನೈಟ್ (ನಾ.) ನೈಟ್ರೊಗ್ಲಿಸರಿನ್ನಿನ ಸ್ಫೋಟಕ ; ಒಂದು ತೆರದ ಜೆಲಟಿನ್ ಡೈನಮೈಟು (ಸಿಡಿಮದ್ದು)

Gem ಜೆಮ್ (ನಾ., ಕ್ರಿ. ಸಕ.) ಮು., ಸಾಣೆಹಿಡಿದು ಮೆರುಗುಕೊಟ್ಟ ಪ್ರಶಸ್ತಶಿಲೆ ; ರತ್ನ ; ಮಣಿ ; ಹರಳು. ಬಹಳ ಸೌಂದರ್ಯದ, ಬಹಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆರೆಯ, ವಸ್ತು ; (ಒಂದರ) ಆಯ್ದ, ಅತ್ಯುತ್ತಮ, ಭಾಗ ; ಅಮೂಲ್ಯ ವಸ್ತು ; ಚಿತ್ರ ಕೆತ್ತಿದ ಅನರ್ಘ್ಯ ಶಿಲೆ. (ರೂಪ.) ರತ್ನದಂಥ ಪ್ರಶಸ್ತ, — ವಸ್ತು, ವ್ಯಕ್ತಿ. (ಕ್ರಿ.) ರತ್ನಾಲಂಕಾರ ಮಾಡು ; ರತ್ನಗಳಂತೆ—; ರತ್ನ ಕೆತ್ತು ; ಮಣಿಖಚಿತ ಮಾಡು. **Gémmy** (ಗು.) ರತ್ನ ಖಚಿತ ; ಮಣಿ ಖಚಿತ ; ರತ್ನ ಕೆತ್ತಿದ(ಂತೆ ರಚಿಸಿದ) ; ರತ್ನಪ್ರಾಯ ; ಥಳ ಥಳಿಸುವ.

Géminate ಜೆಮಿನೆಟ್ (ಗು.), — ನೇಟ್ (ಕ್ರಿ. ಸಕ.) ಜೋಡಿ ಜೋಡಿ ಯಾಗಿ ಸೇರಿದ ; ಜೋಡಿಗಳಲ್ಲಿರುವ ; ಎರಡೆರಡಾದ ; ಜೊತೆ ಜೊತೆ ಯಾದ ; ಜೋಡಿ (G. leaves ದ್ವಿಪರ್ಣಗಳು) ; ಅವಳಿ ; ಯುಗ್ಮ ; ಯುಗಳ ; ಎಣೆ. (ಕ್ರಿ.) ಜೋಡಿ ಜೋಡಿ ಮಾಡು ; — ಯಾಗು ; — ಯಾಗಿರು. **Geminátion** (ನಾ.) ; **Gémini** ಜೆಮಿನೈ (ನಾ.), ಜೆಮಿನಿ (ಭಾವ. ಅವ್ಯ.) ಮಿಥುನ (ನಕ್ಷತ್ರ)ರಾಶಿ ; ರಾಶಿಚಕ್ರದಲ್ಲಿ ಮೂರನೆಯ ರಾಶಿ. (ಪ್ರಾಚೀ. ಪ್ರ.) (ಆಶ್ಚರ್ಯಸೂಚಕ ಪದ : ಸಾ , ಲಘುವಾದ ಆಣೆಯ ಮಾತು)

Gémini. Geminate ನೋಡಿ.

Gémma ಜೆಮ (ನಾ.) (ಸ. ಎ., ಪ್ರಾ. ಎ. ; ಬ. ವ. -ae — ಮಿ) ಎಲೆ ಮೊಗ್ಗು ; ಪಲ್ಲವಾಂಕುರ. (ಪಾಚಿ, ಮೊ. ಗಳಲ್ಲಿ) ತಾಯಿಸಸ್ಯದಿಂದ ಬೇರ್ಪಟ್ಟು ಹೊಸ ಸಸಿಯಾಗುವ ಜೀವಕಣಗಳಿಂದಾದ ಒಂದು ಸಣ್ಣ ಭಾಗ. (ಪ್ರಾ. ಎ.) ಕೆಳ ಅಂತಸ್ತಿನ ರಚನೆಯ ಪ್ರಾಣಿಗಳ ಮೈಮೇಲೆ ಬೆಳೆದು, ತರುವಾಯ ಬೇರ್ಪಟ್ಟು ಸ್ವತಂತ್ರ ವ್ಯಕ್ತಿ ಯಾಗುವ ಮೊಗ್ಗಿನಂಥ ಮೊಳೆ. **Gémmate** ಜೆಮೆಟ್ (ಗು.) ಮೊಗ್ಗು ಗಳುಳ್ಳ ; ಮೊಗ್ಗು ಬೆಳೆದು ಸಂತಾನವೃದ್ಧಿ ಆಗುವ, ಮಾಡುವ. **Gemmáte** ಜೆಮೇಟ್ (ಕ್ರಿ. ಅಕ.) ಮೊಗ್ಗು ಬಿಡು ; ಮೊಗ್ಗು ಬೆಳೆಯು ವುದರಿಂದ ಸಂತಾನವೃದ್ಧಿ ಆಗು, ಮಾಡು. **Gemmátion** (ನಾ.) ಮೊಗ್ಗಾಗುವುದು ; ಮೊಗ್ಗಾಗುವ ಕಾರ್ಯ, ರೀತಿ ; ಮೊಗ್ಗುಗಳ ವಿನ್ಯಾಸ ; ಮೊಗ್ಗುಗಳಿಂದ ಸಂತಾನ ವೃದ್ಧಿ ; ಪ್ರಾಣಿಯ ದೇಹದಿಂದ ಹೊಮ್ಮಿ ಪ್ರಾಣಿಯ ಸಂಬಂಧ ಹರಿದು ಹೊಸ ವ್ಯಕ್ತಿಯಾಗುವುದು. **Gémmative** (ಗು.), **Gemmíferous** (ಗು.) ಮೊಗ್ಗು ಹೊತ್ತಿರುವ, ಬಿಡುವ. ರತ್ನಗರ್ಭ. **Gemmíparous** — ಪರಸ್ (ಗು.) ಮೊಗ್ಗು ಗಳಿಂದ ಸಂತಾನವೃದ್ಧಿಯಾಗುವ ; ಮುಕುಳ ಸಂತಾನದ. **Gemmíparously** (ಕ್ರಿ. ವಿ) ; **Gémmule** (ನಾ.) ಅಂಕುರಾಗ್ರ. ಗುಪ್ತ ಪುಷ್ಪೀಯದ ಜನನಾಣು. (ಪ್ರಾ. ಎ.) (ಸ್ವತಂತ್ರ ಜೀವಿಯಾಗುವ) ಚಿಕ್ಕ ಮುಕುಳಜೀವಿ.

-gen — ಜೆನ್ (ಉ. ಪ್ರ.) — ಜನಕ, — ವರ್ಧಿಷ್ಣು (ಉದಾ., Oxygen ಆಮ್ಲಜನಕ ; Hydrogen ಜಲಜನಕ ; Endogen ಅಂತರ್ವರ್ಧಿಷ್ಣು ; Exogen ಬಹಿರ್ವರ್ಧಿಷ್ಣು ; Acrogen ಅಗ್ರ ವರ್ಧಿಷ್ಣು)

Genáppe ಜೆನ್ಯಾಪ್ (ನಾ.) ಬಹಳ ನಯವೂ ನುಣುಪೂ ಆದ ಉಣ್ಣೆಯ ನೂಲು, ಹುರಿ ; ಕಸೂತಿಯ ಉಣ್ಣೆಯ ದಾರ.

Gendárme (F) ಝಾಂ(ಜೆಂ)ಡಾರ್ಮ್ (ನಾ. ; ಬ. ವ. -s) (ಮು., ಫ್ರಾನ್ಸಿನಲ್ಲಿ ಪೋಲೀಸುಕೆಲಸದಲ್ಲಿ ನಿಯಮಿತನಾಗಿರುವ) ರಾವುತ ಅಥವಾ ಪ್ಯಾದೆ : ಪೋಲೀಸು ಸೈನಿಕ. (ಬೆಟ್ಟಹತ್ತುವುದರಲ್ಲಿ, ಬೆಟ್ಟದ ಕಡಿದಾದ ಏಣುಗಳಲ್ಲಿ ದಾರಿಗೆ ಅಡ್ಡವಾಗಿ ತಡೆಯಾಗಿರುವ) ಕೋಡುಗಲ್ಲು. **Gendarmerié** (F) ಝಾಂಡಾರ್ಮರೀ (ನಾ.) ಪೋಲೀಸು ಸೈನಿಕ ದಳ.

Génder[1] ಜೆಂಡರ್ (ನಾ.) (ವ್ಯಾ.) ಲಿಂಗ. Masculine, Feminine, Neuter, g. ಪುಲ್ಲಿಂಗ, ಸ್ತ್ರೀ —, ನಪುಂಸಕ —. Common g. ಉಭಯ ಲಿಂಗ ; ಪುಂಸ್ತ್ರೀ ಲಿಂಗ. **Génderless** (ಗು.)

Génder[2] ಜೆಂಡರ್ (ಕ್ರಿ. ಸಕ.) (ಕಾವ್ಯ) = Engender.

Gene ಜೀನ್ (ನಾ.) (ಜೀ. ಎ.) ತಾಯಿಯಿಂದ ಒಂದು ಅಂಶವೂ ತಂದೆಯಿಂದ ಒಂದು ಅಂಶವೂ ಬಂದು ಸೇರಿ ಜೊತೆಗೂಡಿ ಆಗಿರುವ ಅಂಕುರ ಜೀವಾಣುವಿನಲ್ಲಿಯ ಎರಡು ಅಂಶಗಳಲ್ಲಿ ಒಂದು ; ವಂಶವಾಹಿ.

Geneálogy ಜೆ(ಜೀ)ನಿಆ್ಯಲೊಜಿ (ನಾ.) ಮೂಲ ಪುರುಷನಿಂದ ಹಿಡಿದು ಎಲ್ಲ ಪಿತೃಗಳನ್ನೂ ಹೆಸರಿಸಿ ಒಬ್ಬನ ಸ್ಥಾನವನ್ನು ನಿರ್ದೇಶಿಸುವ ವಿವರ : ವಂಶಾನ್ವೇಷಣ ; ವಂಶ ವೃಕ್ಷ ; ವಂಶ ಪರಂಪರೆ ; ವಂಶಾ ವಳಿ ; ವಂಶ ; ಪೀಳಿಗೆ. (ಆದಿ ರೂಪದಿಂದ ಸಸ್ಯ ಅಥವಾ ಪ್ರಾಣಿ ಅಭಿವೃದ್ಧಿ ಹೊಂದಿ ಮಾರ್ಪಾಟಾಗಿರುವ) ವಿಕಸನ ಸರಣಿ. **Genealógical** ಜೆ(ಜೀ)ನಿಅಲಾಜಿಕಲ್ (ಗು.) ವಂಶ ಪರಂಪರೆಯ ; ವಂಶಾನುಗತ ; ವಂಶಾನ್ವೇಷಣದ ; ವಂಶಾವಳಿಯ. G. tree ವಂಶ ವೃಕ್ಷ (ಕೊಂಬೆ ಗಳಿಂದ ಕೂಡಿದ ವೃಕ್ಷದಾಕಾರದಲ್ಲಿ ವಂಶಾವಳಿಯನ್ನು ವಿವರಿಸುವ ಪಟ್ಟಿ, ಚಿತ್ರ). **Genealógically** (ಕ್ರಿ. ವಿ.) ; **Geneálogize** — ಆ್ಯಲೊ ಜೈಸ್ (ಕ್ರಿ.) (ಒಂದರ, ಒಬ್ಬನ) ವಂಶಪರಂಪರೆಯನ್ನು ತೋರಿಸು ; ವಂಶವೃಕ್ಷಗಳನ್ನು ಬರೆ, ರಚಿಸು. **Geneálogist** (ನಾ.)

Génera. Genus ಪದದ ಬ. ವ.

Géneral ಜೆನೆರಲ್ (ಗು., ನಾ.) (ಸಂಪೂರ್ಣವಾಗಿ, ಸರಿಸುಮಾರಾಗಿ) ಸಾರ್ವತ್ರಿಕವಾದ ; ಸರ್ವಸಾಮಾನ್ಯವಾದ ; ಸಾಧಾರಣವಾದ ; ಪ್ರಾಯಿಕವಾದ. (ಬಹು ಮಟ್ಟಿಗೆ) ಎಲ್ಲಕ್ಕೂ, ಎಲ್ಲರಿಗೂ, ಅನ್ವಯಿಸುವ ; ಎಲ್ಲವನ್ನೂ, ಎಲ್ಲರನ್ನೂ, ಒಳಕೊಂಡಿರುವ ; ಏಕದೇಶವಲ್ಲದ ; ವಿಶೇಷವಲ್ಲದ ; ಅನಿರ್ದಿಷ್ಟ ; ಸ್ಥಳೀಯವಲ್ಲದ ; ಒಂದು ಪಂಗಡದ್ದಲ್ಲದ; ಹುದುವಾದ (ಗ್ರಾಂ.) [G. confession ಒಟ್ಟಿಗೆ ಮಾಡಿದ ಪಿಷ್ಯಸಮು ದಾಯದ ಪಾಪನಿವೇದನೆ. G. Council ಆಹ್ವಾನ ಕೊಟ್ಟು ಕರೆದ ಕ್ರೈಸ್ತಮತೀಯ ಅಖಿಲ ಸಾಮಾನ್ಯ ಸಭೆ. G. election (Election ನೋಡಿ). G. Post Office ನಗರದ ಪ್ರಧಾನ ಅಂಚೆಯ ಕಚೇರಿ. G. Post ಮೊದಲನೆಯ, ಬೆಳಗಿನ, ಅಂಚೆಬಟವಾಡೆ. ಮನೆಯೊಳಗೆ ಆಡುವ ಒಂದು ಬಗೆಯ ಆಟ(ದ ಹೆಸರು)]. ರೂಢಿಯಾದ ; ವಾಡಿಕೆ ಯಾದ ; ಎಲ್ಲೆಲ್ಲಿಯೂ ಹರಡಿರುವ [In a g. way ಸಾಮಾನ್ಯವಾಗಿ ; ಸಾಧಾರಣವಾಗಿ ; ಲೋಕರೂಢಿಯಾಗಿ. As a g. rule ಸಾಮಾನ್ಯ ವಾಗಿ ; ಅನೇಕ ಸಂದರ್ಭಗಳಲ್ಲಿ. In g. (ವಿಶೇಷ ವಿನಾಯಿತಿಗಳನ್ನು ಬಿಟ್ಟು) ಸರ್ವಸಾಮಾನ್ಯವಾಗಿ, ಪ್ರಾಯಿಕವಾಗಿ. In g. terms ಸಾಮಾನ್ಯವಾದ ಮಾತುಗಳಲ್ಲಿ ; ಮೊಗುಂ ಆಗಿ ; ಅನಿಷ್ಕೃಷ್ಟವಾಗಿ. G. dealer ಅನೇಕ ಬಗೆಯ ಪದಾರ್ಥಗಳ ವ್ಯಾಪಾರಿ ; ನಾನಾ ಸರಕು ವ್ಯಾಪಾರಿ. G. idea ಸಾಮಾನ್ಯ, ಸ್ಥೂಲ, — ಭಾವ, ಅಭಿಪ್ರಾಯ ; ಸರಿಸುಮಾರು ಭಾವ. G. practitioner ಎಲ್ಲ ತೆರದ ರೋಗಗಳಿಗೂ ಚಿಕಿತ್ಸೆ ಮಾಡುವ ವೈದ್ಯ : ಸಾಮಾನ್ಯ ವೈದ್ಯ. G. reader ಸಾಮಾನ್ಯ ವಾಚಕ. G. resemblance ಸಾಮಾನ್ಯ ಹೋಲಿಕೆ ; ತಕ್ಕಷ್ಟು ಹೋಲಿಕೆ. G. servant ಎಲ್ಲ ಕೆಲಸಗಳನ್ನೂ ಮಾಡುವ ಆಳು. G. word, term, notion ಸಾಮಾನ್ಯ ಶಬ್ದ, ಪದ, ಭಾವನೆ.] (ಸೈನ್ಯಾಧಿಕಾರಿ) ಕರ್ನಲ್ಲಿಗೆ ಮೇಲ್ಪಟ್ಟ ಹುದ್ದೆಯ ; ಜೆನೆರಲ್ಲಿನ ; (ಹುದ್ದೆಯ ಹೆಸರುಗಳೊಡನೆ) ಪ್ರಧಾನ ; ಶ್ರೇಷ್ಠ ; ಮುಖ್ಯ ; ಸರ್ವಾಧಿ ಕಾರದ [Adjutant g., Attorney g., Postmaster g. (ಹಾಸ್ಯವಾಗಿ) Lover g. ಎಲ್ಲ ಹೆಂಗಸರನ್ನೂ ಕಾಮಿಸುವವನು ; ಕಾಮ ನಾಯಕ]. (ನಾ.) [(ಪ್ರಾಚೀ. ಪ್ರ.) The g. ಜನಸಾಮಾನ್ಯ ; ಜನತೆ]. (ಬ. ವ. ದಲ್ಲಿ, ಈಗ ವಿರಳ ಪ್ರ.) ಸಾಮಾನ್ಯ ತತ್ತ್ವಗಳು, ಭಾವನೆಗಳು, ಸೂತ್ರಗಳು. ಒಂದು ಧರ್ಮಸಂಸ್ಥೆಯ ಅಧ್ಯಕ್ಷ, ಮುಖ್ಯಸ್ಥ (ಉದಾ., Jesuits, Dominicans, ಮೊ. ಸಂಸ್ಥೆಗಳಲ್ಲಿ). (ಸೈನ್ಯ) ಫೀಲ್ಡ್ ಮಾರ್ಷಲ್ ಅಧಿಕಾರಿಯ ಕೆಳಗಿನ ಅಧಿಕಾರಿ ; ಜೆನೆರಲ್ (Also, Lieutenant g., Major g.) ; ಸೇನಾಪತಿ ; ಯುದ್ಧತಂತ್ರ ನಿಪುಣ ; ವ್ಯೂಹ ರಚನಾ ಪ್ರವೀಣ (A good, bad, great, g.; No g.). (ಬಳ. ಮಾ.) = G. servant (ಮೇಲೆ ನೋಡಿ). **Generalíssimo** (ನಾ.) ಒಟ್ಟುಗೂಡಿಸಿದ ಭೂ ಜಲ ಸೈನ್ಯದ, ಅಥವಾ ಹಲವು ಸೈನ್ಯಗಳ, ಅಧಿಪತಿ ; ಸಮಸ್ತ ಸೇನಾಧ್ಯಕ್ಷ ; ಸೇನಾ ಪತಿ. **Generálity** — ರ್‍ಯಾಲಿಟಿ (ನಾ.) ಸಾಮಾನ್ಯತೆ; ಸಾಧಾರಣತೆ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನಿಷ್ಕೃಷ್ಟತೆ; ಅಸ್ಪಷ್ಟತೆ. ಸರ್ವಸಾಮಾನ್ಯ ಅಂಶ, ತತ್ತ್ವ, ವಿಧಿ, ಹೇಳಿಕೆ. ಪ್ರಧಾನ ಭಾಗ; ಅಧಿಕ ಭಾಗ; ಬಹು ಭಾಗ, ಬಹು ಸಂಖ್ಯೆ. **Generalizátion** — ರಲೈ — (ನಾ.) ಅನುಮಾನ ಫಲವಾಗಿ ಪಡೆದ ಸಾಮಾನ್ಯ ಭಾವನೆ, ಪ್ರಮೇಯ; ಸಾಮಾನ್ಯ ಸೂತ್ರ ನಿರೂಪಣೆ; ಸಾಮಾನ್ಯೀಕರಣ; ಒಟ್ಟು ಮಾತು; ಹುದು ಮಾತು (ಹಲವು ವೇಳೆ ಹೀನಾಯವಾಗಿ ಪ್ರ.: ಮು., Hasty g. ಕೆಲವೇ ಆಧಾರಗಳ ಮೇಲೆ ಮಾಡಿದ ದುಡುಕು ಸಾಮಾನ್ಯೀಕರಣ, ತತ್ತ್ವನಿರೂಪಣೆ). **Géneralize** (ಕ್ರಿ.) ಸಾಮಾನ್ಯ ನಿಯಮಗಳಿಗೆ, ತತ್ತ್ವಕ್ಕೆ, ಭಾವನೆಗೆ, ರೂಪಕ್ಕೆ, — ಇಳಿಸು, ತರು; — ಕ್ಕೆ ಸಾಮಾನ್ಯ ಲಕ್ಷಣ ಕೊಡು; ಸಾಮಾನ್ಯ ಹೆಸರಿನಿಂದ ಕರೆ. (ನ್ಯಾಯ, ಫಲ) ಅನುಮಾನದಿಂದ ಊಹಿಸು; ಸಾಮಾನ್ಯ ಸೂತ್ರ ನಿರೂಪಿಸು. (ಗಣಿತ, ತತ್ತ್ವಶಾಸ್ತ್ರ) ಸಾಮಾನ್ಯ ರೂಪಕ್ಕೆ ಇಳಿಸು; (ಒಂದರ) ಪ್ರಯೋಗವನ್ನು ವಿಸ್ತರಿಸು. (ಚಿತ್ರ) ವಸ್ತುವೈಯಕ್ತಿಕ ಅಥವಾ ಜಾತಿಗತ ಲಕ್ಷಣಗಳನ್ನು ಮಾತ್ರ ರೂಪಿಸು. ಅನಿರ್ದಿಷ್ಟವಾಗಿ ಹೇಳು, ಮಾತನಾಡು. ಸಾಮಾನ್ಯ ರೂಢಿಗೆ ತರು. **Géneralizer** (ನಾ.); **Génerally** (ಕ್ರಿ. ವಿ.) ಬಹುಮಟ್ಟಿಗೆ; ವಿಶೇಷವಾಗಿ; ಪ್ರಾಯಿಕವಾಗಿ; ಸಾಮಾನ್ಯವಾಗಿ; ಸಾಮಾನ್ಯಾರ್ಥದಲ್ಲಿ; ನಿರ್ದಿಷ್ಟ ವಿಚಾರ ಮಾಡದೆ. (G. speaking ಸಾಮಾನ್ಯವಾಗಿ). **Géneralship** (ನಾ.) ಸೈನ್ಯದ ಜೆನೆರಲ್ ಅಧಿಕಾರ; ಸೇನಾಧಿಪತ್ಯ. ಯುದ್ಧ ತಂತ್ರ; ಸಮರ ಕೌಶಲ. (ರಾಯಭಾರ, ವ್ಯವಹಾರ) ಚಾತುರ್ಯ. ಉಚಿತಜ್ಞತೆ; ಜಾಣ್ಮೆ.

Génerate ಜೆನರೇಟ್ (ಕ್ರಿ. ಸಕ.) [ಗಿಡಗಳು, ಪ್ರಾಣಿಗಳು, ಮೊ. ನ್ನು (ಸಾ., ಕರ್ಮಣಿಯಲ್ಲಿ); ಶಾಖ, ಶಕ್ತಿ, ಬೆಳಕು, ಘರ್ಷಣೆ, ವಿದ್ಯುತ್ತು, ಮೊ. ನ್ನು; ಫಲ, ವಸ್ತುಸ್ಥಿತಿ, ಮನಸ್ಸಿನ ಸ್ಥಿತಿ, ಮೊ. ನ್ನು] ಹುಟ್ಟಿಸು, ಉತ್ಪತ್ತಿ ಮಾಡು, ಉತ್ಪಾದನೆ ಮಾಡು, ಜನಿಯಿಸು, ನಿರ್ಮಿಸು, ವಿಕಾಸಗೊಳಿಸು. (ಗಣಿತ: ಚಲಸುತ್ತಿರುವಂತೆ ಭಾವಿಸುವ ಬಿಂದು, ಗೆರೆ, ಕ್ಷೇತ್ರ, ಮೊ. ಗಳ ವಿಷಯದಲ್ಲಿ, ಕ್ರಮವಾಗಿ) ಗೆರೆಯನ್ನು, ಕ್ಷೇತ್ರವನ್ನು, ಘನಾಕೃತಿಯನ್ನು, ರಚಿಸು (A moving point generates a line ಚಲಬಿಂದು ಒಂದು ರೇಖೆಯನ್ನು ರಚಿಸುತ್ತದೆ). **Generátion** (ನಾ.) ಹುಟ್ಟಿಸುವುದು; ಉತ್ಪತ್ತಿ (ಮಾಡುವುದು); ಸಂತಾನಾಭಿವೃದ್ಧಿ (ಮಾಡುವುದು); ಹುಟ್ಟು; ಸಂತಾನ. [Equivocal g., Spontaneous g. (ಆಯಾ ಮಾತುಗಳನ್ನು ನೋಡಿ)]. (ಸ್ವಾಭಾವಿಕ ಅಥವಾ ಕಾಲ್ಪನಿಕ ಕಾರ್ಯಕ್ರಮದಿಂದ) ಉತ್ಪತ್ತಿ, ಉತ್ಪಾದನ. ಸಂತತಿಯಲ್ಲಿ, ವಂಶಾವಳಿಯಲ್ಲಿ, ಒಂದು ಮೆಟ್ಟಲು; ಸಂತತಿ; ಒಂದು ತಲೆಮೊರೆ (I have known them for three generations ಅವರನ್ನು ಮೂರು ತಲೆಯಿಂದ ಬಲ್ಲೆ. His descendant in the tenth g. ಅವನಿಂದ ಹತ್ತನೆಯ ತಲೆಯವನು). ಹೆಚ್ಚುಕಡಮೆ ಒಂದೇ ಕಾಲದಲ್ಲಿ ಹುಟ್ಟಿದ ಜನಸಮುದಾಯ; ಒಂದು ತಲೆಮೊರೆಯವರು. ಮಕ್ಕಳು ತಂದೆಗಳಾಗುವುದಕ್ಕೆ ಬೇಕಾಗುವ ಸರಾಸರಿ ಕಾಲಮಾನ (ಸುಮಾರು ಮೂವತ್ತು ವರ್ಷಗಳ ಕಾಲ; ಮೂರು ತಲೆಗಳಿಗೆ ಒಂದು ಶತಮಾನದಂತೆ). **Génerative** — ರೆ(ref)ಟಿವ್, — ರಟಿವ್ (ಗು.) ಜನನದ; ಉತ್ಪತ್ತಿಯ; ಜನನ ಶಕ್ತಿಯುಳ್ಳ; ಉತ್ಪಾದಕ (ಶಕ್ತಿಯುಳ್ಳ). **Génerator** — ರೇಟರ್ (ನಾ.) ಹುಟ್ಟಿಸುವವನು; ಜನಕ; (ಅನಿಲಗಳು, ಆವಿ, ವಿದ್ಯುತ್ತು, ಮೊ. ನ್ನು ಉತ್ಪತ್ತಿಮಾಡುವ) ಉತ್ಪಾದಕ (ಸಲಕರಣೆ)

Genéric ಜೆನೆರಿಕ್ (ಗು.) ಜಾತಿ ವಾಚಕ. ಒಂದು ದೊಡ್ಡ ಜಾತಿಯ ವ್ಯಕ್ತಿಗೆ ಅನ್ವಯಿಸಿದ. ಸಾಮಾನ್ಯ; ಸಾಧಾರಣ (ನಿಯತವಲ್ಲದ್ದು, ವಿಶಿಷ್ಟತೆಯಿಲ್ಲದ್ದು). **Genérically** (ಕ್ರಿ. ವಿ.)

Génerous ಜೆನರಸ್ (ಗು.) ಉದಾರ; ಉದಾತ್ತ ಸ್ವಭಾವದ; ದೊಡ್ಡ ಮನಸ್ಸಿನ; ವಿಶಾಲ ಹೃದಯದ; ಕೊಡುಗೈಯ; ಧಾರಾಳದ; ದಾನಪರ. (ನೆಲ) ಫಲವತ್ತಾದ; ಹುಲುಸಾದ; ಹೇರಳ; ಪುಷ್ಕಳ; ಯಥೇಷ್ಟ; ಸಮೃದ್ಧ. (ಆಹಾರ, ಬಣ್ಣ, ಮದ್ಯ — ಇವುಗಳ ವಿಷಯದಲ್ಲಿ) ಸಾರವತ್ತಾಗಿಯೂ ಸಮೃದ್ಧಿಯಾಗಿಯೂ ಇರುವ. **Génerously** (ಕ್ರಿ. ವಿ.); **Generósity** — ರಾಸಿಟಿ (ನಾ.) ದೊಡ್ಡ ಮನಸ್ಸು; ಔದಾರ್ಯ; ದಾತೃತ್ವ; ಕ್ಷಮಾ ಶೀಲತೆ.

Génesis ಜೆನೆಸಿಸ್ (ನಾ.) ದೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ, ಪ್ರಪಂಚ ಸೃಷ್ಟಿಯನ್ನು ವಿವರಿಸುವ, ಮೊದಲನೆಯ ಪರ್ವ. ಮೂಲ; ಉತ್ಪತ್ತಿ (ಕ್ರಮ); ರಚನಾ ಕ್ರಮ. [ಸಮಾಸದಲ್ಲಿ: Abiog., Parthenog. (ಆಯಾ ಪದವನ್ನು ನೋಡಿ)]

Génet ಜೆನೆಟ್ (ನಾ.) ಒಂದು ಜಾತಿಯ ಪುನುಗಿನ ಬೆಕ್ಕು; ಇದರ ತುಪ್ಪುಳು ಚರ್ಮ.

Genétic ಜೆ(ಜಿ)ನೆಟಿಕ್ (ಗು.) ಉತ್ಪತ್ತಿಯ; ಉತ್ಪತ್ತಿ ವಿಷಯದ; — ಸಂಬಂಧದ. ತಳಿಶಾಸ್ತ್ರದ. **Genétics** (ನಾ., ಬ. ವ.) (ಜನನ ಕ್ರಿಯೆಗೆ ಸಂಬಂಧಪಟ್ಟ ಶರೀರ ವಿಜ್ಞಾನವನ್ನೂ ತಳಿಯೆಬ್ಬಿಸುವ ಕುಶಲ ವಿದ್ಯೆಯನ್ನೂ ಒಳಕೊಂಡ) ಅನುವಂಶೀಯದ ಮತ್ತು ಜೀವಿ ಮಾದರಿಗಳ ರೂಪ ಸ್ಥಿತಿ ವ್ಯತ್ಯಯದ ವಿಚಾರ: ತಳಿಶಾಸ್ತ್ರ. **Genétically** (ಕ್ರಿ. ವಿ.)

Genéva[1] ಜಿನೀವ (ನಾ.) (ಧಾನ್ಯದಿಂದ ಬಟ್ಟಿಯಿಳಿಸಿ 'ಜೂನಿಪರ್' ಕಾಯಿಂದ ರುಚಿಕಟ್ಟಿದ) ಒಂದು ಬಗೆಯ ಮದ್ಯ: ಧಾನ್ಯ ಮದ್ಯ.

Genéva[2] ಜಿನೀವ (ಗು., ನಾ.) (ಸ್ವಿಟ್ಸರ್‌ಲೆಂಡಿನಲ್ಲಿಯ) ಜಿನೀವ ಪಟ್ಟಣ(ದ) [G. bands ಸ್ವಿಸ್ ಕ್ಯಾಲ್ವಿನ್ ಪಂಥದವರ ಕೊರಳಪಟ್ಟಿಗಳು; ಈ ತೆರದ ಕೊರಳಪಟ್ಟಿಗಳು. G. Conventions (ಯುದ್ಧದಲ್ಲಿ ಚರ ಚಿಕಿತ್ಸಾಲಯ, ಮೊ. ವು ಪಕ್ಷೀಯವಲ್ಲವೆಂದು ಪರಿಗಣಿಸಿ ಅವನ್ನು ಎರಡು ಪಕ್ಷದವರೂ ಮಾನ್ಯಮಾಡಬೇಕೆಂದು ಗೊತ್ತುಪಡಿಸಿದ ೧೮೬೪-೬೫ನೆಯ ಇಸವಿಯ) ಜಿನೀವ ಒಪ್ಪಂದ. G. cross ಯುದ್ಧದಲ್ಲಿ ಚರಚಿಕಿತ್ಸಾಲಯ, ಮೊ. ಗಳ ಸಂಕೇತವಾದ, ಬಿಳಿಯ ಹಿನ್ನೆಲೆಯ, ಕೆಂಪು ಗ್ರೀಕ್‌ಶಿಲುಬೆ. G. gown ಉಪದೇಶ ವೇದಿಕೆಯಲ್ಲಿ ಕ್ಯಾಲ್ವಿನ್ ಪಂಥದವರು, ಮೊ. ರು ತೊಡುವ ಕರಿಯ ನಿಲುವಂಗಿ, ದಗಲೆ]. (ನಾ.) ಜಿನೀವದ ಸಂಕೇತಗಳು. ಜನಾಂಗಗಳ ಸಂಮಿಳನ, ಸಂಘ, ಕೂಟ; ಇದರ ಕಾರ್ಯಕರಾಪಗಳು. **Genévan** (ಗು. ನಾ.); **Genevése** ಜೆನಿವೀಸ್ (ಗು., ನಾ.) ಜಿನೀವದ(ವನು) [ಮು., ಕ್ಯಾಲ್ವಿನ್ ಪಂಥದ(ವನು)]

Génial[1] ಜೀನಿಯಲ್ (ಗು.) ಬೆಳವಣಿಗೆಗೆ ಸಹಾಯಕವಾದ; (ವಾಯು, ವಾಯುಸ್ಥಿತಿ) ಹಿತಕರವಾದ, ಒಗ್ಗುವ, ಬೆಚ್ಚಗಿರುವ; ಉತ್ಸಾಹಕರ; ಹುರಿದುಂಬಿಸುವ; ಉಲ್ಲಾಸದ; ಗೆಲವಿನ; ಸಂತೋಷ ಪ್ರಕೃತಿಯ; ನಗು ಮುಖದ; ಸರಸಿಯಾದ; ದಯಾಪರನಾದ; ಸೌಜನ್ಯಪೂರ್ಣ; ಪ್ರಸನ್ನ; ಸಖ್ಯಶೀಲ; ಸ್ನೇಹಪರ. (ವಿರ. ಪ್ರ.) ಅಸಾಧಾರಣ ಪ್ರತಿಭೆಯ. (ವಿರ. ಪ್ರ.) ನಿಷೇಕದ (G. bed ನಿಷೇಕದ ಸಜ್ಜೆ); ಉತ್ಪಾದಕ; ಜನಕ. **Geniálity** (ನಾ.); **Génialize** (ಕ್ರಿ. ಸಕ.); **Génially** (ಕ್ರಿ. ವಿ.)

Genial[2] ಜೆನೈಅಲ್ (ಗು.) (ಅಂ. ರ. ಶಾ.) ಗಲ್ಲದ.

Genículate(d) ಜೆನಿಕ್ಯುಲೆಟ್, — ಲೇಟೆಡ್ (ಗು.) ಮೊಣಕಾಲಿನಂಥ ಕೀಲುಗಳುಳ್ಳ; ಜಾನು ಸಂಧಿಯ.

Génie ಜೀನಿ (ನಾ.; ಬ. ವ. Genii ಜೀನಿಐ) (ಅರೇಬಿಯನ್ ಕಥೆಗಳ) ಧೂತ, ಬೇತಾಳ.

Génital ಜೆನಿಟಲ್ (ಗು.) ಪ್ರಾಣ್ಯುತ್ಪತ್ತಿಯ; (ಪ್ರಾಣಿ) ಜನನದ. **Génitals** (ನಾ., ಬ. ವ.) ಬಾಹ್ಯ ಜನನೇಂದ್ರಿಯಗಳು; ಜನನಾಂಗಗಳು.

Génitive ಜೆನಿಟಿವ್ (ಗು., ನಾ.) (ವ್ಯಾ.) ಷಷ್ಠೀ ವಿಭಕ್ತಿ (=G. case); ಸಂಬಂಧ ಸೂಚಕ ವಿಭಕ್ತಿ [G. absolute ಗ್ರೀಕ್ ಭಾಷೆಯಲ್ಲಿ ಒಂದು ಬಗೆಯ ಷಷ್ಠೀ ವಿಭಕ್ತಿ (ಪ್ರಯೋಗ)]. **Genitíval** — ಟೈವಲ್ (ಗು.) ಷಷ್ಠೀ ವಿಭಕ್ತಿಯ.

Génito- ಜೆನಿಟೊ— (ಸ. ಪೂ. ಪ.) (ಜನನ ಸಂಬಂಧದ): **-urinary** ಜನನಾಂಗ ಮೂತ್ರಾಂಗಗಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Génius ಜೀನಿಅಸ್ (ನಾ. ; ಬ. ವ. -uses — ಅಸೆಸ್, -ii — ನಿಐ) (ಒಬ್ಬನ) ಇಷ್ಟ ದೇವತೆ, ಕುಲ ದೇವತೆ ; ಅಭಿಮಾನ ದೇವತೆ ; ಗ್ರಾಮ ದೇವತೆ ; ಅಧಿ ದೇವತೆ ; ಭಾಗ್ಯ ದೇವತೆ [Good, evil, g. ಮನುಷ್ಯನ ಸುಗತಿಗೆ, ದುರ್ಗತಿಗೆ, ಅನುವಾಗುವ ದೇವತೆ : ಸುದೇವತೆ, ದುರ್ದೇವತೆ. (ಒಬ್ಬನನ್ನು) ಸನ್ಮಾರ್ಗಕ್ಕೆ, ದುರ್ಮಾರ್ಗಕ್ಕೆ, ಎಳೆಯುವ ಪ್ರಭಾವವುಳ್ಳವನು]. (ಏ. ವ. Genie, ಬ. ವ. Genii) ಭೂತ, ಬೇತಾಳ(ಗಳು) ; ಅಮಾನುಷ ವ್ಯಕ್ತಿ(ಗಳು). (ಜನಾಂಗ, ಕಾಲ, ಮೊ. ಗಳ) ಸಹಜ ಗುಣ, ಸ್ವಭಾವ, ಮನೋಧರ್ಮ, ಬುದ್ಧಿವೃತ್ತಿ, ಅಂತಃಪ್ರವೃತ್ತಿ. (ಭಾಷೆ, ನ್ಯಾಯ, ಮೊ. ಗಳ) ರೀತಿ, ಸ್ವಭಾವ, ಧರ್ಮ, ಲಕ್ಷಣ, ಜಾಯಮಾನ, ಮರ್ಯಾದೆ, ಪ್ರವೃತ್ತಿ, ಸಂಪ್ರದಾಯ. ಒಂದು ಸ್ಥಳದ ಭಾವ ಸಾಹಚರ್ಯ, ಪ್ರೇರಣೆ, ಪ್ರಭಾವ, ಮಹತ್ತ್ವ. ಸ್ವಾಭಾವಿಕ, ಸಹಜ, —ಶಕ್ತಿ, ಸಾಮರ್ಥ್ಯ ; ಪ್ರತಿಭೆ ; ಅತಿಶಯವಾದ ಬುದ್ಧಿಶಕ್ತಿ ; (ಕಲ್ಪನೆಯ, ರಚನೆಯ, ನಿರ್ಮಾಣದ) ಅಸಾಧಾರಣ ಪ್ರತಿಭೆ, ಜನ್ಮಶಕ್ತಿ (ಬ. ವ. ಇಲ್ಲ). ಅಸಾಧಾರಣ ಪ್ರತಿಭಾಶಾಲಿ (ಬ. ವ. Geniuses). G. loci (L) ಅಧಿದೇವತೆ ; ಸ್ಥಳಾಭಿಮಾನ ದೇವತೆ ; ಸ್ಥಳಮಹಿಮೆ.

Génoa ಜೆನೊಅ (ನಾ.) ಇಟಲಿಯ ಒಂದು ಪಟ್ಟಣ (G. cake ಮೇಲ್ಭಾಗದಲ್ಲಿ ಬಾದಾಮಿ ಸೇರಿರುವ ಬಹಳ ರುಚಿಯಾದ ಒಂದು ಬಗೆಯ ರೊಟ್ಟಿ ; ಬಾದಾಮಿ ರೊಟ್ಟಿ). **Genoése** — ಈಸ್ (ಗು., ನಾ.) ಜೆನೊವದ ; (ಏ. ವ., ಬ. ವ.) ಜೆನೊವದವನು(ರು)

Genre (F) ಷಾನ್ರ್ (ನಾ.) ಬಗೆ ; ರೀತಿ ; ಶೈಲಿ. (ಕಾವ್ಯ) ರೂಪ, ಜಾತಿ. ಸಾಮಾನ್ಯ ಜನಜೀವನದ ದೃಶ್ಯಗಳನ್ನು ಚಿತ್ರಿಸುವ ಶೈಲಿ (=G.-painting)

Génro ಜೆನ್ರೋ (ನಾ., ಬ. ವ.) ಜಪಾನಿನ ಹಿರಿಯ ರಾಜತಂತ್ರಜ್ಞರು.

Gens (L) ಜೆನ್ಸ್ [ನಾ. ; ಬ. ವ. Gentes ಜೆಂಟಿ(ೀ)ಸ್] (ರೋ. ಪ್ರಾ.) (ಗ್ರೀಕರಲ್ಲಿ, ರೋಮನರಲ್ಲಿ) ಬುಡಕಟ್ಟು ; ಬಣ ; ಕುಲ.

Gent ಜೆಂಟ್ (ನಾ.) (ಗ್ರಾಮ್ಯ) ಸಭ್ಯ ; ಸಂಭಾವಿತ ; ದೊಡ್ಡಮನುಷ್ಯ. (ಹಾಸ್ಯವಾಗಿ) ಸಂಭಾವಿತನಂತೆ ನಟಿಸುವವನು ; (ಅವನನ್ನು) ಅನುಕರಿಸುವವನು. (Gentleman ಪದದ ಸಂಕ್ಷಿಪ್ತ ರೂಪ)

Genteél ಜೆಂಟೀಲ್ (ಗು.) (ಸಾ., ವ್ಯಂಗ್ಯ ಪ್ರ. ; ಇತರ ಕಡೆ ಗಾಂಭೀರ್ಯ ಪ್ರ. ವಲ್ಲ) ಮೇಲಿನ ಅಂತಸ್ತಿನವರಿಗೆ ತಕ್ಕ ; ಅವರ ವೈಶಿಷ್ಟ್ಯದ, ಲಕ್ಷಣದ ; ಅವರಿಗೆ ಸಂಬಂಧಪಟ್ಟ ; ಉತ್ತಮ ವರ್ಗ ಯೋಗ್ಯ ; ಸಂಭಾವಿತ. ಠೀವಿಯ ; ಠೀಕಿನ ; ಸೊಗಸಿನ ; ನೀಟುತನದ ; ಅಂದವಾಗಿ ಉಡುಪು ತೊಟ್ಟಿರುವ. **Genteélly** (ಕ್ರಿ. ವಿ.) ; **Gentílity** ಜೆಂಟಿಲಿಟಿ (ನಾ.) (ವಿರ. ಪ್ರ.) ಸದ್ವಂಶ ಜನನ ; ಕುಲೀನತೆ ; ಸದ್ವಂಶತೆ; ಸೌಜನ್ಯ. (ಸಾ., ವ್ಯಂಗ್ಯಾರ್ಥದಲ್ಲಿ) ದೊಡ್ಡಸ್ತಿಕೆ ; ಸಂಭಾವಿತತನ ; ಸಭ್ಯ ನಡವಳಿ ; ಸಾಮಾಜಿಕ ಔನ್ನತ್ಯ ; ಉತ್ತಮ ವರ್ಗದವರ ಶೀಲ ಸ್ವಭಾವಗಳು. ವಿನಯ ; ಸಭ್ಯತೆ. Shabby g. ದೊಡ್ಡಸ್ತಿಕೆ ತೋರಿಸಿಕೊಳ್ಳುವ ಪ್ರಯತ್ನ.

Géntian ಜೆನ್ಷ(ಷ್)ನ್, ಜೆನ್ಟಿಯನ್ (ನಾ.) ಸಾ., ಬೆಟ್ಟ ಗುಡ್ಡಗಳಲ್ಲಿ ಬೆಳೆಯುವ, ನೀಲಿ ಹೂವು ಬಿಡುವ, ಒಂದು ಸಸ್ಯಜಾತಿ : ಚಿರಾಯತ ; ಕಿರಿಯಾತು ಗಿಡ. **G.-bitter** ಈ ಸಸ್ಯದ ಬೇರಿನಿಂದ ಇಳಿಸಿದ, ದೇಹದಾರ್ಢ್ಯ ಕೊಡುವ, ಉತ್ತೇಜಕವಾದ, ಕಹಿ ಕಷಾಯ ; ಚಿರಾಯತ ಕಷಾಯ.

Géntile ಜೆಂಟೈ(ಟಿ)ಲ್ (ಗು., ನಾ.) ಯೆಹೂದ್ಯೇತರ (ವ್ಯಕ್ತಿ) ; ಮಾರ್ಮನ್ ಮತೀಯನಲ್ಲದ(ವನು) ; ಕ್ರೈಸ್ತ, ಯೆಹೂದ್ಯ ಅಥವಾ ಮುಸ್ಲಿಂ ಅಲ್ಲದ(ವನು) ; ಮೂರ್ತಿ ಪೂಜಕ. (ವ್ಯಾ.) ದೇಶ ವಾಚಕ, ಜನಾಂಗ ವಾಚಕ, — ಪದ (The words Italian, American, etc. are gentiles). **Géntiledom** (ನಾ.) ; **Gentilítial** ಜೆಂಟಿಲಿಷ(ಷ್)ಲ್ (ಗು.) ಒಂದು ಜನಾಂಗದ, ಬಣದ, ಕುಲದ, ಮನೆತನದ (G. noun, name, insignia)

Gentílity. **Genteel** ನೋಡಿ.

Géntle ಜೆಂಟ್ಲ್ [ಗು. (ತರ ತಮಗಳು -er, -est), ನಾ., ಕ್ರಿ. ಸಕ.] ಕುಲೀನ ವಂಶದ ; ಅಭಿಜಾತ ; ಉತ್ತಮ ಕುಲದ ; ಮೇಲ್ಮೆಯ ; ಮೆಲ್ಪಿನ. ವಂಶಲಾಂಛನ ಧರಿಸುವ ಹಕ್ಕುಳ್ಳ. [ಈಗ G. & simple ಎಂಬಲ್ಲಿಯೂ, ಸಮಾನ ಪದಗಳಾದ Gentlefolks, Gentleman ಎಂಬಲ್ಲಿಯೂ ಮಾತ್ರ ಪ್ರ.]. (ಹುಟ್ಟು, ರಕ್ತ, ವಂಶ, ಉದ್ಯಮ, ಮೊ. ವಿಷಯಗಳಲ್ಲಿ) ಮಾನ್ಯ, ಗೌರವಾರ್ಹ, ಶಿಷ್ಟ, ಶಿಷ್ಟೋಚಿತ. (ಪ್ರಾಚೀ. ಪ್ರ.) ಉದಾರ ; ವಿನೀತ ; ಸಂಭಾವಿತ (ಈಗಲೂ, ವಿನೋದವಾಗಿ, ಗ್ರಂಥಕರ್ತೃವಿನ ಸಂಬೋಧನೆಯಲ್ಲಿ : G. reader ಉದಾರ ವಾಚಕ ಮಹಾಶಯ !). ಸಾಧು ; ಶಾಂತ (The g. craft ಮೀನು ಹಿಡಿಯುವುದು) ; ಸುಲಭವಾಗಿ ನಿರ್ವಹಿಸಲಾಗುವ ; ಹತೋಟಿಯಲ್ಲಿಟ್ಟುಕೊಳ್ಳಲಾಗುವ. ಬಿರುಸು, ಒರಟುತನ, ಕಾಠಿನ್ಯ, ಉಗ್ರತೆ, — ಇಲ್ಲದ; ಮೃದು ; ಮೆತ್ತನೆಯ ; ಸೌಮ್ಯ. (ಔಷಧ) ಸೌಮ್ಯವಾದ, ತೀಕ್ಷ್ಣವಲ್ಲದ. (ನಿಯಮ, ವಿಧಿ, ಮೊ.) ಕಠಿನವಲ್ಲದ ; ಮಿತವಾದ (A g. heat ನಸು ಕಾವು ; ಮಂದೋಷ್ಣ. A g. slope ಮೆಲುವಾಗಿ, ಸೂಕ್ಷ್ಮವಾಗಿ, ಏರುವ, ಇಳಿಯುವ, — ಓರೆ : ನಸುವೋರೆ ; ಸಾಧಾರಣ ಇಳಿಮೇಡು). ದಯಾಪರ ; ಮೃದು ಹೃದಯದ ; ಕೋಮಲ ; ಸುಕುಮಾರತೆಯ (The g. sex ಕೋಮಲೆಯರು ; ಸ್ತ್ರೀಯರು). [Gentlefolk(s) ಮನೆತನಸ್ಥರು ; ಕುಲೀನ ವಂಶಸ್ಥರು ; ಉತ್ತಮ ವಂಶೀಯರು ; ಘರಾಣೆದಾರರು ; ಮೇಲು ವರ್ಗದವರು ; ದೊಡ್ಡಸ್ತಿಕೆಯವರು ; ಸಭ್ಯರು]. (ನಾ. ; ಬ. ವ. ದಲ್ಲಿ ಗ್ರಾಮ್ಯ) = Gentlefolks. ಮೀನಿನ ಗಾಳದಲ್ಲಿ ಉಪಯೋಗಿಸುವ ಮಾಂಸಮಕ್ಷಿಕ, ಮೊ. ಗಳ ಹುಳುಮರಿ. (ಕ್ರಿ.) (ಕುದುರೆಯನ್ನು) ಪಳಗಿಸು ; —ದೃಢವಾಗಿ ಆದರೆ ಲಘುವಾಗಿ ಹಿಡಿದು ನಡಸು. **Géntleness** (ನಾ.) ಮೆಲುಪು ; ದಯಾಪರತೆ ; ಮೃದು ಸ್ವಭಾವ ; ಸಾಧು ಗುಣ ; ಸೌಕುಮಾರ್ಯ ; ಸೌಮ್ಯತೆ ; ವಿನಯ ; ಕೋಮಲತೆ ; ಸ್ನಿಗ್ಧತೆ. ಹೆಚ್ಚು ಇಳುಕಲು ಇಲ್ಲದಿರುವುದು. **Géntly** (ಕ್ರಿ. ವಿ.) ಸಭ್ಯ(ಗೃಹಸ್ಥ)ನಂತೆ ; —ಳಂತೆ; ಸಂಭಾವಿತವಾಗಿ [G. born (ಸುಪ್ರಸೂತ, ಕುಲೀನ ವಂಶದ) ಎಂಬಲ್ಲಿ ಮಾತ್ರ]. ಸದ್ದಿಲ್ಲದೆ ; ಮೆಲ್ಲನೆ ; ಮೆತ್ತಗೆ ; ಮೃದುವಾಗಿ ; ಸೌಮ್ಯವಾಗಿ ; ನಯವಾಗಿ ; ಹಿತವಾಗಿ ; ಕೋಮಲವಾಗಿ ; ದಯಾಪೂರಿತವಾಗಿ. (ತಿಳಿವಳಿಕೆ ಕೊಡುವಾಗ) ನಿಧಾನವಾಗಿ ! **Géntlehood** — ಹುಡ್ (ನಾ.) ಶ್ರೀಮಂತತನ ; ಶ್ರೀಮಂತಿಕೆ ; ಕುಲೀನತೆ ; ಸಭ್ಯತೆ ; ಸದ್ವಂಶ ಲಕ್ಷಣ, ಸ್ಥಾನ, ಸ್ಥಿತಿ. **Géntleman** — ಮ್ಯನ್ (ನಾ.) (ಮು., ಚರಿತ್ರೆ) (ಶ್ರೀಮಂತ ವರ್ಗದವನಲ್ಲದಿದ್ದರೂ ವಂಶಲಾಂಛನ ಧರಿಸುವ ಹಕ್ಕುಳ್ಳ) ಸದ್ವಂಶದವನು. (ಪ್ರಾಚೀ. ಪ್ರ.) ಕೆಲವು ವೃತ್ತಿಗಳು, ಮೊ. ಕ್ಕೆ ಸೇರಿದವನು. ರಾಜನ ಅಥವಾ ದೊಡ್ಡ ಪದವಿಯಲ್ಲಿರುವವನ ಪರಿವಾರಕ್ಕೆ ಸೇರಿದ ಸದ್ವಂಶೀಯ (G. in waiting ಹಾಜರು ಭಾಷಿ, ಅಪ್ಪಣೆಕಾಯುವ, ದೊಡ್ಡಮನುಷ್ಯ. G.-at-arms ರಾಜನ ಅಂಗರಕ್ಷಕ). (ಉದಾರ ಪ್ರವೃತ್ತಿಯೂ ಉನ್ನತ ಕೋಮಲ ಭಾವನೆಗಳೂ ಸುಶಿಕ್ಷಣವೂ ಉಳ್ಳ) ಸಂಭಾವಿತ (Gentlemen's agreement ನೀತಿಬದ್ಧವಾದ, ಆದರೆ ಕಾನೂನುಮೇರೆಗೆ ಕ್ರಮ ನಡಸಲಾಗದ, ಸಭ್ಯರ ಒಪ್ಪಂದ. The g.'s psalm ಬೈಬಲ್ಲಿನಲ್ಲಿಯ ಒಂದು ಕೀರ್ತನೆ). ಸಮಾಜದಲ್ಲಿ ಒಳ್ಳೆಯ ಸ್ಥಾನವುಳ್ಳ ವ್ಯಕ್ತಿ. ಐಶ್ವರ್ಯವೂ ವಿರಾಮವೂ ಉಳ್ಳವನು [G. at large (ಹಾಸ್ಯವಾಗಿ) ಉದ್ಯೋಗವಿಲ್ಲದ ದೊಡ್ಡಮನುಷ್ಯ ; ಸ್ವತಂತ್ರ ಪುರುಷ.]. 'ಮನುಷ್ಯ' (ಎಂಬುದಕ್ಕೆ ಮರ್ಯಾದೆಯ ಮಾತು) ; ದೊಡ್ಡಮನುಷ್ಯ. (ಸಭೆಯಲ್ಲಿ : ಬ. ವ. ದಲ್ಲಿ) ಮಹನೀಯರೆ ! (ಪತ್ರವ್ಯವಹಾರದಲ್ಲಿ, ಸಂಬೋಧನೆ ಮಾಡುವಾಗ) ಮಹಾಶಯ ! (ನ್ಯಾ. ಶಾ.) ನಿರುದ್ಯೋಗಿ. (ವಿನೋದ ಪ್ರ.) Old g. ಸೈತಾನ. My g. ನಾನು ಹೇಳುತ್ತಿದ್ದ ವ್ಯಕ್ತಿ. G.'s g. ದೊಡ್ಡಮನುಷ್ಯನ ಅನುಚರ. G.-commoner (ಚರಿತ್ರೆ) ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳಲ್ಲಿ ಕೆಲವು ಗೊತ್ತಾದ ರಿಯಾಯಿತಿಗಳುಳ್ಳ, ಪಟ್ಟಪ್ರಶಸ್ತಿ ಪಡೆಯಲಿರುವ ವಿದ್ಯಾರ್ಥಿ. G. farmer ಐಶ್ವರ್ಯವೂ ಘರಾಣೆತನವೂ (ಮನೆತನದಿಂದ ದೊಡ್ಡಸ್ತಿಕೆಯೂ) ಇದ್ದು, ಲಾಭ ಕಾಂಕ್ಷೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಿಲ್ಲದೆ, ಕೇವಲ ಸಂತೋಷಕ್ಕಾಗಿ ಬೇಸಾಯ ಮಾಡುವ ದೊಡ್ಡಮನುಷ್ಯ. G. usher ಶ್ರೀಮಂತನ ಹರಿಕಾರ. **Géntlemanhood** (ನಾ.); **Géntlemanship** (ನಾ.); **Géntlemanlike** (ಗು.) ದೊಡ್ಡ ಮನುಷ್ಯನಿಗೆ ತಕ್ಕ; — ನನ್ನು ಹೋಲುವ; ಸಭ್ಯ ಗೃಹಸ್ಥೋಚಿತ; ಸಭ್ಯ ಗೃಹಸ್ಥನಂಥ. **Géntlemanly** (ಗು.) ಸಂಭಾವಿತ ವರ್ತನೆಯ, ನಡೆವಳಿಯ; ದೊಡ್ಡ ಮನುಷ್ಯನಿಗೆ ತಕ್ಕ; ಸಭ್ಯತನದ. **Géntlemanliness** (ನಾ.); **Géntlewoman** (ನಾ.) ಕುಲೀನ ಸ್ತ್ರೀ; ಸುಪ್ರಸೂತೆ; ಸಂಭಾವಿತೆ; ಶ್ರೀಮಂತೆ; ಸಭ್ಯೆ; ಗರತಿ. **Géntlewomanhood** (ನಾ.); **Géntlewomanliness** (ನಾ.); **Géntlewomanlike** (ಗು.); **Géntlewomanly** (ಗು.)

Géntleman, etc. Gentle ನೋಡಿ.

Géntry ಜೆಂಟ್ರಿ (ನಾ.) ಸ್ಥಾನದಲ್ಲಿಯೂ ಹುಟ್ಟಿನಲ್ಲಿಯೂ ಶ್ರೀಮಂತ ದರ್ಜೆಯ ಕೆಳದರ್ಜೆಯವರು; ಮಧ್ಯಮ ಶ್ರೇಣಿಯವರು; ಕುಲೀನರು; ಸಭ್ಯರು. [ತುಚ್ಛವಾಗಿ: (These g. ಎಂಬಲ್ಲಿ) ಜನರು]

Génual ಜೆನ್ಯುಅಲ್ (ಗು.) ಮೊಣಕಾಲಿನ. **Génuflect** (ಕ್ರಿ. ಅಕ.) (ಮು., ಆರಾಧನೆ ಮಾಡುವಾಗ) ಮೊಣಕಾಲೂರು, ಮಂಡಿಯೂರು. **Génuflector** (ನಾ.); **Genufléxion** (ನಾ.); **Génuflectory** (ಗು.) — ವುದರ; — ವುದಕ್ಕೆ ಸಂಬಂಧಪಟ್ಟ.

Génuflect. Genual ನೋಡಿ.

Génuine ಜೆನ್ಯುಇನ್ (ಗು.) ಆದಿ ತಳಿಯ; ಶುದ್ಧ ತಳಿಯ, ಜಾತಿಯ. ನೈಜ ಮೂಲಸ್ಥಾನದಿಂದ, ನೈಜ ಕರ್ತೃವಿನಿಂದ, ನಿಜವಾಗಿ, —ಬಂದ (ಪ್ರಕ್ಷಿಪ್ತವಲ್ಲದ); ನಿಜವಾದ; ಸಾಚ; ಅಚ್ಚ; ಚೊಕ್ಕ; ಕೃತಕವಲ್ಲದ; ಅಪ್ಪಟ; ಹೆಸರಿಗೆ ತಕ್ಕಂತಿರುವ; ನಿಷ್ಕಪಟ; ಅಕೃತ್ರಿಮ; ಯಥಾರ್ಥವಾದ. **Génuinely** (ಕ್ರಿ. ವಿ.); **Génuineness** (ನಾ.)

Génus ಜೀನಸ್ (ನಾ.; ಬ. ವ. Genera ಜೆನೆರ) (ತರ್ಕ) (ಉಪಪಂಗಡಗಳೂ ವಂಶಗಳೂ ಉಳ್ಳ) ಜಾತಿ [Highest g. (ಮತ್ತೊಂದರ ಉಪಪಂಗಡವಲ್ಲದ) ಪ್ರಧಾನ ಜಾತಿ. Subaltern g. ಉಪ ಜಾತಿ]. (ಪ್ರಾ. ವಿ., ಸ. ವಿ.) (ಇತರ ಎಲ್ಲ ಪಂಗಡಗಳಿಂದ ಭಿನ್ನವಾದ, ಸಮಾನ ಅಂಗರಚನಾ ವೈಲಕ್ಷಣ್ಯವಿದ್ದು, ಸಾ., ಅನೇಕ ವಂಶಗಳನ್ನೊಳಕೊಂಡಿರುವ) ಪ್ರಾಣಿಜಾತಿ, ಸಸ್ಯಜಾತಿ (Class ನೋಡಿ). (The genus Homo ಮನುಷ್ಯ ಜಾತಿ). (ಶಿಥಿಲವಾಗಿ) ವರ್ಗ; ತರಗತಿ; ಪಂಗಡ; ಬುಡಕಟ್ಟು; ಬಣ; ಕುಲ; ಕುಟುಂಬ; ಗುಂಪು.

-geny — ಜೆನಿ (ಉ. ಪ್ರ.) — ಜನನ [ಉತ್ಪತ್ತಿಯನ್ನು ಸೂಚಿಸುವ ನಾಮಪದಗಳನ್ನು ಮಾಡುವ ಪ್ರತ್ಯಯ: ಉದಾ., Anthropogeny (ಆ ಪದವನ್ನು ನೋಡಿ)]

Géo- ಜೀಒ —, **Geó-** ಜಿಒ — (ಸ. ಪೂ. ಪ.) ಭೂ—, ಭೂಮಿಯ—. **-dynámic** (ಗು.) ಭೂಮಿಯ ಗುಪ್ತ ಶಕ್ತಿಗಳ. **-selénic** (ಗು.) ಭೂ ಚಂದ್ರರ.

Geocéntric ಜೀಒಸೆಂಟ್ರಿಕ್ (ಗು.) ಭೂಕೇಂದ್ರದಿಂದ ನೋಡುತ್ತಿರುವಂತೆ ಊಹಿಸಿದ; ಭೂಕೇಂದ್ರೀಯ; ಭೂಕೇಂದ್ರಕ (G. latitude of planet ಭೂಕೇಂದ್ರದಿಂದ ನೋಡುವವನಿಗೆ ಕಾಣುವ ಗ್ರಹದ ಅಕ್ಷಾಂಶ; ಗ್ರಹದ ಭೂಕೇಂದ್ರೀಯ ಅಕ್ಷಾಂಶ); ಭೂಮಿಯನ್ನು ಕೇಂದ್ರವಾಗುಳ್ಳ; — ಉಳ್ಳಂತೆ ನಿರ್ದೇಶಿಸುವ (ಸೂರ್ಯ ಕೇಂದ್ರಕವಲ್ಲದ)

Géode ಜೀಓಡ್ (ನಾ.) ಸ್ಫಟಿಕಾಕೃತಿಗಳು ಅಥವಾ ಇತರ ಖನಿಜ ವಸ್ತುಗಳು ಹತ್ತಿಕೊಂಡಿರುವ ಪೊಳ್ಳು(ಳ್ಳ ಸಂಚಯ ಶಿಲೆ); ಸ್ಫಟಿಕಗರ್ಭ ಶಿಲೆ. **Geódic** ಜಿಆಡಿಕ್ (ಗು.)

Geódesy ಜಿಆಡಿಸಿ (ನಾ.) ಭೂಮಿಯ ಅಥವಾ ಅದರ ವಿಶಾಲ ಭಾಗಗಳ ಆಕೃತಿ ವಿಸ್ತಾರಗಳಿಗೆ ಸಂಬಂಧಿಸಿದ ಗಣಿತಶಾಸ್ತ್ರ ಭಾಗ; ಭೂಗಣಿತ. **Geodésic, Geodétic** ಜೀಒ — (ಗು.) G. line ಭೂಮಿಯ ಮೇಲ್ಮೈಯ ಯಾವುದಾದರೂ ಎರಡು ಬಿಂದುಗಳನ್ನು ಕೂಡಿಸುವ ಹ್ರಸ್ವತಮ ರೇಖೆ: ಭೂಕ್ಷೇತ್ರ ರೇಖೆ. **Geodétical** (ಗು.); **Geodétically** (ಕ್ರಿ. ವಿ.); **Geódesist** ಜಿಆಡೆಸಿಸ್ಟ್ (ನಾ.) ಭೂಗಣಿತಜ್ಞ.

Geógnosy ಜಿಆಗ್ನೊಸಿ (ನಾ.) = Geology (ಭೂ ವಿಜ್ಞಾನ); ಪ್ರಾದೇಶಿಕ ಭೂವಿಜ್ಞಾನ; ನಿರ್ದಿಷ್ಟ ಶಿಲೆಗಳ ಖನಿಜ ಲಕ್ಷಣ, ವರ್ಗೀಕರಣ, ಹಂಚಿಕೆ, ಮೊ. ಗಳ ಜ್ಞಾನ: ಭೂಸ್ವರೂಪ ಜ್ಞಾನ. **Geognóstic(al)** ಜೀಆಗ್ನಾಸ್ಟಿಕ್(ಕಲ್) (ಗು.)

Geógraphy ಜಿಆಗ್ರಫಿ (ನಾ.) ಭೂಮಿಯ ಮೇಲ್ಮೈ, ಆಕಾರ, ಪ್ರಕೃತಿ ಲಕ್ಷಣಗಳು, ಸ್ವಾಭಾವಿಕ ಮತ್ತು ರಾಜಕೀಯ ವಿಭಾಗಗಳು, ವಾಯುಗುಣ, ಉತ್ಪನ್ನಗಳು, ಜನಸಂಖ್ಯೆ, ಮೊ. ವಿಷಯಗಳನ್ನೊಳಕೊಂಡ ಶಾಸ್ತ್ರ: ಭೂಗೋಳ ಶಾಸ್ತ್ರ; ಭೂ ವಿವರಣೆ (Mathematical g. ಗಣಿತ ವಿಷಯಕ ಭೂಗೋಳ ಶಾಸ್ತ್ರ. Physical g. ಪ್ರಾಕೃತಿಕ —. Political g. ರಾಜಕೀಯ —). ಭೂಗೋಳ ಶಾಸ್ತ್ರ ವಿಷಯ; ಒಂದು ಪ್ರದೇಶದ ಭೂ ಲಕ್ಷಣಗಳು, ಭೂ ವಿನ್ಯಾಸ; ಪ್ರಾದೇಶಿಕ ಭೂವಿವರಣೆ; ಭೂಗೋಳ ಶಾಸ್ತ್ರ ಗ್ರಂಥ. **Geógrapher** (ನಾ.) ಭೂಗೋಳ ಶಾಸ್ತ್ರಜ್ಞ. **Geográphic(al)** ಜೀಒಗ್ರ್ಯಾ — (ಗು.) ಭೂಗೋಳ ಶಾಸ್ತ್ರದ; ಭೂ ವಿವರಣೆಯ. Geographic latitude ಭೂ ಮಧ್ಯರೇಖಾ ಕ್ಷೇತ್ರದೊಡನೆ ಭೂಮಿಯ ಮೇಲ್ಮೈಯ ಯಾವುದಾದರೂ ಬಿಂದುವಿನಲ್ಲಿಯ ಭೂಲಂಬ ರೇಖೆ ಮಾಡುವ ಕೋನ: ಭೂಗೋಳ ಅಕ್ಷಾಂಶ. Geographical mile ಭೂಮಧ್ಯ ರೇಖೆಯಮೇಲೆ ೧ ಮಿನಿಟ್ ಅಂತರದ (ಅವಕಾಶದ, ಪ್ರಮಾಣದ) ರೇಖಾಂಶ (ಸುಮಾರು ೨,೦೦೦ ಗಜಗಳು). **Geográphically** (ಕ್ರಿ. ವಿ.)

Geólogy ಜಿಆಲೊಜಿ (ನಾ.) ಭೂಮಿಯ ಹೊರ ಪದರ, ಅದರ ಸ್ತರಗಳು, ಅವುಗಳ ಪರಸ್ಪರ ಸಂಬಂಧ ಮತ್ತು ಮಾರ್ಪಾಡುಗಳು — ಇವುಗಳ ವಿಷಯದ ಶಾಸ್ತ್ರ: ಭೂ ವಿಜ್ಞಾನ; ಭೂ ವಿಜ್ಞಾನ ಸಂಬಂಧವಾಗಿ ಒಂದು ಪ್ರದೇಶದ ಲಕ್ಷಣಗಳು, ಸ್ವರೂಪ. **Geológic(al)** ಜೀಒಲಾಜಿ — (ಗು.) (-ic ಪದವು ಈಗ ಭೂವಿಜ್ಞಾನ ವಿಷಯಗಳಿಗೆ ಸೇರಿದ ಪದಾರ್ಥಗಳ ನಿರ್ದೇಶದಲ್ಲಿ ಮಾತ್ರ ಪ್ರ.); **Geológically** (ಕ್ರಿ. ವಿ.); **Geólogist** ಜಿಆಲೊಜಿಸ್ಟ್ (ನಾ.) ಭೂವಿಜ್ಞಾನಿ. **Geólogize** (ಕ್ರಿ.) ಮಾದರಿ ವಸ್ತುಗಳನ್ನು ಸಂಗ್ರಹಿಸಿ ಭೂ ವಿಜ್ಞಾನ ದೃಷ್ಟಿಯಿಂದ ಸ್ಥಳಗಳನ್ನು ಪರೀಕ್ಷೆ ಮಾಡು, ಶೋಧನೆ ಮಾಡು.

Geómancy ಜೀಒಮ್ಯಾನ್ಸಿ (ನಾ.) ಒಂದು ಹಿಡಿ ಮಣ್ಣನ್ನು ನೆಲದಮೇಲೆ ಎರಚುವುದರಿಂದಾದ ಆಕೃತಿಯಿಂದ, ಅಥವಾ ಮನಬಂದಂತೆ ಹಾಕಿದ ಚುಕ್ಕೆಗಳಿಂದಾದ ಆಕಾರದಿಂದ, ಭವಿಷ್ಯ ಹೇಳುವುದು; ಆಕಾರ ಪ್ರಶ್ನೆ. **Geómancer** (ನಾ.); **Geomántic** (ಗು.)

Geómetry ಜಿಆಮೆಟ್ರಿ (ನಾ.) ರೇಖೆಗಳು, ಕ್ಷೇತ್ರಗಳು, ಘನಾಕೃತಿಗಳು — ಇವುಗಳ ಲಕ್ಷಣಗಳ ಮತ್ತು ಪ್ರಮಾಣ ಸಂಬಂಧಗಳ ಶಾಸ್ತ್ರ: ಜ್ಯಾಮಿತಿ; ರೇಖಾ ಗಣಿತ. **Geómeter** ಜಿಆಮಿಟರ್ (ನಾ.) ಜ್ಯಾಮಿತಿಜ್ಞ; ರೇಖಾ ಗಣಿತಜ್ಞ. ಕೆಲವು ಕಂಬಳಿಹುಳು ಜಾತಿ ಮತ್ತು ಅವುಗಳ ಚಿಟ್ಟೆಗಳು (ತಮ್ಮ ನಡಗೆಯಿಂದ ಕಂಬಳಿ ಹುಳುಗಳು ಭೂಮಿಯನ್ನು ಅಳೆಯುವಂತೆ ತೋರುವ ಕಾರಣದಿಂದ). **Geométric(al)** ಜೀಒ — (ಗು.) ಜ್ಯಾಮಿತಿಯ; ಜ್ಯಾಮಿತಿಯ ಪ್ರಕಾರದ; ಜ್ಯಾಮಿತೀಯ. -al tracery ವೃತ್ತಾಕೃತಿಗಳು, ತ್ರಿದಳಾಕೃತಿಗಳು, ಮೊ. ಜ್ಯಾಮಿತೀಯ ರೇಖಾಭಿದ್ರಗಳುಳ್ಳ ಚಿತ್ರಕಲಸ. -al proportion ಸಾಮಾನ್ಯ ಅನುಪಾತ; ಜ್ಯಾಮಿತೀಯ ಅನುಪಾತ (3 : 5 : : 9 : 15). -al progression ಯಾವುದಾದರೂ ಎರಡು ಅನುಗತ ಪದಗಳಿಗಿರುವ ಪ್ರಮಾಣವು ಒಂದೇ ಆಗಿರುವ ಸಂಖ್ಯಾಶ್ರೇಣಿ (5 : 15 : 45 : 135, ಇತ್ಯಾದಿ). G. spider ಜ್ಯಾಮಿತೀಯ ರೇಖಾಕೃತಿಯಲ್ಲಿ ಬಲೆ ಹೆಣೆಯುವ ಜೇಡ: ಜ್ಯಾಮಿತೀಯ ಜೇಡ. **Geométrically** (ಕ್ರಿ. ವಿ.); **Geometrícian** ಜಿಆ — (ನಾ.); **Geómetrize** (ಕ್ರಿ.) ಜ್ಯಾಮಿತಿಯ ಪದ್ಧತಿಯಲ್ಲಿ ಗಣಿಸು, ರಚಿಸು, ರಚನೆಯಾಗು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Geóphagy ಜಿಆಫಜಿ (ನಾ.) ಮಣ್ಣು ತಿನ್ನುವುದು ; — ವ ಅಭ್ಯಾಸ. **Geóphagist** (ನಾ.)

Geopónic ಜಿಆಪಾನಿಕ್ (ಗು.) (ವಿದ್ಯಾಡಂಬರದ ಅಥವಾ ಹಾಸ್ಯದ ಪ್ರ.) ವ್ಯವಸಾಯದ ; ಬೇಸಾಯದ ; ಕೃಷಿಯ.

Geórdie ಜಾರ್ಡಿ (ನಾ.) (ಸ್ಕಾ. ಪ್ರ.) = Collier.

George ಜಾರ್ಜ್ (ನಾ.) [St G. ಮೂರನೆಯ ಎಡ್ವರ್ಡ್‌ದೊರೆಯ ಕಾಲದಿಂದ ಇಂಗ್ಲೆಂಡ್‌ದೇಶದ ರಕ್ಷಣ ಸಂತ ; Order of the Garter ಎಂಬ ಬಿರುದಿನ ಶ್ರೇಣಿಯ ರಕ್ಷಣ ಸಂತ. St G.'s day ಏಪ್ರಿಲ್ ೨೩ನೆಯ ತಾರೀಖು. St G.'s cross ಪಟ್ಟಿಗಳು ಕೇಂದ್ರದಲ್ಲಿ ಅಡ್ಡ ಹಾಯುವ ಕೆಂಪು ಬಣ್ಣದ ಶಿಲುಬೆ]. Garter ಎಂಬ ಬಿರುದುಲಾಂಛನದಲ್ಲಿರುವ ಆಭರಣ. Brown G. ಕಂದುಬಣ್ಣದ ಮಣ್ಣಿನ ಪಾತ್ರೆ. By G. (ಆಣೆಯಿಟ್ಟುಕೊಳ್ಳುವಲ್ಲಿ ಉಪಯೋಗಿಸುವ ಭಾವಸೂಚಕ ಪದ). **Geórgian**[1] (ಗು.) ಇಂಗ್ಲೆಂಡಿನ ಮೊದಲನೆಯ ನಾಲ್ಕು ಮಂದಿ ಜಾರ್ಜ್ ದೊರೆಗಳ ಕಾಲದ ; ಐದನೆಯ ಜಾರ್ಜ್‌ದೊರೆಯ ಕಾಲದ.

Georgétte ಜಾರ್ಜೆಟ್ (ನಾ.) ನಯವಾದ ತೆಳುರೇಷ್ಮೆಯ ಉಡುಪು ಬಟ್ಟೆ (Mme. Georgette ಎಂಬ ಫ್ರೆಂಚ್ ದರ್ಜಿಯ ಹೆಸರಿನಿಂದ)

Geórgian[2] ಜಾರ್ಜಿಯನ್ (ಗು., ನಾ.) ಕಾಕಸಸ್ಸಿನ ಜಾರ್ಜಿಯ ಪ್ರಾಂತದ(ವನು, ಭಾಷೆ) ; ಅಮೆ. ಸಂ. ದ ಜಾರ್ಜಿಯ ಪ್ರಾಂತದ (ವನು)

Geórgic ಜಾರ್ಜಿಕ್ (ನಾ.) ವರ್ಜಿಲ್ ಕವಿಯ ಕೃಷಿ ಕಾವ್ಯವಾದ ಜಾರ್ಜಿಕ್ಸ್ ಎಂಬ ಗ್ರಂಥದ ಒಂದು ಭಾಗ.

Geostróphic ಜಿಆಸ್ಟ್ರಾಫಿಕ್ (ಗು.) (ಪ. ಶಾ.) ಭೂಮಿಯ ತಿರುಗುವಿಕೆಯಮೇಲೆ ಅವಲಂಬನವುಳ್ಳ ; ಭೂಭ್ರಮಣ ಸಂಬಂಧಿ ; ಭೂಭ್ರಮಣಾವಲಂಬಿ.

Geótropism ಜಿಆಟ್ರಪಿಸ್ಸ್‌ಮ್ (ನಾ.) ಭೂಮ್ಯಾಕರ್ಷಣಕ್ಕೆ ಸಂಬಂಧಿಸಿದ ಸಸ್ಯವರ್ಧನ. Positive g. ಬೇರುಗಳು ಭೂಕೇಂದ್ರಾಭಿಮುಖವಾಗಿ ಬೆಳೆಯುವ ಪ್ರವೃತ್ತಿ : ಭೂಕೇಂದ್ರಾಭಿವರ್ತನ. Negative g. — ವಿಮುಖವಾಗಿ ಬೆಳೆಯುವ ಪ್ರವೃತ್ತಿ : ಭೂಕೇಂದ್ರಾಪವರ್ತನ. **Geotrópic** ಜೀಒಟ್ರಾಪಿಕ್ (ಗು.) ; **Geotrópically** (ಕ್ರಿ. ವಿ.)

Gerånium ಜೆರೇನಿಯಂ (ನಾ.) (ಕೊಕ್ಕರೆಯ ಕೊಕ್ಕಿನಂತೆ ಕಾಯಿ ಬಿಡುವ) ಕಾಡುಸೊಪ್ಪಿನ ಸಸ್ಯಜಾತಿಗಳಲ್ಲೊಂದು ; (ಅಂದಕ್ಕಾಗಿ ತೋಟದಲ್ಲಿ ಬೆಳೆಸುವ) ಈ ಜಾತಿಗಳ ಗಿಡ, ಅದರ ಹೂವು : 'ಜರೇನಿಯಂ'. (ಈ ಗಿಡಗಳಲ್ಲಿ ಬಿಡುವ ಹೂವಿನ ಬಣ್ಣದಂಥ) ಹೊಳಪಿನ ಕೆಂಪು ಬಣ್ಣ.

Gérfalcon ಜರ್ಫಾಲ್ಕ(ಕ್)ನ್ (ನಾ.) (ಯೂರೋಪಿನ ಉತ್ತರ ಪ್ರಾಂತಗಳ, ಮು., ಐಸ್ಲಂಡಿನ) ದೊಡ್ಡ ಡೇಗೆ, ಹೆಗ್ಗಿಡುಗ.

Germ ಜರ್ಮ್ (ನಾ., ಕ್ರಿ. ಅಕ.) ಹೊಸ ಜೀವಿವ್ಯಕ್ತಿಯಾಗಿ ವಿಕಸನ ಹೊಂದುವ ಶಕ್ತಿಯುಳ್ಳ ಜೀವಿಯ ಭಾಗ : ಗರ್ಭಾಣು [Germ-ಸಾ., ಗರ್ಭೋತ್ಪಾದಕ ಸ್ತ್ರೀ ಜೀವಾಣು : ಅಂಡಾಣು (Sperm-ರೇತ್ರಾಣು ಪದಕ್ಕೆ ವಿರುದ್ಧ ಪದವಾಗಿ)]. (ಪ್ರಾಣಿಯ, ಸಸ್ಯದ) ಮೂಲ ಜೀವಾಣು, — ಬೀಜ ; ಅಂಕುರ ; ಜೀವಾಂಕುರ ; ಗರ್ಭ ; ಮೊಳಕೆ. (ಮು., ವ್ಯಾಧಿ ವಾಹಕ) ಸೂಕ್ಷ್ಮ ಜೀವಿ ; ಸೂಕ್ಷ್ಮ ಜೀವಾಣು. (ರೂಪ.) ಮೂಲ ; ಮೂಲ ಕಾರಣ ; — ತತ್ತ್ವ (In g. ಇನ್ನೂ ಅರಳಿಲ್ಲದ ; ಅಂಕುರಾವಸ್ಥೆಯಲ್ಲಿರುವ ; ಅಂಕುರ ಪ್ರಾಯದ). (ಕ್ರಿ.) (ರೂಪಕದಲ್ಲಿ ಮಾತ್ರ) ಅಂಕುರಿಸು ; ಮೊಳೆ ; ಚಿಗುರು. **Gérmicide** — ಸೈಡ್ (ನಾ., ಗು.) (ಮು., ವಿಷ) ಜೀವಾಣು ನಾಶಕ (ಪದಾರ್ಥ). **Germicídal** (ಗು.) ; **Gérminal** (ಗು.) ಜೀವಾಂಕುರದ ; — ಸ್ವಭಾವದ ; ಮೊಳಕೆಯಲ್ಲಿರುವ ; ಅಂಕುರಾವಸ್ಥೆಯಲ್ಲಿರುವ. **Gérminally** (ಕ್ರಿ. ವಿ.) ; **Gérminant** — ನಂಟ್ (ಗು.) ಮೊಳೆಯುವ ; ವೃದ್ಧಿ ಹೊಂದುವ (ಸಾ., ರೂಪ.). **Gérminate** — ನೇಟ್ (ಕ್ರಿ.) ಅಂಕುರಿಸು ; ಮೊಳೆ ; ಚಿಗುರು ; ಕುಡಿಯೊಡೆ ; ಮೊಗ್ಗು ಬಿಡು (ರೂಪ. ಸಹ) ; ಚಿಗುರಿಸು ; ಅರಳು ; ಅರಳಿಸು ; ಬೆಳೆ ; ಬೆಳೆಸು ; ವರ್ಧಿಸು ; ಉತ್ಪತ್ತಿಮಾಡು. **Germinátion** (ನಾ.) ; **Gérminative** — ನೇ(ನ)ಟಿವ್ (ಗು.) ಮೊಳೆತಕ್ಕೆ ಸಂಬಂಧಪಟ್ಟ ; ಮೊಳೆತದ ; ಮೊಳೆಯುವ, ಬೆಳೆಯುವ, — ಶಕ್ತಿಯುಳ್ಳ. **Gérminator** (ನಾ.) ಬೆಳೆಯಿಸುವುದು ; ವರ್ಧಕ ; ಬೀಜಗಳ ಮೊಳೆಯುವ ಶಕ್ತಿಯನ್ನು ಅಳೆಯುವ ಸಲಕರಣೆ : ಅಂಕುರಶಕ್ತಿ ಮಾಪಕ. **Gérmless** (ಗು.) ಜೀವಾಂಕುರಗಳಿಲ್ಲದ.

Gérman[1] ಜರ್ಮನ್ (ಗು.) ಬಹಳ ಹತ್ತಿರದ ದೇಹಸಂಬಂಧದ ; ಸ್ವಂತ (Brother-g., Sister-g., Cousin-g. ಎಂಬ ಪ್ರಯೋಗಗಳಲ್ಲಿ ಮಾತ್ರ) ; = Germane.

Gérman[2] ಜರ್ಮನ್ (ಗು., ನಾ.) ಜರ್ಮನ್ ದೇಶದ, ಜನರ, ಭಾಷೆಯ, ವೈಲಕ್ಷಣ್ಯದ [G. measles ಒಂದು ಬಗೆಯ ದಡಾರ. G. Ocean (North Sea ಎಂಬ) ಉತ್ತರ ಸಮುದ್ರ. G. sausage (ಮಸಾಲೆ ಹಾಕಿ ಅರೆ ಬೇಯಿಸಿದ ಮಾಂಸದ ಹೂರಣವುಳ್ಳ) ಒಂದು ಬಗೆಯ ಮಾಂಸದ ಕಡುಬು. G. text = Black letter (Black ನೋಡಿ). G. silver ನಿಕಲ್, ಸತು ಮತ್ತು ತಾಮ್ರ ಸೇರಿ ಆದ ಬಿಳಿಯ ಮಿಶ್ರಲೋಹ : 'ಜರ್ಮನ್ ಸಿಲ್ವರ್']. (ನಾ.) ಜರ್ಮನಿಯವನು ; ಜರ್ಮನ್ ಭಾಷೆ [High G. (ಹಿಂದೆ ದಕ್ಷಿಣ ಪ್ರಾಂತದಲ್ಲಿ ಆಡುವ ಭಾಷೆಯಾಗಿದ್ದು ಈಗ ಜರ್ಮನಿಯಲ್ಲೆಲ್ಲ ಸಾಹಿತ್ಯ ವ್ಯವಹಾರದಲ್ಲಿರುವ) 'ಹೈ ಜರ್ಮನ್' ಭಾಷೆ. Low G. ಹೈ ಜರ್ಮನ್ ಅಲ್ಲದ ಇತರ ಜರ್ಮನ್ ಪ್ರಾಂತ ಭಾಷೆ(ಗಳು) ; ಹೈ ಜರ್ಮನ್ ಭಾಷೆಯುಳಿದು ಇಂಗ್ಲಿಷ್ ಮತ್ತು ಡಚ್ ಭಾಷೆಗಳನ್ನೊಳಕೊಂಡ 'ವೆಸ್ಟ್ ಜರ್ಮನ್' ಭಾಷಾ ವರ್ಗ : ಲೋ ಜರ್ಮನ್ ಭಾಷೆ]. **Germánic** — ಮ್ಯಾನಿಕ್ — (ಗು., ನಾ.) ಜರ್ಮನರ (ಮು., ಚರಿತ್ರೆಯಲ್ಲಿ : G. Confederation, G. Empire ಎಂಬಲ್ಲಿ ಮಾತ್ರ). ಟ್ಯೂಟಾನಿಕ್ ಬುಡಕಟ್ಟಿನ ; — ಜನರ ; ಆದಿ ಟ್ಯೂಟಾನಿಕ್ ಭಾಷೆ(ಯ). East G. ಗಾಥಿಕ್, ಮೊ. ಭಾಷೆಗಳು. North G. ಸ್ಕ್ಯಾಂಡಿನೇವಿಯನ್ ಭಾಷೆ. West G. ಹೈ ಮತ್ತು ಲೋ ಜರ್ಮನ್, ಇಂಗ್ಲಿಷ್, ಫ್ರಿಸಿಯನ್, ಡಚ್, ಮೊ. ಭಾಷಾ ವರ್ಗ (Indo-G. ನೋಡಿ). **Gérmanish** — ಮನಿಷ್ — (ಗು.) ಜರ್ಮನಿಯ. **Gérmanism** (ನಾ.) (ಮು., ಜರ್ಮನ್ ಅಲ್ಲದ ಭಾಷೆಗಳಲ್ಲಿ ಪ್ರಯೋಗಿಸುವ) ಜರ್ಮನ್ ಭಾಷಾ ಮರ್ಯಾದೆ ; ಜರ್ಮನ್ ಭಾವನೆಗಳು ; ಜರ್ಮನ್ ವಿಚಾರಪರತೆ, ಕಾರ್ಯರೀತಿ ; ಜರ್ಮನ್ ರೀತಿ ನೀತಿಗಳ ಮಮತೆ ; ಜರ್ಮನ್ ಅನುಕರಣ. **Gérmanist** (ನಾ.) ಜರ್ಮನ್ ಭಾಷಾ ಪಂಡಿತ ; ಜರ್ಮನ್ ಭಾವನೆಗಳ ಪ್ರಭಾವಕ್ಕೊಳಗಾದವನು. **Germánity** — ಮ್ಯಾನಿಟಿ — (ನಾ.) ಜರ್ಮನ್ ವಿಶೇಷ ಲಕ್ಷಣಗಳು ; ಜರ್ಮನ್ ವೈಶಿಷ್ಟ್ಯ, ವೈಲಕ್ಷಣ್ಯ. **Gérmanize** — ಮನೈಜ್ — (ಕ್ರಿ.) ಜರ್ಮನ್ ಭಾಷೆಗೆ ಪರಿವರ್ತಿಸು ; ಜರ್ಮನ್ ಸ್ವರೂಪ ಕೊಡು ; (ಶೈಲಿ, ಅಭಿರುಚಿ, ಪದ್ಧತಿಗಳು, ಭಾವ, ಸಹಾನುಭೂತಿ, ಮೊ. ಗಳಲ್ಲಿ) ಜರ್ಮನನಂತಾಗು. **Germanizátion** (ನಾ.) ; **Gérmanizer** (ನಾ.) ; **Germáno-** ಜರ್ಮೇನೊ —, **Gérmano-** ಜರ್ಮನೊ— (ಸ. ಪೂ. ಪ.) ಜರ್ಮನಿಯ — ; ಜರ್ಮನ್ —. **Germánomania** (ನಾ.) ಜರ್ಮನಿಗೆ ಸಂಬಂಧಿಸಿದವುಗಳಲ್ಲಿ ಹುಚ್ಚು ಪ್ರೀತಿ ; ಜರ್ಮನ್ ಹುಚ್ಚು (ಪ್ರೇಮ). **Germánophil(e)** ಜರ್ಮ್ಯಾನೊಫಿ(ಫೈ)ಲ್ (ಗು., ನಾ.) ಜರ್ಮನರಲ್ಲಿ, ಅವರ ಸಂಸ್ಥೆಗಳಲ್ಲಿ, ಪದ್ಧತಿಗಳಲ್ಲಿ, ಮೆಚ್ಚುಗೆಯುಳ್ಳವನು ; ಜರ್ಮನ್ ಪ್ರೇಮಿ. **Germanóphilist** ಜರ್ಮನಾಫಿಲಿಸ್ಟ್ (ನಾ.) = Germanophil(e). **Germánophobe** ಜರ್ಮ್ಯಾನೊಫೋಬ್ (ಗು., ನಾ.) ಜರ್ಮನ್ ಭೀತಿಯುಳ್ಳ ; — ಅಸಹ್ಯತೆಯುಳ್ಳ ; ಜರ್ಮನ್ ಭೀತ. **Germánophóbia** ಜರ್ಮನೊಫೋಬಿಯ (ನಾ.) ಜರ್ಮನಿಯ, ಅದರ ಸರ್ಕಾರದ, ಅದರ ಕಾರ್ಯ ಕಲಾಪಗಳ, ಅದರ ವೈಲಕ್ಷಣ್ಯಗಳ — ವಿಷಯದಲ್ಲಿ ಅತ್ಯಂತ ಅಸಹ್ಯತೆ, ಭೀತಿ : ಜರ್ಮನ್ ಭೀತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Germáne ಜರ್ಮೇನ್ (ಗು.) ಸಂಗತ ; ಪ್ರಸಕ್ತ ; ಪ್ರಕೃತ; ಸಂಬದ್ಧ ; ಸಂಬಂಧಿಸಿದ.

Gérmen ಜರ್ಮನ್ (ನಾ.) (ಸ. ವಿ.) (ಒಂದು ಸಸ್ಯದ) ಬೀಜಪಾತ್ರದ ಮೂಲ ರೂಪ ; ಅಂಡಾಶಯ.

Gerontócracy ಜೆ(ಗೆ)ರಂ(ರಾಂ)ಟಾಕ್ರಸಿ (ನಾ.) ಮುದುಕರ ಆಡಳಿತ, ಸರ್ಕಾರ ; ವೃದ್ಧ ಪ್ರಭುತ್ವ ; ಮುದುಕರ ಆಡಳಿತ ಮಂಡಲಿ.

Gerrymánder ಗೆರಿಮ್ಯಾಂಡರ್ (ಕ್ರಿ. ಸಕ., ನಾ.) (ಒಂದು ಪಂಗಡಕ್ಕಾಗಲಿ ಪಕ್ಷಕ್ಕಾಗಲಿ ಚುನಾವಣೆಯಲ್ಲಿ ಮಿತಿ ಮೀರಿದ ಪ್ರಾಬಲ್ಯ ದೊರೆಯುವಂತೆ ಅಕ್ರಮ ರೀತಿಯಿಂದ) ಚುನಾವಣೆಯ ಕ್ಷೇತ್ರ, ವೊ. ನ್ನು ಕುಟಿಲ ಯೋಜನೆ ಮಾಡು. (ನಾ.) ಚುನಾವಣೆಯ ಕ್ಷೇತ್ರ, ವೊ. ಗಳ ಮೋಸದ ಕೈವಾಡ. **Gerrymánderer** (ನಾ.). (ಒಂದು ಅಮೆ. ಸಂ. ದ ಅಧ್ಯಕ್ಷ Gerry ಎಂಬಾತನ ಹೆಸರಿನಿಂದ ಕಟ್ಟಿದ ಪದ)

Gérund ಜೆರಂಡ್ (ನಾ.) ಕೃನ್ನಾಮ ; ಕೃದಂತ ಭಾವನಾಮ (His doing this is doubtful ಅವನು ಇದನ್ನು ಮಾಡುವುದು ಸಂದೇಹ). G.-grinder (ಹಾಸ್ಯ ಪ್ರ.) (ಲ್ಯಾಟಿನ್) ವ್ಯಾಕರಣವನ್ನು ಅರೆದು ಕುಡಿಸುವವನು ; ಶುಷ್ಕ ವೈಯಾಕರಣ ; ಸೂತ್ರ ಶರಣ ; ಪಾಂಡಿತ್ಯ ಪ್ರದರ್ಶಕ. **Gerúndial** (ಗು.) ; **Gerúndive** — ಡಿ — (ಗು., ನಾ.) ಕೃನ್ನಾಮದ ; ಕೃನ್ನಾಮದಂಥ. (ಹಾಸ್ಯವಾಗಿ) ಕೃನ್ನಾಮಗಳಿಂದ ತುಂಬಿದ. (ನಾ.) = Gerund. **Gerúndively** (ಕ್ರಿ. ವಿ.) ; **Gerundíval** — ಡೈ — (ಗು.)

Gésso ಜೆಸೊ (ನಾ.) ಚಿತ್ರ ಕಲೆಯಲ್ಲಿಯೂ (ಶಿಲಾ) ಶಿಲ್ಪದಲ್ಲಿಯೂ ಉಪಯೋಗಿಸಲು ತಕ್ಕಂತೆ ತಯಾರಿಸಿದ gypsum ಅಥವಾ plaster of Paris ಎಂಬ ಸುಣ್ಣದ ಧಾತು ಸಂಯುಕ್ತವಾದ ಹಿಟ್ಟಿನಂಥ ಪದಾರ್ಥ.

Gestátion ಜೆಸ್ಟೇಷನ್ (ನಾ.) ಗರ್ಭೋತ್ಪತ್ತಿ ಕಾಲದಿಂದ ಪ್ರಸವವಾಗುವ ವರೆಗೂ ಗರ್ಭದಲ್ಲಿ ಹೊರುತ್ತಿರುವುದು, —ಹೊರಲ್ಪಟ್ಟಿರುವುದು ; ಗರ್ಭ ಧರಿಸಿರುವ ಕಾಲ ; ಗರ್ಭ ಧಾರಣೆ ; ಗರ್ಭಾವಸ್ಥೆ.

Gestatórial ಜೆಸ್ಟಟೋರಿಯಲ್ (ಗು.) G. chair ಕೆಲವು (ಉತ್ಸವ) ಸಂದರ್ಭಗಳಲ್ಲಿ (ರೋ. ಕ್ಯಾ. ಜಗದ್ಗುರುವಾದ) ಪೋಪನ್ನು ಕುಳ್ಳಿರಿಸಿ ಕೊಂಡು ಹೋಗುವ ಪಾಲಕಿ : ಪೋಪಿನ ಪಾಲಕಿ.

Gestículate ಜೆಸ್ಟಿಕ್ಯುಲೇಟ್ (ಕ್ರಿ.) (ಮಾತುಗಳೊಂದಿಗೆ ಅಥವಾ ಮಾತುಗಳಿಗೆ ಬದಲಾಗಿ) ಅವಯವಗಳನ್ನು ಅಥವಾ ದೇಹವನ್ನು ಭಾವಸೂಚಕವಾಗಿ ಆಡಿಸು ; ಭಾವಾಭಿನಯ ಮಾಡು ; ಅಭಿನಯಿಸು ; ಅಂಗ ಚೇಷ್ಟೆ ಮಾಡು. **Gestículátion** (ನಾ.) ; **Gestículator** (ನಾ.) ; **Gestículative** — ಲೇ(ಲ)ಟಿವ್ (ಗು.) ಅಂಗಾಭಿನಯ ಮಾಡುವ ; ಅಂಗಾಭಿನಯ ಚಾಳಿಯ. **Gestículatory** — ಲಟರಿ (ಗು.)

Gésture ಜೆಸ್ಚ್ಯು(ಸ್ಚ)ರ್ (ನಾ., ಕ್ರಿ.) ಅಂಗದ ಅಥವಾ ದೇಹದ ಭಾವಗರ್ಭಿತ ಚಲನೆ ; (ಭಾವಸೂಚನೆಗಾಗಿ ಅಥವಾ ಭಾಷಣ ಪರಿಣಾಮಕ್ಕಾಗಿ) ಇಂಥ ಚಲನ ವಲನಗಳ ಪ್ರಯೋಗ ; ಅಭಿನಯ ; ಭಾವಾಭಿನಯ. ಸೂಚನೆ ; ಸನ್ನೆ. ಮತ್ತೊಬ್ಬನಲ್ಲಿ ಪ್ರತಿವರ್ತನೆಯುಂಟುಮಾಡುವುದಕ್ಕಾಗಲಿ ಅಥವಾ (ಮು., ಸ್ನೇಹಪೂರ್ವಕವಾದ) ತನ್ನ ಇಂಗಿತವನ್ನು ತಿಳಿಸುವುದಕ್ಕಾಗಲಿ ಉದ್ದೇಶಿಸಿದ ನಡೆ(ವಳಿ), ವ್ಯಾಪಾರ, ವ್ಯವಹಾರ : ಇಂಗಿತ ಸೂಚನೆ. (ಕ್ರಿ.) = Gesticulate.

Get ಗೆಟ್ [ಕ್ರಿ. ; ಭೂತ. Got ; ಭೂ. ಕೃ. Got, gotten (ಸಮಾಸದಲ್ಲಿ ಮಾತ್ರ : ಉದಾ., Ill-gotten)] (ಪ್ರಯತ್ನದಿಂದ, ಉಪಾಯದಿಂದ, ಯಂತ್ರೋಪಕರಣದಿಂದ) ಪಡೆ, ಹೊಂದು ; ಗಳಿಸು ; ಸಂಪಾದಿಸು ; ಆರ್ಜಿಸು ; ದೊರಕಿಸಿಕೊ ; ಒದಗಿಸಿಕೊ ; ಹವಣಿಸಿಕೊ (Cannot g. a living ಜೀವನ ದೊರೆಯುವುದಿಲ್ಲ. G. the better of him ಅವನನ್ನು ಮೀರಿಸು). ಲಾಭ ಪಡೆ, —ತರು (Got little by it ಅದರಿಂದ ಏನೂ ಬರಲಿಲ್ಲ). (ಅಮೆ. ಸಂ. ; ಬಳ. ಮಾ.) (ವ್ಯಕ್ತಿಯನ್ನಾಗಲಿ ವಸ್ತುವನ್ನಾಗಲಿ) ತಿಳಿದುಕೊ. (ಪ್ರಾಣಿಗಳ ವಿಷಯದಲ್ಲಿ) ಹುಟ್ಟಿಸು, ಪಡೆ, ಸಂತಾನೋತ್ಪತ್ತಿ ಮಾಡು (=Beget) (G. with child ಬಸಿರು ಮಾಡು). G. across or over the footlights (ಅಸಂ.) ಪ್ರೇಕ್ಷಕರನ್ನು, ಸಭಾಸದರನ್ನು, ಮುಟ್ಟು, ತಾಕು ; ಪ್ರೇಕ್ಷಕರ ಮೇಲೆ ಪರಿಣಾಮ ಮಾಡು. G. the best of it ಗೆಲ್ಲು ; ಜಯಶೀಲನಾಗು. G. the boot[1], mitten, sack[1] (ಆಯಾ ಪದಗಳನ್ನು ನೋಡಿ). G. by heart, by rote ಕಂಠಪಾಠ ಮಾಡು ; ಬಾಯಿಪಾಠ ಮಾಡು ; ಉರು ಹಚ್ಚು, — ಹೊಡೆ. G. clear, rid, quit, of ತಪ್ಪಿಸಿಕೊ ; ತೊಲಗಿಸಿಕೊ ; ಪಾರಾಗು. G. done with ಕೊನೆ ಮುಟ್ಟಿಸು ; ಮುಗಿಸಿಬಿಡು. G. drunk ಕುಡಿದು ಮತ್ತೇರು. G. a fall ಬೀಳು. G. into one's head ತಲೆಗೆ ಹತ್ತು ; ಮನವರಿಕೆಯಾಗು. G. it ಶಿಕ್ಷೆ, ಆಕ್ಷೇಪಣೆ, — ಹೊಂದು ; ಬೈಗುಳು ತಿನ್ನು. We can g. it for you ಅದನ್ನು ನಿನಗೆ ತರಿಸಿಕೊಡಬಲ್ಲೆವು. G. married ಮದುವೆ ಮಾಡಿಕೊ. G. measles ತಟ್ಟಮ್ಮ, ದಡಾರ, —ಏಳು. G. on one's nerves (ಒಬ್ಬನನ್ನು) ಸಿಡಿಮಿಡಿಗೊಳಿಸು. G. one's way ತನ್ನ ಪಂಥವನ್ನು ಸಾಧಿಸಿಕೊ. G. person or thing on the brain ಒಂದು ವಸ್ತುವಿನ ಅಥವಾ ವ್ಯಕ್ತಿಯ ವಿಷಯವಾಗಿಯೇ ಯಾವಾಗಲೂ ಯೋಚಿಸುತ್ತಿರು. G. person upon a subject ಒಬ್ಬನನ್ನು (ಆ) ವಿಷಯವಾಗಿ ಮಾತನಾಡುವಂತೆ ಒಪ್ಪಿಸು. G. religion ಧರ್ಮವನ್ನು ಸ್ವೀಕರಿಸು. G. rest ವಿಶ್ರಾಂತಿ ಪಡೆ. G. shelved ಮೂಲೆಗೆ ಬೀಳು ; ಮೂಲೆಗೆ ಹಾಕಿಸು. G. ship under way ಹಡಗನ್ನು ಹೊರಡುವಂತೆ, ಚಲಿಸುವಂತೆ, — ಮಾಡು. G. six months ಆರು ತಿಂಗಳು ಸಜ ಪಡೆ. G. there (ಅಸಂ.) ಕಾರ್ಯ ಸಾಧಿಸು ; ತೇರ್ಗಡೆಯಾಗು ; ಸಫಲ ಹೊಂದು. G the upper hand of a person ಒಬ್ಬನಿಗೆ ಮೇಲ್ಕೈ ಆಗು. G. used to it ಅದನ್ನು ರೂಢಿ ಮಾಡಿಕೊ, ಬಳಕೆ ಮಾಡಿಕೊ. G. wind (ಸಮಾಚಾರ, ವೊ.) ಹರಡು. G. wind of ಗಾಳಿವರ್ತಮಾನ ಕೇಳು. G. the worst of it ನಷ್ಟ ಹೊಂದು, ಸೋಲು ಪಡೆ. I got him a place ಅವನಿಗೆ ಒಂದು ಸ್ಥಳ ದೊರೆಯುವಂತೆ ಮಾಡಿದೆನು, ದೊರಕಿಸಿಕೊಟ್ಟೆನು. I got my wrist dislocated ನನ್ನ ಮಣಿಕಟ್ಟು ಕೀಲುತಪ್ಪಿದೆ. It has got to be done ಅದನ್ನು ಮಾಡಲೇ ಮಾಡಬೇಕು, ಮಾಡಿಯೇ ತೀರಬೇಕು. One soon gets to like it ಅದು ಬೇಗ ಅಭ್ಯಾಸವಾಗುತ್ತದೆ, ಬಳಕೆಯಾಗುತ್ತದೆ. They got talking ಅವರು ಮಾತಾಡ ತೊಡಗಿದರು. What has got him? ಅವನಿಗೆ ಏನು ಬಂದಿತು ? ಅವನೇನಾದ ? Where has it got to? ಅದು ಏನಾಗಿದೆ ?

ಉಪ. ಗಳೊಡನೆ :

G. at ಎಟುಕಿಸಿಕೊ ; ಮುಟ್ಟು ; ಸೇರು ; ಪಡೆ ; ಕಾಣು (G.-at-able ಪಡೆಯಬಹುದಾದ ; ಕಾಣಬಹುದಾದ ; ಸಾಧ್ಯ) ; ಹಿಡಿದುಕೊ ; ಕಂಡುಹಿಡಿ ; (ಅಸಂ.) ನ್ಯಾಯವಿರುದ್ಧವಾಗಿ ಪ್ರವರ್ತಿಸು ; ಲಂಚ ಕೊಡು ; (ಅಸಂ.) ಮೇಲೆ ಬೀಳು ; ಕುಚೋದ್ಯ ಮಾಡು [Who are you getting at ? ಯಾರಮೇಲೆ ಬೀಳಬೇಕೆಂದಿದ್ದೀಯೆ ? ಯಾರನ್ನು ಕುಚೋದ್ಯ ಮಾಡುತ್ತಿದ್ದೀಯೆ ? ಯಾರನ್ನು ವಂಚಿಸಲು ಪ್ರಯತ್ನಿಸುತ್ತಿದ್ದೀಯೆ ? (ಸಾಧ್ಯವಿಲ್ಲ ಎಂಬ ಅರ್ಥದಲ್ಲಿ)]. G. into (boots, clothes) (ಬಳ. ಮಾ.) (ಪಾದರಕ್ಷೆಗಳನ್ನು, ಉಡುಪನ್ನು) ಹಾಕಿಕೊ. G. into one's head (ಮದ್ಯ) ತಲೆಗೇರು ; ದಿಗ್ಭ್ರಮೆ ಹಿಡಿಸು. G. off (ವಾಹನದಿಂದ) ಇಳಿ; (ಅಸಂ.) ಹೊರಡು; ನಿದ್ದೆಹೋಗು ; ತೊಲಗು; (ಒಪ್ಪಿತದಿಂದ, ಶಿಕ್ಷೆಯಿಂದ, ಸೋಲಿನಿಂದ) ತಪ್ಪಿಸಿಕೊ ; ಬಿಡುಗಡೆ ಹೊಂದು ; ಶಿಕ್ಷೆ ತಪ್ಪಿಸು ; ಬಿಡಿಸು. ಬಾಯಿಪಾಠ ಮಾಡು (G. off with ಭಿನ್ನಲಿಂಗ ವ್ಯಕ್ತಿಯೊಡನೆ ಪ್ರಣಯಸ್ನೇಹದಿಂದ ವರ್ತಿಸು). G. on (horse, &c.) (ಕುದುರೆ, ವೊ. ನ್ನು) ಹತ್ತು, ಏರು. G. on one's feet or legs ಸಭೆಯಲ್ಲಿ ಮಾತನಾಡಲು ಎದ್ದು ನಿಂತುಕೊ. G. over (ಕಷ್ಟವನ್ನು) ದಾಟು ; ಕಷ್ಟದಿಂದ ಪಾರಾಗು. (ರುಜುವಾತು, ವಾದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಪ್ಪತಕ್ಕದ್ದಲ್ಲವೆಂದು, ಅಸಮಂಜಸವೆಂದು, ತೋರಿಸು. (ರೋಗದಿಂದ) ಪಾರಾಗು, ಗುಣ ಹೊಂದು. (ದಿಗ್ಭ್ರಮೆಯಿಂದ, ಸ್ತಬ್ಧತೆಯಿಂದ) ಎಚ್ಚರು, ತೆಪ್ಪತ್ತುಕೊ. (ದಾರಿಯನ್ನು) ನಡೆದು ಮುಗಿಸು ; (ಕೆಲಸವನ್ನು) ಮಾಡಿ ಮುಗಿಸು. (ಅಸಂ.) ಉಪಾಯದಿಂದ ತಪ್ಪಿಸಿಕೊ, ಸಿಕ್ಕಿಸಿಕೊ. G. round ಒಪ್ಪಿಸು ; ಒಡಂಬಡಿಸು ; (ಉಪಾಯ ಮಾಡಿ) ತಪ್ಪಿಸಿಕೊ. G. through ಕೊನೆ ಮುಟ್ಟಿಸು ; ಮುಗಿಸು ; (ಮಸೂದೆ, ವೊ. ಗಳಿಗೆ ಶಾಸನ ಸಭೆಯಲ್ಲಿ) ಅಂಗೀಕಾರ ದೊರಕಿಸಿಕೊ. (ಕಾಲ, ವೊ. ನ್ನು) ಕಳೆ. G. to (business, &c.) (ಕೆಲಸ, ವೊ. ನ್ನು) ಆರಂಭಿಸು. G. upon = G. on.

ಕ್ರಿ. ವಿ. ಗಳೊಡನೆ :

G. about ಎಡೆಯಿಂದೆಡೆಗೆ ಹೋಗು ; (ರೋಗ ಗುಣವಾಗಿ) ಎದ್ದು ತಿರುಗಾಡು. (ಗಾಳಿವರ್ತಮಾನ) ಹರಡು, ಪ್ರಚಾರವಾಗು. G. abroad (ಗಾಳಿವರ್ತಮಾನ) ಹರಡು. G. along ಮುಂದುವರಿ ; ಬೇಗ, —ನಡೆ, ಮಾಡು; ಜಯ ಹೊಂದು (-well ಅಭಿವೃದ್ಧಿಗೆ ಬರು ; -ill —ಬಾರದಿರು). (ಒಡನೆ) ಹೊಂದಿಕೊಂಡು ಹೋಗು. G. along with you ! (ಬಳ. ಮಾ.) ನಡೆ ! ತೊಲಗು ! ಶುದ್ಧ ಅವಿವೇಕ ! G. away ತಪ್ಪಿಸಿಕೊ(ಂಡು ಹೋಗು) ; ಹೊರಡು ; ತೊಲಗು ! ನಡೆ! G. away with (it) ಪ್ರಯತ್ನಪಟ್ಟು ಕಾರ್ಯದಲ್ಲಿ ಜಯಶಾಲಿಯಾಗು ; ಪ್ರತಿಕ್ರಿಯೆ ತಪ್ಪಿಸಿಕೊ ; ಕಷ್ಟ ನಷ್ಟಗಳಿಗೊಳಗಾಗದೆ ಪಾರಾಗು. G. back (ಮನೆಗೆ) ಹಿಂದಿರುಗು ; (ಕಳೆದುಹೋಗಿದ್ದುದನ್ನು) ಹಿಂದಕ್ಕೆ ಪಡೆ [G. back one's, some of one's, own (ಅಸಂ.) ಸೇಡು ತೀರಿಸಿಕೊ]. G. down (ವಾಹನದಿಂದ) ಇಳಿ. G. in (ಗಾಡಿ, ವೊ. ನ್ನು) ಹೊಗು, ಹತ್ತು. (ಶಾಸನಸಭೆ, ವೊ. ಗಳಿಗೆ) ಚುನಾವಣೆ ಪಡೆ. (ಬೆಳೆಯನ್ನು) ಮನೆಗೆ ತಂದುಕೊ, ತುಂಬಿಕೊ, ಶೇಖರಿಸು. (ಸಾಲ, ವೊ. ನ್ನು) ವಸೂಲು ಮಾಡು. (ಕೆಲಸ ಕಾರ್ಯಗಳಿಗೆ) ಅವಕಾಶ ಕಲ್ಪಿಸಿಕೊ. (ಏಟನ್ನು) ಆಯ ನೋಡಿ ಹೊಡೆ, ಪರಿಣಾಮಕಾರಿಯಾಗುವಂತೆ ಹಾಕು [G. one's hand in (ಒಂದು ಕ್ರಿಯೆಯಲ್ಲಿ) ಕೈ ಕುದುರಿಸಿಕೊ, ಪಳಗು. Can't g. in a word edgeways (Edge ನೋಡಿ)]. G. on (ಉಡುಪನ್ನು) ಹಾಕಿಕೊ. ಪ್ರದರ್ಶಿಸು. ಮುಂದುವರಿ [G. a move on (ಅಸಂ.) ಚಲಿಸಲು ಆರಂಭಿಸು ; ಮೊದಲ ಹೆಜ್ಜೆ ಹಾಕು]; ಅಭಿವೃದ್ಧಿ ಪಡೆ ; ಏಳಿಗೆ ಹೊಂದು.] G. on or g. out ಕೆಲಸ ಮಾಡು, ಇಲ್ಲದಿದ್ದರೆ ಹೊರಟು ಹೋಗು. G. on (without) (ಅವಶ್ಯಕವಾದದ್ದು ಇಲ್ಲದಿದ್ದರೂ) ನಿರ್ವಹಿಸಿಕೊಂಡು ಹೋಗು. G. on with, together (ಒಡನೆ) ಕೂಡಿಕೊಂಡು, ಹೊಂದಿಕೊಂಡು, ಹೋಗು. Be getting on for (ಒಂದು ವಯಸ್ಸು, ವೊ. ನ್ನು) ಸಮೀಪಿಸುತ್ತಿರು]. G. out (ಬಳ. ಮಾ.) ಹೊರಡು ! ತೊಲಗು ! ಅವಿವೇಕ !. (ಸಮಾಚಾರ) ಹೊರಡಿಸು, ಹೊರಡು, ಪ್ರಕಟಿಸು (The secret got out ಗುಟ್ಟು ರಟ್ಟಾಯಿತು). ಪ್ರಯತ್ನದಿಂದ ಉಚ್ಚರಿಸು (The lark could scarce get out his note for joy). G. out of ಹೊರಕ್ಕೆ ಬರು ; ತಪ್ಪಿಸಿಕೊಂಡು ಬರು [Got out of bed on the wrong side (Bed ನೋಡಿ). G. out of sight ಕಣ್ಮರೆಯಾಗು ; ಕಾಣದೆ ಹೋಗು. G. out of one's depth ತನ್ನ ಆಳ ಮೀರಿ ಹೋಗು. G. out of hand ಕೈಮೀರಿ ಹೋಗು; ಕೈಬಿಟ್ಟು ಹೋಗು; ಹತೋಟಿ ತಪ್ಪಿ ಹೋಗು. ಕೆಲಸ, ವೊ. ನ್ನು ಪೂರಯಿಸಿಬಿಡು. (ಅಭ್ಯಾಸವನ್ನು) ಕ್ರಮೇಣ ಬಿಟ್ಟುಬಿಡು ; (ಮಾಡದೆ) ತಪ್ಪಿಸಿಕೊ. (ಸಮಾಚಾರವನ್ನು, ಒಬ್ಬನಿಂದ) ಹೊರಡಿಸು. (ಒಬ್ಬನಿಂದ ದುಡ್ಡು) ಕೀಳು]. G. over (ಕಷ್ಟ ಕೆಲಸವನ್ನು) ಕೊನೆಗಾಣಿಸು, ಕೊನೆ ಮುಟ್ಟಿಸು. (ಒಬ್ಬನನ್ನು) ತನ್ನ ಕಡೆಗೆ ಬರುವಂತೆ ಮಾಡಿಕೊ. G. through ನೆರೆ ಮುಟ್ಟಿಸು ; —ಮುಟ್ಟು ; ಕೊನೆ ಮುಟ್ಟಿಸು. (ಮಸೂದೆ, ವೊ. ವು ಶಾಸನಸಭೆಯಲ್ಲಿ) ಅಂಗೀಕೃತವಾಗು, ಒಪ್ಪಿಗೆ ಪಡೆ ; (ಪರೀಕ್ಷೆಯಲ್ಲಿ) ತೇರ್ಗಡೆಯಾಗು (G. through with ಮಾಡಿ ಮುಗಿಸು ; ನಿಭಾಯಿಸು). G. together ಸೇರು ; ಸೇರಿಸು ; ಕೂಡಿಸು ; ಶೇಖರಿಸು. G. under ಹತೋಟಿಗೆ ತಂದುಕೊ ; ಅಡಗಿಸು ; (ಬೆಂಕಿ) ಆರಿಸು. G. up ಏಳು (ಮು., ಹಾಸಿಗೆಯಿಂದ) ; ಏರು ; ಹತ್ತು (ಮು., ಕುದುರೆಯ ಮೇಲೆ). (ಬೆಂಕಿ, ಗಾಳಿ, ಕಡಲು) ಜೋರಾಗು, ಬಿರುಸಾಗು, ರಭಸಗೊಳ್ಳು. (ಬೇಟೆ) ಮರೆ ಬಿಟ್ಟು ಹೊರಡು. (ಕ್ರಿಕೆಟ್ ಚೆಂಡು) ಬಿರುಸಿನಿಂದ ಪುಟವೇಳು. ಅಣಿಮಾಡು ; ಸಜ್ಜುಗೊಳಿಸು ; ಏರ್ಪಾಟು ಮಾಡು. (ಬಟ್ಟೆ) ಇಸ್ತ್ರಿ ಮಾಡು. (ಕೂದಲನ್ನು, ವ್ಯಕ್ತಿಯನ್ನು, ನಾಟಕದಲ್ಲಿ ವೇಷವನ್ನು, ಪುಸ್ತಕದ ಮುದ್ರಣ, ರಟ್ಟು, ವೊ. ನ್ನು) ಅಂದವಾಗಿ ಕಾಣುವಂತೆ ಮಾಡು. [I got my, his, back up ರೇಗಿಬಿದ್ದೆನು ; ರೇಗಿಬೀಳುವಂತೆ ಮಾಡಿದೆನು ; ಮುಷ್ಕರ ಹಿಡಿದೆನು ; (ಅವನು) ಮುಷ್ಕರ ಹಿಡಿಯುವಂತೆ ಮಾಡಿದೆನು. G. up steam ಎಂಜಿನನ್ನು ನಡಸುವುದಕ್ಕೆ ತಕ್ಕಷ್ಟು ಆವಿಯನ್ನು ತಯಾರಿಸು. (ರೂಪ.) ಉದ್ರೇಕಗೊಳ್ಳು ; ಕೆರಳು ; ಹುರಿದುಂಬು. G. the wind up (ಅಸಂ.) ಭಯಪಡು ; ಹೆದರು ; ಕೃತಕೋದ್ರೇಕಗೊಳ್ಳು]. (ಪರೀಕ್ಷೆ, ವೊ. ಗಳಿಗೆ) ವಿಷಯ ಗಟ್ಟಿಮಾಡಿಕೊ.

Géttable (ಗು.) ; **Gétaway** ಗೆಟ್ಅವೇ (ನಾ.) (ಮು., ಕಳ್ಳರು, ವೊ.) ತಪ್ಪಿಸಿಕೊಳ್ಳುವುದು (Make one's g. ತಪ್ಪಿಸಿಕೊ). **Gét-up** (ನಾ.) (ಉಡುಪು, ಸಜ್ಜು, ವೊ. ಗಳ) ಅಂದ ಚೆಂದ, ರೀತಿ ; (ಪುಸ್ತಕ, ವೊ. ಗಳ) ತಯಾರಿಕೆಯ ರೀತಿ.

Get (ನಾ.) (ಮು., ಬೇಟೆಯ ಭಾಷೆಯಲ್ಲಿ, ಪ್ರಾಣಿಗಳ ವಿಷಯದಲ್ಲಿ) ಹುಟ್ಟಿಸುವುದು ; ಸಂತಾನೋತ್ಪತ್ತಿ ; ಸಂತಾನ ; ಸಂತತಿ.

Gewgaw ಗ್ಯೂಗಾ (ನಾ.) ಥಳುಕಿನ ಒಡವೆ ; — ಆಟದ ಸಾಮಾನು ; ಥಳುಕು ಪಳುಕು ; ಕೆಲಸಕ್ಕೆ ಬಾರದ, ಬರಿಯ ಡೌಲಿನ, ಅಲ್ಪ ವಸ್ತು. (ಬ. ವ. ದಲ್ಲಿ) ಬರಿಯ ಆಡಂಬರ.

Gey ಗೇ (ಕ್ರಿ. ವಿ.) (ಸ್ಕಾ. ಪ್ರ.) ಹೆಚ್ಚಾಗಿ ; ಬಹುವಾಗಿ ; ಅತಿಯಾಗಿ ; ವಿಶೇಷವಾಗಿ. (Gay ಪದದ ಮತ್ತೊಂದು ರೂಪ)

Geýser[1] ಗೇ(ಗೈ)ಸ(ಸ)ರ್ (ನಾ.) (ಬಿಸಿನೀರಿನ ಧಾರೆಯನ್ನು ಆಗಿಂದಾಗ್ಗೆ ಮೇಲಕ್ಕೆ ಚಿಮ್ಮುವ) ಬಿಸಿನೀರಿನ ಬುಗ್ಗೆ, ಊಟೆ ; ನೀರುಕಾಯಿಸುವ ಸಲಕರಣೆ.

Geýser[2] = Geezer.

Ghárry ಗ್ಯಾರಿ, ಗರಿ (ನಾ.) (ಆಂ. ಇಂ.) (ಬಾಡಿಗೆಯ) ಕುದುರೆಯ ಗಾಡಿ.

Ghástly ಗಾ(ಗ್ಯಾ)ಸ್ಟ್ಲಿ (ಗು., ಕ್ರಿ. ವಿ.) ಭಯಂಕರ; ರೌದ್ರ ; ಕರಾಳ; ಭೀಕರ ; ಘೋರ ; ವಿಕಾರ. ಆಕ್ಷೇಪಣೀಯ (ಅತ್ಯುಕ್ತಿ ಪ್ರ.). ಹೆಣ ಮೋರೆಯ ; ಹೆಣದಂಥ ; ವಿವರ್ಣ ; ಬಿಳಿಚಿಕೊಂಡ ; ಕಳೆಯಿಲ್ಲದ. (ಮುಗುಳು ನಗೆ, ವೊ.) ಸಂಕಟಪಟ್ಟು, ಬಲವಂತದಿಂದ, ಹೊರಡಿಸಿದ ; ವಿಕಟ (G. pale ಭಯಂಕರವಾಗಿ ವಿವರ್ಣಹೊಂದಿದ). **Ghástlily** (ಕ್ರಿ. ವಿ.) ; **Ghástliness** (ನಾ.)

Gha(u)t ಗಾಟ್ (ನಾ.) (ಆಂ. ಇಂ.) [Eastern, Western, Gha(u)ts ದಕ್ಷಿಣ ಹಿಂದೂಸ್ಥಾನದ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಉದ್ದಕ್ಕೂ ಹಬ್ಬಿರುವ ಎರಡು ಬೆಟ್ಟದ ಸಾಲುಗಳು : ಪೂರ್ವ ಪಶ್ಚಿಮ ಘಟ್ಟಗಳು]. ಕಣಿವೆ ; ಘಾಟಿ. (ನದಿಗೆ ಇಳಿಯುವ) ಸೋಪಾನ ಪಂಕ್ತಿ ; ಸ್ನಾನಘಟ್ಟ ; ನದಿಯಿಂದ ನೆಲದಮೇಲಕ್ಕೆ ಹತ್ತುವ ಸ್ಥಳ. Burning-g. ಹೊಳೆಯ ದಡದ ಸುಡುಗಾಡು ; ತೀರಶ್ಮಶಾನ.

Gházi ಗಾಸಿ (ನಾ.) ಮಹಮ್ಮದೀಯ ಧರ್ಮಾಂಧ (ಇಸ್ಲಾಮಿನಲ್ಲಿ ನಂಬಿಕೆಯಿಲ್ಲದ ಮತಾಂತರದವರನ್ನು ಕೊಲ್ಲುವವನು). (ಮು., ತುರ್ಕಿಯಲ್ಲಿ) ಮರ್ಯಾದೆಯ ಒಂದು ಬಿರುದು.

Ghee ಗೀ (ನಾ.) (ಎಮ್ಮೆಯ ಅಥವಾ ಹಸುವಿನ) ತುಪ್ಪ.

Ghérkin ಗರ್ಕಿನ್ (ನಾ.) (ಉಪ್ಪಿನಕಾಯಿಗೆ ಉಪಯೋಗಿಸುವ) ಎಳೆಯ ಅಥವಾ ಸಣ್ಣ ಜಾತಿಯ ಸೌತೆಯ ಕಾಯಿ ; ಮೆಕ್ಕೆಯ ಕಾಯಿ.

Ghétto ಗೆಟೊ (ನಾ.) (ಮು, ಇಟಲಿಯ) ನಗರದಲ್ಲಿ ಯೆಹೂದ್ಯರ ವಸತಿ, ವಾಸಸ್ಥಳ.

Ghost ಗೋಸ್ಟ್ (ನಾ.) (ಪ್ರಾಚೀ. ಪ್ರ.) ಜೀವ (ತತ್ತ್ವ) ; ಪ್ರಾಣ ; ಆತ್ಮ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಾಣ ವಾಯು [ಈಗ, Give up the g. (ಪ್ರಾಣ ಬಿಡು, ಸಾಯಿ) ಎಂಬಲ್ಲಿ ಮಾತ್ರ] ; ಪರಮಾತ್ಮ [Holy G (ಕ್ರೈಸ್ತರ ತ್ರಿಮೂರ್ತಿಗಳಲ್ಲಿ ಮೂರನೆಯ ವ್ಯಕ್ತಿ : ಪರಿಶುದ್ಧಾತ್ಮ) ಎಂಬಲ್ಲಿ ಮಾತ್ರ]. (ಪ್ರೇತಲೋಕ, ಮೊ. ಗಳಲ್ಲಿರುವ) ಸತ್ತವನ ಆತ್ಮ ; ಪ್ರೇತ ; (ಜೀವಂತರಿಗೆ ಕಾಣಿಸಿಕೊಳ್ಳುವ) ಸತ್ತವನ ಪ್ರೇತ ; ಗಾಳಿ (Raise, lay, g. ಪ್ರೇತವನ್ನು ಎಬ್ಬಿಸು, ಅಡಗಿಸು ; ಕಾಣುವಂತೆ, ಕಾಣದಂತೆ, ಮಾಡು) ; ಭೂತ ; ದೆವ್ವ ; ಪಿಶಾಚಿ. ಹೆಣದತ್ತ ; ಜೀವಚ್ಛವ ; ನರಪ್ರೇತ(ಲ). ಛಾಯೆ [Not the g. of a chance (ಅಗುವ) ಸಂಭವವೇ ಇಲ್ಲ, ಲಕ್ಷಣವೇ ಇಲ್ಲ]. (ದೃ. ವಿ.) ಲೆನ್ಸಿನಲ್ಲಿಯ ದೋಷದ ಫಲವಾಗಿ ದೂರದರ್ಶಕದ ದೃಷ್ಟಿಕ್ಷೇತ್ರದಲ್ಲಿ ಕಾಣುವ ಪ್ರಕಾಶದ ಬಟ್ಟು ಅಥವಾ ಮಿಥ್ಯಾ ಬಿಂಬ. ಹೆಸರನ್ನು ತನ್ನ ಯಜಮಾನ ಪಡೆಯುವುದಕ್ಕಾಗಿ ತಾನು ದುಡಿಯುವ ಕಲೆಗಾರ, ಸಾಹಿತಿ. G.-word ಮುದ್ರಣಕಾರನ ತಪ್ಪಿನಿಂದ ಅಥವಾ ಉಚ್ಚಾರಣೆಯ ತಪ್ಪಿನಿಂದ ರೂಢಿಗೆ ಬಂದಿರುವ ಪದ : (ಭಾಷೆಯಲ್ಲಿಲ್ಲದ) ಭ್ರಾಂತಿ ಪದ, ಊಹಾ ಪದ (ಉದಾ., Celt², Fylfot). **Ghóst-hood** (ನಾ.) ; **Ghóstlike** (ಗು.) ; **Ghóstly** (ಗು.) (ಪ್ರಾಚೀ. ಪ್ರ.) ಆಧ್ಯಾತ್ಮಿಕ ; ಅದ್ಯೈಹಿಕ ; ಅಮೂರ್ತ. (ಕ್ರೈಸ್ತ) ಧರ್ಮದ ; — ಮಠೀಯ ; — ಮತ ವಿಷಯಕ (Our g. enemy ಸೈತಾನ. G. father, adviser, director ಪಾಪನಿವೇದನೆ ಕೇಳುವ ಪುರೋಹಿತ. G. comfort, counsel ಪುರೋಹಿತನ ಸಮಾಧಾನ ವಚನ, ಹಿತ ವಚನ. G. weapons ಧಾರ್ಮಿಕ, ಮತತತ್ತ್ವದ, — ವಾದಗಳು ; ಮಠದ ದಂಡನೆಗಳು). ದೆವ್ವದಂಥ ; ಪಿಶಾಚದಂಥ ; ಪ್ರೇತದಂಥ ; ಗಾಳಿಯಂಥ. **Ghóstliness** (ನಾ.)

Ghoul ಗೂಲ್ (ನಾ.) (ಪೌರಸ್ತ್ಯ ಕಥೆಗಳಲ್ಲಿ) ಹೆಣತಿನ್ನುವ ಪಿಶಾಚಿ ; ಪಿರಿತಿನಿ (ಗಾಂ.) ; ಮರುಳು (ಗ್ರಾಂ.). **Ghoúlish** (ಗು.) ; **Ghoúlishly** (ಕ್ರಿ. ವಿ.)

Ghyll. Gill² ಪದದ ಮತ್ತೊಂದು ರೂಪ.

Giállo antíco (It.) ಜಾಲ್ಲೊ ಆಂಟೀಕೊ (ನಾ.) ಇಟಲಿಯ ಜೀರ್ಣ ಅವಶೇಷಗಳಲ್ಲಿ ದೊರೆಯುವ, ಅಲಂಕಾರ ಕೆಲಸಕ್ಕೆ ಒದಗುವ, ಹಳದಿಯ ಬಣ್ಣದ, ಬೆಲೆಯುಳ್ಳ (ಅಮೃತ) ಶಿಲೆ.

Gíant ಜಯಂಟ್ (ನಾ., ಗು.) ಅಮಾನುಷ ದೇಹಪ್ರಮಾಣವುಳ್ಳ ಮನುಷ್ಯರೂಪಿನ ವ್ಯಕ್ತಿ : ದೈತ್ಯ ; ರಾಕ್ಷಸ ; ಅಸುರ. (ಗ್ರೀಕ್ ಪುರಾಣ) ಧೂಮ್ಯಧಿದೇವತೆಗೊ ಸ್ವರ್ಗಾಧಿದೇವತೆಗೊ ಅಥವಾ ನರಕಾಧಿದೇವತೆಗೂ ಹುಟ್ಟಿದ ಮಕ್ಕಳಲ್ಲಿ ದೇವತೆಗಳೊಡನೆ ಯುದ್ಧ ಮಾಡಿದವನು. ಅದ್ಭುತ ಶಕ್ತಿಯುಳ್ಳದ್ದು ; ಅಸಾಧಾರಣ ಎತ್ತರದ ಮನುಷ್ಯ, ಪ್ರಾಣಿ, ಸಸ್ಯ : ಬೃಹದ್ದೇಹಿ ; ಪ್ರಚಂಡ ಸಾಮರ್ಥ್ಯ, ಧೈರ್ಯ, ಶಕ್ತಿ, ಮೊ. ಗಳುಳ್ಳ ವ್ಯಕ್ತಿ : ಅದ್ಭುತ ವ್ಯಕ್ತಿ ; ಪ್ರಚಂಡ ಪುರುಷ (There were giants in those days ನಮ್ಮ ಹಿರಿಯರು ನಮಗಿಂತ ಶ್ರೇಷ್ಠರು). [G. cement ಬಲು ಗಟ್ಟಿ ಸಿಮೆಂಟು : ದೈತ್ಯ ಸಿಮೆಂಟು. G.-powder ಒಂದು ಬಗೆಯ ಡೈನಮೈಟು (ಸಿಡಿಮದ್ದು). G.('s)-stride ಗಣೆಯ ತಿರುಗುತಲೆಯಿಂದ ಇಳಿಬಿಟ್ಟಿರುವ ಹಗ್ಗಗಳ ಸಹಾಯದಿಂದ ದೊಡ್ಡದಾಗಿ ದಾಟುಗಾಲು ಹಾಕಿಕೊಂಡು ಆ ಗಣೆಯ ಸುತ್ತಲೂ ಸುತ್ತಬಹುದಾದ ವ್ಯಾಯಾಮ ಸಾಧನೆಯ ಗಣೆ : ರಾಕ್ಷಸ ದಾಟುಗಾಲಿನ (ವ್ಯಾಯಾಮದ) ಗಣೆ]. (ಗು.) ಭೂತಾಕಾರದ ; ರಾಕ್ಷಸ ಶಕ್ತಿಯ ; ಅದ್ಭುತ ; ವಿಪರೀತ ದೊಡ್ಡ ; (ಹಲವು ವೇಳೆ ಸಸ್ಯಗಳ ಹೆಸರುಗಳಲ್ಲಿ). **Gíantess** (ನಾ., ಸ್ತ್ರೀ.) ; **Gíantlike** (ಗು.) ; **Gíantism** (ನಾ.) ರಾಕ್ಷಸತನ, — ಪ್ರಕೃತಿ, — ಅಂಶ, — ವೈಶಿಷ್ಟ್ಯ. ದೇಹಭಾಗದ (ಮು. ಎಲುಬಿನ) ಅಸಹಜ ಬೆಳವಣಿಗೆಯ ರೋಗಸ್ಥಿತಿ.

Giaour ಜೌರ್ (ನಾ.) [ಮುಸಲ್ಮಾನರಲ್ಲದವರಿಗೆ (ಮು., ಕ್ರೈಸ್ತರಿಗೆ) ತುರ್ಕಿಯವರು ತುಚ್ಛವಾಗಿ ಉಪಯೋಗಿಸುವ ಪದ] ಪಾಷಂಡ ; ಧರ್ಮಬಾಹಿರ ; 'ಕಾಫರ್'.

Gib ಗಿಬ್, ಜಿಬ್ (ನಾ.) (ಯಂತ್ರಭಾಗ, ಮೊ. ನ್ನು ಅದರ ಸ್ಥಳದಲ್ಲಿರುವಂತೆ ಬಿಗಿಸುವ) ಲೋಹದ ಅಥವಾ ಮರದ ಬೆಣೆ, ಮೊಳೆ. (ಗಿಬ್) ಗಂಡು ಬೆಕ್ಕು. ಮುದಿಗೊಡ್ಡು (ಹೆಂಗಸು)

Gíbber ಜಿ(ಗಿ)ಬರ್ (ಕ್ರಿ. ಅಕ., ನಾ.) ವೇಗವಾಗಿಯೂ ಅಸ್ಪಷ್ಟವಾಗಿಯೂ ಮಾತನಾಡು(ವುದು) ; ಕೋತಿಯಂತೆ ಕಿಚಪಿಚಗುಟ್ಟು(ವುದು) ; ಅಂಥ ಮಾತು, ಧ್ವನಿ. **Gíbberish** ಗಿಬರಿಷ್ (ನಾ.) ಅರ್ಥವಾಗದ ಮಾತು ; ಅರ್ಥವಿಲ್ಲದ ನುಡಿ ; ಗೊಜಗೊಜ; ತಪ್ಪುತಪ್ಪಾದ ಅಥವಾ ವ್ಯಾಕರಣಬದ್ಧವಲ್ಲದ ಮಾತು.

Gíbbet ಜಿಬೆಟ್ (ನಾ., ಕ್ರಿ. ಸಕ.) (ಅದಿಯಲ್ಲಿ) ಗಲ್ಲು(ಮರ) ; (ಈಚೆಗೆ) ಗಲ್ಲಿಗೆ ಹಾಕಿದ ಅಪರಾಧಿಗಳ ದೇಹವನ್ನು ಸರಪಣಿಯಿಂದ ತೂಗಹಾಕುತ್ತಿದ್ದ ತೋಳುಗಂಬ. ನೇಣುಹಾಕುವುದರಿಂದಾದ ಸಾವು ; ಗಲ್ಲುಶಿಕ್ಷೆ ; ಮರಣ ದಂಡನೆ. (ಕ್ರಿ.) ಗಲ್ಲಿಗೆ ಹಾಕಿ ಕೊಲ್ಲು ; ಗಲ್ಲಿಗೆ ಹಾಕು ; ಗಲ್ಲುಮರದ ಮೇಲೆ (ಅಪರಾಧಿಯ ದೇಹವನ್ನು) ತೂಗಕಟ್ಟು ; ಗಲ್ಲುಮರದ ಮೇಲಿನಂತೆ ತೂಗಕಟ್ಟು. ಅಪಕೀರ್ತಿಗೆ ಈಡು ಮಾಡು ; ಅವಹೇಳನಕ್ಕೆ ಗುರಿಪಡಿಸು.

Gíbbon ಗಿಬನ್ (ನಾ.) (ಮು., ಇಂಡಿಯಾ ದ್ವೀಪಸಮುದಾಯಗಳಲ್ಲಿ ದೊರೆಯುವ) ಕೆಲವು ಜಾತಿಗಳ ನಿಡುದೋಳಿನ ವಾನರ : 'ಗಿಬನ್'.

Gíbbous ಗಿಬಸ್ (ಗು.) ಹೊರ ಉಬ್ಬಿನ ; ಮುಂದಕ್ಕೆ ಉಬ್ಬಿದ. (ಖ. ವಿ.) (ಚಂದ್ರ ಅಥವಾ ಗ್ರಹ) ಅರ್ಧವೃತ್ತಕ್ಕಿಂತ ಹೆಚ್ಚಾಗಿಯೂ ಪೂರ್ಣವೃತ್ತಕ್ಕಿಂತ ಕಡಮೆಯಾಗಿಯೂ (ಇರುವ) ಪ್ರಕಾಶಭಾಗವುಳ್ಳ ; ಅರ್ಧಾಧಿಕ ಬಿಂಬದ. ಡುಬ್ಬುಳ್ಳ ; ಗೂನು ಬೆನ್ನಿನ. **Gíbbously** (ಕ್ರಿ. ವಿ.) ; **Gibbósity** — ಬಾ — (ನಾ.) ; **Gibbóso-** ಗಿಬೋಸೋ — (ಸ. ಪೂ. ಪ.)

Gibe, Jibe ಜೈಬ್ (ಕ್ರಿ., ನಾ.) ಅಣಕಿಸು(ವುದು) ; ಅಪಹಾಸ ; ಅವಹೇಳನ ; — ಮಾಡು(ವುದು) (*At* ಉಪ. ಜೊತೆ ಸಹ). **Gíber** (ನಾ.) ; **Gíbingly** (ಕ್ರಿ. ವಿ.)

Gíddy ಗಿಡಿ (ಗು., ಕ್ರಿ.) (ಕಾಯಿಲೆ, ಜಯ, ಮೊ. ಗಳಿಂದ) ತಲೆ ತಿರುಗು(ವ), ತಲೆ ಸುತ್ತು(ವ) ; ಬೀಳುವಂತಾಗು(ವ), ಸುತ್ತಿಬೀಳು(ವ) ; ಗಿರಕಿಹೊಡೆಸು(ವ) ; — ಹೊಡೆ(ಯುವ) (A g. precipice, success ತಲೆ ತಿರುಗುವಂತೆ ಮಾಡುವ ಪ್ರಪಾತ, ಜಯ). ದಿಗ್ಭ್ರಮೆ ಹಿಡಿಸುವ ವೇಗದಲ್ಲಿ ಗಿರ ಗಿರನೆ ಸುತ್ತುವ; ಬುದ್ಧಿಭ್ರಮಣವಾದ ; ತಲೆ ತಿರುಗಿದ ; ಮದಿಸಿದ ; ಕ್ಷುಬ್ಧ ; ವಿವೇಚನೆ ಮಾಡಲು ಶಕ್ತವಿಲ್ಲದ ; ರೇಗುವ ; ತಿಳಿಗೇಡಿತನದ (Play the g. goat ಹುಚ್ಚನಂತೆ ಆಡು) ; ಚಂಚಲ ; ಅರೆ ಮರುಳಾದ. G.-go-round = Merry-go-round. **Gíddily** (ಕ್ರಿ. ವಿ.) ; **Gíddiness** (ನಾ.)

Gift ಗಿಫ್ಟ್ (ನಾ., ಕ್ರಿ., ಸಕ.) ಕೊಡುಗೆ ; ಕೋಡು (ಗ್ರಾಂ.) ; ಕೊಟ್ಟದ್ದು ; ಕೊಡುವುದು ; ದಾನ ಮಾಡುವುದು [Would not have it at a g. ದಾನವಾಗಿ, ಸುಮ್ಮನೆ, ಕೊಟ್ಟರೂ ಬೇಡ. The living is in the g. of — (ಕ್ರೈಸ್ತ) ಧರ್ಮದತ್ತಿ — ರ ಕೈಯ್ಯಲ್ಲಿ (ಅಧಿಕಾರದಲ್ಲಿ) ಇದೆ. Came to me by free g. ಅದು ನನಗೆ ದಾನವಾಗಿ ಬಂದಿತು]. (ನ್ಯಾ. ಶಾ.) ಪ್ರತಿಫಲಾಪೇಕ್ಷೆಯಿಲ್ಲದೆ ಮನಸಾರ ವರ್ಗಾಯಿಸಿಕೊಟ್ಟ ಆಸ್ತಿ ; ದಾನ ; ದತ್ತಿ ; ಬಹುಮಾನ ; ಉಪಾಯನ ; ದಾನ ಕೊಟ್ಟ ವಸ್ತು [G.-book ಬಹುಮಾನ ಪುಸ್ತಕ. G. coupon ಬೆಲೆಗೆ ಕೊಂಡ ಕೆಲವು ಸರಕುಗಳೊಡನೆ ಕೊಡುವ ದಾಖಲೆ ಚೀಟಿಗಳನ್ನು ಒಟ್ಟುಗೂಡಿಸಿ ಒಂದು ಗೊತ್ತಾದ ಸಂಖ್ಯೆಯಷ್ಟನ್ನು ಹಿಂದಕ್ಕೆ ಕೊಟ್ಟರೆ ಬಹುಮಾನ ದೊರೆಯುವ ದಾಖಲೆ ಚೀಟಿ ; ಇನಾಮು ಚೀಟಿ. G.-horse ದಾನ ಬಂದ ಕುದುರೆ ; ಅಲ್ಪಬೆಲೆಯ ಕೊಡುಗೆ (Look a gift horse in the mouth ದಾನ ಕೊಟ್ಟ ಕುದುರೆಯನ್ನು ಹಲ್ಲು ಹಿಡಿದು ನೋಡು ; 'ಧರ್ಮಕ್ಕೆ ದನ ಕೊಟ್ಟರೆ ಹಿತ್ತಿಲಗೆ ಹೋಗಿ ಬಾಳ ಹಾಕು' ಎಂಬಂತೆ ; ಕೊಟ್ಟ ದಾನದಲ್ಲಿ ಅಸಮಾಧಾನ ತೋರಿಸು)]. ದೈವದತ್ತವಾದ ಕಾರ್ಯಶಕ್ತಿ, ಮನಶ್ಶಕ್ತಿ ; ದೇವರ ವರಪ್ರಸಾದವೆಂದು ಪರಿಗಣಿಸುವ ಗುಣ, ಶಕ್ತಿ, ವರ [G. of tongues (Tongue

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೋಡಿ)]. ಸ್ವಾಭಾವಿಕ, ನೈಸರ್ಗಿಕ, — ಶಕ್ತಿ, ಗುಣ; ಹುಟ್ಟು ಶಕ್ತಿ [G. of the gab (Gab ನೋಡಿ)]. ಪ್ರತಿಭೆ; ಕೌಶಲ. (ಕ್ರಿ.) ದತ್ತಿ, ಕೊಡುಗೆ, — ಬಿಡು; ದಾನ ಕೊಡು; ಬಹುಮಾನ ಕೊಡು (*Away* ಉಪ. ಜೊತೆ). **Gífted** (ಗು.); **Gíftie** (ನಾ.) (ಸ್ಕಾ. ಪ್ರ.) = Gift.

Gig[1] ಗಿಗ್ (ನಾ.) (ಹಗುರವಾದ, ಎರಡು ಚಕ್ರದ) ಒಂಟಿ ಕುದುರೆಯ ಗಾಡಿ. ಹಡಗಿನಲ್ಲಿಟ್ಟಿರುವ, ಹುಟ್ಟು ಹಾಕಿಯೊ ಪಟ ಕಟ್ಟಿಯೊ ನಡಸಬಹುದಾದ (ಒಂದು ಬಗೆಯ) ಹಗುರವಾದ ಕಿರಿದು ದೋಣಿ; (ಹುಟ್ಟು ಹಾಕಿ ನಡಸುವ) ಜೂಜು ದೋಣಿ. G.-lamps (ಅಸಂ.) ಕನ್ನಡಕ. **Gígman** — ಮ್ಯಾನ್ (ನಾ.) ಒಂಟಿ ಕುದುರೆಯ ಗಾಡಿ ಇಟ್ಟಿರುವವನು. Gigmanity ಗೆ ಸೇರಿದವನು. **Gigmánity** — ಮ್ಯಾನಿಟಿ (ನಾ.) ಉನ್ನತ ಭಾವನೆಯಿಲ್ಲದೆ, ವಸ್ತು ವಾಹನಗಳಿಗೆ ಪ್ರಾಧಾನ್ಯ ಕೊಟ್ಟು ಮೆರೆಯುವ, ಸಮಾಜದ ಮಧ್ಯಮ ಶ್ರೇಣಿಯ ಜನರು; — ಜನರ ಮನೋಧರ್ಮ; ದೊಡ್ಡವರಲ್ಲಿ ಓಡಾಡುವುದೇ ಜೀವನದ ಧ್ಯೇಯವೆಂದು ತಿಳಿದು ಆ ರೀತಿ ನಡೆಯುವವರು.

Gig[2] ಗಿಗ್ (ನಾ.) ಮೀನು ಚುಚ್ಚುವ ಒಂದು ತೆರದ ಈಟಿ.

Gigántic ಜೈಗ್ಯಾಂಟಿಕ್ (ಗು.) ರಾಕ್ಷಸ ಪ್ರಮಾಣದ; ದೈತ್ಯಾಕಾರದ; ಬೃಹದಾಕಾರದ; ಅದ್ಭುತಾಕಾರದ; ವಿಪರೀತ ದೊಡ್ಡ. **Gigantésque** — ಗ್ಯಾಂಟೆಸ್ಕ್ (ಗು.) ರಾಕ್ಷಸ ಲಕ್ಷಣಗಳುಳ್ಳ; ರಾಕ್ಷಸನಿಗೆ ತಕ್ಕ. **Gigántically** (ಕ್ರಿ. ವಿ.)

Giggle ಗಿಗ್ಲ್ (ಕ್ರಿ. ಅಕ., ನಾ.) (ನಟನೆಯ, ಅಶಿಕ್ಷಿತ, ಅಸಭ್ಯ, — ಹುಡುಗಿಯಂತೆ) ಕಿಲ ಕಿಲನೆ ನಗು, ಗುಲುಗು; ತಡೆದು ತಡೆದು, ಸ್ವಲ್ಪ ಸ್ವಲ್ಪ ಹೊತ್ತು, ನಗು. (ನಾ.) ಇಂಥ ನಗು. **Gíglet, -ot** ಗಿಗ್ಲೆ(ಗ್ಲ)ಟ್ (ನಾ.) ಕಿಲ ಕಿಲನೆ, ಕಿಸಿ ಕಿಸಿ, ನಗುವ ಹುಡುಗಿ.

Gíglet,-ot. **Giggle** ನೋಡಿ.

Gigmánity. **Gig**[1] ನೋಡಿ.

Gig-mill ಗಿಗ್‌ಮಿಲ್ (ನಾ.) ಬಟ್ಟೆಯಮೇಲೆ ಜುಂಗೆಬ್ಬಿಸುವ ಯಂತ್ರ (ಶಾಲೆ)

Gild[1] ಗಿಲ್ಡ್ (ಕ್ರಿ. ಸಕ., ಭೂ. ಕೃ. Gilded, Gilt) ಚಿನ್ನದ ಮುಲಾಮು ಮಾಡು; ಚಿನ್ನದ ರೇಕು ಹಚ್ಚು; ಚಿನ್ನದ ಬಣ್ಣ ಹಾಕು; ಚಿನ್ನದ ಹಾಗೆ ಕಾಣುವಂತೆ ಮಾಡು; ಗಿಲೀಟು ಮಾಡು. (G. pill ಅವಶ್ಯವಾಗಿ ಅನುಭವಿಸಬೇಕಾದ ಅಹಿತವನ್ನು ಸಹಿಸರಾಗುವಂತೆ ಮೃದು ಮಾಡು). (ಸ್ಥಿತಿ, ಮೊ. ನ್ನು) ಸಹಿಸರಾಗುವಂತೆ, ಮರ್ಯಾದಾರ್ಹ ವಾಗುವಂತೆ, ಹಣ ಕೊಟ್ಟು ಏರ್ಪಡಿಸು. ಹೊಂಬಣ್ಣದಿಂದ, ಹೊಂ ಬೆಳಕಿನಿಂದ, ಛಾಯೆ ಕೊಡು, ಅಲಂಕರಿಸು. ಅಂದವಾದ ಮಾತು ಗಳಿಂದ ಹೊರಕ್ಕೆ ಕಳೆ ಕಟ್ಟಿಸು, ಥಳುಕು ಮಾಡು. Gilded Chamber ಪಾರ್ಲಿಮೆಂಟಿನ ಶ್ರೀಮಂತ ಸಭೆ. Gilded or gilt spurs 'ನೈಟ್' ಪದವಿಯ ಚಿಹ್ನೆ. Gilded youth ಸೊಗಸಿನ ಧನಿಕ ತರುಣರು. Gilt-cup = Buttercup. **Gílder** (ನಾ.) ಚಿನ್ನದ ಮುಲಾಮುಗಾರ. **Gílding** (ನಾ.); **Gilt** (ನಾ.) ಚಿನ್ನದ ಮುಲಾಮು; ಸ್ವರ್ಣ ರೇಪ; ಗಿಲೀಟು. Take the g. off the gingerbread (ಒಂದು ವಸ್ತುವಿನ) ಮಿಥ್ಯಾಕರ್ಷಣಗಳನ್ನು ಕಿತ್ತುಹಾಕು. G.-edge paper, securities, stocks ಹೆಚ್ಚು ಖಾತರಿಯ, ಭರವಸೆಯ, ನೆಚ್ಚಿಕೆಯುಳ್ಳ, ಸಾಲಪತ್ರಗಳು, (ಸರ್ಕಾರದ) ಆಧಾರ ಪತ್ರಗಳು. Cloth g. ಚಿನ್ನದ ಅಕ್ಷರಗಳು ಒತ್ತಿದ ಪುಸ್ತಕದ ಬಟ್ಟೆರಟ್ಟು.

Gild[2] = Guild.

Gill[1] ಗಿಲ್ (ನಾ.; ಸಾ., ಬ. ವ. ದಲ್ಲಿ; ಕ್ರಿ. ಸಕ.) ಮೀನು, ಮೊ. ಜಲಶ್ವಾಸ ಪ್ರಾಣಿಗಳ ಶ್ವಾಸಾಂಗ(ಗಳು): ಜಲ ಪುಪ್ಪುಸ; ಕಿವಿರು. ಕೋಳಿಯ ಕೊರಳಿನ ತೊಂಗುದೊವಲು. ನಾಯಿಕೊಡೆ, ಮೊ. ಗಳ ಒಳಮುಖದ ಕೇಂದ್ರದಿಂದ ಸುತ್ತಲೂ ಹೊರಟಿರುವ ನಿಡುಕು ಪಟ್ಟಿಗಳು. ಮನುಷ್ಯನ ದವಡೆಗಳ ಮತ್ತು ಕಿವಿಗಳ ತಳಭಾಗದಲ್ಲಿರುವ ಮಾಂಸ (Rosy about the gills ಆರೋಗ್ಯ ಕಳೆ ತೋರುವ). (G.-cover ಮೀನಿನ ಕಿವಿರುಗಳಿಗೆ ರಕ್ಷಣೆಕೊಡುವ ಎಲುಬಿನ ಆವರಣ: ಕಿವಿರು ಮುಚ್ಚಳ. G.-net ಕಿವಿರುಗಳನ್ನು ಸಿಕ್ಕಿಸುವುದರಿಂದ ಹಿಡಿಯಲಾಗುವ ಮೀನುಬಲೆ: ಕಿವಿರುಬಲೆ). (ಕ್ರಿ.) (ಮೀನಿನ) ಕರುಳು ತೆಗೆ; (ನಾಯಿಕೊಡೆಯ) ಲಂಬಪಟ್ಟಿಗಳನ್ನು ಕತ್ತರಿಸಿಹಾಕು. ಕಿವಿರುಬಲೆಯಲ್ಲಿ ಮೀನುಹಿಡಿ.

Gill[2] ಗಿಲ್ (ನಾ.) ಆಳವಾದ, ಸಾ., ಕಾಡು ಬೆಳೆದ, ಕಮರಿ; ಬೆಟ್ಟದ ಕಿರು ಝರಿ.

Gill[3] ಜಿಲ್ (ನಾ.) ಕಾಲು ಪೈಂಟಿನ (ಕೆಲವು ಕಡೆ ಅರ್ಧ ಪೈಂಟಿನ) ದ್ರವದ ಅಳತೆ.

Gill[4] ಜಿಲ್ (ನಾ.) Jack & G. ಹುಡುಗ, ಹುಡುಗಿ; ಪೋರ, ಪೋರಿ.

Gilt. **Gild**[1] ನೋಡಿ.

Gímbal ಜಿಂಬಲ್ (ನಾ.) (ಮು., ದಿಕ್ಸೂಚಿಯೂ ಕಾಲಮಾಪಕ ಯಂತ್ರವೂ) ಹಡಗಿನ ಚಲನೆಯಿಂದ ಬಾಧಿತವಾಗದೆ ಯಾವಾಗಲೂ ಸಮ ಮಟ್ಟದಲ್ಲಿಯೇ ಆಡುತ್ತಿರುವಂತೆ ಅಳವಡಿಸುವ ಸಲಕರಣೆ (ಸಾ., ಬಳೆಗಳಿಂದಲೂ ತಿರುಗು ಗೂಟಗಳಿಂದಲೂ ರಚಿಸಿದ್ದು): 'ಜಿಂಬಲ್'.

Gímcrack ಜಿಮ್‌ಕ್ರ್ಯಾಕ್ (ನಾ., ಗು.) ಬರಿ ಡೌಲಿನ (ಒಡವೆ, ವಸ್ತು). ಥಳುಕು ಪಳುಕು; ಕೆಲಸಕ್ಕೆ ಬಾರದ (ಒಡವೆ). **Gímcrackery** (ನಾ.) ಇಂಥ ವಸ್ತುಗಳು. **Gímcracky** (ಗು.)

Gímlet ಗಿಮ್ಲೆಟ್ (ನಾ.) (ಸಾ., ಅರ್ಧಸ್ತಂಭಾಕೃತಿಯ ಒಡಲೂ, ಒಂದು ಕೊನೆಯಲ್ಲಿ ಮರದ ಅಡ್ಡಪಟ್ಟಿಯ ಹಿಡಿಯೂ, ಮತ್ತೊಂದು ಕೊನೆಯಲ್ಲಿ ನಿಡುಸುರುಳಿಯ ತಿರುಪೂ ಉಳ್ಳ) ಒಂದು ತೆರದ ಬೈರಿಗೆ: ನಿಡು ಸುರುಳಿಯ ಬೈರಿಗೆ.

Gimp, Gymp ಗಿಂಪ್ (ನಾ.) ಒಳಗಡೆಯಿರುವ ತಂತಿಯ ಅಥವಾ ಹುರಿಯ ಮೇಲೆ ಹೊಸೆದ ರೇಷ್ಮೆಯ, ಉಣ್ಣೆಯ ಅಥವಾ ಹತ್ತಿಯ, ನೂಲಿನಿಂದ ಮಾಡಿದ ಅಲಂಕಾರದ ಕರೆ, ಪಟ್ಟಿ. (ರೇಷ್ಮೆ, ಮೊ. ಗಳಿಂದ ಮಾಡಿ ತಂತಿಯಿಂದ ಬಲಗೊಳಿಸಿದ) ಮೀನುಹಿಡಿಯುವ ಹುರಿ. (ಅಲಂಕಾರದ ಗೋಟುತಯಾರಿಕೆಯಲ್ಲಿ) ಚಿತ್ರಾಕೃತಿಯನ್ನು ಹೆಗ್ಗುರುತಿಸುವ ದಪ್ಪ ನೂಲೆಳೆ.

Gin[1] ಜಿನ್ (ನಾ., ಕ್ರಿ. ಸಕ.) ಬಲೆ (ಬೀಸು); ಬೋನು (ಒಡ್ಡು); ಬೋನಿನಲ್ಲಿ ಕೆಡವು. ಹಗ್ಗ ಸುತ್ತುವ ರಾಟೆಯುಳ್ಳ ಒಂದು ತೆರದ ಭಾರವೆತ್ತುವ ಯಂತ್ರ. ಹತ್ತಿಯಿಂದ ಬೀಜವನ್ನು ಬೇರ್ಪಡಿಸುವ ಯಂತ್ರ. (ಕ್ರಿ.) ಈ ಯಂತ್ರದಿಂದ ಹತ್ತಿಯ ಬೀಜ ತೆಗೆ.

Gin[2] ಜಿನ್ (ನಾ.) (ಮೊಳೆತ) ಧಾನ್ಯದಿಂದ ಬಟ್ಟಿಯಿಳಿಸಿ ತೆಗೆದ ಮದ್ಯ; 'ಜಿನೀವ' ಎಂಬ ಮದ್ಯ. G.-palace ಬೆಡಗಿನ ಅಲಂಕಾರ ಮಾಡಿರುವ ಮದ್ಯದ ಅಂಗಡಿ. G.-shop (ಜಿನ್) ಮದ್ಯದ ಅಂಗಡಿ. G. sling ರುಚಿವಾಸನೆ ಕಟ್ಟಿ ಸಿಹಿ ಬೆರಸಿ ಮಾಡಿದ ಅಮೆರಿಕದ ಒಂದು ಬಗೆಯ ತಣ್ಣನೆಯ (ಜಿನ್) ಮದ್ಯ. (Geneva ಪದದ ಸಂಕ್ಷಿಪ್ತ)

Gíngall, Jin- ಜಿಂಗಾಲ್ (ನಾ.) (ಚೀನ ಮತ್ತು ಇಂಡಿಯದಲ್ಲಿ) ಆಧಾರದ ಮೇಲಿನಿಂದ ಗುಂಡುಹಾರಿಸುವ ಭಾರದ ಬಂದೂಕು; ಹಗುರವಾದ ತಿರುಗುಬಂದೂಕು. (ಹಿಂದಿ: ಜಂಜಾಲು)

Gínger ಜಿಂಜರ್ (ನಾ., ಗು.) ಅಡಿಗೆಯಲ್ಲಿಯೂ ಔಷಧದಲ್ಲಿಯೂ ಉಪಯೋಗಿಸುವ, ಮುರಬ್ಬ ಮಾಡಲಾಗುವ, ಖಾರವಾದ ಮತ್ತು ಸುವಾಸನೆಯ ರುಚಿಯುಳ್ಳ, ಒಂದು ಬೇರು (ಉಳ್ಳ ಸಸ್ಯ): ಶುಂಠಿ; ಅಲ್ಲ. [Black g. ಸಿಪ್ಪೆತೆಗೆದಿರದ (ಈಸ್ಟ್ ಇಂಡಿಯದ) ಕರಿಯ ಶುಂಠಿ. Green g. ಹಸಿ ಶುಂಠಿ. White g. ಸಿಪ್ಪೆತೆಗೆದಿರುವ (ಜಮೇಕದ) ಬಿಳಿಯ ಶುಂಠಿ. G. shall be hot in the mouth ಭೋಗಾಪೇಕ್ಷೆ, ಸುಖೇಚ್ಛೆ, ಶಾಶ್ವತವಾದದ್ದು]. ಸತ್ತ್ವ; ಕೆಚ್ಚು; ಹಮ್ಮು; ಹುಮ್ಮಸ್ಸು; ಪ್ರಚೋದನೆ; ಉತ್ತೇಜನೆ [G. group (in Parliament)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಪಾರ್ಲಿಮೆಂಟಿನಲ್ಲಿ) ಸರ್ಕಾರವನ್ನು ಹೆಚ್ಚು ನಿರ್ಧಾರಕ ಕಾರ್ಯಕ್ಕೆ ಒತ್ತಾಯಪಡಿಸುವ ಪಕ್ಷ]. ನಸು ಕೆಂಪು ಛಾಯೆಯ ಹಳದಿಯ ಬಣ್ಣ(ದ). [**G. ale, beer, pop** ಶುಂಠಿಯ ರುಚಿವಾಸನೆ ಕಟ್ಟಿದ ಹುದಿವಾಯು ಪಾನೀಯಗಳು. **G. brandy** ಶುಂಠಿ ಬ್ರಾಂದಿ. **Gingerbread** (ನಾ., ಗು.) ಶುಂಠಿ ಹಾಕಿದ ಸಕ್ಕರೆಪಾಕದಿಂದ ಮಾಡಿದ ಒಂದು ತೆರದ ರೊಟ್ಟಿ : ಶುಂಠಿರೊಟ್ಟಿ. (G.-b. nut ಗುಂಡಿಯಾಕಾರದ ಶುಂಠಿ ರೊಟ್ಟಿಯ ಸಣ್ಣ ಬಿಲ್ಲೆ. Take the gilt off the g.-b. (Gild[1] ನೋಡಿ)]. (ಗು.) ಆಡಂಬರದ; ಅತ್ಯಲಂಕಾರದ; ಡೌಲಿನ. **G.-grass** ಶುಂಠಿ ಹುಲ್ಲು. **G.-nut** = Gingerbread nut. **G.-race** ಶುಂಠಿಯ ಕೊನೆ. **G.-wine** ಸಕ್ಕರೆಗೆ ನೀರು ಹಾಕಿ, ಜಜ್ಜಿದ ಶುಂಠಿ ಬೆರಸಿ, ಹುಳಿಸಿ, ಮಾಡಿದ ಒಂದು ತೆರದ ಬ್ರಿಟಿಷ್ ಮದ್ಯ: ಶುಂಠಿ ಮದ್ಯ. **Gingeráde** — ರೇಡ್ (ನಾ.) = G. beer. **Gíngerly** (ಕ್ರಿ. ವಿ., ಗು.) (ತನಗಾಗಲಿ, ತಾನು ಮುಟ್ಟುದುದಕ್ಕಾಗಲಿ, ಮೆಟ್ಟುದುದಕ್ಕಾಗಲಿ, ಅಪಾಯವಾಗದಂತೆಯೂ ಸ್ವಲ್ಪವೂ ಶಬ್ದವಾಗದಂತೆಯೂ) ಅತ್ಯಂತ ಜೋಕೆಯಿಂದ, ಬಹು ಎಚ್ಚರಿಕೆಯಿಂದ. **Gíngery** (ಗು.)

Gínger (ಕ್ರಿ. ಸಕ.) ಶುಂಠಿಯ ರುಚಿ ಕಟ್ಟು ; ಶುಂಠಿ ಬೆರಸು. (ಕುದುರೆಯನ್ನು) ಚುರುಕು ಮಾಡಲು ಗುದಕ್ಕೆ ಶುಂಠಿ ಹಚ್ಚು. (ರೂಪ.) (ಒಬ್ಬನನ್ನು) ಚುರುಕು ಮಾಡು, ಚಿಮ್ಮು, ಹುರಿದುಂಬಿಸು.

Gíngham ಗಿಂಗಮ್ (ನಾ.) ಬಣ್ಣ ಹಾಕಿದ ಹತ್ತಿಯ ದಾರದ ಅಥವಾ ನಾರಿನ ದಾರದ ಪಟ್ಟೆಗಳೂ ಪಪ್ಪಳಿಗಳೂ ಉಳ್ಳ ಒಂದು ತೆರದ ಬಟ್ಟೆ. (ಬಳ. ಮಾ.) ಕೊಡೆ ; ಛತ್ರಿ.

Gíngili ಜಿಂಜಿಲಿ (ನಾ.) ಎಳ್ಳೆಣ್ಣೆ ; ಒಳ್ಳೆಣ್ಣೆ ; ಅಚ್ಚೆಳ್ಳು ; ಎಳ್ಳುಗಿಡ.

Gingíval ಜಿಂಜೈವಲ್ (ಗು.) ಒಸಡಿನ.

Gíngko ಜಿಂಕೊ (ನಾ.) ಬೀಸಣಿಗೆಯಾಕಾರದ ಎಲೆಗಳುಳ್ಳ ಜಪಾನಿನ ಒಂದು ಮರ.

Gínglymus ಗಿಂ(ಜಿಂ)ಗ್ಲಿಮಸ್ (ನಾ.) (ಅಂ. ರ. ಶಾ.) ಎರಡು ದಿಕ್ಕುಗಳಲ್ಲಿ ಮಾತ್ರ ಚಲನವುಳ್ಳ, ಹಿಂದು ಮುಂದಾಡುವ ಕೀಲಿನಂಥ, ದೇಹದ ಒಂದು ಸಂಧಿ (ಉದಾ., ಮೊಣಕೈ ಸಂಧಿ)

Gínseng ಜಿನ್‌ಸೆಂಗ್ (ನಾ.) ಚೀನ, ನೇಪಾಳ, ಕೆನಡ, ಅಮೆ. ಸಂ., ಮೊ. ಪ್ರಾಂತಗಳಲ್ಲಿ ಬೆಳೆಯುವ ಒಂದು ಔಷಧಸಸ್ಯ ; ಇದರ ಬೇರು ; ಇದರಿಂದ ಮಾಡಿದ ಔಷಧ.

Gíppo ಜಿಪೊ (ನಾ.) (ಸೈನ್ಯದ ಅಸಂ.) ಮಾಂಸದ ಸಾರ, ರಸ.

Gípsy, Gýpsy ಜಿಪ್ಸಿ (ನಾ.) 'ರೋಮನಿ' ಎಂದು ಕರೆದುಕೊಳ್ಳುವ, ಹಿಂದೂಸ್ಥಾನದ ನೆಲೆಯುವರಾಗಿದ್ದ, ಅಶುದ್ಧ ಹಿಂದೀಭಾಷೆಯನ್ನಾಡುವ, ಬುಟ್ಟಿಹೆಣಿಗೆ, ಕುದುರೆಯ ವ್ಯಾಪಾರ, ಕಣಿ ಹೇಳುವುದು, ಮೊ. ಜೀವನೋಪಾಯಗಳುಳ್ಳ, ಸ್ಥಾಯಿಯಾಗಿ ಒಂದೆಡೆಯಲ್ಲಿ ನಿಲ್ಲದೆ ಅಲೆಯುತ್ತಿರುವ, ಕಪ್ಪು ಒಡಲೂ ಕೂದಲೂ ಉಳ್ಳ, ಒಂದು ಜನಾಂಗದವನು: ಕೊರವ ; 'ಜಿಪ್ಸಿ'. (ತಮಾಷೆಯಾಗಿ) ತಂಟೆಕೋರಿ ಹೆಂಗಸು ; ಶ್ಯಾಮಲ ವರ್ಣದ ಹೆಂಗಸು. G. bonnet ಮುದುರು ಪಕ್ಕಪಟ್ಟಿಗಳುಳ್ಳ ಒಂದು ದೊಡ್ಡ ಟೋಪಿ. G. moth ಎಲೆ ತಿಂದುಹಾಕುವ ಯೂರೋಪಿನ ಒಂದು ಪತಂಗಜಾತಿ. G. rose ಒಂದು ಸಸ್ಯ ಜಾತಿ. G. table ಹಗುರವಾದ ಮೂರು ಕಾಲಿನ ಗುಂಡುಮೇಜು. **Gípsydom** (ನಾ.) (ಸಾಮೂಹಿಕವಾಗಿ) ಜಿಪ್ಸಿಗಳು. **Gípsyhood** (ನಾ.) ಜಿಪ್ಸಿಸ್ಥಿತಿ, ತನ. **Gípsyism** (ನಾ.) ಜಿಪ್ಸಿಗಳ ಜೀವನ ಕ್ರಮ ಮತ್ತು ಉದ್ಯೋಗಗಳು. **Gípsyish** (ಗು.); **Gípsyfy** (ಕ್ರಿ. ಸಕ.) ಜಿಪ್ಸಿಯಂತೆ ಮಾಡು, ಆಗು.

Giráffe ಜಿರಾಫ್ (ನಾ.) ಮಚ್ಚೆಮಚ್ಚೆಯಾದ ಚರ್ಮವೂ ಉದ್ದವಾದ ಕತ್ತೂ ಕಾಲುಗಳೂ ಉಳ್ಳ, ಮೆಲುಕು ಹಾಕುವ ಆಫ್ರಿಕದ ನಾಗಾಲು ಪ್ರಾಣಿ : 'ಜಿರಾಫ್' (= Camelopard)

Gírandole ಜಿರಂಡೋಲ್ (ನಾ.) ಚಕ್ರಬಾಣ ; ಸುತ್ತುವ ಚಕ್ರದಿಂದ ಹಾರಿಸುವ ಆಕಾಶಬಾಣ ; ಸುತ್ತುತ್ತಿರುಗುವ ಜಲಧಾರೆ. ಕವಲೊಡೆದಿರುವ ಮೋಂಬತ್ತಿಯ ಗುಜ್ಜುಬಂಕ ಅಥವಾ ಕಂಬ. ಮಧ್ಯದಲ್ಲಿ ದೊಡ್ಡ ಹರಳೂ ಸುತ್ತಲೂ ಚಿಕ್ಕ ಹರಳುಗಳೂ ಹಾಕಿರುವ ಒಂದು ತೆರದ ಹತ್ತಕಡಕು, ಲೋಲಕ.

Gírasol(e) ಜಿರಸಾಲ್, — ಸೋಲ್ (ನಾ.) ಕೆಂಪು ಹೊಳಪನ್ನು ಪ್ರತಿಫಲಿಸುವ ಒಂದು ತೆರದ ಕ್ಷೀರಸ್ಫಟಿಕ ಮಣಿ.

Gird[1] ಗರ್ಡ್ (ಕ್ರಿ. ಸಕ. ; ಭೂತ., ಭೂ. ಕೃ. Girded or Girt) (ಕಾವ್ಯ ಅಥವಾ ಅಲಂ.) [ನಡುಪಟ್ಟಿಯಿಂದ (ಮು., ಉಡುಪನ್ನು ಬಂಧಿಸಲು)] ಸೊಂಟ ಕಟ್ಟು, ಬಿಗಿ ; ನಡುವಿಗೆ ಕಟ್ಟು [G. oneself, one's loins ಕಾರ್ಯಕ್ಕೆ ಸಿದ್ಧನಾಗು (*Up* ಉಪ. ದೊಡನೆ ಸಹ)]. ಶಕ್ತಿ, ಅಧಿಕಾರ, ಕೊಡು (*With* ಉಪ. ದೊಡನೆ). ನಡುಕಟ್ಟಿನಲ್ಲಿ ಕತ್ತಿ ತೊಡಿಸು (*With* ಉಪ. ದೊಡನೆ). ನಡುಪಟ್ಟಿ, ಡಾಬು, ಮೊ. ಗಳಿಂದ ಉಡಿಗೆಯನ್ನು ಮೈಗೆ ಬಿಗಿ ; (ಲಾಡಿ, ಹುರಿ, ಮೊ. ನ್ನು) ಸುತ್ತುಕಟ್ಟು. (ಊರು, ಮೊ. ನ್ನು) ಮುತ್ತಿಗೆ ಹಾಕು; —ಮುತ್ತಿಗೆಯ ಸಾಧನ, ಮೊ. ಗಳಿಂದ ಆವರಿಸು. (ನಡುಕಟ್ಟು, ಬೇಲಿ, ಮೊ.) ಸುತ್ತುವರಿ, ಬಳಸು.

Gird[2] ಗರ್ಡ್ (ಕ್ರಿ. ಅಕ., ನಾ.) ಹಾಸ್ಯ ; ನಕಲಿ ; ಗೇಲಿ ; ಪರಿಹಾಸ ; — ಮಾಡು ; ಅಣಕಿಸು (*At* ಉಪ. ದೊಡನೆ)

Gírder ಗರ್ಡರ್ (ನಾ.) (ಮಾಳಿಗೆಯ ತರಾಯಿಗಳಿಗೆ ಆಧಾರವಾಗಿರುವ) ತೊಲೆ, ದೂಲ, ಸರ ; (ಇದೇ ಉಪಯೋಗದ) ಕಬ್ಬಿಣದ ಅಥವಾ ಉಕ್ಕಿನ ಸರ. (ಚಾವಣಿ, ಸೇತುವೆಯ ದಾಟು, ಮೊ. ಗಳಿಗೆ ಹಾಕುವ, ಉಕ್ಕು, ಮೊ. ಗಳಿಂದ ಮಾಡಿದ, ಜಾಲಾಂತರದ ಅಥವಾ ಇತರ ಸಂಯುಕ್ತ ರಚನೆಯ) ಸರಕಟ್ಟು.

Gírdle[1] ಗರ್ಡ್‌ಲ್ (ನಾ., ಕ್ರಿ. ಸಕ.) ನಡುಕಟ್ಟು ; ನಡುಪಟ್ಟಿ ; ಉಡಿದಾರ; ಡಾಬು; ಒಡ್ಯಾಣ ; ಕಟಿಬಂಧ ; ಕಟಿಸೂತ್ರ ; ನಡುಪಟ್ಟಿಯಂತೆ ಸುತ್ತುವರಿದಿರುವದು ; ಮಂಡಲ; ಸಾಣೆಹಿಡಿದ, (ಚಿನ್ನದ) ಕಟ್ಟಡ ಸುತ್ತುವರಿದ, ರತ್ನದ ನಡು ಅಂಚು. (ಅಂ. ರ. ಶಾ.) ಕೈಗಳ ಅಥವಾ ಕಾಲುಗಳ ಮೂಳೆಗಳಿಗೆ ಆಧಾರವಾಗಿರುವ ಅಸ್ಥಿವಲಯ (Shoulder or pectoral g. ಭುಜಾಸ್ಥಿ ವಲಯ. Pelvic or hip g. ಕಟ್ಯಸ್ಥಿ ವಲಯ). ಮರದಮೇಲೆ ಸುತ್ತಲೂ ತೊಗಟೆ ತೆಗೆದು ಮಾಡಿರುವ ಪಟ್ಟಿ. (ಕ್ರಿ.) (ನಡುಕಟ್ಟಿನಿಂದ, ಸುತ್ತುವಲಯದಿಂದ) ಸುತ್ತುವರಿ ; ನಡುಕಟ್ಟು, ಡಾಬು, ಹಾಕು (ಸಾ., *about, in, round* ಉಪ. ದೊಡನೆ). ಸುತ್ತುಪಟ್ಟೆ ಕೆತ್ತಿ (ಮರವನ್ನು) ಸಾಯಿಸು, ಅಥವಾ ಹೆಚ್ಚುಫಲ ಬಿಡುವಂತೆ ಮಾಡು.

Gírdle[2] ಗರ್ಡ್‌ಲ್ (ನಾ. ; ಸ್ಕಾ. ಪ್ರ.) ರೊಟ್ಟಿ, ದೋಸೆ, ಮೊ. ನ್ನು ಸುಡುವ ಗುಂಡು ಕಾವಲಿ, ದುಂಡು ಹೆಂಚು. **G.-cake** ಕಾವಲಿ ದೋಸೆ, — ರೊಟ್ಟಿ.

Girl ಗರ್ಲ್ (ನಾ.) ಹೆಣ್ಣು (ಮಗು) ; ಹುಡುಗಿ ; ಇನ್ನೂ ಮದುವೆಯಿಲ್ಲದ ಹೆಂಗಸು ; ಕೊಡಗೂಸು ; ಕನ್ಯೆ ; ಬಾಲೆ ; ಬಾಲಿಕೆ [(Old g. ಹೆಂಗಸು, ಹೆಣ್ಣುಕುದುರೆ, ಮೊ. ಗಳ ವಿಷಯದಲ್ಲಿ ಪ್ರೀತಿ ಅಥವಾ ಅಗೌರವ ಸೂಚಕವಾದ ಮಾತು, ಸಂಬೋಧನೆ : ಮುದಿ ಹುಡುಗೀ !). The girls (ಮದುವೆಯಾದ ಅಥವಾ ಆಗಿರದ) ಒಂದು ಕುಟುಂಬದ ಹೆಣ್ಣುಮಕ್ಕಳು]. ಮನೆ ಗೆಲಸದವಳು. (ಒಬ್ಬನ) ಪ್ರೇಯಸಿ, ನಲ್ಲೆ (ಹಲವು ವೇಳೆ Best g.). G. guides 'ಬಾಯ್ ಸ್ಕೌಟ್ಸ್' ಎಂಬ ಬಾಲ ಚಮೂ ಸಂಸ್ಥೆಗೆ ಜವಾಬಾದ ಬಾಲಕಾ ಚಮೂ ಸಂಸ್ಥೆ. G. of the period ಈಗಿನ ಕಾಲದ ಹುಡುಗಿ (ಸಂಕೋಚವಿಲ್ಲದ ಹೆಂಗಸಿಗೆ ೧೯ನೆಯ ಶತಮಾನದ ಅರ್ಧ ಹೆಸರು). **Gírlhood** (ನಾ.) ಕನ್ಯಾವಸ್ಥೆ ; (ಸಾಮೂಹಿಕವಾಗಿ) ಹುಡುಗಿಯರು. **Gírlie** ಗರ್ಲಿ (ನಾ.) ಪುಟ್ಟ ಹುಡುಗಿ. **Gírlish** (ಗು.) ಹುಡುಗಿಯ ; ಹುಡುಗಿತನದ ; ಹುಡುಗಿಯಂಥ ; ಹುಡುಗಿತನದಂಥ. **Gírlishly** (ಕ್ರಿ. ವಿ.) ; **Gírlishness** (ನಾ.)

Giróndist ಜಿರಾಂಡಿಸ್ಟ್ (ನಾ., ಗು.) (೧೭೯೧-೯೩ರ ಕಾಲದ ಫ್ರೆಂಚ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಾಸನಸಭೆಯಲ್ಲಿದ್ದ) ಪ್ರಜಾಧಿಪತ್ಯ ಸರ್ಕಾರದ ಮಿತವಾದಿ ಪಕ್ಷದ(ವನು); ಇಂಥ ಅಭಿಪ್ರಾಯಗಳುಳ್ಳ(ವನು)

Girt[1] ಗರ್ಟ್ (ನಾ., ಕ್ರಿ. ಸಕ.) (ಉಬ್ಬು ತಗ್ಗುಗಳನ್ನು ಸೇರಿಸಿಕೊಂಡು ಮಾಡಿದ) ಚಪ್ಪಟೆಯಲ್ಲದ ಕ್ಷೇತ್ರದ ಅಡ್ಡ ಅಳತೆ ಅಥವಾ ಸುತ್ತು ಅಳತೆ. (ಕ್ರಿ.) (ಈ) ಅಳತೆ ಮಾಡು; (ಮರ, ಮೊ. ಗಳ) ಸುತ್ತಳತೆ (ಇಷ್ಟು) ಇರು, ಆಗು. (Girth ಪದದ ಭಿನ್ನ ರೂಪ)

Girt[2]. **Gird** ಧಾತುವಿನ ಭೂತ., ಭೂ. ಕೃ.

Girth ಗರ್ತ್ (ನಾ., ಕ್ರಿ.) (ಜೀನು, ಮೊ. ನ್ನು ಭದ್ರಪಡಿಸುವುದಕ್ಕಾಗಿ ಕುದುರೆ, ಮೊ. ಗಳ) ಒಡಲ ಸುತ್ತಲೂ ಬಿಗಿಯುವ ತೊಗಲಿನ ಅಥವಾ ಬಟ್ಟೆಯ ಪಟ್ಟಿ: ಮೈಪಟ್ಟಿ; ಸುತ್ತುಪಟ್ಟಿ; ತಂಗು. (ಹೆಚ್ಚುಕಡಮೆ ಸ್ತಂಭಾಕೃತಿಯಾಗಿರುವ ಯಾವುದಾದರೂ ವಸ್ತುವಿನ) ಸುತ್ತಳತೆ. [G.-web (ಸುತ್ತುಪಟ್ಟಿಗಾಗಿ ಹೆಣೆದು ಮಾಡಿದ) ಹೆಣಿಗೆಯ ಪಟ್ಟಿ]. (ಕ್ರಿ.) ಸುತ್ತು; ಸುತ್ತುವರಿ; (ಕುದುರೆ, ಮೊ. ಗಳಿಗೆ) ಸುತ್ತುಪಟ್ಟಿ ಹಾಕಿ (ಜೀನು, ಮೊ. ನ್ನು) ಬಿಗಿ. (ಇಷ್ಟು) ಸುತ್ತಳತೆಯಾಗು.

Gist ಜಿಸ್ಟ್ (ನಾ.) ಮುಖ್ಯಾಂಶ; (ಒಂದು ವಿಷಯದ) ಸಾರಾಂಶ; ತಿರುಳು.

Gittern ಗಿಟರ್ನ್ (ನಾ.) = Cithern.

Give ಗಿವ್ (ಕ್ರಿ.; ಭೂತ. Gave ಗೇವ್, ಭೂ. ಕೃ. Given ಗಿವ್‌ನ್) (ಸಾಮಾನ್ಯಾರ್ಥ) ಕೊಡು; ನೀಡು; ಈಯಿ. ಉಚಿತವಾಗಿ, ಬಹುಮಾನವಾಗಿ, ಕೊಡು; ದಯಪಾಲಿಸು; ದಾನ ಮಾಡು; ಅನುಗ್ರಹಿಸು; ಕರುಣಿಸು. ಒಪ್ಪಿಸು; ವಶಪಡಿಸು; ಸ್ವಾಧೀನ ಪಡಿಸು; ಸಮರ್ಪಿಸು. ಕುಗ್ಗು; ಕುಸಿದು ಬೀಳು; ಸಡಿಲು; ಒತ್ತಾಯಕ್ಕೆ ಸಗ್ಗು; ಎಡೆಗೊಡು. G. me the good old times ಆ ಒಳ್ಳೆಯ ಹಿಂದಿನ ಕಾಲವನ್ನು ಬಯಸುತ್ತೇನೆ, ಮೆಚ್ಚುತ್ತೇನೆ. G. boot, mitten, sack (ಆಯಾ ಪದಗಳನ್ನು ನೋಡಿ). G. in marriage ಮದುವೆ ಮಾಡಿ ಕೊಡು. G. into custody or in charge (ಪೊಲೀಸಿಗೆ) ಒಪ್ಪಿಸಿಬಿಡು, ವಶಮಾಡು. G. one's word, honour ಭಾಷೆ ಕೊಡು; ಗೌರವದಮೇಲೆ ಆಣೆಯಿಡು. G. as good as one gets ಮಾತಿಗೆ ಮಾತು, ಏಟಿಗೆ ಏಟು, ಕೊಡು. G. a Roland for an Oliver (Roland ನೋಡಿ). G. one his due ಒಬ್ಬನಲ್ಲಿರಬಹುದಾದ ಗುಣಗಳನ್ನು ಒಪ್ಪಿಕೊ. ಗುಣಕ್ಕೆ ಮತ್ಸರವೆ? Would g. the world, Would g. one's ears (ಅದಕ್ಕಾಗಿ, ಹಾಗಾದರೆ) ಏನು ಬೇಕಾದರೂ ಕೊಟ್ಟೇನು. Gave his life to it ಅದಕ್ಕಾಗಿ ಅವನು ಪ್ರಾಣವನ್ನೇ ತೆತ್ತನು, ಅರ್ಪಿಸಿದನು, ಧಾರೆಯೆರೆದನು. Much given to these pursuits ಈ ಹವ್ಯಾಸಗಳಲ್ಲಿ ಅನುರಕ್ತನಾದ. G. him a kick ಅವನಿಗೆ ಒಂದು ಒದೆ ಕೊಡು. G. a cry ಕೂಗಿಕೊ. G. orders ಅಪ್ಪಣೆ ಕೊಡು. G. a jump ಹಾರು. G. person one's blessing (ಒಬ್ಬನನ್ನು) ಆಶೀರ್ವಾದ ಮಾಡು, ಹರಸು. G. you joy! ದೇವರು ನಿನಗೆ ಸಂತೋಷ ಕೊಡಲಿ! G. the time of day ಸುಪ್ರಭಾತ, ಮೊ. ನ್ನು ಕೋರು, ಹೇಳು; ವಂದಿಸು. G. the case for or against person ಒಬ್ಬನ ಪರವಾಗಿ, ಅಥವಾ ಒಬ್ಬನಿಗೆ ವಿರುದ್ಧವಾಗಿ, ತೀರ್ಪು ಕೊಡು. G. batsman out or not out (ಕ್ರಿಕೆಟ್ ಆಟದಲ್ಲಿ) ದಾಂಡುಗಾರನ ಆಟ ಹೋಯಿತೆಂದು, ಹೋಗಲಿಲ್ಲವೆಂದು, ತೀರ್ಪು ಕೊಡು. G. dinner ಔತಣ ಮಾಡು, ಏರ್ಪಡಿಸು. G. person one's hand ಒಬ್ಬನಿಗೆ ಕೈ ನೀಡು, ಹಸ್ತರಾಘವ ಕೊಡು. ಒಬ್ಬನ ಕೈ ಹಿಡಿ; ಪಾಣಿಗ್ರಹಣ ಮಾಡು; ಮದುವೆಯಾಗು. G. a back ಕಪ್ಪೆಕುಪ್ಪಳಾಟದಲ್ಲಿ ಇನ್ನೊಬ್ಬನು ತನ್ನ ಮೇಲೆ ಹಾರಲು ಬೆನ್ನು ಕೊಡು; ಕಪ್ಪೆ ಕೂರು. G. good example ಒಳ್ಳೆಯ ಆದರ್ಶವಾಗು. The *Times* gives the facts 'ಟೈಮ್ಸ್' ವೃತ್ತಪತ್ರಿಕೆಯು ನಡೆದ ಸಂಗತಿಗಳನ್ನು (ತಿಳಿಸುತ್ತದೆ) ಕೊಡುತ್ತದೆ. Gives no sign of life ಪ್ರಾಣದ ಚಿಹ್ನೆಯೇ ಕಾಣುವುದಿಲ್ಲ. Thermometer gives 80° in the shade ಶಾಖಮಾಪಕವು ನೆರಳಿನಲ್ಲಿ ೮೦° ತೋರಿಸುತ್ತದೆ. G. a performance ಒಂದು ಕೇಳಿಕೆ, ಪ್ರದರ್ಶನ, ಕೊಡು; ಆಟವಾಡು; ಸಂಗೀತ ಕಚೇರಿ ಮಾಡು. G. a reading ವಾಚನ ಮಾಡು, ಓದು. G. a song ಹಾಡು. G. a piece of one's mind ಬಯ್ಯು; ವಾಗ್ದಂಡನೆ ಮಾಡು; ದಂಡಿಸು; ಆಕ್ಷೇಪಿಸು. G. to the world ಪ್ರಕಟಿಸು; ಪ್ರಸಿದ್ಧಪಡಿಸು; ಪ್ರಕಾಶ ಮಾಡು. G. person to understand, know ತಿಳಿಸು; ತಿಳಿಯ ಹೇಳು; ಭರವಸೆ ಕೊಡು. He was given the contract ಅವನಿಗೆ ಗುತ್ತಿಗೆ ಕೊಡಲಾಯಿತು. Given health, the thing can be done ಆರೋಗ್ಯವೊಂದಿದ್ದರೆ ಆ ಕೆಲಸ ಮಾಡಬಹುದು. Analysis gives the following figures ವಿಭಜನೆಯಿಂದ ಈ ಮುಂದಿನ ಸಂಖ್ಯೆಗಳು ಹೊರಪಡುತ್ತವೆ. G. oneself trouble ತೊಂದರೆ ತೆಗೆದುಕೊ. G. oneself airs (Air ನೋಡಿ). Gave myself an hour to get there ಅಲ್ಲಿಗೆ ಹೋಗಿ ಸೇರುವುದಕ್ಕೆ ನಾನು ಒಂದು ಗಂಟೆ ತೆಗೆದುಕೊಂಡೆನು. G. birth to ಹೆರು; ಹಡೆ; ಜನ್ಮ ಕೊಡು (ರೂಪ. ಸಹ). G. chase ಬೆನ್ನಟ್ಟು; ಅಟ್ಟಿಕೊಂಡು ಹೋಗು. G. child something to cry for ನಿಷ್ಕಾರಣವಾಗಿ ಅಳುವುದಕ್ಕೆ ಮಗುವನ್ನು ದಂಡಿಸು. G. ear (Ear ನೋಡಿ). G. ground ಹಿಮ್ಮೆಟ್ಟು; ಹಿಂಜರಿ; ಎಡೆಗೊಡು; ಅವಕಾಶ ಕೊಡು. G. it him (hot) ಅವನಿಗೆ ಬಿಸಿ ತೋರಿಸು; ದಂಡಿಸು. G. one what for (ಅಸಂ.) ದಂಡಿಸು; ಬಯ್ಯು; ಆಕ್ಷೇಪಿಸು. G. place (ಇನ್ನೊಬ್ಬನಿಗೆ) ಸ್ಥಳ ಬಿಟ್ಟುಕೊಡು; ಎಡೆ, ಅವಕಾಶ, ಕೊಡು; ಹಿಂದಕ್ಕೆ ಸರಿ. G. rise to ಕಾರಣವಾಗು; ಉಂಟಾಗು. G. tongue (Tongue ನೋಡಿ). G. way ದಾರಿ ಕೊಡು; ಬಿಟ್ಟುಕೊಡು; ಮುರಿ; ಕಿತ್ತುಹೋಗು; ಬಿದ್ದುಹೋಗು; ಹಿಂದಕ್ಕೆ ಹೋಗು; ಹಿಂಜರಿ; ಎದುರಿಸದಿರು; ಸ್ಥಾನ ಚ್ಯುತನಾಗು; ತ್ರಾಣಗುಂದು. ದುಃಖ, ಮೊ. ಗಳಿಗೆ ವಶನಾಗು. ಬೆಲೆ ಬೀಳು. ಹುಟ್ಟು ಹಾಕಲು ಆರಂಭಿಸು; ಜೋರಾಗಿ ಹುಟ್ಟು ಹಾಕು.

(ಕ್ರಿ. ವಿ. ಗಳೊಡನೆ): G. away (ದಾನವಾಗಿ) ಕೊಟ್ಟುಬಿಡು; ವಧುವನ್ನು ವರನಿಗೆ ಕೊಟ್ಟುಬಿಡು; ಮದುವೆ ಮಾಡಿಕೊಡು. (ಅಸಂ.) (ಒಬ್ಬನನ್ನು) ಬಿಟ್ಟುಕೊಡು, ಹೊರಗೆಡವು, ಪತ್ತೆಯಾಗುವಂತೆ ಮಾಡು, ನಗೆಗೀಡು ಮಾಡು; (ರಹಸ್ಯ, ಮೊ. ನ್ನು) ಬಯಲು ಮಾಡು [(ಅಸಂ.) G. a. the show (Show ನೋಡಿ)]. (ಬಹುಮಾನಗಳನ್ನು) ಹಂಚು, ವಿನಿಯೋಗ ಮಾಡು. G. back ಹಿಂದಕ್ಕೆ ಕೊಡು, — ಒಪ್ಪಿಸು. G. forth ಹೊರಸೂಸು; ಪ್ರಕಟಿಸು; ವರದಿ ಮಾಡು. G. in ಬಿಟ್ಟುಕೊಡು; ಬಗ್ಗು; ಸೋಲೊಪ್ಪಿಕೊ; ಯುದ್ಧವನ್ನು, ವಾದವನ್ನು, ನಿಲ್ಲಿಸು. (ದಸ್ತೈವಜನ್ನು) ತಕ್ಕ ಅಧಿಕಾರಿಗೆ ಒಪ್ಪಿಸು. G. off (ಆವಿ, ಮೊ.) ಹೊರಸೂಸು, ಹೊರಬಿಡು. G. out ಹೇಳು; ಸಾರು; ಪ್ರಕಟಿಸು; ಪ್ರಸಿದ್ಧಪಡಿಸು; ಹೊರಸೂಸು; ಹಂಚು. ಬಳಲಿಕೆಯಿಂದ ನಿಂತುಬಿಡು, ಬಿಟ್ಟುಬಿಡು, ಬಿದ್ದುಹೋಗು. ಸಾಲದೆಹೋಗು. G. over (ಮಾಡದೆ) ಬಿಟ್ಟುಬಿಡು, ನಿಲ್ಲಿಸು. (ಅಭ್ಯಾಸ, ಮೊ. ನ್ನು) ತೊರೆದುಬಿಡು. ಒಪ್ಪಿಸಿಬಿಡು (Given over ಕೆಟ್ಟ ಮಾರ್ಗ, ಮೊ. ಕ್ಕೆ ಅಧೀನನಾದ, ಬದ್ಧ). G. up ಬಿಟ್ಟುಬಿಡು; ತೊರೆ; ತ್ಯಜಿಸು; ವಿಸರ್ಜಿಸು [G. up the ghost (Ghost ನೋಡಿ)]. (ಒಬ್ಬನ) ಅಧೀನನಾಗು; (ತಪ್ಪಿಸಿಕೊಂಡು ಓಡಿಬಂದವನು, ಮೊ. ರನ್ನು, ಬೆನ್ನು ಹತ್ತಿ ಬರುತ್ತಿರುವವರ ಕೈಗೆ) ಒಪ್ಪಿಸಿಬಿಡು. (ಭಾವ, ಉದ್ರೇಕ, ಮೊ. ಗಳಿಗೆ) ವಶನಾಗು. ಸಂಬಂಧ ತೊರೆದುಬಿಡು. ಪ್ರಯತ್ನ ಬಿಟ್ಟುಬಿಡು. (ಆತ್ಮಾರ್ಥ ಮತ್ತು ಭೂ. ಕೃ.) ಅರ್ಪಿತನಾಗು; ವಶವಾಗು. (ಸಹಾಪರಾಧಿಗಳು, ಮೊ. ವರ ಹೆಸರನ್ನು) ಹೇಳಿಬಿಡು, ಹೊರಗೆಡವು. ಬಗೆಹರಿಯದ್ದೆಂದು, ಪರಿಹಾರವಾಗದ್ದೆಂದು, ಅಸಾಧ್ಯವೆಂದು, ಹೇಳಿಬಿಡು, ಕೈ ಬಿಟ್ಟುಬಿಡು; ಆಸೆಯನ್ನು ತೊರೆದುಬಿಡು.

Given ಗಿವ್‌ನ್ (ಗು.) (ದಾನವಾಗಿ) ಕೊಟ್ಟ; ದತ್ತ. (ಲೆಕ್ಕಾಚಾರಕ್ಕಾಗಿ, ವಾದಕ್ಕಾಗಿ) ಅಂಗೀಕೃತ. ಒಲವುಳ್ಳ; ಲಂಪಟ (*To* ಉಪ. ದೊಡನೆ). ಸ್ಪಷ್ಟವಾಗಿ ಹೇಳಿದ; ಗೊತ್ತುಮಾಡಿದ; ನಿರ್ದಿಷ್ಟ ಮಾಡಿದ. **Giver** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Give (ನಾ.) ಒತ್ತಡಕ್ಕೆ ಸಗ್ಗುವುದು ; ಸ್ಥಿತಿಸ್ಥಾಪಕತೆ [There is no g. in a stone floor ಕಲ್ಲು (ಹಾಸಿದ) ನೆಲದಲ್ಲಿ ಜಗ್ಗಿ ಏಳುವ ಗುಣವಿಲ್ಲ]. G. and take ಕೊಟ್ಟು ತೆಗೆದುಕೊಳ್ಳುವುದು ; ಪರಸ್ಪರ ರಿಯಾಯಿತಿ. (ಮಾತುಕತೆಯಲ್ಲಿ) ಹೇಳಿ ಕೇಳಿ ಹೊಂದಿಕೊಳ್ಳುವುದು ; ಪರಸ್ಪರ ತಾಳ್ಮೆ.

Gízzard ಗಿಸರ್ಡ್ (ನಾ.) ಪಕ್ಷಿಯ (ಮೊದಲನೆಯ ಜಠರದಲ್ಲಿ ಜೀರ್ಣ ರಸದೊಡನೆ ಮಿಶ್ರವಾದ ಆಹಾರವನ್ನು ಅರೆಯುವುದಕ್ಕಾಗಿ ಇರುವ) ಎರಡನೆಯ ಜಠರ. (ಕೆಲವು ಮೀನು, ಹುಳು, ಚಿಪ್ಪುಪ್ರಾಣಿ, ಮೊ. ಗಳಲ್ಲಿ) ಹೆಚ್ಚುಬಲವುಳ್ಳ ಸ್ನಾಯುಗಳಿಂದ ಕೂಡಿದ ಜಠರ. Fret one's g. ತೊಂದರೆ, ಕ್ಲೇಶ, ಪಟ್ಟುಕೊ ; ಜಂಜಾಟ ಪಡು. Sticks in one's g. (ರೂಪ.) ರುಚಿಸದು ; ಸೇರದು ; ಸಹಿಸದು.

Glábrous ಗ್ಲೇಬ್ರಸ್ (ಗು.) (ಅಂ. ರ. ಶಾ., ಮೊ.) ಕೂದಲಿಲ್ಲದ ; ತುಪ್ಪುಳಿಲ್ಲದ ; ನುಣುಪು ಚರ್ಮದ.

Gláce (F) ಗ್ಲಾಸೇ (ಗು.) (ಬಟ್ಟೆ, ತೊಗಲು, ಮೊ. ವಿಷಯದಲ್ಲಿ) ನಯ ವಾದ ; ನುಣುಪಾದ ; ಮೆರುಗು ಮಾಡಿದ. (ಹಣ್ಣುಗಳ ವಿಷಯದಲ್ಲಿ) ಸಕ್ಕರೆ ಹಾಕಿದ ; ಮೇಲೆ ಸಕ್ಕರೆಪಾಕ ಹತ್ತಿಸಿರುವ.

Glácial ಗ್ಲ್ಯಾಸಿಯಲ್, ಗ್ಲೇಷಿಯಲ್, ಗ್ಲೇಷ(ಷ್)ಲ್ (ಗು.) ನೀರ್ಗಲ್ಲಿನ ; ನೀರ್ಗಲ್ಲುಳ್ಳ ; ನೀರ್ಗಲ್ಲು ಸ್ವಭಾವದ. (ರ. ವಿ.) ಸ್ಫಟಿಕಾಕೃತಿಯಾದ. (ಭೂ. ವಿ.) ನೀರ್ಗಲ್ಲಿನ ಸಂಸರ್ಗದಿಂದ, ಕರ್ತೃತ್ವದಿಂದ, ಆದ (G. epoch, era, period ಉತ್ತರಾರ್ಧ ಭೂಗೋಳದ ಬಹು ಭಾಗದಮೇಲೆ ನೀರ್ಗಲ್ಲಿನ ಪದರ ಹರಡಿಕೊಂಡಿದ್ದ ಯುಗ, ಶಕ, ಕಾಲ : ಹಿಮಾನಿ ಯುಗ, ಶಕ, ಕಾಲ). **Glácially** (ಕ್ರಿ. ವಿ.) ; **Gláciated** (ಗು.) ನೀರ್ಗಲ್ಲಿನ ಕಾರ್ಯದಿಂದ ಗುರುತುಬಿದ್ದ, ನುಣುಪಾದ ; ನೀರ್ಗಲ್ಲಿನ ಹೊಳೆಗಳಿಂದ ಅಥವಾ ನೀರ್ಗಲ್ಲಿನ ಪದರದಿಂದ, ಮುಚ್ಚಿದ, ಕವಿದ. **Glaciátion** (ನಾ.) ಈ ಸ್ಥಿತಿ ; ನೀರ್ಗಲ್ಲಿನ ಕಾರ್ಯ, ಕಾರ್ಯಫಲ. **Glácier** ಗ್ಲ್ಯಾಸಿಯರ್, ಗ್ಲೇಷಿಯರ್ (ನಾ.) (ಎತ್ತರಪ್ರದೇಶದಲ್ಲಿ ಹಿಮರಾಶಿ ಕೂಡಿ ಅಲ್ಲಿಂದ ನಿಧಾನವಾಗಿ) ಜಾರಿ ಬರುತ್ತಿರುವ ನೀರ್ಗಲ್ಲಿನ ದೊಡ್ಡ ರಾಶಿ; ನೀರ್ಗಲ್ಲ ನದಿ. **Gláciered** (ಗು.) ನೀರ್ಗಲ್ಲ ನದಿಗಳಿಂದ ತುಂಬಿರುವ.

Glácis ಗ್ಲೇ(ಗ್ಲ್ಯಾ)ಸಿಸ್, ಗ್ಲಾಸಿ (ನಾ.) (ಮುತ್ತಿಗೆಯ ಸೈನ್ಯವನ್ನು ಗುಂಡಿನ ಸುರಿಮಳೆಗೆ ಈಡುಮಾಡುವ) ಕೋಟೆಯಿಂದ ಇಳಿಜಾರಾಗಿ ಹೋಗುವ ದಂಡೆ ; (ಕೋಟೆಯ ಸುತ್ತಲಿನ) ಇಳಿವಾರ, ಇಳುಕಲು, ಇಳಿಮೇಡು.

Glad ಗ್ಲ್ಯಾಡ್ (ಗು., ಕ್ರಿ. ಸಕ.) ಗೆಲವಿನ ; ನಲವಿನ ; ಸಂತೋಷದ ; ಹರ್ಷಕರ ; ಉಲ್ಲಾಸವುಳ್ಳ [I am g. to hear it ಕೇಳುವುದಕ್ಕೆ ಸಂತೋಷವಾಗುತ್ತದೆ. Should be g. to know (ವ್ಯಂಗ್ಯಾರ್ಥದಲ್ಲಿ) ತಿಳಿದರೆ ಸಂತೋಷವಾಗುತ್ತದೆ]. (ಮುಖಭಾವ, ಮನೋಭಾವ, ಮೊ.) ಸಂತೋಷದ ಕಳೆಯುಳ್ಳ, ಸಂತೋಷಭರಿತ ; ಸಂತೋಷ ಸೂಚಕ ; ಪ್ರಸನ್ನ. (ಸುದ್ದಿ, ಘಟನೆ) ಹರ್ಷದಾಯಕ. (ಪ್ರಕೃತಿ, ಮೊ.) ಕಾಂತಿಯುತವಾದ ; ರಮಣೀಯವಾದ ; ಮನೋಹರವಾದ ; ಚೆಲುವಾದ ; ನಗುವ ; ಮೆರೆಯುವ. [The g. eye ಬೇಟದ ನೋಟ ; ಪ್ರಣಯ ದೃಷ್ಟಿ ; ಉತ್ಸವದ, ಉಲ್ಲಾಸದ, ನೋಟ ; ನಗೆ ನೋಟ. G. hand (ಅಮೆ. ಸಂ.) ಸ್ವಾಗತ ಹಸ್ತ. G. rags (ಅಮೆ. ಸಂ., ಅಸಂ.) ಭಾನುವಾರದ, ಹಬ್ಬದ, ಉಡಿಗೆ] (ಕ್ರಿ.) (ಪ್ರಾಚೀ. ಪ್ರ.) ನಲಿಸು ; ಸಂತೋಷ ಪಡಿಸು. **Gládden** (ಕ್ರಿ. ಸಕ.) ; **Gládly** (ಕ್ರಿ. ವಿ.) ; **Gládness** (ನಾ.) ; **Gládsome** (ಗು.) (ಕಾವ್ಯ) ಸಂತೋಷ ಜನಕ ; ಗೆಲವಿನ. **Gládsomely** (ಕ್ರಿ. ವಿ.) ; **Gládsomeness** (ನಾ.)

Glade ಗ್ಲೇಡ್ (ನಾ.) ಕಾಡಿನ ಮರಗಳ ಮಧ್ಯದಲ್ಲಿ ಏನೂ ಬೆಳೆದಿರದ ಬಯಲು ಅಥವಾ ಹಾದಿ.

Gládiator ಗ್ಲ್ಯಾಡಿಯೇಟರ್ (ನಾ.) ಪ್ರಾಚೀನ ರೋಮಿನ ಸಾರ್ವಜನಿಕ ಪ್ರದರ್ಶನಗಳಲ್ಲಿ ಕತ್ತಿಯಿಂದಲೊ ಇತರ ಆಯುಧದಿಂದಲೊ ಹೋರಾಟಕ್ಕೆ ತರಪೇತಾದ ಮನುಷ್ಯ ; ಖಡ್ಗ ಮಲ್ಲ. (ರಾಜಕೀಯ, ಮೊ. ಗಳಲ್ಲಿ) ವಾದ ಚತುರ ; ವಾದ ಮಲ್ಲ. **Gladiatórial** — ಯಟೋರಿಯಲ್ (ಗು.)

Gladíolus, Gladiólus ಗ್ಲ್ಯಾಡೈಒಲಸ್, ಗ್ಲ್ಯಾಡಿಯೋಲಸ್ (ನಾ.; ಬ. ವ. - luses, - li) ಕತ್ತಿಯಾಕಾರದ ಎಲೆಗಳನ್ನೂ ಉಜ್ಜ್ವಲ ವರ್ಣದ ಪುಷ್ಪಮಂಜರಿ ವೃಂತಗಳನ್ನೂ ಉಳ್ಳ ಒಂದು ಸಸ್ಯಜಾತಿ.

Gládstone ಗ್ಲ್ಯಾಡ್‌ಸ್ಟನ್ (ನಾ., ಗು.) ಒಂದು ತೆರದ ಹಗುರವಾದ ಪ್ರಯಾಣದ ತೊಗಲ ಕೈಸಂಚಿ (= G. bag). ಇಬ್ಬರು ಕುಳಿತು ಕೊಳ್ಳುವ ನಾಲ್ಕು ಚಕ್ರದ ಒಂದು ತೆರದ ಕುದುರೆಯ ಬಂಡಿ. G. claret (೧೮೬೦ರಲ್ಲಿ ಇಂಗ್ಲೆಂಡಿನ ಮಂತ್ರಿಯಾದ ಗ್ಲ್ಯಾಡ್‌ಸ್ಟನ್ನನು ಸುಂಕ ಕಡಮೆ ಮಾಡಿದ್ದರ ಫಲವಾಗಿ ಬಳಕೆಗೆ ಬಂದ) ಕೆಲವು ಅಗ್ಗದ ಕೆಂಪು ಫ್ರೆಂಚ್ ಮದ್ಯಗಳು (ಹಾಸ್ಯ ಪ್ರ)

Glair ಗ್ಲೇರ್ (ನಾ., ಕ್ರಿ. ಸಕ.) ಮೊಟ್ಟೆಯ ಬಿಳಿಯ ಲೋಳೆ ; (ಇದರಿಂದ ತಯಾರಿಸಿದ) ಕೆಲವು ಅಂಟುಪದಾರ್ಥಗಳು ; ಇದೇ ತೆರದ ಯಾವುದಾದರೂ ಅಂಟುಪದಾರ್ಥ, ಲೋಳೆಪದಾರ್ಥ. (ಕ್ರಿ.) — ಬಳಿ, ಸವರು, ಹಚ್ಚು. **Glaíreous** (ಗು.) ; **Glaíry** (ಗು.)

Glaive ಗ್ಲೇವ್ (ನಾ.) (ಪ್ರಾಚೀ. ಪ್ರ., ಕಾವ್ಯ) (ಅಗಲವಾದ) ಕತ್ತಿ ; ಎಲೆಗತ್ತಿ.

Glámour ಗ್ಲ್ಯಾಮರ್ (ನಾ., ಕ್ರಿ. ಸಕ.) ಕಣ್ಕಟ್ಟು ; ಮಾಟ ; ಮಾಯಾ ಜಾಲ ; ಮೋಹನ ವಿದ್ಯೆ ; ಇಂದ್ರಜಾಲ ; ಭ್ರಾಮಕ (Cast a g. over ಮಾಯಾ ಜಾಲ ಬೀಸು ; ಮರುಳು ಮಾಡು). ಮೋಹಗೊಳಿಸುವ ಸೌಂದರ್ಯ, ಸೊಬಗು ; ಮೋಹನ ಲಾವಣ್ಯ. (ಕ್ರಿ.) ಮಾಯಾ ಜಾಲ ಬೀಸು ; ಮರುಳು ಮಾಡು ; ಮೋಹದಲ್ಲಿ ಸಿಕ್ಕಿಸು ; ಮುಗ್ಧ ಮಾಡು ; ಮಾಟ ಮಾಡು. **Glámorous** (ಗು.)

Glance[1] ಗ್ಲಾನ್ಸ್ (ಕ್ರಿ., ನಾ.) (ಆಯುಧದ ವಿಷಯದಲ್ಲಿ) (ಗುರಿಯನ್ನು ನೇರವಾಗಿ ಹೊಡೆಯದೆ) ಅದರಮೇಲೆ ಜಾರಿಕೊಂಡು ಹೋಗು, ಸವರಿಕೊಂಡು ಹೋಗು (*Aside, of* ಉಪ. ದೊಡನೆ ಸಹ). (ಮಾತು, ಮಾತಾಡುವವನು) ಜಾರಿಸಿಬಿಡು, ತೇಲಿಸಿಬಿಡು ; ವಿಷಯಬಿಟ್ಟು ಸರಿದು ಹೋಗು ; ಸೂಚಿಸಿ ಮುಂದೆ ಹೋಗು [G. at (ಒಂದು ವಿಷಯದಮೇಲೆ) ಪ್ರಾಸಂಗಿಕವಾಗಿ, ಸಾ., ವ್ಯಂಗ್ಯವಾಗಿ, ಪ್ರಸ್ತಾಪಿಸು]. (ಹೊಳಪುವಸ್ತು ಅಥವಾ ಬೆಳಕು) ಥಟ್ಟನೆ ಹೊಳೆ ; ಮಿನುಗು ; ಸ್ಫುರಿಸು ; ಪ್ರಭೆ ಬೀರು. ಥಟ್ಟನೆ ಕಣ್ಣೋಡಿಸು ; ಕಣ್ಣಿಡು ; ಕಣ್ಣು ಹಾಕು ; ದೃಷ್ಟಿ ಬೀಳಿಸು ; (— ಕಡೆ) ಸ್ವಲ್ಪ ನೋಡು [G. over ಸ್ಥೂಲವಾಗಿ ನೋಡು ; ಕಣ್ಣೋಡಿಸು ; ಅಲ್ಲಿ ಇಲ್ಲಿ ಓದಿ ತಿರುವಿಹಾಕು. G. down, up. G. one's eye (*At, over* ಮೊ. ಉಪ. ದೊಡನೆ) (— ಮೇಲೆ) ಕಣ್ಣು, ದೃಷ್ಟಿ, ತಿರುಗಿಸು ; ಬೇಗ ನೋಡು]. (ನಾ.) ವೇಗವಾದ ಮತ್ತು ಓರೆಯಾದ ಚಲನೆ, ಹೊಡೆತ ; ಓರೆಹೊಡೆತ ; ಜಾರೇಟು. (ಕ್ರಿಕೆಟ್) ಓರೆಯಾಗಿ ತಗುಲುವಂತೆ ದಾಂಡನ್ನು ಓಲಿಸಿ ಹೊಡೆದ ಹೊಡೆತ ; ಜಾರು ಹೊಡೆತ. ಥಟ್ಟನೆ ಉಂಟಾದ ಮಿಂಚು, ಸ್ಫುರಣ, ಹೊಳಪು. (*At, into, over* ಉಪ. ದೊಡನೆ) ಕ್ಷಣ ದೃಷ್ಟಿ ; ನಸು ನೋಟ ; ಕುಡಿ ನೋಟ. **Gláncingly** (ಕ್ರಿ. ವಿ.)

Glance[2] ಗ್ಲಾನ್ಸ್ (ನಾ.) (ಲೋಹಸಂಬಂಧ ತೋರುವ) ಒಂದು ತೆರದ ಹೊಳಪಿನ ಅದುರು, ಖನಿಜ [Copper-g. (ತಾಮ್ರ, ಗಂಧಕ, ಸಂಯುಕ್ತ ಖನಿಜ) ; Lead-g. (ಸೀಸ, ಗಂಧಕ, ಸಂಯುಕ್ತ ಖನಿಜ : 'ಗಲೀನ') ಮೊ. ರೂಪಗಳಲ್ಲಿ ಮಾತ್ರ ಪ್ರ.]

Gland ಗ್ಲ್ಯಾಂಡ್ (ನಾ.) (ಶ. ವಿ.) ದೇಹದ ಉಪಯೋಗಕ್ಕಾಗಲಿ ದೇಹದಿಂದ ವಿಸರ್ಜಿಸುವುದಕ್ಕಾಗಲಿ ರಕ್ತದಲ್ಲಿಯ ಕೆಲವು ಘಟಕಗಳನ್ನು ಸ್ರವಿಸುವ, ಆಧಾರಬಿಂದುವಿರುವ ಜೀವಕಣಗಳಿಂದ ಕೂಡಿದ, ಸರಳ ಅಥವಾ ಸಂಕೀರ್ಣ ರಚನೆಯುಳ್ಳ ಅಂಗ ; ರಸಗ್ರಂಥಿ. (ಸ. ವಿ.) ಸಸ್ಯಭಾಗದ ಮೇಲ್ಮೈಯಲ್ಲಿರುವ (ರಸವಿಶೇಷಗಳನ್ನು ಸ್ರವಿಸುವ) ಜೀವಕಣಗಳ ತಂಡ ; ರಸ ಗ್ರಂಥಿ. **Glándless** (ಗು.) ; **Glándule**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

—ಡ್ಯೂರ್ (ನಾ.) ಚಿಕ್ಕ ರಸ ಗ್ರಂಥಿ ; ದೇಹದಲ್ಲಿ ಬೆಳೆಯುವ ದುರ್ಮಾಂಸ. **Glándular** (ಗು.) ರಸ ಗ್ರಂಥಿಯ ; — ಸ್ವಭಾವದ ; ರಸಗ್ರಂಥಿ(ಗಳು) ಉಳ್ಳ. **Glandulíferous** (ಗು.) (ಸಣ್ಣ) ರಸ ಗ್ರಂಥಿಗಳುಳ್ಳ. **Glándulose** (ಗು.) (ಸ. ಎ.) = Glandular. **Glándulous** (ಗು.)

Glánders ಗ್ಲ್ಯಾಂಡರ್ಸ್ (ನಾ., ಬ. ವ.) (ದವಡೆಯ ಕೆಳಭಾಗ ಊದಿಕೊಂಡು, ಮೂಗಿನಿಂದ ಸಿಂಬಳ ಸುರಿಯುತ್ತಿರುವ) ಕುದುರೆಯ ಒಂದು ಅಂಟುರೋಗ ; ಕುದುರೆ ಸಿಂಬಳ ರೋಗ ; ಮನುಷ್ಯನಿಗೆ ಅಂಟಿಕೊಳ್ಳುವ ಈ ರೋಗ. **Glándered** (ಗು.) ; **Glánderous** (ಗು.) ಈ ರೋಗದ, — ದಂಥ.

Glandíferous ಗ್ಲ್ಯಾಂಡಿಫೆರಸ್ (ಗು.) ಓಕ್ ಹಣ್ಣು ಬಿಡುವ. **Glándiform** (ಗು.) ಓಕ್ ಹಣ್ಣಿನಾಕಾರದ. ರಸ ಗ್ರಂಥಿಯಂಥ.

Glare ಗ್ಲೇರ್ (ಕ್ರಿ., ನಾ.) ಕಣ್ಣು ಕೋರೈಸುವಂತೆ ಅಥವಾ ಕಣ್ಣಿಗೆ ಬಾಧೆಯಾಗುವಂತೆ ಹೊಳೆ, ಪ್ರಕಾಶಿಸು ; ಝಳ ಹೊಡೆ ; ಕಣ್ಣು ಕೋರೈಸು. ಹೆಚ್ಚು ಗಮನ ಸೆಳೆಯುವಂತಿರು ; ಕಣ್ಣಿಗೆ ಹೊಡೆಯುವಂತಿರು. ದಿಟ್ಟಿಸಿ, ಎವೆಯಿಕ್ಕದೆ, ಉಗ್ರವಾಗಿ, ನೋಡು ; ದುರದುರನೆ, ದುರುಗುಟ್ಟಿಕೊಂಡು, ನೋಡು (*At, upon* ಉಪ. ದೊಡನೆ). (ದ್ವೇಷವನ್ನು, ತಿರಸ್ಕಾರವನ್ನು) ದೃಷ್ಟಿಯಿಂದ ವ್ಯಕ್ತಪಡಿಸು ; ಕಣ್ಣಲ್ಲಿ ಸೂಸು. (ನಾ.) ಅತ್ಯುಜ್ಜ್ವಲವೂ ತೀಕ್ಷ್ಣವೂ ಆದ ಬೆಳಕು ; ಚುಚ್ಚು ಬೆಳಕು ; ಅತಿ ತೀಕ್ಷ್ಣ ಪ್ರಭೆ ; ಸಹಿಸಲಾಗದ, ಎಡೆಬಿಡದ, ಬಿಸಿಲು ; ಝಳ ; ಥಳುಕು ಹೊಳಪು. ನೆಟ್ಟ ನೋಟ ; ದುರು ದುರು ನೋಟ ; ಉಗ್ರ ದೃಷ್ಟಿ. **Gláringly** (ಕ್ರಿ. ವಿ.) ; **Gláringness** (ನಾ.) ; **Gláry** (ಗು.) ಕಣ್ಣು ಕುಕ್ಕುವ (ಬೆಳಕುಳ್ಳ) ; ಕಣ್ಣು ಕೋರೈಸುವ.

Glass ಗ್ಲಾಸ್ (ನಾ.) ಮರಳನ್ನು ಸೋಡ ಅಥವಾ ಪೊಟಾಷ್ ಅಥವಾ ಇವೆರಡರೊಡನೆಯೂ, ಮತ್ತು ಇತರ ಕೆಲವು ಪದಾರ್ಥಗಳೊಡನೆಯೂ ಬೆರಸಿ, ಶಾಖದಿಂದ ಕರಗಿಸಿ ತಯಾರಿಸಿದ, ಸಾ., ಪಾರದರ್ಶಕವಾಗಿಯೂ ಹೊಳಪುಳ್ಳದ್ದಾಗಿಯೂ ಕಠಿನವಾಗಿಯೂ ಭಿದುರವಾಗಿಯೂ ಇರುವ, ಪದಾರ್ಥ : ಗಾಜು ; ಇದೇ ಗುಣಗಳುಳ್ಳ ಅಥವಾ ಇದೇ ಸಂಯೋಜನೆಯುಳ್ಳ ಪದಾರ್ಥ : ಗಾಜಿನಂಥ ಪದಾರ್ಥ [Crown, Flint, Plate, Water, -g. (ಆಯಾ ಪದಗಳನ್ನು ನೋಡಿ). Cut-g. ('ಫ್ಲಿಂಟ್' ಗಾಜಿಗೆ ಚರಕಿಯಿಂದ ಆಕಾರ ಕೊಟ್ಟು, ಅಥವಾ ಮಸೆದು, ಅಥವಾ ಅಂದಗೊಳಿಸಿ, ತಯಾರಿಸಿದ) ಚರಕಿಗಾಜು. Ground-g. (ಉಜ್ಜಿ, ದ್ರಾವಕದಿಂದ ಮೇಲ್ಮೈ ಸವೆಯಿಸಿ, ಅಥವಾ ಮರಳಿನ ಹೊಡೆತಕ್ಕೆ ಕೊಟ್ಟು, ಗಾಜಿನ ಮೈನುಣುಪನ್ನು ಕಳೆದು ಪಾರದರ್ಶಕತೆ ಹೋಗುವಂತೆ ಮಾಡಿದ) ಉಜ್ಜಿದ ಗಾಜು. G. of antimony 'ಆ್ಯಂಟಿಮನಿ' ಗಾಜು (ಆ್ಯಂಟಿಮನಿ, ಆಮ್ಲಜನಕ, ಗಂಧಕ — ಇವುಗಳ ಸಂಯುಕ್ತ)]. ಗಾಜಿನಿಂದ ಮಾಡಿದ ಪದಾರ್ಥಗಳು : ಗಾಜು ಪಾತ್ರೆಗಳು, ಒಡವೆಗಳು, ಕಿಟಕಿಗಳು, ಸಸ್ಯರಕ್ಷಣ ಕೋಣೆಗಳು ; ಗಾಜಿನ (ಕುಡಿಯುವ) ಪಾತ್ರೆ ; ಗಾಜಿನ ರೋಟ, ಬಟ್ಟಲು ; ಒಂದು ಗಾಜುಪಾತ್ರೆಯೊಳಗಿನ ದ್ರವದ ಮೊತ್ತ ; ಮದ್ಯ (A friendly g. ಸ್ನೇಹಭಾವದ ಕುಡಿತ. Has had a g. too much ಕುಡಿದು ಸ್ವಲ್ಪಮಟ್ಟಿಗೆ ಅಮಲೇರಿದೆ). ಮರಳು ಬಟ್ಟಲು (ಗಡಿಯಾರ) (= Sand-g.); ಗಂಟೆ (ತೋರಿಸುವ) ಬಟ್ಟಲು (= Hour-g.). ಗಾಡಿಯ ಕಿಟಕಿ ; (ಚಿತ್ರ)ಪಟದಮೇಲೆ ಹಾಕುವ ಗಾಜಿನ ಹಲಗೆ, ಕನ್ನಡಿ ; (ಗಿಡಗಳಮೇಲೆ ಮುಚ್ಚುವ) ಗಾಜುಪೆಟ್ಟಿಗೆ. ದರ್ಪಣ. ಕಣ್ಣುಗನ್ನಡಿ. (ಬ. ವ. ದಲ್ಲಿ) ಕನ್ನಡಕ. 'ಲೆನ್ಸು'. (ಕಿಸೆಯ, ಕೈ) ಗಡಿಯಾರದ (ಮುಖಕ್ಕೆ ಹಾಕಿರುವ) ಉಬ್ಬುಗಾಜು. ಅನ್ವೇಷಕ ದುರ್ಬೀನು ; ನಾಟಕದ ದುರ್ಬೀನು ; ದೂರದರ್ಶಕ ; ಸೂಕ್ಷ್ಮದರ್ಶಕ ; ವಾಯುಭಾರ ಮಾಪಕ ; ವಾಯುಸ್ಥಿತಿ ಸೂಚಕ ಗಾಜುಪಾತ್ರೆ. **G.-blower** (ಕರಗಿದ ಗಾಜನ್ನು ಕೊಳವಿಯ ಕೊನೆಯಲ್ಲಿದ್ದಿಕೊಂಡು) ಊದಿ ಆಕಾರ ಕೊಡುವವನು ; ಗಾಜೂದುವವನು. **G. case** (ವಸ್ತುಗಳನ್ನು ಪ್ರದರ್ಶಿಸುವುದಕ್ಕಾಗಲಿ ಜೋಪಾನವಾಗಿ ಇಡುವುದಕ್ಕಾಗಲಿ ಮಾಡಿದ) ಗಾಜಿನ ಬೀರು, ಕೋಶ. **G.-cloth** ಗಾಜೊರಸುವ ಬಟ್ಟೆ ; ಗಾಜಿನ ಪುಡಿ ಅಂಟಿಸಿದ ಬಟ್ಟೆ ; ಗಾಜುಪುಡಿ ಬಟ್ಟೆ. **G. cloth** ಸೂಕ್ಷ್ಮ ನೆಯ್ಗೆಯ ಗಾಜಿನ ದಾರದ ಬಟ್ಟೆ. **G.-cutter** ಗಾಜು ಕೊಯ್ಯುವವನು, — ವದು ; ಗಾಜುಕೊಯ್ಯುವ ಆಯುಧ. **G.-culture** ಗಾಜಿನ ಆವರಣದಲ್ಲಿ ಸಸ್ಯಗಳನ್ನು ಬೆಳಸುವ ವ್ಯವಸಾಯ. **G.-dust** (ಮೆರುಗಿಡುವುದಕ್ಕಾಗಿ ಉಪಯೋಗಿಸುವ) ಗಾಜುಪುಡಿ. **G. eye** ಗಾಜಿನಲ್ಲಿ ಮಾಡಿದ ಕೃತಕ ಕಣ್ಣು ; ಗಾಜಿನ ಕಣ್ಣು ; ಕುದುರೆಗಳಿಗೆ ಬರುವ ಒಂದು ತೆರದ ಕುರುಡು. **G.-house** ಗಾಜುತಯಾರಿಕೆಯ ಮನೆ ; ಗಾಜು ಕಾರ್ಖಾನೆ ; ಸಸ್ಯಗಳನ್ನು ಬೆಳಸುವ ಗಾಜುಮನೆ ; (ಛಾಯಾ ಚಿತ್ರ ಕಾರ್ಯಕ್ಕೆ ಉಪಯೋಗಿಸುವ) ಗಾಜುಚಾವಣಿಯ ಮನೆ. **G.-paper** ಗಾಜು ದೂಳು ಅಂಟಿಸಿದ ಕಾಗದ ; ಗಾಜುಕಾಗದ ; ಹಂಸಪಟ್ಟೆ. **G.-ware** ಗಾಜಿನ ಸಾಮಾನುಗಳು. **Glásswort** ಗಾಜು ತಯಾರಿಕೆಯಲ್ಲಿ ಹಿಂದೆ ಉಪಯೋಗಿಸುತ್ತಿದ್ದ ಸಸ್ಯಜಾತಿ. **Glássful** (ನಾ.) (ಗಾಜು) ಬಟ್ಟಲು ತುಂಬು. **Glássless** (ಗು.) ; **Glássy** (ಗು.) ಗಾಜಿನ ಗುಣಗಳುಳ್ಳ ; ಗಾಜಿನಂಥ. (ಕಣ್ಣು, ಮೊ.) ಕಾಂತಿಯಿಲ್ಲದ, ತೇಜಸ್ಸಿಲ್ಲದ, ನಿಸ್ತೇಜ, ಚಲಿಸದ, ಸ್ಥಿರ, ಅಚಲ. (ನೀರು) (ಗಾಜಿನಂತೆ) ಹೊಳಪುಳ್ಳದ್ದೂ ಪಾರದರ್ಶಕವೂ ಸಮಮೈಯುಳ್ಳದ್ದೂ ಆದ ; ನಿಶ್ಚಲವೂ ಪ್ರಶಾಂತವೂ ಆದ (G. calm, g. surface). **Glássily** (ಕ್ರಿ. ವಿ.) ; **Glássiness** (ನಾ.)

Glass (ಕ್ರಿ. ಸಕ.) (ವಿರ. ಪ್ರ.) ಗಾಜನ್ನು ತೊಡಿಸು, ಅಳವಡಿಸು ; ಗಾಜು ಹಾಕು ; (ಗಾಜಿನಂತೆ) ನುಣುಪು ಮೈ ಕೊಡು. (ವಿರ. ಪ್ರ.) ಗಾಜಿನ ಆವರಣ ಕೊಡು. (ವಿರ. ಪ್ರ.) (ಕಣ್ಣನ್ನು) ಗಾಜಿನಂತೆ ಮಾಡು, ಕಾಂತಿಗೆಡಿಸು, ನಿಸ್ತೇಜ ಮಾಡು. (ಹಲವು ವೇಳೆ ಆತ್ಮಾರ್ಥದಲ್ಲಿ) ಮಾರ್ಪೊಳೆ ; ಪ್ರತಿಬಿಂಬಿಸು ; ಪ್ರತಿಫಲನವಾಗು (Trees g. themselves in the lake ಮರಗಳು ಸರೋವರದಲ್ಲಿ ಪ್ರತಿಬಿಂಬಿಸುತ್ತವೆ). **Glássing-jack** ಚರ್ಮ ನಯಮಾಡುವ ಯಂತ್ರ.

Glaze ಗ್ಲೇಸ್ (ಕ್ರಿ., ನಾ.) (ಕಿಟಕಿ, ಚಿತ್ರಪಟ, ಮೊ. ಗಳಿಗೆ) ಗಾಜು ಹಾಕು. (ಕಟ್ಟಡಕ್ಕೆ) ಗಾಜಿನ ಕಿಟಕಿ ಹವಣಿಸು. (G. in ಗಾಜಿನಿಂದ ಸುತ್ತಲೂ ಆವರಿಸು). (ಕುಡಿಕೆ, ಮೊ. ದ ಕುಂಬಾರನ ಸಾಮಾನುಗಳಿಗೆ ಗಾಜಾಗುವ ಪದಾರ್ಥವನ್ನು ಬಳಿದು ಶಾಖದಿಂದ ಕರಗಿಸಿ) ಗಾಜಿನ ಹೊರಮೈ ಬರುವಂತೆ ಮಾಡು ; ಗಾಜುಮೈ ಕೊಡು. [(ನಾ.) ಹೀಗೆ ಗಾಜಾಗುವ ಪದಾರ್ಥ ; ಹೀಗಾದ ಗಾಜಿನಂಥ ನುಣುಪು ಮೈ]. (ಕುಂಬಾರನ ಸಾಮಾನುಗಳಿಗೆ) ಇದೇ ರೀತಿಯಲ್ಲಿ (ಬಣ್ಣ) ಕಟ್ಟಿಸು. (ಬಟ್ಟೆ, ತೊಗಲು, ಹಿಟ್ಟಿನಲ್ಲಿ ಮಾಡಿದ ಭಕ್ಷ್ಯಗಳು, ಮೊ. ಗಳಿಗೆ) ನಯವಾದ ಹೊಳಪಿನ ಮೈ ಕೊಡು ; ಹೊಳಪು ಕೊಡು. [(ನಾ.) ಹೀಗೆ ಕೊಟ್ಟ ಲೇಪ, ಆದ ಹೊರಮೈ]. (ಕಣ್ಣು) ಪೊರೆ ಮುಚ್ಚು. [(ನಾ.) ಪೊರೆಮುಚ್ಚಿದ ನೋಟ]. (ಬಣ್ಣಹಾಕಿದ ಮೇಲ್ಮೈಗೆ) ವರ್ಣಸಾಮ್ಯ ಮಾಡಲು ಬೇರೆ ಪಾರದರ್ಶಕ ವರ್ಣವನ್ನು ತೆಳ್ಳಗೆ ಹಚ್ಚು [(ನಾ.) ಹೀಗೆ ಹಚ್ಚಿದ ಪೊರೆ]. (ಉಜ್ಜುವುದು, ಮೊ. ಕಾರ್ಯಗಳಿಂದ) ಗಾಜಿನ ಮೇಲ್ಮೈಯನ್ನು ಕೊಡು. [(ನಾ.) ಹೀಗೆ ಕೊಟ್ಟದ್ದರಿಂದಾದ ಹೊಳಪು]. (ಮು., ಕಣ್ಣುಗಳು) ಗಾಜಿನಂತಾಗು, ಗಂಜಿಗಟ್ಟಿಕೊಳ್ಳು, ನಿಸ್ತೇಜವಾಗು. **Glázer** (ನಾ.) ಹೊಳಪು, ಮೆರುಗು, — ಕೊಡುವವನು, ಮಾಡುವವನು; ಮೆರುಗು ಮಾಡುವ ಸಲಕರಣೆ. **Glázy** (ಗು.) ಗಾಜಿನಂತಿರುವ ; ಗಾಜಿನಂಥ ; ಗಾಜುಮಾಡಿದ ಮೈಯಂತೆ ಕಾಣುವ. **Glázier** ಗ್ಲೇಷರ್, ಗ್ಲೇಸ್ಸಿಯರ್ (ನಾ.) (ಕಿಟಕಿ, ಮೊ. ಗಳಿಗೆ) ಗಾಜು, ಕನ್ನಡಿ, ಮೊ. ವನ್ನು ಹಾಕುವ ಕೆಲಸದವನು ; ಗಾಜುಗಾರ [Is your father a g.? (ಹಾಸ್ಯವಾಗಿ, ದೃಷ್ಟಿಗೆ ಅಡ್ಡವಾಗಿ ನಿಂತವನನ್ನು ಕುರಿತು) ನಿನ್ನ ಮೈ ಗಾಜಲ್ಲ]. **Gláziery** (ನಾ.) ಗಾಜುಗಾರನ ಕೆಲಸ. **Glázing** ಗ್ಲೇಸಿಂಗ್ (ನಾ.) (ಕ್ರಿಯಾರ್ಥಗಳಲ್ಲ). ಕಿಟಕಿಗಳು. ಗಾಜುಮೈ ಕೊಡುವುದಕ್ಕೆ ಉಪಯೋಗಿಸುವ ಪದಾರ್ಥ.

Glaswégian ಗ್ಲಾಸ್‌ವೀಜನ್, — ಜಿಯನ್ (ಗು., ನಾ.) ಗ್ಲಾಸ್ಗೊ ಪಟ್ಟಣದ(ವನು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Glaúber's salt(s) ಗ್ಲಾ(ಗ್ಲೌ)ಬರ್ಸ್ ಸಾಲ್ಟ್(ಸ್) ಸೋಡಿಯಂ ಸಲ್ಫೇಟ್ ಲವಣ. (Glauber ಎಂಬ ಜರ್ಮನ್ ರಾಸಾಯನಿಕನ ಹೆಸರಿನಿಂದ)

Glaucóma ಗ್ಲಾಕೋಮ (ನಾ.) ಕಣ್ಣುಗುಡ್ಡೆಯಲ್ಲಿ ಬಿಗಿತ ಹುಟ್ಟಿ ಕ್ರಮೇಣ ದೃಷ್ಟಿ ನಾಶವಾಗುವ ಒಂದು ತೆರದ ಕಣ್ಣು ರೋಗ: 'ಗ್ಲಾಕೋಮ'. **Glaucómatous** (ಗು.)

Glaúcous ಗ್ಲಾಕಸ್ (ಗು.) ಮಾಸಲು ಬೂದು ಹಸುರಿನ ಅಥವಾ ನೀಲಿಯ. (ಸ. ವಿ.) (ಚಪ್ಪರದ್ರಾಕ್ಷಿಯ ಹಣ್ಣಿನಮೇಲಿನಂಥ) ಹುಡಿ ಮುಚ್ಚಿದ.

Glaze, Glázier, etc. **Glass** ನೋಡಿ.

Gleam ಗ್ಲೀಮ್ (ನಾ., ಕ್ರಿ. ಅಕ.) ನುಣ್ಚೆಳಕು; ಕ್ಷಣಿಕ ಪ್ರಭೆ; ಥಳಥಳ; ಮಿನುಗು (ರೂಪ. ಸಹ) (An occasional g. of humour ಎಲ್ಲೋ ಒಮ್ಮೊಮ್ಮೆ ಮಿನುಗುವ ಹಾಸ್ಯ ಕಳೆ, ರಸ. Not a g. of hope ಆಶೆಯ ಒಂದು ಕಿರಣವೂ ಇಲ್ಲ). (ಕ್ರಿ.) ಮಿನುಗು; ಮಿನುಗುಟ್ಟು; ತಗ್ಗಿದ ಪ್ರಭೆಯ, ಅಥವಾ ಬಿಟ್ಟು ಬಿಟ್ಟು ತೋರುವ, ಹೊಳಪಿನಿಂದ ಹೊಳೆ. **Gleámy** (ಗು.)

Glean ಗ್ಲೀನ್ (ಕ್ರಿ.) ಬೆಳೆ ಕೊಯ್ದವರು ಬಿಟ್ಟಿರುವ ಧಾನ್ಯದ ತೆನೆಗಳನ್ನು ಸಂಗ್ರಹಿಸು; ಹಕ್ಕಲಾಯಿ; (ಹೊಲ, ಗದ್ದೆ, ಮೊ. ಗಳಲ್ಲಿ) ಹೀಗೆ ಉಳಿಕೆಯನ್ನು ಆಯ್ದುಬಿಡು. (ವಿಷಯ, ಸುದ್ದಿ, ಮೊ. ವನ್ನು) ಸ್ವಲ್ಪ ಸ್ವಲ್ಪವಾಗಿ ಸಂಗ್ರಹಿಸು, ಕೂಡಹಾಕು, ಶೇಖರಿಸು. **Gleáner** (ನಾ.); **Gleáning** (ನಾ.) ಹಕ್ಕಲು (ಆಯುವುದು). (ಬ. ವ. ದಲ್ಲಿ) ಸಂಗ್ರಹ(ಣ)

Glebe ಗ್ಲೀಬ್ (ನಾ.) (ಕಾವ್ಯ) ಭೂಮಿ; ನೆಲ; ಹೊಲ; ಜಮೀನು. ಪಾದ್ರಿಯ ಧರ್ಮಾದಾಯಕ್ಕೆ ಸೇರಿದ ನೆಲ; ಪಾದ್ರಿಯ ಮಾನ್ಯ.

Glee ಗ್ಲೀ (ನಾ.) ಒಂದೊಂದು ಸ್ವರಭಾಗಕ್ಕೆ ಒಬ್ಬೊಬ್ಬರಂತೆ ಮೂರು ಅಥವಾ ಹೆಚ್ಚು ಮಂದಿ ಹಾಡಬಹುದಾದ, ಗಾಂಭೀರ್ಯದ ಅಥವಾ ಉಲ್ಲಾಸದ ಪದಸರಣಿಗೂಡಿದ, ಹಲವು ವೇಳೆ ವ್ಯತ್ಯಾಸ ಗತಿಗಳುಳ್ಳ, ಸಾ., ಪಕ್ಕವಾದ್ಯಗಳಿಲ್ಲದೆ ಹಾಡುವುದಾದ, ಸಂಗೀತ ಕೃತಿ. ಹರ್ಷ; ಸಂತೋಷ; ಹಿಗ್ಗು; (ಹೊರಕ್ಕೆ ತೋರುವ) ಉತ್ಸಾಹ, ಉಲ್ಲಾಸ; ಖುಷಿ. **Gleéful** (ಗು.); **Gleéfully** (ಕ್ರಿ. ವಿ.); **Gleésome** (ಗು.) = Gleeful.

Gleet ಗ್ಲೀಟ್ (ನಾ.) (ವಿರ. ಪ್ರ.) (ಹುಣ್ಣು, ಗಾಯ, ಮೊ. ಗಳಿಂದ ಹೊರಸೂಸುವ ತೆಳುವಾದ) ರೋಗ ದ್ರವ, ರೋಗ ಸ್ರಾವ; ಮೂತ್ರನಾಳದಿಂದ ಹೊರಸೂಸುವ —; ಮೇಹ ಸ್ರಾವ. **Gleéty** (ಗು.)

Glen ಗ್ಲೆನ್ (ನಾ.) ಇಕ್ಕಟ್ಟಾದ ಕಣಿವೆ.

Gléndoveer ಗ್ಲೆಂಡೊವಿಯರ್ (ನಾ.) (ಹಿಂದೂ ಪುರಾಣಗಳಲ್ಲಿ ಬರುವುದಾಗಿ Southey ಎಂಬ ಇಂಗ್ಲಿಷ್ ಕವಿ ಹೇಳುವ) ಸುಂದರ ಯಕ್ಷ, ಗಂಧರ್ವ. [ಪ್ರಾಯಶಃ, (ಸಂಸ್ಕೃತ) ಗಂಧರ್ವ]

Glénoid ಗ್ಲೀನಾಯ್ಡ್ (ಗು.) (ಅಂ. ರ. ಶಾ.) G. cavity, fossa, surface (ಮು., ಭುಜದ ಚಪ್ಪಟೆಯ ಎಲುಬಿನಲ್ಲೂ, ಕಪಾಳದ ಎಲುಬಿನಲ್ಲೂ) ಕೀಲು ಏರ್ಪಡುವುದಕ್ಕಾಗಿ ಮತ್ತೊಂದು ಮೂಳೆಯ ತುದಿಯನ್ನು ಒಳಕೊಳ್ಳುವ ಆಳವಿಲ್ಲದ ಕುಳಿ; ಕೀಲುಕುಳಿ.

Glib ಗ್ಲಿಬ್ (ಗು., ಕ್ರಿ. ವಿ.) (ಮೇಲ್ಮೈ, ಮೊ.) ನುಣುಪಾದ; ನಯವಾದ; ಜಾರಿಕೆಯ; (ಚಲನೆಗಳನ್ನು) ತಡೆಯದ; (ಚಲನೆ, ಮೊ.) ತಡೆಯಿಲ್ಲದ; ಸರಾಗವಾದ; ಸುಲಭವಾದ (ವಿರ. ಪ್ರ.). (ಭಾಷಣ, ಭಾಷಣಕಾರ, ಮೊ.) ವಾಗ್ಸ್ಫುರಿಯ; ನಿರರ್ಗಳ; ತಡಬಡೆ, ಅಡೆತಡೆ, ಇಲ್ಲದ; ಪರ್ಯಾಲೋಚನೆಯಿಲ್ಲದ; (ತಿರುಳಿಲ್ಲದೆ, ಯಥಾರ್ಥತೆಯಿಲ್ಲದೆ) ಬರಿ ವಾಗಾಡಂಬರದ. (ಕ್ರಿ. ವಿ.) ಮಾತಿನಲ್ಲಿ ತಡಬಡೆಯಿಲ್ಲದೆ (ವಿರ. ಪ್ರ.). **Glíbly** (ಕ್ರಿ. ವಿ.); **Glíbness** (ನಾ.)

Glide ಗ್ಲೈಡ್ (ಕ್ರಿ., ನಾ.) (ದ್ರವ, ಹಡಗು, ಪಕ್ಷಿ, ಗಾಡಿ, ಹಾವು, ಮೊ. ಗಳ ವಿಷಯದಲ್ಲಿ) ನಿಲ್ಲದೆ ಮೃದುಚಲನದಿಂದ ಮುಂದುವರಿ, ಸರಿದು ಹೋಗು; (ಸದ್ದಿಲ್ಲದೆ, ಪ್ರಯತ್ನವಿಲ್ಲದೆ, ಕಷ್ಟವಿಲ್ಲದೆ) ಸರಿ, ಜಾರು; ಜಾರಿಕೊಂಡು, ತೇಲಿಕೊಂಡು, —ಹೋಗು; = Volplane; (ಕಾಲ, ಮೊ.) ಮೆಲ್ಲಗೆ, ತಿಳಿಯದಂತೆ, ಹರಿದುಹೋಗು; ಜಗುಳಿಹೋಗು; ಕ್ರಮೇಣ ಸರಿದುಹೋಗು; ತಿಳಿಯದಂತೆ (ಒಂದರೊಳಕ್ಕೆ) ಲೀನವಾಗಿ ಹೋಗು; ಗೋಚರವಾಗದಂತೆ ಧಾಯಾಂತರ ಹೊಂದು (*Into* ಉಪ. ದೊಡನೆ); — ಹೊಂದುವಂತೆ ಮಾಡು. (ನಾ.) ಜಾರುವುದು; ಜಾರಿ, ಸರಿದು, ಹೋಗುವುದು. (ಸಂಗೀತ) ಒಂದು ಸ್ವರದಿಂದ ಮತ್ತೊಂದು ಸ್ವರಕ್ಕೆ ಹೋಗುವಾಗ ಶಾರೀರವನ್ನು, ವಾದ್ಯವನ್ನು, ನಿಲ್ಲಿಸದೆ ಮಾಡಿದ ಧ್ವನಿಪರಂಪರೆ; ಸ್ವರಜಾರು. (ಧ್ವನಿ ಶಾಸ್ತ್ರ) ಒಂದು ಧ್ವನಿಯಿಂದ ಮತ್ತೊಂದು ಧ್ವನಿಗೆ ಹೋಗುವಾಗ, ಧ್ವನ್ಯಂಗಗಳಲ್ಲಿ ಮಾಡುವ ಕ್ರಮೇಣವಾದ ವ್ಯತ್ಯಾಸ; ಧ್ವನಿಜಾರು. **Glíder** (ನಾ.) ಜಾರಿಹೋಗುವವನು; — ವುದು. ಎಂಜಿನಿಲ್ಲದ ಫಲಕ ವಿಮಾನ. **Glídingly** (ಕ್ರಿ. ವಿ.)

Glim ಗ್ಲಿಮ್ (ನಾ.) (ಅಸಂ.) ಬೆಳಕು; ದೀಪ; ಮೋಂಬತ್ತಿ; ರಾಂದ್ರ.

Glímmer ಗ್ಲಿಮರ್ (ಕ್ರಿ. ಅಕ., ನಾ.) ಮಬ್ಬಾಗಿ, ಮಸುಕಾಗಿ, ಮಿನುಗು; ಬಿಟ್ಟು ಬಿಟ್ಟು ಮಿನುಗು. (ನಾ.; Also, **Glímmering**) ನಸು ಬೆಳಕು; ಚಂಚಲ ಪ್ರಭೆ; ಮಬ್ಬು ಮಬ್ಬಾದ ಆಶಾ ಕಿರಣ, ಮೊ.; (ಸ್ಥೂಲ) ಸೂಚನೆ. ನಸು ನೋಟ; ಅರೆ ನೋಟ; ಅಸ್ಪಷ್ಟವಾದ ತೋರ್ಕೆ.

Glimpse ಗ್ಲಿಂಪ್ಸ್ (ನಾ., ಕ್ರಿ.) ಮಬ್ಬೂ ಕ್ಷಣಿಕವೂ ಆದ ತೋರ್ಕೆ; (ಒಂದರ) ಕ್ಷಣಿಕ, ಅಪೂರ್ಣ, —ದರ್ಶನ; ಮಿನುಗು; ನಸು ನೋಟ; ಕ್ಷಣ ದರ್ಶನ (The glimpses of the moon ರಾತ್ರಿ ಕಾಣುವ ಭೂಮಿಯ ದೃಶ್ಯ. ಪ್ರಾಪಂಚಿಕ ವ್ಯವಹಾರಗಳು). (ಕ್ರಿ.) ಅಸ್ಪಷ್ಟವಾಗಿ, ಮಬ್ಬಾಗಿ, ಅಪೂರ್ಣವಾಗಿ, ಕ್ಷಣ ಕಾಲ ಮಾತ್ರ,— ಕಾಣು, ನೋಡು. (ಕಾವ್ಯ) ನಸು ತೋರು; ಮಬ್ಬಾಗಿ ಕಾಣು; (ಮನಸ್ಸಿಗೆ) ಹೊಳೆ, ಸ್ಫುರಿಸು.

Glint ಗ್ಲಿಂಟ್ (ಕ್ರಿ., ನಾ.) ಥಟ್ಟನೆ ಹೊಳೆ; ಮಿರುಗು; ಥಳಥಳಿಸು; ಮಿಂಚು; (ಬೆಳಕನ್ನು) ಪ್ರತಿಫಲಿಸು. (ನಾ.) ಹೊಳಪು; ಮಿಂಚು.

Glissáde ಗ್ಲಿಸಾ(ಸೇ)ಡ್ (ನಾ., ಕ್ರಿ. ಅಕ.) (ಬೆಟ್ಟ ಇಳಿಯುವುದರಲ್ಲಿ, ನೀರ್ಗಲ್ಲಿನ ಅಥವಾ ಘನಹಿಮದ) ಕಡಿದಾದ ಇಳಿಜಾರಿನಲ್ಲಿ (ನೀರ್ಗಲ್ಲ ಕೊಡಲ, ಮೊ. ಗಳ ಸಹಾಯದಿಂದ) ಕಾಲೂರಿ ನಿಂತು ಜಾರು (ವುದು)

Glísten ಗ್ಲಿಸ'ನ್ (ಕ್ರಿ. ಅಕ., ನಾ.) ಬಿಟ್ಟು ಬಿಟ್ಟು ಹೊಳೆ; ಥಳಥಳಿಸು; ಮಿನುಗು; ಮಿಂಚು; ತೊಳಗು; ಸ್ಫುರಿಸು. (ನಾ.) ಮಿಂಚು; ಹೊಳಪು; ಥಳಥಳಿಕೆ; ಚಂಚಲ ಪ್ರಭೆ.

Glíster ಗ್ಲಿಸ್ಟರ್ (ಕ್ರಿ. ಅಕ., ನಾ.) (ಪ್ರಾಚೀ. ಪ್ರ.) ಮಿರುಗು; ಥಳಥಳಿಸು; ಹೊಳೆ. (ನಾ.) ಹೊಳಪು; ಥಳಥಳಿಕೆ.

Glítter ಗ್ಲಿಟರ್ (ಕ್ರಿ. ಅಕ., ನಾ.) ಪ್ರಕಾಶಮಾನವಾದ ಚಂಚಲ ಪ್ರಭೆಯಿಂದ ಹೊಳೆ; ಥಳಥಳಿಸು; ತೊಳಗಿ ಬೆಳಗು; ಮಿಂಚು; ಮಿರುಗು; (ಆಭರಣಾದಿಗಳಿಂದ) ಝಗಝಗಿಸು; ಬೆಡಗು, ವೈಭವ, — ತೋರು. (ನಾ.) ಹೊಳಪು; ಪ್ರಕಾಶ; ಥಳಥಳಿಕೆ.

Gloáming ಗ್ಲೋಮಿಂಗ್ (ನಾ.) ಬೈಗಿನ ಬೆಳಕು; ಪ್ರದೋಷ; ಮುಚ್ಚಂಜೆ.

Gloat ಗ್ಲೋಟ್ (ಕ್ರಿ. ಅಕ.) (ಕಾಮಾಸಕ್ತಿಯಿಂದ, ಅತ್ಯಾಸೆಯಿಂದ, ದ್ವೇಷ ಬುದ್ಧಿಯಿಂದ, — ಕಣ್ಣು, ಮನಸ್ಸು) ತೃಪ್ತಿ, ಸಂತೋಷ, —ಪಡು; ಹಿಗ್ಗು; ಉಬ್ಬು [*Up(on), over* ಉಪ. ದೊಡನೆ]. **Gloátingly** (ಕ್ರಿ. ವಿ.)

Globe ಗ್ಲೋಬ್ (ನಾ.) ಗೋಳಾಕಾರದ ವಸ್ತು; ಗೋಳ; ಮಂಡಲ; ಗುಂಡು; ಚೆಂಡು. ಭೂಮಂಡಲ; ಗ್ರಹ; ನಕ್ಷತ್ರ; ಸೂರ್ಯ. ಗೋಳಾಕಾರದ ಭೂಪಟ (= Terrestrial g. ಭೂಗೋಳ);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಕ್ಷತ್ರರಾಶಿಗಳ ಗೋಳಾಕಾರದ ಪಟ: ಖಗೋಳ ಪಟ (=Celestial g. ಖಗೋಳ ; ರಾಶಿ ಮಂಡಲ). [Use of the globes (ಪ್ರಾಚೀ. ಪ್ರ.) ಗೋಳಾಕೃತಿಯ ಪಟಗಳಿಂದ ಭೂಗೋಳ, ಖಗೋಳ, ಶಾಸ್ತ್ರಗಳನ್ನು ಕಲಿಸುವುದು] ; ಪ್ರಭುತ್ವಚಿಹ್ನೆಯಾದ ಚಿನ್ನದ ಗೋಳ ; (ಅಂ. ರ. ಶಾ.) ಕಣ್ಣುಗುಡ್ಡೆ. ಸರಿಸುಮಾರು ಗುಂಡಾಗಿರುವ ಗಾಜು ಪಾತ್ರೆ, ಬುರುಡೆ (ಮು., ದೀಪದ ಗೋಳ, ಮೀನುಸಾಕುವ ಗಾಜು ಗೋಳಪಾತ್ರೆ). **G.-fish** ಉಸಿರಿನಿಂದ ಗುಂಡಾಗಿ ಊದಿಕೊಳ್ಳಬಲ್ಲ ಮೀನು : ಬುರುಡೆ ಮೀನು. **G.-flower** ಗುಂಡು ಹಳದಿ ಹೂವು ಬಿಡುವ ಸಸ್ಯಜಾತಿ. **G. lightning** = Fireball (Fire ನೋಡಿ). **G.-trotter, -tting** ನೋಟ ನೋಡುವುದಕ್ಕಾಗಿ ದೇಶಾಂತರಗಳಲ್ಲಿ ಆತುರಾತುರವಾಗಿ ಸಂಚಾರಮಾಡುವ ಪ್ರಯಾಣಿಕ ; —ಸಂಚಾರ ಮಾಡುವುದು; ಲೋಕ ಸಂಚಾರಿ; ಲೋಕಸಂಚಾರ. **Glóboid** (ಗು., ನಾ.) ಸ್ವಲ್ಪ ಮಟ್ಟಿಗೆ ಗೋಳಾಕಾರವಾಗಿರುವ ವಸ್ತು, ಆಕೃತಿ ; ಗೋಳಕಲ್ಪ. **Globóse** (ಗು.) ಗೋಳಾಕಾರದ ; (ಸರಿ ಸುಮಾರು) ಗುಂಡಗಿರುವ. **Globósity** — ಬಾ — (ನಾ.) ಗೋಳತ್ವ ; ಗುಂಡಗಿರುವುದು. **Glóbular** ಗ್ಲಾಬ್ಯುಲರ್ (ಗು.) ಗೋಳಾಕಾರದ; ಗುಂಡಗಿರುವ ; ಸಣ್ಣ ಸಣ್ಣ ಗೋಳಗಳಿಂದಾದ. **Glóbularly** (ಕ್ರಿ. ವಿ.) ; **Globulárity** — ಲ್ಯಾ — (ನಾ.) ; **Glóbule** ಗ್ಲಾಬ್ಯೂಲ್ (ನಾ.) ಸಣ್ಣ ಗೋಳ (ಉದಾ., ರಕ್ತ ಕಣ, ನೀರ ಹನಿ, ಗುಳಿಗೆ, ವೊ.)

Globe (ಕ್ರಿ.) ಗೋಳೀಕರಿಸು ; ಗೋಳಾಕಾರವಾಗು ; ಉಂಡೆ ಮಾಡು, —ಯಾಗು.

Glóbulin ಗ್ಲಾಬ್ಯುಲಿನ್ (ನಾ.) ರಕ್ತದಲ್ಲಿಯ ಸಸಾರಜನಕ ಪದಾರ್ಥ ; ಕೆಂಪು ರಕ್ತಕಣಗಳಲ್ಲಿಯ haemoglobin ಎಂಬ ವರ್ಣದ್ರವ್ಯದ ಒಂದು ಘಟಕ.

Glochídiate ಗ್ಲೋಕಿಡಿಯೆಟ್ (ಗು.) (ಸ. ವಿ.) ತುದಿಯಲ್ಲಿ ಕೊಂಕಿದ ಮುಳ್ಳಿರುವ ; ತುದಿ ಕೊಂಕು ಮುಳ್ಳಿನ.

Glómerate ಗ್ಲಾಮೆರೆಟ್ (ಗು.) (ಸ. ವಿ., ಅಂ. ರ. ಶಾ.) ಒತ್ತುಗೊಂಚಲಾಗಿರುವ ; ಚೆಂಡುಗೂಡಿದ.

Glómerule ಗ್ಲಾಮೆರೂಲ್ (ನಾ.) ಹೂಗೊಂಚಲು ; ಗುದಿ ; ಸಣ್ಣ ಜೀವಕಣಗಳು, ಅಂಗಾಂಶಗಳು, ರಕ್ತ ನಾಳಗಳು, — ಇವೇ ವೊ. ಗಳ ಗೊಂಚಲು, ಗುಚ್ಛ.

Gloom ಗ್ಲೂಮ್ (ನಾ., ಕ್ರಿ.) ಕತ್ತಲೆ ; ಅಂಧಕಾರ ; ಮಬ್ಬು ; ಮಂಕು ; ಜೋಲು ಮೋರೆ ; ಖಿನ್ನತೆ ; ವಿಷಣ್ಣತೆ ; ಮ್ಲಾನತೆ ; ಗ್ಲಾನಿ ; ನಿರಾಶೆ. (ಕ್ರಿ.) ಮಂಕಾಗಿರು ; ಮಂಕುಗವಿದಿರು ; ಗಂಟುಮೋರೆಯಾಗಿರು ; ಹುಬ್ಬು ಗಂಟಿಕ್ಕು ; ಮುಖ ಸಿಂಡರಿಸು ; ವಿಷಣ್ಣನಾಗಿರು ; ಮ್ಲಾನವಾಗಿರು. (ಆಕಾಶ, ವೊ.) ಮೋಡ ಕವಿದಿರು; ಮಂಕು ಕವಿದಿರು; ಮಳೆ ಬರುವಂತಿರು. ಕಪ್ಪಾಗಿ, ಮಸುಕಾಗಿ, — ಕಾಣು ; ಮಂಕು ಕವಿಸು ; ಕತ್ತಲೆ ಕವಿಸು. **Gloómy** ಗ್ಲೂಮಿ (ಗು.) ಕತ್ತಲೆ ಕವಿದ ; ಬೆಳಕಿಲ್ಲದ ; ಮಬ್ಬು ಮುಸುಕಿದ ; ಮಂಕು ಕವಿದ ; ಗೋಳು ಕರೆವ ; ಕಳೆಯಿಲ್ಲದ ; ವಿಷಣ್ಣ ; ಖಿನ್ನ ; ನಿರಾಶೆ ಹುಟ್ಟಿಸುವ ; ಕುಗ್ಗಿಸುವ. **Gloómily** (ಕ್ರಿ. ವಿ.) ; **Gloóminess** (ನಾ.)

Glória (L) ಗ್ಲೋರಿಯ (ನಾ.) (ಕ್ರೈಸ್ತರಲ್ಲಿ) ದೇವರ ಸ್ತೋತ್ರ ಗೀತ (G. Patri, G. tibi, G. in excelsis ಎಂಬುದರ ಸಂಕ್ಷಿಪ್ತ). ಪ್ರಭಾ ಮಂಡಲ ; ದಿವ್ಯ ಪ್ರಭೆ (=**Glóriole**)

Glóriole. **Gloria** ನೋಡಿ.

Glórious, etc. **Glory** ನೋಡಿ.

Glóry ಗ್ಲೋರಿ (ನಾ.) ಅತಿಶಯ ಕೀರ್ತಿ ; ಗೌರವ ಖ್ಯಾತಿ ; ನಿರ್ಮಲ ಯಶಸ್ಸು ; ವೈಭವ ; ನೆಗಳ್ತೆ, ಪೊಗಳ್ತೆ ,ಪೆಂಪು (ಗ್ರಾಂ) ; ಆತ್ಮಶ್ಲಾಘನೆಯ ವಿಷಯ ; ಪ್ರತಾಪ ; ಮಾಹಾತ್ಮ್ಯ ; ಮಹಿಮೆ ; ವಿಶಿಷ್ಟ ಘನತೆ ; ಭೂಷಣ ; ಹೆಮ್ಮೆ ; ಪ್ರತಿಷ್ಠೆ. (ಪೂಜಾ ಸ್ತೋತ್ರ ಪ್ರಾರ್ಥನಾ ಸ್ತೋತ್ರಗಳಲ್ಲಿ) ಜಯ ಜಯ ! [G. be ! or G. ! (ಸಾಮಾನ್ಯ ಜನದ ಆಶ್ಚರ್ಯ, ಸಂತೋಷ, ಸೂಚಕ ಪದ) ಜಯ ಜಯ ! ಭಲೆ ! ಜೈ !]. ಉಜ್ಜ್ವಲವಾದ ಮಹಿಮೆ, ಠೀವಿ, ಪ್ರಭೆ, ಅಟ್ಟಹಾಸ, ಸೌಂದರ್ಯ, ವೈಭವ : ದಿವ್ಯ ಪ್ರಭೆ(ಯ ಜಾಜ್ವಲ್ಯ) ; (ಕಲ್ಪನೆಯ) ಅಲೌಕಿಕ ಸೌಂದರ್ಯ. ಸ್ವರ್ಗದ ಪರಮಾನಂದ ವೈಭವಗಳು [Go to g. ಸ್ವರ್ಗಸ್ಥನಾಗು ; ಸಾಯಿ. Send to g. (ಹಾಸ್ಯವಾಗಿ) ಕೊಲ್ಲು (ಸ್ವರ್ಗಕ್ಕೆ ಕಳುಹಿಸು)]. ವೈಭವಾತಿಶಯ ; ಜಯೋತ್ಕರ್ಷ, ವೊ. (Is in his g. ವೈಭವಾತಿಶಯದಲ್ಲಿದ್ದಾನೆ). (ದೇವತೆಯ ಅಥವಾ ಸಾಧು ಸಂತನ ತಲೆಯ ಅಥವಾ ದೇಹದ ಸುತ್ತಲೂ ಇರುವ) ಪ್ರಭಾ ಮಂಡಲ ; ದಿವ್ಯ ಪ್ರಭೆ. **G.-hole** (ಅಸಂ.) ಕೊಳಕು, — ಕೋಣೆ, ಸೆಳೆಖಾನೆ, ಪೆಟ್ಟಿಗೆ, ಪಾತ್ರೆ, ವೊ. **Glórify** (ಕ್ರಿ. ಸಕ.) ಘನತೆಗೊಳಿಸು ; ದಿವ್ಯಪದವಿ ಕೊಡು ; ದೇವತ್ವಕ್ಕೇರಿಸು. ವೈಭವಾನ್ವಿತ ಮಾಡು ; (ಸಾಮಾನ್ಯ ಅಥವಾ ಕೀಳು ವಸ್ತುವನ್ನು) ಮನೋರಂಜಕವಾಗಿ, ಆಕರ್ಷಕವಾಗಿ, ರಮ್ಯವಾಗಿ, ಸುಂದರವಾಗಿ, ತೋರ್ಪಡಿಸು (Nothing more than a glorified, or glorification of a, cottage ಹೊಗಳಿ ದೊಡ್ಡ ಹೆಸರು ಕೊಟ್ಟ, ಮಹತ್ತ್ವಾರೋಪಣೆಯ, ಗುಡಿಸಲಲ್ಲದೆ ಬೇರೆಯಲ್ಲ). ಮಹತ್ತ್ವ ಕೊಡು ; ಕೊಂಡಾಡು ; ಸ್ತೋತ್ರ ಮಾಡು ; ಹೊಗಳು ; ಕೀರ್ತಿಸು ; ಶ್ಲಾಘಿಸು. **Glorificátion** (ನಾ.) ; **Glórious** (ಗು.) ಮಹಿಮೆಯುಳ್ಳ ; ಮಹತ್ತ್ವವುಳ್ಳ ; ಪ್ರಭಾವವುಳ್ಳ ; ಪುಣ್ಯಶ್ಲೋಕ ; ಪ್ರಖ್ಯಾತ ; ಗೌರವಯುತ ; ಶೋಭಾಯಮಾನ ; ಅತ್ಯಂತ ಶ್ಲಾಘನೀಯ ; ಮಹಾ ವೈಭವಯುಕ್ತ ; ಅತ್ಯಂತ ಆಹ್ಲಾದಕರ [A g. view, day ದಿವ್ಯವಾದ ನೋಟ, ಮಹಾನಂದದ ದಿನ. (ಹಾಸ್ಯವಾಗಿ) G. fun ದಿವ್ಯವಾದ ತಮಾಷೆ. (ವ್ಯಂಗ್ಯವಾಗಿ) A g. muddle ಮಹತ್ತ್ವದ ಅವಿವೇಕ]. ಕುಡಿದು ಮಹಾನಂದದಲ್ಲಿರುವ. **Glóriously** (ಕ್ರಿ. ವಿ.) ; **Glóriousness** (ನಾ.)

Glory (ಕ್ರಿ. ಅಕ.) (ಒಂದು ವಿಷಯ, ಕಾರ್ಯ, ವೊ. ಕ್ಕೆ) ಉಬ್ಬು, ಹಿಗ್ಗು, ಆನಂದಪಡು, ಹೆಮ್ಮೆ ಪಡು, ಹೆಚ್ಚಳಪಡು. **Glóryingly** (ಕ್ರಿ. ವಿ.)

Gloss[1] ಗ್ಲಾಸ್ (ನಾ., ಕ್ರಿ.) ಗ್ರಂಥಪಾಠದಲ್ಲಿಯ ಶಬ್ದಾರ್ಥವನ್ನು ವಿವರಿಸುವುದಕ್ಕಾಗಿ ಪಂಕ್ತಿಗಳ ನಡುವೆಯೊ ಪಕ್ಕದಲ್ಲೊ ಸೇರಿಸಿದ ಪದ ; ಶಬ್ದಾರ್ಥನಿರೂಪಣೆ ; ಪಂಕ್ತಿಗಳ ಮಧ್ಯದಲ್ಲಿ ಸೇರಿಸಿದ ಅರ್ಥ, ಭಾಷಾಂತರ, ಟಿಪ್ಪಣಿಗಳು. ವೃತ್ತಿ ; ವಿವರಣೆ ; ಟಿಪ್ಪಣಿ. ಮತ್ತೊಬ್ಬನ ಮಾತುಗಳ ಅಪನಿರೂಪಣೆ, ಕುಟಿಲ ವಿವರಣೆ, ಅಪ ವ್ಯಾಖ್ಯಾನ, ತಿರಿಚಣೆ. (ಕ್ರಿ.) (ಗ್ರಂಥಪಾಠದಲ್ಲಿ) ಟಿಪ್ಪಣಿ, ವೊ. ನ್ನು ಸೇರಿಸು. ಟಿಪ್ಪಣಿ, ವ್ಯಾಖ್ಯಾನ, ವೊ. ನ್ನು ಬರೆ. (ಮು., ಖಂಡನಾತ್ಮಕವಾದ) ಟೀಕೆ ಮಾಡು ; ವಿಪರೀತಾರ್ಥ ಮಾಡು. ಅರ್ಥಾಂತರ ಕಲ್ಪನೆ ಮಾಡಿ ಹೇಳು ; ಸಮಾಧಾನ ತೋರುವಂತೆ ಹೇಳಿ ತೇಲಿಸಿಬಿಡು ; ಬೇರೆ ಬಣ್ಣ ಕೊಡು. **Glóssary** ಗ್ಲಾಸರಿ (ನಾ.) ಟಿಪ್ಪಣಿ, ವೊ. ಗಳ ಸಂಕಲನ, ಸಂಗ್ರಹ ; ಕ್ಲಿಷ್ಟ, ರೂಢಿಯಳಿದ, ಪ್ರಾಂತೀಯ, ಪಾರಿಭಾಷಿಕ, — ಪದಗಳ ವಿವರಣಪಟ್ಟಿ ; ಲಘು ಶಬ್ದಕೋಶ. **Glossárial** ಗ್ಲಾಸೇರಿಯಲ್ (ಗು.) ; **Glóssarist** ಗ್ಲಾಸರಿಸ್ಟ್ (ನಾ.) ವ್ಯಾಖ್ಯಾನಕಾರ ; ಭಾಷ್ಯಕಾರ ; ಸಂಗ್ರಹ ಕೋಶಕಾರ. **Glossátor** ಗ್ಲಾಸೇಟರ್ (ನಾ.) (ಕ್ರೈಸ್ತ ಧರ್ಮಶಾಸ್ತ್ರದ ಮತ್ತು ರೋಮನ್ ವ್ಯವಹಾರ ಧರ್ಮಶಾಸ್ತ್ರದ, ಮು., ಯೂರೋಪಿನ ಮಧ್ಯಕಾಲದ) ವ್ಯಾಖ್ಯಾನಕಾರ. **Glossógrapher** ಗ್ಲಾಸಾಗ್ರಫರ್ (ನಾ.) ವ್ಯಾಖ್ಯಾಕಾರ ; ಟೀಕಾಕಾರ. **Glossólogy** (ನಾ.) ಶಬ್ದಪ್ರಯೋಗ ಶಾಸ್ತ್ರ ; ಭಾಷಾ ಶಾಸ್ತ್ರ ; ಪದ ಶಾಸ್ತ್ರ.

Gloss[2] ಗ್ಲಾಸ್ (ನಾ., ಕ್ರಿ. ಸಕ.) ಹೊರ ಹೊಳಪು ; ನುಣುಪಿನ ಹೊಳಪು; ಥಳುಕು ; ಹುಸಿ ತೋರ್ಕೆ ; ಹೊರ ಚೆಲುವು ; ಬಾಹ್ಯ ಸೌಂದರ್ಯ. (ಕ್ರಿ.) ಥಳುಕು ಮಾಡು ; ಬಣ್ಣ ಕಟ್ಟು ; ಬಣ್ಣ ಕೊಡು (*Over* ಉಪ. ದೊಡನೆ ಸಹ). **Glóssy** (ಗು.) ; **Glóssily** (ಕ್ರಿ. ವಿ.) ; **Glóssiness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Glóssal ಗ್ಲಾಸಲ್ (ಗು.) (ಅಂ. ರ. ಶಾ.) ನಾಲಗೆಯ ; ಜಿಹ್ವೆಯ.

Glóssary, Glossátor, &c. Gloss[1] ನೋಡಿ.

Glóss(o)- ಗ್ಲಾಸೊ — (ಸ. ಪೂ. ಪ.) ನಾಲಗೆ — ; ಜಿಹ್ವಾ — . **Gloss(o)-epiglóttic** (ಗು.) ನಾಲಗೆಯ ಮತ್ತು ಉಪಜಿಹ್ವೆಯ. **Glossítis** ಗ್ಲಾಸೈಟಿಸ್ (ನಾ.) ನಾಲಗೆಯೂತ.

Glóttis ಗ್ಲಾಟಿಸ್ (ನಾ.) ಶ್ವಾಸನಾಳದ ಮೇಲ್ಭಾಗದಲ್ಲಿ ಮತ್ತು ಧ್ವನಿ ತಂತುಗಳ ಮಧ್ಯದಲ್ಲಿ ಇರುವ, ಆ ತಂತುಗಳ ಸಂಕೋಚನ ವಿಸ್ತರಣ ಗಳಿಂದ ಧ್ವನಿಯನ್ನು ಹೆಚ್ಚುಕಡಮೆ ಮಾಡಬಹುದಾದ, ಅವಕಾಶ, ದ್ವಾರ ; ಶ್ವಾಸನಾಳ ದ್ವಾರ. **Glóttal** (ಗು.) ಶ್ವಾಸನಾಳ ದ್ವಾರದ ; —ದಲ್ಲಿ ಹುಟ್ಟಿದ. **Glóttic** (ಗು.) = Glottal ; ಭಾಷಾ (ಶಾಸ್ತ್ರ) ಸಂಬಂಧದ.

Gloúcester ಗ್ಲಾಸ್ಟರ್ (ನಾ.) ಇಂಗ್ಲೆಂಡಿನ ಒಂದು ಜಿಲ್ಲೆ (County). ಗ್ಲಾಸ್ಟರ್‌ಷೈರಿನಲ್ಲಿ ತಯಾರಾಗುವ ಒಂದು ತೆರದ ಚೀಸ್ (ಮೊಸರಿ ನಿಂದ ತಯಾರಿಸಿದ ಪದಾರ್ಥ)

Glove ಗ್ಲವ್ (ನಾ., ಕ್ರಿ. ಸಕ.) [ತೊಗಲು, ಹತ್ತಿ, ರೇಷ್ಮೆ, ಉಣ್ಣೆ, ಅಥವಾ (ಪೂರ್ವದಲ್ಲಿ) ಉಕ್ಕು — ಇದರಿಂದ ಮಾಡಿದ, ಸಾ., ಬೆರಳು ಗಳು ವಿಂಗಡವಾಗಿರುವ] ಕೈಗವಸು, ಕೈಚೀಲ [Throw down the g. ಕಾಳಗಕ್ಕೆ ಕರೆ ; ಮೂದಲಿಸಿ ಕರೆ. Take up the g. ಮೂದಲಿಕೆಯ ಆಹ್ವಾನವನ್ನು ಅಂಗೀಕರಿಸು, ಒಪ್ಪಿಕೊ. Fit like a g. ಗುತ್ತನಾಗಿ ಅಳವಡು ; ಸರಿಯಾಗಿ ಹೊಂದು. Hand & (*or* in) g. (Hand ನೋಡಿ)]. (ಮೆತ್ತೆಯಂತೆ ಹೊಲದ) ಮುಷ್ಟಿಕಾಳಗದ ಕೈಗವಸು (= Boxing-g.). [Without the gloves (ವಾದ, ಹೋರಾಟ, ಮೊ. ಗಳಲ್ಲಿ) ನಿರ್ದಾಕ್ಷಿಣ್ಯವಾಗಿ, ಭಯವಿಲ್ಲದೆ]. (ಕ್ರಿ.) ಕೈ ಚೀಲ ಹಾಕಿಕೊ, —ಹವಣಿಸು. **G.-fight** ಮೆತ್ತೆ ಕೈಚೀಲಗಳನ್ನು ಹಾಕಿಕೊಂಡು ಮಾಡುವ ಮುಷ್ಟಿ ಕಾಳಗ (ಇದಕ್ಕೆ ವ್ಯತಿರಿಕ್ತವಾದದ್ದು : Prize-fight ಕೈಚೀಲಗಳಿಲ್ಲದೆ, ಬರಿಯ ಮುಷ್ಟಿಗಳಿಂದ ಮಾಡುವ ಮುಷ್ಟಿಕಾಳಗ). **G.-sponge** ಕೈಚೀಲದ ಆಕಾರದ ಸ್ಪಂಜು. **G.-stretcher** ಕೈಚೀಲದ ಬೆರಳುಗಳನ್ನು ಹಿಗ್ಗಿಸುವ ಸಲಕರಣೆ. **Glóveless** (ಗು.) ; **Glóver** (ನಾ.) ಕೈಚೀಲಗಳನ್ನು ಮಾಡು ವವನು, ಮಾರುವವನು ; ಕೈಚೀಲಗಾರ.

Glow ಗ್ಲೋ (ಕ್ರಿ. ಅಕ., ನಾ.) ಬಿಳಿಗಾವಿಗೆ ಬರುವಂತೆ ಕಾಯಿ ; ನಿಗ ನಿಗನೆ ಕಾಯಿ ; (ಜ್ವಾಲೆಯಿಲ್ಲದೆ) ಬೆಳಕನ್ನೂ ಶಾಖವನ್ನೂ ಸೂಸು ; ಕನಲು ; ಜ್ವಲಿಸು ; (ಅತಿಯಾಗಿ ಕಾದಂತೆ) ಹೊಳೆ, ಪ್ರಕಾಶಿಸು ; ಕೆಂಪೇರು. (ದೇಹಶಾಖದಿಂದ, ಭಾವೋದ್ರೇಕದಿಂದ) ತಪಿಸು, ಕೆರಳು, ಕಾವೇರು (*With* ಉಪ. ದೊಡನೆ). (ನಾ.) ಕಾವಿನಿಂದ ಹೊಳೆ ಯುವ ಸ್ಥಿತಿ ; ನಿಗ ನಿಗನೆ ಹೊಳೆಯುವ ಸ್ಥಿತಿ (In a g., All of a g. ಕಾವ್ಏರಿ ; ಬಿಸುಪೇರಿ ; ಕನಲ ; ಕೆಂಪೇರಿ ; ಉದ್ರೇಕಗೊಂಡು). ವರ್ಣದ ಉಜ್ಜ್ವಲತೆ ; ದೀಪ್ತಿ ; ಕಾಂತಿ (ಉದಾ., ಕೆನ್ನೆಗಳ ಕೆಂಪು). ಕಾಯ್ಪು ; ಕನಲಿಕೆ ; ಕಡು ರಾಗ ; ಆವೇಶ ; ಉದ್ರೇಕ. **G.-lamp** (ವಿದ್ಯುತ್ಪ್ರವಾಹದಿಂದ) ಕಾವೇರಿ ಬೆಳಗುವ ಇಂಗಾಲ, ಮೊ. ತಂತಿ ಯುಳ್ಳ ವಿದ್ಯುದ್ದೀಪ ; ಕಾಯ್ಪಿನ ವಿದ್ಯುದ್ದೀಪ. **G.-worm** ಮಿಂಚು ಹುಳು ; ಮಿಣುಕು ಹುಳು. **Glówingly** (ಕ್ರಿ. ವಿ.)

Glower ಗ್ಲಾರ್, **Glówer** ಗ್ಲಾಉಅರ್ (ಕ್ರಿ. ಅಕ.) (ಕಣ್ಣರಳಿಸಿ) ದಿಟ್ಟಿಸಿ ನೋಡು ; ದುರ ದುರನೆ ನೋಡು ; (ಅಸಮಾಧಾನದಿಂದ, ಕೋಪದಿಂದ) ಏವೆಯಿಕ್ಕದೆ ನೋಡು. ಕಣ್ಣು ಕೆರಳಿಸಿ ನೋಡು (ಸಾ., *at* ಉಪ. ದೊಡನೆ). **Glowéringly** (ಕ್ರಿ. ವಿ.)

Gloxínia ಗ್ಲಾಕ್ಸಿನಿಯ (ನಾ.) ಗಂಟೆಯಾಕಾರದ, ವಿವಿಧ ವರ್ಣಗಳ ದೊಡ್ಡ ದೊಡ್ಡ ಹೂವುಗಳನ್ನು ಬಿಡುವ, ಅಮೆರಿಕದ ಉಷ್ಣವಲಯದ, ಸಸ್ಯಜಾತಿ.

Gloze ಗ್ಲೋಸ್ (ಕ್ರಿ.) (ಪ್ರಾಚೀ. ಪ್ರ.) ವ್ಯಾಖ್ಯಾನ ಮಾಡು ; ಟೀಕಿಸು [(*Up*)*on* ಉಪ. ದೊಡನೆ]. ಯಾವುದೋ ಒಂದು ರೀತಿಯಲ್ಲಿ ಸಮಾ ಧಾನ ಹೇಳಿ ತೇಲಿಸಿಬಿಡು ; (ತಪ್ಪು, ಮೊ. ನ್ನು) ಕಡವೆಯಾಗಿ ತೋರಿಸು (ಸಾ., *over* ಉಪ. ದೊಡನೆ). ಬೆಣ್ಣೆಯಂಥ ಮಾತ ನಾಡು ; ಬೂಟಾಟಿಕೆಯಾಡು ; ಮೋಸದ ಮಾತಾಡು ; ಇಚ್ಚಕವಾಡು; ಮುಖಸ್ತುತಿ ಮಾಡು. **Glózingly** (ಕ್ರಿ. ವಿ.)

Glucínum ಗ್ಲ್ಯು(ಗ್ಲೂ)ಸೈನಮ್ (ನಾ.) "ಬೆರಿಲ್" ಎಂಬ ರತ್ನವಿಶೇಷ ದಿಂದ ದೊರೆಯುವ ಒಂದು ಬಿಳಿಯ ಲೋಹಧಾತು : 'ಬೆರಿಲಿಯಂ'.

Glucóse ಗ್ಲ್ಯು(ಗ್ಲೂ)ಕೋಸ್ (ನಾ.) (ರ. ವಿ.) ದ್ರಾಕ್ಷಿಸಕ್ಕರೆ ; (Dextrose, laevulose, mannitose ಮೊ. ಗುಂಪಿಗೆ ಸೇರಿದ) ಯಾವು ದಾದರೊಂದು ಸಕ್ಕರೆ : 'ಗ್ಲೂಕೋಸ್'. **Glucósic** — ಕಾ — (ಗು.) ಗ್ಲೂಕೋಸಿನ. **Glúcoside** (ನಾ.) — ಕೊ — (ರ. ವಿ.) (ಸಾರ ಕುಗ್ಗಿಸಿದ ಆಮ್ಲಗಳಿಂದ ಅಥವಾ ಕ್ಷಾರಗಳಿಂದ ಸಂಸ್ಕರಿಸುವುದ ರಿಂದಾಗಲಿ, ಅಥವಾ ಕಿಣ್ವಗಳ ಕಾರ್ಯಕ್ಕೆ ಬಿಡುವುದರಿಂದಾಗಲಿ) ಅದರಲ್ಲಿಯ ಗ್ಲೂಕೋಸನ್ನು ಇತರ ಪದಾರ್ಥಗಳಿಂದ ಪ್ರತ್ಯೇಕಿಸಬಹು ದಾದ ಒಂದು ಸಸ್ಯಪದಾರ್ಥ : 'ಗ್ಲೂಕೊಸೈಡ್'.

Glue ಗ್ಲ್ಯು, ಗ್ಲೂ (ನಾ., ಕ್ರಿ. ಸಕ.) ಚರ್ಮ ಮತ್ತು ಎಲುಬುಗಳನ್ನು ಬೇಯಿಸಿ ತಯಾರಿಸಿದ, ಗಟ್ಟಿಯಾಗಿಯೂ ಛಿದುರವಾಗಿಯೂ ಕಂದು ಬಣ್ಣವುಳ್ಳದ್ದಾಗಿಯೂ ಇರುವ, ಬಿಸಿಯಲ್ಲಿರುವಾಗ ಅಂಟಾಗಿ ಉಪ ಯೋಗಿಸುವ, 'ಜೆಲಟಿನ್' ಪದಾರ್ಥ ; ಮರವಜ್ರ ; (ಮರವಜ್ರದಂಥ) ಅಂಟು. (G.-pot ಹೊರ ಆವರಣವಾಗಿ ನೀರಿನ ಪಾತ್ರೆಯುಳ್ಳ ಮರ ವಜ್ರವನ್ನು ಕಾಯಿಸುವ ಪಾತ್ರೆ). (ಕ್ರಿ. ; ಕೃದ್ವಾಚಿ Gluing) ಮರ ವಜ್ರದಿಂದ, ಮರವಜ್ರ ಹಾಕಿದಂತೆ, —ಬಂಧಿಸು, ಕೂಡಿಸು, ಅಂಟಿಸು; ಒತ್ತಾಗಿ, ಬಲವಾಗಿ, — ಅಂಟಿಸು, ಕಟ್ಟಿಸು (Eye, ear, glued to the keyhole ಬೀಗದಕೈ ಹಾಕುವ ಬಾಗಿಲ ಕಂಡಿಗೆ ಕಣ್ಣನ್ನು, ಕಿವಿ ಯನ್ನು, ಹತ್ತಿಸಿ). **Gluéy** (ಗು.)

Glum ಗ್ಲಮ್ (ಗು.) ಮಂಕು ಕವಿದ ; ಬಾಡಿದ ಮುಖವುಳ್ಳ ; ಖಿನ್ನತೆ, ವಿಷಣ್ಣತೆ, ಅಸಮಾಧಾನ, — ತೋರುವ ; ಖಿನ್ನ ; ವಿಷಣ್ಣ. **Glúmly** (ಕ್ರಿ. ವಿ.) ; **Glúmness** (ನಾ.)

Glume ಗ್ಲ್ಯು(ಗ್ಲೂ)ಮ್ (ನಾ.) (ಸ. ವಿ.) ಹುಲ್ಲುಜಾತಿ, ಮೊ. ಸಸ್ಯ ಗಳ ಪುಷ್ಪಪಾತ್ರದಲ್ಲಿ ಹೊಟ್ಟಿನಂಥ ಪುಚ್ಛ ; (ಕಾಳಿನ) ಹೊಟ್ಟು. **Glumáceous** ಗ್ಲ್ಯು(ಗ್ಲೂ)ಮೇಷಸ್ (ಗು.) ಹೊಟ್ಟಿನಂಥ ; ಹೊಟ್ಟುಳ್ಳ. **Glumóse** (ಗು.) ಹೊಟ್ಟುಳ್ಳ.

Glut ಗ್ಲಟ್ (ಕ್ರಿ. ಸಕ., ನಾ.) ಹೊಟ್ಟೆ ಬಿರಿಯುವಂತೆ (ಒಬ್ಬನನ್ನು) ಉಣಿಸು, (ತಾನು) ಉಣ್ಣು ; ಕಂಠಪೂರ್ತಿ ತಿನ್ನು, ತಿನ್ನಿಸು ; ಹಾಳತ ಮೀರಿ, ಕಟ್ಟು ರೆಯಾಗುವಂತೆ, ತಿನ್ನು, ತಿನ್ನಿಸು (ರೂಪ. ಸಹ) ; (ಹಸಿ ವನ್ನು, ಆಕಾಂಕ್ಷೆಯನ್ನು) ಪೂರ್ತಿಯಾಗಿ ತೀರಿಸಿಕೊ ; ವೆಗಟಿಸು ; ಮೀರಿ ತಣಿಸು ; ಕಟ್ಟಡಚು ; ಗಿಡುಗು ; ತುರುಕು ; ಮಿತಿ ಮೀರಿ ತುಂಬು. (ಪೇಟೆಯಲ್ಲಿ) ಸಾಮಾನನ್ನು ಮಿತಿ ಮೀರಿ ತುಂಬು, ಶೇಖರಿಸು. (ನಾ.) ಮಿತಿ ಮೀರಿದ ಭೋಗಾನುಭವ ; ಕಂಠಪೂರ್ತಿ ; ಹೊಟ್ಟೆಬಿರಿಯ ಭೋಜನ, ತಿಂಡಿ ; ಭೋಗಾತಿರೇಕ. ಗಿರಾಕಿಗಿಂತ ಹೆಚ್ಚು ಸರಕು (A g. in the market ಪೇಟೆಯಲ್ಲಿ ಸರಕು ಗಿರಾಕಿಯಿಲ್ಲದೆ ತುಂಬಿದೆ)

Glúten ಗ್ಲ್ಯು(ಗ್ಲೂ)ಟೆನ್ (ನಾ.) ಅಂಟುಪದಾರ್ಥ ; ಜಿಬ್ಬು ; ಪ್ರಾಣಿ ಗಳ ಅಂಟುಸ್ರಾವ. ಹಿಟ್ಟಿನಲ್ಲಿಯ ಪಿಷ್ಟಾಂಶವನ್ನು ತೊಳೆದುಬಿಟ್ಟ ಮೇಲೆ ಉಳಿಯುವ ಜಿಗುಟಾದ ಸಸಾರಜನಕ ಭಾಗ : ಹಿಟ್ಟಿನ ಜಿಗುಟು; 'ಗ್ಲೂಟೆನ್'. **Glútinize** (ಕ್ರಿ. ಸಕ.) ; **Glútinous** (ಗು.) ; **Glútinously** (ಕ್ರಿ. ವಿ.) ; **Glutinósity** — ನಾ — (ನಾ.) ಅಂಟು ಗುಣ.

Glútton ಗ್ಲಟ್‌ನ್ (ನಾ.) ಹೊಟ್ಟೆಬಾಕ ; ತಿಂಡಿಪೋತ ; ತಿನಾಳಿ. (ರೂಪ.) ಪುಸ್ತಕ ವಾಚನದಲ್ಲಿ ತೀವ್ರಾಸಕ್ತಿಯುಳ್ಳವನು ; ಪುಸ್ತಕ ಪಿಶಾಚಿ ; ಕೆಲಸದ ಹಸಿವುಳ್ಳವನು ; ಕೆಲಸ ಮಾಡಲು ತೀವ್ರಾಸಕ್ತಿ ಯುಳ್ಳವನು. Wolverene ಎಂಬ ಒಂದು ಹೊಟ್ಟೆಬಾಕ ಪ್ರಾಣಿ. **Glúttonize** (ಕ್ರಿ. ಅಕ.) ಹೊಟ್ಟೆಬಾಕನಂತೆ ತಿನ್ನು. **Glúttonous**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಗು.); **Glúttonously** (ಕ್ರಿ. ವಿ.); **Glúttony** (ನಾ.) ಹೊಟ್ಟೆಬಾಕತನ; ಮಿತಿ ಮೀರಿ ತಿನ್ನುವ ದುರ್ಗುಣ.

Glýcerinate. **Glycerine** ನೋಡಿ.

Glýcerine, -in ಗ್ಲಿಸೆರಿನ್ (ನಾ.) (ಪ್ರಾಣಿಜನ್ಯವಾದ ಮತ್ತು ಸಸ್ಯಜನ್ಯವಾದ ಎಣ್ಣೆಗಳಿಂದ ಸಾಬೂನನ್ನು ತಯಾರುಮಾಡುವಾಗ ಉಪಪದಾರ್ಥವಾಗಿ ದೊರೆಯುವ) ಸಿಹಿಯಾದ, ಬಣ್ಣವಿಲ್ಲದ, ಷರಬತ್ತಿನಂಥ, ಮಂದದ್ರವ (ಮುಲಾಮಿನಂತೆಯೂ ಔಷಧದ ಅನುಪಾನವಾಗಿಯೂ, ಸಿಡಿಮದ್ದು, ಮೊ. ಗಳಲ್ಲಿಯೂ ಉಪಯೋಗ): 'ಗ್ಲಿಸೆರಿನ್'. **Glýcerinate** — ನೇಟ್ (ಕ್ರಿ. ಸಕ.) ಗ್ಲಿಸೆರಿನ್ನಿನಿಂದ ಸಂಸ್ಕರಿಸು (ಮು., ಸಿಡುಬುಹಾಕುವ ಹಾಲನ್ನು). **Glycéric** (ಗು.); **Glýcerate** —ರೇಟ್ (ನಾ.) (ರ. ವಿ.) ಗ್ಲಿಸೆರಿಕ್ ಆಮ್ಲದ ಒಂದು ಲವಣ; ಗ್ಲಿಸೆರಿನ್ ಲವಣ; ಯಾವುದಾದರೂ ಪದಾರ್ಥ ಲೀನವಾದ ಗ್ಲಿಸೆರಿನ್ ದ್ರಾವಣ. **Glýceride** (ರ. ವಿ.) ಗ್ಲಿಸೆರಿನ್ನಿನ ಒಂದು ಸಂಯುಕ್ತ ಈಥರ್‌ದ್ರವ. **Glýceryl** —ರಿಲ್ (ನಾ.) ಗ್ಲಿಸೆರಿನ್ನಿನ ಮತ್ತು ಗ್ಲಿಸೆರೈಡುಗಳ ತ್ರಿಪರಮಾಣುಕ ಘಟಕ. **Glýcero-** (ಸ. ಪೂ. ಪ.) ಗ್ಲಿಸೆರಿನ್ —. **Glýcerol** —ರಾಲ್ (ನಾ.) (ರ. ವಿ.) 'ಗ್ಲಿಸೆರಿನ್' ಪದಕ್ಕೆ ವೈಜ್ಞಾನಿಕರು ಹೆಚ್ಚಾಗಿ ಉಪಯೋಗಿಸುವ ಪದ.

Glýcogen ಗ್ಲೈ(ಗ್ಲಿ)ಕೊಜೆನ್ (ನಾ.) (ರ. ವಿ.) ಪ್ರಾಣಿಗಳ ಅಂಗಾಂಶಗಳಲ್ಲಿ (ಮು., ಯಕೃತ್ತಿನಲ್ಲಿ) ದೊರೆಯುವ ಬಿಳಿಯ ಬಣ್ಣದ, ಅಸ್ಫಟಿಕವಾದ, ರುಚಿ ವಾಸನೆಗಳಿಲ್ಲದ, ಪಿಷ್ಟದಂಥ ಪದಾರ್ಥ. **Glycogénic** (ಗು.) (ಮು., ಪ್ರಾಣಿಗಳ ದೇಹದಲ್ಲಿ) ಸಕ್ಕರೆಯಾಗುವ. **Glycogénesis** (ನಾ.) ಸಕ್ಕರೆಯಾಗುವುದು (ಮು., ಪ್ರಾಣಿಗಳ ದೇಹದಲ್ಲಿ)

Glýcol ಗ್ಲೈ(ಗ್ಲಿ)ಕಾಲ್ (ನಾ.) ಮೇದಸ್ಸಿಯಾದ ದ್ವಿಪರಮಾಣುಕ ಮದ್ಯಸಾರಗಳಲ್ಲೊಂದು: 'ಗ್ಲೈಕಾಲ್'. **Glycól(l)ic** (ಗು.)

Glycónic ಗ್ಲೈಕಾನಿಕ್ (ಗು., ನಾ.) (ಗ್ರೀಕ್ ಮತ್ತು ಲ್ಯಾಟಿನ್ ಛಂದಸ್ಸು) ಒಂದು ಗುರು ಒಂದು ಲಘು ಉಳ್ಳ ಗಣಗಳು ಮೂರೂ, ಒಂದು ಗುರು ಎರಡು ಲಘು ಉಳ್ಳ ಗಣ ಒಂದೂ ಇರುವ ನಾಲ್ಕು ಗಣಗಳ (ಪಾದ, ಛಂದಸ್ಸು). (Glukon ಎಂಬ ಗ್ರೀಕ್ ಕವಿಯ ಹೆಸರಿನಿಂದ)

Glycosúria ಗ್ಲೈ(ಗ್ಲಿ)ಕೊಸ್ಯೂರಿಯ (ನಾ.) ಮೂತ್ರದಲ್ಲಿ ಸಕ್ಕರೆಯಿರುವ ರೋಗಸ್ಥಿತಿ; ಮಧುಮೂತ್ರರೋಗ. **Glycosúric** (ಗು.)

Glyphógraphy ಗ್ಲಿಫಾಗ್ರಫಿ (ನಾ.) ಮೇಣ ಬಳಿದ ಲೋಹಫಲಕದ ಮೇಲೆ ಕೊರೆದ ಅಕ್ಷರಗಳು ಮುದ್ರಣಕ್ಕನುಕೂಲಿಸುವಂತೆ ಉಬ್ಬಾಗಿ ಬರುವ ಹಾಗೆ ಆ ಕೊರೆತದ ಮೇಲೆ ವಿದ್ಯುತ್ತಿನ ಮೂಲಕ ತಾಮ್ರಕಣ ನಿಕ್ಷೇಪಮಾಡುವ ವಿಧಾನ. **Glýphograph** — ಫೊ — (ನಾ., ಕ್ರಿ.) ಇಂಥ ಉಬ್ಬುಮುದ್ರಣ ಫಲಕ (ಮಾಡು). **Glyphográphic** (ಗು.); **Glyphógrapher** — ಫಾಗ್ರ — (ನಾ.)

Glýptic ಗ್ಲಿಪ್ಟಿಕ್ (ಗು.) (ಮು., ರತ್ನಗಳಮೇಲೆ) ಕೆತ್ತನೆಯ; ಕೊರೆಯುವ. **Glyptógraphy** ಗ್ಲಿಪ್ಟಾಗ್ರಫಿ (ನಾ.) ರತ್ನ ಕೊರೆಯುವ ಕಲೆ, ವಿದ್ಯೆ.

Glýptodon ಗ್ಲಿಪ್ಟೊಡಾನ್, **-dont** —ಡಾಂಟ್ (ನಾ.) Armadillo ಎಂಬ ಪ್ರಾಣಿಜಾತಿಗೆ ಸೇರಿದ, ದ. ಅಮೆರಿಕದ, ಒಂದು ವಂಶನಷ್ಟ ಚತುಷ್ಪಾದಿ.

Gnarled, Gnárly ನಾರ್‌ಲ್ಡ್, ನಾರ್ಲಿ (ಗು.) (ಮರ) ಗಂಟುಗಂಟಾದ; ತಿರಿಚು ಮುರಿಚಾದ; ಒರಟೊರಟಾದ (ರೂಪ. ಸಹ)

Gnash ನ್ಯಾಷ್ (ಕ್ರಿ.) (ಹಲ್ಲು) ಕಡಿ, ಮಸೆ (ಮು., ಕೋಪದಿಂದ ಅಥವಾ ಸಂಕಟದಿಂದ)

Gnat ನ್ಯಾಟ್ (ನಾ.) ಸೊಳ್ಳೆಯಂತಿರುವ, (ಹೆಣ್ಣು ಜಾತಿ) ರಕ್ತಹೀರುವ ಒಂದು ಹಾರುಪ್ರಾಣಿ. (ರೂಪ.) ಸಣ್ಣ ಕಿರುಕುಳ; ಕ್ಷುದ್ರ ಬಾಧೆ. ಅಲ್ಪವಸ್ತು, ವಿಷಯ (Strain at g. ಅಲ್ಪ ವಿಷಯಗಳಿಗೆ ಹೆಚ್ಚು ಶ್ರದ್ಧೆ ಕೊಡು)

Gnáthic ನ್ಯಾ(ನೇ)ಥಿಕ್ (ಗು.) ದವಡೆಯ(ಗಳ)

Gnaw ನಾ (ಕ್ರಿ., ಭೂತ. Gnawed, ಭೂ. ಕೃ. Gnawed, -wn) ಬಿಡದೆ ಕಡಿ, ಅಗಿ(ಯುತ್ತಹೋಗು); ಅಗಿದುಹಾಕು; ಕಡಿದುಹಾಕು; ಅಗಿದಗಿದು ಸವೆಯಿಸು (*Away*, *off*, *in two* ಮೊ. ಪದಗಳೊಡನೆ ಸಹ); (ನಾಶಕಾರಿ, ನೋವು, ಮೊ.) ತುಕ್ಕು ಹಿಡಿಸು, ಜೀರ್ಣ ಮಾಡು, ತಿಂದುಹಾಕು, ಸವೆಯಿಸು, ಕ್ಷಯಿಸು: ಯಾತನೆ ಕೊಡು. **Gnawingly** (ಕ್ರಿ. ವಿ.)

Gneiss ನೈಸ್, ಗ್ನೈಸ್ (ನಾ.) (ಭೂ. ವಿ.) ಬೆಣಚುಕಲ್ಲು, 'ಫೆಲ್‌ಸ್ಪಾರ್' ಮತ್ತು ಅಭ್ರಕ ಪದಾರ್ಥಗಳಿಂದ ಕೂಡಿ ಪದರ ಪದರಗಳಾಗಿ ಸ್ಥಾಪಿತವಾಗಿರುವ ಶಿಲೆ: 'ನೈಸ್' ಶಿಲೆ. **Gneíssic** (ಗು.); **Gneíssoid** (ಗು.); **Gneíssose** (ಗು.) = Gneissic. **Gneíssy** (ಗು.) = Gneissic.

Gnome[1] ನೋಮ್, **Gnóme** ನೋಮಿ (ನಾ.) ಸೂಕ್ತಿ; ಸೂತ್ರ; ಸಾರೋಕ್ತಿ; ಗಾದೆ; ನಾಣ್ಣುಡಿ; ಸಾಮತಿ. **Gnómic** ನೋಮಿಕ್ (ಗು.) ಸೂತ್ರದ; ಸೂತ್ರಪ್ರಾಯದ; ಸೂತ್ರಾತ್ಮಕ; ಸೂತ್ರಮಯ. (ವ್ಯಾ.) G. aorist (ಸಾಮಾನ್ಯ ಯಾಥಾರ್ಥ್ಯವನ್ನು ವ್ಯಕ್ತಪಡಿಸಲು ಉಪಯೋಗಿಸುವ) ಅನಿಶ್ಚಿತ ಭೂತಕಾಲ.

Gnome[2] ನೋಮ್ (ನಾ.) ಭೂ ನಿಧಿಗಳನ್ನು ಕಾದುಕೊಂಡಿರುವ ಭೂಗರ್ಭಲೋಕ ವಾಸಿ ಕುಲದ ಕುಬ್ಜ ಪಿಶಾಚಿ, ಕುಳ್ಳ ಭೂತ; ಧನ ಪಿಶಾಚಿ; ಬೇತಾಳ. ಗಿಡ್ಡ; ಕುಳ್ಳ. **Gnómish** (ಗು.)

Gnómon ನೋಮನ್ (ನಾ.) ಗುರುತುಮಾಡಿರುವ ಮೇಲ್ಮೈಮೇಲೆ ಬಿದ್ದ ತನ್ನ ನೆರಳಿನಿಂದ ಹೊತ್ತನ್ನು ತೋರಿಸುವ ನೆರಳುಗಡಿಯಾರದ ಕಂಬ, ಸರಳು, ಸೂಚಿ, ಫಲಕ; (ಕಾಲಮಾನ ಛಾಯಾಯಂತ್ರದ) ಶಂಕು; ಸೂರ್ಯನ ಮಧ್ಯಾಹ್ನರೇಖೆಯ ಕೋನೋನ್ನತಿಯನ್ನು ಅಳೆಯಲು ಉಪಯೋಗಿಸುವ ಕಂಬ, ಮೊ. ವು. (ಜ್ಯಾ.) ಒಂದು ಸಮಾಂತರ ಚತುರ್ಭುಜದ ಒಂದು ಮೂಲೆಯಿಂದ ಅದೇ ಆಕಾರದ ಕ್ಷೇತ್ರವನ್ನು ತೆಗೆದಮೇಲೆ ಉಳಿಯುವ ರೇಖಾಕೃತಿ: 'ನೋಮನ್'. **Gnomónic** — ಮಾ — (ಗು.)

Gnósis ನೋಸಿಸ್ (ನಾ.) ಅಧ್ಯಾತ್ಮ ರಹಸ್ಯ ಜ್ಞಾನ; ಅಧ್ಯಾತ್ಮ ರಹಸ್ಯ ವಿದ್ಯೆ; = Gnosticism. **Gnóstic** ನಾಸ್ಟಿಕ್ (ಗು., ನಾ.) ಜ್ಞಾನ ವಿಷಯಕ; — ಸಂಬಂಧವಾದ; ಜ್ಞಾನದ; ಅಧ್ಯಾತ್ಮ ರಹಸ್ಯ ಜ್ಞಾನವುಳ್ಳ; ಅಧ್ಯಾತ್ಮ ರಹಸ್ಯ ಜ್ಞಾನ ವಾದಿಗಳ; ರಹಸ್ಯದ; ಗೂಢ; ಗುಪ್ತ; (ನಾ., ಸಾ., ಬ. ವ. ದಲ್ಲಿ) ತಾವು ಅಧ್ಯಾತ್ಮ ರಹಸ್ಯ ಜ್ಞಾನವುಳ್ಳವರೆಂದು ಹೇಳಿಕೊಳ್ಳುತ್ತಿದ್ದ ಕೆಲವರು ಆದಿ ಕ್ರೈಸ್ತ ಪಾಷಂಡಿಗಳು. **Gnósticism** (ನಾ.) ಅಧ್ಯಾತ್ಮ ರಹಸ್ಯ ಜ್ಞಾನ ವಾದ. **Gnósticize** (ಕ್ರಿ.) ಈ ತತ್ತ್ವವನ್ನು ಅಂಗೀಕರಿಸು, ಅನುಸರಿಸು, ವಿಸ್ತರಿಸು, ಪ್ರತಿಪಾದಿಸು.

Gnu ನೂ (ನಾ.) ಎತ್ತಿನಂತೆ ಅಥವಾ ಕೋಣನಂತೆ ಇರುವ ಒಂದು ಜಿಂಕೆಯ ಜಾತಿ.

Go ಗೋ (ಕ್ರಿ. ಅಕ.; ಭೂತ. Went, ಭೂ. ಕೃ. Gone ಗಾನ್; ಮಧ್ಯಮ ಪುರುಷ ಏ. ವ. Goest; ಪ್ರಥಮ ಪುರುಷ ಏ. ವ. Goes ಗೋಸ್; ಪ್ರಾಚೀ. ಪ್ರ. Goeth ಗೋಎತ್) (ಒಂದು ಸ್ಥಳ, ಸ್ಥಾನ, ಕಾಲ, ಮೊ. ಗಳಿಂದ) ಹೋಗು; ಹೊರಡು; ತೆರಳು; ನಡೆ; ಚಲಿಸು; ಚಲಿಸುತ್ತಿರು; ಕದಲು; ಪೊರಮಡು (ಗ್ರಾಂ.); ಹೋಗಿ ಸೇರು; ಪ್ರಯಾಣ ಮಾಡು; ಮುಂದುವರಿ; ಮುನ್ನಡೆ. ಅಭಿವೃದ್ಧಿ ಹೊಂದು [Going strong (strong ನೋಡಿ). He will go far ಅವನು ಮುಂದಕ್ಕೆ ಬರುತ್ತಾನೆ, ಮೇಲಕ್ಕೆ ಏರುತ್ತಾನೆ. Go easy ಉಪಾಯವಾಗಿ, ಸುಲಭವಾಗಿ, ಹೋಗು. Go west (ಸೈನಿಕ ಅಸಂ.) ಕೊಲೆಯಾಗು; ಸಾಯಿ. Go the pace (pace ನೋಡಿ). Go a walk, journey, voyage]. (ರೇಖೆ, ಮೊ.) ನಿರ್ದಿಷ್ಟ ದಿಕ್ಕಿನಲ್ಲಿರು, —ದಿಕ್ಕಿಗೆ ಮುಖವಾಗಿರು. A good rule to go by ಅನುಸರಿಸಲು ಒಳ್ಳೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಯಮ, ಸೂತ್ರ. Always goes with his party ಯಾವಾಗಲೂ ಅವನ ಪಕ್ಷವನ್ನು ಹಿಡಿದು ಹೋಗುತ್ತಾನೆ. Go with tide or times ಹತ್ತು ಮಂದಿ ನಡೆದಂತೆ, ಕಾಲಕ್ಕೆ ತಕ್ಕಂತೆ, ನಡೆ. Have nothing to go upon ನಿರ್ಧರಿಸಲು ಏನೂ ಆಧಾರವಿಲ್ಲದಿರು. Go hungry ತಿಂಡಿಯಿಲ್ಲದೆ, ಹಸಿದುಕೊಂಡು, ಇರು. Six months gone with child ಆರು ತಿಂಗಳು ಗರ್ಭಿಣಿಯಾಗಿ. Who goes there? (ಕಾವಲುಗಾರನ ಪ್ರಶ್ನೆ) ಯಾರದು? ಯಾರಲ್ಲಿ? A going concern ಕೆಲಸ ನಡಸುತ್ತಿರುವ, ನಡೆಯುತ್ತಿರುವ (ಉದ್ಯೋಗ) ಸಂಸ್ಥೆ. Clock does not go ಗಡಿಯಾರ ನಡೆಯುವುದಿಲ್ಲ. Tongue goes nineteen to the dozen (Dozen ನೋಡಿ). Go bang ಶಬ್ದಮಾಡಿ ಸಿಡಿ; ಒಡೆದುಹೋಗು; ಢಂ ಎನ್ನು. Go phut (ಅಸಂ.) ಮುರಿದು ಬೀಳು; ಧ್ವಂಸವಾಗಿ ಹೋಗು; ಫಟ್ ಎಂದು ಒಡೆದುಹೋಗು. The sovereign goes anywhere ಸವರನ್ನು ಎಲ್ಲಿ ಹೋದರೂ ಚಲಾವಣೆಯಾಗುತ್ತದೆ. The story goes ಜನ ಹೇಳಿಕೊಳ್ಳುವುದೇನೆಂದರೆ; ಕಥೆಯೇನೆಂದರೆ. He is a good actor as actors go nowadays ಈಗಿನ ಕಾಲದ ನಟರಲ್ಲಿ ಅವನು ಒಳ್ಳೆಯ ನಟನೆಂದೇ ಹೇಳಬೇಕು. Go well, ill, hard ಚೆನ್ನಾಗು, ಕೆಟ್ಟುಹೋಗು, ಕಷ್ಟವಾಗು. Liverpool went Tory ಲಿವರ್‌ಪೂಲ್ ಪಟ್ಟಣವು 'ಟೋರಿ' ಪಕ್ಷ (ಸಂಪ್ರದಾಯ ಪಕ್ಷ) ಹಿಡಿಯಿತು. America goes dry ಅಮೆರಿಕವು ಮದ್ಯಪಾನ ನಿರೋಧವನ್ನು ಆಚರಣೆಗೆ ತರುತ್ತದೆ. Case goes by default ಕಕ್ಷಿಗಾರನ ಗೈರುಹಾಜರಿಯಲ್ಲಿ ಮೊಕದ್ದಮೆ ಅವನಿಗೆ ವ್ಯತಿರಿಕ್ತವಾಗಿ ಹೋಗುತ್ತದೆ. Dinner went well ಭೋಜನಗೋಷ್ಠಿ ಚೆನ್ನಾಗಿ ನಡೆಯಿತು. Goes without saying ಸ್ಪಷ್ಟವಾಗಿಯೇ ಇದೆ; ಹೇಳಬೇಕಾದದ್ದೇ ಇಲ್ಲ. Go free, unpunished ದಂಡನೆಯಿಲ್ಲದೆ ತಪ್ಪಿಸಿಕೊ; ಶಿಕ್ಷೆಯಿಂದ ಪಾರಾಗು. Went cheap for a rupee ಅಗ್ಗವಾಗಿ ಒಂದು ರೂಪಾಯಿ ಬೆಲೆಗೆ ಹೋಯಿತು. Going! gone! (ಹರಾಜುದಾರನ ಆಖೈರು ಹೇಳಿಕೆ) ಹೋಗುತ್ತದೆ! ಹೋಯಿತು! Greek must go ಗ್ರೀಕು ಹೋಗಬೇಕು. My sight is going ನನ್ನ ದೃಷ್ಟಿ ಕೆಟ್ಟುಹೋಗುತ್ತಿದೆ. Next wicket went for nothing (ಕ್ರಿಕೆಟ್) ಮುಂದಿನ ಆಟಗಾರನು ಒಂದು ಓಟವೂ ಇಲ್ಲದೆ ಸೋತುಹೋದನು. Go the way of all the earth, of all flesh, to a better world, to one's account or own place, aloft, off the hooks, &c. ಸಾಯಿ. Go to Jericho, Bath, blazes, hell, &c. (ಮಾತಾಡುವವನ ಕಣ್ಣೆದುರಿಗಿರದಂತೆ) ತೊಲಗಿಹೋಗು, ನಾಶವಾಗಿಹೋಗು. Go to Canossa ಮೊದಲು ಹಠದಿಂದಿದ್ದು ಕೊನೆಗೆ ತಗ್ಗಿಹೋಗು, ತಲೆವಾಗು. Go to the Devil ಹಾಳಾಗಿ, ನಿಪಾತವಾಗಿ, ಹೋಗು. Go to the wall ಮೂಲೆಗೆ ಬೀಳು; ಕೆಟ್ಟುಹೋಗು. Which way goes to Mysore ಮೈಸೂರಿಗೆ ಹೋಗುವ ದಾರಿ ಯಾವುದು? Go to school ಶಿಕ್ಷಣ ಪಡೆ. Go to the bar, to sea ನ್ಯಾಯವಾದಿಯಾಗು, ನಾವಿಕನಾಗು. Go on the stage ನಟನಾಗು. Go on the street (ಬೀದಿ) ಸೂಳೆಯಾಗು. Go bail ಹೊಣೆ, ಜಾಮೀನು, ಆಗು. (I'll go bail ನಾನು ನಿನಗೆ ಭರವಸೆ ಕೊಡುತ್ತೇನೆ). Go to the country (Country ನೋಡಿ). Would not go to do it (ಬಳ. ಮಾ.) ಮಾಡುವಷ್ಟು ಅವಿವೇಕಕ್ಕೆ ಹೋಗುವುದಿಲ್ಲ. Go halves or shares (with) ಸರಿಪಾಲು ಹಂಚಿಕೊ; ಅರ್ಧ ಅರ್ಧ ಹಂಚಿಕೊ. I went to great expense ಬಹಳ ಖರ್ಚುಮಾಡಿದೆನು. Go the whole hog (Hog ನೋಡಿ). Go better or one better (ಬಬ್ಬನಿಗಿಂತ) ಮೇಲಾಗು; (ಒಬ್ಬನನ್ನು) ಮೀರು. Goes to one's heart ಮನಸ್ಸು ನೋಯುತ್ತದೆ; ದುಃಖವಾಗುತ್ತದೆ; ವ್ಯಥೆ ಕೊಡುತ್ತದೆ. Will not go in(to) the basket ಬುಟ್ಟಿಗೆ ಹಿಡಿಸುವುದಿಲ್ಲ. 6 into 12 goes twice ೧೨ರಲ್ಲಿ ೬ ಎರಡು ಬಾರಿ ಹೋಗುತ್ತದೆ. Thread too thick to go through needle ಸೂಜಿಯಲ್ಲಿ ತೂರಲಾರದಷ್ಟು ದಪ್ಪದ ದಾರ. 12 inches go to the foot ಒಂದು ಅಡಿಗೆ ೧೨ ಅಂಗುಲ. The difference goes deep ವ್ಯತ್ಯಾಸ ಬಹಳ ದೂರ ಹೋಗುತ್ತದೆ. As, so, far as it goes ಇದ್ದ ಮಟ್ಟಿಗೆ, ಅದು ಹೋಗುವ ಮಟ್ಟಿಗೆ. Goes a long way (towards) (-ಕ್ಕೆ) ಬಹಳ ಸಹಾಯವಾಗುತ್ತದೆ, ಹೆಚ್ಚು ಪರಿಣಾಮಕಾರಿಯಾಗುತ್ತದೆ. (ಆಹಾರ, ಹಣ, ಮೊ.) ಬಹಳ ದೂರ, ಕಾಲ, ಬರುತ್ತದೆ; ಹೆಚ್ಚಾಗಿ ಕೊಳ್ಳಲಾಗುತ್ತದೆ. Go brown ಕಂದುಬಣ್ಣಕ್ಕೆ ತಿರುಗು. Go blind ಕುರುಡಾಗು. Go mad ಹುಚ್ಚು ಹಿಡಿ. Go to seed ಬೀಜವಾಗು; ಹೂವು ಬಿಡುವುದು ನಿಲ್ಲು; (ರೂಪ.) ವ್ಯರ್ಥವಾಗು; ಹಾಳಾಗು. Go hot and cold ಜ್ವರ ಬರು; ನಾಚಿಕೆಗೊಳ್ಳು. Go to pieces ಚೂರು ಚೂರಾಗಿ ಒಡೆದುಹೋಗು. Go sick (ಸೈನ್ಯ) ರೋಗಿಗಳ ಪಟ್ಟಿಗೆ ದಾಖಲಾಗು. Go it (ಅಸಂ.) ಜೋರಾಗಿ, ರಭಸದಿಂದ, — ವರ್ತಿಸು; ವ್ಯಭಿಚಾರದಲ್ಲಿ, ದುರ್ವ್ಯಸನಗಳಲ್ಲಿ ಲೋಲುಪನಾಗು. Going fifteen ಹದಿನೈದನೆಯ ವರ್ಷ ನಡೆಯುತ್ತಿದೆ. I was going to say ನಾನು ಹೇಳುವುದರಲ್ಲಿದ್ದೆನು; ಹೇಳಬೇಕೆಂದಿದ್ದೆನು. Be gone ತೊಲಗಿ ಹೋಗು. Gone ಹೋದ, ಸತ್ತುಹೋದ (= Dead & gone). Gone on (ಅಸಂ.) ಅದೇ ಹಂಬಲು ಹಿಡಿದು; ಗೀಳು ಹತ್ತಿ. Far gone ಬಹಳ ಕಾಯಿಲೆಯಾಗಿ; ಬಹಳ ತೊಂದರೆಗೆ, ತೊಡಕಿಗೆ, ಸಿಕ್ಕಿ. Go fetch (ನಾಯಿಗೆ ಆಜ್ಞೆ) ಹೋಗಿ ತೆಗೆದುಕೊಂಡು ಬಾ!

(ಉಪ. ಗಳೊಡನೆ): Go about (ಕೆಲಸದಲ್ಲಿ) ಉದ್ಯುಕ್ತನಾಗು, ತೊಡಗಿರು. ಅಲ್ಲಿ ಇಲ್ಲಿ ಓಡಾಡು; ಅಲೆದಾಡು; ಸುತ್ತಾಡು; ಪ್ರಯಾಣ ಮಾಡು. ಪ್ರಚಾರವಾಗು; ಹರಡು. Go at ಕೈಮಾಡು; ಮೇಲೆ ಬೀಳು; ಜೋರಾಗಿ ಆರಂಭಿಸು. Go behind (ತೀರ್ಪು, ಮೊ. ಗಳ ವಿಷಯದಲ್ಲಿ, ಕಾರಣಗಳನ್ನು) ಪುನರ್ವಿಮರ್ಶೆ ಮಾಡು. Go for ತೆಗೆದುಕೊಂಡು ಬರುವುದಕ್ಕೆ ಹೋಗು (Go for nothing, little, &c. ಬೆಲೆಯಿಲ್ಲದೆ, ಉಪಯೋಗವಿಲ್ಲದೆ, ಹೋಗು); ಪಡೆಯಲು ಪ್ರಯತ್ನಿಸು; ಉದ್ದೇಶ, ಗುರಿ, ಇಟ್ಟುಕೊಂಡಿರು. (ಅಸಂ.) ಕೈಮಾಡು; ಮೇಲೆ ಬೀಳು; ಆಕ್ರಮಣ ಮಾಡು. Go into (ಕಸಬು, ಶಾಸನ ಸಭೆ, ಮೊ. ನ್ನು) ಅವಲಂಬಿಸು, ಕೈಕೊಳ್ಳು, ಪ್ರವೇಶಿಸು. ಭಾಗ ವಹಿಸು. (ಸಮಾಜದಲ್ಲಿ) ಸೇರುತ್ತಿರು. (ದುಃಖಸೂಚನೆಯ) ಉಡುಪು ಹಾಕಿಕೊ. ವಿಚಾರ ಮಾಡು. Go into hysterics ಆವೇಶಕ್ಕೊಳಗಾಗು. Go off one's head (Head ನೋಡಿ). Go over ವಿಷಯವನ್ನು ಕೂಲಂಕಷವಾಗಿ ಪರೀಕ್ಷಿಸು; ವಿಚಾರ ಮಾಡು. (ನಾಟಕ, ಮೊ. ನ್ನು) ಪರೀಕ್ಷಾರ್ಥವಾಗಿ, ಪೂರ್ವಭಾವಿಯಾಗಿ, ಆಡು, ನಡಸು. ಮತ್ತೆ ಸರಿಮಾಡು; ಪರಿಷ್ಕರಿಸು. Go over the top or bags (ಸೈನ್ಯ) ಶತ್ರುವಿನಮೇಲೆ ನುಗ್ಗಲು ಕಂದಕ ಬಿಟ್ಟು ಹೊರ ಹೊರಡು. Go through ವಿವರವಾಗಿ, ತಪಶೀಲಾಗಿ, ವಿಚಾರಮಾಡು, ಪರೀಕ್ಷಿಸು; ಪರಾಮರ್ಶಿಸು. (ವ್ರತ, ಉತ್ಸವ, ವಾಚನ, ಮೊ. ನ್ನು) ನಡಸು. ಹೊಂದು; ಅನುಭವಿಸು. (ಪುಸ್ತಕ) (ಇಷ್ಟು) ಮುದ್ರಣಗಳಾಗಿರು; — ಮುದ್ರಣಗಳು ಖರ್ಚಾಗಿರು. Go up the line (ಸೈನ್ಯ) ಮೂಲಸ್ಥಾನ ಬಿಟ್ಟು ಯುದ್ಧರಂಗಕ್ಕೆ ಹೋಗು. Go with ಜೊತೆಯಲ್ಲಿ ಹೋಗು; ಅನುಗತವಾಗಿರು. ಪಕ್ಷ ವಹಿಸು; ಅದೇ ಅಭಿಪ್ರಾಯ ಪಡು; ಹೊಂದಿಕೊ; ತಾತ್ಪರ್ಯ ಹಿಡಿ; ಅನುಸರಿಸು. Go without ಇಲ್ಲದೆಹೋಗು; ಇಲ್ಲದೆಯೇ ತಳ್ಳಿಕೊಂಡುಹೋಗು.

(ಕ್ರಿ. ವಿ. ಗಳೊಡನೆ): Go about (ಮೇಲೆ ನೋಡಿ). Go ahead ನಂಬಿಕೆಯಿಂದ ಮುನ್ನುಗ್ಗು. Go along with = Go with. Go back from or upon one's word ಮಾತಿಗೆ ತಪ್ಪು. Go by (ಪಕ್ಕದಲ್ಲಿ) ಹಾದು ಹೋಗು. Go down (ಹಡಗು) ಮುಳುಗಿ ಹೋಗು. (ನಿರ್ದಿಷ್ಟಸ್ಥಾನಕ್ಕೆ) ಇಳಿಯುತ್ತ ಹೋಗು; ಕೆಳಕ್ಕಿಳಿ; ತಗ್ಗು. (ಗದ್ದವನ ಮುಂದೆ) ಬಿದ್ದುಹೋಗು; ಸೋತುಹೋಗು. ಬರವಣಿಗೆಯಲ್ಲಿ ನಿಂತಿರು. ಗಂಟಲಲ್ಲಿಳಿ. ಒಪ್ಪಿಗೆಯಾಗು; ಅಂಗೀಕಾರ ಪಡೆ. Go in ಸ್ಪರ್ಧಿಯಾಗಿ ಸೇರು. (ಕ್ರಿಕೆಟ್) ಆಟಕ್ಕೆ ಇಳಿ. (ಸೂರ್ಯ, ಮೊ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮರೆಯಾಗು, ಕಾಣದೆಹೋಗು. Go in for (ತನ್ನ) ಉದ್ದೇಶ, ಗುರಿ, ರೀತಿ, ತತ್ತ್ವ, — ಆಗಿ ತೆಗೆದುಕೊ; ಕೈಕೊಳ್ಳು. Go off ರಂಗಸ್ಥಳವನ್ನು ಬಿಡು. ಮೊದಲುಮಾಡು; ಆರಂಭಿಸು; (ಥಟ್ಟನೆ) ಹೊರಟುಹೋಗು. ಸಿಡಿ; ಹಾರು. ಸಾಯಿ. ಕ್ರಮೇಣ ಶಾಂತವಾಗು. ಹೋಗಿಬಿಡು. ಕ್ಷೀಣಿಸು. ನಿದ್ದೆಯಲ್ಲಿ ಮೈಮರೆ; ಮೂರ್ಛೆಹೋಗು. ಮಾರಾಟವಾಗಿಹೋಗು. (ಚೆನ್ನಾಗಿ, ಅನಮರ್ಪಕವಾಗಿ) ನೆರವೇರು, ನಡೆ. Go on (ಕಾರ್ಯ, ಭಾಷಣ) ಮುಂದುವರಿ(ಸು); ಬಿಡದೆ ನಡಸು. ವರ್ತಿಸು. (ಬಳ. ಮಾ.) ಬಾಯಿಗೆ ಬಂದಂತೆ ಆಡು, ಗಳಹು, ದೂಷಿಸು. ರಂಗಸ್ಥಳವೇರು; — ದ ಮೇಲೆ ಬರು. (ಕ್ರಿಕೆಟ್) ಚೆಂಡೆಸತಕ್ಕೆ ಮೊದಲುಮಾಡು. (ಕೆಲಸಕ್ಕೆ) ಸರದಿ ವಹಿಸು. (ಬಳ. ಮಾ.; ವಿಧಿ ರೂಪ) ಅವಿವೇಕವಾಗಿ ಮಾತನಾಡಬೇಡ. Going on for (ಕಾಲ, ವಯಸ್ಸು, ಮೊ. ನ್ನು) ಸಮೀಪಿಸುತ್ತ, ಸಾರುತ್ತ. Go out (ಕೊಠಡಿಯನ್ನು, ಮನೆಯನ್ನು, ಬಿಟ್ಟು) ಹೊರಕ್ಕೆ ಹೋಗು. ದ್ವಂದ್ವ ಯುದ್ಧ ಮಾಡು. ನಂದಿಹೋಗು. (ಸರ್ಕಾರದ) ನೌಕರಿ ಬಿಟ್ಟುಹೋಗು. ಕಾಲಸ್ಥಿತಿಗೆ ಹಿಂದೆ ಬೀಳು; ಬಳಕೆ ತಪ್ಪು. (ವಸಾಹತಿಗೆ) ನೆಲಸಹೋಗು. (ಮು., ಹುಡುಗಿಯರು) ಉದ್ಯೋಗಕ್ಕಾಗಿ (ಸಾ., ಮಕ್ಕಳ ಶಿಕ್ಷಕರಾಗಿ) ಮನೆ ಬಿಟ್ಟು ಹೋಗು. ಸಮಾಜದಲ್ಲಿ ಬೆರೆ, ಕಲೆ. (ಕೆಲಸಗಾರರು) ಮುಷ್ಕರ ಹಿಡಿ. (ಹೃದಯ, ಮೊ. ಒಬ್ಬನಿಗಾಗಿ) ಪ್ರೇಮದಿಂದ ಉಬ್ಬು. Go over ಒಂದು ಪಕ್ಷವನ್ನು, ಧರ್ಮವನ್ನು, ಬಿಟ್ಟು ಬೇರೆಯದಕ್ಕೆ ಹೋಗು. Go round ಸುತ್ತಿಕೊಂಡು ಬರು; ಭೇಟಿ ಮಾಡಹೋಗು; ಪ್ರದಕ್ಷಿಣೆ ಮಾಡು; ಸುತ್ತ ಬರು (ವಷ್ಟು ಉದ್ದವಾಗಿರು). (ಆಹಾರ, ಮೊ.) ನೆರವಿಗೆಲ್ಲ, ಸಮಾಜಕ್ಕೆಲ್ಲ, — ಸಾಕಾಗು, ಆಗುವಂತಿರು. Go through with ಪೂರಯಿಸು; ಮುಗಿಸಿಬಿಡು; ನಿರ್ವಹಿಸು. Go through fire and water (Fire ನೋಡಿ). Go to (ವಿಧಿ ರೂಪ; ಪ್ರಾಚೀ. ಪ್ರ.) (ಬುದ್ಧಿ ಹೇಳುವುದು, ನಂಬದಿರುವುದು, ಅಸಹನೆ, ಮೊ. ಗಳ ಭಾವಸೂಚಕವಾಗಿ) ಸಾಕು ಸಾಕು! ಸುಮ್ಮನಿರು! Go together ಒಟ್ಟಿಗೆ ಹೋಗು; ಒಡನಿರು; ಹೊಂದಿಕೆಯಾಗಿರು. Go under ಮುಳುಗಿಹೋಗು; ಮುರಿದು ಬೀಳು; ಸೋತುಹೋಗು; ನಾಶವಾಗು. **Go-ahead** (ಗು.) ಸಾಹಸಿಗನಾದ. **Go-as-you-please** (ಗು.) ಕಟ್ಟುನಿಟ್ಟಿಲ್ಲದ; ನಿಯಮಬದ್ಧನಲ್ಲದ; ಮನಬಂದ ಗಿರಾಕಿಯ. **Go-between** ಮಧ್ಯಸ್ಥ(ಗಾರ); ರಾಜಿ ಮಾಡಿಸುವವನು. ತರೆಹಿಡುಕ (ಕಿ). **Go-by** ಬಿಟ್ಟು (ಮುಂದೆ) ಹೋಗುವುದು (Give the go-by to ಮೀರಿಹೋಗು; ಹಿಂದೆ ಬಿಟ್ಟುಹೋಗು; ಸಿಕ್ಕದೆಹೋಗು; ಕೈ ಬಿಡು; ಜಾರಿಕೊ; ನಿರ್ಲಕ್ಷಿಸು; ಅವಗಣಿಸು; ನಿರಾಕರಿಸು). **Go-cart** ಮಕ್ಕಳಿಗೆ ನಡಗೆ ಕಲಿಸುವುದಕ್ಕಾಗಿ ಮಾಡಿರುವ ನಡೆಗಾಡಿ; ಮಕ್ಕಳ ತಳ್ಳುಬಂಡಿ; ಕೈಬಂಡಿ. ಡೋಲಿ; ಪಲ್ಲಕ್ಕಿ. **Go-getter** (ನಾ.) (ಅಮೆ. ಸಂ., ಬಳ. ಮಾ.) ತೊಡಗಿದ್ದನ್ನು ಸಾಧಿಸುವವನು; ಸಾಹಸಿ; ಧಾತಿವಂತ; ನುಗ್ಗಿ ಹೋಗುವವನು. **Go-off** ಹೊರಡುವುದು (At the first go-off). **Go-to-meeting** (ಗು.) (ಟೋಪಿ, ಉಡುಪು, ಮೊ.) ಚರ್ಚಿಗೆ ಹೋಗುವಾಗ ಹಾಕಿಕೊಳ್ಳಲು ಇಟ್ಟಿರುವ, ತಕ್ಕ. **Góer** ಗೋಅರ್ (ನಾ.) ಹೋಗುವವನು; ಹೋಗುವುದು (Good, slow, &c. g. ಚೆನ್ನಾಗಿ, ನಿಧಾನವಾಗಿ, —; ಶೀಘ್ರ, ಮಂದ, —ಗಾಮಿ. Comers and goers ಬರುವವರೂ ಹೋಗುವವರೂ). **Góing** ಗೋಇಂಗ್ (ನಾ., ಗು.) (ಕ್ರಿಯಾರ್ಥಗಳಲ್ಲಿ); (ಮು., ನಡಗೆ, ಕುದುರೆಸವಾರಿ, ಮೊ. ಕ್ಕೆ) ನೆಲದ (ಮೈದಾನದ) ಸ್ಥಿತಿ; ನಡೆಯುತ್ತಿರುವ, ಕೆಲಸಮಾಡುತ್ತಿರುವ [Set the clock g. (a-going) ಗಡಿಯಾರ ನಡೆಯುವಂತೆ ಮಾಡು]. ಇರುವ, ದೊರೆಯುವ [One of the best fellows g. ಇರುವ ಉತ್ತಮರಲ್ಲಿ (ಇವನು) ಒಬ್ಬನು]. **Goings-on** (ಸಾ., strange, such, ಮೊ. ಪದಗಳೊಡನೆ) ಕಾರುಬಾರು; ನಡೆವಳಿ. **Gone** ಗಾನ್ (Go ಎಂಬುದರ ಭೂ. ಕೃ.; ಗು.) (ಕ್ರಿಯಾರ್ಥಗಳಲ್ಲಿ). ಕಳೆದುಹೋದ; ಕೈ ತಪ್ಪಿದ; ಹಾಳಾದ; ನಷ್ಟವಾದ; ಕೆಟ್ಟುಹೋದ; ಧ್ವಂಸವಾದ. [A g. man ಪೂರ್ತಿ ಕೆಟ್ಟುಹೋದವನು; ಮುಳುಗಿಹೋದವನು = **Góner** (ನಾ.)]. [A g. case ತೀರ ಕೆಟ್ಟುಹೋದ ವ್ಯವಹಾರ; ಸತ್ತ ವ್ಯವಹಾರ]. ಗತ; ಸಂದ; ಆಗಿಹೋದ (ಸಾ., past and g. ಸತ್ತುಹೋದ)

Go (ನಾ.; ಬ. ವ. Goes) ಹೋಗುವುದು; ಗಮನ (Come-&-go ಗಾಡಿಗಳ, ಜನಗಳ, ಓಡಾಟ; ಜನ ವಾಹನ ಸಂಚಾರ; ಸಂಚಾರ; ಸ್ಥಳದಿಂದ ಸ್ಥಳಕ್ಕೆ ಹೋಗುವುದು, ಬರುವುದು). ಕೆಚ್ಚು; ಹುರುಪು; ಆರ್ಪು; ಸಾಹಸ; ಎದೆಗಾರಿಕೆ; ಸತ್ತ್ವ. (ಬಳ. ಮಾ.) ವಿಷಮ ಪರಿಸ್ಥಿತಿ; ಇಕ್ಕಟ್ಟು (What a go! ಏನು ಇಕ್ಕಟ್ಟು! ಎಂಥ ಕಷ್ಟ ದಸೆ! A rum go ವಿಚಿತ್ರ ಪರಿಸ್ಥಿತಿ. Have a go at ಒಂದು ಕೈ ನೋಡು; ಪ್ರಯತ್ನಪಟ್ಟು ನೋಡು). ಬಡಿಸಿದ ಮದ್ಯ ಅಥವಾ ಆಹಾರ. (ಇಸ್ಪೀಟಾಟ) ಆಟಗಾರನು ತನ್ನ ಕೈಯೆಲೆಯನ್ನು ಆಡಲಾಗದ ಬಿಕ್ಕಟ್ಟಿಗೆ ಸಿಕ್ಕಿದಾಗ ಕೂಗುವ ಕೂಗು; ಹೀಗೆ ಎದುರಾಳಿಗೆ ಒಂದು ಗೆಲ್ಲು ಕೊಡುವ ಸ್ಥಿತಿ. (ಬಳ. ಮಾ.) It's no go ಏನು ಮಾಡುವುದಕ್ಕೂ ಆಗುವುದಿಲ್ಲ; ಅದು ಏಗುವಂತಿಲ್ಲ. (ಬಳ. ಮಾ.) All or quite the go ಕಾಲಾನುಗುಣವಾದದ್ದು; ರೂಢಿ; ಬಳಕೆ. (ಬಳ. ಮಾ.) Near go = close shave (Close ನೋಡಿ). (ಬಳ. ಮಾ.) On the go (ಸಂತತವಾಗಿ) ಚಲಿಸುತ್ತ; ಚಂಚಲ ಸ್ಥಿತಿಯಲ್ಲಿ. Little-go (Little ನೋಡಿ)

Goad ಗೋಡ್ (ನಾ., ಕ್ರಿ. ಸಕ.) (ದನಗಳನ್ನು ಚುರುಕುಮಾಡುವ) ಮೊನೆಯುಳ್ಳ ಕೋಲು; ಮೊನೆಗೋಲು; ಚುಚ್ಚುಗೋಲು. (ರೂಪ.) ಯಾತನೆ ಕೊಡುವ, ಉದ್ರೇಕಿಸುವ, ಹುರಿದುಂಬಿಸುವ, ಚೋದಿಸುವ, — ವಸ್ತು; ಚೋದಕ. (ಕ್ರಿ.) ಮೊನೆಗೋಲಿನಿಂದ ತಿವಿ, ಚೋದಿಸು, ರೇಗಿಸು; ಉದ್ರೇಕಗೊಳಿಸು; ಕೆರಳಿಸು. ಓಡುವಂತೆ ಮಾಡು; ಓಡಿಸು; ಚುಚ್ಚಿ ನಡಸು.

Goal ಗೋಲ್ (ನಾ.) ಜೂಜೋಟದ ಕೊನೆಯ ಎಲ್ಲೆಯನ್ನು ತೋರಿಸುವ ಗುರುತು; ಗುರಿಗಂಬ. (ಪ್ರಯತ್ನದ, ಹೆಬ್ಬಯಕೆಯ) ಗುರಿ; ಲಕ್ಷ್ಯ; ಧ್ಯೇಯ; ಉದ್ದೇಶ; ಗಮ್ಯಸ್ಥಾನ. (ಕಾಲ್ಚೆಂಡು, ಮೊ. ಗಳಲ್ಲಿ) ಗುರಿ(ಕಂಬಗಳು); (ಗುರಿಗಂಬಗಳ ನಡುವೆ ಚೆಂಡನ್ನು ನುಗ್ಗಿಸಿ ಪಡೆದ) ಗೆಲ್ಲಂಕ(ಗಳು) [Place a g. (Place ನೋಡಿ)]. (ರೋ. ಪ್ರಾ.) ರಥಪಂದ್ಯದ ಪಥದಲ್ಲಿಯ ತಿರುವಿನಲ್ಲಿ ನೆಟ್ಟಿರುವ ಕಂಬ. **G.-keeper** ಚೆಂಡು ಗುರಿಹೊಗದಂತೆ ರಕ್ಷಣೆಗಿರುವ ಆಟಗಾರ; ಗುರಿ ಕಾಪಿನವನು [= **Goálie** ಗೋಲಿ (ನಾ.) (ಬಳ. ಮಾ.)]. **G.-line** ಆಟದ ಬಯಲಿನ ಎಲ್ಲೆಯನ್ನು ತೋರಿಸಲು ಪ್ರತಿ ಜೊತೆಯ ಗುರಿಗಂಬಗಳ ಸಾಲಿನಲ್ಲಿ ಉದ್ದಕ್ಕೂ ಎರಡು ಕಡೆಗಳಲ್ಲಿಯೂ ಎಳೆದಿರುವ ಗೆರೆ; ಗುರಿಗಂಬಗಳ ಎಲ್ಲೆಗೆರೆ.

Goat ಗೋಟ್ (ನಾ.) ಮೇಕೆ; ಆಡು; ಅಜ; ಮೇಷ [Sheep and goats (ಬೈಬಲ್) ಒಳ್ಳೆಯವರೂ ಕೆಟ್ಟವರೂ]. (ಬ. ವ.) ಆಡು ಜಾತಿ. ಮೇಷ ರಾಶಿ. ವಿಷಯ ಲಂಪಟ. Get one's g. (ಒಬ್ಬನನ್ನು) ರೇಗಿಸು. Play the giddy g. (Giddy ನೋಡಿ). **G.-god** (ಗ್ರೀಕರ) 'ಪ್ಯಾನ್' ಎಂಬ ಒಂದು ದೇವತೆ. **Goátherd** ಆಡು ಕಾಯುವವನು. **Goat's beard** ಒಂದು ಸಸ್ಯವಿಶೇಷ. **Goátskin** ಆಡಿನ ಚರ್ಮದಿಂದ ಮಾಡಿದ ಉಡುಪು, ಬುದ್ದಲಿ. **Goátsucker** ಒಂದು ಜಾತಿಯ ಇರುಳು ಹಕ್ಕಿ. **Goat's wool** ಇಲ್ಲದ ವಸ್ತು (ಕುದುರೆಯ ಮೊಟ್ಟೆ, ಮೊಲದ ಕೊಂಬು, ಎನ್ನುವ ಹಾಗೆ). **Goátish** (ಗು.) ಮೇಕೆಯಂಥ; ಕಾಮುಕ. **Goáty** (ಗು.) = Goatish. **Goátishly** (ಕ್ರಿ. ವಿ.); **Goátishness** (ನಾ.); **Goateé** (ನಾ.) ಹೋತನ ಗಡ್ಡದಂತಿರುವ ಗಡ್ಡ; ಹೋತನ ಗಡ್ಡ. **Goátling** (ನಾ.) (೧ರಿಂದ ೨ ವರ್ಷದೊಳಗಿನ) ಆಡಿನ ಮರಿ.

Gob ಗಾಬ್ (ನಾ., ಕ್ರಿ. ಅಕ.) (ಗ್ರಾಮ್ಯ) ಲೋಳೆವಸ್ತುವಿನ ಗರಣೆ (ಉದಾ., ಶ್ಲೇಷ್ಮ). (ಕ್ರಿ.) ಉಗುಳು.

Gobáng ಗೋಬ್ಯಾಂಗ್ (ನಾ.) ಚೌಕುಳಿಯ ಮಣೆಯಮೇಲೆ ಆಡುವ ಒಂದು ತೆರದ (ಜಪಾನಿನ) ಆಟ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Góbbet ಗಾಬೆಟ್ (ನಾ.) (ಪ್ರಾಚೀ. ಪ್ರ.) (ಮು., ಹಸಿಯ ಮಾಂಸದ, ಆಹಾರದ) ತುಂಡು, ಮುದ್ದೆ, ಚೂರು.

Góbble ಗಾಬ್ಲ್ (ಕ್ರಿ.) ಆತುರಾತುರವಾಗಿ ಸದ್ದುಮಾಡುತ್ತ ತಿನ್ನು; ಗಪ ಗಪನೆ ತಿನ್ನು. (ಟರ್ಕಿ ಹುಂಜ) ಗಂಟಲಲ್ಲಿ ವೈಲಕ್ಷಣ್ಯದ ಧ್ವನಿ ಮಾಡು; ಮಾತನಾಡುವಾಗ ಕೋಪ, ಮೊ. ಗಳಿಂದ ಇಂಥ ಧ್ವನಿ ಮಾಡು. **G.-stitch** (ಆತುರದಲ್ಲಿ ಹಾಕಿದ) ದಾಟು ಹೊಲಿಗೆ. **Góbbler** (ನಾ.) ಟರ್ಕಿ ಹುಂಜ.

Góbemouche (F) ಗೊಬಮುಷ್, ಗಾಬ್‌ಮೂಷ್ (ನಾ.; ಬ. ವ. — es; ಉಚ್ಚಾರಣೆ ಏ. ವ. ದಂತೆ) ವಿಚಾರ ಮಾಡದೆ ಎಲ್ಲ ಸುದ್ದಿಗಳನ್ನೂ ನಂಬುವವನು; ಕೇಳಿದ್ದನ್ನೆಲ್ಲ ನಂಬುವ ಸುದ್ದಿಗಾರ.

Góblet ಗಾಬ್ಲೆಟ್ (ನಾ.) (ಪ್ರಾಚೀ. ಪ್ರ.) (ಹಿಡಿಗಳಿಲ್ಲದ, ಕೆಲವು ವೇಳೆ ಪಾದಗಳೂ ಮುಚ್ಚಳವೂ ಇರುವ, ಬೋಗುಣಿಯಾಕಾರದ, ಲೋಹದ ಅಥವಾ ಗಾಜಿನ) ಕುಡಿಯುವ ಬಟ್ಟಲು. (ಕಾವ್ಯ) ಪಾನ ಪಾತ್ರೆ; ಮದ್ಯದ ಬಟ್ಟಲು. (ವ್ಯಾಪಾರ) ಪೀಠವೂ ಕಾವೂ ಉಳ್ಳ ಗಾಜಿನ ಪಾತ್ರೆ; ಪೀಠದ ಬಟ್ಟಲು.

Góblin ಗಾಬ್ಲಿನ್ (ನಾ.) ವಿಕಾರ ರೂಪಿನ, ಕೆಡುಕು, ತುಂಟ, — ಪಿಶಾಚಿ.

God ಗಾಡ್ (ನಾ., ಕ್ರಿ. ಸಕ.) ಪ್ರಕೃತಿಯನ್ನೂ ಮನುಷ್ಯರ ಆದೃಷ್ಟಗಳನ್ನೂ ಅಧೀನದಲ್ಲಿಟ್ಟುಕೊಂಡಿರುವಂತೆ ಭಾವಿಸಿ ಪೂಜಿಸುವ ಅತಿಮಾನುಷವಾದ ಪರವಸ್ತು: ದೇವರು; ದೇವ; ಪರಮೇಶ್ವರ; ಒಂದು ದೇವತೆ. [G. of heaven (ರೋಮನರ ಪುರಾಣ) 'ಜೂಪಿಟರ್' (ದೇವರು); ದ್ಯೌಸ್ಪತಿ; ಸ್ವರ್ಗಾಧಿಪತಿ. G. of hell ನರಕಾಧಿಪತಿ; 'ಪ್ಲೂಟೋ'. G. of the sea ಸಮುದ್ರಾಧಿ ದೇವತೆ; 'ನೆಪ್ಚ್ಯೂನ್'. G. of day ಸೂರ್ಯ; 'ಫೀಬಸ್'. G. of fire ಅಗ್ನಿ; 'ವಲ್ಕನ್.' G. of war ಯುದ್ಧ ದೇವತೆ; 'ಮಾರ್ಸ್'. G. of love, Blind g. ಕಾಮ ದೇವ; ಮನ್ಮಥ; 'ಕ್ಯೂಪಿಡ್'. G. of wine ಮದ್ಯದೇವತೆ; 'ಬ್ಯಾಕಸ್'. G. of this world ಸೈತಾನ. Ye gods! Ye gods and little fishes! (ವಿಡಂಬನೆಗಾಗಿ ಮಾಡುವ ವಿಕಟ ಕವಿತೆಯ ಉದ್ಗಾರಗಳು). Feast, sight, for the gods ದೇವ ಭೋಗ್ಯ, ದೇವ ಯೋಗ್ಯ, — ಆದದ್ದು; ಸರ್ವೋತ್ಕೃಷ್ಟವಾದದ್ದು; ಅತ್ಯಂತ ಮನೋಜ್ಞವಾದದ್ದು]. (ದೇವರಿಗೆ ಪ್ರತಿನಿಧಿಯಾಗಿ, ಸಂಕೇತವಾಗಿ, ಆವಾಸವಾಗಿ, ಅಥವಾ ದೈವ ಮಹಿಮೆಯುಳ್ಳದ್ದಾಗಿ ಭಾವಿಸಿ) ಪೂಜಿಸುವ ಮೂರ್ತಿ, ಪ್ರಾಣಿ, ಅಥವಾ ಇತರ ವಸ್ತು; (ದೇವರ) ವಿಗ್ರಹ, ಮೂರ್ತಿ. ಪೂಜ್ಯ ಭಾವನೆಗೆ, ಶ್ಲಾಘನೆಗೆ, ಪಾತ್ರನಾದವನು; ಪ್ರಭಾವಶಾಲಿ; ಮಹಾ ಮಹಿಮ. (ನಾಟಕ ಶಾಲೆ; ಬ. ವ. ದಲ್ಲಿ) (ಅಗ್ಗದ ಪೀಠಪಂಕ್ತಿಯಲ್ಲಿರುವ) ಪ್ರೇಕ್ಷಕರು. ಪರಮೇಶ್ವರ; ವಿಶ್ವೇಶ್ವರ; ಸೃಷ್ಟಿಕರ್ತ; ಲೋಕ ಪಾಲಕ [The Lord G., Almighty G., G. Almighty ಎಂಬ ರೂಪಗಳೂ ಉಂಟು. G. the Father, Son, Holy Ghost ದೇವರು, ದೇವ ಪುತ್ರ (ಕ್ರಿಸ್ತ), ದಿವ್ಯಾತ್ಮ, — ಎಂಬ ಕ್ರೈಸ್ತ ತ್ರಿಮೂರ್ತಿಗಳು. Act of G. (Act ನೋಡಿ). With G. ಸತ್ತು ಸ್ವರ್ಗದಲ್ಲಿ; ಪರಂಧಾಮದಲ್ಲಿ. God's truth ಪರಮ ಸತ್ಯ. God's earth (ಒತ್ತಿ ಹೇಳುವಾಗ) ಈ ಭೂಮಿ; ಸಮಸ್ತ ಭೂಮಂಡಲ. God's image ಮನುಷ್ಯ ದೇಹ. Oh, my, good, G! (ನೋವು, ದುಃಖ, ಕೋಪ, — ಸೂಚಕ ಉದ್ಗಾರಗಳು) ಅಯ್ಯೋ ದೇವರೆ! ಹಾ ದೇವರೆ! G. bless you ದೇವರು ನಿನಗೆ ಒಳ್ಳೆಯದು ಮಾಡಲಿ! G. damn him ದೇವರು ಅವನನ್ನು ನಾಶ ಮಾಡಲಿ, ನರಕಕ್ಕೆ ದೂಡಲಿ. G. forbid! (ದೇವರ ದಯೆಯಿಂದ) ಹಾಗಾಗದಿರಲಿ! (ಪ್ರಾರ್ಥನೆ). G. bless, me! my life! my soul! you! (ಆಶ್ಚರ್ಯ ಸೂಚಕ ಉದ್ಗಾರಗಳು). G. willing ದೈವೇಚ್ಛೆ, ಭಗವತ್ಸಂಕಲ್ಪ, — ಇದ್ದರೆ; ಸಂದರ್ಭಗಳು ಅನುಕೂಲಿಸಿದರೆ. Under G. (ಮನುಷ್ಯನ ಅಸ್ವಾತಂತ್ರ್ಯವನ್ನು ಸೂಚಿಸುವುದಕ್ಕೆ) ಭಗವದಧೀನ; ದೈವಾಧೀನ. Thank G! (ಸಂದರ್ಭಗಳು ಸುಮುಖವಾಗಿ ತಿರುಗಿದುದಕ್ಕೆ ಸಂತೋಷದ ಉದ್ಗಾರ) ಎಲ್ಲ ದೇವರ ಕೃಪೆ! ಬದುಕಿಸಿದೆ ದೇವರೇ! G. knows (ನನ್ನ ಅರಿವಿಗೆ, ಮನುಷ್ಯನ ಅರಿವಿಗೆ, ಮೀರಿದ್ದು ಎಂಬ ಭಾವನೆಯಲ್ಲಿ) ದೇವರಿಗೇ ಗೊತ್ತು; ನಾನರಿಯೆ. ಅದಕ್ಕೆ ದೇವರೇ ಸಾಕ್ಷಿ. For God's sake (ಬಹಳವಾಗಿ ಗೋಗರೆಯುವಲ್ಲಿ) ದೇವರಿಗಾಗಿ! ದಮ್ಮಯ್ಯ! By G. ದೇವರಾಣೆ! So help me G.! (Help ನೋಡಿ)]. **Gódfather, Gódmother, G.-parent, G.-papa, G.-mamma** (ಕ್ರೈಸ್ತರಲ್ಲಿ, ಜ್ಞಾನಸ್ನಾನ ಮಾಡಿಸುವಾಗ) ಮಗುವಿನ ಧಾರ್ಮಿಕ ಶಿಕ್ಷಣದ ಜವಾಬ್ದಾರಿಯನ್ನು ಹೊತ್ತವನು, — ವಳು; ಧರ್ಮಿಯ ಪಿತ, ಮೊ. [(ಇದರಂತೆ) **G.-child, Gódson, G.-daughter**]. **Gódfather** (ನಾ., ಕ್ರಿ. ಸಕ.) (ರೂಪ.) ವ್ಯಕ್ತಿಗೆ, ವಸ್ತುವಿಗೆ, ಯಾರ ಹೆಸರಿಟ್ಟಿದೆಯೊ ಅವನು; ಹೆಸರು ಕೊಟ್ಟವನು. (ಕ್ರಿ.) ಧರ್ಮಿಯ ಪಿತನಾಗು; (— ಗೆ) ತನ್ನ ಹೆಸರು ಕೊಡು; (— ಗೆ) ಜವಾಬ್ದಾರಿವಹಿಸಿಕೊ. **G.-fearing** ದೈವಭೀತಿಯುಳ್ಳ; ಆಸ್ತಿಕತೆಯುಳ್ಳ; ನಿಷ್ಕಾಪಟ್ಯದ; ಧರ್ಮಶ್ರದ್ಧೆಯುಳ್ಳ. **G.-forsaken** ಗುಣಲೇಶವಿಲ್ಲದ; ದಿಕ್ಕಿಲ್ಲದ; ಕಳೆಗೆಟ್ಟ; ಹಾಳುಬಿದ್ದ. (What a g.-f. hole! ಎಂಥ ಹಾಳು ಕೊಂಪೆ!). **Gódmán** ದೇವಮನುಷ್ಯ; ಏಸುಕ್ರಿಸ್ತ. **God's-acre** (ಚರ್ಚಿನ ಆವರಣದಲ್ಲಿರುವ) ಸಮಾಧಿ ಭೂಮಿ. **God's book** ಬೈಬಲ್ ಗ್ರಂಥ. **Gódsend** ಅನಿರೀಕ್ಷಿತವಾಗಿ ಒದಗಿಬಂದ ಸುಘಟನೆ, ಲಾಭ; ದೈವದತ್ತವಾದದ್ದು. **G.-speed** (G. speed you! ಎಂಬುದರ ಸಂಕ್ಷಿಪ್ತ). 'ದೇವರು ರಕ್ಷಿಸಲಿ' ಎಂಬ ಆಶೀರ್ವಚನ (Bid person g.-s. ಕಾರ್ಯ ಕೈಗೂಡಲೆಂದು, ಪ್ರಯಾಣ ಕ್ಷೇಮವಾಗಿ ಮುಗಿಯಲೆಂದು, ಮೊ., ಒಬ್ಬನನ್ನು ಹರಸು; 'ದೇವರು ರಕ್ಷಿಸಲಿ' ಎಂದು ಹರಸು). **Góddess** ಗಾಡೆಸ್ (ನಾ.) ಸ್ತ್ರೀ ದೇವತೆ; ದೇವಿ. [(ಲ್ಯಾಟಿನ್ ಪುರಾಣದಲ್ಲಿ) G. of heaven, hell, love, wisdom, moon, corn, war (ಕ್ರಮವಾಗಿ) ಜೂನೋ, ಪ್ರೊಸರ್ಪಿನ್, ವೀನಸ್, ಮಿನರ್ವ, ಡಯಾನ, ಸೀರೀಸ್, ಬೆಲೋನ]. ಒಬ್ಬನ ಮೆಚ್ಚಿನವಳು, ನಲ್ಲೆ. **Gódhead** (ನಾ.) ದೇವರಾಗಿ, ದೇವತೆಯಾಗಿ, — ಇರುವುದು; ದೇವತ್ವ; ದೇವತೆ. The G. = God. **Gódhood** (ನಾ.) ದೇವತ್ವ; ದೇವ ಭಾವ; ದೇವರು. **Gódless** (ಗು.) ದೇವರಿಲ್ಲದ: ಅದೈವ; ದೇವರನ್ನು ನಂಬದ, ಒಪ್ಪದ; ನಿರೀಶ್ವರ; ನಾಸ್ತಿಕ; ಅಧಾರ್ಮಿಕ; ದುಷ್ಟ. **Gódlessness** (ನಾ.); **Gódlike** (ಗು.) (ಯಾವುದಾದರೂ ಗುಣದಲ್ಲಿ) (ಒಂದು) ದೇವತೆಯನ್ನು, ದೇವರನ್ನು, ಹೋಲುವ; ದೇವರಂಥ; ದೇವ ಯೋಗ್ಯ. **Gódliness** (ನಾ.); **Gódly** (ಗು.) ದಿವ್ಯ; ಧರ್ಮಶ್ರದ್ಧೆಯುಳ್ಳ; ದೈವಭಕ್ತಿಯುಳ್ಳ. **Gódship** (ನಾ.) ದೇವತ್ವ (ಮು., ಹಾಸ್ಯದ ಒಕ್ಕಣೆಯಲ್ಲಿ). **Gódward** (ಕ್ರಿ. ವಿ., ಗು.) ದೇವರ ಕಡೆಗೆ; — ಕಡೆಯ; — ವಿಷಯದಲ್ಲಿ; — ಸಂಬಂಧದಲ್ಲಿ. **Gódwards** (ಕ್ರಿ. ವಿ.)

God (ಕ್ರಿ. ಸಕ.) ದೇವಪದವಿಗೇರಿಸು; ದೇವತ್ವಕ್ಕೇರಿಸು; ದೇವರಾಗಿ ಮಾಡು. G. it ದೇವರಂತೆ ಆಡು, ವರ್ತಿಸು.

Godówn ಗೋಡೌನ್ (ನಾ.) (ಆಂ. ಇಂ.) ಮಳಿಗೆ; ಕೋಠಿ; ಗಿಡಂಗು.

Goéthian ಗಟಿಯನ್ (ಗು., ನಾ.) (ಜರ್ಮನ್ ಕವಿ) ಗಟೆಯ (ಅನುಯಾಯಿ, ಮೆಚ್ಚುಗ); ಗಟೆಯಂಥ; ಗಟೆಯ ಲೇಖನಗಳ(ಂಥ), ಅಭಿಪ್ರಾಯಗಳ(ಂಥ)

Gófer ಗೋಫರ್ (ನಾ.) (ಜೇನುಹುಟ್ಟಿಯಂತೆ ಅಚ್ಚೊತ್ತಿರುವ) ಒಂದು ಬಗೆಯ ತೆಳ್ಳನೆಯ ಕಜ್ಜಾಯ.

Góf(f)er, Gópher, Gaúffer ಗಾ(ಗೋ)ಫರ್ (ಕ್ರಿ. ಸಕ., ನಾ.) (ಅಲಂಕಾರಪಟ್ಟಿಯ ಅಂಚು, ಮೊ. ನ್ನು) ಬಿಸಿಕಬ್ಬಿಣದಿಂದ ಒತ್ತಿ ತೆರೆ ತೆರೆ ಮಾಡು, ನಿರಿಗೆ ಮಾಡು. [Goffered edges of book (ಪುಸ್ತಕದ ರಟ್ಟಿನ ಮೇಲೆ ಒತ್ತಿ ಮಾಡಿದ ಚಿತ್ರಗಳುಳ್ಳ) ಅಲಂಕಾರದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಬ್ಬುಂಡುಗಳು]. (ನಾ.) ನಿರಿಗೆಯೊತ್ತಲು ಉಪಯೋಗಿಸುವ ಬಿಸಿ ಕಬ್ಬಿಣ. ಈ ಕೆಲಸ ಮಾಡುವವನು. (ನಿರಿ, ಅಂಚು, ಮೊ. ಗಳ) ಅಲಂಕಾರದ ಹೆಣಿಗೆ.

Góggle ಗಾಗ್ಲ್ (ಕ್ರಿ., ಗು., ನಾ.) ಮೆಳ್ಳೆಗಣ್ಣಾಗಿರು ; ಕಣ್ಣು ತಿರುಗಿಸು, ಸುತ್ತಿಸು ; (ಕಣ್ಣುಗುಡ್ಡೆ) ಮುಂದಕ್ಕೆ ಚಾಚು, ಉಬ್ಬಿ ಕೊಂಡಿರು ; ಕಣ್ಣು ಸುತ್ತುತ್ತಿರು ; ಓರೆಯಾಗಿ ನೋಡು ; ಕಣ್ಣು ಗಳನ್ನು ಪಕ್ಕಕ್ಕೆ, ಒಂದು ಕಡೆಯಿಂದ ಇನ್ನೊಂದು ಕಡೆಗೆ, ತಿರುಗಿಸು ; ಮಾಲಿಸು. (ಗು.) (ಕಣ್ಣುಗಳು) ಮುಂಚಾಚಿದ, ಉಬ್ಬಿದ, ಪೂರ್ತಿ ಅರಳಿ ಸುತ್ತುತ್ತಿರುವ. (ನಾ., ಬ. ವ. ದಲ್ಲಿ) (ಧೂಳ, ದೂಳು, ಮೊ. ಗಳಿಂದ ಕಣ್ಣಿಗೆ ತೊಂದರೆಯಾಗದಂತೆ ಉಪಯೋಗಿಸುವ, ಸಾ., ಬಣ್ಣದ ಗಾಜು, ತಂತಿ ಜಾಲರಿ, ಮೊ. ನ್ನು ಅಳವಡಿಸಿ ಮಾಡಿದ) ಒಂದುಬಗೆಯ ಕನ್ನಡಕ ; ಬಿಸಿಲು ಕನ್ನಡಕ ; ದೂಳು ಕನ್ನಡಕ ; (ಅಸಂ.) ದುಂಡು ರೆನ್ಸಿನ ಕನ್ನಡಕ. ಕುರಿಗಳ ಒಂದು ರೋಗ ; (ದನಗಳ, ಕುದುರೆಗಳ) ಒಂದು ಬಗೆಯ ತತ್ತರಿಸುವ ರೋಗ. **Góggle-eyed** (ಗು.) ಗುಳ್ಳೆ ಗಣ್ಣಿನ ; ಉಬ್ಬುಗಣ್ಣಿನ ; ಹೊರಳುಗಣ್ಣಿನ.

Góglet ಗಾಗ್ಲೆಟ್, **Gúgglet** ಗಗ್ಲೆಟ್ (ನಾ.) (ಆಂ. ಇಂ.) (ನೀರನ್ನು ತಣ್ಣಗಿಟ್ಟಿರುವುದಕ್ಕಾಗಿ, ಸಾ., ಮಣ್ಣಿನಿಂದ ಮಾಡಿದ, ಉದ್ದಗತ್ತಿನ) ಹೂಜಿ ; ಮಣ್ಣು ಹೂಜಿ.

Goítre ಗಾಯ್ಟರ್ (ನಾ.) ಕತ್ತಿನಲ್ಲಿರುವ 'ಥೈರಾಯ್ಡ್' ಗ್ರಂಥಿಯ ಊತ (ಅನೇಕ ವೇಳೆ ದೊಡ್ಡದಾಗಿ ಜೋಲಾಡುತ್ತಿರುವದು) ; ಗಳಗಂಡ. **Goítred** — ಟರ್ಡ್ (ಗು.) ; **Goítrous** — ಟ್ರಸ್ (ಗು.) ಗಳಗಂಡ ಬಂದ ; ಗಳಗಂಡದಂಥ : ಗಳಗಂಡದ ; (ಸ್ಥಳ) ಗಳಗಂಡ ರೋಗ ಹರಡಿರುವ.

Golcónda ಗಾಲ್ಕಾಂಡ (ನಾ.) ಐಶ್ವರ್ಯದ ಗಣಿ (ರೂಪ. ಸಹ). (ಹಿಂದೆ, ವಜ್ರವ್ಯಾಪಾರದ ಕೇಂದ್ರವಾಗಿದ್ದ ಗೋಲ್ಕೊಂಡ ಎಂಬ ಹೈದರಾ ಬಾದಿನಲ್ಲಿಯ ಒಂದು ಪಟ್ಟಣದ ಹೆಸರಿನಿಂದ)

Gold ಗೋಲ್ಡ್ (ನಾ.) ಗಾಳಿಯಲ್ಲಿ ಕಿಲುಬದ, ತಗಡಾಗಿ ಬಡಿಯಲೂ ತಂತಿಯೆಳೆಯಲೂ ಆಗುವ, ಹೆಚ್ಚುಸಾಂದ್ರತೆಯುಳ್ಳ, ಹಳದಿಯ ಬಣ್ಣದ ಒಂದು ಪ್ರಶಸ್ತ ಲೋಹ : ಚಿನ್ನ ; ಹೊನ್ನು ; ಬಂಗಾರ ; ಸ್ವರ್ಣ ; ಸುವರ್ಣ ; ಹೇಮ ; ಕನಕ ; ಕಾಂಚನ. ಚಿನ್ನದ ನಾಣ್ಯ ; ಹೆಚ್ಚು ಹಣ ; ಅಪಾರ ಧನ ; ಧನಸಂಪತ್ತು ; ಸಂಪತ್ತು ; ಐಶ್ವರ್ಯ. (ರೂಪ.) ಉಜ್ಜ್ವಲ, ಸುಂದರ, ಪ್ರಶಸ್ತ, ಶ್ರೇಷ್ಠ, ಸಾರ, — ವಸ್ತು, ಪದಾರ್ಥ [A heart, voice, of g. ಚಿನ್ನದಂಥ, ಅಮೂಲ್ಯ, — ಹೃದಯ, ಕಂಠ. Age of g. = Golden age (Golden ನೋಡಿ). Pure g. ಅಪರಂಜಿ (She is pure g.). All that glisters or glitters is not g. ಹೊಳೆಯುವುದೆಲ್ಲ ಹೊನ್ನಲ್ಲ ; ಬೆಳ್ಳಗಿರುವುದೆಲ್ಲ ಹಾಲಲ್ಲ]. ಮುರಾಮು ಮಾಡುವುದಕ್ಕಾಗಿ, ಬಣ್ಣ ವಾಗಿ, ಉಪಯೋಗಿಸುವ ಚಿನ್ನ ; ಚಿನ್ನದ ಮುರಾಮು. ಚಿನ್ನದ ದಾರ, ಸರಿಗೆ. ಹೊಂಬಣ್ಣ [Old g. (ನಾ.) ಮಾಸಲು ಕಂದು ಹೊಂಬಣ್ಣ. Old-g. (ಗು.) ಇಂಥ ಬಣ್ಣವುಳ್ಳ]. (ಬಿಲ್ಲುವಿದ್ಯೆ) ಗುರಿ ಗಣ್ಣಿನ ಹೊಳಪಿನ ಮಧ್ಯಭಾಗ (ಸಾ., ಗಿಲೀಟು ಮಾಡಿರುವುದು). **G. amalgam** ಪಾದರಸ ಚಿನ್ನಗಳ ಮೆತುಮಿಶ್ರಣ : ರಸ ಬಂಗಾರ. **G.-beater** ಚಿನ್ನದ ರೇಕು ಬಡಿಯುವವನು. G.-beater's skin ಚಿನ್ನದ ರೇಕು ಬಡಿಯುವಾಗ ರೇಕುಗಳನ್ನು ಬೇರ್ಪಡಿಸಲು ಉಪಯೋಗಿ ಸುವ ತೆಳುಚರ್ಮ ; ಸಣ್ಣ ಗಾಯಗಳಮೇಲೆ ಅಂಟಿಸುವ ಚರ್ಮದ ಪೊರೆ. **G. brick** ಹೊರಕ್ಕೆ ಮಾತ್ರ ಬೆಲೆಯುಳ್ಳಂತೆ ಕಾಣುವ ಬರಿಯ ಥಳುಕಿನ ವಸ್ತು. ಠಕ್ಕು ; ವೇಷ ; ಮೋಸ. **G.-digger** (Dig ನೋಡಿ). (ಅಮೆ. ಸಂ., ಅಸಂ.) ಥಳುಕುಮಾಡಿ ಗಂಡಸರಿಂದ ಹಣ ಸುಲಿಯುವ ಒಲಪುಗಾತಿ. **G.-dust** (ಸಾ., ಸ್ವಾಭಾವಿಕ ಸ್ಥಿತಿ ಯಲ್ಲಿಯೇ ದೊರೆಯುವ) ಚಿನ್ನದ ದೂಳು, ಪುಡಿ. **G.-fever** ಚಿನ್ನ ಹುಡು ಕುವ ಹುಚ್ಚು. **G.-field** ಚಿನ್ನ ದೊರೆಯುವ ಪ್ರಾಂತ ; ಚಿನ್ನದ ಗಣಿಯ ಪ್ರದೇಶ. **Góldfinch** ಒಂದು ಜಾತಿಯ ಹಾಡುಹಕ್ಕಿ. (ಅಸಂ.) ಚಿನ್ನದ ನಾಣ್ಯ ; ಸವರನ್ನು. **G.-fish** ಅಲಂಕಾರಕ್ಕಾಗಿ ಕೊಳಗಳಲ್ಲಿ, ಗಾಜುಪಾತ್ರೆಗಳಲ್ಲಿ, ಸಾಕುವ ಚೀನಾದೇಶದ ಕೆಂಪು ಬಣ್ಣದ ಒಂದು ಸೀನೀರಿನ ಸಣ್ಣ ಮೀನುಜಾತಿ ; ಹೊಮ್ಮೀನು. **G.-foil, G.-leaf** ಚಿನ್ನದ ರೇಕು, — ವರಕು ; ಚಂಚಪು ರೇಕು (-foil ಹೆಚ್ಚುದಪ್ಪದ್ದು). **G.-mine** ಚಿನ್ನದ ಗಣಿ ; (ರೂಪ. ಸಹ) : ಸಂಪತ್ತಿನ ನೆಲೆ. **G. plate** ಚಿನ್ನದ ಪಾತ್ರೆಗಳು. **G.-rush** ಹೊಸ ಚಿನ್ನದ ಗಣಿಗೆ ನುಗ್ಗಾಟ. **Góldsmith** ಚಿನ್ನದ ಕೆಲಸ ಮಾಡುವವನು ; ಅಕ್ಕಸಾಲಿಗ ; ಸೋನಗಾರ ; ಸೋನಾರ ; ವಾಜರವನು. (G.-s. beetle ಹೊಂಬಣ್ಣದ ರೆಕ್ಕೆಮುಸುಕುಳ್ಳ ಒಂದು ಜೀರುಂಡೆಜಾತಿ). **G. stick** ಪ್ರಭುಗಳ ದರ್ಬಾರು, ಮೊ. ಸಂದರ್ಭಗಳಲ್ಲಿ ಚಿನ್ನದ (ಮುಲಾಮಿನ) ದಂಡವನ್ನು ಮುಂದೆ ಹಿಡಿದಿರುವ ಅಧಿಕಾರಿ : ಚಿನ್ನದ ಕಟ್ಟಿಗೆ(ಯವನು)

Gold (ಗು.) ಪೂರ್ತಿಯಾಗಿ ಅಥವಾ ಮುಖ್ಯವಾಗಿ ಚಿನ್ನದಿಂದ ಮಾಡಿದ ; ಚಿನ್ನದ ; ಹೊನ್ನಿನ ; ಹೊಂಬಣ್ಣದ. (ತಗ್ಗಿದ ಬೆಲೆಯ ನಾಣ್ಯಚಲಾವಣೆಯಲ್ಲಿ) ಸಮಬೆಲೆಯಲ್ಲಿ ಲೆಕ್ಕಮಾಡಿದ. G. francs (ಬೆಲೆ ತಗ್ಗದೆಯಿದ್ದಾಗಿನ) ನಿರುಕು ಬೆಲೆಯ ಫ್ರಾಂಕು ನಾಣ್ಯಗಳು.

Gódlen ಗೋಲ್ಡನ್ (ಗು.) ಚಿನ್ನದಿಂದ ಮಾಡಿದ ; ಚಿನ್ನದ [G. fleece (Fleece ನೋಡಿ). G. key (ಅಡಚಣೆಯನ್ನು, ತೊಂದರೆ ಯನ್ನು, ತಪ್ಪಿಸಲು ಉಪಯೋಗಿಸುವ) ಹಣ]. ಚಿನ್ನ ತುಂಬಿರುವ ; ಚಿನ್ನ ಕೊಡುವ. ಹೊಂಬಣ್ಣದ ; ಹೊಂಬೆಳಗಿನ ; ಪ್ರಶಸ್ತ ; ಅಮೂಲ್ಯ ; ಉತ್ಕೃಷ್ಟ ; ಶ್ರೇಷ್ಠ ; ಪ್ರಧಾನ. [G. age ಮನುಷ್ಯನ ಚರಿತ್ರೆಯಲ್ಲಿ (ಚಿನ್ನ, ಬೆಳ್ಳಿ, ಹಿತ್ತಾಳೆ, ಕಬ್ಬಿಣ ಎಂಬ ನಾಲ್ಕು ಯುಗಗಳಲ್ಲಿ ಮೊದಲನೆಯ ದಾದ, ಮನುಷ್ಯರೆಲ್ಲ ಸುಖ ಸಂತೋಷಗಳಿಂದ ಕೂಡಿ ಪಾಪವನ್ನರಿಯದವ ರಾಗಿದ್ದರೆಂದು ಭಾವಿಸುವ) ಸತ್ಯಯುಗ ; ಸ್ವರ್ಣ ಯುಗ ; ಕೃತ ಯುಗ ; (ಜನಾಂಗದ, ಸಾಹಿತ್ಯದ) ಅತಿ ಉಚ್ಛ್ರಾಯ ಕಾಲ, ಏಳಿಗೆಯ ಕಾಲ. G. mean (ಅತಿ ಹೆಚ್ಚೂ ಅತಿ ಕಡಮೆಯೂ ಅಲ್ಲದ) ಮಧ್ಯ ಮಾರ್ಗ ; ಮಿತ ತತ್ತ್ವ ; ನಡು ನೆಲೆ. G.-mouthed ವಾಗ್ಮೋರಣೆಯ ; ವಾಚಾ ಲತೆಯ ; ವಾಗ್ಮಿಯಾದ. G. number ಈಸ್ಟರ್‌ಹಬ್ಬ ಬೀಳುವ ತೇದಿ ಯನ್ನು ಗುಣಿಸಲು ಉಪಯೋಗಿಸುವ ಸಂಖ್ಯೆ. G. opinions ಗೌರವದ, ಘನ, ಅಭಿಪ್ರಾಯಗಳು ; ಅತ್ಯಂತ ಮೆಚ್ಚುಗೆ. The g. rule 'ತನ್ನಂ ತೆಯೇ ಹೆರರನ್ನೂ ಕಾಣು' ಎಂಬ ಬೈಬಲ್ಲಿನ ಸೂತ್ರ. A g. saying ಚಿನ್ನದಂಥ ಮಾತು ; ಘನವಾದ, ಅಮೋಘ, ವಚನ]. **G. balls** ಗಿರವಿಗಾರನ ಅಂಗಡಿಯೆಂಬುದಕ್ಕೆ ಸಂಕೇತವಾದ ಮೂರು ಮೆರುಗುಗೋಲಿಗಳ ಗುರುತು. **G.-eye** ಒಂದು ಬಗೆಯ ಸಮು ದ್ರದ ಬಾತು. **G. Horn** (ಬಿಲ್ಲಿನಂತೆ) ಬಗ್ಗಿರುವ ಬಾಸ್ಫರಸ್ ಜಲ ಸಂಧಿ ; ಕಾನ್‌ಸ್ಟಾಂಟಿನೋಪಲ್ಲಿನ (ಈಗ, ಇಸ್ತಾಂಬೋಲಿನ) ರೇವು. **G.-knop** ಒಂದು ಜಾತಿಯ ಸಣ್ಣ ಜೀರುಂಡೆ. **G. rain** ಒಂದು ಬಗೆಯ ಬಾಣಬಿರುಸು : ಮಳೆಬಾಣ. **G.-rod** ಕೋಲಿನಂತಿರುವ ದಂಟೂ ಹೊಳೆವ ಹೊಂಬಣ್ಣದ ಹೂಗೊಂಚಲೂ ಉಳ್ಳ ಒಂದು ಸಸ್ಯ ಜಾತಿ. **G. syrup** (Syrup ನೋಡಿ). **G.-wedding** ಮದುವೆಯ ಐವತ್ತನೆಯ ವರ್ಷದ ಉತ್ಸವ ; ವಿವಾಹದ ಸುವರ್ಣ ಮಹೋತ್ಸವ.

Golf ಗಾಲ್ಫ್, ಗಾಫ್ (ನಾ., ಕ್ರಿ. ಅಕ.) [ಗಡುಸಾಗಿರುವ ಒಂದು ಸಣ್ಣ ಚೆಂಡನ್ನು ಬಗೆ ಬಗೆಯ ದಾಂಡುಗಳಿಂದ ಹೊಡೆದು ಹಸುರುಮೈದಾನದ ಮೇಲೆ ಓಡಿಸುತ್ತ, ಸ್ವಾಭಾವಿಕವಾಗಿಯೊ ಕೃತಕವಾಗಿ ಮಾಡಿಯೊ ಇರುವ ಅಡಚಣೆಗಳನ್ನು ದಾಟಿಸಿ, ಒಂದು ಕ್ರಮವಿಲ್ಲದೆ ಅಲ್ಲಲ್ಲಿ ಮಾಡಿರುವ ಕುಳಿ (ಬದ್ದು)ಗಳನ್ನು (ಸಾ., ಒಂಬತ್ತು ಅಥವಾ ಹದಿನೆಂಟು) ತುಂಬಿಸಿ, (ಇಬ್ಬರು ಅಥವಾ ಎರಡು ಜೊತೆಯವರು) ಆಡುವ] ಒಂದು ಬಗೆಯ ಚೆಂಡಾಟ : 'ಗಾಲ್ಫ್' ಆಟ (ಅತ್ಯಂತ ಕಡಮೆಯ ಏಟುಗಳಿಂದ ಎಲ್ಲ ಬದ್ದುಗಳನ್ನೂ ತುಂಬಿಸಿ ಸುತ್ತಿ ಬಂದವನು ಜಯಶಾಲಿ). (ಕ್ರಿ.) ಗಾಲ್ಫ್ ಆಟ ಆಡು. **G.-club** ಗಾಲ್ಫ್ ಆಟಗಾರರ ಸಂಘ ; ಗಾಲ್ಫ್ ದಾಂಡು. **G. - links** ಗಾಲ್ಫ್‌ಆಟದ ಮೈದಾನ. **Gólfer** (ನಾ.) ಗಾಲ್ಫ್ ಆಟಗಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Golíath ಗೊಲ್ಯೈಅತ್ (ನಾ.) ರಾಕ್ಷಸ; ದೈತ್ಯ. [(ಬೈಬಲ್ಲಿನ) ಡೇವಿಡ್ ಎಂಬವನು ಕೊಂದ ರಾಕ್ಷಸನ ಹೆಸರಿನಿಂದ]

Gólliwog ಗಾಲಿವಾಗ್ (ನಾ.) ವಿಕಟಾಕಾರದ ಬೊಂಬೆ ; ಗುಮ್ಮ ; ಗೊಗ್ಗಯ್ಯ ; ಬೆರ್ಚಪ್ಪ.

Golósh = Galosh.

Golúptious, Golóp- ಗೊಲಪ್‌ಷಸ್ (ಗು.) (ಹಾಸ್ಯವಾಗಿ) ರಸವತ್ತಾದ; ಬಹು ರುಚಿಯಾದ ; ಬಹಳ ಸೀಯಾದ ; ಮನೋಹರ ; ರುಚಿರ ; ಆಮೋದಕರ ; ಬಾಯಲ್ಲಿ ನೀರೂರಿಸುವ.

Gombeén ಗಾಂಬೀನ್ (ನಾ.) (ಆ್ಯಂಗ್ಲೊ ಐರಿಷ್) ಅತಿ ಹೆಚ್ಚು ದರದ ಮೇಲೆ ಸಾಲ ಕೊಡುವುದು ; ದುಬಾರಿ ಬಡ್ಡಿ. G.-man (ದುಬಾರಿ ಬಡ್ಡಿಗೆ) ಸಾಲ ಕೊಡುವವನು.

Gom(b)roón ಗಾಂ(ಬ್)ರೂನ್ (ನಾ.) (ಇಂಗ್ಲೆಂಡಿನ ಚೆಲ್ಸೀ ಪಟ್ಟಣದ ಮಣ್ಣಿನ ಪಾತ್ರೆಗಳಲ್ಲಿ ಅನುಕರಣಮಾಡಿರುವ) ಪರ್ಷಿಯಾ ದೇಶದ ಕುಂಬಾರ ಸಾಮಾನು. (ಪರ್ಷಿಯನ್ ಖಾರಿಯ ತೀರದ ಒಂದು ಊರಿನ ಹೆಸರಿನಿಂದ)

Gomórrah ಗೊಮಾರ (ನಾ.) ದುಷ್ಟ ಕೊಂಪೆ(ಯ ಮಾದರಿ) (ಬೈಬಲ್)

-gon — ಗಾನ್ (ಉ. ಪ್ರ.) —ಕೋನ [Hexagon ಷಟ್ಕೋನಾಕೃತಿ. Polygon ಬಹುಕೋನಾಕೃತಿ. N-gon : N-ಸಂಖ್ಯೆಯ ಕೋನಾಕೃತಿ]

Gónad ಗಾನ್ಯಡ್ (ನಾ.) (ಜೀ. ವಿ.) ಅಂಡಾಶಯವಾಗಿಯೂ ರೇತ್ರಾಶಯವಾಗಿಯೂ ಸಹ ಕಾರ್ಯ ಮಾಡಬಲ್ಲ ಜನನಗ್ರಂಥಿ : ಅಂಡ ರೇತ್ರ ಗ್ರಂಥಿ.

Góndola ಗಾಂಡ(ಡೊ)ಲ (ನಾ.) ಮಧ್ಯಭಾಗದಲ್ಲಿ ಒಂದು ಕೋಣೆಯಿರುವ, ಎರಡು ತುದಿಗಳೂ ಉದ್ದನಾಗಿ ಮೇಲಕ್ಕೆದ್ದಿರುವ, ಹಿಂಭಾಗದಲ್ಲಿಯ ಒಂದು ಹುಟ್ಟಿನಿಂದ ನಡಸುವ, ವೆನಿಸ್ ನಗರದ ನೀರುಕಾಲುವೆಗಳ ಮೇಲೆ ಓಡಾಡುವ, ಹಗುರವಾದ, ಚಪ್ಪಟೆ ತಳದ ಒಂದು ಬಗೆಯ ದೋಣಿ: 'ಗಾಂಡೊಲ'. ವಾಯುಹಡಗಿನ ತಳಕ್ಕೆ ಕಟ್ಟಿರುವ ತೂಗುದೊಟ್ಟಿಲು. **Gondoliér** ಗಾಂಡೊಲಿಯರ್ (ನಾ.) ಗಾಂಡೊಲ (ದೋಣಿಯನ್ನು) ನಡಸುವವನು.

Gone. Go ಧಾತುವಿನ ಭೂ. ಕೃ.

Gónfalon ಗಾನ್‌ಫಲಾನ್ (ನಾ.) (ಮು., ಇಟಲಿಯ ಪ್ರಜಾಪ್ರಭುತ್ವಗಳ) ಒಂದು ತೆರದ ಬಾವುಟ, ಧ್ವಜ. **Gonfaloniér** — ಲೊನಿಯರ್ (ನಾ.) ಬಾವುಟ ಹಿಡಿಯುವವನು ; ಧ್ವಜ ವಾಹಕ. (ಇಟಲಿಯ ಕೆಲವು ಪ್ರಜಾ ಪ್ರಭುತ್ವಗಳಲ್ಲಿ) ಮುಖ್ಯ ದಂಡಾಧಿಕಾರಿ.

Gong ಗಾಂಗ್ (ನಾ., ಕ್ರಿ. ಸಕ.) (ಪಾಶ್ಚಾತ್ಯ ದೇಶಗಳಲ್ಲಿ, ಸಾ., ಊಟಕ್ಕೆ ಬರಬೇಕೆಂದು ಸೂಚಿಸುವ) (ಅಂಚು ಮಡಿಸಿರುವ) ಜಾಗಟೆ. (ಕರೆ ಗಂಟೆಯಾಗಿ ಅಥವಾ ಎಚ್ಚರಿಕೆಯ ಗಂಟೆಯಾಗಿ ಉಪಯೋಗಿಸುವ, ಆಡಿಸುವ ನಾಲಗೆಯುಳ್ಳ) ಬಟ್ಟಲುಗಂಟೆ. (ಕ್ರಿ.) (ಪೋಲೀಸಿನವನು ಮೋಟಾರನ್ನು) ಜಾಗಟೆಹೊಡೆದು ನಿಲ್ಲಿಸು.

Goniómeter ಗೋನಿಯಾಮಿಟರ್ (ನಾ.) ಕೋನಗಳನ್ನು ಅಳೆಯುವ ಸಲಕರಣೆ : ಕೋನ ಮಾಪಕ. **Goniómetry** — ಮಿಟ್ರಿ (ನಾ.) ಕೋನ ಮಾಪನ. **Goniométric(al)** — ಯೊಮೆಟ್ರಿ — (ಗು.)

Gonorrhoéa ಗಾನೊರೀಯ (ನಾ.) (ಹೆಂಗಸಿನ ಅಥವಾ ಗಂಡಸಿನ) ಹುಣ್ಣಾದ ಮೂತ್ರನಾಳದಿಂದ ಉರಿತದ ಕೀವು ಸುರಿಯುವುದು ; ಒಂದು ತೆರದ ಮೇಹ ರೋಗ ; ಶುಕ್ಲ ದೋಷ. **Gonorrhoéal** (ಗು.)

Good ಗುಡ್ (ಗು., ತರ ತಮ ರೂಪಗಳು better, best) ಒಳ್ಳೆಯ ; ಒಳ್ಳೆಯ ಗುಣಗಳುಳ್ಳ ; ಚೆನ್ನಾದ ; ಉಚಿತ ; ಹಿತವಾದ ; ತೃಪ್ತಿಕರವಾದ ; ಸಮರ್ಪಕವಾದ ; ತಕ್ಕ ; ಸಾಕಾದ ; ಮೆಚ್ಚತಕ್ಕ ; ಯಥೋಚಿತ ; ಲಾಭಕರವಾದ ; ಶುಭವಾದ ; ಮಂಗಳಕರವಾದ. A g. fire ಘದವಾದ ಭೆಂಕಿ. Meat keeps g. ಮಾಂಸ ಕೆಡದೆ ಚೆನ್ನಾಗಿರುತ್ತದೆ. G. soil ಫಲವತ್ತಾದ ನೆಲ. Not g. enough (ಬಳ. ಮಾ.) ಮಾಡಲು, ಅಂಗೀಕರಿಸಲು, ತಕ್ಕದ್ದಾಗಿಲ್ಲ ; ತಕ್ಕಷ್ಟು ತೃಪ್ತಿಕರವಾಗಿಲ್ಲ. G. money. ಒಳ್ಳೆಯ ನಾಣ್ಯ ; ಸಲ್ಲುವ ನಾಣ್ಯ ; ಗಟ್ಟಿ ಹಣ. G. law ಊರ್ಜಿತವಾಗುವ, ಸಾಧುವಾದ, ಸರಿಯಾದ, —ನ್ಯಾಯ. Is g. eating ತಿನ್ನುವುದಕ್ಕೆ ಚೆನ್ನಾಗಿದೆ. G. men & true ಯೋಗ್ಯರು ಮತ್ತು ಸತ್ಯಸಂಧರು. G. old days (ಬಳ. ಮಾ., ಮೆಚ್ಚಿಕೆಯ ಅರ್ಥದಲ್ಲಿ) ಹಿಂದಿನ ಒಳ್ಳೆಯ ದಿನಗಳು. That's a good un ! (ಅಸಂ.) ಹೇಳಲು ಯೋಗ್ಯವಾದ ಸುಳ್ಳು. (ವಿನಯವಾಗಿ, ಅನುಗ್ರಹ ಪೂರ್ವಕವಾಗಿ, ಕೃತಕ ವಿನಯವಾಗಿ ಅಥವಾ ಕೋಪವಾಗಿ, ಸಂಬೋಧಿಸುವಾಗ) My g. friend, man, sir ! ಗೆಳೆಯನೆ ! ಸಂಭಾವಿತನೆ ! ಮಹನೀಯರೆ ! The g. people ಗಂಧರ್ವರು ; ವನದೇವತೆಗಳು ; ಮೋಹಿನಿಯರು. Of g. family ಸದ್ವಂಶದ ; ಒಳ್ಳೆಯ ಮನೆತನದ. In g. spirits ಗೆಲುವಾಗಿ ; ಉಲ್ಲಾಸದಿಂದ ; ಉತ್ಸಾಹದಿಂದ. It is g. to be here ಇಲ್ಲಿರುವುದು ಒಳ್ಳೆಯದು, ಉಚಿತವಾಗಿದೆ. G. God ! G. heavens ! G. gracious ! ದಯಾಮಯ ! ಕರುಣಾಳು ! ಹಾ ದೇವರೆ ! ಅಯ್ಯೋ ದೇವರೆ ! Be so g. as to, g. enough to ದಯವಿಟ್ಟು ; ಅನುಗ್ರಹಿಸಿ. How g. of you ! ತಮ್ಮ ವಿಶ್ವಾಸ, ಉಪಕಾರ ! Say a g. word for (— ವಿಷಯದಲ್ಲಿ) ಒಂದು ಒಳ್ಳೆಯ ಮಾತು ಹೇಳು ; ಸಿಫಾರಸು ಮಾಡು ; ಪರವಾಗಿ ಮಾತನಾಡು. Do a g. turn ಉಪಕಾರ ಮಾಡು. G. news ಒಳ್ಳೆಯ ಸುದ್ದಿ ; ಶುಭ ವರ್ತಮಾನ, ಸಮಾಚಾರ. Things are in g. train ಎಲ್ಲ ಚೆನ್ನಾಗಿ ನಡೆದುಕೊಂಡು ಹೋಗುತ್ತಿದೆ. Have a g. time ಸುಖ ಸಂತೋಷಾನುಭವದಲ್ಲಿರು ; ಖುಷಿಯಾಗಿರು ; ಮಜಾ ಮಾಡು. Have a g. night (ರಾತ್ರಿ) ಸುಖವಾಗಿ, ಹಾಯಾಗಿ, ನಿದ್ದೆಮಾಡು. As g. as a play ಆಟದಂತೆ ; ವಿನೋದವಾಗಿ. Take in g. part (ಇಂದ) ಅಸಮಾಧಾನಪಡದಿರು, ಜುಗುಪ್ಸೆ ಪಡದಿರು; ಒಳ್ಳೆಯ ಅರ್ಥದಲ್ಲಿ, ಹಿತಕರವಾಗಿ, ಭಾವಿಸು. G. debts ವಸೂಲಾಗುವ ಭರವಸೆಯುಳ್ಳ ಸಾಲಗಳು ; ಖಾತರಿ ಸಾಲಗಳು. A g. life ಜೀವವಿಮೆಯ ಸಂಸ್ಥೆ ಅಂಗೀಕರಿಸುವ ದೀರ್ಘಾಯು ; ಹೆಚ್ಚು ಕಾಲ ಬದುಕುವವನು. G. for an amount ಹಣ ಕೊಡುವನೆಂದು ಧೈರ್ಯವಾಗಿ ನಂಬಬಹುದಾದ ; ಹಣಕ್ಕೆ ಖಾತರಿಯುಳ್ಳ ; (ಹುಂಡಿ, ಮೊ.) (— ಅಷ್ಟು) ಹಣಕ್ಕಾಗಿ ಬರೆದ. G. for a ten-mile walk ಹತ್ತು ಮೈಲಿ ನಡೆಯಲು ಮನಸ್ಸುಳ್ಳ, ಸಿದ್ಧವಾಗಿರುವ, ಶಕ್ತಿಯುಳ್ಳ. Gave her a g. beating ಅವಳನ್ನು ಚೆನ್ನಾಗಿ ಹೊಡೆದನು. Rule holds g. ನಿಯಮ ಅನ್ವಯಿಸುತ್ತದೆ. A g. deal, few, many (ಆಯಾ ಪದಗಳನ್ನು ನೋಡಿ). Have a g. mind ಮಾಡಲು ಮನಸ್ಸು ತವಕಿಸುತ್ತಿರು. Will take a g. long time ಬಹಳ ಹೊತ್ತು ಹಿಡಿಯುತ್ತದೆ. Played for a g. hour ಒಂದು ಗಂಟೆಗೆ ಕಡಮೆಯಿಲ್ಲದೆ, ಪೂರ್ತಿ ಒಂದು ಗಂಟೆ ಹೊತ್ತು, ಆಡಿದನು. It is three miles g. from the station ಅದು ನಿಲ್ದಾಣದಿಂದ ಪೂರ್ತಿ ಮೂರು ಮೈಲಿ ಇದೆ. He as g. as told me so ಅವನು ನನಗೆ ಹಾಗೆ ಹೇಳಿದಂತೆಯೇ ಎಣಿಸಬೇಕು. As g. as dead ಸತ್ತ ಕೂಟವೇ, ಲೆಕ್ಕವೇ. Make g. ಪರಿಹಾರ ಕೊಡು ; ನಷ್ಟ ಕಟ್ಟಿಕೊಡು ; ಖರ್ಚು (ಕಟ್ಟಿ)ಕೊಡು. (ಭಾಷೆ) ಸಲ್ಲಿಸು ; ಮಾತು ನಡಸು. (ಉದ್ದೇಶ) ಸಾಧಿಸು ; (ಆಪಾದನೆ) ರುಜುವಾತು ಮಾಡು. **G. breeding** ಸುಶಿಕ್ಷಣ ; ಸರಿಯಾದ, ವಿನಯದ, ನಡತೆ ; ಸಭ್ಯ ನಡವಳಿ ; ಸೌಜನ್ಯ ; ಕುಲೀನತೆ.

Good-byé ಗುಡ್‌ಬೈ (ಭಾವ. ಅವ್ಯ., ನಾ.) ಹೋಗಿ ಬಾ ! ನಿನಗೆ ಒಳ್ಳೆಯದಾಗಲಿ ! ಸ್ವಸ್ತಿ ! ಶುಭಮಸ್ತು ! (ಬೀಳ್ಕೊಡುವಾಗ ಹೇಳುವ ಮಾತು : God be with you ! ಎಂಬುದರ ಸಂಕ್ಷಿಪ್ತ). **G. fellow** ಸರಸಿ ; ಸ್ನೇಹಪರ. **G.-fellowship** ಉಲ್ಲಾಸಶೀಲತೆ ; ಸ್ನೇಹಪರತೆ. **G.-for-nothing, G.-for-nought** (ಗು., ನಾ.) ಕೆಲಸಕ್ಕೆ ಬಾರದ್ದು ; — ದವನು ; ಅಪ್ರಯೋಜಕ. **G. Friday** (Friday ನೋಡಿ). **G. humour** ಉಲ್ಲಾಸದ, ಹರ್ಷದ, ಮನೋಭಾವ ; ಸ್ನೇಹಪರತೆ ; ಸರಸ ಪ್ರಕೃತಿ ; ಉಲ್ಲಾಸ. **Good-húmoured**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಗು.) ; **Good-húmouredly** (ಕ್ರಿ. ವಿ.) ; **G.-looking** (ಗು.) (ನೋಡುವುದಕ್ಕೆ) ಅಂದವಾಗಿರುವ ; ಸುಂದರ ; ಸ್ಫುರದ್ರೂಪವುಳ್ಳ. **Goód-looking** (ಗು.) ಧರ್ಮಿಷ್ಠನಾಗಿ, ಒಳ್ಳೆಯವನಾಗಿ, ಕಾಣುವ. **G. looks** ಅಂದ ; ಚೆಂದ ; ಸೌಂದರ್ಯ ; ಸುಂದರ ಮುಖಭಾವ. **G. luck** (ಒಳ್ಳೆಯ) ಅದೃಷ್ಟ ; ಭಾಗ್ಯೋದಯ ; ಸುದೈವ. G. l. to you ! ನಿನಗೆ ಒಳ್ಳೆಯದಾಗಲಿ ! ಅದೃಷ್ಟಶಾಲಿಯಾಗು ! ಶುಭವಾಗಲಿ ! ಜಯವಾಗಲಿ ! **Goódman** (ಪ್ರಾಚೀ. ಪ್ರ.) ಮನೆಯ ಯಜಮಾನ : ಗಂಡ, ತಂದೆ, ಮೊ. ರು. **G. money** (ಗ್ರಾಮ್ಯ) ಹೆಚ್ಚು ಕೂಲಿ ; ದುಬಾರಿ ಕೂಲಿ. **G. morning, G. day, G. night** ಸುಪ್ರಭಾತ ! ನಮಸ್ಕಾರ ! ಒಳ್ಳೆಯದು ! ಹೋಗಿ ಬನ್ನಿ ! ಶುಭವಾಗಲಿ ! **G. morrow** (ಪ್ರಾಚೀ. ಪ್ರ.) = G. morning. **G. nature** ಒಳ್ಳೆಯ ಸ್ವಭಾವ ; ಒಳ್ಳೆಯತನ ; ಪರೋಪಕಾರಶೀಲತೆ. **Good-nátured** (ಗು.) ; **Good-náturedly** (ಕ್ರಿ. ವಿ.) ; **G.-neighbourhood, - neighbourliness, -neighbourship** ಒಳ್ಳೆಯ ನೆರೆಹೊರೆ ; ಸ್ನೇಹದ ನಡವಳಿ ; ಸ್ನೇಹಾಚರಣೆ. **Goódness** (ನಾ.) ಒಳ್ಳೆಯತನ ; ಸದ್ಗುಣ ; ಸೌಜನ್ಯ ; ಧರ್ಮಗುಣ ; ದಯಾಪರತೆ ; ಸೌಶೀಲ್ಯ ; ಮೇಲ್ಮೆ ; ಹೆಚ್ಚುಗಾರಿಕೆ ; ಶ್ರೇಷ್ಠತೆ; ಪರೋಪಕಾರ ಶೀಲತೆ; ಔದಾರ್ಯ; ದಯೆ ; ಕೃಪೆ [Have the g. to ದಯೆಯಿಟ್ಟು (ಕೊಡಿ, ಮಾಡಿ) ; (ಕೊಡುವ, ಮಾಡುವ) ಕೃಪೆ ತೋರಿ]. (ವಸ್ತುವಿನ, ವಿಷಯದ) ಸಾರ, ಸತ್ತ್ವ. G. gracious ! (ಆಶ್ಚರ್ಯ ಸೂಚಕವಾದ ಅಥವಾ ಕೋಪ ಸೂಚಕವಾದ ಉದ್ಗಾರ). G. knows = God knows. I wish to g. ದೇವರು ನಡಸಲಿ ! Thank g. ದೇವರ ದಯೆ ! For goodness' sake ದಮ್ಮಯ್ಯ ! ನಿನ್ನ ಧರ್ಮ(ಕ್ಕೆ) ! ದೇವರಿಗಾಗಿ ! **Good sense** ವಿವೇಕ ; ವಿವೇಚನೆ ; ವ್ಯಾವಹಾರಿಕ ಬುದ್ಧಿ **Good temper** ಸಹನೆ ; ತಾಳ್ಮೆ ; ಸೌಮ್ಯ ಪ್ರಕೃತಿ ; ಮನಸ್ಸಮಾಧಾನ. **Good-témpered** (ಗು.) ; **Good-témperedly** (ಕ್ರಿ. ವಿ.) ; **G. thing** ಲಾಭದ ವ್ಯವಹಾರ ; — ಜೂಜುವ್ಯಾಪಾರ. ಜಾಣ್ನುಡಿ ; ಚಮತ್ಕಾರದ ಮಾತು. **G. things** ರುಚಿಯಾದ ತಿಂಡಿ ತೀರ್ಥಗಳು ; ಮೃಷ್ಟಾನ್ನ ; ರಸ ಕವಳ. **Goódwife** ಮನೆಯೊಡತಿ ; ಯಜಮಾನಿ ; ಗೃಹಿಣಿ. **Goodwíll** (ನಾ.) (ಒಬ್ಬನ ವಿಷಯದಲ್ಲಿ) ಒಳ್ಳೆಯ ಭಾವ, ಮನಸ್ಸು ; ಅಭಿಮಾನ ; ವಿಶ್ವಾಸ ; ದಯೆ ; ಪ್ರಸನ್ನತೆ. ಸಂತೋಷ ಪೂರ್ವಕವಾದ ಒಪ್ಪಿಗೆ, ಸಮ್ಮತಿ. ಒಂದು ವ್ಯಾಪಾರವನ್ನು ಮಾರಿ ಬಿಡುವವನು ಮುಂದಿನ ಮಾಲೀಕನಿಗೆ ತನ್ನ ಉತ್ತರಾಧಿಕಾರಿಯಾಗಿ ವ್ಯಾಪಾರ ನಡಸುವಂತೆ ಕೊಟ್ಟ ಹಕ್ಕು : ಹೆಸರು ಮತ್ತು ಗಿರಾಕಿ. **Goódy**[1] ಗುಡಿ (ನಾ.) (ಪ್ರಾಚೀ. ಪ್ರ.) ಕೆಳವರ್ಗದ ವಯಸ್ಸಾದ ಹೆಂಗಸು. ಒಂದು ತೆರದ ಮಿಠಾಯಿ. **Goódy**[2], **Goódy-goody** (ಗು.) ಬರಿ ತೋರ್ಕೆಯ, ಶುಷ್ಕ ಭಾವನೆಯ, ಆಡಂಬರದ, ಮೇಲೆ ಮೇಲಿನ, — ಸೌಜನ್ಯವುಳ್ಳ (Talk g. ಒಳ್ಳೆಯತನ, ಸೌಜನ್ಯ, ತೋರುವಂತೆ ಮಾತಾಡು). **Goódiness** (ನಾ.) ಮೇಲೆಮೇಲಿನ ಒಳ್ಳೆಯತನ.

Good (ನಾ.) (ಬ. ವ. ದ ನಾಮವಾಚಕವಾಗಿ ಉಪಯೋಗಿಸುವ ಗು.) ಒಳ್ಳೆಯವರು ; ಸಜ್ಜನರು ; ಧರ್ಮಿಷ್ಠರು ; ಕುಲೀನರು (= The g.; G. & bad alike respect him ಒಳ್ಳೆಯವರೂ ಕೆಟ್ಟವರೂ ಒಂದೇ ಸಮನಾಗಿ ಅವನನ್ನು ಗೌರವಿಸುತ್ತಾರೆ). ಒಳ್ಳೆಯದು ; ಲಾಭಕರವಾದದ್ದು. ಕ್ಷೇಮ ; ಸೌಖ್ಯ ; ಲೇಸು ; ಶ್ರೇಯಸ್ಸು ; ಲಾಭ ; ಪ್ರಯೋಜನ ; ಒಳ್ಳಿತು [Is a power for g. ಒಳ್ಳೆಯದಕ್ಕೆ, ಶ್ರೇಯಸ್ಸಿಗೆ, ಒಂದು ಶಕ್ತಿ ; ಶುಭ ಶಕ್ತಿ. Deceive him for his g. ಅವನ ಹಿತಕ್ಕಾಗಿ ಅವನನ್ನು ಮೋಸಗೊಳಿಸು. What g. will it do? ಅದರಿಂದ ಏನು ಒಳ್ಳೆಯದಾಗುತ್ತದೆ ? — ಏನು ಪ್ರಯೋಜನ ? Do g. ಒಳ್ಳೆಯದು ಮಾಡು ; ದಯೆ ತೋರಿಸು ; ಉಪಕಾರ ಮಾಡು (*To* ಉಪ. ದೊಡನೆ) ; ಲಾಭ ಮಾಡು ; ಹಿತ ಮಾಡು. To the g. ಲಾಭದ ಕಡೆಗೆ ; ಉಳಿತಾಯ ; ನಿವ್ವಳ ನಫೆ ; ಮಿಗಿತಾಯ. Come to g. ಒಳ್ಳೆಯ ಫಲ ಕೊಡು, ಬರು. For g., For g. & all ಒಂದೇ ಸರತಿಗೆ ; ಶಾಶ್ವತವಾಗಿ ; ಸ್ಥಿರವಾಗಿ ; ಎಂದೆಂದಿಗೂ ; ಕಾಯಂ ಆಗಿ ; ಕಡೆಯದಾಗಿ ; ಖಂಡಿತವಾಗಿ. Be no g. ಪ್ರಯೋಜನ ವಿಲ್ಲದಿರು ; ನಿಷ್ಫಲವಾಗಿರು. What is the g. of it? What g. is it? ಅದರಿಂದೇನು ಫಲ, ಪ್ರಯೋಜನ ? Is up to, after, no g. ಏನೋ ಚೇಷ್ಟೆ ಮಾಡಲು ಹವಣಿಸುತ್ತಿದ್ದಾನೆ]. **Goods** ಚರ ಸ್ವತ್ತು ; ಜಿಂದಗಿ ; (ವ್ಯಾಪಾರದ) ಸರಕು, ಸಾಮಾನು [Piece of goods (ಹಾಸ್ಯ ಪ್ರ.) ಮನುಷ್ಯ ; ಆಳು ; ಆಸಾಮಿ. Goods train ಸಾಮಾನಿನ ರೈಲುಬಂಡಿ]. **Goódish** (ಗು.) ಸ್ವಲ್ಪ ಮಟ್ಟಿಗೆ ಒಳ್ಳೆಯದಾದ. **Goódly** (ಗು.) ಅಂದವಾದ ; ಚೆಲುವಾದ ; ಸುಂದರವಾದ. ಹೆಚ್ಚು ; ಬಹಳ. (ವ್ಯಂಗ್ಯವಾಗಿ) ಬಲು ಸೊಗಸು! ಅದ್ಭುತವಾಗಿದೆ ! **Goódliness** (ನಾ.)

Goódy, Goódy-goody. **Good** ನೋಡಿ.

Goose ಗೂಸ್ (ನಾ.) (ಬ. ವ. Geese ಗೀಸ್) ಬಾತುಕೋಳಿಗೂ ಹಂಸಪಕ್ಷಿಗೂ ಮಧ್ಯಸ್ಥವಾದ ಗಾತ್ರವುಳ್ಳ ಜಾಲಪಾದದ ಒಂದು ಪಕ್ಷಿ ಜಾತಿ : ಹೆಬ್ಬಾತು ; (ಹೆಣ್ಣು) ವರಟೆ (ಗಂಡು ವರಟೆ = Gander) ; ಇದರ ಮಾಂಸ [All his geese are swans (ತನ್ನದಕ್ಕೆ) ಮಿತಿ ಮೀರಿದ ಬೆಲೆ ಕಟ್ಟುತ್ತಾನೆ. Kill the g. that lays the golden eggs ಇಂದಿನ ಅವಸರಕ್ಕೆ ಮುಂದಿನ ಲಾಭವನ್ನು ಬಲಿಕೊಡು. Cook person's g. (Cook ನೋಡಿ). Say bo to g. (Bo ನೋಡಿ). Sauce for g. is sauce for gander (Gander ನೋಡಿ)]. ಹೆಡ್ಡ ; ಗಾಂಪ ; ದಡ್ಡ ; ಮಡ್ಡಿ. (ವರಟೆಯ ಕತ್ತಿನಂತೆ ಹಿಡಿಯುಳ್ಳ, ದರ್ಜಿಯವನ) ಇಸ್ತ್ರಿ (ಪೆಟ್ಟಿಗೆ) (ಬ. ವ. Gooses). Fox & geese (Fox ನೋಡಿ). **G.-flesh** (ಅತಿ ಚಳಿಯಿಂದಾಗಲಿ ಭಯದಿಂದಾಗಲಿ) ಬಿರುಮುಳ್ಳೆದ್ದ ಚರ್ಮದ ಸ್ಥಿತಿ ; ರೋಮಾಂಚ (ಸ್ಥಿತಿ). **G.-foot** ಒಂದು ಸಸ್ಯಜಾತಿ. **G.-grass** = Cleavers. **Goóseherd** ವರಟೆಗಳನ್ನು ಸಾಕುವವನು. **G.-quill** (ಮು., ಲೇಖನಿಯಾಗಿ ಉಪಯೋಗಿಸುವ) ವರಟೆಯ ಗರಿ ; ಗರಿಯ ಲೇಖನಿ ; ಪೇನ. **G.-skin** = G.-flesh. **G.-step** (ಹೊಸದಾಗಿ ಸೈನ್ಯಕ್ಕೆ ಸೇರಿದವರಿಗೆ ಮಾಡಿಸುವ, ಜರ್ಮನ್ ಸೈನ್ಯದಲ್ಲಿ ವಿಶೇಷ ಬಳಕೆಯಲ್ಲಿರುವ) ಒಂದೊಂದು ಕಾಲಿನಮೇಲೆ ಪರ್ಯಾಯವಾಗಿ ನಿಂತು ಮತ್ತೊಂದನ್ನು ತೂಗಾಡಿಸುವ ಒಂದು ತೆರದ ಕವಾಯಿತು. **Goósey** (ನಾ.) ದಡ್ಡ.

Goóseberry ಗೂಸ್‌ಬೆರಿ (ನಾ.) ತಿನ್ನುವ ಹಣ್ಣು ಬಿಡುವ ಒಂದು ಮುಳ್ಳಿನ ಸಸ್ಯಜಾತಿ : 'ಗೂಸ್‌ಬೆರಿ' ; 'ಗೂಸ್‌ಬೆರಿ' ಮದ್ಯ. Play g. (ಹಿರಿಯ ಹೆಂಗಸು) ಒಬ್ಬ ಕನ್ಯೆಯ ಜೊತೆಯಲ್ಲಿದ್ದು ಅವಳಿಗೆ ಪಾಲಕಳಾಗಿರು ; ನಲ್ಲ ನಲ್ಲೆಯರಿಗೆ (ನಡತೆ ಮೀರದಂತೆ) ಕಾವಲಾಗಿರು.

Goósegog (ಗು.) ಗೂಸ್‌ಗಾಗ್ (ನಾ.) (ಬಳ. ಮಾ.) = Gooseberry. (ಹಾಸ್ಯ ಪ್ರ. ದಲ್ಲಿ ಅಪಭ್ರಂಶ)

Gópher = Goffer.

Górdian ಗಾರ್ಡಿಯನ್ (ಗು.) G. knot ಬಿಡಿಸಲಾಗದ ತೊಡಕು ಗಂಟು ; ಕಡುಗಂಟು ; ಕಗ್ಗಂಟು. ಕಠಿನ ಸಮಸ್ಯೆ, ಕಾರ್ಯ ; ತೊಡಕು ವಿಷಯ, ಕೆಲಸ (Cut the G. k. ಬಲಪ್ರಯೋಗದಿಂದ ಅಥವಾ ನಿಯಮಗಳಿಗೆ ಲಕ್ಷ್ಯಕೊಡದೆ ಗಂಟು ಹರಿ, ಸಮಸ್ಯೆ ಬಿಡಿಸು) (ಅಲೆಕ್ಸಾಂಡರ್ ಮಹಾಶಯನು ಯಾವ ತೊಡಕುಗಂಟನ್ನು ಕತ್ತರಿಸಿಹಾಕಿದನೊ ಅದನ್ನು ಕಟ್ಟಿದ್ದ Gordius ಎಂಬವನ ಹೆಸರಿನಿಂದ)

Gore[1] ಗೋರ್ (ನಾ.) ಚೆಲ್ಲಿ ಗಡ್ಡೆಕಟ್ಟಿದ, ಹೆಪ್ಪುಗಟ್ಟಿದ, — ರಕ್ತ. **Góry** (ಗು.) ; **Górily** (ಕ್ರಿ. ವಿ.)

Gore[2] ಗೋರ್ (ನಾ., ಕ್ರಿ. ಸಕ.) ಒಂದು ಉಡಿಗೆಯಲ್ಲಿ ಅಗಲವನ್ನು ಸರಿಹೊಂದಿಸುವುದಕ್ಕಾಗಿ ಉಪಯೋಗಿಸುವ ತ್ರಿಕೋನಾಕಾರದ ಬಟ್ಟೆಯ ತುಂಡು ; (ಕೊಡೆ, ಆಕಾಶಬುಟ್ಟಿ, ಗುಮ್ಮಟ, ಗೋಳ, ಮೊ. ಗಳಲ್ಲಿ) ಮುಮ್ಮೂಲೆಯಾಕಾರದ ಅಥವಾ ಬಾಲಚಂದ್ರಾಕೃತಿಯ ತುಂಡು. (ಕ್ರಿ.) ತ್ರಿಕೋನಾಕಾರದ ತುಂಡುಬಟ್ಟೆ ಹೊಂದಿಸಿ ಹೊಲಿ, ತೇಪೆ ಹಾಕು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Gore[3] ಗೋರ್ (ಕ್ರಿ. ಸಕ.) ಕೊಂಬಿನಿಂದ [ಅಥವಾ (ಅಪೂರ್ವವಾಗಿ) ಕೋರೆದಾಡೆಯಿಂದ] ಇರಿ, ತಿವಿ, ಹಾಯಿ. (ರೂಪ.) (ಬಂಡೆಗಳು) ಹಡಗನ್ನು ಇರಿ.

Gorge ಗಾರ್ಜ್ (ನಾ., ಕ್ರಿ.) (ಅಲಂ.) ಒಳಗಂಟಲು. ನುಂಗಿದ್ದು; ಹೊಟ್ಟೆಯಲ್ಲಿರುವುದು [Cast the g. at ಜುಗುಪ್ಸೆಯಿಂದ, ಅಸಹ್ಯದಿಂದ, ತಳ್ಳಿಬಿಡು, ನೂಕಿಬಿಡು ; ಓಕರಿಸಿ ಕಕ್ಕಿಬಿಡು. One's g. rises at (—) ನೋಡಿದರೆ ಬಹಳ ಅಸಹ್ಯವಾಗುತ್ತದೆ, ಜುಗುಪ್ಸೆಯಾಗುತ್ತದೆ, ಹೊಟ್ಟೆ ತೊಳಸುತ್ತದೆ]. ಗಬ ಗಬನೆ ತಿನ್ನುವುದು ; ಮಿತಿ ಮೀರಿ, ಕಟ್ಟರೆಯಾಗುವಂತೆ, ಉಣ್ಣುವುದು. (ಕೋಟೆ) ಬುರುಜಿನ ಅಥವಾ ಇತರ ಹೊರ ರಕ್ಷಣದ ಕುತ್ತಿಗೆಯ ಭಾಗ ; ರಕ್ಷಣಾವರಣದ ಹಿಂದುಗಡೆಯ ಮಾರ್ಗ, ಪ್ರವೇಶ; —ಹಿಂಬಾಗಿಲು. (ಬೆಟ್ಟಗಳ ನಡುವಣ, ಸಾ., ಹೊಳೆ ಹರಿಯುತ್ತಿರುವ) ಕಮರಿ. ಗಾಳದ ಎರೆ(ಯಾಗಿ ಉಪಯೋಗಿಸುವ ಗಟ್ಟಿವಸ್ತು). (ಕ್ರಿ.) ಗಬ ಗಬನೆ ತಿನ್ನು, ನುಂಗು ; ಕಂಠಪೂರ್ತಿ ತಿನ್ನು, ಉಣ್ಣು ; ಕಟ್ಟರೆಯಾಗುವಂತೆ, ಪೆಗಟಿಸುವಂತೆ, ಹೊಟ್ಟೆ ಬಿರಿಯ, ತಿನ್ನು. ಅಡಕು ; ಹಿಗ್ಗಿಸು ; ವಿಸ್ತರಿಸು ; ಅಡೆಚಿಕೊಳ್ಳುವಂತೆ ತುಂಬು.

Górgeous ಗಾರ್ಜಸ್ (ಗು.) ಬಹು ಕಾಂತಿಯ ; ಉಜ್ಜ್ವಲ ವರ್ಣದ ; ಅತ್ಯಲಂಕಾರದ; ಜಾಜ್ವಲ್ಯಮಾನವಾದ ; ಆಡಂಬರದ. (ಪದಪ್ರಯೋಗ) ಅಲಂಕಾರಯುತ ; ಪ್ರಭಾಮಯ ; ಬೆರಗುಗೊಳಿಸುವ. **Górgeously** (ಕ್ರಿ. ವಿ.) ; **Górgeousness** (ನಾ.)

Górget[1] ಗಾರ್ಜಿಟ್ (ನಾ.) (ಚರಿತ್ರೆ) ಕೊರಳ್ಕಾಪು ; ಕಂಠತ್ರಾಣ. (ಹೆಂಗಸಿನ) ತಲೆಯ ಮತ್ತು ಕತ್ತಿನ ಮೇಲೆ ಹೊದೆದುಕೊಳ್ಳುವ ವಸ್ತ್ರ. ಸರ ; ಕಂಠ ಹಾರ. ಹಕ್ಕಿ, ಮೊ. ಗಳ ಕತ್ತಿನಮೇಲಿನ ಬಣ್ಣದ ಪಟ್ಟೆ.

Górget[2] ಗಾರ್ಜಿಟ್ (ನಾ.) (ವೈ. ಶಾ.) ಅಶ್ಮರಿಯ ಶಸ್ತ್ರಚಿಕಿತ್ಸೆಯಲ್ಲಿ ಉಪಯೋಗಿಸುವ ಕಾಲುವೆಯಾಕಾರದ ಉಕ್ಕಿನ ಸಲಕರಣೆ, ಶಸ್ತ್ರ.

Górgon ಗಾರ್ಗನ್ (ನಾ.) (ಗ್ರೀಕ್ ಪುರಾಣ) (ನೋಡಿದವರನ್ನು) ನೋಟದಿಂದ ಕಲ್ಲಾಗಿ ಮಾಡುತ್ತಿದ್ದ ಹಾವುಗೂದಲಿನ ಮೂವರು ಸ್ತ್ರೀಯರಲ್ಲಿ ಒಬ್ಬಳು : 'ಗಾರ್ಗನ್.' ಭಯಂಕರ ರೂಪಿನ, ವಿಕಾರ ರೂಪಿನ, ವ್ಯಕ್ತಿ ; (ನೋಡಲು ಮನಸ್ಸು ಬರದಂತೆ) ವಿಮುಖಗೊಳಿಸುವ ಹೆಂಗಸು. **Gorgónian** ಗಾರ್ಗೋನಿಯನ್ (ಗು.) ; **Górgonize** ಗಾರ್ಗನೈಸ್ (ಕ್ರಿ. ಸಕ.) ಗಾರ್ಗನ್ನಿನಂತೆ ದಿಟ್ಟಿಸಿ ನೋಡು.

Górgónia ಗಾರ್ಗೋನಿಯ (ನಾ. ; ಬ. ವ. -iae, -ias) 'ಕಡಲ ಬೀಸಣಿಗೆ' ಎಂದು ಕರೆಯುವ ಹವಳದ ಜಾತಿಯ ಸೂಕ್ಷ್ಮ ಕಡಲುಜೀವಿ.

Gorílla ಗೊರಿಲ (ನಾ.) ಮರದಲ್ಲಿ ವಾಸಿಸುವ, ಮನುಷ್ಯಸದೃಶವಾದ, ದೊಡ್ಡ, ಬಹಳ ಶಕ್ತಿಯುಳ್ಳ, ಒಂದು ಭಯಂಕರ ಕಪಿಜಾತಿ ; ಒಂದು ದೊಡ್ಡ ನರವಾನರ : 'ಗೊರಿಲ'.

Górmandize ಗಾರ್ಮಂಡೈಸ್ (ನಾ., ಕ್ರಿ.), **Gourmandíse** (F.) ಗೂರ್‌ಮಾಂಡೀಸ್ (ನಾ.) ತಿಂಡಿಪೋತ ಅಭ್ಯಾಸಗಳು ; ತಿಂಡಿಪೋತತನ ; ಹೊಟ್ಟೆಬಾಕತನ. (ಕ್ರಿ.) ಹೊಟ್ಟೆಬಾಕನಂತೆ ತಿನ್ನು ; ಗಪಗಪನೆ ನುಂಗು, ಮುಕ್ಕು. **Górmandizer** (ನಾ.) ಹೊಟ್ಟೆಬಾಕ.

Gorse ಗಾರ್ಸ್ (ನಾ.) ಹಳದಿಯ ಹೂವು ಬಿಡುವ ಒಂದು ಮುಳ್ಳು ಪೊದೆಯ ಜಾತಿ ; 'ಫರ್ಸ್' ಗುಲ್ಮ. **Górsy** (ಗು.) ಇಂಥ ಪೊದೆಯ; ಇಂಥ ಪೊದೆಗಳುಳ್ಳ.

Gosh ಗಾಷ್ (ಭಾವ. ಅವ್ಯ.) (Also, By g.) ದೇವರಾಣೆ ! ದೇವರೇ !

Góshawk ಗಾಸ್‌ಹಾಕ್ (ನಾ.) ಗಿಡ್ಡ ರೆಕ್ಕೆಯ ದೊಡ್ಡ ಡೇಗೆಜಾತಿ.

Góshen ಗೋಷೆನ್ (ನಾ.) (ಬೈಬಲ್) ಬೆಳಕಿನ, ಸಮೃದ್ಧಿಯ,— ಸ್ಥಳ, ಪ್ರಾಂತ.

Gósling ಗಾಸ್‌ಲಿಂಗ್ (ನಾ.) ವರಟೆಯ (ಗೂಸಿನ) ಮರಿ ; ಮರಿ ವರಟೆ. (ರೂಪ.) ಅನುಭವವಿಲ್ಲದ ಹುಡುಗ(ಗಿ)

Góspel ಗಾಸ್ಪೆಲ್ (ನಾ.) (ಕ್ರಿಸ್ತನು ಉಪದೇಶಿಸಿದ) ಸುವಾರ್ತೆ ; ಒಸಗೆ ನುಡಿ ; ಒಳ್ನುಡಿ ; ಕ್ರಿಸ್ತನ ಮತ್ತು ಅವನ ಧರ್ಮಪ್ರವರ್ತಕರ ಮತ ತತ್ತ್ವ ; ಕ್ರೈಸ್ತ ವೇದ ; (ಕರ್ಮಾಚರಣೆ, ಸಂಸ್ಕಾರಗಳು — ಇವಕ್ಕಿಂತ ಶ್ರದ್ಧಾಭಕ್ತಿಗಳೇ ಮುಕ್ತಿಸಂಪಾದನೆಗೆ ಮುಖ್ಯವೆಂಬ ತತ್ತ್ವವೇ ಸುವಾರ್ತೆಯ ಸಾರಾಂಶವೆಂದು ಸಾಧಿಸುವ) ಪ್ರಾಟೆಸ್ಟೆಂಟ್ ಮತತತ್ತ್ವ (ಎದುರು ಪದ Mass). ನಾಲ್ಕು ಸುವಾರ್ತಾಕಾರರ ಗ್ರಂಥಗಳಲ್ಲಿ ಪ್ರಕಟವಾಗಿರುವ ಕ್ರಿಸ್ತನ ಜೀವನ ಚರಿತ್ರೆ ; ಆ (ನಾಲ್ಕು) ಗ್ರಂಥಗಳಲ್ಲೊಂದು ; ಪ್ರಭುಭೋಜನ ಸಂಸ್ಕಾರ ಕಾಲದಲ್ಲಿ ಓದುವ ಅವುಗಳಲ್ಲಿಯ ಒಂದು ಭಾಗ. ಸಂಶಯಪಡದೆ ಧೈರ್ಯವಾಗಿ ನಂಬಬಹುದಾದದ್ದು ; ವೇದ ವಾಕ್ಯ ; ಪರಮ ಸತ್ಯ (Takes his dreams for g. ತನ್ನ ಕನಸುಗಳನ್ನು ಪರಮ ಸತ್ಯವೆಂದು ನಂಬುತ್ತಾನೆ). ಒಬ್ಬನು ಆಚರಿಸುವ, ನಂಬಿರುವ ಅಥವಾ ಉಪದೇಶಿಸುವ, ತತ್ತ್ವ, ಮತ ; ಸಾಮಾಜಿಕ ಅಥವಾ ರಾಜಕೀಯ ಉದ್ಧಾರಕ್ಕೆಂದು ಕಟ್ಟಾಸಕ್ತಿಯಿಂದ ಉಪದೇಶಿಸುವ ತತ್ತ್ವ (The g. of efficiency, laissez faire ಕಾರ್ಯಪಟುತ್ವದ, ವ್ಯವಹಾರ ಸ್ವಾತಂತ್ರ್ಯದ, — ತತ್ತ್ವ, ಉಪದೇಶ). **G.- book** ಪ್ರಭುಭೋಜನ ಸಂಸ್ಕಾರ ಕಾಲದಲ್ಲಿ ಓದುವ ಸುವಾರ್ತೆಗಳಿರುವ ಪುಸ್ತಕ. **G. oath** ಸುವಾರ್ತೆಗಳ ಸಾಕ್ಷಿಯಾಗಿ ಮಾಡಿದ ಪ್ರಮಾಣ. **G.-shop** 'ಮೆಥೊಡಿಸ್ಟ್' ಆರಾಧನ ಮಂದಿರ (ನಿಂದೆಯ ನುಡಿ). **G. side** ಸುವಾರ್ತೆಯನ್ನು ಓದಲು ನಿಲ್ಲುವ ಬಲಪೀಠದ ಉತ್ತರದ ಕಡೆ. **G. truth** ಸುವಾರ್ತೆಯಲ್ಲಿರುವ ಸತ್ಯ (ವಿಚಾರ)ಗಳು ; ವೇದ ವಾಕ್ಯ ; ಸುವಾರ್ತೆಯಷ್ಟೇ ಸತ್ಯವಾದದ್ದು ; ಪರಮ ಸತ್ಯ. **Góspeller** (ನಾ.) (ಪ್ರಭುಭೋಜನ ಸಂಸ್ಕಾರ ಕಾಲದಲ್ಲಿ) ಸುವಾರ್ತೆ ಓದುವವನು. Hot g. ಶ್ರದ್ಧಾಳುವಾದ (ಕ್ರೈಸ್ತ) 'ಪ್ಯೂರಿಟನ್' ಮತಾನುಯಾಯಿ. ಹುಚ್ಚುಹುರುಪಿನ, ಉಗ್ರ,—ಪ್ರಚಾರಕ, ಚಳವಳಿಕಾರ.

Góssamer ಗಾಸಮರ್ (ನಾ., ಗು.) ಶಾಂತ ವಾಯುವಿನಲ್ಲಿ ತೇರಾಡುತ್ತಿರುವ ಅಥವಾ ಹಸುರು ಹುಲ್ಲಿನಮೇಲೆ ಹರಡಿಕೊಂಡಿರುವ, ಹಗುರವಾದ, ತೆಳುಪೊರೆಯಂತಿರುವ, ಪದಾರ್ಥ ; ಚಿಕ್ಕ ಜೇಡರಹುಳುವಿನ ಬಲೆ ; ಇದರ ಒಂದು ಎಳೆ, ದಾರ ; ಅತಿ ನವಿರಾದ, ನಿಸ್ಸತ್ವದ, ಪದಾರ್ಥ ; ಕೇವಲ ಜಾಳು —. ಬಹು ಸೂಕ್ಷ್ಮವಾದ ನೆಯ್ಗೆ, ಜಾಲ. (ಗು.) ಜೇಡನ ಬಲೆಯಂತೆ ಸೂಕ್ಷ್ಮವಾದ, ಹಗುರವಾದ, ನವಿರಾದ, ನಿಸ್ಸತ್ವವಾದ. **Góssamered** (ಗು.) ; **Góssamery** (ಗು.)

Góssip ಗಾಸಿಪ್ (ನಾ., ಕ್ರಿ. ಅಕ.) (ಪ್ರಾಚೀ. ಪ್ರ.) ಸಲಿಗೆಯ, ಆಪ್ತ, ಪರಿಚಿತ, — ವ್ಯಕ್ತಿ (ಮು., ಹೆಂಗಸು) ; ಗೆಳತಿ. ಗೊಡ್ಡು ಹರಟೆಯ, ಸುದ್ದಿ ಹೇಳುವ, — ವ್ಯಕ್ತಿ (ಮು., ಹೆಂಗಸು) : ಹರಟೆಮಲ್ಲ ; ಸುದ್ದಿ ಮಲ್ಲ. ಗೊಡ್ಡು ಹರಟೆ ; ಬುಡವಿಲ್ಲದ ಗಾಳಿವಾತು ; ಬೀದಿ ಮಾತು ; (ಮು., ವ್ಯಕ್ತಿಗಳ ಅಥವಾ ಸಾಮಾಜಿಕ ಘಟನೆಗಳ ವಿಷಯವಾಗಿ) ನೀರು ಕುಡಿದಂತೆ, ಅಡ್ಡಿ ಆತಂಕಗಳಿಲ್ಲದೆ, ಆಡುವ ಮಾತು, ಬರೆಯುವ ಬರವಣಿಗೆ ; ಹರಟೆ. (ಕ್ರಿ.) ಉಪಯೋಗವಿಲ್ಲದ, ಹಗುರವಾದ, ಮಾತನ್ನಾಡು ; ಹರಟೆ ಹೊಡೆ ; ಹರಟೆಯ ಶೈಲಿಯಲ್ಲಿ ಬರೆ. **Góssipry** (ನಾ.) ಹರಟೆ ; ಹರಟೆಯ ಗುಂಪು. **Góssipy** (ಗು.) ; **Góssiper** (ನಾ.)

Got ಗಾಟ್. Get ಧಾತುವಿನ ಭೂತ ಮತ್ತು ಭೂ. ಕೃ. G.-up ಪ್ರಭಾವ ಬೀರುವುದಕ್ಕಾಗಿ ಅಥವಾ ಮೋಸಕ್ಕಾಗಿ ಮಾಡಿದ, ಕೃತಕವಾಗಿ ಕಲ್ಪಿಸಿದ, ಅಲಂಕರಿಸಿದ.

Goth ಗಾತ್ (ನಾ.) (ಕ್ರಿ. ಶ. ೩-೫ನೆಯ ಶತಮಾನಗಳಲ್ಲಿ ಪೂರ್ವ ಪಶ್ಚಿಮ ಚಕ್ರಾಧಿಪತ್ಯಗಳ ಒಳನುಗ್ಗಿ, ಇಟಲಿ, ಫ್ರಾನ್ಸ್ ಮತ್ತು ಸ್ಪೆಯ್ನ್ ದೇಶಗಳಲ್ಲಿ ರಾಜ್ಯಗಳನ್ನು ಸ್ಥಾಪನೆ ಮಾಡಿದ) ಒಂದು ಜರ್ಮನ್ ಕುಲದವನು ; 'ಗಾತ್' ಜನ. ಒರಟ ; ಅನಾಗರಿಕ ; ತಿಳಿವಿಲ್ಲದವನು (ಮು., ಕಲಾಕೃತಿಗಳನ್ನು ಧ್ವಂಸ ಮಾಡುವವನು). **Góthic** ಗಾತಿಕ್ (ಗು., ನಾ.) 'ಗಾತ್' ಜನ(ರ), — ಭಾಷೆ(ಯ). (ವಾ. ಶಾ.) ಪಶ್ಚಿಮ ಯೂರೋಪಿನಲ್ಲಿ ಕ್ರಿ. ಶ. ೧೨-೧೬ನೆಯ ಶತಮಾನಗಳಲ್ಲಿ ಬಳಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಲ್ಲಿದ್ದ ವಾಸ್ತುಶೈಲಿ(ಯ) [ಮು., ಚೂಪು ಕಮಾನಿನ ಶೈಲಿ(ಯ)]: 'ಗಾತಿಕ್' ಶೈಲಿಯ. ಒರಟಾದ; ಅನಾಗರಿಕ; ಅಸಂಸ್ಕೃತ; ವಿಕಾರವಾದ. (ಮುದ್ರಣ, ಗು., ನಾ.) =Black-letter. (ನಾ.) 'ಗಾತಿಕ್' ಭಾಷೆ; — ವಾಸ್ತು ಶಿಲ್ಪ. **Góthically** (ಕ್ರಿ. ವಿ.); **Góthicism** (ನಾ.); **Góthicize** (ಕ್ರಿ.); **Góthish** (ಗು.) 'ಗಾತ್' ಜನಾಂಗದವನಂಥ. ಒರಟು; ಅನಾಗರಿಕ; ಕಲಾಹೀನ.

Gótha (G) ಗೋಟ(ತ) (ನಾ.) ಒಂದು ಬಗೆಯ ದೊಡ್ಡ ಜರ್ಮನ್ ಫಲಕ ವಿಮಾನ: 'ಗೋಟ(ತ)'. (ಜರ್ಮನಿಯಲ್ಲಿಯ Gotha ಎಂಬ ಪಟ್ಟಣದ ಹೆಸರಿನಿಂದ)

Gótham ಗಾಟಮ್ (ನಾ.) ಅವಿವೇಕಿಗಳ, ಮೂರ್ಖರ, — ಊರು (ಮಾದರಿ) (Wise man of G. ಅವಿವೇಕಿ; ದಡ್ಡ). **Góthamite** (ನಾ.) ಅವಿವೇಕಿ; ದಡ್ಡ. (ಇಂಗ್ಲೆಂಡಿನಲ್ಲಿಯ Gotham ಎಂಬ ಒಂದು ಹಳ್ಳಿಯ ಹೆಸರಿನಿಂದ ಇರಬಹುದು)

Gótten. Get ಧಾತುವಿನ ಭೂ. ಕೃ. (ಪ್ರಾಚೀ. ಪ್ರ. ಮತ್ತು ಅಮೆ. ಸಂ.)

Gouge ಗೌಜ್, ಗೂಜ್ (ನಾ., ಕ್ರಿ. ಸಕ.) (ಮರಗೆಲಸದಲ್ಲೂ ಶಸ್ತ್ರಚಿಕಿತ್ಸೆಯಲ್ಲೂ ಉಪಯೋಗಿಸುವ) ಒಳಬಾಗಿನ ಅಲಗುಳ್ಳ ಉಳಿ; ಉಗುರುಳಿ. (ಕ್ರಿ.) ಉಗುರುಳಿಯಿಂದ ಕೆತ್ತು, ಕತ್ತರಿಸು; (ಕಾರ್ಕನ್ನು, ನಾಳಿ ಗಂಡಿಯನ್ನು) ಉಗುರುಳಿಯಿಂದ ಹೇಗೊ ಹಾಗೆ ಕೆತ್ತು, ತೋಡು (*Out* ಉಪ. ದೊಡನೆ); (ಒಬ್ಬನ ಕಣ್ಣನ್ನು) ಹೆಬ್ಬೆಟ್ಟಿನಿಂದ ಮೀಟು, ಎಬ್ಬು (*Out* ಉಪ. ದೊಡನೆ)

Gourd ಗೋರ್ಡ್, ಗೂರ್ಡ್ (ನಾ.) ದೊಡ್ಡ ತಿರುಳುಗಾಯಿ ಬಿಡುವ, ನೆಲದಮೇಲೆ ಅಥವಾ ಚಪ್ಪರದಮೇಲೆ ಹಬ್ಬುವ, ಒಂದು ಬಳ್ಳಿಜಾತಿ; ಇದರ ತಿರುಳುಗಾಯಿ (Common g. ಕುಂಬಳ. Bottle g. ಸೋರೆ. Snake g. ಪಡವಲ); (ತಿರುಳನ್ನು ತೆಗೆದುಹಾಕಿ, ಒಣಗಿಸಿ, ಪಾತ್ರೆಯಂತೆ ಉಪಯೋಗಿಸುವ) ಸೋರೆ, ಮೊ. ಗಳ ಬುರುಡೆ. **Goúrdful** (ನಾ.)

Goúrmand (F) ಗೂರ್‌ಮಂಡ್, — ಮಾನ್ (ಗು., ನಾ.) ಹೊಟ್ಟೆಬಾಕತನದ; ತಿನ್ನುವುದರಲ್ಲಿ ಹೆಚ್ಚು ಆಸಕ್ತಿಯುಳ್ಳ; ಭೋಜನ ಪ್ರಿಯ. (ನಾ.) ಮೃಷ್ಟಾನ್ನ ಪ್ರಿಯ; ಭೋಜನ ರಸಜ್ಞ. **Gourmandíse** (Gormandise ನೋಡಿ); **Goúrmandism** (ನಾ.)

Gourmét (F) ಗೂರ್ಮೆ (ನಾ.) ರಸ ಭಕ್ಷ್ಯ, ಭೋಜ್ಯ, ಪಾನೀಯಗಳ (ಮು., ದ್ರಾಕ್ಷಾ ಮದ್ಯದ) ರಸಜ್ಞ.

Gout ಗೌಟ್ (ನಾ.) (ದೇಹದ) ಸಣ್ಣ ಕೀಲುಗಳು (ಮು., ಕಾಲನ ಹೆಬ್ಬೆಟ್ಟು) ಊದಿ, ಬಹಳ ನೋಯುತ್ತ, ಕೀಲುಗಳಲ್ಲಿ ಸೀಮೆಸುಣ್ಣದಂಥ ಉಂಡೆಗಳು ರಚನೆಯಾಗಿ, ಥಟ್ಟನೆ ಕೆರಳುವ ಒಂದು ರೋಗ; ಸಂಧಿ ವಾತ (Rich, Poor, man's g. ಅತ್ಯಾಹಾರದಿಂದ, ಅಲ್ಪಾಹಾರದಿಂದ, ಬರುವುದೆಂದು ಹೇಳುವ ಒಂದು ತೆರದ ವಾತ ರೋಗ). (G.-fly ಎಂಬ ನೊಣದಿಂದ) ಗೋಧಿಗೆ ತಗುಲುವ ಒಂದು ತೆರದ ರೋಗ. (ಮು., ರಕ್ತದ) ತೊಟ್ಟು, ಹನಿ. ಚೆಲ್ಲಿದ್ದು; ಚಿಮುಕಿಸಿದ್ದು; ಕಲೆ. **Goúty** (ಗು.); **Goúties** (ನಾ. ಬ. ವ.) ಮೇಲ್ಜೋಡುಗಳು. **Goútily** (ಕ್ರಿ. ವಿ.); **Goútiness** (ನಾ.)

Góvern ಗವರ್ನ್ (ಕ್ರಿ.) ಆಳು; ಅಧಿಕಾರ ನಡಸು; (ರಾಜ್ಯದ, ಪ್ರಜೆಯ) ನೀತಿ ನಿಯಮ, ಕಾರ್ಯ ಕಲಾಪಗಳು, ಕಾರುಬಾರು, ಮೊ. ನ್ನು ನಿರಂಕುಶವಾಗಿ ಅಥವಾ ವ್ಯವಸ್ಥಾ ಬದ್ಧವಾಗಿ ನಡಸು, ನಿರ್ವಹಿಸು; ಆಡಳಿತ, ರಾಜ್ಯಭಾರ, — ನಡಸು; ಪ್ರಭುತ್ವ ಮಾಡು. (ಒಂದು ಸಂಸ್ಥೆ, ಮೊ. ಗಳ) ಕಾರ್ಯಭಾರವನ್ನು ನಿಯಮಬದ್ಧವಾಗಿ ನಡಸು (Governing body ಆಸ್ಪತ್ರೆ, ಪಾಠಶಾಲೆ, ಮೊ. ಗಳ ಆಡಳಿತ ಮಂಡಲಿ). (ಕೋಟೆಯನ್ನು, ಪಟ್ಟಣವನ್ನು) ಸೈನಿಕಾಧಿಕಾರದಿಂದ ಆಳು. ಸ್ವತಃ ಸರ್ಕಾರದ ಆಡಳಿತ ನಡಸು; ಪ್ರಭುತ್ವ ಮಾಡು [King reigns but does not g. ರಾಜನು ದೊರೆತನ ಮಾಡುತ್ತಾನೆ, ಆದರೆ ರಾಜ್ಯಭಾರ ನಡಸುವುದಿಲ್ಲ (ಎಂದರೆ, ಆಡಳಿತ ನಡಸುವವರನ್ನು ಚುನಾಯಿಸಿ ನಿಯಮಿಸುತ್ತಾನೆ)]. (ಮನುಷ್ಯನನ್ನು, ಅವನ ಕಾರ್ಯಗಳನ್ನು, ಘಟನೆಗಳ ಗತಿಯನ್ನು, ಪರಿಣಾಮವನ್ನು) ಆಳು; ವ್ಯವಸ್ಥೆಗೊಳಿಸು, ರೂಪಿಸು, ನಿಶ್ಚಯಿಸು. (— ಮೇಲೆ) ಪ್ರಬಲ ವ್ಯಾಪ್ತಿಯುಳ್ಳದ್ದಾಗಿರು; ಪ್ರಭಾವ ಬೀರು. (ಒಂದು ರೀತಿಯಲ್ಲಿ) ನಡೆದುಕೊ, ವರ್ತಿಸು. (ರಾಗ ದ್ವೇಷಾದಿಗಳನ್ನು) ಅಡಗಿಸು, ನಿಗ್ರಹಿಸು, ದಮನ ಮಾಡು, ಹತೋಟಿಯಲ್ಲಿಟ್ಟುಕೊ. (ವ್ಯವಹಾರ ನಿರ್ಣಯದಲ್ಲಿ) (— ಕ್ಕೆ) ಶಾಸನವಾಗಿ, ವಿಧಿಯಾಗಿ, ಸೂತ್ರವಾಗಿ, ತತ್ತ್ವವಾಗಿ, — ಇರು, ಅನ್ವಯಿಸು. [(ವ್ಯಾ.) ಮು., ಕ್ರಿ. ಅಥವಾ ಉಪ.] ನಾಮಪದದೊಡನೆ, ವಿಭಕ್ತಿಯೊಡನೆ, ಅನ್ವಯವಾಗು; ಅನ್ವಯಿಸು (A transitive verb governs a noun in the objective case ಸಕರ್ಮಕ ಕ್ರಿಯಾಪದವು ದ್ವಿತೀಯಾ ವಿಭಕ್ತಿಯ ನಾಮಪದದೊಡನೆ ಅನ್ವಯವಾಗುತ್ತದೆ). **Góvernable** (ಗು.); **Governability** (ನಾ.); **Góvernance** ಗವರ್ನನ್ಸ್ (ನಾ.) ಆಳಿಕೆ; ಆಡಳಿತ; ಅಧಿಕಾರ; ಪ್ರಭುತ್ವ; ಆಡಳಿತದ ರೀತಿ, ಕಾರ್ಯ. **Góverness** (ನಾ.) (ಮು., ಮನೆಯಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುವ) ಉಪಾಧ್ಯಾಯಿನಿ, ಶಿಕ್ಷಕಳು. **G.-car(t)** ಪಕ್ಕಗಳಲ್ಲಿ ಪೀಠಗಳು ಎದುರು ಬದುರಾಗಿರುವ, ಎರಡು ಚಕ್ರದ, ಹಗುರವಾದ ಬಂಡಿ. **Góvernment** (ನಾ.) (Governance ಎಂಬ ಪದದ ಹೆಚ್ಚು ಆಧುನಿಕ ರೂಪ); ಪ್ರಾಂತಾಧಿಪತಿ (Governor) ಆಳುತ್ತಿರುವ ದೇಶಭಾಗ, ಪ್ರಾಂತ; ಆಧಿಪತ್ಯ. ಆಡಳಿತ ಕ್ರಮ; ರಾಜ್ಯ (ಶಾಸನ) ಪದ್ಧತಿ. ಸರ್ಕಾರ; ಮಂತ್ರಿ ಮಂಡಲ [Form a g. (ಮುಖ್ಯ ಮಂತ್ರಿಯ ವಿಷಯದಲ್ಲಿ) ಜೊತೆಯ ಮಂತ್ರಿಗಳನ್ನು ಆರಿಸು; ಮಂತ್ರಿ ಮಂಡಲವೇರ್ಪಡಿಸು; ಸರ್ಕಾರ ರಚಿಸು]. (ವ್ಯಾ.) ಒಂದು ಪದಕ್ಕೂ ಅದರ ಆಶ್ರಯವಾದ ಇನ್ನೊಂದು ಪದಕ್ಕೂ ಇರುವ ಸಂಬಂಧ; ಅನ್ವಯ; ಆಕಾಂಕ್ಷೆ. G. house ಪ್ರಾಂತಾಧಿಪತಿಯ (ಗವರ್ನರಿನ) ಸರ್ಕಾರಿ ಮನೆ. G. paper, securities ಸರ್ಕಾರದ ಸಾಲಪತ್ರಗಳು, ಖಜಾನೆಯ ಹುಂಡಿಗಳು, ಮೊ. **Governméntal** (ಗು.); **Góvernméntally** (ಕ್ರಿ. ವಿ.); **Góvernor** (ನಾ.) ಆಳುವವನು; ರಾಜ್ಯಭಾರ ಮಾಡುವವನು; (ಒಂದು ಪ್ರಾಂತವನ್ನು, ಪಟ್ಟಣವನ್ನು) ಆಳುವುದಕ್ಕೆ ನಿಯಮಿತನಾದ ಅಧಿಕಾರಿ; ಮಂಡಲಾಧಿಪತಿ; ಪ್ರಾಂತಾಧಿಪತಿ. (ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಸ್ವರಾಜ್ಯ ಪಡೆದಿರುವ) ಒಳ ರಾಷ್ಟ್ರದ, ನೆಲಸುನಾಡಿನ, ರಾಜ ಪ್ರತಿನಿಧಿ; (ಅಮೆ. ಸಂ. ಗಳಲ್ಲಿ ಪ್ರತಿ ಸಂಸ್ಥಾನದ) ಕಾರ್ಯಾಧ್ಯಕ್ಷ. (ಕೋಟೆಯ, ಕೋಟೆಯ ಸೈನ್ಯದ) ಅಧಿಪತಿ; ದುರ್ಗಾಧಿಪತಿ. (ಒಂದು ಸಂಸ್ಥೆಯ) ಆಡಳಿತ ಮಂಡಲಿಯ ಸದಸ್ಯ, ಅಧ್ಯಕ್ಷ. (ಅಸಂ.) (ಒಬ್ಬನ) ಯಜಮಾನ, ದಣಿ; (ಒಬ್ಬನ) ತಂದೆ. (ಸಂಬೋಧನೆಯಲ್ಲಿ) ಸ್ವಾಮಿ! (ಒಂದೇ ಸಮನಾಗಿ ಚಲನೆ ನಡೆಯಲು ಯಂತ್ರಕ್ಕೆ ಅನಿಲ, ಆವಿ, ನೀರು, ಮೊ. ನ್ನು ಸಂದರ್ಭಕ್ಕೆ ತಕ್ಕಂತೆ ತಾನಾಗಿ ಒದಗಿಸುವ) ಸ್ವಯಂ ಚಲ ನಿಯಂತ್ರಕ. ಒಂದು ಬಗೆಯ ಗಾಳದ ನೊಣ. **G. general** (ತನ್ನ ಕೈಕೆಳಗೆ ಮಂಡಲಾಧಿಪತಿಗಳನ್ನುಳ್ಳ) ಮಹಾ ಮಂಡಲಾಧಿಪತಿ: 'ಗವರ್ನರ್ ಜೆನರಲ್'. **Góvernor-géneralship** (ನಾ.); **Góvernorship** (ನಾ.)

Gowk ಗೌಕ್ (ನಾ.) (ಪ್ರಾಂ. ಪ್ರ.) ಕೋಗಿಲೆ. ವಕ್ರ ಮನುಷ್ಯ; ಅರೆ ಮರುಳ; ಪೆದ್ದ; ಗಾಂಪ; ಗುಗ್ಗು; ಅವಿವೇಕಿ.

Gown ಗೌನ್ (ನಾ., ಕ್ರಿ. ಸಕ.) ಸಡಿಲವಾದ ಮತ್ತು ಕೆಳಗೆ ಜೋಲಾಡುವ ಮೇಲುಡುಪು [ಮು., ಹೆಂಗಸಿನದು; ಸಾ., ಅಂದ ಚೆಂದಗಳ ತೋರ್ಕೆಯದು. (ಸಮಾಸದಲ್ಲಿ) Tea, Dinner, - g.]; ಕ್ರೈಸ್ತ ಸಂನ್ಯಾಸಿಯ ಅಗಲತೋಳುಗಳ ನಿಲುವಂಗಿ, ದಗಲೆ; ಹೆಂಗಸರೂ ಮಕ್ಕಳೂ ತೊಡುವ ಒಂದು ತೆರದ ಲಂಗ. ಪುರಾತನ ರೋಮನರ ಮೇಲುಡುಪು. 'ಆಲ್ಡರ್‌ಮನ್', ನ್ಯಾಯಾಧಿಪತಿ, ವಕೀಲ, ಪಾದ್ರಿ, ವಿಶ್ವವಿದ್ಯಾನಿಲಯ ಪ್ರೌಢವಿದ್ಯಾನಿಲಯ ಮೊ. ಗಳ ಸದಸ್ಯ, — ಇವರು ಧರಿಸುವ ಉದ್ಯೋಗ ಸೂಚಕವಾದ, ಅಥವಾ ಅವರವರಿಗೆ ಗೊತ್ತುಮಾಡಿರುವ ಬೇರೆ ಬೇರೆ ರೂಪಗಳ ನಿಲುವಂಗಿ [Town & g. (ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವ ವಿದ್ಯಾನಿಲಯಗಳಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸದಸ್ಯೇತರರು ಮತ್ತು ಸದಸ್ಯರು]. (ಕ್ರಿ., ಮು., ಭೂ. ಕೃ.) ಮೇಲಂಗಿ, ದಗಲೆ, — ತೊಡು. **Gównsman** ಆಯುಧಜೀವಿ ಅಲ್ಲದವನು; ಸೈನ್ಯೋದ್ಯೋಗಿಯಲ್ಲದವನು ; ಸ್ವಾಸ್ಥ್ಯಾಧಿಕಾರಿಯಲ್ಲದವನು; ಪಾದ್ರಿಯಲ್ಲದವನು; ವಿಶ್ವವಿದ್ಯಾನಿಲಯದ ಸದಸ್ಯ.

Graáfian ಗ್ರಾಫಿಯನ್ (ಗು.) G. follicle, vesicle, ಸಸ್ತನಿಗಳ ಅಂಡಾಶಯದಲ್ಲಿ ಅಂಡಗಳು ಪಕ್ವಕ್ಕೆಬರುವ ಸಣ್ಣ ಕೋಶಗಳಲ್ಲೊಂದು: ಅಂಡಾಶಯ ಕೋಶ. (Graaf ಎಂಬ ಡಚ್ ಅಂಗರಚನಾ ಶಾಸ್ತ್ರಜ್ಞನ ಹೆಸರಿನಿಂದ)

Grab ಗ್ರ್ಯಾಬ್ (ಕ್ರಿ., ನಾ.) ಥಟ್ಟನೆ, ಫಕ್ಕನೆ, — ಸೆಳೆದುಕೊ, ಹಿಡಿ; ತುಡುಕು ; ಬಲವಂತದಿಂದ ಕಸಿದಿಟ್ಟುಕೊ, ಸ್ವಾಧೀನ ಪಡಿಸಿಕೊ; ಹಿಡಿದು ನಿಲ್ಲಿಸು ; ಕಸಿದುಕೊಳ್ಳಲು ಕೈ ಹಾಕು (*At* ಉಪ. ದೊಡನೆ). (ನಾ.) ಫಕ್ಕನೆ ಹಿಡಿಯುವುದು ; ಕಸಿದುಕೊಳ್ಳುವುದು ; ಬಲವಂತದಿಂದ ಕಿತ್ತುಕೊಳ್ಳುವುದು ; — ವ ಪ್ರಯತ್ನ ; ಕಸಿದುಕೊಳ್ಳುವ ಅಭ್ಯಾಸ; (ಮು. ರಾಜಕೀಯದಲ್ಲಿ, ವಾಣಿಜ್ಯದಲ್ಲಿ) ಬಲವಂತದ ಅಪಹರಣ ನೀತಿ; ಸುಲಿಗೆಯ ಕಾರ್ಯನೀತಿ [Have the g. on (ಅನಂ.) ಹೆಚ್ಚು ಅನುಕೂಲ, ಲಾಭ, ಪಡೆದಿರು ; — ವಾಗಿರು]. (ಯಂತ್ರ) (ಭದ್ರವಾಗಿ ಹಿಡಿದುಕೊಳ್ಳುವ) ಹಿಡಿಕೆ, ಸಾಧನ. ಮಕ್ಕಳ (ಒಂದು ಬಗೆಯ) ಇಸ್ಪೀಟಾಟ. (-)**grábber** (ನಾ.) (— ನ್ನು) ತುಡುಕುವವನು.

Grábble ಗ್ರ್ಯಾಬ್‌ಲ್ (ಕ್ರಿ. ಅಕ.) (ಒಂದು ವಸ್ತುವಿಗಾಗಿ) ತಡಕಾಡು ; ತಡವುತ್ತ ನೋಡು. ಕೈಕಾಲುಗಳನ್ನು ನೆಲಕ್ಕೆ ಹಾಕಿ, ಬೋರಲಾಗಿ ಮಲಗಿ (ಒಂದು ವಸ್ತುವಿಗಾಗಿ) ಹರಿದಾಡು.

Grábby ಗ್ರ್ಯಾಬಿ (ನಾ.) (ನಾವೆಯ ಅನಂ.) ಸಿಪಾಯಿ ; ಯೋಧ.

Grace ಗ್ರೇಸ್ (ನಾ., ಕ್ರಿ. ಸಕ.) ವಿಲಾಸ; ಮನೋಹರತ್ವ; ರಮ್ಯತೆ; ಚಿತ್ತಾಕರ್ಷಣ; ಸೊಬಗು; ಬೆಡಗು ; ಗಾಡಿ; ಚೆಲುವು ; ಚೆಂದ; ಚೆನ್ನು ; ಲಾವಣ್ಯ (ಮು., ಅಂಗಾಂಗಗಳ ಸೌಷ್ಠವ, ಚಲನ ಸೌಲಭ್ಯ ರಾಲತ್ಯಗಳು, ನಡೆ, ಭಾವ ಭಂಗಿಗಳು — ಇವಕ್ಕೆ ಸಂಬಂಧಿಸಿದಂತೆ). ಹೊಂದಿಕೆ; ಒಪ್ಪ ; ಔಚಿತ್ಯ ; ಗಾಂಭೀರ್ಯ ; ಮರ್ಯಾದೆ (Cannot with any g. ask him ಅವನನ್ನು ಕೇಳುವುದು ಚೆನ್ನಿಲ್ಲ. Have the g. to (ಮಾಡಿ) ನಯ ತೋರು. With a good g. ಚೆಂದದಿಂದ; ಮರ್ಯಾದೆಯಿಂದ. With a bad g. ಮನಸ್ಸಿಲ್ಲದೆ ; ಅಸಮಾಧಾನವಾಗಿ ; ಬಲಾತ್ಕಾರಕ್ಕೆ ಕಟ್ಟುಬಿದ್ದು ; ಅವಿನಯದಿಂದ). ಸೊಗಸು; ಲಕ್ಷಣ ; ಭೂಷಣ ; [Airs and graces (ಪ್ರಭಾವ ಬೀರುವುದಕ್ಕಾಗಿ ಅಥವಾ ಆಕರ್ಷಣೆಗಾಗಿ ತೋರುವ) ಒನಪು ಒಯ್ಯಾರ ; ಅಂದ ಚೆಂದ]. (ಸಂ.) (ಸಾಮರಸ್ಯಕ್ಕಾಗಲಿ ಮಾಧುರ್ಯಕ್ಕಾಗಲಿ ಅಗತ್ಯವಲ್ಲದ) ಹೆಚ್ಚಿನ ಸ್ವರ(ಗಳನ್ನು) ಸೇರಿಸಿ ಬೆಡಗುಮಾಡುವುದು (=g.-note, -notes). [The Graces (ಗ್ರೀಕ್ ಪುರಾಣ) ಸೌಂದರ್ಯವನ್ನೂ ಮೋಹಕ ಶಕ್ತಿಯನ್ನೂ ಅನುಗ್ರಹಿಸುವ ಮೂವರು ಸೌಂದರ್ಯವತಿಯರಾದ ದೇವಸೋದರಿಯರು ; ಮೋಹನ ದೇವಿಯರು]. (ದೊಡ್ಡವರು ತೋರುವ) ಅನುಗ್ರಹ; ದಯೆ; ಪ್ರಸಾದ; ಕೃಪಾ ಕಟಾಕ್ಷ [Be in one's good graces ಒಬ್ಬನ ಅನುಗ್ರಹಕ್ಕೆ, ಕೃಪೆಗೆ, ಪಾತ್ರನಾಗಿರು. Act of g.[1] ಹಕ್ಕಿಲ್ಲದ, ಕೇವಲ ಕರುಣೆಯಿಂದ ಕೊಟ್ಟ, ರಿಯಾಯಿತಿ; ಪ್ರಸಾದ. By the g. of God ಭಗವದನುಗ್ರಹದಿಂದ (ರಾಜರ ಬಿರುದಾವಳಿಯಲ್ಲಿ ಸೇರಿಸುವ ಮಾತುಗಳು)]. ವರ ; ಪ್ರಸಾದ. ಪಾಂಡಿತ್ಯ ಪದವಿಯನ್ನು ಪಡೆಯುವುದಕ್ಕೆ ವಿಶ್ವವಿದ್ಯಾನಿಲಯದ ಸದಸ್ಯರ ಸಭೆಯ ಮತ್ತು ಪ್ರೌಢ ವಿದ್ಯಾನಿಲಯದ ಅಧಿಕಾರಿಗಳ ಅನುಮತಿ, ಅನುಜ್ಞೆ. (ದೇವ. ಶಾ.) ಭಗವಂತನ ನಿರ್ವ್ಯಾಜ ಕೃಪೆ, ಅವ್ಯಾಜ ಕರುಣೆ; ದೈವಾನುಗ್ರಹ (=State of g.). ದೈವಾಯತ್ತ ಸಾಮರ್ಥ್ಯ, ಮೊ. [The -th year of g. (with date) ಕ್ರಿ. ಶ. — ವರ್ಷ (ತಾರೀಖು ನೊಡನೆ). In this year of g. (ಸಾ., ವ್ಯಂಗ್ಯ ಪ್ರ.) ಕ್ರೈಸ್ತ ಮತ ನೆಲಸಿ ಇಷ್ಟು ವರ್ಷಗಳಾದಮೇಲೂ]. ಕ್ಲುಪ್ತ ಕಾಲ ಮೀರಿ ಸಲ್ಲಿಸಲು ತೋರಿಸುವ ರಿಯಾಯಿತಿ ; (ಕೊಟ್ಟ) ಹೆಚ್ಚು ಅವಧಿ [Give a day's, year's, g. ಪಾವತಿಯ ದಿನ ಮೀರಿ ಒಂದು ದಿನದ, ವರ್ಷದ, ಹೆಚ್ಚು ಅವಧಿ, ತಳ್ಳುಪಡಿ, ಕೊಡು. Days of g. (ಹುಂಡಿಗೆ ಅಥವಾ ಜೀವ ವಿಮೆಯ ಕಂತಿಗೆ ಹಣ ಕಟ್ಟಲು ಕಾನೂನು ಪ್ರಕಾರ ವಿಧಾಯಕವಾಗಿರುವ) ಪಾವತಿಯ ದಿನ ಮೀರಿದ ಹೆಚ್ಚು ಗಡುವು, ಕಾಲಾವಕಾಶ]. ಕ್ಷಮೆ ; ಅಪರಾಧ ಕ್ಷಮಾಪಣೆ [Act of g.[2] (ಪಾರ್ಲಿಮೆಂಟು ಶಾಸನ ಮಾಡಿ ಕೊಡುವ) ವಿಧಿವತ್ತಾದ ಸಾರ್ವತ್ರಿಕ ಕ್ಷಮಾಪಣೆ ; ಕ್ಷಮೆಯ ಕಾನೂನು]. (ಊಟಕ್ಕೆ ಮೊದಲು ಅಥವಾ ಊಟವಾದ ಬಳಿಕ ಧನ್ಯವಾದವಾಗಿ ಮಾಡುವ) ದೇವರ ಪ್ರಾರ್ಥನೆ (G.-cup ಪ್ರಾರ್ಥನೆಯಾದಮೇಲೆ ಒಬ್ಬರಿಂದೊಬ್ಬರಿಗೆ ಸುತ್ತು ಕಳುಹಿಸುವ ಮದ್ಯತುಂಬಿದ ಬಟ್ಟಲು ; ಊಟ ಮಾಡಿ ಏಳುವಾಗ ಆರೋಗ್ಯವನ್ನು ಹರಸಿ ಕುಡಿಯುವ ಮದ್ಯದ ಗುಟುಕು). (His, Her, Your, g. ಡ್ಯೂಕ್, ಡಚಸ್, ಆರ್ಚ್‌ಬಿಷಪ್, —ಇವರನ್ನು ಸಂಬೋಧಿಸುವಲ್ಲಿ, ಒಕ್ಕಣೆಯಲ್ಲಿ, ಗೌರವ ಸೂಚಕ ಪದ). (ಕ್ರಿ.) ಶೋಭಾಯಮಾನ ಮಾಡು ; ಅಲಂಕರಿಸು ; ಭೂಷಣವಾಗು ; ಗೌರವ ಕೊಡು. ಪ್ರಾಶಸ್ತ್ಯ ಕೊಡು ; ಬಿರುದು, ಮೊ. ನ್ನು ಕೊಟ್ಟು ಗೌರವಿಸು ; ಕೀರ್ತಿ ತರು. **Gráceful** (ಗು.) ; **Grácefully** (ಕ್ರಿ. ವಿ.) ; **Grácefulness** (ನಾ.) ; **Gráceless** (ಗು.) (ಪ್ರಾಚೀ. ಪ್ರ. ಅಥವಾ ಹಾಸ್ಯ ಪ್ರ.) ನೀತಿ ಬಾಹಿರ ; ನೀತಿ ಭ್ರಷ್ಟ. ಮರ್ಯಾದೆಯಿಲ್ಲದ; ನಾಚಿಕೆಗೆಟ್ಟ ; ಧೃಷ್ಟತನದ. (ವಿರ. ಪ್ರ.) ಅಂದವಿಲ್ಲದ ; ನಯ ನಾಜೂಕುಗಳಿಲ್ಲದ. **Grácelessly** (ಕ್ರಿ. ವಿ.); **Grácelessness** (ನಾ.) ; **Grácious** ಗ್ರೇಷಸ್ (ಗು., ಭಾವ. ಅವ್ಯ.) ಹಿತಕರವಾದ ; ಸಂತೋಷ ಕೊಡುವ ; ಸುಖಾವಹವಾದ (ಪ್ರಾಚೀ. ಪ್ರ.). (ಮು., ಕಾವ್ಯ) ದಯೆಯುಳ್ಳ ; ಉಪಕಾರ ಸ್ವಭಾವದ ; ವಿನಯಶೀಲ. (ದೊಡ್ಡವರ ವಿಷಯದಲ್ಲಿ ಮಾತ್ರ ; ಅಥವಾ, ವ್ಯಂಗ್ಯವಾಗಿ, ಹಾಸ್ಯವಾಗಿ) ಅನುಗ್ರಹ ತೋರುವ ; (ತನ್ನ ಕೆಳಗಿನವರಿಗೆ) ಕೃಪೆದೋರಿ ಉಪಕಾರ ಮಾಡುವ; ಕೃಪಾಳು. (ರಾಜನ, ರಾಜ ಸಂಬಂಧಿಗಳ, 'ಡ್ಯೂಕ್' ಪದವಿಯುಳ್ಳವರ, ವಿಷಯದಲ್ಲಿ ಅಥವಾ ಅವರ ಕೃತ್ಯಗಳ ವಿಷಯದಲ್ಲಿ ಗೌರವಾರ್ಥವಾಗಿ ಸೇರಿಸುವ ವಿಶೇಷಣ). (ದೇವರ ವಿಷಯದಲ್ಲಿ) ಕೃಪಾ ಪೂರ್ಣ ; ಕರುಣಾಳು ; ಆಶ್ರಿತ ರಕ್ಷಕ. (ಭಾವ. ಅವ್ಯ. G. God ಎಂಬುದರ ಸಂಕ್ಷಿಪ್ತ) Good g. ! My g. ! G. me! G. goodness! (ಆಶ್ಚರ್ಯ ಸೂಚಕ ಉದ್ಗಾರಗಳು). **Gráciously** (ಕ್ರಿ. ವಿ.) ; **Gráciousness** (ನಾ.)

Grácile ಗ್ರ್ಯಾಸಿ(ಸೈ)ಲ್ (ಗು.) ತೆಳುವಾದ ; ಅಸಿಯೊಡಲಿನ. (ಅಪ ಪ್ರ.) ಕೋಮಲ ತನು. **Gracílity** (ನಾ.) ತೆಳುವು; ಅಸಿ(ತನ). (ಸಾಹಿತ್ಯ ಶೈಲಿ) ಅಲಂಕಾರವಿಲ್ಲದ ಸರಳತೆ.

Grade ಗ್ರೇಡ್ (ನಾ., ಕ್ರಿ. ಸಕ.) (ಸ್ಥಾನ ಮಾನಗಳು, ಯೋಗ್ಯತೆ, ಪಾಂಡಿತ್ಯ, ಗುಣ, ಬೆಲೆ, ಮೊ. ಗಳಲ್ಲಿ) ಸ್ಥಾನ ; ತರ ; ಮೆಟ್ಟಲು , ಅಂತಸ್ತು ; ದರ್ಜೆ ; (ಈ ವಿಷಯಗಳಲ್ಲಿ ಸಮಾನವಾಗಿರುವ ವ್ಯಕ್ತಿಗಳ, ವಸ್ತುಗಳ) ವರ್ಗ. (ಗಣಿತ) ಸಮಕೋನದ ಶತಾಂಶ. (ದನದ ತಳಿಯೆಳಿಸುವುದರಲ್ಲಿ) ನಾಡು ಹಸುಗಳಮೇಲೆ ಉತ್ತಮ ತಳಿಯ ಗೂಳಿಗಳನ್ನು ಹಾರಿಸಿ ಪಡೆದ ತಳಿಭೇದ. (High g. ಉತ್ತಮ ತಳಿಯ ಉತ್ಪಾದಕ ಪ್ರಾಣಿಯನ್ನು ಹೆಚ್ಚಾಗಿ ಹೋಲುವ ಪ್ರಾಣಿ : ಮೇಲು ತಳಿ). (ಪ್ರಾ. ವಿ.) ಮೂಲ ವರ್ಗವು ಸರಿಸುಮಾರು ಒಂದು ಗೊತ್ತಾದ ವಿಕಸನಾವಸ್ಥೆಯಲ್ಲಿದ್ದಾಗ ಅದರಿಂದ ಕವಲೊಡೆದು ಬಂದುವೆಂದು ಭಾವಿಸುವ ಪ್ರಾಣಿವರ್ಗ. (ಭಾ. ಶಾ.) ಒಂದು ಸ್ವರವು ಅಥವಾ ಪದದ ಮೂಲ ರೂಪವು ಸ್ವರವ್ಯತ್ಯಯ ಶ್ರೇಣಿಯಲ್ಲಿ ಪಡೆದಿರುವ ಸ್ಥಾನ. (ಅಮೆ. ಸಂ.) ಓರಡಿ ; ಇಳುಕಲು ; (ಹತ್ತುವ ಅಥವಾ ಇಳಿಯುವ) ಓರಡಿಯ ಗತಿಮಾನ, ಪ್ರಮಾಣ ; ಪ್ರವಣತೆ [On the up, down, g. ಏರುತ್ತ, ಇಳಿಯುತ್ತ (ರೂಪ. ಸಹ)]. (ಕ್ರಿ.) ದರ್ಜೆಗಳಲ್ಲಿ, ವರ್ಗಗಳಲ್ಲಿ, ತರಗತಿಗಳಲ್ಲಿ, ವಿಂಗಡಿಸು ; ವರ್ಗೀಕರಿಸು. ತರಗತಿಗಳಾಗಿ ಭಾಗಿಸು; (ತರಗತಿ ಬದಲಾವಣೆಯಾಗುವಂತೆ) ಬೆರಕೆ ಮಾಡು. ಒಂದರಲ್ಲೊಂದು ಬೆರೆತುಹೋಗಿ ಕ್ರಮೇಣ ಛಾಯಾಂತರ ಹೊಂದುವಂತೆ ಬಣ್ಣಗಳನ್ನು ಹಾಕು, ಬಣ್ಣ ಕೊಡು. (ರಸ್ತೆ, ಕಾಲುವೆ, ಮೊ. ನ್ನು) ಸುಲಭವಾದ ಓರಡಿಗೆ ಇಳಿಸು ; ಓರೆ ತಗ್ಗಿಸು. (ದನ ತಳಿಯೆಳಿಸುವುದರಲ್ಲಿ) ಉತ್ತಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಳಿಯ ಗೂಳಿಯನ್ನು ಹಾರಿಸು (G. up ಹೀಗೆ ತಳಿಯನ್ನು ಮೇಲ್ಪಡಿಸು). (ಭಾ. ಶಾ., ಕರ್ಮಣಿ ಪ್ರ.) ಸ್ವರವ್ಯತ್ಯಯದಿಂದ ಮಾರ್ಪಡು. **Gradáte** ಗ್ರಡೇಟ್ (ಕ್ರಿ.) ಗೋಚರವಾಗದಂತೆ ಕ್ರಮ ಕ್ರಮವಾಗಿ ಛಾಯಾಂತರ, ವರ್ಣಾಂತರ, ಹೊಂದು(ದಿಸು). ಮೆಟ್ಟಲು ಮೆಟ್ಟಲಾಗಿ, ದರ್ಜೆ ದರ್ಜೆಯಾಗಿ, ಅಳವಡಿಸು. **Gradátion** — ಷನ್ (ನಾ.; ಸಾ., ಬ. ವ. ದಲ್ಲಿ) ರೂಪಾಂತರದ, ಮುನ್ನಡೆಯ, ಮೆಟ್ಟಲು (ಗಳು) ; ತಾರತಮ್ಯ. (ಸ್ಥಾನ ಮಾನಗಳು, ತೀವ್ರತೆ, ವ್ಯತ್ಯಾಸ, ಮೊ. ಗಳಲ್ಲಿ) ದರ್ಜೆ ; ಶ್ರೇಣಿ ; ಇಂಥ ಶ್ರೇಣಿಗಳಲ್ಲಿ ಅಳವಡಿಸುವುದು ; ವರ್ಗೀಕರಣ. (ಕುಶಲ ಕಲೆ) ಅರಿವಿಗೆ ಬರದಂತೆ (ಕ್ರಮ ಕ್ರಮವಾಗಿ) ಛಾಯಾಂತರ, ಭಾವಾಂತರ, ಸ್ವರಾಂತರ, ಹೊಂದುವುದು. (ಭಾ. ಶಾ.) ಸ್ವರ ವ್ಯತ್ಯಯ. **Gradátional** (ಗು.); **Gradátionally** (ಕ್ರಿ. ವಿ.); **Grádely** ಗ್ರೇಡ್ಲಿ (ಗು.) (ಪ್ರಾಂ. ಪ್ರ.) ಅತ್ಯುತ್ತಮ ; ಪೂರ್ತಿ ತೃಪ್ತಿಕರವಾದ ; ಚೆಲುವಾದ ; ಸುಂದರವಾದ ; ಮನೋಹರವಾದ. ನೈಜ ; ಸಾಚಾ ; ಸತ್ಯವಾದ ; ಉಚಿತವಾದ. **Grádient** (ನಾ.) (ರಸ್ತೆ, ರೈಲುದಾರಿ, ಮೊ.) ಮಟ್ಟಮ್ಮೆಯೊಡನೆ ಮಾಡುವ ಕೋನ ; ಇಳುಕಲಿನ ಪ್ರಮಾಣ. (ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋದಾಗ ಶಾಖಮಾಪಕದಲ್ಲಿ ಅಥವಾ ವಾಯುಭಾರ ಮಾಪಕದಲ್ಲಿ ಆಗುವ ರಸಮಟ್ಟದ) ಏರಿಳಿತಗಳ ಪ್ರಮಾಣ. **Grádin** ಗ್ರೇಡಿನ್, **Gradíne** ಗ್ರಡೀನ್ (ನಾ.) ಸ್ವಲ್ಪ ಸ್ವಲ್ಪವಾಗಿ ಮೇಲೇರಿ ಹೋಗುವ ಮೆಟ್ಟಲುಗಳ, ಅಥವಾ ಪೀಠ ಪಂಕ್ತಿಗಳ ಒಂದು ಸಾಲು. (ಕ್ರೈಸ್ತ) ಬಲಿ ಪೀಠದ ಹಿಂದುಗಡೆಯಿರುವ ಬಡು. **Grádual** ಗ್ರ್ಯಾಡ್ಯುಅಲ್ (ಗು., ನಾ.) ಕ್ರಮ ಕ್ರಮವಾಗಿ, ಮೆಟ್ಟಲು ಮೆಟ್ಟಲಾಗಿ, — ಆಗುವ; ನಡೆಯುವ ; ನಿಧಾನವಾಗಿ, ಮೆಲ್ಲ ಮೆಲ್ಲಗೆ, ಕ್ರಮೇಣ, ಮುಂದುವರಿಯುವ ; ತ್ವರೆಯಿಲ್ಲದ ; ಕಡಿದಲ್ಲದ; ಅನುಕ್ರಮವಾದ.. (ನಾ.) (ಕ್ರೈಸ್ತ) (ಪ್ರಭು ಭೋಜನ ಸಂಸ್ಕಾರದಲ್ಲಿ ಹಾಡುವ) ಸಂವಾದ ಗೀತ. **Grádually** (ಕ್ರಿ. ವಿ.) ; **Grádualness** (ನಾ.) ; **Gráduate**[1] — ಎಟ್ (ನಾ.) ವಿದ್ಯಾಪೀಠದ ಪದವೀ ಧರ. ಅಳತೆಗೆರೆಗಳನ್ನು ಹಾಕಿರುವ ಔಷಧ ವ್ಯಾಪಾರಿಯ ಗಾಜಿನ ಅಳತೆಪಾತ್ರೆ. **Gráduate**[2] — ಏಟ್ (ಕ್ರಿ.) ವಿದ್ಯಾಪೀಠದ ಪದವಿ ಪಡೆ, ಕೊಡು (ಅಮೆ. ಸಂ.); ಪಾಂಡಿತ್ಯ ಸಂಪಾದಿಸು ; ಪಂಡಿತನಾಗು. (ಅಳತೆಯ) ಭಾಗಗಳನ್ನು, ಅಂಶಗಳನ್ನು, ಗುರುತುಮಾಡು ; ಅಳತೆ ಗುರುತಿಸು. ದರ್ಜೆಗಳಾಗಿ, ತಾರತಮ್ಯಾನುಸಾರ, ತರಗತಿವಾರಾಗಿ, ವಿಂಗಡಿಸು ; ವರ್ಗೀಕರಿಸು. (ತೆರಿಗೆಯ ದರಗಳನ್ನು) ಒಂದು ಸೋಪಾನಪದ್ಧತಿಯಲ್ಲಿ ಹಾಕು, ಹಂಚು. ಕ್ರಮ ಕ್ರಮವಾಗಿ, ಕ್ರಮೇಣ, — ಬದಲಾವಣೆ ಪಡೆ, ಮಾರ್ಪಡು, ಛಾಯಾಂತರ ಹೊಂದು, ಮಾಯವಾಗು (*Away, into* ಉಪ. ದೊಡನೆ). ದ್ರಾವಣವನ್ನು (ಬಾಷ್ಪೀಕರಿಸುವುದರಿಂದ ಗಾತ್ರ ಕುಗ್ಗಿಸಿ) ಸಾರ ಹೆಚ್ಚಿಸು, ಸಾಂದ್ರೀಕರಿಸು. **Graduátion** (ನಾ.) ; **Gráduator** (ನಾ.)

Grádus ಗ್ರೇಡಸ್ (ನಾ.) (ಲ್ಯಾಟಿನ್ ಪದ್ಯಗಳನ್ನು ಬರೆಯಲು ಸಹಾಯವಾಗುವಂತೆ ಪಾಠಶಾಲೆಗಳಲ್ಲಿ ಉಪಯೋಗಿಸುವ) ಲ್ಯಾಟಿನ್ ಛಂದಶ್ಶಾಸ್ತ್ರದ ನಿಘಂಟು.

Gr(a)écism ಗ್ರೀಸಿಸ್ಮ್ (ನಾ.) ಗ್ರೀಕ್ ಭಾಷಾಮರ್ಯಾದೆ, ಸಂಪ್ರದಾಯ ; ಗ್ರೀಕ್ ನುಡಿಗಟ್ಟು (ಮು. ಬೇರೆ ಭಾಷೆಯಲ್ಲಿ ಅನುಕರಣ ಮಾಡಿದ್ದು). ಗ್ರೀಕ್ ಭಾವ, ಶೈಲಿ, ಪದ ವಿನ್ಯಾಸ, ವಾಕ್ಸರಣಿ, ಮೊ. ; ಇವುಗಳ ಅನುಕರಣ ; ಗ್ರೀಕ್ ವೈಶಿಷ್ಟ್ಯ. **Gr(a)écize** ಗ್ರೀಸೈಸ್ (ಕ್ರಿ.) ಗ್ರೀಕ್ ಅಚ್ಚುಕಟ್ಟು, ಲಕ್ಷಣ, ರೂಪ, — ಕೊಡು ; ಗ್ರೀಕ್ ವೈಶಿಷ್ಟ್ಯ ಕೊಡು. ಗ್ರೀಕಂತೆ ಆಗು ; ಗ್ರೀಕರ ಕಡೆ ಒಲವು ತೋರು ; ಗ್ರೀಕರ ಅನುಕರಣ ಮಾಡು. **Gr(a)éco-** ಗ್ರೀಕೊ — (ಸ. ಪೂ. ಪ.) ಗ್ರೀಕ್—. **G.-Roman** ಗ್ರೀಕ್ ಮತ್ತು ರೋಮನ್. **Gr(a)ecománia(c)** (ನಾ.) ಗ್ರೀಕ್ ಹುಚ್ಚು (ಹಿಡಿದವನು). **Gr(a)écophil** (ಗು., ನಾ.) ಗ್ರೀ(ಸ್)ಕ್ ಪ್ರೇಮದ ; — ಪ್ರೇಮಿ.

Graffíto (It.) ಗ್ರಾಫೀಟೊ (ನಾ.) (ಬ. ವ., -ti—ಟೀ) ಬಂಡೆ, ಗೋಡೆ, ಮೊ. ಗಳಮೇಲೆ ಒರಟೊರಟಾಗಿ ಗೀಚಿದ ರೇಖನ, ಚಿತ್ರ, ಬರಹ, ಮೊ. ; ಗೀರು ಚಿತ್ರ (ಮು., ಪಾಂಪೇ ನಗರದಲ್ಲಿನಂತೆ ಪುರಾತನ ನಗರದ ಗೋಡೆಯಮೇಲಿನದು). ಬಗೆ ಬಗೆಯ ಬಣ್ಣಗಳ ಒಳ ಪದರಗಳು ಕಾಣುವಂತೆ ಗೋಡೆಯ ಗಿಲಾವಿನಲ್ಲಿ ಮಾಡಿದ ಗೀರುಗಳ ಅಲಂಕಾರ : ಗೀರಲಂಕಾರ.

Graft[1] ಗ್ರಾಫ್ಟ್ (ನಾ., ಕ್ರಿ. ಸಕ.) ಒಂದು ಗಿಡದ ಜೀವರಸವು ಅದರ ಕಾಂಡದ ಸೀಳಿನಲ್ಲಿ ಸೇರಿಸಿದ ಮತ್ತೊಂದರ ಅಂಗದಲ್ಲಿಯೂ ಕ್ರಮೇಣ ಹರಿದು ಎರಡೂ ಒಂದುಗೂಡುವುದಕ್ಕಾಗಿ ಇಟ್ಟು ಕಟ್ಟಿದ ಕೊಂಬೆ, ಕಣ್ಣು ; ಕಸಿ ; ಕಸಿಯಂಟು ; ಕಸಿಕೊಂಬೆ. (ಶಸ್ತ್ರ ವೈದ್ಯ) ಬೇರೆ ಕಡೆಯಿಂದ ತಂದು ಸೇರಿಸಿದ ಸಜೀವ ಅಂಗಾಂಶದ ತುಂಡು. ಕಸಿ ಮಾಡುವುದು, —ಕಟ್ಟುವುದು; ಅಂಗಾಂಶ ಸಂಯೋಜನೆ; ಕಸಿ ಕಟ್ಟಿದ, ಸಂಯೋಜಿಸಿದ, —ಸ್ಥಳ ; ಕಸಿಯೆಡೆ. (ಕ್ರಿ.) ಕಸಿ ಕಟ್ಟು; — ಮಾಡು (*In, into, on, upon, together* ಉಪ. ದೊಡನೆ). (ರೂಪ.) ಚೇತನವುಳ್ಳ ಅಥವಾ ಬಿಡಿಸಲಾಗದ ಸೇರಿಕೆಯಾಗುವಂತೆ ಕೂಡಿಸು, ಬಂಧಿಸು (*In, upon* ಉಪ. ದೊಡನೆ) ; ಒಂದುಗೂಡಿಸು. (ಶಸ್ತ್ರ ವೈದ್ಯ) (ಸಜೀವ ಅಂಗಾಂಶವನ್ನು) ತೆಗೆದು ಬೇರೆಯ ಭಾಗಕ್ಕೆ ಅಥವಾ ಬೇರೆಯ ಪ್ರಾಣಿಗೆ ಸಂಯೋಜಿಸು. Grafting-clay, -wax ಕಸಿಕಟ್ಟಿದ ಭಾಗವನ್ನು ಮುಚ್ಚುವುದಕ್ಕಾಗಿ ಉಪಯೋಗಿಸುವ ಮಣ್ಣುಮಿಶ್ರಣದ ಅಥವಾ ಮೇಣಮಿಶ್ರಣದ ಪದಾರ್ಥ ; ಕಸಿ ಮಣ್ಣು, ಮೇಣ.

Graft[2] ಗ್ರಾಫ್ಟ್ (ನಾ.) ಸನಿಕೆಯಿಂದ ಒಂದು ಸಲಕ್ಕೆ ಎತ್ತಿಹಾಕುವಷ್ಟು ಮಣ್ಣಿನ ಮೊತ್ತ. ಬಾಲಚಂದ್ರಾಕಾರದ ಅಲಗುಳ್ಳ ಸನಿಕೆ.

Graft[3] ಗ್ರಾಫ್ಟ್ (ನಾ., ಕ್ರಿ. ಅಕ.) (ಅಮೆ. ಸಂ., ಬಳ. ಮಾ.) (ರಾಜಕೀಯ ಅಥವಾ ಪೌರ ಸಂಸ್ಥೆಯ ವ್ಯವಹಾರದ ಸಂಬಂಧದಲ್ಲಿ ಪಡೆಯುವ) ಅಕ್ರಮ ಲಾಭಗಳು; ನ್ಯಾಯವಿರುದ್ಧವಾದ ಸಂಪಾದನೆ; ಮೇಲು ಸಂಪಾದನೆ ; ಅಳಿ ಲಾಭ ; ಕೊಳ್ಳೆ ; (ಇವುಗಳನ್ನು ಪಡೆಯುವುದಕ್ಕಾಗಿ ಕೈಕೊಂಡ) ದುರಾಚರಣೆಗಳು, ಮಾರ್ಗಗಳು. (ಕ್ರಿ.) ನ್ಯಾಯವಿರುದ್ಧ ಸಂಪಾದನೆಗೆ ಪ್ರಯತ್ನಿಸು, ಕೈ ಹಾಕು ; — ನೆ ಮಾಡು. **Gráfter** (ನಾ.)

Grail[1] ಗ್ರೆಯ್ಲ್ (ನಾ.) = Gradual (Grade ನೋಡಿ)

Grail[2] ಗ್ರೆಯ್‌ಲ್ (ನಾ.) ಕ್ರಿಸ್ತನು ಕೊನೆಯ ಊಟದಲ್ಲಿ ಉಪಯೋಗಿಸಿದ, ಮತ್ತು Joseph of Arimathea ಎಂಬಾತನು ಶಿಲುಬೆಯ ಹತ್ತಿರ ಕ್ರಿಸ್ತನ ರಕ್ತವನ್ನು ಹಿಡಿದುಕೊಂಡ, ತಟ್ಟೆ (= Holy g., Saint g., Sangreal)

Grail[3] ಗ್ರೆಯ್ಲ್ (ನಾ.) ಬಾಚಣಿಗೆ ಮಾಡುವವನ ಅರ.

Grain ಗ್ರೆಯ್‌ನ್ (ನಾ., ಕ್ರಿ.) ಕಾಳು ; ಧಾನ್ಯ ; ಬೀಜ ; (ಜಾತಿ ವಾಚಕ; ಏ. ವ.) ಗೋಧಿಯ ಅಥವಾ ಅದರಂಥ ಆಹಾರಯೋಗ್ಯವಾದ ಹುಲ್ಲು; ಅವು ಬಿಡುವ ಫಲ ; ಒಂದು ವಿಶೇಷ ಜಾತಿಯ ಧಾನ್ಯ. (ಬ. ವ.) ಮಸಾಲೆಗೂ ಔಷಧಕ್ಕೂ ಉಪಯೋಗಿಸುವ ಪ. ಆಫ್ರಿಕದ ಒಂದು ಸಸ್ಯದ ಬೀಜಕೋಶಗಳು (= Grains of Paradise or Guinea grains). (ಬ. ವ. ದಲ್ಲಿ) ಸಾರಾಯಿ ಮಾಡಿದಮೇಲೆ ಅಥವಾ ಬಟ್ಟಿಯಿಳಿಸಿದಮೇಲೆ ಉಳಿಯುವ ಮೊಳೆತ ಜವೆಗೋಧಿಯ ಕಸರು ; ಬಟ್ಟಿಯುಳಿಕೆಯ ಕಾಳು ; ಗಸಿ ಕಾಳು. (ಮರಳು, ಚಿನ್ನ, ಲವಣ, ಕೋವಿಮದ್ದು, ಧೂಪ, ಮೊ. ಗಳ) ಚಿಕ್ಕ ಗಡುಸು ಕಣ, ರವೆ (Large, small, -g. powder ದೊಡ್ಡ ಕಣಗಳುಳ್ಳ, ಚಿಕ್ಕ ಕಣಗಳುಳ್ಳ, ಕೋವಿಮದ್ದು). ತೂಕದ ಅತಿ ಕನಿಷ್ಠ ಮಾನ : 'ಗ್ರೆಯ್ನ್' (Troy ತೂಕ ಕ್ರಮದಲ್ಲಿ ೧/೫೭೬೦ ಪೌಂಡಿಗೆ ಸಮ ; Avoirdupois ತೂಕ ಕ್ರಮದಲ್ಲಿ ೧/೭೦೦೦ ಪೌಂಡಿಗೆ ಸಮ). ಅತ್ಯಂತ ಸ್ವಲ್ಪ ಪರಿಮಾಣ ; ಅಣು ; ಲವ ; ಲೇಶ (Without a g. of vanity, love ಲೇಶವೂ ಡಂಭ, ಪ್ರೇಮ, ಇಲ್ಲದೆ). (ಚರಿತ್ರೆ) 'ಕರ್ಮಿಸ್', 'ಕಾಚಿನೀಲ್' ಎಂಬ (ಬಣ್ಣ ಕೊಡುವ) ಹುಳುಗಳು ; ಈ ಯಾವ ಹುಳುವಿನಿಂದಾದರೂ ತಯಾರಿಸಿದ ಬಣ್ಣ ; ಕಿರುಮಂಜಿ ಬಣ್ಣ [Dye in g. ಕಿರುಮಂಜಿ ಬಣ್ಣ ಕಟ್ಟು ; ಯಾವುದಾದರೂ ಗಟ್ಟಿ ಬಣ್ಣ ಹಾಕು, ಕಟ್ಟು; ನೂಲನಲ್ಲೇ ಬಣ್ಣಕಟ್ಟು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚೆನ್ನಾಗಿ ಬಣ್ಣ ಕಟ್ಟು. In g. ಗಟ್ಟಿ ಬಣ್ಣದ. (ರೂಪ.) ಸಂಪೂರ್ಣವಾಗಿ; ಶುದ್ಧ ; ಪಕ್ಕಾ ; ಚೊಕ್ಕ ಸ್ವಭಾವದ]. (ಕಾವ್ಯ) ಬಣ್ಣ ; ವರ್ಣ ; ರಂಗು. ಕಣ ಕಣಗಳಾಗಿರುವ ರಚನೆ ; ಮೇಲ್ಮೈ ತರಿ ತರಿ, ತರಕಲು, ಆಗಿರುವುದು ; (ಬಣ್ಣ ಬಣ್ಣದ) ಮಚ್ಚೆ ಮಚ್ಚೆಯಾಗಿರುವುದು. (ಮಾಂಸ, ಚರ್ಮ, ಮರ, ಕಲ್ಲು, ಮೊ. ಗಳಲ್ಲಿಯ) ಕಣಗಳ ರಚನೆ, ವಿನ್ಯಾಸ ಮತ್ತು ಗಾತ್ರ : ಕಣ ವಿನ್ಯಾಸ. (ಮರದ ವಿಷಯದಲ್ಲಿ) ಎಳೆ ; ಒಂದು ಮಾದರಿಯಾಕಾರವಾಗುವ ಎಳೆಗಳ ರಚನೆ. (ಕಲ್ಲಿದ್ದಲು, ಕಲ್ಲು, ಮೊ. ಗಳಲ್ಲಿ) ಪೊರೆಯೇಳುವ ಪದರಗಳು. (ರೂಪ.) ಸ್ವಭಾವ ; ಪ್ರಕೃತಿ ; ಚಿತ್ತವೃತ್ತಿ ; ಒಲವು ; ಓಲು (Against the g. ಮನಸ್ಸಿಗೆ, ಮನೋಗತಿಗೆ, ವ್ಯತಿರಿಕ್ತವಾಗಿ ; ಸ್ವಭಾವ ವಿರುದ್ಧವಾಗಿ). [**G.-leather** ಕೂದಲಿದ್ದ ಚರ್ಮದ ಕಡೆಯನ್ನು ಹದ ಮಾಡಿರುವ ತೊಗಲು. **G.-side** ಕೂದಲಿದ್ದ ಚರ್ಮದ ಕಡೆ. **G.-sick** (ನಾ.) ದನಗಳ ಒಂದು ರೋಗ ; ದನಗಳ ಮೊದಲ ಹೊಟ್ಟೆ ಉಬ್ಬುವ ರೋಗ]. (ಕ್ರಿ.) ಕಣ ಕಣವಾಗಿ ಆಗು, ಮಾಡು ; ಹರಳುಗಟ್ಟು. ಕಿರುಮಂಜಿ ಬಣ್ಣ ಹಾಕು. ಕಣ ಕಣಗಳಾಗಿರುವ ಮೇಲ್ಮೈ ಕೊಡು ; ತರಕಲು ಮಾಡು. ಸುಲಿದ ಚರ್ಮದ ಕೂದಲು ತೆಗೆದುಹಾಕು. (ಮರದ ಅಥವಾ ಅಮೃತಶಿಲೆಯ ಮೇಲ್ಮೈಯ) ಎಳೆಗಳಂತೆ ಕಾಣುವಹಾಗೆ ಬಣ್ಣ ಹಾಕು. **Graíner** (ನಾ.) ; **Grainless** (ಗು.) ; **Graíny** (ಗು.) ; (-)**grained** (ಗು.) ; **Graníferous** ಗ್ರನಿಫ಼ರಸ್ (ಗು.) ಧಾನ್ಯದ ಕಾಳನ್ನು, ಕಾಳಿನಂಥ ಬೀಜವನ್ನು, ಬಿಡುವ ; ಕಾಳು ಬೀಜದ. **Grániform** ಗ್ರ್ಯಾ(ಗ್ರೇ)ನಿಫಾರ್ಮ್ (ಗು.) ಕಾಳಿನಾಕಾರದ (ಮು., ಅಂ. ರ. ಶಾ., ಸ. ವಿ.). **Granívorous** ಗ್ರಾನಿವೊರಸ್ (ಗು.) ಧಾನ್ಯದ ಕಾಳು ತಿನ್ನುವ; ಧಾನ್ಯಾಹಾರಿ. **Gránular** ಗ್ರ್ಯಾನ್ಯುಲರ್ (ಗು.) ಕಣ ಕಣವಾಗಿರುವ ; ಹರಳು ಹರಳಾದ ; ಕಣಗೂಡಿದ ಮೇಲ್ಮೈಯ ರಚನೆಯ ; ತರಿ ತರಿಯಾದ. **Granulárity** (ನಾ.); **Gránularly** (ಕ್ರಿ. ವಿ.); **Gránulo-** (ಸ. ಪೂ. ಪ.) ; **Gránulous** (ಗು.) = Granular. **Gránulate**[1] — ಲೇಟ್ (ಕ್ರಿ.) ಕಣ ಕಣವಾಗು, — ವಾಗಿ ಮಾಡು ; ಹರಳು ಹರಳಾಗು; — ಗಿ ಮಾಡು. (ಮೇಲ್ಮೈಯನ್ನು) ತರಕಲು ಮಾಡು, ತರಿತರಿ ಮಾಡು. (ಗಾಯ, ಮೊ.) ಮಾಗುವುದರ ಅಥವಾ ಕೂಡಿಕೊಳ್ಳುವುದರ ಸೂಚನೆಯಾಗಿ ಸಣ್ಣ ಸಣ್ಣ ಉಬ್ಬುಗಳಾಗು ; ಕಣಗೂಡು; ಮಾಯಿ ; ಸೇರಿಕೊ ; ಕೂಡಿಕೊ. **Gránulate**[2] — ಲೆಟ್ (ಗು.) (= Granulated). **Granulátion** (ನಾ.) ; **Gránulator** (ನಾ.) ; **Gránule** (ನಾ.) ಸಣ್ಣ ಕಾಳು, ಕಣ, ಹರಳು.

Grains ಗ್ರೇಯ್‌ನ್ಸ್ (ನಾ., ಏ. ವ.) (ಮುಂದಿನ ಭಾಗ) ಕವಲಾಗಿರುವ ಮೀನ ಭರ್ಜಿ.

Gram[1] ಗ್ರ್ಯಾಮ್ (ನಾ.) ಕಡಲೆ ; ಕುದುರೆಯ ದಾಣವಾಗಿ ಉಪಯೋಗಿಸುವ ಯಾವುದಾದರೂ ದ್ವಿದಳ ಧಾನ್ಯ. G.-fed (ಆಂ. ಇಂ., ಅಸಂ.) ಪ್ರತಿಯೊಂದರಲ್ಲೂ ಅತ್ಯುತ್ತಮವಾದುದನ್ನು ಪಡೆಯುವ.

Gram[2] = Gramme.

- gram — ಗ್ರ್ಯಾಂ (ಉ. ಪ್ರ.) —ಲೇಖನ; —ಅಕ್ಷರ. (Anagram, Diagram, Epigram, Telegram, Cablegram, Pistolgram, Phonogram, etc.)

Gráma, Grámma ಗ್ರಾ(ಗ್ರ್ಯಾ, ಗ್ರೇ)ಮ (ನಾ.) (ಅಮೆ. ಸಂ. ಗಳ ಕೆಲವು ಭಾಗಗಳಲ್ಲಿ ಬೆಳೆಯುವ ಮೇವಿನ) ಹಲವು ಗಿಡ್ಡ ಹುಲ್ಲಿನ ಜಾತಿ (=G. grass)

Grámarye ಗ್ರ್ಯಾಮರಿ (ನಾ.) (ಪ್ರಾಚೀ. ಪ್ರ.) ಕಣ್ಕಟ್ಟು ; ಇಂದ್ರಜಾಲ ; ಯಕ್ಷಿಣಿ ; ಮಾಟ ; ಭೂತ ವಿದ್ಯೆ ; ಪ್ರೇತ ಸಿದ್ಧಿ ; ಅಭಿಚಾರ.

Gramércy ಗ್ರಮರ್ಸಿ (ಭಾವ. ಅವ್ಯ.) (ಪ್ರಾಚೀ. ಪ್ರ.) ಸಂತೋಷ! ವಂದನೆಗಳು! ಆಹಾ! (ವಂದನೆ, ಆಶ್ಚರ್ಯ, ಭಾವೋದ್ರೇಕ, — ಮೊ. ನ್ನು ಸೂಚಿಸುವ ಉದ್ಗಾರ)

Gramináceous ಗ್ರೇಮಿನೇಷಸ್, **Gramíneous** ಗ್ರೇಮಿನಿಯಸ್ (ಗು.) ಹುಲ್ಲಿನ ; ಹುಲ್ಲಿನಂಥ; ಹುಲ್ಲು ಹೆಚ್ಚಾಗಿ ಬೆಳೆದಿರುವ. **Graminívorous** ಗ್ರಮಿನಿವೊರಸ್ (ಗು.) ಹುಲ್ಲು ಮೇಯುವ, ತಿನ್ನುವ.

Grámmalogue ಗ್ರ್ಯಾಮಲಾಗ್ (ನಾ.) (ಶೀಘ್ರ ಲಿಪಿ) ಒಂದೇ ಚಿಹ್ನೆಯಿಂದ ಸೂಚಿತವಾದ ಪದ ; ಒಂದು ಪದಕ್ಕೆ ಬದಲಾಗಿ ಉಪಯೋಗಿಸುವ ಅಕ್ಷರ, ಚಿಹ್ನೆ, ಲಿಪಿ ; ಅಕ್ಷರ ಪದ ; ಪದಸೂಚಕ ಚಿಹ್ನೆ.

Grámmar ಗ್ರ್ಯಾಮರ್ (ನಾ.) ವ್ಯಾಕರಣ (ಶಾಸ್ತ್ರ) ; ಶಬ್ದ ಶಾಸ್ತ್ರ (General, Philosophical or Universal g. ಭಾಷೆಗಳ ವ್ಯಾಕರಣ ಪದ್ಧತಿಗಳಲ್ಲಿ ಅಂಗೀಕೃತವಾಗಿ, ವಿವಿಧ ರೀತಿಗಳಲ್ಲಿ ವ್ಯಕ್ತಗೊಳಿಸುವ ಭಾವನಾ ವ್ಯತ್ಯಾಸಗಳ ಶಾಸ್ತ್ರ ; ಎಲ್ಲ ಭಾಷೆಗಳ ವ್ಯಾಕರಣ ಪ್ರಕ್ರಿಯೆಗಳಿಗೂ ಆಧಾರವಾಗಿರುವ ಸಾಮಾನ್ಯ ತತ್ತ್ವಗಳಿಗೆ ಸಂಬಂಧಿಸಿದ ಶಾಸ್ತ್ರ; ಸಾಮಾನ್ಯ ವ್ಯಾಕರಣ ತತ್ತ್ವ. Historical g. ಒಂದು ಭಾಷೆಯ ಶಬ್ದರೂಪಗಳೂ, ಪದ ಯೋಜನೆಯೂ ಕಾಲ ಕ್ರಮದಲ್ಲಿ ಹೇಗೆ ಹೇಗೆ ರೂಪುಗೊಳ್ಳುತ್ತ ಬಂದುವೆಂಬುದನ್ನು ವಿವರಿಸುವ ವ್ಯಾಕರಣ : ಚಾರಿತ್ರಕ ವ್ಯಾಕರಣ. Comparative g. ಎರಡು ಅಥವಾ ಹೆಚ್ಚಿನ ಭಾಷೆಗಳ ವ್ಯಾಕರಣಗಳಿಗಿರುವ ಸಂಬಂಧ ವಿಚಾರ : ತುಲನಾತ್ಮಕ ವ್ಯಾಕರಣ). ವ್ಯಾಕರಣ ಗ್ರಂಥ. ವ್ಯಾಕರಣ ರೂಪಗಳನ್ನು (ಒಬ್ಬನು) ಉಪಯೋಗಿಸುವ ರೀತಿ ; (ಒಬ್ಬನ) ವ್ಯಾಕರಣ ಪ್ರಯೋಗ, ವ್ಯಾಕರಣ ಶುದ್ಧವಾದ, ಶುದ್ಧವಲ್ಲದ, — ಭಾಷೆ, ಬರವಣಿಗೆ. ವ್ಯಾಕರಣ ಶುದ್ಧವಾದದ್ದು, ಸಮ್ಮತವಾದದ್ದು. ಭಾಷೆಯ ಶಬ್ದರೂಪಗಳು, ಪ್ರಯೋಗಗಳು ; ಭಾಷಾ ಮರ್ಯಾದೆಗಳು. ಒಂದು ಕಲೆಯ, ಶಾಸ್ತ್ರದ, ವಿಜ್ಞಾನದ, ಮೂಲ ತತ್ತ್ವಗಳು, ಪ್ರಥಮ ಪಾಠಗಳು. G.-school ಸಾ., ೧೬ನೆಯ ಶತಮಾನದಲ್ಲಿ ಲ್ಯಾಟಿನ್ ಕಲಿಸಲು (ಇಂಗ್ಲೆಂಡಿನಲ್ಲಿ) ಸ್ಥಾಪಿಸಿದ ಪಾಠಶಾಲೆ. **Grámmarless** (ಗು.) (ಭಾಷೆ, ಮಾತು, ಮನುಷ್ಯ, ಮೊ.) ವ್ಯಾಕರಣವಿಲ್ಲದ. **Grammárian** ಗ್ರಮೇರಿಯನ್ (ನಾ.) ವ್ಯಾಕರಣಜ್ಞ ; ವೈಯಾಕರಣ ; ಶಬ್ದ ಶಾಸ್ತ್ರಜ್ಞ ; ಭಾಷಾ ಪಂಡಿತ ; ಸಾಹಿತ್ಯ ಪಂಡಿತ. **Grammátical** ಗ್ರಮ್ಯಾಟಿಕಲ್ (ಗು.) ವ್ಯಾಕರಣದ [G. gender (ವ್ಯಕ್ತಿಯ ಲಿಂಗಕ್ಕೆ ಸಂಬಂಧಪಡದ) ವ್ಯಾಕರಣ ಲಿಂಗ. G. sense (ವ್ಯಾಕರಣ ನಿಯಮಗಳಲ್ಲದ ಇತರ ಸಂದರ್ಭಗಳನ್ನು ಪರಿಗಣಿಸದೆ) ಪದಶಃ ಅರ್ಥ ; ವಾಚ್ಯಾರ್ಥ]. ವ್ಯಾಕರಣ ಬದ್ಧವಾದ ; ಸೂತ್ರಾನುಸಾರವಾದ ; ಒಂದು ಕಲೆಯ ತತ್ತ್ವಸಮ್ಮತವಾದ. **Grammáticize** (ಕ್ರಿ. ಸಕ.) ವ್ಯಾಕರಣ ಬದ್ಧ ಮಾಡು ; ವ್ಯಾಕರಣಾಂಶಗಳನ್ನು ಚರ್ಚಿಸು. **Grammátically** (ಕ್ರಿ. ವಿ.)

Gramme, Gram ಗ್ರ್ಯಾಮ್ (ನಾ.) ('ಮೆಟ್ರಿಕ್' ಪದ್ಧತಿಯಲ್ಲಿ) ತೂಕದ (ಏಕ) ಮಾನ : 'ಗ್ರ್ಯಾಮ್' [ಬಟ್ಟಿಯಿಳಿಸಿ ತೆಗೆದ ನೀರಿನ ಒಂದು ಘನ ಸೆಂಟಿಮೀಟರ್ ಮೊತ್ತವು ಪರಮಾವಧಿ ಸಾಂದ್ರತೆಯಲ್ಲಿರುವಾಗ, ನಿರ್ವಾಯು ಪ್ರದೇಶದಲ್ಲಿ ತೂಗುವ ತೂಕ =೧೫.೪೩೨ (Troy) ಗ್ರೇನುಗಳು]. **G.-centimetre** ಒಂದು ಗ್ರ್ಯಾಮ್ ತೂಕವನ್ನು ಲಂಬವಾಗಿ ಒಂದು ಸೆಂಟಿಮೀಟರ್ ಎತ್ತರ ಎತ್ತಿದರೆ ಆಗುವಷ್ಟು ಕೆಲಸ : 'ಗ್ರ್ಯಾಮ್ ಸೆಂಟಿಮೀಟರ್'. **Grammétre** (—ಒಂದು ಮೀಟರ್ ಎತ್ತರ —) : 'ಗ್ರ್ಯಾಮ್‌ಮೀಟರ್'.

Grámophone ಗ್ರ್ಯಾಮಫೋನ್ (ನಾ.) (ಮು., ಗಟ್ಟಿ ರಬ್ಬರಿನಿಂದ ಮಾಡಿದ ಬಿಲ್ಲೆಗಳ ಮೈಮೇಲೆ ಧ್ವನಿಸಂಗ್ರಹ ಮಾಡಿ ಸಂಗೀತ, ಭಾಷಣ, ಮೊ. ನ್ನು ಮತ್ತೆ ನುಡಿಯಿಸುವ) ಧ್ವನಿ ಪುನರಾವೃತ್ತಿ ಯಂತ್ರ : 'ಗ್ರಾಮಫೋನ್' ; 'ಫೋನೊಗ್ರಾಫ್'. (Phonogram ಎಂಬ ಪದವನ್ನು ತಿರುವಿಹಾಕಿ ಮಾಡಿದ ಅಕ್ರಮ ರೂಪವಿರಬಹುದು)

Grámpus ಗ್ರ್ಯಾಂಪಸ್ (ನಾ.) (ನೀರನ್ನು ತುಂಬಿಕೊಂಡು ಪಿಚಕಾರಿಯಂತೆ ಚಿಮ್ಮುವ, ಮೊಂಡು ತಲೆಯ) ತಿಮಿ ವರ್ಗದ ಒಂದು ಜಲಚರ ಪ್ರಾಣಿ. ಗಟ್ಟಿಯಾಗಿ ಉಸಿರು ಹೊಯ್ಯುವವನು.

Gránary ಗ್ರ್ಯಾನರಿ (ನಾ.) ಒಕ್ಕಿದ ಧಾನ್ಯವನ್ನಿಡುವ ಉಗ್ರಾಣ ; ಕಣಜ ; ಹಗೇವು. ಹೆಚ್ಚಾಗಿ ದವಸ ಧಾನ್ಯಗಳನ್ನು ಬೆಳೆಯುವ, ಮತ್ತು ಮು., ರಫ್ತು ಮಾಡುವ, ಪ್ರಾಂತ, ಪ್ರದೇಶ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Grand ಗ್ರ್ಯಾಂಡ್ (ಗು.) (ಅಧಿಕಾರದ ಬಿರುದುಗಳಲ್ಲಿ) ಎಲ್ಲವಕ್ಕಿಂತ ಮೇಲಾದ ; ಅತ್ಯಂತ ಮೇಲ್ತರಗತಿಯ ; ಮಹಾ [G. Almoner, Falconer, etc. ಮಹಾದಾನಾಧಿಕಾರಿ, ಮಹಾಶ್ಯೇನಶಿಕ್ಷಕ, ಮೊ. (ಪರಂಪರೆಯಿಂದ ಬಂದಿರುವ, ಈಗಲೂ ಇರುವ, ಪುರಾತನ ಅಧಿಕಾರವುಳ್ಳವರು). G. cross (Cross ನೋಡಿ). G. Duke, Duchess: G. Duchy ಎಂಬ ಹೆಸರುಳ್ಳ ಯೂರೋಪಿನ ಕೆಲವು ಸಂಸ್ಥಾನಗಳ ದೊರೆ, ರಾಣಿ ; 'ಝಾರ್' ಎಂಬ (ಹಿಂದಿದ್ದ) ರಷ್ಯಾ ಚಕ್ರವರ್ತಿಯ ಮಗ, ಮಗಳು. Grand-ducal (ಗು.) ; G. Master ಸ್ವನ್ಯದ 'ನೈಟ್' ಬಿರುದಿನ ಶ್ರೇಣಿಯವರ ನಾಯಕ ; Freemasons, Odd Fellows, ಎಂಬಿವೇ ಮೊ ದ ಸೌಭ್ರಾತ್ರ ಮಂಡಲಿಯವರ ನಾಯಕ. G. Turk ತುರ್ಕಿಯ ಸುಲ್ತಾನ. G. Vizier ತುರ್ಕಿಯ ಮುಖ್ಯ ಮಂತ್ರಿ]. (ನ್ಯಾ. ಶಾ.) ದೊಡ್ಡ ; ಮುಖ್ಯ ; ಪ್ರಧಾನ (Petty, Common ಎಂಬವಕ್ಕೆ ವ್ಯತಿರಿಕ್ತ ಪದಗಳು. G. assize, inquest, jury). ಅತ್ಯಂತ ; ಬಹಳ ; ಮುಖ್ಯವಾದ ; ಮಹತ್ತ್ವದ (That is the g. question ಅದೇ ಬಹಳ ಮುಖ್ಯವಾದ ಪ್ರಶ್ನೆ). ಕಟ್ಟಕಡೆಯ ; ಚಿಲ್ಲರೆ ಬಾಬುಗಳನ್ನೆಲ್ಲ ಒಟ್ಟಿಗೆ ಕೂಡಿದ ; ಒಟ್ಟಿನ (G. total ಒಟ್ಟುಮೊತ್ತ. The g. sum or result of his achievements ಅವನ ಎಲ್ಲ ಕಾರ್ಯಸಾಧನೆಗಳ ಒಟ್ಟು ಫಲ, ಪರಿಣಾಮ ; ಅವನು ಸಾಧಿಸಿದ್ದೆಲ್ಲ). ಮಹಾ ; ಪ್ರಧಾನ [The g. entrance ಮಹಾದ್ವಾರ. G. Fleet (ಹಿಂದೆ ನಡೆದ ಮಹಾಯುದ್ಧದಲ್ಲಿ) ಬ್ರಿಟಿಷರ ಮೂಲ, ಪ್ರಧಾನ, ನೌಕಾಸೈನ್ಯ]. ಸೊಗಸಾದ, ಬಹು ಠೀವಿಯ ; ಚಿತ್ತಾಕರ್ಷಕ ; ಮನೋರಂಜಕ ; ವೈಭವಯುಕ್ತ ; ಗಾಂಭೀರ್ಯದ ; ಸೌಂದರ್ಯವುಳ್ಳ (Do the g. ಇಲ್ಲದ ದೊಡ್ಡಸ್ತಿಕೆ ತೋರಿಸಿಕೊ, ಮೆರೆ ; ಗೌರವದ ಸೋಗು ಹಾಕಿಕೊ). (ಕಲ್ಪನೆ, ವಿಷಯ ನಿರೂಪಣೆ, ವಾಗ್ವೋರಣೆ, ಮೊ.) ಗಂಭೀರ ; ಉದಾತ್ತ [G. style (ದೊಡ್ಡ ವಿಷಯಗಳಿಗೆ ತಕ್ಕುದಾದ) ಮಹಾಶೈಲಿ]. ನೀತಿ ಗಾಂಭೀರ್ಯದ ; ಧೀರೋದಾತ್ತ ; ಶ್ಲಾಘ್ಯ [The Grand Old Man *or* G. O. M. ಪೂಜ್ಯ ಪಿತಾಮಹ ; (ಇಂಗ್ಲೆಂಡಿನಲ್ಲಿ) W. E. Gladstone ಎಂಬ ಹಿಂದಿನ ಮುಖ್ಯಮಂತ್ರಿಗೆ ಅನ್ವಯಿಸುತ್ತಿದ್ದದ್ದು)]. (ಬಳ. ವಾ.) ಬಹಳ ತೃಪ್ತಿಕರವಾದ, ಸೊಗಸಾದ (Ground was in g. condition). (ನೆಂಟತನದ ಹೆಸರುಗಳಲ್ಲಿ) : **Grándson** ಮೊಮ್ಮಗ ; ಪೌತ್ರ. **G.-nephew, G.-niece** ಸೋದರ ಮಗನ, ಸೋದರ ಮಗಳ,— ಮಗ(ಳು): ಸೋದರ ಮೊಮ್ಮಗ(ಳು). **Grándmother, Gránd-mamma** ಅಜ್ಜಿ ; ಮಾತಾಮಹಿ; ಪಿತಾಮಹಿ. Teach your grandmother to suck eggs (Egg[1] ನೋಡಿ). **G.-aunt, G.-uncle** ತಂದೆಯ, ತಾಯಿಯ, — ಚಿಕ್ಕಮ್ಮ(ಪ್ಪ), ದೊಡ್ಡಮ್ಮ(ಪ್ಪ) ಅಥವಾ ಸೋದರ ಅತ್ತೆ (- ಮಾವ). **Grándchild** ಮೊಮ್ಮಗು. **Gránd-daughter** ಮೊಮ್ಮಗಳು ; ಪೌತ್ರಿ. **Grándfather, Grándpapa** ಅಜ್ಜ ; ತಾತ ; ಪಿತಾಮಹ ; ಮಾತಾಮಹ (Grandfather's clock ಕಂಬದಂತಿರುವ ಉದ್ದನೆಯ ಮರದ ಕೋಶದಲ್ಲಿ ಭಾರದ ಬಟ್ಟುಗಳನ್ನು ತೂಗಬಿಟ್ಟು ನಡಸುವ ದೊಡ್ಡ ಗಡಿಯಾರ). **Grándmother** (ಕ್ರಿ. ಸಕ.) ಬಹಳ ಮುದ್ದು, ಅತಿ ಉಪಚಾರ, ಮಾಡು (G.-m. the cups ತಟ್ಟೆಯನ್ನು ತೇವಮಾಡಿ ಅದರಲ್ಲಿಯ ಬಟ್ಟಲುಗಳು ಜಾರಿಹೋಗದಂತೆ ಮಾಡು]. **Grándmotherly** (ಗು.) [ಮು., ಕಾನೂನು, ಮೊ. ಗಳ ವಿಷಯದಲ್ಲ = Excessively paternal (Paternal ನೋಡಿ)]. **Grándparent** ಅಜ್ಜ ಅಥವಾ ಅಜ್ಜಿ. **Grándsire** (ಮು., ಪ್ರಾಣಿಯ) ಅಜ್ಜ. ಪೂರ್ವಜ ; ಮುದುಕ ; ವೃದ್ಧ. ಗಂಟೆಗಳನ್ನು ಬಾರಿಸುವುದರಲ್ಲಿ ಧ್ವನಿವ್ಯತ್ಯಾಸಗೊಳಿಸುವ ಒಂದು ಕ್ರಮ.

G. air ಗಾಂಭೀರ್ಯದ, ಮಹತ್ತ್ವದ, ಭಾವ ; ದೊಡ್ಡಸ್ತಿಕೆಯ, ಉದಾತ್ತತೆಯ, ಕಾಣ್ಕೆ ; ಪ್ರತಿಷ್ಠೆ ; ಗಂಭೀರ ವೇಷ. **G. committee** (ಪಾರ್ಲಿಮೆಂಟಿನ) ಮಹಾಸಮಿತಿ. **G. lodge** (Lodge ನೋಡಿ). **G. Monarch** ಫ್ರಾನ್ಸಿನ ೧೪ನೆಯ ಲೂಯಿ. **G. National** (ಇಂಗ್ಲೆಂಡಿನ) ಲಿವರ್‌ಪೂಲ್ ಪಟ್ಟಣದಲ್ಲಿ ವರ್ಷೇ ವರ್ಷೇ ನಡೆಯುವ ಕುದುರೆಯ ಜೂಜು. **G. stand** ಕುದುರೆಯ ಜೂಜು, ಮೊ. ಗಳಲ್ಲಿ (ನೋಟಕರಿಗಾಗಿ) ಏರ್ಪಡಿಸಿರುವ ದೊಡ್ಡ ಪೀಠಪಂಕ್ತಿ. **G. tour** (ಪ್ರಾಚೀ. ಪ್ರ.) ಶಿಕ್ಷಣ ಪೂರ್ಣತೆಗಾಗಿ ಕೈಕೊಂಡ ಯೂರೋಪಿನ ಮುಖ್ಯ ಪಟ್ಟಣ ಮೊ. ಗಳ ಪ್ರವಾಸ ; ಶಿಕ್ಷಣ ಪೂರಣ ಪ್ರವಾಸ ; ಮಹಾ ಪ್ರವಾಸ. **Grándam(e)** ಗ್ರ್ಯಾಂಡಮ್, — ಡೇಮ್ (ನಾ.) (ಪ್ರಾಚೀ. ಪ್ರ.) ಅಜ್ಜಿ ; ಪೂರ್ವಜಳು ; ಮುದುಕಿ. **Grándam** ಪ್ರಾಣಿಯ ತಾಯಿಯ ತಾಯಿ. **Gran(d-)dad** ಗ್ರ್ಯಾನ್‌ಡ್ಯಾಡ್, ಗ್ರ್ಯಾಂಡ್ — (ನಾ.) ತಾತ ; ಅಜ್ಜ (ಮಕ್ಕಳ ಮಾತು ಅಥವಾ ಮುದ್ದು ಮಾತು). **Grandeé** (ನಾ.) (ಸ್ಪೆಯಿನ್ ಅಥವಾ ಪೋರ್ಚುಗಲ್ಲಿನ) ಅತ್ಯುತ್ತಮ ದರ್ಜೆಯ ಶ್ರೀಮಂತ. ಉತ್ತಮ ದರ್ಜೆಯ, ಘನತೆಯ, ವ್ಯಕ್ತಿ. **Grándeur** ಗ್ರ್ಯಾಂಡ್ಯ(ಜ)ರ್ (ನಾ.) ಬಹಳ ದೊಡ್ಡ ಅಧಿಕಾರ (ಶಕ್ತಿ) ; ಮಹೋನ್ನತಿ ; ಮಹಾ ವೈಭವ ; ಪೆಂಪು (ಗ್ರಾಂ.) ; ಧೀರೋದಾತ್ತತೆ ; ಮಹಿಮೆ ; ಘನ ಗಾಂಭೀರ್ಯ ; ಮಹತ್ತ್ವ ; ಅಟ್ಟಹಾಸ. **Grandíloquent** (ಗು.) ವಾಗಾಡಂಬರದ ; ಬಡಾಯಿ ಮಾತಿನ. **Grandíloquence** (ನಾ.) ; **Grandíloquently** (ಕ್ರಿ. ವಿ.) ; **Grándióse** (ಗು.) ಘನೋದ್ದೇಶದ, ಬಹಳ ಗಂಭೀರವಾದ, —ಯೋಜನೆಯುಳ್ಳ ; ಮಹತ್ತ್ವದ ಪ್ರಥೆಗಾಗಿ ಉದ್ದೇಶಿಸಿದ, ಪ್ರಯತ್ನಿಸಿದ; ಮಹತ್ತ್ವೋದ್ದೇಶದ ; ಮಹತ್ತ್ವದ ಪ್ರಥೆ ಬೀರುವ; ಮಹತ್ತ್ವ ತೋರಿಸಿಕೊಳ್ಳುವ; ಆಡಂಬರದ ; ಪಟಾಟೋಪದ. **Grandiósely** (ಕ್ರಿ. ವಿ.) ; **Grandiósity** (ನಾ.) ; **Grándly** (ಕ್ರಿ. ವಿ.) ; **Grándness** (ನಾ.)

Grand (ನಾ.) = G. piano (Upright g. ನಿಲ್ನೆಲೆಗೆ ಹೊಂದುವಂತೆ ಯಂತ್ರರಚನೆ ಮಾಡಿರುವ ಪಿಯಾನೋ ವಾದ್ಯ.)

Grande (F) ಗ್ರ್ಯಾಂಡ್ (ನಾ., ಸ್ತ್ರೀ. ; ಪುಲ್ಲಿಂಗ Grand) G. toilette ಉತ್ಸವದ, ಹಬ್ಬದ, ಉಡುಪು. G. passion ಅತಿಶಯ, ಉಜ್ಜ್ವಲ, ಗಾಢ, — ಪ್ರಣಯ.

Grange ಗ್ರೇಂಜ್ (ನಾ.) (ಪ್ರಾಚೀ. ಪ್ರ.) ಕಣಜ. (ಮು., ಬೇಸಾಯ ಮಾಡುವ ದೊಡ್ಡಮನುಷ್ಯನ) ಹೊಲಮನೆ, ಮೊ. ಕಟ್ಟಡಗಳು ಸೇರಿದ ಹಳ್ಳಿಮನೆ.

Grángerize ಗ್ರೇಂಜರೈಸ್ (ಕ್ರಿ. ಸಕ.) (ಅನೇಕ ವೇಳೆ, ಇತರ ಪುಸ್ತಕಗಳಿಂದ ಕತ್ತರಿಸಿ ತೆಗೆದ ಚಿತ್ರಗಳು, ಮೊ. ನ್ನು ಸೇರಿಸಿ, ಪುಸ್ತಕಕ್ಕೆ) ಹೆಚ್ಚು ಚಿತ್ರಗಳನ್ನೊದಗಿಸು. **Grangerizátion** (ನಾ.) ; **Grángerizer** (ನಾ.) ; **Grángerism** (ನಾ.) ; **Grángerite** (ನಾ.)

Graníferous, Gràniform, Granívorous. **Grain** ನೋಡಿ.

Gránite ಗ್ರ್ಯಾನಿಟ್ (ನಾ.) ಬೆಣಚು ಕಲ್ಲು, ಅಭ್ರಕ, ಮೊ. ಗಳ ಕಣಗಳಿಂದ ಕೂಡಿ, ಕಟ್ಟಡಗಳಿಗೆ ಉಪಯೋಗಿಸುವ, ಸ್ಫಟಿಕಾಕೃತಿಯ ಒಂದು ತೆರದ ಶಿಲೆ ; ಕಟ್ಟಡದ ಕಲ್ಲು : 'ಗ್ರ್ಯಾನಿಟ್' ಕಲ್ಲು (Bite on g. ಕಗ್ಗಲ್ಲು ಕಡಿ ; ವ್ಯಥಾ ಶ್ರಮ ಪಡು). **G.-ware** (ಗ್ರ್ಯಾನಿಟ್ ಶಿಲೆಯನ್ನನುಕರಿಸಿ ಮಾಡಿದ) ಚುಕ್ಕೆ ಚುಕ್ಕೆಯಾದ ಹೊರಮೈಯುಳ್ಳ ಕುಂಬಾರ ಸಾಮಾನು ; ಇದೇ ಹೊರರೂಪಿನ ಒಂದು ಬಗೆಯ ಕಬ್ಬಿಣದ 'ಎನ್ಯಾಮೆಲ್' ಪಾತ್ರೆಗಳು. **Granític** (ಗು.) ಗ್ರ್ಯಾನಿಟ್ಟಿನ ; — ತೆರದ ; — ಉಳ್ಳ ; — ಇಂದಾದ. **Gránitoid** (ಗು., ನಾ.) ಗ್ರ್ಯಾನಿಟ್ಟನ್ನು ಹೋಲುವ (ಶಿಲೆ) ; —ನ ರಚನೆಯುಳ್ಳ (ಶಿಲೆ). **Granítiform** (ಗು.)

Gránny, Gránnie ಗ್ರ್ಯಾನಿ (ನಾ.) (ಸಲಿಗೆಯ, ಪ್ರೀತಿಯ ಅಥವಾ ತಾತ್ಸಾರದ, ಮಾತು) ಅಜ್ಜಮ್ಮ ; ಮುದುಕಮ್ಮ ; ಹರಟೆ ಮಲ್ಲಿ.

Granolíthic ಗ್ರ್ಯಾನೊಲಿತಿಕ್ (ಗು.) ಗ್ರ್ಯಾನಿಟ್ ಚೂರನ್ನೂ ಸಿಮೆಂಟನ್ನೂ ಬೆರಸಿ ಮಾಡಿದ ಒಂದು ಬಗೆಯ ಗಚ್ಚಿನ : 'ಕಾನ್‌ಕ್ರೀಟ್' ನ.

Grant ಗ್ರಾಂಟ್ (ಕ್ರಿ. ಸಕ., ನಾ.) ಮಾನ್ಯ ಮಾಡು ; ಒಪ್ಪು ; ಸಮ್ಮತಿಸು ; ಅನುಮತಿ ಕೊಡು ; ಅನುಗ್ರಹಿಸು ; ದಯಪಾಲಿಸು ; ಕೊಡು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಲಿಸು. (ಸ್ವಾಮ್ಯವನ್ನು, ಹಕ್ಕನ್ನು, ವಿಧಿ ವಿಹಿತವಾಗಿ) ನೀಡು, ದಯಪಾಲಿಸು. (ಆಸ್ತಿಯನ್ನು) ನ್ಯಾಯನಿಬಂಧನೆಯನುಸರಿಸಿ ವರ್ಗಾಯಿಸು, ವಹಿಸಿ ಕೊಡು; ದಸ್ತೈವಜಿನ ಮೂಲಕ ವಶಪಡಿಸು. ವಾದಕ್ಕೆ ಆಧಾರವಾಗಿ (ಒಂದು ಪ್ರಮೇಯವನ್ನು) ಅಂಗೀಕರಿಸು; ಇಟ್ಟುಕೊ; ಭಾವಿಸು [(I g. you ನಾನು ಒಪ್ಪುತ್ತೇನೆ. Take for granted ಹಾಗೆಂದು ಇಟ್ಟುಕೊ, ಭಾವಿಸು)]. (ನಾ.) ಕೊಡುವುದು; ಒಪ್ಪುವುದು; ಸಮ್ಮತಿಸುವುದು; ದಯಪಾಲಿಸುವುದು (The g. or refusal of ಅಂಗೀಕಾರ ಅಥವಾ ತಿರಸ್ಕಾರ). ವಿಧಿವಿಹಿತವಾಗಿ ಕೊಡುವುದು; ದಾನ ಮಾಡುವುದು; ನ್ಯಾಯಾನುಸಾರವಾಗಿ ವಹಿಸುವುದು, ವರ್ಗಾಯಿಸುವುದು; ಕೊಟ್ಟದ್ದು (ಮು., ಹಣ); ದತ್ತಿ; ಕೊಡುಗೆ [Capitation g. (Capitation ನೋಡಿ). **G.-in-aid** (ನಾ.) ಸಹಾಯ ದ್ರವ್ಯ. (ಗು.) ಸಹಾಯ ದ್ರವ್ಯ ಪಡೆಯುವ]. ದಸ್ತೈವಜಿನ ಮೂಲಕ ವರ್ಗಾಯಿಸುವುದು, ವಹಿಸುವುದು. ಸನ್ನದು; ವರ್ಗಪತ್ರ. **Granteé** (ನಾ.) ದತ್ತಿ, ಕ್ರಯ, ದಾನ, — ಪಡೆಯುವವನು. **Grantór** (ನಾ.) — ಕೊಡುವವನು; ದಾತೃ; ದಾನಿ. **Grántable** (ಗು.)

Granth ಗ್ರಂಥ್ (ನಾ.) ಸಿಕ್ಕರ ಧರ್ಮಗ್ರಂಥ, ವೇದ.

Gránular. **Grain** ನೋಡಿ.

Grape ಗ್ರೇಪ್ (ನಾ.) (ತಿನ್ನುವುದಕ್ಕೆ ಅಥವಾ ದ್ರಾಕ್ಷಾಮದ್ಯ ಮಾಡುವುದಕ್ಕೆ ಉಪಯೋಗಿಸುವ, ಬಳ್ಳಿಯಲ್ಲಿ ಹಸುರು ಅಥವಾ ನೇರಿಳೆ ಬಣ್ಣದ ಹಣ್ಣನ್ನು ಗೊಂಚಲು ಗೊಂಚಲಾಗಿ ಬಿಡುವ) ಒಂದು ಜಾತಿಯ ಸಣ್ಣ ಹಣ್ಣು: (ಚಪ್ಪರ) ದ್ರಾಕ್ಷಿ (ಹಣ್ಣು): ದ್ರಾಕ್ಷಿಯ ಬಳ್ಳಿ [The g., The juice of the g. ದ್ರಾಕ್ಷಾ ಮದ್ಯ, —ರಸ. The grapes are sour, Sour grapes (ಆಸೆಪಟ್ಟದ್ದು ಕೈಗೆ ನಿಲುಕದೆಹೋದಾಗ ಅದನ್ನು ಅಲ್ಲಗಳೆದು ನುಡಿಯುವ ಮಾತು): ಕೈಗೆ ಸಿಕ್ಕದ ಹಣ್ಣು ಹುಳಿ; ಹುಳಿ ದ್ರಾಕ್ಷಿ; ಕೆಲಸಕ್ಕೆ ಬಾರದ್ದು]. (ಕುದುರೆ, ಹೇಸರಗತ್ತೆ, ಮೊ. ಗಳ ಗೊರಸಿನ ಮೇಲ್ಭಾಗದಲ್ಲಿ ಅಥವಾ ಅವುಗಳ ಶ್ವಾಸಕೋಶಾವರಣದ ಪೊರೆಯಲ್ಲಿ) ದ್ರಾಕ್ಷಿಯ ಗೊಂಚಲಿನಂತೆ ಬೆಳೆಯುವ ದುರ್ಮಾಂಸ. **G.-brandy** ದ್ರಾಕ್ಷಿಯ ಹಣ್ಣಿನಿಂದ ಅಥವಾ ದ್ರಾಕ್ಷಾ ಮದ್ಯದಿಂದ ಬಟ್ಟಿಯಿಳಿಸಿ ತಯಾರಿಸಿದ ಬ್ರಾಂದಿ: ದ್ರಾಕ್ಷಿ ಬ್ರಾಂದಿ. **G.-cure** ದ್ರಾಕ್ಷಿಯ ಸೇವನೆಯಿಂದ ರೋಗವನ್ನು (ಮು., ಕ್ಷಯ ರೋಗವನ್ನು) ವಾಸಿಮಾಡುವುದು; ದ್ರಾಕ್ಷಾ ಚಿಕಿತ್ಸೆ. **G.-fruit** ಚಕ್ಕೊತ್ತನೆಯ ಜಾತಿಯ ಒಂದು ಸಣ್ಣ ಹಣ್ಣು (ಹಣ್ಣುಗಳು ಗೊಂಚಲು ಗೊಂಚಲಾಗಿ ಬಿಡುವುದರಿಂದ). **G.-house** (ಚಳಿದೇಶದಲ್ಲಿ ಚಳಿಯಿಂದ ಬಾಧೆಯಾಗದಂತೆ) ದ್ರಾಕ್ಷಿಬೆಳೆಸುವ (ಗಾಜಿನ ಆವರಣದ) ಕಟ್ಟಡ: ದ್ರಾಕ್ಷಿ ಮನೆ. **G.-scissors** ದ್ರಾಕ್ಷಿಯ ಬೆಳೆಯ ಆದಿ ಭಾಗದಲ್ಲಿ, ಗೊಂಚಲುಗಳು ಒತ್ತಾಗಿರದಂತೆ ಕತ್ತರಿಸಿ ವಿರಳ ಮಾಡುವ, ಅಥವಾ ತಿನ್ನುವಾಗ ಗೊಂಚಲನ್ನು ಕತ್ತರಿಸಲು ಉಪಯೋಗಿಸುವ, ಕತ್ತರಿ: ದ್ರಾಕ್ಷಿಗತ್ತರಿ. **G.-shot** (ಹಲವು ಸಣ್ಣ ಸಣ್ಣ ಗುಂಡುಗಳನ್ನು ಚೀಲ, ಮೊ. ಗಳಲ್ಲಿ ಒಟ್ಟಿಗೆ ಇಟ್ಟು ಫಿರಂಗಿಗೆ ಹಾಕಿ ಹೊಡೆಯುವುದರಿಂದ ಸುತ್ತಲೂ ಸಿಡಿಯುವ) ಗೊಂಚಲು ಗುಂಡು. **G.-stone** ದ್ರಾಕ್ಷಿಯ ಬೀಜ. **G.-sugar** ದ್ರಾಕ್ಷಿಸಕ್ಕರೆ (Dextrose ಅಥವಾ Glucose). **G.-vine** ದ್ರಾಕ್ಷಿಯ ಬಳ್ಳಿ. ನೀರ್ಗಲ್ಲಿನಮೇಲೆ ಜಾರುವ ಆಟದಲ್ಲಿ ('ಸ್ಕೇಟಿಂಗ್' ಆಟದಲ್ಲಿ) ಎರಡು ಪಾದಗಳೂ ನೀರ್ಗಲ್ಲಿನಮೇಲೆ ಒಟ್ಟಿಗಿದ್ದು ಬಳ್ಳಿಯ ಹೆಣಿಗೆಯಂತೆ ರಚನೆಯಾಗುವ ಚಿತ್ರ. **Grápery** — ಪೆರಿ (ನಾ.) ದ್ರಾಕ್ಷಿಯ ತೋಟ; ದ್ರಾಕ್ಷಿ ಮನೆ. **Grápy** (ಗು.) ದ್ರಾಕ್ಷಿಯ; ದ್ರಾಕ್ಷಿ ಬಳ್ಳಿಯ; ದ್ರಾಕ್ಷಿಯಿಂದ ಕೂಡಿದ; ದ್ರಾಕ್ಷಿ ರುಚಿಯ.

Graph¹ ಗ್ರಾಫ್ (ನಾ.) (ಗಣಿತ, ಭೌತ ವಿಜ್ಞಾನ, ರಸಾಯನ ವಿಜ್ಞಾನ — ಇವುಗಳಲ್ಲಿ) ಪ್ರಮಾಣಗಳ ಪರಸ್ಪರ ಸಂಬಂಧವನ್ನು ವ್ಯಕ್ತಗೊಳಿಸುವ ಸಂಕೇತ ನಕ್ಷೆ; ರೇಖಾ ಚಿತ್ರ (Graphic formula ಎಂಬುದರ ಸಂಕ್ಷಿಪ್ತ). **Gráphic(al)** ಗ್ರ್ಯಾಫಿಕ್, [— ಕಲ್ (ವಿರ. ಪ್ರ.)] (ಗು.) ರೇಖನದ; ವರ್ಣಚಿತ್ರದ; ಕೆತ್ತನೆಯ; ಕೊರೆತದ. ಕಣ್ಣಿಗೆ ಕಟ್ಟಿದಂತಿರುವ; ಸುಸ್ಪಷ್ಟ ವರ್ಣನೆಯ; ಮೂರ್ತಿಮತ್ತಾದ; ಸಜೀವವಾಗಿರುವಂತೆ ತೋರುವ. ಬರಹದ; ಬರವಣಿಗೆಯ. (ಖನಿಜ) ಮೇಲ್ಮೈಯಲ್ಲಾಗಲಿ ಸೀಳಿಕೆಯಲ್ಲಾಗಲಿ ಬರವಣಿಗೆಯಂಥ ಗುರುತುಗಳು ಕಾಣುವ; ರೇಖಾ ಚಿತ್ರಗಳ; ಸಂಕೇತ ರೇಖೆಗಳ. **Gráphically** (ಕ್ರಿ. ವಿ.) ಚಿತ್ರದಲ್ಲಿರುವಂತೆ; ಚಿತ್ರದಂತೆ; ಸುಸ್ಪಷ್ಟವಾಗಿ; ಕಣ್ಣಿಗೆ ಕಟ್ಟಿದಂತೆ. ಬರವಣಿಗೆಯಲ್ಲಿ; ರೇಖಾ ಚಿತ್ರಗಳಿಂದ; ಸಂಕೇತ ರೇಖೆಗಳಿಂದ. **Graphólogy** ಗ್ರಫಾಲೊಜಿ (ನಾ.) ಹಸ್ತಾಕ್ಷರ ವಿದ್ಯೆ; ಒಬ್ಬನ ಕೈಬರಹವನ್ನು ನೋಡಿ ಅವನ ಶೀಲ ಸ್ವಭಾವಗಳನ್ನು ಊಹಿಸಿ ತಿಳಿಯುವ ಕಲೆ, ವಿದ್ಯೆ: ಹಸ್ತಾಕ್ಷರ ಸಾಮುದ್ರಿಕ. ರೇಖಾ ಚಿತ್ರ ಸೂತ್ರ ವ್ಯವಸ್ಥೆ.

Graph² ಗ್ರಾಫ್ (ನಾ., ಕ್ರಿ. ಸಕ.) (ಬರಹದ ಅಸಲಿನಿಂದ ಅನೇಕ ಪ್ರತಿಗಳನ್ನು ತೆಗೆಯಲಾಗುವ ಜೆಲಟಿನ್ ತಯಾರಿಕೆಯ) ಮುದ್ರಕ (ಸಲಕರಣೆ). (ಕ್ರಿ.) ಈ ಸಲಕರಣೆಯಿಂದ ಪ್ರತಿ ಮಾಡು, ಅನೇಕ ಪ್ರತಿಗಳನ್ನು ತೆಗೆ. **Gráphotype** ಗ್ರ್ಯಾಫೊಟೈಪ್ (ನಾ.) ಸಮತಲ ಮುದ್ರಣಕ್ಕೆ ತಯಾರಿಸಿದ ಉಬ್ಬು ಚಿತ್ರಫಲಕ; ಇಂಥ ಫಲಕವನ್ನು ತಯಾರಿಸುವ ವಿಧಾನ.

- graph — ಗ್ರಾಫ್ (ಉ. ಪ್ರ.) — ಲಿಖಿತ, — ರೇಖನ, — ರೇಖಕ. (ಇಂಥ ರೀತಿಯಲ್ಲಿ ಬರೆದದ್ದು, ರಚನೆಯಾದದ್ದು, ಎಂಬುದಕ್ಕೆ) Autograph, Chirograph, Holograph, Lithograph, Photograph, Pictograph (ಆಯಾ ಪದಗಳನ್ನು ನೋಡಿ). (ಲಿಖಿಸುವ ಯಂತ್ರ ಎಂಬುದಕ್ಕೆ) Heliograph, Seismograph, Telegraph (ಆಯಾ ಪದಗಳನ್ನು ನೋಡಿ). (ಬರೆಯುವ ರೀತಿಗೆ) Calligraph, Hectograph (ಆಯಾ ಪದಗಳನ್ನು ನೋಡಿ). **-graphy** — ಗ್ರಫಿ (ಉ. ಪ್ರ.) Calli-, Litho-, Steno-, Geo-, Seleno-. (ಆಯಾ ಪದಗಳನ್ನು ನೋಡಿ)

Gráphite ಗ್ರ್ಯಾಫೈಟ್ (ನಾ.) ಬರಹದ ಸೀಸ: 'ಗ್ರ್ಯಾಫೈಟು'; 'ಪ್ಲಂಬೇಗೊ' (ಸೀಸದಕಡ್ಡಿಗಳಲ್ಲಿ ಬರೆಯುವ ಭಾಗವಾದ ಒಂದು ಬಗೆಯ ಇಂಗಾಲ). **Graphític** ಗ್ರ್ಯಾಫಿಟಿಕ್ (ಗು.) ಗ್ರ್ಯಾಫೈಟಿನ; — ಸ್ವಭಾವದ. **Gráphitoid** (ಗು.) ಗ್ರ್ಯಾಫೈಟಿನ ತೋರ್ಕೆಯುಳ್ಳ.

Graphólogy. **Graph¹** ನೋಡಿ.

Gráphotype. **Graph²** ನೋಡಿ.

Grápnel ಗ್ರ್ಯಾಪ್‌ನೆಲ್ (ನಾ.) ಯಾವುದಾದರೂ ವಸ್ತುವನ್ನು (ಮು., ಶತ್ರುನಾವೆಯನ್ನು) ಹಿಡಿದೆಳೆದುಕೊಳ್ಳುವುದಕ್ಕಾಗಿ ಹಗ್ಗ ಕಟ್ಟಿ ಎಸೆಯುವ ಕಬ್ಬಿಣದ ಕೊಂಡಿಗಳುಳ್ಳ ಸಲಕರಣೆ; (ದೋಣಿಗಳಿಗೆ, ಆಕಾಶ ಬುಟ್ಟಿಗಳಿಗೆ, ಉಪಯೋಗಿಸುವ) ಅನೇಕ ಕೊಂಡಿಗಳುಳ್ಳ ಸಣ್ಣ ಲಂಗರು; ಪಾತಾಳ ಗರಡಿ.

Grápple ಗ್ರ್ಯಾಪ್‌ಲ್ (ನಾ., ಕ್ರಿ.) ಬಿಗಿಹಿಡಿತದ ಸಲಕರಣೆ; = Grapnel; ಜಟ್ಟಿಗಳ ಹಿಡಿತ, ಪಟ್ಟು; — ಹಿಡಿತದಂಥ ಹಿಡಿತ; ಕೈ ಕೈ ಯುದ್ಧ. (ಕ್ರಿ.) ಪಾತಾಳ ಗರಡಿಯಿಂದ (ಯಂತೆ) ಹಿಡಿದುಕೊ, ಬಂಧಿಸು; (ಕೈಗಳಿಂದ) ಹಿಡಿದುಕೊ, ಪಟ್ಟಿಗೆ ಸಿಕ್ಕಿಸಿಕೊ; ಕೈ ಕೈ ಹತ್ತು; ಮೈಮೇಲೆ ಬೀಳು; (— ಒಡನೆ) ಮಲ್ಲಾಮಲ್ಲಿಯಾಗಿ ಹೋರಾಡು (*With, together* ಉಪ. ದೊಡನೆ). G. with ಜಯಿಸಲು ಪ್ರಯತ್ನಿಸು, ಸಾಧಿಸು, ಸಾಹಸ ಪಡು. **Grápplíng** (ನಾ.) (ಕ್ರಿಯಾರ್ಥಗಳಲ್ಲಿ); ಪಾತಾಳ ಗರಡಿ (= G.-iron, Grapnel)

Grasp ಗ್ರಾಸ್ಪ್ (ಕ್ರಿ., ನಾ.) (G. at ಹಿಡಿದುಕೊಳ್ಳಲು ಪ್ರಯತ್ನಿಸು; ಹೆಬ್ಬಯಕೆಯಿಂದ, ಅತಿ ಆಸೆಯಿಂದ, — ಕೈಕೊಳ್ಳು, ಅಂಗೀಕರಿಸು, ಲೋಭದಿಂದ ತುಡುಕು). ಬಿಗಿಯಾಗಿ, ಭದ್ರವಾಗಿ, ಹಿಡಿದುಕೊ; ಬಿಗಿಹಿಡಿ (G. nettle ಕಷ್ಟವನ್ನು, ಅಪಾಯವನ್ನು, ಧೈರ್ಯವಾಗಿ ಎದುರಿಸು; ಕಷ್ಟಕ್ಕೆ, ಅಪಾಯಕ್ಕೆ, ಎದೆಗೊಟ್ಟು ನಿಲ್ಲು). ಗ್ರಹಿಸು; ಮನಸ್ಸಿಗೆ ಹಿಡಿ; (ಬುದ್ಧಿಗೆ) ಮನದಟ್ಟು ಮಾಡಿಕೊ. (ನಾ.) (ಬಿಗಿ) ಹಿಡಿತ; ಕಪಿ ಮುಷ್ಟಿ; ದೃಢ ಮುಷ್ಟಿ (Within, beyond, one's g. ಹಿಡಿತಕ್ಕೆ ಸಿಕ್ಕುವಷ್ಟು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹತ್ತಿರದಲ್ಲ, — ಸಿಕ್ಕದಷ್ಟು ದೂರದಲ್ಲ; ಹಿಡಿತದಲ್ಲ, ಹಿಡಿತ ಮೀರಿ). ಸ್ವಾಧೀನ; ವಶ; ಹತೋಟಿ. ಗ್ರಹಣ; ಗ್ರಹಿಕೆ; ಮನವರಿಕೆ; ಬುದ್ಧಿವ್ಯಾಪ್ತಿ. **Grásping** (ವರ್ತಮಾನ ಕೃ.) ದುರಾಸೆಯ; ಅತ್ಯಾಸೆಯ. **Gráspingly** (ಕ್ರಿ. ವಿ.) ಅತ್ಯಾಸೆಯಿಂದ; ಲೋಭ ಬುದ್ಧಿಯಿಂದ. **Gráspingness** (ನಾ.); **Gráspable** (ಗು.) ತುಡುಕಬಹುದಾದ; ಗ್ರಹಿಸಬಹುದಾದ.

Grass ಗ್ರಾಸ್ (ನಾ., ಕ್ರಿ. ಸಕ.) (ದನ, ಕುದುರೆ, ಕುರಿ, ಮೊ. ತಿನ್ನುವ) ಹುಲ್ಲು; ತೃಣ (Not let g. grow under one's feet ಕೆಲಸ ಮಾಡುವುದರಲ್ಲಿ ಚಚ್ಚರವಾಗಿರು, ತಡ ಬೇಡ. Hear the g. grow ಅಸಾಮಾನ್ಯವಾದ ಸೂಕ್ಷ್ಮ ಗ್ರಹಣ ಶಕ್ತಿ ಪಡೆದಿರು; ಅತಿ ಚುರುಕಾಗಿರು; ಕುಶಾಗ್ರ ಬುದ್ಧಿಯುಳ್ಳವನಾಗಿರು). (ಸ. ವಿ.) (ಧಾನ್ಯ, ಜೊಂಡು, ಬೊಂಬು, ಮೊ. ನ್ನೊಳಕೊಂಡ) ಹುಲ್ಲಿನ ಜಾತಿಯ ಸಸ್ಯ (ಸಾ., ವಿಶೇಷಣ ಪದ ದೊಡನೆ: Bunch-g., Spear-g., G. of Parnassus). (ಅಸಂ.) = Asparagus. ಮೇಯುವುದು; ಮೇವು; ಹುಲ್ಲುಗಾವಲು; ಗೋಮಾಳ [(Be at g.; Go, put, send, turn out,—to g.). At g. (ರೂಪ.) ಕೆಲಸವಿಲ್ಲದೆ; ಬಿಡುವಾಗಿ; ಹಾಯಾಗಿ. G. widow (ತಾತ್ಕಾಲಿಕವಾಗಿ) ಗಂಡನು ಅಗಲಿದವಳು]. ಹುಲ್ಲು ಬೆಳೆದಿರುವ ನೆಲ (Keep off the g. ಹುಲ್ಲು ಬಿಟ್ಟು ನಡೆ; ಹುಲ್ಲು ತುಳಿಯಬೇಡ). (ಗಣಿ) ಭೂ ಮಟ್ಟ; ಗಣಿಯ ಮೇಲ್ಭಾಗ [Send, go, to g. (ವ್ಯಕ್ತಿ) ನೆಲಕ್ಕೆ ಉರುಳಿಸು, ಉರುಳು, ಬೀಳಿಸು, ಬೀಳು. **Grásshopper** ಕುಪ್ಪಳಿಸುವ, ಕೀಚುವ, ಮಿಡಿತೆಯ ಜಾತಿ (**Grásshopper-beam** ಎಂಜಿನಿನಲ್ಲಿ ಮಧ್ಯಕ್ಕೆ ಬದಲಾಗಿ ಒಂದು ತುದಿಯಲ್ಲಿ ತಿರುಗಣಿ ಮಾಡಿರುವ ಚಾಲಕ ದಂಡ). **G.-cutter** (ಇಂಡಿಯ) (ಕುದುರೆ, ಮೊ. ಗಳಿಗೆ) ಹುಲ್ಲು ಕೊಯ್ದು ತರುವ ಮನೆಯ ಆಳು; ಹುಲ್ಲು ಚೆಕ್ಕಿಗ. **G.-snake** (ಯೂರೋಪಿನ) ಸುತ್ತುಪಟ್ಟೆಗಳುಳ್ಳ ಒಂದು ಜಾತಿಯ (ಹುಲ್ಲು) ಹಾವು. **G.-tree** ಆಸ್ಟ್ರೇಲಿಯದ ಒಂದು ಮರದ ಜಾತಿ]. (ಕ್ರಿ.) (ದನಕ್ಕೆ) ಹುಲ್ಲು ಹಾಕು. (ಹುಲ್ಲು) ತೆಂಡೆಗಟ್ಟು; ಹುಲ್ಲು ಬೆಳೆ, ಬೆಳಸು. (ಅಗಸೆಯ ನಾರು, ಮೊ. ನ್ನು) ಬಿಳಿಚಿಸಲು ಹುಲ್ಲಿನಮೇಲೆ ಹರವು. (ಎದುರಾಳಿಯನ್ನು) ನೆಲಕ್ಕೆ ಕೆಡವು, ಉರುಳಿಸು, ಬೀಳಿಸು; (ಹಕ್ಕಿಯನ್ನು ಗುಂಡಿನಿಂದ ಹೊಡೆದು) ನೆಲಕ್ಕೆ ಬೀಳಿಸು. (ಮೀನನ್ನು) ದಡಕ್ಕೆ ತರು. (ಭೂ. ಕೃ.) (ಗಾಲ್ಫ್ ದಾಂಡು) ಮುಖ ಹಿಂದುಗಡೆಗೆ ಸ್ವಲ್ಪ ಓರೆಯಾದ. **Grássless** (ಗು.); **Grássy** (ಗು.) ಹುಲ್ಲಿನ; ಹುಲ್ಲಿರುವ; ಹುಲ್ಲು ಮುಚ್ಚಿದ; ಹುಲ್ಲು ಹೇರಳವಾಗಿರುವ; ಹುಲ್ಲಿನಂಥ.

Grate[1] ಗ್ರೇಟ್ (ನಾ.) ಬೆಂಕಿಗೂಡಿನಲ್ಲಿ ಅಥವಾ ಲೋಹ ಕರಗಿಸುವ ಒಲೆಯಲ್ಲಿ ಉರುವಲು ಹೊರಕ್ಕೆ ಬೀಳದಂತೆ ತಡೆಯುವ ಸರಳಿನ ಚೌಕಟ್ಟು; (ಬೆಂಕಿಯ) ಸರಳು ತಡೆ. ಬೆಂಕಿಗೂಡು; ಲೋಹ ಕರಗಿಸುವ ಒಲೆ. (ವಿರ. ಪ್ರ.) = Grating. **Gráteless** (ಗು.); **Gráting** ಗ್ರೇಟಿಂಗ್ (ನಾ.) ಉದ್ದುದ್ದವಾಗಿ ಅಥವಾ ಅಡ್ಡಹಾಯ್ದು ಜೋಡಿಸಿರುವ (ಮರದ ಅಥವಾ ಲೋಹದ) ಕಂಬಿಯ ಚೌಕಟ್ಟು. (ದೃ. ವಿ.) (ವಕ್ರೀಭವನದಿಂದ ವರ್ಣಪಟಲವನ್ನುಂಟುಮಾಡುವುದಕ್ಕಾಗಿ ಏರ್ಪಡಿಸಿರುವ) ಸಮಾಂತರ ತಂತುತಂಡ ಅಥವಾ ಸಮಾಂತರ ಸೂಕ್ಷ್ಮ ರೇಖಾ ರಚನೆಯ ಗಾಜುಹಲಗೆ, ಮೊ.; ವಕ್ರವಿಯೋಗ ರೇಖಾಫಲಕ: 'ಗ್ರೇಟಿಂಗ್'.

Grate[2] ಗ್ರೇಟ್ (ಕ್ರಿ.) ಒರಟು ಮೈಮೇಲೆ ಉಜ್ಜಿ ಸಣ್ಣ ಪುಡಿಯಾಗಿ ಮಾಡು; (ತುರಿಯುವ ಮಣೆಯಮೇಲೆ) ತುರಿ. ಕರ್ಕಶವಾಗಿರು [(*up*)on ಉಪ. ದೊಡನೆ]; ಕೆರಳಿಸು. (ಹಲ್ಲು) ಮಸೆ, ಕಡಿ. ಕರ್ಕಶ ಧ್ವನಿಯಾಗುವಂತೆ (ಒಂದರಮೇಲೆ) ಉಜ್ಜು [*Against*, (*up*)on ಉಪ. ದೊಡನೆ]. ಪರುಷವಾಗಿ, ಕರ್ಕಶವಾಗಿ, ಅಪಸ್ವರವಾಗಿ,— ಧ್ವನಿ ಮಾಡು, ಧ್ವನಿಯಾಗು; ಕಿರುಗುಟ್ಟು; ಅಹಿತವಾಗಿರು (A grating laugh, voice). (ಕೀಲು, ಮೊ.) ಕಿರ್ರೆನ್ನು. (-) **grater** (ನಾ.) — ತುರಿಯುವ ಮಣೆ. **Grátingly** (ಕ್ರಿ. ವಿ.)

Gráteful ಗ್ರೇಟ್‌ಫುಲ್ (ಗು.) ಒಪ್ಪಿಗೆಯಾದ; ಹಿತಕರ; ಸುಖಕರ; ಕೃತಜ್ಞತೆಯುಳ್ಳ; ಉಪಕಾರ ಸ್ಮರಣೆ ಮಾಡುವ (*To* person, *for* thing). **Grátefully** (ಕ್ರಿ. ವಿ.); **Grátefulness** (ನಾ.); **Grátitude** ಗ್ರ್ಯಾ— (ನಾ.) ಉಪಕಾರ ಸ್ಮರಣೆ; ಕೃತಜ್ಞತೆ; ಪ್ರತ್ಯುಪಕಾರ ಬುದ್ಧಿ.

Grátify ಗ್ರ್ಯಾಟಿಫೈ (ಕ್ರಿ. ಸಕ.) (ಸಾ., ಹಣದ ರೂಪದಲ್ಲಿ) ಪ್ರತಿಫಲ, ರುಸುಮು, ಇನಾಮು, — ಕೊಡು; ಬಹುಮಾನ ಕೊಡು; ಲಂಚ ಕೊಡು; ಕೈ ಬೆಚ್ಚಗೆಮಾಡು. ಸಂತೋಷಪಡಿಸು; ಆನಂದಗೊಳಿಸು; ತಣಿಸು; ತೃಪ್ತಿಪಡಿಸು; ಉಪಕರಿಸು. ಇಷ್ಟಾರ್ಥ ಸಲ್ಲಿಸಿ ಸಂತೋಷಪಡಿಸು; ಇಚ್ಛಾಪೂರ್ತಿ ಮಾಡಿಕೊ; ಆಶೆಯನ್ನು ಸಫಲಗೊಳಿಸು. (ಇಚ್ಛೆ, ಮನೋಭಾವ, ಪ್ರವೃತ್ತಿ, — ಇವನ್ನು) ತಡೆಯಿಲ್ಲದೆ ಬಿಡು, ತಣಿಸು. **Grátifying** (ಗು.) (*To* ಉಪ. ದೊಡನೆ); **Grátifyingly** (ಕ್ರಿ. ವಿ.); **Gratificátion** (ನಾ.) ತೃಪ್ತಿ; ಸಂತೋಷ; ಸುಖಾನುಭವ; ತಣಿವು. ಪ್ರತಿಫಲ; ಬಹುಮಾನ; ಇನಾಮು; ಲಂಚ.

Gráting. Grate[1] ನೋಡಿ.

Grátis ಗ್ರೇಟಿಸ್ (ಕ್ರಿ. ವಿ., ಗು.) ಪುಕ್ಕಟೆಯ; — ಯಾಗಿ; ಮುಫತ್ತಾಗಿ (ಬಂದ). ಏನೂ ಪಡೆಯದೆ, ಬೆಲೆ ಹಾಕದೆ, ಉಚಿತವಾಗಿ, ಧರ್ಮಾರ್ಥವಾಗಿ (ಕೊಟ್ಟ, ಮಾಡಿದ); ಬಿಟ್ಟಿ.

Grátitude. Grateful ನೋಡಿ.

Gratúitous ಗ್ರಟ್ಯೂಇಟಸ್ (ಗು.) ಉಚಿತವಾಗಿ ಕೊಟ್ಟ, ಪಡೆದ; ಬೆಲೆ ಕೊಟ್ಟದ್ದಲ್ಲದ; ಮುಫತ್ತಾದ; ಪುಕ್ಕಟೆಯಾದ. ಅಪೇಕ್ಷಿತವಲ್ಲದ; ಅನಾವಶ್ಯಕವಾದ; ಉದ್ದೇಶವಿಲ್ಲದ; ನಿರ್ನಿಮಿತ್ತವಾದ; (ಒಳ್ಳೆಯ, ನ್ಯಾಯವಾಗಿ ಕೊಡಬಹುದಾದ) ಕಾರಣವಿಲ್ಲದೆ, — ಮಾಡಿದ, ನಡೆಯುತ್ತಿರುವ (A g. lie, liar ನಿಷ್ಕಾರಣವಾದ ಸುಳ್ಳು; ಕಾರಣವಿಲ್ಲದೆ ಸುಳ್ಳು ಹೇಳುವವನು). **Gratúitously** (ಕ್ರಿ. ವಿ.); **Gratúitousness** (ನಾ.)

Gratúity ಗ್ರಟ್ಯೂಇಟಿ (ನಾ.) (ಕೆಳ ದರ್ಜೆಯವನು ಮಾಡಿದ ಉಪಕಾರಕ್ಕಾಗಿ, ಸಹಾಯಕ್ಕಾಗಿ, ದಾತನು ಗೊತ್ತುಮಾಡಿ ಕೊಡುವ) ಹಣರೂಪದ ಇನಾಮು; ಬಹುಮಾನ; ಬಕ್ಷೀಸು; (ಕೆಟ್ಟರ್ಥದಲ್ಲಿ) ಲಂಚ. (ಕೆಲಸದಿಂದ ವಿಶ್ರಾಂತಿ ಹೊಂದಿದಾಗ, ಅಥವಾ ಕೆಲವು ಇತರ ಸಂದರ್ಭಗಳಲ್ಲಿ, ಕೊಡುವ) ಪ್ರೋತ್ಸಾಹ ದ್ರವ್ಯ, ಕೊಡುಗೆ.

Grátulate ಗ್ರ್ಯಾಟ್ಯುಲೇಟ್ (ಕ್ರಿ. ಸಕ.), **Gratulátion** — ಷನ್ (ನಾ.) (Congratulate, -tion ಎಂಬ ಪದಗಳ ಪ್ರಾಚೀ. ಪ್ರ.). **Grátulatory** (ಗು.) (ಇನ್ನೊಬ್ಬನ ವಿಜಯ, ಮೊ. ಕ್ಕಾಗಿ) ಸಂತೋಷ ಸೂಚಿಸುವ, ಅಭಿನಂದಿಸುವ (= Congratulatory)

Gravámen ಗ್ರವೇಮೆನ್ [ನಾ., ಬ. ವ. -mina — ಮಿನ (ವಿರ. ಪ್ರ.)] (ಆಗಿರುವ ಅನ್ಯಾಯಕ್ಕಾಗಿ) ವ್ಯಥೆ; ದುಃಖಕಾರಣ; ಕಿಂಕೃತಿ; ಕರೆಕರೆ; (ಕ್ರೈಸ್ತಮತದ ಅಕ್ರಮಗಳನ್ನು ಅಥವಾ ಅನ್ಯಾಯಗಳನ್ನು ಕುರಿತ) ಪಾದ್ರಿ ಸಭೆಯ ಕೆಳಮಂಡಲಿಯಿಂದ ಮೇಲನ ಮಂಡಲಿಗೆ ಕಳುಹಿಸುವ ಮನವೆ, ಅರ್ಜಿ. ದೂರಿನ, ಆಪಾದನೆಯ, ಫಿರ್ಯಾದಿನ, — ಸಾರ, ತಿರುಳು, ಅತಿ ತೀವ್ರ ಭಾಗ; ಪ್ರಧಾನ ಆರೋಪ.

Grave[1] ಗ್ರೇವ್ (ನಾ.) (ಹೆಣ ಹೂಳುವ) ಕುಳಿ, ಗುಂಡಿ; ಇದರ ಮೇಲಿನ ದಿಬ್ಬ, ಸ್ಮಾರಕ; ಗೋರಿ; ಸಮಾಧಿ; ಹುಗಿತ; ಹುದಿಗೆ; ಕಲ್ಲರೆ; ಬೃಂದಾವನ [Secret as the g. ಬಹು ಗುಟ್ಟಾದ; ಅತಿ ರಹಸ್ಯವಾದ; ಸಮಾಧಿಗುಟ್ಟಿನ. It is enough to make one turn in one's g. (ಕೃತ್ಯ, ಮೊ. ವಿಷಯದಲ್ಲಿ) ಸತ್ತ ಜೀವವನ್ನು ಕೂಡ ಸಂಕಟಪಡಿಸುವಂತಹದು, ಸಂಕಟದಿಂದ ಹೊರಳಾಡುವಂತೆ ಮಾಡುವಂತಹದು, ಅಷ್ಟು ಅಸಹ್ಯಕರವಾದದ್ದು. Some one walking on my g. (ಕಾರಣವಿಲ್ಲದೆ ಮೈನಡುಕ ಹತ್ತಿದಾಗ ಹೇಳುವ ಮಾತು). One foot in g. (Foot ನೋಡಿ)]. ಸತ್ತಿರುವುದು; ಸಾವು; ಮರಣ; ಮೃತ್ಯು; ಯಮ ಲೋಕ. ಸತ್ತುಹೋದದ್ದನ್ನು, ತೀರಿಹೋದದ್ದನ್ನು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಡುವ ಪಾತ್ರೆ, ಆಧಾರ (G. of reputations ಅನೇಕ ಯಶಸ್ಸುಗಳು ನಷ್ಟವಾಗಿಹೋಗಿರುವ ಸ್ಥಳ : ಕೀರ್ತಿಯ ಸಮಾಧಿ). (ಆಲೂಗಡ್ಡೆ, ಮೊ. ಕ್ಕೆ ಮಣ್ಣು ಏರಹಾಕುವ) ಸಾಲು, ಕಾಲುವೆ. **G.-clothes** ಹೂಳುವ ಹೆಣಕ್ಕೆ ಸುತ್ತುವ ಬಟ್ಟೆಗಳು. **G.-digger** ಹೆಣದ ಗುಂಡಿ ತೋಡುವವನು. ತಮ್ಮ ಮರಿಗಳ ಆಹಾರಕ್ಕಾಗಿ ಸತ್ತ ಹುಳು, ಮೊ. ನ್ನು ತಂದು ಹೂಳುವ ಕೀಟಜಾತಿ. **Grávestone** ಗೋರಿಯಮೇಲೆ ಸ್ಥಾಪಿಸಿದ ಕಲ್ಲು ; (ಹೆಸರು ಮೊ. ನ್ನು ಕೆತ್ತಿ ತಲೆಯಕಡೆ ಅಥವಾ ಕಾಲ ಕಡೆ ನೆಡುವ) ಸಮಾಧಿ ಶಿಲೆ. **Gráveyard** ಮಸಣ ; ಸುಡುಗಾಡು ; ಒಲ್ಲಕಾಡು ; ಗೋರಿ ಬಯಲು ; ಸಮಾಧಿ ಭೂಮಿ. **Gráveless** (ಗು.) ; **Gráveward** (ಕ್ರಿ. ವಿ., ಗು.)

Grave² ಗ್ರೇವ್ (ಕ್ರಿ. ಸಕ. ; ಭೂ. ಕೃ. -en, -ed). (ಪ್ರಾಚೀ. ಪ್ರ.) ಹೂಳು (-ed) ; (ಪ್ರಾಚೀ. ಪ್ರ.) (ವಸ್ತುವನ್ನು, ಚಿತ್ರವನ್ನು) ಕೊರೆ, ಕೆತ್ತು, ಕಡೆ (-en, -ed) (Graven image ಕೆತ್ತಿದ, —ವಿಗ್ರಹ, ಮೂರ್ತಿ). (ರೂಪ.) (ಮನಸ್ಸಿನಲ್ಲಿ, ಮನಸ್ಸಿನಮೇಲೆ) ಮಾಸದಂತೆ ನಾಟು ; ಅಚ್ಚೊತ್ತು ; ಕೆತ್ತಿದಂತಿರು (-en, -ed). **Gráver** (ನಾ.) (ಕ್ರಿಯಾರ್ಥಗಳಲ್ಲಿ) ; =Burin.

Grave³ ಗ್ರೇವ್ (ಗು., ನಾ.) ಮುಖ್ಯ ; ಪ್ರಧಾನ ; ಗಭೀರ ; ಘನ ; ತೀವ್ರಾಲೋಚನೆ ಮಾಡಬೇಕಾದ ; ಗುರುತರವಾದ ; ಮಹತ್ತ್ವಾದ ; ಕಡುಪಾದ ; ಬಿಕ್ಕಟ್ಟಾದ ; ವಿಷಮ. (ದೋಷಗಳು, ತೊಂದರೆಗಳು, ಜವಾಬ್ದಾರಿಗಳು, ರೋಗ ಲಕ್ಷಣಗಳು, ಮೊ.) ಅಸಾಧ್ಯವಾದ ; ಎದುರಿಸಲಾಗದ ; ದಿಗಿಲು ಹುಟ್ಟಿಸುವ ; ಪ್ರಬಲ ; ತೀವ್ರ ; ಉಗ್ರ. ಗಂಭೀರ. ಮಬ್ಬು ಬಣ್ಣದ. ಆಡಂಬರವಿಲ್ಲದ ; ಸರಳ. (ಸ್ವರ ಭಾರ) ಅನುದಾತ್ತ ; ಮಂದ್ರ (G. accent ಅನುದಾತ್ತ ಸ್ವರ). **Grávely** (ಕ್ರಿ. ವಿ.)

Grave⁴ ಗ್ರೇವ್ (ಕ್ರಿ. ಸಕ.) (ಹಡಗು ನೆಲದಮೇಲೆ ಅಥವಾ ಒಣ ಕಟ್ಟೆಯಲ್ಲಿ ಇರುವಾಗ ಅದರ ತಳಕ್ಕೆ ಹತ್ತಿಕೊಂಡು ಗುಂಪುಕೂಡಿರುವ ಕಸವನ್ನು ಸುಟ್ಟು, ಟಾರೆಣ್ಣೆ ಬಳಿದು) ಹಡಗಿನ ತಳ ಚೊಕ್ಕಟಮಾಡು.

Grável ಗ್ರ್ಯಾವೆ(ವ್)ಲ್ (ನಾ., ಕ್ರಿ. ಸಕ.) ಹಾದಿಗೂ ರಸ್ತೆಗೂ ಹೆಚ್ಚಾಗಿ ಉಪಯೋಗಿಸುವ ದಪ್ಪ ಮರಳಿನ ಮತ್ತು ಸಣ್ಣ ಕಲ್ಲಿನ ಉಂಡೆಗಳ ಮಿಶ್ರಣ : ಗರಸು ; ಕಂಕರೆ ; 'ಗ್ರಾವೆಲ್.' (ಭೂ. ವಿ., ಗಣಿಕೆಲಸ) (ಮು., ಚಿನ್ನ ದೊರೆಯುವ) ಇಂಥ ಗರಸಿನ ಪದರ (Pay g. ಲಾಭ ದೊರೆಯುವ ಮೊತ್ತದಲ್ಲ ಚಿನ್ನವಿರುವ ಗರಸು). (ವೈ. ಶಾ.) ಕಣ್ಣಿಗೆ ಕಾಣುವಂತಿರುವ ಮೂತ್ರಾಶ್ಮರಿ ಸಂಚಯ(ದ ರೋಗ) ; ಮೂತ್ರಾಶ್ಮರಿ. (**G.-blind** ಹತ್ತಿರ ಹತ್ತಿರ ಶುದ್ಧ ಕುರುಡು). (ಕ್ರಿ.) ಗರಸು, —ಹಾಕು, ಹರವು. ತಬ್ಬಿಬ್ಬು ಮಾಡು ; ದಿಗ್ಭ್ರಮೆ ಹಿಡಿಸು ; ಏನೂ ತೋರದಂತೆ ಮಾಡು; ಮಂಕುಗವಿಸು. **Grávelly** (ಗು.)

Gráver. **Grave²** ನೋಡಿ.

Grávid ಗ್ರ್ಯಾವಿಡ್ (ಗು.) ಬಸಿರಾದ ; ಗರ್ಭಿಣಿಯಾದ.

Grávity ಗ್ರ್ಯಾವಿಟಿ (ನಾ.) ಗಭೀರತೆ ; ಗಾಂಭೀರ್ಯ ; ಗುರುತ್ವ ; ಮಹತ್ತ್ವ ; ಪ್ರಾಧಾನ್ಯ ; ಪ್ರಾಮುಖ್ಯತೆ ; ತೂಕವುಳ್ಳದ್ದು ; ಗುರುತರವಾದದ್ದು ; ಗಂಭೀರ ಭಾವ. ತೂಕ ; ಭಾರ [Centre of g. (Centre ನೋಡಿ). Specific g. ಒಂದು (ಘನ ಅಥವಾ ದ್ರವ) ವಸ್ತುವಿನ ಗಾತ್ರದ ತೂಕವನ್ನು ಅದೇ ಗಾತ್ರದ ನೀರಿನ ತೂಕದೊಡನೆಯೂ, (ಅನಿಲಗಳ ವಿಷಯದಲ್ಲಿ) ಅದೇ ಗಾತ್ರದ ವಾಯುವಿನ ತೂಕದೊಡನೆಯೂ, ತುಲನೆಮಾಡಿ ಪಡೆದ ಭಾರಮಾನ ಸಂಖ್ಯೆ ; ವಿಶಿಷ್ಟ ಗುರುತ್ವ]. ವಸ್ತುಗಳನ್ನು ಭೂಕೇಂದ್ರದ ಕಡೆಗೆ ಸೆಳೆಯುವ ಆಕರ್ಷಣ ಶಕ್ತಿ : ಭೂಮ್ಯಾಕರ್ಷಣ ಶಕ್ತಿ ; ಗತಿವರ್ಧನದಿಂದ ಅಳತೆಮಾಡುವ ಭೂಮ್ಯಾಕರ್ಷಣದ ಬಲ ; ಒಂದು ವಸ್ತು ಮತ್ತೊಂದನ್ನು ಇದೇ ರೀತಿಯಲ್ಲಿ ಆಕರ್ಷಿಸುವ ಬಲ ; (ಶಿಥಿಲ ಪ್ರ.) = Gravitation. **Grávitate** ಗ್ರ್ಯಾವಿಟೇಟ್ (ಕ್ರಿ.) (ಒಂದು ಪದಾರ್ಥದ ಕಡೆಗೆ) ಗುರುತ್ವಾಕರ್ಷಣದಿಂದ ಚಲಿಸು, ಆಕರ್ಷಿತವಾಗು (*Towards* ಉಪ. ದೊಡನೆ). (ಗುರುತ್ವಾಕರ್ಷಣಧಿಂಧ ಅಥವಾ ಅಧರಿಂಧಾಧಂತೆ) ಕೆಳಗೆ ಭರು, ಬೀಳು ; ಕೆಳಮಟ್ಟಕ್ಕೆ ಸೆಳೆತವಿರು ; ಕೆಳಕ್ಕೆ ಇಳಿ, ಬೀಳು. (ವಜ್ರದ ಗಣಿ) (ಭಾರವಾದ ಕಲ್ಲುಗಳು ತಳಕ್ಕೆ ಹೋಗುವಂತೆ) ಗರಸನ್ನು ಕುಲುಕಾಡಿಸು, ಅಲವಾಟು ಮಾಡು. (ರೂಪ.) (ಒಂದು ಪ್ರಭಾವ ಕೇಂದ್ರಕ್ಕೆ ಬಲವಾಗಿ) ಆಕರ್ಷಿತವಾಗು, ಸೆಳೆಯಲ್ಪಡು [*To(wards)* ಉಪ. ದೊಡನೆ]. **Gravitátion** (ನಾ.) ಗುರುತ್ವಾಕರ್ಷಣ. **Gravitátional** (ಗು.) ; **Grávitative** (ಗು.) ಗುರುತ್ವಾಕರ್ಷಣದ ; — ದಿಂದಾದ.

Gravúre ಗ್ರಾ(ಗ್ರ್ಯಾ)ವ್ಯೂರ್, **Grávure** ಗ್ರೇವ್ಯುರ್ (ನಾ.) Photogravure ಎಂಬ ಪದದ ಸಂಕ್ಷಿಪ್ತ.

Grávy ಗ್ರೇವಿ (ನಾ.) ಅಡುವಾಗಲೂ ಆಮೇಲೂ ಮಾಂಸದಿಂದ ಒಸರುವ ಜಿಡ್ಡು ಮತ್ತು ರಸಗಳು ; ಮಾಂಸ ರಸ, ಸಾರ. ಮಾಂಸವನ್ನೂ ಕಾಯಿಪಲ್ಯವನ್ನೂ ಊಟಕ್ಕೆ ಹದಗೊಳಿಸುವುದಕ್ಕಾಗಿ ಈ ಮಾಂಸ ಸಾರದಿಂದ ತಯಾರಿಸಿದ ವ್ಯಂಜನ. **G.-boat** ಮಾಂಸ ರಸ ಹಾಕಿಡುವ ದೋಣಿಯಾಕಾರದ ಪಾತ್ರೆ.

Gray = Grey.

Graýling ಗ್ರೇಲಿಂಗ್ (ನಾ.) ಬೆಳ್ಳಿಬೂದು ಬಣ್ಣದ ಒಂದು ಬಗೆಯ ಸೀನೀರ ಮೀನು. ರೆಕ್ಕೆಗಳ ತಳಭಾಗ ಬೂದು ಬಣ್ಣವಾಗಿರುವ ಒಂದು ಜಾತಿಯ ಚಿಟ್ಟೆ.

Graze¹ ಗ್ರೇಸ್ (ಕ್ರಿ.) [(ಮು., ದನ,) ಬೆಳೆಯುತ್ತಿರುವ ಹುಲ್ಲು, ಮೊ. ನ್ನು] ಮೇಯಿ, ಮೇಯಿಸು ; (ದನ) ಕಾವಲುಹುಲ್ಲು ಮೇಯುತ್ತಹೋಗು ; ಮೇಯುವ ದನಗಳನ್ನು ಕಾಯಿ ; ದನ ಕಾಯಿ. ದನಗಳನ್ನು ಕಾವಲಿಗೆ ಬಿಡು. **Grázing** (ನಾ.) ಮೇಯುವುದು ; ಮೇಯಿಸುವುದು. ಹುಲ್ಲುಗಾವಲು. **Grázier** ಗ್ರೇಸಿಯರ್, ಗ್ರೇಷರ್ (ನಾ.) ಮಾರಾಟಕ್ಕಾಗಿ ದನಗಳನ್ನು ಮೇಯಿಸುವವನು, ಬೆಳೆಸುವವನು. **Gráziery** (ನಾ.) ದನಮೇಯಿಸುವ ಕೆಲಸ. (ವಿರ. ಪ್ರ.) ಹುಲ್ಲುಗಾವಲು.

Graze² ಗ್ರೇಸ್ (ಕ್ರಿ., ನಾ.) ಹಾದುಹೋಗುವಾಗ ಹಗುರವಾಗಿ ತಾಕು, ಸೋಕು ; ಸೋಕಿಕೊಂಡು ಹೋಗು (*Against, along, by, through, past,* ಮೊ. ಗಳೊಡನೆ). ಒರಸಿಕೊಂಡು ಹೋಗುವಾಗ (ಚರ್ಮ, ಮೊ. ನ್ನು) ತರೆ, ತರೆದು(ಕೊಂಡು) ಹೋಗು. (ದೇಹಭಾಗ) ಸ್ವಲ್ಪ ಉಜ್ಜುಗಾಯವಾಗು. (ನಾ.) ಉಜ್ಜುಗಾಯ ; ತರೆದ ಗಾಯ.

Grease ಗ್ರೀಸ್ (ನಾ.), ಗ್ರೀಸ್ (ಕ್ರಿ. ಸಕ.) (ಜಿಂಕೆ ಅಥವಾ ಇತರ ಬೇಟೆಯ ಪ್ರಾಣಿಯ) ಕೊಬ್ಬು, ಮೇದಸ್ಸು [In g., In pride or prime of g. (ಆಹಾರಕ್ಕಾಗಿ) ಕೊಲ್ಲಲು ಹದವಾದ ; ಕೊಬ್ಬುಗೂಡಿರುವ]. ಸತ್ತ ಪ್ರಾಣಿಗಳ ಕರಗಿಸಿದ ಕೊಬ್ಬು (ಮು., ಮೆತುವಾಗಿರುವಾಗ) ; (ಮು., ಚಲನ ಸೌಲಭ್ಯವುಂಟುಮಾಡುವುದಕ್ಕಾಗಿ ಉಪಯೋಗಿಸುವ) ಜಿಡ್ಡಿನ, ಕೊಬ್ಬಿನ, ಪದಾರ್ಥ; ಚರಬಿ. ಉಣ್ಣೆಯಲ್ಲಿಯ ಜಿಡ್ಡು ; ಜಿಡ್ಡು ತೊಳೆಯದ ಉಣ್ಣೆ ; ಜಿಡ್ಡು ತುಪ್ಪಟ (Wool in the g. ಉಣ್ಣೆದೊವಲನ ತುಪ್ಪಟ ; ಕುರಿಯ ಮೈಮೇಲಿನ ಉಣ್ಣೆ). ಕುದುರೆಯ ಹಿಮ್ಮಡಿಯ ಒಂದು ರೋಗ. [**G.-box** (ರೈಲುಬಂಡಿಯ ಚಕ್ರಕ್ಕೆ ಚಲನಸೌಲಭ್ಯಕ್ಕಾಗಿ ಜೋಡಿಸಿರುವ) ಚರಬಿ ಪೆಟ್ಟಿಗೆ. **G.-paint** (ನಟರ ಮುಖಕ್ಕೆ ಬಣ್ಣಹಚ್ಚಲು ತಯಾರಿಸಿದ) ಜಿಡ್ಡುಬಣ್ಣ. **G.-trap** ಚರಂಡಿಗಳಲ್ಲಿ ಹರಿದುಬರುವ ಜಿಡ್ಡನ್ನು ತಡೆಯುವ ಸಲಕರಣೆ ; ಚರಬಿ ತಡೆ]. (ಕ್ರಿ.) ಜಿಡ್ಡನ್ನು, ಕೊಬ್ಬನ್ನು, —ಹಚ್ಚು, ಬಳಿ, ಘರ್ಷಣ ಹರಣಕ್ಕಾಗಿ ಉಪಯೋಗಿಸು; ಜಿಡ್ಡಿನಿಂದ ಕೊಳೆಮಾಡು [G. the wheels (ಮು., ಹಣ ಕೊಟ್ಟು) ಕೆಲಸ ಸರಾಗವಾಗಿ ನಡೆಯುವಂತೆ ಮಾಡಿಕೊ ; ಬೆಣ್ಣೆ ಹಚ್ಚು. G. palm of ಲಂಚ ಕೊಡು ; ಕೈ ಬೆಚ್ಚಗೆ ಮಾಡು. Like greased lightning (ಅನಂ.) ಮಿಂಚಿಗೆ ಕಂದನೆ ಹಾಕಿದಂತೆ : ಅತ್ಯಂತ ವೇಗವಾಗಿ]. (ಕುದುರೆಗೆ) ಹಿಮ್ಮಡಿರೋಗ ಬರಿಸು. **Greáser** (ನಾ.) (ಕ್ರಿಯಾರ್ಥಗಳಲ್ಲಿ). ಜಹಜಿನಲ್ಲಿ (ಎಂಜಿನಿನ) ಬೆಂಕಿ ನೋಡಿಕೊಳ್ಳುವ ಮುಖ್ಯ ಕಾರ್ಲೇಗಾರ ; ಯಂತ್ರ. ಮೊ. ನ್ನು ಎಣ್ಣೆಯಿಂದ ಶುದ್ಧಮಾಡಿ ಚಲನಸೌಲಭ್ಯಕ್ಕಾಗಿ ಅದಕ್ಕೆ ಎಣ್ಣೆ ಹಾಕು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವವನು. (ಅಮೆ. ಸಂ., ಅಸಂ.) ಮೆಕ್ಸಿಕೊ ದೇಶದ ನಾಡಿಗ ಅಥವಾ ಸ್ಪ್ಯಾನಿಷ್ ಅಮೆರಿಕನ್. **Greásy** (ಗು.) ಕೊಬ್ಬನ್ನು ಬಳಿದ ; ಕೊಬ್ಬು ಹತ್ತಿಕೊಂಡಿರುವ ; ಕೊಬ್ಬುಳ್ಳ ; ಕೊಬ್ಬಿನಿಂದ ಮಾಡಿದ ; ಕೊಬ್ಬಿನಂಥ; ಹೆಚ್ಚು ಕೊಬ್ಬು ಕೂಡಿದ. (ಉಣ್ಣೆ) ಜಿಡ್ಡು ಜಿಡ್ಡಾದ, ತೊಳೆದಿರದ, (ಕುದುರೆ) ಹಿಮ್ಮಡಿರೋಗ ತಗುಲಿದ. (ಕೆಸರಿನಿಂದ, ತೇವದಿಂದ) ಜಾರಿಕೆಯಾದ. (ನಡೆವಳಿ, ಮುಖ ಭಾವ) ಅಸಹ್ಯವಾಗುವಂಥ ದಾಸ್ಯ ವರ್ತನೆಯ; ಅತಿ ವಿನಯದ; ಹಲ್ಲುಗಿರಿಯುವ. **G. pole** (ವ್ಯಾಯಾಮದ ಆಟಗಳಲ್ಲಿ ಹತ್ತುವುದಕ್ಕಾಗಲಿ ನಡೆಯುವುದಕ್ಕಾಗಲಿ ಇಟ್ಟಿರುವ) ಜಿಡ್ಡು ಬಳಿದಿರುವ ಕಂಬ ; ಜಿಡ್ಡುಗಂಬ. **Greásily** (ಕ್ರಿ. ವಿ.) ; **Greásiness** (ನಾ.)

Great ಗ್ರೇಟ್ (ಗು.) ದೊಡ್ಡ ; ಭಾರಿಯಾದ ; ಮಹಾ [Made a g. blot ದೊಡ್ಡ ತಪ್ಪು, ಚಿತ್ತು, — ಮಾಡಿದನು. A g. big stick (ಬಳ. ಮಾ.) ಭಾರಿ ದೊಡ್ಡ ದೊಣ್ಣೆ. Great A, Z ದೊಡ್ಡಕ್ಷರಗಳು. G. Bear (Bear[1] ನೋಡಿ). A g. deal, many (ಆಯಾ ಪದಗಳನ್ನು ನೋಡಿ). The g. majority ಅತ್ಯಧಿಕ ಭಾಗ. Greatest Common Measure (Measure ನೋಡಿ). Lived to a g. age ಬಹು ಕಾಲ, ಬಹಳ ವರ್ಷ, ಬದುಕಿದನು. A g. while ago ಬಹು ಕಾಲದ ಹಿಂದೆ. G. with child (ಪ್ರಾಚೀ. ಪ್ರ.) ಬಸಿರಾಗಿ ; ಗರ್ಭಿಣಿಯಾಗಿ]. ಅಸಾಧಾರಣ ; ವಿಶೇಷ ; ಪ್ರಮುಖ ; ಮುಖ್ಯ ; ಬಹು ; ಪ್ರಧಾನ ; ಮಹತ್ತಾದ ; ಪ್ರಖ್ಯಾತ ; ಶ್ರೇಷ್ಠ ; ವಿಶೇಷ ಲಕ್ಷಣದ ; ಪರಮ ; ಸರ್ವೋತ್ತಮ [A g. occasion ಮಹಾ ವಿಶೇಷ ಸಂದರ್ಭ. The G. Powers of Europe ಯೂರೋಪಿನ ಪ್ರಧಾನ, ಬಹಳ ಬಲಿಷ್ಠ, ರಾಷ್ಟ್ರಗಳು. The g. world ಮೇಲ್ತರಗತಿಯವರು ; ಸಮಾಜದಲ್ಲಿ ಶ್ರೇಷ್ಠ ವರ್ಗ. (ಉದ್ಗಾರಗಳಲ್ಲಿ) G. God! G. Scott! (ಪ್ರಖ್ಯಾತಿ ಸೂಚಕವಾಗಿ) Alexander the G. ಅಲೆಗ್ಸಾಂಡರ್ ಮಹಾಶಯ. (ಬಿರುದುಗಳಲ್ಲಿ ಪೂ. ಪದವಾಗಿ) The G. Moghul. (ಹಾಸ್ಯ ಪ್ರ.) The G. unpaid, unwashed (ಆಯಾ ಪದಗಳನ್ನು ನೋಡಿ). A g. judge ಬಹು ಮೇಧಾವಿಯಾದ, ಪಾಂಡಿತ್ಯವುಳ್ಳ, — ನ್ಯಾಯಾಧೀಶ. The truly g. man ನಿಜವಾದ ಮಹಾನುಭಾವ. G. thoughts ಉದಾತ್ತ ಭಾವಗಳು ; ಅಮೋಘ ವಚನಗಳು. Wouldn't it be g. if—? —ಆದರೆ ಬಹು ತೃಪ್ತಿಕರವಾಗುವುದಲ್ಲವೆ?]. ಶುದ್ಧ ; ಪಕ್ಕಾ (A g. scoundrel ಶುದ್ಧ ನೀಚ ; ಪಕ್ಕಾ ಮೋಸಗಾರ). [Uncle, aunt, nephew, niece ಎಂಬ ಪದಗಳ ಹಿಂದೆ ಒಂದು ಬಾರಿ ಅಥವಾ ಹೆಚ್ಚು ಬಾರಿ ಸೇರಿಸಿದಾಗ ಮತ್ತು Grand ಪದದೊಡನೆ ಸೇರಿದ ಸಂಬಂಧವಾಚಕಗಳ ಹಿಂದೆ ಸೇರಿಸಿದಾಗ ಇನ್ನೂ ಒಂದು (ಅಥವಾ ಹೆಚ್ಚು) ತರೆ ಹಿಂದಿನ ಅಥವಾ ಮುಂದಿನ ಸಂಬಂಧ ತೋರಿಸುತ್ತದೆ]: **Great-uncle** ತಂದೆಯ, ತಾಯಿಯ, —ಚಿಕ್ಕಪ್ಪ, ದೊಡ್ಡಪ್ಪ, ಸೋದರ ಮಾವ. (ಹಾಗೆಯೇ **Great-aunt**). **Great-grand-father** ಅಜ್ಜನ, ಅಜ್ಜಿಯ, —ತಂದೆ; ಮುತ್ತಜ್ಜ. (ಹಾಗೆಯೇ, **Great-grandmother**). **Great-grandson, -grand-daughter** ಮರಿ ಮಗ, ಮರಿ ಮಗಳು. (ಹಾಗೆಯೇ **Great-great-grandfather, &c.**). G. Assize, Day, or Inquest (ಕ್ರೈಸ್ತ) ದೇವರು ಮಾಡುವ ಅಂತಿಮ ಮಹಾವಿಚಾರಣೆಯ ದಿನ. G. Bible ೧೫೩೯ರಲ್ಲಿ Coverdale ಎಂಬಾತನು ಪ್ರಕಟಿಸಿದ ಬೈಬಲ್ ಪ್ರತಿ. G. Britain, Charter, Circle (ಆಯಾ ಪದಗಳನ್ನು ನೋಡಿ). **Greatcoát** [(coat ನೋಡಿ). **Greátcoated** (ಗು.) ನಿಲುವಂಗಿ ಧರಿಸಿದ. **Greatcoátless** (ಗು.)]. The g. commoner (ಇಂಗ್ಲೆಂಡಿನ ಮುಖ್ಯಮಂತ್ರಿಯಾಗಿದ್ದ) ಹಿರಿಯ Wm. Pitt ಎಂಬಾತನು. Greater Britain (Britain ನೋಡಿ.) Greatest happiness of the greatest number (Bentham ಎಂಬ ತತ್ತ್ವಜ್ಞಾನಿಯ ತತ್ತ್ವ: Benthamism ನೋಡಿ). **G. go** ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಬಿ. ಎ. ಪದವಿಯ ಅಂತ್ಯ ಪರೀಕ್ಷೆ. **Great-hearted** ಉದಾತ್ತ, ಉದಾರ, —ಹೃದಯದ ; ದೊಡ್ಡ ಮನಸ್ಸಿನ. **G. house** (ಹಳ್ಳಿ, ಮೊ. ಗಳಲ್ಲಿ) ದೊಡ್ಡ(ವನ)ಮನೆ. **G. organ, seal, primer** (ಆಯಾ ಪದಗಳನ್ನು ನೋಡಿ). **G. toe** ಕಾಲಿನ ಹೆಬ್ಬೆಟ್ಟು (ಈಗ ಸಾ., Big toe). **Greáten** (ಕ್ರಿ.) (ಪ್ರಾಚೀ. ಪ್ರ.) ಗಾತ್ರದಲ್ಲಿ, ಮೊತ್ತದಲ್ಲಿ, ದೊಡ್ಡದಾಗು, ದೊಡ್ಡದು ಮಾಡು; ಘನತೆವಂತನನ್ನಾಗಿ, ಪ್ರಮುಖನನ್ನಾಗಿ, ಖ್ಯಾತಿವಂತನನ್ನಾಗಿ, ಮಾಡು. **Greátly** (ಕ್ರಿ. ವಿ.) ಬಹಳವಾಗಿ ; ವಿಶೇಷವಾಗಿ ; ಮುಖ್ಯವಾಗಿ ; ಅತಿಶಯವಾಗಿ [G. esteemed, superior ಬಹಳ ಗೌರವಕ್ಕೆ ಪಾತ್ರ(ನಾದ) ; ಬಹು ಮೇಲಾದ. I should greatly prefer ನನಗೆ ಹೆಚ್ಚು ಇಷ್ಟ]. ಘನವಾಗಿ ; ಉದಾತ್ತವಾಗಿ ; ಉತ್ತಮ ರೀತಿಯಲ್ಲಿ. **Greátness**(ನಾ.) ದೊಡ್ಡತನ ; ಮಹತ್ತ್ವ.

Great (ನಾ.) (ಬ. ವ. ದಲ್ಲಿ) ದೊಡ್ಡವರು (=The g.). (G. & small ದೊಡ್ಡವರೂ ಚಿಕ್ಕವರೂ ; ಹಿರಿಯರೂ ಕಿರಿಯರೂ ; ದೊಡ್ಡವೂ ಚಿಕ್ಕವೂ). (ಏ. ವ. ದಲ್ಲಿ) ದೊಡ್ಡದು. **Greats** ಆಕ್ಸ್‌ಫರ್ಡ್ ಬಿ. ಎ. ಪದವಿಯ ಅಂತ್ಯ ಪರೀಕ್ಷೆ.

Greave ಗ್ರೀವ್ (ನಾ.) ಕಣಕಾಲ ಕಾಪು ; ಜಂಘಾ ಕವಚ.

Greaves ಗ್ರೀವ್ಸ್ (ನಾ., ಬ. ವ.) (ನಾಯಿ, ಮೊ. ಗಳ ಆಹಾರಕ್ಕಾಗಿ, ಅಥವಾ ಮೀನಿನ ಎರೆಯಾಗಿ, ಉಪಯೋಗಿಸುವ) ಚರಬಿಯ ನಾರುನಾರಾದ ಕಳಪೆ : ಚರಬಿಯ ಕಳಪೆ.

Grebe ಗ್ರೀಬ್ (ನಾ.) ಒಂದು ಮುಳುಗುಹಕ್ಕಿ ಜಾತಿ ; (ಅಂಚು ಕಟ್ಟುವಲ್ಲಿ ಅಲಂಕಾರಕ್ಕಾಗಿ ಉಪಯೋಗಿಸುವ) ಇದರ ರೆಕ್ಕೆಯ ಗರಿಗಳು.

Grécian. **Greek** ನೋಡಿ.

Greek ಗ್ರೀಕ್ (ನಾ., ಗು.) ಗ್ರೀಸ್ ದೇಶದವನು ; ಗ್ರೀಕ್ ಬುಡಕಟ್ಟಿಗೆ ಸೇರಿದವನು ; ಗ್ರೀಕನು. (When G. meets G., then comes the tug of war ಸಮಬಲರು ಎದುರಿಸಿದಾಗ ಕಾಳಗ ಸಮದಂಡಿಯಾಗುತ್ತದೆ). (ಕ್ರೈಸ್ತ) ಗ್ರೀಕ್ ಮಠದ ಶಿಷ್ಯ (ಸದಸ್ಯ). ತಂತ್ರಿ ; ಮೋಸಗಾರ ; ಠಕ್ಕ. ಗ್ರೀಕ್ ಭಾಷೆ (G. to me ನನಗೆ ಅರ್ಥವಾಗದ್ದು, ಗೊತ್ತಾಗದ್ದು ; ನನ್ನ ಅರಿವಿಗೆ ಮೀರಿದ್ದು). (ಗು.) ಗ್ರೀಸಿನ ; ಗ್ರೀಕರ ; ಗ್ರೀಕ್ ಭಾಷೆಯ (—ಯಲ್ಲಿ ಬರೆದ, ಮಾತನಾಡುವ) ; ಗ್ರೀಕ್ ಭಾಷಾನುಸಾರವಾದ (G. Fathers ಗ್ರೀಕ್ ಭಾಷೆಯಲ್ಲಿ ಬರೆದ ಹಿಂದಿನ ಕ್ರೈಸ್ತ ಮತ ಗ್ರಂಥಕಾರರು). **G. Church** ಕಾನ್‌ಸ್ಟ್ಯಾಂಟಿನೋಪಲಿನ ಕ್ರೈಸ್ತ ಮಠಾಧಿಪತಿಯ ಅಧಿಕಾರಕ್ಕೆ ಒಳಪಟ್ಟು, ಮು., ಗ್ರೀಸಿನ, ರಷ್ಯದ, ಮತ್ತು ತುರ್ಕಿ ಚಕ್ರಾಧಿಪತ್ಯದ ಕ್ರೈಸ್ತರನ್ನೊಳಕೊಂಡ ಮಠ (ಚರ್ಚು) : 'ಗ್ರೀಕ್ ಚರ್ಚು' (= Orthodox, Eastern, Church). G. calends, fire, fret (ಆಯಾ ಪದಗಳನ್ನು ನೋಡಿ). G. key =G. fret. G., Grecian, gift ಕೇಡಾಗಲೆಂದು, ಮೋಸ ಮಾಡಲು, ಕೊಟ್ಟ ದಾನ ; ಕೇಡು ಕೊಡುಗೆ. **Greékless** (ಗು.) ; **Grécian** ಗ್ರೀಷಿಯನ್, ಗ್ರೀಷನ್ (ಗು., ನಾ.) ಗ್ರೀಸಿನ ; ಗ್ರೀಕರ ; ಗ್ರೀಕ್ [ವಾಸ್ತುಶಿಲ್ಪ ಮತ್ತು ಮುಖದ ಆಕಾರ, — ಇವುಗಳ ನಿರೂಪಣೆಯಲ್ಲಿ ವಿನಾ ವಿರ. ಪ್ರ. G. bend (ಹಿಂದೆ, ನಡಗೆಯಲ್ಲಿ) ಸೊಂಟದಿಂದ ಮೇಲಿನ ದೇಹಭಾಗವನ್ನು ಬಗ್ಗಿಸಿ ನಡೆಯುತ್ತಿದ್ದ ಒಂದು ಕೃತಕ ಭಂಗಿ : ಗ್ರೀಕ್ ಬಾಗು. G. gift = Greek gift. G. knot ಗ್ರೀಕ್ ಹೆಂಗಸರ ಒಂದು ತೆರದ ಜೋಲು ತುರುಬು. G. nose ನಡುವೆ ತಗ್ಗದೆ ಹಣೆಯಿಂದ ನೇರವಾಗಿ ಹೋಗುವ ಮೂಗು ; (ಸರಳವಾದ) ಗ್ರೀಕ್ ಮೂಗು. G. profile ಗ್ರೀಕ್ ಮೂಗಿನ ಮುಖಪಾರ್ಶ್ವ ಚಿತ್ರ, ನೋಟ. G. slippers ಗ್ರೀಕ್ ಜೋಡು (ಪೌರಸ್ತ್ಯರ ತೆರದ ಜೋಡಿಗೆ ವ್ಯಾಪಾರದ ಹೆಸರು)]. (ನಾ.) ಗ್ರೀಕ್ ಪಂಡಿತ ; ಗ್ರೀಕ್ ಭಾಷಾ ಪ್ರವೀಣ. Christ's Hospital ಎಂಬ ಪಾಠಶಾಲೆಯಲ್ಲಿ ಅತಿ ಮೇಲ್ತರಗತಿಯ ವಿದ್ಯಾರ್ಥಿ.

Grécism, Grécize, Gréco-. **Graecism** ನೋಡಿ.

Greed ಗ್ರೀಡ್ (ನಾ.) ತೃಪ್ತಿಯಾಗದ ಆಸೆ (ಮು., ಐಶ್ವರ್ಯಕ್ಕೆ) ; ಧನಲೋಭ ; ಅತ್ಯಾಶೆ ; ದುರಾಶೆ. **Greédy** (ಗು.) ಅತಿ ಹಸಿವಿನ ; ಹೊಟ್ಟೆಬಾಕತನದ; ತಿಂಡಿಪೋತತನದ. ಅತ್ಯಾಶೆಯ; ಧನಲೋಭದ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಲ್ಲವನ್ನೂ ಬಾಚಿಕೊಳ್ಳುವ (ಸ್ವಭಾವದ) (*Of* ಉಪ. ದೊಡನೆ ಸಹ). (ಮಾಡಲು) ಕುತೂಹಲವುಳ್ಳ, ಆತುರತೆಯುಳ್ಳ ; ತೀವ್ರಾಭಿಲಾಷೆಯುಳ್ಳ. **Greédily** (ಕ್ರಿ. ವಿ.) ; **Greédiness** (ನಾ.)

Green ಗ್ರೀನ್ (ಗು.) ಹಸಿಯ ಹುಲ್ಲು, ಕಡಲ ನೀರು, ಪಚ್ಚೆ, ಮೊ. ಗಳ ಬಣ್ಣದ ; ಹಸುರಾದ ; ಹಚ್ಚನೆಯ. ಸೊಪ್ಪು ಬೆಳೆದಿರುವ. ಎಲೆ ತುಂಬಿರುವ. [A g. Christmas, Yule ಹಿತಕರವಾದ, ಮಂಜಿಲ್ಲದ —ಕ್ರಿಸ್‌ಮಸ್ ಹಬ್ಬ(ದ ಕಾಲ)] . (ಮೈಬಣ್ಣ, ಮುಖಚ್ಛಾಯೆ) ಬಿಳಿಚಿಕೊಂಡ ; ನಿಸ್ತೇಜ ; ಪಾಂಡುರ ; ರೋಗದ ಛಾಯೆಯ. [G. eye ಕರುಬು ; ಹೊಟ್ಟೆಕಿಚ್ಚು ; ಮಾತ್ಸರ್ಯ ; ಅಸೂಯೆ. Green-eyed (ಗು.) ; G. jaundice (ಚರ್ಮ ಹಸುರು ಬಣ್ಣಕ್ಕೆ ತಿರುಗುವ) ಕಾಮಾಲೆ ರೋಗ] . (ರೂಪ.) ಕರುಬಿನ ; ಅಸೂಯೆಯ ; ಮಾತ್ಸರ್ಯದ. ಕಾಯಿಪಲ್ಯದ ; ಸೊಪ್ಪಿನ [G. food ಹುಲ್ಲು ; (ಆಹಾರದ) ಸೊಪ್ಪು, ತರಕಾರಿ] . (ಹಣ್ಣು, ಮೊ.) ಹಣ್ಣಾಗಿಲ್ಲದ ; ಕಾಯಾದ ; ಎಳಸಾದ ; ಹೀಚಾದ ; (ಹಸುರುಗೂಡಿ) ಬಲಿಯುತ್ತಿರುವ, ಬೆಳೆಯುತ್ತಿರುವ ; ಒಣಗಿಲ್ಲದ ; ಹಸಿಯ. ಚೈತನ್ಯ ತುಂಬಿರುವ ; ನಳನಳಿಸುತ್ತಿರುವ ; ಬಾಡಿಲ್ಲದ ; ಕಂದಿರದ ; ಜೀರ್ಣವಾಗಿರದ (In the g. tree ಒಳ್ಳೆಯ ದೆಸೆಯಲ್ಲಿ ; ಸೌಖ್ಯ ಸ್ಥಿತಿಯಲ್ಲಿ ; ಅನುಕೂಲ ಸನ್ನಿವೇಶದಲ್ಲಿ. In the dry tree ಕಷ್ಟ, ಕೆಟ್ಟ, — . A g. old age ತೀರ ಹಣ್ಣಾಗದ, ಉತ್ಸಾಹದಿಂದ ಕೂಡಿದ, ಮುಪ್ಪು). ಎಳೆಯ ; ಅಪಕ್ವ ; ಬಲಿತಿಲ್ಲದ ; ಬೆಳವಣಿಗೆಯಿಲ್ಲದ. ಅನುಭವವಿಲ್ಲದ; ಸುಲಭದಲ್ಲಿ ಮೋಸಹೋಗುವ. ಹಸಿಯ ; ಒಣಗಿದ್ದಿಲ್ಲದ ; ಪಕ್ವ ಮಾಡಿರದ ; ಹದಗೊಳಿಸಿರದ. ಹೊಸ ; ಮಾಗಿಲ್ಲದ ; (ಇನ್ನೂ) ಮಾಯದಿರುವ ; ಹಸಿ (A g. wound ಹೊಸ, ಹಸಿ, —ಗಾಯ). **Greénback** ಅಮೆ. ಸಂ. ದ ಕಾಯಿದೆಯ ಪ್ರಕಾರ ಚಲಾವಣೆಯಲ್ಲಿರುವ ನೋಟು ; ಅಮೆ. ಸಂ. ದ ಯಾವ ರಾಷ್ಟ್ರೀಯ ಬ್ಯಾಂಕಿನವರಾದರೂ ಹೊರಡಿಸಿರುವ 'ನೋಟು' (ಹಿಂಭಾಗದಲ್ಲಿ ಹಸುರುಮುದ್ರಣವಿರುವ ಕಾರಣದಿಂದ). **G.-blind** ಹಸುರು ಕಿರಣಗಳನ್ನು ಗ್ರಹಿಸಲಾಗದ ದೃಷ್ಟಿಪಟವುಳ್ಳ ; ಹಸುರು ಗುರುಡು. **G.-book** ಇಂಡಿಯಾ ಸರ್ಕಾರದ ಸರ್ಕಾರಿ ಪ್ರಕಟನೆಯ ಹಸುರು ಪುಸ್ತಕ (ರಟ್ಟುಕಾಗದ ಹಸುರು ಬಣ್ಣದ್ದು). **G. cheese** ಅಪಕ್ವವಾದ, ಹೊಸ, ಹಸುರು ಬಣ್ಣ ಕೊಟ್ಟ, — ಚೀಸು. **G. crop** (ತಿನ್ನುವ) ಹಸುರು ಪಯಿರು ; ಹಸಿಯ ಮೇವು. **G. fly** ಒಂದು ತೆರದ ಗಿಡಹೇನು. **Greéngage** ದುಂಡು ದುಂಡಾಗಿರುವ, ಸೊಗಸಾದ ರುಚಿಯ, ಹಸುರು ಬಣ್ಣದ, 'ಪ್ಲಂ' ಹಣ್ಣು. **Greén-grocer(y)** ಹಣ್ಣು ಹಂಪಲು ಮತ್ತು ಕಾಯಿಪಲ್ಯಗಳ ಚಿಲ್ಲರೆ ವ್ಯಾಪಾರಿ, (ವ್ಯಾಪಾರ); ಚಿಲ್ಲರೆಯಾಗಿ ಮಾರಿದ ಹಣ್ಣು, ಕಾಯಿಪಲ್ಯ. **Greén-heart** ಬ್ರಿಟಿಷ್ ಗಯಾನದ ಒಂದು ಚೌಬೀನೆ ಮರ. **Greénhorn** ತಿಳಿಗೇಡಿ ; ಅನನುಭವಿ ; ದಡ್ಡ ; ಗುಗ್ಗು. **Greénhouse** ಕೋಮಲ ಸಸ್ಯಗಳನ್ನು ಬೆಳಸುವ ಗಾಜಿನ ಮನೆ. **G.-man** 'ಗಾಲ್ಫ್' ಮೈದಾನದ ಕಾವಲುಗಾರ. **G. manure** (ಸಸ್ಯಗಳನ್ನು ಬೆಳಸಿ ಉತ್ತುಬಿಡುವ) ಹಸುರುವಾಣಿ ಗೊಬ್ಬರ. **G.-room** ರಂಗಸ್ಥಳದಲ್ಲಿಲ್ಲದಿರುವಾಗ ನಟರೂ ನಟಿಯರೂ ಇರುವ ಕೋಣೆ : ನೇಪಥ್ಯ ; ವೇಷ ಹಾಕುವ ಕೊಠಡಿ. **Greensíckness** = Chlorosis. **G.-stick** (ಮು., ಮಕ್ಕಳಲ್ಲಿ) ಒಂದು ಕಡೆ ಮುರಿದು ಮತ್ತೊಂದು ಕಡೆ ಬಗ್ಗಿ ಮಾತ್ರ ಇರುವ ಮೂಳೆಮುರಿತ. **G.-stuff** ಸಸ್ಯಗಳು ; ಹಸುರು ಬೆಳೆ ; ಹಸುರು ಕಾಯಿಪಲ್ಯ, ಸೊಪ್ಪು. **Greénsward** ತೆಕ್ಕೆಗಟ್ಟಿದ, ತೆಂಡೆಗಟ್ಟಿದ, ಹುಲ್ಲುನೆಲ. **G. table** ಜೂಜಾಟದ ಮೇಜು. **G. tea** ಆವಿಯಲ್ಲಿ ಒಣಗಿಸಿ ತಯಾರಿಸಿದ ಟೀಎಲೆ. **Greénwood** (ವೇಸಗೆಯ) ಹಸುರುಗಾಡು (ಮು., ನ್ಯಾಯ ಬಾಹಿರರ, ಕಳ್ಳ ಕಾಕರ, ಜೀವನ ರಂಗ). **Greényard** (ತೊಂದು ಪ್ರಾಣಿಗಳನ್ನು ಕೂಡುವ) ದೊಡ್ಡಿ. **Greénish** (ಗು.) ; **Greény** (ಗು.) [(ನ. ಪೂ. ಪ.) Greeny-yellow ಹಸುರುಮಿಶ್ರ ಹಳದಿ] . **Greénly** (ಕ್ರಿ. ವಿ.) ; **Greénness** (ನಾ.)

Green (ನಾ., ಕ್ರಿ.) ಹಸುರಾಗಿರುವದು ; ಹಸುರು ಭಾಗ ; ಹಸುರು (ಬಣ್ಣ) (Do you see any g. in my eye ನಾನೇನು ಗುಗ್ಗುವೆಂದು ಎಣಿಸಿದೆಯೋ?). ಹಸುರು ಬಣ್ಣ, ರಂಗು (ಸಾ., ವಿಶೇಷಣ ಪದದೊಡನೆ : Mineral g., Paris g.). ಶಕ್ತಿ ; ಹುರುಪು ; ಯೌವನ ; ಕಸುವು ; ಬಲ (ಸಾ., In the g. ನವ ಯೌವನದಲ್ಲಿ ; ಯೌವನದ ಭರದಲ್ಲಿ). ಪಯಿರು ಪಚ್ಚೆ ; ಹಸುರು ಸಸ್ಯಗಳು [= **Greénery** (ನಾ.)] . (ಬ. ವ. ದಲ್ಲಿ) ಅಟ್ಟ ಅಥವಾ ಅಡದ ಹಸುರು ಕಾಯಿಪಲ್ಯಗಳು (ಸೊಪ್ಪು, ಮೊ.). ಸಾರ್ವಜನಿಕ ಹುಲ್ಲುಮೈದಾನ ; ವಿಶೇಷ ಉದ್ದೇಶಕ್ಕಾಗಿ ಉಪಯೋಗಿಸುವ ಹುಲ್ಲುನೆಲ (ಮು., ವಿಶೇಷಣಗಳೊಂದಿಗೆ : ಉದಾ., Bleaching, Bowling, Putting, -g.). (ಕ್ರಿ.) (ಮು., ಪಯಿರು ಪಚ್ಚೆಗಳಿಂದ) ಹಸುರೇರು, ಹಚ್ಚಗಾಗು. ಹಸುರು ಬಣ್ಣ ಹಾಕು, ಬಳಿ; ಹಸುರು ಕಲೆಯಾಗು, — ಮಾಡು. (ಅಸಂ.) ಮೋಸಗೊಳಿಸು ; ಟೋಪಿ ಹಾಕು. **Greéner** (ನಾ.) (ಅಸಂ.) ಹೊಸಬ ; ಅನನುಭವಿ (ಮು., ಕೆಲಸ ಹುಡುಕಿಕೊಂಡು ಹೊಸದಾಗಿ ಬಂದ ಪರಸ್ಥಳದವನು). **Greéning** (ನಾ.) ಪಕ್ವವಾದಾಗ ಹಸುರಾಗಿರುವ ಒಂದು ಬಗೆಯ ಸೇಬು : ಹಸುರು ಸೇಬು. **Greenth** (ನಾ.) (ವಿರ. ಪ್ರ.) ಪಯಿರು ಪಚ್ಚೆ ; ಹಸುರು ಸಸ್ಯಗಳು ; ಹಸುರುವಾಣಿ ; ಪಸುರ್ಪು (ಗ್ರಾಂ.)

Greéner, Greening, etc. **Green** ನೋಡಿ.

Greénwich ಗ್ರಿನಿಜ್ (ನಾ.) (ಇಂಗ್ಲೆಂಡಿನ) ಕೆಂಟ್ ಪ್ರಾಂತದಲ್ಲಿ ಸರ್ಕಾರದ ಸಮೀಕ್ಷಣ ಯಂತ್ರಶಾಲೆ (ನಕ್ಷತ್ರ ಶಾಲೆ) ಇರುವ ಒಂದು ಪಟ್ಟಣ [G. time ಗ್ರಿನಿಜ್ಜಿನ ಮಧ್ಯಾಹ್ನರೇಖೆಗೆ ಸರಿಯಾದ ಸರಾಸರಿ ಕಾಲ ; (ಇಂಗ್ಲೆಂಡ್ ಮತ್ತು ಇತರ ಕೆಲವು ದೇಶಗಳಲ್ಲಿ ಬಳಕೆಯಾಗಿರುವ) ಗ್ರಿನಿಜ್ ಪ್ರಮಾಣ ಕಾಲ]

Greet[1] ಗ್ರೀಟ್ (ಕ್ರಿ. ಸಕ.) ನಮಸ್ಕರಿಸಿ ಕುಶಲಪ್ರಶ್ನೆ ಮಾಡು ; (ಮಾತಿನಿಂದ ಅಥವಾ ಅಭಿನಯದಿಂದ) ಅಭಿವಂದಿಸು ; ಸಂಧಿಸಿದಾಗ ಅಥವಾ ಬಂದು ಇಳಿದಾಗ (ಸ್ನೇಹಭಾವದ ಅಥವಾ ಅಲ್ಲದ) ಮಾತುಗಳಿಂದ, ಅಂಗ ವಿಕ್ಷೇಪದಿಂದ, ಎದುರುಗೊಳ್ಳು ; ಒಸಗೆ ಹೇಳು (*With* ಉಪ. ದೊಡನೆ). (ಘೋಷಣೆ, ಮೊ.) ಜಯಕಾರ ಮಾಡು. (ನೋಟ, ಮೊ. ವು ಕಣ್ಣಿಗೆ, ಕಿವಿಗೆ) ಬೀಳು, ಗೋಚರವಾಗು, ತೋರು. **Greéting** (ನಾ.) ಕುಶಲಪ್ರಶ್ನೆ ; ಒಸಗೆ.

Greet[2] ಗ್ರೀಟ್ (ಕ್ರಿ. ಅಕ.) (ಸ್ಕಾ. ಪ್ರ.) ಅಳು ; ಗೋಳಾಡು ; ಪ್ರಲಾಪಿಸು.

Gregárious ಗ್ರೆಗೇರಿಯಸ್ (ಗು.) ಮಂದೆಗೂಡಿ, ಗುಂಪುಗೂಡಿ, — ವಾಸಮಾಡುವ ; ಸಂಘಜೀವಿಯಾದ ; ಸಹವಾಸ ಪ್ರಿಯ. (ಸ. ವಿ.) ಗೊಂಚಲಾಗಿ ಬೆಳೆಯುವ. ಮಂದೆಯ ; ಹಿಂಡಿನ ; ಗುಂಪಿನ. **Gregáriously** (ಕ್ರಿ. ವಿ.) ; **Gregáriousness** (ನಾ.)

Gregórian ಗ್ರಿಗೋರಿಯನ್ (ಗು., ನಾ.) [(ಕ್ರೈಸ್ತ) ಪೋಪ್ ಜಗದ್ಗುರು Gregory I ಎಂಬಾತನು ಮಾಡಿದ] ಕರ್ಮಾನುಷ್ಠಾನದ ಸರಳ ಗಾನ(ದ, —ದಂಥ) ; ಗ್ರಿಗೊರಿ ಗಾನ(ದ, —ದಂಥ). (ಕ್ರೈಸ್ತ) ಪೋಪ್ ಜಗದ್ಗುರುವಾದ ೧೩ನೆಯ ಗ್ರಿಗೊರಿ ಸ್ಥಾಪಿಸಿದ [G. calendar ೧೫೮೨ ರಲ್ಲಿ ಜೂಲಿಯನ್ ಪಂಚಾಂಗವನ್ನು ತಿದ್ದಿ ಪೋಪ್ ಗ್ರಿಗೊರಿ ತಯಾರಿಸಿದ ಪಂಚಾಂಗ : ಗ್ರಿಗೊರಿ ಪಂಚಾಂಗ. G. style ಗ್ರಿಗೊರಿ ಪದ್ಧತಿ. G. epoch (೧೫೮೨ ರಿಂದ) ಗ್ರಿಗೊರಿ ಶಕ]

Grégory-powder ಗ್ರೆಗೊರಿ ಪೌಡರ್ (ನಾ.) ಸುಖ ವಿರೇಚಕವಾಗಿ ಉಪಯೋಗಿಸುವ Rhubarb ಎಂಬ ಸಸ್ಯದ ಬೇರಿನ ಸಂಯುಕ್ತ ಚೂರ್ಣ : ಗ್ರೆಗೊರಿ ಚೂರ್ಣ. (James Gregory ಎಂಬ ಸ್ಕಾಟ್ಲೆಂಡಿನ ವೈದ್ಯನ ಹೆಸರಿನಿಂದ)

Grenáde ಗ್ರೆನೇಡ್ (ನಾ.) ಕೈಯಿಂದ ಎಸೆಯುವ [ಅಥವಾ ಬಂದೂಕಿನಿಂದ ಹಾರಿಸುವ (=Rifle-g.)] ಒಂದು ಸಣ್ಣ ಸಿಡಿಗುಂಡು. (ಚರಂಡಿಗಳನ್ನು ಪರೀಕ್ಷಿಸುವುದು, ಬೆಂಕಿ ಆರಿಸುವುದು, ಮೊ. ವಕ್ಕಾಗಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಸಾಯನ ವಸ್ತುಗಳನ್ನು ಹರಡಲು ಅವನ್ನು ತುಂಬಿ ಎಸೆಯುವ ಗಾಜುಪಾತ್ರೆ. **Grenadíer** ಗ್ರೆನಡಿಯರ್ (ನಾ.) (ಮೊದಲರ್ಥ) ಸಿಡಿಗುಂಡೆಸೆಯುವ ಸಿಪಾಯಿ ; (ಈಗ) ಇಂಗ್ಲೆಂಡಿನಲ್ಲಿ ಅರಮನೆಯ ಸೈನ್ಯದ ಪದಾತಿ ದಳಗಳಲ್ಲಿ ಮೊದಲನೆಯ ದಳ; ಗ್ರೆನಡಿಯರ್ ದಳ(ಗಳು) (= Grenadiers, G. Guards). ಗೀಜಗನ ಹಕ್ಕಿ ಯಂಥ ಒಂದು ಪಕ್ಷಿಜಾತಿ.

Grénadine[1] ಗ್ರೆನಡಿನ್ (ನಾ.) ರೇಷ್ಮೆಯ ಅಥವಾ ರೇಷ್ಮೆ ಮತ್ತು ಉಣ್ಣೆಯ ಉಡುಪುಬಟ್ಟೆ.

Grénadine[2] ಗ್ರೆನಡೀನ್ (ನಾ.) (ಹೃದಯೋತ್ತೇಜಕವಾದ ಫ್ರೆಂಚ್) ದಾಳಿಂಬೆಯ ಷರಬತ್ತು.

Gressórial ಗ್ರೆಸೋರಿಯಲ್ (ಗು.) (ಪ್ರಾ. ವಿ.) ನಡೆಯುವ; ನಡಗೆಗೆ ಅನುಕೂಲಿಸಿದ.

Grétna Green ಗ್ರೆಟ್ನ ಗ್ರೀನ್ (ನಾ.) ಇಂಗ್ಲೆಂಡಿನ ಉತ್ತರದ ಎಲ್ಲೆ ಯಿಂದಾಚೆಗೆ ಸ್ಕಾಟ್ಲೆಂಡಿನಲ್ಲಿರುವ ಒಂದು ಹಳ್ಳಿ(ಯ ಹೆಸರು). G. G. marriage ಆ ಹಳ್ಳಿಗೆ ಕದ್ದುಹೋಗಿ ಮಾಡಿಕೊಂಡ ಕಳ್ಳ ಮದುವೆ.

Grew. Grow ಧಾತುವಿನ ಭೂತ.

Grey, Gray ಗ್ರೇ (ಗು., ನಾ., ಕ್ರಿ.) ಬಿಳುಪಿಗೂ ಕಪ್ಪಿಗೂ ಮಧ್ಯಸ್ಥ ವಾದ, ಬೂದಿಯಂಥ, ಸೀಸದಂಥ, — ಬಣ್ಣ ; ಬೂದು (ಬಣ್ಣದ); ನರೆ ಬಣ್ಣ(ದ) [G. friar 'ಫ್ರಾನ್ಸಿಸ್ಕನ್' ಸಂನ್ಯಾಸಿ (Franciscan ನೋಡಿ). G. eye ಕಣ್ಣುಗುಡ್ಡೆಯ ಕರಿಯ ಭಾಗ ಬೂದುಬಣ್ಣವಾಗಿರುವ ಕಣ್ಣು ; ಬೂದುಗಣ್ಣು ; ಬೆಕ್ಕುಗಣ್ಣು. The g. mare is the better horse ಹೆಂಡತಿಯ ಒಡೆತನ, ಆಳಿಕೆ, ದವಲತ್ತು, ಪಾರುಪತ್ಯ ; ಗಂಡನು ಹೆಂಡತಿಯ ಅಧೀನ]. ಬೆಳಕಿಗೂ ಕತ್ತಲೆಗೂ ಮಧ್ಯಸ್ಥ : ನಸುಗತ್ತಲೆ ; ಮಬ್ಬು ; ಮಂಕು ; ಮಸುಕು. ಮೋಡ ಕವಿದ ; (ಮನ ಸ್ಸನ್ನು) ಕುಗ್ಗಿಸುವ ; ನಿರುತ್ಸಾಹಕರ ; ಕಳೆಗೆಟ್ಟ ; (ವ್ಯಕ್ತಿ, ಅವನ ಕೂದಲು) ಮುಪ್ಪು, ಮೊ. ಗಳಿಂದ ನರೆತ; ನರೆ ತಿರುಗಿದ. ಹಳಮೆಯ; ಪುರಾತನ; ಸನಾತನ; ಅನಾದಿ(ಯಾದ). ಮುಪ್ಪಿನ ; ವೃದ್ಧಾಪ್ಯದ ಒಳ್ಳೆಯ ಅನುಭವವುಳ್ಳ; ಪಳಗಿದ; ನುರಿತ. [G. crow *or* G.-back ತಲೆಮುಸುಕುಳ್ಳ ಕಾಗೆ. **Greýbeard** ದಾಡಿ ನರೆತವನು ; ಮುದುಕ. (ಮದ್ಯ ತುಂಬಿಡುವ) ದೊಡ್ಡ ಜಾಡಿ. ಒಂದು ಬಗೆಯ ಕಲ್ಲುಹೂವು. **G.-headed** ತಲೆ ನರೆತ ; ಮುದಿಯಾದ ; ಬಹುಕಾಲ ದುಡಿದ, ಸೇವೆ ಮಾಡಿದ ; ಹಳೆಯ ; ಪುರಾತನದ. **G. matter** (ಮಿದುಳಿನ ಚಟುವಟಿಕೆಯ ಭಾಗದ) ಬೂದು ದ್ರವ್ಯ. **Greýstone** ಬೂದು ಬಣ್ಣದ ಜ್ವಾಲಾಮುಖಿ ಶಿಲೆ ; ಬೂದುಗಲ್ಲು]. (ನಾ.) ಬೂದು (ಬಣ್ಣದ) ಬಟ್ಟೆಗಳು, ಉಡುಪು. ಬಿಸಿಲಿಲ್ಲದ ತಣ್ಣನೆಯ ಬೆಳಕು. ಬೂದು ಬಣ್ಣ ; ಬೂದು ವರ್ಣದ್ರವ್ಯ ; ಬೂದುಗುದುರೆ (The Greys, Scots Greys : 'Dragoons' ಎಂಬ ಎನೆಯ ಅಶ್ವದಳ). (ಕ್ರಿ.) ಬೂದು ತಿರುಗು, — ತಿರುಗಿಸು ; (ಛಾಯಾ ಚಿತ್ರ) (ಗಾಜಿನ ಮೇಲ್ಮೈ ಯನ್ನು) ಮಸುಕು ಮಾಡು. **Greýish** (ಗು.) ; **Greýly** (ಕ್ರಿ. ವಿ.) ; **Greýness** (ನಾ.)

Greýhound ಗ್ರೇಹೌಂಡ್ (ನಾ.) (ಮೊಲ, ಮೊ. ನ್ನು ಬೇಟೆಯಾಡುವು ದರಲ್ಲಿ ಉಪಯೋಗಿಸುವ, ತೆಳುವಾದ ಉದ್ದ ಕಾಲುಗಳುಳ್ಳ, ತೀಕ್ಷ್ಣ ದೃಷ್ಟಿಯ, ವೇಗಶಾಲಿಯಾದ) ಒಂದು ಬಗೆಯ (ಬೇಟೆಯ) ನಾಯಿ (Ocean g. ವೇಗವಾದ ಹಡಗು). G.-racing ಪಂದ್ಯಗಟ್ಟುವುದಕ್ಕಾಗಿ ಯಾಂತ್ರಿಕ ಮೊಲವನ್ನು ಬೇಟೆನಾಯಿಗಳಿಂದ ಬೆನ್ನಟ್ಟಿಸುವ ಒಂದು ಬಗೆಯ ಆಧುನಿಕ ವಿನೋದ ಕೇಳಿ : ಬೇಟೆನಾಯಿ ಜೂಜು.

Grid ಗ್ರಿಡ್ (ನಾ.) ನಡು ನಡುವೆ ಸ್ಥಳ ಬಿಟ್ಟು ಜೋಡಿಸಿದ ಸಮಾಂತರ ಸರಳುಗಳ ಚೌಕಟ್ಟು ; ಸರಳು ತಡೆ. (ವಿದ್ಯುತ್) ಧ್ವನಿ ವರ್ಧಕ ಕವಾಟ ಭಾಗ. (ರೇಖೆಗಳು, ರೈಲುರಸ್ತೆಗಳು, ವಿದ್ಯುಚ್ಛಕ್ತಿ ಹರಿವಿನ ಸೇರುವೆಗಳು, ಮೊ. ಗಳ) ಹೆಣಿಗೆ, ಜಾಲ. (ಅಡಿಗೆಗೆ, ಸುಡುವುದಕ್ಕೆ, ಉಪಯೋಗಿಸುವ) ಸರಳು ಚೌಕಟ್ಟು ; ಸುಡು ಚೌಕಟ್ಟು.

Gríddle ಗ್ರಿಡ್‌ಲ್ (ನಾ., ಕ್ರಿ. ಸಕ.) (ದೋಸೆ ಹೊಯ್ಯುವ) (ಕಬ್ಬಿಣದ) ಗುಂಡು ಕಾವಲಿ, ಹಂಚು ; ಗಣಿಕೆಲಸದವನ ತಂತಿ (ತಳದ) ಜಲ್ಲಡಿ ; — ತಂತಿ ತಳದ ಚೌಕಟ್ಟು, ಒಂದರಿ. (ಕ್ರಿ.) ಅದುರನ್ನು ಜಲ್ಲಡಿ ಹಿಡಿ.

Gride ಗ್ರೈಡ್ (ಕ್ರಿ. ಅಕ., ನಾ.) ಕರ ಕರನೆ, ಚರ ಚರನೆ, — ಕೊಯ್ಯಿ, ಹೆರೆ (*Along*, *through* ಉಪ. ದೊಡನೆ). (Grides its way ಕರ ಕರನೆ ಕೊಯ್ದುಕೊಂಡು ಹೋಗುತ್ತದೆ). (ನಾ.) ಕರ್ಕಶ ಧ್ವನಿ ; ಕರ ಕರ ಶಬ್ದ.

Grídiron ಗ್ರಿಡೈರ್‌ನ್ (ನಾ.) (ಕೆಂಡದ ಮೇಲಟ್ಟು ಮಾಂಸ ಅಥವಾ ಮೀನನ್ನು ಸುಡುವುದಕ್ಕೆ ಉಪಯೋಗಿಸುವ) ಸರಳು ಚೌಕಟ್ಟು. (ನಾವೆ) ಹಡಗುಕಟ್ಟೆಯಲ್ಲಿ ಹಡಗಿಗೆ ಆಸರೆಯಾದ ಸಮಾಂತರ ತೊಲೆಗಳ ಚೌಕಟ್ಟು : ತೊಲೆ ಚೌಕಟ್ಟು. (ರಂಗ ಭೂಮಿ) ಇಳಿಬಿಡುವ ಚಿತ್ರದ ಪರದೆ, ಮೊ. ಗಳಿಗೆ ಆಸರೆಯಾದ, ರಂಗಸ್ಥಳದ ಮೇಲ್ಭಾಗದಲ್ಲಿಯ ಹಲಗೆಕಟ್ಟಡ, ಮೇಲ್ಚಪ್ಪರ. ನಾವಿಕ ಸೇನೆಯ ಒಂದು ವಿನ್ಯಾಸ ಬದಲಾವಣೆ. ಬೇರೆ ಬೇರೆ ಲೋಹಗಳ ಸರಳುಗಳನ್ನು ಸಮಾಂತರ ವಾಗಿ ಜೋಡಿಸಿ (ವಾಯುಶಾಖ ವ್ಯತ್ಯಾಸವಾದರೂ ಉದ್ದ ವ್ಯತ್ಯಾಸ ವಾಗದಂತೆ) ಏರ್ಪಡಿಸಿದ ಸಮಕಾರಕ ಲೋಲಕ (= G.-pendulum)

Grief ಗ್ರೀಫ್ (ನಾ.) ಕೊರಗು ; ಅಳಲು ; ದುಃಖ ; ಸಂತಾಪ; ಉಗ್ರ ವ್ಯಥೆ [Come to g. ಕಷ್ಟಕ್ಕೆ ಸಿಕ್ಕು ; ದುಃಖಕ್ಕೊಳಗಾಗು ; ವಿಪತ್ತಿಗೆ ಬೀಳು. (ಆಟದಲ್ಲಿ) ಸೋಲು, ಬೀಳು]. **Griévance** ಗ್ರೀವನ್ಸ (ನಾ.) ಅಸಮಾಧಾನಕ್ಕೆ, ನಿಶ್ಚಯವಾಗಿಯಾಗಲಿ ಕಲ್ಪಿಸಿಕೊಂಡಾಗಲಿ, ಇರಬಹುದಾದ ಕಾರಣ ; ಅಸಮಾಧಾನ ಕಾರಣ ; ಅನ್ಯಾಯ ಭಾವನೆ; ಮನದುಬ್ಬಸ ; ಸಂಕಟ ; ದೂರು ; ಕುಂದು ಕೊರತೆಗಳು ; ಬೇಗೆ ; ಬೇಗುದಿ ; ಕಷ್ಟನಿಷ್ಠುರ. **Grieve** (ಕ್ರಿ.) ಸಂತಾಪ, ದುಃಖ, — ಕೊಡು, ಪಡು ; ಕೊರಗಿಸು ; ಕೊರಗು ; ಅಳಲಿಸು ; ಅಳಲು (*At*, *for*, *about*, *over* ಉಪ. ದೊಡನೆ). **Griévous** (ಗು.) ಬಹಳ ಕಷ್ಟ, ತೊಂದರೆ, ವಿಪತ್ತು, — ತರುವ ; ಕೆಡುಕು ಮಾಡುವ ; ದುಃಖಕರ. (ನೋವು, ಮೊ.) ತೀವ್ರ ; ತಾಳಲಾಗದ ; ದುರ್ಭರ. ದೂಷಣೀಯ ; ಘೋರ ; ಪರಮ ಪಾತಕದ. **Griévously** (ಕ್ರಿ. ವಿ.)

Griévance, etc. **Grief** ನೋಡಿ.

Griff(in[1]**)** ಗ್ರಿಫ್, ಗ್ರಿಫಿನ್ (ನಾ.) (ಆಂ. ಇಂ.) ಇಂಡಿಯಾಕ್ಕೆ ಹೊಸ ದಾಗಿ ಬಂದ ಐರೋಪ್ಯ (ಹಿಂದೂ ದೇಶೀಯರ ನಡೆ ನುಡಿಗಳನ್ನು ತಿಳಿಯದವನು) ; ಹೊಸಬ ; ಅನನುಭವಿ ; ತಿಳಿಗೇಡಿ ; ಗುಗ್ಗು. **Gríffinage** (ನಾ.) — ಸ್ಥಿತಿ ; (ಐರೋಪ್ಯನಿಗೆ) ಇಂಡಿಯಾ ವಾಸದ ಮೊದಲನೆಯ ವರ್ಷ.

Gríffin[2] ಗ್ರಿಫಿನ್, **Gríffon**[1], **Grýphon** ಗ್ರಿಫನ್ (ನಾ.) ಹದ್ದಿನ ತಲೆಯೂ ರೆಕ್ಕೆಗಳೂ, ಸಿಂಹದ ಒಡಲೂ, ಉಳ್ಳ(ದ್ದೆಂದು ಗ್ರೀಕರು ನಂಬಿದ್ದ) ಒಂದು ಪೌರಾಣಿಕ ಪ್ರಾಣಿ : 'ಗ್ರಿಫಿನ್'. (Griffon) ಒಂದು ಜಾತಿಯ ರಣಹದ್ದು (= G.-vulture)

Gríffon[2] ಗ್ರಿಫನ್ (ನಾ.) Terrier ಎಂಬ ನಾಯನ್ನು ಹೋಲುವ ಒರಟು ಕೂದಲಿನ ಒಂದು ನಾಯಿಜಾತಿ.

Grig ಗ್ರಿಗ್ (ನಾ.) ಸಣ್ಣ ಹಾವುಮೀನು; ಮಿಡತೆಯಂಥ ಒಂದು ಹುಳು; ಚಿಮ್ಮಂಡೆ (Merry, lively, as a g.)

Grill[1] ಗ್ರಿಲ್ (ಕ್ರಿ., ನಾ.) ಕಬ್ಬಿಣದ ಸರಳುಚೌಕಟ್ಟಿನಮೇಲೆ ಸುಡು (ಸ. ಕ., ಅ. ಕ. ಸಹ). (ರೂಪ.) ಸುಡುವುದರಿಂದ ಚಿತ್ರಹಿಂಸೆಕೊಡು ; ತೀವ್ರ ಶಾಖಕ್ಕೆ ಗುರಿಮಾಡು. (ಅಮೆ. ಸಂ.) (ಮು., ಪೋಲೀಸಿನವರು) ಬಹುವಾಗಿ ಪ್ರಶ್ನೆ ಕೇಳಿ ಹಿಂಸಿಸು ; — ಹಿಂಸೆಗೆ ಗುರಿಪಡಿಸು. (ಸಿಂಪು, ಮೊ. ನ್ನು) ಚಿಪ್ಪಿನೊಂದಿಗೆ ಬೇಯಿಸು. (ನಾ.) ಸರಳು ಕಾವಲಿಯಮೇಲೆ ಸುಟ್ಟು ತಯಾರಿಸಿದ ಆಹಾರ ; ಮಾಂಸದ ಹೋಳು, ಮೊ. ನ್ನು ಸುಟ್ಟು, ಬಡಿಸುವ ಕೋಣೆ (= G.-room). = Gridiron. **Grillage** ಗ್ರಿಲೆಜ್ (ನಾ.) ಹುಸಿ ನೆಲದಲ್ಲಿ ಕಟ್ಟಡಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಳಹದಿಯಾಗಿರಲು ಉಪಯೋಗಿಸುವ ಅಡ್ಡತೊಲೆಗಳ ಭಾರವಾದ ಚೌಕಟ್ಟು ; ತೊಲೆಗಳ ಹದಿಗಟ್ಟು. **Grille, Grill**[2] ಗ್ರಿಲ್ (ನಾ.) ಕಂಬಿ ಚೌಕಟ್ಟು ; ಅಡ್ಡಕಂಬಿಗಳ ಮರೆ, ತೆರೆ (ಮು., ಬಂದವರನ್ನು ನೋಡುವುದಕ್ಕಾಗಿ ಅನುಕೂಲಿಸುವಂತೆ ಬಾಗಿಲಿಗೆ ಹಾಕಿರುವದು, ಮೊ.). (ಮಿನುಕೃಷಿ) ಮೀನುಮೊಟ್ಟೆಗಳನ್ನು ಮರಿಮಾಡುವ ಚೌಕಟ್ಟು. **Grilled** (ಗು.)

Grillage, Grille, etc. **Grill** ನೋಡಿ.

Grim ಗ್ರಿಮ್ (ಗು.) ಕಠಿನ ; ನಿರ್ದಯ ; ಕ್ರೂರ. ಉರಿ ಮೋರೆಯ ; ಉಗ್ರಮುಖದ ; ಬಿರುಸಾದ; ವಿಕೃತ ರೂಪಿನ; ಘೋರ. (ಅನೇಕ ವೇಳೆ ಮೃತ್ಯುವಿನ ವಿಷಯದಲ್ಲಿ) ಕರಾಳ; ರೌದ್ರ (Hold on like g. death ಘೋರ ಮೃತ್ಯುವಿನಂತೆ ಬಿಗಿಯಾಗಿ ಹಿಡಿದುಕೊ). ಅನಿಷ್ಟ; ಭಯಂಕರ ; ನಿರುತ್ಸಾಹಕ (Has a g. truth in it ಅದರಲ್ಲಿ ಒಂದು ಕಠೋರ ಸತ್ಯವಿದೆ. A g. smile ಕೇಡಿನ, ವಿಕಾರದ, ದುರಭಿಪ್ರಾಯದ, — ಮುಗುಳ್ನಗೆ. G. laughter, pastime ಭಯಂಕರವಾದ ನಗು ; ವಿಕಟಾಟ್ಟಹಾಸ ; ವಿಕಟ ವಿಲಾಸ). **Grímly** (ಕ್ರಿ. ವಿ.); **Grímness** (ನಾ.)

Grimáce ಗ್ರಿಮೇಸ್ (ನಾ., ಕ್ರಿ. ಅಕ.) (ಕಿರುಕುಳದ ಅನುಭವ, ಜುಗುಪ್ಸೆ, ಮೊ. ನ್ನು ತೋರಿಸುವ) ಸೊಟ್ಟ ಮೋರೆ, ಗಂಟು ಮೋರೆ, ಸಿಡಿ ಮೋರೆ. (ನಗುವನ್ನುಂಟುಮಾಡುವ) ಹಲ್ಲುಕಿರಿತ ; ಮುಖ ಚೇಷ್ಟೆ; ಕಪಿ ಮೋರೆ. ಸೋಗಿನ ಮುಖಭಾವ ; ನಟನೆ. (ಕ್ರಿ.) ಮುಖ ಸೊಟ್ಟಮಾಡಿಕೊ ; ಹಲ್ಲು ಕಿರಿ ; ಅಣಕಿಸು. **Grimácer** (ನಾ.) ; **Grimácier** (ನಾ.) = Grimacer.

Grimálkin ಗ್ರಿಮ್ಯಾ(ಮಾ)ಲ್ಕಿನ್ (ನಾ.) ಮುದಿ (ಹೆಣ್ಣು) ಬೆಕ್ಕು. (ತುಚ್ಛವಾಗಿ) ಹೊಟ್ಟೆಕಿಚ್ಚಿನ, ಛಲದ, ಮಾತ್ಸರ್ಯದ, ದರ್ಪದ, —ಮುದುಕಿ.

Grime ಗ್ರೈಮ್ (ನಾ., ಕ್ರಿ. ಸಕ.) (ಮೇಲ್ಮೈಯಲ್ಲಿ, ಮು., ಚರ್ಮದಲ್ಲಿ, ಹತ್ತಿಕೊಂಡಿರುವ) ಇಲ್ಲಣ, ಮಸಿ, ಕೊಳೆ, ಕಶ್ಮಲ. (ಕ್ರಿ.) ಮಸಿ ಹಚ್ಚು; ಕಪ್ಪು ಬಳಿ ; ಕೊಳೆ ಮಾಡು ; ಮಲಿನ ಮಾಡು. **Grímy** (ಗು.) ; **Gríminess** (ನಾ.)

Grimm's law. **Law** ನೋಡಿ.

Grin ಗ್ರಿನ್ (ಕ್ರಿ., ನಾ.) (ನೋವಿನಲ್ಲಿ, ಅಥವಾ ಬಲಾತ್ಕಾರದ, ತಡೆಯಿಲ್ಲದ, ತಿಳಿಗೇಡಿತನದ, — ನಗುವಿನಲ್ಲಿ) ಹಲ್ಲು ಬಿಡು, ಹಲ್ಲು ಕಿರಿ [(*At* ಉಪ. ದೊಡನೆ). G. & bear it (ನೋವು, ಮೊ. ನ್ನು) ಯತ್ನವಿಲ್ಲದುದರಿಂದ ತಾಳಿಕೊ, ಸಹಿಸಿಕೊ. G. like Cheshire cat ಅರ್ಥವಿಲ್ಲದೆ ಅಥವಾ ಅಕಾರಣವಾಗಿ ಸದಾ ಹಲ್ಲು ಕಿರಿಯುತ್ತಿರು]. (ತಿರಸ್ಕಾರವನ್ನು, ಸಮಾಧಾನವನ್ನು) ಹಲ್ಲು ಕಿರಿದು ಸೂಚಿಸು, ವ್ಯಕ್ತಪಡಿಸು. (ನಾ.) ಹಲ್ಲು ಕಿರಿಯುವುದು ; ಹಲ್ಲು ಕಿರಿತ (On the g., On the broad g. ದೊಡ್ಡದಾಗಿ ಹಲ್ಲು ಕಿರಿದು)

Grind ಗ್ರೈಂಡ್ (ಕ್ರಿ. ; ಭೂತ., ಭೂ. ಕೃ. Ground ಗ್ರೌಂಡ್) ಬೀಸುವ ಕಲ್ಲಿನಿಂದ ಅಥವಾ ಹಲ್ಲುಗಳಿಂದ ನೆಗ್ಗಿ ಪುಡಿ ಮಾಡು ; ಅರೆ ; ಬೀಸು ; ಬೀಸಿ, ಹಿಟ್ಟು, ಪುಡಿ, ಮಾಡು (ಅನೇಕ ವೇಳೆ *down, small, to pieces, into dust*, ಮೊ. ಪದದೊಡನೆ). ಪುಡಿಯಾಗು ; ಬೀಸಲಾಗು (Will not g. fine ನುಣ್ಣಗೆ ಪುಡಿಯಾಗುವುದಿಲ್ಲ). ಕಾಡು ; ಪೀಡಿಸು ; ಹಿಂಸಿಸು ; ಉಪದ್ರವ ಕೊಡು ; ದಬ್ಬಾಳಿಕೆ ನಡಸು ; ಅರೆದುಬಿಡು ; ಸುಲಿದು, ತೆರ ಹೊರಿಸಿ, ತೊಂದರೆಪಡಿಸು [(ಅನೇಕ ವೇಳೆ *down* ಉಪ. ದೊಡನೆ). A grinding tyranny ಅರೆದುಬಿಡುವ ದಬ್ಬಾಳಿಕೆ ; ಯಾತನೆ ಕೊಡುವ ಪ್ರಭುತ್ವ ; ಪೀಡಕ ಪ್ರಭುತ್ವ. G. the faces of the poor ಬಡವರನ್ನು ತುಳಿ, ಅರೆದುಬಿಡು, ಪೀಡಿಸು]. ಮಸೆ ; ಸಾಣೆ ಹಿಡಿ ; ಉಜ್ಜಿ ನಯ ಮಾಡು, ಚೂಪು ಮಾಡು [Has an axe to g. (Axe ನೋಡಿ). G. lenses, diamonds, etc. ಲೆನ್ಸು, ವಜ್ರ, ಮೊ. ನ್ನು ಉಜ್ಜು, ಸಾಣೆ ಹಿಡಿ]. (ಬೀಸುವ ಕಲ್ಲಿನಿಂದ) ಬೀಸು. (ವಾದ್ಯ, ಮೊ. ಗಳ) ಹಿಡಿ ತಿರುಗಿಸು. ಏಕಪ್ರಕಾರವಾಗಿ, ವಿವಿಧತೆಯಿಲ್ಲದೆ, ದುಡಿ, ಕಷ್ಟಪಡು. ಕಷ್ಟಪಟ್ಟು ಓದು, ವಿದ್ಯೆ ಕಲಿ ; (ಪಾಠವಿಷಯವನ್ನು, ವಿದ್ಯಾರ್ಥಿಗೆ) ಅರೆದು ಹೊಯ್ಯಿ ; ಕಷ್ಟಪಟ್ಟು ಕಲಿಸು (*In* ಉಪ. ದೊಡನೆ). ಕಿರುಗುಟ್ಟುವಂತೆ ಉಜ್ಜು, ತಿಕ್ಕು, ಮಸೆ (*On, into, against* ಉಪ. ದೊಡನೆ. Ship was grinding on rocks ಹಡಗು ಬಂಡೆಗಳಿಗೆ ತೀಡುತ್ತಿದ್ದಿತು, ಮಸೆಯುತ್ತಿದ್ದಿತು). ಕಟ ಕಟನೆ (ಹಲ್ಲು) ಮಸೆ, ಕಡಿ (G. out an oath ಹಲ್ಲು ಹಲ್ಲು ಕಡಿಯುತ್ತ ಶಪಿಸು, ಶಪಥ ಮಾಡು). **Gríndstone** (ನಾ.) (ಅರೆಯುವುದಕ್ಕೆ) ಬೀಸುವ ಕಲ್ಲು ; (ಮೆರುಗು ಕೊಡುವುದಕ್ಕೆ) ಸಾಣೆಕಲ್ಲು ; (ಮಸೆಯುವುದಕ್ಕೆ) ಮಸೆಗಲ್ಲು (Hold, Keep, one's nose to the g. ಸ್ವಲ್ಪವೂ ಬಿಡುವಿಲ್ಲದೆ ಕೆಲಸ ಮಾಡಿಸು ; ಸದಾ ದುಡಿಸು) ; ಸಾಣೆಕಲ್ಲು, ಮೊ. ಕ್ಕಾಗಿ ಉಪಯೋಗಿಸುವ ಕಲ್ಲು ಜಾತಿ. **Grínder** (ನಾ.) ದವಡೆಹಲ್ಲು ; ಅರೆಯುವ ಹಲ್ಲು. ಬೀಸುವ, ಹಿಟ್ಟುಮಾಡುವ, ಸಾಣೆ ಹಿಡಿಯುವ, — ಯಂತ್ರ ; ಬೀಸುವ ಕಲ್ಲಿನ ಮೇಲಿನ ಹೋಳು. ಬೀಸುವವನು ; ಅರೆಯುವವನು ; ಸಾಣೆಗಾರ (ಮು., ಸಮಾಸಗಳಲ್ಲಿ : Organ, Knife, -g. ವಾದ್ಯ ಬಾಜಿಸುವವನು, ಚೂರಿ ಸಾಣೆಹಿಡಿಯುವವನು). ಉರುಹೊಡೆಯುವವನು ; ತಲೆಗೆ ಗಿಡುಗುವವನು. ಕೆಲಸಗಾರರಿಗೆ, ಆಳುಗಳಿಗೆ, ಬೆವರು ಹಿಡಿಸುವವನು. **Gríndery** (ನಾ.) ಜೋಡು ಹೊಲಿಯುವವನ, ಚಮ್ಮಾರನ, ಎಲ್ಲ ಬಗೆಯ ಸಲಕರಣೆಗಳು. (ಆಯುಧ, ಮೊ. ನ್ನು) ಸಾಣೆ ಹಿಡಿಯುವ ಸ್ಥಳ ; ಮಸೆಯೆಡೆ.

Grind (ನಾ.) ಬೀಸುವುದು ; ಉಜ್ಜುವುದು ; ತಿಕ್ಕುವುದು ; ಸಾಣೆ ಹಿಡಿಯುವುದು ; ಅರೆತ ; ಮಸೆತ. ಕಷ್ಟವಾದ, ಬೇಸರ ಹಿಡಿಸುವ, ಒಂದೇ ತೆರದ, ಕೆಲಸ, ದುಡಿಮೆ. ವ್ಯಾಯಾಮಕ್ಕಾಗಿ ನಡೆಯುವುದು ; ವ್ಯಾಯಾಮ ಸಂಚಾರ. (ಹಳ್ಳಗಳು, ಬೇಲಿ, ಮೊ. ನ್ನು ಹಾರಿ ಓಡಬೇಕಾದ) ಕುದುರೆಯ ಜೂಜು. (ಕೇಂಬ್ರಿಡ್ಜ್) ದೋಣಿ ದಾಟು ; ಕಡವು.

Grip[1] ಗ್ರಿಪ್ (ನಾ., ಕ್ರಿ.) ಹಿಡಿ ; ಭದ್ರವಾಗಿ ಹಿಡಿ(ದಿರುವುದು) ; (ಬಿಗಿ) ಹಿಡಿತ ; ಬಲ್ವಿಡಿ (ಗ್ರಾಂ.) (At, come to, grips ಮಲ್ಲಾಮಲ್ಲಿಯಾಗಿ ಕೈಕೈ ಹತ್ತು). ಹಿಡಿಯುವ ಶಕ್ತಿ ; ಗ್ರಹಣ ಶಕ್ತಿ. ಕೈಹಿಡಿತದ ವರಿಸೆ, ಪಟ್ಟು. ಸ್ವಾಧೀನ ; ವಶ ; ಹತೋಟಿ. ಗಮನವನ್ನು ಸೆಳೆದು ಹಿಡಿಯುವ ಶಕ್ತಿ ; ಆಕರ್ಷಣ ಶಕ್ತಿ. ಯಂತ್ರ, ಮೊ. ಗಳಲ್ಲಿರುವ ಕಚ್ಚುವ ಭಾಗ ; ಆಯುಧ ಮೊ. ಗಳ ಹಿಡಿತದ ಭಾಗ ; ಹಿಡಿ. (ಅಮೆ. ಸಂ.) ಪ್ರಯಾಣಿಕನ ಹಿಡಿಚೀಲ (= Gripsack). (ಕ್ರಿ.) ಬಿಗಿಯಾಗಿ, ಭದ್ರವಾಗಿ, ಬಲವಾಗಿ, ಹಿಡಿ(ದುಕೊ), ಕಚ್ಚು ; ಬಿಗಿ ಹಿಡಿ ; ಗಮನ ಸೆಳೆ. **G.-brake** ಕೈಯಿಂದ ಭದ್ರವಾಗಿ ಹಿಡಿದು ಹಾಕುವ ಬಿರಿ, ತಡೆ. **Grípper** (ನಾ.)

Grip[2] ಗ್ರಿಪ್ (ನಾ.) ತೆರೆದ ಸಣ್ಣ ಚರಂಡಿ, ಮೋರಿ.

Gripe ಗ್ರೈಪ್ (ಕ್ರಿ., ನಾ.) ಭದ್ರವಾಗಿ ಹಿಡಿ(ದುಕೊ) ; ಬಿಗಿ ಹಿಡಿ. ಹಿಂಡು; ಉಪದ್ರವ ಕೊಡು ; ಹಿಂಸಿಸು ; ಹೊಟ್ಟೆ ನುಲಿ, ನೋಯಿ ; ಹೊಟ್ಟೆಶೂಲೆಯುಂಟುಮಾಡು. (ನಾವೆ) (ದೋಣಿಯನ್ನು) ಹಗ್ಗಗಳಿಂದ ಕಟ್ಟು, ಬಿಗಿ. (ಹಡಗು) ಚುಕ್ಕಾಣಿ ತಿರುಗಿಸಿದರೂ ಗಾಳಿಯ ಕಡೆಗೆ ಬರು. (ನಾ.) ಬಿಗಿ ಹಿಡಿಯುವುದು ; ಬಿಗಿ ಹಿಡಿತ. ಹಿಡಿತ ; ವಶ ; ಸ್ವಾಧೀನ (In the g. of — ಹಿಡಿತದಲ್ಲಿ, ಅಧೀನದಲ್ಲಿ). (ಬ. ವ.) ಹೊಟ್ಟೆ ಶೂಲೆ, ಹೊಟ್ಟೆನುಲಿತ. (ಆಯುಧ, ಮೊ. ಗಳ) ಹಿಡಿ, ಹಿಡಿಕೆ. (ನಾವೆ : ದೋಣಿಯನ್ನು ಅದರ ಸ್ಥಾನದಲ್ಲಿ ಬಿಗಿದು ನಿಲ್ಲಿಸುವ) ಹಗ್ಗಗಳು. **G.-water** ಕುದುರೆಯ ಹೊಟ್ಟೆಶೂಲೆಗೆ ಕೊಡುವ ಒಂದು ದ್ರವ ಔಷಧ.

Grippe (F) ಗ್ರಿಪ್ (ನಾ.) 'ಇನ್‌ಫ್ಲುಯೆನ್ಜಾ' ರೋಗ.

Grísly ಗ್ರಿಸ್ಲಿ (ಗು.) ಬಹು ಭೀತಿಯನ್ನುಂಟುಮಾಡುವ ; ಘೋರವಾದ ; ಮೂಢ ಭಯ ಹುಟ್ಟಿಸುವ.

Grist[1] ಗ್ರಿಸ್ಟ್ (ನಾ.) ಬೀಸುವ ಕಾಳು, ಧಾನ್ಯ [Brings g. to the

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

mill (ವ್ಯಾಪಾರ, ಕಸಬು) ಲಾಭ ತರುತ್ತದೆ. All is g. that comes to his mill ಬಂದದ್ದೆಲ್ಲ ಲಾಭ). ಸಾರಾಯಿ ಮಾಡುವುದಕ್ಕಾಗಿ ಜಜ್ಜಿಟ್ಟಿರುವ ಮೊಳೆಯಿಸಿದ ಧಾನ್ಯ.

Grist² ಗ್ರಿಸ್ಟ್ (ನಾ.) (ನೂಲಿನ, ಹಗ್ಗದ) ಗಾತ್ರ, ದಪ್ಪ.

Grístle ಗ್ರಿಸ್‌ಲ್ (ನಾ.) (ಕಶೇರುಕ ಪ್ರಾಣಿಗಳಲ್ಲಿ) ದೃಢತೆಯೂ ನಮನಶೀಲತೆಯೂ ಉಳ್ಳ, ನಸು ಬಿಳುಪು ಬಣ್ಣದ, ಒಂದು ಅಂಗರಚನಾ ಸಾಮಗ್ರಿ: ಮೃದ್ವಸ್ಥಿ; ಮೆಲ್ಲೆಲುಬು [In the g. ಬಲಿಯದ; ಎಳಸಾದ (ಮಕ್ಕಳಲ್ಲಿ ಎಲುಬಿಗೆ ಬದಲಾಗಿ ಮೃದ್ವಸ್ಥಿಯಿರುವ ಕಾರಣದಿಂದ)]. **Grístly** (ಗು.)

Grit ಗ್ರಿಟ್ (ನಾ., ಕ್ರಿ.) (ಮು., ತೊಂದರೆ ಕೊಡುವ ಅಥವಾ ಯಂತ್ರಾದಿಗಳಲ್ಲಿ ಅಡಚಿಕೊಳ್ಳುವ) ಕಲ್ಲಿನ, ಮರಳಿನ, ಸಣ್ಣ ಕಣಗಳು. (ಬೀಸುವ ಕಲ್ಲು, ಸಾಣೆಕಲ್ಲು, ಮೊ. ಕ್ಕೆ ಉಪಯೋಗಿಸುವ) ಒರಟು ಮರಳುಗಲ್ಲು (= **Grítstone**). ಕಲ್ಲಿನ ಎಳೆ, ರಚನೆ. (ಬಳ. ಮಾ.) ಗಟ್ಟಿತನ; ಪಿಡುಗುತನ; ದಿಟ್ಟತನ; ಸತ್ತ್ವ; ಸ್ಥೈರ್ಯ; ತಡೆತ; ಧಾತಿ. (ಕ್ರಿ.) ಕರಕರಗುಟ್ಟು(ಟ್ಟಿಸು); ಕರಕರಗುಟ್ಟುತ್ತ, — ಹೋಗು, ಚಲಿಸು. (ಹಲ್ಲು) ಮಸೆ, ಕಡಿ. **Grítty** (ಗು.); **Gríttiness** (ನಾ.)

Grízzled ಗ್ರಿಜ್‌ಲ್ಡ್ (ಗು.) ಬೂದು(ಬಣ್ಣದ); ನರೆ ಬಣ್ಣದ; ನರೆಗೂದಲಿನ; ನರೆತ. **Grízzly** (ಗು., ನಾ.) ನಸು ಬೂದು ಬಣ್ಣದ; ನರೆ ಬಣ್ಣದ; ನರೆಗೂದಲಿನ (G. bear ಉ. ಅಮೆರಿಕದ ಭಯಂಕರವಾದ ಒಂದು ದೊಡ್ಡ ಕರಡಿಜಾತಿ; ಬೂದು ಕರಡಿ) (ನಾ.) ಬೂದು ಕರಡಿ (= G. bear)

Groan ಗ್ರೋನ್ (ಕ್ರಿ., ನಾ.) ನೋವು, ದುಃಖ, ಅಸಮ್ಮತಿ, — ಇವನ್ನು ಸೂಚಿಸುವ, ಆಳವಾದ, ಅಸ್ಪಷ್ಟ, ಧ್ವನಿ ಮಾಡು; ಮುಲುಕು; ನರಳು (G. inwardly ಒಳಗೊಳಗೇ ಕೊರಗು, ವ್ಯಥೆಪಡು). ಮುಲುಕುತ್ತ ಹೇಳು, ಆಡು (*Out* ಉಪ. ದೊಡನೆ). ಪೀಡಿತನಾಗಿರು; ಸಂಕಟಪಡು; ಹೊರಲಾರದೆ ನರಳು [(*Under, beneath, with* ಉಪ. ದೊಡನೆ). G. under injustice ಅನ್ಯಾಯ ತಡೆಯಲಾರದೆ ನರಳು. Shelf groans with books ಬಿಡುವಿನಮೇಲೆ ಅದು ಹೊರಲಾರದಷ್ಟು ಪುಸ್ತಕಗಳಿವೆ. Groaning board ಭಕ್ಷ್ಯ ಭೋಜ್ಯಾದಿಗಳು ಇಡಿಕಿರಿದ ಊಟದ ಮೇಜು]. ಅತ್ಯಾಶೆಯಿಂದ ಅಪೇಕ್ಷಿಸುತ್ತಿರು, ಹಂಬಲಿಸು (*For* ಉಪ. ದೊಡನೆ). [G. down (ಭಾಷಣಕಾರನನ್ನು) ನರಳಾಟದ ಕೂಗಿನಿಂದ ಬಾಯಿ ಮುಚ್ಚಿಸು]. (ನಾ.) ಮುಲುಕು; ನರಳಿಕೆ. **Groáningly** (ಕ್ರಿ. ವಿ.)

Groat ಗ್ರೋಟ್, ಗ್ರಾಟ್ (ನಾ.) (ಚರಿತ್ರೆ) (ಇಂಗ್ಲೆಂಡಿನಲ್ಲಿ ಹಿಂದೆ ಚಲಾವಣೆಯಲ್ಲಿದ್ದ ೪ ಪೆನಿ ಬೆಲೆಯ) ಒಂದು ಬೆಳ್ಳಿಯ ನಾಣ್ಯ; ಅಲ್ಪ ಮೊತ್ತ (Don't care a g. ಕವಡೆಯಷ್ಟೂ, ಕಾಸಿನಷ್ಟೂ, ಲಕ್ಷ್ಯಮಾಡೆನು)

Groats ಗ್ರೋಟ್ಸ್, ಗ್ರಾಟ್ಸ್ (ನಾ., ಬ. ವ.) ಹೊಟ್ಟು ಕಳೆದ (ಕಲವು ವೇಳೆ ನುಚ್ಚುಮಾಡಿದ) ಧಾನ್ಯ (ಮು., 'ಓಟ್ಸ್' ಧಾನ್ಯ)

Gróbian ಗ್ರೋಬಿಯನ್ (ನಾ.) ಎಡ್ಡ ದಡ್ಡನಾದ ಮೈಗಳ್ಳ.

Grócer ಗ್ರೋಸರ್ (ನಾ.) ಸಂಬಾರ ಜಿನಸಿ, ಒಣ ಹಣ್ಣುಗಳು, ಸಕ್ಕರೆ, ಮೊ. ಗೃಹಕೃತ್ಯಕ್ಕೆ ಬೇಕಾದ ಚಿಲ್ಲರೆ ಸಾಮಾನುಗಳನ್ನು ಮಾರುವವನು; ಕಿರಾಣಿ ವ್ಯಾಪಾರಿ; ಪಲ ಸರಕು ವ್ಯಾಪಾರಿ (G.'s itch ಸಕ್ಕರೆಯನ್ನು ಮುಟ್ಟಾಡುವುದರಿಂದ ಬರುವ ಕಜ್ಜಿ, ಕರಪಾಣಿ). **Grócery** (ನಾ.; ಬ. ವ., -ies —ರೀಸ್) ಪಲ ಸರಕು; ಕಿರಾಣಿ ಸಾಮಾನು. (ಬ. ವ. ದಲ್ಲಿ) ಅನೇಕ ತೆರದ ಕಿರಾಣಿ ವ್ಯಾಪಾರ. (ಅಮೆ. ಸಂ.) ಕಿರಾಣಿ ಯಂಗಡಿ.

Grog ಗ್ರಾಗ್ (ನಾ., ಕ್ರಿ.) ನೀರು ಬೆರಸಿದ ಮದ್ಯ; 'ಗ್ರಾಗ್' ಮದ್ಯ. 'ಗ್ರಾಗ್' ಕುಡಿತವುಳ್ಳ ಸಂತೋಷಕೂಟ. (ಕ್ರಿ.) 'ಗ್ರಾಗ್' ಮದ್ಯ ಕುಡಿ. (ಬರಿದಾದ ಮದ್ಯದ ಪೀಪಾಯಿಗೆ) ಬಿಸಿನೀರು ಹಾಕಿ ಬಿಟ್ಟಿದ್ದು, ಅದರಿಂದ ಮದ್ಯವನ್ನು ಸಂಗ್ರಹಿಸು. **G.-blossom** ಅತಿಕುಡಿತದಿಂದ ಮೂಗಿನಮೇಲೆ ಕಾಣಿಸಿಕೊಳ್ಳುವ ಮೊಡವೆ ಅಥವಾ ಕೆಂಪು ರಂಗು.

Gróggy ಗ್ರಾಗಿ (ಗು.) ಕುಡಿದ; ಅಮಲೇರಿದ; ಕುಡಿತಕ್ಕೆ ಬಿದ್ದ. (ಕುದುರೆ) ಮುಂಗಾಲುಗಳಲ್ಲಿ ತ್ರಾಣವಿಲ್ಲದ; ತತ್ತರಿಸುವ; ಸ್ಥಿರತೆ, ಸ್ತಿಮಿತತೆ, ಇಲ್ಲದ; ಅಳ್ಳಾಡುವ. **Grógginess** (ನಾ.)

Groin ಗ್ರಾಯ್‌ನ್ (ನಾ., ಕ್ರಿ. ಸಕ.) ಕಿಬ್ಬೊಟ್ಟೆಯ ತಳಭಾಗಕ್ಕೂ ತೊಡೆಯ ಮೇಲ್ಭಾಗಕ್ಕೂ ಮಧ್ಯೆ ಇರುವ ಹಳ್ಳ, ಮಡಿಕೆ; ತೊಡೆ ಸಂದು. (ವಾ. ಶಾ.) ಎರಡು ಚಾವಣಿ ಕಮಾನುಗಳು ಒಂದಕ್ಕೊಂದು ಸಂಧಿಸಿ ಆದ ಅಂಚು; ಚಾವಣಿ ಕಮಾನುಗಳ ಕೂಡಂಚು; ಇದರ ಮೇಲಿನ ಪಟ್ಟಿ. (ಕ್ರಿ.) ಕೂಡುಕಮಾನುಗಳನ್ನಿಟ್ಟು ಚಾವಣಿ ಕಟ್ಟು. **Groining** (ನಾ.)

Groom ಗ್ರೂಮ್ (ನಾ., ಕ್ರಿ. ಸಕ.) (ಇಂಗ್ಲೆಂಡಿನಲ್ಲಿ) ಅರಮನೆಯ ಇಲಾಖೆಯ ಒಬ್ಬ ಅಧಿಕಾರಿ (G. in waiting, etc.); ಕುದುರೆಗಳನ್ನು ನೋಡಿಕೊಳ್ಳುವವನು; ಕುದುರೆಯ ಆಳು; ಕಾಸ್ತಾರ; ಸಾಹಣಿ. (ವಿರ. ಪ್ರ.) ಮದವಣಿಗ. [**Groómsman** ಸಂಪ್ರದಾಯಾನುಸಾರವಾಗಿ ಮದುವೆಯಲ್ಲಿ ಮದವಣಿಗನೊಡನಿರಬೇಕಾದ ಅವಿವಾಹಿತ ಸ್ನೇಹಿತ; ಅಳಿಯನ ಗೆಳೆಯ]; (ಕ್ರಿ.) ಕುದುರೆಗೆ ಮಾಲೀಸು ಮಾಡು; — ದಾಣಿ, ಮೇವು, ತಿನ್ನಿಸು; —ಯ ಉಸ್ತುವಾರಿ ನೋಡಿಕೊ. (ಭೂ. ಕೃ., ಮನುಷ್ಯರ ವಿಷಯದಲ್ಲಿ) Well-groomed (ಮು., ಕೂದಲು, ಗಡ್ಡ, ಮೊ. ನ್ನು ಚೆನ್ನಾಗಿ ಬಾಚಿಕೊಂಡು) ಅಂದ ಮಾಡಿಕೊಂಡ, ನೀಟು ಮಾಡಿಕೊಂಡ.

Groove ಗ್ರೂವ್ (ನಾ., ಕ್ರಿ. ಸಕ.) (ಮು., ಮಾರ್ಗ ನಿರ್ದೇಶಕ್ಕಾಗಿ ಅಥವಾ ಅದೇ ಆಕಾರದ ಉಬ್ಬಿನ ಹೊಂದಿಕೆಗಾಗಿ, ಮರ, ಲೋಹ, ಮೊ. ಗಳಲ್ಲಿ ಮಾಡಿರುವ) ಗಾಡಿ, ತೋಡು. (ರೂಢಿಯ) ಜಾಡು. ಅಭ್ಯಾಸದ ನಡವಳಿಕೆ; ರೂಢಿಬಿದ್ದ ಕಾರ್ಯಾಚರಣೆ; ನಿತ್ಯ ವಿಧಾನ; ಸಂಪ್ರದಾಯ; ವೃದ್ಧಾಚಾರ. ಕೊರಕಲು. (ಕ್ರಿ.) ಗಾಡಿ ಮಾಡು, ತೋಡು. **Groóvy** (ಗು.); **Grooviness** (ನಾ.)

Grope ಗ್ರೋಪ್ (ಕ್ರಿ. ಅಕ.) (ಕತ್ತಲೆಯಲ್ಲಿ ಹೇಗೋ ಹಾಗೆ) ತಡಕಾಡು, ತಡವು, ತಡವರಿಸು (*For, after* ಉಪ. ದೊಡನೆ ಸಹ); ಕುರುಡನಂತೆ ಹುಡುಕಾಡು (ರೂಪ. ಸಹ). G. one's way ತಡಕಾಡುತ್ತ ನಡೆ, ದಾರಿ ಗೊತ್ತುಮಾಡಿಕೊ. ಸರಿಯಾದ ತಿಳಿವಿಲ್ಲದ್ದರಿಂದ ಎಚ್ಚರಿಕೆಯಾಗಿ ಮುಂದುವರಿ. **Grópingly** (ಕ್ರಿ. ವಿ.)

Gross¹ ಗ್ರೋಸ್ (ನಾ.) (ಬ. ವ. Gross) ೧೨ ಡಜನ್: 'ಗ್ರೋಸು' (= Small g.). Great g. ೧೨ ಗ್ರೋಸು.

Gross² ಗ್ರೋಸ್ (ಗು.) ಹುಲುಸಾಗಿ, ಗಾದಾಗಿ, ತುರುಗಾಗಿ, ಬೆಳೆದ. ಮಿತಿ ಮೀರಿ ತಿಂದು ಊದಿದ; ಗುಡಾಣ ಹೊಟ್ಟೆಯ; ಅಸಹ್ಯವಾಗಿ ಬೊಜ್ಜು ಬೆಳೆದ. ಎದ್ದು ಕಾಣುವ; ಅತಿ ಸ್ಪಷ್ಟವಾದ; ಮಹತ್ತರವಾದ. ಒಟ್ಟಿನ; ತಳ್ಳುಪಡಿಗಳು ಸೇರಿರದ; ಪೂರಾ. ದಟ್ಟ; ಸಾಂದ್ರ; ನಿಬಿಡ; ಘನ. ಅತಿ ಸೂಕ್ಷ್ಮ, ಪಾರದರ್ಶಕ, ಅವ್ಯಕ್ತ, — ಅಲ್ಲದ; ಪಾರ್ಥಿವ; ಸ್ಥೂಲ. (ಆಹಾರ) ಕೀಳ್ತರದ; ಒರಟಾದ; ಜಿಡ್ಡು ಜಿಡ್ಡಾದ; ಕೊಳಕಾದ; ಚೊಕ್ಕಟವಾಗಿಲ್ಲದ; ಅಸಹ್ಯಕರ; ಓಕರಿಕೆ ಬರಿಸುವ (G. feeder ಕೊಳಕು ಆಹಾರವನ್ನು, ಕದನ್ನವನ್ನು, ಅಸಹ್ಯಪಡದೆ ತಿನ್ನುವವನು). (ಇಂದ್ರಿಯ, ಮೊ.) ಸೂಕ್ಷ್ಮವಿಲ್ಲದ; ಜಡ; ಮಂದ. (ರೀತಿನೀತಿಗಳಲ್ಲಿ) ನಯ ನಾಜೂಕಿಲ್ಲದ; ಒರಟಾದ; ಅಸಂಸ್ಕೃತ; ಅಶ್ಲೀಲ. In (the) g. ಸಾಮಾನ್ಯವಾಗಿ; (ವಿವರಗಳಿಗೆ ಹೋಗದೆ) ಸ್ಥೂಲವಾಗಿ; ಒಟ್ಟಿನಮೇಲೆ. **Gróssly** (ಕ್ರಿ. ವಿ.); **Gróssness** (ನಾ.)

Grot ಗ್ರಾಟ್ (ನಾ.) (ಕಾವ್ಯ) = Grotto.

Grotésque ಗ್ರೊಟೆಸ್ಕ್ (ನಾ., ಗು.) (ಮನುಷ್ಯನ ಮತ್ತು ಪ್ರಾಣಿಗಳ ಆಕೃತಿಗಳನ್ನು ಎಲೆಗುಂಪಿನ ಲತಾಕೃತಿಯೊಡನೆ ಚಿತ್ರ ವಿಚಿತ್ರವಾಗಿ ಸೇರಿಸಿ ರಚಿಸಿದ) ವಿಕಟಾಲಂಕಾರ ಚಿತ್ರ ಅಥವಾ ಶಿಲ್ಪ: ವಿಕಟ ಚಿತ್ರ, ಶಿಲ್ಪ. (ರೂಢಿಯಾಗಿ) ಹಾಸಕರವಾಗಿರುವಂತೆ ವಿಕಾರಮಾಡಿದ ಆಕೃತಿ, ರಚನೆ; ವಿಕೃತಿ ಚಿತ್ರ. (ಗು.) (ವಾ. ಶಾ.) ವಿಕಟಾಲಂಕಾರ ಶೈಲಿಯ. ವಿಕಾರ, ವಿರೂಪ, — ಮಾಡಿದ; ವಿಜಾತೀಯ; ವಕ್ರವಕ್ರ. (ಅಸಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬದ್ಧತೆಯಿಂದ) ಹಾಸಕರವಾದ, ಹಾಸ್ಯಾಸ್ಪದವಾದ ; ಅಸಂಗತವಾದ ; ಅಕಟ ವಿಕಟವಾದ. **Grotésquely** (ಕ್ರಿ. ವಿ.) ; **Grotésqueness** (ನಾ.) ; **Gortésquerie** — ಸ್ಕರಿ (ನಾ.) (ಸಾಮೂಹಿಕವಾಗಿ) ವಿಕಟ ವಸ್ತುಗಳು ; ವಿಕಟ ಕಾರ್ಯ ; ವಿಲಕ್ಷಣ ಗುಣ.

Grótto ಗ್ರಾಟೊ (ನಾ. ; ಬ. ವ.. -oes, -os) ಸ್ವಾಭಾವಿಕವಾಗಿಯೇ ಆಗಿರುವ ಅಂದವಾದ ಗವಿ. ಅಲಂಕಾರವಾಗಿ ಮಾಡಿರುವ ಕೃತಕ ಗುಹೆ ; (ತಣ್ಣನೆಯ ವಿಶ್ರಾಂತಿಗೃಹಕ್ಕಾಗಿ) ಗುಹೆಯನ್ನನುಕರಿಸಿ ಸಿಂಪಿ, ಮೊ. ಗಳಿಂದ ಅಲಂಕಾರ ಮಾಡಿದ, ಕೋಣೆ, ಮೊ. ವು ; ತಣ್ಣನೆಯ ಗವಿಕೋಣೆ. **Gróttoed** (ಗು.)

Ground[1] ಗ್ರೌಂಡ್ (ನಾ.) ಭೂಮಿಯ ಮೇಲ್ಮೈ ; ಭೂಮಿ ; ನೆಲ ; (ಒಂದು ಗೊತ್ತಾದ) ಭೂಭಾಗ ; ಪ್ರದೇಶ ; ಒಂದು ಗೊತ್ತಾದ ಉದ್ದೇಶಕ್ಕಾಗಿ ಇಟ್ಟಿರುವ ಪ್ರದೇಶ, ಬಯಲು (Hunting, fishing, cricket, - g.) ; ಜಮೀನು ; (ಬ. ವ. ದಲ್ಲಿ) ಬೇಲಿ, ಮೊ. ಆವರಣ ಹಾಕಿ, ಅಲಂಕಾರಕ್ಕಾಗಲಿ ವಿಹಾರಕ್ಕಾಗಲಿ ಇಟ್ಟುಕೊಂಡಿರುವ, ಮನೆಗೆ ಸೇರಿದ ಪ್ರದೇಶ ; ಆವರಣ ; ಸುತ್ತುನೆಲ. ಸಮುದ್ರದ ತಳ [(ಈಗ ಮು., ರೂಪ.) Touch g.. ಬರಿ ಹರಟೆ, ಮೊ. ನ್ನು ಬಿಟ್ಟು ಗಟ್ಟಿವಿಷಯಕ್ಕೆ ಬಾ. Take g. (ಹಡಗು) ನೆಲ,— ಕಚ್ಚು, ಹತ್ತು]. (ಬ. ವ. ದಲ್ಲಿ) (ಮು., ಕಾಫಿಯ) ಚರಟ. (ವಿದ್ಯುತ್) ಭೂಸಂಬಂಧ (=Earth). ಆಧಾರ ; ಅಸ್ತಿಭಾರ ; ಉದ್ದೇಶ ; ಊರ್ಜಿತ ಕಾರಣ (On the g. of — ಕಾರಣದಿಂದ, ನೆಪದಿಂದ, ಆಧಾರದಮೇಲೆ, On public grounds ಸಾರ್ವಜನಿಕ ಕಾರಣಗಳಿಂದ). ಕೆಳ ಪದರ ; ತಳ ಭಾಗ. ಕಸೂತಿ ಕೆಲಸ, ವರ್ಣಚಿತ್ರ ರಚನೆ, ಮೊ. ಕ್ಕಾಗಿರುವ ಮೇಲ್ಮೈ ; ಚಿತ್ರಕೆಲಸ ಮಾಡದೆ ಉಳಿಸಿರುವ ಭಾಗ ; (ವಸ್ತುವಿನ, ಚಿತ್ರದ) ಪ್ರಧಾನ ವರ್ಣ; ಇತರ ಬಣ್ಣಗಳಿಗೆ ಆಧಾರವಾಗಿ ಅಥವಾ ಹಿನ್ನೆಲೆಯಾಗಿ ಮೊದಲು ಹಚ್ಚಿದ ಬಣ್ಣ : ಆಧಾರ ವರ್ಣ. (ಕೊರೆಯುವ ಕೆಲಸ) ಲೋಹದ ತಗಡಿನಮೇಲೆ ಅಕ್ಷರ, ಚಿತ್ರ, ಮೊ. ನ್ನು ಕೆತ್ತುವುದಕ್ಕಾಗಿ ಬಳಿಯುವ ಒಂದು ಲೇಪ (ಈ ಲೇಪದಮೇಲೆ ಬೇಕಾದ ಚಿತ್ರವನ್ನು ಸೂಜಿಯಿಂದ ಬರೆದು, ದ್ರಾವಕ ಹಾಕುವುದರಿಂದ, ರೇಖಿಸಿದ ಭಾಗವನ್ನು ಮಾತ್ರ ದ್ರಾವಕ ತಿಂದು ಚಿತ್ರ ಶಾಶ್ವತವಾಗಿ ನಿಲ್ಲುವುದು). (ಹಕ್ಕಿಗಳ ಹೆಸರುಗಳಲ್ಲಿ) ನೆಲದಮೇಲೆ ವಾಸಿಸುವ; ನೆಲದ ; ಭೂಚರ (G.-pigeon ; G.-sparrow). (ಪ್ರಾಣಿಗಳ ವಿಷಯದಲ್ಲಿ) ಬಿಲ ಕೊರೆಯುವ ; ನೆಲದಮೇಲೆ ಮಲಗುವ (G.-rat ; G.-spider ; G.-bear ಸಾಮಾನ್ಯ ಕಂದುಕರಡಿ). (ಗಿಡಗಳ ವಿಷಯದಲ್ಲಿ) ಕುರುಚಲು ; ನೆಲದಮೇಲೆ ಹಬ್ಬುವ; ಬಳ್ಳಿವರಿಯುವ (G.-pea ನೆಲಗಡಲೆ). Fall to the g., Be dashed to the g. (ಒಂದು ಹೂಟ, ಸಂಕಲ್ಪ, ಪ್ರತೀಕ್ಷೆ) ವ್ಯರ್ಥವಾಗು ; ನಿಷ್ಪ್ರಯೋಜನ ಹೊಂದು ; ಬಿದ್ದುಹೋಗು ; ಧ್ವಂಸವಾಗಿ ಹೋಗು ; ಮಣ್ಣುಗೂಡು. Break g. (Break ನೋಡಿ). Down to the g. (ಬಳ. ಮಾ.) ಎಲ್ಲ ವಿಷಯಗಳಲ್ಲೂ ; ಬುಡಮುಟ್ಟ ; ಸಂಪೂರ್ಣವಾಗಿ. Above g. ಬದುಕಿರುವ ; ಜೀವಂತವಾಗಿರುವ. Cut the g. from under one's feet ಒಬ್ಬನ ವಾದಸರಣಿಯನ್ನು ಅಥವಾ ಹೂಟಗಳನ್ನು ಮೊದಲೇ ನಿರೀಕ್ಷಿಸಿ ಅವುಗಳನ್ನು ಸಾಗದಂತೆ ಮಾಡು ; ನೆರೆ ತಪ್ಪಿಸು ; ಅಡಿಪಾಯ ಕೀಳು ; ತಳ ಕಡಿ. Cover much g. (ವಿಚಾರಣೆ, ವರದಿ, ಮೊ. ಗಳ ವಿಷಯದಲ್ಲಿ) ಬಹಳ ವಿಷಯಗಳನ್ನೊಳಕೊಂಡಿರು, ಬಹಳ ವ್ಯಾಪಕವಾಗಿರು. Stand one's g. ತನ್ನ ವಾದವನ್ನು, ಉದ್ದೇಶವನ್ನು, ಸಾಧಿಸು ; ನೆರೆ ಬಿಡದಿರು. Shift one's g. ನೆರೆ ಬದಲಾಯಿಸು, ಬದಲಿಸು. Gain g. ಮುಂದುವರಿ ; ಅಭಿವೃದ್ಧಿ ಹೊಂದು ; ಸ್ಥಿತಿ ಬಲಪಡಿಸಿಕೊ. Lose, give, g. ಹಿಮ್ಮೆಟ್ಟು ; ಹಿಂಜರಿ ; ಬಿಟ್ಟುಕೊಡು ; ಹಿಂದೆ ಬೀಳು ; ಕ್ಷೀಣಿಸು ; ಅವನತಿ ಹೊಂದು. Forbidden g. ನಿಷಿದ್ಧ, ತ್ಯಾಜ್ಯ, — ವಿಷಯ ; ಕೈ ಹಾಕಬಾರದ ವಿಚಾರ. Classic g. ಐತಿಹಾಸಿಕ, ಪ್ರಸಿದ್ಧ, —ಸ್ಥಳ. **G.-ash** 'ಆ್ಯಷ್' ಮರದ ಸಸಿ; ಇದರ ಕೈಬೆತ್ತ. **G.-bait** (ನಾ., ಕ್ರಿ., ಸಕ.) ಮೀನು ಹಿಡಿಯುವ ಕಡೆ ಮೀನನ್ನು ಆಕರ್ಷಿಸುವುದಕ್ಕಾಗಿ ತಳಕ್ಕೆಸೆದ ಎರೆ; ತಳದ ಎರೆ. ಹೀಗೆ ತಳದಲ್ಲಿ ಎರೆ ಇಡು. **G.-box** ತೋಟದ ಪಾತಿಗಳ ಅಂಚಿನಲ್ಲಿ ಬೆಳೆಸುವ 'ಬಾಕ್ಸ್' ಎಂಬ ಒಂದು ಕುರುಚಲು ಗಿಡ. **G.-colour** ಬಣ್ಣದ ಮೊದಲ ತೊಡೆತ, ಬಳಿತ ; (ಇತರ ಬಣ್ಣಗಳಿಂದ ಬರೆದ) ಚಿತ್ರಕ್ಕೆ ಹಿನ್ನೆಲೆಯಾದ ಆಧಾರ ವರ್ಣ, ನೆಲೆ ಬಣ್ಣ. **G.-fish** ನೀರಿನ ತಳದಲ್ಲಿ ವಾಸವಾಗಿರುವ ಮೀನು ; ತಳ ಮೀನು. **G.-fishing** ತಳದಲ್ಲಿ ಎರೆಯಿಟ್ಟು ಮೀನು ಹಿಡಿಯುವುದು. **G. floor** ಹೊರಗಿನ ನೆಲಮಟ್ಟದಲ್ಲಿರುವ ಕೋಣೆಗಳು, ಮೊ. ವು : ನೆಲ ಅಂತಸ್ತು (Get in on the g.-f. ಸ್ಥಾಪಕರಿಗೆ ಅನ್ವಯಿಸುವ ನಿಯಮಗಳಮೇಲೆಯೇ ಒಂದು ಸಂಘ, ಮೊ. ಕ್ಕೆ ಪ್ರವೇಶ ಪಡೆ). **G. game** ಮೊಲ, ಮೊ. ನೆಲಬೇಟೆ. **G.-ice** ನೀರಿನ ತಳದಲ್ಲಿ ಕಟ್ಟಿದ ನೀರ್ಗಲ್ಲು ; ತಳದ ನೀರ್ಗಲ್ಲು. **G. landlord** (ಮನೆ ಕಟ್ಟಿಕೊಳ್ಳಲು ಸ್ಥಳವನ್ನು ಗೇಣಿಗೆ ಕೊಟ್ಟಿರುವ) ನಿವೇಶನದ ಒಡೆಯ. **G.-man** (ಕ್ರಿಕೆಟ್, ಮೊ. ಆಟಗಳ) ಬಯಲು ಕಾಯುವವನು ; (ಆಟದ) ಮೈದಾನದ ಕಾವಲುಗಾರ. **G.-note** (ಒಂದು ಸ್ವರಗ್ರಾಮದ) ಮೂಲ (ಮಂದ್ರ) ಸ್ವರ. **G.-nut** ನೆಲಗಡಲೆ ; ಅಮೆರಿಕದಲ್ಲಿ ಇಂತಹದೇ ಒಂದು ಸಸ್ಯಜಾತಿ. **G.-plan** (ಕಟ್ಟಡದ) ತಳಕಟ್ಟು ನಕ್ಷೆ ; ಮೂಲ ರೇಖಾಕೃತಿ ; ಸಾಮಾನ್ಯ ಕಲ್ಪನೆ ; ಸ್ಥೂಲಾಕಾರ. **G.-rent** ನಿವೇಶನದ ಬಾಡಿಗೆ ; ನೆಲ ತೆರಿಗೆ ; ಮನೆದಳಗಂದಾಯ. **G.- sea** ವ್ಯಕ್ತ ಕಾರಣವಿಲ್ಲದೆ ಕ್ಷುಬ್ಧವಾದ ಸಮುದ್ರ ; ಹೊರಳ್ಗಡಲು. **Groúndsman** = G.-man. **G. swell** (ಬಹು ದೂರದ ಅಥವಾ ಕಳೆದುಹೋದ ಬಿರುಗಾಳಿಯ ಫಲವಾಗಿ, ಭೂಕಂಪದ ಫಲವಾಗಿ) ಸಮುದ್ರದಲ್ಲಿ ಕ್ಷುಬ್ಧತೆ. **G. torpedo** ಕಡಲ ತಳದಲ್ಲಿ ನೆಟ್ಟ ನೌಕಾಸ್ಫೋಟಿ ; ಹಡಗುಕೊರೆ. **Groúndwork** (ಸಾ., ರೂಪ.) ಆಧಾರ ; ತಳಪಾಯ ; ನೆಲಗಟ್ಟು. (ಒಂದು ಪದಾರ್ಥದಲ್ಲಿ ಸೇರಿರುವ) ಮುಖ್ಯಾಂಶ. (ಕಸೂತಿಯಿಂದ ಅಥವಾ ಅಲಂಕಾರದಿಂದ ಮರೆಮಾಡದಿರುವ) ಸಾಮಾನ್ಯ ಒಡಲು, ಹಿನ್ನೆಲೆ. **Groúndless** (ಗು.) ನಿಷ್ಕಾರಣ ; ನಿರಾಧಾರ. **Groúndlessly** (ಕ್ರಿ. ವಿ.) ; **Groúndlessness** (ನಾ.) ; **Groúndy** (ಗು.) (ಕಾಫಿ, ಮೊ. ಗಳ) ಚರಟವುಳ್ಳ.

Ground (ಕ್ರಿ.) (ಸಂಸ್ಥೆ, ತತ್ತ್ವ, ನಂಬಿಕೆ, ಮೊ. ನ್ನು ಯಾವುದಾದರೂ ನಿಶ್ಚಯಾಂಶದಮೇಲೆ, ಆಧಾರದಮೇಲೆ) ಸ್ಥಾಪಿಸು, ಪ್ರತಿಷ್ಠಿಸು, ನೆಲೆಗೊಳಿಸು (*On* ಉಪ. ದೊಡನೆ). (ಮೂಲ ಪಾಠಗಳ ವಿಷಯದಲ್ಲಿ) ಚೆನ್ನಾಗಿ ಶಿಕ್ಷಣ ಕೊಡು, ಅರೆದು ಹೊಯ್ಯಿ (*In* ಉಪ. ದೊಡನೆ). (ಕಸೂತಿ, ಮೊ. ಕ್ಕೆ) ಆಧಾರತಲ ಏರ್ಪಡಿಸು. (ಮು., ಶಸ್ತ್ರಾಸ್ತ್ರಗಳನ್ನು) ನೆಲದಮೇಲಿಡು, ಕೆಳಗಿಡು. (ವಿದ್ಯುದ್ವಾಹಕವಾಗಿ) ಭೂಸಂಬಂಧವುಂಟುಮಾಡು. ನೆಲಕ್ಕಿಳಿ ; ಕೆಳಕ್ಕಿಳಿ. (ಹಡಗು) ನೆಲ ಕಚ್ಚು ; ದಡ ಹತ್ತು. (ಭೂ. ಕೃ.) ಸುಸ್ಥಾಪಿತ ; ಭದ್ರವಾಗಿ ನೆಲಸಿದ (Well grounded, Ill grounded). **Groúndedly** (ಕ್ರಿ. ವಿ.) ; **Groúnding** (ನಾ.) ಪ್ರಾಥಮಿಕ ಶಿಕ್ಷಣ (ಕೊಡುವುದು)

Ground[2] ಗ್ರೌಂಡ್ (Grind ಧಾತುವಿನ ಭೂ. ಕೃ.) G. glass ಉಜ್ಜಿ ಅಪಾರದರ್ಶಕವಾಗಿ ಮಾಡಿದ ಗಾಜು ; ಉಜ್ಜಿದ ಗಾಜು.

Groúndage ಗ್ರೌಂಡೆ(ಡಿ)ಜ್ (ನಾ.) (ಸಮುದ್ರತೀರದಲ್ಲಿ ನಿಂತಿರುವ ಅಥವಾ ಬಂದರಿನೊಳಕ್ಕೆ ಬಂದ) ಹಡಗಿಗೆ ಹಾಕುವ ಸುಂಕ ; ನೆಲ ಸುಂಕ ; ಬಂದರು ಸುಂಕ.

Groúndling ಗ್ರೌಂಡ್ಲಿಂಗ್ (ನಾ.) ತಳಮೀನು ಜಾತಿ. ಕುರುಚಲು ಗಿಡ ಅಥವಾ ಹಬ್ಬುಗಿಡ, ಬಳ್ಳಿ. ಕೀಳ್ತರದ ಅಭಿರುಚಿಯುಳ್ಳ ನೋಟಕ, ಓದುಗ.

Groúndsel[1] ಗ್ರೌಂಡ್‌ಸೆಲ್ (ನಾ.) ಹಲವು ಕಳೆಯ ಜಾತಿ.

Groúndsel[2] ಗ್ರೌಂಡ್‌ಸೆಲ್ (ನಾ.) (ಪ್ರಾಚೀ. ಪ್ರ.) ಅಸ್ತಿಭಾರಕ್ಕಾಗಿ ಉಪಯೋಗಿಸುವ ಮರದ ತೊಲೆ ; ತಳ ದಿಮ್ಮಿ. ಮರದ ಚೌಕಟ್ಟಿನ ಅತ್ಯಂತ ತಳಭಾಗ. ಹೊಸ್ತಿಲು.

Group ಗ್ರೂಪ್ (ನಾ., ಕ್ರಿ.) ಒಟ್ಟಿಗೆ ನಿಂತಿರುವ ಮನುಷ್ಯರು ಅಥವಾ ವಸ್ತುಗಳು ; ಗುಂಪು ; ನೆರವಿ ; ಪುಂಜ ತಂಡ ; ಸಮುದಾಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ತರಗತಿಗೆ ಸೇರಿದ, ಸೇರಿಸಿದ, — ಕೆಲವು ವ್ಯಕ್ತಿಗಳು ಅಥವಾ ವಸ್ತುಗಳು : ಪಂಗಡ. (ಕುಶಲ ಕಲೆ) ಎರಡು ಅಥವಾ ಹೆಚ್ಚಿನ ಚಿತ್ರಗಳು, ವಸ್ತುಗಳು, ಬೇರೆ ಬೇರೆಯಾಗಿದ್ದರೂ ಪರಸ್ಪರ ಹೊಂದಿಕೊಂಡು ಆಗಿರುವ ಸಮಗ್ರ ರಚನೆ, ವಿನ್ಯಾಸ : ಸಮುದಾಯ ಚಿತ್ರ ; ರಾಶಿ ಚಿತ್ರ. (G.-captain ಜೇಚರ ಸೈನ್ಯದ ಒಬ್ಬ ಅಧಿಕಾರಿ). (ಕ್ರಿ.) ಗುಂಪು ಸೇರು, ಸೇರಿಸು ; ಗುಂಪಾಗು ; ಗುಂಪುಗೂಡು. ಗುಂಪಿನೊಡನೆ, ಗುಂಪಿನಲ್ಲಿ, ಸೇರಿಸು (*With* ಉಪ. ಮೊಡನೆ). (ಚಿತ್ರಗಳು, ಬಣ್ಣಗಳು, ಮೊ. ನ್ನು) ಸುವ್ಯವಸ್ಥಿತವಾಗಿ, ಹೊಂದಿಕೆಯಾದ ಸಮಷ್ಟಿರೂಪ ಬರುವಂತೆ, ಅಳವಡಿಸು. ವರ್ಗೀಕರಿಸು. **Groúpage** (ನಾ.) ವರ್ಗೀಕರಣ ಮಾಡುವುದು.

Grouse[1] ಗ್ರೌಸ್ (ನಾ. ; ಬ. ವ. Grouse) ತುಪ್ಪುಳುಗಾಲಿನ ಕೋಳಿ ಜಾತಿಯ ಒಂದು ಹಕ್ಕಿ ; ಅದರ ಮಾಂಸ.

Grouse[2] ಗ್ರೌಸ್, ಗ್ರೂಸ್ (ಕ್ರಿ. ಅಕ., ನಾ.) (ಅಸಂ.) ಗೊಣಗು(ಟ್ಟು) ; ಗೊಣಗಾಟ ; ದೂರು.

Grout[1] ಗ್ರೌಟ್ (ನಾ., ಕ್ರಿ. ಸಕ.) (ಸಂದುಗಳನ್ನು ಮುಚ್ಚುವುದಕ್ಕೆ ಹಾಕುವ) ತೆಳ್ಳನೆಯ ನೀರುಗಾರೆ. (ಕ್ರಿ.) ನೀರುಗಾರೆ ಹಾಕಿ ಮುಚ್ಚಿ ಸಮ ಮಾಡು, ನಯ ಮಾಡು.

Grout[2] ಗ್ರೌಟ್ (ಕ್ರಿ.) (ಹಂದಿ, ಮಣ್ಣು, ಮೊ. ನ್ನು) ಮೂತಿಯಿಂದ ಅಗೆ, ತೋಡು, ಎತ್ತಿಹಾಕು.

Grove ಗ್ರೋವ್ (ನಾ.) ಮರಗಳ ಗುಂಪು ; ತೋಪು. **Groved, Gróvy** (ಗು.) ತೋಪಿನ ; ತೋಪಿಗೆ ಸೇರಿದ ; ತೋಪಿನಂಥ ; ತೋಪುಗಳಿಂದ ತುಂಬಿದ ; ತೋಪಿನಲ್ಲಿ ನೆಲಸಿರುವ. **Gróveless** (ಗು.)

Gróvel ಗ್ರಾವ್‌ಲ್ (ಕ್ರಿ. ಅಕ.) ಮುಖವಡಿಯಾಗಿ ಮಲಗು ; ಬೋರಲು ಬೀಳು ; ಕಾಲಮೇಲೆ ಬಿದ್ದು ಹೊರಳಾಡು ; ದೈನ್ಯ ತೋರು ; ಅಡಿಯಾಳಂತೆ ವರ್ತಿಸು (G. in the dirt or dust ಕೊಳೆಯಲ್ಲಿ, ದೂಳಿನಲ್ಲಿ, ಹೊರಳಾಡು). (ಕೃದಂತ) ಹೀನ ; ತುಚ್ಛ ; ನೀಚ ; ನಿಕೃಷ್ಟ. **Gróvellingly** (ಕ್ರಿ. ವಿ.) ; **Gróveller** (ನಾ.)

Grow ಗ್ರೋ (ಕ್ರಿ. ; ಭೂತ. Grew ಗ್ರೂ, ಗ್ರ್ಯೂ ; ಭೂ. ಕೃ. Grown ಗ್ರೋನ್) (ಸಜೀವ ಸಸ್ಯದಂತೆ) ಬೆಳೆ, ಅಭಿವೃದ್ಧಿಯಾಗು ; (ಸಸ್ಯ) ಜೀವದಿಂದಿರು. [(ಹಾಸ್ಯವಾಗಿ) (ನಿರ್ಜೀವ ವಸ್ತು, ಮೊ. ಗಳ ವಿಚಾರದಲ್ಲಿ) ಒಂದು ಸ್ಥಳದಲ್ಲಿ ಇರು, ದೊರೆ, ಸಿಕ್ಕು. G. into one, together ಒಂದಾಗಿ, ಒಟ್ಟಾಗಿ, — ಬೆಳೆ, ಕೂಡಿಕೊ]. ಮೊಳೆ ; ಮೊಳಕೆಯೇಳು. ಮೇಲಕ್ಕೇಳು ; ಉದ್ಭವಿಸು ; (ಸ್ವಾಭಾವಿಕವಾಗಿ) ಹುಟ್ಟು ; ಜನಿಸು ; ತಲೆಯೆತ್ತು. (ಗಾತ್ರದಲ್ಲಿ, ಎತ್ತರದಲ್ಲಿ, ಮೊತ್ತದಲ್ಲಿ, ದರ್ಜೆಯಲ್ಲಿ, ಶಕ್ತಿಯಲ್ಲಿ, ಅಧಿಕಾರದಲ್ಲಿ) ಹೆಚ್ಚಾಗು ; ದೊಡ್ಡದಾಗು ; ಬೆಳೆ ; ವರ್ಧಿಸು [Growing pains ಬೆಳೆಯುವ ಕಾಲದಲ್ಲಿ ಚಿಕ್ಕವರಿಗೆ ಸಾಮಾನ್ಯವಾಗಿ ಬರುವ ನರಗಳ ನೋವು. G. downwards ಕಡಮೆಯಾಗು ; ಇಳಿ(ದುಹೋಗು). ಅವನತಿ ಹೊಂದು. G. rich ಕ್ರಮ ಕ್ರಮವಾಗಿ ಧನಿಕನಾಗು]. (ಕೃಷಿಯಿಂದ) ಬೆಳಸು, ಬೆಳೆ ಮಾಡು ; (ಗಡ್ಡ, ಮೊ. ನ್ನು) ಬೆಳಸು. (ಕರ್ಮಣಿ ಪ್ರ.) (ಯಾವುದಾದರೂ) ಬೆಳೆ ತುಂಬಿರು (*Up, over* ಉಪ. ಮೊಡನೆ). G. up ಪ್ರಾಯಕ್ಕೆ ಬರು ; ವಯಸ್ಸು ಬರು [**Grown-up** (ಗು., ನಾ.) ಪ್ರಾಯ ಬಂದ(ವನು)]. ನೆಲದಿಂದ ಹುಟ್ಟು ; ಮೊಳೆ ; ಪೂರ್ಣವಾಗಿ ಬೆಳೆ. (ಪದ್ಧತಿ, ಸಂಪ್ರದಾಯ) ತಲೆದೋರು, ವಾಡಿಕೆಯಾಗು ; ರೂಢಿಗೆ ಬರು. **Grówable** (ಗು.) ಬೆಳೆಯಲಾಗುವ. **Grówer** (ನಾ.) ಒಂದು ಗೊತ್ತಾದ ರೀತಿಯಲ್ಲಿ ಬೆಳೆಯುವ ಸಸ್ಯ (Fast, free, g. ಬೇಗ ಬೇಗ ಬೆಳೆಯುವ, ಆಶ್ರಯವಿಲ್ಲದೆ ಬೆಳೆಯುವ, ಗಿಡ) ; ಬೆಳೆ ಮಾಡುವವನು ; ಬೆಳೆಯುವವನು (Fruit-g.). **Grówingly** (ಕ್ರಿ. ವಿ.) ; **Grown** (Grow ಧಾತುವಿನ ಭೂ. ಕೃ : G. man ಪ್ರೌಢ ವಯಸ್ಕ ; ದೊಡ್ಡವನು). **Growth** (ನಾ.) ಬೆಳೆಯುವುದು ; ಬೆಳವಣಿಗೆ ; ಬೆಳವಿಗೆ ; ಬೆಳೆತ ; ಅಭಿವೃದ್ಧಿ ; ವೃದ್ಧಿ (Of foreign g. ವಿದೇಶದಲ್ಲಿ ಬೆಳೆದ, ಬೆಳೆಯುವ. Full g. ತುಂಬು ಬೆಳವಣಿಗೆ ; ಪೂರ್ಣ ಪ್ರಮಾಣ). ಬೆಳೆ ಮಾಡುವುದು ; ಬೆಳೆ ; ಫಸಲು ; ಪಯಿರು. (ವೈದ್ಯ) ರೋಗದ ಬೆಳವಣಿಗೆ ; ದುರ್ಮಾಂಸ.

Growl ಗ್ರೌಲ್ (ಕ್ರಿ., ನಾ.) ಕೋಪದ ಗುರು ಗುರು ಶಬ್ದ (ಮಾಡು) (*At* ಉಪ. ಮೊಡನೆ) ; ಮೊಳಗು ; ಗುಡುಗು ; ಕೋಪದ(ದಿಂದ) ಗುರುಗುಟ್ಟು ; ಗುರ್ರೆನ್ನುತ್ತ ಹೇಳು (*Out* ಉಪ. ಮೊಡನೆ). **Grówlingly** (ಕ್ರಿ. ವಿ.) ; **Grówler** (ನಾ.) (ಕ್ರಿಯಾರ್ಥಗಳಲ್ಲಿ) ; ನಾಲ್ಕು ಚಕ್ರದ ಬಾಡಿಗೆಯ ಸವಾರಿಬಂಡಿ. ಒಂದು ಮೀನಜಾತಿ. **Grówlery** (ನಾ.) ಗುರುಗುಟ್ಟುವುದು ; ಗೊಣಗಾಟ ; — ದ ಸ್ಥಳ. (ಹಾಸ್ಯವಾಗಿ) ಒಬ್ಬನ ಏಕಾಂತದ ಕೂಡುವ ಕೋಣೆ.

Grown, Growth. **Grow** ನೋಡಿ.

Groyne ಗ್ರಾಯ್‌ನ್ (ನಾ., ಕ್ರಿ. ಸಕ.) (ಅಲೆಗಳು ತಂದ ಮರಳು, ಕಲ್ಲು, ಮೊ. ವು ಕರೆಮೀರಿ ಒಳನುಗ್ಗದಂತೆ) ತಡೆಯುವುದಕ್ಕಾಗಿ ಕಟ್ಟಿದ ಮರದ ಚೌಕಟ್ಟು ಅಥವಾ ಅಗಲವಾದ ತಗ್ಗುಗೋಡೆ ; ತಡೆಗಟ್ಟು. (ಕ್ರಿ.) ಇಂಥ ತಡೆಗಟ್ಟನ್ನು ಹಾಕು.

Grub[1] ಗ್ರಬ್ (ನಾ.) ಹುಳುಮರಿ ; ಕಂಬಳಿ ಹುಳು. ದಡ್ಡನಾದ ಕಷ್ಟಜೀವಿ ; ಜೀತಗಾರನಂತೆ ದುಡಿಯುವ ಬರಹಗಾರ. ಅಂದಗೇಡಿ ; ಕೊಳಕ ; (ಮರ್ಯಾದೆಗೆ ಲಕ್ಷ್ಯ ಕೊಡದ) ಸೋಮಾರಿ. ನಿರುತ್ಸಾಹಜೀವಿ. (ಕ್ರಿಕೆಟ್) ನೆಲದಮೇಲೆ ಉರುಳಿ ಕೊಂಡು ಹೋಗುವಂತೆ ದಾಂಡುಗಾರನಿಗೆ ಎಸೆದ ಚೆಂಡು. (ಅಸಂ.) ತಿಂಡಿ ; ಊಣಿಸು ; ಊಟ ; ಆಹಾರ. **Grúbby** (ಗು.) ಹುಳುಮರಿಗಳುಳ್ಳ ; —ಗಳು ತುಂಬಿ ಕೇಡು ಮಾಡುವ. ಕೊಳಕು ; ಗಬ್ಬು ; ಕಶ್ಮಲ ; ಒರಟು. **Grúbbiness** (ನಾ.) ; **Grúb-street** (ನಾ., ಗು.) (ಲಂಡನ್ನಿನ) ಬಡ ಗ್ರಂಥಕಾರರು ಮತ್ತು ಜೀತದ ಲೇಖಕರು (ವಾಸಿಸುತ್ತಿದ್ದ ಪ್ರದೇಶ). (ಗು.) ಇಂಥವರ. (ಲಂಡನ್ ಪಟ್ಟಣದಲ್ಲಿ ಕ್ರಿ. ಶ. ೧೭ನೆಯ ಶತಮಾನದಲ್ಲಿ ಇಂಥವರು ವಾಸವಾಗಿದ್ದ ಒಂದು ಬೀದಿಯ ಹೆಸರಿನಿಂದ)

Grub (ಕ್ರಿ.) ಮೇಲ್ಮೇಲೆ ಅಗೆ, ತೋಡು, ಕುಕ್ಕು ; ಬೇರು, ಮೊ. ನ್ನು ಕಿತ್ತುಹಾಕಿ (ನೆಲವನ್ನು) ಚೊಕ್ಕಟಪಡಿಸು (*Up* ಉಪ. ಮೊಡನೆ ಸಹ) ; ಅಗೆದು ಹೊರದೆಗೆ ; ಶೋಧಿಸಿ ಹುಡುಕು. (ರೂಪ.) ಪುಸ್ತಕ, ಮೊ. ಗಳಲ್ಲಿ ಹುಡುಕು, ಹುಡುಕಿ ತೆಗೆ. ಹ್ಳುಮರಿಯ ದುಡಿ ; ಗುಲಾಮಚಾಕರಿ ಮಾಡು (*On, along, away* ಉಪ. ಮೊಡನೆ). (ಅಸಂ.) ತಿನ್ನು ; ಉಣ್ಣು ; (ಊಟದ ಗಿರಾಕಿ, ಮೊ. ರಿಗೆ) ಊಟಕ್ಕಿಡು. **G.-axe, -hoe, -hook** (ಮೋಟುಗಳನ್ನು ಕಿತ್ತುಹಾಕಲು ಉಪಯೋಗಿಸುವ) ಕೊಡಲಿ, ಗುದ್ದಲಿ, ಕೊಕ್ಕೆ. (-) **grúbber** (ನಾ.)

Grudge ಗ್ರಜ್ (ಕ್ರಿ. ಸಕ., ನಾ.) ಕೊಡಲು, ದಾನಮಾಡಲು, ಬಿಟ್ಟುಕೊಡಲು, ಅನುಮತಿಸಲು, ಮಾಡಲು,—ಇಷ್ಟವಿಲ್ಲದಿರು (ವಸ್ತುವನ್ನು ಮನುಷ್ಯನಿಗೆ ಎಂಬಾಗ *to* ಉಪ. ಮೊಡನೆ) ; ಕೊಸರಿ ಕೊಸರಿ ಕೊಡು ; ಕಾರ್ಪಣ್ಯಪಡು ; ತಾಳದಿರು ; ಸಹಿಸದಿರು ; ಅಸೂಯೆ ಪಡು. (ಕೃದಂತ) ಮನಸ್ಸಿಲ್ಲದ ; ಸಮಾಧಾನವಿಲ್ಲದ. (ನಾ.) ಛಲ ; ದ್ವೇಷ ; ವಿರೋಧ ; ಅಸಮಾಧಾನ ; ಅಸೂಯೆ ; ಕರುಬು (Have a g. against ; Bear, owe, one a g.). **Grúdgingly** (ಕ್ರಿ. ವಿ.)

Grúel ಗ್ರೂಎಲ್ (ನಾ., ಕ್ರಿ. ಸಕ.) [ರವೆ, ಹಿಟ್ಟು, ಮೊ. ನ್ನು ಹಾಲಿನಲ್ಲಾಗಲಿ ನೀರಿನಲ್ಲಾಗಲಿ ಬೇಯಿಸಿ (ಮು., ರೋಗಿಗಳಿಗೆ) ಕೊಡುವ] ಗಂಜಿ, ಅಂಬಲಿ (Have, get, one's g. ದಂಡನೆ ಹೊಂದು ; ಪೂರ್ತಿ ಸೋಲು ಪಡೆ ; ಕೊಲೆಯಾಗು. Give one his g.). (ಕ್ರಿ.) ಶಕ್ತಿಗುಂದಿಸು ; ಬಲಹೀನ ಮಾಡು ; ದಂಡನೆ ಕೊಡು. (ಈಗಿನ ಪ್ರ.) ಗಂಜಿ ಕುಡಿಸು. **Grúelling** (ನಾ.)

Gruésome ಗ್ರೂಸಮ್ (ಗು.) ಭಯಂಕರ ; ಬೀಭತ್ಸ ; ಅಸಹ್ಯ. **Gruésomely** (ಕ್ರಿ. ವಿ.) ; **Gruésomeness** (ನಾ.)

Gruff ಗ್ರಫ್ (ಗು.) ಗದರಿಸಿಕೊಳ್ಳುವ ; ಸಿಡುಕಿನ ; ಮೊಟಕು ಮಾತಿನ ; ನುಡಿ ಹಿಡಿತದ ; ಘೊರಟುತ್ತನದ ; ಒರಟು ನಡತೆಯ, ಧ್ವನಿಯ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದುರಹಂಕಾರದ. **Grúffly** (ಕ್ರಿ. ವಿ.); **Grúffness** (ನಾ.); **Grúffish** (ಗು.)

Grúmble ಗ್ರಂಬ್‌ಲ್ (ಕ್ರಿ., ನಾ.) ಗೊಣಗು(ಟ್ಟು); ಅಸ್ಪಷ್ಟವಾಗಿ ಗುರುಗುಟ್ಟು. (ಸಿಡಿಲು, ಮೊ.) ಮೊಳಗು, ಗುಡುಗು, ಗರ್ಜನೆ(ಮಾಡು). ದೂರು; ಅಸಮಾಧಾನ (ತೋರು); ಗೊಣಗಾಡು (*At, about, over* ಉಪ. ಜೊಡನೆ); ದೂರುತ್ತ, ಅಸಮಾಧಾನದಿಂದ, —ಹೇಳು (ಸಾ., *out* ಉಪ. ಜೊಡನೆ). **Grúmbler** (ನಾ.); **Grúmblingly** (ಕ್ರಿ. ವಿ.)

Grume ಗ್ರೂಮ್ (ನಾ.) (ವೈ. ಶಾ.) ರಕ್ತದ ಗಡ್ಡೆ, ಗರಣೆ, ಹೆಪ್ಪು. ಅಂಟು ರಸ; ಜಿಗುಟು ದ್ರವ. **Grúmous** (ಗು.)

Grúmpy, Grúmpish ಗ್ರಂಪಿ, ಗ್ರಂಪಿಷ್ (ಗು.) ಕೋಪಸ್ವಭಾವದ; ಮುಂಗೋಪದ; ಸಿಡುಕಿನ; ರೇಗಿಬೀಳುವ. **Grúmpily** (ಕ್ರಿ. ವಿ.); **Grúmpiness** (ನಾ.)

Grúndyism ಗ್ರಂಡಿಯಿಸ್‌ಮ್ (ನಾ.) ಕಟ್ಟುನಿಟ್ಟಾದ ಸಂಪ್ರದಾಯ ಪಾಲನೆ; ಕೃತಕ ಗಾಂಭೀರ್ಯ; ಅತಿ ಲಜ್ಜಾಭಾವ; ಅಪವಾದದ ಆರೋಪಣೆಯ ಸ್ವಭಾವ. (Mrs. Grundy ಎಂಬ ಪಾತ್ರದ ಹೆಸರಿನಿಂದ)

Grunt ಗ್ರಂಟ್ (ಕ್ರಿ., ನಾ.) (ಹಂದಿ) 'ಡುರುಕ್' ಎನ್ನು; ಗುರುಗುಟ್ಟು; (ಈ ಶಬ್ದದಿಂದ) ಅಸಮಾಧಾನ, ಅಸಮ್ಮತಿ, ಆಯಾಸ, ಮೊ. ನ್ನು ತೋರಿಸು; ಗುರುಗುಟ್ಟುತ್ತ, ಅಸಮಾಧಾನದಿಂದ, ಹೇಳು (ಸಾ., *out* ಉಪ. ಜೊಡನೆ). (ನಾ.) ಹಂದಿಯ 'ಡುರುಕ್' ಎಂಬ ಶಬ್ದ. **Grúntingly** (ಕ್ರಿ. ವಿ.); **Grúnter** (ನಾ.) (ಕ್ರಿಯಾರ್ಥಗಳಲ್ಲಿ). ಹಂದಿ; ಕೆಲವು ಮೀನಜಾತಿ.

Guána ಗ್ವಾನ (ನಾ.) ಉಡು (=Iguana). ಯಾವುದಾದರೂ ಜಾತಿಯ ದೊಡ್ಡ ಹಲ್ಲಿ.

Guáno ಗ್ವಾನೊ, ಗ್ಯುಆ್ಯನೊ (ನಾ.) (ಮು., ಪೆರೂ ದೇಶದ ಸಮೀಪದ ದ್ವೀಪಗಳಲ್ಲಿ ದೊರೆಯುವ, ಗೊಬ್ಬರವಾಗಿ ಉಪಯೋಗಿಸುವ) ಕಡಲು ಕೋಳಿಯ ಹಿಕ್ಕೆ; ಹಿಕ್ಕೆಗೊಬ್ಬರ. ಕೃತಕ ಗೊಬ್ಬರ (ಮು., ಮೀನಿನಿಂದ ತಯಾರಿಸಿದ್ದು); ಮೀನುಗೊಬ್ಬರ: 'ಗ್ವಾನೋ'. (ಕ್ರಿ.) ಗ್ವಾನೋ ಗೊಬ್ಬರ ಹಾಕು; —ಹಾಕಿ ಫಲವತ್ತು ಮಾಡು.

Guaranteé ಗ್ಯಾರಂಟೀ (ನಾ., ಕ್ರಿ. ಸಕ.) ಹೊಣೆ ಹೊತ್ತವನು; ಹೊಣೆಗಾರ; ಜಾಮೀನುದಾರ; ಖಾತರಿದಾರ; ಹೊಣೆ; ಜಾಮೀನು; ಖಾತರಿ. ನಿಯಮಗಳ ಪಾಲನೆಗಾಗಿ, ಅಥವಾ (ಯಾವುದೊಂದರ) ಸ್ಥಿರತೆ, ಶಾಶ್ವತತೆ, ಭದ್ರತೆ, ಮೊ. ಕ್ಕಾಗಿ ಹೊಣೆಯಾಗಿ ಕೊಟ್ಟದ್ದು, ಇರುವುದು; ಈಡು; ಆಧಾರ; ಯಾರಿಗಾಗಿ ಹೊಣೆಕೊಟ್ಟದೆಯೋ ಅವನು; ಹೊಣೆ ಪಡೆದವನು (Guarantor ಹೊಣೆಯಾಗುವವನು). (G. fund ನಷ್ಟ ಸಂಭವಿಸಬಹುದಾದ ಸಂದರ್ಭದಲ್ಲಿ ನಷ್ಟ ಕಟ್ಟಿಕೊಳ್ಳುವುದಕ್ಕಾಗಿ ಈಡಿಟ್ಟ ಮೊತ್ತ: ಈಡು ಠೇವಣಿ). (ಕ್ರಿ.) ಹೊಣೆಯಾಗು; ಹೊಣೆಯಾಗಿರು; (ಕರಾರು, ಮೊ. ಗಳ ಪಾಲನೆಗೆ, ವಸ್ತುವಿನ ಸಾಚಾತನಕ್ಕೆ) ಜವಾಬ್ದಾರನಾಗಿರು, ಭರವಸೆ ಕೊಡು, ಖಾತರಿ ಕೊಡು. (ಒಂದು ವಸ್ತುವಿನ) ಭದ್ರತೆಗೆ, ಸ್ಥಿರತೆಗೆ, — ನಂಬಿಕೆ, ಭರವಸೆ, ಖಾತರಿ, ಕೊಡು. ಸಂಭವವಿದೆಯೆಂದು, ಸಂಭವಿಸುವುದೆಂದು, ಭರವಸೆ ಕೊಡು. ಒಂದರ ಸ್ವಾಧೀನ ಒಬ್ಬನಿಗೆ ಇರುವಂತೆ ಭರವಸೆ ಕೊಡು (*To* ಉಪ. ಜೊಡನೆ). (ಅಪಾಯ, ಮೊ. ಆಗದಂತೆ) ರಕ್ಷಣೆಯ ಭರವಸೆ ಕೊಡು. ಜವಾಬ್ದಾರಿ ಹೊತ್ತಿರು (*Against, from* ಉಪ. ಜೊಡನೆ). **Guárantor** — ಟಾರ್ (ನಾ.) ಹೊಣೆಗಾರ; ಜಾಮೀನುದಾರ. **Guáranty** (ನಾ., ಕ್ರಿ. ಸಕ.) (ಒಬ್ಬನು ಕೊಡಬೇಕಾದ ಸಾಲಕ್ಕಾಗಲಿ ಮಾಡಬೇಕಾದ ಅವಶ್ಯಕರ್ತವ್ಯಕ್ಕಾಗಲಿ ಜವಾಬ್ದಾರಿಯನ್ನು ಮತ್ತೊಬ್ಬನು ತಾನು ವಹಿಸುವುದಾಗಿ ಬರವಣಿಗೆಯ ಮೂಲಕ, ಅಥವಾ ಬೇರೆ ರೀತಿಯಲ್ಲಿ, ಕೊಟ್ಟ) ಭರವಸೆ; ಹೊಣೆ; ಜಾಮೀನು; ಹೊಣೆಗೆ ಆಧಾರ; ಆಧಾರ ಮಾಡಿದ್ದು. (ಕ್ರಿ.) = Guarantee (ಈಗ ವಿರ. ಪ್ರ.)

Guard ಗಾರ್ಡ್ (ನಾ.) (ಕತ್ತಿಯ ವರಿಸೆ, ಮುಷ್ಟಿಕಾಳಗ, ಮೊ. ಗಳಲ್ಲಿ) ಆತ್ಮರಕ್ಷಣೆಗಾಗಿ ನಿಲ್ಲುವ ನೆರೆ, ಅಥವಾ ಮಾಡುವ ಚಲನೆ: ಕಾಪು ನೆರೆ; — ವರಿಸೆ. ಜೋಕೆ; ಜತನ. (ಕ್ರಿಕೆಟ್) ಗುರಿಕೋಲಿನ ರಕ್ಷಣೆಗೆ ದಾಂಡನ್ನು ಹಿಡಿದಿರಬೇಕಾದ ನೆರೆ; ದಾಂಡಿನ ಕಾಪು ನೆರೆ [Take, give, g. (ಆಟಗಾರ, ತೀರ್ಪುಗಾರ) ಕಾಪುನೆರೆಯಾಗಿ ಯಾವ ಸ್ಥಳದಲ್ಲಿ ದಾಂಡನ್ನು ಊರಬೇಕೆಂದು ನಿರ್ಧರಿಸು]. ಕಾವಲು; ಪಹರೆ; ಜಾಗರೂಕ ಸ್ಥಿತಿ; ಎಚ್ಚರಿಕೆ(ಯಿಂದಿರುವುದು); ಎಚ್ಚರ [Keep g., Be on g. ಕಾವಲಿರು; ಪಹರೆಯಿರು; ಎಚ್ಚರಿಕೆಯಿಂದಿರು. On, off, one's g. (ಆಕ್ರಮಣ, ಅಕಸ್ಮಾತ್ ಸಂಘಟನೆ, ಹಠಾತ್ತಾದ ಸ್ವಂತ ಪ್ರೇರಣೆ, ಮೊ. ನ್ನು ಎದುರಿಸಲು) ತನ್ನ ಹುಷಾರಿನಲ್ಲಿ, ಎಚ್ಚರಿಕೆಯಿಂದ, ಇದ್ದು; ಹುಷಾರು, ಎಚ್ಚರ, ತಪ್ಪಿಹೋಗಿ]. ಕಾಪಾಡುವವನು; ರಕ್ಷಕ; ಪಾಲಕ; ಕಾವಲಿರುವವನು; ಪಹರೆಯವನು. (ಟಪಾಲು ಬಂಡಿಯ, ರೈಲಿನ) ರಕ್ಷಣೆಯ ಜವಾಬ್ದಾರಿಯುಳ್ಳ ಅಧಿಕಾರಿ: ಕಾಪಿನ ಅಧಿಕಾರಿ. (ಬ. ವ. ದಲ್ಲಿ) (ಇಂಗ್ಲೆಂಡಿನಲ್ಲಿ) ಅರಮನೆಯ ಸೈನ್ಯ (Foot-guards, Horse-guards, Life-guards, Dragoon Guards, ಮೊ. ರು). (ಒಂದು ಸ್ಥಳದ, ವ್ಯಕ್ತಿಯ) ರಕ್ಷಣೆಗಾಗಿರುವ ಸಿಪಾಯಿಗಳು; ಬೆಂಗಾವಲು ಭಟರು; ಸೈನ್ಯದ ಪ್ರತ್ಯೇಕ ಕಾಪು ದಳ [Advance-g., Rear-g. ಮುಂಗಾಪಿನ, ಹಿಂಗಾಪಿನ, ಪಡೆ. G. of honour (ಗೌರವ ತೋರಿಸುವುದಕ್ಕಾಗಿರುವ) ಗೌರವ ದಳ. Mount (the) g. ಕಾವಲು ವಹಿಸಿಕೊ. Relieve (the) g. ಇನ್ನೊಬ್ಬನ ಪಹರೆ ಬಿಡಿಸಿ ತಾನು ವಹಿಸಿಕೊ]. (ಕೆಡುಕಾಗದಂತೆ, ಅಪಾಯ ಸಂಭವಿಸದಂತೆ) ರಕ್ಷಣೆಯಾಗಿಟ್ಟಿರುವ ಸಲಕರಣೆ: ಕಾಪು, ರಕ್ಷೆ (ಸಾ., ಪದ ಸಂಯೋಜನದಲ್ಲಿ: Fire-g. ಬೆಂಕಿ ಕಾಪು. Trigger-g ಬಂದೂಕಿನ ಕುದುರೆ ಕಾಪು). **G.-boat** (ಬಂದರಿನಲ್ಲಿಯ ನೌಕಾ ದಳದಲ್ಲಿ ಕಾವಲು ಸರಿಯಾಗಿದೆಯೊ ಇಲ್ಲವೊ ಎಂದು ಪರೀಕ್ಷಿಸಿ ನಡಿಸಲು) ಗಸ್ತು ಸುತ್ತುತ್ತಿರುವ ದೋಣಿ. (ಸುಂಕದ ನಿಯಮಗಳನ್ನು, ಅಥವಾ ಸೋಂಕು ಹರಡದಂತಿರುವುದಕ್ಕಾಗಿ ಹಡಗು, ಒಂದು ಗೊತ್ತಾದ ಕಾಲ ಇತರ ಸಂಬಂಧವಿಲ್ಲದಂತೆ ಇರಬೇಕಾದ ನಿಯಮಗಳನ್ನು, ಸರಿಯಾಗಿ ಪಾಲಿಸಲು ನೇಮಿಸಿರುವ) ಸರ್ಕಾರದ ಬಂದರು ದೋಣಿ; ಕಾವಲು ದೋಣಿ. **G.-chain** (ಕಿಸೆಯ ಗಡಿಯಾರ, ಪದಕ, ಮೊ. ನ್ನು) ಭದ್ರಪಡಿಸುವ ಸರಪಣಿ: ಕಾಪು ಸರಪಣಿ. **G.-house** ಸೇನೆಯ ಕಾಪುದಳದ ನೆಲಮನೆ; ಬಂದೀವಾನರನ್ನು ಬಂಧಿಸುವ ಮನೆ: ಕಾಪಿನ ಮನೆ. **G.-rail** ಓಡಾಡುವವರು, ನೋಟ ನೋಡುವವರು, ಅಕಸ್ಮಾತ್ತಾಗಿ ಬಿದ್ದು ಹೋಗದಂತೆ ಅಡ್ಡವಾಗಿ ಹಾಕಿರುವ ಕೈಕಂಬಿ; ಕಾಪಿನ ಕಂಬಿ. **G.-ring** (ಇತರ ಉಂಗುರ ಬಿದ್ದುಹೋಗದಂತೆ ತಡೆಯುವ) ತಡೆಯುಂಗುರ; ಒತ್ತುಂಗುರ. **G.-room** ಕಾಪಿನ ಕೋಣೆ. **G.-ship** ಬಂದರಿನ ರಕ್ಷಣೆಗಿರುವ, ಮತ್ತು ತಮ್ಮ ತಮ್ಮ ಹಡಗುಗಳನ್ನು ಸೇರಿಕೊಳ್ಳುವವರೆಗೂ ನಾವಿಕರಿಗೆ ಆಶ್ರಯ ಕೊಡುವ, ಯುದ್ಧದ ಹಡಗು; ಕಾಪು ಹಡಗು. **Guárdsman** (ಮು., ಇಂಗ್ಲೆಂಡಿನ ಅರಮನೆಯ) ಕಾಪಿನ ದಳದ ಸಿಪಾಯಿ, ಮು., ಹುದ್ದೇದಾರ. **G.-tent** ಕಾಪಿನ ಡೇರೆ. **Guárdless** (ಗು.)

Guard (ಕ್ರಿ.) ಕಾವಲಿರು; ಕಾಪಿರು; ಪಹರೆಯಿರು; ಹೋಗಿ ಬರುವವರನ್ನು ಹತೋಟಿಯಲ್ಲಿಟ್ಟುಕೊಳ್ಳಲು (ಬಾಗಿಲು, ಮೊ. ನ್ನು) ಕಾದಿರು; ರಕ್ಷಣೆ ಕೊಡು; ಕಾಪಿಡು (*From, against* ಉಪ. ಜೊಡನೆ). (ಅಪಾರ್ಥವಾಗದಂತೆ, ದುರುಪಯೋಗ ಮಾಡದಂತೆ, ವಿವರಣೆಗಳಿಂದ ಅಥವಾ ಕರಾರು ಕಟ್ಟಳೆಗಳು, ಮೊ. ಗಳಿಂದ) ಭದ್ರಪಡಿಸು, ರಕ್ಷಣೆ ಕಲ್ಪಿಸು. (ವೈದ್ಯ) (ಔಷಧದೊಡನೆ) ದೋಷ ಹೊಡೆಯುವ ಪದಾರ್ಥಗಳನ್ನು ಸೇರಿಸಿ ಕೊಡು: ಕಾಪಿನೌಷಧ ಕೊಡು. (ಆಲೋಚನೆಗಳನ್ನು, ಭಾಷಣವನ್ನು) ಹತೋಟಿಯಲ್ಲಿ, ಹಿಡಿತದಲ್ಲಿ, ಇಟ್ಟುಕೊ (Guarded language ಬಹಳ ಜೋಕೆಯಿಂದ, ಜಾಗರೂಕತೆಯಿಂದ, ತೂಕ ಮಾಡಿ, ಉಪಯೋಗಿಸಿದ ಭಾಷೆ). (ಕತ್ತಿ ವರಿಸೆ) ಕಾಪು ವರಿಸೆ ಉಪಯೋಗಿಸು. ಮುಂಜಾಗ್ರತೆಯ ಕಾರ್ಯವನ್ನು ಕೈಕೊಳ್ಳು; ಎಚ್ಚರಿಕೆ ತೆಗೆದುಕೊ (*Against* ಉಪ. ಜೊಡನೆ). (ಚದುರಂಗ) (ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಯನ್ನು, ಪ್ಯಾದೆಯನ್ನು) ಮತ್ತೊಂದರಿಂದ ರಕ್ಷಿಸು ; ಕಾಪು ಕೊಡು. **Guárdedly** (ಕ್ರಿ. ವಿ.) ಎಚ್ಚರಿಕೆಯಿಂದ ; ಮುಂಜಾಗ್ರತೆವಹಿಸಿ. **Guárdedness** (ನಾ.) ; **Guárdian** (ನಾ.) ಕಾಯುವವನು ; ಕಾಪಿನವನು ; ಪಾಲಕ ; ಪೋಷಕ ; ರಕ್ಷಕ (G. of the poor, or G. ಕ್ರೈಸ್ತ ಮಠಾಧಿಕಾರದ ಒಂದು ಪ್ರದೇಶದಲ್ಲಿ, ಅಥವಾ ಒಂದು ಪ್ರಾಂತದಲ್ಲಿ, ಬಡವರ ಉದ್ಧಾರಕ್ಕಾಗಿ ಮಾಡಿರುವ ಕಾಯಿದೆಗಳನ್ನು ಆಚರಣೆಯಲ್ಲಿಡುವುದಕ್ಕಾಗಿ ಚುನಾಯಿತವಾದ ಮಂಡಲಿಯ ಸದಸ್ಯ). (ನ್ಯಾ. ಶಾ.) ಮಗು, ಹುಚ್ಚು ಮೊದ್ದ, ಮೊ. ರ, ಅವರ ಆಸ್ತಿಯ, ರಕ್ಷಣಜವಾಬ್ದಾರಿಯುಳ್ಳವನು : ರಕ್ಷಕ ; ಪಾಲಕ. (ಫ್ರಾನ್ಸಿಸ್ಕನ್ ಸಂನ್ಯಾಸಿ ಮಠದ) ಹಿರಿಯ, ಅಧಿಪತಿ. G. angel (ವ್ಯಕ್ತಿಯ, ಸ್ಥಳದ) ರಕ್ಷಕ ದೇವತೆ, ಅಭಿಮಾನ ದೇವತೆ. **Guárdianship** (ನಾ.) ರಕ್ಷಕನ, ಪಾಲಕನ, ಅಧಿಕಾರ ; ಕಾನೂನಿಗನುಸಾರವಾದ ಪಾಲಕತನ ; ಪಾಲನೆ ; ರಕ್ಷಣೆ ; ಕಾಪು (Under the g. of the laws ಕಾನೂನುಗಳ ರಕ್ಷಣೆಯಲ್ಲಿ)

Guáva ಗ್ವಾವ (ನಾ.) (ಮುರಬ್ಬ ಮಾಡಲು ಉಪಯೋಗಿಸುವ) ಸೀಬೆಯ ಹಣ್ಣಿನ ಜಾತಿಯ, ಉಷ್ಣದೇಶದ, ಹುಳಿರುಚಿಯ ಒಂದು ಹಣ್ಣು (ಬಿಡುವ ಮರ) ; ಪೇರಲ, ಚೇಪೆಯ, —ಹಣ್ಣು (ಮರ)

Guayúle ಗ್ವಾಯೂಲ್ (ನಾ.) ರಬ್ಬರಿಗೆ ಬದಲಾಗಿ ಉಪಯೋಗಿಸಲಾಗುವ ಪದಾರ್ಥವನ್ನು ತಯಾರಿಸುವ ರಸವುಳ್ಳ ಮೆಕ್ಸಿಕೊ ದೇಶದ ಒಂದು ಗಿಡ.

Gubernatórial ಗ್ಯೂಬರ್ನಟೋರಿಯಲ್ (ಗು.) ಮಂಡಲಾಧಿಪತಿಯ ; ಗವರ್ನರಿನ ; ಸರ್ಕಾರದ. (ಒಬ್ಬನ) ತಂದೆಯ.

Gúdgeon[1] ಗಡ್ಜನ್ (ನಾ.) ಗಾಳಕ್ಕೆ ಉಪಯೋಗಿಸುವ ಒಂದು ಸೀನೀರು ಮೀನು ; ಸುಲಭವಾಗಿ ಮೋಸಹೋಗುವವನು ; ಅತಿ ನಂಬಿಕೆಯವನು.

Gúdgeon[2] ಗಡ್ಜನ್ (ನಾ.) (ಚಲನ ದಂಡ, ಅಚ್ಚು, ಮೊ. ಗಳ ತುದಿಯಲ್ಲ —ಚಕ್ರ, ಗಂಟೆ, ಮೊ. ವು ಕೆಲಸಮಾಡಲು ಅನುಕೂಲನುವಂತೆ ಇರುವ) ತಿರುಗುಣಿ ಗೂಟ, ತಿರುಗಾಣಿ ; (ಕಂಬದ ತಿರುಗುಣಿ ಗೂಟದ ಮೇಲೆ ಹೆಬ್ಬಾಗಿಲು ತಿರುಗುವಂತೆ ಅದಕ್ಕೆ ಹೊಂದಿಸಿರುವ) ತಿರುಗುಣಿ ಬಳೆ, ಕಣ್ಣು. (ನಾವೆ) ಚುಕ್ಕಾಣಿ ತಿರುಗುವ ಪುಟ, ಒರಳು. ಕಲ್ಲು, ಮೊ. ಗಳ ಎರಡು ದಿಮ್ಮಿಗಳನ್ನು ಕೂಡಿಸಿ ಬಿಗಿಯಾಗಿ ಹಿಡಿದುಕೊಂಡಿರುವ ಮೊಳೆ : ಕೂಡುಮೊಳೆ. **G.-pin** (ಮು.) ಅಡುಬೆಣೆಯನ್ನೂ ಅದರ ದಂಡವನ್ನೂ ಕೂಡಿಸಿ ಹಿಡಿದುಕೊಂಡಿರುವ ಮೊಳೆ.

Guébre ಗೀ(ಗೇ)ಬರ್ (ನಾ.) 'ಝೋರೊ ಆಸ್ಟರ್' ಮತದವನು ; ಅಗ್ನಿ ಪೂಜಕ ; ಪಾರ್ಸಿ(ಯವನು)

Guérdon ಗರ್ಡನ್ (ನಾ., ಕ್ರಿ. ಸಕ.) (ಕಾವ್ಯ) ಪ್ರತಿಫಲ, ಪಾರಿತೋಷಿಕ, ಬಹುಮಾನ (ಕೊಡು). **Guérdonless** (ಗು.)

Guérnsey ಗರ್ನ್ಸಿ (ನಾ.) ಇಂಗ್ಲಿಷ್ ಕಡಲ್ಗಾಲುವೆಯಲ್ಲಿರುವ ದ್ವೀಪಗಳಲ್ಲೊಂದು. (ನಾವಿಕರು, ಕೆಲಸಗಾರರು, ಮಕ್ಕಳು, ಹಾಕಿಕೊಳ್ಳುವ) ದಪ್ಪವಾದ, ಹೆಣಿಗೆಯ ಕೆಲಸದ, ಸಾ., ನೀಲ ಬಣ್ಣದ, ಉಣ್ಣೆಯ ಬಟ್ಟೆಯ ಷರಟು, ಅಂಗಿ, ಮೇಲಂಗಿ (=G. shirt, coat, frock). ಗರ್ನ್ಸಿ ಹಸು.

Guer(r)ílla ಗೆರಿಲ (ನಾ.) (ಈಗ ಸಾ., G. war) ಸಣ್ಣ ಸಣ್ಣ ದಳಗಳು ಹೊಂಚುಹಾಕುತ್ತಿದ್ದು, ಪ್ರತ್ಯೇಕ ಪ್ರತ್ಯೇಕವಾಗಿ ಶತ್ರುಗಳಮೇಲೆ ಬಿದ್ದು ನಡಸುವ, ಒಂದು ಕ್ರಮವಿಲ್ಲದ, ಯುದ್ಧ ; ತುಂಡು ಕಾಳಗ ; ತುಕ್ಕಡಿ ಕಾಳಗ ; ಕಿರುಕುಳದ ಕಾಳಗ ; ಅರೆಮರೆ ಕಾಳಗ ; 'ಗೆರಿಲ' ಕಾಳಗ. ತುಕ್ಕಡಿ ಕಾಳಗದ ಯೋಧ ; 'ಗೆರಿಲ'.

Guess ಗೆಸ್ (ಕ್ರಿ., ನಾ.) (ಅಳತೆ ಮಾಡದೆ ಅಥವಾ ಕ್ರಮವಾಗಿ ಲೆಕ್ಕಾಚಾರ ಮಾಡದೆ) ಅಂದಾಜು ಮಾಡು ; ಊಹೆ ಕಟ್ಟು, ಮಾಡು ; ಊಹಿಸು. (—) ಥಟ್ಟನೆಂದು ಯೋಚಿಸು ; ಒಂದು ವಿಷಯವಾಗಿ ಕಲ್ಪನೆಮಾಡು, ಅಭಿಪ್ರಾಯ ಸೂಚಿಸು. [I g. (ಪು., ಅಮೆ, ನಂ.) ನಾನು ದೃಢವಾಗಿ ಬಲ್ಲೆ ; ನನಗೆ ಚೆನ್ನಾಗಿ ಗೊತ್ತು]. (ಸಮಸ್ಯೆಗೆ ಉತ್ತರವನ್ನು, ತೊಡಕು ವಿಚಾರಕ್ಕೆ ಪರಿಹಾರವನ್ನು) ಸರಿಯಾಗಿ ಊಹಿಸು, ಯೋಚಿಸಿ ಹೇಳು. (ನಾ.) ಸರಿಸುಮಾರಾದ, ಸ್ಥೂಲವಾದ, — ಅಂದಾಜು ; ಊಹೆ ; ಕಲ್ಪನೆ (By g. ಬರಿ ಊಹೆಯಿಂದ ; ಆ ಸಮಯಕ್ಕೆ ತೋಚಿದಂತೆ). **G.-work** ಊಹೆಯಿಂದ ನಡಸಿದ ಕಾರ್ಯಕ್ರಮ ; ಬರಿ ಊಹೆ. Other-g. (Other ನೋಡಿ)

Guest ಗೆಸ್ಟ್ (ನಾ.) ಒಬ್ಬನ ಮನೆಗೆ ಹೊರಗಿನಿಂದ ಬಂದು ಇಳಿದುಕೊಂಡಿರುವ ಗೌರವಸ್ಥ ; — ಊಟಕ್ಕೆ ಬಂದಿರುವ — ; ಅತಿಥಿ ; ಅಭ್ಯಾಗತ (Paying g. ಮು., ಯಾರ ಮನೆಯಲ್ಲಾದರೂ ದುಡ್ಡು ಕೊಟ್ಟು ಊಟಮಾಡುವವನು) ; (ಭೋಜನದಂಗಡಿ, ಊಟದ ಮನೆ, ಮೊ. ಗಳಲ್ಲಿ) ತಾತ್ಕಾಲಿಕವಾಗಿ ಬಂದಿರುವವನು ; ಅಭ್ಯಾಗತ. ಪರ ಸತ್ತ್ವೋಪಜೀವಿ(ಯಾದ ಪ್ರಾಣಿ, ಸಸ್ಯ). **G.-chamber** ಅತಿಥಿಗಳಿಗಾಗಿಟ್ಟಿರುವ ಕೋಣೆ : ಅತಿಥಿ ಶಾಲೆ. **G.-house** (ಸಾ., ವಿನೋದ, ಕ್ರೀಡೆ, ಮೊ. ನ್ನು ಏರ್ಪಡಿಸಿರುವ) ಮೇಲ್ತರಗತಿಯ ಅತಿಥಿ ಗೃಹ. **G.-night** ವಿಹಾರ ಸಂಘ, ವಿದ್ಯಾಶಾಲೆ, ಮೊ. ಗಳಲ್ಲಿ ಅತಿಥಿಗಳಿಗೆ ವಿನೋದ, ಔತಣ, ಏರ್ಪಡಿಸಿರುವ ರಾತ್ರಿ. **Guéstship** (ನಾ.)

Guést-rope ಗೆಸ್ಟ್‌ರೋಪ್, **Guéss-** ಗೆಸ್— (ನಾ.) ಎಳೆದುಕೊಂಡು ಬರುತ್ತಿರುವ ದೋಣಿಯನ್ನು ಸ್ತಿಮಿತಪಡಿಸುವುದಕ್ಕಾಗಿ ಅದಕ್ಕೆ ಕಟ್ಟುವ ಎರಡನೆಯ ಹಗ್ಗ : ಜೊತೆ ಹಗ್ಗ. ಪಕ್ಕದಲ್ಲಿ ಬರುವ ದೋಣಿಗಳ ಹಿಡಿತಕ್ಕೆ ಸಿಕ್ಕುವಂತೆ ಹಡಗಿನ ಹೊರಗಡೆ ಅದರ ಉದ್ದಕ್ಕೂ ತಗುಲಹಾಕಿರುವ ದಪ್ಪ ಹಗ್ಗ.

Guffaw ಗಫಾ (ನಾ., ಕ್ರಿ.) ಒರಟು, ಹುಚ್ಚು, ಅಬ್ಬರದ, — ಗಟ್ಟಿ ನಗು. (ಕ್ರಿ.) ಗಹಗಹಿಸಿ ನಗು ; ರಭಸದಿಂದ ನಗು ; ಗಹಗಹಿಸುತ್ತ ಹೇಳು.

Gúggle = Gurgle.

Guide ಗೈಡ್ (ನಾ.) ದಾರಿ ತೋರಿಸುವವನು ; ಮಾರ್ಗ ದರ್ಶಕ ; (ಪ್ರಯಾಣಿಕನಿಗೆ, ಪ್ರವಾಸಿಗೆ) ದಾರಿ ತೋರಿಸುವ ಕೂಲಿಯಾಳು ; ಹಾದಿ ತೋರುಗ ; ಮಾರ್ಗ ದರ್ಶಿ. (ಸೈನ್ಯ) (ಸ್ಥಳ, ಮೊ. ಗಳ) ಅನ್ವೇಷಣೆ ಮಾಡುವುದು, ಮೊ. ಕ್ಕಾಗಿ ಏರ್ಪಡಿಸಿದ ದಳದ ಒಬ್ಬ ವ್ಯಕ್ತಿ : ಅನ್ವೇಷಕ ದಳದವನು. (ನಾವೆ) (ಉಳಿದ ಸಮರ ನೌಕೆಗಳು ತಮ್ಮ ಚಲನಗತಿಯನ್ನು ಹೊಂದಿಸಿಕೊಳ್ಳುವಂತೆ) ಮಾರ್ಗದರ್ಶಿಯಾಗಿರುವ ಹಡಗು : ಮಾರ್ಗದರ್ಶಕ ನಾವೆ. ಸಲಹೆಗಾರ. ದಾರಿ ತೋರಿಸಿ ನಡಸುವ ತತ್ತ್ವ ಅಥವಾ ಪ್ರಮಾಣ ; ಆದರ್ಶ ; ಮಾರ್ಗ ದರ್ಶಕ [The feelings are a bad g. ಮನೋರಾಗಗಳು ಕೆಟ್ಟ ಮಾರ್ಗ ದರ್ಶಕಗಳು. Scripture is our g. (ಕ್ರೈಸ್ತ) ವೇದವು ನಮ್ಮ ಮಾರ್ಗ ದರ್ಶಕ]. ಮೂಲಪಾಠಗಳ ಪುಸ್ತಕ ; ಕೈಪಿಡಿ. (ಪಟ್ಟಣ, ದೇವಸ್ಥಾನ, ವಸ್ತುಶಾಲೆ, ಮೊ. ಗಳ ವಿಷಯವಿವರಣೆ ಮಾಡುವ) ವಿವರಣೆ ಪುಸ್ತಕ, ಕೈಪಿಡಿ : ಮಾರ್ಗದರ್ಶಕ (ಪುಸ್ತಕ) (=G.-book) (*To* ಉಪ. ದೊಡನೆ). (ಯಂತ್ರಶಾಸ್ತ್ರ) ಯಾವುದಾದರೊಂದು ಭಾಗದ ಚಲನೆಯನ್ನು ನಿಯಂತ್ರಿಸುವ ಕಂಬಿ, ದಂಡ, ಮೊ. ವು : ಚಾಲಕ ದಂಡ. ಅಳತೆಯ ಸಲಕರಣೆ, ಮೊ. ವು. ; ನಿಯಂತ್ರಕ ಸಲಕರಣೆ ; ಸ್ಥಳವನ್ನು ಗುರುತಿಸುವ ಅಥವಾ ಕಣ್ಣಿಗೆ ಗುರುತಾಗಿರುವ ವಸ್ತು. **G.-post** = Finger-post (Finger ನೋಡಿ). **G.-rope** = Guy[1]. ಎತ್ತುಯಂತ್ರದ ಹೊರೆಗೆ (ಅದನ್ನು ಬೇಕಾದ ಕಡೆಗೆ ತಿರುಗಿಸಲಾಗುವಂತೆ) ಕಟ್ಟಿರುವ ಸಣ್ಣ ಹಗ್ಗ. **Guídeway** ಗಾಡಿ ; (ರೂಢಿಯ) ಜಾಡು. **Guídeless** (ಗು.)

Guide (ಕ್ರಿ. ಸಕ.) —ಗೆ ಮಾರ್ಗದರ್ಶಿಯಾಗಿರು ; (ದಾರಿ ತೋರಲು) ಮುಂದೆ ಹೋಗು ; ಅಗ್ರಗಾಮಿಯಾಗು ; ಮಾರ್ಗ ದರ್ಶನ ಕೊಡು. (ಸಂದರ್ಭಗಳನ್ನು, ಕೆಲಸಗಳನ್ನು) ವ್ಯವಸ್ಥೆಗೊಳಿಸು ; ವಿಧಿಸು ; ನಡಸು. (ವ್ಯವಹಾರ, ತೀರ್ಪು, ಮೊ. ಕ್ಕೆ) ತತ್ತ್ವ, ಉದ್ದೇಶ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಧಾರ, — ಆಗಿರು. (ರಾಜ್ಯ, ಮೊ. ಗಳ) ಕಾರ್ಯ ನಿರ್ವಾಹ ಮಾಡು. **Guiding-stick** (ಚಿತ್ರಗಾರನು ತನ್ನ ಬಲಗೈಗೆ ಆಸರೆಯಾಗಿ ಎಡಗೈಯಲ್ಲಿ ಹಿಡಿದುಕೊಳ್ಳುವ) ಆಸರೆ ಕಡ್ಡಿ (= Mahlstick). **Guídable** (ಗು.); **Guídance** (ನಾ.) ನೇತೃತ್ವ; ಮಾರ್ಗ ದರ್ಶನ; ಪರಾಮರಿಕೆ.

G(u)ild ಗಿಲ್ಡ್ (ನಾ.) (ಪರಸ್ಪರ ಸಹಾಯಕ್ಕಾಗಿ ಅಥವಾ ಒಂದೇ ಉದ್ದೇಶ ಸಾಧನೆಗಾಗಿ ಏರ್ಪಡಿಸಿಕೊಂಡ) ಸಂಘ; ವೃತ್ತಿಸಂಘ; ಶ್ರೇಣಿ. G.-hall (ಹಿಂದೆ) ವೃತ್ತಿಸಂಘ ಮಂದಿರ; (ಈಗ) ಪೌರ ಮಂದಿರ. The G.-hall (ಸರ್ಕಾರದವರು ಏರ್ಪಡಿಸುವ ಔತಣಗಳು, ಪೌರ ಸಭೆಯ ಅಧಿವೇಶನ, ಮೊ. ವು ನಡೆಯುವ) ಲಂಡನ್ ಪಟ್ಟಣದ ಪೌರ ಮಂದಿರ. G. socialism ಎಲ್ಲ ಕೈಗಾರಿಕೆಗಳೂ ರಾಜ್ಯದ ಸ್ವತ್ತಾಗಿದ್ದುಕೊಂಡು, ಒಂದೊಂದು ಕೈಗಾರಿಕೆಯ ಆಡಳಿತವೂ ಅದರ ಎಲ್ಲ ಬಗೆಯ (ಕೈ, ಬುದ್ಧಿ) ಕೆಲಸಗಾರರ ಒಟ್ಟುಸಂಘದ ಮೂಲಕ ನಡೆಯುವುದಾಗಿ, ಆ ಕೈಗಾರಿಕೆಯ ಉತ್ಪನ್ನಾಂಶಗಳನ್ನು ಕೊಳ್ಳುವವರ ಹಿತಸಂರಕ್ಷಣೆಗಾಗಿ ಮಾತ್ರ ರಾಜ್ಯ ಶಾಸನವು ಆ ಸಂಘದ ಏರ್ಪಾಟುಗಳಲ್ಲಿ ಕೈ ಹಾಕತಕ್ಕದ್ದೆಂದು ಇಂಗ್ಲೆಂಡಿನಲ್ಲಿ ಹೊರಟ ಒಂದು ಬಗೆಯ ಸಂಸೃಷ್ಟಿ ವಾದ, ಸಮಾಜ ವಾದ, ಸಮತಾ ವಾದ.

Guílder ಗಿಲ್ಡರ್ (ನಾ.) ಹಾಲೆಂಡ್, ಮೊ. ದೇಶಗಳಲ್ಲಿ ಹಿಂದೆ ಪ್ರಚಾರದಲ್ಲಿದ್ದ ಒಂದು ಚಿನ್ನದ ನಾಣ್ಯ. ಈಗ (ಸುಮಾರು ೧ ಷಿಲಿಂಗ್ ೮ ಪೆನಿ ಬೆಲೆಯುಳ್ಳ) ಒಂದು ಡಚ್ ಬೆಳ್ಳಿಯ ನಾಣ್ಯ.

Guile ಗೈಲ್ (ನಾ.) ದ್ರೋಹ; ಮೋಸ; ವಂಚನೆ; ಕಪಟ; ಕುತಂತ್ರ; ಕುಯುಕ್ತಿ; ಠಕ್ಕು. **Guíleful** (ಗು.); **Guílefully** (ಕ್ರಿ. ವಿ.); **Guílefulness** (ನಾ.); **Guíleless** (ಗು.); **Guílelessly** (ಕ್ರಿ. ವಿ.); **Guílelessness** (ನಾ.)

Guillóche ಗಿಲೋಷ್, (F) ಗಿಯೊಷ್ (ನಾ.) ಪಟ್ಟಿ ಹೆಣೆದ ಹಾಗೆ ಮಾಡಿದ ವಾಸ್ತುಶಿಲ್ಪದ ಒಂದು ಅಲಂಕಾರ; ಹೆಣಿಗೆಯ ಅಲಂಕಾರ.

Guíllotine, -tíne ಗಿಲೊಟೀನ್ (ನಾ., ಕ್ರಿ. ಸಕ.) (ನೆಟ್ಟ ಕಂಬಗಳಲ್ಲಿಯ ಗಾಡಿಗಳಲ್ಲಿ ಭಾರವಾದ ಕತ್ತರಿಯಲಗು ಸರಿಯುವಂತೆ ಅಳವಡಿಸಿರುವ) ತಲೆ ಕಡಿಯುವ ಯಂತ್ರ; ಶಿರಶ್ಛೇದಕ (ಯಂತ್ರ): 'ಗಿಲೊಟೀನು'. ಕಿರುನಾಲಗೆ, ಮೊ. ನ್ನು ಕತ್ತರಿಸುವುದಕ್ಕೆ ಉಪಯೋಗಿಸುವ ಚಿಕಿತ್ಸೆಯ ಶಸ್ತ್ರ. ಕಾಗದ, ಮೊ. ನ್ನು ಕತ್ತರಿಸುವ ಒಂದು ಬಗೆಯ ಯಂತ್ರ. (ಶಾಸನ ಸಭೆಗಳಲ್ಲಿ) ಮಸೂದೆಯ ಭಾಗಗಳಮೇಲಾಗಲಿ ಇತರ ವಿಷಯಗಳಮೇಲಾಗಲಿ ಚರ್ಚೆಯಿಂದ ಕಾಲವಿಳಂಬವಾಗದಂತೆ ಮಾಡುವುದಕ್ಕಾಗಿ, ಅಭಿಮತ ಕೊಡುವ ಹೊತ್ತನ್ನು ಕಡ್ಡಾಯವಾಗಿ ಗೊತ್ತು ಮಾಡಿ, ಅಡ್ಡಿಯೇಳದಂತೆ ಮಾಡುವ ವಿಧಾನ; ಅಡ್ಡಿ ಕಡಿ. (ಕ್ರಿ.) ಗಿಲೊಟೀನನ್ನು ಪ್ರಯೋಗಿಸು.

Guilt ಗಿಲ್ಟ್ (ನಾ.) ತಪ್ಪು; ಅಪರಾಧ (ಮಾಡಿರುವಿಕೆ); ಅಪರಾಧಿತನ; ದೋಷ; ಕಳಂಕ. **Guíltless** (ಗು.) ತಪ್ಪು ಮಾಡಿರದ; ತಪ್ಪಿಲ್ಲದ; ನಿರ್ದೋಷಿ, ನಿಷ್ಕಳಂಕ, ನಿಶ್ಶಂಕಿತ, ನಿರಪರಾಧಿ, —ಅದ. (ವಿಷಯವನ್ನು) ತಿಳಿಯದ, ಅರಿಯದ, ಪಡೆದಿರದ (*Of* ಉಪ. ದೊಡನೆ) [G. of Greek, soap, moustache ಗ್ರೀಕು ಅರಿಯದ, ಸಾಬೂನು (ಹಾಕಿ) ಕಾಣದ, ಮೀಸೆಯಿಲ್ಲದ]. **Guíltlessly** (ಕ್ರಿ. ವಿ.); **Guíltlessness** (ನಾ.); **Guílty** (ಗು.) ತಪ್ಪು ಮಾಡಿದ; ತಕ್ಸೀರು ಮಾಡಿದ; ಅಪರಾಧಿಯಾದ; ದೋಷಿಯಾದ. ತಾನು ತಪ್ಪು ಮಾಡಿದುದನ್ನು ತಿಳಿದಿರುವ; ತಪ್ಪಿನ; ತಪ್ಪುಳ್ಳ; ಅಪರಾಧ ಪ್ರೇರಿತ (ವಾದ); ದೋಷ ಯುಕ್ತ; ಶಂಕಿತ; ಕಳ್ಳ. (G. conscience ಕಳ್ಳ ಮನಸ್ಸು. G. behaviour; G. look). ಅಪರಾಧ ಮಾಡಿರುವ [*Of* ಉಪ. ದೊಡನೆ. G., Not g. ತಪ್ಪಿತಸ್ಥ, —ನಲ್ಲ (ದಂಡಾಧಿಕಾರಿ, ಮೊ. ರ ತೀರ್ಪು)]. **Guíltily** (ಕ್ರಿ. ವಿ.); **Guíltiness** (ನಾ.)

Guimp. = Gimp.

Guínea ಗಿನಿ (ನಾ.) ಆಫ್ರಿಕದ ಪಶ್ಚಿಮ ತೀರದ ಒಂದು ಭಾಗ: ಗಿನಿ. (ಆಫ್ರಿಕದ ವ್ಯಾಪಾರಕ್ಕಾಗಿ ಮೊದಲು ಟಂಕಿಸಿದ) ಹಿಂದಿನ ಒಂದು ಚಿನ್ನದ ನಾಣ್ಯ (ಈಗಿನ ಬೆಲೆ ೨೧ ಷಿಲಿಂಗು). **G.-fowl, -hen** (ಯೂರೋಪಿನಲ್ಲಿ ಸಾಕುವ ನವಿಲುಜಾತಿಯ) ಒಂದು ಬಗೆಯ ಕೋಳಿ: ಗಿನಿ ಕೋಳಿ. **G. grains** (Grain ನೋಡಿ). **G.-pig** ಯೂರೋಪ್, ಮೊ. ಕಡೆ ಈಗ ಮುದ್ದಿನ ಪ್ರಾಣಿಯಾಗಿ ಸಾಕುವ ದ. ಅಮೆರಿಕದ ಒಂದು ಸಸ್ತನಿ ಪ್ರಾಣಿ: ಗಿನಿಯಿಲಿ. (ಹಾಸ್ಯವಾಗಿ ಅಥವಾ ತಿರಸ್ಕಾರವಾಗಿ) ಒಂದು ಗಿನಿಯನ್ನು ಕೂಲಿ ಅಥವಾ ರುಸುಮು ತೆಗೆದುಕೊಳ್ಳುವವನು; ಗಿನಿಯ ರಿವಾಜನ್ನು ಅಥವಾ ರುಸುಮನ್ನು ತೆಗೆದುಕೊಳ್ಳುವವನು (ವೈದ್ಯ, ಕಂಪನಿಯ ಚಾಲಕ, ಪಾದ್ರಿಯ ಸಹಾಯಕ, ಮೊ.). **Guínea-pigging** ಗಿನಿಯ ರಿವಾಜು ತೆಗೆದುಕೊಂಡು ತನ್ನ ಕೆಲಸ ಮಾಡುವುದು. **G. worm** ಉಷ್ಣವಲಯದಲ್ಲಿ, ಮನುಷ್ಯನ ಚರ್ಮದಲ್ಲಿ ಸೇರಿಕೊಳ್ಳುವ ಒಂದು ಪರಸತ್ವೋಪಜೀವಿ; ನಾರುಹುಣ್ಣಿನ ಹುಳು; ಗಿನಿ ಹುಳು; ಇದರಿಂದ ಬರುವ ರೋಗ; ನಾರು ಹುಣ್ಣು.

Guise ಗೈಸ್ (ನಾ.) (ಪ್ರಾಚೀ. ಪ್ರ.) ಉಡುಪಿನ ರೀತಿ; ಉಡುಪು. ಹೊರ ತೋರ್ಕೆ; ಬಾಹ್ಯ ರೂಪ. (ಹೊರ) ವೇಷ; ಸೋಗು; ನಟನೆ (Under, in, the g. of — ವೇಷದಲ್ಲಿ, ಸೋಗಿನಲ್ಲಿ)

Guitár ಗಿಟಾರ್ (ನಾ., ಕ್ರಿ. ಅಕ.) ಆರು ತಂತಿಗಳುಳ್ಳ, ಬೆರಳಾಡಿಸಲು ಮೆಟ್ಟಿಲುಗಳಿರುವ, ಕೈಯಿಂದ ನುಡಿಸುವ, ವೀಣೆಯ ಜಾತಿಯ ಒಂದು ವಾದ್ಯ; ಸಿತಾರು. (ಕ್ರಿ.) ಸಿತಾರು ನುಡಿಸು, ಬಾಜಿಸು. **Guitár-ist** (ನಾ.)

Gulch ಗಲ್ಚ್ (ನಾ.) (ಅಮೆ. ಸಂ.) (ಮು., ಚಿನ್ನ ದೊರೆಯುವ) ಕಂದರ, ಕಮರಿ.

Gúlden ಗು(ಗೂ)ಲ್ಡೆನ್ (ನಾ.) (ಹಾಲೆಂಡ್ ಮತ್ತು ಆಸ್ಟ್ರಿಯಾ ಪಂಗಡಗಳ, ೧ ಷಿ. ೮ ಪೆನಿ ಬೆಲೆಯ) ಒಂದು ಬೆಳ್ಳಿಯ ನಾಣ್ಯ.

Gules ಗ್ಯೂಲ್ಸ್ (ನಾ., ಗು.) (ಸಾ., ನಾಮ ಪದದ ಮುಂದೆ ಪ್ರ.); (ವಂಶಲಾಂಛನ) ಕೆಂಪು.

Gulf ಗಲ್ಫ್ (ನಾ., ಕ್ರಿ. ಸಕ.) (ಭೂ ವಿವರಣೆ) ಮುಖ ಭಾಗದಲ್ಲಿ ಕೊಲ್ಲಿಗಿಂತಲೂ ಕಿರಿದಾಗಿರುವ ಸಮುದ್ರದ ಚಾಚು (ಭಾಗ): ಖಾರಿ. ಆಳವಾದ ಹಳ್ಳ, ಡೊಗರು. ಅಗಾಧ (ಆಳ); ಕಮರಿ; ಕಂದರ. (ಕಾವ್ಯ) ಅಗಾಧವಾದ ಆಳ; ಪಾತಾಳ; ಸಮುದ್ರ. ಸುಳಿ; ಜಲಾವರ್ತ (ರೂಪ. ಸಹ). ಯಾವುದನ್ನಾದರೂ ನುಂಗಿಹಾಕುವಂಥದು. ದಾಟಲಾಗದ ಮೇರೆ, ಹಳ್ಳ; ದೊಡ್ಡ ಅಂತರ. (ವಿಶ್ವವಿದ್ಯಾನಿಲಯದ ಅಸಂ.) 'ಆನರ್ಸ್' ಪಾಂಡಿತ್ಯ ಪದವಿಯ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ತಪ್ಪಿದರೂ ಸಾಧಾರಣ ಪಾಂಡಿತ್ಯವುಳ್ಳವನೆಂದು ಕೊಡುವ ರಿಯಾಯಿತಿಯ ಪ್ರಶಸ್ತಿ. (G.-stream ಮೆಕ್ಸಿಕೊ ಖಾರಿಯಿಂದ ಅಟ್ಲಾಂಟಿಕ್ ಸಾಗರದಮೇಲೆ ಹರಿದು ಬರುವ ಉಷ್ಣೋದಕ ಪ್ರವಾಹ: 'ಗಲ್ಫ್ ಸ್ಟ್ರೀಮ್'). (ಕ್ರಿ.) ನುಂಗಿಹಾಕು; ಮುಳುಗಿಸಿಕೊ (ರೂಪ. ಸಹ). (ವಿಶ್ವವಿದ್ಯಾನಿಲಯ) ರಿಯಾಯಿತಿಯ ಪ್ರಶಸ್ತಿ ಕೊಡು.

Gull[1] ಗಲ್ (ನಾ.) ಉದ್ದ ರೆಕ್ಕೆಯ, ಜಾಲ ಪಾದದ, ವಿಶೇಷವಾಗಿ ಸಮುದ್ರವಾಸಿಯಾದ, ಸಾ., ಬೆಳ್ಳಗಿರುವ, ಮುತ್ತಿನ ಬಣ್ಣದಿಂದ ಹಿಡಿದು ಕಪ್ಪು ಬಣ್ಣದ ವರೆಗೂ ವಿಧ ವಿಧವಾದ ಬೆನ್ನಿನ ಹೊದಿಕೆಯುಳ್ಳ, ಹೊಳಪಿನ ಕೊಕ್ಕುಳ್ಳ, ಒಂದು ಪಕ್ಷಿಜಾತಿ. **Gúllery** (ನಾ.) 'ಗಲ್' ಹಕ್ಕಿಗಳು ಬೆಳೆಯುವ ಸ್ಥಳ.

Gull[2] ಗಲ್ (ನಾ., ಕ್ರಿ. ಸಕ.) ಸುಲಭವಾಗಿ ಮೋಸಹೋಗುವ ಮಂಕ; ಗುಗ್ಗು; ಬೆಪ್ಪುತಕ್ಕಡಿ. **Gúllible** ಗಲಬ್‌ಲ್ (ಗು.); **Gullibílity** (ನಾ.); **Gúllish** (ಗು.)

Gúllet ಗಲೆಟ್ (ನಾ.) ಬಾಯಿಂದ ಜಠರದ ವರೆಗಿರುವ ಆಹಾರ ನಾಳ; ಅನ್ನ ನಾಳ; (ಶಿಥಿಲವಾಗಿ) ಗಂಟಲು. (ಪ್ರಾಚೀ. ಪ್ರ., ಪ್ರಾಂ. ಪ್ರ.) ನೀರ ಕಾಲುವೆ; ನಾಲೆ; ಜಲಸಂಧಿ; ಇಕ್ಕಟ್ಟು ದಾರಿ; ಕಣಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Gúlly[1] ಗಲಿ (ನಾ., ಕ್ರಿ. ಸಕ.) (ನೀರು ಹರಿದು ಹರಿದು ಸವೆದುದರಿಂದಾದ) ಕೊರಕಲು, ಕಂದರ, ಕಮರಿ, ಹಳ್ಳ ; (ಕಟ್ಟದ, ಆಳವಾದ) ಕಾಲುವೆ ; ಚರಂಡಿ ; ಮೋರಿ. (ಕ್ರಿ.) (ಆಳವಾದ ದೊಡ್ಡ) ಚರಂಡಿಗಳನ್ನು ಮಾಡು, ಕಟ್ಟು ; (ನೀರು ಹರಿದು ಸವೆಯಿಸುವುದರಿಂದ) ಕಾಲುವೆಯಾಗು, ಹಳ್ಳವಾಗು. **G.-drain** ರೊಚ್ಚುನೀರಿನ ಗುಂಡಿಯಿಂದ ದೊಡ್ಡ ಮೋರಿಗೆ ಹೋಗುವ, ಪಿಂಗಾಣಿ ಕೊಳಾಯಿಗಳ ಚರಂಡಿ; ಕೊಳಾಯಿ ಚರಂಡಿ. **G.-hole** (ಬೀದಿಯಲ್ಲಿ ಮಾಡಿರುವ) ರೊಚ್ಚುನೀರಿನ ಗುಂಡಿ. **G.-trap** ಕೊಳಾಯಿ ಚರಂಡಿಗಳಲ್ಲಿರುವ ದುರ್ವಾಯು ತಡೆ.

Gúlly[2] ಗಲಿ (ನಾ.) ದೊಡ್ಡ ಚೂರಿ, ಚಾಕು.

Gulósity ಗ್ಯುಲಾಸಿಟಿ (ನಾ.) (ವಿರ. ಪ್ರ.) ಹೊಟ್ಟೆಬಾಕತನ.

Gulp ಗಲ್ಪ್ (ಕ್ರಿ., ನಾ.) (ಆತುರದಿಂದ, ಅತ್ಯಾಸೆಯಿಂದ, ಪ್ರಯಾಸದಿಂದ) ನುಂಗು, ನುಂಗಿಬಿಡು, ನೊಣೆ (ಗ್ರಾಂ.) ; ಗುಟುಕಿಸು (ಸಾ., *down* ಉಪ. ದೊಡನೆ) (G. down sobs, tears ಬಿಕ್ಕಿ ಅಳುವುದನ್ನು, ಕಣ್ಣೀರನ್ನು, ತಡೆದುಕೊ, ನುಂಗಿಕೊ) ; ಕಷ್ಟಪಟ್ಟು ನುಂಗು ; (ಕುಡಿಯುವಾಗ) ಉಸಿರು ಹಿಡಿ, ಗಂಟಲು ಅಡಚಿಕೊ. (ನಾ.) ನುಂಗುವುದು (Drained it at one g. ಒಂದೇ ಗುಟುಕಿಗೆ ಕುಡಿದುಬಿಟ್ಟೆನು) ; ನುಂಗುವ ಕಷ್ಟ ; ದೊಡ್ಡ ಗುಟುಕು, ಗುಕ್ಕು. **Gúlpingly** (ಕ್ರಿ. ವಿ.) ; **Gúlpy** (ಗು.) ಗುಟುಕಿನಂಥ ; (ಅತ್ಯಾಸೆಯಿಂದ, ಆತುರದಿಂದ, ಕಷ್ಟಪಟ್ಟು) ನುಂಗಿದ.

Gum[1] ಗಮ್ (ನಾ. ; ಸಾ., ಬ. ವ. ದಲ್ಲಿ ಪ್ರ.) ಬಾಯಲ್ಲಿ ಹಲ್ಲುಗಳು ನಿಂತಿರುವ ಗಟ್ಟಿಮಾಂಸ ; ಒಸಡು. **Gúmboil** ಒಸಡು ಕುರು, ಹುಣ್ಣು.

Gum[2] ಗಮ್ (ನಾ., ಕ್ರಿ.) (ಕಾಗದ, ಮೊ. ಗಳನ್ನು ಅಂಟಿಸುವುದಕ್ಕೂ ಬಟ್ಟೆ, ಮೊ. ವನ್ನು ದೃಢವಾಗಿ ನಿಲ್ಲುವಂತೆ ಮಾಡುವುದಕ್ಕೂ ಇತರ ಕೆಲಸಗಳಿಗೂ ಉಪಯೋಗಿಸುವ, ಕೆಲವು ಮರಗಳಿಂದಲೂ ಗುಲ್ಮಗಳಿಂದಲೂ ಸ್ರವಿಸುವ, ಒಣಗಿದರೆ ಗಟ್ಟಿಯಾಗುವ, ಆದರೆ ನೀರಿನಲ್ಲಿ ಕರಗುವ) ಅಂಟು (ದ್ರವ) ; ಗೋಂದು ; ಬಂಕೆ. ಕಣ್ಣ ಪಿಸುರು. 'ಜೆಲಟೀನ್' ಮೊ. ಗಳಿಂದ ತಯಾರಿಸಿದ ಪಾರದರ್ಶಕವಾದ ಗಟ್ಟಿಮಿಠಾಯಿ ; ಗೋಂದು ಮಿಠಾಯಿ. ಗೋಂದು (ಸ್ರವಿಸುವ) ಮರ (=G.-tree ; ಮು., 'ಯೂಕಲಿಪ್ಟಸ್' ಮರದ ಜಾತಿ) [Up a g.-t. ಇಕ್ಕಟ್ಟಿನಲ್ಲಿ (ಸಿಕ್ಕಿ) ; ಉಪಾಯಾಂತರವಿಲ್ಲದೆ ; ದಿಕ್ಕು ತೋಚದೆ]. ರೋಗಕಾರಣದಿಂದ ಹಣ್ಣುಗಿಡಗಳಲ್ಲಿ ಅಂಟು ಸುರಿಯುವುದು ; ಬಂಕೆ ರೋಗ. (ಬ. ವ. ದಲ್ಲಿ ಅಸಂ.) ರಬ್ಬರು ಮೋಜಾಗಳು. [**G. arabic** (Arab ನೋಡಿ). **G. dragon** (ಔಷಧಗಳಲ್ಲಿ, ಕ್ಯಾಲಿಕೊ ಮುದ್ರಣ, ಮೊ. ಗಳಲ್ಲಿ, ಉಪಯೋಗಿಸುವ) ಕೆಲವು ಸಸ್ಯಗಳಲ್ಲಿ ದೊರೆಯುವ ಒಂದು ಬಗೆಯ ಬಿಳಿಯ ಅಥವಾ ಕೆಂಪು ಅಂಟು. **G. elastic** ಇಂಡಿಯಾ ರಬ್ಬರು. **G. juniper** ('ವಾರ್ನಿಷ್' ತಯಾರಿಕೆಯಲ್ಲೂ ಗುಗ್ಗುಲವಾಗಿಯೂ ಉಪಯೋಗಿಸುವ, ಒಂದು ದೊಡ್ಡ ಮರದಿಂದ ಸ್ರವಿಸುವ) ಒಂದು ಬಗೆಯ ರಾಳ. **G. resin** ಗೋಂದಿನೊಡನೆ ಮಿಶ್ರವಾಡಿದ ಸಸ್ಯರಾಳ (ಉದಾ., Gamboge) ; ಗೋಂದು ರಾಳ. **G. senegal** ಸೆನೆಗಲ್ ದೇಶದ ಒಂದು ಜಾತಿಯ ಗೋಂದು]. (ಕ್ರಿ.) ಗೋಂದು ಹಚ್ಚು, ಬಳಿ ; ಗೋಂದು ಬಳಿದು ಬಿರುಸುಮಾಡು ; ಗೋಂದು ಹಚ್ಚಿ ಸೇರಿಸು, ಭದ್ರಪಡಿಸು (*Down*, *together*, *up*, *in*, ಮೊ. ಉಪ. ದೊಡನೆ). (ರೋಗದ ಫಲವಾಗಿ) ಗೋಂದು ಸುರಿ, ಜಿನುಗು, ಸ್ರವಿಸು. **Gúmmy** ಗಮಿ (ಗು.) ಅಂಟಂಟಾದ ; ಜಿಗುಟಾದ ; ಗೋಂದು ತುಂಬಿರುವ, ಸ್ರವಿಸುವ. (ಕಾಲು, ಕಾಲ ಹರಡು) ಊದಿಕೊಂಡ, ಬಾತುಕೊಂಡ. **Gúmminess** (ನಾ.)

Gúmma ಗಮ (ನಾ.) (ರೋಗ ; ಬ. ವ., -s, -ta) ಮೇಹದ ಕುರು (ಒಳಗಿನ ದ್ರವ ಅಂಟಂಟಾಗಿರುವ ಕಾರಣದಿಂದ). **Gúmmatous** (ಗು.)

Gúmption ಗಂಪ್‌ಷನ್, ಗಮ್‌ಷ್‌ನ್ (ನಾ.) (ಬಳ. ಮಾ.) ಕೆಚ್ಚು ; ದಾಷ್ಟಿಕತನ ; ದಿಟ್ಟತನ ; ಧಾತಿ ; ಕಾರ್ಯಶಕ್ತಿ. (ವರ್ಣಚಿತ್ರ ಕಲೆ) ಬಣ್ಣಗಳನ್ನು ತಯಾರಿಸುವ ಕಲೆ ; ವರ್ಣ ವಾಹಕ.

Gun ಗನ್ (ನಾ.) ಕೋವಿಮದ್ದಿನಿಂದಾಗಲಿ ಇತರ ಸ್ಫೋಟಕ ಶಕ್ತಿಯಿಂದಾಗಲಿ ಗುಂಡು, ಮೊ. ಕ್ಷಿಪಣಿ(ಎಸುಗೆ)ಗಳನ್ನು ಎಸೆಯುವ ಲೋಹದ ಕೊಳವಿ, ನಳಿಕೆ ; ಫಿರಂಗಿ ; ತೋಪು ; ತುಪಾಕಿ ; ಬಂದೂಕು ; ರೈಫಲ್, ಮೊ. ವು [Sure as a g. ನಿಸ್ಸಂದೇಹವಾಗಿ ; ಖಂಡಿತವಾಗಿ ; ತಪ್ಪದೆ. Stand, stick, to one's guns ನೆರೆ ಬಿಟ್ಟು ಕದಲದಿರು ; ಪಟ್ಟು ಹಿಡಿ ; ಸಾಧಿಸು. Son of a g. ನೀಚ, ಕ್ಷುದ್ರ, —ಮನುಷ್ಯ. Great g. ಪ್ರಖ್ಯಾತ ; ಬಹಳ ಪ್ರಸಿದ್ಧನಾದವನು, ಗಣ್ಯನಾದವನು. Blow great guns (ಬಿರುಗಾಳಿ) ರಭಸವಾಗಿ ಬೀಸು]. (ಅಮೆ. ಸಂ. ಅಸಂ.) ಹಲವು ಗುಂಡುಗಳುಳ್ಳ ಸುತ್ತು ಕೋಶಗಳ ಪಿಸ್ತೂಲು. ಷಿಕಾರಿ ಗುಂಪಿನವನು ; ಗೋಲಂದಾಜ (ಸೈನಿಕ). **G.-barrel** ಬಂದೂಕಿನ ಕೋವಿ, ನಳಿಕೆ. **Gunboat** ಭಾರವಾದ ಫಿರಂಗಿ(ಗಳು) ಇರುವ ಸಣ್ಣ ಯುದ್ಧನೌಕೆ ; (ಯುದ್ಧದ) ಫಿರಂಗಿಹಡಗು. **G.-bus** (ಅಸಂ.) ಫಿರಂಗಿ (ಹೊತ್ತಿರುವ) ಫಲಕ ವಿಮಾನ. **G.-carriage** ಫಿರಂಗಿ ಗಾಡಿ. **G.-case** ಷಿಕಾರಿ ಬಂದೂಕಿನ ಕೋಶ. **G.-cotton** ನೈಟ್ರಿಕ್ ಮತ್ತು ಸಲ್ಫ್ಯೂರಿಕ್ ಆಮ್ಲಗಳಲ್ಲಿ ಅದ್ದಿ ತಯಾರಿಸಿದ ಹತ್ತಿಯ ಸ್ಫೋಟಕ (ಬಂಡೆಗಳನ್ನು ಒಡೆಯುವುದರಲ್ಲಿ ಉಪಯೋಗ) : ಸಿಡಿ ಹತ್ತಿ. **G.-fire** ಬಂದೂಕು ಹಾರಿಸುವುದು ; (ಮು., ಸೈನ್ಯ ಮತ್ತು ನಾವೆಯಲ್ಲಿ, ವೇಳೆ ತೋರಿಸುವುದಕ್ಕಾಗಿ ಬೆಳಗ್ಗೆ ಅಥವಾ ಸಂಜೆ ಹಾರಿಸುವ) ವೇಳೆಯ ಗುಂಡು. **G.-harpoon** (ತಿಮಿಂಗಿಲ, ಮೊ. ನ್ನು ಚುಚ್ಚಿ ಹಿಡಿಯಲು) ಕೈಯಿಂದ ಎಸೆಯದೆ ಬಂದೂಕಿನಿಂದ ಹಾರಿಸುವ ಈಟಿ. **G.-house** (ಬಂದೂಕಿನ ಮತ್ತು ಅದನ್ನು ಹಾರಿಸುವವನ ರಕ್ಷಣೆಗಾಗಿರುವ) ಬಂದೂಕು ಮನೆ. **G.-lock** ಬಂದೂಕುಮದ್ದನ್ನೂ ಗುಂಡನ್ನೂ ಹಾರಿಸುವ ಸಲಕರಣೆ ; ಚಾಪು. **Gunman** (ಮು., ಅಮೆ. ಸಂ. ಅಸಂ.) ಬಂದೂಕು ಹಿಡಿದಿರುವ ದರೋಡೆಕೋರ. **G.-metal** (ಹಿಂದೆ ಬಂದೂಕು ಮಾಡಲು ಉಪಯೋಗಿಸುತ್ತಿದ್ದ ತಾಮ್ರ ಮತ್ತು ತವರದ, ಅಥವಾ ತಾಮ್ರ ಮತ್ತು ಸತುವಿನ) ಮಿಶ್ರ ಲೋಹ ; ಬಂದೂಕು, ಫಿರಂಗಿ, — ಲೋಹ. **G.-pit** (ಶತ್ರುಗಳ ಫಿರಂಗಿಹೊಡೆತದಿಂದ ತಮ್ಮ ಫಿರಂಗಿಗಳನ್ನು ರಕ್ಷಿಸಿ ಕೊಳ್ಳುವ) ಫಿರಂಗಿ ಗುಣಿ. **Gunpowder** (ಪೊಟ್ಯಾಷ್, ಗಂಧಕ ಮತ್ತು ಇದ್ದಲು ಬೆರಕೆಮಾಡಿ ತಯಾರಿಸಿದ) (ಬಂದೂಕಿನ) ಹಾರು ಮದ್ದು (Gunpowder plot ಇಂಗ್ಲೆಂಡಿನ ಪಾರ್ಲಿಮೆಂಟ್ ಕಟ್ಟಡವನ್ನು ಹಾರಿಸಿಬಿಡುವುದಕ್ಕಾಗಿ ೧೬೦೫ನೆಯ ಇಸವಿ ನವೆಂಬರ್ ೫ರಲ್ಲಿ ನಡಸಿದ ಪಿತೂರಿ). ಕಣ ಕಣವಾಗಿ ಕಾಣುವ ಒಂದು ಬಗೆಯ ಉತ್ಕೃಷ್ಟವಾದ ಹಸುರು ತೇಯೆಲೆ. White gunpowder (ಹಲವು) ಆಧುನಿಕ ಸಿಡಿಮದ್ದು, ಸ್ಫೋಟಕ. **G.-room** ಯುದ್ಧನೌಕೆಯಲ್ಲಿ ಕೆಳದರ್ಜೆಯ ಅಧಿಕಾರಿಗಳ ಬಿಡಾರದ, ಅಥವಾ ಊಟದ, ಕೋಣೆ (ಆದಿಯಲ್ಲಿ ಗೋಲಂದಾಜರಿಗೂ ಅವರ ಸಹೋದ್ಯೋಗಿಗಳಿಗೂ ಇದ್ದದ್ದು). **G.-runner, -ning** ಅಧೀನ ರಾಜ್ಯಕ್ಕೆ ಬಂದೂಕುಗಳನ್ನೂ ಮದ್ದು ಗುಂಡುಗಳನ್ನೂ ಅಕ್ರಮವಾಗಿ, ಕಾನೂನಿಗೆ ವಿರುದ್ಧವಾಗಿ, ಸಾಗಿಸುವವನು, — ವುದು. **Gúnshot** ಗುಂಡುಹಾರುವ ಪರಮಾವಧಿ ದೂರ ; ಬಂದೂಕು ಹೊಡೆತ (Out of, within, gunshot ಫಿರಂಗಿ, ಬಂದೂಕು, ಹೊಡೆತದ ಮೇರೆ ಮೀರಿ, ಮೇರೆಯೊಳಗೆ). **G. shy** ಬಂದೂಕುಶಬ್ದಕ್ಕೆ ಹೆದರುವ (ಮು., ಬೇಟೆ ನಾಯಿಯ ವಿಷಯದಲ್ಲಿ). **Gunsmith** ಬಂದೂಕುಗಳನ್ನು ತಯಾರಿ, ರಿಪೇರಿ, ಮಾಡುವವನು : ಬಂದೂಕು ಕಮ್ಮಾರ. **G.-stock** ಬಂದೂಕು ನಳಿಕೆಯನ್ನು ಕೂರಿಸಿರುವ ಮರದ ಭಾಗ ; ಬಂದೂಕು ಬುಡ, ಕಾಂಡ. **Gunned** (ಗು.) ; **Gúnless** (ಗು.) ; **Gúnner** (ನಾ.) ಗೋಲಂದಾಜ (ಸೈನಿಕ ಅಥವಾ ಹುದ್ದೇದಾರ) ; (ನಾವೆ) ತೋಪುಖಾನೆಯ, ಮದ್ದಿನ ಮನೆಯ, ಅಧಿಕಾರಿ (G.'s daughter ದಂಡನೆಗಾಗಿ ಛಡಿಯೇಟನ್ನು ಕೊಡಲು ನಾವಿಕರನ್ನು ಬಗಿಯುತ್ತಿದ್ದ ಫಿರಂಗಿ. Kiss, marry, the g.'s d. ಛಡಿಯೇಟು ತಿನ್ನು). ಷಿಕಾರಿಯವನು. **Gúnnery** ದೊಡ್ಡ ಫಿರಂಗಿಗಳ ರಚನೆ, ತಯಾರಿ, ಮತ್ತು ಅವನ್ನು ಉಪಯೋಗಿಸುವ ವಿದ್ಯೆ ; ಫಿರಂಗಿ ವಿದ್ಯೆ (**G.-ship** ಫಿರಂಗಿಶಿಕ್ಷಣ ಕೊಡುವ ಹಡಗು. **G.-lieutenant** ಫಿರಂಗಿ ಶಿಕ್ಷಣ ಕೊಡಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯೋಗ್ಯತೆಯ ಸನ್ನದು ಪಡೆದ ಅಧಿಕಾರಿ ; ಫಿರಂಗಿ ಶಿಕ್ಷಣಾಧಿಕಾರಿ) ; ಫಿರಂಗಿ ಹಾರಿಸುವುದು. **Gúnning** (ನಾ.) (ಮು., ಬೇಟೆಗಾಗಿ) ಬಂದೂಕು ಹೊಡೆಯುವುದು. Go g. ಶಿಕಾರಿಗಾಗಿ ಹೋಗು.

Gúnnel[1] ಗನೆಲ್ (ನಾ.) ಹಾವುಮೀನಿನಾಕಾರದ ಒಂದು ಸಣ್ಣ ಕಡಲ ಮೀನು.

Gúnnel[2] = Gunwale.

Gúnner, &c. **Gun** ನೋಡಿ.

Gúnny ಗನಿ (ನಾ.) (ಸಾ., ಸಣಬಿನಂಥ ನಾರಿನ) (ಒರಟು) ಗೋಣಿ ತಟ್ಟು, ಗೋಣಿ ಚೀಲ.

Gúnter ಗಂಟರ್ (ನಾ.) ಮೋಜಿನಿಯ ಮತ್ತು ಸಮುದ್ರಯಾನದ ಲೆಕ್ಕಗಳನ್ನು ಸುಲಭವಾಗಿ ಗುಣಿಸುವುದಕ್ಕಾಗಿ ಉಪಯೋಗಿಸುವ, ಹಲವು ತೆರದ ಅಳತೆಗಳನ್ನೂ 'ಲಾಗರಿತಮ್ಸ್'ನ ಗಣನ ರೇಖೆಗಳನ್ನೂ ಮೈಮೇಲೆ ಗುರುತುಮಾಡಿರುವ, ಎರಡಡಿ ಉದ್ದದ, ಚಪ್ಪಟೆಯಾದ, ಅಳತೆಕೋಲು : ಗಂಟರ್ ಅಳತೆ ಪಟ್ಟಿ, ಕಡ್ಡಿ (= G.'s scale). ಕೆಳಕೂವೆಯ ಮರದಮೇಲೆ ಬಳೆಗಳ ಮೂಲಕ ಮೇಲಕ್ಕೂ ಕೆಳಕ್ಕೂ ಸರಿಯಬಲ್ಲ ತುದಿಕೂವೆ ಅಥವಾ ಅದರ ಪಟ : ಗಂಟರ್ ಕೂವೆ, ಪಟ. G.'s chain (೬೬ ಅಡಿ ಉದ್ದದ) ಮೋಜಿನಿ ಸರಪಣಿ ; ಗಂಟರ್ ಸರಪಣಿ. (Gunter ಎಂಬ ಪ್ರಸಿದ್ಧ ಗಣಿತಶಾಸ್ತ್ರಜ್ಞನ ಹೆಸರಿನಿಂದ)

Gúnwale, Gúnnel ಗನೆಲ್ (ನಾ.) ಹಡಗಿನ ಅಥವಾ ದೋಣಿಯ ಪಕ್ಕದ ಮೇಲಂಚು (G. to, under ನೀರಿನ ಮಟ್ಟಕ್ಕೆ ಸರಿಯಾಗಿ, — ಮಟ್ಟದ ಕೆಳಗೆ)

Gup ಗಪ್ (ನಾ.) (ಆಂ. ಇಂ.) = Gossip

Gurgitátion ಗರ್ಜಿಟೇಷನ್ (ನಾ.) ಉಕ್ಕೇಳುವುದು ; ಬುಳು ಬುಳನೆ ಕುದಿಯುವುದು ; — ವ ಶಬ್ದ ; (ದ್ರವದ) ತೀವ್ರವಾದ ಕುದಿತ.

Gúrgle ಗರ್ಗ್‌ಲ್ (ಕ್ರಿ., ನಾ.) (ಸೀಸೆಯಿಂದ ನೀರು ಸುರಿಯುವಾಗ, ಕಲ್ಲುಗಳ ಮಧ್ಯದಲ್ಲಿ ನೀರು ಹರಿಯುವಾಗ, ಆಗುವಂಥ) ಗುಳು ಗುಳು ಶಬ್ದ(ಮಾಡು) ; ಗುಳುಗುಳಿಸು ; ಗುಳುಗುಳಿಸುತ್ತ ಹೇಳು.

Gúrjun ಗರ್ಜನ್ (ನಾ.) ವೈದ್ಯದಲ್ಲಿ ಉಪಯೋಗಿಸುವ ಒಂದು ಬಗೆಯ ಗುಗ್ಗುಲವನ್ನು ಅಥವಾ ಎಣ್ಣೆಯನ್ನು ಕೊಡುವ ಈಸ್ಟ್ ಇಂಡಿಯದ ಒಂದು ದೊಡ್ಡ ಮರ.

Gúrkha ಗೂರ್ಕ (ನಾ.) ನೇಪಾಳದ ಗೂರ್ಕ ಪ್ರಾಂತದಲ್ಲಿ ಹಿಂದೆ ನೆಲಸಿ ರಾಜ್ಯಾಧಿಕಾರ ಮಾಡಿದ ರಜಪೂತರ ಬುಡಕಟ್ಟಿನವನು : ಗೂರ್ಕ (G. regiments ಬ್ರಿಟಿಷ್ ಸೈನ್ಯದಲ್ಲಿಯ ಗೂರ್ಕರ ದಳಗಳು)

Gúrry ಗರಿ (ನಾ.) (ಆಂ. ಇಂ.) (ಹಿಂದೂ ದೇಶದ) ಸಣ್ಣ ಕೋಟೆ.

Gúru ಗುರು (ನಾ.) (ಹಿಂದೂ) ಗುರು.

Gush ಗಷ್ (ಕ್ರಿ., ನಾ.) (ಥಟ್ಟನೆ ಹೊರಟ) ತುಂಬು ಪ್ರವಾಹ(ವಾಗಿ ನುಗ್ಗು, ಹರಿ, ಹೊರಡಿಸು) (ಭಾಷಣ, ಕರುಣೆ, ಮಮತೆ, ಮೊ. ಗಳ ವಿಷಯದಲ್ಲ ರೂಪ. ಸಹ) ; (ನೀರನ್ನು) ಯಥೇಚ್ಛವಾಗಿ ಹರಿಸು, ಹೊರಡಿಸು. ಉಕ್ಕಿ ಹರಿಯುವಂತೆ, ಭಾವೋದ್ರೇಕದ ಸೋಗಿನಿಂದ, (ಅತಿಯಾಗಿ) ಮಾತನಾಡು, ವರ್ತಿಸು. (ನಾ.) ನುಗ್ಗುಲು ; ರಭಸ ; ಉದ್ರೇಕ. **Gúsher** (ನಾ.) ಉಕ್ಕೇರುವವನು ; ಉಕ್ಕೇರುವದು ; (ಮು., ಅಮೆ. ಸಂ.) ಯಂತ್ರವಿಲ್ಲದೆ ತಾನಾಗಿ ಮೇಲುಕ್ಕುವ ಎಣ್ಣೆ ಬಾವಿ ; ಎಣ್ಣೆ ಬುಗ್ಗೆ. **Gúshingly** (ಕ್ರಿ. ವಿ.) ; **Gúshy** (ಗು.) ಭಾವೋದ್ರೇಕ ಪ್ರವೃತ್ತಿಯ ; ಉಕ್ಕಿ ಹರಿಯುವ.

Gússet ಗಸೆಟ್ (ನಾ.) ಯಾವುದಾದರ ಭಾಗವನ್ನು ಬಲಗೊಳಿಸುವುದಕ್ಕಾಗಲಿ ವಿಸ್ತಾರಗೊಳಿಸುವುದಕ್ಕಾಗಲಿ ಉಡುಪಿಗೆ ಸೇರಿಸುವ ತ್ರಿಕೋನ ಪಟ್ಟಿ ; ಮೂಲೆ ಪಟ್ಟಿ ; ತಿದಿಯ ಮಡಿಚಲಾಗುವ ಪಕ್ಕಗಳು ; ಬೂಟಿನ ಪಕ್ಕಗಳಲ್ಲಿ ಹಾಕುವ ಹಿಗ್ಗುಪಟ್ಟಿ. (ಒಂದು ಕಟ್ಟಡದ ಅಥವಾ ರಚನೆಯ ಕೋನಭಾಗವನ್ನು ಬಲಪಡಿಸುವುದಕ್ಕಾಗಿ ಹಾಕುವ) ಕಬ್ಬಿಣದ ಮೂಲೆಕಟ್ಟು. **Gússeted** (ಗು.)

Gust[1] ಗಸ್ಟ್ (ನಾ.) ಥಟ್ಟನೆ ಬಿರುಸಿನಿಂದ ನುಗ್ಗುವ ಗಾಳಿಯ ಹೊಡೆತ ; ಹೊಯ್ಗಾಳಿ. (ಮಳೆ, ಬೆಂಕಿ, ಹೊಗೆ, ಶಬ್ದ, ಭಾವ, ಮೊ. ಗಳ) ಹೊಡೆತ, ಉದ್ರೇಕ, ರಭಸದ ಹೊರಹೊಮ್ಮಿಕೆ. **Gústy** (ಗು.) ; **Gústily** (ಕ್ರಿ. ವಿ.)

Gust[2] ಗಸ್ಟ್ (ನಾ.) (ಪ್ರಾಚೀ. ಪ್ರ. ಮತ್ತು ಕಾವ್ಯ) ರುಚಿ ; ಸವಿ. ರಸನೇಂದ್ರಿಯ ; ಆಸ್ವಾದನ ಶಕ್ತಿ ; ತೀವ್ರ ರುಚಿ ; ತೀವ್ರಾಭಿರುಚಿ (Have a g. of ಸ್ವಾರಸ್ಯ ಗ್ರಹಿಸು ; ಮೆಚ್ಚು). **Gustátion** (ನಾ.) ರುಚಿ ನೋಡುವುದು ; ರುಚಿ ಶಕ್ತಿ ; ಆಸ್ವಾದನೆ. **Gústative** ಗಸ್ಟಟಿವ್ (ಗು.) ರುಚಿ ನೋಡುವ. **Gústatory** ಗಸ್ಟಟರಿ (ಗು.) ರುಚಿ ನೋಡುವ ; ರಸನೇಂದ್ರಿಯದ. **Gústo** ಗಸ್ಟೊ (ನಾ.) ಬಹು ರುಚಿ (ಪ್ರಾಚೀ. ಪ್ರ. ; Enjoy the full g. of ಸಂಪೂರ್ಣ ರಸಾಸ್ವಾದನೆ ಮಾಡು). ಉತ್ಸಾಹ ; ಕಟ್ಟಾಸಕ್ತಿ ; ಹೆಚ್ಚಳ.

Gut ಗಟ್ (ನಾ., ಕ್ರಿ.) (ಬ. ವ. ದಲ್ಲಿ) (ಮು., ಮೃಗಗಳ) ಕರುಳು ; (ಯಾವುದಾದರ) ಒಳಗಿರುವುದು ; ಒಳ ಹುರುಳು, ಅಂತರ್ಭಾಗ. (ಅಸಂ.) ಕೆಚ್ಚು ; ನರ ; ಸತ್ತ್ವ. ಕರುಳು (Blind g. ದೊಡ್ಡ ಕರುಳಿನ ಕುರುಡು ಭಾಗ ; ಅಂಧಾಂತ್ರ). (ಸಾ., ಬ. ವ. ದಲ್ಲಿ ; ಗ್ರಾಮ್ಯ) ಹಸಿವಾಗುವ ಭಾಗ: ಹೊಟ್ಟೆ. (ಪ್ರಾಣಿಗಳ ಕರುಳಿನಿಂದ ತಯಾರಿಸಿದ, ಪಿಟೀಲಗೆ ಹಾಕುವ) ಕರುಳ ದಾರ, ನರ, ತಂತು. (ರೇಷ್ಮೆಹುಳುಗಳ ಕರುಳಿನಿಂದ ಮಾಡಿದ) ಮೀನುಗಾಳದ ಹುರಿ. ಇಕ್ಕಟ್ಟಾದ ಜಲಮಾರ್ಗ ; ಜಲಸಂಧಿ. (ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ದೋಣಿಪಂದ್ಯಗಳಲ್ಲಿ) ನದಿಯ ಮುರಿವು. ಇಕ್ಕಟ್ಟು ಕಣಿವೆ, ಹಾದಿ ; (ಬೀದಿಯ) ಓಣಿ. (ಕ್ರಿ.) (ಮೀನು, ಮೊ. ಗಳ) ಕರುಳು ತೆಗೆ(ದು ಶುದ್ಧ ಮಾಡು) ; ಬರಿದು ಮಾಡು. (ಕಟ್ಟಡ, ಮೊ. ಗಳ) ಒಳಜೋಡಣೆಗಳನ್ನು ಕಿತ್ತುಹಾಕು, ನಾಶಮಾಡು ; ಸೂರೆ ಮಾಡು. (ಗ್ರಂಥ, ಮೊ. ಗಳ) ಸಾರವನ್ನು ಎತ್ತಿತೆಗೆ. (ಗ್ರಾಮ್ಯ) ಅತ್ಯಾಶೆಯಿಂದ, ಆತುರಾತುರವಾಗಿ, — ತಿನ್ನು, ಮುಕ್ಕು.

Gúttae ಗಟಿ (ನಾ. ; ಬ. ವ.) (ಮು., ಡೋರಿಕ್ ವಾಸ್ತುಶಿಲ್ಪದಲ್ಲಿ) ಲೋಲಕ ಮೊಲೆ ; ಸಾಲು ಲೋಲಕಗಳು.

Gutta-pércha ಗಟಪರ್ಚ (ನಾ.) ಮಲಯ ದ್ವೀಪಗಳಲ್ಲಿಯ ಹಲವು ಜಾತಿಯ ಮರಗಳಿಂದ ದ್ರವವಾಗಿ ಸ್ರವಿಸುವ, ಆರಿದರೆ ಗಟ್ಟಿಯಾಗುವ, ತೆಳುವಿನಲ್ಲಿ ಬಗ್ಗಿಸಲಾಗುವ, ಬಳುಕುವ, ಬೂದು ಬಣ್ಣದ, ಕೊಂಬಿನಂಥ ಪದಾರ್ಥ : 'ಗಟಪರ್ಚ.'

Gúttate ಗಟೇಟ್ (ಗು.) (ಪ್ರಕೃತಿ ವಿಜ್ಞಾನ) ಬಿಂದುಗಳಂತೆ ಚುಕ್ಕೆ ಚುಕ್ಕೆಯಾಗಿರುವ.

Gútter ಗಟರ್ (ನಾ., ಕ್ರಿ.) (ವಿರ. ಪ್ರ.) ನೀರು ಹರಿದು ಹರಿದು ಆದ ಕಾಲುವೆ ; ನೀರ ದಾರಿ. (ಮಳೆಯ ನೀರು ಹರಿದು ಹೋಗುವಂತೆ) ಸೂರಿನ ಕೆಳಗಿಟ್ಟಿರುವ ದೋಣಿ, ರಸ್ತೆಯ ಬದಿಯಲ್ಲಿರುವ ಕಾಲುವೆ ; ಚರಂಡಿ (**G.-child** ಬೀದಿ ಪೋರ ; ಭಿಕಾರಿ ಮಗು. Take child out of g. ಬಡವರ ನೆರೆಯಿಂದ ಮಗುವನ್ನು ಬಿಡಿಸು). (ದ್ರವ ಹರಿದುಹೋಗುವುದಕ್ಕಾಗಿರುವ) ತೆರೆದ ನಾಲೆ, ಕಾಲುವೆ, ಗಾಡಿ. [**G.-man** ಥಳುಕು ಪಳುಕು ಸಾಮಾನು ಮಾರುವ ಅಗ್ಗದ ಬೀದಿವ್ಯಾಪಾರಿ. **G. press, journalism** (ಕೀಳು, ತುಚ್ಛ, ಅಭಿರುಚಿಯುಳ್ಳವರಿಗಾಗಿ ಪ್ರಕಟಿಸುವ) ರೊಚ್ಚು ಪತ್ರಿಕೆಗಳು, — ಪತ್ರಿಕೋದ್ಯೋಗ. **G.-snipe** = G.-child]. (ಕ್ರಿ.) ಸಾಲು, ಕಾಲುವೆ, ಮೋರಿ, — ಮಾಡು, ಹೊಡೆ, ಆಗು ; ಚರಂಡಿ ಕಟ್ಟು. ಕಾಲುವೆಯಾಗಿ ಹರಿ ; ಕೋಡಿ ಹರಿ. (ಮೋಂಬತ್ತಿ) ಒಂದು ಕಡೆ ಕಾಲುವೆ ಬಿದ್ದು, ದ್ರವ ಹರಿದು, ವೇಗ ಕರಗಿಹೋಗು.

Gúttle ಗಟ್‌ಲ್ (ಕ್ರಿ.) ಹೊಟ್ಟೆಬಾಕನಂತೆ ತಿನ್ನು, ಮುಕ್ಕು. **Gúttler** (ನಾ.)

Gúttural ಗಟರಲ್ (ಗು., ನಾ.) ಗಂಟಲಿನ ; (ಧ್ವನಿಯ ವಿಷಯದಲ್ಲಿ) ಗಂಟಲನಲ್ಲಿ, ಅಥವಾ ನಾಲಗೆಯ ಹಿಂಭಾಗ ಮತ್ತು ತಾಲುಗಳಿಂದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹುಟ್ಟುವ; ಕಂಠ್ಯ (ವರ್ಣ, ಧ್ವನಿ) (ಉದಾ., ಕ, ಗ). **Gútturalize** (ಕ್ರಿ. ಸಕ.) ಕಂಠ್ಯವಾಗಿ ಉಚ್ಚರಿಸು. **Gútturalism** (ನಾ.) ಕಂಠ್ಯ ಗುಣ, ಲಕ್ಷಣ. **Gútturally** (ಕ್ರಿ. ವಿ.); **Gútturo-** ಗಟುರೊ — (ಸ. ಪೂ. ಪ.) ಗಂಟಲು —, ಕಂಠ —. **G.-maxillary** ಗಂಟಲು ಮತ್ತು ದವಡೆಗೆ ಸಂಬಂಧಿಸಿದ.

Gútty ಗಟಿ (ನಾ.) (ಗಾರ್ಲ್ಸ್ ಆಟ) 'ಗಟಪರ್ಚ' ಚೆಂಡು.

Guy[1] ಗೈ (ನಾ., ಕ್ರಿ. ಸಕ.) (ಎತ್ತುಯಂತ್ರದ ಹೊರೆ, ಮೊ. ವನ್ನು ಓಲದಂತೆ ಸ್ತಿಮಿತಪಡಿಸಲು, ಅಥವಾ ಡೇರೆ, ಮೊ. ವನ್ನು ಅದರ ಸ್ಥಳದಲ್ಲಿರುವಂತೆ ಭದ್ರಪಡಿಸಲು, ಕಟ್ಟುವ) ಹಗ್ಗ, ಸರಪಣಿ, ಮೊ. ವು. (ಕ್ರಿ.) — ಇಂದ ಭದ್ರಪಡಿಸು, ಬಿಗಿ.

Guy[2] ಗೈ (ನಾ; ಬ. ವ. -s; ಕ್ರಿ.) (ಇಂಗ್ಲೆಂಡಿನಲ್ಲಿ ಪ್ರತಿ ವರ್ಷ ನವೆಂಬರ್ ೫ನೆಯ ತಾರೀಖಿನ ದಿನ ಸುಡುವ) 'ಗೈ ಫಾಕ್ಸ್' ಎಂಬವನ ಆಕೃತಿ, ಬೊಂಬೆ, ಪಟ (೧೬೦೫ನೆಯ ಇಸವಿ ನವೆಂಬರ್ ೫ನೆಯ ತಾರೀಖಿನ ದಿನ, ಸದಸ್ಯರು ಸೇರಿರುವಾಗ, ಪಾರ್ಲಿಮೆಂಟ್ ಕಟ್ಟಡವನ್ನು Guy Fawkes ಎಂಬವನ ಮುಂದಾಳುತನದಲ್ಲಿ ಸಿಡಿಮದ್ದಿನಿಂದ ಧ್ವಂಸ ಮಾಡಲು ಗೊತ್ತುಮಾಡಿಕೊಂಡಿದ್ದ ಸಂಚಿನ ಸ್ಮಾರಕವಾಗಿ). ವಿಕಾರ ವೇಷದ ಮನುಷ್ಯ; ಭಯಂಕರ ರೂಪ. (ಅಮೆ. ಸಂ. ಅಸಂ.) ಆಳು, ಆಸಾಮಿ. (ಅಸಂ.) (ತಲೆ ತಪ್ಪಿಸಿಕೊಂಡು) ಓಡಿಹೋಗುವುದು; ಪರಾರಿಯಾಗುವುದು (Give the g. to ಪರಾರಿಯಾಗು; ಕಂಬಿ ಕೀಳು. Do a g. ಕಣ್ಮರೆಯಾಗು). (ಕ್ರಿ.) ಆಕೃತಿಯಲ್ಲಿ ತೋರಿಸು, ಮರೆಯಿಸು. ಅಪಹಾಸ್ಯ ಮಾಡು; ಕುಚೋದ್ಯ, ಗೇಲಿ, ಮಾಡು. (ಅಸಂ.) ಓಡಿಹೋಗು.

Gúzzle ಗಜ಼ಲ್ (ಕ್ರಿ.) ಬಕ ಬಕನೆ ತಿನ್ನು; ಗಟ ಗಟನೆ ಕುಡಿ. (ಹಣ, ಮೊ. ನ್ನು) ತಿನ್ನುವುದರಲ್ಲಿ, ಕುಡಿತದಲ್ಲಿ, ನೀಗಿಬಿಡು (*Away* ಉಪ. ದೊಡನೆ). **Gúzzler** (ನಾ.)

Gym ಜಿಮ್ (ನಾ.) (ಅಸಂ.) Gymnasium, Gymnastics ಎಂಬ ಪದಗಳ ಸಂಕ್ಷಿಪ್ತ (Gymnasium ನೋಡಿ)

Gymkhána ಜಿಮ್‌ಖಾನ (ನಾ.) (ಆಂ. ಇಂ.) ಅಂಗಸಾಧನೆಗೆ ಅನುಕೂಲಪಡಿಸಿರುವ ಸಾರ್ವಜನಿಕ ಸ್ಥಳ; ವ್ಯಾಯಾಮ ರಂಗ; ಆಟದ ಮೈದಾನ. ವ್ಯಾಯಾಮ ಕ್ರೀಡಾ ಪ್ರದರ್ಶನ.

Gymnásium ಜಿಮ್ನೇಸಿಯಮ್ (ನಾ.; ಬ. ವ. -iums, -ia) ತಕ್ಕ ಉಪಕರಣಗಳೊಡನೆ ಕೂಡಿದ ಅಂಗಸಾಧನೆಯ ಸ್ಥಳ, ಕಟ್ಟಡ; ವ್ಯಾಯಾಮ ಶಾಲೆ; ಗರುಡಿ ಮನೆ; ತಾಲಿಂಖಾನೆ. (ಯೂರೋಪಿನಲ್ಲ, ಮು., ಜರ್ಮನಿಯಲ್ಲಿ) ವಿಶ್ವವಿದ್ಯಾನಿಲಯಗಳಿಗೆ ವಿದ್ಯಾರ್ಥಿಗಳನ್ನು ತರಬೇತು ಮಾಡುವ ಮೇಲು ದರ್ಜೆಯ ವಿದ್ಯಾಶಾಲೆ [ಉಚ್ಚಾರಣೆ: ಜಿಮ್ನಾ —; ಬ. ವ. (ಕೆಲವು ವೇಳೆ) -ien]. **Gymnásial** (ಗು.) ಇಂಥ ವಿದ್ಯಾಶಾಲೆಯ. **Gýmnast** ಜಿಮ್‌ನ್ಯಾಸ್ಟ್ (ನಾ.) ಅಂಗಸಾಧನೆಯಲ್ಲಿ ಪ್ರವೀಣ; ಗರುಡಿ ಸಾಧಕ; ಮಲ್ಲ. **Gymnástic** (ಗು., ನಾ.) (ಶಿಕ್ಷಣ, ಚಟುವಟಿಕೆ, ಉದ್ಯಮ, ಮೊ. ವನ್ನೊಳಕೊಂಡ) ಅಂಗಸಾಧನೆಯ; ಬುದ್ಧಿಸಾಧನೆಯ. (ನಾ.) (ಬುದ್ಧಿಗೆ ಒಂದು ಸಾಧನೆಯೆಂದು ಪರಿಗಣಿಸುವ) ಶಿಕ್ಷಣ ಕ್ರಮ; ಸಾಧನೆ; ಕಸರತ್ತು (Grammar is a good g. ವ್ಯಾಕರಣವು ಬುದ್ಧಿಗೆ ಒಳ್ಳೆಯ ಶಿಕ್ಷಣ). (ಬ. ವ. ದಲ್ಲಿ) (ಮಾಂಸಖಂಡಗಳನ್ನು ಬಲಿಸುವ) ಅಂಗಸಾಧನೆಗಳು (ಮು., ಗರುಡಿಯಲ್ಲಿ ಮಾಡುವಂಥವುಗಳು. ಏ. ವ. ದ ಅರ್ಥದಲ್ಲಿ ಸಹ). **Gymnástically** (ಕ್ರಿ. ವಿ.)

Gymno- ಜಿಮ್ನೊ — (ಸ. ಪೂ. ಪ.) ಬತ್ತಲೆ —; ನಗ್ನ —. **Gymnósophist** ಜಿಮ್ನಾಸೊಫಿಸ್ಟ್ (ನಾ.) ಅತ್ಯಲ್ಪ ಹೊದಿಕೆಯಿಂದಲೊ ಹೊದಿಕೆಯಿಲ್ಲದೆಯೊ ಸಂಚರಿಸುತ್ತ ಧ್ಯಾನಾಸಕ್ತರಾಗಿರುತ್ತಿದ್ದ ಹಿಂದಿನ ಕಾಲದ ಹಿಂದೂ ಸಾಧುಪಂಗಡದವನು; ಸಂನ್ಯಾಸಿ. **Gymnósophy** (ನಾ.) — ಮತ, ಪಂಥ, ತತ್ತ್ವ. **Gymnospérmous** ಜಿಮ್ನೊಸ್ಪರ್ಮಸ್ (ಗು.) (ಸ. ವಿ., ಪ್ರಾ. ವಿ ಗಳಲ್ಲಿ) ಬೀಜಪಾತ್ರದ ರಕ್ಷಣೆಯಿಲ್ಲದ ಬೀಜಗಳುಳ್ಳ; ನಗ್ನ ಬೀಜಿ. ವಿರಕ್ತ.

Gymnótus ಜಿಮ್ನೋಟಸ್ (ನಾ.) ವಿದ್ಯುದಾಘಾತ ಕೊಡಬಲ್ಲ ಒಂದು ಹಾವುಮೀನು.

Gynaecéum ಜೈ (ಜಿ, ಗೈ, ಗಿ) ನಿಸೀಅಮ್ (ನಾ.) (ಗ್ರೀಕ್ ಮತ್ತು ರೋ. ಪ್ರಾ.) ಮನೆಯಲ್ಲಿ ಹೆಂಗಸರ ಕೋಣೆಗಳು; ಅಂತಃಪುರ; ಜನಾನ. (ಸ. ವಿ.) ಹೂವಿನಲ್ಲಿರುವ ಸ್ತ್ರೀ ಅಂಗಗಳು; ಶಲಾಕೆ ಮತ್ತು ಅಂಡಾಶಯ (ಹಲವು ವೇಳೆ -oécium). **Gynaéco-** (ಸ. ಪೂ. ಪ.) ಸ್ತ್ರೀ—. **Gynaecócracy** — ಕಾಕ್ರಸಿ (ನಾ.) ಸ್ತ್ರೀ ಪ್ರಭುತ್ವ; ಹೆಂಗಸರ ರಾಜ್ಯಭಾರ; ಹೆಣ್ಣಾಳಿಕೆ. **Gynándrous** — ನ್ಯಾಂಡ್ರಸ್ (ಗು.) (ಸ. ವಿ.) ಶಲಾಕೆಯೂ ಕೇಸರಗಳೂ ಒಂದೇ ಸ್ತಂಭಾಕೃತಿಯಲ್ಲಿ ಕೂಡಿಕೊಂಡಿರುವ; ಕೇಸರ ಶಲಾಕೆ (Orchids ಎಂಬ ಹೂವುಗಳಲ್ಲಿರುವಂತೆ). **Gyn(o)**[1]- (Gynaeco- ಎಂಬುದರ ಸಂಕ್ಷಿಪ್ತ ರೂಪ) (ಸ. ಪೂ. ಪ.) (ಮು., ಸ. ವಿ. ದಲ್ಲಿ) ಶಲಾಕಾ—; ಅಂಡಾಶಯ—. **Gýnobase** ಹೂವಿನ ಸ್ತ್ರೀ ಅಂಗಗಳನ್ನು ಹೊತ್ತಿರುವ ವಿಸ್ತೃತ ಆಧಾರ: ಶಲಾಕಾಧಾರ. **Gýnophore** ಅಂಡಾಶಯ ವೃಂತ; (ಪ್ರಾ. ವಿ.) (ಕೆಲವು ಜಲಚರಗಳಲ್ಲಿ) ಅಂಕುರ ಪ್ರಾಣಿಧಾರಿ (ಶಾಖೆ) **Gyn(o)**[2]- ಸ್ತ್ರೀ—. **Gynócracy** = Gynaecocracy. **-gynous** — ಜಿ(ಗಿ)ನಸ್ (ಉ. ಪ್ರ.) — ಶಲಾಕಿ (Androg., Tetrag.)

Gyp[1] ಜಿಪ್ (ನಾ.) (ಕೇಂಬ್ರಿಜ್ ಮತ್ತು ಡರ್ಹ್ಯಾಮ್‌ಗಳಲ್ಲಿ) ಪ್ರೌಢ ವಿದ್ಯಾಶಾಲೆಯ ಜವಾನ; 'ಜಿಪ್'. (ಅಮೆ. ಸಂ. ಅಸಂ.) ಕಳ್ಳ. **G.-room** ಜಿಪ್ಪನ (ಅಡಿಗೆ ವಸ್ತುಗಳ) ಉಗ್ರಾಣ.

Gyp[2] ಜಿಪ್ (ನಾ.) (ಅಸಂ.) Give one g. ನಿಷ್ಕರುಣೆಯಿಂದ ಬಯ್ಯಿ, ದಂಡಿಸು; ಹೊಡೆದು ಕೆಡವು; ಬಲ ಹಾಕು.

Gýps(um) ಜಿಪ್ಸ್, ಜಿಪ್ಸಮ್ (ನಾ.) ಜಲಾಂಶದಿಂದ ಕೂಡಿದ 'ಕ್ಯಾಲ್ಸಿಯಮ್ ಸಲ್ಫೇಟ್' ಖನಿಜ (ಇದರಿಂದ Plaster of Paris ಎಂಬುದನ್ನು ಮಾಡುತ್ತಾರೆ): ಜಿಪ್ಸಮ್; ಜಿಪ್ಸಮ್ ಗೊಬ್ಬರ. **Gýpsum** (ಕ್ರಿ. ಸಕ.) (ಜಮೀನಿಗೆ) ಜಿಪ್ಸಮ್ ಗೊಬ್ಬರ ಹಾಕು. **Gypsógraphy** ಜಿಪ್ಸಾಗ್ರಫಿ (ನಾ.) ಜಿಪ್ಸಮ್ಮಿನಮೇಲೆ ಅಥವಾ 'ಪ್ಲಾಸ್ಟರ್ ಆಫ್ ಪ್ಯಾರಿಸ್ಸಿ'ನಮೇಲೆ ಕೆತ್ತುವುದು; ಈ ಕಲೆ. **Gýps(e)ous** (ಗು.) ಜಿಪ್ಸಮ್ಮಿನಂಥ; ಜಿಪ್ಸಮ್ ಸ್ವಭಾವದ; ಜಿಪ್ಸಮ್ಮುಳ್ಳ. **Gypsíferous** (ಗು.) ಜಿಪ್ಸಮ್ ದೊರೆಯುವ, ಕೊಡುವ.

Gýpsy = Gipsy.

Gýrant ಜೈರಂಟ್ (ಗು.) ವೃತ್ತಾಕಾರದಲ್ಲಿ ಅಥವಾ ಸುರುಳಿಯಾಕಾರದಲ್ಲಿ ಸುತ್ತುತ್ತಿರುವ. **Gýrate** ಜೈರೆಟ್ (ಗು.) (ಸ. ವಿ.) ಉಂಗುರುಂಗುರಗಳಾಗಿ, ಸುತ್ತು ಸುತ್ತುಗಳಾಗಿ, ಅಳವಟ್ಟಿರುವ. **Gyráte** ಜೈರೇಟ್ (ಕ್ರಿ. ಅಕ.) ವೃತ್ತಾಕಾರವಾಗಿ, ಸುರುಳಿಯಾಕಾರವಾಗಿ, — ಹೋಗು, ಸುತ್ತು, ತಿರುಗು; ತಿರ್ರನೆ ತಿರುಗು; ಸುರುಳಿಯಾಗಿ ಸುತ್ತು. **Gyrátion** (ನಾ.) — ಸುತ್ತುವುದು, ತಿರುಗುವುದು; (ಪರಿ)ಭ್ರಮಣ. **Gýratory** (ಗು.); **Gyre** ಜೈಅರ್ (ಕ್ರಿ. ಅಕ., ನಾ.) (ಕಾವ್ಯ) = Gyrate (ಕ್ರಿ.); (ನಾ.) = Gyration. **Gýro** ಜೈರೋ (ನಾ.) = Gyroscope (ಮುಂದೆ ನೋಡಿ). **Gýro-compass** (ಅಯಸ್ಕಾಂತ ದಿಕ್ಸೂಚಿಯನ್ನು ಉಪಯೋಗಿಸಲಾಗದೆ ಇರುವಾಗ ದಿಕ್ಸೂಚಿಯಂತೆ ಉಪಯೋಗಿಸಲು ಅಳವಡಿಸಿರುವ) ಭ್ರಮಣ ದಿಕ್ಸೂಚಿ. **Gyro-** (ಸ. ಪೂ. ಪ.) ಭ್ರಮಣ—. **Gýrograph** (ನಾ.) ಭ್ರಮಣ ಸಂಖ್ಯೆಗಳನ್ನು ಗುರುತುಮಾಡುವ ಸಲಕರಣೆ: ಭ್ರಮಣ ಲೇಖಕ. **Gyroídal** ಜೈರಾಯ್ಡಲ್ (ಗು.) ಸುರುಳಿಯಾಗಿ ಅಳವಟ್ಟ, ಅಳವಡಿಸಿದ. **Gýroscope** ಜೈರೊಸ್ಕೋಪ್ (ನಾ.) (ಒಂದು ಲೋಹದ ವಲಯದಲ್ಲಿ ಅಳವಡಿಸಿದುದಾಗಿ, ತನ್ನ ಅಕ್ಷವು ಯಾವ ದಿಕ್ಕಿನಲ್ಲಾದರೂ ಸುತ್ತುವ ಸೌಲಭ್ಯವುಳ್ಳ, ಗಟ್ಟಿಯಾದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿಭ್ರಮಣ ಚಕ್ರ ; ಭ್ರಮಕ ; (ಪರಿಭ್ರಮಣ ಕಾಯಗಳ ಚಲನ ತತ್ತ್ವವನ್ನು ನಿರೂಪಿಸುವುದಕ್ಕಾಗಿ ಉಪಯೋಗಿಸುವ ಸಲಕರಣೆ) : ಭ್ರಮಣ ದರ್ಶಕ. **Gýrostat** — ಸ್ಟ್ಯಾಟ್ (ನಾ.) ಒಂದು ಕೋಶದಲ್ಲಿ ಅಳವಡಿಸಿರುವ ಭ್ರಮಣ ದರ್ಶಕ.

Gyróse ಜೈರೋಸ್ (ಗು.) (ಸ. ವಿ.) ಮಡಿಸಿಕೊಂಡು ತೆರೆ ತೆರೆಯಾಗಿರುವ ; ಅಲೆಗಳಂತೆ ರೇಖೆಗಳುಳ್ಳ.

Gyve ಜೈವ್ (ನಾ. ; ಸಾ., ಬ. ವ. ದಲ್ಲಿ ; ಕ್ರಿ. ಸಕ.) (ಕಾವ್ಯ) ಸಂಕೋಲೆ (ತೊಡಿಸು) ; ಬೇಡಿ (ಹಾಕು)

H

H ಏಚ್. ಇಂಗ್ಲಿಷ್ ವರ್ಣಮಾಲೆಯ ಎಂಟನೆಯ ಅಕ್ಷರ. Drop one's h's (ಉಚ್ಚರಿಸುವಾಗ) 'ಹ' ಕಾರ ಲೋಪಿಸು. **H.-iron** ಅಡ್ಡ ಕೊಯ್ಲಿನಲ್ಲಿ H ಆಕಾರವುಳ್ಳ ಕಬ್ಬಿಣದ ಸರ(ಕಟ್ಟು)

ಸಂಕ್ಷಿಪ್ತಗಳು : (೧) H[1] (Hard) (ಸೀಸದ ಕಡ್ಡಿಗಳ ವಿಷಯದಲ್ಲಿ) ಗಟ್ಟಿ : **HB** (Hard black) ಗಟ್ಟಿ ಕಪ್ಪು. **H, HH, HHH** (Hard, double, treble, hard) ಗಟ್ಟಿ, ಇಮ್ಮಡಿ ಗಟ್ಟಿ, ಮುಮ್ಮಡಿ ಗಟ್ಟಿ. H[2] (Head) ಮುಖ್ಯ ; ಪ್ರಧಾನ : **H. Q.** (Head quarters) ಪ್ರಧಾನ ಕಾರ್ಯಾಲಯ. H[3] (His or Her) (ಬಿರುದುಗಳಲ್ಲಿ) : **H. B. M.** (His, Her, Britannic Majesty) ಬ್ರಿಟನ್ನಿನ ಮಹಾ ಸನ್ನಿಧಾನ. **H. E.** (His, Her, Excellency) ಘನತೆವೆತ್ತ. **H. I. H.** (His, Her, Imperial Highness) (ಚಕ್ರವರ್ತಿಯ ಮಕ್ಕಳ ಬಿರುದು). **H. R. H.** (His, Her, Royal Highness) (ದೊರೆಮಕ್ಕಳ ಬಿರುದು). **H. I. M.** (His, Her, Imperial Majesty) ಚಕ್ರವರ್ತಿ ಸಾರ್ವಭೌಮ(ಮೆ). **H. M.** (His, Her, Majesty) ಮಹಾ ಪ್ರಭು. H[4] (High) ಪ್ರಬಲ ; ತೀವ್ರ ; ಉಚ್ಚ : **H. E.** (High Explosive) ಪ್ರಬಲವಾದ ಸಿಡಿಮದ್ದು. **H. G.** (High German) (German ನೋಡಿ). H[5] (Highest) ಮಹತ್ತಮ : **H. C. F.** (Highest Common Factor) ಮಹತ್ತಮ ಸಾಮಾನ್ಯ ಅಪವರ್ತನ. H[6] (Home) : **H. O.** (Home Office) ಒಳ ಆಡಳಿತದ ಕಚೇರಿ. H[7] (House) : **H. C., H. L.** (House of Commons, — Lords) ಪಾರ್ಲಿಮೆಂಟಿನ ಪ್ರಜಾ (ಪ್ರತಿನಿಧಿ) ಸಭೆ, ಶ್ರೀಮಂತ ಸಭೆ. **h.** [hour(s)] ಗಂಟೆ(ಗಳು)

(೨) **Heb.** (Hebrews) ಯೆಹೂದ್ಯರು. **hg.** (Hectogram) ನೂರು ಗ್ರ್ಯಾಮು. **hhd.** (Hogshead) (೫೨·೫ ಇಂಪೀರಿಯಲ್ ಗ್ಯಾಲನ್ನುಗಳಿಗೆ ಸಮವಾದ) ದ್ರವದ ಒಂದು ಅಳತೆ. **hl.** (Hectolitre) ನೂರು ಲೀಟರುಗಳು. **hm.** (Hectometre) ನೂರು ಮೀಟರುಗಳು. **Hon.** (Honourable) ಘನ(ತೆವೆತ್ತ). **Hon.** (Honorary) ಗೌರವ(ದ). **Hon. Sec.** (Honorary Secretary) ಗೌರವ ಕಾರ್ಯದರ್ಶಿ. **h. p.** (Horse-power) ಅಶ್ವ ಸಾಮರ್ಥ್ಯ.

Ha ಹಾ (ಭಾವ. ಅವ್ಯ.) (ಆಶ್ಚರ್ಯ, ಸಂತೋಷ, ಸಂಶಯ, ಜಯ, ಕೋಪ, ಮೊ. ವನ್ನು ಸೂಚಿಸುವ ಪದ) ಹಾ !

Hábeas córpus ಹೇಬಿಅ್ಯಸ್ ಕಾರ್ಪಸ್ (ನಾ.) (ಮು., ಒಬ್ಬನನ್ನು ಬಂಧನದಲ್ಲಿಟ್ಟಿರುವುದು ನ್ಯಾಯವಿಹಿತವೊ ಅಲ್ಲವೊ ಎಂಬುದನ್ನು ವಿಚಾರಣೆ ಮಾಡುವುದಕ್ಕಾಗಿ ನ್ಯಾಯಾಧಿಪತಿಯ ಮುಂದೆ) ವ್ಯಕ್ತಿಯನ್ನು ಸಾಕ್ಷಾತ್ತಾಗಿ ಹಾಜರುಮಾಡಬೇಕೆಂದು ಕೊಟ್ಟ ಆಜ್ಞಾಪತ್ರ ; ಆಸಾಮಿ ಹಾಜರಿ ಹುಕುಂ. H. C. Act (ಇಂಗ್ಲೆಂಡಿನ ಎರಡನೆಯ ಚಾರ್ಲ್ಸ್ ದೊರೆ ಈ ಆಜ್ಞೆಯನ್ನು ಜಾರಿಗೆ ತರಲು ಮಾಡಿದ) ಆಸಾಮಿ ಹಾಜರಿಯ ಕಾನೂನು.

Háberdasher ಹ್ಯಾಬರ್‌ಡ್ಯಾಷರ್ (ನಾ.) ಉಡುಪಿಗೆ ಸಂಬಂಧಪಟ್ಟ ದಾರ, ಸೂಜಿ, ಪಟ್ಟಿ, ಅಲಂಕಾರ ವಸ್ತು, ಮೊ. ಗಳ ಚಿಲ್ಲರೆ ವ್ಯಾಪಾರಿ. ಚೀನಿ ವ್ಯಾಪಾರಿ. **Háberdashery** (ನಾ.)

Hábergeon ಹ್ಯಾಬರ್ಜನ್ (ನಾ.) ತೋಳಿಲ್ಲದ ಉಕ್ಕಿನ ಕವಚ.

Hábile ಹ್ಯಾಬಿಲ್ (ಗು.) ಚಾಕಚಕ್ಯವುಳ್ಳ ; ನಿಪುಣನಾದ ; ಕೈಜಾಣ್ಮೆಯ ; ಚತುರ(ತೆಯ)

Habíliment ಹಬಿಲಿಮೆಂಟ್ (ನಾ.) (ಬ. ವ. ದಲ್ಲಿ) ಉದ್ಯೋಗಕ್ಕೆ, ಸಂದರ್ಭಕ್ಕೆ, ತಕ್ಕ ಉಡುಪು, ಪೋಷಾಕು ; (ಹಾಸ್ಯ ಪ್ರ.) ಸಾಮಾನ್ಯ ಬಟ್ಟೆ ಬರೆ, ಉಡುಪು. (ಏ. ವ. ದಲ್ಲಿ) ಸಜ್ಜು ; ಉಡಿಗೆ ತೊಡಿಗೆ ; ವೇಷ ಭೂಷಣ.

Habílitate ಹಬಿಲಿಟೇಟ್ (ಕ್ರಿ.) (ಗಣಿ, ಮೊ. ವನ್ನು) ಕೆಲಸಕ್ಕೆ ಅಣಿ ಮಾಡು, ಸಜ್ಜುಗೊಳಿಸು. (ಗಣಿಯ ಕೆಲಸಕ್ಕೆ) ಬಂಡವಾಳವೊದಗಿಸು. (ಮು., ಜರ್ಮನ್ ವಿಶ್ವವಿದ್ಯಾನಿಲಯದಲ್ಲಿ) ಉದ್ಯೋಗಕ್ಕೆ ಅರ್ಹತೆ, ಶಿಕ್ಷಣ, ಪಡೆ. **Habilitátion** (ನಾ.)

Hábit[1] ಹ್ಯಾಬಿಟ್ (ನಾ., ಕ್ರಿ. ಸಕ.) ಪದ್ಧತಿ ; ರೂಢಿ ; ಅಭ್ಯಾಸ ; ಬಳಕೆ ; ವಾಡಿಕೆ ; ಪಾಟಿ ; ಚಾಳಿ ; ಚಾಲು ; ಚಟ. ಮನಃ ಪ್ರಕೃತಿ ; — ಪ್ರವೃತ್ತಿ ; ಸ್ವಭಾವ (Habit of mind ಮನಸ್ಸಿನ ಸ್ವಭಾವ) ; ದೇಹ ಪ್ರಕೃತಿ (A man of corpulent habit ಸ್ಥೂಲ ದೇಹ ಪ್ರಕೃತಿಯವನು). (ಸ. ವಿ., ಪ್ರಾ.ವಿ.) ಬೆಳವಣಿಗೆಯ ರೀತಿ. (ಪ್ರಾಚೀ. ಪ್ರ.) ಉಡುಪು (ಮು., ಮತಧರ್ಮಕ್ಕೆ ಸಂಬಂಧಪಟ್ಟದ್ದು). (ಪಾಶ್ಚಾತ್ಯ) ಸ್ತ್ರೀಯ ಕುದುರೆಸವಾರಿಯ ಉಡುಪು (= Riding-h.). (ಕ್ರಿ.) ಉಡುಪು ತೊಡಿಸು ; ಬಟ್ಟೆ ಹಾಕು. **Habítual** ಹಬಿಟ್ಯುಅಲ್ (ಗು.) ಅಭ್ಯಾಸದ ; ರೂಢಿಯ ; ಪದ್ಧತಿಯ ; ಸಂಪ್ರದಾಯದ ; ಬಳಕೆಯ ; ವಾಡಿಕೆಯ ; ನಿತ್ಯಗಟ್ಟಳೆಯ. (ಗೊತ್ತಾದ) ಚಾಳಿಗೆ, ಅಭ್ಯಾಸಕ್ಕೆ, ಬಿದ್ದ (A h. drunkard ಕುಡುಕ ಚಾಳಿಯವನು). **Habítually** (ಕ್ರಿ. ವಿ.) ; **Habítualness** (ನಾ.) ; **Habítuate** ಹಬಿಟ್ಯುಯೇಟ್ (ಕ್ರಿ. ಸಕ.) ರೂಢಿ, ಅಭ್ಯಾಸ, ಮಾಡು (ಮಾಡಿಕೊ) ; ಬಳಕೆಗೆ ತರು ; ಒಗ್ಗಿಸು ; ಒಗ್ಗಿಸಿಕೊ (*To* ಉಪ. ದೊಡನೆ). **Habituátion** (ನಾ.) ; **Hábitude** ಹ್ಯಾಬಿಟ್ಯೂಡ್ (ನಾ.) ಮನಸ್ಸಿನ ಅಥವಾ ಶರೀರದ ಪ್ರಕೃತಿ, ಪದ್ಧತಿ ; ಸಂಪ್ರದಾಯ ; ಬಳಕೆ ; ಸ್ವಭಾವ ; ಅಭ್ಯಾಸ. **Habítue** (F) ಹಬಿಟ್ಯುವೆ, ಅಬಿ(ಲ)ಟುವೆ (ನಾ.) (ಒಂದು ಸ್ಥಳಕ್ಕೆ) ವಾಡಿಕೆಯಾಗಿ ಬಂದು ಹೋಗುವವನು ; (ಒಂದು ಸ್ಥಳದಲ್ಲಿ) ವಾಡಿಕೆಯಾಗಿ ವಾಸಮಾಡುವವನು.

Hábit[2] ಹ್ಯಾಬಿಟ್ (ಕ್ರಿ. ಸಕ.) (ಪ್ರಾಚೀ. ಪ್ರ.) ವಾಸಿಸು ; ವಾಸಮಾಡು. **Hábitable** (ಗು.) ವಾಸಮಾಡುವುದಕ್ಕಾಗುವ ; ವಾಸ ಯೋಗ್ಯ. **Habitabílity** (ನಾ.) ; **Hábitableness** (ನಾ.) ; **Hábitably** (ಕ್ರಿ. ವಿ.) ; **Hábitant** — ಟಂಟ್ (ನಾ.) ನಿವಾಸಿ. ಫ್ರೆಂಚ್ ಬುಡಕಟ್ಟಿನ ಕೆನಡ ದೇಶೀಯ (ಉಚ್ಚಾರಣೆ : ಅಬಿಟಾನ್). **Hábitat** — ಟ್ಯಾಟ್ (ನಾ.) ಸಸ್ಯ ಅಥವಾ ಪ್ರಾಣಿ ಸ್ವಾಭಾವಿಕವಾಗಿ ಹುಟ್ಟಿ ಬೆಳೆಯುವ ಸ್ಥಳ ; ತವರು ; ಇರು ನೆಲೆ. **Habitátion** (ನಾ.) ಇರವು ; ಬೀಡು ; ವಾಸ (ಮಾಡುವುದು) (Fit for human habitation ಮನುಷ್ಯವಾಸಕ್ಕೆ ಯೋಗ್ಯ). ಇರು ನೆಲೆ ; ಮನೆ ; ವಸತಿ ; ನಿವಾಸ ; ವಾಸ ಸ್ಥಳ ; ಇಕ್ಕೆ (ಗ್ರಾಂ.)

Hábitable, Hábitat, &c. Habit[2] ನೋಡಿ.

Habítual, Habítuate, &c. Habit[1] ನೋಡಿ.

Hack[1] ಹ್ಯಾಕ್ (ನಾ., ಕ್ರಿ.) ಒಂದು ಕೊನೆ ಎಲೆಗುದ್ದಲಿಯಂತೆಯೂ ಇನ್ನೊಂದು ಕೊನೆ ಮೊನಚಾಗಿಯೂ ಇರುವ ವ್ಯವಸಾಯದ ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಯುಧ ; (ಗಣಿಕೆಲಸದವನ) ಪಿಕಾಸಿ. (ಮು., ಬೂಟಿನ ಮೂತಿ ಯಿಂದ ಒದೆದುದರಿಂದ) ಉದ್ದವೂ ಆಳವೂ ಆದ ಗಾಯ ; ಕಚ್ಚು. (ಕ್ರಿ.) ಕಡಿ ; ತರಿ ; ಕೊಚ್ಚು ; ಕಚ್ಚು ಕಚ್ಚು ಮಾಡು. (ಕಾಲ್ಚೆಂಡಾಟ ದಲ್ಲಿ ಎದುರಾಳಿಯ) ಕಣಕಾಲು ಒದೆ. ಕತ್ತರಿಸುವ ಏಟುಗಳನ್ನು ಕೊಡು, ಛಿನ್ನಾಭಿನ್ನವಾಗಿ ಕಡಿ (*At* ಉಪ. ದೊಡನೆ). ಒಣ ಕೆಮ್ಮು ಲು ಕೆಮ್ಮು ; ಹುಡಿಗೆಮ್ಮು ಕೆಮ್ಮು. A hacking cough (ಸ್ವಲ್ಪ ಸ್ವಲ್ಪ ವಾಗಿ ಪದೇ ಪದೇ ಕೆಮ್ಮುವ) ಒಣ ಕೆಮ್ಮಲು ; ಹುಡಿಗೆಮ್ಮು. **H.-saw** ಲೋಹ ಕೊಯ್ಯುವ ಗರಗಸ.

Hack[2] ಹ್ಯಾಕ್ (ನಾ.) ಡೇಗೆಗೆ ಮಾಂಸವಿಡುವ ಹಲಗೆ. [Be at h. (ಪಳಗಿಸಬೇಕಾದ ಡೇಗೆಯ ಮರಿಯ ವಿಷಯದಲ್ಲಿ) ತಾನೇ ಆಹಾರ ಸಂಪಾ ದಿಸಿಕೊಳ್ಳಲು ಅವಕಾಶವಿಲ್ಲದಿರು ; ಪೂರ್ಣ ಸ್ವಾತಂತ್ರ್ಯವಿಲ್ಲದಿರು]. (ಸುಡು ವುದಕ್ಕೆ ಮೊದಲು) ಇಟ್ಟಿಗೆಗಳನ್ನು ಒಣಗಲಿಡುವ ಚೌಕಟ್ಟು ; ಒಣಗಲಿಟ್ಟ ಇಟ್ಟಿಗೆಯ ಸಾಲು.

Hack[3] ಹ್ಯಾಕ್ (ನಾ., ಕ್ರಿ.) ಬಾಡಿಗೆ ಕುದುರೆ; ಕಳಪೆ ಕುದುರೆ ; ಸುಸ್ತು ಬಿದ್ದ ಕುದುರೆ ; ಸಾಮಾನ್ಯ ಸವಾರಿ ಕುದುರೆ ; ತಟ್ಟು. ಗುಲಾಮ ಚಾಕರಿ ಮಾಡುವವನು ; ದುಡಿತದ ಕತ್ತೆ ; (H. writer ದುಡಿತದ ಬರಹಗಾರ). (ಕ್ರಿ.) (ಎಲ್ಲ ಸಂದರ್ಭಗಳಲ್ಲಿಯೂ ಪದೇ ಪದೇ ಉಪಯೋ ಗಿಸಿ) ಸರ್ವ ಸಾಧಾರಣ ಮಾಡು ; ಹಳಸಲು ಮಾಡು. ಸಾಧಾರಣ ನಡಗೆಯಲ್ಲಿ (ರಸ್ತೆಯಲ್ಲಿ) ಕುದುರೆ ಸವಾರಿ ಮಾಡು. ಬಾಡಿಗೆ ಕುದುರೆ ಉಪಯೋಗಿಸು. ಜೀತದ ಲೇಖಕನಾಗಿ ನೇಮಕಮಾಡು, ದುಡಿಸು.

Háckery ಹ್ಯಾಕರಿ (ನಾ.) (ಇಂಡಿಯಾ ದೇಶದ) ಎತ್ತಿನ ಗಾಡಿ.

Háckle[1] ಹ್ಯಾಕ್‌ಲ್ (ನಾ., ಕ್ರಿ. ಸಕ.) (ಸಣಬು, ಮೊ. ಗಳನ್ನು ಹಿಕ್ಕುವ) ಉಕ್ಕಿನ ಹಿಕ್ಕು ಹಣಿಗೆ ; ಹಿಕ್ಕಣಿಕೆ. ಮನೆಹುಂಜ, ಮೊ. ಹಕ್ಕಿಗಳ ಕುತ್ತಿಗೆಯಮೇಲಿನ ಉದ್ದ ಗರಿಗಳು ; ಕೊರಳ ಗರಿ [With his hackles up (ಹುಂಜ, ನಾಯಿ, ಮನುಷ್ಯ) ಗರಿ ಕೆದರಿಕೊಂಡು ; ಕೋಪ ಗೊಂಡು ; ಹೋರಾಟಕ್ಕೆ ಸಿದ್ಧವಾಗಿ]. ಕೊರಳ ಗರಿಯಿಂದ ಮಾಡಿದ ಕೃತಕ ನೊಣ. (ಕ್ರಿ. ಸಕ.) (ಸಣಬನ್ನು) ಹಿಕ್ಕಣಿಕೆಯಿಂದ ಹಿಕ್ಕು. (ಕೃತಕ ನೊಣವನ್ನು) ಗರಿಯಿಂದ ಅಣಿಮಾಡು.

Háckle[2] ಹ್ಯಾಕ್‌ಲ್ (ಕ್ರಿ. ಸಕ.) ಕೊಚ್ಚು ; ಕಚ್ಚು ಕಚ್ಚು ಮಾಡು. **Háckly** (ಗು.) ಕಚ್ಚು ಕಚ್ಚಾದ ; ಒರಟು ಮೊರಟಾದ ; (ಮೇಲ್ಮೈ) ತರಕರಾಗಿರುವ.

Háckney ಹ್ಯಾಕ್ನಿ (ನಾ., ಕ್ರಿ. ಸಕ.) (ಎತ್ತರದಲ್ಲಿಯೂ ಲಕ್ಷಣದಲ್ಲಿಯೂ) ಮಧ್ಯಸ್ಥವಾದ ಸಾಮಾನ್ಯ ಸವಾರಿಯ ಕುದುರೆ. ವಿರಾಮವಿಲ್ಲದೆ ದುಡಿಯುವವನು ; ಗುಲಾಮ ಚಾಕರಿ ಮಾಡುವವನು ; ಕೂಲಿಯಾಳು. [**H.-carriage, -coach** ಬಾಡಿಗೆಯ ಕುದುರೆಯ ಗಾಡಿ]. (ಕ್ರಿ.) ಸಾಮಾನ್ಯಕ್ಕೆ ತರು, ಇಳಿಸು ; ಹಳಸಲು ಮಾಡು. **Háckneyed** ಚರ್ವಿತ ಚರ್ವಣವಾದ ; ಹಳಸಲಾದ ; ತೇದುಹೋದ.

Had. Have ಧಾತುವಿನ ಭೂತ. ಮತ್ತು ಭೂ. ಕೃ.

Háddock ಹ್ಯಾಡಕ್ (ನಾ.) ಕಾಡ್ ಜಾತಿಗೆ ಸಂಬಂಧಪಟ್ಟ ಒಂದು ಮೀನುಜಾತಿ.

Hade ಹೇಡ್ (ಕ್ರಿ. ಅಕ.) (ಭೂ. ವಿ., ಗಣಿ) ಲಂಬ ರೇಖೆಯಿಂದ ಓರೆ ಯಾಗಿರು.

Hádes ಹೇಡೀಸ್ (ನಾ.) (ಗ್ರೀಕ್ ಪುರಾಣ) ಅಧೋ ಲೋಕ ; ಪಿತೃ ಲೋಕ.

Hádji, Hájji ಹ್ಯಾಜೀ (ನಾ.) ಮಕ್ಕಾ ಯಾತ್ರೆ ಮಾಡಿ (ಬಂದಿ)ರುವ ಮುಸಲ್ಮಾನ(ನ ಬಿರುದು) : ಹಾಜಿ.

Haeccéity ಹೆ(ಹೀ)ಕ್ಸೀಯಿಟಿ (ನಾ.) (ತತ್ತ್ವ ಶಾಸ್ತ್ರ) ' ಇದು ', ' ಈ ' ಎಂಬ ಅರ್ಥದಲ್ಲುಳ್ಳ ಗುಣ ; ' ಇದು ' ತನ ; ' ಈ 'ತನ ; ವ್ಯಕ್ತಿತ್ವ.

Haémal ಹೀಮಲ್ (ಗು.) (ಅಂ. ರ. ಶಾ.) ರಕ್ತದ ; ರಕ್ತಕೋಶವೂ ದೊಡ್ಡ ರಕ್ತನಾಳಗಳೂ ಇರುವ ದೇಹಪಾರ್ಶ್ವದಲ್ಲಿ ನೆಲಸಿರುವ. **Haemátic** ಹಿಮ್ಯಾಟಿಕ್ (ಗು., ನಾ.) ರಕ್ತದ ; ರಕ್ತವುಳ್ಳ. ರಕ್ತದಮೇಲೆ ಪರಿಣಾಮವುಂಟುಮಾಡುವ ಔಷಧ. **Haématin** ಹೀಮಟಿನ್ (ನಾ.) (ರ. ವಿ.) ರಕ್ತವರ್ಣ ಜನಕದ (Haemoglobin) ಘಟಕಾಂಶವಾದ ನೀಲ ಶ್ಯಾಮಲ ಅಸ್ಫಟಿಕ ವಸ್ತು. **Haématite** ಹೀಮಟೈಟ್, **Hém-** ಹೆಮ — (ನಾ.) ಕೆಂಪು, ಕಂದು, ಅಥವಾ ಕಪ್ಪುಬಣ್ಣದ ಕಬ್ಬಿಣದ ಅದುರು. **Haémato-, Hémato-** ಹೀ(ಹೆ) ಮಟೊ (ಸ. ಪೂ. ಪ.) ರಕ್ತ—. **H(a)ématocele** —ಸೀಲ್ (ನಾ.) (ಹೊರಕ್ಕೆ ಹರಿದು ಗಟ್ಟಿಗೊಂಡ) ರಕ್ತ ಕಟ್ಟು, ರಕ್ತ ಶೋಫ. **Haematúria** ಹೀಮಟ್ಯೂರಿಯ (ನಾ.) (ವೈ. ಶಾ.) ಮೂತ್ರದಲ್ಲಿ ರಕ್ತ ವಿರುವುದು ; ರಕ್ತ ಮೂತ್ರ. **Haemoglóbin** ಹೀಮೊಗ್ಲೋಬಿನ್ (ನಾ.) ಕೆಂಪು ರಕ್ತಕಣಗಳಲ್ಲಿಯ ವರ್ಣದ್ರವ್ಯ ; ರಕ್ತವರ್ಣ ಜನಕ ; ' ಹೀಮೊಗ್ಲೋಬಿನ್ '. **Haémorrhage, Hém-** ಹೆಮೊರೆಜ್ (ನಾ.) ರಕ್ತ ಸುರಿಯುವುದು ; ರಕ್ತ ಸ್ರಾವ. **Haémorrhoids, Hém-** ಹೆಮೊರಾಯ್ಡ್ಸ (ನಾ., ಬ. ವ.) ಮೂಲ ವ್ಯಾಧಿ ; ಮೊಳೆ ರೋಗ.

Háfiz ಹಾಫಿಸ್ (ನಾ.) ಕುರಾನು ಕಂಠಪಾಠವಾಗಿರುವ ಮುಸಲ್ಮಾನ (ನ ಬಿರುದು) : ' ಹಾಫಿಸ್'

Háfnium ಹ್ಯಾ(ಹಾ)ಫ್ನಿಯಮ್ (ನಾ.) (ರ. ವಿ.) (೧೯೨೩ರಲ್ಲಿ ಕಂಡು ಹಿಡಿದ) ಒಂದು ಲೋಹ : ' ಹ್ಯಾಫ್ನಿಯಮ್ '.

Haft ಹಾಫ್ಟ್ (ನಾ., ಕ್ರಿ. ಸಕ.) (ಬಾಕು, ಚಾಕು, ಮೊ. ಗಳ) ಹಿಡಿ (ಹಾಕು)

Hag[1] ಹ್ಯಾಗ್ (ನಾ.) ಮುದಿ ಗೊಡ್ಡು ; ಅವಲಕ್ಷಣದ, ವಿಕಾರವಾದ, ಮುದುಕಿ. (ಕೆಡುಕು ಮಾಡುವ) ಶೂನ್ಯಗಾತಿ ; ಮಾಟಗಾತಿ. (ಹಿಂದೆ) ಹೆಣ್ಣು ದೆವ್ವ. ಒಂದು ಪರಸತ್ತ್ವೋಪಜೀವಿ ಮೀನು (=H.-fish). (H.-ridden ದುಸ್ಸ್ವಪ್ನ ಪೀಡಿತ). **Hággish** (ಗು.) — ಅಂಥ ; — ಸ್ವಭಾವದ.

Hag[2] ಹ್ಯಾಗ್ (ನಾ.) ಕುರುಚಲು ಬಂಜರಿನಲ್ಲಿ ಮೆತು ಸ್ಥಳ ; ಜೌಗು ನೆಲದಲ್ಲಿ ಗಟ್ಟಿ ಪ್ರದೇಶ.

Hággard ಹ್ಯಾಗರ್ಡ್ (ಗು., ನಾ.) (ಆಯಾಸ, ದಾರಿದ್ರ್ಯ, ಕಿರಿ ಕಿರಿ, ಮೊ. ಗಳಿಂದ) ರಾಪು ಬಡಿದಂತೆ ಕಾಣುವ, ಹೆಣಮುಖದ, ಕಂಗೆಟ್ಟ, ಮೂಳೆ ಬಿಟ್ಟುಕೊಂಡಿರುವ, ವಿಕಾರವಾದ. (ಡೇಗೆಯ ವಿಷಯದಲ್ಲಿ) ಗರಿ ಬಲಿತಮೇಲೆ ಹಿಡಿದ, ಪಳಗಿಲ್ಲದ. (ನಾ.) ಪಳಗಿಲ್ಲದ ಡೇಗೆ. **Hággardness** (ನಾ.)

Hággle ಹ್ಯಾಗ್‌ಲ್ (ಕ್ರಿ. ಅಕ., ನಾ.) (ವ್ಯಾಪಾರ ಒಪ್ಪಿತಕ್ಕೆ ಬಾರದೆ) ಜಗಳ(ವಾಡು), ರಂಪು (ಮಾಡು), ಕೊಸರಾಡು ; ಜುಗ್ಗಾಡು ; ಚೌಕಾ ಯಿಸಿ ಮಾಡು (*About, over* ಉಪ. ದೊಡನೆ). ಕೊಚ್ಚಿ ಕೊಚ್ಚಿ ಕಚ್ಚು ಗಾಯ ಮಾಡು, ವಿರೂಪಮಾಡು ; ಒಡ್ಡೊಡ್ಡಾಗಿ ಕತ್ತರಿಸು.

Hágiarchy ಹ್ಯಾಗಿಯಾರ್ಕಿ, ಹೇಜಿ — (ನಾ.) ಸಾಧು ಸಂತರ ಪ್ರಭುತ್ವ, ಪಂಥ. **Hágio-** ಹ್ಯಾಗಿಯೊ —, ಹೇಜಿಯೊ — (ಸ. ಪೂ. ಪ.) ಸಾಧು ಸಂತ— ; ಪವಿತ್ರ— ; ಧಾರ್ಮಿಕ —. **Hagiócracy** ಹ್ಯಾಗಿಯಾಕ್ರಸಿ (ನಾ.) ಸಾಧು ಸಂತರ, ಧಾರ್ಮಿಕ ಪುರು ಷರ, ಪ್ರಭುತ್ವ. **Hagiógrapher** —ಗ್ರಫರ್ (ನಾ.) ಸಾಧು ಸಂತರ ಜೀವನಚರಿತ್ರ ಲೇಖಕ. **Hagiográphic** (ಗು.) ; **Hagiógraphy** (ನಾ.) ಸಾಧು ಸಂತರ ಜೀವನ ಚರಿತ್ರೆ. **Hagiólatry** (ನಾ.) ಸಾಧು ಸಂತರ ಪೂಜೆ. **Hagiólogy** (ನಾ.) (ಸಾಧು ಸಂತರ ಜೀವನ ಚರಿತ್ರೆ, ಕಥೆಗಳು, ಮೊ. ವನ್ನೊಳಕೊಂಡ) ಸಾಧು ಸಂತರ ಸಾಹಿತ್ಯ.

Hah ಹಾ (ಭಾವ. ಅವ್ಯ., ಕ್ರಿ. ಅಕ.) = Ha.

Ha ha ಹಾ ಹಾ (ಭಾವ. ಅವ್ಯ.) (ಗಟ್ಟಿ ನಗು) ಹಾ ಹಾ !

Ha-ha ಹಾ ಹಾ (ನಾ.) (ಉಪವನದ ಅಥವಾ ತೋಟದ ಸುತ್ತಲೂ, ಹತ್ತಿರ ಬರುವವರೆಗೂ ಕಾಣದಂತೆ, ಹಾಕಿರುವ) ತಗ್ಗು ಬೇಲಿ.

Hai(c)k ಹಾಯಿಕ್, ಹೇ(ಹೈ)ಕ್ (ನಾ.) (ತಲೆಯನ್ನೂ ದೇಹವನ್ನೂ ಮುಚ್ಚುವ) ಅರಬರ ಹೊದಿಕೆ, ದುಪಟಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Hail[1] ಹೇಯ್‌ಲ್ (ನಾ., ಕ್ರಿ.) (ವಾಯುಮಂಡಲದಲ್ಲಿಯ ನೀರಿನ ಆವಿ ಗಡ್ಡೆ ಕಟ್ಟಿ ಮಳೆಯಂತೆ, ಮಳೆಯೊಂದಿಗೆ, ಬೀಳುವ) ಆಲಿಕಲ್ಲು; ಮುಗಿಲ್ಗಲ್ಲು. (H.-shower, -storm ಆಲಿಕಲ್ಲು ಮಳೆ; — ಬಿರುಗಾಳಿ ಮಳೆ). (ಕ್ಷಿಪಣಿಗಳು, ಶಾಪಗಳು, ಬಯ್ಗುಳು, ಪ್ರಶ್ನೆಗಳು, — ಇವೇ ಮೊ. ಗಳ) ಸುರಿಮಳೆ, ಬಿರುಮಳೆ. [H.-stone ಆಲಿಕಲ್ಲು]. (ಕ್ರಿ.) It hails ಆಲಿಕಲ್ಲು (ಮಳೆ) ಬೀಳುತ್ತಿದೆ. (ರೂಪ.) (ಏಟು, ಮಾತು, ಮೊ.) ಬಿರುಸಾಗಿ ಕರೆ, ಜೋರಾಗಿ ಸುರಿ(ಸು), ರಭಸದಿಂದ ಬೀಳು. **Haily** (ಗು.)

Hail[2] ಹೇಯ್‌ಲ್ (ಭಾವ. ಅವ್ಯ., ಕ್ರಿ., ನಾ.) (ಸಂಧಿಸಿದಾಗ ಒಸಗೆ ಸೂಚಿಸುವ ಸಂಬೋಧನ ಪದ) ಜಯ! ಗೆಲ್! ಗೆಲವು! [H.-fellow, H. fellow well met (ಗು., ನಾ., ಕ್ರಿ. ವಿ.) ನಚ್ಚಿನ ಗೆಳೆತನ(ದ, ದಿಂದ); ಸಲಿಗೆ(ಯ)]. (ಕ್ರಿ.) ವಂದಿಸು; (ದೊರೆ, ಎಂದು ಮುಂತಾಗಿ) ಸ್ವಾಗತಿಸು, ಜಯಕಾರ ಮಾಡು [Hail him (as) king ದೊರೆಯೆಂದು ಸ್ವಾಗತಿಸು, ಜಯಕಾರ ಮಾಡು]. (ಹಡಗು, ಮನುಷ್ಯ, ಮೊ. ವನ್ನು ಗಮನ ಸೆಳೆಯುವ ಕೂಗು); — ಸೆಳೆಯಲು ಕೂಗು ಹಾಕು. (ಹಡಗು, ಮನುಷ್ಯ, — ಒಂದು ಸ್ಥಳದಿಂದ, ಊರಿನಿಂದ) ಬರು, ಬಂದಿಳಿ (*From* ಉಪ. ದೊಡನೆ). (ನಾ.) ಅಭಿವಂದನೆ; ಸಂಬೋಧನೆ (Within h. ಸಂಬೋಧಿಸುವಷ್ಟು ಹತ್ತಿರದಲ್ಲಿ)

Hair ಹೇರ್ (ನಾ.) (ಬಿಡಿ ಅಥವಾ ಒಟ್ಟು) ಕೂದಲು; ನವಿರು; ಕೇಶ; ರೋಮ [ಸಾಮೂಹಿಕವಾಗಿ, ಏ. ವ.; ಬ. ವ. hairs ಕೂದಲುಗಳು (ಪ್ರಾಚೀ. ಪ್ರ.)]. (ಸಸ್ಯಗಳಲ್ಲಿ) ಒಳ ತೊಗಟೆಯಿಂದ ಬೆಳೆದುಬಂದಿರುವ (ಕೂದಲಿನಂತೆ ಬಳುಕುವ) ಉದ್ದವಾದ ಜೀವಕಣ; ಕೂದಲಿನಂಥ ವಸ್ತು; ಚುಚ್ಚು ಕಣಗಳು; ನವಿರು ಮುಳ್ಳು. ಲವ; ಲೇಶ; ಕೂದಲಿನಷ್ಟು. Against the h. ಎಳೆಗೆ ಅಡ್ಡವಾಗಿ; ಪ್ರತಿಲೋಮವಾಗಿ; ಸ್ವಭಾವ ವಿರುದ್ಧವಾಗಿ. To a h. ಬಹು ನಿಕರವಾಗಿ; ನಿಷ್ಕೃಷ್ಟವಾಗಿ. A. h. of the dog that bit you (Dog ನೋಡಿ). Get person by the short hairs ಒಬ್ಬನ ಜುಟ್ಟನ್ನು ತನ್ನ ಕೈಯಲ್ಲಿಟ್ಟುಕೊ; ಒಬ್ಬನನ್ನು ಸಂಪೂರ್ಣವಾಗಿ ಅಧೀನದಲ್ಲಿಟ್ಟುಕೊ. Keep your h. on (ಅಸಂ.) ಶಾಂತವಾಗಿರು; ದುಡುಕದಿರು. Put up, turn up, her h. (ಹುಡುಗಿ) (ದೊಡ್ಡ ಹೆಂಗಸಿನಂತೆ) ತುರುಬು ಕಟ್ಟಿಕೊ. Do or put up, let down, her h. ತಲೆಗೂದಲನ್ನು ತುರುಬು ಕಟ್ಟಿಕೊ, ಜಡೆ ಹಾಕಿಕೊ, ಇಳಿಯ ಬಿಟ್ಟುಕೊ. Not turn a h. ಆಯಾಸವನ್ನಾಗಲಿ ಚಿತ್ತವಿಕಾರವನ್ನಾಗಲಿ ತೋರದಿರು; ಕೂದಲು ಕದಲದಿರು. H. stands on end (ಭಯ, ಘೋರ ಮೊ. ಕಾರಣಗಳಿಂದ) ರೋಮಾಂಚವಾಗು, ಮೈಮೇಲೆ ಮುಳ್ಳೇಳು; ನವಿರೇಳು. Hairbreadth or hair's breadth ಕೂದಲೆಳೆಯಷ್ಟು ಅತ್ಯಲ್ಪ ಅಂತರ [Hairb. escape ಕೂದಲೆಳೆಯಷ್ಟರಲ್ಲಿ (ಗಂಡದಿಂದ) ಪಾರಾಗುವುದು]. **Hairbrush** (ಬಾಚಿಕೊಳ್ಳುವುದಕ್ಕೆ) ಕೂದಲ ತೊಡಪ. **Haircloth** (ಅನೇಕ ಕೆಲಸಗಳಿಗಾಗಿ ಕೂದಲಿನಿಂದ ಮಾಡಿದ) ಕೂದಲ ಬಟ್ಟೆ. **Hairdresser** ಕೂದಲನ್ನು ಅಲಂಕಾರಕ್ಕಾಗಿ ಕತ್ತರಿಸಿ ಅಣಿಗೊಳಿಸುವವನು; ಕೂದಲಣಿಗ. **H.-line** ಕೂದಲ ಹುರಿ, ಹಗ್ಗ; = H.-stroke (ಮುಂದೆ ನೋಡಿ). **H.-net** ತುರುಬು (ಮುಚ್ಚುವ) ಬಲೆ. **H.-oil** ಕೂದಲೆಣ್ಣೆ; ಕೇಶತೈಲ. **Hairpin** ಕೂದಲ ಸೂಜಿ [H.-p. bend ಕೂದಲ ಸೂಜಿಯಂತೆ ಮರಳಿ ಹಿಂದಕ್ಕೆ ಬರುವ ರಸ್ತೆಯ ಬಾಗು; (ರಸ್ತೆಯ) ಹಿಮ್ಮುರಿ ತಿರುವು]. **H.-powder** [ಈಗ (ಪಾಶ್ಚಾತ್ಯ) ಗಂಡು ಸೇವಕರು ಉಪಯೋಗಿಸುವ] ಸುವಾಸನೆಯ ಕೂದಲ ಪುಡಿ. **H. shirt** (ಪಾಶ್ಚಾತ್ಯ ಸನ್ಯಾಸಿಗಳು ಧರಿಸುವ) ಕೂದಲು ಬಟ್ಟೆಯ ಜುಬ್ಬ. **H.-slide** (ಕೊಂಬಿನಿಂದಾಗಲಿ ಆಮೆಯ ಚಿಪ್ಪಿನಿಂದಾಗಲಿ ಮಾಡಿದುದಾಗಿ, ಅಣಿ ಮಾಡಿದ ಕೂದಲನ್ನು ಅದರ ಸ್ಥಾನದಲ್ಲಿಟ್ಟಿರುವ) ಕೂದಲ ಹಿಡಿಕೆ. **H.-space** (ಮುದ್ರಣ) (ಅಕ್ಷರಗಳ ಮಧ್ಯೆ) ಕೂದಲೆಳೆಯಷ್ಟು ಅತ್ಯಲ್ಪ ಅಂತರ: ಕೂದಲೆಡೆ. **H.-splitting** (ಗು., ನಾ.) ಕೂದಲು ಸೀಳುವಂಥ(ದು); (ನಾ., ಕುತರ್ಕಕ್ಕಾಗಿ) ವಿಪರೀತ ಸೂಕ್ಷ್ಮವಾದ ಅರ್ಥಕ್ಕೆ ಹೋಗುವ, — ವುದು; ಅತಿ ಸೂಕ್ಷ್ಮ ತರ್ಕ. **H.-spring** (ಕಿಸ ಗಡಿಯಾರದ ಗತಿ ನಿಯಂತ್ರಕ ಚಕ್ರವನ್ನು ನಿಯಂತ್ರಿಸುವ) ಸೂಕ್ಷ್ಮವಾದ ಬಳುಕು, — ತಂತಿ, ಸುರುಳಿ. **H.-stroke** ಬರವಣಿಗೆಯಲ್ಲಿ ಅಕ್ಷರಗಳ ಸೂಕ್ಷ್ಮವಾದ ಮೇಲ್ಗೆರೆ. **H. trigger** ಸ್ವಲ್ಪ ಒತ್ತಡದಿಂದ (ತುಪಾಕಿಯ) ಮುಖ್ಯ ಕುದುರೆಯನ್ನು ಹಾರಿಸುವ ಉಪ ಕೀಲು. **Hairiness** (ನಾ.); (-)**haired** (ಗು.) (Black-haired, golden-haired, etc.); **Hairless** (ಗು.); **Hairlike** (ಗು.); **Hairy** (ಗು.). Hairy-heeled (ಅಸಂ.) ಸುಶಿಕ್ಷಿತನಲ್ಲದ; ಮರ್ಯಾದೆಯರಿಯದ; ಒಡ್ಡ; ಹಳ್ಳ.

Hake[1] ಹೇಕ್ (ನಾ.) ('ಕಾಡ್' ಜಾತಿಗೆ ಸೇರಿದ) ಒಂದು ಮೀನಜಾತಿ.

Hake,[2] **haik** ಹೇಕ್ (ನಾ.) ಇಟ್ಟಿಗೆ ಒಣಗಿಸುವುದು, ಮೊ. ಕೆಲಸಗಳಿಗೆ ಉಪಯೋಗಿಸುವ ಮರದ ಚೌಕಟ್ಟು.

Hakeém, -kím[1] ಹಕೀಮ್ (ನಾ.) ಯುನಾನೀ ವೈದ್ಯ: ಹಕೀಮ.

Hákim[2] ಹಾಕಿಮ್ (ನಾ.) (ಇಂಡಿಯ ಮತ್ತು ಮುಸಲ್ಮಾನ್ ದೇಶಗಳಲ್ಲಿ) ನ್ಯಾಯಾಧೀಶ; ಪ್ರಭು; ಪ್ರಾಂತಾಧಿಪತಿ.

Halátion ಹ(ಹ್ಯಾ)ಲೇಷನ್ (ನಾ.) (ಛಾಯಾ ಚಿತ್ರ) ವಿಷಮ ಪ್ರತಿಯಲ್ಲಿ ಬೆಳಕು ಎಲ್ಲೆಮೀರಿ ಹರಡಿರುವುದು (ಆಧಾರಫಲಕದಿಂದ ಅಂತರ್ಗತ ಪ್ರತಿಫಲನವಾದ ಕಾರಣದಿಂದ); ಚಿತ್ರದ ಮಬ್ಬು.

Hálberd, -rt ಹ್ಯಾಲ್‌ಬರ್ಡ್, — ರ್ಟ್ (ನಾ.) (ಚರಿತ್ರೆ) ಈಟಿ ಮತ್ತು ಗಂಡುಗೊಡಲಿ ಸೇರಿದ ಒಂದು ಯುದ್ಧಾಯುಧ; ಈಟಿಗೊಡಲಿ. **Halberdíer** (ನಾ.) ಈಟಿಗೊಡಲಿಯ ಸಿಪಾಯಿ.

Hálcyon ಹ್ಯಾಲ್‌ಸಿ(ಷಿ)ಯನ್ (ನಾ., ಗು.) (ಉತ್ತರಾಯಣದಲ್ಲಿ ಕಡಲ ಮೇಲೆ ತೇಲುವ ಗೂಡಿನಲ್ಲಿ ಮೊಟ್ಟೆಗಳಿಗೆ ಕಾವು ಕೊಟ್ಟು ಮರಿಮಾಡುತ್ತದೆಂದೂ, ಅದಕ್ಕಾಗಿ ಗಾಳಿಯನ್ನೂ ಅಲೆಗಳನ್ನೂ ಶಾಂತಗೊಳಿಸುವ ಮಂತ್ರಶಕ್ತಿ ಪಡೆದಿದೆಯೆಂದೂ ಪೂರ್ವಿಕರು ಕಥೆ ಹೇಳುತ್ತಿದ್ದ) ಒಂದು ಪಕ್ಷಿ (ಜಾತಿ). (ಪ್ರಾ. ವಿ.) ಆಸ್ಟ್ರೇಲ್ಯದ ಜಾಲಗಾರ ಹಕ್ಕಿ. (ಗು.) ಶಾಂತ; ಸ್ವಸ್ಥ; ಸಮಾಧಾನವಾದ; ನಿರಾಕುಲ [Halcyon days ಶಾಂತಿ ಕಾಲ; (ಹಿಂದೆ) ಉತ್ತರಾಯಣದ ಆಚೆ ಈಚೆ ಸೇರಿ ೧೪ ದಿನಗಳು, ಈ ಪಕ್ಷಿ ಮರಿಮಾಡುತ್ತಿರುವ ಕಾಲದಲ್ಲಿ, ಸಮುದ್ರವೂ ಗಾಳಿಯೂ ಪ್ರಶಾಂತವಾಗಿರುವುದೆಂದು ನಂಬುತ್ತಿದ್ದ ಕಾಲ]

Hale[1] ಹೇಲ್ (ಗು.) (ಮು., ಮುದುಕರು) ದೇಹದಾರ್ಢ್ಯವುಳ್ಳ; ಗಟ್ಟಿಮುಟ್ಟಾಗಿರುವ. **Háleness** (ನಾ.)

Hale[2] ಹೇಲ್ (ಕ್ರಿ. ಸಕ.) (ಪ್ರಾಚೀ. ಪ್ರ.) ಬಲವಂತವಾಗಿ ಎಳೆ, ಸೆಳೆ (ರೂಪ. ನಹ)

Half ಹಾಫ್ (ನಾ.; ಬ. ವ. halves ಹಾವ್ಸ್) ಒಂದು ವಸ್ತುವಿನ ಎರಡು ಸಮಭಾಗಗಳಲ್ಲೊಂದು; ಅರೆ; ಅಡ್ಡ; ಅರ್ಧ (Your h. is bigger than mine). (ಬಳ. ಮಾ.) ಅರ್ಧ, — ಪೈಂಟು, ಮೈಲಿ, ರಜ, ಮೊ. ವು. ವಿದ್ಯಾಶಾಲೆಯ ಒಂದು ಪರ್ವ, ಹಪ್ತ (ಪಾಠಶಾಲೆಯ ವರ್ಷವನ್ನು ಎರಡು ಪರ್ವವಾಗಿ ಭಾಗಿಸುತ್ತಿದ್ದ ಕಾರಣದಿಂದ). Better h. ಹೆಂಡತಿ; ಅರ್ಧಾಂಗಿ. Do a thing by halves ಕೆಲಸವನ್ನು ಅರ್ಧಮರ್ಧವಾಗಿ, ಹರುಕುಮುರುಕಾಗಿ, ಅಸಮರ್ಪಕವಾಗಿ, ಮಾಡು. Too clever by h. ಅತಿ ಬುದ್ಧಿವಂತ. Go halves ಸಮ ಸಮವಾಗಿ ಹಂಚಿಕೊ (ವ್ಯಕ್ತಿಯ ವಿಷಯದಲ್ಲಿ *with* ಉಪ. ದೊಡನೆ, ಪದಾರ್ಥದ ವಿಷಯದಲ್ಲಿ *in* ಉಪ. ದೊಡನೆ). Cry halves (ಇನ್ನೊಬ್ಬನ ಸಂಪಾದನೆಯಲ್ಲಿ) ಸರಿಪಾಲು ಕೇಳು.

Half (ಗು.) ಅರ್ಧವಾಗಿರುವ; ಅರ್ಧ [A h. length, A h. share. H. a crown. The first stroke is half the battle ಮೊದಲೇಟು (ಕೊಟ್ಟವನು) ಅರ್ಧ ಗೆದ್ದಹಾಗೆ]

Half (ಕ್ರಿ. ವಿ.) ಅರ್ಧದಷ್ಟು; ಅರ್ಧದ ವರೆಗೆ; ಅರ್ಧ; (ಶಿಥಿಲವಾಗಿ) ಬಹುಮಟ್ಟಿಗೆ [(A h.-cooked potato ಬಹುಮಟ್ಟಿಗೆ ಬೆಂದು ಹೋಗಿರುವ ಆಲೂಗಡ್ಡೆ. H. dead ಬಹುಮಟ್ಟಿಗೆ ಸತ್ತ(ಹಾಗೆ). I h. wish — ಎಂದು ನಾನು ಬಹುಮಟ್ಟಿಗೆ ಬಯಸುತ್ತೇನೆ. Not h. a bad fellow (ಅಸಂ.) ಕೆಟ್ಟವನೇನೂ ಅಲ್ಲ. He didn't h.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

swear ಅವನು ಜೋರಾಗಿ, ಉಗ್ರವಾಗಿ, ಪ್ರತಿಜ್ಞೆ ಮಾಡಿದನು]. H. past two (o'clock) ಎರಡೂವರೆ ಗಂಟೆ. H. three (ನಾವೆ) ಮೂರೂವರೆ (ಆಳುದ್ದ). East h.-south (ನಾವೆ.) ಪೂರ್ವದಿಕ್ಕಿನಿಂದ $5\frac{5}{8}$ ಡಿಗ್ರಿಗಳಷ್ಟು ದಕ್ಷಿಣಕ್ಕೆ. H.-&-h. (ಅರ್ಧ ಒಂದು ವಸ್ತುವಾಗಿಯೂ ಇನ್ನರ್ಧ ಮತ್ತೊಂದು ವಸ್ತುವಾಗಿಯೂ ಇರುವ) ಅರೆ ಬೆರಕೆ (ಮು., ಮದ್ಯಗಳ ಮಿಶ್ರಣದಲ್ಲಿ). H. as much (many) again ಒಂದೂವರೆಯಷ್ಟು. **H.-back** (ಕಾಲ್ಚೆಂಡಾಟದಲ್ಲಿ) ಮುಂದಿನ ಸಾಲಿಗೆ ಹಿಂದಿರುವ ಸಾಲು (ಆಟಗಾರ). **H.-baked** ಅಪಕ್ವ; (ರೂಪ.) ಅಪೂರ್ಣ; ಅಶ್ರದ್ಧೆಯಿಂದ ಮಾಡಿದ; ಅಪರಿಣತ; ಅನನುಭವಿ(ಯಾದ); ಅರೆ ಮರುಳಿನ. **H.-ball** (ಬಿಲಿಯರ್ಡ್ಸ್ ಆಟ, ಮೊ. ಗಳಲ್ಲಿ) ಗುರಿಗುಂಡಿನ ಏಣಿಗೆ ಗುರಿಯಿಟ್ಟು ಹೊಡೆದ ಚಲಗುಂಡಿನ ಸೋಕು. **H. binding** (ಪುಸ್ತಕದ ಬೆನ್ನು ಮತ್ತು ಮೂಲೆಗಳಿಗೆ ಚರ್ಮವನ್ನೂ, ಪಕ್ಕಗಳಿಗೆ ಬಟ್ಟೆಯನ್ನೊ, ಕಾಗದವನ್ನೊ, ಹಾಕಿದ) ಅರೆ ರಟ್ಟು (ಕಟ್ಟುವುದು). (ಹೀಗೆಯೇ h.-calf, h.-morocco). **H.-blood** ತಾಯಿ ತಂದೆಗಳಲ್ಲಿ ಒಬ್ಬರು ಮಾತ್ರ ಮತ್ತೊಬ್ಬನಿಗೂ ತನಗೂ ಸಮಾನವಾಗಿರುವ (ಸಂಬಂಧ): ಮಲ ಸಂಬಂಧ; ಭಿನ್ನೋದರತೆ. ಮಿಶ್ರ ಕುಲದವನು; ಅಡನಾಡಿ; ಇಬ್ಬಂದಿ [H.-blooded (ಗು.) ಭಿನ್ನ ಕುಲದವರ ಸಂಬಂಧದಿಂದ ಹುಟ್ಟಿದ; ಮಿಶ್ರ ಕುಲದ]. **H.-boot** ಕಾಲಿನ ಹರಡಿಗೆ ಸ್ವಲ್ಪ ಮೇಲಿನ ವರೆಗೂ ಮುಚ್ಚುವ ಮೋಜ; ಅರೆ ಮೋಜ. **H.-bred** ಬೆರಕೆ ಜಾತಿಯ; ಅಡನಾಡಿಯ; (ರೂಪ.) ಅಸಭ್ಯ; ಅಶಿಷ್ಟ. **H.-breed** ಬೆರಕೆ ರಕ್ತದವನು; ಮಿಶ್ರ ಕುಲದವನು. **H.-brother, -sister** ಭಿನ್ನೋದರ ಭ್ರಾತೃ, ಭಗಿನಿ; ಮಲ, — ಅಣ್ಣ, ತಮ್ಮ, ಅಕ್ಕ, ತಂಗಿ. **H.-caste** (ಗು., ನಾ.) ಅಡ್ಡ ಜಾತಿಯ(ವನು); (ಮು., ಐರೋಪ್ಯ ತಂದೆಗೂ ಇಂಡಿಯದ ತಾಯಿಗೂ ಹುಟ್ಟಿದ) ಬೆರಕೆ ಜಾತಿಯ ಮಗು. **H. cock** ಬಂದೂಕಿನ ಕುದುರೆಯನ್ನು ಅರ್ಧವೆಳೆದು ತಡೆಗಟ್ಟಿರುವುದು. **Halfcrown** $2\frac{1}{2}$ ಷಿಲಿಂಗ್ ಬೆಲೆಯ ಬೆಳ್ಳಿಯ ನಾಣ್ಯ: ಅರ್ಧ 'ಕ್ರೌನ್'. **H.-hearted** (ಗು.) ಅರೆ ಮನಸ್ಸಿನ: ಧೈರ್ಯ, ಉತ್ಸಾಹ, — ಸಾಲದ; ಉದಾಸೀನ ಭಾವದ. **H.-heartedly** (ಕ್ರಿ. ವಿ.); **H.-heartedness** (ನಾ.); **H.-length** ಮನುಷ್ಯನ ಮೇಲಾಯದ ಭಾವಚಿತ್ರ; ಅರೆ ನಿಲವು. **H.-mast** high (ಸತ್ತ ಗೌರವಸ್ಥರಿಗೆ ಗೌರವ ಸೂಚಿಸುವುದಕ್ಕಾಗಿ ಬಾವುಟವನ್ನು) ಧ್ವಜಸ್ತಂಭದ ಅರ್ಧ ಎತ್ತರಕ್ಕಿಳಿಸಿ. **H. measures** ಸರಿ ಹೊಂದಿಕೆಯ, — ನೀತಿ, ಕಾರ್ಯ ಕ್ರಮ; ಅಪೂರ್ಣ, ಅಸಮರ್ಪಕ, — ಕಾರ್ಯ ನೀತಿ, ಧೋರಣೆ; ಅರೆಬರೆ ಏರ್ಪಾಡುಗಳು. **H. moon** ಅರ್ಧ ಚಂದ್ರ; ಅರ್ಧ ಚಂದ್ರಾಕಾರದ ವಸ್ತು. **H. mourning** ಆದಿ ಶೋಕಕಾಲ ಮುಗಿದನಂತರ ಅರ್ಧ ಶೋಕ ಕಾಲದಲ್ಲಿ ಧರಿಸಿಕೊಳ್ಳುವ ಬೂದುಗೂಡಿದ ಕಪ್ಪು ಬಣ್ಣದ ಶೋಕ ವಸ್ತ್ರ. **Hálfpenny** ಹೇಪೆನಿ, ಹಾಫ್ ಪೆನಿ, ಹಾಪೆನಿ, ಹಾಪ್ನಿ (ನಾ.; ಬ. ವ. Halfpence — ಪೆನ್ಸ್) ಅರ್ಧ ಪೆನಿ ಬೆಲೆಯ (ಕಂದು ಕಂಚಿನ) ನಾಣ್ಯ [Turn up again like a bad h. ಚಲಾವಣೆಯಾಗದ ನಾಣ್ಯದಂತೆ (ಬೇಡದ ವಸ್ತುವಿನ ಅಥವಾ ಮನುಷ್ಯನ ವಿಷಯದಲ್ಲಿ) ಪದೇ ಪದೇ, ತಪ್ಪದೆ, — ತಲೆಹಾಕು, ಕಾಣಿಸಿಕೊ, ಬರು]. **Halfpenny lick** (ಅಸಂ.) ಬೀದಿಯಲ್ಲಿ ಮಾರುವ ಮಂಜುಕೆನೆಯ ಹಲ್ವಾ. **Halfpennyworth** (ನಾ., ಉಚ್ಚಾರಣೆ: ಹೇಪರ್ತ್; = Ha'p'orth) ಅರೆ ಪೆನಿಗೆ ಬರುವಷ್ಟು, — ಯ ಬೆಲೆಯಷ್ಟು. **H.-seas-over** ಕುಡಿದು ಅರ್ಧ ಅಮಲೇರಿದ. **H.-timer** (ಒಂದು ಹೊತ್ತು ಮಾತ್ರ ಪಾಠಶಾಲೆಗೆ ಹೋಗಿ ಉಳಿದ ಹೊತ್ತಿನಲ್ಲಿ ಕೂಲಿಮಾಡುವ) ಅರೆಹೊತ್ತಿನ ವಿದ್ಯಾರ್ಥಿ, ಅರೆಹೊತ್ತಿಗ. **H.-title** (ಪುಸ್ತಕದ ಪ್ರಮುಖ ಹೆಸರು ಹಾಳೆಯ ಹಿಂದಿನ ಹಾಳೆಯಲ್ಲಿ ಮುದ್ರಿಸಿದ) ಪುಸ್ತಕದ ಸಂಕ್ಷೇಪದ ಹೆಸರು; (ಪುಸ್ತಕದಲ್ಲಿಯ ಹೊಸ ಪ್ರಕರಣದ ಆರಂಭದ ಹಿಂದಿನ ಹಾಳೆಯಲ್ಲಿ ಮುದ್ರಿಸಿದ) ಪ್ರಕರಣದ ಹೆಸರು. **H.-truth** ಸತ್ಯಾಂಶದ ಒಂದು ಭಾಗವನ್ನು ಮಾತ್ರ ತಿಳಿಸುವ ಹೇಳಿಕೆ; ಅರೆ ಸತ್ಯ. **H.-tone** ಮೂಲಚಿತ್ರದ ನೆರಳು ಬೆಳಕುಗಳು ಸಾ., ಕಣ್ಣಿಗೆ ಕಾಣದಂಥ ಚುಕ್ಕಿಗಳ ಅಥವಾ ಪಪ್ಪಳಿಗಳ ಮೂಲಕ ರಚಿತವಾಗಿರುವ ಛಾಯಾಚಿತ್ರದ ಪಡಿಯಚ್ಚಿನಿಂದ ಮುದ್ರಿಸಿದ ಚಿತ್ರ: ಅರ್ಧ ಪ್ರಕಾಶ ಚಿತ್ರ (H.-tone block, process ಅರ್ಧಪ್ರಕಾಶ ಚಿತ್ರದ ಪಡಿಯಚ್ಚು, — ರಚನಾ ಕ್ರಮ). **H. volley** (Volley ನೋಡಿ). **H.-way house** ಎರಡು ಊರು, ಮೊ. ಗಳ ನಡುವೆ ಇರುವ ಸತ್ರ, ತಿಂಡಿ ತೀರ್ಥದ ಮನೆ. (ರೂಪ.) ಸರಿಹೊಂದಿಕೆಯ ವರ್ತನೆ; ನಡು ನೆಲೆ. **H.-witted** ಅರಿವಿಲ್ಲದ; ಪೆದ್ದಾದ; ಶೂನ್ಯ ಬುದ್ಧಿಯ. **H.-yearly** (ಗು., ಕ್ರಿ. ವಿ.) ಅರ್ಧ ವರ್ಷಕ್ಕೊಮ್ಮೆ (ಬರುವ, ನಡೆಯುವ); ಅರ್ಧ ವಾರ್ಷಿಕ. **Halve** ಹಾವ್ (ಕ್ರಿ. ಸಕ.) ಅರ್ಧರ್ಧವಾಗಿ ಮಾಡು; ಅರ್ಧಿಸು; ಸರಿ ಪಾಲು ಮಾಡು, ಹಂಚು; ಅರ್ಧಕ್ಕಿಳಿಸು. (ಮರಗೆಲಸ) (ಒಂದರಮೇಲೊಂದು ಬರುವ ಅಡ್ಡತೊಲೆಗಳನ್ನು) ಸಂಧಿಸಿದ ಕಡೆ ಅರ್ಧರ್ಧ ದಪ್ಪ ತೆಗೆದುಹಾಕಿ ಒಟ್ಟಿಗೆ ಕೂಡಿಸು. (ಗಾಲ್ಫ್ ಆಟ) H. a hole with (ಇನ್ನೊಬ್ಬ ಆಟಗಾರನು ಹೊಡೆದು ತುಂಬಿದ) ಅಷ್ಟೇ ಹೊಡೆತಗಳಿಂದ ಕುಳಿ ತುಂಬು.

Hálibut ಹ್ಯಾಲಿಬಟ್, **Hóli-** ಹಾ — (ನಾ.) ಆಹಾರಕ್ಕಾಗಿ ಉಪಯೋಗಿಸುವ ಒಂದು ದೊಡ್ಡ ಚಪ್ಪಟೆಮೀನು(ಜಾತಿ)

Hálidom ಹ್ಯಾಲಿಡಮ್ (ನಾ.) (ಪ್ರಾಚೀ. ಪ್ರ.) ಪವಿತ್ರ ವಸ್ತು [(ಮು. ಆಣೆಯಿಟ್ಟುಕೊಳ್ಳುವುದರಲ್ಲಿ) By my h.]

Halieútic ಹ್ಯಾಲಿಯೂಟಿಕ್ (ಗು., ನಾ.) ಮೀನುಹಿಡಿಯುವ. (ನಾ.; ಬ. ವ. ದಲ್ಲಿ) ಮೀನುಹಿಡಿಯುವ ಕಲೆ; ಬೆಸ್ತ ವಿದ್ಯೆ.

Halitósis ಹ್ಯಾಲಿಟೋಸಿಸ್ (ನಾ.) (ವೈ. ಶಾ.) ಅತಿ ಕೆಟ್ಟ ನಾತದ ಉಸಿರು: ದುರ್ಗಂಧ ಶ್ವಾಸ; ನಾರುಸಿರು.

Hall ಹಾಲ್ (ನಾ.) (ಅರಮನೆ, ಮೊ. ಗಳಲ್ಲಿ) ವಿಶಾಲವಾದ ಸಾರ್ವಜನಿಕ ಸಭಾಂಗಣ; ಹಜಾರ; ತೊಟ್ಟಿ (Servant's h. ಆಳುಗಳ, ಸೇವಕರ, ಊಟದ ಕೋಣೆ). ಜಮೀನ್ದಾರನ ವಾಸದ ಮನೆ. ಮಂದಿರ; ಮಹಲು. (ವಿಶ್ವವಿದ್ಯಾನಿಲಯ) ಸದಸ್ಯರಿಲ್ಲದೆ ಯಜಮಾನನೊಬ್ಬನೇ ಆಡಳಿತ ನಡಸುವ ಸಂಸ್ಥೆ; ಏಕನಾಯಕ ವಿಶ್ವವಿದ್ಯಾನಿಲಯ ಸಂಸ್ಥೆ; (ವಿಶ್ವವಿದ್ಯಾನಿಲಯದ ರಿಯಾಯಿತಿಗಳು ಇರುವ ಅಥವಾ ಇಲ್ಲದ) ವಿದ್ಯಾರ್ಥಿ ಮಂದಿರ, ವಸತಿ. (ಇಂಗ್ಲಿಷ್ ಪ್ರೌಢ ವಿದ್ಯಾಶಾಲೆ, ಮೊ. ಗಳಲ್ಲಿ) ಸರ್ವ ಸಮಾನವಾದ ಊಟದ ಹಜಾರ, ಭೋಜನ ಶಾಲೆ; (ಇದರಲ್ಲಿಯ) ಭೋಜನ ಕೂಟ; ಕೂಡೂಟ. ವೃತ್ತಿಸಂಸ್ಥೆಯ ಮಂದಿರ (Saddler's H. ಜೀನುಗಾರರ ಮಂದಿರ). ಸಾರ್ವಜನಿಕ ಕಾರ್ಯ ಕಲಾಪಗಳನ್ನು ನಡಸುವ ದೊಡ್ಡ ಕೋಣೆ, ಹಜಾರ, ಮಂದಿರ. ಮನೆಯ ಒಳಭಾಗಕ್ಕೆ ಪ್ರವೇಶಕೊಡುವ ನಡುವೆ; ಮುನ್ನಂಗಳ. Liberty H. (ಮನ ಬಂದಂತೆ ನಡೆಯಬಹುದಾದ) ಸ್ವಾತಂತ್ರ್ಯ ಮಂದಿರ. **H.-mark** (ನಾ., ಕ್ರಿ. ಸಕ.) (ಇಂಗ್ಲೆಂಡಿನಲ್ಲಿ ಅಕ್ಕಸಾಲಿಗ ಸಂಸ್ಥೆಯವರೂ ಸರ್ಕಾರದ ಲೋಹಪರೀಕ್ಷಾ ಕಚೇರಿಯವರೂ) ಚಿನ್ನದ ಮತ್ತು ಬೆಳ್ಳಿಯ ಗಟ್ಟಿಗಳ ಚೊಕ್ಕತನವನ್ನು ನಿಗದಿಮಾಡಿ ಹಾಕುವ ಮುದ್ರೆ; (ಸಂಸ್ಥೆಯ) ಚೊಕ್ಕ ಮುದ್ರೆ. (ಕ್ರಿ.) — ಯನ್ನು ಹಾಕು (ರೂಪ. ಸಹ)

Hallelújah, -lúiah = Alleluia.

Hálliard = Halyard.

Halló, -loá ಹಲೋ (ಭಾವ. ಅವ್ಯ., ನಾ., ಕ್ರಿ. ಅಕ.) (ಗಮನ ಸೆಳೆಯುವ ಅಥವಾ ಆಶ್ಚರ್ಯ ಸೂಚಕವಾದ ಕೂಗು) ಹಲೊ! ಲೊ! ಎಲೊ! (ನಾ., ಕ್ರಿ. ಅಕ.) 'ಹಲೋ', 'ಅಹೋ', 'ಭೋ' ಎಂಬ ಕೂಗು (ಹಾಕು)

Halloó ಹಲೂ (ಭಾವ. ಅವ್ಯ., ನಾ., ಕ್ರಿ.) ಬೆನ್ನಟ್ಟಿ ಹೋಗೆಂದು ನಾಯಿಗೆ ಕೊಡುವ ಸೂಚನೆಯ ಕೂಗು: 'ಹಲೂ'; 'ಛೂ'. 'ಹಲೂ' ಎಂಬ ಕೂಗು. (ಕ್ರಿ.) (ಮು., ನಾಯಿಗಳಿಗೆ) 'ಹಲೂ' ಎನ್ನು. (ನಾಯಿ, ಮೊ. ವನ್ನು) ಛೂ ಬಿಡು, (ಬೆನ್ನಟ್ಟುವ ಕೆಲಸಕ್ಕೆ) ಹೀಗೆ ಕೂಗಿ ಪ್ರೇರಿಸು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಓಡಿಸು. ಗಮನ ಸೆಳೆಯಲು ಕೂಗು. Do not h. until you are out of the wood (Wood ನೋಡಿ)

Hállow¹ ಹ್ಯಾಲೋ (ನಾ., ಕ್ರಿ. ನಕ.) ಪವಿತ್ರ ಪುರುಷ ; ಸಂತ [ಈಗ All hallows, Hallowmas (ಸರ್ವಸಂತರ ದಿನ) ಎಂಬಲ್ಲಿ ಮಾತ್ರ]. [**Hallowe'en** (All-hallow-even ಎಂಬುದರ ಸಂಕ್ಷಿಪ್ತ) ಸರ್ವ ಸಂತರ ದಿನದ ಹಿಂದಿನ ಸಂಜೆ, ರಾತ್ರಿ]. (ಕ್ರಿ.) ಪವಿತ್ರಗೊಳಿಸು ; ಪವಿತ್ರ ವೆಂದು ಗೌರವಿಸು.

Hállow² ಹ್ಯಾಲೋ (ಕ್ರಿ.) = Halloo (ಕ್ರಿ.)

Hallúcinate ಹ್ಯಲ್ಯೂಸಿನೇಟ್ (ಕ್ರಿ. ಸಕ.) (ಮನುಷ್ಯನ) ಮನಸ್ಸಿನಲ್ಲಿ ಮಿಥ್ಯಾ ಭಾವನೆಗಳನ್ನುಂಟುಮಾಡು ; ಭ್ರಮೆ ಹಿಡಿಸು ; ಭ್ರಾಂತಿ ಗೊಳಿಸು. **Hallucinátion** (ನಾ.) ನಿಜವಾಗಿಯೂ ಇಲ್ಲದ (ಬಾಹ್ಯ) ವಸ್ತುವನ್ನು ಇದ್ದಂತೆ ಭ್ರಮಿಸುವುದು ; ಭ್ರಾಂತಿ ; ಭ್ರಮೆ ; ಮಾಯೆ ; ಮನೋ ವಿಕಲ್ಪ. **Hallúcinatory** (ಗು.)

Halm = Haulm.

Hálo ಹೇಲೊ (ನಾ., ಕ್ರಿ. ಸಕ.)(ಮು., ಸೂರ್ಯ ಚಂದ್ರರನ್ನು) ಸುತ್ತುಗಟ್ಟಿದ ಬೆಳಕಿನ ಗೂಡು ; ಗುಡಿ ; ಪರಿವೇಷ ; ಪ್ರಭಾವಳಿ ; ತೇಜೋ ವಲಯ. ಸಾಧು ಸಂತರ ತಲೆಯ ಸುತ್ತಲೂ ಬಳಸಿರುವ ಪ್ರಭಾ ಮಂಡಲ. ಮಂಡಲ ; ವಲಯ. (ರೂಪ.) ಮನುಷ್ಯ, ಮೊ. ವನ್ನು ಬಳಸಿರುವ ಆದರ್ಶ ದಿವ್ಯಪ್ರಭೆ, ತೇಜಸ್ಸು, ಯಶಸ್ಸು. (ಕ್ರಿ. ಸಕ.) ಗುಡಿ, ಪರಿವೇಷ, ಪರಿಧಿ, —ಕಟ್ಟು.

Hálogen ಹ್ಯಾಲೊಜೆನ್ (ನಾ.) (ರ. ವಿ.) ಫ್ಲೋರಿನ್, ಕ್ಲೋರಿನ್, ಬ್ರೋಮಿನ್, ಅಯೊಡಿನ್ ಎಂಬ ಮೂಲ ಧಾತುಗಳಲ್ಲಿ ಯಾವುದಾದ ರೊಂದು [(ಇವು ಲೋಹಗಳೊಡನೆ ಸರಳ ಸಂಯೋಗ ಹೊಂದಿ 'ಹ್ಯಾಲಾಯ್ಡ್ಸ್' ಎಂಬ ಲವಣಗಳಾಗುತ್ತವೆ (ಉದಾ., ಸೋಡಿಯಂ ಕ್ಲೋರೈಡ್ = ಅಡಿಗೆಯ ಉಪ್ಪು)]. **Háloid** ಹ್ಯಾಲಾಯ್ಡ್, ಹ್ಯಾಲೊಯಿಡ್ (ಗು., ನಾ.) (ರ. ವಿ.) ಅಡಿಗೆಯ ಉಪ್ಪಿನಂಥ ಸಂಯೋಜನೆ ಯುಳ್ಳ (ಲವಣ)

Halt ಹಾಲ್ಟ್ (ನಾ., ಗು., ಕ್ರಿ.) ಪ್ರಯಾಣದಲ್ಲಿ, ನಡಿಗೆಯಲ್ಲಿ, ಅಲ್ಲಲ್ಲಿ ತಂಗು(ವುದು), ನಿಲ್ಲು(ವುದು). (ಪ್ರಾಚೀ. ಪ್ರ.) ಕುಂಟುವುದು. ಸ್ಥಳೀಯ ಅನುಕೂಲ್ಯಕ್ಕಾಗಿ (ಕಟ್ಟಡ, ಮೊ. ಗಳಿಲ್ಲದ) ರೈಲ್ವೆಯ ನಿಲ್ದೆಡೆ. (ಸೈನ್ಯ) ನಿಲ್ಲುವಂತೆ ಮಾಡು ; (ಒಂದು ಕಡೆ) ನಿಲ್ಲಿಸು ; (ಆಜ್ಞೆಯಲ್ಲಿ) ನಿಲ್ಲು ! ಹಿಂದು ಮುಂದು ನೋಡುತ್ತ, ತಡೆದು ತಡೆದು, ಅನುಮಾನಿಸುತ್ತ,—ನಡೆ; ಹಿಂದು ಮುಂದು ನೋಡು; ಅನುಮಾನಿಸು (H. between two opinions ಎರಡು ಅಭಿಪ್ರಾಯಗಳ ಮಧ್ಯೆ ಸಂದೇಹದಲ್ಲಿರು). (ವಾದ, ಪದ್ಯ, ಮೊ. ವು) ದೋಷಗೂಡಿರು ; ಊನ ವಾಗಿರು. (ಪ್ರಾಚೀ. ಪ್ರ.) ಕುಂಟು ; ಕುಂಟಾಗಿರು. (ಗು.) ಕುಂಟು ; (ಶಕ್ತಿ) ಉಡುಗಿಹೋದ. **Háltingly** (ಕ್ರಿ. ವಿ.)

Hálter ಹಾಲ್ಟರ್ (ನಾ., ಕ್ರಿ. ನಕ.) (ಕುದುರೆಗಳನ್ನು, ದನಗಳನ್ನು, ಕಟ್ಟಿ ಹಾಕುವ) ಕುಣಿಕೆಯ ಹಗ್ಗ, ತಲೆತೊಡಿಗೆಯುಳ್ಳ ಬಾರುಪಟ್ಟಿ ; ಕಣ್ಣಿ. (ಮನುಷ್ಯನನ್ನು ಗಲ್ಲಿಗೇರಿಸುವ) ಉರುಲು ಹಗ್ಗ, ಗಲ್ಲು ಹಗ್ಗ, ನೇಣು. ಗಲ್ಲು ಮರಣ ; ನೇಣು ಸಾವು. [H.-break (ಕ್ರಿ. ಸಕ.) (ಕುದುರೆಯನ್ನು) ಲಗಾಮಿಗೆ ಪಳಗಿಸು]. (ಕ್ರಿ.) ಕುಣಿಕೆಯ ಹಗ್ಗದಿಂದ ಕಟ್ಟು (*Up* ಉಪ. ದೊಡನೆ) ; (ಮನುಷ್ಯನನ್ನು ನೇಣಿನಿಂದ) ಗಲ್ಲಿಗೆ ಹಾಕು ; ನೇಣು ಹಾಕು.

Halve. Half ನೋಡಿ.

Hályard, Hálliard, Haúlyard ಹ್ಯಾ(ಹಾ)ಲ್ಯರ್ಡ್ (ನಾ.) ಹಡಗಿನ ಪಟ, ಪಟದ ಅಡ್ಡದಿಮ್ಮಿ, ಮೊ. ವನ್ನು ಎತ್ತುವ ಅಥವಾ ಇಳಿಸುವ ಹಗ್ಗ, ರಾಟಣೆಯ ಸಲಕರಣೆ.

Ham¹ ಹ್ಯಾಮ್ (ನಾ.) ತೊಡೆಯ ಹಿಂಭಾಗ ; ಹಿಂತೊಡೆ ; ಹಿಂತೊಡೆ ಮತ್ತು ಪಿರ್ರೆ (ಹಿಂದೆ) ಮೊಣಕಾಲ ಭಾಗ, (ಆಹಾರಕ್ಕಾಗಿ) ಉಪ್ಪೂರಿಸಿ, ಹೊಗೆಯಲ್ಲಾಗಲಿ ಬೇರೆ ರೀತಿಯಲ್ಲಾಗಲಿ ಒಣಗಿಸಿದ ಹಂದಿಯ ತೊಡೆಯ ಮಾಂಸ.

Ham² ಹ್ಯಾಮ್ (ನಾ.) (ಚರಿತ್ರೆ) ಊರು ; ಹಳ್ಳಿ.

Hámadrýad ಹ್ಯಾಮಡ್ರೈಅಡ್ (ನಾ.) (ಗ್ರೀಕ್ ಪುರಾಣ) (ತಾನು ವಾಸವಾಗಿದ್ದ ಒಂದು ಗೊತ್ತಾದ ಮರದೊಂದಿಗೆ ಜೀವಿಸುತ್ತಿದ್ದು, ಅದರೊಂದಿಗೆ ತಾನೂ ಸಾಯುತ್ತಿದ್ದ) ಒಂದು ದೇವತೆ. (ಇಂಡಿಯದ) ಒಂದು ವಿಷ ಸರ್ಪ, ಘಟ ಸರ್ಪ ; ದೊಡ್ಡ ನಾಗರಹಾವು; ಕಾಳಿಂಗ ನಾಗರ. ಅಬಿಸೀನಿಯದ (ಒಂದು ಜಾತಿಯ) ದೊಡ್ಡ ಕೋತಿ.

Hámburg ಹ್ಯಾಂಬರ್ಗ್, — ಬರೊ (ನಾ.) ಕರಿ ದ್ರಾಕ್ಷಿಹಣ್ಣು. ಸಣ್ಣ ಜಾತಿಯ (ಸಾಕಿದ) ಕೋಳಿ. (Hamburg ಎಂಬುದು ಜರ್ಮನಿಯಲ್ಲಿ ಒಂದು ದೊಡ್ಡ ಪಟ್ಟಣ)

Hames ಹೇಮ್ಸ್ (ನಾ. ; ಬ. ವ.) ಭಾರವೆಳೆಯುವ ಕುದುರೆಗೆ ಕೊರಳು ಪಟ್ಟಿಯಾಗಿ ಹಾಕಿರುವ (— ಪಟ್ಟಿಯ ಭಾಗವಾಗಿರುವ) ಮರದ ಅಥವಾ ಲೋಹದ ಎರಡು ಬಾಗಿಸಿದ ಪಟ್ಟಿಗಳು.

Hámite¹ ಹ್ಯಾಮೈಟ್ (ನಾ.) (ನೋವನ ಎರಡನೆಯ ಮಗನಾದ) ಹ್ಯಾಮಿನ ಸಂತತಿಯವನು ; — ಯವನೆಂದು ಊಹಿಸಲ್ಪಟ್ಟವನು. ಈಜಿಪ್ಟ್ ದೇಶದವನು ; ಐಗುಪ್ತರವನು ; ಆಫ್ರಿಕದ ನೀಗ್ರೋ ಅಥವಾ ಇತರ ಕುಲದವನು. **Hamític** ಹ್ಯಮಿಟಿಕ್ (ಗು.)

Hámite² ಹೇಮೈಟ್ (ನಾ.) ಕೊಕ್ಕೆಯಾಕಾರದ ಚಿಪ್ಪುಳ್ಳ ಪಳೆ ಯುಳಿಕೆಯ ಶೀರ್ಷಪಾದಿ.

Hámlet ಹ್ಯಾಮ್ಲೆಟ್ (ನಾ.) ಸಣ್ಣ ಹಳ್ಳಿ ; ಪಾಳೆಯ ; ಕೊಪ್ಪಲು (ಮು., ಕ್ರೈಸ್ತ ಗುಡಿಯಿಲ್ಲದ್ದು)

Hámmer ಹ್ಯಾಮರ್ (ನಾ.) (ಬಡಿಯುವುದಕ್ಕೂ ಒಡೆಯುವುದಕ್ಕೂ ಹೊಡೆಯುವುದಕ್ಕೂ ಉಪಯೋಗಿಸುವ) ಸುತ್ತಿಗೆ. ಇದೇ ತೆರದ ಕೆಲಸ ಮಾಡುವ ಲೋಹದ ದಿಮ್ಮಿಯುಳ್ಳ ಯಂತ್ರ. ಬಂದೂಕಿನಲ್ಲಿ ಮದ್ದು ಹಾರಿಸುವ ಇಂತಹ ಸಾಧನ : ಬಂದೂಕು ಕುದುರೆ, ಚಾಪು. (ಪಿಯಾನೊ, ಮೊ. ವಾದ್ಯಗಳಲ್ಲಿ) ತಂತಿಮಿಡಿಯುವ ಸಲಕರಣೆ, ಬಡಿಗೆ. (ಮಾಲು ಮಾರಿ ಆಯಿತೆಂದು ಹರಾಜುದಾರನು ಸೂಚಿಸಲು ಬಡಿಯುವ) ಹರಾಜುದಾರನ ಕೊಡತಿ. Come under the h. ಹರಾಜಾಗಿ ಹೋಗು. Knight of the h. ಕಮ್ಮಾರ. Throwing the h. ಭಾರದ ಸುತ್ತಿಗೆಯನ್ನು ಎಸಯುವ ವ್ಯಾಯಾಮ ಸ್ಪರ್ಧೆ. H. & tongs ಶಕ್ತಿಯೆಲ್ಲ ಉಪಯೋಗಿಸಿ. **H.-beam** (ಮೇಲಿನ ತೊಲೆಕಟ್ಟಿಗೆ ಆಧಾರ ವಾಗಿ, ಗೋಡೆಯಿಂದ ಸ್ವಲ್ಪ ದೂರ ಚಾಚಿಕೊಂಡಿರುವ) ಚಾಚು ತೊಲೆ. **H.-cloth** ಕುದುರೆಬಂಡಿ ಹೊಡೆಯುವವನ ಪೀಠದಮೇಲಿನ ಬಟ್ಟೆ. **H.-head** ಸುತ್ತಿಗೆಯ ತಲೆ. 'ಷಾರ್ಕ್' ಎಂಬ ಕ್ರೂರಜಾತಿಯ ಮೀನು : ಸುತ್ತಿಗೆ ಮೀನು. ಆಫ್ರಿಕದ ಒಂದು ಜಾತಿಯ ಹಕ್ಕಿ. **H.-lock** ಜಟ್ಟಿ ತನ್ನ ಪ್ರತಿಕಕ್ಷಿಯ ತೋಳನ್ನು ಅವನ ಬೆನ್ನಹಿಂದೆ ತಿರುಚಿ ಹಿಡಿದುಕೊಳ್ಳುವ ಪಟ್ಟು : ಬೆಂದೋಳು ಪಟ್ಟು. **H.-toe** ಮೇಲಕ್ಕೆ ಬಗ್ಗಿ ಹೋಗಿರುವ ಕಾಲ್ಬೆರಳು. **Hámmerman, Hámmersmith** (ನಾ.) (ಸುತ್ತಿಗೆ ಕೆಲಸದ) ಕಮ್ಮಾರ.

Hámmer (ಕ್ರಿ.) ಸುತ್ತಿಗೆಯಿಂದ (ಹೇಗೋ ಹಾಗೆ) ಹೊಡೆ, ಬಡಿ, ಕುಟ್ಟು. (ಬಳ. ಮಾ.) (ಯುದ್ಧದಲ್ಲಿ, ಆಟ ಪಾಟಗಳಲ್ಲಿ) ಹೆಟ್ಟು ಸೋಲುಂಟುಮಾಡು, ಬಡಿದುಹಾಕು, ಚಚ್ಚಿಬಿಡು (H. out ಉಪಾಯ, ಹಂಚಿಕೆ, —ಯೋಜಿಸು, ಕಲ್ಪಿಸು. H. idea into person's head ಭಾವನೆಯನ್ನು ಒಬ್ಬನ ತಲೆಗೆ ಒತ್ತಿ ಒತ್ತಿ ಹಿಡಿಸು). ಕಷ್ಟಪಟ್ಟು ಕೆಲಸ ಮಾಡು, ದುಡಿ (*At* ಉಪ. ದೊಡನೆ). (ಪತ್ರವ್ಯಾಪಾರ ಕಟ್ಟೆ) ಒಬ್ಬ ಸದಸ್ಯನು ಬಾಕಿ ತೀರಿಸಲು ತಪ್ಪಿದವನೆಂದು (ಕೊಡತಿಯಿಂದ ಮೂರು ಸಲ ಬಡಿದು) ಘೋಷಿಸು.

Hámmock ಹ್ಯಾಮಕ್ (ನಾ.) (ಮು., ಹಡಗಿನಲ್ಲಿ) ಮಲಗುವುದಕ್ಕಾಗಿ ರಟ್ಟು ಬಟ್ಟೆಯಿಂದ ಅಥವಾ ಹುರಿಯ ಬಲೆಯಿಂದ ಮಾಡಿದುದಾಗಿ, ಅದರ ಕೊನೆಯಲ್ಲಿರುವ ಹಗ್ಗಗಳಿಂದ ತೂಗಕಟ್ಟಿದ ಜೋಲೆ ; (ರಟ್ಟು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಟ್ಟೆಯ, ಹುರಿ ಬಲೆಯ) ಜೋಲೆ. H. chair (ತಕ್ಕಂತೆ ಆಳವಡಿಸಿ ಕೊಳ್ಳಬಹುದಾದ ಚೌಕಟ್ಟಿಗೆ ರಟ್ಟುಬಟ್ಟೆ ಕಟ್ಟಿ ಮಾಡಿದ) ಆರಾಮ ಕುರ್ಚಿ.

Hámper[1] ಹ್ಯಾಂಪರ್ (ನಾ.) (ಹಣ್ಣು, ಮೊ. ವನ್ನು ತುಂಬಿ ಕಳುಹಿಸುವುದಕ್ಕಾಗಿ ಬಿದಿರು, ಕಡ್ಡಿ, ಮೊ. ಗಳಿಂದ ಮಾಡಿದ) ಬುಟ್ಟಿ ; ಹೆಡಗೆ.

Hámper[2] ಹ್ಯಾಂಪರ್ (ಕ್ರಿ. ಸಕ., ನಾ.) (ಮನುಷ್ಯ, ಮೊ. ರ.) ಚಲನೆಯನ್ನು ತಡೆಯೊಡ್ಡಿ ನಿರ್ಬಂಧಿಸು, ಪ್ರತಿಬಂಧಿಸು. ತಡೆಯೊಡ್ಡು ; (ರೂಪ.) ಅಡ್ಡಗಟ್ಟು, ಅಡಚಣೆ ಮಾಡು. (ನಾವೆ) ಹಡಗಿಗೆ ಆವಶ್ಯಕವಾದ, ಆದರೆ ಅಚ್ಚುಕಟ್ಟಾಗಿಲ್ಲದ, ಸಜ್ಜು, ಸರಂಜಾಮು.

Hámpton Court ಹ್ಯಾಮ್ಪ್‌ಟನ್ ಕೋರ್ಟ್ (ನಾ.) ಲಂಡನ್ನಿನಲ್ಲಿರುವ ಈ ಹೆಸರಿನ ಅರಮನೆ (ಹೀನ ಸ್ಥಿತಿಗಿಳಿದಿರುವ ದೊಡ್ಡ ಮನೆತನದವರು ವಾಸಮಾಡುವುದಕ್ಕೂ ಸ್ವಲ್ಪ ಮಟ್ಟಿಗೆ ಸಾರ್ವಜನಿಕರ ಉಪಯೋಗಕ್ಕೂ ಈಗ ಬಿಟ್ಟುಕೊಟ್ಟಿದೆ)

Hámshackle ಹ್ಯಾಮ್‌ಷ್ಯಾಕ್‌ಲ್ (ಕ್ರಿ. ಸಕ.) ತಲೆಯನ್ನೂ ಮುಂಗಾಲನ್ನೂ ಸೇರಿಸಿ (ಕುದುರೆ, ಮೊ. ಗಳನ್ನು) ಹಗ್ಗದಿಂದ ಕಟ್ಟು ; ಗುದಿಗಾಲು ಕಟ್ಟು. (ರೂಪ.) ಸಂಕೋಲೆ ಹಾಕು ; ನಿರ್ಬಂಧದಲ್ಲಿಡು ; ತಡೆಗಟ್ಟು.

Hámster ಹ್ಯಾಮ್‌ಸ್ಟರ್ (ನಾ.) ತಿಂಡಿಯನ್ನು ಸಂಗ್ರಹಿಸಲು ದವಡೆ ಚೀಲಗಳುಳ್ಳ (ಹೆಗ್ಗಣದಂಥ) ಒಂದು ಖನಕ ಜಾತಿಯ ಪ್ರಾಣಿ.

Hámstring ಹ್ಯಾಮ್‌ಸ್ಟ್ರಿಂಗ್ (ನಾ., ಕ್ರಿ. ಸಕ. ; ಭೂತ, ಭೂ. ಕೃ. -inged,-ung) (ಮನುಷ್ಯನಲ್ಲಿ) ಮೊಣಕಾಲ ಹಿಂದಿನ ಐದು ಸ್ನಾಯು ರಜ್ಜುಗಳಲ್ಲೊಂದು ; ಜಾನು ರಜ್ಜು. (ಚತುಷ್ಪಾದಿಗಳಲ್ಲಿ) ಹಿಂಗಾಲಿನಲ್ಲಿ ಮೊಣಕಾಲಿನ ಹಿಂಭಾಗದಲ್ಲಿಯ ದೊಡ್ಡ ಸ್ನಾಯುರಜ್ಜು. (ಕ್ರಿ.) (ಈ ಸ್ನಾಯುರಜ್ಜುಗಳನ್ನು ಕತ್ತರಿಸಿ ಮನುಷ್ಯನನ್ನು, ಪ್ರಾಣಿಯನ್ನು) ಊನ ಮಾಡು, ಕುಂಟು ಮಾಡು ; (ರೂಪ.) ಕ್ರಿಯಾಶಕ್ತಿಯುಡುಗಿಸು.

Hámulus ಹ್ಯಾಮ್ಯುಲಸ್ (ನಾ. ; ಬ. ವ. - li — ಲೈ) (ಅಂ. ರ. ಶಾ., ಪ್ರಾ. ವಿ., ಸ. ವಿ.) (ಕೆಲವು ಮೂಳೆಗಳ, ಹಕ್ಕಿಯ ಗರಿಗಳ, ಸಸ್ಯಗಳ ಬರುಗೂದಲಿನ, ರಚನೆಯಲ್ಲಿ ಕಂಡುಬರುವ) ಕೊಕ್ಕೆ, ಕೊಂಡಿಯಂಥ ಚಾಚು.

Hand ಹ್ಯಾಂಡ್ (ನಾ.) ಮಣಿಕಟ್ಟಿನಿಂದ ಮುಂದಿರುವ ತೋಳಿನ ಭಾಗ : ಕೈ ; ಕರ ; ಹಸ್ತ. (ಚತುಷ್ಪಾದಿಗಳಲ್ಲಿ) ಮುಂಗಾಲಿನ ಪಾದ. ಅಧಿಕಾರ ; ಕರ್ತೃತ್ವ ; ಅಧೀನ ; ವಶ. (ಸಾ., ಬ. ವ. ದಲ್ಲಿ) ಒಂದು ಕಾರ್ಖಾನೆ, ಮೊ. ಗಳ ಕೈಗೆಲಸದವನು. ಕೈಚಳಕ ; ಹಸ್ತ ಕೌಶಲ ; ಕೆಲಸಗಾರಿಕೆ. (ಕ್ರಿಕೆಟ್, ಬಿಲಿಯರ್ಡ್ಸ್, ಮೊ. ಆಟಗಳಲ್ಲಿ) ಸೂಳು, ಸರದಿ. ಬರವಣಿಗೆಯ ರೀತಿ ; ಸಹಿ ; ರುಜು. ಕೈಯಂಥ ವಸ್ತು (ಮು., ಗಡಿಯಾರದ ಮುಳ್ಳು). ಕುದುರೆಯ ಎತ್ತರದ ಮಾನ (1 Hand = ೪ ಅಂಗುಲ). ಹಿಡಿ ; ಕಂತೆ ; ಪಿಂಡಿ (ಉದಾ., ಹೊಗೆಸೊಪ್ಪಿನ ಪಿಂಡಿ). (ಇಸ್ಪೀಟಾಟ) ಆಟಗಾರನಿಗೆ ಹಾಕಿದ ಎಲೆಗಳು ; ಈ ಎಲೆಗಳನ್ನು ಹಿಡಿದಿರುವ ಆಟಗಾರ : ಕೈ (First, third, hand). In the hands of —ನ ವಶದಲ್ಲಿ, ಕೈಯಲ್ಲಿ. Pass through many hands ಹಲವರ ಕೈ ಹಾದುಹೋಗು. Have a hand in it ಅದರಲ್ಲೊಂದು ಸಂಬಂಧ, ಕರ್ತೃತ್ವ, ಕಾರ್ಯ ಭಾಗ, — ಇರು ; ಕೈಯಿರು. Give one's hand to ಮದುವೆಯಾಗು. A picture by the same hand ಅದೇ ಕೈ ಬರೆದ ಚಿತ್ರ. All hands (ಹಡಗಿನ) ಎಲ್ಲ ಕೆಲಸಗಾರರೂ ನೌಕರರೂ ಕರಾಸಿಗಳೂ. A good h. at singlestick or acrostics ದೊಣ್ಣೆವರಿಸೆಯಲ್ಲಿ ಅಥವಾ ಚಿತ್ರಬಂಧ ಪದ್ಯರಚನೆಯಲ್ಲಿ ಪಳಗಿದ ಕೈ, ಚತುರ. An old parliamentary hand ಶಾಸನ ಸಭೆಯ ನುರಿತ ಕೈ. First h. information ನೇರವಾದ, ನೇಟಾದ, ಸಮಾಚಾರ. Second h. information ಪರೋಕ್ಷವಾಗಿ ಬಂದ ಸಮಾಚಾರ. Cool h. (Cool ನೋಡಿ). A hand for pastry ಪಿಷ್ಟಭಕ್ಷ್ಯಗಳನ್ನು ಮಾಡುವುದರಲ್ಲಿ ಜಾಣ. A legible h. ತಿಳಿ ಬರಹ. At h. ಬಳಿಯಲ್ಲಿ ; ಸದ್ಯದಲ್ಲಿ ನಡೆಯಲಿರುವ. By h. ಕೈಗೆಲಸದಿಂದ [Brought up by h. (ಮಗುವಿನ ವಿಷಯದಲ್ಲಿ) ಬುಡ್ಡಿಹಾಲಿನಿಂದ, ಹೊಯ್‌ಹಾಲಿನಿಂದ, ಸಾಕಿದ]. For one's own hand ತನಗಾಗಿಯೇ ; ಸ್ವಪ್ರಯೋಜನಕ್ಕಾಗಿಯೇ. Live from h. to mouth ಅಹನ್ಯಹನಿ ಕಾಲಕ್ಷೇಪ ಮಾಡು. In h. ಕೈಯಲ್ಲಿ (ಹಿಡಿದ) ; (ಒಬ್ಬನ) ವಶದಲ್ಲಿ, ಹಿಡಿತದಲ್ಲಿ, ಸ್ವಾಧೀನದಲ್ಲಿ. ಗಮನಕೊಡುತ್ತಿರುವ. Off h. ಪೂರ್ವಸಿದ್ಧತೆಯಿಲ್ಲದೆ ; ಹಾಗಿಂದ ಹಾಗೆಯೇ. On h. (ಒಬ್ಬನ) ವಶದಲ್ಲಿ, ಕೈಯಲ್ಲಿ. On one's hands (ಒಬ್ಬನ) ಜವಾಬ್ದಾರಿಯಲ್ಲಿ, ಮೈಮೇಲೆ ಬಿದ್ದದ್ದಾಗಿ. On all hands ಎಲ್ಲ ಕಡೆಗೂ ; ಎಲ್ಲ ಕಡೆಯಿಂದಲೂ. On the one h., on the other h. (ಅಭಿಪ್ರಾಯ ವ್ಯತ್ಯಾಸಗಳ ಸೂಚನೆಯಲ್ಲಿ) ಒಂದು ಕಡೆ, ಮತ್ತೊಂದು ಕಡೆ. Out of h. ಒಡನೆಯೇ ; ಪೂರ್ವಸಿದ್ಧತೆಯಿಲ್ಲದೆ. ಕೈ ಮೀರಿ. To h. ಕೈಗೆ ಎಟಕುವಂತೆ ; ಹತ್ತಿರದಲ್ಲಿ. To one's h. (ಪ್ರಯಾಸವಿಲ್ಲದೆ, ಪ್ರಯತ್ನ ಪಡದೆ) ಕೈಗೆ ಸಿದ್ಧವಾಗಿ. Bear a h. — ಲ್ಲಿ ಭಾಗ ವಹಿಸು, ಸಹಾಯ ಮಾಡು. Come to h. ಕೈ ಸೇರು. Do a h.'s turn ಕೈ ಅಲುಗಿಸು ; ಸ್ವಲ್ಪವಾದರೂ ಪ್ರಯತ್ನಮಾಡು. Lay hands on ಮುಟ್ಟು ; ಕೈಹಾಕು ; ತುಡುಕು ; ಕೈ ಮಾಡು. Take in h. ವಹಿಸಿಕೊ. Change hands (ಆಸ್ತಿ) ಕೈ ಬದಲಾಯಿಸು. Clean hands (ರೂಪ.) ನಿರ್ದೋಷಿತೆ ; ಶುದ್ಧ ಹಸ್ತ. With a heavy h. ಬಲವಂತದಿಂದ ; ಕಠೋರವಾಗಿ ; ದಬ್ಬಾಳಿಕೆಯಿಂದ. With a high h. ಧೈರ್ಯದಿಂದ ; (ಅಧಿಕಾರವಿದೆಯೆಂಬ) ದರ್ಪದಿಂದ. Have, keep, one's h. in ಅಭ್ಯಾಸವಿಟ್ಟುಕೊಂಡಿರು. His h. is out ಅವನಿಗೆ ರೂಢಿ ತಪ್ಪಿದೆ. (Win) Hands down ಸುಲಭವಾಗಿ (ಗೆಲ್ಲು). Hands off ! ಮುಟ್ಟದಿರು! Hands up ! (ಒಪ್ಪಿಗೆಯ ಸೂಚನೆಯಾಗಿ ಅಥವಾ ಎದುರುಬೀಳದಿರುವುದಕ್ಕಾಗಿ) ಕೈಯೆತ್ತು ! H. in h. ಕೈಯಲ್ಲಿ ಕೈ ಹಾಕಿಕೊಂಡು ; ಅನ್ಯೋನ್ಯ ಸ್ನೇಹದಿಂದ. Go h. in h. with ಜೊತೆ ಜೊತೆಯಾಗಿ ಹೋಗು (ರೂಪ. ಸಹ). Hand over h. or fist (ಹಗ್ಗ ಹತ್ತಿಹೋಗುವುದರಲ್ಲಿ) ಹಿಡಿತದಮೇಲೆ ಹಿಡಿತ ಹಾಕುತ್ತ ; ಕೈಮೇಲೆ ಕೈ ಹಾಕುತ್ತ. (ರೂಪ.) (ಒಬ್ಬನನ್ನು ಹಿಂದೆಹಾಕಲು) ಎಡೆ ಬಿಡದೆ, ಒಂದೇ ಸಮನಾಗಿ, ಬೇಗ ಬೇಗನೆ, ಮುಂದುವರಿಯುತ್ತ. H. to h. (ಕುಸ್ತಿ, ಕಾಳಗ, ಮೊ. ಗಳಲ್ಲಿ) ಕೈ ಕೈ ಹತ್ತಿ. Bind one h. & foot ಕೈ ಕಾಲು ಕಟ್ಟಿಹಾಕು ; ಸಂಪೂರ್ಣವಾಗಿ ಬಂಧಿಸು. Serve (person) h. & foot ಅತಿ ಶ್ರದ್ಧೆಯಿಂದ (ಒಬ್ಬನನ್ನು) ಸೇವಿಸು. Be h. in (*or* and) glove with ಅನ್ಯೋನ್ಯವಾಗಿರು ; ಒಬ್ಬರನ್ನೊಬ್ಬರು ಎಡೆಬಿಡದಿರು. Wash one's hands (of) (ಒಂದರ) ಜವಾಬ್ದಾರಿ ತಪ್ಪಿಸಿಕೊ ; ಕೈ ತೊಳೆದುಕೊ (ರೂಪ.). **Hand-** (ಯಂತ್ರದಿಂದ ತಯಾರಿಸದೆ) ಕೈಯಿಂದ ಮಾಡಿದ (H.-knitted, H.-sewn, H.-painted). **H.-bag** (ಸಂಚಾರದಲ್ಲಿ ಹಿಡಿದುಕೊಂಡುಹೋಗುವ) ಕೈಚೀಲ, ಹಿಡಿಚೀಲ. **H.-ball** ಕೈಯಿಂದ ಎಸೆದಾಡುವ ಚೆಂಡು : ಕೈಚೆಂಡು ; (ಎರಡು ಗುರಿಗಂಬಗಳ ಮಧ್ಯೆ ಆಡುವ) ಕೈಚೆಂಡಾಟ. **H.-barrow** (ಕೈಯಿಂದ ತಳ್ಳಿಕೊಂಡುಹೋಗುವ) ಕೈಬಂಡಿ. **Hand-bell** (ಕೈಯಿಂದ ಬಾರಿಸುವ) ಕೈಗಂಟೆ (ಮು., ಸಂಗೀತಗಾರಿಕೆಯಲ್ಲಿ ಉಪಯೋಗಿಸುವ ಗಂಟೆಗಳ ತಂಡದಲ್ಲೊಂದು). **Handbill** (ಕೈಯಿಂದ ಹಂಚುವ ಮುದ್ರಣ ಮಾಡಿದ) ಹಸ್ತ ಪತ್ರಿಕೆ. **Handbook** (ವಿಷಯ ವಿಸ್ತಾರವಿಲ್ಲದ) ಲಘು ಗ್ರಂಥ ; ಕೈಪಿಡಿ ; ಸ್ಥೂಲಪರಿಚಯ ಗ್ರಂಥ. **H.-canter** ಆಯಾಸವಿಲ್ಲದ ಸಣ್ಣ ಕುಲುಕು ಓಟ. **H.-cart** (ಕೈಯಿಂದ ತಳ್ಳುವ ಅಥವಾ ಎಳೆಯುವ) ಕೈಬಂಡಿ. **Handcuffs** (ಕೈದಿಯ ಕೈಗಳನ್ನು ಬಂಧಿಸುವುದಕ್ಕಾಗಿ) ಚಿಕ್ಕ ಸರಪಣಿಯಿಂದ ಸೇರಿಸಿದ ಒಂದು ಜೊತೆಯ ಲೋಹದ ಬಳೆಗಳು : ಹಾತ್ ಬೇಡಿ. **Handcuff** (ಕ್ರಿ. ಸಕ.) ಹಾತ್‌ಬೇಡಿ ಹಾಕು. **H.-gallop** ಸಣ್ಣ ನಾಗಾಲೋಟ. **H.-glass** (ಕೈಯಲ್ಲಿ ಹಿಡಿದು ನೋಡುವ) ಸಣ್ಣ ಭೂತಗನ್ನಡಿ ; (ಹಿಡಿಯುಳ್ಳ ಸಣ್ಣ) ಕೈಗನ್ನಡಿ. **Handgrip** (ಸ್ನೇಹದ ಅಥವಾ ಶತ್ರುತ್ವದ) ಕೈಹಿಡಿತ, ಮುಷ್ಟಿ ಬಂಧನ. **Handhold** (ಹತ್ತುವುದು, ಮೊ. ಗಳಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕೈ) ಹಿಡಿದುಕೊಳ್ಳುವುದಕ್ಕೆ ಆಸರೆಯಾದದ್ದು ; ಕೈಯಾಸರೆ. **H.-line** (ಕೋಲಿಲ್ಲದೆ ಉಪಯೋಗಿಸುವ) ಕೈಗಾಳದ ಹುರಿ. **H.-loom** ಕೈ ಮಗ್ಗ. **H.-made** (ಯಂತ್ರದಿಂದಲ್ಲದೆ) ಕೈಯಿಂದ ಮಾಡಿದ. **Handmaid(en)** (ಪ್ರಾಚೀ. ಪ್ರ., ರೂಪ.) ಹೆಣ್ಣಾಳು ; ದಾಸಿ. **H.-organ** ಸುಲಭವಾಗಿ ಒಯ್ಯಬಹುದಾದ, ಕೈಯಿಂದ ಹಿಡಿ ತಿರುಗಿಸಿ ಬಾಜಿಸಲಾಗುವ, ಒಂದು ಬಗೆಯ ವಾದ್ಯ. **H.-post** ಕೈಗಂಬ ; ಕೈಮರ. **H.-rail** (ಮೆಟ್ಟಲುಸಾಲು, ಮೊ. ಗಳ ಅಂಚಿನಲ್ಲಿ ಹಾಕಿರುವ) ಹಿಡಿಕಂಬಿ. **Handshake** (ಅಭಿವಂದನೆಯ) ಕೈಕುಲುಕು, ಹಸ್ತ ರಾಘುವ. **Handwriting** (ಮು., ಒಬ್ಬನ) ಕೈಬರಹ, ಬರವಣಿಗೆ. (-) **handed** (ಗು.) ; **Hándless** (ಗು.) ; **Hándful** (ನಾ. ; ಬ. ವ.-fuls) ಕೈತುಂಬು ; ಹಿಡಿ ; (ಜನ, ಮೊ. ಗಳ ವಿಷಯದಲ್ಲಿ) ಸ್ವಲ್ಪ ಸಂಖ್ಯೆ ; ಕೆಲವು. (ಅಸಂ.) ತೊಂದರೆಯ ಮನುಷ್ಯ, ಕೆಲಸ.

Hand (ಕ್ರಿ. ಸಕ.) (ಗಾಡಿ, ಮೊ. ವನ್ನು ಏರಲು, ಇಳಿಯಲು) (ಒಬ್ಬನಿಗೆ) ಕೈ ಕೊಟ್ಟು ಸಹಾಯಮಾಡು, ಕೈ ನೀಡು. (ನಾವೆ) ಪಟ ಸುತ್ತು. (ಕೈಯಿಂದ ಅಥವಾ ಬೇರೆ ರೀತಿಯಲ್ಲಿ) ಕೊಡು, ಒಪ್ಪಿಸು, ವರ್ಗಾಯಿಸು (H. *over to* person, H. *down to* succeeding generations. H. *in* at office. *On*, *up*, ಮೊ. ಉಪ. ದೊಡನೆ ಸಹ). **H.-off** (ರಗ್ಬಿ ಕಾಲ್ಚೆಂಡಾಟ) ಎದುರಾಳಿಯನ್ನು ಕೈಯಿಂದ ನೂಕು (ವುದು) ; ಕೈನೂಕು. **H.-out** (ನಾ.) (ಅಮೆ. ಸಂ.) ಮನೆಬಾಗಿಲಲ್ಲಿ ತಿರುಕನಿಗೆ ಕೊಟ್ಟ ದುಡ್ಡು ಅಥವಾ ಅನ್ನ ; ಕೈಭಿಕ್ಷೆ.

Hándicap ಹ್ಯಾಂಡಿಕ್ಯಾಪ್ (ನಾ., ಕ್ರಿ. ಸಕ.) (ಕುದುರೆಯ ಜೂಜಿನಲ್ಲಿ ಎಲ್ಲ ಸ್ಪರ್ಧಿಗಳಿಗೂ ಸಮಾನ ಅವಕಾಶವಿರುವಹಾಗೆ ಆಯಾ ಕುದುರೆಗೆ ತಕ್ಕದ್ದೆಂದು ತೀರ್ಪುಗಾರನಿಗೆ ತೋರುವ ಭಾರವನ್ನು ಹೊರಿಸಿ ಅಥವಾ ಮುಂದೋಟವನ್ನು ಕೊಟ್ಟು) ಸಮಾನಗೊಳಿಸಿದ ಜೂಜು, ಸ್ಪರ್ಧೆ ; ಮತ್ತೆ ಯಾವುದಾದರೂ ಈ ತೆರದ ಜೂಜು, ಸ್ಪರ್ಧೆ. (ಸ್ಪರ್ಧಿಗಳ ಅವಕಾಶವನ್ನು ಸಮಾನಗೊಳಿಸುವುದಕ್ಕಾಗಿ, ಕೆಲವಕ್ಕೆ) ಹೊರಿಸಿದ ಹೆಚ್ಚಿನ ಭಾರ ಅಥವಾ ಇತರ ನಿರ್ಬಂಧ. (ರೂಪ.) ಯಾವುದಾದರೂ ಕಾರ್ಯ ಸಾಧನೆಗಿರುವ ತಡೆ, ಪ್ರತಿಬಂಧ, ಅನನುಕೂಲ ; ಅಡ್ಡಿ ; ತೊಂದರೆ ; ಅಡ್ಡಿಗಟ್ಟು. (ಕ್ರಿ. ಸಕ.) ಸ್ಪರ್ಧಿಗೆ ಭಾರ ಹೊರಿಸು, ಪ್ರತಿಬಂಧಕ ಕಲ್ಪಿಸು. (ರೂಪ.) (ಪರಿಸ್ಥಿತಿಯ ವಿಚಾರದಲ್ಲಿ) (ಒಬ್ಬನಿಗೆ) ಪ್ರತಿಕೂಲ ಮಾಡು, ಪ್ರತಿಬಂಧಕವಾಗಿರು. **Hándicapper** (ನಾ.)

Hándicraft ಹ್ಯಾಂಡಿಕ್ರಾಫ್ಟ್ (ನಾ.) ಕೈ ಚಾತುರ್ಯ ; ಕೈ ಜಾಣ್ಮೆ ; ಹಸ್ತ ಕೌಶಲ. ಕೈ ಕಲೆ ; ಕೈ ಕಸಬು. **Hándicraftsman** (ನಾ.) ಕೈಗೆಲಸ ಮಾಡುವವನು ; ಕೈ ಕಸಬಿನವನು.

Hándiwork ಹ್ಯಾಂಡಿವರ್ಕ್ (ನಾ.) ಕೈಯಿಂದ ಅಥವಾ ಸ್ವತಃ ತಾನಾಗಿ ಮಾಡಿದ ಕೆಲಸ, ವಸ್ತು ; ಕೈಗೆಲಸ.

Hándkerchief ಹ್ಯಾಂಕರ್ಚಿಫ್ (ನಾ.) ಮೂಗು, ಮುಖ, ಕೈ, ಒರಸಿಕೊಳ್ಳುವುದಕ್ಕಾಗಿ ಜೇಬಿನಲ್ಲಿಟ್ಟುಕೊಂಡಿರುವ (Pocket-h.), ಅಥವಾ ತಲೆಗೆ ಸುತ್ತಿಕೊಳ್ಳುವ, ಅಥವಾ ಕತ್ತಿಗೆ ಸುತ್ತಿಕೊಳ್ಳುವ (Neck h., Neckerchief) ಬಟ್ಟೆ, ರೇಷ್ಮೆ, ಮೊ. ಗಳ ಚಿಕ್ಕ ಚೌಕ (ವಸ್ತ್ರ) ; ಕೈ ಚೌಕ ; ಕರವಸ್ತ್ರ ; ಶಿರವಸ್ತ್ರ ; ಕಂಠವಸ್ತ್ರ. Throw the h. to (person) (ಕೆಲವು ಆಟಗಳಲ್ಲಿ) ತನ್ನನ್ನು ಬೆನ್ನಟ್ಟಿ ಹಿಡಿಯುವಂತೆ ಸೂಚನೆ ಕೊಡಲು ಒಬ್ಬನ ಮುಂದೆ ಕರವಸ್ತ್ರವನ್ನು ಹಾಕು ; (ಒಬ್ಬನಿಗೆ) ಅನುಗ್ರಹ ಪೂರ್ವಕವಾಗಿ ಮೊದಲವಕಾಶ ಕೊಡು.

Hándle ಹ್ಯಾಂಡಲ್ (ನಾ., ಕ್ರಿ. ಸಕ.) ಒಂದು ವಸ್ತುವನ್ನು ಹಿಡಿದುಕೊಳ್ಳುವುದಕ್ಕಾಗಿ ಮಾಡಿರುವ ಅದರ ಭಾಗ ; ಕೈ ; ಹಿಡಿ ; ಕಾವು [H.-bar ಬೈಸಿಕಲ್, ಮೊ. ಗಳಲ್ಲಿ, ಅವನ್ನು ಬೇಕಾದ ಕಡೆಗೆ ತಿರುಗಿಸಲು ಸಾಧನವಾದ, ಎರಡು ತುದಿಗಳಲ್ಲೂ ಹಿಡಿಯಿರುವ, ದಂಡ : ಕೈದಂಡ. H. of the face (ಹಾಸ್ಯ ಪ್ರ.) ಮೂಗು. H. to one's name (ಬಳ. ಮಾ.) ಬಿರುದು (ಉದಾ., Lord, Sir, ಮೊ. ವು)]. (ಅದರಿಂದ) ಪ್ರಯೋಜನ ಹೊಂದಬಹುದಾದ ವಿಷಯ ; ಸಾಧನ ; ನಿಮಿತ್ತ ; ನೆಪ. (ಕ್ರಿ.) ಕೈಯಿಂದ ಮುಟ್ಟು, ಮುಟ್ಟಿ ನೋಡು ; ಕೈ ಆಡಿಸು ; ಸ್ಪರ್ಶ ಮಾಡು. ಕೈಯಿಂದ ಮಾಡು, ನಡಸು. (ಒಬ್ಬನನ್ನು, ಒಂದನ್ನು) ಹಿಡಿತದಲ್ಲಿಟ್ಟುಕೊ, ನಿರ್ವಹಿಸು [H. roughly, kindly (ಒಬ್ಬನ ವಿಷಯದಲ್ಲಿ) ಒರಟಾಗಿ, ದಯೆಯಿಂದ, ನಡೆದುಕೊ]. (ವಿಷಯವನ್ನು) ಪ್ರತಿಪಾದಿಸು, ಬೋಧಿಸು. (ಸಾಮಾನುಗಳ) ವ್ಯಾಪಾರ ನಡಸು.

Hándley-Page ಹ್ಯಾಂಡ್ಲಿ ಪೇಜ್ (ನಾ.) ಒಂದು ತೆರದ ದೊಡ್ಡ ಫಲಕ ವಿಮಾನ. (ರಚಿಸಿದವನ ಹೆಸರಿನಿಂದ)

Hán(d)sel ಹ್ಯಾನ್(ಡ್)ಸೆಲ್ (ನಾ., ಕ್ರಿ. ಸಕ.) (ಹೊಸ ವರ್ಷದ ಅಥವಾ ಹೊಸ ಪರಿಸ್ಥಿತಿಯ ಆರಂಭದಲ್ಲಿ ಕೊಟ್ಟ) ಬಹುಮಾನ, ಉಡುಗೊರೆ. ಬೋಣಿ ; ಮುಂಗಡದ ಹಣ ; ಸಂಚಕಾರ. ಮುನ್ ಸವಿ ; ಮುನ್ ಸೂಚನೆ. (ಕ್ರಿ. ಸಕ.) —ಕೊಡು ; ಉಪಕ್ರಮಿಸು ; ಪ್ರಾರಂಭೋತ್ಸವ ಮಾಡು. ಬೋಣಿ ಮಾಡು ; (ಮಾಡುವವರಲ್ಲಿ) ಮೊದಲಿಗನಾಗಿರು.

Hándsome ಹ್ಯಾನ್(ಡ್)ಸಮ್ (ಗು.) ಅಂದವಾದ ರೂಪಿನ, ಆಕಾರದ ; ಅಂದವಾದ ; ಚೆಲುವಾದ ; ಸುಂದರವಾದ. (ವರ್ತನೆ, ಮೊ. ವು) ಉದಾರ, ಉದಾತ್ತ (A h. present ಉದಾರ ಬಹುಮಾನ. A h. treatment ಆದರದ ಉಪಚಾರ. H. is that h. does ಚೆನ್ನಾಗಿ ಮಾಡುವುದೇ ಚೆನ್ನು]. (ಬೆಲೆ, ಆಸ್ತಿ, ಮೊ. ಗಳ ವಿಷಯದಲ್ಲಿ) ಹೆಚ್ಚು ; ತುಂಬ ; ಅಧಿಕ ; ಪುಷ್ಕಲ. **Hándsomely** (ಕ್ರಿ. ವಿ.) ; **Hándsomeness** (ನಾ.)

Hándy ಹ್ಯಾಂಡಿ (ಗು.) ಕೈಗೆ ಸಿದ್ಧವಾಗಿರುವ, ಸಮೀಪದಲ್ಲಿರುವ ; ಉಪಯೋಗಕ್ಕೆ, ಬಳಕೆಗೆ, ಹಿಡಿತಕ್ಕೆ, —ತಕ್ಕ, ಅನುಕೂಲವಾಗಿರುವ ; ಸಮಯಕ್ಕೆ ಒದಗುವ. ಕೈಜಾಣ್ಮೆಯ ; ಕರ ಕೌಶಲದ. **H.-dandy** ಒಂದು ಮಗು ಮತ್ತೊಂದು ಮಗುವಿನ ಯಾವ ಕೈಯಲ್ಲಿ ವಸ್ತು ಬಚ್ಚಿಟ್ಟುಕೊಂಡಿದೆಯೆಂದು ಊಹೆಮಾಡಿ ಹೇಳಬೇಕಾದ ಮಕ್ಕಳಾಟ ; ಕೈ ಮುಚ್ಚಾಟ. **H.-man** (ಹಲವು ವೇಳೆ ನಾವಿಕರ ವಿಷಯದಲ್ಲಿ, ಚಿಲ್ಲರೆ ಕೆಲಸಗಳಿಗೆ ಒದಗುವ) ಕೈಯಾಳು. **Hándily** (ಕ್ರಿ. ವಿ.) ; **Hándiness** (ನಾ.)

Hang ಹ್ಯಾಂಗ್ [ಕ್ರಿ. ; ಭೂತ., ಭೂ. ಕೃ. Hung, (ಕೆಲವು ಸಂದರ್ಭಗಳಲ್ಲಿ) Hanged] (ಮೇಲಿರುವ ಕೊಕ್ಕೆಯಿಂದ ಅಥವಾ ಇತರ ವಸ್ತುವಿನಿಂದ) ತೂಗ ಹಾಕು, ತೂಗ ಕಟ್ಟು ; ತಗುಲ ಹಾಕು ; ತೂಗ ಬೀಳು ; ತೊಂಗು ; ತೂಗಾಡು ; ಜೋಲು ; ಜೋಲು ಬೀಳಿಸು ; ನೇರಾಡು ; ನೇತಾಡು ; ಇಳಿಯ ಬೀಳು. (*From, to* ಉಪ. ದೊಡನೆ). ಗೋಡೆಗೆ (ಚಿತ್ರಾರದ ಕಾಗದವನ್ನು) ಅಂಟಿಸು. ಗಲ್ಲಿಗೇರಿಸು ; ನೇಣು ಹಾಕು (ಭೂತ., ಭೂ. ಕೃ. Hanged). (ಶಾಪದ ಮಾತು) Hang ! H. it ! H. you ! ಹಾಳಾಗಲಿ ! ನಾಶವಾಗಿ ಹೋಗು ! I'll be hanged if — (ಅದು ಹಾಗಾದರೆ) ನಾನು ತಲೆ ಒಪ್ಪಿಸುತ್ತೇನೆ. Hung beef ಕೆಡದಂತಿಡುವುದಕ್ಕೆ ಒಣಗಿ ಹದವಾಗಲು ತೂಗಕಟ್ಟಿದ ದನದ ಮಾಂಸ. Pictures hung on the line ನೋಟಕ್ಕೆ ಅನುಕೂಲವಾಗಿರುವ ಎತ್ತರದಲ್ಲಿ ತೂಗಕಟ್ಟಿದ ಪಟಗಳು. Hanging Committee (Hanging ನೋಡಿ). The heavens with stars were hung ಆಕಾಶದಲ್ಲಿ ನಕ್ಷತ್ರಗಳು ತೂಗಕಟ್ಟಿದ್ದುವು. Door hangs on hinges and coach on springs ಕದ ಕೀಲುಗಳಮೇಲೆ ತಿರುಗುತ್ತದೆ ; ಸವಾರಿಬಂಡಿ ಎಗುರುಪಟ್ಟಿಗಳಮೇಲೆ ಕೂತಿರುತ್ತದೆ. H. the head (ನಾಚಿಕೆ, ಮೊ. ಗಳಿಂದ) ತಲೆ ತಗ್ಗಿಸು. (ರೂಪ.) Sword hangs over his head ಅವನಿಗೆ ತಲೆಹೋಗುವ ಸಂಭವವಿದೆ. Rogue shall h. for it ಕಳ್ಳ ಅದಕ್ಕಾಗಿ ದಂಡನೆ ಅನುಭವಿಸಬೇಕು. Hangs in the balance ಅತ್ತ ಇತ್ತ ತೂಗುತ್ತಿದೆ ; ಸಂದೇಹದಲ್ಲಿದೆ. Curtain hangs loose, in folds ಪರದೆ ಸಡಿಲವಾಗಿ, ನಿರಿಗೆ ನಿರಿಗೆಯಾಗಿ, ಇಳಿಬಿದ್ದಿದೆ. H. about ಸುತ್ತ ಮುತ್ತ ಸುಳಿದಾಡುತ್ತಿರು. H. back (ನಡೆಯಲು) ಹಿಂಜರಿ ; ಹಿಂದೇಟು ಹೊಡೆ. H. behind ಹಿಂದೆ ಬೀಳು. H. fire (ಬಂದೂಕು) ಹಾರುವುದು ಸಾವಕಾಶವಾಗು ; (ರೂಪ.) ನಿರೀಕ್ಷಣೆಯಂತೆ ನಡೆಯದಿರು. H. heavy (ಹೊತ್ತು) ಹೋಗದಿರು, ಭಾರವಾಗಿರು. H. off = H. back ; ಕೈ ಬಿಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

H. on ಅವಲಂಬಿಸಿರು ; ನಂಬಿರು ; ಆಸಕ್ತಿಯಿಂದ ನಿರೀಕ್ಷಿಸುತ್ತಿರು. ಬಿಡದೆ ಅಂಟಿಕೊಂಡಿರು ; ಕೊರಳಿಗೆ ಗಂಟುಬಿದ್ದಿರು (ರೂಪ. ನಹ) (*To* ಉಪ. ದೊಡನೆ). H. out (ಕಿಟಕಿ, ಮೊ. ಗಳಿಂದ) ತೂಗ ಕಟ್ಟು ; ಕೆಳಮುಖವಾಗಿ ಚಾಚು. (ಅನಂ.) ವಾಸವಾಗಿರು. H. together ಒಟ್ಟಿಗಿರು ; ಕೂಡಿಕೊಂಡಿರು ; ಹೊಂದು. H. up ತೂಗ ಹಾಕು ; (ರೂಪ.) ತಳ್ಳಡು ; ಬದಿಗಿಡು ; ಕಾಲ ಗೊತ್ತುಮಾಡದೆ ಮುಂದಕ್ಕೆ ತಳ್ಳು. **H.-dog** (ಗು., ನಾ.) ಒಳಗೊಳಗೇ ಸಂಧಾನ ನಡಸುವ ಕಳ್ಳ ಕೊರಮ ; ನೀಚ (ನಾದ). **Hángman** ಗಲ್ಲಿಗೇರಿಸು ವವನು. **H.-nail** = Agnail. **Hánger**[1] (ನಾ.) (ಕ್ರಿಯಾರ್ಥ ಗಳಲ್ಲಿ). (Bell-h., Paper-h. ಗಂಟೆ ತೂಗಹಾಕುವವನು ; ಚಿತ್ರ ಕಾಗದ ಅಂಟಿಸುವವನು). ಒಂದು ವಸ್ತುವನ್ನು ತೂಗಕಟ್ಟಲು ಆಧಾರ ವಾಗಿರುವ ಉಂಗುರ, ಬಳೆ, ಮೊ. ; ತೂಗುಂಗುರ ; ತೂಗು ಬಳೆ ; ನೆಲವು. (ಹಿಂದೆ, ಸೊಂಟಪಟ್ಟಿಗೆ ಕಟ್ಟುತ್ತಿದ್ದ) ಮೋಟುಗತ್ತಿ. **Hanger-on** ಅನುಚರ ; ಆಶ್ರಿತ. **Hánging** (ನಾ.) (ಕ್ರಿಯಾರ್ಥಗಳಲ್ಲಿ). ಗೋಡೆ, ಮೊ. ಗಳಿಗೆ ತೂಗಹಾಕಿರುವ ಪರದೆ, ಮೊ. ವು. H. Committee ಪ್ರದರ್ಶನದಲ್ಲಿ ಪಟಗಳನ್ನು ತೂಗಹಾಕಲು ಏರ್ಪಟ್ಟ ಸಮಿತಿ. A h. matter ಮರಣದಂಡನೆಯಾಗುವ ವಿಚಾರ.

Hang (ನಾ.) (ಕೆಳ) ಜೋಲು, ಬಾಗು ; ಜೋಲರುವ, ಬಾಗಿ ರುವ, ತೂಗಬಿದ್ದಿರುವ, —ರೀತಿ ; ಲಂಬನ. Get the h. of ಮರ್ಮವನ್ನು ಗ್ರಹಿಸು ; ಅಭಿಪ್ರಾಯ ತಿಳಿದುಕೊ. Not a h. (ಬಳ. ಮಾ.) ಇಲ್ಲವೇ ಇಲ್ಲ.

Hángar ಹ್ಯಾಂಗಾರ್ (ನಾ.) ಫಲಕ ವಿಮಾನಗಳನ್ನು ಬಿಡುವ ದೊಡ್ಡ ವಠಾರ ; ವಿಮಾನ ಖಾನೆ.

Hánger[1]. **Hang** ನೋಡಿ.

Hánger[2] ಹ್ಯಾಂಗರ್ (ನಾ.) ಕಡಿದಾದ ಬೆಟ್ಟದ ಪಕ್ಕೆಗಳಮೇಲಿನ ಕಾಡು.

Hank ಹ್ಯಾಂಕ್ (ನಾ.) ಯಾವುದಾದರೂ ಬಾಗುಪದಾರ್ಥದ ಸುತ್ತು, ಸುರುಳಿ ; ಒಂದು ಗೊತ್ತಾದ ಉದ್ದವಿರುವ ನೂಲಿನ (ಹತ್ತಿಯದಾದರೆ ೮೪೦ ಗಜ, ಉಣ್ಣೆಯದಾದರೆ ೫೬೦ ಗಜ) ಸುರುಳಿ, ಲಡಿ. (ನಾವೆ) (ಕೂವೆಯ ಹಗ್ಗದ ಪಟಗಳು ಸರಿಯದಂತೆ ಬಂಧಿಸುವ) ಹಗ್ಗ, ಕಬ್ಬಿಣ, ಮೊ. ಗಳ ವಲಯ, ಬಳೆ.

Hánker ಹ್ಯಾಂಕರ್ (ಕ್ರಿ. ಅಕ.) (ಪಡೆಯಬೇಕೆಂದು) ಹೆಚ್ಚಾಗಿ ಬಯಸು, ಹಂಬಲಿಸು, ತೊಳಲು, ಗೀಳು ಹಿಡಿದಿರು (*After* ಉಪ. ದೊಡನೆ). **Hánkering** (ನಾ.)

Hánky ಹ್ಯಾಂಕಿ (ನಾ.) (ಮಕ್ಕಳ ಮಾತು) ಕೈಚೌಕ.

Hánky-pánky ಹ್ಯಾಂಕಿ ಪ್ಯಾಂಕಿ (ನಾ.) ಕಣ್ಕಟ್ಟು ; ಇಂದ್ರಜಾಲ. ಮೋಸ ; ವಂಚನೆ.

Hánover ಹ್ಯಾನೊವರ್ (ನಾ.) House of H. ಹ್ಯಾನೊವರ್ ಮನೆತನದ ಬ್ರಿಟಿಷ್ ರಾಜ್ಯಾಧಿಪತಿಗಳು (George I ನಿಂದ Victoria ವರೆಗೆ)

Hans ಹಾನ್ಸ್(ಷ್) (ನಾ.) ಜರ್ಮನಿಯವನು ಅಥವಾ ಡಚ್ಚರವನು (ಇವರ ಅಡ್ಡ ಹೆಸರು)

Hánsard ಹ್ಯಾನ್ಸರ್ಡ್ (ನಾ.) ಬ್ರಿಟಿಷ್ ಪಾರ್ಲಿಮೆಂಟಿನ ಕಾರ್ಯ ಕಲಾಪಗಳ ಅಧಿಕೃತ (ಸರ್ಕಾರಿ) ವರದಿ. **Hánsardize** (ಕ್ರಿ. ಸಕ.) ಈ ವರದಿಯಲ್ಲಿ ಬರೆದಿರುವ ಸದಸ್ಯನ ಹಿಂದಿನ ಹೇಳಿಕೆಯನ್ನು ಅವನ ಮುಂದಿಟ್ಟು ಅಸಮಂಜಸತೆ ತೋರಿಸು.

Hanse ಹ್ಯಾನ್ಸ್, **Hánse** ಹಾನ್ಸ (ನಾ.) (ಚರಿತ್ರೆ) ವರ್ತಕ ಸಂಘ. ಜರ್ಮನ್ ಪಟ್ಟಣಗಳ (ರಾಜಕೀಯ ಮತ್ತು ವಾಣಿಜ್ಯ ಸಂಬಂಧದ) ಮಂಡಲಿ. ವರ್ತಕ ಸಂಘಕ್ಕೆ ಪ್ರವೇಶದ ರುಸುಮು. **Hanseátic** ಹ್ಯಾನ್ಸಿಆಟಿಕ್ (ಗು.) —ಸಂಘಕ್ಕೆ ಸಂಬಂಧಿಸಿದ.

Hánsom (cab) ಹ್ಯಾನ್ಸಮ್ (ಕ್ಯಾಬ್) (ನಾ.) ಒಳಗೆ ಇಬ್ಬರು ಕುಳಿತು ಕೊಳ್ಳಲಾಗುವ, ಅವರ ಹಿಂದುಗಡೆ ಎತ್ತರದಲ್ಲಿ ಬಂಡಿಕಾರನು ಕುಳಿತು ಗಾಡಿಯ ಚಾವಣಿಯಮೇಲೆ ಹಾಯ್ದು ಬರುವ ಲಗಾಮಿನಿಂದ ನಡಸ ಲಾಗುವ, ಒಂದು ಬಗೆಯ ಎರಡು ಚಕ್ರದ ಕುದುರೆಗಾಡಿ : 'ಹ್ಯಾನ್ಸಮ್' ಗಾಡಿ. (Hansom ಎಂಬವನ ಹೆಸರಿನಿಂದ)

Hap ಹ್ಯಾಪ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) ಅದೃಷ್ಟ ; ದೈವ ಘಟನೆ ; ಹಣೆಬರಹ. (ಬ. ವ. ದಲ್ಲಿ) ಅಕಸ್ಮಾತ್ ಘಟನೆ. (ಕ್ರಿ.) ಅಕಸ್ಮಾತ್ ಘಟಿಸು ; ಆಗು. **Hápházard** —ಹ್ಯಾಪ್ಹಜರ್ಡ್ (ನಾ., ಗು., ಕ್ರಿ. ವಿ.) ಬರಿ ಅದೃಷ್ಟ ; ಅಕಸ್ಮಾತ್ತು (ಮು., *At*, *by*, h.) ; ಆಕಸ್ಮಿಕ ವಾಗಿ. **Hápless** (ಗು.) ದುರದೃಷ್ಟದ. **Háplessly** (ಕ್ರಿ. ವಿ.) ; **Háply** (ಕ್ರಿ. ವಿ.) (ಪ್ರಾಚೀ. ಪ್ರ.) ಅದೃಷ್ಟವಶದಿಂದ ; ಅಕಸ್ಮಾತ್ತಾಗಿ ; ಒಂದು ವೇಳೆ ; ಬಹುಶಃ.

Hápházard. **Hap** ನೋಡಿ.

Haplógraphy ಹ್ಯಾಪ್ಲಾಗ್ರಫಿ (ನಾ.) ಎರಡು ಸಲ ಬರೆಯಬೇಕಾದ ಪಕ್ಕ ಪಕ್ಕದ ಅಕ್ಷರ, ಪದ, ಮೊ. ನ್ನು ತಪ್ಪಾಗಿ ಒಂದೇ ಸಲ ಬರೆಯು ವುದು (ಉದಾ., Philology ಗೆ ಬದಲು Philogy)

Ha'p'orth = Halfpennyworth.

Háppen ಹ್ಯಾಪನ್ (ಕ್ರಿ. ಅಕ.) (ಅಕಸ್ಮಾತ್ತಾಗಿ ಅಥವಾ ಬೇರೆ ಏಧದಲ್ಲಿ) ಬರು, ಸಂಭವಿಸು, ಸಂಘಟಿಸು ; ಆಗು ; ಉಂಟಾಗು ; ನಡೆ. (ಮಾಡಲು) ಅದೃಷ್ಟವಿರು. (ಸಾವಿನ ವಿಷಯದಲ್ಲಿ ನಯನುಡಿ : If anything should h. to me ನನಗೇನಾದರೂ ಆದರೆ ; ನಾನೇ ನಾದರೂ ಸತ್ತುಹೋದರೆ). (ಮನುಷ್ಯನನ್ನು, ವಸ್ತುವನ್ನು) ಆಕಸ್ಮಿಕವಾಗಿ ಸಂಧಿಸು, ಕಾಣು (*Upon* ಉಪ. ದೊಡನೆ). **Háppening** (ನಾ. ; ಸಾ., ಬ. ವ. ದಲ್ಲಿ)

Háppy ಹ್ಯಾಪಿ (ಗು.) (ಮನುಷ್ಯನ ಅಥವಾ ಸಂದರ್ಭದ ವಿಷಯದಲ್ಲಿ) ಅದೃಷ್ಟವುಳ್ಳ ; ಶುಭ. ಸಂತುಷ್ಟ ; ಸಂತೋಷವುಳ್ಳ ; ಸುಖವಾದ ; ನೆಮ್ಮದಿಯಾದ [I shall be h. to assist ಸಂತೋಷದಿಂದ ಸಹಾಯ ಮಾಡುತ್ತೇನೆ. H. dispatch (Dispatch ನೋಡಿ). H. family (Family ನೋಡಿ)]. (ಭಾಷೆಯ, ನಡತೆಯ, ವಿಷಯದಲ್ಲಿ) ತಕ್ಕ, ಉಚಿತವಾದ, ಹಿತವಾದ ; ಸೊಗಸಾದ. **H.-go-lucky** (ಕ್ರಿ. ವಿ., ಗು.) ಅದೃಷ್ಟವಿದ್ದಂತೆ ; ಅದೃಷ್ಟ ನಡಸುವಂತೆ. (ಮನುಷ್ಯ) ತೊಂದರೆ ತೆಗೆದುಕೊಳ್ಳದೆ(ದ) ; ನಿಶ್ಚಿಂತನಾಗಿ ; ಹಾಯಾಗಿ(ರುವ). **Háppily** (ಕ್ರಿ. ವಿ.) ; **Háppiness** (ನಾ.)

Hara-kíri ಹಾರ ಕಿರಿ (ನಾ.) ಜಪಾನಿನ ಕುಲೀನ ವಂಶದವರು (ತಮಗೆ ಅಪಮಾನವಾದಾಗ, ಅಥವಾ ಮರಣ ದಂಡನೆಯಾದಾಗ, ಅಥವಾ ದೇಶಕ್ಕೆ ಮಹಾ ವಿಪತ್ತು ಒದಗಿದಾಗ, ಅಥವಾ ದೊರೆ, ಮೊ. ರು ಸತ್ತಾಗ) ಹೊಟ್ಟೆ ಬಗಿದು ಮಾಡಿಕೊಳ್ಳುವ ಆತ್ಮಹತ್ಯ ; ಸುಖ ಮರಣ : 'ಹಾರ ಕಿರಿ'.

Harángue ಹರ್ಯಾಂಗ್ (ನಾ., ಕ್ರಿ.) ಸಭೆಯಲ್ಲಿ ಮಾಡುವ ಭಾಷಣ ; ಉಚ್ಚ ಧ್ವನಿಯ ಅಥವಾ ಉದ್ರೇಕದ ಭಾಷಣ. (ಕ್ರಿ.) ಆವೇಶ ಭಾಷಣ ಮಾಡು.

Háras ಹ್ಯಾರಸ್, **Harás** ಅರಾ (ನಾ.) ಕುದುರೆಗಳ ತಳಿಬೆಳಸುವ ನೆಲೆ, ಸ್ಥಳ.

Hárass ಹ್ಯಾರಸ್ (ಕ್ರಿ. ಸಕ.) (ಪದೇ ಪದೇ ಮೇಲೆ ಬಿದ್ದು) ಕಿರುಕುಳ ಕೊಡು, ರೇಗಿಸು ; ಕಾಡು ; ಪೀಡಿಸು. **Hárassment** (ನಾ.)

Hárbinger ಹಾರ್ಬಿಂಜರ್ (ನಾ., ಕ್ರಿ. ಸಕ) ಮತ್ತೊಬ್ಬನ ಆಗಮನ ವನ್ನು (ಮುಂದಾಗಿ) ಸೂಚಿಸುವವನು ; ಮುನ್ ಸೂಚಕ ; ದೂತ. (ಹಿಂದೆ) ಸೈನ್ಯಕ್ಕೆ, ರಾಜಪರಿವಾರಕ್ಕೆ, ವಸತಿಗಳನ್ನು ಏರ್ಪಡಿಸಲು ಮುಂದಾಗಿ ಕಳುಹಲ್ಪಟ್ಟವನು. (ಕ್ರಿ.) ಬರವು ಸೂಚಿಸು ; ಮುನ್ ಸೂಚನೆ ಕೊಡು.

Hárbour ಹಾರ್ಬರ್ (ನಾ., ಕ್ರಿ.) ಹಡಗುಗಳಿಗೆ ಸುರಕ್ಷಿತ ಸ್ಥಳ : ಬಂದರು ; ರೇವು (H.-master ಬಂದರಿನ ಅಧಿಕಾರಿ ನಡಸುವವನು),

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮರೆ ; ಆಶ್ರಯ. (ಕ್ರಿ.) (ಹುಳು ಹುಪ್ಪಟೆ, ಅಪರಾಧಿ, ದುರಾಲೋಚನೆ ಗಳು, ಮೊ. ಕ್ಕೆ) ಎಡೆಗೊಡು, ಇಂಬುಗೊಡು. ಬಂದರಿನಲ್ಲಿ ತಂಗು, ನಿಲ್ಲು. **Hárbourless** (ಗು.) ; **Hárbourage** (ನಾ.) ಆಶ್ರಯ (ಸ್ಥಾನ) ; ಮರೆ(ಯೆಡೆ)

Hard ಹಾರ್ಡ್ (ಗು., ನಾ., ಕ್ರಿ. ವಿ.) ಗಟ್ಟಿ(ಯಾದ) ; ದೃಢ ; ಗಡುಸು. ಕುಗ್ಗದ ; ಕಷ್ಟವಾದ ; ಕಠಿನ ; ಕ್ಲಿಷ್ಟ. ನಿರ್ದಯದ ; ನಿಷ್ಕರುಣೆಯ ; ಸಹಿಸಲು ಕಷ್ಟವಾದ ; ದುರ್ಧರ ; ಅಪ್ರಿಯ ; ಕರ್ಕಶ ; ಬಿರುಸಾದ ; ಲೋಭಿಯಾದ. (ವ್ಯಾಪಾರ, ಬೆಲೆ, ಮೊ. ಗಳಲ್ಲಿ) ತುಟ್ಟಿಯಾದ, ಬಿಗಿಯಮೇಲಿರುವ. (ಭಾಷಾ ಶಾಸ್ತ್ರ) ಪರುಷ (ವರ್ಣ). (ನಾ.) ಮುಂಗರೆಗೆ ಅಡ್ಡವಾಗಿ ಹೋಗುವ ಇಳುಕಲು ದಾರಿ. (ಅಸಂ.) ಕಠಿನ ಸಜ, ಶಿಕ್ಷೆ (Got two years h. ಎರಡು ವರ್ಷ ಕಠಿನ ಸಜವಾಯಿತು). (ಕ್ರಿ. ವಿ.) ಕಷ್ಟಪಟ್ಟು ; ಶ್ರಮದಿಂದ ; ಕಠಿನವಾಗಿ ; ಬಿರುಸಾಗಿ (Try h. ಕಷ್ಟಪಟ್ಟು ಪ್ರಯತ್ನಿಸು. Raining h. ಮಳೆ ಬಿರುಸಾಗಿ ಬೀಳುತ್ತಿದೆ. H. pressed ಬಿಡದೆ ಬೆಂಬತ್ತಲ್ಪಟ್ಟು ; ಕಷ್ಟಕ್ಕೆ ಸಿಕ್ಕಿ. H.-earned ಕಷ್ಟಾರ್ಜಿತದ). H. cash ಗಟ್ಟಿ ನಾಣ್ಯ ; ರೊಕ್ಕ (ಕಾಗದದ ಹಣವಲ್ಲ). H. facts ನಿರ್ವಿವಾದಾಂಶಗಳು ; ವಾಸ್ತವಾಂಶಗಳು. H. nut to crack ಕಬ್ಬಿಣದ ಕಡಲೆ ; ಕಠಿನ ಸಮಸ್ಯೆ. ಅಂತರ್ಯ ತಿಳಿಯಲಾಗದ, ಪ್ರೇರಣೆಗೆ ಅನ್ವದ ಕೊಡದ, ಮನುಷ್ಯ. H. of hearing ಸ್ವಲ್ಪ ಕಿವುಡಾದ ; ಕಿವಿ ಚೆನ್ನಾಗಿ ಕೇಳಿಸದ. H. words, question ಕ್ಲಿಷ್ಟ ಪದಗಳು, —ಪ್ರಶ್ನೆ. H. life, times ಕಷ್ಟ ಜೀವನ, — ಕಾಲ. H. lines (Line ನೋಡಿ). H. winter ತೀವ್ರ ಚಳಿಗಾಲ. A h. bargain (ಯಾವ ರಿಯಾಯಿತಿಯೂ ಇಲ್ಲದ) ಬಿಗಿ ವ್ಯಾಪಾರ. H. water (ಕೆಲವು ಖನಿಜ ಲವಣ ಗಳು ಲೀನವಾಗುಳ್ಳದ್ದರಿಂದ ಸಾಬೂನು ನೊರೆಗಟ್ಟದೆ ಬಟ್ಟೆಯೊಗೆಯಲು ಅನುಕೂಲ ಪಡದ) ಗಡುಸು ನೀರು. H. fight ಕಠಿನ ಕಾಳಗ, ಜಗಳ. H. labour (ಕೆಲವರು ಅಪರಾಧಿಗಳಿಗೆ ವಿಧಿಸುವ) ಆಯಾಸದ ಕೆಲಸ, ಕಠಿನ ಸಜ. H. row to hoe ಪ್ರಯಾಸದ ಕೆಲಸ. H. worker ಕಷ್ಟಪಟ್ಟು ಕೆಲಸ ಮಾಡುವವನು ; ಕಷ್ಟದಾಳು. H. swearing (ನಯ ನುಡಿ) ನಾಚಿಕೆಯಿಲ್ಲದ ಸುಳ್ಳುಪ್ರಮಾಣ. Be h. put to it ಕಷ್ಟಕ್ಕೆ ಸಿಕ್ಕು. Die h. ಸುಲಭವಾಗಿ ಸಾಯದ ; ಬದಲಾಯಿಸಲು ಬಹು ಕಷ್ಟವಾದ ; ಸಂಪ್ರದಾಯ ಜಡ. It will go h. with him ಅವನಿಗೆ ಪ್ರತಿಕೂಲವಾಗಿ ಪರಿಣಮಿಸುತ್ತದೆ. H. by ಹತ್ತಿರ. H. (up)on (ವಿಮರ್ಶೆಯಲ್ಲಿ ಅಥವಾ ವಿಚಾರಣೆಯಲ್ಲಿ) ವಿಪರೀತ ಕಟುವಾಗಿ, ಉಗ್ರವಾಗಿ (Don't be too h. on him ಅವನನ್ನು ಬಹು ಕಟುವಾಗಿ ಟೀಕಿಸಬೇಡ, ದಂಡಿಸಬೇಡ). (ಪರಿಸ್ಥಿತಿ, ಮೊ. ಗಳ ವಿಷಯದಲ್ಲಿ) ವಿಪರೀತ ಕಾಠಿನ್ಯದಿಂದ ಒತ್ತುತ್ತ, ಪೀಡಿಸುತ್ತ. H. upon ಹಿಂದೆಯೇ ; ಬೆನ್ನು ಹತ್ತಿ. Run (person) h. (ಒಬ್ಬನನ್ನು) ಬಿಡದೆ ಬೆನ್ನಟ್ಟು ಹತ್ತು. H. & fast (ನಿಯಮಗಳು) ಖಂಡಿತವಾದ, ಕಠಿನವಾದ, ಕಟ್ಟುನಿಟ್ಟಾದ ; ಬಹು ಬಿಗಿಯಾದ. **H.-bake** ಬಾದಾಮಿ ಗಟ್ಟಿಮಿಠಾಯಿ. **H.-baked** ಗಟ್ಟಿಯಾಗುವಂತೆ ಅಟ್ಟ, ಸುಟ್ಟ. **H.-bitten** ಕಾದಾಟದಲ್ಲಿ ಸ್ವಲ್ಪವೂ ಸಗ್ಗದ. **H.-boiled** ಗಟ್ಟಿಯಾಗುವಂತೆ ಬೇಯಿಸಿದ. (ಅಮೆ. ಸಂ., ಬಳ. ಮಾ.) ಕಲ್ಲೆದೆಯ ; ಪಟ್ಟುಹಿಡಿಯುವ ಸ್ವಭಾವದ. ಬೇಡಿಕೆ, ಮೊ. ಗಳಿಗೆ ಸಗ್ಗದ ; ಒಲಿಸಿಕೊಳ್ಳಲಾಗದ. **H. core** ರಸ್ತೆಗೆ ತಳಹದಿಯಾಗಿ ಹಾಕುವ ಗಡುಸುಪದಾರ್ಥ. **H. court** (ಕಲ್ಲರಗು, ಜಲ್ಲಿಗಾರೆ, ಮೊ. ನ್ನು ಹಾಕಿ) ಗಟ್ಟಿಸಿದ ಟೆನಿಸ್ ಆಟದ ಕಣ. **H.-favoured, -featured** ನಿಷ್ಠುರ, ವಿಕಾರ, — ಮುಖದ. **H.-fisted** ಬಿಗಿ ಹಿಡಿತದ ; ಜಿಪುಣತನದ. **H.-headed** ಕಾರ್ಯ ಪರನಾದ ; ವ್ಯವಹಾರೈಕ ಬುದ್ಧಿಯ ; ನಿರ್ದಾಕ್ಷಿಣ್ಯ ಪ್ರಕೃತಿಯ. **H.-hearted** ಕಲ್ಲೆದೆಯ. **H.-heartedly** (ಕ್ರಿ. ವಿ.) ; **H.-heartedness** (ನಾ.) ; **H. hit** ಬಹುತೊಂದರೆಗೆ ಸಿಕ್ಕಿ. **H.-laid** (ದಾರ, ಹುರಿ, ಬಟ್ಟೆ, ಮೊ. ವು) ಬಿಗಿಯಾಗಿ ಹೊಸೆದ, ನೆಯ್ದ. **H.-lying** money ಮುಳುಗು ನಾವೆ, ನೌಕಾಸ್ಫೋಟಿಯ ದೋಣಿ, ಮೊ. ಅಪಾಯಕರವಾದ ಸ್ಥಳಗಳಲ್ಲಿ ಕೆಲಸಮಾಡುವ ನೌಕರರಿಗೆ ಕೊಡುವ ಹೆಚ್ಚಿನ ಸಂಬಳ. **H.-mouthed** (ಕುದುರೆ) ಕಡಿವಾಣಕ್ಕೆ (ಸುಲಭವಾಗಿ) ಸಗ್ಗದ (ರೂಪ. ಸಹ). **H. set** ಗಟ್ಟಿಯಾಗಿ, ದೃಢವಾಗಿ, ಇರುವಂತೆ ಇಟ್ಟ. (ಮೊಟ್ಟೆ) (ಹಕ್ಕಿ) ಕಾವುಕೊಟ್ಟಿರುವ. (ಮನುಷ್ಯ) ಹಸಿದಿರುವ. **Hardshell** ಗಟ್ಟಿ ಚಿಪ್ಪುಳ್ಳ ; (ರೂಪ.) ಬಿಗಿಯ ಮೇಲಿರುವ ; ಬಗ್ಗದ. ಮಧ್ಯಸ್ಥಿಕೆಗೆ ಬರದ. **H. tack** ನಾವೆಯ ಗಟ್ಟಿ ಬಿಸ್ಕತ್ತು. **H. up** (ಮು., ಹಣದ) ಅಭಾವದಿಂದ ; ಇಲ್ಲದೆ ತೊಂದರೆಪಡುತ್ತ (*For* ಉಪದೊಡನೆ). **Hardware** ಕಬ್ಬಿಣದ ಸಾಮಾನುಗಳು. **Hardwareman** ಕಬ್ಬಿಣದ ಸಾಮಾನುಗಳ ವ್ಯಾಪಾರಿ. **Hardwood** (ಎಲೆಯುದುರುವ ಜಾತಿಯ) ಗಟ್ಟಿ ಮರ, ದಾರು ; ಚೌಬೀನೆ. **Hárdness** (ನಾ.); **Hárden** (ಕ್ರಿ.) ಗಟ್ಟಿ, ದೃಢ, ಕಠಿನ, ನಿರ್ದಯ, —ಮಾಡು, ಆಗು (ಮು., ಭೂ. ಕೃ. ನಲ್ಲಿ). **Hárdly** (ಕ್ರಿ. ವಿ.) ಕಠಿನವಾಗಿ ; ಕಷ್ಟದಿಂದ ; ನಿಷ್ಠುರವಾಗಿ. ಅಪೂರ್ವವಾಗಿ ; ಇಲ್ಲದಂತೆಯೇ. **H.-earned** ಕಷ್ಟಪಟ್ಟು ಸಂಪಾದಿಸಿದ ; (ಹಾಸ್ಯ ಪ್ರ.) ಸುಲಭವಾಗಿ —. **Hárdship** ಕಷ್ಟ ದೆಸೆ ; ತೊಂದರೆ ; ಯಾತನೆ. ದಾರಿದ್ರ್ಯ.

Hárdihood. Hardy[1] ನೋಡಿ.

Hárdy[1] ಹಾರ್ಡಿ (ಗು.) ಧೈರ್ಯದ ; ಕೆಚ್ಚಿನ ; ದಿಟ್ಟ ; ಗಟ್ಟಿಮುಟ್ಟಾದ; ಸಹಿಷ್ಣುವಾದ. (ಸಸ್ಯಗಳು) ಚಳಿ ತಡೆದುಕೊಂಡು ಬಯಲಿನಲ್ಲಿ ಬೆಳೆಯಬಲ್ಲ [Half h. ಚಳಿಗಾಲದಲ್ಲಿ ಮಾತ್ರ ಮರೆ ಬೇಕಾದ. H. annual ಬಯಲಿನಲ್ಲಿ ವರ್ಷೇ ವರ್ಷೇ, ತಾನಾಗಿ ಬೀಜಬಿದ್ದು ಹುಟ್ಟುವ ಸಸ್ಯ. (ರೂಪ.) ಪ್ರತಿ ವರ್ಷವೂ ತಪ್ಪದೆ ಬರುವ ವಿಷಯ]. **Hárdihood** (ನಾ.) ಧೈರ್ಯ ; ಕೆಚ್ಚು ; ಧಾರ್ಷ್ಟ್ಯ. **Hárdily** (ಕ್ರಿ. ವಿ.) ಧೈರ್ಯವಾಗಿ. **Hárdiness** (ನಾ.)

Hárdy[2] ಹಾರ್ಡಿ (ನಾ.) (ರೋಹವನ್ನು ಅದರ ಮೇಲಿಟ್ಟು ಕತ್ತರಿಸುವುದಕ್ಕಾಗಿ ಕಮ್ಮಾರನು ಅಡಿಗಲ್ಲಿನ ರಂಧ್ರದಲ್ಲಿಟ್ಟು ಉಪಯೋಗಿಸುವ) ಗಟ್ಟಿ ಕಬ್ಬಿಣದ ಮೊನಚು ಉಳಿ.

Hare ಹೇರ್ (ನಾ.) ಉದ್ದ ಕಿವಿಗಳೂ ಮೊಂಡು ಬಾಲವೂ ಎರಡಾಗಿ ಸೀಳಿರುವ ಮೇಲ್ತುಟಿಯೂ ಉಳ್ಳ, ವಸ್ತುಗಳನ್ನು ಅಗಿದುಹಾಕುವ ಸ್ವಭಾವದ, ಒಂದು ಚತುಷ್ಪಾದಿ : ಮೊಲ. Mad as a March h. ಬೆದೆ ಹತ್ತಿದ ಮೊಲದಂಥ ಹುಚ್ಚನ. First catch your h., then cook him ಹಿಟ್ಟು ಸಿಕ್ಕಿದಮೇಲೆ ರೊಟ್ಟಿಯ ಯೋಚನೆ ಮಾಡು. Run with the h. and hunt with the hounds ಎರಡು ಕಡೆಗೂ ಸೇರಿದವನಂತೆ ನಡೆ. H. & hounds 'ಮೊಲವೂ ಬೇಟೆನಾಯಿಗಳೂ' ಎಂಬ ಒಂದು ತೆರದ ಬೆನ್ನಟ್ಟಿ ಹೋಗುವ ಆಟ (ಕಾಗದದ ಚೂರುಗಳನ್ನು ಎಸೆದುಕೊಂಡು ಹೋಗುವ ಆಟ). **Harebell** ಒಂದು ತೆರದ ಹೂವಿನ ಗಿಡ **H.-brained** ಯಾವುದಕ್ಕೂ ಲಕ್ಷ್ಯಕೊಡದ ; ದುಡುಕುವ ಸ್ವಭಾವದ ; ಹುಚ್ಚು ಹುಚ್ಚಾದ. **H.-lip** ಸೀಳಿದ ಮೇಲ್ತುಟಿ. **H.'s-foot** ಒಂದು ಬಗೆಯ ಮೇವಿನ ಸಸ್ಯ. ಒಂದು ಜಾತಿಯ ಬೆಂಡು ದಾರುವಿನ ಮರ. (ಕೆನ್ನೆ, ತುಟಿ, ಮೊ. ಕ್ಕೆ ಕೆಂಪು ಬಣ್ಣ ಹಚ್ಚಲು ಉಪಯೋಗಿಸುವ) ಹದಗೊಳಿಸಿದ ಮೊಲದ ಅಡಿ.

Hárem, -am ಹೇರೆಮ್ (ನಾ.) (ಮುಸಲ್ಮಾನರ ಮನೆಗಳಲ್ಲಿ) ಹೆಂಗಸರಿರುವ ಭಾಗ ; ಜನಾನ(ದವರು) ; ಅಂತಃಪುರ(ಸ್ತ್ರೀಯರು). (ಸಾ., Haram) ಮಹಮ್ಮದೀಯರ ಪವಿತ್ರ ಸ್ಥಳ. H. skirt (ಅಸಂ.) ಲಂಗದಂಥ (ಹೆಂಗಸಿನ) ದಗಲೆ ಷರಾಯಿ.

Hark ಹಾರ್ಕ್ (ಕ್ರಿ.) ಕಿವಿಗೊಡು; ಕೇಳು; ಆಲಿಸು (*To* ಉಪ. ದೊಡನೆ). (ಬೇಟೆನಾಯಿಗಳನ್ನು ಕೂಗಿ ಹೇಳುವಲ್ಲಿ) ಮುನ್ನುಗ್ಗು ; ಹೊರಡು ; ಓಡು (*Forward, away, off* ಮೊ. ಉಪ. ದೊಡನೆ). H. back (ಬೇಟೆ ನಾಯಿಗಳ ವಿಷಯದಲ್ಲಿ) ಬೇಟೆಯ ಸುಳಿವು ಹಿಡಿಯಲು ಹಿಂದಿರುಗು. (ರೂಪ) (ಬಿಟ್ಟುಹೋದ ವಿಷಯಕ್ಕೆ) ಮತ್ತೆ ಬರು, ಹಿಂದಿರುಗು. (ಬೇಟೆ ನಾಯಿಗಳನ್ನು) ಹಿಂದಕ್ಕೆ ಕರೆ.

Harleian ಹಾರ್ಲೀಯನ್, — ಲಿಅ — (ಗು.) Robert Harley ಎಂಬಾತನ (ಪುಸ್ತಕ ಭಂಡಾರದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Hárlequin ಹಾರ್ಲಿಕ್ವಿನ್, —ಕಿನ್ (ನಾ.) ಇಟಲಿಯ ಹರ್ಷ ನಾಟಕದಲ್ಲಿ ಬರುವ (ವಿದೂಷಕನಂಥ) ಪಾತ್ರ; ಇಂಗ್ಲೆಂಡಿನ ಮೂಕ ನಾಟಕಗಳಲ್ಲಿ ಬರುವ ಒಂದು ಮೂಕ ಪಾತ್ರ; ನಕಲಿ; ಕೋಡಂಗಿ. ಬಣ್ಣ ಬಣ್ಣದ ಪುಕ್ಕಗಳುಳ್ಳ (ಉತ್ತರ ಪ್ರಾಂತದ) ಒಂದು ಜಾತಿಯ ಬಾತುಕೋಳಿ (=H. duck). **Harlequináde** —ನೇಡ್ (ನಾ.) ಕೋಡಂಗಿಯು ಮುಖ್ಯ ಭಾಗ ವಹಿಸಿರುವ ಮೂಕ ನಾಟಕ(ದ ಭಾಗ)

Hárley Street ಹಾರ್ಲಿ ಸ್ಟ್ರೀಟ್ (ನಾ.) ಮೇಲ್ತರಗತಿಯ ವೈದ್ಯರಿರುವ ಲಂಡನ್ನಿನ ಒಂದು ಬೀದಿ.

Hárlot ಹಾರ್ಲಟ್ (ನಾ., ಕ್ರಿ. ಅಕ.) ಗುಡಿಸೆಟ್ಟಿ; ಬೆಲೆವೆಣ್ಣು (— ಆಗು, — ಅಂತೆ ವರ್ತಿಸು). **Hárlotry** (ನಾ.)

Harm ಹಾರ್ಮ್ (ನಾ., ಕ್ರಿ. ಸಕ.) ನಷ್ಟ; ಕೇಡು; ಅಪಾಯ; ಕೆಡುಕು; ತೊಂದರೆ (— ಮಾಡು, — ಆಗು) (Out of h.'s way ಅಪಾಯಕ್ಕೆ, ತೊಂದರೆಗೆ, ಅವಕಾಶವಿಲ್ಲದೆ; ಸುರಕ್ಷಿತವಾಗಿ). **Hármful** (ಗು.); **Hármfully** (ಕ್ರಿ. ವಿ.); **Hármfulness** (ನಾ.); **Hármless** (ಗು.); **Hármlessly** (ಕ್ರಿ. ವಿ.); **Hármlessness** (ನಾ.)

Harmónic, Harmónica, Harmónium, etc. Harmony ನೋಡಿ.

Hármony ಹಾರ್ಮೊನಿ (ನಾ.) ಹೊಂದಿಕೆ; ಸಾಮರಸ್ಯ (Pre-established h. ದೇಹವೂ ಆತ್ಮವೂ ಸೃಷ್ಟಿಯಾಗುವುದಕ್ಕೆ ಮೊದಲೇ ಅವೆರಡಕ್ಕೂ ನೆಲಸಿದ್ದ ಸಾಮರಸ್ಯ). ಬೇರೆ ಬೇರೆ ಭಾಗಗಳ ತಕ್ಕ ಹೊಂದಿಕೆಯಿಂದಾಗುವ ಹಿತ ಪರಿಣಾಮ; ಮೇಳ; ಸ್ವರ ಮೇಳ; ಸ್ವರ ಮೈತ್ರಿ; ಇಂಪು ದನಿ; ಮಧುರ ನಾದ. (ಮು., ನಾಲ್ಕು ಸುವಾರ್ತೆಗಳಲ್ಲಿರುವ ಒಂದೇ ವಿಷಯದ ಕಥನಗಳನ್ನು) ಸರಿಹೊಂದಿಸಿ ಏಕಾಭಿಪ್ರಾಯವಿರುವುದನ್ನು ಪ್ರದರ್ಶಿಸುವುದು. **Harmónic** ಹಾರ್ಮಾನಿಕ್ (ಗು., ನಾ.) ಸಮರಸವಾದ; ಹೊಂದಿಕೊಂಡಿರುವ; ಸಂಗತ; ಪರಸ್ಪರ ಮೇಳವುಳ್ಳ; ಸ್ವರ ಮೇಳನದ. [H. tones (ವಾದ್ಯದ ತಂತಿ, ಕೊಳಲು, ಮೊ. ಗಳಲ್ಲಿ ಸಮಭಾಜ್ಯ ಭಾಗಗಳಿಂದ ಉಂಟಾದ) ಭಾಗ ಸ್ವರಗಳು, ಗೌಣ ಸ್ವರಗಳು. H. quantities ಯಾವ ಸಂಖ್ಯಾಪದಗಳನ್ನು ತಲೆಕೆಳಗು ಮಾಡುವುದರಿಂದ ಅವು ಕ್ರಮವಾಗಿ ಗಣಿತ ಶ್ರೇಣಿಯಲ್ಲಿ ನಿಲ್ಲುವುವೋ ಆ ಸಂಖ್ಯಾಪದಗಳು: ಸ್ವರಮೇಳನ ಸಂಖ್ಯಾ ಪದಗಳು (ಉದಾ., ೧/೩, ೧/೪, ೧/೫ ಅಥವಾ ೧೨, ೧೫, ೨೦). H. progression ಇಂಥ ಪದಗಳ ಶ್ರೇಣಿ: ಸ್ವರಮೇಳನ ಸಂಖ್ಯಾಪದ ಶ್ರೇಣಿ]. (ನಾ.) ಭಾಗ ಸ್ವರ. **Harmónically** (ಕ್ರಿ. ವಿ.); **Harmónica, -con** (ನಾ.) ಹಲವು ತೆರದ ಸಂಗೀತ ವಾದ್ಯಗಳು (ಹೆಸರು). **Harmónious** ಹಾರ್ಮೋನಿಯಸ್ (ಗು.) ಸಮ ರಸವಾದ; ಸುಸಂಗತ; ಹೊಂದಿಕೆಯಾದ; ಹೊಂದಿಕೆಯಾಗಿಯೂ ಹಿತಕರವಾಗಿಯೂ ಇರುವಂತೆ ಒಟ್ಟುಗೂಡಿ ಒಂದಾದ; ವಿರಸವಿಲ್ಲದ; ಇಂಪಾದ ದನಿ ಕೊಡುವ; ಸುಶ್ರಾವ್ಯವಾಗಿ ಹಾಡುವ, ಬಾಜಿಸುವ. **Harmóniously** (ಕ್ರಿ. ವಿ.); **Hármonist** ಹಾರ್ಮೊನಿಸ್ಟ್ (ನಾ.) ಸ್ವರ ಮೇಳ ಚತುರ; ಸಂಗೀತಗಾರ. (ಒಂದೇ ವಿಷಯದ ಮೇಲಿನ ಬೇರೆ ಬೇರೆ ಕಥನಗಳನ್ನು) ಪರಸ್ಪರ ಹೊಂದಿಸುವವನು. (ಅಭಿಪ್ರಾಯ, ಮೊ. ನ್ನು) ಪರಸ್ಪರ ಹೊಂದಿಕೆಮಾಡುವವನು. **Harmonístic** (ಗು.); **Harmónium** ಹಾರ್ಮೋನಿಯಮ್ (ನಾ.) ತಿದಿಯ ಮೂಲಕ ಗಾಳಿಯನ್ನು ನುಗ್ಗಿಸಿ, ಲೋಹದ ತೆಳುತುಂಡುಗಳು ಕಂಪಿಸುವಂತೆ ಮಾಡಿ, ಅದರಿಂದ ಸ್ವರಗಳು ಹೊರಡುವಂತೆಯೂ, ಬೇಕಾದ ಸ್ವರಗಳನ್ನು ಬೆರಳೊತ್ತುವಿಕೆಯಿಂದ ಪಡೆಯುವಂತೆಯೂ ಅಳವಡಿಸಿರುವ ಒಂದು ವಾದ್ಯ: 'ಹಾರ್ಮೋನಿಯಂ'. **Hármonize** (ಕ್ರಿ.) ಸಮ ರಸ, ಹೊಂದಿಕೆ, ಸಂಗತ, —ಮಾಡು, ಆಗು (*With* ಉಪ. ದೊಡನೆ); (ಕರಾ ದೃಷ್ಟಿಯಿಂದ) ಹಿತವಾಗಿರುವಂತೆ ಮಾಡು, ಇರು. ಸ್ವರ ಮೇಳವಾಗುವಂತೆ (ರಾಗಕ್ಕೆ) ಸ್ವರಗಳನ್ನು ಸೇರಿಸು. **Harmonizátion** (ನಾ.); **Harmonómeter** ಹಾರ್ಮೊನಾಮಿಟರ್ (ನಾ.) ಸಂಗೀತ ಸ್ವರಗಳ ಸಾಮರಸ್ಯ ಸಂಬಂಧಗಳನ್ನು ಅಳೆಯುವ ಸಲಕರಣೆ: ಸ್ವರ ಮೇಳ ಮಾಪಕ.

Hárness ಹಾರ್ನೆಸ್ (ನಾ., ಕ್ರಿ. ಸಕ.) (ಭಾರವೆಳೆಯುವ ಕುದುರೆ, ಮೊ. ಗಳ) ಸಜ್ಜು, ಸರಂಜಾಮು. (ರೂಪ.) (ಕಸುಬಿನ ಕೆಲಸಕ್ಕೆ ಬೇಕಾದ) ಸಲಕರಣೆಗಳು [In h. (ನಿತ್ಯಗಟ್ಟಳೆಯ) ಕೆಲಸದಲ್ಲಿ]. ಮಗ್ಗದಲ್ಲಿ ಹಾಸೆಳೆಗಳನ್ನು ಪರ್ಯಾಯ ಕ್ರಮದಲ್ಲಿ ಎತ್ತಿ ಇಳಿಸುವ ಸಲಕರಣೆ: ಹಾಸೆತ್ತು. (ಚರಿತ್ರೆ) ರಕ್ಷಾ ಕವಚ. (ಕ್ರಿ.) (ಕುದುರೆ, ಮೊ. ಗಳಿಗೆ) ಸಜ್ಜು ಹಾಕು. (ರೂಪ.) (ನದಿ, ಜಲಪಾತ, ಪ್ರಕೃತಿ ಶಕ್ತಿ, ಮೊ. ನ್ನು ಚಾಲನ ಕಾರ್ಯಕ್ಕಾಗಿ) ಉಪಯೋಗಿಸಿಕೊ.

Harp ಹಾರ್ಪ್ (ನಾ., ಕ್ರಿ. ಅಕ.) ಬೆರಳಿನಿಂದ ಮಿಡಿಯುವ, ಸುಮಾರಾಗಿ ತ್ರಿಕೋನಾಕಾರವಾಗಿರುವ, ಒಂದು ಬಗೆಯ ತಂತಿವಾದ್ಯ: 'ಹಾರ್ಪ್' ವಾದ್ಯ. (ಕ್ರಿ.) 'ಹಾರ್ಪ್' ವಾದ್ಯ ನುಡಿಸು. ಬೇಜಾರು ಹಿಡಿಸುವಂತೆ ಒಂದೇ ವಿಷಯವನ್ನು ಪ್ರಸ್ತಾವಿಸುತ್ತಿರು, ಹೇಳುತ್ತಿರು; ಹಾಡಿದ್ದೇ ಹಾಡು (*On* ಉಪ. ದೊಡನೆ). **Hárper** (ನಾ.) = **Hárpist** (ನಾ.)

Harpoón ಹಾರ್ಪೂನ್ (ನಾ., ಕ್ರಿ. ಸಕ.) (ತಿಮಿಂಗಿಲ, ಮೊ. ನ್ನು ಹಿಡಿಯುವುದಕ್ಕೆ ಉಪಯೋಗಿಸುವ, ಹಗ್ಗ ಕಟ್ಟಿದ) ಈಟಿಯಂಥ ಕ್ಷಿಪಣಿ: ಈಟಿಗಾಳ (H.-gun ಈ ಕ್ಷಿಪಣಿಯನ್ನು ಎಸೆಯುವ ಬಂದೂಕು). (ಕ್ರಿ.) ಈಟಿಗಾಳದಿಂದ ಹೊಡೆ, ಇರಿ, ಚುಚ್ಚು.

Hárpsichord ಹಾರ್ಪ್ಸಿಕಾರ್ಡ್ (ನಾ.) ಕೀಲಿಕೈಗಳ ಮೂಲಕ ಪುಕ್ಕದ ಮುಮ್ಮೊನೆಯಿಂದಾಗಲಿ ತೊಗಲ ಮೊನೆಗಳಿಂದಾಗಲಿ ನುಡಿಸಬಹುದಾದ, ಪಿಯಾನೊ ವಾದ್ಯದಂಥ (೧೬-೧೮ನೆಯ ಶತಮಾನಗಳ) ಒಂದು ಬಗೆಯ ತಂತಿವಾದ್ಯ.

Hárpy ಹಾರ್ಪಿ (ನಾ.) (ಗ್ರೀಕ್ ಮತ್ತು ಲ್ಯಾಟಿನ್ ಪುರಾಣ) ಹೆಂಗಸಿನಂತೆ ಮುಖವೂ ಒಡಲೂ, ಹಕ್ಕಿಯಂತೆ ರೆಕ್ಕೆಗಳೂ ನಖರಗಳೂ ಉಳ್ಳ ಒಂದು ಹಿಂಸಕ ರಾಕ್ಷಸ ವ್ಯಕ್ತಿ. ಹಿಂಸಕ; ಸುಲಿಗೆ ಕೋರ. H.-eagle ದ. ಅಮೆರಿಕದ ಒಂದು ಹಿಂಸ್ರ ಪ್ರಾಣಿ.

Hárquebus ಹಾರ್ಕ್ವಿಬಸ್ (ನಾ.) = Arquebus. **Harquebusiér** (ನಾ.) ಈ ಬಂದೂಕಿನ ಸಿಪಾಯಿ.

Hárridan ಹ್ಯಾರಿಡ್ಯನ್ (ನಾ.) ಹೆಣಮುಖದ ಮುದುಕಿ.

Hárrier[1]. **Harry** ನೋಡಿ.

Hárrier[2] ಹ್ಯಾರಿಯರ್ (ನಾ.) ಮೊಲಬೇಟೆಯ ನಾಯಿ. (ಬ. ವ. ದಲ್ಲಿ) ಬೇಟೆಗಾರರಿಂದ ಕೂಡಿದ ಈ ಬೇಟೆನಾಯಿಗಳ ತಂಡ. ಒಂದು ಬಗೆಯ ಡೇಗೆ.

Harróvian ಹ್ಯಾರೋವಿಯನ್ (ಗು., ನಾ.) ಹ್ಯಾರೊ ವಿದ್ಯಾಶಾಲೆಯ ವಿದ್ಯಾರ್ಥಿ, ಸದಸ್ಯ. ಹ್ಯಾರೋ ಪಟ್ಟಣದ (ನಿವಾಸಿ)

Hárrow[1] ಹ್ಯಾರೋ (ನಾ., ಕ್ರಿ. ಸಕ.) (ಉತ್ತ ನೆಲದ ಹೆಂಟೆಗಳನ್ನೊಡೆಯುವುದಕ್ಕೂ ಚೆಲ್ಲಿದ ಬೀಜದಮೇಲೆ ಮಣ್ಣು ಮುಚ್ಚುವುದಕ್ಕೂ ಉಪಯೋಗಿಸುವ, ಕಬ್ಬಿಣದ ಹಲ್ಲುಗಳುಳ್ಳ, ಮರದ ಅಥವಾ ಕಬ್ಬಿಣದ) ಕುಂಟೆ, ಹಲುಬೆ (Under the h. ಕಷ್ಟಕ್ಕೆ ಸಿಕ್ಕಿ). (ಕ್ರಿ.) ಕುಂಟೆ, ಹಲುಬೆ, — ಹೊಡೆ. ಸೀಳಿ, ಕೊಚ್ಚಿ, ಗಾಯಮಾಡು. (ರೂಪ.) (ಮನಸ್ಸು, ಮೊ. ನ್ನು) ಬಹಳ ನೋಯಿಸು. **Hárrowing** (ಗು.)

Hárrow[2] ಹ್ಯಾರೋ (ಕ್ರಿ. ಸಕ.) = Harry.

Hárry ಹ್ಯಾರಿ (ಕ್ರಿ. ಸಕ.) ಹಾಳು, ಧ್ವಂಸ, ಮಾಡು; ಕೊಳ್ಳೆ ಹೊಡೆ. (ಒಬ್ಬನನ್ನು) ಸುಲಿಗೆ ಮಾಡು; ಪದೇ ಪದೇ ಪೀಡಿಸು; ಕಿರುಕುಳ ಕೊಡು. **Hárrier**[1] (ನಾ.)

Harsh ಹಾರ್ಷ್ (ಗು.) (ಸ್ಪರ್ಶಕ್ಕೆ, ರುಚಿಗೆ, ಕಣ್ಣಿಗೆ, ಕಿವಿಗೆ) ಒರಟಾದ, ಬಿರುಸಾದ; ಕರ್ಕಶ; ಪರುಷ; ಕಟು. (ಮನೋಭಾವಕ್ಕೆ, ಅಭಿಪ್ರಾಯಕ್ಕೆ) ಸರಿಬೀಳದ, ವಿರುದ್ಧವಾದ; ಕ್ರೂರ; ನಿರ್ದಯ; ನಿಷ್ಠುರ. **Hárshly** (ಕ್ರಿ. ವಿ.); **Hárshness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Hart ಹಾರ್ಟ್ (ನಾ.) (ಮು., ಐದು ವರ್ಷ ತುಂಬಿ, ಕವಲ್ಗೊಂಬು ಮೂಡಿದ, ಕೆಂಪು) ಗಂಡು ಜಿಂಕೆ, ಸಾರಂಗ. H. of ten ಹತ್ತು ಕವಲು ಗೊಂಬಿನ —. H.'s-tongue ಒಂದು ತೆರದ ಜರೀಗಿಡ.

Hártal ಹಾರ್ಟಾಲ್ (ನಾ.) (ಇಂಡಿಯದಲ್ಲಿ) ರಾಜಕೀಯ ಬಿಕ್ಕಟ್ಟಿನಿಂದಾದ ಅಸಮಾಧಾನ ಪ್ರದರ್ಶನಕ್ಕಾಗಲಿ ವ್ಯಸನ ಪ್ರದರ್ಶನಕ್ಕಾಗಲಿ ಒಟ್ಟಿಗೆ ಅಂಗಡಿಗಳನ್ನು ಮುಚ್ಚುವುದು : ಹರತಾಳ.

Hártshorn ಹಾರ್ಟ್ಸ್‌ಹಾರ್ನ್ (ನಾ.) (ಹಿಂದೆ ಅಮೋನಿಯವನ್ನು ಪಡೆಯುವುದಕ್ಕೆ ಮುಖ್ಯ ಪದಾರ್ಥವಾಗಿದ್ದ) ಹಾರ್ಟ್ ಜಿಂಕೆಯ ಕೊಂಬಿನಿಂದ ತಯಾರಿಸಿದ ಪದಾರ್ಥ : ಅಮೋನಿಯ ದ್ರಾವಣ (= Spirit of h.) Salt of h. ಅಮೋನಿಯಂ ಕಾರ್ಬೊನೇಟ್ ಲವಣ : ಘಾಟುಪ್ಪು (ನೆಗಡಿಯಾದಾಗ, ಮೂರ್ಛೆಹೋದಾಗ, ಮೂಗಿಗೆ ಹಿಡಿಯುವ ಲವಣ)

Hárum-scárum ಹೇರಮ್ ಸ್ಕೇರಮ (ಗು., ನಾ.) (ಆಳ. ಮಾ.) ನಿರ್ಲಕ್ಷ್ಯದ, ಅವಿಚಾರದ, ದುಡುಕಿನ (ಮನುಷ್ಯ, ನಡತೆ)

Hárvest ಹಾರ್ವೆಸ್ಟ್ (ನಾ., ಕ್ರಿ. ಸಕ.) (ಧಾನ್ಯ ಮುಂತಾದ ಬೆಳೆಗಳ) ಕೊಯ್ಲು (ಕಾಲ) ; ಸುಗ್ಗಿ (ಕಾಲ). (ಧಾನ್ಯದ) ಬೆಳೆ. ಕಾಲದಲ್ಲಿ ತಾನಾಗಿ ದೊರೆಯುವ ಯಾವುದಾದರೂ ಪದಾರ್ಥದ ಸಂಗ್ರಹ (ಉದಾ., ಜೇನು ತುಪ್ಪ). (ರೂಪ.) (ಯಾವುದಾದರೂ ಕಾರ್ಯದ) ಫಲ. (ಕ್ರಿ.) ಬೆಳೆ ಕೊಯ್ದು ಧಾನ್ಯ ಸಂಗ್ರಹ ಮಾಡು ; (ಧಾನ್ಯ) ತುಂಬಿಡು, ಜೋಪಾನ ಮಾಡು. **H.-bug** ಸುಗ್ಗಿಯ ಕಾಲದಲ್ಲಿ ತೊಂದರೆ ಮಾಡುವ ಒಂದು ಜಾತಿಯ ನುಸಿ. **H. festival** (ಬೆಳೆ ಬಂದ ಕೃತಜ್ಞತೆಗಾಗಿ ಚರ್ಚಿನಲ್ಲಿ ನಡಸುವ) ಸುಗ್ಗಿಯ ಹಬ್ಬ. **H. home** ಬೆಳೆಯೆಲ್ಲ ಮನೆಗೆ ಬಂದು ಸೇರುವುದು ; ಸುಗ್ಗಿಯ ಮುಕ್ತಾಯ ; ಸುಗ್ಗಿಯ ಹಬ್ಬ. **H. moon** (ಇಂಗ್ಲೆಂಡಿನಲ್ಲಿ) ಸೆಪ್ಟೆಂಬರ್ ೨೨, ೨೩ನೆಯ ತಾರೀಖುಗಳಿಂದ ಒಂದು ಪಕ್ಷದೊಳಗಾಗಿ ಕಾಣಿಸಿಕೊಳ್ಳುವ ಹುಣ್ಣಿಮೆ ಚಂದ್ರ : ಸುಗ್ಗಿಹುಣ್ಣಿಮೆ. **H. mouse** (ಬೆಳೆಯುತ್ತಿರುವ ಪೈರಿನ ಕಾಂಡಗಳಲ್ಲಿ ಗೂಡು ಕಟ್ಟಿಕೊಂಡಿರುವ) ಸಣ್ಣ ಜಾತಿಯ ಇಲಿ : ಸುಗ್ಗಿಯಿಲಿ. **Hárvester** ಕೊಯ್ಲುಗಾರ ; ಕೊಯ್ಲು ಯಂತ್ರ (ಮು., ಕೊಯ್ದು ಕಂತೆಕಟ್ಟುವಂಥದು). = Harvest-bug.

Has. **Have** ನೋಡಿ.

Hash ಹ್ಯಾಷ್ (ಕ್ರಿ. ಸಕ., ನಾ.) (ಮಾಂಸವನ್ನು) ಸಣ್ಣ ಚೂರುಗಳಾಗಿ ಕತ್ತರಿಸು, ತುಂಡು ತುಂಡು ಮಾಡು (= H. up) (ರೂಪ. ನಹ). (ನಾ.) ಸಣ್ಣ ಚೂರುಗಳಾಗಿ ಕತ್ತರಿಸಿ ಅಟ್ಟ ಮಾಂಸ. ಹೊಸ ರೂಪದಲ್ಲಿ ಕೊಟ್ಟ ಹಳೆಯ ವಿಷಯಗಳು. ಕಲಬೆರಕೆ. Make a h. of (ಒಂದು ಕಾರ್ಯ ಮಾಡುವಲ್ಲಿ) ಹಾಳು ಮಾಡಿಬಿಡು, ಕುಲಗೆಡಿಸಿಬಿಡು. Settle a person's h. (ಒಬ್ಬನನ್ನು) ತೀರಿಸಿಬಿಡು ; ಬಾಯಿ ಮುಚ್ಚಿಸು ; ಅದುಮಿ ಬಿಡು.

Háshish ಹ್ಯಾಷಿಷ್, **Hasheésh** ಹಾಷೀಷ್ (ನಾ.) (ಹೊಗೆ ಸೇದುವುದಕ್ಕಾಗಿ ಅಥವಾ ಅಗಿಯುವುದಕ್ಕಾಗಿ ಒಣಗಿಸಿಟ್ಟ) ಬಂಗಿಯ ಗಿಡದ ತುದಿಯೆಲೆಗಳು ಮತ್ತು ಮೆತು ಭಾಗಗಳು : ಬಂಗಿ ; ಗಾಂಜ.

Hasp ಹಾಸ್ಪ್ (ನಾ., ಕ್ರಿ. ಸಕ.) ಚಿಲುಕ ; ಕೊಂಡಿ (ಮೊ. ದ ಬಂಧನ ಸಲಕರಣೆ). ನೂಲಿನ ಸುರುಳಿ, ಲಡಿ, ಕಟ್ಟು. (ಕ್ರಿ.) ಚಿಲುಕ, ಕೊಂಡಿ, ಹಾಕಿ ಭದ್ರಪಡಿಸು.

Hássock ಹ್ಯಾಸಕ್ (ನಾ.) (ಮು., ಚರ್ಚಿನಲ್ಲಿ) ಮಂಡಿಯೂರಲು ಮಾಡಿರುವ ಮೆತ್ತೆ. (ಹುಲ್ಲು, ಮೊ. ಗಳ) ಜಡೆ, ಬೊಂತೆ. (ಕೆಂಟ್ ಪ್ರಾಂತದಲ್ಲಿಯ) ಸುಣ್ಣ ಸೇರಿರುವ ಮೆತು ಮರಳುಗಲ್ಲು.

Hástate ಹ್ಯಾಸ್ಟೇಟ್ (ಗು.) ಈಟಿಯಾಕಾರದ.

Haste ಹೇಸ್ಟ್ (ನಾ., ಕ್ರಿ. ಅಕ.) ಚಲನೆಯ ವೇಗ ಗತಿ ; ಅವಸರ ; ಆತುರ ; ತ್ವರೆ ; ತರಾತುರಿ (—ಮಾಡು, —ಪಡು) ; ದುಡುಕು. More h., less speed ಆತುರಪಟ್ಟಷ್ಟೂ ವೇಗ ಕಡಮೆ. Make h. ಬೇಗ ಮಾಡು ; ಅವಸರಪಡು. **Hásten** ಹೇಸನ್ (ಕ್ರಿ.) (ಒಬ್ಬನನ್ನು) ತ್ವರೆಪಡಿಸು ; ಅವಸರಗೊಳಿಸು ; (ಕೆಲಸವನ್ನು) ಬೇಗ ಬೇಗ, ಜಾಗ್ರತೆಯಾಗಿ, ಮಾಡು ; ಆತುರಪಡು ; ತ್ವರೆಯಿಂದ ಬಾ, ಹೋಗು (*To*, ಮೊ. ಉಪ. ದೊಡನೆ). **Hásty** (ಗು.) ಆತುರದ ; ವೇಗದ ; ತ್ವರೆಯ ; ದುಡುಕಿನ ; ಮುಂದಾಲೋಚನೆ ಮಾಡದ ; ಬೇಗ ಕೆರಳುವ. H. pudding ಕುದಿಯುವ ಹಾಲಿನಲ್ಲಿ ಅಥವಾ ನೀರಿನಲ್ಲಿ ಹಾಕಿ ಗಟ್ಟಿಯಾಗುವಂತೆ ತೊಳಸಿದ (ಧಾನ್ಯದ) ಹಿಟ್ಟು : ತಂಬಿಟ್ಟು. **Hástily** (ಕ್ರಿ. ವಿ.) ; **Hástiness** (ನಾ.)

Hat ಹ್ಯಾಟ್ (ನಾ., ಕ್ರಿ. ಸಕ.) (ಮನೆಯಿಂದ ಹೊರಗೆ ಹೋಗುವಾಗ ತಲೆಗಿಟ್ಟುಕೊಳ್ಳುವ) ಗಂಡಸಿನ ಅಥವಾ ಹೆಂಗಸಿನ (ಸಾ., ಚಾಚು ಏಣಿರುವ) ತಲೆಮುಡುಪು ; ಪರಂಗಿ ಟೋಪಿ : 'ಹ್ಯಾಟು'. (ಕ್ರಿ.) — ನ್ನು ಇಟ್ಟುಕೊ, ಹಾಕಿಕೊ ; — ನ್ನು ಇಡು, ಒದಗಿಸು. Top, high, chimney-pot, h. ಕೊಳಗದಾಕಾರದ ರೇಷ್ಮೆಯ ಟೋಪಿ. Opera h. (ಮುದುರಬಹುದಾದ) ಕೊಳಗದಾಕಾರದ ಟೋಪಿ. Cardinal's or red h. (ರೂಪ.) 'ಕಾರ್ಡಿನಲ್ಲ'ನ ಅಧಿಕಾರ, ಹುದ್ದೆ. H. in hand ದೈನ್ಯದಿಂದ ; ತಗ್ಗಿ ಬಗ್ಗಿ ; ದಾಸಾನುದಾಸನಂತೆ. Send round the h. ಚಂದಾ ಬೇಡು, ಕೇಳು ; ವಂತಿಗೆ ಎತ್ತು. Talk through one's h. (ಅಸಂ.) ಜಂಬ ಕೊಚ್ಚು ; ಉತ್ಪ್ರೇಕ್ಷೆ ಮಾಡು ; ಗೊಡ್ಡು ಬೆದರಿಕೆ ತೋರು. As black as my h. ತೀರ ಕಪ್ಪು ; ಕಗ್ಗಪ್ಪು. Bad h. (ಅಸಂ.) ವ್ಯಭಿಚಾರಿ ; ನೀತಿಗೆಟ್ಟವನು ; ಘನತೆಗೆಟ್ಟವನು. **Hatband** ಟೋಪಿಯ (ಸುತ್ತು ಕಟ್ಟಿರುವ) ಸುತ್ತುಪಟ್ಟಿ. **H.-block** (ಟೋಪಿಗೆ ಆಕಾರಕೊಡುವ) ಟೋಪಿಯ ಅಚ್ಚು. **H. trick** ಟೋಪಿಯಿಂದ ಮಾಡುವ ಕಣ್ಕಟ್ಟಾಟ. (ಕ್ರಿಕೆಟ್) ಒಂದಾದಮೇಲೊಂದರಂತೆ ಚೆಂಡಿನ ಮೂರು ಎಸೆತಗಳಿಂದ ಮೂವರ ಆಟವನ್ನು ಕಳೆಯುವ ಸಾಹಸ. **Hátful** (ನಾ.) ; **Hátter** ಟೋಪಿ ಮಾಡುವವನು ; — ಮಾರುವವನು ; ಟೋಪಿಗಾರ. **Hátless** (ಗು.)

Hatch[1] ಹ್ಯಾಚ್ (ನಾ.) ಎರಡು ಭಾಗ ಮಾಡಿರುವ ಕದದ ಕೆಳ ಅರ್ಧ ; ಅರೆ ಕದ. (ಕದ, ಗೋಡೆ, ನೆಲ, ಹಡಗಿನ ಅಟ್ಟ, ಮೊ. ಗಳಲ್ಲಿ ಮಾಡಿರುವ) ಕಂಡಿ. (ನಾವೆ) ಹಡಗಿನಲ್ಲಿ ಸರಕಿಳಿಸುವ ಕಂಡಿ, ದ್ವಾರ ; ಇದರ ಬಾಗಿಲು [Under hatches ಹಡಗಿನ ಅಟ್ಟದ ಕೆಳಗೆ ; (ರೂಪ.) ಕಣ್ಮರೆಯಾಗಿ ಕೆಳಗೆ ; ಹೀನ ಸ್ಥಿತಿಗಿಳಿದು ; ಸತ್ತು]. ತೂಬಿನ ಬಾಗಿಲು. **Hatchway** ಸರಕಿಳಿಸಲು ಹಡಗಿನ ಅಟ್ಟದಲ್ಲಿ ಮಾಡಿರುವ ಕಂಡಿ, ದ್ವಾರ.

Hatch[2] ಹ್ಯಾಚ್ (ಕ್ರಿ., ನಾ.) (ಹಕ್ಕಿಯ ಮರಿ, ಮೊ. ವು) ಮೊಟ್ಟೆಯಿಂದ ಹೊರಗೆ ಬರು, ಬರಿಸು ; ಮರಿ ಮಾಡು ; ಮರಿಯಾಗು. (ಮೊಟ್ಟೆಯ ಮೇಲೆ) ಕಾವಿಗೆ ಕುಳಿತುಕೊ. (ಸಂಚು, ಮೊ. ನ್ನು) ಗುಪ್ತವಾಗಿ ಯೋಜಿಸಿ ಬೆಳಸು ; ಸಂಚು ಹೂಡು. (ನಾ.) (ಮೊಟ್ಟೆಯಿಂದ) ಮರಿ ಮಾಡುವುದು, ಆಗುವುದು ; (ಮೊಟ್ಟೆಯೊಡೆದು ಬಂದ) ಮರಿಗಳ ತಂಡ. Hatches, catches, matches and dispatches (ವೃತ್ತ ಪತ್ರಿಕೆಯಲ್ಲಿ ಪ್ರಕಟವಾಗುವ) ಜನನ, (ಮದುವೆಯ) ನಿಶ್ಚಿತಾರ್ಥ, ಮದುವೆ, ಮರಣ — ಇವುಗಳ ಪಟ್ಟಿ. **Hátchery** ಹ್ಯಾಚರಿ (ನಾ.) ಮೀನನ್ನು ಮರಿಮಾಡುವ ಸ್ಥಳ.

Hatch[3] ಹ್ಯಾಚ್ (ಕ್ರಿ. ಸಕ., ನಾ.) (—ರ ಮೇಲ್ಮೈಯಲ್ಲಿ ಸಾ., ಸಮಾಂತರ) ಗೆರೆಗಳನ್ನು ಕೊರೆ. (ನಾ.) ಹೀಗೆ ಕೊರೆದ ಗೆರೆ. Hatched moulding (ವಾ. ಶಾ.) ಎರಡು ತಂಡದ ಒರೆಯ ಸಮಾಂತರ ಗೆರೆಗಳು ಅಡ್ಡಹಾಯುವಂತೆ ಕೊರೆದ ಅಚ್ಚು.

Hátchery. **Hatch**[2] ನೋಡಿ.

Hátchet ಹ್ಯಾಚೆಟ್ (ನಾ.) ಹಗುರವಾದ ಮೋಟು ಕಾವಿನ ಕೊಡಲಿ ; ಕೈಕೊಡಲಿ. H.-face ಕಿರಿಯಗಲದ ಚೂಪು ಮುಖ. Bury the h. (Bury ನೋಡಿ). Throw the h. ಉತ್ಪ್ರೇಕ್ಷಿಸು ; ಹೆಚ್ಚಿಸಿ ಹೇಳು ; ಅತಿ ಮಾಡು. Throw the helve after the h. ಆದ ನಷ್ಟದ ಜೊತೆಗೆ ಮತ್ತಷ್ಟು ನಷ್ಟ ಮಾಡಿಕೊ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Hátchment ಹ್ಯಾಚ್‌ಮೆಂಟ್ (ನಾ.) ವಂಶಲಾಂಛನ(ಕೆತ್ತಿದ) ಗುರಾಣಿ. (ಸತ್ತುಹೋದವನ ಮನೆಯ ಮುಂಭಾಗದಲ್ಲಿ ತಗುಲಹಾಕಿರುವ ಅವನ) ವಂಶಲಾಂಛನ ಕೆತ್ತಿದ ಹಲಗೆ.

Hate ಹೇಟ್ (ನಾ., ಕ್ರಿ. ಸಕ.) (ಮು., ಕಾವ್ಯ) ಹಗೆ; ದ್ವೇಷ. (ಕ್ರಿ.) ತುಂಬ ಅವಿಶ್ವಾಸಪಡು; ದ್ವೇಷಿಸು; ಹಗೆ ಕಾರು. **Hátable** (ಗು.); **Háteful** (ಗು.) ಅಸಹ್ಯತೆ, ದ್ವೇಷ, ಹಗೆ, — ಉಂಟುಮಾಡುವ. **Hátefully** (ಕ್ರಿ. ವಿ.); **Hátefulness** (ನಾ.); **Hátred** (ನಾ.) ತೀರ ಅವಿಶ್ವಾಸ; ದ್ವೇಷ; ಹಗೆ; ವಿರೋಧ.

Haúberk ಹಾಬರ್ಕ್ (ನಾ.) ಉಕ್ಕಿನ ಕವಚ.

Haugh ಹಾಫ್, ಹಾರ್ಫ್ (ನಾ.) ನದಿಯ ಪಕ್ಕದ ಚಪ್ಪಟೆಯ ಒಂದು ನೆಲ.

Haúghty ಹಾಟಿ (ಗು.) ಜಂಬದ; ಗರ್ವದ; ಸೊಕ್ಕಿನ; ಬಿಂಕದ; ಪ್ರತಿಷ್ಠೆಯ; ಅಹಂಕಾರದ: ದರ್ಪದ; ಬಿಗುಮಾನದ. **Haúghtily** (ಕ್ರಿ. ವಿ.); **Haúghtiness** (ನಾ.)

Haul ಹಾಲ್ (ಕ್ರಿ., ನಾ.) ಬಲವಂತದಿಂದ ಎಳೆ, ಸೆಳೆ; (ಹಗ್ಗ, ಮೊ. ನ್ನು) ತುಯ್ಯಿ, ಎಳೆ (*At, upon* ಉಪ. ದೊಡನೆ). ಬಂಡಿ, ಮೊ. ಗಳ ಮೂಲಕ ಸಾಗಿಸು. (ನಾವೆ) ಹಡಗಿನ ಗತಿಯನ್ನು ತಿರುಗಿಸು (H. upon the wind ಹಡಗನ್ನು ಗಾಳಿಯ ದಿಕ್ಕಿನ ಕಡೆಗೆ ತಿರುಗಿಸು); (ಗಾಳಿ) — ಕಡೆಗೆ ತಿರುಗು. (ನಾ.) ಎಳೆಯುವುದು; ಸೆಳೆಯುವುದು. (ರೂಪ.) ಸಂಪಾದನೆ; ಗಳಿಕೆ; ಅರ್ಜನೆ. **Haúlage** ಹಾಲೆಜ್ (ನಾ.) ಎಳೆತ; ಬಂಡಿ, ಮೊ. ಗಳಲ್ಲಿ ಭಾರವನ್ನು ಸಾಗಿಸುವುದು; ಎಳೆತದ ಶಕ್ತಿ. ಸಾಗಿಸುವ ಖರ್ಚು. **Haúlier** — ಲಯರ್ (ನಾ.) (ಮು., ಕಲ್ಲಿದ್ದಲ ಗಣಿಯಲ್ಲಿ ತೊಟ್ಟಿಗಳನ್ನು ತಳಕ್ಕೆ) ಸಾಗಿಸುವವನು. ಬಾಡಿಗೆ ಬಂಡಿಯವನು.

Ha(u)lm ಹಾಮ್ (ನಾ.) ತಾಳು; ವೃಂತ; ಕಾಂಡ. (ಪ್ರಾತ್ಯೇಕ ವಚನ) (ಬಟಾಣಿ, ಅವರೆ, ಆಲೂಗಡ್ಡೆ, ಮೊ. ಗಳ, ಕಾಯಿಗಳಿಲ್ಲದ) ಕಡ್ಡಿ, ಕಾಂಡ.

Haunch ಹಾನ್ಚ್ (ನಾ.) (ಮನುಷ್ಯರಲ್ಲಿ, ಚತುಷ್ಪಾದಿಗಳಲ್ಲಿ) ಕೊನೆಯ ಪಕ್ಕೆಲುಬುಗಳಿಗೂ ತೊಡೆಗೂ ಮಧ್ಯೆ ಇರುವ ಭಾಗ: ಟೊಂಕ; ನಡು; ಕಟಿ; ಪಿರ್‍ರೆಯ ಭಾಗಗಳು. (ಆಹಾರಕ್ಕಾಗಿ ಉಪಯೋಗಿಸುವ ಜಿಂಕೆ, ಮೊ. ಗಳ) ತೊಡೆ ಮತ್ತು ನಡು. (ವಾ. ಶಾ.) ಅಸರೆಯ ಕಂಬಕ್ಕೂ ನೆತ್ತಿಗೂ ನಡುವಣ ಕಮಾನು ಭಾಗ.

Haunt ಹಾಂಟ್ (ಕ್ರಿ., ನಾ.) ಸುಳಿದಾಡು; (ಒಂದು ಸ್ಥಳಕ್ಕೆ) ಪದೇ ಪದೇ ಹೋಗುತ್ತಿರು; ಸಂಚಾರ ಮಾಡು. (ಒಬ್ಬನ) ಜೊತೆಯಲ್ಲಿ ಸದಾ ಇರು; (ಒಬ್ಬನನ್ನು) ಬೆನ್ನು ಹತ್ತಿರು. (ಆಲೋಚನೆಗಳು, ಮೊ. ವು, ಒಬ್ಬನಿಗೆ) ಸದಾ ಹೊಳೆಯುತ್ತಿರು, ತಲೆದೋರುತ್ತಿರು. (ಭೂ. ಕೃ.) ದೆವ್ವಗಳು ಸುಳಿದಾಡುವ; ದೆವ್ವಗಳಿರುವ. (ಒಂದೆಡೆಯಲ್ಲಿ) ವಾಡಿಕೆಯಾಗಿ, (ಒಂದು ಸ್ಥಳದಲ್ಲಿ) ಒಬ್ಬನೊಡನೆ, ನೆಲಸಿರು (*In, about, with* ಉಪ. ದೊಡನೆ). (ನಾ.) ಹೆಚ್ಚಾಗಿ ಹೋಗಿಬರುವ ಸ್ಥಳ; ಸಂಚಾರಸ್ಥಳ. ಪ್ರಾಣಿಗಳ ವಾಡಿಕೆಯ ಮೇವಿನ ಸ್ಥಳ. ಕಳ್ಳಕಾಕರು ವಾಡಿಕೆಯಾಗಿ ಸೇರುವ ಗುಟ್ಟಿನ ಸ್ಥಳ.

Haútboy, Hóboy ಹೋಬಾಯ್, **Óboe** ಓಬಾಯ್ (ನಾ.) ಉಚ್ಚಸ್ವರ ಕೊಡುವ ಮರದ ಗಾಳಿವಾದ್ಯ. ಆರ್ಗನ್ ವಾದ್ಯದ ಮೆಟ್ಟು. ' ಸ್ಟ್ರಾಬೆರಿ ' ಎಂಬ ಹಣ್ಣುಗಿಡದ ಎತ್ತರದ ಜಾತಿ.

Hauteúr (F) ಹೋಟರ್ (ನಾ.) (ನಡತೆಯಲ್ಲಿ) ಗರ್ವ, ಜಂಬ, ಬಿಂಕ, ಸೊಕ್ಕು, ಪ್ರತಿಷ್ಠೆ.

Haut-goút (F) ಹೋಗು (ನಾ.) ಕಟು ರುಚಿ. ಸ್ವಲ್ಪ ಕೊಳೆತ.

Havána ಹವ್ಯಾನ (ನಾ.) ಹವ್ಯಾನದಲ್ಲಿಯೊ ಕ್ಯೂಬಾದಲ್ಲಿಯೊ ಮಾಡಿದ ಹೊಗೆಸುತ್ತು.

Have[1] ಹ್ಯಾವ್ [ಕ್ರಿ., ಸಹಾಯಕ ಕ್ರಿ.; ವರ್ತಮಾನ I have; (ಪ್ರಾಚೀ. ಪ್ರ.) Thou hast; He has; We, you, they, have. ಭೂತ. Had; (ಪ್ರಾಚೀ. ಪ್ರ.; ಮಧ್ಯಮ ಪುರುಷ ಏ. ವ.) Hadst; ಭೂ. ಕೃ. Had. (ಸಂಕ್ಷಿಪ್ತ) I've, We've, &c; I'd, We'd, &c; 's = Has. (ಬಳ.ಮಾ., ನಿಷೇಧ ರೂಪ) Haven't, Hasn't, Hadn't]. ಉಂಟಾಗಿರು; ಇರು; ಬರು; ತಿಳಿದಿರು; ಇಟ್ಟುಕೊಂಡಿರು; ಅನುಭವಿಸು; ಅವಕಾಶ ಕೊಡು; ತೆಗೆದುಕೊ; ಪಡೆ; ಹೊಂದು. I have two sons. June has 30 days. It has its advantages ಅದರಲ್ಲೂ ಕೆಲವು ಅನುಕೂಲಗಳಿವೆ. I had a toothache. I will not h. you say such things ಇಂಥ ಮಾತನ್ನು ನಿನ್ನಿಂದ ನಾನು ಕೇಳತಕ್ಕವನಲ್ಲ. He has no Greek ಅವನಿಗೆ ಗ್ರೀಕು ಬಾರದು. H. this in mind ಇದನ್ನು ಮನಸ್ಸಿನಲ್ಲಿಟ್ಟುಕೊಂಡಿರು. I had some conversation with him ಅವನೊಡನೆ ಸ್ವಲ್ಪ ಮಾತನಾಡಿದೆನು. H. a game ಒಂದಾಟವಾಡು. H. a try ಒಂದು ಕೈ ನೋಡು. He will h. it that — ಎಂದು ಅವನು ಅಭಿಪ್ರಾಯಪಡುತ್ತಾನೆ. As Plato has it ಪ್ಲೇಟೊ ಹೇಳುವಂತೆ. H. a plantain ಒಂದು ಬಾಳೆಹಣ್ಣು ತೆಗೆದುಕೊ. The Ayes h. it. (Ay ನೋಡಿ). Let him h. it ಅವನಿಗೆ ತಕ್ಕದ್ದು ಮಾಡು; ಅವನನ್ನು ದಂಡಿಸು. I had him there ಅವನಿಗಿಂತ ಮೇಲುಗೈಯಾದೆ. You h. been had (ಅಸಂ.) ನೀನು ಮೋಸಹೋದೆ; ಆಯ್ತು ನಿನಗೆ! H. him shot ಅವನನ್ನು ಗುಂಡುಹೊಡೆಯಿಸಿ ಸಾಯಿಸು. H. him up ಅವನನ್ನು ಕೋರ್ಟಿಗೆ ಎಳೆ. I had my leg broken ಕಾಲು ಮುರಿದುಕೊಂಡೆ. H. it your own way (ಮುಂದೆ ವಾದಿಸಲು ಇಷ್ಟವಿಲ್ಲದೆ) ನಿನ್ನ ಮನಸ್ಸಿಗೆ ಬಂದಂತೆ ನಡೆದುಕೊ. H. nothing on (person) (ಅಮೆ.ಸಂ.) ಒಬ್ಬನಮೇಲೆ ಯಾವ ವಿಷಯದಲ್ಲೂ ಮೇಲುಗೈ ಅಲ್ಲದಿರು. H. at ಮೇಲೆ ಬೀಳು; ಎರಗು. H. done ನಿಲ್ಲು; ನಿಲ್ಲಿಸು; ಸಾಕುಮಾಡು. H. on (ಉಡುಪು) ಹಾಕಿಕೊಂಡಿರು. H. it out (with person) ಚರ್ಚೆ, ಮೊ. ಗಳ ಮೂಲಕ (ಒಬ್ಬನೊಡನೆ) ವ್ಯಾಜ್ಯವನ್ನು ಬಗೆಹರಿಸು. ಹಲ್ಲು ಕೀಳಿಸಿಕೊ. I had rather go, had better go ನಾನು ಹೋಗುವುದೇ ಮೇಲು. (ಸಹಾಯಕ ಕ್ರಿ.) Shall h. packed ಗಂಟುಮೂಟೆ ಕಟ್ಟಿ ಮುಗಿಸಿರುವೆನು. Had I known ನನಗೆ ಗೊತ್ತಿದ್ದಿದ್ದರೆ. **Has-been** (ನಾ.) (ಬಳ. ಮಾ) ಹಿಂದಿದ್ದ ಗುಣವನ್ನು, ಪ್ರಾಶಸ್ತ್ಯವನ್ನು, ದಕ್ಷತೆಯನ್ನು, ಕಳೆದುಕೊಂಡಿರುವ ವ್ಯಕ್ತಿ, ವಸ್ತು; ಹಿಂದೆ ಬಿದ್ದವನು; ಹಳತಾಗಿ ಹೋದದ್ದು.

Have (ನಾ.) Haves and Have-nots ಉಳ್ಳವರೂ ಇಲ್ಲದವರೂ; ಧನಿಕರೂ ದರಿದ್ರರೂ. (ಅಸಂ.) ಮೋಸ; ವಂಚನೆ. **Háving** (ನಾ.) (ಕ್ರಿಯಾರ್ಥಗಳಲ್ಲಿ). (ಸಾ., ಬ. ವ. ದಲ್ಲಿ) ಆಸ್ತಿ; ಸ್ವತ್ತು.

Háven ಹೇವ್‌ನ್ (ನಾ.) ರೇವು (ಪಟ್ಟಣ); ಬಂದರು. (ರೂಪ.) ವಿಶ್ರಾಂತಿಸ್ಥಾನ; ನಿಲುಕಡೆ; ಆಶ್ರಯ (= H. of rest)

Háversack ಹ್ಯಾವರ್‌ಸ್ಯಾಕ್ (ನಾ.) (ಸೈನಿಕನ) ಆಹಾರ ಪದಾರ್ಥಗಳನ್ನಿಟ್ಟುಕೊಳ್ಳುವ ದಪ್ಪ ರಟ್ಟಿನ ಚೀಲ; ಬೆನ್ನುಚೀಲ.

Hávildar ಹ್ಯಾವಿಲ್ದಾರ್ (ನಾ.) (ಇಂಗ್ಲಿಷ್ ಸೈನ್ಯದ ' ಸಾರ್ಜೆಂಟ್ ' ಹುದ್ದೆಗೆ ಜವಾಬಾಗಿರುವ) ಇಂಡಿಯದ ಸಿಪಾಯಿ ಸೈನ್ಯದ ಅಧಿಕಾರಿ; ಹವಾಲ್ದಾರ.

Hávoc ಹ್ಯಾವಕ್ (ನಾ., ಕ್ರಿ. ಸಕ.; ಭೂತ., ಭೂ. ಕೃ. -ocked) ನಾಶ, ಹಾಳು, ಹಾವಳಿ (— ಮಾಡು). Make h. of, play h. among — ಧ್ವಂಸ ಮಾಡು. Cry h. (ಸೈನಿಕರಿಗೆ) ' ಸೂರೆ ಮಾಡಿ! ಕೊಳ್ಳೆ ಹೊಡೆಯಿರಿ! ' ಎಂಬ ಆಜ್ಞೆ ಕೊಡು (ಈಗ ರೂಪ.)

Haw[1] ಹಾ (ನಾ.) ' ಹಾಥಾರ್ನ್ ' ಗಿಡ(ದ ಹಣ್ಣು). (ಚರಿತ್ರೆ) ಬೇಲಿ; ಆವರಣ. **Hawbuck** (ನಾ.) ಹಳ್ಳಿ ಗಮಾರ. **Hawfinch** (ನಾ.) ಒಂದು ಪಕ್ಷಿಜಾತಿ.

Haw[2] ಹಾ (ನಾ.) (ಕುದುರೆ, ನಾಯಿ, ಮೊ. ಗಳ) ಮೂರನೆಯ ರೆಪ್ಪೆ; ಕಣ್ಣು ಕುಣಿಕೆಯೊಳಗಿನ ಮೃದ್ವಸ್ಥಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Haẃ-haẃ ಹಾ-ಹಾ (ಭಾವ. ಅವ್ಯ., ನಾ., ಕ್ರಿ. ಅಕ.) ಹಹ್ಹಾ ! (ಎಂದು ನಗು) ; ಗಟ್ಟಿ ನಗು. = Ha-ha.

Hawk[1] ಹಾಕ್ (ನಾ., ಕ್ರಿ.) ಹಕ್ಕಿಬೇಟೆಗಾಗಿ ಪಳಗಿಸಿದ, ಡೇಗೆಯ ರೆಕ್ಕೆಗಳಿಗಿಂತ ಸ್ವಲ್ಪ ಮೊಟಕಾಗಿಯೂ ಗುಂಡಾಗಿಯೂ ಇರುವ ರೆಕ್ಕೆಗಳುಳ್ಳ, ಮಾಂಸಾಹಾರಿಯಾದ ಒಂದು ಹಿಂಸ್ರ ಪಕ್ಷಿ : ಗಿಡುಗ (Know a h. from a handsaw ಸಾಮಾನ್ಯ ವಿವೇಚನೆ ಇರು). ಅಪಹರಣ ಸ್ವಭಾವದವನು ; ಸೂರೆ ಮಾಡುವವನು ; ಸುಲಿಗೆಕೋರ ; ದರೋಡೆಕೋರ ; ಮೋಸಗಾರ. [**H.-eyed** ತೀಕ್ಷ್ಣ ದೃಷ್ಟಿಯುಳ್ಳ. **H.-moth** ಒಂದು ಬಗೆಯ ಚಿಟ್ಟೆ. **H.-nosed** ಗರುಡ ಮೂಗಿನ. **H.'s-bill** ಗರುಡ ಮೂಗಿನ ಆಮೆ]. (ಕ್ರಿ.) ಗಿಡುಗನಿಂದ ಹಕ್ಕಿಬೇಟೆಯಾಡು ; ಗಿಡುಗನಂತೆ ಎರಗು (*At* ಉಪ. ದೊಡನೆ) ; (ಬಾನಕ್ಕಿ, ಮೊ. ಗಳ ವಿಷಯದಲ್ಲಿ) ಹುಳು ಹುಪ್ಪಟೆ ಹಿಡಿ. **Haẃker**[1] (ನಾ.) ಶ್ಯೇನ ಶಿಕ್ಷಕ ; ಡೇಗೆಗಾರ. **Haẃkish** (ಗು.) ; **Haẃklike** (ಗು.)

Hawk[2] ಹಾಕ್ (ಕ್ರಿ. ಸಕ.) (ಸಾಮಾನನ್ನು) ಮಾರಾಟಕ್ಕಾಗಿ ಹೊತ್ತುಕೊಂಡು ತಿರುಗು ; ಚಿಲ್ಲರೆಯ ತಿರುಗುವ್ಯಾಪಾರ ಮಾಡು (ಸಾ., ರೂಪ.). **Haẃker**[2] (ನಾ.) ತಿರುಗು ವ್ಯಾಪಾರಿ ; ಕೋರಿ ಸೆಟ್ಟಿ.

Hawk[3] ಹಾಕ್ (ಕ್ರಿ.) (ಸದ್ದು ಮಾಡಿ) ಗಂಟಲನ್ನು ಸರಿಮಾಡಿಕೊ ; (ಶ್ಲೇಷ್ಮ, ಮೊ. ವನ್ನು) ಗಂಟಲಿನಿಂದ ಹೊರದೆಗೆ (*Up* ಉಪ. ದೊಡನೆ); ಕ್ಯಾಕರಿಸು.

Hawk[4] ಹಾಕ್ (ನಾ.) ಗಾರೆಕೆಲಸದವನ, ಹಿಡಿಯಿರುವ ಚೌಕ ಹಲಗೆ : ಗಾರೆಮಣೆ.

Haẃker. **Hawk** ನೋಡಿ.

Hawse ಹಾಸ್ (ನಾ.) ಹೊರಜಿಗಂಡಿಗಳುಳ್ಳ ಹಡಗಿನ ಮೂತಿಯ ಭಾಗ. ಲಂಗರು ಬಿಟ್ಟಿರುವ ಹಡಗಿನ ಮೂತಿಗೂ ಲಂಗರಿಗೂ ಮಧ್ಯವಿರುವ ಅವಕಾಶ, ದೂರ. **H.-hole** ಹೊರಜಿಗಂಡಿ. **Haẃser** (ನಾ.) (ಹಡಗಿನ) ದೊಡ್ಡ ಹಗ್ಗ, ಸಣ್ಣ ಹೊರಜಿ (ಈಗ ಸಾ., ಉಕ್ಕಿನದು)

Haẃthorn ಹಾಥಾರ್ನ್ (ನಾ.) ಒಂದು ಜಾತಿಯ ಮುಳ್ಳು ಪೊದೆ ಅಥವಾ ಸಣ್ಣ ಗಿಡ.

Hay ಹೇ (ನಾ.) ಕೊಯ್ದು ಮೇವಿಗಾಗಿ ಒಣಗಿಸಿಟ್ಟ ಹುಲ್ಲು ; ಒಣ ಹುಲ್ಲು ; ಕರಡ. Burgundian h. ಕುದುರೆಯ ಮಸಾಲೆ ಸೊಪ್ಪು. Look for a needle in a bottle (or bundle) of h. (Bottle[2] ನೋಡಿ). Make h. (ಕೊಯ್ದು) ಹುಲ್ಲನ್ನು ಬಿಸಿಲಲ್ಲಿ ಹರವಿ ಒಣಗಿಸು. Make h. of ಅವ್ಯವಸ್ಥೆಗೊಳಿಸು ; ಗಲಬಿಲ ಮಾಡು. Make h. while the sun shines ಸಿಕ್ಕಿದ ಅವಕಾಶವನ್ನು ಉಪಯೋಗಿಸಿಕೊ ; ಗಾಳಿ ಬಂದಾಗ ತೂರಿಕೊ. **Haybox** (ಒಳಗಿನ ಕಾವು ನಷ್ಟವಾಗದಂತೆಯೂ ಅಟ್ಟ ಪದಾರ್ಥವು ಇರುವ ಶಾಖದಿಂದಲೇ ಚೆನ್ನಾಗಿ ಪಕ್ವವಾಗುವಂತೆಯೂ ಏರ್ಪಡಿಸಿರುವ) ಹುಲ್ಲು ಇಡಿಕಿದ ಪೆಟ್ಟಿಗೆ. **Haycock** (ಶಂಕುವಿನಾಕಾರದಲ್ಲಿ ಪೇರಿಸಿದ) ಹುಲ್ಲು ಮೆದೆ, ಬಣವೆ. **H. fever** ಪರಾಗದಿಂದ ಅಥವಾ ದೂಳಿನಿಂದ ಬರುವ, ಸಾ., ಗೂರಲು ಲಕ್ಷಣಗಳುಳ್ಳ, ಬೇಸಗೆ ಕಾಲದ ಒಂದು ರೋಗ. **H.-fork** (ಹುಲ್ಲನ್ನು ತಿರುವಿಹಾಕಲು ಅಥವಾ ಬಂಡಿಯಲ್ಲಿ ತುಂಬಲು ಉಪಯೋಗಿಸುವ) ಹುಲ್ಲುಕವೆ. **Haymaker** ಹುಲ್ಲನ್ನು ಕೊಯ್ದ ಮೇಲೆ ಎತ್ತಿ, ಎಸೆದು, ಹರವುವವನು ; ಹುಲ್ಲು ಮಾಡುವವನು ; ಹುಲ್ಲೊಣಗಿಸುವ ಸಲಕರಣೆ. **Hayrick, Haystack** ಹುಲ್ಲು ಮೆದೆ, ಬಣವೆ.

Hay (ಕ್ರಿ.) (ನೆಲದಲ್ಲಿ) ಹುಲ್ಲು ಬೆಳೆ ಇಡು. ಒಣಹುಲ್ಲು ಮಾಡು ; ಒಣಹುಲ್ಲಾಗಿ ಮಾಡು.

Haýward ಹೇವಾರ್ಡ್ (ನಾ.) (ಕ್ರೈಸ್ತ ಮಠಾಧಿಕಾರಕ್ಕೆ ಸೇರಿದ ಪ್ರದೇಶ, ಮೊ. ಗಳಲ್ಲಿ) ಬೇಲಿಗಳ ಮತ್ತು ಆವರಣಗಳ ಉಸ್ತುವಾರಿ ನೋಡಿಕೊಳ್ಳುವ ಅಧಿಕಾರಿ.

Házard ಹ್ಯಾಸರ್ಡ್ (ನಾ., ಕ್ರಿ. ಸಕ.) (ಗೆಲ್ಲಲು ತೊಡಕಾದ) ಒಂದು ತೆರದ ದಾಳದಾಟ. ಪಣ ; ಅದೃಷ್ಟ ; ಧೈರ್ಯದಿಂದ ನುಗ್ಗುವುದು ; ನಷ್ಟ, ಅಪಾಯ, — ಸಂಭವ ; ಅಪಾಯ (At all hazards ಏನೇ ಬರಲಿ ; ಎಷ್ಟೇ ಅಪಾಯವೊದಗಲಿ). [(ಬಿಲಿಯಡ್ಸ್) : Winning h. (ಗುರಿಚೆಂಡು ಚೀಲ ತುಂಬುವ) ಗೆಲು ಹೊಡೆತ. Losing h. (ಸ್ವಂತ ಚೆಂಡು ಗುರಿ ತಪ್ಪಿ ಚೀಲ ತುಂಬುವ) ಸೋಲು ಹೊಡೆತ]. (ಗಾಲ್ಫ್) (ಯಾವ ಬಗೆಯದಾದರೂ) ಅಡಚಣೆಯೊಡ್ಡಿರುವ ಆಟದ ಮೈದಾನದ ಭಾಗ ; ಅಡಚಣೆ. (ಐರ್ಲೆಂಡಿನಲ್ಲಿ) 'ಕ್ಯಾಬ್' ಬಂಡಿಗಳು ನಿಲ್ಲುವ ಸ್ಥಳ. (ಕ್ರಿ.) ಅಪಾಯಕ್ಕೆ ಈಡು, ಗುರಿ, — ಮಾಡು ; — ಈಡಾಗು ; ಪಣವೊಡ್ಡು. (ಕಾರ್ಯ, ಹೇಳಿಕೆ, ಊಹೆ — ಇವುಗಳಲ್ಲಿ) ಸಾಹಸ ಮಾಡು, ಲಕ್ಷಿಸದೆ ಮುನ್ನುಗ್ಗು ; ಅದೃಷ್ಟ ನೋಡು. **Házardous** (ಗು.) ಅಪಾಯಕರವಾದ ; ಅದೃಷ್ಟ ವಶದ. **Házardously** (ಕ್ರಿ. ವಿ.) ; **Házardousness** (ನಾ.)

Haze[1] ಹೇಸ್ (ನಾ., ಕ್ರಿ. ಸಕ.) [ಭೂಮಿಗೆ ಹತ್ತಿರವಿರುವ ವಾಯುಮಂಡಲದಲ್ಲಿ ನೀರಾವಿ, ಮೊ. ಗಳ ಅಸಂಖ್ಯಾತ ಕಣಗಳಿಂದ (ಸಾ., ಕಾವಿನಿಂದ) ಉಂಟಾಗುವ] ಕಾವಳ ; ಮಂಜು ; ಮಸುಕು ; ಮಬ್ಬು. (ರೂಪ.) ಮನಸ್ಸಿನ, ಬುದ್ಧಿಯ, — ಮಂಕು. (ಕ್ರಿ.) — ಮಾಡು, ಕವಿಸು. **Házy** ಹೇಸಿ (ಗು.) ಮಂಜು ಮಂಜಾದ; ಮಬ್ಬುಗವಿದ ; ಮಸುಕಾದ ; ಅಸ್ಪಷ್ಟ. ಕೊಂಚ ಅಮಲೇರಿದ. **Házily** (ಕ್ರಿ. ವಿ.); **Háziness** (ನಾ.)

Haze[2] ಹೇಸ್ (ಕ್ರಿ. ಸಕ.) (ನಾವೆ) ಅತಿಯಾಗಿ ದುಡಿಸಿ ತೊಂದರೆ ಕೊಡು. (ಅಮೆ. ಸಂ.) ಗೋಳುಗುಟ್ಟಿಸು ; ಪೀಡಿಸು.

Házel ಹೇಸ್‌ಲ್ (ನಾ.) ಒಂದು ಬಗೆಯ ಪೊದೆ (ಗಿಡ) ; 'ಹೇಸ್‌ಲ್' ಪೊದೆ. (H.-nut 'ಹೇಸ್‌ಲ್' ಹಣ್ಣು, ಕಾಯಿ). 'ಹೇಸ್‌ಲ್' ಕೋಲು, — ದಾರು. (ಮು., ಕಣ್ಣಿನ ವಿಷಯದಲ್ಲಿ) ಕೆಂಗಂದು ಬಣ್ಣ. Wych-h. (Wych ನೋಡಿ). **Házelly** (ಗು.)

Házy, &c. **Haze**[1] ನೋಡಿ.

He[1] ಹಿ, ಹೀ [ಸ. ನಾ. ; ದ್ವಿತೀಯಾ ವಿಭಕ್ತಿ Him (ಅವನನ್ನು) ; ಷಷ್ಠೀ ವಿಭಕ್ತಿ His (ಅವನ) ; ಬ. ವ. They (ಅವರು) ; ದ್ವಿತೀಯಾ ವಿಭಕ್ತಿ Them (ಅವರನ್ನು) ; ಷಷ್ಠೀ ವಿಭಕ್ತಿ Their (ಅವರ). (ನಾ. ; ಬ. ವ. He's)]. ಅವನು ; ಆತ ; ಇವನು ; ಈತ. (ನಾ.) ಗಂಡು (ಮು., ಪ್ರಾಣಿಗಳ ವಿಷಯದಲ್ಲಿ) (ಗು.) : He-goat ಗಂಡು ಮೇಕೆ ; ಹೋತ. He-man (ಅಮೆ. ಸಂ.) ಪೌರುಷಶಾಲಿ ; ಪ್ರಭಾವಶಾಲಿ ; ಗಂಡು ಮನುಷ್ಯ ; ವೀರ್ಯವಂತ ; ಗಂಡಿಗ.

He[2] ಹೀ (ಭಾವ. ಅವ್ಯ.) (ವಿನೋದ ಅಥವಾ ಅವಹೇಳನ ಸೂಚಕ ಪದ) ಹೀ (ಸಾ., ಪುನರುಕ್ತಿಯಲ್ಲಿ : ಹೀ ಹೀ)

Head ಹೆಡ್ (ನಾ.) ತಲೆ ; ಮಂಡೆ ; ಶಿರಸ್ಸು ; ರುಂಡ. (ಬಳ. ಮಾ.) ತಲೆ ನೋವು (ಮು., ಹಿಂದಿನ ರಾತ್ರಿ ಕುಡಿದು ಅಮಲೇರಿದ್ದರ ಫಲವಾಗಿ). (ಒಂದು ಅಳತೆ) ತಲೆಯುದ್ದ [Taller by a h. — ಇಂತ ಒಂದು ತಲೆಯಷ್ಟು ಎತ್ತರ. Won by a h. (ಕುದುರೆ ಜೂಜು) ಒಂದು ತಲೆಯುದ್ದದಿಂದ ಗೆದ್ದಿತು. Cannot make h. or tail of ತಲೆ ಬಾಲ ಒಂದೂ ತಿಳಿಯುವುದಿಲ್ಲ; ಏನೂ ಅರ್ಥವಾಗುವುದಿಲ್ಲ.]. ಬುದ್ಧಿ (ಶಕ್ತಿಯ ನೆಲೆ) ; ಕಲ್ಪನಾ ಶಕ್ತಿ(ಯ ನೆಲೆ). ಪ್ರಾಣ (It cost him his h. ಅದು ಅವನ ತಲೆ ತಿಂದಿತು). (ಮು., ನಾಣ್ಯದ ಒಂದು ಮುಖದಲ್ಲಿರುವ) ತಲೆ(ಯ ಚಿತ್ರ) [Heads I win, tails you lose (ಸಾ., ಹೆಚ್ಚು ತಿಳಿವಿಲ್ಲದವರನ್ನು ಮೋಸಗೊಳಿಸುವ ಒಪ್ಪಂದ) : (ಮೇಲೆಸೆದು ಬಿದ್ದ ನಾಣ್ಯದ) ಮೇಲ್ಮುಖ ಕಂಡರೆ ನಾನು ಗೆದ್ದೆ, ಕೆಳಮುಖ ಕಂಡರೆ ನೀನು ಸೋತೆ (ಹೇಗಾದರೂ ತನಗೇ ಗೆಲವು ಎಂಬರ್ಥದಲ್ಲಿ). King's or Queen's h. (ಅಸಂ.) ಅಂಚೆಯ ತಲೆಚೀಟಿ ; ಅಂಚೆ ಸ್ಟಾಂಪು]. ಜಿಂಕೆಯ ಕವಲುಗೊಂಬು (Deer of the first h. ಹೊಸದಾಗಿ ಕೊಂಬೊಡೆದ ಜಿಂಕೆ). ಮನುಷ್ಯ ; ವ್ಯಕ್ತಿ [Crowned heads ಕಿರೀಟ ಧಾರಿಗಳು ; ರಾಜರು. Some hot h. ಯಾವನೋ ದುಡುಕು ಮನುಷ್ಯ. Two annas a (*or* per) head ತಲೆಗೆರಡು ಆಣೆ. Twenty h. of cattle ಇಪ್ಪತ್ತು ದನ. Large h. of game

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧಿಕ ಸಂಖ್ಯೆಯ ಬೇಟೆ ; ತುಂಬು ಬೇಟೆ]. (ಆಕಾರದಲ್ಲಿ ಅಥವಾ ಸ್ಥಾನದಲ್ಲಿ) ತಲೆಯಂಥ ಭಾಗ [ಆಯುಧದ ತಲೆ (ಕತ್ತರಿಸುವ ಅಥವಾ ಹೊಡೆಯುವ ಭಾಗ), ಮೊಳೆಯ ತಲೆ, ಮೊ. ವು]. (ಸಸ್ಯಗಳ ವಿಷಯದಲ್ಲಿ) ತಾಳಿನ ತುದಿಯಲ್ಲಿರುವ ಎಲೆಗಳ ಅಥವಾ ಹೂವುಗಳ ಗುಂಪಲು; ಗುತ್ತಿ ; ತೆನೆ. ಮದ್ಯದಮೇಲೆ ಕಟ್ಟುವ ಬುರುಗು, ನೊರೆ ; ಹಾಲಿನ ಮೇಲಿನ ಕೆನೆ. (ಧ್ವಜಸ್ತಂಭ, ಮೆಟ್ಟಿಲಿನ ಸಾಲು, ಪುಟ, ಮೊ. ಗಳ) ತುದಿ, ಅಗ್ರ. (ಕುರು, ಮೊ. ಗಳ) ಪಕ್ವಕ್ಕೆ ಬಂದ ಭಾಗ ; ಮೂತಿ. ಮೇಲ್ತುದಿ. ನದಿ ಬಂದು ಸೇರುವ ಸರೋವರದ ಭಾಗ. (ಹಾಸಿಗೆಯ) ತಲೆಭಾಗ. ಮೂಲ; ಉಗಮ ಸ್ಥಾನ ; ಆದಿ ಮೂಲ. (ಸುತ್ತುವ ಯಂತ್ರ, ಮೊ. ಗಳಿಗೆ ಒದಗಿಸಲು) ಎತ್ತರದಲ್ಲಿಟ್ಟ ನೀರಿನ ಮೊತ್ತ. (ಎತ್ತರದಲ್ಲಿಯ ನೀರು, ಮೊ. ಗಳ ಒತ್ತಡದ) ಮಟ್ಟ. (ಆವರಣದಲ್ಲಿ ಬಂಧಿಸಿಟ್ಟ ಹಬೆ, ಮೊ. ಗಳ ಒಂದು ಚದರಮಾನದ ಮೇಲಿನ) ಒತ್ತಡ. (ಮೆರವಣಿಗೆ, ಸೈನ್ಯ, ಮೊ. ಗಳ) ಮುಂಭಾಗ, ಮುಂಬು, ಚೂಣಿ. (ಗುಳ ಸೇರಿರುವ ನೇಗಿಲಿನ) ಮುಂಭಾಗ. (ಹಡಗಿನ) ಮೂತಿ [By the h. (ಹಿಂಭಾಗಕ್ಕಿಂತ) ಮೂತಿ ನೀರಿನಲ್ಲಿ ಹೆಚ್ಚು ಮುಳುಗಿ. (ರೂಪ.) ಸ್ವಲ್ಪ ಅಮಲೇರಿ]. ಸಮುದ್ರದೊಳಕ್ಕೆ ಚಾಚಿಕೊಂಡಿರುವ ಗುಡ್ಡನಾಡಿನ ಭಾಗ; ಭೂಶಿರ (ಉದಾ., Beachy H.). (ಕಲ್ಲಿದ್ದಲ ಗಣಿಯಲ್ಲಿ ಕೆಲಸ ಮಾಡಲು) ಸುರಂಗ ಮಾರ್ಗ. ಅಧಿಪತಿ ; ಮುಖಂಡ ; ನಾಯಕ ; ತಲೆಯಾಳು ; ಮುಖ್ಯಸ್ಥ (ಸಾ., ವಿಶೇಷಣ ಪದ) ; (ಪ್ರೌಢ ವಿದ್ಯಾ ಶಾಲೆಯ) ಅಧ್ಯಕ್ಷ ; (ವಿದ್ಯಾ ಶಾಲೆಯ) ಮುಖ್ಯೋಪಾಧ್ಯಾಯ. ನಾಯಕ ಸ್ಥಾನ ; ಆಧಿಪತ್ಯ (At the h. of — ರ ತಲೆಯಾಳಾಗಿ, ಅಧಿಪತಿಯಾಗಿ). (ಪ್ರಸಂಗ, ಪ್ರಬಂಧ, ಮೊ. ಗಳಲ್ಲಿ) ಪ್ರಧಾನ ಪ್ರಕರಣ ; ಮುಖ್ಯಾಂಶ. ತರಗತಿ ; ವರ್ಗ ; ಬಾಬು. ತುದಿಗೇರಿದ ಸ್ಥಿತಿ; ಉತ್ಕಟ ಸ್ಥಿತಿ [Come to a h. ಪಕ್ವ ಸ್ಥಿತಿಗೆ, ಉತ್ಕಟ ಸ್ಥಿತಿಗೆ, ಬರು ; ಬಿಕ್ಕಟ್ಟಿಗೆ ಬರು ; ತುದಿಗಟ್ಟಕ್ಕೆ ಬರು. Gather h. (Gather ನೋಡಿ)]. (ನಾವೆ) ಹಡಗಿನ ಮೂತಿಯಲ್ಲಿಯ ನಾವಿಕರ ಕಕ್ಕಸು. Old h. on young shoulders ವಯೋವೃದ್ಧನಲ್ಲದಿದ್ದರೂ ಜ್ಞಾನವೃದ್ಧ ; ಎಳೆಯ ವಯಸ್ಸು, ಬೆಳೆದ ಬುದ್ಧಿ. Put thing out of one's h. ಅದರ ಯೋಚನೆ ಬಿಡು ; ಅದನ್ನು ತಲೆಗೆ ಹಚ್ಚಿಕೊಳ್ಳದಿರು. Put thing out of person's h. (ಅವನು ಅದನ್ನು) ಮರೆಯುವಂತೆ ಮಾಡು. Off one's h. ತಲೆ ಕೆಟ್ಟು ; ಹುಚ್ಚು ಹಿಡಿದು. On one's h. (ಸೇಡು, ದೋಷ) ಒಬ್ಬನ ತಲೆಯಮೇಲೆ (ಬಿದ್ದು, ಹೊತ್ತು). Stand on one's h. ತಲೆ ಕೆಳಗಾಗಿ ನಿಲ್ಲು. Could do it on my h. (ಅಸಂ.) ಬಹಳ ಸುಲಭವಾಗಿ ಮಾಡಬಲ್ಲೆನು. Out of one's own h. ಸ್ವಂತ ಕಲ್ಪನೆಯಿಂದ. Over one's h. (ಮು., ರೂಪ.) (ಅಪಾಯ, ಗಂಡಾಂತರ) ಒಬ್ಬನ ತಲೆಯಮೇಲೆ ; (He is promoted over my h. ಅವನನ್ನು ಬಡತಿ ಮಾಡಿ ನನ್ನ ಮೇಲೆ ಹಾಕಿದರು); (ಒಬ್ಬನ) ಬುದ್ಧಿಗೆ ಮೀರಿ (He talks over our heads ಅವನು ನಮ್ಮ ತಿಳಿವಳಿಕೆಗೆ ಮೀರಿ ಮಾತಾಡುತ್ತಾನೆ). By the h. and ears (ದನವನ್ನೆಳೆಯುವಂತೆ) ಬಲವಂತವಾಗಿ. Over h. and ears (Ear[1] ನೋಡಿ). From h. to foot ಮುಡಿಯಿಂದ ಅಡಿಯ ವರೆಗೆ ; ಆಪಾದ ಮಸ್ತಕ ; ಮೈಮೇಲೆಲ್ಲ. H. of hair (ಮು., ತುಂಬ ಇರುವ) ತಲೆಗೂದಲು. H. over heels ತಲೆ ಕೆಳಗು. By h. & shoulders = By h. & ears ; (ಆಕಾರದಲ್ಲಿ) ಹೆಚ್ಚು ಎತ್ತರವಾಗಿ ; (ಬುದ್ಧಿಶಕ್ತಿಯಲ್ಲಿ, ನೀತಿಯ ಮಟ್ಟದಲ್ಲಿ) ತಲೆ ಮೆಟ್ಟಿ. Keep one's h. ಶಾಂತತೆಯಿಂದಿರು ; ದುಡುಕದಿರು. Keep one's h. above water (ರೂಪ.) ಸಾಲಕ್ಕೆ ಬೀಳದಿರು. Lose one's h. ತಲೆ ಕಳೆದುಕೊ ; ದಿಕ್ಕು ತೋರದಿರು ; ಭ್ರಾಂತನಾಗು. Make h. ಮುನ್ನುಗ್ಗು. Make h. against ಎದುರಿಸಿ ಗೆಲ್ಲು ; ಪ್ರತಿಭಟಿಸು. Put (thing) into person's h. — ನ್ನು (ಒಬ್ಬನ) ತಲೆಗೆ ಹಾಕು ; (ಒಬ್ಬನಿಗೆ) ಸೂಚಿಸು. H. first or foremost (ಮುಳುಗುವುದರಲ್ಲಿ) ತಲೆ ಮುಂದಾಗಿ. (ರೂಪ.) ದುಡುಂ ಪ್ರವೇಶ ಮಾಡಿ. Give (horse) his h. (ಕುದುರೆಯನ್ನು) ಸ್ವೇಚ್ಛೆಯಾಗಿ ಹೋಗಲು ಬಿಡು. Lay (our, etc.) heads together ಒಟ್ಟಿಗೆ ಸೇರಿ ಸಮಾಲೋಚಿಸು. Talk person's h. off ಮಾತನಾಡಿ (ಒಬ್ಬನಿಗೆ) ತಲೆ ಚಿಟ್ಟುಗಟ್ಟಿಸು, ಬೇಸರಿಕೆ ತರು. Beat person's h. off (ಒಬ್ಬನನ್ನು) ಪೂರ್ತಿಯಾಗಿ ಸೋಲಿಸಿಬಿಡು ; (ಒಬ್ಬನ) ತಲೆ ಮೆಟ್ಟಿ ನಿಲ್ಲು. Two heads are better than one ಒಬ್ಬನಿಗಿಂತ ಇಬ್ಬರ ಆಲೋಚನೆ ಮೇಲು. H. & front (ತಪ್ಪಿತ, ಮೊ. ಗಳ) ತಿರುಳು. (ಬಳ. ಮಾ.) ಮುಖಂಡ ; (ಸಾ., ಪುಂಡರ) ನಾಯಕ. **Headache** ತಲೆನೋವು. **Headachy** (ಗು.) ತಲೆನೋವಿನಿಂದ ನರಳುತ್ತಿರುವ ; ತಲೆನೋವು ಬರಿಸುವ. **Headband** ತಲೆಪಟ್ಟಿ. **Headborough** (ಚರಿತ್ರೆ) ಕೀಳು ದರ್ಜೆಯ ಪೊಲೀಸು ಪ್ಯಾದೆ. **H.-dress** ತಲೆಯುಡಿಗೆ (ಮು., ಹೆಂಗಸಿನ ಅಲಂಕಾರದ ತೊಡಿಗೆ). **Headfast** (ಹಡಗನ್ನು ಬಂದರಿನ ಕಟ್ಟೆಗೆ ಬಿಗಿಯುವ) ಹಡಗಿನ ಮೂತಿಯ ಹಗ್ಗ. **H.-gear** (ಪರಂಗಿ) ಟೋಪಿ ; ರುಮಾಲು ; ತಲೆಯುಡಿಗೆ. **Headhunter** ಜಯಸ್ಮಾರಕವಾಗಿ ತನ್ನ ಶತ್ರುಗಳ ತಲೆಬುರುಡೆಗಳನ್ನು ಕೂಡಹಾಕುವ ಕಾಡುಮನುಷ್ಯ. **Headland** ಭೂಶಿರ ; ಹೊಲದ ಕೊನೆಯಲ್ಲಿ ಉಳದೆ ಬಿಟ್ಟ ಭಾಗ. **Headlight** (ಹಡಗಿನ ಧ್ವಜಸ್ತಂಭದ) ಮೇಲ್ಗಡೆ, (ರೈಲ್ವೆಯೆಂಜಿನು, ಮೋಟಾರು, ಮೊ. ಗಳ) ಮುಂಭಾಗದಲ್ಲಿ, ಇಟ್ಟಿರುವ ಹೆಚ್ಚು ಪ್ರಕಾಶದ ದೀಪ ; ತಲೆ ದೀಪ. **H.-line** ಶಿರೋನಾಮವಿರುವ ಪುಟದ ಮೇಲ್ಪಂಕ್ತಿ ; ತಲೆ ಪಂಕ್ತಿ ; (ವರ್ತಮಾನ ಪತ್ರಿಕೆಯ) ಶಿರೋನಾಮ ಅಥವಾ ಉಪ ಶಿರೋನಾಮ ; ವಿಷಯ ನಿರೂಪಕ ಮೇಲ್ಪಂಕ್ತಿ. **Headman** ತಲೆಯಾಳು ; ಮುಖಂಡ ; ಹೆಗ್ಗಡೆ ; (ಕುಲದ) ಮುಖ್ಯಸ್ಥ. **H. master, mistress** (ಪಾಠಶಾಲೆಯ) ಮುಖ್ಯೋಪಾಧ್ಯಾಯ (ಯಿನಿ). **H.-money** (ಪ್ರತಿಯೊಬ್ಬನಿಗಾಗಿ, ಪ್ರತಿಯೊಬ್ಬನೂ ಕೊಟ್ಟ) ತಲೆ ತೆರಿಗೆ. **Heád-on** (ಗು.) ಗಾಡಿಗಳ ಮೂತಿಗಳು ಒಂದಕ್ಕೊಂದು ತಗುಲುವ (A head-on collision), ಅಥವಾ, ಎದುರುಬಂಡಿಗೆ ಅಥವಾ ನಿಲುವಸ್ತುವಿಗೆ ಡಿಕ್ಕಿಹೊಡೆಯುವ. **Heád-ón** (ಕ್ರಿ. ವಿ.) (ಒಂದು ಗೊತ್ತಾದ ವಸ್ತುವಿನ ಕಡೆಗೆ) ತಲೆ ನೇರವಾಗಿ ತಿರುಗಿ. **H.-phones** ಕೇಳುವವರು ಕಿವಿಗಳಿಗಿಟ್ಟುಕೊಳ್ಳಲಾಗುವ, ದೂರವಾಣಿಯ ಅಥವಾ ನಿಸ್ತಂತು ವಾರ್ತೆಯ ಗ್ರಾಹಕ. **H.-piece** ಸೀಸಕ. ಬುದ್ಧಿ ; ಮೇಧಾವಿ. ಪುಸ್ತಕದಲ್ಲಿ ಅಧ್ಯಾಯ, ಮೊ. ಗಳ ಮೇಲ್ಗಡೆ ಹಾಕುವ ಅಲಂಕಾರ ಚಿತ್ರ : ತಲೆ ಚಿತ್ರ. **Headquarters** (ಸೈನ್ಯ) ಮುಖ್ಯ ಸೇನಾಧಿಪತಿಯ ನಿವಾಸ ಸ್ಥಾನ ; (ಸಾಮಾನ್ಯಾರ್ಥದಲ್ಲಿ) ಸೇನಾಧಿಕಾರದ ಕೇಂದ್ರ ಸ್ಥಾನ ; ಕೇಂದ್ರ ಕಾರ್ಯ ಸ್ಥಾನ. **Headspring** ನದಿ, ಮೊ. ಗಳ ಮೂಲ, ಉತ್ಪತ್ತಿ ಸ್ಥಾನ (ರೂಪ. ಸಹ). **H.-stall** (ಕುದುರೆಯ ತಲೆಗೆ ತೊಡಿಸುವ) ಕಡಿವಾಣದ, ಲಗಾಮಿನ, ತಲೆಪಟ್ಟಿ. **Headstock** ಯಂತ್ರದಲ್ಲಿ ಸುತ್ತುವ ಭಾಗಗಳಿಗೆ ಆಸರೆ(ಯಾದ ಅಚ್ಚಿನ ಭಾಗ). **Headstone** ಗೋರಿಯ ಕಲ್ಲು. **H.-stone** ಅಸ್ತಿಭಾರದಲ್ಲಿ ಮುಖ್ಯವಾದ ಕಲ್ಲು (ರೂಪ. ಸಹ). **H.-voice** (ಹಾಡುಗಾರಿಕೆಯಲ್ಲಿ, ಮಾತನಾಡುವಿಕೆಯಲ್ಲಿ) ಉಚ್ಚ ಧ್ವನಿ ; ತಾರ ಸ್ವರ. **Headway** ಮುನ್ನಡೆ ; ಅಭಿವೃದ್ಧಿ ; ಪ್ರಗತಿ ; (ಹಡಗು) ಮುಂದುವರಿಯುವ ವೇಗ, ಗತಿ. (ವಾ. ಶಾ.) ಕಮಾನು, ಮೊ. ಗಳ ಎತ್ತರ. **H. water** (ಸಾ., ಬ. ವ. ದಲ್ಲಿ) ನದಿಯ ಮೂಲ, ಮೇಲ್ಭಾಗ. **H. wind** ಎದುರು ಗಾಳಿ. **H.-work** ಮಿದುಳು ಕೆಲಸ. (ವಾ. ಶಾ.) ಕಟ್ಟಡದ ಕಮಾನಿನ ಮುಡಿಗಲ್ಲಿನ ಅಲಂಕಾರ ಕೆಲಸ. (-) **headed** (ಗು.); **Heádless** (ಗು.) ; **Heádlong** (ಕ್ರಿ. ವಿ., ಗು.) (ಬೀಳುವುದು, ಮೊ. ಗಳಲ್ಲಿ) ತಲೆ ಮುಂದಾಗಿ ; ರಭಸದ(ದಿಂದ) ; ಬಹು ಜೋರಿನ ; ಬಹು ಜೋರಾಗಿ ; ದುಡುಮ್ಮನೆ ; ಮುಂದಾಲೋಚನೆಯಿಲ್ಲದ(ದೆ) ; ಅವಿಚಾರದ (ದಿಂದ). **Heádmost** — ಮೋ (ಮ)ಸ್ಟ್ (ಗು.) ಮೊತ್ತ ಮೊದಲಿನ ; ಅಗ್ರಸ್ಥ ; ತುತ್ತ ತುದಿಯ. **Heádsman** ಹೆಡ್ಸ್‌ಮನ್ (ನಾ.) ವಧಕಾರ ; ಶಿರಶ್ಛೇದಕ. ತಿಮಿಂಗಿಲ ಷಿಕಾರಿ ದೋಣಿಯ ಮುಖ್ಯಾಧಿಕಾರಿ. **Heádstrong** (ಗು.) ಅತಿ ಹಠಮಾರಿ(ಯಾದ). **Heádstrongness** (ನಾ.) ; **Heády** ಹೆಡಿ (ಗು.) (ವ್ಯಕ್ತಿ, ವಸ್ತು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ತನೆ, ಮೊ. ಗಳ ವಿಷಯದಲ್ಲಿ) ದುಡುಕಿನ ; ರಭಸದ ; ಬಲು ಜೋರಿನ; ತೀವ್ರ ಉದ್ರೇಕದ. (ಮದ್ಯ, ಮೊ. ಪು) ಅಮಲೇರಿಸುವ. **Heádily** (ಕ್ರಿ. ವಿ.) ; **Heádiness** (ನಾ.)

Head (ಕ್ರಿ.) ತಲೆ, —ಇಡು, ಮಾಡು, ಆಳವಡಿಸು ; (ಗಿಡ, ಮರ, ಮೊ. ಗಳ) ತಲೆ ಕತ್ತರಿಸಿಹಾಕು (= h. down); ತಲೆ ಕತ್ತರಿಸು ; ಶಿರಶ್ಛೇದ ಮಾಡು. ತಲೆ, ತುದಿ, — ಆಗು, ಆಗಿರು. (ಕಾಲ್ಚೆಂಡಾಟ) ಚೆಂಡನ್ನು ತಲೆಯಿಂದ ಹೊಡೆ. (ಅಧ್ಯಾಯ, ಪಟ್ಟಿ, ಮೊ. ಗಳ) ನೆತ್ತಿಯಲ್ಲಿ, ಮೊದಲಲ್ಲಿ, — ಹೆಸರು ಹಾಕು, ಇರು ; ಮೊದಲಲ್ಲಿರು. ಪಕ್ವಕ್ಕೆ ಬರು ; ತುದಿಗಟ್ಟಕ್ಕೆ ಬರು ; ವೃದ್ಧಿಯಾಗು. (ದಳ, ಮೊ. ಗಳ) ಅಗ್ರದಲ್ಲಿ, ನಾಯಕತ್ವದಲ್ಲಿ, — ಇರು, ನಿಲ್ಲು ; ಮುಂದಾಳಾಗು. ಮೀರು ; ತಲೆ ಮೆಟ್ಟು. ಎದುರಿಸು ; ಪ್ರತಿಭಟಿಸು. [H. back, off ಹಿಂದಕ್ಕೆ, ಪಕ್ಕಕ್ಕೆ, ತಿರುಗಿಸರಾಗುವಂತೆ (ಒಂದರ) ಮುಂದುವರಿದು ಹೋಗು]; (ಹೇಳಿದ ದಿಕ್ಕಿಗೆ) ಅಭಿಮುಖವಾಗು. (ಹಡಗು) (ಒಂದು ಸ್ಥಳ, ಸ್ಥಾನ) ಸೇರಲು ಹೋಗು, ಕಡೆಗೆ ಹೋಗು (*For* ಉಪ. ದೊಡನೆ). **Heáder** ಹೆಡರ್ (ನಾ.) (ಪೀಪಾಯಿ, ಮೊಳೆ, ಮೊ. ಗಳಿಗೆ) ತಲೆ, — ಇಡುವವನು, ಮಾಡುವವನು. (ಗೋಡೆಯ ಮುಖಕ್ಕೆ ಸಮಕೋನವಾಗುವಂತೆ ಅಡ್ಡವಾಗಿಟ್ಟ) ಇಟ್ಟಿಗೆ, ಕಲ್ಲು. ತಲೆ ಮುಂದಾಗಿ ಬಿದ್ದ ಮುಳುಗು. **Heáding** (ನಾ.) (ಕ್ರಿಯಾರ್ಥಗಳಲ್ಲಿ). (ಕಾಲ್ಚೆಂಡಾಟ) ಚೆಂಡನ್ನು ತಲೆಯಿಂದ ಹೊಡೆಯುವುದು. (ಪುಟ, ಮೊ. ಗಳ ನೆತ್ತಿಯಲ್ಲಿ) ಶಿರೋನಾಮ, ಮೊ. ಪು. (ಸುರಂಗಮಾರ್ಗವನ್ನು ಕೊರೆಯಲು ಪೂರ್ವ ಸಿದ್ಧತೆಯಾಗಿ ಹಾಕುವ) ಸಮತಲದ ದಾರಿ.

-head — ಹೆಡ್, **-hood** — ಹುಡ್ (ಉ. ಪ್ರ.) (ಭಾವ ನಾಮಗಳನ್ನು ಮಾಡುವಲ್ಲಿ) —ತೆ ; —ತ್ವ ; —ತನ ; —ಮೆ ; —ಸ್ಥಿತಿ ; —ದಶೆ (ಉದಾ., Godhead, - hood ; Maidenhead, - hood)

Heal ಹೀಲ್ (ಕ್ರಿ.) (ಒಬ್ಬನನ್ನು, ಗಾಯವನ್ನು) ವಾಸಿಮಾಡು, ಗುಣಮಾಡು (ರೂಪ. ಸಹ) ; (ರೋಗ) ವಾಸಿಯಾಗು, ಗುಣವಾಗು ; (ಗಾಯ) ಮಾಯಿ, ಆರು, ಆರಿಸು (ರೂಪ. ಸಹ). ಉಪಶಮನ, — ಆಗು, ಮಾಡು. **H.-all** ಸರ್ವರೋಗ ನಾಶಿನಿ (ಸಾ., ಕೆಲವು ಗಿಡ ಮೂಲಿಕೆಗಳ ಬಳಕೆಯ ಹೆಸರು). **Heáler** (ನಾ.) (Time is a great healer ಕಾಲವು ದೊಡ್ಡ ವೈದ್ಯ)

Health ಹೆಲ್ತ್ (ನಾ.) ದೇಹಾರೋಗ್ಯ ; ಸ್ವಸ್ಥತೆ (ರೂಪ. ಸಹ). ದೇಹ ಸ್ಥಿತಿ ; ಪ್ರಕೃತಿ [Good, bad, h. ಒಳ್ಳೆಯ, ಕೆಟ್ಟ, ದೇಹ ಸ್ಥಿತಿ. H.-officer, Officer of h. (ಆರೋಗ್ಯ ನಿಯಮಗಳು, ಮೊ. ವನ್ನು ಜಾರಿಗೆ ತರಲು ನೇಮಕನಾದ) ಆರೋಗ್ಯಾಧಿಕಾರಿ. Bill of h. (Bill[3] ನೋಡಿ)]. (ಒಬ್ಬನ ಗೌರವಕ್ಕಾಗಿ) ಆರೋಗ್ಯ ಭಾಗ್ಯವನ್ನು ಬಯಸಿ ಕುಡಿದ ಪಾನ ; ಸ್ವಸ್ತಿ ಪಾನ. (ಒಬ್ಬನಿಗೆ) ಆರೋಗ್ಯ ಭಾಗ್ಯವನ್ನು ಬಯಸುವುದು. **Healthful** (ಗು.) ಆರೋಗ್ಯ ಕೊಡುವ ; ಆರೋಗ್ಯಕರವಾದ. ನೈತಿಕ ಅಥವಾ ಪಾರಮಾರ್ಥಿಕ ಕ್ಷೇಮಕ್ಕೆ ನೆರವಾದ ; ಹಿತಕರ. **Heálthfully** (ಕ್ರಿ. ವಿ.) ; **Heálthfulness** (ನಾ.) ; **Heálthy** (ಗು.) (ಒಳ್ಳೆಯ) ಆರೋಗ್ಯವುಳ್ಳ (ರೂಪ. ಸಹ) ; ಒಳ್ಳೆಯ ಆರೋಗ್ಯಕ್ಕೆ ನೆರವಾಗುವ ; ಆರೋಗ್ಯಕರ. **Heálthily** (ಕ್ರಿ. ವಿ.) ; **Heálthiness** (ನಾ.)

Heap ಹೀಪ್ (ನಾ., ಕ್ರಿ. ಸಕ.) (ಒಂದರ ಮೇಲೊಂದು ಬಿದ್ದಿರುವ) ಗುಡ್ಡೆ, ಕುಪ್ಪೆ, ಒಟ್ಟಲು, ರಾಶಿ. (ಬಳ. ಮಾ.) ಹೆಚ್ಚು ಸಂಖ್ಯೆ [A h. of people (ಜನರ) ದೊಡ್ಡ ಗುಂಪು. Heaps of times ಅನೇಕಾನೇಕ ವೇಳೆ. He is heaps better (ಕ್ರಿ. ವಿ.) ಅವನು ಬಹು ಮಟ್ಟಿಗೆ ಮೇಲು. Struck all of a h. (ಬಳ. ಮಾ.) ನಿಶ್ಚೇತನವಾಗಿ ; ದಿಗ್ಭ್ರಮೆಗೊಂಡು ; ಬುದ್ಧಿಭ್ರಮಣೆಗೊಂಡು]. (ಕ್ರಿ.) (ವಸ್ತುಗಳನ್ನು) ಗುಡ್ಡೆ, ರಾಶಿ, — ಹಾಕು ; ಒಟ್ಟು (*Up, together*, ಮೊ. ಉಪ. ದೊಡನೆ). (ಬಂಡಿಗೆ ಸಾಮಾನು) ಹೇರು. (ಒಬ್ಬನಿಗೆ ಉಪಕಾರ) ಹೊರಿಸು (*With* ಉಪ. ದೊಡನೆ). (ನಿಂದೆ, ಅಪಮಾನ, ಮೊ. ವನ್ನು ಒಬ್ಬನಮೇಲೆ) ಹೇರು (*Upon* ಉಪ. ದೊಡನೆ)

Hear ಹಿಯರ್ (ಕ್ರಿ. ; ಭೂತ., ಭೂ. ಕೃ. Heard ಹರ್ಡ್) (ಕಿವಿಯಿಂದ) ಕೇಳು ; (ಕರ್ಮಣ್ಯರ್ಥದಲ್ಲಿ) (ಕಿವಿಗೆ) ಕೇಳಿಸು. ಕಿವಿಗೊಡು ; ಆಲಿಸು ; ರಾಲಿಸು (H. him out ಅವನು ಹೇಳುವುದನ್ನು ಪೂರ್ತಿ ಕೇಳಿಬಿಡು. H. a sermon ಪಾದ್ರಿಯ ಉಪದೇಶ ಭಾಷಣವನ್ನು ಕೇಳು). ಮೊಕದ್ದಮೆ, ಫಿರ್ಯಾದು, ಮೊ. ವನ್ನು ಕೇಳು, ವಿಚಾರಣೆ ಮಾಡು. (ಪ್ರಾರ್ಥನೆಯನ್ನು) ಸಲ್ಲಿಸು ; ಅನುಗ್ರಹಿಸು. ಅಂಗೀಕರಿಸು (He will not h. of it ಅವನು ಅದನ್ನು ಕಿವಿಯಮೇಲೆಯೇ ಹಾಕಿಕೊಳ್ಳುವುದಿಲ್ಲ. You will h. of this ಇದಕ್ಕಾಗಿ ನಿನಗೆ ತಕ್ಕ ಶಾಸ್ತಿ ಆಗುತ್ತದೆ). ತಿಳಿವಳಿಕೆಗೆ ಬರು (*That, of, about* ಪದದೊಡನೆ). H. from — ಇಂದ ಕಾಗದ, ವರ್ತಮಾನ, ಬರು. H. tell of (ಪ್ರಾಚೀ. ಪ್ರ.) ಎಂದು ಹೇಳುವುದನ್ನು ಕೇಳಿರು. H. ! H. ! (ಹುರಿದುಂಬಿಸುವ, ಪ್ರೋತ್ಸಾಹದ, ಉದ್ಗಾರ; ಅನೇಕ ವೇಳೆ, ವ್ಯಂಗ್ಯವಾಗಿ) ಕೇಳಿ(ರಿ) ! ಕೇಳಿ(ರಿ) ! **Heárable** (ಗು.) ; **Heárer** (ನಾ.) ; **Heáring** (ನಾ.) (ಕ್ರಿಯಾರ್ಥಗಳಲ್ಲಿ). ಕಿವಿಯಿಂದ ಕೇಳುವುದು (Hard of h. ಕಿವುಡು. Within, out of, h. ಕೇಳಿಸುವಷ್ಟು, ಕೇಳದಷ್ಟು, — ದೂರದಲ್ಲಿ. Give him a fair h. ಅವನು ಹೇಳುವುದನ್ನೆಲ್ಲ ನಿಷ್ಪಕ್ಷಪಾತವಾಗಿ ಕೇಳು). (ನ್ಯಾ. ಶಾ.) ಮೊಕದ್ದಮೆಯ ವಿಚಾರಣೆ. **Heárken, Hár-** ಹಾರ್ಕನ್ (ಕ್ರಿ. ಅಕ.) ಕಿವಿಗೊಡು, ಕೇಳು (*To* ಉಪ. ದೊಡನೆ). **Heársay** (ನಾ.) (ನಿಜವೆಂದು ತಿಳಿಯದ) ಕೇಳಿಕೆಯ ಮಾತು. ಗಾಳಿ ವರ್ತಮಾನ ; ಬೀದಿ ಸುದ್ದಿ. H. evidence (ಅವರಿವರ) ಕೇಳಿಕೆಯ ಸಾಕ್ಷಿ.

Hearse ಹರ್ಸ್ (ನಾ.) ಶ್ಮಶಾನ ಯಾತ್ರೆಯಲ್ಲಿ ಹೆಣದ ಪೆಟ್ಟಿಗೆಯನ್ನು ಹೊತ್ತುಕೊಂಡು ಹೋಗುವ ಬಂಡಿ, ರಥ ; ಶವದ ಬಂಡಿ, ರಥ, ಯಾನ. (ಹಿಂದೆ) ಪ್ರೇತ ವಸ್ತ್ರಕ್ಕೆ ಆಧಾರವಾದ ಚೌಕಟ್ಟು.

Heart ಹಾರ್ಟ್ (ನಾ.) (ಕುಗ್ಗಿ, ಶುದ್ಧ ರಕ್ತವನ್ನು ದೇಹಕ್ಕೆಲ್ಲ ಸಂತತವಾಗಿ ಸಾಗಿಸುವ, ಹಿಗ್ಗಿ, ಮಲಿನರಕ್ತವನ್ನು ಹಿಂದಕ್ಕೆ ಪಡೆಯುವ) ರಕ್ತ ಕೋಶ ; ಹೃದಯ (Right, left, h. ಹೃತ್ಕೋಶದ ಬಲ, ಎಡ, — ಪಾರ್ಶ್ವ. Smoker's h. ಚುಟ್ಟಾ ಸೇದುವುದರಿಂದುಂಟಾದ ಹೃದಯ ವ್ಯಾಧಿ). ಎದೆ ; ಮನಸ್ಸು ; ಆತ್ಮ ; ಅಂತರಂಗ [H.-to-h. talk ಮನಸ್ಸು ಬಿಚ್ಚಿ, ಮರೆಮಾಜದೆ, — ಆಡುವ ಮಾತು. After one's (own) h. ತನ್ನ ಅಭಿರಾಷೆಯಂತೆ, ಇಚ್ಛೆಯಂತೆ]. ಮನೋಭಾವಗಳ ನೆರೆ (ಮು., ಪ್ರೇಮದ ನೆರೆ) ; ಅಂತಃಕರಣ [Give, lose, one's h. to ಮನವನ್ನು ಸೂರೆಕೊಡು, ಅರ್ಪಿಸು ; ಮನ ಸೋಲು ; ಅನುರಕ್ತನಾಗು. Win the h. of (ಒಬ್ಬನನ್ನು) ಒಲಿಸಿಕೊ ; (ಒಬ್ಬನ) ಅನುರಾಗ, ಪ್ರೇಮ, —ಸಂಪಾದಿಸು. Union of hearts ಮನಸ್ಸು ಮನಸ್ಸು ಒಂದಾಗುವುದು (ನಿರ್ಬಂಧದಿಂದಲ್ಲ) ; ಅಂತರಂಗ ಮೈತ್ರಿ, ಪ್ರೇಮ ; ಪರಸ್ಪರ ಒಲುಮೆ]. ಭಾವಜ್ಞತೆ; ಅನುಕಂಪ [He has no h. ಅವನಿಗೆ ಹೃದಯವೇ (ಕರುಣೆಯೇ) ಇಲ್ಲ]. ಎದೆಗಾರಿಕೆ ; ಧೈರ್ಯ ; ಗುಂಡಿಗೆ (Pluck up, or take, lose, h. ಧೈರ್ಯ ತೆಗೆದುಕೊ, — ಕೆಡು). [(ವ್ಯಕ್ತಿಯ ವಿಷಯದಲ್ಲಿ) ಪ್ರೇಮ ಸೂಚಕವಾಗಿ : Dear, Sweet, h. ಪ್ರಾಣವೇ ! ಪ್ರಾಣೇಶ್ವರೀ ! ಹೃದಯೇಶ್ವರ ! My hearts (ನಾವೆ) ಕೆಚ್ಚೆದೆಯವರು]. (ಮು., ಮರದ) ಗರ್ಭ ; ಚೇಗು [H. of oak (ರೂಪ.) ಕೆಚ್ಚೆದೆಯವನು]. ಜೀವಾಳ ; ತಿರುಳು ; ಸಾರವತ್ತಾದ ಭಾಗ (The h. of the matter ವಿಷಯದ ಸಾರ). (ನೆಲದ ವಿಷಯದಲ್ಲಿ) ಫಲವತ್ತು (Out of h. ಫಲವತ್ತಲ್ಲದ). ಹೃದಯಾಕಾರದ ವಸ್ತು ; (ಇಸ್ಪೀಟು, ಬ. ವ. ದಲ್ಲಿ) ಆಠೀನ್ (ರಂಗು). At h. ಅಂತರಂಗದಲ್ಲಿ ; ನಿಜವಾಗಿ ; ವಾಸ್ತವವಾಗಿ. By h. ಬಾಯಿಪಾಠವಾಗಿ ; ಕಂಠಪಾಠವಾಗಿ (Learn, say, by h.). From one's h. ಹೃತ್ಪೂರ್ವಕವಾಗಿ ; ನಿರ್ವಂಚನೆಯಾಗಿ. In one's h. ಗುಟ್ಟಾಗಿ. In h. ಉಲ್ಲಾಸವಾಗಿ ; ಗೆಲುವಿನಿಂದ. Near(est) one's h. (ಅತ್ಯಂತ) ಪ್ರೀತಿಪಾತ್ರನಾಗಿ ; ಬಹಳ ಬೇಕಾದವನಾಗಿ. Out of h. ಉತ್ಸಾಹವಿಲ್ಲದೆ ; ಮನಸ್ಸಿಲ್ಲದೆ. With all one's h. ಮನಃಪೂರ್ತಿಯಾಗಿ ; ನಿಷ್ಕಾಪಟ್ಯದಿಂದ ; ಹೃತ್ಪೂರ್ವಕವಾಗಿ ; ಅತ್ಯಂತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶ್ವಾಸದಿಂದ. Find in one's h. (ಏನನ್ನಾದರೂ ಮಾಡುವುದಕ್ಕೆ) ಮನಸ್ಸಿರು, ಮನಸ್ಸಿಗೆ ಬರು, ಮನಸ್ಸು ಒಪ್ಪು (*To* ಉಪ. ದೊಡನೆ ; ಮು., ನಿಷೇಧಾರ್ಥದಲ್ಲಿ). Have thing at h. —ಲ್ಲಿ ತೀವ್ರಾಸಕ್ತಿ ಇರು. Lay thing to h. ಮನಸ್ಸಿಗೆ ತೆಗೆದುಕೊ ; ಮನಸ್ಸಿಟ್ಟು ಪರ್ಯಾಲೋಚಿಸು. Searchings of h. ಸಂಶಯಗಳು ; ಶಂಕೆಗಳು ; ಆತ್ಮ ಪರೀಕ್ಷೆ. Take (thing) to h. ಮನಸ್ಸಿಗೆ ಹಚ್ಚಿಕೊ; ಅದೇ ಚಿಂತೆಯಲ್ಲಿರು. Break person's h. ಎದೆಯೊಡೆ ; ದುಃಖದಲ್ಲಿ ಮುಳುಗಿಸು. Cry one's h. out ಎದೆಯೊಡೆಯುವಂತೆ ವಿಪರೀತವಾಗಿ ಅಳು. Eat one's h. out (ಚಿಂತೆ, ತೊಂದರೆ, ವೊ. ಗಳಿಂದ) ಕೃಶವಾಗಿ ಹೋಗು; ಬಡವಾಗು. Have the h. (ಮು., ನಿಷೇಧಾರ್ಥದಲ್ಲಿ) (ಮಾಡಲು) ತಕ್ಕಷ್ಟು ಕಲ್ಲೆದೆಯುಳ್ಳವನಾಗಿರು, ಮನಸ್ಸು ಬರು. H. & hand ಉತ್ಸಾಹದಿಂದ. In one's h. of hearts ಹೃದಯಾಂತರಾಳದಲ್ಲಿ. H. & soul ಸರ್ವ ಶಕ್ತಿಯಿಂದ ; ಶಕ್ತಿ ಮೀರಿ. Have one's h. in one's mouth ಬಹಳ ಗಾಬರಿ ಬೀಳು ; ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡಿರು ; ಎದೆ ಹಾರು. His h. is in the right place ಅವನ ಮನಸ್ಸು ಸರಿಯಾದ ಕಡೆ ಇದೆ. Take h. of grace ಧೈರ್ಯ ತಂದುಕೊ. Wear one's h. upon one's sleeve ಗುಟ್ಟಿಲ್ಲದವನಾಗಿರು ; ಮುಚ್ಚುಮರೆಯಿಲ್ಲದಿರು ; (ತನ್ನ) ಅಂತರಂಗವನ್ನು ಬಹಿರಂಗ ಪಡಿಸು. It does my h. good ಅದು (ನನ್ನ) ಮನಸ್ಸನ್ನು ಹರ್ಷಗೊಳಿಸುತ್ತದೆ. **H.-ache** ಎದೆಗುದಿ ; ಮನೋವ್ಯಥೆ. **H.-beat** ಎದೆಯ ತುಡಿತ; ಹೃದಯಸ್ಪಂದ ; (ರೂಪ.) ಭಾವೋದ್ರೇಕ. **H.('s)-blood** ಎದೆಯ ರಕ್ತ ; ಜೀವ ; ಪ್ರಾಣ. **H.-break** (ಎದೆಯೊಡೆಯುವ) ಅತಿ ದುಃಖ. **H.-breaking** (ದುಃಖ) ಎದೆಯೊಡೆಯುವ ; ಅತಿ ದುಃಖಕರ. **H.-broken** (ದುಃಖದಿಂದ) ಎದೆಯೊಡೆದ. **Heart-burn** ಎದೆಯ ತಳಭಾಗದಲ್ಲಾಗುವ ಉರಿ; ಎದೆಯುರಿ. **H.-burning** ಹೊಟ್ಟೆಯುರಿ, — ಕಿಚ್ಚು ; ದ್ವೇಷ ; ಹಗೆ. **H.-disease** ಹೃದಯ ವ್ಯಾಧಿ. **H.-felt** (ಭಾವ, ವೊ. ವು) ಹೃತ್ಪೂರ್ವಕ (ವಾದ). **H.-rending** ಎದೆ ಬಿರಿಯುವ ; ಮನೋವೇಧಕ. **Heartsease** ಒಂದು ಜಾತಿಯ ಹೂವಿನ ಗಿಡ. **H.-sick** ಕುಗ್ಗಿದ ಮನಸ್ಸಿನ ; ನಿರುತ್ಸಾಹಿ ; ವಿಷಣ್ಣ. **H.-sore** (ಗು., ನಾ.) (ದುಃಖದಿಂದ) ಎದೆನೊಂದ ; ಮನೋವ್ಯಥೆ. **H.-strings** ಹೃದಯ (ತಂತು) (ರೂಪ.) ; ಬಹು ಗಾಢವಾದ ಪ್ರೇಮ. **H.-whole** ಉತ್ಸಾಹ ಕುಗ್ಗದ; ಧೈರ್ಯಗುಂದದ. ಅನುರಕ್ತನಲ್ಲದ; ನಿಷ್ಕಪಟ ; ಹೃತ್ಪೂರ್ವಕ. **H.-wood** ಚೇಗು. (-) **hearted** (ಗು.) ; **Heárten** ಹಾರ್ಟ್‌ನ್ (ಕ್ರಿ.) ಹುರಿದುಂಬಿಸು ; ಉತ್ಸಾಹಗೊಳಿಸು (ಸಾ., *up*, *on* ಉಪ. ದೊಡನೆ). ಧೈರ್ಯ ತಂದುಕೊ (*Up* ಉಪ. ದೊಡನೆ). **Heártily** (ಕ್ರಿ. ವಿ.) ಹೃತ್ಪೂರ್ವಕವಾಗಿ ; ಮನಃಪೂರ್ತಿಯಾಗಿ ; ಧೈರ್ಯವಾಗಿ. ರುಚಿಯಿಂದ. ಪೂರ್ತಿಯಾಗಿ ; ಮನಸಾರೆ ; ಬಹು (H. sick of it ಅದರ ವಿಷಯದಲ್ಲಿ ಬಹಳ ಬೇಸರ ಹಿಡಿದು). **Heártless** (ಗು.) ಮನಸ್ಸು ಕರಗದ ; ಮರುಕವಿಲ್ಲದ; ನಿರ್ದಯ; ಕ್ರೂರ. **Heártlessly** (ಕ್ರಿ. ವಿ.) ; **Heártlessness** (ನಾ.) ; **Heárty** (ಗು., ನಾ.) ಆದರ ಪೂರ್ವಕ ; ಅಂತಃಕರಣ ಪೂರ್ವಕ ; ಸೌಹಾರ್ದದ. (ಭಾವಗಳು) ನಿಷ್ಕಪಟ ; ಸರಳ ; ಹುರುಪಿನ ; ಉತ್ಸಾಹವುಳ್ಳ ; ದೃಢ. (ಊಟ) ಪುಷ್ಕಳ ; ಸಮೃದ್ಧ. (ನಾ.) My hearties (ನಾವಿಕರನ್ನು ಸಂಬೋಧಿಸಿ) ನನ್ನ ಗೆಳೆಯರೇ ! ಮಿತ್ರರೇ ! **Heártiness** (ನಾ.)

Hearth ಹಾರ್ತ್ (ನಾ.) ಬೆಂಕಿಗೂಡಿನ ನೆಲ ; ಮನೆಯಲ್ಲಿಯ ಬೆಂಕಿ ಗೂಡು ; ಮನೆ. H. & home ಮನೆ ಬಾಗಿಲು. **H.-rug** ಒಲೆಯ ಮುಂದಿನ ಕಾಲೊರಸು. **Hearthstone** ಒಲೆಯ ಚಪ್ಪಡಿ. ಬೆಂಕಿ ಗೂಡು, ಒಲೆ, ವೊ. ವನ್ನು ಬಿಳುಪಾಗಿಸಲು ಉಪಯೋಗಿಸುವ ಒಂದು ಬಗೆಯ ಮೆತುಗಲ್ಲು.

Heártily, Heártless, Heárty. **Heart** ನೋಡಿ.

Heat ಹೀಟ್ (ನಾ.) ಕಾವು ; ಬಿಸುಪು ; ಉಷ್ಣ ; ತಾಪ ; ಕಾವಿನ ಅರಿವು [Red, white, h. (ಲೋಹ, ವೊ. ಗಳ ವಿಷಯದಲ್ಲಿ) ಕೆಂಗಾವು, ಬಿಳ್ಗಾವು]. (ಭೌ. ವಿ.) ವಸ್ತುಗಳಲ್ಲಿರುವ ಅಗೋಚರವಾದ ಅಣುಗಳ ಚಲನಾತ್ಮಕವಾದ ಶಕ್ತಿ, ಅಥವಾ ಆ ಅಣುಗಳ ಸ್ಥಾನದ, ಸ್ಥಿತಿಯ, ಪ್ರಭಾವದ, — ಶಕ್ತಿ (ಈ ಶಕ್ತಿಯು ವಸ್ತುಗಳಲ್ಲಿ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಾಗಣೆಯಿಂದ, ಅಥವಾ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಿಕಿರಣದಿಂದ, ಹರಿಯುವುದು. ಹಿಂದಕ್ಕೆ ಈ ಶಕ್ತಿಯನ್ನು ಸ್ಥಿತಿಸ್ಥಾಪಕಗುಣವುಳ್ಳ ಪ್ರವಾಹಿಪದಾರ್ಥವೆಂದು ಊಹಿಸಿದ್ದರು). [Latent h. ಒಂದು ಗ್ರಾಮ್ ತೂಕದ ವಸ್ತು, (ಶಾಖ ವ್ಯತ್ಯಾಸವಾಗದಂತೆ) ಸ್ಥಿತ್ಯಂತರ ಹೊಂದುವುದಕ್ಕಾಗಿ (ಎಂದರೆ, ಘನ ರೂಪದಿಂದ ದ್ರವ ರೂಪಕ್ಕಾಗಲಿ ಅನಿಲರೂಪಕ್ಕಾಗಲಿ, ಅಥವಾ ದ್ರವರೂಪದಿಂದ ಅನಿಲ ರೂಪಕ್ಕಾಗಲಿ, ಮಾರ್ಪಡಿಸಲು) ಬೇಕಾಗುವ ಉಷ್ಣದ ಮೊತ್ತ ; ಸುಪ್ತೋಷ್ಣ. Specific h. ಒಂದು ವಸ್ತುವನ್ನು ಒಂದು ಡಿಗ್ರಿ ಸೆಂಟಿಗ್ರೇಡಿನಷ್ಟು ಶಾಖವೇರಿಸುವುದಕ್ಕೆ ಬೇಕಾದ ಉಷ್ಣದ ಮೊತ್ತವನ್ನು, ಆ ವಸ್ತುವಿನಷ್ಟೇ ತೂಕದ ನೀರನ್ನು ಅಷ್ಟೇ ಕಾಯಿಸುವುದಕ್ಕೆ ಬೇಕಾದ ಉಷ್ಣದ ಮೊತ್ತದೊಡನೆ ಹೋಲಿಸಿ ಪಡೆದ ಪ್ರಮಾಣ : ವಿಶಿಷ್ಟೋಷ್ಣ]. ಸೆಕೆ ; ಸೆಕೆಯ ವಾಯು ಸ್ಥಿತಿ. ಶರೀರದ ಉಷ್ಣಸ್ಥಿತಿ. ಕಾರ. (Prickly h. ಉಷ್ಣದೇಶಗಳಲ್ಲಿ ಸಾಮಾನ್ಯವಾದ ಒಂದು ಚರ್ಮರೋಗ ; ಬೆವರುಸಾಲೆ). ಪಂದ್ಯದ ಒಂದು ಸೂಳು, ಬಾರಿ [At a h. ಒಂದು ಬಾರಿಯಲ್ಲಿ. (Trial) heats (ಕಡೆಯ ಪಂದ್ಯದ ಸ್ಪರ್ಧಿಗಳನ್ನು ಗೊತ್ತುಮಾಡುವುದಕ್ಕಾಗಿ ನಡಸುವ) ಪೂರ್ವಭಾವಿ ಪಂದ್ಯಗಳು : ಆಯ್ಕೆ ಪಂದ್ಯಗಳು. Final h. ಕಡೆಯ ಪಂದ್ಯ ; ತೀರ್ಮಾನ ಪಂದ್ಯ]. ಬಿಸುಪು ; ಭಾವೋದ್ರೇಕ ; ಕೋಪ. (ವಾದ, ವೊ. ಗಳಲ್ಲಿ) ಉದ್ರೇಕ. (ಬೆದೆಗಾಲದಲ್ಲಿ ಮೃಗಗಳ) ಬೆದೆ ; ಕಾಮೋದ್ರೇಕ [On, in, at, h. (ಹೆಣ್ಣುಪ್ರಾಣಿಗಳ ವಿಷಯದಲ್ಲಿ) ಬೆದೆ ಹತ್ತಿ]. **H.-spot** ಚರ್ಮದಮೇಲಿನ ಕಂದು ಮಚ್ಚೆ ; ಚರ್ಮದಲ್ಲಿ ಶಾಖ ತಿಳಿಯಲಾಗುವ ಸ್ಥಳ ; ಉಷ್ಣಸ್ಥಳ. **H.-wave** (ವಿಕಿರಣವಾದ) ಉಷ್ಣದ ತರಂಗ ; ಕಾವಿನ ಅಲೆ ; (ಸ್ಥಳದಿಂದ ಸ್ಥಳಕ್ಕೆ ಪ್ರವಹಿಸುತ್ತದೆಂದು ಎಣಿಸುವ) ವಾಯುಮಂಡಲದಲ್ಲಿಯ ಅಧಿಕ ಉಷ್ಣವೃದ್ಧಿ.

Heat (ಕ್ರಿ.) ಬಿಸಿ ಮಾಡು ; ಕಾಯಿಸು. (ರಕ್ತ, ವೊ. ಗಳಲ್ಲಿ) ಉಷ್ಣ ಹೆಚ್ಚಿಸು ; ಉಷ್ಣ ಮಾಡು. ಉದ್ರೇಕಿಸು ; ಸಿಟ್ಟೆಬ್ಬಿಸು. ಬಿಸಿಯೇರು ; ಕಾವೇರು (ರೂಪ. ಸಹ). **Heátedly** (ಕ್ರಿ. ವಿ.) ಉದ್ರೇಕದಿಂದ. **Heáter** (ನಾ.) ಕಾಯಿಸುವವನು ; —ವದು ; ತಾಪಕ ; ಕಾಯಿಸುವ ಸಲಕರಣೆ, ಪಾತ್ರೆ.

Heath ಹೀತ್ (ನಾ.) (ಮು., ಕುರುಚಲು ಬೆಳೆದಿರುವ) ಸಮನಾದ ಬಂಜರು ಭೂಮಿ. (ಅಲ್ಲಿ ಬೆಳೆದಿರುವ) ಕುರುಚಲು ಗಿಡ(ದ ಹೆಸರು). **H.-bell** ಕುರುಚಲು ಗಿಡದ ಗಂಟೆಯಾಕಾರದ ಹೂವು. **Heáthy** (ಗು.)

Heáthen ಹೀ(ದೆ)ದ್‌ನ್ (ಗು., ನಾ.) ಕ್ರೈಸ್ತ, ಯೆಹೂದ್ಯ ಅಥವಾ ಮಹಮ್ಮದೀಯ, —ಅಲ್ಲದ(ವನು) ; ವಿಧರ್ಮಿ [(ಸಾಮೂಹಿಕವಾಗಿ, ಬ. ವ. ದಲ್ಲಿ) The h.]. ಅಸಂಸ್ಕೃತ. The h. Chinee ಚೀನಾ ದೇಶಸ್ಥ. **Heáthendom** (ನಾ.) 'ಹೀದನ್' ಪ್ರಪಂಚ. **Heáthenism** (ನಾ.) 'ಹೀದನ್' ನಂಬಿಕೆಗಳು, ಮತ (ಕ್ರೈಸ್ತರಲ್ಲವೆಂಬ ದೃಷ್ಟಿಯಿಂದ). ಅಸಂಸ್ಕೃತ ಸ್ಥಿತಿ ; ಅನಾಗರಿಕತೆ. **Heáthenry** (ನಾ.) 'ಹೀದನ್' ನಂಬಿಕೆ, ಆಚಾರ, ಲಕ್ಷಣ. **Heáthenish** (ಗು.) ; **Heáthenishly** (ಕ್ರಿ. ವಿ.) ; **Heáthenishness** (ನಾ.) ; **Heáthenize** (ಕ್ರಿ.)

Heáther ಹೆದರ್ (ನಾ.) (ಬಂಜರು ಭೂಮಿಯಲ್ಲಿ ಬೆಳೆಯುವ) ಬಗೆ ಬಗೆಯ ಕುರುಚಲು ಗಿಡ. H.-bell = Heath-bell. H. mixture (ಹೆದರ್ ಹೋಲಿಕೆಯ ಊಹೆಯಿಂದ) ಒಂದು ಬಗೆಯ ಮಿಶ್ರವರ್ಣಗಳ ಬಟ್ಟೆ. **Heáthery** (ಗು.)

Heave ಹೀವ್ (ಕ್ರಿ. ; ಭೂತ., ಭೂ. ಕೃ. Heaved or Hove ; ನಾ.) (ಭಾರ ವಸ್ತುವನ್ನು) ಎತ್ತು. (ಭೂ. ವಿ.) (ಎಳೆಯ ಅಥವಾ ಸ್ತರದ ವಿಷಯದಲ್ಲಿ) (ಮತ್ತೊಂದರ) ಸ್ಥಳವನ್ನಾಕ್ರಮಿಸು. (ಮುಲುಕು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಟ್ಟುಸಿರು, ಮೊ. ವನ್ನು) ಕಷ್ಟಪಟ್ಟು ಹೊರಸೂಸು, ಬಿಡು. (ನಾವೆ ಮತ್ತು ಬಳ. ಮಾ.) ಎಸೆ; ಎತ್ತಿ ಒಗೆ. (ನಾವೆ) ಹಗ್ಗದಿಂದ (ಮೇಲಕ್ಕೆ) ಎಳೆ, ಎತ್ತು. ಉಕ್ಕೇರು; ಉಬ್ಬು. (ಅಲೆಗಳಂತೆ) ಪರ್ಯಾಯ ಕ್ರಮದಲ್ಲಿ ಏಳುತ್ತ ಬೀಳುತ್ತ ಹೋಗು. ಏದು. ಓಕರಿಸು. (ಹಗ್ಗ, ಮೊ. ವನ್ನು) ಜಗ್ಗಿ ಎಳೆ; ತುಯ್ಯು (*At* ಉಪ. ಮೊಡನೆ). [H. down (ಹಡಗನ್ನು ಚೊಕ್ಕಟ ಮಾಡುವುದು, ಮೊ. ಕ್ಕಾಗಿ) ಒಂದು ಪಕ್ಕಕ್ಕೆ ಒಲಿಸು; ಒಂದು ಪಕ್ಕದಮೇಲೆ ಮಲಗಿಸು, ತಿರುಗಿಸು. H. to (ನಡೆಯುತ್ತಿರುವ ಹಡಗನ್ನು) ನಿಲ್ಲಿಸು. H. in sight ದೃಷ್ಟಿಗೆ ಬರು; ಗೋಚರವಾಗು; ಕಾಣು. H. ho (ನಾವಿಕರು ಲಂಗರನ್ನು ಮೇಲಕ್ಕೆತ್ತುವಾಗ ಕೂಗುವ) 'ಹೀವ್ ಹೋ!' ಎಂಬ ಕೂಗು]. (ನಾ.) (ಕ್ರಿಯಾರ್ಥಗಳಲ್ಲ). [H. of the sea (ಹಡಗಿನ ಗತಿಯಮೇಲೆ) ಸಮುದ್ರದ ಉಬ್ಬರದಿಂದ ಬೀಳುವ ಒತ್ತರ, ಬಲ; ಕಡಲ ನೂಕು]. (ಭೂ. ವಿ.) (ಎಳೆಯ, ಸ್ತರದ) ಸಮತಲದ ಸ್ಥಾನಚ್ಯುತಿ. (ಬ. ವ. ದಲ್ಲಿ) ಕುದುರೆಗಳಿಗೆ ನಿಶ್ಶಕ್ತಿಯುಂಟುಮಾಡುವ ಒಂದು ರೋಗ.

Heáven ಹೆವ್‌ನ್ (ನಾ.) ಆಕಾಶ; ಅಂತರಿಕ್ಷ (ಸಾ., ಗದ್ಯದಲ್ಲಿ ಈಗ ಬ. ವ.); ಬಾನು; ಮೋಡಗಳು ತೇಲಾಡುವ, ಗಾಳಿ ಬೀಸುವ, ಪಕ್ಷಿಗಳು ಹಾರಾಡುವ, ವಾಯುಮಂಡಲ ಪ್ರದೇಶ. (ಪಾಶ್ಚಾತ್ಯ ಪ್ರಾಚೀನ ಖ. ವಿ.) ಪ್ರತಿ ಆಕಾಶಕಾಯವನ್ನು ಆವರಿಸಿ ಅದರೊಡನೆ ಸುತ್ತುತ್ತಿರುವುದಾಗಿ ಊಹಿಸಿದ್ದ ಗೋಳ. ದೇವರ ಮತ್ತು ಅವನ ಪರಿವಾರ ದೇವತೆಗಳ ವಾಸಸ್ಥಾನ: ದೇವ ಲೋಕ; ಸ್ವರ್ಗ; ಬರ್ದಿಲ (ಗ್ರಾಂ.) (ಸಾ., ಆಕಾಶದಿಂದಾಚೆಗೆ ಇರುವುದೆಂದು ಪ್ರತೀತಿ) [Seventh h., H. of heavens (ಯೆಹೂದ್ಯರು ನಂಬಿರುವ) ಏಳು ಊರ್ಧ್ವ ಲೋಕಗಳಲ್ಲಿ ಎಲ್ಲಕ್ಕಿಂತ ಮೇಲಿರುವ ದೇವರ ವಾಸಸ್ಥಾನವಾದ ದೇವ ಲೋಕ]. ದೇವರು; ಪರ ದೈವ; ಪರಮೇಶ್ವರ [It is H.'s will ಅದು ದೈವೇಚ್ಛೆ. By h! Good heavens! (ಒತ್ತಿ ಹೇಳುವಲ್ಲಿ, ಭಾವ ಸೂಚನೆಯಲ್ಲಿ) ಓ ದೇವರೇ!]. ದಿವ್ಯಾನಂದ (ಸ್ಥಳ). **H.-born** ದೇವಾಂಶ ಸಂಭೂತ; ದಿವ್ಯ. **Heávenly** (ಗು.) ದೇವ ಲೋಕದ; ದಿವ್ಯ; ಸ್ವರ್ಗೀಯ (The H. City ಸ್ವರ್ಗ ಲೋಕ). ಬಾನಿನ; ಆಕಾಶದ [H. bodies ಗ್ರಹ, ನಕ್ಷತ್ರ, ಮೊ. ಆಕಾಶಸ್ಥ ಕಾಯಗಳು. The H. Twins ಮಿಥುನ (ರಾಶಿ)]. ಅತಿಮಾನುಷ ಶ್ರೇಷ್ಠತೆಯ; ಅತ್ಯುತ್ತಮ; ಸ್ವರ್ಗೀಯ [What h. figs! (ಬಳ. ಮಾ.) ಎನು ದಿವ್ಯವಾದ ಅಂಜೂರ(ದ ಹಣ್ಣುಗಳು)!]. **H.-minded** ಪಾರಮಾರ್ಥಿಕ (ಬುದ್ಧಿಯುಳ್ಳ); ಧರ್ಮ ನಿಷ್ಠ; ಭಗವದ್ಭಕ್ತಿಯುಳ್ಳ. **Heávenliness** (ನಾ.); **Heávenward** (ಗು.); **Heávenward(s)** (ಕ್ರಿ. ವಿ.)

Heáviside layer ಹೆವಿಸೈಡ್ ಲೇಯರ್ (ನಾ.) ನಿಸ್ತಂತು ವಾರ್ತಾ ತರಂಗಗಳನ್ನು ಹಿಂದಕ್ಕೆ ಪ್ರತಿಫಲಿಸಿ ಭೂಮಿಯ ಬಾಹ್ಯ ರೇಖೆಯನ್ನನುಸರಿಸಿ ಹೋಗುವಂತೆ ಮಾಡುವ ವಾಯುಮಂಡಲದ ಪದರ. ನಿಸ್ತಂತು ವಾರ್ತಾ ತರಂಗಗಳನ್ನು ಪ್ರಸರಿಸಲು ಅನುಕೂಲವಾದ, ಭೂಮಟ್ಟದಿಂದ ೭೫ ಮೈಲಿಗಳ ಎತ್ತರದ ಮೇಲಿರುವ, ವಾಯು ಪದರ. (Oliver Heaviside ಎಂಬ ಇಂಗ್ಲಿಷ್ ಭೌತ ವಿಜ್ಞಾನಿಯ ಹೆಸರಿನಿಂದ)

Heávy ಹೆವಿ (ಗು., ನಾ., ಕ್ರಿ. ವಿ.) ಹೆಚ್ಚು ತೂಕದ; ಭಾರವಾದ; ಹೆಚ್ಚು ವಿಶಿಷ್ಟ ಗುರುತ್ವವುಳ್ಳ; ಭಾರಿ [A h. crop ತುಂಬು ಬೆಳೆ. H. traffic, rain ಭಾರಿ (ಜನ, ವಾಹನ) ಸಂಚಾರ, ಭಾರಿ ಮಳೆ]. — ಇಂದ ತುಂಬಿದ (*With* ಉಪ. ಮೊಡನೆ). (ಫಿರಂಗಿ, ಮೊ. ವು) ಭಾರಿಯಾದ [H. guns, metal, artillery ಭಾರಿ ಫಿರಂಗಿಗಳು. H. metal (ರೂಪ.) ಭಯಂಕರ ಪ್ರತಿಕಕ್ಷಿ(ಗಳು)]. ಹೊರೆಯಾದ; ದುರ್ಭರ. (ಸೈನ್ಯ) ಭಾರಿ ಬಂದೂಕುಗಳನ್ನು ಹೊತ್ತಿರುವ. ಬಲವಾದ; ಬಿರುಸಾದ (H. storm, sea ಭಾರಿ ಬಿರುಗಾಳಿ, ಚಂಡ ಮಾರುತ; ಬಿರುಗಡಲು). (ನೆಲ) ಮಣ್ಣು ಅಂಟಿಕೊಳ್ಳುವ, ಪ್ರಯಾಣಕ್ಕೆ ಕಷ್ಟವಾದ. (ರೊಟ್ಟಿ, ಮೊ. ವು) ಉಬ್ಬಿಕೊಳ್ಳದ್ದರಿಂದ ದಟ್ಟವಾಗಿರುವ. (ಆಹಾರ) ಸುಲಭವಾಗಿ ಜೀರ್ಣವಾಗದ; ಅರಗದ. [H. in or on hand (ಕುದುರೆ) ಕಡಿವಾಣದಮೇಲೆ ಜೋತುಬಿದ್ದ; (ರೂಪ.) ಜಡ; ಉಲ್ಲಾಸಗೊಳಿಸಲಾಗದ]. (ಆಕಾಶ) (ಮೋಡ) ಕವಿದ; ಮಬ್ಬು ಮುಸುಕಿದ. (ರೂಪದಲ್ಲಿ, ಕಾರ್ಯದಲ್ಲಿ) ಒಡ್ಡೊಡ್ಡಾದ; ನಾಜೂಕಿಲ್ಲದ. (ಮನುಷ್ಯ) ಮಂದ ಬುದ್ಧಿಯ; ಜಡ. (ಎತ್ತಿಡಲಾಗದಂತೆ) ಬಲು ಗಾತ್ರವಾದ, ಭಾರವಾದ, ಸ್ಥೂಲ. (ಕಲಾ ಕೃತಿ, ಸಾಹಿತ್ಯ ಕೃತಿ) ಕಳೆ ಕಟ್ಟದ; ನೀರಸ; ಬೇಸರ ಹಿಡಿಸುವ; ಗಡುಸಾದ. (ನಾಟಕ) ನಿರುತ್ಸಾಹದ; ವಿಷಣ್ಣ; ವಿಷಾದಕರ. ಕ್ರೂರ; ಪೀಡಕ (H. fate ಕ್ರೂರ ವಿಧಿ). ದುಃಖಕರ (H. news ದುಃಖದ ವರ್ತಮಾನ). ವಿಷಣ್ಣ; ನಿರುತ್ಸಾಹಿ; ಗೋಳು ಕರೆವ; ತೂಕಡಿಸುವ. [It lies h. ಅದು ಭಾರವಾಗಿ ಕುಳಿತಿದೆ. ಅದು ಹೊರೆಯಾಗಿದೆ. Time hangs h. ಹೊತ್ತು ಹೋಗುವುದಿಲ್ಲ. (ನಾ.; ಬ. ವ. ದಲ್ಲಿ) The Heavies = Dragoon Guards; ಭಾರಿ ಫಿರಂಗಿ (ದಳ)]. (ಕ್ರಿ. ವಿ.) = Heavily (ಈಗ ಮು., ಸಮಾಸಗಳಲ್ಲಿ: ಉದಾ., H.-laden ಭಾರ ಹೇರಿದ). **H.-armed** ಭಾರವಾದ ಶಸ್ತ್ರ, ರಕ್ಷಾ ಕವಚ, — ತೊಟ್ಟಿರುವ. **H.-hearted** ದುಃಖ ಭಾರದ; ವಿಷಣ್ಣ. H. Chemicals (Chemistry ನೋಡಿ). H. oil (ಟಾರೆಣ್ಣೆಯಿಂದ ತೆಗೆದ, ನೀರಿಗಿಂತಲೂ ಭಾರವಾದ) ಒಂದು ಬಗೆಯ ಭಾರ ತೈಲ. H.-spar = Barytes. H. swell (ಬಳ. ಮಾ.) ತನ್ನ ನಿಜವಾದ ಅಥವಾ ಕಲ್ಪನೆಯ ಪ್ರಶಸ್ತಿಯನ್ನು ಅತಿ ವಸ್ತ್ರಾಲಂಕಾರ, ಮೊ. ಗಳಿಂದ ಮೆರೆಯುವವನು: ಡಂಭಾಚಾರಿ. H. water (ಸಾಮಾನ್ಯ ನೀರಿಗಿಂತ ಸೇಕಡ ಹತ್ತರಷ್ಟು ಭಾರವಾದ) ತೂಕದ ನೀರು; ಭಾರ ಜಲ (ಸಾಮಾನ್ಯ ಜಲಜನಕಕ್ಕೆ ಬದಲಾಗಿ ಭಾರ ಜಲಜನಕದಿಂದ ಕೂಡಿರುವ ಕಾರಣದಿಂದ). **H.-weight** ಸಾಮಾನ್ಯ ಭಾರಕ್ಕಿಂತ ಹೆಚ್ಚು ಭಾರವುಳ್ಳ ಜೂಜು ರಾವುತ, ಮೊ. ವರು; ೧೭೫ ಪೌಂಡಿಗಿಂತ ಹೆಚ್ಚು ಭಾರವುಳ್ಳ ಮುಷ್ಟಿಕಾಳಗದ ಜಟ್ಟಿ. **Heávily** (ಕ್ರಿ. ವಿ.); **Heáviness** (ನಾ.); **Heávyish** (ಗು.)

Hébdomad ಹೆಬ್ಡೊಮ್ಯಾಡ್ (ನಾ.) ಏಳು ದಿನ; ವಾರ. **Hebdómadal** ಹೆಬ್ಡಾಮಡಲ್ (ಗು.) (ವಾರ) ವಾರದ; ಸಾಪ್ತಾಹಿಕ. H. Council (ಆಕ್ಸ್‌ಫರ್ಡ್ ವಿ. ವಿ. ನಿ.) ಮಂಡಲಿಯ ವಾರ ಸಭೆ.

Hébe ಹೀಬೀ (ನಾ.) (ಗ್ರೀಕ್ ಪುರಾಣ) ಯೌವನಾಧಿದೇವತೆ; ದೇವ ಲೋಕದ ಪಾನ ಪರಿಚಾರಿಕೆ. (ಹಾಸ್ಯ ಪ್ರ.) (ಮದ್ಯ) ಪರಿಚಾರಿಕೆ.

Hébetate ಹೆಬಿ(ಟೆ)ಟೇಟ್ (ಕ್ರಿ.) ಮಂದ, ಜಡ — ಆಗು, ಮಾಡು. **Hébetude** ಹೆಬಿಟ್ಯೂಡ್ (ನಾ.) ದಡ್ಡತನ; ಮೊದ್ದುತನ.

Hebráic, Hébraism, Hébraist. **Hebrew** ನೋಡಿ.

Hébrew ಹೀಬ್ರು (ನಾ., ಗು.) ಯೆಹೂದ್ಯ (Epistle to the Hebrews ಹೊಸ ಒಡಂಬಡಿಕೆಯಲ್ಲಿ ಈ ಹೆಸರಿನ ಪ್ರಕರಣ). ಪ್ರಾಚೀನ ಯೆಹೂದ್ಯರ ಭಾಷೆ. (ಬಳ. ಮಾ.) ಅರ್ಥವಾಗದ ಭಾಷೆ, ಮಾತು, ಭಾಷಣ. (ಗು.) ಹೀಬ್ರು ಭಾಷೆಯ; ಯೆಹೂದ್ಯರ. **H.-wise** (ಬರವಣಿಗೆ) ಬಲದಿಂದ ಎಡಕ್ಕೆ. **Hebráic** ಹಿ(ೀ)ಬ್ರೇಯಿಕ್ (ಗು.) ಯೆಹೂದ್ಯರ; ಯೆಹೂದ್ಯ ಭಾಷೆಯ. **Hebráically** (ಕ್ರಿ. ವಿ.); **Hébraism** ಹೀಬ್ರೇಯಿಸ್‌ಮ್ (ನಾ.) ಯೆಹೂದ್ಯರ ಲಕ್ಷಣ, ಗುಣ. ಯೆಹೂದ್ಯರ ಮತ, ಧರ್ಮ, ಸಂಸ್ಕೃತಿ. ಯೆಹೂದ್ಯ ಭಾಷಾ ಮರ್ಯಾದೆ, ವಾಕ್ಸರಣಿ. **Hébraist** (ನಾ.) ಯೆಹೂದ್ಯ ಭಾಷಾ ಪಂಡಿತ; ಯೆಹೂದ್ಯ ಮತೀಯ, — ಮತಾನುಯಾಯಿ. **Hebraístic** (ಗು.); **Hebraístically** (ಕ್ರಿ. ವಿ.); **Hébraize** ಹೀಬ್ರೈಐಸ್ (ಕ್ರಿ.)

Hécatomb ಹೆಕಟಾಮ್, — ಟೂಮ್ (ನಾ.) (ಗ್ರೀಕ್ ಪ್ರಾಚೀನ) ಸರ್ವಜನ ಸಮ್ಮುಖದಲ್ಲಿ ನಡೆಯುತ್ತಿದ್ದ ಶತ(ಗೋ)ಮೇಧ; ಮಹಾ ಯಜ್ಞ; ಹಲವು ಪ್ರಾಣಿಗಳ ಬಲಿ.

Heck ಹೆಕ್ (ನಾ.) ನದಿಯಲ್ಲಿ ಮೀನು ಹರಿದೋಡುವುದನ್ನು ತಡೆಯುವ ಚೌಕಟ್ಟು; ಮೀನು ತಡೆಕಟ್ಟು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Héckle ಹೆಕ್‌ಲ್ (ಕ್ರಿ. ಸಕ., ನಾ.) (ಸಣಬು, ಮೊ. ವನ್ನು) ಹಿಕ್ಕು ; ಸಿಕ್ಕು ಬಿಡಿಸು. ಕಠಿನವಾಗಿ ಪ್ರಶ್ನೆಹಾಕು ; ಪ್ರಶ್ನೆಗಳಿಂದ ಕಠಿನ ಪರೀಕ್ಷೆಗೆ ಗುರಿಪಡಿಸು ; ಪ್ರಶ್ನೆ ಹಾಕಿ ಕಾಡಿಸು. (ನಾ.) ಹಿಕ್ಕಣಿಕೆ. **Héckler** (ನಾ.)

Héctare ಹೆಕ್ಟೇರ್, **Hectáre** (F) ಎಕ್ಟಾರ್ (ನಾ.) ಫ್ರೆಂಚ್ ಅಥವಾ ಮೆಟ್ರಿಕ್ ಮಾನದಲ್ಲಿ (೨·೪೭೧ ಎಕರೆಯಷ್ಟರ) ಒಂದು ಚದರಳತೆ.

Héctic ಹೆಕ್ಟಿಕ್ (ಗು., ನಾ.) ಕ್ಷಯ ರೋಗದ (H. fever ಕ್ಷಯ, ಮೊ. ರೋಗಗಳೊಂದಿಗೆ ಬರುವ, ಕೆನ್ನೆ ಕೆಂಪೇರುವ, ಮೈ ಕಾವೇರುವ, ಜ್ವರ : ಕ್ಷಯ ಜ್ವರ). ರೋಗದಿಂದ ಕೆಂಪಡರಿದ, ಕೆರಳಿದ (ರೂಪ. ಸಹ). (ಅಸಂ.) ಉದ್ರಿಕ್ತ ; ಆವೇಶಗೊಂಡ ; ಉಗ್ರ ; ಭಾವೋದ್ರೇಕದ (For a h. moment ಆವೇಶದ ಒಂದು ಕ್ಷಣ ಕಾಲದ ವರೆಗೆ). (ನಾ.) ಕ್ಷಯ ಜ್ವರ ; ಕ್ಷಯ ರೋಗಿ ; ಕ್ಷಯ ಜ್ವರದ ಕೆರಳು.

Hecto- ಹೆಕ್ಟೊ —(ಸ. ಪೂ. ಪ.) ನೂರು — ; ಶತ —. **Hectograph** ನೂರುಗಟ್ಟಳೆ ಪ್ರತಿಗಳನ್ನು ತೆಗೆಯಲಾಗುವ ಯಂತ್ರ ಸಲಕರಣೆ : ನೂರಚ್ಚು ; (ಕ್ರಿ. ಸಕ.) (ಇದರಿಂದ) ನೂರಾರು ಪ್ರತಿಗಳನ್ನು ತೆಗೆ. **Hectogram(me)** ನೂರು ಗ್ರ್ಯಾಮ್ ತೂಕ (= ೩·೫೨ ಔನ್ಸ್ ತೂಕ). **Hectolitre, -liter** ನೂರು ಲೀಟರ್ ಅಳತೆ (೩·೫೩೦ ಘನ ಅಡಿ). **Hectometre, -meter** ನೂರು ಮೀಟರು ಉದ್ದ (= ೩೨೮·೦೯ ಅಡಿ)

Héctor ಹೆಕ್ಟರ್ (ನಾ., ಕ್ರಿ.) ಅಬ್ಬರಿಸು(ವವನು) ; ಬೆದರಿಸು(ವವನು) ; ಉದ್ಧತ ; ಜಂಬಗಾರ. (Iliad ಎಂಬ ಗ್ರೀಕ್ ಪುರಾಣದಲ್ಲಿ ಬರುವ Hector ಎಂಬ ಶೂರನ ಹೆಸರಿನಿಂದ)

Héddles ಹೆಡ್‌ಲ್ಸ್ (ನಾ., ಬ. ವ.) ಮಗ್ಗದಲ್ಲಿ ಹಾಸುಗಳು ಅಣಿಗೆ ಅಚ್ಚಿನ ಮೂಲಕ ಹೋಗುವ ಮೊದಲು, ಅವುಗಳನ್ನು ವಿಂಗಡಿಸಿಡುವ ಸಣ್ಣಹುರಿಗಳು ಅಥವಾ ತಂತಿಗಳು ; ಹಾಸುವಿಂಗಡಕ.

Hedge ಹೆಜ್ (ನಾ., ಕ್ರಿ.) [ಪೊದೆ, ಕುರುಚಲು ಗಿಡ, (ಹಸಿ ಅಥವಾ ಒಣಗಿದ) ದಡಿ, ಮೊ. ಗಳ] ಬೇಲಿ (Quickset h. ಹಸಿ ಬೇಲಿ. Dead h. ಒಣ ಬೇಲಿ. Doesn't grow on every h. ಅಪೂರ್ವವಾದದ್ದು). ತಡೆಗಟ್ಟಾಗಿ ನಿಲ್ಲಿಸಿದ ವಸ್ತುಗಳ ಅಥವಾ ಮನುಷ್ಯರ ಸಾಲು. (ರೂಪ.) ಅಡಚಣೆ ; ತಡೆ. (ಪಂದ್ಯ ಒಡ್ಡುವುದರಲ್ಲಿ) ತನಗೆ ನಷ್ಟವಾಗದಂತೆ ಎದುರು ಕಡೆಯೂ ಪಣವೊಡ್ಡಿ ಭದ್ರಪಡಿಸಿಕೊಳ್ಳುವುದು. [**H.-priest** ನಿರಕ್ಷರಸ್ಥನಾದ ಕೆಳ ದರ್ಜೆಯ ಪುರೋಹಿತ ; ಕಳಪೆ ಪುರೋಹಿತ. **Hedgerow** ಬೇಲಿಯ ಪೊದೆಯ ಸಾಲು. **H.-school** ಕೀಳು ದರ್ಜೆಯ ಪಾಠಶಾಲೆ (ಹಿಂದೆ, ಮು., ಐರ್ಲೆಂಡಿನ ಬಯಲ ಪಾಠಶಾಲೆ). **H.-sparrow** (ಬ್ರಿಟನ್ನಿನ) ಸಾಮಾನ್ಯ ಹಕ್ಕಿಗಳಲ್ಲೊಂದು ಜಾತಿ]. (ಕ್ರಿ.) (ಬೇಲಿ, ಮೊ. ಗಳಿಂದ) ಸುತ್ತುಗಟ್ಟು (ರೂಪ. ಸಹ) ; ಬೇಲಿ ಹಾಕು ; ತಡೆಗಟ್ಟು ; ಬೇಲಿ ಹಾಕಿ ಪ್ರತ್ಯೇಕಿಸು (*Off* ಉಪ. ದೊಡನೆ). ಸುತ್ತುವರಿ (*In* ಉಪ. ದೊಡನೆ). ಬೇಲಿಯನ್ನು ಮಟ್ಟಕ್ಕೆ ಸರಿಯಾಗಿ ಕತ್ತರಿಸು, ಸವರು [**Hédger** (ನಾ.)]. (ಜೂಜು, ಸಟ್ಟಾ ವ್ಯಾಪಾರ, ಮೊ. ಗಳಲ್ಲಿ) ಎದುರು ಕಡೆಯೂ ಪಣವೊಡ್ಡಿ ವ್ಯಾಪಾರ ನಡಸಿ ನಷ್ಟವಾಗದಂತೆ ಭದ್ರಪಡಿಸಿಕೊ. (ಯಾವುದಕ್ಕೂ) ಸಿಕ್ಕಿ ಕೊಳ್ಳದಿರು.

Hédgehog ಹೆಜ್‌ಹಾಗ್ (ನಾ.) ಹುಳು, ಮೊ. ವನ್ನು ತಿಂದು ಜೀವಿಸುವ, ಆತ್ಮ ರಕ್ಷಣೆಗಾಗಿ ಚೆಂಡಿನಂತೆ ಮುದುರಿಕೊಂಡು ಸುತ್ತಲೂ ಮುಳ್ಳುಗಳನ್ನು ನಿಗುರಿಸುವ, ಒಂದು ಚತುಷ್ಪಾದಿ ; ಮುಳ್ಳು ಹಂದಿ. ಮೈಯಲ್ಲ ಮುಳ್ಳಿದ್ದ ಹಲವು ಜಾತಿಯ ಪ್ರಾಣಿ(ಗಳ ಹೆಸರು). (ಕೆಲವು ಸಸ್ಯಗಳ) ಮುಳ್ಳು ಬೀಜಕೋಶ ; ಮುಳ್ಳು ಕಾಯಿ. ಒಡನೆ ಸಿಗುವುದಕ್ಕಾಗದ ಮನುಷ್ಯ. **Hédgehoggy** (ಗು.) ಸಿಗುವುದಕ್ಕಾಗದ.

Hedónic ಹಿಡಾನಿಕ್ (ಗು., ನಾ.) ಸುಖದ ; ಸಂತೋಷದ. (ನಾ. ; ಬ. ವ. ದಲ್ಲಿ) ಸೌಖ್ಯತತ್ತ್ವ ವಿಚಾರ. **Hédonism** ಹೀಡನಿಸ್ಮ್ (ನಾ.) ಸೌಖ್ಯವೇ ಮುಖ್ಯ ಪುರುಷಾರ್ಥವೆಂಬ ವಾದ. **Hédonist** (ನಾ.) ; **Hedonístic** (ಗು.)

Heed ಹೀಡ್ (ಕ್ರಿ. ಸಕ. ; ಸ್ಕಾ. ಪ್ರ. ಮತ್ತು ಗ್ರಾಂ. ; ನಾ.) ಗಮನ, ಲಕ್ಷ್ಯ (ಕೊಡು). Take h. ಎಚ್ಚರಿಕೆ ತೆಗೆದುಕೊ. Pay or give h. to ಗಮನ ಕೊಡು. **Heédful** (ಗು.) ; **Heédfully** (ಕ್ರಿ. ವಿ.) ; **Heédfulness** (ನಾ.) ; **Heédless** (ಗು.) ; **Heédlessly** (ಕ್ರಿ. ವಿ.) ; **Heédlessness** (ನಾ.)

Heé-haw ಹೀ ಹಾ (ನಾ.) ಕತ್ತೆಯ ಕಿರಿಚು, ಕೂಗು. ಗಟ್ಟಿ ನಗು.

Heel[1] ಹೀಲ್ (ನಾ.) (ಮನುಷ್ಯನ) ಹಿಮ್ಮಡಿ [H. of Achilles ಒಂದೇ ಒಂದು ಅಪಾಯ ಸ್ಥಾನ ; ಮರ್ಮಸ್ಥಾನ ; ನೆರ ; ಒಂದೇ ಒಂದು ದೌರ್ಬಲ್ಯ]. (ಅಂ. ರ. ಶಾ.) (ಕಾಲ್ನಡೆಗಳ) (ಸಾ., ಭೂಮಿಗೆ ಸೋಕದೆ ಮೇಲಕ್ಕಿರುವ) ಹಿಂಗಾಲ ಹಿಮ್ಮಡಿ. (ಬಳ. ಮಾ.) (ಕಾಲ್ನಡೆಗಳ) ಗೊರಸಿನ ಹಿಂಭಾಗ. (ಬ. ವ. ದಲ್ಲಿ) ಹಿಂಭಾಗದ ಪಾದಗಳು. ಕಾಲ್ಚೀಲದ ಹಿಮ್ಮಡಿ ಮುಚ್ಚುವ ಭಾಗ ; ಹಿಮ್ಮಡಿಗೆ ಆಸರೆಯಾದ ಜೋಡಿನ ಭಾಗ ; ಜೋಡಿನ ಹಿಮ್ಮಡಿ. (ಆಕಾರದಿಂದಾಗಲಿ, ಸ್ಥಾನದಿಂದಾಗಲಿ) ಹಿಮ್ಮಡಿಯಂಥ ವಸ್ತು (ಉದಾ., ಪಿಟೀಲು ಕಮಾನಿನ ಹಿಡಿಕೆ, ಗಾಲ್ಫ್ ದಾಂಡಿನ ತಲೆಯಲ್ಲಿಯ ಕೊಕ್ಕೆ, ಮೊ. ವು). At h. ; At, on, upon, one's heels (ಒಬ್ಬನ) ಬೆನ್ನ ಹಿಂದೆಯೇ. Down at h. (ಜೋಡಿನ ವಿಷಯದಲ್ಲಿ) ಹಿಮ್ಮಡಿ ಜಜ್ಜಿಹೋದ(ಗಿ). (ಮನುಷ್ಯ) ಇಂಥ ಜೋಡು ಹಾಕಿಕೊಂಡು ; ಅಚ್ಚುಕಟ್ಟಿಲ್ಲದೆ ; ಚೊಕ್ಕಟಕ್ಕೆ ಲಕ್ಷ್ಯಕೊಡದೆ. To h. (ನಾಯಿ) ಹಿಂದೆಯೇ (ಇರುವ) ; ಅಂಕೆಯಲ್ಲಿ(ರುವ). H.-&-toe walking ಅಡಿಯೂರಿ ನಡೆಯುವ ನಡಗೆ (ಓಟವಲ್ಲ). Heels over head, (ಸಾ., Head over heels) ತಲೆಕೆಳಕಾಗಿ ; ಲಾಗ ಹಾಕುತ್ತ. Kick one's heels ಕಾಯುತ್ತ ನಿಂತಿರು. Cool one's heels (Cool ನೋಡಿ). Lay, clap, by the heels ಸೆರೆ ಹಾಕು ; ಕೋಳಕ್ಕೆ ಹಾಕು. Show a clean pair of heels, Take to one's heels ಕಂಬಿ ಕೀಳು ; ಕಾಲಿಗೆ ಬುದ್ಧಿ ಹೇಳು ; ಓಡಿಹೋಗು. Have the heels of (ಓಟದಲ್ಲಿ, ಒಬ್ಬನನ್ನು) ಹಿಂದೆ ಹಾಕು. Turn on one's h. ಗಿರಕ್ಕನೆ (ಹಿಂದಕ್ಕೆ) ತಿರುಗು. Be carried with the heels foremost ಚಟ್ಟದಮೇಲೆ ಸಾಗಿಹೋಗು. **H.-ball** (ಮೋಚಿಯವನು ಮೆರುಗುಕೊಡಲು ಉಪಯೋಗಿಸುವ) ಗಟ್ಟಿಮೇಣದ ಮತ್ತು ಕಾಡಿಗೆಯ ಮಿಶ್ರಣ ; ಕಾಡಿಗೆ ಮೇಣ. **H.-tap** ಹಿಮ್ಮಡಿಯ ಅಟ್ಟೆ. ಬಟ್ಟಲಿನ ಅಡಿಯಲ್ಲಿ ಉಳಿದ ಮದ್ಯ.

Heel (ಕ್ರಿ.) (ನಾಟ್ಯದಲ್ಲಿ) ನೆಲಕ್ಕೆ ಹಿಮ್ಮಡಿ ಸೋಕಿಸು ; ಹಿಮ್ಮಡಿ ಊರು ; ಹಿಮ್ಮಡಿಯಿಂದ ಮುಟ್ಟು. (ಜೋಡು, ಮೊ. ಗಳಿಗೆ) ಹಿಮ್ಮಡಿ ಕಟ್ಟು. ಬೆನ್ನುಹತ್ತಿ ಹೋಗು ; ಅಟ್ಟಿಕೊಂಡು ಹೋಗು. (ಕಾಲ್ಚೆಂಡಾಟ) (ಚೆಂಡನ್ನು ಪಡೆಯಲು ಗೊಂದಲವೆದ್ದಾಗ ಅದನ್ನು) ಹಿಮ್ಮಡಿಯಿಂದ ಹಿಂದಕ್ಕೆ ತನ್ನ ಕಡೆಯವನಿಗೆ ತಳ್ಳಿಬಿಡು. (ಗಾಲ್ಫ್ ಆಟ) ದಾಂಡಿನ ಹಿಮ್ಮಡಿಯಿಂದ ಚೆಂಡನ್ನು ಹೊಡೆ. **Heeled** (ಗು.) (ಅಮೆ. ಸಂ., ಬಳ. ಮಾ.) ಪಿಸ್ತೂಲು ಆಯುಧವುಳ್ಳ. ದ್ರವ್ಯ ಸಹಾಯವುಳ್ಳ.

Heel[2] ಹೀಲ್ (ಕ್ರಿ., ನಾ.) (ಹಡಗು, ಮೊ. ವು ಗಾಳಿಯ ಒತ್ತರದಿಂದಲೂ ಒಂದು ಕಡೆಯ ಭಾರ ಹೆಚ್ಚಾಗಿರುವುದರಿಂದಲೂ) ಓಲು. (ಹಡಗನ್ನು) ಓಲಿಸು. (ನಾ.) ಹಡಗಿನ ಓಲು.

Heft ಹೆಫ್ಟ್ (ನಾ., ಕ್ರಿ. ಸಕ.) (ಪ್ರಾಂ. ಪ್ರ., ಅಮೆ. ಸಂ.) ಭಾರ ; ತೂಕ. (ಪ್ರಾಂ. ಪ್ರ.) ಎತ್ತಿಗೆ. (ಕ್ರಿ.) (ಮು., ತೂಕವನ್ನು ಪರೀಕ್ಷಿಸಲು) ಎತ್ತು ; ಎತ್ತಿನೋಡು. **Héfty** (ಗು.) ಭಾರಿಯಾದ ; ಎತ್ತರವಾಗಿಯೂ ಮೈಕಟ್ಟುಳ್ಳವನಾಗಿಯೂ ಇರುವ ; ಕಟ್ಟಾಳಾದ ; ಬಲಿಷ್ಠನಾದ ; ದೃಢ ಕಾಯನಾದ (A battalion of h. fellows ಕಟ್ಟಾಳುಗಳ ಪಟಾಲಂ)

Hégemony ಹಿ(ೕ)ಜೆ(ಗೆ)ಮೊನಿ, ಹೆಜಿ(ಗಿ)ಮನಿ (ನಾ.) (ಮು., ಸಂಯುಕ್ತ ರಾಜ್ಯಗಳಲ್ಲಿ ಒಂದರ) ಅಧಿನಾಯಕತ್ವ ; ಪ್ರಮುಖತೆ ; ಪ್ರಾಬಲ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Hegemónic ಹೆಜಿಮಾನಿಕ್, ಹೀಗಿ— (ಗು.) ಆಧಿಪತ್ಯ ನಡಸುತ್ತಿರುವ; ಮೇಲಾಳುತ್ತಿರುವ; ಮುಂದಾಳಾಗಿರುವ.

Hégira,-jira ಹೆಜಿರ (ನಾ.) ಮಕ್ಕಾದಿಂದ ಮದೀನಕ್ಕೆ ಮಹಮ್ಮದ್ ಪೈಗಂಬರನ ಪಲಾಯನ. ಇಲ್ಲಿಂದ ಆರಂಭವಾಗುವ ಮಹಮ್ಮದೀಯ ಶಕ (ಕ್ರಿ. ಶ. ೬೨೨); ಹೆಜಿರ ಶಕ.

Heífer ಹೆಫರ್ (ನಾ.) ಇನ್ನೂ ಕರು ಹಾಕಿಲ್ಲದ ಎಳೆಯ ಹಸು; ಕಡಸು; ಪಡ್ಡೆ.

Heigh ಹೇ (ಭಾವ. ಅವ್ಯ.) [ಪ್ರೋತ್ಸಾಹಕ ಅಥವಾ (ಸಂಗತಿ ತಿಳಿಯಲು ಕೇಳುವ) ಪ್ರಶ್ನಾರ್ಥಕ ಪದ] ಹೇ! H.-ho (ಬೇಸರ, ಆಶಾಭಂಗ, ಮೊ. ವನ್ನು ಸೂಚಿಸುವ ಉದ್ಗಾರ) ಹೇ ಹೋ!

Height ಹೈಟ್ (ನಾ.) ಎತ್ತರ; ಭೂಮಟ್ಟದಿಂದ ಅಥವಾ ಸಮುದ್ರಮಟ್ಟದಿಂದ ಇರುವ ಎತ್ತರ; ಔನ್ನತ್ಯ; ಬಹಳ ಎತ್ತರ (Situated at a h. ಬಹಳ ಎತ್ತರದಲ್ಲಿ). ಉನ್ನತ ಸ್ಥಾನ; ತುದಿ; ನೆತ್ತಿ; ಉತ್ಕರ್ಷ; ಶಿಖರ; ಉಚ್ಛ್ರಾಯ (The h. of folly ಅವಿವೇಕದ ಪರಮಾವಧಿ; ಪರಮ ಮೂರ್ಖತೆ. At its h. ಉಚ್ಛ್ರಾಯ ಸ್ಥಿತಿಯಲ್ಲಿ; ಪರಮಾವಧಿಯಲ್ಲಿ). ದಿಣ್ಣೆ; ಏರು ನೆಲ; ಮೇಡು. **Heíghten** ಹೈಟ್‌ನ್ (ಕ್ರಿ.) (ಇನ್ನೂ) ಎತ್ತರಿಸು; ಏರಿಸು; ಹೆಚ್ಚಿಸು; ಪ್ರಬಲಗೊಳಿಸು. (ವರ್ಣನೆ, ಕಥೆ, ಮೊ. ವನ್ನು) ವಿಸ್ತರಿಸು, ದೊಡ್ಡದು ಮಾಡು, ಎತ್ತರವಾಗು, ಏರು (ನಾ., ರೂಪ.)

Heínous ಹೇನಸ್ (ಗು.) (ಪಾತಕ ಅಥವಾ ಪಾತಕಿಯ ವಿಷಯದಲ್ಲಿ) ಬಹಳ ಹೇಯ (ವಾದ); ಅತಿ ಘೋರವಾದ. **Heínously** (ಕ್ರಿ. ವಿ.); **Heínousness** (ನಾ.)

Heir ಏರ್ (ನಾ.) ಹಿಂದಿನ ಯಜಮಾನನ ನ್ಯಾಯಸಮ್ಮತವಾದ ಪ್ರತಿನಿಧಿಯಾಗಿ ಅವನ ಆಸ್ತಿಯನ್ನಾಗಲಿ ಪದವಿಯನ್ನಾಗಲಿ ಪಡೆಯುವವನು, ಅಥವಾ ಪಡೆಯುವ ಹಕ್ಕುಳ್ಳವನು; ಹಕ್ಕುದಾರ; ಬಾಧ್ಯಸ್ಥ; ಉತ್ತರಾಧಿಕಾರಿ. (ರೂಪ.) (ಸಂತೋಷ, ದಂಡನೆ, ಮೊ. ಗಳಿಗೆ) ನ್ಯಾಯವಾಗಿ ಭಾಗಿಯಾದವನು. H. apparent (Apparent ನೋಡಿ). H.-at-law ರಕ್ತ ಸಂಬಂಧದಿಂದ ಹಕ್ಕುದಾರ. H. in tail ಪರಭಾರೆ ಮಾಡಲಾಗದ ಸ್ವತ್ತಿಗೆ ಹಕ್ಕುದಾರ. H. male ಗಂಡು ಸಂತತಿಯಿಂದಲೇ ಬಂದ ಹಕ್ಕುದಾರ. H. presumptive (Presumptive ನೋಡಿ). **Heírdom** (ನಾ.) (ರಕ್ತ ಸಂಬಂಧದ) ಹಕ್ಕುದಾರಿ; ಉತ್ತರಾಧಿಕಾರಿತ್ವ; ಹಕ್ಕುದಾರಿಯ ಸ್ವತ್ತು. **Heíress** (ನಾ., ಸ್ತ್ರೀ.); **Heírless** (ಗು.); **Heírloom** (ನಾ.) ಸ್ಥಿರಾಸ್ತಿಯನ್ನನುಸರಿಸಿ ಬರುವ ಚರಾಸ್ತಿ, ಜಿಂದಗಿ; ಕುಲಧನ. ವಂಶಪಾರಂಪರ್ಯವಾಗಿ ಬಂದ ಯಾವುದಾದರೂ ಚರ ಸ್ವತ್ತು. (ರೂಪ.) ವಂಶಾರ್ಜಿತ ಗುಣಗಳು; ಆನುವಂಶಿಕ ಲಕ್ಷಣಗಳು. **Heírship** (ನಾ.) ಹಕ್ಕುದಾರನ ಸ್ಥಿತಿ, ಹಕ್ಕುಗಳು; ಹಕ್ಕುದಾರಿಕೆ.

Héjira. **Hegira** ನೋಡಿ.

Held. Hold ಧಾತುವಿನ ಭೂತ. ಮತ್ತು ಭೂ. ಕೃ.

Helíacal ಹಿಲೈಅಕಲ್ (ಗು.) ಸೂರ್ಯಸಂಬಂಧವಾದ; ಸೂರ್ಯನ ಹತ್ತಿರವಿರುವ; ಸೌರ. [H. rising, setting (of a star) (ಸೂರ್ಯನ ಸಮೀಪದಲ್ಲಿದ್ದುದರಿಂದ ಕಾಣದೆ ಇದ್ದು, ಅಂತರ ಬೆಳ್ಳಾಗ ಸೂರ್ಯೋದಯಕ್ಕೆ ಮೊದಲು ಪ್ರಥಮತಃ ಕಾಣಿಸಿಕೊಳ್ಳುವ) ನಕ್ಷತ್ರದ ಉದಯ; (ಸೂರ್ಯಾಸ್ತವಾದಮೇಲೆ ಸ್ವಲ್ಪ ಹೊತ್ತು ಕಾಣುತ್ತಿದ್ದು ಅನಂತರ ಕಾಣದೆಹೋಗುವ) ನಕ್ಷತ್ರದ ಅಸ್ತ. (ನಕ್ಷತ್ರದ) ಸೌರೋದಯ, ಸೌರಾಸ್ತ]

Heliánthus ಹೀಲಿಆ್ಯಂಥಸ್ (ನಾ.) ಸೂರ್ಯಕಾಂತಿ ಸಸ್ಯಜಾತಿ.

Hélical ಹೆಲಿಕಲ್ (ಗು.) ಸುರುಳಿಯಾಕಾರದ. **Hélically** (ಕ್ರಿ. ವಿ.); **Hélicoid** (ಗು.); **Helicoídal** (ಗು.) ಸುರುಳಿಯಾಕಾರದ; ತಿರುಪುಮೊಳೆಯ ಸುತ್ತಿನಾಕಾರದ.

Hélicon ಹೆಲಿಕಾನ್ (ನಾ.) (ಗ್ರೀಕ್ ಪುರಾಣ: ಕಲಾಭಿಮಾನಿ ದೇವತೆಗಳಿಗೆ ಪವಿತ್ರ ಸ್ಥಳವಾದ ಬಿಯೋಷಿಯ ಪ್ರಾಂತದಲ್ಲಿಯ) ಹೆಲಿಕಾನ್ ಪರ್ವತ. ಕವಿತಾವೇಶದ ಮೂಲಸ್ಥಾನ. **Helicónian** —ಕೋನಿಯನ್ (ಗು.)

Hélicopter ಹೆಲಿಕಾಪ್ಟರ್ (ನಾ.) ಸಮತಲ ಕ್ಷೇತ್ರದಲ್ಲಿ ಗರ್ರನೆ ತಿರುಗುವ ತಿರುಪುಗಳಿಂದ ನೆಟ್ಟನೆ ಮೇಲಕ್ಕೇರುವ ಹಾರುಯಂತ್ರ; 'ಹೆಲಿಕಾಪ್ಟರ್'.

Helio- ಹೀಲಿಯೊ— (ಸ. ಪೂ. ಪ.) ಸೂರ್ಯ—; ಸೌರ—. **Heliocéntric** ಸೂರ್ಯಕೇಂದ್ರದಿಂದ ನೋಡುತ್ತಿರುವಂತೆ ಊಹಿಸಿದ; ಸೂರ್ಯನನ್ನು ಕೇಂದ್ರವಾಗುಳ್ಳಂತೆ ಭಾವಿಸಿದ; ಸೂರ್ಯಕೇಂದ್ರಕ. **Héliochrome** ಸ್ವಾಭಾವಿಕ ವರ್ಣಗಳಿರುವಂತೆ ತೆಗೆದ ಛಾಯಾಚಿತ್ರ: ಸಹಜ ವರ್ಣ ಛಾಯಾ ಚಿತ್ರ. **Héliochromy** (ಹೀಗೆ) ಚಿತ್ರ ತೆಗೆಯುವುದು. **Héliogram** ಸೌರ ಸಂಕೇತದಿಂದ ಕಳುಹಿಸಿದ ವರ್ತಮಾನ. **Héliograph** ಸೂರ್ಯನ ಬೆಳಕಿಗೆ ಒಡ್ಡಿ ಪಡೆದ ರೇಖಾ ಚಿತ್ರ; ಸೌರ ರೇಖನ. ಸೂರ್ಯನ ಛಾಯಾ ಚಿತ್ರ ತೆಗೆಯುವ ಯಂತ್ರ ಸಲಕರಣೆ: ಸೂರ್ಯ ಛಾಯಾ ಗ್ರಾಹಕ. ಸೂರ್ಯ ಪ್ರಭೆಗಳನ್ನು ತಕ್ಕಂತೆ ಪ್ರತಿಫಲನ ಮಾಡಿ, ಸಂಕೇತಗಳನ್ನು ಕಲ್ಪಿಸಿ, ವರ್ತಮಾನ ಕಳುಹಿಸುವ ಸಲಕರಣೆ: ಸೌರ ಸಂಕೇತ ವರ್ತಮಾನ ಸಾಧನ. (ಕ್ರಿ. ಸಕ.) ಸೌರ ಸಂಕೇತದ ಮೂಲಕ (ವರ್ತಮಾನ) ಕಳುಹು. ಸೂರ್ಯ ಛಾಯಾ ಚಿತ್ರ ತೆಗೆ. **Heliógraphy** ಸೂರ್ಯ ವಿವರಣೆ; ಸೌರ ರೇಖನ; ಸೌರ ಸಂಕೇತ (ವರ್ತಮಾನ ಪ್ರಸರಣ) ಪದ್ಧತಿ. **Heliográphic(al)** (ಗು.); **Heliogravúre** = Photogravure. **Heliómeter** ಎರಡು ನಕ್ಷತ್ರಗಳಿಗಿರುವ ಕೋನದೂರವನ್ನು ಅಳೆಯುವ ಯಂತ್ರ ಸಲಕರಣೆ: ತಾರಾಂತರ ಮಾಪಕ [(ಆದಿಯಲ್ಲಿ) ಸೂರ್ಯನ ವ್ಯಾಸವನ್ನು ಅಳೆಯುವ ಸಲಕರಣೆ]. **Hélioscope** (ಕಣ್ಣಿಗೆ ಕೆಡುಕಾಗದಂತೆ) ಸೂರ್ಯನನ್ನು ವೀಕ್ಷಿಸಲಾಗುವ ಸಲಕರಣೆ; ಸೂರ್ಯ ದರ್ಶಕ. **Heliósis** ಹೀಲಿಯೋಸಿಸ್ (ನ. ವಿ.) ಗಾಜು, ಮೊ. ಗಳ ಮೂಲಕ ಸೂರ್ಯ ರಶ್ಮಿಗಳು ಹಾದು ಎಲೆಗಳಮೇಲೆ ಕೇಂದ್ರೀಕರಿಸಿ ಮಾಡುವ ಸುಡುಮಚ್ಚೆಗಳು; ಬಿಸಿಲ ಪೆಟ್ಟು. **Héliostat** ಸೂರ್ಯನ ಬೆಳಕನ್ನು ಯಾವಾಗಲೂ ಒಂದೇ ದಿಕ್ಕಿಗೆ ಪ್ರತಿಫಲಿಸುವಂತೆ ಅಳವಡಿಸಿರುವ ಗಡಿಯಾರದಂಥ ಸಲಕರಣೆಯುಳ್ಳ ಕನ್ನಡಿ: ಸೂರ್ಯ ಸ್ಥಾಯಿ. **Heliothérapy** ಬಿಸಿಲಿಗೆ ಮೈಯೊಡ್ಡುವುದರ ಮೂಲಕ ರೋಗ ಚಿಕಿತ್ಸೆ; ಸೂರ್ಯಸ್ನಾನ ಚಿಕಿತ್ಸೆ. **Héliotrope** ಸುವಾಸನೆಯುಳ್ಳ ಧೂಮ್ರ ವರ್ಣದ ಹೂವು ಬಿಡುವ ಒಂದು ಸಸ್ಯಜಾತಿ; ಈ ಹೂವುಗಳ ಬಣ್ಣ, ಸುವಾಸನೆ. ರಕ್ತ ಶಿಲೆ (Blood-stone). **Heliotrópic** (ಸಸ್ಯಗಳು) (ಸೂರ್ಯನ) ಬೆಳಕಿನ ಪ್ರಭಾವದಿಂದ ಒಂದು ಗೊತ್ತಾದ ಕಡೆಗೆ ತಿರುಗುವ (ಸ್ವಭಾವದ); ಸೂರ್ಯಾವರ್ತ. **Heliótropism** ಸೂರ್ಯಾವರ್ತತೆ. **Héliotype** ಜೆಲಟೀನ್ ಪಟಲವನ್ನು ಸೂರ್ಯನ ಬೆಳಕಿಗೆ ಒಡ್ಡುವುದರಿಂದ ಪಡೆದ ಚಿತ್ರ.

Hélium ಹೀಲಿಯಮ್ (ನಾ.) (ಸೂರ್ಯನ ವಾಯುಮಂಡಲದಲ್ಲಿರುವುದೆಂದು ೧೮೬೮ರಲ್ಲಿ ಊಹಿಸಿದ, ೧೮೯೫ರಲ್ಲಿ ಮೊದಲು ಭೂಮಿಯಲ್ಲಿ ಪಡೆದ) ಒಂದು ಪಾರದರ್ಶಕ ಅನಿಲ: 'ಹೀಲಿಯಮ್'.

Hélix ಹೀ(ಹೆ)ಲಿಕ್ಸ್ (ನಾ.; ಬ. ವ. -ices —ಸೀಸ್) (ಬಿರುಡೆತಿರುಪಿನಂಥ ಅಥವಾ ಒಂದೇ ಕ್ಷೇತ್ರದಲ್ಲಿರುವ ಗಡಿಯಾರದ ತಂತಿಸುರುಳಿಯಂಥ) ಸುರುಳಿ. (ವಾ. ಶಾ.) ಸುರುಳಿಯಲಂಕಾರ. ಹೊರಕಿವಿಯ ಅಂಚಿನ ಭಾಗ. (ಸಾಮಾನ್ಯ) ಬಸವನ ಹುಳುವಿನ ಜಾತಿ.

Hell ಹೆಲ್ (ನಾ.) ಅಧೋಲೋಕ; ಪ್ರೇತಲೋಕ; ದಂಡನೆ ಪಡೆದ ಪ್ರೇತಗಳು ಹೋಗುವ ಲೋಕ; ನರಕ. ದೌಷ್ಟ್ಯದ, ವಿಪತ್ತಿನ, —ಸ್ಥಳ, ಸ್ಥಿತಿ (A h. of a noise ಸಹಿಸಲಾಗದ, ವಿಪರೀತ, ಗಲಾಟೆ). Prisoner's Base ಮೊ. ಆಟಗಳಲ್ಲಿ ಬಂದಿಗಳನ್ನು ಸೆರೆಹಾಕುವ ಸಣ್ಣ ಕೋಣೆ. ಜೂಜು ಮನೆ. [H.! What the h. do you want? (ಶಾಪ ಹಾಕುವಲ್ಲಿ) ಹಾಳು! ನಿನಗೇನು ಹಾಳಾದ್ದು ಬೇಕು? Give

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(a person) h. (ತಡೆಯಲಾಗದಂಥ) ಕಿರುಕುಳ ಕೊಡು. Like h. ಅಸಾಧ್ಯವಾಗಿ, ವಿಪರೀತವಾಗಿ]. H. for leather ಅತಿ ಬಿರುಸಿನ ಸವಾರಿಯ ಭರದಲ್ಲಿ; ದೌಡಾದೌಡಿಯಲ್ಲಿ (ಸಾ., ride h. f. l.). **H.-box** (ಮುದ್ರಣದ ಅನಂ.) ಕಳಪೆ ಮೊಳೆಗಳನ್ನು ಹಾಕುವ ಪೆಟ್ಟಿಗೆ. **H.-cat** ಮತ್ಸರಗ್ರಸ್ತೆ; ಛಲಗಾತಿ; ರೋಷಕಾರುವವಳು. **H.-hound** ನರಕದ ನಾಯಿ (ಮು., Cerberus ಎಂಬುದು); ಪಿಶಾಚಿ. **H.-weed** (ಹಲವು ಸಸ್ಯಗಳ ಹೆಸರು). **Héllish** (ಗು.); **Héllishly** (ಕ್ರಿ. ವಿ.); **Héllishness** (ನಾ.); **Héllward** (ಕ್ರಿ. ವಿ., ಗು.)

Héllebore ಹೆಲಿಬೋರ್ (ನಾ.) (ಹುಚ್ಚಿಗೆ ಮದ್ದು ಎಂದು ನಂಬಿದ್ದ ಹಲವು ಸಸ್ಯಗಳ ಪ್ರಾಚೀನ ಹೆಸರು) ಕಟುಕರೋಹಿಣಿ, ಮೊ. ವು. (ಸ. ವಿ.) Christmas Rose (ಗುಂಪಿಗೆ ಸೇರಿದ) ಸಸ್ಯ ಜಾತಿ.

Héllene ಹೆಲೀನ್ (ನಾ.) (ಶುದ್ಧ ಗ್ರೀಕ್ ಕುಲದ ಪ್ರಾಚೀನ) ಗ್ರೀಕನು; ಆಧುನಿಕ ಗ್ರೀಸ್ ರಾಜ್ಯದ ಪ್ರಜೆ. **Hellénic** — ಲೀ(ಲೆ) — (ಗು.); **Héllenism** ಹೆಲೆನಿಸ್ಮ್ (ನಾ.) ಗ್ರೀಕ್ ಭಾಷಾ ಮರ್ಯಾದೆ, ಪ್ರಯೋಗ; ಗ್ರೀಕಾನುಕರಣ; ಗ್ರೀಕ್ ಸಂಸ್ಕೃತಿ; ಗ್ರೀಕ್ ದೇಶೀಯತೆ. **Héllenist** (ನಾ.) (ತಾನು ಗ್ರೀಕನಲ್ಲದೆ) ಗ್ರೀಕ್ ಭಾಷೆಯನ್ನು ಉಪಯೋಗಿಸುವವನು [**Hellenístic** (ಗು.)]; ಗ್ರೀಕ್ ಪಂಡಿತ. **Héllenize** (ಕ್ರಿ.)

Héllo ಹೆಲೊ (ಭಾ. ಅವ್ಯ., ನಾ., ಕ್ರಿ.) ಎಲೈ. = Hallo.

Helm[1] ಹೆಲ್ಮ್ (ನಾ.) (ಪ್ರಾಚೀ. ಪ್ರ.) ಉಕ್ಕು ಟೊಪ್ಪಿಗೆ; ಸೀಸಕ; ಶಿರಸ್ತ್ರಾಣ. (ಇಂಗ್ಲೆಂಡಿನ ಉ. ಪ್ರಾಂತದಲ್ಲಿ) ಬಿರುಗಾಳಿ ಮಳೆಯ ಮೊದಲು, ಅಥವಾ ಆ ಸಮಯದಲ್ಲಿ, ಬೆಟ್ಟದಮೇಲೆ ಕವಿಯುವ ಮೋಡ (= H.-cloud). **Helmed** (ಗು.)

Helm[2] ಹೆಲ್ಮ್ (ನಾ., ಕ್ರಿ. ಸಕ.) ಹಡಗಿನ ಕರ್ಣವನ್ನು ತಕ್ಕಂತೆ ತಿರುಗಿಸಲಾಗುವ ಚಕ್ರ; ಚುಕ್ಕಾಣಿ ಚಕ್ರ. ಈ ಚಕ್ರವನ್ನು ತಿರುಗಿಸಿದ ಕೋನದೂರ [(More, little, h.). Down (with the) h., Up (with the) h. ಗಾಳಿ ಬೀಸುವ ದಿಕ್ಕಿಗೆ, ಗಾಳಿಗೆದುರಾಗಿ, ಚುಕ್ಕಾಣಿ ಬರುವಂತೆ ಚುಕ್ಕಾಣಿ ಚಕ್ರವನ್ನಿಡು. Weather h., Lee h. ಗಾಳಿ ದಿಕ್ಕಿಗೆ, ಗಾಳಿಗೆದುರಾಗಿ, ಚುಕ್ಕಾಣಿ ಬರುವಂತಿಟ್ಟ ಚುಕ್ಕಾಣಿ ಚಕ್ರ]. (ರೂಪ.) ಆಡಳಿತ; ಅಧಿಕಾರ ಸೂತ್ರ (Take the h. ಅಧಿಕಾರ ಸೂತ್ರ ವಹಿಸು; ಆಡಳಿತ ತೆಗೆದುಕೊ). (ಕ್ರಿ.) (ಸಾ., ರೂಪ.) (ಅಧಿಕಾರ, ಆಡಳಿತ) ನಡಸು, ವಹಿಸು. **Hélmsman** ಹೆಲ್ಮ್ಸ್‌ಮ್ಯನ್ (ನಾ.) (ಚುಕ್ಕಾಣಿ) ನಡಸುವವನು; ಚುಕ್ಕಾಣಿಗ; ಕರ್ಣಧಾರ.

Hélmet ಹೆಲ್ಮೆಟ್ (ನಾ.) (ಸಿಪಾಯಿಗಳು, ಬೆಂಕಿ ಆರಿಸುವವರು, ಮೊ. ರ) ತಲೆಕಾಪು; ಸೀಸಕ; ಶಿರಸ್ತ್ರಾಣ. (ಉಷ್ಣ ದೇಶಗಳಲ್ಲಿ ಉಪಯೋಗಕ್ಕಿರುವ) ಗಟ್ಟಿಸಿದ ಉಣ್ಣೆಯ ಅಥವಾ ಬೆಂಡಿನ ಟೊಪ್ಪಿಗೆ. ಬಟ್ಟಿ ಪಾತ್ರೆಯ ಮೇಲ್ಭಾಗ, ತಲೆ. (ಸ. ವಿ.) ಕೆಲವು ಹೂವುಗಳಲ್ಲಿ ಕಮಾನಿನಾಕಾರದಲ್ಲಿ ಬಗ್ಗಿರುವ ಎಸಳುಸುತ್ತಿನ ಮೇಲ್ಭಾಗ. ಒಂದು ಜಾತಿಯ ಚಿಪ್ಪಿನಪ್ರಾಣಿಯ ಚಿಪ್ಪು. **Hélmeted** (ಗು.)

Hélminth ಹೆಲ್ಮಿಂತ್ (ನಾ.) ಕ್ರಿಮಿ (ಸಾ., ಕರುಳಿನಲ್ಲಿರುವಂಥದು). **Helmínthic** (ಗು.) ಕ್ರಿಮಿಯ. **Helmínthoid** (ಗು.) ಕ್ರಿಮಿಯಂಥ. **Helminthólogy** (ನಾ.) ಕ್ರಿಮಿ ಶಾಸ್ತ್ರ. **Helminthíasis** — ತೈಆಸಿಸ್ (ನಾ.) ದೇಹದಲ್ಲಿ ಕ್ರಿಮಿಗಳಿರುವ ರೋಗ; ಕ್ರಿಮಿ ರೋಗ.

Hélot ಹೆ(ಹೀ)ಲಟ್ (ನಾ.) (ಪ್ರಾಚೀನ ಸ್ಪಾರ್ಟಾ ರಾಜ್ಯದಲ್ಲಿ ಸ್ವತಂತ್ರ ಪ್ರಜೆಗೂ ಗುಲಾಮನಿಗೂ ಮಧ್ಯ ದರ್ಜೆಯಲ್ಲಿದ್ದ) ಒಂದು ತರಗತಿಯ ಸ್ವತಂತ್ರನಲ್ಲದ ಉಳುಮೆಯ ಜೀತಗಾರ; ಸ್ವತಂತ್ರನಲ್ಲದ ದುಡಿತಗಾರ; ಗುಲಾಮ; ದಾಸ. Drunken H. (ಸ್ಪಾರ್ಟಾ ಯುವಕರಿಗೆ ಮದ್ಯಪಾನ ವಿಷಯದಲ್ಲಿ ಎಚ್ಚರಿಕೆ ಕೊಡುವುದಕ್ಕಾಗಿ ಪ್ರದರ್ಶನ ಮಾಡುತ್ತಿದ್ದ) ಹೆಂಡ ಕುಡಿಸಿ ಅಮಲೇರಿಸಿದ ದುಡಿತಗಾರ. **Hélotism** (ನಾ.); **Hélotry** (ನಾ.) — ಸ್ಥಿತಿ; ದಾಸ್ಯ ವರ್ಗದವರು. **Hélotize** (ಕ್ರಿ. ಸಕ.)

Help ಹೆಲ್ಪ್ (ಕ್ರಿ. ಸಕ.) [(ಪ್ರಾಚೀ. ಪ್ರ.) ಭೂತ. Holp, ಭೂ. ಕೃ. Holpen; (ಈಗ) ಭೂತ., ಭೂ. ಕೃ. Helped] ಸಹಾಯ ಮಾಡು; ಉಪಕಾರ ಮಾಡು; ನೆರವಾಗು. [H. me to an answer. H. me out (of a difficulty). H. person on, off, with coat ಅಂಗಿ ಹಾಕಿಕೊಳ್ಳಲು, ಬಿಚ್ಚಿ ಹಾಕಲು, ಸಹಾಯ ಮಾಡು. H. (person) to (ಒಬ್ಬನಿಗೆ) ಉಣ್ಣಲಿಕ್ಕು, ಅನ್ನ ಹಾಕು]. (ಊಟಕ್ಕೆ ಕುಳಿತಾಗ, ಆಹಾರವನ್ನು) ಬಡಿಸು. ನಿವಾರಿಸು; ಬಿಡಿಸು; ತಪ್ಪಿಸು (It can't be helped ಅದನ್ನು ತಪ್ಪಿಸಲಾಗುವುದಿಲ್ಲ. Don't be longer than you can h. ಅನಿವಾರ್ಯವಾದುದಕ್ಕಿಂತ ಹೆಚ್ಚು ಕಾಲವಿರಬೇಡ). (ನಿಷೇಧಾರ್ಥ) ಮಾಡದೆ ಬಿಡು; ಮಾಡದಿರು (I cannot h. hoping that —. —ಎಂಬ ಆಸೆ ಬಿಟ್ಟಿರಲಾರೆ). So help me God (ಪ್ರಾರ್ಥನೆಗಳಲ್ಲಿ, ಭಾಷೆಯಿಟ್ಟುಕೊಳ್ಳುವಲ್ಲಿ: 'ನಾನು ಭಾಷೆಗೆ ತಪ್ಪುವುದಿಲ್ಲ', 'ನಾನು ಸತ್ಯವನ್ನು ಆಡುತ್ತಿದ್ದೇನೆ' ಎಂಬ ಪ್ರಮಾಣಗಳಲ್ಲಿ) ದೇವರು ನಡಸಿಕೊಡಲಿ!

Help (ನಾ.) ಸಹಾಯ; ಒತ್ತಾಸೆ; ಉಪಕಾರ; ನೆರವು (It is a great h. ಅದು ಬಹಳ ಸಹಾಯವಾಗಿದೆ). (ಅಮೆ. ಸಂ.) ಮನೆಯಾಳು. (Lady h. ಮನೆಯೊಡತಿಯ ಸಹಾಯಕಳು ಮತ್ತು ಸಂಗಾತಿ. Mother's h. ಹಿರಿಯ ದಾದಿ). ಉಪಾಯ; ಪರಿಹಾರ (There is no h. for it ಅದಕ್ಕೇನೂ ಪರಿಹಾರವಿಲ್ಲ, ಉಪಾಯವಿಲ್ಲ). (ಊಟ) ಬಡಿಸುವುದು. **Hélpful** (ಗು.) (ವ್ಯಕ್ತಿ ಅಥವಾ ವಸ್ತು) ಉಪಯೋಗವಾದ; ಸಹಾಯಕ; ನೆರವಾಗುವ; ಅನುಕೂಲವಾದ. **Hélpfully** (ಕ್ರಿ. ವಿ.); **Hélpfulness** (ನಾ.); **Hélping** (ನಾ.) (ಕ್ರಿಯಾರ್ಥಗಳಲ್ಲಿ); (ಊಟ) ಒಂದು ಸಲ ಬಡಿಸಿದ್ದು. **Hélpless** (ಗು.) ಸಹಾಯವಿಲ್ಲದ; ದಿಕ್ಕಿಲ್ಲದ; ಸಹಾಯ ಮಾಡಿಕೊಳ್ಳಲಾಗದ; ಕೈಲಾಗದ. **Hélplessly** (ಕ್ರಿ. ವಿ.); **Hélplessness** (ನಾ.); **Hélpmate** (ನಾ.) ಸಹಾಯಕ; ಸಂಗಾತಿ (ಸಾ., ಗಂಡ, ಹೆಂಡತಿ); ಸಹಧರ್ಮಿಣಿ. **Hélpmeet** (ನಾ.) (Helpmate ಎಂಬುದರ ಅಶುದ್ಧ ರೂಪ)

Hélter-skélter ಹೆಲ್ಟರ್ ಸ್ಕೆಲ್ಟರ್ (ಕ್ರಿ. ವಿ., ಗು., ನಾ.) ದಿಕ್ಕಾಪಾಲು (ಆದ); ಅವ್ಯವಸ್ಥೆ(ಯ); ಆತುರಾತುರವಾಗಿ; ದಡಬಡ(ನೆ); ಚೆಲ್ಲಾಪಿಲ್ಲಿ (ಯಾಗಿ); ಸಿಕ್ಕಾಬಟ್ಟೆ.

Helve ಹೆಲ್ವ್ (ನಾ.) ಆಯುಧದ ಹಿಡಿ; (ಕೊಡಲಿ, ಮೊ. ಗಳ) ಕಾವು. Throw the h. after the hatchet (Hatchet ನೋಡಿ)

Helvétian ಹೆಲ್ವೀಷ(ಷ್)ನ್ (ಗು., ನಾ.) ಸ್ವಿಟ್ಸರ್ಲೆಂಡಿನ(ವನು)

Hem[1] ಹೆಮ್ (ನಾ., ಕ್ರಿ. ಸಕ.) (ಬಟ್ಟೆ, ಮೊ. ಗಳ) ಅಂಚು (ಮು., ಅಂಚು ಮಡಿಸಿ ಹೊಲಿದದ್ದು); ಟಿಬ್ಬಿ. (ಕ್ರಿ.) ಅಂಚು ಮಡಿಸಿ ಹೊಲಿ. H. in, about, round ಸುತ್ತುಗಟ್ಟು; ಒಳಗೆ ಕೂಡು; ಬಂಧಿಸು.

Hem[2] ಹೆಮ್ (ಭಾವ. ಅವ್ಯ., ನಾ., ಕ್ರಿ. ಅಕ.) (ಗಮನ ಸೆಳೆಯುವ, ಸಂಶಯ ಸೂಚಿಸುವ, ಪದ) ಹೆಮ್! ಹೆಮ್ಮೆನ್ನು(ವುದು); ಗಂಟಲು ಸರಿಮಾಡಿಕೊ. (ಮಾತನಾಡುವಾಗ) ಅನುಮಾನಿಸು, ತಡವರಿಸು.

Hemátic, &c. **Haem-** ನೋಡಿ.

Hemi- ಹೆಮಿ —, ಹೀಮಿ — (ಸ. ಪೂ. ಪ.) ಅರೆ —; ಅರ್ಧ —. **Hémicycle** (ನಾ.) ಅರ್ಧ ಚಂದ್ರಾಕೃತಿ; ಅರ್ಧ ವೃತ್ತ. **Hemihédral** — ಹೀ(ಹೆ)ಡ್ರಲ್ (ಗು.) (ಸ್ಫಟಿಕ) ಸಹಜವಾಗಿರಬೇಕಾದ ಮುಖಗಳಲ್ಲಿ ಅರ್ಧಸಂಖ್ಯೆ ಮಾತ್ರವಿರುವ. **Hemimetábola** — ಮಿಟ್ಯಾಬೊಲ (ನಾ.) ಅಪೂರ್ಣ ರೂಪಾಂತರ ಹೊಂದುವ ಹುಳುಗಳು. **Hemiplégia** — ಪ್ಲೀಜಿಯ (ನಾ.) ಪಾರ್ಶ್ವ ವಾಯು.

Hémisphere ಹೆಮಿಸ್ಫಿಯರ್ (ನಾ.) ಅರ್ಧ ಗೋಳ; ಗೋಳಾರ್ಧ; (ಮು., ವಿಷುವದ್ವೃತ್ತದಿಂದಾಗಲಿ, ಸಂಕ್ರಾಂತಿ ವೃತ್ತದಿಂದಾಗಲಿ ಭಾಗಿಸಿದ) ಖಗೋಳಾರ್ಧ. ಭೂಮಿಯ ಪೂರ್ವಾರ್ಧ ಗೋಳ ಅಥವಾ ಪಶ್ಚಿಮಾರ್ಧ ಗೋಳ (Eastern h. ಯೂರೋಪ್, ಏಷ್ಯ ಮತ್ತು ಆಫ್ರಿಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಖಂಡಗಳನ್ನುಳ್ಳದ್ದು. Western h. ಉ. ಮತ್ತು ದ. ಅಮೆರಿಕ ಖಂಡಗಳನ್ನುಳ್ಳದ್ದು). [(ಸಮಭಾಜಕ ವೃತ್ತದಿಂದ ಭಾಗಿಸಿದ) Northern h. ಉತ್ತರಾರ್ಧ ಗೋಳ, Southern h. ದಕ್ಷಿಣಾರ್ಧ ಗೋಳ]. Magdeburg hemispheres ವಾಯುಮಂಡಲದ ಒತ್ತಡವನ್ನು ನಿದರ್ಶನಮಾಡುವ ಪ್ರಯೋಗದಲ್ಲಿ, ಸಂದು ಬಿಡದೆ ಒಂದಕ್ಕೊಂದು ಹೊಂದಿಕೊಳ್ಳುವ ಹಿತ್ತಾಳೆಯ ಎರಡು ಪೊಳ್ಳು ಅರ್ಧಗೋಳಗಳನ್ನು ತಕ್ಕಂತೆ ಹೊಂದಿಸಿ, ಒಳವಾಯುವನ್ನು ವಾಯುರೇಚಕದ ಮೂಲಕ ಹೊರಡಿಸಿಬಿಟ್ಟರೆ ಅವು ಬಿಗಿಯಾಗಿ ಕಚ್ಚಿಕೊಳ್ಳುವ ಎರಡು ಅರ್ಧಗೋಳಗಳು: 'ಮ್ಯಾಗ್ಡಿಬರ್ಗ್' ಅರ್ಧಗೋಳಗಳು. (ಜರ್ಮನಿಯ ಒಬ್ಬ ವೈಜ್ಞಾನಿಕನ ಸ್ಥಳವಾದ Magdeburg ಪಟ್ಟಣದ ಹೆಸರಿನಿಂದ). **Hemisphéric(al)** (ಗು.)

Hémistich ಹೆಮಿಸ್ಟಿಕ್ (ನಾ.) (ಪದ್ಯದ) ಅರ್ಧ ಪಾದ; ಅರ್ಧ ಚರಣ.

Hémlock ಹೆಮ್‌ಲಾಕ್ (ನಾ.) (ಉರಿಗೆ ಅಥವಾ ನೋವಿಗೆ ಬಲವಾದ ಉಪಶಮನಕಾರಿಯಾಗಿ ಉಪಯೋಗಿಸುವ) ಒಂದು ವಿಷ ಸಸ್ಯ; ಇದರಿಂದ ತಯಾರಿಸಿದ ವಿಷ ರಸ, ಕಷಾಯ.

Hémorrhage, &c. Haem- ನೋಡಿ.

Hemp ಹೆಂಪ್ (ನಾ.) ಪುಂಡಿ ಗಿಡ; ಸಣಬಿನ ಗಿಡ; ಬಂಗಿ, ಗಾಂಜಾ (ಗಿಡ). (ಹಗ್ಗ, ದಪ್ಪ ಬಟ್ಟೆ, ಮೊ. ವನ್ನು ಮಾಡುವ) ಇದರ ತೊಗಟೆಯ ನಾರು; ಪುಂಡಿ ನಾರು; ಸಣಬು; ಕಿತ್ತಾ ನಾರು. (ಹಾಸ್ಯ ಪ್ರ.) ನೇಣು; ಉರುಲು (ನೇಣು ಹಾಕಲು ಉಪಯೋಗಿಸುವ ಇದರ ಹಗ್ಗದಿಂದ). ನಾರು ತೆಗೆಯಬಹುದಾದ ಹಲವು ಜಾತಿಯ ಗಿಡ(ಗಳು). =Bhang, Hashish. **Hémpen** (ಗು.) ಸಣಬಿನ; ಸಣಬನ್ನು ಹೋಲುವ; ಸಣಬಿನಿಂದ ಮಾಡಿದ.

Hém-stitch ಹೆಮ್‌ಸ್ಟಿಚ್ (ಕ್ರಿ. ಸಕ., ನಾ.) (ಬಟ್ಟೆ, ಮೊ. ಕ್ಕೆ) ಒಂದು ಬಗೆಯ ಅಲಂಕಾರದ ಅಂಚುಹೊಲಿಗೆ (ಹಾಕು)

Hen ಹೆನ್ (ನಾ.) (ಸಾಕಿದ) ಹೆಣ್ಣು ಕೋಳಿ; ಹೇಂಟೆ. (ಇತರ ಹಕ್ಕಿಗಳ ವಿಷಯದಲ್ಲಿ) ಹೆಣ್ಣು (ಎರಡನೆಯ ಪದವಾಗಿ ಪ್ರ.: Guinea-h., pea-hen). Like a h. with one chicken ಹುಚ್ಚು ಗಡಿಬಿಡಿಯಿಂದ, —ಸಡಗರದಿಂದ. H. & chickens ಯೂರೋಪಿನ ಹಲವು ಹೂವು ಗಿಡಗಳ ಜಾತಿ. **Henbane** ಒಂದು ಜಾತಿಯ ವಿಷ ಸಸ್ಯ. ಇದರಿಂದ ತೆಗೆದ ಔಷಧವಸ್ತು. **H.-coop** (ಕೋಳಿಗಳನ್ನು ಕೂಡಿಡುವ) ಹಂಜರ. **H. crab, lobster** ಹೆಣ್ಣು ಏಡಿ, ನಳ್ಳಿ. **H.-harrier** ನೀಲಿ ಡೇಗೆ. **H.-hearted** ಪುಕ್ಕಲೆದೆಯ; ಹೆಣ್ಣಿಗನಾದ. **H.-party** ಬರಿ ಹೆಂಗಸರ ಗೋಷ್ಠಿ. **H.-pecked** ಹೆಂಡತಿಯ ಅಧೀನದಲ್ಲಿರುವ; ಪತ್ನೀ ದಾಸ. **H.-roost** (ರಾತ್ರಿ) ಕೋಳಿಗಳು ನಿದ್ದೆ ಹೋಗುವ ನೆಲೆ, ಸ್ಥಳ. **Hénny** ಹೆನಿ (ಗು., ನಾ.) ಹೇಂಟೆಯಂಥ (ಹುಂಜ)

Hence ಹೆನ್ಸ್ (ಕ್ರಿ. ವಿ.) (ಪ್ರಾಚೀ. ಪ್ರ.) ಇಲ್ಲಿಂದ; ಇದರಿಂದ (ಸಾ., ಅನಾವಶ್ಯಕವಾದ ದ್ವಿರುಕ್ತಿಯಲ್ಲಿ: From h.); ಈ ಕಾರಣದಿಂದ; ಇನ್ನು ಮೇಲೆ; ಇದರ ಫಲವಾಗಿ; ಆದುದರಿಂದ. Hence! (ಕಾವ್ಯ ಮತ್ತು ಅಲಂ.) ತೊಲಗು! ತೊಲಗಿಹೋಗು! H. with ತೆಗೆದುಕೊಂಡು ಹೋಗು. Go h. ಹಾಳಾಗಿ ಹೋಗು; ಸಾಯಿ. **Henceforth, Henceforward** ಈ ಹೊತ್ತಿನಿಂದ; ಇನ್ನು ಮುಂದೆ; ಇನ್ನು ಮೇಲೆ. Five years h. ಈಗಿನಿಂದ ಐದು ವರ್ಷದಲ್ಲಿ.

Hénchman ಹೆನ್ಚ್‌ಮ್ಯನ್ (ನಾ.) (ಚರಿತ್ರೆ) ವೀರಾನುಚರ; ವೀರಭಟನ ಸೇವಕ; (ಪ್ರಸಿದ್ಧ ಪುರುಷನ ಅಥವಾ ರಾಜಕುಮಾರನ) ಗೌರವದ ಅನುಚರ; ಹಿಂದಾಳು. (ಸ್ಕಾಟ್ಲೆಂಡಿನ) ಗುಡ್ಡನಾಡಿನ ಹೆಗ್ಗಡೆಯ ಮುಖ್ಯಾನುಚರ. ನಂಬಿಕೆಯ ಅನುಯಾಯಿ. (ರಾಜಕೀಯ ನಡವಳಿಯಲ್ಲಿ) ಬೆಂಬಲ ಕೊಡುವವನು (ಮು., ಅಮೆ. ಸಂ. ದಲ್ಲಿ ಹಣ ಪಡೆದು ಬೆಂಬಲ ಕೊಡುವವನು)

Hendeca- ಹೆಂಡೆಕ— (ಸ. ಪೂ. ಪ.) ಹನ್ನೊಂದು—; ಏಕಾದಶ—. **Hendécagon** (ನಾ.) ಏಕಾದಶ ಭುಜಗಳ ಸರಳ ರೇಖಾಕೃತಿ. **Hendecasyllábic** (ಗು., ನಾ.) ಹನ್ನೊಂದು ಅಕ್ಷರದ (ಪಾದ); ಏಕಾದಶಾಕ್ಷರಿ.

Hendíadys ಹೆಂಡೈಅಡಿಸ್ (ನಾ.) (ಇಂಗ್ಲಿಷ್ ವ್ಯಾ. ಮತ್ತು ಅಲಂ.) ಒಂದು ಬಗೆಯ ಪ್ರಯೋಗ: ಒಂದು ಮಿಶ್ರಭಾವವನ್ನು (ವಿಶೇಷ್ಯ ವಿಶೇಷಣಗಳ ಮೂಲಕ ವ್ಯಕ್ತಗೊಳಿಸದೆ) ಸಂಬಂಧಾವ್ಯಯದಿಂದ ಕೂಡಿದ ಎರಡು (ನಾಮ)ಪದಗಳ ಮೂಲಕ ಹೇಳುವುದು (ಉದಾ., In golden goblets ಎಂಬುದಕ್ಕೆ ಬದಲು In goblets & gold ಎಂದು)

Hénna ಹೆನ (ನಾ.) ಗೋರಂಟಿ, ಮದರಂಗಿ (ಗಿಡ); (ಮೈಬಣ್ಣಕ್ಕಾಗಿ ಉಪಯೋಗಿಸುವ) ಇದರ ಚಿಗುರು ಮತ್ತು ಎಲೆಗಳು.

Hénotheism ಹೆನೊಥಿಯಿಸ್ಮ್ (ನಾ.) (ತಾನು ನಂಬಿರುವ ದೇವರು ಒಬ್ಬನೇ ದೇವರೆಂದು ಪ್ರತಿಪಾದಿಸದೆ) ಒಂದೇ ದೇವರಲ್ಲಿಟ್ಟಿರುವ ನಂಬಿಕೆ, ಭಕ್ತಿ; ಏಕದೇವೋಪಾಸನೆ.

Hepátic ಹಿಪ್ಯಾಟಿಕ್ (ಗು.) ಯಕೃತ್ತಿನ; ಯಕೃತ್ತಿಗೆ ಹಿತಕಾರಿಯಾದ. ಯಕೃದ್ವರ್ಣದ. **Hépatize** ಹೆಪಟೈಸ್ (ಕ್ರಿ. ಸಕ.) (ಶ್ವಾಸಕೋಶಗಳನ್ನು ರಕ್ತಸಾಂದ್ರತೆಯಿಂದ) ಯಕೃತ್ ಪದಾರ್ಥ(ದಂತೆ) ಮಾಡು. **Hepatizátion** (ನಾ.); **Hepatítis** ಹೆಪಟೈಟಿಸ್ (ನಾ.) (ವೈ. ಶಾ.) ಯಕೃತ್ತಿನ ಊತ. **Hepato-** ಹೆಪಟೊ— (ಸ. ಪೂ. ಪ.) ಯಕೃತ್—. **Hepatógenous** (ಗು.) ಯಕೃತ್ತಿನಲ್ಲಿ ಹುಟ್ಟುವ; ಯಕೃತ್ ಜನ್ಯ.

Hepta- ಹೆಪ್ಟ— (ಸ. ಪೂ. ಪ.) ಏಳು—; ಸಪ್ತ—. **Héptachord** (ನಾ.) ಏಳು ತಂತಿಯ ವಾದ್ಯ; ಸಪ್ತ ಸ್ವರ ಗ್ರಾಮ. **Héptaglot** —ಗ್ಲಾಟ್ (ಗು., ನಾ.) ಸಪ್ತಭಾಷಾ (ಪುಸ್ತಕ); ಸಪ್ತಭಾಷಿ. **Héptagon** (—ಗಾನ್) (ನಾ.) ಸಪ್ತ ಭುಜಗಳುಳ್ಳ ಸರಳ ರೇಖಾಕೃತಿ: ಸಪ್ತ ಭುಜಿ. **Heptágonal** ಹೆಪ್ಟ್ಯಾಗೊನಲ್ (ಗು.); **Heptahédron** — ಹೀ(ಹೆ)ಡ್ರನ್ (ನಾ.) ಸಪ್ತ ಮುಖಗಳುಳ್ಳ ಘನಾಕೃತಿ; ಸಪ್ತ ಮುಖಿ. **Heptasyllábic** (ಗು.) ಏಳಕ್ಷರದ; ಸಪ್ತಾಕ್ಷರಿ. **Héptateuch** ಹೆಪ್ಟಟ್ಯೂಕ್ (ನಾ.) (ಬೈಬಲ್ಲಿನ) ಮೊದಲನೆಯ ಏಳು ಪ್ರಕರಣಗಳು.

Héptad ಹೆಪ್ಟ್ಯಡ್ (ನಾ.) ಏಳರ ತಂಡ, ಗುಂಪು; ಸಪ್ತಕ. (ರ. ವಿ.) ಏಳು ಜಲಜನಕ ಪರಮಾಣುಗಳಿಗೆ ಸಮನಾದ ಪರಮಾಣು ಅಥವಾ ಅಣು: ಸಪ್ತಯೋಗಿ.

Héptarchy ಹೆಪ್ಟಾರ್ಕಿ (ನಾ.) ಏಳು ಮಂದಿ ಆಡಳಿತಗಾರರು ನಡಸುವ ಸರ್ಕಾರ; ಏಳ್ವರಾಡಳಿತ(ದ ಸರ್ಕಾರ); ಸಪ್ತ ಪ್ರಭುತ್ವ. (ಹಿಂದೆ ಬ್ರಿಟನ್ನಿನಲ್ಲಿದ್ದ ಆ್ಯಂಗಲ್ಸ್ ಮತ್ತು ಸ್ಯಾಕ್ಸನರ) ಏಳು ರಾಜ್ಯಗಳು **Heptárchic(al)** (ಗು.)

Her ಹರ್ (ಸ. ನಾ.; ಗು.) ಅವಳನ್ನು; ಆಕೆಯನ್ನು [Was that her (ಬಳ. ಮಾ.) ಅದು ಅವಳೊ!] ಅವಳ; ಆಕೆಯ [Hers ಅವಳದು. It is her hat. It is hers. My father & hers suffer(s) for it]. **Herself** ಹರ್‌ಸೆಲ್ಫ್ (ಸ. ನಾ.) (ಅವಳು ಎಂಬುದನ್ನು ಒತ್ತಿ ಹೇಳುವಾಗಲೂ ಆತ್ಮಾರ್ಥದಲ್ಲೂ ಪ್ರ.) ಅವಳೇ; ಆಕೆಯೇ. She said it h. ಅದನ್ನು ಅವಳೇ ಹೇಳಿದಳು. She is not h. ಅವಳು ತನ್ನ ಎಂದಿನ (ದೇಹದ, ಮನಸ್ಸಿನ) ಸ್ಥಿತಿಯಲ್ಲಿಲ್ಲ.

Hérald ಹೆರಲ್ಡ್ (ನಾ., ಕ್ರಿ. ಸಕ.) ಪ್ರಭುತ್ವದ ನಿರ್ಣಯಗಳನ್ನು ಘೋಷಣೆ ಮಾಡುತ್ತಿದ್ದ, ರಾಜ ರಾಜರುಗಳಿಗೆ ಸಂದೇಶಗಳನ್ನು ಒಯ್ಯುತ್ತಿದ್ದ, ವೀರಭಟರ ಕ್ರೀಡಾ ಯುದ್ಧಗಳಲ್ಲಿ, ಸ್ಪರ್ಧೆಗಳಲ್ಲಿ, ಪಂಚಾಯಿತನಾಗಿರುತ್ತಿದ್ದ, ಪ್ರಭುತ್ವ ಸಂಬಂಧದ ಹಲವು ಸಂಪ್ರದಾಯಗಳೂ ಉತ್ಸವಗಳೂ ನೆರವೇರಲು ಏರ್ಪಡಿಸುತ್ತಿದ್ದ, ವಂಶರಾಂಛನಗಳನ್ನುಪಯೋಗಿಸುವಲ್ಲಿ ಕ್ರಮಾಚರಣೆಯನ್ನನುಸರಿಸುವಂತೆ ಮಾಡುತ್ತಿದ್ದ, ಶ್ರೀಮಂತರ ಸ್ಥಾನಗಳ ತಾರತಮ್ಯ ವಿಚಾರಗಳನ್ನು ತೀರ್ಮಾನಿಸುತ್ತಿದ್ದ, ವಂಶರಾಂಛನಗಳಿಗೆ ಹಕ್ಕುಳ್ಳವರ ವಂಶಾವಳಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯನ್ನೂ ಹೆಸರುಗಳನ್ನೂ ದಾಖಲೆಯಿಡುತ್ತಿದ್ದ, ಅಧಿಕಾರಿ ; ರಾಜ ಘೋಷಕ ; ದೂತ ; ಸೂತ. [Heralds' College (ಈಗ) ವಂಶಾವಳಿಗಳನ್ನು ದಾಖಲಿಡುವ ಮತ್ತು ವಂಶಲಾಂಛನಗಳನ್ನು ಕೊಡುವ ಸಂಸ್ಥೆ]. ಸುದ್ದಿಗಾರ (ವರ್ತಮಾನ ಪತ್ರಿಕೆಯ ಹೆಸರಾಗಿ : The Herald, The Daily, National, Herald, &c.). ಅಗ್ರ ಗಾಮಿ; ಮುನ್ ಸೂಚಕ. (ಕ್ರಿ.) ಬರವನ್ನು ಸೂಚಿಸು, ಸಾರು, ಘೋಷಿಸು. ಒಳಕ್ಕೆ ಕರೆತಂದು ಬಿಡು. **Heráldic** ಹೆರ್ಯಾಲ್ಡಿಕ್ (ಗು.) ವಂಶಲಾಂಛನ ವಿದ್ಯೆಯ. **Héraldry** (ನಾ.) ವಂಶಲಾಂಛನ ವಿದ್ಯೆ ; ವಂಶಲಾಂಛನಗಳು ; ವಂಶಲಾಂಛನ ವೈಭವ.

Herb ಹರ್ಬ್ (ನಾ.) ತಾಳಿನಲ್ಲಿ ದಾರುವಿಲ್ಲದ, ತಾಳು ಬಹು ಕಾಲ ನಿಲ್ಲದ, —ಗಿಡ, ಸಸ್ಯ ; ಎಲೆ, ತಾಳು, ಮೊ. ವನ್ನು ಆಹಾರಕ್ಕಾಗಿ, ಔಷಧಕ್ಕಾಗಿ, ಸುವಾಸನೆಗಾಗಿ, ರುಚಿಗಾಗಿ, ಉಪಯೋಗಿಸುವ ಸಸ್ಯ. ಮೂಲಿಕೆ ; ನಾರು ಬೇರು ; ಓಷಧಿ ; ಹಸುರು. H. beer ಮೂಲಿಕೆಗಳಿಂದ ತಯಾರಿಸಿದ 'ಬಿಯರ್' ಮದ್ಯ. **Herbáceous** ಹರ್ಬೇಷಸ್ (ಗು.) ಓಷಧಿಯ ಸ್ವಭಾವದ ; ಪರ್ಣ ಸ್ವರೂಪದ. **Herbíferous** (ಗು.) ಮೆತು ತಾಳಿನ ಗಿಡಗಳುಳ್ಳ. **Herbívorous** (ಗು.) ಸಸ್ಯಾಹಾರಿ ; ಶಾಕಾಹಾರಿ. **Hérbless** (ಗು.) ; **Hérbage** ಹರ್ಬೇಜ್ (ನಾ.) ಮೆತು ತಾಳಿನ ಸಸ್ಯಗಳು ; ಪಯಿರು ಪಚ್ಚೆ ; ಸೊಪ್ಪು ಸದೆ. (ನ್ಯಾ. ಶಾ.) (ಮತ್ತೊಬ್ಬನ ಜಮೀನಿನಲ್ಲಿ ತನಗಿರುವ) ಮೇವುಹಕ್ಕು. **Hérbal** (ಗು., ನಾ.) ಮೆತು ಸಸ್ಯಗಳ (ವಿವರಣ ಗ್ರಂಥ) ; ಓಷಧಿ ವಿವರಣ (ಗ್ರಂಥ). **Hérbalist** (ನಾ.) ಸಸ್ಯಗಳ ಪರಿಶ್ರಮವುಳ್ಳವನು ; ಓಷಧಿ ಶಾಸ್ತ್ರಜ್ಞ ; (ಈಗ) ಪುರಾತನ ಸಸ್ಯವಿಜ್ಞಾನ ಲೇಖಕ. ಔಷಧ ಸಸ್ಯಗಳ ವ್ಯಾಪಾರಿ. **Herbárium** ಹರ್ಬೇರಿಯಂ (ನಾ.) ಒಣಸಸ್ಯ ಸಂಗ್ರಹಣ (ಪುಸ್ತಕ, ಕೋಶ, ಕೊಠಡಿ). **Hérborize** (ಕ್ರಿ. ಅಕ.) ಓಷಧಿಗಳನ್ನು ಸಂಗ್ರಹಿಸು ; (ಮು., ಸಸ್ಯಗಳ ಬೆಳವಣಿಗೆಯನ್ನು ವೀಕ್ಷಿಸುತ್ತ) ಸಸ್ಯ ಶಾಸ್ತ್ರಾಧ್ಯಾಯನ ಮಾಡು. **Herborizátion** (ನಾ.) ; **Hérborist** (ನಾ.) ; **Hérby** (ಗು.) ಓಷಧಿ ಸಮೃದ್ಧಿಯುಳ್ಳ ; ಪಯಿರು ಪಚ್ಚೆಯ ; ಓಷಧಿ ಸ್ವಭಾವದ.

Hércules ಹರ್ಕ್ಯುಲೀಸ್ (ನಾ.) (ಗ್ರೀಕ್ ಮತ್ತು ರೋಮನ್ ಪುರಾಣ) (ಅತ್ಯಂತ ಶ್ರಮಸಾಧ್ಯವಾದ ಹನ್ನೆರಡು ಸಾಹಸ ಕಾರ್ಯಗಳನ್ನು ನಿರ್ವಹಿಸಿದ) ಅತ್ಯಧಿಕ ಬಲಶಾಲಿಯಾದ ಒಬ್ಬ ವೀರ : 'ಹರ್ಕ್ಯುಲೀಸ್'. ಅತಿ ಬಲಿಷ್ಠ. ಉ. ದಿಕ್ಕಿನಲ್ಲಿ ಒಂದು ನಕ್ಷತ್ರಪುಂಜ. Pillars of H. ಜಿಬ್ರಾಲ್ಟರ್ ಜಲಸಂಧಿಯ ಇಕ್ಕೆಲದ ಕಲ್ಲುಬಂಡೆಗಳು. (ರೂಪ.) ಪರಮಾವಧಿ. H. beetle (ದ. ಅಮೇರಿಕದ ಐದಂಗುಲ ಉದ್ದದ) ದೊಡ್ಡ ಜೀರುಂಡೆ. H. powder (ಗಣಿಯ ಕೆಲಸದಲ್ಲಿ ಉಪಯೋಗಿಸುವ) ಒಂದು ಸಿಡಿಮದ್ದು. **Herculéan** ಹರ್ಕ್ಯುಲಿಯನ್ (ಗು.) ಹರ್ಕ್ಯುಲೀಸಿನ ; (ಹರ್ಕ್ಯುಲೀಸಿನಂತೆ) ಬಲಿಷ್ಠನಾದ ; (ಹರ್ಕ್ಯುಲೀಸಿನ ಸಾಹಸ ಕಾರ್ಯಗಳಂತೆ) ಅತ್ಯಂತ ಶ್ರಮಸಾಧ್ಯವಾದ.

Herd ಹರ್ಡ್ (ನಾ., ಕ್ರಿ.) (ಪ್ರಾಣಿಗಳ, ಮು., ಒಟ್ಟಿಗೆ ಮೇಯುತ್ತಿರುವ, ಹೋಗುತ್ತಿರುವ, ದನಗಳ) ಮಂದೆ, ಹಿಂಡು. (ತಿರಸ್ಕಾರವಾಗಿ) ಜನ ಜಂಗುಳಿ ; ಗೊಂದಣಿ; ಗುಮ್ಮಿ [(ಮು., The h., The common h., The vulgar h. ಮಂದಿ). The h. instinct (ಮನಶ್ಶಾಸ್ತ್ರರೀತ್ಯಾ ಪರಿಣಾಮಕಾರಿಯಾದ) ಸಂಘಪ್ರೇಮವೆಂಬ ಹುಟ್ಟುಗುಣ, ಜಾಯಮಾನ ; ಸಮುದಾಯ ಪ್ರವೃತ್ತಿ ; ಹಿಂಡುಗೂಡುವ ಸ್ವಭಾವ. H.-book (ದನಗಳ ಅಥವಾ ಹಂದಿಗಳ) ವಂಶ ಪುಸ್ತಕ ; ಪಶುವಂಶ ಪುಸ್ತಕ]. ಗೊಲ್ಲ ; ದನಕಾಯುವವನು [ಮು., Cowherd (ಗೋವಳಗ), Swineherd (ಹಂದಿ ಕಾಯುವವನು), ಮೊ. ರೂಪಗಳಲ್ಲಿ] . **Hérdsman** (ನಾ.) ಗೊಲ್ಲ ; ಗೋವಳ ; ಮಂದೆಯವನು ; ದನ ಕಾಯುವವನು.

Herd (ಕ್ರಿ.) ಮಂದೆಯಾಗಿ ಹೋಗು ; ಮಂದೆಗಟ್ಟಿಕೊಂಡು ಹೋಗು ; ಹಿಂಡುಗಟ್ಟು (ಮು., ಮನುಷ್ಯರ ವಿಷಯದಲ್ಲಿ ರೂಪ.); (ವಸ್ತುಗಳು) ಒಟ್ಟುಗೂಡು ; ಗುಂಪಾಗು (*Together, with* ಉಪ, ಧೋಷನ). (ಕುರಿ, ದನ) ಕಾಯಿ,

Here ಹಿಯರ್ (ಕ್ರಿ. ವಿ., ನಾ.) ಇಲ್ಲಿ ; ಈ ಜನ್ಮದಲ್ಲಿ ; ಇಹ ಲೋಕದಲ್ಲಿ (=h. below) ; ಈ ಪ್ರಸ್ತಾವದಲ್ಲಿ ; ಈ ವಿಷಯದಲ್ಲಿ ; ಇದರಲ್ಲಿ ; ಈ ಸ್ಥಳಕ್ಕೆ [H. ! (ಹಾಜರಿ ಹೇಳುವಾಗ) ಇದ್ದೇನೆ ; ಹಾಜರ್. Here's a health to you (ಆರೋಗ್ಯ ಬಯಸಿ ಪಾನಮಾಡುವಾಗ) ಇಗೋ ! ನಿಮಗೆ ಆರೋಗ್ಯವುಂಟಾಗಲಿ ! Look h. (ಗಮನ ಸೆಳೆಯುವಾಗ, ವಿರೋಧ ಸೂಚಿಸುವಾಗ) ಇಲ್ಲಿ ನೋಡು ! I don't belong h. ನಾನು ಇಲ್ಲಿಯವನಲ್ಲ. H. & there ಇಲ್ಲೂ ಅಲ್ಲೂ ; ಹಲವೆಡೆ. H., there & everywhere ಎಲ್ಲೆಲ್ಲೂ. Neither h. nor there ಇಲ್ಲಿಯೂ ಇಲ್ಲ, ಅಲ್ಲಿಯೂ ಇಲ್ಲ ; ಅಪ್ರಸ್ತುತ. H. goes ! (ಬಳ. ಮಾ.) (ಧೈರ್ಯದ ಕೆಲಸದ ಆರಂಭವನ್ನು ಸೂಚಿಸುವಾಗ) ಇಗೋ ಆರಂಭವಾಯಿತು !] (ನಾ.) ಈ ಸ್ಥಳ ; ಈ ಸಂದರ್ಭ ; ಈ ಎಡೆ (From, to, near, h.). **Hereabout(s)** ಎಲ್ಲಿಯೊ ಇಲ್ಲೇ ಹತ್ತಿರದಲ್ಲಿ ; ಇಲ್ಲೆಲ್ಲೋ. **Hereafter** (ಕ್ರಿ. ವಿ.) ಇನ್ನು ಮುಂದೆ ; ಇನ್ನು ಮೇಲೆ ; ಪರ ಲೋಕದಲ್ಲಿ. (ನಾ.) ಭವಿಷ್ಯ ; ಮುಂದಿನದು ; ಪರ ಲೋಕ. **Hereat** (ಪ್ರಾಚೀ. ಪ್ರ.) ಇದನ್ನು ನೋಡಿ ; ಇದರ ಫಲವಾಗಿ. **Hereby** ಇದರಿಂದ ; ಇದರ ಫಲವಾಗಿ. **Herein** ಈ ಸಂದರ್ಭದಲ್ಲಿ ; ಇದರಲ್ಲಿ. **Hereinafter** (ದಸ್ತಾವೇಜು, ಮೊ. ಗಳಲ್ಲಿ) ಈ ಕೆಳಗೆ, ಮುಂದೆ. **Hereinbefore** (ದಸ್ತಾವೇಜು, ಮೊ. ಗಳಲ್ಲಿ) ಪೂರ್ವ ಭಾಗದಲ್ಲಿ ; ಈ ಹಿಂದೆ. **Hereof** (ಪ್ರಾಚೀ. ಪ್ರ.) ಇದರ. **Hereto** (ಪ್ರಾಚೀ. ಪ್ರ.) ಇದಕ್ಕೆ ; ಈ ವಿಷಯಕ್ಕೆ. **Heretofore** ಇದಕ್ಕೆ ಮುಂಚೆ ; ಪೂರ್ವದಲ್ಲಿ. **Hereunder** (ಪುಸ್ತಕ, ಮೊ. ಗಳಲ್ಲಿ) ಈ ಕೆಳಗೆ. **Hereupon** ಇದಾದ ಮೇಲೆ ; ಇದರ ಪರಿಣಾಮವಾಗಿ ; ಇದರಿಂದ. **Herewith** (ಮು., ಕಾಗದದಲ್ಲಿಟ್ಟಿರುವ ಸೇರಿಕೆಯ ವಿಷಯದಲ್ಲಿ) ಇದರೊಡನೆ.

Heréditable. **Heredity** ನೋಡಿ.

Herédity ಹಿರೆಡಿಟಿ (ನಾ.) ತನ್ನಂತೆ ರೂಪ ಗುಣಗಳಿರುವ ಸಂತತಿಯನ್ನು ಹುಟ್ಟಿಸುವ ಪ್ರವೃತ್ತಿ ; ಅನುವಂಶೀಯತೆ ; ವಂಶಾನುಗತತ್ವ. **Heréditable** (ಗು.) ವಂಶ ಪಾರಂಪರ್ಯವಾಗಿ ಪಡೆಯಬಹುದಾದ, ಅನುಭವಿಸಬಹುದಾದ ; ಪರಂಪರಾ ಪ್ರಾಪ್ಯ. **Hereditabílity** (ನಾ.) ; **Herédítament** ಹೆರಿಡಿಟಮೆಂಟ್, **Heré-** ಹಿ(ಹೆ)ರೆ— (ನಾ.) ಪಾರಂಪರ್ಯವಾಗಿ ಪಡೆಯಲಾಗುವ ಆಸ್ತಿ ; ಸ್ಥಿರ ಸ್ವತ್ತು ; ಪಿತ್ರಾರ್ಜಿತ (ಸ್ವತ್ತು). **Hereditárian** ಹಿ(ಹೆ)ರೆಡಿಟೇರಿಯನ್ (ನಾ.) ಅನುವಂಶ ವಾದಿ. **Heréditary** (ಗು.) ವಂಶ ಪಾರಂಪರ್ಯವಾಗಿ ಬರುವ ; ಪರಂಪರಾಗತ ; ಅನುವಂಶಿಕ. (ರೋಗ, ಹುಟ್ಟುಗುಣ, ಮೊ. ವು) ತಲೆಮೊರೆಯಿಂದ ತಲೆಮೊರೆಗೆ ಸಾಗಿ ಬರುವ (H. creed, hatred ವಂಶಾನುಗತವಾಗಿ ಬಂದ ಮತ, ದ್ವೇಷ). ಪಿತ್ರಾರ್ಜಿತ (ಹಕ್ಕುಗಳು). **Heréditarily** (ಕ್ರಿ. ವಿ.) ; **Heréditariness** (ನಾ.) ; **Heréditism** (ನಾ.) ಅನುವಂಶಿಕ ತತ್ತ್ವ.

Héresy ಹೆರೆಸಿ (ನಾ.) ಶಾಸ್ತ್ರೀಯ ಸಂಪ್ರದಾಯಕ್ಕೆ ವಿರೋಧವಾದ ಅಭಿಪ್ರಾಯ ; ಪಾಷಂಡ ವಾದ ; ಯಾವ ವಿಷಯದಲ್ಲಾದರೂ ಅಂಗೀಕೃತ ಅಭಿಪ್ರಾಯಕ್ಕೆ ವಿರೋಧವಾದದ್ದು. **Herésiarch** (ನಾ.) ಪಾಷಂಡ ಮತ ಸ್ಥಾಪಕ, ಗುರು, ನಾಯಕ. **Héresiólogist** — ಆಲೊಜಿಸ್ಟ್ (ನಾ.) ಪಾಷಂಡ ಮತ ವ್ಯಾಸಂಗಿ. **Héresiólogy** (ನಾ.) ಪಾಷಂಡ ಮತ ವ್ಯಾಸಂಗ. ಪಾಷಂಡ ಮತಗಳ ಗ್ರಂಥ. **Héretic** ಹೆರೆಟಿಕ್ (ನಾ.) ಅಸಂಪ್ರದಾಯಿ ; ಸಂಪ್ರದಾಯ ಬಾಹಿರ ; ಪಾಷಂಡಿ. **Herétical** (ಗು.)

Hériot ಹೆರಿಯಟ್ (ನಾ.) (ನ್ಯಾ. ಶಾ.) ಹಿಡುವಳಿದಾರನು ಸತ್ತಲ್ಲಿ ಅವನ ದಣಿಗೆ ಒಪ್ಪಿಸಿದ, ಸತ್ತವನ ಉತ್ತಮ ರಾಸು, ಚರಾಸ್ತಿ, ಅಥವಾ (ಸಮ ಬೆಲೆಯ) ಹಣ ; ದಣಿಸಲ್ಲಿಕೆ [ಈಗ (ಇಂಗ್ಲಿಷ್) ಶ್ರೀಮಂತರ ಸ್ವಂತ ಅನುಭವದಲ್ಲಿರುವ ಹಿಡುವಳಿಗಳ ವಿಷಯದಲ್ಲಿ ಮಾತ್ರ]

Héritable ಹೆರಿಟಬ್‌ಲ್ (ಗು.) (ಸ್ಥಿರಾಸ್ತಿಯ ವಿಷಯದಲ್ಲಿ) ನ್ಯಾಯ ಸಮ್ಮತವಾದ ಹಕ್ಕುದಾರರಿಗೆ ಕ್ರಮಾನುಗತವಾಗಿ ಬರುವ ; ಪಿತೃವಿನಿಂದ ಮಗನಿಗೆ ಸಾಗಿಬರುವ ; ಪಿತ್ರಾರ್ಜಿತ ; ಪಿತ್ರಾರ್ಜಿತವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬರಲುಳ್ಳ. **Héritably** (ಕ್ರಿ. ವಿ.) ; **Héritage** ಹೆರಿಟೆಜ್ (ನಾ.) ಪಿತ್ರಾರ್ಜಿತವಾಗಿ ಬಂದದ್ದು, ಬರಬಹುದಾದದ್ದು ; ಪಿತ್ರಾರ್ಜಿತ. (ರೂಪ.) (ಒಬ್ಬನ) ಪಾಲಿಗೆ ಬಿಟ್ಟದ್ದು, ಕೊಟ್ಟದ್ದು. (ಬೈಬಲ್) (ದೇವರ ಸ್ವತ್ತು, ಮಕ್ಕಳು) : ಪುರಾತನ ಯೆಹೂದ್ಯರು, ಕ್ರೈಸ್ತ ಸಂಘ. ಪಾಲಿಗೆ ಬಂದ ಅದೃಷ್ಟ, ಭಾಗ್ಯ ; ಹಣೆಬರಹ. **Héritor** (ನಾ.) ಉತ್ತರಾಧಿಕಾರಿ ; ಹಕ್ಕುದಾರ.

Hermáphrodite ಹರ್ಮ್ಯಾಫ್ರೊಡೈಟ್ (ನಾ., ಗು.) ಪುಂ ಸ್ತ್ರೀ ಲಕ್ಷಣಗಳೆರಡೂ ಉಳ್ಳ (ಮನುಷ್ಯ, ಪ್ರಾಣಿ) ; ಉಭಯ ಲಿಂಗಿ. (ಪ್ರಾ. ವಿ.) ಪುಂ ಸ್ತ್ರೀ ಅಂಗಗಳೆರಡನ್ನೂ ಸಹಜವಾಗುಳ್ಳ ಪ್ರಾಣಿ (ಉದಾ., ಎರೆಹುಳು). (ಸ. ವಿ.) ಒಂದೇ ಹೂವಿನಲ್ಲಿ ಶಲಾಕೆಯೂ ಕೇಸರಗಳೂ ಎರಡೂ ಇರುವ ಸಸ್ಯ ; ಉಭಯ ಲಿಂಗಿ ಸಸ್ಯ. ಪರಸ್ಪರ ವಿರುದ್ಧ ಗುಣಗಳುಳ್ಳ (ವ್ಯಕ್ತಿ, ವಸ್ತು). ಎರಡು ಬಗೆಯ ಹಡಗುಗಳ ಲಕ್ಷಣಗಳನ್ನುಳ್ಳ ಹಡಗು. **Hermaphrodític(al)** — ಡಿ — (ಗು.) ; **Hermáphroditism** — ಡೈಟಿಸ಼್ಮ್ (ನಾ.)

Hermeneútic ಹರ್ಮಿನ್ಯೂಟಿಕ್ (ಗು., ನಾ.) ಅರ್ಥ ವಿವರಣೆಯ· ಅರ್ಥ ಮೀಮಾಂಸದ. (ಸಾ., ಬ. ವ. ದಲ್ಲಿ) ಅರ್ಥ ವಿವರಣ ಶಾಸ್ತ್ರ (ಮು., ಬೈಬಲ್ಲಿನದು). **Hermeneútical** (ಗು.)

Hérmes ಹರ್ಮೀಸ಼್ (ನಾ.) (ಗ್ರೀಕ್ ಪುರಾಣ) (ದೇವದೂತನೂ, ವಿಜ್ಞಾನ ಮತ್ತು ವಾಕ್ಪಟುತ್ವ, ಮೊ. ಗಳ ಅಧಿದೇವತೆಯೂ, ಜ಼್ಯೂಸ್ ದೇವನ ಮತ್ತು ಮೈಯಾ ದೇವಿಯ ಮಗನೂ, ಆದ) ಹರ್ಮೀಸ಼್.

Hermétic ಹರ್ಮೆಟಿಕ್ (ಗು.) ರಸ ತಂತ್ರದ [H. art ರಸತಂತ್ರ ಕಲೆ. H. seal (ಕಾವಿನಿಂದ ಕರಗಿಸುವುದು, ಮೊ. ಗಳಿಂದ) ಗಾಳಿ ನುಸಿಯದಂತೆ ಮಾಡಿದ ಬೆಸುಗೆ (ರೂಪ. ಸಹ)]. **Hermétically** (ಕ್ರಿ. ವಿ.)

Hérmit ಹರ್ಮಿಟ್ (ನಾ.) ವಿರಕ್ತ ; ಸಂನ್ಯಾಸಿ ; ಜೋಗಿ. ಏಕಾಂತ ವಾಸಿ. H.-crab (ಚಿಪ್ಪಿಲ್ಲದ ತನ್ನ ಹಿಂಭಾಗವನ್ನು ಅಪಾಯದಿಂದ ರಕ್ಷಿಸಿಕೊಳ್ಳುವುದಕ್ಕಾಗಿ, ಮತ್ತೊಂದು ಚಿಪ್ಪಿನಪ್ರಾಣಿ ಕಳಚಿಹಾಕಿದ ಚಿಪ್ಪನ್ನು ಧರಿಸುವ) ಒಂದು ಬಗೆಯ ಏಡಿ ; ಸಂನ್ಯಾಸಿ ಏಡಿ. **Hérmitage** ಹರ್ಮಿಟೆಜ್ (ನಾ.) ಆಶ್ರಮ ; ಸಂನ್ಯಾಸಿ ಮಠ ; ಏಕಾಂತ ವಾಸಸ್ಥಾನ. ಒಂದು ಬಗೆಯ ಫ್ರೆಂಚ್ ಮದ್ಯ (ಅದು ತಯಾರಾಗುವ ಬೆಟ್ಟದಮೇಲೆ ಒಂದು ಹಾಳುಮಠವಿರುವ ಕಾರಣದಿಂದ)

Hern. **Heron** ನೋಡಿ.

Hérnia ಹರ್ನಿಯ (ನಾ.) (ವೈ. ಶಾ.) ಒಂದು ಅಂಗದ ಭಾಗವು ಆ ಅಂಗದ ಆವರಣಚರ್ಮದಲ್ಲಿ ಸ್ವಾಭಾವಿಕವಾಗಿಯೊ ಅಕಸ್ಮಾತ್ತಾಗಿಯೊ ಆದ ಛಿದ್ರದ ಮೂಲಕ ತನ್ನ ಸ್ಥಾನ ಬಿಟ್ಟು ಹೊರಚಾಚಿಕೊಂಡಿರುವುದು ; ಅಂತ್ರ ವೃದ್ಧಿ ; ಅಂಡ ವಾಯು. **Hérnial** (ಗು.) ; **Hérniary** (ಗು.) ; **Herniótomy** ಹರ್ನಿಯಾಟೊಮಿ (ನಾ.) ಅಂತ್ರ ವೃದ್ಧಿ ಶಸ್ತ್ರ ಚಿಕಿತ್ಸೆ.

Héro ಹೀರೊ (ನಾ. ; ಬ. ವ. -oes — ರೋಸ಼್) (ಗ್ರೀಕ್ ಪ್ರಾಚೀನ) ದೇವತೆಗಳ ಪ್ರೀತಿಗೆ ಪಾತ್ರನಾದ, ಅತಿಮಾನುಷ ಲಕ್ಷಣಗಳುಳ್ಳ ವ್ಯಕ್ತಿ ; ದೇವಾಂಶ ಪುರುಷ ; ಅರ್ಧ ದೇವ. ಪ್ರಖ್ಯಾತ ಯೋಧ ; ವೀರ. (ಅಲಂ.) (ತಾಯ್ನಾಡಿಗಾಗಿ) ಕಾದಾಡಿದವನು ; ಶೂರ ; ಕಲಿ (Homes for heroes ವಿಶ್ರಾಂತ ಯೋಧರಿಗೆ ಮನೆಗಳು). ಸಾಹಸ ಕಾರ್ಯಗಳಿಗೂ ಉದಾತ್ತ ಗುಣಗಳಿಗೂ ಮೆಚ್ಚಿಕೆ ಪಡೆದವನು ; ಮಹಾಪುರುಷ. (ಕಾವ್ಯ, ನಾಟಕ, ಕಥೆ, ಮೊ. ಗಳ) ನಾಯಕ. H.-worship (ಪ್ರಾಚೀನ ಅಥವಾ ಇತರ) ವೀರಾರಾಧನೆ ; ವೀರ ಪೂಜೆ. H.-worshipper ವೀರ ಪೂಜಕ. **Heróic** ಹಿ(ಹೆ)ರೋಯಿಕ್ (ಗು., ನಾ.) (ಕಾರ್ಯಗಳ ಅಥವಾ ಗುಣಗಳ ವಿಷಯದಲ್ಲಿ) ವೀರನ ; ವೀರೋಚಿತ. (ವ್ಯಕ್ತಿಗಳ ವಿಷಯದಲ್ಲಿ) ವೀರ ಲಕ್ಷಣಗಳುಳ್ಳ [The h. age (ಟ್ರಾಯ್ ಪಟ್ಟಣದಿಂದ ಗ್ರೀಕರು ಹಿಂದಿರುಗುವುದಕ್ಕೆ ಮೊದಲಿನ) ಗ್ರೀಸಿನ ವೀರ ಯುಗ]. (ಕಾವ್ಯದ ವಿಷಯದಲ್ಲಿ) ವೀರರನ್ನು ಕುರಿತ [H. poem ವೀರ ಕಾವ್ಯ. H. verse ವೀರ ಕಾವ್ಯಗಳಲ್ಲಿ ಉಪಯೋಗಿಸುವ ಛಂದಸ್ಸು]. (ಭಾಷೆ) ಉದಾತ್ತ, ಪ್ರೌಢ, ಆಡಂಬರದ. ಧೀರ ; ಸಾಹಸದ. (ನಾ.) = H. verse ; (ಬ. ವ. ದಲ್ಲಿ) ಉದಾತ್ತ, ಆಡಂಬರದ, — ಭಾಷೆ, ಶೈಲಿ, ಭಾವಗಳು. **Heróically** (ಕ್ರಿ. ವಿ.) ; **Heroicómic** ಹಿ(ಹೆ)ರೋಯಿ ಕಾಮಿಕ್ (ಗು.) ಗಾಂಭೀರ್ಯವೂ ಪರಿಹಾಸ್ಯವೂ ಮಿಶ್ರವಾದ ; ವೀರ ಹಾಸ್ಯದ. **Heróify** (ಕ್ರಿ. ಸಕ.) ವೀರನನ್ನಾಗಿ ಮಾಡು. **Héroine** ಹೆರೊಯಿನ್ (ನಾ.) ಉಪದೇವತೆ ; ದೇವಾಂಶ ಸ್ತ್ರೀ ; ವೀರ ನಾರಿ ; (ಕಾವ್ಯ, ಮೊ. ಗಳ) ನಾಯಿಕೆ ; ಕಥಾ ನಾಯಕಿ. **Héroism** (ನಾ.) ವೀರ ಲಕ್ಷಣ, ವರ್ತನೆ ; ಕಲಿತನ. **Héroize** ಹೀ(ಹೆ)ರೊ(ೀ)ಐಸ಼್ (ಕ್ರಿ.) ವೀರನನ್ನಾಗಿ ಮಾಡು ; ನಾಯಕ ಪಾತ್ರ ವಹಿಸು ; ಕಥಾ ನಾಯಕನಾಗು.

Heróin ಹಿರೋಯಿನ್ (ನಾ.) ಅಫೀಮು ಸಾರದಿಂದ ತಯಾರಿಸಿದ, ನೋವನ್ನು ಶಮನಮಾಡುವ, ನಿದ್ದೆ ಬರಿಸುವ, ಪ್ರಜ್ಞೆ ತಪ್ಪಿಸುವ, ಔಷಧ ಪದಾರ್ಥ : ' ಹಿರೋಯಿನ್ '.

Héroine, &c. **Hero** ನೋಡಿ.

Héron ಹೆರನ್, **Hern** ಹರ್ನ್ (ನಾ.) ಉದ್ದ ಕಾಲಿನ ಒಂದು ನೀರು ಹಕ್ಕಿ ; ಒಂದು ಜಾತಿಯ ಕ್ರೌಂಚ ಪಕ್ಷಿ. **Héronry** (ನಾ.) ಹೆರನ್ ಹಕ್ಕಿಗಳು ಮರಿ ಹಾಕಿ ಅಭಿವೃದ್ಧಿಯಾಗುವ ಸ್ಥಳ.

Hérpes ಹರ್ಪೀಸ಼್ (ನಾ.) ಗುಳ್ಳೆಗಳು ತಂಡ ತಂಡವಾಗೇಳುವ ಒಂದು ಬಗೆಯ ಚರ್ಮರೋಗ. **Herpétic** — ಪೆ — (ಗು.)

Herpetólogy ಹರ್ಪೆಟಾಲೊಜಿ (ನಾ.) ಪ್ರಾಣಿ ವಿಜ್ಞಾನದ (ಹಲ್ಲಿ, ಹಾವು, ಮೊ.) ಸರೀಸೃಪ ಶಾಸ್ತ್ರ ಭಾಗ ; ಸರೀಸೃಪ ಶಾಸ್ತ್ರ. **Herpetólogist** (ನಾ.)

Herr (G.) ಹೆ(ೕ)ರ್ (ನಾ. ; ಬ. ವ. Herren ಹೆರೆನ್) (ಜರ್ಮನ್ ಭಾಷೆಯಲ್ಲಿ ಹೆಸರಿನ ಹಿಂದೆ ಉಪಯೋಗಿಸುವ ಮರ್ಯಾದೆಯ ಮಾತು) ಶ್ರೀಮಾನ್ ; (ಜರ್ಮನ್) ದೊಡ್ಡ ಮನುಷ್ಯ.

Hérring ಹೆರಿಂಗ್ (ನಾ.) (ಆಹಾರಕ್ಕಾಗಿ ಉಪಯೋಗಿಸುವ, ಮೊಟ್ಟೆಯಿಡುವುದಕ್ಕಾಗಿ ಸಮುದ್ರತೀರಕ್ಕೆ ದೊಡ್ಡ ಗುಂಪುಗಳಾಗಿ ಬರುವ) ಉ. ಅಟ್ಲಾಂಟಿಕ್ ಸಾಗರದ ಒಂದು ಮೀನಜಾತಿ ; ' ಹೆರಿಂಗ್ ' ಮೀನು. Red h. (Red ನೋಡಿ). **H.-bone** (ನಾ., ಕ್ರಿ.) ಹೆರಿಂಗ್ ಮೀನಿನ ಎಲುಬುಗಳನ್ನು ಹೋಲುವ ಹೊಲಿಗೆ (ಹಾಕು) ; ಈ ತೆರದ ಆಕೃತಿರಚನೆ ಮಾಡು. (ವಾ. ಶಾ.) ಕಲ್ಲುಗಳನ್ನು, ಹೆಂಚುಗಳನ್ನು, ಒಂದೇ ಸಾಲಿನಲ್ಲಿಲ್ಲದಂತೆ ವಕ್ರ ಕ್ರಮದಲ್ಲಿ ಜೋಡಿಸುವುದು. **H. pond** (ಹಾಸ್ಯ ಪ್ರ.) ಉ. ಅಟ್ಲಾಂಟಿಕ್ (ಸಾಗರ)

Hértzian ಹರ್ಟ್ಸಿಯನ್ (ಗು.) H. waves (ನಿಸ್ತಂತುವಾಗಿ ಕಳುಹಿಸಬಹುದಾದ) ವಿದ್ಯುತ್ತರಂಗಗಳು. H. telegraphy ನಿಸ್ತಂತು ವಾರ್ತಾ ಪ್ರಸರಣ. (ಜರ್ಮನಿಯ ಭೌತ ವಿಜ್ಞಾನಿ Hertz ಎಂಬಾತನ ಹೆಸರಿನಿಂದ)

Hésitate ಹೆಸಿಟೇಟ್ (ಕ್ರಿ. ಅಕ.) ಅನಿಶ್ಚಯದಿಂದಿರು ; ಅರೆ ಮನಸ್ಸಾಗಿರು ; ಶಂಕಿಸು ; ಹಿಂಜರಿ ; ಹಿಂದು ಮುಂದು ನೋಡು. **Hésitatingly** (ಕ್ರಿ. ವಿ.) ; **Hesitátion** (ನಾ.) ; **Hésitative** (ಗು.) ; **Hésitant** — ಟಂಟ್ (ಗು.) ಶಂಕಿಸುವ ; ಅನಿಶ್ಚಯದ. **Hésitance** (ನಾ.) = Hesitation. **Hésitancy** (ನಾ.) — ಸ್ಥಿತಿ, — ಗುಣ ; ಅನಿಶ್ಚಯ ; ಓಲಾಡುವುದು.

Hespérian ಹೆಸ್ಪೀರಿಯನ್ (ಗು.) (ಕಾವ್ಯ) ಪಡುವಲಿನ ; ಪಾಶ್ಚಾತ್ಯ.

Hespérides ಹೆಸ್ಪೆರಿಡೀಸ಼್ (ನಾ.) (ಗ್ರೀಕ್ ಪುರಾಣ) ಭೂಮಿಯ ಪಶ್ಚಿಮಾವಧಿ ಪ್ರದೇಶದಲ್ಲಿರುವ ಪುಣ್ಯ ದ್ವೀಪಗಳಲ್ಲಿಯ ಚಿನ್ನದ ಸೇಬು ಹಣ್ಣನ್ನು ' ಡ್ರೆಗನ್ ' ಎಂಬ ರಾಕ್ಷಸ ಸರ್ಪದ ಸಹಾಯದಿಂದ ಕಾಯುತ್ತಿರುವರೆಂಬ ಕಲ್ಪನೆಯಿದ್ದ ಅಪ್ಸರ ಸ್ತ್ರೀಯರು (ಹೆಸ್ಪೆರಸ್ಸಿನ ಮಕ್ಕಳು)

Hésperus ಹೆಸ್ಪೆರಸ್ (ನಾ.) ಸಂಧ್ಯಾ ನಕ್ಷತ್ರ (ಶುಕ್ರ)

Héssian ಹೆಸಿಯನ್, ಹೆಷನ್ (ಗು., ನಾ.) ಜರ್ಮನಿಯಲ್ಲಿಯ 'ಹೆಸ್'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಾಂತದ. (ನಾ.) ಕಿತ್ತಾನಾರಿನ ಅಥವಾ ಸಣಬಿನ ಒರಟು ಗಟ್ಟಿ ಬಟ್ಟೆ, ರಟ್ಟು. H. (boot) ('ಹೆಸ್' ಯೋಧರು ಹಿಂದೆ ತೊಡುತ್ತಿದ್ದ) ಎತ್ತರವಾದ 'ಹೆಸ್' ಮೋಜ (ಮೊಜ್ಜೆ). H. fly ಗೋಧಿಯನ್ನು ಹಾಳು ಮಾಡುವ ಹುಳುಮರಿಯಿಂದ ಹುಟ್ಟುವ ನೊಣ: 'ಹೆಸ್' ನೊಣ.

Hest ಹೆಸ್ಟ್ (ನಾ.) (ಪ್ರಾಚೀ. ಪ್ರ.) = Behest.

Hetaéra ಹಿ(ಹೆ)ಟಿಯರ, **Hetaíra** ಹಿ(ಹೆ)ಟೈರ (ನಾ. ; ಬ. ವ. -rae —ರೀ) (ಒಬ್ಬನು) ಇಟ್ಟುಕೊಂಡವಳು ; ಉಪ ಪತ್ನಿ. **Hetaérism, Hetaírism** (ನಾ.) ಸೂಳೆಗಾರಿಕೆ. (ಪೂರ್ವ ಕಾಲದಲ್ಲ ಕೆಲವು ಬುಡ ಕಟ್ಟುಗಳಲ್ಲಿ ಇತ್ತೆಂದು ಹೇಳುವ) ಸಮೂಹವಿವಾಹ ಪದ್ಧತಿ, ಬಣ ಮದುವೆ (ಹೆಂಗಸರು ಆ ಗುಂಪಿನ ಎಲ್ಲ ಗಂಡಸರಿಗೂ ಹೆಂಡತಿಯರಾಗಿರುವುದು)

Hetero- ಹೆಟೆರೊ— (ಸ. ಪೂ. ಪ.) ಬೇರೆ— ; ಅನ್ಯ— ; ಇತರ— ; ವಿವಿಧ— ; ಭಿನ್ನ— ; ವಿಷಮ— ; ಅಕ್ರಮ— ; ವಿರುದ್ಧ—. **Heterochrómous** ವಿವಿಧ ವರ್ಣಗಳ. **Hétero-dyne, -dyning** (ನಿಸ್ತಂತು ವಾರ್ತಾ ಗ್ರಹಣದಲ್ಲಿ) ಸರಿಸುಮಾರಾಗಿ ಸ್ವರಮೇಳನದಲ್ಲಿರುವ ಧ್ವನಿತರಂಗಗಳನ್ನು ಒಟ್ಟಿಗೆ ಉಂಟುಮಾಡುವು ದರಿಂದಾಗುವ ಕಂಪನ, ಸ್ಪಂದನ ; ವಿವಿಧ ಕಂಪನ. **Heterógamous** (—ರಾಗಮಸ್) ಕೇಸರ ಶಲಾಕೆಗಳು ಅಕ್ರಮವಾಗಿರುವ ; ವಿಸದೃಶ ಪುಷ್ಪಿ. **Heterógraphy** (—ರಾಗ್ರಫಿ) ಪದದಲ್ಲಿ ಅಕ್ರಮ ವಾದ, ಅಸಂಬದ್ಧವಾದ, ಅಕ್ಷರಸಂಯೋಜನೆ. **Heteromórphic** ಭಿನ್ನ ರೂಪಗಳ ; ವಿದೃಶ ರೂಪಗಳ. **Heteromórphism** ರೂಪ ವೈವಿಧ್ಯ. **Heterónomous** (—ರಾನೊಮಸ್) (ಬೆಳವಣಿಗೆ, ವೊ. ಗಳಲ್ಲಿ) ಬೇರೆ ಬೇರೆ ನಿಯಮಗಳಿಗೊಳಪಟ್ಟ ; ಹೊರ ಕಟ್ಟಳೆಗೆ ಒಳಪಟ್ಟ ; ಬಾಹ್ಯ ನಿಯಮಾಧೀನ. **Heterónomy** ಬೇರೆ ನಿಯಮ ವಿರುವುದು. ಪರಾಧೀನತೆ ; ಪಾರತಂತ್ರ್ಯ ; ಬಾಹ್ಯ ನಿಯಮಾಧೀನತೆ. **Heteropáthic** (—ಪ್ಯಾಥಿಕ್) = Allopathic ; ಪರಿಣಾಮದಲ್ಲಿ ವ್ಯತ್ಯಾಸವಿರುವ; ಭಿನ್ನ ಪರಿಣಾಮಕ. **Heterophýllous** (—ಫಿಲಸ್) ಒಂದೇ ಗಿಡದಲ್ಲಿ ಬೇರೆ ಬೇರೆ ಆಕಾರದ ಎಲೆಗಳನ್ನು ಬಿಡುವ ; ವಿದೃಶ ಪರ್ಣಿ. **Héterotaxy** (ಅಂ. ರ. ಶಾ., ಸ. ವಿ.) (ಅಂಗಗಳು, ಭಾಗಗಳು) ಅಸಹಜ ವಿನ್ಯಾಸ(ದಲ್ಲಿರುವುದು) ; (ಭೂ. ವಿ.) ಸ್ತರ ರಚನೆ ಯಲ್ಲಿ ಕ್ರಮ ತಪ್ಪಿರುವುದು.

Héteroclite ಹೆಟೆರೊಕ್ಲೈಟ್ (ಗು., ನಾ.) ಅಕ್ರಮ ವಿಭಕ್ತಿರೂಪದ (ನಾಮ ಪದ)

Héterodox ಹೆಟೆರೊಡಾಕ್ಸ್ (ಗು.) (ವ್ಯಕ್ತಿಯ ಅಥವಾ ಅಭಿಪ್ರಾಯದ ವಿಷಯದಲ್ಲಿ) ಶಾಸ್ತ್ರಸಮ್ಮತವಲ್ಲದ ; ಸಂಪ್ರದಾಯ ವಿರುದ್ಧವಾದ. **Héterodoxy** (ನಾ.) ಅಸಂಪ್ರದಾಯ.

Heterogéneous ಹೆಟೆರೊಜೀ(ಜೆ)ನಿಯಸ್ (ಗು.) ವೈವಿಧ್ಯವುಳ್ಳ ; ಭಿನ್ನ ಭಿನ್ನ ಅಂಶಗಳಿಂದ ಕೂಡಿರುವ ; ಪರಸ್ಪರ ಅಸಂಬದ್ಧ ಸ್ವಭಾವದ ; ವಿಜಾತೀಯ ; ಕಲಬೆರಕೆಯ. (ಗಣಿತ) (ಸಂಖ್ಯೆಗಳು ಭಿನ್ನ ಜಾತಿಯ ವಾದುದರಿಂದ) ಸಮಾನ ಪರಿಮಾಣವಿಲ್ಲದ. **Heterogenéity** —ಜಿನೀಯಿಟಿ (ನಾ.) ; **Heterogéneousness** —ಜೀನಿ— (ನಾ.) ; **Heterogéneously** (ಕ್ರಿ. ವಿ.)

Heterogénesis ಹೆಟೆರೊಜೆನಿಸಿಸ್ (ನಾ.) (ಸಜಾತೀಯ ಪಿತೃವಿನಿಂದಲ್ಲದೆ) ಅನ್ಯ ರೀತಿಯಲ್ಲಿ ಪ್ರಾಣಿಯ ಜನನ ; ಭಿನ್ನ ಜನನ (ಮು., ನಿರ್ಜೀವ ವಸ್ತುವಿನಿಂದ ಜೀವಿ ಹುಟ್ಟುವುದು). **Heterogenétic** (ಗು.)

Heterozýgote ಹೆಟೆರೊಸ್ಸೈ(ಸಿ)ಗೋಟ್ (ನಾ.) (ಮೆಂಡೆಲ್ ತತ್ತ್ವ) (ಭಿನ್ನ ಜಂಪತಿಗಳ ಸಂಯೋಗದಿಂದ ಹುಟ್ಟಿದ) ಭಿನ್ನ ಸಂಯುಕ್ತಬೀಜ. **Heterozýgous** (ಗು.)

Heurístic ಹ್ಯೂರಿಸ್ಟಿಕ್ (ಗು.) (ತಾನಾಗಿ) ಕಂಡುಹಿಡಿಯಲು ಸಾಧಕ ವಾದ ; ಸ್ವಪ್ರಯತ್ನದಿಂದ ಕಂಡುಹಿಡಿಯುವಂತೆ ಮಾಡುವ. H. method ವಿಷಯಗಳನ್ನು ತಾನಾಗಿ ತಿಳಿದುಕೊಳ್ಳುವಂತೆ ವಿದ್ಯಾರ್ಥಿಗೆ ಕೊಡುವ ಶಿಕ್ಷಣ ಪದ್ಧತಿ ; ಸ್ವಯಂ ಶಿಕ್ಷಣ ಉಪದೇಶ ಕ್ರಮ : 'ಹ್ಯೂರಿಸ್ಟಿಕ್' ಪದ್ಧತಿ.

Hew ಹ್ಯೂ (ಕ್ರಿ. ; ಭೂತ. Hewed, ಭೂ. ಕೃ. Hewn or Hewed) (ವಸ್ತುವನ್ನು ಕೊಡಲಿ, ಕತ್ತಿ, ವೊ. ಗಳಿಂದ) ಕತ್ತರಿಸು ; ತುಂಡು ತುಂಡು ಮಾಡು ; ಕಡಿದುಹಾಕು ; ಕಡಿದು ಉರುಳಿಸು ; ತರಿ (*Down, away, off, asunder, to pieces*, ವೊ. ಪದದೊಡನೆ). ಆಕಾರ ಬರುವಂತೆ ಕೆತ್ತು ; ತುಂಡು ಮಾಡುವ ಏಟುಗಳನ್ನು ಹೊಡೆ (*At, among* ಉಪ. ದೊಡನೆ). H. one's way ಕಡಿದು ಕೆಡವಿ ದಾರಿ ಮಾಡಿಕೊಂಡು ಹೋಗು. **Hewer** (ನಾ.) ಕಡಿಯುವವನು ; ಕಲ್ಲಿದ್ದ ಲನ್ನು ಗಣಿಯಿಂದ ಕಡಿದು ತೆಗೆಯುವವನು. Hewers of wood & drawers of water ಕಷ್ಟದ ಕೂಲಿಕೆಲಸ ಮಾಡುವವರು.

Hexa- ಹೆಕ್ಸ— (ಸ. ಪೂ. ಪ.) ಆರು— ; ಷಟ್—. **Héxachord** (ನಾ.) ಆರು ಸ್ವರಗಳಿಂದ ಕೂಡಿದ ಮತ್ತು ಮೂರನೆಯ ನಾಲ್ಕನೆಯ ಸ್ವರಗಳ ಮಧ್ಯೆ ಅರ್ಧ ಸ್ವರ ಬರುವ, ಸ್ವರಗ್ರಾಮ. **Héxagon** (ನಾ.) ಷಡ್ಭುಜಿ. **Hexágonal** ಹೆಕ್ಸ್ಯಾಗೊನಲ್ (ಗು.) ; **Héxagram** ಹೆಕ್ಸಗ್ರ್ಯಾಮ್ (ನಾ.) ಸಮ ತ್ರಿಭುಜಗಳೆರಡು ಒಂದಕ್ಕೊಂದು ತಲೆ ಕೆಳಗಾಗಿ ಒಂದರ ಮೇಲೊಂದು ಸೇರಿ (ಅವುಗಳ ಆರು ಕೋನಸ್ಥಾನ ಗಳು ಷಡ್ಭುಜದ ಷಟ್ಕೋನ ಬಿಂದುಗಳಲ್ಲಿ ಹೊಂದಿಕೆಯಾಗುವಂತೆ ಅಳ ವಟ್ಟ) ಷಡ್ರೇಖಾಕೃತಿ. **Hexahédron** —ಹೀ(ಹೆ)ಡ್ರನ್ (ನಾ.) ಆರುಮುಖಗಳುಳ್ಳ ಘನಾಕೃತಿ ; ಷಣ್ಮುಖಿ. **Hexahédral** (ಗು.) ; **Héxapod** (ನಾ., ಗು.) ಆರು ಪಾದಗಳುಳ್ಳ (ಪ್ರಾಣಿ) ; ಷಟ್ಪಾದಿ. **Hexápody** ಹೆಕ್ಸ್ಯಾಪೊಡಿ (ನಾ.) (ಛಂ.) ಆರು ಗಣಗಳ ಪಾದ. **Héxastyle** (ಗು., ನಾ.) ಆರು ಕಂಬಗಳ (ಮುಖ ಮಂಟಪ). **Hexasyllábic** (ಗು.) ಆರಕ್ಷರದ. **Héxateuch** —ಟ್ಯೂಕ್ (ನಾ.) (ಬೈಬಲ್ಲಿನ) ಮೊದಲನೆಯ ಆರು ಪ್ರಕರಣಗಳು, ಪ್ರಥಮ ಷಟ್ಕ.

Hexád ಹೆಕ್ಸ್ಯಾಡ್ (ನಾ.) ಆರು ; ಆರು ಸಂಖ್ಯೆಗಳ ಶ್ರೇಣಿ ; ಆರರ ತಂಡ ; ಷಟ್ಕ. (ರ. ವಿ.) ಆರು ಮಾನಗಳ (ಎಂದರೆ, ಜಲಜನಕದ ಆರು ಪರಮಾಣುಗಳ) ಸಂಯೋಗ ಶಕ್ತಿಯುಳ್ಳ ಮೂಲಧಾತು ಅಥವಾ ಘಟಕ : ಷಡ್ಯೋಗಿ.

Hexámeter ಹೆಕ್ಸ್ಯಾಮಿಟರ್ (ನಾ.) (ಛಂ.) ಆರು ಗಣದ ಪಾದ ; ಷಡ್ಗಣ ಪಾದಿ (ಮು., Dactylic h.). **Hexamétric** (ಗು.) ; **Hexámetrist** (ನಾ.) ಷಡ್ಗಣ ಪಾದಿ (ವೃತ್ತ)ಗಳನ್ನು ರಚಿಸುವವನು.

Hey ಹೇ (ಭಾವ. ಅವ್ಯ.) (ಗಮನ ಸೆಳೆಯುವ, ಸಂತೋಷ ಅಥವಾ ಆಶ್ಚರ್ಯ ಸೂಚಕ, ಅಥವಾ ಪ್ರಶ್ನಾರ್ಥಕ, ಪದ) ಹೇ ! H. for — ! (ಶ್ಲಾಘನೆ ಅಥವಾ ಉತ್ಸಾಹಪೂರ್ವಕವಾದ ಮೆಚ್ಚಿಕೆ ಸೂಚಿಸುವ ಉದ್ಗಾರ) ಭಳ ಭಳೆ ! H. presto (ಯಕ್ಷಿಣಿಗಾರನು ಮಾಡುವ ಆಜ್ಞೆಯ ಪದ) ಹೇ ! ಬೇಗ ಬಾ ! (ಆಶ್ಚರ್ಯವನ್ನುಂಟುಮಾಡುವ ರೂಪಾಂತರ, ವೊ. ವನ್ನು ತೋರಿಸುವಲ್ಲಿ ಹೇಳುವ ಮಾತು). **Hey-day**[1] (ಭಾವ. ಅವ್ಯ.) (ಸಂತೋಷ, ಆಶ್ಚರ್ಯ, ವೊ. ವನ್ನು ಸೂಚಿಸುವ ಉದ್ಗಾರ)

Heýday[2] ಹೇಡೇ (ನಾ.) (ಯೌವನ, ಪೌರುಷ, ಸೌಭಾಗ್ಯ, ವೊ. ಗಳ) ಉನ್ನತಿ, ಉಚ್ಛ್ರಾಯ, ಉತ್ಕರ್ಷ.

Hi ಹೈ (ಭಾವ. ಅವ್ಯ.) (ಗಮನ ಸೆಳೆಯುವ ಪದ) ಹೈ !

Hiátus ಹೈಏಟಸ್ (ನಾ. ; ಬ. ವ. -uses —ಸಸ್, —ಸಿಸ್) (ಒಂದು ಶ್ರೇಣಿಯಲ್ಲಿ, ವೃತ್ತಾಂತದಲ್ಲಿ, ಅಥವಾ ರುಜುವಾತಿನ ಸರಣಿಯಲ್ಲಿ ಇರುವ) ಲೋಪ, ಬಿಡುವು. (ಗ್ರಂಥ) ಪಾತ. (ಸ್ವರಾಂತ ಪದವು ಸ್ವರಾದಿ ಪದದೊಡನೆ ಸೇರುವಾಗ ಮಧ್ಯೆ) ವಿಸಂಧಿ (ಉದಾ., Co-operate)

Hibernate ಹೈಬರ್ನೇಟ್ (ಕ್ರಿ. ಅಕ.) (ಪ್ರಾಣಿ) ಚಳಿಗಾಲವನ್ನು ನಿಶ್ಚೇಷ್ಟ ಸ್ಥಿತಿಯಲ್ಲಿ ಕಳೆ. (ಮನುಷ್ಯ) ಚಳಿಗಾಲವನ್ನು ಸೌಮ್ಯ ವಾತಾ ವರಣದಲ್ಲಿ ಕಳೆ. (ರೂಪ.) ಚಟುವಟಿಕೆಯಿಲ್ಲದಿರು ; ನಿಶ್ಚೇಷ್ಟನಾಗಿ ಬಿದ್ದಿರು. **Hibernant** (ಗು.) ; **Hibernátion** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Hibérnian ಹೈಬರ್ನಿಯನ್ (ಗು., ನಾ.) ಐರ್ಲೆಂಡಿನ(ವನು). **Hibérnicism** (ನಾ.) ಐರಿಷ್ ಭಾಷಾಮರ್ಯಾದೆ, ಮಾತಿನ ರೀತಿ ; = Irish bull (Bull³ ನೋಡಿ)

Hibíscus ಹಿ(ಹೈ)ಬಿಸ್ಕಸ್ (ನಾ.) ದಾಸವಾಳ ಜಾತಿಯ ಒಂದು ಸಸ್ಯ.

Híccup, Híccough ಹಿಕಪ್ (ನಾ., ಕ್ರಿ.) ಶ್ವಾಸಾಂಗಗಳು ಅನೈಚ್ಛಿಕವಾಗಿ ಸಂಕೋಚನ ಹೊಂದಿ, ಶ್ವಾಸದ್ವಾರವು ಥಟ್ಟನೆ ಮುಚ್ಚಿಕೊಳ್ಳುವುದರಿಂದ ಹುಟ್ಟುವ ವಿಲಕ್ಷಣ ಶಬ್ದ ; ಬಿಕ್ಕಳಿಕೆ ; ಬಿಕ್ಕು ; ಬಿಕ್ಕಲು. (ಕ್ರಿ.) ಬಿಕ್ಕಳಿಸು ; ಬಿಕ್ಕುತ್ತ ಹೇಳು, ಹೊರಡಿಸು (*Out* ಉಪ. ದೊಡನೆ)

Hic jácet (L) ಹಿಕ್ ಜೇಸೆಟ್ (ನಾ.) ಸಮಾಧಿ ಲೇಖ (= Here lies ಇಲ್ಲಿ ಸಮಾಧಿಯಾಗಿದ್ದಾನೆ)

Hick ಹಿಕ್ (ನಾ.) (ಅಮೆ. ಸಂ., ಬಳ. ಮಾ.) ಹಳ್ಳಿಗ ; ಬೇಸಾಯಗಾರ.

Híckory ಹಿಕರಿ (ನಾ.) ಉ. ಅಮೆರಿಕದ, ಗಟ್ಟಿದಾರುವಿನ ಒಂದು ಮರ ; ಇದರ ದಾರು, ದೊಣ್ಣೆ.

Hid, Hídden. Hide² ನೋಡಿ.

Hide¹ ಹೈಡ್ (ನಾ., ಕ್ರಿ. ಸಕ.) (ಪ್ರಾಣಿಯ ಒರಟಾದ ಅಥವಾ ಹದ ಮಾಡಿದ) ಚರ್ಮ. (ಹಾಸ್ಯ ಪ್ರ.) ಮನುಷ್ಯ ಚರ್ಮ (To save his own h. ಜೀವ ಉಳಿಸಿಕೊಳ್ಳುವುದಕ್ಕಾಗಿ). (ಕ್ರಿ.) ಚರ್ಮ ಸುಲಿ ; (ಬಳ. ಮಾ.) ಕೊ(ೀ)ರಡೆಯಿಂದ ಹೊಡೆ. **Hide-bound** (ದನ ಕರುಗಳು) (ಆರೈಕೆಯಿಲ್ಲದ್ದರಿಂದ) ಚರ್ಮ ಮೂಳೆಗೆ ಹತ್ತಿಕೊಂಡಿರುವ ; (ಮರಗಳು ಬೆಳೆಯಲಾಗದಂತೆ) ತೊಗಟೆ ಹತ್ತಿಕೊಂಡಿರುವ. (ರೂಪ.) ಸಂಕುಚಿತ ದೃಷ್ಟಿಯ. (-)**hided** (ಗು.) ; **Híding¹** (ನಾ.) (ಕೋರಡೆಯಿಂದ) ಹೊಡೆಯುವುದು ; ಸದೆ ಬಡಿಯುವುದು.

Híde² ಹೈಡ್ (ಕ್ರಿ. ; ಭೂತ. Hid, ಭೂ. ಕೃ. Hidden, Hid ; ನಾ.) ಮುಚ್ಚಿಡು ; ಬಚ್ಚಿಡು ; ಬೈತಿಡು ; ಮರ, — ಆಗು, ಮಾಡು [H. one's light under a bushel (Bushel ನೋಡಿ)]. (ವಿಷಯವನ್ನು ಒಬ್ಬನಿಂದ) ಮರೆಮಾಜು, ಗುಟ್ಟಾಗಿಡು. (ಬಚ್ಚಿಡಬೇಕೆಂಬ ಉದ್ದೇಶವಿಲ್ಲದೆ) (ವಸ್ತುವನ್ನು) ಕಣ್ಣಿಗೆ ಬೀಳದಂತಿಡು [H. one's head (ಅಪಮಾನ, ಮೊ. ಗಳಿಂದ) ತಲೆ ಮರಸಿಕೊ]. ಬಚ್ಚಿಟ್ಟುಕೊ; ಅವಿತುಕೊ. [**H.-&-seek** (ಮಕ್ಕಳ) ಕಣ್ಣಾಮುಚ್ಚಾಲೆಯಾಟ (ಕೈಗೆ ಸಿಕ್ಕದೆ ತಪ್ಪಿಸಿಕೊಳ್ಳುವ ವ್ಯಕ್ತಿಯ ಅಥವಾ ವಸ್ತುವಿನ ವಿಷಯದಲ್ಲಿ ರೂಪ. ಸಹ)]. (ನಾ.) (ಕಾಡು ಮೃಗಗಳ ಛಾಯಾಚಿತ್ರವನ್ನು ತೆಗೆಯುವಾಗ) ಅವಿತುಕೊಳ್ಳುವ ಮರೆ. **Hiding²** (ನಾ.) (ಕ್ರಿಯಾರ್ಥಗಳಲ್ಲಿ) ; Be in h. ಅವಿತುಕೊಂಡಿರು. H.-place ಅವಿತುಕೊಳ್ಳುವ ಸ್ಥಳ ; ಮರೆ.

Hide³ ಹೈಡ್ (ನಾ.) (ಚರಿತ್ರೆ) ಆಶ್ರಿತರೂ ಸೇರಿದ ಒಂದು ಸ್ವತಂತ್ರ ಕುಟುಂಬದ ಜೀವನಕ್ಕೆ ಸಾಕಾಗುವಷ್ಟು ಭೂಮಿ (ಬಹುಶಃ, ಸುಮಾರು ೧೨೦ ಎಕರೆ)

Hídeous ಹಿಡಿಯಸ್ (ಗು.) (ಮನಸ್ಸಿಗೆ, ನೋಟಕ್ಕೆ) ಭಯಂಕರ, ಭೀಕರ, ಘೋರ ; ಅತಿ ವಿಕಾರದ ; ಅಸಹ್ಯಕರ (H. crime, noise, pattern ಘೋರವಾದ ಪಾತಕ, ಗದ್ದಲ, ಮಾದರಿ). **Hídeously** (ಕ್ರಿ. ವಿ.) ; **Hídeousness** (ನಾ.)

Hie ಹೈ (ಕ್ರಿ. ಅಕ.) (ಕಾವ್ಯ) ಬೇಗ ಹೋಗು (*To* ಮೊ. ಉಪ. ದೊಡನೆ). (ಸರ್ವನಾಮದ ಆತ್ಮಾರ್ಥದಲ್ಲಿ) H. thee ಅವಸರಪಟ್ಟುಕೊಂಡು ಹೊರಡು. He hied him ಅವನು ಅವಸರಪಟ್ಟುಕೊಂಡು ಹೋದನು.

Híerarch ಹೈಎರಾರ್ಕ್ (ನಾ.) ಮುಖ್ಯ ಪುರೋಹಿತ ; ಪ್ರಧಾನ ಗುರು ; (ಕ್ರೈಸ್ತರ) ಪ್ರಧಾನ ಮಠಾಧಿಪತಿ. **Híerarchy** (ನಾ.) ದೇವದೂತರ ಮೂರು ವಿಭಾಗಗಳಲ್ಲಿ ಯಾವುದಾದರೊಂದು ; ದೇವದೂತರು. (ಧರ್ಮ ವಿಷಯಗಳಲ್ಲಿ) ಪುರೋಹಿತ ಪ್ರಭುತ್ವ ; ಪುರೋಹಿತರ ಕ್ರಮಬದ್ಧ (ಅನುಕ್ರಮ) ಶ್ರೇಣಿ. (ಯಾವುದಾದರೂ) ಕ್ರಮಬದ್ಧ ಶ್ರೇಣಿ. **Hierárchic(al)** (ಗು.) ; **Híerarchism** (ನಾ.)

Hierátic(al) ಹೈಎರ್ಯಾಟಿಕ್(ಕಲ್) (ಗು.) ಪುರೋಹಿತರ (ಮು., ಪ್ರಾಚೀನ ಈಜಿಪ್ಟಿನ ಬರವಣಿಗೆ, ಈಜಿಪ್ಟ್ ಮತ್ತು ಗ್ರೀಕ್ ಸಂಪ್ರದಾಯದ ಕರಾರೀತಿ, —ಇವುಗಳ ವಿಷಯದಲ್ಲಿ)

Hiero- ಹೈಎರೊ — (ಸ. ಪೂ. ಪ.) ಪವಿತ್ರ — ; ಧರ್ಮ — . **Hierócracy** — ರಾಕ್ರಸಿ (ನಾ.) ಪುರೋಹಿತ ಪ್ರಭುತ್ವ. **Híerogram** —ಗ್ರ್ಯಾಮ್, **- graph** —ಗ್ರಾಫ್ (ನಾ.) ಪವಿತ್ರ ಶಾಸನ ಲೇಖನ ಅಥವಾ ಸಂಕೇತ. **Hierólatry** — ರಾಲಟ್ರಿ (ನಾ.) ಸಾಧು ಸಂತರ ಆರಾಧನೆ. **Hierólogy** (ನಾ.) ಪವಿತ್ರ ಸಾಹಿತ್ಯ, ಶಾಸ್ತ್ರ.

Híeroglyph ಹೈಎರೊಗ್ಲಿಫ್ (ನಾ.) (ಪುರಾತನ ಇಜಿಪ್ಷನ್ ಮತ್ತು ಇತರ ಕೆಲವು ಬರವಣಿಗೆಗಳಲ್ಲಿರುವಂತೆ) ಒಂದು ಪದಕ್ಕೆ, ಅಕ್ಷರಕ್ಕೆ ಅಥವಾ ಧ್ವನಿಗೆ ಸಂಕೇತವಾಗಿ ಉಪಯೋಗಿಸಿದ ವಸ್ತುಚಿತ್ರ ; ಚಿತ್ರ ಬರವಣಿಗೆ ; (ವಸ್ತು)ಚಿತ್ರ ಲಿಪಿ. ಗುಪ್ತ ಸಂಕೇತ ; ಗೂಢ ಲಿಪಿ ; ಅರ್ಥವಾಗದ, ಓದಲಾಗದ, ಬರವಣಿಗೆ. **Hieroglýphic** (ಗು., ನಾ.) ಚಿತ್ರ ಲಿಪಿಯ(ಲ್ಲಿ ಬರೆದ) ; ಸಂಕೇತಾತ್ಮಕ ; ಸಂಕೇತದ. (ನಾ., ಬ. ವ. ದಲ್ಲಿ) ಚಿತ್ರ ಲಿಪಿ. **Hieroglýphical** (ಗು.) ; **Hieroglýphically** (ಕ್ರಿ. ವಿ.)

Híerophant ಹೈಎರೊಫ್ಯಾಂಟ್ (ನಾ.) (ಗ್ರೀಕ್ ಪ್ರಾಚೀನ) ದೀಕ್ಷೆ ಕೊಡುವ ಪುರೋಹಿತ ; ದೀಕ್ಷಾ ಗುರು ; ಆಚಾರ್ಯ ; ಪವಿತ್ರ ರಹಸ್ಯಗಳನ್ನು ಪ್ರತಿಪಾದಿಸುವವನು ; ರಹಸ್ಯ ತತ್ತ್ವ ಬೋಧಕ. **Hierophántic** (ಗು.)

Híggle ಹಿಗಲ್ (ಕ್ರಿ. ಅಕ.) (ಬೆಲೆ, ಮೊ. ವಿಷಯದಲ್ಲಿ) ಜಗ್ಗಾಡು ; ಕೊಸರಾಡು ; ಚೌಕಸಿ ಮಾಡು.

Híggledy-píggledy ಹಿಗಲ್ಡಿ ಪಿಗಲ್ಡಿ (ಕ್ರಿ. ವಿ., ಗು., ನಾ.) ತೀರ ಅವ್ಯವಸ್ಥೆಯ (ಯಿಂದ) ; ದಿಕ್ಕಾಪಾಲು (ಆಗಿ, ಆದ) ; ಚೆಲ್ಲಾಪಿಲ್ಲಿ (ಯ, ಯಾಗಿ)

High ಹೈ (ಗು., ನಾ., ಕ್ರಿ. ವಿ.) ಎತ್ತರವಾದ (A h. hill ಎತ್ತರವಾದ ಗುಡ್ಡ. One inch h. ಒಂದಂಗುಲ ಎತ್ತರ). (ಭೂಮಿ, ಸಮುದ್ರ, ಮೊ. ಗಳ ಮಟ್ಟಕ್ಕೆ) ಮೇಲ್ಮಟ್ಟದಲ್ಲಿರುವ. ಮೇಲ್ನಾಡಿನ ; ಒಳನಾಡಿನ [H. Asia ಏಷ್ಯದ ಒಳನಾಡು ; ಒಳ ಏಷ್ಯ. H. Dutch, German ಒಳ ನಾಡಿನ, ಮೇಲ್ನಾಡಿನ, —ಡಚ್, ಜರ್ಮನ್ (ಭಾಷೆ)]. ಎತ್ತರದ (H. jump ಎತ್ತರದ ನೆಗೆತ. H. flying ಎತ್ತರದ ಹಾರಾಟ). ಉತ್ತಮ ಗುಣದ (H. art ಉತ್ತಮ ಕಲೆ). ಉನ್ನತ ಪದವಿಯ [The Most H. ಸರ್ವೋತ್ತಮ ; ದೇವರು. H. minds ಉದಾತ್ತ ಭಾವವುಳ್ಳವರು. H. spirit ಎದೆಗಾರಿಕೆ ; ಕೆಚ್ಚು ; ಸಾಹಸ. A h. opinion of — ವಿಷಯದಲ್ಲಿ ಒಳ್ಳೆಯ ಭಾವನೆ, ಮೆಚ್ಚಿಕೆಯ ಅಭಿಪ್ರಾಯ. H. life ಮೇಲ್ತರಗತಿಯ(ವರ) ಜೀವನ; ಶ್ರೀಮಂತ ಜೀವನ. H. feeding ಮೃಷ್ಟಾನ್ನ ಭೋಜನ]. (ಮಾಂಸ, ಬೇಟೆ) ನಸು ಹಳಸಿದ. ಬಹಳ ; ಹೆಚ್ಚಿನ ; ಅಧಿಕ ; ತೀವ್ರ ; ವಿಶೇಷ ; ಕಡು [In h. favour ವಿಶೇಷಾನುಗ್ರಹಕ್ಕೆ ಪಾತ್ರನಾಗಿ ; ಬಹಳ ಮೆಚ್ಚಿಕೆ ಪಡೆದು. H. pressure ಅಧಿಕವಾದ ಒತ್ತಡ. H. temperature ಹೆಚ್ಚು, ತೀವ್ರ, — ಶಾಖ. How is that for h.? (ಅಸಂ.) ಅದು ಬಹು ಆಶ್ಚರ್ಯವಲ್ಲವೆ? H. latitude ಹೆಚ್ಚು ಅಕ್ಷಾಂಶ (ಸಮಭಾಜಕ ವೃತ್ತದಿಂದ ಉತ್ತರಕ್ಕಾಗಲಿ ದಕ್ಷಿಣಕ್ಕಾಗಲಿ ಬಹು ದೂರ). H. colour ಉಜ್ವಲ ವರ್ಣ ; (ಮು.,) ಕೆಂಬಣ್ಣ ; ಮುಖ ಕೆಂಪೇರುವುದು]. ಹೆಚ್ಚು ಬೆಲೆಯ ; ತುಟ್ಟಿಯಾದ (Corn is h. ಧಾನ್ಯ ಬಹಳ ತುಟ್ಟಿಯಾಗಿದೆ). (ಕಾಲ) ಬಹಳ ಮುಂದುವರಿದ, ಏರಿದ (H. noon ಮಟ ಮಟ ಮಧ್ಯಾಹ್ನ. It is h. time to go ಬಹಳ ಹೊತ್ತಾಯಿತು, ಹೊರಡಬೇಕು). (ಧ್ವನಿ) ಉಚ್ಚ ; ಎತ್ತರಿಸಿದ (H. words ಕೋಪದ ಮಾತುಗಳು ; ರೇಗಿನ ಕೂಗಾಟಗಳು). (ಅಭಿಪ್ರಾಯದಲ್ಲಿ) ಉಗ್ರ (ಗಾಮಿಯಾದ) (A h. Tory ಅತಿ ಸಂಪ್ರದಾಯ ಪಾಲಕ). ಉಲ್ಲಾಸದ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೆಲವಿನ (H. spirits ಬಹಳ ಉಲ್ಲಾಸ, ಉತ್ಸಾಹ, ಸಂಭ್ರಮ). (ಅಧಿಕಾರಿ, ಮೊ.) ಮುಖ್ಯ, ಪ್ರಧಾನ [H. Admiral ಮುಖ್ಯ ನೌಕಾ ಸೇನಾಧಿಪತಿ. H. Chancellor (Chancellor ನೋಡಿ)]. [H. & Dry (ಹಡಗು) ನೀರಿನಿಂದ ಹೊರಗೆ; (ರೂಪ.) ಪ್ರಕೃತ ಘಟನಾಪ್ರವಾಹದಲ್ಲಿ ಸೇರಿರದ ; ಪ್ರಕೃತ ಸ್ಥಿತಿಯನ್ನರಿಯದ ; ಪ್ರಕೃತ ಘಟನೆಗಳಿಂದ ಹೊರಚ್ಚಾಗಿರುವ. With a h. hand (Hand ನೋಡಿ). On the h. horse (Horse ನೋಡಿ). H. & low (ಮೇಲು, ಕೀಳು) ಎಲ್ಲ ಸ್ಥಿತಿಗಳವರೂ. (ಕ್ರಿ. ವಿ.) ಎಲ್ಲ ಕಡೆಯೂ ; ಸರ್ವತ್ರ (Search h. & low ಎಲ್ಲ ಕಡೆಯೂ ಹುಡುಕು). H. & mighty ಬಹಳ ಗರ್ವದ ; ದುರಹಂಕಾರದ ; ಮದೋನ್ಮತ್ತ. The high(er) command ಪ್ರಧಾನ ಸೇನಾಪತಿ ಮತ್ತು ಅವನ ಸಿಬ್ಬಂದಿ. On the h. ropes (ಬಳ. ಮಾ.) ಉಬ್ಬಿಹೋದ; ಬೀಗಿದ ; ಉಪೇಕ್ಷೆ ಮಾಡುವ ; ಧಿಕ್ಕರಿಸುವ ; ರೇಗಿದ. On h. ಸ್ವರ್ಗದಲ್ಲಿ; ಸ್ವರ್ಗಕ್ಕೆ. From on h. ಸ್ವರ್ಗ ಲೋಕದಿಂದ ; ಮೇಲಿನಿಂದ ; ದೊಡ್ಡ ಕಡೆಯಿಂದ]. (ಕ್ರಿ. ವಿ.) ಬಹಳ ಮೇಲೆ ; ಎತ್ತರದಲ್ಲಿ ; ಎತ್ತರವಾಗಿ ; ಉನ್ನತ ಸ್ಥಿತಿಗೆ, — ಯಲ್ಲಿ ; ಬಹುವಾಗಿ ; ಅಧಿಕವಾಗಿ ; ವಿಶೇಷವಾಗಿ. ಹೆಚ್ಚು ಬೆಲೆಗೆ. (ಧ್ವನಿ) ಎತ್ತರಕ್ಕೆ, ಎತ್ತರದಲ್ಲಿ ; ಉಚ್ಚ ಕಂಠದಲ್ಲಿ. Play h. ಹೆಚ್ಚು ಪಣ ಒಡ್ಡಿ ಆಡು ; ಹೆಚ್ಚು ಬೆಲೆಯ ಎಲೆ — ಆಡು, ಇಳಿ. Run h. (ಸಮುದ್ರ) ಹೆಚ್ಚು ಉಬ್ಬರವೆದ್ದು ಬಲವಾಗಿ ಹರಿ ; (ರೂಪ.) ಮನೋಭಾವ ಉಕ್ಕಿ ಹರಿ.

H. altar ಪ್ರಧಾನ ಬಲಿಪೀಠ. **H.-angle** (ಬಂದೂಕು, ಮೊ. ಗಳ ವಿಷಯದಲ್ಲಿ) (ಸಾ., ೪೦ ಡಿಗ್ರಿಗಳಿಗಿಂತ) ಹೆಚ್ಚು ಕೋನದಲ್ಲಿ ಓಲಿಸಿ ಉಪಯೋಗಿಸಲುಳ್ಳ ; ಹೆಚ್ಚು ಕೋನದ. **Highball** (ಅಮೆ. ಸಂ.) ಉದ್ದನೆಯ ಲೋಟಾದಲ್ಲಿ ಕುಡಿಯಲು ಕೊಡುವ ವ್ಹಿಸ್ಕಿ ಮತ್ತು ಸೋಡಾ(ಗಳ ಮಿಶ್ರಣ). **H.-blower** ಮೂಗಿನ ಹೊಳ್ಳೆಗಳನ್ನು ರಭಸದಿಂದ ಆಡಿಸಿ ಸದ್ದು ಮಾಡುವ ಕುದುರೆ. **H.-born** ಉತ್ತಮ ವಂಶದಲ್ಲಿ ಹುಟ್ಟಿದ ; ಕುಲೀನ ; ಶ್ರೀಮಂತ ಮನೆತನದ. **H.-brow** (ಗು., ನಾ.) (ಅಮೆ. ಸಂ.) ಎತ್ತರವಾದ ಹಣೆಯುಳ್ಳ(ವನು) ; ಪ್ರೌಢ ಪ್ರತಾಪದ ; ಮೇಧಾವಿ ; ಪಂಡಿತ (ಮು., ಪ್ರಜ್ಞೆಯಲ್ಲೂ ಪಾಂಡಿತ್ಯದಲ್ಲೂ ತಾನು ಶ್ರೇಷ್ಠನೆಂಬ ಭಾವನೆಯುಳ್ಳವನು, ಭಾವನೆಯುಳ್ಳವನಂತೆ ಕಾಣುವವನು ; ಪಾಂಡಿತ್ಯ ಪ್ರತಿಷ್ಠೆಯುಳ್ಳವನು) ; (ರಾಜಕೀಯ, ಮೊ. ವಿಷಯಗಳಲ್ಲಿ) ಪಾಂಡಿತ್ಯಪೂರ್ಣವಾದ ಅಭಿಪ್ರಾಯಗಳುಳ್ಳ(ವನು). **H.-browed** (ಗು.) ; **H. Church** (ನಾ., ಗು.) ಬಿಷಪ್ಪಿನ ಮತ್ತು ಪುರೋಹಿತ ವರ್ಗದ ಅಧಿಕಾರಕ್ಕೂ ಪ್ರಸಾದ, ಸಂಸ್ಕಾರ, ಮೊ. ಗಳ ಪ್ರಭಾವಕ್ಕೂ ಹೆಚ್ಚು ಪ್ರಾಧಾನ್ಯ ಕೊಡುವ (ಪಕ್ಷ, ತತ್ತ್ವಗಳು). **H.-churchman** ಈ ಪಕ್ಷದವನು. **H. Court** ಶ್ರೇಷ್ಠ, ಪ್ರಧಾನ, — ನ್ಯಾಯಸ್ಥಾನ (ಸಾ., H. Court of Justice). **H. day** ಹಬ್ಬದ, ಉತ್ಸವದ, — ದಿನ. **H. falútin(g)** (ಗು., ನಾ.) (ನಿರರ್ಥಕ) ಶಬ್ದಾಡಂಬರ(ದ). **H. farming** ಬೇಸಾಯದಲ್ಲಿ ವಿಶೇಷ ಗೊಬ್ಬರಗಳನ್ನು ಹೆಚ್ಚಾಗಿ ಉಪಯೋಗಿಸುವುದು. ಉತ್ತಮ ತೆರದ ಬೇಸಾಯ. **H.-flown** ಮಿತಿ ಮೀರಿದ ; ಅತ್ಯುಕ್ತಿಯ ; ವಾಗಾಡಂಬರದ. **H.-flyer, -flier** (ರೂಪ.) ಹೆಬ್ಬಯಕೆಯುಳ್ಳವನು ; ಮಹತ್ವಾಕಾಂಕ್ಷಿ ; ಅತಿರೇಕ ಭಾವನೆಗಳುಳ್ಳವನು. **H.-flying** (ರೂಪ.) ಮಹತ್ವಾಕಾಂಕ್ಷೆಯ. **H.-handed** (ಅಧಿಕಾರ) ಗರ್ವದ, ದರ್ಪದ ; ಸ್ವೇಚ್ಛಾ ಪ್ರವೃತ್ತಿಯ. **H. hat** (ಅಮೆ. ಸಂ.) ದೊಡ್ಡಸ್ತಿಕೆ ನಟಿಸು(ವವನು). (ಕ್ರಿ.) ಜಬರ್ನಿಂದ, ಅಲಕ್ಷ್ಯದಿಂದ, ಕಾಣು. **H. jinks** (Jinks ನೋಡಿ). **Highlands** ಮಲೆ ನಾಡು ; ಮೇಲ್ನಾಡು ; ಪ್ರಸ್ಥಭೂಮಿ ; ಸ್ಕಾಟ್ಲೆಂಡಿನ ಉ. ಭಾಗ (ಉಚ್ಚಾರಣೆ: ಹೈಲಂಡ್ಸ್). **Highlander** (ಮು., ಸ್ಕಾಟ್ಲೆಂಡಿನ) ಮಲೆ ನಾಡಿಗ, ಮೇಲ್ನಾಡಿಗ. **H. light** (ವರ್ಣಚಿತ್ರ, ಮೊ. ಗಳ ವಿಷಯದಲ್ಲಿ) (ಸಾ., ಬ. ವ. ದಲ್ಲಿ) ಚಿತ್ರವಸ್ತುವಿನ ಯಾವುದಾದರೂ ಅತ್ಯುಜ್ಜ್ವಲ ಭಾಗ(ಗಳು). **H.-lows** (ಪ್ರಾಚೀ. ಪ್ರ.) ಹರಡಿನ ಮೇಲ್ಭಾಗದವರೆಗೆ ಬರುವ ಬೋಜಾಗಳು. **H. mass** (Mass ನೋಡಿ). **H.-minded** ಉದಾತ್ತ ಸ್ವಭಾವದ ; ದೊಡ್ಡ ಮನಸ್ಸಿನ. (ಪ್ರಾಚೀ. ಪ್ರ.) ಸೊಕ್ಕಿನ ; ಅಹಂಭಾವದ (Lord, I am not h.-m. ದೇವರೇ ! ನಾನು ಅಹಂಭಾವವುಳ್ಳವನಲ್ಲ). **H.-mindedness** ಔದಾರ್ಯ ; ಘನತೆ ; (ಪ್ರಾಚೀ. ಪ್ರ.) ಹೆಮ್ಮೆ. **H.-pitched** (ಧ್ವನಿ) ಉದಾತ್ತ ; ಉಚ್ಚ ; ತಾರ. (ಚಾವಣಿ, ಮೊ. ವು.) ಕಡಿದಾದ. (ರೂಪ.) ಉದಾರ ಸ್ವಭಾವದ ; ಮೇಲಾದ ನಡತೆಯ. **H. priest** (ಮು., ಯೆಹೂದ್ಯರ) ಮುಖ್ಯ ಪುರೋಹಿತ. H. priori road ವಿಚಾರ ಮಾಡಿ ನಿರ್ಧರಿಸುವುದನ್ನು ಬಿಟ್ಟು ಸುಮ್ಮನೆ ಅಂಗೀಕರಿಸುವುದು ; ಅವಿಚಾರ ಕಲ್ಪನೆ. **H. road** ಮುಖ್ಯ, ಪ್ರಧಾನ, — ರಸ್ತೆ ; ರಾಜ ಬೀದಿ. **H. seas** (Sea ನೋಡಿ). **H.-spirited** ಉದಾತ್ತ ಭಾವವುಳ್ಳ ; ಎದೆಗಾರಿಕೆಯ ; ಕೆಚ್ಚಿನ ; ಸಾಹಸ ಚೇತನವುಳ್ಳ. **H.-stepper** (ನಡಗೆಯಲ್ಲಿ, ಓಟದಲ್ಲಿ) ಕಾಲುಗಳನ್ನು ಹೆಚ್ಚಾಗಿ ಮೇಲಕ್ಕೆತ್ತಿ ಇಡುವ ಕುದುರೆ ; (ರೂಪ.) ಜಂಬಗಾರ. **H. Street** (ಸಾ., ಊರಿನ ಮುಖ್ಯ ಬೀದಿಯ ಹೆಸರು) ದೊಡ್ಡ ಬೀದಿ. **H.-strung** ಸೂಕ್ಷ್ಮ ಮನಸ್ಥಿತಿಯ ; ಉದ್ವೇಗಾಗ್ರದಲ್ಲಿರುವ ; ತುಂಬಿ ಮಿಡುಕುವ, ತುಡಿಯುವ. **H. table** (ಮು., ಪ್ರೌಢ ವಿದ್ಯಾಶಾಲೆಯ ಸದಸ್ಯರು ಭೋಜನಕ್ಕೆ ಕುಳಿತುಕೊಳ್ಳುವ) ಎತ್ತರದಲ್ಲಿ ಹಾಕಿರುವ ಮೇಜು (ಬಳ. ಮಾ. The h.). **H. tea** ಮಾಂಸವನ್ನೂ ಜೊತೆಗೆ ಬಡಿಸುವ ಚಹಗೋಷ್ಠಿ. **H. tide** (Tide ನೋಡಿ). **H. treason** (Treason ನೋಡಿ). **H. water** (ನೀರು ಪರಮಾವಧಿ ಏರಿದ) ಉಬ್ಬರ ಸ್ಥಿತಿ ; ಪೂರ್ಣ ಭರತ ; ಭರತಿ ಉಬ್ಬರದ ಸಮಯ. **H. watermark** ಭರತಿ ಉಬ್ಬರದಲ್ಲಿ ಮುಟ್ಟಿದ ನೀರುಮಟ್ಟ. (ರೂಪ.) (ಏರಿಳಿತಗಳ ಪರಂಪರೆಯಲ್ಲಿ) ದಾಖಲೆಯಿರುವ ಪರಮಾವಧಿಯ ಮಟ್ಟ ; ಏರು ಮಟ್ಟ. **Highway** (ಸಾ., The king's h.-w.) ಹೆದ್ದಾರಿ ; ರಾಜ ಮಾರ್ಗ ; (ಭೂಮಿಯ ಮೇಲೆ, ನೀರಿನಮೇಲೆ) ಮುಖ್ಯ ದಾರಿ. (ಕಾರ್ಯನಿರ್ವಾಹ, ಮೊ. ಕ್ಕೆ) ನೇರವಾದ ಮಾರ್ಗ. **Highwayman** (ಸಾ., ಕುದುರೆ ಹತ್ತಿರುವ) ದಾರಿಗಳ್ಳ ; ಸುಲಿಗೆಕೋರ. **Híghly** (ಕ್ರಿ. ವಿ.) ಬಹಳವಾಗಿ ; ಹೆಚ್ಚಾಗಿ ; ವಿಶೇಷವಾಗಿ ; ಅತಿಶಯವಾಗಿ (H. amusing ಬಹಳ ವಿನೋದಕರವಾದ. Esteem h. ಹೆಚ್ಚಾಗಿ ಗೌರವಿಸು. H. paid ಹೆಚ್ಚು ಬೆಲೆಯ, ಸಂಬಳದ). ಗೌರವ ಪುರಸ್ಸರವಾಗಿ ; ಮೆಚ್ಚಿಕೆಯಿಂದ (Think, Speak, h. of). H. descended ಉತ್ತಮ ಕುಲದ ; ಶ್ರೀಮಂತ ವಂಶದ. **Híghness** (ನಾ.) (ಬ್ರಿಟಿಷ್ ದೊರೆಮಕ್ಕಳ, ಇತರ ದೇಶಗಳ ದೊರೆಗಳ, ದೊರೆಮಕ್ಕಳ, — ಬಿರುದಿನ ಪದ): ಘನತೆವೆತ್ತ.

Hight ಹೈಟ್ (ಕ್ರಿ., ಭೂ. ಕೃ.) (ಪ್ರಾಚೀ. ಪ್ರ., ಕಾವ್ಯ, ಹಾಸ್ಯ ಪ್ರ.) ಎಂಬ ; ಹೆಸರಿನ ; ಎಂದು ಕರೆಯುವ.

Híjacker ಹೈಜ್ಯಾಕರ್ (ನಾ.) (ಅಮೆ. ಸಂ., ಅಸಂ.) ತೆರಿಗೆ ಕೊಡದೆ ಕಳ್ಳತನದಿಂದ ಸಾರಾಯಿ ಸಾಗಿಸುವವರನ್ನು ಸುಲಿಗೆಮಾಡಿ ಆ ಸಾರಾಯಿಯಿಂದ ಲಾಭ ಪಡೆಯುವವನು.

Híjra = Hegira.

Hike ಹೈಕ್ (ನಾ., ಕ್ರಿ.) (ಸಂತೋಷಕ್ಕೊ ವ್ಯಾಯಾಮಕ್ಕೊ ಕೈಕೊಂಡ) ಹಳ್ಳಿಗಾಡಿನ ದೂರ ನಡಗೆ ; ನಾಡು ಸುತ್ತು. (ಕ್ರಿ.) ಜೋರಾಗಿ, ಕಷ್ಟದಿಂದ, ನಡೆ. ದೂರ ನಡಗೆ ಹೋಗು. ಮೇಲೇರಿಸು ; ಬೀಸಿ ಎಸೆ ; ಒಗೆ ; ನೂಕಿ ಚಲಿಸುವಂತೆ ಮಾಡು. **Híker** (ನಾ.)

Hilárious ಹಿಲೇರಿಯಸ್ (ಗು.) ಹರ್ಷದ ; ಗೆಲವಿನ ; ಸಂತೋಷದ ; ಉಲ್ಲಾಸದ ; ಖುಷಿಯಾದ. **Hiláriously** (ಕ್ರಿ. ವಿ.) ; **Hiláriousness** (ನಾ.) ; **Hilárity** ಹಿಲ್ಯಾರಿಟಿ (ನಾ.)

Hílary ಹಿಲರಿ (ನಾ.) H. term ಜನವರಿ ತಿಂಗಳಿನಲ್ಲಿ ಆರಂಭವಾಗುವ ನ್ಯಾಯಸ್ಥಾನದ ಅಥವಾ ವಿಶ್ವವಿದ್ಯಾನಿಲಯದ ವರ್ಷವಿಭಾಗ.

Hill ಹಿಲ್ (ನಾ., ಕ್ರಿ. ಸಕ.) ಗುಡ್ಡ ; ಬೆಟ್ಟ [The hills (ಆಂ. ಇಂ.) (ಆರೋಗ್ಯ ಲಾಭ, ಮೊ. ಗಳಿಗಾಗಿ ಹೋಗುವ) ಗಿರಿ ನಿವಾಸ, ಪರ್ವತ ವಸತಿ, ಮಲೆವೀಡು]. ರಾಶಿ ; ಗುಡ್ಡೆ ; ದಿಬ್ಬ ; ತಿಟ್ಟು ; ದೋರೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[Ant-h. ಹುತ್ತ. Dung-h. ಗೊಬ್ಬರದ ಕುಪ್ಪೆ ; ತಿಪ್ಪೆ. Mole-h. (ಹೆಗ್ಗಣ, ಮೊ. ತೋಡಿದ) ಮಣ್ಣು ಕುಪ್ಪೆ]. (ಕ್ರಿ.) ಗುಡ್ಡೆ ಮಾಡು ; ರಾಶಿ ಹಾಕು. (ಗಿಡಗಳಿಗೆ) ಮಣ್ಣು ಏರಹಾಕು (*Up* ಉಪ. ಮೊಡನೆ). **Hilly** ಹಿಲಿ (ಗು.) ; **Hílliness** (ನಾ.) ; **Híllock** ಹಿಲಕ್ (ನಾ.) ಸಣ್ಣ ಗುಡ್ಡ ; ಮೊರಡಿ.

Hilló, -loá ಹಿಲೊ(ೕ) (ಭಾವ. ಅವ್ಯ.) (ದೂರದಲ್ಲಿರುವವನನ್ನು ಕರೆಯುವಾಗ ಅಥವಾ ಒಬ್ಬನನ್ನು ಸಂಧಿಸಿದುದಕ್ಕೆ ಆಶ್ಚರ್ಯ ಸೂಚಿಸುವಾಗ ಹೇಳುವ ಮಾತು) ಹಿಲೋ !

Híllock. **Hill** ನೋಡಿ.

Hilt ಹಿಲ್ಟ್ (ನಾ., ಕ್ರಿ. ಸಕ.) (ಕತ್ತಿಯ, ಕಠಾರಿಯ) ಹಿಡಿ (Prove up to the h. ಪೂರ್ತಿಯಾಗಿ ರುಜುವಾತು ಕೊಡು; ಸಾಧಿಸು). (ಕ್ರಿ.) ಹಿಡಿ ಹಾಕು.

Hílum ಹೈಲಂ (ನಾ.) ಬೀಜಪಾತ್ರಕ್ಕೆ ಅಂಟಿಕೊಂಡಿರುವ ಬೀಜದ ಭಾಗ ; ಬೀಜದ ಕಣ್ಣು, ನಾಭಿ.

Him ಹಿಂ (ಸ. ನಾ. ; He ಪದದ ದ್ವಿತೀಯಾ ವಿಭಕ್ತಿ) ಅವನನ್ನು ; ಅವನಿಗೆ ; (ಬಳ. ಮಾ., ಪ್ರಥಮಾ ವಿಭಕ್ತಿ ರೂಪದಂತೆಯೂ ಪ್ರ. ; ಮು., than ಪದದ ಮುಂದೆ : You are worse than h. ನೀನು ಅವನಿಗಿಂತ ಕೇಡು. That's h. ಅದು ಅವನು). **Himsélf** (ಸ. ನಾ.) (He ಪದದ ಅವಧಾರಣ ಮತ್ತು ಸ್ವಾರ್ಥಕ ರೂಪ) ಅವನೇ ; ತಾನೇ ; ತನ್ನನ್ನೇ [He did it h. ಅದನ್ನು ಅವನೇ ಮಾಡಿದನು. I saw the man h. ನಾನು ಆ ಮನುಷ್ಯನನ್ನೇ ಕಂಡೆನು. He hurt h. ಅವನು ತಾನಾಗಿ ಗಾಯ ಮಾಡಿಕೊಂಡನು. He is not h. ಅವನು ತನ್ನ (ದೇಹದ, ಮನಸ್ಸಿನ) ಸಹಜ ಸ್ಥಿತಿಯಲ್ಲಿಲ್ಲ]

Hind[1] ಹೈಂಡ್ (ನಾ.) (ಮು., ಮೂರನೆಯ ವರ್ಷದ ಅಥವಾ ಮೂರು ವರ್ಷ ವಯಸ್ಸು ಮೀರಿದ) (ಕೆಂಪು) ಹೆಣ್ಣು ಜಿಂಕೆ.

Hind[2] ಹೈಂಡ್ (ನಾ.) ಹೊಲದ ಆಳು ; (ಸ್ಕಾಟ್ಲೆಂಡಿನಲ್ಲಿ ಮತ್ತು ಉ. ಇಂಗ್ಲೆಂಡಿನಲ್ಲಿ) ಮು., ವಾಸಕ್ಕೆ ಹೊಲದಲ್ಲಿಯೇ ಗುಡಿಸಲು ಪಡೆದಿರುವ, ಎರಡು ಕುದುರೆಗಳು ತನ್ನ ವಶದಲ್ಲಿರುವ, ಮದುವೆಯಾಗಿರುವ, ಕುಶಲ ಕರ್ಮಿಯಾದ, ಬೇಸಾಯದ ಆಳು. (ಇನ್ನೊಬ್ಬರ) ಆಸ್ತಿಯ ಮೇಲ್ವಿಚಾರಕ ; ಮನೆವಾರ್ತೆಗಾರ. ಹಳ್ಳಿ ಗಮಾರ ; ಗಗ್ಗ ; ಒರಟ.

Hind[3] ಹೈಂಡ್ (ಗು.) ಹಿಂಭಾಗದ(ಲ್ಲಿರುವ) ; ಹಿಂದುಗಡೆಯ, ಬಾಲದ ಕಡೆಯ [(ಸಾ., Hinder ಎಂಬ ರೂಪವೇ ಬಳಕೆಯಲ್ಲಿ ಹೆಚ್ಚಾಗಿದೆ. ಮುಂದೂ ಹಿಂದೂ ಜೊತೆ ಜೊತೆಯಾಗಿರುವ ವಸ್ತುಗಳ ವಿಷಯದಲ್ಲಿ Hind ಎಂಬ ರೂಪವುಂಟು) : H. leg ಹಿಂಗಾಲು. H. quarters ಹಿಂಬದಿ ; ಹಿಂಭಾಗ. H. wheel ಹಿಂಗಾಲಿ]. **Hínder**[1] (ಗು.) = Hind. **Híndmost** — ಮೋ(ಮ)ಸ್ಟ್ (ನಾ.) ಎಲ್ಲಕ್ಕೂ ಹಿಂದಿನ ; ಅತ್ಯಂತ ಹಿಂದಿರುವ.

Hínder[2] ಹಿಂಡರ್ (ಕ್ರಿ. ಸಕ.) ತಡೆ (—ಮಾಡು, ಕಟ್ಟು) ; ಅಡ್ಡಿ ಹಾಕು ; ಅಡ್ಡಗಟ್ಟು ; ಅಡಚಣೆಯೊಡ್ಡು. **Híndrance** ಹಿಂಡ್ರನ್ಸ್ (ನಾ.) ಅಡ್ಡಿ ; ತಡೆ ; ಅಡಚಣೆ.

Híndi ಹಿಂಡೀ (ಗು., ನಾ.) ಹಿಂದೀ ಭಾಷೆ(ಯ)

Híndmost. **Hind**[3] ನೋಡಿ.

Híndrance. **Hinder**[2] ನೋಡಿ.

Hindú, -doó, Hín- ಹಿಂದು(ಡೂ) (ನಾ., ಗು.) ಹಿಂದೂ ಮತೀಯ ; ಹಿಂದೂ. (ಗು.) ಹಿಂದೂಗಳ ; ಹಿಂದೂ ಮತದ. (ಶಿಥಿಲವಾಗಿ) ಇಂಡಿಯಾ ದೇಶೀಯ. **Hínduism, -dooism** (ನಾ.) ಹಿಂದೂ ಮತ. **Hínduize, -dooize** (ಕ್ರಿ. ಸಕ.) (ಮತ, ಪದ್ಧತಿ, ಆಚಾರ, ಮೊ. ಗಳಲ್ಲಿ) ಹಿಂದೂವನ್ನಾಗಿ ಮಾಡು. **Hindustáni, -doostánee** ಹಿಂದೂಸ್ಥಾನಿ(ೕ) (ಗು., ನಾ.) ಹಿಂದೂಸ್ಥಾನದ ; ಹಿಂದೂಸ್ಥಾನಿ (ಭಾಷೆ)

Hinge ಹಿಂಜ್ (ನಾ., ಕ್ರಿ.) (ಕದವನ್ನು ಬಾಗಿಲುವಾಡಕ್ಕೆ ಸೇರಿಸುವಂಥ, ತೂಗಹಾಕುವಂಥ) ತಿರುಗಣೆ ; ಕೀಲು ; ಈ ತೆರದ ಕೆಲಸ ಮಾಡುವ (ಪ್ರಾಣಿಯ ದೇಹದಲ್ಲಿಯ) ಸ್ವಾಭಾವಿಕವಾದ ಕೀಲು (ಉದಾ., ಚಿಪ್ಪಿನ ಪ್ರಾಣಿಯ ಚಿಪ್ಪುಕೀಲು). (Off the hinges ಕೀಲು ತಪ್ಪಿ ; ದೇಹಸ್ಥಿತಿ ಅಥವಾ ಮನಸ್ಸಿನ ಸ್ಥಿತಿ ಕೆಟ್ಟುಹೋಗಿ ; ಸ್ವಸ್ಥತೆಯಿಲ್ಲದೆ). (ರೂಪ.) (ಎಲ್ಲವೂ ಯಾವುದರಮೇಲೆ ತಿರುಗುವುದೋ ಅಂಥ) ಕೇಂದ್ರ ತತ್ತ್ವ, ಆಧಾರ (ವಿಷಯ), ನಿರ್ಣಾಯಕ ಸಂಗತಿ. (ಕ್ರಿ.) ಕೀಲು ಹಾಕು ; ಕೀಲಿನಿಂದ (ಹೇಗೋ ಹಾಗೆ) ತಗುಲಹಾಕು. (ಬಾಗಿಲು, ಮೊ. ಗಳ ವಿಷಯದಲ್ಲಿ, ಅಥವಾ ರೂಪಕವಾಗಿ) (ನಿಡುಕು, ತತ್ತ್ವ, ಮೊ. ಗಳಿಗೆ) ತೂಗಬಿದ್ದು ತಿರುಗು, ಅವಲಂಬಿಸಿರು (*On* ಉಪ. ಮೊಡನೆ). **Hinged** (ಗು.) ; **Híngeless** (ಗು.)

Hínny[1] ಹಿನಿ (ನಾ.) ಹೆಣ್ಣು ಕತ್ತೆಯಲ್ಲಿ ಗಂಡು ಕುದುರೆಗೆ ಹುಟ್ಟಿದ ಪ್ರಾಣಿ ; ಹೇಸರ ಕತ್ತೆ.

Hínny[2], **-nie.** **Honey** ನೋಡಿ.

Hint ಹಿಂಟ್ (ನಾ., ಕ್ರಿ.) ಸೂಕ್ಷ್ಮ ಸೂಚನೆ ; ಗುಪ್ತವಾಗಿ ಕೊಟ್ಟ, ಅಥವಾ ನೇರವಾಗಿ ಕೊಡದ, ಸಲಹೆ ; ಸುಳಿವು ; ಸಂಜ್ಞೆ. (ಕ್ರಿ.) ಸೂಕ್ಷ್ಮ ಸೂಚನೆ ಕೊಡು ; ಸುಳಿವು ಕೊಡು (= H. at)

Hínterland (G.) ಹಿಂಟರ್‌ಲ್ಯಾಂಡ್ (ನಾ.) ಸಮುದ್ರದ ಅಥವಾ ನದಿಯ ತೀರಪ್ರದೇಶಕ್ಕೆ ಹಿಂಭಾಗದಲ್ಲಿರುವ ಪ್ರಾಂತ : ಹಿನ್ನಾಡು.

Hip[1] ಹಿಪ್ (ನಾ.) (ಮನುಷ್ಯರ, ಚತುಷ್ಪಾದಿಗಳ) ದೇಹದಲ್ಲಿ ನಡುವಿನ ಕೆಳಗೆ ಎರಡು ಪಕ್ಕಗಳಲ್ಲಿಯೂ ಚಾಚಿಕೊಂಡಿರುವ ಕಿಬ್ಬೊಟ್ಟೆಯ ಭಾಗ : ಚೊಂಕ ; ರೊಂಡಿ ; ಚಪ್ಪೆ ; ಕಟಿ. [Have (person) on the h. (ಒಬ್ಬನನ್ನು) ಇಕ್ಕಟ್ಟಿನಲ್ಲಿ ಸಿಕ್ಕಿಸಿಕೊ ; ಪಟ್ಟು ಹಿಡಿ. Smite h. & thigh (ಕರುಣೆ ತೋರದೆ) ನದೆ ಬಡಿ]. (ವಾ. ಶಾ.) ಬೆನ್ನುಕಟ್ಟಿನಿಂದ ಸೂರಿನ ವರೆಗೂ ಇರುವ ಮೇಲ್ಚಾವಣಿಯಲ್ಲಿಯ ಮೂಲೆ ಏಣು. **H.-roof** ಪಕ್ಕಗಳೂ ಕೊನೆಗಳೂ ಸಹ ಬಾಗಿರುವ ಚಾವಣಿ. **H.-bath** ಚೊಂಕದ ವರೆಗೂ ತೊಟ್ಟಿಯ ನೀರಿನಲ್ಲಿ ಕುಳಿತು ಮಾಡುವ ಸ್ನಾನ ಚಿಕಿತ್ಸೆ : ಕಟಿ ಸ್ನಾನ ; ಈ ಸ್ನಾನದ ತೊಟ್ಟಿ. **H.-disease** ಸೊಂಟದ ಕೀಲಿನಲ್ಲಿ ಹುಟ್ಟುವ (ಅಣಬೆಯ ಜಾತಿಯ ಜೀವಾಣುಗಳಿಂದಾದ, ಸ್ಪಂಜಿನಂಥ ದುರ್ಮಾಂಸಗೂಡಿದ) ಒಂದು ರೋಗ : ಕಟಿಸಂಧಿ ರೋಗ. (-) **hipped** (ಗು.)

Hip[2] ಹಿಪ್, **Hep** ಹೆಪ್ (ನಾ.) (ಮು., ಕಾಡು) ಗುಲಾಬಿಯ ಕಾಯಿ, ಹಣ್ಣು.

Hip[3] (ನಾ., ಕ್ರಿ. ಸಕ.), **Hyp** ಹಿಪ್ (ನಾ.) ಮಂಕುರೋಗ (ಬರಿಸು). ವಿಷಣ್ಣತೆ(ಯುಂಟುಮಾಡು) ; = Hypochondria.

Hip[4] ಹಿಪ್ (ಭಾವ. ಅವ್ಯ.) (ಒಟ್ಟಿಗೆ ಮಾಡುವ ಜಯಘೋಷವನ್ನು ಆರಂಭಿಸುವ ಪದ : H., h., hurrah ! ಎಂಬಲ್ಲಿ)

Hipe ಹೈಪ್ (ಕ್ರಿ. ಸಕ., ನಾ.) (ಕುಸ್ತಿಯಲ್ಲಿ ಎದುರಾಳನ್ನು) ನೆಲದಿಂದ ಮೇಲಕ್ಕೆತ್ತಿ ಪಕ್ಕನೆ ಅವನ ತೊಡೆಗಳ ಮಧ್ಯೆ ತನ್ನ ಮೊಣಕಾಲನ್ನು ತೊಡರಿಸಿ ಕೆಳಕ್ಕೆ ಕೆಡವು(ವುದು) ; ಟಾಂಗು ಕೊಡುವುದು.

Híppo ಹಿಪೊ (ನಾ.) (ಬಳ. ಮಾ.) ನೀರಾನೆ. (Hippopotamus ಎಂಬುದರ ಸಂಕ್ಷಿಪ್ತ)

Hippo- ಹಿಪೊ— (ಸ. ಪೂ. ಪ.) ಕುದುರೆ—, ಅಶ್ವ—. **Hippocentaur** = Centaur. **Hippóphagy** ಹಿಪಾಫಜಿ (ನಾ.) ಕುದುರೆಯ ಮಾಂಸ ತಿನ್ನುವ ರೂಢಿ. **Híppophil(e)** —ಫಿಲ್, —ಫೈಲ್ (ನಾ.) ಅಶ್ವಪ್ರೇಮಿ. **Hippophóbia** (ನಾ.) ಕುದುರೆಯ ಭಯ ; ಅಶ್ವದ್ವೇಷ.

Hippocámpus ಹಿಪೊಕ್ಯಾಂಪಸ್ (ನಾ. ; ಬ. ವ. -pi —ಪೈ) ಒಂದು ಸಣ್ಣ ಮೀನ ಜಾತಿ ; ಕಡಲ್ಗುದುರೆ. (ಅಂ. ರ. ಶಾ.) H. major, minor ಮಿದುಳಿನಲ್ಲಿ ಪ್ರತಿ ಪಕ್ಕದಲ್ಲಿಯೂ ಇರುವ ಒಂದು ಪೌಳು ಅಂಗದ ತಳದಲ್ಲಿಯ ದೊಡ್ಡ ಉಬ್ಬು, ಸಣ್ಣ ಉಬ್ಬು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Híppocras ಹಿಪೊಕ್ರ್ಯಾಸ್ (ನಾ.) (ಚರಿತ್ರೆ) ಸುವಾಸನಾ ದ್ರವ್ಯಗಳನ್ನು ಬೆರಸಿ ರುಚಿಕಟ್ಟಿದ ದ್ರಾಕ್ಷಾ ಮದ್ಯ ; ಸುವಾಸನಾ ಮದ್ಯ.

Híppocrene ಹಿಪೊಕ್ರೀನ್ (ನಾ.) (ಗ್ರೀಕ್ ಪುರಾಣ) ಕಾವ್ಯ ಕಲಾಧಿಮಾನ ದೇವತೆಗಳಿಗೆ ಪೂಜ್ಯವಾದ ಹೆಲಿಕಾನ್ ಪರ್ವತದಲ್ಲಿಯ ಒಂದು ಚಿಲುಮೆ ; ಕವಿ ತೀರ್ಥ.

Híppodrome ಹಿಪೊಡ್ರೋಮ್ (ನಾ.) (ಗ್ರೀಕ್ ಮತ್ತು ರೋಮನ್ ಪ್ರಾಚೀನ) ರಥ ಪಂದ್ಯ, ಕುದುರೆ ಪಂದ್ಯ, ಮೊ. ಗಳ ಪಥ ; ವರ್ತುಲ ಕ್ರೀಡಾ ರಂಗ.

Híppogriff, -gryph ಹಿಪೊಗ್ರಿಫ್ (ನಾ.) ಕುದುರೆಯ ಒಡಲುಳ್ಳ, ಗ್ರಿಫಿನ್ನಿನಂಥ ಒಂದು ಪೌರಾಣಿಕ ಪ್ರಾಣಿ.

Hippopótamus ಹಿಪೊಪಾಟಮಸ್ (ನಾ., ಬ. ವ. -muses, -mi —ಮೈ) (ದೊಡ್ಡ ಮುನುಡಿಯೂ, ಉದ್ದವಾದ ಕೋರೆಹಲ್ಲುಗಳೂ, ಗಿಡ್ಡ ಕಾಲುಗಳೂ, ಕೂದಲಿಲ್ಲದ ದಪ್ಪಚರ್ಮದಿಂದ ಕೂಡಿದ ಬಹು ಭಾರವಾದ ಒಡಲೂ ಉಳ್ಳ, ನದಿ, ಮೊ. ಗಳಲ್ಲಿ ವಾಸಮಾಡುವ) ಆಫ್ರಿಕದ ಒಂದು ದೊಡ್ಡ ಚತುಷ್ಪಾದಿ : ನೀರಾನೆ ; 'ಹಿಪೊಪಾಟಮಸ್'.

Hírcine ಹರ್ಸೈನ್ (ಗು.) ಆಡಿನ ; ಆಡಿನಂಥ ; ಆಡನ್ನು ಹೋಲುವ.

Hire ಹೈಅರ್ (ನಾ., ಕ್ರಿ. ಸಕ.) ಒಂದು ವಸ್ತುವನ್ನು ಹಂಗಾಮಿ ಉಪಯೋಗ ಮಾಡಿಕೊಳ್ಳುವುದಕ್ಕಾಗಲಿ ಒಬ್ಬನಿಂದ ಕೆಲಸ ಮಾಡಿಸಿಕೊಳ್ಳುವುದಕ್ಕಾಗಲಿ ಗೊತ್ತುಮಾಡಿ ಕೊಡುವ ಹಣ; ಕೂಲಿ; ಮಜೂರಿ ; ಬಾಡಿಗೆ. (ಒಬ್ಬನನ್ನು) ಕೂಲಿಗಿಟ್ಟುಕೊಳ್ಳುವುದು ; (ಒಂದು ವಸ್ತುವನ್ನು) ಬಾಡಿಗೆಗೆ ತೆಗೆದುಕೊಳ್ಳುವುದು ; (ರೂಪ.) ಪ್ರತಿಫಲ ; ಪಾರಿತೋಷಿಕ. [**H.-purchase, H.-system** ಬೆಲೆಯ ಹಣವನ್ನು ಗೊತ್ತಾದ ಕಂತುಗಳಲ್ಲಿ ಕೊಟ್ಟ ಬಳಿಕ ಬಾಡಿಗೆಗೆ ತೆಗೆದುಕೊಂಡ ವಸ್ತು ಬಾಡಿಗೆದಾರನ ಸ್ವತ್ತಾಗುವ ವ್ಯಾಪಾರಪದ್ಧತಿ : ಕಂತು ಕೊಳಿಕೆ. On h. ಬಾಡಿಗೆಗೆ (ಕೊಡಲಿರುವ)]. (ಕ್ರಿ.) (ಒಬ್ಬನನ್ನು) ಕೂಲಿಗೆ ಇಟ್ಟುಕೊ ; (ವಸ್ತುವನ್ನು) ಬಾಡಿಗೆಗೆ, —ತೆಗೆದುಕೊ, ಕೊಡು (= h. out). **Hírable** (ಗು.) ; **Híreling** (ನಾ.) (ಸಾ., ನಿಕೃಷ್ಟವಾಗಿ) ಕೂಲಿಯಾಳು ; ಕೂಲಿಗಾಗಿ ಯಾವುದಾದರೂ ಕಾರ್ಯ ಮಾಡುವವನು ; ದುಡ್ಡಿಗೆ ದುಡಿಯುವವನು.

Hírsute ಹರ್ಸ್ಯೂಟ್ (ಗು.) ಒರಟು ಕೂದಲಿನಿಂದ ಕೂಡಿದ ; ಕೂದಲು ಹೆಚ್ಚಾಗಿ ಬೆಳೆದಿರುವ ; ಬಾಚಿ ನಯಮಾಡಿಕೊಳ್ಳದಿರುವ ; ಕೆದರು ಕೂದಲಿನ. (ಸ. ವಿ., ಪ್ರಾ. ವಿ.) ಉದ್ದವಾದ ಒರಟು ಕೂದಲು ತುಂಬಿರುವ. **Hírsuteness** (ನಾ.)

His ಹಿಸ್ (ಗು., ಸ. ನಾ.) (He ಪದದ ಷಷ್ಠೀ ವಿಭಕ್ತಿ) ಅವನ(ದು) (H. hat. It is his) ; ತನ್ನ (To gain h. reward ತನ್ನ ಬಹುಮಾನವನ್ನು ಪಡೆಯಲು)

Híspid ಹಿಸ್ಪಿಡ್ (ಗು.) (ಸ. ವಿ., ಪ್ರಾ. ವಿ.) ಬಿರುಗೂದಲಿನ ; ಮುಳ್ಳು ಕೂದಲಿನ.

Hiss ಹಿಸ್ (ಕ್ರಿ., ನಾ.) (ಮನುಷ್ಯ, ಹಾವು, ಬಾತು, ಬೆಂಕಿಯಮೇಲೆ ಸುರಿದ ದ್ರವ, ಮೊ.) ಹಿಸ್, ಬುಸ್, ಥಸ್ (ಅನ್ನು) ; (ಮು., ಅಸಮ್ಮತಿಯನ್ನು ಅಥವಾ ತಿರಸ್ಕಾರವನ್ನು ಸೂಚಿಸಲು) ಹಿಸ್ಸೆನ್ನು ; (ಮನುಷ್ಯ, ಮೊ. ವಿಷಯದಲ್ಲಿ) ಹೀಗೆ ಅಸಮ್ಮತಿ ತೋರು. [H. off (the stage), away, down ಹಿಸ್ಸೆನ್ನುತ್ತ ತಿರಸ್ಕಾರಪೂರ್ವಕವಾಗಿ (ರಂಗಸ್ಥಳದಿಂದ) ಓಡಿಸಿಬಿಡು]. (ಉದಾಹರಿಸಿದ ಮಾತುಗಳನ್ನು) ಕೋಪದಿಂದ ಬುಸುಗುಟ್ಟುತ್ತ ನುಡಿ.

Hist ಹಿಸ್ಟ್ (ಭಾವ. ಅವ್ಯ.) (ಗಮನ ಸೆಳೆಯುವುದು, ಸದ್ದಡಗಿಸುವುದು, ನಾಯಿಯನ್ನು ಛೂಬಿಡುವುದು, ಮೊ. ಸಂದರ್ಭಗಳಲ್ಲಿ) ಹಿಸ್ಟ್.

Histo- ಹಿಸ್ಟೊ— (ಸ. ಪೂ. ಪ.) (ಜೀ. ವಿ. ಪದಗಳಲ್ಲಿ) : **Histogénesis** (ನಾ.), **Histógeny** ಹಿಸ್ಟಾಜೆನಿ (ನಾ.) (ಜೈವ) ಅಂಗಾಂಶೋತ್ಪಾದನ. **Histogenétic** (ಗು.) ; **Histólogy** ಹಿಸ್ಟಾಲೊಜಿ (ನಾ.) (ಜೈವ) ಅಂಗಾಂಶ ಶಾಸ್ತ್ರ. **Histólogist** (ನಾ.) —ಶಾಸ್ತ್ರಜ್ಞ. **Histológical** ಹಿಸ್ಟೊಲಾ— (ಗು.)

Histórian. **History** ನೋಡಿ.

Históriated ಹಿಸ್ಟೋರಿಯೇಟೆಡ್ (ಗು.) (ಅಲಂಕಾರಾಕ್ಷರ, ಮೊ. ಗಳ ವಿಷಯದಲ್ಲಿ) ಮನುಷ್ಯರ ಅಥವಾ ಪ್ರಾಣಿಗಳ ಚಿತ್ರಗಳಿಂದ ಅಲಂಕರಿಸಿದ ; ಪ್ರಾಣಿ ಚಿತ್ರಾಲಂಕಾರದ.

Históric, etc. **History** ನೋಡಿ.

Hístory ಹಿಸ್ಟರಿ (ನಾ.) ಸಾರ್ವಜನಿಕ ವಿಷಯಗಳನ್ನು ಅವಿಚ್ಛಿನ್ನವಾಗಿ, ಒಂದು ಕ್ರಮವನ್ನನುಸರಿಸಿ, ಬರೆದಿಟ್ಟ ವಿಷಯ ಸಂಗ್ರಹ : ಚರಿತ್ರೆ ; ಇತಿಹಾಸ ; ಬರುವಳಿ. ಜನಾಂಗಗಳ ಬೆಳವಣಿಗೆಯ ವಿಚಾರ (ಬ. ವ. ಇಲ್ಲ) ; ಜನಾಂಗದ, ವ್ಯಕ್ತಿಯ, ವಸ್ತುವಿನ, ಸಂಬಂಧವಾದ ಸಂಪೂರ್ಣ ಘಟನಾವಳಿ ; ಸಂಪೂರ್ಣ ವೃತ್ತಾಂತ. (ವಿಶೇಷ ಘಟನೆಗಳುಳ್ಳ) ಪೂರ್ವ ಚರಿತ್ರೆ ; ಹಿಂದಿನ ಕಥೆ [This knife has a h. ಈ ಚೂರಿಯ ವಿಷಯದಲ್ಲಿ ಒಂದು ಚರಿತ್ರೆ ಇದೆ]. ಹಿಂದಿನ ಘಟನೆಗಳ ಸಮಷ್ಟಿ ; ಮಾನವ ವ್ಯವಹಾರಗಳ ಗತಿ (ಬ. ವ. ಇಲ್ಲ). [Ancient h. (ಸಾ., ಕ್ರಿ. ಶ. ೪೭೬ರ ವರೆಗಿನ) ಪುರಾತನ ಚರಿತ್ರೆ ; ಪ್ರಾಚೀನ ಇತಿಹಾಸ ; (ಹಾಸ್ಯ ಪ್ರ.) ರೂಢಿ, ಬಳಕೆ, ತಪ್ಪಿಹೋದದ್ದು ; ಓಬೀರಾಯನ ಕಾಲದ ಮಾತು. Medieval h. (೧೫ನೆಯ ಶತಮಾನದ ವರೆಗಿನ) ಮಧ್ಯ ಯುಗದ ಇತಿಹಾಸ, ಚರಿತ್ರೆ. Modern h. (೧೫ನೆಯ ಶತಮಾನದಿಂದೀಚಿನ) ಆಧುನಿಕ ಚರಿತ್ರೆ]. ಪ್ರಕೃತಿಯ ಗೋಚರಾನುಭವಗಳ ಕ್ರಮಾನುಸಾರ ವೃತ್ತಾಂತ (ಮು., Natural h. ಪ್ರಕೃತಿ ಚರಿತ್ರೆ). ಐತಿಹಾಸಿಕ ನಾಟಕ. **Histórian** ಹಿಸ್ಟೋರಿಯನ್ (ನಾ.) ಚರಿತ್ರ ಲೇಖಕ ; ಇತಿಹಾಸಕಾರ (ಪ್ರೌಢಾರ್ಥದಲ್ಲಿ : ಬರಿಯ ವಂಶಾನುಚರಿತೆ ಬರೆಯುವವನಾಗಲಿ ಸಂಗ್ರಹಕಾರನಾಗಲಿ ಅಲ್ಲ). **Históric** ಹಿಸ್ಟಾರಿಕ್ (ಗು.) ಚರಿತ್ರೆಯಲ್ಲಿ ಪ್ರಸಿದ್ಧವಾದ ; ಇತಿಹಾಸ ಪ್ರಸಿದ್ಧ. [H. tenses (ಲ್ಯಾಟಿನ್ ಮತ್ತು ಗ್ರೀಕ್ ವ್ಯಾ.) ಆಗಿಹೋದ ಸಂಗತಿಗಳನ್ನು ಹೇಳುವಲ್ಲಿ ಸಾ., ಉಪಯೋಗಿಸುವ ಕಾಲವಾಚಕಗಳು. H. present (ಭೂತ ಕಾಲದ ವಿಷಯಗಳನ್ನು ಹೇಳುವಲ್ಲಿ ಉಪಯೋಗಿಸುವ ಚಾರಿತ್ರ ವರ್ತಮಾನ ಕಾಲ)]. = Historical. **Histórical** (ಗು.) ಚರಿತ್ರೆಯ ; ಚಾರಿತ್ರಿಕ ; ಐತಿಹಾಸಿಕ (H. evidence, principles ಐತಿಹಾಸಿಕ ಪ್ರಮಾಣ, —ತತ್ತ್ವಗಳು) ; ಚರಿತ್ರೆಗೆ ಸೇರಿದ, ಸಂಬಂಧಿಸಿದ (ಕಟ್ಟು ಕಥೆಗಳಲ್ಲ) [H. method (of investigation) ಐತಿಹಾಸಿಕ ಪದ್ಧತಿ(ಯ ವಿಷಯ ಶೋಧನೆ)]. ಚರಿತ್ರ ಸಂಬಂಧವಾದ ; ಚರಿತ್ರಕಾರನ ದೃಷ್ಟಿಯಿಂದ (Of purely h. interest ಕೇವಲ ಚರಿತ್ರಾರ್ಥಕವಾದ) ; ಹಿಂದಿನ ಕಾಲದ ; ಈಗಿನದಲ್ಲದ. (ಕಾದಂಬರಿ, ಚಿತ್ರ, ಮೊ. ವು) ಐತಿಹಾಸಿಕ ವಿಷಯ, ಘಟನೆ, ಇವುಗಳನ್ನೊಳಕೊಂಡ : ಚಾರಿತ್ರಿಕ. =Historic. **Histórically** (ಕ್ರಿ. ವಿ.) ; **Historícity** ಹಿಸ್ಟೊರಿಸಿಟಿ (ನಾ.) (ನಡೆದುದೆಂದು ಹೇಳುವ ಘಟನೆ, ಮೊ. ಗಳ) ಐತಿಹಾಸಿಕತೆ, ನಿಜತ್ವ, ಪ್ರಾಮಾಣ್ಯ. **Historiógrapher** ಹಿಸ್ಟೋರಿಯಾಗ್ರಫರ್ (ನಾ.) (ಮು., ರಾಜಾಸ್ಥಾನ, ಮೊ. ಗಳ ಅಧಿಕೃತ) ಚರಿತ್ರ ಲೇಖಕ. **Historiógraphy** (ನಾ.) ಇತಿಹಾಸ ಲೇಖನ. **Historiográphic(al)** (ಗು.)

Hístrion ಹಿಸ್ಟ್ರಿಯನ್ (ನಾ.) (ಸಾ., ತುಚ್ಛವಾಗಿ) (ರಂಗಸ್ಥಳದ) ನಟ. **Histriónic** —ಯಾನಿಕ್ (ಗು., ನಾ.) ನಟರ ; ಅಭಿನಯದ ; ನಟನೆಯ ; ಸೋಗಿನ ; ಬೂಟಾಟಿಕೆಯ. (ನಾ., ಬ. ವ. ದಲ್ಲಿ) ನಾಟಕ ಪ್ರದರ್ಶನ ; ನಾಟ್ಯ ಕಲೆ. ಬರಿಯ ನಟನೆ ; ಬೂಟಾಟಿಕೆ. **Hístrionism** —ಯೊನಿಸಮ್ (ನಾ.) ನಟನೆ; ಅಭಿನಯ (ಅಭ್ಯಾಸ, ಶೈಲಿ). **Histriónicism** —ಯಾನಿಸಿಸಮ್ (ನಾ.) ಅಭಿನಯ. **Histriónically** (ಕ್ರಿ. ವಿ.)

Hit ಹಿಟ್ (ಕ್ರಿ. ; ಭೂತ., ಭೂ. ಕೃ. Hit) (ಕ್ಷಿಪಣಿಯಿಂದ) ಹೊಡೆ ; ಏಟು ಕೊಡು ; ಬಡಿ ; ಚಚ್ಚು (*At* ಉಪ. ದೊಡನೆ). (ಚಲಿಸುತ್ತಿರುವ ವಸ್ತುವಿನ ವಿಷಯದಲ್ಲಿ) ಹೊಡೆ, ತಗುಲು, ತಾಕು, ಸಂಘಟ್ಟಿಸು ; (ಅಕ. ದಲ್ಲಿ *Against, upon* ಉಪ. ದೊಡನೆ). (ರೂಪ.) ಮನಸ್ಸಿಗೆ ತಟ್ಟು ; ಮನ ನೋಯಿಸು [Hard h. ಬಹಳ ಕಷ್ಟಕ್ಕೀಡಾಗಿ (ಉದಾ.,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಣದ ನಷ್ಟದಿಂದ)] ; (ಉದ್ದೇಶಿಸಿದ ವಸ್ತುವನ್ನು, ವಿಷಯವನ್ನು) ಥಟ್ಟನೆ, — ಪಡೆ, ತಿಳಿ (= H. upon). ಬಹಳ ಸಮರ್ಪಕವಾಗಿ ಅನುಕರಿಸು (= H. off). ಸರಿಹೊಂದು ; ಹೊಂದಿಕೆಯಾಗು ; ಹೊಂದಿಸು. H. below the belt (Belt ನೋಡಿ). H. it, H. the (right) nail on the head ಸರಿಯಾಗಿ ಊಹಿಸು ; ಗುರಿ ಹೊಡೆದಂತೆ ಹೇಳು. H. it off ಒಪ್ಪು ; ಸಮ್ಮತಿಸು ; ಏಕೀಭವಿಸು. H. out ಜೋರಾಗಿ ಹೊಡೆ. H. up (ಕ್ರಿಕೆಟ್) ಹೆಚ್ಚಾಗಿ ಓಟಗಳನ್ನು ಮಾಡು.

Hit (ನಾ.) ಹೊಡೆತ ; ಏಟು ; ಬಡಿತ ; ಪೆಟ್ಟು. (ರೂಪ.) ಮರ್ಮೋದ್ಘಾಟನ ; ಚುಚ್ಚು ಮಾತು (*At* ಉಪ. ಜೊಡನೆ. A sly h. at the sayings of the philosophers). ಒಳ್ಳೆಯ ಅದೃಷ್ಟದ ಹೊಡೆತ ; ಜಯಪ್ರದವಾದ ಪ್ರಯತ್ನ.

Hitch ಹಿಚ್ (ಕ್ರಿ., ನಾ.) (ವಸ್ತುವನ್ನು) ಥಟ್ಟನೆ ತಳ್ಳು; ಸ್ಥಳ ಬದಲಾಯಿಸು ; ಜರುಗು ; ಜರುಗಿಸು (H. up ಥಟ್ಟನೆ ಮೇಲೆತ್ತು). (ಒಂದು ವಿಷಯವನ್ನು ಕಥೆ, ಮೊ. ಕ್ಕೆ) ತರಲು ಹವಣಿಸು, ತಂದು ಸೇರಿಸು. ಕುಣಿಕೆ, ಕೊಂಡಿ, ಮೊ. ಗಳಿಂದ ಬಂಧಿಸು, ಬಂಧನಗೊಳ್ಳು, ಸಿಕ್ಕಿಸು, ಸಿಕ್ಕಿಕೊಳ್ಳು (*In*, *on*, *to*, ಮೊ. ಉಪ. ಜೊಡನೆ). [H. one's waggon to a star (Waggon ನೋಡಿ)]. (ನಾ.) ಥಟ್ಟನೆಯ ನೂಕು, ಸೆಳೆತ. (ನಾವೆ) ಬಗೆ ಬಗೆಯ ಕುಣಿಕೆ, ಗಂಟು (Half h. ಹಗ್ಗದ ತುದಿಯನ್ನು ಅದರ ನಿಂತ ಭಾಗದಮೇಲೆ ಸುತ್ತಿ, ಆ ಸುತ್ತಿನೊಳಗಿನಿಂದ ತುದಿಯನ್ನು ತೂರಿಸಿ ಹಾಕುವ ಗಂಟು). (ತಾತ್ಕಾಲಿಕ) ತಡೆ ; ಅಡಚಣೆ ; ತೊಡಕು.

Híther ಹಿದರ್ (ಕ್ರಿ. ವಿ., ಗು.) ಇತ್ತ ; ಇತ್ತ ಕಡೆ(ಗೆ) ; ಈ ಕಡೆ(ಗೆ) ; ಇಲ್ಲಿ(ಗೆ) (ಈಗ ಸಾ., here). (H. & thither ಅಲ್ಲಿಂದಿಲ್ಲಿಗೆ ; ಅತ್ತ ಇತ್ತ ; ದಿಕ್ಕು ದಿಕ್ಕಿಗೂ). (ಗು.) ಇತ್ತ ಕಡೆ ನೆಲಸಿರುವ ; ಈ ಕಡೆಯ; (ಎರಡರಲ್ಲಿ) ಹೆಚ್ಚುಸಮೀಪದ. **Hitherto** ಈ ವರೆಗೆ ; ಇಲ್ಲಿಯ ವರೆಗೆ. **Hitherward** (ಪ್ರಾಚೀ. ಪ್ರ.) ಈ ಕಡೆ ; ಈ ದಿಕ್ಕಿನಲ್ಲಿ.

Hive ಹೈವ್ (ನಾ., ಕ್ರಿ.) ಜೇನು ಗೂಡು ; ಜೇನು ಹುಟ್ಟು ; ಜೇನು ನೊಣಗಳಿಗಾಗಿ ಮಾಡಿದ ವಸತಿ, ಗೂಡು (= Beehive). (ರೂಪ.) ಚಟುವಟಿಕೆಯ ಜನ ನಿಬಿಡ ಸ್ಥಳ. ಗೂಡು ತುಂಬುವಷ್ಟು ಜೇನುಹುಳು. ಜೇನು ಗೂಡಿನ ಆಕಾರದ ಅಥವಾ ರಚನೆಯ ವಸ್ತು. (ಕಿಕ್ಕಿರಿದ) ಸಂದಣಿ. (ಕ್ರಿ.) (ಜೇನುಹುಳುಗಳನ್ನು) ಗೂಡಿನಲ್ಲಿ ಸೇರಿಸು. (ಜನ, ಮೊ. ನ್ನು) ಸುಖವಾದ ವಸತಿಯಲ್ಲಿರಿಸು. ಕೂಡಿಡು ; ಸಂಚಯ ಮಾಡು. (ಜೇನು) ಗೂಡು ಸೇರು ; (ಜೇನುಹುಳುಗಳಂತೆ) ಒಟ್ಟಿಗೆ ವಾಸಮಾಡು.

Hives ಹೈವ್ಸ್ (ನಾ.) (ಬ. ವ.) ಚರ್ಮದಮೇಲೇಳುವ ಗುಳ್ಳೆಗಳು. ದೊಡ್ಡ ಕರುಳು, ಗಂಟಲು, ಮೊ. ಗಳ ಉರಿಯೂತ.

H'm = Hem², Hum².

Ho ಹೋ (ಭಾವ. ಅವ್ಯ.) (ಆಶ್ಚರ್ಯ, ಮೆಚ್ಚಿಕೆ, ಜಯೋತ್ಸಾಹ, ತಿರಸ್ಕಾರ, ಮೊ. ಗಳನ್ನು ಸೂಚಿಸುವ ಉದ್ಗಾರ) ಹೋ ! ; (ಗಮನ ಸೆಳೆಯುವುದಕ್ಕೆ) ಹೋ! (ಇತರ ಭಾವ. ಅವ್ಯ. ಗಳೊಡನೆ ಜೊತೆಗೂಡಿ ಪ್ರ.) **Heigh-ho**! (Heigh ನೋಡಿ). What ho! (What ನೋಡಿ). (ನಾವೆ) (ಸೇರಬೇಕಾದ ದಿಕ್ಕು, ಸ್ಥಳದ ಹೆಸರು, ಮೊ. ಗಳ ಸೂಚನೆ) Westward ho.

Hoar ಹೋರ್ (ಗು., ನಾ.) ಮುಪ್ಪಿನಿಂದ ನರೆತ ಕೂದಲನ ; ನರೆತ. ನರೆ ಬಿಳುಪು(ಪಿನ). (H.-frost ಘನೀಭವಿಸಿದ ಬಿಳಿಯ ಮಂಜು ; ಗಡ್ಡೆಕಟ್ಟಿದ ಇಬ್ಬನಿ). (ವಸ್ತುಗಳು) ಹಳತಾಗಿ ಬೂದು ತಿರುಗಿದ. (**H.-stone** ಹಿಂದಿನ ಕಾಲದ ಬಾಂದು ಕಲ್ಲು, ಎಲ್ಲೆ ಕಲ್ಲು). (ನಾ.) ನರೆ(ತ). = H.-frost. **Hoáry** ಹೋರಿ (ಗು.) (ಮುಪ್ಪಿನಿಂದ ಕೂದಲು) ನರೆತ, ಬೆಳ್ಳಗಾದ. ಮುಪ್ಪಿನ ನೋಟದ ; ಮುಪ್ಪು ಕಾಣುತ್ತಿರುವ ; ತಲೆ ನರೆತ. ಪ್ರಾಚೀನ ; ಪೂಜ್ಯ ; ಗೌರವಾರ್ಹ. (ಸ. ವಿ., ಕ್ರಿಮಿ ಶಾಸ್ತ್ರ) ಸಣ್ಣ ಸಣ್ಣ ಬಿಳಿಯ ಕೂದಲು ಬೆಳೆದಿರುವ. **Hoáriness** (ನಾ.)

Hoard ಹೋರ್ಡ್ (ನಾ., ಕ್ರಿ. ಸಕ.) (ಮು., ಕೂಡಿಟ್ಟ ಹಣದ) ರಾಶಿ, ಸಂಗ್ರಹ ; ಬಯ್ಕೆ (ಗ್ರಾಂ.); ಮುಡುಪು. (ವಿಷಯ, ಮೊ. ಗಳ) ಸಂಗ್ರಹಿಸಿಟ್ಟ ರಾಶಿ. (ಕ್ರಿ.) (ಹಣ, ಮೊ. ನ್ನು) ಕೂಡಿಡು ; ಗಂಟು ಮಾಡು ; ಕೂಡಹಾಕಿ ಭದ್ರಪಡಿಸು (*Up* ಉಪ. ಜೊಡನೆ). (ಭದ್ರವಾಗಿ) ಮನಸ್ಸಿನಲ್ಲಿ ಇಟ್ಟುಕೊ. (ಯುದ್ಧಕಾಲದಲ್ಲಿ ಆಹಾರಪದಾರ್ಥಗಳು, ಮೊ. ವನ್ನು) ಅತ್ಯಧಿಕವಾಗಿ ಕೂಡಿಟ್ಟುಕೊ.

Hoárhound = Horehound.

Hoárding ಹೋರ್ಡಿಂಗ್ (ನಾ.) (ಕಟ್ಟಡವನ್ನು ಕಟ್ಟುತ್ತಿರುವಾಗ ಅಥವಾ ದುರಸ್ತು ಮಾಡುತ್ತಿರುವಾಗ ಅದರ ಸುತ್ತಲೂ ನೆಡುವ) ಹಲಗೆ ಬೇಲಿ (ಸಾ., ಪ್ರಕಟನ ಪಟಗಳನ್ನು ಹಚ್ಚುವುದಕ್ಕೆ ಉಪಯೋಗ)

Hoarse ಹೋರ್ಸ್ (ಗು.) (ದನಿ) ಒರಟು ; ಒಡೆದ ; ಗಂಟಲು ಕಟ್ಟಿದ ; ಗಂಟಲು ಧಾರವಾದ ; ವಟಗುಟ್ಟುವ. ಇಂಥ ದನಿಯ(ಯುಳ್ಳ). **Hoársely** (ಕ್ರಿ. ವಿ.) ; **Hoársen** (ಕ್ರಿ.) ; **Hoárseness** (ನಾ.)

Hoax ಹೋಕ್ಸ್ (ಕ್ರಿ. ಸಕ., ನಾ.) (ಒಬ್ಬನನ್ನು ತಮಾಷೆಗಾಗಿ) ಮೋಸ ಹೋಗುವಂತೆ ಮಾಡು, ನಂಬಿಸಿ ವಂಚಿಸು. (ನಾ.) ತಮಾಷೆಯ, ಕೀಟಲೆಯ, — ಮೋಸ.

Hob ಹಾಬ್ (ನಾ.) (ಬೆಂಕಿಗೂಡಿನ) ಕೆಂಡದ ಚೌಕಟ್ಟಿನ ಮೇಲ್ಮಟ್ಟಕ್ಕೆ ಸಮವಾದ ಮಟ್ಟವುಳ್ಳ, ಬೆಂಕಿಗೂಡಿನ ಆವರಣದ ಭಾಗ. (ಕೆಲವು ಆಟಗಳಲ್ಲಿ ಗುರಿಯಾಗಿ ಉಪಯೋಗಿಸುವ) ಗುಂಡುತಲೆಯ ಗೂಟ. = Hobnail.

Hóbble ಹಾಬ್ಲ್ (ಕ್ರಿ., ನಾ.) ಕುಂಟಿಕೊಂಡು ನಡೆ ; ಕುಂಟು. (ರೂಪ.) (ಕಾರ್ಯದಲ್ಲಿ, ಮಾತಿನಲ್ಲಿ) ತಡೆ ತಡೆದು ಮುಂದುವರಿ ; ಕುಂಟಿಕೊಂಡು (ಕೆಲಸ) ಮಾಡು ; ತಡವರಿಸುತ್ತ ಮಾತನಾಡು. (ಪದ್ಯ) ಓಟವಿಲ್ಲದಿರು ; ಕುಂಟು. ಕುಂಟುವಂತೆ ಮಾಡು. ಆವರಣ ಬಿಟ್ಟು ಹೋಗದಂತೆ (ಕುದುರೆ, ಮೊ. ಗಳ) ಕಾಲುಗಳನ್ನು ಕೂಡಿಸಿ ಕಟ್ಟಿಹಾಕು. (ನಾ.) ಸಮವಿಲ್ಲದ ಅಥವಾ ದೃಢವಿಲ್ಲದ ನಡಗೆ ; ಕುಂಟು ನಡಗೆ. ಎಡವಟ್ಟು (ಸಂದರ್ಭ). (ಕುದುರೆ, ಮೊ. ಗಳು ಸರಿಯಾಗಿ ನಡೆಯಲಾಗದಂತೆ ಕಟ್ಟುವ) ಹಗ್ಗ, ಕೊರಡು, ತೊಡರು, ಮೊ. ವು. H. skirt (ಸರಾಗವಾಗಿ ನಡೆಯಲಾಗದಂತೆ ತಡೆಯುವಷ್ಟು ತಳಭಾಗದಲ್ಲಿ ಕಿರಿದಾಗಿರುವ) ತೊಡರು ಲಂಗ.

Hóbbledehoy ಹಾಬ್ಲ್‌ಡಿಹಾಯ್, **Hobbade-** ಹಾಬಡಿ —, **Hobbede-** ಹಾಬಿಡಿ — (ನಾ.) (ಹುಡುಗತನಕ್ಕೂ ಪ್ರೌಢ ವಯಸ್ಸಿಗೂ ಮಧ್ಯೇ ಇರುವ) ನಯವಿಲ್ಲದ, ಪಳಗಿಲ್ಲದ, — ತರುಣ ; ಹುಡುಗಚೇಷ್ಟೆ ಇನ್ನೂ ತಪ್ಪಿಲ್ಲದವನು. **Hobbledehoýhood** (ನಾ.) ; **Hobbledehoýism** (ನಾ.) ; **Hobbledehoýish** (ಗು.)

Hóbby[1] ಹಾಬಿ (ನಾ.) ಜೀವನೋಪಾಯಕ್ಕಲ್ಲದೆ ಆತ್ಮಸಂತೋಷಕ್ಕಾಗಿ ಮಾಡುವ ಕೆಲಸ ಅಥವಾ ವ್ಯಾಸಂಗ ; ಹವ್ಯಾಸ. (ಪ್ರಾಚೀ. ಪ್ರ.) ಸಣ್ಣ ಕುದುರೆ ; ತಟ್ಟು. (ಚರಿತ್ರೆ) ಹಗುರವಾದ ಕಾಲೊತ್ತುಬಂಡಿಯ ಮೊದಲನ ಮಾದರಿ.

Hóbby[2] ಹಾಬಿ (ನಾ.) ಒಂದು ಸಣ್ಣ (ಜಾತಿಯ) ಡೇಗೆ.

Hóbby-horse ಹಾಬಿ ಹಾರ್ಸ್ (ನಾ.) 'ಮಾರಿಸ್ ಡ್ಯಾನ್ಸ್', ಮೊ. ಕುಣಿತದಲ್ಲಿ ಆಟಗಾರನು ಸೊಂಟಕ್ಕೆ ಕಟ್ಟಿಕೊಂಡು ನೆಗೆದಾಡುವ, ಕಡ್ಡಿ ಹೆಣೆದು ಮಾಡಿದ, ಕುದುರೆಯ ಆಕೃತಿ ; ಆಟದ (ಹೆಣಿಗೆಯ) ಕುದುರೆ. ಮಕ್ಕಳಾಟದ, ಕುದುರೆಯ ತಲೆಯುಳ್ಳ ಕೋಲು ; ಕೋಲು ಕುದುರೆ. (ಮರದ) ತೂಗು ಕುದುರೆ. ರಂಕ ರಾಟಣದಲ್ಲಿಯ (ಮರದ) ಕುದುರೆ. = Hobby[1] (ಈಗ ವಿರ. ಪ್ರ.)

Hóbgoblin ಹಾಬ್‌ಗಾಬ್ಲಿನ್ (ನಾ.) ತುಂಟ ದೆವ್ವ, ಪಿಶಾಚಿ ; ಗುಮ್ಮ.

Hóbnail ಹಾಬ್‌ನೇಯ್ಲ್ (ನಾ.) ಜೋಡಾಗಳ ಹಿಮ್ಮಡಿಗೆ ಹಾಕುವ ದಪ್ಪ ತಲೆಯ ಗಿಡ್ಡುಮೊಳೆ. ಇಂಥ ಮೊಳೆ ಹಾಕಿದ ಜೋಡಾ ಹಾಕಿಕೊಳ್ಳುವವನು ; ಹಳ್ಳಿ ಗಮಾರ. **Hóbnailed** (ಗು.) (H. liver.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ವೈ. ಶಾ.) (ರೋಗದಿಂದ) ಮೊಳೆಯ ತರೆಯಂಥ ಉಬ್ಬುಗಳು ಒತ್ತಾಗಿ ಹರಡಿರುವ ಯಕೃತ್ತು.

Hób-nob ಹಾಬ್ ನಾಬ್ (ಕ್ರಿ. ಅಕ.) (ಮತ್ತೊಬ್ಬನೊಡನೆ) ಒಟ್ಟಿಗೆ ಕುಡಿ ; ಸಹಪಾನ ಮಾಡು. (ಒಬ್ಬನೊಂದಿಗೆ) ಸಲಿಗೆಯಿಂದಿರು, ಅನ್ಯೋನ್ಯವಾಗಿರು (*With* ಉಪ. ದೊಡನೆ)

Hóbo ಹೋಬೋ (ನಾ.) (ಅಮೆ. ಸಂ.) ತಿರುಗು ಕೆಲಸಗಾರ ; ಅಲೆಕೂಲಿ. (ಊರೂರು) ಅರೆಯುವವನು ; ಅಲೆಮಾರಿ.

Hock[1] ಹಾಕ್ (ನಾ.) ಚತುಷ್ಪಾದಿಯ ಹಿಂಗಾಲಿನಲ್ಲಿ ನಿಜವಾದ ಮಂಡಿಗೂ ಟುಂಟು ಕಾಲಿಗೂ ಮಧ್ಯೇ ಇರುವ ಕೀಲು.

Hock[2] ಹಾಕ್ (ನಾ.) ಜರ್ಮನಿಯ ಬಿಳಿಯ ದ್ರಾಕ್ಷಾ ಮದ್ಯ (ಮು., Hochheim ಎಂಬ ಸ್ಥಳದಲ್ಲಿ ತಯಾರಾದದ್ದು)

Hock[3] ಹಾಕ್ (ಕ್ರಿ. ಸಕ., ನಾ.) (ಹಿಂದೆ, ಅಮೆ. ಸಂ., ಅಸಂ.) ಒತ್ತೆ(ಯಿಡು) ; ಅಡವು (ಹಾಕು) ; ಗಿರವಿ (ಹಾಕು). In h. ಒತ್ತೆಯಲ್ಲಿ ; ಸಾಲದಲ್ಲಿ ; ಸೆರೆಯಲ್ಲಿ.

Hóckey ಹಾಕಿ (ನಾ.) ಚೆಂಡನ್ನು ಕೊಂಕಿದ ದಾಂಡುಗಳಿಂದ ಹೊಡೆದು ಪ್ರತಿಕಕ್ಷಿಗಳ ಗುರಿಗಂಬಗಳ ಮಧ್ಯೆ ನುಗ್ಗಿಸಲು ಯತ್ನಿಸುವ ಒಂದು ಆಟ : 'ಹಾಕಿ' ಆಟ.

Hócus ಹೋಕಸ್ (ಕ್ರಿ. ಸಕ.) ಮೋಸಗೊಳಿಸು ; ವಂಚಿಸು ; ಠಕ್ಕಿಸು. (ಒಬ್ಬನನ್ನು) ಮತ್ತುಪದಾರ್ಥದಿಂದ ಪ್ರಜ್ಞೆ ತಪ್ಪಿಸು. (ಮದ್ಯಕ್ಕೆ) ಮತ್ತು ಪದಾರ್ಥ ಸೇರಿಸು. **Hócus-pócus** (ನಾ., ಕ್ರಿ.) ಕಣ್ಕಟ್ಟು ; ಯಕ್ಷಿಣಿ ; ಕೈಚಳಕದ ಮಾಟಗಾರಿಕೆ. 'ಘೂ' ಮಂತ್ರ ; ಮಂತ್ರ ಗಾಳಿ. ಮೋಸ ; ವಂಚನೆ. (ಕ್ರಿ.) ಕಣ್ಕಟ್ಟು ಮಾಡು ; ತಂತ್ರ ಮಾಡು ; ಮೋಸಗೊಳಿಸು ; ಠಕ್ಕಿಸು.

Hod ಹಾಡ್ (ನಾ.) ಗಾರೆ, ಮೊ. ನ್ನು ಮೇಲೆತ್ತಿ ಕೊಡುವುದಕ್ಕಾಗಿ ಮಾಡಿರುವ ಕೋಲಿನ ಕಾಲುಳ್ಳ (ಕಟ್ಟಡಕಾರನ) ಹಗುರವಾದ ತೆರೆದ ತೊಟ್ಟಿ ; ಕೋಲ್ತೊಟ್ಟಿ. **Hodman** ಕೋಲ್ತೊಟ್ಟಿಯ ಕೂಲಿಯಾಳು. (ರೂಪ.) ಯಂತ್ರದಂತೆ (ಒಂದೇ ರೀತಿ) ಕೆಲಸ ಮಾಡುವವನು. ದುಡಿತದ ಲೇಖಕ ; ಕೂಲಿ ಬರಹಗಾರ.

Hódden ಹಾಡನ್ (ನಾ.) ಒರಟು ಉಣ್ಣೆಯ ಬಟ್ಟೆ. H. grey ಬೂದು ಬಣ್ಣದ 'ಹಾಡನ್' ಬಟ್ಟೆ (ಹಳ್ಳಿಗಾಡಿನವರ ಮಾದರಿಯುಡಿಗೆ)

Hodge ಹಾಡ್ಜ್ (ನಾ.) ಇಂಗ್ಲೆಂಡಿನ ಮಾದರಿಯ ಬೇಸಾಯದ ಆಳು.

Hódge-pódge ಹಾಡ್ಜ್ ಪಾಡ್ಜ್ (ನಾ.) = Hotch-potch.

Hodiérnal ಹೋಡಿಅರ್ನಲ್ (ಗು.) ಈ ದಿನದ ; ಇಂದಿನ ; ಈ ಕಾಲದ.

Hodómeter ಹೊ(ಹಾ)ಡಾಮಿಟರ್, **Od-** ಒಡಾ — (ನಾ.) ಗಾಲಿ ವಾಹನಗಳು ನಡೆದ ದೂರವನ್ನು ಅಳೆಯುವಂತೆ ಗಾಲಿಗೆ ಸಿಕ್ಕಿಸಿರುವ ಒಂದು ಸಲಕರಣೆ ; ಪಥ ಮಾಪಕ.

Hoe ಹೋ (ನಾ., ಕ್ರಿ.) ಮಣ್ಣನ್ನು ಸಡಿಲಿಸುವುದು, ಕಳೆ ಕೀಳುವುದು, ಮೊ. ಕೆಲಸಗಳಿಗೆ ಉಪಯೋಗಿಸುವ ಒಂದು ಮುಟ್ಟು ; ಕಳೆಗುದ್ದಲಿ. Dutch h. ನೂಕಿಕೊಂಡು ಹೋಗುವ ಕಳೆಗುದ್ದಲಿ. (ಕ್ರಿ.) (ಪೈರಿನ) ಕಳೆ ಕೀಳು ; ಮಣ್ಣು ಸಡಿಲಿಸು ; (ನೆಲವನ್ನು) ಕಳೆಗುದ್ದಲಿಯಿಂದ ಅಗೆ, ಅಗತೆ ಮಾಡು (*Up* ಉಪ. ದೊಡನೆ) ; ಕಳೆಗುದ್ದಲಿಯಿಂದ ಕಡಿದು ಕೆಡವು (*Down* ಉಪ. ದೊಡನೆ). ಕಳೆಗುದ್ದಲಿಯಿಂದ ಕೆಲಸ ಮಾಡು.

Hog ಹಾಗ್ (ನಾ.) ಹಂದಿ (ಮು., ಹಿಡಮಾಡಿ ಮಾಂಸಕ್ಕಾಗಿ ಬೆಳೆಸಿದ ಗಂಡು ಹಂದಿ). (ಪ್ರಾಂ. ಪ್ರ.) (ಮೊದಲ ಬಾರಿಯೂ ಉಣ್ಣೆ ಕತ್ತರಿಸಿಲ್ಲದ) ಚಿಕ್ಕ ಕುರಿ ; ಎಳಗುರಿ. (ರೂಪ.) ಒರಟ ; ಒಡ್ಡ ; ಹೊಟ್ಟೆಬಾಕ ; ಕೊಳಕ ; ಹೊಲಸು ಮನುಷ್ಯ. = Road-h. (Road[1] ನೋಡಿ). Go the whole h. (ಕೆಲಸವನ್ನು) ಪೂರಾ, ಆದ್ಯಂತವಾಗಿ, ಯಾವುದನ್ನೂ ಬಿಡದೆ, ಮಾಡು. H. in armour ಸೊಗಸಿನ ಉಡುಪು ತೊಟ್ಟು ಸುಲಭವಾಗಿ ಚಲಿಸಲಾಗದ ಒಡ್ಡ ; ಬಿಗುಮಾನದಿಂದಿರುವ ಒಡ್ಡ ಮನುಷ್ಯ. H.'s pudding ಬಗೆ ಬಗೆಯ ವಸ್ತುಗಳನ್ನು ತುಂಬಿ ಪಕ್ವ ಮಾಡಿದ ಹಂದಿಯ ಕರುಳು ; ಹಂದಿಕಡುಬು. **Hogback, H.'s-back** ಗುಡ್ಡದ ನೆತ್ತಿಯ ಕಡಿದಾದ ಏಣು. **H.-fish** ತಲೆಯಮೇಲೆ ಬಿರುಗೂದಲಿರುವ ಒಂದು ಮೀನ ಜಾತಿ ; ಹಂದಿಮೀನು. **H. mane** ಗುತ್ತನಾಗಿ ಕತ್ತರಿಸಿದ ಕುದುರೆಯ ಜೂಲು. **H.-wash** ಹಂದಿಗಳಿಗೆ ಹಾಕುವ (ಅಡಿಗೆಮನೆಯ) ಕಲಗಚ್ಚು, ಮೊ. **Hógget** ಹಾಗೆಟ್ (ನಾ.) (ಒಂದು) ವರ್ಷದ ಕುರಿ. **Hóggish** (ಗು.) ; **Hóggishly** (ಕ್ರಿ. ವಿ.) ; **Hóggishness** (ನಾ.) ; **Hóglike** (ಗು.) ; **Hógling** (ನಾ.) ಹಂದಿಮರಿ ; ಕುರಿಮರಿ.

Hog (ಕ್ರಿ.) (ಬೆನ್ನು, ಮೊ.) ಮಧ್ಯದಲ್ಲಿ ಕಮಾನಿನಂತೆ ಉಬ್ಬು, ಉಬ್ಬಿಸು. (ಕುದುರೆಯ ಜೂಲನ್ನು) ಗುತ್ತನಾಗಿ ಕತ್ತರಿಸು. (ಬಳ. ಮಾ.) ಅಪಾಯಕರವಾದ ವೇಗದಲ್ಲಿ ಮೋಟಾರು ನಡಸು. ಬೇಕೆಂದು ದಾರಿ ಕಟ್ಟು, ಸ್ಥಳ ಕೊಡದಿರು.

Hógget. **Hog** ನೋಡಿ.

Hóggin ಹಾಗಿನ್ (ನಾ.) ಜಾಲಿಸಿದ ಗರಸುಮಣ್ಣು, ಗ್ರ್ಯಾವೆಲ್ ಮಣ್ಣು.

Hógmanay ಹಾಗ್‌ಮನೇ (ನಾ.) (ಸ್ಕಾ. ಪ್ರ.) ವರ್ಷದ ಕಡೆಯ ದಿನ ; (ಆ ದಿನ ಮಕ್ಕಳಿಗೆ ಕೊಡುವ) ಸೀದೋಸೆ, ಕಜ್ಜಾಯ.

Hógshead ಹಾಗ್ಸ್‌ಹೆಡ್ (ನಾ.) ದೊಡ್ಡ ಪೀಪಾಯಿ ; ದ್ರವ ವಸ್ತುಗಳ ಒಂದು ಅಳತೆಯ ಮಾನ (೫೨½ ಇಂಪೀರಿಯಲ್ ಗ್ಯಾಲನ್ ಪ್ರಮಾಣ ; ಸಂಕ್ಷಿಪ್ತ : hhd.)

Hoi(c)k ಹಾಯ್ಕ್ (ಕ್ರಿ.) (ಫಲಕ ವಿಮಾನವನ್ನು) ಬಲ ಪ್ರಯೋಗದಿಂದ ಥಟ್ಟನೆ ಮೇಲಕ್ಕೆ ತಿರುಗುವಂತೆ ಮಾಡು.

Hoick(s) ಹಾಯ್ಕ್ಸ್ (ಭಾವ ಅವ್ಯ.) ಬೇಟೆನಾಯಿಗಳನ್ನು 'ಛೂ' ಬಿಡುವ, ಕೆರಳಿಸುವ, ಉದ್ಗಾರ (= Yoicks)

Hoi polloi. **Polloi** ನೋಡಿ.

Hoist[1] ಹಾಯ್ಸ್ಟ್ (ಕ್ರಿ. ಸಕ., ನಾ.) (ಮು., ಬಾವುಟಗಳನ್ನು) ಮೇಲ ಕ್ಕೇರಿಸು ; ಹಾರಿಸು. (ಕಪ್ಪಿ, ಮೊ. ಸಲಕರಣೆಗಳಿಂದ) ಮೇಲಕ್ಕೆತ್ತು. [(ಭೂ.ಕೃ.) H. with his own petard (ಪರರ ನಾಶಕ್ಕಾಗಿ ಮಾಡಿದ) ತನ್ನ ಸಿಡಿಗುಂಡಿನಿಂದ ತಾನೇ ಸಿಡಿದುಹೋಗಿ. (ರೂಪ.) ಇತರರ ನಾಶಕ್ಕಾಗಿ ಮಾಡಿದ ಹೂಟ ತನ್ನ ನಾಶಕ್ಕೇ ಕಾರಣವಾಗಿ]. (ನಾ.) (ಮೇಲಕ್ಕೆ) ಎತ್ತುವುದು, ಏರಿಸುವುದು, ತಳ್ಳುವುದು ; ಎತ್ತುವ ಯಂತ್ರಸಲಕರಣೆ ; ಎತ್ತಿಗೆ.

Hoíty-toity ಹಾಯ್ಟಿ ಟಾಯ್ಟಿ (ನಾ., ಗು., ಭಾವ. ಅವ್ಯ.) ಗಲಭೆಯ (ನಡತೆ) ; ತಲೆ ತಿರುಗಿದ (ನಡತೆ) ; ಪುಂಡಾಟ(ದ). ಕುಣಿ ದಾಟದ ; ಉಲ್ಲಾಸದ ; ಗರ್ವದ ; ಸೊಕ್ಕಿನ ; ಸಿಡುಕಿನ. (ಭಾವ. ಅವ್ಯ.) (ಇಲ್ಲದ ದೊಡ್ಡಸ್ತಿಕೆ, ಪ್ರತಿಷ್ಠೆ, ಮೊ. ಗಳ ವಿಷಯದಲ್ಲಿ ಆಶ್ಚರ್ಯ ಅಥವಾ ತಿರಸ್ಕಾರ ಸೂಚಕ ಉದ್ಗಾರ)

Hókey-pókey ಹೋಕಿ ಪೋಕಿ (ನಾ.) = Hocus-pocus ; ತಿರುಗು ವ್ಯಾಪಾರಿ ಮಾರುವ ಅಗ್ಗದ ಮಂಜುಕೆನೆಯ ಹಲ್ವಾ (Ice-cream)

Hold[1] ಹೋಲ್ಡ್ [ಕ್ರಿ. ; ಭೂತ. Held ; ಭೂ. ಕೃ. Held, (ಪ್ರಾಚೀ. ಪ್ರ.) Holden ಹೋಲ್ಡನ್] (ಭದ್ರವಾಗಿ) ಹಿಡಿ, ಹಿಡಿದುಕೊ [Held ! (ರಗ್ಬಿ ಕಾಲ್ಚೆಂಡಾಟದಲ್ಲಿ ಚೆಂಡನ್ನು ಎದುರಾಳಿಯೂ ಓಟಗಾರನೂ ಇಬ್ಬರೂ ಹಿಡಿದದ್ದರಿಂದ, ಅದನ್ನು ಕೆಳಗಿಡಬೇಕೆಂಬ ಕೂಗು)]. (ಒಂದು ಗೊತ್ತಾದ ಭಾವ) ತೋರುವಂತೆ ಇರು ; (ತಲೆ, ಮೊ. ನ್ನು ಒಂದು ಗೊತ್ತಾದ ಭಾವ ತೋರುವಂತೆ) ಇಟ್ಟುಕೊಂಡಿರು. (ಪಾತ್ರೆ) ಹಿಡಿ ; ಹಿಡಿಸು ; ಒಳಕೊಳ್ಳು. (ಆಸ್ತಿ, ಸರ್ಕಾರದ ಸಾಲಪತ್ರಗಳು, ಜಮೀನು) ಪಡೆದಿರು, ಸ್ವಾಮ್ಯವುಳ್ಳವ ನಾಗಿರು, ಹಿಡುವಳಿದಾರನಾಗಿರು. (ಸ್ಥಾನ) (ಒಂದು ಸ್ಥಳವನ್ನು) ಸ್ವಾಧೀನದಲ್ಲಿಟ್ಟುಕೊಂಡಿರು. (ಸ್ಥಳವನ್ನು, ಒಬ್ಬನ ಆಲೋಚನೆಗಳನ್ನು) ಆಕ್ರಮಿಸಿರು. (ಒಬ್ಬನನ್ನು, ಒಬ್ಬನ ಗಮನವನ್ನು) ತಲ್ಲೀನವಾಗುವಂತೆ ಮಾಡು. ಬಿಗಿಹಿಡಿ [H. your noise, tongue ಗಲಾಟೆ ನಿಲ್ಲಿಸು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಾಯಿಮುಚ್ಚು, ನಾಲಗೆ ಬಿಗಿಹಿಡಿ. H. one's hand (ಶಿಕ್ಷಿಸದಂತೆ ಅಥವಾ ಇತರ ಕೆಲಸ ಮಾಡದಂತೆ) ತಡೆ, ತಡೆದುಕೊ, ತಾಳು. There is no holding him ಅವನನ್ನು (ಅವನ ಚೇಷ್ಟೆ, ಉತ್ಸಾಹ, ಉದ್ದೇಶ, ಮೊ. ನ್ನು) ತಡೆಯಲಾಗುವುದಿಲ್ಲ. H. him at bay ತನ್ನ ಮೇಲೆ ಬೀಳದಂತೆ ಅವನನ್ನು ತಡೆದಿಟ್ಟರು. H. in suspense ತೀರ್ಮಾನಿಸದೆ ಇಟ್ಟರು ; ಅಮಾನತ್ತಿನಲ್ಲಿಟ್ಟರು. H. thing over one ಸದಾ ಅದೇ ಬೆದರಿಕೆ ತೋರಿಸುತ್ತಿರು]. (ಪರತ್ತುಗಳನ್ನು, ಭಾಷೆಯನ್ನು) ಪಾಲಿಸುವಂತೆ ಮಾಡು. (ಉತ್ಸವ, ಸಭೆ, ಸಂಭಾಷಣೆ, ಮೊ. ನ್ನು) ಆಚರಿಸು, ನೆರವೇರಿಸು, ಕೂಡಿಸು, ನಡಸು. (ಸೂಕ್ತಿನ ಮಾತು, ಮೊ. ನ್ನು) ಆಡು, ಉಪಯೋಗಿಸು. (H. to bail ಹೊಣೆ ಹೊರಿಸು ; ಜಾಮೀನಿನಿಂದ ಬಂಧಿಸು). (ಅಮೆ. ಸಂ.) ಸೆರೆಯಲ್ಲಿಡು. (ನ್ಯಾಯಾಧಿಪತಿ, ನ್ಯಾಯ ಸ್ಥಾನ) (—ಎಂದು) ವಿಧಿಸು, ತೀರ್ಪು ಕೊಡು (*That* ಪದದೊಡನೆ). H. it good to do ಮಾಡುವುದು ಒಳ್ಳೆಯದೆಂದು ಭಾವಿಸು. H. him in esteem, contempt ಅವನಲ್ಲಿ ಗೌರವವಿಟ್ಟರು, ತಿರಸ್ಕಾರಭಾವವುಳ್ಳವನಾಗಿರು. H. thing cheap (—ನ್ನು) ಅಗ್ಗವಾಗಿ ಕಾಣು, ಕಡೆಗಣಿಸು. H. dear ಪ್ರೀತಿಯಿಂದ ಭಾವಿಸು, ಕಾಣು. H. by, to (ಅಯ್ಕೆ, ಗುರಿ, ಮೊ. ವನ್ನು) ಭದ್ರವಾಗಿ ಹಿಡಿ, ಬಿಡದಿರು. H. with ಒಪ್ಪು ; ಸರಿಯೆನ್ನು. H., H. good, H. true (ಕಾನೂನು, ಮೊ.) ಊರ್ಜಿತವಾಗು, ಅನ್ವಯಿಸು. H. on one's way ತನ್ನ ಮಾರ್ಗ ಹಿಡಿದು ಹೋಗುತ್ತಿರು. Hold! (ಪ್ರಾಚೀ. ಪ್ರ.) ನಿಲ್ಲು ! ತಾಳು ! H. one's head high ತಲೆಯೆತ್ತಿಕೊಂಡು ಮೆರೆ. H. up one's head ತಲೆಯೆತ್ತಿ ನಿಲ್ಲು; ತಲೆ ಜೋಲುಹಾಕದಿರು ; ಎದೆಗುಂದದಿರು. H. one's ground, H. one's own ಹಿಮ್ಮೆಟ್ಟದಿರು ; ಜಗ್ಗದಿರು ; ನೆಲೆ ಬಿಡದಿರು. H. water (ರೂಪ.) ಒಡಕಿಲ್ಲದಿರು ; ಭದ್ರವಾಗಿರು ; ಪರೀಕ್ಷೆಗೆ ನಿಲ್ಲು. H. aloof (ಇತರರೊಡನೆ) ವ್ಯವಹಾರ ಮಾಡದಿರು ; ತನ್ನಷ್ಟಕ್ಕೆ ತಾನಿರು ; ದೂರವಾಗಿರು. H. back (ಸಕ.) ತಡೆ(ಗಟ್ಟು) ; (ಅಕ.) ಹಿಂದಿರು ; ಸೇರದಿರು ; ಕೈ ಹಚ್ಚದಿರು (*From* ಉಪ. ದೊಡನೆ). H. down (ಅಮೆ. ಸಂ.) ಇದ್ದಲ್ಲಿಯೇ ಇರು ; (ತನ್ನ ಉದ್ಯೋಗವನ್ನು) ಬಿಡದೆ ಇಟ್ಟುಕೊಂಡಿರು. H. forth (ಸಾ., ತಿರಸ್ಕಾರಾರ್ಥದಲ್ಲಿ) ಬಹಿರಂಗವಾಗಿ ಮಾತಾಡು ; ಉಪದೇಶ ಮಾಡು ; ಒದರು. H. hard (ವಿಧಿರೂಪ) ನಿಲ್ಲು ! H. in ನಿರ್ಬಂಧದಲ್ಲಿಡು ; ತಡೆದಿಡು ; ತಡೆದುಕೊ. H. off ತಡಮಾಡು. H. on (ಒಂದನ್ನು) ಹಿಡಿದುಕೊಂಡಿರು. (ಬಳ. ಮಾ., ವಿಧಿರೂಪ) ನಿಲ್ಲು ! H. out (ಕೈ, ಮೊ. ನ್ನು) ನೀಡು, ಚಾಚು ; (ಆಸೆ, ಭರವಸೆ, ಮೊ. ನ್ನು) ಕೊಡು, ಮುಂದಿಡು. ತಾಳಿಕೊಂಡಿರು ; ಪಟ್ಟಾಗಿ ಹಿಡಿದಿರು. H. over ಮುಂದಕ್ಕೆ ಹಾಕು; ತಳ್ಳಿಡು; ಅಮಾನತ್ತಿನಲ್ಲಿಟ್ಟರು. H. together ಒಂದುಗೂಡು(ಡಿಸು) ; ಒಟ್ಟಿಗೆ ಸೇರಿಸು. H. up ಆಸರೆ ಕೊಡು ; ಎತ್ತಿ ಹಿಡಿ (ರೂಪ. ಸಹ). (ಅಪಹಾಸ್ಯ, ಮೊ. ಕ್ಕೆ ಗುರಿಯಾಗುವಂತೆ) ಪ್ರದರ್ಶಿಸು, ಎತ್ತಿ ತೋರಿಸು (*To* ಉಪ. ದೊಡನೆ). (ಅಭಿವೃದ್ಧಿಯನ್ನು) ತಡೆ(ಗಟ್ಟು) ; ಅಡಚಣೆ ಮಾಡು. (ಅಮೆ. ಸಂ.) ದಾರಿಗಟ್ಟಿ ಹೊಡೆದು ಸುಲಿಗೆ ಮಾಡು. (ಕುದುರೆಯ ವಿಷಯದಲ್ಲಿ) ತಡೆದುಕೊ, ಬೀಳದಿರು. **H.-all** (ಪ್ರಯಾಣಿಕರು, ಸಿಪಾಯಿಗಳು, ಮೊ. ರು) ಬಟ್ಟೆ ಬರೆ, ಮೊ. ನ್ನು ಇಟ್ಟುಕೊಂಡು ಒಯ್ಯಬಹುದಾದ ಚೀಲ ; ಅಡುಕು ಚೀಲ. **H.-back** ಅಡ್ಡಿ ; ಅಡಚಣೆ. **Holdfast** ಬಿಗಿ ಹಿಡಿತ; ಗೋಡೆ, ಮೊ. ಗಳಿಗೆ (ವಸ್ತುವನ್ನು) ಬಿಗಿಸುವ ಹಿಡಿಕಟ್ಟು ; ಬಂಧನಿ. **H-up** (ಆದಿಯಲ್ಲಿ ಅಮೆ. ಸಂ.) ದರೋಡೆಗಾಗಿ (ಮನುಷ್ಯ, ವಾಹನ, ರೈಲುಬಂಡಿ, ಮೊ. ನ್ನು) ಬಲಾತ್ಕಾರವಾಗಿ ತಡೆದು ನಿಲ್ಲಿಸುವುದು. **Hólder** (ನಾ.) (ಕ್ರಿಯಾರ್ಥಗಳಲ್ಲಿ) ; (ಉದ್ಯೋಗ, ಹುದ್ದೆ, ಮೊ. ಗಳನ್ನು) (ತಾತ್ಕಾಲಿಕವಾಗಿ) ಪಡೆದಿರುವವನು. (ಯಾವುದಾದರೂ ವಸ್ತುವನ್ನು) ಹಿಡಿದುಕೊಳ್ಳುವ ಸಾಧನ ; ಹಿಡುಕ (Cigar-h. ಚುಟ್ಟಾ ಹಿಡುಕ. Pen-h. ಲೇಖನಿಯ ಕಡ್ಡಿ). **Hólding** (ನಾ.) (ಕ್ರಿಯಾರ್ಥಗಳಲ್ಲಿ). (ಜಮೀನು) ಹಿಡುವಳಿ; ಹಿಡುವಳಿಯ ಜಮೀನು ; ಒಬ್ಬನಲ್ಲಿರುವ ಸರ್ಕಾರದ ಸಾಲಪತ್ರಗಳು, ಬಂಡವಾಳ ಪತ್ರಗಳು, ಮೊ. ವು.

Hold (ನಾ.) ಹಿಡಿತ (ರೂಪ. ಸಹ) (Take, get, keep, h. of ಹಿಡಿದುಕೊ, ಹಿಡಿದುಕೊಂಡಿರು). (ಹಿಡಿದುಕೊಳ್ಳುವ) ಅವಕಾಶ ; ಅಧಿಕಾರ. ಹಿಡಿದುಕೊಳ್ಳುವ ಆಸರೆ, ಸಾಧನ. H. (on) (ರೂಪ.) (— ಮೇಲೆ) ಪ್ರಭಾವ.

Hold[2] ಹೋಲ್ಡ್ (ನಾ.) ಸರಕು ತುಂಬಲು ಹಡಗಿನ ಅಟ್ಟದ ಕೆಳಗಿರುವ ಅವಕಾಶ ; (ಹಡಗಿನ) ಸಾಮಾನು ಕುಳಿ.

Hole ಹೋಲ್ (ನಾ.) ಕಂಡಿ; ಡೊಗರು ; ತೂತು ; ರಂಧ್ರ ; ಗುಂಡಿ. (ಹೊಳೆ, ಮೊ. ಗಳಲ್ಲಿ) ಆಳವಾದ ಜಾಗ ; ಮಡು. (ಪ್ರಾಣಿಗಳ) ಬಿಲ ; ಬೊಕ್ಕೆ. ಸಣ್ಣ, ಕೀಳು, — ವಾಸದ ಮನೆ; ಕುಟಿ ; ಜೋಪಡಿ. (ಹಲವು ಆಟಗಳಲ್ಲಿ ಚೆಂಡು, ಮೊ. ನ್ನು ತುಂಬಬೇಕಾದ) ಬದ್ದು, ಕುಳಿ. (ಗಾರ್ಟ್ಸ್ ಆಟ) ಒಂದು ಬದ್ದಿನಿಂದ ಇನ್ನೊಂದು ಬದ್ದಿಗೆ ಅತ್ಯಲ್ಪ ಸಂಖ್ಯೆಯ ಹೊಡೆತಗಳಿಂದ ಚೆಂಡನ್ನು ಸಾಗಿಸಿದುದಕ್ಕಾಗಿ ಆಟಗಾರನು ಪಡೆಯುವ ಅಂಕಗಳು. (ಆಸಂ.) ಎಡವಟ್ಟು ಸಂದರ್ಭ ; ಇಕ್ಕಟ್ಟು (I am in rather, a devil of, a hole ಬಹಳ ಎಡವಟ್ಟಿನಲ್ಲಿ, ತೊಡಕಿನಲ್ಲಿ, ಸಿಕ್ಕುಬಿದ್ದಿದ್ದೇನೆ). Pick holes in ಹುಳುಕು, ತಪ್ಪು, —ಹುಡುಕು ; ರಂಧ್ರಾನ್ವೇಷಣ ಮಾಡು. Make a h. in ಬಹಳ ಹೆಚ್ಚು ವೆಚ್ಚ ಮಾಡು. Round (square) peg in square (round) hole ಸ್ಥಳಕ್ಕೆ ಹೊಂದದವನು. **H.-&-corner** (ಗು.) ಗುಟ್ಟಿನ ; ಒಳಸಂಚಿನ ; ಮೋಸದ. **Hóley** (ಗು.) ರಂಧ್ರಗಳಿಂದ ತುಂಬಿದ.

Hole (ಕ್ರಿ.) (— ಲ್ಲಿ) ತೂತು ಮಾಡು, ಕಂಡಿ ಕೊರೆ. (ನಾವೆ) (ಹಡಗಿನ) ಬದಿಯಲ್ಲಿ ತೂತು ಕೆಡವು ; ಬಿಲ ಕೊರೆ ; ಸುರಂಗ ಹೊಡೆ ; (ಗಣಿಗೆ ಹೋಗಲು) ಇಳಿದಾರಿ, ಸುರಂಗ, —ಮಾಡು ; ಗಣಿಯ ಒಂದು ಕಾರ್ಯಸ್ಥಾನದಿಂದ ಮತ್ತೊಂದಕ್ಕೆ ಸುರಂಗದ ಹಾದಿ ಮಾಡು. ಗುಂಡಿಯಲ್ಲಿ ಹಾಕು. (ಗಾರ್ಟ್ಸ್ ಚೆಂಡು) ಬದ್ದು ತುಂಬುವಂತೆ ಹೊಡೆ.

Hóliday ಹಾಲಿಡೇ(ಡಿ) (ನಾ.) ಕೆಲಸ ನಿಲ್ಲಿಸಿ ವಿಶ್ರಾಂತಿ ಪಡೆದ ದಿನ ; ಬಿಡುವು ; ರಜಾ (ದಿನ) ; ಸೂಟಿ. (ಸಾ., ಬ. ವ. ದಲ್ಲಿ) ರಜಾ ದಿನಗಳು ; ಬಿಡುವು. Bank h. (Bank[2] ನೋಡಿ). Blind man's h. (Blind ನೋಡಿ). Make h., Take a h. ಕೆಲಸ ಮಾಡದಿರು; ರಜಾ ತೆಗೆದುಕೊ. H. clothes ಹಬ್ಬದುಡಿಗೆ. H. task ಶಾಲೆಯ ವಿದ್ಯಾರ್ಥಿ ರಜಾ ದಿನಗಳಲ್ಲಿ ಮಾಡಬೇಕಾದ ಕೆಲಸ ; ರಜಾ ಕಾಲದ ಕೆಲಸ. = Holy-day (Holy ನೋಡಿ)

Hólla. Hollo[2] ನೋಡಿ.

Hólland ಹಾಲಂಡ್ (ನಾ.) ಯೂರೋಪಿನ ಉ. ನೆದರ್‌ಲೆಂಡ್ಸ್ ಸೀಮೆಯ ಒಂದು ಪ್ರಾಂತ ; ಹಾಲಂಡ್ ರಾಜ್ಯ. ಒಂದು ಬಗೆಯ ನಾರುಬಟ್ಟೆ ; 'ಹಾಲಂಡ್' ಬಟ್ಟೆ. Brown H. ಚೆಲುವೆ ಮಾಡಿರದ ಕಂದು 'ಹಾಲಂಡ್' ಬಟ್ಟೆ. **Hóllander** (ನಾ.) ಹಾಲಂಡ್ ನಿವಾಸಿ ; ಡಚ್ಚನು. **Hóllands** — ಲಂಡ್ಸ್ (ನಾ.) ಹಾಲಂಡಿನಲ್ಲಿ ತಯಾರಾಗುವ ಧಾನ್ಯಮದ್ಯ ; ಹಾಲಂಡ್ ಮದ್ಯ.

Hóllo[1] ಹಾಲೊ (ಭಾವ. ಅವ್ಯ., ನಾ.) (ಗಮನ ಸೆಳೆಯುವ ಉದ್ಗಾರ) ಹಾಲೊ ! (ನಾ.) 'ಹಾಲೊ' ಎಂಬ ಕೂಗು.

Hóllo[2], **-low**[1] ಹಾಲೊ, **Hólla** ಹಾಲ, **Hólloa** ಹಾಲೋ (ಕ್ರಿ.) ಗಟ್ಟಿಯಾಗಿ ಕೂಗು ; ಬೇಟೆನಾಯಿಗಳನ್ನು ಕೂಗು, ಕರೆ.

Hóllow[2] ಹಾಲೋ (ಗು., ನಾ., ಕ್ರಿ. ವಿ., ಕ್ರಿ. ಸಕ.) ಕಂಡಿ (ಯಿರುವ); ಕುಳಿ(ಯಿರುವ); ಗಟ್ಟಿಯಲ್ಲದ; ಪೊಟರೆಯಾದ; ಪೊಳ್ಳಾದ; ಟೊಳ್ಳಾದ; = H. square (Square ನೋಡಿ); ಬರಿದಾದ ; ಒಳಗೇನೂ ಇಲ್ಲದ; ಬರಿ ಹೊಟ್ಟೆಯ ; ಹಸಿದ. (ಧ್ವನಿ) ತುಂಬುಸ್ವರವಲ್ಲದ. (ರೂಪ.) ಬರಿದಾದ; ಕಪಟದ ; ಮೋಸದ ; ಸುಳ್ಳಿನ ; ಹುರುಳಿಲ್ಲದ. (ನಾ.) ಟೊಳ್ಳು ; ಪೊಳ್ಳು ; ಗುಂಡಿ ; ಕುಳಿ ; ಡೊಗರು ; ಹಳ್ಳ ; ಕಣಿವೆ ; ಕಂದರ ; ತಗ್ಗು ಪ್ರದೇಶ. (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೂರ್ತಿಯಾಗಿ (Beaten h. ಪೂರ್ತಿಯಾಗಿ ಸೋಲಿಸಲ್ಪಟ್ಟ). [**H.-eyed** ಗುಳಿಗಣ್ಣಿನ. **H.-hearted** ಕಪಟದ. **H. race** ಪ್ರಬಲ ಸ್ಪರ್ಧೆಯಿಲ್ಲದ ಪಂದ್ಯ]. (ಕ್ರಿ.) ಕುಳಿ ತೋಡು; ಗುಂಡಿ ಮಾಡು (=H. out). ಟೊಳ್ಳಿರುವಂತೆ ಬಗ್ಗಿಸು. **Hóllowly** (ಕ್ರಿ. ವಿ.); **Hóllowness** (ನಾ.)

Hólloway ಹಾಲೊವೆ (ನಾ.) (ಕೋರ್ಟಿನಲ್ಲಿ ವಿಚಾರಣೆಯಾಗಬೇಕಾದ ಹೆಂಗಸರನ್ನು, ಶಿಕ್ಷೆಗೆ ಗುರಿಯಾದ ಸಾಲಗಾರರನ್ನು, ಇಡುವ) ಹಾಲೊವೆ ಪಟ್ಟಣದ ಸೆರೆಮನೆ (= H. prison)

Hólly ಹಾಲಿ (ನಾ.) (ಅಂಚಿನಲ್ಲಿ) ಮುಳ್ಳಿರುವ ಎಲೆಗಳುಳ್ಳ, ಸಣ್ಣ ಹಸುರು ಹೂವನ್ನೂ ಕೆಂಪು ಹಣ್ಣನ್ನೂ ಬಿಡುವ, ಒಂದು ನಿತ್ಯಹಸುರು ಪೊದೆ.

Hóllyhock ಹಾಲಿಹಾಕ್ (ನಾ.) ಬಗೆ ಬಗೆಯ ಬಣ್ಣದ ದೊಡ್ಡ ಹೂವು ಬಿಡುವ ಒಂದು ಎತ್ತರವಾದ ಗಿಡ; ದೊಡ್ಡ ಬಿಂದಿಗೆ ಗಿಡ.

Hóllywood ಹಾಲಿವುಡ್ (ನಾ.) (ಮು., ಕ್ಯಾಲಿಫೋರ್ನಿಯದ ಹಾಲಿವುಡ್ ಎಂಬ ಸ್ಥಳದಲ್ಲಿ ತಯಾರಾಗುವ) ಅಮೆರಿಕದ ಮಾದರಿಯ ಚಲಚ್ಚಿತ್ರ.

Holm[1], **-me** ಹೋಮ್ (ನಾ.) (ಮು., ನದಿಯಲ್ಲಿಯ ಅಥವಾ ವಿಸ್ತಾರವಾದ ಭೂಪ್ರದೇಶಕ್ಕೆ ಸಮೀಪದಲ್ಲಿಯ) ಚಿಕ್ಕ ದ್ವೀಪ. (ಪ್ರವಾಹ ಬಂದಾಗ ಮುಳುಗಿಹೋಗುವ) ನದಿಯ ಪಕ್ಕದ ಚಪ್ಪಟೆಯ ಭೂಮಿ; ಕರೆ ಬಯಲು.

Holm[2] ಹೋಮ್ (ನಾ.) ನಿತ್ಯಹಸುರಿನ ಓಕ್‌ಮರ (= H.-oak)

Holo- ಹಾಲೊ — (ಸ. ಪೂ. ಪ.) ಪೂರ್ಣ —; ಪೂರ್ತಿ —; ಪರಿಪೂರ್ಣ—. **Hólograph** (ಗು., ನಾ.) ಯಾರ ಹೆಸರಿನಲ್ಲಿದೆಯೊ ಅವನೇ ಪೂರ್ತಿಯಾಗಿ ಬರೆದ (ದಸ್ತಾವೇಜು); ಸ್ವದಸ್ತೂರು (ಪತ್ರ). **Holohédral** —ಹೀ(ಹೆ)ಡ್ರಲ್ (ಗು.) (ಸ್ಫಟಿಕ) ಆಕಾರ ಸಮಸೂತ್ರತೆಗೆ ಆವಶ್ಯಕವಾದ ಸಂಪೂರ್ಣ ಸಂಖ್ಯೆಯ ಮುಖಗಳುಳ್ಳ; ಪರಿಪೂರ್ಣ ಮುಖಿ. **Holometábola** — ಮೆಟ್ಯಾಬೊಲ (ನಾ., ಬ. ವ.) ಪೂರ್ಣ ಪರಿವರ್ತನೆ ಹೊಂದುವ ಕೀಟಗಳು. ಪೂರ್ಣ ಪರಿಣಾಮಿಗಳು. **Hólophote** — ಫೋಟ್ (ನಾ.) (ಸಮುದ್ರದ ಬೆಳಕುಮನೆ, ಮೊ. ಗಳಲ್ಲಿ) ದೀಪದಿಂದ ಹೊರಡುವ ಎಲ್ಲ ಬೆಳಕನ್ನೂ ಉಪಯೋಗಿಸಿಕೊಳ್ಳಲು ಅನುಕೂಲವಾಗುವಂತೆ ಹೊಂದಿಸುವ ಒಂದು ಸಲಕರಣೆ: ಪ್ರಕಾಶ ಸಂಗ್ರಾಹಕ.

Hólocaust ಹಾಲೊಕಾಸ್ಟ್ (ನಾ.) ಪೂರ್ಣಾಹುತಿ; ಒಟ್ಟಿಗೆ ಕೊಟ್ಟ ಬಲಿ; (ರೂಪ.) ಸರ್ವ ನಾಶ.

Holothúrian ಹಾಲೊಥ್ಯೂರಿಯನ್ (ಗು., ನಾ.) ಒಂದು ಜಾತಿಯ ಸಮುದ್ರಪ್ರಾಣಿ.

Holpen ಹೋಲ್ಪನ್. Help ಧಾತುವಿನ ಪ್ರಾಚೀನ ಭೂ. ಕೃ.

Hólster ಹೋಲ್‌ಸ್ಟರ್ (ನಾ.) (ಜೀನಿಗೆ ಅಥವಾ ನಡುಪಟ್ಟಿಗೆ ತೊಡಿಸಿರುವ) ಪಿಸ್ತೂಲಿನ ಚರ್ಮಕೋಶ; ಪಿಸ್ತೂಲು ಚೀಲ.

Holt ಹೋಲ್ಟ್ (ನಾ.) (ಕಾವ್ಯ) ಮರಗಾಡು; ಕುರುಚಲು ಕಾಡು. ಕಾಡು ಬೆಳೆದಿರುವ ಗುಡ್ಡ.

Hóly ಹೋಲಿ (ಗು., ನಾ.) ದೇವರಿಗೆ ಅರ್ಪಿಸಿದ; ಪವಿತ್ರ; ಪರಿಪೂತ; ಪೂಜ್ಯ; ಪಾವನ; ಪುಣ್ಯಾತ್ಮ. (ನೀತಿಯಲ್ಲೂ ಧರ್ಮದಲ್ಲೂ) ಪರಿಶುದ್ಧವಾದ. ದೇವರಿಗೆ ಸೇರಿದ; ದೇವರಿಂದ ನಿಯೋಜಿತವಾದ; ದೈವಭಕ್ತಿಯುಳ್ಳ; ಸದ್ಧರ್ಮಶೀಲ. (ನಾ.) H. of holies ಗರ್ಭ ಗೃಹ (ರೂಪ. ಸಹ). H. city (City ನೋಡಿ). H. cross (ಕ್ರಿಸ್ತನ) ಪವಿತ್ರ ಶಿಲುಬೆ. H. Cross day (ಸೆಪ್ಟೆಂಬರ್ ೧೪ನೆಯ ತಾರೀಖಿನ ದಿನ ನಡಸುವ) ಪವಿತ್ರ ಶಿಲುಬೆಯ ಹಬ್ಬ. H. day ಮತ ಸಂಬಂಧವಾದ ಹಬ್ಬ. H. family (Family ನೋಡಿ). H. Ghost, H. Spirit ಕ್ರೈಸ್ತರ ತ್ರಿಮೂರ್ತಿಗಳಲ್ಲಿ ಮೂರನೆಯ ವ್ಯಕ್ತಿ: ಪವಿತ್ರಾತ್ಮ. H. grail (Grail[2] ನೋಡಿ). H. Joe (ನಾವೆ, ಅಸಂ.) ದೈವಭಕ್ತ; ಧರ್ಮಾತ್ಮ. H. Land ಪುಣ್ಯ ಭೂಮಿ [ಪಶ್ಚಿಮ ಪ್ಯಾಲಸ್ಟೈನ್ ಪ್ರಾಂತ (ಮು., ಜೂಡೀಯ ಪ್ರಾಂತ)]. H. Office (Office ನೋಡಿ). H. orders (Order ನೋಡಿ). H. Roman Empire (Roman ನೋಡಿ). H. terror (ಅಸಂ.) ಭಯಂಕರ ವ್ಯಕ್ತಿ. ತೊಡಕಿಗೆ, ಪೀಕಲಾಟಕ್ಕೆ, ಸಿಕ್ಕಿಸುವ ಮಗು. ಬೇಸರ ಹಿಡಿಸುವವನು; ಬೇಜಾರು ಮನುಷ್ಯ. H. Thursday ಪವಿತ್ರ ಗುರುವಾರ [(ಕ್ರಿಸ್ತ) ಸ್ವರ್ಗಾರೋಹಣ ದಿನ = Ascension Day; (ಜನರೂಢಿಯಲ್ಲಿ) ಪವಿತ್ರ ವಾರದಲ್ಲಿ ಬರುವ ಗುರುವಾರ]. H. Saturday ಪವಿತ್ರ (ವಾರದಲ್ಲಿ ಬರುವ) ಶನಿವಾರ. H. water (ಪವಿತ್ರ ಕಾರ್ಯಗಳಿಗಾಗಿ ಮಿಾಸಲಿಟ್ಟಿರುವ ಅಥವಾ ಮಂತ್ರಪೂತವಾದ) ಪವಿತ್ರೋದಕ; ಮಿಾಸಲು ನೀರು. H. Week ಈಸ್ಟರ್ ಭಾನುವಾರದ ಹಿಂದಿನ ವಾರ; ಪವಿತ್ರ ವಾರ. H. Writ (ಸಾಮೂಹಿಕವಾಗಿ) ಪವಿತ್ರ ಲೇಖನಗಳು, ಗ್ರಂಥಗಳು (ಮು., ಬೈಬಲ್). **Hólily** (ಕ್ರಿ. ವಿ.) ಪವಿತ್ರ ರೀತಿಯಲ್ಲಿ. **Hóliness** (ನಾ.) ಪವಿತ್ರತೆ. H., His H. (ಪೋಪ್ ಗುರುವಿನ ಬಿರುದು) ಪೂಜ್ಯ ಪಾದರು; ಶ್ರೀಗಳವರು.

Hólystone ಹೋಲಿಸ್ಟೋನ್ (ನಾ., ಕ್ರಿ. ಸಕ.) ಹಡಗಿನ ಅಟ್ಟಗಳ ನೆಲವನ್ನು ಉಜ್ಜಿ ಚೊಕ್ಕಟಮಾಡಲು ಉಪಯೋಗಿಸುವ ಮೆತು ಮರಳುಗಲ್ಲು; ಉಜ್ಜುಗಲ್ಲು. (ಕ್ರಿ.) (ಹಡಗಿನ ನೆಲವನ್ನು) ಉಜ್ಜುಗಲ್ಲಿನಿಂದ ಉಜ್ಜು.

Hom ಹೋಮ್, **Hóma** ಹೋಮ (ನಾ.) ಪ್ರಾಚೀನ ಪರ್ಷಿಯನ್ನರಿಗೂ ಪಾರ್ಸಿಯವರಿಗೂ ಪವಿತ್ರವಾದ ಒಂದು ಸಸ್ಯ; 'ಹೋಮ' ಗಿಡ; ಇದರ ರಸ. (ಇದು ವೇದಗಳಲ್ಲಿ ಹೇಳಿರುವ 'ಸೋಮ' ಎಂಬ ಸಸ್ಯವೆಂದು ಭಾವನೆ)

Hómage ಹಾಮೆಜ್ (ನಾ.) (ಊಳಿಗಮಾನ್ಯ ಪದ್ಧತಿಯಲ್ಲಿ) ಸ್ವಾಮಿಯೆಂದು ಬಹಿರಂಗವಾಗಿ ಒಪ್ಪಿಕೊಳ್ಳುವುದು; ಪ್ರಭುನಿಷ್ಠಾ ಪ್ರತಿಜ್ಞೆ. ತನಗಿಂತಲೂ ಉತ್ತಮವೆಂದು ಅಂಗೀಕರಿಸುವುದು. ಕರ್ತವ್ಯ ಮರ್ಯಾದೆ; ಗೌರವಾರ್ಪಣ; ಗೌರವದ ಕಾಣಿಕೆ. Pay, do, h. to (person, his qualities) (ಒಬ್ಬನಿಗೆ, ಒಬ್ಬನ ಗುಣಗಳಿಗೆ) ಗೌರವ ಸಲ್ಲಿಸು.

Home ಹೋಮ್ (ನಾ., ಗು., ಕ್ರಿ. ವಿ.) ಮನೆ; ಬೀಡು (ಗ್ರಾಂ.); ವಾಸಸ್ಥಾನ; ಗೃಹ; ತಾಯಿ ನಾಡು; ಸ್ವದೇಶ; ಜನ್ಮ ಭೂಮಿ (Long or last h. ಗೋರಿ; ಶ್ಮಶಾನ). ಒಂದು ವಸ್ತುವಿನ ನೆಲೆಯಾದ ಅಥವಾ ಅದು ವಿಶೇಷವಾಗಿ ದೊರೆಯುವ ಸ್ಥಳ; ಆಗರ; ನೆಲೆ. ಅನಾಥರ ಅಥವಾ ಅಶಕ್ತರ ಪೋಷಣಾಲಯ; ಅನಾಥಾಲಯ; ಅಶಕ್ತ ಪೋಷಣಾಲಯ; ಆಶ್ರಮ. (ಆಟಗಳಲ್ಲಿ) ಗುರಿ(ಕಂಬ). [Nothing to write h. about (ಬಳ. ಮಾ.) ವಿಶೇಷವೇನೂ ಇಲ್ಲ; ಅಲ್ಪ ವಿಷಯ. At h. ಸ್ವಂತ ಮನೆಯಲ್ಲಿ; ಸ್ವದೇಶದಲ್ಲಿ. ನಿಸ್ಸಂಕೋಚವಾಗಿ; ಆರಾಮವಾಗಿ. (ವಿಷಯ, ಮೊ.) ಚೆನ್ನಾಗಿ ಬಲ್ಲವನಾಗಿ, ಪರಿಣತಿಯುಳ್ಳವನಾಗಿ (*With, on, in* ಉಪ. ದೊಡನೆ); ಭೇಟಿಗೆ ಬರುವವರಿಗೆ ದೊರೆಯುವವನಾಗಿ (ಮು., Not at h. ಭೇಟಿಗೆ ಅವಕಾಶವಿಲ್ಲ). At-home (ನಾ.) (At ನೋಡಿ)]. (ಗು.) ಮನೆಯ; ಮನೆಗೆ ಸಂಬಂಧಿಸಿದ; ಮನೆಯಲ್ಲಿ ನಡಸುವ; ಮನೆಯಿಂದ ಹೊರಹೊರಡುವ; (ಮನೆಯ) ಅಕ್ಕಪಕ್ಕದಲ್ಲಿಯ (H. counties ಲಂಡನ್ನಿಗೆ ಅತಿ ಸಮಿಾಪದ ಜಿಲ್ಲೆಗಳು). ಸ್ವದೇಶದಲ್ಲಿ, — ನಡೆಯುವ, ತಯಾರಾದ; ಸ್ವದೇಶದ (H. industries, products ಸ್ವದೇಶಿ ಕೈಗಾರಿಕೆಗಳು, ಉತ್ಪನ್ನಗಳು. The h. trade or market ಒಳ ದೇಶದ ವ್ಯಾಪಾರ, ಗಿರಾಕಿ). ಗೃಹಕೃತ್ಯದ; ಒಳ ಆಡಳಿತದ [H. Office ದೇಶದ ಒಳ ಆಡಳಿತ (ನಡಸುವ) ಇಲಾಖೆ, ಕಚೇರಿ]. ಮನಸ್ಸಿಗೆ ತಟ್ಟುವ; ಮನ ನಾಟುವ; ಮನ ಚುಚ್ಚುವ (H. question ಮನಸ್ಸಿಗೆ ತಟ್ಟುವ ಪ್ರಶ್ನೆ. H. truth ತೀಕ್ಷ್ಣವಾಗಿ ಮನ ತಾಕುವ ಸತ್ಯವಚನ: ತೀಕ್ಷ್ಣ ಸತ್ಯ, ಸತ್ಯಾಂಶ. H. thrust ಮನ ಚುಚ್ಚುವ ಮಾತು; ಚುಚ್ಚು ನುಡಿ). (ಕ್ರಿ. ವಿ.) ತನ್ನ ಮನೆಗೆ; ಸ್ವದೇಶಕ್ಕೆ (Come, go, h.); ಮನೆಗೆ ಬಂದು ತಲುಪಿ (He is h.). ಗುರಿಮುಟ್ಟುವಂತೆ [The thrust went h. (ಮಾತು, ಇರಿತ) ಚೆನ್ನಾಗಿ (ಮನಸ್ಸಿಗೆ, ಎದೆಗೆ) ನಾಟಿತು, ಚುಚ್ಚಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Bring charge h. to person ಅಪರಾಧವನ್ನು ಮನಗಾಣಿಸು. Come h. to ಮನಸ್ಸಿಗೆ ನಾಟು]. **H.-born** ಸ್ವದೇಶದ ; ದೇಶೀಯ. **H.-bred** ಮನೆಯಲ್ಲಿ ಬೆಳೆಸಿದ ; ದೇಶೀಯ ; ಸಂಸಾರಕ್ಕೆ ಸೇರಿದ. **H.-brewed** (ಗು., ನಾ.) ಮನೆಯಲ್ಲಿ ಹುಳಿಸಿ ತಯಾರಿಸಿದ (ಬಿಯರ್, ಮೊ. ಮದ್ಯ). **H.-coming** ಮನೆಗೆ, ಸ್ವದೇಶಕ್ಕೆ (ಹಿಂದಿರುಗಿ) ಬರುವುದು ; ಸ್ವದೇಶಾಗಮನ ; ಸ್ವಗೃಹಾಗಮನ. **H.-felt** ಅಂತ ರಂಗಕ್ಕೆ ತಟ್ಟಿದ. **H.-keeping** (ಗು.) ಮನೆಯಲ್ಲೇ ಇರುವ (ಸ್ವಭಾವದ) ; ಮನೆ ಮೂಳ. **H.-made** ಮನೆಯಲ್ಲಿ, ಮನೆಯ ಬಳಕೆಗೆ, — ಮಾಡಿದ, ತಯಾರಿಸಿದ. **H. Rule** ರಾಜ್ಯದ ಪ್ರಜೆಗಳೇ ನಡಸುವ ಸರ್ಕಾರ (ಮು., ಐರ್ಲೆಂಡಿನದು) ; ಸ್ವರಾಜ್ಯ. **H.-sick(ness)** ಮನೆ (ಅಥವಾ ಸ್ವದೇಶ) ಬಿಟ್ಟು ಹೊರಗಿರುವುದರ ಫಲವಾಗಿ ತಲೆದೋರುವ ಮನಸ್ಸಿನ ಖಿನ್ನತೆ, ವಿಷಣ್ಣತೆ (ಉಳ್ಳ) ; ಮನೆಯ ಹಂಬಲು, ಗೀಳು (ಉಳ್ಳ). **Hómespun** (ಗು., ನಾ.) ಮನೆಯಲ್ಲಿ ನೂತ (ನೂಲಿನ ಬಟ್ಟೆ) ; ಒರಟು ಬಟ್ಟೆ. ಕೇವಲ ಸಾಮಾನ್ಯವಾದ, ಸಾದಾ, ನಯವಿಲ್ಲದ (ಪದಾರ್ಥ). **Hómestead** — ಸ್ಟೆಡ್ (ನಾ.) ಹೊರ ಕಟ್ಟಡಗಳಿಂದ ಕೂಡಿದ ಮನೆ ; ಹೊಲಮನೆ. **Hómeward** (ಕ್ರಿ. ವಿ., ಗು.), **-wards** (ಕ್ರಿ. ವಿ.) ಮನೆಯ ಕಡೆಗೆ (ಹೋಗುವ), ಮನೆಯ ಕಡೆಯ ; ಗೃಹಾಭಿಮುಖವಾಗಿ [Homeward bound (ಮು., ಹಡಗು) ಸ್ವದೇಶಕ್ಕೆ ಹೊರಟುಹೋಗುತ್ತಿರುವ]. **Hómeless** (ಗು.) ಮನೆ ಮಠವಿಲ್ಲದ ; ದಿಕ್ಕಿಲ್ಲದ. **Hómelike** (ಗು.) ; **Hómely** (ಗು.) ಸರಳ ; ಸಾಮಾನ್ಯ ; ಅನಾಡಂಬರ ; ಪ್ರಾಕೃತ. (ಮನುಷ್ಯ, ಮುಖಭಾವ) ಅಂದವಿಲ್ಲದ ; ಕೇವಲ ಸಾಮಾನ್ಯ ವಾದ. **Hómeliness** (ನಾ.) ; **Hómer** (ನಾ.) ಮನೆಗೆ ಹಿಂದಿರುಗುವ ಪಾರಿವಾಳ. **Hóming** (ಗು.) ಮನೆಗೆ ಹೋಗುವ ; (ಪಾರಿವಾಳ) ಮನೆಗೆ (ಹಿಂದಿರುಗಿ) ಹಾರಿಬರುವಂತೆ ಕಲಿಸಿರುವ. **Hómy** (ಗು.) ಮನೆಯ ನೆನಪು ಕೊಡುವ ; ಮನೆಯಂತಿರುವ.

Home (ಕ್ರಿ.) (ಮು., ಪಾರಿವಾಳದ ವಿಷಯದಲ್ಲಿ) (ಹಿಂದಿರುಗಿ) ಮನೆಗೆ ಹೋಗು. (ಒಬ್ಬನಿಗೆ) ಮನೆ, ವಸತಿ, — ಒದಗಿಸಿಕೊಡು. ಮನೆಯಲ್ಲಿ, ಇರು, ವಾಸಮಾಡು ; ಮನೆಗೆ ಹೋಗು.

Hómely, Hómer, etc. **Home** ನೋಡಿ.

Homéric ಹೊಮೆರಿಕ್ (ಗು.) (ಗ್ರೀಕ್ ಮಹಾಪುರಾಣ ಕರ್ತ) ಹೋಮರಿನ ಅಥವಾ ಆತನ ಕಾವ್ಯಗಳ ; ಹೋಮರಿನ (ಕವಿತಾ) ಶೈಲಿಯ.

Hómicide ಹಾಮಿಸೈಡ್ (ನಾ.) ಮನುಷ್ಯನನ್ನು ಕೊಲ್ಲುವವನು ; ನರ ಘಾತುಕ. ಮನುಷ್ಯನನ್ನು ಕೊಲ್ಲುವುದು ; ನರ ಹತ್ಯೆ. **Homicídal** (ಗು.)

Homilétic. **Homily** ನೋಡಿ.

Hómily ಹಾಮಿಲಿ (ನಾ.) (ಪಾದ್ರಿಯ) ಧರ್ಮೋಪದೇಶ ಭಾಷಣ. ಬೇಸರ ಹಿಡಿಸುವ ದೀರ್ಘ ನೀತಿಬೋಧೆ ; —ಧರ್ಮ ಶ್ರವಣ. **Homilétic** (ಗು., ನಾ.) ಧರ್ಮೋಪದೇಶ ಭಾಷಣದ. (ನಾ., ಬ. ವ. ದಲ್ಲಿ) ಧರ್ಮೋಪದೇಶ ಭಾಷಣ ಕಲೆ.

Hóming. **Home** ನೋಡಿ.

Hóminy ಹಾಮಿನಿ (ನಾ.) ನೀರಿನಲ್ಲಿ ಅಥವಾ ಹಾಲಿನಲ್ಲಿ ಬೇಯಿಸಿದ ಮುಸುಕಿನ ಜೋಳದ ತರಿ : (ಮುಸುಕಿನ) ಜೋಳದ ಅಂಬಲಿ.

Hómo ಹೋಮೊ (ನಾ.) (ಪ್ರಾ. ವಿ.) ಮನುಷ್ಯ. H. sapiens ಒಂದು ಪ್ರಾಣಿವಂಶಕ್ಕೆ ಸೇರಿದವನೆಂದು ಪರಿಗಣಿಸುವ ಮನುಷ್ಯ ಪ್ರಾಣಿ ; ಮನುಷ್ಯ ಜಾತಿ.

Homo- ಹೋ(ಹಾ)ಮೊ — (ಸ. ಪೂ. ಪ.) ಒಂದೇ — ; ಏಕ — ; ಸಮಾನ — ; ಸಮ —. **Homocéntric** (ಗು.) ಒಂದೇ ಕೇಂದ್ರ ವುಳ್ಳ ; ಏಕ ಕೇಂದ್ರೀಯ. **Homógamous** ಹೊಮಾಗಮಸ್ (ಗು.) (ಸ. ವಿ.) ಒಂದು ಪುಷ್ಪದಲ್ಲಿಯ ಎಲ್ಲ ಕಿರುಹೂವುಗಳೂ ಉಭಯ ಲಿಂಗಿ ಗಳಾಗಿಯೊ ಏಕ ಲಿಂಗಿಗಳಾಗಿಯೊ ಇರುವ. **Homogenétic** ಹಾಮೊಜಿನೆಟಿಕ್ (ಗು.) ಒಂದೇ ವಂಶದ ; ಒಂದೇ ಉತ್ಪತ್ತಿಸ್ಥಾನ ವುಳ್ಳ. **Homógeny** ಹೊಮಾಜಿನಿ (ನಾ.) ಒಂದೇ ವಂಶವಾದ್ದರಿಂದ ಇರುವ ಪರಸ್ಪರ ಸಾಮ್ಯ. ವಂಶ ಸಾಮ್ಯ. **Hómograph** ಹಾಮೊ ಗ್ರಾಫ್ (ನಾ.) ಮತ್ತೊಂದು ಪದದಂತೆಯೇ ಅಕ್ಷರ ಸಂಯೋಜನೆ ಯಿದ್ದು ಅರ್ಥಮಾತ್ರ ಬೇರೆಯಾಗಿರುವ ಪದ ; ಸಮರೂಪ ಪದ. **Homomórphic, -mórphous** (ಗು.) ಏಕ ರೂಪತೆಯ ; ರೂಪ ಸಾಮ್ಯವುಳ್ಳ. **Homónomous** ಹೊಮಾನೊಮಸ್ (ಗು.) ಬೆಳವಣಿಗೆ ಯಲ್ಲಿ ಒಂದೇ ನಿಯಮವುಳ್ಳ ; ಸಮಾನ ನಿಯಮದ. **Hómophone** ಹಾಮೊಫೋನ್ (ನಾ.) ಉಚ್ಚಾರಣೆ ಮತ್ತೊಂದು ಪದದಂತೆ ಇದ್ದರೂ ಅರ್ಥದಲ್ಲೂ ವ್ಯುತ್ಪತ್ತಿಯಲ್ಲೂ ಅದಕ್ಕೆ ಬೇರೆಯಾದ ಪದ ; ಸಮಾ ನೋಚ್ಚಾರಣ ಪದ (ಉದಾ., Gait, Gate) ; ಸಮಾನ ಧ್ವನಿ ಚಿಹ್ನೆ. **Homophónic** ಹಾಮೊಫಾನಿಕ್ (ಗು.) (ಸಂ.) ಒಂದೇ ಶ್ರುತಿಯ ; ಸಮ ಸ್ವರದ. **Homóphonous** ಹೊಮಾಫೊನಸ್ (ಗು.) (ಸಂ.) ಶ್ರುತಿಗೂಡಿದ ; ಸ್ವರ ಸಾಮ್ಯದ. (ಚಿಹ್ನೆ) ಸಮಾನ ಧ್ವನಿ ಸೂಚಕ. **Homóphony** (ನಾ.) ಸ್ವರೈಕ್ಯ. **Homoplástic** ಹಾಮೊ ಪ್ಲ್ಯಾಸ್ಟಿಕ್ (ಗು.) (ಜೀ. ವಿ.) ಸಮಾನ ರಚನೆಯ. **Hómotype** (ನಾ.) (ಮತ್ತೊಂದರ) ಸಮಾನ ರಚನೆಯ ಅಂಗ, ಭಾಗ ; ಸದೃಶಾಂಗ. **Homozýgote** ಹೋ(ಹಾ)ಮೊಜೈ(ಜಿ)ಗೋಟ್ (ನಾ.) (ಮೆಂಡೆಲ್ ತತ್ತ್ವ) ಒಂದೇ ತೆರದ ಎರಡು ಜಂಪತಿಗಳು ಸೇರಿ ಆದ ಸಂಯುಕ್ತ ಬೀಜ : ಸಮಜಂಪತಿ ಸಂಯುಕ್ತ ಬೀಜ. **Homozýgous** (ಗು.)

Homoeópathy ಹಾ(ಹೋ)ಮಿಯಾಪತಿ (ನಾ.) ಒಂದು ನಿರ್ದಿಷ್ಟ ರೋಗದ ಚಿಕಿತ್ಸೆಯಲ್ಲಿ ಯಾವ ಔಷಧ ವಸ್ತುವನ್ನು ಆರೋಗ್ಯವಂತನಿಗೆ ಕೊಟ್ಟರೆ ಅವನಲ್ಲಿ ಆ ರೋಗವು ಕಾಣಿಸಿಕೊಳ್ಳುವುದೋ ಅದೇ ಔಷಧ ವನ್ನು ಆ ರೋಗವುಳ್ಳವನಿಗೆ (ಸಾ., ಅತ್ಯಲ್ಪ ಪ್ರಮಾಣದಲ್ಲಿ) ಕೊಟ್ಟು ವಾಸಿಮಾಡುವ ವೈದ್ಯ ಪದ್ಧತಿ : ಸದೃಶ ಕ್ರಿಯಾ ಚಿಕಿತ್ಸೆ ; 'ಹೋಮಿ ಯಾಪತಿ' ಚಿಕಿತ್ಸೆ (Hahnemann ಎಂಬ ಜರ್ಮನ್ ಪಂಡಿತನು ಪ್ರಚಾರಕ್ಕೆ ತಂದದ್ದು). **Hómoeopath** ಹಾ(ಹೋ)ಮಿಯೊಪ್ಯಾತ್ (ನಾ.) ಸದೃಶ ಕ್ರಿಯಾ ಚಿಕಿತ್ಸಕ. **Homoeopáthic** (ಗು.) (ಸಾ., ಹಾಸ್ಯ ಪ್ರ.) ಅತ್ಯಲ್ಪ (ಪ್ರಮಾಣದ). **Homoeopáthically** (ಕ್ರಿ. ವಿ.) ; **Homoeópathist** —ಯಾಪತಿಸ್ಟ್ (ನಾ.) ಸದೃಶ ಕ್ರಿಯಾ ಚಿಕಿತ್ಸಕ, — ಪ್ರತಿಪಾದಕ.

Homogéneous ಹಾಮೊಜೀನಿಯಸ್ (ಗು.) ಒಂದೇ ತೆರದ, ಬಗೆಯ ; ಎಲ್ಲ ಭಾಗಗಳೂ ಒಂದೇ ತೆರದವಾಗಿರುವ ; ಸಮ ರೂಪದ. **Homogéneously** (ಕ್ರಿ. ವಿ.) ; **Homogéneousness** (ನಾ.) ; **Homogenéity** — ಜಿನೀಯಿಟಿ (ನಾ.)

Homólogate ಹೊಮಾಲೊಗೇಟ್ (ಕ್ರಿ. ಸಕ.) (ಸ್ಕಾ. ಪ್ರ.) ಒಪ್ಪು ; ಅಂಗೀಕರಿಸು ; ಸಮ್ಮತಿಸು ; ಸ್ಥಿರಪಡಿಸು **Homologátion** (ನಾ.)

Homólogize, Homólogy, etc. **Homologous** ನೋಡಿ.

Homólogous ಹೊಮಾಲೊಗಸ್ (ಗು.) ಅದೇ ತೆರನಾದ ಸಂಬಂಧ, ಸ್ಥಾನ, ಮೊ. ವನ್ನುಳ್ಳ ; ಸಮಾನ ಸ್ಥಾನವುಳ್ಳ ; ಅನುರೂಪವಾದ. **Homólogize** — ಜೈಸ್ (ಕ್ರಿ.) ಅದೇ ತೆರನಾದ ಸಂಬಂಧ, ಸ್ಥಾನ, ಮೊ. ವು ಇರು ; — ಇರುವಂತೆ ಮಾಡು ; ಅನುರೂಪವಾಗಿರು ; ಸದೃಶ ಮಾಡು, — ವಾಗು **Hómologue** ಹಾಮೊಲಾಗ್ (ನಾ.) ಅನುರೂಪವಾದ, ಸದೃಶವಾದ, — ವಸ್ತು. **Homólogy** ಹೊಮಾ ಲೊಜಿ (ನಾ.) ಸಾಮ್ಯ ; ಅನುರೂಪತೆ ; ಸಂಬಂಧದ ಸಾಮ್ಯ. **Homológical** ಹಾ(ಹೋ)ಮೊ — (ಗು.) ; **Homológically** (ಕ್ರಿ. ವಿ.)

Hómonym ಹಾಮೊನಿಮ್ (ನಾ.) ಸಮಾನ ರೂಪದ, ಆದರೆ ಭಿನ್ನಾರ್ಥ ವುಳ್ಳ, ಪದ ; ಸಮ ರೂಪದ [ಉದಾ., Pole (ಉದ್ದವಾದ ಗಳು, ಕೋಲು), Pole (ಧ್ರುವ)]. ಸನಾಮಕ. **Homonýmic** (ಗು.) ಸಮಾನ ರೂಪದ ಪದಗಳಿಗೆ ಸಂಬಂಧಿಸಿದ. **Homónymous** ಹೊಮಾನಿಮಸ್ (ಗು.) ಒಂದೇ ಹೆಸರಿನ ; ಸನಾಮಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Hómo sápiens. Homo ನೋಡಿ.

Homoséxual ಹೋ(ಹಾ)ಮೊಸೆಕ್‌ಷುಅಲ್ (ಗು., ನಾ.) ಸಲಿಂಗಿ ಕಾಮವುಳ್ಳ; ಸಲಿಂಗಿ ಕಾಮಿ.

Homúncule ಹೊಮನ್‌ಕ್ಯುಲ್, **Homúncle** ಹೊಮನ್‌ಕ್‌ಲ್ (ನಾ.) ಪುಟ್ಟ ಮನುಷ್ಯ; ಮೋಟ.

Hómy. Home ನೋಡಿ.

Hone ಹೋನ್ (ನಾ., ಕ್ರಿ. ಸಕ.) (ಮು., ಕ್ಷೌರ ಕತ್ತಿಗಳ) ಮಸೆಗಲ್ಲು; ಸಾಣೆಕಲ್ಲು; ಮಸೆಗಲ್ಲಾಗುವ ಹಲವು ಕಲ್ಲುಜಾತಿಗಳು. (ಕ್ರಿ.) (ಸಾಣೆಕಲ್ಲಿನ ಮೇಲೆ) ಮಸೆ; ಸಾಣೆ ಹಿಡಿ.

Hónest ಆನೆಸ್ಟ್ (ಗು.) (ನಡೆ ನುಡಿಗಳಲ್ಲಿ) ನ್ಯಾಯಪರವಾದ; ಋಜು ಮಾರ್ಗದ; ಸುಳ್ಳಾಡದ; ವಂಚನೆ, ಮೋಸ, — ಇಲ್ಲದ; ಕಳ್ಳತನ ವಿಲ್ಲದ; ನಿಷ್ಕಪಟ; ಪ್ರಾಮಾಣಿಕತೆಯುಳ್ಳ; ಸತ್ಯವಂತನಾದ; ಕೃತ್ರಿಮವಿಲ್ಲದ. (ಲಾಭ, ಮೊ. ವು) ನ್ಯಾಯವಾಗಿ ಪಡೆದ (Turn, earn, an h. penny ನ್ಯಾಯವಾಗಿ ಕಾಸನ್ನು ಗಳಿಸು, ಸಂಪಾದಿಸು). (ವಸ್ತು) ಬೆರಕೆಯಿಲ್ಲದ; ಅಪ್ಪಟ. (ಪ್ರಾಚೀ. ಪ್ರ.: ಹೆಂಗಸಿನ ವಿಷಯ ದಲ್ಲಿ) ಪರಿಶುದ್ಧಳಾದ; ಸಾಧ್ವಿಯಾದ; ಶೀಲವಂತಳಾದ [Make an h. woman of (ತಾನು ಕೆಡಿಸಿದ ಹೆಂಗಸನ್ನು) ಸಾಧ್ವಿಯಾಗಿ ಮಾಡು, ಮದುವೆ ಮಾಡಿಕೊ]. (ಅನುಗ್ರಹ ತೋರುವಲ್ಲಿ, ಹಾಸ್ಯದಲ್ಲಿ) ಒಳ್ಳೆಯ; ಮೆಚ್ಚಿನ. **Hónestly** (ಕ್ರಿ. ವಿ.); **Hónesty** (ನಾ.) ಪ್ರಾಮಾಣಿಕತೆ; ಯಥಾರ್ಥತೆ; ಸತ್ಯಪರತೆ. ಒಂದು ಸಸ್ಯಜಾತಿ(ಯ ಹೆಸರು)

Hóney ಹನಿ (ನಾ.) ಜೇನು (ತುಪ್ಪ); ಮಧು; ಮಕರಂದ. (ರೂಪ.) ಸಿಹಿ; ಮಾಧುರ್ಯ. ನಲ್ಲ (ನಲ್ಲೆ); ಪ್ರಿಯ (ಪ್ರಿಯೆ); ಇನಿಯ(ಳು); ಮುದ್ದು [ಉ. ಇಂಗ್ಲೆಂಡಿನ ಮತ್ತು ಸ್ಕಾ. ಪ್ರ.: Hinnie, -ny (ಉಚ್ಚಾರಣೆ) ಹಿನಿ]. **H.-bee** ಜೇನು ಹುಳು. **H.-buzzard** ಜೇನಿನ ಮತ್ತು ಕಣಜದ ಮರಿಹುಳುಗಳನ್ನು ತಿಂದುಹಾಕುವ ಒಂದು ಹಕ್ಕಿ. **H.-dew** ಗಿಡಹೇನು ಸ್ರವಿಸಿದ್ದೆಂದು ಭಾವಿಸುವ, ಕೆಲವು ಗಿಡಗಳ ಎಲೆ ಮತ್ತು ದಂಟಿನಮೇಲೆ ದೊರೆಯುವ, ಸಿಹಿಯಾದ ಅಂಟುಪದಾರ್ಥ; ಅತಿಶಯ ಮಧುರ ವಸ್ತು; ಸಿಹಿಗೆ ಹೆಸರಾದ ಪದಾರ್ಥ. ಕಾಕಂಬಿ ಹಾಕಿ ಮಧುರಗೊಳಿಸಿದ ಹೊಗೆಯ ಸೊಪ್ಪು. **Honeysuckle** ಸುವಾಸನೆಯುಳ್ಳ ಹಳದಿ ಹೂವು ಬಿಡುವ ಒಂದು ಜಾತಿಯ ಬಳ್ಳಿ. **H.-sweet** ಜೇನಿನಂತೆ ಸಿಹಿ(ಯಾದ); ಮಧು ಮಧುರ. **Hóneyed, -nied** (ಗು.); **Hóneycomb** —ಕೋಮ್ (ನಾ., ಕ್ರಿ. ಸಕ.) (ಜೇನುಹುಳುಗಳು ಜೇನಿಡುವುದಕ್ಕೂ ತಮ್ಮ ತತ್ತಿಗಳಿಗೂ ಮೇಣದಿಂದ ಷಟ್ಕೋನಾಕಾರದ ಗೂಡುಗಳಾಗಿ ಕಟ್ಟಿದ) ಜೇನು ಗೂಡು; ಜೇನು ಹುಟ್ಟು; ಜೇನು ಕೊಡ. ಲೋಹದಲ್ಲಿ (ಮು., ಫಿರಂಗಿಯಲ್ಲಿ) ಕುಹರಗಳಿರುವ, ಕುಳಿಗಳಿರುವ, ದೋಷ; ಛಿದ್ರ ದೋಷ. ಷಟ್ಕೋನಾಕಾರದ ಗೂಡುಗಳಾಗಿ ರಚಿಸಿದ ಅಲಂಕಾರದ ಕೆಲಸ ಅಥವಾ ಇತರ ಕೆಲಸ; ಷಟ್ಕೋನಾಕೃತಿ ರಚನೆ. (ಕ್ರಿ.) ಕುಳಿಗಳಿಂದ ತುಂಬು; ಶಕ್ತಿಗುಂದಿಸು. ಜೇನುಹುಟ್ಟಿನ ಆಕಾರದ ಮಾದರಿಯನ್ನು ಗುರುತು ಮಾಡು. **Hóneymoon** (ನಾ., ಕ್ರಿ. ಅಕ.) (ಸಂಸಾರ ಹೂಡುವುದಕ್ಕೆ ಮೊದಲು) ನೂತನ ದಂಪತಿಗಳ ಸುಖಾನುಭೋಗದ ಕಾಲ; (ದಾಂಪತ್ಯ ಸುಖದ) ಮಧು ಮಾಸ. (ಕ್ರಿ.) (ಒಂದು ಸ್ಥಳದಲ್ಲಿ) ನವ ದಾಂಪತ್ಯ ಭೋಗಕಾಲವನ್ನು ಕಳೆ (*In, at* ಉಪ. ಜೊತೆ)

Hóneymoon. Honey ನೋಡಿ.

Hong ಹಾಂಗ್ (ನಾ.) (ಚೀನದಲ್ಲಿ) (ಕಾರ್ಖಾನೆ, ಮೊ. ಗಳಾಗಿ ಉಪಯೋಗಿಸುವ) ಕಟ್ಟಡಗಳ ತಂಡ. (ಚೀನದಲ್ಲಿ ಅಥವಾ ಜಪಾನಿನಲ್ಲಿ ಇರುವ) ವಿದೇಶೀಯರ ವ್ಯಾಪಾರ ಸಂಸ್ಥೆ.

Honk ಹಾಂಕ್ (ನಾ., ಕ್ರಿ. ಅಕ.) ಕಾಡು ವರಟೆಯ ಕೂಗು. ಮೋಟಾರು ಕೊಂಬಿನ ಶಬ್ದ. (ಕ್ರಿ.) 'ಹಾಂಕ್' ಎಂದು ಕೂಗು, ಧ್ವನಿ ಮಾಡು.

Honorárium, Hónorary, etc. Honour ನೋಡಿ.

Hónour, Hónor (ಅಮೆ. ಸಂ.), ಆನರ್ (ನಾ.) ಮರ್ಯಾದೆ; ಗೌರವ; ಮನ್ನಣೆ; ಘನತೆ; ಮಾನ್ಯತೆ; ಖ್ಯಾತಿ; ಕೀರ್ತಿ; ಯಶಸ್ಸು; ಒಳ್ಳೆಯ ಹೆಸರು. ಔದಾರ್ಯ; ದೊಡ್ಡ ಮನಸ್ಸು; ನ್ಯಾಯ ನಿಷ್ಠೆ; ಸಂಪ್ರದಾಯ ನಿಷ್ಠೆ. (ಹೆಂಗಸಿನ ವಿಷಯದಲ್ಲಿ) ಸಾಧ್ವಿ ಎಂಬ ಗಣನೆ, ಮಾನ, ಸತೀತ್ವ. ಗೌರವದ ಪದವಿ [Your, His, H. (ಜಿಲ್ಲಾ ನ್ಯಾಯಾಧಿಪತಿಯನ್ನು ಕುರಿತು ಸಂಬೋಧಿಸುವ ಪದ) ನ್ಯಾಯಮೂರ್ತಿಗಳೇ! (ಅಧಿಕಾರವುಳ್ಳ ಇತರರನ್ನೂ ಸಹ ಹಳ್ಳಿಯವರು ಸಂಬೋಧಿಸುವಾಗ ಉಪಯೋಗಿಸುವ ಪದ) ಮಹಾ ಸ್ವಾಮಿ!]. ಗೌರವಾರ್ಥವಾಗಿ ಕೊಟ್ಟದ್ದು; ಮರ್ಯಾದೆ; ಮನ್ನಣೆ; ಬಿರುದು. (ಗಾಲ್ಫ್ ಆಟ) ಹಿಂದಿನ ಬದ್ದನ್ನು ತುಂಬಿ ಗೆದ್ದ ಕಾರಣ ಮೊದಲು ಆಡುವ ಹಕ್ಕು (It is my h.). (ಬ. ವ. ದಲ್ಲಿ) ಅತಿಥಿಗಳಿಗೆ ಮಾಡುವ ಸತ್ಕಾರ, ಉಪಚಾರ; ಅತಿಥಿ ಸತ್ಕಾರ [Do the honours of (the table, a house, the town) (ಔತಣಕ್ಕೆ, ಮನೆಗೆ, ಊರಿಗೆ, ಬಂದ ಅತಿಥಿಗಳನ್ನು) ತಕ್ಕಂತೆ ಸತ್ಕರಿಸು. Last, funeral, honours (ಶವಸಂಸ್ಕಾರದಲ್ಲಿ ತೋರಿಸುವ) ಅಂತ್ಯ ಗೌರವ. Military honours (ಗೌರವದ ಅಧಿಕಾರಿಯಾಗಿದ್ದವನ ಶವಸಂಸ್ಕಾರದಲ್ಲಿ, ಅಥವಾ ರಾಜರು, ಮೊ. ರ ಸಂದರ್ಶನದಲ್ಲಿ, ತೋರಿಸುವ) ಸೈನಿಕ ಗೌರವ. Honours of war ಯುದ್ಧ ನಿಲ್ಲಿಸಿ ಅಧೀನವಾದ ಸೈನ್ಯಕ್ಕೆ (ಹಾರುಬಾವುಟಗಳೊಡನೆಯೂ ಇತರ ಸಂಭ್ರಮದೊಡನೆಯೂ) ಸ್ಥಳಬಿಟ್ಟು ಹೊರಡಲು ಕೊಟ್ಟ ರಿಯಾಯಿತಿ, ಗೌರವ: ಯುದ್ಧ ಗೌರವ]. (ಬಿ. ಎ. ನಿ., ಬ. ವ. ದಲ್ಲಿ) (ಪರೀಕ್ಷೆಯಲ್ಲಿ ಸಾಮಾನ್ಯ ತೇರ್ಗಡೆಯ ಪಾಂಡಿತ್ಯಕ್ಕಿಂತ ಹೆಚ್ಚು ಪಾಂಡಿತ್ಯವಿರುವುದರಿಂದ ಕೊಡುವ) ಪಾಂಡಿತ್ಯದ ಘನತೆ; ಘನ ಪಾಂಡಿತ್ಯ. (ಮತ್ತೊಬ್ಬರಿಗೆ) ಗೌರವ ತರುವ ವ್ಯಕ್ತಿ, ವಸ್ತು; ಭೂಷಣ (He is an h. to his profession ಅವನು ತನ್ನ ವೃತ್ತಿಗೆ ಭೂಷಣಪ್ರಾಯನಾಗಿದ್ದಾನೆ). (ವಿಸ್ಟ್ ಆಟದಲ್ಲಿ) ತುರುಫಿನ ಹಾಸು, ರಾಜ, ರಾಣಿ ಮತ್ತು ಗುಲಾಮ, — ಈ ಎಲೆಗಳು; (ಬ್ರಿಡ್ಜ್ ಆಟದಲ್ಲಿ) ಇವುಗಳ ಜೊತೆಗೆ ಹತ್ತನೆಯ ಬಂದು ಸಹ. (ವಾಣಿಜ್ಯ) Acceptance for the h. of (ಒಂದು ತಿರಸ್ಕೃತವಾದ ಹುಂಡಿಯನ್ನು, ಅದನ್ನು ಬರೆದವನ ಅಥವಾ ವರ್ಗಾಯಿಸಿ ಬರೆದವನ ಗೌರವ ಉಳಿಸುವುದಕ್ಕಾಗಿ) ಮೂರನೆಯವನು ಅಂಗೀಕರಿಸಿ ಹಣಪಾವತಿ ಮಾಡುವುದು; ಗೌರವವನ್ನುಳಿಸುವ ಅಂಗೀಕಾರ. In h. of (ಉತ್ಸವ) (— ರ) ಗೌರವಾರ್ಥವಾಗಿ. Bound in h. to (do) ಮಾಡಲು ಧರ್ಮಕ್ಕೆ, ಗೌರವಕ್ಕೆ, ಕಟ್ಟುಬಿದ್ದು. Be on one's h. to (do) (— ಮಾಡುವುದು) ಒಬ್ಬನ ಧರ್ಮವಾಗಿರು, ಕರ್ತವ್ಯವಾಗಿರು. (ಪ್ರತಿಜ್ಞಾಪೂರ್ವಕವಾಗಿ ಹೇಳುವಲ್ಲಿ) Upon my h. ನನ್ನ ಗೌರವದ ಆಣೆಗೂ. H. bright (ಬಳ. ಮಾ.) ಗೌರವದ ಆಣೆ! Code, law, of h. ನಡವಳಿಯ ಸಾಂಪ್ರದಾಯಿಕ ನಿಯಮಗಳು; ಸದಾಚಾರ ನಿಯಮಗಳು. Affair, Debt, Legion, Maid, Point, Word, of h. (ಆಯಾ ಪದಗಳನ್ನು ನೋಡಿ). **Honorárium** ಹಾ(ಆ)ನೊರೇರಿಯಂ (ನಾ.; ಬ. ವ. -ums, -a) (ವೃತ್ತಿಸಂಬಂಧದ ಕೆಲಸಕ್ಕಾಗಿ ಕೊಡುವ) ಗೌರವ ಸಂಭಾವನೆ; ರುಸುಮು. **Hónorary** ಆನೊರರಿ (ಗು.) (ಒಂದು ಪದವಿಯನ್ನು ಪಡೆಯುವುದಕ್ಕೆ ನಿಯಮಾನುಸಾರವಾಗಿ ಇರಬೇಕಾದ ಯೋಗ್ಯತೆ, ಕಾರ್ಯಸಾಧನೆ, ಮೊ. ಗಳಿಲ್ಲದೆ) ಗೌರವಾರ್ಥವಾಗಿ ಅನುಗ್ರಹಿಸಿದ, ಕೊಟ್ಟ. (ಆ ಹುದ್ದೆಗೆ ಸಂಬಂಧಿಸಿದ ವೇತನಾದಿಗಳನ್ನು ಪಡೆಯದೆ) ಗೌರವದ ಹೆಸರನ್ನೊ ಉದ್ಯೋಗವನ್ನೊ ಪಡೆದಿರುವ, ವಹಿಸಿರುವ; ಗೌರವದ [H. secretary, treasurer, etc. ಗೌರವ ಕಾರ್ಯದರ್ಶಿ, ಖಜಾಂಚಿ, ಮೊ. ರು (ಸಂಕ್ಷಿಪ್ತ: Hon.)] (ಕರ್ತವ್ಯ, ಜವಾಬ್ದಾರಿ, ಸಾಲ, ಮೊ. ವು) ಗೌರವವನ್ನವಲಂಬಿಸಿರುವ (ಕಾನೂನಿನ ಮೂಲಕ ನಿರ್ಬಂಧಿಸಲಾಗದ). **Honorífic** ಆನೊರಿಫಿಕ್ (ಗು., ನಾ.) ಗೌರವ ಸೂಚಕ (ಪದ). **Hónourable** ಆನರಬ್‌ಲ್ (ಗು.) ಗೌರವಾರ್ಹ; ಮನ್ನಣೆಯ; ಗೌರವ, ಕೀರ್ತಿ, — ತರುವ; ಗೌರವಕ್ಕೆ ತಕ್ಕ. ಋಜು; ಪ್ರಾಮಾಣಿಕತೆಯ; ಗೌರವದಿಂದ ಕೂಡಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[(Person's) intentions are h. (ಹೆಂಗಸಿನೊಡನೆ ಪ್ರಣಯಾಚರಣೆ ಮಾಡುವಲ್ಲಿ) ಮದುವೆ ಮಾಡಿಕೊಳ್ಳಬೇಕೆಂಬ ಘನೋದ್ದೇಶವಿದೆ]. [ಕೆಲವರು ಶ್ರೀಮಂತರು, ಸರ್ಕಾರದ ದೊಡ್ಡ ಅಧಿಕಾರಿಗಳು, ಮೊ. ರ ಬಿರುದು (ಸಂಕ್ಷಿಪ್ತ : Hon.)] ಘನತೆವೆತ್ತ. Right H. (ಇವರುಗಳಿಗಿಂತ ಮೇಲ್ಪಟ್ಟ ದರ್ಜೆಯವರ ಬಿರುದು). Most H. [ಇವರಿಗಿಂತಲೂ ದೊಡ್ಡವರ (ಶ್ರೀಮಂತರು, ಮೊ. ರ) ಬಿರುದು]. **Hónourably** (ಕ್ರಿ. ವಿ.)

Hónour, Hónor (ಅಮೆ. ಸಂ.) (ಕ್ರಿ. ಸಕ.) ಗೌರವಿಸು ; ಮನ್ನಣೆ ತೋರು ; ಬಿರುದು, ಪದವಿ, ಘನತೆ, —ಕೊಡು. (ವಾಣಿಜ್ಯ) (ವಾಯಿದೆಗೆ ಸರಿಯಾಗಿ) ಹುಂಡಿಯ ಹಣ ಸಲ್ಲಿಸು.

Hooch ಹೂಚ್ (ನಾ.) (ಅಮೆ. ಸಂ. ಅಸಂ.) ಮಾದಕ ದ್ರವ ; ಮದ್ಯ.

Hood ಹುಡ್ (ನಾ., ಕ್ರಿ. ಸಕ.) ತಲೆಯನ್ನೂ ಕತ್ತನ್ನೂ ಮುಚ್ಚುವ ಒಂದು ಗವುಸು (ನಿಲುವಂಗಿ, ಮೊ. ಗಳ ಭಾಗವಾಗಾಗಲ ಪ್ರತ್ಯೇಕವಾಗಾಗಲ ಇರಬಹುದು) ; ಗೊಂಗಡಿ ; ಗೊಪ್ಪೆ ; ಕುಂಚಿಗೆ. (ವಿ. ವಿ. ನಿ.) ಪದವಿಯ ಸೂಚನೆಯಾಗಿ ಮೇಲ್ದಗಲೆಯಮೇಲೆ ಧರಿಸುವ ಲಾಂಛನ ವಸ್ತ್ರ ; ಪದವಿ (ಸೂಚಕ) ಲಾಂಛನ : 'ಹುಡ್'. ಡೇಗೆಯ ತಲೆಗಿಡುವ ತೊಗಲಿನ ಮುಸುಕು. (ಆಕಾರದಲ್ಲಾಗಲ ಉಪಯೋಗದಲ್ಲಾಗಲ) ಹೆಡೆಯುಡಿಗೆಯಂಥ ವಸ್ತು ; ಹೆಡೆ. (ಕ್ರಿ.) ಹೆಡೆಯುಡಿಗೆ ಹಾಕು. **Hoóded** (ಗು.) — ತೊಟ್ಟಿರುವ ; — ಇರುವ ; (ಉಡಿಗೆ) ಹೆಡೆಯ ಭಾಗ ಸೇರಿಸಿರುವ. (ಸ. ವಿ.) ಹೆಡೆಯಾಕಾರದ ; [H. snake ಹೆಡೆ ಬಿಡುವ ಹಾವು (ಮು., ನಾಗರ ಹಾವು)]. (ರೂಪ.) ಕಣ್ಣು ಕಟ್ಟಿದ ; ಮರೆ ಮಾಡಿದ ; ಮುಚ್ಚಿದ. **Hoódie, -dy** ಹುಡಿ (ನಾ.) ಹೆಡೆಯಂತೆ ಕಾಣುವ ತಲೆಯ ಮೇಲ್ಭಾಗವುಳ್ಳ ಕಾಗೆ ; ಹೆಡೆ ಕಾಗೆ (= H. Crow). **Hoódman-blind** (ನಾ.) ಕಣ್ಣಾಮುಚ್ಚಾಲೆಯಾಟ (ಹಿಂದಿನ ಹೆಸರು). **Hoódwink** (ಕ್ರಿ. ಸಕ.) ವಂಚಿಸು ; ಕಣ್ಣಿಗೆ ಮಣ್ಣೆರಚು ; ಮೋಸ ಮಾಡು ; ಕಣ್ಣನ್ನು ಕಟ್ಟು.

Hoódie. **Hood** ನೋಡಿ.

Hoódlum ಹುಡ್ಲಂ (ನಾ.) (ಅಮೆ. ಸಂ.) ಬೀದಿಯ ಪುಂಡ ; ಒರಟು ಪುಂಡ ಯುವಕ.

Hoódman-blind, Hoódwink. **Hood** ನೋಡಿ.

Hoof ಹೂಫ್ (ನಾ. ; ಬ. ವ. — fs, -ves ; ಕ್ರಿ.) ಕುದುರೆ, ಮೊ. ಪ್ರಾಣಿಗಳ ಪಾದಗಳಿಗಿರುವ ಕೊಂಬಿನ ಆವರಣ : ಗೊರಸು ; ಖುರ [Cloven h. (Cleave ನೋಡಿ)]. (ಹಾಸ್ಯ ಪ್ರ.) ಮನುಷ್ಯನ ಪಾದ ; [H.-pad (ಒಂದು ಕಾಲಿನ ಗೊರಸು ಮತ್ತೊಂದು ಕಾಲಿಗೆ ತಾಕಿ ಗಾಯ ಮಾಡದಂತೆ ಹಾಕಿದ) ಗೊರಸು ಮೆತ್ತೆ. H. pick ಗೊರಸಿನಲ್ಲಿ ಸಿಕ್ಕಿಕೊಂಡ ಕಲ್ಲುಚೂರುಗಳನ್ನು ತೆಗೆಯುವ ನಲಕರಣೆ ; ಗೊರಸು ಬೆದಕು]. (ಕ್ರಿ.) ಗೊರಸಿನಿಂದ ಹೊಡೆ, ಒದೆ. (ಅಸಂ., ಮನುಷ್ಯನ ವಿಷಯದಲ್ಲಿ) (ಒಬ್ಬನನ್ನು) ಒದ್ದೋಡಿಸು (*Out* ಉಪ. ದೊಡನೆ). ಕಾಲ್ನಡಗೆಯಲ್ಲಿ ಹೋಗು. (-) **hoofed** ಹೂಫ್ಟ್, ಹೂಫೆಡ್ (ಗು.)

Hook ಹುಕ್ (ನಾ.) (ವಸ್ತುಗಳನ್ನು ತೂಗಹಾಕುವುದಕ್ಕಾಗಲ ಹಿಡಿದುಕೊಳ್ಳುವುದಕ್ಕಾಗಲ ಅನುಕೂಲಸುವಂತೆ ಕೊನೆ ಬಗ್ಗಿಸಿದ, ಲೋಹದ ಅಥವಾ ಇತರ ಪದಾರ್ಥದ ಸಲಾಕಿಯ, ಕೋಲಿನ) ಕೊಕ್ಕೆ, ಕೊಂಡಿ. (ಸಾ., ಮುಳ್ಳುಳ್ಳ) ಗಾಳದ ಕೊಕ್ಕೆ (= fish-h.) ; ಮೀನ ಗಾಳ. (ರೂಪ.) ಬೋನು ; ಜಾಲ ; ಗಾಳ. ಕುಡುಗೋಲು [(ಮು., Reaping -h. ಕೊಯ್ಲಿನ ಕುಡುಗೋಲು). H. & eye (ಉಡುಪಿನ ಭಾಗಗಳನ್ನು ಸೇರಿಸುವ) ಲೋಹದ ಸಣ್ಣ ಕೊಕ್ಕೆ ಮತ್ತು ಕುಣಿಕೆ]. ಕಡಿದಾದ ಬಾಗು, ಮುರಿವು, ತಿರುವು (ಉದಾ., ನದಿಯ ತಿರುವು). ನೀರಿನೊಳಕ್ಕೆ ಕೊಂಡಿಯಂತೆ ಚಾಚಿಕೊಂಡಿರುವ ನೆಲ. = Pot-h. (Pot ನೋಡಿ). By h. or by crook ನ್ಯಾಯದಿಂದರೂ ಅನ್ಯಾಯದಿಂದರೂ ; ತಪ್ಪೋ ನೆಪ್ಪೋ. Drop off the hooks (ಅಸಂ.) ಸಾಯಿ ; ಕಂತೆಯೊಗೆ. On one's own h. (ಅಸಂ.) ಸ್ವಂತ ಜವಾಬ್ದಾರಿಯ ಮೇಲೆ. Take one's h. (ಅಸಂ.) = h. it (ಮುಂದೆ ನೋಡಿ). **H.-nose(d)** ಕೊಕ್ಕೆ ಮೂಗು(ಳ್ಳ) ; ಗಿಣಿಮೂಗು(ಳ್ಳ). **H.-worm** (ಮನುಷ್ಯರ ಮತ್ತು ಪ್ರಾಣಿಗಳ ಕರುಳಿನಲ್ಲಿ ಸೇರುವ) ಕೊಕ್ಕೆ ಹುಳು.

Hook (ಕ್ರಿ.) ಕೊಕ್ಕೆಯಿಂದ ಹಿಡಿ ; ಕೊಕ್ಕೆಯಿಂದ (ಗಳಿಂದ) ಬಂಧಿಸು, ಸಿಕ್ಕಿಸು ; ಕೊಕ್ಕೆ ಹಾಕು [H. on, in, up ಕೊಕ್ಕೆ(ಯಿಂದ) ತಗುಲಿಸು. H. on (ಒಬ್ಬನ) ತೋಳಿಗೆ ತೋಳು ಹಾಕಿಕೊ. H.-up (ಆದಿಯಲ್ಲಿ ಅಮೆ. ಸಂ.) ವಿಶೇಷ ವಾರ್ತಾ ಪ್ರಸರಣಗಳಿಗಾಗಿ ವಾರ್ತಾ ಪ್ರಸರಣ ಕೇಂದ್ರಗಳ ಪರಸ್ಪರ ಸಂಯೋಜನೆ]. ಕದಿ. ಗಾಳ ಹಾಕಿ (ಮೀನು) ಹಿಡಿ. [(ರೂಪ.) ಮು., (ಒಬ್ಬನು) ಗಂಡನಾಗುವಂತೆ ಬಲೆ ಬೀಸು]. (ಮುಷ್ಟಿ ಕಾಳಗದಲ್ಲಿ) (ಎದುರಾಳಿಯನ್ನು) ಮೊಣಕೈ ಬಾಗಿನಿಂದ ಹೊಡೆ [(ನಾ.) ಈ ರೀತಿಯ ಮೊಣಕೈ ಹೊಡೆತ]. H. it (ಅಸಂ.) ಓಡಿಹೋಗು ; ಕಂಬಿ ಕೀಳು. **Hooked** ಹುಕ್ಟ್, ಹುಕೆಡ್ (ಗು.) ಕೊಕ್ಕೆಯಾಕಾರದ ; ಕೊಕ್ಕೆಯಿರುವ (ಗಳಿರುವ)

Hoókah ಹುಕ (ನಾ.) ಹೂಜಿಯಲ್ಲಿಯ ನೀರಿನ ಮಾರ್ಗವಾಗಿ ಸೆಳೆದ ಹೊಗೆಯನ್ನು ಸೇದಲು ಅಳವಡಿಸಿರುವ ಉದ್ದನಾದ ಮೆತುಕೊಳವೆಯುಳ್ಳ ಚುಂಗಾಣಿ ; ಹುಕ್ಕ ; ಗುಡುಗುಡಿ.

Hoóker ಹುಕರ್ (ನಾ.) (ಹಲವು ಬಗೆಯ) ಡಚ್ ಮತ್ತು ಐರಿಷ್ ಸಣ್ಣ ಹಡಗು (The old h. : ಯಾವುದಾದರೂ ಹಡಗಿನ ವಿಷಯದಲ್ಲಿ ತಿರಸ್ಕಾರ ಭಾವದಿಂದ ಅಥವಾ ಮುದ್ದಿನಿಂದ ಆಡುವ ಮಾತು)

Hoókey, Hoóky ಹುಕಿ (ನಾ.) Play h. (ಅಮೆ. ಸಂ. ಅಸಂ.) (ಕರ್ತವ್ಯದಿಂದ) ಕಳ್ಳತಪ್ಪಿಸಿಕೊ. Blind h. ಇಸ್ಪೀಟಿನ ಒಂದು ಜೂಜಾಟ.

Hoólee ಹೂಲೀ, **Hóli** ಹೋಲೀ (ನಾ.) ಹೋಳೀ ಹಬ್ಬ ; ಕಾಮನ ಹುಣ್ಣಿಮೆ.

Hoóligan ಹೂಲಿಗನ್ (ನಾ.) ಬೀದಿಯ ತರುಣ ಪುಂಡರ ತಂಡದವನು ; ಪುಂಡ. **Hoóliganism** (ನಾ.) ಪುಂಡತನ.

Hoop[1] ಹೂಪ್ (ನಾ., ಕ್ರಿ. ಸಕ.) (ಮು., ಪೀಪಾಯಿಯ ಮರದ ನಿಡುಪಟ್ಟಿಗಳನ್ನು ಒಟ್ಟಿಗೆ ಬಿಗಿಯುವ) ಲೋಹ, ಮರ, ಮೊ. ಗಳ ದುಂಡುಕಟ್ಟು. (ಮಕ್ಕಳು ಆಟಕ್ಕಾಗಿ ಉರುಳಿಸಿಕೊಂಡು ಹೋಗುವ) ಮರದ ಅಥವಾ ಕಬ್ಬಿಣದ ಬಳೆ. (ಹೆಂಗಸರ ಲಂಗವನ್ನು ಸುತ್ತಲೂ ಉಬ್ಬಿಸುವ) ಬಾಗಿ ಬೀಗುವ ಗುಣವುಳ್ಳ ಪದಾರ್ಥದಿಂದ ಮಾಡಿದ ಬಳೆ ; ಲಂಗದ ಉಬ್ಬು ಪಟ್ಟಿ. 'ಕ್ರೋಕೇ' ಎಂಬ ಆಟದಲ್ಲಿ ಉಪಯೋಗಿಸುವ ಕಬ್ಬಿಣದ ಕಮಾನು. ಸರ್ಕಸ್ಸಿನ ಸವಾರರು ತೂರಿಹೋಗಲು ಮೇಲೆ ಕಾಗದ ಚಾಚಿ ಅಂಟಿಸಿದ ದೊಡ್ಡ ಬಳೆ (Go through the h. or hoops ಕಠಿನ ಪರೀಕ್ಷೆಗೊಳಪಡು). ಒಂದು ತೆರದ ಬೆರಳುಂಗುರ. [H.-iron (ಬಂಧಿಸುವುದಕ್ಕಾಗಿ ಮಾಡಿದ) ಕಬ್ಬಿಣದ ಉದ್ದನೆಯ ತೆಳುಪಟ್ಟಿ. H. petticoat (ಉಬ್ಬು ಪಟ್ಟಿಗಳಿಂದ) ಉಬ್ಬಿಸಿದ ಲಂಗ ; ಉಬ್ಬುಲಂಗ]. (ಕ್ರಿ.) ಸುತ್ತು ಪಟ್ಟಿಗಳಿಂದ ಬಂಧಿಸು. (ಬಂಡಿಯ ಪಟ್ಟಿಯಂತೆ) ಸುತ್ತುವರಿ, ಸುತ್ತುಗಟ್ಟು.

Hoop[2] ಹೂಪ್ (ಕ್ರಿ. ಅಕ., ನಾ.) 'ಹೂಪ್' ಎಂದು ಕೂಗು [Hooping-cough (ಮು., ಮಕ್ಕಳಿಗೆ ಬರುವ) ನಾಯಿಕೆಮ್ಮು]. (ನಾ.) (ನಾಯಿಕೆಮ್ಮಿನಲ್ಲಿ ಕೇಳಬರುವ) 'ಹೂಪ್' ಶಬ್ದ.

Hoóp-la ಹೂಪ್ಲಾ (ನಾ.) (ಜಾತ್ರೆ, ಮೊ. ಗಳಲ್ಲಿ) ತಕ್ಕಂತೆ ಅಳವಡಿಸಿ ಇಟ್ಟಿರುವ ಕೆಲವು ವಸ್ತುಗಳಮೇಲೆ ದೂರದಿಂದ ಎಸೆದ, ಬೆಲೆಕೊಟ್ಟು ಪಡೆದ, ಉಂಗುರವು ಅವುಗಳಲ್ಲಿ ಯಾವುದನ್ನಾದರೂ ಸುತ್ತುಗಟ್ಟಿದರೆ ಆ ವಸ್ತು ಎಸೆದವನದಾಗುವ ಒಂದು ತೆರದ ಆಟ ; ಉಂಗುರ ಎಸೆತದ ಆಟ.

Hoot ಹೂಟ್ (ಕ್ರಿ., ನಾ.) (ಮು., ಅಸಮಾಧಾನದ, ಅಸಮ್ಮತಿಯ, ಸೂಚಕವಾಗಿ) ದೊಡ್ಡ ಗದ್ದಲ ಮಾಡು ; ಹುಯ್ಲೆಬ್ಬಿಸು ; ಗುಲ್ಲು ಮಾಡು ; ಬೊಬ್ಬೆಯಿಡು (*At* ಉಪ. ದೊಡನೆ ಸಹ). (ಒಬ್ಬನನ್ನು) ತಿರಸ್ಕಾರದ ಕೂಗುಗಳಿಂದ ಕಾಡಿಸು ; ಗುಲ್ಲೆಬ್ಬಿಸಿ ಓಡಿಸಿಬಿಡು (*Out*, *away*, ಮೊ. ಉಪ. ದೊಡನೆ). (ಗೂಬೆ) 'ಗೂ ಗುಕ್' ಎನ್ನು ; ಘೂತ್ಕಾರ ಮಾಡು (ಆವಿಯ ಸಿಳ್ಳು, ಮೋಟಾರು ಬಂಡಿ ಅಥವಾ ಅಧರ ಚಾಲಕ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೂಗು, ದನಿ ಮಾಡು. (ನಾ.) (ಮು., ಅಪಹಾಸ್ಯದ ಅಥವಾ ಅಸಮ್ಮತಿಯ) ಅರ್ಥವಿಲ್ಲದ ಕೂಗು, ಬೊಬ್ಬೆ. ಗೂಬೆಯ ಕೂಗು ; ಘೂತ್ಕಾರ. Not care, not worth, a h. (ಅಮೆ. ಸಂ., ಅಸಂ.) ಸ್ವಲ್ಪವೂ ಲಕ್ಷ್ಯ ಮಾಡೆನು ; ಯಾವುದಕ್ಕೂ ಕೆಲಸಕ್ಕೆ ಬಾರದ್ದು. **Hoóter** (ನಾ.) (ಕ್ರಿಯಾರ್ಥಗಳಲ್ಲ) ; (ಮು., ಕಾರ್ಖಾನೆ, ಮೊ. ಗಳಲ್ಲಿ ಕೆಲಸವನ್ನು ಪ್ರಾರಂಭಿಸಲು ಅಥವಾ ನಿಲ್ಲಿಸಲು ಸೂಚನೆಯಾಗಿ ಕೂಗಿಸುವ) ಧ್ವನಿ ಯಂತ್ರ ; ಆವಿಯ ಸಿಳ್ಳು.

Hoot(s) ಹೂಟ್(ಟ್ಸ್) (ಭಾವ. ಅವ್ಯ.) (ಉ. ಇಂಗ್ಲೆಂಡಿನ ಮತ್ತು ಸ್ಕಾ. ಪ್ರ.) ಅತೃಪ್ತಿಯನ್ನು ಅಥವಾ ಅಸಮಾಧಾನ ಆತುರಗಳನ್ನು ಸೂಚಿಸುವ ಉದ್ಗಾರ : 'ಹೂಟ್(ಟ್ಸ್)'.

Hoove ಹೂವ್ (ನಾ.) (ಸಾ., ಹಸುರುಮೇವನ್ನು ಮಿತಿಮೀರಿ ತಿನ್ನುವುದರಿಂದ ಬರುವ) ದನಗಳ ಹೊಟ್ಟೆಯುಬ್ಬರದ ರೋಗ.

Hop[1] ಹಾಪ್ (ನಾ., ಕ್ರಿ.) ಕಾಯಿಗಳಿಗಾಗಿ ಬೆಳೆಯುವ, ಸಾರ್ವಕಾಲಿಕವಾದ ಒಂದು ಜಾತಿಯ ಹಬ್ಬುಬಳ್ಳಿ ; 'ಹಾಪ್' ಬಳ್ಳಿ. (ಬ. ವ. ದಲ್ಲಿ) ಧಾನ್ಯಮದ್ಯ, ಮೊ. ಗಳಿಗೆ ಕಹಿರುಚಿ ಕೊಡುವುದಕ್ಕಾಗಿ ಉಪಯೋಗಿಸುವ ಇದರ ಬಲಿತ ಕಾಯಿಗಳು ; ಹಾಪ್ ಕಾಯಿಗಳು. [**H.-bind, -bine** ಹಾಪ್ ಬಳ್ಳಿಯ ಹಬ್ಬುವ ಕಾಂಡ. **H.-picker** ಹಾಪ್ ಕಾಯಿಗಳನ್ನು ಬಿಡಿಸುವ ಕೂಲಿಯಾಳು, ಯಂತ್ರ. **H.-pillow** (ನಿದ್ದೆ ಬರಿಸಲು) ಹಾಪ್ ಕಾಯಿಗಳನ್ನು ತುಂಬಿದ ತಲೆದಿಂಬು. **H.-pocket** (Pocket ನೋಡಿ). **H.-pole** ಹಾಪ್ ಬಳ್ಳಿಯನ್ನು ಹಬ್ಬಿಸುವ ದಡಿ]. (ಕ್ರಿ.) ಹಾಪ್ ಕಾಯಿಗಳಿಂದ ರುಚಿಕಟ್ಟು ; ಹಾಪ್ ಕಾಯಿ ಬಿಡು ; ಹಾಪ್ ಕಾಯಿಗಳನ್ನು ಬಿಡಿಸಿ ಶೇಖರಿಸು. **Hópper**[1] (ನಾ.) = Hop-picker.

Hop[2] ಹಾಪ್ (ಕ್ರಿ., ನಾ.) (ಮನುಷ್ಯ) ಒಂಟಿಕಾಲಿನಲ್ಲಿ ನೆಗೆ, ಕುಂಟು ; ಎಗುರು. (ಪ್ರಾಣಿಗಳ ವಿಷಯದಲ್ಲಿ) ಎಲ್ಲ ಕಾಲುಗಳಿಂದಲೂ ಒಟ್ಟಿಗೆ ನೆಗೆ, ಕುಪ್ಪಳಿಸು. (ಹಳ್ಳ, ಕಾಲುವೆ, ಮೊ. ನ್ನು) ನೆಗೆದು ದಾಟು, ಹಾರು. [H. (the twig or stick) (ಅಸಂ.) ಥಟ್ಟನೆ ಹೋಗಿಬಿಡು ; ಸಾಯಿ. H. it (ಬೇಗನೆ) ಹೊರಟುಹೋಗು. H. off (ಫಲಕ ವಿಮಾನ) ಹೊರಡು. **Hop-o'-my-thumb** ಗುಜ್ಜಾರಿ ; ಮೋಟ. **Hopscotch** ಒಂದು ಕಾಲಮೇಲೆ ಕುಂಟುತ್ತ, ಆ ಕಾಲಿನಿಂದಲೇ ಒಂದು ಕಲ್ಲುಬಿಲ್ಲೆಯನ್ನು ನೆಲದಮೇಲಿನ ಗೀರುಮನೆಗಳಿಗೆ ತಳ್ಳುವ ಮಕ್ಕಳ ಆಟ ; ಕುಂಟೆಬಿಲ್ಲೆ]. (ನಾ.) (ಒಂದು ಕಾಲ ಮೇಲೆ) ನೆಗೆತ. [On the h. (ಬಳ. ಮಾ.) ಗಡಿಬಿಡಿ ಮಾಡುತ್ತ]. ನೆಗೆತ. (ಬಳ. ಮಾ.) ಕುಣಿತ. (ವಿಮಾನ ಚಾಲನದಲ್ಲಿ) ಬಹು ದೂರದ ಹಾರಿಕೆಯಲ್ಲಿ ನಿಲ್ಲಡೆಗಳಲ್ಲೊಂದು ; ತಂಗೆಡೆ. H., skip (or step) & jump ಕ್ರಮವಾಗಿ ಕುಪ್ಪಳಿಸುವುದು, ಜಿಗಿಯುವುದು ಮತ್ತು ಹಾರುವುದು, — ಈ ಮೂರೂ ಚಲನೆಗಳನ್ನುಳ್ಳ ಒಂದು ವ್ಯಾಯಾಮ. **Hópper**[2] (ನಾ.) ನೆಗೆಯುವವನು ; ಜಿಗಿಯುವವನು ; ಕುಪ್ಪಳಿಸುವವನು. ಜಿಗಿ ಹುಳು (ಮು., ಚಿಕಟ, ಮೊ.). ಬೀಸುವ ಯಂತ್ರದಲ್ಲಿ ಧಾನ್ಯವನ್ನು ತುಂಬಿಕೊಂಡು ಕೆಳಕ್ಕೆ ಬಿಡುವ (ತರಕೆಳಗಾದ ಶಂಕುವಿನಾಕಾರದ ಅಥವಾ ಗೋಪುರಾಕಾರದ) ತೊಟ್ಟಿ (ಹಿಂದೆ ಇದು ಅಲ್ಲಾಡುತ್ತಿರುವಂತೆ ಅಳವಡಿಸಿದ್ದ ಕಾರಣ); ಹಲವು ಯಂತ್ರಗಳಲ್ಲಿ ಇದೇ ರೀತಿಯ ಸಲಕರಣೆ. ಹೂಳೆತ್ತುವ ಯಂತ್ರದಿಂದ ಮಣ್ಣು, ಮೊ. ನ್ನು ಸಾಗಿಸಿಕೊಂಡು ಹೋಗಿ ತಳ್ಳಿಬಿಡುವ ಚಪ್ಪಟೆ ದೋಣಿ. **Hopperlight, or -casement** (ಗಾಳಿ ಬರುವಂತೆ ಮೇಲುಗಡೆ ಅವಕಾಶವಿದ್ದು ಮುಚ್ಚಲು ಅನುಕೂಲಿಸುವಂತೆ ತಳದಲ್ಲಿ ಕೀಲಿಟ್ಟಿರುವ) ಕೀಲುಕಿಟಕಿ.

Hope ಹೋಪ್ (ನಾ., ಕ್ರಿ.) (ವಸ್ತುವಿನ ವಿಷಯದಲ್ಲಿ, ಕಾರ್ಯ ಮಾಡುವಲ್ಲಿ) ನಿರೀಕ್ಷಣೆಯೂ ಅಭಿಲಾಷೆಯೂ ಕೂಡಿದ ಮನೋರಥ ; ಭರವಸೆ ; ನಂಬಿಕೆ. ಹಾರೈಕೆ ; ಸಂಭವ (Hoping against h. ಬಯಲಾಸೆಯನ್ನು ನೆಚ್ಚಿಕೊಂಡು). ಆಸೆಗೆ ಕೇಂದ್ರವಾಗಿರುವ ವ್ಯಕ್ತಿ, ವಸ್ತು. ಆಸೆಯ ನೆಲೆ [Forlorn hope (Forlorn ನೋಡಿ)]. (ಕ್ರಿ.) (ಅಭಿಲಾಷೆಯೊಡನೆ) ನಿರೀಕ್ಷಿಸು ; ಭರವಸೆ ಪಡು ; ನಂಬು ; ಹಾರೈಸು.

Hópeful (ಗು., ನಾ.) ಆಶಾ ಜನಕ ; ಭರವಸೆ ಕೊಡುವ ; ನಂಬಬಹುದಾದ. (ನಾ.) (ಸಾ., ವ್ಯಂಗ್ಯಾರ್ಥದಲ್ಲಿ) (ಏಳಿಗೆಗೆ ಬರುವ) ಭರವಸೆ ತೋರುವ ಹುಡುಗ ಅಥವಾ ಹುಡುಗಿ (= Young h.). **Hópefully** (ಕ್ರಿ. ವಿ.) ; **Hópefulness** (ನಾ.) ; **Hópeless** (ಗು.) ಯಾವ ಆಶೆಯೂ ಇಲ್ಲದ ; ಹತಾಶ ; ಆಶಾ ರಹಿತ (A h. case ಸ್ವಲ್ಪವೂ ಆಸೆಯಿಲ್ಲದ ವಿಷಯ, ಸ್ಥಿತಿ, ಮೊಕದ್ದಮೆ). **Hópelessly** (ಕ್ರಿ. ವಿ.) ; **Hópelessness** (ನಾ.)

Hópple ಹಾಪ್‌ಲ್ (ಕ್ರಿ. ಸಕ., ನಾ.) (ಕುದುರೆ, ಮೊ. ಗಳ) ಕಾಲು(ಗಳನ್ನು ಜೋಡಿಸಿ) ಕಟ್ಟು. (ನಾ.) ಹೀಗೆ ಬಂಧಿಸುವ ಸಲಕರಣೆ : ಕಾಲ್ಕಟ್ಟು.

Hórary ಹೋರರಿ (ಗು.) ಗಂಟೆಗಳ ; ಹೋರೆಯ ; ಗಂಟೆ ಗಂಟೆಗೂ ಸಂಭವಿಸುವ.

Horde ಹೋರ್ಡ್ (ನಾ.) ಟಾರ್ಟರರ ಅಥವಾ ಇತರ ಅಲೆದಾಡುವ ಪಂಗಡದವರ ದಳ. (ಸಾ., ತಿರಸ್ಕಾರವಾಗಿ) ತಂಡ ; ಗುಂಪು ; ಗುಮ್ಮಿ ; ಮಂದೆ.

Hórehound, Hoár- ಹೋರ್‌ಹೌಂಡ್ (ನಾ.) (ಕೆಮ್ಮು, ಮೊ. ಕ್ಕೆ ಔಷಧವಾಗಿ ಉಪಯೋಗಿಸುವ ಸುವಾಸನೆಯ, ಕಹಿಯಾದ ರಸವುಳ್ಳ) ಒಂದು ಸೊಪ್ಪಿನ ಗಿಡ.

Horízon ಹೊರೈಸ(ಸ್)ನ್ (ನಾ.) ಭೂಮಿಯೂ ಆಕಾಶವೂ ಸೇರುವಂತೆ ಕಾಣುವ ರೇಖೆ ; ದಿಗಂತ ; ಕ್ಷಿತಿಜ ; ಬಾನಂಚು, ಬಾಂಗರ [Apparent, sensible, visible, h. ನೋಟಕನ ಕಣ್ಣು ಶಿಖರವಾಗುಳ್ಳ ಶಂಕುವಿನಾಕೃತಿಯು ಭೂಮಿಯ ಮೇಲ್ಮೈಯನ್ನು ಸಂಧಿಸುವ ರೇಖೆ ; ದೃಷ್ಟ ಕ್ಷಿತಿಜ. Celestial, rational, true, h. ಒಂದು ಸ್ಥಳದ ದೃಷ್ಟ ಕ್ಷಿತಿಜಕ್ಕೆ ಸಮಾಂತರವಾಗಿರುವಂತೆ ಭೂಕೇಂದ್ರದ ಮೂಲಕ ಹಾದುಹೋಗುವ ಕ್ಷೇತ್ರವುಳ್ಳ ಖಗೋಳದ ದೊಡ್ಡ ವೃತ್ತ ; ಖಗೋಳ ಕ್ಷಿತಿಜ]. (ರೂಪ.) (ಪರಿಜ್ಞಾನ, ಅನುಭವ, ಆಸಕ್ತಿ, ಮೊ. ಗಳ) ಅವಧಿ, ಮಿತಿ, ವ್ಯಾಪ್ತಿ. **Horizóntal** ಹಾರಿಸಾಂಟಲ್ (ಗು., ನಾ.) ಕ್ಷಿತಿಜದ(ಲ್ಲಿಯ) ; ದಿಗಂತದ(ಲ್ಲಿಯ). ಕ್ಷಿತಿಜ ತಲಕ್ಕೆ ಸಮಾಂತರದಲ್ಲಿರುವ ; ಲಂಬ ರೇಖೆಗೆ ಸಮಕೋನದಲ್ಲಿರುವ. ಮಟ್ಟವಾಗಿರುವ ; ಸಮತಲವಾಗಿರುವ; ಚಪ್ಪಟೆಯಾದ ; ಸಪಾಟ. (ಯಂತ್ರ, ಮೊ. ವು.) ಸಮತಲದ ದಿಕ್ಕಿನಲ್ಲಿ, ಕ್ಷೇತ್ರದಲ್ಲಿ, ಕೆಲಸಮಾಡುವ ಭಾಗಗಳುಳ್ಳ ; ಸಮ ಮಟ್ಟದ. (ನಾ.) ಸಮತಲ ರೇಖೆ, ಕಂಬಿ, ಮೊ. **Horizontálity** (ನಾ.) ; **Horizóntally** (ಕ್ರಿ. ವಿ.)

Hórmone ಹಾರ್ಮೋನ್ (ನಾ.) (ಶ. ವಿ.) (ರಕ್ತಕ್ಕೆ ಸೇರಿ ಅಂಗಾಂಗಗಳನ್ನು ಚುರುಕಾಗಿ ಕೆಲಸಮಾಡುವಂತೆ ಚೋದಿಸುವ) ಹಲವು ಬಗೆಯ ಅಂತಃಸ್ರಾವಗಳು : ಚೋದಕ ಸ್ರಾವ ; 'ಹಾರ್ಮೋನ್'.

Horn ಹಾರ್ನ್ (ನಾ.) (ದನ, ಕುರಿ, ಮೇಕೆ, ಮೊ. ಸಸ್ತನಿ ಪ್ರಾಣಿಗಳ ತಲೆಯಮೇಲಿನ) ಕೊಂಬು, ಕೋಡು, ಶೃಂಗ [Take the bull by the horns (Bull[1] ನೋಡಿ)]. ಸಾರಂಗದ ತಲೆಯಮೇಲಿನ ಕವಲೊಡೆದ, ಕ್ವಚಿತ್ ಕಾಲದ, ಕೊಂಬು. ಇತರ ಪ್ರಾಣಿಗಳ ತಲೆಯ ಮೇಲೆ ಚಾಚಿಕೊಂಡಿರುವ ಭಾಗ : ಕೋಡು [(ಉದಾ., ಬಸವನ ಹುಳುವಿನ ಸ್ಪರ್ಶಾಂಗ, ಕೀಟಗಳ ಸ್ಪರ್ಶ ತಂತು, ಕೋಡಿನ ಗೂಬೆಯ ತಲೆ ಜುಟ್ಟು). Draw in one's horns ಬಿಸುಪನ್ನು, ಉತ್ಸಾಹವನ್ನು, ತಡೆದುಕೊ ; ಹಿಂದೆಗೆ ; ಬಾಲ ಮುದುರಿಕೊ ; ಜಂಬ ತಗ್ಗಿಸು]. ಕೊಂಬಿನ ಪದಾರ್ಥ [**H.-shavings** (ಗೊಬ್ಬರವಾಗಿ ಉಪಯೋಗಿಸುವ) ಕೊಂಬು ಹೆರೆದ ಚೂರುಗಳು]. ಕೊಂಬಿನಿಂದ ಮಾಡಿದ ವಸ್ತು ; ಕೊಂಬಿನ ಸಾಮಾನು [ಉದಾ., Shoe-h. (Shoe ನೋಡಿ)]. ಕೊಂಬಿನ ಕುಡಿಯುವ ಪಾತ್ರೆ ; (ಬಂದೂಕುಮದ್ದು ತುಂಬುವ) ಕೊಂಬಿನ ನಳಿಕೆ. (H. of plenty = Cornucopia). ಕಹಳೆ ; ಕೊಂಬು (ಈಗ ಕೊಂಬಿನಿಂದ ಮಾಡುವುದಿಲ್ಲ) [Hunting-h., French h. (ಕಹಳೆಯ ಜಾತಿಯವು). English h. (ತೀಕ್ಷ್ಣ ಧ್ವನಿಯ ಒಂದು ಬಗೆಯ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಂಗ್ಲಿಷ್ ಗಾಳಿವಾದ್ಯ]. ಕೊಂಬಿನಾಕಾರದ ಚಾಚು. ಬಾಲಚಂದ್ರನ ಅಥವಾ ಆ ಆಕಾರದ ಇತರ ವಸ್ತುವಿನ ತುದಿ. (ಕೊಲ್ಲಿ, ನದಿ, ಮೊ. ಗಳ) ತೋಳು, ಶಾಖೆ, ಕವಲು. ಉಭಯ ಸಂಕಟದ ಪಕ್ಷಗಳಲ್ಲಿ ಒಂದು. The H. (ದ. ಅಮೆರಿಕದ ದ. ಕೊನೆಯಲ್ಲಿರುವ) ಹಾರ್ನ್ ದ್ವೀಪ (ಅದರ ಆಕಾರದಿಂದ). **Hornbeam** ಬೇಲಿಗಾಗಿ ಬೆಳಸುವ ಗಟ್ಟಿ ದಾರುವಿನ ಒಂದು ಜಾತಿಯ ಮರ. **Hornbill** ಕೊಕ್ಕಿನ ಮೇಲೆ ಕೊಂಬಿನಂಥ ವಸ್ತು ಬೆಳೆದಿರುವ ಒಂದು ಜಾತಿಯ ಹಕ್ಕಿ: ಕೊಂಬು ಕೊಕ್ಕಿನ ಹಕ್ಕಿ. **Hórnblende** — ಬ್ಲೆಂಡ್ (ನಾ.) (ಮು., ಸಿಲಿಕ, ಮ್ಯಾಗ್ನೀಷಿಯ ಮತ್ತು ಸುಣ್ಣ ಸೇರಿರುವ ಗ್ರ್ಯಾನೈಟ್, ಮೊ. ಹಲವು ಶಿಲೆಗಳ ಘಟಕಾಂಶವಾಗಿರುವ ಕಗ್ಗಂದು, ಕಪ್ಪು, ಅಥವಾ ಹಸುರು ಬಣ್ಣದ) ಒಂದು ಖನಿಜ: 'ಹಾರ್ನ್ಬ್ಲೆಂಡ್'. **H.-book** (ಚರಿತ್ರ) ಹಿಡಿಯುಳ್ಳ ಹಲಗೆಯಮೇಲೆ ಹಚ್ಚಿ ರಕ್ಷಣೆಗಾಗಿ ಕೊಂಬಿನ ತೆಳ್ಳನೆಯ ಪಟ್ಟಿಯನ್ನು ಮೇಲೆ ಹಾಕಿರುವ ವರ್ಣಮಾಲೆ, ಪ್ರಥಮಗೀತೆ, ಮೊ. ನ್ನು ಬರೆದ ಕಾಗದದ ಹಾಳೆ; ಓನಾಮದ, ಸ್ತೋತ್ರಪಾಠದ, ಹಲಗೆ. **H.-mad** (ಪ್ರಾಚೀ. ಪ್ರ.) ಪೂರಾ ಹುಚ್ಚು ಹಿಡಿದಿರುವ (ಆದಿಯಲ್ಲಿ, ಕೊಂಬುಳ್ಳ ಪ್ರಾಣಿಗಳ ವಿಷಯದಲ್ಲಿ ಪ್ರ.). **Hórnpipe** (ನಾ.) ಹಳೆಯ ಕಾಲದ ಒಂದು ಗಾಳಿವಾದ್ಯ. (ಮು., ನಾವಿಕರ ವಿನೋದಗೋಷ್ಠಿಯಲ್ಲಿ, ಸಾ., ಒಬ್ಬನ) ಉಲ್ಲಾಸದ ನೃತ್ಯ; ಈ ನೃತ್ಯದ ಗಾನ. **H.-plate** ರೈಲುಬಂಡಿಯ ಅಚ್ಚಿನ ರಕ್ಷೆ. **H.-rimmed** ಕೊಂಬು ಕಟ್ಟಿನ (ಕನ್ನಡಕದ). **Hornstone** ಸುಲಭವಾಗಿ ಒಡೆದುಹೋಗುವ ಮರಳುಗಲ್ಲು; ಕೊಂಬುಗಲ್ಲು. **Hórner** (ನಾ.) ಕೊಂಬಿನ (ಚಮಚ, ಬಾಚಣಿಗೆ, ಮೊ.) ಸಾಮಾನು ಮಾಡುವವನು. ಕೊಂಬು ಊದುವವನು; ಕೊಂಬಿನವನು. **Hórnful** (ಗು.); **Hórnless** (ಗು.). **Hórny** (ಗು.) ಕೊಂಬಿನ; ಕೊಂಬಿನಂಥ. ಕೊಂಬುಗಳು ತುಂಬ ಇರುವ; ಕೊಂಬಿನಂತೆ ಗಡುಸಾಗಿರುವ; ಜಡ್ಡುಗಟ್ಟಿರುವ (H.-handed ಜಡ್ಡುಗೈಯ). **Hórniness** (ನಾ.)

Horn (ಕ್ರಿ.) (ಮು., ಭೂ. ಕೃ. ನಲ್ಲಿ) ಕೊಂಬು ಬೆಳೆ. ಕೊಂಬಿನಿಂದ ತಿವಿ; (ಕೊಂಬಿನಿಂದ) ಹಾಯಿ. (ಹಡಗಿನ ಒಡಲನ್ನು) ತಳ ತೊರೆಯ ರೇಖೆಗೆ ಸಮಕೋನದಲ್ಲಿರುವಂತೆ ಅಳವಡಿಸು. H. in (ಅಮೆ. ಸಂ.) ಅಡ್ಡ ಬರು, ತಲೆ ಹಾಕು.

Hórnblende, Hórner. **Horn** ನೋಡಿ.

Hórnet ಹಾರ್ನೆಟ್ (ನಾ.) (ತನ್ನ ಮುಳ್ಳುಗಳಿಂದ ಬಿರುಸಾಗಿ ಚುಚ್ಚಿ ಸಂಕಟಪಡಿಸುವ) ಕಣಜ ವರ್ಗದ ಒಂದು ದೊಡ್ಡ ಹಾರುಹುಳು; ದೊಡ್ಡ ಕಣಜ. Bring hornets' nest about one's ears, Arouse a nest of hornets ವೈರಿಗಳನೇಕರನ್ನು ರೇಗಿಸಿ ಅವರಿಂದ ತೊಂದರೆಗೊಳಗಾಗು; ಹಗೆ ಮುನುಕಿಸಿಕೊ.

Hórnpipe, etc. **Horn** ನೋಡಿ.

Hórologe ಹಾರೊಲಾ(ಲೋ)ಜ್ (ನಾ.) ಗಡಿಯಾರ; ನೆರಳು ಗಡಿಯಾರ; ಹೋರಾ ದರ್ಶಕ. **Horóloger** ಹೊರಾಲೊಜರ್ (ನಾ.) ಗಡಿಯಾರ ಮಾಡುವವನು; ಹೊತ್ತು ಹೇಳುವವನು. **Horólogist** (ನಾ.) = Horologer. **Horólogy** (ನಾ.) ಹೊತ್ತಳೆಯುವ ವಿದ್ಯೆ; ಕಾಲ ಗಣನೆಯ ವಿದ್ಯೆ; ಗಡಿಯಾರ (ಮಾಡುವ) ವಿದ್ಯೆ. **Horológic(al)** ಹಾರೊಲಾಜಿಕ್(ಕಲ್) (ಗು.)

Horópter ಹೊರಾಪ್ಟರ್ (ನಾ.) ಕಣ್ಣುಗಳ ಒಂದು ಗೊತ್ತಾದ ನೆರೆಯಲ್ಲಿ ಬೇರೆ ಬೇರೆ ಕಾಣದೆ ಒಂದಾಗಿ ಕಾಣುವ ಬಿಂದುಸಮುದಾಯ.

Hóroscope ಹಾರೊಸ್ಕೋಪ್ (ನಾ.) (ಜ್ಯೋ.) (ಒಂದು ಗೊತ್ತಾದ ಸಮಯದಲ್ಲಿ, ಮು., ಒಬ್ಬನು ಹುಟ್ಟಿದ ಸಮಯದಲ್ಲಿ) ಅಂತರಿಕ್ಷವನ್ನೂ ಗ್ರಹಗಳನ್ನೂ ವೀಕ್ಷಿಸುವುದು; ಗ್ರಹ ವೀಕ್ಷಣ. ಒಂದು ನಿರ್ದಿಷ್ಟ ಸಮಯದಲ್ಲಿ ಗ್ರಹಗಳ ಸ್ಥಾನಗಳನ್ನು ತೋರಿಸುವ ಕುಂಡಲಿ; ಗ್ರಹ ಕುಂಡಲಿ; ಜನ್ಮಪತ್ರಿಕೆ; ಜಾತಕ. Cast a h. ಕುಂಡಲಿ ಹಾಕು; ಜಾತಕ ಬರೆ. **Horoscópic(al)** ಹಾರೊಸ್ಕಾಪಿಕ್(ಕಲ್) (ಗು.); **Horóscopy** ಹೊರಾಸ್ಕೊಪಿ (ನಾ.) ಜಾತಕ ವಿದ್ಯೆ.

Hórrent ಹಾರೆಂಟ್ (ಗು.) (ಕಾವ್ಯ) ಮೈಮೇಲೆ ಮುಳ್ಳೇಳುವ; ರೋಮಾಂಚವಾಗುವ. ಬಿರುಗೂದಲಂತೆ ನಿಮಿರಿ ನಿಂತ.

Hórrible ಹಾರಿಬ್‌ಲ್ (ಗು.) ಭಯ ಹುಟ್ಟಿಸುವ; ದಿಗಿಲುಗೊಳಿಸುವ; ಗಾಬರಿಯುಂಟುಮಾಡತಕ್ಕ; ಘೋರ; ಉಗ್ರ; ಕರಾಳ; ಭೀಕರ. (ಬಳ. ಮಾ.) ವಿಪರೀತ; ಅಹಿತ(ವಾದ); ಸಹಿಸಲಾಗದ (H. noise ವಿಪರೀತ ಗದ್ದಲ. H. bore ಬಹು ಬೇಜಾರು ಮನುಷ್ಯ. H. weather ಅಸಾಧ್ಯ ವಾಯುಸ್ಥಿತಿ). **Hórribleness** (ನಾ.); **Hórribly** (ಕ್ರಿ. ವಿ.); **Hórrid** (ಗು.) ಘೋರ; ಭಯಂಕರ; ರೌದ್ರ. (ಕಾವ್ಯ., ಪ್ರಾಚೀ. ಪ್ರ.) ಒರಟಾದ; ಮುಳ್ಳೆದ್ದ. (ಬಳ. ಮಾ.) = Horrible. **Hórridly** (ಕ್ರಿ. ವಿ.); **Hórridness** (ನಾ.); **Hórrify** (ಕ್ರಿ. ಸಕ.) ದಿಗಿಲುಗೊಳಿಸು; ಭಯ ಹುಟ್ಟಿಸು; ಗಾಬರಿ ಪಡಿಸು. ಹೇಯವಾಗಿಸು; ಹೆಸರು ಕಳೆ. **Horrífic** (ಗು.); **Horrificátion** (ನಾ.); **Horripilátion** ಹಾರಿಪಿಲೇಷನ್ (ನಾ.) (ಚಳಿಯಿಂದಲೊ ಭಯದಿಂದಲೊ) (ಮೈಮೇಲೆ) ಮುಳ್ಳೇಳುವುದು; ರೋಮಾಂಚ; ಪುಲಕ. **Hórror** ಹಾರರ್ (ನಾ.) ಗಾಬರಿ(ಯಿಂದಾದ ನಡುಕ); ಅತ್ಯಂತ ಭೀತಿ; ಥರಥರಿಕೆ; ಅತ್ಯಂತ ಜುಗುಪ್ಸೆ (*Of* ಉಪ. ದೊಡನೆ). (ವೈ. ಶಾ.) (ರೋಗಲಕ್ಷಣವಾದ) ನಡುಕ [The horrors (ಮು., ಕಂಪ ಸನ್ನಿಯಲ್ಲಿಯಂತೆ) ನಡುಕದ ಅಥವಾ ಮನಗುಂದಿನ ಕೆರಳಿಕೆ. H.-struck, -stricken ದಿಗಿಲುಬಿದ್ದ; ಗಾಬರಿಗೊಂಡ; ಭಯ ಭ್ರಾಂತ]. ಭಯಂಕರ ವಸ್ತು. Chamber of Horrors ಭಯಂಕರ ವಸ್ತುಗಳಿಂದ ತುಂಬಿದ ಸ್ಥಳ; ಭಯಂಕರ ಸ್ಥಾನ (Mme. Tussaud ಎಂಬಾಕೆ ಏರ್ಪಡಿಸಿದ್ದ ಮೇಣದ ಬೊಂಬೆಗಳ ಪ್ರದರ್ಶನದಲ್ಲಿ ಘಾತುಕರು, ಮೊ. ಪಾತಕಿಗಳ ಕೊಠಡಿ)

Hórrid, Horripilátion, Hórror, etc. **Horrible** ನೋಡಿ.

Hors (F) ಆ(ಹಾ)ರ್ (ಕ್ರಿ. ವಿ., ಉಪ.) ಹೊರಗೆ; ಬಾಹ್ಯ. **H. concours** —ಕಾನ್‌ಕೂರ್. (ಪ್ರದರ್ಶನ ವಸ್ತು) ಬಹುಮಾನಕ್ಕೆ ಸ್ಪರ್ಧಿಸದ. **H. de combat** —ಡ ಕಾನ್ಬಾ (ಗು., ಕ್ರಿ. ವಿ.) ಕದನದಿಂದ ಹೊರಗಾಗಿ; (ಕದನದಲ್ಲಿ) ಶಕ್ತಿಗುಂದಿ. **H.-d'oeuvre** — ಡವ್ರ (ನಾ.; ಬ. ವ. -s) (ಊಟದ ಪ್ರಾರಂಭದಲ್ಲಿ ಅಥವಾ ಮಧ್ಯದಲ್ಲಿ ರುಚಿಗಾಗಿ ಬಡಿಸಿದ) ಹೆಚ್ಚು ಭಕ್ಷ್ಯ.

Horse ಹಾರ್ಸ್ (ನಾ.) ಕುದುರೆ; ಅಶ್ವ [You may take a h. to the water, but you can't make him drink (ಗಾದೆ) ಕುದುರೆಯನ್ನು ಕುಂಟೆಗೆ ನಡಸಿಕೊಂಡು ಹೋಗಬಹುದು, ಆದರೆ ಅದನ್ನು ನೀರು ಕುಡಿಯುವಂತೆ ಮಾಡಲು ಸಾಧ್ಯವಿಲ್ಲ; ಬಾಯಿಗೆ ತುತ್ತಿಡಬಹುದು, ನುಂಗಿಸಲಾದೀತೆ?]. ಹಿಡ ಮಾಡಿದ ಅಥವಾ ಮಾಡಿರದ (ಮು., ಪ್ರಾಯದ) ಗಂಡು ಕುದುರೆ. (ಜಾತ್ಯೇಕ ವಚನ) ಕುದುರೆಯ ದಂಡು; ಅಶ್ವ ಸೈನ್ಯ [Light h. ಲಘು ಆಯುಧದ ರಾವುತ ಸೈನಿಕರು; ಲಘು ಅಶ್ವ ದಳ. Sea-h. (Sea ನೋಡಿ)]. (ವ್ಯಾಯಾಮ ಶಾಲೆಯಲ್ಲಿ) ಮರದ ಹಾರುಕುದುರೆ. ಸಾಮಾನಿಡುವ (ಸಾ., ಕಾಲುಗಳುಳ್ಳ) ಚೌಕಟ್ಟು (Clothes-h. ಬಟ್ಟೆ ನಿಲುವು). (ನಾವೆ) (ಹಲವು ರೀತಿ ಉಪಯೋಗಿಸುವ) ಹಗ್ಗ, ಕಂಬಿ. (ಗಣಿ) (ಖನಿಜದ) ಎಳೆಯಲ್ಲಿ ಅಡಚಣೆ. To h. (ಆಜ್ಞೆ) ಕುದುರೆ ಹತ್ತಿರಿ! Flog a dead h. (Flog ನೋಡಿ). Look a gift h. in the mouth (Gift ನೋಡಿ). Mount, ride, the high h. ದೊಡ್ಡಸ್ತಿಕೆ ಮೆರೆ; ಜಂಬ ತೋರಿಸು. Dark, Willing, h. (ಆಯಾ ಪದಗಳನ್ನು ನೋಡಿ). Put the cart before the h. (Cart ನೋಡಿ). Eat, work, like a h. (ಕುದುರೆಯಂತೆ) ಹೆಚ್ಚಾಗಿ ತಿನ್ನು, ದುಡಿ. On horseback ಕುದುರೆ ಹತ್ತಿ; ಸವಾರಿ ಮಾಡುತ್ತ. **H. artillery** (ಅತಿ ವೇಗವಾಗಿ ಚಲಿಸುವ) ಕುದುರೆ ಗೋಲಂದಾಜ (ಸೈನ್ಯ). **H.-block** ಕುದುರೆಯನ್ನು ಹತ್ತುವುದಕ್ಕಾಗಿ ಮಾಡಿದ ಮರದ ಅಥವಾ ಕಲ್ಲಿನ ಜಗುಲಿ. **H.-box** ಕುದುರೆಗಳನ್ನು ರೈಲುಮೇಲೆ ಸಾಗಿಸುವ ಮುಚ್ಚುಬಂಡಿ; ಕುದುರೆಗಳನ್ನು ಹಡಗಿನೊಳಕ್ಕೆ ಇಳಿಯಬಿಡುವ ಕುದುರೆಯ ಡಬ್ಬಿ. (ಹಾಸ್ಯ ಪ್ರ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕ್ರೈಸ್ತ ದೇವಾಲಯದಲ್ಲಿ) ಒಂದು ಸಂಸಾರದವರು ಒಟ್ಟಿಗೆ ಕುಳಿತುಕೊಳ್ಳುವಂತೆ (ಇತರ ಆಸನಗಳಿಂದ) ಪ್ರತ್ಯೇಕಿಸಿರುವ ಆವರಣವುಳ್ಳ ಆಸನಗಳ ತಂಡ. **H.-breaker** ಕುದುರೆ ಪಳಗಿಸುವವನು ; ಅಶ್ವ ಶಿಕ್ಷಕ. **H.-chestnut** ಕಾಡು 'ಚೆಸ್ನಟ್' ಮರ ; ಈ ಮರದ ಹಣ್ಣು. **H.-cloth** ಕುದುರೆಗೆ ಹೊದಿಸುವ (ಅಲಂಕಾರದ ಉಡಿಗೆಯ ಭಾಗವಾದ) ವಸ್ತ್ರ ; ಕುದುರೆಯ ವಸ್ತ್ರ. **H.-coper** ಕುದುರೆಯ ವ್ಯಾಪಾರಿ. **H.-flesh** (ಮು., ಆಹಾರವಾಗಿ ಉಪಯೋಗಿಸುವ) ಕುದುರೆಯ ಮಾಂಸ ; (ಸಾಮೂಹಿಕವಾಗಿ) ಕುದುರೆಗಳು. **H.-fly** ಕುದುರೆಗಳನ್ನು ಪೀಡಿಸುವ (ಹಲವು ಬಗೆಯ) ನೊಣ. **H. Guards** ಇಂಗ್ಲೆಂಡಿನ ಅರಮನೆಯ ಸೈನ್ಯದ ಅಶ್ವದಳ (ಮು., Royal H. G.) ; ಆ ಅಶ್ವದಳದ ಆಡಳಿತದ ಕಚೇರಿ (ಮು., Whitehall ಭವನದ ಎದುರಿನಲ್ಲಿರುವ ಒಂದು ಕಟ್ಟಡ) ; ಸೈನ್ಯದ ಮುಖ್ಯಾಧಿಕಾರಿಗಳು. **Horse-hair** ಕುದುರೆಯ ಬಾಲದ ಅಥವಾ ಜೂಲಿನ ಕೂದಲು ; (ಕುದುರೆಯ) ಜವಿ. **H. latitudes** ಈಶಾನ್ಯ ವಾಣಿಜ್ಯಮಾರುತ ಕ್ಷೇತ್ರದ ಉತ್ತರ ತುದಿಯಲ್ಲಿರುವ ಶಾಂತಿವಲಯಗಳು. **H.-laugh** ಗಟ್ಟಿಯಾದ ಒರಟು ನಗು. **H.-leech** ಒಂದು ತೆರದ ದೊಡ್ಡ ಜಿಗುಣೆ. (ರೂಪ.) ತೃಪ್ತಿಪಡಿಸಲಾಗದವನು ; ಸುಲಿಗೆಕೋರ ; ದುರಾಸೆಯ ಮನುಷ್ಯ (Daughters of the h.-leech ಇನ್ನೂ ಕೊಡು, ಮತ್ತೂ ಕೊಡು ಎಂದು ಪೀಡಿಸುವವರು). **Horseman** (ನಿಪುಣನಾದ) ಕುದುರೆ ಸವಾರ ; ರಾವುತ. **Horsemanship** (ಕುದುರೆ) ಸವಾರಿಯ ಕಲೆ ; ರಾವುತ ವಿದ್ಯೆ. **H.-marines** (ತಮಗೆ ತಿಳಿಯದ ಉದ್ಯೋಗಕ್ಕೆ ಹೊರಟವರ ಮಾದರಿಯಾಗಿ) ಕಲ್ಪನೆಯ ನಾವಿಕ ಸವಾರ ದಳ. Tell that to the h.-marines (ಬರಿಯ ಕಲ್ಪನೆಯ ಸಮಾಚಾರ, ಸುಳ್ಳಿನ ಕಂತೆ, ಹೇಳುವವನನ್ನು ಕುರಿತು ಅಪಹಾಸ್ಯವಾಗಿ). **H.-mushroom** ಒರಟಾದ, ಆದರೆ ತಿನ್ನಬಹುದಾದ, ಪೊಳ್ಳುತಾಳಿನ ಒಂದು ಅಣಬೆ. **H.-play** ಗಟ್ಟಿಯಾಗಿ ಕೂಗುತ್ತ ಹಾರಾಡುವ ಒರಟು ಆಟ. **H.-pond** ಕುದುರೆಗೆ ಮೈತೊಳೆಯುವ, ನೀರು ಕುಡಿಸುವ, ಕುಂಟೆ. ಕೇಡಿಗರನ್ನು ನೀರಿನಲ್ಲಿ ಅದ್ದಿ ಶಿಕ್ಷಿಸುವ ಕುಂಟೆ. **H.-power** ಕುದುರೆಯ ಶಕ್ತಿಯಿಂದ ತಿರುಗುತ್ತ ಇತರ ಯಂತ್ರಗಳನ್ನು ನಡಸುವ ಯಂತ್ರ. (ಯಂತ್ರ ಶಾಸ್ತ್ರ) (ಯಂತ್ರವು) ಕೆಲಸಮಾಡುವ ದರದ (ಏಕ) ಮಾನ : ಅಶ್ವಸಾಮರ್ಥ್ಯ [ಒಂದು ಸೆಕಂಡಿಗೆ ೫೫೦ ಅಡಿಪೌಂಡುಗಳು (Foot-pounds) ; ಸಂಕ್ಷಿಪ್ತ : h. p.]. **H.-race** ಕುದುರೆಯ ಜೂಜು ; — ಪಂದ್ಯ. **H.-radish** ಒಂದು ತೆರದ ಮೂಲಂಗಿ. H.-r. tree ನುಗ್ಗೆಯ ಮರ. **H. sense** (ಬಳ. ಮಾ.) ಸಾಮಾನ್ಯ ವಿವೇಚನಾ ಶಕ್ತಿ, ವ್ಯವಹಾರ ಬುದ್ಧಿ ; ಸಾಮಾನ್ಯ ವಿವೇಕ ; ಚೂಟಿ. **Horseshoe** ಕುದುರೆಯ ಲಾಳ, ಹಲ್ಲೆ ; ಲಾಳದಾಕಾರದ ವಸ್ತು [(ನಾ., ಗು.) H.-s. table ಕುದುರೆಯ ಲಾಳದಾಕಾರದ ಮೇಜು]. **H.-tail** ಕುದುರೆಯ ಬಾಲ (ತುರ್ಕಿ ದೇಶದಲ್ಲಿ ಪಾಷಾವಿನ ದರ್ಜೆಯ ಸೂಚಕವಾಗಿ ಉಪಯೋಗಿಸುವ ಧ್ವಜ, ಲಾಂಛನ). ಗುಪ್ತ ಪುಷ್ಪೀಯಗಳ ಒಂದು ಸಸ್ಯಜಾತಿ. **Horsewhip** ಕುದುರೆಯ ಚಾವಟಿ, ಚಬುಕು. [(ಕ್ರಿ.) (ಒಬ್ಬನನ್ನು) ಚಾವಟಿಯಿಂದ ಹೊಡೆದು ದಂಡಿಸು]. **Horsewoman** ಕುದುರೆಯ ಸವಾರಳು. **Hórseless** (ಗು.) ; **Hórsy** ಹಾರ್ಸಿ (ಗು.) ಕುದುರೆಗಳಿಗೆ ಅಥವಾ ಕುದುರೆಯ ಜೂಜುಗಳಿಗೆ ಸಂಬಂಧಿಸಿದ ; —ಗಳಲ್ಲಿ ಆಸಕ್ತನಾದ, ಲೋಲುಪನಾದ. ಕುದುರೆಯ ಚಾಕರನ ಅಥವಾ ಪಂದ್ಯದ ಸವಾರನ ವೇಷ ಭಾಷೆಗಳನ್ನು ಅನುಕರಿಸುವ. **Hórsily** (ಕ್ರಿ. ವಿ.) ; **Hórsiness** (ನಾ.)

Horse (ಕ್ರಿ.) (ಒಬ್ಬನಿಗೆ, ವಾಹನಕ್ಕೆ) ಕುದುರೆ(ಗಳನ್ನು) ಒದಗಿಸು, ಹವಣಿಸು. (ಒಬ್ಬನನ್ನು) ಬೆನ್ನಮೇಲೆ ಹೊತ್ತುಕೊ. ಚಾವಟಿಯಿಂದ ಹೊಡೆಯುವುದಕ್ಕಾಗಿ (ಒಬ್ಬನನ್ನು) ಮತ್ತೊಬ್ಬನ ಬೆನ್ನಮೇಲೆ ಹತ್ತಿಸು. ಕುದುರೆ ಹತ್ತು ; ಕುದುರೆಯ ಮೇಲೆ ಹೋಗು.

Hórsey pouch ಹಾರ್ಸಿ ಪೌಚ್ (ನಾ.) ಅರ್ಧ ಭಾಗವು ಮಿಕ್ಕ ಅರ್ಧ ಭಾಗದೊಳಗೆ ಮಡಿಚಿಕೊಳ್ಳುವ ರಬ್ಬರಿನ ತಂಬಾಕುಚೀಲ. (Horsey ಎಂಬವನು ರಚಿಸಿದ್ದು)

Hórsy, etc. **Horse** ನೋಡಿ.

Hórtative ಹಾರ್ಟಟಿವ್ (ಗು.) ಹುರಿದುಂಬಿಸುವ, —ವಂಥ ; ಬುದ್ಧಿವಾದ ಹೇಳುವ ; ಪ್ರಬೋಧಕ ; ಪ್ರೇರಕ. **Hórtatory** (ಗು.)

Hórticulture ಹಾರ್ಟಿಕಲ್ಚ್ಯರ್, — ಕಲ್ಚರ್ (ನಾ.) ತೋಟದ ಬೇಸಾಯದ ವಿದ್ಯೆ, ಕಲೆ ; ತೋಟದ ಕೃಷಿ ; ತೋಟಗಾರಿಕೆ. **Horticúltural** (ಗು.) ; **Horticúlturist** (ನಾ.)

Hórtus síccus (L) ಹಾರ್ಟಸ್ ಸಿಕಸ್ (ನಾ.) ಕ್ರಮವಾಗಿ ವಿಂಗಡಿಸಿಟ್ಟ ಒಣ ಸಸ್ಯಗಳ ಸಂಗ್ರಹ.

Hósanna ಹೊಸ್ಯಾನ (ನಾ.) 'ರಕ್ಷಿಸು !', 'ತ್ರಾಹಿ ! ತ್ರಾಹಿ !' ಎಂಬ ಘೋಷಣ, ಪ್ರಾರ್ಥನೆ. ಅರ್ಚನೆಯ, ಸ್ತೋತ್ರದ, ಘೋಷ.

Hose ಹೋಸ್ (ನಾ., ಕ್ರಿ. ಸಕ.) (ಜಾತಿ ವಾಚಕ, ಬ. ವ. ದಲ್ಲಿ) ಮೊಣಕಾಲ ವರೆಗೂ ಬರುವ ಕಾಲ್ಚೀಲ(ಗಳು) ; ಉದ್ದ— ; (Half-h. ಅರೆ ಕಾಲ್ಚೀಲ). (ಬ. ವ. hoses) (ಗಿಡಗಳು, ಮೊ. ಕ್ಕೆ ನೀರೆರೆಯುವ) ಮೆತು ನೀರ್ಕೊಳವಿ. [H.-tops (ಸ್ಕಾಚ್ ಉಚ್ಚಾರಣೆ : ಹೋಟಾಪ್ಸ್) ಪಾದ(ಭಾಗ)ವಿಲ್ಲದ ಕಾಲ್ಚೀಲ]. (ಕ್ರಿ.) ಕಾಲ್ಚೀಲ, ಮೆತು ನೀರ್ಕೊಳವಿ, — ಹವಣಿಸು ; ಮೆತು ನೀರ್ಕೊಳವಿಯಿಂದ ನೀರೆರೆ, ನೀರು ಚೆಲ್ಲಿ ನೆನಸು. **Hósier** ಹೋಷಿ(ಸಿ)ಯರ್, — ಷರ್ (ನಾ.) ಕಾಲ್ಚೀಲಗಳನ್ನೂ ಚೌಕಟ್ಟಿನ ಕಸೂತಿಯ ಅಥವಾ ಹೆಣಿಗೆಯ ಒಳ ಉಡುಪನ್ನೂ ಮಾರುವವನು ಅಥವಾ ಮಾಡುವವನು. **Hósiery** (ನಾ.) ಕಾಲ್ಚೀಲ, ಮೊ. ಉಡುಪಿನ ಸಾಮಾನು ; —ಗಳ ವ್ಯಾಪಾರ ; —ಗಳ ಕಾರ್ಖಾನೆ.

Hóspice ಹಾಸ್‌ಪಿಸ್ (ನಾ.) ಪ್ರಯಾಣಿಕರ ವಿಶ್ರಾಂತಿ ಗೃಹ (ಮು., ಮತ ಸಂಸ್ಥೆಯವರು ಇಟ್ಟಿರುವದು) ; ಸತ್ರ ; ಅನಾಥಾಲಯ ; ರೋಗಿಗಳ ಪೋಷಣಾಲಯ.

Hóspitable ಹಾಸ್ಪಿಟಬ್‌ಲ್ (ಗು.) ಆಗಂತುಕರಿಗೆ, ಅತಿಥಿಗಳಿಗೆ, ಸ್ವಾಗತ ಕೊಟ್ಟು ಅವರನ್ನು ಸತ್ಕರಿಸುವ (ಸ್ವಭಾವದ) ; ಬಂದವರನ್ನು ಆದರಿಸುವ ; ಆಶ್ರಯ ಕೊಡುವ ; ಉದಾರ. **Hóspitably** (ಕ್ರಿ. ವಿ.) ; **Hóspital** (ನಾ.) ರೋಗಿಗಳನ್ನೂ ಗಾಯಗೊಂಡವರನ್ನೂ ಉಪಚರಿಸುವ ಸಂಸ್ಥೆ, ಮಂದಿರ ; ವೈದ್ಯ ಶಾಲೆ ; ಆಸ್ಪತ್ರೆ ; ಧರ್ಮ ಸಂಸ್ಥೆ [(ಅಂಕಿತ ನಾಮಗಳಲ್ಲಿ) Christ's H. ಹಿಂದೆ ಲಂಡನ್ ಪಟ್ಟಣದಲ್ಲಿದ್ದ ಒಂದು ಸಾರ್ವಜನಿಕ ಪಾಠಶಾಲೆ]. (ಚರಿತ್ರೆ) =Hospice. H. fever ಕಿಕ್ಕಿರಿದ ಆಸ್ಪತ್ರೆಗಳಲ್ಲಿ (ರೋಗಿಗಳ ದೇಹದಿಂದ ಹೊರಟ ವಿಷ ವಾಯುವಿನಿಂದ) ಬರುವ ವಿಷಮ(ಶೀತ) ಜ್ವರ ; ಆಸ್ಪತ್ರೆ ಜ್ವರ. H. Saturday, Sunday ಸ್ಥಳೀಯ ಆಸ್ಪತ್ರೆಗಳಿಗಾಗಿ ವರ್ಷಕ್ಕೊಂದು ಬಾರಿ ಧರ್ಮದ ಹಣವನ್ನು (ಬೀದಿಗಳಲ್ಲಿ) ವಸೂಲ್ಮಾಡುವ ಶನಿವಾರ, (ಚರ್ಚುಗಳಲ್ಲಿ ವಸೂಲ್ಮಾಡುವ) ಭಾನುವಾರ. **Hóspitalism** (ನಾ.) ಆಸ್ಪತ್ರೆಯ ಆಚರಣೆ(ಯಲ್ಲಿಯ ಆರೋಗ್ಯದ ಕುಂದು ಕೊರತೆಗಳು). **Hospitálity** ಹಾಸ್ಪಿಟ್ಯಾಲಿಟಿ (ನಾ.) ಅತಿಥಿಗಳನ್ನು, ಅಭ್ಯಾಗತರನ್ನು, ಆದರದಿಂದ ಸ್ವಾಗತಿಸಿ ಉಪಚರಿಸುವುದು ; ಅತಿಥಿ ಸತ್ಕಾರ ; ಆತಿಥ್ಯ. (Afford me the h. of your columns ನಿಮ್ಮ ಪತ್ರಿಕೆಯಲ್ಲಿ ದಯವಿಟ್ಟು ನನ್ನ ಲೇಖನಕ್ಕೆ ಅವಕಾಶ ಕೊಡಿ). **Hóspital(l)er** ಹಾಸ್ಪಿಟಲರ್ (ನಾ.) (ಆಸ್ಪತ್ರೆಗಳಲ್ಲಿ ರೋಗಿಗಳನ್ನೂ ಅಶಕ್ತರನ್ನೂ ಉಪಚರಿಸುವ) ಧಾರ್ಮಿಕ ಸಂಸ್ಥೆಯ ಸದಸ್ಯ. (ಕೆಲವು ಲಂಡನ್ ಆಸ್ಪತ್ರೆಗಳಲ್ಲಿ) ಪಾದ್ರಿ, ಪುರೋಹಿತ. Knights Hospital(l)ers ಕ್ರಿ. ಶ. ೧೦೪೮ರಲ್ಲಿ ಸ್ಥಾಪಿತವಾದ ಯೋಧ ಸಂನ್ಯಾಸಿಗಳ ಒಂದು ಸಂಸ್ಥೆ.

Hóspital, &c. **Hospitable** ನೋಡಿ.

Host[1] ಹೋಸ್ಟ್ (ನಾ.) ಹೆಚ್ಚು ಸಂಖ್ಯೆ ; ದೊಡ್ಡ ಗುಂಪು, ಪಡೆ ; ನೆರವಿ ; ಸಮೂಹ (Person is a h. in himself ಒಂದು ಗುಂಪಿನ ಕೆಲಸವನ್ನು ತಾನೊಬ್ಬನೇ ಮಾಡಬಲ್ಲನು). (ಪ್ರಾಚೀ. ಪ್ರ.) ಸೈನ್ಯ ; ದಂಡು. (ಬೈಬಲ್) Lord, God, of Hosts ದೇವ ಸೇನಾಪತಿ. Host(s) of Heaven ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ; ದೇವ ದೂತರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Host[2] ಹೋಸ್ಟ್ (ನಾ.) (ಒಬ್ಬನಿಗೆ ಅಥವಾ ಅನೇಕರಿಗೆ) ಮನೆಯಲ್ಲಿ ಎಡೆ ಕೊಟ್ಟು ಸತ್ಕಾರ ಮಾಡುವವನು; ಆತಿಥ್ಯ ಮಾಡುವವನು; ಆತಿಥ್ಯಕಾರ; ಆತಿಥೇಯ. ಪ್ರಯಾಣಿಕರಿಗೆ ತಿಂಡಿ ವಸತಿಗಳನ್ನು ಬೆಲೆಗೆ ಒದಗಿಸುವ ಸತ್ರದ ಯಜಮಾನ (Reckon without one's h. ಮುಖ್ಯಾಂಶಗಳನ್ನೂ ಕಷ್ಟಾಂಶಗಳನ್ನೂ ಗಣಿಸದೆ ಲೆಕ್ಕಹಾಕು; ಮುಖ್ಯ ವಿಷಯಗಳ ತಿಳಿವಳಿಕೆಯಿಲ್ಲದಿರು). (ಜೀ. ವಿ.) ಉಪಜೀವಿಗೆ ಆಶ್ರಯವಾದ ಪ್ರಾಣಿ, ಸಸ್ಯ; ಆಶ್ರಯ. **Hóstess** (ನಾ., ಸ್ತ್ರೀ.) ಅತಿಥಿಗಳನ್ನು ಸತ್ಕರಿಸುವ ಮನೆಯ ಯಜಮಾನಿ; ಭೋಜನ ವಸತಿ ಗೃಹದ ಯಜಮಾನಿ.

Host[3] ಹೋಸ್ಟ್ (ನಾ.) ಪ್ರಭುಭೋಜನದಲ್ಲಿ ಸಂಸ್ಕರಿಸಿದ ರೊಟ್ಟಿ.

Hóstage ಹಾಸ್ಟೆಜ್ (ನಾ.) ಒಲಾದವನು; ಒತ್ತೆಯಾದವನು; ಓಲು; ಒತ್ತೆ; ಒತ್ತೆಯಾಳು; ಹೊಣೆ; ಜಾಮೀನು. H. to fortune ಅದೃಷ್ಟಕ್ಕೆ ಈಡಾದದ್ದು; ವಿಧಿಯ ಕೈಗೆ ಒಪ್ಪಿಸಿದ್ದು. **Hóstageship** (ನಾ.)

Hóstel ಹಾಸ್ಟೆಲ್ (ನಾ.) (ಪ್ರಾಚೀ. ಪ್ರ.) ವಿದ್ಯಾರ್ಥಿಗಳಿಗೆ ಅಥವಾ ಇತರ ವಿಶೇಷ ಪಂಗಡದವರಿಗೆ ಊಟ ವಸತಿಗಳನ್ನು ಕೊಡುವ ಮನೆ; ವಿದ್ಯಾರ್ಥಿ ನಿಲಯ. **Hóstelry** ಹಾಸ್ಟೆಲ್ರಿ (ನಾ.) (ಪ್ರಾಚೀ. ಪ್ರ.) ಊಟ ವಸತಿ ಮನೆ.

Hóstile ಹಾಸ್ಟೈಲ್ (ಗು.) ಹಗೆಯ; ಶತ್ರುವಿನ; ಶತ್ರುತ್ವದ; ಪ್ರತಿಪಕ್ಷದ; ವಿರುದ್ಧ; ಆಗದ. **Hóstilely** (ಕ್ರಿ. ವಿ.); **Hostílity** ಹಾಸ್ಟಿಲಟಿ (ನಾ.) ಹಗೆತನ; ಶತ್ರುತ್ವ; ವೈರ; ದ್ವೇಷ. ಯುದ್ಧಸ್ಥಿತಿ. (ಬ. ವ. ದಲ್ಲಿ) ಯುದ್ಧ ಕಾರ್ಯಾಚರಣೆಗಳು; ಯುದ್ಧ. (ಆಲೋಚನೆ, ಮೊ. ಗಳಲ್ಲಿ) ವಿರೋಧ, ಪ್ರತಿಕೂಲ.

Hóstler ಹಾ(ಆ)ಸ್ಲರ್ (ನಾ.) = Ostler.

Hot ಹಾಟ್ (ಗು., ಕ್ರಿ. ವಿ.) ಹೆಚ್ಚು ಕಾವಿನ; ಬಹಳ ಬಿಸಿಯಾದ; ಕಾಯ್ಪಿನ; ಸುಡುವ; ಶಾಖ ಕೊಡುವ; ಶಾಖ ತೋರುವ (H. fever ಕಾಯುವ ಜ್ವರ; ಸುಡುಜ್ವರ. H. blush ಕಾಯ್ಪಿನ ಮುಖ ಕೆಂಪು). ಕಾಮುಕನಾದ; ಬೆದೆ ಹತ್ತಿದ. (ಮೆಣಸು, ಮೊ.) ಕಾರವಾದ; ಚುರುಕಾದ. ಉಜ್ವಲ; ಉದ್ರಿಕ್ತ; ಕೆರಳಿದ; ಕೋಪದ; ಉದ್ರೇಕಗೊಂಡ, — ಗೊಳಿಸುವ; ಕೆರಳಿಸುವ. (ಬೇಟೆಯಲ್ಲಿ ವಾಸನೆ) ತೀವ್ರವಾದ; ತೀಕ್ಷ್ಣವಾದ; ಕಟುವಾದ. (ರೂಪ.) (ಸುದ್ದಿ, ಮೊ.) ಹೊಸತಾದ; ಈಚಿನ; ಬಿಸಿ ಬಿಸಿ. (ಬಳ. ಮಾ.) (ಖಜಾನೆಯ ಹುಂಡಿಗಳ ವಿಷಯದಲ್ಲಿ) ಹೊಸದಾಗಿ ಹೊರಡಿಸಿದ; ಬಿಸಿ ಬಿಸಿ. (ಕೆಲವು ಚೆಂಡಾಟಗಳಲ್ಲಿ, ಹೊಡೆತ, ಎಸೆತ, ಮೊ.) ಪ್ರತಿಕಕ್ಷಿ ತಡೆಯಲು ಕಷ್ಟವಾದ, ಬಹಳ ಜೋರಿನ. (ಪಂದ್ಯದ ಅಥವಾ ವ್ಯಾಯಾಮದ ಆಟಗಳ ಸ್ಪರ್ಧಿಯ ವಿಷಯದಲ್ಲಿ) ಗೆಲ್ಲುವನೆಂದು ಬಲವಾಗಿ ಊಹಿಸಿದ (A h. favourite ಎಂಬಲ್ಲಿ). (ನೃತ್ಯದ ಸಂಗೀತ) ಅತಿ ವೈಖರಿಯ; ಬಹು ಆಡಂಬರದ (H. jazz, H. rhythm). [Blow h. & cold (Blow[1] ನೋಡಿ). H. & h. ಆದಕೂಡಲೇ ಬಡಿಸಿದ; ಬಿಸಿ ಬಿಸಿಯಾದ. H. & strong ಉದ್ರೇಕದಿಂದ; ಆವೇಶ ಪೂರ್ವಕ(ವಾಗಿ). Give it him h. ಅವನಿಗೆ ಬಿಸಿತೋರಿಸು. ಅವನನ್ನು ಬಲವಾಗಿ ವಾಗ್ದಂಡನೆ ಮಾಡು, ಶಿಕ್ಷಿಸು. Make the place too h. for him (ಕಿರುಕುಳದಿಂದ) ಆ ಸ್ಥಳ ಅವನಿಗೆ ಸಹಿಸಲಾಗದಂತೆ ಮಾಡು]. (ಕ್ರಿ. ವಿ.) ಬಿಸಿ ಬಿಸಿಯಾಗಿ; ಚುರುಕಾಗಿ; ಉತ್ಸುಕತೆಯಿಂದ; ಸಿಟ್ಟಿನಿಂದ. **H. air** (ಅಸಂ.) ಉದ್ರೇಕದ ಅಥವಾ ಜಂಬದ ಮಾತು. **Hotbed** ಕೊಳೆಯುತ್ತಿರುವ ಗೊಬ್ಬರದಿಂದ ಶಾಖವೇರಿದ ಪಾತಿ. (ರೂಪ.) ರೋಗ, ದುರಾಚಾರ, ದುರ್ನೀತಿ, ಮೊ. ವು ಬೆಳೆಯಲು ಹದವಾದ ಸ್ಥಳ. **H. blast** (ಕುಲುಮೆಯೊಳಕ್ಕೆ ನುಗ್ಗಿಸುವ) ಬಿಸಿ ಗಾಳಿ. **H.-blooded** ಬಿಸಿ ರಕ್ತದ; ಕಾಯ್ಪಿನ; ಉದ್ರೇಕ ಸ್ವಭಾವದ. **H.-brained, -headed** ಬೇಗ ಕೆರಳುವ; ಉದ್ರೇಕಗೊಳ್ಳುವ. **H. cockles** (ಚರಿತ್ರ) ಕಣ್ಣು ಕಟ್ಟಿಕೊಂಡಿರುವ ಆಟಗಾರನು ತನ್ನನ್ನು ತಟ್ಟಿದವರಾರೆಂದು ಊಹಿಸಿ ಹೇಳುವ ಒಂದು ಹಳ್ಳಿಯಾಟ. **H. foot** ಬಹು ಆತುರವಾಗಿ; ತರಾತುರಿಯಾಗಿ. **Hothead** ಬಹಳ ದುಡುಕಿನವನು; ಉದ್ರೇಕ ಸ್ವಭಾವದವನು. **Hothouse** ಅಕಾಲದಲ್ಲಿ, ಶೀತಕಾಲದಲ್ಲಿ, ಶೀತ ಪ್ರದೇಶಗಳಲ್ಲಿ, ಸಸ್ಯಗಳನ್ನು ಬೆಳೆಸುವುದಕ್ಕೆ ಕೃತಕ ಶಾಖವನ್ನು ಕೊಡುವುದಕ್ಕಾಗಿ ಮಾಡಿರುವ ಗಾಜಿನ ಚಾವಣಿಯೂ ಪಕ್ಕಗಳೂ ಉಳ್ಳ ಮನೆ; ಕೃತಕ ಶಾಖದ ಮನೆ; ಕಾವು ಮನೆ. **H.-press** (ನಾ.) (ಕಾಗದವನ್ನು ಅಥವಾ ಬಟ್ಟೆಯನ್ನು ಸುಕ್ಕಿಲ್ಲದಂತೆ ನಯಮಾಡಲು ಉಪಯೋಗಿಸುವ ನುಣುಪು ರಟ್ಟುಗಳೂ ಬಿಸಿ ಲೋಹದ ತಗಡುಗಳೂ ಉಳ್ಳ) ಬಿಸಿ ಒತ್ತು ಯಂತ್ರ. (ಕ್ರಿ.) (ಕಾಗದ, ಮೊ. ನ್ನು) ಈ ಯಂತ್ರದಲ್ಲಿ ಒತ್ತು. **H.-short** (ಕಬ್ಬಿಣ) ಕಾದಿರುವಾಗ ಭಿದುರತೆಯುಳ್ಳ. **Hotspur** ದುಡುಕಿನವನು; ಅವಿಚಾರಿ (Sir H. Percy ಎಂಬಾತನ ಅಡ್ಡ ಹೆಸರಿನಿಂದ). **H. stuff** (ಅಸಂ.) ಬಹಳ ಜೋರಿನವನು; ಉದ್ರೇಕ ಸ್ವಭಾವದವನು. ಸಾಹಸಿ; ಬಹಳ ಚತುರ; ದೃಢ ಸಂಕಲ್ಪವುಳ್ಳವನು. **H. water** (ರೂಪ.) ತೊಂದರೆ; ಇಕ್ಕಟ್ಟು; ಅಪಮಾನ; ಅಪಾಯ ಸ್ಥಿತಿ; ಸಂಕಟ. **H. well** (ಸ್ವಾಭಾವಿಕವಾದ) ಬಿಸಿ ನೀರಿನ ಊಟೆ. ಆವಿಯ ಎಂಜಿನಿನಲ್ಲಿ ಆವಿಯನ್ನು ಸಾಂದ್ರೀಕರಿಸುವ ಕೋಣೆಯಿಂದ ಹರಿದುಬರುವ ಬಿಸಿ ನೀರನ್ನು ಹಿಡಿಯುವ ತೊಟ್ಟಿ. **Hótly** (ಕ್ರಿ. ವಿ.); **Hótness** (ನಾ.)

Hot (ಕ್ರಿ. ಸಕ.) (ಗ್ರಾಮ್ಯ) ಕಾಯಿಸು; ಬಿಸಿ ಮಾಡು (*Up* ಉಪ. ದೊಡನೆ)

Hótchkiss ಹಾಚ್‌ಕಿಸ್ (ನಾ.) ಒಂದು ಬಗೆಯ ಯಂತ್ರಫಿರಂಗಿ. (ಕಂಡುಹಿಡಿದವನ ಹೆಸರಿನಿಂದ)

Hótchpotch ಹಾಚ್‌ಪಾಚ್, **-pot** — ಪಾಟ್(ನಾ.) (ಹಲವು ಪದಾರ್ಥಗಳನ್ನು ಸೇರಿಸಿ ಮಾಡಿದ) ಕೂಟು (ಮು., ತರಕಾರಿಯೂ ಮಾಂಸವೂ ಸೇರಿದ್ದು); ಕಲಸು ಮೇಲೋಗರ. (ನ್ಯಾ. ಶಾ.) (ಮು., ಅಂತಿಮ ಇಷ್ಟಪತ್ರ ಬರೆಯದೆ ಸತ್ತವನ ಆಸ್ತಿಯ ವಿಷಯದಲ್ಲಿ) ಸಮವಾಗಿ ಹಂಚುವುದಕ್ಕೆ ಅನುಕೂಲಿಸುವಂತೆ ಆಸ್ತಿಗಳನ್ನು ಒಟ್ಟಿಗೆ ಸೇರಿಸುವುದು; ಆಸ್ತಿ ಸಂಮಿಲನ. ಮಿಶ್ರಣ; ಕಲ ಬೆರಕೆ.

Hotél ಹೋ(ಓ)ಟೆಲ್ (ನಾ.) ಪ್ರಯಾಣಿಕರು, ಮೊ. ರಿಗೆ ಊಟ ವಸತಿಗಳನ್ನು ಹಣಕ್ಕೆ ಒದಗಿಸುವ ಗೃಹ; ಭೋಜನ ಗೃಹ; ಹೋಟೆಲು.

Hóttentot ಹಾಟ್'ನ್‌ಟಾಟ್ (ನಾ.) ಹಿಂದೆ 'ಗುಡ್ ಹೋಪ್' ಭೂಶಿರದ ಸಮೀಪ ಪ್ರಾಂತದಲ್ಲಿದ್ದ, ದ. ಆಫ್ರಿಕದ ಬುಡಕಟ್ಟಿಗೆ ಸೇರಿದವನು: 'ಹಾಟಂಟಾಟ್'. (ರೂಪ.) ಕೀಳ್ತರದ ಬುದ್ಧಿಶಕ್ತಿ ಅಥವಾ ಸಂಸ್ಕೃತಿ ಉಳ್ಳವನು; ಮಂದ ಬುದ್ಧಿ; ಅಸಂಸ್ಕೃತ.

Hough ಹಾಕ್ (ನಾ., ಕ್ರಿ. ಸಕ.) = Hock[1]. (ಕ್ರಿ.) = Hamstring. **Hoúgher** (ನಾ.)

Hound ಹೌಂಡ್ (ನಾ., ಕ್ರಿ. ಸಕ.) (ಮು., ವಾಸನೆ ಹಿಡಿದು ಬೇಟೆಯಾಡುವ) ಬೇಟೆನಾಯಿ [The hounds (ನರಿ ಬೇಟೆಯ) ಬೇಟೆನಾಯಿಗಳ ತಂಡ]. ತುಚ್ಛ, ಅಲ್ಪ, — ಮನುಷ್ಯ; ಕೀಳ. Hair & hounds ಎಂಬ ಆಟದಲ್ಲಿ ಸುಳಿವು ಹಿಡಿದು ಹೋಗುವವನು. (ಕ್ರಿ.) ಬೇಟೆನಾಯಿಯಿಂದ (ಹೇಗೊ ಹಾಗೆ) ಬೇಟೆಯಾಡು; (ಬೇಟೆನಾಯಿಯನ್ನು ಬೇಟೆ, ಮೊ. ಗಳ ಮೇಲೆ) ಛೂ ಬಿಡು. (ರೂಪ.) (ಒಬ್ಬನ) ಮೇಲೆ ಬೀಳುವಂತೆ ಅಥವಾ ಒಬ್ಬನನ್ನು, ಒಂದನ್ನು, ಅಟ್ಟಿಕೊಂಡು ಹೋಗುವಂತೆ, ಚೋದಿಸು, ಕೆರಳಿಸು (*On* ಉಪ. ದೊಡನೆ). **Hoúndish** (ಗು.)

Hour ಅವರ್, ಔರ್ (ನಾ.) ದಿವಸದ ೨೪ನೆಯ ಒಂದು ಭಾಗ: ೬೦ ನಿಮಿಷಗಳ ಕಾಲ; ಗಂಟೆ; ತಾಸು. ಸ್ವಲ್ಪ ಹೊತ್ತು (The h. ಗಡಿಯಾರ ತೋರಿಸುವ ಗಂಟೆ, ಹೊತ್ತು). (ಬ. ವ. ದಲ್ಲಿ) ದಿನಚರಿಯ ಕೆಲಸ, ಮೊ. ಗಳಿಗೆ ಗೊತ್ತು ಮಾಡಿದ ಕಾಲ: ಕೆಲಸದ ಕಾಲ [Office hours are 11 to 5 ಕಚೇರಿಯ ಕೆಲಸದ ಕಾಲ ೧೧ರಿಂದ ೫ ಗಂಟೆಯ ವರೆಗೆ. At the eleventh h. ಕೊನೆ ಗಳಿಗೆಯಲ್ಲಿ. Small hours

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಧ್ಯರಾತ್ರಿ ಕಳೆದಮೇಲಿನ ಹತ್ತಿರದ ಗಂಟೆಗಳು. Good or early hours (ರಾತ್ರಿ ಮಲಗಿಕೊಳ್ಳುವ, ಬೆಳಗ್ಗೆ ಏಳುವ) ಸರಿಯಾದ, ಮುಂಚಿನ, ಕಾಲ: ಹೊತ್ತಿಗೆ ಮುಂಚೆ. Bad or late hours ಅಕಾಲ ಅಥವಾ ಮೀರಿದ ಹೊತ್ತು. Regular hours ನಿಯತವಾದ ಹೊತ್ತು. The question of the h. ಸದ್ಯದ ಪ್ರಶ್ನೆ; ಈಗಿನ ವಿಷಯ. In a good, evil, h. ಒಳ್ಳೆಯ, ಕೆಟ್ಟ, ಹೊತ್ತಿನಲ್ಲಿ; ಸುದೈವದಿಂದ, ದುರ್ದೈವದಿಂದ]. (ಬ. ವ. ದಲ್ಲಿ) ದಿವಸದಲ್ಲಿ (ಕ್ರೈಸ್ತ) ಪ್ರಾರ್ಥನೆಗಾಗಿ ಗೊತ್ತುಮಾಡಿರುವ ಏಳು ಹೊತ್ತುಗಳು; ಈ ಹೊತ್ತುಗಳಲ್ಲಿ ಮಾಡ ಬೇಕಾದ ಪ್ರಾರ್ಥನೆ. (ಖ. ವಿ.) ರೇಖಾಂಶ ೧೫°. **H.-circle** (ಸಾ., ಭೂಗೋಳದಮೇಲೆ ಗುರುತಿಸಿರುವ) ಹೋರಾವೃತ್ತ; ರೇಖಾಂಶ ವೃತ್ತ (ಇಂಥವು ೨೪ನ್ನು ಗುರುತಿಸಿರುತ್ತಾರೆ). **H.-glass** (ಸರಿಯಾಗಿ ಒಂದು ಗಂಟೆಯ ಕಾಲದಲ್ಲಿ ಮರಳೆಲ್ಲ ಹರಿದುಹೋಗುವಂತೆ ರಚಿಸಿದ) ಮರಳು ಗಡಿಯಾರ. **H.-hand** (ಗಡಿಯಾರದಲ್ಲಿ ಗಂಟೆ ತೋರಿಸುವ) ಗಂಟೆಯ ಮುಳ್ಳು. **Hóurly** (ಗು., ಕ್ರಿ. ವಿ.) ಪ್ರತಿ ಗಂಟೆಯ(ಲ್ಲೂ ನಡೆಯುವ, ಮಾಡುವ, ಗಣಿಸುವ); ಸಂತತವಾಗಿ (ನಡೆಯುವ); ಪದೇ ಪದೇ (ನಡೆಯುವ)

Hoúri ಹೂ(ಹೌ)ರಿ (ನಾ.) ಮಹಮ್ಮದೀಯ ಸ್ವರ್ಗದ ಅಪ್ಸರೆ; (ಮೋಹಾವೇಶವುಂಟುಮಾಡುವ) ಪರಮ ಸುಂದರಿ.

House ಹೌಸ್ [ನಾ.; ಬ. ವ. -s (ಉಚ್ಚಾರಣೆ) ಹೌಸೆ(ಸಿ)ಸ್] (ವಾಸದ) ಮನೆ; ಗೃಹ [ಸಾ., ವಿಶೇಷಣ ಪೂರ್ವ ಪದದೊಡನೆ; ಉದಾ., Almsh., Bakeh., Lighth., Summerh. (ಆಯಾ ಪದಗಳನ್ನು ನೋಡಿ). H. of God (ಕ್ರೈಸ್ತ) ದೇವಾಲಯ; ಪೂಜಾ ಮಂದಿರ; ಗುಡಿ]. ತಿಂಡಿ ತೀರ್ಥದ ಅಂಗಡಿ. [Bow down in the h. of Rimmon ಒಮ್ಮತದ ಅಥವಾ ಸಂಪ್ರದಾಯದ ಅನು ವರ್ತನೆಗಾಗಿ ತನ್ನ ನೀತಿಯನ್ನು ಬಲಿಗೊಡು. Ale, Coffee, Eating, -h.; Public h. (ಆಯಾ ಪದಗಳನ್ನು ನೋಡಿ)]. ಪ್ರಾಣಿಗಳನ್ನು, ಸಾಮಾನನ್ನು, ಇಡುವ ಕಟ್ಟಡ (Hen-h., Storeh., Wareh.). ಧಾರ್ಮಿಕ ಸಂಸ್ಥೆ; ಸಂನ್ಯಾಸಿ ಮಠ. [(ಆಕ್ಸ್‌ಫರ್ಡ್ ವಿ. ವಿ. ನಿ.) The H. = Christ Church (College)]. ಹಣಕ್ಕೆ ಊಟ ಹಾಕುವ ಮನೆ; ಇಂಥ ಮನೆಯಲ್ಲಿ ಊಟಮಾಡಿಕೊಂಡಿರುವ ವಿದ್ಯಾರ್ಥಿಗಳು, ಹುಡುಗರು. ಸಭೆ; ಸಭೆ ಸೇರುವ ಕಟ್ಟಡ; ಸಭಾ ಮಂದಿರ [H. of Commons, Lords. Houses of Parliament (ಆಯಾ ಪದ ಗಳನ್ನು ನೋಡಿ)]. (ಸಭೆಗೆ ಅವಶ್ಯವಾದ) ನಿಯತ ಸಂಖ್ಯೆ [Make a H. ಸಭೆಯಲ್ಲಿ ನಿಯತ ಸಂಖ್ಯೆಯ (House of Commons ಸಭೆಯಲ್ಲಿ ೪೦ ಮಂದಿ) ಸದಸ್ಯರು ಹಾಜರಿರುವಂತೆ ಏರ್ಪಡಿಸು. The H. (ಬಳ. ಮಾ.) ಪತ್ರ ವ್ಯಾಪಾರದ ಕಟ್ಟೆ; ಮಾರುವ ಕಟ್ಟೆ. (ನಯ ನುಡಿ) ನಿರ್ಗತಿಕ ರಿಂದ ಕೆಲಸಮಾಡಿಸಿ ಅವರಿಗೆ ಊಟಹಾಕುವ ಮನೆ. ಇಂಗ್ಲೆಂಡಿನ ಪ್ರಜಾ ಪ್ರತಿನಿಧಿ ಸಭೆ ಅಥವಾ ಶ್ರೀಮಂತ ಸಭೆ (House of Commons or House of Lords). Clearing, Custom, -h. (ಆಯಾ ಪದಗಳನ್ನು ನೋಡಿ). Counting-House (Count[1] ನೋಡಿ)]. ನಾಟಕ ಶಾಲೆ(ಯ ಪ್ರೇಕ್ಷಕರು, ಶ್ರೋತೃಗಳು) (Full h. ತುಂಬಿದ ನಾಟಕ ಶಾಲೆ). ಕುಟುಂಬ; ಸಂಸಾರ; ಮನೆತನ; ರಾಜ ಸಂತತಿ (H. of Windsor ವಿಂಡ್ಸರ್ ಮನೆತನ: ಈಗಿನ ಬ್ರಿಟಿಷ್ ರಾಜ ಮನೆತನ). ವ್ಯಾಪಾರ ಸಂಸ್ಥೆ. (ಜ್ಯೋ. ವಿ.) ಖಗೋಳದ ಹನ್ನೆರಡನೆಯ ಒಂದು ಭಾಗ; ರಾಶಿ. (ಕಾಗದದ ಮತ್ತು ಸೀಸದ ಕಡ್ಡಿಯ ಹೊರತು ಇತರ ಯಾವ ಉಪಕರಣವೂ ಇಲ್ಲದೆ ಬಹು ಮಂದಿ ಕೂಡಿ ಆಡಬಹುದಾದ) ಒಂದು ಅದೃಷ್ಟದ ಆಟ. (ಪ್ರಾಣಿಗಳ ವಿಷಯದಲ್ಲಿ, ವಿಶೇಷಣವಾಗಿ) ಮನೆಯ(ಲ್ಲಿ ಸಾಕಿದ), ಮನೆಗೆ ಪದೇ ಪದೇ ಬರುವ, ಮನೆಯಲ್ಲಿ ಸೇರಿ ಪೀಡಿಸುವ (H.-cat, H.-fly). H. of call ಒಂದು ಕಸುಬಿನ ತಿರುಗು ಕೂಲಿಯವರು ಒಟ್ಟುಗೂಡುವ, ಸಾಮಾನು ಹೊರುವವರು ಕೆಲಸ ಹುಡುಕಿ ಕೊಂಡು ಬರುವ, ಯಾರ ನೆರೆಯನ್ನಾದರೂ ವಿಷಯವನ್ನಾದರೂ ತಿಳಿಯ ಬಹುದಾದ, —ಮನೆ. H. of cards (ಮಕ್ಕಳು ಆಟಕ್ಕಾಗಿ ಕಟ್ಟುವ) ಇಸ್ಪೀಟೆಲೆಗಳ ಮನೆ. (ರೂಪ.) ಬುಡ ಭದ್ರವಿಲ್ಲದ ಹಂಚಿಕೆ, ಏರ್ಪಾಡು, ಮೊ. H. of ill fame ವ್ಯಭಿಚಾರದ ಮನೆ. H. & home (ಅವಧಾರಣಾರ್ಥಕವಾಗಿ) ಮನೆ. H.-to-h. ಮನೆಯಿಂದ ಮನೆಗೆ (ಸಾಗಿಸಿದ, ನಡೆಸಿದ). Bring down the h. (Bring ನೋಡಿ). Keep h. ಸಂಸಾರ ಮಾಡು; ಗೃಹಕೃತ್ಯ ನಡಸು. Keep open h. ಬಂದವರಿಗೆಲ್ಲ ಇಲ್ಲವೆನ್ನದೆ ಸತ್ಕಾರಮಾಡು. Keep the h. ಮನೆ ಯಲ್ಲೇ ಇರು; ಹೊರಗೆ ಹೋಗದಿರು. Like a h. on fire ಬಹಳ ಚುರುಕಾಗಿ; ಅತಿ ವೇಗವಾಗಿ. **H.-agent** (ಮನೆಗಳನ್ನು ಬೆಲೆಗಾಗಲಿ, ಬಾಡಿಗೆಗಾಗಲಿ, ಕೊಡಿಸುವ) ಮನೆ ದಳ್ಳಾಳಿ. **H.-boat** ವಾಸಕ್ಕೆ ಅನುಕೂಲವಾಗುವಂತೆ ಅಳವಡಿಸಿರುವ ದೋಣಿ: ಮನೆ ದೋಣಿ. **Housebreaker** ದುಷ್ಕೃತ್ಯಕ್ಕಾಗಿ ಹಗಲು ಇನ್ನೊಬ್ಬರ ಮನೆ ಯನ್ನು ಬೀಗ ಮುರಿದು ನುಗ್ಗುವವನು; ಹಗಲುಗಳ್ಳ. ಹಳೆಯ ಮನೆ ಗಳನ್ನು ಕೆಡವಲು ನೇಮಕನಾದವನು; ಮನೆಯೊಡಕ. **H. dinner** (ವಿಹಾರ ಸಂಘಗಳಲ್ಲಿ) ಸದಸ್ಯರಿಗಾಗಿಯೂ ಅತಿಥಿಗಳಿ ಗಾಗಿಯೂ ವಿಶೇಷ ರೀತಿಯಲ್ಲಿ ಏರ್ಪಡಿಸಿದ ಭೋಜನ ಸಮಾರಂಭ; (ವಿಹಾರ) ಸಂಘ ಭೋಜನ. **H.-dog** ಮನೆ ಕಾಯುವ ನಾಯಿ. **H.-flag** (ವರ್ತಕ ಸಂಸ್ಥೆ ತನ್ನ ಹಡಗಿನಮೇಲೆ ಹಾರಿಸುವ) ಸಂಸ್ಥೆಯ ಬಾವುಟ. **H.-flannel** (ಮನೆಯ) ನೆಲ, ಮೊ. ನ್ನು ಉಜ್ಜಿ ಚೊಕ್ಕಟಮಾಡಲು ಉಪಯೋಗಿಸುವ ಒರಟು ಫ್ಲಾನಲ್ ಬಟ್ಟೆ. **Housekeeper** ಗೃಹಕೃತ್ಯ ನಡಸುವವಳು; ಮನೆ, ಕಚೇರಿ, ಮೊ. ಗಳ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುವವನು(ಳು), ಆಡಳಿತ ಗಾರ(ಳು). **Housekeeping** ಮನೆವಾರ್ತೆ; ಗೃಹ ಕಾರ್ಯ ನಿರ್ವಹಣ (Good, bad, liberal, &c. h.-k.). **Housemaid** (ಅತಿಥಿಗಳನ್ನು ಉಪಚರಿಸುವ ಮತ್ತು ಮಲಗುವ ಕೋಣೆಗಳನ್ನು ಅಣಿ ಮಾಡುವ) ಮನೆಯ ಹೆಣ್ಣಾಳು; ಮನೆಗೆಲಸದವಳು; ಕೆಲಸಗಿತ್ತಿ. Housemaid's knee (ಮಂಡಿಯೂರಿಯೂರಿ ಬರುವ) ಮಂಡಿಯೂತ. **Housemaster** ಪಾಠಶಾಲೆಯ ಭೋಜನ ಗೃಹದ ಪಾರುಪತ್ಯಗಾರ. **H. party** ಹಳ್ಳಿಮನೆ, ಮೊ. ಗಳಲ್ಲಿ ಸೇರಿರುವ ಅತಿಥಿಗಳ ಗೋಷ್ಠಿ. **H.-place** (ಹೊಲಮನೆ, ಮೊ. ಗಳಲ್ಲಿ) ವಾಸದ ಕೊಠಡಿ. **H.-proud** ಮನೆಯ ಅಚ್ಚುಕಟ್ಟಿಗೂ ಅಂದಕ್ಕೂ ಹೆಚ್ಚು ಗಮನ ಕೊಟ್ಟಿರುವ; ತನ್ನ ಮನೆಯ ವಿಷಯದಲ್ಲೂ ಗೃಹಕೃತ್ಯದ ವಿಷಯದಲ್ಲೂ ಹೆಮ್ಮೆಪಡುವ. **H.-room** ಮನೆಯಲ್ಲಿ ಸ್ಥಳ ವಸತಿ (Would not give it h.-r. ಅದು ದಾನವಾಗಿ ಬಂದರೂ ತೆಗೆದುಕೊಳ್ಳೆನು). **H.-physician, -surgeon** ಆಸ್ಪತ್ರೆಯಲ್ಲೇ ವಾಸವಾಗಿರುವ ವೈದ್ಯ, ಶಸ್ತ್ರವೈದ್ಯ; ಸ್ಥಾನಿಕ—. **H.-top** (Proclaim from the h.-tops ಮಾಳಿಗೆಯಮೇಲೆ ನಿಂತು ಸಾರು). **H.-warming** ಗೃಹ ಪ್ರವೇಶೋತ್ಸವ. **Housework** (ಕಸ ಮುಸುರೆ, ಅಡಿಗೆ, ಮೊ.) ಮನೆಗೆಲಸ. **Hóuseful** (ನಾ.) ಮನೆತುಂಬು. **Hóusehold** ಮನೆಯವರು; ಕುಟುಂಬ; ಮನೆಯ ಸಿಬ್ಬಂದಿ. (ಬ. ವ. ದಲ್ಲಿ) ಎರಡನೆಯ ದರ್ಜೆಯ (ಗೋಧಿ, ಮೊ. ಗಳ) ಹಿಟ್ಟು. [H.-h. troops ದೊರೆಯ ಅಂಗ ರಕ್ಷಕ ದಳಗಳು. H.-h. gods (ರೋ. ಪ್ರಾ.) ಕುಲ ದೇವತೆಗಳು; ಮನೆ ದೇವರುಗಳು; (ರೂಪ.) ಸಂಸಾರದ ಆವಶ್ಯಕತೆಗಳು. H.-h. word (ಎಲ್ಲರೂ ಬಲ್ಲ) ಮನೆಯ ಮಾತು; ರೂಢಿಯ ಸಂಗತಿ, ಹೆಸರು]. **Hóuseholder** (ನಾ.) (ತನ್ನ ಸ್ವಂತ ಮನೆಯ ಹಾಗೆ) ಒಂದು ಮನೆಯಲ್ಲಿ ವಾಸ ಮಾಡುವವನು (ಹಿಂದೆ, ಚುನಾವಣೆಯ ಹಕ್ಕು ಪಡೆ ಯುವುದಕ್ಕಾಗಿ). ಮನೆಯ ಯಜಮಾನ; ಗೃಹಸ್ಥ. **Hóuseless** (ಗು.); **Hóusewife** ಹೌಸ್‌ವೈಫ್, ಹಸ್‌ವಿಫ್, ಹಸಿಫ್ (ನಾ.) ಮನೆಯ ಯಜಮಾನಿ; ಗೃಹಿಣಿ. ಮನೆವಾರ್ತೆ ನಡಸುವವಳು (Good, bad, h.). ಸೂಜಿ ದಾರದ ಸಂಚಿ, ಪೆಟ್ಟಿಗೆ; ಹೊಲಿಗೆ ಪೆಟ್ಟಿಗೆ (ಉಚ್ಚಾರಣೆ, ಹಸಿಫ್). **Hóusewifely** (ಗು.); **Hóusewifery** ಹೌಸ್ ವಿ(ವೈ)ಫ್ರಿ, ಹಸಿಫ್ರಿ (ನಾ.) ಮನೆವಾರ್ತೆ; ಗೃಹ ಕೃತ್ಯ.

House ಹೌಸ್ (ಕ್ರಿ.) ಮನೆಗೆ ಬಂದವನನ್ನು ಸ್ವಾಗತಿಸು, ಬರಮಾಡಿಕೊ. (ಒಬ್ಬನಿಗೆ ಇಳಿಯುವುದಕ್ಕೆ) ಸ್ಥಳ ಮಾಡಿಕೊಡು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನರೆ ಕೊಡು. (ಸಾಮಾನಿಡಲು) ತಕ್ಕ ಸ್ಥಳ ಒದಗಿಸು. (ಬಡಗಿ ಕೆಲಸ) (ಕುಳಿ, ವೆಜ್ಜ, ಮೊ. ಗಳಲ್ಲಿ) ಕೂರಿಸು. (ನಾವೆ) (ಫಿರಂಗಿ, ಮೊ. ನ್ನು) ಸುರಕ್ಷಿತವಾದ ಸ್ಥಳದಲ್ಲಿಡು; (ಮೇಲ್ಕೂವೆಗಳನ್ನು) ತಗ್ಗಿಸು. ಮನೆಯಲ್ಲಿ (ಹೇಗೊ ಹಾಗೆ) ರಕ್ಷಣೆ ಪಡೆ; ವಾಸ ಮಾಡು. (ಜನರಿಗೆ) ಮನೆಗಳನ್ನೊದಗಿಸು. (The Housing problem ಮಂದಿಗೆ ಮನೆಯೊದಗಿಸುವ ಸಮಸ್ಯೆ)

Hoúsing ಹೌಸಿಂಗ್ (ನಾ.) ರಕ್ಷಣೆಗಾಗಿ ಅಥವಾ ಅಲಂಕಾರಕ್ಕಾಗಿ ಕುದುರೆಗೆ ಹೊದಿಸುವ ಬಟ್ಟೆ.

Houýhnhnm ಹ್ವಿಹ್ನ್‌ಮ್, ಹ್ವಿನ್(ನಿ)ಮ್ (ನಾ.) ಮನುಷ್ಯಲಕ್ಷಣಗಳುಳ್ಳ ಕುದುರೆ (Swift ಕವಿಯ Gulliver's Travels ಎಂಬ ಕಥೆಯಲ್ಲಿ ಬರುವ ಹೆಸರು)

Hove ಹೋವ್. Heave ಧಾತುವಿನ ಭೂತ., ಭೂ. ಕೃ.

Hóvel ಹಾ(ಹ)ವ್‌ಲ್ (ನಾ.) ತೆರೆದಿರುವ ಜೋಪಡಿ; ಹೊರ ಮನೆ; ಕುಟೀರ; ಕೀಳು ಗುಡಿಸಿಲು. ಪಿಂಗಾಣಿ ತಯಾರಿಕೆಯ ಕುಲುಮೆಯ ಸುತ್ತಲೂ ಕಟ್ಟಿದ ಶಂಕುಪಿನಾಕಾರದ ಕಟ್ಟಡ.

Hóveller ಹಾ(ಹ)ವ್‌ಲರ್ (ನಾ.) ಸನ್ನದಿಲ್ಲದ, — ದೋಣಿಗಾರ, ಹಡಗು ನಡಸುವವನು (ಮು., ನಾಶ ಹೊಂದಿದ ಹಡಗಿಗೆ ಸಹಾಯಕ್ಕಾಗಿ ಅಥವಾ ಲೂಟಿಗಾಗಿ ಹೋಗುವವನು). ಇಂಥ ದೋಣಿ, ಹಡಗು.

Hóver ಹಾ(ಹ)ವರ್ (ಕ್ರಿ. ಅಕ., ನಾ.) (ಪಕ್ಷಿ, ಮೊ. ವು ಒಂದು ಸ್ಥಳದ ಮೇಲೆ) ಹಾರಾಡು (*Over, about* ಉಪ. ದೊಡನೆ). (ಒಬ್ಬನು, ಒಂದು ಸ್ಥಳದಲ್ಲಿ) ಸುಳಿದಾಡುತ್ತಿರು; ಅಲೆದಾಡುತ್ತಿರು; ಅಡ್ಡಾಡುತ್ತಿರು (*About* ಉಪ. ದೊಡನೆ). (ನಾ.) ಸುಳಿದಾಡುತ್ತಿರುವುದು; ತೂಗಾಡುತ್ತಿರುವುದು; ಅನಿಶ್ಚಿತ ಸ್ಥಿತಿ.

How ಹೌ (ಕ್ರಿ. ವಿ.) ಹೇಗೆ; ಎಂತು; ಎಷ್ಟು. (ಜೋರಿನಿಂದ ಹೇಳುವಲ್ಲಿ) H. the deuce, devil, dickens? H. on earth? ಹೇಗೆತಾನೆ? H. are you? H. do you do? ಹೇಗಿದ್ದೀರಿ? ಕ್ಷೇಮವೇ? (ನಿಮ್ಮ) ದೇಹಸ್ಥಿತಿ ಹೇಗಿದೆ? H.-d'ye-do (ನಾ.) (ಬಳ. ಮಾ.) ಇಕ್ಕಟ್ಟು ಸಂದರ್ಭ. H.'s that (ಕ್ರಿಕೆಟ್) ಅವನ ಆಟ ಹೋಯಿತೊ ಇಲ್ಲವೊ? H. now? ಇದರರ್ಥವೇನು? H. so? ಅದು ಹೇಗೆ? ಹಾಗೆಂದು ತೋರಿಸಬಲ್ಲೆಯಾ? H. is corn? ಧಾನ್ಯ(ದ ಧಾರಣೆ) ಹೇಗಿದೆ? Told us how God was almighty ದೇವರು ಹೇಗೆ ಸರ್ವಶಕ್ತನೆಂಬುದನ್ನು ನಮಗೆ ತಿಳಿಸಿದರು. H. far is it? ಅದು ಎಷ್ಟು ದೂರ(ವಿದೆ)? H. many there are! ಅಲ್ಲಿ ಎಷ್ಟು ಜನ ಇದ್ದಾರೆ! H. would you like it? ನಿನಗೆ ಹೇಗೆನ್ನಿಸೀತು? H. he snores! ಹೇಗೆ ಗೊರಕೆ ಹೊಡೆಯುತ್ತಾನೆ! Do it h. you can ನೀನು ಹೇಗೆ ಬೇಕಾದರೂ ಮಾಡು. And h. (ಅಮೆ. ನಂ. ಅಸಂ.) (ಮು., ವ್ಯಂಗ್ಯಾರ್ಥದಲ್ಲಿ, ಅತಿಶಯಾರ್ಥದಲ್ಲಿ) ಹೆಚ್ಚಾಗಿ; ಇನ್ನೂ ಅಷ್ಟು. Here's h.! ಇಗೋ ನಿನ್ನ ಆರೋಗ್ಯ ಭಾಗ್ಯಕ್ಕೆ! (ಮದ್ಯಪಾನದ ಸಂಕೇತ). **Howbéit** ಹೌಬೀಇಟ್ (ಕ್ರಿ. ವಿ.) (ಪ್ರಾಚೀ. ಪ್ರ.) ಆದಾಗ್ಯೂ; ಹಾಗಾದರೂ. **However** (ಕ್ರಿ. ವಿ.) ಹೇಗಾದರೂ; ಎಷ್ಟಾದರೂ; ಹಾಗಿದ್ದರೂ; (ಪ್ರಾಚೀ. ಪ್ರ.) ಏನೇ ಆದರೂ; ಏನೇ ಆಗಲಿ. H. ever (Ever ನೋಡಿ). **Howsoever** (ಕ್ರಿ. ವಿ.) ಯಾವ ರೀತಿಯಲ್ಲಾದರೂ; ಎಷ್ಟಾದರೂ ಸಹ (ಸರಿಯೆ); ಏನೇ ಆಗಲಿ; ಎಷ್ಟೇ —. How much? (ಅಸಂ.) (ಆಡಿದ ಮಾತನ್ನು ಮತ್ತೆ ಹೇಳಬೇಕೆಂದು ಕೇಳುವಲ್ಲಿ) ಏನು? ಯಾವುದು?

How (ನಾ.) The h. ಹೇಗೆ ಎಂಬುದು; ರೀತಿ.

Hoẃdah ಹೌಡ (ನಾ.) (ಇಬ್ಬರು ಅಥವಾ ಹೆಚ್ಚು ಮಂದಿ ಕುಳಿತುಕೊಳ್ಳುವಂತೆ ಸ್ಥಳವಿದ್ದು, ಸಾ., ಮೇಲ್ಚಪ್ಪರವುಳ್ಳ, ಆನೆಯ ಬೆನ್ನ ಮೇಲಿನ) ಅಂಬಾರಿ; ಹೌದ.

Hoẃitzer ಹೌಇಟ್ಸರ್ (ನಾ.) ಎತ್ತರ ಕೋನದಲ್ಲಿ ಓಲಿಸಿ, ಕಡಮೆ ವೇಗದಲ್ಲಿ ಸಿಡಿಗುಂಡು ಹಾರಿಸಲು ಏರ್ಪಡಿಸಿರುವ ಸಣ್ಣ ಫಿರಂಗಿ; 'ಹೌಇಟ್ಸರ್'.

Howl ಹೌಲ್ (ಕ್ರಿ., ನಾ.) (ಪ್ರಾಣಿಗಳ ವಿಷಯದಲ್ಲಿ: ನಾಯಿ, ತೋಳ, ಮೊ. ಗಳ) ಗೋಳುಕರೆಯ, ಗಟ್ಟಿಯಾದ, —ನಿಡುಕಿರಿಚು; ಚೀರಾಟ. ಅರಚಿಕೊ; ಊಳು; ಕಿರಿಚಿಕೊ. (ಮನುಷ್ಯ) ನೋವಿನಿಂದ, ಅಪಹಾಸ್ಯವಾಗಿ, — ಹುಯ್ಯಲಿಡು, ದೊಡ್ಡೆಯಿಡು; ನೋವಿನ, ಅಪಹಾಸ್ಯದ, — ಹುಯ್ಯಲು. (ಮಾತುಗಳನ್ನು) ಹುಯ್ಯಲಿಡುತ್ತ ಹೇಳು. (ನಿಸ್ತಂತು ವಾರ್ತಾ ಪ್ರಸರಣದಲ್ಲಿ) ಗ್ರಾಹಕವನ್ನು (ಧ್ವನಿ ತರಂಗಗಳಿಗೆ) ಶ್ರುತಿಗೂಡಿಸುತ್ತಿರುವಾಗ ಹೊರಡುವ (ಇತರ ಶ್ರೋತೃಗಳಿಗೂ ತೊಂದರೆ ಮಾಡಬಹುದಾದ) ಗೋಳುಕರೆಯಂಥ ಧ್ವನಿ. **Hoẃler** (ನಾ.) (ಕ್ರಿಯಾರ್ಥಗಳಲ್ಲಿ). ದ. ಅಮೆರಿಕದ ಒಂದು ಜಾತಿಯ ಕೋತಿ. (ಅಸಂ.) ಎದ್ದು ಕಾಣುವ, ಸ್ಪಷ್ಟವಾದ, — ತಪ್ಪು, ಪ್ರಮಾದ, ದೋಷ. Come a h. (ಅಸಂ.) ದುಃಖಕ್ಕೆ, ಕಷ್ಟಕ್ಕೆ, — ಈಡಾಗು. **Hoẃling** (ಗು.) ಕಿರಿಚುವ; ಊಳುವ; ಹುಯ್ಯಲಿಡುವ [H. Derwish (Derwish ನೋಡಿ). H. wilderness (ಬೈಬಲ್) ಹಾಳು ಸುರಿಯುವ ನಿರ್ಜನ ಪ್ರದೇಶ]. (ಅಸಂ.) ವಿಪರೀತವಾದ; ಎದ್ದು ಕಾಣುವ, ಕಣ್ಣಿಗೆ ಹೊಡೆಯುವ (A h. shame ಎದ್ದು ಕಾಣುವ ಅವಮಾನ, ನಾಚಿಕೆಗೇಡುತನ)

Hoẃlet ಹೌಲೆಟ್ (ನಾ.) (ಪ್ರಾಂ. ಪ್ರ.) ಗೂಬೆ.

Hoy[1] ಹಾಯ್ (ನಾ.) (ಮು., ಹತ್ತಿರದ ಪ್ರದೇಶಗಳಿಗೆ ಪ್ರಯಾಣಿಕರನ್ನೂ ಸಾಮಾನನ್ನೂ ಸಾಗಿಸುವ, ಸಾ., ಒಂದೇ ಕೂವೆಯುಳ್ಳ) ಸಣ್ಣ ಹಡಗು.

Hoy[2] ಹಾಯ್ (ಭಾವ. ಅವ್ಯ.) (ಗಮನ ಸೆಳೆಯುವಲ್ಲಿ, ಪ್ರಾಣಿಗಳನ್ನು ಅಟ್ಟುವಲ್ಲಿ, ಕೂಗುವ ಕೂಗು); (ನಾವೆ) (ಕರೆಯುವಲ್ಲಿ, ಗಟ್ಟಿಯಾಗಿ ಕೂಗುವಲ್ಲಿ) ಹಾಯ್!

Hoýden ಹಾಯ್ಡನ್ (ನಾ.) ನಯವಿಲ್ಲದ, ಅಶಿಕ್ಷಿತಳಾದ, ಹುಡುಗಿ; ಮರ್ಯಾದೆಗೆಟ್ಟ ಹುಡುಗಿ; ದಿಟ್ಟೆ; ಬಜಾರಿ. **Hoýdenhood** (ನಾ.); **Hoýdenism** (ನಾ.); **Hoýdenish** (ಗು.)

Hub[1] ಹಬ್ (ನಾ.) (ಅಚ್ಚಿನಮೇಲೆ ಅಥವಾ ಅಚ್ಚಿನೊಡನೆ ಸುತ್ತುವ, ಅದರಿಂದ ಸುತ್ತಲೂ ಅರೆಕಾಲುಗಳು ಹೊರಟಿರುವ) ಗಾಲಿಯ ಮಧ್ಯಭಾಗ: ಗುಂಬ. (ರೂಪ.) ವ್ಯಾಪಾರ, ಉದ್ಯೋಗ, ಮೊ. ಚಟುವಟಿಕೆಗಳ ಕೇಂದ್ರಸ್ಥಾನ (The hub of the universe ಜಗತ್ಕೇಂದ್ರ)

Hub[2] ಹಬ್, **Húbby** ಹಬಿ (ನಾ.) (ಬಳ. ಮಾ.) ಗಂಡ.

Húbble-bubble ಹಬ್‌ಲ್ ಬಬ್‌ಲ್ (ನಾ.) ಒಂದು ತೆರದ ಹುಕ್ಕ, ಗುಡುಗುಡಿ. ಗುಳುಗುಳು ಧ್ವನಿ; ಮಾತಿನ ಗಲಿಬಿಲಿ.

Húbbub ಹಬಬ್ (ನಾ.) ಅನೇಕ ಮಂದಿಯ ಕೂಗಾಟ; ಗೊಂದಲ; ಗಲಿಬಿಲಿ; ಗಲಾಟೆ; ಗಲಭೆ; ಗುಲ್ಲು; ದೊಂಬಿ; ದಾಂಧಲೆ; ಮಾರಾ ಮಾರಿ.

Húbris (Gk) ಹ್ಯೂಬ್ರಿಸ್ (ನಾ.) ಮದ; ದುರಹಂಕಾರ; ನಿರ್ಲಕ್ಷ್ಯತೆ; ಸೊಕ್ಕು. **Hubrístic** (ಗು.)

Húckaback ಹಕಬ್ಯಾಕ್ (ನಾ.) (ಮೈಯೊರಸಿಕೊಳ್ಳುವ, ಒರಟು ಒಡಲಿನ) ದಪ್ಪ ನಾರುಬಟ್ಟೆ.

Húckle ಹಕ್‌ಲ್ (ನಾ.) ಟೊಂಕ; ರೊಂಡಿ. **H.-back(ed)** ಗೂನುಬೆನ್ನು(ನ್ನಿನ). **H.-bone** ರೊಂಡಿ ಮೂಳೆ; ಟೊಂಕದ ಎಲುಬು; (ಚತುಷ್ಪಾದಿಗಳ) ಗೆಣ್ಣು ಮೂಳೆ.

Húckster ಹಕ್‌ಸ್ಟರ್ (ನಾ., ಕ್ರಿ.) (ಚಿಲ್ಲರೆ ಸಾಮಾನುಗಳ) ತಿರುಗು ವ್ಯಾಪಾರಿ. ಕೂಲಿಗಾಗಿ ಏನನ್ನಾದರೂ ಮಾಡಲು ಸಿದ್ಧನಾಗಿರುವವನು. (ಕ್ರಿ.) ಚಿಲ್ಲರೆ ವ್ಯಾಪಾರ ಮಾಡು (ರೂಪ. ಸಹ). ಚೌಕಸಿ ಮಾಡು; ಕೊಸರಾಡು. ಕೀಳ್ತರಕೆ ಮಾಡು. **Húcksterer** (ನಾ.); **Húcksteress** (ನಾ., ಸ್ತ್ರೀ.); **Húckstery** (ನಾ.) ಚಿಲ್ಲರೆ ವ್ಯಾಪಾರ(ದ ಸ್ಥಳ, ಸಾಮಾನು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Húddle ಹಡ್‌ಲ್ (ಕ್ರಿ., ನಾ.) ಅವ್ಯವಸ್ಥೆಯಾಗಿ ರಾಶಿ ಹಾಕು (ಯಾಗು). (ವಸ್ತುಗಳು, ಮೊ. ನ್ನು) ಕ್ರಮವಿಲ್ಲದಂತೆ ಗುಂಪುಗೂಡಿಸು, ಒಟ್ಟು (*Together, up, into, out of* ಮೊ. ಉಪ. ಜೊತೆ). (ಸುತ್ತಿಕೊಂಡು) ಮುದುರಿಕೊ (*Up* ಉಪ. ಜೊತೆ). (ಕೆಲಸ, ಮೊ. ನ್ನು) ಆತುರಾತುರವಾಗಿ, ಒಡ್ಡೊಡ್ಡಾಗಿ, ಅಡ್ಡಾದಿಡ್ಡಿಯಾಗಿ, — ಮಾಡಿ ಮುಗಿಸು (*Over, through, up* ಉಪ. ಜೊತೆ). ಒಟ್ಟಿಗೆ, ಒತ್ತೊತ್ತಾಗಿ, — ಸೇರಿಕೊ, ಕೂಡಿಕೊ ; ಕಿಕ್ಕಿರಿದು, ಇಡಿಕಿರಿದು, — ಗುಂಪಾಗು, ಒಟ್ಟಾಗು (*Together* ಪದಜೊತೆ). (ನಾ.) ಅವ್ಯವಸ್ಥೆಯ, — ರಾಶಿ, ಮುದ್ದೆ, ಗುಂಪು. ಅವ್ಯವಸ್ಥೆ ; ಗೊಂದಲ; ಗಡಿಬಿಡಿ.

Hudibrástic ಹ್ಯೂಡಿಬ್ರ್ಯಾಸ್ಟಿಕ್ (ಗು.) (Butler ಎಂಬ ಇಂಗ್ಲಿಷ್ ಕವಿಯ) Hudibras ಎಂಬ ವೀರ ವಿಡಂಬನ ಕಾವ್ಯದ ಛಂದಸ್ಸಿನಲ್ಲಿ, ರೀತಿಯಲ್ಲಿ, — ರಚಿತವಾದ ; ವೀರ ವಿಡಂಬನ ಶೈಲಿಯ.

Hue[1] ಹ್ಯೂ (ನಾ.) ಬಣ್ಣ ; ವರ್ಣ ; ರಂಗು ; ಛಾಯೆ. **(-)hued** (ಗು.)

Hue[2] ಹ್ಯೂ (ನಾ.) [ಈಗ H. & cry ಎಂಬಲ್ಲಿ ಮಾತ್ರ : (ಬೆನ್ನಟ್ಟಿ ಹೋಗುವಲ್ಲಿ, ಮೇಲೆ ಬೀಳುವಲ್ಲಿ, ಮಾಡುವ) ಅಬ್ಬರ, ಗಲಭೆ, ಗಲಾಟೆ, ಕೂಗಾಟ, ಬೊಬ್ಬೆ, ಕೋಲಾಹಲ]. (ಒಬ್ಬನಿಗೆ ವಿರೋಧವಾಗಿ ಎಬ್ಬಿಸಿದ) ಗುಲ್ಲು ; ಹುಯಿಲ್ಲು (*Against* ಉಪ. ಜೊತೆ). (ತಕ್ಸೀರುದಾರನನ್ನು ಹಿಡಿಯಬೇಕೆಂಬ) ಘೋಷಣೆ. (ಹಿಂದೆ) (ತಪ್ಪಿಸಿಕೊಂಡು ಹೋಗಿರುವ ಅಪರಾಧಿಗಳು, ಮೊ. ರ ವಿವರಗಳನ್ನೊಳಕೊಂಡ) ಪೋಲೀಸಿನವರ ಪ್ರಸಿದ್ಧ ಪತ್ರಿಕೆ.

Huff ಹಫ್ (ಕ್ರಿ., ನಾ.) ಕಾಡು; ಪೀಡಿಸು ; ಗೋಳುಗುಟ್ಟಿಸು; ಮೇಲೆ ಬೀಳು (*Into, out of* ಉಪ. ಜೊತೆ). ರೇಗಿಸು ; ಹೀನೈಸು ; ರೇಗಿ ಬೀಳು ; ಅಪಮಾನ ಮಾಡಿದಂತೆ ಎಣಿಸು. (Draughts ಆಟದಲ್ಲಿ) ಎದುರಾಳಿಯ ಕಾಯನ್ನು ದಂಡವಾಗಿ ತೆಗೆದುಬಿಡು. (ನಾ.) ಮುನಿಸು; ರೇಗಾಟ; ಸಿಟ್ಟು (In a h. ಮುನಿಸಿಕೊಂಡು. Take h. ರೇಗಿಬೀಳು). (Draughts ಆಟ) ಎದುರಾಳಿಯ ಕಾಯನ್ನು ಎತ್ತಿಬಿಡುವುದು. **Húffily** (ಕ್ರಿ. ವಿ.) ; **Húffiness** (ನಾ.) ; **Húffish** (ಗು.) ; **Húffishly** (ಕ್ರಿ. ವಿ.) ; **Húffishness** (ನಾ.) ; **Húffy** (ಗು.)

Hug ಹಗ್ (ಕ್ರಿ. ಸಕ., ನಾ.) (ಸಾ., ಪ್ರೇಮದಿಂದ) ತೋಳುಗಳಿಂದ ಬಿಗಿಯಾಗಿ ಅಪ್ಪಿಕೊ ; ತಬ್ಬಿಕೊ ; ಎದೆಗವಚಿಕೊ. (ಕರಡಿ) (ಮನುಷ್ಯ, ಮೊ. ನ್ನು) ಮುಂಗಾಲುಗಳ ಮಧ್ಯದಲ್ಲಿ ಸಿಕ್ಕಿಸಿಕೊಂಡು ಅದುಮು. (ವಿಚಾರಮಾಡದೆ ಮನಸ್ಸಿಗೆ ಹಿಡಿದ ಅಭಿಪ್ರಾಯ, ಮೊ. ಗಳ ವಿಷಯದಲ್ಲಿ) ನಲಿ ; ಬಿಡದೆ ಹಿಡಿದಿರು ; ಮೆಚ್ಚಿಕೊ. (ಪ್ರಯೋಜನ ಪಡೆಯುವುದಕ್ಕಾಗಿ ಒಬ್ಬನಲ್ಲಿ) ಪ್ರೇಮವನ್ನು ಪ್ರದರ್ಶಿಸು, ಪ್ರೀತಿ ತೋರು. [H. oneself ತನಗೆ ತಾನೇ ನಲಿ; ಧನ್ಯನೆಂದು ಭಾವಿಸು (*On, for* ಉಪ. ಜೊತೆ)]. (ಸಮುದ್ರದ ಕರೆ, ಮೊ. ಕ್ಕೆ) ಸಮೀಪದಲ್ಲೇ (ಹೋಗುತ್ತ) ಇರು. (**H.-me-tight** ಗುತ್ತನಾದ ಒಂದು ಉಣ್ಣೆಯ ಹೊದಿಕೆ ಅಥವಾ ಜುಬ್ಬ). (ನಾ.) ಅಪ್ಪಿಕೆ ; ತೆಕ್ಕೆ ; ಆಲಿಂಗನ. ಕುಸ್ತಿಯಲ್ಲಿ ಒಂದು ಪಟ್ಟು.

Huge ಹ್ಯೂಜ್ (ಗು.) ಬಹು ದೊಡ್ಡ ; ಭಾರಿ ; ಮಹಾ ; ಅತಿ ವಿಸ್ತಾರವಾದ ; ಅಗಾಧವಾದ. **Húgely** (ಕ್ರಿ. ವಿ.) ; **Húgeness** (ನಾ.) ; **Húgeous** ಹ್ಯೂಜಸ್ (ಗು.) (ಸಾ., ಹಾಸ್ಯ ಪ್ರ.) = Huge. **Húgeously** (ಕ್ರಿ. ವಿ.) ; **Húgeousness** (ನಾ.)

Húgger-múgger ಹಗರ್ ಮಗರ್ (ನಾ., ಗು., ಕ್ರಿ. ವಿ., ಕ್ರಿ.) ಗುಟ್ಟು ; ರಹಸ್ಯ ; ಗುಟ್ಟಿನ ; ಗುಟ್ಟಾಗಿ. ಅವ್ಯವಸ್ಥೆ(ಯ, ಯಾಗಿ) ; ಗಲಬಿಲಿ ; ಗೊಂದಲ. ಬಚ್ಚಿಡು ; ಮುಚ್ಚಿಡು ; ಗುಟ್ಟಾಗಿಡು (*Up* ಉಪ. ಜೊತೆ); ಗುಟ್ಟಾಗಿ, ರಹಸ್ಯದಲ್ಲಿ, — ಪ್ರವರ್ತಿಸು. ಅವ್ಯವಸ್ಥೆ ಮಾಡು.

Húggery ಹಗರಿ (ನಾ.) (Barrister ಮೊ. ರು ತಾವು ಕೆಲಸ ಪಡೆಯಲು) Attorney ಮೊ. ರನ್ನು ಅನುಸರಿಸಿಕೊಂಡುಹೋಗುವ ರೂಢಿ.

Húguenot ಹ್ಯೂಗೆ(ಗ)ನಾಟ್ (ನಾ.) (ಚರಿತ್ರೆ) = French Protestant.

Hulk ಹಲ್ಕ್ (ನಾ.) [ಸಾಮಾನು ತುಂಬುವುದು, ಮೊ. ಕ್ಕೆ ಉಪಯೋಗಿಸುವ, (ಬ. ವ. ದಲ್ಲಿ, ಚರಿತ್ರೆ) ಸೆರೆಮನೆಯಾಗಿ ಉಪಯೋಗಿಸುತ್ತಿದ್ದ] ಬಿಟ್ಟಿ ಹಾಕಿದ ಹಡಗಿನ ಒಡಲು. (ಸುಲಭವಾಗಿ ನಡಸಲಾಗದ) ವಿಪರೀತ ದೊಡ್ಡ ಹಡಗು. (ರೂಪ.) ಭಾರಿ ಆಳು ; ಭಾರಿ ಮುದ್ದೆ. **Húlking** (ಗು.) ಬಹಳ ಗಾತ್ರದ ; ಒಡ್ಡೊಡ್ಡಾದ.

Hull[1] ಹಲ್ (ನಾ., ಕ್ರಿ. ಸಕ.) ಹಣ್ಣು, ಕಾಯಿ, ಮೊ. ಗಳ ಹೊರ ಹೊದಿಕೆ, ಸಿಪ್ಪೆ ; (ಮು., ಬಟಾಣಿ ಮತ್ತು ಹುರುಳಿಯ ಕಾಯಿಗಳ) ಬೀಜಕೋಶ, ಸಿಪ್ಪೆ. (ರೂಪ.) ಹೊದಿಕೆ ; ಮುಸುಕು ; ಆವರಣ. (ಕ್ರಿ.) ಸಿಪ್ಪೆ ಸುಲಿ(ದು ಹಾಕು)

Hull[2] ಹಲ್ (ನಾ., ಕ್ರಿ. ಸಕ.) (ಧ್ವಜ, ಪಟಗಳು, ಕಟ್ಟುಹಗ್ಗಗಳು, ಮೊ. ನ್ನು ಬಿಟ್ಟು) ಹಡಗಿನ ಕಟ್ಟಡ, ಒಡಲು [H. down (ಹಡಗಿನ ಒಡಲು ಕಾಣದಂತೆ) ಬಹು ದೂರದಲ್ಲಿ]. (ಕ್ರಿ.) ಫಿರಂಗಿಗುಂಡಿನಿಂದ (ಹಡಗಿನ) ಒಡಲನ್ನು ಹೊಡೆ.

Húllabaloó ಹಲಬಲೂ (ನಾ.) ಬೊಬ್ಬೆ ; ಗುಲ್ಲು ; ಹುಯಿಲ್ಲು ; ಕೋಲಾಹಲ ; ಗಲಭೆ.

Hulló, -loá ಹಲೋ (ಭಾವ. ಅವ್ಯ.) [ಗಮನ ಸೆಳೆಯುವುದು, ಆಶ್ಚರ್ಯ ತೋರುವುದು, ಅಥವಾ (ಮು., ದೂರವಾಣಿಯಲ್ಲಿ) ಕರೆದವರನ್ನು ಕೂಗಿ ವಿಚಾರಿಸುವುದು, — ಈ ಸಂದರ್ಭಗಳಲ್ಲಿ ಉಪಯೋಗ] ಹಲೋ !

Hum[1] ಹಂ (ಕ್ರಿ., ನಾ.) (ಜೇನುನೊಣ, ತಿರುಗು ಬುಗುರಿ, ಮೊ. ಗಳ ಧ್ವನಿಯಂತೆ) ಸಂತತವಾಗಿ ಮರ್ಮರ ಧ್ವನಿ ಮಾಡು ; ಮೊರೆ ; ಝೇಂಕರಿಸು. (ಸಂದೇಹ ತೋರಿಸುವಾಗ) ಮೆಲ್ಲಗೆ ಅಸ್ಪಷ್ಟಧ್ವನಿ ಮಾಡು ; 'ಹಂ' ಎನ್ನು (ಸಾ., H. & ha). ಮೂಗಿನಲ್ಲಿ ಹಾಡು. (ಬಳ. ಮಾ.) ಚಟ್ಟರದಿಂದಿರು ; ಚಟುವಟಿಕೆಯಿಂದಿರು (Make things h. ಚಟುವಟಿಕೆಯಿಂದ ಕೆಲಸಮಾಡುವಂತೆ ಏರ್ಪಡಿಸು). ತುಟಿ ಮುಚ್ಚಿಕೊಂಡು, —ಹೇಳು, ಹಾಡು. (ನಾ.) (ಮು., ಸಂದೇಹದ, ಹೊಗಳಿಕೆಯ, ಆಶ್ಚರ್ಯದ) ಝೇಂಕಾರ (ಸಾ., Hums & ha's). (ಅಸಂ.) ದುರ್ವಾಸನೆ (ಹೊಡೆ). **Húmming** ಹಮಿಂಗ್ (ಗು.) (ಕ್ರಿಯಾರ್ಥಗಳಲ್ಲಿ). (ಬಳ. ಮಾ.) ಚುರುಕಾದ ; ಜೋರಾದ ; ಶಕ್ತಿಗೂಡಿದ (A h. knock on the head ತಲೆಯಮೇಲೆ ಒಂದು ಜೋರಾದ ಪೆಟ್ಟು). **H.-bird** (ಬೇಗ ಬೇಗ ರೆಕ್ಕೆ ಬಡಿಯುವುದರಿಂದ ಮರ್ಮರ ಧ್ವನಿ ಮಾಡುವ ಹಲವು ಜಾತಿಯ) ಝೇಂಕಾರದ ಹಕ್ಕಿ. **H.-top** (ಸುತ್ತು ತಿರುಗುವಾಗ) ಮೊರೆಯುವ ಬುಗುರಿ.

Hum[2] ಹಂ (ಭಾವ. ಅವ್ಯ.) (ಅನಿಶ್ಚಯ, ಅನಮ್ಮತಿ, ಮೊ. ನ್ನು ಸೂಚಿಸುವ ಪದ) ಹಂ !

Hum[3] ಹಂ (ನಾ.) (ಅಸಂ.) Humbug ಪದದ ಸಂಕ್ಷಿಪ್ತ.

Húman ಹ್ಯೂಮನ್ (ಗು., ನಾ.) ಮನುಷ್ಯನ ; ಮನುಷ್ಯ ಸಂಬಂಧವಾದ ; ಮಾನವ (H. nature ಮನುಷ್ಯ ಸ್ವಭಾವ). ಮನುಷ್ಯರನ್ನೊಳಕೊಂಡ(ಡಿರುವ) (H. race ಮಾನವ ಕುಲ. H. creature ಮನುಷ್ಯಪ್ರಾಣಿ). (ದೇವರದು ಎಂಬುದಕ್ಕೆ ವ್ಯತಿರಿಕ್ತವಾಗಿ) ಮಾನವ (H. affairs ಮಾನವ ವ್ಯವಹಾರಗಳು). ಮಾನವ ವೈಲಕ್ಷಣ್ಯಗಳನ್ನುಳ್ಳ ; — ಗಳನ್ನು ತೋರುವ (More than h. ಮನುಷ್ಯತ್ವಕ್ಕೆ ಮೀರಿದ. Less than h. ಮನುಷ್ಯತ್ವಕ್ಕೆ ಕಡಮೆಯಾದ ; ಪಶುಪ್ರಾಯ). (ನಾ. ; ಹಾಸ್ಯ ಪ್ರ.) ಮನುಷ್ಯಪ್ರಾಣಿ. **Húmanness** (ನಾ.) ; **Humáne** ಹ್ಯುಮೇನ್ (ಗು.) ಉಪಕಾರ ಬುದ್ಧಿಯುಳ್ಳ ; ಧರ್ಮಶೀಲ(ನಾದ) ; ಮರುಕವುಳ್ಳ ; ದಯಾಪರ [H. Society (ನೀರಿನಲ್ಲಿ ಮುಳುಗಿಹೋಗುವವರನ್ನು ಎತ್ತಿ ಬದುಕಿಸುವ) ಒಂದು ಪರೋಪಕಾರ ಸಂಘ. H. killer (ದನಗಳನ್ನು) ನೋವಾಗದಂತೆ ಕಡಿಯುವ ಸಲಕರಣೆ]. (ಸಾಹಿತ್ಯ, ಮೊ. ವಿಷಯದಲ್ಲಿ) ಸಂಸ್ಕೃತಿ, ನಯ, — ಕೊಡುವ ; ಲಲಿತ ; ಉದಾರ. **Humánely** (ಕ್ರಿ. ವಿ.) ; **Húmaneness** (ನಾ.) ; **Húmanism** (ನಾ.) ಮಾನವ ಹಿತ ನಿಷ್ಠೆ ; ಮಾನವಾಸಕ್ತಿ ; ಪ್ರತಿಯೊಂದು ವಿಷಯವನ್ನೂ ಮಾನವ ದೃಷ್ಟಿಯಿಂದಲೇ (ದೈವಿಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೃಷ್ಟಿಯಿಂದಲ್ಲ) ವಿಚಾರ ಮಾಡುವ ಪದ್ಧತಿ ; ಮಾನವ ಪ್ರಧಾನ ದೃಷ್ಟಿ ; ಮಾನುಷ್ಯ ದರ್ಶನ. ಮಾನವ ಜಾತಿ ವಿಚಾರ (ವ್ಯಕ್ತಿಯೊಬ್ಬನದಲ್ಲ). =Religion of Humanity. (ಮು., ಗ್ರೀಕ್ ಮತ್ತು ರೋಮನ್ ಪುರಾತನ ಸಾಹಿತ್ಯಾರ್ಭ್ಯಾಸಿಗಳ) ಸಾಹಿತ್ಯ ಸಂಸ್ಕೃತಿ, ಮನೋಧರ್ಮ. **Húmanist** (ನಾ.) ಮನುಷ್ಯ ಸ್ವಭಾವವನ್ನೂ ಮಾನವ ವ್ಯವಹಾರಗಳನ್ನೂ ವಿಚಾರಮಾಡುವವನು ; ಮಾನುಷ್ಯ ದಾರ್ಶನಿಕ. (ಮು., ೧೪-೧೬ನೆಯ ಶತಮಾನಗಳಲ್ಲಿ) ಪುರಾತನ ರೋಮನ್ ಮತ್ತು ಗ್ರೀಕ್ ಸಾಹಿತ್ಯಗಳನ್ನೂ ಪ್ರಾಚೀನ ವಿಷಯಗಳನ್ನೂ ವಿಚಾರಮಾಡುತ್ತಿದ್ದ ಪಂಡಿತ. **Humanístic** (ಗು.) ; **Humanitárian** ಹ್ಯುಮ್ಯಾನಿಟೇರಿಯನ್ (ನಾ., ಗು.) ಮಾನವ ಹಿತ ಸಾಧನೆ ಮಾಡುವುದೇ ಮನುಷ್ಯನ ಮುಖ್ಯ ಕರ್ತವ್ಯವೆಂದು ನಂಬಿರುವ(ವನು), ಪ್ರತಿಪಾದಿಸುವ(ವನು) ; ಮಾನವ ಹಿತೋತ್ಸಾಹಿ. **Humanitárianism** (ನಾ.) ಮಾನವ ಹಿತ ಸಾಧನೆಯ ಮತ, ತತ್ತ್ವಗಳು, ಆಚರಣೆಗಳು. **Humánity** ಹ್ಯುಮ್ಯಾನಿಟಿ (ನಾ.) ಮನುಷ್ಯ ಸ್ವಭಾವ ; ಮಾನವತ್ವ. (ಬ. ವ. ದಲ್ಲಿ) ಮನುಷ್ಯ ಗುಣಗಳು ; ಮಾನವ ಲಕ್ಷಣಗಳು. ಮಾನವ ಕುಲ. ಉಪಕಾರ ಬುದ್ಧಿ ; ದಯೆ ; ಅನುಕಂಪ. (ಬ. ವ. ದಲ್ಲಿ) ಮಾನವ ಹಿತ ಕಾರ್ಯಗಳು. Religion of H. ಅತಿಮಾನುಷ ವಿಚಾರಗಳನ್ನು ಬಿಟ್ಟು (ಮುಖ್ಯವಾಗಿ ಅಥವಾ ಪೂರ್ತಿಯಾಗಿ) ಮನುಷ್ಯನ ಪುರೋಭಿವೃದ್ಧಿಯನ್ನೇ ಗುರಿಯಾಗಿಟ್ಟುಕೊಂಡಿರುವ ಮತ : ಮನುಷ್ಯೋತ್ಕರ್ಷ ಧರ್ಮ. The humanities ಸಂಸ್ಕೃತಿಗೆ ಮುಖ್ಯವಾಗಿ ನೆರವಾಗುವುದೆಂದು ಪರಿಗಣಿಸುವ ಲಲಿತ ವಿದ್ಯೆಗಳು (ಮು., ಲ್ಯಾಟಿನ್ ಮತ್ತು ಗ್ರೀಕ್ ಪ್ರೌಢ ಸಾಹಿತ್ಯಗಳು). **Húmanize** ಹ್ಯೂ — (ಕ್ರಿ.) ಮನುಷ್ಯಲಕ್ಷಣ ಕೊಡು ; ಮಾನವೀಕರಿಸು (Humanized milk ಎದೆಹಾಲನ್ನು ಹೋಲುವಂತೆ ತಯಾರಿಸಿದ ಹಸುವಿನ ಹಾಲು). ದಯಾಮಯನಾಗು ; ಕರುಣಾಳುವಾಗು ; — ವನ್ನಾಗಿ ಮಾಡು. **Humanizátion** (ನಾ.) ; **Húmankind** ಮನುಷ್ಯ ಜಾತಿ,— ವರ್ಗ. **Húmanly** (ಕ್ರಿ. ವಿ.) ಮನುಷ್ಯ ರೀತಿಯಲ್ಲಿ; ಮಾನವ ಸಾಧನಗಳಿಂದ ; ಮನುಷ್ಯ ದೃಷ್ಟಿಯಿಂದ; ಮಾನವ ಸಹಜ ಭಾವನೆಗಳಿಂದ ; ದಯೆಯಿಂದ.

Humáne, Humanitárian, &c. **Human** ನೋಡಿ.

Húmble ಹಂಬ್‌ಲ್ (ಗು., ತರ ರೂಪ Humbler, ತಮ ರೂಪ Humblest ; ಕ್ರಿ. ಸಕ.) ಸ್ವಪ್ರತಿಷ್ಠೆಯಿಲ್ಲದ ; ನಮ್ರ ; ವಿನೀತ ; ದೀನ ; ತಗ್ಗಿ ನಡೆಯುವ [Your h. servant (ಹಿಂದೆ, ಮು., ಒಕ್ಕಣೆಯಲ್ಲಿ) ತಮ್ಮ ನಮ್ರ ಸೇವಕ]. ಕೀಳು ಸ್ಥಿತಿಯ, ಸ್ಥಾನ ಮಾನಗಳ ; ಬಡ. (ವಸ್ತುಗಳ ವಿಷಯದಲ್ಲಿ) ಸಾಮಾನ್ಯ (ರೀತಿಯ, ಗಾತ್ರದ, ವಿಸ್ತಾರದ) [Eat h. pie (Eat ನೋಡಿ). H. Plant 'ಮುಟ್ಟಿದರೆ ಮುನಿ' ಎಂಬ ಸಸ್ಯ]. (ಕ್ರಿ.) ಅಹಂಕಾರ ಬಿಡಿಸು ; ನಮ್ರನನ್ನಾಗಿ ಮಾಡು ; ಸೊಕ್ಕು ಮುರಿ. H. oneself ತಗ್ಗಿ ನಡೆ ; ಹೀನ್ಯೈಸಿಕೊ. **Húmbleness** (ನಾ.) ; **Húmbly** (ಕ್ರಿ. ವಿ.)

Húmble-bee ಹಂಬ್‌ಲ್ ಬೀ (ನಾ.) =Bumble-bee.

Húmbug ಹಂಬಗ್ (ನಾ., ಕ್ರಿ.) ಮೋಸ ; ಠಕ್ಕು ; ವಂಚನೆ ; ಸೋಗು; ನಟನೆ. (ಭಾವ. ಅವ್ಯ.) ಅವಿವೇಕ ! ಶುದ್ಧ ಸುಳ್ಳು ! . ಮೋಸಗಾರ ; ಠಕ್ಕ ; ಆಷಾಢಭೂತಿ. ಒಂದು ಬಗೆಯ ಮಿಠಾಯಿ. (ಕ್ರಿ.) (ಒಬ್ಬನನ್ನು, ಒಂದು ಕೆಲಸ ಮಾಡುವಂತೆ, ಮಾಡದಂತೆ) ಮರುಳುಗೊಳಿಸು, ವಂಚಿಸು, ಕಣ್ಣಿಗೆ ಮಣ್ಣೆರಚು. ವಂಚಕನಾಗಿರು ; ವಂಚಕನಂತೆ, —ನಡೆ, ವರ್ತಿಸು. **Humbúggery** — ಗರಿ (ನಾ.)=Humbug.

Húmdrum ಹಮ್‌ಡ್ರಂ (ಗು., ನಾ., ಕ್ರಿ. ಅಕ.) ನಿತ್ಯಗಟ್ಟಳೆ(ಯ) ; ಕೇವಲ ಸಾಧಾರಣ ; ನೀರಸ; ಸಪ್ಪೆ ; ವಿಶೇಷವಿಲ್ಲದ; ಏನೂ ಸ್ವಾರಸ್ಯವಿಲ್ಲದ. (ಕ್ರಿ.) ಸ್ವಾರಸ್ಯ ತೋರದೆ, ಬಳಕೆಯ ಮಾರ್ಗದಲ್ಲಿ, — ಮುಂದುವರಿ, ವರ್ತಿಸು. **Húmdrumness** (ನಾ.)

Húmerus ಹ್ಯೂಮೆರಸ್ (ನಾ.) (ಅಂ. ರ. ಶಾ.) (ಮನುಷ್ಯನಲ್ಲಿ) ಮೇಲ್ತೋಳಿನ ಎಲುಬು ; (ಇತರ ಕಶೇರುಕ ಪ್ರಾಣಿಗಳಲ್ಲಿ) ಇದಕ್ಕೆ ಜವಾಬಾದ ಎಲುಬು. **Húmeral** (ಗು.) (ಅಂ. ರ. ಶಾ.) ಮೇಲು ರಟ್ಟೆಯ ಎಲುಬಿನ. ಭುಜದ (ಗಳ)

Húmid ಹ್ಯೂಮಿಡ್ (ಗು.) ತೇವವುಳ್ಳ ; ಒದ್ದೆಯಾದ ; ಆರ್ದ್ರ. **Humídify** ಹ್ಯು — (ಕ್ರಿ. ಸಕ.) ; **Humídity** (ನಾ.)

Humíliate ಹ್ಯುಮಿಲಿಯೇಟ್ (ಕ್ರಿ. ಸಕ.) (ಒಬ್ಬನ) ಘನತೆಗೆ ಅಥವಾ ಆತ್ಮ ಗೌರವಕ್ಕೆ ಕುಂದು ತರು. ಗೌರವ ಕಳೆ ; ತೇಜೋವಧೆ ಮಾಡು ; ಅಪಮಾನ ಮಾಡು ; ಸೊಕ್ಕಡಗಿಸು. **Humíliating** (ಗು.) ತಲೆ ತಗ್ಗಿಸುವಂತೆ ಮಾಡುವ. **Humiliátion** (ನಾ.) ತೇಜೋವಧೆ ; ಅಪಮಾನ. **Humílity** (ನಾ.) ವಿನಯ ; ನಮ್ರತೆ ; ದೈನ್ಯ ; ಹೀನ ಸ್ಥಿತಿ.

Húmmock ಹಮಕ್ (ನಾ.) ಗುಡ್ಡ ; ಮೊರಡಿ ; ದಿಣ್ಣೆ. (ಮು., ಜವುಗು ನೆಲದಲ್ಲಿಯ) ಏರುಭೂಮಿ. (ನೀರ್ಗಲ್ಲ ಮೈದಾನದಲ್ಲಿ) ಡುಬ್ಬ ಅಥವಾ ಉಬ್ಬಿನ ಏಣುಸಾಲು. **Húmmocky** (ಗು.)

Húmour, Húmor (ಅಮೆ. ಸಂ.), ಹ್ಯೂ(ಯೂ)ಮರ್ (ನಾ.) ಮನಃಸ್ಥಿತಿ ; ಚಿತ್ತವೃತ್ತಿ ; (ಮನೋ)ಭಾವ ; ಒಲವು ; ಪ್ರವೃತ್ತಿ ; ಮನಸ್ಸು (In the h. for fighting ಕಾದಾಡುವ ಮನಸ್ಸಿನಲ್ಲಿ). ಹಾಸ್ಯ ; ವಿನೋದ ; ಪರಿಹಾಸ ಶೀಲತೆ ; ವಿನೋದ ಪ್ರವೃತ್ತಿ ; ಹಾಸ್ಯ ರಸ ; ಹಾಸ್ಯ ರಸಜ್ಞತೆ ; ಹಾಸ್ಯ ಕಲ್ಪನೆ ; ನಗೆ. (Out of h. ಸಮಾಧಾನ ಕೆಟ್ಟು ; ಮನಸ್ಸು ಸರಿಯಿಲ್ಲದೆ. Good h. ಸುಪ್ರಸನ್ನತೆ. Ill h. ಅಪ್ರಸನ್ನತೆ). [**Húmourless** (ಗು.) ; **-humoured** (ಗು.)]. (ಬ. ವ. ದಲ್ಲಿ) ಶರೀರ ರಸಧಾತುಗಳು [Cardinal humours (ಚರಿತ್ರೆ) ವ್ಯಕ್ತಿಯ ದೇಹದ ಮತ್ತು ಮನಸ್ಸಿನ ಗುಣಗಳನ್ನು ರೂಪಿಸುವ (ರಕ್ತ, ಶ್ಲೇಷ್ಮ, ಹರಿತ ಪಿತ್ತ, ಕೃಷ್ಣ ಪಿತ್ತ, ಎಂಬ) ನಾಲ್ಕು ಮುಖ್ಯವಾದ ಶರೀರ ರಸಧಾತುಗಳು. Aqueous, vitreous, h. (ಕಣ್ಣಿನೊಳಗಿನ ಪಾರದರ್ಶಕವಾದ ಎರಡು ದ್ರವಗಳು) : ಜಲ ದ್ರವ, ಕಾಚಕ ದ್ರವ]. **Húmoral** ಹ್ಯೂಮೊ(ಮ)ರಲ್ (ಗು.) (ವೈ. ಶಾ.) ಶರೀರ ರಸಧಾತುಗಳ. H. pathology ಶರೀರ ರಸಧಾತುಗಳ (ವಿಕಾರ) ಸ್ಥಿತಿಯೇ ಎಲ್ಲ ರೋಗಗಳಿಗೂ ಮೂಲ (ಕಾರಣ) ವೆಂಬ ತತ್ತ್ವ; ರಸಧಾತು ನಿದಾನ. **Húmoralism** (ನಾ.) =Humoral pathology. **Húmoralist** (ನಾ.) ; **Humoralístic** (ಗು.) ; **Húmourist, Húmorist** (ನಾ.) ಪರಿಹಾಸ ಶೀಲ. ವಿನೋದವಾಗಿ ಮಾತನಾಡುವವನು, ಅಭಿನಯಿಸುವವನು, ಬರೆಯುವವನು ; ವಿನೋದಿ ; ವಿನೋದಗಾರ ; ಹಾಸ್ಯಗಾರ ; ನಗೆಗಾರ. **Humorístic** (ಗು.) ; **Húmorous** (ಗು.) ವಿನೋದದ, ಪರಿಹಾಸ, — ಶೀಲ ; ಹಾಸ್ಯಕರ ; ತಮಾಷೆಯ. **Húmorously** (ಕ್ರಿ. ವಿ.) ; **Húmorousness** (ನಾ.) ; **Húmoursome, Húmorsome** (ಗು.) ಚಂಚಲ ; ಚಪಲ. ಸಿಡುಕಿನ ; ರೇಗುವ ಸ್ವಭಾವದ. **Húmoursomeness** (ನಾ.)

Húmour, Húmor (ಕ್ರಿ. ಸಕ.) (ವ್ಯಕ್ತಿ, ರುಚಿ, ಸ್ವಭಾವ, ಮೊ. ನ್ನು) ತೃಪ್ತಿಪಡಿಸು ; ಭಾವಾನುಸರಣೆ ಮಾಡು ; ಉಬ್ಬಿಸು ; ಪುಸಲಾಯಿಸು. (— ಕ್ಕೆ) ತಕ್ಕಂತೆ ಹೊಂದಿಕೊ ; ಸಮಾಧಾನ ಮಾಡು.

Hump ಹಂಪ್ (ನಾ., ಕ್ರಿ. ಸಕ.) (ಮು., ಮನುಷ್ಯನ ಬೆನ್ನಿನಮೇಲಿನ) ಗೂನು ; (ಒಂಟೆ, ಮೊ. ಗಳ ಬೆನ್ನಿನಮೇಲಿನ) ಡುಬ್ಬ ; (ದನಗಳ) ಹಿಣಿಲು. ಮಣ್ಣಿನ ಗುಡ್ಡ. (ಅಸಂ.) ಖಿನ್ನತೆಯ, ಕೋಪದ, — ಕೆರಳು, ಉದ್ರೇಕ (It gives me the h. ಮೈಯುಲ್ಲ ಉರಿಯುತ್ತದೆ). (ಕ್ರಿ.) ಡುಬ್ಬದಾಕಾರ ಮಾಡು ; ಗೂನು ಮಾಡು. ಕಿರುಕುಳ ಕೊಡು ; ಕಾಡು ; ಪೀಡಿಸು ; ಬೇದರಗೊಳಿಸು. (ಆಸ್ಟ್ರೇಲಿಯದ ಅಸಂ.) (ಮೂಟೆಯನ್ನು) ಬೆನ್ನಿನಮೇಲೆ ಎತ್ತಿಕೊ, ಭುಜದಮೇಲೆ ಹಾಕಿಕೊ, ಹೊರು. **Humpback** ಗೂನು ಬೆನ್ನು(ಳ್ಳವನು) ; ಗೂನ. **H.-backed** ಗೂನು ಬೆನ್ನಿನ. **Humped** (ಗು.) ; **Húmpless** (ಗು.) ; **Húmpy**[1] (ಗು.)

Humph ಹಂಫ್ (ಭಾವ. ಅವ್ಯ., ಕ್ರಿ. ಅಕ.) (ಸಂದೇಹವನ್ನು ಅಥವಾ ಅಸಮಾಧಾನವನ್ನು ಸೂಚಿಸುವ ಪದ) ಹಂಫ್ ! (ಕ್ರಿ.) 'ಹಂಫ್' ಎನ್ನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Húmpty-dúmpty ಹಮ್(ಪ್)ಟಿ ಡಮ್(ಪ್)ಟಿ (ನಾ.) ಗಿಡ್ಡಾಗಿಯೂ ದಪ್ಪವಾಗಿಯೂ ಇರುವ ಮನುಷ್ಯ; ದಪ್ಪ ಗುಜ್ಜಾರಿ.

Húmpy[2] ಹಂಪಿ (ನಾ.) ಆಸ್ಟ್ರೇಲಿಯದ ಗುಡಿಸಿಲು.

Húmus ಹ್ಯೂಮಸ್ (ನಾ.) ನೆಲದಲ್ಲಿಯ ಸಸ್ಯಸಂಬಂಧವಾದ ಗೊಬ್ಬರ (ಎಲೆ, ಕಡ್ಡಿ, ಮೊ. ಜೈವಿಕ ಪದಾರ್ಥಗಳು ನೆಲದಲ್ಲಿ ಸಾವಕಾಶವಾಗಿ ಕೊಳೆತು ಕಪ್ಪೇರಿದ ಪದಾರ್ಥ)

Hun ಹನ್ (ನಾ.) (೪, ೫ನೆಯ ಶತಮಾನಗಳಲ್ಲಿ ಯೂರೋಪಿಗೆ ದಾಳಿಯಿಟ್ಟು ಹಾವಳಿಮಾಡಿದ) ಏಷ್ಯದ ಒಂದು ಅಲೆಮಾರಿ ಜನಾಂಗ; ಹೂಣ. (ತಿರಸ್ಕಾರವಾಗಿ) ಜರ್ಮನನು (ಮು., ಪ್ರಷ್ಯನನು, ಆಸ್ಟ್ರಿಯನನು). **Húnnish** ಹನಿಷ್ (ಗು.) ಹೂಣರ; ಹೂಣ ಸಂಬಂಧವಾದ; ಹೂಣರಂಥ.

Hunch ಹನ್ಷ್, ಹಂಚ್ (ಕ್ರಿ. ಸಕ., ನಾ.) ಹೊರಬಾಗು ಬರುವಂತೆ (ಕಮಾನು) ಬಗ್ಗಿಸು. ಡುಬ್ಬಾಗುವಂತೆ (ಹೊರಕ್ಕೆ, ಮೇಲಕ್ಕೆ) ತಳ್ಳು, ನೂಕು (*Out*, *up* ಉಪ. ದೊಡನೆ); ಡುಬ್ಬಾಗಿಸು. (ನಾ.) ಡುಬ್ಬ; ಗೂನು. ದಪ್ಪ ತುಂಡು. Have a h. that (ಅಮೆ. ಸಂ. ಅಸಂ.) (— ಎಂದು) ಭಾವಿಸು, ಎಣಿಸು, ಅನುಮಾನಿಸು, ಆಲೋಚಿಸು. **H.-back(ed)** = Hump-back(ed). **Húnchy** (ಗು.)

Húndred ಹಂಡ್ರೆಡ್ (ನಾ., ಗು.) ನೂರು; ಶತ [(೧೦೦, 100, C) (A h., one h., six h., several h., men. Hundreds of men ನೂರಾರು ಜನ. Some, several, hundreds ಕೆಲವು ನೂರು, ಹಲವು ನೂರು). (ಸಮಾಸಗಳಲ್ಲಿ) The h.-&-first ನೂರೊಂದನೆಯ(ದು).Six-h.-&-ninth ಆರುನೂರೊಂಬತ್ತನೆಯ(ದು)]. ಹೆಚ್ಚು ಸಂಖ್ಯೆ; ನೂರಾರು (=h. & one) [Not a h. miles from (ಹಾಸ್ಯ ಪ್ರ.) ಹತ್ತಿರದಲ್ಲೇ. A h. per cent efficient ರೆಕ್ಕಾಚಾರದಿಂದ ಎಷ್ಟು ಸಾಧ್ಯವೆಂದು ತಿಳಿಯುವುದೂ ಅಷ್ಟನ್ನೂ ಕಾರ್ಯತಃ ಮಾಡುವ; ನೂರಕ್ಕೆ ನೂರಾಗಿ ಕಾರ್ಯದಕ್ಷತೆಯುಳ್ಳ; ಸಂಪೂರ್ಣ ಸಮರ್ಥ(ವಾಗಿ)]. ನೂರು ಪೌಂಡು (ಹಣ). (ಮು., ಚರಿತ್ರೆ) ಜಿಲ್ಲೆಯ ವಿಭಾಗಗಳಲ್ಲಿ ಸ್ವಂತ ನ್ಯಾಯಸ್ಥಾನವಿರುವ ಭಾಗ. Great, long, h. =೧೨೦. H. of bricks (Brick ನೋಡಿ). Hundreds & thousands (ಕ್ರೈಸ್ತರ ಮದುವೆಯಲ್ಲಿ, ಹಬ್ಬಗಳಲ್ಲಿ, ಮಾಡುವ ಗೋಪುರಾಕೃತಿಯ ಭಕ್ಷ್ಯ, ಮೊ. ಗಳಿಗೆ ಅಲಂಕಾರ ಮಾಡುವ) ಸಕ್ಕರೆ ಪಾಕದ ಸಣ್ಣ ಗುಂಡುಗಳು. **Húndredfold** (ನಾ.) ನೂರ್ಮಡಿ; ನೂರರಷ್ಟು. **Húndredth** (ಗು., ನಾ.) ನೂರನೆಯ(ದು). **Hundredweight** ೧೧೨ ಪೌಂಡು ತೂಕ (Avoirdupois ಮಾನ. ಸಂಕ್ಷಿಪ್ತ: cwt.) (ಅಮೆ. ಸಂ.) ೧೦೦ ಪೌಂಡು ತೂಕ.

Hung. Hang ಧಾತುವಿನ ಭೂತ. ಮತ್ತು ಭೂ. ಕೃ.

Húnger ಹಂಗರ್ (ನಾ., ಕ್ರಿ.) ಆಹಾರವಿಲ್ಲದ್ದರಿಂದಾಗುವ ಒಂದು ಬಗೆಯ ಸಂಕಟ, ಬಳಲಿಕೆ: ಹಸಿವು; ಕ್ಷುತ್ತು. (ರೂಪ.) ಬಲವಾದ ಬಯಕೆ; ಹಂಬಲು (*For*, *after* ಮೊ. ಉಪ. ದೊಡನೆ). [**H.-strike** (ತಾನು ಬಯಸಿದುದನ್ನು ಪಡೆಯುವುದಕ್ಕಾಗಿ ಅಥವಾ ಸೆರೆಯಿಂದ ಬಿಡುಗಡೆ ಹೊಂದುವುದಕ್ಕಾಗಿ) ಊಟಮಾಡದ ಮುಷ್ಕರ ಹಿಡಿಯುವುದು: ಉಪವಾಸ ಮುಷ್ಕರ. **H.-march** ಉದ್ಯೋಗ ದೊರೆಯದಿರುವವರು ತಮ್ಮ ಅವಸ್ಥೆಯ ಕಡೆಗೆ ಗಮನ ಸೆಳೆಯುವುದಕ್ಕಾಗಿ ಒಟ್ಟುಗೂಡಿ ಹೊರಡುವ ಕಾಲ್ನಡೆ: ಹಸಿವು ಮೆರವಣಿಗೆ. **H.-marcher** (ನಾ.)]. (ಕ್ರಿ.) ಹಸಿ; ಹಸಿವಾಗು; ಹಸಿವಿನಿಂದಿರು. [ವಿಧೇಯನಾಗುವಂತೆ (*Into* ಉಪ. ದೊಡನೆ), ಸ್ಥಳ, ಮೊ. ನ್ನು ಬಿಟ್ಟುಹೋಗುವಂತೆ (*Out of* ಉಪ. ದೊಡನೆ)], ಉಪವಾಸ ಕೆಡವು. ಹೆಬ್ಬಯಕೆಯಿರು; ಹಂಬಲಿಸು (*For*, *after* ಉಪ. ದೊಡನೆ). (ಭೂ. ಕೃ., ಪ್ರಾಚೀ. ಪ್ರ.) ಹಸಿದ. **Húngry** (ಗು.) ಹಸಿದ (H. as a hunter). ಹಸಿವು ತೋರುವ (A h. look ಹಸಿವಿನಿಂದ ಕಂಗೆಟ್ಟ ನೋಟ). ಹಸಿವು ಹುಟ್ಟಿಸುವ (A h. air ಹಸಿವು ಹುಟ್ಟಿಸುವ ವಾಯುಸ್ಥಿತಿ). (H. rice ಸಾವೆಯ ಜಾತಿಗೆ ಸೇರಿದ ಪ. ಆಫ್ರಿಕದ ಒಂದು ಧಾನ್ಯ). (ರೂಪ.) ತವಕ ಪಡುವ; ಉತ್ಸುಕ; ಅತ್ಯಾಸೆಯ. (ನೆಲ, ಮಣ್ಣು) ನಿಸ್ಸಾರ(ವಾದ), ಫಲ ಕೊಡದ. **Húngrily** (ಕ್ರಿ. ವಿ.); **Húngriness** (ನಾ.)

Hunk ಹಂಕ್ (ನಾ.) ಕತ್ತರಿಸಿಹಾಕಿದ ದೊಡ್ಡ ತುಂಡು; ಒಡ್ಡೊಡ್ಡಾದ ತುಂಡು; = Hunch.

Hunks ಹಂಕ್ಸ್ (ನಾ.) ಬಿಗಿಮುಷ್ಟಿಯವನು; ಜಿಪುಣ; ಲೋಭಿ.

Hunt ಹಂಟ್ (ಕ್ರಿ., ನಾ.) ಕಾಡು ಮೃಗಗಳನ್ನು ಅಥವಾ ಬೇಟೆಯನ್ನು ಬೆನ್ನಟ್ಟಿ ಹೋಗು. (ಆಹಾರಕ್ಕಾಗಿ ಅಥವಾ ವ್ಯಾಯಾಮ ಕ್ರೀಡೆಗಾಗಿ) ಬೇಟೆಯಾಡು, ಶಿಕಾರಿ ಮಾಡು. ಹುಡುಕು; ಹುಡುಕಾಡು (*After*, *for* ಉಪ. ದೊಡನೆ). ಅಟ್ಟಿಬಿಡು, ಓಡಿಸಿಬಿಡು (*Away*, *out* ಉಪ. ದೊಡನೆ). (ಒಂದು ಪ್ರಾಂತವನ್ನು) ಬೇಟೆಹುಡುಕುತ್ತ ಬಳಸಾಡು, ಸುತ್ತಾಡು. ಬೇಟೆಯಲ್ಲಿ (ಕುದುರೆಯನ್ನು, ಬೇಟೆ ನಾಯಿಗಳನ್ನು) ಉಪಯೋಗಿಸು. H. Down ಬೇಟೆಯನ್ನು (ತಪ್ಪಿಸಿಕೊಳ್ಳಲಾಗದಂತೆ) ಇಕ್ಕಟ್ಟಿನಲ್ಲಿ ಸಿಕ್ಕಿಸಿಕೊ. H. out ಜಾಡಿನಿಂದ ಪತ್ತೆಮಾಡು; ಹುಡುಕಿ ಕಂಡುಹಿಡಿ. H. up (— ಕ್ಕಾಗಿ) ಹುಡುಕಿ ನೋಡು. H. in couples (Couple ನೋಡಿ). H. the hare, slipper, squirrel (ಕೆಲವು ಆಟಗಳ ಹೆಸರು). **Húnter** (ನಾ.) ಬೇಟೆಗಾರ [(ರೂಪ.) Fortune-h. (Fortune ನೋಡಿ). Place-h. ಪದವಿಗಾಗಿ, ಸ್ಥಾನಕ್ಕಾಗಿ, ಬಹಳ ಪ್ರಯತ್ನ ಮಾಡುವವನು: ಸ್ಥಾನಾಪೇಕ್ಷಿ]. ಬೇಟೆಯ ಕುದುರೆ; ಬೇಟೆಯ ನಾಯಿ. (ಗಡಿಯಾರದ ಮುಖದ ಗಾಜಿನ ರಕ್ಷಣೆಗಾಗಿ) ಕೀಲಿನ ಮುಚ್ಚಳವಿರುವ ಕಿಸೆಗಡಿಯಾರ (Half-h. ಮುಖದ ಗಾಜಿನ ಹೊರ ಸುತ್ತಿಗೆ ಮಾತ್ರ ಮುಚ್ಚಳವಿರುವ ಕಿಸೆಗಡಿಯಾರ). **Húnting** (ನಾ.) (ಕ್ರಿಯಾರ್ಥಗಳಲ್ಲಿ); ಬೇಟೆ [**H.-box** ಬೇಟೆಯ ಕಾಲದಲ್ಲಿ (ತಿಂಗಳುಗಳಲ್ಲಿ) ಉಪಯೋಗಕ್ಕಿರುವ ಸಣ್ಣ ಹಳ್ಳಿಯಮನೆ; ಬೇಟೆಯ ಗೂಡು. **H.-cog** (Cog[1] ನೋಡಿ). **H.-crop** (Crop ನೋಡಿ). **H.-ground** (ಒಬ್ಬನು) ಬೇಟೆಯಾಡುವ ಸ್ಥಳ (ಸಾ., ರೂಪ. ದಲ್ಲಿ). Happy h.-ground(s) ಭವಿಷ್ಯಸ್ಥಿತಿ (ಅಮೆ. ಇಂಡಿಯನರು ನಿರೀಕ್ಷಿಸುವಂಥದು). ಬೇಟೆಯಾಡುವುದಕ್ಕೆ ಒಳ್ಳೆಯ ಸ್ಥಳ (ರೂಪ.). **H.-horn** ಬೇಟೆಯ(ಲ್ಲಿ ಉಪಯೋಗಿಸುವ) ಕಹಳೆ, ಕೊಂಬು]. **Húntsman** ಹಂಟ್ಸ್‌ಮ್ಯನ್ (ನಾ.) = Hunter; (ಮು., ನರಿಯ) ಬೇಟೆಯ ನಾಯಿಗಳನ್ನು ಬೇಟೆಗೆ ಬಿಡುವವನು.

Hunt (ನಾ.) ಬೇಟೆ(ಯಾಡುವುದು); ಶಿಕಾರಿ (ರೂಪ. ಸಹ). ಬೇಟೆನಾಯಿಗಳ ತಂಡದೊಂದಿಗೆ ಬೇಟೆಯಾಡುವವರು; ಬೇಟೆಯಾಡುವ ಪ್ರಾಂತ.

Húrdle ಹರ್ಡ್‌ಲ್ (ನಾ., ಕ್ರಿ. ಸಕ.) (ಹಂಗಾಮಿಯ ಬೇಲಿ, ಮೊ. ಕ್ಕಾಗಿ ಮರದ ಅಡ್ಡಪಟ್ಟಿಗಳಿಂದಾಗಲಿ ಮೆತುಕಡ್ಡಿಗಳಿಂದ ಹೆಣೆದಾಗಲಿ ಬಲಪಡಿಸಿ ಮಾಡಿ, ಸ್ಥಳದಿಂದ ಸ್ಥಳಕ್ಕೆ ಸಾಗಿಸಲಾಗುವ) ಉದ್ದ ಚೌಕಟ್ಟು, ತಡಿಕೆ; ತಡಿಕೆ ಹಾರುವ ಪಂದ್ಯ(H.-race)ದಲ್ಲಿರುವ ಮರದ ಚೌಕಟ್ಟು. (ಚರಿತ್ರೆ) ರಾಜದ್ರೋಹಿಗಳನ್ನು ವಧ ಸ್ಥಾನಕ್ಕೆ ಎಳೆದುಕೊಂಡು ಹೋಗಲು ಉಪಯೋಗಿಸುತ್ತಿದ್ದ ಚೌಕಟ್ಟು. (ಕ್ರಿ.) ತಡಿಕೆ ಬೇಲಿ ಹಾಕು; — ಹಾಕಿ ಪ್ರತ್ಯೇಕಿಸು (*Off* ಉಪ. ದೊಡನೆ). **Húrdler** (ನಾ.) ತಡಿಕೆಗಳನ್ನು ಮಾಡುವವನು. ತಡಿಕೆ ಪಂದ್ಯಗಳಲ್ಲಿ ಓಡುವವನು.

Húrdy-gurdy ಹರ್ಡಿಗರ್ಡಿ (ನಾ.) ತಂಬೂರಿಯ ತೆರದ ಒಂದು ತಂತಿವಾದ್ಯ.

Hurl ಹರ್ಲ್ (ಕ್ರಿ. ಸಕ., ನಾ.) (ಒಂದು ಸ್ಥಾನದಿಂದ) ಜೋರಾಗಿ ಎಸೆ; ಬೀಸಿ ಎಸೆ, ಒಗೆ (ರೂಪ. ಸಹ); (ಕ್ಷಿಪಣಿ, ಮೊ. ನ್ನು) ಎಸೆ (ರೂಪ. ಸಹ). (ನಾ.) ಎಸೆತ; ಬಲವಾದ ಒಗೆತ.

Húrley ಹರ್ಲಿ (ನಾ.) (ಐರ್ಲೆಂಡಿನ) ಹಾಕಿ ಆಟ, ಹಾಕಿ ದಾಂಡು.

Húrly ಹರ್ಲಿ (ನಾ.) (ಪ್ರಾಚೀ. ಪ್ರ.) ಗಲಭೆ; ಗದ್ದಲ; ಕೋಲಾಹಲ. **Húrly-búrly** (ನಾ.) =Hurly.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Hurráh ಹು(ಹ)ರಾ, **Hurraý** ಹು(ಹ)ರೇ (ಭಾವ. ಅವ್ಯ., ನಾ., ಕ್ರಿ. ಅಕ.) (ಹಿಗ್ಗು, ವಿಜೃಂಭಣೆ, ಜಯೋನ್ಮಾದ, ಮೆಚ್ಚಿಕೆ — ಇವನ್ನು ಸೂಚಿಸುವ ಪದ) ಹುರಾ! ಹುರೇ! ಉಘೇ! ಭಲಾ! ಜೈ! (ನಾ.) ಈ ಘೋಷಣೆ. (ಕ್ರಿ.) 'ಹುರಾ' ಎಂದು ಘೋಷಿಸು; ಜಯಕಾರ ಮಾಡು.

Húrricane ಹರಿಕೆ(ಃ)ನ್ (ನಾ.) ಬಿರುಗಾಳಿ (ಕೂಡಿದ ಮಳೆ); ಚಂಡ ಮಾರುತ (ಮು., West Indies ದ್ವೀಪಗಳಲ್ಲಿ ಬೀಸುವ ಪ್ರಚಂಡ ಸುಂಟುರ ಗಾಳಿ) (ರೂಪ. ಸಹ). **H.-bird** = Frigate-bird. H. deck ಹಡಗಿನ ಹಗುರವಾದ ಮೇಲಟ್ಟ. H. lamp (ಬಿರುಗಾಳಿಯಲ್ಲಿ ಆರಿಹೋಗದಂತೆ ರಚಿಸಿದ) ಬಿರುಗಾಳಿ ಲಾಂದ್ರ.

Húrry ಹರಿ (ನಾ., ಕ್ರಿ.) (ವಿಪರೀತ) ಅವಸರ; ಆತುರ; ತರಾತುರಿ. ಬೇಗ ಕೆಲಸವಾಗಬೇಕೆಂಬ ತವಕ. (ನಿಷೇಧಾರ್ಥದಲ್ಲಿ ಅಥವಾ ಪ್ರಶ್ನಾರ್ಥದಲ್ಲಿ) ಅವಸರಕ್ಕೆ ಕಾರಣ, ಆತುರದ ಅವಶ್ಯಕತೆ [You will not beat that in a h. (ಬಳ. ಮಾ.) ನೀನು ಅದನ್ನು ಸುಲಭವಾಗಿ ಗೆಲ್ಲಲಾರೆ. Shall not ask again in a h. ಮರಳಿ ಮನಃಪೂರ್ವಕವಾಗಿ ಕೇಳುವುದಿಲ್ಲ]. [**H.-scurry** (ಕ್ರಿ. ವಿ., ಗು., ನಾ., ಕ್ರಿ. ಅಕ.) ಹುಚ್ಚು ಆತುರ(ದ, ದಲ್ಲಿ); ಹೀಗೆ ಮುಂದುವರಿ, ವರ್ತಿಸು]. (ಕ್ರಿ.) ತ್ವರೆ ಮಾಡು, — ಪಡಿಸು; ಆತುರ ಪಡು, — ಪಡಿಸು. (ಒಬ್ಬನನ್ನು, ಒಂದನ್ನು) ಅತ್ಯಾತುರದಿಂದ (ಎತ್ತಿ)ಕೊಂಡು ಹೋಗು, ಅಟ್ಟು, ತರುಬು (*Away*, *along*, *into*, *into doing* ಮೊ. ಪದ ದೊಡನೆ). ಆತುರದಿಂದ ಚಲಿಸು, (ಕೆಲಸ) ಮಾಡು. H. up ತ್ವರೆ ಮಾಡು. **Húrriedly** (ಕ್ರಿ. ವಿ.); **Húrriedness** (ನಾ.)

Hurst ಹರ್ಸ್ಟ್ (ನಾ.) ಗುಡ್ಡ; ಮೊರಡಿ; (ಸಮುದ್ರದಲ್ಲಿಯ ಅಥವಾ ನದಿಯಲ್ಲಿಯ) ಮರಳು ದಿಬ್ಬ; ಕಾಡು ಬೆಳೆದ ಗುಡ್ಡ; ಮರಗಾಡು.

Hurt ಹರ್ಟ್ (ನಾ., ಕ್ರಿ.) ಗಾಯ; ಪೆಟ್ಟು; ನೋವು; ಕೆಡುಕು; ತೊಂದರೆ. (ಕ್ರಿ.) (ದೇಹಕ್ಕೆ) ಗಾಯ, ಬಾಧೆ, ನೋವು, — ಮಾಡು; ನಷ್ಟ ಮಾಡು. (ಒಬ್ಬನನ್ನು, ಒಬ್ಬನ ಮನಸ್ಸನ್ನು) ವ್ಯಥೆಗೊಳಿಸು, ನೋಯಿಸು. (ಬಳ. ಮಾ.) ಕೆಡುಕನ್ನು, ನೋವನ್ನು, ಅನುಭವಿಸು; **Húrtful** (ಗು.); **Húrtfully** (ಕ್ರಿ. ವಿ.); **Húrtfulness** (ನಾ.); **Húrtless** (ಗು.)

Húrtle ಹರ್ಟಲ್ (ಕ್ರಿ., ನಾ.) (ಪ್ರಾಚೀ. ಪ್ರ.) ಅಪ್ಪಳಿಸಿ ಹೊಡೆ; ಸಂಘಟ್ಟಿಸು; (ವೇಗವಾಗಿ) ಬೀಸಿ ಎಸೆ; ಲಟಪಟ ಧ್ವನಿ ಮಾಡುತ್ತ ಚಲಿಸು, ನಡೆ; ರಭಸದಿಂದ ಬೀಳು, ಎರಗು. (ನಾ.) ಸಂಘಟ್ಟನೆ; ಅಪ್ಪಳಿಕೆ; ಜೋರಾದ ಎಸೆತ. ಲಟಪಟ ಧ್ವನಿ.

Húsband ಹಸ್‌ಬಂಡ್ (ನಾ., ಕ್ರಿ. ಸಕ.) ಗಂಡ; ಪತಿ; (H.'s tea ಸಾರ ಕಡಮೆಯಾದ ತಣ್ಣನೆಯ ಚಹ). (ಪ್ರಾಚೀ. ಪ್ರ.) (Good, bad, h. ಆಡಳಿತವನ್ನು ವಿಚಕ್ಷಣೆಯಿಂದ, — ಯಿಲ್ಲದೆ, ನಡಸುವವನು). (ಕ್ರಿ.) ಮಿತ ವ್ಯಯದಿಂದ (ಆಡಳಿತ) ನಡಸು; ಮಿತವ್ಯಯ ಮಾಡು; ಹಾಳತ ಮಾಡು. (ಪ್ರಾಚೀ. ಪ್ರ.) (ಭೂಮಿಯನ್ನು) ಉಳು; ಬೇಸಾಯ ಮಾಡು. (ಸಸ್ಯಗಳನ್ನು) ಕೃಷಿ ಮಾಡು.. (ಕಾವ್ಯ, ಹಾಸ್ಯ ಪ್ರ.) ಗಂಡನನ್ನು ದೊರಕಿಸು. (ವಿರ. ಪ್ರ.) (ಹೆಂಗಸನ್ನು) ಮದುವೆಯಾಗು; ಗಂಡನಾಗು. **Húsbandhood** (ನಾ.); **Húsbandship** (ನಾ.); **Húsbandlike** (ಗು.); **Húsbandman** (ನಾ.) ಒಕ್ಕಲಿಗ; ರೈತ. **Húsbandry** ಹಸ್ಬಂಡ್ರಿ (ನಾ.) ಆರಂಬ; ಬೇಸಾಯ. ಮನೆವಾರ್ತೆ; ಆರ್ಥಿಕ ನಿರ್ವಹಣ (Good, bad, h.). ಎಚ್ಚರಿಕೆಯ, ಜೋಕೆಯ, ಆಡಳಿತ; ವಿಚಕ್ಷಣೆ.

Hush ಹಷ್ (ನಾ., ಕ್ರಿ.) ಸದ್ದಿಲ್ಲದಿರುವುದು; ನಿಶ್ಶಬ್ದ; ಮೌನ (**H.-money** ರಟ್ಟುಮಾಡದಿರುವುದಕ್ಕಾಗಿ ಕೊಟ್ಟ ಹಣ; ಮೌನಕ್ಕೆ ಲಂಚ). (ಕ್ರಿ.) ಸದ್ದು ಅಡಗಿಸು; — ಮಾಡದಿರು; ಮೌನವಾಗು(ವಾಗಿಸು); ಸುಮ್ಮನಿರು [H. up (ವಿಚಾರವನ್ನು) ಮುಚ್ಚು; ಮುಚ್ಚಿಬಿಡು; ಅಡಗಿಸಿಬಿಡು]. (ಮು., ಭಾವ. ಅವ್ಯ.) ಸುಮ್ಮನಿರು (ರಿ)! ಸದ್ದು! [**Hush-aby** ಹಷಬೈ (ಭಾವ. ಅವ್ಯ.) (ಮಗುವಿಗೆ ಲಾಲಿ ಹಾಡುವಾಗ) ಸದ್ದು! ಮಲಗು!] **H.-ship** (ಹಿಂದಿನ ಮಹಾಯುದ್ಧ ಕಾಲದಲ್ಲಿ ಬಲು ಉದ್ದ, ವೇಗ ಮತ್ತು ಫಿರಂಗಿಶಕ್ತಿಗಳುಳ್ಳಂತೆ) ಗುಟ್ಟಾಗಿ ಕಟ್ಟಿದ (ಯುದ್ಧದ) ಹಡಗು; ಜರ್ಮನರ ಜಲಾಂತರ್ಗಾಮಿ ನಾವೆಗಳನ್ನು ಮೋಸಗೊಳಿಸಿ ಸೆಳೆಯಲು ಶಾಂತ ನಾವೆಯಂತೆ ವೇಷ ಹಾಕಿದ ಯುದ್ಧದ ಹಡಗು; ಗುಟ್ಟಿನ ಯುದ್ಧನಾವೆ. **H.-h.** (ಗು.) (ಸಾ., ರಾಜ್ಯದ ಯೋಜನೆಗಳು, ಮದ್ದು, ಗುಂಡು, ಮೊ. ವಿಷಯಗಳಲ್ಲಿ) ಬಹು ಗುಟ್ಟಾಗಿ ಇಡಬೇಕಾದ; ಅತಿ ರಹಸ್ಯದ.

Husk ಹಸ್ಕ್ (ನಾ., ಕ್ರಿ. ಸಕ.) ಕೆಲವು ಕಾಯಿಗಳ ಅಥವಾ ಬೀಜಗಳ ಒಣ ಹೊರಹೊದಿಕೆ: ಹೊಟ್ಟು; ಸಿಪ್ಪೆ. (ರೂಪ.) (ಒಂದರ) ನಿಸ್ಸಾರವಾದ, ನಿಷ್ಪ್ರಯೋಜನವಾದ, ಹೊರ ಭಾಗ. ದನಗಳ ಒಂದು ಗಂಟಲು ರೋಗ. (ಕ್ರಿ.) (ಒಂದರ) ಹೊಟ್ಟು ತೆಗೆ, ಸಿಪ್ಪೆ ಸುಲಿ. **Húsky**[1] (ಗು., ನಾ.) ಹೊಟ್ಟಿನ; ಹೊಟ್ಟುಭಾಗ ತುಂಬಿರುವ. ಹೊಟ್ಟಿನಂತೆ ಒಣಕಲಾದ. ಗಂಟಲು ಒಣಗಿರುವ; ಗಂಟಲೊಡೆದ; ದನಿಯೊಡೆದ; ಗೊಗ್ಗರ ದನಿಯ. ಬಲವಾದ; ಜಗ್ಗದ; ಕಟ್ಟಾಳಾದ. (ನಾ.) ಕಟ್ಟಾಳು; ದೃಢಾಂಗ. **Húskily** (ಕ್ರಿ. ವಿ.); **Húskiness** (ನಾ.)

Húsky[2] ಹಸ್ಕಿ (ನಾ.) 'ಎಸ್ಕಿಮೊ' (ಜನರ) ನಾಯಿ; ಎಸ್ಕಿಮೊ ಮನುಷ್ಯ, ಭಾಷೆ.

Hussár ಹುಸ್ಸಾರ್ (ನಾ.) ಲಘು (ಆಯುಧಗಳನ್ನು ಧರಿಸಿದ) ರಾವುತ ದಳದ ಸಿಪಾಯಿ: 'ಹುಸ್ಸಾರ್'.

Hússy, -zzy ಹಸಿ (ನಾ.) ಕೀಳು ನಡತೆಯ, ಗುಣಹೀನಳಾದ, ಹೆಂಗಸು; ಮರ್ಯಾದೆಗೆಟ್ಟ, ದಿಟ್ಟ, ಹುಡುಗಿ; ಹರಾಮಿ.

Hústings ಹಸ್ಟಿಂಗ್ಸ್ (ನಾ., ಬ. ವ.) (೧೮೭೨ಕ್ಕೆ ಹಿಂದೆ) ಪಾರ್ಲಿಮೆಂಟಿನ ಸದಸ್ಯಸ್ಥಾನಗಳಿಗೆ ಸೂಚಿತರಾಗುವ ಉಮೇದುವಾರರು ನಿಲ್ಲುವುದಕ್ಕೂ, ನಿಂತುಕೊಂಡು (ಚುನಾವಣೆದಾರರಿಗೆ) ಭಾಷಣ ಮಾಡುವುದಕ್ಕೂ, ಹಾಕುತ್ತಿದ್ದ (ತಾತ್ಕಾಲಿಕ) ಅಟ್ಟಣೆ; ಚುನಾವಣೆಯ ಕಾರ್ಯಕಲಾಪಗಳು. ಲಂಡನ್ನಿನ Guildhall ಭವನದಲ್ಲಿ ಪೌರ ಸಭಾಧ್ಯಕ್ಷ, ಮೊ. ರು ನಡಸುವ ನ್ಯಾಯಸ್ಥಾನ (ಈಗ ಅಪೂರ್ವ)

Hústle ಹಸ್‌ಲ್ (ಕ್ರಿ., ನಾ.) (ಮರ್ಯಾದೆ ತೋರದೆ, ಒರಟಾಗಿ) ತಳ್ಳು, ನೂಕು, ದಬ್ಬು; ತಳ್ಳಿಕೊಂಡು ಹೋಗು. (ವ್ಯಕ್ತಿ, ಮೊ. ನ್ನು) ಒಳಕ್ಕೆ, ಹೊರಕ್ಕೆ, —ದಬ್ಬು, ನೂಕು (*Into*, *out of* ಮೊ. ಉಪ. ದೊಡನೆ); ಮರ್ಯಾದೆ ತೋರದೆ (ಒಂದು ಕೆಲಸಕ್ಕಾಗಿ) —ತಳ್ಳು, ಬಲವಂತಪಡಿಸು. (ಒಂದರಮೇಲೆ) ಒರಟಾಗಿ ನೂಕು, ತಳ್ಳು (*Against* ಉಪ. ದೊಡನೆ). ನುಗ್ಗಿ ದಾರಿಮಾಡಿಕೊಂಡು ಹೋಗು; ಆತುರಪಡು (ಪಡಿಸು); ಅವಸರಿಸು; ಗೊಂದಲ, ಗಲಬಿಲಿ, —ಮಾಡು. (ನಾ.) ನೂಕು ನುಗ್ಗಲು; ಗಡಿಬಿಡಿ (ಮಾಡುವುದು); ಆತುರ (ಪಡುವುದು)

Hut ಹಟ್ (ನಾ., ಕ್ರಿ.) ಒರಟೊರಟಾಗಿ ಕಟ್ಟಿದ ಸಣ್ಣ ಕೀಳು ಮನೆ; ಗುಡಿಸಿಲು; ಗುಡಿಲು; ಜೋಪಡಿ. (ಸೈನ್ಯ) ಸೈನಿಕ ದಳಗಳಿಗೆ ಹಂಗಾಮಿಯಾಗಿ ಕಟ್ಟಿದ ಮರದ ಮನೆ. (ಕ್ರಿ.) (ಸೈನಿಕ ದಳಗಳು, ಮೊ. ನ್ನು) ಗುಡಿಸಿಲುಗಳಲ್ಲಿ ಬೀಡು ಬಿಡಿಸು, ನಿಲ್ಲಿಸು. ಗುಡಿಸಿಲಿನಲ್ಲಿ ತಂಗು, ವಾಸಮಾಡು, ಮರೆ ಹೊಂದು. **H.-circle** (ಪ್ರಾಚೀ. ಶಾ.) ಚರಿತ್ರಪೂರ್ವ ಕಾಲದ ಗುಡಿಸಿಲಿದ್ದ ನಿವೇಶನವನ್ನು ಸೂಚಿಸುವ ಕಲ್ಲುಗಳ ಅಥವಾ ಮಣ್ಣಿನ ಸುತ್ತು. **Hútment** (ನಾ.) ಗುಡಿಸಿಲುಗಳ ಬೀಡು, ಪಾಳೆಯ.

Hutch ಹಚ್ (ನಾ.) ಮೊಲ, ಮೊ. ನ್ನು ಕೂಡುವ ಪೆಟ್ಟಿಗೆಯಂಥ ಗೂಡು. ಗುಡಿಸಿಲು; ಜೋಪಡಿ; ಸಣ್ಣ ಮನೆ. (ಗಣಿಯ ಕೆಲಸ, ಮೊ. ಗಳಲ್ಲಿ ಉಪಯೋಗಿಸುವ) ತಗ್ಗುಚಕ್ರಗಳ ಸಣ್ಣ ಬಂಡಿ.

Huzoór ಹಜೂರ್ (ನಾ.) ಹಿಂದೂ ದೇಶೀಯರು ದೊಡ್ಡ ಅಧಿಕಾರಿ, ಮೊ. ರನ್ನು ಸಂಬೋಧಿಸುವಲ್ಲಿ ಉಪಯೋಗಿಸುವ ಗೌರವ ಪದ: ಹುಜೂರ್.

Huzzá ಹ(ಹು)ಜ್ಜಾ (ಭಾವ. ಅವ್ಯ., ನಾ., ಕ್ರಿ.) (ಹಿಗ್ಗು, ಜಯೋನ್ಮಾದ, ಪ್ರೋತ್ಸಾಹ, ಮೆಚ್ಚಿಕೆ —ಇವನ್ನು ಸೂಚಿಸುವ ಪದ) ಹುಜ್ಜಾ! (ನಾ.) ಈ ಘೋಷ. (ಕ್ರಿ.) 'ಹುಜ್ಜಾ' ಎನ್ನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Hýacinth ಹೈಅಸಿಂತ್ (ನಾ.) ಬಗೆಬಗೆಯ ಬಣ್ಣಗಳ, ಗಂಟೆಯ ಆಕಾರದ, ಹೂವು ಬಿಡುವ ಗಡ್ಡೆಗಿಡಗಳ ಜಾತಿ. ಧೂಮ್ರನೀಲ ಬಣ್ಣ. ಒಂದು ಪ್ರಶಸ್ತ ಶಿಲೆ; (ಕಿತ್ತಿಳೆ ಬಣ್ಣದ) 'ಝರ್ಕಾನ್' ಮಣಿ. **Hyacínthine** —ತಿನ್, —ತೈನ್ (ಗು.)

Hýades ಹೈಅಡೀಸ್ (ನಾ., ಬ. ವ.) ಕೃತ್ತಿಕಾ ನಕ್ಷತ್ರಪುಂಜದ ಹತ್ತಿರವಿರುವ ಒಂದು ನಕ್ಷತ್ರಪುಂಜ.

Hyaéna. **Hyena** ನೋಡಿ.

Hýaline ಹೈಅಲ(ಲೈ)ನ್ (ಗು., ನಾ.) ಗಾಜಿನಂಥ (ಮು., ಪಾರಿಭಾಷಿಕ ಪ್ರ.). (ನಾ.) (ಕಾವ್ಯ) ಶಾಂತ ಸಮುದ್ರ, ನಯಗಡಲು, ಶುಭ್ರಾಕಾಶ, ತಿಳಿ ಬಾನು, ಮೊ. **Hýalite** —ಲೈಟ್ (ನಾ.) 'ಓಪಲ್' ಜಾತಿಯ ಬಣ್ಣವಿಲ್ಲದ ಮಣಿ; ಕ್ಷೀರ ಸ್ಫಟಿಕ. **Hýaloid** (ಗು., ನಾ.) (ಅಂ. ರ. ಶಾ.) ಗಾಜಿನಂಥ. ಕಣ್ಣಿನ ಕಾಚಕ ದ್ರವವನ್ನು ಆವರಿಸಿಕೊಂಡಿರುವ ಪಾರದರ್ಶಕವಾದ ತೆಳ್ಳನೆಯ ಪೊರೆ (H. membrane)

Hýalite, Hýaloid. **Hyaline** ನೋಡಿ.

Hýbrid ಹೈಬ್ರಿಡ್ (ನಾ., ಗು.) ಭಿನ್ನ ವಂಶಗಳಿಗೆ ಅಥವಾ ಭಿನ್ನ ಪ್ರಭೇದಗಳಿಗೆ ಸೇರಿದ ಪ್ರಾಣಿಗಳ (ಅಥವಾ ಸಸ್ಯಗಳ) ಕೂಡಿಕೆಯಿಂದ ಹುಟ್ಟಿದ ಬೆರಕೆಯ ಪ್ರಾಣಿ, ಸಸ್ಯ; ಅಡ್ಡಜಾತಿಯ —; ಅಡ್ಡ ತಳಿ; ಇಬ್ಬಂದಿ; ಮಿಶ್ರಜ; ಸಂಕರಿ. ಮಿಶ್ರ ಜನಾಂಗದವನು. (ರೂಪ.) ಅಸಮಂಜಸವಾದ ಅಂಶಗಳು ಸೇರಿ ಆಗಿರುವ ವಸ್ತು, ಪದ. (ಗು.) ಅಡ್ಡ ಜಾತಿಯ; ಬೆರಕೆಯ; ಕಲಬೆರಕೆಯ (H. bill ಸಾರ್ವಜನಿಕ ಮತ್ತು ಖಾಸಗಿ — ಈ ಎರಡು ಲಕ್ಷಣಗಳೂ ಉಳ್ಳ, ಇದೇ ತೆರದ ಮಿಶ್ರ ಸಮಿತಿಯ ವಿಚಾರಕ್ಕಾಗಿ ಒಪ್ಪಿಸಿದ, ಪಾರ್ಲಿಮೆಂಟಿನ ಮಸೂದೆ). **Hýbridism** (ನಾ.) ಬೆರಕೆ(ಯ ಸ್ಥಿತಿ); ಅಡ್ಡತಳಿ ಹುಟ್ಟಿಸುವುದು. **Hybrídity** (ನಾ.) ಬೆರಕೆ; ಸಾಂಕರ್ಯ. **Hýbridize** (ಕ್ರಿ.) ಅಡ್ಡತಳಿ ಹುಟ್ಟಿಸುವುದಕ್ಕಾಗಿ ತಳಿ ಬೆರಸು. (ಪ್ರಾಣಿ, ಸಸ್ಯ) ಮಿಶ್ರ ತಳಿಯನ್ನು ಹುಟ್ಟಿಸು; ಮಿಶ್ರತಳಿಯಾಗು; ಬೇರೆ ತಳಿಯೊಡನೆ ಬೆರೆ. **Hýbridizable** (ಗು.) ಸಂಕರ ಸಾಧ್ಯ. **Hybridizátion** (ನಾ.)

Hýdatid ಹೈ(ಹಿ)ಡಟಿಡ್ (ನಾ.) (ವೈ. ಶಾ.) ಜೀವಿಗಳ ಅಂಗಾಂಶಗಳಲ್ಲಿ ರೋಗದ ಫಲವಾಗಿ ತಲೆದೋರುವ, ನೀರಿನಂಥ ದ್ರವ ತುಂಬಿದ, ಕೋಶ; (ಮು.) ಲಾಡಿಹುಳುವಿನಿಂದಾದ, ಅದರ ಹುಳುಮರಿ ಇರುವ, ಗುಳ್ಳೆ.

Hyde Park ಹೈಡ್ ಪಾರ್ಕ್ (ನಾ.) ಲಂಡನ್ನಿನ, —ಒಂದು ಉದ್ಯಾನ, ನೀಟುಗಾರರ ವಿಹಾರಸ್ಥಾನ (ಈಚೆಗೆ ಹಲವು ರಾಜಕೀಯ ಮತ್ತು ಇತರ ಚಳವಳಿಗಳ ಪ್ರದರ್ಶನ ಕ್ಷೇತ್ರ)

Hýdra ಹೈಡ್ರ (ನಾ.) (ಗ್ರೀಕ್ ಪುರಾಣ) ಕಡಿದುಹಾಕಿದಂತೆಲ್ಲ ಮರಳಿ ಹುಟ್ಟುತ್ತಿದ್ದ ಹಲವು ತಲೆಗಳುಳ್ಳ ಹಾವು: 'ಹೈಡ್ರ' ಸರ್ಪ. (ರೂಪ.) ನಿರ್ಮೂಲಮಾಡಲು ಕಷ್ಟವಾದದ್ದು. ನೀರ ಹಾವು; ಬಾಯಿಯ ಸುತ್ತಲೂ ಚಾವಟಿಗಳಂಥ ಸ್ಪರ್ಶಾಂಗಗಳುಳ್ಳ ಸೀನೀರಿನ ಒಂದು ಸಣ್ಣ ಪ್ರಾಣಿಜಾತಿ: 'ಹೈಡ್ರ'. **Hýdroid** ಹೈಡ್ರಾಯ್ಡ್ (ಗು., ನಾ.) (ಪ್ರಾ. ವಿ.) ಹೈಡ್ರದಂಥ (ಪ್ರಾಣಿ)

Hýdrant ಹೈಡ್ರಂಟ್ (ನಾ.) ನೀರು ಸರಬರಾಯಿಯ ಮುಖ್ಯ ಕೊಳಾಯಿಗೆ ಸೇರಿಸಿರುವ (ಸಾ., ಬೀದಿಯಲ್ಲಿರುವ) ನಲ್ಲಿಯ ಮೂತಿಗೆ ಮೆತು ನೀರ್ಕೊಳವಿಯನ್ನು ಸಿಕ್ಕಿಸಿ ನೀರನ್ನು ಪಡೆಯಬಹುದಾದ ನೀರಿನ ನಲ್ಲಿ: ನೀರು ತುಂಬುವ ನಲ್ಲಿ.

Hýdrate ಹೈಡ್ರೆಟ್ (ನಾ.), ಹೈಡ್ರೇಟ್ (ಕ್ರಿ. ಸಕ.) (ರ. ವಿ.) (ನೀರು ಮತ್ತೊಂದು ಸಂಯುಕ್ತದೊಡನೆ ಅಥವಾ ಒಂದು ಮೂಲಧಾತುವಿನೊಡನೆ ಸಂಯೋಗ ಹೊಂದಿ ಆದ) ಜಲ ಸಂಯುಕ್ತ: 'ಹೈಡ್ರೆಟ್'. (ಕ್ರಿ.) ನೀರಿನೊಡನೆ (ರಾಸಾಯನಿಕ) ಸಂಯೋಗವಾಗು, ಸಂಯೋಗ ಮಾಡು; ಜಲಸಂಯುಕ್ತವಾಗು, — ಮಾಡು. **Hydrátion** (ನಾ.)

Hydraúlic ಹೈಡ್ರಾಲಿಕ್ (ಗು., ನಾ.) ನೀರಿನ ಸಾಮರ್ಥ್ಯದಿಂದ ನಡೆಸುವ; ಜಲಸಾಮರ್ಥ್ಯದ (H. lift ನೀರೊತ್ತಡದ ಎತ್ತಿಗೆ. H. ram ಕೆಳಕ್ಕೆ ಹರಿಯುತ್ತಿರುವ ಜಲಧಾರೆಯ ಚಲನಶಕ್ತಿಯಿಂದ ಆ ನೀರಿನ ಸ್ವಲ್ಪ ಭಾಗವನ್ನು ಮೊದಲ ಮಟ್ಟಕ್ಕಿಂತ ಮೇಲಕ್ಕೆ ಏರುವಂತೆ ಏರ್ಪಡಿಸಿರುವ ಸ್ವಯಂಚಲ ಎತ್ತುಯಂತ್ರ). ನೀರಿನಲ್ಲಿ ಗಟ್ಟಿಗೊಳ್ಳುವ, ಬಿಗಿದುಕೊಳ್ಳುವ (H. cement). (H. press = Hydrostatic press). ಕೊಳಾಯಿಗಳ ಅಥವಾ ಕಾಲುವೆಗಳ ಮೂಲಕ ಸಾಗಿಸಿದ ನೀರಿನ. (ನಾ., ಬ. ವ. ದಲ್ಲಿ) (ಮು., ಚಾಲಕ ಶಕ್ತಿಯೊದಗುವಂತೆ ದ್ರವಗಳನ್ನು ಕೊಳಾಯಿ, ಮೊ ಗಳ ಮೂಲಕ ಹರಿಯಿಸುವುದಕ್ಕೆ ಸಂಬಂಧಿಸಿದ) ಜಲಧಾರ ಶಾಸ್ತ್ರ. **Hydraúlically** (ಕ್ರಿ. ವಿ.); **Hydraulícian** —ಷನ್ (ನಾ.) ಜಲಧಾರ ಶಾಸ್ತ್ರ ಪಂಡಿತ.

Hýdric ಹೈಡ್ರಿಕ್ (ಗು.) (ರ. ವಿ.) ಜಲಜನಕದ; ಜಲಜನಕವುಳ್ಳ. **Hýdride** —ಡ್ರೈಡ್ (ನಾ.) ಜಲಜನಕವು ಒಂದು ಮೂಲಧಾತುವಿನೊಡನೆ ಅಥವಾ ಒಂದು ಘಟಕಾವಯವದೊಡನೆ ಸಂಯುಕ್ತವಾಗಿ ಆದ ಪದಾರ್ಥ: 'ಹೈಡ್ರೈಡ್'.

Hýdro ಹೈಡ್ರೋ (ನಾ.) (ಬಳ. ಮಾ., ಸಂಕ್ಷಿಪ್ತ) = Hydropathic.

Hydro- ಹೈಡ್ರೊ— (ಸ. ಪೂ. ಪ.) (೧) ಜಲ—; ನೀರಿನ—. (೨) (ರೋಗಗಳ ಹೆಸರಿನಲ್ಲಿ) ನೀರು, ರಸ, — ತುಂಬಿದ. (೩) ಜಲಜನಕ ಸಂಯುಕ್ತ. **-áeroplane** (ಈಗ ವಿರ. ಪ್ರ.) = Seaplane (Sea ನೋಡಿ). **-cárbon** ಜಲಜನಕ ಮತ್ತು ಇಂಗಾಲ ಸಂಯುಕ್ತ: 'ಹೈಡ್ರೊಕಾರ್ಬನ್'. **-cele** (-ಸೀಲ್) (ವೈ. ಶಾ.) ದ್ರವ ತುಂಬಿದ ಬಾವು; ಅಂಡ ಶೋಬೆ; ಅಂಡ ವಾಯು. **-céphalus** (ವೈ. ಶಾ.) ತಲೆಬುರುಡೆಯೊಳಗಡೆ ಮಿದುಳಮೇಲೆ ದ್ರವಸೇರುವ ರೋಗ. **-cephálic** (ಗು.); **-céphalous** (ಗು.); **-chlóric** (ಗು.) (ರ. ವಿ.) ಜಲಜನಕ ಮತ್ತು ಕ್ಲೋರಿನ್ ಸಂಯುಕ್ತ: 'ಹೈಡ್ರೊಕ್ಲೋರಿಕ್'. **-cyánic** (ಗು.) (ರ. ವಿ.) ಜಲಜನಕ ಮತ್ತು Cyanogen ಸಂಯುಕ್ತ: 'ಹೈಡ್ರೊಸೈಯಾನಿಕ್' (H. c. acid 'ಪ್ರಸಿಕ್' ಆಮ್ಲ). **-dynámic(al)** (ಗು.) ದ್ರವಗಳಮೇಲೆ ಅಥವಾ ದ್ರವಗಳಿಂದ ಪ್ರಯೋಗವಾಗುವ ಬಲಗಳ; ದ್ರವ, ಜಲ,— ಬಲದ. **-dynámics** ದ್ರವ, ಜಲ,— ಬಲ ಶಾಸ್ತ್ರ. **-eléctric** (ಗು.) ನೀರಿನ ಅಥವಾ ನೀರಾವಿಯ ಘರ್ಷಣದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ; ಜಲ(ಪಾತ) ಶಕ್ತಿಯಿಂದುತ್ಪನ್ನವಾದ ವಿದ್ಯುತ್ತಿನ. **-graphy** (ಹೈಡ್ರಾ—) ಭೂಮಿಯ ಮೇಲಿನ ಜಲಭಾಗಗಳ ಶಾಸ್ತ್ರೀಯ ವಿವರಣೆ; ಜಲರಾಶಿ ವಿವರಣ ಶಾಸ್ತ್ರ. **-grapher** ಜಲರಾಶಿ ವಿವರಣ ಶಾಸ್ತ್ರಜ್ಞ. **-gráphic(al)** ಹೈಡ್ರೊಗ್ರಾಫಿಕ್— (ಗು.); **-kinétics** ಜಲ, ದ್ರವ, — ಚಲನ ಶಾಸ್ತ್ರ. **-kinétic** (ಗು.) ಜಲ ಚಲನದ. **-logy** (ಹೈಡ್ರಾ—) ನೀರಿನ ಗುಣಗಳು, ನಿಯಮಗಳು, ಮೊ. ನ್ನು ವಿವರಿಸುವ ಶಾಸ್ತ್ರ; ಜಲಧರ್ಮ ಶಾಸ್ತ್ರ. **-lysis** (ನೀರಿನ ಎರಡು ಘಟಕಗಳು ಬೇರೆ ಬೇರೆ ಸಂಯುಕ್ತಗಳಲ್ಲಿ ನೆಲೆಗೊಳ್ಳುವಂತೆ ಪರಿಣಾಮವಾಗುವ) ಜಲ ವಿಶ್ಲೇಷಣ. **-mánia** (ಹೈಡ್ರೊ—) ನೀರು ಬೇಕೆಂಬ ಅತ್ಯಾಶೆ, ಹುಚ್ಚು; ನೀರಿನ ಹುಚ್ಚು. **-mechánics** ಜಲ ಯಂತ್ರ ಶಾಸ್ತ್ರ. **-meter** (ಹೈಡ್ರಾ—) ದ್ರವಗಳ (ಕೆಲವು ವೇಳೆ ಘನವಸ್ತುಗಳ) ವಿಶಿಷ್ಟ ಗುರುತ್ವವನ್ನು ಕಂಡುಹಿಡಿಯಲು ಉಪಯೋಗಿಸುವ ಸಲಕರಣೆ; ದ್ರವ ವಿಶಿಷ್ಟಗುರುತ್ವ ಮಾಪಕ. **-métric** ಹೈಡ್ರೊ— (ಗು.); **-metry** (ಹೈಡ್ರಾ—) — ಮಾಪನ. **-phane** (ಹೈಡ್ರೊ—) ನೀರಿನಲ್ಲಿಟ್ಟಾಗ ನೀರನ್ನು ಹೀರಿಕೊಂಡು ಪಾರದರ್ಶಕವಾಗುವ ಒಂದು ಬಗೆಯ ಕ್ಷೀರ ಸ್ಫಟಿಕ; ಜಲಕಾಂತ ಮಣಿ. **-phone** ನೀರಿನ ಮೂಲಕ ಸಾಗಿಬರುವ ಧ್ವನಿಯನ್ನು ಕಂಡುಹಿಡಿಯುವ ಸಲಕರಣೆ; ಜಲಗತ ಧ್ವನಿ ಗ್ರಾಹಕ (ಮು., ಒಳಗಡಲ ಹಡಗುಗಳನ್ನು ಪತ್ತೆಹಚ್ಚುವಂಥದು). **-phyte** ಒಂದು ಜಲಸಸ್ಯ. **-plane** ಮುಳುಗು ಹಡಗು (ಜಲಾಂತರ್ನೌಕೆ) (ನೀರಿನ ಮೇಲಕ್ಕೆ) ಏಳುವುದಕ್ಕೂ (ನೀರಿನೊಳಕ್ಕೆ) ಮುಳುಗುವುದಕ್ಕೂ ಸಹಾಯಮಾಡುವ ಈಜುರೆಕ್ಕೆಯ ಆಕಾರದ ರಚನೆ: (ಮುಳುಗುಹಡಗಿನ) ಈಜುರೆಕ್ಕೆ. ನೀರಿನ ಮೇಲ್ಮೈಯನ್ನು ತಾಕಿಕೊಂಡು ಹೋಗುವ, ಹಗುರವೂ ಶೀಘ್ರಗಾಮಿಯೂ ಆದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೋಟಾರು ದೋಣಿ. ಕಡಲ (ಮೇಲೆ ಇಳಿಯುವುದಕ್ಕೂ ಕಡಲ ಮೇಲಿನಿಂದ ಹಾರುವುದಕ್ಕೂ ಅಳವಡಿಸಿದ) ಫಲಕ ವಿಮಾನ. **-pneumátic** (ಗು.) ನೀರು ಮತ್ತು ವಾಯು ಒಟ್ಟಿಗೆ ಕೆಲಸಮಾಡುವ ಸಂದರ್ಭದ : ಜಲ ವಾಯು ಚಲಿ. **-quínone** (— ಕ್ವೈನೋನ್) (ಛಾಯಾ ಚಿತ್ರದಲ್ಲಿ) ಬಿಂಬಸ್ಫುಟೀಕರಣಕ್ಕಾಗಿ ಉಪಯೋಗಿಸುವ ಒಂದು ಪದಾರ್ಥ. **-sphere** ಭೂಮಿಯ ಮೇಲ್ಮೈಯ ಜಲಭಾಗಗಳು ; ಜಲ ಮಂಡಲ. **-stat** (—ಸ್ಟ್ಯಾಟ್) ನೀರಿರುವುದನ್ನು ಕಂಡು ಹಿಡಿಯುವ ಒಂದು ವಿದ್ಯುತ್ ಸಲಕರಣೆ. **-therapeútic** —ತೆರ ಪ್ಯೂಟಿಕ್ (ಗು.) = Hydropathic. **-thérapy** (— ತೆರಪಿ) = Hydropathy. **-thérmal** (ಗು.) (ಭೂ. ವಿ.) (ಭೂಮಿಯ ಹೊರ ಪದರದಮೇಲೆ ಆಗುವ ವ್ಯತ್ಯಾಸಗಳ ಸಂಬಂಧದಲ್ಲಿ) ಕಾವುನೀರಿನ. **-thórax** (ವೈ. ಶಾ.) ಎದೆಯ ಶೋಬೆ. **-tropism** (ಸಸ್ಯಗಳ ವಿಷಯದಲ್ಲಿ) ತೇವದ ಕಡೆಗೆ, ಅಥವಾ ತೇವದ ಕಡೆಯಿಂದ, ತಿರುಗುವ ಗುಣ. **-zóa** — ಝೋಅ (ನಾ., ಬ. ವ.) ಕೆಲವು ಜಾತಿಯ ಸಮುದ್ರ ಪ್ರಾಣಿಗಳು.

Hýdrogen ಹೈಡ್ರೊಜೆನ್ (ನಾ.) (ರ. ವಿ.) ಈಗ ತಿಳಿದಿರುವ ವಸ್ತುಗಳ ಲ್ಲೆಲ್ಲ ಅತ್ಯಂತ ಹಗುರವಾದ, ಬಣ್ಣವೂ ವಾಸನೆಯೂ ಇಲ್ಲದ, ಕಣ್ಣಿಗೆ ಕಾಣದ, ಒಂದು ಅನಿಲ ಮೂಲಧಾತು (ಇದು ನೀರಿನ ಒಂದು ಘಟಕ) : ಜಲಜನಕ ; 'ಹೈಡ್ರೊಜೆನ್'. **Hydrógenous** ಹೈಡ್ರಾಜೆನಸ್ (ಗು.) ಜಲಜನಕದ ; —ವುಳ್ಳ. **Hýdrogenate** ಹೈಡ್ರೊಜೆನೇಟ್, **Hydró-** ಹೈಡ್ರಾ— (ಕ್ರಿ. ಸಕ.) ಜಲಜನಕ ಸೇರಿಸು ; ಜಲಜನಕ ಸಂಯುಕ್ತ ಮಾಡು. **Hydrógenize** ಹೈಡ್ರೊಜೆನೈಸ್ (ಕ್ರಿ. ಸಕ.)

Hýdroid. Hydra ನೋಡಿ.

Hýdromel ಹೈಡ್ರೊಮೆಲ್ (ನಾ.) ಜೇನುತುಪ್ಪ ಮತ್ತು ನೀರಿನ ಮಿಶ್ರಣ; ಜಲ ಮಧು ಮಿಶ್ರಣ. Vinous h. ಜೇನ್ನೀರು ಮದ್ಯ (= Mead)

Hydrópathy ಹೈಡ್ರಾಪತಿ (ನಾ.) (ವೈ. ಶಾ.) ನೀರನ್ನು (ದೇಹದ) ಹೊರಗೂ ಒಳಗೂ ಪ್ರಯೋಗಮಾಡುವ ಚಿಕಿತ್ಸೆ ; ಜಲ ಚಿಕಿತ್ಸೆ. **Hydropáthic** ಹೈಡ್ರೊಪ್ಯಾತಿಕ್ (ಗು., ನಾ.) ಜಲ ಚಿಕಿತ್ಸೆಯ. (ನಾ.) ಜಲ ಚಿಕಿತ್ಸಾಲಯ. **Hydrópathist** ಹೈಡ್ರಾಪತಿಸ್ಟ್ (ನಾ.) ಜಲ ಚಿಕಿತ್ಸಕ.

Hydrophóbia ಹೈಡ್ರೊಫೋಬಿಯ (ನಾ.) (ಮು., ಮನುಷ್ಯರಲ್ಲಿ ಹುಚ್ಚು ನಾಯಿ ಕಡಿತದ ರೋಗದ ಲಕ್ಷಣವಾಗಿ) ಜಲ ದ್ವೇಷ ; (ಮು., ಮನುಷ್ಯರಲ್ಲಿ) ನಾಯಿಕಡಿತದಿಂದ ಹುಟ್ಟುವ ಹುಚ್ಚು. (ಹಾಸ್ಯ ಪ್ರ.) ನೀರಿನ ಭಯ. **Hydrophóbic** (ಗು.)

Hýdropsy ಹೈಡ್ರಾಪ್ಸಿ (ನಾ.) (ಪ್ರಾಚೀ. ಪ್ರ. ; ವೈ. ಶಾ.) ಜಲೋದರ ; ಶೋಬೆ. **Hydrópic** (ಗು.) ಜಲೋದರದ ; ಶೋಬೆಯ.

Hydrostátic ಹೈಡ್ರೊಸ್ಟ್ಯಾಟಿಕ್ (ಗು., ನಾ.) ದ್ರವ ಬಲ ಸಮತಾ ಸ್ಥಿತಿಯ ಮತ್ತು ನಿಶ್ಚಲ ದ್ರವಗಳ ಒತ್ತಡದ. (ನಾ., ಬ. ವ. ದಲ್ಲಿ) ಈ ವಿಷಯದ ವಿಜ್ಞಾನ ಭಾಗ : ಜಲ ಸಮಸ್ಥಿತಿ ಶಾಸ್ತ್ರ. H. paradox ಆದರ್ಶ ದ್ರವದ ವಿಚಾರದಲ್ಲಿ, ಎಷ್ಟೇ ಅಲ್ಪ ಮೊತ್ತದ್ದಾದರೂ ಎಷ್ಟೇ ದೊಡ್ಡ ಮೊತ್ತಕ್ಕೆ ಸರಿದೂಗುವಂತೆ ಮಾಡಬಹುದೆಂಬ ತತ್ತ್ವ: ದ್ರವ ಬಲ ಸಮತಾ ಆಭಾಸ (ತತ್ತ್ವ). H. press [=Hydraulic, Bramah's, press (Bramah ನೋಡಿ)]. **Hydrostátical** (ಗು.) ; **Hydrostátically** (ಕ್ರಿ. ವಿ.)

Hýdrous ಹೈಡ್ರಸ್ (ಗು.) (ರ. ವಿ., ಖನಿಜ ಶಾಸ್ತ್ರ) ನೀರಿರುವ ; ನೀರುಳ್ಳ ; ಸಜಲ.

Hyéna, Hyaéna ಹೈಈನ (ನಾ.) ನಾಯಿಜಾತಿಗೆ ಸೇರಿದ ಒಂದು ಮಾಂಸಾಹಾರಿ ಚತುಷ್ಪಾದಿ ; (ಕತ್ತೆ)ಕಿರುಬ. [Striped h. ಪಟ್ಟೆ ಕಿರುಬ (ಇದರ ಊಳನ್ನು ಪಿಶಾಚಿನಗುವಿಗೆ ಹೋಲಿಸುತ್ತಾರೆ)]. ಕ್ರೂರ ಮನುಷ್ಯ ; ವಿಶ್ವಾಸ ಘಾತುಕ ; ವಂಚಕ ; ಸುಲಿಗೆಕೋರ. ಟಾಸ್ಮೇನಿಯ (ದ್ವೀಪದ) ಹುಲಿ. **H.-dog** ಕಿರುಬದಂತಿರುವ, ದ. ಆಫ್ರಿಕದ ನಾಯಿಜಾತಿಯ ಒಂದು ಮೃಗ : ಕಿರುಬ ನಾಯಿ.

Hyetómeter ಹೈಎಟಾಮಿಟರ್ (ನಾ.) ಮಳೆಯನ್ನಳೆಯುವ ಸಲಕರಣೆ ; ವೃಷ್ಟಿ ಮಾಪಕ.

Hygeia ಹೈಜೀಯ (ನಾ.) ಆರೋಗ್ಯಾಭಿಮಾನಿ ದೇವತೆ ; ಮೂರ್ತೀಕರಿಸಿದ ಆರೋಗ್ಯ. **Hygeían** (ಗು.) ; **Hýgiene** ಹೈಜಿಯಾನ್, ಹೈಜೀನ್ (ನಾ.) ಆರೋಗ್ಯ ಸೂತ್ರಗಳು, ತತ್ತ್ವಗಳು ; ಜನಾರೋಗ್ಯ ; ಆರೋಗ್ಯ ಶಾಸ್ತ್ರ. **Hygiénic(al)** ಹೈಜಿಎ—, ಹೈಜೀ— (ಗು.) ; **Hygiénically** (ಕ್ರಿ. ವಿ.) ; **Hygiénics** (ನಾ., ಬ. ವ.) = Hygiene. **Hýgienist** (ನಾ.)

Hýgiene. Hygeia ನೋಡಿ.

Hygro- ಹೈಗ್ರೊ— (ಸ. ಪೂ. ಪ.) ತೇವ — ; ದ್ರವ — ; ಜಲ —. **Hygrólogy** (ಹೈಗ್ರಾ —) (ವಾಯು, ಮೊ. ಗಳ) ಆರ್ದ್ರತಾ ವಿಚಾರ. **-meter** ವಾಯುವಿನ ಅಥವಾ ಅನಿಲದ ತೇವವನ್ನಳೆಯುವ ಸಲಕರಣೆ : (ವಾಯು) ಆರ್ದ್ರತಾ ಮಾಪಕ. **-métric** ಹೈಗ್ರೊ — (ಗು.) ; **-metry** (ಹೈಗ್ರಾ —) (ವಾಯು) ಆರ್ದ್ರತಾ ಮಾಪನ (ಶಾಸ್ತ್ರ). **-scope** (ಹೈಗ್ರೊ —) ವಾಯುವಿನ ಆರ್ದ್ರತೆಯನ್ನು ಸೂಚಿಸುವ (ಅದರ ಅಳತೆಮಾಡದ) ಸಲಕರಣೆ : ಆರ್ದ್ರತಾ ದರ್ಶಕ. **-scópic** — ಸ್ಕಾ — (ಗು.) ಆರ್ದ್ರತಾ ದರ್ಶಕದ ; (ವಸ್ತುಗಳ ವಿಷಯದಲ್ಲಿ) ಆರ್ದ್ರತಾ ಸೂಕ್ಷ್ಮತೆಯುಳ್ಳ.

Hýlic ಹೈಲಿಕ್ (ಗು.) ದ್ರವ್ಯದ ; ಜಡ ವಸ್ತುವಿನ.

Hylo- ಹೈಲೊ — (ಸ. ಪೂ. ಪ.) ಜಡದ್ರವ್ಯ — ; ಭೌತ —. **-mórphism** ಆದಿ ಭೌತ ದ್ರವ್ಯವೇ ವಿಶ್ವದ ಆದಿ ಕಾರಣವೆಂಬ ವಾದ ; ಭೌತ ದ್ರವ್ಯವೂ ಅದರ ವಿಕಾರಗಳೂ ವಿಶ್ವೋತ್ಪತ್ತಿಗೆ ಸಾಕಾದಷ್ಟು ಕಾರಣವೆಂಬ ವಾದ. **-theism** ಪರಮಾತ್ಮನಿಗೂ ಭೌತ ದ್ರವ್ಯಕ್ಕೂ ಅಭೇದ ಎಂಬ ವಾದ ; ಭೌತ ದೇವತ್ವ ವಾದ. **-theist** ; **-theístic** (ಗು.) ; **-zóic** (ಗು.) ; **-zóism** ದ್ರವ್ಯಕ್ಕೆ ಚೇತನವಿದೆ ಎಂಬ, ಅಥವಾ ಚೇತನವು ದ್ರವ್ಯದ ಒಂದು ಗುಣ ಎಂಬ, ವಾದ : ದ್ರವ್ಯ ಚೇತನ ವಾದ. **-zóist** ; **-zoístic** (ಗು.)

Hýmen[1] ಹೈಮೆನ್ (ನಾ.) (ಗ್ರೀಕ್ ಮತ್ತು ರೋಮನ್ ಪುರಾಣ) ವಿವಾಹಾಭಿಮಾನಿ ದೇವತೆ. **Hymenéal** ಹೈಮೆನೀಯಲ್ (ಗು., ನಾ.) ವಿವಾಹ ಸಂಬಂಧದ ; (ನಾ.) ವಿವಾಹ ಗೀತ ; (ಬ. ವ. ದಲ್ಲಿ) ಶೋಭನ ಪ್ರಸ್ತ. **Hymenéally** (ಕ್ರಿ. ವಿ.)

Hýmen[2] ಹೈಮೆನ್ (ನಾ.) (ಅಂ. ರ. ಶಾ.) ಕನ್ಯೆಯ ಯೋನಿಯ (ಬಹಿರ್ದ್ವಾರವನ್ನು ಮುಚ್ಚಿರುವ) ಪೊರೆ : ಯೋನಿಚ್ಛದ.

Hymenóptera ಹೈಮೆನಾಪ್ಟೆರ (ನಾ., ಬ. ವ.) ಪೊರೆಯಂತಿರುವ ನಾಲ್ಕು ರೆಕ್ಕೆಗಳುಳ್ಳ ಒಂದು ದೊಡ್ಡ ಕೀಟವರ್ಗ. **Hymenópteral** (ಗು.) ; **Hymenópterous** (ಗು.)

Hymn ಹಿಂ (ನಾ., ಕ್ರಿ.) (ಮು., ಆರಾಧನೆಯ ಕಾಲದಲ್ಲಿ ಹೇಳುವ ಛಂದೋಬದ್ಧವಾದ) ದೇವರ ಸ್ತೋತ್ರಗೀತ ; (ದೇವರ) ಸ್ತೋತ್ರ ಪಾಠ ; ಋಕ್ಕು [H.-book (ದೇವರ) ಸ್ತೋತ್ರಪಾಠ ಪುಸ್ತಕ]. (ಕ್ರಿ.) (ದೇವರ) ಸ್ತೋತ್ರ ಗಾನ ಮಾಡು. **Hýmnal** ಹಿಮ್ನಲ್ (ಗು., ನಾ.) ಸ್ತೋತ್ರಗಳ. (ನಾ.) ಸ್ತೋತ್ರಪಾಠ ಪುಸ್ತಕ. **Hýmnary** (ನಾ.) ಸ್ತೋತ್ರಪಾಠ ಪುಸ್ತಕ. **Hýmnic** (ಗು.) ; **Hýmnist** (ನಾ.) ಸ್ತೋತ್ರಪಾಠ ಕರ್ತ. **Hýmnody** ಹಿಮ್ನೊಡಿ (ನಾ.) ಸ್ತೋತ್ರ ಗಾನ ; ಸಂಕೀರ್ತನೆ ; ಸ್ತೋತ್ರ ಮಾಲೆ ; ಸ್ತೋತ್ರ ರಚನೆ. **Hýmnodist** (ನಾ.) ; **Hymnógrapher** ಹಿಮ್ನಾಗ್ರಫರ್ (ನಾ.) ಸ್ತೋತ್ರ ರಚನಕಾರ. **Hymnólogy** (ನಾ.) ಸ್ತೋತ್ರ ರಚನೆ ; — ವ್ಯಾಸಂಗ ; ಸ್ತೋತ್ರ ಮಾಲೆ. **Hymnólogist** (ನಾ.) ; **Hymnológic** ಹಿಮ್ನೊಲಾಜಿಕ್ (ಗು.)

Hýoid ಹೈಆಯ್ಡ್ (ಗು., ನಾ.) (ಅಂ. ರ. ಶಾ.) [H. bone (ಗಲ್ಲಕ್ಕೂ 'ಥೈರಾಯ್ಡ್' ಮೃದ್ವಸ್ಥಿಗೂ ಮಧ್ಯೇ ಇರುವ) ನಾಲಗೆಮೂಳೆ ; ಜಿಹ್ವಾಸ್ಥಿ]. (ನಾ.) = H. bone. (ಗು.) ನಾಲಗೆಮೂಳೆಯ ; ಜಿಹ್ವಾಸ್ಥಿಗೆ ಸಂಬಂಧಪಟ್ಟ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Hyp. **Hip**[3] ನೋಡಿ.

Hypaéthral, -péthral ಹೈ(ಹಿ)ಪೀತ್ರಲ್ (ಗು.) ಆಕಾಶಕ್ಕೆ ತೆರೆದಿರುವ; ಛಾವಣಿಯಿಲ್ಲದ; ಬಯಲಿನ.

Hypállage ಹೈ(ಹಿ)ಪ್ಯಾಲಜಿ (ನಾ.) (ವ್ಯಾ.) ಒಂದು ಪ್ರಮೇಯದ (ಲ್ಲಿಯ) ಎರಡು ಭಾಗಗಳ ಸಹಜ ಸಂಬಂಧದ ವ್ಯತ್ಯಯ (ಉದಾ., He is dead to shame = Shame is dead to him 'ಅವನ ಪಾಲಿಗೆ ನಾಚಿಕೆಯೇ ಇಲ್ಲ' ಎಂಬುದಕ್ಕೆ ಬದಲಾಗಿ 'ನಾಚಿಕೆಯ ಪಾಲಿಗೆ ಅವನು ಇಲ್ಲವೇ ಇಲ್ಲ' ಎಂದಂತೆ)

Hyper- ಹೈಪರ್— (ಪೂ. ಪ್ರ.) (ಮೇಲೆ, ಆಚೆ, ಮೀರಿ, ಹೆಚ್ಚಾಗಿ, ಅತಿ — ಎಂಬ ಅರ್ಥಗಳಲ್ಲಿ)

Hyperaesthésia ಹೈಪರ್ಎ(ಈ)ಸ್ಥೀಸಿಯ (ನಾ.) (ವೈ. ಶಾ.) ನರಗಳ (ಅಥವಾ ನರಕೇಂದ್ರಗಳ) ವ್ಯಾಧಿಸಂಬಂಧವಾದ ಮಿತಿಮೀರಿದ ಸೂಕ್ಷ್ಮವೇದಿತೆ; ಅತಿ ಸೂಕ್ಷ್ಮ ವೇದಿತೆ. **Hyperaesthétic** (ಗು.)

Hypérbaton ಹೈಪರ್ಬಟಾನ್ (ನಾ.) (ವ್ಯಾ., ಅಲಂ.) (ಮು., ಪ್ರಾಧಾನ್ಯ ಸೂಚನೆಗಾಗಿ) ಪದಗಳ ಸಹಜ (ಸಂಯೋಜನ) ಕ್ರಮವನ್ನು ವಿಪರ್ಯಯ ಮಾಡುವುದು: ವಿಪರ್ಯಯಾಲಂಕಾರ (ಉದಾ., "The famous tree stood here" ಎಂಬುದಕ್ಕೆ ಬದಲಾಗಿ "Here stood the famous tree" ಎಂದು ಹೇಳುವುದು)

Hypérbola ಹೈಪರ್ಬೊಲ (ನಾ.) (ಜ್ಯಾ.) ಒಂದು ಶಂಕುವನ್ನು ಅದರ ಆಧಾರಕ್ಷೇತ್ರಕ್ಕೂ ಪೈಗೂ ಇರುವ ಕೋನಕ್ಕಿಂತ ಹೆಚ್ಚಾದ ಕೋನದಲ್ಲಿ ಒಂದು ಸಮಕ್ಷೇತ್ರದಿಂದ ಕತ್ತರಿಸಿದರೆ ಏರ್ಪಡುವ ವಕ್ರರೇಖೆ: ಅತಿಪರವಲಯ. **Hyperbólic** — ಬಾಲಿಕ್ (ಗು.)

Hypérbole ಹೈಪರ್ಬೊಲಿ (ನಾ.) (ಅಲಂ.) (ಅಕ್ಷರಶಃ ಪರಿಗಣಿಸಬಾರದ) ಅತ್ಯುಕ್ತಿ; ಅತಿಶಯೋಕ್ತಿ. **Hyperbólical** — ಬಾಲಿಕಲ್ (ಗು.); **Hyperbólically** (ಕ್ರಿ. ವಿ.); **Hypérbolism** — ಬೊಲಿಸಮ್ (ನಾ.) ಅತ್ಯುಕ್ತಿ, —ಪ್ರಯೋಗ, ಪ್ರಿಯತೆ. **Hypérbolist** (ನಾ.) ಅತ್ಯುಕ್ತಿ ಪ್ರಯೋಗಿ.

Hyperbórean ಹೈಪರ್ಬೋರಿಯನ್ (ಗು., ನಾ.) ಭೂಮಿಯ ಪರಮ ಉತ್ತರ ಪ್ರದೇಶದ (ನಿವಾಸಿ); (ಬಳ. ಮಾ.) ಒಂದು ನಾಡಿನ ಅತ್ಯುತ್ತರ ಭಾಗದ (ನಿವಾಸಿ). (ಗ್ರೀಕ್ ಪುರಾಣ) ಉತ್ತರ ಮಾರುತದ ಆಚೆ, ನಿತ್ಯಬಿಸಿಲೂ ಸುಖ ಸಮೃದ್ಧಿಯೂ ಇರುವ ನಾಡಿನಲ್ಲಿ ವಾಸಿಸುವ ಒಂದು ಕುಲದವನು.

Hypercataléctic ಹೈಪರ್ಕ್ಯಾಟಲೆಕ್ಟಿಕ್ (ಗು.) (ಛಂ.) (ಪದ್ಯದ ವಿಷಯದಲ್ಲಿ) ದ್ವಿಗಣ ಪಾದದ ಕೊನೆಯಲ್ಲಿ ಒಂದು ಅಕ್ಷರ ಹೆಚ್ಚಾಗಿರುವ; ಅಧಿಕಾಕ್ಷರದ.

Hypercrítical ಹೈಪರ್ಕ್ರಿಟಿಕಲ್ (ಗು.) (ಮು., ಸಣ್ಣ ತಪ್ಪುಗಳ ವಿಷಯದಲ್ಲಿ) ಕಟು ವಿಮರ್ಶೆ ಮಾಡುವ; ಕುಶಪಿಷ್ಟೆಯ; ಅತಿ ಸೂಕ್ಷ್ಮ ವಿಮರ್ಶಕ. **Hypercrítically** (ಕ್ರಿ. ವಿ.); **Hypercríticism** (ನಾ.); **Hypercríticize** (ಕ್ರಿ.)

Hypermétric(al) ಹೈಪರ್ಮೆಟ್ರಿಕ್(ಕಲ್) (ಗು.) (ಪದ್ಯಪಾದ) ಹೆಚ್ಚಕ್ಷರವುಳ್ಳ; (ಅಕ್ಷರ) ಹೆಚ್ಚಿನ, ಮಿಗಿಲಾದ.

Hypermetrópia ಹೈಪರ್ಮಿಟ್ರೋಪಿಯ (ನಾ.) (ವೈ. ಶಾ.) ಅತಿ ದೂರ ದೃಷ್ಟಿ(ಯ ರೋಗ). **Hypermetrópic** — ಟ್ರಾಪಿಕ್ (ಗು.)

Hyperphýsical ಹೈಪರ್ಫಿಸಿಕಲ್ (ಗು.) ಅತಿ ಭೌತ; ಲೋಕಾತೀತ.

Hýpersthene ಹೈಪರ್ಸ್ತೀನ್ (ನಾ.) ನಸು ಹಸುರು ಬಣ್ಣದ ಒಂದು ಖನಿಜ.

Hypértrophy ಹೈಪರ್ಟ್ರೊಫಿ (ನಾ.) (ವೈ. ಶಾ.) ಅತಿ ಆಹಾರ ಪುಷ್ಟಿಯಿಂದಾದ (ಅಂಗ, ಮೊ. ಗಳ) ಬೆಳವಣಿಗೆ, ವಿಸ್ತರಣ; ಅತಿ ವೃದ್ಧಿ. **Hypertróphic** — ಟ್ರಾಫಿಕ್ (ಗು.); **Hypértrophied** — ಟ್ರೊಫಿಡ್ (ಗು.)

Hypéthral. **Hypaethral** ನೋಡಿ.

Hýphen ಹೈಫನ್ (ನಾ., ಕ್ರಿ. ಸಕ.) ಎರಡು ಪದಗಳನ್ನು ಒಟ್ಟುಗೂಡಿಸುವುದಕ್ಕಾಗಲಿ, ಪಂಕ್ತಿಯ ಕೊನೆಯಲ್ಲಿ ಮುರಿದ ಒಂದು ಪದದ ಭಾಗವನ್ನು (ಮುಂದಿನ ಪಂಕ್ತಿಯಲ್ಲಿ) ಸೇರಿಸುವ ಸೂಚನೆಗಾಗಲಿ, ಅಥವಾ ಒಂದು ಪದವನ್ನು ಭಾಗಗಳಾಗಿ ವಿಂಗಡಿಸುವುದಕ್ಕಾಗಲಿ ಉಪಯೋಗಿಸುವ ಚಿಹ್ನೆ (-); ಕೂಡುಗೆರೆ. (ಮಾತನಾಡುವಾಗ) ಪದದ ಅಕ್ಷರಗಳ ನಡುವೆ ಸ್ವಲ್ಪ ವಿರಾಮ. (ಕ್ರಿ.) (ಪದಗಳನ್ನು) ಕೂಡುಗೆರೆಯಿಂದ ಕೂಡಿಸು; (ಸಮಾಸ ಪದವನ್ನು) ಕೂಡುಗೆರೆ ಹಾಕಿ ಬರೆ. **Hýphenate** — ನೇಟ್ (ಕ್ರಿ. ಸಕ.) = Hyphen (ಕ್ರಿ.) (Hyphenated Americans = German-Americans, Irish-Americans, &c.)

Hypno- ಹಿಪ್ನೊ — (ಸ. ಪೂ. ಪ.) ನಿದ್ದೆ—, ನಿದ್ರಾ—. **-génesis** ನಿದ್ರಾವಸ್ಥೆ ಹುಟ್ಟಿಸುವುದು; **-genétic** (ಗು.) — ಹುಟ್ಟಿಸುವ. **-logy** (ಹಿಪ್ನಾ—) ನಿದ್ರಾವಸ್ಥೆಯ ವಿಚಾರ.

Hypnósis ಹಿಪ್ನೋಸಿಸ್ (ನಾ.) (ಕೃತಕವಾಗಿ ಬರಿಸಿದ) ನಿದ್ದೆ; ವಶೀಕರಣ ಸುಪ್ತಸ್ಥಿತಿ. **Hypnótic** ಹಿಪ್ನಾ— (ಗು., ನಾ.) ವಶ್ಯ ಸುಪ್ತಿ(ಯುಂಟುಮಾಡುವ); ಸುಪ್ತ್ಯಾವಾಹಕ. (ನಾ.) ನಿದ್ದೆ ಬರಿಸುವ ವಸ್ತು; ನಿದ್ರಾಜನಕ. ವಶ್ಯ ಸುಪ್ತ; ಸುಪ್ತ್ಯಾವಾಹಿತ. **Hýpnotism** ಹಿಪ್ನೊ— (ನಾ.) ಬಾಹ್ಯ ಪ್ರಚೋದನೆಗೆ ಮಾತ್ರ ಗಮನಕೊಡುವ ಗಾಢನಿದ್ರೆಯಂಥ ಸ್ಥಿತಿ(ಯನ್ನು ಕೃತಕವಾಗಿ ಬರಿಸುವುದು); ವಶ್ಯ ಸುಪ್ತಿ(ಯನ್ನುಂಟುಮಾಡುವುದು); ಸುಪ್ತ್ಯಾವಾಹನೆ. **Hýpnotist** (ನಾ.); **Hýpnotize** (ಕ್ರಿ. ಸಕ.)

Hýpo ಹೈಪೊ (ನಾ.) (ಛಾಯಾ ಚಿತ್ರ) ಬಿಂಬವನ್ನು ಸ್ಥಾಯಿಗೊಳಿಸಲು ಉಪಯೋಗಿಸುವ (Hyposulphite of soda ಎಂಬ) ಲವಣ.

Hýpo- ಹೈ(ಹಿ)ಪೊ— (ಸ. ಪೂ. ಪ.) ಕೆಳ(ಗಿನ)—, ಕಡಮೆ—, ಸ್ವಲ್ಪ—, ಒಳ—. (ರ. ವಿ.) (ಸಾಮಾನ್ಯ ಹೆಸರಿನ ಆಮ್ಲಜನಕದ ಸಂಯುಕ್ತಗಳ ಶ್ರೇಣಿಗಿಂತ ಕೆಳ ತರಗತಿಯ ಸಂಯುಕ್ತಗಳ ಹೆಸರನ್ನು ರಚಿಸುವಾಗ ಉಪಯೋಗ: ಉದಾ., Sulphurous acid = H_2SO_3; Hyposulphurous acid = H_2SO_2). **-blast** (ಜೀ. ವಿ.) ಭ್ರೂಣಾವರಣದಲ್ಲಿ ಜೀವ ಕಣಗಳ ಒಳ ಆಸ್ತರಣ. **-bránchial** (ಗು.) ಜಲಪುಪ್ಪುಸಗಳ ಕೆಳಗಿರುವ. **-corístic** (ಗು.) (ವ್ಯಾ.) ಮುದ್ದುಹೆಸರಿನ ತೆರದ. **-cýcloid** (ಜ್ಯಾ.) ಒಂದು ವೃತ್ತರೇಖೆಯು ಒಳ ಪರಿಧಿಯನ್ನು ಹೊದ್ದಿಕೊಂಡು ಮತ್ತೊಂದು ವೃತ್ತರೇಖೆ ಉರುಳುವಲ್ಲಿ, ಅದರಲ್ಲಿಯ ಒಂದು ನಿರ್ದಿಷ್ಟ ಬಿಂದು ರೇಖಿಸುವ ವಕ್ರರೇಖೆ: ಅಂತರ್ವೃತ್ತ ಕಲ್ಪ. **-gástrium** ಹೊಟ್ಟೆಯ ಅತ್ಯಂತ ಕೆಳಭಾಗ; ಕೆಳಹೊಟ್ಟೆ; ಕಿಬ್ಬೊಟ್ಟೆ; ವಸ್ತಿ. **-géal** — ಜೀಅಲ್, **-géan** (ಗು.) ನೆಲದೊಳಗಿನ. **-gene** — ಜೀನ್ (ಗು.) (ಭೂ. ವಿ.) (ಶಿಲೆಗಳ ವಿಷಯದಲ್ಲಿ) ನೆಲದೊಳಗೆ ರಚನೆಯಾದ. **-géum** — ಜೀಅಂ (ಬ. ವ. -gea) ನೆಲದೊಳಗಿನ ಕೋಣೆ; ನೆಲ ಮಾಳಿಗೆ. **-glóssal** (ಗು., ನಾ.) ನಾಲಗೆಯ ಚಲನ ವಾಹಿ ನರ (= H. nerve); ಈ ನರದ. **-gynous** ಹೈ(ಹಿ)ಪಾಜಿನಸ್ (ಗು.) ಶಲಾಕೆಗಳ ಅಥವಾ ಅಂಡಾಶಯದ ಕೆಳಗಿರುವ. **-nasty** (ನಾ.) (ಸ. ವಿ.) ಸಸ್ಯಾಂಗಗಳು ಕೆಳಭಾಗದಲ್ಲಿ ಹೆಚ್ಚುವೇಗವಾಗಿ ಬೆಳೆಯುವ ಪ್ರವೃತ್ತಿ; ಅಧೋವೃದ್ಧಿ. **-phósphite** (ರ. ವಿ.) Hypophosphorous ಆಮ್ಲದ ಒಂದು ಲವಣ. **-style** (ಗು. ನಾ.) (ವಾ. ಶಾ.) ಕಂಬಗಳಮೇಲೆ ನಿಂತಿರುವ ಛಾವಣಿಯುಳ್ಳ (ಮಂದಿರ, ಮೊ.): ಕಂಬಸಾಲಿನ (ಮಂದಿರ, ಮೊ.). **-trachélium** (— ಟ್ರಕೀಲಿಯಂ) ಕಂಬದ ಬೋದಿಗೆಯ ಕೆಳಭಾಗ.

Hýpocaust ಹೈ(ಹಿ)ಪೊಕಾಸ್ಟ್ (ನಾ.) (ರೋ. ಪ್ರಾ.) ಮನೆಗೆ ಅಥವಾ ಸ್ನಾನಗೃಹಕ್ಕೆ ಶಾಖಕೊಡುವುದಕ್ಕಾಗಿ ಅಗ್ನಿಕುಂಡದಿಂದ ಬಂದ ಶಾಖವನ್ನು ಶೇಖರಿಸಲು ಮಾಡಿದ ನೆಲದೊಳಗಿನ ಟೊಳ್ಳು ಜಾಗ: ಶಾಖಸಂಗ್ರಹದ ನೆಲಮಾಳಿಗೆ.

Hypochóndria ಹೈ(ಹಿ)ಪೊಕಾಂಡ್ರಿಯ (ನಾ.) (ನಿಜವಾದ ಕಾರಣವಿಲ್ಲದ) ವ್ಯಾಧಿ ಭ್ರಾಂತಿ ವಿಷಣ್ಣತೆ. **Hypochóndriac** — ಕಾಂಡ್ರಿಆ್ಯಕ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಗು., ನಾ.) ಈ ರೋಗವುಳ್ಳ(ವನು). **Hypochondríacal** —ಡ್ರೈಅಕಲ್ (ಗು.) ; **Hypochondríacally** (ಕ್ರಿ. ವಿ.) ; **Hypochondríasis** —ಡ್ರೈಅಸಿಸ್ (ನಾ.) (ವೈ. ಶಾ.) (ಸಾ., ಅಜೀರ್ಣದಿಂದ ಕೂಡಿದ) ನರವ್ಯೂಹದ ಒಂದು ಬಗೆಯ ವ್ಯಾಧಿ (ಮು., ರೋಗಿಯು ತನಗೆ ಯಾವುದೋ ಪ್ರಬಲವಾದ ದೇಹವ್ಯಾಧಿಯಿದೆಯೆಂಬ ನಿಷ್ಕಾರಣವಾದ ನಂಬಿಕೆಯಿಂದ ಪೇಚಾಡುವಂಥದು) : ರೋಗ ಭ್ರಾಂತಿ.

Hypócrisy ಹಿಪಾಕ್ರಿಸಿ (ನಾ.) ಸೌಶೀಲ್ಯದ ಅಥವಾ ಒಳ್ಳೆಯತನದ ಸೋಗು ; ಸದ್ಧರ್ಮ ವೇಷ ; ಕಪಟಾಚರಣೆ ; ಠಕ್ಕು ; ಬೂಟಾಟಿಕೆ. **Hýpocrite** ಹಿಪೊಕ್ರಿಟ್ (ನಾ.) ಬೂಟಾಟಗಾರ ; ಕಪಟಿ ; ಠಕ್ಕ ; ಆಷಾಢಭೂತಿ. **Hypocrítical** (ಗು.) ; **Hypocrítically** (ಕ್ರಿ. ವಿ.)

Hypodérmic ಹೈ(ಹಿ)ಪೊಡರ್ಮಿಕ್ (ಗು.) (ವೈ. ಶಾ.) (ಔಷಧದ್ರವ್ಯ, ಮೊ. ಗಳ ವಿಷಯದಲ್ಲಿ) ಚರ್ಮದ ಕೆಳಗೆ ಪ್ರಯೋಗಿಸಿದ (H. injection ಚರ್ಮದ ಕೆಳಗೆ ಚುಚ್ಚಿ ಸೇರಿಸುವುದು). (ಅಂ. ರ. ಶಾ.) ಚರ್ಮದ ಕೆಳಗೆ ನೆಲಸಿರುವ. **Hypodérmically** (ಕ್ರಿ. ವಿ.)

Hypóstasis ಹೈ(ಹಿ)ಪಾಸ್ಟಸಿಸ್ (ನಾ. ; ಬ. ವ. -ases — ಸೀಜ಼್) (ವೈ. ಶಾ.) (ದೇಹದ ಅಂಗಗಳಲ್ಲಿ) ರಕ್ತಾಧಿಕ್ಯ. (ತ. ಶಾ.) ಉಪಾಧಿಗಳಿಂದ ಬೇರ್ಪಡಿಸಿದ, ಅವುಗಳ ಹಿಂದೆ ಇರುವ, ಶುದ್ಧ ಸತ್ತ್ವ. (ದೇವ. ಶಾ.) (ಕ್ರಿಸ್ತನ) ಮೂರ್ತಿತ್ವ ; (ದೇವರ) ವ್ಯಕ್ತಿತ್ವ. **Hypostátic(al)** —ಸ್ಟ್ಯಾ— (ಗು.) ; **Hypostátically** (ಕ್ರಿ. ವಿ.) ; **Hypóstasize** ಹೈ(ಹಿ)ಪಾಸ್ಟ—, **Hypóstatize** (ಕ್ರಿ. ಸಕ.) ವಸ್ತುವಾಗಿ ಪರಿಗಣಿಸು ; ವಾಸ್ತವಿಕ ರೂಪ ಕೊಡು.

Hypótenuse ಹೈ(ಹಿ)ಪಾಟೆನ್ಯೂಸ್ (ನಾ.) (ಜ್ಯಾ.) ಸಮಕೋನಿಕ ತ್ರಿಕೋನದಲ್ಲಿ ಸಮಕೋನಕ್ಕೆ ಅಭಿಮುಖವಾಗಿರುವ ಬಾಹು : ಕರ್ಣ. (Hypothenuse ಎಂಬ ರೂಪ ಅಸಾಧು)

Hýpothec ಹೈ(ಹಿ)ಪಾತೆ(ತಿ)ಕ್ (ನಾ.) (ರೋಮನ್ ಮತ್ತು ಸ್ಕಾಟಿಷ್ ನ್ಯಾ. ಶಾ.) (ಸಾಲಗಾರನಿಗೆ ಸೇರಿದ ಮತ್ತು ಅವನ ಅಧೀನದಲ್ಲಿರುವ ಸ್ವತ್ತಿನಮೇಲೆ ಸಾಲಕೊಟ್ಟವನಿಗೆ ಕಾನೂನು ಸ್ಥಾಪಿಸಿಕೊಟ್ಟ) ಆಧಾರ. **Hypóthecary** —ಪಾತಿಕೆ(ಕ)ರಿ (ಗು.) ಇಂತಹ ಆಧಾರದ ; ಇಂತಹ ಆಧಾರದ ತೆರದ. **Hypóthecate** (ಕ್ರಿ. ಸಕ.) ಆಧಾರ ಮಾಡು ; ಈಡು ಮಾಡು ; ಅಡಮಾನ ಮಾಡು. **Hypothecátion** (ನಾ.)

Hypóthesis ಹೈ(ಹಿ)ಪಾತಿಸಿಸ್ (ನಾ., ಬ. ವ. -ses — ಸೀಜ಼್) ಒಂದು ವಿಷಯವನ್ನು ವಿಚಾರಮಾಡುವಲ್ಲಿ ಅದರ ತಥ್ಯಾಂಶದ ನಿಷ್ಕರ್ಷೆಯಿಲ್ಲದುದರಿಂದ, ಆ ತಥ್ಯಾಂಶವು ಹೀಗಿರಬಹುದೆಂದು ಊಹಿಸಿ ಮಾಡಿದ, ಅಥವಾ ವಿಚಾರಮಾಡಲು ಆಧಾರವಾಗಿಟ್ಟುಕೊಂಡ, ಒಂದು ಊಹೆ, ಕಲ್ಪನೆ : ಆಧಾರ ಕಲ್ಪನೆ ; ಊಹಾ ಪ್ರತಿಜ್ಞೆ. **Hypothétic(al)** —ಪೊತೆ— (ಗು.) ; **Hypothétically** (ಕ್ರಿ. ವಿ.) ; **Hypóthesize** — ಪಾತಿ — (ಕ್ರಿ.) ಊಹಾ ಪ್ರತಿಜ್ಞೆಯನ್ನು ರಚಿಸು, ಕಲ್ಪಿಸು ; ಭಾವಿಸಿಕೊ.

Hypsómeter ಹಿಪ್ಸಾಮಿಟರ್ (ನಾ.) ಎತ್ತರಗಳನ್ನು ಅಳೆಯುವ ಸಲಕರಣೆ ; ಉನ್ನತಿ ಮಾಪಕ. **Hypsómetry** (ನಾ.) ಉನ್ನತಿ ಮಾಪನ **Hypsométric(al)** ಹಿಪ್ಸೊ — (ಗು.)

Hýrax ಹೈರ್ಯಾಕ್ಸ್ (ನಾ.) ಮೊಲದಂಥ ಒಂದು ತೆರದ ಸಣ್ಣ ಚತುಷ್ಪಾದಿ (ಜಾತಿ)

Hýson ಹೈಸನ್ (ನಾ.) ಚೀನಾ ದೇಶದಿಂದ ಬರುವ ಒಂದು ಬಗೆಯ ಹಸುರು ತೇಯೆಲೆ.

Hy-spy ಹೈಸ್ಪೈ, **I spy** ಐ ಸ್ಪೈ (ನಾ.) ಒಂದು ತೆರದ ಕಣ್ಣಾಮುಚ್ಚಾಲೆಯಾಟ.

Hýssop ಹಿಸಪ್ (ನಾ.) ಹಿಂದೆ ಔಷಧಕ್ಕಾಗಿ ಉಪಯೋಗಿಸುತ್ತಿದ್ದ, ಸಣ್ಣ ಪೊದೆಯಾಗಿ ಬೆಳೆಯುವ, ಮತು ತಾಳಿನ ಒಂದು ಪರಿಮಳ ಸಸ್ಯ. (ಬೈಬಲ್) ಯೆಹೂದ್ಯರ ಸಂಸ್ಕಾರಗಳಲ್ಲಿ ಪ್ರೋಕ್ಷಣೆಗಾಗಿ ಕಡ್ಡಿಗಳನ್ನು ಉಪಯೋಗಿಸುತ್ತಿದ್ದ ಒಂದು ಸಸ್ಯ ; ಈ ಗಿಡದ ಕಡ್ಡಿಗಳಿಂದ ಮಾಡಿದ ಪ್ರೋಕ್ಷಣ ಕೂರ್ಚ.

Hysterésis ಹಿಸ್ಟರೀಸಿಸ್ (ನಾ.) (ಭೌ. ವಿ.) ವ್ಯತ್ಯಾಸ ಹೊಂದುತ್ತ ಹೋಗುವ ಕಾಂತಪ್ರೇರಕ ಬಲದೊಂದಿಗೆ ಆದರಿಂದುಂಟಾದ ಕಾಂತ ಫಲವು ತಕ್ಕಂತೆ ಬದಲಾವಣೆ ಹೊಂದದೆ ಹಿಂದೆ ನಿಲ್ಲುವುದು : ಕಾಂತ ಜಡತ್ವ.

Hystéria ಹಿಸ್ಟೀರಿಯ (ನಾ.) (ವೈ. ಶಾ.) ಇಂದ್ರಿಯ ಸುಪ್ತಿ, ಸೆಳವು, ಮೊ. ಲಕ್ಷಣಗಳುಳ್ಳ, ನೀತಿಶಕ್ತಿಯನ್ನೂ ಬುದ್ಧಿಶಕ್ತಿಯನ್ನೂ ಕ್ಷೋಭೆಗೊಳಿಸುವ, ನರವ್ಯೂಹದ ಕಾರ್ಯಕ್ರಮವನ್ನು ಭಂಗಪಡಿಸುವ, (ಮು., ಹೆಂಗಸರ) ಒಂದು ಉನ್ಮಾದ ರೋಗ : ಗರ್ಭೋನ್ಮಾದ (ಹಿಂದೆ, ಗರ್ಭಕೋಶದ ತೊಂದರೆಗಳಿಂದ ಬರುವುದೆಂದು ಊಹಿಸಿದ್ದುದು). ರೋಗಕಾರಣದ ಚಿತ್ತಸಂಕ್ಷೋಭೆ, ಚಿತ್ತೋದ್ರೇಕ. **Hystéric** ಹಿಸ್ಟೆರಿಕ್ (ಗು.) = Hysterical. (ನಾ.) ಗರ್ಭೋನ್ಮಾದಗ್ರಸ್ತ(ಳು). **Hystérics** (ನಾ.) ಉನ್ಮಾದದ ಕೆರಳು, ಸೆಳವು. **Hystérical** (ಗು.) ಗರ್ಭೋನ್ಮಾದದ; — ಪೀಡಿತ. ವ್ಯಾಧಿಕಾರಣದಿಂದ ಉದ್ರೇಕಗೊಳ್ಳುವ; ಅತ್ಯುದ್ರೇಕದ. **Hystérically** (ಕ್ರಿ. ವಿ.)

Hystero- ಹಿಸ್ಟೆರೊ — (ಸ. ಪೂ. ಪ.) ಗರ್ಭ—. **-génic** (ಗು.) ಗರ್ಭೋನ್ಮಾದ ಕಾರಕ. **-geny** ಗರ್ಭೋನ್ಮಾದ ಕರಣ. **-logy** —ರಾ— (ನಾ.) ಗರ್ಭಾಶಯ ಶಾಸ್ತ್ರ. **-tomy** (ನಾ.) ಗರ್ಭಕೋಶದ ಶಸ್ತ್ರಚಿಕಿತ್ಸೆ.

Hýsteron Próteron ಹಿಸ್ಟೆರಾನ್ ಪ್ರಾಟೆರಾನ್ (ನಾ.) (ವ್ಯಾ.) ಕಡೆಯಲ್ಲಿ ಬರಬೇಕಾದದ್ದು ಮೊದಲಲ್ಲಿ ಬರುವ ಒಂದು ಅಲಂಕಾರ ; ಕ್ರಮ ವಿಪರ್ಯಯ.

I

I[1] ಐ. ಇಂಗ್ಲಿಷ್ ವರ್ಣಮಾಲೆಯ ಒಂಬತ್ತನೆಯ ಅಕ್ಷರ. ರೋಮನ್ ಅಂಕನದಲ್ಲಿ, ಒಂದು (I, i = 1 ; ii = 2 ; iii = 3 ; iv = 4 ; vi = 6 ; viii = 8 ; ix = 9 ; xi = 11 ; li = 51 ; cii = 102 ; miv = 1004)

ಸಂಕ್ಷಿಪ್ತಗಳು : **I.** (1) (Jesus) ಏಸುಕ್ರಿಸ್ತ. (2) (Imperial) ಸಾಮ್ರಾಜ್ಯದ [**I. S. O.** (Imperial Service Order) ಸಾಮ್ರಾಜ್ಯ ಸೇವಾ ವರ್ಗ]. (3) (Indian) ಇಂಡಿಯದ [**I. C. S.** (Indian Civil Service) ಇಂಡಿಯದ ಒಳಸರ್ಕಾರದ ಅಧಿಕಾರಿ ವರ್ಗ ; ಮುಲ್ಕಿ ಅಧಿಕಾರಿ ವರ್ಗ]. (4) (Irish) ಐರ್ಲೆಂಡಿನ [**I. R. A.** (Irish Republican Army) ಐರ್ಲೆಂಡಿನ ಪ್ರಜಾಪ್ರಭುತ್ವ ಪಕ್ಷದ ಸೈನ್ಯ]

i. (1) (id) [**i.e.** (id est) ಎಂದರೆ]. (2) (idem) [**i.q.** (idem quod) ಅದೇ ; ಮೇಲೆ ಹೇಳಿದ್ದೇ]. (3) (indicated) ಸೂಚಿತ [**i.h.p.** (indicated horse power) ಸೂಚಿತ ಅಶ್ವಸಾಮರ್ಥ್ಯ]

ib., ibid. (ibidem) ಅದೇ ಸ್ಥಳದಲ್ಲಿ. **id.** (idem) ಅದೇ. **in.** [inch(es)]. **incl.** (inclusive). **incog.** (incognito). **Ind.** (Indian, Indiana). **inf.** (infra). **init.** (initio).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

inst. (instant). **inv.** (invenit). **I O U** [(I owe you) ತಾನು ಕೊಡಬೇಕಾದ ಸಾಲವನ್ನು ಒಪ್ಪಿಕೊಳ್ಳಲು ಈ ಸಂಕೇತಾಕ್ಷರಗಳನ್ನು ಬರೆದ ಸಾಲಪತ್ರ]

I² ಐ (ಸ. ನಾ., ನಾ.) ನಾನು (ದ್ವಿತೀಯಾ ವಿಭಕ್ತಿ: me ನನ್ನನ್ನು ; ಷಷ್ಠೀ ವಿಭಕ್ತಿ : my ನನ್ನ. ಬ. ವ. : we ನಾವು ; ದ್ವಿತೀಯಾ ವಿಭಕ್ತಿ : us ನಮ್ಮನ್ನು ; ಷಷ್ಠೀ ವಿಭಕ್ತಿ : our ನಮ್ಮ). (ನಾ.) (ತ. ಶಾ.) The I ಅಹಂ.

Íamb ಐಆ್ಯಂಬ್ (ನಾ.) = Iambus.

Iámbus ಐಆ್ಯಂಬಸ್ (ನಾ. ; ಬ. ವ. -buses, -bi — ಬೈ) (ಗ್ರೀಕ್ ಛಂ.) ಒಂದು ಲಘು, ಒಂದು ಗುರು (∪—) ಇರುವ ಗಣ. (ಇಂಗ್ಲಿಷ್ ಛಂ. ನಲ್ಲಿ) ಒಂದು ಸ್ವರಭಾರವಿಲ್ಲದ ಅಕ್ಷರ, ಒಂದು ಸ್ವರಭಾರವಿರುವ ಅಕ್ಷರ — ಈ ಮೇರೆಗೆ ಇರುವುದು. **Iámbic** (ಗು., ನಾ.) ಈ ಗಣದ (ವೃತ್ತ)

Ibérian ಐಬೀರಿಯನ್ (ಗು., ನಾ.) ಪುರಾತನ ಐಬೀರಿಯಾ ದೇಶದ (ಮನು, ಭಾಷೆ). ಸ್ಪೈಯ್ನ್ ಮತ್ತು ಪೋರ್ಚುಗಲ್ ಕೂಡಿದ ದೇಶದ.

Íbex ಐಬೆಕ್ಸ್ (ನಾ. ; ಬ. ವ. -exes) (ಆಲ್ಪ್ಸ್ ಮತ್ತು ಅಪೆನ್ನೈನ್ ಪ್ರಾಂತದ) ಹಿಂದಕ್ಕೆ ಬಾಗಿದ ದೊಡ್ಡ ಕೊಂಬುಗಳುಳ್ಳ ಕಾಡು ಮೇಕೆ.

Ibídem (L) ಇಬೈಡೆಮ್ (ಕ್ರಿ. ವಿ., ಸಂಕ್ಷಿಪ್ತ : ib., ibid.) ಅ(ಇ)ದೇ ಸ್ಥಳದಲ್ಲಿ ; ಅ(ಇ)ದೇ ಗ್ರಂಥ, ಪ್ರಕರಣ, ವಾಕ್ಯವೃಂದ, ಮೊ. ಗಳಲ್ಲಿ.

Íbis ಐಬಿಸ್ (ನಾ. ; ಬ. ವ. Ibises — ಸಸ್) ಉಷ್ಣ ಪ್ರದೇಶಗಳ ಸರೋವರಗಳಲ್ಲೂ ಜವುಗು ಪ್ರಾಂತಗಳಲ್ಲೂ ಇರುವ ಕೊಕ್ಕರೆಯಂಥ ಒಂದು ಪಕ್ಷಿ. Sacred I. ಪುರಾತನ ಇಜಿಪ್ಷನ್ನರು ಪವಿತ್ರವಾಗಿ ಎಣಿಸುತ್ತಿದ್ದ Ibis ಪಕ್ಷಿ.

Ice ಐಸ್ (ನಾ.) ಗಡ್ಡೆಕಟ್ಟಿದ, ಹೆಪ್ಪುಗೊಂಡ, ನೀರು ; ನೀರ್ಗಲ್ಲು ; ಮಂಜುಗಡ್ಡೆ [Break the i. (ರೂಪ.) (Break ನೋಡಿ). Cut no i. (Cut ನೋಡಿ)]. (ಬ. ವ. ದಲ್ಲಿ) ಒಂದು ತೆರದ ಮಂಜು ಗಟ್ಟಿಸಿದ ಮಿಠಾಯಿ ; ಮಂಜು ಹಲ್ವಾ ; ಸಕ್ಕರೆ ಹಾಕಿ ರುಚಿಕಟ್ಟಿ ಮಾಡಿದ ನೀರ್ಗಲ್ಲ ಮಿಠಾಯಿ. **I.-age** ನೀರ್ಗಲ್ಲ ಯುಗ. **I.-axe** (ಆಲ್ಪ್ಸ್ ಪರ್ವತವನ್ನು ಹತ್ತುವವರು) ನೀರ್ಗಲ್ಲಿನಲ್ಲಿ ಮೆಟ್ಟಲು ಕಡಿಯುವುದಕ್ಕಾಗಿ ಉಪಯೋಗಿಸುವ ಕೊಡಲಿ : ನೀರ್ಗಲ್ಲ ಕೊಡಲಿ. **Íceberg** [ನೀರಿನಮೇಲೆ (ಸಾ., ಬಹಳ ಎತ್ತರವಾಗಿದ್ದು) ತೇಲುತ್ತಿರುವ] ನೀರ್ಗಲ್ಲ ಗುಡ್ಡ. ಧ್ರುವ ಪ್ರದೇಶದ ನೀರ್ಗಲ್ಲ ಪ್ರವಾಹದಿಂದ ಕಿತ್ತುಬಂದ ಭಾಗ. (ರೂಪ.) ಜಡ ಪ್ರಕೃತಿಯವನು. **Íceblink** ನೀರ್ಗಲ್ಲಿನಿಂದ ಪ್ರತಿಫಲಿತವಾಗಿ ದಿಗಂತದಲ್ಲಿ ಕಾಣುವ ಪ್ರಭೆ : ನೀರ್ಗಲ್ಲ ಪ್ರಭೆ. **I.-boat** ನೀರ್ಗಲ್ಲಮೇಲೆ ಪ್ರಯಾಣಮಾಡಲು ಅನುಕೂಲಿಸುವಂತೆ ಜಾರುತೋರೆಗಳಮೇಲೆ ಅಳವಡಿಸಿದ ದೋಣಿ : ನೀರ್ಗಲ್ಲ ದೋಣಿ ; ನದಿ, ಮೊ. ಗಳಲ್ಲಿ ನೀರ್ಗಲ್ಲನ್ನು ಒಡೆಯುವುದಕ್ಕಾಗಿ ಉಪಯೋಗಿಸುವ ದೋಣಿ (=I.-breaker). **I.-cream** ಮಂಜು ಕೆನೆ ಹಲ್ವಾ. Coco-nut i. ತುರಿದ ಕೊಬರಿ ಹಾಕಿ ರುಚಿಕಟ್ಟಿದ ಸಕ್ಕರೆಯ ಬಿಲ್ಲೆಗಳು : ಕೊಬರಿ ಮಿಠಾಯಿ. **I.-fall** ಘನೀಭವಿಸಿದ ಜಲಪಾತದಂತಿರುವ ನೀರ್ಗಲ್ಲ ನದಿಯ ಕಡಿದು ಭಾಗ : ನೀರ್ಗಲ್ಲ ಪ್ರಪಾತ. **I.-field** (ಮು., ಧ್ರುವ ಪ್ರದೇಶಗಳಲ್ಲಿಯ) ನೀರ್ಗಲ್ಲ ಮೈದಾನ. **I.-foot** (ಉತ್ತರ ಧ್ರುವ ಪ್ರಾಂತದಲ್ಲಿ ಕರೆಯ ಉದ್ದಕ್ಕೂ ಇರುವ) ನೀರ್ಗಲ್ಲ ಪಟ್ಟೆ. **I.-house** ನೀರ್ಗಲ್ಲನ್ನು ಕೂಡಿಡುವುದಕ್ಕಾಗಿ ಸ್ವಲ್ಪ ಭಾಗವೂ ಪೂರ್ತಿಯಾಗಿಯೂ ನೆಲದ ಕೆಳಗೆ ಮಾಡಿದ ಕಟ್ಟಡ : ನೀರ್ಗಲ್ಲ ನೆಲಮಾಳಿಗೆ. **Íceman** (— ಮ್ಯಾನ್) ನೀರ್ಗಲ್ಲಮೇಲೆ ಹಾದು ಹೋಗುವುದರಲ್ಲಿ ನಿಪುಣ. ಮಂಜುಮಿಠಾಯಿಗಾರ. **I.-pack** (Pack ನೋಡಿ). **I.-pick** ನೀರ್ಗಲ್ಲ ಚಪ್ಪಡಿಯನ್ನು ಒಡೆದು ಚೂರು ಚೂರು ಮಾಡುವ ಮೊನೆಗುದ್ದಲಿ. **I.-plough** (ಬಿಸಿಲು ಕಾಲದಲ್ಲಿ ಉಪಯೋಗಿಸುವುದಕ್ಕಾಗಿ) ನದಿ, ಮೊ. ಗಳ ಮೇಲಿನ ನೀರ್ಗಲ್ಲನ್ನು ಸಣ್ಣ ದಿಮ್ಮಿಗಳನ್ನಾಗಿ ಪ್ರತ್ಯೇಕಿಸಿ ತೆಗೆಯಲು ಅದರಮೇಲೆ ಗಾಡಿ ಮಾಡುವ ಸಲಕರಣೆ : ನೀರ್ಗಲ್ಲ ನೇಗಿಲು, ರಂಟೆ. **I. pudding** ಮಂಜುಗಟ್ಟಿಸಿದ ಕಡುಬಿನಂಥ ಭಕ್ಷ್ಯ. **I.-run** ಜಾರುಬಂಡಿಗಳು ಓಡಾಡುವುದಕ್ಕೆ ಮಾಡಿದ ನೀರ್ಗಲ್ಲಿನ ಕೃತಕ ಜಾಡು. **I.-wool** (ಕ್ರೋಷೇ ಕೆಲಸ, ಮೊ. ಲ್ಲಿ ಉಪಯೋಗಿಸುವ) ಹೊಳಪಿನ ಉಣ್ಣೆಯ ದಾರ. **Ícicle** ಐಸಿಕ್‌ಲ್ (ನಾ.) (ಮಾಳಿಗೆಯಿಂದ ತೊಟ್ಟಿಕ್ಕುವ ನೀರು ಹನಿಗಳು ಹಾಗೆಯೇ ಘನೀಭವಿಸಿ ಮಾಳಿಗೆಯಿಂದ ತೊಂಗುಬಿದ್ದಿರುವ ಚೂಪು ಕೊನೆಯ) ನೀರ್ಗಲ್ಲ ತೊಂಗಲು. **Ícy** ಐಸಿ (ಗು.) ನೀರ್ಗಲ್ಲು ತುಂಬ ಇರುವ, —ಮುಚ್ಚಿರುವ : ಹಿಮಮಯ. ಬಹಳ ಚಳಿಯ, ಶೀತಲದ. (ರೂಪ.) ಆದರ ಶೂನ್ಯವಾದ ; ಜಡ (I. manners). **Ícily** (ಕ್ರಿ. ವಿ.) ; **Íciness** (ನಾ.)

Ice (ಕ್ರಿ. ಸಕ.) ಗಡ್ಡೆಕಟ್ಟಿಸು ; ಘನೀಭವಿಸು ; ನೀರ್ಗಲ್ಲಿನಿಂದ (ಹೇಗೊ ಹಾಗೆ) ಹರವು, ಮುಚ್ಚು. (ಮದ್ಯವನ್ನು) ನೀರ್ಗಲ್ಲಿನಲ್ಲಿ(ಟ್ಟು) ತಂಪಿಸು. (ದೋಸೆ, ಕಜ್ಜಾಯ, ಮೊ. ಗಳ ಮೇಲೆ) ಸಕ್ಕರೆಯ ಪಾಕವನ್ನು ಹರವು, — ಪಾಕದಿಂದ ಅಲಂಕರಿಸು. **Ícing** (ನಾ.)

Íceberg. Ice ನೋಡಿ.

Íceland ಐಸ್‌ಲ್ಯಾಂಡ್ (ನಾ.) ನಾರ್ವೆಗೂ ಗ್ರೀನ್‌ಲೆಂಡಿಗೂ ಮಧ್ಯೇ ಇರುವ ಒಂದು ದೊಡ್ಡ ದ್ವೀಪ: ಐಸ್‌ಲ್ಯಾಂಡು. I. lichen, moss ತಿನ್ನಬಹುದಾದ ಕಲ್ಲುಹೂವು, ಪಾಚಿ (ಜಾತಿಗಳು). I. poppy ಉ. ಧ್ರುವ ಪ್ರಾಂತದ ಹಳದಿಯ ಬಣ್ಣದ ಗಸಗಸೆ ಗಿಡ. I. spar 'ಕ್ಯಾಲ್ಸೈಟ್' ಖನಿಜದ ಒಂದು ಪಾರದರ್ಶಕ ಪ್ರಭೇದ. **Ícelander** (ನಾ.) ಐಸ್‌ಲ್ಯಾಂಡಿನವನು. **Icelándic** (ಗು., ನಾ.) ಐಸ್‌ಲ್ಯಾಂಡಿನ (ಭಾಷೆ)

Ichneúmon ಇಕ್‌ನ್ಯೂಮನ್ (ನಾ.) ಮೊಸಳೆಯ ಮೊಟ್ಟೆಗಳನ್ನು ನಾಶಮಾಡುವ ಮುಂಗುಸಿಜಾತಿಯ, ಕಂದುಬಣ್ಣದ, ಒಂದು ಸಣ್ಣ ಚತುಷ್ಪಾದಿ ; ಒಂದು ಜಾತಿಯ ಮುಂಗುಸಿ. ಮತ್ತೊಂದು ಹುಳುವಿನ ಮರಿಹುಳುಗಳ ಮೇಲ್ಭಾಗದಲ್ಲಾಗಲಿ ಒಳಭಾಗದಲ್ಲಾಗಲಿ ಮೊಟ್ಟೆಯಿಡುವ ಪರಸತ್ವೋಪಜೀವಿಯಾದ ಒಂದು ಸಣ್ಣ ರೆಕ್ಕೆಹುಳು (= I. fly)

Ichnógraphy ಇಕ್ನಾಗ್ರಫಿ (ನಾ.) ತಳನಕ್ಷೆ(ಯ ರೇಖನ). **Ichnográphic(al)** ಇಕ್ನೊಗ್ರಾಫ್ಯ — (ಗು.)

Íchnolite ಇಕ್ನೊಲೈಟ್, **Íchnite** ಇಕ್ನೈಟ್ (ನಾ.) ಪಳೆಯುಳಿಕೆಯ ಹೆಜ್ಜೆಗುರುತು. **Ichnólogy** ಇಕ್ನಾ — (ನಾ.) ಪಳೆಯುಳಿಕೆಯ ಹೆಜ್ಜೆಗುರುತುಗಳ ವಿಚಾರ.

Íchor ಐಕರ್ (ನಾ.) (ಗ್ರೀಕ್ ಪುರಾಣ) ದೇವತೆಗಳ ಧಮನಿಗಳಲ್ಲಿ ರಕ್ತದಂತೆ ಹರಿಯುತ್ತಿರುವ ಅತಿ ಸೂಕ್ಷ್ಮ ಪ್ರವಾಹಿದ್ರವ್ಯ. (ಮದ್ದಾನೆಯ ಕೆನ್ನೆಗಳಿಂದ ಹರಿಯುವ) ಮದ ಜಲ. (ವೈ. ಶಾ.) ಗಾಯ, ಮೊ. ಗಳಿಂದ ಸುರಿಯುವ ಒಂದು ಕಟು ದ್ರವ ; ರಸಿಕೆ. (ರೂಪ.) ರಕ್ತ. **Íchorous** (ಗು.)

Ichthyo- ಇಕ್ಥಿಯೊ — (ಸ. ಪೂ. ಪ. ; ಆದಿಯಲ್ಲಿ ಸ್ವರವಿರುವ ಪದಗಳ ಹಿಂದೆ Ichthy- ಮಾತ್ರ) ಮೀನು —, ಮತ್ಸ್ಯ —. **-graphy** (ಇಕ್ಥಿಯಾಗ್ರಫಿ) ಮತ್ಸ್ಯ ವಿವರಣ (ಶಾಸ್ತ್ರ). **-grapher** ಮತ್ಸ್ಯ ವಿಷಯ ಲೇಖಕ. **-oid** ಇಕ್ಥಿಯಾಯ್ಡ್ (ಗು., ನಾ.) ಮೀನಿನಂಥ ; ಮೀನಿನ ಮಾದರಿಯ ಕಶೇರುಕ ಪ್ರಾಣಿ. **-latry** (— ಯಾಲಟ್ರಿ) ಮತ್ಸ್ಯದೇವತಾ ಪೂಜೆ. **-lite** ಪಳೆಯುಳಿಕೆಯ ಮೀನು. **-logy** (— ಯಾಲೊಜಿ) ಮೀನುಗಳ ಪ್ರಾಕೃತಿಕ ಚರಿತ್ರೆ ; ಮತ್ಸ್ಯ ಶಾಸ್ತ್ರ. **-lógical** — ಯೊಲಾ — (ಗು.). **-logist** (— ಯಾಲೊ —) ಮತ್ಸ್ಯ ವಿದ್ಯಾ ಪಂಡಿತ. **-phagi** — ಯಾಫಜೈ (ನಾ., ಬ. ವ.) ಮೀನು ತಿನ್ನುವವರು ; ಮತ್ಸ್ಯ ಭಕ್ಷಕರು. **-phagist** ಮೀನು ತಿನ್ನುವವನು. **-phagous** — ಫಗಸ್ (ಗು.) ಮೀನು ತಿನ್ನುವ. **-phagy** (— ಯಾಫಜಿ) ಮೀನು ತಿನ್ನುವ ಅಭ್ಯಾಸ ; ಮತ್ಸ್ಯ ಭಕ್ಷಣ. **-ornis** (— ಯಾರ್ನಿಸ್) (ಪ್ರಾಚೀನ ಕಾಲದ) ಹಲ್ಲುಗಳಿದ್ದ ಒಂದು ಪಕ್ಷಿಜಾತಿ. **-saúrus** (— ಸಾರಸ್) (ಪ್ರಾಚೀನ ಕಾಲದ) ದೊಡ್ಡ ತಲೆಯೂ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೂತಿಯ ಕಡೆಗೆ ಚೂಪಾಗಿ ಹೋಗುವ ದೇಹವೂ, ಉದ್ದ ಬಾಲವೂ, ನಾಲ್ಕು ಈಜುರೆಕ್ಕೆಗಳೂ, ಉಳ್ಳ ಒಂದು ಸಮುದ್ರಪ್ರಾಣಿ: ಮಿಾನು ಹಲ್ಲಿ. **-ósis** (— ಯೋಸಿಸ್) (ಹೊರಚರ್ಮ ಒಣಕಲಾಗಿಯೂ, ಕೊಂಬಿನಂತೆ ಗಡುಸಾಗಿಯೂ, ಮಿಾನಿನ ಚರ್ಮದಂತೆ ಪೊರೆ ಪೊರೆಯಾಗಿಯೂ, ಆಗುವ) ಒಂದು ಚರ್ಮರೋಗ. **-ótic** —ಯಾಟಿಕ್ (ಗು.)

Icicle. Ice ನೋಡಿ.

Ickle ಇಕ್‌ಲ್ (ಗು.) (ಎಳೆಮಕ್ಕಳ ಮಾತು) ಪುಟ್ಟ ; ಚಿಕ್ಕ ; = Icicle.

Ícon ಐಕಾನ್ (ನಾ.) ಮೂರ್ತಿ ; ಪ್ರತಿಮೆ ; ವಿಗ್ರಹ. **Icónic** (ಗು.) (ಪ್ರತಿಮೆಯ ಅಥವಾ ಭಾವಚಿತ್ರದ ರೀತಿಯ ಪ್ರತಿಮೆಗಳ ವಿಷಯದಲ್ಲಿ) ಸಾಂಪ್ರದಾಯಿಕ ಮಾದರಿಯ(ನ್ನನುಸರಿಸುವ). **Icónoclasm** — ಕ್ಲ್ಯಾಸ್ಮ್ (ನಾ.) ವಿಗ್ರಹಗಳನ್ನೊಡೆದುಹಾಕುವುದು (ರೂಪ. ಸಹ). **Icónoclast** (ನಾ.) ವಿಗ್ರಹ ಭಂಜಕ [ಮು., ಪೌರಸ್ತ್ಯ (ಕ್ರೈಸ್ತ) ಆರಾಧನ ಮಂದಿರಗಳಲ್ಲಿ ಮೂರ್ತಿಪೂಜೆಗೆ ವಿರೋಧವಾಗಿ ಕ್ರಿ. ಶ. ೮-ನೆಯ ಶತಮಾನಗಳಲ್ಲಿ ತಲೆದೋರಿದ ಚಳವಳಿಯಲ್ಲಿ ಭಾಗ ವಹಿಸಿದವನು]. (ರೂಪ.) ಮಮತೆಯ ಭಕ್ತಿ ಭಾವನೆಗಳನ್ನು ಎದುರಿಸುವವನು, ಖಂಡಿಸುವವನು. **Iconoclástic** (ಗು.); **Iconógraphy** ಐಕೊನಾಗ್ರಫಿ (ನಾ.) ಒಂದು ವಿಷಯವನ್ನು ಚಿತ್ರಗಳಿಂದ, ರೇಖನಗಳಿಂದ, ಉದಾಹರಿಸುವುದು: ಚಿತ್ರೋದಾಹರಣೆ; ಪ್ರತಿಮಾ ಶಿಲ್ಪ. ಚಿತ್ರಪ್ರಧಾನವಾಗಿರುವ ಪುಸ್ತಕ; ಚಿತ್ರಗಳ, ಪ್ರತಿಮೆಗಳ, ವಿಷಯವಾದ ಗ್ರಂಥ; ಪ್ರತಿಮಾ ವಿವರಣೆ. **Iconógrapher** (ನಾ.) ಪ್ರತಿಮಾ ಚಿತ್ರಕ. **Iconográphic** ಐಕಾನೊಗ್ರ್ಯಾಫಿಕ್ (ಗು.); **Iconólater** ಐಕೊನಾಲಟರ್ (ನಾ.) ಮೂರ್ತಿ ಪೂಜಕ. **Iconólatry** (ನಾ.); **Iconólogy** (ನಾ.) ಪ್ರತಿಮಾ ಶಾಸ್ತ್ರ. **Iconómachy** — ಮಕಿ (ನಾ.) ಆರಾಧನೆಯಲ್ಲಿ ಮೂರ್ತಿಯನ್ನುಪಯೋಗಿಸಕೂಡದೆಂಬ ಬಗ್ಗೆ ಯುದ್ಧ; ವಿಗ್ರಹಾರಾಧನ ವಿರೋಧ. **Iconóstasis** — ಸ್ಟಸಿಸ್ (ನಾ.) (ಪೌರಸ್ತ್ಯ ಕ್ರೈಸ್ತ ಆರಾಧನ ಮಂದಿರಗಳಲ್ಲಿ) ಪವಿತ್ರ ಪ್ರದೇಶವನ್ನು ಮಂದಿರದ ಪ್ರಧಾನ ಭಾಗದಿಂದ ಪ್ರತ್ಯೇಕಿಸುವ, ಮತ್ತು ಪ್ರತಿಮೆಗಳಿಂದ ಅಲಂಕರಿಸಿರುವ ಬಾಗಿಲುಗಳುಳ್ಳ, ಅಡ್ಡತಡೆ.

Icónoclasm, Iconólatry, &c. Icon ನೋಡಿ.

Ícosahédron ಐಕೊಸಹೀ(ಹೆ)ಡ್ರನ್ (ನಾ.) ಇಪ್ಪತ್ತು ಸಮತಲದ ಮುಖಗಳುಳ್ಳ ಘನಾಕೃತಿ: ವಿಂಶತಿ ಮುಖಿ.

Íctus ಇಕ್ಟಸ್ (ನಾ.) (ಛಂ.) ತಾನದ, ಛಂದಸ್ಸಿನ, — ಒತ್ತು: ಸ್ವರ ಭಾರ.

Id ಇಡ್ (ನಾ.) (ಜೀ. ವಿ.) (ಅನುವಂಶ ತತ್ತ್ವದಲ್ಲಿ) (ಜೀವಿಯ ಪ್ರಕೃತಿಯನ್ನು ನಿರ್ಧರಿಸುವ) ಜೀವಾಂಕುರಾಂಶ. (ಮ. ಶಾ.) (ವ್ಯಕ್ತಿಯ) ಸಹಜ ಪ್ರವೃತ್ತಿಗಳು.

Idéa ಐಡೀ(ಡಿ)ಯ (ನಾ.) (ವ್ಯಕ್ತಿಗಳಲ್ಲಿ ಕಾಣಿಸುವ ಲಕ್ಷಣಗಳಿಂದ ಪ್ರತ್ಯೇಕವಾಗಿ ಅವಕ್ಕೆ ಮೂಲಾದರ್ಶವಾಗಿರುವ) ಪರಿಪೂರ್ಣ ಭಾವ; ಯಾವ ವರ್ಗದಲ್ಲಾದರೂ ಇರುವ ಪ್ರತ್ಯೇಕ ರೂಪಗಳು ಯಾವುದರ ಅಪೂರ್ಣ ಪ್ರತಿಗಳಾಗಿರುವುವೋ ಆ ಚಿರಸ್ಥಾಯಿಯಾದ ಆದರ್ಶ ರೂಪ; (ಗುರಿಯಾಗಿಟ್ಟುಕೊಳ್ಳಬೇಕಾದುದರ, ಸೃಷ್ಟಿಸಬೇಕಾದುದರ) ಮನೋಭಾವನೆ, ಕಲ್ಪನಾ ಬಿಂಬ. ಉದ್ದೇಶ; ಅಭಿಪ್ರಾಯ; ಧ್ಯೇಯ; ಕಾರ್ಯಸಾಧನೆಯ ರಚನೆ, ಉಪಾಯ; ಮನಸ್ಸಿಗೆ ಹೊಳೆದ ಕಲ್ಪನೆ; ಮನೋಗತ; ಆಲೋಚನೆಯ ಮಾರ್ಗ (The young i. ಮಗುವಿನ ಮನಸ್ಸು); ಅಸ್ಪಷ್ಟ ಭಾವನೆ; ಕಲ್ಪನೆ (The i. of his doing such a thing ಅವನು ಇಂತಹ ಕೆಲಸವನ್ನು ಮಾಡುವವನೆಂಬ ಭಾವನೆ. I had no i. you were there ನೀನು ಅಲ್ಲಿರುವೆಯೆಂದು ನನ್ನ ಮನಸ್ಸಿಗೆ ಹೊಳೆಯಲಿಲ್ಲ). **Idéa'd, Idéaed** ಐಡೀ(ಡಿ)ಅಡ್ (ಗು.); **Idéaless** (ಗು.); **Idéate** —ಡೀಯೇಟ್ (ಕ್ರಿ.) ಕಲ್ಪನೆ ಮಾಡು(ಡಿಕೊ); ಭಾವಿಸು; ಆಲೋಚಿಸು; ಕಲ್ಪನೆಗಳನ್ನು ಮಾಡಿಕೊ. **Ideátion** (ನಾ.); **Ideátional** (ಗು.); **Idéal** ಐಡೀಯಲ್ (ಗು., ನಾ.) ಅತ್ಯುಚ್ಚ ಭಾವನೆಗೆ ಅನುರೂಪವಾದ; ಉದಾತ್ತ ಭಾವನೆಯ; ಭಾವಾತ್ಮಕ; ಭಾವನೆಯಲ್ಲಿ, ಕಲ್ಪನೆಯಲ್ಲಿ, ಮಾತ್ರವಿರುವ; ಆದರ್ಶಪ್ರಾಯವಾದ. ಕೇವಲ ಕಲ್ಪನೆಯ; ಧ್ಯೇಯ ಮಾತ್ರದ; ಭಾವನಾ ಮಾತ್ರದ. (ನಾ.) ನ್ಯೂನತೆಯಿಲ್ಲದ ಮಾದರಿ; ಆದರ್ಶ ಧ್ಯೇಯ; ಅನುಕರಣಕ್ಕೆ ಆದರ್ಶವೆಂದು ಇಟ್ಟುಕೊಂಡ ವಸ್ತು, ವಿಷಯ. **Idéally** (ಕ್ರಿ. ವಿ.); **Idéalism** (ನಾ.) (ವಸ್ತುಗಳ, ವಿಷಯಗಳ) ಆದರ್ಶ ರೂಪ ಗ್ರಹಣ, ಪರಿಪೂರ್ಣ ಭಾವ ಗ್ರಹಣ; ಆದರ್ಶ ರೀತಿಯ ಕಲ್ಪನೆ, ವಿವೇಚನೆ; ಆದರ್ಶ ಜೀವನ. (ತ. ಶಾ.) 'ಇಂದ್ರಿಯಗೋಚರವಾಗುವ ಬಾಹ್ಯ ವಸ್ತುಗಳು ವಾಸ್ತವವಾಗಿ ಭಾವನಾ ಮಯವಾದವು' ಎಂಬ ವಾದ; ಕೇವಲ ಭಾವನಾ ವಾದ. **Idéalist** (ನಾ.) ಉದಾತ್ತ ಧ್ಯೇಯ ನಿಷ್ಠ; ಭಾವನಾ ವಾದಿ. **Idealístic** (ಗು.); **Idéalize** (ಕ್ರಿ.) ಆದರ್ಶವಾಗಿ ಮಾಡು; ಆದರ್ಶ ರೂಪದಲ್ಲಿ ಅಥವಾ ರೀತಿಯಲ್ಲಿ ನಿರ್ದೇಶಿಸು. **Idealizátion** (ನಾ.); **Ideálity** ಐಡಿಆ್ಯಲಿಟಿ (ನಾ.) ಆದರ್ಶತೆ; ಕಲ್ಪನಾ ಶಕ್ತಿ; ಭಾವನಾ ಶಕ್ತಿ.

Idéal, Idéalism, &c. Idea ನೋಡಿ.

Idee fíxe (F) ಈಡೇ ಫೀಕ್ಸ್ (ನಾ.) ಮನಸ್ಸನ್ನು ಪೂರ್ತಿಯಾಗಿ ಆಕ್ರಮಿಸಿರುವ ಭಾವನೆ; ಮನಸ್ಸಿಗೆ ಹತ್ತಿಬಿಟ್ಟಿರುವ ಭಾವನೆ; ಒಂದೇ ವಿಷಯದಮೇಲಿನ ಗೀಳು.

Ídem (L) ಐ(ಇ)ಡೆಮ್ (ನಾ., ಕ್ರಿ. ವಿ.; ಸಂಕ್ಷಿಪ್ತ: id.) ಅ(ಇ)ದೇ ಗ್ರಂಥಕರ್ತ(ನಲ್ಲಿ) (ಉಚ್ಚಾರಣೆ: ಐಡೆಮ್). ಅ(ಇ)ದೇ ಪದ (ಉಚ್ಚಾರಣೆ: ಇಡೆಮ್). I. quod ಅ(ಇ)ದೇ; ಮೇಲೆ ಹೇಳಿದ್ದೇ.

Idéntic ಐಡೆಂಟಿಕ್ (ಗು.) (ಅಂತರ್ರಾಷ್ಟ್ರೀಯ ವ್ಯವಹಾರ) I. note ಹಲವು ರಾಷ್ಟ್ರಗಳು ತಮ್ಮ ತಮ್ಮ ಅಭಿಪ್ರಾಯವನ್ನು ಒಂದೇ ರೀತಿಯಾಗಿ ಪದಪ್ರಯೋಗ ಮಾಡಿದ ಒಕ್ಕಣೆಯಲ್ಲಿ ಬರೆದು ತಮ್ಮ ವ್ಯವಹಾರವುಳ್ಳ ಮತ್ತೊಂದು ರಾಷ್ಟ್ರಕ್ಕೆ ಏಕ ಕಾಲದಲ್ಲಿ ಕಳುಹಿಸಿಕೊಡುವ ಪತ್ರ: ಏಕ ರೂಪ ನಿರೂಪ. = Identical.

Idéntical ಐಡೆಂಟಿಕಲ್ (ಗು.) (ಬೇರೆ ಬೇರೆ ಕಾಲಗಳಲ್ಲಿ ನೋಡಿದ ಒಂದೇ ವಸ್ತುವಿನ ವಿಷಯದಲ್ಲಿ) ಅದೇ ಆದ; ಅನನ್ಯ; (ಬೇರೆ ಬೇರೆ ವಸ್ತುಗಳ ವಿಷಯದಲ್ಲಿ) ಪ್ರತಿ ವಿವರದಲ್ಲೂ ಹೊಂದಿಕೆಯುಳ್ಳ; ಒಂದೇ ವಿಧವಾದ; ಸಮಗ್ರ ಸಮವಾದ; ತದ್ರೂಪವಾದ; ತದ್ವತ್ತಾದ; ಅಭೇದ (*With* ಉಪ. ದೊಡನೆ). (ತರ್ಕ, ಗಣಿತ) ಏಕತ್ವವನ್ನು ಹೇಳುವ, ನಿರೂಪಿಸುವ (I. proposition ಸಾಮ್ಯ ನಿರೂಪಣ ಪ್ರತಿಜ್ಞೆ: ಉದಾ., Man is man). **Idéntically** (ಕ್ರಿ. ವಿ.); **Idéntify** (ಕ್ರಿ. ಸಕ.) (ಮತ್ತೊಂದರೊಡನೆ) ಸಮವೆಂದು ಪರಿಗಣಿಸು; ಸಮಿಾಕರಿಸು (*With* ಉಪ. ದೊಡನೆ); (ಒಂದು ಪಕ್ಷ, ನೀತಿ, ಮೊ. ಕ್ಕೆ) ಎಡೆಬಿಡದೆ ಹೊಂದಿಕೊಂಡಿರು. ಅನನ್ಯ ಸಂಬಂಧವುಳ್ಳವನಾಗಿರು. (*Oneself, with* ಪದದೊಡನೆ); (ಒಂದರ) ತಾದಾತ್ಮ್ಯವನ್ನೂ ಅನನ್ಯತೆಯನ್ನೂ ಸ್ಥಾಪಿಸು; ಗುರುತಿಸು. **Idéntifiable** (ಗು.); **Identificátion** (ನಾ.) ಗುರುತು ಸ್ಥಾಪಿಸುವುದು; ಗುರುತಿಸುವುದು. (I. or Identity disk ಯುದ್ಧೋದ್ಯೋಗದಲ್ಲಿರುವಾಗ, ಸೈನಿಕನ ಹೆಸರು, ಮೊ. ನ್ನು ಬರೆದು ಅವನ ಕುತ್ತಿಗೆಗೆ ತಗುಲಹಾಕಿರುವ ರಬ್ಬರಿನ ಬಿಲ್ಲೆ: ಗುರುತು ಬಿಲ್ಲೆ). **Idéntity** (ನಾ.) ಸಮಗ್ರ ಸಮತೆ; ಅನನ್ಯತೆ; ವ್ಯಕ್ತಿತ್ವ; ಗುರುತು [I. disk (ಮೇಲೆ ನೋಡಿ)]. (ಬೀ. ಗ.) ಎರಡು ರಾಶಿಗಳಲ್ಲಿಯ ಸಂಕೇತ ಪದಗಳಿಗೆ ಯಾವ ನಿರ್ದಿಷ್ಟ ಬೆಲೆಗಳನ್ನು ಕೊಟ್ಟರೂ ಎರಡೂ ಸರ್ವ ಸಮವಾಗಿರುವುದು. (ದ್ವಿರಾಶಿ) ಸಮತೆ. (ದ್ವಿರಾಶಿ) ಸಮಗ್ರ ಸಮಿಾಕರಣ [ಉದಾ., $(x+1)^2 = x^2+2x+1$]

Ideo- ಐ(ಇ)ಡಿಯೊ— (ಸ. ಪೂ. ಪ.) ಭಾವ(ನಾ) —. **-gram** ಐಡಿಯೊಗ್ರ್ಯಾಮ್, **-graph** (— ಗ್ರಾಫ್) ವಸ್ತುವಿನ ಹೆಸರನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಕ್ತಪಡಿಸದೆ ಕೇವಲ ಭಾವವನ್ನು ಮಾತ್ರ ಸಂಕೇತವಾಗಿ ತಿಳಿಸುವ ಲಿಪಿ: ಭಾವಲಿಪಿ (ಉದಾ., ಚೀನಾಲಿಪಿ). **-gráphic(al)** — ಗ್ರ್ಯಾ — (ಗು.); **-graphy** (ಐಡಿಯಾಗ್ರಫಿ) ರೇಖನ ಸಂಕೇತಗಳ ಮೂಲಕ ಭಾವನಿರೂಪಣೆ (ಮಾಡುವುದು): ಭಾವಲಿಪಿ ವಿದ್ಯೆ. **-logue** (ಐಡೀಯೊಲಾಗ್) ಕೇವಲ ಸೂತ್ರವಾದಿ; ಗಾಳಿ ಗೋಪುರ ಕಟ್ಟುವವನು; ಪುಸ್ತಕ ಪಂಡಿತ. **-logy** (ಐಡಿಯಾಲೊಜಿ) ಭಾವ(ನೆ)ಗಳ ಉತ್ಪತ್ತಿ, ಲಕ್ಷಣ, ಸ್ವಭಾವ — ಇವನ್ನು ಕುರಿತ ಶಾಸ್ತ್ರ: ಭಾವನಾ ಶಾಸ್ತ್ರ; ಪರಸ್ಪರ ಸಂಬಂಧವುಳ್ಳ ಭಾವನಾ ಸಮುಚ್ಚಯ; ಕೇವಲ ಭಾವನೆ. **-lógical** — ಲಾಜಿ — (ಗು.); **-logist** — ಯಾರೊ —.

Ides ಐಡ್ಸ್ (ನಾ.; ಬ. ವ.) (ರೋ. ಪ್ರಾ.) ಮಾರ್ಚಿ, ಮೇ, ಜೂಲೈ ಮತ್ತು ಅಕ್ಟೋಬರು ತಿಂಗಳುಗಳ ೧೫ನೆಯ ತಾರೀಖು, ಉಳಿದ ತಿಂಗಳುಗಳ ೧೩ನೆಯ ತಾರೀಖು.

Id est (L) ಇಡ್ ಎಸ್ಟ್ (ಸಂಕ್ಷಿಪ್ತ: *i.e.*) ಏನೆಂದರೆ.

Ídiocy. Idiot ನೋಡಿ.

Ídiom ಇಡಿಯಮ್ (ನಾ.) (ಒಂದು ಜನದ, ದೇಶದ) ಭಾಷೆ, ನುಡಿ; ಇದರ ವೈಶಿಷ್ಟ್ಯ; ಒಂದು ಭಾಷೆಗೆ ವಿಶೇಷ ಧರ್ಮವಾಗಿರುವ ನುಡಿಗಟ್ಟು; ಭಾಷೆಯ ಜಾಯಮಾನ; ಭಾಷಾ, — ಸಂಪ್ರದಾಯ, ಮರ್ಯಾದೆ, ಲಕ್ಷಣ, ಪದ್ಧತಿ. **Idiomátic** ಇಡಿಯೊಮ್ಯಾಟಿಕ್ (ಗು.) ಆಯಾ ಭಾಷೆಗೆ ಅನುಗುಣವಾದ; (ಒಂದು ಭಾಷೆಯ) ನುಡಿಗಟ್ಟಿನ; ದೇಶ್ಯ; ದೇಸಿ; ಬಳಕೆಯ ಮಾತಿನ. **Idiomátically** (ಕ್ರಿ. ವಿ.)

Idiópathy ಇಡಿಯಾಪತಿ (ನಾ.) (ವೈ. ಶಾ.) (ಮತ್ತೊಂದು ವ್ಯಾಧಿಯು ಕಾರಣವಲ್ಲದ, ಅಥವಾ ಈಗಿನ ವ್ಯಾಧಿ ಬರುವುದಕ್ಕೆ ಪೂರ್ವಭಾವಿಯಾಗಿ ಮತ್ತೊಂದು ವ್ಯಾಧಿ ಬಂದಿಲ್ಲದ) ಸ್ವತಂತ್ರ ವ್ಯಾಧಿ. **Idiopáthic** ಇಡಿಯೊಪ್ಯಾತಿಕ್ (ಗು.); **Idiopáthically** (ಕ್ರಿ. ವಿ.)

Ídioplasm ಇಡಿಯೊಪ್ಲ್ಯಾಸ್ಮ್ (ನಾ.) (ಜೀ. ವಿ.) ಒಂದು ಜೀವಿಯ ಸ್ವಭಾವವನ್ನು ನಿರ್ಧರಿಸುವ ಜೀವಕಣದಲ್ಲಿಯ (ವಂಶವಾಹಿ) ದ್ರವ್ಯ.

Idiosýncrasy ಇಡಿಯೊಸಿಂಕ್ರಸಿ (ನಾ.) (ಒಬ್ಬನ ವಿಶೇಷತೆಯ) ಮಾನಸಿಕ ಪ್ರಕೃತಿ, ದೃಷ್ಟಿ, ಮನೋಭಾವ; ವ್ಯಕ್ತಿವೈಲಕ್ಷಣ್ಯ; — ವೈಶಿಷ್ಟ್ಯ; — ಜಾಯಮಾನ. (ಒಬ್ಬ ಗ್ರಂಥಕರ್ತನ) ಪದ ಪ್ರಯೋಗ ವೈಶಿಷ್ಟ್ಯ, ಶೈಲಿಯ —. (ವೈ. ಶಾ.) (ಒಬ್ಬನ ವಿಶೇಷತೆಯ) ದೇಹಪ್ರಕೃತಿ. **Idiosyncrátic** — ಕ್ರ್ಯಾಟಿಕ್ (ಗು.)

Ídiot ಇಡಿಯಟ್ (ನಾ.) ವಿವೇಕವಾಗಿ ನಡೆಯಲು ತಕ್ಕಷ್ಟು ಬುದ್ಧಿಯಿಲ್ಲದವನು; ಮಂದ ಬುದ್ಧಿ; ಮತಿ ಹೀನ; ಪೂರಾ ತಿಳಿಗೇಡಿ; ಹುಟ್ಟು ದಡ್ಡ; ಪೆದ್ದ. **Idiótic** — ಯಾಟಿಕ್ (ಗು.); **Idiótically** (ಕ್ರಿ. ವಿ.); **Ídiocy** ಇಡಿಯೊಸಿ (ನಾ.) ಹೆಡ್ಡತನ; ಶುದ್ಧ ತಿಳಿಗೇಡಿತನ; ಹುಟ್ಟು ದಡ್ಡತನ.

Ídle ಐಡ್‌ಲ್ [ಗು. (ತರತಮಗಳು, -er, -est); ಕ್ರಿ.] (ಕಾರ್ಯ, ಯೋಚನೆ, ಮಾತು) ನಿಷ್ಫಲ, ಅಪ್ರಯೋಜಕ, ವ್ಯರ್ಥ; ನಿರಾಧಾರ; ಅನುಪಯೋಗ. ಕೆಲಸವಿಲ್ಲದ; ಸೋಮಾರಿಯಾದ; ಮೈಗಳ್ಳನಾದ [I. wheel (ಯಂತ್ರದಲ್ಲಿ ಸಾ., ಕೆಲಸಮಾಡದೆ ಇದ್ದು, ಯಂತ್ರ ಕಟ್ಟು ನಿಂತುಹೋಗುವ ಸಂದರ್ಭದಲ್ಲಿ, ತಾನು ತಿರುಗುತ್ತ ಕೆಲಸ ನಡಸುವ) ಕಾಪು ಚಕ್ರ. (ಎರಡು ಹಲ್ಲುಚಕ್ರಗಳ ನಡುವೆ ಅವಕ್ಕೆ ಸಂಬಂಧ ಕಲ್ಪಿಸುವುದಕ್ಕಾಗಿರುವ) ಮಧ್ಯಸ್ಥ ಚಕ್ರ]. (ಕ್ರಿ.) ಸೋಮಾರಿಯಾಗಿರು; (ಕಾಲ, ವೊ. ನ್ನು) ಸೋಮಾರಿತನದಲ್ಲಿ ವ್ಯರ್ಥವಾಗಿ ಕಳೆದುಬಿಡು (*Away* ಉಪ. ಜೊತೆ). **Idleness** (ನಾ.); **Ídler** (ನಾ.) ಸೋಮಾರಿ; ಮೈಗಳ್ಳ. **Ídly** (ಕ್ರಿ. ವಿ.); **Ídlesse** ಐಡ್ಲೆಸ್ (ನಾ.) = Idleness.

Ido ಈಡೋ (ನಾ.) Esperanto ಭಾಷೆಯನ್ನು ಆಧಾರವಾಗುಳ್ಳ ಒಂದು ಕಾಲ್ಪನಿಕ ಸಾರ್ವತ್ರಿಕ ಭಾಷೆ.

Ídol ಐಡ(ಡ್)ಲ್ (ನಾ.) (ಆರಾಧನೆಗಾಗಿ ಉಪಯೋಗಿಸುವ) ದೇವತಾ ವಿಗ್ರಹ, ಮೂರ್ತಿ, ಪ್ರತಿಮೆ. ನಿಜವಲ್ಲದ ದೇವರು(ತೆ); ಮಿಥ್ಯಾ ದೇವತೆ. ಅತ್ಯಂತ ಅನುರಾಗಕ್ಕೆ ಪಾತ್ರವಾದ ವ್ಯಕ್ತಿ, ವಸ್ತು; ಅಚ್ಚುಮೆಚ್ಚಾದ —. ಭ್ರಮೆ; ಭ್ರಾಂತಿ. (ತರ್ಕ) ಮಿಥ್ಯಾ ಕಲ್ಪನೆ; ದೋಷ [Idols of the tribe, cave, market, theatre ಮನುಷ್ಯ ಸಾಮಾನ್ಯ ಸ್ವಭಾವದಿಂದ ಉಂಟಾದವು, ವ್ಯಕ್ತಿಯ ಗುಣ ಅವಗುಣಗಳಿಂದ ಉಂಟಾದವು, ಮನುಷ್ಯರ ಪರಸ್ಪರ ವ್ಯವಹಾರ ಸಂಪರ್ಕದಿಂದ ಹುಟ್ಟಿದವು, ಪೂರ್ವದಿಂದ ಬಂದ ಸಂಪ್ರದಾಯಗಳ, ನಂಬಿಕೆಗಳ, ಮೂಲಕ ಹುಟ್ಟಿದವು, — ಹೀಗೆ ಪ್ರಮಾದಗಳು ನಾಲ್ಕು ತೆರದವೆಂದು Francis Bacon (ಕ್ರಿ. ಶ. ೧೬೨೦) ಎಂಬ ತತ್ತ್ವ ವಿಚಾರಿ ಪ್ರತಿಪಾದಿಸಿದ್ದಾನೆ]. **Idólater** ಐಡಾಲಟರ್ (ನಾ.) ವಿಗ್ರಹಾರಾಧಕ; (ಒಬ್ಬನ, ಒಂದರ) ಅವಿಚಾರ ಭಕ್ತ, ಅಚ್ಚುಮೆಚ್ಚುಗಾರ. **Idólatress** (ನಾ., ಸ್ತ್ರೀ.); **Idólatry** (ನಾ.) ಮೂರ್ತಿ ಪೂಜೆ. ಮಿತಿ ಮೀರಿದ ಭಕ್ತಿ ವಿಶ್ವಾಸಗಳು [Honour one on this side idolatry ದೇವತ್ವದ ಆರೋಪಣೆಯೊಂದನ್ನುಳಿದು (ಒಬ್ಬನನ್ನು) ಮಿತಿ ಮೀರಿ ಗೌರವಿಸು]. **Idólatrous** (ಗು.); **Idólatrously** (ಕ್ರಿ. ವಿ.); **Ídolize** ಐಡೊಲೈಸ್ (ಕ್ರಿ.) (ಒಬ್ಬನನ್ನು) ದೈವಮೂರ್ತಿಯನ್ನಾಗಿ ಪರಿಗಣಿಸು; ಅತಿಯಾಗಿ ಗೌರವಿಸು, ಪೂಜಿಸು, ಪ್ರೀತಿಸು. ಮೂರ್ತಿಪೂಜಾ ನಿಷ್ಠನಾಗಿರು. **Idolizátion** (ನಾ.); **Idólum** ಐಡೋಲಂ (ನಾ.; ಬ. ವ. -la) ಮನಶ್ಚಿತ್ರ; ಮನೋಭಾವನೆ. (ತರ್ಕ) ಪ್ರಮಾದ.

Idólum. Idol ನೋಡಿ.

Idyl(l) ಐ(ಇ)ಡಿಲ್ (ನಾ.) ಮು., ಹಳ್ಳಿಯ ಜನಜೀವನದಲ್ಲಿಯ ಮನೋಹರವಾದ ದೃಶ್ಯವನ್ನೊ ವಿಷಯವನ್ನೊ ಕುರಿತು ಪದ್ಯದಲ್ಲಾಗಲಿ ಗದ್ಯದಲ್ಲಾಗಲಿ (Prose i.) ಮಾಡಿದ ಸಣ್ಣ ವರ್ಣನೆ: ಜನಪದ ಗೀತೆ. ಇದಕ್ಕೆ ಹೊಂದುವ ಘಟನೆ, ಕಥಾ ವಿಷಯ. **Idýllic** (ಗು.); **Idýllically** (ಕ್ರಿ. ವಿ.); **Ídyllist** (ನಾ.); **Ídyllize** (ಕ್ರಿ. ಸಕ.)

If ಇಫ್ (ಸಂ. ಅವ್ಯ., ನಾ.) — ರೆ; — ಒಡೆ (ಗ್ರಾಂ.); ಪಕ್ಷದಲ್ಲಿ (If I knew what to do I should do it ಏನು ಮಾಡಬೇಕೊ ನನಗೆ ತಿಳಿದಿದ್ದರೆ ನಾನು ಅದನ್ನು ಮಾಡಬಹುದಾಗಿದ್ದಿತು. See if you can turn the handle ಹಿಡಿಯನ್ನು ತಿರುಗಿಸಲು ನಿನ್ನ ಕೈಯಲ್ಲಾಗುವುದೆ ನೋಡು). (If ಪದವನ್ನು ಬಿಟ್ಟುಬಿಟ್ಟಾಗ ಕ್ರಿಯಾಪದವು ಕರ್ತೃಪದಕ್ಕೆ ಮೊದಲೇ ಬರುತ್ತದೆ: Were I in your place = If I were in your place) If I only knew! ನನಗೆ ತಿಳಿದಿದ್ದರೆ ಎಷ್ಟು ಚೆನ್ನಾಗಿರುತ್ತಿದ್ದಿತು! As if — ಹಾಗೆ; — ಅಂತೆ [You talk as if you didn't know ನಿನಗೇನೂ ತಿಳಿದಿಲ್ಲದಂತೆ ಮಾತಾಡುತ್ತೀಯೆ ('ನಿನಗೆಲ್ಲ ಚೆನ್ನಾಗಿ ತಿಳಿಯುವುದು' ಎಂಬ ಅರ್ಥದಲ್ಲಿ)]. (ನಾ.) ಅವಶ್ಯ ಸಂದರ್ಭ; ವಿಶೇಷಣ (There are too many ifs in the way)

Ígneous ಇಗ್ನಿಯಸ್ (ಗು.) ಬೆಂಕಿಯ; ಅಗ್ನಿ ಸಂಬಂಧದ; ಅಗ್ನಿಸ್ವಭಾವದ; ಬೆಂಕಿಯಿಂದ ಕೂಡಿರುವ; ಜ್ವಾಲಾಮುಖಿಯಿಂದಾದ.

Ígnis fátuus (L) ಇಗ್ನಿಸ್ ಫ್ಯಾಟ್ಯುಅಸ್ (ನಾ.) ಜವುಗು ಪ್ರದೇಶಗಳಲ್ಲಿ ರಾತ್ರಿಯ ವೇಳೆ (ಅಪೂರ್ವವಾಗಿ) ಕಾಣಿಸಿಕೊಳ್ಳುವ ಬೆಳಕು (ಕೊಳೆಯುತ್ತಿರುವ ಜೈವಿಕ ಪದಾರ್ಥದಿಂದ ಹೊರಟ ಅನಿಲವು ತಾನಾಗಿ ಹೊತ್ತಿಕೊಳ್ಳುವುದರಿಂದ ಹುಟ್ಟುವುದೆಂಬ ಭಾವನೆ); ಕೊಳ್ಳಿ ಪಿಶಾಚಿ. (ರೂಪ.) ಬರಿ ಭ್ರಾಂತಿಯ ಆಶೆ, ಲಾಭ.

Igníte ಇಗ್ನೈಟ್ (ಕ್ರಿ.) ಅತಿ ಬಿಸಿಯಾಗಿ ಮಾಡು; ಹೆಚ್ಚು ಕಾವೇರಿಸು. (ರ. ವಿ.) ಹೊತ್ತಿಕೊಳ್ಳುವ, ರಾಸಾಯನಿಕ ಪರಿವರ್ತನೆಯಾಗುವ, ಶಾಖ ಬರುವಂತೆ ಕಾಯಿಸು. (ಬೆಂಕಿ) ಹೊತ್ತಿಸು; (ಬೆಂಕಿ) ಹೊತ್ತಿಕೊ, ಹೊತ್ತು. **Ignítable** (ಗು.); **Ignítion** ಇಗ್ನಿಷನ್ (ನಾ.) (ಕ್ರಿಯಾರ್ಥಗಳಲ್ಲಿ). ಅಂತರ್ದಹನ ಎಂಜಿನಿನ ವರ್ತುಲ ನಾಳಿಯಲ್ಲಿ ಅನಿಲ ಮಿಶ್ರಣವನ್ನು ಹೊತ್ತಿಸುವುದು: ಉರಿಹೊತ್ತಿಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ignóble ಇಗ್ನೋಬ್‌ಲ್ (ಗು., ತರ ತಮಗಳು -er, -est) ಕೀಳು ಹುಟ್ಟಿನ ; ನೀಚ ವಂಶದ ; ಹೀನ ಸ್ಥಿತಿಯ ; ದುರ್ಯಶಸ್ಸಿನ ; ನೀಚ ; ತುಚ್ಛ ; ಅಧಮ ; ಘನತೆಗೆಟ್ಟ ; ಅಪಮಾನಕರ. **Ignóbleness** (ನಾ.) ; **Ignóbly** (ಕ್ರಿ. ವಿ.)

Ignominy ಇಗ್ನೊಮಿನಿ (ನಾ.) ಕೆಟ್ಟ ಹೆಸರು ; ಅಗೌರವ ; ಕಳಂಕ ; ಅಪಕೀರ್ತಿ ; ಅಪಕೀರ್ತಿ ತರುವ ನಡತೆ ; ಅಪಮಾನ ತರತಕ್ಕದ್ದು. **Ignomínious** (ಗು.) (ಈಗ, ಸಾ., ಕಡಮೆಯ ನಿಂದಾರ್ಥದಲ್ಲಿ) ತಲೆ ತಗ್ಗಿಸುವಂಥ. **Ignomíniously** (ಕ್ರಿ. ವಿ.)

Ignorámus ಇಗ್ನೊರೇಮಸ್ (ನಾ. ; ಬ. ವ. -muses — ಮಸಸ್) ಮೂಢ ; ದಡ್ಡ ; ಹೆಡ್ಡ ; ಜಡ ಮತಿ.

Ignorance ಇಗ್ನೊರನ್ಸ್ (ನಾ.) ತಿಳಿವಿಲ್ಲದಿರುವುದು ; ಅರಿವಿಲ್ಲದಿರುವುದು ; ಅರಿಯಮೆ (ಗ್ರಾಂ.) ; ಅಜ್ಞಾನ (Where i. is bliss, 'tis folly to be wise ವಿಷಯಜ್ಞಾನವಿಲ್ಲದಿರುವುದು ಪರಮ ಸುಖವಾಗಿರುವ ಕಡೆ ಜ್ಞಾನಪಡೆಯುವುದು ಅವಿವೇಕ). **Ignorant** (ಗು.) ತಿಳಿವಳಿಕೆ ಸಾಲದ ; ಅರಿವಿಲ್ಲದ ; ವಿಷಯಜ್ಞಾನವಿಲ್ಲದ [*Of*, *in* (subject), *of* (fact)]. **Ignorantly** (ಕ್ರಿ. ವಿ.)

Ignorátio elénchi (L) ಇಗ್ನೊರೇಷಿಯೊ ಇಲೆಂಕೈ (ನಾ.) (ತರ್ಕ) ಎದುರಾಳಿಯ ವಾದವನ್ನು ಖಂಡಿಸುವಂತೆ ತೋರುವ, ಆದರೆ ನಿಜವಾಗಿ ಅವನು ಹೇಳದಿರುವ ಯಾವುದೋ ವಿಷಯವನ್ನು ಖಂಡಿಸುವ, ವಾದ : ಅಸಂಬದ್ಧ ವಾದ.

Ignóre ಇಗ್ನೋರ್ (ಕ್ರಿ. ಸಕ.) ಗಣನೆಗೆ ತಂದುಕೊಳ್ಳದಿರು ; ಲಕ್ಷ್ಯ ಮಾಡದಿರು ; ಕಡೆಗಣಿಸು ; ಅಲಕ್ಷ್ಯ ಮಾಡು. (ಮಹಾ ಪಂಚಾಯಿತ ಸಭೆಯ ವಿಷಯದಲ್ಲಿ) (ದೋಷಾರೋಪಣೆಯ ದಾವೆ) ನಿರಾಧಾರವಾದುದೆಂದು ತಳ್ಳಿಹಾಕು.

Ignótum per ignótius (L) (ಇಗ್ನೋಟಂ ಪರ್ ಇಗ್ನೋಷಿಯಸ್) ಮೊದಲೇ ತಿಳಿಯದುದನ್ನು ಅಷ್ಟು ಮಟ್ಟಿಗೂ ತಿಳಿಯದುದರಿಂದ ವಿವರಿಸುವುದು.

Iguána ಇಗ್ವಾನ (ನಾ.) (ವೆಸ್ಟ್ಇಂಡೀಸ್ ಮತ್ತು ದ. ಅಮೆರಿಕದ) ಮರದಮೇಲೆ ವಾಸಿಸುವ ಒಂದು ದೊಡ್ಡ ಹಲ್ಲಿಜಾತಿ : ಉಡ.

Iguánodon ಇಗ್ವಾನೊಡಾನ್ (ನಾ.) ಈಗ ಪಳೆಯುಳಿಕೆಯಾಗಿ ದೊರೆಯುವ ಸಸ್ಯಾಹಾರಿಯಾದ, ಭೂತಾಕಾರದ ಒಂದು ಹಲ್ಲಿಜಾತಿ.

I H S (ಸಂಕ್ಷಿಪ್ತ) (Gk) Iesous (Jesus) ಯೇಸು ಕ್ರಿಸ್ತ (ಊಹೆಯ ಅರ್ಥಗಳಲ್ಲೊಂದು : Jesus Hominum Salvator ಮನುಷ್ಯೋದ್ಧಾರಕ ಯೇಸು ಕ್ರಿಸ್ತ)

Iliac. **Ilium** ನೋಡಿ.

Iliad ಇಲಿಅ್ಯಡ್ (ನಾ.) ಹೋಮರ್ ಕವಿ ಬರೆದನೆಂದು ಪ್ರತೀತಿ ಇರುವ, ಟ್ರಾಯ್ ಪಟ್ಟಣದ ಮುತ್ತಿಗೆಯನ್ನು ಕುರಿತ, ಒಂದು ಇತಿಹಾಸ ಕಾವ್ಯ. I. of woes (ರೂಪ.) ಕಷ್ಟ, ದುಃಖ, —ಪರಂಪರೆ.

Ilium ಇಲಿಯಮ್ (ನಾ. ; ಬ. ವ. -ia) ರೊಂಡಿಯ ಎಲುಬು. **Íliac** ಇಲಿಅ್ಯಕ್ (ಗು.) ರೊಂಡಿಯ ಎಲುಬಿನ ; (ರೊಂಡಿಯ) ಪಕ್ಕೆಯ. I. artery ಹೊಟ್ಟೆಯಲ್ಲಿಯ ಮಹಾ ಅಪಧಮನಿಯ ಎರಡು ಶಾಖೆಗಳಲ್ಲಿ ಯಾವುದಾದರೊಂದು. I. passion ಕರುಳಿನಲ್ಲಿಯ ಅಡಚಣೆಯಿಂದ ಉಂಟಾಗುವ ಬಲು ನೋವಿನ ಒಂದು ರೋಗ : ಅಂತ್ರ ಶೂಲೆ.

Ilk ಇಲ್ಕ್ (ಗು.) (ಸ್ಕಾ. ಪ್ರ.) Of that i. (ವ್ಯಕ್ತಿ, ವಸ್ತು, ಮೊ.) ಅದೇ ಆದ ; ಅದರದೇ ಆದ (Guthrie of that i. = Guthrie of Guthrie). That i. (ಗ್ರಾಮ್ಯ) ಆ ಮನೆತನ, ಪಂಗಡ, ಗುಂಪು, ಜಾತಿ.

Ill ಇಲ್ (ಗು., ನಾ., ಕ್ರಿ. ವಿ.) ಅನಾರೋಗ್ಯದ ; ಅಸ್ವಸ್ಥ ; ಕಾಯಿಲೆಯ [He was taken i. ಅವನಿಗೆ ಕಾಯಿಲೆಯಾಯಿತು. (ರೋಗದ ಸಂದರ್ಭದಲ್ಲಿ *of*, *with* ಉಪ. ದೊಡನೆ ; ವ್ಯಾಕುಲ, ಮೊ. ಸಂದರ್ಭದಲ್ಲಿ *with* ಉಪ. ದೊಡನೆ)]. (ಆರೋಗ್ಯ) ನೆಟ್ಟಗಿಲ್ಲದ, ಕೆಟ್ಟುಹೋದ. ನೀತಿಗೆಟ್ಟ ; ಕೆಟ್ಟ ; ದುಷ್ಟ (I. fame ಕೆಟ್ಟ ಹೆಸರು ; ಅಪಕೀರ್ತಿ. I. blood, I. will ಹಗೆ ; ದ್ವೇಷ ; ಕಾದಾಟ. I. nature ಅಸಭ್ಯತೆ ; ಒರಟುತನ ; ದುಷ್ಟ ಸ್ವಭಾವ. I. humour, temper ಅಸಮಾಧಾನ ಸ್ಥಿತಿ ; ರೇಗಿಬೀಳುವ ಸ್ಥಿತಿ ; ಕೋಪ ಪ್ರಕೃತಿ ; ಸಿಡುಕು). ಕೆಡುಕು ಮಾಡುವ ; ಹಾನಿಕರ (I. weeds grow apace ಕೆಡುಕಿನ ಕಳೆ ಬಹು ಬೇಗ ಬೆಳೆಯುತ್ತದೆ. Do an i. turn to person ಒಬ್ಬನಿಗೆ, ಒಬ್ಬನ ಹಿತಕ್ಕೆ, ಕೆಡುಕು ಮಾಡು, ಹಾನಿ ತರು). ಹಾಳಾದ ; ಕ್ಲೇಶಕರ ; ನಾಶಕರ; ಅನರ್ಥದ (It's an i. wind that blows nobody good ಅದು ಯಾರಿಗೂ ಒಳ್ಳೆಯದಾಗದ ಪೀಡೆ). (ಪ್ರಾಚೀ. ಪ್ರ.) ಕಷ್ಟವಾದ (I. to please ಮೆಚ್ಚಿಸಲು ಕಷ್ಟವಾದ). ತಪ್ಪು ಇರುವ ; ಜಾಣ್ಮೆಯಿಲ್ಲದ ; ಅವ್ಯವಸ್ಥೆಯ (I. management ಅವ್ಯವಸ್ಥೆಯ ಆಡಳಿತ). (ನೀತಿ, ನಡತೆ) ತಗದ ; ಅಯೋಗ್ಯ ; (I. success ಅಸಮರ್ಪಕ ಜಯ). (ನಾ.) ಕೇಡು ; ಕೆಡುಕು ; ಅನಿಷ್ಟ ; ಹಾನಿ ; [Speak i. of (ಒಂದನ್ನು) ಹಳಿ, ದೂಷಿಸು ; ಕೆಡುಕು ಮಾತಾಡು]. (ಬ. ವ. ದಲ್ಲಿ) ಕೇಡುಗಳು ; ಆಪತ್ತುಗಳು ; ದುರದೃಷ್ಟಗಳು. (ಕ್ರಿ. ವಿ.) ಅಯೋಗ್ಯವಾಗಿ (Behaved i. ಅಯೋಗ್ಯವಾಗಿ ವರ್ತಿಸಿದನು) ; [Take (thing) i. (ಅದರಿಂದ) ಅಸಮಾಧಾನಪಟ್ಟು ಕೋಪಿಸಿಕೊ ; ತಪ್ಪೆಂದು ಎಣಿಸು]. ಪ್ರತಿಕೂಲವಾಗಿ ; ವಿರೋಧವಾಗಿ (It would have gone i. with him ಅವನಿಗೆ ಪ್ರತಿಕೂಲವಾಗಿ ಹೋಗುತ್ತಿದ್ದಿತು). ಸಮರ್ಪಕವಲ್ಲದೆ ; ಅಪೂರ್ಣವಾಗಿ (I. provided ಸಮರ್ಪಕವಾಗಿ ಒದಗಿಸದ ; — ಒದಗಿಸಿಕೊಳ್ಳದ. It i. became him to speak ಅವನು ಮಾತನಾಡಿದ್ದು ಅವನಿಗೆ ಯೋಗ್ಯವಲ್ಲ. I. at ease ಮುಜುಗರಗೊಂಡು ; ಕಳವಳಪಡುತ್ತ ; ಮನಸ್ಸಮಾಧಾನವಿಲ್ಲದೆ). **I.-advised(ly)** ವಿವೇಚನೆಯಿಲ್ಲದ(ದೆ) ; ಅವಿವೇಕದ(ವಾಗಿ). **I.-affected** ಅನುಕೂಲವಾಗಿಲ್ಲದ ; ಹಿತ ತೋರದ. **I.-bred** ಅಶಿಕ್ಷಿತ ; ಅಸಭ್ಯ ; ಒರಟು ರೀತಿಯ. **I. breeding** ಅಸಭ್ಯ ವರ್ತನೆ ; ಮರ್ಯಾದೆಗೆಟ್ಟ ನಡೆವಳಿ ; ಅವಿನಯ. **I.-conditioned** ದುಷ್ಟ (ಸ್ವಭಾವದ) ; ಹೀನ ಸ್ಥಿತಿಯಲ್ಲಿರುವ. **I.-disposed** ಕೆಡುಕು ಮಾಡುವ ಮನಸ್ಸಿನ ; ದುಷ್ಟ ಸ್ವಭಾವದ ; ಪ್ರತಿಕೂಲವಾಗಿರುವ (*Towards* ಪದದೊಡನೆ). **I.-fated** ದುರದೃಷ್ಟ ಒದಗಿದ ; ಕೇಡು ತರುವ. **I.-favoured** ಅಂದಗೇಡಿಯಾದ ; ಕುರೂಪಿಯಾದ ; ಅವಲಕ್ಷಣದ ; ಮನಸ್ಸಿಗೆ ಒಪ್ಪದ ; ಹಿತವಲ್ಲದ ; ಆಕ್ಷೇಪಣೆಗೀಡಾದ. **I.-gotten** ಅನ್ಯಾಯಾರ್ಜಿತ. **I.-humoured** ಸಿಡುಕಿನ ; ರೇಗುವ (ಸ್ವಭಾವದ). **I.-judged** ಅವಿವೇಕದ ; ವಿವೇಚನೆಯಿಲ್ಲದ. **I.-mannered** ನಡತೆಗೆಟ್ಟ ; ಅಸಭ್ಯತನದ ; ಒರಟು ರೀತಿಯ. **I.-natured(ly)** ದುಷ್ಟ ಸ್ವಭಾವದ(ದಿಂದ). **I.-omened** ದುಶ್ಶಕುನಗಳಿಂದ ಕೂಡಿದ ; ಶಕುನ ಸರಿಯಿಲ್ಲದ. **I.-starred** ಕೆಟ್ಟ ನಕ್ಷತ್ರದಲ್ಲಿ ಹುಟ್ಟಿದ ; ದುರದೃಷ್ಟದ. **I.-tempered** ದುಮ್ಮಾನದ ; ರೇಗುಸ್ವಭಾವದ ; ಥಟ್ಟನೆ ಕೋಪಿಸಿಕೊಳ್ಳುವ ; ಸಿಡುಕಿನ. **I.-timed** ಅವೇಳೆಯ ; ಸಮಯೋಚಿತವಲ್ಲದ. **I.-treat, I.-use** ಸರಿಯಾಗಿ ಕಾಣದಿರು ; ಹಿಂಸೆ ಕೊಡು ; ಪೀಡಿಸು ; ಕೆಡುಕು ಮಾಡು. **Illness** (ನಾ.) ಅನಾರೋಗ್ಯ (ಸ್ಥಿತಿ) ; ಅಸ್ವಸ್ಥತೆ ; ಕಾಯಿಲೆ ; ಕುತ್ತ (ಗ್ರಾಂ.)

Illátion ಇಲೇಷನ್ (ನಾ.) (ಹೇತು, ಪಕ್ಷ, — ಇವುಗಳಿಂದ) ಅನುಮಾನ (ಮಾಡುವುದು) ; ಅನುಮಿತಿ ; ಅನುಮಾನಿಸಿ ಪಡೆದ ನಿರ್ಣಯ ; ನಿಗಮನ. **Illátive** (ಗು.) (ಪದಗಳು) ಅನುಮಾನ ಸೂಚಕ ; ಅನುಮಾನಿಕ (I. particles)

Illégal ಇಲೀ(ಲ್ಲೀ)ಗಲ್ (ಗು.) ನ್ಯಾಯವಲ್ಲದ ; ನ್ಯಾಯ ವಿರುದ್ಧ ; ಕಾನೂನಿಗೆ ವಿರುದ್ಧವಾದ ; ನಿರ್ನ್ಯಾಯ. **Illégally** (ಕ್ರಿ. ವಿ.) ; **Illegálity** ಇಲ(ಲ್ಲಿ)ಗ್ಯಾಲಿಟಿ (ನಾ.)

Illégible ಇಲೆ(ಲ್ಲೆ)ಜಿಬ್‌ಲ್ (ಗು.) ಅಸ್ಪಷ್ಟ ; ಓದಲಾಗದ ; ಗಜಿಬಿಜಿ **Illegibílity** (ನಾ) ; **Illégibly** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Illegítimate ಇಲ(ಲ್ಲ)ಜಿಟಿಮೆಟ್ (ಗು., ನಾ.), —-ಮೇಟ್ (ಕ್ರಿ. ಸಕ.) ನ್ಯಾಯ, ಕಾನೂನು, — ಸಮ್ಮತವಲ್ಲದ; ನ್ಯಾಯ ವಿರುದ್ಧ; ಅನುಚಿತ. (ನ್ಯಾಯ ಸಮ್ಮತವಾದ) ವಿವಾಹ ಸಂಬಂಧದಿಂದ ಹುಟ್ಟಿರದ (ವನು); ಹಾದರಕ್ಕೆ ಹುಟ್ಟಿದವನು; ಜಾರಜ; ಅಡನಾಡಿ. ತಪ್ಪಾಗಿ, — ಅನುಮಾನಿಸಿದ, ಊಹಿಸಿದ. ಸ್ವಭಾವ ವ್ಯತಿರಿಕ್ತ; ಅಸಹಜ. (ಕ್ರಿ.) ಜಾರಜನೆಂದು ನಿರ್ಣಯಿಸು, ನಿರ್ಣಯಿಸಿ ಹೇಳು. **Illegítimately** (ಕ್ರಿ. ವಿ.); **Illegitimátion** (ನಾ.); **Illegítimacy** — ಮಸಿ (ನಾ.)

Illíberal ಇಲ(ಲ್ಲ)ಬೆ(ಬ)ರರ್ (ಗು.) ಸ್ವತಂತ್ರ ಪ್ರಜೆಗೆ ತರವಲ್ಲದ. ಉದಾರ ಸಂಸ್ಕೃತಿಯಿಲ್ಲದ; ಅನುದಾರ; ಸಂಕುಚಿತ. ಗ್ರಾಮ್ಯ; ಅಸಭ್ಯ; ಹೀನ. ಮನಸ್ಸು ಧಾರಾಳವಿಲ್ಲದ; ಜಿಪುಣ; ಕೃಪಣ. **Illiberálity** — ರ್‍ಯಾ — (ನಾ.); **Illíberally** (ಕ್ರಿ. ವಿ.)

Illícit ಇಲ(ಲ್ಲ)ಸಿಟ್ (ಗು.) ನ್ಯಾಯ ವಿರುದ್ಧ; ನಿಷಿದ್ಧ. **Illícitly** (ಕ್ರಿ. ವಿ.)

Illímitable ಇಲ(ಲ್ಲಿ)ಮಿಟಬ್‌ಲ್ (ಗು.) ಮಿತಿಯಿಲ್ಲದ; ಎಲ್ಲೆಯಿಲ್ಲದ; ಕಡೆಯಿಲ್ಲದ; ಅಪರಿಮೇಯ; ಅಪಾರ. **Illimitabílity** (ನಾ.); **Illímitableness** (ನಾ.); **Illímitably** (ಕ್ರಿ. ವಿ.)

Illíterate ಇಲ(ಲ್ಲಿ)ಟೆರೆಟ್ (ಗು., ನಾ.) ಅಕ್ಷರ ಜ್ಞಾನವಿಲ್ಲದ(ವನು); ಅನಕ್ಷರಸ್ಥ; ಓದು ಬರಹ ಬಾರದ(ವನು), ಕಲಿಯದವನು; ವಿದ್ಯಾ ಹೀನ. **Illíterateness** (ನಾ.); **Illíteracy** — ರಸಿ (ನಾ.)

Illógical ಇಲಾ(ಲ್ಲಾ)ಜಿಕಲ್ (ಗು.) ತರ್ಕವಿಲ್ಲದ; ತರ್ಕ ವಿರುದ್ಧ; ಸಪ್ರಮಾಣ ವಿಚಾರತತ್ತ್ವವನ್ನರಿಯದ ಅಥವಾ ಅದಕ್ಕೆ ಲಕ್ಷ್ಯ ಕೊಡದ; ಅಸಂಬದ್ಧ; ಅಸಮಂಜಸ. **Illógically** (ಕ್ರಿ. ವಿ.); **Illogicálity** — ಕ್ಯಾ — (ನಾ.)

Illth ಇಲ್ತ್ (ನಾ.) (ವಿರ. ಪ್ರ.) ದುಃಸ್ಥಿತಿ; ದಾರಿದ್ರ್ಯ ಸ್ಥಿತಿ; ಕೇಡು; ಎಡರು. (Wealth ಪದಕ್ಕೆ ವಿರುದ್ಧ)

Illúme. **Illuminate** ನೋಡಿ.

Illúminate ಇಲ್ಯೂ(ಲೂ)ಮಿನೇಟ್ (ಕ್ರಿ. ಸಕ.) ಬೆಳಗು(ಗಿಸು); ಬೆಳಕು ಕೊಡು; — ಮಾಡು. (ಒಬ್ಬನಿಗೆ) ಜ್ಞಾನೋದಯ, ಆತ್ಮ ಪ್ರಕಾಶ, — ಉಂಟುಮಾಡು. (ಒಂದು ವಿಷಯದಮೇಲೆ) ಬೆಳಕು ಬೀಳಿಸು; (ವಿಷಯವನ್ನು) ವಿಶದಪಡಿಸು. (ಒಂದರಮೇಲೆ) ಕಾಂತಿ ಬೀರು. (ಕಟ್ಟಡ, ಮೊ. ಕ್ಕೆ ಉತ್ಸವ ಸೂಚನೆಯಾಗಿ, ಯಥೇಚ್ಛವಾಗಿ) ದೀಪಾಲಂಕಾರ ಮಾಡು. (ಚಿನ್ನ, ಬೆಳ್ಳಿ, ಉಜ್ಜ್ವಲ ವರ್ಣ — ಇವು ಗಳಿಂದ ಕೈಬರಹದ ಪ್ರತಿಯಲ್ಲಿ) ಮೊದಲಕ್ಷರವನ್ನು ಅಲಂಕರಿಸು. **Illúme** (ಕ್ರಿ. ಸಕ.) (ಕಾವ್ಯ) ಬೆಳಗು(ಗಿಸು); ಪ್ರಕಾಶಗೊಳಿಸು (ರೂಪ. ಸಹ). **Illúminant** (ಗು., ನಾ.) ಬೆಳಗುವ(ದು); ಪ್ರಕಾಶಕ. **Illuminátion** (ನಾ.); **Illúminator** (ನಾ.); **Illúminative** — ನೇ (ನೆ, ನ) — (ಗು.); **Illúmine** — ಮಿನ್ (ಕ್ರಿ. ಸಕ.) ಬೆಳಗು; ಪ್ರಕಾಶ ಮಾಡು; ಜ್ಞಾನೋದಯ ಮಾಡು; ಆತ್ಮಪ್ರಕಾಶ ಮಾಡು.

Illumináti ಇಲ್ಯೂ(ಲೂ)ಮಿನೇಟೈ, —ಮಿನಾಟಿ (ನಾ., ಬ. ವ.) ಜರ್ಮನಿಯ Weishaupt ಎಂಬ ಪಂಡಿತನು ೧೭೭೬ರಲ್ಲಿ ಸ್ಥಾಪಿಸಿದ ಒಂದು ಗುಪ್ತ ಸಂಘ (ಈ ಸಂಘದವರು Freemason ಸಂಘದಂತೆ ವ್ಯವಸ್ಥೆ ಪಡೆದು, ದೇವಾಸ್ತಿಕ ತತ್ತ್ವಗಳನ್ನೂ ಪ್ರಜಾ ಪ್ರಭುತ್ವ ತತ್ತ್ವಗಳನ್ನೂ ಪಾಲಿಸತಕ್ಕವರಾಗಿದ್ದರು). ವಿಶೇಷ ಜ್ಞಾನವುಳ್ಳವರೆಂದು, ಆರೂಢ ಜ್ಞಾನಿಗಳೆಂದು, — ಹೇಳಿಕೊಳ್ಳುವವರು. **Illúminism** (ನಾ.) ಈ ರಹಸ್ಯ ಜ್ಞಾನಿ ಪಂಥದ ತತ್ತ್ವ. **Illúminist** (ನಾ.)

Illúmine. **Illuminate** ನೋಡಿ.

Illúsion ಇಲ್ಯೂಷನ್ (ನಾ.) ಮಾಯೆ; ಮೋಸ; ಭ್ರಮೆ; ಭ್ರಾಂತಿ; ಒಂದು ಬಾಹ್ಯವಸ್ತುವಿನ ವಿಷಯದಲ್ಲಿ ಮಿಥ್ಯಾ ಜ್ಞಾನದ ಇಂದ್ರಿಯ ಗೋಚರತೆ; ಅಭಾಸ; ಕಣ್ಕಟ್ಟು. (ಬುರುಕಿ, ಮೊ. ಕ್ಕೆ ಉಪಯೋಗಿಸುವ) ಪಾರದರ್ಶಕವಾದ ನವಿರು ರೇಷ್ಮೆ ಬಟ್ಟೆ. **Illúsionist** (ನಾ.) ಪ್ರಪಂಚ ಮಿಥ್ಯಾ ವಾದಿ; ಮಾಯಾ ವಾದಿ; ಅವಿದ್ಯಾ ವಾದಿ. ಕಣ್ಕಟ್ಟು ಮಾಡುವವನು; ಐಂದ್ರಜಾಲಿಕ; ಯಕ್ಷಿಣಿಗಾರ. **Illúsionism** (ನಾ.) ಪ್ರಪಂಚ ಮಿಥ್ಯಾ ವಾದ. **Illúsive** — ಸಿವ್ (ಗು.) ಮೋಸದ; ಮಾಯೆಯ; ಭ್ರಾಂತಿಯ. **Illúsively** (ಕ್ರಿ. ವಿ.); **Illúsiveness** (ನಾ.); **Illúsory** — ಸರಿ (ಗು.) ಭ್ರಾಂತಿಕಾರಕ; — ಜನಕ; ಮೋಸದ. **Illúsorily** (ಕ್ರಿ. ವಿ.); **Illúsoriness** (ನಾ.)

Illustrate ಇಲಸ್ಟ್ರೇಟ್ (ಕ್ರಿ. ಸಕ.) ವಿಶದಗೊಳಿಸು; ವಿವರಿಸು; (ಉದಾಹರಣೆಗಳಿಂದ) ಸ್ಪಷ್ಟ ಪಡಿಸು; ದೃಷ್ಟಾಂತ ಕೊಡು. (ವರ್ಣನೆ, ಮೊ. ನ್ನು) (ರೇಖಾ) ಚಿತ್ರಗಳಿಂದ ವಿಶದೀಕರಿಸು; ಸಚಿತ್ರ ಮಾಡು; ಚಿತ್ರ ಹಾಕು; (ಪುಸ್ತಕ, ವರ್ತಮಾನ ಪತ್ರಿಕೆ, ಮೊ. ನ್ನು) ಚಿತ್ರಗಳಿಂದ ಅಲಂಕರಿಸು. **Illustrátion** (ನಾ.); **Illústrative** — ಸ್ಟ್ರೆಟಿವ್, **Illus-** ಇಲಸ್ಟ್ರೇ — (ಗು.) ವಿವರಣವಾಗಿರುವ; ಉದಾಹರಣೆಯಾಗಿರುವ (*Of* ಉಪ. ದೊಡನೆ). **Illústratively** (ಕ್ರಿ. ವಿ.); **Illustrator** — ಸ್ಟ್ರೇ — (ನಾ.)

Illústrious ಇಲಸ್ಟ್ರಿಯಸ್ (ಗು.) ಪ್ರಖ್ಯಾತ; ಸುಪ್ರಸಿದ್ಧ; ಕೀರ್ತಿವಂತ; ಯಶಸ್ವಿ. **Illústriously** (ಕ್ರಿ. ವಿ.); **Illústriousness** (ನಾ.)

Image ಇಮೆ(ಮಿ)ಜ್ (ನಾ., ಕ್ರಿ. ಸಕ.) ಒಂದು ವಸ್ತುವಿನ ಬಾಹ್ಯ ರೂಪದ (ಕಾಲ್ಪನಿಕ) ಪ್ರತಿಮೆ (ಮು., ಭಕ್ತಿಗಾಗಿಟ್ಟುಕೊಂಡ ಸಾಧು ಸಂತರು, ಮೊ. ರ ವಿಗ್ರಹ); ಪ್ರತಿಮೆ; ವಿಗ್ರಹ; ಮೂರ್ತಿ; ಬಿಂಬ; ಪ್ರತೀಕ; ಆಕಾರ; ತೋರ್ಕೆ. (ಬೆಳಕಿನ ಕಿರಣಗಳು ಕನ್ನಡಿಯಲ್ಲಿ ಪ್ರತಿ ಫಲಿಸುವುದರಿಂದಾಗಲ, ಲೆನ್ಸಿನ ಮೂಲಕ ವಕ್ರೀಭವಿಸುವುದರಿಂದಾಗಲ ಉಂಟಾಗುವ, ಒಂದು ವಸ್ತುವಿನ) ಪ್ರತಿಬಿಂಬ (He is the very i. of his father ಅವನು ತನ್ನ ತಂದೆಯ ಪ್ರತಿಬಿಂಬ, ಪಡಿಯಚ್ಚು); ಮಾರ್ಫೊಳಪು; ನೆರಳು. ಮಾದರಿ; ಉಪಮಾನ; ರೂಪಕ. ಭಾವನೆ; ಕಲ್ಪನೆ. (ಕ್ರಿ.) (ಒಂದರ) ಪ್ರತಿಮೆ, ವಿಗ್ರಹ, — ಮಾಡು; (ಒಂದರಂತೆ) ಚಿತ್ರಿಸು. ಪ್ರತಿಬಿಂಬಿಸು. (ಮನಸ್ಸಿನಲ್ಲಿ) ಚಿತ್ರಿಸಿಕೊ, ಕಲ್ಪಿಸಿಕೊ. ಕಣ್ಣಿಗೆ ಕಟ್ಟುವಂತೆ ವರ್ಣಿಸು. ಮಾದರಿಯಾಗಿ, — ತೋರು, ಮಾಡು. **Imageable** (ಗು.); **Imageless** (ಗು.); **Imagery** — ಜರಿ, — ಜ್ರಿ (ನಾ.) ಪ್ರತಿಮೆಗಳು; ವಿಗ್ರಹಗಳು; ಪ್ರತಿಮಾ ಶಿಲ್ಪ; ಕೆತ್ತನೆ. ಪ್ರಕೃತಿ ವರ್ಣನೆ; ಶಬ್ದಚಿತ್ರ. **Imagist** ಇಮೆಜಿಸ್ಟ್ (ನಾ.) Romantic ಕಲಾ ಸಂಪ್ರದಾಯವನ್ನು ಪ್ರತಿಘಟಿಸಿ, ನಿರ್ದಿಷ್ಟವಾದ ಕಲ್ಪನಾ ಚಿತ್ರಗಳ ಮೂಲಕ ಭಾವವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಬೇಕೆಂಬ ಆಧುನಿಕ ಕವಿವರ್ಗದಲ್ಲೊಬ್ಬನು: ಸ್ಪಷ್ಟ ಚಿತ್ರಕ ಕವಿ.

Imáginal. **Imago** ನೋಡಿ.

Imágine ಇಮ್ಯಾಜಿನ್ (ಕ್ರಿ. ಸಕ.) (ಒಂದರ ಚಿತ್ರವನ್ನು) ಮನಸ್ಸಿನಲ್ಲಿ ಕಲ್ಪಿಸಿಕೊ; (ವಸ್ತುವಿನ ವಿಷಯದಲ್ಲಿ, ಅದು ಇದೆ, ಹೇಗಿದೆ, ಅದು ಏನು, ಎಂದು ಮುಂತಾಗಿ) ಭಾವಿಸಿಕೊ, ಕಲ್ಪಿಸಿಕೊ. ಊಹಿಸು (I cannot i. what he is doing). ಎಣಿಸು; ಅಭಿಪ್ರಾಯ ಪಡು (*That* ಪದದೊಡನೆ). (ಒಂದು ಭಾವನೆಯನ್ನು) ಮನಸ್ಸಿಗೆ ತಂದುಕೊ (*That* ಪದದೊಡನೆ). **Imáginable** (ಗು.) ಊಹಿಸಬಹುದಾದ (The greatest difficulty i.). **Imáginably** (ಕ್ರಿ. ವಿ.); **Imáginary** (ಗು.) ಕಲ್ಪನೆಯಲ್ಲಿ, ಭಾವನೆಯಲ್ಲಿ, ಮಾತ್ರವಿರುವ; (ಕೇವಲ) ಕಾಲ್ಪನಿಕ; ಊಹೆಯ. (ಗಣಿತ) ನಿಜವಾಗಿ ಅಸ್ತಿತ್ವವಿಲ್ಲದೆ ಒಂದು ವಿಶೇಷೋದ್ದೇಶಕ್ಕಾಗಿ ಇರುವಂತೆ ಕಲ್ಪಿಸಿಕೊಂಡ (ಉದಾ., ಋಣ ಸಂಖ್ಯೆಯ ವರ್ಗಮೂಲ). **Imáginarily** (ಕ್ರಿ. ವಿ.); **Imaginátion** (ನಾ.) ಭಾವಿಸಿಕೊಳ್ಳುವುದು; ಕಲ್ಪನೆ; ಭಾವನೆ. ಇಂದ್ರಿಯಗೋಚರವಿಲ್ಲದ ಬಾಹ್ಯವಸ್ತುಗಳ ಪ್ರತಿಮೆಗಳನ್ನು ಕಲ್ಪಿಸಿಕೊಳ್ಳುವ ಮನಶ್ಶಕ್ತಿ; ಕಲ್ಪನಾ ಶಕ್ತಿ; ಭಾವನಾ ಶಕ್ತಿ; ಪ್ರತಿಭಾ ಶಕ್ತಿ; ರೂಪಕ ಶಕ್ತಿ; ಬಿಂಬಕಲ್ಪನಾ ಶಕ್ತಿ; ಬುದ್ಧಿಯ ಸೃಷ್ಟಿ ಶಕ್ತಿ. **Imáginative** (ಗು.) ಕಲ್ಪನಾ ಶಕ್ತಿಯ; — ಯನ್ನುಪಯೋಗಿಸುವ; — ಯನ್ನುಳ್ಳ; — ಯನ್ನು ಹೆಚ್ಚಾಗಿ ತೋರುವ; ಕಾಲ್ಪನಿಕ; ಊಹಾತ್ಮಕ; ಭಾವನೆಯ. **Imáginatively** (ಕ್ರಿ. ವಿ.); **Imáginativeness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Imagist. Image ನೋಡಿ.

Imágo ಇಮೇಗೊ [ನಾ. ; ಬ. ವ. -gines ಇಮೇ(ಮ್ಯಾ)ಜಿನೀಸ್, -gos — ಗೋಸ್] ಇತರ ಅವಸ್ಥೆಗಳೆಲ್ಲವನ್ನೂ ದಾಟಿ ಯೌವನದ ಪರಿಪೂರ್ಣಾವಸ್ಥೆ ಪಡೆದ ಕೀಟ, ಕ್ರಿಮಿ ; ಪರಿಪೂರ್ಣ ಕೀಟ (ಉದಾ., ಚಿಟ್ಟೆ). **Imáginal** ಇಮ್ಯಾಜಿನಲ್ (ಗು.) ಪರಿಪೂರ್ಣ ಕೀಟದ.

Imám, Imaúm ಇಮಾಮ್ (ನಾ.) ಮಸೀದಿಯ ಪುರೋಹಿತ ; ಮಹಮ್ಮದೀಯ ಧಾರ್ಮಿಕ ಪೂಜ್ಯ ವ್ಯಕ್ತಿ. ಹಲವು ಮುಸಲ್ಮಾನ್ ಪ್ರಮುಖರ ಬಿರುದು : 'ಇಮಾಮ್'. **Imámate** — ಮೇಟ್ (ನಾ.) ಇಮಾಮಿನ ಆಡಳಿತ ಪ್ರಾಂತ.

Imbecile ಇಂಬಿಸಿ(ೕ)ಲ್, — ಸ್ಯೈಲ್, (ಗು., ನಾ.) ಮನೋ ದೌರ್ಬಲ್ಯವುಳ್ಳ(ವನು) ; ಹುಟ್ಟು ದಡ್ಡ ; ಬುದ್ಧಿ ಶೂನ್ಯ ; ದೇಹ ದೌರ್ಬಲ್ಯವುಳ್ಳ ; ಬಲಹೀನ. **Imbecilely** (ಕ್ರಿ. ವಿ.) ; **Imbecílity** — ಸಿಲಿಟಿ (ನಾ.)

Imbíbe ಇಂಬೈಬ್ (ಕ್ರಿ. ಸಕ.) (ಭಾವ, ಮೊ. ನ್ನು) ಗ್ರಹಿಸು, ಹೀರಿಕೊ, ಅಂತರ್ಗತ ಮಾಡಿಕೊ. (ದ್ರವ) ಕುಡಿ. (ಗಾಳಿ, ಮೊ. ನ್ನು) ಸೇದಿಕೊ. (ತೇವ, ಮೊ. ನ್ನು) ಹೀರು(ರಿಕೊ). **Imbibítion** ಇಂಬಿಬಿಷನ್ (ನಾ.)

Ímbricate ಇಂಬ್ರಿಕೇಟ್ (ಕ್ರಿ.), — ಕೆಟ್ (ಗು.) (ಎಲೆಗಳು, ಮೀನಿನ ಪೊರೆ, ಮೊ. ನ್ನು) ಹೆಂಚು ಹೊದಿಸಿದಂತೆ ಒಂದರಮೇಲೊಂದು ಕೂಡುವಹಾಗೆ ಅಳವಡಿಸು, ಅಳವಟ್ಟಿರು. **Ímbricative** — ಕೇ (ಕ) — (ಗು.) ; **Imbricátion** (ನಾ.)

Imbróglio ಇಂಬ್ರೋಲ್ಯೋ (ನಾ.) ಅವ್ಯವಸ್ಥೆಯಾಗಿ ಹಾಕಿದ ರಾಶಿ ; ಅಣಿಯಿಲ್ಲದ ಗುಡ್ಡೆ ; ಅಸ್ತವ್ಯಸ್ತತೆ. (ಮು., ರಾಜಕೀಯ ಅಥವಾ ನಾಟಕೀಯ) ತೊಡಕು ಸಂದರ್ಭ ; ಜಟಿಲಾವಸ್ಥೆ ; ಬಿಕ್ಕಟ್ಟು ; ಮುಗ್ಗಟ್ಟು.

Imbrué ಇಂಬ್ರೂ (ಕ್ರಿ. ಸಕ.) (ಕೈಯನ್ನು, ಕತ್ತಿಯನ್ನು, — ರಕ್ತದಿಂದ, ಕೊಲೆಯಿಂದ) ಕಲೆಗೊಳಿಸು, ಕಳಂಕಿತ ಮಾಡು ; ತೋಯಿಸು, ನೆನಸು (ಮು., ರಕ್ತದಿಂದ) (*In*, *with* ಉಪ. ದೊಡನೆ)

Imbrúte ಇಂಬ್ರೂಟ್, **Em-** ಎಂ — (ಕ್ರಿ. ಸಕ.) ಪಶುಪ್ರಾಯ ಮಾಡು.

Imbué ಇಂಬ್ಯೂ (ಕ್ರಿ. ಸಕ.) ಪೂರ್ತಿ ವ್ಯಾಪಿಸುವಂತೆ ಮಾಡು ; ತುಂಬು ; ಊರಿಸು ; ಭಾವನೆ ಮಾಡು (*With* ಉಪ. ದೊಡನೆ). ಬಣ್ಣ ಕಟ್ಟು ; ಬಣ್ಣ ಬಳಿ ; ರಂಗು ಹಾಕು (*With* ಉಪ. ದೊಡನೆ). (ವೇದನೆ, ಭಾವನೆ, ಮೊ. ಗಳಿಂದ) ಆವೇಶ ತುಂಬು ; ಪ್ರೇರಿಸು (*With* ಉಪ. ದೊಡನೆ). = Imbrue.

Ímitate ಇಮಿಟೇಟ್ (ಕ್ರಿ. ಸಕ.) (ಒಬ್ಬರ) ಮೇಲ್ಪಂಕ್ತಿಯನ್ನು ಅನುಸರಿಸು ; ಅನುಕರಿಸು ; ಅಣಕಿಸು ; (ತಿಳಿದೊ ತಿಳಿಯದೆಯೊ, — ಒಬ್ಬನ, ಒಂದರ) ಹಾಗೆ ಇರು, ಮಾಡು, ಆಡು ; ಹೋಲು. **Ímitable** — ಟ — (ಗು.) ಅನುಕರಣ ಸಾಧ್ಯ. **Imitabílity** (ನಾ.) ಅನುಕರಣ ಸಾಧ್ಯತೆ ; ಅನುಕರಣ ಶಕ್ತಿ. **Ímitator** — ಟೇ — (ನಾ.) ; **Imitátion** (ನಾ.) ಅನುಕರಣ (ಮಾಡುವುದು) ; ಹೋಲಾಟ ; ಹೋಲುವೆ (I. is the sincerest flattery ಅನುಕರಣವು ನಿಜವಾದ ಪ್ರಶಂಸೆ). ಪ್ರತಿ (ರೂಪ) ; ನಕಲು ; ಅನುಕರಣ ಮಾಡಿದ್ದು. [(ಗು.) I. leather ಅನುಕರಣದ, ಕೃತಕದ, — ತೊಗಲು] . (ಸಂ.) ರಾಗ, ಮೊ. ನ್ನು, ಸಾ., ಬೇರೆ ಶ್ರುತಿಯಲ್ಲಿ ಅಥವಾ ಬೇರೆ ರಾಗದಲ್ಲಿ, ಮರಳಿ ಹಾಡುವುದು. **Ímitative** (ಗು.) (ಒಂದರ) ಮಾದರಿಯನ್ನು ಅಥವಾ ಉದಾಹರಣೆಯನ್ನು ಅನುಸರಿಸುವ ; ಅನುಕರಣದ ; ಅನುಕರಣಾತ್ಮಕ ; ಅನುಕರಣ, — ಪರ, ಶೀಲ (*Of* ಉಪ. ದೊಡನೆ) [I. arts ಅನುಕೃತಿ ಕಲೆಗಳು : ವರ್ಣಚಿತ್ರ ಕಲೆ, ಶಿಲ್ಪ ಕಲೆ. I. word ಅನುಕರಣ ಶಬ್ದ (ಉದಾ., Fizz)] . ಕೃತಕ ; ಖೋಟಾ. **Ímitatively** (ಕ್ರಿ. ವಿ.) ; **Ímitativeness** (ನಾ.)

Immáculate ಇಮ್ಯಾಕ್ಯುಲೆಟ್ (ಗು.) ಪರಿಶುದ್ಧ ; ನಿಷ್ಕಳಂಕ ; ನಿರ್ಮಲ ; ನಿರ್ದುಷ್ಟ (ಅನೇಕ ವೇಳೆ, ವ್ಯಂಗ್ಯಾರ್ಥದಲ್ಲಿ) ; [I. Conception (ಮೇರಿಕನ್ನಿಕೆಯ ವಿಷಯದಲ್ಲಿ) ಮೂಲ ಪಾಪದೋಷವಿಲ್ಲದ ಗರ್ಭಧಾರಣೆ ; ನಿಷ್ಕಳಂಕ ಗರ್ಭಧಾರಣೆ] . (ಪ್ರಕೃತಿ ಚರಿತ್ರೆ) ಕಲೆಗಳಿಲ್ಲದ ; ಮಚ್ಚೆಗಳಿಲ್ಲದ. **Immáculacy** — ಲಸಿ (ನಾ.) ನಿಷ್ಕಳಂಕ ಸ್ಥಿತಿ, ಗುಣ. **Immáculateness** (ನಾ.) ; **Immáculately** (ಕ್ರಿ. ವಿ.)

Ímmanent ಇಮನೆಂಟ್ (ಗು.) ಒಳಗೆ ನೆಲಸಿರುವ ; ಅಂತಸ್ಥ ; ನೈಸರ್ಗಿಕ (*In* ಉಪ. ದೊಡನೆ). (ದೇವರ ವಿಷಯದಲ್ಲಿ) ಚಿರ ವಿಶ್ವವ್ಯಾಪಿ (ಯಾದ) ; ಜಗದಂತರ್ಯಾಮಿ(ಯಾದ). **Ímmanence** (ನಾ.) ; **Ímmanency** (ನಾ.)

Immatérial ಇಮ(ಮ್ಮ)ಟೀರಿಯಲ್ (ಗು.) ದ್ರವ್ಯವಲ್ಲದ ; ಅದ್ರವ್ಯ. ಅಮೂರ್ತ ; ಅಭೌತ. ಅಪ್ರಧಾನ ; ಅಪ್ರಕೃತ. **Immateriálity** (ನಾ.) ; **Immatérialize** (ಕ್ರಿ. ಸಕ.) ; **Immatérialism** (ನಾ.) ಮನಸ್ಸಿನ ಭಾವನೆಯಲ್ಲದೆ ದ್ರವ್ಯವೆಂಬುದಕ್ಕೆ ಪ್ರತ್ಯೇಕವಾದ ಅಸ್ತಿತ್ವವಿಲ್ಲವೆಂಬ ವಾದ ; ಅದ್ರವ್ಯ ವಾದ. **Immatérialist** (ನಾ.)

Immatúre ಇಮಟ್ಯೂರ್ (ಗು.) ಬಲಿತಿಲ್ಲದ ; ಅಪಕ್ವ ; ಎಳಸಾದ ; ಎಳವೆಯ. **Immatúrity** (ನಾ.)

Immeásurable ಇಮೆ(ಮ್ಮೆ)ಝ್ಯುರಬ್‌ಲ್ (ಗು.) ಅಳೆಯಲಾಗದ ; ಅಮೇಯ ; ವಿಪರೀತ. **Immeasurabílity** (ನಾ.) ; **Immeásurableness** (ನಾ.) ; **Immeásurably** (ಕ್ರಿ. ವಿ.)

Immédiate ಇಮೀಡಿಯೆಟ್ (ಗು.) (ವ್ಯಕ್ತಿ ಅಥವಾ ವಸ್ತು ಮತ್ತೊಂದರೊಡನೆಯ ಸಂಬಂಧದಲ್ಲಿ) ಎಡೆ ಬಿಡದೆ ಹೊದ್ದಿಕೊಂಡಿರುವ ; (ಅವಕಾಶ ಬಿಡದೆ) ಸೇರಿಕೊಂಡಿರುವ ; ಅವ್ಯವಹಿತ ; ತತ್‌ಕ್ಷಣ. (ಸಂಬಂಧ ಅಥವಾ ಕ್ರಿಯೆ) ನೇರವಾದ ; ಸಮಕ್ಷ ; ಮಧ್ಯವರ್ತಿಯಿಲ್ಲದ [(ತರ್ಕ) I. inference (ಮಧ್ಯಮ ಪದವನ್ನು ಪ್ರಯೋಗಿಸದೆ) ಪ್ರತಿಜ್ಞೆಯೊಂದರಿಂದಲೇ ಪಡೆದ ನಿಗಮನ] . ಅತಿ ಸಮೀಪದ ; ನೆರೆಯ ; ಪಕ್ಕದ (My i. neighbour ನನ್ನ ನೆರೆಯವನು). ತತ್‌ಕ್ಷಣದ ; ಒಡನೆಯೇ ಸಂಭವಿಸುವ ; ತಡವಿಲ್ಲದ (Give an i. reply ಒಡನೆಯೇ ಉತ್ತರ ಕೊಡು). **Immédiacy** — ಯಸಿ (ನಾ.) ಮಧ್ಯವರ್ತಿತ್ವವಿಲ್ಲದ್ದು ; ನೇರವಾದ, ಅನಂತರ, — ಸಂಬಂಧ ; ನೇರವಾಗಿರುವುದು. **Immédiateness** (ನಾ.) ; **Immédiately** (ಕ್ರಿ. ವಿ.)

Immemórial ಇಮಿ(ಮ್ಮಿ)ಮೋರಿಯಲ್ (ಗು.) ನೆನಪಿಗೆ ಮೀರಿದ ; ಪ್ರಾಚೀನ(ತೆಯ) ; ಅತಿ ಪುರಾತನದ ; ತೀರ ಹಳಮೆಯ (Time i. ಅನಾದಿ ಕಾಲ). **Immemórially** (ಕ್ರಿ. ವಿ.)

Imménse ಇಮೆನ್ಸ್ (ಗು.) ಬಹು ದೊಡ್ಡ ; ಮಹತ್ತಾದ ; ಅಪರಿಮಿತ. (ಅಸಂ.) ಬಹಳ ಒಳ್ಳೆಯ ; ಬಹು ಶ್ಲಾಘ್ಯವಾದ. **Imménsely** (ಕ್ರಿ. ವಿ.) ಅತ್ಯಂತವಾಗಿ ; ಅಪಾರವಾಗಿ ; (ಅಸಂ.) ಬಹು ಹೆಚ್ಚಾಗಿ. **Imménseness** (ನಾ.) ; **Imménsity** (ನಾ.)

Immérse ಇಮರ್ಸ್ (ಕ್ರಿ. ಸಕ.) (ದ್ರವದಲ್ಲಿ) ಅದ್ದು, ಮುಳುಗಿಸು. (ತಲೆ ಮುಳುಗಿಸಿ) ಜ್ಞಾನಸ್ನಾನ ಮಾಡಿಸು ; ಹೀಗೆ ಕ್ರೈಸ್ತನನ್ನಾಗಿ ಮಾಡು. ಒಂದು ಕೆಲಸದಲ್ಲಿ, ಚಟುವಟಿಕೆಯಲ್ಲಿ, ಮಗ್ನಗೊಳಿಸು. (ಸಾಲ, ತೊಂದರೆ, ಆಲೋಚನೆ, ಮೊ. ಗಳಲ್ಲಿ) ಮುಳುಗಿಸು ; ಬಹು ದೂರ ಸಿಕ್ಕಿಕೊಳ್ಳುವಂತೆ ಮಾಡು. **Immérsion** — ಷನ್ (ನಾ.) (ಕ್ರಿಯಾರ್ಥಗಳಲ್ಲಿ) ; (ಜ್ಯೋ.) ಒಂದು ಆಕಾಶ ಕಾಯವು ಮತ್ತೊಂದರ ಹಿಂದೆ ಅಥವಾ ಅದರ ನೆರಳಿನಲ್ಲಿ ಹೊಕ್ಕು ಮರೆಯಾಗುವುದು ; ಗ್ರಾಸ.

Ímmigrate ಇಮಿಗ್ರೇಟ್ (ಕ್ರಿ.) ಪರ ದೇಶಕ್ಕೆ ನೆರೆಯಾಗಿ ನಿಲ್ಲಲು ಬರು ; ವಲಸೆ ಬರು ; ಗುಳೆ ತೆಗೆ (*Into* ಉಪ. ದೊಡನೆ). (ಒಬ್ಬನನ್ನು) (ಪರ ದೇಶದಲ್ಲಿ) ನೆಲಸಲು ಕರೆತರು. **Immigrátion** (ನಾ.) ; **Ímmigrant** — ಗ್ರಂಟ್ (ಗು., ನಾ.) ವಲಸೆ ಬಂದ(ವನು) ; ವಲಸೆಗಾರ.

Ímminent ಇಮಿನೆಂಟ್ (ಗು.) (ಘಟನೆಗಳು, ಮು., ಅಪಾಯಗಳು) ಸಂಭವಿಸುವಂತಿರುವ, ಸನ್ನಿಹಿತವಾಗಿರುವ, ಆಸನ್ನ, ಹತ್ತಿರಕ್ಕೆ ಬಂದ, ಇನ್ನೇನು ಆಗುವ. **Ímminence** (ನಾ.) ; **Ímminently** (ಕ್ರಿ. ವಿ.)

Immíscible ಇಮಿಸಿಬ್‌ಲ್ (ಗು.) ಬೆರಸಲಾಗದ ; ಬೆರಕೆಯಾಗದ. **Immiscibility** (ನಾ.) ; **Immíscibly** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Immítigable ಇಮಿಟಿಗಬ್‌ಲ್ (ಗು.) ತಗ್ಗಿಸಲಾಗದ ; ಕಡಮೆ ಮಾಡಲಾಗದ ; ಶಮನ ಮಾಡಲಾಗದ. **Immítigably** (ಕ್ರಿ. ವಿ.)

Immíxture ಇಮಿ(ಮ್ಮಿ)ಕ್ಸ್ಚ್ಯುರ್ (ನಾ.) ಬೆರಸುವುದು. (ಒಂದರಲ್ಲಿ) ತಗುಲಿ ಬೀಳುವುದು, ಸಿಕ್ಕಿ — (*In* ಉಪ. ದೊಡನೆ)

Immóbile ಇಮೋ(ಮ್ಮೋ)ಬಿಲ್ (ಗು.) ಚಲಿಸಲಾಗದ ; ಚಲಿಸದ ; ಅಚಲ ; ನಿಶ್ಚಲ. **Immobílity** —ಮೊ— (ನಾ.) ; **Immóbilize** —ಮೋ— (ಕ್ರಿ. ಸಕ.) ಕದಲದಂತೆ ಬಿಗಿಸು, ಬಂಧಿಸು. (ಸೈನ್ಯ ದಳಗಳನ್ನು) ಸ್ಥಳಾಂತರಕ್ಕೆ ಸಾಗಿಸಲಾಗದಂತೆ ಮಾಡು. (ನಾಣ್ಯವನ್ನು) ಚಲಾವಣೆ ನಿಲ್ಲಿಸು. **Immobilizátion** (ನಾ.)

Immóderate ಇಮಾ(ಮ್ಮಾ)ಡೆರೆಟ್ (ಗು.) ಅತಿ(ಯಾದ) ; ಮಿತಿ ಮೀರಿದ ; ಹಾಳತವಿಲ್ಲದ; ಹಿಡಿತವಿಲ್ಲದ; ಅಡಕವಿಲ್ಲದ. **Immóderately** (ಕ್ರಿ. ವಿ.)

Immódest ಇಮಾ(ಮ್ಮಾ)ಡೆಸ್ಟ್ (ಗು.) ಮರ್ಯಾದೆಗೆಟ್ಟ ; ಲಜ್ಜೆಗೆಟ್ಟ ; ಗಾಂಭೀರ್ಯವಿಲ್ಲದ ; ಅಸಭ್ಯ ; ಅವಿನೀತ. ಮುಂದೆಬಿದ್ದು ಹೋಗುವ ; ಧೂರ್ತ. **Immódestly** (ಕ್ರಿ. ವಿ.) ; **Immódesty** (ನಾ.)

Ímmolate ಇಮೊಲೇಟ್ (ಕ್ರಿ. ಸಕ.) (ಒಬ್ಬನನ್ನು) ಬಲಿಯಾಗಿ ಕೊಲ್ಲು, ಬಲಿ ಕೊಡು (ರೂಪ.). **Immolátion** (ನಾ.) ; **Ímmolator** (ನಾ.)

Immóral ಇಮಾ(ಮ್ಮಾ)ರಲ್ (ಗು.) ನೀತಿವಿರುದ್ಧವಾದ ; ನೀತಿಗೆಟ್ಟ ; ದುಷ್ಟ ; ದುಶ್ಶೀಲ ; ದುರಾಚಾರದ ; ವ್ಯಭಿಚಾರಿಯಾದ ; ಕೆಟ್ಟ ನಡತೆಯ. **Immórally** (ಕ್ರಿ. ವಿ.) ; **Immorálity** ಇಮೊ(ಮ್ಮೊ)ರ್‍ಯಾಲಿಟಿ (ನಾ.)

Immórtal ಇಮಾರ್ಟಲ್ (ಗು., ನಾ.) ಸಾವಿಲ್ಲದ ; ಅಮರ ; ದಿವ್ಯ. ಅಳಿಯದ ; ಮಾಸಿಹೋಗದ ; ಕೆಟ್ಟು ಹೋಗದ. ಶಾಶ್ವತ ಕೀರ್ತಿಯ. (ಬಳ. ಮಾ.) ಸ್ಥಿರ ; ನಿತ್ಯ ; ಅಮೃತ ; ಬಹು ಕಾಲ ಬಾಳುವ. (ನಾ.) ಅಮರ ; (ಬ. ವ. ದಲ್ಲಿ) (ಪುರಾಣ) ದೇವತೆಗಳು. ಶಾಶ್ವತ ಕೀರ್ತಿ ಪಡೆದವನು (ಮು., ಗ್ರಂಥಕರ್ತ). ಫ್ರೆಂಚ್ ಸಾಹಿತ್ಯ ಪರಿಷತ್ತಿನ ಸದಸ್ಯ. (ಬ. ವ. ದಲ್ಲಿ) ಪುರಾತನ ಪರ್ಷಿಯದ ರಾಜನ ಅಂಗರಕ್ಷಕರು. **Immórtalize** (ಕ್ರಿ. ಸಕ.) ಅಮರನ(ವ)ನ್ನಾಗಿ ಮಾಡು ; ಶಾಶ್ವತ ಕೀರ್ತಿ, — ಅನುಗ್ರಹಿಸು, ಕೊಡು. ಚಿರಜೀವಿಯಾಗಿ ಮಾಡು ; ಚಿರಸ್ಥಾಯಿಯಾಗಿ ಮಾಡು. **Immortalizátion** (ನಾ.) ; **Immórtally** (ಕ್ರಿ. ವಿ.) ಶಾಶ್ವತವಾಗಿ. (ಬಳ. ಮಾ.) ಅಪರಿಮಿತವಾಗಿ ; ಬಹಳವಾಗಿ. **Immortálity** — ಟ್ಯಾಲಿಟಿ (ನಾ.) ಅಮೃತತ್ವ ; ಅಳಿಯಮೆ.

Immortélle ಇಮಾರ್ಟೆಲ್ (ನಾ.) ಒಣಗಿಸಿದರೂ ಬಣ್ಣಗೆಡದಿರುವ, ಕಾಗದದಂಥ ರಚನೆಯುಳ್ಳ, ಒಂದು ತೆರದ ಸಂಕೀರ್ಣ ಪುಷ್ಪಜಾತಿ (ಅನೇಕ ವೇಳೆ ಸಮಾಧಿಗಳನ್ನಲಂಕರಿಸಲು ಉಪಯೋಗಿಸುವರು)

Immóvable ಇಮೂ(ಮ್ಮೂ)ವಬ್‌ಲ್ (ಗು., ನಾ.) ಕದಲದ ; ಕದಲಿಸಲಾಗದ ; ಅಳ್ಳಾಡದ ; ಚಲನೆಯುಲ್ಲದ ; ನಿಶ್ಚಲ ; ವ್ಯತ್ಯಾಸಹೊಂದದ [I. feast (Feast ನೋಡಿ)] ; ಪಟ್ಟಾಗಿ ನಿಂತ ; ದೃಢವಾದ ; ಜಗ್ಗದ. ಮನಸ್ಸು ಕರಗದ ; (ಅನು)ರಾಗ ಶೂನ್ಯ. (ನ್ಯಾ. ಶಾ., ಆಸ್ತಿಯ ವಿಷಯದಲ್ಲಿ) ಜಮೀನು, ಮನೆ, ಮೊ. ವುಗಳುಳ್ಳ ; ಸ್ಥಿರ ಸ್ವತ್ತಿನ. (ನಾ.) (ಸಾ., ಬ. ವ. ದಲ್ಲಿ) ಸ್ಥಿರ ಸ್ವತ್ತು ; ಸ್ಥಿರಾಸ್ತಿ. **Immovabílity** (ನಾ.) ; **Immóvableness** (ನಾ.) ; **Immóvably** (ಕ್ರಿ. ವಿ.)

Immúne ಇಮ್ಯೂನ್ (ಗು., ನಾ.) (ವಿಷ, ರೋಗದ ಸೋಂಕು, ಮೊ. ವು) ಅಂಟದಂತೆ ರಕ್ಷಣೆಪಡೆದಿರುವ (*From, against, to* ಉಪ. ದೊಡನೆ) ; ರಕ್ಷಿತ. (ನಾ.) — ರಕ್ಷಿತನಾದವನು. **Immúnity** (ನಾ.) (ನ್ಯಾ. ಶಾ.) (ತೆರಿಗೆ, ಅಧಿಕಾರ ವ್ಯಾಪ್ತಿ, ಮೊ. ಗಳಿಂದ) ವಿನಾಯಿತಿ, ಬಿಡುತಿ (*From* ಉಪ. ದೊಡನೆ). (— ಇಂದ) ಬಿಡುಗಡೆ. (ರೋಗದ ಸೋಂಕು, ಮೊ. ಗಳಿಂದ) ರಕ್ಷಣೆ (ಪಡೆದಿರುವುದು) (*From* ಉಪ. ದೊಡನೆ). **Ímmunize** ಇಮ್ಯು(ಮ್ಯೂ)ನೈಸ್ (ಕ್ರಿ. ಸಕ.) (ಸೋಂಕು ತಟ್ಟದಂತೆ) ರಕ್ಷೆ ಕೊಡು (*Against* ಉಪ. ದೊಡನೆ). **Immunizátion** (ನಾ.) ; **Immunólogy** —ನಾಲೊಜಿ (ನಾ.) ಸೋಂಕು ತಟ್ಟದಿರುವುದನ್ನೂ, ಹಾಗೆ ತಟ್ಟದಂತಿರುವುದಕ್ಕೆ ಕಾರಣಗಳನ್ನೂ, ವಿಚಾರ ಮಾಡುವ (ವೈದ್ಯ, ಜೀವಾಣು, ರಾಸಾಯನಿಕ) ಶಾಸ್ತ್ರ : ಸೋಂಕು ರಕ್ಷಾ ಶಾಸ್ತ್ರ.

Immúre ಇಮ್ಯೂರ್ (ಕ್ರಿ. ಸಕ.) ಸೆರೆಯಲ್ಲಿಡು ; ಹೊರಗಿನ ಸಂಪರ್ಕವಿಲ್ಲದಂತೆ ಒಳಗಡೆ ಸೇರಿಕೊ (I. oneself). **Immúrement** (ನಾ.)

Immútable ಇಮ್ಯೂಟಬ್‌ಲ್ (ಗು.) ಮಾರ್ಪಾಟಾಗದ ; ವ್ಯತ್ಯಾಸ ಮಾಡಲಾಗದ ; ಬೇರೆ ಬೇರೆ ಸಂದರ್ಭಗಳಲ್ಲಿ ಬದಲಾವಣೆಗೆ ಅವಕಾಶವಿಲ್ಲದ ; ನಿರ್ವಿಕಲ್ಪ ; ನಿರ್ವಿಕಾರ. **Immutabílity** (ನಾ.) ; **Immútably** (ಕ್ರಿ. ವಿ.)

Imp[1] ಇಂಪ್ (ನಾ.) ದೆವ್ವದ ಮಗು ; ಚಿಕ್ಕ ದೆವ್ವ ; ಮರಿ ಪಿಶಾಚಿ. ತುಂಟ ಮಗು. (ಪ್ರಾಚೀ. ಪ್ರ.) ಮಗು ; ಹಸುಳೆ. **Ímpish** (ಗು.) — ದ, — ವಿನ, — ಯ. **Ímpishly** (ಕ್ರಿ. ವಿ.) ; **Ímpishness** (ನಾ.)

Imp[2] ಇಂಪ್ (ಕ್ರಿ. ಸಕ.) [Imp the wings of (bird) ಊನವಾದ ರೆಕ್ಕೆಗೆ ಹೊಸ ಗರಿಗಳನ್ನು ಕಸಿ ಕಟ್ಟಿ (ಹಕ್ಕಿಯ) ಹಾರುವ ಶಕ್ತಿಯನ್ನು ಮತ್ತೆ ಉಂಟುಮಾಡು, ಬಲಪಡಿಸು]. (ವಿರ. ಪ್ರ.) ದೊಡ್ಡದು ಮಾಡು ; ವಿಸ್ತರಿಸು ; ಹೆಚ್ಚಿಸು ; ಪೂರಣ ಮಾಡು (*Out* ಉಪ. ದೊಡನೆ)

Ímpact ಇಂಪ್ಯಾಕ್ಟ್ (ನಾ.), **Impáct** (ಕ್ರಿ. ಸಕ.) ಹೊಡೆತ ; ಬಡಿತ ; ಡಿಕ್ಕಿ ; ಅಪ್ಪಳಿಕೆ ; ಸಂಘಟ್ಟನೆ ; ಆಘಾತ (*On, against* ಉಪ. ದೊಡನೆ). (ಕ್ರಿ.) (ಒಂದರೊಳಕ್ಕೆ) ಭದ್ರವಾಗಿ, — ಒತ್ತು, ತೆತ್ತಿಸು (ಗ್ರಾಂ.) ; ಸೇರಿಸು, ಬಂಧಿಸು (*Into, in* ಉಪ. ದೊಡನೆ). **Impáction** (ನಾ.)

Impaír ಇಂಪೇರ್ (ಕ್ರಿ. ಸಕ.) ಕುಗ್ಗಿಸು ; ತಗ್ಗಿಸು ; ನಷ್ಟಪಡಿಸು ; ದುರ್ಬಲಗೊಳಿಸು ; ಶಿಥಿಲ ಮಾಡು ; ಹಾನಿ ತರು. **Impaírment** (ನಾ.)

Impále ಇಂಪೇಲ್ (ಕ್ರಿ. ಸಕ.) (ಮರಣದಂಡನೆಯಾಗಿ ಒಬ್ಬನ ದೇಹ, ಮೊ. ನ್ನು) ದಸಿಯಮೇಲೆ ಏರಿಸು ಅಥವಾ ದಸಿಯೇರಿಸು ; ಶೂಲಕ್ಕೆ ಹಾಕು ; — ಏರಿಸು. (ವಂಶಲಾಂಛನ) ಒಂದೇ ಗುರಾಣಿಯಮೇಲೆ ಎರಡು ವಂಶಲಾಂಛನಗಳನ್ನು, ಮಧ್ಯೆ ಉದ್ದ ಗೆರೆಯೆಳೆದು, ಪಕ್ಕ ಪಕ್ಕದಲ್ಲಿ ಜೋಡಿಸು. (ವಿರ. ಪ್ರ.) ದಸಿಗಳನ್ನು ನೆಟ್ಟು ಬೇಲಿ ಹಾಕು. **Impálement** (ನಾ.)

Impálpable ಇಂಪ್ಯಾಲ್ಪಬ್‌ಲ್ (ಗು.) ಸ್ಪರ್ಶಕ್ಕೆ ಗೋಚರವಾಗದ ; ಮುಟ್ಟಿ ತಿಳಿಯಲಾಗದ ; ಮನಸ್ಸಿಗೆ ಸುಲಭವಾಗಿ ಗ್ರಾಹ್ಯವಾಗದ ; ಬಲು ಸೂಕ್ಷ್ಮವಾದ. **Impalpabílity** (ನಾ.) ; **Impálpably** (ಕ್ರಿ. ವಿ.)

Impáludism ಇಂಪ್ಯಾಲ್ಯು(ಲ್ಯೂ)ಡಿಸ್‌ಮ್ (ನಾ.) ಜವುಗು ಪ್ರದೇಶ ವಾಸಿಗಳಲ್ಲಿ ಕಂಡುಬರುವ, ಮೊರೆ ಜ್ವರವೂ ಗುಲ್ಮ ಶೋಫೆಯೂ ಲಕ್ಷಣಗಳಾಗುಳ್ಳ ಒಂದು ರೋಗಸ್ಥಿತಿ : ಜವುಗು ಪ್ರಾಂತ ರೋಗ(ಸ್ಥಿತಿ)

Impánate ಇಂಪೇನೆಟ್, **Ímpanate** ಇಂಪ— (ಗು.) (ಕ್ರಿಸ್ತನ ದೇಹದ ವಿಷಯದಲ್ಲಿ) ಪವಿತ್ರೀಕರಿಸಿದ ರೊಟ್ಟಿಯಲ್ಲಿರುವ. **Impanátion** — ಪ — (ನಾ.)

Impánel = Empanel.

Impáradise ಇಂಪ್ಯಾರಡೈಸ್, **Em-** ಎಂ— (ಕ್ರಿ. ಸಕ.) ಪರಮ ಸುಖಾನುಭವ ಸ್ಥಿತಿಗೆ ತರು ; ಆನಂದ ಪರವಶ ಮಾಡು ; ಸ್ವರ್ಗ ಸುಖ ವುಂಟುಮಾಡು ; (ಸ್ಥಳ, ಸ್ಥಿತಿ, ಮೊ. ನ್ನು) ಸ್ವರ್ಗಸಮ ಮಾಡು.

Imparisyllábic ಇಂಪ್ಯಾರಿಸಿಲ್ಯಾಬಿಕ್ (ಗು., ನಾ.) (ಗ್ರೀಕ್ ಮತ್ತು ಲ್ಯಾಟಿನ್ ವ್ಯಾ.) ಪ್ರಥಮಾ ವಿಭಕ್ತಿ ರೂಪಕ್ಕಿಂತಲೂ ಷಷ್ಠೀ ವಿಭಕ್ತಿ ರೂಪದಲ್ಲಿ ಹೆಚ್ಚು ಅಕ್ಷರಗಳುಳ್ಳ (ನಾಮ ಪದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Impárk ಇಂಪಾರ್ಕ್ (ಕ್ರಿ. ಸಕ.) (ಮೃಗಗಳನ್ನು) ಹುಲ್ಲುಮೈದಾನದಲ್ಲಿ ಒಂದು ಆವರಣದೊಳಗೆ ಸೇರಿಸು ; ಉದ್ಯಾನಕ್ಕಾಗಿ (ಒಂದು ಜಮೀನಿಗೆ) ಆವರಣ ಹಾಕು. **Imparkátion** (ನಾ.)

Impárt ಇಂಪಾರ್ಟ್ (ಕ್ರಿ. ಸಕ.) (ಒಬ್ಬನಿಗೆ, ಒಂದರ) ಪಾಲು, ಭಾಗ, —ಕೊಡು ; ಹಂಚು. (ಸುದ್ದಿ, ಮೊ. ನ್ನು ಒಬ್ಬನಿಗೆ) ಮುಟ್ಟಿಸು, ತಿಳಿಸು (*To* ಉಪ. ದೊಡನೆ). **Impartátion** (ನಾ.) ; **Impártment** (ನಾ.)

Impártial ಇಂಪಾರ್ಷ(ರ್ಷ್)ಲ್ (ಗು.) ಪಕ್ಷಪಾತವ(ವಿ)ಲ್ಲದ ; ನಿಷ್ಪಕ್ಷಪಾತದ ; ಯಾವ ಕಡೆಗೂ ಒಲೆಯದ, ಒಲವಿಲ್ಲದ ; ಸಮದರ್ಶಿತ್ವದ ; ನ್ಯಾಯವಾದ. **Impártially** (ಕ್ರಿ. ವಿ.) ; **Impartiálity** — ಷಿಆಲ್ಯ — (ನಾ.)

Impártible ಇಂಪಾರ್ಟಿಬ್‌ಲ್ (ಗು.) (ಆಸ್ತಿಯ ವಿಷಯದಲ್ಲಿ) ಪಾಲು ಮಾಡಲಾಗದ ; ಅವಿಭಾಜ್ಯ.

Impássable ಇಂಪಾಸಬ್‌ಲ್ (ಗು.) ಹಾದು ಹೋಗಲಾಗದ; ದಾಟಲಾಗದ ; ದುರ್ಗಮ. **Impassabílity** (ನಾ.) ; **Impássableness** (ನಾ.)

Impásse (F) ಇಂಪಾಸ್ (ನಾ.) ಮುಂದೆ ಹೋಗುವುದಕ್ಕೆ ಅವಕಾಶವಿಲ್ಲದ ದಾರಿ ; ಕುರುಡು ದಾರಿ. (ರೂಪ.) ಪಾರಾಗಲು ಸಾಧ್ಯವಿಲ್ಲದ ಸ್ಥಿತಿ, ಅವಸ್ಥೆ ; ಇಕ್ಕಟ್ಟು ; ಬಿಕ್ಕಟ್ಟು.

Impássible ಇಂಪ್ಯಾಸಿಬ್‌ಲ್ (ಗು.) ಭಾವೋದ್ರೇಕಗೊಳ್ಳಲಾಗದ ; ವ್ಯಥೆ, ಮೊ. ವು ತಟ್ಟದ ; ಭಾವನಾ ಶೂನ್ಯನಾದ ; ಜಡ ; ವೀತರಾಗಿ, ವಿರಾಗಿ, —ಆದ. **Impássibílity** (ನಾ.) ; **Impássibleness** (ನಾ.) ; **Impássibly** (ಕ್ರಿ. ವಿ.)

Impássion ಇಂಪ್ಯಾಷನ್ (ಕ್ರಿ. ಸಕ.) ಉದ್ರೇಕಗೊಳಿಸು ; ರಾಗೋದ್ರೇಕ ಮಾಡು ; ಬಲವಾಗಿ ರೇಗಿಸು, ಕೆರಳಿಸು (ಮು., ಭೂ. ಕೃ. ನಲ್ಲಿ)

Impássive ಇಂಪ್ಯಾಸಿವ್ (ಗು.) ಭಾವೋದ್ರೇಕ ಶೂನ್ಯ ; ಮನೋವಿಕಾರಗೊಳ್ಳದ ; ಶಾಂತ ಚಿತ್ತದ ; ವೇದನೆ, ವ್ಯಥೆ, — ತಟ್ಟದ. **Impássively** (ಕ್ರಿ. ವಿ.) ; **Impássiveness** (ನಾ.) ; **Impassívity** (ನಾ.)

Impáste ಇಂಪೇಸ್ಟ್ (ಕ್ರಿ. ಸಕ.) ಕಣಕದಿಂದ (ಹೇಗೋ ಹಾಗೆ) ಸುತ್ತುವರಿ, ಹೊರ ಪೊರೆ ಕಟ್ಟು ; ಕಣಕವಾಗಿ ಮಾಡು. (ಚಿತ್ರಗಳಿಗೆ) ಬಣ್ಣವನ್ನು ದಟ್ಟವಾಗಿ ಹಾಕು. **Impásto** ಇಂಪಾ(ಪ್ಯಾ)ಸ್ಟೊ (ನಾ.) (ಚಿತ್ರ ಕಲೆ) ದಪ್ಪವಾಗಿ ಬಣ್ಣ ಹಾಕುವುದು.

Impátient ಇಂಪೇಷ(ಷ್)ಂಟ್ (ಗು.) (ಶಾಂತವಾಗಿ) ಸಹಿಸಿಕೊಳ್ಳದ ; ಅಸಹನೆಯ ; ಸಹಿಸದ ; ತಾಳ್ಮೆಯಿಲ್ಲದ (*Of* ಉಪ. ದೊಡನೆ). (ಒಂದು ವಸ್ತುವಿಗಾಗಿ, ಒಂದು ಕೆಲಸಕ್ಕಾಗಿ) ಬಿಡದೆ ತವಕಗೊಳ್ಳುವ ; ಆತುರಪಡುವ. **Impátience** (ನಾ.) ; **Impátiently** (ಕ್ರಿ. ವಿ.)

Impawn ಇಂಪಾನ್ (ಕ್ರಿ. ಸಕ.) ಒತ್ತೆಯಿಡು ; ಅಡವು ಹಾಕು. (ರೂಪ.) ಒತ್ತೆ, ಹೊಣೆ, —ಕೊಡು ; ಮಾತು ಕೊಡು ; ಭಾಷೆ ಮಾಡು.

Impayable (F) ಇಂಪೇಯಬ್‌ಲ್ (ಗು.) ಬೆಲೆ ಕೊಡಲು, ತೀರಿಸಲು, ಆಗದ ; ಅಮೂಲ್ಯವಾದ. (ಬಳ. ಮಾ.) ಸಾಮಾನ್ಯ ಮಿತಿಯನ್ನು ಮೀರಿಹೋಗುವ.

Impeách ಇಂಪೀಚ್ (ಕ್ರಿ. ಸಕ.) (ನಡತೆ, ಶೀಲ, ಮೊ. ನ್ನು) ಸಂದೇಹಿಸು, ಆಕ್ಷೇಪಿಸು ; ಹೀನಯಿಸು ; ಅಲ್ಲಗಳೆ ; ಹಳಿ ; ಜರೆ ; (ಒಬ್ಬನ ಮೇಲೆ) ತಪ್ಪು ಹೊರಿಸು, ಆಪಾದನೆ ಮಾಡು (*Of* ಉಪ. ದೊಡನೆ). (—ಎಂದು) ದೋಷಾರೋಪಣೆ ಮಾಡು (*With* ಉಪ. ದೊಡನೆ). (ಒಂದರಲ್ಲಿ) ತಪ್ಪು ಹಿಡಿ. ತಕ್ಕ ನ್ಯಾಯಸ್ಥಾನದ ಮುಂದೆ ರಾಜದ್ರೋಹದ ಅಥವಾ ಇತರ ಪ್ರಬಲ ತಕ್ಸೀರಿನ ಆಪಾದನೆ ಮಾಡು ; —ಮಾಡಿ, ವಿಚಾರಣೆಗೆ ಗುರಿಪಡಿಸು. **Impeáchable** (ಗು.) ; **Impeáchment** (ನಾ.)

Impéccable ಇಂಪೆಕಬ್‌ಲ್ (ಗು.) ಪಾಪಕ್ಕೀಡಾಗದ ; ಪಾಪ ದೂರ. (ವಸ್ತು) ನಿರ್ದುಷ್ಟ. **Impeccabílity** (ನಾ.) ; **Impéccably** (ಕ್ರಿ. ವಿ.) ; **Impéccant** — ಕಂಟ್ (ಗು.) ಪಾಪ ಮಾಡದ ; ತಪ್ಪು —.

Impecúnious ಇಂಪಿಕ್ಯೂನಿಯಸ್ (ಗು.) ಹಣವಿಲ್ಲದ ; ಧನ ಹೀನ. **Impecuniósity** (ನಾ.)

Impédance ಇಂಪೀಡನ್ಸ್ (ನಾ.) (ವಿದ್ಯುತ್) ವಿದ್ಯುತ್ ಪೂರಣವಾದ ಒಂದು ವಸ್ತುವಿನಲ್ಲಿ ಸ್ವಪ್ರಚೋದನೆಯಿಂದ ವಸ್ತುತಃ ಕಂಡುಬರುವ ನಿರೋಧ : ಸ್ವಪ್ರಚೋದನಾ ನಿರೋಧ.

Impéde ಇಂಪೀಡ್ (ಕ್ರಿ. ಸಕ.) ತಡೆ ; ಅಡ್ಡಿ ಮಾಡು ; ನಿರೋಧಿಸು. **Impédiment** — ಪೆಡಿ — (ನಾ.) ತಡೆ ; ಅಡ್ಡಿ ; ಅಡಚಣೆ [I. (*in* one's speech) ಉಗ್ಗು ; ಬಿಕ್ಕಲು ; ತೊದಲು ; ನತ್ತಿ]. (ಬ. ವ.) (ಮು., ಸೈನ್ಯದ, ಪ್ರಯಾಣದ) ಸಾಮಾನು ಸರಂಜಾಮು [= **Impediménta** (L)]. **Impedimental** (ಗು.)

Impél ಇಂಪೆಲ್ (ಕ್ರಿ. ಸಕ.) (ವ್ಯಕ್ತಿ, ಮೊ. ನ್ನು ಕಾರ್ಯ ಮಾಡಲು) ಪ್ರಚೋದಿಸು, ಬಲವಂತಪಡಿಸು. ಚಿಮ್ಮು ; ಮುಂದಕ್ಕೆ ತಳ್ಳು ; ದೂಡು ; ನಡಸು. **Impéllent** (ಗು., ನಾ.) ಪ್ರಚೋದಿಸುವ, ತಳ್ಳುವ (ವಸ್ತು)

Impénd ಇಂಪೆಂಡ್ (ಕ್ರಿ. ಅಕ.) ತಲೆಯಮೇಲೆ ತೊಂಗುತ್ತಿರು, ತೂಗುತ್ತಿರು (*Over* ಉಪ. ದೊಡನೆ). (ರೂಪ., ಅಪಾಯ) ತಲೆಯ ಮೇಲೆ ಬೀಳುವಂತಿರು ; ಕೇಡು ತರುವಂತಿರು (*Over* ಉಪ. ದೊಡನೆ). ಒಡನೆಯೇ ಸಂಭವಿಸುವಂತಿರು ; ಆಸನ್ನವಾಗಿರು. **Impéndence** (ನಾ.) ; **Impéndency** (ನಾ.) ; **Impéndent** (ಗು.)

Impénetrable ಇಂಪೆನಿಟ್ರಬ್‌ಲ್ (ಗು.) ಒಳಹೊಗಲಾಗದ ; ತೂರಲಾಗದ ; ಅಭೇದ್ಯ. (ರೂಪ.) ಮರ್ಮ ತಿಳಿಯಲಾಗದ ; ಆಳ ತಿಳಿಯಲಾಗದ. (ಭಾವ, ಮೊ.) ಒಳಹೊಗದ, ನಾಟದ (*To, by* ಉಪ. ದೊಡನೆ). (ಭೌ. ವಿ.) ಎರಡು ವಸ್ತುಗಳು ಏಕ ಕಾಲದಲ್ಲಿ ಒಂದೇ ಸ್ಥಳವನ್ನು ಆಕ್ರಮಿಸಿಕೊಳ್ಳಲಾರದುದಕ್ಕೆ ಕಾರಣವಾದ ಧರ್ಮವುಳ್ಳ : ಅಪ್ರವೇಶ್ಯ. **Impenetrabílity** (ನಾ.) ; **Impénetrableness** (ನಾ.) ; **Impénetrably** (ಕ್ರಿ. ವಿ.) ; **Impénetrate** (ಕ್ರಿ. ಸಕ.) ಆಳವಾಗಿ ಒಳಹೊಗು.

Impénitent ಇಂಪೆನಿಟೆಂಟ್ (ಗು.) (ಮಾಡಿದ ಪಾಪಕ್ಕೆ) ಪಶ್ಚಾತ್ತಾಪಪಡದ ; ಕಲ್ಲೆದೆಯ. **Impénitence** (ನಾ.) ; **Impénitency** (ನಾ.) ; **Impénitently** (ಕ್ರಿ. ವಿ.)

Impérative ಇಂಪೆರಟಿವ್ (ಗು., ನಾ.) (ವ್ಯಾ.) ವಿಧಿ ರೂಪದ ; ಆಜ್ಞಾರ್ಥಕ. ಆಜ್ಞಾಪಿಸುವ ; ಮಾಡಿಯೇ ತೀರಬೇಕಾದ ; ಅತ್ಯಗತ್ಯವಾದ ; ಅವಶ್ಯ ಕರ್ತವ್ಯವಾದ. (ನಾ.) ವಿಧಿ ರೂಪ. **Impératively** (ಕ್ರಿ. ವಿ.) ; **Impérativeness** (ನಾ.) ; **Impérativál** —ಟೈವಲ್ (ಗು.) (ವ್ಯಾ.) ವಿಧಿ ರೂಪದ.

Imperátor (L) ಇಂಪೆರೇಟರ್ (ನಾ.) (ರೋ. ಚರಿತ್ರೆ) (ಪ್ರಜಾಧಿಪತ್ಯದ ಕಾಲದಲ್ಲಿ ಜಯಶಾಲಿಯಾದ ಸೇನಾಪತಿಯನ್ನು ಸೈನಿಕರು ಅಭಿವಂದಿಸಿ ಜಯಘೋಷ ಮಾಡಿ ಅವನಿಗೆ ಕೊಟ್ಟ ಬಿರುದು) : ವಿಜಯ ; ಅಧಿಪತಿ. ಚಕ್ರವರ್ತಿ ; ಸಾರ್ವಭೌಮ. **Imperatórial** — ರಟೋರಿಯಲ್ (ಗು.)

Imperceptible ಇಂಪರ್ಸೆಪ್ಟಿಬ್‌ಲ್ (ಗು.) ಕಾಣಲಾಗದ ; ತಿಳಿಯಲಾಗದ ; ಗ್ರಹಿಸಲಾಗದ ; ಅಗೋಚರ ; ಅತ್ಯಲ್ಪ ; ಅತಿ ಸೂಕ್ಷ್ಮ. **Imperceptibly** (ಕ್ರಿ. ವಿ.); **Impercéption** (ನಾ.); **Impercípient** ಇಂಪರ್ಸಿಪಿಯೆಂಟ್ (ಗು.) ಗ್ರಹಣಶಕ್ತಿಯಿಲ್ಲದ ; ಗ್ರಹಿಸಿಕೊಳ್ಳದ.

Impercípient. **Imperceptible** ನೋಡಿ.

Imperence ಇಂಪೆರೆನ್ಸ್ (ನಾ.) = Impudence (ಎಂಬುದರ ಅಸಂಸ್ಕೃತ ರೂಪ)

Impérfect ಇಂಪರ್ಫೆಕ್ಟ್ (ಗು., ನಾ.) ಪೂರ್ತಿ ರೂಪುಗೊಂಡಿರದ ; ಪೂರ್ತಿಮಾಡಿರದ ; ಅಸಮಗ್ರ ; ಊನವಾಗಿರುವ ; ದೋಷಯುಕ್ತ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊರತೆಯುಳ್ಳ. [(ವ್ಯಾ.) I. tenses (ಕ್ರಿಯೆ ಇನ್ನೂ ನಡೆಯುತ್ತಿದೆ, ಮುಗಿದಿಲ್ಲ, ಎಂದು ಸೂಚಿಸುವ) ನ್ಯೂನ ಕ್ರಿಯಾ ರೂಪಗಳು. He is, he will be, singing ಅವನು, ಹಾಡುತ್ತಿದ್ದಾನೆ, ಹಾಡುತ್ತಿರುವನು]. (ನಾ.) (ವ್ಯಾ.) = I. tense. **Impérfectly** (ಕ್ರಿ. ವಿ.); **Imperféction** (ನಾ.) ಅಪೂರ್ಣತೆ; ಅಸಮಗ್ರತೆ; ನ್ಯೂನತೆ; ತಪ್ಪಿರುವುದು; ಕೊರೆ; ಕೊರತೆ; ಊಣೆಯ (ಗ್ರಾಂ.)

Impérforate ಇಂಪರ್ಫೊರೆಟ್ (ಗು.) ರಂಧ್ರ(ಗಳು) ಮಾಡಿಲ್ಲದ; ನೀರಂಧ್ರ. (ಮು., ಅಂ. ರ. ಶಾ.) ಸಹಜದ್ವಾರವಿಲ್ಲದ. [ಅಂಚೆಯ ತರೆಟಿಕೀಟ(ಯ ಹಾಳೆ)] ಕಂಡಿಗಳು ಕೊರೆದಿಲ್ಲದ.

Impérial ಇಂಪೀರಿಯಲ್ (ಗು., ನಾ.) ಸಾಮ್ರಾಜ್ಯದ; ಚಕ್ರಾಧಿಪತ್ಯದ; ಸಾಮ್ರಾಜ್ಯದಂತಸ್ಸಿನ ಸ್ವತಂತ್ರ ರಾಷ್ಟ್ರದ. (ಅಂಗಗಳಾಗಿರುವ ರಾಜ್ಯಗಳು, ಮೊ. ನ್ನು ಬಿಟ್ಟು) ಗ್ರೇಟ್ ಬ್ರಿಟನ್ನಿನ [I. federation ಒಟ್ಟು ಸಾಮ್ರಾಜ್ಯದ ಕ್ಷೇಮಾಭ್ಯುದಯಕ್ಕಾಗಿ ಕೈಕೊಳ್ಳುವ ಕಾರ್ಯಕ್ರಮದ ಆಡಳಿತದಲ್ಲಿಯೂ ವೆಚ್ಚದಲ್ಲಿಯೂ ನೆಲಸುನಾಡುಗಳಿಗೆ ಒಂದು ಭಾಗ ವಹಿಸುವಂತೆ ಹೊಂದಾವಣೆ ಮಾಡುವ ಹಂಚಿಕೆಯುಳ್ಳ ಬ್ರಿಟಿಷ್ ಸಂಯುಕ್ತ ಸಾಮ್ರಾಜ್ಯ ವ್ಯವಸ್ಥೆ; ಬ್ರಿಟನ್ನಿನ ಸಂಯುಕ್ತ ಸಾಮ್ರಾಜ್ಯ (ವ್ಯವಸ್ಥೆ). I. Institute ಬ್ರಿಟಿಷ್ ಸಾಮ್ರಾಜ್ಯದ ಹಲವು ಭಾಗಗಳಿಗೆ ಪರಸ್ಪರ ವ್ಯಾಪಾರಾಭಿವೃದ್ಧಿಯುಂಟುಮಾಡಲು ಲಂಡನ್ನಿನಲ್ಲಿರುವ ಒಂದು ಸಂಸ್ಥೆ (ಯ ಕಟ್ಟಡ). I. preference ಹೊರ ದೇಶದ ಸರಕುಗಳಮೇಲೆ ಹಾಕುವ ಸುಂಕಕ್ಕಿಂತಲೂ, ಸಾಮ್ರಾಜ್ಯದ ಭಾಗಗಳಿಂದ ಆಮದಾಗಿ ಬರುವ ಸರಕುಗಳಮೇಲೆ ಕಡಮೆ ಸುಂಕ ಹಾಕುವುದು; ಸಾಮ್ರಾಜ್ಯದ (ಸುಂಕ) ರಿಯಾಯಿತಿ]. ಚಕ್ರವರ್ತಿಯ. ಪರಮಾಧಿಕಾರವುಳ್ಳ; ಮಹಿಮಾನ್ವಿತ; ಮಹಾ ವೈಭವದ. [(ಬ್ರಿಟನ್ನಿನ ತೂಕದ ಮತ್ತು ಅಳತೆಯ ವಿಷಯದಲ್ಲಿ) I. gallon, acre, etc.]. (ಕಾಗದ) ೨೨ × ೩೨ ಅಂಗುಲಗಳ ಅಳತೆಯ. (ನಾ.) ಕೆಳದುಟಿಯ ಕೆಳಗೆ ಮಾತ್ರ (ಚೂಪಾಗಿ) ಬೆಳೆಯುವಂತೆ ಬಿಟ್ಟ ಗಡ್ಡ(ದ ಭಾಗ) (Napoleon III ಎಂಬ ಫ್ರೆಂಚ್ ಚಕ್ರವರ್ತಿಯಿಂದ). ಕೋಚ್‌ಬಂಡಿಯ ಚಾವಣಿಯಮೇಲೆ ಅಳವಡಿಸಿರುವ ಸಾಮಾನುಖಾನೆ. ರಷ್ಯಾ ದೇಶದ ಜ಼ಾರ್ ಚಕ್ರವರ್ತಿಯ ಕಾಲದ ಒಂದು ಚಿನ್ನದ ನಾಣ್ಯ. **Impérially** (ಕ್ರಿ. ವಿ.); **Impérialism** (ನಾ.) ಚಕ್ರವರ್ತಿ(ಯ) ಪ್ರಭುತ್ವ (ಮು., ನಿರಂಕುಶವಾದದ್ದು). ಎಲ್ಲಿ ವ್ಯಾಪಾರಕ್ಕೆ ಬ್ರಿಟಿಷರ(ಧ್ವಜ) ರಕ್ಷಣೆ ಬೇಕಾಗಿದೆಯೊ ಅಲ್ಲಿಗೆ ಬ್ರಿಟಿಷ್ ಸಾಮ್ರಾಜ್ಯವನ್ನು ವಿಸ್ತರಿಸುವುದು: ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣ. ಯುದ್ಧ ರಕ್ಷಣ ಕಾರ್ಯಗಳಿಗಾಗಿ, ಒಳ ಸಾಮ್ರಾಜ್ಯದ ವಾಣಿಜ್ಯ, ಮೊ. ಕ್ಕಾಗಿ, ಬ್ರಿಟಿಷ್ ಚಕ್ರಾಧಿಪತ್ಯದ ಬೇರೆ ಬೇರೆ ಭಾಗಗಳ ಸಂಘಟನೆ: ಬ್ರಿಟಿಷ್ ಸಾಮ್ರಾಜ್ಯ ಸಂಘಟನೆ. ವಸಾಹತುಗಳ ಮತ್ತು ಆಶ್ರಿತ ರಾಜ್ಯಗಳ ಪ್ರಯೋಜನದಲ್ಲಿ ನಂಬಿಕೆ; ಸಾಮ್ರಾಜ್ಯ ತತ್ತ್ವ. **Imperialístic** (ಗು.); **Impérialize** (ಕ್ರಿ. ಸಕ.); **Impérialist** (ನಾ.) ಚಕ್ರವರ್ತಿಯ ಅನುಯಾಯಿ (ಮು., ೧೬೦೦-೧೮೦೦ ಕಾಲದ ಜರ್ಮನ್ ಚಕ್ರವರ್ತಿಯ ಅನುಯಾಯಿ). ಚಕ್ರವರ್ತಿಯ ಆಳಿಕೆ ಬೇಕೆಂದು ವಾದಿಸುವವನು; ಸಾಮ್ರಾಜ್ಯ ವಾದಿ (ಮು., ಫ್ರೆಂಚರ ನೆಪೋಲಿಯನ್ ಬೋನೆಪಾರ್ಟಿನ ವಂಶಾಭಿಮಾನಿ). (ಬ್ರಿಟಿಷ್) ಸಾಮ್ರಾಜ್ಯ ವಾದಿ. **Impérious** (ಗು.) ಪ್ರಭುತ್ವ ಮಾಡುವ; ಅಧಿಪತ್ಯ ನಡಸುವ. ಉದ್ಧತನಾದ; ದರ್ಪದ; (ಅಧಿಕಾರ) ಗರ್ವದ. ಅತ್ಯಗತ್ಯವಾದ; ಪ್ರಬಲ. **Impériously** (ಕ್ರಿ. ವಿ.); **Impériousness** (ನಾ.)

Impéril ಇಂಪೆರಿಲ್ (ಕ್ರಿ. ಸಕ.) ಅಪಾಯಕ್ಕೆ ತರು; ಗಂಡಾಂತರಕ್ಕೊಳಗಾಗಿಸು; ಕೇಡು ತರು.

Impérious. **Imperial** ನೋಡಿ.

Impérishable ಇಂಪೆರಿಷಬ್‌ಲ್ (ಗು.) ನಾಶವಾಗದ; ಅಳಿಯದ; ಸಾಯದ; ಅವಿನಾಶಿ; ಕೆಟ್ಟುಹೋಗದ; ಶಾಶ್ವತವಾಗಿರುವ; ಅಕ್ಷಯ. **Impérishabílity** (ನಾ.); **Impérishableness** (ನಾ.); **Impérishably** (ಕ್ರಿ. ವಿ.)

Impérium (L) ಇಂಪೀರಿಯಮ್ (ನಾ.) ಸರ್ವತಂತ್ರ ಸ್ವತಂತ್ರಾಧಿಕಾರ; ಚಕ್ರಾಧಿಪತ್ಯ; ಸಾಮ್ರಾಜ್ಯ. I. in imperio ಮತ್ತೊಂದು ಅಧಿಕಾರಕ್ಕೊಳಪಟ್ಟ ಪರಮಾಧಿಕಾರ.

Impérmanent ಇಂಪರ್ಮನೆಂಟ್ (ಗು.) ಶಾಶ್ವತವಲ್ಲದ; ಅಶಾಶ್ವತ; ಅನಿತ್ಯ. **Impérmanence** (ನಾ.); **Impérmanency** (ನಾ.)

Impérmeable ಇಂಪರ್ಮಿಯಬ್‌ಲ್ (ಗು.) ಒಳಹೊಗಲವಕಾಶ ಕೊಡದ; ಒಳಗೆ ಹೊಗಲಾಗದ; ಅಪ್ರವೇಶ್ಯ; ಅವ್ಯಾಪ್ಯ. (ಭೌ. ವಿ.) ಪ್ರವಾಹಿ ದ್ರವ್ಯಗಳನ್ನು ಹೊಗಗೊಡದ. **Impermeabílity** (ನಾ.)

Impermíssible ಇಂಪರ್ಮಿಸಿಬ್‌ಲ್ (ಗು.) ಅಪ್ಪಣೆ, ಅನುಮತಿ, — ದೊರೆಯದ, ಇಲ್ಲದ.

Imperscríptible ಇಂಪರ್ಸ್ಕ್ರಿಪ್ಟಿಬ್‌ಲ್ (ಗು.) ಲಿಖಿತ ಪ್ರಮಾಣವಿಲ್ಲದ.

Impérsonal ಇಂಪರ್ಸನಲ್ (ಗು.) [(ವ್ಯಾ.) I. verb (ಪ್ರಥಮ ಪುರುಷ ಏಕ ವಚನದಲ್ಲಿ ಮಾತ್ರ ಪ್ರಯೋಗವಾಗುವ) ಅಕರ್ತೃಕ ಕ್ರಿಯಾಪದ; ಭಾವ ವಾಚಕ (ಉದಾ., It rains)]. ವ್ಯಕ್ತಿಗೆ ಅನ್ವಯಿಸದ, ಸಂಬಂಧಿಸದ; ವ್ಯಕ್ತಿಸ್ವರೂಪವಿಲ್ಲದ. **Impérsonally** (ಕ್ರಿ. ವಿ.); **Impersonálity** — ನ್ಯಾ — (ನಾ.)

Impérsonate ಇಂಪರ್ಸನೇಟ್ (ಕ್ರಿ. ಸಕ.) ದೇಹರೂಪದಲ್ಲಿ ತೋರಿಸು; ವ್ಯಕ್ತಿತ್ವ ಕೊಡು; ಮೂರ್ತೀಕರಿಸು; ಮನುಷ್ಯನಂತೆ ಭಾವಿಸು, ಪರಿಗಣಿಸು. (ಒಬ್ಬನಂತೆ) ವೇಷ ಧರಿಸು, ನಟಿಸು, ಪಾತ್ರಾಭಿನಯ ಮಾಡು; (ಮೋಸ ಮಾಡುವುದಕ್ಕೆ) ಮತ್ತೊಬ್ಬನಾಗಿ ವರ್ತಿಸು. **Impersonátion** (ನಾ.); **Impérsonative** (ಗು.); **Impérsonator** (ನಾ.); **Impersónify** ಇಂಪರ್ಸಾನಿಫೈ (ಕ್ರಿ. ಸಕ.) = Personify.

Impértinent ಇಂಪರ್ಟಿನೆಂಟ್ (ಗು.) ವಿನಯವಿಲ್ಲದ; ಅವಿನೀತ; ತಲೆಹರಟೆಯ; ಅಧಿಕಪ್ರಸಂಗಿತನದ; ತನಗೆ ಸಂಬಂಧಪಡದ ವಿಷಯದಲ್ಲಿ ತಲೆಹಾಕುವ. ಅಪ್ರಸ್ತುತ; ಸಂದರ್ಭಕ್ಕೆ ತಗದ; ಅಸಂಬದ್ಧ; ಅಪ್ರಸಕ್ತ. **Impértinence** (ನಾ.); **Impértinently** (ಕ್ರಿ. ವಿ.)

Impertúrbable ಇಂಪರ್ಟರ್ಬಬ್‌ಲ್ (ಗು.) ಉದ್ರೇಕಗೊಳ್ಳದ; ಕ್ಷೋಭೆಗೊಳ್ಳದ; ಶಾಂತ. **Imperturbabílity** (ನಾ.); **Impertúrbableness** (ನಾ.); **Impertúrbably** (ಕ್ರಿ. ವಿ.)

Impérvious ಇಂಪರ್ವಿಯಸ್ (ಗು.) ಪ್ರವೇಶಕ್ಕೆಡೆಗುಡದ; ಹೊಗಲಾಗದ; ಅಭೇದ್ಯ (*To* ಉಪ. ದೊಡನೆ). (ರೂಪ.) ನಾಟದ (I. to argument ವಾದಕ್ಕೆ ಕಿವಿಗೊಡದ). **Impérviously** (ಕ್ರಿ. ವಿ.); **Impérviousness** (ನಾ.)

Impetígo ಇಂಪಿಟೈಗೊ (ನಾ.) ಗುಳ್ಳೆಗಳೇಳುವ ಒಂದು ಚರ್ಮರೋಗ. **Impetíginous** — ಟಿಜಿ — (ಗು.)

Ímpetrate ಇಂಪೆಟ್ರೇಟ್ (ಕ್ರಿ. ಸಕ.) (ದೇವ. ಶಾ.) ಪ್ರಾರ್ಥನೆಯಿಂದ ಪಡೆ. (ವಿರ. ಪ್ರ.) ಬೇಡು; ಪ್ರಾರ್ಥಿಸು. **Impetrátion** (ನಾ.); **Ímpetratory** (ಗು.)

Impétuous ಇಂಪೆಟ್ಯುಅಸ್ (ಗು.) ರಭಸವಾಗಿ, ವೇಗವಾಗಿ, — ಚಲಿಸುವ; ರಭಸದ; ಉದ್ರೇಕದ; ಜೋರಿನ. ಒರಟಾದ, ಹಠಾತ್ತಾದ, — ಶಕ್ತಿಯಿಂದ ವರ್ತಿಸುವ; ಉರುಬಿನ; ಉರವಣೆಯ. **Impétuously** (ಕ್ರಿ. ವಿ.); **Impétuousness** (ನಾ.); **Impetuósity** — ಆ — (ನಾ.); **Ímpetus** ಇಂಪಿಟಸ್ (ನಾ.; ಬ. ವ. -uses) (ಒಂದು ವಸ್ತು ಚಲಿಸುವ) ಉರುಬು, ರಭಸ. (ರೂಪ.) ಚಾಲಕ ಶಕ್ತಿ; ಪ್ರಚೋದನೆ.

Ímpetus. **Impetuous** ನೋಡಿ.

Impínge ಇಂಪಿಂಜ್ (ಕ್ರಿ.) (ಒಂದರ ಮೇಲೆ) ಆಘಾತ ಮಾಡು; ಸಂಘಟ್ಟಿಸು; (ರಭಸದಿಂದ) ತಾಕು; ಡಿಕ್ಕಿ ಹೊಡೆ (*On, upon* ಉಪ. ದೊಡನೆ). (ಕ್ರಿ. ಸಕ., ಪ್ರಾಚೀ. ಪ್ರ.) (ವಸ್ತುವನ್ನು) ಡಿಕ್ಕಿ ಹೊಡಸು. **Impíngement** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Impious ಇಂಪಿಯಸ್ (ಗು.) ದೈವನಿಷ್ಠೆಯಿಲ್ಲದ ; ಧರ್ಮಶ್ರದ್ಧೆಯಿಲ್ಲದ ; ಅನಾಚಾರದ ; ಅಧಾರ್ಮಿಕ ; ದುಷ್ಟ ; ಭ್ರಷ್ಟ. **Impiously** (ಕ್ರಿ. ವಿ.) ; **Impíety** ಇಂಪೈಎಟಿ (ನಾ.) ದೈವಭಕ್ತಿಯಿಲ್ಲದಿರುವುದು, ಅಧಾರ್ಮಿಕತೆ ; ದೈವದಲ್ಲಿ, ಮತದಲ್ಲಿ, —ಅಶ್ರದ್ಧೆ.

Impíteous ಇಂಪಿಟಿಯಸ್ (ಗು.) (ಕಾವ್ಯ) ಕನಿಕರವಿಲ್ಲದ ; ನಿಷ್ಕರುಣೆಯ.

Implácable ಇಂಪ್ಲೇ(ಪ್ಲ್ಯಾ)ಕಬ್‌ಲ್ (ಗು.) ತಣಿಸಲಾಗದ ; ಸಮಾಧಾನ ಮಾಡಲಾಗದ (I. foe ಬದ್ಧ ವೈರಿ) ; ನಿರ್ದಯ ; ನಿಷ್ಕರುಣ ; ಕಠೋರ (ದ್ವೇಷ, ಕ್ರೋಧ, ಮೊ. ಗಳಲ್ಲಿ). **Implacability** (ನಾ.) ; **Implácably** (ಕ್ರಿ. ವಿ.)

Implacéntal ಇಂಪ್ಲಸೆಂಟಲ್ (ಗು.) ಜರಾಯುವಿಲ್ಲದ.

Implánt ಇಂಪ್ಲಾಂಟ್ (ಕ್ರಿ. ಸಕ.) ಒಳಗೆ ಸೇರಿಸು, ನೆಡು, ಬಂಧಿಸು ; ಕಚ್ಚಿಸು ; ನೆಲೆಗೊಳಿಸು (*In* ಉಪ. ದೊಡನೆ). (ತತ್ತ್ವ, ಭಾವನೆ, ಮೊ. ನ್ನು) ಮನಸ್ಸಿನಲ್ಲಿ ನೆಡು (*In* ಉಪ. ದೊಡನೆ). (ಸಸಿಯನ್ನು) ನೆಡು, ನಾಟು. **Implantátion** (ನಾ.)

Implédge ಇಂಪ್ಲೆಜ್ (ಕ್ರಿ. ಸಕ.) ಒತ್ತೆಯಿಡು ; ಅಡವು ಹಾಕು ; ಈಡು ಮಾಡು.

Implement ಇಂಪ್ಲಿಮೆಂಟ್ (ನಾ., ಕ್ರಿ. ಸಕ.) (ಪೀಠೋಪಸ್ಕರ, ಉಡುಪು, ಮೊ.) ಸಾಮಗ್ರಿ, ಸಾಮಾನು. (ಬ. ವ. ದಲ್ಲಿ) ಇವುಗಳ ಸಜ್ಜು. ಆಯುಧ ; ಸಲಕರಣೆ ; ಮುಟ್ಟು (ಮು., ಬ. ವ. ದಲ್ಲಿ). (ನ್ಯಾ. ಶಾ.) (ಒಪ್ಪಂದ, ಮೊ. ಗಳನ್ನು) ನಡಸುವುದು, ನೆರವೇರಿಸುವುದು. (ಕ್ರಿ.) (ನ್ಯಾ. ಶಾ.) (ಒಪ್ಪಂದ, ಮೊ. ನ್ನು) ನಡಸು, ನೆರವೇರಿಸು ; (ಗೊತ್ತು ಪಾಡನ್ನು) ನಡಸು ; ನೆರವೇರಿಸು. ಪೂರ್ಣ ಮಾಡು ; ಭರತಿ ಮಾಡು ; ಜೊತೆಗೆ ಸೇರಿಸು. **Implétion** ಇಂಪ್ಲೀಷನ್ (ನಾ.) ತುಂಬುವುದು ; ತುಂಬಿದ್ದು ; ಭರತಿ ; ತುಂಬು ; ಪೂರ್ಣತೆ.

Implétion. Implement ನೋಡಿ.

Implicate ಇಂಪ್ಲಿಕೇಟ್ (ಕ್ರಿ. ಸಕ.) ತೆಕ್ಕೆಹಾಕು ; ಒಂದಕ್ಕೊಂದು ಸುತ್ತು ; ತೊಡಕಿಸು ; ತೊಡರಿಸು. ಅನುಮಿತಿಯಿಂದ ಅರ್ಥಕೊಡು, ಭಾವನೆಯುಂಟುಮಾಡು (ಉದಾ., 'Parent' implicates 'child'). (ಒಬ್ಬನನ್ನು) ದೋಷಾರೋಪಣೆ, ತಕ್ಸೀರು, ಮೊ. ಗಳಲ್ಲಿ ಸಿಕ್ಕಿಸು (*In* ಉಪ. ದೊಡನೆ). (ಕರ್ಮಣಿಯಲ್ಲಿ) (ಒಂದರ) ಪರಿಣಾಮಕ್ಕೆ ಒಳಗಾಗಿರು (*In* ಉಪ. ದೊಡನೆ). **Implicative** (ಗು.) ; **Implicátion** (ನಾ.)

Implícit ಇಂಪ್ಲಿಸಿಟ್ (ಗು.) ವ್ಯಕ್ತವಾಗಿ ಹೇಳದಿದ್ದರೂ ಅಭಿಪ್ರಾಯ ಕೊಡುವ ; ಧ್ವನಿತ. (ವಸ್ತುತಃ) ಅಡಕವಾಗಿರುವ, ಸೇರಿರುವ (*In* ಉಪ. ದೊಡನೆ). ಸ್ವಲ್ಪವೂ ಸಂಶಯಪಡದ (I. faith ಪೂರ್ಣ ವಿಶ್ವಾಸ ; ದೃಢವಾದ ನಂಬಿಕೆ ; ಸ್ವತಂತ್ರವಾಗಿ ವಿಚಾರಮಾಡದೆ ಸಾಮಾನ್ಯ ನಂಬಿಕೆಯಲ್ಲಿ ವಿಶ್ವಾಸ. I. obedience ಎದುರಾಡದ, ಯಾವ ಪ್ರಶ್ನೆ ಯನ್ನೂ ಕೇಳದ, —ವಿಧೇಯತೆ). ಸಂಪೂರ್ಣ. **Implícitly** (ಕ್ರಿ. ವಿ.) ; **Implícitness** (ನಾ.)

Implóre ಇಂಪ್ಲೋರ್ (ಕ್ರಿ. ಸಕ.) ಶ್ರದ್ಧೆಯಿಂಥ, ದೈನ್ಯದಿಂದ, ಸೆರ ಗೊಡ್ಡಿ, —ಬೇಡಿಕೊ ; ಪ್ರಾರ್ಥಿಸಿಕೊ ; ಮೊರೆಯಿಡು. **Implóringly** (ಕ್ರಿ. ವಿ.) ; **Implóringness** (ನಾ.)

Implúvium (L) ಇಂಪ್ಲೂವಿಯಮ್ (ನಾ.) (ರೋ. ಪ್ರಾ.) ಮನೆಯ ತೊಟ್ಟಿಯ ತೆರಪಿನಲ್ಲಿ ಮೇಲಿಂದ ಬೀಳುವ ಮಳೆನೀರನ್ನು ಹಿಡಿಯು ವುದಕ್ಕಾಗಿ ಕಟ್ಟಿರುವ ಚದರ ತೊಟ್ಟಿ.

Implý ಇಂಪ್ಲೈ (ಕ್ರಿ. ಸಕ.) (ಕಂಠೋಕ್ತವಾಗಿ ಹೇಳದಿದ್ದರೂ, ಒಂದರ) ನಿಜಾಭಿಪ್ರಾಯ ಕೊಡು ; ಅಭಿಪ್ರಾಯವಾಗು ; ಧ್ವನಿತವಾಗು (*That* ಪದದೊಡನೆ). ಅರ್ಥವಾಗು ; (ವ್ಯಂಗ್ಯವಾಗಿ) ಸೂಚಿಸು. **Implíedly** —ಎಡ್ಲಿ (ಕ್ರಿ. ವಿ.) ಅಧ್ಯಾಹೃತವಾಗಿ.

Impólicy. Impolitic ನೋಡಿ.

Impolíte ಇಂಪೊಲೈಟ್ (ಗು.) ಮರ್ಯಾದೆಗೆಟ್ಟ ; ವಿನಯವಿಲ್ಲದ ; ಅಸಭ್ಯ ; ಒರಟಾದ. **Impolítely** (ಕ್ರಿ. ವಿ.) ; **Impolíteness** (ನಾ.)

Impólitic ಇಂಪಾಲಟಿಕ್ (ಗು.) ಸಮಯೋಚಿತವಲ್ಲದ ; ಅನೌಚಿತ್ಯದ ; ಅಚಾತುರ್ಯದ ; ಅವಿವೇಕದ. **Impóliticly** (ಕ್ರಿ. ವಿ.) ; **Impólicy** ಇಂಪಾಲಿಸಿ (ನಾ.) ತಪ್ಪು ನೀತಿ ; —ಧೋರಣೆ ; ಅನೀತಿ ; ಅನೌಚಿತ್ಯ.

Impónderable ಇಂಪಾಂಡೆರಬ್‌ಲ್ (ಗು., ನಾ.) (ಭೌ. ವಿ.) ತೂಕ ವಿಲ್ಲದ ; ಭಾರ ರಹಿತ. ಬಹಳ ಹಗುರವಾದ. (ಮನಸ್ಸು, ಗುಣ, ವಿದ್ಯುಚ್ಛಕ್ತಿ, ಮೊ. ಗಳ ವಿಷಯದಲ್ಲಿ) ತೂಕಮಾಡಿ ನೋಡಲಾಗದ ; ತೂಕದಿಂದ ಅಂದಾಜು ಕಟ್ಟಲಾಗದ. (ನಾ.) ಇಂಥ ವಸ್ತು.

Impónent ಇಂಪೋನೆಂಟ್ (ಗು., ನಾ.) (ಕರ್ತವ್ಯ, ಮೊ. ನ್ನು) ಹೊರಿಸು ವ(ವನು), ವಿಧಿಸುವ(ವನು)

Impórt ಇಂಪೋರ್ಟ್ (ಕ್ರಿ. ಸಕ.), **Ím-** (ನಾ.) (ವಸ್ತುವನ್ನು, ಮು., ಸರಕನ್ನು, ಹೊರ ದೇಶದಿಂದ) ತರು ; ಆಮದು ಮಾಡು (*Into* ಉಪ. ದೊಡನೆ). [**Impórtable** (ಗು.) ; **Importabílity** (ನಾ.) ; **Importátion** (ನಾ.) ; **Impórter** (ನಾ.)]. ಸೂಚಿಸು. ಅರ್ಥ, ಅಭಿಪ್ರಾಯ, ಭಾವ, —ಕೊಡು (*That* ಪದದೊಡನೆ) ; ವ್ಯಕ್ತ ಪಡಿಸು ; ತಿಳಿಸು (*That* ಪದದೊಡನೆ). (ಒಬ್ಬನಿಗೆ, ಒಂದಕ್ಕೆ) ಫಲಕಾರಿಯಾಗಿರು, ಸಂಬಂಧಪಟ್ಟಿರು, ಮುಖ್ಯವಾಗಿರು (Questions that i. us nearly ನಮಗೆ ಕೇವಲ ಸಂಬಂಧಪಟ್ಟ ವಿಷಯಗಳು. It imports us to know ಅದನ್ನು ತಿಳಿಯುವುದು ನಮಗೆ ಫಲಕಾರಿ). (ನಾ.) ಸೂಚಿತವಾದದ್ದು ; ಧ್ವನಿ ; ಭಾವ ; ಅರ್ಥ ; ಪ್ರಾಮುಖ್ಯ(ತೆ). ಆಮದು ಮಾಡುವುದು ; (ಬ. ವ. ದಲ್ಲಿ) ಆಮದು ಸರಕು.

Impórtance ಇಂಪಾ(ಪೋ)ರ್ಟನ್ಸ್ (ನಾ.) ಮುಖ್ಯವಾಗಿರುವುದು ; ಪ್ರಾಧಾನ್ಯ ; ಪ್ರಾಮುಖ್ಯತೆ ; ತೂಕ ; ಅಭಿಪ್ರಾಯ ; ಮಹತ್ತ್ವ ; ಪ್ರಭಾವ ; ಅಗ್ಗಳಿಕೆ ; ಹೆಚ್ಚಳಿಕೆ ; ಘನತೆ ; ಆಡಂಬರ ; ಪ್ರತಿಷ್ಠೆ. (ಸಾ., Self-i. ಸ್ವಪ್ರತಿಷ್ಠೆ). **Impórtant** (ಗು.) (ಒಬ್ಬನಿಗೆ, ಒಂದು ಉದ್ದೇಶಕ್ಕೆ) ಪ್ರಾಮುಖ್ಯವಾದ ; ಪ್ರಧಾನವಾದ ; ತೂಕವುಳ್ಳ ; ಮಹತ್ತ್ವವುಳ್ಳ ; ಪರಿಣಾಮವುಂಟುಮಾಡುವ ; ಆಡಂಬರದ ; ಪ್ರತಿಷ್ಠೆಯ. **Impórtantly** (ಕ್ರಿ. ವಿ.)

Importúne ಇಂಪಾಟ್ಯೂರ್ನ್, **Impórtune** —ಟ್ಯೂರ್ನ್ (ಕ್ರಿ. ಸಕ.) ಒತ್ತಾಯದಿಂದ ಪ್ರಾರ್ಥಿಸು ; ಮೇಲಿಂದಮೇಲೆ ಬೇಡಿಕೊ (ಪ್ರಾರ್ಥನೆಗಳಿಂದ) ಪೀಡಿಸು, ಕಾಡು. **Impórtunate** ಇಂಪಾಟ್ಯುರ್ ನೆಟ್ (ಗು.) (ಕ್ರಿಯಾರ್ಥಗಳಲ್ಲಿ) ; (ಸಂದರ್ಭಗಳು) ಅತ್ಯಗತ್ಯವಾದ ; ಒತ್ತಾಯದ ; ನಿರ್ಬಂಧ ಪಡಿಸುವ. **Impórtunately** (ಕ್ರಿ. ವಿ.) ; **Importúnity** — ಟ್ಯೂ — (ನಾ.)

Impóse ಇಂಪೋಸ್ (ಕ್ರಿ.) (ಪ್ರಾಚೀ. ಪ್ರ.) (ವಸ್ತುವನ್ನು) ಒಂದರ ಮೇಲಿಡು (*Upon* ಉಪ. ದೊಡನೆ). (ಮುದ್ರಣ) (ಅಚ್ಚುಮೊಳೆಗಳ ಪುಟ ಗಳನ್ನು) ಮುದ್ರಣ ಚೌಕಟ್ಟಿನಲ್ಲಿ ಕ್ರಮವಾಗಿ ಜೋಡಿಸಿ ಬಿಗಿಪಡಿಸು. (ತೆರಿಗೆ, ಕರ್ತವ್ಯ, ಅಪಾದನೆ, ಆಭಾರ, ಉಪಕಾರ ಭಾರ, ಹಂಗು, ಮೊ. ನ್ನು) ಹೊರಿಸು, ವಿಧಿಸು, ಹೇರು (*Upon* ಉಪ. ದೊಡನೆ). ಮೋಸದಿಂದ (ಒಂದನ್ನು, ಒಬ್ಬನ) ತಲೆಗೆ ಕಟ್ಟು ; (ಒಬ್ಬನಿಗೆ) ಟೋಪಿ ಹಾಕು (*Upon* ಉಪ. ದೊಡನೆ). (ಒಬ್ಬನಮೇಲೆ ವಿಸ್ಮಯಗೊಳಿಸುವ ನಡತೆ ಯಿಂದಾಗಲಿ, ರೂಪಿನಿಂದಾಗಲಿ) ಪ್ರಭಾವ ಬೀರು (*On* ಉಪ. ದೊಡನೆ) ; (I. upon ಒಬ್ಬನ ಅಶಕ್ತತೆಯನ್ನೊ ಅಲಕ್ಷ್ಯತೆಯನ್ನೊ ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊ) ; ವಂಚಿಸು, ಮೋಸ ಮಾಡು (*Upon* ಉಪ. ದೊಡನೆ). **Impósingly** (ಕ್ರಿ. ವಿ.) ; **Impósingness** (ನಾ.) ; **Imposítion** ಇಂಪೊಸಿಷನ್ (ನಾ.) (ಕ್ರಿಯಾರ್ಥಗಳಲ್ಲಿ) ; (ಮತದೀಕ್ಷೆ ಕೊಡುವುದು, ಮೊ. ಗಳಲ್ಲಿ) ತಲೆಯಮೇಲೆ ಕೈಯಿಡುವುದು. ಕರ ; ತೆರಿಗೆ ; ಸುಂಕ. ಮೋಸ ; ಠಕ್ಕು ; ವಂಚನೆ ; ಹೆಚ್ಚುಬೆಲೆ ಹಾಕುವುದು. ಪಾಠಶಾಲೆ ಯಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷೆಯಾಗಿ ನಿಯಮಿಸಿದ ಕೆಲಸ (ಬಳ. ಮಾ., ಸಂಕ್ಷಿಪ್ತ : impo, impot)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Impóssible ಇಂಪಾಸಿಬ್‌ಲ್ (ಗು.) ಸಾಧ್ಯವಿಲ್ಲದ; ಅಸಾಧ್ಯವಾದ; ಆಗದ (ನಾ., It ಕರ್ತೃಕವಾಗಿ: It is i. to .....); (ಶಿಥಿಲವಾಗಿ) ಸುಲಭವಲ್ಲದ; ಅನುಕೂಲವಲ್ಲದ; ಅಶಕ್ಯ. (ಬಳ. ಮಾ.) ಹೊಂದದ; ಸಹಿಸಲಾಗದ (An i. hat ಹೇಗೂ ಹೊಂದದ ಟೋಪಿ. An i. person ಒಡನೆ ಹೊಂದಿಕೊಂಡು ನಡೆಯಲು ಆಗದವನು. ಸಹಿಸಲು ಸಾಧ್ಯವಲ್ಲದವನು). **Impossibílity** (ನಾ.); **Impóssibly** (ಕ್ರಿ. ವಿ.)

Ímpost[1] ಇಂಪೋಸ್ಟ್ (ನಾ.) (ಚರಿತ್ರ) ತೆರಿಗೆ; ಸುಂಕ; ಪೊಗದಿ. (ಕುದುರೆಯ ಜೂಜಿನ ಅಸಂ.) (ಇತರ ಕುದುರೆಗಳೊಡನೆ ಸಮತೂಕಕ್ಕಾಗಿ) ಕುದುರೆಗೆ ಹೇರಿದ ಭಾರ.

Ímpost[2] ಇಂಪೋಸ್ಟ್ (ನಾ.) (ಕಮಾನನ್ನು ಹೊತ್ತಿರುವ) ಕಂಬದ ಮೇಲುವರಿಸೆ.

Impóster ಇಂಪಾಸ್ಟರ್ (ನಾ.) (ಮೋಸ ಮಾಡಲು) ಇನ್ನೊಬ್ಬನಂತೆ ವೇಷ ತಾಳಿದವನು, ಅಥವಾ ತೋರ್ಪಡಿಸಿಕೊಳ್ಳುವವನು; ಸೋಗುಗಾರ; ಠಕ್ಕ; ಮೋಸಗಾರ. **Impóstrous** (ಗು.); **Impósture** ಇಂಪಾಸ್ಚ್ಯು(ಸ್ಚ)ರ್ (ನಾ.) ಮೋಸ; ವಂಚನೆ; ಠಕ್ಕು.

Impóstume, -thume ಇಂಪಾಸ್ಟ್ಯುಮ್ (ನಾ.) (ಈಗ ವಿರ. ಪ್ರ.) ಕೀವು ತುಂಬಿದ ಬಾವು; ಒಳ ಕುರು (ರೂಪ. ಸಹ)

Impósture. **Imposter** ನೋಡಿ.

Ímpot ಇಂಪಾಟ್ = Imposition (**Impose** ನೋಡಿ)

Ímpotent ಇಂಪೋಟೆಂಟ್ (ಗು.) ನಿರ್ಬಲ; ದುರ್ಬಲ; ಉಡುಗಿ ಹೋದ; ಸತ್ತ್ವಗುಂದಿದ; ಆಪಿಲ್ಲದ; ನಿಷ್ಫಲ. (ಗಂಡಸಿನ ವಿಷಯದಲ್ಲಿ) ಪುಂಸತ್ವವಿಲ್ಲದ; ನಿರ್ವೀರ್ಯ; ನಪುಂಸಕ; ಷಂಡ. **Ímpotence** (ನಾ.); **Ímpotency** (ನಾ.); **Ímpotently** (ಕ್ರಿ. ವಿ.)

Impoúnd ಇಂಪೌಂಡ್ (ಕ್ರಿ. ಸಕ.) (ದನಗಳನ್ನು) ದೊಡ್ಡಿಯಲ್ಲಿ ಕೂಡು. (ಒಬ್ಬನನ್ನು, ಒಂದನ್ನು) ದೊಡ್ಡಿಯಲ್ಲಿ ಹೇಗೊ ಹಾಗೆ ಕೂಡು. ಕಾನೂನನುಸರಿಸಿ ವಶಪಡಿಸಿಕೊ; ಮುಟ್ಟುಗೋಲು ಹಾಕು.

Impóverish ಇಂಪಾವೆರಿಷ್ (ಕ್ರಿ. ಸಕ.) ಬಡವನನ್ನಾಗಿ ಮಾಡು; ಬಡತನಕ್ಕೆ ತರು; ಶಕ್ತಿಯುಡುಗಿಸು; ಫಲವತ್ತು ಕಡಮೆ ಮಾಡು. **Impóverishment** (ನಾ.)

Imprácticable ಇಂಪ್ರ್ಯಾಕ್ಟಿಕಬ್‌ಲ್ (ಗು.) ಕಾರ್ಯರೂಪಕ್ಕೆ ತರಲಾಗದ; ಕಾರ್ಯಸಾಧ್ಯವಲ್ಲದ; ಆಗದ ಹೋಗದ; ನಡೆಯದ; ಆಚರಣೆಗೆ ಬರದ. (ಮನುಷ್ಯ ಅಥವಾ ವಸ್ತು) ಹತೋಟಿಗೆ ಸಿಕ್ಕದ; ಏಗುವುದಕ್ಕಾಗದ. (ದಾರಿ, ಮೊ.) ಹಾಯಲಾಗದ, ದುರ್ಗಮವಾದ. **Impracticabílity** (ನಾ.); **Imprácticableness** (ನಾ.); **Imprácticably** (ಕ್ರಿ. ವಿ.)

Ímprecate ಇಂಪ್ರಿಕೇಟ್ (ಕ್ರಿ. ಸಕ.) ಕೇಡು ಕೋರು; ಶಾಪ ಕರೆ; ಶಪಿಸು (*Upon* person, etc.). **Imprecátion** (ನಾ.) ಶಾಪ, ಶಪನೆ (ಮು., ನುಡಿದದ್ದು). **Ímprecatory** (ಗು.)

Imprégnable ಇಂಪ್ರೆಗ್ನಬ್‌ಲ್ (ಗು.) (ಕೋಟೆ, ಮೊ.) (ಯುದ್ಧಶಸ್ತ್ರಗಳಿಂದ) ವಶಪಡಿಸಿಕೊಳ್ಳಲಾಗದ; ಅಜೇಯ. (ರೂಪ.) ದಾಳಿಗೆ ಸಗ್ಗದ; ಅಭೇದ್ಯ. **Impregnabílity** (ನಾ.); **Imprégnably** (ಕ್ರಿ. ವಿ.)

Ímprégnate ಇಂಪ್ರೆಗ್ನೆಟ್ (ಗು.), — ನೇಟ್ (ಕ್ರಿ. ಸಕ.) ಬಸಿರಾದ; ಗರ್ಭಿತ. (ರೂಪ.) ವ್ಯಾಪಿಸಿಕೊಂಡಿರುವ; ವ್ಯಾಪ್ತ (*With* ಉಪ. ದೊಡನೆ). (ಕ್ರಿ.) ಬಸಿರು ಮಾಡು; ವೀರ್ಯವಿಡು. (ಜೀ. ವಿ.) (ಹೆಣ್ಣಿನ ಅಂಡ ಜೀವಾಣುವನ್ನು) ಫಲವತ್ತಾಗಿ ಮಾಡು; ಗರ್ಭಾಧಾನ ಮಾಡು. ತುಂಬು; ಪೂರಿತ ಮಾಡು; (ಭಾವನೆಗಳಿಂದ, ನೀತಿ, ಮೊ. ಗಳಿಂದ) ಗರ್ಭಿತ, ಭರಿತ, — ಮಾಡು (*With* ಉಪ. ದೊಡನೆ). **Impregnátion** (ನಾ.)

Impresário ಇಂಪ್ರೆಸಾರಿಯೊ (ನಾ.) ಸಾರ್ವಜನಿಕ ವಿನೋದಗಳನ್ನು ಏರ್ಪಡಿಸುವವನು (ಮು., ಸಂಗೀತ, ನಾಟಕ, ಮೊ. ಗಳ ವ್ಯವಸ್ಥಾಪಕ). ವಿನೋದ ಗೋಷ್ಠಿ ವ್ಯವಸ್ಥಾಪಕ.

Imprescríptible ಇಂಪ್ರಿಸ್ಕ್ರಿಪ್ಟಿಬ್‌ಲ್ (ಗು.) ಅನುಭವಿಸದೆ ಬಿಟ್ಟುದರಿಂದ ಕಳೆದುಹೋಗಲಾಗದ; ಕಟ್ಟಳೆಗೊಳಪಡದ; ಕಾನೂನಿನ ಮೇರೆಗೆ ಯಾರೂ ಕಿತ್ತುಕೊಳ್ಳಲಾಗದ; ನಿರ್ಬಾಧಿತ (I. right ನಿರ್ಬಾಧಿತವಾದ ಹಕ್ಕು)

Ímpress[1] ಇಂಪ್ರೆಸ್ (ನಾ.), **Impréss** (ಕ್ರಿ. ಸಕ.) ಮುದ್ರೆ (ಒತ್ತುವುದು); ಠಸ್ಸೆ (ಹಾಕುವುದು); ಮುದ್ರೆ, ಠಸ್ಸೆ, ಮೊ. ಗಳ ಗುರುತು. (ರೂಪ.) (ಒಂದರ) ವಿಶಿಷ್ಟ ಲಕ್ಷಣ, ಚಿಹ್ನೆ. (ಕ್ರಿ.) (ಗುರುತು, ಮೊ. ನ್ನು) ಒತ್ತಿ ಹಾಕು; ಮುದ್ರೆಯೊತ್ತು; ಠಸ್ಸೆಹಾಕು (*On* ಉಪ. ದೊಡನೆ). (ಒಬ್ಬನಮೇಲೆ, ಒಬ್ಬನ ಮನಸ್ಸಿನಮೇಲೆ, ಭಾವನೆ, ಮೊ. ನ್ನು) ಅಚ್ಚೊತ್ತು, ನಾಟು; ಮನಸ್ಸಿಗೆ ಹಿಡಿಸು; ಮನದಟ್ಟು ಮಾಡು. (ಒಂದನ್ನು, ಠಸ್ಸೆ, ಮೊ. ನ್ನು ಒತ್ತಿ) ಗುರುತು ಮಾಡು (*With* ಉಪ. ದೊಡನೆ); (ರೂಪ.) ಹೆಚ್ಚಾಗಿ ಪರಿಣಾಮವುಂಟುಮಾಡು; ಪ್ರಭಾವ ಬೀರು (*With* ಉಪ. ದೊಡನೆ). **Impréssible** (ಗು.); **Impressibílity** (ನಾ.); **Impréssion** —ಷನ್ (ನಾ.) ಗುರುತು, ಮುದ್ರೆ, ಠಸ್ಸೆ (ಒತ್ತುವುದು); ಮುದ್ರಣದ ಮೊಳೆಗಳಿಂದ ಅಥವಾ ಕೆತ್ತನೆಯಿಂದ ತೆಗೆದ ಪ್ರತಿ. ಪುಸ್ತಕದ ಒಂದು ಮುದ್ರಣ; — ಮುದ್ರಣದ ಪ್ರತಿಗಳ ಸಂಖ್ಯೆ; (ಪುಸ್ತಕದ ಪ್ರತಿಗಳನ್ನು) ಮುದ್ರಿಸುವುದು. (ಇದ್ದುದನ್ನೇ ಬದಲಾವಣೆಯಿಲ್ಲದೆ ಮಾಡಿದ) ಪುನರ್ಮುದ್ರಣ, ಆವೃತ್ತಿ (ಹೊಸ ಮುದ್ರಣವಲ್ಲ). (ಮನಸ್ಸಿನಮೇಲೆ ಆದ) ಪರಿಣಾಮ, ಪ್ರಭಾವ; (ಮನಸ್ಸಿನಮೇಲೆ ನಾಟಿರುವ) ಭಾವನೆ, ಅಭಿಪ್ರಾಯ; ಖಚಿತವಲ್ಲದ ನಂಬಿಕೆ; ತೋಚಿಕೆ (That is my i.; I was under the i. that). **Impréssionable** (ಗು.) ಭಾವನೆಗಳು, ಮೊ. ಗಳ ಪರಿಣಾಮಕ್ಕೊಳಗಾಗುವ; ಸುಲಭವಾಗಿ ಪ್ರೇರಿಸಲಾಗುವ. **Impressionabílity** (ನಾ.); **Impréssionary** (ಗು.); **Impréssionism** ಇಂಪ್ರೆಷನಿಸ್ಮ್ (ನಾ.) ಸೂಕ್ಷ್ಮ ವಿವರಗಳಿಗೆ ಹೋಗದೆ (ಒಂದು ವಸ್ತುವಿನ ಅಥವಾ ದೃಶ್ಯದ) ಒಟ್ಟು ಪರಿಣಾಮವನ್ನು ಮಾತ್ರ ರಚಿಸುವ, — ಚಿತ್ರದ ಅಥವಾ ಲೇಖನದ ಪದ್ಧತಿ; (ಚಿತ್ರಕರ) ದೃಷ್ಟಿಕೇಂದ್ರವನ್ನು ಬದಲಾಯಿಸುತ್ತ ಹೋದಂತೆ ಬೇರೆ ಬೇರೆ ಅಂಶಗಳು ಗೋಚರವಾಗುವಂತಲ್ಲದೆ ಎಲ್ಲವನ್ನೂ ಒಟ್ಟಿಗೆ ಗ್ರಹಿಸಲು ಅನುಕೂಲಿಸುವಂತೆ ವಿವರಗಳನ್ನು ಚಿತ್ರಿಸುವ ಪದ್ಧತಿ: ಸಮಷ್ಟಿ ಪರಿಣಾಮ ಪದ್ಧತಿ. **Impréssionist** (ನಾ.); **Impressionístic** (ಗು.); **Impréssive** ಇಂಪ್ರೆಸಿವ್ (ಗು.) (ಭಾಷೆ, ದೃಶ್ಯ, ಮೊ. ವು) ಗಾಢವಾದ ಭಾವನೆಗಳನ್ನು ಉತ್ತೇಜಿಸುವ ಶಕ್ತಿಯುಳ್ಳ; ಭಾವೋತ್ಪಾದಕ; ಮನ ತಟ್ಟುವ; ಪರಿಣಾಮಕಾರಕ. **Impréssively** (ಕ್ರಿ. ವಿ.); **Impréssiveness** (ನಾ.)

Impréss[2] ಇಂಪ್ರೆಸ್ (ಕ್ರಿ. ಸಕ.) (ಜನರನ್ನು) ಭೂಸೈನ್ಯಕ್ಕೆ ಅಥವಾ ಜಲಸೈನ್ಯಕ್ಕೆ ಸೇರುವಂತೆ ಬಲಾತ್ಕರಿಸು; ಯುದ್ಧೋದ್ಯೋಗಕ್ಕೆ (ಜನರನ್ನು) ಹಿಡಿ. (ಸಾಮಾನು, ಮೊ. ನ್ನು) ಸಾರ್ವಜನಿಕ ಉಪಯೋಗಕ್ಕಾಗಿ ಹಿಡಿ(ದು ಹಾಕು); ಬಿಟ್ಟಿ ಹಿಡಿ. ವಾದ, ಮೊ. ಗಳಲ್ಲಿ (ಒಂದು ವಿಷಯವನ್ನು) ಉಪಯೋಗಿಸಿಕೊ, ಬಳಸಿಕೊ. **Impréssment** (ನಾ.)

Impréssion, Impréssionism, etc. **Impress**[1] ನೋಡಿ.

Impréssive, etc. **Impress**[1] ನೋಡಿ.

Ímprest ಇಂಪ್ರೆಸ್ಟ್ (ನಾ.) ಸರ್ಕಾರಿ ಕೆಲಸದ ಖರ್ಚಿಗಾಗಿ (ಒಬ್ಬನಿಗೆ) ಮುಂಗಡವಾಗಿ ಕೊಟ್ಟ ಹಣ: ಕೈಹಣ.

Imprimátur (L) ಇಂಪ್ರಿಮೇಟರ್ (ನಾ.) (ಸರ್ಕಾರದಿಂದ ಕೊಟ್ಟ) ಮುದ್ರಣಾಧಿಕಾರ (ಈಗ ರೋ. ಕ್ಯಾ. ಚರ್ಚಿನವರು ಅನುಮತಿಕೊಟ್ಟ ಪುಸ್ತಕಗಳ ವಿಷಯದಲ್ಲಿ ಮಾತ್ರ). (ರೂಪ.) ಅನುಮತಿ; ಮಂಜೂರಾತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Imprímis (L) ಇಂಪ್ರೈಮಿಸ್ (ಕ್ರಿ. ವಿ.) ಮೊದಲನೆಯದಾಗಿ ; ಪ್ರಥಮತಃ.

Imprint ಇಂಪ್ರಿಂಟ್ (ನಾ.), **Imprínt** (ಕ್ರಿ. ಸಕ.) ಮುದ್ರೆ ; ಅಚ್ಚು (ರೂಪ. ಸಹ). [Publisher's, Printer's, i. (ಪುಸ್ತಕದ ಹೆಸರಿನ ಪುಟದಲ್ಲಾಗಲಿ ಕೊನೆಯಲ್ಲಾಗಲಿ ಮುದ್ರಿಸುವ) ಪ್ರಕಾಶಕರ, ಮುದ್ರಕರ (ಹೆಸರು, ಸ್ಥಳ, ಮೊ. ನ್ನು ತಿಳಿಸುವ) ಮುದ್ರೆ]. (ಕ್ರಿ.) (ಚಿತ್ರ, ಮೊ. ನ್ನು) ಮುದ್ರೆಯೊತ್ತು ; (ಭಾವನೆ, ಮೊ. ನ್ನು) ಮನಸ್ಸಿನಮೇಲೆ ಅಚ್ಚೊತ್ತು ; ಮನದಟ್ಟು ಮಾಡು ; (ವಸ್ತುವಿನ ಯೋಗ್ಯತೆ, ಮೊ. ನ್ನು, ಅದರಮೇಲೆ) ಅಚ್ಚೊತ್ತು (*On*, *in* ಉಪ. ದೊಡನೆ). (ವಸ್ತುವಿನಮೇಲೆ) ಚಿತ್ರವನ್ನು ರಸ್ಸೆಯೊತ್ತು (*With* ಉಪ. ದೊಡನೆ)

Impríson ಇಂಪ್ರಿಸ್‌ನ್ (ಕ್ರಿ. ಸಕ.) ಸೆರೆಯಲ್ಲಿಡು ; (ರೂಪ.) ಬಂಧನ ದಲ್ಲಿಡು ; ಹೊರಗೆ ಬಾರದಂತೆ ಕೂಡು. **Imprísonment** (ನಾ.)

Impróbable ಇಂಪ್ರಾಬಬ್‌ಲ್ (ಗು.) ನಿಜವಲ್ಲದಿರಬಹುದಾದ ; ನಡೆಯ ದಿರಬಹುದಾದ ; ಅಸಂಭವ. **Improbabílity** (ನಾ.) ; **Impróbably** (ಕ್ರಿ. ವಿ)

Impróbity ಇಂಪ್ರೋ(ಪ್ರಾ)ಬಿಟಿ (ನಾ.) ದುಷ್ಟತನ ; ದೌರ್ಜನ್ಯ ; ಅಪ್ರಮಾಣಿಕತೆ.

Imprómptu ಇಂಪ್ರಾಂಪ್‌ಟ್ಯೂ (ಕ್ರಿ. ವಿ., ನಾ., ಗು.) ಪೂರ್ವ ಸಿದ್ಧತೆ ಯಿಲ್ಲದೆ (ಮಾಡಿದ) (ಕ್ರಿಯೆ, ಕೃತಿ, ರಚನೆ, ಭಾಷಣ, ಮೊ.) ; ಆಶು (ಕವಿತೆ, ಭಾಷಣ, ಮೊ. ವು) ; ಆಶು ಸಂಗೀತ ಕೃತಿ.

Impróper ಇಂಪ್ರಾಪರ್ (ಗು.) ಸರಿಯಲ್ಲದ ; ಅಯುಕ್ತ ; ತಪ್ಪಾದ [I. fraction ಛೇದಕ್ಕಿಂತ ಅಂಶ ದೊಡ್ಡದಾಗಿ (ಒಂದಕ್ಕಿಂತ ಹೆಚ್ಚಾಗಿ) ಇರುವ ಭಿನ್ನರಾಶಿ ; ವಿಷಮ ಭಿನ್ನರಾಶಿ ; ಅಶುದ್ಧ —]. ಅಯೋಗ್ಯ ; ತಗದ ; ತರವಲ್ಲದ ; ಅಸಭ್ಯ ; ಅಶ್ಲೀಲ. **Impróperly** (ಕ್ರಿ. ವಿ.) ; **Impropríety** ಇಂಪ್ರೊಪ್ರೈಯೆಟಿ (ನಾ.) ಸರಿಯಲ್ಲದಿರುವುದು ; ಅನೌಚಿತ್ಯ ; ಅಪಚಾರ ; ತಗದ್ದು ; ಅಯೋಗ್ಯತೆ ; ಅಸಭ್ಯತೆ ; ಅಶ್ಲೀಲತೆ.

Imprópriate ಇಂಪ್ರೋಪ್ರಿಯೇಟ್ (ಕ್ರಿ. ಸಕ.), —ಯೆಟ್ (ಗು.) (ಮಠದ ದತ್ತಿಯನ್ನು ಒಂದು ಸಂಸ್ಥೆಯ ಅಥವಾ ವ್ಯಕ್ತಿಯ) ಸ್ವಂತ ಆಸ್ತಿಯನ್ನಾಗಿ ಸೇರಿಸಿಕೊ ; (ಮಠದ ವರಮಾನವನ್ನು, ಆಸ್ತಿಯನ್ನು) ಲೌಕಿಕರ ಕೈಗೊಪ್ಪಿಸು. **Impropriátion** (ನಾ.) ; **Imprópriator** (ನಾ.) ಮಠದ ಆಸ್ತಿ ವಹಿಸಲ್ಪಟ್ಟವನು.

Impróve ಇಂಪ್ರೂವ್ (ಕ್ರಿ.) ಮೇಲ್ಪಡಿಸು ; ಮೇಲಾಗು ; ಉತ್ತಮ ಗೊಳಿಸು ; ಉತ್ತಮವಾಗು ; ಅಭಿವೃದ್ಧಿ ಪಡಿಸು ; — ಯಾಗು. (I. away one's profits ಬಂದ ಲಾಭವನ್ನು ಉತ್ತಮಗೊಳಿಸು ವುದರಲ್ಲಿ ವೆಚ್ಚಮಾಡು). ಗುಣ ಹೊಂದು ; ತಿದ್ದು ; ತಿದ್ದಿಕೊ. (ಸಂದರ್ಭವನ್ನು, ಅವಕಾಶವನ್ನು) ಸದುಪಯೋಗಪಡಿಸಿಕೊ. [I. upon (—) ಕ್ಕಿಂತ ಉತ್ತಮಪಡಿಸು ; ಅದಕ್ಕಿಂತಲೂ ಚೆನ್ನಾಗಿ ಮಾಡು]. (ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು) ತಿಳಿವಳಿಕೆಯುಂಟಾಗ ಲೆಂದು ಉಪದೇಶ ಮಾಡು, ಬೋಧಿಸು (= I. the occasion). **Impróvable** (ಗು.) ಉತ್ತಮಪಡಿಸಲಾಗುವ ; ಬೇಸಾಯಕ್ಕೆ ತಕ್ಕ ; ಹೆಚ್ಚುಫಲವತ್ತಾಗಿ ಮಾಡಬಹುದಾದ. **Improvabílity** (ನಾ.) ; **Impróvableness** (ನಾ.) ; **Impróvement** (ನಾ.) ಮೇಲ್ಮೆ ; ಮೇಲ್ಪಾಡು ; ಅಭಿವೃದ್ಧಿ. (ಹೊಲ, ಮನೆ, ಮೊ. ಗಳ ಬೆಲೆ ಹೆಚ್ಚಿಸುವ) ಹೊಸ ಮಾರ್ಪಾಟು, ಅಭಿವೃದ್ಧಿ. **Impróver** (ನಾ.) (ಕ್ರಿಯಾರ್ಥ ಗಳಲ್ಲಿ); ಒಂದು ಕಸಬಿನಲ್ಲಿ ತನ್ನ ಕಾರ್ಯ ಕೌಶಲವನ್ನು ಅಭಿವೃದ್ಧಿಪಡಿಸಿ ಕೊಳ್ಳುವುದಕ್ಕಾಗಿ ಕೂಲಿಯಿಲ್ಲದೆಯೊ ಕಡಮೆ ಕೂಲಿಗೊ ಕೆಲಸ ಮಾಡುವವನು : ಕೌಶಲ್ಯಾರ್ಥಿ. = Dress-i. (Dress[2] ನೋಡಿ)

Impróvident ಇಂಪ್ರಾವಿಡೆಂಟ್ (ಗು.) ಮುನ್‌ದೃಷ್ಟಿಯಿಲ್ಲದ ; ಮುನ್ನೆಚ್ಚರಿಕೆಯಿಲ್ಲದ ; ನಿರ್ಲಕ್ಷ್ಯದ ; ಕೈಹಿಡಿತವಿಲ್ಲದ. **Impróvidently** (ಕ್ರಿ. ವಿ.) ; **Impróvidence** (ನಾ.)

Improvíse ಇಂಪ್ರೊವೈಸ್ (ಕ್ರಿ. ಸಕ.) ಆಶು ಕವಿತೆ ಮಾಡು ; ಆಶು ಭಾಷಣ ಮಾಡು ; ಆ ಸಮಯದಲ್ಲಿ ಮನಸ್ಸಿಗೆ ಹೊಳೆದಂತೆ, — ಒದ ಗಿಸು, ಅನುಗೊಳಿಸು, ಕಾರ್ಯ ನಡಸು; ಇದ್ದುದರಲ್ಲಿಯೇ ಕಲ್ಪಿಸಿಕೊ. **Improvisátion** ಇಂಪ್ರೊವೈಸೇಷನ್, ಇಂಪ್ರಾವಿ — (ನಾ.) ; **Imprócisator** ಇಂಪ್ರಾವಿಸೇಟರ್, **Improv(v)isatóre** (It.) ಇಂಪ್ರೊ(ವ್)ವೀಸಾಟೋರೆ [ನಾ. ; ಬ. ವ. -ori —ರೀ] ಆಶು ರಚನಕಾರ ; ಆಶು ಕೃತಿಕಾರ ; ಆಶು ಭಾಷಣಕಾರ. **Improv(v)isatríce** — ಟ್ರೀಚೇ (ನಾ., ಸ್ತ್ರೀ. ; ಬ. ವ. -trici —ಟ್ರೀಚಿ) ; **Improvisatórial** ಇಂಪ್ರಾವಿಸಟೋರಿಯಲ್ (ಗು.) ; **Improvísatory** — ಟರಿ (ಗು.)

Imprúdent ಇಂಪ್ರೂಡೆಂಟ್ (ಗು.) ದುಡುಕಿನ ; ವಿವೇಚನೆಯಿಲ್ಲದ ; ಅಚಾತುರ್ಯದ ; ಅವಿವೇಕದ ; ವಿಚಾರ ಮಾಡದ. **Imprúdence** (ನಾ.) ; **Imprúdently** (ಕ್ರಿ. ವಿ.)

Impudent ಇಂಪ್ಯುಡೆಂಟ್ (ಗು.) ನಾಚಿಕೆಪಡದೆ ಮುಂದೆಬಿದ್ದು ಹೋಗುವ; ನಾಚಿಕೆಗೆಟ್ಟ ; ನಿರ್ಲಜ್ಜ ; ಧೃಷ್ಟ ; ಮಾನ ಮರ್ಯಾದೆ ಗಳಿಲ್ಲದ ; ಸೊಕ್ಕಿನಿಂದ ಅವಮರ್ಯಾದೆ ಮಾಡುವ ; ಉದ್ಧತ. **Impudence** (ನಾ.) ; **Impudently** (ಕ್ರಿ. ವಿ.) ; **Impudícity** (ನಾ.) ನಾಚಿಕೆಗೇಡಿತನ ; ನಿರ್ಲಜ್ಜತೆ ; ಅಶ್ಲೀಲತೆ.

Impúgn ಇಂಪ್ಯೂನ್ (ಕ್ರಿ. ಸಕ.) (ಹೇಳಿಕೆ, ಕಾರ್ಯ, ಮೊ. ನ್ನು) ಮಾತಿ ನಿಂದ ಪ್ರತಿಭಟಿಸು, ಆಕ್ಷೇಪಿಸು, ಖಂಡಿಸು. **Impúgnment** (ನಾ.) ; **Impúgnable** — ಪಗ್ನ — (ಗು.)

Impúissant ಇಂಪ್ಯೂಇಸಂಟ್ (ಗು.) ನಿರ್ವೀರ್ಯ ; ದುರ್ಬಲ ; ಅಶಕ್ತ. **Impúissance** (ನಾ.)

Impulse ಇಂಪಲ್ಸ್ (ನಾ.) ಮುಂದೊತ್ತುವುದು ; ಥಟ್ಟನೆ ನೂಕುವುದು ; ಚಿಮ್ಮು ; ರಭಸದ, — ನೂಕಲು, ಹೊಡೆತ. (ಭೌ. ವಿ.) ಅತ್ಯಲ್ಪ ಕಾಲದಲ್ಲಿ, ನಿರ್ದಿಷ್ಟವಾದ ಆಘಾತವನ್ನುಂಟುಮಾಡುವ ಅತ್ಯಂತ ದೊಡ್ಡ ಬಲ (ಉದಾ., ಚಮ್ಮಟಿಗೆಯ ಹೊಡೆತ) ; (ಪ್ರಯೋಗವಾದ) ಸರಾಸರಿ ಬಲದ ಮೊತ್ತದ ಮತ್ತು ಅದರ ಪ್ರಯೋಗಕಾಲದ ಗುಣ ಲಬ್ಧ ; ಆಘಾತದ ಮೊತ್ತ. ಮನಸ್ಸಿನ ಆವೇಗ. (ಯೋಚನೆ ಮಾಡದೆ ಥಟ್ಟನೆ ಕಾರ್ಯಮಾಡುವ) ಹಠಾತ್ತಾದ ಪ್ರವೃತ್ತಿ ; ಚಾಲಕ ಬಲ. **Impúlsion** ಇಂಪಲ್ಷನ್ (ನಾ.) ಥಟ್ಟನೆ ತಳ್ಳುವುದು ; ರಭಸ ; ಒತ್ತರ ; ಮನಸ್ಸಿನ ಆವೇಗ, ಹಠಾತ್ತಾದ ಪ್ರವೃತ್ತಿ ; ಪ್ರೇರಣೆ. **Impúlsive** (ಗು.) ಥಟ್ಟನೆ ತಳ್ಳುವ. (ಮನುಷ್ಯರು, ಅವರ ನಡೆವಳಿ, ಮೊ. ವು) ಥಟ್ಟನೆ ಉಂಟಾದ ಪ್ರವೃತ್ತಿಯಿಂದ ನಡೆಯುವ ; ಹಿಂದು ಮುಂದು ನೋಡದೆ ನುಗ್ಗುವ ; ಆವೇಗಪರ. **Impúlsively** (ಕ್ರಿ. ವಿ.) ; **Impúlsiveness** (ನಾ.)

Impúnity ಇಂಪ್ಯೂನಿಟಿ (ನಾ.) ದಂಡನೆಯಿಂದ ಬಿಡುಗಡೆ, ವಿನಾಯಿತಿ ; ಅಭಯ (With i. ಅಭಯ ಪಡೆದು). ಒಂದು ಕಾರ್ಯದ ಫಲವಾಗಿ ಸಂಭವಿಸುವ ಅಪಾಯ ತಟ್ಟದಿರುವುದು ; ರಕ್ಷೆ ; ಭದ್ರತೆ.

Impúre ಇಂಪ್ಯೂರ್ (ಗು.) ಕೊಳೆಯಾದ ; ಮೈಲಿಗೆಯ ; ಅಶುದ್ಧ ; ಮಲಿನ ; ಅಪವಿತ್ರ ; ದೂಷಿತ ; ವ್ಯಭಿಚಾರಿಯಾದ. ಇತರ ಪದಾರ್ಥ ಬೆರಕೆಯಾಗಿರುವ ; ಮಿಶ್ರ (ರೂಪ. ಸಹ). (ಬಣ್ಣ) ಮತ್ತೊಂದು ಬಣ್ಣ ದೊಡನೆ ಮಿಶ್ರವಾಗಿರುವ ; ಅಪ್ಪಟವಲ್ಲದ. **Impúrely** (ಕ್ರಿ. ವಿ.) ; **Impúrity** (ನಾ.)

Impúte ಇಂಪ್ಯೂಟ್ (ಕ್ರಿ. ಸಕ.) (ಮು., ದೋಷವನ್ನು, ಒಬ್ಬನಮೇಲೆ) ಆರೋಪಿಸು, ಹೊರಿಸು, ಆಪಾದಿಸು (*To* person). (ದೇವ. ಶಾ.) (ಒಬ್ಬನಿಗೆ ಮತ್ತೊಬ್ಬನ ಪುಣ್ಯವನ್ನೊ ಪಾಪವನ್ನೊ) ಹೊರಿಸು. **Impútable** (ಗು.) ; **Imputabílity** (ನಾ.) ; **Imputátion** —ಪ್ಯು— (ನಾ.) ; **Impútative** ಇಂಪ್ಯೂಟಟಿವ್ (ಗು.) ; **Impútatively** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

In ಇನ್ (ಉಪ.) (ಸ್ಥಳ, ಕಾಲ, ಸಂದರ್ಭ, ಮೊ. ಗಳ ಎಲ್ಲೆಯೊಳಗೆ ನೇರಿಕೆಯನ್ನು ಅಥವಾ ಸ್ಥಾನವನ್ನು ನಿರ್ದೇಶಿಸುವ ಪದ) (1) — ಅಲ್ಲಿ; — ಒಳಗೆ. I. Europe, London, etc.; I. the house, a box, etc.; I. muslin ಮಸ್ಲಿನ್ ಬಟ್ಟೆಯಲ್ಲಿ. I. brown boots, etc.; I. (the works of) Thackeray. Blind i. one eye ಒಂದು ಕಣ್ಣು ಕುರುಡು. One i. a hundred ನೂರಕ್ಕೆ ಒಬ್ಬ, ಒಂದು. I. clover, hot water, leading-strings, the dark (ಆಯಾ ಪದಗಳನ್ನು ನೋಡಿ). I. cash ನಗದು ಹಣದಲ್ಲಿ. I. liquor ಮದ್ಯದ ಅಮಲೇರಿ. I. search of (ಉದ್ಯೋಗ, ಮೊ. ವನ್ನು) ಹುಡುಕುತ್ತ. I. crossing the river ನದಿಯನ್ನು ದಾಟುವಲ್ಲಿ. Packed i. dozens ಡಜನ್ ಡಜನ್ನಾಗಿ ಸೇರಿಸಿ ಕಟ್ಟಿ. Falling in folds ನಿರಿ ನಿರಿಯಾಗಿ ಬಿದ್ದಿರುವ. The latest thing in loud speakers ಧ್ವನಿ ವರ್ಧಕದ ಈಗಿನ ಮಾದರಿ.

(2) —ಗೆ, —ಕ್ಕೆ; —ಆಗಿ. I. reply to (—ಕ್ಕೆ) ಉತ್ತರವಾಗಿ. I. honour of (—ರ) ಗೌರವಾರ್ಥವಾಗಿ. I. itself ಅದಷ್ಟನ್ನೇ ಪರಿಗಣಿಸಿದರೆ. As far as i. me lies ನನ್ನ ಕೈಯಲ್ಲಿರುವ ಮಟ್ಟಿಗೆ. Did not think he had it i. him ಅದು ಅವನಿಂದ ಸಾಧ್ಯವೆಂದೆಣಿಸಲಿಲ್ಲ. Not i. it ಸ್ಪರ್ಧೆಯಲ್ಲಿ ಸೇರಿಲ್ಲ; ಬಲವಾದ ಸ್ಪರ್ಧಿಯೇನೂ ಅಲ್ಲ. Nothing, little, not much, i. it (ಕುದುರೆಯ ಜೂಜಿನ ಅಸಂ.) ಯಾರು ಗೆಲ್ಲುತ್ತಾರೊ ಇನ್ನೂ ಹೇಳುವಂತಿಲ್ಲ. Cut it i. half ಅರ್ಧಕ್ಕೆ ಸರಿಯಾಗಿ ಕತ್ತರಿಸು. Weak i. algebra ಬೀಜಗಣಿತದಲ್ಲಿ ಹಿಂದು. Seven in number ಸಂಖ್ಯೆಯಲ್ಲಿ ಏಳು. Four feet i. width ಅಗಲ(ದಲ್ಲಿ) ನಾಲ್ಕು ಅಡಿ. I. so (*or* as) far as (—) ಅಷ್ಟರ ಮಟ್ಟಿಗೆ. I. that ಅದರಿಂದ; ಆದುದರಿಂದ; ಆ ಕಾರಣದಿಂದ.

In (ಕ್ರಿ. ವಿ.): Come i.; Send him i.; Put a notice i. ಒಂದು ಪತ್ರಿಕೆಯಲ್ಲಿ ಜಾಹಿರಾತು ಹಾಕು. He is i. ಅವನು ಮನೆಯಲ್ಲಿದ್ದಾನೆ, (ಮು.) ಭೇಟಿ ಕೊಡುತ್ತಾನೆ. I. with it ಒಳಕ್ಕೆ ತೆಗೆದುಕೊಂಡು ಹೋಗು. Throw i. the harness (ವ್ಯಾಪಾರದಲ್ಲಿ, ಇತರ ವಸ್ತುಗಳ ಜೊತೆಗೆ) ಕುದುರೆಯ ಸರಂಜಾಮನ್ನೂ ಹಾಕಿಬಿಡು. A coat with the woolly side i. ತುಪ್ಪಟವಿರುವ ಪಕ್ಕ ಒಳಮುಖನಾಗಿರುವ ಅಂಗಿ. The Liberals were i. ಲಿಬರಲ್ ಪಕ್ಷದವರು ಅಧಿಕಾರದಲ್ಲಿದ್ದರು. Before he had been i. five minutes (ಕ್ರಿಕೆಟ್) ಅವನು ಆಟಕ್ಕಿಳಿದ ಐದು ನಿಮಿಷದೊಳಗಾಗಿ. Keep the fire i. ಬೆಂಕಿಯನ್ನು ಉರಿಸುತ್ತಿರು. Train, summer, is i. ರೈಲುಬಂಡಿ, ಬೇಸಗೆ,—ಬಂದಿತು. Russian boots are i. ರಷ್ಯನ್ ಜೋಡುಗಳು ಈಗ ಮೆಚ್ಚು. Mangoes are i. ಇದು ಮಾವಿನಹಣ್ಣಿನ ಕಾಲ. Rub i. ಒಳಕ್ಕೆ ಸೇರುವಂತೆ ಉಜ್ಜು. Wall i. ಒಳಗೆ ಸೇರಿಸಿ ಗೋಡೆ ಹಾಕು. I. for (it) ಕಟ್ಟುಬಿದ್ದು; (ಸಾ., ತೊಂದರೆ, ಕೇಡು, ಮೊ. ಗಳಲ್ಲಿ) ಸಿಕ್ಕಿಕೊಂಡು. I. for (ಪಂದ್ಯ, ಮೊ.) ಸ್ಪರ್ಧೆಯಲ್ಲಿ ಸೇರಿ. Be, keep, i. with (— ಒಡನೆ) ಸ್ನೇಹದಿಂದಿರು. Breed i. & i. (Breed ನೋಡಿ). I. & out ಒಳಕ್ಕೂ ಹೊರಕ್ಕೂ; ಹಿಂದಕ್ಕೂ ಮುಂದಕ್ಕೂ; ತೂಗಾಡುತ್ತ.

In (ಗು.) ಒಳಗಿನ; ಒಳಗೆ ವಾಸಮಾಡುವ; ಒಳಗಿರುವ. I.-patient ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲೇ ತಂಗಿರುವ ರೋಗಿ: (ಆಸ್ಪತ್ರೆಯ) ಒಳ ರೋಗಿ.

In (ನಾ.) (ಬ. ವ. ದಲ್ಲಿ) ಅಧಿಕಾರದಲ್ಲಿರುವ ರಾಜಕೀಯ ಪಕ್ಷ. Ins & outs ಒಳಗೂ ಹೊರಗೂ, ಎಲ್ಲ. (ಸಾ., ರೂಪ.) (ಕಾರ್ಯಕ್ರಮ, ಮೊ. ಗಳ) ಎಲ್ಲ ವಿವರಗಳು, ಎಲ್ಲ ವಿಚಾರಗಳು (*Of* ಉಪ. ದೊಡನೆ)

In (ಉಪ.) (L): *In camera* (Camera ನೋಡಿ). *In extenso* ಸವಿಸ್ತಾರವಾಗಿ. *In extremis* ಪ್ರಾಣಹೋಗುತ್ತಿರುವಲ್ಲಿ. *In memoriam* ಜ್ಞಾಪಕಾರ್ಥವಾಗಿ. *In toto* ಸಂಪೂರ್ಣವಾಗಿ.

Inabílity ಇನ್‌ಅಬಿಲಿಟಿ (ನಾ.) ಕೈಲಾಗದಿರುವುದು; ಅಸಮರ್ಥತೆ; ಅಶಕ್ತಿ; ಅನರ್ಹತೆ.

Inaccéssible ಇನ್‌ಆ್ಯಕ್ಸೆಸಿಬ್‌ಲ್ (ಗು.) ಎಟುಕದ; (ಹೋಗಿ) ಮುಟ್ಟಲಾಗದ; ಪ್ರವೇಶಿಸಲಾಗದ; ಸಿಕ್ಕದ; ದೊರೆಯದ; ಸಾಧಿಸಲಾಗದ. (ಮನುಷ್ಯರ ವಿಷಯದಲ್ಲಿ) (ಸ್ನೇಹ, ಸಲಿಗೆ, ಮೊ. ಕ್ಕೆ) ಅವಕಾಶ ಕೊಡದ; ಹತ್ತಿರ ಬರಗೊಡಿಸದ; ಸುಲಭಸಾಧ್ಯವಲ್ಲದ. **Inaccessibílity** (ನಾ.); **Inaccéssibly** (ಕ್ರಿ. ವಿ.)

Ináccurate ಇನ್‌ಆ್ಯಕ್ಯುರೆಟ್ (ಗು.) ಸರಿಯಿಲ್ಲದ; ತಪ್ಪಾದ; ನಿಷ್ಕೃಷ್ಟವಲ್ಲದ; ಕರಾರುವಾಕಾಗಿಲ್ಲದ. **Ináccurately** (ಕ್ರಿ. ವಿ.); **Ináccuracy** — ರಸಿ (ನಾ.)

Ináction ಇನ್‌ಆ್ಯಕ್‌ಷನ್ (ನಾ.) ಕೆಲಸ ಮಾಡದಿರುವುದು; ಕಾರ್ಯಾಭಾವ; ಜಡತೆ; ಮೈಗಳ್ಳತನ; ಸೋಮಾರಿತನ; ಅಚೇಷ್ಟತೆ. **Ináctive** (ಗು.); **Ináctively** (ಕ್ರಿ. ವಿ.); **Inactívity** (ನಾ.)

Inadaptabílity ಇನ್‌ಅಡ್ಯಾಪ್ಟಬಿಲಿಟಿ (ನಾ.) ಹೊಂದಿಕೆಯಿಲ್ಲದಿರುವುದು; ಹೊಂದಿಕೊಳ್ಳಲಾಗದಿರುವುದು; ಹೊಂದಿಕೆ ಮಾಡಲಾಗದಿರುವುದು.

Inádequate ಇನ್‌ಆ್ಯಡಿಕ್ವೆಟ್ (ಗು.) (ಉದ್ದೇಶಕ್ಕೆ, ಕಾರ್ಯಕ್ಕೆ) ತಕ್ಕಷ್ಟು ಇಲ್ಲದ; ಸಾಲದ; ಸಾಕಾಗದ (*To* purpose, *to* do); ಕೊರತೆಯಾದ. **Inádequately** (ಕ್ರಿ. ವಿ.); **Inádequacy** —ಕ್ವಸಿ (ನಾ.)

Inadhésive ಇನ್‌ಆ್ಯಢೀಸಿವ್ (ಗು.) ಅಂಟಿಕೊಳ್ಳದ.

Inadmíssible ಇನ್‌ಆ್ಯಡ್ಮಿಸಿಬ್‌ಲ್ (ಗು.) ಒಪ್ಪಲಾಗದ; ಅಂಗೀಕರಿಸಲಾಗದ; ಎಡೆಗೊಡಲಾಗದ; ಅಗ್ರಾಹ್ಯ. **Inadmissibílity** (ನಾ.)

Inadvértent ಇನ್‌ಆ್ಯಡ್ವರ್ಟೆಂಟ್ (ಗು.) ಸರಿಯಾಗಿ, — ಲಕ್ಷ್ಯ ಕೊಡದ, ಗಮನ ಕೊಡದ; ಎಚ್ಚರಿಕೆಯಿಲ್ಲದ; ಉಪೇಕ್ಷೆಯ. (ಕಾರ್ಯ) ಉದ್ದೇಶಪೂರ್ವಕವಲ್ಲದ; ಅಜಾಗರೂಕತೆಯಿಂದಾದ. **Inadvértence** (ನಾ.); **Inadvértency** (ನಾ.); **Inadvértently** (ಕ್ರಿ. ವಿ.)

Inálienable ಇನ್‌ಏಲಿಯೆನಬ್‌ಲ್ (ಗು.) ಪರಭಾರೆ ಮಾಡಲಾಗದ. **Inalienabílity** (ನಾ.); **Inálienably** (ಕ್ರಿ. ವಿ.)

Inálterable ಇನ್‌ಆಲ್ಟರಬ್‌ಲ್ (ಗು.) ಬದಲಾಯಿಸಲಾಗದ; ಮಾರ್ಪಡಿಸಲಾಗದ. **Inalterabílity** (ನಾ.); **Inálterably** (ಕ್ರಿ. ವಿ.)

Inamoráto (It.) ಇನ್‌ಆ್ಯಮೊರಾಟೋ (ನಾ.; ಸ್ತ್ರೀ. -ta —ಟ) ನಲ್ಲ; ಪ್ರಿಯ; ಕಾದಲ (ಗ್ರಾಂ.)

Ináne ಇನೇನ್ (ಗು., ನಾ.) ಬರಿಯ; ಶೂನ್ಯ; ಖಾಲಿ. ಬುದ್ಧಿಯಿಲ್ಲದ; ಅವಿವೇಕದ; ದಡ್ಡ. (ನಾ.) The i. ಶೂನ್ಯಾಕಾಶ; ಅನಂತಾಕಾಶ; ಬಾಂಬಯಲು. **Inánely** (ಕ್ರಿ. ವಿ.); **Inanítion** — ಅನಿ — (ನಾ.) ಬರಿದಾಗಿರುವುದು; ಬರಿದು; ಶೂನ್ಯತೆ (ಮು., ದೇಹಪೋಷಣೆಯಿಲ್ಲದ್ದರಿಂದ); (ಆಹಾರವಿಲ್ಲದ್ದರಿಂದ ಅಥವಾ ಸರಿಯಾಗಿ ಜೀರ್ಣವಾಗದ್ದರಿಂದ) ನಿಶ್ಶಕ್ತಿ, ಸುಸ್ತು. **Inánity**— ಆ್ಯ — (ನಾ.)

Inánimate ಇನ್‌ಆ್ಯನಿಮೆಟ್ (ಗು.) ಜಡ; ಅಚೇತನ. ಜೀವಿವರ್ಗಕ್ಕೆ ಸೇರಿರದ (I. nature ಜೀವರಹಿತ ಪ್ರಪಂಚ, ಪ್ರಕೃತಿ). ನಿಸ್ಸತ್ವ. **Inánimately** (ಕ್ರಿ. ವಿ.); **Inanimátion** (ನಾ.)

Inanítion. **Inane** ನೋಡಿ.

Inappeásable ಇನ್‌ಅಪೀಸಬ್‌ಲ್ (ಗು.) ತೃಪ್ತಿ ಪಡಿಸಲಾಗದ; ತಣಿಸಲಾಗದ; ಸಮಾಧಾನ ಪಡಿಸಲಾಗದ.

Inappéllable ಇನ್‌ಅಪೆಲಬ್‌ಲ್ (ಗು.) (ನ್ಯಾ. ಶಾ.) ಮೇಲ್ಮನವಿ ಮಾಡಿಕೊಳ್ಳಲಾಗದ; (ಅಲ್ಲಿಂದ) ಮೇಲ್ಮನವಿಗೆ ಅವಕಾಶವಿಲ್ಲದ.

Ináppetence ಇನ್‌ಆ್ಯಪಿಟೆನ್ಸ್ (ನಾ.) ಗೀಳು ಇಲ್ಲದಿರುವುದು; ಪ್ರಬಲೇಚ್ಛೆ ಇಲ್ಲದಿರುವುದು; ಅನಿಚ್ಛೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Inápplicable ಇನ್‌ಅ್ಯಪ್ಲಿಕಬ್‌ಲ್ (ಗು.) (ಸಂದರ್ಭಕ್ಕೆ, ಉದ್ದೇಶಕ್ಕೆ) ಅನ್ವಯಿಸದ ; ಅನ್ವಯಿಸಲಾಗದ ; ಸರಿಹೊಂದದ ; ಒಪ್ಪದ (*To* ಉಪ. ಜೊಡನೆ). **Inápplicability** (ನಾ.) ; **Inápplicably** (ಕ್ರಿ. ವಿ.)

Inápposite ಇನ್‌ಅ್ಯಪೊಸಿ(ಸೈ)ಟ್ (ಗು.) ಸಮಂಜಸವಲ್ಲದ ; ತಗದ ; ಒಪ್ಪದ ; ಅಸಂಗತ ; ಅಯುಕ್ತ ; ಅನುಚಿತ. **Ináppositely** (ಕ್ರಿ. ವಿ.)

Inappréciable ಇನ್‌ಅಪ್ರಿಷಿಯಬ್‌ಲ್ (ಗು.) ಗೋಚರಕ್ಕೆ ಬರದ ; ಗಣನಾರ್ಹವಲ್ಲದ ; ಅತ್ಯಲ್ಪ. **Inappréciably** (ಕ್ರಿ. ವಿ.) ; **Inappreciátion** — ಯೇ — (ನಾ.) ಯೋಗ್ಯತೆಯನ್ನು, ಸ್ವಾರಸ್ಯವನ್ನು, — ಗ್ರಹಿಸದಿರುವುದು ; ತಕ್ಕಂತೆ ಗುಣಗ್ರಹಣ ಮಾಡದಿರುವುದು. **Inapprépiative** — ಯೆ — (ಗು.)

Inapprehénsible ಇನ್‌ಅ್ಯಪ್ರಿಹೆನ್ಸಿಬ್‌ಲ್ (ಗು.) ಇಂದ್ರಿಯಗ್ರಾಹ್ಯವಲ್ಲದ ; ಇಂದ್ರಿಯಾತೀತ ; ಬುದ್ಧಿಗೆ ನಿಲುಕದ ; ತಲೆಗೆ ಹತ್ತದ.

Inapproáchable ಇನ್‌ಅಪ್ರೋಚಬ್‌ಲ್ (ಗು.) (ಹೋಗಿ) ಮುಟ್ಟಲಾಗದ ; ಸಮೀಪಿಸಲು ಎಡೆಗೊಡದ ; ಹತ್ತಿರಕ್ಕೆ ಹೋಗಲಾಗದ. ಎಣೆಯಿಲ್ಲದ.

Inappróprìate ಇನ್‌ಅಪ್ರೋಪ್ರಿಯೆಟ್ (ಗು.) ತಕ್ಕದ್ದಲ್ಲದ ; ಅನುಚಿತ ; ಅಸಂಗತ ; ಹೊಂದದ. **Inappróprìately** (ಕ್ರಿ. ವಿ.) ; **Inappróprìateness** (ನಾ.)

Inápt ಇನ್‌ಅ್ಯಪ್ಟ್ (ಗು.) ಹೊಂದದ ; ಅರ್ಹವಲ್ಲದ ; ಜಾಣ್ಮೆಯಿಲ್ಲದ ; ಅಚತುರ. **Ináptitude** (ನಾ.) ; **Ináptness** (ನಾ.) ; **Ináptly** (ಕ್ರಿ. ವಿ.)

Inárch ಇನ್‌ಆರ್ಚ್ (ಕ್ರಿ. ಸಕ.) ಬೆಳೆಯುತ್ತಿರುವ ರೆಂಬೆಯನ್ನು ತಾಯಿ ಮರದಿಂದ ಕತ್ತರಿಸದೆ ಮತ್ತೊಂದು ಗಿಡಕ್ಕೆ ಕಸಿಕಟ್ಟು.

Inárm ಇನ್‌ಆರ್ಮ್ (ಕ್ರಿ. ಸಕ.) (ಕಾವ್ಯ) ತಬ್ಬಿಕೊ ; ತಕ್ಕೈಸು ; ಆಲಿಂಗಿಸು.

Inartículate ಇನ್‌ಆರ್ಟಿಕ್ಯುಲೆಟ್ (ಗು.) ಕೀಲಿನಿಂದ ಕೂಡಿಲ್ಲದ ; ಕೀಲಿಲ್ಲದ ; ಸಂಧಿ ರಹಿತ. (ಮಾತು) ಸ್ಪಷ್ಟೋಚ್ಚಾರಣೆಯಿಲ್ಲದ ; ಸ್ಪಷ್ಟವಾಗಿ ಮಾತಾಡಲಾಗದ ; ಸ್ಪಷ್ಟಾರ್ಥವಿಲ್ಲದ. ಮೂಕ. **Inartículately** (ಕ್ರಿ. ವಿ.) ; **Inartículateness** (ನಾ.)

Inartifícial ಇನ್‌ಆರ್ಟಿಫಿಷಲ್ (ಗು.) ಅಕೃತಕ ; ಸ್ವಾಭಾವಿಕವಾದ ; ಸಹಜ. ಕಲಾ ರೂಪವಿಲ್ಲದ ; ಕಲಾ ಚಾತುರ್ಯ ತೋರದ. **Inartifícially** (ಕ್ರಿ. ವಿ.)

Inartístic ಇನ್‌ಆರ್ಟಿಸ್ಟಿಕ್ (ಗು.) ಕಲಾ ತತ್ತ್ವಗಳನ್ನನುಸರಿಸದ ; ಕಲಾ ಕೌಶಲವಿಲ್ಲದ ; ಕಲಾಭಿರುಚಿಯಿಲ್ಲದ. **Inartístically** (ಕ್ರಿ. ವಿ.)

Inasmúch ಇನ್‌ಅ್ಯಸ್‌ಮಚ್ (ಕ್ರಿ. ವಿ.) [Inasmuch as ಹಾಗಿರುವುದರಿಂದ ; ಆ ಕಾರಣದಿಂದ ; ನೋಡುವಲ್ಲಿ ; ಆಲೋಚಿಸುವಲ್ಲಿ ; ಏಕೆಂದರೆ]. (ಪ್ರಾಚೀ. ಪ್ರ.) ಅಷ್ಟುಮಟ್ಟಿಗೆ (ಈ ಪದವು ಆದಿಯಲ್ಲಿ In as much ಎಂದು ಮೂರು ಪದಗಳಾಗಿದ್ದಿತು)

Inatténtion ಇನ್‌ಅಟೆನ್ಷನ್ (ನಾ.) ಗಮನವಿಲ್ಲದಿರುವುದು ; ಅನವಧಾನ ; ಅಲಕ್ಷ್ಯ(ತೆ) ; ಅಜಾಗರೂಕತೆ ; ಎಚ್ಚರಿಕೆಯಿಲ್ಲದಿರುವುದು. ಮರ್ಯಾದೆ ತೋರಿಸದಿರುವುದು ; ಅನಾದರ(ಣೆ) ; ಉಪೇಕ್ಷೆ ; ಅಸಡ್ಡೆ. **Inatténtive** (ಗು.) ; **Inatténtively** (ಕ್ರಿ. ವಿ.) ; **Inatténtiveness** (ನಾ.)

Inaúdible ಇನ್‌ಆಡಿಬ್‌ಲ್ (ಗು.) ಕೇಳಲಾಗದ ; ಕೇಳಬರದ ; ಕೇಳಿಸದ. **Inaudibílity** (ನಾ.) ; **Inaúdibly** (ಕ್ರಿ. ವಿ.)

Inaúgural. Inaugurate ನೋಡಿ.

Inaúgurate ಇನ್‌ಆಗ್ಯುರೇಟ್ (ಕ್ರಿ. ಸಕ.) (ಒಬ್ಬನಿಗೆ ಒಂದು ಅಧಿಕಾರವನ್ನು) ವಿಧ್ಯುಕ್ತವಾಗಿ ವಹಿಸಿಕೊಡು. (ಒಂದು ಉದ್ಯಮ, ಮೊ. ನ್ನು) ಪೂಜಾದಿಗಳಿಂದ ಆರಂಭಿಸು. (ಸಾರ್ವಜನಿಕ ಉಪಯೋಗದ ಕಟ್ಟಡ, ಮೊ. ಗಳಿಗೆ) ಪ್ರಾರಂಭೋತ್ಸವ ಮಾಡು. **Inaugurátion** (ನಾ.) ; **Inaúgurator** (ನಾ.) ; **Inaúguratory** (ಗು.) ; **Inaúgural** (ಗು., ನಾ.) ಪ್ರತಿಷ್ಠಾಪನೆಯ ; ಪ್ರಾರಂಭೋತ್ಸವದ. (ಅಮೆ. ಸಂ.) (ಸಂಘ, ಮೊ. ಗಳ ವಿಧಿ ವಿಹಿತ) ಉಪಕ್ರಮ ಭಾಷಣ.

Inauspícious ಇನ್‌ಆಸ್ಪಿಷಸ್ (ಗು.) ಅಶುಭದ ; ಅಪ ಶಕುನದ ; ದುರದೃಷ್ಟದ ; ದೌರ್ಭಾಗ್ಯದ ; ಅಮಂಗಳಕರ ; ಅನಿಷ್ಟಕರ. **Inauspíciously** (ಕ್ರಿ. ವಿ.) ; **Inauspíciousness** (ನಾ.)

Ínboard ಇನ್‌ಬೋರ್ಡ್ (ಕ್ರಿ. ವಿ., ಗು.) (ನಾವೆ) ಹಡಗಿನ ಪಕ್ಕೆಗಳೊಳಗಡೆ ಅಥವಾ ಮಧ್ಯದ ಕಡೆಗೆ (ಇರುವ)

Ínborn ಇನ್‌ಬಾರ್ನ್ (ಗು.) ಹುಟ್ಟುತ್ತ ಬಂದ ; ಪ್ರಕೃತಿ ಜನ್ಯ ; ಸಹಜ ; ಸ್ವಭಾವ ಸಿದ್ಧ.

Inbreáthe ಇನ್‌ಬ್ರೀದ್ (ಕ್ರಿ. ಸಕ.) ಒಳಕ್ಕೆ ಊದು ; ಉಸಿರೆಳೆದುಕೊ ; ಉಸಿರೆರೆ; ಜೀವ ಹೊಯ್ಯಿ. (ರೂಪ.) ಚೈತನ್ಯ ತುಂಬು ; ಉತ್ತೇಜಿಸು.

Ínbred ಇನ್‌ಬ್ರೆಡ್ (ಗು.) ಸ್ವಾಭಾವಿಕವಾಗಿ ಬಂದ ; (ಪ್ರಕೃತಿ) ಸಹಜವಾದ. **Ínbreeding** (ನಾ.) ಕೇವಲ ಹತ್ತಿರ ಸಂಬಂಧದ ಪ್ರಾಣಿಗಳಲ್ಲಿಯೇ ಸಂಬಂಧ ಬೆಳಸುತ್ತ ಹೋಗುವುದು ; — ಗಳಿಂದ ತಳಿಯೆಬ್ಬಿಸುವುದು.

Incálculable ಇನ್‌ಕ್ಯಾಲ್ಕ್ಯುಲಬ್‌ಲ್ (ಗು.) ಗಣಿಸಲಾಗದ(ಷ್ಟು ಅತಿ ದೊಡ್ಡದಾದ) ; ಅಗಣ್ಯ ; ಮೊದಲೇ ಗಣಿಸಲು, ಎಣಿಸಲು, ಸಾಧ್ಯವಾಗದ ; ದುರೂಹ್ಯ ; (ಮನುಷ್ಯ, ನಡತೆ, ಮೊ. ವು) ನಂಬಿಕೆಯಿಟ್ಟುಕೊಳ್ಳಲಾಗದ ; ನೆಚ್ಚಿಕೆಯಿಲ್ಲದ ; ಅನಿಶ್ಚಿತ ; ಒಂದು ಗೊತ್ತಿಲ್ಲದ. **Incalculabílity** (ನಾ.) ; **Incálculably** (ಕ್ರಿ. ವಿ.)

Incandésce ಇನ್‌ಕ್ಯಾಂಡೆಸ್ (ಕ್ರಿ.) ಶಾಖದಿಂದ ಬೆಳಗು, ಬೆಳಗಿಸು ; ನಿಗ ನಿಗನೆ ಕಾಯಿ(ಸು) ; ಕನಲು. **Incandéscent** (ಗು.) ಶಾಖವೇರಿ ಬೆಳಗುವ ; ಪ್ರಜ್ವಲಿಸುವ ; ಪ್ರಕಾಶದಿಂದ ಹೊಳೆಯುವ. (ವಿದ್ಯುದ್ದೀಪ, ಮೊ. ಗಳಲ್ಲಿ) ತಂತಿ, ಮೊ. ವು ಕಾವೇರಿ ಪ್ರಜ್ವಲಿಸುವ. **Incandéscence** (ನಾ.)

Incantátion ಇನ್‌ಕ್ಯಾಂಟೇಷನ್ (ನಾ.) ಮಂತ್ರ(ಪ್ರಯೋಗ); ಮಾಟ; ಅಭಿಚಾರ.

Incápable ಇನ್‌ಕೇಪಬ್‌ಲ್ (ಗು.) ಕೈಯಲ್ಲಾಗದ ; ಕೈಯಲ್ಲಿ ಹರಿಯದ ; ಮಾಡಲಾರದ ; ಅಳವಲ್ಲದ ; ಮಾಡಲಾಗದ; ಮಾಡತಕ್ಕವನಲ್ಲದ ; ಅಸಮರ್ಥ (ಸಾ., ' ಕೆಟ್ಟ ಕೆಲಸ ಮಾಡಲಾರದವನು ' ಎಂಬ ಅರ್ಥದಲ್ಲಿ). (ಉತ್ತಮಗೊಳಿಸಲು) ಸಾಧ್ಯವಲ್ಲದ (*Of* ಉಪ. ಜೊಡನೆ). ಸಾಮಾನ್ಯ ದಾರ್ಢ್ಯವಿಲ್ಲದ ; ಅಶಕ್ತ (Drunk & i. ಕುಡಿದು ಅಶಕ್ತನಾಗಿರುವ). **Incapabílity** (ನಾ.) ; **Incápably** (ಕ್ರಿ. ವಿ.)

Incapácitate ಇನ್‌ಕಪ್ಯಾಸಿಟೇಟ್ (ಕ್ರಿ. ಸಕ.) (ಕೆಲಸ, ಮೊ. ಕ್ಕೆ) ಅಶಕ್ತನನ್ನಾಗಿ, ಅನರ್ಹನನ್ನಾಗಿ, ಮಾಡು (*For* work, etc. ; *for, from*, doing). (ನ್ಯಾ. ಶಾ.) ಅನಧಿಕಾರಿಯನ್ನಾಗಿ ಮಾಡು ; ಅರ್ಹತೆಯಿಲ್ಲದಂತೆ ಮಾಡು. **Incapacitátion** (ನಾ.) ; **Incapácity** (ನಾ.) (ಕೆಲಸ, ಮೊ. ಕ್ಕೆ) ಅಸಮರ್ಥತೆ, ಅಶಕ್ತತೆ, ಅನರ್ಹತೆ. (ನ್ಯಾ. ಶಾ.) ಅನಧಿಕಾರತ್ವ ; ಅರ್ಹತೆಯಿಲ್ಲದಿರುವುದು.

Incárcerate ಇನ್‌ಕಾರ್ಸರೇಟ್ (ಕ್ರಿ. ಸಕ.) ಸೆರೆಯಲ್ಲಿಡು ; (ರೂಪ.) ಬಂಧನದಲ್ಲಿಡು. **Incarcerátion** (ನಾ.) ; **Incárcerator** (ನಾ.)

Incárnadine ಇನ್‌ಕಾರ್ನಡಿ(ಡೈ)ನ್ (ಗು., ಕ್ರಿ. ಸಕ.) (ಕಾವ್ಯ) ಮಾಂಸ ವರ್ಣದ ; ಕಡುಗೆಂಪು ಬಣ್ಣದ. ಈ ಬಣ್ಣ ಹಾಕು, ಆಗಿಸು.

Incárnate ಇನ್‌ಕಾರ್ನೆಟ್ (ಗು.), **In-** — ನೇಟ್ (ಕ್ರಿ. ಸಕ.). (ವ್ಯಕ್ತಿ, ಗುಣ, ಮೊ. ವು) ಮೂರ್ತಿಮತ್ತಾದ, ಮೆಯ್ವೆತ್ತ (ಗ್ರಾಂ.) ; ಒಡಲು ಪಡೆದ, (ಮು.) ಮನುಷ್ಯದೇಹ ಧರಿಸಿದ ; ಅವತರಿಸಿದ (He is an i. fiend ಅವನು ಮನುಷ್ಯರೂಪದ ಪಿಶಾಚಿ, ನರ ಪಿಶಾಚಿ. Liberty i. ಮೂರ್ತಿಮತ್ತಾದ ಸ್ವಾತಂತ್ರ್ಯ). (ಕ್ರಿ.) ಮೂರ್ತಿಮತ್ತಾಗಿ ಮಾಡು ; ಸಶರೀರ ಮಾಡು ; ಅವತಾರ ಮಾಡು ; ಮೆಯ್ವೆರು (ಗ್ರಾಂ.).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಭಾವ, ಮೊ. ಕ್ಕೆ) ಆಕಾರ ಕೊಡು. (ವ್ಯಕ್ತಿ, ಮೊ. ವು ಒಂದು ಗುಣದ) ಸಜೀವ ಮೂರ್ತಿಯಾಗಿರು, ಅವತಾರವಾಗಿರು. **Incarnátion** (ನಾ.) (ಮು., ಮನುಷ್ಯರೂಪದಲ್ಲಿ) ಅವತರಿಸುವುದು, ಅವತಾರ (The I. ಕ್ರಿಸ್ತಾವತಾರ). (ಗುಣ, ಮೊ. ಗಳ) ಮೂರ್ತ ಸ್ವರೂಪ ; ಮೂರ್ತಿ (*Of* ಉಪ. ದೊಡನೆ)

Incaútious ಇನ್‌ಕಾಷಸ್ (ಗು.) ಜೋಕೆಯಿಂದಿಲ್ಲದ ; ಎಚ್ಚರಿಕೆಯಿಲ್ಲದ ; ಅಜಾಗರೂಕ ; ದುಡುಕಿನ. **Incaútiously** (ಕ್ರಿ. ವಿ.) ; **Incaútiousness** (ನಾ.)

Incéndiary ಇನ್ಸೆಂಡಿಯರಿ (ಗು., ನಾ.) (ಮನೆ, ಮೊ. ದ) ಸ್ವತ್ತಿಗೆ ಬೆಂಕಿಯಿಡುವ(ವನು) ; —ಇಟ್ಟ ಅಪರಾಧ ಮಾಡಿದ ; ಬೆಂಕಿ ಹಚ್ಚುವ (I. shell ಸಿಡಿತದ ವಸ್ತುಗಳಿಗೆ ಬದಲು ಬೆಂಕಿಹೊತ್ತಿಸುವ ವಸ್ತುಗಳನ್ನು ತುಂಬಿದ ಗುಂಡು : ಬೆಂಕಿ ಗುಂಡು). (ರೂಪ.) ಜಗಳವೆಬ್ಬಿಸುವ ; (ಕಾದಾಡಲು) ಉದ್ರೇಕಗೊಳಿಸುವ. (ನಾ.) ಕಿಚ್ಚಿಡುವವನು ; (ರೂಪ.) ಉದ್ರೇಕಕಾರಿ. **Incéndiarism** (ನಾ.)

Íncense[1] ಇನ್ಸೆನ್ಸ್ (ನಾ., ಕ್ರಿ. ಸಕ.) ಸುಟ್ಟಾಗ ಸುವಾಸನೆ ಯನ್ನು ಬೀರುವ ಒಂದು ಗೋಂದುಪದಾರ್ಥ ; ಸುವಾಸನಾ ದ್ರವ್ಯ (ಹಾಲುಮಡ್ಡಿ, ಸಾಮ್ರಾಣಿ, ಮೊ. ವು) ; (ಮು., ಆರಾಧನೆಯಲ್ಲಿ) ಇದರ ಹೊಗೆ, ಧೂಪ. (ರೂಪ.) ಸ್ತೋತ್ರ ; ಪ್ರಶಂಸೆ ; (ಹುಸಿ) ಹೊಗಳಿಕೆ. (ಕ್ರಿ.) (ಒಬ್ಬನಿಗೆ, ವಸ್ತುವಿಗೆ) ಧೂಪ ಹಾಕು. (ದೇವರಿಗೆ) ಧೂಪ ಸಮರ್ಪಿಸು ; ಸುವಾಸನೆ ಹರಡು. **Incensátion** (ನಾ.) ; **Íncensory** — ಸೊರಿ (ನಾ.) ಧೂಪ ಪಾತ್ರೆ.

Incénse[2] ಇನ್ಸೆನ್ಸ್ (ಕ್ರಿ. ಸಕ.) ರೇಗಿಸು ; ಕೆರಳಿಸು ; ಸಿಟ್ಟಿಗೆಬ್ಬಿಸು (Incensed *against*, *with*, *at*, *by*)

Íncensory. **Incense**[1] ನೋಡಿ.

Incéntive ಇನ್ಸೆಂಟಿವ್ (ಗು., ನಾ.) ಪ್ರೋತ್ಸಾಹಕ ; ಉತ್ತೇಜಕ ; ಪ್ರೇರಕ ; ಕೆರಳಿಸುವ. (ನಾ.) ಉದ್ರೇಕಕಾರಿ. ಉದ್ದೇಶ.

Incépt ಇನ್ಸೆಪ್ಟ್ (ಕ್ರಿ.) (ಕೇಂಬ್ರಿಡ್ಜ್ ವಿ. ವಿ. ನಿ. ದಲ್ಲಿ) Master ಅಥವಾ Doctor ಪದವಿ ಪಡೆಯಲು ತೊಡಗು. **Incéption** ಇನ್ಸೆಪ್ಷನ್ (ನಾ.) ಪ್ರಾರಂಭ ; ಉಪಕ್ರಮ ; ತೊಡಗುವುದು. (ಕೇಂಬ್ರಿಡ್ಜ್ ವಿ. ವಿ. ನಿ. : Incept ನೋಡಿ). **Incéptive** (ಗು., ನಾ.) ತೊಡಗುವ ; ಆರಂಭ(ದ). [(ವ್ಯಾ.) I. verb ಕಾರ್ಯಾರಂಭ ಸೂಚಕ ಕ್ರಿಯಾಪದ]. (ನಾ.) = I. verb. **Incéptor** (ನಾ.)

Incértitude ಇನ್‌ಸರ್ಟಿಟ್ಯೂಡ್ (ನಾ.) ಅನಿಶ್ಚಯ ; ನೆಚ್ಚಿಕೆಯಿಲ್ಲ ದಿರುವುದು.

Incéssant ಇನ್‌ಸೆಸಂಟ್ (ಗು.) ಎಡೆ ಬಿಡದ ; ಸಂತತ ; ನಿರಂತರ ; ಅವಿಚ್ಛಿನ್ನ ; ಮೇಲಿಂದ ಮೇಲಿನ ; ಮತ್ತೆ ಮತ್ತೆ ಬರುವ. **Incéssancy** (ನಾ.) ; **Incéssantly** (ಕ್ರಿ. ವಿ.) ; **Incéssantness** (ನಾ.)

Íncest ಇನ್ಸೆಸ್ಟ್ (ನಾ.) ಧರ್ಮಶಾಸ್ತ್ರದ ಪ್ರಕಾರ ಮದುವೆಯಾಗ ಕೂಡದ ತೀರ ಹತ್ತಿರದ ಸಂಬಂಧಿಗಳೊಡನೆ (ಸ್ವಗೋತ್ರದವರೊಡನೆ) ಸಂಭೋಗ ; ಅಗಮ್ಯ ಗಮನ. **Incéstuous** (ಗು.) ಅಗಮ್ಯ ಗಮನ (ಪಾತಕ)ದ. **Incéstuously** (ಕ್ರಿ. ವಿ.)

Inch[1] ಇಂಚ್, ಇನ್ಚ್ (ನಾ., ಕ್ರಿ.) (ಉದ್ದದಲ್ಲಿ) ಒಂದು ಅಡಿಯ ಹನ್ನೆರಡ ರಲ್ಲಿ ಒಂದು ಭಾಗ : ಅಂಗುಲ (Square i. ಚದರಂಗುಲ. Cubic i. ಘನ ಅಂಗುಲ). (ಮಳೆಯ ಆಳತೆಯ ಮಾನ) ನೆಲದಮೇಲೆ ಒಂದು ಅಂಗುಲ ಆಳ ನಿಲ್ಲುವಷ್ಟು ಮೊತ್ತ. (ವಾಯುವಿನ ಅಥವಾ ಇತರ ಒತ್ತಡ) ಪಾದರಸದ ವಾಯುಭಾರಮಾಪಕದಲ್ಲಿ ಒಂದಂಗುಲ ಎತ್ತರದ ಪಾದರಸದ ತೂಕವನ್ನು ಸರಿದೂಗುವ ಒತ್ತಡದ ಮೊತ್ತ. ಅಲ್ಪ ಮೊತ್ತ ; ಕೊಂಚ. (By inches ಕೊಂಚ ಕೊಂಚವಾಗಿ. Every i. ಸಂಪೂರ್ಣವಾಗಿ). (ಬ. ವ. ದಲ್ಲಿ) ಎತ್ತರ [A man of your inches ನಿನ್ನಷ್ಟು ಎತ್ತರದ ಆಳು. Give him an i. and he'll take an ell (Ell ನೋಡಿ). Flog person within an i. of his life ಸಾಯುವಷ್ಟರ ಮಟ್ಟಿಗೆ ನದೆಬಡಿ. An i. of cold iron ಕಠಾರಿ, ಮೊ. ಗಳ ಇರಿತ]. (ಕ್ರಿ.) ಕೊಂಚ ಕೊಂಚವಾಗಿ ಸರಿ(ಸು). I. in, I. forward ನುಸುಳು(ಳಿಸು) ; ಮುಂದುವರಿ(ಸು). **-incher** (ನಾ.) (Six-i. ಆರಂಗುಲ ಉದ್ದದ, ವ್ಯಾಸದ, — ವಸ್ತು : ಆರಂಗುಲ)

Inch[2] ಇಂಚ್, ಇನ್ಚ್ (ನಾ.) ಸಣ್ಣ ದ್ವೀಪ (ಮು., ಸ್ಕಾಟ್ಲೆಂಡಿನದು)

Ínchoate ಇಂಕೊ(ಎ)ಯೇಟ್ (ಗು.), —ಯೇಟ್ (ಕ್ರಿ. ಸಕ.) ಈಗತಾನೆ ಆರಂಭವಾದ ; ಹೊಮ್ಮಿಲ್ಲದ ; ಅಪೂರ್ಣಾವಸ್ಥೆಯ. (ಕ್ರಿ.) ಮೊದಲು ಮಾಡು ; ಪ್ರಾರಂಭಿಸು. **Inchoátion** (ನಾ.) ; **Ínchoative** ಇಂಕೋಯೆಟಿವ್, — ಕೊಯೇ — (ಗು.)

Íncidence ಇನ್‌ಸಿಡೆನ್ಸ್ (ನಾ.) ಬೀಳುವುದು ; ಒತ್ತುವುದು ; ಭಾರ ; ಹೊರೆ. (What is the i. of the tax ? ತೆರಿಗೆ ಯಾರಮೇಲೆ ಬೀಳುತ್ತದೆ ?). (ಭೌ. ವಿ.) ರೇಖೆ ಅಥವಾ ರೇಖೆಯಲ್ಲಿ ಚಲಿಸುತ್ತಿರುವ ವಸ್ತು ಒಂದು ಸಮತಲದಮೇಲೆ ಬೀಳುವುದು : ಅಪಾತ. (Angle of i. ಅಪಾತ ರೇಖೆ, ಅಪಾತ ರಶ್ಮಿ, ಮೊ. ವು ಸಮತಲದಲ್ಲಿಯ ಅಪಾತ ಬಿಂದುವಿನ ಲಂಬರೇಖೆಯೊಡನೆ ಮಾಡುವ ಕೋನ : ಅಪಾತ ಕೋನ). ಪ್ರಭಾವದ, ಪರಿಣಾಮದ, — ವಿಸ್ತಾರ, ವ್ಯಾಪ್ತಿ. **Íncident** (ನಾ., ಗು.) ಅಪ್ರಧಾನ ಅಥವಾ ಸಹಾಯಕ ಘಟನೆ ; ಘಟನೆ ; ಸಂಗತಿ ; ಪ್ರಸಂಗ; ಸಂಭವ. ಎಲ್ಲರ ಗಮನವನ್ನೂ ಆಕರ್ಷಿಸುವ ಪ್ರಸಂಗ. (ನಾಟಕದಲ್ಲಿ ಅಥವಾ ಕಾವ್ಯದಲ್ಲಿ) ಒಂದು ವಿಶೇಷ ಘಟನೆ. (ನ್ಯಾ. ಶಾ.) (ಆಸ್ತಿ, ಅಧಿಕಾರ, ಮೊ. ಗಳ ಜೊತೆಯಲ್ಲಿ) ಅನುಗತವಾಗಿ ಬಂದ ಹಕ್ಕು, ಬಾಧ್ಯತೆ, ಹೊರೆ, ಮೊ. ವು. (ಗು.) ಸಂಭವಿಸಬಹುದಾದ ; ಅನುಗತ. ಸ್ವಾಭಾವಿಕವಾಗಿ ಸೇರಿರುವ (*To* ಉಪ. ದೊಡನೆ). (ಬೆಳಕಿನ ಕಿರಣ, ಮೊ. ವು) (ಮೇಲೆ) ಬೀಳುವ; ಅಪಾತವಾಗುವ (*Upon* ಉಪ. ದೊಡನೆ). **Incidéntal** (ಗು.) ಗೌಣ ; ಅಮುಖ್ಯ ; ಪ್ರಾಸಂಗಿಕ ; ಸಂಭವಿಸ ಬಹುದಾದ ; ಸಂಭವನೀಯ (*To* ಉಪ. ದೊಡನೆ). [I. images, colours (ಅನುಭವ ನಿಂತಮೇಲೂ ಗೋಚರವಾಗುತ್ತಿರುವಂತೆ ಭಾಸ ವಾಗುವ) ಅನುಗತ ಬಿಂಬಗಳು, ವರ್ಣಗಳು]. **Incidéntally** (ಕ್ರಿ. ವಿ.)

Incínerate ಇನ್‌ಸಿನರೇಟ್ (ಕ್ರಿ. ಸಕ.) ಸುಟ್ಟು ಬೂದಿಮಾಡು ; (ದೇಹ, ಮೊ. ನ್ನು) ಬೆಂಕಿಯಿಂದ ಸುಟ್ಟುಹಾಕು. **Incinerátion** (ನಾ.) ; **Incínerator** (ನಾ.) ದಹನ ಕುಂಡ ; ದಾಹಕ.

Incípient ಇನ್‌ಸಿಪಿಯೆಂಟ್ (ಗು.) ಆರಂಭದ ; ಆರಂಭ ದಶೆಯ ; ಪ್ರಥಮಾವಸ್ಥೆಯ ; ಮುಮ್ಮೊದಲ. **Incípiently** (ಕ್ರಿ. ವಿ.) ; **Incípience** (ನಾ.) ; **Incípiency** (ನಾ.)

Íncipit (L) ಇನ್‌ಸಿಪಿಟ್ (ವಾಕ್ಯ) : (ಗ್ರಂಥ, ಮೊ. ದು) (ಇಲ್ಲಿ) ಆರಂಭ ವಾಗುತ್ತದೆ.

Incíse ಇನ್‌ಸೈಸ್ (ಕ್ರಿ. ಸಕ.) (ಒಂದರಲ್ಲಿ) ಕಚ್ಚು ಮಾಡು ; ಕೊರೆ ; ಕೆತ್ತು. **Incísion** ಇನ್ಸಿಷನ್ (ನಾ.) ಕಚ್ಚು ಮಾಡುವುದು ; ಕೊರೆತ ; ಕತ್ತರಿಕೆ ; ಕಚ್ಚು ; ಗಾಯ. **Incísive** ಇನ್ಸೈಸಿವ್ (ಗು.) ಕಡಿಯುವ ; ಕಚ್ಚು ಮಾಡುವ ; ಇರಿಯುವ ; ಒಳಹೊಗುವ. (ರೂಪ.) ಚುರುಕು, ತೀಕ್ಷ್ಣ, —ಬುದ್ಧಿಯ. ಹರಿತವಾದ ; ತೀಕ್ಷ್ಣವಾದ ; ಚುಚ್ಚುವ. **Incísively** (ಕ್ರಿ. ವಿ.) ; **Incísiveness** (ನಾ.) ; **Incísor** ಇನ್ಸೈಸ(ಸ)ರ್ (ನಾ.) (ಅಂ. ರ. ಶಾ., ಪ್ರಾ. ವಿ.) (ಕಡಿಯುವುದಕ್ಕೆ ಅನುಕೂಲವಾದ, ಕೋರೆಹಲ್ಲುಗಳಿಗೆ ಮಧ್ಯೇ ಇರುವ) ಮುಂದಿನ ಹಲ್ಲು ಗಳಲ್ಲೊಂದು ; ಬಾಚಿ ಹಲ್ಲು.

Incísor. **Incise** ನೋಡಿ.

Incíte ಇನ್‌ಸೈಟ್ (ಕ್ರಿ. ಸಕ.) (ವ್ಯಕ್ತಿ, ಮೊ. ನ್ನು ಕಾರ್ಯಕ್ಕೆ) ಪ್ರಚೋದಿಸು ; ಪ್ರೇರಿಸು ; ಉತ್ತೇಜಿಸು ; ಹುರಿದುಂಬಿಸು ; ಕೆರಳಿಸು ; ರೇಗಿಸು ; ಚಿತಾಯಿಸು ; ಎತ್ತಿಕಟ್ಟು. **Incitátion** (ನಾ.) ; **Incítement** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Incivílity ಇನ್‌ಸಿವಿಲಿಟಿ (ನಾ.) ಅವಿನಯ; ಅಸಭ್ಯತೆ; ಅವಮರ್ಯಾದೆ; ಒರಟು ನಡತೆ.

Incivism ಇನ್‌ಸಿವಿಸ್ಮ್ (ನಾ.) ಸತ್ಪ್ರಜಾ ಲಕ್ಷಣವಿಲ್ಲದಿರುವುದು (ಮು., French Revolution ತತ್ತ್ವಗಳಲ್ಲಿ ಭಕ್ತಿವಿಶ್ವಾಸಗಳಿಲ್ಲದಿರುವುದು)

Inclément ಇನ್‌ಕ್ಲೆಮೆಂಟ್ (ಗು.) (ವಾಯುಸ್ಥಿತಿ ಅಥವಾ ಹವ) ಕಠಿನವಾದ, ಸೌಮ್ಯವಲ್ಲದ (ಮು., ಕೊರೆತದಿಂದ ಅಥವಾ ಬಿರುಗಾಳಿಯಿಂದ ಕೂಡಿದ್ದು). **Inclémency** (ನಾ.)

Inclíne ಇನ್‌ಕ್ಲೈನ್ (ಕ್ರಿ., ನಾ.) (ತಲೆ, ಮೈ, ಮೊ.) ಮುಂದಕ್ಕೆ, ಕೆಳಕ್ಕೆ, —ಬಾಗು, ಬಗ್ಗಿಸು, ಒಲೆ. [I. one's ear (ಒಬ್ಬನ ಹೇಳಿಕೆ, ಪ್ರಾರ್ಥನೆ, ಮೊ. ನ್ನು) ಸುಮುಖವಾಗಿ ಕೇಳು, ಲಾಲಿಸು, ಕಿವಿಗೊಡು (*To* ಉಪ. ದೊಡನೆ)]. (ಒಂದು ಕಾರ್ಯಕ್ಕೆ) ಮನಸ್ಸಿರು, ಒಲವಿರು, ಮನಸ್ಸು ಬರುವಂತೆ ಮಾಡು, ಪ್ರವೃತ್ತಿಗೊಳಿಸು. [I. our hearts to keep this law ಈ ನಿಯಮವನ್ನು ಪಾಲಿಸುವಂತೆ ನಮಗೆ ಮನವೊಲಿಸು. I am inclined to think; I i. to think (—ಎಂದು) ಆಲೋಚನೆ ತೋರುತ್ತದೆ]. (ಲಂಬರೇಖೆ, ಮೊ. ಗಳಿಂದ) ಓಲು, ಓಲಿಸು [Inclined plane ಇಳುಕಲು ಸಮತಲ; ಪ್ರವಣ ಸಮತಲ (ಯಾಂತ್ರಿಕ ಶಕ್ತಿಗಳಲ್ಲೊಂದು) (Mechanical ನೋಡಿ)]. ಒಲವಿರು (*To* ಉಪ. ದೊಡನೆ). (I. to corpulence ಬೊಜ್ಜು ಬೆಳೆಯುವಂತಿರು). (ನಾ.) = Inclined plane; ಇಳುಕಲು; ಓರೆ; ಪ್ರವಣ ಕ್ಷೇತ್ರ. **Inclínable** (ಗು.) ಒಲವುಳ್ಳ; ಇಚ್ಛೆಯುಳ್ಳ; ಮನಸ್ಸಿರುವ; ಅನುಕೂಲವಾದ (*To* ಉಪ. ದೊಡನೆ). **Inclinátion** —ಕ್ಲಿ— (ನಾ.) ಬಾಗು; ಓರೆ; ಓಲು; ಇಳುಕಲು; ಪ್ರವಣತೆ. ಎರಡು ರೇಖೆಗಳ ದಿಕ್ಕುಗಳಿಗಿರುವ ವ್ಯತ್ಯಾಸ (ಮು., ಅವುಗಳಿಗಿರುವ ಕೋನದ ಅಳತೆಯಿಂದ). ಒಲವು; ಮನಸ್ಸು; ಪ್ರವೃತ್ತಿ (*To, for* ಉಪ. ದೊಡನೆ). ಎರಕ; ಇಷ್ಟ. **Inclinómeter** —ನಾಮಿಟರ್ (ನಾ.) ಅಯಸ್ಕಾಂತ ಸೂಚಿಯ ಆನತಿಯಿಂದ, ಭೂಮಿಯ ಅಯಸ್ಕಾಂತ ಬಲದ ಲಂಬತೀವ್ರತೆಯನ್ನು ಅಳೆಯುವ ಸಲಕರಣೆ: ಕಾಂತಾನತಿ ಮಾಪಕ.

Inclinómeter. **Incline** ನೋಡಿ.

Inclúde ಇನ್‌ಕ್ಲೂಡ್ (ಕ್ರಿ. ಸಕ.) (ಪೂರ್ತಿಯಾದೊಂದರ ಭಾಗವಾಗಿ) ಸೇರಿಸು, ಸೇರಿರು; ಒಳಗೊಳ್ಳು; ಒಳಗೊಂಡಿರು; ಅಂತರ್ಗತ ಮಾಡಿಕೊ. ಸೇರಿದಂತೆ, ಒಳಗೊಂಡಂತೆ, —ಭಾವಿಸು, ಎಣಿಕೆಗೆ ತೆಗೆದುಕೊ. (ಭೂ. ಕೃ.) ಒಳಗೆ ಕೂಡಿದ; ಅಂತರ್ಗತವಾದ. **Inclúsive** (ಗು.) ಒಳಕೊಳ್ಳುವ; ಒಳಕೊಂಡ; ಸಹಿತ; ಸಮೇತ (*Of* ಉಪ. ದೊಡನೆ ಸಹ) [Pages 7 to 26 i. ೭ರಿಂದ ಹಿಡಿದು ೨೬ನೆಯ ಪುಟವೂ ಸೇರಿ (ಸಂಕ್ಷಿಪ್ತ: incl.)]. ಹೆಚ್ಚು ಭಾಗವನ್ನು, ಅಥವಾ ಎಲ್ಲವನ್ನೂ, ಒಳಕೊಂಡ; ವ್ಯಾಪಕ [I. terms ಎಲ್ಲ ಅಂಶಗಳೂ ಸೇರಿದ ಒಟ್ಟೊಪ್ಪಂದ]. **Inclúsively** (ಕ್ರಿ. ವಿ.); **Inclúsiveness** (ನಾ.); **Inclúsion** —ಷನ್ (ನಾ.)

Incógnito ಇನ್‌ಕಾಗ್ನಿಟೋ [ಗು., ನಾ. (ಬ. ವ. -ti —ಟೀ; ಸ್ತ್ರೀ. -ta —ಟ, ಬ. ವ. -te —ಟೇ); ಕ್ರಿ. ವಿ.] (ಸಂಕ್ಷಿಪ್ತ: incog.) ಗುರುತು ಮರಸಿಕೊಂಡ(ವನು); ಅಜ್ಞಾತ ವೇಷದ; —ವೇಷಿ(ಯಾಗಿ). (ಕ್ರಿ. ವಿ.) (ಹೆಸರು, ಯೋಗ್ಯತೆ, ಮೊ. ನ್ನು) ಮರಸಿಕೊಂಡು (Travel i. ತನ್ನ ನಿಜಸ್ಥಿತಿ ಮರಸಿಕೊಂಡು ಪ್ರಯಾಣಮಾಡು. Do good i. ತನ್ನ ಸ್ಥಿತಿ, ಮೊ. ನ್ನು ತಿಳಿಯಪಡಿಸದಂತೆ ಇತರರಿಗೆ ಉಪಕಾರ ಮಾಡು)

Incógniz(s)able ಇನ್‌ಕಾ(ಗ್)ನಿಸಬ್‌ಲ್ (ಗು.) ಇಂದ್ರಿಯ ಗ್ರಾಹ್ಯವಾಗದ; ಬುದ್ಧಿಗೆ ನಿಲುಕದ; ಗುರುತಿಸಲಾಗದ. **Incógnizant** —ಜ಼ಂಟ್ (ಗು.) ಅರಿವಿಲ್ಲದ; ತಿಳಿವಿಗೆ ಬರದ; ಇಂದ್ರಿಯ ಗೋಚರವಾಗದ (*Of* ಉಪ. ದೊಡನೆ). **Incógnizance** (ನಾ.)

Incohérent ಇನ್‌ಕೊಹಿಯರೆಂಟ್ (ಗು.) ಪರಸ್ಪರ ಸಂಬಂಧವಿಲ್ಲದ; ಅಸಂಬದ್ಧ (ರೂಪ. ಸಹ). **Incohérently** (ಕ್ರಿ. ವಿ.); **Incohérence** (ನಾ.); **Incohésive** —ಹೀಸಿವ್ (ಗು.) ಅಂಟಿಕೊಳ್ಳದ; ಒಟ್ಟುಗೂಡದ; ಅಸಂಸಕ್ತ.

Incohésive. **Incoherent** ನೋಡಿ.

Incombústible ಇನ್‌ಕಂಬಸ್ಟಿಬ್‌ಲ್ (ಗು.) (ಬೆಂಕಿಯಿಂದ) ಸುಟ್ಟು ಹೋಗಲಾರದ; ಸುಡದ; ಉರಿದುಹೋಗದ; ಅದಾಹ್ಯ. **Incombustibílity** (ನಾ.)

Íncome ಇನ್‌ಕಮ್ (ನಾ.) [ಒಬ್ಬನ ವ್ಯಾಪಾರ, ಜಮೀನು, ಕೆಲಸ, ಮೊ. ಗಳಿಂದ ಬರುವ ನಿಯತ ಕಾಲಿಕ (ಸಾ., ವರ್ಷಗಟ್ಟಳೆಯ)] ವರಮಾನ; ಹುಟ್ಟುವಳಿ; ಆದಾಯ; ಆಯ (I.-tax ವರಮಾನದ ತೆರಿಗೆ)

Íncomer ಇನ್‌ಕಮರ್ (ನಾ.) ಒಳಕ್ಕೆ ಬಂದವನು; ವಲಸೆ ಬಂದವನು. (ಹೇಳದೆ ಕೇಳದೆ) ಮಧ್ಯೆ (ಅಡ್ಡವಾಗಿ) ಬಂದವನು. ಉತ್ತರಾಧಿಕಾರಿ. **Íncoming** (ನಾ.) ಪ್ರವೇಶ; ಆಗಮನ; ಬರವು. (ಸಾ., ಬ. ವ. ದಲ್ಲಿ) ಹುಟ್ಟುವಳಿ, ಆದಾಯ. (ಗು.) (ಒಬ್ಬನ) ತರುವಾಯ ಬರುವ; ಉತ್ತರಾಧಿಕಾರಿಯಾಗುವ. ವಲಸೆಬರುವ. (ರಾಭ) ಬೆಳೆದುಬರುವ.

Incomménsurable ಇನ್‌ಕಮೆನ್‌ಸ್ಯು(ಷು)ರಬ್‌ಲ್ (ಗು.) (ಪರಿಮಾಣಗಳ ವಿಷಯದಲ್ಲಿ) ಪೂರ್ಣಾಂಕ ರೂಪದಲ್ಲಾಗಲಿ ಭಿನ್ನರಾಶಿಯ ರೂಪದಲ್ಲಾಗಲಿ ಒಂದಕ್ಕೊಂದಕ್ಕೆ ಸಮಾನಾಪವರ್ತನವಿಲ್ಲದ (*With* ಉಪ. ದೊಡನೆ); ಅನಪವರ್ತ್ಯ. ಪೂರ್ಣಸಂಖ್ಯಾರೂಪದಲ್ಲಾಗಲಿ ಭಿನ್ನರಾಶಿಯ ರೂಪದಲ್ಲಾಗಲಿ ವ್ಯಕ್ತಪಡಿಸಲಾಗದ ಸಂಖ್ಯೆ (ಉದಾ., ೨ರ ವರ್ಗಮೂಲ). (ಪರಿಮಾಣದ ವಿಷಯದಲ್ಲಿ) ಹೋಲಿಸಲಾಗದ; (ಒಂದರೊಡನೆ) ಅಳತೆಗೆ ಗಣ್ಯವಲ್ಲದ (*With* ಉಪ. ದೊಡನೆ). **Incommensurabílity** (ನಾ.); **Incomménsurably** (ಕ್ರಿ. ವಿ.); **Incomménsurate** —ರೇಟ್ (ಗು.) ಸಾಮ್ಯವಿಲ್ಲದ; ಅನುಗುಣವಲ್ಲದ; ತಕ್ಕಷ್ಟಿಲ್ಲದ; (*With, to* ಉಪ. ದೊಡನೆ). = Incommensurable. **Incomménsurateness** (ನಾ.)

Incommóde ಇನ್‌ಕಮೋಡ್ (ಕ್ರಿ. ಸಕ.) ತೊಂದರೆ ಕೊಡು; ಕಾಡು; ಪೀಡಿಸು; ಅಡಚಣೆಯೊಡ್ಡು. **Incommódious** (ಗು.) ಸಾಕಷ್ಟು ಸ್ಥಳವಿಲ್ಲದ; ಅನುಕೂಲವಿಲ್ಲದ; ಕಿಷ್ಕಿಂಧವಾದ. **Incommódiousness** (ನಾ.)

Incommúnicable ಇನ್‌ಕಮ್ಯೂನಿಕಬ್‌ಲ್ (ಗು.) (ಇತರರಿಗೆ) ಹೇಳಲಾಗದ, ಹೇಳಕೂಡದ, ಕೊಡಲಾಗದ. **Incommunicabílity** (ನಾ.); **Incommúnicableness** (ನಾ.); **Incommúnicably** (ಕ್ರಿ. ವಿ.); **Incommúnicative** (ಗು.) (ಇತರರಿಗೆ) ತಿಳಿಸುವ, ಹೇಳುವ, —ಸ್ವಭಾವದವನಲ್ಲದ; (ಒಬ್ಬರೊಡನೆ) ಸೇರಲೂ ಸಂಭಾಷಣೆ ಮಾಡಲೂ ಒಲ್ಲದ; (ಇತರರೊಡನೆ) ಬೆರೆಯದ. **Incommúnicatively** (ಕ್ರಿ. ವಿ.); **Incommúnicativeness** (ನಾ.)

Incommútable ಇನ್‌ಕಮ್ಯೂಟಬ್‌ಲ್ (ಗು.) ಮಾರ್ಪಡಿಸಲಾಗದ; ಬದಲಾಯಿಸಲಾಗದ; ವಿನಿಮಯ ಮಾಡಲಾಗದ; ಅಪರಿವರ್ತ್ಯ. **Incommútably** (ಕ್ರಿ. ವಿ.)

Incompáct ಇನ್‌ಕಂಪ್ಯಾಕ್ಟ್ (ಗು.) ಅಡಕವಾಗಿಲ್ಲದ; ಒತ್ತಾಗಿಲ್ಲದ (ರೂಪ. ಸಹ)

Incómparable ಇನ್‌ಕಾಂಪರಬ್‌ಲ್ (ಗು.) ಎಣೆಯಿಲ್ಲದ; ಅನುಪಮ; ಅಸದೃಶ (*With, to* ಉಪ. ದೊಡನೆ). **Incómparableness** (ನಾ.); **Incómparably** (ಕ್ರಿ. ವಿ.)

Incompátible ಇನ್‌ಕಂಪ್ಯಾಟಿಬ್‌ಲ್ (ಗು.) ಸಂಗತವಾಗದ; ಹೊಂದಿಕೆಯಿಲ್ಲದ; ಒಡಂಬಡದ; ಮೇಳನವಿಲ್ಲದ; ಅಸಂಬದ್ಧ; ಅಸಮಂಜಸ; ಅನನುರೂಪ (*With* ಉಪ. ದೊಡನೆ). **Incompatibílity** (ನಾ.)

Incómpetent ಇನ್‌ಕಾಂಪಿಟೆಂಟ್ (ಗು.) (ಮಾಡುವುದಕ್ಕೆ) ಯೋಗ್ಯತೆಯಿಲ್ಲದ, ಶಕ್ತಿಯಿಲ್ಲದ; ಅನರ್ಹ; ಅಸಮರ್ಥ; (ನ್ಯಾ. ಶಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರ್ಹತೆಯಿಲ್ಲದ ; ಅನಧಿಕಾರಿಯಾದ. **Incómpetently** (ಕ್ರಿ. ವಿ.) ; **Incómpetence** (ನಾ.) ; **Incómpetency** (ನಾ.)

Incompléte ಇನ್‌ಕಂಪ್ಲೀಟ್ (ಗು.) ಮುಗಿದಿಲ್ಲದ ; ಅಪೂರ್ಣ ; ಅಸಮಗ್ರ ; ಅರೆಕೊರೆ. **Incomplétely** (ಕ್ರಿ. ವಿ.) ; **Incompléteness** (ನಾ.)

Incomprehénsible ಇನ್‌ಕಾಂಪ್ರಿಹೆನ್ಸಿಬ್‌ಲ್ (ಗು.) ಅರ್ಥಮಾಡಿಕೊಳ್ಳಲಾಗದ ; ತಿಳಿದುಕೊಳ್ಳಲಾಗದ ; ಅಸಂವೇದ್ಯ ; ದುರವಗಾಹ. (ಮು., ಕ್ರೈಸ್ತ ದೇವ. ಶಾ.) ಅಪರಿಮಿತ [(ನಾ.) Three incomprehensibles (ಕ್ರೈಸ್ತ) : ದೇವರು, ದೇವಪುತ್ರ (ಕ್ರಿಸ್ತ), ದಿವ್ಯಾತ್ಮ]. **Incomprehensibílity** (ನಾ.) ; **Incomprehénsibleness** (ನಾ.) ; **Incomprehénsibly** (ಕ್ರಿ. ವಿ.) ; **Incomprehénsion** (ನಾ.) ಮನಸ್ಸಿಗೆ ಹಿಡಿಯದಿರುವುದು ; ತಿಳಿದುಕೊಳ್ಳಲಾಗದಿರುವುದು ; ತಿಳಿದುಕೊಳ್ಳದಿರುವುದು ; ಅಗ್ರಹಣ.

Incompréssible ಇನ್‌ಕಂಪ್ರೆಸಿಬ್‌ಲ್ (ಗು.) ಅಡಕಮಾಡಲಾಗದ ; ಕುಗ್ಗಿಸಲಾಗದ ; ಚಿಕ್ಕದು ಮಾಡಲಾಗದ ; ಅಸಂಕೋಚ್ಯ. **Incompressibílity** (ನಾ.)

Incompútable ಇನ್‌ಕಂಪ್ಯೂಟಬ್‌ಲ್, **Incómputable** —ಕಾಂಪ್ಯು— (ಗು.) ಲೆಕ್ಕಮಾಡಲಾಗದ ; ಗಣನೆಗೆ ಸಿಕ್ಕದ ; ಅಗಣ್ಯ.

Inconceívable ಇನ್‌ಕನ್ಸೀವಬ್‌ಲ್ (ಗು.) ಭಾವಿಸಲಾಗದ ; ಊಹಿಸಲಾಗದ ; ಅಚಿಂತ್ಯ ; ಕಲ್ಪನಾತೀತ. (ಬಳ. ಮಾ.) ಕೇವಲ ಅಸಾಧಾರಣವಾದ. **Inconceivabílity** (ನಾ.) ; **Inconceívably** (ಕ್ರಿ. ವಿ.)

Inconclúsive ಇನ್‌ಕನ್‌ಕ್ಲೂಸಿವ್ (ಗು.) (ವಾದ, ನಿದರ್ಶನ, ಕ್ರಿಯೆ, ಮೊ.) ಒಂದು ಗೊತ್ತಿಗೆ ಬರದ, ತೀರ್ಮಾನವಾಗದ ; ನಿರ್ಣಯವಿಹೀನ. **Inconclúsively** (ಕ್ರಿ. ವಿ.) ; **Inconclúsiveness** (ನಾ.)

Incondénsable ಇನ್‌ಕಂಡೆನ್ಸಬ್‌ಲ್ (ಗು.) (ಮು., ದ್ರವ ಸ್ಥಿತಿಗೆ ಅಥವಾ ಘನ ಸ್ಥಿತಿಗೆ) ಸಾಂದ್ರೀಕರಿಸಲಾಗದ. ಸಂಕ್ಷೇಪ ಮಾಡಲಾಗದ.

Incóndite ಇನ್‌ಕಾಂಡಿಟ್ (ಗು.) (ಸಾಹಿತ್ಯ ಪ್ರಬಂಧ, ಮೊ. ಗಳ ವಿಷಯದಲ್ಲಿ) ಸರಿಯಾಗಿ ರಚಿಸಿಲ್ಲದ ; ಗಾಂಭೀರ್ಯವಿಲ್ಲದ ; ನಯವಿಲ್ಲದ ; ಅಸಂಸ್ಕೃತ.

Inconfórmity ಇನ್‌ಕನ್‌ಫಾರ್ಮಿಟಿ (ನಾ.) ಸಾಮ್ಯವಿಲ್ಲದಿರುವುದು ; ಸಂಪ್ರದಾಯ ವಿರುದ್ಧತೆ ; ಅನನುರೂಪತೆ ; ಹೊಂದಿಕೆಯಿಲ್ಲದಿರುವುದು (*To, with* ಉಪ. ದೊಡನೆ) ; = Nonconformity.

Incóngruous ಇನ್‌ಕಾಂಗ್ರುಅಸ್ (ಗು.) ಒಪ್ಪದ ; ಹೊಂದದ ; ಅಸಂಗತ ; ಅಸಮಂಜಸ (*With* ಉಪ. ದೊಡನೆ) ; ಅಸಂಬದ್ಧ ; ಅನುಚಿತ. **Incóngruously** (ಕ್ರಿ. ವಿ.) ; **Incóngruousness** (ನಾ.) ; **Incongrúity** — ಕಂಗ್ರೂಯಿಟಿ (ನಾ.)

Inconsécutive ಇನ್‌ಕನ್ಸೆಕ್ಯುಟಿವ್ (ಗು.) ಅನುಗೂಡಿ ಬರದ ; ಅನುಕ್ರಮಿಕವಲ್ಲದ ; ಕ್ರಮ ತಪ್ಪಿದ. **Inconsécutively** (ಕ್ರಿ. ವಿ.) ; **Inconsécutiveness** (ನಾ.)

Incónsequent ಇನ್‌ಕಾನ್ಸಿಕ್ವೆಂಟ್ (ಗು.) (ಸ್ವಾಭಾವಿಕವಾಗಿ) ಅನುಸರಿಸಿ ಬರದ ; ಅನುಗತವಲ್ಲದ ; ಅಸಂಗತ ; ಪೂರ್ವಾಪರ ಸಂಬಂಧವಿಲ್ಲದ ; ಅಸಂಬದ್ಧ ; ಹೊಂದಿಕೆಯಿಲ್ಲದ. **Incónsequence** (ನಾ.) ; **Inconsequéntial** (ಗು.) ; **Inconsequéntially** (ಕ್ರಿ. ವಿ.) ; **Incónsequently** (ಕ್ರಿ. ವಿ.)

Inconsíderable ಇನ್‌ಕನ್ಸಿಡರಬ್‌ಲ್ (ಗು.) ಗಣನೆಗೆ ಯೋಗ್ಯವಲ್ಲದ ; ಗಣ್ಯವಲ್ಲದ ; ಲೆಕ್ಕಕ್ಕೆ ಬರದ ; ಹೆಚ್ಚಿಲ್ಲದ ; ಅಲ್ಪ ಪ್ರಮಾಣದ, ಬೆಲೆಯ ; ಸ್ವಲ್ಪ.

Inconsíderate ಇನ್‌ಕನ್ಸಿಡರೆಟ್ (ಗು.) (ವ್ಯಕ್ತಿ ಅಥವಾ ಕಾರ್ಯ) ಪರ್ಯಾಲೋಚನೆಯಿಲ್ಲದ, ವಿವೇಚನೆಯಿಲ್ಲದ ; ದುಡುಕಿನ. ಪರರ ಭಾವನೆಗಳಿಗೆ ಲಕ್ಷ್ಯಕೊಡದ ; ದಯಾ ದಾಕ್ಷಿಣ್ಯ ರಹಿತ. **Inconsíderately** (ಕ್ರಿ. ವಿ.) ; **Inconsíderateness** (ನಾ.) ; **Inconsiderátion** (ನಾ.)

Inconsístent ಇನ್‌ಕನ್ಸಿಸ್ಟೆಂಟ್ (ಗು.) ಹೊಂದಿಕೆಯಿಲ್ಲದ ; ಅಸಂಗತ ; ಸಾಮರಸ್ಯವಿಲ್ಲದ ; ಅಸಂಬದ್ಧ ; ಅಸಮಂಜಸ ; ಪೂರ್ವಾಪರ ವಿರುದ್ಧ (*With* ಉಪ. ದೊಡನೆ). (ವಸ್ತು) ಹೊಂದಿಕೆಯಾಗದ ಭಾಗಗಳುಳ್ಳ. ತನ್ನ ತತ್ತ್ವಗಳಿಗೆ ಅಥವಾ ಹಿಂದಿನ ನಡೆವಳಿಕೆಗೆ ವಿರುದ್ಧವಾಗಿ ನಡೆಯುವ ; ಅಸಂಬದ್ಧ ನಡೆವಳಿಯ. **Inconsístency** (ನಾ.) ; **Inconsístently** (ಕ್ರಿ. ವಿ.)

Inconsólable ಇನ್‌ಕನ್ಸೋಲಬ್‌ಲ್ (ಗು.) (ವ್ಯಕ್ತಿ, ಅವನ ದುಃಖ, ಮೊ. ವಿಷಯದಲ್ಲಿ) ಸಮಾಧಾನಗೊಳಿಸಲಾಗದ ; ಸಂತಯಿಸಲಾಗದ. **Inconsólably** (ಕ್ರಿ. ವಿ.)

Incónsonant ಇನ್‌ಕಾನ್ಸೊನಂಟ್ (ಗು.) ಸಾಮರಸ್ಯವಿಲ್ಲದ ; ವಿಸ್ವರ ; ಮೇಳನವಿಲ್ಲದ (*With, to* ಉಪ. ದೊಡನೆ). **Incónsonance** (ನಾ.)

Inconspícuous ಇನ್‌ಕನ್‌ಸ್ಪಿಕ್ಯುಅಸ್ (ಗು.) (ಎದ್ದು) ಕಾಣದ ; ಕಣ್ಣಿಗೆ ಬೀಳದ; ಗಮನ ಸೆಳೆಯದ ; ಅಪ್ರಸಿದ್ಧ. (ಸ. ವಿ. : ಹೂವುಗಳು) ಸಣ್ಣ, ಕಾಂತಿಯಿಲ್ಲದ, ನಿಸ್ತೇಜ, ಮಾಸಲಾದ, ಹಸುರಾದ. **Inconspícuousness** (ನಾ.)

Incónstant ಇನ್‌ಕಾನ್‌ಸ್ಟಂಟ್ (ಗು.) (ವ್ಯಕ್ತಿ) ಚಂಚಲ ; ಚಪಲ (ಚಿತ್ತ); ಒಂದು ಗೊತ್ತಿಲ್ಲದ ; (ಮನಸ್ಸು) ಬದಲಾಯಿಸುವ ; ಏಕ ನಿಷ್ಠೆಯಿಲ್ಲದ ; ಅನಿಯತ; ಅಸ್ಥಿರ. **Incónstancy** (ನಾ.); **Incónstantly** (ಕ್ರಿ. ವಿ.)

Inconsúmable ಇನ್‌ಕನ್‌ಸ್ಯೂಮಬ್‌ಲ್ (ಗು.) ಸುಟ್ಟುಹೋಗದ ; (ಬೆಂಕಿ, ಮೊ. ಗಳಿಂದ) ನಾಶವಾಗದ. (ಅರ್ಥಶಾಸ್ತ್ರ) ಉಪಯೋಗಿಸಿಬಿಡುವ ಉದ್ದೇಶದ್ದಲ್ಲದ ; ಬಳಸಲಲ್ಲದ.

Incontéstable ಇನ್‌ಕಂಟೆಸ್ಟಬ್‌ಲ್ (ಗು.) ವಿವಾದಾಸ್ಪದವಲ್ಲದ ; ನಿರ್ವಿವಾದದ ; ಪ್ರತಿಭಟಿಸಲಾಗದ. **Incontéstably** (ಕ್ರಿ. ವಿ.)

Incóntinent ಇನ್‌ಕಾಂಟಿನೆಂಟ್ (ಗು.) ಇಂದ್ರಿಯನಿಗ್ರಹವಿಲ್ಲದ ; (ಮು., ಕಾಮಾಸಕ್ತಿಯಲ್ಲಿ) ಸಂಯಮವಿಲ್ಲದ. (ಗುಟ್ಟು, ನಾಲಗೆ, ಮೂತ್ರ, ಮೊ. ನ್ನು) ತಡೆದುಕೊಳ್ಳಲಾಗದ, ತನ್ನಲ್ಲಿಯೇ ಇಟ್ಟುಕೊಳ್ಳಲಾಗದ (*Of* ಉಪ. ದೊಡನೆ). **Incóntinence** (ನಾ.) ; **Incóntinently** (ಕ್ರಿ. ವಿ.) ತತ್‌ಕ್ಷಣ ; ಒಡನೆ ; ಕೂಡಲೆ.

Incontrovértible ಇನ್‌ಕಾಂಟ್ರೊವರ್ಟಿಬ್‌ಲ್ (ಗು.) ಪ್ರತಿ ಹೇಳಲಾಗದ ; ನಿರ್ವಿವಾದದ ; ಅಖಂಡ್ಯ. **Incontrovértibly** (ಕ್ರಿ. ವಿ.)

Inconvénience ಇನ್‌ಕನ್ವೀನಿಯೆನ್ಸ್ (ನಾ., ಕ್ರಿ. ಸಕ.) ಸ್ವಂತ ಅನುಕೂಲ್ಯಕ್ಕೆ ಅಥವಾ ಸ್ವಸೌಖ್ಯಕ್ಕೆ ಹೊಂದದಿರುವುದು; ಅನನುಕೂಲ ; ಅಸೌಕರ್ಯ ; ತೊಂದರೆ. (ಒಬ್ಬನಿಗೆ) ಅನನುಕೂಲ ಮಾಡು, ಅಸೌಕರ್ಯಪಡಿಸು. **Inconvénient** (ಗು.) ಅನನುಕೂಲದ ; ಅಸೌಕರ್ಯದ ; ಇಕ್ಕಟ್ಟಿನ ; ತೊಂದರೆಯ. **Inconvéniently** (ಕ್ರಿ. ವಿ.)

Inconvértible ಇನ್‌ಕನ್ವರ್ಟಿಬ್‌ಲ್ (ಗು.) ಮಾರುವೆ ಮಾಡಲಾಗದ ; (ಮು., ಕಾಗದದ ಹಣದ ವಿಷಯದಲ್ಲಿ, ನಾಣ್ಯಕ್ಕೆ) ಪರಿವರ್ತಿಸಲಾಗದ ; ಮುರಿಸಲಾಗದ. **Inconvertibílity** (ನಾ.) ; **Inconvértibly** (ಕ್ರಿ. ವಿ.)

Inconvíncible ಇನ್‌ಕನ್ವಿನ್ಸಿಬ್‌ಲ್ (ಗು.) ಮನಗಾಣಿಸಲಾಗದ ; ಒಪ್ಪಿಸಲಾಗದ ; ವಿಚಾರಕ್ಕೆ ಕೆಂದದ ; ಹಿಡಿ ವಾದದ.

Incoordinátion ಇನ್‌ಕೊಆರ್ಡಿನೇಷನ್ (ನಾ.) ಪರಸ್ಪರ ಜೋಡಣೆಯಿಲ್ಲದಿರುವುದು ; ಸಮ ಯೋಜನೆಯಿಲ್ಲದಿರುವುದು ; ಅಸಮನ್ವಯ.

Incórporate ಇನ್‌ಕಾರ್ಪೊರೆಟ್ (ಗು.), —ರೇಟ್ (ಕ್ರಿ.) ಅನೇಕ ವ್ಯಕ್ತಿಗಳು ಅಥವಾ ಸಂಸ್ಥೆಗಳು ಅಂಗಾಂಗೀ ಭಾವದಿಂದ ಏಕೀಭವಿಸು(ವ) ; ಸಂಘವಾಗಿ ಒಂದುಗೂಡು(ವ) ; ಸಂಘಟಿತವಾದ ; ಸಂಸ್ಥಾ ಬದ್ಧ. (ಕ್ರಿ.) (ಒಂದರಲ್ಲಿ) ಸೇರಿಸು. (ಪರಿಕರಗಳನ್ನು) ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪದಾರ್ಥವಾಗಿ ಒಟ್ಟುಗೂಡಿಸು. (ಕಾನೂನುಬದ್ಧವಾದ) ಸಂಸ್ಥೆಯಾಗಿ ಏರ್ಪಡಿಸು, ಏರ್ಪಡು. **Incorporátion** (ನಾ.) ; **Incórporator** (ನಾ.)

Incorpóreal ಇನ್'ಕಾರ್ಪೋರೀರಿಯಲ್ (ಗು.) ಪದಾರ್ಥದಿಂದಾದುದಲ್ಲದ ; ಅಭೌತ ; ಅಶರೀರಿಯಾದ ; ಅವಾಸ್ತವ ; ಅಮೂರ್ತ ವ್ಯಕ್ತಿಗಳ. (ನ್ಯಾ. ಶಾ.) ತನಗೆ ವಾಸ್ತವಿಕ ಅಸ್ತಿತ್ವವಿಲ್ಲದಿದ್ದರೂ ಒಂದು ಪ್ರತ್ಯಕ್ಷ ವಸ್ತುವಿಗೆ ಹಕ್ಕಾಗಿ ಅಥವಾ ಲಾಭವಾಗಿ ಸಂಬಂಧಪಟ್ಟಿರುವ ; ಅವಾಸ್ತವಿಕ (I. hereditament). **Incorpóreally** (ಕ್ರಿ. ವಿ.) ; **Incorporéity** — ಕಾರ್ಪೊರೀಯಿಟಿ (ನಾ.)

Incorréct ಇನ್'ಕರೆಕ್ಟ್ (ಗು.) ನಿಜ ಸ್ಥಿತಿಗೆ ಅನುಸಾರವಾಗಿಲ್ಲದ ; ಅಯಥಾರ್ಥ. (ಶೈಲಿ, ಮೊ.) ಸರಿಯಲ್ಲದ, ತಪ್ಪಾದ ; ಅಶುದ್ಧ ; ಅಸಾಧು ; ದೋಷಯುಕ್ತ. (ಪುಸ್ತಕದ ವಿಷಯದಲ್ಲಿ, ಮುದ್ರಣಕ್ಕೆ) ಸರಿಯಾಗಿ ತಿದ್ದಿಲ್ಲದ. **Incorréctly** (ಕ್ರಿ. ವಿ.) ; **Incorréctness** (ನಾ.)

Incórrigible ಇನ್'ಕಾರಿಜಿಬ್'ಲ್ (ಗು.) (ವ್ಯಕ್ತಿ, ಅಭ್ಯಾಸ) ತಿದ್ದುವುದಕ್ಕಾಗದ(ಷ್ಟು ಕೆಟ್ಟಿರುವ) ; ತಿದ್ದಲಾಗದ. **Incorrigibílity** (ನಾ.) ; **Incórrigibly** (ಕ್ರಿ. ವಿ.)

Incorrúptible ಇನ್'ಕರಪ್ಟಿಬ್'ಲ್ (ಗು.) ಕೆಟ್ಟುಹೋಗದ ; ಕೆಡಿಸಲಾಗದ ; ಕೆಡದ ; ಅನಶ್ವರ ; ಶಾಶ್ವತ ; ನಿತ್ಯ. ಕೆಟ್ಟ ಮಾರ್ಗಕ್ಕೆ ಬೀಳುವಂತೆ ಮಾಡಲಾಗದ (ಮು., ಲಂಚಕ್ಕೆ ವಶಪಡಿಸಲಾಗದ). **Incorruptibílity** (ನಾ.) ; **Incorrúptibly** (ಕ್ರಿ. ವಿ.) ; **Incorrúption** (ನಾ.) (ಬೈಬಲ್ಲಿನಲ್ಲಿ) ನಶಿಸಿಹೋಗದಿರುವುದು ; ಅಕ್ಷಯತೆ.

Incrássate ಇನ್'ಕ್ರ್ಯಾಸೇಟ್ (ಗು.) (ಸ. ವಿ., ಪ್ರಾ. ವಿ.) ದಪ್ಪವಾಗಿ ಆದ ; ಊದಿಕೊಂಡ.

Incréase ಇನ್'ಕ್ರೀಸ್ (ಕ್ರಿ.), **Íncrease** (ನಾ.) ಹೆಚ್ಚಾಗು ; ದೊಡ್ಡದಾಗು ; ಬೆಳೆ ; ವೃದ್ಧಿಯಾಗು (ಮು., ಸಂತಾನದಲ್ಲಿ) ; (ಗುಣದಲ್ಲಿ, ಯೋಗ್ಯತೆಯಲ್ಲಿ) ಮುಂದುವರಿ ; ಏರು ; ಏಳಿಗೆ ಹೊಂದು (*In* ಉಪ. ದೊಡನೆ). ಹೆಚ್ಚು ದೊಡ್ಡದಾಗಿ ಅಥವಾ ಹೆಚ್ಚು ಸಂಖ್ಯೆಯಾಗುವಂತೆ ಮಾಡು ; ಹೆಚ್ಚಿಸು ; (ಗುಣ) ವೃದ್ಧಿ ಮಾಡು. (ನಾ.) ಬೆಳವಣಿಗೆ ; ಹೆಚ್ಚಿಕೆ ; ವೃದ್ಧಿ ; ದೊಡ್ಡದಾಗುವುದು ; ಸಂಖ್ಯಾವೃದ್ಧಿ. (ಮನುಷ್ಯರ, ಪ್ರಾಣಿಗಳ, ಸಸ್ಯಗಳ) ಸಂತಾನಾಭಿವೃದ್ಧಿ. (On the i. ಹೆಚ್ಚುತ್ತ, ಬೆಳೆಯುತ್ತ). ಹೆಚ್ಚಾದ ಮೊತ್ತ. (ಪ್ರಾಚೀ. ಪ್ರು.) ಬೆಳೆ ; ಫಸಲು. **Increásingly** (ಕ್ರಿ. ವಿ.)

Incrédible ಇನ್'ಕ್ರೆಡಿಬ್'ಲ್ (ಗು.) ನಂಬಲಾಗದ ; ನಂಬಿಕೆಗೆ ಮೀರಿದ ; (ಬಳ. ಮಾ.) ನಂಬಲು ಕಷ್ಟವಾದ ; ಆಶ್ಚರ್ಯಕರವಾದ. **Incredibílity** (ನಾ.) ; **Incrédibly** (ಕ್ರಿ. ವಿ.)

Incrédulous ಇನ್'ಕ್ರೆಡ್ಯುಲಸ್ (ಗು.) ನಂಬದ ; ಸಂಶಯಾತ್ಮಕನಾದ. **Incrédulously** (ಕ್ರಿ. ವಿ.) ; **Incredúlity** — ಕ್ರಿಡ್ಯೂ — (ನಾ.)

Íncrement ಇನ್'ಕ್ರಿಮೆಂಟ್ (ನಾ.) = Increase ; ಹೆಚ್ಚಿದ, ಹೆಚ್ಚುವ, — ಮೊತ್ತ ; ಹೆಚ್ಚು ; ಏರಿಕೆ ; ಲಾಭ ; ಬಡತಿ [Unearned i. (Unearned ನೋಡಿ)]. (ಗಣಿತ) ಒಂದು ಚಲಪರಿಮಾಣವು ಕ್ರಮೇಣ ಹೆಚ್ಚುತ್ತಹೋಗುವ ಅಲ್ಪಮೊತ್ತ ; ಚಲ ಪರಿಮಾಣದ ವೃದ್ಧ್ಯಂಶ.

Incríminate ಇನ್'ಕ್ರಿಮಿನೇಟ್ (ಕ್ರಿ. ಸಕ.) ತಪ್ಪು, ಅಪರಾಧ, — ಹೊರಿಸು ; ಆಪಾದಿಸು ; (—ಕ್ಕೆ) ಗುರಿಮಾಡು. **Incríminatory** (ಗು.)

Incrustátion ಇನ್'ಕ್ರಸ್ಟೇಷನ್ (ನಾ.) ಹೊರಪೊರೆ ಕಟ್ಟುವುದು ; ಹೊರಮೈ ಗಡುಸಾಗುವುದು ; ಗಟ್ಟಿ ಹೊರ ಪದರ. (ಕಟ್ಟಡಕ್ಕೆ ಅಮೃತಶಿಲೆ, ಮೊ. ಗಳ) ಮುಖಗಟ್ಟು. (ರೂಪ.) ಜಡ್ಡುಗಟ್ಟಿದ ಅಭ್ಯಾಸ, ಅಭಿಪ್ರಾಯ. (ಅಭ್ಯಾಸ, ಅಭಿಪ್ರಾಯ) ಜಡ್ಡುಗಟ್ಟಿರುವುದು. ಹೊಕ್ಕು.

Íncubate ಇನ್'ಕ್ಯುಬೇಟ್ (ಕ್ರಿ.) ಮೊಟ್ಟೆಗಳಮೇಲೆ ಕಾವಿಗೆ ಕುಳಿತೊ ಅಥವಾ ಬೇರೆ ವಿಧವಾಗಿಯೊ ಅವನ್ನು ಮರಿಮಾಡು. (ಮೊಟ್ಟೆಗಳ ಮೇಲೆ) ಕಾವಿಗೆ ಕುಳಿತುಕೊ ; ಹೊದಗು. **Incubátion** (ನಾ.) ಕಾವಿಗೆ ಕುಳಿತು (ಮೊಟ್ಟೆಯನ್ನು) ಮರಿಮಾಡುವುದು [Artificial i. ಕೃತಕ ಶಾಖದಿಂದ (ಮೊಟ್ಟೆಗಳನ್ನು) ಮರಿಮಾಡುವುದು]. (ಕ್ರೈಸ್ತ: ಪವಿತ್ರಾತ್ಮದ ವಿಷಯದಲ್ಲಿ) ಧ್ಯಾನಪರನಾಗುವುದು. (ವೈ. ಶಾ.) (ರೋಗವಂಟಿದಮೇಲೆ ಅಥವಾ ರೋಗ ನಿವಾರಣೆಯ ಔಷಧವನ್ನು ದೇಹದೊಳಕ್ಕೆ ಚುಚ್ಚಿ ಸೇರಿಸಿದಮೇಲೆ) ರೋಗದ ಪ್ರಥಮ ಚಿಹ್ನೆಗಳು ಕಾಣಿಸಿಕೊಳ್ಳುವುದಕ್ಕೆ ಮೊದಲು ರೋಗದ ಜೀವಾಣುಗಳು ಹೊಂದುವ ಪರಿಣಾಮ ; ಪರಿಪಾಕಾವಸ್ಥೆ ; ರೋಗ ಒಳಗೆ ಹೊಮ್ಮುವುದು. **Íncubative** (ಗು.) ; **Íncubatory** (ಗು.) (ಮು.) ರೋಗದ ಪರಿಪಾಕಾವಸ್ಥೆಗೆ ಸಂಬಂಧಪಟ್ಟ. **Íncubator** (ನಾ.) ಹಕ್ಕಿಯ ಮೊಟ್ಟೆಗಳಿಂದ ಮರಿಮಾಡುವುದು, ಕಾಲಕ್ಕೆ ಮೊದಲು ಹುಟ್ಟಿದ ಮಕ್ಕಳನ್ನು ಬೆಳೆಸುವುದು, ಏಕಾಣು ಜೀವಿಗಳನ್ನು ಅಭಿವೃದ್ಧಿ ಪಡಿಸುವುದು, — ಈ ಕೆಲಸಗಳಿಗೆ ಉಪಯೋಗಿಸುವ ಕೃತಕ ಶಾಖೋಪಕರಣ . ಕಾವುಪೆಟ್ಟಿಗೆ.

Íncubus ಇನ್'ಕ್ಯುಬಸ್ (ನಾ.) ನಿದ್ದೆ ಮಾಡುತ್ತಿರುವವರನ್ನು ಮೆಟ್ಟಿಕೊಳ್ಳುವುದೆಂದು ಭಾವನೆಯಿರುವ ಗಾಳಿ, ದೆವ್ವ : ಸ್ವಪ್ನಪಿಶಾಚಿ ; ಸ್ವಪ್ನಪಿಶಾಚಿಯಂತೆ ಪೀಡಿಸುವ ಮನುಷ್ಯ ಅಥವಾ ವಿಷಯ.

Ínculcate ಇನ್'ಕಲ್ಕೇಟ್ (ಕ್ರಿ. ಸಕ.) (ವಿಷಯ, ಪದ್ಧತಿ, ಭಾವ, ಮೊ. ನ್ನು ಒಬ್ಬನಿಗೆ, ಮನಸ್ಸಿಗೆ ಹತ್ತುವಂತೆ) ಒತ್ತಿ ಹೇಳು, ಪದೇ ಪದೇ ಹೇಳು, ಬೋಧಿಸು. **Inculcátion** (ನಾ.) ; **Ínculcator** (ನಾ.)

Ínculpate ಇನ್'ಕಲ್ಪೇಟ್ (ಕ್ರಿ. ಸಕ.) ದೋಷಾರೋಪಣೆ ಮಾಡು ; ತಪ್ಪು ಹೊರಿಸು ; ದೂರು. **Inculpátion** (ನಾ.) ; **Incúlpatory** (ಗು.)

Incúlt ಇನ್'ಕಲ್ಟ್ (ಗು.) ಉತ್ತಿರದ ; ಬೇಸಾಯ ಮಾಡದ. ಒರಟಾದ ; ನಯವಿಲ್ಲದ ; (ಮನುಷ್ಯ, ನಡೆವಳಿ) ಅಸಂಸ್ಕೃತ ; ಅನಾಗರಿಕ.

Incúmbent[1] ಇನ್'ಕಂಬೆಂಟ್ (ನಾ.) (ಕ್ರೈಸ್ತ) ಮಠದ ದತ್ತಿಯನ್ನು ಅನುಭವಿಸುತ್ತಿರುವವನು. (ವಿಶ. ಪ್ರ.) ಯಾವುದಾದರೂ ಅಧಿಕಾರದಲ್ಲಿರುವವನು ; ಸ್ಥಾನಿಕ. **Incúmbency** (ನಾ.) ಸ್ಥಾನಿಕನ ಅಧಿಕಾರ ; ಅಧಿಕಾರ — ಕಾಲ, ವ್ಯಾಪ್ತಿ, ಕ್ಷೇತ್ರ.

Incúmbent[2] ಇನ್'ಕಂಬೆಂಟ್ (ಗು.) ಮೇಲೆ ಬಿದ್ದಿರುವ ; ಮೇಲೆ ಒತ್ತುತ್ತಿರುವ ; ಭಾರ ಬಿದ್ದಿರುವ (*On* ಉಪ. ದೊಡನೆ). (ಒಬ್ಬನ) ಕರ್ತವ್ಯವಾಗಿರುವ ; (ಒಬ್ಬನು) ಮಾಡಬೇಕಾದ (*On*, *upon* ಉಪ. ದೊಡನೆ ; It is i. on you to warn them ಅವರಿಗೆ ಎಚ್ಚರಿಕೆ ಕೊಡಬೇಕಾದದ್ದು ನಿನ್ನ ಕರ್ತವ್ಯ)

Incunábula (L) ಇನ್'ಕ್ಯುನ್ಯಾಬ್ಯುಲ (ನಾ., ಬ. ವ.) (ಒಂದರ) ಆರಂಭದಶೆ, ಪ್ರಥಮಾವಸ್ಥೆ. ಮುದ್ರಣ ಕಂಡುಹಿಡಿದ ಹೊಸದರಲ್ಲಿ (ಮು., ಕ್ರಿ. ೧೫೦೦ಕ್ಕೆ ಮೊದಲು) ಮುದ್ರಿಸಿದ ಪುಸ್ತಕಗಳು [ಏ. ವ. (-um) ದಲ್ಲಿ ಸಹ]

Incúr ಇನ್'ಕರ್ (ಕ್ರಿ. ಸಕ.) (ಅಪಾಯ, ನಿಂದೆ, ಶಿಕ್ಷೆ, ವೆಚ್ಚ, ಮೊ. ಕ್ಕೆ) ಈಡಾಗು, ಪಕ್ಕಾಗು, ಗುರಿಯಾಗು ; (— ಮೊ. ನ್ನು) ಮೇಲೆ ತಂದುಕೊ, ಎಳೆದುಕೊ.

Incúrable ಇನ್'ಕ್ಯೂರಬ್'ಲ್ (ಗು., ನಾ.) (ರೋಗ) ವಾಸಿಮಾಡಲಾಗದ ; ಗುಣವಾಗದ ; (ರೋಗ) ವಾಸಿಯಾಗದವನು ; ವಾಸಿಯಾಗದ ರೋಗದಿಂದ ನರಳುತ್ತಿರುವವನು. (ರೂಪ.) ಸರಿಪಡಿಸಲಾಗದ ; ತಿದ್ದಲಾಗದ. **Incurabílity** (ನಾ.) ; **Incúrableness** (ನಾ.) ; **Incúrably** (ಕ್ರಿ. ವಿ.)

Incúrious ಇನ್'ಕ್ಯೂರಿಯಸ್ (ಗು.) ಕೌತುಕವಿಲ್ಲದ ; ಕುತೂಹಲವಿಲ್ಲದ ; ಗಮನವಿಲ್ಲದ ; ನಿರ್ಲಕ್ಷ್ಯ ; ಗಮನಾರ್ಹವಲ್ಲದ ; ಸ್ವಾರಸ್ಯವಿಲ್ಲದ [ಸಾ., Not i. (ಸ್ವಾರಸ್ಯವಿಲ್ಲದೆ ಇಲ್ಲ) ಎಂಬಲ್ಲಿ]. **Incúriously** (ಕ್ರಿ. ವಿ.) ; **Incuriósity** — ಯಾ — (ನಾ.)

Incúrsion ಇನ್'ಕರ್ಷನ್ (ನಾ.) (ಶತ್ರುಗಳ) ದಾಳಿ ; ಥಟ್ಟನೆ ಮೇಲೆ ಬೀಳುವುದು. **Incúrsive** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Incúrve ಇನ್‌ಕರ್ವ್ (ಕ್ರಿ. ಸಕ.) ವಕ್ರಾಕೃತಿಯಾಗುವಂತೆ ಬಗ್ಗಿಸು ; ಒಳ(ಗಡೆಗೆ) ಬಾಗಿಸು (ಮು., ಥೂ. ಕ್ರಿ. ನಲ್ಲಿ). **Incurvátion** (ನಾ.)

Incus (L) ಇಂಕಸ್ (ನಾ.) ಕಿವಿಯೊಳಗಿರುವ, (ಧ್ವನಿ ಕಂಪನಗಳನ್ನು ಸಾಗಿಸುವ, ಕಮ್ಮಾರನ ಅಡಿಗಲ್ಲಿನಾಕಾರದ) ಒಂದು (ಸಣ್ಣ) ಎಲುಬು.

Incúse ಇನ್‌ಕ್ಯೂಸ್ (ಗು., ನಾ., ಕ್ರಿ. ಸಕ.) (ನಾಣ್ಯ, ಮೊ. ಗಳ ಮೇಲಿನ ಮುದ್ರಣದ ವಿಷಯದಲ್ಲಿ) ಒಳ ಬಡಿದು ಅಥವಾ ಮುದ್ರೆಯೊತ್ತಿ ಮಾಡಿದ. (ನಾ.) ಹೀಗೆ ಒತ್ತಿದ ಮುದ್ರೆ. (ಕ್ರಿ. ; ಮು., ಥೂ. ಕ್ರಿ. ನಲ್ಲಿ) (ಚಿತ್ರ, ಮೊ. ನ್ನು) ಮುದ್ರೆ ಬಡಿದು ಒತ್ತು ; (ನಾಣ್ಯ, ಮೊ. ಗಳ ಮೇಲೆ) (ಬಡಿದು) ಚಿತ್ರವೊತ್ತು.

Ind ಇಂಡ್ (ನಾ.) (ಪ್ರಾಚೀ. ಪ್ರ., ಕಾವ್ಯ) ಇಂಡಿಯ.

Indébted ಇಂಡೆಟೆಡ್ (ಗು.) (ಒಬ್ಬನಿಗೆ ಹಣ) ಸಾಲ ತೀರಿಸಬೇಕಾದ ; ಋಣಿಯಾದ ; ಸಾಲ ಮಾಡಿದ. (ಒಬ್ಬನಿಗೆ, ಒಂದಕ್ಕೆ, ಒಂದಕ್ಕಾಗಿ) ಕೃತಜ್ಞತೆ ತೋರಿಸಬೇಕಾದ ; ಉಪಕೃತನಾದ (*To* person, thing, *for* benefit, etc.). **Indébtedness** (ನಾ.)

Indécent ಇಂಡೀಸೆಂಟ್ (ಗು.) ಯೋಗ್ಯವಲ್ಲದ ; ತಗದ ; ಮರ್ಯಾದೆ ಗೆಟ್ಟ ; ಅಯುಕ್ತ ; ನಾಚಿಕೆಯಿಲ್ಲದ ; ಅಸಭ್ಯ ; ಅಶ್ಲೀಲ ; ಬಂಡು ; ಥಂಡ. **Indécency** (ನಾ.) ; **Indécently** (ಕ್ರಿ. ವಿ.)

Indecíduous ಇಂಡಿಸಿಡ್ಯುಅಸ್ (ಗು.) (ಸ. ವಿ.) ಕಾಲ ಕಾಲಕ್ಕೆ ಎಲೆ ಉದುರಿಹೋಗದ ; ನಿತ್ಯ ಹಸುರಿನ.

Indecípherable ಇಂಡಿಸೈಫರಬ್‌ಲ್ (ಗು.) (ಗುಪ್ತಲಿಪಿ, ತೊಡಕು ಬರವಣಿಗೆ, ಮೊ.) ಅರ್ಥ ಬಿಡಿಸಲಾಗದ, ಓದಲಾಗದ, ತಿಳಿಯಲಾಗದ.

Indecísion ಇಂಡಿಸಿಷನ್ (ನಾ.) ನಿರ್ಧಾರವಿಲ್ಲದಿರುವುದು; ಅನಿರ್ಧಾರ; ನಿರ್ಣಯಕ್ಕೆ ಬಾರದಿರುವುದು ; ದೃಢ ಮನಸ್ಸಿಲ್ಲದಿರುವುದು ; ಸಂದಿಗ್ಧತೆ. **Indecísive** —ಸೈಸಿವ್ (ಗು.) ; **Indecísively** (ಕ್ರಿ. ವಿ.) ; **Indecísiveness** (ನಾ.)

Indeclínable ಇಂಡಿಕ್ಲೈನಬ್‌ಲ್ (ಗು., ನಾ.) ವಿಭಕ್ತಿ ರೂಪಗಳಿಲ್ಲದ ; ವಿಭಕ್ತಿ ಪ್ರತ್ಯಯಗಳಿಲ್ಲದ. (ನಾ.) ಅವ್ಯಯ.

Indecompósable ಇಂಡೀಕಂಪೋಸಬ್‌ಲ್ (ಗು.) ಘಟಕಗಳಾಗಿ ಒಡೆಯಲಾಗದ ; ಪೃಥಕ್ಕರಿಸಲಾಗದ ; ಅವಿಶ್ಲೇಷ್ಯ.

Indecórous ಇಂಡಿಕೋರಸ್, **Indécorous** ಇಂಡೆಕೊರಸ್ (ಗು.) ತಗದ ; ಯೋಗ್ಯವಲ್ಲದ ; ಮರ್ಯಾದೆಗೆಟ್ಟ ; ಅನುಚಿತ ; ಅಸಭ್ಯ. **Indecórously** (ಕ್ರಿ. ವಿ.); **Indecórousness** (ನಾ.) ; **Indecórum** — ಡಿಕೋ — (ನಾ.) ಅನೌಚಿತ್ಯ ; ಅಮರ್ಯಾದೆ ; ಯೋಗ್ಯವಲ್ಲದ ನಡೆವಳಿ.

Indeéd ಇಂಡೀಡ್ (ಕ್ರಿ. ವಿ.) ದಿಟವಾಗಿ ; ಸತ್ಯವಾಗಿ ; ನಿಶ್ಚಯವಾಗಿ ; ವಾಸ್ತವವಾಗಿ. He was i. a remarkable man ಅವನು ನಿಶ್ಚಯವಾಗಿಯೂ ಅಸಾಧಾರಣವಾದ ಮನುಷ್ಯ. I shall be very glad i. ನಿಜವಾಗಿ ನನಗೆ ತುಂಬ ಸಂತೋಷ. No i. ! ಇಲ್ಲವೇ ಇಲ್ಲ ! Who is this Mr. Smith ? —Who is he i. ! ಆತನು ಯಾರೆಂದು ಕೇಳುವೆಯಲ್ಲಾ ! ನೀನು ಕೇಳುವುದು ಸರಿಯೆ ? There are i. exceptions ವಿನಾಯಿತಿಗಳಿರುವುದೇನೊ ನಿಜ. Indeed ! ನಿಜವಾಗಿ ! ಹಾಗೆಯೇ ! ಹಾಗೋ ! (ವ್ಯಂಗ್ಯಾರ್ಥದಲ್ಲಿ, ತಿರಸ್ಕಾರ ಸೂಚಕವಾಗಿ, ನಂಬದೆ)

Indefátigable ಇಂಡಿಫ್ಯಾಟಿಗಬ್‌ಲ್ (ಗು.) (ವ್ಯಕ್ತಿಗಳು, ಗುಣಗಳು, ಮೊ. ವಿಷಯದಲ್ಲಿ) ಬಳಲಿಸಲಾಗದ ; ಆಯಾಸವರಿಯದ ; ದಣಿಯದ ; ಅವಿಶ್ರಾಂತ. **Indefatigabílity** (ನಾ.) ; **Indefátigably** (ಕ್ರಿ. ವಿ.)

Indefeásible ಇಂಡಿಫೀಸಿಬ್‌ಲ್ (ಗು.) ದಂಡವಾಗಿ ಕಿತ್ತುಕೊಳ್ಳಲಾಗದ ; ಇಲ್ಲದಂತೆ ಮಾಡಲಾಗದ ; ರದ್ದುಮಾಡಲಾಗದ (I. right). **Indefeasibílity** (ನಾ.) ; **Indefeásibly** (ಕ್ರಿ. ವಿ.)

Indeféctible ಇಂಡಿಫೆಕ್ಟಿಬ್‌ಲ್ (ಗು.) ಎಂದಿಗೂ ತಪ್ಪದ ; ಕುಂದದ ; ಕೆಟ್ಟುಹೋಗದ ; ಅಳಿದುಹೋಗದ ; ಅಕ್ಷಯ ; ನಿಷ್ಕಳಂಕ ; ಕುಂದಿಲ್ಲದ.

Indefénsible ಇಂಡಿಫೆನ್ಸಿಬ್‌ಲ್ (ಗು.) (ಶಸ್ತ್ರಬಲದಿಂದ) ರಕ್ಷಿಸಲಾಗದ ; (ವಾದಬಲದಿಂದ) ಸಮರ್ಥಿಸಲಾಗದ. **Indefensibílity** (ನಾ.) ; **Indefénsibly** (ಕ್ರಿ. ವಿ.)

Indefínable ಇಂಡಿಫೈನಬ್‌ಲ್ (ಗು.) ಲಕ್ಷಣ ನಿರೂಪಿಸಲಾಗದ ; ವಿವರಿಸಲಾಗದ. **Indefínably** (ಕ್ರಿ. ವಿ.)

Indéfinite ಇಂಡೆಫಿನಿಟ್ (ಗು.) ಒಂದೂ ಗೊತ್ತಿಲ್ಲದ ; ಅನಿರ್ದಿಷ್ಟ ; ಅನಿಶ್ಚಿತ ; ಅಸ್ಪಷ್ಟ ; ಅಪರಿಮಿತ. (ವ್ಯಾ.) (ಗುಣವಾಚಕ, ಸರ್ವನಾಮ, ಮೊ.) ಕಾಲ, ಪುರುಷ, ಮೊ. ವನ್ನು ನಿರ್ದೇಶಿಸದ ; ಅನಿರ್ದೇಶಕ [I. article (ಅನಿರ್ದೇಶಕ ಗುಣವಾಚಿ) : A, An]. (ಕ್ರಿಯಾ ಕಾಲ ವಿಷಯದಲ್ಲಿ) ಕ್ರಿಯೆ ನಡೆಯುತ್ತಿದೆಯೊ ಮುಗಿಯಿತೊ ಎಂಬುದನ್ನು ನಿರ್ದೇಶಿಸದ. **Indéfinitely** (ಕ್ರಿ. ವಿ.) ; **Indéfiniteness** (ನಾ.) ; **Indefínitude** — ಡಿ — (ನಾ.) ಅನಿರ್ದಿಷ್ಟ ಸ್ಥಿತಿ.

Indehíscent ಇಂಡಿಹಿಸೆಂಟ್ (ಗು.) (ಸ. ವಿ.) (ಬೀಜಕೋಶ) ಬಾಯಿ ಬಿಡದ ; ಬಿರಿಯದ.

Indélible ಇಂಡೆಲಿಬ್‌ಲ್ (ಗು.) (ಗುರುತು, ಕಲೆ, ಮಸಿ, ಮೊ. ವಿಷಯದಲ್ಲಿ, ಮತ್ತು ರೂಪಕವಾಗಿ ಅಪಮಾನ, ಮೊ. ವಿಷಯದಲ್ಲಿ) ಅಳಿಸಲಾಗದ, ತೊಡೆದುಹೋಗದ. **Indelibílity** (ನಾ.) ; **Indélibly** (ಕ್ರಿ. ವಿ.)

Indélicate ಇಂಡೆಲಿಕೆಟ್ (ಗು.) ನಯವಿಲ್ಲದ ; ಒರಟಾದ ; ಅಸಂಸ್ಕೃತ ; ಗಾಂಭೀರ್ಯವಿಲ್ಲದ ; ಲಜ್ಜಾ ಹೀನ ; ಔಚಿತ್ಯವರಿಯದ. **Indélicately** (ಕ್ರಿ. ವಿ.) ; **Indélicacy** — ಕ — (ನಾ.)

Indémnify ಇಂಡೆಮ್ನಿಫೈ (ಕ್ರಿ. ಸಕ.) (ಒಬ್ಬನಿಗೆ ಕೇಡು ಅಥವಾ ನಷ್ಟ ಆಗದಂತೆ) ಕಾಪಾಡು, ರಕ್ಷಣೆ ಕೊಡು, ಭದ್ರಪಡಿಸು (*From, against* ಉಪ. ದೊಡನೆ). (ಒಬ್ಬನಿಗೆ) ಕಾನೂನಿನ ಮೇರೆಗೆ ಜವಾಬ್ದಾರಿ ಹೊರದಂತೆ ಭದ್ರಪಡಿಸು (*For* ಉಪ. ದೊಡನೆ) ; ನಿರ್ಬಾಧಿತ ಮಾಡು. (ನಷ್ಟ, ಇಟ್ಟ ಖರ್ಚು, ಮೊ. ಕ್ಕಾಗಿ ಒಬ್ಬನಿಗೆ) ಪರಿಹಾರ ಕೊಡು. **Indemnificátion** (ನಾ.) ; **Indémnity** ಇಂಡೆಮ್ನಿಟಿ (ನಾ.) (ಕೆಡುಕು ಅಥವಾ ನಷ್ಟ ಆಗದಂತೆ) ರಕ್ಷಣೆ (ಕೊಡುವುದು) ; ಭದ್ರಪಡಿಸುವುದು ; ನಷ್ಟ ಪರಿಹಾರ. (ನ್ಯಾ. ಶಾ.) ತೆರಬೇಕಾದ ದಂಡ, ಮೊ. ಗಳಿಂದ ವಿನಾಯಿತಿ (Act of I.). ಪಟ್ಟ ನಷ್ಟಕ್ಕೆ ಪರಿಹಾರ ; ಇದಕ್ಕಾಗಿ ಕೊಟ್ಟ ಮೊತ್ತ (ಮು., ಯುದ್ಧದಲ್ಲಿ ಗೆದ್ದವನು ಸೋತವನೊಡನೆ ರಾಜಿ ಮಾಡಿಕೊಳ್ಳಲು ಒತ್ತಾಯದಿಂದ ಪಡೆಯುವ ಹಣ)

Indémnity. **Indemnify** ನೋಡಿ.

Indemónstrable ಇಂಡಿಮಾನ್‌ಸ್ಟ್ರಬ್‌ಲ್ (ಗು.) (ಮು., ಸ್ವತಸ್ಸಿದ್ಧವಾದ ಸತ್ಯಾಂಶಗಳನ್ನು) ಪ್ರಮಾಣೀಕರಿಸಲಾಗದ, ಋಜುವಾತು ಮಾಡಲಾಗದ, ನಿದರ್ಶಿಸಲಾಗದ.

Indént ಇಂಡೆಂಟ್ (ಕ್ರಿ.), (ನಾ.) (**Índent** ಸಹ) (ಒಂದರಲ್ಲಿ) ಹಲ್ಲಿನಂಥ ಕಚ್ಚುಗಳನ್ನು ಮಾಡು ; (ಗುರುತು, ಮೊ. ನ್ನು ಒಂದರಲ್ಲಿ) ಒತ್ತು, ನೆಡು, ಥಾಪಿಸು. (ಸಮುದ್ರತೀರ, ಮೊ. ಗಳಲ್ಲಿ) ದೂರ ಹೋಗುವ ಒಳಚಾಚುಗಳಾಗು, —ಗಳನ್ನು ಮಾಡು. (ದುಪ್ರತಿಯಾಗಿ ಬರೆದ ದಸ್ತೈವಜನ್ನು) ಕೋಚು ಕೋಚಾಗಿರುವಂತೆ (ಎರಡಾಗಿ) ಕತ್ತರಿಸು ; (ದಸ್ತೈವಜನ್ನು) ಕರಾರುವಾಕಾದ ದುಪ್ರತಿಮಾಡು. (ಮುದ್ರಣ) ಬೇರೆ ಪರಿಚ್ಛೇದವನ್ನು ಆರಂಭಮಾಡುವಾಗ ಮೊದಲ ಪಂಕ್ತಿಯನ್ನು ಮುದ್ರಣದ ಅಂಚಿನಿಂದ ಸ್ವಲ್ಪ ಒಳಕ್ಕೆ ತಳ್ಳು. ಯಾವುದಾದರೂ ಪದಾರ್ಥ ಬೇಕೆಂದು (ಒಬ್ಬನಿಗೆ) ಕೋರಿಕೆ ಕಳುಹಿಸು (ಸಾ., ಬರಹದಲ್ಲಿ, ದುಪ್ರತಿಯಾಗಿ) (*Upon* person *for* thing) ; (ಬೇಕಾದ ಸಾಮಾನಿಗೆ) ಕೋರಿಕೆಪತ್ರ ಕಳುಹಿಸು. (ನಾ.) ಕಚ್ಚು ಕಚ್ಚಾಗಿರುವುದು ; ಕಚ್ಚು ಕಚ್ಚಾಗಿ ಕತ್ತರಿಸಿದ ದಸ್ತೈವಜಿನ ದುಪ್ರತಿ. ಬೇಕಾಗಿರುವ ಸಾಮಾನಿಗೆ ಅಧಿಕಾರದ ಕೋರಿಕೆಯ ಪತ್ರ ; ಸರಕಿಗಾಗಿ (ಸಾ., ಪರದೇಶಕ್ಕೆ) ಕಳುಹಿಸಿದ ಕೋರಿಕೆಯ ಪತ್ರ. (Índent) ಕಚ್ಚು ; ಹಳ್ಳ ; ತಗ್ಗು. **Indentátion** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಚ್ಚು ಕಚ್ಚು ಮಾಡುವುದು ; — ಆಗಿರುವುದು ; ಕತ್ತರಿಕೆ ; ಕಚ್ಚು ; ಕ್ರಕಚ ರೇಖೆ ; ಕೋಡು ಕೋಡು. ಸಮುದ್ರ ತೀರ, ಮೊ. ಗಳಲ್ಲಿ ದೂರ ಹೋಗುವ ಒಳಚಾಚು. **Indéntion** (ನಾ.) ಮುದ್ರಣದಲ್ಲಿ ಪಂಕ್ತಿಯ ಒಳಚಾಚು ; = Indentation. **Indénture** — ಟ್ಯುರ್, — ಚರ್ (ನಾ., ಕ್ರಿ. ಸಕ.) ಕೋಡು ಕೋಡಾಗಿ ಕತ್ತರಿಸಿದ ದಸ್ತೈವಜು. ಮುದ್ರೆಯೊತ್ತಿ ಪರಿಷ್ಕರಿಸಿದ ಕರಾರು ಅಥವಾ ಒಪ್ಪಂದ (ಮು., ಉಮೇದುವಾರನನ್ನು ಅವನ ಯಜಮಾನನಿಗೆ ಬಂಧಿಸುವಂಥದು) ; (Take up one's indentures ಸೇವೆಯ ಉದ್ಯೋಗ ಮುಗಿದಮೇಲೆ ಕರಾರು ದಸ್ತೈವಜನ್ನು ಹಿಂದಕ್ಕೆ ಪಡೆ). ಪಟ್ಟಿ, ಪ್ರಮಾಣ ಪತ್ರ, ಮೊ. ವು. = Indentation. (ಕ್ರಿ.) ಪರಿಷ್ಕರಿಸಿದ ಕರಾರಿನಿಂದ (ಒಬ್ಬನನ್ನು) ಬದ್ಧಗೊಳಿಸು (ಮು., ಉಮೇದುವಾರನನ್ನಾಗಿ)

Indénture, etc. **Indent** ನೋಡಿ.

Indepéndence, -ency ಇಂಡಿಪೆಂಡೆನ್ಸ್, — ಡೆನ್ಸಿ (ನಾ.) (-ce) ಅಪರಾಧೀನತೆ ; ಸ್ವಾತಂತ್ರ್ಯ (*On, of* ಉಪ. ದೊಡನೆ ಸಹ) ; ಸ್ವತಂತ್ರ ವರಮಾನ. (-cy) = Congregationalism ; (-cy) ಸ್ವತಂತ್ರ ರಾಷ್ಟ್ರ. [I. (-ce)day (ಅಮೆ. ಸಂ.) ೧೭೭೬ನೆಯ ಇಸವಿಯಲ್ಲಿ ಸ್ವಾತಂತ್ರ್ಯ ಸಾರಿದ ದಿನ (ಜುಲೈ ೪ನೆಯ ತಾರೀಖು)]. **Indepéndent** (ಗು., ನಾ.) (ಒಬ್ಬನ ಅಧಿಕಾರಕ್ಕೆ) ಅಧೀನವಲ್ಲದ ; ಸ್ವತಂತ್ರ (*Of* ಉಪ. ದೊಡನೆ ಸಹ). (ಕ್ರೈಸ್ತ) ಸ್ಥಳ ಸಭಾ ಪದ್ಧತಿಯ, ಸ್ಥಳೀಯ ಸಭಾಧಿಕಾರದ. (ದೃಢತೆ, ಕಾರ್ಯ ದಕ್ಷತೆ, ಮೊ. ಕ್ಕಾಗಿ) ಮತ್ತೊಂದನ್ನು ಅವಲಂಬಿಸಿರದ ; ಸ್ವಾವಲಂಬಿ (I. proof). ಹೊಟ್ಟೆಪಾಡಿಗಾಗಿ ದುಡಿಯಬೇಕಾಗಿಲ್ಲದ [I. income (ದುಡಿಯಬೇಕಾಗಿಲ್ಲದ) ಸ್ವತಂತ್ರ ವರಮಾನ]. ಇತರರಿಂದ ಉಪಕಾರ ಪಡೆಯಲು ಇಷ್ಟವಿಲ್ಲದ ; ಇತರರ ಋಣವನ್ನೊಲ್ಲದ. (ನಾ.) (ರಾಜ್ಯತಂತ್ರ, ಮೊ. ಗಳಲ್ಲಿ ಯಾವ ಪಕ್ಷಕ್ಕೂ ಸೇರದ) ಸ್ವತಂತ್ರ ವರ್ತಿ. = Congregationalist. (ವೃತ್ತಪತ್ರಿಕೆಯ ಹೆಸರಾಗಿ) : *New York* I., ಮೊ. ವು. **Indepéndently** (ಕ್ರಿ. ವಿ.)

Indescribable ಇಂಡಿಸ್ಕ್ರೈಬಬ್‌ಲ್ (ಗು.) ಅಸ್ಪಷ್ಟ ಭಾವದ; ಅನಿರ್ದಿಷ್ಟ ; (ಬಹು ದೊಡ್ಡದಾಗಿ, ಬಹಳ ರಮಣೀಯವಾಗಿ, ಕೇವಲ ಕೆಟ್ಟದ್ದಾಗಿ — ಇರುವುದರಿಂದ) ವರ್ಣನಾತೀತ, ವಿವರಿಸಲಾಗದ. **Indescribabílity** (ನಾ.) ; **Indescríbably** (ಕ್ರಿ. ವಿ.)

Indestrúctible ಇಂಡಿಸ್ಟ್ರಕ್ಟಿಬ್‌ಲ್ (ಗು.) ನಾಶ ಮಾಡಲಾಗದ ; ಅವಿನಾಶಿ ; ಅಕ್ಷಯ. **Indestructibílity** (ನಾ.) ; **Indestrúctibly** (ಕ್ರಿ. ವಿ.)

Indetérminable ಇಂಡಿಟರ್ಮಿನಬ್‌ಲ್ (ಗು.) ಗೊತ್ತುಪಡಿಸಲಾಗದ ; ಕಂಡುಹಿಡಿಯಲಾಗದ. (ವ್ಯಾಜ್ಯ, ಮೊ.) ತೀರ್ಮಾನಿಸಲಾಗದ, ಪರಿಹರಿಸಲಾಗದ. **Indetérminate** — ನೆಟ್ (ಗು.) (ವಿಸ್ತಾರ, ನಡತೆ, ಮೊ.) ಒಂದು ಗೊತ್ತಿಲ್ಲದ, ಅನಿರ್ದಿಷ್ಟ ; ಸಂದಿಗ್ಧ ; ಸಂಶಯಾತ್ಮಕ [I. sentence ಕೈದಿಯ ಒಳ್ಳೆಯ ನಡತೆಯಮೇಲೆ ಶಿಕ್ಷೆಯ ಕಾಲವನ್ನು ಕಡಮೆಮಾಡುವ ನಿಯಮಕ್ಕೊಳಪಡಿಸಿ (ನ್ಯಾಯಾಧಿಪತಿ) ಮಾಡುವ ದಂಡಾಜ್ಞೆ : ಅನಿಷ್ಕೃಷ್ಟ ದಂಡಾಜ್ಞೆ. I. vowel ಅಸ್ಪಷ್ಟ ಸ್ವರ (*A*go, mom*e*nt, cous*i*n, cert*ai*n, ಮೊ. ಗಳಲ್ಲಿಯಂತೆ)]. (ಗಣಿತ : ಪರಿಮಾಣಗಳ ವಿಷಯದಲ್ಲಿ) ನಿರ್ದಿಷ್ಟ ಮೂಲ್ಯವಿಲ್ಲದ. **Indetérminately** (ಕ್ರಿ. ವಿ.) ; **Indetérminateness** (ನಾ.) ; **Indeterminátion** (ನಾ.) ಅನಿರ್ಣಯ(ತೆ) ; ಅನಿರ್ಧಾರ ; ಸಂದಿಗ್ಧತೆ. **Indetérminism** (ನಾ.) ಮನುಷ್ಯನ ಕಾರ್ಯಗಳು ಕೇವಲ ಉದ್ದೇಶಾಧೀನವಾಗಿರದೆ ಸ್ವಲ್ಪ ಮಟ್ಟಿಗೆ ಸ್ವತಂತ್ರವಾದುವೆಂಬ ತತ್ತ್ವ. **Indetérminist** (ನಾ.)

Index ಇಂಡೆಕ್ಸ್ [ನಾ., (ಬ. ವ. -exes, -ices — ಡಿಸೀಸ್) ; ಕ್ರಿ. ಸಕ.] ತೋರುಬೆರಳು ; ತರ್ಜನಿ. (ಯಂತ್ರ ಸಲಕರಣೆಗಳಲ್ಲಿ) (ಅಳತೆ, ಮೊ. ನ್ನು ತೋರಿಸುವ) ಸೂಚಿ. ಮಾರ್ಗದರ್ಶಕ (ಸೂತ್ರ). (ಸಾ., ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ) ಗ್ರಂಥವಿಷಯ, ಮೊ. ಗಳ ಅಕಾರಾದಿ ಸೂಚಿ ; ಅಕಾರಾದಿ. [(ರೋ. ಕ್ಯಾ.) The I. ರೋ. ಕ್ಯಾ. ಮತೀಯರು ಓದಬಾರದೆಂದು ನಿಷೇಧಿಸಿರುವ, ಅಥವಾ ನಿಷಿದ್ಧ ಭಾಗಗಳನ್ನು ತೆಗೆದುಹಾಕಿ ಪರಿಷ್ಕರಿಸಿರುವ ಪುಸ್ತಕಗಳನ್ನು ಮಾತ್ರ ಓದಲು ಅಪ್ಪಣೆಯಿರುವ, ಗ್ರಂಥಗಳ ಪಟ್ಟಿ (ಪೂರ್ಣ ರೂಪ : I. librorum prohibitorum). I. expurgatorius ನಿಷಿದ್ಧ ಭಾಗಗಳನ್ನು ತೆಗೆದುಹಾಕಿದಲ್ಲಿ ಆ ಗ್ರಂಥಗಳನ್ನು ಓದಬಹುದೆಂದು ಅಪ್ಪಣೆಯಿರುವ ಪುಸ್ತಕಗಳಲ್ಲಿ ತೆಗೆದುಹಾಕಬೇಕಾದ ನಿಷಿದ್ಧ ಭಾಗಗಳ ಪಟ್ಟಿ]. I. number [ಯಾವುದಾದರೂ ಒಂದು ಗೊತ್ತಾದ ದಿನದಲ್ಲಿ ಬೆಲೆಗಳ ಅಥವಾ ಕೂಲಿಗಳ ಪರಿಮಿತಿಯನ್ನು ಮಾನಪ್ರಮಾಣವಾಗಿಟ್ಟುಕೊಂಡ ಒಂದು ಕಾಲದ (೧೦೦ ಎಂದು ಸಂಕೇತವಾಗಿಟ್ಟುಕೊಂಡ) ಮಟ್ಟದೊಡನೆ ಹೋಲಿಸಿ ತೋರಿಸುವ ಸೂಚ್ಯಂಕ]. (ಬೀ. ಗ.) ಘಾತ (ಸೂಚಿ). (ಕ್ರಿ. ಸಕ.) (ಪುಸ್ತಕಕ್ಕೆ) ಅಕಾರಾದಿ ಕೊಡು; (ಪದ, ಮೊ. ನ್ನು) ಅಕಾರಾದಿಯಲ್ಲಿ ಸೇರಿಸು. **Índexless** (ಗು.)

India ಇಂಡಿಯ (ನಾ.) ಇಂಡಿಯಾ ದೇಶ ; ಹಿಂದೂಸ್ಥಾನ ; ಭರತ ಖಂಡ. Further I. ಇಂಡಿಯಾಕ್ಕೂ ಚೀನಾಕ್ಕೂ ಮಧ್ಯೇ ಇರುವ ದೇಶ. I. Office ಇಂಡಿಯಾ ದೇಶದ ಆಡಳಿತ ನಡಸುವ, ಲಂಡನ್ನಿನಲ್ಲಿರುವ ಬ್ರಿಟಿಷ್ ಸರ್ಕಾರದ ಇಲಾಖೆ : ಇಂಡಿಯಾ ಇಲಾಖೆ. I. paper ಕೆತ್ತನೆಯ ಚಿತ್ರಗಳ ಕರಡುಮುದ್ರಣಕ್ಕಾಗಿ ಉಪಯೋಗಿಸುವ, ಮೆತುವಾಗಿಯೂ ದ್ರವ ಹೀರುವುದಾಗಿಯೂ ಇರುವ, ಚೀನದಿಂದ ತರಿಸುವ, ಒಂದು ತೆರದ ಕಾಗದ. Oxford I. paper ತೆಳುವಾಗಿಯೂ ನಾರಾಗಿಯೂ ಅಪಾರದರ್ಶಕವಾಗಿಯೂ ಇರುವ ಒಂದು ತೆರದ ಮುದ್ರಣ ಕಾಗದ. I. proof ಇಂಡಿಯಾ ಕಾಗದದಮೇಲೆ ತೆಗೆದ ಕರಡು ಮುದ್ರಣ. **Indiaman** ಇಂಡಿಯಾದೊಡನೆ ವ್ಯಾಪಾರ ನಡಸುತ್ತಿರುವ ಹಡಗು. **Indiarubber** ಬಂಡಿಗಾಲಿಗಳ ಪಟ್ಟಿಗಳಿಗಾಗಿಯೂ ಸೀಸದ ಕಡ್ಡಿಯ ಬರವಣಿಗೆಯನ್ನು ಅಳಿಸುವುದಕ್ಕಾಗಿಯೂ ಉಪಯೋಗಿಸುವ ಪದಾರ್ಥ (ಕೆಲವು ಜಾತಿಯ ಗಿಡಗಳ ಹಾಲು ಹೆಪ್ಪುಕೊಂಡು ಆಗಿರುವುದು) : ಇಂಡಿಯಾ ರಬ್ಬರು. **Indian** (ಗು., ನಾ.) ಇಂಡಿಯಾ ದೇಶದ(ವನು) ; ಭಾರತೀಯ ; ಅಮೆರಿಕದ ಮತ್ತು ವೆಸ್ಟ್ ಇಂಡೀಸ್ ಪ್ರದೇಶದ ಮೂಲ ನಿವಾಸಿಗಳ(ಲ್ಲೊಬ್ಬನು) ; ಹಿಂದೆ ಇಂಡಿಯಾದಲ್ಲಿ ವಾಸವಾಗಿದ್ದ ಐರೋಪ್ಯನು (ಮು., ಇಂಗ್ಲಿಷಿನವನು). Red I. ಉ. ಅಮೆರಿಕದ ಮೂಲ ನಿವಾಸಿ ಕುಲದವನು. I. civilian : Indian Civil Service ಎಂಬ ಉದ್ಯೋಗ ಖಾತೆಯ ಅಧಿಕಾರಿ. I. club (ಅಂಗಸಾಧನೆಯಲ್ಲಿ ಉಪಯೋಗಿಸುವ ಸೀಸೆಯ ಆಕಾರದ) ಕೊಂತ ; ಕರೇಲ. I. corn ಮುಸುಕಿನ ಜೋಳ. I. file ಒಂದೇ ಸಾಲು. India(n) ink (ಚೀನಾ ಮತ್ತು ಜಪಾನಿನಲ್ಲಿ ತಯಾರಿಸುವ) ಕಪ್ಪು ಮಸಿ (ಗಟ್ಟಿ). I. meal ಮುಸುಕಿನ ಜೋಳದ ಹಿಟ್ಟು. I. summer ಉ. ಅಮೆ. ಸಂ. ಗಳಲ್ಲಿ ಶರತ್ಕಾಲದ ಕೊನೆಯ ಭಾಗದಲ್ಲಿ ಕಾಣಬರುವ ಮಬ್ಬಾದ, ನಿರಾರ್ದ್ರ, ಪ್ರಶಾಂತ, ವಾಯುಸ್ಥಿತಿ. I. weed ತಂಬಾಕು ; ಹೊಗೆಯ ಸೊಪ್ಪು. **Índianize** (ಕ್ರಿ. ಸಕ.) ; **Indianizátion** (ನಾ.) (ರೀತಿಯಲ್ಲಿ ಅಥವಾ ರಚನೆಯಲ್ಲಿ) ಇಂಡಿಯದ್ದಾಗಿ ಮಾಡುವುದು.

Índicate ಇಂಡಿಕೇಟ್ (ಕ್ರಿ. ಸಕ.) ತೋರಿಸು ; ತಿಳಿಸು ; ಸೂಚಿಸು. (ವೈ. ಶಾ.) (ಚಿಕಿತ್ಸೆಯನ್ನು) ಸೂಚಿಸು, ಸಂಕ್ಷೇಪವಾಗಿ ಹೇಳು. ಗುರುತು, ಲಕ್ಷಣ, ತೋರಿಕೆ, — ಆಗಿರು [Indicated horse-power (ಸಂಕ್ಷಿಪ್ತ : i.h.p.) ಯಂತ್ರಕಾರ್ಯ ನಿರ್ದೇಶಕವು ಸೂಚಿಸಿದ ಅಶ್ವಸಾಮರ್ಥ್ಯ]. **Indicátion** (ನಾ.) ; **Indícative** — ಕಟಿವ್ (ಗು., ನಾ.) (ವ್ಯಾ.) ಒಂದು ವಿಷಯವನ್ನು ನಡೆದದ್ದೆಂದು, ನಿಶ್ಚಯಾಂಶವೆಂದು, ಹೇಳುವ (ಹೇಳುವವನ ಅಭಿಪ್ರಾಯ, ಅಭಿಲಾಷೆ, ಎಂದಲ್ಲ). ನಿರ್ದೇಶಕ ; ಸೂಚನೆ ಕೊಡುವ (*Of* ಉಪ. ದೊಡನೆ) (Índicative — ಕೇ — ಎಂಬ ರೂಪ ಸಹ). (ನಾ.) ನಿರ್ದೇಶಾರ್ಥ (= I. mood). **Indícatively** (ಕ್ರಿ. ವಿ.) ; **Índicator** — ಕೇ — (ನಾ.) ತೋರಿಸುವ, ನಿರ್ದೇಶಿಸುವ, — ವ್ಯಕ್ತಿ, ವಸ್ತು (ಮು., ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಂತ್ರಸಲಕರಣೆ, ವೊ. ಗಳಿಗೆ ಸೇರಿಸಿರುವ ಕಾರ್ಯಸೂಚಿ). **Indicatory** — ಕ(ಕೇ) — (ಗು.)

Indíct ಇಂಡೈಟ್ (ಕ್ರಿ. ಸಕ.) (ಒಬ್ಬನಮೇಲೆ ದೊಂಬಿ, ವೊ. ಕ್ಕಾಗಿ ಕಾನೂನನುಸರಿಸಿ) ತಪ್ಪು ಹೊರಿಸು, ದೋಷಾರೋಪಣೆ ಮಾಡು (*For* riot, *as* a rioter, *on* charge). **Indíctable** (ಗು.) ತಪ್ಪು ಹೊರಿಸಬಹುದಾದ ; ಆಪಾದನೆ ಮಾಡಬಹುದಾದ. **Indíction** ಇಂಡಿಕ್‌ಷನ್ (ನಾ.) ಹದಿನೈದು ವರ್ಷ ಕಾಲದ ಒಂದು ಕಾಲಚಕ್ರ (ರೋಮನ್ ಚಕ್ರಾಧಿಪತ್ಯದ ಹಣಕಾಸಿನ ವ್ಯವಸ್ಥೆಯ ಕಾಲಮಾನ). ಪ್ರತಿ ಹದಿನೈದು ವರ್ಷ ಕಾಲದ ಆರಂಭದಲ್ಲಿಯೂ ರೋಮನ್ ಚಕ್ರವರ್ತಿಗಳು ವಿಧಿಸುತ್ತಿದ್ದ ಆಸ್ತಿಕಂದಾಯದ ವಿಧಾನ ; ಈ ಕಂದಾಯ. ಸಾರುವುದು ; ಪ್ರಕಟನೆ. **Indíctment** ಇಂಡೈಟ್‌ಮೆಂಟ್ (ನಾ.) (ನ್ಯಾ. ಶಾ.) ವಿಧಿವತ್ತಾಗಿ ತಪ್ಪು ಹೊರಿಸುವುದು ; ಕ್ರಮಬದ್ಧ ಆಪಾದನೆ ; ಆಪಾದನ ಪತ್ರ. Bill of i. ನ್ಯಾಯದರ್ಶಿಗಳಿಗೆ ಒಪ್ಪಿಸಿದ ಲಿಖಿತ ಆಪಾದನಪತ್ರ.

Índies ಇಂಡಿ(ೀ)ಸ್ (ನಾ., ಬ. ವ.) ಇಂಡಿಯ ಮತ್ತು ಅದರ ಆಚೆಯ ದೇಶ ಮತ್ತು ದ್ವೀಪಗಳು (=East I.). West I. ಮೆಕ್ಸಿಕೊ ಕೊಲ್ಲಿಯ ಮುಖದಲ್ಲಿರುವ ದ್ವೀಪ ಸಮುದಾಯ.

Indífference ಇಂಡಿಫೆರೆನ್ಸ್ (ನಾ.) ಆಸಕ್ತಿ ಅಥವಾ ಗಮನ ಇಲ್ಲದಿರುವುದು (*To, towards* ಉಪ. ದೊಡನೆ ಸಹ) ; ಔದಾಸೀನ್ಯ ; ಅನಾದರ ; ಉಪೇಕ್ಷೆ ; ತಾತ್ಸಾರ ; ಅಸಡ್ಡೆ ; ಅಪ್ರಾಮುಖ್ಯತೆ [ಮು., A matter of i. (ಅಪ್ರಾಮುಖ್ಯ ವಿಷಯ) ಎಂಬಲ್ಲಿ]. **Indífferency** (ನಾ.) ; **Indífferent** (ಗು., ನಾ.) ಪಕ್ಷಪಾತವಿಲ್ಲದ; ಯಾವ ಕಡೆಗೂ ಒಲವಿಲ್ಲದ ; ಉದಾಸೀನ ಭಾವದ ; ತಾಟಸ್ಥ್ಯ ಭಾವದ. ಒಳ್ಳೆಯದೂ ಅಲ್ಲದ ಕೆಟ್ಟದ್ದೂ ಅಲ್ಲದ; ಸುಮಾರಾದ ; ಸಾಮಾನ್ಯವಾಗಿ ಕೆಟ್ಟ ; ಕೆಟ್ಟದ್ದೆಂದು ಹೇಳಬಹುದಾದ (ಮು., Very i. ಎಂಬಲ್ಲಿ). (ರಾಸಾಯನಿಕ, ವಿದ್ಯುತ್, ಅಥವಾ ಕಾಂತ, —ಲಕ್ಷಣದಲ್ಲಿ) ಯಾವ ಕಡೆಗೂ ಸೇರದ, ತಟಸ್ಥವಾದ. ಅಪ್ರಧಾನವಾದ (*To* ಉಪ. ದೊಡನೆ). (ನಾ.) (ಮು., ಮತವಿಷಯದಲ್ಲಾಗಲಿ ರಾಜಕೀಯ ವಿಷಯದಲ್ಲಾಗಲಿ) ಯಾವ ಪಕ್ಷವನ್ನೂ ಸೇರದವನು ; ತಟಸ್ಥ. **Indífferently** (ಕ್ರಿ. ವಿ.) ; **Indífferentism** (ನಾ.) (ಮು., ಮತವಿಷಯಗಳಲ್ಲಿ) ಉದಾಸೀನ ಭಾವ, ತಾಟಸ್ಥ್ಯ. **Indífferentist** (ನಾ.)

Índigene. Indigenous ನೋಡಿ.

Indígenous ಇಂಡಿಜಿನಸ್ (ಗು.) ಸ್ಥಳಜನ್ಯ. (ಭೂಮಿ, ವೊ. ಕ್ಕೆ) ಸ್ವಾಭಾವಿಕ(ವಾಗಿ ಸಂಬಂಧಪಟ್ಟ) (*To* ಉಪ. ದೊಡನೆ) (ರೂಪ. ಸಹ). **Indígenously** (ಕ್ರಿ. ವಿ.) ; **Índigene** — ಜೀನ್ (ನಾ.) ಸ್ಥಳೀಯ.

Índigent ಇಂಡಿಜೆಂಟ್ (ಗು.) ಬಡವನಾದ; ದರಿದ್ರ. **Índigence** (ನಾ.) ಬಡತನ ; ದಾರಿದ್ರ್ಯ.

Indigéstion ಇಂಡಿಜೆಸ್ಚ್ಯನ್, —ಸ್ಚನ್ (ನಾ.) ಆಹಾರ ಜೀರ್ಣವಾಗದಿರುವುದು ; ಅಜೀರ್ಣ ; ಅಜೀರ್ಣ ರೋಗ (ರೂಪ. ಸಹ). **Indigésted** — ಡಿ(ಡೈ) — (ಗು.) (ಜೀರ್ಣಕೋಶದಲ್ಲಿ ಸರಿಯಾಗಿ) ಜೀರ್ಣವಾಗಿಲ್ಲದ, ಅರಗಿಲ್ಲದ. ಆಕಾರವಿಲ್ಲದ ; ರೂಪ ರಹಿತ ; ಅಣಿಮಾಡಿಲ್ಲದ ; ಅವ್ಯವಸ್ಥಿತ ; ಸರಿಯಾಗಿ ಯೋಚಿಸಿಲ್ಲದ. **Indigéstible** (ಗು.) ಜೀರ್ಣವಾಗದ (ರೂಪ. ಸಹ). **Indigestibílity** (ನಾ.) **Indigéstive** (ಗು.) ಅಜೀರ್ಣದಿಂದ ನರಳುತ್ತಿರುವ; ಅಜೀರ್ಣ ಮಾಡುವ.

Indígn ಇಂಡೈನ್ (ಗು.) (ಪ್ರಾಚೀ. ಪ್ರ.) ಅಯೋಗ್ಯ ; ತಗದ ; ಅಪಮಾನಕರವಾದ.

Indígnant ಇಂಡಿಗ್ನಂಟ್ (ಗು.) ಕೋಪವೂ ಧಿಕ್ಕಾರವೂ ಕೂಡಿದ, ಅಥವಾ ಅನ್ಯಾಯವಾದುದಕ್ಕಾಗಿ ರೇಗುವ, ಮನೋಭಾವವುಳ್ಳ ; ಧರ್ಮಕ್ರೋಧವುಳ್ಳ ; ಕೋಪಗೊಂಡ ; ರೇಗಿದ ; ಕೆರಳಿದ (*At* thing, *with* person). **Indígnantly** (ಕ್ರಿ. ವಿ.) ; **Indignátion** (ನಾ.) (ನೀಚತನ, ಅನ್ಯಾಯ, ಕೆಡುಕು ಅಥವಾ ದುರ್ನಡತೆ — ಇವುಗಳಿಂದ ಕೆರಳಿದ) ಕೋಪ, ರೇಗು, ರೋಷ. I. meeting ಸಾರ್ವಜನಿಕ ಕೋಪಸೂಚಕ ಸಭೆ.

Indígnity ಇಂಡಿಗ್ನಿಟಿ (ನಾ.) ಅಯೋಗ್ಯವಾದ ನಡೆವಳಿ, ನಡತೆ ; ಇಳಿಕೆ ; ತಿರಸ್ಕಾರ ; ಉಪೇಕ್ಷೆ ; ಅವಮಾನ ; ಕಡೆಗಣಿಕೆ.

Índigo ಇಂಡಿಗೊ (ನಾ.) (ಒಂದು ಸಸ್ಯಜಾತಿಯಿಂದ ತೆಗೆದ, ಬಣ್ಣವಾಗಿ ಉಪಯೋಗಿಸುವ) ನೀಲಿಯ ಪುಡಿ ; ನೀಲಿ. I. blue ನೀಲಿಯಊದ. I. white ನೀಲಿಯಲ್ಲಿಯ ಆಮ್ಲಜನಕವನ್ನು ತೆಗೆದುಹಾಕಿ ಉಳಿದ ಸ್ಫಟಿಕಾಕೃತಿಯ ಬಿಳಿಯ ಪುಡಿ. **Indigótic** — ಗಾಟಿಕ್ (ಗು.) ನೀಲಿಯ ; ನೀಲಿಯಿಂದಾದ.

Indiréct ಇಂಡಿ(ಡೈ)ರೆಕ್ಟ್ (ಗು.) (ದಾರಿ, ವೊ.) ನೇರವಾಗಿಲ್ಲದ, ಬಳಸಾದ, ಸೊಟ್ಟ ; ವಿಷಯಕ್ಕೆ ನೇರವಾಗಿ ಹೋಗದ. (ಅರ್ಥಶಾಸ್ತ್ರ: ತೆರಿಗೆಗಳ ವಿಚಾರದಲ್ಲಿ) ನೇರವಲ್ಲದ, ಪರೋಕ್ಷ (ತೆರಿಗೆ ಹಾಕಿದ ಸರಕಿಗೆ ಅದನ್ನುಪಯೋಗಿಸುವವನು ಹೆಚ್ಚುಬೆಲೆಯ ರೂಪದಲ್ಲಿ ಕೊಡುವಂಥದು). [(ವ್ಯಾ.) I. speech ಒಬ್ಬನು ಹೇಳಿದುದನ್ನು ಮತ್ತೊಬ್ಬನು ತನ್ನಂತೆ ರೂಪು ಮಾರ್ಪಡಿಸಿ ಹೇಳುವ ಹೇಳಿಕೆ : ಪರೋಕ್ತಿ. I. object ಗೌಣ ಕರ್ಮಪದ (ಉದಾ., ಪುಸ್ತಕವನ್ನು ಅವನಿಗೆ ಕೊಡು. I. passive ಗೌಣ ಕರ್ಮಣಿ (I was told it)]. ನೇರವಾಗಿ ಉದ್ದೇಶಿಸದ, ಗುರಿಯಿಡದ, ಪಡೆಯದ (I. result ನೇರವಾಗಿ ಪಡೆಯದ ಫಲ ; ಪರೋಕ್ಷ ಪರಿಣಾಮ). **Indiréctly** (ಕ್ರಿ. ವಿ.) ; **Indiréctness** (ನಾ.) ; **Indiréction** (ನಾ.) (ಕಾರ್ಯದಲ್ಲಿ) ಸುತ್ತು ಮಾರ್ಗ, ನೇರವಿಲ್ಲದಿರುವುದು (By i.) ; ಮೋಸ ; ಕೃತ್ರಿಮ.

Indiscérnible ಇಂಡಿಸರ್ನಿಬ್'ಲ್ (ಗು., ನಾ.) ವಿವೇಚಿಸಲಾಗದ ; —ಲಾಗದ್ದು ; ಮತ್ತೊಂದರಿಂದ ಭೇದ ತಿಳಿಯಲಾಗದ ; —ಲಾಗದ್ದು ; ತಿಳಿಯಲಾಗದ್ದು. Identity of indiscernibles ' ಎಲ್ಲ ವಿಷಯಗಳಲ್ಲೂ ಒಂದೇ ಸಮವಾಗಿರುವ ವಸ್ತುಗಳು ಎರಡು ಇರಲಾರವು ; ಏಕೆಂದರೆ, ಅವು ಸರ್ವ ಸಮವಾಗಿರುವ ಪಕ್ಷಕ್ಕೆ ಎರಡೂ ಒಂದೇ ಆಗಿರಬೇಕು ' —ಹೀಗೆಂಬ ವಾದ. **Indiscérnibly** (ಕ್ರಿ. ವಿ.)

Indiscérptible ಇಂಡಿಸರ್ಪ್ಟಿಬ್'ಲ್ (ಗು.) ಲಯವಾಗದ ; ಭಾಗಗಳಾಗಿ ಒಡೆದು ನಾಶಹೊಂದದ. **Indiscerptibílity** (ನಾ.)

Indíscipline ಇಂಡಿಸಿಪ್ಲಿನ್ (ನಾ.) ಅಂಕೆಯಿಲ್ಲದಿರುವುದು ; ಕಟ್ಟಿಲ್ಲದ್ದು ; ಅಶಿಕ್ಷೆ ; ಶಿಸ್ತಿಲ್ಲದಿರುವುದು. **Indísciplinable** (ಗು.)

Indiscreét ಇಂಡಿಸ್ಕ್ರೀಟ್ (ಗು.) ವಿವೇಚನೆಯಿಲ್ಲದ; ಅಚಾತುರ್ಯದ ; ಜೋಕೆಯಿಂದಿಲ್ಲದ ; ಎಚ್ಚರ ತಪ್ಪಿದ. **Indiscreétly** (ಕ್ರಿ. ವಿ.) ; **Indiscrétion** ಇಂಡಿಸ್ಕ್ರೆಷನ್ (ನಾ.) (ಗುಣವಾಚಕಾರ್ಥಗಳಲ್ಲಿ) ; ಸರ್ಕಾರದ ಗುಟ್ಟು, ವೊ. ನ್ನು ಅಕಸ್ಮಾತ್ತಾಗಿ, ಅವಿಚಾರತೆಯಿಂದ, ಬಹಿರಂಗ ಪಡಿಸುವುದು ; (Calculated i. ಅಕಸ್ಮಾತ್ತೆಂದು ತೋರುವಂತೆ ಏರ್ಪಡಿಸಿ ಉದ್ದೇಶಪೂರ್ವಕವಾಗಿ ಸರ್ಕಾರದ ಗುಟ್ಟು, ವೊ. ನ್ನು ಬಹಿರಂಗ ಪಡಿಸುವುದು). ಸಮಾಜ ನೀತಿಯನ್ನು ಅತಿಕ್ರಮಿಸುವುದು ; ಅನೌಚಿತ್ಯ.

Indíscrete ಇಂಡಿಸ್ಕ್ರೀಟ್ (ಗು.) ಬೇರೆ ಬೇರೆ, ಪೃಥಕ್ಕಾದ, ಭಾಗಗಳಿಲ್ಲದ ; ಅಖಂಡ.

Indiscríminate ಇಂಡಿಸ್ಕ್ರಿಮಿನೆಟ್ (ಗು.) ಗೊತ್ತುಗುರಿಯಿಲ್ಲದ ; ತಾರತಮ್ಯ ಜ್ಞಾನವಿಲ್ಲದ ; ವ್ಯತ್ಯಾಸ ನೋಡದ ; ಗಲಿಬಿಲಿಯಾದ. **Indiscríminately** (ಕ್ರಿ. ವಿ.) ; **Indiscríminateness** (ನಾ.) ; **Indiscriminátion** (ನಾ.) ; **Indiscríminative** (ಗು.)

Indispénsable ಇಂಡಿಸ್ಪೆನ್ಸಬ್'ಲ್ (ಗು.) ಇಲ್ಲದಿದ್ದರೆ ನಿರ್ವಹಿಸಲಾಗದ ; ಅವಶ್ಯವಾದ ; (ನ್ಯಾಯ, ಕರ್ತವ್ಯ, ವೊ.) ಬಿಡಲಾಗದ, ಕಡೆಗಣಿಸಲಾಗದ. **Indispensabílity** (ನಾ.) ; **Indispénsableness** (ನಾ.) ; **Indispénsably** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Indispóse ಇಂಡಿಸ್ಪೋಸ್ (ಕ್ರಿ. ಸಕ.) ಅಸಮರ್ಥವಾಗಿ ಅಥವಾ ಅಶಕ್ತವಾಗಿ ಮಾಡು (*For* thing, *to* do). ವಿಮುಖವಾಗಿ ಮಾಡು ; ಒಲವಿಲ್ಲದಂತೆ ಮಾಡು ; ಬೇಡವಾಗು (*Towards, from, to* ಉಪ. ದೊಡನೆ). ಅಸ್ವಸ್ಥ ಮಾಡು ; —ವಾಗಿರು ; ಆರೋಗ್ಯ ಕೆಡಿಸು ; —ಕೆಡು. **Indisposítion** (ನಾ.) ಇರಿಸು ಮುರಿಸು ; ದೇಹಾಲಸ್ಯ ; ಅಸ್ವಸ್ಥತೆ ; ಜಡ್ಡು (ಮು., ಬೇಗ ವಾಸಿಯಾಗುವಂಥದು). ಒಲವಿಲ್ಲದಿರುವುದು ; ಮನಸ್ಸಿಲ್ಲದಿರುವುದು (*To* thing, *to* do) ; ವಿಮುಖತೆ (*To, towards* ಉಪ. ದೊಡನೆ)

Indísputable ಇಂಡಿಸ್ಪ್ಯುಟಬ್‌ಲ್, **Indispútable** —ಸ್ಪ್ಯೂ— (ಗು.) ವಾದಕ್ಕೆಡೆಯಿಲ್ಲದ ; ನಿರ್ವಿವಾದದ ; ಚರ್ಚೆಗವಕಾಶವಿಲ್ಲದ. **Indisputabílity** (ನಾ.) ; **Indísputableness** (ನಾ.) ; **Indísputably** (ಕ್ರಿ. ವಿ.)

Indíssoluble ಇಂಡಿಸ(ಸೊ)ಲ್ಯುಬ್‌ಲ್, **Indissóluble** —ಸಾ— (ಗು.) ಕರಗದ ; ಲೀನವಾಗದ. ಒಡೆಯಲಾಗದ ; ಸ್ಥಿರವಾದ ; ದೃಢವಾದ (An i. bond ವಿಚ್ಛೇದವಾಗದ ಬಂಧ ; ಒಡೆಯಲಾಗದ ಕಟ್ಟು). **Indissolubílity** (ನಾ.) ; **Indíssolubly** (ಕ್ರಿ. ವಿ.)

Indistínct ಇಂಡಿಸ್ಟಿಂಕ್ಟ್ (ಗು.) ಅಸ್ಪಷ್ಟ ; ಅಸ್ಫುಟ ; ಮಸುಕು ಮಸುಕಾದ. **Indistínctly** (ಕ್ರಿ. ವಿ.) ; **Indistínctness** (ನಾ.) ; **Indistínctive** (ಗು.) ವಿಶೇಷ ಗುಣವಿಲ್ಲದ ; ವಿಶಿಷ್ಟತೆಯಿಲ್ಲದ **Indistínctively** (ಕ್ರಿ. ವಿ.)

Indistínguishable ಇಂಡಿಸ್ಟಿಂಗ್ವಿಷಬ್‌ಲ್ (ಗು.) ವ್ಯತ್ಯಾಸ ತೋರದ ; ಅಭಿನ್ನ. **Indistínguishably** (ಕ್ರಿ. ವಿ.)

Indistríbutable ಇಂಡಿಸ್ಟ್ರಿಬ್ಯುಟಬ್‌ಲ್ (ಗು.) ಹಂಚಲಾಗದ.

Indíte ಇಂಡೈಟ್ (ಕ್ರಿ. ಸಕ.) (ಕವಿತೆ, ಭಾಷಣ, ಮೊ. ನ್ನು) ರಚಿಸು. (ಸಾ., ಹಾಸ್ಯವಾಗಿ ; ಕಾಗದಪತ್ರ, ಮೊ. ನ್ನು) ಬರೆ.

Indivértible ಇಂಡಿವರ್ಟಿಬ್‌ಲ್ (ಗು.) ಬೇರೆಕಡೆಗೆ ಹಾಯಿಸಲಾಗದ, ತಿರುಗಿಸಲಾಗದ. **Indivértibly** (ಕ್ರಿ. ವಿ.)

Indivídual ಇಂಡಿವಿಡ್ಯುಅಲ್ (ಗು., ನಾ.) ಒಂದು ; ಒಬ್ಬ ; ಏಕ ; ಒಂದು ಗೊತ್ತಾದ ; ವೈಶಿಷ್ಟ್ಯದ (ಸಾಮಾನ್ಯದ್ದಲ್ಲದ) ; ಸ್ವಂತ. ಪ್ರತ್ಯೇಕ ಲಕ್ಷಣವುಳ್ಳ ; ವ್ಯಕ್ತಿ ವೈಲಕ್ಷಣ್ಯದ ; ವೈಯಕ್ತಿಕ. ಒಂದು ತರಗತಿಯ ವ್ಯಕ್ತಿ ; ಮನುಷ್ಯವ್ಯಕ್ತಿ (ಸಮಾಜ, ಕುಟುಂಬ, ಮೊ. ಅಲ್ಲ). (ಗ್ರಾಮ್ಯ) ಆಳು, ಆಸಾಮಿ. **Indivídualism** (ನಾ.) ವ್ಯಕ್ತಿಭಾವ ; ಅಹಂಭಾವ. (ಸಮಾಜ ಶಾಸ್ತ್ರ) ವ್ಯಕ್ತಿಸ್ವಾತಂತ್ರ್ಯ ತತ್ತ್ವ ; ವ್ಯಕ್ತಿವಾದ. **Indivídualist** (ನಾ.) ವ್ಯಕ್ತಿ(ಸ್ವಾತಂತ್ರ್ಯ) ವಾದಿ. **Individualístic** (ಗು.); **Individuálity** (ನಾ.) ವ್ಯಕ್ತಿತ್ವ ; ಪ್ರತ್ಯೇಕ ಅಸ್ತಿತ್ವ ; ವ್ಯಕ್ತಿ ಲಕ್ಷಣ (ಮು., ಎದ್ದುಕಾಣುತ್ತಿರುವ ಸಂದರ್ಭದಲ್ಲಿ) ; ಸ್ವಕೀಯತೆ. (ಬ. ವ. ದಲ್ಲಿ) ವೈಯಕ್ತಿಕ ಅಭಿರುಚಿ, ಮೊ. ವು. **Indivídualize** (ಕ್ರಿ. ಸಕ.) (—ಕ್ಕೆ) ವ್ಯಕ್ತಿಲಕ್ಷಣ ಕೊಡು. ನಿರ್ದಿಷ್ಟವಾಗಿ ಹೇಳು. **Individualizátion** (ನಾ.) ; **Indivídually** (ಕ್ರಿ. ವಿ.) ವ್ಯಕ್ತಿಭಾವದಲ್ಲಿ ; ವೈಯಕ್ತಿಕವಾಗಿ ; ವ್ಯಕ್ತಿಶಃ ; ವೈಶಿಷ್ಟ್ಯ ಸೂಚಕ ರೀತಿಯಲ್ಲಿ. ಒಬ್ಬೊಬ್ಬರಾಗಿ ; ಒಂದೊಂದಾಗಿ (ಒಟ್ಟಿಗಲ್ಲ). I. different ವಂಶ ಒಂದೇ ಆದರೂ ವ್ಯಕ್ತಿವ್ಯತ್ಯಾಸಗಳುಳ್ಳ. **Indivíduate** (ಕ್ರಿ. ಸಕ.) = Individualize. **Individuátion** (ನಾ.)

Indivísible ಇಂಡಿವಿಸಿಬ್‌ಲ್ (ಗು., ನಾ.) ಭಾಗಿಸಲಾಗದ ; ಅವಿಭಾಜ್ಯ. (ನಾ.) ಅತ್ಯಲ್ಪ ಪ್ರಮಾಣದ, —ಕಣ, ಮೊತ್ತ ; ಲವ ; ಲೇಶ ; ಅಣು. **Indivisibílity** (ನಾ.) ; **Indivísibly** (ಕ್ರಿ. ವಿ.)

Indo- ಇಂಡೊ— (ಸ. ಪೂ. ಪ.) ಇಂಡಿಯದ ; ಹಿಂದೂ—. **-Aryan** ಹಿಂದೂ ಆರ್ಯ. **-Chinese** ಹಿಂದೂ ಚೀನದ. **-European, -Germanic** ಯೂರೋಪು ಮತ್ತು ಏಷ್ಯಾ ಖಂಡಗಳ ಬಹು ಭಾಗಗಳಲ್ಲಿ, ಉ. ಇಂಡಿಯಾದ ವರೆಗೂ, ಬಳಕೆಯಲ್ಲಿರುವ ಭಾಷೆಗಳನ್ನೊಳಕೊಂಡ ಭಾಷಾ ವರ್ಗದ : ಇಂಡೊ ಯೂರೋಪಿಯನ್, ಇಂಡೊ ಜರ್ಮ್ಯಾನಿಕ್, ಭಾಷಾ ವರ್ಗದ. **Indonésian** —ನೀಷ(ಷಿಯ)ನ್ (ಗು.) ಈಸ್ಟ್ ಇಂಡಿಯಾ ದ್ವೀಪಗಳ.

Indócile ಇಂಡೋಸೈಲ್, ಇಂಡಾಸಿ(ಸೈ)ಲ್ (ಗು.) ತಿದ್ದಲಾಗದ ; ಅಂಕೆಗೊಳಪಡದ ; ಹೇಳಿದಂತೆ ಕೇಳದ. **Indocílity** ಇಂಡೊಸಿಲಿಟಿ (ನಾ.)

Índolent ಇಂಡೊಲೆಂಟ್ (ಗು.) ಸೋಮಾರಿಯಾದ ; ಆಲಸತೆಯ ; ಪಾಲುಮಾರಿಕೆಯ ; ಮೈಗಳ್ಳತನದ. (ವೈ. ಶಾ.) ನೋವು ಕೊಡದ (I. tumour). **Índolence** (ನಾ.) ; **Índolently** (ಕ್ರಿ. ವಿ.)

Indómitable ಇಂಡಾಮಿಟಬ್‌ಲ್ (ಗು.) ಬಗ್ಗದ ; ಸಗ್ಗದ ; ಹಿಡಿದ ಪಟ್ಟು ಬಿಡದ ; ಅದಮ್ಯ. **Indómitably** (ಕ್ರಿ. ವಿ.)

Índoor ಇಂಡೋರ್ (ಗು.) ಮನೆಯೊಳಗಿನ (I. games ಮನೆಯೊಳಗೆ ಆಡುವ ಆಟಗಳು). ನಿರಾಶ್ರಿತರಿಗಾಗಿ ಏರ್ಪಡಿಸಿರುವ ಕೆಲಸದ ಮನೆಯೊಳಗಿನ (I. relief). **Indoórs** —ರ್ಸ್ (ಕ್ರಿ. ವಿ.) ಮನೆಯೊಳಗೆ (ಮೊದಲಿನ ರೂಪ Within doors)

Indorsátion ಇಂಡಾರ್ಸೇಷನ್ (ನಾ.) = Endorsement. **Indorseé** ಇಂಡಾರ್ಸೀ (ನಾ.) ಪತ್ರ, ಹುಂಡಿ, ಮೊ. ನ್ನು ಯಾರ ಹೆಸರಿಗೆ ವರ್ಗಾಯಿಸಿದೆಯೊ ಅವನು : ವರ್ಗದಾರ.

Índraught, -draft ಇಂಡ್ರಾಫ್ಟ್ (ನಾ.) ಒಳಸೆಳೆದುಕೊಳ್ಳುವುದು ; ಒಳಸೆಳೆತ ; (ಪ್ರವಾಹದ) ಒಳಹರಿತ.

Índri ಇಂಡ್ರಿ (ನಾ.) (ಮಡಗಾಸ್ಕರಿನ) ಕಾಡುಪಾಪ.

Indúbitable ಇಂಡ್ಯೂಬಿಟಬ್‌ಲ್ (ಗು.) ನಿಸ್ಸಂದೇಹವಾದ ; ನಿಸ್ಸಂಶಯವಾದ ; ಅಸಂದಿಗ್ಧ. **Indúbitably** (ಕ್ರಿ. ವಿ.)

Indúce ಇಂಡ್ಯೂಸ್ (ಕ್ರಿ. ಸಕ.) ಪ್ರೇರಿಸು ; ಒಲಿಸು ; ಒಪ್ಪಿಸು. ಆಗಮಾಡು ; ಉಂಟುಮಾಡು ; ಹುಟ್ಟಿಸು. (ವಿದ್ಯುತ್ ಪ್ರವಾಹವನ್ನು) ಚೋದನೆಯಿಂದ ಹುಟ್ಟಿಸು ; ಚೋದಿಸು. (ತರ್ಕ) ಅನುಮಾನದಿಂದ ಪಡೆ. **Indúcement** (ನಾ.) ಪ್ರೇರಣೆ ; ಬೋಧನೆ ; (—ಕ್ಕೆ) ಒಯ್ಯುವ ಆಕರ್ಷಣೆ ; ಪ್ರಚೋದನೆ ; ಆಸೆ (*To* ಉಪ. ದೊಡನೆ). **Indúct** ಇಂಡಕ್ಟ್ (ಕ್ರಿ. ಸಕ.) ವಿಧಿವತ್ತಾಗಿ (ಕ್ರೈಸ್ತ) ಮಠದ ದತ್ತಿಯ ಅನುಭವಕ್ಕೆ, ಒಂದು ಅಧಿಕಾರಕ್ಕೆ, ನೇಮಿಸು (*To* ಉಪ. ದೊಡನೆ). (ಪೀಠ, ಕೋಣೆ, ಮೊ. ಗಳಲ್ಲಿ) ಕುಳ್ಳಿರಿಸು, ಪ್ರತಿಷ್ಠಿಸು, ಸ್ಥಾಪಿಸು (*Into* ಉಪ. ದೊಡನೆ). ಪರಿಚಯ ಮಾಡಿಸು ; ಪ್ರವೇಶ ಮಾಡಿಸು (*To, into* ಉಪ. ದೊಡನೆ). **Indúction** ಇಂಡಕ್‌ಷನ್ (ನಾ.) (Induct ಪದದ ಕ್ರಿಯಾರ್ಥಗಳಲ್ಲಿ) ; (ಪ್ರಾಚೀ. ಪ್ರ.) ಪೀಠಿಕೆ ; ಉಪೋದ್ಘಾತ ; ಮುನ್ನುಡಿ. . ಸಾಮಾನ್ಯ ಪ್ರತಿಪಾದನೆಯನ್ನು ಸಮರ್ಥಿಸುವುದಕ್ಕಾಗಿ ದೃಷ್ಟಾಂತ ಕೊಡುವುದು. ನಿರ್ದಿಷ್ಟವಾದ ಕೆಲವು ಉದಾಹರಣೆಗಳಿಂದ ಸಾಮಾನ್ಯ ಸೂತ್ರವನ್ನು ಕಟ್ಟುವುದು, ಕಲ್ಪಿಸುವುದು ; ಅನುಗಮನ ; ಅನುಮಿತಿ (Mathematical i. ಒಂದು ಆನುಪೂರ್ವಿಯಲ್ಲಿ ಯಾವುದೊಂದು ನಿಜವಾದರೂ, ಅದರ ಮುಂದಿನದೂ ನಿಜವೆಂದು ತೋರಿಸಿ, ಅಥವಾ ಯಾವುದಾದರೂ ನಿರ್ದಿಷ್ಟಾಂಶವು ನಿಜವೆಂದು ತೋರಿಸಿ, ಒಂದು ಪ್ರತಿಜ್ಞೆಯ ಸಾರ್ವತ್ರಿಕ ಯಥಾರ್ಥತೆಯನ್ನು ಸಿದ್ಧಗೊಳಿಸುವುದು ; ಗಣಿತಾನುಮಿತಿ). (ಕಾಂತಶಕ್ತಿಯುಳ್ಳ ಅಥವಾ ವಿದ್ಯುಚ್ಛಕ್ತಿಯುಳ್ಳ ವಸ್ತುವನ್ನು ಮತ್ತೊಂದು ವಸ್ತುವಿನ ಬಳಿಯಲ್ಲಿಟ್ಟು, ಆದರೆ ಅದಕ್ಕೆ ಸಂಪರ್ಕಮಾಡಿಸದೆ, ಆ ವಸ್ತುವಿನಲ್ಲಿ) ಕಾಂತಶಕ್ತಿಯನ್ನಾಗಲಿ ವಿದ್ಯುಚ್ಛಕ್ತಿಯನ್ನಾಗಲಿ ಚೋದನೆಯಾಗುವಂತೆ ಮಾಡುವುದು ; ಕಾಂತ(ಶಕ್ತಿ) ಚೋದನೆ, ವಿದ್ಯುಚ್ಛಕ್ತಿ ಚೋದನೆ. (I.-coil ಅನೇಕಾನೇಕ ಸುತ್ತುಗಳುಳ್ಳ ಸೂಕ್ಷ್ಮ ತಂತಿಯ ಸುರುಳಿಯಲ್ಲಿ ಅತಿ ಪ್ರಬಲವಾದ ಪ್ರವಾಹ ವಿದ್ಯುತ್ತನ್ನು ಚೋದನೆಯಿಂದ ಉಂಟುಮಾಡುವ ಒಂದು ಸಲಕರಣೆ ; ವಿದ್ಯುತ್ ಚೋದಕ ಕುಂಡಲ). **Indúctive** (ಗು.) (ತರ್ಕ, ಮೊ. ವು) ಅನುಮಿತಿಯ, ಅನುಗಮನದ (ಆಧಾರವುಳ್ಳ). ವಿದ್ಯುತ್ ಚೋದಿತ ; ಕಾಂತ ಚೋದಿತ. **Indúctively** (ಕ್ರಿ. ವಿ.); **Indúctiveness** (ನಾ.);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Indúctor ಇಂಡಕ್ಟರ್ (ನಾ.) ಪಾದ್ರಿಗೆ ದತ್ತಿಯನ್ನು ವಿಧಿವತ್ತಾಗಿ ವಹಿಸುವವನು. ತಾನು ವಿದ್ಯುತ್‌ಚೋದನೆ ಮಾಡುವ ಅಥವಾ ತನ್ನಲ್ಲಿ ವಿದ್ಯುತ್‌ಚೋದನೆಯಾಗುವಂತಿರುವ ಒಂದು ವಿದ್ಯುತ್ ಸಲಕರಣೆಯ ಭಾಗ : ವಿದ್ಯುತ್ ಚೋದಕ.

Indúctile ಇಂಡಕ್‌ಟಿ(ಟೈ)ಲ್ (ಗು.) (ಲೋಹಗಳ ವಿಷಯದಲ್ಲಿ) ಮೆತು ವಲ್ಲದ, ತಂತಿಯೆಳೆಯಲಾಗದ ; ಪೆಡಸಾದ.

Indúct, Indúction, etc. Induce ನೋಡಿ.

Indúlge ಇಂಡಲ್ಜ್ (ಕ್ರಿ.) (ಒಬ್ಬನನ್ನು, ತನ್ನನ್ನು, —ಇಷ್ಟ, ವಿಷಯ, ಮೊ. ಗಳಲ್ಲಿ) ತೃಪ್ತಿಪಡಿಸು, ತಣಿಸು, ಇಚ್ಛಾಪೂರ್ತಿ ಮಾಡು, ಮಾಡಿಕೊ (*In, with* ಉಪ. ದೊಡನೆ) ; (ಬಯಕೆ, ಮೊ.) ಸ್ವೇಚ್ಛೆಯಾಗಿ ಬಿಡು ; ಲೋಲುಪನಾಗು. (ಕಠಿನವಾದ ಭಾಷೆ, ಸವಾರಿ ಮಾಡುವುದು, ಹೊಗೆ ಸೇದುವುದು, ಮೊ. ಗಳಲ್ಲಿ) ನಿರಾತಂಕವಾಗಿ ಅನುಭವಿಸಿ ತೃಪ್ತಿ ಪಡು ; ಅತ್ಯಾಸಕ್ತಿಯುಳ್ಳವನಾಗಿರು. (ಬಳ. ಮಾ.) ಅಮಲೇರಿಸುವ ಪದಾರ್ಥಗಳನ್ನು ಮಿತಿಮೀರಿ ಉಪಯೋಗಿಸು. **Indúlgence** (ನಾ.) (ಕ್ರಿಯಾರ್ಥಗಳಲ್ಲಿ). (Self-i. ಲೋಲುಪತೆ). ತಾಳ್ಮೆ ; ಸಹನೆ. ಅನುಗ್ರಹಿಸಿದ ವಿಶೇಷಾಧಿಕಾರ [Declaration of I. (ಮು., ೧೬೭೨ರಲ್ಲಿ ಇಂಗ್ಲೆಂಡಿನಲ್ಲಿ ಎರಡನೆಯ ಚಾರ್ಲ್‌ಸ್ ದೊರೆಯೂ, ೧೬೮೭ರಲ್ಲಿ ಎರಡನೆಯ ಜೇಮ್ಸ್ ದೊರೆಯೂ ಘೋಷಿಸಿದ) ಮತ ಸ್ವಾತಂತ್ರ್ಯ ಪ್ರಕಟನೆ]. (ರೋ. ಕ್ಯಾ.) ವಿಧಿವತ್ತಾಗಿ ಪಾಪಪರಿಹಾರ ಸಂಸ್ಕಾರ ಮಾಡಿದಮೇಲೆ ಇಹಲೋಕದಲ್ಲಿ ಇನ್ನೂ ಅನುಭವಿಸಬೇಕಾದ ಶಿಕ್ಷೆಯನ್ನು ಕ್ಷಮಿಸುವುದು : ಪಾಪ ಕ್ಷಮೆ. **Indúlgenced** (ಗು.) (ರೋ. ಕ್ಯಾ.) (ದೇವರ ಪ್ರಾರ್ಥನೆಗಳು, ಭೌತ ವಸ್ತುಗಳು, ಇವುಗಳ ವಿಷಯದಲ್ಲಿ, ಅವನ್ನು ಉಪಯೋಗಿಸುವವನಿಗೆ) ಪಾಪಕ್ಷಮೆ ತರುವ. **Indúlgent** (ಗು.) ; **Indúlgently** (ಕ್ರಿ. ವಿ.)

Indúlt ಇಂಡಲ್ಟ್ (ನಾ.) [ಚರ್ಚಿನ (ಇಗರ್ಜಿಯ) ಸಂಪ್ರದಾಯ ನ್ಯಾಯದ ಪ್ರಕಾರ ಅವಕಾಶವಿಲ್ಲದುದಕ್ಕೆ] ಪೋಪ್ ಗುರು ಕೊಡುವ ಅನುಮತಿ.

Indurate ಇಂಡ್ಯುರೇಟ್ (ಕ್ರಿ.) ಗಟ್ಟಿಯಾಗು ; ಗಟ್ಟಿಯಾಗಿ ಮಾಡು ; ಜಡ್ಡುಗಟ್ಟಿಸು ; ಜಡ್ಡುಗಟ್ಟಿಹೋಗು ; ಕಲ್ಲೆದೆ ಮಾಡು ; ರೂಢಮೂಲ ವಾಗು. **Indurátion** (ನಾ.) ; **Indurative** (ಗು.)

Indúsium (L) ಇಂಡ್ಯೂಸಿಯಮ್ (ನಾ. ; ಬ. ವ. -ia) ಜರೀಗಿಡದ ಕಾಯಿಗೊಂಚಲನ್ನು ಮುಸುಕಿರುವ ರಕ್ಷಾ ಪಟಲ ; (ಕೆಲವು ಹೂವು ಗಳಲ್ಲಿ) ಶಲಾಕಾಗ್ರವನ್ನು ಆವರಿಸಿಕೊಂಡಿರುವ ಕೂದಲ ತಂಡ. ಮರಿಹುಳುವಿನ ಆವರಣ ಕೋಶ.

Indústrial, etc. Industrious ನೋಡಿ.

Indústrious ಇಂಡಸ್ಟ್ರಿಯಸ್ (ಗು.) ಮೈಬಗ್ಗಿ ಕೆಲಸ ಮಾಡುವ ; ಉದ್ಯೋಗಶೀಲ ; ದುಡಿಯುವ. **Indústriously** (ಕ್ರಿ. ವಿ.) ; **Indústrial** (ಗು., ನಾ.) ಕೈಗಾರಿಕೆಯ(ಗಳ) [I. maintenance ಪ್ರತಿಯೊಂದು ಕೈಗಾರಿಕೆಯೂ ತನ್ನ ನಿರುದ್ಯೋಗಿಗಳ ಜೀವನೋಪಾಯಕ್ಕೆ ತಾನೇ ಒದಗಿಸಬೇಕಾದ ಪದ್ಧತಿ. The i. revolution (ಮು., ಯಂತ್ರಸಾಧನಗಳನ್ನು ಕಂಡುಹಿಡಿದುದರ ಫಲವಾಗಿ, ೧೮ನೆಯ ಶತಮಾನದ ಅಂತ್ಯದಲ್ಲಿಯೂ ೧೯ನೆಯ ಶತಮಾನದ ಆದಿಯಲ್ಲಿಯೂ) ಧಣಿಗಳ ಮತ್ತು ಕೂಲಿಗಾರರ ಪರಸ್ಪರ ಸಂಬಂಧದಲ್ಲುಂಟಾದ ಮಾರ್ಪಾಡು ; ಕೈಗಾರಿಕೆಗಳ ಕ್ರಾಂತಿ, ವಿಪ್ಲವ. I. school (ನಿರಾಶ್ರಿತ ಬಾಲಕರಿಗೆ ಸಾಮಾನ್ಯ ವಿಷಯಗಳ ಜೊತೆಗೆ ಒಂದು ಕಸಬನ್ನು ಕಲಿಸುವ) ಕೈಗಾರಿಕೆಯ ಪಾಠ ಶಾಲೆ ; ವೃತ್ತಿಶಿಕ್ಷಣ ಶಾಲೆ]. ಕೈಗಾರಿಕೆಗಳಿಗೆ ಮಾತ್ರ ಉಪಯೋಗಕ್ಕೆ ಬರುವ, ಉಪಯೋಗವಾಗುವಂತೆ ಏರ್ಪಡಿಸಿದ (I. alcohol ಕೈಗಾರಿಕೆಗಳ ಉಪಯೋಗದ ಮದ್ಯಸಾರ). (ನಾ.) ಕೈಗಾರಿಕೆಯಲ್ಲಿ ತೊಡಗಿರುವವನು ; ಕೈಗಾರಿಕೆಯವನು. (ಬ. ವ. ದಲ್ಲಿ) ಕೈಗಾರಿ ಕೆಯ ಕೂಡುಬಂಡವಾಳ ಸಂಘದ ಪಾಲುಗಳು. **Indústrialism** (ನಾ.) ದೊಡ್ಡ ಕೈಗಾರಿಕೆಗಳಿಂದ, ಅವಿರುವ ಕಾರಣದಿಂದ, ಒದ ಗುವ ಸ್ಥಿತಿಗತಿಗಳು ; ಕೈಗಾರಿಕೆ ಪದ್ಧತಿ ; ಕೈಗಾರಿಕೆಗಳ ಕಸಬಿನ ಏರ್ಪಾಡು. **Indústrialist** (ನಾ.) ; **Indústrialize** (ಕ್ರಿ. ಸಕ.) ; **Indústrially** (ಕ್ರಿ. ವಿ.) ; **Índustry** (ನಾ.) ಕಷ್ಟಪಟ್ಟು ಕೆಲಸ ಮಾಡುವುದು ; ಉದ್ಯೋಗಶೀಲತೆ ; ದುಡಿಮೆ ; ದುಡಿತ ; ಕಸಬು ; ಕೈಗಾರಿಕೆ.

Índustry. Industrious ನೋಡಿ.

Indwéll ಇನ್‌ಡ್ವೆಲ್ (ಕ್ರಿ.; ಭೂತ., ಭೂ. ಕೃ. Indwelt) (ಸಾ., ರೂಪ. ; ಆತ್ಮ, ತತ್ತ್ವ, ಮೊ. ವು) ಒಳಗಿರು ; ಅಂತಸ್ಥವಾಗಿರು ; ವಾಸಮಾಡು. ಶಾಶ್ವತವಾಗಿ ನೆಲಸಿರು (*In* ಉಪ. ದೊಡನೆ). **Indwéller** (ನಾ.)

Inébriate ಇನೀಬ್ರಿಯೆಟ್ (ಗು., ನಾ.), — ಯೇಟ್ (ಕ್ರಿ. ಸಕ.) ಕುಡಿದು ಮತ್ತೇರಿದ(ವನು) ; (ಹೆಂಡ) ಕುಡುಕ. (ಕ್ರಿ.) (ಕುಡಿಸಿ) ಮತ್ತೇರಿಸು ; ಅಮಲೇರಿಸು (ರೂಪ. ಸಹ). **Inebriátion** (ನಾ.) ; **Inebríety** ಇನಿ(ೕ)ಬ್ರೈಯೆಟಿ (ನಾ.) (ಕುಡಿದು) ಮತ್ತೇರುವುದು ; ಅಮಲು ; ಕುಡಿತದ ಚಾಳಿ.

Inédible ಇನ್‌ಎಡಿಬ್‌ಲ್ (ಗು.) ತಿನ್ನತಕ್ಕದ್ದಲ್ಲದ ; ಆಹಾರಯೋಗ್ಯ ವಲ್ಲದ. **Inedibílity** (ನಾ.)

Inédited ಇನ್‌ಎಡಿಟೆಡ್ (ಗು.) ಪ್ರಕಟವಾಗಿರದ ; ಸಂಪಾದಕೀಯ ಪರಿಷ್ಕರಣವಿಲ್ಲದೆ ಪ್ರಕಟಿಸಿದ.

Inéffable ಇನ್‌ಎಫಬ್‌ಲ್ (ಗು.) ಅನಿರ್ವಚನೀಯ ; ವರ್ಣನಾತೀತ ; ಮಾತಿಗೆ ಮೀರಿದ. **Inéffably** (ಕ್ರಿ. ವಿ.)

Ineffáceable ಇನ್‌ಎಫೇಸಬ್‌ಲ್ (ಗು.) ಅಳಿಸಲಾಗದ ; ತೊಡೆದು ಹಾಕಲಾಗದ. **Ineffaceabílity** (ನಾ.) ; **Ineffáceably** (ಕ್ರಿ. ವಿ.)

Inefféctive ಇನ್‌ಎಫೆಕ್ಟಿವ್ (ಗು.) ಬಯಸಿದ ಫಲವನ್ನು ಕೊಡದ ; ಫಲಕಾರಿಯಲ್ಲದ ; ಪರಿಣಾಮಕಾರಿಯಲ್ಲದ ; ವ್ಯರ್ಥ. (ಮನುಷ್ಯ) ಅಸಮರ್ಥ. ನೀರಸ ; ಪೇಲವ ; ಕಲಾ ಗುಣವಿಲ್ಲದ. **Inefféctively** (ಕ್ರಿ. ವಿ.) ; **Inefféctiveness** (ನಾ.) ; **Inefféctual** (ಗು.) ನಿಷ್ಫಲ ; ವ್ಯರ್ಥ ; ನಿರರ್ಥಕ. **Inefféctually** (ಕ್ರಿ. ವಿ.) ; **Inefféctualness** (ನಾ.)

Inefficácious ಇನ್‌ಎಫಿಕೇಷಸ್ (ಗು.) (ಪ್ರತಿಕ್ರಿಯೆ, ಮೊ. ವು) ಪ್ರಯೋಜನಕಾರಿಯಲ್ಲದ; ಕಾರ್ಯಸಾಧಕವಲ್ಲದ; ಗುಣಕಾರಿಯಲ್ಲದ.

Ineffícient ಇನ್‌ಎಫಿಷೆಂ(ಷ್ಂ)ಟ್ (ಗು.) (ಮನುಷ್ಯ) ದಕ್ಷನಲ್ಲದ ; (ಪೂರ್ಣ) ಶಕ್ತನಲ್ಲದ ; ಅಸಮರ್ಥ ; ತಕ್ಕ ಯೋಗ್ಯತೆಯಿಲ್ಲದ. ಪರಿಣಾಮಕಾರಿಯಲ್ಲದ ; ಫಲಕಾರಿಯಲ್ಲದ. **Ineffíciency** (ನಾ.) ; **Ineffíciently** (ಕ್ರಿ. ವಿ.)

Inelástic ಇನ್‌ಇಲ್ಯಾಸ್ಟಿಕ್ (ಗು.) ಸ್ಥಿತಿಸ್ಥಾಪಕ ಗುಣವಿಲ್ಲದ ; ಬೇಕಾ ದಂತೆ ಹೊಂದಿಸಲಾಗದ ; ಮಣಿಯದ ; ಸಗ್ಗದ. **Inelastícity** (ನಾ.)

Inélegant ಇನ್‌ಎಲಿಗಂಟ್ (ಗು.) ಅಂದವಿಲ್ಲದ ; ನಯ ನಾಜೂಕಿಲ್ಲದ ; ಒಡ್ಡೊಡ್ಡಾದ. (ಶೈಲಿ) ಸೊಬಗಿಲ್ಲದ, ಲಾಲಿತ್ಯವಿಲ್ಲದ. **Inélegance** (ನಾ.) ; **Inélegantly** (ಕ್ರಿ. ವಿ.)

Inéligible ಇನ್‌ಎಲಿಜಿಬ್‌ಲ್ (ಗು.) (ಆಯ್ಕೆಗೆ) ಅರ್ಹನಲ್ಲದ, ತಕ್ಕವ ನಲ್ಲದ (ಮು., ಸೈನ್ಯಕ್ಕೆ ಜನರನ್ನು ಆಯ್ಕೆಮಾಡುವ ವಿಷಯದಲ್ಲಿ). **Ineligibílity** (ನಾ.) ; **Inéligibly** (ಕ್ರಿ. ವಿ.)

Inelúctable ಇನ್‌ಇಲಕ್ಟಬ್‌ಲ್ (ಗು.) (ಇಂದ) ತಪ್ಪಿಸಿಕೊಳ್ಳಲಾಗದ ; ಯತ್ನವಿಲ್ಲದ.

Inépt ಇನೆಪ್ಟ್ (ಗು.) ಹೊಂದದ ; ಹೊಂದಿಸಲಾಗದ ; ಅನುಚಿತ ; ಅಸಮಂಜಸ ; ಅವಿವೇಕದ. **Inéptitude** (ನಾ.) ; **Inéptness** (ನಾ.) ; **Inéptly** (ಕ್ರಿ. ವಿ.)

Inéquable ಇನ್‌ಈ(ಎ)ಕ್ವಬ್‌ಲ್ (ಗು.) ಒಂದೇಸಮನಲ್ಲದ.

Inequálity ಇನ್‌ಇಕ್ವಾಲಿಟಿ (ನಾ.) (ಪ್ರಮಾಣ, ಗುಣ, ದರ್ಜೆ, ಸ್ಥಿತಿ ಗತಿ ಮೊ. ಲ್ಲಿ) ಅಸಮತೆ ; ಹೆಚ್ಚುಕಡಮೆ ಇರುವುದು ; ವ್ಯತ್ಯಾಸವಾಗುವುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಮೇಲ್ಮೈ) ಸಮವಿಲ್ಲದಿರುವುದು ; ಮಟ್ಟವಾಗಿಲ್ಲದಿರುವುದು. (ಖ. ವಿ.) (ಆಕಾಶಕಾಯದ ಚಲನೆಯಲ್ಲಿ) ಕ್ರಮ ಭಂಗ.

Inequiláteral ಇನ್‌ಈಕ್ವಿಲ್ಯಾಟೆರಲ್ (ಗು.) ಅಸಮ ಬಾಹು(ಗಳುಳ್ಳ)

Inéquitable ಇನ್‌ಎಕ್ವಿಟಬ್‌ಲ್ (ಗು.) ಧರ್ಮಸಮ್ಮತವಲ್ಲದ ; ಅನ್ಯಾಯವಾದ. **Inéquitably** (ಕ್ರಿ. ವಿ.) ; **Inéquity** (ನಾ.) ಅನ್ಯಾಯ ; ಪಕ್ಷಪಾತ.

Inerádicable ಇನ್‌ಇರ್ಯಾಡಿಕಬ್‌ಲ್ (ಗು.) ನಿರ್ಮೂಲ ಮಾಡಲಾಗದ. **Inerádicably** (ಕ್ರಿ. ವಿ.)

Inérrable ಇನ್‌ಎರಬ್‌ಲ್ (ಗು.) ತಪ್ಪಿತಕ್ಕೆ ಬೀಳದ ; ತಪ್ಪುಮಾಡಲಾರದ ; ದೋಷಕ್ಕೆಡೆಗುಡದ. **Inerrabílity** (ನಾ.) ; **Inérrably** (ಕ್ರಿ. ವಿ.) ; **Inérrancy** (ನಾ.) ; **Inérrant** (ಗು.) ತಪ್ಪುಮಾಡದ.

Inért ಇನರ್ಟ್ (ಗು.) ಸ್ವಾಭಾವಿಕವಾದ ಕಾರ್ಯಶಕ್ತಿ, ಚಲನಶಕ್ತಿ, ನಿರೋಧಶಕ್ತಿ, —ಇಲ್ಲದ ; ಜಡ ; ನಿಶ್ಚಲ ; ನಿಷ್ಕ್ರಿಯ. ಕಾರ್ಯಕಾರಿಯಾದ ರಾಸಾಯನಿಕ ಅಥವಾ ಇತರ ಗುಣಗಳಿಲ್ಲದ. ಆಲಸ್ಯದ ; ಚಟುವಟಿಕೆಯಿಲ್ಲದ ; ನಿಶ್ಚೇಷ್ಟ. **Inértia** ಇನರ್ಷಿಯ (ನಾ.) (ಭೌ. ವಿ.) ಬಾಹ್ಯಬಲ ಪ್ರಭಾವವಿಲ್ಲದಿದ್ದರೆ ಒಂದು ಅಚಲವಸ್ತು ಇದ್ದಂತೆಯೇ ನಿಶ್ಚಲವಾಗಿರುವ, ಅಥವಾ ಚಲವಸ್ತು ಒಂದೇಸಮನಾದ ಗತಿಯಿಂದ ಋಜುರೇಖೆಯಲ್ಲಿ ಚಲಿಸುತ್ತಿರುವ, ಧರ್ಮ [= Vis inertiae : ಜಡತ್ವದ ಧರ್ಮ, ಬಲ]. ಜಡತೆ : ಆಲಸ್ಯ. **Inértly** (ಕ್ರಿ. ವಿ.) ; **Inértness** (ನಾ.)

Inértia. **Inert** ನೋಡಿ.

Inescápable ಇನ್‌ಎಸ್ಕೇಪಬ್‌ಲ್ (ಗು.) ತಪ್ಪಿಸಿಕೊಳ್ಳಲಾಗದ.

Inesséntial ಇನ್‌ಎಸೆನ್ಷಲ್ (ಗು.) ಆವಶ್ಯಕವಲ್ಲದ ; ಅಮುಖ್ಯ ; ಅಪ್ರಧಾನ.

Inéstimable ಇನ್‌ಎಸ್ಟಿಮಬ್‌ಲ್ (ಗು.) ಬೆಲೆ ಕಟ್ಟಲಾಗದ ; ಅಮೂಲ್ಯ ; ಅನರ್ಘ್ಯ ; ಅತ್ಯುತ್ಕೃಷ್ಟ. **Inéstimably** (ಕ್ರಿ. ವಿ.)

Inévitable ಇನ್‌ಎವಿಟಬ್‌ಲ್ (ಗು.) ತಪ್ಪಿಸಿಕೊಳ್ಳಲಾಗದ ; ಅನಿವಾರ್ಯ ; ಖಂಡಿತ ಸಂಭವಿಸುವ (The i. ತಪ್ಪಿಸಿಕೊಳ್ಳಲಾಗದ್ದು ; ತಪ್ಪದ್ದು). (ಬಳ. ಮಾ.) ಬೇಸರ ಹಿಡಿಸುವಷ್ಟು ಪಳಕೆಯಾದ. (ವಿಮರ್ಶಕರ ಅನಂ.) (ಪಾತ್ರಗಳ ಶೀಲ ಸ್ವಭಾವ ವರ್ಣನೆ, ಕಥಾವಸ್ತು ವಿಕಸನೆ, ಮೊ. ವು) ಅನ್ಯಥಾ ವರ್ಣನೆಗೆ, ಸಮಾಪ್ತಿಗೆ, ಅವಕಾಶವಿಲ್ಲದಷ್ಟು (ಪ್ರಕೃತಿ) ಸಹಜವಾಗಿರುವ, ಸ್ವಭಾವ ಸಿದ್ಧವಾಗಿರುವ ; ಸರ್ವ ಸಮ್ಮತವಾದ ; ಮನವೊಪ್ಪುವ. **Inevitabílity** (ನಾ.) ; **Inévitableness** (ನಾ.) ; **Inévitably** (ಕ್ರಿ. ವಿ.)

Inexáct ಇನ್‌ಎಗ್ಝ್ಯಾಕ್ಟ್ (ಗು.) ಅನಿಷ್ಕೃಷ್ಟ ; ನಿಕರವಲ್ಲದ. **Inexáctitude** (ನಾ.) ; **Inexáctly** (ಕ್ರಿ. ವಿ.) ; **Inexáctness** (ನಾ.)

Inexcúsable ಇನ್‌ಎಕ್ಸ್‌ಕ್ಯೂಸಬ್‌ಲ್ (ಗು.) (ಮನುಷ್ಯ, ಕ್ರಿಯೆ, ಮೊ. ವು) ನ್ಯಾಯಸಮ್ಮತವೆಂದು ಸಮರ್ಥಿಸಲಾಗದ ; ಸರಿಯಾದ ಕಾರಣವಿಲ್ಲದ ; ಮನ್ನಿಸಲಾಗದ ; ಅಕ್ಷಮ್ಯ. **Inexcúsably** (ಕ್ರಿ. ವಿ.)

Inexécutable ಇನ್‌ಎಕ್ಸೆಕ್ಯುಟಬ್‌ಲ್ (ಗು.) (ಕಾರ್ಯತಃ) ಸಾಧಿಸಲಾಗದ, ನಡಸಲಾಗದ ; ಮಾಡಲಾಗದ.

Inexhaústible ಇನ್‌ಎಗ್ಝಾಸ್ಟಿಬ್‌ಲ್ (ಗು.) ತೀರಿಸಿಬಿಡಲಾಗದ ; ಮುಗಿಸಿಬಿಡಲಾಗದ ; ಅಕ್ಷಯ. ಬಳಲಿಸಲಾಗದ ; ಬಳಲದ ; ಶಕ್ತಿಗುಂದದ. **Inexhaustibílity** (ನಾ.) ; **Inexhaústibly** (ಕ್ರಿ. ವಿ.)

Inéxorable ಇನ್‌ಎಕ್ಸೊರಬ್‌ಲ್ (ಗು.) ಬೇಡಿ ಮನಸ್ಸು ಕರಗಿಸಲಾಗದ ; ಕನಿಕರವಿಲ್ಲದ ; ಕಠೋರ ; ನಿಷ್ಕರುಣೆಯ ; ದಯಾ ದಾಕ್ಷಿಣ್ಯ ಶೂನ್ಯ. **Inexorabílity** (ನಾ.) ; **Inéxorably** (ಕ್ರಿ. ವಿ.)

Inexpéctant ಇನ್‌ಎಕ್ಸ್‌ಪೆಕ್ಟಂಟ್ (ಗು.) ನಿರೀಕ್ಷಣೆಯಿಲ್ಲದ.

Inexpédient ಇನ್‌ಎಕ್ಸ್‌ಪೀಡಿಯೆಂಟ್ (ಗು.) ಅನುಚಿತವಾದ ; ಅನನುಕೂಲವಾದ ; ಸಮಯೋಚಿತವಲ್ಲದ ; ಸೂಕ್ತವಲ್ಲದ. **Inexpédiency** (ನಾ.)

Inexpénsive ಇನ್‌ಎಕ್ಸ್‌ಪೆನ್ಸಿವ್ (ಗು.) ಅಗ್ಗವಾದ ; ಸುಲಭ ಬೆಲೆಯ ; ಅಲ್ಪ ವ್ಯಯದ. **Inexpénsively** (ಕ್ರಿ. ವಿ.) ; **Inexpénsiveness** (ನಾ.)

Inexpérience ಇನ್‌ಎಕ್ಸ್‌ಪೀರಿಯೆನ್ಸ್ (ನಾ.) ಅನುಭವವಿಲ್ಲದಿರುವುದು ; ಅನನುಭವ . **Inexpérienced** (ಗು.)

Inexpért ಇನ್‌ಎಕ್ಸ್‌ಪರ್ಟ್ (ಗು.) ಅನುಭವದಿಂದ ಬಂದ ಕೌಶಲವಿಲ್ಲದ ; ಪ್ರವೀಣನಲ್ಲದ ; ನುರಿತಿಲ್ಲದ. **Inexpértly** (ಕ್ರಿ. ವಿ.)

Inéxpiable ಇನ್‌ಎಕ್ಸ್‌ಪಿಯಬ್‌ಲ್ (ಗು.) (ಅಪರಾಧ) ಪರಿಹಾರ ಮಾಡಿಕೊಳ್ಳಲಾಗದ ; ಪ್ರಾಯಶ್ಚಿತ್ತವಿಲ್ಲದ. (ಕೋಪ, ಮೊ. ವು) ಸಮಾಧಾನ ಮಾಡಲಾಗದ. **Inéxpiably** (ಕ್ರಿ. ವಿ.)

Inéxplicable ಇನ್‌ಎಕ್ಸ್‌ಪ್ಲಿಕಬ್‌ಲ್ (ಗು.) ವಿವರಿಸಲಾಗದ ; ಕಾರಣ ಕೊಡಲಾಗದ ; ಸಮಾಧಾನ ಕೊಡಲಾಗದ. **Inexplicabílity** (ನಾ.) ; **Inéxplicably** (ಕ್ರಿ. ವಿ.)

Inexplícit ಇನ್‌ಎಕ್ಸ್‌ಪ್ಲಿಸಿಟ್ (ಗು.) ನಿಷ್ಕೃಷ್ಟವಾಗಿ, ಸ್ಪಷ್ಟವಾಗಿ, — ಹೇಳದ. **Inexplícitly** (ಕ್ರಿ. ವಿ.) ; **Inexplícitness** (ನಾ.)

Inexplósive ಇನ್‌ಎಕ್ಸ್‌ಪ್ಲೋಸಿವ್ (ಗು.) ಸಿಡಿಯದ ; ಸಿಡಿಯುವ ಗುಣವಿಲ್ಲದ ; ಅಸ್ಫೋಟಕ.

Inexpréssible ಇನ್‌ಎಕ್ಸ್‌ಪ್ರೆಸಿಬ್‌ಲ್ (ಗು., ನಾ.) ಹೇಳಲಾಗದ. (ನಾ. ; ಬ. ವ. ದಲ್ಲಿ, ಹಾಸ್ಯವಾಗಿ) ಷರಾಯಿ, ಇಜಾರು. **Inexpréssibly** (ಕ್ರಿ. ವಿ.) ; **Inexpréssive** (ಗು.) ಭಾವಪ್ರದರ್ಶಕವಲ್ಲದ ; (ಪ್ರಾಚೀ. ಪ್ರ.) = Inexpressible. **Inexpréssively** (ಕ್ರಿ. ವಿ.) ; **Inexpréssiveness** (ನಾ.)

Inexpúgnable ಇನ್‌ಎಕ್ಸ್‌ಪಗ್ನಬ್‌ಲ್ (ಗು.) ಆಕ್ರಮಣ ಸಾಧ್ಯವಲ್ಲದ ; ದುರ್ಭೇದ್ಯ ; ಅಜೇಯ (ರೂಪ. ಸಹ)

Inexténsible ಇನ್‌ಎಕ್ಸ್‌ಟೆನ್ಸಿಬ್‌ಲ್ (ಗು.) ವಿಸ್ತರಿಸಲಾಗದ ; ಲಂಬಿಸಲಾಗದ.

Inextínguishable ಇನ್‌ಎಕ್ಸ್‌ಟಿಂಗ್ವಿಷಬ್‌ಲ್ (ಗು.) (ಬೆಂಕಿ) ಆರಿಸಲಾಗದ, ನಂದಿಸಲಾಗದ (ರೂಪ. ಸಹ)

Inéxtricable ಇನ್‌ಎಕ್ಸ್‌ಟ್ರಿಕಬ್‌ಲ್ (ಗು.) (ಸ್ಥಾನ, ಸ್ಥಿತಿ, ಮೊ. ಗಳ ವಿಷಯದಲ್ಲಿ) ಬಿಡಿಸಿಕೊಳ್ಳಲಾಗದ, ತಪ್ಪಿಸಿಕೊಳ್ಳಲಾಗದ, ಪಾರಾಗಲಾಗದ. (ಗಂಟು, ಸಮಸ್ಯೆ, ಮೊ.) ಬಿಡಿಸಲಾಗದ. **Inéxtricably** (ಕ್ರಿ. ವಿ.)

Infállible ಇನ್‌ಫ್ಯಾಲಿಬ್‌ಲ್ (ಗು.) ತಪ್ಪೇ ಮಾಡದ ; — ಆಗದ ; ಅಮೋಘ ; ಋಜುಮಾರ್ಗ ಬಿಟ್ಟು ಹೋಗದ ; ಮೋಸಹೋಗಲಾಗದ. (ಮಾರ್ಗ, ಪರೀಕ್ಷೆ, ರುಜುವಾತು, ಮೊ.) ತಪ್ಪದ ; ತಪ್ಪಿಹೋಗದ ; ಖಂಡಿತವಾದ. **Infallibílity** (ನಾ.) (ಮು., ಪೋಪ್ ಗುರುವಿನ ಲಕ್ಷಣವಾಗಿ) ತಪ್ಪಿಗವಕಾಶವಿಲ್ಲದ ಗುಣ. **Infállibilism** (ನಾ.) ; **Infállibilist** (ನಾ.) ; **Infállibly** (ಕ್ರಿ. ವಿ.)

Ínfamize. **Infamy** ನೋಡಿ.

Ínfamy ಇನ್‌ಫಮಿ (ನಾ.) ಅಪಕೀರ್ತಿ ; ಅಪಖ್ಯಾತಿ ; ಕೆಟ್ಟ ಹೆಸರು ; ಪಳಿ (ಗ್ರಾಂ.). (ನ್ಯಾ. ಶಾ.) (ಮಾಡಿದ ಕೆಲವು ಅಕೃತ್ಯಗಳಿಗಾಗಿ) ಪ್ರಜಾ ಹಕ್ಕು ನಷ್ಟ. ನೀಚ ಕೃತ್ಯ ; ಅಪಮಾನ ಕಾರ್ಯ. **Ínfamous** (ಗು.) ಹೆಸರು ಕೆಟ್ಟ ; ಅಪಕೀರ್ತಿಯ ; ನೀಚ ; ಹೇಯ. (ನ್ಯಾ. ಶಾ.) (ಮೇಲೆ ನೋಡಿ). **Ínfamously** (ಕ್ರಿ. ವಿ.) ; **Ínfamize** —ಮೈಸ್ (ಕ್ರಿ. ಸಕ.) ಹೆಸರು ಕೆಡಿಸು ; ಅಪಕೀರ್ತಿ ತರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Infant ಇನ್‌ಫಂಟ್ (ನಾ.) ಮಗು ; ಕೂಸು ; (ಏಳು ವರ್ಷದ ಒಳಗಿನ) ಹಸುಳೆ ; ಶಿಶು [I.-school (ಸಾ., ೭ ವರ್ಷ ವಯಸ್ಸಿನ ಕೆಳಗಿನ) ಮಕ್ಕಳ ಪಾಠಶಾಲೆ]. (ನ್ಯಾ. ಶಾ.) (೨೧ ವರ್ಷ ವಯಸ್ಸಿನೊಳಗಿರುವ) ಅಪ್ರಾಪ್ತ ವಯಸ್ಕ. **Infancy** ಇನ್‌ಫನ್ಸಿ (ನಾ.) ಮಗುತನ; ಹಸುಳೆತನ ; ಶೈಶವ. (ನ್ಯಾ. ಶಾ.) (ಮೇಲೆ ನೋಡಿ). ಬೆಳವಣಿಗೆಯ ಆರಂಭ ದಶೆ ; ಶೈಶವಾವಸ್ಥೆ ; ಎಳೆತನ. **Infánticide** —ಫ್ಯಾಂಟಿಸೈಡ್ (ನಾ.) ಹುಟ್ಟಿದ ಕೂಸಿನ ಕೊಲೆ (ಮು., ತಾಯಿಯ ಅನುಮತಿಯಿಂದ); ಶಿಶು ಹತ್ಯೆ ; ಆಗತಾನೆ ಹುಟ್ಟಿದ ಕೂಸುಗಳನ್ನು ಕೊಲ್ಲುವ ಪದ್ಧತಿ ; ಕೂಸನ್ನು ಕೊಲ್ಲುವವನು ; ಶಿಶು ಘಾತಕ. **Infánticídal** (ಗು.) ; **Infantile** —ಫಂಟೈ(ಟಿ)ಲ್ (ಗು.) ಕೂಸುಗಳ ; ಕೂಸುಗಳ ರೀತಿಯ ; ಶೈಶವದ (I. paralysis ಮಕ್ಕಳಿಗೆ ಬರುವ ಪಾರ್ಶ್ವ ವಾಯು) ; ಮಗುತನದಲ್ಲಿಯ. **Infántilism** — ಟಿ — (ನಾ.) (ವೈ. ಶಾ.) ಮನಸ್ಸಿನ ಅಥವಾ ಶರೀರದ ತಕ್ಕ ಬೆಳವಣಿಗೆಯಿಲ್ಲದಿರುವುದು: ಶಿಶುಪ್ರಾಯತೆ. **Infantine** — ಟೈನ್ (ಗು.) = Infantile.

Infánta ಇನ್‌ಫಾಂಟ (ನಾ.) ಸ್ಪೆಯ್ನ್ ಅಥವಾ ಪೋರ್ಚುಗಲ್ ದೇಶದ ರಾಜದಂಪತಿಗಳ ಮಗಳು (ಸಾ., ರಾಜ್ಯಕ್ಕೆ ಉತ್ತರಾಧಿಕಾರಿಣಿಯಲ್ಲದ ಹಿರಿಯ ಮಗಳು). **Infánte** —ಟೇ (ನಾ.) — ಎರಡನೆಯ ಮಗ.

Infantry ಇನ್‌ಫಂಟ್ರಿ (ನಾ.) ಕಾಲಾಳು ; ಕಾಲು ಬಲ ; ಪಾಯ ದಳ ; ಪದಾತಿ ಸೈನ್ಯ. Mounted I. ಸಂಚಾರಕ್ಕೆ ಮಾತ್ರ ಅಶ್ವಾರೋಹಿಗಳಾಗಿದ್ದು ಯುದ್ಧದಲ್ಲಿ ನೆಲದಮೇಲೆ ನಿಂತು ಹೋರಾಡುವ ಕಾಲು ಬಲ ; ಸವಾರ ಪದಾತಿ ಸೈನ್ಯ. **Infantryman** —ಮನ್ (ನಾ.) ಪದಾತಿ ಸೈನಿಕ ; ಪ್ಯಾದೆ.

Infátuate ಇನ್‌ಫ್ಯಾಚ್ಯುಏಟ್ (ಕ್ರಿ. ಸಕ.) (ಒಬ್ಬನನ್ನು) ಕೇವಲ ಅವಿವೇಕಿಯನ್ನಾಗಿ, ತಿಳಿಗೇಡಿಯನ್ನಾಗಿ, ಮಾಡು; ಮತಿಭ್ರಂಶ ಮಾಡು; (ಮಿತಿ ಮೀರಿದ) ರಾಗೋದ್ರೇಕವುಂಟುಮಾಡು ; ಮೋಹ ಪರವಶ ಮಾಡು ; ಆವೇಶಗೊಳಿಸು ; ಉನ್ಮತ್ತನನ್ನಾಗಿ ಮಾಡು. **Infátuatedly** (ಕ್ರಿ. ವಿ.) ; **Infatuátion** (ನಾ.)

Inféct ಇನ್‌ಫೆಕ್ಟ್ (ಕ್ರಿ. ಸಕ.) (ವಾಯು, ಮೊ. ನ್ನು) ಹಾನಿಕರವಾದ ಕೊಳೆಯಿಂದ ಅಥವಾ ರೋಗಾಣುಗಳಿಂದ ತುಂಬು. (ಒಬ್ಬನನ್ನು, ದೇಹವನ್ನು, ಮನಸ್ಸನ್ನು) ಕಲುಷಿತ ಮಾಡು, ಜಾಡ್ಯದ ಸೋಂಕು — ಹಿಡಿಸು, ಅಂಟಿಸು (ರೂಪ. ಸಹ) (*With* ಉಪ. ಸೊಡನೆ). (ಒಬ್ಬನಿಗೆ ಅಭಿಪ್ರಾಯ, ಮೊ. ನ್ನು) ತುಂಬು, ತಲೆಗೆ ಹತ್ತಿಸು (*With* ಉಪ. ದೊಡನೆ). **Inféction** (ನಾ.) (ಮು., ವಾಯುವಿನ ಮೂಲಕ ಅಥವಾ ನೀರಿನ ಮೂಲಕ) ರೋಗ ತಾಕುವುದು, ಜಾಡ್ಯ ಅಂಟುವುದು; ರೋಗದ ಸೋಂಕು ; ಅಂಟುರೋಗ. (ರೂಪ.) ನೀತಿಭ್ರಷ್ಟತೆ ; ಸಂಸರ್ಗ ದೋಷ. (ಒಬ್ಬರ ಮೇಲ್ಪಂಕ್ತಿ, ಅನುಕಂಪ, ಮೊ. ವು) ಹರಡುವುದರಿಂದುಂಟಾದ ಪ್ರಭಾವ. **Inféctious** —ಷಸ್ (ಗು.) ರೋಗ ವಂಟಿಸುವ ; ಅಂಟುರೋಗ ತರುವ ; ಸಾಂಕ್ರಾಮಿಕ ; ಸೋಂಕಿನ. (ರೋಗ) ನೀರಿನ ಅಥವಾ ಗಾಳಿಯ ಮೂಲಕ ಹರಡಬಹುದಾದ. (ಭಾವಾವೇಶ, ಮೊ.) (ಒಬ್ಬರಿಂದೊಬ್ಬರಿಗೆ) ಹರಡಬಹುದಾದ, ತಗುಲುವ, ಹತ್ತುವ. **Inféctiously** (ಕ್ರಿ. ವಿ.) ; **Inféctiousness** (ನಾ.) ; **Inféctive** (ಗು.) ; **Inféctiveness** (ನಾ.) ; **Infectívity** (ನಾ.)

Infelícity ಇನ್‌ಫಿಲಿಸಿಟಿ (ನಾ.) ಅಸುಖ ; ದುಃಖ ; ದುರದೃಷ್ಟ ; ದುರ್ದೈವ. (ಮಾತಿನ, ಭಾವದ) ಹೊಂದಿಕೆಯಿಲ್ಲದಿರುವುದು ; ಅನೌಚಿತ್ಯ ; ಅಯುಕ್ತತೆ. **Infelicífic** —ಫೀಲಿಸಿಫಿಕ್ (ಗು.) ಅಸುಖ ಕಾರಕ ; ಅಸಂತೋಷಕರ. **Infelícitous** — ಫಿಲಿಸಿಟಸ್ (ಗು.)

Infér ಇನ್‌ಫರ್ (ಕ್ರಿ. ಸಕ.) ಊಹಿಸು ; ತರ್ಕಿಸು ; ಅನುಮಾನಿಸು ; ತೀರ್ಮಾನಕ್ಕೆ ಬರು ; ಅರ್ಥವಾಗು. **Inferable** (ಗು.); **Inference** ಇನ್‌ಫೆರೆನ್ಸ್ (ನಾ.) ಊಹೆ, ಅನುಮಾನ, — ಮಾಡುವುದು ; ಅನುಮಾನಿಸಿದ್ದು ; ಅನುಮಿತ. **Inferéntial** (ಗು.) ; **Inferéntially** (ಕ್ರಿ. ವಿ.)

Inférior ಇನ್‌ಫೀರಿಯರ್ (ಗು., ನಾ.) ಕೆಳಗಿನ [I. limit (Limit ನೋಡಿ)]. ದರ್ಜೆ, ಗುಣ, ಮೊ. ಲ್ಲಿ ಕಡಮೆಯಾದ, ಕೀಳಾದ (*To* ಉಪ. ದೊಡನೆ ಸಹ) ; ಕೆಳ ಮಟ್ಟದ ; ಕೀಳು ತರದ. (ಖ. ವಿ. : ಗ್ರಹಗಳ ವಿಷಯದಲ್ಲಿ) ತನ್ನ ಕಕ್ಷೆ ಭೂಕಕ್ಷೆಯ ಒಳಗಡೆ ಇರುವ. (ಸ. ವಿ. : ಪುಷ್ಪಪಾತ್ರದ ವಿಷಯದಲ್ಲಿ) ಅಂಡಾಶಯದ ಕೆಳಗಿರುವ ; (ಅಂಡಾಶಯ) ಪುಷ್ಪಪಾತ್ರದ ಕೆಳಗಿರುವ. (ಮುದ್ರಣ) ಅಕ್ಷರಗಳ ಕೆಳಭಾಗದಲ್ಲಿರುವ (ಉದಾ., H_2, O_n). (ನಾ.) (ಮು., ದರ್ಜೆಯಲ್ಲಿ) ಕೆಳಗಿನವನು ; ಕಡಮೆಯ ಅಂತಸ್ತಿನವನು [Kind to inferiors (ತನಗಿಂತಲೂ) ಕೆಳಗಿನವರಲ್ಲಿ ದಯೆ ತೋರುವ]. **Inferiórity** —ಯಾರಿಟಿ (ನಾ.) [I. complex (Complex ನೋಡಿ)]. **Infériorly** (ಕ್ರಿ. ವಿ.)

Inférnal ಇನ್‌ಫರ್‌ನಲ್ (ಗು.) ನರಕದ ; ಅಧೋಲೋಕದ ; ನರಕದಂಥ ; ಪೈಶಾಚಿಕ ; ಘೋರ. (ಬಳ. ಮಾ.) ಅಸಹ್ಯಕರವಾದ; [I. machine ಸಿಡಿದು ಸ್ವತ್ತನ್ನೊ ಪ್ರಾಣವನ್ನೊ ನಾಶಮಾಡುವ (ಸಾ., ರೂಪು ಮರಸಿದ) ನಲಕರಣ : ಧ್ವಂಸ ಯಂತ್ರ]. **Inférnally** (ಕ್ರಿ. ವಿ.) ; **Infernálity** —ನ್ಯಾಲಿಟಿ (ನಾ.) ; **Inférno** (ನಾ.) ನರಕ (ಮು., ಇಟಲಿಯ ಪ್ರಸಿದ್ಧ ಕವಿಯಾದ ಡ್ಯಾಂಟೆಯು ' Divine Comedy ' ಎಂಬ ಗ್ರಂಥದಲ್ಲಿ ವರ್ಣಿಸಿರುವದು) ; ಅತಿ ಘೋರವಾದ ಸ್ಥಳ.

Inférno. **Infernal** ನೋಡಿ.

Inférrable ಇನ್‌ಫರಬ್‌ಲ್ (ಗು.) = Inferable.

Infértile ಇನ್‌ಫರ್‌ಟೈ(ಟಿ)ಲ್ (ಗು.) ಫಲವತ್ತಲ್ಲದ. **Infertílity** (ನಾ.)

Infést ಇನ್‌ಫೆಸ್ಟ್ (ಕ್ರಿ. ಸಕ.) (ಕ್ರಿಮಿಗಳು, ದರೋಡೆಕೋರರು, ರೋಗ, ಮೊ. ವು) (ಸುತ್ತಿ) ಮುತ್ತು, ಮುಸುರು, ಪೀಡಿಸು, ಕಾಟ ಕೊಡು ; ತುಂಬಿರು. **Infestátion** (ನಾ.)

Infeudátion ಇನ್‌ಫ್ಯುಡೇಷನ್ (ನಾ.) ಸೈನಿಕ ಅಥವಾ ಇತರ ರೀತಿಯ ಸಹಾಯ ಮಾಡುವ ಷರತ್ತಿನಮೇಲೆ (ಒಬ್ಬನಿಗೆ) ಉಂಬಳಿ, ಮಾನ್ಯ, ಮೊ. ನ್ನು ಕೊಡುವುದು ; ಹೀಗೆ ಮಾನ್ಯಕೊಟ್ಟ ಸನ್ನದು. I. of tithes (ಕ್ರೈಸ್ತ ಪಾದ್ರಿಗಳಲ್ಲದ) ಲೌಕಿಕರಿಗೆ ದಶಾಂಶದ ತೆರಿಗೆಯ ಹಕ್ಕು ಕೊಡುವುದು.

Infibulátion ಇನ್‌ಫಿಬ್ಯುಲೇಷನ್ (ನಾ.) ಸಂಭೋಗ ಮಾಡಲಾಗದಂತೆ ಜನನಾಂಗಗಳಿಗೆ ಬಂಧನಿ ಹಾಕುವುದು ; ಸಂಭೋಗದ ತಡೆ.

Infidel ಇನ್‌ಫಿಡೆ(ಡ್)ಲ್ (ನಾ., ಗು.) ಮತಧರ್ಮದಲ್ಲಿ ನಂಬಿಕೆಯಿಲ್ಲದ(ವನು) ; ನಾಸ್ತಿಕ. (ಚರಿತ್ರೆ) ಕ್ರೈಸ್ತ ವಿರೋಧ ಮತದವನು. (ಯೆಹೂದ್ಯರ ಅಥವಾ ಮಹಮ್ಮದೀಯರ ಅಭಿಪ್ರಾಯದಮೇರೆಗೆ) (ತಮ್ಮ ಆಚರಣೆಯ) ನಿಜವಾದ ಮತಧರ್ಮದಲ್ಲಿ ನಂಬಿಕೆಯಿಲ್ಲದವನು. (ಸಾ., ದೇವರು, ಮತ, ಮೊ. ಗಳಲ್ಲಿ) ನಂಬಿಕೆಯಿಲ್ಲದವನು. (ಗು.) ನಾಸ್ತಿಕ್ಯದ ; ನಾಸ್ತಿಕರ. **Infidélity** (ನಾ.) ಕ್ರೈಸ್ತ ಮತದಲ್ಲಿ ನಂಬಿಕೆಯಿಲ್ಲದಿರುವುದು. ಕರ್ತವ್ಯ ನಿಷ್ಠೆ, ಅನುರಕ್ತಿ, ಇಲ್ಲದಿರುವುದು. (ಮು., ಗಂಡ ಹೆಂಡಿರಲ್ಲಿ) ದಾಂಪತ್ಯ ದ್ರೋಹ, ವಿಶ್ವಾಸ ಘಾತಕತನ (= Conjugal i.). **Infidelize** (ಕ್ರಿ.)

Infield ಇನ್‌ಫೀಲ್ಡ್ (ನಾ.) ಮನೆಯ ಸುತ್ತುಮುತ್ತಿನ ಅಥವಾ ಸಮೀಪದ ಬೇಸಾಯದ ಜಮೀನು ; ಸಾಗುವಳಿಗೆ ತಕ್ಕ ಜಮೀನು ; ತಪ್ಪದೆ ಗೊಬ್ಬರ ಹಾಕಿ ಪೈರಿಡುವ ಜಮೀನು. (ಕ್ರಿಕೆಟ್) ಗುರಿಗೋಲಿನ ಸುತ್ತುಮುತ್ತಲಿನ ಪ್ರದೇಶ ; ಗುರಿಗೋಲಿನ ಬಳಿ ಕಾಯುವ ಆಟಗಾರ.

Infíghting ಇನ್‌ಫೈಟಿಂಗ್ (ನಾ.) ತೋಳಿನ ದೂರಕ್ಕಿಂತಲೂ ಹತ್ತಿರದಲ್ಲಿ ಮುಷ್ಟಿಕಾಳಗ ಮಾಡುವುದು, ಹೋರಾಡುವುದು ; ಕೈ ಕೈ ಕಾಳಗ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Infíltrate ಇನ್‌ಫಿಲ್‌ಟ್ರೇಟ್ (ಕ್ರಿ.) (ದ್ರವವನ್ನು) ಒಳಕ್ಕೆ ಸೋಸು (*Into, through* ಉಪ. ದೊಡನೆ); (ದ್ರವ) ಒಳಕ್ಕೆ ಸೋಸಿಕೊಂಡು ಹೋಗು; ಸೋಸುವುದರಿಂದ (ಒಳಗೆಲ್ಲ) ವ್ಯಾಪಿಸು(ವಂತೆ ಮಾಡು). **Infiltrátion** (ನಾ.) (ಕ್ರಿಯಾರ್ಥಗಳಲ್ಲಿ); (ಮು. ಸೈನ್ಯ, ರಾಜ್ಯನೀತಿ) ಸಿಪಾಯಿಗಳು ಅಥವಾ ವಲಸಿಗರು ತೋರ್ಪಡಿಸಿಕೊಳ್ಳದೆ ಸಣ್ಣ ಸಣ್ಣ ತಂಡಗಳಲ್ಲಿ ಒಂದು ಪ್ರದೇಶವನ್ನು ಕ್ರಮೇಣ ಆಕ್ರಮಿಸುವುದು: ಕ್ರಮೇಣಾಕ್ರಮಣ.

Ínfinite ಇನ್‌ಫಿನಿಟ್ (ಗು., ನಾ.) ಅಪಾರ; ಅನಂತ. ಅತ್ಯಂತ ದೊಡ್ಡ. (ಬ. ವ. ದ ನಾಮಪದದೊಡನೆ) ಲೆಕ್ಕವಿಲ್ಲದಷ್ಟು; ಅಸಂಖ್ಯಾತ; ಅನೇಕಾನೇಕ. (ವ್ಯಾ., ಕ್ರಿಯಾ ರೂಪಗಳ ವಿಷಯದಲ್ಲಿ) ಪುರುಷ, ವಚನ — ಇವುಗಳಿಂದ ನಿರ್ದಿಷ್ಟವಾಗಿಲ್ಲದ (ಉದಾ., Infinitive, gerund). (ನಾ.) The I. (ಅನಂತನಾದ) ದೇವರು. The i. ಅನಂತಾಕಾಶ. **Ínfinitely** (ಕ್ರಿ. ವಿ.); **Infinitésimal** (ಗು., ನಾ.) ಅತ್ಯಂತ ಅಲ್ಪ (ಮೊತ್ತ); ಸೂಕ್ಷ್ಮಾತಿಸೂಕ್ಷ್ಮ. I. calculus ಅತ್ಯಲ್ಪೀಯ ಕಲನ. **Infinitésimally** (ಕ್ರಿ. ವಿ.); **Infínitive** (ಗು., ನಾ.) (ವ್ಯಾ.) ಪುರುಷ, ಕಾಲ, ವಚನ, ಮೊ. ಗಳ ನಿರ್ದೇಶ ಯಾವುದೂ ಇಲ್ಲದೆ ಕೇವಲ ಭಾವಾರ್ಥವನ್ನು ಮಾತ್ರ ಹೇಳುವ (ಧಾತು ರೂಪ); ಧಾತ್ವರ್ಥ ವಾಚಿ (ಉದಾ., To see). **Infinitíval** — ಟೈವಲ್ (ಗು.); **Infínitude** (ನಾ.) ಅಪರಿಮಿತತೆ; ಅಪಾರತೆ. ಅಪಾರ, — ಸಂಖ್ಯೆ, ವಿಸ್ತಾರ (*Of* ಉಪ. ದೊಡನೆ). **Infínity** (ನಾ.) = Infinitude. (ಗಣಿತ) ಅನಂತವಾದ ಮೊತ್ತ (ಇದರ ಚಿಹ್ನೆ: ∞)

Infírm ಇನ್‌ಫರ್ಮ್ (ಗು.) (ಮು., ಮುಪ್ಪಿನಿಂದ) ದೇಹದಾರ್ಢ್ಯವಿಲ್ಲದ; ಶಕ್ತಿಯುಡುಗಿದ. (ಮನುಷ್ಯ, ಮನಸ್ಸು, ವಿಚಾರಶಕ್ತಿ, ಮೊ.) ದುರ್ಬಲವಾದ, ದೃಢವಿಲ್ಲದ (I. of purpose ಒಂದು ಸ್ಥಿರವಾದ ಸಂಕಲ್ಪವಿಲ್ಲದ). **Infírmly** (ಕ್ರಿ. ವಿ.); **Infírmity** (ನಾ.); **Infírmary** (ನಾ.) ರೋಗ ಚಿಕಿತ್ಸಾಲಯ; ಆಸ್ಪತ್ರೆ. (ಪಾಠಶಾಲೆ, ನಿರಾಶ್ರಿತರ ಕಾರ್ಯಶಾಲೆ, ಮೊ. ಗಳಲ್ಲಿ) ರೋಗಿಗಳ ವಠಾರ.

Infíx ಇನ್‌ಫಿಕ್ಸ್ (ಕ್ರಿ. ಸಕ.), **Ínfix** (ನಾ.) (ಒಂದು ವಸ್ತುವನ್ನು ಮತ್ತೊಂದರಲ್ಲಿ) ಕೂರಿಸು, ಬಂಧಿಸು, ಸೇರಿಸು (*In* ಉಪ. ದೊಡನೆ). (ಸಂಗತಿ, ಮೊ. ನ್ನು ಮನಸ್ಸಿನಲ್ಲಿ) ನೆಡು, ನಾಟು, ಅಚ್ಚೊತ್ತು (*In* ಉಪ. ದೊಡನೆ). (ವ್ಯಾ.) ಪದಮಧ್ಯದಲ್ಲಿ ಸೇರುವ ಪ್ರತ್ಯಯ. (ಕ್ರಿ.) ಅಂತಹ ಪ್ರತ್ಯಯವನ್ನು ಸೇರಿಸು.

Infláme ಇನ್‌ಫ್ಲೇಮ್ (ಕ್ರಿ.) ಬೆಂಕಿಯಿಡು; ಉರಿ ಹೊತ್ತಿಸು. ಉರಿಯಿಂದ (ಹೇಗೋ ಹಾಗೆ) ಬೆಳಗು; ಪ್ರಜ್ವಲಿಸು. ಕೆರಳಿಸು; ಉದ್ದೀಪಿಸು; ಉದ್ರೇಕಗೊಳಿಸು (-ed *with, by*). (ಮೈ, ರಕ್ತ, ಮೊ. ನ್ನು ಜ್ವರ ಬಂದಂತೆ) ಕಾವೇರಿಸು. ಉರಿ ಹೊತ್ತಿಕೊ; ಉರಿಯೇಳು. ಹೆಚ್ಚುವಂತೆ ಮಾಡು; ಜೋರು ಮಾಡು; ಉದ್ರೇಕಗೊಳ್ಳು; ಕೆರಳು. (ವೈ. ಶಾ.) ರಕ್ತ ಕಟ್ಟಿ ಊದಿಕೊ. **Inflámmable** ಇನ್‌ಫ್ಲ್ಯಾಮಬ್‌ಲ್ (ಗು., ನಾ.) ಸುಲಭವಾಗಿ ಹೊತ್ತಿಕೊಳ್ಳುವ, ಹೊತ್ತಿಸಲಾಗುವ; ಸುಲಭವಾಗಿ ಕೆರಳುವ, ಉದ್ರೇಕಗೊಳ್ಳುವ. (ನಾ.) ಸುಲಭವಾಗಿ ಹೊತ್ತಿಕೊಳ್ಳುವ ಪದಾರ್ಥ; ಸುಲಭ ದಾಹ್ಯ. **Inflammabílity** (ನಾ.); **Inflámmableness** (ನಾ.); **Inflammátion** ಇನ್‌ಫ್ಲಮೇಷನ್ (ನಾ.) (ಕ್ರಿಯಾರ್ಥಗಳಲ್ಲಿ); (ರೂಪ.) ಕೆರಳು; ಉದ್ರೇಕ. (ವೈ. ಶಾ.) ದೇಹಭಾಗದಲ್ಲಿ ರಕ್ತಕಟ್ಟಿ ನೋವು, ಉರಿ, ಆಗುವ ಊತ; ಉರಿಯೂತ. **Inflámmatory** — ಫ್ಲ್ಯಾಮಟರಿ (ಗು.) (ರಾಗ ದ್ವೇಷಾದಿಗಳನ್ನು) ಕೆರಳಿಸುವ; ಉದ್ರೇಕಿಸುವ (ಸಾ., ಕೆಟ್ಟರ್ಥದಲ್ಲಿ); ಉದ್ರೇಕ ಕಾರಿಯಾದ. (ದೇಹದ) ಉರಿಯೂತದ; ಉರಿಯೂತ ಬರಿಸುವ.

Infláte ಇನ್‌ಫ್ಲೇಟ್ (ಕ್ರಿ. ಸಕ.) ಗಾಳಿಯನ್ನು ಅಥವಾ ಅನಿಲವನ್ನು ತುಂಬಿ ಉಬ್ಬಿಸು; ಗಾಳಿ ತುಂಬು; ಊದಿ ಉಬ್ಬಿಸು. (ಒಬ್ಬನನ್ನು, — ಉತ್ಸಾಹ, ಗರ್ವ, ಮೊ. ಗಳಿಂದ) ಉಬ್ಬಿಸು, ಬೀಗಿಸು. (ಹಣ ಕಾಸಿನ ವ್ಯವಹಾರದ ವಿಷಯದಲ್ಲಿ) ಮಿತಿ ಮೀರಿ (ಹಣದ) ಚಲಾವಣೆ ಹೆಚ್ಚಿಸು. ಕೃತಕವಾಗಿ (ಬೆಲೆ) ಏರಿಸು. (ಭಾಷಾ ವಿಷಯದಲ್ಲಿ ಭೂ. ಕೃ.) ವಾಗಾಡಂಬರದ. **Inflátion** (ನಾ.) (ಕ್ರಿಯಾರ್ಥಗಳಲ್ಲಿ); (ನಾಣ್ಯಕ್ಕೆ ಪರಿವರ್ತಿಸಲಾಗದ ನೋಟುಗಳನ್ನು ಹೆಚ್ಚಾಗಿ ಬಳಕೆಗೆ ತಂದು) ಚಲಾವಣೆಯನ್ನು ಮಿತಿ ಮೀರಿ ಹೆಚ್ಚಿಸುವುದು. **Inflátor** (ನಾ.) ವಾಯು ಪೂರಕ.

Infléct ಇನ್‌ಫ್ಲೆಕ್ಟ್ (ಕ್ರಿ. ಸಕ.) ಒಳಕ್ಕೆ ಬಾಗಿಸು, ಬಗ್ಗಿಸು; ಕೊಂಕಿಸು. (ವ್ಯಾ.) ವ್ಯಾಕರಣ ಸಂಬಂಧವನ್ನು ವ್ಯಕ್ತಗೊಳಿಸಲು (ಪದಕ್ಕೆ) ವಿಭಕ್ತಿ ಪ್ರತ್ಯಯಗಳನ್ನು ಹಚ್ಚು; ವಿಭಕ್ತಿ, ಆಖ್ಯಾತ ರೂಪ, ನಡಸು. (ಸಂ.) ಒಂದು ಸ್ವರವನ್ನು ಅರ್ಧಸ್ವರದಿಂದ ಏರಿಸು, ಇಳಿಸು. **Infléction** = Inflexion. **Infléctive** (ಗು.) (ವ್ಯಾ.) ವಿಭಕ್ತಿ ಅಥವಾ ಆಖ್ಯಾತ ಕಾರ್ಯದ. **Infléxible** (ಗು.) ಬಗ್ಗಿಸಲಾಗದ; ಬಾಗದ. (ರೂಪ.) ಬಗ್ಗದ; ಜಗ್ಗದ; ಸಗ್ಗದ; ಅನಮ್ಯ; ದೃಢ ಸಂಕಲ್ಪದ. **Inflexibílity** (ನಾ.); **Infléxibly** (ಕ್ರಿ. ವಿ.); **Infléxion** — ಫ್ಲೆಕ್‌ಷನ್ (ನಾ.) (ಕ್ರಿಯಾರ್ಥಗಳಲ್ಲಿ); ವಿಭಕ್ತಿ, ಆಖ್ಯಾತ, — ಕಾರ್ಯ; ಪದದ ಪ್ರತ್ಯಯ ಹಚ್ಚಿದ ರೂಪ; (ವಿಭಕ್ತಿ) ಪ್ರತ್ಯಯ, ಮೊದಲಾದುವು. ಧ್ವನಿಯ ಏರಿಳಿತ. (ಜ್ಯಾ.) ಹೊರಬಾಗಿನಿಂದ ಒಳಬಾಗಿಗೆ ವಕ್ರರೇಖೆಯ ಬದಲಾವಣೆ. **Infléxional** (ಗು.); **Infléxionless** (ಗು.)

Infléxible, Infléxion, etc. **Inflect** ನೋಡಿ.

Inflíct ಇನ್‌ಫ್ಲಿಕ್ಟ್ (ಕ್ರಿ. ಸಕ.) ಏಟು, — ಹೊಡೆ, ಕೊಡು; ಗಾಯ ಮಾಡು (*Upon* ಉಪ. ದೊಡನೆ). (ಹಿಂಸೆ, ನೋವು, ದಂಡ, ಮೊ. ನ್ನು) ಮೇಲೆ ಹೇರು, ಹೊರಿಸು. **Inflíctable** (ಗು.); **Inflíction** (ನಾ.) (ಕ್ರಿಯಾರ್ಥಗಳಲ್ಲಿ); ಒಬ್ಬರಿಗೆ ತೊಂದರೆಯ ಅಥವಾ ಬೇಸರದ ಅನುಭವ (ಉಂಟುಮಾಡುವುದು); ಹಿಂಸೆ; ಪೀಡೆ. **Inflíctor** (ನಾ.)

Infloréscence ಇನ್‌ಫ್ಲೊರೆಸೆನ್ಸ್ (ನಾ.) (ಸ. ವಿ.) (ಅಕ್ಷರೇಖಾ ಸಂಬಂಧವಾಗಿಯೂ ಪರಸ್ಪರ ಸಂಬಂಧವಾಗಿಯೂ) ಸಸ್ಯದ ಹೂವುಗಳು ವಿನ್ಯಾಸವಾಗಿರುವ ರೀತಿ; (ಸಸ್ಯದ) ಪುಷ್ಪ ವಿನ್ಯಾಸ; ಸಂಕೀರ್ಣ ಪುಷ್ಪ; ಹೂವು ಬಿಡುವುದು (ರೂಪ. ಸಹ)

Ínflow ಇನ್‌ಫ್ಲೋ (ನಾ.) ಒಳಕ್ಕೆ ಹರಿಯುವುದು; ಒಳ ಹರಿತ. **Ínflowing** (ಗು., ನಾ.)

Ínfluence ಇನ್‌ಫ್ಲುಯೆನ್ಸ್ (ನಾ., ಕ್ರಿ. ಸಕ.) (ಜ್ಯೋ.) ನಕ್ಷತ್ರಗಳಿಂದ ಮನುಷ್ಯನ ಸ್ವಭಾವ, ಅದೃಷ್ಟಗಳಮೇಲೆ ಪರಿಣಾಮಕಾರಿಯಾಗುವ ಅಭೌತ ಪ್ರಭಾವ: ನಕ್ಷತ್ರ ಬಲ. (ರೂಪ.) (ಒಬ್ಬನ) ಪ್ರಭಾವ; ಪ್ರಾಬಲ್ಯ; ಮಹಿಮೆ. (ಒಬ್ಬನ, ಒಂದರ, ಮೇಲಿನ) ಪರಿಣಾಮ (*Upon* ಉಪ. ದೊಡನೆ) [Undue i. ಒಬ್ಬನು ತಾನಾಗಿ ತನ್ನ ಕರ್ತವ್ಯವನ್ನು ಬಿಡದೆ ನಡಸುತ್ತಿರುವ ಸಂದರ್ಭದಲ್ಲಿ ಬೇರೆ ರೀತಿ ನಡೆಯುವಂತೆ ಮಾಡುವ ನ್ಯಾಯಸಮ್ಮತವಲ್ಲದ (ಅಧಿಕಾರ)ವರ್ತನೆ; ಅನುಚಿತ ಪ್ರಾಬಲ್ಯ]. (ಸಾ., ಅಭೌತ) ನೈತಿಕ ಶಕ್ತಿ (*Over, with* ಉಪ. ದೊಡನೆ); ಪ್ರಭಾವ ಬೀರುವ ವಸ್ತು, ವ್ಯಕ್ತಿ; ಪ್ರಭಾವಶಾಲಿ. (ವಿದ್ಯುತ್) = Induction. (ಕ್ರಿ.) ಪ್ರಭಾವ ಬೀರು; ಪರಿಣಾಮ ಮಾಡು; ಪ್ರಚೋದಿಸು. **Ínfluent** — ಯೆಂಟ್ (ಗು., ನಾ.) ಒಳಕ್ಕೆ ಹರಿಯುವ (ರೂಪ. ಸಹ). (ನಾ.) ಉಪ ನದಿ; ಕೂಡು ಹೊಳೆ. **Influéntial** — ಯೆನ್ಷಲ್ (ಗು.) ಮಾತುಬರಿ. **Influéntially** (ಕ್ರಿ. ವಿ.)

Ínfluent. **Influence** ನೋಡಿ.

Influénza (It.) ಇನ್‌ಫ್ಲುಯೆನ್ಜ (ನಾ.) (ಸಾ., ಕಠಿನವಾದ ನೆಗಡಿಯಿಂದ ಕೂಡಿ ಬೇಗ ಸುಸ್ತುಮಾಡುವ) ಒಂದು ಸಾಂಕ್ರಾಮಿಕ ಜ್ವರ: 'ಇನ್‌ಫ್ಲುಯೆನ್ಜ'; ಕಠಿನವಾದ ನೆಗಡಿ (= I. cold). (ರೂಪ.) (ಬುದ್ಧಿಯ ಅಥವಾ ವಾಣಿಜ್ಯದ) ಸಾಂಕ್ರಾಮಿಕ.

Ínflux ಇನ್‌ಫ್ಲಕ್ಸ್ (ನಾ.) ಒಳಕ್ಕೆ ಹರಿಯುವುದು; ಒಳ ಹರಿವು (ಮು., ಹೊಳೆ, ಮೊ. ವು ನದಿ, ಮೊ. ಗಳ ಒಳಕ್ಕೆ ಹರಿಯುವುದು, ಬರುತ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನದೀಮುಖ. (ಜನರು ಅಥವಾ ವಸ್ತುಗಳು ಒಂದು ಸ್ಥಳಕ್ಕೆ) ಸಂತತವಾಗಿ ಬರುವುದು ; ಜನಪ್ರವಾಹ ; ವಸ್ತುಪ್ರವಾಹ (*Into* ಉಪ. ದೊಡನೆ)

Infórm ಇನ್‌ಫಾರ್‌ಮ್ (ಕ್ರಿ.) (ಒಬ್ಬನಿಗೆ, ಒಂದರ ವಿಷಯವಾಗಿ) ತಿಳಿಯ ಹೇಳು, ತಿಳಿಸು. (ಒಬ್ಬನಲ್ಲಿ, ಒಬ್ಬನ ಮನಸ್ಸಿನಲ್ಲಿ, — ಸಂವೇದನೆ, ಗುಣ, ವ್ಯವಸ್ಥೆ, ಮೊ.) ಹುಟ್ಟುವಂತೆ, ವ್ಯಾಪಿಸುವಂತೆ, ಮಾಡು. (ಬುದ್ಧಿ, ನಡತೆ, ಮೊ. ನ್ನು ಶಿಕ್ಷಣಕೊಡುವುದರಿಂದ, ಬೋಧನೆಯಿಂದ) ರೂಪಿಸು; ಶಿಕ್ಷಣ ಕೊಡು; ಬೋಧಿಸು. (ಒಬ್ಬನಮೇಲೆ) ತಪ್ಪು ಹೊರಿಸು, ಆಪಾದನೆ ಮಾಡು (*Against* ಉಪ. ದೊಡನೆ). ಸಮಾಚಾರ ತಿಳಿಸು, ವರ್ತಮಾನ ಕೊಡು. **Infórmant** — ಮಂಟ್ (ನಾ.) (ಸಂಗತಿ) ಹೇಳುವವನು ; ವರ್ತಮಾನ ಕೊಡುವವನು ; ಬಾತಮಿದಾರ. **Information** ಇನ್‌ಫರ್‌ಮೇಷನ್ (ನಾ.) ತಿಳಿಸುವುದು ; ಹೇಳುವುದು ; ಹೇಳಿದ್ದು ; ತಿಳಿವು ; ತಿಳಿಯಬೇಕಾದ, ತಿಳಿದ, — ವಿಷಯಗಳು ; ಸುದ್ದಿ ; ಸಮಾಚಾರ (*On, about* ಉಪ. ದೊಡನೆ). (ನ್ಯಾ. ಶಾ.) (ಒಬ್ಬನಮೇಲೆ ನ್ಯಾಯಸ್ಥಾನದಲ್ಲಿ ಅಥವಾ ನ್ಯಾಯಾಧಿಪತಿಯ ಮುಂದೆ ಇಟ್ಟ) ಆಪಾದನೆ, ಫಿರ್ಯಾದು (*Against* ಉಪ. ದೊಡನೆ). **Informátional** (ಗು.) ; **Infórmative** ಇನ್‌ಫಾರ್‌ಮಟಿವ್ (ಗು.) (ವಿಷಯ, ಸಮಾಚಾರ, ಮೊ. ನ್ನು) ತಿಳಿಸುವ ; ತಿಳಿವಳಿಕೆ ಕೊಡುವ ; ಬೋಧಪ್ರದ. **Infórmatory** (ಗು.) (ಸಮಾಚಾರ) ತಿಳಿಸುವ ; ಬೋಧಪ್ರದ. **Infórmed** (ಗು.) ತಿಳಿಯಹೇಳಿದ ; (ವಿಷಯ) ತಿಳಿದ ; ವಿದ್ಯಾವಂತನಾದ ; ಬುದ್ಧಿವಂತನಾದ ; ವ್ಯುತ್ಪನ್ನ (ಮು., Well, ill, -i. ತಕ್ಕ ತಿಳಿವಳಿಕೆಯುಳ್ಳ, — ಇಲ್ಲದ). **Infórmer** (ನಾ.) ಒಬ್ಬನ ಅಪರಾಧ ತಿಳಿಸುವವನು (ಮು., ಅಪರಾಧಿಗಳನ್ನು ತಾನಾಗಿ ಪತ್ತೆಮಾಡಿ, ಅವರ ತಪ್ಪಿತಗಳನ್ನು ತಿಳಿಯಪಡಿಸುವವನು) (= Common i.)

Infórmal ಇನ್‌ಫಾರ್‌ಮಲ್ (ಗು.) ವಿಧ್ಯುಕ್ತವಲ್ಲದ ; ವಿಹಿತ ಕ್ರಮ ವನ್ನನುಸರಿಸದ ; ಅವಿಧಿಯಾದ ; ಅನಿರ್ಬಂಧ ರೀತಿಯ. **Infórmally** (ಕ್ರಿ. ವಿ.) ; **Informálity** — ಮ್ಯಾ — (ನಾ.)

Ínfra (L) ಇನ್‌ಫ್ರ (ಕ್ರಿ. ವಿ. ; ಸಂಕ್ಷಿಪ್ತ : inf.) ಕೆಳಗೆ ; ಇನ್ನೂ ಕೆಳಗೆ ; ಇನ್ನೂ ಮುಂದೆ [(ಪುಸ್ತಕದಲ್ಲಿ) *Vide i.* ಕೆಳಗಡೆ ನೋಡಿ]. **Ínfra dig.** (L) (Infra dignitatem ಎಂಬುದರ ಸಂಕ್ಷಿಪ್ತ) (ಗು.) ಮಾನಕ್ಕೆ ಕಡಮೆಯಾದ ; ಗೌರವ ಹೀನ ; (ಯೋಗ್ಯತೆಗೆ) ತಕ್ಕದ್ದಲ್ಲದ.

Infra- ಇನ್‌ಫ್ರ— (ಸ. ಪೂ. ಪ.) ಕೆಳಗಿನ —; ಕೆಳ —. **-red** ವರ್ಣಪಟಲದಲ್ಲಿ ಕೆಂಪುಪಟ್ಟೆಯಿಂದಾಚೆಯ ದೃಗ್ಗೋಚರ ವಾಗದ ಕಿರಣಗಳ; (ವರ್ಣಪಟಲ) ರಕ್ತವರ್ಣಾತೀತ. **-rénal** ಮೂತ್ರ ಪಿಂಡದ ಕೆಳಗಿನ. **-scápular** ಭುಜಾಸ್ಥಿಯ ಕೆಳಗಿನ. **-stérnal** ಎದೆಮೂಳೆಯ ಕೆಳಗಿನ.

Infráction ಇನ್‌ಫ್ರ್ಯಾಕ್‌ಷನ್ (ನಾ.) ಮುರಿಯುವುದು; ಉಲ್ಲಂಘನೆ ; ಅತಿಕ್ರಮಣ ; (ನಿಯಮ) ಭಂಗ.

Infrángible ಇನ್‌ಫ್ರ್ಯಾಂಜಿಬ್‌ಲ್ (ಗು.) ಮುರಿಯಲಾಗದ ; ಮುರಿಯದ (ರೂಪ. ನಹ) ; ಉಲ್ಲಂಘಿಸಲಾಗದ ; ಅತಿಕ್ರಮಿಸಲಾಗದ.

Infréquent ಇನ್‌ಫ್ರೀಕ್ವೆಂಟ್ (ಗು.) ಮರಳಿ ಮರಳಿ ಬರದ ; ವಿರಳ ; ಅಪರೂಪ. **Infréquency** (ನಾ.) ; **Infréquently** (ಕ್ರಿ. ವಿ.)

Infrínge ಇನ್‌ಫ್ರಿಂಜ್ (ಕ್ರಿ. ಸಕ.) (ಕಾನೂನು, ಪ್ರತಿಜ್ಞೆ, ಮೊ. ನ್ನು) ಮೀರು, ಮುರಿ, ಉಲ್ಲಂಘಿಸು, ಅತಿಕ್ರಮಿಸು, ಭಂಗ ಮಾಡು. **Infríngement** (ನಾ.)

Infrúctuous ಇನ್‌ಫ್ರಕ್‌ಟ್ಯುಅಸ್ (ಗು.) ಫಲ ಬಿಡದ ; (ರೂಪ.) ವಿಫಲ ; ನಿರರ್ಥಕ ; ವ್ಯರ್ಥ.

Infundíbulum ಇನ್‌ಫಂಡಿಬ್ಯುಲಂ (ನಾ.) (ಅಂ. ರ. ಶಾ.) ದೇಹದಲ್ಲಿ ಪನ್ನಾಲೆಯ (ಆಲಿಕೆಯ) ಆಕಾರದ ಬಿಲ ಅಥವಾ ರಚನೆ. **Infundíbular** (ಗು.) ಪನ್ನಾಲೆಯಾಕಾರದ.

Infúriate ಇನ್‌ಫ್ಯೂರಿಯೇಟ್ (ಕ್ರಿ. ಸಕ.) ಸಿಟ್ಟೆಬ್ಬಿಸು ; ರೇಗಿಸು ; ಕೋಪೋದ್ರಿಕ್ತ ಮಾಡು.

Infúse ಇನ್‌ಫ್ಯೂಸ್ (ಕ್ರಿ.) (ಪದಾರ್ಥವನ್ನು ಒಳಕ್ಕೆ) ಸುರಿ, ಹೊಯ್ಯಿ (*Into* ಉಪ. ದೊಡನೆ). (ರೂಪ.) (ಸೊಬಗು, ಉತ್ಸಾಹ, ಜೀವ, ಮೊ. ನ್ನು) ಎರೆ, ತುಂಬು. (ಮೂಲಿಕೆ, ತೇಯಲೆ, ಮೊ. ನ್ನು ಅದರ ಕಷಾಯ ತೆಗೆಯಲು) ದ್ರವದಲ್ಲಿ ನೆನೆಹಾಕು ; ಊರು (Let it i. for five minutes ಅದು ಐದು ನಿಮಿಷ ಊರಲಿ). **Infúser** (ನಾ.) ; **Infúsion** — ಷನ್ (ನಾ.) (ಕ್ರಿಯಾರ್ಥಗಳಲ್ಲಿ) ; (ಊರಹಾಕಿ ತೆಗೆದ) ಕಷಾಯ ; ಊರಿ (ದ್ರವದಲ್ಲಿ) ಸೇರಿದ ಪದಾರ್ಥ, ಅಂಶ ; ಸೇರಿದ್ದು ; ಬೆರಕೆ.

Infúsible ಇನ್‌ಫ್ಯೂಸಿಬ್‌ಲ್ (ಗು.) (ಶಾಖದಿಂದ) ಕರಗಿಸಲಾಗದ, ಕರಗದ. **Infusibílity** (ನಾ.)

Infusória ಇನ್‌ಫ್ಯುಸೋರಿಯ (ನಾ., ಬ. ವ.) ಕೊಳೆಯುತ್ತಿರುವ ಪ್ರಾಣಿಜನ್ಯ ಅಥವಾ ಸಸ್ಯಜನ್ಯ ದ್ರವಪದಾರ್ಥಗಳಲ್ಲಿ ಕಾಣುವ ಸೂಕ್ಷ್ಮಾಣು ಜೀವಿವರ್ಗ. **Infusórial** (ಗು.) ; **Infusórian** (ಗು., ನಾ.) — ಸೂಕ್ಷ್ಮಾಣು ಜೀವಿವರ್ಗದ (ಪ್ರಾಣಿ). **Infúsory** — ಫ್ಯೂಸರಿ (ಗು., ನಾ.) = Infusorian.

Íngathering ಇನ್‌ಗ್ಯಾದರಿಂಗ್ (ನಾ.) ಒಳಗೆ ಕುಂಬಿಕೊಳ್ಳುವುದು (ಮು., ಬೆಳೆಯನ್ನು) ; ಧಾನ್ಯ ಸಂಚಯ (ಮಾಡುವುದು) ; ಸುಗ್ಗಿ.

Ingéminate ಇನ್‌ಜೆಮಿನೇಟ್ (ಕ್ರಿ. ಸಕ.) ಮತ್ತೆ ಹೇಳು ; ಮರಳಿ ಮರಳಿ ಹೇಳುತ್ತಿರು ; ಒತ್ತಿ ಹೇಳು (ಮು., I. peace ಶಾಂತಿಯ ಆವಶ್ಯಕತೆಯನ್ನು ಬಿಡದೆ ಒತ್ತಿ ಹೇಳುತ್ತಿರು)

Ingénious ಇಂಜೀನಿಯಸ್ (ಗು.) (ಕಲ್ಪನೆಯಲ್ಲಿ) ಚತುರನಾದ ; ಉಪಾಯ ಕೌಶಲವುಳ್ಳ ; ಚಾತುರ್ಯದಿಂದ ಕಲ್ಪಿಸಿದ ; ಚಮತ್ಕಾರವಾದ ; ಅತಿ ಬುದ್ಧಿವಂತಿಕೆಯ. **Ingéniously** (ಕ್ರಿ. ವಿ.) ; **Ingenúity** ಇಂಜಿನ್ಯೂಯಿಟಿ (ನಾ.) ಕಲ್ಪನಾ ಚಾತುರ್ಯ ; ಉಪಾಯ ಕೌಶಲ ; ಜಾಣತನ.

Ingénue (F) ಆ್ಯನ್‌ಷೇನೂ (ನಾ.) ಕೃತಕವಿಲ್ಲದ, ಸರಳ ಸ್ವಭಾವದ, — ಹುಡುಗಿ (ಮು., ನಾಟಕ ಪಾತ್ರದಲ್ಲಿ)

Ingenúity. **Ingenious** ನೋಡಿ.

Ingénuous ಇನ್‌ಜೆನ್ಯುಅಸ್ (ಗು.) ಮರೆಮಾಜದ ; ಅಕೃತ್ರಿಮ ; ನಿಷ್ಕಪಟ ; ಸಾಚಾ ; ನೈಜ ಸ್ವಭಾವದ ; ಸರಳ. **Ingénuously** (ಕ್ರಿ. ವಿ.) ; **Ingénuousness** (ನಾ.)

Ingést ಇನ್‌ಜೆಸ್ಟ್ (ಕ್ರಿ. ಸಕ.) (ಆಹಾರವನ್ನು) ಹೊಟ್ಟೆಗೆ ಹೊಗಿಸು. **Ingéstion** (ನಾ.) ; **Ingéstive** (ಗು.)

Íngle ಇಂಗ್‌ಲ್ (ನಾ.) ಒಲೆಯಲ್ಲಿ ಉರಿಯುತ್ತಿರುವ ಬೆಂಕಿ. I.-nook = Chimney-corner (Chimney ನೋಡಿ)

Inglórious ಇನ್‌ಗ್ಲೋರಿಯಸ್ (ಗು.) ನಾಚಿಕೆಗೇಡಾದ ; ಅಪಮಾನಕರವಾದ ; ತಲೆ ತಗ್ಗಿಸುವಂಥ. ಅಪ್ರಸಿದ್ಧ ; ಪ್ರಖ್ಯಾತಿಗೆ ಬರದ. **Inglóriously** (ಕ್ರಿ. ವಿ.)

Íngoing ಇನ್‌ಗೋಯಿಂಗ್ (ಗು., ನಾ.) ಒಳಕ್ಕೆ ಹೋಗುವ, ಪ್ರವೇಶಿಸುವ. (ನಾ.) ಒಳಹೊಗುವುದು ; ಪ್ರವೇಶ. ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳುವವನು ಮನೆಯ ಸ್ಥಿರ ಸಾಮಾನು, ಮೊ. ಗಳಿಗಾಗಿ ಕೊಡುವ ಹಣ. ವ್ಯಾಪಾರವನ್ನು ಮತ್ತೊಬ್ಬನಿಂದ ವಹಿಸಿಕೊಂಡವನು ಅವನಿಗೆ ಕೊಡುವ ಹಣ.

Íngot ಇಂಗಟ್ (ನಾ.) ಎರಕ ಹೊಯ್ದ ಲೋಹದ (ಸಾ., ಚಿನ್ನ, ಬೆಳ್ಳಿ ಅಥವಾ ಉಕ್ಕಿನ, ಸಾ., ನೀಳ ಘನಾಕೃತಿಯ) ಗಟ್ಟಿ ; ಲೋಹದ ಇಟ್ಟಿಗೆ, ಪಾಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Íngrain ಇನ್‌ಗ್ರೇನ್ (ಗು.) (ನಾಮಪದಗಳ ಹಿಂದೆ Íngrain, ನಾಮಪದಗಳ ಮುಂದೆ ಅಥವಾ ವಿಶೇಷಣವಾಗಿ Ingraín). ಕಡುಗೆಂಪು ಬಣ್ಣ ಹಾಕಿದ; ಎಳೆಯಲ್ಲೇ ಬಣ್ಣಹಾಕಿದ; ಗಟ್ಟಿಬಣ್ಣ ಹಾಕಿದ. ಸ್ವಭಾವಸಿದ್ಧವಾದ; ರೂಢಮೂಲವಾದ; ಚೆನ್ನಾಗಿ ಬೇರೂರಿದ. **Ingraíned** — ಗ್ರೇನ್ಡ್ (ಗು.) ಆಳವಾಗಿ ಬೇರುಬಿಟ್ಟಿರುವ; ಸುದೃಢ. (ಮನುಷ್ಯರ ವಿಷಯದಲ್ಲಿ) ಸಂಪೂರ್ಣವಾದ; ಪರಮ; ಪಕ್ಕಾ. **Ingraínedly** — ನೆಡ್ಲಿ (ಕ್ರಿ. ವಿ.)

Ingráte ಇನ್‌ಗ್ರೇಟ್ (ಗು., ನಾ.) (ಪ್ರಾಚೀ. ಪ್ರ.) ಕೃತಜ್ಞತೆಯಿಲ್ಲದ(ವನು); ಕೃತಘ್ನ(ನಾದ); ಉಪಕಾರ ಮರೆಯುವ.

Ingrátiate ಇನ್‌ಗ್ರೇಷಿಯೇಟ್ (ಕ್ರಿ. ಸಕ.) (ಒಬ್ಬನ) ಅನುಗ್ರಹ ಸಂಪಾದಿಸು; (ಒಬ್ಬನ) ಮೆಚ್ಚಿಕೆ, ಒಲವು, ಪಡೆ (Oneself *with*). **Ingrátiatingly** (ಕ್ರಿ. ವಿ.)

Ingrátitude ಇನ್‌ಗ್ರ್ಯಾಟಿಟ್ಯೂಡ್ (ನಾ.) ಕೃತಜ್ಞತೆಯಿಲ್ಲದಿರುವುದು; ಕೃತಘ್ನತೆ; ನೆರವು ಮರವು.

Ingravéscent ಇನ್‌ಗ್ರವೆಸೆಂಟ್ (ಗು.) (ವೈ. ಶಾ.) (ರೋಗ, ಮೊ. ವು) ದಿನ ದಿನಕ್ಕೆ ಉಲ್ಬಣವಾಗುತ್ತಿರುವ. **Ingravéscence** (ನಾ.)

Ingrédient ಇನ್‌ಗ್ರೀಡಿಯಂಟ್ (ನಾ.) ಮಿಶ್ರಣದಲ್ಲಿ ಸೇರಿರುವ, — ಘಟಕ, ಅಂಶ; ಘಟಕಾಂಶ.

Íngress ಇನ್‌ಗ್ರೆಸ್ (ನಾ.) ಒಳಹೊಗುವುದು; ಪ್ರವೇಶ; ಪ್ರವೇಶಾಧಿಕಾರ.

Íngrowing ಇನ್‌ಗ್ರೋಇಂಗ್ (ಗು.) ಒಳಗಡೆಗೆ ಬೆಳೆಯುತ್ತಹೋಗುವ (ಮು., ಉಗುರಿನ ವಿಷಯದಲ್ಲಿ : ಮಾಂಸದೊಳಕ್ಕೆ ಬೆಳೆಯುತ್ತಹೋಗುವ). **Íngrowth** (ನಾ.)

Ínguinal ಇಂಗ್ವಿನಲ್ (ಗು.) ತೊಡೆಯ ಸಂದಿನ(ಲ್ಲಿರುವ)

Ingúrgitate ಇನ್‌ಗರ್ಜಿಟೇಟ್ (ಕ್ರಿ. ಸಕ.) ಅತ್ಯಾಶೆಯಿಂದ ನುಂಗು. (ರೂಪ.) ನುಂಗಿಹಾಕು. **Ingurgitátion** (ನಾ.)

Inhábit ಇನ್‌ಹ್ಯಾಬಿಟ್ (ಕ್ರಿ. ಸಕ.) (ಮನುಷ್ಯ, ಪ್ರಾಣಿ: ಒಂದು ಪ್ರಾಂತ, ಊರು, ಮನೆ, ಮೊ. ಲ್ಲಿ) ವಾಸಿಸು, ನೆಲಸಿರು, ಬೀಡು ಮಾಡು (ರೂಪ. ಸಹ). **Inhábitable** (ಗು.) ವಾಸಕ್ಕೆ ತಕ್ಕ; ವಾಸಾರ್ಹ. **Inhábitant** — ಟಂಟ್ (ನಾ.) ನಿವಾಸಿ; ಒಕ್ಕಲು. **Inhabitátion** — ಟೇಷನ್ (ನಾ.) ವಾಸ(ವಾಗಿರುವುದು). **Inhábitancy** — ಟನ್ಸಿ (ನಾ.) (ಮು., ನಿವಾಸಿಯ ಹಕ್ಕು ಬಾಧ್ಯತೆಗಳನ್ನು ಪಡೆಯುವುದಕ್ಕಾಗಿ ಗೊತ್ತಾದ ಒಂದು ಅವಧಿಯ ವರೆಗೆ) ನಿವಾಸಿಯಾಗಿರುವುದು; ವಾಸಸ್ಥಾನ; ನಿವಾಸ.

Inhále ಇನ್‌ಹೇಲ್ (ಕ್ರಿ. ಸಕ.) ಉಸಿರೆಳೆದುಕೊ; (ಗಾಳಿ, ಅನಿಲ, ಮೊ. ನ್ನು) ಒಳಕ್ಕೆ ಸೇದಿಕೊ. (ಮು., ಹೊಗೆಸೊಪ್ಪಿನ) ಹೊಗೆಯನ್ನು (ಶ್ವಾಸ ಕೋಶಗಳಿಗೆ) ಸೇದಿಕೊ (ರೂಪ. ಸಹ). **Inháler** (ನಾ.) (ಹೊಗೆ) ಸೇದುವವನು; (ಹೊಗೆ) ಸೇದುವ ಸಲಕರಣೆ. **Inhalátion** — ಹ — (ನಾ.)

Inharmónic ಇನ್‌ಹಾರ್ಮಾನಿಕ್ (ಗು.) ಸ್ವರಮೇಳನವಿಲ್ಲದ; ಅಪಸ್ವರದ. **Inharmónious** — ಮೋನಿಯಸ್ (ಗು.) = Inharmonic; ಸಮರಸವಲ್ಲದ; ಹೊಂದದ. **Inharmóniously** (ಕ್ರಿ. ವಿ.)

Inhére ಇನ್‌ಹಿಯರ್ (ಕ್ರಿ. ಅಕ.) (ಗುಣ, ಹಕ್ಕು, ಮೊ.) ಸೇರಿರು; ಅಂತರ್ಗತವಾಗಿರು; ಸಹಜವಾಗಿ ನೆಲಸಿರು (*In* ಉಪ. ದೊಡನೆ). **Inhérence** (ನಾ.); **Inhérent** (ಗು.); **Inhérently** (ಕ್ರಿ. ವಿ.); **Inhésion** ಇನ್‌ಹೀಷನ್ (ನಾ.) ಅಂತರ್ಗತವಾಗಿರುವುದು.

Inhérit ಇನ್‌ಹೆರಿಟ್ (ಕ್ರಿ. ಸಕ.) (ಆಸ್ತಿ, ಅಂತಸ್ತು, ಬಿರುದು, ಮೊ. ನ್ನು) ವಂಶಾನುಕ್ರಮವಾಗಿ, ಉತ್ತರಾಧಿಕಾರದಿಂದ, — ಪಡೆ. (ಗುಣ, ಶೀಲ ಸ್ವಭಾವ, — ಇವನ್ನು) ತನ್ನ ಪೂರ್ವಜರಿಂದ ಪಡೆ; ಉತ್ತರಾಧಿಕಾರಿಯಾಗು. **Inhéritable** (ಗು.) ಪಿತ್ರಾರ್ಜಿತವಾಗಿ ಪಡೆಯಬಹುದಾದ (ರೂಪ. ಸಹ). **Inheritabílity** (ನಾ.); **Inhéritance** (ನಾ.) ಉತ್ತರಾಧಿಕಾರದಿಂದ, ಪಿತ್ರಾರ್ಜಿತವಾಗಿ, ಪಡೆಯುವುದು, ಪಡೆದದ್ದು; ರಿಕ್ಥ; ಉತ್ತರಾಧಿಕಾರ; ಪಿತ್ರಾರ್ಜಿತ (ರೂಪ. ಸಹ). **Inhéritor** (ನಾ.) ಉತ್ತರಾಧಿಕಾರಿ. **Inhéritress, Inhéritrix** (ನಾ., ಸ್ತ್ರೀ.)

Inhésion. **Inhere** ನೋಡಿ.

Inhíbit ಇನ್‌ಹಿಬಿಟ್ (ಕ್ರಿ. ಸಕ.) (ಮು., ಕ್ರೈಸ್ತ ಮಠೀಯ ನ್ಯಾಯದಲ್ಲಿ, ಒಬ್ಬನನ್ನು ಒಂದು ಕೆಲಸ ಮಾಡದಂತೆ) ನಿಷೇಧಿಸು; ಪ್ರತಿಬಂಧಿಸು; (ಪಾದ್ರಿಯನ್ನು) ವೈದಿಕ ವೃತ್ತಿ ಮಾಡದಂತೆ ನಿಷೇಧಿಸು; (ಕಾರ್ಯ, ಕಾರ್ಯಗತಿ, ಮೊ. ನ್ನು) ತಡೆ, ಅಡ್ಡಿಮಾಡು. **Inhibítion** (ನಾ.) (ಕ್ರಿಯಾರ್ಥಗಳಲ್ಲಿ); (ಮ. ಶಾ.) ಒಂದು ಕಾರ್ಯ ನಿಷಿದ್ಧವಾದುದೆಂದು ಸಹಜವಾಗಿಯೊ ಪ್ರೇರಣೆಯಿಂದಲೊ ಹಿಂಜರಿಯುವ ಪ್ರವೃತ್ತಿ; ಸಂಯಮ ಪ್ರವೃತ್ತಿ. **Inhíbitory** — ಟರಿ (ಗು.)

Inhóspitable ಇನ್‌ಹಾಸ್ಪಿಟಬ್‌ಲ್ (ಗು.) ಆದರಣೆ ತೋರದ; ಅನಾದರಣೆ ಮಾಡುವ; ಸತ್ಕರಿಸದ. (ಪ್ರದೇಶ, ಕಡಲ ಕರೆ, ಮೊ.) ರಕ್ಷಣೆ ಕೊಡದ; ನಿರಾಶ್ರಯ; ನಿರ್ಭಿಕ್ಷ. **Inhóspitableness** (ನಾ.); **Inhóspitably** (ಕ್ರಿ. ವಿ.); **Inhospitálity** (ನಾ.) ಅನಾದರಣೆ.

Inhúman ಇನ್‌ಹ್ಯೂಮನ್ (ಗು.) (ಮನುಷ್ಯ, ನಡತೆ) ಅಮಾನುಷ; ಪಶುಪ್ರಾಯವಾದ; ಕ್ರೂರ; ರಾಕ್ಷಸೀಯ; ನಿರ್ದಯ. **Inhúmanly** (ಕ್ರಿ. ವಿ.); **Inhumánity** — ಹ್ಯುಮ್ಯಾನಿಟಿ (ನಾ.)

Inhúme ಇನ್‌ಹ್ಯೂಮ್ (ಕ್ರಿ. ಸಕ.) (ಹೆಣ) ಹೂಳು. **Inhumátion** — ಹ್ಯು — (ನಾ.)

Inímical ಇನಿಮಿಕಲ್ (ಗು.) ಹಗೆತನವುಳ್ಳ; ವೈರದ; ವಿರೋಧವಾದ (*To* ಉಪ. ದೊಡನೆ). ಪ್ರತಿಕೂಲವಾದ; ಕೇಡು ತರುವ; ಹಾನಿಕರವಾದ (*To* ಉಪ. ದೊಡನೆ). **Inímically** (ಕ್ರಿ. ವಿ.)

Inímitable ಇನಿಮಿಟಬ್‌ಲ್ (ಗು.) ಅನುಕರಿಸಲಾಗದ; ಅಸಮಾನವಾದ; ಎಣೆಯಿಲ್ಲದ. **Inímitableness** (ನಾ.); **Inímitably** (ಕ್ರಿ. ವಿ.)

Iníquity ಇನಿಕ್ವಿಟಿ (ನಾ.) ಅಧರ್ಮ; ಪಾಪ; ದುಷ್ಟತನ; ಶುದ್ಧ ಅನ್ಯಾಯ; ಕೇಡಿಗತನ. (ಬ. ವ. ದಲ್ಲಿ) ಪಾಪಗಳು; ದುಷ್ಕೃತ್ಯಗಳು. **Iníquitous** (ಗು.); **Iníquitously** (ಕ್ರಿ. ವಿ.)

Inítial ಇನಿಷ(ಷ್)ಲ್ (ಗು., ನಾ., ಕ್ರಿ. ಸಕ.) ಮೊದಲಿನ(ಲ್ಲಿಯ); ಮೊದಲಲ್ಲಿ ಬರುವ; ಆರಂಭದ; ಆದ್ಯ (I. stage ಆರಂಭ ದಶೆ. I. expenses ಮೊದಲ ವೆಚ್ಚಗಳು. I. letter ಪದದ ಮೊದಲಿನ ಅಕ್ಷರ : ಆದ್ಯಕ್ಷರ). (ನಾ., ಬ. ವ. ದಲ್ಲಿ) ಹೆಸರಿನ ಮತ್ತು ಉಪ ನಾಮದ ಮೊದಲಕ್ಷರಗಳು. (ಕ್ರಿ.) (ಹೆಸರಿನ ಮತ್ತು ಉಪ ನಾಮದ) ಮೊದಲಕ್ಷರಗಳಿಂದ, — ಗುರುತು ಮಾಡು, ರುಜು ಮಾಡು. **Inítially** (ಕ್ರಿ. ವಿ.); **Inítiate** ಇನಿಷಿಯೇಟ್ (ಕ್ರಿ. ಸಕ.), — ಯಟ್ (ಗು., ನಾ.) ಮೊದಲು ಮಾಡು; ಆರಂಭಿಸು; ಉಪಕ್ರಮಿಸು; ತೊಡಗಿಸು; (ಒಬ್ಬನನ್ನು ಸಂಘ, ಉದ್ಯೋಗ, ಗುಟ್ಟು, ರಹಸ್ಯ, ಶಾಸ್ತ್ರ, ಮೊ. ಕ್ಕೆ ವಿಧಿವತ್ತಾಗಿ, ಪ್ರಾರಂಭ ಸಂಸ್ಕಾರ ನಡಸಿ) ಸೇರಿಸು, ಪ್ರವೇಶಗೊಳಿಸು; ದೀಕ್ಷೆ ಕೊಡು. (ಗು., ನಾ.) ಪ್ರವೇಶ ಪಡೆದ(ವನು); ದೀಕ್ಷೆ ಪಡೆದ(ವನು); ದೀಕ್ಷಿತ. **Initiátion** (ನಾ.); **Inítiative** — ಷಿಯೆಟಿವ್, — ಷ್ಯಟಿವ್ (ನಾ., ಗು.) ಮೊದಲ ಹೆಜ್ಜೆ; ಪ್ರಾರಂಭ; ತೊಡಗು [Take the i. (ಮಾಡುವುದಕ್ಕೆ) ಮುಂತೊಡಗು, ಮುಂದಾಗು. Have the i. ಆರಂಭ ಶಕ್ತಿ, ಅಧಿಕಾರ, ಪಡೆದಿರು. (ಸೈನ್ಯ) ತನ್ನ ಹಂಚಿಕೆಗೆ ಅನುಗುಣವಾಗಿ ಶತ್ರುಗಳನ್ನು ನಡಸುವ ಶಕ್ತಿ ಪಡೆದಿರು]. (ಸ್ವಿಟ್ಸರ್ಲಂಡಿನಲ್ಲಿಯಂತೆ, ಶಾಸನಸಭೆಯ ಹೊರಗೆ) ಸಾಮಾನ್ಯ ಪ್ರಜೆಗಳು ಹೊಸ ಮಸೂದೆಯನ್ನು ಸೂಚಿಸಲು ಅಥವಾ ಅದನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾನೂನು ಮಾಡಲು ಪಡೆದಿರುವ ಹಕ್ಕು. (ಗು.) ಆರಂಭದ; ಉಪಕ್ರಮದ. **Inítiator** —ಯೇ— (ನಾ.); **Inítiatrix** (ನಾ., ಸ್ತ್ರೀ.); **Inítiatory** — ಯಟರಿ (ಗು.)

Inítiate, Inítiative, etc. **Initial** ನೋಡಿ.

Inítio (L) ಇನಿಷಿಯೋ (ಕ್ರಿ ವಿ.) (ಪುಸ್ತಕದ ವಾಕ್ಯಗಳು, ಮೊ. ಗಳ ವಿಷಯದಲ್ಲಿ) ಮೊದಲನಲ್ಲಿ, ಆರಂಭದಲ್ಲಿ; (ಸಂಕ್ಷಿಪ್ತ: Init.)

Injéct ಇನ್‌ಜೆಕ್ಟ್ (ಕ್ರಿ. ಸಕ.) (ದ್ರವ, ಔಷಧ, ಮೊ. ನ್ನು) ನಾಳ, ಮೊ. ಗಳೊಳಕ್ಕೆ ಪಿಚಕಾರಿಯಿಂದ (ಹೇಗೊ ಹಾಗೆ) ಒಳಹೊಗಿಸು, ಒಳನುಗ್ಗಿಸು, ಚುಚ್ಚಿ ಹೊಗಿಸು (*Into* ಉಪ. ದೊಡನೆ). **Injéction** (ನಾ.) (ಕ್ರಿಯಾರ್ಥಗಳಲ್ಲಿ); ಒಳಹೊಗಿಸಿದ, — ದ್ರವ, ದ್ರಾವಣ; ಸೂಜಿಮದ್ದು. (I.-engine ತಣ್ಣೀರ ಧಾರೆಯನ್ನು ಎರಚಿ ಆವಿಯನ್ನು ದ್ರವೀಕರಿಸುವ ಎಂಜಿನ್ನು). **Injéctor** (ನಾ.) ಒಳನುಗ್ಗಿಸುವವನು; — ವದು.

Injudícious ಇನ್‌ಜುಡಿಷಸ್ (ಗು.) ವಿವೇಚನೆ ಮಾಡದ; ವಿಚಾರಹೀನ; ಸಂದರ್ಭೋಚಿತವಲ್ಲದ; ಅಯುಕ್ತ. **Injudíciously** (ಕ್ರಿ. ವಿ.); **Injudíciousness** (ನಾ.)

Injúnction ಇನ್‌ಜಂಕ್‌ಷನ್ (ನಾ.) ಅಧಿಕಾರಪೂರ್ವಕವಾಗಿ ಕೊಟ್ಟ ಎಚ್ಚರಿಕೆ, ಆಜ್ಞೆ, ಕಟ್ಟಳೆ. (ನ್ಯಾ. ಶಾ.) (ತಪ್ಪಿತ ಮಾಡದಂತೆ ಒಬ್ಬನನ್ನು ಪ್ರತಿಬಂಧಿಸಿ ಕೊಟ್ಟ, ಅಥವಾ ಅವನಿಂದ ಕೇಡು ನಷ್ಟಗಳಿಗೊಳಗಾದವನಿಗೆ ಪರಿಹಾರ, ಮೊ. ನ್ನು ಕೊಡಲು ನಿರ್ಬಂಧಿಸುವ) ತಡೆಯಪ್ಪಣೆ, ಪ್ರತಿಬಂಧಕಾಜ್ಞೆ, ನಷ್ಟಪರಿಹಾರಾಜ್ಞೆ. **Injúnct** (ಕ್ರಿ. ಸಕ.) (ಬಳ. ಮಾ.) ಆಜ್ಞೆಯಿಂದ ತಡೆಮಾಡು.

Ínjure ಇನ್‌ಜ(ಜು)ರ್ (ಕ್ರಿ. ಸಕ.) ಕೆಡುಕು, ಕೇಡು, ಹಾನಿ, — ಮಾಡು; ನೋವು, ಬಾಧೆ, —ಕೊಡು; (ಒಬ್ಬನಿಗೆ) ಅನ್ಯಾಯ, ಅಪರಾಧ, ಮಾಡು. **Ínjured** ಇನ್‌ಜರ್ಡ್ (ಗು.) ಕೇಡಿಗೊಳಗಾದ; ಘಾಸಿಹೊಂದಿದ; ನೋವು ಪಟ್ಟ; ನೊಂದ (In an i. voice ನೊಂದ ದನಿಯಲ್ಲಿ). **Injúrious** ಇನ್‌ಜೂರಿಯಸ್ (ಗು) ಅನ್ಯಾಯದ; ಕೇಡು ಮಾಡುವ. (ಮಾತು) ತೆಗಳಿಕೆಯ, ದೂಷಣೆಯ, ನಿಂದೆಯ, ಅಪಮಾನಕರವಾದ; ಕೆಡುಕು ಮಾಡುವ; ಹಾನಿಕರ. **Injúriously** (ಕ್ರಿ. ವಿ.); **Injúriousness** (ನಾ.); **Ínjury** ಇನ್‌ಜ(ಜು)ರಿ (ನಾ.) ಕೇಡು; ಕೆಡುಕು; ಹಾನಿ; ನಷ್ಟ; ಅನ್ಯಾಯ; ಬಾಧೆ.

Injústice ಇನ್‌ಜಸ್ಟಿಸ್ (ನಾ.) ಅನ್ಯಾಯ; ಅಧರ್ಮ; ಅನ್ಯಾಯ ಕೃತ್ಯ (You do him an i. ಅವನಿಗೆ ಅನ್ಯಾಯ ಮಾಡುತ್ತೀಯೆ)

Ink ಇಂಕ್ (ನಾ., ಕ್ರಿ. ಸಕ.) (ಲೇಖನಿಯಿಂದ ಬರೆಯುವ, ಕೆಂಪು, ಕಪ್ಪು, ಮೊ. ಬಣ್ಣಗಳ) ಶಾಯಿ, ಮಸಿ [Marking i. (Marking ನೋಡಿ)]; ಮುದ್ರಣ ಮಾಡಲು ಉಪಯೋಗಿಸುವ ಜಿಗುಟಾದ ಮಸಿ: ಅಚ್ಚುಮಸಿ (=Printer's i.). ಕೆಲವು ಜಾತಿಯ ಮೀನುಗಳು ತಾವು ತಪ್ಪಿಸಿಕೊಂಡು ಹೋಗಲು ಅನುಕೂಲಿಸುವಂತೆ ತಮ್ಮ ದೇಹದೊಳಗಿನ ಒಂದು ಚೀಲದಿಂದ ಹೊರಚೆಲ್ಲುವ ಒಂದು ಕಪ್ಪು ದ್ರವ. (ಕ್ರಿ.) ಮಸಿ ಬಳಿ, ಹಚ್ಚು; ಮಸಿಯಿಂದ ಗುರುತು ಮಾಡು (*In, over* ಮೊ. ಉಪ. ದೊಡನೆ). ಮುದ್ರಣ ಮಾಡುವುದಕ್ಕಾಗಿ ಅಚ್ಚುಮೊಳೆ, ಮೊ. ಕ್ಕೆ ಶಾಯಿ, — ಬಳಿ, ಹಚ್ಚು. **I.-bag** (ಕೆಲವು ಮೀನುಗಳಲ್ಲಿ) ಮಸಿಕೋಶ. **I.-bottle, -pot** ಮಸಿ ಕುಡಿಕೆ; ದೌತಿ. **I.-horn** ಹಿಂದೆ ಶಾಯಿ ತುಂಬಲು ಉಪಯೋಗಿಸುತ್ತಿದ್ದ ಸಣ್ಣ ಕೊಂಬಿನ ಪಾತ್ರೆ; ಶಾಯಿ ಕೊಂಬು. **I.-pad** ರಬ್ಬರ್ ಮುದ್ರೆ, ಮೊ. ಕ್ಕೆ ಶಾಯಿ ಹಚ್ಚುವ ಮೆತ್ತೆ; ಮಸಿ ಮೆತ್ತೆ. **Inkstand** (ಒಂದು ಅಥವಾ ಹೆಚ್ಚು ದೌತಿಗಳನ್ನಿಡುವುದಕ್ಕ, ಸಾ., ಲೇಖನಿಯಾನರೆ, ಮೊ. ಗಳೊಂದಿಗೆ ಇರುವ) ದೌತಿ ಮಣೆ. **I.-well** ಇಳಿಮೇಜಿನಲ್ಲಿ ತೂತು ಮಾಡಿ ಅದರೊಳಗಿಟ್ಟಿರುವ ಶಾಯಿ ಕುಡಿಕೆ. **Ínker** (ನಾ.) ವರ್ತಮಾನವನ್ನು ಶಾಯಿಯಲ್ಲಿ ಬರೆದಿಡುವ ದೂರಲೇಖಕ (ತಂತಿಯ ವರ್ತಮಾನದ) ಸಲಕರಣೆ. (ಮುದ್ರಣ, ಮೊ.) ಶಾಯಿ (ಹಚ್ಚುವ) ಉರುಳೆ. **Ínkiness** (ನಾ.); **Ínkless** (ಗು.); **Ínky** (ಗು.) ಮಸಿಯ; ಮಸಿಯಿಂದ ಬರೆದ; ಮಸಿಯನ್ನುಪಯೋಗಿಸುವ; ಗ್ರಂಥ ಸಂಬಂಧವಾದ. ಮಸಿಕಪ್ಪಿನ; ಮಸಿ ತೊಡೆದ; ಮಸಿ ಹಚ್ಚಿದ.

Ínkling ಇಂಕ್ಲಿಂಗ್ (ನಾ.) ಸುಳಿವು; ಸೂಚನೆ; ಜಾಡು; (ಒಂದರ ವಿಷಯದಲ್ಲಿ) ಸೂಕ್ಷ್ಮವಾದ ತಿಳಿವು, ಅನುಮಾನ, ಗುಮಾನಿ (*Of* ಉಪ. ದೊಡನೆ)

Ínland ಇನ್‌ಲಂ(ಲ್ಯಾಂ)ಡ್ (ನಾ., ಗು., ಕ್ರಿ. ವಿ.) ದೇಶದ ಒಳಭಾಗ; ಒಳನಾಡು. ಒಳನಾಡಿನಲ್ಲಿರುವ; ಸಮುದ್ರಕ್ಕೆ, ಎಲ್ಲೆಗೆ, (ಬಹು) ದೂರದಲ್ಲಿರುವ; ನಡು ನಾಡಿನ; ಒಂದು ದೇಶದ ಎಲ್ಲೆಯೊಳಗೆ ನಡೆಯುವ; ಒಳದೇಶದ [I. trade ಒಳದೇಶದ ವ್ಯಾಪಾರ. I. duty ಒಳದೇಶದ (ವ್ಯಾಪಾರದಮೇಲಿನ) ಸುಂಕ. I. revenue (ತೆರಿಗೆ, ಒಳಸುಂಕ, ಮೊ. ಸೇರಿದ) ಒಳದೇಶದ ಉತ್ಪತ್ತಿ, ಹುಟ್ಟುವಳಿ]. (ಕ್ರಿ. ವಿ.) ನಾಡಿನ ಒಳಭಾಗದಲ್ಲಿ; ಒಳನಾಡಿನ ಕಡೆಗೆ. **Ínlander** —ಲಂ— (ನಾ.); **Inlándish** —ಲ್ಯಾಂ— (ಗು.) ಒಳನಾಡಿನ ರೀತಿಯ, ಸ್ವಭಾವದ.

Inláy ಇನ್‌ಲೇ (ಕ್ರಿ. ಸಕ.; ಭೂತ., ಭೂ. ಕೃ. Inlaid); **Ínlay, Inláy** (ನಾ.) ಎರಡರ ಮೇಲ್ಮೈಯೂ ಒಂದೇ ಮಟ್ಟದಲ್ಲಿರುವಂತೆ ಒಂದು ವಸ್ತುವನ್ನು ಮತ್ತೊಂದರೊಳಗೆ ಹುದುಗಿಸು, ಹದಿ; ಬೇರೊಂದು ವಸ್ತುವನ್ನು ಹುದುಗಿಸಿ ಅಲಂಕರಿಸು, ಕೂರಿಸು, ಖಚಿತ ಮಾಡು. ದೊಡ್ಡ ದಪ್ಪಕಾಗದದಲ್ಲಿ ಮಧ್ಯೆ ಕತ್ತರಿಸಿ ಮಾಡಿದ ಅವಕಾಶದಲ್ಲಿ ಒಂದು ಪುಟ, ಚಿತ್ರಪಟ ಅಥವಾ ಚಿತ್ರಕೊರೆತ — ಇವನ್ನು (ಇವುಗಳ ರಕ್ಷಣೆಗಾಗಿ, ಅಂಚು ಹೆಚ್ಚಾಗಿರುವುದಕ್ಕಾಗಿ) ಹದ್ದಿಸು. (ನಾ.) ಕೆತ್ತನೆ(ಯ ಕೆಲಸ)

Ínlet ಇನ್‌ಲೆಟ್ (ನಾ.) ಸಮುದ್ರದ ಸಣ್ಣ ಒಳಚಾಚು, ತೋಳು; ಖಾರಿ. ಒಳಕ್ಕೆ ಹೋಗುವ ದಾರಿ; ಪ್ರವೇಶ ದ್ವಾರ. (ಕೆತ್ತನೆ, ಮೊ. ಕೆಲಸದಲ್ಲಿ) ಹದ್ದಿಸಿದ ತುಂಡು.

Ínlier ಇನ್‌ಲೈಅರ್ (ನಾ.) (ಭೂ. ವಿ.) ಮೇಲ್ಭಾಗದಲ್ಲಿ ಕಾಲಕ್ರಮೇಣ ಆದ ಶಿಲಾರಚನೆಯಿಂದ ಪೂರ್ತಿಯಾಗಿ ಮುಚ್ಚಿರುವ ತಳ ಭಾಗದ ಶಿಲಾರಚನೆ.

Ínly ಇನ್ಲಿ (ಕ್ರಿ. ವಿ.) (ಕಾವ್ಯ) ಒಳಗೆ; ಅಂತರಂಗದಲ್ಲಿ; ಹೃದಯದಲ್ಲಿ; ಮನಃಪೂರ್ವಕವಾಗಿ.

Ínlying ಇನ್‌ಲೈಯಿಂಗ್ (ಗು.) ಒಳಗಿರುವ; ಅಂತಸ್ಥ.

Ínmate ಇನ್‌ಮೇಟ್ (ನಾ.) ಮನೆ, ಮೊ. ಗಳಲ್ಲಿ ವಾಸಮಾಡುವವನು; ನಿವಾಸಿ (ಮು., ಅಂಥ ಹಲವರಲ್ಲೊಬ್ಬನು); ಸಹ ನಿವಾಸಿ.

Ínmost ಇನ್‌ಮೋಸ್ಟ್, — ಮೊಸ್ಟ್ (ಗು.) ಅತ್ಯಂತ ಒಳಗಡೆಯ; (ರೂಪ.) ಅತ್ಯಂತ ಗಾಢವಾದ, ಆಳವಾದ.

Inn ಇನ್ (ನಾ.) ಪ್ರಯಾಣಿಕರು ಹಣಕೊಟ್ಟು ತಂಗುವುದಕ್ಕೂ ಇತರ ಸೌಕರ್ಯಗಳನ್ನು ಪಡೆಯುವುದಕ್ಕೂ ಅನುಕೂಲ ಮಾಡಿರುವ ಸಾರ್ವಜನಿಕ ಪ್ರವಾಸಿ ಗೃಹ: ತಂಗುದಾಣ; ತಳಿ (ಗ್ರಾಂ.); ಹೋಟಲು; [Innkeeper (ನಾ.) ಪ್ರವಾಸಿ ಗೃಹದ ಯಜಮಾನ]. Inns of Court ವಕೀಲ ವೃತ್ತಿಯನ್ನು ಅವಲಂಬಿಸಲು ಅನುಮತಿ ಕೊಡುವ ಸರ್ವಾಧಿಕಾರವುಳ್ಳ ನಾಲ್ಕು ನ್ಯಾಯವಾದಿ ಸಂಸ್ಥೆಗಳು; ಲಂಡನ್ ಪಟ್ಟಣದಲ್ಲಿರುವ ಈ ಸಂಘಗಳ ಕಟ್ಟಡಗಳು. Inns of Chancery ಹಿಂದೆ ಲಂಡನ್ ಪಟ್ಟಣದಲ್ಲಿ ವಕೀಲ ಪರೀಕ್ಷೆಗೆ ಓದುವ ವಿದ್ಯಾರ್ಥಿಗಳು ವಾಸಿಸುತ್ತಿದ್ದ ಕಟ್ಟಡಗಳು; ಆ ಕಟ್ಟಡಗಳಲ್ಲಿದ್ದ ಸಂಘಗಳು.

Innáte ಇನ್ನೆ(ನೆ)ೕಟ್, **Ínnate** —ನ್ನೇ— (ಗು.) ಒಳಹುಟ್ಟಿದ; ಹುಟ್ಟಿನಿಂದ ಬಂದ; ಸ್ವಭಾವಸಿದ್ಧವಾದ; ಸಹಜವಾದ. **Innátely** (ಕ್ರಿ. ವಿ.); **Innáteness** (ನಾ.)

Innávigable ಇನ್ಯಾ(ನ್ನ್ಯಾ)ವಿಗಬ್‌ಲ್ (ಗು.) ಹಡಗು ಸಂಚರಿಸಲಾಗದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Inner ಇನರ್ (ಗು., ನಾ.) ಒಳಗಿನ ; ಒಳಗಡೆಯ ; ಆಂತರಿಕ [The i. man ಮನುಷ್ಯನ ಆತ್ಮ ; ಮನಸ್ಸು ; ಅಂತರಾತ್ಮ ; (ಹಾಸ್ಯವಾಗಿ) ಹೊಟ್ಟೆ (Refreshed his i. man ತನ್ನ ಹೊಟ್ಟೆ ತುಂಬಿಸಿಕೊಂಡನು). I. tube (ಚಕ್ರದ) ಗಾಳಿಪಟ್ಟೆಯೊಳಗಿರುವ ಗಾಳಿತುಂಬುವ ಪ್ರತ್ಯೇಕವಾದ ರಬ್ಬರುಕೊಳವೆ]. (ನಾ.) (ಬಂದೂಕಿನ) ಗುರಿಪಟಲದಲ್ಲಿ ಗೂಳಿಗಣ್ಣಿಗೆ ಹೊದ್ದಿರುವ ಸುತ್ತಲಿನ ಹೊರ ಭಾಗ ; ಆ ಭಾಗಕ್ಕೆ ತಗುಲಿದ ಗುಂಡು. **Innermost** — ಮೋ(ೀ)ಸ್ಟ್ (ಗು.)

Innérvate ಇನ(ನ್ನ)ರ್ವೇಟ್ (ಕ್ರಿ. ಸಕ.) (ಅಂಗ, ಮೊ. ಕ್ಕೆ) ನರಶಕ್ತಿಯನ್ನು ಅಥವಾ ನರಗಳನ್ನು ಒದಗಿಸು. **Innervátion** (ನಾ.)

Innings ಇನಿಂಗ್ಸ್ (ನಾ. ; ಬ. ವ. ಅದೇ) (ಕ್ರಿಕೆಟ್, ಮೊ. ಆಟ) ಒಂದು ಪಕ್ಷದವರು ದಾಂಡು ಹಿಡಿದು ಆಡಿದ ಆಟದ ಸರದಿ ; ದಾಂಡುಗಾರನು ತನ್ನ ಸರದಿಯಲ್ಲಿ ಆಡುವ ಆಟ, ಮಾಡುವ ಓಟ. (ರೂಪ.) (ರಾಜಕೀಯ ಪಕ್ಷ, ಮತ, ಮೊ. ಗಳ) ಅಧಿಕಾರ ಕಾಲ, ಪ್ರಾಬಲ್ಯ ಕಾಲ.

Innocent ಇನೊಸೆಂಟ್ (ಗು., ನಾ.) ನಿರ್ದೋಷಿಯಾದ ; ನಿಷ್ಕಳಂಕ ; ಪಾಪ ರಹಿತ ; ಅರಿಯದ ; (ಅಪರಾಧ, ಮೊ. ವಿಷಯದಲ್ಲಿ) ತಪ್ಪಿತಸ್ಥನಲ್ಲದ ; ನಿರಪರಾಧಿಯಾದ. [Windows i. of glass (ಬಳ. ಮಾ.) ಗಾಜಿಲ್ಲದ ಕಿಟಕಿ]. ಸರಳ ; ನಿಷ್ಕಪಟ ; ಕೃತ್ರಿಮವರಿಯದ ; ಕೆಡುಕು ಮಾಡದ. (ನಾ.) ಕಳಂಕವಿಲ್ಲದ ವ್ಯಕ್ತಿ (ಮು., ಎಳೆಯ ಮಗು). [Innocents' Day (ಹೆರಡ್ ದೊರೆ ಕೊಲ್ಲಿಸಿದ ಮಕ್ಕಳ ಜ್ಞಾಪಕಾರ್ಥವಾಗಿ ಡಿಸೆಂಬರ್ ೨೮ನೆಯ ತಾರೀಖಿನಲ್ಲಿ ಆಚರಿಸುವ) ಹಸುಳೆಗಳ ದಿನ. Massacre of the innocents (ಪಾರ್ಲಿಮೆಂಟಿನ ಅಸಂ.) ಅಧಿವೇಶನದ ಕಡೆಯ ಭಾಗದಲ್ಲಿ ಕಾಲವಿಲ್ಲದ್ದರಿಂದ ತೆಗೆದುಕೊಳ್ಳಲಾಗದ ಮಸೂದೆಗಳ ಪರಿತ್ಯಾಗ]. ಸರಳ ಸ್ವಭಾವದವನು ; ಏನೂ ಅರಿಯದವನು ; ತಿಳಿಗೇಡಿ ; ಗಾಂಪ. **Innocence** (ನಾ.) ; **Innocency** (ನಾ.) (ವಿರ. ಪ್ರ.) ; **Innocently** (ಕ್ರಿ. ವಿ.)

Innócuous ಇನಾಕ್ಯುಅಸ್ (ಗು.) (ಮು., ಹಾವುಗಳ ವಿಷಯದಲ್ಲಿ) ಕೆಡುಕು ಮಾಡದ ; — ಆಗದ. **Innócuously** (ಕ್ರಿ. ವಿ.) ; **Innócuousness** (ನಾ.) ; **Innocúity** ಇನೊಕ್ಯೂಯಿಟಿ (ನಾ.)

Innóminate ಇನಾ(ನ್ನಾ)ಮಿನೆಟ್ (ಗು.) ಹೆಸರಿಲ್ಲದ ; ಅನಾಮಕ. (ಅಂ. ರ. ಶಾ.) I. bone (ಮೂರು ಮೂಲಾಸ್ಥಿಗಳು ಸೇರಿ ಆಗಿರುವ) ರೊಂಡಿ ಮೂಳೆ, ಕಟ್ಯಸ್ಥಿ.

Innovate ಇನೊವೇಟ್ (ಕ್ರಿ. ಅಕ.) ಹೊಸದಾದುದನ್ನು ತರು ; ನವೀನತೆಯನ್ನು ಕಲ್ಪಿಸು ; (ಸ್ಥಾಪಿತವಾಗಿದ್ದುದರಲ್ಲಿ) ಬದಲಾವಣೆ ಮಾಡು ; ಹೊಸ ರೀತಿಯನ್ನು ಆಚರಣೆಗೆ ತರು. **Innovátion** (ನಾ.) ; **Innovator** (ನಾ.) ; **Innovatory** (ಗು.)

Innóxious ಇನಾ(ನ್ನಾ)ಕ್‌ಷಸ್ (ಗು.) ಕೇಡುಂಟುಮಾಡದ ; ಕೆಡುಕು ಆಗದ ; ನಿರುಪದ್ರವ. **Innóxiously** (ಕ್ರಿ. ವಿ.) ; **Innóxiousness** (ನಾ.)

Innuéndo ಇನ್ನ್ಯುಎಂಡೊ (ನಾ. ; ಬ. ವ. -oes —ಡೋಸ್ ; ಕ್ರಿ. ಅಕ.) (ಸಾ., ಹೀನಾಯದ) ವ್ಯಂಗ್ಯೋಕ್ತಿ ; ಯಾಸೆ ಮಾತು. (ಕ್ರಿ.) ವ್ಯಂಗ್ಯವಾಗಿ ಸೂಚಿಸು.

Innúmerable ಇನ್ಯೂ(ನ್ನ್ಯೂ)ಮೆರಬ್‌ಲ್ (ಗು.) ಲೆಕ್ಕವಿಲ್ಲದ ; ಎಣಿಸಲಾಗದ ; ಅಸಂಖ್ಯಾತ.

Innutrítion ಇನ್ಯು(ನ್ನ್ಯು)ಟ್ರಿಷನ್ (ನಾ.) ಆಹಾರಪೋಷಣೆಯಿಲ್ಲದಿರುವುದು ; ಪೋಷಣಾಭಾವ. **Innutrítious** (ಗು.) ಪುಷ್ಟಿಕರವಲ್ಲದ.

Inobsérvance ಇನ್‌ಅಬ್ಸರ್ವನ್ಸ್ (ನಾ.) ಗಮನವಿಲ್ಲದಿರುವುದು ; ಅನವಧಾನ. (ಕಾನೂನು, ಮೊ. ಗಳನ್ನು) ಅನುಸರಿಸಿ ನಡೆಯದಿರುವುದು ; ಅಪಾಲನೆ.

Inoccupátion ಇನ್‌ಅಕ್ಯುಪೇಷನ್ (ನಾ.) ಉದ್ಯೋಗವಿಲ್ಲದಿರುವುದು : ನಿರುದ್ಯೋಗ. ಅನಾಕ್ರಮಿತ ಸ್ಥಿತಿ.

Inóculate ಇನ್‌ಆಕ್ಯುಲೇಟ್ (ಕ್ರಿ. ಸಕ.) (ಮನುಷ್ಯನಿಗೆ ಅಥವಾ ಪ್ರಾಣಿಗೆ ಬಹು ಸೌಮ್ಯಸ್ಥಿತಿಯಲ್ಲಿ ರೋಗವನ್ನುಂಟುಮಾಡಿ ಆ ರೋಗ ಮುಂದೆ ತಗುಲದಂತೆ ರಕ್ಷಿಸುವ ಉದ್ದೇಶದಿಂದ) ರೋಗವಿಷವನ್ನು ಅಥವಾ ಸೂಕ್ಷ್ಮರೋಗಾಣುಗಳನ್ನು (ರಕ್ತದ) ಒಳಕ್ಕೆ ಹೊಗಿಸು, ಚುಚ್ಚು ; (ಒಬ್ಬನಲ್ಲಿ) ಹೀಗೆ (ರೋಗ) ಸ್ಥಾಪನೆ ಮಾಡು ; ಸೋಂಕು ಸೇರಿಸು (*On*, *into* ಉಪ. ದೊಡನೆ). (ಒಂದು ಗಿಡದ) ಎಲೆಮೊಗ್ಗನ್ನು ಅಥವಾ ಅಂಕುರವನ್ನು (ಮತ್ತೊಂದು) ಗಿಡಕ್ಕೆ ಸೇರಿಸು : ಕಣ್ಣು ಹಾಕು. **Inoculátion** (ನಾ.) ; **Inóculative** (ಗು.) ; **Inóculator** (ನಾ.)

Inódorous ಇನ್‌ಓಡೊರಸ್ (ಗು.) ವಾಸನೆಯಿಲ್ಲದ ; ನಿರ್ಗಂಧ.

Inoffénsive ಇನ್‌ಅಫೆನ್ಸಿವ್ (ಗು.) ಕೆಡುಕು ಮಾಡದ ; ಅಸಹ್ಯಕರವಲ್ಲದ; ನಿರಾಕ್ಷೇಪ. **Inoffénsively** (ಕ್ರಿ. ವಿ.) ; **Inoffénsiveness** (ನಾ.)

Inoffícious ಇನ್‌ಅಫಿಷಸ್ (ಗು.) ಉದ್ಯೋಗ, ಕರ್ತವ್ಯ, — ಇಲ್ಲದ. (ನ್ಯಾ. ಶಾ.) ಕರ್ತವ್ಯನೀತಿಗೆ ಅನುಸಾರವಾಗಿಲ್ಲದ.

Inóperable ಇನ್‌ಅಪರಬ್‌ಲ್ (ಗು.) (ವೈ. ಶಾ.) (ದೇಹದಲ್ಲಿಯ ಗಡ್ಡೆ, ಮೊ. ವು) ಶಸ್ತ್ರಚಿಕಿತ್ಸೆ ಮಾಡಲಾಗದ.

Inóperative ಇನ್‌ಆಪೆರಟಿವ್ (ಗು.) ಕೆಲಸ ಮಾಡದ ; ಫಲ ತೋರದ ; ಪರಿಣಾಮವುಂಟುಮಾಡದ. (ನ್ಯಾ. ಶಾ.) ಕಾರ್ಯರೂಪಕ್ಕೆ ಬರುವ ಶಕ್ತಿಯಿಲ್ಲದ ; ವ್ಯವಹಾರ ಶಕ್ತಿಯಿಲ್ಲದ ; ಸಲ್ಲದ.

Inópportune ಇನ್‌ಆಪರ್‌ಟ್ಯೂನ್ (ಗು.) ಸಮಯೋಚಿತವಲ್ಲದ ; ಅಕಾಲದ. **Inópportunely** (ಕ್ರಿ. ವಿ.) ; **Inópportuneness** (ನಾ.)

Inórdinate ಇನ್‌ಆರ್ಡಿನೆಟ್ (ಗು.) ಮಿತಿ ಮೀರಿದ ; ಅತಿಯಾದ ; ಹದಗೆಟ್ಟ ; ಅವ್ಯವಸ್ಥೆಯ. **Inórdinately** (ಕ್ರಿ. ವಿ.)

Inorgánic ಇನ್‌ಆರ್ಗ್ಯಾನಿಕ್ (ಗು.) ಕ್ರಮಬದ್ಧವಾದ ಭೌತ ರಚನೆಯಿಲ್ಲದ ; ನಿರವಯವ. (ರ. ವಿ.) (ಸಂಯುಕ್ತಗಳು, ಮೊ. ಗಳ ವಿಷಯದಲ್ಲಿ) ಜೈವಿಕ ವಸ್ತುಗಳ ರಚನೆಯಲ್ಲಿ ಸೇರಿರದ ; ಅಜೈವಿಕ (ಜೀವಸಂಬಂಧವಿಲ್ಲದ) (I. chemistry ಖನಿಜ ವಸ್ತುಗಳಿಗೆ ಸಂಬಂಧಿಸಿದ ರಸಾಯನ ವಿಜ್ಞಾನ ; ಅಜೈವಿಕ ರಸಾಯನ ವಿಜ್ಞಾನ). ಸ್ವಾಭಾವಿಕವಾದ ಬೆಳವಣಿಗೆಯಿಂದ ಆಗಿರದ. ಹೊರಗಿನ ; ಬಾಹ್ಯ.

Inorganizátion ಇನ್‌ಆರ್ಗನೈಸೇಷನ್ (ನಾ.) ವ್ಯವಸ್ಥೆಯಿಲ್ಲದಿರುವುದು ; ಅವ್ಯವಸ್ಥೆ.

Inornáte ಇನ್‌ಆರ್ನೇಟ್ (ಗು.) ಅಲಂಕಾರವಿಲ್ಲದ ; ನಿರಲಂಕಾರ ; ನಿರಾಡಂಬರ.

Inósculate ಇನ್‌ಆಸ್ಕ್ಯುಲೇಟ್ (ಕ್ರಿ.) (ರಕ್ತನಾಳ, ಮೊ.) (ಒಂದರೊಳಗೊಂದು) ಸಂಧಿಸು, ಬೆಳು ; ಒಂದರ ಕೊನೆ ಮತ್ತೊಂದರ ನಾಳದೊಡನೆ ಸಂಬಂಧ ಪಡೆದಿರು (*With* ಉಪ. ದೊಡನೆ). (ನಾರು, ಎಳೆ, ಮೊ. ವು) ಅನ್ಯೋನ್ಯವಾಗಿ ಕೂಡಿಕೊ, ಕೂಡಿಸು ; ಒಂದರೊಡನೊಂದು ಹೆಣೆ(ದುಕೊ). **Inosculátion** (ನಾ.)

Inpouring ಇನ್‌ಪೋರಿಂಗ್ (ಗು., ನಾ.) ಒಳಕ್ಕೆ ಸುರಿಯುವ(ವುದು) ; ಒಳ ಸುರಿತ.

Inquest ಇನ್‌ಕ್ವೆಸ್ಟ್ (ನಾ.) (ನಿಜಸ್ಥಿತಿಯನ್ನು ಕಂಡುಹಿಡಿಯಲು ನಡಸುವ) ನ್ಯಾಯಾನುಸಾರವಾದ ಅಥವಾ ನ್ಯಾಯಾಧಿಪತಿ ಮಾಡುವ ವಿಚಾರಣೆ ; ಮಹಜರು ; ಪಂಚನಾಮೆ; =Coroner's i. (Coroner ನೋಡಿ). (Great, last, i. ಅಂತಿಮ ಮಹಾ ವಿಚಾರಣೆ). ದುರ್ಮರಣ ವಿಚಾರಣಾಧಿಕಾರಿಯ ನ್ಯಾಯದರ್ಶಿ ಸಭೆ [Grand i. = Grand jury (Jury ನೋಡಿ). G. i. of the nation ಇಂಗ್ಲೆಂಡಿನ (House of Commons) ಪ್ರಜಾ ಪ್ರತಿನಿಧಿ ಸಭೆ]

Inquíetude ಇನ್‌ಕ್ವೈಎಟ್ಯೂಡ್ (ನಾ.) (ಮನಸ್ಸಿನ ಅಥವಾ ದೇಹದ) ಅಸ್ವಸ್ಥತೆ ; ಅಶಾಂತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Inquíre, En- ಇನ್‌ಕ್ವಯರ್, ಎನ್ — (ಕ್ರಿ.) (ಒಂದು ವಿಷಯವಾಗಿ) ಅನ್ವೇಷಣ ಮಾಡು, ವಿಚಾರ ಮಾಡು, ವಿಚಾರಿಸು (*Into* ಉಪ. ದೊಡನೆ). (ಒಬ್ಬನನ್ನು, ಒಂದರ ವಿಷಯವಾಗಿ) ಕೇಳಿ ತಿಳಿದುಕೊ ; ವಿಷಯ ಕೇಳು (*Of* person, *about*, *after*, thing, etc.). (I. *after*, *for*, him ಅವನು ಹೇಗಿರುವನೆಂದು, ಅವನ ಯೋಗಕ್ಷೇಮವನ್ನು, ವಿಚಾರಿಸು). (ಅಂಗಡಿಯಲ್ಲಿ ಸಾಮಾನು, ಮೊ. ಗಳಿಗಾಗಿ) ವಿಚಾರಿಸು (*For* ಉಪ. ದೊಡನೆ). (ಒಬ್ಬನ ಹೆಸರು, ಉದ್ಯೋಗ, ಮೊ. ನ್ನು ತಿಳಿಯಲು) ಕೇಳು, ವಿಚಾರಿಸು (*Whether*, *how* ಮೊ. ಪದದೊಡನೆ). **Inquíringly** (ಕ್ರಿ. ವಿ.) ; **Inquíry, En-** — ಯರಿ (ನಾ.) ಕೇಳುವುದು ; ಕೇಳಿಕೆ ; ಪ್ರಶ್ನೆ ; ವಿಚಾರಣೆ ; ಶೋಧನೆ ; ತನಿಖೆ (Make inquiries ವಿಚಾರ ಮಾಡು. Court of i. ಒಬ್ಬ ಅಧಿಕಾರಿಯಮೇಲಿನ ಅಥವಾ ಸಿಪಾಯಿಯಮೇಲಿನ ಆಪಾದನೆಯನ್ನು ವಿಚಾರಿಸುವ ನ್ಯಾಯಸ್ಥಾನ)

Inquisítion ಇನ್‌ಕ್ವಿಸಿಷನ್ (ನಾ.) ಹುಡುಕುವುದು ; ಶೋಧನೆ ; ವಿಚಾರಣೆ; ತನಿಖೆ. (ಅಧಿಕಾರಿ ಅಥವಾ ನ್ಯಾಯಾಧಿಕಾರಿ ನಡಸುವ) ಕ್ರಮಬದ್ಧ ವಿಚಾರಣೆ ; ತಪಸೀಲು ವಿಚಾರಣೆ. [(ರೋ. ಕ್ಯಾ.) The I. ಪಾಷಂಡ ವಾದವನ್ನು ಅಡಗಿಸಲು ನಿಯಮಿಸಿದ್ದ ಮರೀಯ ನ್ಯಾಯಸ್ಥಾನ (= Holy Office)]. **Inquisítional** (ಗು.) ; **Inquísitive** (ಗು.) ವಿಚಾರ ಮಾಡುವ ; ಅನ್ವೇಷಣಶೀಲ ; ತಿಳಿದುಕೊಳ್ಳುವ ಕುತೂಹಲವುಳ್ಳ ; ಗುಟ್ಟು ತಿಳಿಯಲೆಳಸುವ. (ಅಧಿಕಪ್ರಸಂಗಿತನದಿಂದ) ಪ್ರಶ್ನಿಸುವ, ಭೇದಿಸುವ, ತಲೆಹಾಕುವ. **Inquísitively** (ಕ್ರಿ. ವಿ.) ; **Inquísitiveness** (ನಾ.) ; **Inquísitor** (ನಾ.) (ಅಧಿಕಾರ ಪೂರ್ವಕವಾಗಿ) ವಿಚಾರಣೆ ನಡಸುವವನು ; ವಿಚಾರಣಾಧಿಕಾರಿ. (ರೋ. ಕ್ಯಾ.) ಪಾಷಂಡ ವಿಚಾರಣಾಧಿಕಾರಿ [Grand I. (ಕೆಲವು ದೇಶಗಳಲ್ಲಿ) (ರೋ. ಕ್ಯಾ.) ಪಾಷಂಡ ವಿಚಾರಣೆಯ ನ್ಯಾಯಸ್ಥಾನದ ಅಧ್ಯಕ್ಷ. I. General (ಸ್ಪಯ್ನ್ ದೇಶದಲ್ಲಿಯ ಈ ಅಧಿಕಾರಿ)]. **Inquisitórial** — ಟೋ — (ಗು.) ಈ ವಿಚಾರಣಾಧಿಕಾರಿಯಂಥ. ರೇಗಿಸುವಂತೆ ಹೊಂಚಿ ಹುಡುಕುವ. **Inquisitórially** (ಕ್ರಿ. ವಿ.)

Ínroad ಇನ್‌ರೋಡ್ (ನಾ.) ಶತ್ರು ದಾಳಿ ; ದುರಾಕ್ರಮಣ ; ಅತಿಕ್ರಮಣ.

Ínrush ಇನ್‌ರಷ್ (ನಾ.) ಒಳ ನುಗ್ಗು(ವುದು)

Insálivate ಇನ್‌ಸ್ಯಾಲಿವೇಟ್ (ಕ್ರಿ. ಸಕ.) (ಆಹಾರಕ್ಕೆ) ಜೊಲ್ಲು ಬೆರಸು. **Insalivátion** (ನಾ.)

Insalúbrious ಇನ್‌ಸಲ್ಯೂಬ್ರಿಯಸ್ (ಗು.) (ವಾಯುಸ್ಥಿತಿ, ಸ್ಥಳ) ಅನಾರೋಗ್ಯ(ವಾದ). **Insalúbrity** (ನಾ.)

Insáne ಇನ್‌ಸೇನ್ (ಗು.) ಹುಚ್ಚು ಹಿಡಿದ ; ಬುದ್ಧಿಯಿಲ್ಲದ ; ಮತಿವಿಕಲ (I. asylum ಹುಚ್ಚಾಸ್ಪತ್ರೆ). **Insánely** (ಕ್ರಿ. ವಿ.) ; **Insánity** — ಸ್ಯಾನಿಟಿ (ನಾ.) ಹುಚ್ಚು ; ಉನ್ಮಾದ ; ಬುದ್ಧಿ ಭ್ರಮಣೆ.

Insánitary ಇನ್‌ಸ್ಯಾನಿಟರಿ (ಗು.) ಆರೋಗ್ಯ ಕೆಡಿಸುವ ; ಅನಾರೋಗ್ಯಕರ(ವಾದ)

Insátiable ಇನ್‌ಸೇಷ(ಷಿಅ)ಬ್‌ಲ್ (ಗು.) ತೃಪ್ತಿ ಪಡಿಸಲಾಗದ ; ತಣಿಸಲಾಗದ ; ಅತ್ಯಾಸೆಯುಳ್ಳ (*Of* ಉಪ. ದೊಡನೆ). **Insatiabílity** (ನಾ.) ; **Insátiably** (ಕ್ರಿ. ವಿ.) ; **Insátiate** — ಷಿಯೆಟ್ (ಗು.) ಎಂದಿಗೂ ತೃಪ್ತಿಪಡದ ; ನಿತ್ಯ ಅತೃಪ್ತ.

Inscríbe ಇನ್‌ಸ್ಕ್ರೈಬ್ (ಕ್ರಿ. ಸಕ.) (ಮಾತುಗಳು, ಮೊ. ನ್ನು ಕಲ್ಲು, ಲೋಹ, ಕಾಗದ, ಮೊ. ಗಳಮೇಲೆ) ಬರೆ, ಲೇಖಿಸು, ಕೆತ್ತು. (ಒಬ್ಬನ ಹೆಸರನ್ನು) ಪಟ್ಟಿಯಲ್ಲಿ ಬರೆ. [(ಮು., ಭೂ. ಕ್ರ.) (ಸರ್ಕಾರದ ಅಥವಾ ಇತರ ಸಾಲದ ವಿಷಯದಲ್ಲಿ) ಕೊಟ್ಟ ಸಾಲಕ್ಕೆ ಕೈಯಿಂದ ಕೈಗೆ ಚಲಾವಣೆ ಮಾಡಲಾಗುವ ಪತ್ರಗಳನ್ನು ಕೊಡದೆ ಹಿಡುವಳಿದಾರರ ಹೆಸರನ್ನು (ಸಾಲ ಪಡೆದ ಸರ್ಕಾರದ ಅಥವಾ ಇತರ ಸಂಘದ)] ಮುಖ್ಯ ಕಚೇರಿಯಲ್ಲಿಟ್ಟಿರುವ ಪಟ್ಟಿಯಲ್ಲಿ ದಾಖಲು ಮಾಡಿಕೊಂಡು ಪಾಲುಗಳಾಗಿ ಕೊಡು. (Inscribed stock ಹೆಸರು ದಾಖಲು ಮಾಡಿಕೊಂಡಿರುವ ಪಾಲು ಬಂಡವಾಳ ಪತ್ರ). (ಹಾಳೆ, ಶಾಸನದ ಕಲ್ಲು, ಮೊ. ಗಳಮೇಲೆ ಅಕ್ಷರಗಳಿಂದ) ಗುರುತಿಸು, ಬರೆ. (ಗ್ರಂಥ, ಮೊ. ನ್ನು ಸಂಕ್ಷೇಪವಾದ ಅರ್ಪಣ ಬರೆದು) ಅಂಕಿತ ಮಾಡು. (ಜ್ಯಾ.) ಒಂದು ಆಕೃತಿಯ ಒಳಗಡೆ ಮತ್ತೊಂದು ಆಕೃತಿಯನ್ನು ಅದರ ನಿರ್ದಿಷ್ಟ ಬಿಂದುಗಳು ಹೊರ ಆಕೃತಿಯ ಪರಿಧಿಯಲ್ಲಿರುವಂತೆ ರೇಖಿಸು: ಒಳರೇಖಿಸು. **Inscríbable** (ಗು.) ; **Inscríption** ಇನ್‌ಸ್ಕ್ರಿಪ್‌ಷನ್ (ನಾ.) (ಮು., ಸ್ಮಾರಕ ವಸ್ತು, ನಾಣ್ಯ, ಮೊ. ಗಳಮೇಲೆ) ಕೆತ್ತಿದ ಮಾತುಗಳು ; (ಸ್ಮಾರಕ) ಲೇಖನ ; ಶಾಸನ ; (ಸರ್ಕಾರದ ಅಥವಾ ಇತರ ಸಂಘಗಳ ಸಾಲದ ವಿಷಯದಲ್ಲಿ ಪತ್ರದಾರರ ಹೆಸರನ್ನು) ದಾಖಲೆಯ ಪುಸ್ತಕದಲ್ಲಿ ಬರೆದಿಡುವುದು. **Inscríptional** (ಗು.) ; **Inscríptive** (ಗು.)

Inscrútable ಇನ್‌ಸ್ಕ್ರೂಟಬ್‌ಲ್ (ಗು.) ಒಳಹೊಕ್ಕು ಕಂಡುಹಿಡಿಯಲಾಗದ ; ಭೇದಿಸಲಾಗದ ; ದುರ್ಭೇದ್ಯ ; ಮರ್ಮವರಿಯಲಾಗದ ; ನಿಗೂಢ. **Inscrutabílity** (ನಾ.) ; **Inscrútableness** (ನಾ.) ; **Inscrútably** (ಕ್ರಿ. ವಿ.)

Ínsect ಇನ್‌ಸೆಕ್ಟ್ (ನಾ.) (ಪ್ರಾ. ವಿ.) ದೇಹವು ತಲೆ, ಎದೆ, ಹೊಟ್ಟೆ ಎಂಬ ಮೂರು ಪ್ರತ್ಯೇಕ ಭಾಗಗಳಾಗಿಯೂ, ಸಾ., ಎರಡು ಅಥವಾ ನಾಲ್ಕು ರೆಕ್ಕೆಗಳೂ, ಎದೆಯ ಪ್ರಾಂತದಲ್ಲಿ ಆರು ಕಾಲುಗಳೂ, ಉಳ್ಳ ಒಂದು ಚಿಕ್ಕ ಅಕಶೇರುಕ ಪ್ರಾಣಿ ; ಕೀಟ. (ಶಿಥಿಲವಾಗಿ) ಕ್ರಿಮಿ ; ಹುಳು. (ರೂಪ.) ಹುಲು ಮನುಷ್ಯ ; ಅಲ್ಪ ಪ್ರಾಣಿ. (I.-powder ಕೀಟ ನಿವಾರಕ, ಕೀಟ ನಾಶಕ, — ಚೂರ್ಣ, ಪುಡಿ). **Insectárium** (ನಾ.) ಕೀಟವರ್ಧನ ಸ್ಥಳ. **Insécticide** — ಸೈಡ್ (ನಾ.) (ಮು., ಕೀಟಗಳನ್ನು ಕೊಲ್ಲುವುದಕ್ಕಾಗಿ ತಯಾರಿಸಿದ) ಕೀಟ ನಾಶಕ **Insecticídal** (ಗು.) ; **Insectívora** ಇನ್ಸೆಕ್ಟಿವೊರ (ನಾ., ಬ. ವ.) (ಪ್ರಾ. ವಿ.) ಕೀಟಾಹಾರಿಗಳಾದ ಅನೇಕ ಜಾತಿಯ ಚತುಷ್ಪಾದಿಗಳು, ಬಾವಲಿಗಳು, ಮೊ. ; ಕೀಟಾಹಾರಿ ವರ್ಗ. **Inséctivore** (ನಾ.) ಕೀಟ ಭಕ್ಷಕ (ಪ್ರಾಣಿ, ಸಸ್ಯ). **Insectívorous** (ಗು.) ; **Insectólogy** (ನಾ.) ಕೀಟ ಶಾಸ್ತ್ರ (ಮು., ಮನುಷ್ಯನಿಗೆ ಕೀಟಗಳ ಆರ್ಥಿಕ ಸಂಬಂಧ ವಿಚಾರವನ್ನು ಕುರಿತದ್ದು)

Insecúre ಇನ್‌ಸಿಕ್ಯೂರ್ (ಗು.) ಭದ್ರವಿಲ್ಲದ ; ನೆಚ್ಚಿಕೆಯಿಲ್ಲದ ; ಭರವಸೆಯಿಲ್ಲದ. (ನೀರ್ಗಲ್ಲು, ನೆಲ, ಮೊ.) ದೃಢವಿಲ್ಲದ ; ಕುಸಿದುಹೋಗಬಹುದಾದ. **Insecúrely** (ಕ್ರಿ. ವಿ.) ; **Insecúrity** (ನಾ.)

Inséminate ಇನ್‌ಸೆಮಿನೇಟ್ (ಕ್ರಿ. ಸಕ.) (ಬೀಜ, ಮೊ. ನ್ನು) ಬಿತ್ತು ; ಬೀಜಾವಾಪ ಮಾಡು (*In* ಉಪ. ದೊಡನೆ) (ರೂಪ. ಸಹ). **Insemination** (ನಾ.)

Insénsate ಇನ್‌ಸೆನ್ಸೆಟ್ (ಗು.) (ಒಂದರ) ಅರಿವು ತಟ್ಟದ ; ಮನೋವೇದನೆಯಿಲ್ಲದ ; ಭಾವನಾ ಶೂನ್ಯ ; ದೇಹವೇದನಾ ಶೂನ್ಯ. ಬುದ್ಧಿಯಿಲ್ಲದ ; ದಡ್ಡ ; ಜಡ. **Insénsately** (ಕ್ರಿ. ವಿ.)

Insénsible ಇನ್‌ಸೆನ್ಸಿಬ್‌ಲ್ (ಗು.) ಗೋಚರವಾಗದಷ್ಟು ಸೂಕ್ಷ್ಮವಾದ, ಕ್ರಮ ಕ್ರಮವಾದ ; ಗಮನಕ್ಕೆ ಬರದ ; ಅಗ್ರಾಹ್ಯ ; ಪ್ರಜ್ಞೆಯಿಲ್ಲದ ; ಮೂರ್ಛಿತ (He fell down and was long i. ಅವನು ಕೆಳಕ್ಕೆ ಬಿದ್ದು ಬಹು ಕಾಲ ಮೂರ್ಛಿತನಾಗಿದ್ದನು). ಅರಿವಿಗೆ ಬಂದಿಲ್ಲದ ; ತಿಳಿದಿಲ್ಲದ (*Of*, *to*, *how* ಮೊ. ಪದದೊಡನೆ). ರಸಭಾವ ಶೂನ್ಯ ; ಕಲ್ಲೆದೆಯ ; ನಿರ್ದಯ. **Insensibílity** (ನಾ.) ವೇದನಾ ಶೂನ್ಯತೆ ; ಸೂಕ್ಷ್ಮವರಿಯದಿರುವುದು. ಔದಾಸೀನ್ಯ ; ಉಪೇಕ್ಷೆ (*To* ಉಪ. ದೊಡನೆ). ಪ್ರಜ್ಞೆಯಿಲ್ಲದಿರುವುದು ; ಮೂರ್ಛೆ ; ಮೈಮರವು. **Insénsibly** (ಕ್ರಿ. ವಿ.) ; **Insénsitive** (ಗು.) (ಸ್ಪರ್ಶ, ದೃಷ್ಟಿ, ಬೆಳಕು, ಮಾನಸಿಕ ಅಥವಾ ನೈತಿಕ ಪ್ರಭಾವ, ಮೊ. ನ್ನು) ಗ್ರಹಿಸಲಾಗದ ; ಶೀಘ್ರಪರಿಣಾಮಿಯಲ್ಲದ. (ಇಂದ್ರಿಯ) ಗ್ರಹಣಶಕ್ತಿಯಿಲ್ಲದ ; ಜಡ (*To* ಉಪ. ದೊಡನೆ). **Insénsitiveness** (ನಾ.); **Inséntient** — ಸೆನ್‌ಷ(ಷಿಯೆ)ಂಟ್ (ಗು.) ಅಚೇತನ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Insénsitive, Inséntient. Insensible ನೋಡಿ.

Inséparable ಇನ್‌ಸೆಪರಬ್‌ಲ್ (ಗು., ನಾ.) ಬೇರೆ ಮಾಡಲಾಗದ ; ಪ್ರತ್ಯೇಕಿಸಲಾಗದ ; ಅಗಲಿಸಲಾಗದ ; ಅಗಲದ. [(ವ್ಯಾ.) I. prefix ಅದನ್ನೇ ಪ್ರತ್ಯೇಕ ಪದವಾಗಿ ಉಪಯೋಗಿಸಲಾಗದ ಪೂ. ಪ್ರ. (ಉದಾ., dis-, mis-, un-)]. (ನಾ. ; ಸಾ., ಬ. ವ. ದಲ್ಲಿ) ಅಗಲಿಸಲಾಗದ, ಅಗಲದ, ಎಡೆ ಬಿಡದ, — ವ್ಯಕ್ತಿ, ವಸ್ತು (ಮು., ಸ್ನೇಹಿತ). **Inseparabílity** (ನಾ.) ; **Inséparably** (ಕ್ರಿ. ವಿ.)

Insért ಇನ್‌ಸರ್ಟ್ (ಕ್ರಿ. ಸಕ.) (ಒಂದು ವಸ್ತುವನ್ನು ಮತ್ತೊಂದರಲ್ಲಿ, ಅಂಚುಗಳ ನಡುವೆ) ಒಳಸೇರಿಸು, ಒಳಜೋಡಿಸು, ತುರುಕು (*In, into, between* ಮೊ. ಉಪ. ದೊಡನೆ). (ಲೇಖನ, ವರ್ತಮಾನ ಪತ್ರಿಕೆ, ಮೊ. ಗಳಲ್ಲಿ ಅಕ್ಷರ, ಮಾತು, ಮೊ. ನ್ನು) ಮಧ್ಯೆ ಸೇರಿಸು (*In, into* ಉಪ. ದೊಡನೆ). **Insértion** (ನಾ.) (ಕ್ರಿಯಾರ್ಥಗಳಲ್ಲಿ) ; (ಲೇಖನದಲ್ಲಿ ಅಥವಾ ಮುದ್ರಣದಲ್ಲಿ) ಸೇರಿಸಿದ್ದು. ಸಾದಾ ಪದಾರ್ಥದಲ್ಲಿ ಕಸೂತಿ ಹಾಕಿದ ಅಲಂಕಾರ (Lace i.). (ಅಂ. ರ. ಶಾ.) (ಸ್ನಾಯು, ಅಂಗ, ಮೊ. ಗಳ) ಸೇರಿಕೆಯ ರೀತಿ, ಜೋಡಣೆ.

Ínset ಇನ್‌ಸೆಟ್ (ನಾ. ; ಕ್ರಿ. ಸಕ. ; ಭೂತ, ಭೂ. ಕೃ. Inset or Insetted) (ಒಂದು ಹಾಳೆಯಲ್ಲಿ ಅಥವಾ ಪುಸ್ತಕದಲ್ಲಿ) ಸೇರಿಸಿದ ಹೆಚ್ಚಿನ ಪುಟ(ಗಳು). ದೊಡ್ಡ ನಕ್ಷೆ, ಮೊ. ಗಳ ಎಲ್ಲೆಯೊಳಗಡೆ ಸೇರಿಸಿದ ಸಣ್ಣ ನಕ್ಷೆ, ಮೊ. ವು; ಒಳ ಸೇರಿಕೆ. ಉಡುಪಿನೊಳಕ್ಕೆ ಸೇರಿಸಿದ ಬಟ್ಟೆಯ ತುಂಡು. (ಕ್ರಿ.) ಒಳ ಸೇರಿಸು ; ಒಳ ಜೋಡಿಸು.

Ínshóre ಇನ್‌ಷೋರ್ (ಕ್ರಿ. ವಿ., ಗು.) ದಡದ, ಕರೆಯ, — ಹತ್ತಿರದ(ಲ್ಲಿ) I. of (— ಕ್ಕಿಂತ) ದಡಕ್ಕೆ ಹತ್ತಿರವಾದ (ವಾಗಿ)

Ínside ಇನ್‌ಸೈಡ್ (ನಾ., ಗು., ಕ್ರಿ. ವಿ., ಉಪ.) ಒಳ ಪಕ್ಕ ; ಒಳಗಡೆ ; ಒಳ ಮೈ ; ಒಳ ಭಾಗ ; ಒಳ ಪ್ರದೇಶ. (ಬಳ. ಮಾ.) ಜಠರ ಮತ್ತು ಕರುಳು. ಅಂತರಂಗ ; ಮನಸ್ಸು ; ಆಲೋಚನೆ. (The ínside of a week ವಾರದ ಮಧ್ಯ ಭಾಗ). (Insíde) ಮಜಲುಬಂಡಿ, ಮೊ. ಗಳಲ್ಲಿ ಒಳಗೆ ಕುಳಿತಿರುವ ಪ್ರಯಾಣಿಕ. (Turn ínside out ಒಳಗು ಹೊರಗಾಗುವಂತೆ ತಿರುವಿಹಾಕು ; ಪೂರ್ತಿ ಹುಡುಕು). (ಗು.) (Ínside) ಒಳಗಿನ ; ಒಳಗಿರುವ ; ಒಳಗಿನಿಂದ ಬಂದ (I. information ಹೊರಗಿನವರಿಗೆ ತಿಳಿಯಲು ಸಾಧ್ಯವಿಲ್ಲದ ಒಳ ಸುದ್ದಿ). (ಕ್ರಿ. ವಿ.) (Insíde) ಒಳಗೆ ; ಒಳಗಡೆಯಲ್ಲಿ [I. of a week (ಬಳ. ಮಾ.) ಒಂದು ವಾರದೊಳಗಾಗಿ]. (ಉಪ.) (Ínside) ಒಳ ಪಕ್ಕದಲ್ಲಿ ; ಒಳಗಡೆ. **Insíder** (ನಾ.) ಒಳಗಿನವನು ; ಒಂದು ಸಂಘ, ಸಂಸ್ಥೆ, ಮೊ. ಗಳಲ್ಲಿ ಸೇರಿರುವವನು ; ಗುಟ್ಟು ಬಲ್ಲವನು ; ಅಂತರಂಗಕ್ಕೆ ಸೇರಿದವನು.

Insídious ಇನ್‌ಸಿಡಿಯಸ್ (ಗು.) ದ್ರೋಹದ ; ವಂಚನೆಯ ; ಮೋಸದ ; ಗುಟ್ಟಾಗಿ ಅಥವಾ ತಂತ್ರದಿಂದ ನಡೆಯುವ (I. disease ಅಗೋಚರವಾಗಿ ಹರಡುವ ರೋಗ). **Insídiously** (ಕ್ರಿ. ವಿ.) ; **Insídiousness** (ನಾ.)

Ínsight ಇನ್‌ಸೈಟ್ (ನಾ.) (ಶೀಲಸ್ವಭಾವ, ಸಂದರ್ಭ, ಮೊ. ನ್ನು ತಿಳಿಯಲು) ಒಳಹೊಕ್ಕು ನೋಡುವುದು ; ಒಳ ನೋಟ, ದೃಷ್ಟಿ ; ಸೂಕ್ಷ್ಮ ಪರಿಜ್ಞಾನ ; ಸೂಕ್ಷ್ಮ ಗ್ರಹಣ ಶಕ್ತಿ.

Insígnia ಇನ್‌ಸಿಗ್ನಿಯ (ನಾ., ಬ. ವ.) (ಅಧಿಕಾರ, ಘನತೆ, ಮೊ. ಗಳ) ವಿಶೇಷ ಚಿಹ್ನೆಗಳು, ಲಾಂಛನಗಳು ; ಬಿರುದುಗಳು.

Insigníficant ಇನ್‌ಸಿಗ್ನಿಫಿಕಂಟ್ (ಗು.) ಮುಖ್ಯವಲ್ಲದ ; ಅಲ್ಪ ; ತುಚ್ಛ ; ನಿಕೃಷ್ಟ ; ಅನಾಮಧೇಯ ; ಅರ್ಥವಿಲ್ಲದ. **Insigníficance** (ನಾ.) ; **Insigníficancy** (ನಾ.) ; **Insigníficantly** (ಕ್ರಿ. ವಿ.)

Insincére ಇನ್‌ಸಿನ್ಸಿಯರ್ (ಗು.) ನಿಷ್ಕಾಪಟ್ಯವಿಲ್ಲದ ; ಯಾಥಾರ್ಥ್ಯವಿಲ್ಲದ ; ಅಪ್ರಾಮಾಣಿಕ ; ವಂಚನೆಯ ; ಕಪಟಾಚರಣೆಯ. **Insincérely** (ಕ್ರಿ. ವಿ.) ; **Insincérity**— ಸೆರಿಟಿ (ನಾ.)

Insínuate ಇನ್‌ಸಿನ್ಯುಯೇಟ್ (ಕ್ರಿ. ಸಕ.) (ಒಂದನ್ನು, ಒಂದು ಸ್ಥಳಕ್ಕೆ) ಕೊಂಚ ಕೊಂಚವಾಗಿ, ಉಪಾಯವಾಗಿ, — ಸೇರಿಸು, ನುಸುಳಿಸು. (ತಾನು ಒಂದು ಸ್ಥಳಕ್ಕೆ, ಒಬ್ಬರ ಪ್ರೀತಿಗೆ, ಒಂದು ಅಧಿಕಾರಕ್ಕೆ) ಸೇರಿಕೊ, ನುಸುಳಿಕೊ, ಹೊಸೆದುಕೊಂಡು ಹೋಗು (*Into* ಉಪ. ದೊಡನೆ). ಅಭಿಪ್ರಾಯವನ್ನು ಅಪ್ರತ್ಯಕ್ಷವಾಗಿ ತಿಳಿಸು, ವ್ಯಂಗ್ಯವಾಗಿ ಸೂಚಿಸು. **Insínuatingly** (ಕ್ರಿ. ವಿ.) ; **Insinuátion** (ನಾ.) ; **Insínuator** (ನಾ.) ; **Insínuative** (ಗು.)

Insípid ಇನ್‌ಸಿಪಿಡ್ (ಗು.) ರುಚಿಯಿಲ್ಲದ ; ನಿಸ್ಸಾರವಾದ ; ಸಪ್ಪೆಯಾದ; ಜೀವಕಳೆಯಿಲ್ಲದ ; ಜಡ ; ಚಿತ್ತಾಕರ್ಷಕವಲ್ಲದ ; ಸ್ವಾರಸ್ಯವಿಲ್ಲದ. **Insipídity** (ನಾ.) ; **Insípidness** (ನಾ.); **Insípidly** (ಕ್ರಿ. ವಿ.)

Insíst ಇನ್‌ಸಿಸ್ಟ್ (ಕ್ರಿ.) (ಒಂದರ ವಿಷಯವಾಗಿ) ಲಂಬಿಸಿ, ಒತ್ತಿ, ಹೇಳು (*On* ಉಪ. ದೊಡನೆ). (I. on this point ಈ ವಿಷಯದಲ್ಲಿ ಪಟ್ಟು ಹಿಡಿ. I. on his innocence ಅವನು ನಿರಪರಾಧಿಯೆಂದು ಸಾಧಿಸು). ಅತ್ಯಾವಶ್ಯಕವೆಂದು ಒತ್ತಾಯ ಮಾಡು ; ಹಠ ಹಿಡಿ (I i. on being present ನಾನು ಇರಲೇಬೇಕೆಂದು ಒತ್ತಾಯ ಮಾಡುತ್ತೇನೆ). **Insístence** (ನಾ.) ; **Insístency** (ನಾ.) ; **Insístent** (ಗು.) ; **Insístently** (ಕ್ರಿ. ವಿ.)

Insobríety ಇನ್‌ಸೊಬ್ರೈಎಟಿ (ನಾ.) (ಮು., ಮದ್ಯದ ಕುಡಿತದಲ್ಲಿ) ಮಿತಿ ಮೀರಿರುವುದು, ಅಳತೆಗೆಟ್ಟಿರುವುದು ; ಅತಿ ಕುಡಿತ.

Insolátion ಇನ್‌ಸೋಲೇಷನ್ (ನಾ.) (ಬಣ್ಣ ಕಳೆಯುವುದು, ವೈದ್ಯ ಚಿಕಿತ್ಸೆ, ಮೊ. ಉದ್ದೇಶದಿಂದ ಅಥವಾ ರೋಗಕಾರಣವಾಗಿ) ಬಿಸಿಲಿಗೆ ಒಡ್ಡುವುದು.

Ínsolent ಇನ್‌ಸೋಲೆಂಟ್ (ಗು.) ರೇಗಿಸುವಂತೆ ಜರೆಯುವ, ಧಿಕ್ಕರಿಸುವ, ಅಪಮಾನ ಮಾಡುವ ; ಸೊಕ್ಕಿನ ; ದುರಹಂಕಾರದ. **Ínsolence** (ನಾ.) ; **Ínsolently** (ಕ್ರಿ. ವಿ.)

Insóluble ಇನ್‌ಸಾಲ್ಯುಬ್‌ಲ್ (ಗು.) (ಸಿಕ್ಕು) ಬಿಡಿಸಲಾಗದ, ಪರಿಹರಿಸಲಾಗದ ; (ದ್ರವದಲ್ಲಿ) ಕರಗದ ; ವಿಲೀನವಾಗದ. **Insolubílity** (ನಾ.) ; **Insólubleness** (ನಾ.) ; **Insólubly** (ಕ್ರಿ. ವಿ.)

Insólvent ಇನ್‌ಸಾಲ್ವೆಂಟ್ (ಗು., ನಾ.) ಸಾಲ ತೀರಿಸಲಾರದ(ವನು) ; ದಿವಾಳಿ. ದಿವಾಳಿಗಳಿಗೆ ಸಂಬಂಧಿಸಿದ (I. laws). **Insólvency** (ನಾ.) ದಿವಾಳಿತನ.

Insómnia ಇನ್‌ಸಾಮ್ನಿಯ (ನಾ.) ನಿದ್ದೆ ಹತ್ತದಿರುವುದು ; ನಿದ್ದೆ ಬಾರದ ಸ್ಥಿತಿ ; ನಿರ್ನಿದ್ರತೆ.

Insomúch ಇನ್‌ಸೊಮಚ್ (ಕ್ರಿ. ವಿ.) (—) ಅಷ್ಟರ ಮಟ್ಟಿಗೆ (*That* ಪದದೊಡನೆ)

Insoúciant ಇನ್‌ಸೂಸಿಯಂಟ್ (ಗು.) ನಿರ್ಲಕ್ಷ್ಯದ ; ಅಜಾಗರೂಕ ; ಮನಸ್ಸಿಗೆ ಹಚ್ಚಿಕೊಳ್ಳದ ; ಉದಾಸೀನ. **Insoúciance** (ನಾ.)

Inspéct ಇನ್‌ಸ್ಪೆಕ್ಟ್ (ಕ್ರಿ. ಸಕ.) ವಿವರವಾಗಿ, ಅಧಿಕಾರ ಪೂರ್ವಕವಾಗಿ, — ಪರೀಕ್ಷಿಸು ; ತನಿಖೆ ಮಾಡು. **Inspéction** (ನಾ.) ; **Inspéctor** (ನಾ.) ಪರೀಕ್ಷಾಧಿಕಾರಿ ; (ಸೂಪರಿಂಟೆಂಡೆಂಟಿನ ಕೆಳಗೆ, ಸಾರ್ಜೆಂಟನ ಮೇಲೆ ಇರುವ) ಪೋಲೀಸ್ ಇನ್‌ಸ್ಪೆಕ್ಟರು. **Inspéctorship** (ನಾ.) ಪರೀಕ್ಷಾಧಿಕಾರ ; —ಅಧಿಕಾರಿ ವರ್ಗ. **Inspéctoral** (ಗು.) ; **Inspectórial** — ಕ್ಟೋರಿಯಲ್ (ಗು.) — ಅಧಿಕಾರಿಗಳ ; — ಅಧಿಕಾರಿ ದರ್ಜೆಯುಳ್ಳ. **Inspéctorate** — ಕ್ಟೊರೆಟ್ (ನಾ.) — ಹುದ್ದೆ ; —ಕೆಲಸ ; —ಮೇಲ್ವಿಚಾರಣೆ ; —ಅಧಿಕಾರಿ ವರ್ಗ ; — ಅಧಿಕಾರ ಪ್ರದೇಶ.

Inspirátion, etc. Inspire ನೋಡಿ.

Inspíre ಇನ್‌ಸ್ಪೈಅರ್ (ಕ್ರಿ. ಸಕ.) (ಗಾಳಿ, ಮೊ. ನ್ನು) ಒಳಕ್ಕೆ ಸೇದಿಕೊ ; ಉಸಿರೆಳೆದುಕೊ ; ಉಚ್ಛ್ವಸಿಸು. (ಮು., ದೈವಿಕ ಅಥವಾ ಅತಿಮಾನುಷ ಕರ್ತೃ, ಒಬ್ಬನಲ್ಲಿ) ಆಲೋಚನೆಯನ್ನು, ಭಾವವನ್ನು, — ಪ್ರೇರಿಸು, ತುಂಬು ; ಸ್ಫೂರ್ತಿ ಕೊಡು (ಸಾ., ಭೂ. ಕೃ. ನಲ್ಲಿ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಭಾವಾವೇಶದಿಂದ, ಒಬ್ಬನನ್ನು) ಚೇತನಗೊಳಿಸು, ಉತ್ತೇಜಿಸು (*With* ಉಪ. ದೊಡನೆ). (ಒಬ್ಬನಲ್ಲಿ) ಭಾವಾವೇಶ ತುಂಬು (*Into* person). (ಒಬ್ಬನಲ್ಲಿ) ಭಾವ ಮೂಡಿಸು (*In* person). [An inspired article (ಪತ್ರಿಕೆಯಲ್ಲಿ) ಒಬ್ಬ ಪ್ರಭಾವಶಾಲಿಯಿಂದ ಗುಟ್ಟಾಗಿ ಪ್ರೇರಿತವಾದ ಲೇಖನ: ಪ್ರೇರಿತ ಲೇಖನ]. **Inspirátion** — ಸ್ಪಿರೇಷನ್ (ನಾ.) (ಕ್ರಿಯಾರ್ಥಗಳಲ್ಲಿ); (ಮು., ವೇದ, ಬೈಬಲ್, ಮೊ. ನ್ನು ಬರೆದವರು ಹೊಂದಿದ್ದರೆಂದು ನಂಬಿರುವ) ದೈವ ಪ್ರೇರಣೆ; ಭಗವತ್ಪ್ರೇರಣೆ (Verbal i. ಪ್ರತಿ ಶಬ್ದವನ್ನೂ ಹೇಳಿ ಬರಸಿದ ದೈವ ಪ್ರೇರಣೆ: ಶಾಬ್ದಿಕ ಪ್ರೇರಣೆ. Plenary i. ಸರ್ವ ವಿಷಯ ಪ್ರೇರಣೆ. Moral i. ನೈತಿಕ ಮತ್ತು ಧಾರ್ಮಿಕ ಪ್ರೇರಣೆ). ಪ್ರೇರಿತ ಭಾವನೆ, ಆಲೋಚನೆ; ಪ್ರಬೋಧನೆ; ಥಟ್ಟನೆ ಹೊಳೆದ, ಸಮಯೋಚಿತವಾದ, ಸೊಗಸಾದ, — ಭಾವ, ಸ್ಫೂರ್ತಿ; ಸ್ಫೂರ್ತಿ ಕೊಡುವ ತತ್ತ್ವ. **Inspirátional** (ಗು.); **Inspirátionism** (ನಾ.) ದೈವಪ್ರೇರಣೆಯಲ್ಲಿ ನಂಬಿಕೆ. **Inspirátionist** (ನಾ.) ದೈವಪ್ರೇರಣ ವಾದಿ. **Inspirator** (ನಾ.) ಗಾಳಿಯನ್ನು ಅಥವಾ ಆವಿಯನ್ನು ಒಳಕ್ಕೆ ಸೇದಿಕೊಳ್ಳುವ ಸಲಕರಣೆ; ವಾಯು ಚೋಷಕ. **Inspíratory** ಇನ್‌ಸ್ಪಯ್‌ರಟರಿ (ಗು.) ಉಚ್ಛ್ವಾಸದ; ಉಚ್ಛ್ವಾಸಕ್ಕನುಕೂಲಿಸುವ.

Inspírit ಇನ್‌ಸ್ಪಿರಿಟ್ (ಕ್ರಿ. ಸಕ.) ಜೀವ ಹೊಯ್ಯಿ; ಉಜ್ಜೀವಿಸು; ಚೈತನ್ಯ ತುಂಬು. (ಕಾರ್ಯ ಮಾಡಲು) ಧೈರ್ಯ ಹುಟ್ಟಿಸು; ಪ್ರೋತ್ಸಾಹಿಸು (*To* action, *to* do). **Inspíriting** (ಗು.)

Inspíssate, In- ಇನ್‌ಸ್ಪಿಸೇಟ್ (ಕ್ರಿ. ಸಕ.) ಮಂದಯಿಸು; ಸಾಂದ್ರೀಕರಿಸು. **Inspissátion** (ನಾ.)

Instabílity ಇನ್‌ಸ್ಟಬಿಲಿಟಿ (ನಾ.) ದೃಢತೆಯಿಲ್ಲದಿರುವುದು; ಅಸ್ಥಿರತೆ; ಚಂಚಲತೆ (ಸಾ., ರೂಪ.: ನೈತಿಕ ಗುಣಗಳು, ಮೊ. ವಿಷಯದಲ್ಲಿ)

Instáll ಇನ್‌ಸ್ಟಾಲ್ (ಕ್ರಿ. ಸಕ.) (ಒಬ್ಬನನ್ನು ಅಧಿಕಾರದಲ್ಲಿ ಅಥವಾ ಪದವಿಯಲ್ಲಿ) ವಿಧಿವತ್ತಾಗಿ ಕುಳ್ಳಿರಿಸು; ಪಟ್ಟ ಕಟ್ಟು (*In* ಉಪ. ದೊಡನೆ). (ಒಬ್ಬನನ್ನು, ತನ್ನನ್ನು, ಒಂದು ಸ್ಥಾನದಲ್ಲಿ, ಸ್ಥಿತಿಯಲ್ಲಿ) ಸ್ಥಾಪನೆ ಮಾಡು (*In* ಉಪ. ದೊಡನೆ). (ಶಾಖದ ಅಥವಾ ದೀಪದ ಸಲಕರಣೆ, ಮೊ. ನ್ನು) ಉಪಯೋಗಕ್ಕಾಗಿ ಅದರ ಸ್ಥಳದಲ್ಲಿ ಅಳವಡಿಸು. **Instállant** — ಸ್ಟಾಲಂಟ್ (ಗು., ನಾ.) ವಿಧಿವತ್ತಾಗಿ ಸ್ಥಾಪಿಸುವ(ವನು). **Installátion** (ನಾ.) ಪ್ರತಿಷ್ಠಾಪನೆ; ಪಟ್ಟಾಭಿಷೇಕ. (ಯಂತ್ರಸಲಕರಣೆ, ಮೊ. ನ್ನು ಉಪಯೋಗಕ್ಕಾಗಿ, ಕಾರ್ಯಕ್ಕಾಗಿ) ಸ್ಥಾಪಿಸುವುದು, ಅಳವಡಿಸುವುದು.

Instálment ಇನ್‌ಸ್ಟಾಲ್ಮೆಂಟ್ (ನಾ.) ಕೊಡಬೇಕಾದ ಒಟ್ಟು ಮೊತ್ತದಲ್ಲಿ ಕಾಲಕ್ರಮವಾಗಿ ಸಲ್ಲಿಸಬೇಕಾದ ಭಾಗಗಳಲ್ಲಿ ಒಂದು; ಬೇರೆ ಬೇರೆ ಕಾಲಗಳಲ್ಲಿ ಒದಗಿಸಿದ ಅನೇಕ ಅಂಶಗಳಲ್ಲಿ ಒಂದು; ಕಂತು; ಕಿಸ್ತು.

Instance ಇನ್‌ಸ್ಟನ್ಸ್ (ನಾ., ಕ್ರಿ. ಸಕ.) ಸಾಮಾನ್ಯ ನಿಶ್ಚಯಾಂಶವನ್ನು ನಿದರ್ಶಿಸುವ ವಿಷಯ; ಉದಾಹರಣೆ; ದೃಷ್ಟಾಂತ. ಒಂದು ನಿರ್ದಿಷ್ಟ ಸಂದರ್ಭ, ವಿಷಯ [In your i. ನಿನ್ನ ವಿಷಯದಲ್ಲಿ. For i. ಉದಾಹರಣೆಗಾಗಿ; ದೃಷ್ಟಾಂತವಾಗಿ. At the i. of (— ರ) ಪ್ರಾರ್ಥನೆಯಂತೆ, ಸೂಚನೆಯಂತೆ]. (ನ್ಯಾ. ಶಾ.) ವ್ಯವಹಾರ; ದಾವೆ (Court of first i. ಆರಂಭವಿಚಾರಣೆಯ ನ್ಯಾಯಸ್ಥಾನ). (In the first i. ಮೊದಲನೆಯದಾಗಿ; ಪ್ರಥಮತಃ; ವ್ಯವಹಾರದ ಮೊದಲನೆಯ ಹಂತದಲ್ಲಿ). (ಕ್ರಿ.) (ಸಂಗತಿಯನ್ನು, ಸಂದರ್ಭವನ್ನು) ನಿದರ್ಶನವಾಗಿ ಕೊಡು, ಉದಾಹರಿಸು; (ಸಾ., ಕರ್ಮಣಿಯಲ್ಲಿ) ನಿದರ್ಶನವಾಗಿರು.

Instancy. **Instant** ನೋಡಿ.

Instant ಇನ್‌ಸ್ಟಂಟ್ (ಗು., ನಾ.) ತುರ್ತಾದ; ಅವಸರದ. ನಡೆಯುತ್ತಿರುವ ತಿಂಗಳಿನ (ಸಂಕ್ಷಿಪ್ತ: inst.; The 6th inst. ಈ ತಿಂಗಳ 6ನೆಯ ತಾರೀಖು). ಕೂಡಲೇ ಆಗಬೇಕಾದ; ತತ್‌ಕ್ಷಣದ. (ನಾ.) ಕರಾರುವಾಕಾದ (ಈಗಿನ) ಹೊತ್ತು; ಕ್ಷಣ (Come this i. ಈ ಕ್ಷಣ ಬಂದುಬಿಡು. I told you the i. I knew ನನಗೆ ಗೊತ್ತಾದ ಕೂಡಲೆ ನಿನಗೆ ಹೇಳಿದೆನು). ಅಲ್ಪಾವಧಿ ಕಾಲ. **Instantáneous** — ಟೇನಿಯಸ್ (ಗು.) ಒಂದು ಕ್ಷಣ ಮಾತ್ರದಲ್ಲಿ ಬರುವ, ನಡೆಯುವ, ಮಾಡಿದ, ಆದ; ತತ್‌ಕ್ಷಣದ. (ಬಲಕ್ರಿಯಾ ಶಾಸ್ತ್ರ) ನಿರ್ದಿಷ್ಟ ಕ್ಷಣದಲ್ಲಿ ಇರುವ. **Instantáneously** (ಕ್ರಿ. ವಿ.); **Instantáneousness** (ನಾ.); **Instánter** ಇನ್‌ಸ್ಟ್ಯಾಂಟರ್ (ಕ್ರಿ. ವಿ.) ಈ ಕೂಡಲೇ; ತತ್‌ಕ್ಷಣವೇ (ಈಗ ಸಾ., ಹಾಸ್ಯ ಪ್ರ.). **Instantly** (ಕ್ರಿ. ವಿ.) ಈ ಕೂಡಲೇ; ತತ್‌ಕ್ಷಣವೇ. **Instancy** ಇನ್‌ಸ್ಟನ್ಸಿ (ನಾ.) ತುರ್ತು; ಅವಸರ.

Instantané (F) ಆನ್‌ಸ್ಟಾನ್‌ಟಾನೇ (ನಾ.) (ಕೈ ಛಾಯಾಗ್ರಾಹಕದಲ್ಲಿ) ಥಟ್ಟನೆ ತೆಗೆದ ಛಾಯಾ ಚಿತ್ರ; ತತ್‌ಕ್ಷಣ ಚಿತ್ರ. (ರೂಪ.) ಕೆಲವು ವಾಕ್ಯಗಳಲ್ಲೇ ಕೊಟ್ಟ ಸೂಕ್ಷ್ಮ ವರ್ಣನೆ.

Instánter, etc. **Instant** ನೋಡಿ.

Instaurátion ಇನ್‌ಸ್ಟಾರೇಷನ್ (ನಾ.) ಪುನರುದ್ಧಾರ; ಜೀರ್ಣೋದ್ಧಾರ; ದುರಸ್ತು ಪಡಿಸುವುದು; (ಹಳೆಯದನ್ನು) ಹೊಸದು ಮಾಡುವುದು; ನವೀಕರಣ. **Instaurator** (ನಾ.)

Insteád ಇನ್‌ಸ್ಟೆಡ್ (ಕ್ರಿ. ವಿ.) (— ಕ್ಕೆ) ಬದಲಾಗಿ, ಪ್ರತಿಯಾಗಿ; (— ರ) ಸ್ಥಳದಲ್ಲಿ (I. of going ಹೋಗುವುದಕ್ಕೆ ಬದಲಾಗಿ. In his stead; In my stead, etc.)

Instep ಇನ್‌ಸ್ಟೆಪ್ (ನಾ.) ಕಾಲ್ಬೆರಳುಗಳಿಗೂ ಹರಡಿಗೂ ನಡುವಣ ಪಾದದ ಮೇಲ್ಭಾಗ; ಮೇಗಾಲು; ಈ ಭಾಗಕ್ಕೆ ಅಳವಡುವ ಪಾದ ರಕ್ಷೆ, ಮೊ. ಗಳ ಭಾಗ; ಈ ಆಕಾರದ ವಸ್ತು.

Instigate ಇನ್‌ಸ್ಟಿಗೇಟ್ (ಕ್ರಿ. ಸಕ.) (ಒಬ್ಬನನ್ನು ಒಂದು ಕಾರ್ಯಕ್ಕೆ, ಸಾ., ಕೆಡುಕು ಮಾಡುವುದಕ್ಕೆ) ಒತ್ತಾಯ ಮಾಡು, ಪ್ರೇರೇಪಣೆ ಮಾಡು, ಎತ್ತಿಕಟ್ಟು; (ದಂಗೆ, ಖೂನಿ, ಮೊ.) ದುರ್ಬೋಧನೆಯಿಂದ ನಡೆಯುವಂತೆ ಮಾಡು; ಚಿತಾವಣೆ ಮಾಡು. **Instigátion** (ನಾ.); **Instigator** (ನಾ.)

Instíl(l) ಇನ್‌ಸ್ಟಿಲ್ (ಕ್ರಿ. ಸಕ.) (ಒಂದರಲ್ಲಿ ದ್ರವವನ್ನು) ಹನಿ ಹನಿಯಾಗಿ ಹಾಕು, ತೊಟ್ಟಿಕ್ಕಿಸು. (ಸಂವೇದನೆ, ಭಾವ, ಮೊ. ನ್ನು, ಒಬ್ಬನಲ್ಲಿ, ಮನಸ್ಸಿನಲ್ಲಿ) ತುಂಬು. **Instillátion** (ನಾ.); **Instílment** (ನಾ.)

Instinct ಇನ್‌ಸ್ಟಿಂಕ್ಟ್ (ನಾ.), **Instínct** (ಗು.) (ಮು., ಕೀಳು ಪ್ರಾಣಿಗಳಲ್ಲಿ ಕಂಡುಬರುವ, ಬುದ್ಧಿಪೂರ್ವಕವಾಗಿಯೊ ಎಂಬಂತೆ ಕಾರ್ಯಗಳನ್ನು ಮಾಡುವ) ಸಹಜ ಪ್ರವೃತ್ತಿ; ಹುಟ್ಟರಿವು; ಕಲಿಯದೆ ಬಂದ ಚಾತುರ್ಯ, ಕೌಶಲ. (ಗು.) (ಪ್ರಾಣ, ಚೆಲುವು, ಬಲ, ಮೊ. ಗಳಿಂದ) ವ್ಯಾಪ್ತವಾದ, ತುಂಬಿದ (*With* ಉಪ. ದೊಡನೆ). **Instínctive** (ಗು.); **Instínctively** (ಕ್ರಿ. ವಿ.)

Institute ಇನ್‌ಸ್ಟಿಟ್ಯೂಟ್ (ನಾ., ಕ್ರಿ. ಸಕ.) (ವೈಜ್ಞಾನಿಕ ಅಥವಾ ಇತರ ಉದ್ದೇಶಸಾಧನೆಗಾಗಿ, ನಿಯಮಬದ್ಧವಾಗೇರ್ಪಟ್ಟ) ಸಂಘ, ಸಂಸ್ಥೆ, ವ್ಯವಸ್ಥೆ. ಇದರ ಉಪಯೋಗಕ್ಕಾಗಿರುವ ಕಟ್ಟಡ; ಸಂಘ ಮಂದಿರ. (ಬ. ವ. ದಲ್ಲಿ) (ಒಂದು ವಿಷಯದ, ಮು., ನ್ಯಾಯಶಾಸ್ತ್ರದ) ಮೂಲತತ್ತ್ವಗಳ ಸಂಗ್ರಹ (Institutes of Justinian ಜಸ್ಟಿನಿಯನ್ ಚಕ್ರವರ್ತಿಯ ಆಜ್ಞೆಯ ಪ್ರಕಾರ ರಚಿಸಿದ ರೋಮನ್ ನ್ಯಾಯಶಾಸ್ತ್ರದ ಮೂಲ ಸೂತ್ರಗಳು). (ಕ್ರಿ.) ಸ್ಥಾಪಿಸು; ಪ್ರತಿಷ್ಠಿಸು; ಏರ್ಪಡಿಸು. (ವಿಚಾರಣೆ, ಮೊ. ನ್ನು) ನಡಸಲು ಆರಂಭಿಸು, ಹೂಡು. (ಒಬ್ಬನನ್ನು ಕ್ರೈಸ್ತ ಧರ್ಮಾದಾಯದ ಪೌರೋಹಿತ್ಯ ವೃತ್ತಿಗೆ) ನೇಮಿಸು (*To*, *into* ಉಪ. ದೊಡನೆ). **Institútion** (ನಾ.) (ಕ್ರಿಯಾರ್ಥಗಳಲ್ಲಿ); [(*Of* person) ಒಬ್ಬ ಪಾದ್ರಿಯನ್ನು ಮಠದ ಶಿಷ್ಯರ] ಆಧ್ಯಾತ್ಮಿಕ ಶಿಕ್ಷಣಕ್ಕಾಗಿ ನೇಮಿಸುವುದು. ಅನೂಚಾನವಾಗಿ ಬಂದ ನ್ಯಾಯ, ಪದ್ಧತಿ, ಸಂಪ್ರದಾಯ, ಆಚಾರ. (ಬಳ. ಮಾ.) ಸುಪ್ರಸಿದ್ಧ ವ್ಯಕ್ತಿ, ವಸ್ತು. (ಒಂದು ಸಾರ್ವಜನಿಕ ಉದ್ದೇಶಸಾಧನೆಗಾಗಿ ಸ್ಥಾಪಿಸಿದ) ಸಂಸ್ಥೆ; ಸಂಸ್ಥೆಯ ಕಟ್ಟಡ; ಸಂಘ ಮಂದಿರ. **Institútional** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Instrúct ಇನ್‌ಸ್ಟ್ರಕ್ಟ್ (ಕ್ರಿ. ಸಕ.) ಶಿಕ್ಷಣ ಕೊಡು ; ಬೋಧಿಸು ; ಕಲಿಸು ; ಹೇಳಿಕೊಡು (*In* subject). (— ಎಂದು) ತಿಳಿಸು, ತಿಳಿವಳಿಕೆ ಕೊಡು. (ಕಕ್ಷಿಗಾರನು ತನ್ನ ವಕೀಲನಿಗೆ) ವಿಷಯವನ್ನು ತಿಳಿಯಹೇಳು ; (ಒಂದು ಕಾರ್ಯಮಾಡಲು, ಒಬ್ಬನಿಗೆ) ತಿಳಿವಳಿಕೆ ಕೊಡು ; ಅಪ್ಪಣೆ ಮಾಡು ; ವಿಧಿಸು (*To* do). **Instrúctor** (ನಾ.) ; **Instrúctress** (ನಾ., ಸ್ತ್ರೀ.) ; **Instrúction** (ನಾ.) ಬೋಧನೆ ; ಶಿಕ್ಷಣ. (ಬ. ವ. ದಲ್ಲಿ) ತಿಳಿವಳಿಕೆ ; ಅಪ್ಪಣೆ ; ಆಜ್ಞೆ ; [(ಬ. ವ. ದಲ್ಲಿ) ವಕೀಲನಿಗೆ ಕೊಡುವ] ತಿಳಿವಳಿಕೆ, ವಿಷಯ ಪರಿಚಯ, ಮಾಹಿತಿ. **Instrúctional** (ಗು.) ; **Instrúctive** (ಗು.) ತಿಳಿವಳಿಕೆ ಕೊಡುವ ; ಬೋಧಪ್ರದ. **Instrúctively** (ಕ್ರಿ. ವಿ.) ; **Instrúctiveness** (ನಾ.)

Instrument ಇನ್‌ಸ್ಟ್ರುಮೆಂಟ್ (ನಾ., ಕ್ರಿ. ಸಕ.) ಉಪಕರಣ ; ಸಾಧನ. ಒಂದು ಕಾರ್ಯದಲ್ಲಿ ಉಪಯೋಗಿಸಿಕೊಳ್ಳಲ್ಪಟ್ಟವನು ; ಒಬ್ಬನ ಸಾಧನವಾದವನು. (ಮು., ಸೂಕ್ಷ್ಮವಾದ ಅಥವಾ ವೈಜ್ಞಾನಿಕ ಕಾರ್ಯಕ್ಕಾಗಿ ಉಪಯೋಗಿಸುವ) ಆಯುಧ, ಸಾಧನ, ಸಲಕರಣೆ. (ತಂತಿ, ಮೊ. ಗಳ ಕಂಪನದಿಂದ ಅಥವಾ ಕೊಳವಿ, ಮೊ. ಗಳಲ್ಲಿಯ ಗಾಳಿಯ ಕಂಪನದಿಂದ ಸಂಗೀತ ಸ್ವರಗಳು ಹುಟ್ಟುವಂತೆ ರಚಿಸಿದ) ವಾದ್ಯ (= Musical i.). (Stringed instruments ತಂತಿ ವಾದ್ಯಗಳು. Wind instruments ರಂಧ್ರ ವಾದ್ಯಗಳು). ವಿಧಿಬದ್ಧವಾದ (ಮು., ನ್ಯಾಯವಿಧಿಗನುಸಾರವಾದ) ಪತ್ರ ; ದಸ್ತೈವಜು. (ಕ್ರಿ.) (ಗೀತವನ್ನು) ವಾದ್ಯಕ್ಕೆ ಹೊಂದಿಸು, ಅಳವಡಿಸು. **Instruméntal** (ಗು.) (ಒಂದು ಉದ್ದೇಶಸಾಧನೆಗೆ, ಒಂದು ಕಾರ್ಯದಲ್ಲಿ) ಸಾಧನವಾಗಿರುವ, ಉಪಕರಣವಾಗಿರುವ ; ಸಾಧಕ (*To* purpose, *in* work, *in* doing) ; ಒಂದು ಉಪಕರಣದ, ಉಪಕರಣದಿಂದಾದ (I. errors ಉಪಕರಣ ದೋಷಗಳು). (ಸಂಗೀತ) ವಾದ್ಯದಲ್ಲಿ ನುಡಿಸಿದ. (ವ್ಯಾ.) I. case ಕರಣವನ್ನು ಸೂಚಿಸುವ ವಿಭಕ್ತಿ : ತೃತೀಯಾ ವಿಭಕ್ತಿ. **Instruméntalist** (ನಾ.) ವಾದ್ಯ ನುಡಿಸುವವನು ; ವಾದ್ಯಗಾರ. **Instruméntally** (ಕ್ರಿ. ವಿ.) ; **Instrumentálity** (ನಾ.) ಸಾಧನ(ತೆ) (By the i. of). **Instrumentátion** (ನಾ.) ಗೀತವನ್ನು ವಾದ್ಯಕ್ಕೆ ಹೊಂದಿಸುವುದು. ಶಸ್ತ್ರ ಚಿಕಿತ್ಸೆ ; ಆಯುಧ ಪ್ರಯೋಗ ; = Instrumentality.

Insubórdinate ಇನ್‌ಸಬಾರ್ಡಿನೇಟ್ (ಗು.) ಅವಿಧೇಯ ; ಎದುರು ಬೀಳುವ. **Insubordinátion** (ನಾ.) ಅವಿಧೇಯತೆ.

Insubstántial ಇನ್‌ಸಬ್‌ಸ್ಟ್ಯಾನ್‌ಷಲ್ (ಗು.) ಅವಾಸ್ತವಿಕ ; ಹುರುಳಿಲ್ಲದ. **Insubstantiálity** — ಷಿಯ್ಯಾಲಿಟಿ (ನಾ.)

Insúfferable ಇನ್‌ಸಫರಬ್‌ಲ್ (ಗು.) (ದುರಹಂಕಾರ, ಸೊಕ್ಕು, ಪ್ರತಿಷ್ಠೆ, ಮೊ.) ಸಹಿಸಲಾಗದ, ತಾಳಲಾಗದ, ದುಸ್ಸಹ. **Insúfferably** (ಕ್ರಿ. ವಿ.)

Insuffícient ಇನ್‌ಸಫಿಷೆಂಟ್ (ಗು.) ಸಾಕಾಗದ ; ಸಾಲದ ; ಸಾಕಷ್ಟು ಇಲ್ಲದ ; ಕೊರೆಯಾದ. **Insuffíciency** (ನಾ.) ; **Insuffíciently** (ಕ್ರಿ. ವಿ.)

Insufflate ಇನ್‌ಸಫ್ಲೇಟ್ (ಕ್ರಿ. ಸಕ.) (ಗಾಳಿ, ಅನಿಲ, ಮೊ. ನ್ನು ಒಡಲನ ಕುಹರ, ಮೊ. ಗಳೊಳಕ್ಕೆ) ಊದು. (ಮೂಗು, ಮೊ. ಕ್ಕೆ) ಊದಿ ಚಿಕಿತ್ಸೆ ಮಾಡು. **Insufflátion** (ನಾ.) (ಒಂದರ ಮೇಲೆ, ಒಳಕ್ಕೆ) (ಗಾಳಿ) ಊದುವುದು. (ಭೂತೋಚ್ಚಾಟನೆಯ ಸಂಸ್ಕಾರವಾಗಿ ಒಬ್ಬನ ಮೈಮೇಲೆ) ಮಂತ್ರಗಾಳಿ ಊದುವುದು. **Insufflator** (ನಾ.) ಗಾಳಿ ನುಗ್ಗಿಸುವ ಸಲಕರಣೆ.

Insular ಇನ್‌ಸ್ಯುಲರ್ (ಗು.) ದ್ವೀಪದ ; ದ್ವೀಪ ಲಕ್ಷಣದ ; ದ್ವೀಪವಾಸಿಗಳ(ಂಥ) (ಮು., ಸಂಕುಚಿತ ಮನಸ್ಸುಳ್ಳ) ; ಸಂಕೋಚ ಭಾವನೆಯ, ದೃಷ್ಟಿಯ. **Insularism** (ನಾ.) (ಮು.) ಸಂಕೋಚ ಭಾವನೆ, ದೃಷ್ಟಿ. **Insulárity** (ನಾ.) ಸುತ್ತಲೂ ನೀರು ಬಳಸಿಕೊಂಡು ಇರುವ ಸ್ಥಿತಿ ; ದ್ವೀಪ ವಾಸಿತನ ; =Insularism. **Insularly** (ಕ್ರಿ. ವಿ.) ; **Insulate** —ಲೇಟ್ (ಕ್ರಿ. ಸಕ.) (ನೆಲವನ್ನು) ದ್ವೀಪವಾಗಿಸು. (ವ್ಯಕ್ತಿಯನ್ನು, ವಸ್ತುವನ್ನು) ಸುತ್ತಮುತ್ತಣ ಸನ್ನಿವೇಶದಿಂದ ಬೇರ್ಪಡಿಸು, ಪ್ರತ್ಯೇಕಿಸು. ವಿದ್ಯುತ್ತು ಅಥವಾ ಶಾಖ ಹರಿಯದಂತೆ ನಡುವೆ ಅವಾಹಕಗಳನ್ನಿಟ್ಟು (ವಸ್ತುವನ್ನು) ಬೇರ್ಪಡಿಸು ; ಅವಾಹಕದ ಮೂಲಕ ಪ್ರತ್ಯೇಕಿಸು. **Insulátion** (ನಾ.) ; **Insulator** (ನಾ.) ಪ್ರತ್ಯೇಕಿಸುವವನು, — ವದು ; (ಮು., ಶಾಖ, ವಿದ್ಯುತ್) ನಿರೋಧಕ.

Insulate, etc. **Insular** ನೋಡಿ.

Insulin ಇನ್‌ಸ್ಯುಲಿನ್ (ನಾ.) ಮಧುಮೂತ್ರ ರೋಗ ನಿವಾರಣೆಗೆ ಸಾಧಕವಾದ ಒಂದು ಔಷಧ (ಇದನ್ನು ಪ್ರಾಣಿಗಳ ಮೇದೋಜೀರಕಾಂಗದಲ್ಲಿಯ ಕೆಲವು ಭಾಗಗಳಿಂದ ತಯಾರಿಸುತ್ತಾರೆ) : 'ಇನ್‌ಸ್ಯುಲಿನ್'.

Insult ಇನ್‌ಸಲ್ಟ್ (ನಾ.), **Insúlt** (ಕ್ರಿ. ಸಕ.) ಹೀನಯಿಸುವ ಅಥವಾ ಅವಮಾನ ಮಾಡುವ ಮಾತು, ಕಾರ್ಯ ; ಮುಖಭಂಗ ; ಅವಮಾನ. (ಕ್ರಿ.) ಮುಖಭಂಗ ಮಾಡು ; ಅವಮರ್ಯಾದೆ ಮಾಡು ; ತಿರಸ್ಕಾರದಿಂದ ಬಯ್ದು ಅವಮಾನಿಸು ; ಅಪಮಾನಕ್ಕೆ ಗುರಿಪಡಿಸು. **Insúltingly** (ಕ್ರಿ. ವಿ.)

Insúperable ಇನ್‌ಸ್ಯೂಪರಬ್‌ಲ್ (ಗು.) (ಅಡ್ಡಗಟ್ಟು, ಮೊ. ವು, ರೂಪಕವಾಗಿ ಕಷ್ಟಗಳು, ಮೊ. ವು) ದಾಟಲಾಗದ, ಪರಿಹರಿಸಲಾಗದ, ದುಸ್ತರ ; (ವಿರ. ಪ್ರ.) ಮೀರಿಸಲಾಗದ. **Insuperabílity** (ನಾ.) ; **Insúperably** (ಕ್ರಿ. ವಿ.)

Insuppórtable ಇನ್‌ಸಪೋರ್ಟಬ್‌ಲ್ (ಗು.) ತಾಳಲಾಗದ ; ಸಹಿಸಲಾಗದ. ನ್ಯಾಯವೆಂದು ಸಾಧಿಸಲಾಗದ. **Insuppórtably** (ಕ್ರಿ. ವಿ.)

Insúrance ಇನ್‌ಷೂರನ್ಸ್ (ನಾ.) ಒಂದು ಗೊತ್ತಾದ ಮೊಬಲಗನ್ನು ಕಂತುಗಳಲ್ಲಿ ಕೊಡಲು ಒಪ್ಪಿದವನ ಸ್ವತ್ತುನಷ್ಟದ, ಪ್ರಾಣನಷ್ಟದ ಅಥವಾ ಕಾರ್ಯಶಕ್ತಿ ನಷ್ಟದ ಸಂದರ್ಭದಲ್ಲಿ ಹಿಂದೆಯೇ ಗೊತ್ತು ಮಾಡಿಕೊಂಡಿರುವ ಒಟ್ಟು ಮೊತ್ತವನ್ನು, ಕಂತುಕೊಡುತ್ತ ಬಂದವನಿಗೆ ಅಥವಾ ಅವನ ವಾರಸುದಾರರಿಗೆ, ಒಂದು ಸಂಘ, ಮೊ. ವು ಪರಿಹಾರವಾಗಿ ಕೊಡುವ ಕರಾರಿನ ಪದ್ಧತಿ ; ವಿಮೆ ಮಾಡುವುದು ; (ಜೀವ, ಸ್ವತ್ತು, ಮೊ. ನ್ನು) ವಿಮೆಮಾಡುವ ಪದ್ಧತಿ ; ವಿಮೆ ; ವಿಮೆಗಾಗಿ ಕೊಟ್ಟ ಹಣ ; ವಿಮೆಯ ಕಂತು ; (ಜೀವ ಅಥವಾ ಸ್ವತ್ತು, ಮೊ. ನ್ನು) ವಿಮೆಮಾಡಿದ ಮೊತ್ತ. [National I. Act (ಇಂಗ್ಲೆಂಡಿನಲ್ಲಿ) (ಕೂಲಿಗಾರರು ವಾರ ವಾರವೂ ತಮ್ಮ ವಿಮೆಗಾಗಿ ಸರ್ಕಾರಕ್ಕೆ ಕಂತು ಕಟ್ಟಬೇಕೆಂದೂ, ಅವರ ಧಣಿಗಳೂ ಇದಕ್ಕೆ ತಮ್ಮ ಭಾಗದ ಸಹಾಯಾರ್ಥವನ್ನು ಸೇರಿಸಬೇಕೆಂದೂ, ಇವಕ್ಕೆ ಪ್ರತಿಫಲವಾಗಿ ಕೂಲಿಯವರಿಗೆ ಕಾಯಿಲೆ, ನಿರುದ್ಯೋಗ, ಮೊ. ಕಷ್ಟ ಸಂಭವಿಸಿದಾಗ ಅವರಿಗೆ ಸರ್ಕಾರವು ಸಹಾಯ ನೀಡುವುದೆಂದೂ ಭರವಸೆ ಕೊಟ್ಟು ೧೯೧೧ರಲ್ಲಿ ಜಾರಿಗೆ ತಂದ) ರಾಷ್ಟ್ರೀಯ ವಿಮಾ ಕಾನೂನು]. **Insúrant** — ರಂಟ್ (ನಾ.) ವಿಮೆಯ ಪತ್ರವನ್ನು ಯಾರ ಹೆಸರಿಗೆ ಕೊಟ್ಟಿದೆಯೊ ಅವನು ; ವಿಮೆದಾರ. **Insúre** (ಕ್ರಿ. ಸಕ.) ವಿಮೆ ಮಾಡು ; (The insured ಯಾರಿಗೆ ಈ ಮೊತ್ತ ಕೊಡಬೇಕೆಂದು ಭದ್ರಪಟ್ಟಿದೆಯೊ ಅವನು : ವಿಮೆದಾರ). ದೃಢ ಪಡಿಸು. **Insúrable** (ಗು.) ವಿಮಾ ಯೋಗ್ಯ. **Insúrer** (ನಾ.) ವಿಮೆಯ ಕಂತುಗಳನ್ನು ಪಡೆಯುವುದರ ಪ್ರತಿಫಲವಾಗಿ ಒಬ್ಬನ ಆಸ್ತಿಯನ್ನು ವಿಮೆ ಮಾಡುವವನು.

Insúrgent ಇನ್‌ಸರ್ಜೆಂಟ್ (ಗು., ನಾ.) ಪ್ರತಿಭಟಿಸಿ ದಂಗೆಯೇಳುವ ; (ಸಮುದ್ರ, ಮೊ.) ನುಗ್ಗಿ ಬರುವ. (ನಾ.) ದಂಗೆಕೋರ ; ಬಂಡಾಯಗಾರ. **Insúrgency** (ನಾ.)

Insurmoúntable ಇನ್‌ಸಮೌಂಟಬ್‌ಲ್ (ಗು.) ದಾಟಲಾಗದ ; ಜಯಿಸಲಾಗದ ; ದುಸ್ತರ ; ದುರ್ಲಂಘ್ಯ. **Insurmoúntably** (ಕ್ರಿ. ವಿ.)

Insurréction ಇನ್‌ಸರೆಕ್‌ಷನ್ (ನಾ.) ಸ್ಥಾಪಿತವಾದ ಅಧಿಕಾರಕ್ಕೆ, ಆಡಳಿತಕ್ಕೆ, ಬಹಿರಂಗವಾಗಿ ಪ್ರತಿಭಟಿಸಿ ದಂಗೆಯೇಳುವುದು ; ಆರಂಭ ದಶೆಯಲ್ಲಿರುವ ದಂಗೆ ; ಪರಿಮಿತವಾದ ಬಂಡಾಯ. **Insurréctional** (ಗು.); **Insurréctionary** (ಗು.); **Insurréctionist** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Insuscéptible ಇನ್‌ಸಸೆಪ್ಟಿಬ್‌ಲ್ (ಗು.) (ಚಿಕಿತ್ಸೆಗೆ, ಪ್ರಭಾವಕ್ಕೆ) ಸಗ್ಗದ, ಒಳಗಾಗದ; ಪರಿಣಾಮಕಾರಿಯಾಗದ (*Of* treatment, *to* agency, etc.). **Insusceptibílity** (ನಾ.)

Intáct ಇಂಟ್ಯಾಕ್ಟ್ (ಗು.) ಮುಟ್ಟದ; ಅಖಂಡವಾಗಿರುವ; ಅಚ್ಚಳಿಯದ; ಹಾನಿ ತಟ್ಟಲ್ಲದ; ಕೆಟ್ಟಲ್ಲದ; ಕುಂದಿಲ್ಲದ; ಶಿಥಿಲವಾಗಿಲ್ಲದ.

Intáglio (It.) ಇನ್‌ಟ್ಯಾಲ್ಯೊ (ನಾ., ಕ್ರಿ. ಸಕ.) ಹಳ್ಳವಾಗಿ ಕೊರೆದು ಮಾಡಿದ ಚಿತ್ರ, ಮಾದರಿ; ಇಳಿಕೆತ್ತನೆ. (ಕಲ್ಲು, ಮೊ. ಗಟ್ಟಿವಸ್ತುಗಳಲ್ಲಿ) ಕೆತ್ತಿರುವುದು, ಕೆತ್ತನೆ. ಚಿತ್ರ ಕೆತ್ತಿರುವ ಮಣಿ, ರತ್ನ. (ಕ್ರಿ.) (ವಸ್ತುವಿನಮೇಲೆ, ಆಕೃತಿಯನ್ನು) ಕೆತ್ತು, ಕೊರೆ. **Intágliated** —ಲ್ಯೇಟೆಡ್ (ಗು.)

Intake ಇನ್‌ಟೇಕ್ (ನಾ.) ಹೊರಗಿನಿಂದ ಒಳಕ್ಕೆ ತೆಗೆದುಕೊಳ್ಳುವುದು; ಒಳಕ್ಕೆ ತೆಗೆದುಕೊಂಡ ಮೊತ್ತ; ನದಿ, ಮೊ. ಗಳಿಂದ ನಾಲೆಗೆ ಅಥವಾ ಕೊಳಾಯಿಗೆ ನೀರನ್ನು ತೆಗೆದುಕೊಳ್ಳುವ ಸ್ಥಳ; (ನೀರನ್ನು) ಒಳಹಾಯಿಸುವ ಸ್ಥಳ; ಒಳಹಾಯಿಕೆ. (ಗಣಿಯಲ್ಲಿಯ) ಗಾಳಿದಾರಿ. (ಕೊಳವೆ, ಕಾಲುಚೀಲ, ಮೊ. ಗಳ ಒಂದು ಭಾಗದಲ್ಲಿ) ಥಟ್ಟನೆ ಅಗಲ ಕಿರಿದಾಗುವುದು, —ವ ಸ್ಥಳ. ಕುರುಚಲು ಕಾಡನ್ನು ಕಡಿದು ಉಪಯೋಗಕ್ಕೆ ತಂದ ನೆಲ.

Intángible ಇನ್‌ಟ್ಯಾಂಜಿಬ್‌ಲ್ (ಗು.) ಮುಟ್ಟಲಾಗದ; ಮುಟ್ಟಿ ತಿಳಿಯಲಾಗದ; ಸ್ಪರ್ಶಕ್ಕೆ ಗೋಚರವಾಗದ; ಮನಸ್ಸಿನಲ್ಲಿ ಗ್ರಹಿಸಲಾಗದ; ತಿಳಿಯಲಾಗದ. **Intangibílity** (ನಾ.); **Intángibly** (ಕ್ರಿ. ವಿ.)

Integer ಇಂಟಿಜರ್ (ನಾ.) ಪೂರ್ಣಾಂಕ; ವಿಭಾಗ ಮಾಡಿಲ್ಲದ ಮೊತ್ತ; ಅಖಂಡ, ಸಮಗ್ರ,—ವಸ್ತು. **Íntegral** —ಗ್ರಲ್ (ಗು., ನಾ.) ಸಮಗ್ರವಾಗಿರುವುದರ; ಒಂದು ಒಟ್ಟನ್ನು ಪೂರ್ಣ ಮಾಡಲು ಆವಶ್ಯಕವಾದ; ಸಂಪೂರ್ಣ; ಸಮಗ್ರ. (ಗಣಿತ) ಪೂರ್ಣಾಂಕದ; —ದಿಂದ ಸೂಚಿತವಾದ, ನಿರ್ದಿಷ್ಟವಾದ; ಪೂರ್ಣಾಂಕಗಳನ್ನು ಮಾತ್ರ ಒಳಕೊಂಡ, ಕುರಿತ (I. calculus ಸಮಾಸ ಕಲನ). (ನಾ.) ಕೊಟ್ಟ ಅವಲಂಬಿ ಪರಿಮಾಣವು ಯಾವುದರ ಅವಕಲನ ಗುಣಾಂಕವೊ ಆ ಮೊತ್ತ; ಅನುಕಲ. **Integrálity** —ಗ್ರ್ಯಾಲಟಿ (ನಾ.); **Íntegrally** (ಕ್ರಿ. ವಿ.); **Íntegrant** —ಗ್ರಂಟ್ (ಗು., ನಾ.) (ಭಾಗಗಳ ವಿಷಯದಲ್ಲಿ) ಪೂರ್ಣವನ್ನಾಗಿ ಮಾಡುವ ಅಂಶದ; ಪೂರಕ ಘಟಕ. **Íntegrate** ಇಂಟಿಗ್ರೆಟ್ (ಗು.), —ಗ್ರೇಟ್ (ಕ್ರಿ. ಸಕ.) ಭಾಗಗಳು ಕೂಡಿ ಆದ; ಅಂಶಪೂರ್ಣ; ಪೂರ್ಣ; ಸಮಗ್ರ. (ಕ್ರಿ.) (ಅಪೂರ್ಣವಾದದ್ದಕ್ಕೆ) ಇತರ ಭಾಗಗಳನ್ನು ಸೇರಿಸಿ ಪೂರ್ಣಮಾಡು; ಸಮಗ್ರವನ್ನಾಗಿ ಮಾಡು. (ಬೇರೆ ಬೇರೆಯಾಗಿರುವ ಭಾಗಗಳನ್ನು) ಸಂಯೋಜಿಸಿ ಪೂರ್ಣವನ್ನಾಗಿ ಮಾಡು. (ಗಣಿತ) ಸಮಾಸ ಕಲನ ಮಾಡು; (ಕ್ಷೇತ್ರಫಲ, ಶಾಖ, ಮೊ. ಗಳ) ಸರಾಸರಿ ಮೊಲ್ಯವನ್ನು ಅಥವಾ (ಒಟ್ಟು) ಮೊತ್ತವನ್ನು ಕಂಡುಹಿಡಿ. **Integrátion** (ನಾ.) ಅನುಕಲನ. **Íntegrative** —ಗ್ರೇ(ಗ್ರ)— (ಗು.); **Íntegrator** —ಗ್ರೇ— (ನಾ.) ಇದನ್ನು ಕಂಡುಹಿಡಿಯುವ ಸಲಕರಣೆ: ಅನುಕಲಕ. **Intégrity** ಇಂಟೆಗ್ರಿಟಿ (ನಾ.) ಪೂರ್ಣತೆ; ಸಮಗ್ರತೆ; ದೃಢತೆ; ಭದ್ರತೆ. ಋಜುತ್ವ; ಪ್ರಾಮಾಣಿಕತೆ.

Íntegrate, etc., Intégrity. Integer ನೋಡಿ.

Intégument ಇಂಟೆಗ್ಯುಮೆಂಟ್ (ನಾ.) ಚರ್ಮ, ಹೊಟ್ಟು, ಸಿಪ್ಪೆ, ತೊಗಟೆ, ಅಥವಾ (ಸ್ವಾಭಾವಿಕವಾಗಿ ಮೇಲ್ಮುಸುಕಾಗಿರುವ) ಇತರ ಹೊದಿಕೆ. **Integuméntary** (ಗು.)

Íntellect ಇಂಟೆಲೆಕ್ಟ್ (ನಾ.) ತಿಳಿದುಕೊಳ್ಳುವ ಮತ್ತು ವಿಚಾರ ಮಾಡುವ ಶಕ್ತಿ; ಬುದ್ಧಿಶಕ್ತಿ; ಪ್ರಜ್ಞೆ. ಪ್ರಜ್ಞಾಶಾಲಿ(ಗಳು). **Intelléction** (ನಾ.) ಬುದ್ಧಿವ್ಯಾಪಾರ; ಬುದ್ಧಿಗ್ರಹಣ (ಮು., Imagination ಎಂಬ ಭಾವಕ್ಕೆ ವಿರುದ್ಧವಾದದ್ದು). **Intelléctive** (ಗು.); **Intelléctual** (ಗು., ನಾ.) ಬುದ್ಧಿ(ಶಕ್ತಿ)ಯ; ಬುದ್ಧಿಗ್ರಾಹ್ಯ; ಬುದ್ಧಿಯನ್ನುಪಯೋಗಿಸಬೇಕಾದ; ಬೌದ್ಧಿಕ. ಒಳ್ಳೆಯ ತಿಳಿವಳಿಕೆಯುಳ್ಳ(ವನು); ಪ್ರಜ್ಞಾಶಾಲಿ; ಜ್ಞಾನವಂತ (The intellectuals of a country ಒಂದು ದೇಶದ ಪ್ರಾಜ್ಞರು). **Intelléctually** (ಕ್ರಿ. ವಿ.); **Intelléctualism** (ನಾ.) ತರ್ಕದಿಂದಲೇ ಜ್ಞಾನವು ಪೂರ್ಣವಾಗಿ ಅಥವಾ ಮುಖ್ಯವಾಗಿ ಬರುವುದೆಂಬ ವಾದ; ಪ್ರಜ್ಞಾಪ್ರಾಧಾನ್ಯ ವಾದ. **Intelléctualist** (ನಾ.); **Intellectuálity** (ನಾ.); **Intellectualizátion** (ನಾ.); **Intelléctualize** (ಕ್ರಿ.) ಪ್ರಜ್ಞಾಶಾಲಿಯಾಗಿ ಮಾಡು; ಪ್ರಜ್ಞಾ ಲಕ್ಷಣ, ಗುಣ, —ಕೊಡು. ಬುದ್ಧಿಯನ್ನುಪಯೋಗಿಸು; ಪ್ರಜ್ಞಾಪೂರ್ವಕವಾಗಿ ಮಾತನಾಡು, ಬರೆ; ತತ್ತ್ವಾರ್ಥ ಮಾಡು. **Intélligence** (ನಾ.) ಬುದ್ಧಿಶಕ್ತಿ; ಪ್ರಜ್ಞೆ. (ಮನುಷ್ಯನ ಅಥವಾ ಪ್ರಾಣಿಯ ವಿಷಯದಲ್ಲಿ) ಬುದ್ಧಿಸೂಕ್ಷ್ಮತೆ; ಶೀಘ್ರಗ್ರಹಣ ಶಕ್ತಿ; ಚುರುಕು ಬುದ್ಧಿ; ವಿಚಾರಶೀಲ ವ್ಯಕ್ತಿ. ಸುದ್ದಿ; ವರ್ತಮಾನ; ಸಮಾಚಾರ [I. Department (ಮು., ಸೈನ್ಯೋದ್ದೇಶಗಳಿಗಾಗಿ) ಸಮಾಚಾರಗಳನ್ನು ಸಂಗ್ರಹಿಸುವ ಇಲಾಖೆ; ಸುದ್ದಿ ಇಲಾಖೆ]. **Intélligencer** (ನಾ.) ಸುದ್ದಿ ತರುವವನು; ಬಾತಮಿದಾರ; ಗೂಢಚಾರ; ಬೇಹುಕಾರ. **Intélligent** (ಗು.) (ಸಾ., ಹೆಚ್ಚು ಮಟ್ಟದ) ಅರಿವು, ಬುದ್ಧಿಶಕ್ತಿ, —ತೋರುವ, ಉಳ್ಳ; ಚುರುಕು ಬುದ್ಧಿಯ. **Intelligéntial** (ಗು.); **Intélligently** (ಕ್ರಿ. ವಿ.); **Intelligéntzia, -sia** —ಜೆಂಟ್ಸಿಯ (ನಾ.) (ಒಂದು ಜನಾಂಗದಲ್ಲಿ) ಸ್ವತಂತ್ರವಾಗಿ ವಿವೇಚನೆಯುಳ್ಳ ವರ್ಗ; (ಒಂದು ಜನಾಂಗದ) ವಿದ್ಯಾವಂತ ವರ್ಗ. **Intélligible** —ಜಿಬ್‌ಲ್ (ಗು.) ತಿಳಿಯಲಾಗುವ; ಗ್ರಹಿಸುವುದಕ್ಕಾಗುವ (*To* ಉಪ. ದೊಡನೆ). (ತತ್ತ್ವ ಶಾಸ್ತ್ರ) (ಇಂದ್ರಿಯಗ್ರಾಹ್ಯವಾಗದೆ) ಕೇವಲ ಬುದ್ಧಿಗ್ರಾಹ್ಯವಾದ. **Intelligibílity** (ನಾ.); **Intélligibly** (ಕ್ರಿ. ವಿ.)

Intélligence, etc., Intelligéntzia. Intellect ನೋಡಿ.

Intémperate ಇನ್‌ಟೆಂಪೆರೆಟ್ (ಗು.) (ವ್ಯಕ್ತಿಯ ಅಥವಾ ನಡತೆಯ ವಿಷಯದಲ್ಲಿ) ಹಾಳತವಿಲ್ಲದ, ಹತೋಟಿಯಿಲ್ಲದ, ಉಚ್ಛೃಂಖಲ, ಅತಿರೇಕದ. ಅತಿ ಭೋಗಿಯಾದ. ಕುಡಿತಕ್ಕೆ ಬಿದ್ದ; ಮಿತಿಮೀರಿ ಕುಡಿಯುವ. **Intémperance** (ನಾ.); **Intémperately** (ಕ್ರಿ. ವಿ.)

Inténd ಇಂಟೆಂಡ್ (ಕ್ರಿ. ಸಕ.) ಉದ್ದೇಶಿಸು; ಸಂಕಲ್ಪಿಸು; ಬಗೆ; ಕುರಿ (We i. no harm ಕೇಡು ಮಾಡಬೇಕೆಂಬುದು ನಮ್ಮ ಉದ್ದೇಶವಲ್ಲ). (ವ್ಯಕ್ತಿಯನ್ನು, ವಸ್ತುವನ್ನು, ಒಂದು ಉದ್ದೇಶಕ್ಕಾಗಿ) ಸಂಕಲ್ಪಿಸು, ಗೊತ್ತುಮಾಡು, ಮೀಸಲಾಗಿಡು [We i. our son for the bar ನಮ್ಮ ಮಗ ನ್ಯಾಯವಾದಿಯಾಗಬೇಕೆಂದು ಉದ್ದೇಶಿಸಿದ್ದೇವೆ. This fruit is intended for you ಈ ಹಣ್ಣು ನಿನಗಾಗಿ (ನೀನು ತಿನ್ನಬೇಕೆಂದು) ಇಟ್ಟಿದೆ]. ಅಭಿಪ್ರಾಯಪಡು (What exactly do you i. by the word? ಆ ಪದಕ್ಕೆ ಖಚಿತವಾದ ನಿನ್ನ ಅರ್ಥವೇನು?). **Inténded** (ನಾ.) (ಬಳ. ಮಾ.) ತಾನು ಮದುವೆಯಾಗಬೇಕೆಂದಿರುವ ಪ್ರಿಯ, ಪ್ರಿಯೆ; ನಿಶ್ಚಿತ ವಧು, ವರ (Your, his, her, i.). **Inténdment** ಇಂಟೆಂಡ್‌ಮೆಂಟ್ (ನಾ.) ಕಾನೂನಿನಂತೆ ನಿರ್ಧರವಾದ ಅರ್ಥ.

Inténdant ಇಂಟೆಂಡೆಂಟ್ (ನಾ.) ಸಾರ್ವಜನಿಕ ಉದ್ಯೋಗ, ವ್ಯವಹಾರ, ಮೊ. ಗಳ ವಿಚಾರಣಕರ್ತ; ಮೇಲ್ವಿಚಾರಕ. **Inténdancy** (ನಾ.)

Inténse ಇಂಟೆನ್ಸ್ (ಗು.; ತರ ತಮ ರೂಪಗಳು: -er, -est) (ಗುಣ, ಲಕ್ಷಣ, ಮೊ.) ಹೆಚ್ಚು ಮಟ್ಟದಲ್ಲಿರುವ; ಬಲವತ್ತಾದ; ತೀವ್ರ; ತೀಕ್ಷ್ಣ; ಉಗ್ರ; ಉದ್ರಿಕ್ತ; ಕಡು; ಕಡುಪಾದ; (ಯಾವುದಾದರೂ ಗುಣ) ಅತಿಶಯವಾಗುಳ್ಳ. (ಭಾವನೆ ಅಥವಾ ಕ್ರಿಯೆ) ಅತ್ಯಾಸಕ್ತಿಯ; ಉತ್ಸುಕ; ಗಾಢ; ಬಹಳ. **Inténsely** (ಕ್ರಿ. ವಿ.); **Inténseness** (ನಾ.); **Inténsify** (ಕ್ರಿ.) (ಗುಣವಾಚಕಾರ್ಥಗಳಲ್ಲಿ); (ಛಾಯಾ ಚಿತ್ರ) ಫಲಕದಲ್ಲಿಯ ವಿಷಮ ಬಿಂಬವನ್ನು ರಾಸಾಯನಿಕ ಕ್ರಿಯೆಯಿಂದಾಗಲಿ, ಇತರ ಮಾರ್ಗದಿಂದಾಗಲಿ, ದಟ್ಟವಾಗಿಸು. **Intensificátion** (ನಾ.); **Inténsion** (ನಾ.) (As opposed to *extension*)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಒಂದು ಗುಣದ) ತೀವ್ರತೆ, ಆಧಿಕ್ಯ, ಗಾಢತೆ, ಆಳ; ಮನಸ್ಸಿನ ಅಥವಾ ಸಂಕಲ್ಪಶಕ್ತಿಯ ಗಾಢಪ್ರಯತ್ನ; ದೃಢ ಪ್ರಯತ್ನ. **Inténsity** (ನಾ.); **Inténsive** (ಗು.) (As opposed to *extensive*) ತೀವ್ರ; ಆಳವಾದ; ಗಾಢವಾದ; ತೀವ್ರಗೊಳಿಸುವ. (ವ್ಯಾ.) ಆಧಿಕ್ಯ ವಾಚಕ. ಕೇಂದ್ರೀಕೃತ; ಒಂದೇ ಬಿಂದುವಿಗೆ, ವಿಸ್ತೀರ್ಣಕ್ಕೆ, ವಿಷಯಕ್ಕೆ, ನಿರ್ದೇಶಿಸಿದ (I. study ಒಂದು ವಿಷಯವನ್ನು ತೀವ್ರವಾಗಿ ಅಭ್ಯಾಸ ಮಾಡುವುದು; ಗಾಢಾಭ್ಯಾಸ). (ಅರ್ಥಶಾಸ್ತ್ರ) ನಿರ್ದಿಷ್ಟ ಪ್ರದೇಶದ ಉತ್ಪತ್ತಿಯನ್ನು ಹೆಚ್ಚುಮಾಡುವ (I. agriculture). (ವೈ. ಶಾ.) I. inoculation ಸಲ ಸಲಕ್ಕೂ ಹೆಚ್ಚು ಹೆಚ್ಚು ತೀವ್ರವಾದ ಪ್ರತಿವಿಷವನ್ನು ದೇಹಕ್ಕೆ (ಚುಚ್ಚಿ) ಸೇರಿಸುವುದು. **Inténsively** (ಕ್ರಿ. ವಿ.); **Intént** (ನಾ., ಗು.) ಆಶಯ; ಅಭಿಪ್ರಾಯ; ಉದ್ದೇಶ (With good i.; With i. to defraud). [(ಬ. ವ. ದಲ್ಲಿ) To all intents & purposes ಬಹುತರವಾಗಿ; ಅಂತೆಯೇ]. (ಗು.) ಮನಸ್ಸು ಮಾಡಿರುವ; ನಿರ್ಧರಿಸಿರುವ (*On* doing, *on* object). ಅತಿ ಶ್ರದ್ಧೆಯಿಂದ (ಒಂದರಲ್ಲಿ) ತತ್ಪರನಾಗಿರುವ (*On* ಉಪ. ದೊಡನೆ). ಆಸಕ್ತಿಯುಳ್ಳ; ಶ್ರದ್ಧಾಪೂರ್ವಕವಾದ; ತೀವ್ರಾಭಿಲಾಷೆಯ. **Inténtly** (ಕ್ರಿ. ವಿ.); **Inténtness** (ನಾ.); **Inténtion** (ನಾ.) ಉದ್ದೇಶ; ಆಶಯ; ಅಂತ್ಯೋದ್ದೇಶ; ಇಂಗಿತ. (ಬ. ವ. ದಲ್ಲಿ) (ಬಳ. ಮಾ.) ಮದುವೆಯ ಪ್ರಸ್ತಾವದ ಉದ್ದೇಶಗಳು. [(ವೈ. ಶಾ.) First Second i. ಮೊಲ್ಲಡೆ ಹರಳುಗಟ್ಟಿ ಗಾಯ ವಾಸಿಯಾಗುವುದು. First i. ಹೀಗೆ ಹರಳುಗಟ್ಟದೆ, ಭಾಗಗಳು ಕೂಡಲೆ ಸೇರಿಕೊಂಡು ಗಾಯ ವಾಸಿಯಾಗುವುದು]. (ತರ್ಕ) ಭಾವನೆ; ಕಲ್ಪನೆ [First intentions (ವಸ್ತುಗಳ ವಿಷಯದಲ್ಲಿ) ಪ್ರಥಮ ಭಾವನೆ (ಉದಾ., ಮರ, ಹಸು). Second intentions ಪ್ರಥಮ ಭಾವನೆಯ ಮೇಲೆ ಆಲೋಚನೆಯಿಂದ ಹುಟ್ಟಿದ ದ್ವಿತೀಯ ಭಾವನೆಗಳು (ಉದಾ., ಜಾತಿ, ಗುಣ, ಮೊ.)]. [(ದೇವ. ಶಾ.) Special, particular, i. (ಪ್ರಭುಭೋಜನ ಸಂಸ್ಕಾರದಲ್ಲಿ ಯಾವ ಫಲಪ್ರಾಪ್ತಿಗಾಗಿ ಸಲ್ಲಿಸಲಾಗುವುದೊ ಆ) ವಿಶೇಷೋದ್ದೇಶ]. **Inténtional** (ಗು.) ಉದ್ದೇಶಪೂರ್ವಕವಾಗಿ ಮಾಡಿದ. **Inténtionally** (ಕ್ರಿ. ವಿ.)

Intént, Inténtion, etc. **Intense** ನೋಡಿ.

Intér[1] ಇಂಟರ್ (ಕ್ರಿ. ಸಕ.) (ಹೆಣ, ಮೊ. ನ್ನು) ನೆಲದೊಳಗೆ, ಗೋರಿ, ಮೊ. ಗಳಲ್ಲಿ, ಸ್ಥಾಪಿಸು; ಹೂಳು. **Intérment** (ನಾ.) ಹೂಳುವುದು.

Inter[2] (L) ಇಂಟರ್ (ಉಪ.) ನಡುವೆ; ಮಧ್ಯೆ. *I. alia* (— ಏಲಿಯ) ಇತರ ವಿಷಯ, ಮೊ. ಗಳ ಮಧ್ಯೆ. *I. nos* (—ನೋಸ್) ನಮ್ಮ ನಮ್ಮಲ್ಲಿ. *I. se* (— ಸ) ಅವರವರಲ್ಲಿ. *I. vivos* (— ವೈವೋಸ್) ಜೀವಂತರಲ್ಲಿ [ಮು., ದಾನವಾಗಿ ಬಂದುದರ ವಿಷಯದಲ್ಲಿ (ಉತ್ತರಾಧಿಕಾರದಿಂದ ಬಂದ ವಿಷಯದಲ್ಲಲ್ಲ)]

Inter- ಇಂಟರ್— (ಸ. ಪೂ. ಪ.) (ಪರಸ್ಪರ ಸಂಬಂಧವನ್ನು ಸೂಚಿಸುವ, ನಡುವೆ, ಮಧ್ಯೆ ಎಂಬರ್ಥವನ್ನು ಕೊಡುವ, ಪೂ. ಪ್ರ.) ಮಧ್ಯೆ —; ನಡು —. (ಕ್ರಿಯಾಪದಗಳನ್ನೂ ನಾಮಪದಗಳನ್ನೂ ಗುಣವಾಚಕಗಳನ್ನೂ ಮಾಡಲು ಉಪಯೋಗವಾಗುತ್ತದೆ). **-articular** ದೇಹದ ಕೀಲಿನಲ್ಲಿ ಎದುರುಬದುರು ಭಾಗಗಳ ಸಂಪರ್ಕವಾಗುವ ಮೈಯ ನಡುವಣ. **-bed** (ಕ್ರಿ. ಸಕ.) (ವಸ್ತುವನ್ನು) ಇತರ ವಸ್ತುಗಳ ಮಧ್ಯದಲ್ಲಿ ನಾಟು, ನೆಡು. **-collegiate** ಪ್ರೌಢ ವಿದ್ಯಾಶಾಲೆಗಳು ಪರಸ್ಪರ ನಡಸುವ. **-costal** ದೇಹದ (ಎರಡು) ಪಕ್ಕೆಲುಬುಗಳ ಮಧ್ಯದ; ಹಡಗಿನ ಈ ತೆರದ ಪುಸ್ತುಬಂದಿಯ ಪಟ್ಟಿಗಳ ಮಧ್ಯದ. **-cross** (ಕ್ರಿ.) ಒಂದಕ್ಕೊಂದು ಅಡ್ಡಡ್ಡವಾಗಿರು(ಡು); ಅಡ್ಡ ಹಾಯಿ. ಎರಡು ಬೇರೆ ಬೇರೆ ತಳಿಗಳನ್ನು ಸಂಪರ್ಕಮಾಡಿ ಹೊಸ ತಳಿ ಬೆಳಸು; — ತಳಿಗಳು ಪರಸ್ಪರ ಸಂಪರ್ಕವಾಗಿ ಹೊಸ ತಳಿ ಬೆಳೆ; ತಳಿಬೆರೆ; — ಬೆರಸು. **-facial** ಸ್ಫಟಿಕಾಕೃತಿಯ ಅಥವಾ ಇತರ ಘನಾಕೃತಿಯ ಎರಡು ಮುಖಗಳ ಮಧ್ಯೇ ಇರುವ. **-glacial** ಹಿಮಾನೀ ಯುಗಗಳ ಮಧ್ಯದ. **-growth** ಒಂದರೊಡನೊಂದು ಸೇರಿಕೊಂಡು ಬೆಳೆಯುವುದು: ಕೂಡು ಬೆಳವಣಿಗೆ. **-node** (ಸ. ವಿ.) ಎಲೆ ಬಿಡುವ ಎರಡು ಗೆಣ್ಣುಗಳ ಮಧ್ಯೇ ಇರುವ ಕಾಂಡಭಾಗ. (ಅಂ. ರ. ಶಾ.) (ದೇಹದ) ಎರಡು ಸಂಧಿಗಳ ಮಧ್ಯೇ ಇರುವ ತೆಳುವಾದ ಭಾಗ (ಮು., ಬೆರಳಿನ ಎಲುಬು). **-provincial** ಪ್ರಾಂತಗಳ ಮಧ್ಯೇ ಇರುವ; ಪ್ರಾಂತಗಳು ಪರಸ್ಪರವಾಗಿ ನಡಸುವ; ಪ್ರಾಂತ ಪರಸ್ಪರ. **-space** (ಎರಡು ವಸ್ತುಗಳಿಗೆ ಮಧ್ಯೇ ಇರುವ) ಸ್ಥಳಾವಕಾಶ, ಅಂತರ; (ಎರಡು ಕಾಲಗಳ ಮಧ್ಯದ) ಕಾಲಾವಕಾಶ; ಬಿಡುವು. **-stellar** ನಕ್ಷತ್ರಗಳಿಗೆ ಮಧ್ಯೇ ಇರುವ. **-stratification** ಪ್ರತ್ಯೇಕ ಸ್ತರಗಳು ಮಧ್ಯೇ ಮಧ್ಯೇ ಇರುವುದು.

Interact[1] ಇಂಟರ್‌ಆ್ಯಕ್ಟ್ (ನಾ.) ನಾಟಕದ ಎರಡು ಅಂಕಗಳ ನಡುವಣ ವಿರಾಮ; ಅಂಕ ವಿರಾಮ. ಆ ವಿರಾಮ ಕಾಲದಲ್ಲಿ ನಡಸುವ ಉಲ್ಲಾಸಕರವಾದ ಸಣ್ಣ ವಿನೋದ.

Interáct[2] ಇಂಟರ್‌ಆ್ಯಕ್ಟ್ (ಕ್ರಿ. ಅಕ.) ಪರಸ್ಪರವಾಗಿ ಕಾರ್ಯ ಮಾಡು, ಪ್ರಭಾವ ಬೀರು, ಪರಿಣಾಮ ಮಾಡು. **Interáction** (ನಾ.) ಪರಸ್ಪರ ಕ್ರಿಯೆ. **Interáctive** (ಗು.)

Interblénd ಇಂಟರ್‌ಬ್ಲೆಂಡ್ (ಕ್ರಿ.) (ವಸ್ತುಗಳು) ಒಂದರೊಡನೊಂದು ಬೆರಸು, ಬೆರೆ; ಸಂಮಿಶ್ರ ಮಾಡು; —ಆಗು (*With* ಉಪ. ದೊಡನೆ)

Interbreéd ಇಂಟರ್‌ಬ್ರೀಡ್ (ಕ್ರಿ.) ತಳಿ ಮಿಶ್ರಮಾಡು; ಅಡ್ಡತಳಿ ಬೆಳಸು. (ಬೇರೆ ಬೇರೆ ವಂಶದ ಪ್ರಾಣಿಗಳು) ಪರಸ್ಪರ ಬೆರೆ. ಸಂಕರೋತ್ಪತ್ತಿ ಮಾಡು, — ಆಗು.

Intércalary ಇಂಟರ್‌ಕಲರಿ (ಗು.) (ದಿನದ ಅಥವಾ ತಿಂಗಳಿನ ವಿಷಯದಲ್ಲಿ) ಸೌರವರ್ಷಕ್ಕೆ ಸರಿಹೊಂದಿಸುವುದಕ್ಕಾಗಿ ಪಂಚಾಂಗದಲ್ಲಿ (ಹೆಚ್ಚಾಗಿ) ಸೇರಿಸಿದ. (ವರ್ಷದ ವಿಷಯದಲ್ಲಿ) ಅಧಿಕ ದಿನ, ಮಾಸ,— ಇವನ್ನುಳ್ಳ. ನಡುವೆ ಬರುವ; ನಡುವೆ ಸೇರಿಸಿದ. **Intércalate** (ಕ್ರಿ. ಸಕ.) (ಅಧಿಕ ದಿನ, ಮಾಸ, ಮೊ. ನ್ನು) ಮಧ್ಯೆ ಸೇರಿಸು. (ಸಾಮಾನ್ಯ ಕ್ರಮ ಮೀರಿ ಯಾವುದನ್ನಾದರೂ) ಮಧ್ಯೆ ಸೇರಿಸು (ಮು., ಸ್ತರದ ವಿಷಯದಲ್ಲಿ, ಭೂತ ಕೃದ್ವಾಚಿಯಲ್ಲಿ). **Intercalátion** (ನಾ.)

Intercéde ಇಂಟರ್‌ಸೀಡ್ (ಕ್ರಿ. ಅಕ.) ಮತ್ತೊಬ್ಬನ ಪರವಾಗಿ ಮಧ್ಯಸ್ಥಿಕೆ ಮಾಡು. (ಒಬ್ಬನೊಂದಿಗೆ ಮತ್ತೊಬ್ಬನ ಪರವಾಗಿ) ಹೇಳಿಕೊ, ಪ್ರಾರ್ಥಿಸು (*With* one person *for* another). **Intercéssion** —ಸೆಷನ್ (ನಾ.) (ಮು.) ಮತ್ತೊಬ್ಬನ ಪರವಾಗಿ ಪ್ರಾರ್ಥನೆ, ಬಿನ್ನಹ (ಮಾಡುವುದು). **Intercéssor** (ನಾ.); **Intercessórial** — ಸೋ — (ಗು.) ಮಧ್ಯಸ್ಥಗಾರನ, — ನಿಗೆ ಸಂಬಂಧಿಸಿದ. **Intercéssory** — ಸರಿ — (ಗು.)

Intercépt ಇಂಟರ್‌ಸೆಪ್ಟ್ (ಕ್ರಿ. ಸಕ.) (ವ್ಯಕ್ತಿ, ಮೊ. ನ್ನು ಸ್ಥಳದಿಂದ ಸ್ಥಳಕ್ಕೆ ಹೋಗುವ) ನಡುದಾರಿಯಲ್ಲಿ ಅಡ್ಡಗಟ್ಟು, ಹಿಡಿದುಬಿಡು. (ಬೆಳಕು, ಮೊ. ನ್ನು ಒಂದಕ್ಕೆ ಹೋಗದಂತೆ) ತಡೆದುಬಿಡು (*From* ಉಪ. ದೊಡನೆ). ತಡೆ; ನಿಲ್ಲಿಸು. (ಗಣಿತ) ಎರಡು ಬಿಂದುಗಳ ಅಥವಾ ರೇಖೆಗಳ ಮಧ್ಯೇ ಇರುವ ಪ್ರದೇಶವನ್ನು ಗುರುತುಮಾಡಿ ಪ್ರತ್ಯೇಕಿಸು. **Intercéption** (ನಾ.); **Intercéptor** (ನಾ.); **Intercéptive** (ಗು.)

Interchange ಇಂಟರ್‌ಚೇಂಜ್ (ನಾ.), **Interchánge** (ಕ್ರಿ. ಸಕ.) (ಇಬ್ಬರು ಅಥವಾ ಎರಡು ಪಕ್ಷಗಳು ತಂತಮ್ಮಲ್ಲಿ ಮಾಡಿಕೊಳ್ಳುವ ಪದಾರ್ಥಗಳ) ಪರಸ್ಪರ ವಿನಿಮಯ, ಅದಲು ಬದಲು ಒಂದಾದ ಮೇಲೊಂದರಂತೆ ಬರುವುದು; ಪರ್ಯಾಯ. (ಕ್ರಿ.) (ಇಬ್ಬರ ವಿಷಯದಲ್ಲಿ, ವಸ್ತುಗಳನ್ನು) ಪರಸ್ಪರ ವಿನಿಮಯ ಮಾಡಿಕೊ; (ಎರಡು ವಸ್ತುಗಳಲ್ಲಿ) ಒಂದರ ಸ್ಥಾನದಲ್ಲಿ ಮತ್ತೊಂದನ್ನಿಡು; ಅದಲು ಬದಲು ಮಾಡು; ಪರ್ಯಾಯ ಕ್ರಮದಲ್ಲಿ ಬರು(ವಂತೆ ಮಾಡು). **Interchangeabílity** (ನಾ.); **Interchángeable** (ಗು.); **Interchángeableness** (ನಾ.); **Interchángeably** (ಕ್ರಿ. ವಿ.)

Intercolónial ಇಂಟರ್‌ಕಲೋನಿಯಲ್ (ಗು.) ಬೇರೆ ಬೇರೆ ನೆಲಸು ನಾಡುಗಳಿಗೆ ಪರಸ್ಪರವಾಗಿ ಇರುವ, ಪರಸ್ಪರ ನಡೆಯುತ್ತಿರುವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Intercommúnicate ಇಂಟರ್‌ಕಮ್ಯೂನಿಕೇಟ್ (ಕ್ರಿ. ಅಕ.) ಪರಸ್ಪರ (ಪತ್ರ, ಮೊ. ಗಳ) ವ್ಯವಹಾರವಿರು; ಪರಸ್ಪರ ಬಳಕೆಯಿರು. ಒಂದರಿಂದೊಂದಕ್ಕೆ ಸಲೀಸಾದ ದಾರಿಯಿರು. **Intercommunicátion** (ನಾ.)

Intercommúnion ಇಂಟರ್‌ಕಮ್ಯೂನಿಯನ್ (ನಾ.) ಅನ್ಯೋನ್ಯ ವ್ಯವಹಾರ; ಅನ್ಯೋನ್ಯವಾಗಿರುವ ಬಳಕೆ; ಅಂತರಂಗ ಸಂಬಂಧ. ಪರಸ್ಪರ ಕ್ರಿಯೆ, ಸಂಬಂಧ; ಹೊಕ್ಕು ಬಳಕೆ. **Intercommúnity** (ನಾ.) ಬೇರೆ ಬೇರೆ ಪಕ್ಷಗಳಿಗೆ ಸಾಮಾನ್ಯವಾಗಿರುವುದು; ಸರ್ವಪಕ್ಷ ಸಾಮಾನ್ಯತೆ; ಮದ್ದಕ (ಮಧ್ಯಕ); ವಸ್ತುಗಳನ್ನು ಒಟ್ಟಿಗೆ ಅನುಭವಿಸುವುದು.

Íntercourse ಇಂಟರ್‌ಕೋರ್ಸ್ (ನಾ.) ಸಾಮಾಜಿಕ ವ್ಯವಹಾರ, ಹೊಕ್ಕುಬಳಕೆ. (ಮನುಷ್ಯನಿಗೆ ದೇವರಲ್ಲಿ) ಸಂಯೋಗ, ಭಾವೈಕ್ಯ. (ಬೇರೆ ಬೇರೆ ದೇಶ, ಮೊ. ಗಳಿಗೆ, ವ್ಯಾಪಾರ, ಮೊ. ಉದ್ದೇಶಗಳಿಗಾಗಿ ಇರುವ) ಪರಸ್ಪರ ವ್ಯವಹಾರ, ಸಂಬಂಧ. (ಸ್ತ್ರೀ ಪುರುಷ) ಸಂಭೋಗ (Illicit i. ಅಕ್ರಮ ಸಂಭೋಗ)

Intercúrrent ಇಂಟರ್‌ಕರೆಂಟ್ (ಗು.) (ಕಾಲ ಅಥವಾ ಘಟನೆ) ನಡುವೆ ಬರುವ, ಹರಿಯುವ. (ರೋಗ) ಮತ್ತೊಂದು ರೋಗದ ಮಧ್ಯೆ ಬರುವ; ಬಿಟ್ಟು ಬಿಟ್ಟು ಬರುವ. **Intercúrrence** (ನಾ.)

Interdepénd ಇಂಟರ್‌ಡಿಪೆಂಡ್ (ಕ್ರಿ. ಅಕ.) (ಒಂದನ್ನೊಂದು, ಒಬ್ಬನ ಮೇಲೊಬ್ಬ) ಪರಸ್ಪರ ಅವಲಂಬಿಸು; ಅನ್ಯೋನ್ಯಾಶ್ರಯವಿರು. **Interdepéndence, -ency** (ನಾ.); **Interdepéndent** (ಗು.); **Interdepéndently** (ಕ್ರಿ. ವಿ.)

Ínterdict ಇಂಟರ್‌ಡಿಕ್ಟ್ (ನಾ.), **Interdíct** (ಕ್ರಿ. ಸಕ.) ಅಧಿಕಾರ ಪೂರ್ವಕವಾದ, — ನಿಷೇಧ, ನಿರೋಧ. (ಸ್ಕಾಟ್ ನ್ಯಾ. ಶಾ.) = Injunction. (ರೋ. ಕ್ಯಾ.) (ಒಬ್ಬ ಮನುಷ್ಯನನ್ನು ಅಥವಾ ಒಂದು ಸ್ಥಳವನ್ನು) ಧಾರ್ಮಿಕ ವ್ಯವಹಾರ, ಮೊ. ಗಳಿಂದ ಬಹಿಷ್ಕರಿಸುವ ಶಿಕ್ಷೆ; ಬಹಿಷ್ಕಾರ (ಶಿಕ್ಷೆ). (ಕ್ರಿ.) (ಕ್ರಿಯೆಯನ್ನು) ನಿಷೇಧಿಸು; ನಿರೋಧಿಸು. (ಒಂದರ ಉಪಯೋಗವನ್ನು) ನಿಷೇಧಿಸು; ಬಹಿಷ್ಕರಿಸು. (ಒಬ್ಬನು ಒಂದನ್ನು ಮಾಡಕೂಡದೆಂದು) ತಡೆ, ಅಡ್ಡಿಮಾಡು (Person *from* doi*ng*). (ಒಂದನ್ನು, ಒಬ್ಬನಿಗೆ) ಕೊಡಕೂಡದೆಂದು ನಿಷೇಧಿಸು (Thing *to* person). **Interdíction** (ನಾ.); **Interdíctory** (ಗು.)

Ínterest ಇಂಟೆರೆಸ್ಟ್ (ನಾ.) (ಆಸ್ತಿಯಲ್ಲಿ) ಕಾನೂನಿಗನುಸಾರವಾದ ಆಸಕ್ತಿ, ಬಾಧ್ಯತೆ, ಹಕ್ಕು (*In* ಉಪ. ದೊಡನೆ); (ವ್ಯಾಪಾರೋದ್ಯಮ, ಮೊ. ಗಳಲ್ಲಿ) ಆರ್ಥಿಕ ಸಂಬಂಧ, ಪಾಲು; [Vested interests (Vest ನೋಡಿ)]. ಹಿತ; ಹಿತಾರ್ಥ; ಆಸ್ಥೆ; ಪ್ರಯೋಜನ; ಲಾಭ [I do it in your i. ನಿನ್ನ ಪ್ರಯೋಜನಕ್ಕಾಗಿ ಅದನ್ನು ಮಾಡುತ್ತೇನೆ. In the i. (or interests) of truth ಸತ್ಯಕ್ಕಾಗಿ, ಸತ್ಯ ಪಾಲನೆಗಾಗಿ]. (ಒಬ್ಬನಿಗೆ) ಆಸಕ್ತಿಯಿರುವ ವಿಷಯ. ಒಂದು ಪಕ್ಷದವರಿಗೆ ಸಂಬಂಧಿಸಿದ ತತ್ತ್ವ. (ಒಂದರಲ್ಲಿ) ಎಲ್ಲರಿಗೂ ಸಮಾನ ಹಿತಾರ್ಥವಿರುವ ಪಕ್ಷ, ಪಂಗಡ (The brewing i.). ತನ್ನ ಕ್ಷೇಮಚಿಂತನೆಯು ಸ್ವಾರ್ಥಪ್ರವೃತ್ತಿ; ಆತ್ಮ ಹಿತ; ಸ್ವಾರ್ಥ (= Self-interest). [Make i. (*with* person) ಬೇರೊಬ್ಬನೊಡನೆ ಹಿತಾರ್ಥಕ್ಕಾಗಿ, ಆಸಕ್ತಿಗಾಗಿ, ಕೂಡಿಕೊ]. ಸಂಬಂಧಪಟ್ಟದ್ದು. ಕುತೂಹಲ; ಕುತೂಹಲಕಾರಿ; ಸ್ವಾರಸ್ಯ (This has no i. for me ಇದರಲ್ಲಿ ನನಗೆ ಯಾವ ಸ್ವಾರಸ್ಯವೂ ಇಲ್ಲ). (ಸಾಲ ಕೊಟ್ಟ ಹಣಕ್ಕೆ ಕೊಡುವ) ಬಡ್ಡಿ. With i. ಬಡ್ಡಿ ಸಹಿತ; (ರೂಪ.) ಹೆಚ್ಚಿದ ಬಲದಿಂದ; ಮತ್ತಷ್ಟು ಹೆಚ್ಚಾಗಿ (Returned the blow with i. ಕೊಟ್ಟ ಏಟಿಗೆ ಮತ್ತಷ್ಟು ಸೇರಿಸಿ ಪ್ರತಿಯೇಟು ಕೊಟ್ಟನು). Simple I. (ಅಸಲಿನಮೇಲೆ ಮಾತ್ರ ಹಾಕಿ ಗೊತ್ತಾದ ಕಾಲಗಳಲ್ಲಿ ಪಾವತಿ ಪಡೆಯುವ) ಸರಳ ಬಡ್ಡಿ. Compound i. (ಅಸಲೂ ಅದರ ಮೇಲಿನ ಬಡ್ಡಿಯೂ ಸೇರಿದ ಮೊತ್ತವನ್ನು ಮುಂದಿನ ಅಸಲಾಗಿ ತೆಗೆದುಕೊಳ್ಳುತ್ತ ಲೆಕ್ಕಮಾಡುವ) ಚಕ್ರಬಡ್ಡಿ.

Ínterest (ಕ್ರಿ. ಸಕ.) (ಒಬ್ಬನನ್ನು) ಆಸಕ್ತಿ ವಹಿಸುವಂತೆ, ಭಾಗ ವಹಿಸುವಂತೆ, ಮಾಡು; ಆಸಕ್ತಿ ಹುಟ್ಟಿಸು (*In* ಉಪ. ದೊಡನೆ). (ಭೂ. ಕೃ.) ಸ್ವಾರ್ಥವಿರುವ; ನಿಷ್ಪಕ್ಷಪಾತವಲ್ಲದ; ಸ್ವಾರ್ಥ ರಾಹಿತ್ಯವಿಲ್ಲದ. (Interested parties, motives ಸ್ವಾರ್ಥತೆಯುಳ್ಳ ಪಕ್ಷಗಳು; ಸ್ವಾರ್ಥೋದ್ದೇಶಗಳು). ಕುತೂಹಲವೆಬ್ಬಿಸು; ಗಮನ ಸೆಳೆ. **Ínteresting** (ಗು.) ಸ್ವಾರಸ್ಯವುಳ್ಳ; ಆಸಕ್ತಿ ಹುಟ್ಟಿಸುವ; ಕುತೂಹಲ ಜನಕ. (In an interesting condition ಬಸಿರಾಗಿ; ಗರ್ಭಿಣಿಯಾಗಿ). **Ínterestingly** (ಕ್ರಿ. ವಿ.); **Ínterestedly** (ಕ್ರಿ. ವಿ)

Interfére ಇಂಟರ್‌ಫಿಯರ್ (ಕ್ರಿ. ಅಕ.) (ವಸ್ತುಗಳ ವಿಷಯದಲ್ಲಿ) ಮತ್ತೊಂದಕ್ಕೆ ಅಡ್ಡವಾಗಿ, ವಿರುದ್ಧವಾಗಿ, ಬರು (*With* ಉಪ. ದೊಡನೆ). (ವ್ಯಕ್ತಿಯ ವಿಷಯದಲ್ಲಿ, ತನಗೆ ಸಂಬಂಧವಿಲ್ಲದಿದ್ದರೂ) ಮಧ್ಯೆ ಬರು, ತಲೆ ಹಾಕಿಕೊಂಡು ಬರು, ಕೈ ಹಾಕು (*With* ಉಪ. ದೊಡನೆ ಸಹ). (ಭೌ. ವಿ., ಬೆಳಕಿನ ಅಲೆಗಳು, ಮೊ. ವು) ಒಂದಕ್ಕೊಂದು ಸಂಘಟ್ಟಿಸು, ಪರಸ್ಪರವಾಗಿ ಅಡ್ಡೈಸು. (ಕುದುರೆ) ಒಂದು ಕಾಲನ್ನು ಮತ್ತೊಂದಕ್ಕೆ ಹೊಡೆ. **Interférence** (ನಾ.); **Interféring** (ಗು.)

Intérfluent ಇಂಟರ್‌ಫ್ಲುಎಂಟ್ (ಗು.) ಒಂದರೊಳಕ್ಕೊಂದು ಹರಿಯುವ; ಪರಸ್ಪರ ಪ್ರವಾಹಿ.

Interfúse ಇಂಟರ್‌ಫ್ಯೂಸ್ (ಕ್ರಿ.) (ವಸ್ತುವನ್ನು) ಮತ್ತೊಂದರಲ್ಲಿ ಬೆರಸು, ಸಮ್ಮಿಶ್ರ ಮಾಡು (*With* ಉಪ. ದೊಡನೆ). (ವಸ್ತುಗಳು) ಒಟ್ಟಿಗೆ ಬೆರೆ; ಒಂದುಗೂಡಿಕೊ; ಸಮ್ಮಿಶ್ರವಾಗು. (ಎರಡು ವಸ್ತುಗಳು) ಪರಸ್ಪರ ಬೆರಕೆಯಾಗು, — ಮಾಡು. **Interfúsion** (ನಾ.)

Ínterim ಇಂಟರಿಮ್ (ಕ್ರಿ. ವಿ., ನಾ., ಗು.) (ಪ್ರಾಚೀ. ಪ್ರ.) (ಕ್ರಿ. ವಿ.) ಅಷ್ಟರಲ್ಲಿ; ಈ ಮಧ್ಯೆ; ತನ್ಮಧ್ಯೆ; ಮಧ್ಯೇ ಬರುವ ಕಾಲ; ಅಂತರ. (ಗು.) ಮಧ್ಯೇ ಬರುವ; ನಡುವಣ; ತಾತ್ಕಾಲಿಕ; ಹಂಗಾಮಿ (I. dividend ವಾರ್ಷಿಕ, ಮೊ. ಲಾಭ ನಷ್ಟದ ಪಟ್ಟಿ ಆಗುವುದಕ್ಕೆ ಮೊದಲೇ ಕೊಟ್ಟ ತಾತ್ಕಾಲಿಕ, ಹಂಗಾಮಿ, — ಲಾಭಾಂಶ)

Intérior ಇಂಟೀರಿಯರ್ (ಗು., ನಾ.) ಒಳಗಡೆಯಿರುವ; ಒಳಗಿನ; ಅಂತಸ್ಥ; ಒಳ ನಾಡಿನ; ಸಮುದ್ರದ ಕರೆಗೆ, ಗಡಿಗೆ, ದೂರವಾಗಿರುವ; ('ಪರದೇಶ'ಕ್ಕೆ ವಿರುದ್ಧವಾಗಿ) ಸ್ವದೇಶದ, ಒಳ ದೇಶದ. ಮನಸ್ಸಿನಲ್ಲಿರುವ; ಆತ್ಮಗತ; ಅಂತರ್ಗತ. (ನಾ.) ಒಳ ಭಾಗ; ಒಳಗು; ಒಳ ನಾಡು; ಕಟ್ಟಡದ ಅಥವಾ ಕೊಠಡಿಯ ಒಳ ಭಾಗ; ಈ ಒಳ ಭಾಗದ ನೋಟ, ಚಿತ್ರ. ಒಳ ಸ್ವಭಾವ; ಆತ್ಮ. ಒಳ ದೇಶದ ಆಡಳಿತ [ಗಳನ್ನು ನೋಡಿಕೊಳ್ಳುವ ಕಚೇರಿ: ಒಳಾಡಳಿತದ ಕಚೇರಿ (Minister of the I. ಒಳಾಡಳಿತದ ಮಂತ್ರಿ)]. **Intériorly** (ಕ್ರಿ. ವಿ.)

Interjácent ಇಂಟರ್‌ಜೇಸೆಂಟ್ (ಗು.) (ಎರಡರ) ನಡುವೆ ಇರುವ; ಮಧ್ಯಸ್ಥಿತ; ಮಧ್ಯಸ್ಥ.

Interjéct ಇಂಟರ್‌ಜೆಕ್ಟ್ (ಕ್ರಿ. ಸಕ.) (ಅಡ್ಡಮಾತು, ಮೊ. ನ್ನು) ಇದ್ದಕ್ಕಿದ್ದ ಹಾಗೆ, ಪ್ರಾಸಂಗಿಕವಾಗಿ, ಸೇರಿಸು, ಮಾತಾಡು, ಹೇಳು; ಮಧ್ಯೇ ಕೂಗು. **Interjéction** (ನಾ.) ಉದ್ಗಾರ. ಭಾವಸೂಚಕಾವ್ಯಯ (ಉದಾ., Ah!, Whew!). **Interjéctional** (ಗು.); **Interjéctionally** (ಕ್ರಿ. ವಿ.); **Interjéctory** (ಗು.)

Interláce ಇಂಟರ್‌ಲೇಸ್ (ಕ್ರಿ.) ಒಂದರೊಳಗೊಂದು ತೊಡರಿ ಸೇರಿಕೊಳ್ಳುವಂತೆ ಒಟ್ಟಿಗೆ ಬಂಧಿಸು, ಹೆಣೆ; ಸಿಕ್ಕು ಮಾಡು, ಆಗು; ತೊಡಕು ಬೀಳು, — ಬೀಳಿಸು; ಪರಸ್ಪರ ಹೆಣೆದುಕೊ (ರೂಪ. ಸಹ). (ಎರಡು ವಸ್ತುಗಳನ್ನು ಒಂದರಲ್ಲೊಂದು ಬೆರೆಯುವಂತೆ) ಸೇರಿಸು (*With* ಉಪ. ದೊಡನೆ). ಒಂದನ್ನೊಂದು ತೊಡಕಾಗಿ ಅಡ್ಡಹಾಯಿ. **Interlácement** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Interlárd ಇಂಟರ್‌ಲಾರ್ಡ್ (ಕ್ರಿ. ಸಕ.) (ಲೇಖನದಲ್ಲಿ, ಭಾಷಣದಲ್ಲಿ) ವಿದೇಶೀಯ ಪದಗಳು, ಮೊ. ನ್ನು ಬೆರಸು.

Interleaf ಇಂಟರ್‌ಲೀಫ್ (ನಾ. ; ಬ. ವ. -ves) ಪುಸ್ತಕದ ಹಾಳೆಗಳ ನಡುವೆ ಸೇರಿಸಿದ (ಸಾ., ಬರಿಯ) ಹೆಚ್ಚು ಹಾಳೆ, ನಡು ಹಾಳೆ. **Interleáve** (ಕ್ರಿ. ಸಕ.) ನಡುಹಾಳೆಗಳನ್ನು ಸೇರಿಸು (ರೂಪ. ಸಹ)

Interlíne ಇಂಟರ್‌ಲೈನ್ (ಕ್ರಿ. ಸಕ.) (ದಸ್ತೈವಜು, ಮೊ. ಗಳಲ್ಲಿ) ಪಂಕ್ತಿಗಳ ನಡುವೆ ಮಾತುಗಳನ್ನು ಸೇರಿಸು ; ಹಂಸಪಾದ ಹಾಕಿ (ಬಿಟ್ಟುಹೋದ ಮಾತುಗಳನ್ನು) ಸೇರಿಸು; ಕುಂಟು ಪಂಕ್ತಿ ಬರೆ. **Interlínear** — ಲಿನಿ — (ಗು.) ಪಂಕ್ತಿಗಳ ನಡುವೆ ಬರೆದ, ಮುದ್ರಿಸಿದ. **Interlineátion** — ಲಿನಿಯೇಷನ್ (ನಾ.)

Interlóck ಇಂಟರ್‌ಲಾಕ್ (ಕ್ರಿ.) (ಒಂದರಮೇಲಕ್ಕೊಂದು ಸ್ವಲ್ಪ ದೂರ ಹರಡುವುದರ ಮೂಲಕ, ಅಥವಾ ಒಂದರಲ್ಲಿಯ ಸಂದುಗಳಲ್ಲಿ ಮತ್ತೊಂದರ ಚಾಚುಗಳು ಕೂರುವುದರ ಮೂಲಕ) ಪರಸ್ಪರ ತೊಡರಿಕೊ ; (ಸಾ., ಕರ್ಮಣಿಯಲ್ಲಿ) ಒಂದರೊಳಗೊಂದನ್ನು ಪರಸ್ಪರ ತೊಡರಿಸು.

Interlócutor ಇಂಟರ್‌ಲಾಕ್ಯುಟರ್ (ನಾ.) ಸಂವಾದದಲ್ಲಿ ಅಥವಾ ಸಂಭಾಷಣೆಯಲ್ಲಿ ಭಾಗ ವಹಿಸುವವನು ; ಸಂವಾದಕ (My i. ನನ್ನೊಡನೆ ಸಂಭಾಷಿಸುತ್ತಿರುವವನು). **Interlócutory** —ಟರಿ (ಗು.) ಪರಸ್ಪರ ಸಂಭಾಷಣೆಯ ; —ಯುಳ್ಳ ; —ಸ್ವಭಾವದ. (ನ್ಯಾ. ಶಾ.) ನ್ಯಾಯಸ್ಥಾನದಲ್ಲಿ ವಿಚಾರಣೆಯಾಗುವುದಕ್ಕೆ ಮೊದಲೇ ಕಕ್ಷಿ ಪ್ರತಿ ಕಕ್ಷಿಗಳು ತಮತಮಗಿರುವ ನಿಜವಾದ ಭಿನ್ನಾಭಿಪ್ರಾಯಗಳು ಯಾವುವೆಂಬುದನ್ನು ನಿರ್ಣಯಿಸಲು ಅವಿಧಿಯಾಗಿ ನಡಸುವ ಚರ್ಚೆಯ. **Interlócutress** (ನಾ., ಸ್ತ್ರೀ.) ; **Interlócutrix** (ನಾ., ಸ್ತ್ರೀ.) ; **Interlocútion** —ಲೊಕ್ಯೂ— (ನಾ.)

Interloper ಇಂಟರ್‌ಲೋಪರ್ (ನಾ.) ಹಕ್ಕಿಲ್ಲದೆ ಹೊಕ್ಕವನು ; ಇತರರ ಕೆಲಸದಲ್ಲಿ ತಾನಾಗಿ ಮಧ್ಯೆ ತಲೆಹಾಕುವವನು ; ಇತರರ ವ್ಯವಹಾರಗಳಲ್ಲಿ (ಮು., ಸ್ವಂತ ಲಾಭಕ್ಕಾಗಿ) ತಾನಾಗಿ ಪ್ರವೇಶಿಸುವವನು. (ಚರಿತ್ರೆ) ಇತರರಿಗೆ ಒಟ್ಟಪ್ಪಣೆ ಕೊಟ್ಟಿರುವ ಒಂದು ವ್ಯಾಪಾರದಲ್ಲಿ ಅಪ್ಪಣೆ ಪಡೆಯದೆ ವ್ಯಾಪಾರ ಮಾಡುವವನು : ಅನಧಿಕೃತ ವ್ಯಾಪಾರಿ. **Interlópe** (ಕ್ರಿ. ಅಕ.)

Interlude ಇಂಟರ್‌ಲ್ಯೂಡ್ (ನಾ.) ನಾಟಕದ ಅಂಕಗಳ ನಡುವಣ ವಿರಾಮ ; ಅಂಕ ವಿರಾಮ. ಆ ವಿರಾಮದಲ್ಲಿ ನಡಸುವ ಸಣ್ಣ ವಿನೋದ, ಮೊ. ದು. (ಸಂ.) ಸ್ತೋತ್ರಗೀತ ಪದಗಳ ನಡುವೆ ಬಾಜಿಸುವ ವಾದ್ಯಗೀತ : ಅಂತರ ವಾದನ. ಭಿನ್ನ ಲಕ್ಷಣದ ಕಾಲಾವಕಾಶ, ಸ್ಥಳಾವಕಾಶ ; ಅಂತರ ; ಮಧ್ಯೆ ತಂದು ಸೇರಿಸಿದ, — ಘಟನೆ, ವಿನೋದ ಪ್ರಕರಣ, ಮೊ. ದು. (ಚರಿತ್ರೆ) ಕ್ರಿಸ್ತನ ಅಥವಾ ಕ್ರೈಸ್ತ ಸಂತರ ವಿಷಯವಾದ ನಾಟಕಗಳಲ್ಲಿ, ಅಥವಾ ನೈತಿಕ ನಾಟಕಗಳಲ್ಲಿ, ಅಂಕಗಳ ನಡುವೆ ಸೇರಿಸುತ್ತಿದ್ದ ಸಣ್ಣ ನಾಟಕೀಯ, ಅಥವಾ ವಿಡಂಬನ ದೃಶ್ಯ : ಅಂಕಮಧ್ಯ ದೃಶ್ಯ.

Intermárriage ಇಂಟರ್‌ಮ್ಯಾರೆಜ್ (ನಾ.) ಬೇರೆ ಬೇರೆ ಮನೆತನ, ಕುಲ, ಬುಡಕಟ್ಟು, ಜಾತಿ, ಮೊ. ಕ್ಕೆ ಸೇರಿದ ಗಂಡು ಹೆಣ್ಣಿಗೆ ಮದುವೆ ; ಕುಲಾಂತರ, ಜಾತ್ಯಂತರ, —ವಿವಾಹ; (ಶಿಥಿಲವಾಗಿ) (ಹತ್ತಿರದ ಬಂಧುಗಳಲ್ಲಿ) ಒಬ್ಬರೊಬ್ಬರಿಗೆ ಮದುವೆಯ ಸಂಬಂಧ : ಸಮೀಪ ಬಾಂಧವ್ಯ ವಿವಾಹ. **Intermárry** (ಕ್ರಿ. ಅಕ.) (ಕುಲ, ಬುಡಕಟ್ಟು, ಮೊ. ಗಳ ವಿಷಯದಲ್ಲಿ) ಪರಸ್ಪರ ವಿವಾಹ ಸಂಬಂಧ ಬೆಳಸು (*With* ಉಪ. ದೊಡನೆ)

Interméddle ಇಂಟರ್‌ಮೆಡ್‌ಲ್ (ಕ್ರಿ. ಅಕ.) (ಮು., ತನಗೆ ಸಂಬಂಧಪಡದಿರುವುದರಲ್ಲಿ) ಕೈ ಹಾಕು, ಪ್ರವೇಶ ಮಾಡು, ಅನಕ್ತನಾಗು (*With, in* ಉಪ. ದೊಡನೆ)

Intermédiary. Intermediate ನೋಡಿ.

Intermédiate ಇಂಟರ್‌ಮೀಡಿಯೆಟ್ (ಗು., ನಾ.), — ಯೇಟ್ (ಕ್ರಿ. ಅಕ.) (ಎರಡು ವಸ್ತುಗಳ, ಸ್ಥಾನಗಳ, ಕಾಲಗಳ, ಸಂಖ್ಯೆಗಳ, ಒಂದು ಶ್ರೇಣಿಯ, ಅಂಗಗಳು, ಮೊ. ಗಳ) ಮಧ್ಯೇ ಬರುವ, ಇರುವ, ಸಂಭವಿಸುವ. (ನಾ.) ಮಧ್ಯೇ ಬರುವದು ; ಮಧ್ಯವರ್ತಿ. (ಕ್ರಿ.) ಮಧ್ಯಸ್ಥ ಮಾಡು ; ಮಧ್ಯಸ್ಥನಾಗಿ ವರ್ತಿಸು (*Between* ಉಪ. ದೊಡನೆ). **Intermédiately** (ಕ್ರಿ. ವಿ.) ; **Intermediátion** (ನಾ.) ; **Intermédiator** (ನಾ.) ಮಧ್ಯಸ್ಥಗಾರ. **Intermédiary** (ಗು., ನಾ.) ಎರಡು ಪಕ್ಷಗಳ ನಡುವೆ ವರ್ತಿಸುವ ; ಮಧ್ಯಸ್ಥ ಮಾಡುವ ; ಮಧ್ಯಸ್ಥಿಕೆಯ ; ಮಧ್ಯೆ ಬರುವ. (ನಾ.) ಮಧ್ಯೆ ವರ್ತಿಸುವವನು, — ವದು ; ಮಧ್ಯಸ್ಥಗಾರ. **Intermédium** (ನಾ. ; ಬ. ವ. -ia, -iums) (ಮು., ಆಕಾಶದಲ್ಲಿ ಶಕ್ತಿಯನ್ನು ಹಾಯಿಸುವ) ಮಧ್ಯವರ್ತಿ, ವಾಹಕ.

Intermédium. **Intermediate** ನೋಡಿ.

Intérment. **Inter**[1] ನೋಡಿ.

Intermézzo (It.) ಇಂಟರ್‌ಮೆಡ್ಜೊ (ನಾ.) (ಸಂ.) ನಾಟಕದ ಅಥವಾ ಸಂಗೀತ ನಾಟಕದ ಅಂಕಗಳ ನಡುವೆ ಬರುವ, ಸಣ್ಣ ಲಘುದೃಶ್ಯ, ವಿನೋದ ಪ್ರಕರಣ, ಮೊ. ದು : ಉಪ ನಾಟಕ. ದೊಡ್ಡ ಗೀತ ಕೃತಿಯ ಮುಖ್ಯ ಭಾಗಗಳನ್ನು ಸಂಬಂಧಿಸುವ ಸಣ್ಣ ಗೀತ ಅಥವಾ ವಾದನ.

Intermigrátion ಇಂಟರ್‌ಮೈಗ್ರೇಷನ್ (ನಾ.) ನೆರೆಗಳನ್ನು (ಸಾ., ದೇಶದಿಂದ ದೇಶಕ್ಕೆ) ಪರಸ್ಪರ ಬದಲಾಯಿಸುವುದು : ಪರಸ್ಪರ ವಲಸೆ.

Intérminable ಇಂಟರ್ಮಿನಬ್‌ಲ್ (ಗು.) ಕೊನೆಯಿಲ್ಲದ ; ಕೊನೆಗಾಣಿಸಲಾಗದ ; ಎಂದಿಗೂ ಮುಗಿಯದ ; ಬೇಸರ ಹಿಡಿಸುವಷ್ಟು ಉದ್ದವಾದ, ದೀರ್ಘವಾದ. **Intérminableness** (ನಾ.) ; **Intérminably** (ಕ್ರಿ. ವಿ.)

Intermíngle ಇಂಟರ್‌ಮಿಂಗ್‌ಲ್ (ಕ್ರಿ.) (ಎರಡು ವಸ್ತುಗಳನ್ನು) ಪರಸ್ಪರ ಬೆರಸು ; ಸಂಮಿಶ್ರ ಮಾಡು (*With* ಉಪ. ದೊಡನೆ). ಒಡ ಬೆರೆ ; ಸಂಮಿಶ್ರವಾಗು (*With* ಉಪ. ದೊಡನೆ)

Intermít ಇಂಟರ್‌ಮಿಟ್ (ಕ್ರಿ.) (ಕೆಲವು ಕಾಲ) ತಡೆದಿಡು ; ನಿಲ್ಲಿಸಿಬಿಡು. (ಮು., ಜ್ವರ, ನೋವು, ಮೊ. ವು ಅಥವಾ ನಾಡಿಯ ತುಡಿತ) ಸ್ವಲ್ಪ ಕಾಲ ನಿಲ್ಲು ; ಬಿಟ್ಟು ಬಿಟ್ಟು ಬರು. **Intermíttence** (ನಾ.) ; **Intermíttent** (ಗು.) ; **Intermíttently** (ಕ್ರಿ. ವಿ.) ; **Intermíssion** (ನಾ.) ಬಿಡುವು ; ವಿರಾಮ ; ವಿಚ್ಛಿತ್ತಿ [ಸಾ., Without i. (ಬಿಡುವಿಲ್ಲದೆ ; ಎಡೆಬಿಡದೆ) ಎಂಬಲ್ಲಿ]

Intermíx ಇಂಟರ್‌ಮಿಕ್ಸ್ (ಕ್ರಿ.) ಪರಸ್ಪರ ಬೆರಸು, ಬೆರೆ ; ಸಂಮಿಶ್ರ ಮಾಡು ; ಸಂಮಿಶ್ರವಾಗು. **Intermíxture** (ನಾ.)

Intérn ಇಂಟರ್ನ್ (ಕ್ರಿ. ಸಕ.) ಒಂದು ಪ್ರದೇಶದಲ್ಲಿಯೇ ವಾಸಿಸುವಂತೆ ನಿರ್ಬಂಧಿಸು ; ಒಂದು ಎಲ್ಲೆಯೊಳಗೆ ಕೂಡು. **Interneé** (ನಾ.) ಪ್ರದೇಶ ನಿರ್ಬಂಧಿ. **Intérnment** (ನಾ.) ಪ್ರದೇಶ ನಿರ್ಬಂಧ (Internment Camp ಯುದ್ಧದ ಬಂದಿಗಳನ್ನೂ ನೆಲಸುಹಕ್ಕಿಲ್ಲದ ವಿದೇಶೀಯರನ್ನೂ ನಿರ್ಬಂಧದಲ್ಲಿಡುವ ಪಾಳೆಯ)

Intérnal ಇಂಟರ್ನಲ್ (ಗು., ನಾ.) (ಒಂದರ) ಒಳಗಿನ, ಒಳಗಡೆಯ ; ಒಳಗಡೆಯಿರುವ ; ಅಂತಸ್ಥ ; ಅಂತಸ್ಥಿತ. (ಒಂದರ) ಆಂತರಿಕ ಸ್ವಭಾವದ ; ಸಹಜ ; ನೈಜ (I. evidence ಆಂತರಿಕ ಪ್ರಮಾಣ, ಸಾಕ್ಷ್ಯ). (ಒಂದು ದೇಶದ) ಒಳಾಡಳಿತದ. ಮನಸ್ಸಿನ ; ಆತ್ಮದ ; ಒಳ ದೃಷ್ಟಿಯ ; ಆಂತರಿಕ ; ಅಂತರ್ಮುಖದ ; ಆಧ್ಯಾತ್ಮಿಕ. (ನಾ., ಬ. ವ.) ನೈಜ ಗುಣಗಳು. [I.-combustion engine (ಎಂಜಿನಿನ ವರ್ತುಲ ನಾಳಿಯಲ್ಲಿ ಅನಿಲ, ಎಣ್ಣೆ, ಅಥವಾ ದಾಹ್ಯಬಾಷ್ಪ — ಇವುಗಳ ಸ್ಫೋಟನದಿಂದ ಚಾಲಕಶಕ್ತಿ ಹುಟ್ಟುವ) ಅಂತರ್ದಹನ ಎಂಜಿನು]. **Intérnally** (ಕ್ರಿ. ವಿ.) ; **Internálity** — ನ್ಯಾಲಿಟಿ (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Internátional ಇಂಟರ್‌ನ್ಯಾಷನಲ್ (ಗು., ನಾ.) ಬೇರೆ ಬೇರೆ ಜನಾಂಗಗಳಲ್ಲಿ ಪರಸ್ಪರ ಇರುವ, ನಡೆಯುವ ; ಅಂತರ ರಾಷ್ಟ್ರೀಯ ; (ಎಲ್ಲ ದೇಶಗಳಲ್ಲಿಯ ಕೂಲಿಕಾರ ವರ್ಗಗಳು ರಾಜಕೀಯ ನಡವಳಿಯನ್ನು ಒಟ್ಟಿಗೆ ನಡಸಬೇಕೆಂಬ ಉದ್ದೇಶದಿಂದ ಸ್ಥಾಪಿತವಾದ) I. Working Men's Associations ಎಂಬ ಅಂತರ ರಾಷ್ಟ್ರೀಯ ಕೆಲಸಗಾರರ ಸಂಘಗಳ. (ನಾ.) ಅಂತರ ರಾಷ್ಟ್ರೀಯ (ಸಾ., ಅಂಗಸಾಧನೆಯ) ಸ್ಪರ್ಧೆಗಳಲ್ಲಿ ಭಾಗ ವಹಿಸುವವನು ; ಅಂತರ ರಾಷ್ಟ್ರೀಯ ಸ್ಪರ್ಧೆಗಾರ. ಅಂತರ ರಾಷ್ಟ್ರೀಯ ಕೆಲಸಗಾರರ ಸಂಘ(ದ ಸದಸ್ಯ). **Internátionalism** (ನಾ.) ; **Internátionalist** (ನಾ.) ಸಮಾನ ಪ್ರಯೋಜನಕ್ಕಾಗಿ ಎಲ್ಲ ಜನಾಂಗಗಳು ಸಹಕರಿಸಿ ವರ್ತಿಸಬೇಕೆಂದು ವಾದಿಸುವವನು (ಮು., ಅಂತರ ರಾಷ್ಟ್ರೀಯ ಕೆಲಸಗಾರರ ಸಂಘದ ಪ್ರೋತ್ಸಾಹಕ) ; ಅಂತರ ರಾಷ್ಟ್ರೀಯತಾ ವಾದಿ ; ಅಂತರ ರಾಷ್ಟ್ರೀಯ ನ್ಯಾಯ (ಶಾಸ್ತ್ರ) ನಿಪುಣ. **Internationálity** (ನಾ.) ; **Internátionalize** (ಕ್ರಿ. ಸಕ.) ಅಂತರ ರಾಷ್ಟ್ರೀಯ ಮಾಡು ; (ಮು., ಒಂದು ದೇಶ, ಮೊ. ನ್ನು) ಬೇರೆ ಬೇರೆ ಜನಾಂಗಗಳ ಸಂಯುಕ್ತ ರಕ್ಷಣೆ, ಮೊ. ಕ್ಕೆ ಒಳಪಡಿಸು. **Internationalizátion** (ನಾ.) ; **Internátionally** (ಕ್ರಿ. ವಿ.)

Internationále (F) ಇಂಟರ್‌ನ್ಯಾಷನಾಲ್ (The I. ಪ್ರದರ್ಶನ ಕಾಲಗಳಲ್ಲಿ ಹಾಡುವ ಫ್ರೆಂಚ್ ಸಮತಾವಾದ ಗೀತೆ). = International (Working Men's) Association.

Internécine ಇಂಟರ್‌ನೀಸೈ(ಸಿ)ನ್ (ಗು.) ಪರಸ್ಪರ ನಾಶಕ, ಮಾರಕ. (ಮೊದಲನ ಅರ್ಥ) ವಿಧ್ವಂಸಕ, ಕಗ್ಗೊಲೆಯ (I. war)

Internúncio ಇಂಟರ್‌ನನ್ಷಿಯೊ (ನಾ.) ಎರಡು ಪಕ್ಷಗಳ ಮಧ್ಯೆ ಓಡಾಡುವ ದೂತ; ರಾಜಾಸ್ಥಾನಗಳಿಗೆ (ಮೇಲುದರ್ಜೆಯ ರಾಯಭಾರಿಯನ್ನು ನೇಮಕಮಾಡಿಲ್ಲದ ಸಂದರ್ಭದಲ್ಲಿ) ಪೋಪ್‌ಗುರು ಕಳುಹಿಸಿ ಕೊಡುವ ಸಾಮಾನ್ಯ ರಾಯಭಾರಿ. **Internúncial** —ನನ್ಷಿಯಲ್, —ನನ್ಸಲ್ (ಗು.) ಎರಡು ಪಕ್ಷಗಳಿಗೆ ಪರಸ್ಪರವಾಗಿ ಸಂದೇಶ ಮುಟ್ಟಿಸುವ ಕಾರ್ಯವುಳ್ಳ. (ನರಗಳ ವಿಷಯದಲ್ಲಿ) ದೇಹದ ಬೇರೆ ಬೇರೆ ಭಾಗಗಳಿಗೆ ವೇದನೆಗಳನ್ನು ಸಾಗಿಸುವ, ತಿಳಿಸುವ : ಸಂವೇದನಾ ವಾಹಿ.

Interósculate ಇಂಟರ್‌ಆಸ್ಕ್ಯುಲೇಟ್ (ಕ್ರಿ. ಅಕ.) ಒಂದರೊಳಗೊಂದು ಸೇರು, ಬೆರೆ. (ಎರಡು ಗುಂಪುಗಳನ್ನು ಕೂಡಿಸುವ) ಸಂಬಂಧವಾಗಿರು. **Interosculátion** (ನಾ.)

Interpáge ಇಂಟರ್‌ಪೇಜ್ (ಕ್ರಿ. ಸಕ.) ಪುಟಗಳ ಮಧ್ಯೆ ಹಾಳೆಗಳನ್ನು ಸೇರಿಸು : ನಡುಹಾಳೆ ಹಾಕು ; ನಡುಹಾಳೆಯ ಮೇಲೆ ಮುದ್ರಿಸು.

Interpéllate ಇಂಟರ್‌ಪೆಲೇಟ್ (ಕ್ರಿ. ಸಕ.) (ಶಾಸನಸಭೆಯಲ್ಲಿ, ಆ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಯನ್ನು) ಸಮಾಧಾನ ಕೊಡಬೇಕೆಂದು ಅಡ್ಡಪ್ರಶ್ನೆ ಕೇಳು. **Interpellátion** (ನಾ.) ; **Interpellátor** (ನಾ.)

Interpénetrate ಇಂಟರ್‌ಪೆನಿಟ್ರೇಟ್ (ಕ್ರಿ.) ಸಂಪೂರ್ಣವಾಗಿ ಮಧ್ಯೆ ಮಧ್ಯೆ ದೂರಿಕೊ ; ವ್ಯಾಪಿಸು ; ಪರಸ್ಪರ ವ್ಯಾಪ್ತವಾಗು. **Interpenetrátion** (ನಾ.) ; **Interpénetrative** (ಗು.)

Interplay ಇಂಟರ್‌ಪ್ಲೇ (ನಾ.) ಪರಸ್ಪರ ಪ್ರಭಾವ ; (ಎರಡು ವಸ್ತುಗಳ) ಅನ್ಯೋನ್ಯ ಕ್ರಿಯೆ.

Intepleád ಇಂಟರ್‌ಪ್ಲೀಡ್ (ಕ್ರಿ. ಅಕ.) (ಮೂರನೆಯ ಪಕ್ಷೀಯನಿಗೆ ಸಂಬಂಧಿಸಿದ ಒಂದು ವಿಷಯವನ್ನು ತೀರ್ಮಾನಿಸುವುದಕ್ಕಾಗಿ) (ಇಬ್ಬರು) ಪರಸ್ಪರ ವ್ಯವಹಾರ ಹೂಡು.

Intérpolate ಇಂಟರ್‌ಪೊಲೇಟ್ (ಕ್ರಿ. ಸಕ.) [ಕಾಲ, ಮೊ. ಗಳ ವಿಷಯದಲ್ಲಿ ತಪ್ಪು ಅಭಿಪ್ರಾಯ ಬರುವಂತೆ (ಪುಸ್ತಕ, ಮೊ. ಗಳಲ್ಲಿ ಹೊಸ ವಿಷಯವನ್ನು)] ಮಧ್ಯೆ ಸೇರಿಸು; (ಮಾತುಗಳನ್ನು) ಹೀಗೆ ಪ್ರಕ್ಷೇಪಮಾಡು; (ಗಣಿತ) (ಒಂದು ಶ್ರೇಣಿಯಲ್ಲಿ ಯಾವುದಾದರೂ) ಮಧ್ಯೆ ಪದವನ್ನು ಸೇರಿಸು. **Interpolátion** (ನಾ.) ; **Intérpolator** (ನಾ.)

Interpóse ಇಂಟರ್‌ಪೋಸ್ (ಕ್ರಿ.) ನಡುವೆ ಸೇರಿಸು, ಇಡು, ಬರುವಂತೆ ಮಾಡು (*Between* ಉಪ. ಜೊತೆನೆ). (ಅಸಮ್ಮತಿ, ಆಕ್ಷೇಪಣೆ, ಅಧಿಕಾರ, ಮೊ. ನ್ನು) ಅಡ್ಡಿಯಾಗಿ ತರು, ಹೂಡು, ನಡುವೆ ತಂದೊಡ್ಡು. (ಕಕ್ಷಿಗಳ, ವಾದಿಗಳ) ನಡುವೆ ನಿಲ್ಲು, ಇರು (*Between* ಉಪ. ಜೊತೆನೆ). ತಡೆಯೊಡ್ಡಲು ಬೇರೆ ಮಾತುಗಳನ್ನು ಮಧ್ಯೆ ಎತ್ತಿಹೇಳು ; ಅಡ್ಡಪ್ರಸಂಗ ತರು ; ತಡೆಯೊಡ್ಡು. **Interpósal** (ನಾ.) ; **Interposítion** (ನಾ.) (ಕ್ರಿಯಾರ್ಥಗಳಲ್ಲಿ) ; ನಡುವೆ ತಂದೊಡ್ಡಿದ್ದು ; ಅಡ್ಡಿ. ಮಧ್ಯಸ್ಥಿಕೆ.

Intérpret ಇಂಟರ್‌ಪ್ರೆಟ್ (ಕ್ರಿ.) (ಕ್ಲಿಷ್ಟ ಪದಗಳು, ಲೇಖನಗಳು, ಮೊ. ಗಳ) ಅರ್ಥವಿವರಣೆ ಮಾಡು ; (ಒಂದರ) ಅರ್ಥವನ್ನು ಬಿಡಿಸು. ಕಲೆಯ ನಿರೂಪಣದ, ಪ್ರದರ್ಶನದ, ಮೂಲಕ ಅರ್ಥವನ್ನು, ಅಭಿಪ್ರಾಯವನ್ನು, ವ್ಯಕ್ತಪಡಿಸು. ಒಂದು ನಿರ್ದಿಷ್ಟ ರೀತಿಯಲ್ಲಿ ವಿವರಿಸು, ತಿಳಿ (This we i. as a threat ಇದನ್ನು ಒಂದು ಬೆದರಿಕೆಯೆಂದು ಭಾವಿಸುತ್ತೇವೆ). ಭಾಷಾ ಪರಿವರ್ತನಕಾರನ, ದುಬಾಸಿ(ದ್ವಿಭಾಷಿ)ಯ, ಕೆಲಸ ಮಾಡು. **Intérpretable** (ಗು.) ; **Intérpretative** — ಪ್ರಿಟೇಟಿವ್ (ಗು.) ; **Interpretátion** (ನಾ.) ; **Intérpreter** —ಪ್ರೆಟರ್ (ನಾ.) ಅರ್ಥವಿವರಣೆ ಮಾಡುವವನು ; ವ್ಯಾಖ್ಯಾಕಾರ. ಬೇರೆ ಬೇರೆ ಭಾಷೆಗಳನ್ನಾಡುವವರ ಮಾತನ್ನು ಒಬ್ಬರಿಂದೊಬ್ಬರಿಗೆ ಬಾಯಿಮಾತಿನಲ್ಲಿ ಭಾಷಾಂತರ ಮಾಡಿ ಹೇಳುವವನು ; ದುಬಾಸಿ (ದ್ವಿಭಾಷಿ). **Intérpretership** (ನಾ.); **Intérpretress** (ನಾ., ಸ್ತ್ರೀ.)

Interrégnum ಇಂಟರ್‌ರೆಗ್ನಮ್ (ನಾ. ; ಬ. ವ -na, -nums) ರಾಜ್ಯದಲ್ಲಿ ಕ್ರಮಪ್ರಾಪ್ತ ರಾಜನಿಲ್ಲದ ಕಾಲ (ಮು., ಒಬ್ಬ ರಾಜನ ಆಳಿಕೆ ಮುಗಿದು, ಅವನ ಉತ್ತರಾಧಿಕಾರಿ ಪಟ್ಟಕ್ಕೆ ಬರುವ ವರೆಗಿನ ಮಧ್ಯ ಕಾಲ) : ರಾಜ ವಿಚ್ಛಿತ್ತಿ. ಬಿಡುವು ; ಅಂತರ ; ವಿಚ್ಛಿತ್ತಿ.

Interrelátion ಇಂಟರ್‌ರಿಲೇಷನ್ (ನಾ.) ಪರಸ್ಪರ ಸಂಬಂಧ. **Interrelátionship** (ನಾ.)

Intérrogate ಇಂಟೆರೊಗೇಟ್ (ಕ್ರಿ. ಸಕ.) (ಒಬ್ಬನನ್ನು ಮು., ನಿಕಟವಾಗಿ ಅಥವಾ ವಿಧಿವತ್ತಾಗಿ) ಪ್ರಶ್ನಿಸು ; ಪ್ರಶ್ನೆ ಹಾಕಿ ಪರೀಕ್ಷಿಸು. **Interrogátion** (ನಾ.) ಪ್ರಶ್ನೆ(ಕೇಳುವುದು). [Point, mark, note, of i. ಪ್ರಶ್ನಾರ್ಥಕ ಚಿಹ್ನೆ (?)]. **Interrógative** ಇಂಟರಾಗಟಿವ್ (ಗು., ನಾ.) ಪ್ರಶ್ನೆಯ ; ಪ್ರಶ್ನೆಯ ರೂಪದ ; ಪ್ರಶ್ನಾತ್ಮಕ ; ಪ್ರಶ್ನೆ ಮಾಡುವ (An i. tone). (ವ್ಯಾ. ; ಪದಗಳ ವಿಷಯದಲ್ಲಿ) ಪ್ರಶ್ನೆ ಕೇಳುವುದರಲ್ಲಿ ಉಪಯೋಗಿಸುವ ; ಪ್ರಶ್ನಾರ್ಥಕ (I. pronouns : ಉದಾ., Who ?, Which ?, etc.) (ನಾ.) ಪ್ರಶ್ನೆ ; ಪ್ರಶ್ನ ರೂಪದ ಪದ (ಮು., ಪ್ರಶ್ನಾರ್ಥಕ ಸರ್ವನಾಮ). **Interrógatively** (ಕ್ರಿ. ವಿ.); **Intérrogator** (ನಾ.) ; **Interrógatory** ಇಂಟರಾಗಟರಿ (ಗು., ನಾ.) ಪ್ರಶ್ನಿಸುವ (An i. tone ಪ್ರಶ್ನೆಯ ಧ್ವನಿ). (ನಾ.) ಪ್ರಶ್ನೆ ; ಪ್ರಶ್ನ ಮಾಲೆ, (ಮು., ನ್ಯಾ. ಶಾ.) ಅಪಾದಿತ, ಮೊ. ರಿಗೆ ವಿಧಿವತ್ತಾಗಿ ಹಾಕಿದ ಪ್ರಶ್ನಾವಳಿ.

Interrúpt ಇಂಟರಪ್ಟ್ (ಕ್ರಿ. ಸಕ.) (ಕ್ರಿಯೆ, ಕ್ರಮ, ಭಾಷಣ, ಮಾತನಾಡುತ್ತಿರುವವನು, ಮೊ. ಗಳಿಗೆ) ಅಡ್ಡ ಬರು, ತಡೆ ಮಾಡು ; (ನೋಟ, ಮೊ. ನ್ನು) ಅಡ್ಡಯಿಸು. (ಒಂದರ) ಅವಿಚ್ಛಿನ್ನತೆಯನ್ನು ಮುರಿ. **Interrúptedly** (ಕ್ರಿ. ವಿ.) ; **Interrúpter** (ನಾ.) ; **Interrúption** (ನಾ.) ; **Interrúptory** (ಗು.)

Intersect ಇಂಟರ್‌ಸೆಕ್ಟ್ (ಕ್ರಿ.) ಅಡ್ಡ ಹಾಯ್ದು (ಒಂದನ್ನು) ವಿಭಾಗಿಸು ; (ರೇಖೆ, ಮೊ.) ಒಂದನ್ನೊಂದು ಅಡ್ಡ ಹಾಯಿ, ಛೇದಿಸು, ಕತ್ತರಿಸು. **Intersection** (ನಾ.) (ಕ್ರಿಯಾರ್ಥಗಳಲ್ಲಿ) ; ಪರಸ್ಪರ ಛೇದಿಸುವ ರೇಖೆಗಳ ಸಮಾನ ಬಿಂದು ; —ಸಮತಲಗಳ ಸಮಾನ ರೇಖೆ : ಛೇದ ಬಿಂದು, — ರೇಖೆ. **Interséctional** (ಗು.)

Interspérse ಇಂಟರ್‌ಸ್ಪರ್ಸ್ (ಕ್ರಿ. ಸಕ.) (ಇತರ ವಸ್ತುಗಳ ಮಧ್ಯೆ) ಅಲ್ಲಲ್ಲಿ ಇಡು (*Between, among* ಉಪ. ಜೊತೆನೆ) ; ವಸ್ತುಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಧ್ಯೇ ಮಧ್ಯೇ ಇತರ ವಸ್ತುಗಳನ್ನಿಟ್ಟು ಒಂದು ವಸ್ತುವಿನಲ್ಲಿ ವೈವಿಧ್ಯ ವುಂಟುಮಾಡು (*With* ಉಪ. ದೊಡನೆ). **Interspérsion** (ನಾ.)

Interstate ಇಂಟರ್‌ಸ್ಟೇಟ್ (ಗು.) ರಾಜ್ಯಗಳಿಗೆ ಪರಸ್ಪರವಾಗಿ ಇರುವ, ನಡೆಯುವ: ರಾಜ್ಯ ಪರಸ್ಪರ.

Intérstice ಇಂಟರ್‌ಸ್ಟಿಸ್, **În-** (ನಾ.) ನಡುವೆ ಬಿಟ್ಟಿರುವ ಸ್ಥಳ; ತೆರಪು; ಅಂತರ; ಕಂಡಿ; ಬಿರುಕು; ಸಂದು. **Interstítial** —ಷಲ್ (ಗು.) ತೆರಪಿನ; ತೆರಪುಂಟುಮಾಡುವ; ತೆರಪಿನಲ್ಲಿರುವ.

Intertwíne ಇಂಟರ್‌ಟ್ವೈನ್ (ಕ್ರಿ.) (ಒಂದರೊಡನೊಂದು) ಹೆಣೆ, ಹೆಣೆದುಕೊ (*With* ಉಪ. ದೊಡನೆ). **Intertwínement** (ನಾ.)

Interval ಇಂಟರ್‌ವಲ್ (ನಾ.) ಎರಡರ ನಡುವಣ ಕಾಲ, ಅವಕಾಶ, ಸ್ಥಳ; ವಿರಾಮ; ಬಿಡುವು; ತೆರಪು; ವಿಚ್ಛಿತ್ತಿ (At intervals ಅಲ್ಲಲ್ಲಿ; ಆಗಾಗ). (ಸಂ.) ಸ್ವರಮಾಧುರ್ಯದಲ್ಲಾಗಲಿ, ಸ್ವರಮೇಳದಲ್ಲಾಗಲಿ ಎರಡು ಧ್ವನಿಗಳ ಸ್ಥಾಯಿಯ ಅಂತರ. (ಗುಣಗಳ ವಿಷಯದಲ್ಲಿ ವ್ಯಕ್ತಿಗಳಿಗಿರುವ ಅಥವಾ ವಸ್ತುಗಳಿಗಿರುವ) ಪರಸ್ಪರ ಅಂತರ. **Intervállic** — ವ್ಯಾಲಿಕ್ (ಗು.)

Intervéne ಇಂಟರ್‌ವೀನ್ (ಕ್ರಿ. ಅಕ.) (ಹೊರಗಿನದಾಗಿ) ನಡುವೆ ಬರು; ಅಷ್ಟರಲ್ಲಿ, ಏತನ್ಮಧ್ಯೆ, — ಸಂಭವಿಸು; (ಮನುಷ್ಯನ ಅಥವಾ ವಸ್ತುವಿನ ವಿಷಯದಲ್ಲಿ, ಫಲಪ್ರದವಾಗದಂತೆ ಅಥವಾ ಫಲದಲ್ಲಿ ವ್ಯತ್ಯಾಸವಾಗುವಂತೆ) ಅಡ್ಡ ಬರು (*Between* persons, *in* affair). (ನ್ಯಾ. ಶಾ.) ತಾನು ಆರಂಭದಲ್ಲಿ ಕಕ್ಷಿಯಾಗಿ ಸೇರಿರದ ವ್ಯವಹಾರದಲ್ಲಿ ತರುವಾಯ ಬಂದು ಸೇರು. (ಎರಡರ) ನಡುವೆ ಇರು (*Between* ಉಪ. ದೊಡನೆ). **Intervéner** (ನಾ.) (ಮು., ನ್ಯಾ. ಶಾ. ದ ಅರ್ಥದಲ್ಲಿ). **Intervénient** (ಗು., ನಾ.) (ಹೊರಗಿನಿಂದ) ಬಂದು ಸೇರುವ, ನಡುವೆ ಬರುವ(ವನು, ವದು). **Intervéntion** (ನಾ.)

Interview ಇಂಟರ್‌ವ್ಯೂ (ನಾ., ಕ್ರಿ. ಸಕ.) (ಮು.) ಸಹಾಲೋಚನೆಗಾಗಿ (ವ್ಯಕ್ತಿಗಳು) ಸಾಕ್ಷಾತ್ತಾಗಿ ಸೇರುವುದು, ಸಂಧಿಸುವುದು; ಭೇಟಿ. ಪ್ರಕಟನೆಗಾಗಿ ಹೇಳಿಕೆಯನ್ನು ಪಡೆಯುವ ಉದ್ದೇಶದಿಂದ ಒಂದು ಪತ್ರಿಕೆಯ ಪ್ರತಿನಿಧಿ ಒಬ್ಬನೊಡನೆ ಮಾಡುವ ಸಂದರ್ಶನ. (ಕ್ರಿ.) ಭೇಟಿ ಮಾಡು; ಮುಖತಃ ಕಾಣು; ಸಂದರ್ಶಿಸು (ಮು., ಪ್ರಕಟನೆಗೆ ಹೇಳಿಕೆ ಪಡೆಯುವುದಕ್ಕಾಗಿ). **Interviewer** (ನಾ.)

Intervólve ಇಂಟರ್‌ವಾಲ್ವ್ (ಕ್ರಿ. ಸಕ.) (ವಸ್ತುಗಳು) ಒಂದರೊಳಗೊಂದನ್ನು (ಸುರುಳಿ) ಸುತ್ತು.

Interweáve ಇಂಟರ್‌ವೀವ್ (ಕ್ರಿ. ಸಕ.) (ಒಂದರೊಡನೊಂದನ್ನು, ಹಾಸು ಹೊಕ್ಕುಗಳಂತೆ) ಒಟ್ಟಿಗೆ ನೆಯ್ಯಿ; (ಒಂದರೊಡನೊಂದು) ಮಧ್ಯೇ ಮಧ್ಯೇ ಸೇರಿಕೊಳ್ಳುವಂತೆ ಹೆಣೆ. (ವಸ್ತುಗಳನ್ನು) ಅನ್ಯೋನ್ಯವಾಗಿ ಬೆರಸು.

Interwínd ಇಂಟರ್‌ವೈಂಡ್ (ಕ್ರಿ.) (ವಸ್ತುಗಳು) ಒಂದರೊಡನೊಂದನ್ನು, ಒಂದರೊಳಗೊಂದನ್ನು, ಸುತ್ತು, ಹೆಣೆ; —ಸುತ್ತಿಕೊ, ಹೆಣೆದುಕೊ.

Intéstate ಇಂಟೆಸ್ಟೆಟ್ (ಗು., ನಾ.) (ವ್ಯಕ್ತಿ) ಅಂತಿಮ ಇಷ್ಟಪತ್ರ ಬರೆದಿಟ್ಟಿಲ್ಲದ (He died i. ಅವನು ಅಂತಿಮ ಇಷ್ಟಪತ್ರ ಬರೆದಿಡದೆ ಸತ್ತುಹೋದನು). (ನಾ.) — ಬರೆದಿಡದೆ ಸತ್ತುಹೋದವನು. **Intéstacy** (ನಾ.) ಈ ಪರಿಸ್ಥಿತಿ.

Intéstine ಇಂಟೆಸ್ಟಿನ್ (ನಾ., ಗು.) (ಸಾ., ಬ. ವ. ದಲ್ಲಿ) ಜಠರದ ಕೊನೆಯಿಂದ ಗುದದ್ವಾರದ ವರೆಗಿನ ಅನ್ನನಾಳದ ಭಾಗ: ಕರುಳು; ಅಂತ್ರ (Small, large, i. ಸಣ್ಣ, ದೊಡ್ಡ, ಕರುಳು). (ಗು.) (ಯುದ್ಧ, ಮೊ. ಗಳ ವಿಷಯದಲ್ಲಿ) ಒಳಗಿನ, ಸ್ಥಳೀಯ ಪ್ರಜೆಗಳಲ್ಲಿಯೇ ಕಕ್ಷಿ ಪ್ರತಿಕಕ್ಷಿಗಳಾಗಿ ಪರಸ್ಪರ ನಡೆಯುವ. [I. motion (ಒಂದು ವಸ್ತುವಿನ) ಒಳಗಡೆಯೇ ಅಥವಾ ಅಣುಗಳಲ್ಲಿ ನಡೆಯುವ ಚಲನೆ: ಅಂತಶ್ಚಲನೆ]. **Intéstinal** —ಸ್ಟಿನಲ್, **Intestínal** —ಸ್ಟೈ— (ಗು.) ಕರುಳಿನ; ಕರುಳಿನಲ್ಲಿರುವ; ಕರುಳನ್ನು ತಟ್ಟುವ, ಬಾಧಿಸುವ; ಕರುಳುಳ್ಳ.

Intimate[1] ಇಂಟಿಮೆಟ್ (ಗು., ನಾ.) ಬಹಳ ಬಳಕೆಯ; ಹತ್ತಿರ ಪರಿಚಯದ; ಸಲಿಗೆಯ; ಅನ್ಯೋನ್ಯವಾದ; ಆಪ್ತ; ನಿಕಟ [I. friend(ship) ಆಪ್ತ ಮಿತ್ರ, — ಮೈತ್ರಿ. I. connexion ನಿಕಟ ಸಂಬಂಧ. I. knowledge (ಬಳಕೆಯಿಂದ ಬಂದ) ಪರಿಪೂರ್ಣವಾದ ತಿಳುವಳಿಕೆ; ಪರಿಶ್ರಮ]. ಸಾರಭೂತ; ನೈಜ. (ದಿನಚರಿ ಪುಸ್ತಕ) ಮನೋಭಾವ, ಮೊ. ನ್ನು ಬರೆದಿಟ್ಟ, ಒಳಕೊಂಡ. (ನಾ.) ನೆಚ್ಚಿನ ಗೆಳೆಯ; ಆಪ್ತ ಮಿತ್ರ. **Intimately** (ಕ್ರಿ. ವಿ.); **Intimacy** —ಮಸಿ (ನಾ.) ಹೆಚ್ಚಿನ ಪಳಕೆ; ಅಂತರಂಗ; ಗಾಢ ಪರಿಚಯ. (ನಯ ನುಡಿ) (ಸ್ತ್ರೀ ಪುರುಷ) ಅಕ್ರಮ ಸಂಬಂಧ.

Intimate[2] ಇಂಟಿಮೇಟ್ (ಕ್ರಿ. ಸಕ.) (ವಿಷಯ, ಕೋರಿಕೆ, ಮೊ. ನ್ನು) ತಿಳಿಸು; ತಿಳಿವಳಿಕೆ ಕೊಡು; ಸೂಚಿಸು; ಅಭಿಪ್ರಾಯ ತೋರು, ಕೊಡು. **Intimátion** (ನಾ.)

Intímidate ಇಂಟಿಮಿಡೇಟ್ (ಕ್ರಿ. ಸಕ.) (ಮು., ಒಂದು ಮಾರ್ಗವನ್ನು ಹಿಡಿಯುವಂತೆ, ಅಥವಾ ಬಿಡುವಂತೆ, ಮಾಡುವುದಕ್ಕಾಗಿ) ಭಯ ಹುಟ್ಟಿಸು, ಹೆದರಿಸು. **Intimidátion** (ನಾ.); **Intímidator** (ನಾ.)

Intímity ಇಂಟಿಮಿಟಿ (ನಾ.) ಅಂತರ್ಯ; ರಹಸ್ಯ.

Intínction ಇಂಟಿಂಕ್‌ಷನ್ (ನಾ.) (ಕ್ರೈಸ್ತ) (ಪ್ರಭುಭೋಜನ ಸಂಸ್ಕಾರಾರ್ಥಿಯು ಎರಡನ್ನೂ ಒಟ್ಟಿಗೆ ಪಡೆಯಲಾಗುವಂತೆ) ಪ್ರಭುಭೋಜನದ ರೊಟ್ಟಿಯನ್ನು ದ್ರಾಕ್ಷಾ ಮದ್ಯದಲ್ಲಿ ಅದ್ದುವುದು.

Intítule ಇಂಟಿಟ್ಯೂಲ್ (ಕ್ರಿ. ಸಕ.) (ಪಾರ್ಲಿಮೆಂಟಿನ ಕಾನೂನಿಗೆ) ಹೆಸರು ಕೊಡು (ಸಾ., ಭೂ. ಕೃ. ನಲ್ಲಿ)

Into ಇಂಟು (ಉಪ.) [To ಪದದಂತೆ ಒಂದರೊಳಕ್ಕೆ ಚಲನೆಯನ್ನು, ದಿಕ್ಕನ್ನು, ವ್ಯಕ್ತಗೊಳಿಸುವ ಪದ (ರೂಪ. ಸಹ)] —ಗೆ; ಒಳಕ್ಕೆ; ಒಳಗೆ (Come i. the garden. Throw it i. the fire. Look i. the matter ಆ ವಿಚಾರವನ್ನು ಪರಿಶೀಲಿಸು. Get i. trouble ತೊಂದರೆಗೆ ಸಿಕ್ಕಿಕೊ. Come i. property ಆಸ್ತಿಯನ್ನು ಪಡೆ). (ಬದಲಾವಣೆ, ಸ್ಥಿತಿ, ಫಲ, — ಇವನ್ನು ವ್ಯಕ್ತಗೊಳಿಸುವ ಅರ್ಥದಲ್ಲಿ) ಆಗಿ, ಅಂತೆ (Turn stones i. gold. Collect them i. heaps. Divide them i. three classes. Flogged i. submission)

In-toed ಇನ್‌ಟೋಡ್ (ಗು.) ಒಳ ಬಾಗಿದ ಕಾಲ್ಬೆರಳುಗಳುಳ್ಳ.

Intólerable ಇಂಟಾಲರೆರಬ್‌ಲ್ (ಗು.) ತಾಳಲಾಗದ; ಸಹಿಸಲಾಗದ; ದುಸ್ಸಹ. **Intólerableness** (ನಾ.); **Intólerably** (ಕ್ರಿ. ವಿ.); **Intólerance** (ನಾ.) ಅಸಹಿಷ್ಣುತೆ. **Intólerant** —ರಂಟ್ (ಗು.) (ಮು., ಸ್ವಮತ ಭಿನ್ನವಾದ ಮತಧರ್ಮಾಭಿಪ್ರಾಯಗಳನ್ನು) ಸೈರಿಸದ, ಸಹಿಸದ; (ಮತ) ಸಹಿಷ್ಣುತೆಯಿಲ್ಲದ (*Of* ಉಪ. ದೊಡನೆ). **Intólerantly** (ಕ್ರಿ. ವಿ.)

Intonate ಇಂಟೋನೇಟ್ (ಕ್ರಿ. ಸಕ.) = Intone. **Intonátion** (ನಾ.) ರಾಗದ ದನಿಯಲ್ಲಿ ಪಠಿಸುವುದು, ಪಠಿಸುವುದು. (ಚರ್ಚ್ ಸಂ.) ಸರಳ ಗೀತೆಯ ಪ್ರಾರಂಭದ ರಾಗಾಲಾಪನೆ; ಸಂಗೀತಸ್ವರಗಳನ್ನು ಹಾಡುವುದು, ಉತ್ಪತ್ತಿ ಮಾಡುವುದು; ಧ್ವನಿಯ ರೀತಿ; ಸ್ವರ ವಿಧಾನ; ಸ್ವರಧಾರ. **Intóne** (ಕ್ರಿ. ಸಕ.) (ಸ್ತೋತ್ರ ಗೀತೆ, ದೈವ ಪ್ರಾರ್ಥನೆ, ಮೊ. ನ್ನು) ರಾಗದಿಂದ ಹೇಳು, ಒಂದು ಗೊತ್ತಾದ ಸ್ವರದಲ್ಲಿ ಉಚ್ಚರಿಸು.

Intóne. **Intonate** ನೋಡಿ.

Intóxicate ಇಂಟಾಕ್ಸಿಕೇಟ್ (ಕ್ರಿ. ಸಕ.) (ಮದ್ಯ) ಕುಡಿಸಿ ಅಮಲೇರಿಸು; ಮತ್ತು, ಮಯಕ, —ಬರಿಸು. (ತಾನಾಗಿ ತಡೆಯಲು ಸಾಧ್ಯವಿಲ್ಲದಷ್ಟು) ಕೆರಳಿಸು, ಆನಂದ ಪರವಶ ಮಾಡು; ಆವೇಶಗೊಳಿಸು; ಮೈಮರಸು (Intoxicated *with*, *by*). **Intóxicating** (ಗು.); **Intoxicátion** (ನಾ.); **Intóxicant** —ಕಂಟ್ (ಗು., ನಾ.) ಅಮಲೇರಿಸುವ (ವಸ್ತು, ಮದ್ಯ); ಮಾದಕ (ದ್ರವ್ಯ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Intra- ಇಂಟ್ರ— (ಸ. ಪೂ. ಪ.) ಒಳಗಿನ—; ಅಂತರ್—. **-cranial** ತಲೆಬುರುಡೆಯೊಳಗಿನ. **-mural** (ಕೋಟೆಯ ಅಥವಾ ಕಟ್ಟಡದ) ಗೋಡೆಗಳೊಳಗೆ, —ಇರುವ, ಮಾಡುವ. **-venous** ಅಭಿಧಮನಿಯ(ಗಳ) ಒಳಗೆ ಇರುವ, ನಡೆಯುವ.

Intráctable ಇಂಟ್ರ್ಯಾಕ್ಟಬ್‌ಲ್ (ಗು.) ಮಾರ್ಗಕ್ಕೆ ತರಲಾಗದ; ತಿದ್ದಲಾಗದ; ಪಳಗಿಸಲಾಗದ; ಹಠಮಾರಿಯಾದ; ಮೂರ್ಖನಾದ; ಮೊಂಡ. ಸುಲಭವಾಗಿ ಬಗೆಹರಿಸಲಾಗದ. **Intractability** (ನಾ.); **Intráctableness** (ನಾ.); **Intráctably** (ಕ್ರಿ. ವಿ.)

Intrádos ಇಂಟ್ರೇಡಾಸ್ (ನಾ.) (ವಾ. ಶಾ.) (ಕಟ್ಟಡದ) ಕಮಾನಿನ ಒಳ ಬಾಗು.

Intránsigent ಇಂಟ್ರ್ಯಾನ್ಸಿಜೆಂಟ್ (ಗು., ನಾ.) (ರಾಜ್ಯನೀತಿಯಲ್ಲಿ) ಹಿಡಿದ ಪಟ್ಟು ಬಿಡದ, ಒಪ್ಪಂದಕ್ಕೆ ಬರದ. (ನಾ.) ಹಠವಾದಿ (ಮು., ಪ್ರಜಾರಾಜ್ಯ ಪಕ್ಷದವನು)

Intránsitive ಇಂಟ್ರ್ಯಾನ್ಸಿಟಿವ್ (ಗು., ನಾ.) ಅಕರ್ಮಕ (ಕ್ರಿಯೆ). **Intránsitively** (ಕ್ರಿ. ವಿ.)

Intrant ಇಂಟ್ರಂಟ್ (ನಾ.) (ಪ್ರೌಢ ವಿದ್ಯಾಶಾಲೆ, ಸಂಘ, ಮೊ. ಕ್ಕೆ) ಸೇರುವವನು; ಪ್ರವೇಶಿ.

Intrépid ಇಂಟ್ರೆಪಿಡ್ (ಗು.) ಹೆದರಿಕೆಯಿಲ್ಲದ; ಧೈರ್ಯಶಾಲಿ(ಯಾದ); ಗುಂಡಿಗೆಯುಳ್ಳ. **Intrepídity** (ನಾ.); **Intrépidly** (ಕ್ರಿ. ವಿ.)

Íntricate ಇಂಟ್ರಿಕೆಟ್ (ಗು.) ಬುದ್ಧಿಗೆ ಹರಿಯದಷ್ಟು ತೊಡಕುಳ್ಳ; ಅತಿ ತೊಡರಿನ; ಹೆಣೆದುಕೊಂಡ; ಜಟಿಲ; ಗಹನ. **Íntricately** (ಕ್ರಿ. ವಿ.); **Íntricacy** —ಕಸಿ (ನಾ.)

Intrígue ಇಂಟ್ರೀಗ್ (ಕ್ರಿ., ನಾ.) ಒಳಸಂಚು ನಡಸು; ಗುಪ್ತ ಪ್ರಭಾವ ಬೀರು (*With* ಉಪ. ಜೊಡನೆ). (ಹೆಂಗನೂ ಗಂಡಸೂ) ಅಕ್ರಮ ಸಂಬಂಧ ಮಾಡು; ಕಳ್ಳೊಲುಮೆ ಇಡು, ಇರು (*With* ಉಪ. ಜೊಡನೆ). (ವೃತ್ತಪತ್ರಿಕೆ) ಆಸಕ್ತಿ, ಕುತೂಹಲ, —ಕೆರಳಿಸು. (ನಾ.) ಒಳಸಂಚು (ನಡಸುವುದು); ಗುಪ್ತ ಪ್ರಣಯ (ಸಂಧಾನ); ಕಳ್ಳೊಲುಮೆ. **Intrig(u)ant** (F) ಇಂಟ್ರಿಗಂಟ್ (ನಾ.) ಸಂಚುಗಾರ. **Intrig(u)ánte** (F) ಇಂಟ್ರಿಗಾಂ(ಗ್ಯಾಂ)ಟ್ (ನಾ., ಸ್ತ್ರೀ.) ಸಂಚುಗಾತಿ.

Intrínsic ಇಂಟ್ರಿನ್ಸಿಕ್ (ಗು.) ಸ್ವಾಭಾವಿಕ(ವಾಗಿಯೇ ಸೇರಿರುವ); ಸಹಜವಾದ; ನೈಜ; ವಾಸ್ತವಿಕ (I. value ವಾಸ್ತವಿಕ ಮೌಲ್ಯ). **Intrínsically** (ಕ್ರಿ. ವಿ.)

Intro- ಇಂಟ್ರೊ— (ಸ. ಪೂ. ಪ.) ಒಳ—. **-fléxion** ಒಳ ಬಾಗು. **-grássion** ಒಳಹೊಗುವುದು; ಒಳಕ್ಕೆ ಬರುವುದು; ಅಂತರ್ಗಮನ.

Introdúce ಇಂಟ್ರೊಡ್ಯೂಸ್ (ಕ್ರಿ. ಸಕ.) ಒಳಗೆ ತರು; ಒಳಗಿಡು; ಒಳಹೊಗಿಸು; ಒಳಸೇರಿಸು. (ಪದ್ಧತಿ, ಭಾವ, ಅಭಿವೃದ್ಧಿ, ಮೊ. ನ್ನು ಒಂದು ಸ್ಥಳದಲ್ಲಿ, ಒಂದು ವ್ಯವಸ್ಥೆಯಲ್ಲಿ) ಆಚರಣೆಗೆ ತರು (*Into* ಉಪ. ಜೊಡನೆ). (ವಿಷಯ, ಮೊ. ನ್ನು) ಪ್ರವೇಶ ಮಾಡಿಸು; ಮುಂದಕ್ಕೆ ತರು. (ಸಂಬಂಧಾವ್ಯಯ, ಮೊ. ಗಳ ವಿಷಯದಲ್ಲಿ, ವಾಕ್ಯವನ್ನು) ಪ್ರಾರಂಭಿಸು. (ಒಬ್ಬನನ್ನು ಮತ್ತೊಬ್ಬನಿಗೆ, ಮು., ಸಂಪ್ರದಾಯ ಕ್ರಮದಲ್ಲಿ) ಪರಿಚಯ ಮಾಡಿಕೊಡು (Person *to* another). (ತರುಣಿಯನ್ನು) ಸಮಾಜಕ್ಕೆ ಪ್ರವೇಶಗೊಳಿಸು. (ಪ್ರಸ್ತುತ ವಿಷಯ, ಮೊ. ಕ್ಕೆ ಒಬ್ಬನ) ಗಮನ ಸೆಳೆ, ಗಮನಕ್ಕೆ ತರು (Person *to* subject, etc.). (ಮಸೂದೆ, ಮೊ. ನ್ನು) (ಶಾಸನ ಸಭೆಯಲ್ಲಿ) ತರು. **Introdúctory** —ಡಕ್ಟರಿ (ಗು.); **Introdúction** (ನಾ.) (ಕ್ರಿಯಾರ್ಥಗಳಲ್ಲಿ); (ಪುಸ್ತಕಕ್ಕೆ ಆರಂಭದಲ್ಲಿ ಸೇರಿಸಿರುವ) ಪೀಠಿಕೆ. (ಗ್ರಂಥದ ಹೆಸರಾಗಿ) ಪ್ರವೇಶಿಕೆ; ಪ್ರವೇಶ ದಾಯಿನಿ. (ಒಬ್ಬನನ್ನು ಮತ್ತೊಬ್ಬನಿಗೆ ಕ್ರಮವಾಗಿ) ಪರಿಚಯ ಮಾಡಿಕೊಡುವುದು (Letter of i. ಒಬ್ಬನನ್ನು ಮೂರನೆಯವನಿಗೆ ಪರಿಚಯ ಮಾಡಿಕೊಡುವುದಕ್ಕಾಗಿ ಬರೆದುಕೊಟ್ಟ ಪತ್ರ: ಪರಿಚಯ ಪತ್ರ)

Intróit ಇಂಟ್ರೋಇಟ್, —ಟ್ರಾಯ್ಟ್ (ನಾ.) (ಕ್ರಿಸ್ತ ಧರ್ಮ) ಪ್ರಭು ಭೋಜನ ಸಂಸ್ಕಾರ ನಡೆಸಲು ಪುರೋಹಿತನು ಬಲಿಪೀಠದ ಬಳಿಗೆ ಬರುತ್ತಿರುವಲ್ಲಿ ಗಾಯಕ ವೃಂದವು ಹಾಡುವ ಗೀತ, ಮೊ.

Intromít ಇಂಟ್ರೊಮಿಟ್ (ಕ್ರಿ. ಸಕ.) (ಪ್ರಾಚೀ. ಪ್ರ.) ಒಳಕ್ಕೆ ಬಿಡು; ಪ್ರವೇಶಕೊಡು (*Into* ಉಪ. ಜೊಡನೆ). (ಒಳಗೆ, ಮಧ್ಯೆ) ಸೇರಿಸು, ಇಡು. **Intromíssion** (ನಾ.); **Intromíttent** (ಗು.)

Introspéct ಇಂಟ್ರೊಸ್ಪೆಕ್ಟ್ (ಕ್ರಿ. ಅಕ.) ಸ್ವಂತ ಆಲೋಚನೆಗಳನ್ನೂ ಭಾವಗಳನ್ನೂ ಪರಿಶೀಲಿಸು; ತನ್ನ ಒಳಹೊಕ್ಕು ನೋಡು; ಒಳ ವಿಮರ್ಶೆ ಮಾಡಿಕೊ; ಅಂತರಂಗ ಪರೀಕ್ಷೆ ಮಾಡಿಕೊ. **Introspéction** (ನಾ.) ಆತ್ಮ ಪರೀಕ್ಷೆ. **Introspéctionist** (ನಾ.); **Introspéctive** (ಗು.); **Introspéctively** (ಕ್ರಿ. ವಿ.); **Introspéctiveness** (ನಾ.)

Introvért ಇಂಟ್ರೊವರ್ಟ್ (ಕ್ರಿ. ಸಕ.), **Íntrovert** (ನಾ.) (ತನ್ನನ್ನೇ ಪರೀಕ್ಷಿಸಿಕೊಳ್ಳುವುದಕ್ಕಾಗಿ ಮನಸ್ಸನ್ನು, ಆಲೋಚನೆಯನ್ನು) ಒಳಗಡೆ ತಿರುಗಿಸು, ಅಂತರ್ಮುಖ ಮಾಡು. (ಮು., ಪ್ರಾ. ವಿ.) (ಅಂಗ, ಮೊ. ನ್ನು) ಅದರ ಕೊಳವೆಯೊಳಕ್ಕೆ ಅಥವಾ ಆಧಾರದೊಳಕ್ಕೆ ಸೆಳೆದುಕೊ; ಒಳ ಸೆಳೆದುಕೊ. (ನಾ.) ಅಂತರ್ಮುಖಿ(ಯಾಗುವವನು). **Introvérsible** (ಗು.); **Introvérsion** (ನಾ.); **Introvérsive** (ಗು.); **Introvértive** (ಗು.)

Intrúde ಇಂಟ್ರೂಡ್ (ಕ್ರಿ.) (ವಸ್ತುವನ್ನು) ಬಲವಂತದಿಂದ ಒಳಕ್ಕೆ ನೂಕು, ನುಗ್ಗಿಸು; ಒಳ ನುಗ್ಗಿಸು (*Into* ಉಪ. ಜೊಡನೆ). (ಒಂದನ್ನು ಒಬ್ಬನ ಮೇಲೆ) ಬಲವಂತವಾಗಿ ಹೇರು (*Upon* person). (ಒಂದು ಸ್ಥಳ, ಸಮಾಜಕೂಟ, ಮೊ. ಕ್ಕೆ, ಒಬ್ಬನ ವ್ಯವಹಾರ, ಏಕಾಂತ, ಮೊ. ಗಳಲ್ಲಿ) ಕರೆಯದೆ ಬರು; ತಾನಾಗಿ ನುಗ್ಗು (*Into* place, etc.; *upon* person, etc.). **Intrúder** (ನಾ.); **Intrúsion** —ಷನ್ (ನಾ.) (ಕ್ರಿಯಾರ್ಥಗಳಲ್ಲಿ); (ಭೂ. ವಿ.) ಸ್ತರ, ಮೊ. ಗಳ ನಡುವೆ ಕರಗಿದ ಶಿಲೆ ಒಳನುಗ್ಗುವುದು; ಅಂತಸ್ಸರಣ. **Intrúsionist** (ನಾ.); **Intrúsive** —ಸಿವ್ (ಗು.); **Intrúsively** (ಕ್ರಿ. ವಿ.); **Intrúsiveness** (ನಾ.)

Íntubate ಇಂಟ್ಯುಬೇಟ್ (ಕ್ರಿ. ಸಕ.) (ವೈ. ಶಾ.) (ಶ್ವಾಸನಾಳ, ಮೊ. ನ್ನು ತೆರೆದಿಡುವುದಕ್ಕಾಗಿ) ಕೊಳವೆ ತೂರಿಸು. **Intubátion** (ನಾ.)

Íntuit. Intuition ನೋಡಿ.

Intuítion ಇಂಟ್ಯುಇಷನ್ (ನಾ.) ವಿಚಾರವಿಲ್ಲದೆ, ತರ್ಕಿಸದೆ, ಮನಸ್ಸು ಒಡನೆಯೇ ಗ್ರಹಿಸುವುದು; ಸಹಜ ಜ್ಞಾನ; ಸ್ವಯಂ ಪ್ರಕಾಶ; ಅಂತರ್ದೃಷ್ಟಿ; ಅಂತರ್ಬೋಧ; ಒಳ ಅರಿವು. **Intuítional** (ಗು.); **Intuítionalism** (ನಾ.) ಸತ್ಯಾನುಭವವು ಅಂತರ್ಬೋಧೆಯಿಂದಲೇ ಆಗುವುದೆಂಬ ವಾದ; ಸಹಜ ಜ್ಞಾನ ವಾದ. **Intuítionalist** (ನಾ.); **Intuítionism** (ನಾ.) ಬಾಹ್ಯ ವಸ್ತುಗಳ ಜ್ಞಾನವು ಇತರ ಸಹಾಯವಿಲ್ಲದೆ ನೇರವಾಗಿ ಆಗುವುದೆಂಬ ವಾದ: ಸ್ವಯಂ ಪ್ರಕಾಶ ವಾದ; = Intuitionalism. **Intuítionist** (ನಾ.); **Íntuit** (ಕ್ರಿ.) ಅಂತರ್ದೃಷ್ಟಿಯಿಂದ ತಿಳಿ. (ವಸ್ತುವಿನ) ಸಾಕ್ಷಾತ್ಕಾರದಿಂದ ಜ್ಞಾನ ಪಡೆ. **Intúitive** —ಟ್ಯೂ— (ಗು.) ಅಂತರ್ದೃಷ್ಟಿಯ, —ಯುಳ್ಳ, —ಯಿಂದ ಗ್ರಹಿಸಿದ. **Intúitively** (ಕ್ರಿ. ವಿ.); **Intúitiveness** (ನಾ.); **Intúitivism** (ನಾ.) ನೀತಿ ತತ್ತ್ವಗಳು ಅಂತರ್ಬೋಧ ಜನ್ಯಗಳೆಂಬ ವಾದ. **Intúitivist** (ನಾ.)

Intuméscent ಇಂಟ್ಯುಮೆಸೆ(ಸ್)ಂಟ್ (ಗು.) ಉಬ್ಬಿಕೊಳ್ಳುವ; ಊದಿಕೊಳ್ಳುವ; ಬಾತುಕೊಳ್ಳುವ. **Intuméscence** (ನಾ.)

Intussuscéption ಇಂಟಸ್‌ಸಸೆಪ್‌ಷನ್ (ನಾ.) (ಶ. ವಿ.) ಒಂದು ಚೇತನವು, ಜೀವಿಯು, ಬಾಹ್ಯ ಪದಾರ್ಥವನ್ನು ಒಳಕ್ಕೆ ತೆಗೆದುಕೊಂಡು ಅದನ್ನು ಜೈವಿಕ ಅಂಗಾಂಶವನ್ನಾಗಿ ಮಾರ್ಪಡಿಸಿಕೊಳ್ಳುವುದು; ಬಾಹ್ಯ ವಸ್ತು ಜೀರ್ಣ. (ಭಾವ, ಮೊ. ನ್ನು) ಗ್ರಹಿಸುವುದು. ಕರುಳಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ಭಾಗವು ಪಕ್ಕದ ಮತ್ತೊಂದು ಭಾಗದೊಳಕ್ಕೆ ಸೇರಿಕೊಳ್ಳುವುದು.

Inúnction ಇನಂಕ್‌ಷನ್ (ನಾ.) ಎಣ್ಣೆ ಹಚ್ಚುವುದು ; —ಉಜ್ಜುವುದು.

Ínundate ಇನಂಡೇಟ್ (ಕ್ರಿ. ಸಕ.) (ಜಮೀನು, ಮೊ. ಗಳಮೇಲೆ) ಜಲಪ್ರವಾಹ ಕೊಚ್ಚು ; ತುಂಬುನೀರು ಹರಿಸು. (ರೂಪ.) ತುಂಬಿ ಹರಿ. **Inundátion** (ನಾ.) ಪ್ರವಾಹ (ಬರುವುದು) ; ನೆರೆ.

Inurbáne ಇನ್‌ಅರ್ಬೇನ್ (ಗು.) ಅನಾಗರಿಕ ; ನಡತೆಯರಿಯದ ; ಅಸಭ್ಯ. **Inurbánity** —ಬ್ಯಾನಿಟಿ (ನಾ.)

Inúre, en-, ಇ(ಎ)ನ್ಯೂರ್ (ಕ್ರಿ.) (ಒಂದಕ್ಕೆ, ಒಂದು ಕೆಲಸ ಮಾಡುವುದಕ್ಕೆ, (ಒಬ್ಬನನ್ನು) ಒಗ್ಗಿಸು, ಪಳಗಿಸು ; ರೂಢಿಮಾಡು (*To* ಉಪ. ಜೊಡನೆ). (ಕ್ರಿ. ಅಕ. ; ಮು., ನ್ಯಾ. ಶಾ. : ಸಾ., en-) ಆಚರಣೆಗೆ ಬರು ; ಜಾರಿಗೆ ಬರು. **Inúrement** (ನಾ.)

Inúrn ಇನರ್ನ್ (ಕ್ರಿ. ಸಕ.) (ಹೆಣ ಸುಟ್ಟ ಬೂದಿಯನ್ನು) ಕುಂಭದಲ್ಲಿ ಹಾಕಿಡು ; ಗೋರಿಯಲ್ಲಿಡು ; ಹೂಳು.

Inútile ಇನ್‌ಯೂಟಿಲ್ (ಗು.) ಉಪಯೋಗವಿಲ್ಲದ ; ಕೆಲಸಕ್ಕೆ ಬಾರದ. **Inutílity** —ಯು— (ನಾ.)

Inváde ಇನ್‌ವೇಡ್ (ಕ್ರಿ. ಸಕ.) (ರಾಜ್ಯ, ಮೊ. ಗಳಮೇಲೆ, ಶತ್ರುಭಾವದಿಂದ) ದಂಡೆತ್ತಿ ಹೋಗು ; ದಾಳಿಯಿಡು ; ಒಳನುಗ್ಗು. (ರೂಪ.) (ಧ್ವನಿಗಳು, ರೋಗಗಳು, ಭಾವಗಳು, ಮೊ. ಗಳ ವಿಷಯದಲ್ಲಿ) ಕವಿ, ಮುತ್ತು. (ಹಕ್ಕು, ಮೊ. ನ್ನು) ಅತಿಕ್ರಮಣ ಮಾಡು. **Inváder** (ನಾ.); **Invásion** ಇನ್‌ವೇಷನ್ (ನಾ.); **Invásive** —ಸಿವ್ (ಗು.)

Inváginate ಇನ್‌ವ್ಯಾಜಿನೇಟ್ (ಕ್ರಿ. ಸಕ.) ಗವಸಣಿಗೆಯಲ್ಲಿಡು ; ಒರೆಯಲ್ಲಿಡು ; ಒರೆಚೀಲದಲ್ಲಿಡು. (ಕೊಳವೆಯಾಕಾರದ ಒರೆಚೀಲವನ್ನು) ಹೊರ ಒಳಗು ಮಾಡು. **Invaginátion** (ನಾ.)

Invalid[1], **Invalíd** ಇನ್‌ವಲೀಡ್ (ಗು., ನಾ., ಕ್ರಿ.) (ಕಾಯಿಲೆಯಿಂದಾಗಲಿ, ಗಾಯ, ಮೊ. ಗಳಿಂದಾಗಲಿ) ಶಕ್ತಿಗುಂದಿದ(ವನು), ಬಲಗೆಟ್ಟ(ವನು). (ಕ್ರಿ.) ಕಾಯಿಲೆಯಿಂದ (ಒಬ್ಬನನ್ನು) ಮಲಗಿಸು, ಬಲಗೆಡಿಸು (ಸಾ., ಕರ್ಮಣಿ ಪ್ರ.) ; ಬಲಗೆಟ್ಟವನೆಂದು ಪರಿಗಣಿಸು ; ಚಟುವಟಿಕೆಯ ಉದ್ಯೋಗದಿಂದ ತೆಗೆದುಬಿಡು ; ಅಶಕ್ತನೆಂದು ಮನೆಗೆ ಕಳುಹಿಸಿಬಿಡು ; ಶಕ್ತಿಗುಂದಿದವನಾಗು ; ಬಲಗೆಟ್ಟವನಾಗು ; ರೋಗಿಗಳ ಪಟ್ಟಿಗೆ ದಾಖಲಾಗು. **Ínvalidhood** (ನಾ.) ; **Ínvalidism** (ನಾ.) ; **Invalídity**[1] (ನಾ.) (ದೇಹ) ದೌರ್ಬಲ್ಯ.

Inválid[2] ಇನ್‌ವ್ಯಾಲಿಡ್ (ಗು.) ಊರ್ಜಿತವಾಗದ; (ಮು.) ಕಾನೂನಿನ ಬಲವಿಲ್ಲದ. **Inválidly** (ಕ್ರಿ. ವಿ.) ; **Inválidate** (ಕ್ರಿ. ಸಕ.) ಊರ್ಜಿತವಾಗದಂತೆ, (ಕಾಯಿದೆಯ) ಬಲವಿಲ್ಲದಂತೆ, —ಮಾಡು ; ನಿರರ್ಥಕ ಮಾಡು. **Inválidátion** (ನಾ.) ; **Invalídity**[2] —ವಲಿ— (ನಾ.) ನಿರರ್ಥಕತೆ.

Inváluable ಇನ್‌ವ್ಯಾಲ್ಯುಅಬ್‌ಲ್ (ಗು.) ಬೆಲೆಗೆ ಮೀರಿದ ; ಬೆಲೆ ಕಟ್ಟಲಾಗದ ; ಅಮೂಲ್ಯವಾದ.

Ínvar ಇನ್ವಾರ್ (ನಾ.) ನಿಕಲ್ ಲೋಹವೂ ಉಕ್ಕೂ ಸೇರಿ ಆದ ಒಂದು ಮಿಶ್ರಲೋಹ (ಇದು ಅತ್ಯಲ್ಪ ಶಾಖವಿಸ್ತರ ಗುಣಕವುಳ್ಳ ಲೋಹವಾದುದರಿಂದ ಇದನ್ನು ಕೆಲವು ವೈಜ್ಞಾನಿಕ ಸಲಕರಣೆಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ). (Invariable ಪದದ ಸಂಕ್ಷಿಪ್ತ)

Inváriable ಇನ್‌ವೇರಿಯಬ್‌ಲ್ (ಗು.) ವ್ಯತ್ಯಾಸ ಮಾಡಲಾಗದ ; ವ್ಯತ್ಯಾಸವಾಗದ ; ನಿರ್ವಿಕಾರವಾದ ; ಬದಲಾಗದ ; ತಪ್ಪದ ; ಯಥಾಸ್ಥಿತಿಯ. (ಗಣಿತ) ಅಚಲ ; ಸ್ಥಿರ. **Invariabílity** (ನಾ.) ; **Inváriableness** (ನಾ.) ; **Inváriably** (ಕ್ರಿ. ವಿ.)

Invéctive ಇನ್‌ವೆಕ್ಟಿವ್ (ನಾ.) (ಕೂಗಾಟದಿಂದ ಕೂಡಿದ) ಖಂಡನೆಯ, ನಿಂದನೆಯ, —ಭಾಷಣ.

Inveígh ಇನ್‌ವೇ (ಕ್ರಿ. ಅಕ.) ಆಕ್ರೋಶದಿಂದ ಮಾತನಾಡು ; ಗಟ್ಟಿಯಾಗಿ ದೂಷಣೆಮಾಡು (*Against* ಉಪ. ಜೊಡನೆ)

Inveígle ಇನ್‌ವೀ(ವೇ)ಗ್‌ಲ್ (ಕ್ರಿ. ಸಕ.) (ಒಂದು ಸ್ಥಳ, ನಡೆವಳಿ, ಮೊ. ಕ್ಕೆ, ಒಂದು ಕಾರ್ಯ ಮಾಡುವುದಕ್ಕೆ) (ಹಾದಿ ತಪ್ಪಿಸಿ) ಸೆಳೆ, ಪುಸಲಾಯಿಸು (*Into* ಉಪ. ಜೊಡನೆ). **Inveíglement** (ನಾ.)

Invénit (L) ಇನ್‌ವೀನಿಟ್, **Invenérunt** (L) ಇನ್‌ವೀನಿಯರಂಟ್ (ಕ್ರಿ., ಪ್ರಥಮ ಪುರುಷ ಏ. ವ., ಬ. ವ. ; ಸಂಕ್ಷಿಪ್ತ : Inv.) ಈ ಕೃತಿಯನ್ನು (ಇಂಥವನು) ರೂಪಿಸಿದ್ದು, ಕಲ್ಪನೆ ಮಾಡಿದ್ದು (ಕಲೆಗಾರನ ರುಜುವಿನೊಡನೆ ಸಹ)

Invént ಇನ್ವೆಂಟ್ (ಕ್ರಿ. ಸಕ.) (ಹೊಸ ರೀತಿ, ಸಲಕರಣೆ, ಮೊ. ನ್ನು) ಯೋಜಿಸು, ಕಲ್ಪಿಸು ; (ಸುಳ್ಳು ಕತೆ, ಮೊ. ನ್ನು) ಹುಟ್ಟಿಸಿ ಹೇಳು, ಸೃಷ್ಟಿಸು ; ಕಾವಿಸು. **Invéntion** —ವೆನ್‌ಷನ್ (ನಾ.) (ಕ್ರಿಯಾರ್ಥಗಳಲ್ಲಿ) ; ನಿರ್ಮಿಸಿದ್ದು ; ನಿರ್ಮಾಣ ; ಯಂತ್ರಸಾಧನ. (ನ್ಯಾ. ಶಾ.) ಸ್ವಾಮ್ಯಪತ್ರಕ್ಕೆ ವಿಷಯವಾದ ಹೊಸ ತಯಾರಿಕೆ. ಕಲ್ಪಿತ ಕಥೆ ; ಕಲ್ಪನೆ ; ಕಲ್ಪನಾ ಶಕ್ತಿ. **Invéntive** (ಗು.) ; **Invéntively** (ಕ್ರಿ. ವಿ.) ; **Invéntiveness** (ನಾ.) ; **Invéntor** (ನಾ.) ನಿರ್ಮಾಪಕ ; (ಮು., ನ್ಯಾ. ಶಾ.) ಹೊಸ ತಯಾರಿಕೆಯ ಸ್ವಾಮ್ಯ ಪಡೆದವನು. **Invéntress** (ನಾ., ಸ್ತ್ರೀ.)

Ínventory ಇನ್‌ವೆಂಟರಿ (ನಾ., ಕ್ರಿ. ಸಕ.) (ಸಾಮಾನುಗಳು, ಪೀಠೋಪಕರಣಗಳು, ಮೊ. ಗಳ) ತಪಶೀಲು ಪಟ್ಟಿ ; (ಸರಕಿನ) ವಿವರ ಪಟ್ಟಿ ; ಆಸ್ತಿ ಪಟ್ಟಿ ; ತಪಶೀಲು ಪಟ್ಟಿಯಲ್ಲಿರುವ ಎಲ್ಲ ಸಾಮಾನುಗಳು. (ಕ್ರಿ.) (ಸಾಮಾನು, ಮೊ. ನ್ನು) ಪಟ್ಟಿಯಲ್ಲಿ ಸೇರಿಸು; (—ಗಳ) ಪಟ್ಟಿ ಮಾಡು.

Inverácity ಇನ್‌ವೆರ್‍ಯಾಸಿಟಿ (ನಾ.) ಅಪ್ರಾಮಾಣಿಕತೆ ; ಅಸತ್ಯತೆ.

Invérse, Ín- ಇನ್‌ವರ್ಸ್ (ಗು., ನಾ.) (ಸ್ಥಾನ, ಕ್ರಮ ಅಥವಾ ಸಂಬಂಧ, —ಇವುಗಳಲ್ಲಿ) ತಲೆ ಕೆಳಗಾದ ; ಹಿಂದು ಮುಂದಾದ ; ವಿಪರ್ಯಯವಾದ [I. ratio, proportion (ಎರಡು ಚಲಮೊತ್ತಗಳಲ್ಲಿ ಒಂದರ ಬೆಲೆ ಕಡಮೆಯಾದಂತೆಲ್ಲ ಮತ್ತೊಂದರ ಬೆಲೆ ಹೆಚ್ಚುತ್ತಹೋಗುವ) ವಿಪರ್ಯಯ ಪ್ರಮಾಣ, ಸಂಬಂಧ, ಅನುಪಾತ]. (ನಾ.) ತಲೆ ಕೆಳಗು, ವಿಪರ್ಯಯ, ವಿಲೋಮ, —ಸ್ಥಿತಿ. (ಒಂದರ) ಪ್ರತ್ಯಕ್ಷ ವಿರುದ್ಧವಾದದ್ದು (*Of* ಉಪ. ಜೊಡನೆ). **Invérsely** (ಕ್ರಿ. ವಿ.) ; **Invérsion** —ವರ್ಷನ್ (ನಾ.) ತಲೆ ಕೆಳಗು ಮಾಡುವುದು ; ವಿಪರ್ಯಯ —. (ಸ್ಥಾನ, ಕ್ರಮ, ಸಂಬಂಧ, —ಇವು) ವಿಪರ್ಯಯವಾಗಿರುವುದು (ಮು., ವ್ಯಾಕರಣದ ಪದಕ್ರಮದಲ್ಲಿ) : ಪದಕ್ರಮ ವಿಪರ್ಯಯ. (ಗಣಿತ) ಸಂಖ್ಯಾ ಸಂಬಂಧದ ವಿಪರ್ಯಯ. **Invérsive** (ಗು.) ; **Invért** (ಕ್ರಿ.) ತಲೆ ಕೆಳಗು ಮಾಡು ; ದೋರಲು ಹಾಕು ; ಮಗುಚು [Inverted commas (Comma ನೋಡಿ)] ; ಸ್ಥಾನ, ಕ್ರಮ, ಸಂಬಂಧ, —ಇವುಗಳನ್ನು ಹಿಂದು ಮುಂದು ಮಾಡು. **Ín-** (ನಾ.) (ಗ್ರಾಮ ಸಾರದ ಚರಂಡಿಯ ತಳಭಾಗದಲ್ಲಿರುವಂಥ) ತಲೆ ಕೆಳಗು ಕಮಾನು.

Invért. **Inverse** ನೋಡಿ.

Invértebrate ಇನ್‌ವರ್ಟಿಬ್ರೆಟ್ (ಗು., ನಾ.) ಬೆನ್ನುಮೂಳೆಯಿಲ್ಲದ (ಪ್ರಾಣಿ) ; ಅಕಶೇರುಕ. (ರೂಪ.) ಸ್ಥೈರ್ಯವಿಲ್ಲದವನು.

Invést ಇನ್‌ವೆಸ್ಟ್ (ಕ್ರಿ.) ಬಟ್ಟೆ ತೊಡಿಸು, ಉಡಿಸು (*In, with* ಉಪ. ಜೊಡನೆ). (ಬಟ್ಟೆಯಂತೆ) ಹೊದಿಸು, ಮುಚ್ಚು. (ಒಬ್ಬನಿಗೆ ಅಧಿಕಾರ ಲಾಂಛನ, ಹುದ್ದೆ, ಮೊ. ನ್ನು) ವಹಿಸಿಕೊಡು ; ಗುಣಾತಿಶಯವನ್ನು ಆರೋಪಿಸು. ಮುತ್ತಿಗೆ ಹಾಕು. (ಮೂಲಧನವನ್ನು, ಸರ್ಕಾರದ ಸಾಲಪತ್ರ, ಮೊ. ಗಳಲ್ಲಿ) ಹಣವನ್ನು ವಿನಿಯೋಗಿಸು, ಹಾಕು (*In* ಉಪ. ಜೊಡನೆ). (ಬಳ. ಮಾ.) (ಒಂದರಮೇಲೆ) ಖರ್ಚು ಮಾಡು (I. in a bun ಸೀಬೋಣಿಗಾಗಿ ದುಡ್ಡು ಖರ್ಚುಮಾಡು). **Invéstiture** —ಟ್ಯುರ್ (ನಾ.) ಅಧಿಕಾರವನ್ನೊ ಬಿರುದನ್ನೊ ವಿಧಿವತ್ತಾಗಿ ವಹಿಸಿಕೊಡುವುದು. ಗುಣಾತಿಶಯಗಳನ್ನು ಉಂಟುಮಾಡುವುದು, ಆರೋಪಿಸುವುದು (*With* ಉಪ. ಜೊಡನೆ). **Invéstment** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಒಂದು ಉದ್ಯಮದಲ್ಲಿ) ಹಣ ಹಾಕುವುದು ; —ಹಾಕಿದ ಹಣ ; ಬಂಡವಾಳ. ಹಣ ಹಾಕಿರುವ ಆಸ್ತಿ. = Investiture. ಉಡುಪು ; ಉಡಿಗೆ. (ಸೈನ್ಯ) ಮುತ್ತಿಗೆ (ಹಾಕುವುದು) ; (ಸ್ಥಳಪ್ರದೇಶದಲ್ಲಾಗಲಿ ಜಲಪ್ರದೇಶದಲ್ಲಾಗಲಿ, ಶತ್ರುವನ್ನು) ತಡೆಗಟ್ಟುವುದು. **Invéstor** (ನಾ.)

Invéstigate ಇನ್‌ವೆಸ್ಟಿಗೇಟ್ (ಕ್ರಿ. ಸಕ.) ಪರೀಕ್ಷಿಸು; ವಿಚಾರಣೆ ನಡಸು; ತನಿಖೆ ಮಾಡು. **Investigátion** (ನಾ.) ; **Invéstigative** (ಗು.) ; **Invéstigator** (ನಾ.) ; **Invéstigatory** (ಗು.)

Invéstiture, etc. **Invest** ನೋಡಿ.

Invéterate ಇನ್‌ವೆಟೆರೆಟ್ (ಗು.) ಬಹು ಕಾಲದಿಂದ ನೆಲೆಯಾಗಿರುವ ; ಚಿರಸ್ಥಾಪಿತ. (ರೋಗ, ಅಭ್ಯಾಸ, ದುರಭಿಪ್ರಾಯ, ಮೊ.) ಚೆನ್ನಾಗಿ ಬೇರೂರಿದ, ರೂಢಮೂಲವಾದ, ಪರಿಹರಿಸಲಾಗದ. **Invéteracy** (ನಾ.) ; **Invéterately** (ಕ್ರಿ. ವಿ.)

Invídious ಇನ್‌ವಿಡಿಯಸ್ (ಗು.) (ನಡತೆ, ಮೊ. ಗಳ ವಿಷಯದಲ್ಲಿ ನಿಜವಾದ ಅಥವಾ ತೋರುವ ಅನ್ಯಾಯದಿಂದ) ಕ್ರೋಧ ಹುಟ್ಟಿಸುವ ; (ಗೌರವ, ಮರ್ಯಾದೆ, ಮೊ. ವನ್ನು ಕೊಡುವ ವಿಷಯದಲ್ಲಿ) ರೋಷವನ್ನುಂಟುಮಾಡುವ ; (ಒಂದು ವಸ್ತು, ಅದನ್ನು ಉಳ್ಳವನ ವಿಷಯದಲ್ಲಿ) ಮತ್ಸರ ಹುಟ್ಟಿಸುವ, ಭೇದ ಕಾರಕ. **Invídiously** (ಕ್ರಿ. ವಿ.) ; **Invídiousness** (ನಾ.)

Invígilate ಇನ್‌ವಿಜಿಲೇಟ್ (ಕ್ರಿ. ಅಕ.) ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಮೇಲೆ ಕಾವಲಿರು. **Invigilátion** (ನಾ.) ; **Invígilator** (ನಾ.)

Invígorate ಇನ್‌ವಿಗೊರೇಟ್ (ಕ್ರಿ. ಸಕ.) ವೀರ್ಯಯುತನನ್ನಾಗಿ ಮಾಡು ; ಬಲ ಕೊಡು ; ಚೇತನಗೊಳಿಸು. **Invígorative** (ಗು.) ; **Invígorator** (ನಾ.)

Invíncible ಇನ್‌ವಿನ್ಸಿಬ್‌ಲ್ (ಗು.) ಗೆಲ್ಲಲಾಗದ ; ಅಜೇಯ (ರೂಪ. ನಹ). **Invincibílity** (ನಾ.) ; **Invíncibly** (ಕ್ರಿ. ವಿ.)

Invíolable ಇನ್‌ವೈಒಲಬ್‌ಲ್ (ಗು.) ಮೀರಿ ನಡೆಯಕೂಡದ ; ಉಲ್ಲಂಘಿಸಕೂಡದ ; ಅಲಂಘ್ಯ ; (ಕಾನೂನು, ವ್ಯಕ್ತಿ, ಸ್ಥಳ, ಮೊ. ಗಳ ವಿಷಯದಲ್ಲಿ) ಅತಿಕ್ರಮಣ, ಅಪವಿತ್ರ, ಮೊ. ವು ಆಗದಂತೆ ಪರಿಶುದ್ಧವಾಗಿಡಬೇಕಾದ. **Inviolabílity** (ನಾ.) ; **Invíolably** (ಕ್ರಿ. ವಿ.) ; **Invíolate** —ಯೊಲೆಟ್ (ಗು.) (ಕಾನೂನು, ಸ್ಥಳ, ಮೊ. ವು) ಅತಿಕ್ರಮಿಸಿಲ್ಲದ, ಮುರಿದಿಲ್ಲದ, ಅಪವಿತ್ರಗೊಳಿಸಿಲ್ಲದ. **Invíolacy** (ನಾ.) ; **Invíolately** (ಕ್ರಿ. ವಿ.) ; **Invíolateness** (ನಾ.)

Invísible ಇನ್‌ವಿಸಿಬ್‌ಲ್ (ಗು., ನಾ.) (ಕಣ್ಣಿಗೆ) ಕಾಣಲಾಗದ(ದ್ದು) ; ಕಣ್ಣಿಗೆ ಬೀಳದ(ದಿರುವುದು) ; ಅಗೋಚರ, ಅದೃಶ್ಯ(ವಾದದ್ದು) (When I called she was i.) ; ಕಣ್ಣಿಗೆ ಬೀಳದಷ್ಟು ಸೂಕ್ಷ್ಮವಾದ. I. exports ಒಂದು ದೇಶಕ್ಕೆ ಆಮದಾಗುವ ಪದಾರ್ಥಗಳು ರಫ್ತಿಗಿಂತ ಹೆಚ್ಚಾಗಿ ಕಂಡುಬಂದರೂ ವಾಸ್ತವವಾಗಿ ಹಾಗಲ್ಲವೆಂಬುದಕ್ಕೆ ಕಾರಣವಾದ (ಎಂದರೆ, ಲೆಕ್ಕಕ್ಕೆ ಸಿಕ್ಕದೆಹೋದ) ಹಡಗುಗಳ ಬಾಡಿಗೆ, ಪರದೇಶಗಳಲ್ಲಿ ಹಾಕಿರುವ ಬಂಡವಾಳ, ಮೊ. ಇತರ ಬಾಬುಗಳು : ಪರೋಕ್ಷ ರಫ್ತು (ಉದಾ., ಅಮೆರಿಕದಿಂದ ಇಂಗ್ಲೆಂಡಿಗೆ ಹೋದ ಪ್ರಯಾಣಿಕರು ಇಂಗ್ಲೆಂಡಿನಲ್ಲಿ ವೆಚ್ಚಮಾಡುವ ಹಣ ಅಮೆರಿಕದ ಪರೋಕ್ಷ ರಫ್ತು, ಇಂಗ್ಲೆಂಡಿನ ಪರೋಕ್ಷ ಆಮದು). I. ink (ಶಾಬುಕ್ಕೆ ಹಿಡಿಯುವುದು, ಮೊ. ಗಳಿಂದ ಮಾತ್ರ ರೂಪುಗೊಂಡು ಕಣ್ಣಿಗೆಬೀಳುವ) ಅದೃಶ್ಯ ಮಸಿ. The i. ಅದೃಶ್ಯ ಪ್ರಪಂಚ ; ದೇವರು. **Invisibílity** (ನಾ.) ; **Invísibleness** (ನಾ.) ; **Invísibly** (ಕ್ರಿ. ವಿ.)

Invíte ಇನ್‌ವೈಟ್ (ಕ್ರಿ. ಸಕ., ನಾ.) (ಭೋಜನಕ್ಕೆ, ಒಬ್ಬನ ಮನೆಗೆ, ಒಂದು ಸ್ಥಳ, ಸಭೆ, ಮೊ. ಕ್ಕೆ) ಬರಬೇಕೆಂದು ವಿನಯದಿಂದ ಕರೆ ; ಆಹ್ವಾನಿಸು ; ಆಮಂತ್ರಿಸು ; (ಮನಸ್ಸಿಗೆ ಒಪ್ಪಬಹುದೆಂದು ತೋರುವ ಕಾರ್ಯ ಯಾವುದನ್ನಾದರೂ ಮಾಡಲು) ವಿನಯದಿಂದ ಕೇಳಿಕೊ. (ಸಲಹೆ, ಅಭಿಪ್ರಾಯ, ಅಂತರ್ಯ ವಿಚಾರ, ಮೊ. ಕ್ಕಾಗಿ) ವಿನಯದಿಂದ ಬೇಡಿಕೊ. (ಒಂದನ್ನು) ಉದ್ದೇಶವಿಲ್ಲದೆಯೇ ತಂದುಕೊ, ಬರುವಂತೆ ಮಾಡಿಕೊ ; ಒಂದು ರೀತಿಯಲ್ಲಿ ನಡೆಯುವಂತೆ ಮಾಡು ; ಆಕರ್ಷಣೆ ಮಾಡು. (ನಾ.) (ಬಳ. ಮಾ.) ಆಹ್ವಾನ ; ಆಮಂತ್ರಣ. **Inviting** (ಗು.) ವಿನಯದ ಕರೆ ಕೊಡುವ ; ಆಕರ್ಷಕ ; ಮನ ಸೆಳೆಯುವ ; ಮೋಹಗೊಳಿಸುವ. **Invítingly** (ಕ್ರಿ. ವಿ.) ; **Invítingness** (ನಾ.) ; **Invitátion** ಇನ್ವಿಟೇಷನ್ (ನಾ.) ಆಹ್ವಾನ ; ಆಮಂತ್ರಣ ; ಔತಣ ; ಕರೆ. **Invítatory** —ವೈಟಟರಿ (ಗು.) ಆಹ್ವಾನಿಸುವ ; —ವಂತಿರುವ ; ಆಹ್ವಾನವಿರುವ.

Invocátion ಇನ್ವೊಕೇಷನ್ (ನಾ.) (ದೇವರು, ದೇವತೆ, ಮೊ. ನ್ನು) ಪ್ರಾರ್ಥನೆಯಲ್ಲಾಗಲಿ, ಸಾಕ್ಷಿಯಾಗಾಗಲಿ, ಆಹ್ವಾನಮಾಡುವುದು, ಕರೆಯುವುದು ; (ದೇವರ, ದೇವತಾ) ಪ್ರಾರ್ಥನೆ (The I. ಕ್ರೈಸ್ತ ಬೋಧಕನು ಉಪದೇಶದ ಆರಂಭದಲ್ಲಿ ಉಪಯೋಗಿಸುವ ಮಾತುಗಳು : ಪ್ರಾರ್ಥನೆಯ ನುಡಿ). (ಕಾವ್ಯರಚನೆಗೆ ಸ್ಫೂರ್ತಿ ನೀಡುವಂತೆ, ನೆರವಾಗುವಂತೆ) ಕಾವ್ಯದೇವಿಯನ್ನು ಕುರಿತು ಮಾಡುವ ಪ್ರಾರ್ಥನೆ. **Invócatory** ಇನ್‌ವಾಕಟರಿ, **In-** ಇನ್‌ವೊಕೇಟರಿ (ಗು.) ; **Invóke** ಇನ್ವೋಕ್ (ಕ್ರಿ. ಸಕ.) (ದೇವರು, ಮೊ. ರನ್ನು) ಪ್ರಾರ್ಥಿಸು, ಆಹ್ವಾನ ಮಾಡು. (ಸಹಾಯಕ್ಕಾಗಿ, ರಕ್ಷಣೆಗಾಗಿ, ಒಬ್ಬನ ಅಧಿಕಾರ, ಮೊ. ನ್ನು ಕುರಿತು) ಮೊರೆಯಿಡು, ಬೇಡಿಕೊ. (ಭೂತವನ್ನು) ಮಂತ್ರಾದಿಗಳಿಂದ ಆಹ್ವಾನ ಮಾಡು. (ಸೇಡು, ಸಹಾಯ, ಮೊ. ಗಳಿಗೆ) ಮನ ಮುಟ್ಟಿ ಬೇಡು.

Ínvoice ಇನ್ವಾಯ್ಸ್ (ನಾ., ಕ್ರಿ. ಸಕ.) [(ಹಡಗಿನಲ್ಲಿ ಅಥವಾ ಬೇರೆ ವಿಧದಲ್ಲಿ) ಕಳುಹಿಸಿರುವ ಸರಕುಗಳ, ಮತ್ತು ಅವುಗಳ ಬೆಲೆ, ಸಾಗಣೆಯ ಖರ್ಚು, ಮೊ. ವಿವರಗಳ] ಸರಕುಪಟ್ಟಿ, ಸಾಮಾನುಪಟ್ಟಿ. (ಕ್ರಿ.) ಸರಕುಪಟ್ಟಿ, ಸಾಮಾನುಪಟ್ಟಿ, —ಮಾಡು ; —ಯಲ್ಲಿ ಸೇರಿಸು.

Invóke. **Invocation** ನೋಡಿ.

Ínvolucre ಇನ್ವೊಲ್ಯೂಕರ್ (ನಾ.) (ಮು., ಅಂ. ರ. ಶಾ.) ಮುಸುಕು ; ಆವರಣ ; ಕೋಶ. (ಸ. ವಿ.) ಪುಷ್ಪಮಂಜರಿಯನ್ನು ಆವರಿಸಿಕೊಂಡಿರುವ ಉಪಪತ್ರ ವಲಯ.

Invóluntary ಇನ್‌ವಾಲಂಟರಿ (ಗು.) ಮನಸ್ಸಂಕಲ್ಪವಿಲ್ಲದೆ ಆದ, ಮಾಡಿದ ; ಅನೈಚ್ಛಿಕ. **Invóluntarily** (ಕ್ರಿ. ವಿ.) ; **Invóluntariness** (ನಾ.)

Ínvolute ಇನ್ವೊಲ್ಯೂಟ್ (ಗು., ನಾ.) ತೊಡಕಾದ ; ಜಟಿಲ. ನಿಡುಸುರುಳಿಯಾಗಿ ಸುತ್ತಿದ. (ಸ. ವಿ.) ಅಂಚುಗಳು ಒಳಮುಖವಾಗಿ ಸುರುಳಿಯಾಗಿರುವ ; ಅಂತರ್ವಲಿತ. (ನಾ. ; ಜ್ಯಾ.) ಒಂದು ವಕ್ರರೇಖೆಯ ಕ್ಷೇತ್ರದಲ್ಲಿಯೇ ಆ ರೇಖೆಯನ್ನು ಸ್ಪರ್ಶಿಸಿಕೊಂಡು ಆ ರೇಖೆಯಮೇಲೆ ಜಾರದೆ ಉರುಳುವ ಒಂದು ಸರಳರೇಖೆಯಲ್ಲಿಯ ಯಾವುದಾದರೊಂದು ಬಿಂದು ಗುರುತಿಸುವ ಪಥ ; ಸುಲಭವಾಗಿ ಮಣಿಯುವ, ಆದರೆ ವಿಸ್ತರಿಸಲಾಗದ, ಒಂದು ದಾರವು, ಬಿಗಿಯಾಗಿ ಎಳೆದಿಟ್ಟಿರುವಾಗ, ಒಂದು ನಿರ್ದಿಷ್ಟ ವಕ್ರರೇಖೆಯಮೇಲೆ ಸುತ್ತಿಕೊಳ್ಳುವಾಗಾಗಲಿ, ಸುತ್ತಿಕೊಂಡಿರುವಾಗ ಅದರಿಂದ ಬಿಚ್ಚಿಕೊಳ್ಳುವಾಗಾಗಲಿ, ಆ ದಾರದ ಕೊನೆಯು ವಕ್ರರೇಖೆಯ ಕ್ಷೇತ್ರದಲ್ಲಿ ಗುರುತಿಸುವ ಪಥ : "ಅನವಲೂತ". **Involútion** (ನಾ.) ತೊಡಕಿಸುವುದು ; ತೊಡರಿಕೊಳ್ಳುವುದು ; ತೊಡಕು ; ಸಿಕ್ಕು ; ಜಟಿಲತೆ. ಒಳಮುಖವಾಗಿ ಸುರುಳಿಯಾಗುವುದು ; ಹಾಗೆ ಸುತ್ತಿಕೊಂಡ ಭಾಗ. (ಗಣಿತ) ಒಂದು ಮೊತ್ತವನ್ನು ಯಾವ ಘಾತಕ್ಕಾದರೂ ಏರಿಸುವುದು : ಘಾತೀಕರಣ.

Invólve ಇನ್ವಾಲ್ವ್ (ಕ್ರಿ. ಸಕ.) (ಒಂದನ್ನು ಮತ್ತೊಂದರಲ್ಲಿ) ಸುತ್ತು (*In* ಉಪ. ದೊಡನೆ); ನಿಡುಸುರುಳಿಯಾಗಿ ಸುತ್ತು. (ಒಬ್ಬನನ್ನು, ಒಂದು ವಿಷಯವನ್ನು, —ಕಷ್ಟ, ರಹಸ್ಯ, ಮೊ. ಗಳಲ್ಲಿ) ತೊಡರಿಸು, ಸಿಕ್ಕಿಸು (*In* ಉಪ. ದೊಡನೆ); (ಒಬ್ಬನನ್ನು ಅಪಾದನೆಗೆ, ತಕ್ಕರಾರಿಗೆ) ಸಿಕ್ಕಿಸು (*In* ಉಪ. ದೊಡನೆ). ಒಳಕೊಳ್ಳು ; ಒಳಪಡಿಸು ; ಅಡಕಮಾಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(*In* ಉಪ. ದೊಡನೆ); ಒಳಕೊಂಡಿರು. **Invólvement** (ನಾ.) (ಕ್ರಿಯಾರ್ಥಗಳಲ್ಲಿ); ಹಣಕಾಸಿನ ತೊಂದರೆ, ಪೇಚಾಟ; ಆರ್ಥಿಕ ಮುಗ್ಗಟ್ಟು. ತೊಡಕು ವಿಷಯ; ಜಟಿಲ ವಿಚಾರ.

Invúlnerable ಇನ್‌ವಲ್ನೆರಬ್‌ಲ್ (ಗು.) ಗಾಯಗೊಳಿಸಲಾಗದ; ಹಾನಿ ತಟ್ಟದ; ಅವೇಧನೀಯ (ಮು., ರೂಪ.). **Invulnerabílity** (ನಾ.); **Invúlnerably** (ಕ್ರಿ. ವಿ.)

Ínward ಇನ್‌ವರ್ಡ್ (ಗು., ನಾ.), **Ínward(s)** (ಕ್ರಿ. ವಿ.) ಒಳಗಿರುವ; ಒಳಮುಖವಾಗಿರುವ; ಅಂತಸ್ಥ; ಮಾನಸಿಕ; ಆಧ್ಯಾತ್ಮಿಕ. (ಕ್ರಿ. ವಿ.) (ಚಲನೆ ಅಥವಾ ಸ್ಥಾನ) ಒಳಮುಖವಾಗಿ; ಮನಸ್ಸಿನಲ್ಲಿ; ಆತ್ಮದಲ್ಲಿ. (ನಾ., ಬ. ವ. ದಲ್ಲಿ) ಕರುಳು. **Ínwardly** (ಕ್ರಿ. ವಿ.) ಒಳಗಡೆ; (ಮಾತು) ತನ್ನಲ್ಲಿಯೇ, (ಇತರರಿಗೆ) ಕೇಳಿಸದಂತೆ; ಮನಸ್ಸಿನಲ್ಲಿ; ಆತ್ಮದಲ್ಲಿ. **Ínwardness** (ನಾ.) ಒಳಸ್ವಭಾವ; ಸಾರಾಂಶ; ಆಂತರ್ಯ; ಅಂತರ್ಮುಖತೆ.

Inweáve ಇನ್‌ವೀವ್, **En-** ಎನ್ — (ಕ್ರಿ. ಸಕ.) (ಒಂದರೊಳಗೊಂದನ್ನು) ಸೇರಿಸಿ ಹೆಣೆ, ನೆಯ್ಯಿ (*With* ಉಪ. ದೊಡನೆ) (ರೂಪ. ಸಹ)

Ínwrought ಇನ್‌ರಾಟ್ (ಗು., ಭೂ. ಕೃ.) [(ಬಟ್ಟೆ) ನಮೂನೆಗಳಿಂದ] ಅಲಂಕರಿಸಿದ; ಚಿತ್ರ ನೆಯ್ದ; ಕಸೂತಿ ತೆಗೆದ (*With* ಉಪ. ದೊಡನೆ). (ನಮೂನೆ, ಬಟ್ಟೆಯಮೇಲೆ) ನೆಯ್ದು ಸೇರಿಸಿದ (*In, on* ಉಪ. ದೊಡನೆ); (ರೂಪ.) ಒತ್ತಾಗಿ ಬೆರೆದ, ಸೇರಿದ (*With* ಉಪ. ದೊಡನೆ)

Íodine ಐಒಡಿ(ಡೈ)ನ್ (ನಾ.) ಔಷಧದಲ್ಲಿಯೂ ಛಾಯಾ ಚಿತ್ರಣದಲ್ಲಿಯೂ ಉಪಯೋಗಿಸುವ, ರಾಸಾಯನಿಕ ಗುಣಗಳಲ್ಲಿ ಕ್ಲೋರಿನ್, ಬ್ರೋಮಿನ್‌ಗಳನ್ನು ಹೋಲುವ, ಒಂದು ಅಲೋಹ ಮೂಲಧಾತು: 'ಅಯೊಡಿನ್'. **Iódic** ಐಅಡಿಕ್ (ಗು.) ಅಯೊಡೀನಿನ. **Íodide** ಐಒಡೈಡ್ (ನಾ.) ಅಯೊಡಿನ್ ಸಂಯುಕ್ತ. **Íodism** (ನಾ.) (ವೈ. ಶಾ.) ಔಷಧರೂಪದಲ್ಲಿ ಅಯೊಡಿನ್ನಿನ ಅಥವಾ ಅದರ ಸಂಯುಕ್ತಗಳ ಅತಿಸೇವನೆಯಿಂದಾದ ರೋಗಸ್ಥಿತಿ; ಅಯೊಡಿನ್ನಿನಿಂದಾದ ವಿಕಾರ. **Íodize** (ಕ್ರಿ. ಸಕ.) ಅಯೊಡಿನ್ನಿನಿಂದ ಅಥವಾ ಅದರ ಸಂಯುಕ್ತಗಳಿಂದ ಚಿಕಿತ್ಸೆ, ಸೇಚಿತ, ಭಾವನೆ, —ಮಾಡು (ಮು., ವೈದ್ಯದಲ್ಲಿ ಮತ್ತು ಛಾಯಾ ಚಿತ್ರಣದಲ್ಲಿ). **Iódoform** ಐಒಡೊಫಾರ್ಮ್, **Ío-** ಐಅ— (ನಾ.) ಕ್ಲೋರೊಫಾರಮ್ಮಿಗೆ ಸದೃಶವಾದ, ಪೂತಿನಾಶಕವಾಗಿ ಉಪಯೋಗಿಸುವ, ಒಂದು ಅಯೊಡಿನ್ ಸಂಯುಕ್ತ: 'ಅಯೋಡೊಫಾರ್ಮ್'.

Íolite ಐಅ(ಒ)ಲೈಟ್ (ನಾ.) ಅಲ್ಯೂಮಿನಿಯಂ, ಕಬ್ಬಿಣ ಮತ್ತು ಮ್ಯಾಗ್ನೀಸಿಯಂ ಲೋಹಗಳ ಸಿಲಿಕೇಟು (ನೀಲ ಅಥವಾ ನೇರಿಳೆ ಬಣ್ಣವುಳ್ಳದ್ದು): 'ಅಯೊಲೈಟ್'.

Íon ಐಅನ್ (ನಾ.) ವಿದ್ಯುದ್ವಿಭಜನದಲ್ಲಿ ಪ್ರತ್ಯೇಕವಾಗುವ ಎರಡು ಘಟಕಗಳಲ್ಲಿ ಆಯಾ ಧ್ರುವಕ್ಕೆ ಹಾದುಹೋಗುವ ಘಟಕ. ಒಂದು ಮಾನದಷ್ಟು ಧನ ಅಥವಾ ಋಣ ವಿದ್ಯುತ್ತನ್ನು ಧರಿಸಿ ಚಲಿಸುತ್ತಿರುವ ಕಣ: ವಿದ್ಯುದ್ವಾಹಿ ಕಣ [A *cation* ಧನವಿದ್ಯುದ್ವಾಹಿ ಕಣ (+). An *anion* ಋಣವಿದ್ಯುದ್ವಾಹಿ ಕಣ (—)]. **Íonize** ಐಅನೈಸ್ (ಕ್ರಿ. ಸಕ.) ವಿದ್ಯುದ್ವಾಹಿ ಕಣಗಳಾಗಿ ಮಾರ್ಪಡಿಸು. **Ionizátion** (ನಾ.)

Iónian ಐಓನಿಯನ್ (ಗು., ನಾ.) ಅಯೋನಿಯ (ದೇಶ)ದ; ಅಯೋನಿಯನ್ (ಜನರ); ಯವನ(ರ). **Iónic** — ಆನಿಕ್ (ಗು.) ಅಯೋನಿಯದ. I. order ಬೋದಿಗೆಯ ಇಕ್ಕೆಲಗಳಲ್ಲಿ ಎರಡು ಸುರುಳಿ ಅಲಂಕಾರಗಳುಳ್ಳ ಅಯೋನಿಕ್ ಕಂಬಶೈಲಿ.

Ióta ಐಓಟ (ನಾ.) (ಅತಿ ಸಣ್ಣದಾದ) ಒಂದು ಗ್ರೀಕ್ ಅಕ್ಷರ (I, *i*). ಪರಮಾಣು; ಅತ್ಯಲ್ಪ ಕಣ; ಲವಲೇಶ. **Iótacism** —ಸಿಸ್ಮ್ (ನಾ.) ಅಯೋಟ ಅಕ್ಷರವನ್ನು ಅತಿಯಾಗಿ ಪ್ರಯೋಗಿಸುವುದು. ಇತರ ಗ್ರೀಕ್ ಸ್ವರಗಳನ್ನು ಅಯೋಟದಂತೆ ('ಈ' ಕಾರವಾಗಿ) ಉಚ್ಚರಿಸುವುದು.

I O Ú ಐ ಓ ಯೂ (ನಾ.) (ಈ ಮೂರು ಅಕ್ಷರಗಳನ್ನೂ ಅವುಗಳ ಮುಂದೆ ನಿರ್ದಿಷ್ಟ ಮೊತ್ತವನ್ನೂ ನಮೂದಿಸಿ ರುಜುಮಾಡಿ ಸಾಲಪಡೆದುದಕ್ಕೆ ವಿಧಾಯಕವಾಗಿ ಬರೆದುಕೊಟ್ಟ) ಸಾಲಪತ್ರ (= I owe you ನಾನು ನಿನಗೆ . . . . . ನ್ನು ಸಾಲ ತೀರಿಸಬೇಕು)

Ipecacuánha ಇಪಿಕ್ಯಾಕ್ಯುಆನ್ಯ (ನಾ.) ವಿರೇಚಕವಾಗಿಯೂ ವಮನಕಾರಿಯಾಗಿಯೂ ಉಪಯೋಗಿಸುವ ದ. ಅಮೆರಿಕದ ಒಂದು ಗುಲ್ಮದ ಬೇರು.

Ípse díxit (L) ಇಪ್ಸಿ ಡಿಕ್ಸಿಟ್ (ನಾ.; ಬ. ವ. -s) ಕೇವಲ ಅಧಿಕಾರ ಬಲದ ಹೇಳಿಕೆ; ಬೇರೆ ಆಧಾರವಿಲ್ಲದ ಅಧಿಕೃತ ವಾಕ್ಯ; ಅಧಿಕಾರೋಕ್ತಿ.

Ipsíssima vérba (L) ಇಪ್ಸಿಸಿಮ ವರ್ಬ (ನಾ., ಬ. ವ.) ಅದೇ ಮಾತುಗಳು.

Ípso fácto (L) ಇಪ್ಸೋ ಫ್ಯಾಕ್ಟೋ (ಕ್ರಿ. ವಿ.) ಅದೇ ಸಂದರ್ಭದಿಂದಲೇ; ಅದೇ ಸಂಗತಿಯಿಂದಲೇ.

Irák, Iráq ಇರಾಕ್ (ನಾ.) ಇರಾಕ್ ರಾಜ್ಯ. **Iráki, -qi** (ಗು., ನಾ.) ಇರಾಕ್ ದೇಶದ, ಜನರ, ಭಾಷೆಯ. (ನಾ.) ಇರಾಕಿನವನು; ಇರಾಕಿ.

Iránian ಐರೇನಿಯನ್ (ಗು., ನಾ.) ಪರ್ಷಿಯದ; ಇರಾನಿನ. (ಭಾಷೆಗಳ ವಿಷಯವಾಗಿ) ಜೆಂಡ್, ಹಳೆಯ ಪರ್ಷಿಯನ್ ಮತ್ತು ಅವುಗಳ ಜನ್ಯ ಆಧುನಿಕ ಭಾಷೆಗಳನ್ನೂ ಒಳಕೊಂಡ ಭಾಷಾವರ್ಗಕ್ಕೆ ಸೇರಿದ: ಇರಾನಿ(ಯನ್) ವರ್ಗದ. (ನಾ.) ಇರಾನಿ ಬುಡಕಟ್ಟಿನವನು.

Iráscible ಐ(ಇ)ರ್ಯಾಸಿಬ್‌ಲ್ (ಗು.) ಮುಂಗೋಪದ, ಸಿಡುಕಿನ, ಕೆರಳುವ, — ಸ್ವಭಾವದ. **Irascibílity** (ನಾ.)

Iráte ಐರೇಟ್ (ಗು.) ಕೋಪಗೊಂಡ; ಕುಪಿತ; ಸಿಟ್ಟಿಗೆದ್ದ.

Íre ಐ(ಅ)ರ್ (ನಾ.) (ಕಾವ್ಯ) ಸಿಟ್ಟು. **Íreful** (ಗು.); **Írefully** (ಕ್ರಿ. ವಿ.)

Irénic(al) ಐರೆ(ರೀ)ನಿಕ್, — ಕಲ್ (ಗು.) ಶಾಂತಿಯ (ಉದ್ದೇಶದ); ಶಾಂತಿಕಾರಕ.

Irénicon ಐರೀ(ರೆ)ನಿಕನ್ (ನಾ.) = Eirenicon.

Iridáceous. **Iris** ನೋಡಿ.

Iridéscent ಇರಿಡೆಸೆಂಟ್ (ಗು.) ಕಾಮನ ಬಿಲ್ಲಿನ ಬಣ್ಣಗಳಂತೆ ಬಣ್ಣ ತೋರುವ; ಸ್ಥಾನ ವ್ಯತ್ಯಾಸವಾದಂತೆಲ್ಲ ವರ್ಣವ್ಯತ್ಯಾಸ ತೋರುವ. **Iridéscence** (ನಾ.) ವಿವಿಧ ವರ್ಣ ಸ್ಫುರಣ; ಬಣ್ಣ ಮಿನುಕು.

Irídium ಐರಿಡಿಯಂ (ನಾ.) ಮೆರುಗುಕೊಟ್ಟ ಉಕ್ಕಿನಂತಿರುವ ಪ್ಲಾಟಿನಂ ವರ್ಗಕ್ಕೆ ಸೇರಿದ ಒಂದು ಬಿಳಿಯ ಲೋಹ: ಐರಿಡಿಯಂ.

Iridósmine ಐ(ಇ)ರಿಡಾಸ್(ಸ್)ಮಿನ್ (ನಾ.) ಬರಹದ ಚಿನ್ನದ ಮುಳ್ಳುಗಳ ಮೊನೆಗೆ ಹಚ್ಚಲು ಉಪಯೋಗಿಸುವ, ಆಸ್ಮಿಯಮ್ ಮತ್ತು ಐರಿಡಿಯಮ್ ಲೋಹಗಳ ಮಿಶ್ರಣ.

Íris ಐರಿಸ್ (ನಾ.) ಕಣ್ಣಿನ ಜಲದ್ರವದಲ್ಲಿರುವ, ಮಧ್ಯೆ ಗುಂಡು ಕಂಡಿಯುಳ್ಳ, ವರ್ತುಲಾಕಾರದ, ಚಪ್ಪಟೆಯಾದ, ಬಣ್ಣದ ಪೊರೆ: ಕನೀನಿಕಾಪಟ; ಪಾಪೆಪೊರೆ. ಕಾಮನಬಿಲ್ಲು; —ಬಿಲ್ಲಿನ ದೇವತೆ. ಗಡ್ಡೆ ಬೇರೂ, ಕತ್ತಿಯಾಕಾರದ ಎಲೆಗಳೂ, ಬಣ್ಣಬಣ್ಣದ ಬೆಡಗಿನ ಹೂವೂ, ಉಳ್ಳ ಹಲವು ಗಿಡಗಳ ಜಾತಿ: 'ಐರಿಸ್' ಗಿಡ. ಮುಪ್ಪಟ್ಟೆಯ ಗಾಜಿನಂತೆ ಬಣ್ಣ ಬಣ್ಣದ ಕಿರಣಗಳನ್ನು ಪ್ರತಿಫಲಿಸುವ ಒಂದು ಬಗೆಯ ಶಿಲಾಸ್ಫಟಿಕ [I. diaphragm (ದ್ಯ. ವಿ.) (ಒಂದು ಲೆನ್ಸಿಗೆ ಅಥವಾ ಲೆನ್ಸ್ ವ್ಯೂಹಕ್ಕೆ ಬೆಳಕು ಬಿಡುವ ಕಂಡಿಯ ವಿಸ್ತಾರವನ್ನು ತಕ್ಕಂತೆ ಅಳವಡಿಸಲಾಗುವ) ರಂಧ್ರ ಸಂಧಾನಕ ಪಟಲ]. **Iridáceous** ಐ(ಇ)ರಿಡೇಷಸ್ (ಗು.) (ಸ. ವಿ.) ಐರಿಸ್ (ಸಸ್ಯ) ಜಾತಿಯ. **Irítis** ಐರೈಟಿಸ್ (ನಾ.) ಕನೀನಿಕಾ ಪಟದ ಊತ.

Írish ಐರಿಷ್ (ಗು., ನಾ.) ಐರ್ಲೆಂಡಿನ [I. bull (Bull[3] ನೋಡಿ). I. bridge ರಸ್ತೆಗೆ ಅಡ್ಡಲಾಗಿ ನೀರನ್ನು ಸಾಗಿಸುವ ತೆರದ ಕಲ್ಲುಚರಂಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

I. Free State ೧೯೨೨ರಲ್ಲಿ ಬ್ರಿಟಿಷ್ ಸಂಯುಕ್ತ ರಾಜ್ಯದಿಂದ ಬೇರ್ಪಟ್ಟು ಸ್ವತಂತ್ರ ರಾಷ್ಟ್ರವಾದ ಐರ್ಲೆಂಡಿನ ಭಾಗ : ಐರಿಷ್ ಸ್ವತಂತ್ರ ರಾಷ್ಟ್ರ]. (ನಾ.) ಐರಿಷ್ ಭಾಷೆ. The I. (ಬ. ವ.) ಐರಿಷ್ ಜನ ; ಐರಿಷರು. **Irishman, -woman** (ನಾ.) ಐರಿಷನು(ಳು). **Irishism** (ನಾ.) (ಮು., ಮಾತಿನಲ್ಲಿ) ಐರಿಷ್ ವೈಲಕ್ಷಣ್ಯ ; =Irish bull. **Irishize** (ಕ್ರಿ. ಸಕ.)

Irítis. Iris ನೋಡಿ.

Irk ಅರ್ಕ್ (ಕ್ರಿ. ಸಕ.) (ಪ್ರಾಚೀ. ಪ್ರ.) ಅಸಹ್ಯ, ಜುಗುಪ್ಸೆ, ಬೇಸರ, — ಹಿಡಿಸು [ಮು., It irks (me, him)]. **Irksome** (ಗು.) ಬೇಸರ ಹಿಡಿಸುವ ; ಆಯಾಸಗೊಳಿಸುವ. **Irksomely** (ಕ್ರಿ. ವಿ.) ; **Irksomeness** (ನಾ.)

Iron ಐಅರ್ನ್ (ನಾ., ಗು.) ಕಬ್ಬಿಣ ; ಅಯಸ್ಸು (Wrought i. ಮೆತು ಕಬ್ಬಿಣ. Cast i. ತಾಂಡವಾಳ. Steel ಉಕ್ಕು). (ರೂಪ.) ದಾರ್ಢ್ಯ ; ಕಾಠಿನ್ಯ ; ಕ್ರೂರ ; ನಿಷ್ಕರುಣ (A man of i. ಕಟ್ಟಾಳು ; ಸ್ಥೈರ್ಯಶಾಲಿ. Rule with a rod of i. ಕ್ರೂರವಾಗಿ ಆಳು). ಕಬ್ಬಿಣದ ಧಾತುವಿನಿಂದ ತಯಾರಿಸಿದ ಶಕ್ತಿವರ್ಧಕ ಔಷಧ. ಕಬ್ಬಿಣದ ಆಯುಧ, ಮುಟ್ಟು [Curling, grappling, -i. (ಆಯಾ ಪದಗಳನ್ನು ನೋಡಿ)]. ಕಬ್ಬಿಣದ ಬರೆಗೋಲು. ಒಂದು ತೆರದ ಕಬ್ಬಿಣದ ತಲೆಯುಳ್ಳ ಗಾಲ್ಫ್ ದಾಂಡು. (ಬಟ್ಟೆ, ಮೊ. ನ್ನು ಸುಕ್ಕಿಲ್ಲದಂತೆ ನಯಮಾಡುವ) ಇಸ್ತ್ರಿಪೆಟ್ಟಿಗೆ. (ಸಾ., ಬ. ವ. ದಲ್ಲಿ) ಬೇಡಿ ; ಸಂಕೋಲೆ (ಮು., In irons ಕೈಬೇಡಿ ಹಾಕಿ). (ಮು., ಬ. ವ. ದಲ್ಲಿ) ರಿಕಾಪು. (ಬ. ವ. ದಲ್ಲಿ) ಅಂಗವಿಕಾರವನ್ನು ಸರಿಪಡಿಸುವುದಕ್ಕಾಗಿ ಹಾಕಿದ ಕಾಲುಕಟ್ಟುಗಳು. [Strike while the i. is hot (ಗಾದೆ) ಅನುಕೂಲ ಸಂದರ್ಭದಲ್ಲಿ ಕಾರ್ಯ ನಡಸು. Have (too) many irons in the fire ಒಂದೇ ಸಮಯದಲ್ಲಿ ಅನೇಕ ಹವ್ಯಾಸಗಳನ್ನು ಹಚ್ಚಿಕೊಂಡಿರು. (ಒಂದೇ ಉದ್ದೇಶಸಾಧನೆಗೆ) ಹಲವು ಸಾಧನಗಳನ್ನು, ಉಪಾಯಗಳನ್ನು, ಇಟ್ಟುಕೊಂಡಿರು]. (ಗು.) ಕಬ್ಬಿಣದ. ಬಹು ಗಟ್ಟಿಮುಟ್ಟಾದ ; ದೃಢವಾದ ; ಸಗ್ಗದ ; ಅಚಲ ; ನಿರ್ದಯ. **I. age** ಕ್ರೌರ್ಯದ, ಹಿಂಸೆಯ, ಯುಗ (Brazen age ನೋಡಿ). ಕಬ್ಬಿಣದ ಆಯುಧಗಳ, ಮುಟ್ಟುಗಳ, ಯುಗ. **I.-bark** ಗಟ್ಟಿ ತೊಗಟೆಯುಳ್ಳ 'ಯೂಕಲಿಪ್ಟಸ್' ಮರದ ಜಾತಿ. **I.-bound** ಕಬ್ಬಿಣ(ದಿಂದ) ಬಿಗಿದ. (ಸಮುದ್ರದ ಕರೆ) ಬಂಡೆಗೂಡಿದ. (ರೂಪ.) ಅತಿ ಕಟ್ಟುನಿಟ್ಟಿನ ; ಬಿರುಸಾಗಿಯೂ ಬಿಗಿಯಾಗಿಯೂ ಇರುವ. **Iron-clad** (ಗು.) ರಕ್ಷಣೆಗಾಗಿ ಕಬ್ಬಿಣ(ದ ತಗಡು) ತೊಡಿಸಿರುವ ; ಅಯೋ ರಕ್ಷಿತ. (ನಾ.) ಕಬ್ಬಿಣ ತೊಡಿಸಿದ ಹಡಗು. **I. cross** ಪ್ರಷ್ಯ ಮತ್ತು ಆಸ್ಟ್ರಿಯ ದೇಶಗಳಲ್ಲಿ ಯುದ್ಧವೀರರಿಗೆ ಕೊಡುವ ಬಿರುದಿನ ಪದಕ. **I. Duke** ಡ್ಯೂಕ್ ಆಫ್ ವೆಲಿಂಗ್ಟನ್. **I.-grey** (ಗು., ನಾ.) ಆಗತಾನೆ ತುಂಡುಮಾಡಿದಕಡೆಯ ಕಬ್ಬಿಣದ (ಬೂದು) ಬಣ್ಣ(ದ). **I. horse** (ಗಾಡಿಗಳನ್ನೆಳೆದುಕೊಂಡು ಹೋಗುವ) ರೈಲ್ವೆಯ ಆವಿಯ ಎಂಜಿನ್ ; ಬೈಸಿಕಲ್ ಅಥವಾ ಟ್ರೈಸಿಕಲ್. **Iron-master** ಕಬ್ಬಿಣದ ತಯಾರಿಕೆಯ ಕಾರ್ಖಾನೆಯ ಯಜಮಾನ. **Ironmonger** ಕಬ್ಬಿಣದ (ಸಾಮಾನುಗಳ) ವ್ಯಾಪಾರಿ. **Ironmongery** ; **I.-mould** — ಮೋಲ್ಡ್ (ನಾ., ಕ್ರಿ.) ತುಕ್ಕಿನ ಅಥವಾ ಶಾಯಿಯ ಕರೆ, ಕಲೆ. (ಕ್ರಿ.) ಕಬ್ಬಿಣದ ಕರೆಯಾಗು ; — ಮಾಡು. **I. rations** ಉಪಾಯಾಂತರವಿಲ್ಲದಾಗ ಮಾತ್ರ ಉಪಯೋಗಿಸಬಹುದೆಂದು ಸಿಪಾಯಿಗೆ ಹಂಚಿಕೊಟ್ಟ ಸ್ವಲ್ಪ ಪ್ರಮಾಣದ ಆಹಾರ : ಕೈಗಾವಲು ತಿಂಡಿ. **Ironsides** ಅತಿಶಯ ಧೈರ್ಯಶಾಲಿ ; (ಮು., ಬ. ವ. ದಲ್ಲಿ) (ಇಂಗ್ಲೆಂಡಿನ) ಕ್ರಾಮ್‌ವೆಲ್ಲನ ದಂಡಾಳುಗಳು. **I.-stone** ಬಹು ಗಟ್ಟಿಯಾದ ಹಲವು ಕಬ್ಬಿಣದ ಅದುರುಗಳ ಹೆಸರು. **Ironwork** ಕಬ್ಬಿಣದ ಕೆಲಸ ; ಕಬ್ಬಿಣದ ಸಾಮಾನು. **Ironworks** (ಏ. ವ. ಅಥವಾ ಬ. ವ.) ಕಬ್ಬಿಣ ಕರಗಿಸುವ ಅಥವಾ ಕಬ್ಬಿಣದ ಸಾಮಾನು ಮಾಡುವ ಕಾರ್ಖಾನೆ ; ಕಬ್ಬಿಣದ ಕಾರ್ಖಾನೆ. **Irony**[1] ಐಅರ್ನಿ (ಗು.) ಕಬ್ಬಿಣದ ; ಕಬ್ಬಿಣದಂಥ.

Iron (ಕ್ರಿ. ಸಕ.) ಕಬ್ಬಿಣ ಹವಣಿಸು, ತೊಡಿಸು ; ಕಬ್ಬಿಣದಿಂದ ಬಲಪಡಿಸು. ಸಂಕೋಲೆ ಹಾಕು. (ಬಟ್ಟೆ, ಮೊ. ನ್ನು) ಇಸ್ತ್ರಿ ಮಾಡು.

Irony[2] ಐರೊನಿ (ನಾ.) ಮು., ಒಬ್ಬನ ಅಭಿಪ್ರಾಯವನ್ನು ಅಲ್ಲಗಳೆಯುವುದಕ್ಕಾಗಿ ಆ ಅಭಿಪ್ರಾಯವನ್ನೇ ಒಪ್ಪುವಂತೆ ನಟಿಸಿ ಮಾತನಾಡಿ ವಿರುದ್ಧಾಭಿಪ್ರಾಯ ಸೂಚಿಸುವುದು : ಹಾಸ್ಯವ್ಯಂಗ್ಯ ; ಕಟಕಿ ; ಅಣಕ. ಸಹಜವಾಗಿ ಅಪೇಕ್ಷಣೀಯವಾಗಿದ್ದು (ವಿಧಿ, ದಶೆ, ಮೊ. ಗಳ) ಹಿತಕಾರಕ ದೃಷ್ಟಿಯಿಂದಲೊ ಎಂಬಂತೆ ತೋರಿದರೂ ನಿಜವಾಗಿ ದ್ವೇಷಾಸೂಯೆಗಳಿಂದ ಕೂಡಿದುದಾಗಿ ಅಕಾಲದಲ್ಲಾಗಲಿ ವಕ್ರ ಮಾರ್ಗದಲ್ಲಾಗಲಿ ಸಂಭವಿಸುವ ದುರ್ಘಟನೆ ; ವಿಧಿಯ ಅಣಕ ; ವಿಧಿ ವಿಡಂಬನ (=I. of fate). ತಿಳಿದವರಿಗೆ ಮಾತ್ರ ಒಳ ಅರ್ಥವೂ ಸಾಮಾನ್ಯ ಶ್ರೋತೃಗಳಿಗೆ ಹೊರ ತೋರಿಕೆಯ ಅರ್ಥವೂ ಬರುವಂತೆ ಮಾಡಿದ ಪದಪ್ರಯೋಗ (= Dramatic, tragic, i.). Socratic i. ಎದುರಾಳಿಯ ಅಜ್ಞಾನವನ್ನು ಹೊರಗೆಡಹುವುದಕ್ಕಾಗಿ ತಾನು ಅರಿಯದವನಂತೆ ಸೋಗುಹಾಕಿಕೊಳ್ಳುವುದು. **Irónic(al)** (ಗು.) ಹಾಸ್ಯವ್ಯಂಗ್ಯದ ; ಹಾಸ್ಯವ್ಯಂಗ್ಯ ಪ್ರಯೋಗದ ; ಹಾಸ್ಯವ್ಯಂಗ್ಯವಾಗಿ ಹೇಳಿದ ; ಹಾಸ್ಯವ್ಯಂಗ್ಯ ಪ್ರಿಯನಾದ. **Irónically** (ಕ್ರಿ. ವಿ.) ; **Ironist** (ನಾ.) ಹಾಸ್ಯವ್ಯಂಗ್ಯ ಪ್ರಯೋಗಿ.

Irrádiant ಇರೇಡಿಯಂಟ್ (ಗು.) ಥಳಥಳನೆ ಹೊಳೆಯುವ. **Irrádiance** (ನಾ.) ; **Irrádiate** — ಯೇಟ್ (ಕ್ರಿ. ಸಕ.) (ಒಂದರಮೇಲೆ) ಹೊಳೆ, ಬೆಳಗು. (ರೂಪ.) (ಒಂದು ವಿಷಯದಮೇಲೆ) ಬೆಳಕು ಬೀಳಿಸು ; ವಿಷಯಸ್ಫುರಣ ಮಾಡು. (ಮುಖ, ಮೊ. ನ್ನು ಸಂತೋಷ, ಮೊ. ಗಳಿಂದ) ಬೆಳಗು. **Irrádiative** (ಗು.) ; **Irradiátion** (ನಾ.) ಹೊಳೆಯುವುದು ; ಬೆಳಗುವುದು (ರೂಪ. ಸಹ). (ದೃ. ವಿ.) ಕಪ್ಪು ಹಿನ್ನೆಲೆಯಮೇಲೆ ನೋಡಿದಾಗ ಪ್ರದೀಪ್ತ ವಸ್ತುವಿನ ಅಂಚುಗಳು ಖಚಿತವಾಗಿಲ್ಲದೆ ಮುಂದುವರಿದಂತೆ ತೋರುವುದು ; ಪ್ರಭಾ ವಿಸ್ತರಣ (ಭ್ರಮೆ)

Irrátional ಇರ್‌ರ್ಯಾಷನಲ್ (ಗು., ನಾ.) ವಿಚಾರಹೀನವಾದ ; ಅಸಂಬದ್ಧವಾದ. ವಿಚಾರ ಬುದ್ಧಿಯಿಲ್ಲದ. (ಗಣಿತ) (ವರ್ಗಮೂಲ, ಮೊ. ಗಳ ವಿಷಯದಲ್ಲಿ) ಅಸಹಜ ; ಪ್ರಾಕೃತಿಕ ಸಂಖ್ಯೆಗಳೊಡನೆ ಪರಿಗಣಿಸಲಾಗದ (ಉದಾ., ಕೊನೆಮುಟ್ಟದ ದಶಮಾಂಶ ಸಂಖ್ಯೆ) : ಕರಣಿ. (ನಾ.) ಕರಣೀಗತ ಸಂಖ್ಯೆ, ರಾಶಿ. **Irrationálity** — ನ್ಯಾ — (ನಾ.) ; **Irrátionalize** — ನ — (ಕ್ರಿ. ಸಕ.) ; **Irrátionally** (ಕ್ರಿ. ವಿ.)

Irreclaímable ಇರ್‌ರಿಕ್ಲೇಮಬ್‌ಲ್ (ಗು.) (ಜಮೀನನ್ನು) ಆಬಾದಿಗೆ ತರಲಾಗದ. ಸನ್ಮಾರ್ಗಕ್ಕೆ, ಉಪಯೋಗಕ್ಕೆ, ತರಲಾಗದ. ಹಿಂದಕ್ಕೆ ಪಡೆಯಲಾಗದ. **Irreclaímably** (ಕ್ರಿ. ವಿ.)

Irrécognizable ಇರ್‌ರೆಕಗ್ನೈಸಬ್‌ಲ್ (ಗು.) ಗುರುತಿಸಲಾಗದ.

Irréconcilable ಇರ್‌ರೆಕನ್ಸೈಲಬ್‌ಲ್ (ಗು., ನಾ.) ಬದ್ಧವೈರದ. ರಾಜಿ ಮಾಡಲಾಗದ ; (ಭಾವ, ಮೊ. ವು) ಒಂದಕ್ಕೊಂದು ಹೊಂದದ ; ಪರಸ್ಪರ ವಿರುದ್ಧವಾದ ; ಅಸಂಗತ. (ನಾ.) (ರಾಜಕೀಯ ವಿಧಿ, ಮೊ. ಕ್ಕೆ) ಬದ್ಧ ವಿರೋಧಿ. **Irreconcilabílity** (ನಾ.) ; **Irréconcilableness** (ನಾ.) ; **Irréconcilably** (ಕ್ರಿ. ವಿ.)

Irrecóverable ಇರ್‌ರಿಕವರಬ್‌ಲ್ (ಗು.) ಹಿಂದಕ್ಕೆ ಪಡೆಯಲಾಗದ ; ವಸೂಲು ಮಾಡಲಾಗದ. ವಾಸಿ ಮಾಡಲಾಗದ ; ಜೀವ ಹೊಯ್ಯಲಾಗದ. **Irrecóverably** (ಕ್ರಿ. ವಿ.)

Irrecúsable ಇರ್‌ರಿಕ್ಯೂಸಬ್‌ಲ್ (ಗು.) ನಿರಾಕರಿಸಲಾಗದ ; ಅಂಗೀಕರಿಸಲೇ ಬೇಕಾದ.

Irredeémable ಇರ್‌ರಿಡೀಮಬ್‌ಲ್ (ಗು.) (ಸರ್ಕಾರ ಮಾಡಬೇಕಾದ ವಾರ್ಷಿಕ ಸಂದಾಯದ ವಿಷಯದಲ್ಲಿ) ಠೇವಣಿಯನ್ನು ವಾಪಸು ಕೊಟ್ಟು ಬಿಡುಗಡೆ ಹೊಂದಲಾಗದ ; ಅಪರಿಹಾರ್ಯ ; ಬಿಡಿಸಿಕೊಳ್ಳಲಾಗದ. (ಚಲಾವಣೆಗೆ ಕೊಟ್ಟ ಅಧಿಕಾರಿಯು ಕಾಗದದ ಹಣಕ್ಕೆ) ನಾಣ್ಯ ಕೊಡುವಂತೆ ಬದ್ಧನಾಗಿರದ ; ನಾಣ್ಯಕ್ಕೆ ಬದಲಾಯಿಸಲಾಗದ. ಮಾರ್ಗಕ್ಕೆ ತರಲಾಗದ ; ಉದ್ಧರಿಸಲಾಗದ. **Irredeémably** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Irredénta ಇರಿಡೆಂಟ (ಗು., ನಾ.) (ಒಂದು ದೇಶದ ವಿಷಯದಲ್ಲಿ) ಒಡೆದು ಛಿದ್ರವಾಗಿರುವ, ರಾಷ್ಟ್ರದ ಕೈ ಬಿಟ್ಟುಹೋದ (ಭಾಗಗಳು). (ಉದಾ., Italia, Karnataka, i.). **Irredéntism** (ನಾ.) ಹೀಗೆ ಒಡೆದ ಭಾಗಗಳನ್ನು ಒಂದುಗೂಡಿಸಬೇಕೆಂಬ ವಾದ: ಏಕೀಕರಣ ವಾದ. **Irredéntist** (ನಾ.)

Irredúcible ಇರ್‍ರಿಡ್ಯೂಸಿಬ್‍ಲ್ (ಗು.) (ಅಪೇಕ್ಷಿತ ಸ್ಥಿತಿಗೆ) ಇಳಿಸಲಾಗದ (*To* ಉಪ. ದೊಡನೆ). (ಇರುವುದಕ್ಕಿಂತ) ಕಡಮೆ ಮಾಡಲಾಗದ; ತಗ್ಗಿಸಲಾಗದ (I. minimum). (ಇನ್ನೂ) ಸುಲಭ ಸ್ಥಿತಿಗೆ ತರಲಾಗದ. **Irreducibílity** (ನಾ.)

Irréfragable ಇರ್‍ರೆಫ್ರಗಬ್‍ಲ್ (ಗು.) (ಹೇಳಿಕೆ, ವಾದ, ವ್ಯಕ್ತಿ) ಪ್ರತಿ ಹೇಳಲಾಗದ, ಖಂಡಿಸಲಾಗದ. **Irréfragably** (ಕ್ರಿ. ವಿ.)

Irrefrángible ಇರ್‍ರಿಫ್ರ್ಯಾಂಜಿಬ್‍ಲ್ (ಗು.) ಮುರಿಯಲಾಗದ; ಮೀರಕೂಡದ. (ದೃ. ವಿ.) ವಕ್ರೀಭವಿಸ(ಲಾಗ)ದ.

Irréfutable ಇರ್‍ರೆಫ್ಯುಟಬ್‍ಲ್, **Irrefútable** — ರಿಫ್ಯೂ — (ಗು.) ಅಬದ್ಧವೆಂದು ಸಾಧಿಸಲಾಗದ; ನಿರಾಕರಿಸಲಾಗದ; ಖಂಡಿಸಲಾಗದ. **Irrefutabílity** (ನಾ.); **Irréfutably** (ಕ್ರಿ. ವಿ.)

Irrégular ಇರ್‍ರೆಗ್ಯುಲರ್ (ಗು., ನಾ.) ಕ್ರಮವಲ್ಲದ; ನಿಯಮ ವಿರುದ್ಧವಾದ; ಸ್ವಭಾವ ವ್ಯತಿರಿಕ್ತವಾದ; ಯಥಾ ಪ್ರಮಾಣತೆಯಿಲ್ಲದ; ಅಸಮರೂಪದ. (ತಲ) ಒಂದು ಮಟ್ಟವಿಲ್ಲದ. ಅವ್ಯವಸ್ಥಿತವಾದ. (ಕಾಲಾವಧಿ, ಕ್ರಮ, ಮೊ. ಗಳಲ್ಲಿ) ಅಸಮವಾದ. (ವ್ಯಾ., ಪದ) ರೂಢಿಯಾದ ವಿಭಕ್ತಿ, ಮೊ. ಪ್ರತ್ಯಯಗಳು ಹತ್ತದ (ಉದಾ., Sell, cast, feed). (ದಂಡಾಳುಗಳು) ಕ್ರಮಬದ್ಧ ಉದ್ಯೋಗದಲ್ಲಿಲ್ಲದ. (ನಾ., ಬ. ವ. ದಲ್ಲಿ) ಅನಿಯತ ದಂಡಾಳುಗಳು. **Irregulárity** — ಲ್ಯಾ — (ನಾ.); **Irrégularly** — ಲ — (ಕ್ರಿ. ವಿ.)

Irrélative ಇರ್‍ರೆಲಟಿವ್ (ಗು.) ಹೊಂದಿಕೆಯಿಲ್ಲದ; ಸಂಬಂಧವಿಲ್ಲದ (*To* ಉಪ. ದೊಡನೆ); ಸಂಬಂಧ(ಧಿ)ಗಳು ಇಲ್ಲದ. ಕೇವಲ. **Irrélatively** (ಕ್ರಿ. ವಿ.)

Irrélevant ಇರ್‍ರೆಲವಂಟ್ (ಗು.) (ಪ್ರಕೃತ) ವಿಷಯಕ್ಕೆ ಸಂಬಂಧಪಡದ; ~~ಅಪ್ರಕೃತ; ಅಪ್ರಸಕ್ತ;~~ ಅಸಂಬದ್ಧ (*To* ಉಪ. ದೊಡನೆ). **Irrélevance, -ancy** (ನಾ.); **Irrélevantly** (ಕ್ರಿ. ವಿ.)

Irrelígion ಇರ್‍ರಿಲಿಜನ್ (ನಾ.) ಮತಧರ್ಮ ವಿರೋಧ; ಮತಧರ್ಮ ನಿರಾಕರಣೆ; ನಾಸ್ತಿಕ್ಯ. **Irrelígionist** (ನಾ.); **Irrelígious** — ಜಸ್ (ಗು.); **Irrelígiously** (ಕ್ರಿ. ವಿ.)

Irremédiable ಇರ್‍ರಿಮೀಡಿಅಬ್‍ಲ್ (ಗು.) ನೇರ್ಪಡಿಸಲಾಗದ; (ಚಿಕಿತ್ಸೆಯಿಂದ) ಗುಣಮಾಡಲಾಗದ; ಪರಿಹಾರವಿಲ್ಲದ. **Irremédiably** (ಕ್ರಿ. ವಿ.)

Irremíssible ಇರ್‍ರಿಮಿಸಿಬ್‍ಲ್ (ಗು.) ಮನ್ನಿಸಲಾಗದ; ಅಕ್ಷಮ್ಯ; ವ್ಯತ್ಯಾಸ ಮಾಡಲಾಗದಂತೆ ಬಂಧಕವಾದ. **Irremíssibly** (ಕ್ರಿ. ವಿ.)

Irremóvable ಇರ್‍ರಿಮೂವಬ್‍ಲ್ (ಗು.) (ಮು., ಅಧಿಕಾರದಿಂದ) ತೆಗೆದು ಹಾಕಲಾಗದ; ಅಧಿಕಾರ ತಪ್ಪಿಸಲಾಗದ. **Irremovabílity** (ನಾ.); **Irremóvably** (ಕ್ರಿ. ವಿ.)

Irréparable ಇರ್‍ರೆಪರಬ್‍ಲ್ (ಗು.) (ಹಾನಿ, ನಷ್ಟ, ಮೊ. ವು) ಸರಿಮಾಡಲಾಗದ. **Irréparableness** (ನಾ.); **Irréparably** (ಕ್ರಿ. ವಿ.)

Irrepláceable ಇರ್‍ರಿಪ್ಲೇಸಬ್‍ಲ್ (ಗು.) ನಷ್ಟವಾದುದಕ್ಕೆ ಬೇರೊಂದನ್ನು ಒದಗಿಸಲಾಗದ; ಬದಲಿಡಲಾಗದ.

Irrepréssible ಇರ್‍ರಿಪ್ರೆಸಿಬ್‍ಲ್ (ಗು., ನಾ.) ಅಡಗಿಸಲಾಗದ; ತಡೆಯಲಾಗದ; ಅದಮ್ಯ. (ನಾ., ಬಳ. ಮಾ.) ಅಡಗಿಸಲಾಗದವನು. **Irrepréssibly** (ಕ್ರಿ. ವಿ.)

Irreproáchable ಇರ್‍ರಿಪ್ರೋಚಬ್‍ಲ್ (ಗು.) ನಿಂದಾತೀತ; ನಿರ್ದುಷ್ಟ. **Irreproachabílity** (ನಾ.); **Irreproáchably** (ಕ್ರಿ. ವಿ.)

Irresístible ಇರ್‍ರಿಸಿಸ್ಟಿಬ್‍ಲ್ (ಗು.) ಎದುರಿಸಲಾಗದ; ತಡೆಯಲಾಗದ; ಪ್ರತಿಘಟಿಸಲಾಗದ. **Irresistibílity** (ನಾ.); **Irresístibly** (ಕ್ರಿ. ವಿ.)

Irrésolute ಇರೆಸೊಲ್ಯೂಟ್ (ಗು.) ತೀರ್ಮಾನಕ್ಕೆ ಬರದ; ಹಿಂದು ಮುಂದು, ಮೀನ ಮೇಷ, ನೋಡುವ; ಸಂದೇಹ ಪಡುತ್ತಿರುವ; ದೃಢ ಸಂಕಲ್ಪವಿಲ್ಲದ; ಅಸ್ಥಿರ ಮನಸ್ಸಿನ; ಅನಿಶ್ಚಿತ ಬುದ್ಧಿಯ. **Irrésolutely** (ಕ್ರಿ. ವಿ.); **Irrésoluteness** (ನಾ.); **Irresolútion** (ನಾ.)

Irresólvable ಇರ್‍ರಿಸಾಲ್ವಬ್‍ಲ್ (ಗು.) ಭಾಗಗಳಾಗಿ ವಿಂಗಡಿಸಲಾಗದ; ಅವಿಭಾಜ್ಯ. (ಸಮಸ್ಯೆ) ಬಿಡಿಸಲಾಗದ.

Irrespéctive ಇರ್‍ರಿಸ್ಪೆಕ್ಟಿವ್ (ಗು.) I. of ಗಣನೆಗೆ ತೆಗೆದುಕೊಳ್ಳದೆ; ಲಕ್ಷಿಸದೆ [The posts were filled i. of nationality ಜನಾಂಗ ಭಾವನೆಗೆ ಗಮನ ಕೊಡದೆ (ಅಧಿಕಾರ) ಸ್ಥಾನಗಳನ್ನು ಭರತಿಮಾಡಲಾಯಿತು]. **Irrespéctively** (ಕ್ರಿ. ವಿ.)

Irrespónsible ಇರ್‍ರಿಸ್ಪಾನ್ಸಿಬ್‍ಲ್ (ಗು.) (ನಡವಳಿಗೆ) ಜವಾಬ್ದಾರಿ, ಹೊಣೆ, ಹೊತ್ತಿರದ; ಬೇಜವಾಬ್ದಾರಿಯ; ತಕ್ಕ ಜವಾಬ್ದಾರಿ ವಹಿಸದೆ ನಡೆಯುತ್ತಿರುವ, ಮಾಡಿದ. **Irresponsibílity** (ನಾ.); **Irrespónsibly** (ಕ್ರಿ. ವಿ.)

Irrespónsive ಇರ್‍ರಿಸ್ಪಾನ್ಸಿವ್ (ಗು.) (ಬಲಕ್ಕೆ, ಚೋದನೆಗೆ) ಪ್ರತಿಕ್ರಿಯೆ ತೋರಿಸದ, ಪ್ರತಿವರ್ತನೆಯಿಲ್ಲದ; (ಪ್ರಶ್ನೆಗೆ) ಉತ್ತರ ಕೊಡದ; ಪ್ರಾರ್ಥನೆ ಲಾಲಿಸದ (*To* ಉಪ. ದೊಡನೆ). **Irrespónsiveness** (ನಾ.)

Irreténtion ಇರ್‍ರಿಟೆನ್‍ಷನ್ (ನಾ.) ಧಾರಣಶಕ್ತಿಯಿಲ್ಲದಿರುವುದು (ಮು., ಮೂತ್ರದ ವಿಷಯದಲ್ಲಿ). **Irreténtive** (ಗು.) ಧಾರಣಶಕ್ತಿಯಿಲ್ಲದ. **Irreténtiveness** (ನಾ.)

Irretriévable ಇರ್‍ರಿಟ್ರೀವಬ್‍ಲ್ (ಗು.) ಮರಳಿ ಪಡೆಯಲಾಗದ; ನೇರ್ಪಡಿಸಲಾಗದ; ನಷ್ಟವನ್ನು, ಕೇಡನ್ನು, ಪರಿಹರಿಸಲಾಗದ; ಪರಿಹಾರವಿಲ್ಲದ. **Irretrievabílity** (ನಾ.); **Irretriévably** (ಕ್ರಿ. ವಿ.)

Irréverent ಇರೆವೆರೆಂಟ್ (ಗು.) ಪೂಜ್ಯಭಾವವಿಲ್ಲದ; ಭಕ್ತಿಯಿಲ್ಲದ. (ಪೂಜ್ಯ ವಸ್ತುವಿಗೆ ಅಥವಾ ವ್ಯಕ್ತಿಗೆ) ಅಗೌರವ ತೋರುವ. **Irréverence** (ನಾ.); **Irreveréntial** — ರೆನ್ಷ‍ಲ್ (ಗು.); **Irréverently** (ಕ್ರಿ. ವಿ.)

Irrevérsible ಇರ್‍ರಿವರ್ಸಿಬ್‍ಲ್ (ಗು.) ಮಾರ್ಪಡಿಸಲಾಗದ; ಹಿಂದು ಮುಂದು ಮಾಡಲಾಗದ; ವಿಪರ್ಯಯಗೊಳಿಸಲಾಗದ. **Irreversibílity** (ನಾ.); **Irrevérsibly** (ಕ್ರಿ. ವಿ.)

Irrévocable ಇರೆವೊಕಬ್‍ಲ್ (ಗು.) ಮಾರ್ಪಡಿಸಲಾಗದ; ಹಿಂದಕ್ಕೆ ತೆಗೆದುಕೊಳ್ಳಲಾಗದ; ಕೈ ಮೀರಿದ. **Irrevocabílity** (ನಾ.); **Irrévocably** (ಕ್ರಿ. ವಿ.)

Irrigate ಇರಿಗೇಟ್ (ಕ್ರಿ. ಸಕ.) (ಹೊಳೆ, ಮೊ. ಗಳ ವಿಷಯದಲ್ಲಿ: ಜಮೀನಿಗೆ) ನೀರೊದಗಿಸು. ನಾಲೆ, ಮೊ. ಗಳಿಂದ (ಜಮೀನಿಗೆ) ನೀರು ಹಾಯಿಸು. (ವೈ. ಶಾ.) (ಗಾಯ, ಮೊ. ಕ್ಕೆ, ತಂಪಿಸುವುದಕ್ಕಾಗಿ, ಶುದ್ಧಿಮಾಡುವುದಕ್ಕಾಗಿ, ಅಥವಾ ಸೋಂಕುನಿವಾರಣೆಗಾಗಿ) ಒಂದು ದ್ರವ ಸಂತತವಾಗಿ ಹರಿಯುವಂತೆ ಏರ್ಪಡಿಸು. (ರೂಪ.) ತೇವದಿಂದ ಹೇಗೊ ಹಾಗೆ ಕಳೆಯೇರಿಸು, ಚೇತನಗೊಳಿಸು, ಫಲವತ್ತು ಮಾಡು. **Irrigable** (ಗು.); **Irrigátion** (ನಾ.) ನೀರಾವರಿ; ನೀರು ಹಾಯಿಸುವುದು. **Irrigative** (ಗು.) ನೀರು ಹಾಯಿಸುವ; ನೀರು ಹಾಯ್ಕೆಯ. **Irrigator** (ನಾ.) ನೀರು ಹಾಯಿಸುವವನು(ವದು). ದ್ರವ ಸೇಚಕ; (ವೈ. ಶಾ.) ದ್ರವ ಹಾಯಿಸುವ ಸಲಕರಣೆ.

Irritate[1] ಇರಿಟೇಟ್ (ಕ್ರಿ. ಸಕ.) ಸಿಟ್ಟೆಬ್ಬಿಸು; ರೇಗಿಸು; ಪೀಡಿಸು; ಕಿರುಕುಳ ಕೊಡು (-ed *at*, *by*, *with*, *against*). (ದೇಹಾಂಗ, ಮೊ. ಗಳ ವಿಷಯದಲ್ಲಿ) ಕೆರಳಿಸು, ವೇದೆಯುಂಟುಮಾಡು. (ಶ. ವಿ.) (ಅವಯವವನ್ನು) ಚೇತನಗೊಳಿಸು. **Irritatingly** (ಕ್ರಿ. ವಿ.);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Irritátion (ನಾ.) ; **Írritative** (ಗು.) ; **Írritable** — ಟಬ್‌ಲ್ (ಗು.) ಬೇಗ ಸಿಟ್ಟಿಗೇಳುವ ; ಮುಂಗೋಪದ ; ಸಿಡುಕಿನ. (ಅವಯವ, ಮೊ. ವು ಸ್ಪರ್ಶ, ಮೊ. ಕ್ಕೆ) ಸೂಕ್ಷ್ಮವೇದಿ(ಯಾದ). (ಶ. ವಿ.: ಸ್ನಾಯುಗಳ ಮತ್ತು ನರಗಳ ವಿಷಯದಲ್ಲಿ) ಪ್ರಚೋದನೆಯಿಂದ ಚೇತನಗೊಳಿಸ ಬಹುದಾದ. **Írritably** (ಕ್ರಿ. ವಿ.); **Irritabílity** (ನಾ.); **Írritancy**[1] (ನಾ.) = Irritation. **Írritant** (ಗು., ನಾ.) (ಸಾ., ದೇಹಕ್ಕೆ) ಕೆರಳಿಕೆಯುಂಟುಮಾಡುವ; ಉದ್ರೇಕಕಾರಿ (ವಸ್ತು) (ರೂಪ. ಸಹ)

Írritate[2] ಇರಿಟೇಟ್ (ಕ್ರಿ. ಸಕ.) (ನ್ಯಾ. ಶಾ.) ತೊಡೆದುಹಾಕು ; ರದ್ದು ಮಾಡು. ಸಲುವಳಿಯಿಲ್ಲದಂತೆ ಮಾಡು. **Írritancy**[2] (ನಾ.) ರದ್ದು ಮಾಡುವುದು ; ರದ್ದಾಗಿರುವುದು.

Irrúption ಇರಪ್ಷನ್ (ನಾ.) ದಂಡೆತ್ತಿ ಬರುವುದು ; ದಾಳಿಯಿಡು ವುದು ; ಬಲಾತ್ಕಾರ ಪ್ರವೇಶ.

Is ಇಸ್. Be ಧಾತುವಿನ ಪ್ರಥಮ ಪುರುಷ ಏ. ವ.

Isabélla ಇಸಬೆಲ, **Ísabel** ಇಸಬೆಲ್ (ಗು., ನಾ.) ಬೂದುಹಳದಿ (ಬಣ್ಣದ). **Isabélline** — ಲೈ(ಲಿ)— (ಗು.)

Isagógic ಐಸಗಾಜಿಕ್ (ಗು., ನಾ.) (ವಿಷಯವ್ಯಾಸಂಗಕ್ಕೆ) ಪ್ರವೇಶ ದಾಯಕ. (ನಾ., ಬ. ವ. ದಲ್ಲಿ) ಬೈಬಲ್ಲಿನ ಗ್ರಂಥಪಾಠಕ್ಕೂ ರಚನೆಗೂ ಸಂಬಂಧಪಟ್ಟ ವ್ಯಾಸಂಗ.

Ischiátic ಇಸ್ಕಿ‌ಆ್ಯಟಿಕ್ **-dic** —ಡಿಕ್ (ಗು.) ರೊಂಡಿಯ ; ಕಟಿ ಪ್ರದೇಶದ.

Íshmael ಇಷ್ಮೆ(ಲ)ಎಲ್ (ನಾ.) ಸಮಾಜ ಬಾಹಿರ ; ಭ್ರಷ್ಟ. **Íshmaelite** (ನಾ.) ಇಷ್ಮೇಲನ ಸಂತತಿಯವನು. = Ishmael.

Ísinglass ಐಸಿಂಗ್ಲಾಸ್ (ನಾ.) ಕೆಲವು ಸೀನೀರುಮೀನುಗಳ ದೇಹ ದಲ್ಲಿಯ ಗಾಳಿಚೀಲಗಳಿಂದ ತಯಾರಿಸಿದ, ಬಿಳಿಯ ಛಾಯೆಯ, ಅರೆ ಪಾರದರ್ಶಕವಾದ, ಒಂದು ಅಪ್ಪಟ ಸಸಾರಜನಕ ವಸ್ತು (ಇದರಿಂದ ಜೋನಿಭಕ್ಷ್ಯಗಳನ್ನೂ ಅಂಟುಪದಾರ್ಥವನ್ನೂ ಮಾಡುವುದಲ್ಲದೆ ದ್ರವ ಶುದ್ಧೀಕರಣಕ್ಕಾಗಿಯೂ ಇದನ್ನು ಉಪಯೋಗಿಸುತ್ತಾರೆ) : 'ಐಸಿಂ ಗ್ಲಾಸ್' ; ಮೀನಂಟು ವಜ್ರ.

Íslam ಇಸ್(ಸ್)ಲಮ್, ಇಸ್ಲಾಮ್ (ನಾ.) ಮಹಮ್ಮದೀಯ ಮತ ; ಮಹಮ್ಮದೀಯ ಪ್ರಪಂಚ ; ಮುಸಲ್ಮಾನರು. **Islámic, Islamític** (ಗು.) ಮಹಮ್ಮದೀಯ ; ಮುಸ್ಲಿಂ. **Íslamism** (ನಾ.) ; **Íslamite** (ನಾ.)

Ísland ಐಲ್ಯಂಡ್ (ನಾ., ಕ್ರಿ. ಸಕ.) ಸುತ್ತಲೂ ನೀರಿರುವ ಭೂಭಾಗ : ದ್ವೀಪ ; ನಡುಗಡ್ಡೆ ; ಕುರುವ (ಗ್ರಾಂ.). (ರೂಪ.) ಪ್ರತ್ಯೇಕಿಸಿ ದಂತಿರುವುದು (ಮು., ಹುಲ್ಲುಮೈದಾನದಿಂದ ಸುತ್ತುವರಿದಿರುವ ಮರ ಗಾಡು ; ವಿವಿಕ್ತ ಪ್ರದೇಶ ; ವಾಹನಸಂಚಾರ ಹೆಚ್ಚಾಗಿರುವ ರಸ್ತೆಯಲ್ಲಿ ಅಡ್ಡ ಹಾಯ್ದು ಹೋಗುವವರು ನಿಲ್ಲಲು ಮಾಡಿರುವ ಎತ್ತರಿಸಿದ ಸ್ಥಳ ; ಬೀದಿಯ ಅನಪಾಯದ ನಿಲ್ದಾಣ). (ಶ. ವಿ.) ವಿವಿಕ್ತವಾಗಿರುವ ಅಂಗಾಂಶ ಅಥವಾ ಜೀವಾಣು ಸಮುದಾಯ. (ಕ್ರಿ.) ದ್ವೀಪವನ್ನಾಗಿ ಮಾಡು ; ವಿವಿಕ್ತ ಮಾಡು ; ದ್ವೀಪಗಳಂತೆ ಚುಕ್ಕೆ ಚುಕ್ಕೆಯಾಗಿ ಹರಡು. **Íslander** (ನಾ.) ದ್ವೀಪ ವಾಸಿ.

Isle ಐಲ್ (ನಾ.) ದ್ವೀಪ (ಗದ್ಯದಲ್ಲಿ ಸಾ., ಅಂಕಿತನಾಮದೊಡನೆ ಪ್ರ. : ಉದಾ., I. of Wight, British Isles : ಸಾ., ಸಣ್ಣ ದ್ವೀಪಗಳ ವಿಷಯದಲ್ಲಿ ಪ್ರ.). **Islet** ಐಲೆಟ್ (ನಾ.) ಸಣ್ಣ ದ್ವೀಪ ; ವಿವಿಕ್ತ ಪ್ರದೇಶ.

Ísm ಇಸ್‌ಮ್ (ನಾ.) ಒಂದು ವಿಶಿಷ್ಟವಾದ ತತ್ತ್ವ, ಸಂಪ್ರದಾಯ.

Isn't. = Is not.

Iso- ಐಸೊ(ಸಾ)— (ಸ. ಪೂ. ಪ.) ಸಮ—; ಸಮಾನ—. **-bar** ಒಂದು ನಿರ್ದಿಷ್ಟ ಕಾಲದಲ್ಲಿ, ಅಥವಾ ಸರಾಸರಿಯಾಗಿ, ವಾಯುವಿನ ಒತ್ತಡವು ಒಂದೇಸಮನಾಗಿರುವ ಸ್ಥಳಗಳನ್ನು ಸೇರಿಸಿ ಭೂಪಟದ ಮೇಲೆ ಎಳೆದ ಗೆರೆ : ಸಮ ವಾಯುಭಾರ ರೇಖೆ. **-baric** — ಬಾರಿಕ್. **-cheim** (— ಕೈಮ್) ಚಳಿಗಾಲದ ಸರಾಸರಿ ಶಾಖ ಒಂದೇ ಆಗಿರುವ ಸ್ಥಳಗಳನ್ನು ಸೇರಿಸಿ ಭೂಪಟದಮೇಲೆ ಎಳೆದ ಗೆರೆ : ಸಮ ಶೀತ ರೇಖೆ. **-cheimal, -chimenal** (ಗು., ನಾ.). **-chromatic** ಒಂದೇ ಬಣ್ಣದ. **-chronous** (ಐಸಾ —) ಒಂದೇ ಕಾಲ ಹಿಡಿಯುವ ; (ಗಡಿಯಾರದ ಲೋಲಕದ ಚಲನೆಯಂತೆ) ಒಂದೇ ಸಮನಾದ ಕಂಪನಗಳುಳ್ಳ : ಸಮಾನ ಕಂಪನದ. **-clinal** (— ಕ್ಲೈನಲ್) ಸಮ ಕಾಂತಾವನತಿಯ. **-clinic** — ಕ್ಲಿನಿಕ್ (= Isoclinal) (I. lines ಸಮ ಕಾಂತಾವನತಿಯುಳ್ಳ ಸ್ಥಳಗಳನ್ನು ಭೂಪಟದಮೇಲೆ ಅಥವಾ ನಕ್ಷೆಯಮೇಲೆ ಸೇರಿಸಿ ಎಳೆದ ಗೆರೆಗಳು : ಸಮ ಕಾಂತಾವನತಿ ರೇಖೆಗಳು). **-cracy** (ಐಸಾಕ್ರಸಿ) ಎಲ್ಲ ಜನರೂ ಸಮಾನ ರಾಜ್ಯಾಧಿಕಾರ ಪಡೆದಿರುವ ಸರ್ಕಾರ ಪದ್ಧತಿ : ಸಮಾನಾಧಿ ಕಾರ (ಪ್ರಭುತ್ವ). **-cratic** (ಐಸೊಕ್ರ್ಯಾಟಿಕ್). **-dynamic** ಸಮಾನ ಕಾಂತಶಕ್ತಿಯ. **-geotherm** (— ಜೀಯೊತರ್ಮ್) ಭೂಮಿಯೊಳಗಡೆ ಸಮಶಾಖದ ಸ್ಥಳಗಳನ್ನು ಸೇರಿಸಿ ಎಳೆದ (ಕಾಲ್ಪನಿಕ) ರೇಖೆ : ಭೂಮ್ಯಂತಸ್ಸಮ ಶಾಖ ರೇಖೆ. **-gonic** (— ಗಾನಿಕ್) ಕಾಂತದಿಗ್ಭ್ರಂಶ ಕೋನವು ಸಮಾನವಾಗಿರುವ ಸ್ಥಳಗಳನ್ನು ತೋರಿಸುವ : ಸಮಾನ ಕಾಂತ ದಿಗ್ಭ್ರಂಶ ಸೂಚಕ. **-meric** (ರ. ವಿ.) ಪದಾರ್ಥಗಳಲ್ಲಿ ಸೇರಿರುವ ಮೂಲ ಧಾತುಗಳೂ ಅವುಗಳ ಪ್ರಮಾಣಗಳೂ, ಸಾ., ಆ ಪದಾರ್ಥಗಳ ಅಣುಭಾರಗಳೂ ಒಂದೇ ಆಗಿದ್ದು, ಆ ಪದಾರ್ಥಗಳಲ್ಲಿಯ ಪರಮಾಣುಗಳ ವಿನ್ಯಾಸ ವ್ಯತ್ಯಯದಿಂದ ಬೇರೆ ಬೇರೆ ಭೌತ ಅಥವಾ ಭೌತ ಮತ್ತು ರಾಸಾ ಯನಿಕ ಗುಣಗಳುಂಟಾಗಿರುವ ಸ್ಥಿತಿಯ : ಸಮಾನ ಘಟಕ ವೈಪರೀತ್ಯದ ; ಸಮಾವಯವ [ಉದಾ., Butane ಮತ್ತು Isobutane ಎಂಬ ಎರಡು ಪದಾರ್ಥಗಳಿಗೂ C_4H_{10} ಎಂಬ ಒಂದೇ ಸೂತ್ರಸಂಕೇತ ವಿದ್ದರೂ ಅವುಗಳಲ್ಲಿಯ ಪರಮಾಣುವಿನ್ಯಾಸವು (Butane ಗೆ) $CH_3-CH_2-CH_2-CH_3$ ಎಂದೂ, (Isobutane ಗೆ) $CH_3-\underset{CH_3}{\underset{|}{C}}H-CH_3$ ಎಂದೂ ಇರುತ್ತದೆ]. **-metric(al)** ಒಂದೇ ಅಳತೆಯ ; ಸಮಾನ ಪರಿಮಾಣದ. **-morphism** ಒಂದೇ ಆಕೃತಿಯಲ್ಲಿ ಅಥವಾ ಸಮೀಪ ಸಂಬಂಧದ ಜ್ಯಾಮಿತೀಯ ಆಕೃತಿಗಳಲ್ಲಿ ಸ್ಫಟಿಕೀಕೃತವಾಗುವ ಧರ್ಮ : ಸಮಾನಾಕೃತಿತ್ವ. **-morphous** ಸಮಾನಾಕೃತಿಯ. **-nomy** (ಐಸಾನೊಮಿ) ರಾಜಕೀಯ ಹಕ್ಕು, ಮೊ. ಗಳ ಸರಿಸಮಾನತೆ. **-perimetrical** (ಐಸೊ —) ಸಮ ಪರಿಧಿಯುಳ್ಳ. **-seismal** (—ಸೈಸ್ಮಲ್) ಭೂಕಂಪದ ಆಘಾತವು ಒಂದೇ ಬಲವುಳ್ಳದ್ದಾಗಿರುವ ಸ್ಥಳಗಳನ್ನು ಸೇರಿಸುವ : ಸಮ ಭೂಕಂಪನದ. **-theral** ಐಸಾತೆರಲ್, — ತಿಯರಲ್ (ಗು., ನಾ.) ಬೇಸಗೆಯ ಸರಾಸರಿ ಶಾಖ ಒಂದೇ ಆಗಿರುವ ಸ್ಥಳಗಳನ್ನು ಸೇರಿಸುವ (ರೇಖೆ) : ಬೇಸಗೆಯ ಸಮಶಾಖ ರೇಖೆ. **-therm** (ಐಸೊ —) ವರ್ಷದ ಸರಾಸರಿ ಶಾಖ ಒಂದೇ ಆಗಿರುವ ಸ್ಥಳಗಳನ್ನು ಸೇರಿಸುವ ರೇಖೆ : (ವಾರ್ಷಿಕ) ಸಮ ಶಾಖ ರೇಖೆ. **-thermal** (ಗು., ನಾ.) ಸಮಶಾಖಗಳ, — ಗಳನ್ನು ತೋರಿಸುವ (ರೇಖೆ) ; = Isotherm.

Ísolate ಐಸೊಲೇಟ್ (ಕ್ರಿ. ಸಕ.) ಬೇರೆಯಾಗಿ, ಪ್ರತ್ಯೇಕವಾಗಿ, ಒಂಟಿಯಾಗಿ, —ಇಡು ; ಬೇರ್ಪಡಿಸು. (ರ. ವಿ.) (ವಸ್ತುವನ್ನು) ಅದರ ಸಂಯೋಜನಗಳಿಂದ ಪೃಥಕ್ಕರಿಸು. (ವಿದ್ಯುತ್) = Insulate. (ಸೋಂಕುರೋಗ ಇತರರಿಗೆ ಸಂಪರ್ಕವಾಗದಂತೆ ವ್ಯಕ್ತಿ, ಮೊ. ನ್ನು) ಪ್ರತ್ಯೇಕವಾಗಿ ಇಡು. **Isolátion** (ನಾ.) ; **Ísolator** (ನಾ.)

Ísopod ಐಸೊಪಾಡ್ (ನಾ.) ಎದೆಯ ಭಾಗದಲ್ಲಿ ಸಮ ರೀತಿಯಲ್ಲಿ ಅಳವಡಿಸಿದ ಏಳು ಜೊತೆಯ ಒಂದೇ ಉದ್ದದ ಕಾಲುಗಳುಳ್ಳ ಒಂದು ವಲ್ಕವಂತ ಪ್ರಾಣಿ : ಸಮಪಾದಿ.

Isósceles ಐಸಾಸಿ(ಸೆ)ಲೀಸ್ (ಗು.) (ತ್ರಿಕೋಣದ ವಿಷಯದಲ್ಲಿ) ಸಮ ದ್ವಿಬಾಹು(ಗಳುಳ್ಳ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ísotope ಐಸೊಟೋಪ್ (ನಾ.) ಒಂದೇರೀತಿಯ ರಾಸಾಯನಿಕ ಧರ್ಮಗಳಿದ್ದು ಭಿನ್ನ ಭಿನ್ನ ಪರಮಾಣುಭಾರಗಳುಳ್ಳ ಮೂಲಧಾತುಗಳಲ್ಲಿ (ಅಥವಾ ಪರಮಾಣುಗಳಲ್ಲಿ) ಯಾವುದಾದರೊಂದು: ಸಮಸ್ಥಾನಿ. **Isotópic** — ಟಾಪಿಕ್ (ಗು.); **Isótopy** ಐಸಾಟೊಪಿ (ನಾ.)

Ísrael ಇಸ್ರೈಎಲ್ (ನಾ.) ಯೆಹೂದ್ಯರು. (ರೂಪ.) ದೇವರು ಆರಿಸಿಕೊಂಡ ಜನರು; ದೇವ ಪ್ರಿಯರು. **Ísraelite** (ನಾ.) ಯೆಹೂದ್ಯ (ರವನು). **Ísraelitish** (ಗು.)

Íssue ಇಷ್ಯು(ಸ್ಯು) (ನಾ.) ಹೊರ ಹೊರಡುವುದು; ಹೊರ ಹರಿತ. (ವಿಷಯ, ಮೊ. ಗಳ) ಮುಕ್ತಾಯ; ಕೊನೆ. (ವೈ. ಶಾ.) (ರಕ್ತ, ಮೊ. ಗಳ) ಸುರಿತ; ಹರಿವು; ಹೀಗೆ ಹರಿಸಲು ಮಾಡಿದ ಕಚ್ಚು, ಗಾಯ. ಹೊರಕ್ಕೆ ಹೋಗುವ ದಾರಿ; ಹೊರ ದಾರಿ. ನದೀಮುಖ. ಸಂತಾನ; ಮಕ್ಕಳು (Without male i. ಗಂಡು ಸಂತಾನವಿಲ್ಲದೆ). ಫಲ; ಪರಿಣಾಮ. (In the i. ಆ ಸಂದರ್ಭದಲ್ಲಿ). (ಮು., ನ್ಯಾ. ಶಾ.) (ನಿರ್ಣಯಿಸಬೇಕಾದ) ವಿವಾದಾಂಶ (I. of fact ಸಂಗತಿಯನ್ನು ಕುರಿತ ವಿವಾದಾಂಶ. I. of law ಕಾನೂನನ್ನು ಕುರಿತ ವಿವಾದಾಂಶ). [At i. (ವ್ಯಕ್ತಿಗಳ ವಿಷಯದಲ್ಲಿ) ಭಿನ್ನಾಭಿಪ್ರಾಯವುಳ್ಳವರಾಗಿ; (ವಸ್ತುಗಳ ವಿಷಯದಲ್ಲಿ) ವಾದಗ್ರಸ್ತವಾಗಿ. Join i. (ವಿವಾದಾಂಶವೆಂದು ಒಪ್ಪಿದ ವಿಷಯದಮೇಲೆ, ಒಂದು ಪಕ್ಷ ವಹಿಸಿ ಒಬ್ಬನೊಡನೆ) ವಾದಕ್ಕೆ ಆರಂಭಿಸು (*With* person *on* point). (ನ್ಯಾ. ಶಾ.) (ಇಬ್ಬರೂ ಒಪ್ಪಿ) ವಿವಾದಾಂಶವನ್ನು ನ್ಯಾಯಸ್ಥಾನದ ತೀರ್ಪಿಗೆ ಒಪ್ಪಿಸು. (ಒಂದು ಪಕ್ಷದವನು) ಮತ್ತೊಂದು ಪಕ್ಷದವನು ಒಪ್ಪಿಸಿದ ವಾದಾಂಶವನ್ನು ಅಂಗೀಕರಿಸು]. (ಹುಂಡಿ, ಕಾಗದದ ಹಣ, ಸ್ಟಾಂಪುಗಳು, ಮೊ. ನ್ನು) ಹೊರಡಿಸುವುದು; ಒಮ್ಮೆ ಹೊರಡಿಸಿದ ನಾಣ್ಯಗಳು, ಕಾಗದದ ಹಣ, ವೃತ್ತಪತ್ರಿಕೆಯ ಪ್ರತಿಗಳು, ಮೊ. ಗಳ ಸಂಖ್ಯೆ. **Íssueless** (ಗು.) ವಾದಾಂಶವಿಲ್ಲದ. ಸಂತತಿಯಿಲ್ಲದ. ಫಲವಿಲ್ಲದ.

Íssue (ಕ್ರಿ.) ಹೊರ ಹೊರಡು; ಹೊರಕ್ಕೆ ಹೋಗು; ಹೊರಕ್ಕೆ ಬರು; ಹೊರ ಹರಿ (ಸಾ., *Out*, *forth* ಉಪ. ಸೊಡನೆ). (ಒಂದು ಸ್ಥಿತಿಯಿಂದ) ಹೊರ ಬರು; ನಿಷ್ಪನ್ನವಾಗು; ಉದಿಸು (*From* ಉಪ. ದೊಡನೆ). ಫಲಿಸು (*From* ಉಪ. ದೊಡನೆ); ಮುಗಿ; ಪರಿಣಾಮವಾಗು (*In* ಉಪ. ದೊಡನೆ). ಹೊರ ಬೀಳು; ಪ್ರಕಟವಾಗು; ಹೊರಕಳುಹು. (ಕಾಗದದ ಹಣ, ವೃತ್ತಪತ್ರಿಕೆಗಳು) ಚಲಾವಣೆ ಮಾಡು, ಪ್ರಚಾರ ಮಾಡು. (ಸೈನ್ಯ) (ಸೈನಿಕನಿಗೆ) ಸಜ್ಜು ಒದಗಿಸು, ಹವಣಿಸು, ಕೊಡು. **Íssuable** (ಗು.); **Íssuance** (ನಾ.) (ಕ್ರಿಯಾರ್ಥಗಳಲ್ಲಿ); = Issue (ನಾ.)

Ísthmus ಇಸ್ತ್(ಸ್ಟ್)ಮಸ್, ಇಸ್‌ಮಸ್ (ನಾ.; ಬ. ವ. -muses —ಮಸೆಸ್) ಭೂಕಂಠ; ಭೂಸಂಧಿ. (ಅಂ. ರ. ಶಾ., ಸ. ವಿ.) ಎರಡು ದೊಡ್ಡ ಭಾಗಗಳನ್ನು ಕೂಡಿಸುವ ಇಕ್ಕಟ್ಟುಭಾಗ; ಸಂಧಿ. **Ísthmian** (ಗು., ನಾ.) ಭೂಕಂಠದ (ನಿವಾಸಿ)

Ístle ಇಸ್ಟ್ಲಿ (ನಾ.) (ಹುರಿ, ಬಲೆ, ಮೊ. ಗಳಿಗೆ ಉಪಯೋಗಿಸುವ) ಕತ್ತಾಳೆ, ಮೊ. ಗಳ ನಾರು.

It ಇಟ್ (ಸ. ನಾ.; ಷಷ್ಠೀ ವಿಭಕ್ತಿ Its; ಬ. ವ. They, ದ್ವಿತೀಯಾ ವಿಭಕ್ತಿ Them, ಷಷ್ಠೀ ವಿಭಕ್ತಿ Their) ಪ್ರಸ್ತುತ ವಿಷಯ, ವ್ಯಕ್ತಿ; ಇದು; ಅದು [Who is it (that knocks)? ಅದು ಯಾರು (ಬಾಗಿಲು ತಟ್ಟುವವನು)? It is I (ಅದು) ನಾನು]. [It rains ಮಳೆ ಹೊಯ್ಯುತ್ತದೆ. It is Wednesday (ಅದು, ಇದು) ಬುಧವಾರ. It is 86 miles to Mysore ಮೈಸೂರಿಗೆ ಎಂಬತ್ತಾರು ಮೈಲಿ(ದೂರ) ಆಗುತ್ತದೆ. It says in the Bible ಬೈಬಲ್ಲಿನಲ್ಲಿ (— ಎಂದು) ಹೇಳುತ್ತದೆ. I would go if it were not for the expense ವೆಚ್ಚವಿಲ್ಲದಿದ್ದರೆ ನಾನು ಹೋಗುತ್ತಿದ್ದೆ. (ಮುಂದಿರುವ ಕರ್ತೃಪದದ ಸೂಚಕವಾಗಿ) It is absurd to talk like that ಹಾಗೆ ಮಾತಾಡುವುದು ಅವಿವೇಕ. It is seldom that he fails ಅವನು ಅಪಜಯ ಹೊಂದುವುದು ಅಪರೂಪ. It was a purse that he dropped ಅವನು ಕೆಡವಿದ್ದು ಹಣದ ಚೀಲ. Deuce take it ಹಾಳಾಗಿ ಹೋಗಲಿ. Lord it over him ಅವನಮೇಲೆ ಕಾರಬಾರು ನಡಸು. Give it him (hot) ಬಿಸಿ ಮುಟ್ಟಿಸು; ಚೆನ್ನಾಗಿ ಕೊಡು. Have done it ಅವಿವೇಕ ಮಾಡಿದೆ]. (ಅಸಂ.) ತುತ್ತತುದಿ; ಪರಾಕಾಷ್ಠ (For barefaced lying you really are it ಪಕ್ಕಾ ಸುಳ್ಳಿಗೆ ನೀನೇ ಗುರು). **Its** ಇಟ್ಸ್. It ಪದದ ಏ. ವ., ಷಷ್ಠಿಯ ರೂಪ. **Itsélf** (ಸ. ನಾ.) (It ಪದದ ನಿರ್ಧಾರಕ ಮತ್ತು ಸ್ವಾರ್ಥಕ ರೂಪ) ಅದೇ; ತಾನೇ (By i. ತನಗೆ ತಾನೇ; ಅದಷ್ಟನ್ನೇ ಗಣಿಸಿದರೆ. In i. ಸುತ್ತಲಿನ ಸಂಬಂಧ ಎಣಿಸದೆ; ವಸ್ತುತಃ)

Itálian ಇಟ್ಯಾಲಿಯನ್ (ಗು., ನಾ.) ಇಟಲಿಯ (ಭಾಷೆ, ದೇಶಿಗ). I. cloth ಉಡುಪಿನ ಅಸ್ತರಿಗೆ ಹಾಕುವ ಒಂದು ವಿಧವಾದ ಹೊಳಪು ಪಟ್ಟುಮುಖದ ಬಟ್ಟೆ. I. handwriting (Gothic ಗೆ ಭಿನ್ನವಾಗಿ) ಈಗ ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಮೊ. ದೇಶಗಳಲ್ಲಿ ಬಳಕೆಯಲ್ಲಿರುವ (ಕೈ) ಬರವಣಿಗೆ. I. iron ಅಲಂಕಾರಪಟ್ಟಿ, ಮೊ. ನ್ನು ನಿರಿಗೆಗಳಾಗಿ ಒತ್ತಲು ಉಪಯೋಗಿಸುವ ಗುಂಡುತುದಿಯ ಕಬ್ಬಿಣದ ಉರುಳೆ. I. warehouse(man) ಇಟಲಿಯ ಕಿರಾಣಿಸಾಮಾನು, ಹಣ್ಣು, ಮೊ. ನ್ನು ಮಾರುವ ದೊಡ್ಡ ಅಂಗಡಿ(ಯವನು). **Itálianism** (ನಾ.) ಇಟ್ಯಾಲಿಯನರ ಸಂಪ್ರದಾಯ, ಲಕ್ಷಣ, ವೈಶಿಷ್ಟ್ಯ (ಮು., ಇಟ್ಯಾಲಿಯನ್ ಭಾಷಾಮರ್ಯಾದೆ, ಪ್ರಯೋಗ). ಇಟಲಿಯ ಮೇಲಿನ ಪ್ರೇಮ, ವ್ಯಾಮೋಹ. **Itálianize** (ಕ್ರಿ.); **Itálic** (ಗು., ನಾ.) (ಮು., ರೋಮ್ ಪಟ್ಟಣ ಬಿಟ್ಟು) ಪುರಾತನ ಇಟಲಿಯ. [I. type (ಒಂದು ಬಗೆಯ) ಓರೆ ಮುದ್ರಾಕ್ಷರ]. (ನಾ.; ಬ. ವ. ದಲ್ಲಿ) (ಒತ್ತಿಹೇಳುವಿಕೆಯನ್ನು, ಅಥವಾ ಅನ್ಯಭಾಷಾ ಪದವೆಂಬುದು, ಮೊ. ನ್ನು, ತೋರಿಸಲು ಉಪಯೋಗಿಸುವ) ಓರೆ ಮುದ್ರಣಾಕ್ಷರಗಳು. **Itálicize** (ಕ್ರಿ. ಸಕ.) (ಪದಗಳನ್ನು) ಓರೆ ಅಕ್ಷರಗಳಲ್ಲಿ ಮುದ್ರಿಸು (ಮು., ಪ್ರಧಾನತೆ ಅಥವಾ ವಿಶೇಷತೆ ತೋರಿಸುವುದಕ್ಕಾಗಿ). **Itáliot** — ಯಾಟ್, **-ote** — ಯೋಟ್ (ಗು., ನಾ.) ದಕ್ಷಿಣ ಇಟಲಿಯಲ್ಲಿಯ ಗ್ರೀಕ್ ನೆಲಸುನಾಡುಗಳ (ನಿವಾಸಿ)

Itch ಇಚ್ (ನಾ., ಕ್ರಿ. ಅಕ.) ನವೆ; (ಚರ್ಮದಲ್ಲಿ ಕೊರೆದು ಸೇರಿಕೊಳ್ಳುವ) ಕಜ್ಜಿಯ ಅಣುಜೀವಿಯಿಂದಾದ, ನವೆಯಿಂದ ಕೂಡಿದ, ಒಂದು ಅಂಟುರೋಗ: ಕಜ್ಜಿ; ತುರಿ; ಕಡಿತ. ತೀಟೆ; ಹಂಬಲು (*For* thing, *to* do). (I.-mite ಕಜ್ಜಿಯ ಅಣುಜೀವಿ). (ಕ್ರಿ.) ನವೆಯಾಗು; ಕಡಿ (Scratch where it itches ನವೆಯಾದ ಕಡೆ ಕೆರೆ, ತುರಿಸು). (ಮನುಷ್ಯನ ಅಥವಾ ಅವನ ಬೆರಳುಗಳ ವಿಷಯದಲ್ಲಿ) ತುಡಿಯುತ್ತಿರು, ಆತುರಪಡುತ್ತಿರು (*For* thing, *to* do). **Ítchiness** (ನಾ.); **Ítchy** (ಗು.)

Ítem ಐಟೆಮ್ (ನಾ., ಕ್ರಿ. ವಿ.) (ಯಾವುದನ್ನಾದರೂ ಗಣನೆಮಾಡುತ್ತ ಹೋಗುವಲ್ಲಿ, ಸೇರುವ) ಅಂಶ, ವಿಷಯ, ವಸ್ತು, ಬಾಬು; ಲೆಕ್ಕ, ಮೊ. ಗಳಲ್ಲಿ ಇದರ ದಾಖಲೆ. (ವೃತ್ತಪತ್ರಿಕೆ, ಮೊ. ಗಳಲ್ಲಿ) ಸುದ್ದಿ, ಮೊ. ಗಳ ವಿವರ; (ದಸ್ತಾವೇಜು, ಮೊ. ಗಳಲ್ಲಿಯ) ಕಲಮು. (ಕ್ರಿ. ವಿ.) ಹಾಗೆಯೇ; ಸಹ; ಕೂಡ; ಮತ್ತು (ಒಂದೊಂದು ಬಾಬನ್ನು ಹೇಳಿಕೊಂಡು ಹೋಗುವಾಗ)

Íterate ಇಟೆರೇಟ್ (ಕ್ರಿ. ಸಕ.) (ಹೇಳಿದ ಮಾತು, ಮೊ. ನ್ನು) ತಿರುಗಿ ಹೇಳು; ಮರಳಿ ಹೇಳು; (ಆಪಾದನೆ, ದೃಢ ವಚನ, ಆಕ್ಷೇಪಣೆ, ಮೊ. ನ್ನು) ಮೇಲಿಂದಮೇಲೆ ಹೇಳು. **Íterance, -ancy** (ನಾ.); **Iterátion** (ನಾ.); **Íterative** — ರೆ(ರ) — (ಗು.)

Ithúriel's spear ಇತ್ಯೂರಿಯೆಲ್ಸ್ ಸ್ಪಿಯರ್ (ನಾ.) ಯಥಾರ್ಥತೆಯ ಪರಮ ಪ್ರಮಾಣ; ನಿರ್ಧಾರಕ ಪರೀಕ್ಷೆ; ಒರೆಗಲ್ಲು. (ಕ್ರೈಸ್ತ ಪುರಾಣದಲ್ಲಿಯ ಒಬ್ಬ ದೇವದೂತನ ಹೆಸರಿನಿಂದ)

Ithyphállic ಇತಿಫ್ಯಾಲಿಕ್ (ಗು., ನಾ.) ಬ್ಯಾಕಸ್ ದೇವತೆಯ ಉತ್ಸವಗಳಲ್ಲಿ ಹಿಡಿದುಕೊಂಡು ಹೋಗುವ ಲಿಂಗದ. ಬ್ಯಾಕಸ್ ಗೀತ ಛಂದಸ್ಸಿನ. (ನಾ.) ಈ ಛಂದಸ್ಸಿನ ಕವನ; ಅಶ್ಲೀಲ ಕವನ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Itínerant ಐ(ಇ)ಟಿನೆರಂಟ್ (ಗು.) ಎಡೆಯಿಂದ ಎಡೆಗೆ ಪ್ರಯಾಣ ಮಾಡುವ, ಸಂಚರಿಸುವ; ಸಂಚಾರೀ. (ನ್ಯಾಯಾಧಿಪತಿಗಳು, ವಿಚಾರಣೆಗಾಗಿ) ಸುತ್ತುತ್ತಿರುವ; (ವೆಸ್ಲಿಯನ್ ಪಾದ್ರಿಗಳು, ಬೋಧೆ ಮಾಡುವುದಕ್ಕಾಗಿ) ಸಂಚರಿಸುತ್ತಿರುವ. **Itíneracy, Itínerancy** (ನಾ.); **Itínerary** — ರರಿ (ನಾ., ಗು.) (ಪ್ರಯಾಣ) ಮಾರ್ಗ; ಪ್ರಯಾಣದ, ಸಂಚಾರದ (ವಿವರಗಳನ್ನೊಳಕೊಂಡ) ಬರೆದಿಟ್ಟ ದಾಖಲೆ: ಪ್ರಯಾಣಿಕರ ಕೈಪಿಡಿ. (ಗು.) ಸಂಚಾರದ; ಪ್ರಯಾಣದ; ರಸ್ತೆಗಳ; ಮಾರ್ಗಗಳ. **Itínerate** —ರೇಟ್ (ಕ್ರಿ. ಅಕ.) ಸ್ಥಳದಿಂದ ಸ್ಥಳಕ್ಕೆ ಸಂಚಾರ ಮಾಡು, ತಿರುಗು. (ವೆಸ್ಲಿಯನ್ ಕ್ರೈಸ್ತ ಪಂಗಡ) ಗೊತ್ತಾದ ಪ್ರಾಂತದಲ್ಲಿ ಸುತ್ತುತ್ತ ಉಪದೇಶ ಮಾಡು. **Itinerátion** (ನಾ.)

Ívory ಐವೊರಿ (ನಾ.) ಆನೆ, ನೀರಾನೆ, ಮೊ. ಗಳ ಕೋರೆಹಲ್ಲುಗಳ ಹೆಚ್ಚುಭಾಗವಾಗಿರುವ ಗಟ್ಟಿಯಾದ ಬಿಳಿಯ ಪದಾರ್ಥ: ದಂತ [Fossil i. ('ಮ್ಯಾಮತ್' ಎಂಬ ವಂಶನಷ್ಟ ಗಜದ) ಅವಶಿಷ್ಟ ದಂತ; ಪಳೆಯುಳಿಕೆಯ ದಂತ. Vegetable i. (ಬಣ್ಣದಲ್ಲಿಯೂ ಗಟ್ಟಿಯಲ್ಲಿಯೂ ರಚನೆಯಲ್ಲಿಯೂ ದಂತದಂತಿರುವ) ದ. ಅಮೆರಿಕದ ಒಂದು ಜಾತಿ ತಾಳೆಯ ಬೀಜದ ಸಸಾರಜನಕ ಪದಾರ್ಥ: ಮರದಂತ (ಗುಂಡಿ, ಮೊ. ನ್ನು ಮಾಡುವುದಕ್ಕೆ ಉಪಯೋಗಿಸುತ್ತಾರೆ). I.-nut ಮರದಂತ ಕೊಡುವ ಈ ತಾಳೆಯ ಬೀಜ. Black i. ಆಫ್ರಿಕದ ನೀಗ್ರೊ ಗುಲಾಮರು]. ದಂತದ ಬಣ್ಣ. (ಅಸಂ., ಬ. ವ. ದಲ್ಲಿ) ದಾಳಗಳು, ಬಿಲಿಯರ್ಡ್ಸ್ ಆಟದ ಚೆಂಡುಗಳು, ಪಿಯಾನೋ ವಾದ್ಯದ ಕೀಲಿಕೈಗಳು, ಮೊ. ವು. (ಅಸಂ., ಏ. ವ. ಅಥವಾ ಬ. ವ.) ಹಲ್ಲು(ಗಳು). I. black ಸುಟ್ಟ ದಂತದಿಂದ ತಯಾರಿಸಿದ ಒಂದು ಕಪ್ಪುಬಣ್ಣ: ದಂತದ ಕಪ್ಪು.

Ívy ಐವಿ (ನಾ.) ಸಾ., ಐದು ಮೂಲೆಗಳುಳ್ಳ ಕಪ್ಪುಹಸುರಿನ ಹೊಳೆಯುವ ಎಲೆಗಳಿಂದ ಕೂಡಿದ, ನಿತ್ಯಹಸುರಿನ ಒಂದು ಹಬ್ಬುಬಳ್ಳಿ (I. geranium 'ಐವಿ' ತೆರದ ಎಲೆಗಳುಳ್ಳ 'ಜೆರೇನಿಯಂ' ಎಂಬ ಸಸ್ಯ). **Ívied** (ಗು.) ಐವಿ ಬಳ್ಳಿ ಬೆಳೆದ, ಆವರಿಸಿದ.

Ízzard ಇಸರ್ಡ್ (ನಾ.) (ಪ್ರಾಚೀ. ಪ್ರ.) Z ಎಂಬ ಅಕ್ಷರ [From A to I. (ಆದ್ಯಂತವಾಗಿ) ಎಂಬಲ್ಲಿ ಮಾತ್ರ ಪ್ರ.]

Ízzat ಇಸಟ್ (ನಾ.) (ಆಂ. ಇಂ. ಮತ್ತು ಪೌರಸ್ತ್ಯ) ಘನತೆ; ಯಶಸ್ಸು; ಆತ್ಮ ಗೌರವ; (ಕೆಲವು ವೇಳೆ) ಸ್ವಪ್ರತಿಷ್ಠೆ: ಇಸ್ಸತ್.

J

J ಜೇ. ಇಂಗ್ಲಿಷ್ ವರ್ಣಮಾಲೆಯ ಹತ್ತನೆಯ ಅಕ್ಷರ. **J** (pen), J ಅಕ್ಷರ ಒತ್ತಿರುವ ಅಗಲವೊನೆಯ ಲೇಖನಿಮುಳ್ಳು.

ಸಂಕ್ಷಿಪ್ತಗಳು: **J.** (Judge, Justice) ನ್ಯಾಯಾಧೀಶ. **J. P.** (Justice of Peace) ಶಾಂತಿಪಾಲಕ ನ್ಯಾಯಾಧೀಶ. **Jan.**(uary); **Jas.** (James); **Jer.**(emiah); **Jno.** (John); **Josh.**(ua); **Jud.**(ith); **Judg.**(es: ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿಯ 'ನ್ಯಾಯಾಧೀಶರು' ಎಂಬ ಪುಸ್ತಕ). **Jun.**(ior)

Jab ಜ್ಯಾಬ್ (ಕ್ರಿ. ಸಕ., ನಾ.) ಒರಟೊರಟಾಗಿ ತಿವಿ, ಚುಚ್ಚು; ಇರಿ (*Into* ಉಪ. ದೊಡನೆ). (ನಾ.) (ಮೊನೆಯ ವಸ್ತುವಿನಿಂದಾಗಲಿ ಮುಷ್ಟಿಯಿಂದಾಗಲಿ) ತಿವಿತ, ಇರಿತ; (ಸ್ಯೈನ್ಯ: ಮೊದಲ ತಿವಿತದ ಸಣ್ನನ್ನು ಪೂರ್ತಿ ಸಳೆದುಕೊಳ್ಳದೆ ಮತ್ತೆ ತಿವಿದ) ಸಣ್ಣ ತಿವಿತ.

Jábber ಜ್ಯಾಬರ್ (ಕ್ರಿ., ನಾ.) ಅರ್ಥವಿಲ್ಲದೆ ಬಡ ಬಡನೆ ಮಾತಾಡು; ವೇಗ ವೇಗ ಅಸ್ಪಷ್ಟವಾಗಿ (ಮಾತನ್ನು) ಉಚ್ಚರಿಸು; ಗೊಜಗುಟ್ಟು. (ಕೋತಿ, ಮೊ. ಗಳಂತೆ) ಕಿಚಕಿಚಗುಟ್ಟು. (ನಾ.) ಬಡ ಬಡನೆ ಆಡುವ ಮಾತು; ರೊಟಗುಟ್ಟುವುದು; ಅರ್ಥವಾಗದ ಭಾಷೆ.

Jácinth ಜ್ಯಾ(ಜೇ)ಸಿಂತ್ (ನಾ.) ಕೆಂಗಿತ್ತಳೆಯ ಬಣ್ಣದ ಒಂದು ಬಗೆಯ ರತ್ನ ('ಜರ್ಕಾನ್' ಎಂಬ ರತ್ನದ ಪ್ರಭೇದ)

Jack[1] ಜ್ಯಾಕ್ (ನಾ.) John ಎಂಬ ಹೆಸರಿನ ಬಳಕೆಯ ರೂಪ [ಮು., ಜನಸಾಮಾನ್ಯದವನನ್ನು ಹೇಳುವಲ್ಲಿ: ಉದಾ., J. & Gill (Gill[4] ನೋಡಿ). (Every man j. ಪ್ರತಿಯೊಬ್ಬನೂ; ಪ್ರತಿ ವ್ಯಕ್ತಿಯೂ). = J. tar. ಕೂಲಿಯಾಳು; ಚಿಲ್ಲರೆ ಕೆಲಸಗಾರ, ಮೊ.; [Cheap J. (Cheap ನೋಡಿ). Steeple-j. (Steeple ನೋಡಿ)]. (ಇಸ್ಪೀಟಾಟ) ಗುಲಾಮ; ಜಾಕಿ. ಮಾಂಸ ಸುಡುವ ಸಲಾಕಿಯನ್ನು ತಿರುಗಿಸುವ ಸಲಕರಣೆ. ಭಾರಗಳನ್ನು ಎತ್ತುವ ಯಂತ್ರ: ಎತ್ತಿಗೆ; (ಬಂಡಿಯ ಚಕ್ರ)ವನ್ನು ಚೊಕ್ಕಟಮಾಡುವುದಕ್ಕಾಗಿ ಅಚ್ಚನ್ನು ಮೇಲೆತ್ತಿ ಹಿಡಿಯುವ ಸಲಕರಣೆ: ಊರೆಯೆತ್ತಿಗೆ (= Carriage-j.). [Boot-j. (Boot ನೋಡಿ)]. ಹಲವು ಬಗೆಯ ಯಂತ್ರಗಳು, ಮೊ. ಗಳ ಭಾಗಗಳ ಹೆಸರು. (ಮು., ಎಳೆಯ ಅಥವಾ ಸಣ್ಣ) 'ಪೈಕ್' ಎಂಬ ಸಿಹಿನೀರು ಮೀನು. [J. Frost (Frost ನೋಡಿ)]. Before you could say J. Robinson ಬಲು ಬೇಗನೆ; ಥಟ್ಟನೆ. **J.-a-dandy** ಸೊಗಸುಗಾರ (ಪುಟ್ಟಸಾಮಿ). **Jáckanapes** ಜ್ಯಾಕನೇಪ್ಸ್ (ನಾ.) (ಪ್ರಾಚೀ. ಪ್ರ.) ಪಳಗಿದ ಕೋತಿ. ಜಂಬದ ಕೋಳಿ; ಅವಿನೀತ; ಧೃಷ್ಟ; ತುಂಟ ಮಗು. **Jackass** (ಗಂಡು) ಕತ್ತೆ. ದಡ್ಡ; ಮುಟ್ಠಾಳ. Laughing Jackass ಆಸ್ಟ್ರೇಲಿಯದ ಒಂದು ದೊಡ್ಡ ಜಾಲಗಾರ ಹಕ್ಕಿ. **J.-boot** ಮೊಣಕಾಲ ಮೇಲಿನ ವರೆಗೂ ಬರುವ ದೊಡ್ಡ ಮೋಜ. **Jackdaw** ಒಂದು ಜಾತಿಯ ಸಣ್ಣ ಕಳ್ಳ ಕಾಗೆ; ಡೊಂಬ ಕಾಗೆ. Jack in office ಪ್ರತಿಷ್ಠೆಯ ಕೆಳ ಅಧಿಕಾರಿ. **Jack-in-the-box** ಪೆಟ್ಟಿಗೆ ತೆರೆದೊಡನೆಯೇ ಚಂಗನೆ ಹಾರುವ ಒಂದು ತೆರದ ಆಟದ ಬೊಂಬೆ; ಒಂದು ಬಗೆಯ ಬಾಣಬಿರುಸು. **J. Johnson** (ಸೈನಿಕ ಅಸಂ.) ಜರ್ಮನರ ಭಾರಿ ಫಿರಂಗಿಯ ಸಿಡಿಗುಂಡು. **J. Ketch** ಗಲ್ಲಿಗೇರಿಸುವ ಚಾಕರ. **J.-Knife** ಜೇಬಿನಲ್ಲಿಟ್ಟುಕೊಳ್ಳುವುದಕ್ಕೆ ಅನುಕೂಲವಾದ ದೊಡ್ಡ ಮಡಿಚುಚಾಕು. J. of all trades ಯಾವ ಕೆಲಸಕ್ಕಾದರೂ ಕೈಹಾಕಬಲ್ಲವನು; ಎಲ್ಲ ಕಸಬುಗಾರ. **J.-o'-lantern** ಕೊಳ್ಳಿ ದೆವ್ವ. (ರೂಪ.) ಮೋಸಕ್ಕೆಳೆಯುವದು; ಹಿಡಿತಕ್ಕೆ ಸಿಕ್ಕದ್ದು. **J.-plane** (ಒರಟು ಕೆಲಸಕ್ಕೆ ಉಪಯೋಗಿಸುವ) ಕಚ್ಚಾ ತೋಪಡ. **J. pudding** ನಕಲಿ; ಕೋಡಂಗಿ. **J.-snipe** ಒಂದು ಬಗೆಯ ಸಣ್ಣ ಬೇಟೆಹಕ್ಕಿ. **J. tar** ಸಾಮಾನ್ಯ ನಾವಿಕ; ಕಲಾಸಿ. **J.-towel** ಉರುಳೆಯಿಂದ ಇಳಿಬಿಟ್ಟ, ಕೊನೆಯಿಲ್ಲದ ಒರಟು ಚೌಕ.

Jack (ಕ್ರಿ. ಸಕ.) ಎತ್ತಿಗೆಯಿಂದ ಮೇಲೆತ್ತು. J. up (ಪ್ರಯತ್ನ, ಮೊ. ನ್ನು) ತೊರೆದುಬಿಡು.

Jack[2] ಜ್ಯಾಕ್ (ನಾ.) (ಮು., ಜನಾಂಗ ಸೂಚಕವಾಗಿ, ಹಡಗಿನ ಮೂತಿಯ ಭಾಗದಲ್ಲಿ ಹಾರಿಸುವ) ಹಡಗಿನ ಸಣ್ಣ ಬಾವುಟ (ಉದಾ., British, French, j.). ಹಡಗುನಡಸುವವನ ಸೂಚನೆಗಾಗಿ ಮುಂಗೊವೆಯಲ್ಲಿ ಹಾರಬಿಟ್ಟಿರುವ ಒಂದೇ ಬಾವುಟ. Union J. (Union ನೋಡಿ)

Jack[3] ಜ್ಯಾಕ್ (ನಾ.) (ಪ್ರಾಚೀ. ಪ್ರ.) ಪದಾತಿಯ, ತೋಳಿಲ್ಲದ ಚಿಕ್ಕ ಅಂಗಿ. (ಸಾ., ಮೇಣಬಳಿದ ಚರ್ಮದಿಂದ ಮಾಡಿ, ಟಾರೆಣ್ಣೆ, ಮೊ. ನ್ನು ಹಚ್ಚಿರುವ) ಸಾರಾಯಿ ಬುದ್ದಲಿ (= Black j.)

Jack[4] ಜ್ಯಾಕ್ (ನಾ.) ಹಲಸಿನ ಹಣ್ಣು.

Jáckal ಜ್ಯಾಕಾಲ್ (ನಾ., ಕ್ರಿ. ಅಕ.) ನರಿಯ ಗಾತ್ರದ, ನಾಯಿ ಜಾತಿಯ ಒಂದು ಪ್ರಾಣಿ. (ರೂಪ.) (ಒಂದು ಕೆಲಸದಲ್ಲಿ ತನಗಿಂತ ಮೇಲ್ಪಟ್ಟವನಿಗಾಗಿ) ಮೊದಲುಮಾಡಬೇಕಾದ ಕಚ್ಚಾಚಾಕರಿ ಮಾಡುವವನು. (ಕ್ರಿ.) ಕಚ್ಚಾಚಾಕರಿ ಮಾಡು (*For* ಉಪ. ದೊಡನೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Jáckanapes. **Jack**[1] ನೋಡಿ.

Jácket ಜ್ಯಾಕೆಟ್ (ನಾ., ಕ್ರಿ. ಸಕ.) ಗಂಡಸಿನ ಅಥವಾ ಹೆಂಗಸಿನ, ತೋಳುಳ್ಳ ನಡುವಂಗಿ [Dust his j. ಅವನನ್ನು ಹೊಡೆ, ಬಡಿ]. (ರಕ್ಷಣೆ, ಶಾಖತಡೆ, ಮೊ. ಕ್ಕಾಗಿ) ಕುದಿಪಾತ್ರೆಯ ಸುತ್ತಲೂ ಹಾಕುವ ಆವರಣ. ಮಾರಾಟಕ್ಕಾಗಿ ಪ್ರದರ್ಶಿಸುವ ಪುಸ್ತಕದ ಮೇಲ್ಗಡೆಯ ಸಡಿಲವಾದ ಮರೆಹಾಳೆ; ಕವಚ; ಪ್ರಾಣಿಯ (ಸ್ವಾಭಾವಿಕ) ಹೊದಿಕೆ; (Potatoes boiled in their jackets ಸಿಪ್ಪೆ ಸುಲಿಯದೆ ಬೇಯಿಸಿದ ಆಲೂಗಡ್ಡೆಗಳು). (ಕ್ರಿ.) ನಡುವಂಗಿ ತೊಡಿಸು; ಹೊರ ಆವರಣ ಹಾಕು.

Jácob ಜೇಕಬ್ (ನಾ.) J.'s ladder (ಬೈಬಲ್ಲು) ಜೇಕಬ್ಬನು ಕನಸಿನಲ್ಲಿ ಕಂಡ ದೇವಲೋಕದ ಏಣಿ. ಒಂದು ಬಗೆಯ ಸಸ್ಯ. (ನಾವೆ) ಮರದ ಮೆಟ್ಟಲುಗಳುಳ್ಳ ನೂಲೇಣಿ. J.'s staff ಮೋಜಣಿದಾರರು ಮೂಗಾಲಿನ ಆನರೆಯಂತೆ ಉಪಯೋಗಿಸುವ, ತುದಿಯಲ್ಲಿ ಮೊನಚಾದ ಅಣಚುಳ್ಳ, ದಂಡ; ದೂರವನ್ನೂ ಎತ್ತರವನ್ನೂ ಅಳೆಯುವ ಒಂದು ಸಲಕರಣೆ.

Jacobéan ಜ್ಯಾಕೊಬೀಯನ್ (ಗು.) (ಇಂಗ್ಲೆಂಡಿನ) ಮೊದಲನೆಯ ಜೇಮ್ಸ್‌ದೊರೆಯ ಆಳಿಕೆಯ, ಕಾಲದ.

Jácobin[1] ಜ್ಯಾಕೊಬಿನ್ (ನಾ.) ಡೊಮಿನಿಕನ್ ಕ್ರೈಸ್ತ ಸಂನ್ಯಾಸಿ. ತೀವ್ರ ಪ್ರಜಾಪ್ರಭುತ್ವ ವಾದಿಗಳ (ರಾಜಕೀಯ) ಸಮಾಜದ ಸದಸ್ಯ; ಈ ಸಮಾಜದ ತತ್ತ್ವಗಳಿಗೆ ಸಹಾನುಭೂತಿಯುಳ್ಳವನು; ತೀವ್ರ ಉಗ್ರ ಪಕ್ಷದವನು. **Jacobínic(al)** (ಗು.); **Jácobinism** (ನಾ.); **Jácobinize** (ಕ್ರಿ. ಸಕ.)

Jácobin[2] ಜ್ಯಾಕೊಬಿನ್ (ನಾ.) ಕುತ್ತಿಗೆಯಮೇಲೆ ಗರಿಗಳು ಹಿಂದು ಮುಂದಾಗಿದ್ದು ಕ್ರೈಸ್ತ ಸಂನ್ಯಾಸಿಯ ಟೊಪ್ಪಿಗೆಯಂತೆ ಅಳವಟ್ಟು ಇರುವ ಒಂದು ಪಾರಿವಾಳದ ಜಾತಿ.

Jácobite ಜ್ಯಾಕೊಬೈಟ್ (ನಾ.) (ಇಂಗ್ಲೆಂಡಿನಲ್ಲಿ) ರಾಜ್ಯತ್ಯಾಗ ಮಾಡಿದ ಎರಡನೆಯ ಜೇಮ್ಸಿನ, ಅಥವಾ ರಾಜ್ಯಕ್ಕೆ ಹಕ್ಕುಹೂಡಿದ ಅವನ ಮಗನ, ಪಕ್ಷೀಯ, ಅನುಯಾಯಿ. **Jacobítical** —ಬಿಟಿ— (ಗು.); **Jácobitism** — ಬೈಟಿಸ್ಮ್ (ನಾ.)

Jacóbus ಜಕೋಬಸ್ (ನಾ.) ಇಂಗ್ಲೆಂಡಿನ ದೊರೆಯಾಗಿದ್ದ ಮೊದಲನೆಯ ಜೇಮ್ಸಿನ ಆಳಿಕೆಯಲ್ಲಿ ಥಾಪಿಸಿದ, ೨೦-೨೪ ಷಿಲಿಂಗ್ ಬೆಲೆಯ, ಒಂದು ಚಿನ್ನದ ನಾಣ್ಯ.

Jáconet ಜ್ಯಾಕೊನೆಟ್ (ನಾ.) [ಕುರುಹಿಟ್ಟು (ಪೋಲ್ಟಿಸ್) ಕಟ್ಟುವುದು, ಮೊ. ಕ್ಕೆ ಉಪಯೋಗಿಸುವ] ನೀರಿಳಿಯದಂತೆ ಮಾಡಿದ, ನಸು ದಪ್ಪದ, ಬಣ್ಣಕಟ್ಟಿದ, ಹತ್ತಿಯ ಬಟ್ಟೆ.

Jácquard loom ಜಕಾರ್ಡ್(ಜ್ಯಾಕರ್ಡ್) ಲೂಮ್ (ನಾ.) ಫ್ರಾನ್ಸಿನ ಲೈಅನ್ಸ್ ಪಟ್ಟಣದ Jacquard ಎಂಬಾತನು ಬಟ್ಟೆಗಳಲ್ಲಿ ಚಿತ್ರ ನೆಯ್ಗೆಯನ್ನು ನೆಯ್ಯುವುದಕ್ಕಾಗಿ ರಚಿಸಿದ ಸಲಕರಣೆಯನ್ನುಳವಡಿಸಿದ ಮಗ್ಗ: ಚಿತ್ರನೆಯ್ಗೆಯ ಮಗ್ಗ; ಜಕಾರ್ಡ್ ಮಗ್ಗ.

Jacquerié ಝ್ಯಾಕ್‌ಕೆರೀ, ಝಾಕ್‌ರೀ (ನಾ.) ರೈತಾಪಿ ಜನರ ದಂಗೆ (ಮು., ೧೩೫೭-೮ರಲ್ಲಿ ಫ್ರಾನ್ಸಿನಲ್ಲಿ ನಡೆದದ್ದು)

Jactitátion ಜ್ಯಾಕ್ಟಿಟೇಷನ್ (ನಾ.) [(ನ್ಯಾ. ಶಾ.) J. of marriage ಒಬ್ಬನ ಹೆಂಡತಿ, ಅಥವಾ ಒಬ್ಬಳ ಗಂಡ, ಎಂದು ಸುಳ್ಳುಹಕ್ಕು ಹೂಡುವ ಅಪರಾಧ]. (ವೈ. ಶಾ.) ಕಾಯಿಲೆಯಲ್ಲಿ, ಸ್ತಿಮಿತವಿಲ್ಲದ ಹೊರಳಾಟ. (ಕೈಕಾಲಿನ ಅಥವಾ ಸ್ನಾಯುವಿನ) ಸೆಳೆತ.

Jade[1] ಜೇಡ್ (ನಾ., ಕ್ರಿ. ಸಕ.) ಕೀಳು ಜಾತಿಯ, ಸುಸ್ತುಬಿದ್ದ, ಜೀರ್ಣವಾಗಿಹೋದ, —ಕುದುರೆ; ನೀಚ ಕುದುರೆ. (ನಿಂದನೆ ಮಾಡು ವಲ್ಲಿ, ಸಾ., ತಮಾಷೆಯಾಗಿ) ಹೆಂಗಸು. (ಕ್ರಿ.) ಕಷ್ಟಕೆಲಸ ಮಾಡಿಸಿ ಸುಸ್ತುಬೀಳಿಸು, ನಿತ್ರಾಣ ಮಾಡು, ಬಳಲಿಸು (ಸಾ., ಭೂ. ಕೃ. ನಲ್ಲಿ)

Jade[2] ಜೇಡ್ (ನಾ.) ಹಸುರು, ನೀಲ ಅಥವಾ ಬಿಳಿಯ, ಗಡುಸಾದ, (ಪ್ರಶಸ್ತ) ಶಿಲೆ: 'ಜೇಡ್' ಶಿಲೆ (Hornblende ನ ಪ್ರಭೇದ) ನೋಡುವುದಕ್ಕೆ ಇದರಂತೆಯೇ ಇರುವ, ಸೋಡಿಯಂ ಮತ್ತು ಅಲ್ಯೂಮಿನಿಯಮ್ಮುಗಳ ಸಿಲಿಕೇಟು [= **Jád(e)ite**]

Jaéger ಯೇಗರ್ (ನಾ.) (ನಾರು ಸೇರಿಸಿರದ) ಹಲವು ಬಗೆಯ ಅಪ್ಪಟ ಉಣ್ಣೆಯ ಬಟ್ಟೆ. (ಮೊದಲು ತಯಾರಿಸಿದವನ ಹೆಸರಿನಿಂದ)

Jag ಜ್ಯಾಗ್ (ನಾ., ಕ್ರಿ. ಸಕ.) ಮೊನಚಾದ ಚಾಚು (ಮು., ಬಂಡೆಯ ಮೊನೆ). (ಕ್ರಿ.) ಕೋಡು ಕೋಡಾಗಿ ಹರಿ, ಕತ್ತರಿಸು; (ಏಣಿನಲ್ಲಿ, ಮೇಲ್ಮೈಯಲ್ಲಿ) ಏರು ತಗ್ಗು ಮಾಡು; ಕಚ್ಚು ಕಚ್ಚು ಮಾಡು; ಕ್ರಕಚ ಮಾಡು. **Jágger** (ನಾ.); **Jággedly** (ಕ್ರಿ. ವಿ.); **Jággedness** (ನಾ.); **Jággy** (ಗು.)

Jáger ಯೇಗರ್ (ನಾ.) = Yager.

Jággery ಜ್ಯಾಗರಿ (ನಾ.) ಬೆಲ್ಲ.

Jaghír(e) ಜಾಗಿಯರ್ (ನಾ.) (ಇಂಡಿಯಾದಲ್ಲಿ) ಒಂದು ಜಿಲ್ಲೆಯ, ಪ್ರಾಂತದ, ಆಡಳಿತವನ್ನೂ ವರಮಾನವನ್ನೂ ಒಬ್ಬ ಮನುಷ್ಯನಿಗೆ ಅಥವಾ ಒಂದು ಸಂಸ್ಥೆಗೆ ಸರ್ಕಾರದವರು ವರ್ಗಾಯಿಸಿ ಕೊಡುವುದು: ಜಹಗೀರು ಕೊಡುವುದು. (ಹಾಗೆ ಕೊಟ್ಟ) ಜಹಗೀರು (ಪ್ರಾಂತ). **Jaghírdar** (ನಾ.) ಜಹಗೀರುದಾರ.

Jáguar ಜ್ಯಾಗ್ವಾರ್, —ಗ್ಯುಅರ್ (ನಾ.) ಅಮೆರಿಕದ ಕೆಲವು ಮರಗಾಡುಗಳಲ್ಲಿರುವ, ಮಚ್ಚೆಮಚ್ಚೆಯ ಮೈಯ, ಮಾಂಸಾಹಾರಿಯಾದ, ಬೆಕ್ಕಿನ ಜಾತಿಯ, ಒಂದು ದೊಡ್ಡ ಚತುಷ್ಪಾದಿ; ಒಂದು ಜಾತಿಯ ಚಿರತೆ.

Jah ಜಾ (ನಾ.) = Jehovah.

Jail = Gaol.

Jain ಜೆಯ್‌ನ್ (ನಾ., ಗು.) ಜೈನ. **Jaínism** (ನಾ.) ಜೈನ ಮತ, ಧರ್ಮ.

Jálap ಜ್ಯಾ(ಜಾ)ಲಪ್ (ನಾ.) (ಮು., ಮೆಕ್ಸಿಕೊ ದೇಶದ ಒಂದು ಬಳ್ಳಿಯ ಗಡ್ಡೆ ಬೇರಿನಿಂದ ತಯಾರಿಸಿದ) (ಒಂದು) ಭೇದಿಯೌಷಧ: 'ಜಾಲಪ್'. Indian j. ತಿಗಡೆ ಬಳ್ಳಿ; ಬಳಿಯ ನಾಗದಂತಿ.

Jálousie (F) ಝಾಲುಸಿ, ಝ್ಯಾಲೂಸೀ (ನಾ.) ಬಿಸಿಲು ಮಳೆಗಳಿಗೆ ತಡೆಯಾಗಿದ್ದು, ಗಾಳಿಯನ್ನೂ ಸ್ವಲ್ಪ ಬೆಳಕನ್ನೂ ಮಾತ್ರ ಒಳಗೆ ಬಿಡಲಾಗುವಂತೆ, ಒಂದರ ಏಣಿನಮೇಲೊಂದನ್ನು ಕೂರಿಸಿದ ಅಡ್ಡಪಟ್ಟಿಗಳಿಂದ ಮಾಡಿದ ತೆರೆ, (ಕಿಟಕಿ, ಮೊ. ಗಳ) ಕದ: ಅಡ್ಡಪಟ್ಟಿಗಳ ತೆರೆ, ಕದ.

Jam[1] ಜ್ಯಾಮ್ (ಕ್ರಿ., ನಾ.) (ಎರಡು ತಲಗಳ ಮಧ್ಯೆ, ವಸ್ತುವನ್ನು) ಅಮುಕು, ಇರುಕು; (ಯಂತ್ರಭಾಗ) ಕೆಲಸ ಮಾಡಲಾಗದಂತೆ ಇರುಕಿಸು, ಇರುಕಿಸಿಕೊ. (ವಸ್ತುಗಳು ಒಟ್ಟಿಗೆ ಸೇರಿಕೊಳ್ಳುವಂತೆ) ಅದುಮು; (ಒಂದು ವಸ್ತುವನ್ನು ಒಂದು ಅವಕಾಶದೊಳಕ್ಕೆ) ಬಲವಾಗಿ ನೂಕು, ಜಡಿ (*Into* ಉಪ. ಮೊದನೆ); (ಮಾರ್ಗ, ಮೊ. ನ್ನು) ಕಿಕ್ಕಿರಿದು ತುಂಬಿ, ಅಡಚು, ಬಂದುಮಾಡು; ಬೆಣೆ ಹಾಕಿದಂತೆ ಬಿಗಿಯಾಗಿ ಸಿಕ್ಕಿಕೊ, ಅಡಚಿಕೊ. (ನಿಸ್ತಂತು ವಾರ್ತೆ) ಇತರ ಕಡೆಯಿಂದ ವಾರ್ತಾ ತರಂಗಗಳನ್ನು ಕಳುಹಿಸಿ ಪ್ರಕೃತ ವಾರ್ತಾ ತರಂಗಗಳನ್ನು ಅಥವಾ ಧ್ವನ್ಯಾಕರ್ಷಕ ಯಂತ್ರವನ್ನು ಗಜಿಬಿಜಿ ಮಾಡು, ಅರ್ಥವಾಗದಂತೆ ಮಾಡು: ವಾರ್ತಾ ಸಂಮರ್ದ ಮಾಡು. (ನಾ.) ಅಡಚಿಕೊಳ್ಳುವುದು; ಅಡಚಾಟ; ಒತ್ತಡ; ಇರುಕು. (ಯಂತ್ರ, ಮೊ.) ಅಡಚಿಹೋದ ಕಾರಣದಿಂದ ನಡೆಯದೆ ನಿಂತುಬಿಡುವುದು. ಕಿಕ್ಕಿರಿದ ನೆರವಿ; ನೂಕು ನುಗ್ಗಲು. J.-stroke = Pendulum stroke (Pendulum ನೋಡಿ)

Jam[2] ಜ್ಯಾಮ್ (ನಾ.) ಸಕ್ಕರೆಯ ಪಾಕದಲ್ಲಿ ಕುದಿಸಿ ರಸಾಯನದಂತೆ ಮಾಡಿದ ಹಣ್ಣು: ಹಣ್ಣುಪಾಕ. Real j. (ಅಸಂ.) ನಿಜವಾದ ಮಾಧುರ್ಯವನ್ನೂ ಸುಖಾಸ್ವಾದನವನ್ನೂ ಕೊಡತಕ್ಕಂಥದು.

Jamaíca ಜಮೇಕ (ನಾ.) ಜಮೇಕ ದ್ವೀಪದಲ್ಲಿ ತಯಾರಿಸಿದ ಒಂದು ತೆರದ ಸಾರಾಯಿ (= J. rum)

Jamb ಜ್ಯಾಂ (ನಾ.) (ಬಾಗಿಲುವಾಡ, ಕಿಟಕಿ, ಮೊ. ಗಳ) ಪಕ್ಕನಿಲವು; ದ್ವಾರಬಂಧದ ಕಂಬತೋಳು; (ಮು., ಬ. ವ. ದಲ್ಲಿ) ಒಲೆಯ ಪಕ್ಕದ ದವಡೆಗಲ್ಲುಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Jamboreé ಜ್ಯಾಂಬೊರೀ (ನಾ.) (ಅಮೆ. ಸಂ.) ಉತ್ಸವ (ಸಮಾರಂಭ); ವಿನೋದಕೇಳಿ. ಬಾಲಭಟರ (ಸ್ಕೌಟುಗಳ) ದೊಡ್ಡ ಜಾತ್ರೆ, ಸಮಾರಂಭ.

Jángle ಜ್ಯಾಂಗ್ಲ್ (ಕ್ರಿ., ನಾ.) (ಗಂಟೆ, ಮೊ. ಗಳಿಂದ) ಕರ್ಕಶ ಧ್ವನಿ (ಮಾಡು) ; ಕಿರಿಚುತ್ತ, ಗಲಾಟೆ ಮಾಡುತ್ತ, — ಮಾತಾಡು ; ಕೂಗಾಡು. (ಪ್ರಾಚೀ. ಪ್ರ.) ಜಗಳ (ಮಾಡು) ; ವಾಗ್ವಾದ (ಮಾಡು)

Jánitor ಜ್ಯಾನಿಟರ್ (ನಾ.) ಬಾಗಿಲು ಕಾಯುವವನು ; ದ್ವಾರಪಾಲಕ.

Jánizary, -nissary ಜ್ಯಾ(ಯ್ಯಾ)ನಿಸ್ಸರಿ (ನಾ.) (ಚರಿತ್ರೆ) ತುರ್ಕಿಯ ಸುಲ್ತಾನನ ಅಂಗರಕ್ಷಕ ಪದಾತಿಪಡೆಯವನು ; ತುರ್ಕಿ ಸೈನಿಕ. (ರೂಪ.) ಪೀಡನೆಗೆ ಸಾಧಕನಾದವನು.

Jánsenist ಜ್ಯಾನ್ಸೆನಿಸ್ಟ್ (ನಾ.) ಸ್ವಾಭಾವಿಕ ಮನುಷ್ಯಸಂಕಲ್ಪವು ತಪ್ಪುದಾರಿ ಹಿಡಿಯಲುಳ್ಳದ್ದೆಂದೂ ಒಳ್ಳೆಯದು ಮಾಡುವ ಶಕ್ತಿ ಇಲ್ಲದ್ದೆಂದೂ ವಾದಿಸುತ್ತಿದ್ದ Cornelius Jansen ಎಂಬವನು ಸ್ಥಾಪಿಸಿದ ರೋ. ಕ್ಯಾ. ಪಕ್ಷಕ್ಕೆ ಸೇರಿದವನು. **Jánsenism** (ನಾ.) ; **Jansenístic** (ಗು.)

Jánuary ಜ್ಯಾನ್ಯುಅರಿ (ನಾ.) (ಸಂಕ್ಷಿಪ್ತ : Jan.) (ಇಂಗ್ಲಿಷ್ ವರ್ಷದ ಮೊದಲನೆಯ ತಿಂಗಳಾದ) ಜನವರಿ.

Jánus (L) ಜೇನಸ್ (ನಾ.) ತಲೆಯ ಮುಂಭಾಗ ಹಿಂಭಾಗಗಳಲ್ಲಿ ಸಹ ಮುಖಗಳಿರುವಂತೆ ಚಿತ್ರಿಸಿರುವ, ದ್ವಾರ ಮತ್ತು ಮಹಾದ್ವಾರ ರಕ್ಷಕನಾದ, ಪ್ರಾಚೀನ ಇಟ್ಯಾಲಿಯನರ, ದೇವತೆ : 'ಜೇನಸ್' ದೇವತೆ.

Jap ಜ್ಯಾಪ್ (ಗು., ನಾ.) (ಬಳ. ಮಾ.) = Japanese.

Japán ಜಪ್ಯಾನ್ (ನಾ., ಕ್ರಿ. ಸಕ.) (ಏಷ್ಯಾ ಖಂಡದ ಪೂರ್ವ ಭಾಗದಲ್ಲಿರುವ) ಜಪಾನ್ ದ್ವೀಪ (ಚಕ್ರಾಧಿಪತ್ಯ). (ಮು., ಮೊದಲು ಜಪಾನಿನಿಂದ ಬರುತ್ತಿದ್ದ) ಒಂದು ಬಗೆಯ ಗಟ್ಟಿ ಮೆರುಗು (ವಾರ್ನಿಷ್). ಜಪಾನ್ ಮಾದರಿಯ ಕೆಲಸ. (ಕ್ರಿ.) ಜಪಾನ್‌ಮೆರುಗು ಹಾಕು ; (ಜಪಾನ್‌ಮೆರುಗು ಕೊಟ್ಟಂತೆ) ಕಪ್ಪನೆಯ ಹೊಳಪು ಕೊಡು. **Japanése** ಜ್ಯಾಪನೀಸ್ (ಗು., ನಾ.) ಜಪಾನಿನ(ವನು) ; ಜಪಾನ್ ಭಾಷೆ. **Japanésque** ಜ್ಯಾಪನೆಸ್ಕ್ (ಗು., ನಾ.) ಜಪಾನ್ ಮಾದರಿಯ (ವಸ್ತು). **Japónic** ಜಪಾನಿಕ್ (ಗು.) ಜಪಾನಿನ. **Japónica** ಜಪಾನಿಕ (ನಾ.) ಜಪಾನಿನ ಹಲವು ಬಗೆಯ ಅಲಂಕಾರ ಸಸ್ಯಗಳು.

Jape ಜೇಪ್ (ಕ್ರಿ. ಅಕ., ನಾ.) ಹಾಸ್ಯ, ತಮಾಷೆ (— ಮಾಡು)

Japhétic ಜಫೆಟಿಕ್ (ಗು.) (ಬೈಬಲ್) ನೋವನ ಮಗ ಜೇಫೆತ್ತಿನ (ಸಂತತಿಯ). ಇಂಡೋ ಯೂರೋಪಿಯನ್ ಬುಡಕಟ್ಟಿನ.

Japónic, Japónica. **Japan** ನೋಡಿ.

Jar[1] ಜಾರ್ (ನಾ., ಕ್ರಿ.) ಕರ್ಕಶ ಧ್ವನಿ, ಕಂಪನ ; ಮನಸ್ಸಿಗೂ ನರಗಳಿಗೂ ಅಹಿತವಾದ ಘಾತ ; ಧಕ್ಕೆ. ವಿರಸ ; ವಿಷಮತೆ ; ಜಗಳ; (ಗೃಹ) ಕಲಹ. (ಕ್ರಿ.) ಕರ್ಕಶ ಧ್ವನಿ ಮಾಡು, ಆಗು ; (ಒಬ್ಬನಿಗೆ, ಕಿವಿ, ನರ, ಮೊ. ಕ್ಕೆ) ಕಠೋರವಾಗಿರು (*Upon* ಉಪ. ದೊಡನೆ) ; (ಒಂದರ ಮೇಲೆ) ಕಿರುಗುಟ್ಟುವಂತೆ ಹೊಡೆ, ತಾಕು (*Upon, against* ಉಪ. ದೊಡನೆ). ಕರ್ಕಶವಾಗಿ ಕಂಪಿಸು, (ಪ್ರತಿ)ಧ್ವನಿ ಕೊಡು. (ಅಭಿಪ್ರಾಯ, ಹೇಳಿಕೆ, ಕಾರ್ಯ) ಹೊಂದಿಕೆಯಿಲ್ಲದಿರು ; ವಿರುದ್ಧವಾಗಿರು (*With* ಉಪ. ದೊಡನೆ). ಜಗಳವಾಡು ; ಕಚ್ಚಾಡು ; ವಾಗ್ಯುದ್ಧ ಮಾಡು. ಕರ್ಕಶ ಧ್ವನಿಯಾಗುವಂತೆ ಮಾಡು. (ನರಗಳನ್ನು) ಅದಿರಿಸು. **Járringly** (ಕ್ರಿ. ವಿ.)

Jar[2] ಜಾರ್ (ನಾ.) (ಮಣ್ಣಿನ, ಗಾಜುಮಣ್ಣಿನ, ಗಾಜಿನ, ಸಾ., ಉರುಳೆಯಾಕಾರದ) ಪಾತ್ರೆ (ಹಿಡಿಯುಳ್ಳದ್ದು ಅಥವಾ ಇಲ್ಲದ್ದು): ಜಾಡಿ [Leyden j. (Leyden ನೋಡಿ)]. **Járful** (ನಾ.)

Jar[3] ಜಾರ್ (ನಾ.) (ಬಳ. ಮಾ.) On the, On a, On, j. ಅರೆ ತೆರೆದು (Ajar ಎಂಬುದರ ವಿಕೃತ ರೂಪ)

Jardiniére (F) ಝಾರ್ಡಿನ್ಯೇರ್ (ನಾ.) (ಕೊಠಡಿಯಲ್ಲಿ, ಕಿಟಕಿಯ ತಳ, ಮೊ. ಗಳಲ್ಲಿ) ಹೂವುಬಿಡುವ ಸಸ್ಯಗಳನ್ನು ಪ್ರದರ್ಶಿಸುವ ಅಲಂಕಾರದ ಹೂವಿನ ಕುಂಡ ಅಥವಾ ನಿಲೆ ; ಗಿಡದಿಂದ ಕೊಯ್ದ ಹೂವುಗಳನ್ನು ಮೇಜು, ಮೊ. ಗಳಮೇಲೆ ಪ್ರದರ್ಶಿಸುವ ಅಲಂಕಾರ ಪಾತ್ರೆ.

Járgon[1] ಜಾರ್ಗನ್ (ನಾ.) ಅರ್ಥವಾಗದ ಮಾತು(ಗಳು) ; ಲೊಡ ಲೊಡ ; ಗೊಜ ಗೊಜ. ಅನಾಗರಿಕ, ಕ್ಷುಲ್ಲಕ, ಭಾಷೆ ; ಪಾರಿಭಾಷಿಕ ಆಡಂಬರ. ಬಳಕೆಯಲ್ಲಿಲ್ಲದ ಪದಗಳನ್ನೇ ತುಂಬಿದ (ವಿವಿಧ ವೃತ್ತಿಗಳಲ್ಲಿ, ಪಂಗಡಗಳಲ್ಲಿ, ಬಳಸುವ) ಭಾಷೆ (Critics' j., Metaphysical j.); ಹಕ್ಕಿಗಳ ಕಿಚ ಕಿಚ (ಧ್ವನಿ). **Járgonize** (ಕ್ರಿ.)

Járgon[2] ಜಾರ್ಗನ್, **Jargoón** ಜಾರ್ಗೂನ್ (ನಾ.) ಸಿಂಹಳ ದ್ವೀಪದಲ್ಲಿ ದೊರೆಯುವ ಒಂದು ಬಗೆಯ 'ಝರ್ಕಾನ್' ಎಂಬ ಪ್ರಶಸ್ತ ಶಿಲೆ.

Járrah ಜ್ಯಾರ (ನಾ.) ಪ. ಆಸ್ಟ್ರೇಲಿಯದ 'ಮಹಾಗನಿ' ಎಂಬ ಮರ(ದ ಗಟ್ಟಿ, ಬಾಳಿಕೆಯ, ದಾರು)

Járvey ಜಾರ್ವಿ (ನಾ.) ಬಾಡಿಗೆಯ (ಕುದುರೆ) ಗಾಡಿಯವನು ; ಐರಿಷ್ ಬಂಡಿಯನ್ನು ಹೊಡೆಯುವವನು.

Jásmin(e) ಜ್ಯಾಸ್ಮಿನ್, **Jéssamin(e)** ಜೆಸಮಿನ್ (ನಾ.) ಬಿಳಿಯ ಅಥವಾ ಹಳದಿಯ ಹೂವು ಬಿಡುವ ಒಂದು ಜಾತಿಯ ಗುಲ್ಮ ; ಸುವಾಸನೆಯ ಬಿಳಿಯ ಹೂವು ಬಿಡುವ ಒಂದು ಜಾತಿಯ ಬಳ್ಳಿ (Common or white j.) : ಜಾಜಿ, ಮಲ್ಲಿಗೆ, ಮೊ.

Jásper ಜಾಸ್ಪರ್ (ನಾ.) (ಸಾ., ಕೆಂಪು, ಹಳದಿ ಅಥವಾ ಕಂದು ಬಣ್ಣದ) ಒಂದು ಅಪಾರದರ್ಶಕ 'ಕ್ವಾರ್ಟ್ಸ್' (ಬೆಣಚು) ಕಲ್ಲು.

Jat ಜಾಟ್ (ನಾ.) ಇಂಡಿಯದ ವಾಯವ್ಯ ಪ್ರಾಂತಗಳಲ್ಲಿ ವಿಸ್ತಾರವಾಗಿ ಹರಡಿಕೊಂಡಿರುವ, ಬೇರೆ ಬೇರೆ ಮತಧರ್ಮಗಳನ್ನೂ ವೃತ್ತಿಗಳನ್ನೂ ಉಳ್ಳ, ಒಂದು ಜನಾಂಗದವನು : ಜಾಟ (ಕುಲದವನು)

Jaúndice ಜಾಂಡಿಸ್ (ನಾ., ಕ್ರಿ. ಸಕ.) ಪಿತ್ತರಸದ ಚಲನೆಗೆ ಅಡಚಣೆಯುಂಟಾಗಿ ಚರ್ಮ, ದೇಹ ದ್ರವಗಳು, ಅಂಗಾಂಶಗಳು —ಇವೆಲ್ಲವೂ ಹಳದಿಯ ಬಣ್ಣಕ್ಕೆ ತಿರುಗಿದ, ಮಲಬದ್ಧತೆಯಿಂದಲೂ ಹಸಿವಿಲ್ಲದಿರುವಿಕೆಯಿಂದಲೂ ಕೂಡಿದ, ರೋಗಸ್ಥಿತಿ : ಕಾಮಾಲೆ ; ಅರಿಸಿನಮುಂಡಿಗೆ ರೋಗ ; ಕಾಮಾಲೆಯ ಚಿಹ್ನೆಯಾದ ಸ್ವಾಸ್ಥ್ಯ ತಪ್ಪಿದ ದೃಷ್ಟಿ (ಸಾ., ರೂಪ. ದಲ್ಲಿ) : ಮಾತ್ಸರ್ಯ, ಮೊ. ಗಳಿಂದುಂಟಾದ ವಕ್ರಭಾವಗಳು. (ಕ್ರಿ.) ಕಾಮಾಲೆರೋಗ ಬರು. (ಸಾ., ರೂಪ. ; ಭೂ. ಕೃ. ನಲ್ಲಿ) ಈರ್ಷ್ಯೆಯಿಂದ, ಮತ್ಸರದಿಂದ ಅಥವಾ ಅಸೂಯೆಯಿಂದ (ಒಬ್ಬನನ್ನು, ಒಬ್ಬನ ವಿವೇಚನೆಯನ್ನು) ಬಾಧಿತ ಮಾಡು, ಮಾಂದ್ಯ ಮಾಡು ; ದೃಷ್ಟಿ ಕೆಡಿಸು ; ಮತ್ಸರಗ್ರಸ್ತ ಮಾಡು.

Jaunt ಜಾಂಟ್ (ಕ್ರಿ. ಅಕ., ನಾ.) (ಮು., ಸಂತೋಷಕ್ಕಾಗಿ) ಪ್ರಯಾಣ, ಸಂಚಾರ, ವಿಹಾರ (—ಮಾಡು). Jaunting-car (ಐರ್ಲೆಂಡಿನಲ್ಲಿ ಹೆಚ್ಚು ಬಳಕೆಯ) ಹಗುರವಾದ ಎರಡು ಚಕ್ರದ ಬಂಡಿ.

Jaúnty ಜಾಂಟಿ (ಗು., ನಾ.) ನಿರಾತಂಕವಾದ ಉಲ್ಲಾಸವುಳ್ಳ ; —ಉಳ್ಳಂತೆ ನಟಿಸುವ ; ಹಿಗ್ಗು ಉಕ್ಕುವ. (ನಾ.) (ನಾವೆ) ನೌಕಾ ಪೊಲೀಸಿನ ಮುಖ್ಯಾಧಿಕಾರಿ. **Jaúntily** (ಕ್ರಿ. ವಿ.) ; **Jaúntiness** (ನಾ.)

Jávan ಜಾವನ್, **Javanése** ಜ್ಯಾವನೀಸ್ (ಗು., ನಾ.) ಜಾವಾ ದ್ವೀಪದ(ವನು). (-ese) ಜಾವಾ (ಮಧ್ಯಪ್ರಾಂತದ) ಭಾಷೆ.

Jávelin ಜ್ಯಾವ್‌ಲಿನ್ (ನಾ.) ಹಗುರವಾದ ಎಸೆಯೀಟಿ, ಭಲ್ಲೆಯ.

Jaw ಜಾ (ನಾ., ಕ್ರಿ.) (ಕಶೇರುಕ ಪ್ರಾಣಿಗಳಲ್ಲಿ) ದವಡೆಮೂಳೆ, ದವಡೆ [Lower, upper, j. ಕೆಳ, ಮೇಲ, ದವಡೆ. J.-bone ಸಸ್ತನಿ ಪ್ರಾಣಿಗಳಲ್ಲಿ, ಕೆಳದವಡೆಯ ಎರಡು ಮೂಳೆಗಳಲ್ಲಿ ಯಾವುದಾದರೂ ಒಂದು, ಅಥವಾ (ಕೆಲವು ಪ್ರಾಣಿಗಳಲ್ಲಿ) ಎರಡೂ ಒಂದುಗೂಡಿರುವ ಮೂಳೆ : ದವಡೆಯ ಮೂಳೆ]. (ಬ. ವ. ದಲ್ಲಿ) ಹಲ್ಲುಗಳಿಂದ ಕೂಡಿದ ಬಾಯಿಯ ಎಲುಬುಗಳು . ಬಾಯಿ. (ಬ. ವ. ದಲ್ಲಿ) (ಕಣಿವೆ, ಕಾಲುವೆ, ಮೊ. ಗಳ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಿರು ಬಾಯಿ. (ಬ. ವ. ದಲ್ಲಿ) ಯಂತ್ರದಲ್ಲಿ ದವಡೆಯಂಥ ಬಂಧನ ಭಾಗಗಳು (ಉದಾ., Vice ಹಿಡಿಗಲ್ಲು). (ಬಳ. ಮಾ.) ಹರಟೆಯ ಬಾಯಿ (Hold your j. ಬಾಯಿ ಮುಚ್ಚು ; ಹರಟೆ ನಿಲ್ಲಿಸು). ಉಪದೇಶ ಭಾಷಣ ; ಉಪನ್ಯಾಸ. [J.-breaker (ಬಳ. ಮಾ.) ಉಚ್ಚಾರಣೆಗೆ ಕಷ್ಟವಾದ ಪದ]. (ಕ್ರಿ.) (ಬಳ. ಮಾ.) ಬೇಜಾರು ಹಿಡಿಯುವಂತೆ ದೀರ್ಘಭಾಷಣ ಮಾಡು ; ಉಪನ್ಯಾಸ ಮಾಡು.

Jay ಜೇ (ನಾ.) ಬಹಳ ಕಾಂತಿಯ ಪುಕ್ಕಗಳುಳ್ಳ, ಗಲಭೆಮಾಡುತ್ತ ಚಿಲಪಿಲಿಗುಟ್ಟುವ, ಯೂರೋಪಿನ ಒಂದು ಜಾತಿಯ ಹಕ್ಕಿ ; ಈ ಹಕ್ಕಿ ಜಾತಿ. (ರೂಪ.) ಅಲಕ್ಷ್ಯದಿಂದ ಗೊಡ್ಡು ಹರಟೆ ಹೊಡೆಯುವವನು. ಗುಗ್ಗು ; ಮುಟ್ಠಾಳ. J.-walker ಬೀದಿಯಲ್ಲಿ ಅಪಾಯಕ್ಕೆ ಒಳಗಾಗುವಂತೆ ನಿರ್ಲಕ್ಷ್ಯವಾಗಿ ಅಡ್ಡಾಡುವವನು.

Jazz ಜ್ಯಾಸ್ (ನಾ., ಗು., ಕ್ರಿ. ಅಕ.) (ಅಮೆ. ಸಂ. ಗಳ ನೀಗ್ರೊ ಜನರಿಂದ ಬಂದ) ಒಂದು ತೆರದ ಕುಣಿತ ಮತ್ತು (ಈ ಕುಣಿತಕ್ಕೆ ಹೊಂದಿಸಿದ) ಸಂಗೀತ. ಗೊಂದಲದ ಅಥವಾ ಅಕಟ ವಿಕಟವಾದ ಕಾರ್ಯಕಲಾಪಗಳು. (ಗು.) (ಬಣ್ಣ, ಮೊ. ವು) ವಿರಸವಾದ, ವಿಸಂಗತವಾದ ; ಒಡ್ಡೊಡ್ಡಾದ ; ವಿಡಂಬನದ [J. band (ಪಿಯಾನೊ, ವೀಣೆ, ತಬಲ, ಮೊ. ಹಲವು ವಾದ್ಯಗಳನ್ನು ಏಕ ಕಾಲದಲ್ಲಿ ಬಾಜಿಸಿ ಮಾಡುವ) ಅಬ್ಬರದ ಕೂಟವಾದ್ಯ]. (ಕ್ರಿ.) ಜಾಸ್‌ವಾದ್ಯ ಬಾಜಿಸು, —ಸಂಗೀತ ಹಾಡು, ನೃತ್ಯ ಮಾಡು ; ಇವುಗಳಲ್ಲಿ ಲೋಲನಾಗು.

Jeálous ಜೆಲಸ್ (ಗು.) (ತನ್ನ ಹಕ್ಕು, ಮೊ. ನ್ನು) ಉಳಿಸಿಕೊಳ್ಳಲು ಬದ್ಧಾದರವುಳ್ಳ, ಜಾಗರೂಕತೆಯುಳ್ಳ (*Of* ಉಪ. ದೊಡನೆ). (ಹೆಂಡತಿ, ಗಂಡ, ಪ್ರಿಯ, ಸ್ನೇಹಿತ — ಇವರ ಪ್ರಣಯಕ್ಕೆ, ಪ್ರೀತಿಗೆ) ತನ್ನನ್ನು ತಪ್ಪಿಸಿ ಮತ್ತೊಬ್ಬರು ಪಾತ್ರರಾಗುವರೆಂಬ ಸಂಶಯ, ಶಂಕೆ, — ಉಳ್ಳ ; (ಪ್ರತಿಸ್ಪರ್ಧಿಯೆಂಬ ಶಂಕೆಯುಳ್ಳವನಲ್ಲಿ) ಈರ್ಷ್ಯೆಯುಳ್ಳ ; (ಒಬ್ಬನ, ಅಥವಾ ಅವನಿಗಿರುವ ಅನುಕೂಲಗಳ, ವಿಷಯದಲ್ಲಿ) ಅಸೂಯೆ ಪಡುವ, ಕರುಬುವ, ಹೊಟ್ಟೆಕಿಚ್ಚು ಪಡುವ. (ಬೈಬಲ್ಲಿನಲ್ಲಿ, ದೇವರ ವಿಷಯವಾಗಿ) ಅನ್ಯ ದೈವೋಪಾಸನೆಯನ್ನು ಸಹಿಸದ. (ವಿಚಾರಣೆ, ಮೇಲ್ವಿಚಾರಣೆ, ಮೊ. ಗಳ ವಿಷಯದಲ್ಲಿ) ಸಂಶಯಗ್ರಸ್ತನಾಗಿ ಜಾಗರೂಕತೆಯುಳ್ಳ. **Jeálously** (ಕ್ರಿ. ವಿ.) ; **Jeálousy** (ನಾ.) ಈರ್ಷ್ಯೆ ; ಅಸೂಯೆ ; ಅನುಮಾನ ಪ್ರಕೃತಿ ; ಪ್ರೇಮ ಶಂಕೆ.

Jeer ಜಿಯರ್ (ಕ್ರಿ., ನಾ.) ಅಪಹಾಸ್ಯ (ಮಾಡು) ; ಗೇಲಿ (ಮಾಡು) (*At* ಉಪ. ದೊಡನೆ)

Jehad = Jihad.

Jehóvah ಜಿಹೋವ (ನಾ.) (ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ) ದೇವರ ಮುಖ್ಯ ಹೆಸರು : ಯೆಹೋವ. **Jehóvist** (ನಾ.) ಬೈಬಲ್ಲಿನಲ್ಲಿ ದೇವರನ್ನು ಜಿಹೋವ ಎಂದು ಕರೆದಿರುವ ಮೊದಲನೆಯ ಆರು ಪ್ರಕರಣಗಳ ಕರ್ತೃ(ರು). **Jehovístic** (ಗು.)

Jéhu ಜೀಹ್ಯೂ (ನಾ.) (ಹಾಸ್ಯ ಪ್ರ.) ಅತಿ ರಭಸದಿಂದ ಬಂಡಿ ನಡಸುವವನು.

Jejúne ಜಿಜೂನ್ (ಗು.) ಬರಿದು ; ಬೆಂಡು ; ನೀರಸ ; ನಿಸ್ಸಾರ ; (ನೆಲದ ವಿಷಯದಲ್ಲಿ) ಫಲವತ್ತಿಲ್ಲದ ; ಬಂಜರು. ಮನಸ್ಸಿಗೆ ತೃಪ್ತಿ ಕೊಡದ. **Jejúnely** (ಕ್ರಿ. ವಿ.) ; **Jejúneness** (ನಾ.)

Jékyll & Hyde ಜೆಕಿಲ್ ಅ್ಯಂಡ್ ಹೈಡ್ (ನಾ.) ಒಂದು ಕಾಲದಲ್ಲಿ ಒಂದು ತೆರನಾಗಿಯೂ, ಮತ್ತೊಂದು ಕಾಲದಲ್ಲಿ ಅದಕ್ಕೆ ವಿರುದ್ಧವಾಗಿಯೂ, ಸಹಜವಾಗಿಯೇ ಎರಡು ವ್ಯಕ್ತಿತ್ವಗಳನ್ನು ತೋರಿಸುವ ಒಂದೇ ವ್ಯಕ್ತಿ ; ಇಬ್ಬರು ಬೇರೆ ಬೇರೆ ವ್ಯಕ್ತಿಗಳಂತೆ ಪರ್ಯಾಯವಾಗಿ ತೋರ್ಪಡಿಸಿಕೊಳ್ಳುವ ಏಕ ವ್ಯಕ್ತಿ : ದ್ವಂದ್ವ ಸ್ವರೂಪಿ. (R. L. Stevenson ಎಂಬಾತನ ಒಂದು ಕಥೆಯಿಂದ)

Jélly ಜೆಲಿ (ನಾ., ಕ್ರಿ.) ತೊಗಲು, ಮೂಳೆ, ಮೊ. ನ್ನು ಬೇಯಿಸಿ ಅದರಿಂದ ಹೊರಟ ರಸವನ್ನು ಆರಿಸಿದುದರಿಂದಾದ, ಸಸಾರಜನಕ ಪದಾರ್ಥವನ್ನು ಮುಖ್ಯವಾಗುಳ್ಳ, ಮೆತುವಾಗಿಯೂ ದೃಢವಾಗಿಯೂ ಅರೆ ಪಾರದರ್ಶಕವಾಗಿಯೂ ಇರುವ, ಒಂದು ಆಹಾರಪದಾರ್ಥ : 'ಜೆಲ್ಲಿ'. ಹಣ್ಣಿನ ರಸ, ಮೊ. ನ್ನು ಹೀಗೆಯೇ ತಯಾರಿಸಿದ ಪದಾರ್ಥ : ಹಣ್ಣುಪಾಕ. [**J.-bag** ಜೆಲ್ಲಿಯನ್ನು ಸೋಸುವ ಚೀಲ. **J.-fish** ಸರಿಸುಮಾರಾಗಿ ಪಾರದರ್ಶಕವಾದ, ಘನದ್ರವ ದೇಹವುಳ್ಳ ಒಂದು ಸಮುದ್ರ ಮೀನಜಾತಿ : ಲೋಳೆ ಮೀನು ; ಅಂಬಲಿ ಮೀನು. **Jélly-graph** ತಟ್ಟೆಯಲ್ಲಿ ತಟ್ಟಿ ಅಳವಡಿಸಿದ ಒಂದು ಮೆತು ಘನ ಪದಾರ್ಥದ ಮೇಲೆ ಕಾಗದವನ್ನೊತ್ತಿ ಪ್ರತಿಗಳನ್ನೆತ್ತುವ ಸಲಕರಣೆ]. (ಕ್ರಿ.) ಘನ ದ್ರವವಾಗಿ ಹೆತ್ತುಕೊ ; — ಕೊಳ್ಳುವಂತೆ ಮಾಡು.

Jémadar ಜೆಮದಾರ್ (ನಾ.) ಇಂಡಿಯದ ಸೈನ್ಯದಲ್ಲಿ ಕೆಳದರ್ಜೆಯ ದೇಶೀಯ ಅಧಿಕಾರಿ : ಜಮೇದಾರ ; ಇಂಡಿಯದ ಒಬ್ಬ ಪೋಲೀಸು ಅಧಿಕಾರಿ : ಜಮೇದಾರ.

Jémmy ಜೆಮಿ (ನಾ.) (ಸಾ., ಬೇರೆ ಬೇರೆ ಭಾಗಗಳಾಗಿ ಮಾಡಿರುವ) ಕಳ್ಳರ ಹಾರೆಕೋಲು. ಅಟ್ಟ ಕುರಿಯ ತಲೆ.

Jénnet ಜೆನೆಟ್ (ನಾ.) ಸ್ಪೆಯಿನ್ನಿನ ಒಂದು ಸಣ್ಣ ಕುದುರೆ, ತಟ್ಟು.

Jénny ಜೆನಿ (ನಾ.) (ಸ್ಥಳದಿಂದ ಸ್ಥಳಕ್ಕೆ ಒಯ್ಯಬಹುದಾದ) ಚಲಯೆತ್ತಿಗೆ ಯಂತ್ರ. = Spinning-j. (Spinning ನೋಡಿ). ಬಿಲಿಯರ್ಡ್ಸ್ ಆಟದಲ್ಲಿ ಒಂದು ಹೊಡೆತ. J. wren ರೆನ್ ಎಂಬ ಹಕ್ಕಿ(ಗೆ ಮಕ್ಕಳ ಮತ್ತು ಬಳಕೆಯ ಮಾತು)

Jeópardy ಜೆಪರ್ಡಿ (ನಾ.) ಅಪಾಯ ; ಗಂಡಾಂತರ ; ವಿಪತ್ತು. **Jeópardize** ಜೆಪರ್ಡೈಸ್ (ಕ್ರಿ. ಸಕ.) ಅಪಾಯಕ್ಕೆ, ಗಂಡಾಂತರಕ್ಕೆ, ಸಿಕ್ಕಿಸು, ತರು.

Jequírity ಜಿಕ್ವಿರಿಟಿ (ನಾ.) ಗುಲಗಂಜಿ ಬಳ್ಳಿ [ಇದರ ಬೀಜಗಳು ಕೆಂಪು, ಮೊ. ಬಣ್ಣಗಳುಳ್ಳವಾಗಿದ್ದು ಅವನ್ನು ಆಭರಣಗಳಲ್ಲೂ ಔಷಧಕ್ಕೂ ತೂಕವಾಗಿಯೂ ಉಪಯೋಗಿಸುತ್ತಾರೆ]. ಉದ್ದವಾದ ಹಿಂಗಾಲುಗಳೂ, ಹೆಚ್ಚಾದ ನೆಗೆಯುವ ಶಕ್ತಿಯೂ, ಅಗಿಯುವ ಹಲ್ಲುಗಳೂ, ಉಳ್ಳ, ಆಫ್ರಿಕದ ಮರಳುಗಾಡುಗಳಲ್ಲಿಯ, ಇಲಿಯಂಥ ಒಂದು ಚತುಷ್ಪಾದಿ.

Jeremíah ಜೆರಿಮೈಯ (ನಾ.) ಗೋಳುಕರೆಯ ಪ್ರವಾದಿ ; ಕಾಲ ಕೆಟ್ಟುಹೋಯಿತೆಂದು ದೂಷಿಸುವವನು. **Jeremíad** — ಅ್ಯಡ್ (ನಾ.) ಗೋಳಾಟ ; ಪ್ರಲಾಪ ; ದುಃಖದ ಮೊರೆ.

Jéricho ಜೆರಿಕೋ (ನಾ.) ಪ್ಯಾಲೆಸ್ಟೈನಿನ ಒಂದು ಪಟ್ಟಣ (Go to J. ಹಾಳಾಗಿಹೋಗು)

Jeríd, -reéd ಜೆರೀಡ್ (ನಾ.) (ಪರ್ಷಿಯನ್, ಟರ್ಕಿಷ್ ಮತ್ತು ಅರೇಬಿಯನ್ ರಾವುತರು ಸೈನಿಕ ಆಟಗಳಲ್ಲಿ ಉಪಯೋಗಿಸುವ) ಉದ್ದವಾದ ಮರದ ಮೊಂಡು ಎಸೆಯಾಟಿ. ಈ ಎಸೆಯಾಟಿಯ ಆಟ.

Jerk[1] ಜರ್ಕ್ (ನಾ., ಕ್ರಿ.) ಥಟ್ಟನೆಯ, ಚುರುಕಿನ, — ಎಳೆತ, ನುಲಿ, ಎಸೆತ, ಚಲನೆ, ಮೊ. ವು. ಸ್ನಾಯುಗಳ ಅನೈಚ್ಛಿಕವಾದ ಥಟ್ಟನೆಯ ಸೆಳವು, ಸಂಕೋಚನೆ ; ಜಗ್ಗು. (ಬ. ವ. ದಲ್ಲಿ) (ಮು., ಭಕ್ತಿಯ ಆವೇಶದಲ್ಲಿ) ಅಂಗಾಂಗಗಳ, ಮುಖದ, ಅನೈಚ್ಛಿಕ ಚಲನವಲನಗಳು. (ಕ್ರಿ.) ಥಟ್ಟನೆ ಸೆಳೆ, ನೂಕು, ನುಲಿ, ಚಲಿಸು ; ಜಗ್ಗು ; ಚಲನೆಯನ್ನು ಥಟ್ಟನೆ ನಿಲ್ಲಿಸಿ ಎಸೆ.

Jerk[2] ಜರ್ಕ್ (ಕ್ರಿ. ಸಕ.) (ಮು., ಗೋಮಾಂಸವನ್ನು) ಕೆಡದಂತೆ ಇಡುವುದಕ್ಕಾಗಿ ಉದ್ದುದ್ದವಾಗಿ ಸೀಳಿ ಬಿಸಿಲಲ್ಲಿ ಒಣಗಿಸು.

Jérkin ಜರ್ಕಿನ್ (ನಾ.) (ಚರಿತ್ರೆ) (ಸಾ., ಚರ್ಮದಿಂದ ಮಾಡಿದ) ಗಂಡಸಿನ ಗುತ್ತನಾದ ನಡುವಂಗಿ.

Jérry ಜೆರಿ (ನಾ.) [J.-builder (ಕಳಪೆ ಸಾಮಾನುಗಳನ್ನು ಹಾಕಿ) ಭದ್ರವಿಲ್ಲದ ಮನೆಗಳನ್ನು ಕಟ್ಟುವವನು. J.-building ಇಂಥ ಮನೆ, ಕಟ್ಟಡ. J.-built ಹೀಗೆ ಕಟ್ಟಿದ]. ಕೀಳು ತೆರದ ಬಿಯರ್ ಮದ್ಯದ ಅಂಗಡಿ (= J.-shop). (ಅಸಂ.) ಮೂತ್ರ ಪಾತ್ರೆ. (ಸೈನಿಕ ಅಸಂ.) ಜರ್ಮನ್ ಸೈನಿಕ ; ಜರ್ಮನರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Jérsey ಜರ್ಸಿ (ನಾ.) ಇಂಗ್ಲಿಷ್ ಕಡಲ್ಗಾಲುವೆಯಲ್ಲಿರುವ Channel Islands ಎಂಬ ದ್ವೀಪಗಳಲ್ಲೊಂದು : ಜರ್ಸಿ ದ್ವೀಪ (ಸಾ., ವಿಶೇಷಣ ವಾಗಿ). (ಮು., ವ್ಯಾಯಾಮ ಕ್ರೀಡೆಗಳಲ್ಲಿ ಹಾಕಿಕೊಳ್ಳುವ) ಉಣ್ಣೆಯ ದಾರದ ಹೆಣಿಗೆಯ ಗುತ್ತನೆಯ ಕವಚ; ಅಂಥದೇ ಒಳಗವಚ; ಹೆಂಗಸಿನ ಗುತ್ತನೆಯ ಹೆಣಿಗೆಯ ನಡುವಂಗಿ. ಜರ್ಸಿ ಹಸು.

Jerúsalem ಜೆರೂಸಲೆಮ್ (ನಾ.) ಪ್ಯಾಲೆಸ್ಟೈನಿನ ಒಂದು ಪಟ್ಟಣ. ಕತ್ತೆ (= J. pony). J. artichoke (Artichoke ನೋಡಿ)

Jess ಜೆಸ್ (ನಾ., ಕ್ರಿ. ಸಕ.) ಡೇಗೆಬೇಟೆಯಲ್ಲಿ ಡೇಗೆಯ ಪ್ರತಿ ಕಾಲಿಗೂ ಕಟ್ಟುವ ತೊಗಲು, ರೇಷ್ಮೆ, ಮೊ. ಗಳ ತುಂಡುಪಟ್ಟಿ. (ಕ್ರಿ.) ಡೇಗೆಗೆ ಕಾಲುಪಟ್ಟಿ ಹಾಕು.

Jéssamine = Jasmine.

Jésse ಜೆಸಿ (ನಾ.) J. window ಡೇವಿಡ್ಡಿನ ತಂದೆಯಾದ ಜೆಸ್ಸಿಯ ಮೂಲದಿಂದ ಹಿಡಿದು ಕ್ರಿಸ್ತನ ವಂಶಾವಳಿಯನ್ನು (ಕ್ರಿಸ್ತನು ಅವತರಿಸಿದು ದನ್ನು) ಚಿತ್ರಿಸಿರುವ ಕಿಟಕಿ.

Jest ಜೆಸ್ಟ್ (ನಾ., ಕ್ರಿ. ಅಕ.) ಪರಿಹಾಸ್ಯ; ಕುಚೋದ್ಯ; ಲೇವಡಿ; ಹುಡುಗಾಟ; ತಮಾಷೆ. [In j. ತಮಾಷೆಯಾಗಿ; ವಿನೋದಕ್ಕಾಗಿ. A standing j. ನಿತ್ಯಪರಿಹಾಸ ವಿಷಯ. J.-book ಪರಿಹಾಸಗಳ ಪುಸ್ತಕ]. (ಕ್ರಿ.) — ಮಾಡು; ಲಾಘವ ತೋರಿ ಮಾತಾಡು, ವರ್ತಿಸು. **Jéster** (ನಾ.) ನಕಲಿ; ಹಾಸ್ಯಗಾರ; ನಗೆಗಾರ; (ಮು., ರಾಜಾಸ್ಥಾನದ, ಶ್ರೀಮಂತರ ಮನೆಯಲ್ಲಿಯ) ವಿದೂಷಕ. **Jéstingly** (ಕ್ರಿ. ವಿ.)

Jésuit ಜೆಸ್ಯುಯಿಟ್ (ನಾ.) 'Society of Jesus' ಎಂಬ ರೋ. ಕ್ಯಾ. ಕ್ರೈಸ್ತ ಮಂಡಲಿಯ ಸದಸ್ಯ. ಮೋಸಗಾರ; ಠಕ್ಕ; ವಂಚಕ; (ನಿಶ್ಚಯ ತಿಳಿಸದಂತೆ) ಹೊರಳುಮಾತಾಡುವವನು. Jesuits' bark ಸಿಂಕೋನ (ಗಿಡದ) ತೊಗಟೆ. **Jesuítical** (ಗು.); **Jesuítically** (ಕ್ರಿ. ವಿ.); **Jésuitism** (ನಾ.) ಜೆಸ್ಯುಯಿಟ್ಟರ ಅಥವಾ ಅವರ ತೆರದ ತತ್ತ್ವ, ಪದ್ಧತಿ; = Jesuitry. **Jésuitry** (ನಾ.) ಕೇವಲ ಸೂಕ್ಷ್ಮವಾದ ಕುತರ್ಕ ಅಥವಾ ಹೊರಳುಮಾತು; ಸಿದ್ಧಿ ಸರಿಯಾದರೆ ಸಾಧನವೂ ಸರಿ ಎಂಬ ವಾದ. **Jésuitize** (ಕ್ರಿ.) ಜೆಸ್ಯುಯಿಟ್ಟನಂತೆ ನಡೆ; ಜೆಸ್ಯುಯಿಟ್ ತತ್ತ್ವ ವ್ಯಾಪಿಸುವಂತೆ ಮಾಡು.

Jésus ಜೀಸಸ್ (ನಾ.) ಯೇಸು (ಕ್ರಿಸ್ತ)

Jet[1] ಜೆಟ್ (ನಾ., ಗು.) ಹೊಳಪು ಮೆರುಗನ್ನು ತೆಗೆದುಕೊಳ್ಳುವ ಒಂದು ಬಗೆಯ ಕಲ್ಲಿದ್ದಲು; ಇದರ ಬಣ್ಣ(ದ); ಗಾಢವಾದ ಹೊಳಪುಕಪ್ಪು (=J.-black). **Jétty**[1] (ಗು.) = Jet-black.

Jet[2] ಜೆಟ್ (ನಾ., ಕ್ರಿ.) (ಮು., ಸಣ್ಣ ರಂಧ್ರದಿಂದ) ಮುಂದಕ್ಕೆ ಅಥವಾ ಮೇಲಕ್ಕೆ ಚಿಮ್ಮಿ ಸೂಸುವ ನೀರು, ಆವಿ, ಅನಿಲ, ಮೊ. ಗಳ ಧಾರೆ : ಬುಗ್ಗೆ; ಚಿಮ್ಮುಗೆ. (ನೀರು, ಮೊ. ನ್ನು ಹೀಗೆ ಧಾರೆಯಾಗಿ ಚಿಮ್ಮಲು ಹಾಕಿರುವ) ಮೂತಿ : ಧಾರಾ ನಾಳಿ. (ಕ್ರಿ.) ಧಾರೆಯಾಗಿ ಚಿಮ್ಮು, ಚಿಮ್ಮಿಸು.

Jétsam ಜೆಟ್ಸಮ್ (ನಾ.) ಅಪಾಯ ಸಂಭವದಲ್ಲಿ ಭಾರ ಕಡಮೆಮಾಡು ವುದಕ್ಕಾಗಿ ಹಡಗಿನಿಂದ (ಸಮುದ್ರಕ್ಕೆ) ಎಸೆದುಬಿಟ್ಟ ಸಾಮಾನು; (ಆಧುನಿಕ ಪ್ರ.) ಹೀಗೆ ಎಸೆದು ಕರೆಗೆ ಹೊಡೆದುಕೊಂಡು ಬಂದ ಸಾಮಾನು. **Jéttison** ಜೆಟಿಸನ್ (ನಾ., ಕ್ರಿ. ಸಕ.) (ಮು., ಅಪಾಯ ಸಂಭವದಲ್ಲಿ ಭಾರ ಕಡಮೆಮಾಡುವುದಕ್ಕಾಗಿ) ಹಡಗಿನಿಂದ ಸರಕನ್ನು ಸಮುದ್ರಕ್ಕೆ ಎಸೆದುಬಿಡು(ವುದು)

Jéttison. **Jetsam** ನೋಡಿ.

Jétton ಜೆಟನ್ (ನಾ.) ಮುದ್ರೆಯೊತ್ತಿದ ಅಥವಾ ಚಿತ್ರಕೊರೆದ (ಲೋಹ, ದಂತ, ಮೊ. ಗಳ) ಎಣಿಕೆಯ ಬಿಲ್ಲೆ, ಕಾಯಿ (ಲೆಕ್ಕಮಾಡುವುದರಲ್ಲೂ ಇಸ್ಪೀಟಾಟದಲ್ಲೂ ಉಪಯೋಗಿಸುತ್ತಿದ್ದದ್ದು)

Jétty[1]. **Jet**[1] ನೋಡಿ.

Jétty[2] ಜೆಟಿ (ನಾ.) ಬಂದರಿನ ಅಥವಾ ಕರೆಯ ರಕ್ಷಣೆಗಾಗಿ ಸಮುದ್ರ ದೊಳಕ್ಕೆ ಚಾಚಿಕೊಂಡು ಹೋಗಿರುವ (ಮರದ ಅಥವಾ ಕಲ್ಲಿನ) ಒಡ್ಡು, ಏರಿ; ಬಂದರು ಕಾಪು. ಹಡಗಿನಿಂದ ಇಳಿಯುವುದಕ್ಕೆ ಕಟ್ಟಿರುವ ಕಟ್ಟೆ; ದಕ್ಕೆ.

Jeu (F) ಝ [ನಾ.; ಬ. ವ. jeux ಝೊ, ಝ]. **J. de mots** (ಝ ದ ಮೋ) ಒಂದೇ ಉಚ್ಚಾರಣೆಯುಳ್ಳ ಪದಗಳನ್ನು ವಿಪರೀತಾರ್ಥ ವಾಗುವಂತೆ ಪ್ರಯೋಗಿಸುವುದು : ಶ್ಲೇಷೆ; ಹದಿರು ನುಡಿ. **J. d'esprit** (ಝ ಡೆಸ್‌ಪ್ರೀ) (ನಾ., ಸಾಹಿತ್ಯದ) ಚತುರೋಕ್ತಿ.

Jeunessé doreé (F) ಝನೆಸ್ ಡೊರೇ (ನಾ.) ಸೊಗಸುಗಾರರಾದ ಧನಿಕ, ಶ್ರೀಮಂತ, — ತರುಣರು.

Jew ಜ್ಯೂ, ಜೂ (ನಾ., ಕ್ರಿ. ಸಕ.) ಯೆಹೂದ್ಯ (ಕುಲದವನು). (ಬಳ. ಮಾ., ರೂಪ.) ದುಬಾರಿ ಬಡ್ಡಿಗೆ ಸಾಲಕೊಡುವ ಸುಲಿಗೆಕೋರ; ವ್ಯಾಪಾರದಲ್ಲಿ ಸಗ್ಗದವನು. [Rich as a J. ಬಹಳ ಧನಿಕ. Unbelieving J. (ಯಾವುದನ್ನೂ) ಸುಲಭವಾಗಿ ನಂಬದವನು. Tell that to the Jews ಆ ಅಸಂಭವದ ಕಥೆಯನ್ನು ಇಲ್ಲಿ ಹೇಳಬೇಡ. **J.-baiting** ಕರುಣೆ ತೋರದೆ ಯೆಹೂದ್ಯರನ್ನು ಹಿಂಸಿಸುವುದು. **J.'s-ear** ತಿನ್ನಬಹು ದಾದ ಒಂದು ಜಾತಿಯ ಅಣಬೆ. **J.'s-harp** ಚೌಕಟ್ಟನ್ನು ಹಲ್ಲುಗಳ ಮಧ್ಯೆ ಹಿಡಿದುಕೊಂಡು, ಲೋಹದ ನಾಲಗೆಯನ್ನು ಬಡಿದು ಬಾಜಿಸುವ ಒಂದು ತೆರದ ವಾದ್ಯ : ಮೋರ್ಚಿಂಗು]. (ಕ್ರಿ.) (ಬಳ. ಮಾ.) ಮೋಸ ಮಾಡು; ವಂಚಿಸು; (ಕೃತ್ರಿಮದಿಂದ) ಹಳ್ಳಕ್ಕೆ ಕೆಡವು (ರೂಪ.). **Jewess** (ನಾ., ಸ್ತ್ರೀ.); **Jewish** (ಗು.); **Jewry** (ನಾ.) ಯೆಹೂ ದ್ಯರು. (ಚರಿತ್ರೆ) (ನಗರ, ಮೊ. ಗಳಲ್ಲಿ) ಯೆಹೂದ್ಯರ ವಸತಿ, ಪಾಳೆಯ.

Jewel ಜ್ಯೂಎಲ್ (ನಾ., ಕ್ರಿ. ಸಕ.) (ಅಲಂಕಾರಕ್ಕಾಗಿ ಧರಿಸುವ, ಸಾ., ರತ್ನ ಕೆತ್ತಿರುವ) ಒಡವೆ; ರತ್ನಾಭರಣ; ಅನರ್ಘ್ಯ ಮಣಿ; ರತ್ನ. ಅಮೂಲ್ಯ ವ್ಯಕ್ತಿ, ವಸ್ತು. (The J.-house. 'Tower of London' ಎಂಬ ಭವನದಲ್ಲಿ ಇಂಗ್ಲೆಂಡಿನ ರಾಜಾಭರಣಗಳನ್ನಿಟ್ಟಿರುವ ಕೊಠಡಿ). (ಕ್ರಿ.) ಆಭರಣಗಳಿಂದ ಅಲಂಕರಿಸು; ಆಭರಣಗಳನ್ನು ಅಳವಡಿಸು. ಗಡಿಯಾರದಲ್ಲಿ ತಿರುಗುಣಿ ರಂಧ್ರ ಮಾಡಲು ರತ್ನಶಿಲೆ ಹಾಕು. **Jeweller** (ನಾ.); **Jewellery, Jewelry** (ನಾ.) ಒಡವೆಗಳು; ರತ್ನಾಭರಣಗಳು. **Jewelly** (ಗು.) ಆಭರಣಗಳುಳ್ಳ; ಆಭರಣಗಳನ್ನು ಹೋಲುವ.

Jewry. **Jew** ನೋಡಿ.

Jézebel ಜೆಸೆಬೆಲ್ (ನಾ.) ಧೃಷ್ಟೆ; ಪತಿತೆ; ಭ್ರಷ್ಟೆ; ಗಂಡುಬೀರಿ; ಪುಂಶ್ಚಲಿ; ತಾಟಕಿ; ತಾಟಗಿತ್ತಿ. ಮುಖಕ್ಕೆ ಬಣ್ಣ ಹಾಕಿಕೊಳ್ಳುವ ಹೆಂಗಸು.

Jib[1] ಜಿಬ್ (ನಾ., ಕ್ರಿ.) ಹಡಗಿನ ಧ್ವಜಸ್ತಂಭದ ತುದಿಯಿಂದ ಹೊರಟು ಹಡಗಿಗೆ ಭದ್ರವಾಗಿ ಬಿಗಿದ ಹೊರಚಿಯಮೇಲಿನ ತ್ರಿಕೋನಾಕಾರದ ಪಟ (Cut of his j. ಮುಖಲಕ್ಷಣ; ಮೂರ್ತಿಸ್ವರೂಪ. **Jibboom** ಹಡಗಿನ ಮೂಕಿಮರದ ಕೊನೆಯಿಂದ ಹೊರಚಾಚಿದ ಒಂದು ತೊಲೆ). ಎತ್ತುಯಂತ್ರದ ಚಾಚುತೋಳು. (ಕ್ರಿ.) (ನಾವೆ) (ಪಟವನ್ನು, ಕೂವೆಯ ಅಡ್ಡ ತೊಲೆಯನ್ನು) ಹಡಗಿನ ಒಂದು ಪಕ್ಕದಿಂದ ಮತ್ತೊಂದು ಪಕ್ಕಕ್ಕೆ ಎಳೆದು ಸುತ್ತಿಸು; ಹೀಗೆ ಹಡಗಿನ ಪಕ್ಕದಿಂದ ಪಕ್ಕಕ್ಕೆ (ಪಟ, ಮೊ.) ಸುತ್ತಿಬರು.

Jib[2] ಜಿಬ್ (ಕ್ರಿ. ಅಕ.) (ಕುದುರೆ, ಮೊ.) ಮುಂದಕ್ಕೆ ಹೋಗದೆ ಮೊಂಡಾಟಮಾಡಿ ನಿಂತುಬಿಡು; ಮುಂದಕ್ಕೆ ಹೋಗುವ ಬದಲು ಹಿಂದು ಹಿಂದಕ್ಕೆ, ಪಕ್ಕ ಪಕ್ಕಕ್ಕೆ, ತುಯಿದಾಡು; ತಕರಾರು ಮಾಡು. (ರೂಪ.) (ಯಾವುದಾದರೂ) ಕಾರ್ಯವನ್ನು ಪಟ್ಟುಹಿಡಿದು ಮುಂದು ವರಿಸದಿರು; ಹಿಂದೇಟು ಹೊಡೆ. J. at (ಒಂದು ಮಾರ್ಗಕ್ಕೆ, ಒಬ್ಬ ವ್ಯಕ್ತಿಗೆ) ಅಸಹ್ಯ ತೋರು; ಹಿಂಜರಿ. **Jibber** (ನಾ.) ಮೊಂಡು ಬೀಳುವ ಕುದುರೆ.

Jibba(h), jú-, dj- ಜಿಬ, ಜುಬ್ಬ (ನಾ.) ಮಹಮ್ಮದೀಯರು ತೊಡುವ ಉದ್ದವಾದ ನಿಲುವಂಗಿ, ದಗಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Jib door ಜಿಬ್ ಡೋರ್ (ನಾ.) ಗೋಡೆಯಲ್ಲಿ ಪ್ರತ್ಯೇಕವಾಗಿದ್ದಂತೆ ತೋರದಹಾಗೆ, ಸಾ., ಬಣ್ಣ, ಮೊ. ನ್ನು ಹಾಕಿದ, ಗೋಡೆಯ ಮುಖಕ್ಕೆ ಸಮನಾಗಿಟ್ಟಿರುವ, ಬಾಗಿಲು : ಮರಸು ಬಾಗಿಲು.

Jibe = Gibe.

Jíff(y) ಜಿಫ್(ಫಿ) (ನಾ.) ಅತ್ಯಂತ ಸ್ವಲ್ಪ ಕಾಲ ; ಕ್ಷಣ ಮಾತ್ರ. In a j. ಅರೆ ಕ್ಷಣದಲ್ಲಿ. (Wait) half a j. ಅರೆ ಕ್ಷಣ (ತಡೆ)

Jig ಜಿಗ್ (ನಾ., ಕ್ರಿ.) ಉಲ್ಲಾಸದ, ಅವಸರವಸರದ, ಎಗುರು, — ಕುಣಿತ ; ಇದಕ್ಕೆ ಹೊಂದಿಸಿದ ಸಂಗೀತ. (ಕ್ರಿ.) ಉಲ್ಲಾಸ ನರ್ತನ ಮಾಡು ; ಮೇಲಕ್ಕೂ ಕೆಳಕ್ಕೂ, ಹಿಂದಕ್ಕೂ ಮುಂದಕ್ಕೂ, ಬೇಗ ಬೇಗ, ಹಠಾತ್ತನೆ, ಚಲಿಸು. (ರಂಧ್ರಗಳಿರುವ ತಳವುಳ್ಳ ಪೆಟ್ಟಿಗೆಯಲ್ಲಿ ಅದುರನ್ನು ಹಾಕಿ) ನೀರಿನಲ್ಲಿ ಜಾಲಾಡಿ (ಅದುರಿನ) ಒರಟುಭಾಗವನ್ನು ನಯ ಭಾಗದಿಂದ ಪ್ರತ್ಯೇಕಿಸು. J.-saw (ಅಮೆ. ಸಂ.) ಚಿತ್ರಗೆಲಸದ ಯಂತ್ರಗರಗಸ. J.-saw puzzle ಒಂದು ಚಿತ್ರಪಟವನ್ನು ಹಲಗೆಯ ಮೇಲೆ ಅಂಟಿಸಿ, ಆ ಹಲಗೆಯನ್ನು ಚಿತ್ರಗೆಲಸದ ಗರಗಸದಿಂದ ಒಂದು ಕ್ರಮ ವಿಲ್ಲದ ಭಾಗಗಳಾಗಿ ಕೊಯ್ದು ತೊಡಕು (ಈ ತುಂಡುಗಳನ್ನು ಜೋಡಿಸಿ ಸರಿಯಾದ ಚಿತ್ರವನ್ನಾಗಿ ಮಾಡಬೇಕು) : ತುಂಡುಚಿತ್ರದ ತೊಡಕು.

Jígger ಜಿಗರ್ (ನಾ.) (ನಾವೆ) ಭಾರವೆತ್ತುವ ಒಂದು ತೆರದ ಸಣ್ಣ ಕಪ್ಪಿ. (ಹಡಗಿನ) ಸಣ್ಣ ಪಟ; ಸಣ್ಣ ಪಟದ ಒಕ್ಕೂವೆಯ ಹಡಗು. (ಬಳ. ಮಾ.) ಬಿಲಿಯರ್ಡ್ಸ್ ದಾಂಡಿಗೆ ಊರೆ. ಅದುರನ್ನು ಜಾಲಾಡುವವನು ; ಜಾಲಾಡುವ ಒಂದರಿಯುಳ್ಳ ಪೆಟ್ಟಿಗೆ. J.-mast ನಾಲ್ಕು ಕೂವೆಯ ಹಡಗಿನಲ್ಲಿ ಅತ್ಯಂತ ಹಿಂದಿನ ಕೂವೆ.

Jíggle ಜಿಗ್‌ಲ್ (ಕ್ರಿ. ಸಕ.) ಲಘುವಾಗಿ ತೂಗು, ಥಟ್ಟನೆ ಜಗ್ಗು.

Jihád, Je- ಜಿಹಾಡ್ (ನಾ.) (ಇಸ್ಲಾಮಿನಲ್ಲಿ ನಂಬಿಕೆಯಿಲ್ಲದವರಮೇಲೆ) ಮಹಮ್ಮದೀಯರ ಧಾರ್ಮಿಕ ಯುದ್ಧ : ಜಿಹಾದ್. (ರೂಪ.) ಒಂದು ತತ್ತ್ವ, ಮೊ. ದುದರ ಪರವಾಗಿ ಅಥವಾ ವಿರುದ್ಧವಾಗಿ ಹೂಡಿದ ಯುದ್ಧ ; ಮರಣಾವಧಿ ಯುದ್ಧ.

Jill = Gill[4].

Jilt ಜಿಲ್ಟ್ (ನಾ., ಕ್ರಿ. ಸಕ.) ಪ್ರಣಯಕ್ಕೆ ಪ್ರೋತ್ಸಾಹ ಕೊಟ್ಟು, ತರುವಾಯ ಕಾರಣವಿಲ್ಲದೆಯೇ ಪ್ರಣಯಿಯನ್ನು ನಿರಾಕರಿಸುವವಳು ; (ಅಪೂರ್ವವಾಗಿ) ಹೀಗೆ ಪ್ರಣಯಿನಿಯನ್ನು ನಿರಾಕರಿಸುವವನು : ಪ್ರಣಯ ದ್ರೋಹಿ. (ಕ್ರಿ.) ಹೀಗೆ ಪ್ರಣಯಿ(ನಿ)ಯನ್ನು ನಿರಾಕರಿಸು ; ಪ್ರಣಯ ದ್ರೋಹ ಮಾಡು.

Jim Crow ಜಿಮ್ ಕ್ರೋ (ನಾ.) (ಅಮೆ. ಸಂ.) ನೀಗ್ರೋ (ಜಾತಿಯವನ ಅಡ್ಡ ಹೆಸರು) (J.-C. car ನೀಗ್ರೋ ಜನರ ಪ್ರಯಾಣಕ್ಕೆ ಪ್ರತ್ಯೇಕ ವಾಗಿ ಗೊತ್ತುಮಾಡಿರುವ ರೈಲುಬಂಡಿ). ಬಗ್ಗಿರುವ ಕಬ್ಬಿಣದ ಸರಳು ಗಳನ್ನಾಗಲಿ, ರೈಲುಕಂಬಿಗಳನ್ನಾಗಲಿ ಮರಸುತ್ತಿನ ಒತ್ತಡದಿಂದ ನೆಟ್ಟಗೆ ಮಾಡುವ ಒಂದು ಸಲಕರಣೆ.

Jíminy ಜಿಮಿನ್ನೆ (ಭಾವ. ಅವ್ಯ.) (ಪ್ರಾಚೀ. ಪ್ರ.) = Gemini.

Jimp ಜಿಂಪ್ (ಗು.) (ಸ್ಕಾ. ಪ್ರ.) ತೆಳು ; ಕೋಮಲ ; ಲಲಿತ. ಅಲ್ಪ ಪ್ರಮಾಣದ ; ಕೊಂಚ.

Jíngle ಜಿಂಗ್‌ಲ್ (ನಾ., ಕ್ರಿ.) ಸಣ್ಣ ಗಂಟೆಗಳು, ಸರಪಣಿಯ ಕೊಂಡಿ ಗಳು, ಮೊ. ಗಳಿಂದ ಹೊರಡುವಂಥ ಮಿಶ್ರ ಧ್ವನಿ : ಝಣಝಣ; ಝಣತ್ಕಾರ. (ಮು., ಗಮನಾಕರ್ಷಣಕ್ಕಾಗಿ) ಪದಗಳಲ್ಲಿ ಒಂದೇ (ಜಾತಿ) ಧ್ವನಿಯ ಆವರ್ತನೆ : ಯಮಕ. (ಐರ್ಲೆಂಡಿನ ಮತ್ತು ಆಸ್ಟ್ರೇಲಿಯದ) ಎರಡು ಚಕ್ರಗಳ ಮುಚ್ಚುಬಂಡಿ. (ಕ್ರಿ.) (ಬೀಗದ ಕೈಗಳು, ಮೊ.) ಝಣಗುಟ್ಟು ; —ಗುಟ್ಟಿಸು. (ಬರವಣಿಗೆ) ಪ್ರಾಸ, ಯಮಕ, ಮೊ. ಗಳಿಂದ ತುಂಬಿರು.

Jíngo ಜಿಂಗೊ [ಭಾವ. ಅವ್ಯ., ನಾ. (ಬ. ವ. -oes), ಗು.] [(ದೃಢವಾಗಿ, ಪ್ರಮಾಣ ಪೂರ್ವಕ, ಹೇಳುವಲ್ಲಿ) By (the living) j. ! ದೇವರಾಣೆ !]. ಯುದ್ಧ ವಾದಿ ; ಅಬ್ಬರದ ದೇಶಾಭಿಮಾನಿ. (ಗು.) ಒರಟು ಉತ್ಸಾಹದ ; ಜರ್ಬಿನ. **Jíngoism** (ನಾ.) ; **Jíngoist** (ನಾ.) ; **Jingoístic** (ಗು.)

Jinks ಜಿಂಕ್ಸ್ (ನಾ.) High j. ನಗೆಯಾಟಪಾಟ ; ಸಂಭ್ರಮದ ಮೆರೆದಾಟ ; ವಿನೋದ ಕ್ರೀಡೆ.

Jinneé ಜಿನೀ (ನಾ. ; ಬ. ವ. Jinn ; ಇದನ್ನೇ ಅನೇಕ ವೇಳೆ ಏ. ವ. ವಾಗಿಯೂ ಪ್ರಯೋಗಿಸುವುದುಂಟು ; ಸ್ತ್ರೀ. Jinneéyeh ಜಿನೀಯೆ) (ಮಹಮ್ಮದೀಯ ಪಿಶಾಚವಿದ್ಯೆಯಲ್ಲಿ) ದೇವದೂತರಿಗಿಂತ ಕೆಳ ದರ್ಜೆಯ, ಮನುಷ್ಯ ರೂಪದಲ್ಲೂ ಪ್ರಾಣಿ ರೂಪದಲ್ಲೂ ಕಾಣಿಸಿಕೊಳ್ಳಬಲ್ಲ, ಮನುಷ್ಯರಮೇಲೆ ಲೋಕೋತ್ತರವಾದ ಪ್ರಭಾವವುಳ್ಳ, ಒಂದು ಭೂತ, ಪಿಶಾಚಿ : ಜಿನ್ನಿ (=Genie)

Jinrícksha, -ríkisha ಜಿನ್‌ರಿಕ್‌ಷ, — ರಿಕಿಷ (ನಾ.) ತಲೆಮುಚ್ಚು ಇರುವ, ಆಳು ಅಥವಾ ಆಳುಗಳು ಎಳೆಯುವ, ಹಗುರವಾದ ಎರಡು ಚಕ್ರದ ಬಂಡಿ : 'ರಿಕ್‌ಷಾ' (ಬಂಡಿ)

Jírga ಜರ್ಗ (ನಾ.) ಅಫ್ಘನ್ ಕುಲ ನಾಯಕರ ಸಭೆ : ಜರ್ಗ.

Jiu-jítsu = Ju-jutsu.

Job[1] ಜಾಬ್ (ನಾ., ಕ್ರಿ.) (ಮು., ಕೂಲಿಗಾಗಿ ಅಥವಾ ಲಾಭಕ್ಕಾಗಿ ಮಾಡುವ) ಚಿಲ್ಲರೆ ಕೆಲಸ ; ಕರ್ತವ್ಯಾನುಸಾರವಾಗಿ ನಡೆಯದೆ ಸ್ವಾರ್ಥಕ್ಕೆ ದುರುಪಯೋಗ ಪಡಿಸಿಕೊಂಡ ಕೆಲಸ; ಸ್ವಾರ್ಥ ಸಾಧನ. (ತಾನು) ಮಾಡಬೇಕಾದುದು ; ಕೆಲಸ. [On the j. (ಅಸಂ.) ಕೆಲಸ ಮಾಡುತ್ತ ; ಎಚ್ಚರಿಕೆಯಿಂದ. Do person's j. ಒಬ್ಬನನ್ನು ಹಾಳುಮಾಡಿ ಬಿಡು. Bad j. ನಿಷ್ಪ್ರಯೋಜಕ ಕಾರ್ಯ ; ಫಲವಾಗದೆ ಹೋದದ್ದು. Good, bad, j. (ಒಂದು ಕಾರ್ಯದ) ಸುಸ್ಥಿತಿ, ದುಃಸ್ಥಿತಿ. **J.-lot** ಲಾಭ ಸಂಪಾದಿಸಬಹುದೆಂಬ ಆಸೆಯಿಂದ ವ್ಯಾಪಾರದಲ್ಲಿ ಕೊಂಡ ಸಾಮಾನು ಗಳು. **Jobmaster** (ಕುದುರೆ, ಬಂಡಿ, ಮೊ. ನ್ನು) ಬಾಡಿಗೆಗೆ ಕೊಡು ವವನು. **J.-work** (ಕೂಲಿಯ) ಚಿಲ್ಲರೆ ಕೆಲಸ, ಬಿಡಿ ಕೆಲಸ]. (ಕ್ರಿ.) ಚಿಲ್ಲರೆ ಕೆಲಸ ಮಾಡು. (ಕುದುರೆ, ಬಂಡಿ, ಮೊ. ನ್ನು ಕ್ಲುಪ್ತ ಕಾರ್ಯಕ್ಕೆ, ಕಾಲಕ್ಕೆ) ಬಾಡಿಗೆಗೆ ತೆಗೆದುಕೊ, — ಕೊಡು. (ಬಂಡವಾಳ ಪತ್ರಗಳು, ಸರಕು, ಮೊ. ಗಳ) ದಳ್ಳಾಳಿವ್ಯಾಪಾರ ನಡಸು ; ಬಂಡವಾಳ ಪತ್ರ ವ್ಯಾಪಾರ ಮಾಡು. ನಂಬಿಕೆಯ ಅಧಿಕಾರ ಸ್ಥಾನವನ್ನು ಸ್ವಾರ್ಥಕ್ಕೆ ದುರುಪಯೋಗಪಡಿಸಿಕೊ. (ಒಂದು ವಿಷಯದಲ್ಲಿ, ವ್ಯವಹಾರದಲ್ಲಿ) ದುರ್ವ್ಯಾಪಾರ ನಡಸು. **Jóbber** (ನಾ.) ; **Jóbbery** (ನಾ.) ಅಧಿಕಾರ ಸ್ಥಾನದಲ್ಲಿ ಸ್ವಾರ್ಥ ಸಾಧನೆ.

Job[2] ಜಾಬ್ (ಕ್ರಿ., ನಾ.) ಸ್ವಲ್ಪ ಚುಚ್ಚು, ಇರಿ ; ಕುಕ್ಕು ; (ಕುದುರೆಯನ್ನು) ಕಡಿವಾಣ ಒತ್ತಿ ನೋಯಿಸು. (ನಾ.) ತಿವಿತ ; ಇರಿತ ; ಕಡಿವಾಣದ ಥಟ್ಟನೆಯ ಒತ್ತುವಿಕೆ.

Job[3] ಜೋಬ್ (ನಾ.) (ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ ಬರುವ) Book of J. ಎಂಬ ಪ್ರಕರಣದ ಕಥಾ ನಾಯಕ (ಒಬ್ಬ ಯಹೂದ್ಯ ನಾಯಕ ; ಈತನು ಕಷ್ಟಸಹಿಷ್ಣುತೆಗೆ ಪ್ರಸಿದ್ಧನಾದವನು). Would try the patience of J. ಜೋಬನಂಥವನ ತಾಳ್ಮೆಯನ್ನೂ ಕಳೆಯುತ್ತದೆ; ಎಂಥವನನ್ನೂ ರೇಗಿಸುತ್ತದೆ. J.'s comforter (Comfort ನೋಡಿ). J.'s tears ಮಣಿಯಾಗಿ ಉಪಯೋಗಿಸುವ ಒಂದು ಬಗೆಯ ಹುಲ್ಲಿನ ಬೀಜ.

Jobátion ಜೊಬೇಷನ್ (ನಾ.) (ಮು., ದೀರ್ಘವಾದ) ವಾಗ್ದಂಡನೆ.

Jóbbernowl ಜಾಬರ್‌ನೋಲ್ (ನಾ.) ಮಡ್ಡಿ ತಲೆ ; ದಡ್ಡ.

Jock ಜಾಕ್ (ನಾ.) (ಸೈನಿಕ ಅಸಂ.) (ಸ್ಕಾಟ್ಲೆಂಡಿನ) ಹೈಲೆಂಡು ಸೈನಿಕ (= Jack)

Jóckey[1] ಜಾಕಿ (ನಾ.) ಜೂಜುಕುದುರೆಯ ಸವಾರ : 'ಜಾಕಿ' [= jock (ಬಳ. ಮಾ.). J. Club (ಇಂಗ್ಲೆಂಡಿನಲ್ಲಿ) ಕುದುರೆ ಪಂದ್ಯ ಗಳ ಆಡಳಿತ ವಹಿಸಿರುವ ನ್ಯೂಮಾರ್ಕೆಟ್ ಎಂಬ ಸ್ಥಳದಲ್ಲಿಯ ಸಂಸ್ಥೆ]. ಹುಡುಗ ; ಕೀಳಾಳು. **Jóckeydom** (ನಾ.) (ಒಟ್ಟನಲ್ಲಿ) ಜಾಕಿಗಳು. **Jóckeyship** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Jóckey[2] ಜಾಕಿ (ಕ್ರಿ.) (ಹೆಚ್ಚು ಬುದ್ಧಿಯಿಂದ ಒಬ್ಬನನ್ನು) ಮೋಸಮಾಡು ; ವಂಚಿಸು ; ಠಕ್ಕಿಸು. (ಒಬ್ಬನನ್ನು) ಒಂದು ಕಾರ್ಯ ಮಾಡದಂತೆ, ಮಾಡುವಂತೆ, ಮೋಸಗೊಳಿಸು ; ಮೋಸದಿಂದ (ಒಬ್ಬನನ್ನು) ಸಾಗಿಸಿಬಿಡು, ಹೊರ ಸೆಳೆ, ಒಳಗೆ ಸಿಕ್ಕಿಸಿಕೊ (*Away*, *out*, *in* ಮೊ. ಉಪ. ದೊಡನೆ)

Jócko ಜಾಕೊ (ನಾ.) = Chimpanzee.

Jocóse ಜೊಕೋಸ್ (ಗು.) ಹುಡುಗಾಟಿಕೆಯ; ವಿನೋದ ಪರ; ಸರಸದ; ಪರಿಹಾಸ ಶೀಲ. **Jocósely** (ಕ್ರಿ. ವಿ.) ; **Jocóseness** (ನಾ.) ; **Jocósity** — ಕಾ — (ನಾ.) ; **Jócular** ಜಾಕ್ಯುಲರ್ (ಗು.) ಉಲ್ಲಾಸ ಶೀಲ; ವಿನೋದ ಪರ; ಪರಿಹಾಸ ಶೀಲ. **Jocularity** — ಲ್ಯಾರಿಟಿ (ನಾ.) ; **Jócularly** (ಕ್ರಿ. ವಿ.)

Jócular. **Jocose** ನೋಡಿ.

Jócund ಜಾ(ಜೋ)ಕಂಡ್ (ಗು.) ಉಲ್ಲಾಸ ಶೀಲ ; ವಿನೋದ ಪರ ; ಆಹ್ಲಾದಕರ; ಖುಷಿಯಾದ. **Jocúndity** (ನಾ.); **Jócundly** (ಕ್ರಿ. ವಿ.)

Jodhpúrs ಜೋಡ್‌ಪೂರ್ಸ್ (ನಾ., ಬ. ವ.) ಕುದುರೆಸವಾರಿ, ಮೊ. ಗಳಿಗಾಗಿ ಉಪಯೋಗಿಸುವ, ಮಂಡಿಯಿಂದ ಹರಡಿನ ವರೆಗೆ ಗುತ್ತನಾಗಿರುವ ಷರಾಯಿ. (ಇಂಡಿಯದ ಜೋಧಪುರದ ಹೆಸರಿನಿಂದ)

Joe ಜೋ (ನಾ.) Not for J. ! (ಅಸಂ.) ನನಗೆ ಬೇಡ ; ನಾನೊಲ್ಲೆ.

Joe Míller ಜೋ ಮಿಲರ್ (ನಾ.) ಹಳಸಲು ಹಾಸ್ಯ, ವಿನೋದ. (Joseph Miller ಎಂಬ ಹರ್ಷ ನಟನ ಹೆಸರಿನಿಂದ)

Jóey ಜೋಇ (ನಾ.) 'ಕಾಂಗರೂ' ಮರಿ; (ಯಾವುದಾದರೂ ಪ್ರಾಣಿಯ) ಮರಿ.

Jog ಜಾಗ್ (ಕ್ರಿ., ನಾ.) (ಭಾರವಾದುದನ್ನು) ನೂಕಿ, ಥಟ್ಟನೆ ತಿವಿದು, ಅಲುಗಿಸು ; ಜರುಗಿಸು ; ಸ್ವಲ್ಪ ತಳ್ಳು. (ಗಮನ ಸೆಳೆಯಲು) ಮೊಣಕೈಯಿಂದ ತಿವಿ. (ಒಬ್ಬನ, ತನ್ನ) ಜ್ಞಾಪಕ ಶಕ್ತಿಯನ್ನು ಚುರುಕುಗೊಳಿಸು. ಕಷ್ಟಪಟ್ಟುಕೊಂಡು ಮುಂದುವರಿ ; ಕಾಲೆಳೆದುಕೊಂಡು ಹೋಗು ; ಓಲಾಡಿಕೊಂಡು ಹೋಗು (*On*, *along* ಉಪ. ದೊಡನೆ); ತನ್ನ ದಾರಿ ಹಿಡಿದು ಹೋಗು ; ಹೊರಡು (We must be jogging). ಮುಂದುವರಿ ; ಕಾಲ ಕಳೆ [We must j. on somehow ಹೇಗೆಯೋ ಕಾಲಹರಣ ಮಾಡಬೇಕು. Matters j. along ಸಂದರ್ಭಗಳು ಮುಂದುವರಿಯುತ್ತವೆ. J.-trot (ಸಾ., ಕುದುರೆಯ) ನಿಧಾನವಾದ, ಒಂದೇ ಸಮದ ನಡಗೆ. (ರೂಪ.) ಬೇಜಾರು ಹಿಡಿಸುವಂಥ ಸಾಗಣೆ]. (ನಾ.) ಅಲುಗಾಟ; ತಳ್ಳಾಟ; ತಿವಿತ. ನಿಧಾನವಾದ ನಡಗೆ ; ಬೇಜಾರು ನಡೆ. **Jóggle**[1] ಜಾಗ್ಲ್ (ಕ್ರಿ., ನಾ.) ಥಟ್ಟನೆಯ ತಿವಿತಗಳಿಂದ (ಹೇಗೊ ಹಾಗೆ) ತಡೆದು ತಡೆದು ಅಲುಗು, ಚಲಿಸು. (ನಾ.) ಮೆತ್ತನೆಯ ಅಲುಗಾಟ.

Jóggle[2] ಜಾಗ್ಲ್ (ನಾ., ಕ್ರಿ. ಸಕ.) ಕಲ್ಲಿನ ಅಥವಾ ಮರದ ಎರಡು ತುಂಡುಗಳು ಒಂದರಮೇಲೊಂದು ಜಾರಿಹೋಗದಂತೆ ಏರ್ಪಡಿಸಿದ ಸೇರುವೆ ; ಇದಕ್ಕಾಗಿ ಒಂದು ತುಂಡಿನಲ್ಲಿ ಮಾಡಿದ ಕಚ್ಚು, ಮತ್ತೊಂದರಲ್ಲಿ ಅದಕ್ಕೆ ಹೊಂದುವಂತೆ ಮಾಡಿದ ಚಾಚು ; ಇದೇ ಉದ್ದೇಶಕ್ಕಾಗಿ ಎರಡು ತುಂಡುಗಳನ್ನೂ ಸೇರಿಸಿ ಹಾಕಿದ ಸಣ್ಣ ಕೂಡುಬೆಣೆ. (ಕ್ರಿ.) ಸೇರುವೆ(ಬೆಣೆ)ಯಿಂದ ಕೂಡಿಸು.

Johánnine ಜೊಹ್ಯಾನೈನ್ (ಗು.) (ಏಸುಕ್ರಿಸ್ತನ ಶಿಷ್ಯರಲ್ಲೊಬ್ಬನಾದ) ಜಾನಿನ.

John ಜಾನ್ (ನಾ.) (ಕ್ರೈಸ್ತರಲ್ಲಿ) ಗಂಡಸಿನ ಕ್ರೈಸ್ತ ನಾಮ : ಜಾನ್. J. Bull ಇಂಗ್ಲಿಷ್ ಜನಾಂಗ ; ಮಾದರಿಯ (ಅಚ್ಚ) ಇಂಗ್ಲಿಷಿನವನು. **John-Bullism** (ನಾ.) ಮಾದರಿಯ ಇಂಗ್ಲಿಷ್ ನಡತೆ, ಶೀಲ, ಸ್ವಭಾವ, ವೈಶಿಷ್ಟ್ಯ, ಹೇಳಿಕೆ, ಕಾರ್ಯ. J. Chinaman ಚೀನಿ(ಗ); ಚೀನಾ ದೇಶಸ್ಥ. J. Company ಈಸ್ಟ್ಇಂಡಿಯಾ ಕಂಪೆನಿ. J. Doe (ನ್ಯಾ. ಶಾ. ದಲ್ಲಿ) ಕಾಲ್ಪನಿಕ ವ್ಯಕ್ತಿ. J.-o'-Groat's (-House) ಸ್ಕಾಟ್ಲೆಂಡಿನ ಉತ್ತರ ಭಾಗ (From J.-o'-G. to Land's End ಗ್ರೇಟ್‌ಬ್ರಿಟನ್ನಿನ ಆದ್ಯಂತವೂ)

Jóhnian ಜೋನಿಯನ್ (ಗು., ನಾ.) ಕೇಂಬ್ರಿಡ್ಜಿನಲ್ಲಿಯ St. John's ಕಾಲೇಜಿನ(ವನು)

Jóhnny ಜಾನಿ (ನಾ.) ಆಸಾಮಿ ; ಗೆಣೆಯ (ಮು., ಸೊಗಸುಗಾರ, ಸೋಮಾರಿ). J. Armstrong (ನಾವಿಕ ಅಸಂ.) ಕೈ ಸಾಮರ್ಥ್ಯ ; ತೋಳ್ಬಲ. J.-cake (ಅಮೆ. ಸಂ. ದ) ಮುಸುಕಿನ ಜೋಳದ ಹಿಟ್ಟಿನ ರೊಟ್ಟಿ ; (ಆಸ್ಟ್ರೇಲಿಯದ) ಗೋಧಿಯ ಹಿಟ್ಟಿನ ರೊಟ್ಟಿ. J. Raw ಅನನುಭವಿ ; ಹೊಸಬ.

Johnsónian ಜಾನ್ಸೋನಿಯನ್ (ಗು.) (೧೮ನೆಯ ಶತಮಾನದಲ್ಲಿದ್ದ ಇಂಗ್ಲೆಂಡಿನ ಪ್ರಸಿದ್ಧ ಸಾಹಿತಿಯೂ ನಿಘಂಟುಕಾರನೂ ಆದ) ಸ್ಯಾಮ್ಯುಯೆಲ್ ಜಾನ್ಸನ್ನಿನ(ಂಥ) ; ಮು., ಲ್ಯಾಟಿನ್ ವ್ಯುತ್ಪತ್ತಿಯ ಪದಗಳಿಂದ ತುಂಬಿದ. **Johnsonése** ಜಾನ್ಸನೀಸ್ (ನಾ.) ಜಾನ್ಸನ್ನಿನ ಭಾಷೆ, ಶೈಲಿ ಅಥವಾ ಅದರ ಅನುಕರಣ ; ದೊಡ್ಡ ದೊಡ್ಡ ಶಬ್ದಗಳ ಪ್ರಯೋಗ.

Joie de vívre ಝ್ವಾ ಡ ವೀವ್ರ್ (ನಾ.) ಜೀವನದ (ಸಾತ್ವಿಕ) ಸುಖಾನುಭವ ; ಬಾಳ್ಸವಿ.

Join ಜಾಯ್‌ನ್ (ಕ್ರಿ., ನಾ.) (ವಸ್ತುಗಳನ್ನು, ಒಂದಕ್ಕೊಂದಕ್ಕೆ) ಕೂಡಿಸು, ಸೇರಿಸು, ಜೋಡಿಸು ; (ಎರಡು ಬಿಂದುಗಳನ್ನು) ಸರಳ ರೇಖೆಯಿಂದ ಸೇರಿಸು ; (ಮದುವೆ, ಸ್ನೇಹ, ಬಾಂಧವ್ಯ, ಮೊ. ಗಳ ಮೂಲಕ ಒಬ್ಬರೊಡನೊಬ್ಬರನ್ನು) ಒಂದಾಗಿಸು, ಕೂಡಿಸು, ಸಂಬಂಧ ಮಾಡಿಸು (*With*, *to* ಉಪ. ದೊಡನೆ); ಒಂದುಗೂಡು ; ಏಕೀಭವಿಸು (*With*, *to* ಉಪ. ದೊಡನೆ ಸಹ) ; (ಒಂದು ಕೆಲಸ ಮಾಡುವುದರಲ್ಲಿ) ಇತರರೊಡನೆ ಸೇರು, ಭಾಗ ವಹಿಸು ; (ಒಬ್ಬನ) ಸಂಗಾತಿಯಾಗು, ಜೊತೆ ಸೇರು ; (ಸಂಘ, ಮೊ. ಗಳ) ಸದಸ್ಯನಾಗು, — ನಾಗಿ ಸೇರು ; (ಸೈನ್ಯದಳ, ಹಡಗು, ವ್ಯಾಪಾರ ಸಂಸ್ಥೆ, ಮೊ. ಗಳಲ್ಲಿ) ಒಂದು ಸ್ಥಾನಕ್ಕೆ, ತನ್ನ ಸ್ಥಳಕ್ಕೆ, ನೌಕರಿಗೆ, (ಮರಳಿ) ಸೇರಿಕೊ ; ಸಂಗಮವಾಗು ; ಕೂಡು (The Cauvery and the Kapini join at T.-Narsipur). [J. battle ಕಾಳಗ ಮೊದಲುಮಾಡು ; ಯುದ್ಧವನ್ನು ಆರಂಭಿಸು. J. hands ಕೈ ಜೋಡಿಸಿಕೊ ; (ಇಬ್ಬರು ಸಖ್ಯ ಸೂಚಕವಾಗಿ) ಒಬ್ಬರ ಕೈಯನ್ನೊಬ್ಬರು ಹಿಡಿ ; (ಮದುವೆಯಲ್ಲಿ) ಪಾಣಿಗ್ರಹಣ ಮಾಡು ; (ಪುರೋಹಿತ, ಮದುವೆಯಲ್ಲಿ) ಪಾಣಿಗ್ರಹಣ ಮಾಡಿಸು. (ರೂಪ.) ಒಂದು ಕಾರ್ಯದಲ್ಲಿ, ಉದ್ಯಮದಲ್ಲಿ, ಒಟ್ಟಿಗೆ ಸೇರು, ಒಟ್ಟಾಗು. J. issue (Issue ನೋಡಿ). J. up (ಕ್ರಿ. ಅಕ.) ಸೈನ್ಯಕ್ಕೆ ಸೇರು]. (ನಾ.) ಕೂಡೆಡೆ ; ಕೂಡುಗೆರೆ. **Joínder** ಜಾಯ್‌ಂಡರ್ (ನಾ.) (ನ್ಯಾ. ಶಾ. ದಲ್ಲಿ ವಿನಾ ಅಪೂರ್ವ) ಕೂಡಿಸುವುದು ; ಸೇರಿಸುವುದು ; ಒಟ್ಟುಗೂಡುವಿಕೆ. **Joíner** ಜಾಯ್ನರ್ (ನಾ.) (ಕ್ರಿಯಾರ್ಥಗಳಲ್ಲಿ). ಮನೆಯ ಪೀಠೋಪಕರಣಗಳು, ಮೊ. ನ್ನೂ ಮರಗೆಲಸದವನು ಮಾಡುವ ಸಾಮಾನುಗಳಿಗಿಂತ ಹಗುರವಾದ ಮತ್ತು ಅಲಂಕಾರವಾದ ಇತರ ಮರಗೆಲಸವನ್ನೂ ಮಾಡುವವನು : ಜೋಡಣೆಯ ಕೆಲಸದ ಬಡಗಿ ; ಕೂಡು ಬಡಗಿ. **Joínery** (ನಾ.) ಈ ಕೆಲಸ ; ಈ ಕೆಲಸಗಾರನು ಮಾಡುವ ಸಾಮಾನು.

Joint ಜಾಯ್‌ಂಟ್ (ನಾ., ಗು., ಕ್ರಿ. ಸಕ.) (ಎರಡು ವಸ್ತುಗಳನ್ನು) ಸೇರಿಸಿರುವ ಸ್ಥಾನ ; ಸೇರಿಕೆ; ಸಂಧಿ ; ಕೂಟ ; (ಪ್ರಾಣಿದೇಹದಲ್ಲಿ) ಎರಡು ಮೂಳೆಗಳು ಒಟ್ಟಿಗೆ ಹೊಂದಿಕೊಂಡಿರುವಂತೆ ಏರ್ಪಟ್ಟಿರುವ ರಚನೆ ; ಮೂಳೆ ಕೀಲು ; ಅಸ್ಥಿ ಸಂಧಿ [Out of j. (ಎಲುಬು) ಕೀಲು ತಪ್ಪಿ. (ರೂಪ.) ಕ್ರಮ ತಪ್ಪಿ ; ಅಸ್ತವ್ಯಸ್ತವಾಗಿ. Put (person's) nose out of j. (Nose ನೋಡಿ)]. ಎಲೆ ಅಥವಾ ಕೊಂಬೆ ಹೊರಡುವ ಕಾಂಡಭಾಗ : ಗೆಣ್ಣು ; ಪರ್ವ. ಒಂದು ಕೃತಕ ರಚನೆಯ ಎರಡು ಭಾಗಗಳು ಚಲಿಸದೆ ಭದ್ರವಾಗಿರುವಂತೆ ಅಥವಾ ಚಲಿಸಲು ಅನುಕೂಲಿಸುವಂತೆ, ಸೇರಿಸಿರುವ ಎಡೆ, ಸೇರಿಸುವ ಸಲಕರಣೆ : ಕೂಡೆಡೆ ; ಸಂಯೋಜಕ. (ಭೂ. ವಿ.) ಒಂದು ಬಂಡೆಯಲ್ಲಿಯ ಬಿರುಕು. (ಪ್ರಾಣಿಯ ಅಥವಾ ಸಸ್ಯದ ಒಡಲಿನಲ್ಲಿ) ಕೀಲುಗಳಿಂದಲೊ ಗೆಣ್ಣುಗಳಿಂದಲೊ ಸೇರಿಸಿರುವ, ಒಂದು ಭಾಗ. (ಕಟುಕನು ತುಂಡುಮಾಡಿದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಾಣಿಯ ದೇಹಭಾಗಗಳಲ್ಲೊಂದು (ಮು., ಊಟಕ್ಕೆ ಬಡಿಸುವುದಕ್ಕಾಗಿ ಕತ್ತರಿಸಿದ ತುಂಡು). (ಅಮೆ. ಸಂ. ಅಸಂ.) (ಕಾಯಿದೆಗೆ ವಿರುದ್ಧವಾದ) ಅಫೀಮುಕೋರರ ಕಳ್ಳ ಕೋಣೆ, ಕುಡಿತದಂಗಡಿ. [J.-stool (ಹಿಂದೆ, joined-) (ಜೋಡಣೆಯ ಬಡಗಿಯು ಬೇರೆ ಬೇರೆ ಭಾಗಗಳನ್ನು ಜೋಡಿಸಿ ಮಾಡಿದ) ಜೋಡಣೆಯ ನಾಗಾಲ್ಮಣೆ]. (ಗು.) ಒಟ್ಟಾಗಿ ಇಬ್ಬರು ಅಥವಾ ಹೆಚ್ಚು ಮಂದಿ ಪಡೆದಿರುವ, ಮಾಡಿದ; — ಮಂದಿಗೆ ಸೇರಿದ; ಒಟ್ಟಿನ; ಸಂಸೃಷ್ಟಿಯ [J. action ಕೂಡುಗೆಲಸ. J. opinion ಸಂಯುಕ್ತಾಭಿಪ್ರಾಯ. J. estate ಮಧ್ದಕದ ಆಸ್ತಿ]; (ವ್ಯಕ್ತಿಗಳ ವಿಷಯದಲ್ಲಿ) (ಸ್ವಾಮ್ಯ, ಕಾರ್ಯ, ಮೊ. ಗಳಲ್ಲಿ) ಇತರರೊಡನೆ ಭಾಗವುಳ್ಳ; ಕೂಡನುಭವವುಳ್ಳ; ಅವಿಭಕ್ತ; ಜಂಟಿ [J. owners ಕೂಡೊಡೆಯರು; ಸಹ ಸ್ವಾಮಿಗಳು. During their j. lives ಅವರೆಲ್ಲರೂ ಬದುಕಿರುವಾಗ; ಅವರ ಸಹಜೀವನ ಕಾಲದಲ್ಲಿ. J. stock ಪಾಲುಗಳಾಗಿ ವಿಂಗಡಿಸಿರುವ, ಕೂಡು ಒಡೆತನದ, —ಬಂಡವಾಳ: ಕೂಡು ಬಂಡವಾಳ. (ಗು.) ಕೂಡುಬಂಡವಾಳದ (J.-stock bank, company)]. (ಕ್ರಿ.) ಕೀಲುಗಳಿಂದ ಸೇರಿಸು; (ಇಟ್ಟಿಗೆ, ಮೊ. ಕಟ್ಟಡದ) ಸಂದುಗಳನ್ನು ಗಾರೆ, ಮೊ. ಗಳಿಂದ ಮುಚ್ಚು: ಸಂದುಗಾರೆ ಮಾಡು. (ಹಲಗೆ, ಮೊ. ನ್ನು ಮತ್ತೊಂದಕ್ಕೆ ಜೋಡಿಸಲು) ಅಂಚನ್ನು ಹತ್ತರಿಹಿಡಿದು ಸರಿಮಾಡು; (ಒಂದರ ಒಡಲನ್ನು, ಅಂಗವನ್ನು) ಸೇರಿಕೆಯ ಬಳಿ ಕತ್ತರಿಸು; — ಸೇರಿಕೆಗಳ ಬಳಿ ಕತ್ತರಿಸಿ ತುಂಡು ತುಂಡು ಮಾಡು. **Jóintless** (ಗು.); **Jóintly** (ಕ್ರಿ. ವಿ.); **Jóinter** (ನಾ.) (ಕ್ರಿಯಾರ್ಥಗಳಲ್ಲಿ). ಹಲಗೆ, ಮೊ. ನ್ನು ಜೋಡಿಸುವಲ್ಲಿ ನಯಮಾಡುವ ಹತ್ತರಿ: ಕೂಟ ಹತ್ತರಿ. ಸಂದುಗಾರೆ ಮಾಡುವ ಆಯುಧ. (ಮು., ವಿದ್ಯುತ್ತಿನ ತಂತಿಗಳನ್ನು) ಬೆಸೆಯುವ ಕೆಲಸಗಾರ; ಬೆಸಗಾರ. **Jóintress** (ನಾ.) ವಿಧವಾನುಭವದ ಆಸ್ತಿಯನ್ನು ಅನುಭವಿಸುತ್ತಿರುವ ವಿಧವೆ. **Jóinture** — ಟ್ಯುರ್ (ನಾ., ಕ್ರಿ. ಸಕ.) ಹೆಂಡತಿಯೊಬ್ಬಳಿಗೆ ಮಾತ್ರ ಸೇರಿದ, ಗಂಡ ಸತ್ತ ಬಳಿಕ ಅವಳು ತಾನು ಬದುಕಿರುವವರೆಗೂ ಅನುಭವಿಸಬಹುದಾದ, ಆಸ್ತಿ: ವಿಧವಾನುಭವದ ಆಸ್ತಿ. (ಕ್ರಿ.) (ಹೆಂಡತಿಗೆ) ವಿಧವಾನುಭವದ ಆಸ್ತಿ ಒದಗಿಸು.

Joist ಜಾಯ್‌ಸ್ಟ್ (ನಾ.) ಮಾಳಿಗೆಯಲ್ಲಿ ಜಂತೆ ಅಥವಾ ಹಲಗೆ ಹಾಕುವುದಕ್ಕಾಗಿ ಗೋಡೆಯಿಂದ ಗೋಡೆಗೆ ಹಾಕಿದ ದೂಲಗಳಲ್ಲೊಂದು; ದೂಲ. **Joisted** (ಗು.)

Joke ಜೋಕ್ (ನಾ., ಕ್ರಿ.) ನಗು ಬರಿಸುವಂತೆ ಹೇಳಿದುದು ಅಥವಾ ಮಾಡಿದುದು: ತಮಾಷೆ; ವಿನೋದ; ನಕಲಿ; (ಅಪ)ಹಾಸ್ಯ; ಹುಡುಗಾಟ; ಪರಿಹಾಸ; ಕುಚೋದ್ಯ; ಅಪಹಾಸ್ಯದ ಪರಿಸ್ಥಿತಿ; ನಗೆಗೇಡು [Practical j. ಒಬ್ಬನನ್ನು ನೋಡಿ ನಗಲು ಅವನಮೇಲೆ ಹೂಡಿದ ಕುಚೇಷ್ಟೆ. It is no j. ಅದೇನು ಹುಡುಗಾಟವಲ್ಲ, ಸುಲಭ ಸಾಧ್ಯವಲ್ಲ (ಗಂಭೀರವಾದ ವಿಷಯ)]. (ಕ್ರಿ.) ತಮಾಷೆ, ಹಾಸ್ಯ, ಗೇಲಿ, — ಮಾಡು. **Jókingly** (ಕ್ರಿ. ವಿ.); **Jóky** (ಗು.). **Jóker** (ನಾ.) ಹಾಸ್ಯಗಾರ. (ಅಸಂ.) ಆಳು; ಆಸಾಮಿ. (ಇಸ್ಪೀಟಾಟ) ಕೆಲವು ಆಟಗಳಲ್ಲಿ ಅತ್ಯಂತ ಹೆಚ್ಚಿನ ಬೆಲೆಯ ತುರುಫಾಗಿ ಗಣಿಸುವ, (ಕಟ್ಟಿನಲ್ಲಿ ಹೆಚ್ಚಾಗಿ ಸೇರಿಸಿರುವ), ಬರಿಯ ಅಥವಾ ವಿಕಟಚಿತ್ರದ, ಒಂದು ಎಲೆ: 'ಜೋಕರ್'.

Jólly ಜಾಲಿ (ಗು., ಕ್ರಿ. ವಿ., ನಾ., ಕ್ರಿ. ಸಕ.) ಹರ್ಷಭರಿತ; ಉಲ್ಲಾಸಶೀಲ; ಕುಶಾಲಿನ; ಖುಷಿಯ; ನಗು ಮುಖದ. ಸ್ವಲ್ಪ ಕುಡಿದು ಅಮಲೇರಿದ [The j. god ಬ್ಯಾಕಸ್ (ಮದ್ಯ) ದೇವತೆ]. (ಬಳ. ಮಾ.; ವ್ಯಕ್ತಿ ಅಥವಾ ವಸ್ತು) ಸಂತೋಷ ಹರಡುವ; ಹರ್ಷಕರ; ಮನೋಹರವಾದ (ಅನೇಕ ವೇಳೆ ವ್ಯಂಗ್ಯ ಪ್ರ., He must be a j. fool to do it ಅದನ್ನು ಮಾಡಲು ಅವನೊಬ್ಬ ದೊಡ್ಡ ಬೆಪ್ಪನಾಗಿರಬೇಕು). (ಕ್ರಿ. ವಿ.) (ಬಳ. ಮಾ.) ಬಹಳ ಮಟ್ಟಿಗೆ; ಕೇವಲ (He will be j. savage ಅವನು ಶುದ್ಧ ಕಾಡುಮನುಷ್ಯನಾಗುತ್ತಾನೆ). (ನಾ.; ನಾವಿಕ ಅಸಂ.) ನಾವಿಕ (ಸೈನಿಕ). (ಕ್ರಿ.) (ಬಳ. ಮಾ.) ಹೊಗಳು; ಪುಸಲಾಯಿಸು (ಸಾ., j. along). ಕುಚೋದ್ಯ ಮಾಡು; ಹಾಸ್ಯ ಮಾಡು. **Jóllify** (ಕ್ರಿ.) ಖುಷಿ ಮಾಡು; — ಯಾಗು (ಮು., ಕುಡಿಸಿ, ಕುಡಿದು); ಉಲ್ಲಾಸಗೊಳಿಸು; — ಗೊಳ್ಳು. **Jollificátion** (ನಾ.); **Jóllily** (ಕ್ರಿ. ವಿ.); **Jóllity** (ನಾ.) ಸಂತೋಷ ಸಂಭ್ರಮ; ಉತ್ಸವ (ಸಮಾರಂಭ); ನಲಿದಾಟ.

Jólly-boat ಜಾಲಿ ಬೋಟ್ (ನಾ.) (ಯುದ್ಧದ ಹಡಗಿನ ದೋಣಿಗಿಂತ ಚಿಕ್ಕದಾದ) ಹಡಗಿನ ಸಣ್ಣ ದೋಣಿ (=Jolly)

Jolt ಜೋಲ್ಟ್ (ಕ್ರಿ., ನಾ.) (ಮು., ಬಂಡಿಯ ಪ್ರಯಾಣದಲ್ಲಿ) ಕುಲುಕಾಡು, ಕುಲುಕಾಡಿಸು; (ಬಂಡಿಯ ವಿಷಯದಲ್ಲಿ) ಎತ್ತಿ ಎತ್ತಿ ಹಾಕುತ್ತ ಹೋಗು (ಒರಟು ದಾರಿಯಲ್ಲಿಯಂತೆ). (ನಾ.) (ಬಂಡಿಯ) ಕುಲುಕಾಟ. **Jólty** (ಗು.)

Jólterhead ಜೋಲ್ಟರ್‌ಹೆಡ್ (ನಾ.) ಮೊದ್ದು ತಲೆ; ದಡ್ಡ; ಪೆದ್ದ.

Jónah ಜೋನ (ನಾ.) ದುರದೃಷ್ಟ, ಕೇಡು, — ತರುವವನು; ಬದುಕಿದ್ದರೆ ಕೇಡು ತರಬಹುದೆಂದು ಬಲಿಗೆ ತುತ್ತಾಗಿಸಲ್ಪಟ್ಟವನು.

Jónathan ಜಾನತನ್ (ನಾ.) [(Brother) J. ಅಮೆ. ಸಂ. ಗಳ ಪ್ರಜಾ ವರ್ಗದ ಮೂರ್ತ ಸ್ವರೂಪ; — ಮಾದರಿಯ ನಾಡಿಗ, ಪೌರ]. (ಊಟ ಮುಗಿದಮೇಲೆ ತಿನ್ನುವ) ಒಂದು ಬಗೆಯ ಸೇಬು.

Jongleúr (F) ಜ್ಞಾಂ(ಜಾಂ)ಗ್ಲರ್ (ನಾ.) (ಚರಿತ್ರೆ) ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಿರುವ ಗಾಯಕ; ಚಾರಣ.

Jórdan ಜಾರ್ಡನ್ (ನಾ.) ಮೂತ್ರ ಪಾತ್ರೆ (ಸಭ್ಯ ಪ್ರಯೋಗವಲ್ಲ)

Jórum ಜೋರಂ (ನಾ.) ಕುಡಿಯುವ ದೊಡ್ಡ ಬಟ್ಟಲು, ಪಾತ್ರೆ; ಅದರಲ್ಲಿಯ ಪಾನೀಯ (ಮು., 'ಪಂಚ್' ಮದ್ಯ)

Jóseph ಜೋಸೆಫ್ (ನಾ.) ಬ್ರಹ್ಮಚರ್ಯ ನಿಷ್ಠ; ಪರಿಶುದ್ಧಾತ್ಮ. (೧೮ನೆಯ ಶತಮಾನದ) ಹೆಂಗಸರು ಕುದುರೆಯ ಸವಾರಿ ಮಾಡುವಾಗ ತೊಡುತ್ತಿದ್ದ ಉದ್ದವಾದ ಮೇಲಂಗಿ.

Josh ಜಾಷ್ (ನಾ., ಕ್ರಿ.) (ಅಮೆ. ಸಂ. ಅಸಂ.) ಸಭ್ಯವಿನೋದ (ಮಾಡು); ಗೇಲಿ (ಮಾಡು); ಕುಚೋದ್ಯ (ಮಾಡು). (ಕ್ರಿ.) ವಂಚಿಸು; ಠಕ್ಕಿಸು. **Jósher** (ನಾ.)

Jóskin ಜಾಸ್ಕಿನ್ (ನಾ.) ಹಳ್ಳಿ ಗಮಾರ; ಮಡಡ; ದಡ್ಡ.

Joss ಜಾಸ್ (ನಾ.) ಚೀನಿಯರ (ಮನೆಯಲ್ಲಿ ಪೂಜಿಸುವ) ದೇವರ ವಿಗ್ರಹ. **J.-house** ಚೀನಿಯರ ದೇವಸ್ಥಾನ. **J.-stick** (ಸುವಾಸನೆಯ ದಾಹ್ಯ ವಸ್ತುವನ್ನೂ ಮಣ್ಣನ್ನೂ ಬೆರಸಿ ಮಾಡಿದ, ಧೂಪವಾಗಿ ಉಪಯೋಗಿಸುವ) ಧೂಪದ ಕಡ್ಡಿ.

Jósser ಜಾಸರ್ (ನಾ.) (ಅಸಂ.) ಬೆಪ್ಪ; ಗುಗ್ಗು. ಆಸಾಮಿ; ಆಳು.

Jóstle ಜಾಸ್‌ಲ್, **Jústle** ಜಸ್‌ಲ್ (ಕ್ರಿ., ನಾ.) (ಜಲನೆಯಲ್ಲಿ) ತಳ್ಳು, ನೂಕು; ಡಿಕ್ಕಿ ಹೊಡೆ (*Against* ಉಪ. ದೊಡನೆ). ತಿವಿದು ದಾರಿ ಬಿಡಿಸಿಕೊಂಡು ಹೋಗು. (ಒಬ್ಬನೊಡನೆ, ಒಂದು ವಸ್ತುವಿಗಾಗಿ) ಹೆಣಗಾಡು, ಹೋರಾಡು (*With* person *for* thing). (ಒಬ್ಬನನ್ನು, ಒಂದು ಕಡೆಯಿಂದ) ತಳ್ಳಿಬಿಡು (*Away, from* ಉಪ. ದೊಡನೆ). (ನಾ.) ನೂಕಾಟ; ನೂಕು ನುಗ್ಗಲು; ಧಕ್ಕಾಮುಕ್ಕಿ; ಹೋರಾಟ.

Jot[1] ಜಾಟ್ (ನಾ.) (ನಿಷೇಧಾರ್ಥ ಹೇಳುವಾಗ) ಲವ; ಲೇಶ.

Jot[2] ಜಾಟ್ (ಕ್ರಿ. ಸಕ.) (ಸಂಗ್ರಹವಾಗಿ, ಬೇಗ ಬೇಗ) ಬರೆದುಕೊ, ಗುರುತು ಹಾಕಿಕೊ (ನಾ., j. down)

Joule ಜೌಲ್, ಜೂಲ್ (ನಾ.) (ವಿದ್ಯುತ್ತು) ಒಂದು ಅಂಪೇರ್ ಪ್ರಮಾಣದ ವಿದ್ಯುತ್ಪ್ರವಾಹವು ಒಂದು ಸೆಕೆಂಡು ಕಾಲ, ಒಂದು ಓಮ್ ಮಾನದ ಪ್ರತಿರೋಧದಲ್ಲಿ ಹರಿಯುವುದರಿಂದ ಉತ್ಪನ್ನವಾಗುವ ಕೆಲಸದ ಅಥವಾ ಶಾಖದ ಮೊತ್ತ; ವಿದ್ಯುತ್ಕಾರ್ಯ ಮಾನ: 'ಜೌಲ್'. (Dr. J. P. Joule ಎಂಬ ಇಂಗ್ಲಿಷ್ ಭೌತ ವಿಜ್ಞಾನಿಯ ಹೆಸರಿನಿಂದ)

Jounce ಜೌನ್ಸ್ (ಕ್ರಿ.) (ದಾರಿಪ್ರಯಾಣದಲ್ಲಿ) ಪುಟ ನೆಗೆ, ಬಿದ್ದೇಳು, ಎತ್ತಿ ಹಾಕು; ಕುಲುಕಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Joúrnal ಜರ್ನಲ್ (ನಾ.) (ಲೆಕ್ಕವಿಡುವ ವಿದ್ಯೆ) (ಅಂದಂದಿನ ವ್ಯಾಪಾರ ಒಂದೊಂದನ್ನೂ ಅದು ಆದಹಾಗೆಲ್ಲ ಬರೆದುಕೊಂಡು, ಅದನ್ನು ಯಾವ ಯಾವ ಜಮಾ ಖರ್ಚು ಬಾಬಿಗೆ ಸೇರಿಸಬೇಕೆಂಬುದನ್ನು ನಮೂದಿಸುವ) ದಿನಚರಿ ಪುಸ್ತಕ, ರೋಜು ಪುಸ್ತಕ; ದಿನ ದಿನದ ಘಟನೆಗಳ ದಾಖಲೆ (ಪುಸ್ತಕ); ದಿನಚರಿ ಘಟನಾವಳಿ (ಪುಸ್ತಕ). [(ಪಾರ್ಲಿಮೆಂಟ್) The Journals ದಿನ ದಿನದ ಕಾರ್ಯ ಕಲಾಪಗಳ ಬರೆದ ದಾಖಲೆ]. (ನಾವೆ) ಪ್ರಯಾಣ ಕಾಲದಲ್ಲಿ ಆಯಾ ದಿನದ ಹಡಗಿನ ಗಮನ ಮಾರ್ಗ, ಹೋದ ದೂರ, ಗಾಳಿ, ವಾಯುಸ್ಥಿತಿ, ವೊ. ನ್ನು ಬರೆದಿಡುವ ಪುಸ್ತಕ: (ಹಡಗಿನ) ದಿನವರದಿಯ ಪುಸ್ತಕ. ದಿನ (ವರ್ತಮಾನ) ಪತ್ರಿಕೆ; ಇತರ ನಿಯತಕಾಲಿಕ ಪತ್ರಿಕೆ. ಆಧಾರದಮೇಲೆ ಸುತ್ತುವ ಅಚ್ಚಿನ ಭಾಗ; ಅಚ್ಚಿನ ಘರ್ಷಣ ಭಾಗ (J.-box ಅಚ್ಚಿನ ಆಧಾರಭಾಗವನ್ನೂ ಅಲ್ಲಿಯ ಅಚ್ಚಿನಭಾಗವನ್ನೂ ಒಳಕೊಂಡ ಕೋಶ). **Journalése** — ಲೀಸ್ (ನಾ.) ವೃತ್ತಪತ್ರಿಕೆಯ ಸಾಮಾನ್ಯ ಲೇಖನಗಳಲ್ಲಿಯೂ ಹೊಟ್ಟೆಪಾಡಿನ ಲೇಖಕರ ಬರವಣಿಗೆಯಲ್ಲಿಯೂ ಕಾಣಬರುವ ಅಪರಿಷ್ಕೃತ ಭಾಷಾ ಪ್ರಯೋಗ. **Joúrnalism** (ನಾ.) ಪತ್ರಿಕೋದ್ಯೋಗ. (ಸಾಮೂಹಿಕ ವಾಗಿ) ವೃತ್ತಪತ್ರಿಕೆಗಳು. ದಿನಚರಿ ಬರೆಯುವ ಪದ್ಧತಿ, ಅಭ್ಯಾಸ. **Joúrnalist** (ನಾ.) ಸಾರ್ವಜನಿಕ ಪತ್ರಿಕೆಯ ಸಂಪಾದಕ, ಲೇಖಕ; ಪತ್ರಿಕೋದ್ಯೋಗಿ. **Journalístic** (ಗು.); **Joúrnalize** (ಕ್ರಿ.) (ಲೆಕ್ಕವಿಡುವ ಕ್ರಮ) (ಸ್ವಂತ) ದಿನಚರಿ ಪುಸ್ತಕದಲ್ಲಿ ಬರೆ, ದಾಖಲು ಮಾಡು; (ಸ್ವಂತ) ದಿನಚರಿ ಇಡು.

Joúrney ಜರ್ನಿ (ನಾ., ಕ್ರಿ. ಅಕ.) ನಿರ್ದಿಷ್ಟ ಕಾಲದಲ್ಲಿ ಪ್ರಯಾಣ ಮಾಡಿದ ದೂರ: ಪ್ರಯಾಣ ದೂರ (Four days' j.). (ಸಾ., ನೆಲದ ಮೇಲೆ ಮಾಡಿದ) ಸ್ವಲ್ಪ ದೂರದ ಪಯಣ, ಪರ್ಯಟನ (Take, undertake, perform, a j.). [**Journeyman** ಕೂಲಿ ಪಡೆದು ಮತ್ತೊಬ್ಬರಿಗಾಗಿ ಕೆಲಸಮಾಡುವ ಯಂತ್ರಶಿಲ್ಪಿ ಅಥವಾ ಕಾರೇಗಾರ. (ರೂಪ.) ಬರಿ ಕೂಲಿಯವನು. **J.-m. (clock)** (ಖ. ವಿ.) ವೀಕ್ಷಣ ಶಾಲೆ ಯಲ್ಲಿ ಪ್ರಮಾಣದ ಗಡಿಯಾರಗಳನ್ನು ಒಂದರೊಡನೊಂದನ್ನು ಹೋಲಿಸು ವುದಕ್ಕಾಗಿ ಇಟ್ಟುಕೊಂಡಿರುವ ದುಯ್ಯಂ ಗಡಿಯಾರ. **J.-work** ಜೀತದವನ ಕೆಲಸ (ಮು., ರೂಪ. ದಲ್ಲಿ)]. (ಕ್ರಿ.) ಪ್ರಯಾಣ ಮಾಡು.

Joust ಜೂಸ್ಟ್, **Just** ಜಸ್ಟ್ (ಕ್ರಿ. ಅಕ., ನಾ.) ಕುದುರೆಯೇರಿ, ಭಲ್ಲೆ ಹಿಡಿದು, ಇಬ್ಬರು ರಾವುತರು ಮಾಡುವ ದ್ವಂದ್ವ ಯುದ್ಧ (ಮಾಡು)

Jove ಜೋವ್ (ನಾ.) =Jupiter (ಮು., By J.! ದೇವರಾಣೆ!) **Jóvian** ಜೋವಿಯನ್ (ಗು.) ಜೋವಿನ(ಂಥ); ಬೃಹಸ್ಪತಿ ಗ್ರಹದ.

Jóvial ಜೋವಿಯಲ್ (ಗು.) ಹರ್ಷದ, ಉಲ್ಲಾಸ ಶೀಲ; ಸಂತೋಷ ಸಂಭ್ರಮದ. **Joviálity** (ನಾ.); **Jóvially** (ಕ್ರಿ. ವಿ.)

Jowl ಜೋ(ಜೌ)ಲ್, **Jole** (ನಾ.) ದವಡೆ (ಮೂಳೆ); ಕೆನ್ನೆ; ಗಲ್ಲ [ಮು., Cheek by j. (Cheek ನೋಡಿ)]. ಉಬ್ಬಿದ ಕತ್ತು; (ದನಗಳ) ಗಂಗೆದೊವಲು; (ಹಕ್ಕಿಯ) ಎರೆಚೀಲ; (ಸಾಮನ್ ಮತ್ತು ಇತರ ಕೆಲವು ಮೀನುಗಳ) ತಲೆ ಮತ್ತು ಭುಜಗಳು.

Joy ಜಾಯ್ (ನಾ., ಕ್ರಿ.) ಆನಂದ; ಸಂತೋಷ; ಹರ್ಷ; ನಲವು; ನಲಿವು; ಹರ್ಷಕಾರಿ; ಆನಂದ ದಾಯಕ [**J.-bells** (ಉತ್ಸವ ಕಾಲದಲ್ಲಿ ಬಾಜಿಸುವ) ನಲಿವು ಗಂಟೆಗಳು. **J.-ride** (ಅಸಂ.) ಸಂತೋ ಷದ ಸವಾರಿ. **Joystick** (ಅಸಂ.) ಫಲಕ ವಿಮಾನದ ನಿಯಂತ್ರಕ ಸನ್ನೆಕೋಲು]. (ಕ್ರಿ.) (ಮು., ಕಾವ್ಯ) ಹರ್ಷಿಸು; ಆನಂದಪಡು; ನಲವೇರಿಸು. **Joýful** (ಗು.); **Joýfully** (ಕ್ರಿ. ವಿ.); **Joýfulness** (ನಾ.); **Joýless** (ಗು.); **Joýlessly** (ಕ್ರಿ. ವಿ.); **Joýlessness** (ನಾ.); **Joýous** (ಗು.); **Joýously** (ಕ್ರಿ. ವಿ.); **Joýousness** (ನಾ.)

Júbilant ಜೂಬಿಲಂಟ್ (ಗು.) ಸಂತೋಷ ಪ್ರದರ್ಶಕ; ಹಿಗ್ಗಿ ಮೆರೆ ಯುವ; ಆನಂದ ಭರಿತ; ಉತ್ಸುಕ. **Júbilantly** (ಕ್ರಿ. ವಿ.); **Júbilance, Jubilátion** (ನಾ.); **Júbilate**[1] —ಲೇಟ್ (ಕ್ರಿ. ಅಕ.)

Jubiláte[2] (L) ಜೂಬಿಲೇಟಿ, ಯೂಬಿಲಾಟೆ (ನಾ.) ಆ್ಯಂಗ್ಲಿಕನ್ ಪೂಜಾವಿಧಾನದಲ್ಲಿ ಹಾಡುವ ನೂರನೆಯ ಸ್ತೋತ್ರಗೀತ; ಜಯ ಘೋಷ.

Júbilee ಜೂಬಿಲಿ (ನಾ.) (ಯೆಹೂದ್ಯ ಚರಿತ್ರೆ: ಯೆಹೂದ್ಯರು ತಾವು ಬಿಡುಗಡೆಯಾಗಿ ಯಥಾಸ್ಥಾನ ದೊರೆತ ಸ್ಮಾರಕವಾಗಿ ಐವತ್ತು ವರ್ಷಗಳಿಗೊಮ್ಮೆ ಕೆಲವು ಆಚರಣೆಗಳನ್ನು ನಡಸುವ) ಬಂಧವಿಮೋಚನ ವರ್ಷ. (ರೋ. ಕ್ಯಾ. ಮತ) ರೋಮ್ ಯಾತ್ರೆಯಿಂದಲೂ, ಇತರ ಕೆಲವು ಧರ್ಮ ಕಾರ್ಯಗಳನ್ನು ಮಾಡುವುದರಿಂದಲೂ (ಹಿಂದೆ ಕೆಲವು ಕ್ಲುಪ್ತ ಕಾಲಗಳಲ್ಲಿ ಮಾತ್ರ, ಈಗ ಎಂದಾದರೂ) ಪಾಪವಿಮೋಚನೆಯ ವರವನ್ನು ಕೊಡುವ ವರ್ಷ. ಐವತ್ತನೆಯ ವಾರ್ಷಿಕೋತ್ಸವ; [Silver j. ಇಪ್ಪತ್ತೈದನೆಯ ವಾರ್ಷಿಕೋತ್ಸವ; ರಜತ ಮಹೋತ್ಸವ; ಪಂಚವಿಂಶತಿ ಪೂರ್ತಿ; ಬೆಳ್ಳಿಯ ಹಬ್ಬ. Golden j. ಐವತ್ತನೆಯ ವಾರ್ಷಿಕೋತ್ಸವ; ಸ್ವರ್ಣ ಮಹೋತ್ಸವ; ಚಿನ್ನದ ಹಬ್ಬ. Diamond j. ವಿಕ್ಟೋರಿಯಾ ರಾಣಿಯ ಆಳಿಕೆಯ ಅರುವತ್ತನೆಯ ವಾರ್ಷಿಕೋತ್ಸವ; ವಜ್ರ ಮಹೋತ್ಸವ; ರನ್ನದ ಹಬ್ಬ]. ಹರ್ಷದಿಂದಿರುವ ದಿನಗಳು; ಉತ್ಸವ ಕಾಲ; ಆನಂದೋ ದ್ರೇಕ; ಹರ್ಷ ಭಾರ.

Judáic(al) ಜೂಡೇಯಿಕ್(ಕಲ್) (ಗು.) ಯೆಹೂದ್ಯರ; ಯೆಹೂದ್ಯ (ಸಂಬಂಧವುಳ್ಳ). **Júdaism** ಜೂಡೆಯಿಸ಼್ಮ್ (ನಾ.) ಯೆಹೂದ್ಯಮತ. **Júdaist** (ನಾ.) ಯೆಹೂದ್ಯ ಸಂಪ್ರದಾಯಿ. **Júdaize** ಜೂಡೆಐಸ಼್ (ಕ್ರಿ.) ಯೆಹೂದ್ಯರ ಪದ್ಧತಿಗಳನ್ನು, ಆಚಾರಗಳನ್ನು, ಅನುಸರಿಸು; ಯೆಹೂದ್ಯಾನುಕರಣ ಮಾಡು; ಯೆಹೂದ್ಯೀಕರಿಸು.

Júdas ಜೂಡಸ್ (ನಾ.) ಯೇಸುಕ್ರಿಸ್ತನನ್ನು ವಿಶ್ವಾಸಘಾತಕತನದಿಂದ ಶತ್ರುವಶ ಮಾಡಿದ ಅವನ ಒಬ್ಬ ಶಿಷ್ಯ: 'ಜೂಡಸ್'. ಪರಮ ದ್ರೋಹಿ. ಬಾಗಿಲಿನಲ್ಲಿಯ ಇಣಿಕುಗಂಡಿ. **J.-colour(ed)** (ಗಡ್ಡ, ವೊ. ಗಳ ವಿಷಯದಲ್ಲಿ) ಕೆಂಪು ಬಣ್ಣ(ದ). **J. kiss** ಮೋಸದ ಮುತ್ತು (ಬೈಬಲ್). **J.-tree** ಎಲೆ ಬರುವುದಕ್ಕೆ ಮೊದಲೇ ಊದಾ ಬಣ್ಣದ ಹೂವು ಬಿಡುವ ಒಂದು ಜಾತಿಯ ಮರ.

Júdenhetze (G) ಯೂಡೆನ್‌ಹೆಟ್ಸೇ (ನಾ.) ಪಟ್ಟು ಹಿಡಿದು ಯೆಹೂದ್ಯ ರನ್ನು ನಿಷ್ಕರುಣೆಯಿಂದ ಹಿಂಸಿಸುವುದು.

Judge ಜಡ್ಜ್ (ನಾ., ಕ್ರಿ.) ನ್ಯಾಯಾಧಿಪತಿ; ನ್ಯಾಯಾಧೀಶ. (ದೇವರ ವಿಷಯದಲ್ಲಿ) ಸರ್ವಸ್ವತಂತ್ರ ನ್ಯಾಯನಿರ್ಣಾಯಕ. (ಯೆಹೂದ್ಯ ಚರಿತ್ರೆ) ಜಾಷುಅನ ತರುವಾಯ ರಾಜರ ಆಳ್ವಿಕೆ ಬರುವ ವರೆಗಿನ ಮಧ್ಯ ಕಾಲದಲ್ಲಿ, ಇಸ್ರೇಎಲ್ ರಾಜ್ಯದಲ್ಲಿ ತಾತ್ಕಾಲಿಕವಾಗಿ ಅಧಿಕಾರ ನಡಸುತ್ತಿದ್ದ (ಸಾ., ಯುದ್ಧಪ್ರಮುಖನಾದ) ಅಧಿಕಾರಿ. (ಬ. ವ. ದಲ್ಲಿ; ಸಂಕ್ಷಿಪ್ತ: Judg.) ಹಳೆಯ ಒಡಂಬಡಿಕೆಯ ಏಳನೆಯ ಪುಸ್ತಕ. ವಿವಾದದಲ್ಲಾಗಲಿ ಪಂದ್ಯದಲ್ಲಾಗಲಿ ತೀರ್ಪುಕೊಡಲು ನಿಯಮಿತ ನಾದವನು: ತೀರ್ಪುಗಾರ; ಒಂದು ವಿಷಯದ, ಸಮಸ್ಯೆಯ, ಬಲಾಬಲಗಳನ್ನು, ಯೋಗ್ಯತೆಯನ್ನು, ತೀರ್ಮಾನಿಸಲು ದಕ್ಷನಾದ ವನು: ಯೋಗ್ಯತಾ ಪರೀಕ್ಷಕ; ಯೋಗ್ಯತಾ ಪರೀಕ್ಷಾ ದಕ್ಷ (I am no j. of diamonds ವಜ್ರಗಳನ್ನು ಪರೀಕ್ಷಿಸುವ ಯೋಗ್ಯತೆ, ಪರಿಶ್ರಮ, ನನಗಿಲ್ಲ). (J. Advocate General ಸೈನಿಕ ನ್ಯಾಯಸ್ಥಾನಗಳಮೇಲೆ ಪರಮಾಧಿಕಾರವುಳ್ಳ ಅಸೈನಿಕಾಧಿಕಾರಿ. J.-made law ನ್ಯಾಯಾಧಿ ಪತಿಗಳ ತೀರ್ಮಾನಗಳ ಆಧಾರದಮೇಲೆ ಏರ್ಪಟ್ಟ ತತ್ತ್ವಗಳು: ತೀರ್ಪಿನ ನ್ಯಾಯ ತತ್ತ್ವಗಳು). (ಕ್ರಿ.) (ನ್ಯಾಯಸ್ಥಾನದಲ್ಲಿ ಒಬ್ಬನಮೇಲೆ) ತೀರ್ಪು ಹೇಳು, ಕೊಡು; (ವ್ಯವಹಾರವನ್ನು) ವಿಚಾರಣೆ ಮಾಡು; (ಒಂದು ವಿಚಾರವನ್ನು) ತೀರ್ಮಾನಿಸು, ಬಗೆಹರಿಸು; (– ಎಂದು) ತೀರ್ಪು ಕೊಡು, ವಿಧಾಯಕ ಮಾಡು (*That* ಪದದೊಡನೆ); (ಒಬ್ಬನ ಯೋಗ್ಯತೆಯ ವಿಷಯದಲ್ಲಿ, ಅವನ ಕೃತ್ಯಗಳಿಂದ) ಅಭಿಪ್ರಾಯ ಪಡು; ಯೋಗ್ಯತೆ ನಿರ್ಣಯಿಸು (*By* ಉಪ. ದೊಡನೆ); ಟೀಕಿಸು; ಆಕ್ಷೇಪಿಸು; ಖಂಡಿಸು; (ಅಂಕಿ ಅಂಶಗಳಿಂದ ಒಂದು ವಸ್ತು ಹೀಗೆ, ಹಾಗೆ, ಇರುವು ದೆಂದು) ತೀರ್ಮಾನಕ್ಕೆ ಬರು, ಊಹಿಸು, ಭಾವಿಸು; ನ್ಯಾಯಾಧಿ ಪತಿಯಾಗಿ ವರ್ತಿಸು; (ಒಂದರ ವಿಷಯವಾಗಿ) ಅಭಿಪ್ರಾಯ ಪಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(*Of* thing, etc.). **Júdgeship** (ನಾ.) ನ್ಯಾಯಾಧಿಪತಿತ್ವ. **Judgemátic(al)** (ಗು.) ವಿವೇಚನೆಯುಳ್ಳ ; ಸೂಕ್ಷ್ಮ ದೃಷ್ಟಿಯ ; — ಯಿಂದ ಪರಿಶೀಲಿಸುವ. **Judgemátically** (ಕ್ರಿ. ವಿ.); **Júdg(e)-ment** ಜಡ್ಜ್‌ಮೆಂಟ್ (ನಾ.) (ನ್ಯಾಯಸ್ಥಾನದ) ತೀರ್ಪು ; ಕೋರ್ಟಿನ ತೀರ್ಮಾನ, ನಿರ್ಣಯ [The last j. (ಪ್ರಪಂಚದ ಅಂತ್ಯದಲ್ಲಿ ದೇವರು ಮಾಡುವ) ಅಂತಿಮ ಮಹಾ ವಿಚಾರಣೆ]. ಭಗವದಸಮಾಧಾನ ಸೂಚಕ ವೆಂದು ಪರಿಗಣಿಸುವ ಕೇಡು, ದುರದೃಷ್ಟ ; ದೈವ ಶಿಕ್ಷೆ (It is a j. on you for getting up late). ಟೀಕೆ ; ವಿಮರ್ಶೆ ; ಅಭಿಪ್ರಾಯ ; ಊಹೆ (In my j. ನನ್ನ ಅಭಿಪ್ರಾಯದಲ್ಲಿ) ; ವಿಮರ್ಶನ ಶಕ್ತಿ ; ವಿವೇಚನಾ ಶಕ್ತಿ ; ಸೂಕ್ಷ್ಮ ದೃಷ್ಟಿ ; ಯುಕ್ತಾಯುಕ್ತ ಪರಿಜ್ಞಾನ. J. creditor ಕೊಟ್ಟ ಸಾಲವನ್ನು ಹಿಂದಕ್ಕೆ ಬರುವಂತೆ ತೀರ್ಪುಪಡೆದ ಸಾಲಿಗ. J.-day ದೇವರು ನಡೆಸುವ ಕಡೆಯ ಮಹಾ ವಿಚಾರಣೆಯ ದಿನ. J. debt ತೀರಿಸಬೇಕೆಂದು ನ್ಯಾಯಸ್ಥಾನದ ತೀರ್ಪಾಗಿರುವ ಸಾಲ : ತೀರ್ಪು ಸಾಲ. J. debtor ತೀರ್ಪಿನ ಪ್ರಕಾರ ಸಾಲ ತೆರಬೇಕಾದವನು : ತೀರ್ಪು ಸಾಲಗಾರ. J.-seat ನ್ಯಾಯಾಧಿಪತಿಯ ಪೀಠ ; ನ್ಯಾಯ ಪೀಠ ; ನ್ಯಾಯಸ್ಥಾನ. J. summons ತೀರ್ಪು ಹೊತ್ತ ಸಾಲಗಾರನು ಸಾಲ ತೀರಿಸದ ತಪ್ಪಿಗಾಗಿ ನ್ಯಾಯಸ್ಥಾನ ದಲ್ಲಿ ಹಾಜರಾಗಬೇಕೆಂದು ಕೊಟ್ಟ ಕರೆ : ತೀರ್ಪುಸಾಲ ತಪ್ಪಿತದ ಕರೆ.

Judgemátic, Júdg(e)ment. **Judge** ನೋಡಿ.

Júdicature ಜೂಡಿಕ(ಕೇ)ಟ್ಯುರ್ (ನಾ.) ನ್ಯಾಯ ನಿರ್ವಾಹ (ಮಾಡುವುದು). [Supreme Court of J. in England ಇಂಗ್ಲೆಂಡಿನಲ್ಲಿ (ಹಿಂದಿನ Courts of Chancery, King's Bench, Common Pleas, Exchequer, ಮೊ. ನ್ಯಾಯಸ್ಥಾನಗಳನ್ನು ಒಟ್ಟುಗೂಡಿಸಿ ಸ್ಥಾಪಿಸಿದ) ಪರಮಾಧಿಕಾರ ನ್ಯಾಯಸ್ಥಾನ]. ನ್ಯಾಯಾಧಿಪತಿಯ ಅಧಿಕಾರ, ಕರ್ತವ್ಯ, ಅಧಿಕಾರ ವ್ಯಾಪ್ತಿ, ಅಧಿಕಾರಾವಧಿ; ನ್ಯಾಯಾಧಿಪತಿಗಳು, — ಗಳ ಮಂಡಲಿ ; ನ್ಯಾಯಸ್ಥಾನ(ಗಳು)

Judícial ಜುಡಿಷಲ್ (ಗು.) ನ್ಯಾಯಸ್ಥಾನದ ; ನ್ಯಾಯಸ್ಥಾನದಿಂದ ನಡೆದ ; ನ್ಯಾಯಸ್ಥಾನಕ್ಕೆ ತಕ್ಕ (J. murder ಕಾನೂನಿಗನುಸಾರ ವಾಗಿದ್ದರೂ ಅನ್ಯಾಯವಾದ ಮರಣದಂಡನೆ. J. separation ನ್ಯಾಯಾಧಿಪತಿಯ ಆಜ್ಞೆಯಂತೆ ಆದ ಗಂಡಹೆಂಡಿರ ಪ್ರತ್ಯೇಕ ವಾಸ). ದೈವದಂಡನೆಯಿಂದಾದ (J. blindness ದೈವದಂಡನೆಯಿಂದಾದ ಮತಿಭ್ರಂಶ, ಬುದ್ಧಿಭ್ರಮಣೆ). ನಿರ್ಣಯಾಧಿಕಾರವುಳ್ಳ (A j. assembly ನಿರ್ಣಾಯಕ ಸಭೆ) ; ನ್ಯಾಯಾಧಿಪತಿಯ; ನ್ಯಾಯಾಧಿಪತಿಗೆ ಉಚಿತ ವಾದ ; ತೀರ್ಮಾನ ಹೇಳುವ ; ವಿಮರ್ಶಾತ್ಮಕ ; ನಿಷ್ಪಕ್ಷಪಾತವಾದ. **Judícially** (ಕ್ರಿ. ವಿ.) ; **Judíciary** — ಷರಿ, — ಷಿಯರಿ (ನಾ.) ಸಾಮೂಹಿಕವಾಗಿ ಒಂದು ರಾಜ್ಯದ (ಎಲ್ಲ) ನ್ಯಾಯಾಧಿಪತಿಗಳು ; ನ್ಯಾಯದ ಇಲಾಖೆ. **Judícious** — ಷಸ್ (ಗು.) ವಿವೇಕವುಳ್ಳ ; ವಿವೇಚನೆಯುಳ್ಳ ; ಯುಕ್ತಾಯುಕ್ತ ಪರಿಜ್ಞಾನವುಳ್ಳ. **Judíciously** (ಕ್ರಿ. ವಿ.) ; **Judíciousness** (ನಾ.)

Judíciary, Judícious, etc. **Judicial** ನೋಡಿ.

Jug[1] ಜಗ್ (ನಾ., ಕ್ರಿ. ಸಕ.) (ಹಿಡಿಯೂ, ಹಲವು ವೇಳೆ ಮೂತಿಯೂ, ಇರುವ) ಆಳವಾದ ದ್ರವಪಾತ್ರೆ: 'ಜಗ್'. (ಅಸಂ.) ಸೆರೆ ಮನೆ (= Stone-j.). (ಕ್ರಿ.) (ಮೊಲವನ್ನು) ಮಣ್ಣಿನ ಪಾತ್ರೆಯಲ್ಲಿ ಅಥವಾ ಜಾಡಿಯಲ್ಲಿ ಬೇಯಿಸು (ಸಾ., ಭೂ. ಕೃ. ನಲ್ಲಿ). (ಅಸಂ.) ಸೆರೆ ಹಾಕು. **Júgful** (ನಾ.)

Jug[2] ಜಗ್ (ಕ್ರಿ. ಅಕ.) ('ಬುಲ್‌ಬುಲ್' ಅಥವಾ ಇತರ ಹಕ್ಕಿ) 'ಜಗ್ ಜಗ್' ಎಂದು ಧ್ವನಿ ಮಾಡು. **Jug, Jug-jug** (ನಾ.) ಜಗ್, ಜಗ್ ಜಗ್ ಎಂಬ ಧ್ವನಿ.

Júgate ಜೂಗೇಟ್ (ಗು.) (ಸ. ವಿ.) (ಕಿರು ಎಲೆಗಳು ಜೋಡಿ ಜೋಡಿಯಾಗುಳ್ಳ) ಯುಗಳ ಪರ್ಣಿ. (ಕಿರು ಎಲೆಗಳ ವಿಷಯದಲ್ಲಿ) ಜೋಡಿ ಜೋಡಿಯಾಗಿರುವ.

Júggernaut ಜಗರ್‌ನಾಟ್, **Jágannath** ಜಗನ್ನಾಥ್ (ನಾ.) (ಹಿಂದೂ ಪುರಾಣ) ವಿಷ್ಣುವಿನ ಎಂಟನೆಯ ಅವತಾರವಾದ ಕೃಷ್ಣ : ಜಗನ್ನಾಥ ; (ಪೂರಿಯಲ್ಲಿರುವ) ಜಗನ್ನಾಥ ವಿಗ್ರಹ (ಪ್ರತಿ ವರ್ಷವೂ ಈ ವಿಗ್ರಹವನ್ನು ಬಹಳ ದೊಡ್ಡ ರಥದಮೇಲೆ ಕೂಡಿಸಿ ರಥವನ್ನೆಳೆಯುವಾಗ ಭಕ್ತರು ತೇರ ಗಾಲಿಯ ಕೆಳಗೆ ತಾವಾಗಿ ಬಿದ್ದು ಬಲಿಯಾಗುತ್ತಿದ್ದರೆಂಬ ಹೇಳಿಕೆಯುಂಟು). (ರೂಪ.) ಕುರುಡು ನಂಬಿಕೆಯಿಂದ (ಸ್ವಲ್ಪವೂ ವಿಚಾರ ಮಾಡದೆ) ತಾವಾಗಿ ಬಲಿಬೀಳುವ, ಅಥವಾ ಇತರರನ್ನು ಬಲಿಗೊಡುವ, — ಆಚಾರ, ಭಾವನೆ (= J. car)

Júggins ಜಗಿನ್ಸ್ (ನಾ.) (ಅಸಂ.) ತಿಳಿಗೇಡಿ.

Júggle ಜಗ್ಲ್ (ಕ್ರಿ., ನಾ.) ಕಣ್ಕಟ್ಟು ಮಾಡು; ಗಾರುಡಿ ವಿದ್ಯೆ ತೋರು. [J. *with* (ಒಬ್ಬನನ್ನು) ಮೋಸಗೊಳಿಸು ; (ಸಂಗತಿಗಳ ವಿಷಯದಲ್ಲಿ) ತಪ್ಪು ತಿಳಿವಳಿಕೆ ಕೊಡು]. (ಒಬ್ಬನಿಂದ, ಒಂದು ವಸ್ತುವನ್ನು) ಮೋಸ ಮಾಡಿ ಕಸಿದುಕೊ (Person, etc., *out of* thing). ತಂತ್ರದಿಂದ, — ತರು, ಪಡೆ, ಬದಲಾಯಿಸು (*Away, into* ಉಪ. ಜೊತೆ). (ನಾ.) ಕಣ್ಕಟ್ಟು ; ತಂತ್ರ ; ಮೋಸ ; ಠಕ್ಕು. **Júggler** (ನಾ.) ಗಾರುಡಿಗ ; ಠಕ್ಕ ; ಮೋಸಗಾರ ; ತಂತ್ರಗಾರ. **Júgglery** (ನಾ.)

Jugo-Sláv ಯೂಗೊಸ್ಲಾವ್ (ಗು., ನಾ.) ಯೂಗೊಸ್ಲಾವಿಯ ರಾಜ್ಯದ (ನಿವಾಸಿ)

Júgular ಜೂ(ಜ)ಗ್ಯುಲರ್ (ಗು., ನಾ.) ಕುತ್ತಿಗೆಯ ಅಥವಾ ಗಂಟಲಿನ [J. veins ತಲೆಯಿಂದ ಹೃದಯಕ್ಕೆ (ಮಲಿನ) ರಕ್ತವನ್ನು ಸಾಗಿಸುವ ದೊಡ್ಡ ಅಭಿಧಮನಿಗಳು : ಕಂಠಾಭಿಧಮನಿಗಳು. External, Internal, j. vein ತಲೆಯ ಹೊರಭಾಗದ, ತಲೆಬುರುಡೆಯೊಳಗಿನ, ಕಂಠಾಭಿಧಮನಿ]. (ಮೀನಿನ ವಿಷಯದಲ್ಲಿ) ಹೊಟ್ಟೆಯ ಭಾಗದ ಈಜುರೆಕ್ಕೆಗಳು ಎದೆಯ ಭಾಗದವುಗಳ ಮುಂಭಾಗದಲ್ಲಿರುವ. (ನಾ.) = j. vein.

Júgulate ಜೂ(ಜ)ಗ್ಯುಲೇಟ್ (ಕ್ರಿ. ಸಕ.) ಕೊರಳು ಕೊಯ್ದು ಕೊಲ್ಲು ; (ಮು., ರೂಪ.) ಪ್ರಬಲವಾದ ಔಷಧ, ಮೊ. ನ್ನು ಕೊಟ್ಟು ರೋಗ ತಲೆಯೆತ್ತದಂತೆ ಮಾಡು.

Juice ಜೂಸ್ (ನಾ.) ಕಾಯಿಪಲ್ಯಗಳ ಅಥವಾ ಹಣ್ಣುಗಳ ದ್ರವಭಾಗ : ರಸ ; ಪ್ರಾಣಿಶರೀರದ ಅಥವಾ ಪ್ರಾಣಿಜನ್ಯ ವಸ್ತುಗಳ ದ್ರವಭಾಗ : ರಸ ; ದ್ರವ [ಮು., the juices ಶರೀರ ದ್ರವಗಳು (ರಕ್ತವಲ್ಲ). Gastric j. ಜಠರ ರಸ]. (ರೂಪ.) (ಒಂದರ) ಸಾರ, ಅಂತಸ್ಸತ್ವ. (ಅಸಂ.) (ಎಂಜಿನ್ನು, ಮೊ. ಗಳಲ್ಲಿ ಉಪಯೋಗಿಸುವ) ಪೆಟ್ರೋಲೆಣ್ಣೆ ಅಥವಾ ವಿದ್ಯುಚ್ಛಕ್ತಿ. **Júiceless** (ಗು.) ; **Júicy** (ಗು.) ರಸ ಭರಿತ ; ರಸವತ್ತಾದ. (ಹವ) ತಂಡಿಯ, ಮಳೆಯ. (ಬಳ. ಮಾ.) ಪ್ರತಿಭಾ ಯುಕ್ತ ; ಸ್ವಾರಸ್ಯವಾದ ; ರಸವತ್ತಾದ. (ಕಲೆಯ ಅಸಂ.) ತೇವವಿರುವಂತೆ ತೋರುವ ತುಂಬುವರ್ಣ ಹಾಕಿದ. **Júiciness** (ನಾ.)

Jújube ಜೂಜೂಬ್ (ನಾ.) ಓಟೆಯುಳ್ಳ ಎಲಚಿ ಮತ್ತು ಬೋರೆಯ ಜಾತಿಯ, ತಿನ್ನುವ ಹಣ್ಣು ; ಜೂಜೂಬ್ ಹಣ್ಣಿನ ರುಚಿ ಕಟ್ಟಿ, ಅಥವಾ ಆ ಹಣ್ಣಿನಂತೆ ತೋರುವಹಾಗೆ ಗೋಂದು, ಜೆಲಟಿನ್, ಮೊ. ಗಳಿಂದ ಮಾಡಿದ ಬತ್ತಾಸು : ಜೂಜೂಬ್ ಬತ್ತಾಸು.

Ju-jú(i)tsu, Jiu-jú(í)tsu ಜೂಜ(ಜಿ)ಟ್ಸೂ (ನಾ.) ಆಯುಧ ಸಹಾಯ ವಿಲ್ಲದೆ ಆತ್ಮರಕ್ಷಣೆ ಮಾಡಿಕೊಳ್ಳುವ, ಈಗ ಶಾರೀರಕ ವ್ಯಾಯಾಮ ವಾಗಿ ಬಹಳ ಬಳಕೆಯಲ್ಲಿರುವ, ಜಪಾನೀಯರ ಮಲ್ಲವಿದ್ಯೆ, ಮೊ. ವು : 'ಜೂಜಿಟ್ಸೂ'.

Júlep ಜೂಲೆಪ್ (ನಾ.) (ಮು., ಔಷಧಕ್ಕೆ ಅನುಪಾನವಾಗಿ ಉಪಯೋಗಿಸುವ) ಸಕ್ಕರೆ ಅಥವಾ ಷರಬತ್ತು ಹಾಕಿ ಮಾಡಿದ ಪಾನೀಯ ; ಉತ್ತೇಜಕ ಔಷಧಪಾನೀಯ. (ಅಮೆ. ಸಂ.) (ನೀರ್ಗಲ್ಲನ್ನೊ ಸುವಾಸನಾ ರುಚಿದ್ರವ್ಯಗಳನ್ನೊ ಸೇರಿಸಿ ಮಾಡಿದ) ನೀರುಬೆರಸಿದ ಮದ್ಯ.

Júlian ಜೂಲಿಯನ್ (ಗು.) ಜೂಲಿಯಸ್ ಸೀಸರಿನ (J. calendar ಈತನು ಪ್ರಚಾರಕ್ಕೆ ತಂದ ಪಂಚಾಂಗ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Julý ಜೂಲೈ (ನಾ.) ಇಂಗ್ಲಿಷ್ ವರ್ಷದ ಏಳನೆಯ ತಿಂಗಳು : ಜೂಲೈ. (ಜೂಲಿಯಸ್ ಸೀಸ್ಸರಿನ ಹೆಸರಿನಿಂದ)

Júmble ಜಂಬ್‌ಲ್ (ಕ್ರಿ., ನಾ.) ಅವ್ಯವಸ್ಥೆಯಾಗಿ ಓಡಾಡು, ಸುತ್ತಾಡು. ಕಲಬೆರಕೆ ಮಾಡು ; ಅವ್ಯವಸ್ಥೆ ಮಾಡು (*Up* ಉಪ. ದೊಡನೆ). (ನಾ.) ಗಲಿಬಿಲಿಯಾಗಿ ಸೇರಿಸಿದ ಗುಂಪು; ಕಲಬೆರಕೆ; ಅವ್ಯವಸ್ಥೆ. ಕುಲುಕಾಟ. **J.-sale** ಅಂಗಡಿಬೀದಿ, ಮೊ. ಗಳಲ್ಲಿ ಹಲವು ಬಗೆಯ ಚಿಲ್ಲರೆ ಅಗ್ಗದ ಸಾಮಾನುಗಳ ಮಾರಾಟ ; ಕಲಬೆರಕೆಯ ಮಾರಾಟ. **J.-shop** ಹಲವು ಬಗೆಯ ಸಾಮಾನುಗಳನ್ನು ಮಾರುವ ಅಂಗಡಿ. **Júmbly** (ಗು.)

Júmbo ಜಂಬೊ (ನಾ.) ದೊಡ್ಡ ಒಡಲಿನ, ಒಡ್ಡೊಡ್ಡಾದ, ಮನುಷ್ಯ, ಪ್ರಾಣಿ, ಅಥವಾ ವಸ್ತು ; (ಮು.) ಲಂಡನ್ನಿನ ಮೃಗಾಲಯೋದ್ಯಾನದಲ್ಲಿ ಪ್ರಸಿದ್ಧವಾದ ಈ ಹೆಸರಿನ ದೊಡ್ಡ ಆನೆ. (ಕಾರ್ಯಸಿದ್ಧಿ, ಇಷ್ಟಾರ್ಥ ಸಿದ್ಧಿ, ಪಡೆದು) ಪ್ರಸಿದ್ಧಿಗೆ ಬಂದವನು.

Jump ಜಂಪ್ (ನಾ., ಕ್ರಿ.) (ನೆಲದಿಂದ) ನೆಗೆತ, ಎಗುರು, ಹಾರಿಕೆ, ಕುಪ್ಪಳಿಕೆ ; ಲಂಘನ ; [(ವ್ಯಾಯಾಮ ಸ್ಪರ್ಧೆ) Long j. ಉದ್ದ ನೆಗೆತ. High j. ಎತ್ತರ ನೆಗೆತ]. (ಢಕ್ಕೆಯಿಂದಲೊ ಗಾಬರಿಯಿಂದಲೊ ಉಂಟಾದ) ಬೆಚ್ಚು. [(ಅಸಂ.) The jumps (ಅತಿ ಕುಡಿತದಿಂದಾದ) ಕಂಪ ಸನ್ನಿ]. (ಮೊತ್ತ, ದರ, ಬೆಲೆ, ಮೊ. ಗಳ) ಥಟ್ಟನೆಯ ಏರಿಕೆ, ಲಂಘನೆ. (ವಾದ, ಶ್ರೇಣಿ, ಮೊ. ಗಳಲ್ಲಿ) ಮೆಟ್ಟಲು ಮೆಟ್ಟಲಾಗಿ ಹೋಗದೆ, ಅತಿಕ್ರಮಿಸಿ ಹಾರಿದ ಅಂತರ. (ಕ್ರಿ.) [ದೇಹವನ್ನು ಬಗ್ಗಿಸಿ ಥಟ್ಟನೆ ಕಾಲುಗಳನ್ನು ನೀಡಿ, (ಮೀನಿನ ವಿಷಯದಲ್ಲಿ) ಬಾಲವನ್ನು ನಿಮಿರಿಸಿ] ಹಾರು, ನೆಗೆ, ಕುಪ್ಪಳಿಸು, ಚಿಗಿ, ಎಗುರು, ಲಂಘಿಸು. (ಪೀಠ, ಮೊ. ಗಳಿಂದ) ಥಟ್ಟನೆ ಕುಪ್ಪಳಿಸು, ನೆಗೆ (*Up, out* ಉಪ. ದೊಡನೆ). (J. in ಬಂಡಿ, ಮೊ. ಗಳೊಳಕ್ಕೆ ಹಾರಿಕೊ). (ಭಾವೋದ್ರೇಕ, ಢಕ್ಕೆ, ಮೊ. ಗಳಿಂದ) ಫಕ್ಕನೆ ಚಲಿಸಿ ಬೆಚ್ಚಿಬೀಳು (J. for joy ಸಂತೋಷದಿಂದ ನೆಗೆದಾಡು). (ಬೆಲೆ, ಮೊ.) ಥಟ್ಟನೆ ಏರು. (ತೀರ್ಮಾನ, ಮೊ. ಕ್ಕೆ) ಆತುರವಾಗಿ ಬರು, ಬಂದು ಸೇರು, ಹಾರಿಬಿಡು (*To, at* ಉಪ. ದೊಡನೆ). [J. at (ರೂಪ.) (ಕೇಳಿದ ಬೆಲೆಯನ್ನು, ಮುಗಿದ ವ್ಯಾಪಾರವನ್ನು) ತವಕದಿಂದ ಕೂಡಲೆ ಒಪ್ಪಿಕೊ. J. (up)on (ತಪ್ಪಿತಸ್ಥ, ಮೊ. ರನ್ನು) ಮಾತಿನಿಂದ ಅಥವಾ ಕಾರ್ಯದಿಂದ ಮೇಲೆ ಬಿದ್ದು ಅದುಮಿಬಿಡು]. (ಒಂದರೊಡನೊಂದು) (ಸಂಪೂರ್ಣ) ಹೊಂದಿಕೆಯಾಗು, ಮೇಳಯಿಸು (*Together, with* ಉಪ. ದೊಡನೆ). (ಹೆಬ್ಬಾಗಿಲು, ಮೊ. ನ್ನು) ಹಾರಿ ದಾಟು. (ರೈಲುಬಂಡಿ) ಕಂಬಿ ಬಿಟ್ಟುಹೋಗು. (ಮಗು, ಮೊ. ಕ್ಕೆ) ಕೆಳಕ್ಕೆ ಹಾರಲು ಸಹಾಯಮಾಡು (*Down* ಉಪ. ದೊಡನೆ). (ವಸ್ತು) ನೆಗೆಯುವಂತೆ ಮಾಡು. (ವ್ಯಕ್ತಿಯನ್ನು, ನರಗಳನ್ನು) ಬೆಚ್ಚುಬೀಳಿಸು. (ಬಾಣಲೆಯಲ್ಲಿ ಹಾಕಿದ ಆಲೂಗಡ್ಡೆ, ಮೊ. ನ್ನು) ಆಗಾಗ ಕೆದಕುತ್ತ ಕರಿ, ಪಚನ ಮಾಡು (ಸಾ., ಭೂ. ಕೃ. ನಲ್ಲಿ). (ಒಂದರಮೇಲೆ) ಎಗುರಿ ಬೀಳು, ಎರಗು. ತಿಳಿಯದಂತೆ (ಒಬ್ಬನನ್ನು) ಹಿಂದೆಬೀಳಿಸು. (ನೆಲನುನಾಡುಗಳಲ್ಲಿ, ಗಣಿ, ಮೊ. ಗಳ ವಿಷಯದಲ್ಲಿ) (ಹಿಂದಿನ ಅನುಭವದಾರನು ತೊರೆದುಬಿಟ್ಟದ್ದನ್ನು ಅಥವಾ ವಿಧಿಗನುಸಾರವಾಗಿ ನಡೆಯದೆ ಹಕ್ಕು ಕಳೆದುಕೊಂಡದ್ದನ್ನು) ಹಠಾತ್ತಾಗಿ, ಮೋಸದಿಂದ, ಆಕ್ರಮಿಸಿಕೊ. (ವಿಷಯ, ಪುಸ್ತಕದ ಭಾಗ, ಮೊ. ನ್ನು) ನೋಡದೆ ಬಿಟ್ಟು ಹಾದುಹೋಗು, ಹಾರಿಸಿಬಿಡು. (ಬಂಡೆಯನ್ನು, ಬಂಡೆಯಲ್ಲಿ ತೂತನ್ನು) ಮೊನಚು ಗಡಾರಿಯಿಂದ ಕೊರೆ. J. down person's throat (ಮಾತಾಡುತ್ತಿರುವವನಿಗೆ) ಬಿರುಸಾಗಿ ಉತ್ತರಕೊಟ್ಟು ಮಾತನ್ನು ತಡೆಗಟ್ಟು. J. out of one's skin ಆಶ್ಚರ್ಯದಿಂದ ಹಾರಿಬೀಳು. **Júmpable** (ಗು.) ; **Júmper**[1] (ನಾ.) (ಕ್ರಿಯಾರ್ಥಗಳಲ್ಲಿ). ಎಗುರು ಹುಳು (ಉದಾ., ಚಿಗಟ). ಪಟಸ್ತಂಭ, ಅದರ ಅಡ್ಡತೊಲೆ, ಮೊ. ವು ಎಗುರಿ ಬೀಳದಂತೆ ಬಿಗಿದು ಕಟ್ಟುವ ಹೊರಜಿ. ಬಂಡೆ, ಮೊ. ನ್ನು ಒಡೆಯುವುದಕ್ಕಾಗಿ, ಸಿಡಿಮದ್ದು ತುಂಬುವುದಕ್ಕೆ ತೂತನ್ನು ಕೊರೆಯಲು ಉಪಯೋಗಿಸುವ ಉಳಿಯುಲಗಿನ ಭಾರವಾದ ಗಡಾರಿ : ಎಗುರು ಗಡಾರಿ. **Júmpiness** (ನಾ.); **Júmping** (ಗು.) (ಕ್ರಿಯಾರ್ಥಗಳಲ್ಲಿ). [ಹಾರುವ ಪ್ರಾಣಿಗಳ ಹೆಸರಿನಲ್ಲಿ : J.-cat (Cat ನೋಡಿ), J.-deer, J.-mouse, etc.].

Júmpy (ಗು.) ಎಗುರುವ ; ಎಗುರುವಂತೆ ಮಾಡುವ ; ಎಗುರುಗಳು ಅಥವಾ ಥಟ್ಟನೆಯ ಬದಲಾವಣೆಗಳು ಉಳ್ಳ. ಪಿರಿಕಿ ಸ್ವಭಾವದ ; ದಿಗಿಲು ಬೀಳುವ ; ರೇಗುವ.

Júmper[2] ಜಂಪರ್ (ನಾ.) ನಾವಿಕರು, ಮೊ. ರು ತೊಡುವ, ರಟ್ಟುಬಟ್ಟೆ ಮೊ. ಗಳಿಂದ ಮಾಡಿದ ಸಡಿಲವಾದ ಹೊರಅಂಗಿ ; ಹೆಂಗಸರು ಮತ್ತು ಮಕ್ಕಳು ತಲೆಯಮೇಲಿನಿಂದ ಹಾಕಿಕೊಳ್ಳುವ, ಸೊಂಟದ ವರೆಗೂ ಬರುವ, ಗುಂಡಿ, ಮೊದಲಾದುವು ಇಲ್ಲದ, ಸಡಿಲವಾದ ಒಂದು ಹೊರ ಅಂಗಿ : 'ಜಂಪರ್'; ಮಕ್ಕಳ ಮತ್ತು ಕೆಲಸಗಾರರ ಉಡುಪು ಕೊಳೆಯಾಗದಂತೆ ಮೇಲೆ ಹಾಕುವ ದಗಲೆ.

Júnction ಜಂಕ್‌ಷನ್ (ನಾ.) ಸೇರುವುದು ; ಸೇರಿಕೆ ; ಸಂಧಿ ; ಸೇರಿಕೆಯ ಸ್ಥಳ ; ಕೂಡಲು; ಪ್ರತ್ಯೇಕವಾದ ರೈಲುದಾರಿಗಳು ಸಂಧಿಸಿ ಒಂದುಗೂಡುವ ನಿಲ್ದಾಣ : ಸಂಧಿ (ನಿಲ್ದಾಣ) (ಹಲವು ವೇಳೆ ಅಂಕಿತ ನಾಮಗಳಲ್ಲಿ : Bangalore j., Guntakal j., etc.). **Júncture** ಜಂಕ್‌ಟ್ಯುರ್, —ಚರ್ (ನಾ.) ಸೇರುವುದು ; ಒಟ್ಟಿಗೆ ಸೇರಿಸುವುದು. (ವಸ್ತುಗಳು ಒಂದಕ್ಕೊಂದು) ಸೇರುವ ಎಡೆ ; ಸೇರುವೆಡೆ; ಸಂಧಿ ಸ್ಥಾನ ; ಘಟನೆಗಳ ಅಥವಾ ಸಂದರ್ಭಗಳ ಒಟ್ಟುಗೂಡುವಿಕೆ ; ಸಂಧಿ ಸನ್ನಿವೇಶ ; ಸಂಧಿ ಸಮಯ (At this j. ಈ ಸಂದರ್ಭದಲ್ಲಿ, ಸಂದುಕಟ್ಟಿನಲ್ಲಿ)

Júncture. **Junction** ನೋಡಿ.

June ಜೂನ್ (ನಾ.) ಇಂಗ್ಲಿಷ್ ವರ್ಷದ ಆರನೆಯ ತಿಂಗಳು : 'ಜೂನ್'.

Júngle ಜಂಗ್‌ಲ್ (ನಾ.) (ಮು., ಇಂಡಿಯಾದಲ್ಲಿ) ಕುರುಚಲು ಕಾಡು ; ಕಾನು ; ಜಂಗಲಿ. [(ಅನೇಕ ವೇಳೆ, ಗು. ವಾಗಿ ಪ್ರ.) ಜಂಗಲಿಯ(ಲ್ಲಿ ವಾಸಮಾಡುವ) : ಉದಾ., J.-bear, -cat, -fowl]. (ರೂಪ.) ತೊಡಕು ತೊಡರುಗಳ ಪೊದೆ. (ಅಸಂ.) ಪ. ಆಫ್ರಿಕದ ಪತ್ರ ವ್ಯಾಪಾರ ಕಟ್ಟೆ. J. fever (ಕಾಡಿನಲ್ಲಿಯ ವಿಷಗಾಳಿಯಿಂದ ಬರುವ) ಜಂಗಲ ಜ್ವರ. **Júngled** (ಗು.) ; **Júngli** (ನಾ., ಗು.) ಜಂಗಲಿಯಲ್ಲಿ ವಾಸಮಾಡುವ(ವನು, ದು): ಜಂಗಲಿ ನಿವಾಸಿ. (ಆಂ. ಇಂ., ಬಳ. ಮಾ.) ಒಡ್ಡೊಡ್ಡಾದ ; ನಯ ನಾಜೂಕಿಲ್ಲದ ; ಒರಟು ; ಅಸಂಸ್ಕೃತ. **Júngly** (ಗು.)

Júnior ಜೂನಿಯರ್ (ಗು., ನಾ.) ಕಿರಿಯ(ವನು) ; ಚಿಕ್ಕ(ವನು) (ಮು., ತಂದೆಯ ಹೆಸರನ್ನೇ ಇಟ್ಟಿರುವ ಮಗನ ವಿಷಯದಲ್ಲಿ : ಉದಾ., John Smith j. ಕಿರಿಯ ಜಾನ್ ಸ್ಮಿತ್; ಒಂದೇ ಹೆಸರಿನ ಶಾಲಾ ವಿದ್ಯಾರ್ಥಿಗಳ ವಿಷಯದಲ್ಲಿ ಸಹ ಹೀಗೆಯೇ. ಸಂಕ್ಷಿಪ್ತ : jun., jr.). ಕಡಮೆಯ ಅಂತಸ್ತಿನ ; ಕೆಳ ದರ್ಜೆಯ ; ಕಿರಿಯ (J. partner ಕಿರಿಯ ಪಾಲುದಾರ, —ಪತ್ತಿಗ). (ನಾ.) The juniors ಕಿರಿಯವರು (– is my j. — ನನಗಿಂತ ಕಿರಿಯ, ಕೆಳಗಿನವನು). **Juniórity** —ಯಾ— (ನಾ.) ಕಿರಿಯತನ. **Júniorate** — ಯರೆಟ್ (ನಾ.) (Society of Jesus ಎಂಬ ಸಂಘದಲ್ಲಿ) ಪುರೋಹಿತರಾಗುವ ಮೊದಲು ಕಿರಿಯ ಸದಸ್ಯರು ಪಡೆಯುತ್ತಿದ್ದ ಎರಡು ವರ್ಷಗಳ ಶಿಕ್ಷಣ.

Júniper ಜೂನಿಪರ್ (ನಾ.) ಶಂಕುಫಲಿ ಎಂಬ ಸಸ್ಯವರ್ಗಕ್ಕೆ ಸೇರಿದ ನಿತ್ಯಹಸುರಿನ ಗುಲ್ಮ (ಜಾತಿ) : 'ಜೂನಿಪರ್' ಗುಲ್ಮ. Common j. (ಔಷಧಕ್ಕಾಗಿಯೂ gin ಎಂಬ ಮದ್ಯ ಮಾಡುವುದರಲ್ಲೂ ಉಪಯೋಗಿಸುವ, Oil of j. ಎಂಬ ಎಣ್ಣೆ ಕೊಡುವ ಕಾಯನ್ನು ಬಿಡುವ) ಸಾಮಾನ್ಯ ಜೂನಿಪರ್ ಗುಲ್ಮ.

Junk[1] ಜಂಕ್ (ನಾ., ಕ್ರಿ. ಸಕ.) ನಾರು, ಗುಂಜು, ಮೊ. ನ್ನು ಬಿಡಿಸಿ ತೆಗೆಯುವುದಕ್ಕಾಗಿ ತುಂಡು ತುಂಡು ಮಾಡಿ ಹಾಕಿದ ಹಳೆಯ ಹೊರಜಿ. ಬಿಸುಟ ಪದಾರ್ಥ ; ಕಸ. ದಪ್ಪ ತುಂಡು, ಚೂರು. (ನಾವೆ) ಉಪ್ಪಿಟ್ಟ ಮಾಂಸ. ಒಂದು ಜಾತಿಯ ತಿಮಿಂಗಿಲದ ತಲೆಯಲ್ಲಿ Spermaceti ಎಂಬ ನೆಣ ತುಂಬಿದ ಅಂಗಾಂಶದ ಮುದ್ದೆ. (J.-shop ನಾವಿಕ ಸಾಮಾನುಗಳ ಅಂಗಡಿ). (ಕ್ರಿ.) ದಪ್ಪ ತುಂಡುಗಳಾಗಿ ಕತ್ತರಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Junk[2] ಜಂಕ್ (ನಾ.) ಚೀನಾ ಸಮುದ್ರದಲ್ಲಿ ಉಪಯೋಗಿಸುವ ಚಪ್ಪಟೆ ತಳದ ಒಂದು ಬಗೆಯ ದೊಡ್ಡ ದೋಣಿ.

Júnker (G) ಯುಂಕರ್ (ನಾ.) ಜರ್ಮನ್ ಶ್ರೀಮಂತ ತರುಣ ; (ಪ್ರಷ್ಯಾ ದೇಶದಲ್ಲಿ) ಇತರರೊಡನೆ ಬೆರೆಯದ ಶ್ರೀಮಂತ ಪಕ್ಷದ ಸದಸ್ಯ.

Júnket ಜಂಕೆಟ್ (ನಾ., ಕ್ರಿ. ಅಕ.) ಮೇಲ್ಭಾಗದಲ್ಲಿ ಕಾದ ಕೆನೆಯನ್ನು ಹರಡಿರುವ ಸಿಹಿ ಬೆರಸಿದ ಮೊಸರು ಮತ್ತು ಮೊಸರೊಡಕಿನ ಒಂದು ಭಕ್ಷ್ಯ. ಹಬ್ಬ ; ಹಬ್ಬದೂಟ. (ಕ್ರಿ.) ಹಬ್ಬದೂಟ ಮಾಡು ; ವನಭೋಜನ ಮಾಡು. **Júnketing** (ನಾ.)

Júno (L) ಜೂನೊ (ನಾ.) 'ಜೂಪಿಟರ್' ದೇವತೆಯ ಹೆಂಡತಿ : ಜೂನೋ ದೇವಿ; ಘನ ಗಾಂಭೀರ್ಯದ ಸೌಂದರ್ಯವತಿ. ಅಂಗಾರಕ ಮತ್ತು ಬೃಹಸ್ಪತಿಗಳ ಪಥಗಳ ನಡುವೆ, ಸೂರ್ಯನ ಸುತ್ತಲೂ ಸುತ್ತುತ್ತಿರುವ ಕ್ಷುದ್ರ ಗ್ರಹಗಳಲ್ಲಿ ಮೂರನೆಯದು.

Júnta ಜಂಟ (ನಾ.) ಸ್ಪೈಯ್ನ್ ಅಥವಾ ಇಟಲಿಯ ಮಂತ್ರಣ ಸಭೆ, ಆಡಳಿತ ಸಭೆ. = Junto.

Júnto ಜಂಟೊ (ನಾ.) (ಸಣ್ಣ) ಒಳ ಕೂಟ ; ಸಂಚು ಕೂಟ ; ಪಂಗಡ ; ರಾಜಕೀಯ ಅಥವಾ ಇತರ ಜನಕೂಟ.

Jupe (F) ಜೂಪ್, ಝುಪ್ (ನಾ.) (ಹೆಂಗಸಿನ) ಲಂಗ.

Júpiter (L) ಜೂಪಿಟರ್ (ನಾ.) (ರೋಮನ್ ಪುರಾಣ) ದೇವತೆಗಳ ರಾಜ ; ದೇವಾಧಿದೇವ ; ದ್ಯುಪಿತೃ. (J. Pluvius ಮಳೆಯ ಅಧಿದೇವತೆ ; ಪರ್ಜನ್ಯ). ಸೌರವ್ಯೂಹದಲ್ಲಿ ಅತ್ಯಂತ ದೊಡ್ಡ ಗ್ರಹ : ಬೃಹಸ್ಪತಿ ; ಗುರು.

Júral ಜೂರಲ್ (ಗು.) ಕಾನೂನಿನ ; ನ್ಯಾಯ ವಿಷಯಕ ; ನ್ಯಾಯಾಡಳಿತದ ; (ನೈತಿಕ) ಹಕ್ಕು ಬಾಧ್ಯತೆಗಳ ಮತ್ತು ಕರ್ತವ್ಯಗಳ.

Jurássic ಜುರ್ಯಾಸಿಕ್ (ಗು.) (ಫ್ರಾನ್ಸ್ ಮತ್ತು ಸ್ವಿಟ್ಜರ್ಲೆಂಡುಗಳ ಮಧ್ಯೆ ಇರುವ) ಜೂರಾ ಪರ್ವತದ ; ಈ ಪರ್ವತದ ರಚನೆಯಲ್ಲಿರುವಂತೆ Oolitic ಎಂಬ ಒಂದು ಬಗೆಯ ಸುಣ್ಣಕಲ್ಲು ಹರಡಿರುವ ರಚನೆಯುಳ್ಳ.

Jurídical ಜುರಿಡಿಕಲ್ (ಗು.) ನ್ಯಾಯ ವ್ಯವಹಾರದ ; ನ್ಯಾಯ ಸಂಬಂಧವಾದ.

Júrisconsúlt ಜೂರಿಸ್‌ಕನ್ಸಲ್ಟ್ (ನಾ.) ನ್ಯಾಯಶಾಸ್ತ್ರ ಪಂಡಿತ ; ವ್ಯವಹಾರ ಶಾಸ್ತ್ರಜ್ಞ.

Jurisdíction ಜೂರಿಸ್‌ಡಿಕ್‌ಷನ್ (ನಾ.) ನ್ಯಾಯ ನಿರ್ವಾಹ (ಮಾಡುವುದು) ; ನ್ಯಾಯಾಧಿಕಾರ ಅಥವಾ ಇತರ ವಿಧವಾದ ಅಧಿಕಾರ ; ಅಧಿಕಾರವ್ಯಾಪ್ತಿ(ಯುಳ್ಳ ಪ್ರದೇಶ). **Jurisdíctional** (ಗು.)

Jurisprúdence ಜೂರಿಸ್‌ಪ್ರೂಡೆನ್ಸ್ (ನಾ.) ನ್ಯಾಯ ತತ್ತ್ವ, ಶಾಸ್ತ್ರ ; ವ್ಯವಹಾರ ಧರ್ಮ ಶಾಸ್ತ್ರ; ನ್ಯಾಯ ಕೌಶಲ. **Jurisprudéntial** (ಗು.); **Jurisprúdent** (ಗು., ನಾ.) ನ್ಯಾಯಶಾಸ್ತ್ರ ಪಾಂಡಿತ್ಯವುಳ್ಳ(ವನು)

Júrist ಜೂರಿಸ್ಟ್ (ನಾ.) ನ್ಯಾಯ ಶಾಸ್ತ್ರಜ್ಞ ; ನ್ಯಾಯಶಾಸ್ತ್ರ ವಿಷಯ ಲೇಖಕ. ನ್ಯಾಯಶಾಸ್ತ್ರ ವ್ಯಾಸಂಗಿ ; ನ್ಯಾಯಶಾಸ್ತ್ರ ಪದವೀಧರ. **Jurístic(al)** (ಗು.) ; **Jurístically** (ಕ್ರಿ. ವಿ.)

Júror ಜೂರರ್ (ನಾ.) ನ್ಯಾಯಸ್ಥಾನದ ಪಂಚಾಯಿತ (ಸದಸ್ಯ) ; ನ್ಯಾಯದರ್ಶಿ. ಪ್ರಮಾಣ ಮಾಡುವವನು.

Júry ಜೂರಿ (ನಾ.) ನ್ಯಾಯಸ್ಥಾನದಲ್ಲಿ ತಮಗೆ ಒಪ್ಪಿಸಿದ ವ್ಯವಹಾರ ವಿಚಾರದಲ್ಲಿ ನಿಜವಾದ ತೀರ್ಪನ್ನು ಹೇಳುವುದಾಗಿ ಪ್ರಮಾಣಮಾಡಿರುವವರು : ನ್ಯಾಯದರ್ಶಿಗಳು [Grand j. (ವಿಚಾರಣೆಯ ನ್ಯಾಯದರ್ಶಿಗಳಿಗೆ ಅಪಾದನೆಗಳನ್ನು ಒಪ್ಪಿಸುವ ಮೊದಲು, ಅವುಗಳನ್ನು ವಿಚಾರಿಸುವುದಕ್ಕಾಗಿ ನೇಮಿಸಿದ ೧೨ರಿಂದ ೨೩ ಮಂದಿಯನ್ನೊಳಕೊಂಡ) ನ್ಯಾಯದರ್ಶಿಗಳ ಮಹಾ ಮಂಡಲ. Trial, common, petty, j. (ಅರ್ಥ ಸಂಬಂಧದ ಅಥವಾ ತಕ್ಸೀರಿನ ವಿಷಯವಾದ ವ್ಯವಹಾರಗಳಲ್ಲಿ, ನಿಜಸ್ಥಿತಿಯನ್ನು ವಿಚಾರಣೆ ಮಾಡಿ ಒಮ್ಮತದ ತೀರ್ಮಾನ ಹೇಳುವುದಕ್ಕೆ ನಿಯಮಿಸಿದ ೧೨ ಮಂದಿಯನ್ನೊಳಕೊಂಡ) ಸಾಮಾನ್ಯ, ಚಿಕ್ಕ, — ನ್ಯಾಯದರ್ಶಿ ಮಂಡಲ. Special j. (ಸಮಾಜದಲ್ಲಿ ನಿರ್ದಿಷ್ಟ ಸ್ಥಾನ ಮಾನಗಳನ್ನುಳ್ಳವರನ್ನೊಳಕೊಂಡ) ವಿಶೇಷ ನ್ಯಾಯದರ್ಶಿ ಮಂಡಲ. J. of matrons (ಮರಣ ದಂಡನೆಯನ್ನು ನಿಲ್ಲಿಸುವ ಉದ್ದೇಶದಿಂದ ಗರ್ಭಿಣಿ ಎಂಬ ನೆಪವನ್ನು ಹೂಡಿದಾಗ, ಅದನ್ನು ನಿರ್ಧರಿಸಲು ನೇಮಿಸುವ) ಸ್ತ್ರೀ ನ್ಯಾಯದರ್ಶಿ ಮಂಡಲ]. (ಮೇಲಾಟಗಳಲ್ಲಿ ಬಹುಮಾನಗಳನ್ನು ಯಾರಿಗೆ ಕೊಡಬೇಕೆಂಬುದನ್ನು ತೀರ್ಮಾನಿಸಲು ನೇಮಕವಾದ) ಬಹುಮಾನ ಮಂಡಲಿ. J.-box ನ್ಯಾಯಸ್ಥಾನದಲ್ಲಿ ನ್ಯಾಯದರ್ಶಿಗಳು ಕುಳಿತುಕೊಳ್ಳುವ ಸುತ್ತುಗಟ್ಟುಳ್ಳ ಪೀಠಸ್ಥಾನ. **Júryman** (ನಾ.) ನ್ಯಾಯದರ್ಶಿ (ಮಂಡಲಿಯ ಸದಸ್ಯ)

Júry-mast ಜೂರಿ ಮಾಸ್ಟ್ (ನಾ.) ಮುರಿದುಹೋದ ಅಥವಾ ಕಳೆದು ಹೋದ ಕೂವೆಗೆ ಬದಲಾಗಿ ಹಾಕುವ ತಾತ್ಕಾಲಿಕ ಕೂವೆ.

Jússive ಜಸಿವ್ (ಗು.) (ವ್ಯಾ.) ಆಜ್ಞಾರ್ಥಕ ; ವಿಧ್ಯರ್ಥಕ.

Just[1] ಜಸ್ಟ್ (ಗು., ಕ್ರಿ. ವಿ.) (ವ್ಯಕ್ತಿ, ನಡತೆ) (ಒಬ್ಬನಿಗೆ) ನ್ಯಾಯವಾದ, ನಿಷ್ಪಕ್ಷಪಾತವಾದ (*To* person, etc.) ; (ಗಣನೆ, ಮೊ. ಗಳ ವಿಷಯದಲ್ಲಿ) ಅರ್ಹತೆಯುಳ್ಳ, ಯೋಗ್ಯವಾದ (A j. reward ತಕ್ಕ ಪ್ರತಿಫಲ). (ಮನೋಭಾವಗಳು, ಅಭಿಪ್ರಾಯಗಳು, ಮೊ.) ಸಕಾರಣವಾದ, ಸಾಧಾರವಾದ (J. resentment, fear ಸಕಾರಣವಾದ ದ್ವೇಷ, ಭಯ). ಸರಿಯಾದ ಪ್ರಮಾಣದ ; ತಕ್ಕ ; ಸಮಂಜಸವಾದ. (ಕ್ರಿ. ವಿ.) ಸರಿಯಾಗಿ, ನಿಷ್ಕೃಷ್ಟವಾಗಿ (J. there, J. then, J. so, That is j. it ನಿಜವಾಗಿ ಅದೇ). ಅಷ್ಟುಮಾತ್ರ (I j. managed it ಅದನ್ನು ಸಾಧಿಸಲು ಎಷ್ಟು ಬೇಕೊ ಅಷ್ಟು ಮಾತ್ರ ಸಾಧ್ಯವಾಯಿತು). ಸರಿಯಾಗಿ ; ಆ ಕ್ಷಣದಲ್ಲಿ ; ಈಗ ತಾನೆ (I have j. seen him pass ಅವನು ಹೋದದ್ದನ್ನು ಈಗ ತಾನೆ ಕಂಡೆನು. J. now ಈಗ ತಾನೆ). (ಬಳ. ಮಾ.) ನಿಜವಾಗಿ ; ಸಂಪೂರ್ಣವಾಗಿ (It is j. splendid ಅದು ನಿಜವಾಗಿಯೂ ಬಹು ಸೊಗಸಾಗಿದೆ. Not j. yet ಇನ್ನೂ ಈಗಲೇ ಅಲ್ಲ). (ಅವಧಾರಣಾರ್ಥದಲ್ಲಿ ಅಸಂ. : Did he swear? Didn't he j.! ಪ್ರಮಾಣ ಮಾಡಿದನೆ? ಮಾಡಲಿಲ್ಲವೆ !). **Jústly** (ಕ್ರಿ. ವಿ.) ; **Jústness** (ನಾ.) ; **Jústice** ಜಸ್ಟಿಸ್ (ನಾ.) ನ್ಯಾಯವಾದ ನಡತೆ ; ನ್ಯಾಯ ; ನಿಷ್ಪಕ್ಷಪಾತ. ಹಕ್ಕುಸ್ಥಾಪನೆಯಲ್ಲಿ ಪ್ರಯೋಗಿಸುವ ಅಧಿಕಾರ. (Poetical j. ಕಾವ್ಯ, ಮೊ. ಗಳಲ್ಲಿ ನಿರೂಪಿಸುವ ಆದರ್ಶ ನ್ಯಾಯ : ಕವಿತಾ ನ್ಯಾಯ). ನ್ಯಾಯ ವ್ಯವಹಾರ (Court of J. ನ್ಯಾಯಸ್ಥಾನ) ; ದಂಡಾಧಿಕಾರಿ ; (ಮು., ಇಂಗ್ಲೆಂಡಿನಲ್ಲಿ Supreme Court of Judicature ಎಂಬ ಪರಮ ನ್ಯಾಯಸ್ಥಾನದ) ನ್ಯಾಯಾಧಿಪತಿ. J. of the Peace ಜಿಲ್ಲೆ, ಪಟ್ಟಣ, ಮೊ. ಗಳಲ್ಲಿ ಶಾಂತಿ ರಕ್ಷಣೆಗಾಗಿ ನೇಮಿಸಿದ ಕೆಳ ದರ್ಜೆಯ ದಂಡಾಧಿಕಾರಿ : ಶಾಂತಿ ಪಾಲಕ (ನ್ಯಾಯಾಧಿಪತಿ). Do j. to ನಿಷ್ಪಕ್ಷಪಾತವಾಗಿ ನೋಡು ; ಯೋಗ್ಯತೆಗೆ ತಕ್ಕ ಬೆಲೆ ಕೊಡು ; ತೃಪ್ತಿಕರವಾಗಿ ಮಾಡು. Do oneself j. ತನ್ನ ಸಾಮರ್ಥ್ಯಕ್ಕೆ ಒಪ್ಪುವಂತೆ ಕೆಲಸಮಾಡು. **Jústiceship** (ನಾ.) ನ್ಯಾಯಾಧಿಪತಿಯ ಅಧಿಕಾರ, ಪದವಿ. **Justíciable** — ಷಿಯ(ಷ)ಬ್‌ಲ್ (ಗು., ನಾ.) ವ್ಯವಹಾರಾಧಿಕಾರಕ್ಕೊಳಪಟ್ಟ. (ನಾ.) (ಮತ್ತೊಬ್ಬನ) ಅಧಿಕಾರಕ್ಕೊಳಪಟ್ಟವನು (*Of* another). **Justíciar** — ಷಿಯರ್, — ಷ್ಯರ್ (ನಾ.) (ಇಂಗ್ಲೆಂಡಿನ) ನಾರ್ಮನ್ ಮತ್ತು ಆದಿ ಪ್ಲಾಂಟಾಜೆನೆಟ್ ದೊರೆಗಳ ಕಾಲದಲ್ಲಿ ರಾಜಕೀಯ ಮತ್ತು ನ್ಯಾಯವಿಚಾರಗಳ ಪ್ರಧಾನಾಧಿಕಾರಿ. **Justíciary** (ನಾ., ಗು.) ನ್ಯಾಯಾಧಿಕಾರಿ ; = Justiciar. (ಗು.) ನ್ಯಾಯ ಶಾಖೆಯ ಆಡಳಿತದ ; ನ್ಯಾಯಾಧಿಕಾರದ. **Jústify** ಜಸ್ಟಿಫೈ (ಕ್ರಿ. ಸಕ.) (ಒಬ್ಬನ, ಒಂದು ಕಾರ್ಯದ) ನ್ಯಾಯವನ್ನು, ಋಜುತ್ವವನ್ನು, — ತೋರಿಸು ; (ನ್ಯಾಯವೆಂದು) ಸಮರ್ಥಿಸು, ಸ್ಥಾಪಿಸು ; (ಸಮಯ ಸಂದರ್ಭಗಳು) ಹೀಗೆ ಸಮರ್ಥಿಸುವಂತಿರು. (ದೇವ. ಶಾ.) [ಕ್ರಿಸ್ತನ ಧರ್ಮಪರಾಯಣತೆಯ ಕಾರಣದಿಂದ ಅಥವಾ (ರೋ. ಕ್ಯಾ.) ಭಗವದನುಗ್ರಹದ ಫಲವಾಗಿ, ಒಬ್ಬನಿಗೆ] ಪಾಪದ ಫಲ ವಿಮೋಚನೆಯಾಗಿದೆಯೆಂದು ವಿಧಿವಿಹಿತವಾಗಿ ಹೇಳು. (ಹೇಳಿಕೆ, ಮೊ. ನ್ನು) ಸಮರ್ಥಿಸು, ರುಜುವಾತು ಮಾಡು. (ನಡತೆ, ಹಕ್ಕು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊ. ಕ್ಕೆ) ತಕ್ಕಷ್ಟು ಆಧಾರ ಕೊಡು. (J. bail ಜಾಮೀನುದಾರನು ತಾನು ಹೊಣೆಹೊರಲು ತಕ್ಕಷ್ಟು ಧನಬಲವುಳ್ಳವನೆಂದು ಪ್ರಮಾಣಪೂರ್ವಕವಾಗಿ ಸಮರ್ಥಿಸು: ಜಾಮೀನು ಸಮರ್ಥನೆ ಮಾಡು). (ಮುದ್ರಣ) ಪಂಕ್ತಿಯಲ್ಲಿ ಅಕ್ಷರಗಳು ಹೊಂದಿಕೊಂಡಿರುವಂತೆ ಸರಿಪಡಿಸು. **Justifiability** (ನಾ.); **Jústifiable** (ಗು.); **Jústifiably** (ಕ್ರಿ. ವಿ.); **Justificátion** (ನಾ.) ಸಮರ್ಥನ; ಔಚಿತ್ಯ ಸಾಧನ. **Jústificative** (ಗು.); **Jústificatory** (ಗು.)

Just². **Joust** ನೋಡಿ.

Jústice, Jústify, etc. **Just¹** ನೋಡಿ.

Jut ಜಟ್ (ನಾ., ಕ್ರಿ. ಅಕ.) ಚಾಚು; ಮುನ್‌ಚಾಚಿಕೊಂಡಿರುವ ಭಾಗ. (ಕ್ರಿ.) ಹೊರಕ್ಕೆ, ಮುಂದಕ್ಕೆ, —ಚಾಚು, ಚಾಚಿರು (*Out, forth* ಉಪ. ದೊಡನೆ)

Jute ಜೂಟ್ (ನಾ.) (ರಟ್ಟು, ಬಟ್ಟೆ, ಗೋಣಿ ತಟ್ಟು, ಹಗ್ಗ, ಮೊ. ಗಳ ತಯಾರಿಕೆಯಲ್ಲಿ ಉಪಯೋಗಿಸುವ, ಹೆಚ್ಚಾಗಿ ಬಂಗಾಳದಲ್ಲಿ ಬೆಳೆಯುವ) ಸಣಬಿನ ಜಾತಿಯ ಗಿಡದ ತೊಗಟೆಯ ನಾರು; ಗೋಣಿ ನಾರು.

Juvenéscence. **Juvenile** ನೋಡಿ.

Júvenile ಜೂವಿನೈಲ್ (ಗು., ನಾ.) ಚಿಕ್ಕ ವಯಸ್ಸಿನ; ಹರೆಯದ; ಹುಡುಗರಿಗೆ, ಹರೆಯದವರಿಗೆ, —ತಕ್ಕ, ಉಚಿತವಾದ; ತರುಣ ಲಕ್ಷಣವುಳ್ಳ. (ನಾ.) ಚಿಕ್ಕ ಪ್ರಾಯದವನು (ವಳು); ಹರೆಯದವನು (ವಳು). (ಬ. ವ. ದಲ್ಲಿ, ವ್ಯಾಪಾರದ ಅನಂ.) ಮಕ್ಕಳಿಗೆಂದು ಉದ್ದೇಶಿಸಿದ ಪುಸ್ತಕಗಳು: ಮಕ್ಕಳ ಪುಸ್ತಕಗಳು. **Júvenilely** (ಕ್ರಿ. ವಿ.); **Juvenílity** — ನಿ — (ನಾ.); **Juvenília** (ನಾ., ಬ. ವ.) ಕವಿ ತಾನು ತಾರುಣ್ಯದಲ್ಲಿದ್ದಾಗ ರಚಿಸಿದ ಕೃತಿಗಳು, ಗ್ರಂಥಗಳು: ಬಾಲ್ಯ ಗ್ರಂಥಗಳು (ಸಾ., ಇಂಥ ಲೇಖನಗಳ ಸಂಗ್ರಹದ ಹೆಸರಾಗಿ ಪ್ರ.). **Juvenéscence** —ನೆಸೆನ್ಸ್ (ನಾ.) ಮಗುತನದಿಂದ ಯೌವನಕ್ಕೆ ತಿರುಗುವ ಪ್ರಾಯ; ಕೌಮಾರ್ಯ; ಯೌವನೋದಯ. **Juvenéscent** (ಗು.)

Juxtapóse ಜಕ್ಸ್ಟಪೋಸ್ (ಕ್ರಿ. ಸಕ.) (ವಸ್ತುಗಳನ್ನು) ಒಂದರ ಪಕ್ಕದಲ್ಲೊಂದಿರುವಂತೆ ಇಡು: ಪಕ್ಕ ಪಕ್ಕದಲ್ಲಿಡು. **Juxtaposítion** (ನಾ.) — ಇಡುವುದು, ಇಟ್ಟಿರುವುದು.

K

K ಕೇ. ಇಂಗ್ಲಿಷ್ ವರ್ಣಮಾಲೆಯ ಹನ್ನೊಂದನೆಯ ಅಕ್ಷರ.

ಸಂಕ್ಷಿಪ್ತಗಳು: (1) (King's) ರಾಜನ [**K. B.** (King's Bench) ರಾಜ ನ್ಯಾಯಸ್ಥಾನ. **K. C.** (King's Counsel) ರಾಜ ನಿರೂಪದಿಂದ ಪ್ರಶಸ್ತಿ ಪಡೆದ ಬ್ಯಾರಿಸ್ಟರು]. (2) (Knight) ವೀರ ಪುರುಷ: 'ನೈಟು' [**K. G.** (Knight of the Garter)]. (3) (Knight Commander; also, **K. C.**) ವೀರ ನಾಯಕ [**K. B. E.** (Knight Commander of the British Empire); **K. C. B.** (— of the Bath); **K. C. I. E.** (— of the Indian Empire); **K. C. M. G.** (— of the Order of St. Michael & St. George); **K. C. S. I.** (— of the Star of India); **K. C. V. O.** (— of the Royal Victorian Order)]

kg. (Kilogramme); **kl.** (Kilolitre); **km.** (Kilometre); **Knt, Kt** (Knight)

Kábbalah. = Cabbala.

Kádi. = Cadi.

Káffir ಕ್ಯಾಫರ್, **Káfir** ಕಾಫಿರ್, **Cáffre** ಕಾಫರ್ (ನಾ.) ದ. ಆಫ್ರಿಕದ ಬಂಟು ಎಂಬ ಕುಲದವನು. ಮಹಮ್ಮದೀಯ ಮತದಲ್ಲಿ ನಂಬಿಕೆಯಿಲ್ಲದವನು; ಮುಸಲ್ಮಾನನಲ್ಲದವನು: ಕಾಫರ್. (ಬ. ವ. ದಲ್ಲಿ) ದ. ಆಫ್ರಿಕದ ಗಣಿಯ ಕಂಪೆನಿಯ ಪಾಲುಗಳು.

Kaínit(e) ಕಾಯಿ(ಕೈ)ನಿ(ನೈ)ಟ್ (ನಾ.) ಮ್ಯಾಗ್ನೀಸಿಯಂ ಪೊಟಾಸಿಯಮ್ಮುಗಳ ಸಲ್ಫೇಟುಗಳು, ಮ್ಯಾಗ್ನೀಸಿಯಂ ಕ್ಲೋರೈಡ್, ಮತ್ತು ಜಲಾಂಶ — ಇವೆಲ್ಲವೂ ಸಂಯುಕ್ತವಾಗಿದ್ದು ಸ್ವಾಭಾವಿಕವಾಗಿ ದೊರೆಯುವ ಒಂದು ಲವಣ: 'ಕೈನೈಟು'. (ಇದನ್ನು ಗೊಬ್ಬರವಾಗಿ ಉಪಯೋಗಿಸುತ್ತಾರೆ)

Kaíser ಕೈಸರ್ (ನಾ.) ಚಕ್ರವರ್ತಿ; (ಚರಿತ್ರೆ) ಜರ್ಮನ್ ಚಕ್ರವರ್ತಿ; ಆಸ್ಟ್ರಿಯಾ ಚಕ್ರವರ್ತಿ. (ಚರಿತ್ರೆ) Holy Roman Empire ಎಂಬ ಸಾಮ್ರಾಜ್ಯದ ಅಧ್ಯಕ್ಷ. **Kaísership** (ನಾ.)

Kala-azár ಕಾಲಾ ಅಜಾರ್ (ನಾ.) ಪೂರ್ವದಿಕ್ಕಿನ ಉಷ್ಣ ದೇಶಗಳಲ್ಲಿಯ ಕಠಿನ ಅಂಟುಜಾಡ್ಯವಾದ ಮಲೇರಿಯಾ ಜ್ವರ: 'ಕಾಲಾ ಅಜಾರ್'.

Kaleídoscope ಕಲೈಡೊಸ್ಕೋಪ್ (ನಾ.) ತಳಭಾಗದಲ್ಲಿಯ ಅರೆಯಲ್ಲಿಟ್ಟಿರುವ ಬಣ್ಣ ಬಣ್ಣದ ಗಾಜಿನ ಚೂರುಗಳು ಒಳಪಕ್ಕಗಳಲ್ಲಿ ಅಳವಡಿಸಿರುವ ಕನ್ನಡಿಗಳ ಮೂಲಕ ಪ್ರತಿಫಲನ ಹೊಂದಿ, ಸಮರೂಪಾಕೃತಿಗಳೂ, ಕೊಳವಿಯನ್ನು ಸುತ್ತು ತಿರುಗಿಸಿದಂತೆಲ್ಲ ಇಂತಹ ಬೇರೆ ಬೇರೆ ಆಕೃತಿಗಳೂ, ಕಾಣುವಂತೆ ರಚಿಸಿದ ಒಂದು ನೋಟದ ಕೊಳವಿ; ವಿವಿಧ ಚಿತ್ರ ದರ್ಶಕ: 'ಕಲೈಡೊಸ್ಕೋಪ್'. (ರೂಪ.) ಎಡೆಬಿಡದೆ ವ್ಯತ್ಯಾಸ ಹೊಂದುತ್ತಿರುವ ಉಜ್ಜ್ವಲ ವಸ್ತುಗಳ ತಂಡ. **Kaleidoscópic(al)** (ಗು.); **Kaleidoscópically** (ಕ್ರಿ. ವಿ.)

Kálends. = Calends.

Káli ಕ್ಯಾಲಿ, ಕೇಲಿ(ಲೈ) (ನಾ.) =Alkali; (ಸುಟ್ಟರೆ ಸೋಡಾ ಕ್ಷಾರದ ಬೂದಿಯುಳಿಯುವ) 'ಸಾಲ್ಟ್‌ವರ್ಟ್' ಎಂಬ ಮುಳ್ಳುಗಿಡ.

Kálpa ಕಲ್ಪ (ನಾ.) ಕಲ್ಪ; ಬ್ರಹ್ಮನ ಒಂದು ದಿವಸ (೪೩೨ ಕೋಟಿ ವರ್ಷ)

Kámi ಕಾಮಿ (ನಾ.) (ಜಪಾನಿನಲ್ಲಿ) ಗವರ್ನರು, ಮೊ. ರ ಬಿರುದು: 'ಕಾಮಿ'. (ಜಪಾನಿನ ದೇಶೀಯ ಮತದಲ್ಲಿ) ದೇವರು.

Kangaroó ಕ್ಯಾಂಗರೂ (ನಾ.) ಜೋರಾಗಿ ನೆಗೆಯಲಾಗುವಂತೆ ಬಹಳ ದೃಢವಾಗಿ ಬೆಳೆದ ದೊಡ್ಡ ಹಿಂಗಾಲುಗಳೂ, ನಡಗೆಗೆ ಅಷ್ಟು ಉಪಯೋಗಕ್ಕೆ ಬಾರದ ಸಣ್ಣ ಮುಂಗಾಲುಗಳೂ ಉಳ್ಳ, ಆಸ್ಟ್ರೇಲಿಯ, ಟಾಸ್ಮೇನಿಯ, ಮೊ. ದೇಶಗಳ ನಿವಾಸಿಯಾದ, ಹೊಟ್ಟೆಸಂಚಿಯುಳ್ಳ ಒಂದು ಮೃಗ: 'ಕ್ಯಾಂಗರು'; (K. rat ಹೊಟ್ಟೆಸಂಚಿಯುಳ್ಳ ಆಸ್ಟ್ರೇಲಿಯದ ಇಲಿಯಂಥ ಒಂದು ಚಿಕ್ಕ ಪ್ರಾಣಿ: ಕ್ಯಾಂಗರೂ ಇಲಿ). (ಅನಂ., ಬ. ವ. ದಲ್ಲಿ) ಪ. ಆಸ್ಟ್ರೇಲಿಯದ ಗಣಿಕಂಪೆನಿಗಳ ಪಾಲುಗಳು; ಈ ಪಾಲುಗಳ ವ್ಯಾಪಾರಿಗಳು. K. bicycle ಇಳಿಜಾರು ಬೆನ್ನಿನ (ಪೀಠವುಳ್ಳ) ಬೈಸಿಕಲ್ಲು (ಬೀಳದಂತೆ ರಕ್ಷಣೋಪಾಯವಾಗಿ ಮೊದಲು ತಯಾರಿಸಿದ್ದು). K. closure ಹಲವು ತಿದ್ದುಪಡಿ ಸೂಚನೆಗಳು ಬಂದಿರುವಾಗ ಸಮಿತಿಯ (ಪಾರ್ಲಿಮೆಂಟಿನ) ಅಧ್ಯಕ್ಷನು ಕೆಲವನ್ನು ಚರ್ಚೆಗೆ ಆರಿಸಿಕೊಂಡು ಉಳಿದುವನ್ನು ತಳ್ಳಿಬಿಡುವ ಚರ್ಚೆಯ ಮುಕ್ತಾಯ: ಕ್ಯಾಂಗರೂ ಮುಕ್ತಾಯ.

Kántian ಕ್ಯಾಂಟಿಯನ್ (ಗು., ನಾ.) Immanuel Kant ಎಂಬ ಜರ್ಮನ್ ತತ್ತ್ವಜ್ಞನ: ಕ್ಯಾಂಟನ; ಕ್ಯಾಂಟನ ತತ್ತ್ವ ಸಿದ್ಧಾಂತದ. (ನಾ.) ಕ್ಯಾಂಟ್ ತತ್ತ್ವಾನುಯಾಯಿ. **Kántism** (ನಾ.)

Káolin ಕಾ(ಕೇ)ಯೊಲಿನ್ (ನಾ.) ('ಫೆಲ್ಡ್‌ಸ್ಪಾರ್' ಖನಿಜವು ವಿಘಟನೆ ಹೊಂದುವುದರಿಂದಾದ) ಬಹು ನಯವಾದ ಬಿಳಿಯ ಜೇಡಿಮಣ್ಣು:

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಿಂಗಾಣಿ ಮಣ್ಣು : 'ಕೇಯೊಲಿನ್' (ಪಿಂಗಾಣಿ ತಯಾರಿಕೆಯಲ್ಲಿ ಉಪಯೋಗ). **Káolinize** (ಕ್ರಿ. ಸಕ.)

Kápok ಕಾಪಕ್ (ನಾ.) ಒಂದು ಜಾತಿಯ ಮರದ ಬೀಜಗಳಿಗೆ ಸುತ್ತಲೂ ಅಂಟಿಕೊಂಡಿರುವ, ಎಕ್ಕಿದ ಹತ್ತಿಯಂತಿರುವ ಪದಾರ್ಥ; ಬೂರುಗದ ಹತ್ತಿ. (ಮೆತ್ತೆ, ಮೊ. ಗಳಿಗೆ ತುಂಬುವುದಕ್ಕೆ ಉಪಯೋಗ)

Káppa ಕ್ಯಾಪ (ನಾ.) ಗ್ರೀಕ್ ವರ್ಣಮಾಲೆಯ ಹತ್ತನೆಯ ಅಕ್ಷರ (K, κ); 'ಕ'ಕಾರ.

Kárma ಕರ್ಮ (ನಾ.) ಮುಂದಿನ ಜನ್ಮದ ಗತಿಯನ್ನು ನಿಷ್ಕರ್ಷಿಸುವ ಪೂರ್ವಜನ್ಮ ಸರಣಿಯ ಕರ್ಮ ಸಂಚಯ; ಪ್ರಾರಬ್ಧ; ವಿಧಿ; ಹಣೆಯ ಬರಹ.

Kartéll = Cartel (ಕೊನೆಯ ಅರ್ಥ)

Katabátic ಕ್ಯಾಟಬ್ಯಾಟಿಕ್ (ಗು.) (ಪ. ಶಾ.) (ಗಾಳಿಯ ವಿಷಯದಲ್ಲಿ) ವಾಯು ಕೆಳಕ್ಕಿಳಿಯುವುದರಿಂದುಂಟಾದ. (Anabatic ನೋಡಿ)

Katábolism ಕಟ್ಯಾಬೊಲಿಸ್ಮ್ (ನಾ.) (ಜೀ. ವಿ.) ದೇಹದಲ್ಲಿ ಜೀವದ್ರವ್ಯ ಒಡೆದು ಜೀವಿಗೆ ಬೇಕಾದ ಶಕ್ತಿಯನ್ನುಂಟುಮಾಡಿ ಸುಲಭ ರಚನೆಯ ರಾಸಾಯನಿಕ ಪದಾರ್ಥಗಳಾಗಿ ಬೇರ್ಪಡುವುದು: ಜೀವದ್ರವ್ಯ ವಿಚ್ಛೇದನ. (Metabolism ನೋಡಿ)

Keck ಕೆಕ್ (ಕ್ರಿ. ಅಕ.) ಓಕರಿಸು. K. at (ಆಹಾರ, ಮೊ. ನ್ನು) ಅಸಹ್ಯದಿಂದ ತ್ಯಜಿಸು, ನಿರಾಕರಿಸು.

Kédgeree ಕೆಡ್ಜರೀ (ನಾ.) ಅಕ್ಕಿ, ಬೇಳೆ, ಈರುಳ್ಳಿ, ಮೊಟ್ಟೆ, ಮೊ. ನ್ನು ಸೇರಿಸಿ ಮಾಡಿದ, ಇಂಡಿಯಾ ಜನರಲ್ಲಿ ಕೆಲವರ ಒಂದು ಅಡಿಗೆ: ಕಿಚಡಿ. ಮೀನು, ಅಕ್ಕಿ, ಮೊಟ್ಟೆ, ಮೊ. ಗಳಿಂದ ಮಾಡಿದ ಯೂರೋಪಿಯನ್ನರ ಒಂದು ಅಡಿಗೆ.

Keel ಕೀಲ್ (ನಾ., ಕ್ರಿ. ಸಕ.) ಹಡಗಿನ ಅಥವಾ ದೋಣಿಯ ಕಟ್ಟಡಕ್ಕೆಲ್ಲ ಆಧಾರವಾಗಿ, ಅತ್ಯಂತ ತಳಭಾಗದಲ್ಲಿ ಉದ್ದಕ್ಕೂ ಹಾಸಿರುವ ಮರದ ದಿಮ್ಮಿ; (ಹಡಗಿನ ಅಥವಾ ದೋಣಿಯ) ಅಡಿಗಟ್ಟು; (ಕಬ್ಬಿಣದ ಹಡಗುಗಳಲ್ಲಿ ಇದೇ ಉದ್ದೇಶಕ್ಕಾಗಿ ಹಾಕಿರುವ) ಕಬ್ಬಿಣದ ತಗಡುಗಳ ಅಡಿಗಟ್ಟು. (ಕಾವ್ಯ) ಹಡಗು. (ಇಂಗ್ಲೆಂಡಿನಲ್ಲಿ) ಟೈನ್ ನದಿ, ಮೊ. ಗಳ ಮೇಲೆ ಉಪಯೋಗಿಸುವ, ಕಲ್ಲಿದ್ದಲ ಹಡಗುಗಳಿಗೆ ಕಲ್ಲಿದ್ದಲನ್ನು ಸಾಗಿಸುವ, ಚಪ್ಪಟೆ ತಳದ ಹಡಗು (ಸಾ., ದೋಣಿ). ಇಂತಹದು ಹೊರಲಾಗುವ ಕಲ್ಲಿದ್ದಲ ಮೊತ್ತ. [False K. (ನಿಜವಾದ ಅಡಿಮರದ ರಕ್ಷಣೆಗಾಗಿ ಅದರ ಕೆಳಗೆ ಜೋಡಿಸಿರುವ) ಸಹಾಯಕ ಅಡಿಮರ. K.-blocks (ಹಡಗನ್ನು ಕಟ್ಟುವುದು, ಮೊ. ಸಂದರ್ಭಗಳಲ್ಲಿ) ಅಡಿಮರಕ್ಕೆ ಆಧಾರವಾಗಿ ಹಾಕಿರುವ ಮರದ ದಿಮ್ಮಿಗಳು. **Keélhaul** (ಕ್ರಿ. ಸಕ.) ಶಿಕ್ಷೆಗಾಗಿ (ಒಬ್ಬನನ್ನು) ಹಡಗಿನ ಅಡಿಮರದ ಕೆಳಗೆ ಹಗ್ಗದಿಂದ ಇಳಿಯಬಿಟ್ಟು ಒಂದು ಕಡೆಯಿಂದ ಮತ್ತೊಂದು ಕಡೆಗೆ ಎಳೆದುಕೊ]. (ಕ್ರಿ.) ಅಡಿಮರ ಮೇಲಾಗುವಂತೆ (ಹಡಗನ್ನು) ತಲೆ ಕೆಳಗು ಮಾಡು. K. over (ಮನುಷ್ಯ, ಮೊ. ನ್ನು) ಉರುಳಿಸಿಬಿಡು, ಮಗುಚಿಹಾಕಿಬಿಡು. **Keélless** (ಗು.)

Keen[1] ಕೀನ್ (ನಾ., ಕ್ರಿ.) ಗೋಳಾಟದಿಂದ ಕೂಡಿದ ಐರಿಷ್ ಶ್ಮಶಾನ ಗಾನ. (ಕ್ರಿ.) ಇಂತಹ ಗೋಳಾಟದ ಗಾನ ಮಾಡು; (ಒಬ್ಬನನ್ನು ಕುರಿತು) ಹೀಗೆ ಹಲುಬು, ಗೋಳಾಡು; ಗೋಳುರಾಗದಲ್ಲಿ ಹೇಳು; ಗೋಳಾಡುತ್ತ ಹೇಳು.

Keen[2] ಕೀನ್ (ಗು.) ಹರಿತವಾದ ಮೊನೆಯುಳ್ಳ; ಚೂಪಾದ; ಕೂರಾದ; ಹರಿತವಾದ. (ಧ್ವನಿ, ಬೆಳಕು, ಮೊ.) ಚುಚ್ಚುವ, ಕೋರೈಸುವ, ಪ್ರಕಾಶವಾದ, ತೀಕ್ಷ್ಣವಾದ; (ಶೀತ) ಅತಿಯಾದ, ಕೊರೆಯುವ; (ನೋವು, ಮೊ.) ತೀವ್ರವಾದ, ಉಗ್ರವಾದ, ಸಹಿಸಲಾಗದ; (ವ್ಯಕ್ತಿ, ಇಚ್ಛೆ, ಆಸಕ್ತಿ) ಉತ್ಸಾಹದಿಂದ ಕೂಡಿದ, ಉತ್ಸುಕ, ಉಜ್ಜ್ವಲ [(ಬಳ. ಮಾ.) *On* thing, *on* doing]. [K. as mustard ಉತ್ಸಾಹ ಭರಿತ ("*Keene's* mustard" ಎಂಬುದರ ಮೇಲೆ ಚಮತ್ಕಾರ ಪ್ರ.)]; (ಕಣ್ಣು, ದೃಷ್ಟಿ, ವಾಸನೆ) ಚುರುಕಾದ, ಅತಿ ಸೂಕ್ಷ್ಮಗ್ರಾಹಕವಾದ; ಚುರುಕು ಬುದ್ಧಿಯ. [K.-set ಹಸಿದ; ಕುತೂಹಲ ಪಡುತ್ತಿರುವ (*For* ಉಪ. ದೊಡನೆ)]. **Keénly** (ಕ್ರಿ. ವಿ.); **Keénness** (ನಾ.)

Keep[1] ಕೀಪ್ (ಕ್ರಿ.; ಭೂತ., ಭೂ. ಕೃ. Kept) ಇಡು; (ಸ್ವಾಧೀನದಲ್ಲಿ, ಅಧೀನದಲ್ಲಿ, ಭದ್ರವಾಗಿ) ಇಟ್ಟುಕೊಂಡಿರು; ಕಳೆದುಕೊಳ್ಳದಿರು; (ಕಾನೂನು, ವಾಗ್ದಾನ, ನಂಬಿಕೆ, ಕರಾರು, ಪರಸ್ಪರ ನಿಶ್ಚಿತ ಸಮಾಗಮ, ಮೊ. ನ್ನು) ಪಾಲಿಸು, ಗೌರವಿಸು, ಅನುಸರಿಸು. (ಹಬ್ಬ, ವ್ರತ, ಮೊ. ನ್ನು) ಆಚರಿಸು. (ವ್ಯಕ್ತಿ, ಕೋಟೆ, ಪಟ್ಟಣ, ಕಾರ್ಖಾನೆ ಮತ್ತು ಕ್ರಿಕೆಟ್ಟಿನ ಗುರಿ, ಮೊ. ನ್ನು) ಕಾಯಿ, ಕಾಪಾಡು, ರಕ್ಷಿಸು. (ಮನೆ, ಮೊ. ನ್ನು) ತಕ್ಕ ವ್ಯವಸ್ಥೆಯಲ್ಲಿಟ್ಟುಕೊಂಡಿರು. (ಅಂಗಡಿ, ಮೊ. ನ್ನು) ಇಟ್ಟಿರು, ನಡೆಸಿಕೊಂಡುಹೋಗು. (ಮುಂದಿನ ಸಮಯ, ಮೊ. ಕ್ಕಾಗಿ) ಬಳಸದೆ ಇಟ್ಟಿರು, ಉಳಿಸಿಟ್ಟಿರು. (ಆಹಾರ, ಮೊ.) ಕೆಡದಂತಿರು. ಗೋಪ್ಯವಾಗಿಟ್ಟುಕೊಂಡಿರು. ಇರು; ವಾಸವಾಗಿರು; ನೆಲೆ ಮಾಡಿಕೊಂಡಿರು. K. one's balance ಸಮತೆ, ಪವಣು, ತಪ್ಪದಿರು. K. the ball rolling (Ball[1] ನೋಡಿ). K. body and soul together (Body ನೋಡಿ). K. cattle, bees, etc. ದನ, ಜೇನುಹುಳು, ಮೊ. ನ್ನು ಇಟ್ಟು ಸಾಕು. K. company, look out, pace, step, time, watch, wicket (ಆಯಾ ಪದವನ್ನು ನೋಡಿ). K. cool ಶಾಂತತೆಯಿಂದಿರು; ದುಡುಕದಿರು. K. one's counsel (Counsel ನೋಡಿ). K. a diary, accounts, books, etc. ದಿನಚರಿ, ಲೆಕ್ಕ, ಪುಸ್ತಕ, ಮೊ. ನ್ನು ಇಟ್ಟಿರು. K. one's feet ಬೀಳದಂತೆ ನಿಲ್ಲು; ಅಡಿ ಭದ್ರವಾಗಿರು. K. friends ಸ್ನೇಹದಿಂದಿರಿ. He keeps giggling ಅವನು ಕಿಸಿ ಕಿಸಿ ನಗುತ್ತಿದ್ದಾನೆ. K. one's hand in (Hand ನೋಡಿ). K. one's head (Head ನೋಡಿ). K. one's hair on (Hair ನೋಡಿ). K. in good health ಆರೋಗ್ಯದಿಂದಿರು. K. house (House ನೋಡಿ). K. indoors ಒಳಗಡೆಯೇ ಇರು. K. (woman) as mistress (ಒಬ್ಬಳನ್ನು) ಉಪ ಪತ್ನಿಯನ್ನಾಗಿ ಇಟ್ಟುಕೊಂಡಿರು. He keeps moving about ಅವನು ಸಂಚರಿಸುತ್ತಿರುತ್ತಾನೆ. K. the news from him ಅವನಿಗೆ ಸಮಾಚಾರವನ್ನು ತಿಳಿಸಬೇಡ. K. open house (House ನೋಡಿ). K. the peace (Peace ನೋಡಿ). K. the pot boiling (Pot ನೋಡಿ). K. one in prison, custody ಒಬ್ಬನನ್ನು ಬಂದೀಖಾನೆಯಲ್ಲಿ, ಬಂಧನದಲ್ಲಿ, ಇಡು. K. to the right (ದಾರಿಯಲ್ಲಿ, ರಸ್ತೆಯಲ್ಲಿ, ಹೋಗುವಾಗ) ಬಲಗಡೆಯಲ್ಲಿ ಹೋಗು. K. the saddle, the field, the stage, one's ground, etc. (ಪ್ರತಿಭಟನೆಯಿದ್ದರೂ) ಕುದುರೆಯಮೇಲೆ, ಕಳದಲ್ಲಿ, ನಾಟಕ ರಂಗದಲ್ಲಿ, ಸ್ವಸ್ಥಾನದಲ್ಲಿ, —ಸ್ಥಿರವಾಗಿ, ಕದಲದೆ, ನೆಲಸಿರು. K. a secret ಗುಟ್ಟು ಹೊರಗೆಡವದಿರು. K. straight on for two miles ಎರಡು ಮೈಲಿ ದೂರ ನೇರವಾಗಿ ಹೋಗು. K. from talking ಮಾತಾಡದಿರು. K. in touch with (Touch ನೋಡಿ). K. track of (—ರ) ಗತಿಯನ್ನು, ಬೆಳವಣಿಗೆಯನ್ನು, ದೃಷ್ಟಿಯಲ್ಲಿಟ್ಟಿರು, ಗಮನಿಸುತ್ತಿರು. God k. you ದೇವರು ನಿನ್ನನ್ನು ರಕ್ಷಿಸಲಿ. Milk will not k. in such heat ಇಷ್ಟು ಶಾಖದಲ್ಲಿ ಹಾಲು ಕೆಡದೆ ಇರುವುದಿಲ್ಲ. Where do you k.? ಎಲ್ಲಿ ವಾಸವಾಗಿದ್ದೀಯೆ?

K. at ಒಂದೇ ಸಮನಾಗಿ ಕೆಲಸ ಮಾಡುತ್ತಿರು, ಮಾಡಿಸುತ್ತಿರು. K. from (ಇಂದ) ದೂರವಿರು; (—ನ್ನು) ಸೇರದಿರು, ಬಳಸದಿರು. K. to (ಮಾರ್ಗ, ವಾಗ್ದಾನ) ತಪ್ಪದಿರು, ಪಾಲಿಸು, ಹಿಡಿದುಹೋಗು. K. (thing, etc.) to oneself (ವಸ್ತು, ಮೊ. ನ್ನು) ಇತರರೊಡನೆ ಹಂಚಿಕೊಳ್ಳಲು ಒಪ್ಪದೆ ತನಗೇ ಇಟ್ಟುಕೊ. K. oneself to oneself ತನ್ನಷ್ಟಕ್ಕೆ ತಾನಿರು; ಯಾರೊಡನೆಯೂ ಸೇರದಿರು. K. away ಬರದೆ ನಿಂತುಬಿಡು; ಬರಗೊಡದಿರು. K. back (ಮುಂದೆ ಹೋಗದಂತೆ) ತಡೆದಿಡು; ಹಿಂದಿರು; ಅಭಿವೃದ್ಧಿ ತಡೆ. ಬಚ್ಚಿಡು. K. down ಅಧೀನದಲ್ಲಿಟ್ಟುಕೊ. ಮೊತ್ತ ಕಡಮೆಯಾಗಿರುವಂತೆ ಇಟ್ಟಿರು; (ಸೈನ್ಯ) ಚಿಲ್ಲರೆ ಕದನ ಮಾಡುವಲ್ಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಳಗಡೆ ಬಿದ್ದುಕೊ. K. in (ಮನೋಭಾವ, ಮೊ. ನ್ನು) ಬಗಿಹಿಡಿ, ನಿಗ್ರಹಿಸು. (ಶಾಲೆಯ ಹುಡುಗನನ್ನು ಶಾಲೆ ಮುಗಿದಮೇಲೆ ಬಿಡದೆ) ನಿರ್ಬಂಧದಲ್ಲಿಟ್ಟಿರು. (ಬೆಂಕಿ) ಆರದಂತೆ ಉರಿಸುತ್ತಿರು. ಮನೆಯಲ್ಲೇ ಇದ್ದುಕೊಂಡಿರು. (—ಒಡನೆ) ಸಮಾಧಾನದಿಂದಿರು (*With* ಉಪ. ದೊಡನೆ). K. off ನಿವಾರಿಸು; ತಪ್ಪಿಸು; ದೂರ ನಿಲ್ಲು. K. on (ಬಿಡದೆ) ಹಿಡಿದಿರು, ಉಪಯೋಗಿಸುತ್ತಿರು, ಪ್ರದರ್ಶಿಸುತ್ತಿರು, ಮಾಡುತ್ತ ಹೋಗು. K. out ಒಳಕ್ಕೆ ಬಿಡದಿರು. K. together ಒಟ್ಟಿಗಿರು; ಒಟ್ಟಿಗಿರುವಂತೆ ಮಾಡು. K. under ಅಧೀನದಲ್ಲಿಟ್ಟುಕೊ. K. up (ಉತ್ಸಾಹ, ಬೆಲೆ, ಮೊ.) ತಗ್ಗದಂತೆ, ಏಕ ರೀತಿಯಿರುವಂತೆ, ನೋಡಿಕೊ. [K. one's end up (End ನೋಡಿ). K. it up ಎತ್ತಿ ಹಿಡಿದಿರು; ಕುಗ್ಗಿನದಿರು; ಸಡಿಲ ಬಿಡಬೇಡ]; ದುರಸ್ತಾಗಿಟ್ಟುಕೊಂಡಿರು; ಸರಿಯಾದ, ದಕ್ಷತೆಯ, ಸ್ಥಿತಿಯಲ್ಲಿ ಇಟ್ಟುಕೊಂಡಿರು [K. up appearances (Appear ನೋಡಿ). K. up your Greek (ಕಲಿತ) ಗ್ರೀಕು ಮರೆಯದಂತೆ ರೂಢಿಯಲ್ಲಿಟ್ಟುಕೊಂಡಿರು]. (ಪತ್ರವ್ಯವಹಾರ, ಮೊ. ನ್ನು) ನಡಸುತ್ತಿರು. (ಒಬ್ಬನನ್ನು) ರಾತ್ರಿ ಎದ್ದು ಕುಳಿತಿರುವಂತೆ ಮಾಡು. ಧೈರ್ಯತಾಳು; ಎದೆಗುಂದದಿರು. (—ಒಡನೆ) ಸಮಹೆಜ್ಜೆ ಹಾಕುತ್ತ ಹೋಗು (*With* ಉಪ. ದೊಡನೆ)

Keep ಕೀಪ್ (ನಾ.) (ಚರಿತ್ರೆ) ಕೋಟೆ; ದುರ್ಗ; ಕೋಟೆಮನೆಯ ಮಧ್ಯ ಭಾಗದಲ್ಲಿಯ ಬಲವಾದ ರಕ್ಷಣಗೃಹ. ಜೀವನ; ಪೋಷಣೆ; ಇದಕ್ಕೆ ಬೇಕಾದ ಆಹಾರ (You don't earn your k. ನಿನ್ನ ಜೀವನಕ್ಕೆ ನೀನು ಸಂಪಾದಿಸುವುದಿಲ್ಲ). For keeps (ಅಮೆ. ಸಂ. ಅಸಂ.) (ಪಡೆದವನು ಅಥವಾ ಜಯಿಸಿದವನು) ಶಾಶ್ವತವಾಗಿಟ್ಟುಕೊಳ್ಳಲು; ಶಾಶ್ವತವಾಗಿ (ನಿಲ್ಲಲು)

Keéper (ನಾ.) (ಕ್ರಿಯಾರ್ಥಗಳಲ್ಲಿ). ಉಸ್ತುವಾರಿ ನೋಡಿಕೊಳ್ಳುವವನು (Gamek., etc.). [ಉಂಗುರ (ಮು., ಮದುವೆಯದು) ಬೆರಳಿನಿಂದ ಜಾರಿಹೋಗದಂತೆ ತಡೆಯುವ] ತಡೆಯುಂಗುರ. **Keéping** (ನಾ.) (ಕ್ರಿಯಾರ್ಥಗಳಲ್ಲಿ). ಸ್ವಾಧೀನ; ವಶ; ರಕ್ಷಣೆ (In safe k. ಸುರಕ್ಷಿತವಾಗಿ; ಭದ್ರವಾಗಿ. In his k. ಅವನ ವಶದಲ್ಲಿ, ರಕ್ಷಣೆಯಲ್ಲಿ). (ಹಿಂದೆ, ಮು., ವರ್ಣಕರೆಯಲ್ಲಿ) ಪರಸ್ಪರ ಹೊಂದಿಕೆ, ಸಾಮರಸ್ಯ [In k. (with), out of k. (with) ಹೊಂದಿಕೆಯಾಗಿ, ಹೊಂದಿಕೆಯಿಲ್ಲದೆ]. (ವಿಶೇಷಣವಾಗಿ) (ಕೆಡದಂತೆ) ಇಟ್ಟಿರಲು ತಕ್ಕ (K. apples). K.-room (ಮು., ಅಮೆ. ಸಂ.) ವಾಸದ ಕೋಣೆ. **Keépsake** (ನಾ.) ಕೊಟ್ಟವನ ಕುರುಹಾಗಿ, ಜ್ಞಾಪಕಾರ್ಥವಾಗಿ, ಇಟ್ಟುಕೊಂಡಿರುವ ವಸ್ತು: ಪ್ರೇಮದ ಕುರುಹು. (ವಿಶೇಷಣವಾಗಿ) (ಕ್ರಿ. ಶ. ೧೯ನೆಯ ಶತಮಾನದ ಆದಿ ಭಾಗದಲ್ಲಿ Keepsakes ಎಂದು ಕರೆಯುತ್ತಿದ್ದ ಕೆಲವು ವಾರ್ಷಿಕ ಸಾಹಿತ್ಯ ಪ್ರಕಟನೆಗಳಂತೆ) ಕೃತಕ ಸೌಂದರ್ಯದ; ನೀರಸ.

Kef ಕೆಫ್, **Keif** ಕೈಫ್, **Kief** ಕೀಫ್ (ನಾ.) (ಭಂಗಿ, ಮೊ. ಗಳಿಂದ ಉಂಟಾದ) ಮತ್ತು, ಮಂಪರ. ಸೋಮಾರಿತನದ ಸುಖಾನುಭವ. (ಮತ್ತುಬರುವುದಕ್ಕಾಗಿ ಸೇವಿಸುವ) ಭಂಗಿ, ಮೊ.

Keg ಕೆಗ್ (ನಾ.) (ಸಾ., ೧೦ ಗ್ಯಾಲನ್ನುಗಳಿಗಿಂತ ಕಡಮೆಯ ಪ್ರಮಾಣದ) ಸಣ್ಣ ಪೀಪಾಯಿ.

Kelp ಕೆಲ್ಪ್ (ನಾ.) ಸಮುದ್ರದ ಕಳೆಯ ಹಲವು ದೊಡ್ಡ ಜಾತಿ. (ಸೋಡಿಯಂ ಕಾರ್ಬೊನೇಟ್, ಅಯೊಡಿನ್, ಮೊ. ನ್ನು ಪಡೆಯುವುದಕ್ಕಾಗಿ) ಸಮುದ್ರದ ಕಳೆಯನ್ನು ಸುಟ್ಟು ತಯಾರಿಸಿದ ಬೂದಿ (ಇದನ್ನು ಹಿಂದೆ ಸಾಬೂನನ್ನೂ ಗಾಜನ್ನೂ ಮಾಡುವುದಕ್ಕೆ ಉಪಯೋಗಿಸುತ್ತಿದ್ದರು)

Kelt, etc. = Celt, etc.

Kemp ಕೆಂಪ್ (ನಾ.) ಉಣ್ಣೆಯಲ್ಲಿರುವ ಒರಟುಗೂದಲು. **Kémpy** (ಗು.)

Ken ಕೆನ್ (ನಾ., ಕ್ರಿ. ಸಕ.) ದೃಷ್ಟಿಯ, ಅರಿವಿನ, —ವ್ಯಾಪ್ತಿ; ಕಣ್ಣುನಿಟ್ಟು (*In, out of*, beyond, one's k. ಒಬ್ಬನ ದೃಷ್ಟಿಗೆ, ಅರಿವಿಗೆ, ಒಳಪಟ್ಟು, ಮೀರಿ, ಆಚೆ). (ಕ್ರಿ.) (ಈಗ ಸ್ಕಾಚ್ ಅಥವಾ ಉತ್ತರದ ಪ್ರ.) ನೋಡಿ ದೊಡನೆಯೇ ಗುರುತಿಸು; (ವ್ಯಕ್ತಿ, ವಸ್ತು, ವಿಷಯ —ಎಂದು) ತಿಳಿ, ಅರಿ.

Kénnel[1] ಕೆನಲ್ (ನಾ., ಕ್ರಿ.) ಮನೆ ನಾಯಿಗೆ, ಬೇಟೆ ನಾಯಿಗಳಿಗೆ, ಕಟ್ಟಿರುವ ಗೂಡು, ನೆರೆ: ನಾಯಿಮನೆ; ಕೀಳ್ತರದ ಮನೆ. (ಕ್ರಿ.) ಕೀಳ್ತರದ ಮನೆಯಲ್ಲಿ ವಾಸಮಾಡು; —ಮನೆಗೆ ಹೋಗು; ನಾಯಿಮನೆಯಲ್ಲಿ ಇಡು, ಇಟ್ಟಿರು.

Kénnel[2] ಕೆನಲ್ (ನಾ.) ಚರಂಡಿ; ಮೋರಿ.

Kenósis ಕಿನೋಸಿಸ್ (ನಾ.) (ದೇವ. ಶಾ.) ಕ್ರಿಸ್ತನು ಮನುಷ್ಯಾವತಾರದಲ್ಲಿ ದೈವೀ ಸ್ವಭಾವವನ್ನು (ಸ್ವಲ್ಪ ಮಟ್ಟಿಗಾದರೂ) ತ್ಯಜಿಸಿರುವುದು: ಕ್ರಿಸ್ತನ ದೈವ ಗುಣ ತ್ಯಾಗ. **Kenótic** ಕೆನಾಟಿಕ್ (ಗು.); **Kenóticism** (ನಾ.)

Kéntish ಕೆಂಟಿಷ್ (ಗು.) ಕೆಂಟಿನ (ಮು., ಕೆಂಟ್ ಜನರ, ಭಾಷೆಯ). K. fire (ಒಂದೇ ಸಮನಾಗಿ, ಮೇಲಿಂದಮೇಲೆ) ದೀರ್ಘ ಕಾಲ ಮಾಡುವ ಚಪ್ಪಾಳೆಯ ಅಥವಾ ಅಸಮಾಧಾನದ ಪ್ರದರ್ಶನ. K. rag ಕೆಂಟಿನಲ್ಲಿ ದೊರೆಯುವ ಒಂದು ಬಗೆಯ ಗಟ್ಟಿ ಸುಣ್ಣಕಲ್ಲು.

Kept ಕೆಪ್ಟ್. Keep ಧಾತುವಿನ ಭೂತ., ಭೂ. ಕೃ.

Kerb ಕರ್ಬ್ (ನಾ.) ನೆಲಗಟ್ಟಿನ ಅಥವಾ ಎತ್ತರಿಸಿದ ಕಾಲುದಾರಿಯ ಕಲ್ಲಿನ ಅಂಚುಗಟ್ಟು. K.-stone ಅಂಚುಗಟ್ಟಿನ ಕಲ್ಲು.

Kérchief ಕರ್ಚಿಫ್ (ನಾ.) ತಲೆ ಮುಚ್ಚಲು ಉಪಯೋಗಿಸುವ ಚೌಕ: ತಲೆಚೌಕ. (ಕಾವ್ಯ) ಕೈಚೌಕ; ಕರ ವಸ್ತ್ರ. **Kérchiefed** (ಗು.)

Kerf ಕರ್ಫ್ (ನಾ.) (ಮು., ಗರಗಸದಿಂದ) ಕೊಯ್ದು ಮಾಡಿದ ಸಂದು. ಕಡಿದುರುಳಿಸಿದ ಮರದ ಕಡಿದ ತುದಿ.

Kérmes ಕರ್ಮಿ(ರ್ಮೆ)ಸ್ (ನಾ.) (ದ. ಯೂರೋಪಿನಲ್ಲೂ, ಉ. ಆಫ್ರಿಕದಲ್ಲೂ ದೊರೆಯುವ) ಒಂದು ಜಾತಿಯ ಹುಳು: ಕರ್ಮಿಸ್ ಹುಳು; ಕಿರುಮಂಜಿ ಹುಳು. ಈ ಹುಳುಗಳ ಒಡಲನ್ನು ಒಣಗಿಸಿದ್ದರಿಂದಾದ ಒಂದು ಕೆಂಪು ವರ್ಣದ್ರವ್ಯ: 'ಕರ್ಮಿಸ್' ಬಣ್ಣ; ಕಡುಗೆಂಪು ಬಣ್ಣದ ಅಸ್ಫಟಿಕ 'ಆ್ಯಂಟಿಮನಿ ಟ್ರೈಸಲ್ಫೈಡ್'.

Kérnel ಕರ್ನಲ್ (ನಾ.) ಕರಟಕಾಯಿಯ ಗಟ್ಟಿ ಚಿಪ್ಪಿನ ಒಳ ಭಾಗದಲ್ಲಿರುವ, ಅಥವಾ ಓಟೆಯುಳ್ಳ ಹಣ್ಣಿನೊಳಗೆ ಓಟೆಯ ಸುತ್ತಲೂ ಇರುವ (ಸಾ., ತಿನ್ನಬಹುದಾದ) ಮೆತು ಭಾಗ: ತಿರುಳು. (ಹೊಟ್ಟು, ಸಿಪ್ಪೆ, ಮೊ. ಗಳೊಳಗಿನ) ಬೀಜ(ದ ಭಾಗ) (ಉದಾ., ಅಕ್ಕಿಯ ಕಾಳು); ಬೀಜಪ್ರಾಯವಾದುದು; ರಚನೆಯ ಕೇಂದ್ರ; ನಾಭಿ (ಸಾ., ರೂಪ.)

Kérosene ಕೆರೊಸೀನ್ (ನಾ.) (ಪೆಟ್ರೋಲಿಯಂ, ಕಲ್ಲಿದ್ದಲು, ಪ್ಯಾರಫಿನ್, ಮೊ. ಗಳಿಂದ ಬಟ್ಟಿಯಿಳಿಸಿ ತೆಗೆದ) ದೀಪದೆಣ್ಣೆ: ಕೆರೊಸೀನ್ ಎಣ್ಣೆ; ಸೀಮೆಯೆಣ್ಣೆ.

Késtrel ಕೆಸ್ಟ್ರೆಲ್ (ನಾ.) ಒಂದು ಸಣ್ಣ ಡೇಗೆಜಾತಿ.

Kétchup ಕೆಚಪ್ (ನಾ.) ಅಣಬೆಯ ರಸ, ಟೊಮಾಟೊ ಹಣ್ಣು, ಮೊ. ಗಳಿಂದ ಮಾಡಿದ ಒಂದು ತೆರದ ವ್ಯಂಜನ.

Kétone ಕೀಟೋನ್ (ನಾ.) (ರ. ವಿ.) 'ಆ್ಯಲ್ಡಿಹೈಡ್' ವರ್ಗಕ್ಕೆ ಸಂಬಂಧಿಸಿದ ಒಂದು ಜೈವಿಕ ಸಂಯುಕ್ತ ವರ್ಗ: 'ಕೀಟೋನ್'.

Kéttle ಕೆಟಲ್ (ನಾ.) ಸಾ., ಲೋಹದಿಂದ ಮಾಡಿದ, ಹಿಡಿಯೂ ಮೂತಿಯೂ ಉಳ್ಳ, ನೀರುಕುದಿಸುವ ಪಾತ್ರೆ: 'ಕೆಟಲ್'. Fish-k. (Fish[1] ನೋಡಿ). A pretty k. of fish (Fish[1] ನೋಡಿ). **Kettle-drum(mer)** ಒಂದು ಗೊತ್ತಾದ ನಾದ ಕೊಡುವ ತಾಮ್ರದ ಅಥವಾ ಹಿತ್ತಾಳೆಯ ಬುರುಡೆಮದ್ದಳೆ (ಬಾಜಿಸುವವನು). **K.-drum** ಮಧ್ಯಾಹ್ನದಮೇಲೆ ನಡಸುವ ದೊಡ್ಡ ಉಪಾಹಾರ ಗೋಷ್ಠಿ. **K.-holder** ಕೆಟಲಿನ ಬಿಸಿ ಕೈಗೆ ತಾಕದಂತೆ ಉಪಯೋಗಿಸುವ ಬಟ್ಟೆಯ ತುಂಡು. **Kéttleful** (ನಾ.)

Key[1] ಕೀ (ನಾ., ಕ್ರಿ. ಸಕ.) (ಸಾ., ಕಬ್ಬಿಣದಿಂದ ಮಾಡಿದ) ಬೀಗದ ಕೈ, ಕೀಲ ಕೈ [Get, have, the k. of the street ರಾತ್ರಿ ಮನೆಗೆ ಸೇರಿಸದೆ ಬೀದಿಯಲ್ಲಿರು; ಬೀದಿವಾಸ ಮಾಡು; ಮನೆಯಿಲ್ಲದಿರು. Master k. (Master ನೋಡಿ). St. Peter's keys ಪೋಪ್ ಗುರುವಿನ ಲಾಂಛನವಾಗಿ (ಫಲಕ, ಕವಚ, ಮೊ. ಗಳಲ್ಲಿ) ಚಿತ್ರಿಸುವ ಕತ್ತರಿ ಬೀಗದ ಕೈಗಳು. Golden, silver, k. (ಯಾವುದನ್ನಾದರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಧಿಸಲು ಅಡ್ಡ ಮಾರ್ಗದಲ್ಲಿ ಹೋಗಿ, ಫಲ ಪಡೆಯುವುದಕ್ಕಾಗಿ ಕೊಡುವ) ಲಂಚ(ದ ಹಣ). Power of the keys ಪೋಪ್‌ಗುರುವಿಗೆ ವಹಿಸಿರುವ ಧರ್ಮಾಧಿಕಾರ. Gibraltar is the key of the Mediterranean ಜಿಬ್ರಾಲ್ಟರ್ ಕೋಟೆಯು ಮೆಡಿಟರೇನಿಯನ್ ಸಮುದ್ರದ ಪ್ರವೇಶಕ್ಕೆ ಹತೋಟಿಯುಳ್ಳದ್ದಾಗಿದೆ]. ಅನ್ಯಭಾಷೆಯ ಪುಸ್ತಕ ಅರ್ಥವಾಗುವಂತೆ ಬರೆದು ಪ್ರಕಟಿಸಿದ ಅದರ ಭಾಷಾಂತರ, ವಿವರಣೆ, ವ್ಯಾಖ್ಯಾನ. ಗಣಿತದ ಲೆಕ್ಕಗಳು, ಸಮಸ್ಯೆಗಳು, ಮೊ. ಗಳ ತೊಡಕನ್ನು ಬಿಡಿಸಿ ವ್ಯಾಖ್ಯಾನ (ಮಾಡುವ) ಗಣಿತವ್ಯಾಖ್ಯಾನ ಪುಸ್ತಕ. (ಸಂ.) ಒಂದು ನಿರ್ದಿಷ್ಟ ಸ್ವರವನ್ನವಲಂಬಿಸಿ ಏರ್ಪಟ್ಟ ಪರಸ್ಪರ ಸಂಬಂಧವುಳ್ಳ ಸ್ವರಪದ್ಧತಿ; (ರೂಪ.) (ಆಲೋಚನೆಯ, ಮಾತಿನ) ಭಾವ, ಶೈಲಿ; [K.-note ಒಂದು ಸ್ವರಪದ್ಧತಿಯ ಆಧಾರ ಸ್ವರ, ಶ್ರುತಿ; (ರೂಪ.) ಮುಖ್ಯ ಭಾವ; ಮುಖ್ಯಾಭಿಪ್ರಾಯ]. ಬೇರೆ ಬೇರೆ ತುಂಡುಗಳನ್ನು ಒಟ್ಟಿಗೆ ಬಂಧಿಸುವುದಕ್ಕಾಗಿ (ಅವುಗಳಲ್ಲಿಯ ರಂಧ್ರಗಳ ಮೂಲಕ) ನಟ್ಟ ಮರದ ಅಥವಾ ಲೋಹದ ಬೆಣೆ: ಕೂಡು ಬೆಣೆ. (Organ, piano, ಮೊ. ವಾದ್ಯಗಳಲ್ಲಿ ಧ್ವನಿರಚನೆಗಾಗಿ) ಬೆರಳಿನಿಂದ ಒತ್ತುವ ಕೀಲು, ಬಿರಡೆ: ಧ್ವನಿ ಕೀಲಿಕ್ಕೈ; Typewriter, ಮೊ. ಗಳಲ್ಲಿ ಇದೇ ಬಗೆಯ ಕೀಲು; ತಿರುಪುಮೊಳೆ, ಗೂಟ, ತಿರುಪು ಬಿಲ್ಲೆ, ಮೊ. ನ್ನು ಹಿಡಿದುಕೊಳ್ಳುವುದಕ್ಕೂ ತಿರುಗಿಸುವುದಕ್ಕೂ ಉಪಯೋಗಿಸುವ ಸಲಕರಣೆ: ತಿರುಪು ಕೈ; ಗಡಿಯಾರದ ಬೀಗದಕ್ಕೈ. (ಚದುರಂಗ) ಒಂದು ಸಮಸ್ಯಾ ಪರಿಹಾರಕ್ಕಾಗಿ ಒಂದು ಕಾಯಿಯ ಮುಖ್ಯ ನಡೆ (= K. move). **Keyboard** (ಪಿಯಾನೋ, ಮೊ. ಗಳಲ್ಲಿ) ಕೀಲಿಕ್ಕೈಗಳಿರುವ ಮಣೆ. **K.-bugle** ನಾದಸಂಖ್ಯೆಯನ್ನು ಹೆಚ್ಚಿಸಲನುಕೂಲಿಸುವಂತೆ ಬಿರಡೆಗಳನ್ನು ಅಳವಡಿಸಿರುವ ತುತ್ತೂರಿ. **Keyhole** ಬೀಗದಕ್ಕೈ ಹಾಕುವ ಕಂಡಿ. **K. industry** ಇತರ ಕೈಗಾರಿಕೆಗಳನ್ನು ನಡಸುವುದಕ್ಕೆ ಆವಶ್ಯಕವಾದ ಮೂಲ ಕೈಗಾರಿಕೆ (ಉದಾ., ಕಲ್ಲಿದ್ದಲ ಗಣಿಯದು, ಬಣ್ಣದ ಕೈಗಾರಿಕೆ, ಮೊ.). **K. map** (ಎಲ್ಲ ವಿವರಗಳನ್ನೊಳಕೊಂಡ ಭೂಪಟದ ಉಪಯೋಗ ಸೌಲಭ್ಯಕ್ಕಾಗಿ ತಯಾರಿಸಿದ) ಬರಿ ಎಲ್ಲೆಯ ಭೂಪಟ. **K.-ring** ಬೀಗದ ಕೈ (ಪೋಣಿಸಿಡುವ) ಉಂಗುರ. **Keystone** ಕಮಾನಿನ ಕಟ್ಟಡವನ್ನೆಲ್ಲ ಒಟ್ಟಯಿಸಿ ಬಂಧಿಸುವ ಅದರ ನೆತ್ತಿಗಲ್ಲು; (ರೂಪ.) ಎಲ್ಲಕ್ಕೂ ಮೂಲಪ್ರಾಯವಾಗಿರುವ ಕೇಂದ್ರ ತತ್ತ್ವ. **Keýless** (ಗು.)

Key (ಕ್ರಿ. ಸಕ.) ಮೊಳೆ, ಬೆಣೆ, ಅಗುಳಿ, ಮೊ. ನ್ನು ಹಾಕಿ ಬಿಗಿ(ಸು) (*In*, *on*, ಮೊ. ಉಪ. ದೊಡನೆ). (ಪಿಯಾನೊ, ಮೊ. ವಾದ್ಯಗಳ ತಂತಿಗಳನ್ನು) ಶ್ರುತಿ ಮಾಡು. K. up (ರೂಪ.) (ಒಂದು ಕೆಲಸ ಮಾಡಲು, ಒಂದು ಸ್ಥಿತಿಗೂಡಲು) ಉತ್ತೇಜಿಸು (Person *to* do, *to* condition, etc.). (ಒಂದರ ಭಾವ, ಗುಣ, ಮೊ. ಗಳ ಮಟ್ಟವನ್ನು) ಎತ್ತರಿಸು; ಹುರಿದುಂಬು; (ಕೋರಿಕೆ, ಕೇಳಿಕೆ, ಪ್ರಯತ್ನ, ಮೊ. ನ್ನು) ಏರಿಸು, ಹೆಚ್ಚಿಸು.

Key[2] ಕೀ (ನಾ.) ತಗ್ಗಾದ ದ್ವೀಪ ಅಥವಾ ಮುಳುಗುಬಂಡೆಯ ಸಾಲು.

Kháddar ಖದರ್, **Khádi** ಖಾದೀ (ನಾ.) (ಇಂಡಿಯಾದಲ್ಲಿ) ಕೈಯಲ್ಲಿ ನೂತ ನೂಲಿನಿಂದ ಕೈಮಗ್ಗದಲ್ಲಿ ಮಾಡಿದ ಬಟ್ಟೆ: ಖದ್ದರು; ಖಾದಿ.

Khakán ಕಾಕಾನ್ (ನಾ.) = Khan[1].

Kháki ಖಾಕಿ (ಗು., ನಾ.) ದೂಳುಬಣ್ಣದ; ಮಾಸಲು ಹಳದಿಯ; ಖಾಕಿ ಬಣ್ಣದ. (ನಾ.) (ಬ್ರಿಟಿಷ್ ಸೈನ್ಯದಲ್ಲಿ ಉಪಯೋಗಿಸುವ) ಖಾಕಿ ಬಣ್ಣದ, ಹತ್ತಿಯ ಅಥವಾ ಉಣ್ಣೆಯ, ಮೂಲೆನೆಯ್ಗೆಯ, ಉಬ್ಬು ಗೆರೆಗಳ, ಬಟ್ಟೆ: ಖಾಕಿ ಬಟ್ಟೆ.

Khálifa, Khálifat = Caliph(ate)

Khan[1] ಖಾನ್ (ನಾ.) ಮಧ್ಯ ಏಷ್ಯ, ಆಫ್ಘಾನಿಸ್ಥಾನ, ಮೊ. ಕಡೆಗಳಲ್ಲಿ ದೊರೆಗಳ ಮತ್ತು ಅಧಿಕಾರಿಗಳ ಬಿರುದು: ಖಾನ. (ಚರಿತ್ರೆ) ಮಧ್ಯಯುಗದಲ್ಲಿ ಟರ್ಕಿ, ಟಾರ್ಟರ್ ಮತ್ತು ಮಂಗೋಲಿಯ ಬುಡಕಟ್ಟಿನವರ ಮೇಲೆ ಸರ್ವಸ್ವತಂತ್ರ ಪ್ರಭುತ್ವ ನಡಸಿದವರೂ ಚೀನಾ ಚಕ್ರವರ್ತಿಗಳೂ ಆಗಿದ್ದ ಚಂಗೀಸ್‌ಖಾನನ ಸಂತತಿಯವರ ವೈಶಿಷ್ಟ್ಯದ ಬಿರುದು. **Khánate** (ನಾ.) ಖಾನನ ಆಡಳಿತಕ್ಕೊಳಪಟ್ಟ ಪ್ರಾಂತ; ಖಾನನ ಸ್ಥಾನ.

Khan[2] ಕ್ಯಾನ್, ಕಾನ್ (ನಾ.) = Caravanserai.

Khansámah ಕಾನ್ಸಾಮಾ (ನಾ.) (ಆಂ. ಇಂ.) ಮನೆಯ ಪಾರುಪತ್ಯಗಾರ; ಮುಖ್ಯ ಬಾಣಸಿಗ.

Khéda ಖೆಡ, **Kéddah** ಕೆಡ್ಡ (ನಾ.) (ಮೈಸೂರು, ಬಂಗಾಳ, ಮೊ. ಕಡೆಗಳಲ್ಲಿ) ಆನೆಗಳನ್ನು ಹಿಡಿಯಲು ಮಾಡಿದ ಆವರಣ: ಖೆಡ್ಡ.

Khedíve ಕೆಡೀವ್ (ನಾ.) (೧೮೬೭ರಲ್ಲಿ ತುರ್ಕಿ ಸರ್ಕಾರದವರು ಈಜಿಪ್ಟಿನಲ್ಲಿ ರಾಜಪ್ರತಿನಿಧಿಯಾಗಿದ್ದ ಇಸ್ಮಾಯಿಲ್ ಪಾಷಾನಿಗೆ ಕೊಟ್ಟ ಬಿರುದು): 'ಖೇಡಿವ್'. **Khedív(i)al** (ಗು.)

Khi (Gk) ಕೈ (ನಾ.) ಇಂಗ್ಲಿಷಿನ ch ಗೆ ಹೊಂದುವ ಗ್ರೀಕ್ ಅಕ್ಷರ (χ, ಖ)

Khídmutgar ಕಿಡ್ಮಟ್‌ಗಾರ್ (ನಾ.) (ಇಂಡಿಯಾದಲ್ಲಿ) ಊಟದ ಮೇಜಿನ ಬಳಿ (ಐರೋಪ್ಯರ) ಸೇವೆಗಾಗಿ ಕಾದಿರುವವನು: ಭೋಜನ ಪರಿಚಾರಕ.

Khílafat ಕಿಲಫ್ಯಾಟ್ (ನಾ.) = Khalifat.

Kíbble ಕಿಬ್‌ಲ್ (ಕ್ರಿ. ಸಕ.) ತರಿ ತರಿಯಾಗಿ ಬೀಸು, ಒಡೆ.

Kibe ಕೈಬ್ (ನಾ.) (ಮು., ಹಿಮ್ಮಡಿಯಮೇಲಿನ) ಕೀತುಕೊಂಡ ಶೀತದ ಹುಣ್ಣು. Tread on one's kibes (ಒಬ್ಬನ) ಮನಸ್ಸು ನೋಯಿಸು.

Kíblah ಕಿಬ್ಲ (ನಾ.) ಮುಸಲ್ಮಾನರು ಪ್ರಾರ್ಥನೆ ಮಾಡುವಾಗ ತಿರುಗಿಕೊಳ್ಳುವ ದಿಕ್ಕು, ಕಡೆ (ಮಕ್ಕಾ ಪಟ್ಟಣದ ದೇವಾಲಯದ ಕಡೆ)

Kibósh ಕಿಬಾಷ್, **Kíbosh** ಕೈ— (ನಾ.) (ಅಸಂ.) ಶುದ್ಧ ಅವಿವೇಕದ ಹರಟೆ; ಠಕ್ಕು. Put the k. on ತೀರಿಸಿಬಿಡು; ತಲೆಯಮೇಲೆ ಹೊಡೆ.

Kick[1] ಕಿಕ್ (ನಾ., ಕ್ರಿ.) (ಕಾಲಿನಿಂದ) ಒದೆಯುವುದು; ಒದೆ(ತ). (ಬಳ. ಮಾ.) ಪ್ರತಿಕ್ರಿಯಾ ಶಕ್ತಿ; ಪುಟಿಯುವ ಶಕ್ತಿ [(He has no k. left). Drop-k. (Drop ನೋಡಿ). Place-k. (Place ನೋಡಿ). More kicks than halfpence ಕಾಸಿಗಿಂತ ಕಿರುಕುಳ ಹೆಚ್ಚು; ಕರುಣೆಗಿಂತ ಕಾಠಿನ್ಯ ಹೆಚ್ಚು]. (ಗುಂಡು ಹಾರಿಸಿದಾಗ) ಬಂದೂಕಿನ ಹಿಂದೊದೆತ. (ಕಾಲ್ಚೆಂಡಾಟ) ಒದೆಯುವವನು, ಒದೆಗಾರ (Good, Bad, etc. k.); (K.-off ಆಟವಾರಂಭಿಸುವ ಮೊದಲೊದೆ(ತ). K.-starter ಒದೆಯುವುದರಿಂದ ಮೋಟಾರು ಬೈಸಿಕಲ್ಲು ಹೊರಡುವಂತೆ ಮಾಡುವ, ಅದರಲ್ಲಿಯ ಒಂದು ನನ್ನೆ: ಒದೆ ನನ್ನೆ). (ಕ್ರಿ.) (ಪಾದದಿಂದ) ಒದೆ; ಒದೆ ಕೊಡು (K. against the pricks ಎದುರುಬಿದ್ದು ತೊಂದರೆ ತಂದುಕೊ). (ಸಲಹೆ, ಅಭಿಪ್ರಾಯ, ಗಣನೆ, ಮೊ. ಕ್ಕೆ) ಜುಗುಪ್ಸೆ, ಅಸಮ್ಮತಿ, ಅಸಮಾಧಾನ, ಮೊ. ನ್ನು ತೋರು (*Against*, *at* ಉಪ. ದೊಡನೆ). [K. the bucket (ಅಸಂ.) ಸಾಯಿ; ಕಂತೆಯೊಗೆ. K. one's heels (Heel[1] ನೋಡಿ)]. (ವಸ್ತುವನ್ನು) ಒದೆದೊದೆದು ಮುಂದಕ್ಕೆ ಸಾಗಿಸು. (ಕಾಲ್ಚೆಂಡಾಟ) ಒದೆತದಿಂದ ಗುರಿಯನ್ನು ಹೊಗಿಸು; ಒದ್ದೋಡಿಸು (*Out, downstairs*, etc.). K. one upstairs (ರೂಪ.) ಶ್ರೀಮಂತ ಪದವಿಯನ್ನೊ ಬಿರುದನ್ನೊ ಕೊಟ್ಟು (ಬೇಡದವನನ್ನು) ಮೂಲೆಗೆ ಕೂಡಿಸು. K. off (ಜೋಡನ್ನು) ಕಾಲೊದರಿ ಎಸೆದುಬಿಡು. (ಕಾಲ್ಚೆಂಡಾಟ) (ಆಟವಾರಂಭಿಸುವ) ಮೊದಲೊದೆ ಕೊಡು. K. up (ದೂಳು) ಎಬ್ಬಿಸು; (ಗೊಂದಲ, ಗಲಾಟೆ) ಎಬ್ಬಿಸು. Kicking-strap ಬಂಡಿಯ ಕುದುರೆ ಒದೆಯಲಾಗದಂತೆ ತಡೆಯುವ ನವಾರು; ಒದೆತದ ತಡೆ. **Kícker** (ನಾ.) (ಕ್ರಿಯಾರ್ಥಗಳಲ್ಲಿ). ಒದೆಯುವ ಕುದುರೆ.

Kick[2] ಕಿಕ್ (ನಾ.) (ಅಳತೆ ಕುಗ್ಗಿಸುವ) ಗಾಜುಸೀಸೆಯ ತಳದ ಒಳಬಾಗು.

Kid[1] ಕಿಡ್ (ನಾ., ಕ್ರಿ.) ಆಡಿನ ಮರಿ. (ಕೈಚೀಲಗಳಿಗೂ ಜೋಡಾಗಳಿಗೂ ಉಪಯೋಗಿಸುವ) ಆಡಿನ ಮರಿಯ ತೊಗಲು. 'ಬ್ರಹ್ಮಹೃದಯ' ಎಂಬ ನಕ್ಷತ್ರಪುಂಜದಲ್ಲಿಯ ಮೂರು ಸಣ್ಣ ನಕ್ಷತ್ರಗಳು (=The Kids). (ಅಸಂ.) ಮಗು; ಕೂಸು. [K.-glove (ಗು.) ಅತಿ ನಾಜೂಕಿನ; ಕೈ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಸಿಕೊಳ್ಳದ; (ನಿತ್ಯಗೆಲಸ, ಮೊ. ನ್ನು ತಪ್ಪಿಸಿಕೊಳ್ಳುವ) ಕೆಲಸಗಳ್ಳನಾದ]. (ಕ್ರಿ.) (ಆಡು) ಮರಿ ಹಾಕು, ಈಯಿ. **Kíddy** (ನಾ.) ಚಿಕ್ಕ (ಆಡು) ಮರಿ. (ಅನಂ., ಬಳ. ಮಾ.) ಚಿಕ್ಕ ಕೂಸು ; ಕಿರುಗೂಸು.

Kid[2] ಕಿಡ್ (ಕ್ರಿ. ಸಕ., ನಾ.) (ಅಸಂ.) ಮೋಸ, ವಂಚನೆ (ಮಾಡು); ಠಕ್ಕಿಸು.

Kid[3] ಕಿಡ್ (ನಾ.) ಸಣ್ಣ ಮರದ ತೊಟ್ಟಿ (ಮು., ನಾವಿಕನ ಊಟದ ತೊಟ್ಟಿ)

Kídderminster ಕಿಡರ್‌ಮಿನ್‌ಸ್ಟರ್ (ನಾ.) ಇಂಗ್ಲೆಂಡಿನ ಈ ಹೆಸರಿನ ಊರಿನಲ್ಲಿ ತಯಾರಾದ ಜಮಖಾನೆ.

Kíddle ಕಿಡ್‌ಲ್ (ನಾ.) ನದಿಯಲ್ಲಿ ಮೀನುಹಿಡಿಯುವುದಕ್ಕೆ ಬಲೆ, ಮೊ. ನ್ನು ಅಡ್ಡಗಟ್ಟಲು ಅನುಕೂಲಿಸುವಂತೆ ಅವಕಾಶ ಬಿಟ್ಟು ಹಾಕಿದ ಅಡ್ಡಗಟ್ಟೆ; ಇದೇ ಕೆಲಸಕ್ಕಾಗಿ ಕಡಲ ಕರೆಯಲ್ಲಿ ಹಾಕಿದ ದಸಿಬಲೆಗಳು.

Kídnap ಕಿಡ್‌ನ್ಯಾಪ್ (ಕ್ರಿ. ಸಕ.) (ಮಗುವನ್ನು) ಕದ್ದುಕೊಂಡು ಹೋಗು; (ನ್ಯಾಯವಿರುದ್ಧವಾಗಿ ಬಲಪ್ರಯೋಗ ಮಾಡಿ) ಒಬ್ಬನನ್ನು ಎತ್ತಿಕೊಂಡು ಹೋಗು ; (ಬಲಾತ್ಕಾರ) ಹರಣ ಮಾಡು. **Kídnapper** (ನಾ.)

Kídney ಕಿಡ್ನಿ (ನಾ.) ಸಸ್ತನಿಗಳ, ಪಕ್ಷಿಗಳ, ಉರಗಮನಿಗಳ, ಉದರ ಕುಹರದಲ್ಲಿರುವ, ರಕ್ತದಲ್ಲಿಯ ಉಪಯೋಗ ಕಳೆದ ಸಸಾರಜನಕ ಪದಾರ್ಥವನ್ನು ಹೊರದೂಡುವುದಕ್ಕಾಗಿ ತನ್ನಲ್ಲಿ ಹರಿಯುವ ರಕ್ತದಿಂದ ಬೇರ್ಪಡಿಸಿ ಮೂತ್ರದ ಮೂಲಕ ಸಾಗಿಸುವ, ನಾಳಗುಚ್ಛಾಂಗಗ ಳೆರಡರಲ್ಲಿ ಒಂದು : ಮೂತ್ರಜನಕಾಂಗ ; ಮೂತ್ರಪಿಂಡ; ಆಹಾರ ಕ್ಕಾಗಿ ಉಪಯೋಗಿಸುವ ಕುರಿ, ದನ ಮತ್ತು ಹಂದಿಯ ಮೂತ್ರ ಪಿಂಡ. ಪ್ರಕೃತಿ ; ಸ್ವಭಾವ (A man of that k., of the right k.). ಅಂಡಾಕಾರದ ಆಲೂಗಡ್ಡೆ (= K. potato). K. bean ಮನೆಹುರುಳಿ ಕಾಯಿ (ಗಿಡ)

Kief = Kef.

Kill ಕಿಲ್ (ಕ್ರಿ., ನಾ.) ಕೊಲ್ಲು ; ಕೊಂದುಹಾಕು ; ಸಾಯಿಸು [K. two birds with one stone (Bird ನೋಡಿ)]. (ರೋಗ, ದುಃಖ, ಧಕ್ಕೆ, ಮದ್ಯ, ವಿಷ, ಮೊ. ಗಳ ವಿಷಯದಲ್ಲಿ) ಸಾವಿಗೆ ಕಾರಣವಾಗು [K. off (ಜನರು, ಮೊ. ನ್ನು) ಕೊಂದುಹಾಕಿ ಕಾಟ ತಪ್ಪಿಸಿಕೊ]. ಬೇಟೆಯಲ್ಲಿ ಕೊಲ್ಲು ; ವಧಿಸು. ಕೊಂದಮೇಲೆ ಒಳ್ಳೆಯ ಮಾಂಸ, ಹೆಚ್ಚು ಮಾಂಸ, ದೊರೆ (Pigs do not k. well at that age). (ಕಥೆ, ಮೊ. ಗಳಲ್ಲಿ) ಸತ್ತಂತೆ ವರ್ಣಿಸು, ನಿರೂಪಿಸು (K. your villain in the last chapter). (ಗಿಡ, ರೋಗ, ಮೊ. ಗಳ) ಸತ್ತ್ವನಾಶ ಮಾಡು. (ಮನೋಭಾವ, ಮೊ. ನ್ನು) ಅಡಗಿಸಿಬಿಡು, ಧ್ವಂಸ ಮಾಡು, ಕೊನೆಗಾಣಿಸು, ಅಳಿಯಿಸು. (ಬಣ್ಣ, ಮೊ. ನ್ನು) ವ್ಯತಿರಿಕ್ತವಾದ ಬಣ್ಣ, ಮೊ. ಗಳಿಂದ ಕಳೆಗುಂದಿಸು, ನಿಸ್ತೇಜ ಮಾಡು, ಪ್ರಭಾವ ಮುರಿ. ಸುಮ್ಮನೆ (ಹೊತ್ತು) ಕಳೆ. ಮೆಚ್ಚಿಕೆ, ವಿನೋದ, ಮೊ. ಗಳಲ್ಲಿ (ಒಬ್ಬನನ್ನು) ಮುಳುಗಿಸಿಬಿಡು (Got up to k. ಆಕರ್ಷಣೀಯವಾಗಿ, ಮನೋಹರವಾಗಿ, ಉಡುಪು ತೊಟ್ಟು). (ಟೆನಿಸ್ ಆಟ) ಹಿಂದಕ್ಕೆ ಕಳುಹಲಾಗದಂತೆ (ಚೆಂಡನ್ನು) ಕುಟ್ಟಿಬಿಡು. (ಕಾಲ್ಚೆಂಡಾಟ) (ಚೆಂಡನ್ನು) ಅಲ್ಲಾಡದಂತೆ ನಿಲ್ಲಿಸಿಬಿಡು. (ಶಾಸನ ಸಭೆಯಲ್ಲಿ ಮಸೂದೆ ಯನ್ನು) ಪೂರ್ತಿಯಾಗಿ ಸೋಲಿಸಿಬಿಡು, ನಿಪಾತ ಮಾಡು. [K. with kindness ತಪ್ಪುತಿಳಿವಳಿಕೆಯ ಪ್ರೇಮದಿಂದ ಪ್ರಾಣಾಪಾಯಕ್ಕೀಡುಮಾಡು. **K.-devil** ನೀರಿನಲ್ಲಿ ಸುತ್ತುತ್ತಿರುವಂತೆ ಅಳವಡಿಸಿದ (ಮೀನಿನ) ಕೃತಕ ಎರೆ. **K.-joy** (ಒಂದು ಸಂತೋಷ ಕೂಟದ) ಉತ್ಸಾಹ ಭಂಗ ಮಾಡುವವನು. **K.-time** (ನಾ., ಗು.) ಹೊತ್ತು ಕಳೆಯುವುದಕ್ಕಾಗಿ ಮಾಡುವ (ಉದ್ಯೋಗ)]. (ನಾ.) ಕೊಲ್ಲುವುದು ; ಕೊಲೆ ; ವಧೆ. (ಮು., ಬೇಟೆಗಾರ, ಹುಲಿ, ಮೊ. ವು) ಕೊಂದ ಪ್ರಾಣಿ. **Kíller** (ನಾ.) ಕೊಲ್ಲುವವನು ; —ವದು. (ಅಮೆ. ಸಂ.) ಕೊಲೆಗಾರ. Humane k. (Human ನೋಡಿ). **Kílling** (ಗು.) ; **Kíllingly** (ಕ್ರಿ. ವಿ.)

Kiln ಕಿಲ್, ಕಿಲ್ನ್ (ನಾ.) (ಸುಡುವುದು, ಒಣಗಿಸುವುದು, ಮೊ. ಕ್ಕಾಗಿ ಮಾಡಿದ) ಆವಿಗೆ, ಒಲೆ. Lime-k. ಸುಣ್ಣದ ಗೂಡು, ಒಲೆ. Brick-k. ಇಟ್ಟಿಗೆ(ಇಟ್ಟಂಗಿ)ಯ ಗೂಡು. K.-dry (ಕ್ರಿ. ಸಕ.) ಆವಿಗೆಯಲ್ಲಿ, ಒಲೆಯಲ್ಲಿ, ಒಣಗಿಸು.

Kilo- ಕಿಲೊ — (ಸ. ಪೂ. ಪ.) ಸಾವಿರ — ; ಸಹಸ್ರ —. **-cycle** ಧ್ವನಿತರಂಗಗಳನ್ನು ನಿರ್ದೇಶಿಸುವಾಗ ತರಂಗಗಳ ಉದ್ದಳತೆಯ ಮೀಟರುಗಳನ್ನು ಹೇಳುವ ಬದಲು ಕಂಪನ ಸಂಖ್ಯೆಯನ್ನು ಅಳತೆಯಾಗಿ ಉಪಯೋಗಿಸುವ ಒಂದು ಮಾನ(ಒಂದು ಸೆಕೆಂಡಿಗೆ೧,೦೦೦ ಕಂಪನಗಳು). **-gram(me)** ಸಾವಿರ ಗ್ರ್ಯಾಮ್ (ತೂಕ) : ಕಿಲೊಗ್ರ್ಯಾಮ್ (೨.೨೦೪ ಪೌಂಡಿನ ತೂಕಕ್ಕೆ ಸಮ). **-grammetre** ಒಂದು ಕಿಲೊಗ್ರ್ಯಾಮ್ ತೂಕವನ್ನು ಒಂದು ಮೀಟರ್ ಎತ್ತರಕ್ಕೆ ಎತ್ತಲು ಬೇಕಾಗುವ ಶಕ್ತಿ : 'ಕಿಲೊಗ್ರ್ಯಾಮ್ ಮೀಟರು'. **-litre, -liter** ಸಾವಿರ ಲೀಟರು ಅಳತೆ : 'ಕಿಲೊ ಲೀಟರ್' (= ೩೫.೩೧ ಘನ ಅಡಿಗಳು). **-metre, -meter** (ಉದ್ದ ಅಳತೆ) ಸಾವಿರ ಮೀಟರು (= ೩,೨೮೦.೮೯ ಅಡಿ) : 'ಕಿಲೊ ಮೀಟರ್'. **-metric(al)** (ಗು.) ; **-watt** ಸಾವಿರ ವಾಟುಗಳು : 'ಕಿಲೊ ವಾಟ್'.

Kilt ಕಿಲ್ಟ್ (ನಾ., ಕ್ರಿ. ಸಕ.) (ಸೊಂಟದಿಂದ ಮಂಡಿಯ ವರೆಗೆ ಬರುವ, ಬಣ್ಣ ಬಣ್ಣದ ಪಟ್ಟೆ ಪಟ್ಟೆಯ ಚೌಕುಳಿ ನಮೂನೆಯ ಬಟ್ಟೆಯಿಂದ ಮಾಡಿದ, ಸ್ಕಾಟ್ಲೆಂಡಿನ ಮಲೆನಾಡಿಗರ ಉಡುಪಿನ ಭಾಗವಾದ) ಗಿಡ್ಡು ಲಂಗ. (ಕ್ರಿ.) ಮೈಸುತ್ತಲೂ (ಗಿಡ್ಡುಲಂಗವನ್ನು) ನಿರಿಗೂಡಿಸಿ ಕಟ್ಟು. ಉದ್ದುದ್ದ ವಾಗಿ ನಿರಿ ಮಾಡಿ ಕಟ್ಟು (ಮು., ಭೂ. ಕೃ. ನಲ್ಲಿ). **Kíltie** (ನಾ.) ಗಿಡ್ಡುಲಂಗ ಧರಿಸಿದ ಮಲೆನಾಡಿನ ಸಿಪಾಯಿ.

Kimóno ಕಿಮೋನೋ (ನಾ.) (ಅಗಲವಾದ ಮೋಟು ತೋಳುಗಳುಳ್ಳ, ಸೊಂಟಪಟ್ಟಿ ಕಟ್ಟಿರುವ, ಉದ್ದವೂ ಸಡಿಲವೂ ಆದ) ಜಪಾನೀಯರ ನಿಲುವಂಗಿ, ದಗಲೆ : 'ಕಿಮೋನೋ'; ಇದನ್ನು ಅನುಕರಿಸಿ ಮಾಡಿದ ಯೂರೋಪಿಯನ್ನರ ಹೊರ ದಗಲೆ.

Kin ಕಿನ್ (ನಾ., ಗು.) ಬುಡಕಟ್ಟು ; ವಂಶ ; ಕುಲ ; ಮನೆತನ (Comes of good k. ಒಳ್ಳೆಯ ಮನೆತನದಲ್ಲಿ ಹುಟ್ಟಿದ್ದಾನೆ ; ಸತ್ಕುಲ ಪ್ರಸೂತ). ಬಳಗ ; ನಂಟರು ; ಬಂಧುಗಳು [Kith & k. (Kith ನೋಡಿ)]. (ಗು.) (ರಕ್ತ) ಸಂಬಂಧಿ ; ನಂಟತನವುಳ್ಳ [We are k. ನಾವು ನಂಟರು. He is k. to me. Of k. ರಕ್ತಸಂಬಂಧವುಳ್ಳ ; (ರೂಪ.) ಗುಣಸಂಬಂಧವುಳ್ಳ. Near of k. ಹತ್ತಿರ ಸಂಬಂಧದ. Next of k. (Next ನೋಡಿ)]. **Kínless** (ಗು.) ; **Kínsfolk** ಕಿನ್ಸ್‌ಫೋಕ್ (ನಾ., ಬ. ವ.) (ಸಾಹಿತ್ಯ ಪ್ರ.) ರಕ್ತಸಂಬಂಧಿಗಳು. **Kínsman** (ನಾ.) ; **Kínswoman** (ನಾ.) ; **Kínship** (ನಾ.) ರಕ್ತಸಂಬಂಧ ; (ಸ್ವಭಾವ, ಗುಣ, ಮೊ. ಗಳಲ್ಲಿ) ಸಾಮ್ಯ, ಸಂಬಂಧ.

Kíncob ಕಿಂಕಾಬ್ (ನಾ.) ಚಿನ್ನದ ಅಥವಾ ಬೆಳ್ಳಿಯ (ದಾರದಿಂದ) ಕಸೂತಿ ಹಾಕಿದ ಬಹು ಬೆಲೆಯುಳ್ಳ ಇಂಡಿಯದ ಕಲಾಬತ್ತು ಬಟ್ಟೆ : 'ಕಿಂಕಾಬು'.

Kind[1] ಕೈಂಡ್ (ನಾ.) (ಪ್ರಾಣಿ, ಸಸ್ಯ, ಮೊ. ಗಳ) ಜಾತಿ, ಕುಲ, ಸ್ವಾಭಾವಿಕ ವರ್ಗ (Human k., The rabbit k.) ; ತರಗತಿ ; ಬಗೆ ; ತೆರ ; ಪ್ರಭೇದ [Of what k. is it? Something of the k. ಆ ತೆರದ ಯಾವುದೋ ಒಂದು. Nothing of the k. ಆ ರೀತಿಯದಲ್ಲವೇ ಅಲ್ಲ; ಹಾಗೇನೂ ಅಲ್ಲ. We had coffee of a k. (ತಿರಸ್ಕಾರವಾಗಿ) ಏನೋ ಹೆಸರಿಗೆ 'ಕಾಫಿ' ಎನ್ನುವುದು ದೊರೆಯಿತು. These k. of men (ಬಳ. ಮಾ.) ಈ ಬಗೆಯ ಜನರು]. (ಶೈಥಿಲ್ಯ, ಅಸ್ಪಷ್ಟತೆ, ಉತ್ಪ್ರೇಕ್ಷೆ, ಮೊ. ಅರ್ಥ ಗರ್ಭಿತವಾಗಿ) ಏನೋ ಒಂದು ಬಗೆಯ [He is a k. of stockbroker, millionaire ಅವನೂ ಒಂದು ಬಗೆಯ ದಳ್ಳಾಳಿ, ಲಕ್ಷಾಧಿಕಾರಿ. I k. of expected it (ಬಳ. ಮಾ.) ನಾನು ಸ್ವಲ್ಪಮಟ್ಟಿಗೆ ಹಾಗೆಯೇ ನಿರೀಕ್ಷಿಸಿದೆನು]. (ಪ್ರಾಚೀ. ಪ್ರ.) ಪ್ರಕೃತಿ (The law of k. ಪ್ರಕೃತಿ ಧರ್ಮ, ನಿಯಮ). (ಪ್ರಾಚೀ. ಪ್ರ.) (ವ್ಯಕ್ತಿ, ಮೊ. ಕ್ಕೆ ಸಹಜವಾದ) ಮಾರ್ಗ, ರೀತಿ, (ಜಾತಿ) ಸ್ವಭಾವ [They act after their k. ತಮ್ಮ (ಜಾತಿ) ಸ್ವಭಾವಕ್ಕೆ ತಕ್ಕಂತೆ ನಡೆಯುತ್ತಾರೆ]. ಲಕ್ಷಣ ; ಗುಣ ; ಸ್ವಭಾವ [They differ in k. ಅವರು, ಅವು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಭಾವದಲ್ಲಿ, ಗುಣದಲ್ಲಿ, ವ್ಯತ್ಯಾಸ ಹೊಂದಿದ್ದಾರೆ, ಹೊಂದಿವೆ (ಅಂತಸ್ತಿನಲ್ಲಿ ಮಾತ್ರವಲ್ಲ). In k. ಪದಾರ್ಥರೂಪದಲ್ಲಿ, ಉತ್ಪನ್ನಗಳ ರೂಪದಲ್ಲಿ, ಬೆಳೆಯ ರೂಪದಲ್ಲಿ (ಹಣದ ರೂಪದಲ್ಲಲ್ಲ). Repay his insolence in k. ಅವನ ಧೃಷ್ಟತನಕ್ಕೆ ಪ್ರತಿ ಧಾರ್ಷ್ಟ್ಯ ತೋರು]

Kind[2] ಕೈಂಡ್ (ಗು.) ಮೃದು ಸ್ವಭಾವದ ; ಉಪಕಾರಶೀಲ ; ದಯಾಪರ; ಕರುಣೆಯುಳ್ಳ; ನಲ್ಮೆಯ. (ವ್ಯಕ್ತಿ, ಮೊ. ಗಳ ವಿಷಯದಲ್ಲಿ) ಸ್ನೇಹಭಾವದ (*To* ಉಪ. ದೊಡನೆ). (ಪ್ರಾಚೀ. ಪ್ರ.) ಪ್ರೀತಿಯ ; ಪ್ರೇಮದ. K.-hearted ಸುಹೃದಯನಾದ ; ಕರುಣಾಳುವಾದ. **Kíndly**[1] (ಕ್ರಿ. ವಿ.) (ಬೇಡಿಕೆಗಳಲ್ಲಿ ಮರ್ಯಾದಾ ಪೂರ್ವಕ ಪ್ರ., ಆಜ್ಞೆಗಳಲ್ಲಿ ವ್ಯಂಗ್ಯ ಪ್ರ.) ದಯವಿಟ್ಟು. **Kíndly**[2] (ಗು.) = Kind[2]. (ವಾಯುಗುಣ, ಮೊ.) ಹಿತಕರ; ಸುಖಾವಹ. (ಪ್ರಾಚೀ. ಪ್ರ.) ಸ್ವದೇಶದಲ್ಲಿ ಹುಟ್ಟಿದ; ದೇಶೀಯ (K. Scot). **Kíndlily** (ಕ್ರಿ. ವಿ.) ; **Kíndliness** (ನಾ.) ; **Kíndness** (ನಾ.) ದಯೆ ; ಕರುಣೆ ; ಕೃಪೆ ; ಉಪಕಾರ; ಪ್ರೀತಿ.

Kíndergarten (G) ಕಿಂಡರ್‌ಗಾರ್ಟ್‌ನ್ (ನಾ.) ವಸ್ತುಪಾಠಗಳು, ಆಟದ ಸಾಮಾನು, ಆಟಗಳು, ಹಾಡುವಿಕೆ, ಮೊ. ಗಳ ಮೂಲಕ ಮಕ್ಕಳ ಮನಸ್ಸನ್ನು ವಿಕಾಸ ಮಾಡುವ ಪಾಠಶಾಲೆ: 'ಕಿಂಡರ್‌ಗಾರ್ಟ್‌ನ್' (ಜರ್ಮನ್ ಭಾಷೆಯಲ್ಲಿ = ಮಕ್ಕಳ ತೋಟ). **Kíndergartenism** (ನಾ.)

Kíndle ಕಿಂಡ್‌ಲ್ (ಕ್ರಿ.) ಬೆಂಕಿ ಹಚ್ಚು ; ಉರಿಸು ; ಉರಿ ಹೊತ್ತಿಸು; ದೀಪ ಹಚ್ಚು. (ರೂಪ.) (ಕೋಪ ತಾಪಗಳನ್ನು) ಉದ್ರೇಕಿಸು ; ರೇಗಿಸು ; ಕೆರಳಿಸು ; ಕನಲಿಸು; (ಭಾವ, ಮೊ. ನ್ನು) ಉತ್ತೇಜಿಸು; (ವ್ಯಕ್ತಿಯನ್ನು, ಒಂದು ಕೆಲಸ ಮಾಡಲು) ಆವೇಶಗೊಳಿಸು, ಹುರಿದುಂಬಿಸು (*To* ಉಪ. ದೊಡನೆ). (ಉರಿ) ಹೊತ್ತಿಕೊ ; ಭಗ್ಗನೆ ಉರಿಯೇಳು. (ರೂಪ.) ಉತ್ಸಾಹಗೊಳ್ಳು; ಮಸಗು ; ಕೆರಳು ; ಕನಲು. ಭಾವೋದ್ರೇಕಗೊಳ್ಳು. ಪ್ರಕಾಶ ಮಾಡು ; — ವಾಗು ; ಪ್ರಜ್ವಲಿತವಾಗು ; — ಮಾಡಿಸು (ಸಾ., *up* ಉಪ. ದೊಡನೆ). **Kíndling** (ನಾ.) (ಏ. ವ. ಅಥವಾ ಬ. ವ. ದಲ್ಲಿ, ಮು.) ಬೆಂಕಿ ಹೊತ್ತಿಸುವ ಸಣ್ಣ ಪುಳ್ಳೆ, ಚಕ್ಕೆಯ ಪುಡಿ.

Kíndred ಕಿಂಡ್ರೆಡ್ (ನಾ., ಗು.) ರಕ್ತಸಂಬಂಧ; ಜ್ಞಾತಿತ್ವ ; ನಂಟತನ; ಬಳಗ. (ರೂಪ.) ಗುಣ ಸಾಮ್ಯ. ಬಂಧುಗಳು; ನಂಟರು ; ಬಂಧು ವರ್ಗ. (ಗು.) ರಕ್ತಸಂಬಂಧದ. (ರೂಪ.) ಸಂಬಂಧಿಸಿದ ; ಸಂಬಂಧಪಟ್ಟ ; ಸಾದೃಶ್ಯದ (Frost & k. phenomena)

Kine ಕೈನ್. **Cow**[1] ನೋಡಿ.

Kinéma ಕಿ(ಕೈ)ನೀಮ. Cinema ಎಂಬುದರ ಮತ್ತೊಂದು ರೂಪ. **Kinemátograph, -ic, -y** = Cinematograph, etc.

Kinemátic ಕೈ(ಕಿ)ನಿ(ನೆ)ಮ್ಯಾಟಿಕ್ (ಗು., ನಾ.) (ಬಲವನ್ನಾಗಲಿ ದ್ರವ್ಯ ಮೊತ್ತವನ್ನಾಗಲಿ ಪರಿಗಣಿಸದೆ ಗುಣರೂಪವಾಗಿ ಭಾವಿಸಿದ) ಕೇವಲ ಚಲನೆಯ. (ನಾ., ಬ. ವ. ದಲ್ಲಿ) ಶುದ್ಧ ಚಲನ ಶಾಸ್ತ್ರ. **Kinemátical** (ಗು.) ; **Kinétic** ಕೈನೆಟಿಕ್ (ಗು., ನಾ.) ಚಲನೆಯ ; ಚಲನೆಯಿಂದಾದ ; ಚಲನಾತ್ಮಕ [K. energy (Energy ನೋಡಿ). K. theory of heat, of gases ಉಷ್ಣವೂ ಅನಿಲಾವಸ್ಥೆಯೂ ಕಣಗಳ ಚಲನೆಯಿಂದ ಉಂಟಾಗುವುದೆಂಬ ತತ್ತ್ವ : ಕಣಚಲನ ಉಷ್ಣ ತತ್ತ್ವ ; — ಅನಿಲ ತತ್ತ್ವ]. (ನಾ., ಬ. ವ. ದಲ್ಲಿ) ವಸ್ತುಗಳ ಚಲನೆಗೂ ಅವುಗಳಮೇಲೆ ಕಾರ್ಯಮಾಡುತ್ತಿರುವ ಬಲಗಳಿಗೂ ಇರುವ ಸಂಬಂಧವನ್ನು ಪರಿಗಣಿಸುವ ಶಾಸ್ತ್ರ : ಚಲನ (ಸಂಬಂಧಿ) ಶಾಸ್ತ್ರ.

King ಕಿಂಗ್ (ನಾ.) (ಮು., ವಂಶಾನುಗತವಾಗಿ ರಾಜ್ಯವಾಳುವ) ಸ್ವತಂತ್ರ ರಾಷ್ಟ್ರದ ದೊರೆ, ರಾಜ, ಅರಸ [K. sends his carriage ಸೆರೆಮನೆಯ ಬಂಡಿ ಬರುತ್ತದೆ. K. Baby ಮನೆಗೆ ಮುದ್ದಿನ ಮಗು. K. Emperor (of U. K. & India) ಗ್ರೇಟ್‌ಬ್ರಿಟನ್ನಿನ ದೊರೆ ಮತ್ತು ಇಂಡಿಯಾದ ಚಕ್ರವರ್ತಿ. K. Log ಒಬ್ಬರ ಗೊಡವೆಗೆ ಹೋಗದ (ಅತಿ ಸಾಧು) ದೊರೆ ; ಮೊದ್ದಿನ ದೊರೆ; K. Stork ಪೀಡಕ ರಾಜ (ಈಸೋಪನ ಕಪ್ಪೆಗಳ ಕಥೆಯಿಂದ). K. of kings ದೇವರು ; (ಹಲವು ಪೌರಸ್ತ್ಯ ದೊರೆಗಳ ಬಿರುದು) ರಾಜಾಧಿರಾಜ. K. of Terrors ಮೃತ್ಯು; ಯಮ. K.'s bounty, counsel, English, evidence, head, highway, shilling, weather (ಆಯಾ ಪದವನ್ನು ನೋಡಿ). K. of the Castle ಮಕ್ಕಳ ಒಂದು ಆಟ]. ಬಹು ದೊಡ್ಡ ವರ್ತಕ, ಮೊ. (Fur-k. ತುಪ್ಪುಳುಚರ್ಮದ ಬಹು ದೊಡ್ಡ ವ್ಯಾಪಾರಿ. Railway-k. ಭಾರಿ ರೈಲು ಕಂಪೆನಿಗಳ ಯಜಮಾನ). (K. of beasts ಮೃಗ ರಾಜ : ಸಿಂಹ. K. of birds ಪಕ್ಷಿ ರಾಜ : ಗರುಡ, ಹದ್ದು). (ಹಣ್ಣು, ಗಿಡ, ಮೊ. ಗಳ ವಿಷಯದಲ್ಲಿ) ಅತ್ಯುತ್ತಮವಾದುದು. (ಚದುರಂಗ) ರಾಜ (ಪ್ಯಾದೆಮಾತು ಆಗದಂತೆ ಕಾಪಾಡಿಕೊಳ್ಳಬೇಕಾದ ಕಾಯಿ). (ಇಸ್ಪೀಟು) ರಾಜ(ನ ಚಿತ್ರವಿರುವ ಎಲೆ). **K.-bolt** ಮುಖ್ಯ ಅಗುಳಿ ; ದೊಡ್ಡ ಅಗುಳಿ. **K.-crab** ಕುದುರೆಯ ಲಾಳದಾಕಾರದ ಮೇಲ್ಚಿಪ್ಪುಳ್ಳ ದೊಡ್ಡ ನಳ್ಳಿ. **K.-craft** ರಾಜ ತಂತ್ರ. **K.-cup** = Buttercup, ಮೊ. ಸಸ್ಯವಿಶೇಷ. **Kingfisher** ಜಾಲಗಾರ ಹಕ್ಕಿ ; ಮಿಂಚುಳ್ಳಿ. **K.-maker** ರಾಜ ಪ್ರತಿಷ್ಠಾಪಕ (ಮು., ಇಂಗ್ಲೆಂಡಿನ ಆರನೆಯ ಹೆನ್ರಿಯ ಕಾಲದಲ್ಲಿದ್ದ Earl of Warwick). **K.-of-Arms** (Arm[2] ನೋಡಿ). **K.-post** ಬಂಧನಿ ದೂಲದಿಂದ ಇಪ್ಪಾರು ಮರದ ಸೇರಿಕೆಗೆ ಆಧಾರವಾಗಿ ಹಾಕಿರುವ ನಿಲುಗಂಬ ; ಬೆಂಗಟೆ ಕಂಬ. **K.'s evil** (ದೊರೆ ಮುಟ್ಟಿದರೆ ವಾಸಿಯಾಗುವುದೆಂದು ಹಿಂದೆ ನಂಬಿದ್ದ) ಗಂಡಮಾಲೆ. **Kíngdom** (ನಾ.) ರಾಜನಾಳುವ ದೇಶ ; (ರಾಜನ ಅಧೀನದಲ್ಲಿರುವ) ರಾಜ್ಯ [United K. ಗ್ರೇಟ್‌ಬ್ರಿಟನ್ ಮತ್ತು (ಉ.) ಐರ್ಲೆಂಡ್]. ದೇವರ ಆಧ್ಯಾತ್ಮಿಕ ಪ್ರಭುತ್ವ, ಸಾಮ್ರಾಜ್ಯ (The k. of heaven ಸ್ವರ್ಗ ಸಾಮ್ರಾಜ್ಯ). ಅಧಿಕಾರ ಪ್ರದೇಶ ; ಆಧಿಪತ್ಯ. ಪ್ರಕೃತಿಯ ಒಂದು ಭಾಗ, ವರ್ಗ (Animal, vegetable, mineral, k. ಪ್ರಾಣಿ, ಸಸ್ಯ, ಖನಿಜ, — ಪ್ರಪಂಚ, — ಕೋಟಿ). **Kíngdom-come** (ಅಸಂ.) ಪರ ಲೋಕ; ದೇವ ಲೋಕ (ಬೈಬಲ್ಲಿನಲ್ಲಿ ಬರುವ Thy k. come ಎಂಬುದರ ಪ್ರತಿಧ್ವನಿ). **Kíngdomed** — ಡಮ್ಡ್ (ಗು.) ; **Kínglet** (ನಾ.) (ಸಾ., ತಿರಸ್ಕಾರ ಸೂಚಕ) ಉಪ ರಾಜ ; ರಾಜ ಕಲ್ಪ. ಹೊಂಜುಟ್ಟಿನ 'ರೆನ್' ಎಂಬ ಹಕ್ಕಿ. **Kíngling** (ನಾ.) = Kinglet (ಆದರೆ ಕಡಮೆಯ ತಿರಸ್ಕಾರಾರ್ಥದಲ್ಲಿ ಪ್ರ.). **Kíngless** (ಗು.) ; **Kínglike** (ಗು.) ; **Kíngly** (ಗು.) ರಾಜನ ; ರಾಜ ಲಕ್ಷಣದ ; ರಾಜ ದರ್ಜೆಯ ; ರಾಜ ಯೋಗ್ಯವಾದ. **Kíngliness** (ನಾ.) ; **Kíngship** (ನಾ.)

King (ಕ್ರಿ.) ದೊರೆತನ ಮಾಡು ; ದೊರೆಯಂತೆ ಆಳು (ಮು., K. it) ; (ಒಬ್ಬನನ್ನು) ದೊರೆಯಾಗಿ ಮಾಡು.

Kíngdom, Kínglet, etc. King ನೋಡಿ.

Kink ಕಿಂಕ್ (ನಾ., ಕ್ರಿ.) (ತಂತಿ, ಸರಪಣಿ, ಹಗ್ಗ, ಮೊ. ಗಳಲ್ಲಿ) ತಡೆಯುಂಟುಮಾಡುವ ಅಥವಾ ಅಲ್ಲಿ ಕಿತ್ತುಹೋಗಬಹುದಾದ ತಿರಿಚು. (ರೂಪ.) ಮನಸ್ಸಿನ ತಿರಿಚುಮುರಿಚು ; ವಿಚಿತ್ರ ಭಾವನೆ ; ವಿಪರೀತ ಕಲ್ಪನೆ. (ಕ್ರಿ.) (ಹಗ್ಗ, ಮೊ. ವು) ತಿರಿಚು ಬೀಳು, ಬೀಳಿಸು. **Kínky** (ಗು.)

Kíno ಕೀನೊ (ನಾ.) (ಔಷಧ ತಯಾರಿಕೆಯಲ್ಲೂ, ಚರ್ಮ ಹದಮಾಡುವುದರಲ್ಲಿಯೂ ಉಪಯೋಗಿಸುವ) ಕಾಚನ್ನು ಹೋಲುವ ಹಲವು ಮರಗಳ ಗೋಂದು.

Kiósk ಕಿಯಾಸ್ಕ್ (ನಾ.) (ತುರ್ಕಿ ಮತ್ತು ಪರ್ಷಿಯಾ ದೇಶಗಳಲ್ಲಿ) ನಾಲ್ಕು ಕಡೆಯೂ ತೆರೆದಿರುವ ಹಗುರವಾದ ಬಿಸಿಲು ಚಪ್ಪರ, ಬೇಸಗೆಯ ಮಂಟಪ. (ಫ್ರಾನ್ಸ್ ಮತ್ತು ಬೆಲ್ಜಿಯಂ ದೇಶಗಳಲ್ಲಿ) ವೃತ್ತಪತ್ರಿಕೆಗಳ ವ್ಯಾಪಾರಕಟ್ಟೆ, ವಾದ್ಯ ಮಂಟಪ, ಮೊ.

Kip[1] ಕಿಪ್ (ನಾ.) (ತೊಗಲಿಗಾಗಿ ಉಪಯೋಗಿಸುವ) ಕರು, ಮೊ. ಮರಿಗಳ ಅಥವಾ ಸಣ್ಣ ಪ್ರಾಣಿಗಳ (ಸುಲಿದ) ಚರ್ಮ.

Kip[2] ಕಿಪ್ (ನಾ.) (ಅಸಂ.) ಸಾಮಾನ್ಯ ವಸತಿಗೃಹ; (ಹಂಗಾಮಿ) ವಾಸಸ್ಥಳ. ಹಾಸಿಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Kirk ಕರ್ಕ್ (ನಾ.) (ಸ್ಕಾ. ಪ್ರ.) ಕ್ರೈಸ್ತ ದೇವಾಲಯ : ಚರ್ಚ್. K. of Scotland (ಇಂಗ್ಲಿಷ್ ಪ್ರಯೋಗದಲ್ಲ Church of England ಗೆ ಅಥವಾ Episcopal Church of Scotland ಗೆ ಬೇರೆಯಾದದ್ದು). **Kirkman** ಸ್ಕಾಟ್ಲೆಂಡ್ ಚರ್ಚಿನ ಶಿಷ್ಯ. **K. session** ಸ್ಕಾಟ್ಲೆಂಡ್ ಚರ್ಚಿನಲ್ಲಿಯೂ ಇತರ ಪ್ರೆಸ್ಬಿಟೇರಿಯನ್ ಚರ್ಚುಗಳಲ್ಲಿಯೂ ಪಾದ್ರಿಗಳು ಮತ್ತು ಹಿರಿಯರು ಸೇರಿದ ಅತ್ಯಂತ ಕೆಳಗಿನ ನ್ಯಾಯ ಸಭೆ : ಕರ್ಕ್ ನ್ಯಾಯಸಭೆ.

Kírtle ಕರ್ಟ್‌ಲ್ (ನಾ.) (ಪ್ರಾಚೀ. ಪ್ರ.) ಹೆಂಗಸಿನ ಮೇಲುಡುಪು ; ಲಂಗ ; ಗಂಡಸಿನ ದಗಲೆ, ಅಂಗಿ.

Kísmet ಕಿಸ್ಮೆಟ್ (ನಾ.) ವಿಧಿ ; ಅದೃಷ್ಟ ; ಹಣೆಯ ಬರಹ : ' ಕಿಸ್ಮತ್ '.

Kiss ಕಿಸ್ (ನಾ., ಕ್ರಿ. ಸಕ.) (ಮು., ಪ್ರೀತಿ, ಅಭಿವಂದನೆ, ಗೌರವ, ತೋರಿಸುವುದಕ್ಕಾಗಿ ತುಟಿ ಮುಟ್ಟಿಸಿ ಕೊಡುವ) ಮುತ್ತು ; ಮುದ್ದು ; ಚುಂಬನ. (ಬಿಲಿಯರ್ಡ್ಸ್ ಆಟ) ಚಲಿಸುತ್ತಿರುವ ಚೆಂಡುಗಳ ಪರಸ್ಪರ ತಾಕು. ಒಂದು ಬಗೆಯ ಸಕ್ಕರೆಮಿಠಾಯಿ. (ಕ್ರಿ.) ಮುತ್ತಿಡು (K. & be friends) ; ಮುದ್ದಾಡು ; ಚುಂಬಿಸು. (ಬಿಲಿಯರ್ಡ್ಸ್ : ಒಂದು ಚೆಂಡು ಮತ್ತೊಂದು ಚೆಂಡನ್ನು) ಮೆಲ್ಲಗೆ ತಾಕು. K. away ಮುತ್ತಿಟ್ಟು (ಕಂಬನಿ, ಮೊ. ನ್ನು) ತೊಡೆ, ದುಃಖ ಹೋಗಲಾಡಿಸು. K. the book (ಪ್ರಮಾಣ ಮಾಡುವಲ್ಲಿ) ಬೈಬಲ್ಲನ್ನು ಮುತ್ತಿಡು. K. the dust ಮಾನ ಬಿಟ್ಟು ಶರಣಾಗತನಾಗು ; ಪಾದ ಧೂಳಿಯಲ್ಲಿ ಹೊರಳು. ಕೊಲೆ ಹೊಂದು ; ಕೊಲ್ಲಲ್ಪಡು. K. the ground ಅಧೀನತೆಯ, ಭಕ್ತಿಯ, ಗುರುತಾಗಿ ಅಡ್ಡಬೀಳು; ಹೀನಾಯ ಪಡು; ಸೋಲು ಪಡೆ. K. one's hand to (ದೂರದಲ್ಲಿ ಹೋಗುತ್ತಿರುವವನಿಗೆ ಪ್ರೇಮ ತೋರಿಸಲು) ತನ್ನ ಕೈಗೆ ಮುತ್ತು ಕೊಟ್ಟು ಕೈಯಾಡಿಸು. K. hands or the hand (of sovereign, etc.) (ವಿಧಿವತ್ತಾದ ವಂದನೆಯಾಗಿ ಅಥವಾ ಒಂದು ಅಧಿಕಾರಕ್ಕೆ ನಿಯಮಿತನಾದುದಕ್ಕಾಗಿ ದೊರೆ, ಮೊ. ರ) ಕೈಗೆ ಮುತ್ತಿಡು. K. the rod ದಂಡನೆಯನ್ನು ಬಾಯಿಮುಚ್ಚಿಕೊಂಡು ಅನುಭವಿಸು, ಒಪ್ಪಿಕೊ. **K.-in-the-ring** (ಗಂಡು ಹೆಣ್ಣನ್ನೂ ಹೆಣ್ಣು ಗಂಡನ್ನೂ ಅಟ್ಟಿಸಿಕೊಂಡು ಹೋಗಿ ಮುತ್ತಿಡುವ) ಯುವಕ ಯುವತಿಯರ ಒಂದು ಆಟ. **K.-me-quick** ಹಲವು ಬಗೆಯ ಸಸ್ಯ ಜಾತಿ(ಯ ಹೆಸರು) . ಹಣೆಯ ಮುಂಗುರುಳು. **Kíssable** (ಗು.); **Kíssably** (ಕ್ರಿ. ವಿ.) ; **Kíssing** (ಗು., ನಾ.) [K. kind (ಪರಸ್ಪರ) ಪ್ರೇಮದಿಂದ]

Kit[1] ಕಿಟ್ (ನಾ.) (ಹಲವು ಕೆಲಸಗಳಿಗೆ ಉಪಯೋಗಿಸುವ) ಮರದ ತೊಟ್ಟಿ. ಸಿಪಾಯಿಯ ಸಾಮಾನು ಸರಂಜಾಮಿನ ಚೀಲ ; ಈ ಚೀಲದಲ್ಲಿಯ ಸಾಮಾನು; (ಮು., ಪ್ರಯಾಣಕ್ಕೆ ಅಣಿಗೊಳಿಸಿದ, ಒಬ್ಬನ ಸ್ವಂತದ) ಗಂಟು ಮೂಟೆ. ಕೆಲಸಗಾರನ (ಮು., ಮೋಚಿಯ) ಉಪಕರಣ ಸಾಮಗ್ರಿ. K.-bag (ಸಿಪಾಯಿಯ ಅಥವಾ ಪ್ರಯಾಣಿಕನ) ಸಾಮಾನು ಚೀಲ.

Kit[2] ಕಿಟ್ (ನಾ.) Kitten ಪದದ ಸಂಕ್ಷಿಪ್ತ.

Kít-cat ಕಿಟ್‌ಕ್ಯಾಟ್ (ನಾ.) (K. Club ಎರಡನೆಯ ಜೇಮ್ಸಿನ ಕಾಲದಲ್ಲಿ ಸ್ಥಾಪಿತವಾದ ವ್ಹಿಗ್ ಪಕ್ಷದ ರಾಜನೀತಿಜ್ಞರ ಮತ್ತು ಸಾಹಿತಿಗಳ ಸಂಘ) ; K. club ನ ಸದಸ್ಯ. ಅರ್ಧ ನಿಲುವಿಗಿಂತ ಕಡಮೆಯಾದ, ಕೈಗಳುಳ್ಳ, ಭಾವ ಚಿತ್ರ (=K. portrait)

Kítchen ಕಿಚೆನ್ (ನಾ.) ಅಡಿಗೆಯ ಮನೆ; ಪಾಕ ಶಾಲೆ. K. garden ಹಣ್ಣನ್ನೂ ತರಕಾರಿಯನ್ನೂ ಬೆಳೆಯುವ (ಮನೆಯ) ಕೈತೋಟ. K.-maid (ಸಾ., ಅಡಿಗೆಯವಳ ಸೇವಕಳಾದ) ಅಡಿಗೆಯ ಮನೆಯ ಪರಿಚಾರಿಕೆ ; ಬೋನಗಿತ್ತಿ. K. midden (Midden ನೋಡಿ). K. physic (ಹಾಸ್ಯವಾಗಿ) ರೋಗಿಗೆ ತಕ್ಕ ಪುಷ್ಟಿಯಾಹಾರ. K.-stuff ಅಡಿಗೆಯ ಸಾಮಾನು (ಮು., ಕಾಯಿಪಲ್ಯಗಳು). **Kítchener** ಕಿಚೆನರ್ (ನಾ.) ಅಡಿಗೆಯೊರೆಯ ಸಾಲು ; (ಸಂನ್ಯಾಸಿ ಮಠದಲ್ಲಿ) ಅಡಿಗೆಯ ಮನೆಯ ಪಾರುಪತ್ಯಗಾರ.

Kite ಕೈಟ್ (ನಾ., ಕ್ರಿ.) ಉದ್ದವಾದ ರೆಕ್ಕೆಗಳೂ, ಸಾ., ಕವಲೊಡೆದ ತೋಕೆಯೂ ಉಳ್ಳ, ಕೊಕ್ಕಿನಲ್ಲಿ ಹಲ್ಲಿಲ್ಲದ, ಡೇಗೆಯ ಕುಟುಂಬಕ್ಕೆ ಸೇರಿದ, ಮಾಂಸಾಹಾರಿಯಾದ ಒಂದು ಪಕ್ಷಿ : ಹದ್ದು. ಆಶಾಪಾತಕ ಸುಲಿಗೆಕೋರ; ದಗಾಕೋರ. (ಕಟ್ಟಿದ ದಾರವನ್ನು ಬಿಟ್ಟು ಹಾರಿಸುವ) ಗಾಳಿಯ ಪಟ [Fly a k. (Fly[2] ನೋಡಿ)] . (ಬ. ವ. ದಲ್ಲಿ) ನಸು ಗಾಳಿಯಲ್ಲಿ ಮಾತ್ರ ಹರಡುವ ಹಡಗಿನ ಅತ್ಯಂತ ಎತ್ತರದ ಪಟಗಳು. [K. balloon ಸೈನಿಕ ಪರಿಶೀಲನೆಗಾಗಿ (ತಂತುವಿನ ಮೂಲಕ) ಹತೋಟಿಯಲ್ಲಿಟ್ಟುಕೊಂಡು ಹಾರಿಸುವ ಆಕಾಶಬುಟ್ಟಿ] . (ಕ್ರಿ.) ಹದ್ದಿನಂತೆ ಆಕಾಶದಲ್ಲಿ ಈಸುತ್ತ ಹಾರು ; ಗಾಳಿಯ ಪಟದಂತೆ ಎತ್ತರದಲ್ಲಿ ಹಾರಿಸು. (ವಾಣಿಜ್ಯ) ದರದು ಹುಂಡಿಯಾಗಿ ಪರಿವರ್ತಿಸು ; — ಯಿಂದ ಹಣ ಪಡೆ.

Kith ಕಿತ್ (ನಾ.) K. & kin ಪರಿಚಿತರು ಮತ್ತು ನಂಟರು; ನಂಟರಿಷ್ಟರು ; ಬಂಧು ಬಳಗ.

Kítten ಕಿಟ್‌ನ್ (ನಾ., ಕ್ರಿ. ಸಕ.) ಬೆಕ್ಕಿನ ಮರಿ. ಕುಲುಕುಲಾಡಿ ಹುಡುಗಿ. (ಕ್ರಿ.) (ಬೆಕ್ಕು) ಮರಿ ಹಾಕು. **Kíttenish** (ಗು.) ಬೆಕ್ಕಿನ ಮರಿಯಂಥ ; ಚೆಲ್ಲಾಟವಾಡುವ.

Kíttle ಕಿಟ್‌ಲ್ (ಗು.) ತೊಂದರೆ ಕೊಡುವ ; ನಿರ್ವಹಿಸಲು ಕಷ್ಟವಾದ ; ತೊಡಕಿನ ; ಬಹು ಸೂಕ್ಷ್ಮವಾದ [K. cattle (ಮು., ರೂಪ.) ವ್ಯವಹರಿಸಲು ಕಷ್ಟವಾದ ಜನ, ವಿಷಯ]

Kítty ಕಿಟಿ (ನಾ.) ಬೆಕ್ಕಿನ ಮರಿ(ಯ ಮುದ್ದು ಹೆಸರು)

Kíwi ಕೀವಿ (ನಾ.) =Apteryx. (ಅಸಂ.) ಆಕಾಶಸಂಚಾರ ಮಾಡದ ಆಕಾಶದಳದ ಸದಸ್ಯ.

Kláxon ಕ್ಲಾಕ್ಸನ್, — ಕ್ಸ್‌ನ್ (ನಾ.) ವಿದ್ಯುತ್‌ಚಾಲಕ ಕಿರಿಚು ಮೋಟಾರು ಕಹಳೆ.

Kleptománia ಕ್ಲೆಪ್ಟೊಮೇನಿಯ (ನಾ.) ಬಡತನದ ಬಾಧೆಯಿಲ್ಲದಿದ್ದರೂ ಮತ್ತೊಬ್ಬರ ವಸ್ತುವನ್ನು ಕದಿಯಬೇಕೆಂಬ ತಡೆಯಲಸಾಧ್ಯವಾದ ಮನಃಪ್ರವೃತ್ತಿ ; ಕದಿಯುವ ಗೀಳು, ಚಾಳಿ. **Kleptomániac** (ನಾ.)

Knack ನ್ಯಾಕ್ (ನಾ.) (ಒಂದು ಕೆಲಸವನ್ನು ಒಪ್ಪವಾಗಿ ಮಾಡಲು ಅಭ್ಯಾಸದಿಂದ ಬಲಿತ) ಜಾಣತನ ; ಕಾರ್ಯಕೌಶಲ ; ಚಾತುರ್ಯದ ಕಲ್ಪನೆ, ಸಲಕರಣೆ ; ಯುಕ್ತಿ. ಆಟದ ವಸ್ತು ; ಥಳಕು ಪಳಕು. (ಕಾರ್ಯದಲ್ಲಿ, ಮಾತಿನಲ್ಲಿ) ಒಂದು ತೆರದ ಚಳಕ, ಸ್ವಭಾವ. **Knácky** (ಗು.)

Knácker ನ್ಯಾಕರ್ (ನಾ.) ಕೆಲಸಕ್ಕೆ ಬಾರದ ಕುದುರೆಗಳನ್ನು ಕೊಂಡು (ಅವುಗಳ ತೊಗಲು, ಗೊರಸು, ಮೊ. ಗಳಿಗಾಗಿ) ಅವುಗಳನ್ನು ಕೊಲ್ಲುವವನು : ಕುದುರೆ ಕಸಾಯಿ. ಹಳೆಯ ಮನೆ, ಹಡಗು, ಮೊ. ನ್ನು ಅವುಗಳಿಂದ ದೊರೆಯುವ ಸಾಮಾನುಗಳಿಗಾಗಿ ಕೊಳ್ಳುವವನು. **Knáckery** (ನಾ.) ಕುದುರೆ ಕಸಾಯಿಯ ಅಂಗಳ.

Knag ನ್ಯಾಗ್ (ನಾ.) ದಾರುವಿನಲ್ಲಿಯ ಗಂಟು ; ರೆಂಬೆಯ ಬುಡ. **Knággy** (ಗು.) ಗಂಟು ಗಂಟಾದ ; ಒರಟೊರಟಾದ.

Knap[1] ನ್ಯಾಪ್ (ನಾ.) (ಪ್ರಾಂ. ಪ್ರ.) ಬೆಟ್ಟದ ನೆತ್ತಿ ; ಶಿಖರ ; ಮೊರಡಿ ; ಏರುದಿಣ್ಣೆ.

Knap[2] ನ್ಯಾಪ್ (ಕ್ರಿ. ಸಕ.) (ರಸ್ತೆಗಾಗಿ ಕಲ್ಲುಚೂರುಗಳನ್ನು) ಸುತ್ತಿಗೆಯಿಂದ ಒಡೆ; ಜಲ್ಲಿಯೊಡೆ. (ಬೈಬಲ್; ಪ್ರಾಂ. ಪ್ರ.) ಬಡಿ; ಕುಟ್ಟು; ತಟ್ಟು; ಥಟ್ಟನೆ ಮುರಿದುಹಾಕು. **Knápper** (ನಾ.) ಜಲ್ಲಿ ಒಡೆಯುವವನು.

Knápsack ನ್ಯಾಪ್‌ಸ್ಯಾಕ್ (ನಾ.) (ಸಿಪಾಯಿಯ, ಪ್ರಯಾಣಿಕನ) ಆವಶ್ಯಕವಾದ ಸಾಮಾನನ್ನು ಒಯ್ಯುವ, ರಟ್ಟುಬಟ್ಟೆಯ ಅಥವಾ ತೊಗಲಿನ, ಚೀಲ (ನವಾರಿನಿಂದ ಬೆನ್ನಿಗೆ ಕಟ್ಟಿದ್ದು) ; ಸಾಮಾನು ಚೀಲ, ಸಿಪಾಯಿ ಚೀಲ ; ಬೆನ್ನು ಚೀಲ.

Knar ನಾರ್ (ನಾ.) ಮರದ ಗಂಟು (ಮು., ಕಾಂಡದಲ್ಲಿಯ ಅಥವಾ ಬುಡದಲ್ಲಿಯ ತೊಗಟೆಮುಚ್ಚಿದ ಗಂಟು)

Knave ನೇವ್ (ನಾ.) ನೀತಿ ನಿಯಮಗಳಿಲ್ಲದವನು ; ಕೆಟ್ಟವನು ; ಮೋಸಗಾರ; ದಗಾಕೋರ. [**Knávery** (ನಾ.) ; **Knávish** (ಗು.) ; **Knávishly** (ಕ್ರಿ. ವಿ.) ; **Knávishness** (ನಾ.)] . (ಇಸ್ಪೀಟು) ಗುಲಾಮ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Knead ನೀಡ್ (ಕ್ರಿ. ಸಕ.) (ನೀರು ಹಾಕಿ ಕಲಸಿದ ಹಿಟ್ಟು, ಜೇಡಿಮಣ್ಣು, ಮೊ. ನ್ನು) ನಾದು; (ಹಿಟ್ಟನ್ನು, ಮಣ್ಣನ್ನು) ನಾದಿ (ರೊಟ್ಟಿಯನ್ನು, ಮಡಕೆಯನ್ನು) ಮಾಡು. (ರೂಪ.) ಚೆನ್ನಾಗಿ ಬೆರೆಯುವಂತೆ ಮಾಡು ; ಒಟ್ಟಿಗೆ ಬೆಸೆ; (ಸ್ನಾಯು, ಮೊ. ನ್ನು) ನಾದುವಂತೆ ಹಿಸುಕಿ ನೀವು. **Kneádable** (ಗು.) ; **Kneáder** (ನಾ.) ; **Kneáding** (ನಾ.) (ಕ್ರಿಯಾರ್ಥಗಳಲ್ಲಿ). K.-trough (ಹಿಟ್ಟು, ಮೊ. ನ್ನು) ನಾದುವ ಮರದ ತೊಟ್ಟಿ.

Knee ನೀ (ನಾ., ಕ್ರಿ. ಸಕ.) ತೊಡೆಗೂ ಕೆಳ ಕಾಲಿಗೂ ಮಧ್ಯದಲ್ಲಿರುವ ಸಂಧಿ ; ಮಂಡಿ ; ಮೊಣಕಾಲು ; ಪ್ರಾಣಿಗಳಲ್ಲಿ ಇದಕ್ಕೆ ಜವಾಬಾದ ಅಂಗಭಾಗ [Give a k. to (ಕುಸ್ತಿಯಲ್ಲಿ ಸೂಳುಗಳ ಮಧ್ಯೆ) ಜಟ್ಟಿಗೆ ತನ್ನ ಮಂಡಿಯನ್ನು ಆಧಾರವಾಗಿ ಕೊಡು ; (ಜಟ್ಟಿಕಾಳಗದಲ್ಲಿ ಜಟ್ಟಿಗೆ) ಸಹಾಯಕನಾಗಿ ಕಾರ್ಯ ಮಾಡು. On one's knees (ದೈನ್ಯ, ಆರಾಧನೆ, ಶರಣುಹೊಗುವುದು — ಈ ಸಂದರ್ಭಗಳಲ್ಲಿ) ನೆಲಕ್ಕೆ ಮಂಡಿಯೂರಿ. Bring (person) to his knees (ಒಬ್ಬನನ್ನು) ಶರಣಾಗತನನ್ನಾಗಿ ಮಾಡು ; ಕಾಲಿಗೆರಗಿಸು. Is on the knees of the gods ದೇವರ ಕೈಯಲ್ಲಿದೆ ; ಇನ್ನೂ ನಿಶ್ಚಿತವಾಗಿಲ್ಲ]. ಮಂಡಿ ಮುಚ್ಚುವ ಉಡುಪಿನ ಭಾಗ. (ಆಕಾರದಲ್ಲಾಗಲಿ ಸ್ಥಾನದಲ್ಲಾಗಲಿ) ಮಂಡಿಯನ್ನು ಹೋಲುವ ವಸ್ತು : ಮು., ಕೋನಿಕ ಬಾಗು ಇರುವ ಮರದ ಅಥವಾ ಕಬ್ಬಿಣದ ತುಂಡು. (ಕ್ರಿ.) ಮಂಡಿಯಿಂದ ತಿವಿ. (ಚೌಕಟ್ಟು, ಮೊ. ನ್ನು) ಮಂಡಿಕೀಲುಗಳಿಂದ ಬಿಗಿ. (ಬಳ. ಮಾ.) (ಷರಾಯಿಯನ್ನು) ಮಂಡಿಯ ಬಳಿ ಉಬ್ಬಿಕೊಂಡಿರುವಂತೆ ಮಾಡು. **K.-breeches** ಮಂಡಿಯ ವರೆಗಿನ ಅಥವಾ ಮಂಡಿಗಿಂತ ಸ್ವಲ್ಪ ಕೆಳಕ್ಕೆ ಹೋಗುವ ಚಡ್ಡಿ. **K.-cap** ಮಂಡಿಕೀಲಿನ ಮುಂಭಾಗದಲ್ಲಿರುವ ಹೊರಬಾಗುಳ್ಳ ಎಲುಬು: ಮಂಡಿ ಚಿಪ್ಪು ; ಮಂಡಿಯ ಕಾಪು. **K.-deep** ಮೊಣಕಾಲುದ್ದ. **K.-hole (table)** ಇಕ್ಕಡೆಯ ಸೆಳೆಖಾನೆಗಳ ಮಧ್ಯೆ ಮೊಣಕಾಲಿಟ್ಟುಕೊಳ್ಳಲು ಬಿಟ್ಟಿರುವ ಕಂಡಿ(ಯುಳ್ಳ ಬರೆಯುವ ಮೇಜು). **K.-joint** ಮಂಡಿ ಕೀಲು ; ಎರಡು ತುಂಡುಗಳನ್ನು ಕೀಲುಗೂಡಿಸಿರುವ ಸೇರುವೆ, ಸಂಧಿ. **K.-pan** =K.-cap.

Kneel ನೀಲ್ (ಕ್ರಿ. ಅಕ. ; ಭೂತ., ಭೂ. ಕೃ. Knelt) [ಮು., ಪ್ರಾರ್ಥನೆಗಾಗಿ ಅಥವಾ (ಒಬ್ಬನಿಗೆ) ಭಕ್ತಿ ತೋರಿಸುವುದಕ್ಕಾಗಿ] ತನ್ನ ಮಂಡಿಯ ಮೇಲೆ ಬೀಳು, ಮೊಣಕಾಲೂರು (*To* ಉಪ. ದೊಡನೆ)

Knell ನೆಲ್ (ನಾ., ಕ್ರಿ.) (ಮು., ಒಬ್ಬನು ಸತ್ತುಹೋದಾಗ ಅಥವಾ ಅವನ ಶವಸಂಸ್ಕಾರದಲ್ಲಿ, ನಿಧಾನವಾಗಿ, ಗಂಭೀರವಾಗಿ, ಬಾರಿಸುವ) ಗಂಟೆಯ ಶಬ್ದ ; ಮರಣ ಘಂಟಾನಾದ. (ರೂಪ.) ಸಾವಿನ ಅಥವಾ ನಾಶದ ಸೂಚನೆಯಾಗಿ ಪರಿಗಣಿಸುವ ಪ್ರಕಟನೆ, ಘಟನೆ, ಮೊ. ವು ; ಅಂತ್ಯ ಸೂಚಕ. (ಕ್ರಿ.) (ಪ್ರಾಚೀ. ಪ್ರ.) (ಮು., ಸತ್ತಾಗ, ಶವಸಂಸ್ಕಾರದಲ್ಲಿ) ಗಂಟೆ ಬಾರಿಸು; ಮರಣ ಘಂಟಾನಾದ ಮಾಡು; ಗೋಳಾಡು; ಗೋಳಿಡು. (ರೂಪ.) ಅಪಶಕುನ ಧ್ವನಿ ಮಾಡು ; ಮರಣ ಘಂಟಾ ರವದಂತೆ ಸಾರು.

Knelt. Kneel ಧಾತುವಿನ ಭೂತ., ಭೂ. ಕೃ.

Knew. Know ಧಾತುವಿನ ಭೂತ.

Kníckerbocker ನಿಕರ್‌ಬಾಕರ್ (ನಾ.) (ಅಮೆ. ಸಂ. ದ) ನ್ಯೂಯಾರ್ಕ್ ಪಟ್ಟಣದವನು. (ಬ. ವ. ದಲ್ಲಿ) ಮೊಣಕಾಲ ಬಳಿ ಕಿರಿದುಮಾಡಿದ ಸಡಿಲವಾದ ಚಲ್ಲಣ : 'ನಿಕರ್‌ಬಾಕರ್' ಚಲ್ಲಣ. **Kníckers** (ನಾ., ಬ. ವ.) (ಬಳ. ಮಾ.) =Knickerbockers ; ನಿಕರ್‌ಬಾಕರಿನಂಥ ಹೆಂಗಸಿನ ಒಳ ಷರಾಯಿ.

Kníckers. **Knickerbocker** ನೋಡಿ.

Kníck-knack, Níck-nack ನಿಕ್‌ನ್ಯಾಕ್ (ನಾ.) ಹಗುರವಾದ, ನಾಜೂಕಾದ, — ಪೀಠೋಪಕರಣ, ಉಡುಪು, ಅಥವಾ ತಿಂಡಿ. ಥಳಕುಪಳಕು; ಡೌಲಿನ ಒಡವೆ; ಆಟದ ವಸ್ತು. **(K)níck-(K)nackery** (ನಾ.) ; **(K)níck-(k)nackish** (ಗು.)

Knife ನೈಫ್ (ನಾ. ; ಬ. ವ. Knives ; ಕ್ರಿ. ಸಕ. ; ಭೂತ., ಭೂ. ಕೃ. Knifed) ಕೊಯ್ಯುವ ಸಲಕರಣೆಯಾಗಿ ಅಥವಾ ಆಯುಧವಾಗಿ ಉಪಯೋಗಿಸುವ, ಮಡಿಸಲಾಗುವಂತೆ ಅಥವಾ ಆಗದಂತೆ ಅಳವಡಿಸಿರುವ ಹಿಡಿಯುಳ್ಳ, ಹರಿತ ಮಾಡಿದ ಅಲಗು ; ಚೂರಿ ; ಚಾಕು ; ಕತ್ತಿ [Table-k. ಊಟದ ಚೂರಿ. Carving-k. (ಮಾಂಸ, ಮೊ. ನ್ನು) ತುಂಡು ಮಾಡುವ ಚೂರಿ. Pocket-k. ಮಡಿಚು ಚಾಕು. Get a k. into (person) (ಕೇಡಿಗನ ಅಥವಾ ಹಗೆಸಾಧಿಸುವವನ ವಿಷಯದಲ್ಲಿ) ಇರಿ ; ಹಗೆಗೊಳ್ಳು ; ದ್ವೇಷ ಕಾರು. War to the k. ಮರುಕವಿಲ್ಲದೆ ಮಾಡುವ ಯುದ್ಧ]. (ಯಂತ್ರಸಲಕರಣೆಗಳಲ್ಲಿ) ಕತ್ತರಿಸುವ ಅಲಗು. [The k. ಶಸ್ತ್ರ ಚಿಕಿತ್ಸೆ (Have a horror of the k. ಶಸ್ತ್ರಚಿಕಿತ್ಸೆಗೆ ಗಾಬರಿಪಡು). Before you can say k. ಬಹು ಬೇಗ ; ಥಟ್ಟನೆ. Play a good k. & fork ಮನ ದಣಿಯ, ಅಚ್ಚುಕಟ್ಟಾಗಿ, ಊಟ ಮಾಡು]. (ಕ್ರಿ.) ಕತ್ತಿಯಿಂದ ಕಡಿ, ಇರಿ. **K.-board** ಚೂರಿಗಳನ್ನು ಚೊಕ್ಕಟಮಾಡುವ ಹಲಗೆ. **K.-boy** ಊಟದ ಚೂರಿಗಳನ್ನು ತೊಳೆಯುವ ಸೇವಕ. **K.-edge** ಚೂರಿಯ ಏಣು ; ಲೋಲಕ, ಮೊ. ವು ತೂಗಾಡಲು ಆಸರೆಯಾಗಿರುವ ಉಕ್ಕಿನ ಚೂರಿಯೇಣುಳ್ಳ ಬೆಣೆಯಾಕಾರದ ತುಂಡು. =Arete. **K.-grinder** (ಚೂರಿ, ಮೊ. ನ್ನು ಸಾಣೆಹಿಡಿಯುವ) (ತಿರುಗು) ಸಾಣೆಗಾರ ; ಚೂರಿ, ಮೊ. ಗಳ ತಯಾರಿಕೆಯಲ್ಲಿ ಅವನ್ನು ಸಾಣೆ ಹಿಡಿಯುವವನು. **K.-machine** ಚೂರಿಗಳನ್ನು ಚೊಕ್ಕಟ ಮಾಡುವ ಯಂತ್ರ. **K.-rest** ಊಟದ ಮೇಜಿನಮೇಲೆ ಚೂರಿಯನ್ನೊ ಮುಳ್ಳು ಚಮಚವನ್ನೊ ಇಡಲು ಮಾಡಿದ ಲೋಹದ ಅಥವಾ ಗಾಜಿನ ನೆಲೆ.

Knight ನೈಟ್ (ನಾ., ಕ್ರಿ. ಸಕ.) ಸೇನಾನುಚರ ; ಅನುಚರನಾಗಿ, ರಕ್ಷಣ ಧುರೀಣನಾಗಿ, ಯುದ್ಧದಲ್ಲಾಗಲಿ ಸಾಹಸ ಪ್ರದರ್ಶನದ ಪಂದ್ಯಗಳಲ್ಲಾಗಲಿ (ಒಬ್ಬ ಮಹಿಳೆಯ) ಸೇವೆಯಲ್ಲಿ ನಿರತನಾದವನು: (ಮಹಿಳಾ) ರಕ್ಷಕ ವೀರ ; ಕಾಪು ಕಲಿ ; ಸಾ., ಶ್ರೀಮಂತನಾಗಿ ಹುಟ್ಟಿ, ವೀರಾನುಚರನಾಗಿ ಸೇವೆ ಮಾಡಿ, ರಾಜನಿಂದಲೊ ಅಥವಾ ಅರ್ಹತೆಯುಳ್ಳ ಇತರ ಅಧಿಕಾರಿಯಿಂದಲೊ ಗೌರವದ ಸೈನಿಕ ಪದವಿಗೆ ಏರಿಸಲ್ಪಟ್ಟವನು ; ಶ್ರೀಮಂತ ವೀರ ; ವ್ಯಕ್ತಿಶಃ ಯೋಗ್ಯತೆ ಪಡೆದ ಅಥವಾ ರಾಜನಿಗೊ ರಾಜ್ಯಕ್ಕೊ ಸೇವೆ ಸಲ್ಲಿಸಿದ ವ್ಯಕ್ತಿಗೆ ಬಹುಮಾನ ರೂಪವಾಗಿ ಕೊಡುವ ಇಂತಹ ಪದವಿ : 'ನೈಟ್' ಪದವಿ. (ಚರಿತ್ರೆ) ಪಾರ್ಲಿಮೆಂಟಿನಲ್ಲಿ ಪ್ರಾಂತ ಪ್ರತಿನಿಧಿ (=K. of the shire). (ರೋ. ಪ್ರಾ.) ಅಶ್ವಸೈನಿಕ. (ಗ್ರೀಕ್ ಪ್ರಾ.) ಆಥೆನ್ಸಿನಲ್ಲಿ ಎರಡನೆಯ ದರ್ಜೆಯ ಪ್ರಜೆ, ಪೌರ. (ಚದುರಂಗ) ಕುದುರೆಯ ಮುಖವುಳ್ಳ ಒಂದು ಕಾಯಿ : ಕುದುರೆ. (ಕ್ರಿ.) (ಒಬ್ಬನಿಗೆ) 'ನೈಟ್' ಪದವಿ ಅನುಗ್ರಹಿಸು. **K.-errant** ವೀರೋಚಿತ ಸಾಹಸ ಕಾರ್ಯಗಳನ್ನು ಹುಡುಕಿಕೊಂಡು ಸಂಚರಿಸುತ್ತಿದ್ದ ಮಧ್ಯಯುಗದ ವೀರ ಪುರುಷ ; (ರೂಪ.) ದೀನರಕ್ಷಣ ವೀರ ; ವಿಚಿತ್ರ ವರ್ತನೆಯವನು. **K.-errantry** ಇಂಥವನ ಆಚರಣೆ, ನಡತೆ (ರೂಪ. ಸಹ). Knight of the post ಸುಳ್ಳುಸಾಕ್ಷ್ಯ ಹೇಳಿ ಹೊಟ್ಟೆ ಹೊರೆದುಕೊಳ್ಳುವವನು. **K.-service** (ಚರಿತ್ರೆ) ಸೈನಿಕಸೇವೆ ಸಲ್ಲಿಸುವ ಷರತ್ತಿನಮೇಲೆ ಪಡೆದ ಹಿಡುವಳಿ : ಸೇನಾವೃತ್ತಿಯ ಹಿಡುವಳಿ. **Knígtage** (ನಾ.) ಒಟ್ಟು 'ನೈಟ್' ಮಂಡಲಿ ; 'ನೈಟ್' ಪದವಿ ಪಡೆದವರ ಪಟ್ಟಿ ಮತ್ತು ಅವರ ವೃತ್ತಾಂತ. **Knígthood** (ನಾ.) ; **Kníghtlike, Kníghtly**[1] (ಗು.) ; **Kníghtly**[2] (ಕ್ರಿ. ವಿ.) (ಕಾವ್ಯ)

Knit ನಿಟ್ (ಕ್ರಿ. ; ಭೂತ., ಭೂ. ಕೃ. Knitted *or* Knit) (ನೂಲನ್ನು ಅಥವಾ ದಾರವನ್ನು ಅನ್ಯೋನ್ಯವಾಗಿ ಕುಣಿಕೆಬೀಳುವಂತೆ ವಸ್ತ್ರ, ಮೊ. ನ್ನು) ಉದ್ದ ಸೂಜಿಗಳಿಂದ ಒತ್ತು ಹೆಣೆ (To k. stockings). (ಮಡಿಕೆಬೀಳುವಂತೆ, ಹುಬ್ಬನ್ನು) ಸಂಕುಚಿಸು ; (ಹುಬ್ಬು) ಗಂಟುಹಾಕು. ಒತ್ತಾಗಿ, ದಟ್ಟವಾಗಿ, — ಮಾಡು, ಆಗು (ಮು., ಭೂ. ಕೃ. ನಲ್ಲಿ : A well-k. frame ಸುದೃಢವಾದ ಒಡಲು). (ರೂಪ.) (ಸಮಾನ ಪ್ರಯೋಜನಗಳು, ಮದುವೆ, ಮೊ. ಗಳಿಂದ) ಅನ್ಯೋನ್ಯವಾಗಿ ಒಂದುಗೂಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(*Together* ಪದದೊಡನೆ). [K. up ಹೆಣಿಗೆ ಹಾಕಿ ದುರಸ್ತು ಮಾಡು. (ರೂಪ.) (ವಾದ, ಮೊ. ನ್ನು) ಮುಕ್ತಾಯ ಮಾಡು, ಕೊನೆಗಾಣಿಸು]. **Knítting** (ನಾ.) (ಕ್ರಿಯಾರ್ಥಗಳಲ್ಲಿ). (ಸೂಜಿ) ಹೆಣಿಗೆ(ಯ ಕೆಲಸ). **Knitting-needle** (ಉಕ್ಕು, ದಾರು, ದಂತ, ಮೊ. ಗಳಿಂದ ಮಾಡಿದ, ಹೆಣಿಗೆಯಲ್ಲಿ ಎರಡನ್ನೊ ಹೆಚ್ಚಾಗಿಯೊ ಉಪಯೋಗಿಸುವ, ದಬ್ಬಳದಂತಿರುವ) ಹೆಣಿಗೆ ಸೂಜಿ, ಕಡ್ಡಿ.

Knob ನಾಬ್ (ನಾ., ಕ್ರಿ.) ಒಂದು ವಸ್ತುವಿನ ತುದಿಯಲ್ಲಿಯೊ ಮೇಲ್ಮೈ ಯಲ್ಲಿಯೊ ಇರುವ ಗುಂಡಾದ ಉಬ್ಬು; ಗುಬಟು; (ಬಾಗಿಲನ, ಸಳೆಬಾನೆಯ) ಹಿಡಿ ಗುಬಟು (Door-k.). (ಸಕ್ಕರೆ, ಕಲ್ಲಿದ್ದಲು, ಮೊ. ಗಳ) ಸಣ್ಣ ತುಂಡು. (ಅಸಂ.) ತಲೆ (ಸಾ., Nob). (ಕ್ರಿ.) ಗುಬಟುಗಳಿಡು; ಹೊರಕ್ಕೆ ಉಬ್ಬಿಕೊ (*Out* ಉಪ. ದೊಡನೆ). **Knobstick** (ಮು., ಆಯುಧವಾಗಿ ಉಪಯೋಗಿಸುವ) ಗುಬಟು ದೊಣ್ಣೆ. ಕೆಲಸಗಾರರು ಮುಷ್ಕರ ಹಿಡಿದಿರುವಾಗ ತಾನು ಕೆಲಸಮಾಡುವ ಕೆಲಸಗಾರ. **Knóbby** (ಗು.); **Knóbbiness** (ನಾ.); **Knóbble** ನಾಬ್‌ಲ್ (ನಾ.) ಸಣ್ಣ ಗುಬಟು. **Knóbbly** (ಗು.)

Knock ನಾಕ್ (ಕ್ರಿ.) ಬಲವಾದ ಏಟು ಹೊಡೆ; (ಬಾಗಿಲು) ತಟ್ಟು. (ಒಳಹೊಗಲು) ಬಾಗಿಲು ತಟ್ಟು (=K. at the door). (ಅಸಂ.) (ಮನಸ್ಸಿನಮೇಲೆ) ಬಲವಾಗಿ ಅಚ್ಚೊತ್ತು, ನೆಡು (What knocks me is his impudence ನನ್ನ ಮನಸ್ಸಿನಮೇಲೆ ನೆಟ್ಟದ್ದು ಅವನ ಧೃಷ್ಟತನ). (ಆವಿಯ ಎಂಜಿನಿನ ಅಥವಾ ಅಂತರ್ದಾಹಕ ಎಂಜಿನಿನ ವಿಷಯದಲ್ಲಿ) ದಬ್ ದಬ್ ಎಂಬ ಶಬ್ದ ಮಾಡು. K. person on the head (ಒಬ್ಬನನ್ನು) ತಲೆಯಮೇಲೆ ಚೆಚ್ಚಿ, ಬಡಿದು, ಸ್ತಬ್ಧನನ್ನಾಗಿ ಮಾಡು, ಕೊಲ್ಲು. (ರೂಪ.) (ಹಂಚಿಕೆ, ಕಾರ್ಯಯೋಜನೆ, ಮೊ. ನ್ನು) ಮುರಿದುಬಿಡು, ತಲೆಯೆತ್ತದಂತೆ ಮಾಡು. K. one's head against (ರೂಪ.) ಪ್ರತಿಕೂಲ ಪರಿಸ್ಥಿತಿ, ಘಟನೆ, ಮೊ. ಗಳೊಡನೆ ಹೋರಾಡು, ತಲೆ ಚೆಚ್ಚಿಕೊ. K. head (ನಮ್ರಭಾವದಿಂದ, ಭಕ್ತಿಯಿಂದ) ಹಣೆಯನ್ನು ನೆಲಕ್ಕೆ ಮುಟ್ಟಿಸು. K. in, out, off, etc. ಬಡಿದು ಒಳಗಿಳಿಸು, ಹೊಡೆದು ಹೊರಕ್ಕೋಡಿಸು. K. into a cocked hat (Cock[2]) ನೋಡಿ. K. one into the middle of next week ಬಲವಾದ ಏಟು ಕೊಡು; ಕಠಿನವಾಗಿ ಶಿಕ್ಷಿಸು. K. the bottom out of (ವಾದ, ಮೊ. ಕ್ಕೆ) ಆಧಾರವಿಲ್ಲದಂತೆ ಮಾಡು. K. about ಮೇಲಿಂದ ಮೇಲೆ ಹೊಡೆ(ಯುತ್ತಿರು); ಅಗೌರವದಿಂದ ವರ್ತಿಸು; ಕಾಠಿನ್ಯದಿಂದ ಕಾಣು. ಅಲೆದಾಡು; ಪರೆದಾಡು; ಒಂದು ಗೊತ್ತಿಲ್ಲದ ಬಾಳು ಬಾಳು. K. against (ಒಂದರೊಡನೆ) ಸಂಘಟ್ಟಿಸು; ಡಿಕ್ಕಿ ಹೊಡೆ; ಅಕಸ್ಮಾತ್ತಾಗಿ (ಒಂದನ್ನು) ಸಂಧಿಸು, ಎದುರು ಹಾಯಿ. K. down (ವ್ಯಕ್ತಿ, ಮೊ. ನ್ನು) ಹೊಡೆದು ನೆಲಕ್ಕುರುಳಿಸು; (ರೂಪ.) ಕೆಡವು; ಸಾಯಿಸು. (ಹರಾಜಿನಲ್ಲಿ ಸುತ್ತಿಗೆ ಬಡಿದು) ಸವಾಲುದಾರನ ಹೆಸರಿಗೆ ಪದಾರ್ಥವನ್ನು ಬಿಡು (*To* ಉಪ. ದೊಡನೆ). (ಹಾಡು ಹೇಳುವುದು, ಮೊ. ಕ್ಕೆ) ಒಬ್ಬನನ್ನು ಕರೆ (*For* ಉಪ. ದೊಡನೆ). (ಬಳ. ಮಾ.) (ಬೆಲೆ) ತಗ್ಗಿಸು, ಇಳಿಸು. (ರವಾನೆಯಲ್ಲಿ ಹೆಚ್ಚು ಸ್ಥಳ ಆಕ್ರಮಿಸದಂತೆ, ಯಂತ್ರ, ಮೊ. ನ್ನು) ಭಾಗಗಳಾಗಿ ಕಳಚಿಬಿಡು. K. off ಏಟು ಕೊಟ್ಟು ಹೊಡೆದುಹಾಕು. ಕೆಲಸ ಬಿಟ್ಟುಬಿಡು; ತ್ಯಜಿಸಿಬಿಡು. (ಬಳ. ಮಾ.) (ಕೆಲಸವನ್ನು) ಮಾಡಿ ಮುಗಿಸು. (ಪದ್ಯ, ಮೊ. ನ್ನು) ಅವಸರವಸರವಾಗಿ ರಚಿಸು, ಹೆಣೆ. [ಬೆಲೆಯಿಂದ, ಬೆಲೆಪಟ್ಟಿಯಿಂದ, (ಒಂದು ಗೊತ್ತಾದ) ಮೊಬಲಗನ್ನು] ಕಡಮೆ ಹಾಕು, ವಜಾ ಮಾಡು. (ಅಸಂ.) ಪಡೆದುಕೊ; ಎಗುರಿಸಿಬಿಡು. K. person's head off (ರೂಪ.) (ಒಬ್ಬನನ್ನು) ಸುಲಭವಾಗಿ ಮೀರಿಸು, ಸೋಲಿಸು, ತಲೆ ಮೆಟ್ಟು. K. out (ಚುಂಗಾಣಿಯನ್ನು) ತಟ್ಟಿ (ಕರುಕು, ಮೊ. ನ್ನು) ಕೊಡವಿಬಿಡು. (ಜಟ್ಟಿಯನ್ನು ಅವಧಿಯೊಳಗಾಗಿ) ಮೇಲೇಳದಂತೆ ಹೊಡೆದು ಕೆಡವು. (ರೂಪ.) ಸೋಲಿಸಿಬಿಡು. (ಬಳ. ಮಾ.) (ಕಾರ್ಯವಿನ್ಯಾಸ, ಮೊ. ನ್ನು) ಅವಸರವಸರವಾಗಿ ಮಾಡು. K. together ಅವಸರವಾಗಿ ಒಟ್ಟಿಗೆ ಸೇರಿಸು. K. under ಅಧೀನನಾಗು; ಸೋಲೊಪ್ಪಿಕೊ. K. up ಹೊಡೆದು ಮೇಲಕ್ಕೆ ಅಟ್ಟು. ಅವಸರವಸರವಾಗಿ ಮಾಡು; —ಅಣಿಗೊಳಿಸು. (ಕ್ರಿಕೆಟ್ ಆಟದಲ್ಲಿ) ಓಟಗಳನ್ನು ಕೂಡಹಾಕು, ಶೇಖರಿಸು. ಬಾಗಿಲು ತಟ್ಟಿ (ಮಲಗಿರುವವನನ್ನು) ಎಚ್ಚರಿಸು. ಸುಸ್ತಾಗು; ಸುಸ್ತು ಮಾಡು. **K.-about** (ನಾ., ಗು.) (ಗಾಯನ ಮಂದಿರ, ಮೊ. ಗಳಲ್ಲಿ) ಗದ್ದಲದ, ಗಲಭೆಯ (ಕಚೇರಿ, ಆಟ, ಪ್ರದರ್ಶನ). ಗೊತ್ತುಗುರಿಯಿಲ್ಲದೆ ಅಲೆದಾಡುವ. (ಉಡುಪು) ಒರಟು ಕೆಲಸಕ್ಕೆ ಉಪಯೋಗಿಸಲು ತಕ್ಕ. **K.-down** (ಗು., ನಾ.) (ಏಟು) ಉರುಳಿಸಿಬಿಡುವ, ನೆಲ ಕಚ್ಚಿಸುವ (ರೂಪ. ಸಹ). (ಹರಾಜಿನಲ್ಲಿ, ಬೆಲೆ) ಮೊದಲೇ ಗೊತ್ತುಮಾಡಿಟ್ಟುಕೊಂಡಿರುವ, ಅತ್ಯಂತ ಕಡಮೆಯ. (ನಾ.) ಯಾರೆಂದರೆ ಅವರು ಭಾಗವಹಿಸುವ ಕದನ, ಕಾದಾಟ; ದೊಂಬಿ ಜಗಳ. **K.-knees** ನಡೆಯುವಾಗ ಒಂದಕ್ಕೊಂದು ಬಡಿದುಕೊಳ್ಳುವ ಮಂಡಿಗಳು: ತಾಗು ಮಂಡಿಗಳು. **K.-kneed** ತಾಗುಮಂಡಿಗಳುಳ್ಳ. **K.-out** (ಗು., ನಾ.) ಜಟ್ಟಿಯನ್ನು ಕೆಡವಿಬಿಡುವ (ಗುದ್ದು, ಏಟು). ಹರಾಜು ಮುಗಿದಮೇಲೆ ತಮ್ಮ ತಮ್ಮಲ್ಲೆ ಮಾರಿಕೊಂಡು ಹಂಚಿಕೊಳ್ಳುವ ಉದ್ದೇಶದಿಂದ, ಹರಾಜಿನಲ್ಲಿ ಬೆಲೆಯೇರಿಸದೆ ಕಡಮೆ ಬೆಲೆಗೆ ಪಡೆಯಲು ಏರ್ಪಟ್ಟ ಗುಂಪಿನವನು; ಈ (ಹರಾಜು) ಪದ್ಧತಿ; ಇಂಥ ಹರಾಜು ವ್ಯಾಪಾರ. **Knócker** (ನಾ.) (ಕ್ರಿಯಾರ್ಥಗಳಲ್ಲಿ). (ಗಮನ ಸೆಳೆಯುವುದಕ್ಕಾಗಿ ಬಾಗಿಲನ ಲೋಹದ ತಗಡಿನಮೇಲೆ ಬಡಿಯಲಾಗುವಂತೆ ಕೀಲುಗೂಡಿಸಿ ಬಾಗಿಲಿಗೆ ಹಾಕಿದ) ಬಡಿ. [Up to the k. (ಅಸಂ.) (ಯಾವ ನ್ಯೂನತೆಯೂ ಇಲ್ಲದೆ) ಸಂಪೂರ್ಣವಾಗಿ, ಅತ್ಯುತ್ತಮವಾಗಿ]. ಗಣಿಗಳಲ್ಲಿ ವಾಸಮಾಡುತ್ತ, ಅದುರಿರುವ ಸ್ಥಳವನ್ನು ತಟ್ಟಿ ತೋರಿಸುವುದೆಂದು ನಂಬಿಕೆಯುಳ್ಳ ಒಂದು ದೆವ್ವ: ಖನಿಜ ಪಿಶಾಚಿ.

Knock (ನಾ.) ಏಟು; ಪೆಟ್ಟು; ಹೊಡೆತ; ಬಡಿತ. (ಬಾಗಿಲ) ತಟ್ಟು. (ಅಸಂ.) (ಕ್ರಿಕೆಟ್ಟಿನಲ್ಲಿ) ಒಂದು ಸೂಳು ಆಟ. (ಆವಿಯ ಅಥವಾ ಅಂತರ್ದಹನ ಎಂಜಿನಿನಲ್ಲಿ) ಒಂದು ತೆರದ ದಬ ದಬ ಶಬ್ದ. Take the k. (ಅಸಂ.) ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿ ಪೆಟ್ಟು ತಿನ್ನು, ತೊಂದರೆ ಪಡು. **K.-up** (ಕ್ರಿಕೆಟ್, ಮೊ. ಆಟಗಳಲ್ಲಿ) ಅಭ್ಯಾಸಕ್ಕಾಗಿ, ಅಥವಾ ಉದ್ದೇಶವಿಲ್ಲದೆ, ಆಡಿದ ಆಟ.

Knoll[1] ನೋಲ್ (ನಾ.) ಸಣ್ಣ ಗುಡ್ಡ; ಮೊರಡಿ; ದಿಣ್ಣೆ; ತಿಟ್ಟು.

Knoll[2] ನೋಲ್ (ಕ್ರಿ.) (ಪ್ರಾಚೀ. ಪ್ರ.) (ಗಂಟೆ) ಬಾರಿಸು; (ಕಾಲಮಾನದ ಗಂಟೆಗಳನ್ನು) ಹೊಡೆ; ಗಂಟೆ ಬಾರಿಸಿ ಕರೆ ಕೊಡು.

Knot ನಾಟ್ (ನಾ., ಕ್ರಿ.) (ಹಗ್ಗ, ದಾರ, ಮೊ. ಗಳ) ಗಂಟು, ಗ್ರಂಥಿ. (ಉಡುಪಿಗೆ ಅಲಂಕಾರವಾಗಿ, ಸೇರಿಕೆಯಾಗಿ, ಕಟ್ಟಿದ) ಅಲಂಕಾರ ಪಟ್ಟೆಯ ದಾರದ ಗಂಟು. (ನಾವೆ) ಹಡಗಿನ ವೇಗದ ಅಳತೆಯಾಗಿ, ಅದರ ಅಳತೆಯ ಹಗ್ಗದಲ್ಲಿ ಹಾಕಿರುವ ಗಂಟುಗಳಿಂದ ಗುರುತಿಸಿರುವ ಭಾಗ; (ಶಿಥಿಲವಾಗಿ) ನೌಕಾ ಮೈಲಿ: 'ನಾಟ್' (= ೬,೦೮೦ ಅಡಿ). ತೊಡಕು; ಕಷ್ಟ; ಸಮಸ್ಯೆ [Gordian k. (Gordian ನೋಡಿ)]. (ಸಮಸ್ಯೆ, ಕಥಾ ವಸ್ತು, ಮೊ. ಗಳಲ್ಲಿ) ಕೇಂದ್ರ ಸ್ಥಾನ, ಗರ್ಭ. (Marriage, Wedding, -k. ಮದುವೆಯ ಗಂಟು; ವಿವಾಹ ಬಂಧ). (ಪ್ರಾಣಿದೇಹದಲ್ಲಿಯ) (ಗಟ್ಟಿ) ಗಂಟು, ಗಂತಿ; (ಸಸ್ಯದ ಕಾಂಡ, ಕೊಂಬೆ, ಅಥವಾ ಬುಡ —ಇವುಗಳಲ್ಲಿಯ) ಸ್ವಭಾವ ವ್ಯತಿರಿಕ್ತವಾದ ಗಡ್ಡೆ, ಗಳಲೆ, ಗಂಟು; (ಮರದ ಕಾಂಡದಲ್ಲಿ ರೆಂಬೆ ಹೊರಡುವ ಸ್ಥಳದಲ್ಲಿ ಆಗುವ) ಗಡುಸು ಪದಾರ್ಥ; ಇದರಿಂದ ಮರದ ಆ ಭಾಗದ ಹಲಗೆಯಲ್ಲಿ ಕಾಣುವ ಅಡ್ಡ ಎಳೆಯ ಗುಂಡು ರಚನೆ; ಸಸ್ಯದ ಕಾಂಡದಲ್ಲಿಯ ಗೆಣ್ಣು, ಪರ್ವ. (ವ್ಯಕ್ತಿಗಳ, ವಸ್ತುಗಳ) ಗುಂಪು; ತಂಡ; ಗುಚ್ಛ. (ಹೊರೆ ಹೊರುವವರು ಉಪಯೋಗಿಸುವ) ಹೆಗಲೊತ್ತು, ಹೆಗಲು ಮೆತ್ತೆ (= Porter's k.). (ಕ್ರಿ.) (ದಾರ, ಮೊ. ನ್ನು) ಗಂಟು ಹಾಕು; (ಅಂಚುದಾರಗಳಿಗೆ) ಗಂಟು ಹಾಕು; ಹೀಗೆ ಗಂಟು ಹಾಕಿ (ಅಂಚು) ಕಟ್ಟು. ಹುಬ್ಬು ಗಂಟಿಕ್ಕು; ಒತ್ತಾಗಿ ಅಥವಾ ತೊಡಕಾಗಿ ಬಂಧಿಸು, ಸೇರಿಕೊ; ತೊಡರಿಸು. **Knotwork** ದಪ್ಪ ದಾರಗಳನ್ನು ಒಂದರೊಡನೊಂದು ತೊಡರಿಸಿ ಹೆಣೆದು ಮಾಡಿದ, ಅಥವಾ ಇಂತಹ ಹೆಣಿಗೆಯ ಮಾದರಿಯ, ಒಂದು ಅಲಂಕಾರದ ಕೆಲಸ. **Knótless** (ಗು.); **Knótting** (ನಾ.);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Knótty (ಗು.) ಗಂಟುಗಳಿಂದ ತುಂಬಿದ; ಗಂಟುಗಂಟಾದ; (ರೂಪ.) ವಿವರಿಸಲು ಕಷ್ಟವಾದ; ಬಗೆ ಹರಿಯದ; ಜಟಿಲ; ಬಿಡಿಸುವುದಕ್ಕಾಗದ (K. subject, question, point). **Knóttiness** (ನಾ.)

Knout ನೌಟ್, ನೂಟ್ (ನಾ., ಕ್ರಿ. ಸಕ.) (ಹಿಂದೆ ರಷ್ಯಾದಲ್ಲಿ ತಪ್ಪು ಮಾಡಿದವರನ್ನು ಹೊಡೆಯಲು ಉಪಯೋಗಿಸುತ್ತಿದ್ದ, ಹಲವು ಬಾರಿ ಅದರಿಂದ ಸಾವು ಉಂಟಾಗುತ್ತಿದ್ದ) ಚಾವಟಿ, ಕಶೆ. (ಕ್ರಿ.) — ಯಿಂದ ಹೊಡೆ; ಕಶಾ ಪ್ರಹಾರ ಮಾಡು.

Know ನೋ (ಕ್ರಿ.; ಭೂತ. Knew ನ್ಯೂ, ಭೂ. ಕೃ. Known ನೋನ್) ತಿಳಿ; ಕಂಡುಕೊ; ಗುರುತಿಸು (I knew him at once ನಾನು ಅವನನ್ನು ತತ್‌ಕ್ಷಣ ಗುರುತಿಸಿದೆನು); ವಿವೇಚನೆ ಮಾಡು [I don't k. him from Adam ಆದಮನಿಗೂ ಅವನಿಗೂ ಭೇದ ತಿಳಿಯಲಾರೆ. K. a hawk from a handsaw (Hawk[1] ನೋಡಿ)]. ವಸ್ತು, ಸ್ಥಳ, ವ್ಯಕ್ತಿ — ಇವುಗಳ ಪರಿಚಯವಿರು, ಗೊತ್ತಿರು, ತಿಳಿದಿರು (I k. him by name ಅವನ ಹೆಸರು ಕೇಳಿರುತ್ತೇನೆ; ಅವನ ಹೆಸರು ಹೇಳಬಲ್ಲೆ). (ಭಯ, ನೋವು, ಮೊ. ಗಳ) ಸ್ವಂತ ಅನುಭವವಿರು. (ಒಬ್ಬನೊಡನೆ) ಅನ್ಯೋನ್ಯವಾಗಿರು. (ವಿಷಯ, ಸಂಗತಿ) ತಿಳಿ(ದಿರು); ಅರಿ(ತಿರು); (ಹೇಗೆ, ಏನು, ಎಂದು ಮೊದಲಾಗಿ) ತಿಳಿ(ದಿರು); (ಭಾಷೆ, ಶಾಸ್ತ್ರ, ವಿಜ್ಞಾನ, ಮೊ. ಗಳಲ್ಲಿ) ತಿಳಿವಳಿಕೆಯಿರು, ಪಾಂಡಿತ್ಯವಿರು [All one knows (ಕ್ರಿ. ವಿ.) ತಿಳಿದದ್ದೆಲ್ಲ; ಮಾಡಬಹುದಾದದ್ದೆಲ್ಲ; ತನ್ನ ಶಕ್ತಿ ಪೂರ್ತಿ]. K. about (ಒಂದರ) ಸಮಾಚಾರ, ವಿಷಯ, ತಿಳಿದಿರು. I k. better (than that) ಅದಕ್ಕಿಂತ ಹೆಚ್ಚು ವಿಷಯವೆಲ್ಲ ನನಗೆ ಚೆನ್ನಾಗಿ ತಿಳಿದಿರುವುದರಿಂದ ಅದನ್ನು ನಂಬಲಾರೆ. K. better than ಮಾಡುವಷ್ಟು ದಡ್ಡನಲ್ಲ. K. of ತಿಳಿದಿರು; ಗೊತ್ತಿರು. Not that I k. of ನನಗೆ ತಿಳಿದ ಮಟ್ಟಿಗೆ ಇಲ್ಲ. K. one's own mind ದೃಢ ಮನಸ್ಸಿನಿಂದಿರು; ಮನಸ್ಸು ಓಲಾಡದಿರು. K. what's what ಲೋಕಾನುಭವವಿರು. Don't you k.? ನಿನಗೆ ತಿಳಿಯದೆ? (It's such a bore, don't you know?). K. the ropes (Rope ನೋಡಿ). **K.-nothing** (ನಾ.) ಅಜ್ಞ; ಏನೂ ಅರಿಯದವನು; ಅಜ್ಞೇಯತಾ ವಾದಿ. **K.-nothingism** ಅಜ್ಞೇಯತಾ ವಾದ. **Know-ability** (ನಾ.); **Knowable** (ಗು.); **Knowableness** (ನಾ.); **Knowing** (ಗು.) (ಕ್ರಿಯಾರ್ಥಗಳಲ್ಲಿ). ಬಲ್ಲ; ಚಾತುರ್ಯವುಳ್ಳ; ತಂತ್ರಿ; ಮರ್ಮಜ್ಞ; ಬಹಳ ಜೋಕೆಯಿಂದಿರುವ. (ಬಳ. ಮಾ.) ಸೊಗಸುಗಾರನಾದ; ಠೀಕಾದ (A k. hat). **Knowingly** (ಕ್ರಿ. ವಿ.) ತಿಳಿದು ತಿಳಿದು; ತಿಳಿದ ಹಾಗೆ; ಬುದ್ಧಿಪೂರ್ವಕವಾಗಿ (I have never k. injured him). **Knowingness** (ನಾ.); **Knowledge** ನಾಲೆಜ್ (ನಾ.) (ವ್ಯಕ್ತಿ, ವಸ್ತು, ವಿಷಯ — ಇವುಗಳ) ಅರಿವು, ತಿಳಿವು, (ಅನುಭವ) ಜ್ಞಾನ, ಪರಿಚಯ (*Of* ಉಪ. ದೊಡನೆ); ತಿಳಿವಳಿಕೆ [It came to my k. ಅದು ನನ್ನ ತಿಳಿವಳಿಕೆಗೆ ಬಂದಿತು. Not to my k. ನನಗೆ ತಿಳಿದಮಟ್ಟಿಗೆ ಇಲ್ಲ. He had to my (certain) k. been bribed ಅವನಿಗೆ ಲಂಚ ಕೊಟ್ಟರೆಂದು ನನಗೆ (ಖಂಡಿತ) ಗೊತ್ತು]. (ವಿಷಯ, ಭಾಷೆ, ಮೊ. ಗಳ) ಶಾಸ್ತ್ರ ಜ್ಞಾನ, ವ್ಯವಹಾರ ಜ್ಞಾನ; ವಿದ್ಯೆ; ಶಾಸ್ತ್ರ (Every branch of k. ವಿದ್ಯೆಯ, ಶಾಸ್ತ್ರದ, ಪ್ರತಿಯೊಂದು ಶಾಖೆ). **Knowledgeable** (ಗು.) (ಬಳ. ಮಾ.) ಬಲ್ಲವನಾದ; ಬುದ್ಧಿವಂತನಾದ.

Know (ನಾ.) (ಬಳ. ಮಾ.) In the k. (ಪ್ರಸಕ್ತ ವಿಷಯವನ್ನು ಅಥವಾ ಸಾಮಾನ್ಯವಾಗಿ ಇತರರಿಗೆ ತಿಳಿಯದ ವಿಷಯವನ್ನು) ತಿಳಿದಿದ್ದು.

Knowledge. **Know** ನೋಡಿ.

Knuckle ನಕ್‌ಲ್ (ನಾ., ಕ್ರಿ.) ಬೆರಳಿನ (ಮು., ಬುಡದ) ಗೆಣ್ಣು. (ಪ್ರಾಣಿಯ) ಮೊಣಕಾಲಿನ ಗೆಣ್ಣು; ಪ್ರಾಣಿಯ ಮೊಣಕಾಲಿನ ಈ ಭಾಗದ ಮಾಂಸದ ತುಂಡು. (ಕ್ರಿ.) ಗೆಣ್ಣುಗಳಿಂದ ಹೊಡೆ, ಒತ್ತು, ತಿವಿ, ಉಜ್ಜು; (ಗೋಲಿಯಾಟದಲ್ಲಿ) ನೆಲದಮೇಲೆ ಗೆಣ್ಣುಗಳನ್ನು ಊರು. K. down, under ಬಿಟ್ಟುಕೊಡು; ವಶವಾಗು; ಅಧೀನನಾಗು. **K.-bone** (ಮು., ಕುರಿ, ಮೊ. ಗಳ) ಗೆಣ್ಣೆಲುಬು; (ಬ. ವ. ದಲ್ಲಿ) ಗೆಣ್ಣೆಲುಬುಗಳಿಂದ ಆಡುವ ಒಂದು ಆಟ. **K.-duster** ಹೊಡೆಯುವಾಗ ಗೆಣ್ಣುಗಳಿಗೆ ಅಪಾಯವಾಗದಂತೆ ಹಾಕಿಕೊಳ್ಳುವ ಲೋಹದ ರಕ್ಷೆ: ಗೆಣ್ಣು ಕಾಪು.

Knur(r) ನರ್ (ನಾ.) (ಮರದ ಕಾಂಡದಮೇಲಿನ) ಅಸಹಜವಾದ ಗಟ್ಟಿ ಗಂಟು; ಗಟ್ಟಿ (ಮುದ್ದೆ); ಒಂದು ಬಗೆಯ (ಆಟದ) ಮರದ ಚೆಂಡು.

Knurl ನರ್‌ಲ್ (ನಾ.) ಗಂಟು, ಗುಬಟು; (ಮು., 'ಟೈಪ್‌ರೈಟರ್' ಯಂತ್ರದಲ್ಲಿ, ಅಕ್ಷರಕ್ಕೆ ಒತ್ತುವ ಲೋಹಫಲಕವನ್ನು ತಿರುಗಿಸುವ ಗುಬಟು). (ಲೋಹದ ಕೆಲಸ) ಮೇಲ್ಮೈಯಲ್ಲಿ ಉಬ್ಬು ಸಾಲುಗುಂಡು, ಮಣಿ ಸಾಲು. **Knurled** (ಗು.)

Knut ನಟ್ (ನಾ.) Nut (=ಡಂಭಗಾರ ಹುಡುಗ) ಪದದ ಹಾಸ್ಯ ರೂಪ.

Kódak ಕೋಡ್ಯಾಕ್ (ನಾ., ಕ್ರಿ. ಸಕ.) (ಉದ್ದವಾದ ಒಂದು ಸೂಕ್ಷ್ಮಗ್ರಾಹಿ ಪಟಲದ ಸುರುಳಿಯನ್ನುಳ್ಳ) ಒಂದು ಬಗೆಯ ಛಾಯಾಗ್ರಾಹಿ ಸಲಕರಣೆ: 'ಕೋಡಾಕ್'. (ಕ್ರಿ.) ಇದರಿಂದ ಛಾಯಾ ಚಿತ್ರ ತೆಗೆ. (ರೂಪ.) (ದೃಶ್ಯ, ನೋಟ, ಮೊ. ನ್ನು) ಬೇಗ ಗ್ರಹಿಸು, ಹಿಡಿ, ಸ್ಪಷ್ಟವಾಗಿ ವರ್ಣಿಸು, ಸ್ಫುಟವಾಗಿ ರೂಪಿಸು.

Kóel ಕೋಎಲ್ (ನಾ.) (ಇಂಡಿಯದ ಮತ್ತು ಆಸ್ಟ್ರೇಲಿಯದ) ಕೋಗಿಲೆ (ಜಾತಿ)

Kóh-i-noor ಕೋಹಿನೂರ್ (ನಾ.) (೧೮೪೯ರಿಂದ ಬ್ರಿಟಿಷ್ ರಾಜರ ಸ್ವತ್ತಾಗಿರುವ) ಇಂಡಿಯದ ಪ್ರಸಿದ್ಧವಾದ ಒಂದು ವಜ್ರ: 'ಕೋಹಿನೂರ್' ವಜ್ರ. (ಯಾವುದಾದರೊಂದರ ಜಾತಿಯಲ್ಲಿ) ಸರ್ವೋತ್ಕೃಷ್ಟವಾದದ್ದು, ರತ್ನಪ್ರಾಯವಾದದ್ದು.

Kohl ಕೋಹ್‌ಲ್, ಕೋಲ್ (ನಾ.) (ಪೂರ್ವ ದೇಶಗಳಲ್ಲಿ ಕಣ್ಣಿಗೆ ಕಾಡಿಗೆಯಾಗಿ ಉಪಯೋಗಿಸುವ) ಒಂದು ಪುಡಿ (ಸಾ., ಸುರುಮ); ಕಾಡಿಗೆ; ಕಜ್ಜಳ.

Kohlrábi ಕೋಲ್‌ರಾಬಿ (ನಾ.) (ಇಂಗ್ಲೆಂಡಿನಲ್ಲಿ ದನಗಳ ಮೇವಿಗಾಗಿ ಉಪಯೋಗಿಸುವ) ಒಂದು ತೆರದ ಕೋಸುಗಡ್ಡೆ.

Kóla = Cola.

Kópec(k), -peek, -pek = Copeck.

Kópje ಕಾಪಿ (ನಾ.) (ದ. ಆಫ್ರಿಕದಲ್ಲಿ) ಸಣ್ಣ ಗುಡ್ಡ, ಮೊರಡಿ.

Korán ಕೊರಾನ್ (ನಾ.) ಅರಬ್ಬೀ ಭಾಷೆಯಲ್ಲಿರುವ ಮಹಮ್ಮದೀಯರ ಪವಿತ್ರ ಗ್ರಂಥ; ಮಹಮ್ಮದನು ಬಾಯಲ್ಲಿ ಹೇಳಿದ, ಆತನಿಗೆ ದೈವಿಕವಾಗಿ ಶ್ರುತಿಪ್ರಕಾಶವಾದ, ವಿಚಾರಗಳು (ಆತನ ಮರಣಾನಂತರ ಅರಬ್ಬೀ ಭಾಷೆಯಲ್ಲಿ ಬರೆದು ಸಂಗ್ರಹಿಸಿದ್ದು): ಕೊರಾನು. **Koránic** (ಗು.)

Kotów ಕೋಟೌ (ನಾ., ಕ್ರಿ. ಅಕ.) (ಭಕ್ತಿಯನ್ನು ಅಥವಾ ಶರಣಾಗತಿಯನ್ನು ತೋರಿಸಲು ಮಂಡಿಯೂರಿ ಹಣೆಯನ್ನು ನೆಲಕ್ಕೆ ಮುಟ್ಟಿಸುವ) ಚೀನಿಯರ ನಮಸ್ಕಾರ (ಪದ್ಧತಿ, ಕ್ರಮ). (ಕ್ರಿ.) ಹೀಗೆ ನಮಸ್ಕಾರ ಮಾಡು. (ಒಬ್ಬನಿಗೆ) ಅತಿ ದೈನ್ಯ ತೋರಿಸು.

Kótwal ಕಾ(ಕೋ)ಟ್‌ವಾಲ್ (ನಾ.) (ಇಂಡಿಯಾದಲ್ಲಿ, ಪಟ್ಟಣದ) ಪೋಲೀಸು ದಳಾಧಿಪತಿ; ದಂಡಾಧಿಕಾರಿ: ಕೊತ್ವಾಲ. **Kotwáli** (ನಾ.) ಪೋಲೀಸು ಠಾಣೆ.

Koúmiss ಕೂಮಿಸ್ (ನಾ.) ಕುದುರೆಯ ಹಾಲನ್ನು ಹುಳಿಸಿ ತಯಾರಿಸಿದ ಒಂದು ಮದ್ಯ.

Kraal ಕ್ರಾಲ್ (ನಾ.) ಸುತ್ತಲೂ ಬೇಲಿಯಿರುವ ಗುಡಿಸಿಲುಗಳ ತಂಡದ ದ. ಆಫ್ರಿಕದ ಹಳ್ಳಿ, ಕೊಪ್ಪಲು; ದನಗಳ ಕೊಟ್ಟಿಗೆ; ಕುರಿಯ ರೊಪ್ಪ; ದೊಡ್ಡಿ.

Krait ಕ್ರೈಟ್, ಕ್ರೆಯ್ಟ್ (ನಾ.) ಬಂಗಾಳದ ಒಂದು ತೀವ್ರ ವಿಷಸರ್ಪ.

Krémlin ಕ್ರೆಮ್ಲಿನ್ (ನಾ.) ರಷ್ಯನ್ ಪಟ್ಟಣದೊಳಗಿನ ದುರ್ಗ [ಮು., ಮಾಸ್ಕೋ ಪಟ್ಟಣದಲ್ಲಿ (ಹಿಂದಿನ ಚಕ್ರವರ್ತಿಗಳ) ಅರಮನೆ, ಮೊ. ಗಳಿದ್ದ ದುರ್ಗ]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Kriégspiel (G) ಕ್ರೀಗ್(ಕ್)ಸ್ಪೀಲ್ (ನಾ.) ಸೈನಿಕ ದಳಗಳು, ಫಿರಂಗಿಗಳು, ಮೊ. ಗಳ ಚಲನವಲನಗಳನ್ನು ತೋರಿಸಲು ನಕ್ಷೆಗಳಮೇಲೆ ಕಾಯಿಗಳನ್ನು ನಡಸಿ ಆಡುವ ಯುದ್ಧದಾಟ.

Kris = Creese.

Kríshnaism ಕೃಷ್ಣಯಿಸ್ಮ್ (ನಾ.) ಕೃಷ್ಣದೇವರ ಆರಾಧನೆ; ಕೃಷ್ಣಮತ.

Króne ಕ್ರೋನೆ (ನಾ.) ಡೆನ್ಮಾರ್ಕ್, ನಾರ್ವೆ ಮತ್ತು ಸ್ವೀಡನ್ ದೇಶಗಳಲ್ಲಿಯ (೧ ಷಿಲಿಂಗ್, ೧½ ಪೆನಿ ಬೆಲೆಯ) ಒಂದು ಬೆಳ್ಳಿಯ ನಾಣ್ಯ; ಮಹಾ ಯುದ್ಧಕ್ಕೆ ಮೊದಲಿನ ಆಸ್ಟ್ರಿಯಾ ದೇಶದ (೧೦ ಪೆನಿ ಬೆಲೆಯ) ಒಂದು ಬೆಳ್ಳಿಯ ನಾಣ್ಯ; ಜರ್ಮನಿಯ (೧೦ ಮಾರ್ಕ್ ಬೆಲೆಯ) ಒಂದು ಚಿನ್ನದ ನಾಣ್ಯ.

Krýpton ಕ್ರಿಪ್ಟ(ಪ್ಟಾ)ನ್ (ನಾ.) (ರ. ವಿ.) (೧೮೯೮ರಲ್ಲಿ Ramsay ಎಂಬ ರಸವೈಜ್ಞಾನಿಕನು ಕಂಡುಹಿಡಿದ) ಅಪರೂಪವಾದ ಒಂದು ಅನಿಲ: 'ಕ್ರಿಪ್ಟಾನ್' ಅನಿಲ.

Kshátriya ಕ್ಷತ್ರಿಯ (ನಾ.) ಹಿಂದೂಗಳ ನಾಲ್ಕು ವರ್ಣದವರಲ್ಲಿ ಎರಡನೆಯ ವರ್ಣದವನು: ಕ್ಷತ್ರಿಯ.

Kúdos (Gk) ಕ್ಯೂಡಾಸ್ (ನಾ.) (ಅನಂ.) ಹೆಸರುವಾಸಿ; ಕೀರ್ತಿ; ಯಶಸ್ಸು.

Kú-Klux (-Klán) ಕ್ಯೂಕ್ಲಕ್ಸ್ (ಕ್ಲ್ಯಾನ್) (ನಾ.) (ಅಮೆ. ಸಂ.) (ಅಮೆ. ಸಂ. ಳಲ್ಲಿ ನಡೆದ ಒಳಯುದ್ಧದ ತರುವಾಯ, ನೀಗ್ರೋ ಜನರ ನಿಗ್ರಹಕ್ಕಾಗಿ ದಕ್ಷಿಣ ಸಂಸ್ಥಾನಗಳಲ್ಲಿ ಏರ್ಪಟ್ಟ) ಒಂದು ಗೂಢ ಸಂಸ್ಥೆ; ಮಹಾಯುದ್ಧದ ತರುವಾಯ ಪರ ರಾಜ್ಯ ಪ್ರಭಾವಗಳನ್ನು ಪ್ರತಿಭಟಿಸುವುದಕ್ಕಾಗಿ ಅಮೆ. ಸಂ. ಳಲ್ಲಿ ಏರ್ಪಟ್ಟ ಅದೇ ತೆರದ ಒಂದು (ಗೂಢ) ಸಂಸ್ಥೆ.

Kúkri ಕುಕ್ರಿ (ನಾ.) ಘೂರ್ಕರು ಉಪಯೋಗಿಸುವ, ಮೊನೆಯ ಕಡೆಗೆ ಅಗಲವಾಗುತ್ತ ಹೋಗುವ, ಒಂದು ಬಗೆಯ ಕುಡುಗತ್ತಿ: 'ಕುಕ್ರಿ'.

Kultúr (G) ಕುಲ್ಟೂರ್ (ನಾ.) (ಜರ್ಮನರ ಅಭಿಪ್ರಾಯಾನುಸಾರವಾದ) ನಾಗರಿಕತೆ, ಸಂಸ್ಕೃತಿ.

Kurd ಕರ್ಡ್, ಕುರ್ಡ್ (ನಾ.) ಕುರ್ಡಿಸ್ಥಾನದವನು.

Kýanize ಕೈಅನೈಸ್ (ಕ್ರಿ. ಸಕ.) ಕೆಡದಂತಿರುವುದಕ್ಕಾಗಿ ರಸ ಪಾಷಾಣ (ಸವ್ವೀರ) ದ್ರಾವಣದಿಂದ (ಮರವನ್ನು) ಸಂಸ್ಕರಿಸು.

Kýmograph ಕೈಮೊಗ್ರಾಫ್ (ನಾ.) ಒತ್ತಡ, ನಾಡಿಯ ತುಡಿತ, ಧ್ವನಿ ತರಂಗಗಳು, ಮೊ. ವನ್ನು ರೇಖಾಚಿತ್ರಗಳ ಮೂಲಕ ಗುರುತು ಮಾಡುವ ಸಲಕರಣೆ: ತರಂಗ ರೇಖಕ.

L

L ಎಲ್. ಇಂಗ್ಲಿಷ್ ವರ್ಣಮಾಲೆಯ ಹನ್ನೆರಡನೆಯ ಅಕ್ಷರ. L- ಆಕಾರದ ವಸ್ತು [L-iron = Angle-iron (Angle ನೋಡಿ)]. ಕೊಳಾಯಿ, ಮೊ. ಗಳ ಚೌಕಮೂಲೆಯ ಸೇರುವೆ, ಸಂಧಿ. ರೋಮನ್ ಸಂಖ್ಯೆ (= ೫೦) (CL = ೧೫೦; XL = ೪೦; LX = ೬೦; LV = ೫೫; LXX = The Septuagint)

ಸಂಕ್ಷಿಪ್ತಗಳು: (1) Lance ಈಟಿ [**L.-Corp.**(oral) (Lance ನೋಡಿ)]. (2) Least ಲಘುತಮ [**L. C. M.** (Least Common Multiple) ಲಘುತಮ ಸಾಮಾನ್ಯ ಅಪವರ್ತ್ಯ]. (3) Left. (4) Libra(e) ಪೌಂಡು [**L. S. D.** (Librae, Solidi, Denarii) ಪೌಂಡು, ಷಿಲಿಂಗು, ಪೆನಿ]. (5) Licentiate ಯೋಗ್ಯತಾ ಸನ್ನದು ಪಡೆದ [**L. D. S.** (— of dental surgery) ದಂತವೈದ್ಯದ ಯೋಗ್ಯತಾ ಸನ್ನದು ಪಡೆದವನು. **L. R. C. P., L. R. C. S.** (— of Royal College of Physicians, Surgeons)]

LL. = Legum ನ್ಯಾಯ ಶಾಸ್ತ್ರ [**LL. B.** (— baccalaureus) ನ್ಯಾಯ ಶಾಸ್ತ್ರ ಪ್ರವೇಶಿ. **LL. D.** (— doctor) ನ್ಯಾಯ ಶಾಸ್ತ್ರ ಪಂಡಿತ, — ವಿಶಾರದ]. **£** = Libra(e) (**£. s. d.** ಪೌಂಡು, ಷಿಲಿಂಗು, ಪೆನಿ)

lat.(itude). **lb.** [Libra(e)]. **Lieut.**(enant). **lit.**(erally). **Lit.**(erarum) **D.**(octor). **loc.**(o) **cit.**(ato). **log.**(arithm). **long.**(itude). **loq.**(uitur). **Lt.**(Lieutenant). **Ltd.** (Limited)

La ಲಾ (ನಾ.) (ಸಂ.) ಸ್ವರಾಷ್ಟಕದಲ್ಲಿ ಆರನೆಯ ಸ್ವರ: ಧ.

Laáger ಲಾಗರ್ (ನಾ., ಕ್ರಿ.) (ಮು., ವೃತ್ತಾಕಾರದಲ್ಲಿ ಬಂಡಿಗಳನ್ನು ಸುತ್ತಲೂ ಬಿಟ್ಟು ಏರ್ಪಡಿಸಿದ) ಸುತ್ತುಬಂಡಿಗಳ ಪಾಳೆಯ. (ಕ್ರಿ.) (ಬಂಡಿಗಳನ್ನು) ಸುತ್ತುಗಟ್ಟಿ ಪಾಳೆಯ ರಚಿಸು; (ಜನರನ್ನು) ಇಂಥ ಪಾಳೆಯದಲ್ಲಿಡು; ಹೀಗೆ ಬೀಡು ಬಿಡು.

Lábdacism = Lambdacism.

Labefáction ಲ್ಯಾಬಿಫ್ಯಾಕ್ಷನ್ (ನಾ.) ಅಲ್ಲಾಟ; ಶಕ್ತಿಗುಂದು(ವುದು); ಮುರಿದು ಬೀಳುವುದು; ನಾಶ.

Lábel ಲೇಬೆ(ಬ್)ಲ್ (ನಾ., ಕ್ರಿ. ಸಕ.) ಒಂದು ವಸ್ತುವಿನ ಸ್ವರೂಪ, ಮಾಲೀಕ, ಹೆಸರು, ರವಾನೆಯ ಸ್ಥಳ, ಮೊ. ನ್ನು ಬರೆದು ಆ ವಸ್ತುವಿಗೆ ಅಂಟಿಸುವ, ಕಟ್ಟುವ, —ಕಾಗದ, ಬಟ್ಟೆ, ರಟ್ಟು, ಲೋಹ, ಮೊ. ಗಳ ಬಿಲ್ಲೆ, ಪಟ್ಟಿ: ಹೆಸರು ಪಟ್ಟಿ; ಗುರುತು ಪಟ್ಟಿ; ಚೀಟಿ. (ರೂಪ.) (ವ್ಯಕ್ತಿ, ಮೊ. ನ್ನು ವರ್ಗೀಕರಿಸುವ) ಸಣ್ಣ ವಿಶೇಷಣ, ಹೆಸರು. ಅಂಟು ಚೀಟಿ; ತಲೆ ಚೀಟಿ; 'ಸ್ಟಾಂಪು'. (ವಾ. ಶಾ.) (ಮಳೆಯ ನೀರು ಕೆಳಗೆ ಬೀಳದಂತೆ ತಡೆಯುವ) ಮುಂಜೂರು. (ಕ್ರಿ.) (ಗುರುತು ಪಟ್ಟಿ, ತಲೆ ಚೀಟಿ, ಮೊ. ನ್ನು) ಅಂಟಿಸು, ಕಟ್ಟು. ವರ್ಗೀಕರಿಸು.

Lábial ಲೇಬಿಯಲ್ (ಗು., ನಾ.) ತುಟಿಗಳ; ಓಷ್ಠ್ಯ. (ಅಂ. ರ. ಶಾ., ಪ್ರಾ. ವಿ.) ತುಟಿಯ; ತುಟಿಯಂಥ; ತುಟಿಯಂಥ ಅಂಗ, ಭಾಗ; = Labium. [(ಸಂ.) L. pipe ಆರ್ಗನ್ ವಾದ್ಯದಲ್ಲ ತುಟಿಗಳಿರುವ ಕೊಳಲು]. (ಧ್ವನಿ ಶಾಸ್ತ್ರ) ತುಟಿಗಳನ್ನು ಮುಚ್ಚಿ ಅಥವಾ ಹತ್ತಿರ ತಂದು ಉಚ್ಚರಿಸಬೇಕಾದ (ಧ್ವನಿ): ಓಷ್ಠ್ಯಧ್ವನಿ (p, b, m, f, v, w ಅಕ್ಷರಗಳು, ಮತ್ತು ತುಟಿಗಳನ್ನು ಗುಂಡಗೆಮಾಡಿ ಉಚ್ಚರಿಸಬೇಕಾದ o ಮೊ. ಸ್ವರಗಳು). **Lábialism** (ನಾ.); **Lábialize** (ಕ್ರಿ. ಸಕ.); **Labializátion** (ನಾ.); **Lábiate** —ಯೆಟ್ (ಗು., ನಾ.) (ಸ. ವಿ.) ತುಟಿಗಳ ಹಾಗೆ ತೋರುವಂತೆ ಇಪ್ಪಾಲಾಗಿರುವ ಪುಷ್ಪಪಾತ್ರವುಳ್ಳ, ದಳವಲಯವುಳ್ಳ, (ಸಸ್ಯ): ಓಷ್ಠ ರೂಪಿ; (ಸ. ವಿ., ಪ್ರಾ. ವಿ.) ತುಟಿಯಂಥ; ತುಟಿಯಾಕಾರದ. **Lábio-dental** ತುಟಿ ಮತ್ತು ಹಲ್ಲುಗಳಿಂದಾದ; ದಂತೌಷ್ಠ್ಯ.

Lábiate. Labial ನೋಡಿ.

Lábile ಲೇ(ಲ್ಯಾ)ಬಿಲ್ (ಗು.) (ಭೌ. ವಿ., ರ. ವಿ.) ಅಸ್ಥಾಯಿ; ಸ್ಥಾನಚ್ಯುತಿಯನ್ನೊ ಬದಲಾವಣೆಯನ್ನೊ ಸುಲಭವಾಗಿ ಹೊಂದುವ.

Lábium ಲೇಬಿಯಮ್ (ನಾ.; ಬ. ವ. -ia) (ಅಂ. ರ. ಶಾ.; ಸಾ., ಬ. ವ. ದಲ್ಲಿ) ಭಗೋಷ್ಠ(ಗಳು); ಕ್ರಿಮಿಗಳು, ವಲ್ಕವಂತ ಪ್ರಾಣಿಗಳು, ಮೊ. ಗಳ ಬಾಯಿಯ ತಳ; (ಪ್ರಾ. ವಿ.) ಏಕ ಕವಾಟದ ಚಿಪ್ಪಿನ ಒಳ ತುಟಿ; (ಸ. ವಿ.) ಓಷ್ಠ್ಯ ದಳವಲಯದ ಕೆಳ ತುಟಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Láboratory ಲ್ಯಾಬೊರಟರಿ, **Labó-** ಲಬಾ — (ನಾ.) ವಿಜ್ಞಾನ (ಮು., ರಸಾಯನ ವಿಜ್ಞಾನ) ಪ್ರಯೋಗಗಳನ್ನು ನಡಸುವುದಕ್ಕೂ ರಾಸಾಯನಿಕ ವಸ್ತುಗಳು, ಮೊ. ನ್ನು ತಯಾರಿಸುವುದಕ್ಕೂ ಉಪಯೋಗಿಸುವ ಕೊಠಡಿ, ಮನೆ, ಕಟ್ಟಡ : ಪ್ರಯೋಗ ಶಾಲೆ ; (ರಸಾಯನ) ಕಾರ್ಯಾಲಯ. [(ರೂಪ.) L. of the mind, of ideas, etc. ಮನಸ್ಸಿನ ಪ್ರಯೋಗ ಶಾಲೆ ; ಮಿದುಳು]. **Laboratórial** (ಗು.)

Lábour, Lábor ಲೇಬರ್ (ನಾ.) ದೇಹದ ಅಥವಾ ಮನಸ್ಸಿನ ಶ್ರಮ ; ದುಡಿತ ; ದುಡಿಮೆ ; ಜೀತ ; ಕಷ್ಟ ; ಕಾರ್ಯ ; ಕೆಲಸ ; ಗೆಯ್ಮೆ. [Hard l. (Hard ನೋಡಿ). Lost l. ನಿಷ್ಫಲ ಪ್ರಯತ್ನ ; ವ್ಯಥಾ ಶ್ರಮ. L. of love (ಲಾಭದ ಅಥವಾ ಬಹುಮಾನದ ಆಸೆಯಿಲ್ಲದೆ) ಕೇವಲ ಪ್ರೀತಿಯಿಂದ ಮಾಡುವ ಕೆಲಸ, ಪಡುವ ಶ್ರಮ : ಪ್ರೀತಿಯ ದುಡಿಮೆ]. ಸಮಾಜದ ಆವಶ್ಯಕತೆಗಳನ್ನು ಒದಗಿಸಲು ಉಪಯೋಗವಾಗುವ ದುಡಿಮೆ. ಪದಾರ್ಥಗಳ ಉತ್ಪತ್ತಿಗೆ ದೇಹಶ್ರಮ ಪಡುವ ಜನಗಳ ತಂಡ ; ದುಡಿಯುವವರು ; ಕೆಲಸಗಾರರು ; ಕಾರ್ಮಿಕರು. ರಾಜಕೀಯ ಪಕ್ಷವಾಗೇರ್ಪಟ್ಟ ಜೀತಗಾರರು,— ವರ್ಗ. ಕಷ್ಟ ಕೆಲಸ (L. of Hercules, Herculean l. ಅತ್ಯಧಿಕ ಬಲ, ಸಾಮರ್ಥ್ಯ, ಮೊ. ವು ಆವಶ್ಯಕವಾದ ಕೆಲಸ, ಸಾಹಸ). ಹೆರಿಗೆಯ ಬೇನೆ; ಪ್ರಸವ ವೇದನೆ (In l.). L. Exchange ಜೀತಗಾರರು ಬೇಕಾಗಿರುವ ಸ್ಥಳಗಳಿಗೆ ಜೀತ ಅಪೇಕ್ಷಿಸುವವರನ್ನು ಒದಗಿಸುವ ಏರ್ಪಾಡುಳ್ಳ ಸರ್ಕಾರದ ಕಚೇರಿ. L. leader ಜೀತಗಾರ ಸಂಘದ ಅಧಿಕಾರಿ. L.-market ನಿರುದ್ಯೋಗಿಗಳಾದ ಜೀತಗಾರರನ್ನು ಗಿರಾಕಿಯಿರುವ ಕಡೆಗೆ ಒದಗಿಸುವುದು : ಜೀತಗಾರ ಸರಬರಾಯಿ. L. Party ಜೀತಗಾರರ (ರಾಜಕೀಯ) ಪಕ್ಷ, ವರ್ಗ ; (ಪಾರ್ಲಿಮೆಂಟಿನಲ್ಲಿ) ಈ ಪಕ್ಷದ (ಚುನಾಯಿತ) ಸದಸ್ಯರು. **Labórious** ಲಬೋರಿಯಸ್ (ಗು.) ಕಷ್ಟಪಟ್ಟು ಕೆಲಸ ಮಾಡುವ ; ಪ್ರಯಾಸದ. (ಶೈಲಿ, ಮೊ.) (ಸರಾಗವಾಗಿಲ್ಲದೆ, ಓಟವಿಲ್ಲದೆ) ಬಹು ಶ್ರಮಪಟ್ಟು ರಚಿಸಿದಂತೆ ತೋರುವ ; ತಿಣಿಕಿ ಬರೆದ. **Labóriously** (ಕ್ರಿ. ವಿ.) ; **Labóriousness** (ನಾ.)

Lábour, Lábor (ಕ್ರಿ.) ಕಷ್ಟಪಡು ; ದುಡಿ ; ಶ್ರಮಿಸು ; ಕಷ್ಟಪಟ್ಟು ಕೆಲಸ ಮಾಡು ; (ಒಂದು ಗುರಿಯ ಸಾಧನೆಗೆ, ಒಂದು ಕೆಲಸ ಮಾಡುವುದಕ್ಕೆ) ಪ್ರಯಾಸ ಪಡು, ಹೆಣಗು; ಕಷ್ಟ ಪಟ್ಟು ಮುಂದುವರಿ (Wheels l. in the sand ಗಾಲಿಗಳು ಮರಳಿನಲ್ಲಿ ಬಲು ಕಷ್ಟದಿಂದ ಸಾಗುತ್ತವೆ) ; ತೊಂದರೆ ಪಡು; ಕ್ಲೇಶಕ್ಕೊಳಗಾಗು [Her labouring heart (ದುಃಖ ಭಾರದಿಂದ) ನೋಯುವ ಅವಳ ಹೃದಯ] ; ತಪ್ಪು ತಿಳಿವಳಿಕೆ, ಮೊ. ಗಳಿಂದ ಬಾಧಿತನಾಗಿರು, ಪೇಚಾಡು. (ಹಡಗು) ವಿಪರೀತವಾಗಿ ಹೊರಳಾಡು, ಏಳುತ್ತ ಬೀಳುತ್ತ ಹೋಗು. (ಪ್ರಾಚೀ. ಪ್ರ. ಅಥವಾ ಕಾವ್ಯ) (ನೆಲವನ್ನು) ಉಳು. ವಿಸ್ತರಿಸು ; ಸೂಕ್ಷ್ಮ ವಿವರಗಳಿಗೆ ಗಮನ ಕೊಟ್ಟು ಕಾರ್ಯ ನಡಸು ; ಸವಿಸ್ತಾರವಾಗಿ ಪ್ರತಿಪಾದಿಸು (I will not l. the point ಆ ಅಂಶವನ್ನು ನಾನು ಲಂಬಿಸುವುದಿಲ್ಲ). **Láboured** (ಗು.) ಬಹಳ ಲಂಬಿಸಿದ; ಬಹಳ ಶ್ರಮ ಪಟ್ಟು ಮಾಡಿದಂತೆ ತೋರುವ ; ತಿಣಿಕಿ ಮಾಡಿದ; ತಾನಾಗಿ, ಸಹಜವಾಗಿ, ಬಂದದ್ದಲ್ಲದ. **Lábourer** (ನಾ.) (ಕ್ರಿಯಾರ್ಥಗಳಲ್ಲಿ). ಜಾಣ್ಮೆ ಅಥವಾ ಶಿಕ್ಷಣಕ್ಕಿಂತ ಬಲ ಅಥವಾ ತಾಳ್ಮೆ (ಹೆಚ್ಚಾಗಿ) ಬೇಕಾಗಿರುವ ಕೆಲಸವನ್ನು ಕೂಲಿಗಾಗಿ ಮಾಡುವವನು ; ಕೂಲಿಕಾರ ; ಜೀತಗಾರ (= Labouring man). **Lábourite** (ನಾ.) ಕೂಲಿಕಾರ ಪಕ್ಷದವನು ; — ಸದಸ್ಯ.

Lábret ಲೇಬ್ರೆಟ್ (ನಾ.) ತುಟಿಯಲ್ಲಿ ರಂಧ್ರ ಮಾಡಿ ಆಧರಣವಾಗಿ ಧರಿಸಿದ (ಪ್ರಾಣಿಯ) ಚಿಪ್ಪು, ಎಲುಬು, ಮೊ. ವು : ತುಟಿಯೊಡವೆ; ಓಷ್ಠಾಭರಣ.

Labúrnum (L) ಲಬರ್ನಮ್ (ನಾ.) ಉಜ್ಜ್ವಲ ಹಳದಿಯ ಬಣ್ಣದ ಹೂಗೊಂಚಲು ಬಿಡುವ ಒಂದು ಗಿಡ. Indian l. ಕಕ್ಕೇ ಗಿಡ.

Lábyrinth ಲ್ಯಾಬಿರಿಂತ್ (ನಾ.) (ಮಾರ್ಗದರ್ಶನವಿಲ್ಲದೆ ದಾರಿಯನ್ನು ಹಿಡಿದು ಹೋಗಲು ಸಾಧ್ಯವಿಲ್ಲದಂತೆ) ಹಲವು ದಾರಿಸೇರುವೆಗಳಿಂದ ಕೂಡಿ ತೊಡಕಾಗಿಯೂ ಕ್ರಮಬದ್ಧವಲ್ಲದೆಯೂ ಇರುವ ಕಟ್ಟಡ ; ತೊಳಸು ಬಳಸಿನ ಹಾದಿಗಳ ಕಟ್ಟಡ; ಚಕ್ರ ಭೀಮನ ಕೋಟೆ. (ರೂಪ.) ತೊಡಕಾದ ರಚನೆ, ವ್ಯವಸ್ಥೆ. (ಅಂ. ರ. ಶಾ.) ಒಳಗಿವಿಯಲ್ಲಿಯ ಸಂಕೀರ್ಣ ಕುಹರ. ಬಹಳ ತೊಡಕಿನ ಪರಿಸ್ಥಿತಿ. **Labyrínthine** —ತ್ಥೈನ್, —ತಿನ್ (ಗು.)

Labyrínthodon ಲ್ಯಾಬಿರಿಂತೊಡಾನ್, **-dont** — ಡಾಂಟ್ (ನಾ.) ತೊಡಕಿನ ದಂತನ್ಯಾಸವುಳ್ಳ (ವಂಶನಷ್ಟವಾಗಿ, ಪಳೆಯುಳಿಕೆಯ ರೂಪದಲ್ಲಿ ದೊರೆಯುವ, ದೊಡ್ಡ ಒಡಲಿನ) ಒಂದು ಸ್ಥಲ ಜಲ ಉಭಯ ಜೀವಿ (ಜಾತಿ). **-dont** (ಗು.) ತೊಡಕಿನ ದಂತನ್ಯಾಸವುಳ್ಳ.

Lac[1] ಲ್ಯಾಕ್ (ನಾ.) ಕೆಂಪು ಬಣ್ಣವಾಗಿ ಉಪಯೋಗಿಸುವ, ಗಾಢ ರಕ್ತ ವರ್ಣದ, ಗುಗ್ಗುಲದ ಜಾತಿಯ ಒಂದು ಪದಾರ್ಥ: ಅರಗು ; ಲಾಕ್ಷಾ ; ಅರಗು ಬಳಿದ ಸಾಮಾನು.

Lac[2], **Lakh** ಲ್ಯಾಕ್ (ನಾ.) (ಆಂ. ಇಂ.) ಶತ ಸಹಸ್ರ ; ಲಕ್ಷ (ಸಾ., L. of rupees)

Lace ಲೇಸ್ (ನಾ., ಕ್ರಿ.) ಬೂಟ್ಸು, ಮೊ. ಗಳ ಎದುರು ಬದುರಿನ ಅಂಚುಗಳನ್ನು, ಗುಂಡು ರಂಧ್ರಗಳ ಅಥವಾ ಕೊಕ್ಕೆಗಳ ಮೂಲಕ, ಒಟ್ಟಿಗೆ ಬಿಗಿಯುವ ಹುರಿ ಅಥವಾ ತೊಗಲಿನ ದಾರ. ಬಟ್ಟೆ, ಅಂಗಿ, ಮೊ. ಗಳ ಅಲಂಕಾರಕ್ಕಾಗಿ ಉಪಯೋಗಿಸುವ ಹೆಣಿಗೆಯ ಪಟ್ಟಿ (ಸಾ., ಜರತಾರಿಯದು) ; ಕಲಾಬತು ; ನಾರು, ಹತ್ತಿ, ಉಣ್ಣೆ, ರೇಷ್ಮೆ, ಲೋಹ — ಇವುಗಳಿಂದ ಮಾಡಿದ ದಾರದಿಂದ ಚಿತ್ರರಚನೆಯಾಗಿ ಹೆಣೆದು ಮಾಡಿದ ಸೂಕ್ಷ್ಮ ರಚನೆಯ ಅಲಂಕಾರದ ಪಟ್ಟಿ [**L.-glass** ಅಲಂಕಾರದ ಚಿತ್ರಪಟ್ಟಿಯ ಮಾದರಿಯಂಥ ಚಿತ್ರವುಳ್ಳ ವೆನಿಸ್ಸಿನ ಗಾಜುಸಾಮಾನು. **L.-pillow** (ಚಿತ್ರಪಟ್ಟಿಯ ಕೆಲಸ ಮಾಡುವ ಹೆಂಗಸು ತೊಡೆಯಮೇಲಿಟ್ಟುಕೊಳ್ಳುವ) ಚಿತ್ರಕೆಲಸದ ಮೆತ್ತೆ]. (ಕ್ರಿ.) (ಬೂಟ್ಸು, ಮೊ. ನ್ನು) ಹುರಿಯಿಂದ, ತೊಗಲಿನ ದಾರದಿಂದ, ಕೂಡಿಸಿ ಕಟ್ಟು, ಬಿಗಿ ; (ಬಗಿಲಾಡಿಯನ್ನು ಎಳೆದು) ಸೊಂಟವನ್ನು ಬಿಗಿ; ಒಬ್ಬನ(ಳ) ಸೊಂಟವನ್ನು ಒತ್ತಡದಿಂದ ಕಿರಿದುಮಾಡು. ಸರಿಗೆ ದಾರ, ಮೊ. ನ್ನು ಒಳನೆಯ್ದು ಅಥವಾ ಕಸೂತಿ ಹಾಕಿ (ಬಟ್ಟೆಯನ್ನು) ಅಲಂಕರಿಸು ; ಸರಿಗೆ ಹಾಕು (*With* ಉಪ. ದೊಡನೆ). (ಹುರಿ, ಮೊ. ನ್ನು) ಪೋಣಿಸು (*Through* ಉಪ. ದೊಡನೆ). ಅಲಂಕಾರಪಟ್ಟಿಯಿಂದ, ಜರತಾರಿಯಿಂದ, ಅಲಂಕರಿಸು. (ಬಣ್ಣ ಬಣ್ಣದ ರೇಖೆಗಳಿಂದ) ಚಿತ್ರಿಸು (*With* ಉಪ. ದೊಡನೆ). (ಬಾರಿನಿಂದ) ಹೊಡೆ, ಬಡಿ (L. *into* person). (ಹಾಲು, ಬಿಯರ್, ಮೊ. ಗಳಿಗೆ) ತೀವ್ರ ಮದ್ಯ ಬೆರಸಿ ರುಚಿ ಕಟ್ಟು, ಬಲಗೊಳಿಸು (*With* ಉಪ. ದೊಡನೆ). **Lácing** (ನಾ.) ; **Lácy** (ಗು.)

Lácerate ಲ್ಯಾಸೆರೇಟ್ (ಕ್ರಿ. ಸಕ.), —ರೆಟ್ (ಗು.) (ಮು., ಮಾಂಸವನ್ನು ಅಥವಾ ಅಂಗಾಂಶವನ್ನು) ಬಗಿ(ದುಹಾಕು), ಹರಿದುಹಾಕು, ಸಿಗಿದುಹಾಕು. (ಹೃದಯವನ್ನು, ಮನಸ್ಸನ್ನು) ನೋಯಿಸು, ಸಂಕಟ ಪಡಿಸು. (ಗು.) (ಕ್ರಿಯಾರ್ಥಗಳಲ್ಲಿ). (ಪ್ರಾ. ವಿ., ಸ. ವಿ.) ಏಣು ಅಥವಾ ಮೊನೆ, ಒಂದು ಕ್ರಮವಿಲ್ಲದೆ, ಕೋಚುಕೋಚಾಗಿ, ಸೀಳಿರುವ ; ಕೋಚು ಕೋಚಾದ. **Lácerable** (ಗು.) ; **Lácerative** (ಗು.) ; **Lacerátion** (ನಾ.)

Lacértian ಲಸರ್‌ಟಿ(ಷಿ)ಯನ್, **-tine** —ಟೈ(ಟಿ)ನ್ (ಗು.) ಹಲ್ಲಿಯಂಥ.

Láches ಲ್ಯಾಚೆಸ್ (ನಾ.) (ನ್ಯಾ. ಶಾ.) ನ್ಯಾಯಕರ್ತವ್ಯದಲ್ಲಿ ಅಶ್ರದ್ಧೆ; (ಹಕ್ಕುಸ್ಥಾಪನೆ, ರಿಯಾಯಿತಿ ಸಾಧನೆ, ಮೊ. ಗಳಲ್ಲಿ) ತಡ, ಸಾವಕಾಶ; (ದಂಡನೀಯವಾದ) ಕರ್ತವ್ಯ ಲೋಪ, ಉಪೇಕ್ಷೆ.

Láchrymal ಲ್ಯಾಕ್ರಿಮಲ್ (ಗು., ನಾ.) ಕಣ್ಣೀರಿನ; ಕಣ್ಣೀರನ್ನು ಹಿಡಿಯುವ [L. vase or L. ಕಣ್ಣೀರು ಪಾತ್ರೆ ; ಅಶ್ರು ಪಾತ್ರೆ. L. canal, duct, gland, sac (ಅಂ. ರ. ಶಾ.) ಅಶ್ರು ನಾಳ, ಗ್ರಂಥಿ, ಕೋಶ]. **Láchrymals** (ನಾ.) ಅಶ್ರು ಸಂಬಂಧಾಂಗಗಳು. **Lachrymátion** (ನಾ.) ಕಣ್ಣೀರು ಹರಿತ ; ಅಶ್ರು ಗಲನ. **Láchrymatory** —ಮಟರಿ (ಗು., ನಾ.) ಕಣ್ಣೀರಿನ ; ಕಣ್ಣೀರು ಬರಿಸುವ ; ಅಶ್ರು ಕಾರಕ (L. shell ಸಿಡಿದು ಕಣ್ಣೀರನ್ನು ಸುರಿಸುತ್ತ ಏನು ಮಾಡಲೂ ತೋರದಂತೆ ಮಾಡುವ ವಿಷವಾಯುತುಂಬಿದ ಸಿಡಿಗುಂಡು : ಕಣ್ಣೀರು ಸಿಡಿಗುಂಡು). ಪುರಾತನ ರೋಮನರ ಸಮಾಧಿಗಳಲ್ಲಿ ಕಂಡುಬರುವ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಶ್ರುಪಾತ್ರೆಯೆಂದು ಊಹಿಸಿರುವ, ಸಣ್ಣ ಗಾಜು ಸೀಸೆ : ಕಣ್ಣೀರು ಸೀಸೆ. **Láchrymose** (ಗು.) ಕಣ್ಣೀರು ತುಂಬಿದ, ಸುರಿಸುವ; ಅಳುವ. **Lachrymósely** (ಕ್ರಿ. ವಿ.)

Laciniate(d) ಲಸಿನಿಯೆಟ್, — ಯೇಟೆಡ್ (ಸ. ವಿ., ಪ್ರಾ. ವಿ.) ಅಳ ವಾಗಿಯೂ ಕಚ್ಚು ಕಚ್ಚಾಗಿಯೂ ಇರುವ ಸೀಳಿಕೆಗಳಿಂದ ಭಾಗ ಗಳಾಗಿರುವ; ಗರಗಸದ ಹಲ್ಲುಗಳಂಥ ಅಂಚುಳ್ಳ; ಕಚ್ಚು ಕಚ್ಚಾದ ಏಣುಳ್ಳ; ಕ್ರಕಚ.

Lack ಲ್ಯಾಕ್ (ನಾ., ಕ್ರಿ.) ಕೊರತೆ; ಅಭಾವ; ಇಲ್ಲದಿರುವುದು; ನ್ಯೂನತೆ (No l. of ಏನೂ ಕೊರತೆಯಿಲ್ಲ; ಬೇಕಾದಷ್ಟಿದೆ. For l. of ಇಲ್ಲದ್ದರಿಂದ; ಅಭಾವದಿಂದ). (ಕ್ರಿ.) ಇಲ್ಲದಿರು; ಅಭಾವವಾಗಿರು [(ಕೃದ್ವಾಚಿಯಲ್ಲಿ ಮಾತ್ರ) Money was lacking ಹಣವಿಲ್ಲದಿತ್ತು. He is lacking in courage ಅವನಿಗೆ ಧೈರ್ಯವಿಲ್ಲ]; ಇಲ್ಲದೆ ಹೋಗು. **Láckland** ಲ್ಯಾಕ್‌ಲ್ಯಾಂಡ್ (ಗು., ನಾ.) ಭೂಮಿ ಯಿಲ್ಲದ(ವನು). **Láck-lustre** (ಗು.) (ಕಣ್ಣು, ಮೊ.) ಕಳೆಯಿಲ್ಲದ; ಮಂಕಾದ.

Lackadaísical ಲ್ಯಾಕಡೆಯ್ಸಿಕಲ್ (ಗು.) ಸೋಗಿನ ಬಳಲಿಕೆಯ; ಬಳಲಿ ಹೋದಂತೆ ನಟಿಸುವ; ವಿಷಣ್ಣತೆ ತೋರುವ; ಲವಲವಿಕೆಯಿಲ್ಲದ; ಸೋಗಿನ; ಹಾವಭಾವಗಳನ್ನು ನಟಿಸುವ. **Lackadaísically** (ಕ್ರಿ. ವಿ.); **Lackadaísicalness** (ನಾ.)

Lácker = Lacquer.

Láckey, Lácquey ಲ್ಯಾಕಿ (ನಾ., ಕ್ರಿ. ಸಕ.) ಕಾಲಾಳು; (ಮು., ಪೋಷಾಕು ತೊಟ್ಟ) ಸೇವಕ, ಜವಾನ; ಅಡಿಯಾಳಂತೆ ನಡೆಯುವವನು; ಅತಿ ವಿನಯ ತೋರುವವನು. ಪರ ಸತ್ವೋಪಜೀವಿ. (ಕ್ರಿ.) ಹಾಜರು ಭಾಷಿಯಾಗಿರು; ಅತಿ ದೈನ್ಯದಿಂದ ವರ್ತಿಸು; ಅಜೀಜುವಾರಿ ಮಾಡು.

Lacónic ಲಕಾನಿಕ್ (ಗು.) ಮಿತ ಭಾಷಣೆಯ; ಸಂಕ್ಷೇಪವಾದ; ಸಂಗ್ರಹ ವಾಗಿ ಹೇಳುವ; (ಬಹಳ) ಅಡಕ ಮಾತಿನ. **Lacónically** (ಕ್ರಿ. ವಿ.); **Lacónicism** (ನಾ.) = **Láconism** ಲ್ಯಾಕೊನಿಸ್‌ಮ್ (ನಾ.) ಮಾತಿನ ಅಡಕ; ಸಂಗ್ರಹೋಕ್ತಿ.

Lácquer, Lácker ಲ್ಯಾಕರ್ (ನಾ., ಕ್ರಿ. ಸಕ.) (ಮದ್ಯಸಾರದಲ್ಲಿ ಅರಗನ್ನು ಕರಗಿಸಿ ಮಾಡಿದ, ಮು., ಹಿತ್ತಾಳೆಗೆ ಬಳಿಯುವ) ಹೊಂಬಣ್ಣದ ಅರಗಿನ ಮೆರುಗು; (ಮರದ ಸಾಮಾನಿಗೆ ಬಳಿಯುವ, ಒಳ್ಳೆಯ ಹೊಳಪು ಕೊಡುವ) ರಾಳದ ಮೆರುಗು(ಗಳು); ಮೆರುಗೆಣ್ಣೆ; ಇಂತಹ ಮೆರುಗು ಕೊಟ್ಟ ಸಾಮಾನು(ಗಳು). (ಕ್ರಿ.) — ಕೊಡು, ಬಳಿ.

Lácquey = Lackey.

Lacrim-, Lacrym- = Lachrym-.

Lactátion, Lácteal, Lactéscence, etc. Lactic ನೋಡಿ.

Láctic ಲ್ಯಾಕ್ಟಿಕ್ (ಗು.) (ರ. ವಿ.) ಹಾಲಿನ [L. acid (ಹಾಲು ಹುಳಿ ಯುವುದರಲ್ಲಿ ಉಂಟಾಗುವ) ಕ್ಷೀರಾಮ್ಲ]. **Láctate** — ಟೇಟ್ (ನಾ.) ಕ್ಷೀರಾಮ್ಲ ಲವಣ. **Lactíferous** (ಗು.) ಹಾಲನ್ನು, ಹಾಲಿನಂಥ ದ್ರವವನ್ನು, ಕೊಡುವ, ಉತ್ಪತ್ತಿ ಮಾಡುವ; ಕ್ಷೀರ (ರಸ) ಕೊಡುವ; ಕ್ಷೀರ (ರಸ) ವಾಹಕ. **Lactátion** (ನಾ.) ಮೊಲೆಯೂಡಿಸುವುದು; ಸ್ತನ್ಯ ಕೊಡುವುದು; ಮೊಲೆಹಾಲು ಕೂಡುವುದು. **Lácteal** ಲ್ಯಾಕ್ಟಿಯಲ್ (ಗು., ನಾ.) ಹಾಲಿನ; ಅನ್ನಕ್ಷೀರ (ಅಥವಾ ಇತರ ಕ್ಷೀರದ್ರವ) ವಾಹಕ. (ನಾ., ಬ. ವ. ದಲ್ಲಿ) ಅನ್ನಕ್ಷೀರ ವಾಹಕ (ನಾಳ)ಗಳು. **Lactéscence** ಲ್ಯಾಕ್ಟೆಸೆನ್ಸ್ (ನಾ.), **-nt** — ಸೆಂಟ್ (ಗು.) ಹಾಲಿನಂತಿರುವ; ಹಾಲಿನ ತೋರ್ಕೆಯುಳ್ಳ; ಹಾಲಿನಂಥ ರಸ ಕೊಡುವ. **Lacto-** ಲ್ಯಾಕ್ಟೊ — (ಸ. ಪೂ. ಪ.) ಕ್ಷೀರ —; ದುಗ್ಧ —. **-meter** (ಲ್ಯಾಕ್ಟಾ —) ಕ್ಷೀರ ಶುದ್ಧಿ ಮಾಪಕ. **-protein** ಕ್ಷೀರದಲ್ಲಿಯ ಸಸಾರಜನಕಾಂಶ. **-scope** ಕ್ಷೀರ ಶುದ್ಧಿ ದರ್ಶಕ. **Lactóse** (ನಾ.) ಹಾಲಿನಲ್ಲಿಯ ಸಕ್ಕರೆಪದಾರ್ಥ: ಹಾಲಿನ ಸಕ್ಕರೆ; ಕ್ಷೀರ ಶರ್ಕರ.

Lactómeter, Lactóse. Lactic ನೋಡಿ.

Lacúna ಲಕ್ಯೂನ [ನಾ.; ಬ. ವ. -ae (ನಿ), -as (ನಸ್)] ತೆರಪು; ಬಿಡುವು; ಅಂತರ; ಲೋಪ(ವಾಗಿರುವ) ಭಾಗ; ಬಿಡುತಿ (ಭಾಗ); ಖಾಲಿ ಭಾಗ; (ಎಲುಬು, ಅಂಗಾಂಶ, ಮೊ. ಗಳಲ್ಲಿಯ) ಕುಳಿ, ಕುಹರ. **Lacúnal** (ಗು.), **Lacúnar** (ಗು.), **Lacúnary** (ಗು.) = Lacunal. **Lacúnose** (ಗು.) ತೆರಪು ಭಾಗಗಳು ಹೆಚ್ಚಾಗಿರುವ.

Lacústrine ಲಕಸ್ಟ್ರಿ(ಸ್ಟ್ರೈ)ನ್ (ಗು.) ಸರೋವರದ(ಲ್ಲಿ ವಾಸವಾಗಿರುವ, ಬೆಳೆಯುವ); ಸಾರಸ. L. age ಸರೋವರ ವಾಸ ಗೃಹಗಳ ಯುಗ (ಸರೋವರದ ಅಡಿನೆಲದಲ್ಲಿ ಉದ್ದವಾದ ದಸಿಗಳನ್ನು ನೆಟ್ಟು ಅವುಗಳಮೇಲೆ ಮನೆಗಳನ್ನು ಕಟ್ಟಿ ಆ ಮನೆಗಳಲ್ಲಿ ವಾಸಮಾಡುತ್ತಿದ್ದ ಕಾಲ)

Lad ಲ್ಯಾಡ್ (ನಾ.) ಹುಡುಗ; ಹರೆಯದವ; ತರುಣ; ಹೈದ; ಮಾಣಿ; ಆಸಾಮಿ. **Láddie** (ನಾ.) ಪುಟ್ಟ ಹುಡುಗ.

Ládder ಲ್ಯಾಡರ್ (ನಾ., ಕ್ರಿ. ಅಕ.) (ಸಾ., ಸ್ಥಳದಿಂದ ಸ್ಥಳಕ್ಕೆ ಒಯ್ಯ ಬಹುದಾದ, ಕಟ್ಟಡ, ಮೊ. ಗಳ ಮೇಲಕ್ಕೆ ಹತ್ತಲು ಸಾಧನವಾದ) ಏಣಿ, ನಿಚ್ಚಣಿಗೆ. (ಕಾಲುಚೀಲ, ಮೊ. ಗಳ ಹೆಣಿಗೆ ಹಾಕುವಲ್ಲಿ ಒಂದೊಂದು ಎಳೆ ತಪ್ಪಿಹೋಗುವುದರಿಂದಾದ) ಉದ್ದ ಐಬು. [(ಕ್ರಿ.) ಇಂಥ ಐಬು ಆಗು]. (ರೂಪ.) ಲೋಕದಲ್ಲಿ ಮೇಲೇರಲು, ಉದ್ದೇಶ ಸಾಧಿಸಲು, ಸಾಧನ. Kick down l. ಮೇಲೇರಿದಮೇಲೆ ಅದಕ್ಕೆ ಸಾಧನವಾಗಿದ್ದ ಮಿತ್ರರನ್ನು ಅಥವಾ ಉದ್ಯೋಗವನ್ನು ನಿರಾಕರಿಸು, ತಳ್ಳಿಬಿಡು.

Lade ಲೇಡ್ (ಕ್ರಿ. ಸಕ.; ಭೂ. ಕೃ. Laden) (ಹಡಗಿಗೆ) ಸಾಮಾನು ಹೇರು, ತುಂಬು; ಸಾಮಾನನ್ನು ಹಡಗಿನ ಸರಕಾಗಿ ತುಂಬಿ ಕಳುಹಿಸು. [Bill of lading (Bill³ ನೋಡಿ)]. **Láden** (ಭೂ. ಕೃ.) (ಬಂಡಿ, ಸಾಮಾನುಹೊರುವ ಪ್ರಾಣಿ ಅಥವಾ ಮನುಷ್ಯ, ಮರ, ಕೊಂಬೆ, ಮೇಜು, ಮೊ. ಗಳ ವಿಷಯದಲ್ಲಿ) ಹೇರಿದ, ಭಾರ ಹೊತ್ತ (*With* ಉಪ. ದೊಡನೆ). (ಪಾಪ, ದುಃಖ, ಮೊ. ಗಳ) ಹೊರೆ ಹೊತ್ತ, ಭಾರದಿಂದ ಬಾಧೆ ಪಡುವ (*With* ಉಪ. ದೊಡನೆ). **Láding** (ನಾ.) ಹೇರು(ವುದು)

La-di-dá ಲಾ ಡಿ ಡಾ (ಗು., ನಾ.) ನಡತೆಯಲ್ಲೂ (ಮಾತಿನ) ಉಚ್ಚಾರಣೆಯಲ್ಲೂ ಆಡಂಬರ, ಡಂಭ, ದೊಡ್ಡಸ್ತಿಕೆಯ ಸೋಗು (ತೋರಿಸುವವನು); ಇಂತಹ ಡಂಭಾಚಾರ(ದ)

Ládle ಲೇಡ್‌ಲ್ (ನಾ., ಕ್ರಿ. ಸಕ.) (ದ್ರವ, ಮೊ. ನ್ನು ಎತ್ತಿಹಾಕುವುದಕ್ಕೆ ಉಪಯೋಗಿಸುವ) ಸೌಟು, ಸಟ್ಟುಗ, ಅಗಪೆ, ದರ್ವಿ. (ಕ್ರಿ.) (ದ್ರವ ವನ್ನು ಒಂದು ಪಾತ್ರೆಯಿಂದ ಮತ್ತೊಂದಕ್ಕೆ) ಸೌಟಿನಿಂದ ತುಂಬಿ ಹಾಕು. **Ládleful** (ನಾ.)

Lády ಲೇಡಿ (ನಾ.) ಒಡತಿ; ಯಜಮಾನಿ; ಗೃಹಿಣಿ; ಯಾಜಮಾನ್ಯ ಮಾಡುವವಳು; ಆಳುವವಳು (L. of the manor ಜಹಗೀರುದಾರಿಣಿ. Our sovereign l. ನಮ್ಮ ಮಹಾರಾಣಿ). ಪುರುಷನ ಪ್ರೀತಿಪಾತ್ರಳು; ನಲ್ಲೆ. (Our L. ಮೇರಿ ಕನ್ನಿಕೆ). ಸಮಾಜದ ಮೇಲ್ತರಗತಿಯ ಹೆಂಗಸು; ಕುಲೀನೆ; ಆರ್ಯೆ [L. of the bedchamber ಅರಮನೆಯ ಸಜ್ಜೆವಳ್ತಿ. L.-in-waiting ರಾಣಿಯ ಚೇಟಿ. Fine l. (Fine² ನೋಡಿ)]. (ಹೆಂಗಸಿಗೆ ಉಪಯೋಗಿಸುವ ಗೌರವದ ಮಾತು): ಮಹಿಳೆ; ಶ್ರೀಮಂತ ಕುಟುಂಬದ ಹೆಂಗಸರ, 'ನೈಟ್' ಪದವಿ ಪಡೆದವರ ಹೆಂಡತಿಯರ, ಹೆಸರಿನ ಹಿಂದೆ ಸೇರಿಸುವ ಗೌರವದ ಬಿರುದು: ಶ್ರೀಮಂತೆ. [L. Mayoress ಲಾರ್ಡ್ ಮೇಯರಿನ ಹೆಂಡತಿ. My l. (ಆಳುಗಳು ಶ್ರೀಮಂತೆ ಯರನ್ನು ಸಂಬೋಧಿಸುವಲ್ಲಿ) ನನ್ನೊಡತಿ! My dear or good l. (ಸಾಮಾನ್ಯವಾಗಿ ಮಹಿಳೆಯನ್ನು ಸಂಬೋಧಿಸುವ ರೀತಿ)]. (ಪ್ರಾಚೀ. ಪ್ರ. ಅಥವಾ ಗ್ರಾಮ್ಯ) ಹೆಂಡತಿ (ಶ್ರೀಮಂತೆಯ ಬಿರುದು ಇಲ್ಲದ ಸಂದರ್ಭದಲ್ಲಿ) [Your good l. ನಿನ್ನ ಹೆಂಡತಿ. Ladies and gentlemen (ಸ್ತ್ರೀ ಪುರುಷರು ಸೇರಿರುವ ಸಭೆಯನ್ನು ಸಂಬೋಧಿಸುವಲ್ಲಿ) ಮಹಿಳೆಯರೇ ಮತ್ತು ಮಹನೀಯರೇ! Painted l. ಒಂದು ಬಗೆಯ ಚಿಟ್ಟೆ]. (ಪ್ರಾಣಿಗಳ ವಿಷಯದಲ್ಲಿ) ಹೆಣ್ಣು [L. dog (ಹಾಸ್ಯ ಪ್ರ.) ಹೆಣ್ಣು ನಾಯಿ]. L. clerk, L. doctor, L. president ಗುಮಾಸ್ತಳು, ವೈದ್ಯಳು, ಅಧ್ಯಕ್ಷಿಣಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ladies' gallery ಪಾರ್ಲಿಮೆಂಟಿನ ಜನ ಪ್ರತಿನಿಧಿ ಸಭೆಯಲ್ಲಿ ಮಹಿಳೆಯರಿಗಾಗಿಯೇ ಇಟ್ಟಿರುವ ಕೈಸಾಲೆ; ಮಹಿಳೆಯರು ಕೂಡುವ ಸ್ಥಳ. **Lády-bird** ಜೀರುಂಡೆ ಜಾತಿಯ ಒಂದು ಕೀಟ. **L.-chair** ಗಾಯಪಟ್ಟವರು, ಮೊ. ನ್ನು ಎತ್ತಿಕೊಂಡು ಹೋಗುವುದಕ್ಕಾಗಿ ಇಬ್ಬರು ತಮ್ಮ ಕೈಗಳನ್ನು ತೆಕ್ಕೆಹಾಕಿಕೊಂಡು ಮಾಡುವ ಕೈತೆಕ್ಕೆ ಕುರ್ಚಿ. **L.-clock, -cow** = Lady-bird. **L. help** ಮನೆಗೆಲಸದ ಹೆಣ್ಣಾಳು. **L.-killer** ಹೆಂಗಸರನ್ನು ಬಲೆಗೆ ಹಾಕಿಕೊಳ್ಳುವವನು. **L.-love** ನಲ್ಲೆ; ಪ್ರಿಯತಮೆ. **L.'s finger** ಅವರೆಯ ಜಾತಿಯ ಒಂದು ಗಿಡ. **L.'s-maid** ಸೈರಂಧ್ರಿ. **L.'s man,** Ladies' man ಸ್ತ್ರೀ ಸಹವಾಸ ಪ್ರೇಮಿ. **Ládyhood** (ನಾ.) ಮಹಿಳಾತ್ವ; ಶ್ರೀಮಂತೆಗೆ ಇರಬೇಕಾದ ಗುಣಗಳು. (ಸಾಮೂಹಿಕವಾಗಿ) ಮಹಿಳೆಯರು; ಮಹಿಳಾ ವರ್ಗ. **Ládyfy, -ify** (ಕ್ರಿ. ಸಕ.) (ಒಬ್ಬಳಲ್ಲಿ) ಗೌರವ ಮಹಿಳಾತನವನ್ನು ಆರೋಪಿಸು; —ಮಹಿಳೆ ಎಂದು ಕರೆ. (ಭೂ. ಕೃ. ನಲ್ಲಿ) ಗೌರವ ಮಹಿಳೆಯಂತೆ ಸೋಗು ಹಾಕುವ. **Ládylike** (ಗು.) ಗೌರವ ಮಹಿಳೆಯ ನಡೆವಳಿಯುಳ್ಳ; (ಗಂಡಸಿನ ವಿಷಯದಲ್ಲಿ) ಹೆಣ್ಣಿಗನಾದ; ಮಹಿಳೆಗೆ ತಕ್ಕ. **Ládyship** (ನಾ.) ಗೌರವ ಮಹಿಳಾತ್ವ; ಶ್ರೀಮಂತೆತನ. Her, Your, l., Their ladyships (ಬಿರುದುಳ್ಳ ಶ್ರೀಮಂತೆಯರನ್ನು ಕುರಿತು ಗೌರವಪೂರ್ವಕವಾಗಿ ಮಾತನಾಡುವಾಗ, ಸಂಬೋಧಿಸುವಾಗ)

L(a)évulose ಲೀವ್ಯುಲೋಸ್ (ನಾ.) (ರ. ವಿ.) ಒಂದು ಜಾತಿಯ ಗ್ಲೂಕೋಸ್ ಸಕ್ಕರೆ; ಹಣ್ಣುಸಕ್ಕರೆ.

Lag¹ ಲ್ಯಾಗ್ (ಕ್ರಿ. ಅಕ., ನಾ.) ಬಹು ನಿಧಾನವಾಗಿ ಹೋಗು; (ಜೊತೆಗೆ ಹೆಜ್ಜೆ ಹಾಕದೆ) ಹಿಂದೆ ಬೀಳು (ಸಾ., *behind* ಪದದೊಡನೆ). (ನಾ.; ಭೌ. ವಿ.) (ವಿದ್ಯುತ್ಪ್ರವಾಹದಲ್ಲಿ ಅಥವಾ ಚಲನೆಯಲ್ಲಿ) ಗತಿವಿಲಂಬ(ದ ಮೊತ್ತ); ಹಿಂಬೀಳಿಕೆ. **Lággard** (ನಾ., ಗು.); **Lágger** (ನಾ.); **Lágging** (ಗು.)

Lag² ಲ್ಯಾಗ್ (ಕ್ರಿ. ಸಕ., ನಾ.) (ಅಸಂ.) ಕಠಿನ ಸಜ ಕೊಡು; ಕೈದು ಮಾಡು; ದಸ್ತಗಿರಿ ಮಾಡು. (ನಾ.) ಕೈದಿ.

Lag³ ಲ್ಯಾಗ್ (ನಾ., ಕ್ರಿ. ಸಕ.) (ಶಾಖ ನಷ್ಟವಾಗದಂತೆ) ಕುದಿಪಾತ್ರೆ, ಮೊ. ಗಳ ಸುತ್ತಲೂ ಹೊದ್ದಿಸಿರುವ ಶಾಖತಡೆಯ ಪದಾರ್ಥದ ತುಂಡು. (ಕ್ರಿ.) ಶಾಖತಡೆಯ ಪದಾರ್ಥವನ್ನು ಸುತ್ತುವರಿಸು. **Lágging** (ನಾ.)

Lágan ಲ್ಯಾಗನ್ (ನಾ.) (ನ್ಯಾ. ಶಾ.) ಸಮುದ್ರದ ತಳದಲ್ಲಿ ಬಿದ್ದಿರುವ ಸರಕು ಅಥವಾ ಹಡಗುನಷ್ಟದ ಸಾಮಾನು.

Lagoón, -une ಲಗೂನ್ (ನಾ.) ತಗ್ಗಾದ ಮರಳುದಂಡೆಯ ಮೂಲಕ ಸಮುದ್ರದಿಂದ ಬೇರ್ಪಟ್ಟ ಉಪ್ಪುನೀರಿನ ಹರವು: 'ಲಗೂನ್'. ಸಮುದ್ರದಲ್ಲಿ ಹವಳದ ದಿಬ್ಬ ಸುತ್ತುವರಿದಿರುವ ಜಲಭಾಗ.

Láic ಲೇಇಕ್ (ಗು., ನಾ.) ವೈದಿಕನಲ್ಲದ(ವನು); ಲೌಕಿಕ; ಐಹಿಕ. **Láical** (ಗು.); **Láically** (ಕ್ರಿ. ವಿ.); **Láicize** —ಸೈಸ್ (ಕ್ರಿ. ಸಕ.) ಲೌಕಿಕ(ವನ್ನಾಗಿ) ಮಾಡು; (ಪಾಠಶಾಲೆ, ಮೊ. ನ್ನು) ಲೌಕಿಕರ ಅಧೀನಪಡಿಸು; (ಉದ್ಯೋಗಕ್ಕೆ) ಲೌಕಿಕರಿಗೂ ಅವಕಾಶ ಕೊಡು. **Laicizátion** (ನಾ.)

Laid. Lay ಧಾತುವಿನ ಭೂತ., ಭೂ. ಕೃ.

Lain. Lie (ಮಲಗು) ಧಾತುವಿನ ಭೂ. ಕೃ.

Lair ಲೇರ್ (ನಾ., ಕ್ರಿ.) ಪ್ರಾಣಿಗಳು ಮಲಗಿಕೊಳ್ಳುವ ಸ್ಥಳ; ಪ್ರಾಣಿಗಳ ಇಕ್ಕೆ, ಹಕ್ಕೆ; ವ್ಯಾಪಾರಕ್ಕಾಗಿ ಹೊಡೆದುಕೊಂಡು ಹೋಗುವ ದನಗಳು ತಂಗಲು ದಾರಿಯಲ್ಲಿ ಮಾಡಿರುವ ಕೊಟ್ಟಿಗೆ, ಆವರಣ: ತಂಗುದೊಡ್ಡಿ, ಕೊಟ್ಟಿಗೆ. ಕಾಡು ಮೃಗಗಳ ಹಕ್ಕೆ. (ಕ್ರಿ.) ಇಕ್ಕೆಗೆ, ಹಕ್ಕೆಗೆ —ಹೋಗು; —ಯಲ್ಲಿ ಮಲಗು; —ಯಲ್ಲಿಡು. **Lairage** —ರೇಜ್ (ನಾ.) (ದನಗಳನ್ನು) ತಂಗುದೊಡ್ಡಿಯಲ್ಲಿ ಕೂಡುವುದು; ತಂಗುದೊಡ್ಡಿ(ಯ ಸ್ಥಳ, ವ್ಯವಸ್ಥೆ)

Laird ಲೇರ್ಡ್ (ನಾ.) (ಸ್ಕಾ. ಪ್ರ.) (ಸ್ಕಾಟ್ಲೆಂಡಿನಲ್ಲಿ) ಜಮೀನುದಾರ. **Laírdship** (ನಾ.)

Láis ಲೇಇಸ್ (ನಾ.) ಸುಶಿಕ್ಷಿತಳಾದ ಅಥವಾ ಚೆಲುವೆಯಾದ ವೇಶ್ಯಾಂಗನೆ. (ಪ್ರಸಿದ್ಧರಾಗಿದ್ದ ಇಬ್ಬರು ವೇಶ್ಯೆಯರ ಹೆಸರಿನಿಂದ)

Laíssez-áller (F) ಲೇಸೇ ಆ್ಯಲೇ, ರೆಸೇ ಹ್ಯಾಲೇ (ನಾ.) ನಿರಾತಂಕ ಸ್ವಾತಂತ್ರ್ಯ; ನಿರ್ಬಂಧ ರಾಹಿತ್ಯ.

Laíssez-faire (F) ಲೇ(ಲೆ)ಸೇ ಫೇರ್ (ನಾ.) (ಮು., ವ್ಯಾಪಾರ, ಕೈಗಾರಿಕೆ, ಮೊ. ಗಳಲ್ಲಿ) ವ್ಯಕ್ತಿಪ್ರಯತ್ನಕ್ಕೆ ಸರ್ಕಾರ ಪ್ರವೇಶಿಸದಿರುವುದು; (ವ್ಯಾಪಾರ, ಮೊ. ಗಳಲ್ಲಿ) ಸರ್ಕಾರದ ತಾಟಸ್ಥ್ಯ ನೀತಿ.

Láity. **Lay²** ನೋಡಿ.

Lake¹ ಲೇಕ್ (ನಾ.) ಸುತ್ತಲೂ ಭೂಮಿಯಿರುವ ವಿಶಾಲವಾದ ನೀರಿನ ಹರವು: ಸರೋವರ; ದೊಡ್ಡ ಕೆರೆ. The Great L. ಅಟ್ಲಾಂಟಿಕ್ ಸಾಗರ. The Great Lakes ಅಮೆ. ಸಂ. ಗಳಿಗೂ ಕ್ಯಾನಡ ದೇಶಕ್ಕೂ ಗಡಿಯಾಗಿರುವ ಐದು ಮಹಾ ಸರೋವರಗಳು. L.-country, L.-land, The Lakes ಇಂಗ್ಲಿಷ್ ಸರೋವರ ಪ್ರದೇಶಗಳು. L. dwelling ಸರೋವರದ ಅಡಿಭೂಮಿಯಲ್ಲಿ ದಸಿಗಳನ್ನು ನೆಟ್ಟು ಅವುಗಳಮೇಲೆ ಕಟ್ಟುತ್ತಿದ್ದ (ಇತಿಹಾಸಕ್ಕೆ ಪೂರ್ವಕಾಲದ) ವಾಸದ ಮನೆ: ಸರೋವರ ವಾಸ ಗೃಹ. L.-dweller (ಇಂಥ) ಸರೋವರ ಗೃಹದ ನಿವಾಸಿ. L. poets (ಇಂಗ್ಲೆಂಡಿನ) ಸರೋವರ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಕೋಲ್‌ರಿಜ್, ಸದೆ, ಮತ್ತು ವರ್ಡ್ಸ್‌ವರ್ತ್ ಎಂಬ ಇಂಗ್ಲಿಷ್ ಕವಿಗಳು. **Lákeless** (ಗು.); **Lákelet** (ನಾ.)

Lake² ಲೇಕ್ (ನಾ.) (ಮೊದಲು ಅರಗಿನಿಂದ ಮಾಡುತ್ತಿದ್ದ, ಈಗ ಹಲವು ಬೆರಕೆವಸ್ತುಗಳಿಂದ ಮಾಡುವ) ಕಡುಗೆಂಪಿನ ವರ್ಣದ್ರವ್ಯ; ರಾಕಿ ಬಣ್ಣ.

Lakh. **Lac²** ನೋಡಿ.

Lallátion ಲ್ಯಾಲೇಷನ್ (ನಾ.) = Lambdacism.

Lam ಲ್ಯಾಮ್ (ಕ್ರಿ.) (ಅಸಂ.) ಬೆತ್ತ, ಮೊ. ಗಳಿಂದ ಬಲವಾಗಿ ಹೊಡೆ, ತೀಡು, ಚೆಚ್ಚು (*Into* ಉಪ. ದೊಡನೆ)

Láma¹ ಲಾಮ (ನಾ.) ಟಿಬೆಟ್ಟಿನ ಅಥವಾ ಮಂಗೋಲಿಯದ ಬೌದ್ಧ ಪುರೋಹಿತ, ವೈದಿಕ: 'ಲಾಮ' (Dalai or Grand L. ಟಿಬೆಟ್ಟಿನ ಪ್ರಧಾನ ಬೌದ್ಧ ಗುರು: ದಾಲೈ ಲಾಮ. Teshu L. ಮಂಗೋಲಿಯದ—: ತೇಷೂ ಲಾಮ). **Lámaism** (ನಾ.) ಲಾಮಾಗಳು ಬೋಧಿಸುವ ಮತ ತತ್ತ್ವಗಳು, ಸಂಪ್ರದಾಯಗಳು, ಆಚಾರಗಳು: ಲಾಮಾ ಮತ. **Lámaist** (ನಾ.); **Lamásery** ಲಮಾಸರಿ (ನಾ.) ಲಾಮಾಗಳ ವಿಹಾರ ಮಂದಿರ, ಮಠ.

Lama² = Llama.

Lamárckian ಲಮಾರ್ಕಿಯನ್ (ಗು., ನಾ.) (ಫ್ರೆಂಚ್ ಪ್ರಾಣಿವೈಜ್ಞಾನಿಕನಾದ) ಲಾಮಾರ್ಕನ, ಅಥವಾ ಅವನ ಪರಿಣಾಮ ವಾದದ (ಅನುಯಾಯಿ). [ಅಭ್ಯಾಸ, ಮೊ. ಗಳಿಂದ ಜೀವಿಗಳ ರಚನೆಯಲ್ಲಿ ವ್ಯತ್ಯಾಸವುಂಟಾಗಿ, ಆ ವ್ಯತ್ಯಾಸಗಳು ಮುಂದೆ ಪರಂಪರಾನುಗತವಾಗಬಲ್ಲವೆಂಬುದು ಈತನ ತತ್ತ್ವ]

Lamásery. **Lama¹** ನೋಡಿ.

Lamb ಲ್ಯಾಮ್ (ನಾ., ಕ್ರಿ.) ಕುರಿಮರಿ [As well be hanged for a sheep as for a l. ಧೈರ್ಯದಿಂದ ಪಾಪ ಮಾಡು; ಕೃತ್ಯವನ್ನು ಆದ್ಯಂತವಾಗಿ ಮಾಡಿಬಿಡು. Like a l. (ಕುರಿಮರಿಯಂತೆ) ಎದುರುಬೀಳದೆ, ತಲೆ ಬಗ್ಗಿಸಿಕೊಂಡು. Wolf, fox, in l.'s skin ಗೋಮುಖ ವ್ಯಾಘ್ರ; ಆಷಾಢಭೂತಿ]. (ಆಹಾರವಾಗಿ ಉಪಯೋಗಿಸುವ) ಕುರಿಮರಿಯ ಮಾಂಸ. ಕ್ರೈಸ್ತ ಸಮುದಾಯದ, ಶಿಷ್ಯವರ್ಗದ, ಕಿರಿಯ ಸದಸ್ಯ. ಕೃತ್ರಿಮವರಿಯದವನು; ಪರಮ ಸಾಧು; ಅಶಕ್ತ; ಸುಲಭವಾಗಿ ಮೋಸಹೋಗುವವನು. (ಒಬ್ಬನ) ಪ್ರೀತಿಪಾತ್ರ; [The L. (of God) ಕ್ರಿಸ್ತ. **Lámbskin** (ಉಣ್ಣೆಯಿರುವ) ಕುರಿಮರಿಯ ಚರ್ಮ, ತೊಗಲು. L.'s-wool (ಕಾಲ್ಚೀಲ, ಮೊ. ಗಳಿಗೆ ಉಪಯೋಗಿಸುವ) ಕುರಿಮರಿಯ ಉಣ್ಣೆ]. (ಕ್ರಿ.) (ಕರ್ಮಣಿ ಪ್ರ., ಕುರಿಮರಿಗಳ ವಿಷಯದಲ್ಲಿ) ಈಯಲ್ಪಡು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುರಿಮರಿ ಹಾಕು. (ಗಬ್ಬವಾಗಿರುವ ಕುರಿಗಳನ್ನು) ಆರೈಕೆ ಮಾಡು. **Lámber** (ನಾ.) ಗಬ್ಬದ ಕುರಿಗಳನ್ನು ಆರೈಕೆ ಮಾಡುವವನು. ಗಬ್ಬದ ಕುರಿ. **Lámbhood** (ನಾ.) ; **Lámbkin** (ನಾ.) ; **Lámb-like** (ಗು.)

Lambáste ಲ್ಯಾಂಬೇಸ್ಟ್ (ಕ್ರಿ. ಸಕ.) (ಪ್ರಾಂ. ಪ್ರ.) ಹೊಡೆ ; ಚೆಚ್ಚು ; ಸದೆ ಬಡಿ.

Lámbda ಲ್ಯಾಮ್ಡ (ನಾ.) (ಇಂಗ್ಲಿಷಿನ L ಅಕ್ಷರಕ್ಕೆ ಜವಾಬಾದ) ಗ್ರೀಕ್ ವರ್ಣಮಾಲೆಯ ಹನ್ನೊಂದನೆಯ ಅಕ್ಷರ (Λ, λ). L. moth ರೆಕ್ಕೆಗಳಮೇಲೆ 'ಲ್ಯಾಮ್ಡ'ದಂತಿರುವ ಗುರುತುಗಳುಳ್ಳ ಒಂದು ಚಿಟ್ಟೆ. **La(m)bdacism** — ಸಿಸ್ಮ್ (ನಾ.) ರಕಾರವನ್ನು ಲಕಾರದಂತೆ ಉಚ್ಚರಿಸುವುದು.

Lámbent ಲ್ಯಾಂಬೆಂಟ್ (ಗು.) (ಉರಿ) ಮೇಲ್ಮೈಯನ್ನು ಸುಡದೆ ಹಗುರವಾಗಿ (ಅದರಮೇಲೆ) ಆಡುತ್ತಿರುವ. (ಬೆಳಕು) ಸೌಮ್ಯ ಪ್ರಕಾಶ ಹರಿಯುವ ; (ಕಣ್ಣು, ಆಕಾಶ, ಮೊ.) ಸೌಮ್ಯ ಪ್ರಕಾಶದ ; ಮೃದು ಕಾಂತಿಯ. (ಬುದ್ಧಿಚಮತ್ಕಾರ, ಮೊ.) ನಯ ಸೊಬಗಿನ. **Lámbency** (ನಾ.) ; **Lámbently** (ಕ್ರಿ. ವಿ.)

Lámbeth ಲ್ಯಾಂಬೆತ್ (ನಾ.) Archbishop of Canterbury ಎಂಬ ಇಂಗ್ಲೆಂಡಿನ ಕ್ರೈಸ್ತ ಪ್ರಧಾನ ಮಠಾಧಿಪತಿಯ (ಲ್ಯಾಂಬೆತ್ತಿನಲ್ಲಿರುವ) ಅರಮನೆ. (ಕ್ರೈಸ್ತ ಸಮುದಾಯದ ಪ್ರತಿನಿಧಿಯೆಂಬ ಭಾವನೆಯಿಂದ) ಪ್ರಧಾನ ಮಠಾಧಿಪತಿ.

Lame[1] ಲೇಮ್ (ಗು., ಕ್ರಿ. ಸಕ.) [ಒಂದು ಅಂಗ (ಮು., ಪಾದ ಅಥವಾ ಕಾಲು) ಪೆಟ್ಟಿನಿಂದ ಅಥವಾ ಊನತೆಯಿಂದ] ಕುಂಟಾದ ; ಕುಂಟುವ ; ಹೆಳವನಾದ ; ನಡೆಯಲಾಗದ ; (ವ್ಯಕ್ತಿ, ಅಂಗ, ಹೆಜ್ಜೆ, ಮೊ. ಗಳ ವಿಷಯದಲ್ಲಿ : L. of *or* in a leg, etc.). (ವಾದ, ಕಥೆ, ನೆಪ) ಅಸಮರ್ಪಕವಾದ, ಅತೃಪ್ತಿಕರವಾದ, ಕುಂಟು. (ಛಂ.) ಓಟವಿಲ್ಲದ ; ಕುಂಟುವ. [L. duck (Duck[1] ನೋಡಿ)]. (ಕ್ರಿ.) ಕುಂಟು ಮಾಡು ; ಊನ ಮಾಡು (ರೂಪ. ಸಹ). **Lámish** (ಗು.) ; **Lámely** (ಕ್ರಿ. ವಿ.) ; **Lámeness** (ನಾ.)

Lamé[2] (F) ಲ್ಯಾಮೇ (ಗು., ನಾ.) ಬೆಳ್ಳಿಯ ಅಥವಾ ಚಿನ್ನದ ಸರಿಗೆಯನ್ನು ಸೇರಿಸಿ ನೆಯ್ದ (ಬಟ್ಟೆ)

Laméllа ಲಮೆಲ [ನಾ. ; ಬ. ವ. -ae (ಲೀ)] (ಮು., ಎಲುಬಿನ) ತೆಳು ಹಲಗೆ, ಫಲಕ ; (ಮು., ಅಂಗಾಂಶದ) ಪೊರೆ, ಪದರ. **Laméllar** (ಗು.) ಪದರ ಪದರವಾಗಿರುವ. **Lámellate(d)** ಲ್ಯಾಮೆಲೆಟ್, — ಲೇಟೆಡ್ (ಗು.) ; **Laméllose** ಲ — (ಗು.) = Lamellate. **Lamellíferous** ಲ್ಯಾ — (ಗು.) ಪದರಗಳುಳ್ಳ.

Lamént ಲಮೆಂಟ್ (ನಾ., ಕ್ರಿ.) (ತೀವ್ರವಾದ ದುಃಖಸೂಚನೆಯ) ಅಳು, ಗೋಳಾಟ ; ರೋದನ ; ಪ್ರಲಾಪ ; ಶೋಕ ಗೀತೆ ; ಸಾವುಹಾಡು. (ಕ್ರಿ.) (ಒಬ್ಬರಿಗಾಗಿ, ಒಂದಕ್ಕಾಗಿ) ಅಳು, ಗೋಳಾಡು, ದುಃಖಪಡು, ವ್ಯಥೆಪಡು, ಹಲುಬು, ಪ್ರಲಾಪಿಸು (*For, over* ಉಪ. ದೊಡನೆ). [(ಭೂ. ಕೃ.) The late lamented — ದುಃಖ ವಿಷಯರಾದ ದಿವಂಗತ —]. **Lámentable** ಲ್ಯಾಮೆಂಟಬ್‌ಲ್ (ಗು.) (ಪ್ರಾಚೀ. ಪ್ರ.) ದುಃಖಕರ. (ಘಟನೆ, ವಿಧಿ, ಸ್ಥಿತಿ, ನಡತೆ, ಮೊ. ಗಳ ವಿಷಯದಲ್ಲಿ) ವ್ಯಥೆ ಪಡಬೇಕಾದ, ಶೋಚನೀಯ. **Lámentably** (ಕ್ರಿ. ವಿ.) ; **Lamentátion** (ನಾ.) ಅಳು(ವುದು) ; = Lament ; ರೋದನ ; ಪ್ರಲಾಪ ; ವಿಲಾಪ ; ಶೋಕ. Lamentations (of Jeremiah) ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ ಬರುವ ಈ ಹೆಸರಿನ ಒಂದು ಪ್ರಕರಣ.

Lámia ಲೇಮಿಯ (ನಾ.) ನರ ಭಕ್ಷಕಳೂ ಮಕ್ಕಳ ರಕ್ತವನ್ನು ಹೀರುವವಳೂ ಆದ (ಕಾಲ್ಪನಿಕ) ರಾಕ್ಷಸಿ.

Lámina ಲ್ಯಾಮಿನ [ನಾ. ; ಬ. ವ. -ae (ನೀ)] (ಲೋಹ, ಎಲುಬು, ಆವರಣ ಚರ್ಮ, ಪದರುಗಲ್ಲು, ಸಸ್ಯದ ಅಂಗವನ್ನು, ಮೊ. ಗಳ) ತೆಳು ತಗಡು, ಹಲಗೆ, ಪದರ, ಪೊರೆ. **Láminar** (ಗು.) ; **Láminose** (ಗು.) ;

Láminate — ನೇಟ್ (ಕ್ರಿ.), — ನೆಟ್ (ಗು.) (ಲೋಹವನ್ನು) ತೆಳು ತಗಡಾಗಿ, ರೇಕಾಗಿ, ಬಡಿ ಅಥವಾ ಲಟ್ಟಿಸು ; ಪದರ ಪದರವಾಗಿ, ಹಾಳೆ ಹಾಳೆಯಾಗಿ, —ಸೀಳು, ಒಡೆ. (ಲೋಹದ) ತಗಡುಗಳನ್ನು ಹೊದ್ದಿಸು ; ಹಾಳೆಯಮೇಲೆ ಹಾಳೆಯಿಟ್ಟು ರಚಿಸು, ಮಾಡು. **Lamination** (ನಾ.) ; **Laminíferous** (ಗು.) ಪದರಗಳ ರಚನೆಯುಳ್ಳ.

Lámmas ಲ್ಯಾಮಸ್ (ನಾ.) (ಹಿಂದೆ, ಸುಗ್ಗಿಯ ಹಬ್ಬವಾಗಿ ಆಚರಿಸುತ್ತಿದ್ದ) ಆಗಸ್ಟು ಮೊದಲನೆಯ ತಾರೀಖು. Latter L. (ಹಾಸ್ಯವಾಗಿ) ಇಲ್ಲದ ತೇದಿ, ದಿನ ; ಎಂದಿಗೂ ಬಾರದ ದಿನ.

Lamp ಲ್ಯಾಂಪ್ (ನಾ., ಕ್ರಿ.) (ಎಣ್ಣೆ, ಬತ್ತಿ, ಕೂಡಿದ) ದೀಪ ; ದೀವಿಗೆ ; ಸೊಡರು (ಗ್ರಾಂ.) ; ಉರಿವ ಮೇಣದ ಬತ್ತಿ, ಉರಿವ ಅನಿಲಧಾರೆ, ಬಿಳಿಗಾವು ತಂತಿ, ಅಥವಾ ಬೆಳಕುಕೊಡುವ ಇತರ ಪದಾರ್ಥ— ಇವನ್ನು ಒಳಕೊಂಡಿರುವ ಗಾಜುಪಾತ್ರೆ. [Smell of the l. ಜಾಗರಣೆ ವ್ಯಾಸಂಗದ ಚಿಹ್ನೆ. (ಶೈಲಿ, ಮೊ. ಗಳಲ್ಲಿ) ಪ್ರಯಾಸಪಟ್ಟು ಬರೆದ ಲಕ್ಷಣವಿರು. Pass, hand, on the l. ಜ್ಞಾನಾಭಿವೃದ್ಧಿಯಲ್ಲಿ, ಒಂದು ಉದ್ದೇಶ ಸಾಧನೆಯಲ್ಲಿ, ತನ್ನ ಭಾಗದ ಕಾರ್ಯವನ್ನು ಮಾಡು ; ಜ್ಞಾನ ಜ್ಯೋತಿಯನ್ನು ಮುಂದಕ್ಕೆ ಸಾಗಿಸು (ಪ್ರಾಚೀನ ಗ್ರೀಕರ ಪಂಜುಹಿಡಿದು ಓಡುವ ಪಂದ್ಯದ ಪ್ರಸ್ತಾಪದಿಂದ). Safety l., Spirit l. (ಆಯಾ ಪದಗಳನ್ನು ನೋಡಿ)]. (ರೂಪ.) ಸೂರ್ಯ ; ಚಂದ್ರ ; ನಕ್ಷತ್ರ. ಅಧ್ಯಾತ್ಮ, ಮೇಧಾ, ಆಶಾ, — ಜ್ಯೋತಿ. (ಕ್ರಿ.) ಬೆಳಗು ; ಪ್ರಕಾಶಿಸು ; ದೀಪಗಳನ್ನು ಹಾಕು ; ಬೆಳಕು ಬೀಳಿಸು ; ಪ್ರಕಾಶ, ಕಾಂತಿ, — ಬೀರು. **L.-black** ದೀಪದ ಹೊಗೆಯ ಕಪ್ಪಿನಿಂದ ತಯಾರಿಸಿದ ವರ್ಣದ್ರವ್ಯ : ದೀಪದ ಕಪ್ಪು. **L.-chimney** (ದೀಪ ಸರಿಯಾಗಿ ಉರಿಯಲು ಗಾಳಿಯ ಹರಿವನ್ನು ತಕ್ಕಂತೆ ನೇರ್ಪಡಿಸುವ) ಗಾಜಿನ ನಳಿಗೆ : ದೀಪದ 'ಚಿಮ್ನಿ'. **Lámplight** (ನಾ.) ದೀಪದ(ಗಳ) ಬೆಳಕು. **L.-lighter** ಬೀದಿಯ ದೀಪಗಳನ್ನು ಹಚ್ಚುವವನು (Like a l.-l. ವೇಗವಾಗಿ, ತ್ವರೆಯಿಂದ). **L.-post** ಬೀದಿಯ ದೀಪದ (ಸಾ., ಕಬ್ಬಿಣದ) ಕಂಬ. **Lámpion** (ನಾ.) ದೀಪಾಲಂಕಾರಗಳಲ್ಲಿ ಉಪಯೋಗಿಸುವ, ಎಣ್ಣೆ ಬತ್ತಿಗಳನ್ನುಳ್ಳ (ಸಾ., ಬಣ್ಣದ) ಗಾಜು ಬುಡ್ಡಿ. **Lámpless** (ಗು.)

Lámpion. **Lamp** ನೋಡಿ.

Lampoón ಲ್ಯಾಂಪೂನ್ (ನಾ., ಕ್ರಿ. ಸಕ.) ಉಗ್ರವಾದ ವಿಡಂಬ ಲೇಖನ ; ಕಟು ಕಟಕಿ ಲೇಖನ ; ಲೇವಡಿ ಬೈಗುಳ ಬರಹ. (ಕ್ರಿ.) (ಒಬ್ಬನಮೇಲೆ) —ಬರೆ. **Lampoóner** (ನಾ.), **Lampoónist** (ನಾ.) — ಲೇಖಕ.

Lámprey ಲ್ಯಾಂಪ್ರಿ (ನಾ.) ಒಂದು ಜಾತಿಯ ಹಾವುಮೀನು.

Lance ಲಾನ್ಸ್ (ನಾ., ಕ್ರಿ. ಸಕ.) ಉದ್ದವಾದ ಮರದ ಗಣೆಯೂ, ತುದಿಯಲ್ಲಿ ಮೊನಚಾದ ಉಕ್ಕಿನ ತಲೆಯೂ ಇರುವ, ರಾವುತರು ತಮ್ಮ ದಾಳಿಯಲ್ಲಿ ಉಪಯೋಗಿಸುವ, ಒಂದು ಆಯುಧ: ಭಲ್ಲೆ(ಯ). (ಮೀನನ್ನು ತಿವಿದು ಕೊಲ್ಲುವುದಕ್ಕಾಗಿ ಅಥವಾ ಈಟಿಗಾಳದಿಂದ ಹಿಡಿದ ತಿಮಿಂಗಿಲವನ್ನು ಕೊಲ್ಲುವುದಕ್ಕಾಗಿ ಉಪಯೋಗಿಸುವ) ಭಲ್ಲೆಯದಂಥ ಆಯುಧ. (ಬ. ವ. ದಲ್ಲಿ) ಭಲ್ಲೆಯಕಾರರು. (ಕ್ರಿ.) (ಕಾವ್ಯ) ಎಸೆ ; ಬೀರು. (ಶಸ್ತ್ರ ಚಿಕಿತ್ಸೆ) ಈಟಿಶಸ್ತ್ರದಿಂದ ಚುಚ್ಚು, ಕತ್ತರಿಸಿ ತೆರೆ. **L.-corporal** (ಅಸಂ., **L.-jack**) ಸಾಮಾನ್ಯ ಸಿಪಾಯಿಯ ಸಂಬಳದಮೇಲೆ ಹಂಗಾಮಿಯಾಗಿ 'ಕಾರ್ಪೊರಲ್' ಕೆಲಸ ಮಾಡುತ್ತಿರುವ ನಾಸನ್ನದು ಅಧಿಕಾರಿ. **L.-sergeant** (ಹಂಗಾಮಿಯಾಗಿ) ಸಾರ್ಜೆಂಟು ಕೆಲಸ ನೋಡುತ್ತಿರುವ 'ಕಾರ್ಪೊರಲ್'. **Lancewood** ಗಾಡಿಯ ಈಟು, ಮೀನುಗೋಲು, ಮೊ. ಗಳಿಗೆ ಉಪಯೋಗಿಸುವ, ಸುಲಭವಾಗಿ ಮುರಿದುಹೋಗದ, ಬಾಗಿ ಬೀಗುವ, ವೆಸ್ಟ್ಇಂಡಿಯದ ಒಂದು ದಾರು. **Láncer** (ನಾ.) ಭಲ್ಲೆಯಕಾರ. (ಬ. ವ. ದಲ್ಲಿ) ಒಂದು ಬಗೆಯ ಚೌಕ ಕುಣಿತ ; ಇದಕ್ಕೆ ಹೊಂದಿಸಿದ ಸಂಗೀತ. **Láncet** (ನಾ.) ರಕ್ತ ಹೊರಡಿಸುವುದಕ್ಕೂ ಚುಚ್ಚುವುದಕ್ಕೂ ಅನುಕೂಲಿಸುವಂತೆ, ಸಾ., ಎರಡು ಹರಿತದ ಅಂಚುಗಳೂ ಮೊನಚಾದ ತುದಿಯೂ ಉಳ್ಳ ಒಂದು ಶಸ್ತ್ರ : ಈಟಿ ಶಸ್ತ್ರ. ಮೊನಚಾದ ನೆತ್ತಿಯುಳ್ಳ ಕಮಾನು, ಕಿಟಕಿ (= L. arch, light,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

window). **Lánceted** (ಗು.) ಮೊನಚಾದ ನೆತ್ತಿಯ ಕಮಾನು ಅಥವಾ ಕಿಟಕಿ ಉಳ್ಳ. **Lánceolate** —ಲಟ್ (ಗು.) ಈಟಿಯ ತಲೆಯ ಆಕಾರವುಳ್ಳ; ಏಣುಗಳು ಎರಡು ಕಡೆಗೂ ತುದಿ ಮೊನೆ ಗೂಡುವಂತೆ ಹೋಗುವ.

Láncelet (ನಾ.) ಒಂದು ಜಾತಿಯ ಮೀನು (ಕಶೇರುಕ ಪ್ರಾಣಿಗಳಲ್ಲಿ ಅತ್ಯಂತ ಕೆಳ ದರ್ಜೆಯದು)

Lánceolate, Láncet, etc. **Lance** ನೋಡಿ.

Láncinating ಲಾನ್ಸಿನೇಟಿಂಗ್ (ಗು.) (ನೋವು) ತೀವ್ರವಾದ, ಚಳುಕಾಗುವ, ಇರಿಯುವ.

Land ಲ್ಯಾಂಡ್ (ನಾ.) ಭೂಮಿಯ ಮೇಲ್ಮೈಯ ಗಟ್ಟಿ ಭಾಗ: ಭೂಭಾಗ (ಸಮುದ್ರ, ನೀರು, ಎಂಬವಕ್ಕೆ ಪ್ರತಿಯಾಗಿ). [Travel by l.; How the l. lies ಸಂದರ್ಭಗಳೇನು; ವ್ಯವಹಾರ ಸ್ಥಿತಿ ಹೇಗಿದೆ]. ನೆಲ; ಜಮೀನು; ದೇಶದ ವಿಸ್ತಾರ, ಹರವು; ದೇಶ; ನಾಡು; ಜನಾಂಗ; ರಾಷ್ಟ್ರ [L. of promise = Canaan. L. of cakes ಸ್ಕಾಟ್ಲೆಂಡು. L. of the leal ಪುಣ್ಯಲೋಕ. L. of the living ಈ ಜೀವಮಾನ; ಇಹ ಲೋಕ]. ಭೂಸ್ಥಿತಿ; ಭೂ ಸ್ವತ್ತು. (ಬ. ವ. ದಲ್ಲಿ) ಹೊಲ ಗದ್ದೆ; ಭೂಮಿ ಕಾಣಿ; ಜಮೀನುಗಳು. ನೀರ್ಗಾಲುವೆಗಳಿಂದ ಪ್ರತ್ಯೇಕಿಸಲ್ಪಟ್ಟ ಉತ್ತ ಭೂಮಿಯ ಅಥವಾ ಹುಲ್ಲು ಮೈದಾನದ ಪಟ್ಟೆ. **L.-agent, -agency** (ಯಜಮಾನನು ನೇಮಕ ಮಾಡಿರುವ) ಜಮೀನುಗಳ ಮೇಲ್ವಿಚಾರಕ,— ಮೇಲ್ವಿಚಾರಣೆ; ಭೂ ಸ್ಥಿತಿಯ ಮಾರಾಟ, ಮೊ. ಗಳ ಕಾರ್ಯಭಾರಿ, —ಕಾರ್ಯಭಾರ. **L.-bank** ಜಮೀನಿನ ಆಧಾರದಮೇಲೆ ಅದರ ವೆಚ್ಚಗಳಿಗೆ ಹಣವೊದಗಿಸುವ ಬ್ಯಾಂಕು: ಜಮೀನು ಬ್ಯಾಂಕು. **L.-breeze** ನೆಲದ ಕಡೆಯಿಂದ ಸಮುದ್ರದ ಕಡೆಗೆ ಬೀಸುವ ಗಾಳಿ: ನೆಲ ಗಾಳಿ. **L.-carriage** ಭೂ ಮಾರ್ಗವಾಗಿ ಸಾಮಾನು, ಮೊ. ಗಳ ಸಾಗಣೆ. **L.-crab** ಕಡಲಲ್ಲಿ ಹುಟ್ಟಿ ನೆಲದಮೇಲೆ ಜೀವಿಸುವ ನಳ್ಳಿ: ನೆಲ ನಳ್ಳಿ. **Lándfall** (ನಾ.) (ನಾವೆ) (ಕಡಲ ಪ್ರಯಾಣದಲ್ಲಿ, ಮು., ಮೊದಲನೆಯ ಸಲ) ನೆಲ ಕಾಣುವುದು (Good, bad, landfall ಲೆಕ್ಕಾಚಾರ ಮಾಡಿದ್ದಂತೆ, ಲೆಕ್ಕಾಚಾರಕ್ಕೆ ವ್ಯತಿರಿಕ್ತವಾಗಿ, ಭೂಭಾಗ ಮುಟ್ಟುವುದು). **L.-force(s)** ಭೂ ಸೈನ್ಯ(ಗಳು) (ನಾವಿಕ ಸೈನ್ಯವಲ್ಲ). **L.-girl** (ಹಿಂದಿನ ಮಹಾಯುದ್ಧ ಕಾಲದಲ್ಲಿಯಂತೆ) ಭೂ ವ್ಯವಸಾಯದ ಕೆಲಸ ಮಾಡುವ ಹೆಂಗಸು: ಬೇಸಾಯಗಾತಿ. **L.-grabber** ಜಮೀನನ್ನು ಅಪಹರಿಸುವವನು. **Lándholder** (ನಾ.) ಜಮೀನುದಾರ (ಸಾ., ಸಾಗುವಳಿದಾರ, ಗೇಣಿಗಾರ). **L.-hunger, -hungry** ಜಮೀನು ಸಂಪಾದಿಸುವ ಅತ್ಯಾಶೆ(ಯುಳ್ಳ). **L.-jobber** ಅತಿ ಲಾಭಾಕಾಂಕ್ಷೆಯ ಜಮೀನುವ್ಯಾಪಾರಿ. **Lándlady** (ನಾ.) ತಿಂಡಿ ತೀರ್ಥದಂಗಡಿಯ ಯಜಮಾನಿ; ಊಟದಂಗಡಿಯಿಟ್ಟಿರುವವಳು; ಮನೆಗಳನ್ನು, ಕೋಣೆಗಳನ್ನು, ಬಾಡಿಗೆಗೆ ಕೊಡಲು ಉಳ್ಳವಳು; ಜಮೀನುದಾರಿಣಿ. **L.-law** (ಸಾ., ಬ. ವ. ದಲ್ಲಿ) ಭೂ ಸ್ಥಿತಿಯ ಕಾನೂನು(ಗಳು). **L.-locked** (ಬಹು ಮಟ್ಟಿಗೆ ಅಥವಾ ಸಂಪೂರ್ಣವಾಗಿ) ನೆಲ ಸುತ್ತುವರಿದ; ಭೂ ವೇಷ್ಟಿತ. **Lándlord** (ನಾ.) (ಕೈಕೆಳಗೆ ಗೇಣಿಗಾರರಿರುವ) ಜಮೀನುದಾರ. ಭೋಜನದಂಗಡಿಯ, ಬಾಡಿಗೆ ಕೋಣೆಗಳ, ಯಜಮಾನ. **Lándlordism** (ನಾ.) ಗೇಣಿಗಾರರಿಂದ ಗೊತ್ತಾದ ಗುತ್ತಿಗೆ ಪಡೆದು ಭೂ ಸ್ವಾಮ್ಯವನ್ನು ಅನುಭವಿಸುವ ಜಮೀನ್ದಾರಿ ಪದ್ಧತಿ; ಈ ಪದ್ಧತಿಯನ್ನು ಹಿಡಿದ ವಾದ. **Land-lubber** (ನಾವೆ) ಸಮುದ್ರದ ಮತ್ತು ಹಡಗುಗಳ ವಿಷಯ ಏನೂ ತಿಳಿಯದವನು; ಕಡಲ ಗುಗ್ಗು. **Lándmark** (ನಾ.) (ಒಂದು ದೇಶ, ಜಮೀನು, ಮೊ. ಗಳ) ಎಲ್ಲೆ ಗುರುತು (ಬಾಂದು, ಮೊ. ವು); ಒಂದು ಪ್ರಾಂತ, ಮೊ. ಗಳಲ್ಲಿ ಕಣ್ಣಿಗೆ ಎದ್ದು ಕಾಣುವ ಯಾವುದಾದರೂ ವಸ್ತು; ಹೆಗ್ಗುರುತು. ಇತಿಹಾಸದಲ್ಲಿ ಸ್ಥಿತ್ಯಂತರ ಆರಂಭವಾಗುವ ಘಟನೆ. **Landócracy** ಲ್ಯಾಂಡಾಕ್ರಸಿ (ನಾ.) ಜಮೀನ್ದಾರ ವರ್ಗ. **Lándocrat** —ಡೊ— (ನಾ.); **Lándowner** (ನಾ.) ಜಮೀನಿನ ಸ್ವಾಮ್ಯವುಳ್ಳವನು; ಜಮೀನ್ದಾರ. **Lándscape** (ನಾ.) ಭೂ ದೃಶ್ಯ; ಇದರ ಚಿತ್ರ; ಇದನ್ನು ಚಿತ್ರಿಸುವ ಚಿತ್ರ ಕಲೆ. **L.s.-gardening** (ಪ್ರಕೃತಿಯ ದೃಶ್ಯವನ್ನನುಕರಿಸಿ ಮಾಡಿದ) ಅಲಂಕಾರೋದ್ಯಾನ ರಚನೆ; ಚಿತ್ರ ತೋಟಗಾರಿಕೆ. **L.s.-gardener** ಚಿತ್ರ ತೋಟಗಾರ. **L.s.-marble** ಮರದಲ್ಲಿರುವಂತೆ ಚಿತ್ರರೇಖನವುಳ್ಳ ಒಂದು ಬಗೆಯ ಅಮೃತ ಶಿಲೆ. **L.s.-painter** ಭೂ ದೃಶ್ಯದ ಚಿತ್ರಗಾರ (= **Lándscapist**). **Land's-end** (ಇಂಗ್ಲೆಂಡಿನಲ್ಲಿ) ಕಾರ್ನ್‌ವಾಲ್ ಪ್ರಾಂತದ ಪಡುವಣ ಕೊನೆ; ಕೊಟ್ಟ ಕೊನೆ. **Land-service** ಭೂ ಸೈನಿಕ ವೃತ್ತಿ. **L.-shark** ಕಡಲ ತೀರದಲ್ಲಿರುವ ನಾವಿಕರನ್ನು ಸುಲಿಗೆ ಮಾಡಿ, ಮೋಸಗೊಳಿಸಿ, ಜೀವಿಸುವವನು. **L.-sick** (ಗು.) (ನಾವೆ) (ಹಡಗಿನ ವಿಷಯದಲ್ಲಿ) ಭೂಮಿ ಹತ್ತಿರವಿರುವುದರಿಂದ ಚಲನೆಗೆ ತಡೆಯಾಗಿರುವ. **L.-slide** = Landslip. (ಅಮೆ. ಸಂ.) ರಾಜಕೀಯದಲ್ಲಿ ಭಾರಿ ಸೋಲು. **Lándslip** (ನಾ.) ಪ್ರಪಾತ, ಬೆಟ್ಟ—ಇವುಗಳಿಂದ ಸರಿದು ಬೀಳುವುದು; ಭೂಪಾತ; ಜರಿವು. **Lándsman** (ನಾ.) ನಾವಿಕನಲ್ಲದವನು. **L.-swell** ಸಮುದ್ರದ ಕರೆಯಮೇಲೆ ದೊಡ್ಡ ಅಲೆಗಳ ಉರುಳು. **L.-tax** ಭೂಗಂದಾಯ. **L.-tie** ಗೋಡೆ, ಮೊ. ದು ಭದ್ರವಾಗಿರುವಂತೆ ಅದಕ್ಕೆ ಆಧಾರವಾಗಿ ಅದರ ಒಂದು ಭಾಗದಿಂದ ನೆಲಕ್ಕೆ ಸೇರಿಸಿರುವ ಅಥವಾ ಆನಿಸಿರುವ ತೊಲೆ, ದೂಲ, ಅಥವಾ (ಇಟ್ಟಿಗೆಯ ಅಥವಾ ಕಲ್ಲಿನ) ಕಟ್ಟಡ: ನೆಲ ಬಿಗಿ. **L.-wind** = L.-breeze. **Lánded**[1] (ಗು.) ಜಮೀನುಳ್ಳ; ಭೂಸ್ಥಿತಿಯುಳ್ಳ (The l. interest ಜಮೀನ್ದಾರರು, ಹಿಡುವಳಿದಾರರು); ಜಮೀನಿನ; ಭೂ ಸ್ವತ್ತಿನ (L. estate, property ಭೂ ಸ್ವತ್ತು). **Lándless** (ಗು.); **Lándward** (ಕ್ರಿ. ವಿ., ಗು.); **Lándwards** (ಕ್ರಿ. ವಿ.)

Land (ಕ್ರಿ.) ದಡ ಸೇರು, ಮುಟ್ಟು; —ಸೇರಿಸು, —ಮುಟ್ಟಿಸು [**Lánded**[2] (ಭೂ. ಕೃ.) (ದಡಕ್ಕೆ) ಬಂದಿಳಿದ; ನೆಲ ಮುಟ್ಟಿದ (ಮು., newly-landed ಮೊ. ಸಮಾಸಗಳಲ್ಲಿ)]; (ಹಡಗಿನಿಂದ) ನೆಲಕ್ಕೆ ಇಳಿ(ಸು) (*At* ಉಪ. ದೊಡನೆ); ವಾಹನದಿಂದ ಕೆಳಗಿಳಿ(ಸು). ಒಂದು ಸ್ಥಳಕ್ಕೆ, ದಶೆಗೆ, ಸ್ಥಾನಕ್ಕೆ, —ತರು, ಬರು. (ಏಟು, ಮೊ. ನ್ನು) ಹೊಡೆ, ಕೊಡು (Landed him one in the eye ಕಣ್ಣಿಗೆ ಹೊಡೆದನು). (ಮೀನನ್ನು) ದಡಕ್ಕೆ ತರು. (ರೂಪ.) (ಬಹುಮಾನ, ಮೊ. ನ್ನು) ಗೆಲ್ಲು. (ಜೂಜುಕೋರರು, ಕುದುರೆಯನ್ನು) ಮೊದಲನೆಯದಾಗಿ ತರು; (ಜೂಜು ಕುದುರೆ) ಮೊದಲನೆಯದಾಗಿ ಬರು. (ಎಗುರಿ, ಕುಪ್ಪಳಿಸಿ) ನೆಲ ಮುಟ್ಟು. **Lánding** (ನಾ.) (ಕ್ರಿಯಾರ್ಥಗಳಲ್ಲಿ). (ಹಡಗು, ಮೊ. ಗಳಿಂದ) ಇಳಿಯುವ ಸ್ಥಳ; ಇಳಿದಾಣ (=L. place). ಒಂದರಿಂದೊಂದಕ್ಕೆ ಏರಿ ಹೋಗುವ ಮೆಟ್ಟಲುಸಾಲಿಗೆ ಮಧ್ಯೆ ಇರುವ ಜಗುಲಿ; ನಡು ನಿಲ್ದೆಡೆ. **L.-stage** ಜನರನ್ನೂ ಸಾಮಾನನ್ನೂ ಹಡಗಿನಿಂದ ಇಳಿಸುವ (ತೇಲು)ನೆರೆಯಟ್ಟ.

Lándau ಲ್ಯಾಂಡಾ (ನಾ.) ಚಾವಣಿಯುಳ್ಳ, ನಾಲ್ಕು ಚಕ್ರದ, ಒಂದು ತೆರದ ಸವಾರಿ ಬಂಡಿ: 'ಲ್ಯಾಂಡಾ' ಬಂಡಿ. **Landaulét** (ನಾ.) ಇದೇ ತೆರದ ಸಣ್ಣ ಬಂಡಿ.

Lándgrave ಲ್ಯಾಂಡ್‌ಗ್ರೇವ್ (ನಾ.; ಸ್ತ್ರೀ. -vine —ಗ್ರವೀನ್) ಕೆಲವರು ಜರ್ಮನ್ ರಾಜ್ಯಾಧಿಕಾರಿಗಳ ಬಿರುದು.

Lándlord, Landócracy, Lándscape, etc. **Land** ನೋಡಿ.

Lándsturm (G) ಲ್ಯಾಂಟ್‌ಷ್ಟುರ್ಮ್ (ನಾ.) (ಜರ್ಮನಿ, ಮೊ. ದೇಶಗಳಲ್ಲಿ) ಭೂ ಸೈನ್ಯ, ನಾವಿಕ ಸೈನ್ಯ ಮತ್ತು 'ಲ್ಯಾಂಡ್‌ವೇರ್' ಎಂಬ ಯುದ್ಧಕಾಲದ ಸೈನ್ಯ —ಇವುಗಳಿಗೆ ಸೇರದಿರುವ ಜನಸಾಮಾನ್ಯರನ್ನು ಯುದ್ಧಕಾಲದಲ್ಲಿ ಒಟ್ಟೊಟ್ಟಾಗಿ ಸೈನಿಕೋದ್ಯೋಗಕ್ಕೆ ಕರೆದು ನಿಯಮಿಸುವುದು; ಹೀಗೆ ನಿಯಮಿಸಿದ ಸೈನ್ಯ.

Lánd-tag (G) ಲಾಂಟ್ ಟಾಖ್ (ನಾ.) ಜರ್ಮನ್ ಸಂಸ್ಥಾನಗಳ ಶಾಸನ ಸಭೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Lándwehr (G) ಲಾಂಡ್(ಟ್)ವೇರ್ (ನಾ.) (ಜರ್ಮನಿ, ಮೊ. ದೇಶಗಳಲ್ಲಿ) ಯುದ್ಧಕಾಲದಲ್ಲಿ ಮಾತ್ರ ಅವಿಚ್ಛಿನ್ನವಾಗಿ ಸೈನಿಕ ಸೇವೆ ಮಾಡುವ ಸೈನ್ಯ: ಯುದ್ಧಕಾಲದ ಸೈನ್ಯ.

Lane ಲೇನ್ (ನಾ.) (ಸಾ., ಎರಡು ಬೇಲಿಗಳ ಮಧ್ಯದ) ಕಿರು ದಾರಿ [It is a long l. that has no turning (ರೂಪ.) ಬದಲಾವಣೆ ಬಂದೇ ಬರಬೇಕು]; ಕಿರಿದಾದ ರಸ್ತೆ, ಬೀದಿ; ಸಂದಿ; ಓಣಿ; ಗಲ್ಲಿ. ಎರಡು ಸಾಲು ಜನತಂಡದ ಮಧ್ಯೆ ಬಿಟ್ಟಿರುವ ಹಾದಿ. ಕಡಲ ಜಹಜುಗಳ ಸಂಚಾರಕ್ಕೆ ಗೊತ್ತುಮಾಡಿರುವ ಮಾರ್ಗ: ನೌಕಾ ಪಥ. Red l. ಗಂಟಲು. The l. (ಲಂಡನ್ನಿನಲ್ಲಿ) ಡ್ರೂರಿ ಲೇನ್ (ನಾಟಕ ಶಾಲೆ)

Lang Sýne ಲ್ಯಾಂಗ್ ಸೈನ್ (ಕ್ರಿ. ವಿ., ನಾ.) (ಸ್ಕಾ. ಪ್ರ.) ಹಿಂದಿನ ದಿನಗಳಲ್ಲಿ; —ದಿನಗಳು.

Lánguage ಲ್ಯಾಂಗ್ವೆ(ಗ್ವಿ)ಜ್ (ನಾ.) (ಒಂದು ದೇಶದಲ್ಲಿ ಜನರಾಡುವ, ಬಳಕೆಯಲ್ಲಿರುವ) ಭಾಷೆ, ನುಡಿ, ಪದಪ್ರಯೋಗ [Dead l. (Dead ನೋಡಿ)]. ಮನೋಭಾವವನ್ನು ವ್ಯಕ್ತಪಡಿಸುವ ರೀತಿ; ಅಭಿವ್ಯಕ್ತಿ ರೀತಿ (Finger l. ಬೆರಳು ಸನ್ನೆಗಳ ಭಾಷೆ. L. of flowers ಬಗೆ ಬಗೆಯ ಹೂವುಗಳ ಮೂಲಕ ಮನೋಭಾವವನ್ನು ರೂಪಿಸುವ ರೀತಿ: ಪುಷ್ಪ ಭಾಷೆ). ಪದಗಳು ಮತ್ತು ಅವುಗಳ ಪ್ರಯೋಗ; ಮಾತನಾಡುವ ಶಕ್ತಿ; ವಾಕ್ ಶಕ್ತಿ; (ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ) (ಒಬ್ಬನ) ಭಾಷಾ ಶೈಲಿ (Bad or vulgar l. ಆಣೆ, ಶಪನ, ಬೈಗುಳು —ಇವುಗಳಿಂದ ಕೂಡಿದ ಗ್ರಾಮ್ಯ ಭಾಷೆ; ದುರ್ಭಾಷೆ. Strong l. ಉದ್ರೇಕದ ಮಾತು, ಭಾಷೆ). ಶಾಸ್ತ್ರದ, ಉದ್ಯೋಗದ, ಕಲೆಯ, ಪರಿಭಾಷೆ; ಸಾಹಿತ್ಯ ಶೈಲಿ; ಪದ ಪ್ರಯೋಗ. L.-master (ಸಾ., ಆಧುನಿಕ, ಅನ್ಯ) ಭಾಷಾ ಬೋಧಕ.

Lánguid ಲ್ಯಾಂಗ್ವಿಡ್ (ಗು.) ಚಟುವಟಿಕೆಯಿಲ್ಲದ; ಲವಲವಿಕೆಯಿಲ್ಲದ; ಹುರುಪಿಲ್ಲದ; ಉತ್ಸಾಹವಿಲ್ಲದ; ಚುರುಕಿಲ್ಲದ; ನಿರ್ವೀರ್ಯ; ಶ್ರಮಿಸಲು ಇಚ್ಛೆಯಿಲ್ಲದ; ಜಡ; ಮಂದ; ಜೋಲುಬಿದ್ದ; ನಿರಾಸಕ್ತಿಯ; ಕಳೆಯಿಲ್ಲದ; ಸಪ್ಪೆಯ; ನಿಸ್ತೇಜ; ಮಂಕು ಕವಿದ; ಸ್ವಾರಸ್ಯವಿಲ್ಲದ; ನೀರಸ; ನಿಶ್ಶಕ್ತ; ಮಬ್ಬಾದ; ನಿಧಾನವಾಗಿ ಚಲಿಸುವ. **Lánguidly** (ಕ್ರಿ. ವಿ.); **Lánguidness** (ನಾ.)

Lánguish ಲ್ಯಾಂಗ್ವಿಷ್ (ಕ್ರಿ. ಅಕ.) ಶಕ್ತಿಗುಂದು; — ಗುಂದಿರು; ಕ್ಷೀಣಿಸು; ಕ್ಷಯಿಸು; ಕೃಶಿಸು; ಸೊರಗು; ನಿರ್ವೀರ್ಯವಾಗು (ಗಿರು); ನಿತ್ರಾಣಗೊಳ್ಳು; ಬಲಗುಂದಿಸುವ, ಮನ ಕುಗ್ಗಿಸುವ, ಸನ್ನಿವೇಶದಲ್ಲಿ, ಸ್ಥಿತಿಯಲ್ಲಿ, —ಜೀವಿಸು, ವಾಸಿಸು (*Under* ಉಪ. ದೊಡನೆ); ಚುರುಕಿಲ್ಲದೆಹೋಗು; ಜಡವಾಗು; ಉತ್ಸಾಹಗುಂದು; ಕುಗ್ಗಿಹೋಗು; ಕೊರಗು (*For* ಉಪ. ದೊಡನೆ); ಜೋಲು ಮುಖ ಹಾಕಿಕೊ; ಮರುಕದ ಸೋಗು ಹಾಕಿಕೊ. **Lánguishingly** (ಕ್ರಿ. ವಿ.); **Lánguishment** (ನಾ.); **Lángour** ಲ್ಯಾಂಗ(ಗ್ವ)ರ್ (ನಾ.) ನಿತ್ರಾಣ; ದೌರ್ಬಲ್ಯ; ಸುಸ್ತು; ಬವಳಿ; ಆಲಸ್ಯ; ಆಯಾಸ; ದಣಿವು; ಚಟುವಟಿಕೆಯಿಲ್ಲದಿರುವುದು; ನಿರಾಸಕ್ತಿ; ನಿರುತ್ಸಾಹ; ಜಡತೆ; ಮಾಂದ್ಯ; ಮಂಕು; ಕುಗ್ಗಿಹೋದ ಸ್ಥಿತಿ; ಮೃದು (ಪ್ರ)ಭಾವ. (ಆಕಾಶ, ಮೊ. ಗಳ ವಿಷಯದಲ್ಲಿ) ಎದೆಯೊತ್ತುವ ಮೌನ. **Lánguorous** (ಗು.); **Lánguorously** (ಕ್ರಿ. ವಿ.)

Lánguor, etc. **Languish** ನೋಡಿ.

Lániary ಲ್ಯಾನಿಯರಿ (ಗು., ನಾ.) ಬಗಿಯಲು, ಸೀಳಲು, —ತಕ್ಕ, ಅನುಕೂಲವುಳ್ಳ (ಹಲ್ಲು); ಕೋರೆ ಹಲ್ಲು.

Laníferous ಲೇನಿಫೆರಸ್, **-gerous** —ಜೆರಸ್ (ಗು.) ತುಪ್ಪಟವುಳ್ಳ; — ಬೆಳೆಯುವ, ಕೊಡುವ.

Lank ಲ್ಯಾಂಕ್ (ಗು.) ಬಡಕಲಾದ; ಕುಗ್ಗಿಹೋದ; ತುಂಬಿಲ್ಲದ; ಸಣಕಲಾಗಿರುವ; ಉದ್ದವಾಗಿಯೂ ತೆಳ್ಳಗೂ ಇರುವ. (ಹುಲ್ಲು, ಮೊ.) ಉದ್ದವಾಗಿಯೂ ಜೋಲುತ್ತಲೂ ಇರುವ. (ಕೂದಲು) ಕೊಂಕಿಲ್ಲದೆ ನೇರವೂ ಮೆತುವೂ ಆಗಿರುವ. **Lánky** (ಗು.) (ಕೈ ಕಾಲುಗಳು, ಮನುಷ್ಯ) ವಿಕಾರವಾಗಿ ಸಣಕಲಾಗಿಯೂ ಉದ್ದವಾಗಿಯೂ ಇರುವ. **Lánkiness** (ನಾ.)

Lánolin ಲ್ಯಾನೊಲಿನ್ (ನಾ.) ಮುಲಾಮುಗಳಿಗೆ ಆಧಾರವಸ್ತುವಾಗಿರುವ, ಕುರಿಯ ಉಣ್ಣೆಯಿಂದ ತೆಗೆದ, ಒಂದು ಜಿಡ್ಡಿನ ಸಾರ: 'ಲ್ಯಾನೊಲಿನ್'.

Lántern ಲ್ಯಾಂಟರ್ನ್ (ನಾ.) ಮೇಣದ ಬತ್ತಿ, ಮೊ. ದೀಪಗಳ ರಕ್ಷಣೆಯ ಪಾರದರ್ಶಕ ಕೋಶ; ಗಾಳಿತಡೆಯ ಕೈದೀವಿಗೆ: ಲಾಂದ್ರ; ಲಾಟೀನು. [Bull's-eye, Chinese, Dark, Magic, l. (ಆಯಾ ಪದವನ್ನು ನೋಡಿ). Parish l. ಹಳ್ಳಿಯ ಲಾಂದ್ರ; ಚಂದ್ರ]. =Magic l. [**Lánternist** (ನಾ.) ಮಾಯಾ ದೀಪದಲ್ಲಿ ಚಿತ್ರಗಳನ್ನು ತೋರಿಸುವವನು: ಮಾಯಾ ದೀಪ ಚಾಲಕ]. ಸಮುದ್ರ ದೀಪಗೃಹದ ಬೆಳಕು ಕೋಣೆ. ಒಳಕ್ಕೆ ಬೆಳಕು ಬೀಳುವುದಕ್ಕಾಗಿ ಕೋಣೆಯ ಮಾಳಿಗೆಯಲ್ಲಿ, ಅಥವಾ ಗುಮ್ಮಟದ ಮೇಲ್ಭಾಗದಲ್ಲಿ, ಪಕ್ಕಗಳಲ್ಲಿ, ಗಾಜುಹಲಗೆಗಳನ್ನುಹಾಕಿ ಕಟ್ಟಿದ ಕಟ್ಟಡ: ಬೆಳಕು ಮಾಳಿಗೆ. L. jaws ಮುಖ ಬತ್ತಿಹೋದಂತೆ ತೋರ್ಪಡಿಸುವ ಉದ್ದವೂ ತೆಳುವೂ ಆದ ದವಡೆ ಮೂಳೆಗಳು. **Lántern-jawed** (ಗು.)

Lánthanum ಲ್ಯಾಂತನಮ್ (ನಾ.) (ರ. ವಿ.) (೧೮೩೯-೪೧ರಲ್ಲಿ ಕಂಡುಹಿಡಿದ) ಅಪರೂಪವಾದ ಒಂದು ಮೂಲ ಧಾತು: 'ಲ್ಯಾಂತನಂ'.

Lánthorn ಲ್ಯಾಂಟ್‌ಹಾರ್ನ್, ಲ್ಯಾಂಟರ್ನ್ (ನಾ.) = Lantern.

Lányard ಲ್ಯಾನ್‌ಯರ್ಡ್ (ನಾ.) (ನಾವೆ) ಯಾವುದನ್ನಾದರೂ ಬಿಗಿಯುವುದಕ್ಕಾಗಲಿ ಅಥವಾ ಹಿಡಿಕೆಯಾಗಿ ಆಗಲಿ ಉಪಯೋಗಿಸುವ ಸಣ್ಣ ಹಗ್ಗ.

Lap[1] ಲ್ಯಾಪ್ (ನಾ.) ಉಡುಪು, ಕುದುರೆಯ ತಡಿ, ಮೊ. ಗಳ ಜೋಲುತ್ತಿರುವ ಭಾಗ. ಕಿವಿಯ ಹಾಲೆ. ಕುಳಿತಿರುವವನ(ಳ) ಸೊಂಟದಿಂದ ಮೊಣಕಾಲ ವರೆಗಿನ ಭಾಗ; ತೊಡೆ; ಅಂಕ; ಮಡಿಲು; ಉಡಿ; ಸೋಗಿಲು (ಗ್ರಾಂ.) (In Fortune's l.; In the l. of luxury). ಗುಡ್ಡಗಳ ನಡುವಣ ತಗ್ಗುಪ್ರದೇಶ. **L.-dog** (ಪಾಶ್ಚಾತ್ಯ ಸ್ತ್ರೀಯರು) ತೊಡೆಯಮೇಲಿಟ್ಟುಕೊಂಡು ಮುದ್ದಿಸುವ ಪುಟ್ಟ ನಾಯಿ. **Lápstone** (ನಾ.) ಮೋಚಿಯವನು ಚರ್ಮವನ್ನು ತಟ್ಟುವುದಕ್ಕಾಗಿ ತೊಡೆಯ ಮೇಲಿಟ್ಟುಕೊಳ್ಳುವ ಕಲ್ಲು: (ಮೋಚಿಯವನ) ತೊಡೆಗಲ್ಲು. **Lápful** (ನಾ.) ಮಡಿಲು ತುಂಬು. **Láppet** (ನಾ.) (ಉಡುಪು, ಮಾಂಸ, ಪೊರೆ, ಮೊ. ಗಳ) ಚಿಕ್ಕ ಮಡಿಕೆ; ಚುಂಗು; ಸಡಿಲವಾದ ಅಥವಾ ಮೇಲ್ಪದರದ ತುಂಡು. ಕಿವಿಯ ಹಾಲೆ, ಮೊ. ವು. =Lapel. ಹೆಂಗಸಿನ ತಲೆಯುಡಿಗೆಯ ಚುಂಗು. **Láppeted** (ಗು.)

Lap[2] ಲ್ಯಾಪ್ (ಕ್ರಿ.) (ಉಡುಪು, ಮೊ. ನ್ನು) ಮಡಿಚು, ಸುತ್ತು, ಸುರುಳಿ ಸುತ್ತು (*About, round* ಪದದೊಡನೆ). ಮಡಿಕೆ ಮಡಿಕೆಯಾಗಿ ಸುತ್ತು, ಮಡಿಚು (*In* ಉಪ. ದೊಡನೆ). (ಪ್ರಭಾವ, ಮೊ.) ಸುತ್ತುವರಿ, ಆವರಿಸು, ಬಳಸು (ಸಾ., *round* ಉಪ. ದೊಡನೆ). ಮುದ್ದಿಗಾಗಿ ಅಪ್ಪಿಕೊ (ಮು., ಕರ್ಮಣಿಯಲ್ಲಿ: Lapped in luxury ಭೋಗ ಭಾಗ್ಯಗಳು ತುಂಬಿರುವ). (ಕವಾಟ, ಚಾವಣಿಯ ಹೊದಿಕೆಯ ಹಲಗೆ, ಮೊ. ನ್ನು) ಏಣಿನಲ್ಲಿ ಒಂದರಮೇಲೊಂದು ಕೂರುವಂತೆ ಮುಂಚಾಚು, ಒಂದರ ಮೇಲೆ ಚಾಚು (*Over* ಉಪ. ದೊಡನೆ. L. over =Overlap). (ಜೂಜಿನಲ್ಲಿ ಸ್ಪರ್ಧಿಯನ್ನು) ಒಂದು ಅಥವಾ ಹೆಚ್ಚು ಸುತ್ತುಗಳಿಂದ ಹಿಂದೆ ಹಾಕು.

Lap (ನಾ.) ಒಂದರಮೇಲೊಂದು ಚಾಚಿ ಕೂತಿರುವ ಭಾಗ(ದ ಮೊತ್ತ). (Half-l., L.-joint ಕಂಬಿ, ತೀರು, ಮೊ. ಗಳನ್ನು ಪ್ರತಿಯೊಂದರ ಸೇರು ಕೊನೆಗಳ ದಪ್ಪದಲ್ಲಿ ಅರ್ಧ ತೆಗೆದು, — ಕೂರಿಸುವುದು, ಸೇರಿಸುವುದು; ಪಾಳಿ). (ಹತ್ತಿ, ಮೊ. ಗಳಿಂದ ಮಾಡುವ ತಯಾರಿಕೆಯಲ್ಲಿ) ಉರುಳೆಯ ಮೇಲೆ ಸುತ್ತಿದ ಒಂದು ಪದರ, ಹಾಳೆ. ಉರುಳೆಯಮೇಲೆ ಸುತ್ತಿದ ಹಗ್ಗ, ರೇಷ್ಮೆ, ನೂಲು, ಮೊ. ಗಳ ಒಂದು ಸುತ್ತು. ಜೂಜಿನ ಪಥದ ಒಂದು ಸುತ್ತು.

Lap[3] ಲ್ಯಾಪ್ (ನಾ., ಕ್ರಿ. ಸಕ.) ರತ್ನ, ಲೋಹ — ಇವುಗಳಿಗೆ (ಮೆರುಗು ಕೊಡುವುದಕ್ಕಾಗಿ) ಸಾಣೆ ಹಿಡಿಯುವ ತಿರುಗುತಟ್ಟೆ: ಸಾಣೆ ಚಕ್ರ. (ಕ್ರಿ.) — ಇಂದ ಸಾಣೆ ಹಿಡಿ, ಮೆರುಗು ಕೊಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Lap[4] ಲ್ಯಾಪ್ (ಕ್ರಿ., ನಾ.) (ದ್ರವವನ್ನು) ನಾಲಗೆಯಿಂದ ಮೊಗೆದು ಕುಡಿ (*Up* ಉಪ. ದೊಡನೆ). (ದ್ರವವನ್ನು) ಆತುರಾತುರವಾಗಿ ಕುಡಿದುಬಿಡು (*Up*, *down* ಉಪ. ದೊಡನೆ). (ನೀರು) ಶಬ್ದಮಾಡುತ್ತ (ದಡಕ್ಕೆ) ಬಡಿ, ಅಪ್ಪಳಿಸು. (ನಾ.) ನಾಯಿಗಳ ದ್ರವರೂಪದ ಆಹಾರ. (ಅಸಂ.) ಸಪ್ಪೆಯಾಗಿರುವ ಪಾನೀಯ, ಮದ್ಯ. ನಾಲಗೆಯ ಒಂದು ಮೊಗೆ(ಯ ಮೊತ್ತ). ಅಲೆಗಳು ದಡಕ್ಕೆ ಬಡಿಯುವುದರಿಂದಾದ ಶಬ್ದ.

Lapél ಲ್ಯಾಪೆಲ್ (ನಾ.) ಅಂಗಿಯ ಹಿಮ್ಮಡಿಚಿದ ಎದೆಯ ಭಾಗ. **Lapélled** (ಗು.)

Lápicide ಲ್ಯಾಪಿಸೈಡ್ (ನಾ.) ಕಲ್ಲುಕುಟಿಕ ; ಕಲ್ಲಿನಮೇಲೆ ಅಕ್ಷರ, ಶಾಸನ, ಕೆತ್ತುವವನು : ಶಾಸನ ಶಿಲ್ಪಿ.

Lápidary ಲ್ಯಾಪಿಡರಿ (ಗು., ನಾ.) ಕಲ್ಲುಗಳಿಗೆ ಸಂಬಂಧಪಟ್ಟ (L. bee ಕಲ್ಲುಗೋಡೆ, ಮೊ. ಗಳಲ್ಲಿ ಗೂಡು ಕಟ್ಟುವ ಜೇನು) ; ಕಲ್ಲಮೇಲೆ ಕೆತ್ತಿದ ; (ಶೈಲಿಯ ವಿಷಯದಲ್ಲಿ) ಶಿಲಾಶಾಸನಕ್ಕೆ ಯೋಗ್ಯವಾದ (ಎಂದರೆ, ಖಚಿತ, ಅಡಕ, ಬಿಗಿ, —ಆದ) ; ಸ್ಮಾರಕ (ಲೇಖನ)ಗಳ. (ನಾ.) (ರತ್ನ, ವಜ್ರ, ಮೊ. ಪ್ರಶಸ್ತ ಮಣಿ) ಕತ್ತರಿಸುವವನು, ಸಾಣೆ ಹಿಡಿಯುವವನು, ಮೆರುಗು ಕೊಡುವವನು, ಕೆತ್ತನೆಯವನು : ರತ್ನ ಶಿಲ್ಪಿ. **Lápidate** ಲ್ಯಾಪಿಡೇಟ್ (ಕ್ರಿ. ಸಕ.) ಕಲ್ಲು ಹೊಡೆ, ಬೀರು ; ಕಲ್ಲಿನಿಂದ ಹೊಡೆದು ಕೊಲ್ಲು. **Lapidátion** (ನಾ.) ; **Lapídify** ಲ— (ಕ್ರಿ. ಸಕ.) ಕಲ್ಲಾಗಿ ಮಾಡು ; ಕಲ್ಲಾಗಿಸು. **Lapidificátion** (ನಾ.)

Lápis lázuli (L) ಲ್ಯಾಪಿಸ್ ಲ್ಯಾಜ್ಯುಲೈ (ನಾ.) ಸಣ್ಣ ಸಣ್ಣ ಗುಂಡುಗಳಾಗಿ ದೊರೆಯುವ, ಉಜ್ಜ್ವಲ ಆಕಾಶ ನೀಲ ವರ್ಣದ, ಒಂದು ಶಿಲಾವಸ್ತು (ಇದು ಗಂಧಕವಿರುವ ಒಂದು ಸಿಲಿಕೇಟು ಪದಾರ್ಥ) ; ವೈಡೂರ್ಯ ; ನೀಲೋಪಲ ; ಇದರಿಂದ ತಯಾರಿಸಿದ ಉಜ್ಜ್ವಲ ನೀಲ ವರ್ಣದ್ರವ್ಯ ; ಇದರ ಬಣ್ಣ.

Lapp ಲ್ಯಾಪ್ (ನಾ., ಗು.) ಉ. ಸ್ಕ್ಯಾಂಡಿನೇವಿಯದ ಕುಳ್ಳ ಜನಾಂಗದವನು : ಲ್ಯಾಪನು ; ಲ್ಯಾಪ್ ಭಾಷೆ [= **Láppish** (ನಾ.)]. ಲ್ಯಾಪ್ ಜನರ, ಲ್ಯಾಪ್ ಭಾಷೆಯ [= **Láppish** (ಗು.)]. **Lápland** ಲ್ಯಾಪ್‌ಲ್ಯಾಂಡ್ ದೇಶ. **Láplander** (ನಾ.) ಲ್ಯಾಪ್‌ಲ್ಯಾಂಡಿನವನು. **Lappónian** (ಗು., ನಾ.) = Lapp.

Láppet. **Lap**[1] ನೋಡಿ.

Lapse ಲ್ಯಾಪ್ಸ್ (ನಾ., ಕ್ರಿ. ಅಕ.) (ಸ್ವಲ್ಪ) ಜ್ಞಾಪಕ ತಪ್ಪಿಹೋಗುವುದು ; ಬಾಯಿ ತಪ್ಪು ; ಕೈ ತಪ್ಪು ; ಸಣ್ಣ ತಪ್ಪು. (ದೌರ್ಬಲ್ಯದಿಂದ, ಅಲಕ್ಷ್ಯದಿಂದ, ಆದ) ಋಜು (ಧರ್ಮ) ಮಾರ್ಗಚ್ಯುತಿ ; ಆಸ್ತಿಕತೆ ಕೆಟ್ಟು ನಾಸ್ತಿಕತೆಗೆ ಬೀಳುವುದು (*From*, *into* ಉಪ. ದೊಡನೆ); ಹೀನ ಸ್ಥಿತಿಗೆ ಇಳಿಯುವುದು ; ಅವನತಿ. (ಹಕ್ಕು, ರಿಯಾಯಿತಿ) ಉಪಯೋಗಿಸದೆ ಹೋದುದರಿಂದ ನಿಂತುಹೋಗುವುದು, ತಪ್ಪಿಹೋಗುವುದು. (ನೀರಿನ) ಮೆಲು ಹರಿವು. ಕಾಲ ಗತಿ (*Of* ಉಪ. ದೊಡನೆ). [L. rate (ಪವ. ಶಾ.) ಎತ್ತರ ಹೆಚ್ಚಿದಂತೆಲ್ಲ ಉಷ್ಣ ಇಳಿಯುತ್ತಹೋಗುವ ದರ : (ಉಷ್ಣದ) ಇಳಿಕೆಯ ದರ] . (ಕ್ರಿ.) ಪ್ರಯತ್ನ ಅಥವಾ ಶಕ್ತಿ ಸಾಲದೆ ಒಂದು ಸ್ಥಾನವನ್ನಾಗಲಿ ಸ್ಥಿತಿಯನ್ನಾಗಲಿ ಉಳಿಸಿಕೊಳ್ಳದಿರು ; ಹಿಂದಕ್ಕೆ ಬೀಳು; ಬಿದ್ದುಹೋಗು (*Back*, *away* ಉಪ. ದೊಡನೆ), (ಸಾ., ಅಧಮ ಸ್ಥಿತಿಗೆ, ಪೂರ್ವ ಸ್ಥಿತಿಗೆ) (*Into* ಉಪ. ದೊಡನೆ) ; ದಾರಿ, ನೀತಿ, — ತಪ್ಪು. (ಕ್ರೈಸ್ತ ಧರ್ಮಾದಾಯ, ಆಸ್ತಿ, ಹಕ್ಕು, ಮೊ. ವು, ನಿಯಮಗಳನ್ನು ಪಾಲಿಸದೆಹೋದುದರಿಂದ, ಉತ್ತರಾಧಿಕಾರಿಗಳಿಲ್ಲದುದರಿಂದ) ತಪ್ಪಿಹೋಗು, ಕೈಬಿಟ್ಟುಹೋಗು, ಬೇರೊಬ್ಬನಿಗೆ ಸೇರಿಹೋಗು. (ಕೆಳಕ್ಕೆ, ಹಿಂದಕ್ಕೆ, ಮುಂದಕ್ಕೆ) ಕ್ರಮೇಣ ಸರಿದುಹೋಗು, ಜಾರಿಹೋಗು, ಹರಿದುಹೋಗು, ಇಳಿದುಹೋಗು, ಕಳೆದುಹೋಗು (*Away* ಉಪ. ದೊಡನೆ) ; (ಭೂ. ಕೃ.) ತಪ್ಪಿಹೋದ ; ಕೈಬಿಟ್ಟುಹೋದ ; ಹಿಮ್ಮರಳಿದ ; ರದ್ದಾಗಿಹೋದ.

Lápsus (L) ಲ್ಯಾಪ್ಸಸ್ (ನಾ.) ಸಣ್ಣ ತಪ್ಪು ; ಸ್ಖಾಲಿತ್ಯ. L. linguae (— ಲಿಂಗ್ವೀ) ನಾಲಗೆ ಜಾರಿ ಆದ ತಪ್ಪು ; ಬಾಯಿ ತಪ್ಪು. L. calami (— ಕ್ಯಾಲಮೈ) ಲೇಖನಿ ತಪ್ಪು ; ಕೈ ತಪ್ಪು.

Lapútan ಲಪ್ಯೂಟನ್ (ಗು., ನಾ.) ಲಪ್ಯೂಟ ದ್ವೀಪದ(ವನು). ಅಸಂಭವ ಕಲ್ಪನೆಯ ; ಭ್ರಾಂತಿಯ ; ಅಸಂಬದ್ಧ. (Gulliver's Travels ಎಂಬ ವಿಡಂಬನ ಗದ್ಯಗ್ರಂಥದಲ್ಲಿ ಬರುವ ಹಾರುದ್ವೀಪವಾದ Laputa ಎಂಬುದರಿಂದ)

Lápwing ಲ್ಯಾಪ್‌ವಿಂಗ್ (ನಾ.) ಒಂದು ಜಾತಿಯ ಹಕ್ಕಿ : ಟಿಟ್ಟಿಭ ; ಕೋಯಷ್ಟಿಕ.

Lar ಲಾರ್ (ನಾ. ; ಬ. ವ. -es ಲೇರೀಸ್, -s ಲಾರ್ಸ್) (ಪುರಾತನ ರೋಮನರ) ಮನೆದೇವರು (ಸಾ., ಬ. ವ. ದಲ್ಲಿ ; Lares, Lares & Penates ಮನೆದೇವರುಗಳು ; ಒಬ್ಬನ ಸ್ವಂತ ಅಥವಾ ಕುಟುಂಬದ ಚರ ಆಸ್ತಿ ; ಸ್ವಗೃಹ). ಬರ್ಮಾ ದೇಶದ ಬಿಳಿಗೈಯ ಗಿಬನ್ ವಾನರ (ಬ. ವ. Lars)

Lárboard ಲಾರ್‌ಬೋ(ಬ)ರ್ಡ್ (ನಾ., ಗು.) (ನಾವೆ) (ಮುನ್ನೋಟದಲ್ಲಿ) ಹಡಗಿನ ಎಡ ಭಾಗ.

Lárceny ಲಾರ್ಸೆನಿ (ನಾ.) (ನ್ಯಾ. ಶಾ.) ಇತರರ ಸಾಮಾನನ್ನು ಸ್ವಂತಕ್ಕೆ ಉಪಯೋಗಪಡಿಸಿಕೊಳ್ಳಲು ಅಪಹರಿಸುವುದು ; ಚೌರ್ಯ ; ಕಳವು [Petty l. (ಹಿಂದೆ ಇಂಗ್ಲೆಂಡಿನಲ್ಲಿ) ಒಂದು ಷಿಲಿಂಗಿಗಿಂತ ಕಡಮೆ ಬೆಲೆಯ ಸಾಮಾನಿನ ಅಪಹರಣ, ಕಳವು]. **Lárcener** (ನಾ.) = **Lárcenist** (ನಾ.); **Lárcenous** (ಗು.); **Lárcenously** (ಕ್ರಿ. ವಿ.)

Larch ಲಾರ್ಚ್ (ನಾ.) ಹೊಳಪು ಎಲೆಗಳುಳ್ಳ, ಶಂಕುವಿನ ಆಕಾರದ ಕಾಯಿ ಬಿಡುವ, ವೆನಿಷಿಯನ್ ಕರ್ಪೂರದೆಣ್ಣೆ ಕೊಡುವ, ಚರ್ಮ ಹದ ಮಾಡಲು ಉಪಯೋಗವಾಗುವ ತೊಗಟೆಯುಳ್ಳ, ಬಾಗಿ ಮುರಿಯದ ದಾರುವಿನ, ಒಂದು ಮರ : ' ಲಾರ್ಚ್ ' ಮರ ; ಇದರ ದಾರು.

Lard ಲಾರ್ಡ್ (ನಾ., ಕ್ರಿ. ಸಕ.) (ಮು., ಅಡಿಗೆಗೂ ಔಷಧಕ್ಕೂ ಉಪಯೋಗಿಸುವುದಕ್ಕಾಗಿ ಶುದ್ಧಿಮಾಡಿ ತಯಾರಿಸಿದ) ಹಂದಿಯ ಹೊಟ್ಟೆಯೊಳಗಿನ ಕೊಬ್ಬು : ಹಂದಿಯ ಕೊಬ್ಬು. (ಕ್ರಿ.) (ಅಡುವುದಕ್ಕೆ ಮೊದಲು) ಉಪ್ಪೂರಿಸಿದ ಹಂದಿಯ ಮಾಂಸದ ತುಂಡುಗಳನ್ನು ಇತರ ಮಾಂಸ, ಮೊ. ಗಳಲ್ಲಿ ಮಧ್ಯೆ ಮಧ್ಯೆ ಸೇರಿಸು (Larding-needle, -pin ಹೀಗೆ ಮಧ್ಯೆ ಸೇರಿಸಲು ಉಪಯೋಗಿಸುವ ದಬ್ಬಳ, ಕಂಬಿ, ಮೊ. ವು). (ಭಾಷಣವನ್ನು, ಲೇಖನವನ್ನು, ರೂಪಕ, ಪಾರಿಭಾಷಿಕ ಪದ, ಅನ್ಯಭಾಷಾ ಪದ, ಮೊ. ಗಳಿಂದ) ಅಲಂಕರಿಸು, ಶೋಭೆಗೊಳಿಸು (*With* ಉಪ. ದೊಡನೆ). **Lárdy** (ಗು.) ; **Lardáceous** ಲಾರ್ಡೇಷಸ್ (ಗು.) (ವೈ. ಶಾ.) (ಮು., ಅಂಗಾಂಶದ ಕ್ಷೀಣತೆಯ, ಅಥವಾ ಆ ರೋಗದಿಂದ ನರಳುತ್ತಿರುವ ರೋಗಿಯ, ವಿಷಯದಲ್ಲಿ) ಹಂದಿಯ ಕೊಬ್ಬಿನಂತಿರುವ. **Lárder** (ನಾ.) ಮಾಂಸ, ಮೊ. ಗಳನ್ನಿಡುವ ಕೋಣೆ, ಗೂಡು. **Lárdon, Lardoón** (ನಾ.) ಮಾಂಸದಲ್ಲಿ ಮಧ್ಯೆ ಸೇರಿಸಲು ಉಪಯೋಗಿಸುವ ಉಪ್ಪೂರಿಸಿದ ಹಂದಿಯ ಮಾಂಸದ ತುಂಡು.

Lardáceous, Lárder, Lárdon, etc. **Lard** ನೋಡಿ.

Lárdy-dárdy ಲಾರ್ಡಿ ಡಾರ್ಡಿ (ಗು.) (ಅಸಂ.) (ಠೀಕಿನ) ನಟನೆಯ ; ಗುನುಗಿನ ; (ವಿಲಾಸಗಾರನ) ಬೆಡಗಿನ.

Láres. **Lar** ನೋಡಿ.

Large ಲಾರ್ಜ್ (ಗು., ನಾ.) ದೊಡ್ಡ ; ವಿಶಾಲವಾದ; ವ್ಯಾಪಕವಾದ (L. powers, discretion). (ಪ್ರಾಚೀ. ಪ್ರ.) ಧಾರಾಳವಾದ, ಉದಾರ, ದಾನಶೀಲ, ಕೊಡುಗೈಯ, ಕ್ಷಮಾಶೀಲ, ದಯಾಳುವಾದ, ನಿಷ್ಪಕ್ಷಪಾತದ [(ಈಗಲೂ ಸಹ ಪ್ರ.): L. views, L. charity, L. tolerance; **L.-minded** (ಗು.); **Large-míndedness** (ನಾ.) ಉದಾರ ಮನಸ್ಸು. **L.-hearted** (ಗು.) ; **Large-heártedness** (ನಾ.) ಉದಾರ ಹೃದಯತೆ, ಭಾವನೆ]. (ಕಲಾ ನಿರೂಪಣೆಯಲ್ಲಿ) ನಿರ್ಬಂಧವಿಲ್ಲದ, ಸರಾಗವಾದ, ಒಟ್ಟು ನೋಟದ. (ಆಕಾರದಲ್ಲಿ) ದೊಡ್ಡ(ಳತೆಯ) [ಮನುಷ್ಯನ ವಿಚಾರದಲ್ಲಿ, l. of limb (ದೊಡ್ಡ ಕೈ ಕಾಲುಗಳುಳ್ಳ) ಎಂಬಂಥ ಪ್ರಯೋಗಗಳಲ್ಲಿ ವಿನಾ, ಅಪೂರ್ವ]. (ಕರ್ತೃ ನಾಮಪದಗಳೊಡನೆ) ದೊಡ್ಡ (ಪ್ರಮಾಣದ) (L. & small farmers).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[(ನಾ.) (At l., In l. ಎಂಬಲ್ಲ ಮಾತ್ರ): At l. ನಿರ್ಬಂಧವಿಲ್ಲದೆ; ಸ್ವಾತಂತ್ರ್ಯವುಳ್ಳವನಾಗಿ. (ಕಥನ, ಮೊ.) ಸವಿಸ್ತಾರವಾಗಿ; ವಿವರಗಳೊಡನೆ. (Popular with the people at l. ಜನಸಮುದಾಯದ ಅಭಿಮಾನಕ್ಕೆ ಪಾತ್ರನಾಗಿ. Scatters imputations at l. ಒಂದು ಗುರಿಯಿಲ್ಲದೆ, ಗೊತ್ತಿಲ್ಲದೆ, ಸಾರ್ವತ್ರಿಕವಾಗಿ ದೋಷಾರೋಪಣೆ ಮಾಡುತ್ತಾನೆ. Gentleman at l. ನಿರ್ದಿಷ್ಟ ಕಾರ್ಯವಿಲ್ಲದ ಅಸ್ಥಾನಿಕ; ಉದ್ಯೋಗವಿಲ್ಲದವನು). In l. ದೊಡ್ಡ ಅಳತೆಯಲ್ಲಿ; ವಿಶಾಲ ರೀತಿಯಲ್ಲಿ]. **Lárgely** (ಕ್ರಿ. ವಿ.) (ಗುಣವಾಚಕಾರ್ಥಗಳಲ್ಲಿ). ಹೆಚ್ಚು ಮಟ್ಟಿಗೆ; ಬಹು ಮಟ್ಟಿಗೆ (Is l. due to). **Lárgeness** (ನಾ.); **Lárgen** (ಕ್ರಿ.) (ಕಾವ್ಯ) ದೊಡ್ಡದು ಮಾಡು, ಆಗು. **Lárgish** (ಗು.) ಸ್ವಲ್ಪ ಮಟ್ಟಿಗೆ ದೊಡ್ಡದಾದ.

Lárgess(e) ಲಾರ್ಜೆಸ್ (ನಾ.) (ಪ್ರಾಚೀ. ಪ್ರ.) (ದೊಡ್ಡ ಮನುಷ್ಯರು ಉತ್ಸವಸಂದರ್ಭಗಳಲ್ಲಿ) ಉದಾರವಾಗಿ ಕೊಟ್ಟ ದ್ರವ್ಯ ರೂಪವಾದ ಅಥವಾ ಇತರ ರೂಪವಾದ ಕೊಡುಗೆ; ಧೂರಿ; ಉದಾರ ದಾನ.

Láriat ಲ್ಯಾರಿಯಟ್ (ನಾ.) ಕುದುರೆ, ಮೊ. ನ್ನು ಕಟ್ಟಿಹಾಕುವ ಹಗ್ಗ; = Lasso.

Lark[1] ಲಾರ್ಕ್, **Láverock** ಲ್ಯಾವರಕ್ (ನಾ.) ಮರಳು ಕಂದು ಬಣ್ಣದ ಗರಿಗಳುಳ್ಳ ಒಂದು ಸಣ್ಣ ಪಕ್ಷಿಜಾತಿ [Skylark (ಬಾನಾಡಿ) ಮೊ. ವು. Rise with the l. ಬೆಳಗಿನ ಜಾವಕ್ಕೇ ಏಳು. If the sky fall, we shall catch larks (ಅಸಂಬದ್ಧವಾದ ಸೂಚನೆಗೆ ವ್ಯಂಗ್ಯವಾದ ಪ್ರತ್ಯುತ್ತರ): ಆಕಾಶ ಬಿದ್ದರೆ ಬಾನಾಡಿಗಳನ್ನು ಹಿಡಿಯಬಹುದು]

Lark[2] ಲಾರ್ಕ್ (ನಾ., ಕ್ರಿ. ಅಕ.) ಕುಣಿದಾಟ; ನಲಿದಾಟ; ವಿನೋದ ಘಟನೆ (What a l.! ಏನು ತಮಾಷೆ! ಎಷ್ಟು ವಿನೋದ!). (ಕ್ರಿ.) ನಲಿದಾಡು; ಕುಣಿದಾಡು; ಕುಚೇಷ್ಟೆ, ವಿನೋದ, ಮಾಡು. **Lárky** (ಗು.)

Lárkspur ಲಾರ್ಕ್‌ಸ್ಪರ್ (ನಾ.) ಅಂದವಾದ ಹೂವು ಬಿಡುವ ಒಂದು ಸಸ್ಯವಿಶೇಷ.

Lárrikin ಲ್ಯಾರಿಕಿನ್ (ನಾ.) (ಸಾ., ಸಣ್ಣ ವಯಸ್ಸಿನ) ಬೀದಿ ಪುಂಡ.

Lárum ಲೇ(ಲ್ಯಾ)ರಂ (ನಾ.) = Alarum (ಎಂಬುದಕ್ಕೆ ಈಗ ವಿರ. ಪ್ರ.)

Lárva ಲಾರ್ವ (ನಾ.; ಬ. ವ. -ae —ರ್ವೀ) (ಮೊಟ್ಟೆಯೊಡೆದು ಪೊರೆ ಹುಳುವಿನ ಸ್ಥಿತಿಗೆ ಬರುವ ವರೆಗಿನ ಅವಸ್ಥೆಯ) ಮರಿಹುಳು. (ಸ್ವಲ್ಪ ಮಟ್ಟಿಗೆ ರೂಪಾಂತರ ಹೊಂದುವ ಇತರ ಪ್ರಾಣಿಗಳ) ಅಪಕ್ವ ರೂಪ. **Lárval** (ಗು.); **Lárvi-** (ಸ. ಪೂ. ಪ.); **Lárviform** (ಗು.) ಮರಿಹುಳುವಿನಾಕಾರದ.

Larýngoscope, etc. Larynx ನೋಡಿ.

Lárynx ಲ್ಯಾರಿಂಕ್ಸ್ (ನಾ.) ಧ್ವನಿತಂತುಗಳಿರುವ ಗಂಟಲ ಕುಹರ; ದನಿಪೆಟ್ಟಿಗೆ. **Larýngeal** ಲರಿಂಜಿಯಲ್ (ಗು.); **Larýngic** —ಜಿಕ್ (ಗು.); **Laryngítis** ಲ್ಯಾರಿಂಜೈಟಿಸ್ (ನಾ.) ದನಿಪೆಟ್ಟಿಗೆಯ ಒಳಚರ್ಮದ ಉರಿಯೂತ. **Larýngo-** (ಸ. ಪೂ. ಪ.): **Laryngólogy** —ಗಾಲೊಜಿ (ನಾ.) ದನಿಪೆಟ್ಟಿಗೆಯ, ಅದರ ರೋಗಗಳ ವಿಷಯವಾದ, —ಶಾಸ್ತ್ರ: ಕಂಠ(ರೋಗ) ಶಾಸ್ತ್ರ. **Larýngoscope** ಲರಿಂಗೊಸ್ಕೋಪ್ (ನಾ.) ಧ್ವನಿನಾಳವನ್ನು ಪರೀಕ್ಷಿಸಲು ಉಪಯೋಗಿಸುವ ದರ್ಪಣಗೂಡಿದ ಸಲಕರಣೆ: ಧ್ವನಿನಾಳ ದರ್ಶಕ. **Laryngótomy** ಲ್ಯಾರಿಂಗಾಟೊಮಿ (ನಾ.) (ಮು., ಉಸಿರಾಡಲು ಅವಕಾಶ ಕಲ್ಪಿಸುವುದಕ್ಕಾಗಿ ಹೊರಗಿನಿಂದ) ಧ್ವನಿನಾಳದ ಕೊಯ್ತ; ಧ್ವನಿನಾಳ ಕರ್ತನ.

Láscar ಲ್ಯಾಸ್ಕರ್, **Lascár** — ಕಾರ್ (ನಾ.) ಈಸ್ಟ್‌ಇಂಡಿಯದ ನಾವಿಕ; ಕಲಾಸಿ. (ಆಂ. ಇಂ.) ಡೇರೆ ಹೊಡೆಯುವವನು; ಚಪ್ರಾಸಿ.

Lascívious ಲಸಿವಿಯಸ್ (ಗು.) ಕಾಮುಕನಾದ; ವಿಷಯ ಲಂಪಟನಾದ; ಕಾಮ: ಪ್ರೇರಕವಾದ. **Lascíviously** (ಕ್ರಿ. ವಿ.); **Lascíviousness** (ನಾ.)

Lash ಲ್ಯಾಷ್ (ಕ್ರಿ., ನಾ.) (ಕೈ, ಕಾಲು, ಬಾಲ, ಮೊ. ನ್ನು) ಥಟ್ಟನೆ ಬೀಸು, ಜಾಡಿಸು; ರಭಸವಾಗಿ ಸುರಿ(ಸು), ಹರಿ(ಸು), ನುಗ್ಗು. (ಬೆಳಕು) ಹೊಳೆ, ಮಿಂಚು. ಬಿರುಸಾಗಿ, ಜೋರಾಗಿ, —ಬಡಿ, ಹೊಡೆ, ಅಪ್ಪಳಿಸು (*At* ಉಪ. ದೊಡನೆ); (ಕುದುರೆ) ಒದೆ (*Out* ಉಪ. ದೊಡನೆ). (ಯಾವುದರಲ್ಲಾಗಲಿ) ಮಿತಿ ಮೀರಿ ಹೋಗು (*Out* ಉಪ. ದೊಡನೆ); ಖಂಡನೆಯ, ಬೈಗುಳ, ಮಾತು ಸುರಿಸು. ಚಾವಟಿಯಿಂದ, ಬಾರುಗೋಲಿನಿಂದ, —ಹೊಡೆ, ತೀಡು; (ಅಲೆಗಳು) ಬಡಿ, ಅಪ್ಪಳಿಸು. ಉದ್ರೇಕಗೊಳಿಸು; ಕೆರಳು; ಕೆರಳಿಸು (ರೂಪ. ಸಹ) (L. oneself into a fury ರೌದ್ರ ತಾಳು). (ಹಗ್ಗ, ಹುರಿ, ಮೊ. ಗಳಿಂದ) ಬಿಗಿ, ಬಂಧಿಸು (*Down, on, together, to* something). (ನಾ.) ತೊಗಲಿನ ಬಾರಿನ, ಚಾವಟಿಯ, — ಏಟು, ಹೊಡೆತ. ಚಾವಟಿಯ ಬಳುಕುವ ಭಾಗ, ಬಾರು [The l. ಚಡಿಯೇಟು; ಕಶಾ ಪ್ರಹಾರ(ದ ದಂಡನೆ)]. =Eye-l. (Eye ನೋಡಿ) [**Láshless** (ಗು.)]. ಹೊಡೆದೆಬ್ಬಿಸುವ ಪ್ರಭಾವ. **Lásher** (ನಾ.) (ಕ್ರಿಯಾರ್ಥಗಳಲ್ಲಿ). ಏರಿ(ಯ ಮೇಲೆ ನುಗ್ಗಿ ಬರುವ ನೀರು); ಏರಿಯ ಕೆಳಗಿನ ಹೊಂಡ. **Láshing** (ನಾ.)

Lásher. Lash ನೋಡಿ.

Láshkar ಲ್ಯಾಷ್‌ಕಾರ್ (ನಾ.) ಶಸ್ತ್ರಸಜ್ಜಿತರಾದ ಇಂಡಿಯದ ಒಂದು ಬಣದವರ ತಂಡ.

Lasque ಲಾಸ್ಕ್ (ನಾ.) ಚಪ್ಪಟೆಯಾಗಿಯೂ ವಿಕಾರವಾಗಿಯೂ ದೋಷಪುಳ್ಳದುದಾಗಿಯೂ ಇರುವ ವಜ್ರ.

Lass ಲ್ಯಾಸ್ (ನಾ.) ಹುಡುಗಿ; ಹೆಣ್ಣು; ಇನಿಯೆ; ನಲ್ಲೆ. **Lássie** (ನಾ.) ಚಿಕ್ಕ—.

Lássitude ಲ್ಯಾಸಿಟ್ಯೂಡ್ (ನಾ.) ಆಲಸ್ಯ; ಅಲಸಿಕೆ; ನಿರುತ್ಸಾಹ; ನಿರಾಸಕ್ತಿ; ಶ್ರಮಿಸಲು, ಆಸಕ್ತಿ ವಹಿಸಲು, ಇಚ್ಛೆಯಿಲ್ಲದಿರುವುದು.

Lásso ಲ್ಯಾಸೊ, ಲಸೂ (ನಾ., ಕ್ರಿ. ಸಕ.) (ಸ್ಪ್ಯಾನಿಷ್ ಅಮೆರಿಕದಲ್ಲಿ) ದನ, ಮೊ. ನ್ನು ಹಿಡಿಯುವ, ಜೀರುಗುಣಿಕೆಯುಳ್ಳ ತೊಗಲ ಬಾರು. (ಕ್ರಿ.) — ಬಾರಿನಿಂದ ಹಿಡಿ.

Last[1] ಲಾಸ್ಟ್ (ನಾ.) ಜೋಡು, ಮೊ. ಕ್ಕೆ ಆಕಾರ ಕೊಡುವ, ಮೋಚಿಯವನ ಮರದ ಅಚ್ಚು: ಮೋಚಿಯಚ್ಚು. Stick to one's l. ತನಗೆ ತಿಳಿಯದ ವಿಷಯದಲ್ಲಿ ಕೈಹಾಕದಿರು.

Last[2] ಲಾಸ್ಟ್ (ನಾ.) (ಒಂದೊಂದು ಸ್ಥಳದಲ್ಲಿ ಒಂದೊಂದು ರೀತಿಯಾಗಿಯೂ, ಸಾಮಾನನ್ನನುಸರಿಸಿ ಬೇರೆ ಬೇರೆಯಾಗಿಯೂ, ಇರುವ) ಒಂದು ತೂಕದ, ಪ್ರಮಾಣದ, ಅಳತೆ (L. of wool ೧೨ ಮೂಟೆ ಅಥವಾ ೪೩೬೮ ಪೌಂಡು ಉಣ್ಣೆ. L. of malt ೧೦ ಕ್ವಾರ್ಟರ್ ಅಥವಾ ೮೦ ಬುಷೆಲ್ ಮೊಳಕೆ ಗೋಧಿ)

Last[3] ಲಾಸ್ಟ್ (ಗು., ನಾ., ಕ್ರಿ. ವಿ.) (ಇತರ ಎಲ್ಲವೂ ಆದಮೇಲೆ) ಕೊನೆಯ(ಲ್ಲಿ ಬರುವ); ಅಂತ್ಯದ; ಕಡೆಯ (The l. two ಕೊನೆಯದು ಮತ್ತು ಅದರ ಹಿಂದಿನದು; ಕೊನೆಯ ಎರಡು. The two l. ಎನ್ನುವುದು ಈಚೆಗೆ ಸಾಮಾನ್ಯವಾಗಿ ಅಶುದ್ಧ ಪ್ರ. ವೆಂದು ಭಾವಿಸಲ್ಪಟ್ಟಿದೆ. L. but not least ಕಡೆಯದಾದರೂ ಕಡಮೆಯಲ್ಲ); (ಮು., ಪ್ರಾಣದ, ಪ್ರಪಂಚದ) ಕೊನೆಯ, ಅವಸಾನದ [The four l. things ಮರಣ, ಅಂತಿಮ ಮಹಾ ವಿಚಾರಣೆ, ಸ್ವರ್ಗ, ನರಕ — ಎಂಬ ಕ್ರೈಸ್ತ ಮತದ ಚರಮ ಚತುಷ್ಟಯ. L. day ಅಂತಿಮ ಮಹಾ ವಿಚಾರಣೆಯ ದಿನ. On one's l. legs (Leg ನೋಡಿ)]. (ಈಗ ಹೇಳುತ್ತಿರುವ, ಸೂಚಿಸುತ್ತಿರುವ, —ಕಾಲಕ್ಕೆ, ಸಂದರ್ಭಕ್ಕೆ) ಹಿಂದಿನ; ಹೋದ; ಕಳೆದ; ಅತ್ಯಂತ ಈಚೆಯ [In the l. fortnight ಈ ಹಿಂದಿನ ಪಕ್ಷದಲ್ಲಿ. L. Christmas ಹೋದ ಕ್ರಿಸ್‌ಮಸ್ಸಿನಲ್ಲಿ. L. evening, night, week, month, year. (L. morning, day, or afternoon ಶುದ್ಧ ಪ್ರ. ಅಲ್ಲ)]. (L. letter, joke, baby, ಮೊ. ನ್ನು ಸೂಚಿಸುವ ಸಂದರ್ಭದಲ್ಲಿ) (ನಾ.) ಹಿಂದಿನದು; ಕೊನೆಯದು (As I said in my l.,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Have you heard —'s l. ?, Mrs —'s l.) ; ಅತ್ಯಂತ ಕೆಳಗಿನ; ಕಟ್ಟ ಕಡೆಯ; ಅತ್ಯಂತ ಕೀಳು ದರ್ಜೆಯ, ಗಣನೆಯ (L. crust, resource). [He was the l. to be consulted ಸಲಹೆ ಕೇಳಿದ ವರಲ್ಲ ಅವನು ಕೊನೆಯವನು. I should be the l. to do it ಅದನ್ನು ನಾನೆಂದಿಗೂ ಮಾಡೆನು. It is the l. thing to try ಅದು ಸಾಮಾನ್ಯ ವಾಗಿ ಪ್ರಯತ್ನಮಾಡತಕ್ಕದ್ದಲ್ಲ. ಅದು ಕೊನೆಯ ಪ್ರಯತ್ನ. He has said the l. word on the matter ಅವನು ಆ ವಿಷಯದಲ್ಲಿ ಕೊನೆಯ ಮಾತನ್ನು, ಅಂತ್ಯ ನಿರ್ಧಾರವನ್ನು, ಹೇಳಿಬಿಟ್ಟಿದ್ದಾನೆ. It is of the l. importance ಅದು ಅತ್ಯಂತ ಮುಖ್ಯವಾದುದಾಗಿದೆ]. (ನಾ.) ಕೊನೆಯಲ್ಲಿ, ಈ ಹಿಂದೆ, —ಹೇಳಿದ ವ್ಯಕ್ತಿ, ವಸ್ತು; ಹಿಂದೆ ಹೇಳಿದ್ದು (The l., This l., Which l.). [Breathe, look, one's l. (ತನ್ನ) ಕೊನೆಯ ಉಸಿರಾಡು, ನೋಟ ನೋಡು : ಸಾಯಿ. Shall never hear the l. of it ಅದೆಂದಿಗೂ ಮುಗಿಯುವುದಿಲ್ಲ ; ಅದಕ್ಕೆ ಕೊನೆಯೇ ಕಾಣೆ. At (long) l. ಕಟ್ಟ ಕಡೆಗೆ. To, till, the l. ಕಡೆಯ ವರೆಗೂ (ಮು., ಸಾಯುವ ವರೆಗೂ)]. (ಕ್ರಿ. ವಿ.) ಇತರ ಎಲ್ಲವೂ(ರೂ) ಆದಮೇಲೆ ; ಕಡೆಗೆ ; ಕೊನೆಯಲ್ಲಿ [(ಸಾ., ಸ. ಪೂ. ಪ.) L.-made, -mentioned. When did you see him l.? ಅವನನ್ನು ಕೊನೆಯ ಸಲ ಯಾವಾಗ ನೋಡಿದ್ದೆ ?]. (ಎಣಿಕೆಯಲ್ಲಿ) ಕೊನೆಗೆ ; ಕೊನೆಯದಾಗಿ ; ಆಖೈರಾಗಿ [=**Lástly** (ಕ್ರಿ. ವಿ.)]

Last[4] ಲಾಸ್ಟ್ (ಕ್ರಿ., ನಾ.) ನಡೆ ; ಸಾಗು ; ಮುಗಿದುಹೋಗದೆ ಇರು ; ತಕ್ಕಷ್ಟು ಇರು ; ಸಾಕಾಗು ; ಉಳಿದಿರು ; ಜೀವದಿಂದಿರು ; ಬಾಳಿಕೆ ಬರು [Will l. me eight months ನನಗೆ ಎಂಟು ತಿಂಗಳು ಬರುತ್ತದೆ, ಎಂಟು ತಿಂಗಳಿಗೆ ಸಾಕಾಗುತ್ತದೆ. L. out ಮು., — ವರೆಗಾದರೂ ವೀರ್ಯವತ್ತಾಗಿ, ಉಪಯೋಗದಲ್ಲಿ, — ಇರು]. (ನಾ.) ತಡೆತ ; ತ್ರಾಣ. **Lásting** (ಗು., ನಾ.) ತಡೆದು ನಿಲ್ಲುವ ; ಸ್ಥಿರವಾದ ; ಶಾಶ್ವತ (No l. benefit ಶಾಶ್ವತ ಪ್ರಯೋಜನವಿಲ್ಲ); ಬಾಳಿಕೆ ಬರುವ. (ನಾ.) ಬಾಳಿಕೆ ಬರುವ ಬಟ್ಟೆ. **Lástingly** (ಕ್ರಿ. ವಿ.) ; **Lástingness** (ನಾ.)

Latch ಲ್ಯಾಚ್ (ನಾ., ಕ್ರಿ. ಸಕ.) (ಹೊರಗಿನಿಂದ ಸನ್ನೆ, ಮೊ. ಗಳಿಂದ ತೆರೆಯಲಾಗುವ ಬಾಗಿಲ ಅಥವಾ ಹೆಬ್ಬಾಗಿಲ) ಎತ್ತುಗುಳಿ ; (ಬಾಗಿಲು ಮುಚ್ಚಿದಾಗ ತಾನಾಗಿ ಅಗುಳಿ ಹಾಕಿಕೊಂಡು, ಹೊರಗಿನಿಂದ ಬೀಗದ ಕೈ ಹಾಕಿ ತೆರೆಯಲಾಗುವ) ಹೊರ ಬಾಗಿಲಿನ ಸ್ಪ್ರಿಂಗ್ ಅಗುಳಿಬೀಗ. (L.-key — ಇದರ ಬೀಗದ ಕೈ. L.-key vote ವಾಸಕ್ಕೆ ಮನೆಯುಳ್ಳದ್ದರಿಂದ ಬರುವ ಚುನಾವಣೆಯ ಹಕ್ಕು. On the l. ಕೀಲ ಅಗುಳಿ ಮಾತ್ರ ಹಾಕಿದ್ದು). (ಕ್ರಿ.) ಕೀಲ ಅಗುಳಿ (ಬೀಗ) ಹಾಕು.

Látchet ಲ್ಯಾಚೆಟ್ (ನಾ.) (ಬೈಬಲ್) ಬೂಟ್ಸನ್ನು ಕಟ್ಟುವ ತೊಗಲ ಬಾರು.

Late ಲೇಟ್ (ಗು. ; ತರ ರೂಪ Later, Latter; ತಮ ರೂಪ Latest, Last; ನಾ.) (ಗೊತ್ತಾದ, ವಾಡಿಕೆಯ) ಹೊತ್ತು ಮೀರಿದ ; ತಡವಾದ ; ಕಾಲ ವಿಳಂಬವಾದ (Was l. for dinner ಊಟಕ್ಕೆ ಹೊತ್ತು ಮೀರಿ ಬಂದನು. It is too l. to go ಈಗ ಹೋಗಲು ಹೊತ್ತು ಮೀರಿ ಹೋಯಿತು. L.-comer ಹೊತ್ತು ಮೀರಿ ಬರುವವನು, ಬಂದವನು). (ಗಿಡ, ಹಣ್ಣು, ಮೊ. ಗಳ ವಿಷಯದಲ್ಲಿ) ತಡವಾಗಿ ಹೂವು ಬಿಡುವ, ಮಾಗುವ. ಹಗಲು ಹೊತ್ತು, ರಾತ್ರಿ ಹೊತ್ತು, ಬಹಳ ಮುಂದುವರಿದಿರುವ [L. hours (Hour ನೋಡಿ). On Wednesday at latest ಕೊನೆಯ ಪಕ್ಷ ಬುಧವಾರ]. ಈಗ ಬದುಕಿಲ್ಲದ ; ಈಗ ನಿರ್ದಿಷ್ಟ ಸ್ಥಾನ ಮಾನ, ಮೊ. ಇಲ್ಲದ ; ಗತ ; ಸಂದ ; ಮಾಜಿ (The l. prime minister ಗತಿಸಿದ ಅಥವಾ ಹಿಂದೆ ಇದ್ದ ಮುಖ್ಯ ಮಂತ್ರಿ ; ಮಾಜಿ—. My l. residence). ಇತ್ತೀಚಿನ [(The l. floods, war). L. fee ನಲ್ಲಿನಲು ಗೊತ್ತಾದ ಹೊತ್ತು ಮೀರಿ ರವಾನೆಗೆ ತಂದ ಕಾಗದಕ್ಕೆ ಕೊಡಬೇಕಾದ ಹೆಚ್ಚು ರುಸುಂ : ತಡವು ತೆರ]. (ನಾ.) Of l. ಈಚೆಗೆ. **Látely** (ಕ್ರಿ. ವಿ.) ಮೊನ್ನೆ ಮೊನ್ನೆ ; ಈಚೀಚೆಗೆ ; ಇತ್ತೀಚೆಗೆ ; ಈಗೀಗ. **Latén** (ಕ್ರಿ.) ಹೊತ್ತು, — ಮಾಡು, ಆಗು. **Láteness** (ನಾ.) ; **Látish** (ಗು., ಕ್ರಿ. ವಿ.) ಸ್ವಲ್ಪ ಮಟ್ಟಿಗೆ ತಡವಾದ (ವಾಗಿ)

Late (ಕ್ರಿ. ವಿ. ; ತರ ರೂಪ Later; ತಮ ರೂಪ Latest, Last) ಹೊತ್ತು ಮೀರಿ ; ತಡವಾಗಿ ; ಹೊತ್ತಾಗಿ [Better l. than never ಇಲ್ಲದೆಯೇ ಹೋಗುವುದಕ್ಕಿಂತಲೂ ತಡವಾದರೂ ಚಿಂತೆಯಿಲ್ಲ. This happened later on ಇದು ಆಮೇಲೆ ನಡೆಯಿತು. Sooner or later, early or l., soon or l. ಬೇಗರೋ ಸಾವಕಾಶವಾಗಿಯೋ, ಇಂದೋ ಮುಂದೋ, ಎಂದಾದರೂ. We sat l. ನಾವು (ರಾತ್ರಿ) ಬಹಳ ಹೊತ್ತು ಕುಳಿತಿದ್ದೆವು. Traces remained as l. as the Stuart times. L. in the day (ಬಳ. ಮಾ.) ಕೊನೆ ಕೊನೆಗೆ ; ಎಲ್ಲವೂ ಮುಗಿಯುತ್ತಿರುವಾಗ (ಮು., ಅಲಕ್ಷ್ಯದಿಂದ ತಡಮಾಡಿ)]. (ಕಾವ್ಯ) ಇತ್ತೀಚೆಗೆ ; ಮೊನ್ನೆ ತಾನೆ (I sent thee l. a rosy wreath)

Látent ಲೇಟೆಂಟ್ (ಗು.) ಮೇಲಕ್ಕೆ ಕಾಣದೆ ಅಡಗಿಕೊಂಡಿರುವ ; ಹುದುಗಿರುವ ; ಗುಪ್ತ ; ಸುಪ್ತ ; ಅವ್ಯಕ್ತ ; (ವಿಕಾಸವಾಗದೆ) ಅಂತರ್ಗತವಾಗಿರುವ. L. heat (Heat ನೋಡಿ). **Látency** (ನಾ.) ; **Látently** (ಕ್ರಿ. ವಿ.)

Láteral ಲ್ಯಾಟೆರಲ್ (ಗು., ನಾ.) ಪಕ್ಕದ(ಲ್ಲಿಯ) ; ಪಕ್ಕದಿಂದ ; ಪಕ್ಕದ ಕಡೆಗಿರುವ ; ಪಾರ್ಶ್ವದ(ಲ್ಲಿಯ) ; ಪಾರ್ಶ್ವಸ್ಥ [L. branch (of family) ನೇರವಾದ ಸಂತತಿಯಲ್ಲಿ ಬರುವವನ ಸೋದರನ ಅಥವಾ ಸೋದರಿಯ ಸಂತಾನ ; ಪಾರ್ಶ್ವ ಶಾಖೆ]. (ನಾ.) ಪಕ್ಕ(ದ್ದು) ; ಪಾರ್ಶ್ವ ಭಾಗ, ಅಂಗ, ವಸ್ತು (ಮು., ಪಕ್ಕದಿಂದ ಹೊರಟ ರೆಂಬೆ, ಶಾಖೆ). **Láterally** (ಕ್ರಿ. ವಿ.)

Láterite ಲ್ಯಾಟೆರೈಟ್ (ನಾ.) ರಸ್ತೆ, ಮೊ. ಗಳಿಗಾಗಿ ಉಪಯೋಗಿಸುವ, ಕಬ್ಬಿಣಸಂಯುಕ್ತ ಪದಾರ್ಥಗೂಡಿದ, ಪುಡಿ ಪುಡಿಯಾಗುವ ಕೆಂಪು ಜೇಡು ಮೇಲ್ಮಣ್ಣು ; ಜಂಬು ಮಣ್ಣು : 'ಲ್ಯಾಟೆರೈಟ್'.

Látex ಲೇಟೆಕ್ಸ್ (ನಾ.) (ಸ. ವಿ.) ಮರ ಗಿಡಗಳ ಹಾಲು ; ಸಸ್ಯ ಕ್ಷೀರ. (ವ್ಯಾಪಾರದಲ್ಲಿ) ಕಚ್ಚಾ ರಬ್ಬರು.

Lath ಲಾತ್ (ನಾ. ; ಬ. ವ. -s, ಲಾದ್ಸ್ ; ಕ್ರಿ. ಸಕ.) (ಮಾಳಿಗೆಯ ಹೆಂಚು ಹೊದ್ದಿಸುವುದಕ್ಕಾಗಲಿ ಗಾರೆ ತಾರಸು ಹಾಕುವುದಕ್ಕಾಗಲಿ ಆಧಾರವಾಗಿ, ಅಥವಾ ಕಂಬಿಯ ಚೌಕಟ್ಟುಗಳ, ಮರೆ ತೆರೆಗಳ, ಅಡ್ಡಪಟ್ಟಿಗಳಾಗಿ, ಉಪಯೋಗಿಸುವ) ತೆಳುವಾದ, ಕಿರಿಯಗಲದ, ಮರದ ಪಟ್ಟಿ ; ರಿಪೀಸು ಪಟ್ಟಿ ; ಮರದ ದಬ್ಬೆ [As thin as a l. (ಮನುಷ್ಯರ ವಿಷಯದಲ್ಲಿ) ಕದಿರು ಕಡ್ಡಿಯಂತೆ (ತೆಳ್ಳಗಿರುವ). L. & plaster ಒಳಗೋಡೆಯ ಮುಖಗಟ್ಟು, ಚಾವಣಿಯ ಒಳಗಟ್ಟು, ತಡಿಕೆ ಗೋಡೆ, ಮೊ. ಗಳ ದಬ್ಬೆ ಮತ್ತು ಗಾರೆ ಸಾಮಾನು]. (ಕ್ರಿ.) (ಗೋಡೆಗೆ, ಚಾವಣಿಗೆ) ದಬ್ಬೆ, ರಿಪೀಸು, —ಹಾಕು. **Láthy** ಲಾತಿ (ಗು.) ; **Láthing** (ನಾ.)

Lathe ಲೇದ್ (ನಾ.) (ಮರ, ಲೋಹ, ದಂತ, ಮೊ. ವಸ್ತುವನ್ನು ತಕ್ಕ ಆಕಾರಕ್ಕೆ ಕಡೆಯುವುದಕ್ಕಾಗಿ, ಆ ಯಂತ್ರದಲ್ಲಿಯ ಹರಿತವಾದ ಉಳಿ, ಮೊ. ಕ್ಕೆ ಕೊಟ್ಟು ತಿರುಗಿಸುವಂತೆ ಏರ್ಪಾಡುಳ್ಳ) ಚರಕಿ ಯಂತ್ರ ; ಕಡೆತದ ಯಂತ್ರ (= Turning-l.) ; ಕುಂಬಾರನ ಚಕ್ರ (=Potter's l.). **L.-bearer, -carrier, -dog** ಕಡೆಯಬೇಕಾದ ವಸ್ತುವನ್ನು ಚರಕಿ ಯಂತ್ರದ ಕೇಂದ್ರಗಳಿಗೆ ಅಥವಾ ಹಿಡಿಕೆಗಳಿಗೆ ಬಂಧಿಸುವ ಸಲಕರಣೆ. **L.-bed** ಚರಕಿಯ ಭಾಗಗಳನ್ನು ತಕ್ಕಂತೆ ಅಳವಡಿಸುವುದಕ್ಕಾಗಿ ಒಂದು ತುದಿಯಿಂದ ಮತ್ತೊಂದು ತುದಿಯ ವರೆಗೂ ಗಾಡಿಯುಳ್ಳ ಚರಕಿ ಯಂತ್ರದ ತಳಚೌಕಟ್ಟು.

Láther ಲ್ಯಾದರ್ (ನಾ., ಕ್ರಿ.) ಸಾಬೂನನ್ನು ನೀರಿನಲ್ಲಿ ಉಜ್ಜಿದರೆ ಹೊರಡುವ ನೊರೆ : ಸಾಬೂನು ನೊರೆ. ಕುದುರೆಯ ನೊರೆಬೆವರು. (ಕ್ರಿ.) (ಗಡ್ಡ, ಮೊ. ಕ್ಕೆ, ಕ್ಷೌರಕ್ಕಾಗಿ) ಸಾಬೂನಿನ ನೊರೆ ಬಳಿ. (ಕುದುರೆ) ನೊರೆಬೆವರು ಕೂಡು. (ಸಾಬೂನು) ನೊರೆಗೂಡು ; ನೊರೆಯಾಗು. (ಬಳ. ಮಾ.) ಬಡಿ ; ಹೊಡೆ ; ಚೆಚ್ಚು ; ಅಪ್ಪಳಿಸು. **Láthery** (ಗು.) ; **Láthering** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Láthi ಲಾಠಿ (ನಾ.) (ಆಂ. ಇಂ.) ಇಂಡಿಯದ ಜನರೂ ಪೊಲೀಸಿನವರೂ ಆಯುಧವಾಗಿ ಉಪಯೋಗಿಸುವ, ಕಬ್ಬಿಣದ ಕಟ್ಟುಹಾಕಿದ, ಉದ್ದವೂ ಭಾರವೂ ಆದ, ದೊಣ್ಣೆ : ಲಾಠಿ ; ಲಟ್ಠ.

Latifúndia (L) ಲೇಟಿಫಂಡಿಯ (ನಾ., ಬ. ವ.) (ಮು., ಒಂದು ದೇಶದ ಸಾಮಾಜಿಕ ವ್ಯವಸ್ಥೆಗೆ ಲಕ್ಷಣವಾಗಿರುವ) ದೊಡ್ಡ ಜಮೀನ್ದಾರಿಗಳು.

Látin ಲ್ಯಾಟಿನ್ (ಗು., ನಾ.) ಇಟಲಿಯ ಲ್ಯಾಟಿಯಂ ಎಂಬ ಪುರಾತನ ಪ್ರಾಂತದ ; ಪುರಾತನ ರೋಮನರ ; — ರೋಮನ್ ಭಾಷೆ (ಯಂಥ) ; —ಭಾಷೆಯಲ್ಲಿಯ. ರೋ. ಕ್ಯಾ. ಚರ್ಚಿನ. (ಜನಾಂಗಗಳ ವಿಷಯದಲ್ಲಿ) ರೋಮನ್ ಪದ್ಧತಿ, ಸಂಪ್ರದಾಯ, ಮೊ. ನ್ನು ವಂಶ ಪಾರಂಪರ್ಯವಾಗುಳ್ಳ ; ಲ್ಯಾಟಿನ್ ಜನ್ಯ ಭಾಷೆಯನ್ನಾಡುವ (The L. peoples ಫ್ರಾನ್ಸ್, ಸ್ಪೈಯ್ನ್, ಪೋರ್ಚುಗಲ್, ಇಟಲಿ, ಮೊ. ದೇಶಗಳ ಜನರು). (ನಾ.) ಲ್ಯಾಟಿನ್ ಭಾಷೆ [Old L. (ಕ್ರಿ. ಪೂ. ೭೫ಕ್ಕೆ ಹಿಂದಿನ) ಹಳೆಯ ಲ್ಯಾಟಿನ್ ಭಾಷೆ. Classical L. (ಸುಮಾರು ಕ್ರಿ. ಪೂ. ೭೫ರಿಂದ ಕ್ರಿ. ಶ. ೧೭೫ರ ವರೆಗಿನ, ಈಚಿನ ಪ್ರಜಾಪ್ರಭುತ್ವದ ಮತ್ತು ರೋಮ್ ಚಕ್ರಾಧಿಪತ್ಯದ ಆದಿ ಕಾಲದ ಮಹಾ ಕವಿಗಳು ಉಪಯೋಗಿಸುತ್ತಿದ್ದ) ಪ್ರೌಢ ಲ್ಯಾಟಿನ್ ಭಾಷೆ. Late L. (ಕ್ರಿ. ಶ. ೧೭೫ರಿಂದ ೬೦೦ ರ ವರೆಗಿನ) ಈಚಿನ ಲ್ಯಾಟಿನ್ ಭಾಷೆ. Medieval L. (ಕ್ರಿ. ಶ. ೬೦೦ರಿಂದ ೧೫೦೦ರ ವರೆಗಿನ) ನಡು ಲ್ಯಾಟಿನ್ ಭಾಷೆ. Modern L. (ಕ್ರಿ. ಶ. ೧೫೦೦ರಿಂದೀಚೆಯ) ಆಧುನಿಕ ಲ್ಯಾಟಿನ್ ಭಾಷೆ. Low L. ನಡು ಲ್ಯಾಟಿನ್ ಅಥವಾ ನಡು ಲ್ಯಾಟಿನ್ನನ್ನು ಒಳಕೊಂಡ ಈಚಿನ ಲ್ಯಾಟಿನ್ ಭಾಷೆ. Thieves' L. ಕಳ್ಳರ ಸಂಕೇತ ಭಾಷೆ. Dog L. (Dog ನೋಡಿ)]. ಪುರಾತನ ರೋಮನ್ ಪ್ರಜೆ ; ಲ್ಯಾಟಿಯಂ ಪ್ರಜೆ. (ರೋ. ಪ್ರಾ.) ಚುನಾವಣೆಯ ವಿಶೇಷ ರಿಯಾಯಿತಿಯುಳ್ಳ ಇಟಲಿಯವನು. **Látinism** (ನಾ.) ; **Látinless** (ಗು.) ; **Látinist** (ನಾ.) ; **Latíne** (L) ಲಟೈನಿ (ಕ್ರಿ. ವಿ.) ಲ್ಯಾಟಿನ್ ಭಾಷೆಯಲ್ಲಿ (ಪದ, ಮೊ. ಕ್ಕೆ ಸಮಾನಾರ್ಥದ ಲ್ಯಾಟಿನ್ ಪದವನ್ನು ಕೊಡುವಲ್ಲಿ). **Latínity** ಲಟಿನಿಟಿ (ನಾ.) (ಒಬ್ಬನು) ಲ್ಯಾಟಿನ್ ಬರೆಯುವ ರೀತಿ ; ಲ್ಯಾಟಿನ್ ಶೈಲಿಯ, ವ್ಯಾಕರಣ ಪ್ರಯೋಗದ, —ಲಕ್ಷಣ, ಗುಣ. ಲ್ಯಾಟಿನ್ ಪ್ರಜೆಯ ಸ್ಥಾನ ಮಾನ. **Látinize** ಲ್ಯಾ— (ಕ್ರಿ.) (ಪದಕ್ಕೆ) ಲ್ಯಾಟಿನ್ ರೂಪ ಕೊಡು ; ಲ್ಯಾಟಿನ್ ಭಾಷೆಯಲ್ಲಿ ಹೇಳು, ಬರೆ. ಪುರಾತನ ರೋಮನರ, ಲ್ಯಾಟಿನ್ ಜನರ, ಲ್ಯಾಟಿನ್ ಚರ್ಚಿನ, ಅಭಿಪ್ರಾಯಗಳಿಗೆ, ಸಂಪ್ರದಾಯಗಳಿಗೆ, ಹೊಂದುವಂತೆ ಮಾಡು. ಲ್ಯಾಟಿನ್ ರೂಪಗಳು, ಭಾಷಾ ಮರ್ಯಾದೆಗಳು, ಮೊ. ನ್ನು ಉಪಯೋಗಿಸು. **Latinizátion** (ನಾ.) ; **Látinizer** (ನಾ.)

Latíne, Latínity, etc. **Latin** ನೋಡಿ.

Látitude ಲ್ಯಾಟಿಟ್ಯೂಡ್ (ನಾ.) ಸಂಕುಚಿತ ಭಾವನೆಯಿಲ್ಲದಿರುವುದು ; ಅರ್ಥಮಾಡುವುದರಲ್ಲಿ ಉದಾರ ಭಾವನೆ ; ಮನೋ ವೈಶಾಲ್ಯ. ಅವಕಾಶ ; ಸ್ವಾತಂತ್ರ್ಯ. (ಹಾಸ್ಯ ಪ್ರ.) ಅಗಲ (Hat with great l. of brim ಹೆಚ್ಚು ಅಗಲದ ಅಂಚುಳ್ಳ ಟೋಪಿ). (ವಿರ. ಪ್ರ.) ಪೂರ್ಣ ವಿಸ್ತಾರ ; ವ್ಯಾಪ್ತಿ (Understood, taken, in its proper l. ಅದರ ವಿಸ್ತಾರಾರ್ಥದಲ್ಲಿ, ಪೂರ್ಣ ವ್ಯಾಪ್ತಿಯಲ್ಲಿ, —ಗ್ರಹಿಸಿದಾಗ, ತೆಗೆದುಕೊಂಡಾಗ). ಆಚರಣೆಯ ಭೇದಗಳ, ಅಭಿಪ್ರಾಯ ಭೇದಗಳ, —ಸಹನೆ, ಸಹಿಷ್ಣುತೆ [**Latitudinárian** (ಗು., ನಾ.) (ಮು., ಮತ ಧರ್ಮಗಳ ವಿಷಯದಲ್ಲಿ) ಹೆಚ್ಚು ನಿಷ್ಠೆಯಿಲ್ಲದ, ಕಟ್ಟುನಿಟ್ಟಿಲ್ಲದ ; —ವನು ; ಸಾಧಾರಣ ನಿಷ್ಠ. **Latitudinárianism** (ನಾ.) ಸಾಧಾರಣ ನಿಷ್ಠೆ]. (ಭೂಗೋಳ ಶಾಸ್ತ್ರ) ಅಕ್ಷಾಂಶ (Degree, minute, etc., of l.) ; ಒಂದು ಸ್ಥಳದ (ಉ. ಅಥವಾ ದ.) ಅಕ್ಷಾಂಶ (In l. 40° N., etc.). (ಸಾ., ಬ. ವ. ದಲ್ಲಿ) (ಪ್ರ)ದೇಶಗಳು [(ಮು., ಶಾಬ ನಿರ್ದೇಶ ಸಂಬಂಧದಲ್ಲಿ) High latitudes ಭೂಮಧ್ಯ ರೇಖೆಗೆ ಬಹಳ ದೂರ ಉತ್ತರದಲ್ಲಿಯೊ ದಕ್ಷಿಣದಲ್ಲಿಯೊ ಇರುವ ಪ್ರದೇಶಗಳು, Low latitudes —ಸಮೀಪದಲ್ಲಿರುವ ಪ್ರದೇಶಗಳು]. (ಖ. ವಿ.) ಕ್ರಾಂತಿ ವೃತ್ತದಿಂದ ಒಂದು ಆಕಾಶ ಕಾಯಕ್ಕಿರುವ ಕೋನ ದೂರ ; ಅಕ್ಷಾಂಶ. **Latitúdinal** (ಗು.) (ಭೂಗೋಳ ಶಾಸ್ತ್ರ) ಅಕ್ಷಾಂಶದ.

Latríne ಲಟ್ರೀನ್ (ನಾ.) (ಮು., ಬೀಡಾರ, ಸಿಪಾಯಿಗಳ ವಾಸಸ್ಥಾನ, ಆಸ್ಪತ್ರೆ, ಮೊ. ಸ್ಥಳಗಳಲ್ಲಿಯ) ಕಕ್ಕಸು, ಪಾಯಿಖಾನೆ ಮನೆ ; ಕಾಲುಮಡಿ

Látter ಲ್ಯಾಟರ್ (ಗು.) (ಕಾಲಮಾನ, ಮೊ. ಗಳ) ಕೊನೆಯ, ಕೊನೆಗಾಲದ, ಕಡೆಯ, ಈಚಿನ (In these l. days ಪ್ರಪಂಚದ ಚರಿತ್ರೆಯ ಈಚಿನ ಕಾಲದಲ್ಲಿ. L. end ಸಾವು). (ಪ್ರಾಚೀ. ಪ್ರ.) ತರುವಾಯದ ; ಎರಡನೆಯ [L. grass (ಮೊದಲನೆಯ ಕೊಯ್ಲಾದ ಮೇಲೆ ಆಗುವ) ಎರಡನೆಯ ಹುಲ್ಲಿನ ಬೆಳೆ]. ಎರಡನೆಯ(ದಾಗಿ ಹೇಳಿದ) ; (ಹೇಳಿದುದರಲ್ಲಿ) ಎರಡನೆಯದಾದ ; ಉತ್ತರ [(Former ಪದಕ್ಕೆ ಎದುರು ಪದ). The l. (ಹೇಳಿದುದರಲ್ಲಿ) ಎರಡನೆಯದು, ಎರಡನೆಯವನು (ಎಂಬುದಕ್ಕೆ ಸಂಕ್ಷಿಪ್ತ). **L.-day** ಆಧುನಿಕ (ಕಾಲದ) (L.-day saints 'ಮಾರ್ಮನ್' ಪಂಥದವರು)]. **Látterly** (ಕ್ರಿ. ವಿ.) (ಜೀವಮಾನದ, ಒಂದು ಕಾಲಮಾನದ) ಕಡೆಯಲ್ಲಿ, (ಕೊನೆ) ಕೊನೆಗೆ ; ಇತ್ತೀಚೆಗೆ ; ಈಚೆಗೆ.

Láttice ಲ್ಯಾಟಿಸ್ (ನಾ.) ತಡಕೆ, ಬಾಗಿಲು, ಮುಂತಾದುವಾಗಿ ಮಾಡುವ, ಮಧ್ಯೆ ಮಧ್ಯೆ ಕಂಡಿಗಳುಳ್ಳ, ಅಡ್ಡ ಪಟ್ಟಿಗಳ ಚೌಕಟ್ಟು : ಜಾಲಕ ; ಜಾಳಂದರ ; ಹೀಗೆ ಅಳವಡಿಸಿದ ಪಟ್ಟಿಗಳು (=l.-work). L. bridge ಜಾಳಂದರದ (ಉಕ್ಕಿನ) ಸರಕಟ್ಟಿನ ಸೇತುವೆ. L. frame or girder ಎರಡು ಉದ್ದವಾದ ಸರಳುಪಟ್ಟಿಗಳ ಮಧ್ಯೆ ಕಬ್ಬಿಣದ ಜಾಳಂದರದ ಚೌಕಟ್ಟನ್ನು ಹಾಕಿ ಒಂದುಗೂಡಿಸಿದ ಸರ(ಕಟ್ಟು) : ಜಾಳಂದರದ ಸರಕಟ್ಟು. L. window ಜಾಳಂದರದ ಕಿಟಕಿ ; ವಜ್ರಾಕೃತಿಯ ಸಣ್ಣ ಗಾಜುಬಿಲ್ಲೆಗಳ(ನ್ನು ಸೀಸದ ಚೌಕಟ್ಟಿನ ಜಾಲಕದ ಕಂಡಿಗಳಿಗೆ ಅಳವಡಿಸಿ ಮಾಡಿದ) ಕಿಟಕಿ. **Látticed** (ಗು.) ; **Látticing** (ನಾ.)

Laud ಲಾಡ್ (ನಾ., ಕ್ರಿ. ಸಕ.) (ದೇವರ) ಸ್ತೋತ್ರ (ಸ್ತೋತ್ರಗೀತಗಳಲ್ಲಿ ವಿನಾ ವಿರ. ಪ್ರ.). (ಬ. ವ. ದಲ್ಲಿ) ಸ್ತೋತ್ರ ಗೀತೆ. (ಕ್ರಿ.) ಸ್ತೋತ್ರ ಮಾಡು ; ಶ್ಲಾಘಿಸು ; ಕೊಂಡಾಡು. **Laúdable** (ಗು.) ಮೆಚ್ಚತಕ್ಕ ; ಹೊಗಳತಕ್ಕ ; ಶ್ಲಾಘ್ಯ ; ಸ್ತುತ್ಯ. (ವೈ. ಶಾ.: ಸ್ರಾವಗಳ ವಿಷಯದಲ್ಲಿ) ಆರೋಗ್ಯವಾದ ; ಕುಂದಿಲ್ಲದ. **Laudabílity** (ನಾ.) ; **Laúdably** (ಕ್ರಿ. ವಿ.) ; **Laudátion** (ನಾ.) ; **Laúdative** (ಗು.) ; **Laudátor** (ನಾ.) ; **Laúdatory** (ಗು.)

Laúdanum ಲಾಡ್ನಮ್ (ನಾ.) ಅಫೀಮಿನ ಮದ್ಯಸಾರದ ಧೃತಿ.

Laugh ಲಾಫ್, ಲ್ಯಾಫ್ (ಕ್ರಿ., ನಾ.) ನಗು [L. in one's sleeve ತನ್ನೊಳಗೇ ನಗು, ವಿನೋದಪಡು ; ಬಾಯಿ ಮುಚ್ಚಿಕೊಂಡು ನಗು. Laughing hyena (Hyena ನೋಡಿ). Laughing Jackass (Jack[1] ನೋಡಿ). L. on the wrong side of mouth ನಗುವಿನಿಂದ ಅಳುವಿಗೆ, ವಿನೋದದಿಂದ ಕೋಪಕ್ಕೆ, ತಿರುಗು ; ಅಳು. He laughs best who laughs last ಮೊದಲಿಗೆ ಮೊದಲೇ ಬೀಗಬಾರದು ; ಜಯಕ್ಕೆ ಮೊದಲೇ ಹೆಕ್ಕಳಿಸಬೇಡ]. (ನೀರು, ಸ್ಥಳ, ದೃಶ್ಯ, ಪಯಿರು, ಮೊ. ವು) ನಲಿದಾಡು, ಕುಣಿದಾಡು, ಕಳಕಳಿಸು. ನಗುತ್ತ ಹೇಳು ; ಹಾಸ್ಯಕ್ಕೆ ಗುರಿಮಾಡು [L. at ತಮಾಷೆ ಮಾಡು ; ಹಾಸ್ಯ ಮಾಡು ; ನೋಡಿ (ಮುಗುಳು ನಗೆ) ನಗು ; ಪ್ರಸನ್ನತೆಯಿಂದ, ಮುಗುಳು ನಗೆಯಿಂದ ನೋಡು. L. out of (ಒಬ್ಬನ ಅಭ್ಯಾಸ, ನಂಬಿಕೆ, ಮೊ. ನ್ನು) ಹಾಸ್ಯಮಾಡಿ ತಪ್ಪಿಸು. L. out of court (ಒಬ್ಬನನ್ನು, ಒಂದು ಅಭಿಪ್ರಾಯವನ್ನು) ಗೇಲಿ ಮಾಡಿ ಅದಕ್ಕೆ ಗಮನ ಕೊಡದಂತೆ ಮಾಡು. L. away (ಒಂದು ವಿಷಯವನ್ನು) ನಕ್ಕು ತಿರಸ್ಕರಿಸಿಬಿಡು, ಗಮನ ಕೊಡದೆ ತಳ್ಳಿಬಿಡು ; ಕಾಲವನ್ನು ನಗುತ್ತ, ವಿನೋದದಿಂದ, ಕಳೆದುಬಿಡು. L. down ನಕ್ಕು ಬಾಯಿ ಮುಚ್ಚಿಸು. L. off (ತೊಡಕು, ಪೇಚಾಟ, ಮೊ. ನ್ನು) ನಕ್ಕು ಪರಿಹರಿಸಿಕೊ. L. over ನಗುತ್ತ ಚರ್ಚೆಮಾಡು]. (ನಾ.) ನಗು ; ನಗೆ ; ನಗುವಿನ ಧ್ವನಿ [Join in the l. ಗೇಲಿಗೆ ಗುರಿಯಾದವನು (ಅದನ್ನು ತಮಾಷೆಯಾಗಿ ಭಾವಿಸಿ) ತಾನೂ ಸೇರಿಕೊಂಡು ನಗು. Have, get, the l. of ಹಾಸ್ಯಮಾಡುತ್ತಿದ್ದವನನ್ನೇ ಹಾಸ್ಯಕ್ಕೆ ಗುರಿಪಡಿಸು]. **Laúgher** (ನಾ.) ; **Laúghing**[1]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಗು.); **Laúghingly** (ಕ್ರಿ. ವಿ.); **Laúghable** (ಗು.) ನಗು ಬರಿಸುವ; ತಮಾಷೆಯ; ಹಾಸ್ಯಾಸ್ಪದವಾದ. **Laúghably** (ಕ್ರಿ. ವಿ.); **Laúghing**[2] (ನಾ.) (ಕ್ರಿಯಾರ್ಥಗಳಲ್ಲಿ). No l. matter ನಗುವಂಥದಲ್ಲ; ಗಮನಾರ್ಹವಾದ, ವಿಚಾರಾರ್ಹವಾದ, —ವಿಷಯ. **L.-gas** (ಉಸಿರಿನಿಂದ ಎಳೆದುಕೊಂಡಾಗ ಮತ್ತುಬರಿಸುವ, ವೇದನ ಪ್ರತಿಕಾರಿಯಾಗಿ ಉಪಯೋಗಿಸುವ) 'ನೈಟ್ರಸ್ ಆಕ್ಸೈಡ್' ಅನಿಲ. **L.-stock** (ಸಾಮಾನ್ಯವಾಗಿ) ಹಾಸ್ಯಕ್ಕೆ ಗುರಿಯಾದವನು, ಗುರಿಯಾದದ್ದು; ನಗೆಗೇಡಿ; ನಗೆಗೇಡಾದದ್ದು. **Laúghter** (ನಾ.) ನಗೆ; ನಗು [Homeric l. (ಹೋಮರ್ ಕವಿ ಹೇಳುವಂತೆ, ಪರಿಹಾಸ ಸಂದರ್ಭದಲ್ಲಿ) ಪ್ರೇಕ್ಷಕರು ಗೊಳ್ಳೆಂದು ನಗುವ ಗಟ್ಟಿ ನಗು]

Launch ಲಾನ್ಚ್, ಲಾಂಚ್ (ಕ್ರಿ., ನಾ.) (ಕ್ಷಿಪಣಿ, ಏಟು, ಖಂಡನೆ, ಬೆದರಿಕೆ, ತೀರ್ಪು —ಇವನ್ನು) ಎಸೆ, ಬೀರು, ಬಿಡು, ಪ್ರಯೋಗಿಸು. (ಒಂದು ಉದ್ಯಮದಲ್ಲಿ) ಪ್ರವೇಶಿಸು, ಮುನ್ನುಗ್ಗು (*Forth*, *out* ಉಪ. ಜೊಡನೆ) (L. out into expense ಹಿಂದು ಮುಂದು ನೋಡದೆ ವೆಚ್ಚ ಮಾಡು. L. out into strong language ಕಟುವಾಗಿ ಮಾತನಾಡು). (ಹಡಗನ್ನು, ದೋಣಿ ಬಾರಿ) ನೀರಿನೊಳಕ್ಕೆ ತೇಲಬಿಡು, ಸಮುದ್ರಕ್ಕೆ ಬಿಡು. (ನಾ.) (ಹಡಗನ್ನು, ದೋಣಿ ಬಾರಿ) ಸಮುದ್ರಕ್ಕೆ ಬಿಡುವುದು; ಯುದ್ಧದ ಹಡಗಿನ ಅತ್ಯಂತ ದೊಡ್ಡ ದೋಣಿ; (ಪ್ರಯಾಣ, ವಿಹಾರ, ಮೊ. ಗಳಿಗಾಗಿ ಉಪಯೋಗಿಸುವ) ವಿದ್ಯುತ್ತಿನ ಅಥವಾ ಆವಿಯ ದೊಡ್ಡ ದೋಣಿ.

Laúnder, etc. **Laundry** ನೋಡಿ.

Laúndry ಲಾಂಡ್ರಿ (ನಾ.) ಬಟ್ಟೆಗಳನ್ನು ಒಗೆದು ಚಲುವೆ ಮಾಡುವ ಉದ್ಯೋಗದ ಏರ್ಪಾಡು; ದೋಬಿ ಖಾನೆ; ಚಲುವೆಗಾಗಿ ಕಳುಹಿಸಿದ, ಚಲುವೆಯಾದ, ಬಟ್ಟೆಗಳು. **Laúnder** ಲಾಂಡರ್ (ಕ್ರಿ.) (ಮು., ಭೂ. ಕೃ. ನಲ್ಲಿ) (ಬಟ್ಟೆ) ಒಗೆದು ಚಲುವೆ ಮಾಡು, —ಆಗು. **Laúndress** ಲಾಂಡ್ರೆಸ್ (ನಾ.) ಅಗಸಗಿತ್ತಿ, ಮಡಿವಾಳಗಿತ್ತಿ. 'Inns of Court' ಎಂಬ ವಕೀಲ ಸಂಘಗಳಲ್ಲಿ ಕೋಣೆಗಳ ಉಸ್ತುವಾರಿ ನೋಡಿಕೊಳ್ಳುವವಳು.

Laúreate ಲಾರಿಯೆಟ್ (ಗು., ನಾ.) 'ಲಾರೆಲ್' ಎಲೆಯ ಕಿರೀಟವನ್ನು, ದಂಡೆಯನ್ನು, ಧರಿಸಿದ; (ಕಿರೀಟ, ದಂಡೆ) 'ಲಾರೆಲ್' ಎಲೆಯಿಂದ ಮಾಡಿದ; ಕವಿಯಾಗಿ ಗೌರವಕ್ಕೆ, ಪ್ರಶಸ್ತಿಗೆ, ಯೋಗ್ಯತೆ ಪಡೆದ. (ನಾ.) (ರಾಜಾಸ್ಥಾನದಲ್ಲಿ ಗೀತಗಳನ್ನು ಬರೆಯಲು ವೇತನ ಪಡೆಯುವ) ಆಸ್ಥಾನ ಕವಿ; ರಾಜ ಕವಿ (= Poet l.). **Laúreateship** (ನಾ.)

Laúrel ಲಾರೆಲ್ (ನಾ., ಕ್ರಿ. ಸಕ.) ಹೊಳಪು ಎಲೆಗಳುಳ್ಳ ಒಂದು ಗುಲ್ಮ ಜಾತಿ; ಜಯದ, ಕವಿತಾ ಪ್ರಶಸ್ತಿಯ, ಚಿಹ್ನೆಯಾದ 'ಬೇ' ಮರದ ಎಲೆ ಗುಂಪಲು [Reap, win, laurels ಪ್ರಶಸ್ತಿ ಪಡೆ, ಸಂಪಾದಿಸು. Rest on one's laurels (ಹಿಂದೆ ಸಂಪಾದಿಸಿರುವುದಕ್ಕಿಂತ) ಹೆಚ್ಚು ಪ್ರಶಸ್ತಿಗೆ ಪ್ರಯತ್ನಿಸದಿರು. Look to one's laurels ಹಿಂದಿನ ಖ್ಯಾತಿಗೆ ಲೋಪ ಬರದಂತೆ ಎಚ್ಚರಿಕೆಯಿಂದಿರು. L.-bottle ಕ್ರಿಮಿ ಕೀಟಗಳನ್ನು ಕೊಲ್ಲಲು 'ಲಾರೆಲ್' ಎಲೆಗಳನ್ನು ತುಂಬಿರುವ ಸೀಸೆ]. (ಕ್ರಿ.) 'ಲಾರೆಲ್' ದಂಡೆ ಮುಡಿಸು, ಹಾಕು.

Láva ಲಾವ (ನಾ.) ಜ್ವಾಲಾಮುಖಿಯಿಂದ ಹೊರಟು ಪ್ರವಹಿಸುವ ಪದಾರ್ಥ: ಶಿಲಾ ಪ್ರವಾಹ; ಇದು ಆರಿದಮೇಲೆ ಆಗುವ ಘನ ಪದಾರ್ಥ.

Lavátion, Lávatory. **Lave** ನೋಡಿ.

Lave ಲೇವ್ (ಕ್ರಿ. ಸಕ.) (ಕಾವ್ಯ) (ಮ್ಯ್ತಾ) ತೊಳೆ; ಸ್ನಾನ ಮಾಡು(ಡಿಸು). (ಹೊಳೆ, ಮೊ. ವು) (ಒಂದರ ಮೇಲೆ) ಹರಿ, ಪ್ರವಹಿಸು. **Lávement** (ನಾ.) (ವೈ. ಶಾ.) ಪಿಚಕಾರಿಯಿಂದ (ದ್ರವವನ್ನು) ಒಳನುಗ್ಗಿಸುವುದು; ದ್ರವವನ್ನು ಗುದ ದ್ವಾರದಿಂದ—: 'ಎನೀಮ'. **Lavátion** ಲವೇಷನ್ (ನಾ.) ತೊಳೆಯುವುದು; ತೊಳೆತ; ಪ್ರಕ್ಷಾಳನ. **Lávatory** ಲ್ಯಾವಟೊರಿ (ನಾ.) (ಪ್ರಾಚೀ. ಪ್ರ.) ತೊಳೆದುಕೊಳ್ಳಲು ಇಟ್ಟಿರುವ ಪಾತ್ರೆ; ಕೈ, ಕಾಲು, ಮುಖ, ಮೊ. ನ್ನು ತೊಳೆದುಕೊಳ್ಳುವುದಕ್ಕಾಗಿ ಮಾಡಿರುವ ಕೋಣೆ (ಅನೇಕ ವೇಳೆ, ನೀರ ಹರಿತದಿಂದ ಮೂತ್ರ, ಮಲ, ಮೊ. ವು ಕೊಚ್ಚಿಹೋಗುವ ಏರ್ಪಾಡುಳ್ಳದ್ದು); ಕ್ಷಾಲನ.

Lávender ಲ್ಯಾವೆಂಡರ್ (ನಾ., ಕ್ರಿ. ಸಕ.) ಸುವಾಸನಾ ದ್ರವ್ಯಕ್ಕಾಗಿ ಬೆಳೆಯುವ, ನಸು ನೀಲಿ ಹೂವೂ ಕಿರುಎಲೆಗಳೂ ಉಳ್ಳ, ಒಂದು ಸಣ್ಣ ಗುಲ್ಮ ಜಾತಿ: ಲ್ಯಾವೆಂಡರ್ (ಸಸ್ಯ). (ಬಟ್ಟೆ, ಮೊ. ವನ್ನು ಹುಳು ತಿನ್ನದಂತೆ, ಪದರಗಳ ಮಧ್ಯೆ ಇಡುವ) ಇದರ ಹೂವೂ ಕಡ್ಡಿಗಳೂ [Lay up in l. (ರೂಪ.) ಮುಂದಿನ ಉಪಯೋಗಕ್ಕಾಗಿ ತೆಗೆದಿಡು]. ಸ್ವಲ್ಪ ಕೆಂಪು ಛಾಯೆಗೂಡಿದ ನಸು ನೀಲಿಯ ಬಣ್ಣ. (L.-water ಲ್ಯಾವೆಂಡರಿನ ಹೂವುಗಳಿಂದ ಬಟ್ಟಿಯಿಳಿಸಿ ತೆಗೆದು ಮದ್ಯಸಾರವನ್ನೂ ಪನ್ನಂಬರ ವೆಂಬ ಸುಗಂಧ ದ್ರವ್ಯವನ್ನೂ ಸೇರಿಸಿ ತಯಾರಿಸಿದ ಸುಗಂಧ ದ್ರವ: 'ಲ್ಯಾವೆಂಡರ್' ಪನ್ನೀರು). (ಕ್ರಿ.) (ಬಟ್ಟೆಗಳ ಮಧ್ಯೆ) ಲ್ಯಾವೆಂಡರನ್ನು ಇಡು.

Láverock = Lark[1].

Lávish ಲ್ಯಾವಿಷ್ (ಗು., ಕ್ರಿ. ಸಕ.) ತಡೆಯಿಲ್ಲದೆ, ಧಾರಾಳವಾಗಿ, — ಕೊಡುವ, ಉತ್ಪತ್ತಿಮಾಡುವ; ವಿಪುಲ; ಪುಷ್ಕಲ; ಅದ್ದೂರಿ (*Of* money, etc., *in* giving); ಅಪರಿಮಿತ; ಅತಿಯಾದ; ಬಹಳ ದುಂದಿನ; (ಹಣ, ಪ್ರಯತ್ನ, ರಕ್ತ, ಮೆಚ್ಚಿಕೆ, ಮೊ. ನ್ನು) ಧಾರಾಳವಾಗಿ, ಅತಿಯಾಗಿ, —ಕೊಡು, ವ್ಯಯಮಾಡು, ಚೆಲ್ಲು. **Lávishly** (ಕ್ರಿ. ವಿ.); **Lávishness** (ನಾ.); **Lávishment** (ನಾ.)

Law[1] ಲಾ (ನಾ.) ಒಂದು ಸಮಾಜವು ಅನುಸರಿಸಲು ಅಂಗೀಕರಿಸಿರುವ ಶಾಸನಸಭಾ ರಚಿತವಾದ ಅಥವಾ ಸಂಪ್ರದಾಯ ರೂಢವಾದ ವಿಧಿಗಳು, ಕಟ್ಟಳೆಗಳು; ವ್ಯವಹಾರ ನಿಬಂಧನೆ; ನ್ಯಾಯ ಶಾಸ್ತ್ರ [The l. forbids, allows ನ್ಯಾ. ಶಾ. ನಿಷೇಧಿಸುತ್ತದೆ, ಅವಕಾಶ ಕೊಡುತ್ತದೆ. The l. of the land ನಾಡಿನ ಕಟ್ಟಳೆ. The l. of the Medes & Persians ಮಾರ್ಪಡಿಸಲಾಗದ, ಅಚಲತ, —ನಿಯಮ. Lay down the l. ಅಧಿಕಾರಯುತವಾಗಿ ಹೇಳು; ಹೆಮ್ಮೆಯಿಂದ, ದರ್ಪದಿಂದ, ಆಜ್ಞೆ ಮಾಡು]; ನಿಯಮ; ಕಟ್ಟಳೆ; ಕಾನೂನು; ಕಾಯಿದೆ; ಶಾಸನ [L. & order ನ್ಯಾಯ ಪರಿಪಾಲನೆ ಮತ್ತು ಶಿಸ್ತು (ಶಾಂತಿ ರಕ್ಷಣೆ). Necessity knows no l. ಆವಶ್ಯಕತೆ ನ್ಯಾಯ ನಿಯಮಗಳನ್ನು ಲೆಕ್ಕಿಸುವುದಿಲ್ಲ. Be a l. unto oneself ತನ್ನದೇ ಆದ ಮಾರ್ಗವನ್ನು ಹಿಡಿ; ಸಂಪ್ರದಾಯವನ್ನು ಲಕ್ಷಿಸದಿರು]; ನ್ಯಾಯ ಪದ್ಧತಿ [Court of l. (Court ನೋಡಿ). Son-in-law, etc. (Son ನೋಡಿ). Learned in the l. ನ್ಯಾಯ ಶಾಸ್ತ್ರ ಪ್ರವೀಣ. Read l. ನ್ಯಾಯಶಾಸ್ತ್ರಾಭ್ಯಾಸ ಮಾಡು]; ವ್ಯವಹಾರ ಧರ್ಮ ಶಾಸ್ತ್ರ; ಕಟ್ಟುಮಾಡುವ ಆದೇಶಗಳು, ನಿಯೋಗಗಳು [Give the l. to (ಮತ್ತೊಬ್ಬನಮೇಲೆ) ತನ್ನ ಅಭಿಪ್ರಾಯವನ್ನು ಹೊರಿಸು; (ಮತ್ತೊಬ್ಬನನ್ನು) ತನ್ನ ಅಭಿಪ್ರಾಯದಂತೆ ನಡೆಯಲು ನಿರ್ಬಂಧಿಸು]; ನ್ಯಾ. ಶಾ. ದ ಒಂದು ಭಾಗ, ಶಾಖೆ [Commercial l. ವಾಣಿಜ್ಯ ನ್ಯಾ. ಶಾ. The l. of evidence ಸಾಕ್ಷ್ಯದ, ಪ್ರಮಾಣದ, —ನ್ಯಾ. ಶಾ. Civil, common, martial, l. (ಆಯಾ ಪದವನ್ನು ನೋಡಿ). International l., L. of nations ರಾಷ್ಟ್ರಗಳಿಗೆ ಪರಸ್ಪರ ವ್ಯವಹಾರ ಸಂಬಂಧವನ್ನು ನಿಯಂತ್ರಿಸುವ ನ್ಯಾ. ಶಾ.; ಅಂತರ ರಾಷ್ಟ್ರೀಯ ನ್ಯಾ. ಶಾ.]. ಶಾಸನ ನ್ಯಾಯ [ಎದುರು ಪದ: ಧರ್ಮ ನ್ಯಾಯ (Equity ನೋಡಿ). Good, bad, etc., l. ಸಂಗತವಾದ ಕಾನೂನುಗಳಿಂದ ಸಿದ್ಧಿಸಿದ್ದು, ಸಿದ್ಧಿಸದ್ದು (It may be common sense, but it is not l. ಅದು ವಿವೇಕ ಸಮ್ಮತವಾಗಿರಬಹುದು, ಆದರೆ ಕಾನೂನು ಸಮ್ಮತವಲ್ಲ]; ನ್ಯಾಯ ವೃತ್ತಿ; ವಕೀಲ ವೃತ್ತಿ (The l. ವಕೀಲ ವೃತ್ತಿ. Bred to the l. ವಕೀಲಗೆ ತರಪೇತಾದ); ನ್ಯಾಯಶಾಸ್ತ್ರ ಜ್ಞಾನ; ಕಾನೂನಿನ ಪರಿಹಾರ; (ಪರಿಹಾರ ಕೊಡುವ) ನ್ಯಾಯ ಸ್ಥಾನ; ನ್ಯಾಯ ವ್ಯವಹಾರ [Go to l. ನ್ಯಾಯ ಸ್ಥಾನಕ್ಕೆ ಹೋಗು; ದಾವಾ ಹಾಕು. Have, take, the l. of person (ಒಬ್ಬನಮೇಲೆ) ದಾವಾ ಹಾಕು; ಒಬ್ಬನನ್ನು ಕೋರ್ಟಿಗೆ ಎಳೆ. Take

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

the l. into one's own hands (ಸಂಭವಿಸಿದ ಕೆಡುಕಿಗೆ, ನಷ್ಟಕ್ಕೆ) ತಾನೇ ಬಲಪ್ರಯೋಗ ಮಾಡಿ ಪರಿಹಾರ ಪಡೆ. The L.-courts ಮು., the Royal Courts of Justice (Royal ನೋಡಿ)]. (ಯೆಹೂದ್ಯ ಪ್ರವಾದಿ) ಮೋಸೆಸ್ಸಿನ ವಿಧಿಗಳು, ನಿಯಮಗಳು, ಉಪದೇಶ (= L. of Moses); (ಮು., ಒಂದು ಕಲೆಯಲ್ಲಿ, ಜೀವನ ರಂಗದಲ್ಲಿ, ಅಥವಾ ವ್ಯಾಯಾಮ ಕ್ರೀಡೆಯಲ್ಲಿ) ಕಾರ್ಯ ನಿಯಮ, —ವ್ಯವಸ್ಥೆ; (ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ನಿರ್ದಿಷ್ಟ ಫಲ ದೊರೆಯುವ, ನಿಶ್ಚಲ ಸಂಬಂಧವನ್ನು ಹೇಳುವ) ಸೂತ್ರ, ವಿಧಿ; ಪ್ರಕೃತಿ ನಿಯಮ; ಸ್ವಭಾವ ನಿಯಮ (= L. of nature, Natural l.); [Laws of motion ನ್ಯೂಟನ್ ಎಂಬ ವೈಜ್ಞಾನಿಕನು ಸೂತ್ರೀಕರಿಸಿದ ಮೂರು ಚಲನ ನಿಯಮಗಳು, ಸೂತ್ರಗಳು. Gresham's l. ಕೆಟ್ಟ ನಾಣ್ಯವು ಒಳ್ಳೆಯ ನಾಣ್ಯವನ್ನು (ಚಲಾವಣೆಯಿಂದ) ದೂಡಿಬಿಡುತ್ತದೆಂಬ ನಿಯಮ. Kepler's laws ಕೆಪ್ಲರ್ ಎಂಬ ಖಗೋಳ ವೈಜ್ಞಾನಿಕನು ಪ್ರತಿಪಾದಿಸಿದ ಗ್ರಹ ಗತಿಗಳ ಮೂರು ಸೂತ್ರಗಳು. Grimm's, Verner's, l. ಜರ್ಮ್ಯಾನಿಕ್ ಭಾಷೆಗಳಲ್ಲಿ ವ್ಯಂಜನ ವ್ಯತ್ಯಾಸಗಳ ಸೂತ್ರಗಳು]; ಪ್ರಕೃತಿ(ಯಲ್ಲಿ ಕಾಣುವ) ನಿಯಮಾನುಸರಣೆ; ಪ್ರಕೃತಿ ನಿಯಮಗಳು (Where they saw chance, we see l. ಆಕಸ್ಮಿಕ ಸಂಘಟನೆಯೆಂದು ಅವರು ತಿಳಿದ ಸಂದರ್ಭದಲ್ಲಿ ನಾವು ನಿಯಮಾನುಸರಣೆಯನ್ನು ಕಾಣುತ್ತೇವೆ. L. of Nature ಪ್ರಕೃತಿ ನಿಯಮ. L. of Reason ದೈವ ಸಮ್ಮತವೆಂದಾಗಲಿ ವಿವೇಕ ಸಮ್ಮತವೆಂದಾಗಲಿ ಅಂಗೀಕೃತವಾದ ಆಚರಣೆಯ ತತ್ತ್ವಗಳು). (ಆಟ, ಬೇಟೆ, ಮೊ. ಗಳಲ್ಲಿ) ಬೇಟೆಗೆ, ಸ್ಪರ್ಧಿಗೆ, ಕೊಟ್ಟ ಕಾಲಾವಕಾಶ, ರಿಯಾಯಿತಿ. **L.-abiding(ness)** ನ್ಯಾಯ ಬದ್ಧ(ತೆ); ನ್ಯಾಯಾನುಸರಣೆ. **L. calf** ನ್ಯಾಯಶಾಸ್ತ್ರ ಪುಸ್ತಕಗಳಿಗೆ ರಟ್ಟು ಕಟ್ಟುವಲ್ಲಿ ಉಪಯೋಗಿಸುವ ಕರುವಿನ (ಬಣ್ಣ ಹಾಕದ) ತೊಗಲು. **L.-court** (Court ನೋಡಿ). **L. French** ನ್ಯಾಯಶಾಸ್ತ್ರ ಪುಸ್ತಕಗಳಲ್ಲಿ ಪ್ರಯೋಗಿಸುವ ಆಂಗ್ಲೊ ನಾರ್ಮನ್ ಪದಗಳು. **Lawgiver** ನ್ಯಾಯ ನಿಬಂಧನೆಗಳನ್ನು ರಚಿಸುವವನು. **Law-hand** ದಸ್ತೈವಜುಗಳನ್ನು ಬರೆಯುವಲ್ಲಿ ಉಪಯೋಗಿಸುವ ಕೈಬರಹ. **L. Latin** ಮೊದಮೊದಲಿನ ಇಂಗ್ಲಿಷ್ ನ್ಯಾಯ ನಿಬಂಧನೆಗಳ ಅಸಂಸ್ಕೃತ ಲ್ಯಾಟಿನ್ ಭಾಷೆ. **L.-lord** ಪಾರ್ಲಿಮೆಂಟಿನ ಶ್ರೀಮಂತ ಸಭೆಯ ನ್ಯಾಯ ವ್ಯವಹಾರ ಕೆಲಸದಲ್ಲಿ ಭಾಗವಹಿಸಲು ಅರ್ಹನಾದ ಶ್ರೀಮಂತ ಸದಸ್ಯ. **L.-maker** ಶಾಸನಕಾರ; ಸ್ಮೃತಿ ಕರ್ತ. **L. merchant** (ಕೆಲವು ಸಂದರ್ಭಗಳಲ್ಲಿ ಸಾಮಾನ್ಯ ಕಾನೂನಿಗೆ ಹೊಂದದ) ವ್ಯಾಪಾರ ವಾಣಿಜ್ಯಗಳನ್ನು ನಿಯಂತ್ರಿಸುವ ನ್ಯಾಯ ನಿಬಂಧನೆಗಳು. **L.-officer** ನ್ಯಾಯ ನಿರೂಪಣಾಧಿಕಾರಿ. **L.-stationer** ನ್ಯಾಯವಾದಿಗಳಿಗೆ ಬೇಕಾದ ಬರೆವಣಿಗೆಯ ಸಾಮಾನುಗಳನ್ನು ಮಾರುವ, ದಸ್ತೈವಜುಗಳನ್ನು ದಪ್ಪಕ್ಷರದಲ್ಲಿ ಕಾನೂನಿಗನುಸಾರವಾಗಿ ಬರೆಯಲು ತೆಗೆದುಕೊಳ್ಳುವ, ವ್ಯಾಪಾರಿ. **Lawsuit** (ಹಕ್ಕುಸ್ಥಾಪನೆಗೆ ನ್ಯಾಯಸ್ಥಾನದಲ್ಲಿ ಹೂಡುವ) ದಾವೆ, ಮೊಕದ್ದಮೆ, ವ್ಯಾಜ್ಯ. **Law-term** ನ್ಯಾಯಶಾಸ್ತ್ರದ ಪಾರಿಭಾಷಿಕ ಪದ. ನ್ಯಾಯಸ್ಥಾನಗಳು ತೆರೆದು ಕೆಲಸಮಾಡುವ ವರ್ಷಭಾಗ. **L.-writer** ನ್ಯಾಯಶಾಸ್ತ್ರ ಲೇಖಕ; ದಸ್ತೈವಜು ಬರೆಯುವವನು. **Laẃful** (ಗು.) ಶಾಸನಾನುಸಾರವಾದ; ಶಾಸನ ವಿಹಿತವಾದ. ನ್ಯಾಯ ಸಮ್ಮತವಾದ; (ಮಗು) ಧರ್ಮಸಂತಾನದ. **Laẃfully** (ಕ್ರಿ. ವಿ.); **Laẃfulness** (ನಾ.); **Laẃless** (ಗು.) (ದೇಶ, ಮೊ. ಗಳ ವಿಷಯದಲ್ಲಿ) ಕಾನೂನೇ ಇಲ್ಲದ; ಕಾನೂನು ಜಾರಿಯಲ್ಲಿಲ್ಲದ; ನ್ಯಾಯವನ್ನು ಲಕ್ಷಿಸದ; ಶಾಸನೋಲ್ಲಂಘನೆ ಮಾಡುವ; ಶಾಸನಬದ್ಧವಾಗಿರದ. ಹತೋಟಿಗೆ ಮೀರಿದ; ಸ್ವಚ್ಛಂದ; ಪುಂಡಾಟದ. **Laẃlessness** (ನಾ.); **Laẃyer** (ನಾ.) ನ್ಯಾಯ ವೃತ್ತಿಯವನು; ನ್ಯಾಯ ವಾದಿ; ವಕೀಲ; ನ್ಯಾಯಶಾಸ್ತ್ರ ಪಂಡಿತ (Good, no, l.). Penang l. ಪೆನಾಂಗಿನ ತಾಳೆಯ (ಕೈ)ಕೋಲು.

Law², **Laws** ಲಾ, ಲಾಸ್ (ಭಾವ. ಅವ್ಯ.) (ಆಶ್ಚರ್ಯ ಸೂಚಕ ಪದ)

Lawn¹ ಲಾನ್ (ನಾ.) (ಮು., ಬಿಷಪ್ಪಿನ ಅಂಗಿಯ ತೋಳಿಗೆ ಉಪಯೋಗಿಸುವ) ಒಂದು ತೆರದ ನಯವಾದ ಬಟ್ಟೆ. L. sieve ನಾರು ಬಟ್ಟೆಯ ಅಥವಾ ರೇಷ್ಮೆಬಟ್ಟೆಯ ಜರಡಿ. **Laẃny¹** (ಗು.) 'ಲಾನ್' ಬಟ್ಟೆಯಿಂದ ಮಾಡಿದ; 'ಲಾನ್' ಉಡುಪು ಧರಿಸಿದ. ಬಿಷಪ್ಪಿನ.

Lawn² ಲಾನ್ (ನಾ.) (ಪ್ರಾಚೀ. ಪ್ರ.) ಅಡವಿಯ ನಡುವಣ ಬಯಲು. ಹುಲ್ಲು ಮೈದಾನ (ಪ್ರದೇಶ); (ಹುಲ್ಲನ್ನು ಒತ್ತಾಗಿ ಕತ್ತರಿಸಿದ) ಹುಲ್ಲಿನ ತೆಂಡೆ ಕಟ್ಟಿರುವ ವಿಹಾರ ಪ್ರದೇಶ, ಅಥವಾ ಉದ್ಯಾನ; ಹಚ್ಚನೆಯ ಬಯಲು; ಹಸಲೆ. **L.-mower** ಮೈದಾನದ ಹುಲ್ಲು ಕತ್ತರಿಸುವ (ಸುತ್ತು ತಿರುಗುವ ಸುರುಳಿಕತ್ತಿಗಳುಳ್ಳ) ಯಂತ್ರ: ಹಸಲೆ ಕತ್ತರಿ. **L.-sprinkler** ಹುಲ್ಲುಮೈದಾನಕ್ಕೆ ನೀರೆರೆಯುವ (ಕೊಳವೆಯ ಮೂತಿ ಸುತ್ತು ತಿರುಗುವಂತೆ ಅಳವಡಿಸಿರುವ) ಒಂದು ಯಂತ್ರ. **L. tennis** ಹುಲ್ಲು ತೆಂಡೆ ಕಟ್ಟಿದ, ಕಲ್ಲರಗು ಮೊ. ಗಳಿಂದ ಮಾಡಿದ, ಸಮ ನೆಲದಮೇಲೆ ಆಡುವ, ಒಂದು ತೆರದ ಟೆನಿಸ್ ಆಟ. **Laẃny²** (ಗು.) ಹುಲ್ಲುಮೈದಾನದ(ಂಥ); ನಯವಾದ ಹುಲ್ಲು ಬೆಳೆದಿರುವ.

Laẃyer. **Law¹** ನೋಡಿ.

Lax ಲ್ಯಾಕ್ಸ್ (ಗು.) ಸಡಿಲವಾದ; ಅಳ್ಳಕವಾದ; ದಟ್ಟವಲ್ಲದ. (ವಿರ. ಪ್ರ.) ಸರಂಧ್ರ. ಅಸಡ್ಡೆಯ; ಅಲಕ್ಷ್ಯದ; ಅಜಾಗರೂಕತೆಯ; ಖಂಡಿತವಲ್ಲದ; ಕಟ್ಟುನಿಟ್ಟಿಲ್ಲದ; ಬಿಗಿಯಿಲ್ಲದ; ಅನಿಶ್ಚಯದ. **Láxity** (ನಾ.); **Láxly** (ಕ್ರಿ. ವಿ.); **Láxative** ಲ್ಯಾಕ್ಸಟಿವ್ (ಗು., ನಾ.) ಮಲ ವಿಸರ್ಜನೆ (ಭೇದಿ) ಮಾಡಿಸುವ (ಔಷಧ); ಭೇದಿಯೌಷಧ; ವಿರೇಚಕ.

Lay¹ ಲೇ (ನಾ.) ಹಾಡುವುದಕ್ಕಾಗಿ ರಚಿಸಿದ ಸಣ್ಣ ಗೀತೆ, ಅಥವಾ ಕಥನ ಕವಿತೆ. (ಶಿಥಿಲವಾಗಿ) ಹಾಡು; ಗೀತೆ; ಪದ್ಯ; ಹಕ್ಕಿಹಾಡು.

Lay² ಲೇ (ಗು.) ಪುರೋಹಿತನ, ಯತಿಯ, ವರ್ಗಕ್ಕೆ ಸೇರಿಲ್ಲದ; (ಕ್ರೈಸ್ತ) ದೀಕ್ಷೆಪಡೆದಿಲ್ಲದ; ಲೌಕಿಕ; ಲೌಕಿಕರ; —ರು ಮಾಡಿದ. (ಶಾಸ್ತ್ರ, ಕಲೆ, ಕಸಬು, ಮೊ. ಗಳಲ್ಲಿ) ಪರಿಶ್ರಮವಿಲ್ಲದ (ಮು., ನ್ಯಾಯ ಅಥವಾ ವೈದ್ಯ ವಿಷಯದಲ್ಲಿ). (ಇಸ್ಪೀಟಾಟ) ತುರುಫಲ್ಲದ (L. suit, card). L. brother, sister (ಕ್ರೈಸ್ತ) ಮತದೀಕ್ಷೆಯನ್ನು ಪಡೆದು ವೈದಿಕ ಉಡುಪನ್ನು ಧರಿಸಿ, ಆದರೆ ಇತರ ಕರ್ತವ್ಯಗಳಿಂದ ವಿನಾಯಿತಿ ಪಡೆದು, ಕೈ ಕೆಲಸ ಮಾಡುವವನು(ಳು). L. clerk (ಕ್ರೈಸ್ತ) ಪ್ರಮುಖ ಆರಾಧನ ಮಂದಿರದ, ಅಥವಾ ಪ್ರೌಢ ವಿದ್ಯಾಶಾಲೆಯ ಚರ್ಚಿನ, ಗಾಯಕ; ಗ್ರಾಮದ ಕ್ರೈಸ್ತ ಮಂದಿರದ ಲೌಕಿಕಾಧಿಕಾರಿ. L. communion ಚರ್ಚಿನ ಲೌಕಿಕ ಸದಸ್ಯತ್ವ; ಪ್ರಭು ಭೋಜನದಲ್ಲಿ ಲೌಕಿಕರು ಭಾಗ ವಹಿಸುವುದು. L. lord (ಪಾರ್ಲಿಮೆಂಟಿನ ಶ್ರೀಮಂತ ಸಭೆಯಲ್ಲಿ) ನ್ಯಾಯ ವ್ಯವಹಾರ ಕಾರ್ಯದಲ್ಲಿ ಸಹಾಯಕನಲ್ಲದ ಸಾಮಾನ್ಯ ಶ್ರೀಮಂತ ಸದಸ್ಯ. Layman ಜನಸಾಮಾನ್ಯದಲ್ಲೊಬ್ಬ; ಲೌಕಿಕ. ಒಂದು ವೃತ್ತಿಯ, ಕಲೆಯ, ಶಾಸ್ತ್ರದ (ಮು., ವೈದ್ಯದ) ಪರಿಶ್ರಮ, ಪಾಂಡಿತ್ಯ, —ಇಲ್ಲದವನು. L. reader (ಕ್ರೈಸ್ತ) ಮತ ಸಂಸ್ಕಾರಗಳನ್ನು ನಡಸಲು ಅಧಿಕಾರ ಪಡೆದಿರುವ ಲೌಕಿಕ. **Láity** ಲೇಯಿಟಿ (ನಾ.) ಲೌಕಿಕತನ; ಲೌಕಿಕರು; ಯಾವುದಾದರೊಂದು ವೃತ್ತಿಗೆ ಸೇರಿರದವರು; ಕಸಬುದಾರರಲ್ಲದವರು; ಯಾವುದಾದರೊಂದು ಶಾಸ್ತ್ರ ಪಂಡಿತ ವರ್ಗಕ್ಕೆ ಸೇರಿರದವರು.

Lay³ ಲೇ (ಕ್ರಿ.; ಭೂತ., ಭೂ. ಕೃ. Laid; ನಾ.) ಮುಖವಡಿಯಾಗಿ ಮಲಗು, —ಗಿಸು; (ಮಲಗುವಂತೆ) ಕೆಳಕ್ಕೆ ಬೀಳಿಸು (L. low ಶರಣು ಹೊಗಿಸು; ಸೊಕ್ಕು ಮುರಿ; ನಮ್ರ ಮಾಡು). (ಗಾಳಿ, ಮಳೆ) (ಪಯಿರನ್ನು) ನೆಲಕ್ಕೆ ಕೆಡವು. (ಸಮುದ್ರ, ಗಾಳಿ, ದೂಳು, ಶಂಕೆ, ಭೂತ, ಮೊ. ನ್ನು) ಅಡಗಿಸು, ಶಾಂತ ಮಾಡು. ಇಡು; ಮಡಗು; ಹೊರಿಸು; ಒರಗಿಸಿಡು [L. to sleep or rest ಹುಗಿ; ಹೂಳು; ಸಮಾಧಿ ಮಾಡು (ರೂಪ. ಸಹ). L. one's bones in (ಒಂದು ನಿರ್ದಿಷ್ಟ ಸ್ಥಳದಲ್ಲಿ) ಸಮಾಧಿಯಾಗು, ಹೂಳಲ್ಪಡು]. (ಹೇಂಟೆ) (ಮೊಟ್ಟೆ) ಇಡು, ಹಾಕು. (ಹಣ, ತಲೆ, ಪ್ರಾಣ, ಮೊ. ನ್ನು) ಪಂತವಾಗಿಡು, ಪಣವೊಡ್ಡು, ಪೈಜೆಯಿಡು; ಬಾಜಿ ಕಟ್ಟು. [L. to heart (Heart ನೋಡಿ). L. heads together ಸಹಾಲೋಚನೆ ನಡಸು. L. a spark to the train ಸಿಡಿಮದ್ದಿನ ಸಂಚಯ, ಮೊ. ಕ್ಕೆ ಬೆಂಕಿ ಒಯ್ಯುವ ಜಾವಿಗೆಬತ್ತಿ ಹಚ್ಚು. L. hold on or of ಹಿಡಿದುಕೊ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಹಿಸು ; (ರೂಪ.) ಎದುರಾಳಿಯ ಕುಂದು ಕೊರತೆಗಳನ್ನು ತನ್ನ ಅನುಕೂಲಕ್ಕೆ ತಿರುಗಿಸಿಕೊ. L. great store upon ಹೆಚ್ಚು ಬೆಲೆಯುಳ್ಳದ್ದಾಗಿ ಭಾವಿಸು. L. wait (Wait ನೋಡಿ). L. siege to ಮುತ್ತಿಗೆ ಹಾಕು ; ಒತ್ತಿ ಒತ್ತಿ ಬೇಡಿಕೊ. Scene of tale is laid in Delhi ಕಥಾ ದೃಶ್ಯವನ್ನು ಡಿಲ್ಲಿಯಲ್ಲಿದ್ದಂತೆ ವರ್ಣಿಸಿದೆ. L. hands on ತುಡುಕು ; ಕೈ ಹಾಕು ; ಹಿಡಿದುಕೊ ; ಬಳಸಿಕೊ ; ಕೈ ಮಾಡು ; ಘಾಸಿ ಮಾಡು (ಮು., L. hands on oneself ಆತ್ಮಹತ್ಯ ಮಾಡಿಕೊ). I cannot l. my hands upon it ಅದು ನನ್ನ ಕೈಗೆ ಸಿಕ್ಕುವಂತಿಲ್ಲ]. (ಕ್ರೈಸ್ತ) ದೀಕ್ಷೆ ಕೊಟ್ಟದ್ದನ್ನು ಪುಷ್ಟೀಕರಿಸುವುದಕ್ಕಾಗಿ ಕೈಗಳನ್ನು (—ಮೇಲೆ) ಇಡು. (ಫಿರಂಗಿಯನ್ನು) ಗುರಿಯಿಡು. L. land fallow ಜಮೀನನ್ನು ಬಂಜರು ಬಿಡು. L. person under obligation ಒಬ್ಬನನ್ನು ಋಣಿಯಾಗಿ ಮಾಡು. L. person under necessity (ಒಬ್ಬನನ್ನು) ಕಟ್ಟುಬೀಳುವಂತೆ ಮಾಡು. L. person under contribution (ಹಣ, ಮೊ. ನ್ನು) ತೆರುವಂತೆ ಮಾಡು. L. bare ಬತ್ತಲೆ ಮಾಡು ; ಬಯಲು ಮಾಡು ; ರಟ್ಟು ಮಾಡು. L. waste ಹಾಳು ಕೆಡವು ; ನೆಲಸಮ ಮಾಡು. L. open ತೆರೆದಿಡು ; ಬಹಿರಂಗ ಮಾಡು ; ವಿಶದ ಪಡಿಸು. (ಚರ್ಮ, ಸಿಪ್ಪೆ) ಸುಲಿ. L. fast, by the heels ಬೇಡಿ ಹಾಕು ; ಬಂಧನದಲ್ಲಿಡು. L. aboard (Aboard ನೋಡಿ). L. claim to (something) (ಒಂದಕ್ಕೆ) ಹಕ್ಕು ಹೂಡು. L. an information ಕಾನೂನನುಸರಿಸಿ ಅಪಾದನೆ ಹೊರಿಸು. The minister will l. papers on the table ಸದಸ್ಯರ ಅವಗಾಹನೆಗಾಗಿ ಮಂತ್ರಿ ಆವಶ್ಯಕವಾದ ಕಾಗದ ಪತ್ರಗಳನ್ನು ಪ್ರಕಟಪಡಿಸುತ್ತಾನೆ. He laid his damages at a thousand rupees ಅವನು ತನ್ನ ನಷ್ಟಪರಿಹಾರಕ್ಕಾಗಿ ಒಂದು ಸಾವಿರ ರೂಪಾಯನ್ನು ಹೊರಿಸಿದನು. L. to his charge, at or to his door (ಈಗಿನ ಪ್ರ.) ಅವನಮೇಲೆ ತಪ್ಪು ಹೊರಿಸು ; ಅವನ ತಲೆಗೆ ಕಟ್ಟು. An additional duty was laid on windows ಕಿಟಕಿಗಳಿಡುವುದಕ್ಕಾಗಿ ಬೇರೆ ತೆರವನ್ನು ಹೊರಿಸಲಾಯಿತು. L. stress, weight, emphasis, on —ನ್ನು ಒತ್ತಿ ಹೇಳು. L. blows on, L. it on ಏಟು ಹೊಡೆ ; ಚಚ್ಚು. L. into (ಅಸಂ.) ನಡೆ ಬಡಿ. L. about one ಎಲ್ಲ ಕಡೆಯಿಂದಲೂ ಹೊಡೆ. L. foundation ಪಾಯ, ಅಸ್ತಿಭಾರ, — ಹಾಕು. L. table, cloth, or breakfast (ಮೇಜನ್ನು) ಊಟಕ್ಕೆ ಅಣಿಮಾಡು. L. the fire ಹೊತ್ತಿಸುವುದಕ್ಕೆ ಉರುವಲನ್ನು ಸಿದ್ಧವಾಗಿಡು. The manner of laying the yarns into ropes ಹಗ್ಗಮಾಡುವುದಕ್ಕೆ ಹುರಿಗಳನ್ನಿಡುವ ರೀತಿ. His design had been long laid ಅವನು ತನ್ನ ಹಂಚಿಕೆಯನ್ನು ಹಿಂದೆಯೇ ಹಾಕಿದ್ದನು. L. one's account (with) ಲೆಕ್ಕಾಚಾರದಲ್ಲಿ ಸೇರಿಸಿಕೊಂಡಿರು ; ನಿರೀಕ್ಷಿಸು. L. on paint ಬಣ್ಣ ಬಳಿ. Laid paper (ತಯಾರಿಕೆಯಲ್ಲಿ ಉಪಯೋಗಿಸುವ) ತಂತಿಗುರುತುಗಳು ಎದ್ದುಕಾಣುವ ಕಾಗದ. L. aside or by ಒಂದು ಕಡೆ ಇಟ್ಟುಬಿಡು ; ಬಳಸದಿರು ; ಅಭ್ಯಾಸ ಮಾಡುವುದನ್ನು ಬಿಡು ; (ವಿಷಯವನ್ನು) ಆಲೋಚಿಸದಿರು. ಬಿಟ್ಟುಬಿಡು ; ತ್ಯಜಿಸು. (ಹಣ, ಮೊ. ನ್ನು) ಮುಂದಿನ ಉಪಯೋಗಕ್ಕೆ ಮಿಗಿಸಿಡು, ಎತ್ತಿಡು. L. down ನೆಲದ ಮೇಲೆ, ಕೆಳಗೆ, ಇಡು (L. down one's arms ಕೈದುಗಳನ್ನು ಕೆಳಗಿಡು ; ಶರಣಾಗತನಾಗು) ; (ಅಧಿಕಾರ, ಆಸೆ) ಬಿಟ್ಟುಬಿಡು. (ಹಣ) ಕೊಟ್ಟುಬಿಡು ; ಪಣವೊಡ್ಡು. (ಪ್ರಾಣವನ್ನು) ಬಲಿಕೊಡು, ತೆರು. (ಹಡಗನ್ನು, ರೈಲನ್ನು) ಕಟ್ಟಲು, ಹಾಕಲು, —ಆರಂಭಿಸು. ಕಟ್ಟು, ಹಾಕು. (ವಿಧಿ, ನೀತಿ, ಮಾರ್ಗ —ಇವನ್ನು) ನಿರ್ಣಯಿಸಿ ಹೇಳು [L. down the law (Law[1] ನೋಡಿ)]. ಕಾಗದದಮೇಲೆ (ನಕ್ಷೆ, ಮೊ. ನ್ನು) ಬರೆದಿಡು. (ಜಮೀನಿನಲ್ಲಿ) ಹುಲ್ಲಿನ, ಮೇವಿನ, ಬೆಳೆಯಿಡು (*In, to, under, with* ಉಪ. ದೊಡನೆ). (ದ್ರಾಕ್ಷಾ ಮದ್ಯವನ್ನು) ನೆಲಮಾಳಿಗೆಯಲ್ಲಿ ಶೇಖರಿಸಿಡು. L. in ಕೂಡಿಡು ; ಸಂಗ್ರಹಿಸು. (ಬಳ. ಮಾ.) ಏಟು ಸುರಿಸು. L. off (ಕ್ರಿ.) (ಪ್ರಾಂ. ಪ್ರ. ಮತ್ತು ಅಮೆ. ನಂ.) (ಕೆಲಸ) ನಿಲ್ಲಿಸಿಬಿಡು ; ಕೆಲಸದಿಂದ (ಕೆಲಸಗಾರನನ್ನು) ತೆಗೆದುಬಿಡು. (ಜಮೀನು, ಮೊ. ನ್ನು) ಭಾಗಗಳಾಗಿ, ಪ್ರತ್ಯೇಕಿಸಿ, ಗುರುತು ಮಾಡು. Lay-off (ನಾ.) ಒಬ್ಬ ಕೆಲಸಗಾರನನ್ನು ಹಂಗಾಮಿಯಾಗಿ ವಜಾಮಾಡಿರುವ ಕಾಲ ; ಗಿರಾಕಿಯಿಲ್ಲದ, ಕೆಲಸ ಕಡಮೆಯಾಗಿರುವ, ಕಾಲ. L. on (ತೆರಿಗೆ, ಆಜ್ಞೆ, ದಂಡ) ವಿಧಿಸು. ಏಟು ಕೊಡು ; ಏಟಿನಮೇಲೆ ಏಟು ಹೊಡೆ ; (ಚಾಟಿ, ಮೊ. ಗಳಿಂದ) ಹೊಡೆ. (ಬಣ್ಣ, ಮೊ. ನ್ನು) ತೊಡೆ ; ಹಚ್ಚು (L. it on thick or with a trowel ಅತಿ ಸ್ಪಷ್ಟವಾಗಿ, ವಿಪರೀತವಾಗಿ, ಹೊಗಳು). (ಬೇಟೆನಾಯಿಗಳನ್ನು) ವಾಸನೆ ಹಿಡಿದು ಹೋಗಲು ಬಿಡು. (ಅನಿಲ, ನೀರು, ವಿದ್ಯುಚ್ಛಕ್ತಿ —ಇವನ್ನು ಒದಗಿಸುವ) ಕೊಳಾಯಿ, ಮೊ. ನ್ನು ಅನುಗೊಳಿಸು. L. out ಹರಡು ; ಕಣ್ಣಿಗೆ ಕಾಣುವಂತೆ ತೆರೆದಿಡು. (ಹೆಣವನ್ನು) ಹೂಳುವುದಕ್ಕೆ ಸಿದ್ಧಮಾಡು. (ಅಸಂ.) ಕೊಲ್ಲು. (ಹಣವನ್ನು) ವೆಚ್ಚಮಾಡು. (ಒಂದು ಕೆಲಸ ಮಾಡಲು) ಶ್ರಮ ವಹಿಸು, ಹೆಣಗು. ಒಂದು ಹಂಚಿಕೆಯನ್ನನುಸರಿಸಿ (ಹೊಲ, ತೋಟ, ಮೊ. ನ್ನು) ರೂಪುಗೊಳಿಸು. L. up ಕೂಡಹಾಕು ; ಶೇಖರಿಸು. (ಹಡಗನ್ನು) ಉಪಯೋಗದಿಂದ ತೆಗೆದುಬಿಡು. (ಹಣ) ಉಳಿಸಿಡು ; ಕೂಡಿಡು. (ಕರ್ಮಣಿಯಲ್ಲಿ) ಕಾಯಿಲೆಯಿಂದ ಮಲಗಿರು, ಹಾಸಿಗೆ ಹತ್ತಿರು.

Lay (ನಾ.) (ಅಸಂ.) ಉದ್ಯೋಗ ; ಜೀವನೋಪಾಯ. (ಹಗ್ಗದ ಹುರಿಗಳಲ್ಲಿಯ) ತಿರಿಚು, ತಿರಿಚಿನ ಮೊತ್ತ. ಯಾವುದಾದರೊಂದು (ಮು., ಒಂದು ದೇಶ) ಇರುವ ಸ್ಥಾನ, ದಿಕ್ಕು. L.-out ನೆಲ, ಮೊ. ಗಳ ವಿನ್ಯಾಸ, ರೂಪಣ. **Laýer** (ನಾ., ಕ್ರಿ.) (ಕ್ರಿಯಾರ್ಥಗಳಲ್ಲಿ). ಪದರ ; ಸ್ತರ ; ವರಿಸೆ ; (ಮೇಲ್ಮೈಮೇಲೆ ಹರಡಿರುವ, ತೊಡೆದಿರುವ, ವಸ್ತುವಿನ) ಒಂದು ವರಿಸೆ. (ತೋಟಗಾರಿಕೆ) ಬೇರು ಬಿಟ್ಟು ಬೇರೆ ಗಿಡವಾಗುವುದಕ್ಕಾಗಿ ಭೂಮಿಯಲ್ಲಿ ಹೂಳಿಟ್ಟ ಮೂಲ ಸಸ್ಯಕ್ಕೆ ಸೇರಿರುವ ರೆಂಬೆ [(ಕ್ರಿ.) ಹೀಗೆ ಗಿಡದ ರೆಂಬೆ ಹೂತು ಸಸ್ಯವೃದ್ಧಿ ಮಾಡು]. (ಬ. ವ. ದಲ್ಲಿ) ನೆಲಕ್ಕೊರಗಿದ ಪಯಿರಿನ ಪಟ್ಟೆಗಳು [(ಕ್ರಿ.) (ಧಾನ್ಯದ ಪಯಿರು) ಬೆಳವಣಿಗೆಯಲ್ಲಿ ಶಕ್ತಿಗುಂದಿ ನೆಲಕ್ಕೊರಗು]. ಚಿಪ್ಪಿನ ಪ್ರಾಣಿಗಳ ಕೂಡಲಿನ ಪ್ರದೇಶ. Good, bad, l. (ಹೇಂಟೆಗಳ ವಿಷಯದಲ್ಲಿ) ಚೆನ್ನಾಗಿ ಮೊಟ್ಟೆಯಿಡುವದು, ಮೊಟ್ಟೆಯಿಡದ್ದು. Layers & backers ಕುದುರೆ, ಮೊ. ಗಳ ಮೇಲೆ, ಪರವಾಗಿ ಅಥವಾ ವಿರೋಧವಾಗಿ, ಪಂದ್ಯ ಕಟ್ಟುವವರು. **Laýered** (ಗು.)

Laýer. **Lay**[3] ನೋಡಿ.

Layétte (F) ಲೆಯೆಟ್ (ನಾ.) ಆಗತಾನೆ ಹುಟ್ಟಿದ ಮಗುವಿಗೆ ಆವಶ್ಯಕವಾದ ಬಟ್ಟೆಬರೆ, ಹಾಸಿಗೆ ಮತ್ತು ಇತರ ಸಾಮಾನುಗಳು.

Laý figure ಲೇ ಫಿಗರ್ (ನಾ.) ಬಟ್ಟೆಬರೆಯನ್ನು ಅಳವಡಿಸಿ ಮಾದರಿ ನೋಡುವುದಕ್ಕಾಗಿ, ಮರದ ತುಂಡುಗಳನ್ನು ಹೊಂದಿಸಿ ಮಾಡಿದ, ಕಲೆಗಾರರು ಉಪಯೋಗಿಸುವ, ಮನುಷ್ಯಾಕೃತಿ ; ಗೊಂಬೆ. ಗಣ್ಯನಲ್ಲದವನು ; ಅನಾಮಧೇಯ. (ಕಾದಂಬರಿ, ಮೊ. ಗಳಲ್ಲಿ) ನಿಸ್ಸಾರವಾದ, ತಿರುಳಿಲ್ಲದ, — ವ್ಯಕ್ತಿ.

'**Laýstall** ಲೇಸ್ಟಾಲ್ (ನಾ.) ತಿಪ್ಪೆಯ ರಾಶಿ.

Lázar ಲೇಸರ್ (ನಾ.) (ಪ್ರಾಚೀ. ಪ್ರ.) ದರಿದ್ರನೂ ರೋಗಿಯೂ ಆದವನು (ಮು., ಕುಷ್ಠ ರೋಗಿ). **L.-house** = **Lazarét(to)** ಲ್ಯಾಸರೆಟ್(ಟೊ) (ನಾ.) ದರಿದ್ರರೂ ರೋಗಿಗಳೂ ಆದವರ (ಮು., ಕುಷ್ಠ ರೋಗಿಗಳ) ಆಸ್ಪತ್ರೆ; ಹೊರಗಿನಿಂದ ಬಂದವರನ್ನು ಸೋಂಕು ರೋಗದ ಭಯದಿಂದ ಪ್ರತ್ಯೇಕವಾಗಿಟ್ಟಿರಲು ಏರ್ಪಡಿಸಿದ ಕಟ್ಟಡ, ಹಡಗು ; ಹಡಗಿನ ತಳಕ್ಕೂ ಅದರ ಮೇಲಿನ ಅಟ್ಟಕ್ಕೂ ಮಧ್ಯೇ ಇರುವ, ಉಗ್ರಾಣವಾಗಿ ಉಪಯೋಗಿಸುವ, ಹಡಗಿನ ಹಿಂಭಾಗ.

Lazarét(to). **Lazar** ನೋಡಿ.

Lázarus ಲ್ಯಾಸರಸ್ (ನಾ.) ಭಿಕ್ಷಗಾರ ; ತಿರುಕ ; ಬಡವ ; ಕುಷ್ಠ. L. & Dives ತಿರುಕರು ಮತ್ತು ಧನಿಕರು.

Laze. **Lazy** ನೋಡಿ.

Lázuli = Lapis lazuli.

Lázy ಲೇಸಿ (ಗು., ಕ್ರಿ.) ದುಡಿಯಲು ಮನಸ್ಸಿಲ್ಲದ ; ಕೆಲಸಗಳ್ಳನಾದ ; ಸೋಮಾರಿಯಾದ ; ಮೈಗಳ್ಳನಾದ ; ಸೋಮಾರಿತನವನ್ನುಂಟುಮಾಡುವ [**L.-bed** (ಇಕ್ಕಡೆಯೂ ಕಾಲುವೆಯಿರುವ, ಆರಡಿ ಅಗಲವಾದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉರುಳುಗಡ್ಡೆ (ಬೆಳಸುವ) ಪಾತಿ. **L.-bones** ಸೋಮಾರಿ ; ಮೈಗಳ್ಳ. **L. pinion** ಒಂದು ಹಲ್ಲುಚಕ್ರದಿಂದ ಮತ್ತೊಂದಕ್ಕೆ ಚಲನ ಸಾಗಿಸುವ ಸಣ್ಣ ಹಲ್ಲುಚಕ್ರ]. (ಕ್ರಿ.) =Laze. **Laze** (ಕ್ರಿ., ನಾ.) (ಬಳ. ಮಾ.) ಸೋಮಾರಿಯಾಗಿರು ; ಸೋಮಾರಿತನದಲ್ಲಿ (ಕಾಲ) ಕಳೆ (*Away* ಉಪ. ದೊಡನೆ). (ನಾ.) ಸೋಮಾರಿತನದಲ್ಲಿ ಕಳೆದ ಹೊತ್ತು. **Lázily** (ಕ್ರಿ. ವಿ.) ; **Láziness** (ನಾ.)

Lea[1] ಲೀ (ನಾ.) (ಕಾವ್ಯ) ಬಯಲು (ಮು., ಹುಲ್ಲುಮೈದಾನ)

Lea[2] ಲೀ (ನಾ.) [ಬೇರೆ ಬೇರೆ ಪ್ರಾಂತಗಳಲ್ಲಿ (೩೦೦, ೨೦೦, ೧೨೦ ಮತ್ತು ೮೦ ಗಜದ) ಬೇರೆ ಬೇರೆ ಪ್ರಮಾಣಗಳ] ನೂಲಿನ ಅಳತೆ.

Leach ಲೀಚ್ (ಕ್ರಿ. ಸಕ.) ಒಂದು ಪದಾರ್ಥದ ಮೂಲಕ (ದ್ರವ) ತೂರಿ ಹೋಗುವಂತೆ ಮಾಡು. (ದ್ರವದಲ್ಲಿ ವಿಲೀನವಾಗುವ ವಸ್ತುಗಳನ್ನು ಪ್ರತ್ಯೇಕಿಸಲು ತೊಗಟೆಯಲ್ಲಿ, ಅದುರಿನಲ್ಲಿ) ದ್ರವ ತೂರಿಹೋಗುವಂತೆ ಮಾಡು ; ಹೀಗೆ (ವಿಲೀನವಾಗುವ ವಸ್ತುಗಳನ್ನು) ಪ್ರತ್ಯೇಕಿಸು (*Away* ಉಪ. ದೊಡನೆ)

Lead[1] ಲೆಡ್ (ನಾ.) ಭಾರವಾಗಿಯೂ ಮೆತುವಾಗಿಯೂ ತಗಡು ಬಡಿಯಬಹುದಾಗಿಯೂ ಶಾಖದಿಂದ ಸುಲಭವಾಗಿ ಕರಗುವುದಾಗಿಯೂ ಇರುವ ಮಂಕಾದ ನಸು ನೀಲ ನರೆ ಬಣ್ಣದ, ಒಂದು ಲೋಹ: ಸೀಸ [Red l. ವರ್ಣದ್ರವ್ಯವಾಗಿ ಉಪಯೋಗಿಸುವ ಸೀಸದ ಆಮ್ಲಜನಕ ಸಂಯುಕ್ತ ; ಸಿಂದೂರ ; ಚಂದ್ರ. White l. ಲೆಡ್ ಕಾರ್ಬೊನೇಟ್ ಮತ್ತು ಜಲಸಂಯುಕ್ತ ಲೆಡ್ ಆಕ್ಸೈಡುಗಳ ಮಿಶ್ರಣವಾದ ವರ್ಣದ್ರವ್ಯ ; ಸಫೇದು (=Ceruse). Black-l. *or* l. (Black ನೋಡಿ). Ounce of l. ಬಂದೂಕಿನ ಗುಂಡು, ಗೋಲ]. ನೀರಿನ ಆಳ ಕಂಡುಹಿಡಿಯಲು ಉಪಯೋಗಿಸುವ ಸೀಸದ ತುಂಡು ; ಆಳದ ಗುಂಡು [Cast, heave, the l. ಆಳದ ಗುಂಡನ್ನು ಬಿಡು, ಎತ್ತು. Arm the l. (ಸಮುದ್ರತಳದ ಗುಣವನ್ನು ತಿಳಿಯುವುದಕ್ಕಾಗಿ) ಆಳದ ಗುಂಡಿನ ಅಡಿಯ ಪೊಳ್ಳಿಗೆ ಚರಬಿ ತುಂಬು. Swing the l. (ನಾವಿಕ ಮತ್ತು ಸೈನಿಕ ಅಸಂ.) ಕೆಲಸ ತಪ್ಪಿಸಿಕೊಳ್ಳುವುದಕ್ಕಾಗಿ ರೋಗ ನಟಿಸು, ರೋಗ ಬೆಳಸು]. (ಬ. ವ. ದಲ್ಲಿ) ಚಾವಣಿಗೆ ಹೊದಿಸುವ ಸೀಸದ ಹಾಳೆಗಳು ; ಸೀಸ(ದ ಹಾಳೆ) ಹೊದಿಸಿದ (ಸಾ., ಸಮತಲದ) ಚಾವಣಿ. ಕಂಬಿ ಚೌಕಟ್ಟಿನ ಅಥವಾ ಬಣ್ಣದ ಕಿಟಕಿಯ ಗಾಜುಬಿಲ್ಲೆಗಳನ್ನು ಹಿಡಿದುಕೊಂಡಿರುವ ಸೀಸದ ಚೌಕಟ್ಟು. (ಮುದ್ರಣ) (ಅಕ್ಷರದ ಸಾಲುಗಳ ನಡುವಣ ಅಂತರವನ್ನು ಹೆಚ್ಚಿಸಲು ಉಪಯೋಗಿಸುವ) ಲೋಹದ ತೆಳುಪಟ್ಟಿ. L. comb (ಕೂದಲನ್ನು ಕಪ್ಪಗೆ ಮಾಡಲು ಉಪಯೋಗಿಸುವ) ಸೀಸದ ಹಣಿಗೆ. L. pencil ಸೀಸದ ಕಡ್ಡಿ. L.-poisoning (ಸೀಸವು ದೇಹದೊಳಕ್ಕೆ ಸ್ವಲ್ಪ ಸ್ವಲ್ಪವಾಗಿ ಬಹು ಕಾಲ ಹೋಗುವಂತೆ ಬಿಡುವುದರಿಂದ, ಅಥವಾ ಹೆಚ್ಚಾಗಿ ಸೇರಿ ತೀವ್ರ ಸ್ಥಿತಿಗೆ ಬರುವುದರಿಂದ, ಉಂಟಾಗುವ) ಸೀಸ ವಿಷ ಪ್ರಯೋಗ. L. wool ನೀರಿನ ಕೊಳಾಯಿಗಳನ್ನು ಒಂದಕ್ಕೊಂದು ಕೂಡಿಸಲು ಉಪಯೋಗಿಸುವ, ಎಳೆ ಎಳೆಗಳಾಗಿರುವ ಸೀಸ : ಸೀಸದ ತುಪ್ಪಟ. L.-work ಕಿಟಕಿಗೆ ಕನ್ನಡಿ ಹಚ್ಚುವ ಕೆಲಸ; ಸೀಸದ ಬೆಸುಗೆಯ ಕೆಲಸ. L.-works ಸೀಸದ ಅದುರನ್ನು ಕರಗಿಸುವ ಕಾರ್ಖಾನೆ. **Leadsman** ಆಳದ ಗುಂಡನ್ನು ಮೇಲಕ್ಕೆತ್ತುವ ನಾವಿಕ. **Leádless** (ಗು.) ; **Leáden** ಲೆಡ್‌ನ್ (ಗು.) ಸೀಸದ(ಂಥ). (Sleep's l. sceptre ನಿದ್ದೆಯ ಪ್ರಜ್ಞೆ ತಪ್ಪಿಸುವ ಶಕ್ತಿ. L. sword ಕೆಲಸಕ್ಕೆ ಬಾರದ ಕತ್ತಿ). ಭಾರವಾದ ; ನಿಧಾನವಾದ ; ಹೊರೆಯಾದ (L. limbs); ಜಡ; ಸತ್ವಗುಂದಿಸುವ (L. rule). ಸೀಸದ ಬಣ್ಣದ.

Lead (ಕ್ರಿ.) ಸೀಸದಿಂದ ಮುಚ್ಚು ; ಸೀಸದ ಭಾರ ಹೇರು ; (ಕಿಟಕಿಯ ಗಾಜುಗಳಿಗೆ) ಸೀಸದ ಚೌಕಟ್ಟು ಹಾಕು. (ಮುದ್ರಣ) ಮುದ್ರಣದ ಸಾಲುಗಳನ್ನು ಲೋಹದ ತೆಳು ತಗಡು ಹಾಕಿ ಪ್ರತ್ಯೇಕಿಸು. (ಬಂದೂಕಿನ ನಾಳಿ) ಸೀಸ ಹತ್ತಿಕೊಂಡು ಮಲಿನವಾಗು.

Lead[2] ಲೀಡ್ (ಕ್ರಿ. ; ಭೂತ., ಭೂ. ಕೃ. led ಲೆಡ್) ಒಬ್ಬನ ಜೊತೆಯಲ್ಲಿ ಹೋಗುವಂತೆ ನಿರ್ಬಂಧಪಡಿಸು (L. captive ಸೆರೆ ಹಿಡಿದುಕೊಂಡು ಹೋಗು). (ಮು., ಮುಂದೆ ಮುಂದೆ ಹೋಗುತ್ತ, ಹಿಂದಿನವರನ್ನು) ಕರೆದುಕೊಂಡು ಹೋಗು ; ದಾರಿ ತೋರಿಸುತ್ತ ಹೋಗು; ಮುಂದೆ ಹೋಗು. (ಉದ್ದೇಶ, ಸಂದರ್ಭ, ಮೊ. ಕ್ಕೆ) ಮಾರ್ಗದರ್ಶಕನಾಗು ; ಮುಂದಾಳಾಗಿ ನಡಸು. [Curiosity, chance, led him to Rome ಕುತೂಹಲ, ದೈವಘಟನೆ, ಅವನನ್ನು ರೋಮ್ ಪಟ್ಟಣಕ್ಕೆ ಒಯ್ದಿತು. L. one a dance ಒಬ್ಬನು ತನ್ನ ಗುರಿಯನ್ನು ಸಾಧಿಸಿಕೊಳ್ಳಲು ಕಷ್ಟವಾಗುವಂತೆ ತೊಂದರೆ ಕೊಡು. L. one a life ಒಬ್ಬನನ್ನು ಸಂತತವಾಗಿ ಕಾಡು, ಪೀಡಿಸು. L. the way ದಾರಿ ತೋರಿಸಲು ಮೊದಲು ಹೋಗು ; ಮುಂದಾಳಾಗು (ರೂಪ. ಸಹ)]. (ಸಾಕ್ಷಿಗೆ) ಉತ್ತರ ಸೂಚಕವಾದ ಪ್ರಶ್ನೆಗಳನ್ನು ಹಾಕು. (ಸೇನಾ ನಾಯಕ) ಚಲನ ವಲನಗಳನ್ನು ನಡಸು, ನಿಯಂತ್ರಿಸು ; ಕೈ ಹಿಡಿದು, ಮುಟ್ಟಿಕೊಂಡು (ಒಬ್ಬನನ್ನು) ನಡಸಿಕೊಂಡು ಹೋಗು ; (ಪ್ರಾಣಿಯನ್ನು) ಕೊರಳಿಗೆ ಹಗ್ಗ ಹಾಕಿ ಹಿಡಿದುಕೊಂಡು ಹೋಗು [Led horse ಕುದುರೆಯ ಆಳು, ಮೊದಲಾದವರು ನಡಸಿಕೊಂಡು ಹೋಗುವ ಹೆಚ್ಚಿಗೆಯ ಕುದುರೆ. Led captain ಆಶ್ರಿತ ಜೀವಿ ; ಅತಿ ದೈನ್ಯ ತೋರುವವನು ; ಪರೋಪಜೀವಿ. Is easier led than driven ಬಲಾತ್ಕರಿಸುವುದಕ್ಕಿಂತ ಒಡಂಬಡಿಸುವುದು ಸುಲಭ. L. astray ತಪ್ಪುದಾರಿಗೆ (ಮು., ಪಾಪ ಕಾರ್ಯಕ್ಕೆ) ಎಳೆ. L. by the nose ಮೂಗುದಾರ ಹಿಡಿದು ಎಳೆದುಕೊಂಡು ಹೋಗು ; ಕಣ್ಣು ಮುಚ್ಚಿಕೊಂಡು ಹಿಂಬಾಲಿಸುವಂತೆ ಮಾಡು. Lead woman to altar ಹೆಂಗಸನ್ನು ಮದುವೆಯಾಗು, ಕೈ ಹಿಡಿ. L. one to suppose ಊಹಿಸುವಂತೆ ಮಾಡು, ಮೋಸಗೊಳಿಸು. All roads l. to Rome ಎಲ್ಲ ಹಾದಿಗಳೂ ರೋಮಿಗೆ ಹೋಗಿ ಸೇರುತ್ತವೆ ; (ರೂಪ.) ಎಲ್ಲವೂ ಒಂದೇ ಪರಿಣಾಮಕ್ಕೆ ಬರುತ್ತವೆ. This led to confusion ಇದು ಗೊಂದಲವೆಬ್ಬಿಸಿತು. Ropes led through blocks fixed to stakes ದಡಿಗಳಿಗೆ ಬಿಗಿದ ಕಪ್ಪಿಗಳ ಮೂಲಕ ಹಾಯಿಸಿದ ಹಗ್ಗಗಳು. L. a miserable existence ಕಾರ್ಪಣ್ಯದಿಂದ ಬಾಳು. L. a double life ಇಬ್ಬಗೆಯ ಬಾಳು ಬಾಳು ; ಹೊರಗೊಂದು ಒಳಗೊಂದು ಬಾಳು. L. the dance (ಕುಣಿತದಲ್ಲಿ) ಮೊದಲಿಗನಾಗು ; (ರೂಪ.) ಯಾವುದಾದರೂ ಕೆಲಸದಲ್ಲಿ ಮುಂದಾಳಾಗು. Demosthenes leads all orators (—ನು) ವಾಗ್ಮಿಗಳಲ್ಲಿ ಪ್ರಮುಖನು. To l. trumps ತುರುಫು ಇಳಿಯುವುದು. L. up to[1] ತನಗೆ ಬೇಕಾದ ಎಲೆ ಮತ್ತೊಬ್ಬ ಆಟಗಾರನಿಂದ ಹೊರಕ್ಕೆ ಬರುವಂತೆ ತಾನು ಇಳಿ. L. away (ಸಾ., ಕರ್ಮಣಿಯಲ್ಲಿ ಪ್ರ.) ವಿಚಾರ ಮಾಡದೆ ಬೆನ್ನು ಹಿಡಿದು, ಅನುಸರಿಸಿ, ಬರುವಂತೆ ಮಾಡು. L.-in (ನಾ.) ನಿಸ್ತಂತು ವಾರ್ತಾಗ್ರಾಹಕವನ್ನು ಹೊರಗಿನ ತರಂಗ ಸಂಗ್ರಾಹಕದೊಡನೆ ಸಂಬಂಧಿಸುವ ತಂತಿ. L. off (ನಾಟ್ಯ, ಸಂಭಾಷಣೆ) ಪ್ರಾರಂಭಿಸು. L. on ಉದ್ದೇಶಕ್ಕಿಂತ ಹೆಚ್ಚಾಗಿ ಮುಂದೆ ಹೋಗುವಂತೆ ಸೆಳೆ, ಪ್ರೇರಿಸು, ಪುಸಲಾಯಿಸು. L. up to[2] (ವಿಷಯಕ್ಕೆ) ಪೂರ್ವಸಿದ್ಧತೆ ಮಾಡು ; ತಂದು ಬಿಡು ; ಸಂಭಾಷಣೆಯನ್ನು (ಒಂದು ನಿರ್ದಿಷ್ಟ ವಿಷಯಕ್ಕೆ) ತಿರುಗಿಸು. **Leádable** (ಗು.); **Leáder** (ನಾ.) (ಕ್ರಿಯಾರ್ಥಗಳಲ್ಲಿ). [Follow my l. (Follow ನೋಡಿ)]. ಶಾಸನ ಸಭೆಯಲ್ಲಿ ಸರ್ಕಾರಪಕ್ಷದ ಮುಖ್ಯಸ್ಥ (ಮು., L. of House of Commons). ಪ್ರಮುಖ ನ್ಯಾಯವಾದಿ. (ಒಂದರ ಹಿಂದೊಂದಿರುವ ಸಾಲಿನ) ಮುಂಗುದುರೆ. (ಪ್ರಕಾಂಡದ ಅಗ್ರದಲ್ಲಿಯ) ಹೊಡೆ. ಸ್ನಾಯು ರಜ್ಜು. (ವೃತ್ತ ಪತ್ರಿಕೆಯ) ಪ್ರಧಾನ ಲೇಖನ ; ಸಂಪಾದಕೀಯ. (ಮುದ್ರಣ) ದೃಷ್ಟಿಸಹಾಯಕವಾಗಿ ಹಾಕುವ ಬಿಂದುಗಳ ಅಥವಾ ಗೀಟುಗಳ ಸಾಲು. **Leáderless** (ಗು.) ; **Leádership** (ನಾ.) ; **Leaderétte** ಲೀಡರೆಟ್ (ನಾ.) (ಸಂಪಾದಕೀಯದ ಮುದ್ರಣಾಕ್ಷರಗಳಲ್ಲೇ ಮುದ್ರಿಸಿದ) ಉಪ ಸಂಪಾದಕೀಯ. **Leáding** (ನಾ., ಗು.) (ಕ್ರಿಯಾರ್ಥಗಳಲ್ಲಿ). Men of light & l. (ಮಾರ್ಗದರ್ಶಕರಾದ) ಪ್ರಭಾವಶಾಲಿಗಳು. **L.-business** (ನಾಟಕ) ಪ್ರಧಾನ ನಟನು ವಾಡಿಕೆಯಾಗಿ ಅಭಿನಯಿಸುವ ಪಾತ್ರಗಳು. **L.-rein** (ಕುದುರೆ) ನಡಸುವ ಲಗಾಮು. **L.-staff** ಗೂಳಿಯ (ಮೂಗಿನ ಉಂಗುರಕ್ಕೆ ಕಟ್ಟಿರುವ) ಮೂಗು ಕೋಲು. **L.-strings** (ಹಿಂದೆ) ಮಕ್ಕಳಿಗೆ ನಡಿಗೆ ಕಲಿಸಲು ಉಪಯೋಗಿಸುತ್ತಿದ್ದ ದಾರ : ನಡಗೆ ದಾರ (In l.-s. ಶಿಷ್ಯವೃತ್ತಿಯಲ್ಲಿ, ಪರತಂತ್ರದಲ್ಲಿ ; ಸೂತ್ರದ ಗೊಂಬೆಯಾಗಿ),

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

L. article ದಪ್ಪಕ್ಷರಗಳಲ್ಲಿ ಮುದ್ರಿಸಿದ (ಪತ್ರಿಕೆಯ) ಪ್ರಧಾನ ಲೇಖನ; ಸಂಪಾದಕೀಯ. ವ್ಯಾಪಾರದ ಮುಖ್ಯ ಸಾಮಗ್ರಿ; (ವ್ಯಾಪಾರದಲ್ಲಿ) ಇತರ ಸಾಮಾನುಗಳಿಗೆ ಗಿರಾಕಿ ಸೆಳೆಯುವುದಕ್ಕಾಗಿ ಅಗ್ಗವಾಗಿ ಮಾರಿದ ಸರಕು. L. case (ನ್ಯಾ. ಶಾ.) (ಇತರ ಮೊಕದ್ದಮೆಗಳನ್ನು ತೀರ್ಮಾನಿಸಲು) ಮಾರ್ಗದರ್ಶಕವಾದ ಮೊಕದ್ದಮೆ. L. lady, man (ನಾಟಕದಲ್ಲಿ) ನಾಯಕಿ, ನಾಯಕ (ಪಾತ್ರವಹಿಸುವ ನಟಿ, ನಟ). L. question ಬೇಕಾಗುವ ಉತ್ತರವನ್ನು ಹೊರಸೆಳೆಯುವ ಪ್ರಶ್ನೆ.

Lead (ನಾ.) (ಮುಂದೆ ಹೋಗುತ್ತ ಕೊಡುವ) ಮಾರ್ಗದರ್ಶನ; ದಾರಿ ತೋರಿಕೆ [Follow the l. of (-ನ) ನಾಯಕತ್ವವನ್ನು ಅನುಸರಿಸು, Give one a l. ಒಬ್ಬನಿಗೆ (ತಾನು ಮೊದಲು ಮಾಡಿ) ದಾರಿ ತೋರಿಸು]. ಅಗ್ರಸ್ಥಾನ; ನಾಯಕತ್ವ (Take the l. ನಾಯಕತ್ವ ವಹಿಸು). (ಮು., ಜಲಯಂತ್ರಕ್ಕೆ ಹೋಗುವ) ತೋಡುಗಾಲುವೆ. (ವಿದ್ಯುತ್) (ಉಗಮ ಸ್ಥಾನದಿಂದ ಕಾರ್ಯ ಸ್ಥಾನಕ್ಕೆ ವಿದ್ಯುತ್ತನ್ನು ಕೊಂಡೊಯ್ಯುವ) ವಿದ್ಯುದ್ವಾಹಕ. (ನಾಯಿ, ಮೊ. ನ್ನು) ಹಿಡಿದುಕೊಂಡು ಹೋಗುವ ಹುರಿ, ಮೊ. ವು. (ಇಸ್ಪೀಟಾಟ) ಮೊದಲಿಳಿತ(ದ ಹಕ್ಕು) (Return l. ಸ್ವಪಕ್ಷದವನು ಇಳಿದ ರಂಗನ್ನೇ ಹಾಕುವುದು). (ನಾಟಕ) ಮುಖ್ಯ ಪಾತ್ರ (ವಹಿಸುವವನು). L.-off ಪ್ರಾರಂಭ; ಉಪಕ್ರಮ.

Leaf[1] ಲೀಫ್ [ನಾ. (ಬ. ವ. Leaves ಲೀವ್ಸ್); ಕ್ರಿ. ಅಕ.] (ಸಾ., ಹಸುರು) ಎಲೆ; ಪರ್ಣ; ಪತ್ರ; (ಬಳ. ಮಾ.) ಎಸಳು; ದಳ (Rose-l. ಗುಲಾಬಿ ಎಸಳು); ಎಲೆಗುಂಪಲು (Fall of the l. ಎಲೆ ಉದುರುವ ಕಾಲ: ಮಾಗಿ ಕಾಲ. In l. ಎಲೆಗಳು ತುಂಬಿ; ಪರ್ಣ ಭರಿತ). ಹೊಗೆಯ ಸೊಪ್ಪು; ತೇಯೆಲೆ. ಒಂದು ಹಾಳೆ, ಪಾನು (= ೨ ಪುಟ) [Take l. out of person's book (Book ನೋಡಿ). Turn over new l. ನಡತೆಯನ್ನು ತಿದ್ದಿಕೊ; ಒಳ್ಳೆಯ ಹಾದಿಗೆ ತಿರುಗು]. (ಚಿನ್ನ, ಬೆಳ್ಳಿ, ಕೊಂಬು, ಅಮೃತ ಶಿಲೆ, ಮೊ. ಗಳ) ಬಹಳ ತೆಳು ಹಾಳೆ; ರೇಕು; ವರಕು. (ಬಾಗಿಲು, ಮುಚ್ಚಳ, ಮೇಜು, ಮೊ. ಗಳ) ಸರಿಯುವ ಅಥವಾ ಕೀಲುಗೂಡಿಸಿರುವ ಭಾಗ. ಸೆಳೆ ಸೇತುವೆಯ ಚಲಭಾಗಗಳಲ್ಲೊಂದು. ಬಂದೂಕಿನಲ್ಲಿಯ ಕೀಲಟ್ಟಿರುವ ಗುರಿದೃಷ್ಟಿ. (ಚಾಲಕ ಚಕ್ರಕ್ಕೆ ಸಂಬಂಧಿಸಿದ) ಹಲ್ಲುಚಕ್ರದ ಹಲ್ಲು (ಗಳಲ್ಲೊಂದು). (L. brass ಹಿತ್ತಾಳೆಯ ವರಕು. **L.-mould** ಕೊಳೆತ ಸೊಪ್ಪು, ಎಲೆ, ಸೇರಿದ ಮಣ್ಣು: ಎಲೆಗೊಬ್ಬರ). (ಕ್ರಿ.) ಎಲೆ ಬಿಡು. **Leáfage** (ನಾ.) ಎಲೆಗಳು; ಎಲೆ ಗುಂಪಲು; ಪರ್ಣಚಿತ್ರಾಲಂಕಾರ. (-) **leafed** (ಗು.); **Leáfless** (ಗು.); **Leáflessness** (ನಾ.); **Leáfy** (ಗು.); **Leáfiness** (ನಾ.); **Leáflet** (ನಾ.) (ಸ. ಪಿ.) ಸಂಯುಕ್ತ ಪರ್ಣದಲ್ಲಿಯ ಕಿರು ಎಲೆ: ಪರ್ಣಕ; ಎಳೆಯ ಎಲೆ. (ಮು., ಉಚಿತವಾಗಿ ಹಂಚಲು ಮುದ್ರಿಸಿ, ಹೊಲಿಯದೆ ಮಡಿಸಿದ) ಕಾಗದದ ಸಣ್ಣ ಹಾಳೆ; (ಮುದ್ರಿತ) ಹಸ್ತಪತ್ರಿಕೆ. (-) **leaved** ಲೀವ್ಡ್ (ಗು.) (ಅಂಥ, ಅಷ್ಟು) ಎಲೆಗಳುಳ್ಳ, ಹಾಳೆಗಳುಳ್ಳ (ಸಾ., ಸಮಾಸಗಳಲ್ಲಿ: Large-l., Red-l.; Two-l. door ಎರಡು ಹಾಳೆಗಳುಳ್ಳ ಕದ)

Leaf[2] ಲೀಫ್ (ನಾ.) (ನಾವೆ ಮತ್ತು ಸೈನಿಕ ಅನಂ.) (ಗೈರುಹಾಜರಿಯ) ರಜ; 'ಫ್ಲೆರ್ಲೋ' ರಜ.

League[1] ಲೀಗ್ (ನಾ.) (ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆಯಾಗಿರುವ) ದೂರದ ಅಳತೆ (ಸುಮಾರು ಮೂರು ಮೈಲಿ); ಹರಿದಾರಿ.

League[2] ಲೀಗ್ (ನಾ., ಕ್ರಿ.) (ಪರಸ್ಪರ ರಕ್ಷಣೆಗೆ ಮತ್ತು ಸಹಾಯಕ್ಕೆ ಅಥವಾ ಸಮಾನ ಹಿತಸಾಧನೆಗೆ ಮಾಡಿಕೊಂಡ) ಸಂಧಿ, ಒಪ್ಪಂದ, ಒಡಂಬಡಿಕೆ, ಕರಾರು. (ಇಂಥ ಒಡಂಬಡಿಕೆಗೆ ಸೇರಿದ ರಾಷ್ಟ್ರಗಳ ಅಥವಾ ವ್ಯಕ್ತಿಗಳ) ಕೂಡಲು, ಒಕ್ಕೂಟ, ಸಂಘ. [Solemn L. & Covenant (Covenant ನೋಡಿ). In l. with ಜೊತೆಗೆ ಸೇರಿಕೊಂಡು. L. football ಜೊತೆಗೂಡಿರುವ ಸಂಘಗಳು ತಮ್ಮಲ್ಲಿ ಯಾರು ಅಗ್ರ ಪಟ್ಟಕ್ಕೆ ಅರ್ಹರೆಂಬುದನ್ನು ನಿರ್ಧರಿಸುವುದಕ್ಕಾಗಿ ಒಬ್ಬರೊಡನೊಬ್ಬರು ಆಡುವ ಕಾಲ್ಚೆಂಡಿನ ಪಂದ್ಯದಾಟ. L. of Nations (೧೯೧೯ರಲ್ಲಿ ಆದ ಶಾಂತಿಯೊಪ್ಪಂದದ ಫಲವಾಗಿ, ಯುದ್ಧಗಳಾಗದಂತೆ ಮಾಡುವ ಉದ್ದೇಶದಿಂದ ಸ್ಥಾಪಿಸಿದ) ಜನಾಂಗಗಳ ಸಂಘ]. (ಕ್ರಿ.) ಒಕ್ಕೂಟವಾಗು; ಒಕ್ಕೂಟ ವೇರ್ಪಡಿಸು [(ಭೂ. ಕೃ. ನಲ್ಲಿ) Leagued *together, with*]. **Leáguer**[1] ಲೀಗರ್ (ನಾ.) ಒಕ್ಕೂಟದ ಸದಸ್ಯ, ಸದಸ್ಯ ಮಂಡಲಿ.

Leáguer[2] ಲೀಗರ್ (ನಾ.) (ಪ್ರಾಚೀ. ಪ್ರ.) (ಮುತ್ತಿಗೆಯ ಸೈನ್ಯದ) ಪಾಳೆಯ, ಬೀಡು, ಮುತ್ತಿಗೆ.

Leak ಲೀಕ್ (ನಾ., ಕ್ರಿ. ಅಕ.) (ಸೋರುವ, ಒಳತೂರುವ) ಒಡಕು, ಬಿರುಕು, ತೂತು; ಸೋರುಗಂಡಿ; ತೂರುಗಂಡಿ (Spring a l. ಸೋರುಗಂಡಿ, ತೂರುಗಂಡಿ, — ಬೀಳು, ಬಿದ್ದಿರು). (ಕ್ರಿ.) (ದ್ರವ) ಸೋರು, ಸೋರಿಸು, ಒಳತೂರು, ಒಳತೂರಿಸು. (ಗುಟ್ಟು, ಮೊ. ವು) ಮೆಲ್ಲಗೆ, ಕ್ರಮೇಣ, ಹೊರಬೀಳು. **Leákage** (ನಾ.) ಸೋರಿ ಹೋದದ್ದು; ತೂರಿ ಒಳಹೊಕ್ಕದ್ದು. ಗುಟ್ಟು ಹೊರಬೀಳುವುದು. (ಹಣ ತಿಂದುಹಾಕಿರಬೇಕೆಂಬ ಸೂಚನೆ ಕೊಡುವಂತೆ) ಹಣ ಮಾಯವಾಗುವುದು. **Leáky** (ಗು.) ತೂತು ಬಿದ್ದ; ಒಡಕುಳ್ಳ; ಸೋರುವ. ಮೂತ್ರ ತಡೆಯಲಾಗದ. ಗುಟ್ಟು ಹೊರಗೆಡಹುವ (ಸ್ವಭಾವದ). **Leákiness** (ನಾ.)

Leal ಲೀಲ್ (ಗು.) (ಸ್ಕಾ. ಪ್ರ. ಮತ್ತು ಸಾಹಿತ್ಯ ಪ್ರ.) ಸ್ವಾಮಿಭಕ್ತಿಯುಳ್ಳ; ನಂಬಿಕೆಯ; ಪ್ರಾಮಾಣಿಕತೆಯ.

Lean[1] ಲೀನ್ (ಗು., ನಾ.) (ಮನುಷ್ಯ) ತೆಳುವಾದ; ತುಂಬಿಕೊಂಡಿಲ್ಲದ; ಸಣಕಲಾದ (L. crops ಬಡಕಲು ಬೆಳೆ. L. diet ಪುಷ್ಟಿಕೊಡದ ಆಹಾರ; ಬಡ ತಿಂಡಿ. L. years ಬಹಳ ಕಡಮೆ ಬೆಳೆಯ ವರ್ಷಗಳು; ದುರ್ಭಿಕ್ಷ ವರ್ಷಗಳು). ಲಾಭಕರವಲ್ಲದ; ಪ್ರತಿಫಲ ದೊರೆಯದ. (ಮಾಂಸ, ಕೊಬ್ಬುಗೂಡಿಲ್ಲದೆ) ಬರಿ ಸ್ನಾಯುಭಾಗವಾಗಿರುವ. (ನಾ.) ಮಾಂಸದ ಸ್ನಾಯುಭಾಗ. **Leánness** (ನಾ.)

Lean[2] ಲೀನ್ [ಕ್ರಿ. (ಭೂತ., ಭೂ. ಕೃ. Leaned, Leant ಲೆಂಟ್); ನಾ.] (ಆಧಾರಕ್ಕಾಗಿ ದೇಹವನ್ನು ಒಂದಕ್ಕೆ) ಒರಗಿಸು, ಆನಿಸು; ಒರಗು, ಆನು; (ವಸ್ತು) ಓಲಿಕೊಂಡು ಒರಗಿರು (*Against, on* ಉಪ. ದೊಡನೆ). [(ಸೈನ್ಯ) L. upon ಪಕ್ಕದ ಕಡೆ ರಕ್ಷಣೆಯಾಗಿಟ್ಟುಕೊಂಡಿರು]. ಅವಲಂಬಿಸು; ಆಶ್ರಯಿಸು; ಆಧಾರ ಮಾಡಿಕೊ; ನೆಮ್ಮು [(*Up*)*on* ಉಪ. ದೊಡನೆ]. (ದೇಹ) ಬಗ್ಗಿಸು, ಓಲಿಸು, ಬಾಗು (*Back, forward, over, towards,* ಮೊ. ಪದದೊಡನೆ); ಓಲಿಕೊಂಡು ನಿಲ್ಲು; (ಕರುಣೆ, ಕ್ಷಮೆ, ಮೊ. ಗಳ ಕಡೆ) ಒಲವಿರು (*To* ಉಪ. ದೊಡನೆ); (ಒಂದು ಪಕ್ಷ, ಅಭಿಪ್ರಾಯ, ವ್ಯಕ್ತಿ — ಇವಕ್ಕೆ) ಪಕ್ಷಪಾತವಿರು (*To* ಉಪ. ದೊಡನೆ). [L.-to (ಮನೆಯ ಗೋಡೆಗೆ ಹಾಕಿದ) ಒಪ್ಪಾರು; ಒಪ್ಪಾರು ಮನೆ]. (ನಾ.) ಓಲು; ಒಲವು; ಓಲಿಕೆ (Has a decided l. to the right). **Leáning** (ನಾ.) (ಕ್ರಿಯಾರ್ಥಗಳಲ್ಲಿ); ಒಲವು; ಪ್ರವೃತ್ತಿ; ಪ್ರವಣತೆ.

Leap ಲೀಪ್ [ಕ್ರಿ. (ಭೂತ., ಭೂ. ಕೃ. Leapt ಲೆಪ್ಟ್ or Leaped); ನಾ.] ಹಾರು; ನೆಗೆ; ಎಗುರು; ದುಮುಕು [Look before you l. (Look ನೋಡಿ). L.-frog (ನಾ., ಕ್ರಿ.) (ಮುಂದುಗಡೆ ಬಗ್ಗಿ ನಿಂತುಕೊಂಡಿರುವವನಮೇಲೆ ಕಾಲು ಅಗಲಿಸಿಕೊಂಡು ಹಾರುವ) ಕಪ್ಪೆಕುಪ್ಪಳ ಆಟ (ಆಡು) (*Over* ಉಪ. ದೊಡನೆ)]. (ನಾ.) ನೆಗೆತ; ಹಾರಿಕೆ; ಎಗುರು; ಎಗುರಿಕೆ; ದುಮುಕುವಿಕೆ (ಈಗ Jump ಎಂಬ ಪದ ಹೆಚ್ಚು ರೂಢಿ). (L. in the dark ಫಲ ನಿಶ್ಚಯವಿಲ್ಲದ ಅಪಾಯದ ಉದ್ಯಮಕ್ಕೆ ದುಡುಂ ಪ್ರವೇಶ. By leaps and bounds ಹಾರಿ ಹಾರಿಕೊಂಡು ಹೋಗುತ್ತ; ಅತ್ಯಂತ ವೇಗದಿಂದ ಮುಂದುವರಿಯುತ್ತ). ಯಾವುದನ್ನು ಹಾರಿಹೋಗಬೇಕೊ ಅದು. L.-day ಫೆಬ್ರುವರಿ ತಿಂಗಳ ೨೯ನೆಯ ತಾರೀಖು. L.-year ಅಧಿಕ ದಿನದ (೩೬೬ ದಿವಸದ) ವರ್ಷ. **Leáper** (ನಾ.)

Learn ಲರ್ನ್ (ಕ್ರಿ.; ಭೂತ., ಭೂ. ಕೃ. Learnt, Learned ಲರ್ನ್ಡ್) (ಒಂದು ವಿಷಯದಲ್ಲಿ, ಅಧ್ಯಯನ, ಅನುಭವ, ಮತ್ತೊಬ್ಬರಿಂದ ಹೇಳಿಸಿಕೊಳ್ಳುವುದು, — ಈ ಮೂಲಕ) ಜ್ಞಾನ ಸಂಪಾದಿಸು. (ಕಲೆ, ಮೊ. ಗಳಲ್ಲಿ) ಚಾತುರ್ಯ ಪಡೆ; ಕಲಿ(ತುಕೊ) (*From, of* ಉಪ. ದೊಡನೆ). (ಬಾಯಿಗೆ) ಗಟ್ಟಿಮಾಡು (L. by heart, by rote ಕಂಠಪಾಠವಾಗಿ,

पुस्तकालय
गुरुकुल काँगड़ी

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುರುಡು ಪಾಠವಾಗಿ, ಗಟ್ಟಿಮಾಡು). (— ಎಂದು) ಅರಿ, ತಿಳಿ [I am (or have) yet to l. ನಾನಿನ್ನೂ ತಿಳಿದುಕೊಳ್ಳಬೇಕಾಗಿದೆ; ನನಗೆ ಗೊತ್ತಿಲ್ಲ (ಸಾ., ಅಪನಂಬಿಕೆಯ ಸೂಚನೆಯೊಡನೆ)]; ಒಬ್ಬರ ಹೇಳಿಕೆಯಿಂದ (ಒಂದು ವಿಷಯವನ್ನು) ವಿಚಾರ ಮಾಡಿ ತಿಳಿ; ಪಾಠ ಕಲಿ. (ಪ್ರಾಚೀ. ಪ್ರ., ಹಾಸ್ಯ ಅಥವಾ ಗ್ರಾಮ್ಯ ಪ್ರ.) ಕಲಿಸು, ಬೋಧಿಸು. **Leárnable** (ಗು.); **Leárner** (ನಾ.); **Leárned** ಲರ್ನೆಡ್ (ಗು.) ಹೆಚ್ಚುವ್ಯಾಸಂಗ ಮಾಡಿದ; ಪಾಂಡಿತ್ಯ ಪಡೆದ; ವಿದ್ಯಾವಂತನಾದ; ಘನ ಪಾಂಡಿತ್ಯ ತೋರುವ. (ನ್ಯಾಯವಾದಿಯನ್ನು ಕುರಿತು ನ್ಯಾಯಸ್ಥಾನ, ಮೊ. ಗಳಲ್ಲಿ ಹೇಳುವಾಗ, ಸಂಪ್ರದಾಯವಾಗಿ ಉಪಯೋಗಿಸುವ ಗೌರವದ ವಿಶೇಷಣ: My l. friend or brother). (ಭಾಷೆ, ವೃತ್ತಿ, ಮೊ.) ಪಂಡಿತರು ಅವಲಂಬಿಸಿರುವ, ಅಭ್ಯಾಸ ಮಾಡುತ್ತಿರುವ; ಪಂಡಿತರ; ವಿದ್ಯಾವಂತರ; (ಭಾಷೆಯಲ್ಲಿಯ ಪದಗಳು) ಪಂಡಿತರಿಂದ (ಹೊಸದಾಗಿ) ಪ್ರಯೋಗಕ್ಕೆ ಬಂದ. **Leárnedly** (ಕ್ರಿ. ವಿ.); **Leárning** (ನಾ.) (ಕ್ರಿಯಾರ್ಥಗಳಲ್ಲಿ). ವ್ಯಾಸಂಗದಿಂದ ಪಡೆದ (ಮು., ಭಾಷೆ, ಸಾಹಿತ್ಯ, ಚರಿತ್ರೆ, ಮೊ. ಗಳ) ಪಾಂಡಿತ್ಯ, ಜ್ಞಾನ, ವಿದ್ಯೆ.

Lease[1] ಲೀಸ್ (ನಾ., ಕ್ರಿ. ಸಕ.) (ಜಮೀನು, ಮನೆ, ಮೊ. ನ್ನು ಗೊತ್ತಾದ ಕಾಲಕ್ಕೆ, ಒಂದು ಪ್ರತಿಫಲಕ್ಕಾಗಿ ವಹಿಸಿಕೊಡುವ) ಗುತ್ತಿಗೆ, ಗೇಣಿ, ಭೋಗ್ಯ [Put out to l.; By or on l.; A new l. of life (ಆರೋಗ್ಯ ಪಡೆದುದರಿಂದ ಅಥವಾ ಆತಂಕ ವ್ಯಾಕುಲಗಳು ತೊಲಗಿಹೋದುದರಿಂದ) ಮುಂದಕ್ಕೆ ಜೀವಿಸುವ ಭರವಸೆ: ಪುನರಾಯುಸ್ಸು]. ಗುತ್ತಿಗೆ ಕರಾರು; ಗೇಣಿ ಚೀಟಿ; ಭೋಗ್ಯ ಪತ್ರ [Lease-hold(er) ಗುತ್ತಿಗೆ (ಜಮೀನು), ಗುತ್ತಿಗೆದಾರ]. (ಕ್ರಿ.) ಗುತ್ತಿಗೆ, ಗೇಣಿ, — ಕೊಡು, ತೆಗೆದುಕೊ.

Lease[2] ಲೀಸ್ (ನಾ.) ಮಗ್ಗದಲ್ಲಿ ಹಾಸು ನೂಲೆಳೆಗಳು ಒಂದನ್ನೊಂದು ಅಡ್ಡಹಾಯುವುದು; ಹಾಸು ನೂಲೆಳೆಗಳನ್ನೆತ್ತುವ ಕುಣಿಕೆಹುರಿ.

Leash ಲೀಷ್ (ನಾ., ಕ್ರಿ. ಸಕ.) ಬೇಟೆಯ ಅಥವಾ ಬೇಟೆಯಟ್ಟಿಕೊಂಡು ಹೋಗುವ ನಾಯಿಗಳನ್ನು ಹಿಡಿದಿರುವ ತೊಗಲ ಬಾರು (Hold in l. ಸ್ವಾಧೀನದಲ್ಲಿ, ಹಿಡಿತದಲ್ಲಿ, — ಇಟ್ಟುಕೊ). (ಬೇಟೆನಾಯಿ, ಮೊಲ, ಮೊ. ಗಳ) ಮೂರರ ತಂಡ. (ನೆಯ್ಗೆ) (ಮಗ್ಗದ ಹಾಸು ಬಿಂಗಡಕದ ಎರಡು ಪಟ್ಟಿಗಳ ಮಧ್ಯೆ ಮೇಲಿಂದ ಕೆಳಕ್ಕೆ ನಿಂತು) ಹಾಸು ನೂಲೆಳೆಗಳನ್ನು ಎತ್ತಿಹಿಡಿಯುವ ಸಾಲು ಕುಣಿಕೆಹುರಿಗಳಲ್ಲೊಂದು: ಜೆದ. (ಕ್ರಿ.) ತೊಗಲು ಬಾರಿನಿಂದ ಒಟ್ಟಿಗೆ ಕಟ್ಟು, (ಕಟ್ಟಿ) ಹಿಡಿದುಕೊ.

Leásing ಲೀಸಿಂಗ್ (ನಾ.) (ಬೈಬಲ್) ಸುಳ್ಳು (ಹೇಳುವುದು)

Least ಲೀಸ್ಟ್ (ಗು., ನಾ., ಕ್ರಿ. ವಿ.) ಅತ್ಯಂತ ಸಣ್ಣ, ಸ್ವಲ್ಪ; ಅತ್ಯಲ್ಪ(ದ); ಕನಿಷ್ಠ (ಪ್ರಮಾಣದ); ಲಘುತಮ [The l. (ಮು., ನಿಷೇಧಾರ್ಥ ಪದಗಳ ಮುಂದೆ ಬಂದಾಗ) ಎಷ್ಟು ಸಣ್ಣದಾದರೂ, ಎಷ್ಟು ಸ್ವಲ್ಪವಾದರೂ. L. Common Multiple (Multiple ನೋಡಿ). Line of l. resistance (Resistance ನೋಡಿ)]. (ನಾ.) ಅತ್ಯಂತ ಸಣ್ಣದು, ಸ್ವಲ್ಪದ್ದು; ಕನಿಷ್ಠ ಪ್ರಮಾಣ(ದ್ದು) [To say the l. of it (ಅತಿ) ಮಿತವಾಗಿ ಹೇಳುವುದಾದರೆ. L. said soonest mended ಮಾತು ಎಷ್ಟು ಕಡಮೆಮಾಡಿದರೆ ಅಷ್ಟು ಬೇಗ ಸರಿಪಡಿಸಲಾಗುವುದು; ಚರ್ಚಿಸಿದಷ್ಟೂ (ಕೆಲಸ) ಇನ್ನೂ ಕೆಡುತ್ತದೆ. At (the) l. ಯಾವ ಸಂದರ್ಭದಲ್ಲೇ ಆದರೂ; ಅಷ್ಟಾದರೂ; ಎಷ್ಟು ಕೊಂಚವೆಂದರೂ; ಕನಿಷ್ಠ ಪಕ್ಷ. (In) the l. ಕೊಂಚವೂ; ಸ್ವಲ್ಪವೂ]. (ಕ್ರಿ. ವಿ.) ಅತ್ಯಲ್ಪ ಪ್ರಮಾಣದಲ್ಲೂ. **Leástways** —ವೇಸ್ (ಕ್ರಿ. ವಿ.) (ಗ್ರಾಮ್ಯ), **Leástwise** — ವೈಸ್ (ಕ್ರಿ. ವಿ.) (ವಿರ. ಪ್ರ.) ಎಷ್ಟು ಕಡಮೆಯಾದರೂ; ಅಥವಾ ಅಷ್ಟಾದರೂ.

Leat ಲೀಟ್ (ನಾ.) ಬೀಸುವ, ಸುತ್ತುವ, — ಯಂತ್ರ, ಮೊ. ಗಳಿಗೆ ನೀರು ಸಾಗಿಸುವ (ತೆರೆದ) ಕಾಲುವೆ.

Leáther ಲೆದರ್ (ನಾ., ಕ್ರಿ. ಸಕ.) (ಉಪಯೋಗಕ್ಕೆ ಒದಗುವಂತೆ) ಹದ ಮಾಡಿದ ಚರ್ಮ: ತೊಗಲು [Patent l. ಕಪ್ಪು ಮೆರುಗಿನ ನಯವಾದ ಮೇಲ್ಮೈ ಕೊಟ್ಟಿರುವ ತೊಗಲು. American l. ಬಣ್ಣ ಹಾಕಿದ ಒಂದು ಬಗೆಯ ಮೇಣಗಪ್ಪಟ. L. & prunella ಬರಿಯ ವಸ್ತ್ರ, ವೇಷ, ಮಾತ್ರ (ವ್ಯತ್ಯಾಸ). Nothing like l. ತನ್ನ ಸರಕು ಎಲ್ಲ ಕೆಲಸಕ್ಕೂ ಒದಗುತ್ತದೆ (ಎಂಬ ಸ್ವಾಭಿಮಾನದ ಅಭಿಪ್ರಾಯ)]. ತೊಗಲಿನ ಸಾಮಾನು; ಒಂದು ಸಾಮಾನಿನ ತೊಗಲಿನ ಭಾಗ; ಮೆರುಗುಜ್ಜುವ ತೊಗಲಿನ ತುಂಡು; ತೊಗಲಿನ ಬಾರು. (Stirrup-l. ರಿಕಾಪಿನ ತೊಗಲು ಬಾರು). (ಅಸಂ.) ಕ್ರಿಕೆಟ್ ಚೆಂಡು; ಕಾಲ್ಚೆಂಡು [L.-hunting (ಕ್ರಿಕೆಟ್) ಚೆಂಡು ಕಾಯುವುದು]. (ಬ. ವ. ದಲ್ಲಿ) ಕೆಳಕಾಲ ಕಾಪು; ಮೊಣಕಾಲ ಷರಾಯಿ; ಚಲ್ಲಣ. (ಅಸಂ.) (ಒಬ್ಬನ) ಮೈಚರ್ಮ (Lose l. ಚರ್ಮ ಸುಲಿದು ಹೋಗು; ಉಜ್ಜುಗಾಯವಾಗು). (ಕ್ರಿ.) ತೊಗಲು ಹೊದಿಸು; ತೊಗಲ ಕಾಪು ಹಾಕು; ಬಾರಿನಿಂದ ಹೊಡೆ. **L.-back** ಒಂದು ಬಗೆಯ ಆಮೆ. **L.-head** ಮಡ್ಡಿ; ದಡ್ಡ. **L.-jacket** ಹಲವು ಬಗೆಯ ಮೀನು, ಮೊ. ವು. **L.-neck** ಸೈನಿಕ. **L.-wood** ಹಲವು ಬಗೆಯ ಜಿಗಿ ಬಿಗಿಯ ತೊಗಟೆಯುಳ್ಳ ಮರಗಳು. **Leatherétte** (ನಾ.) ತೊಗಲನ್ನು ಹೋಲುವಂತೆ ಮಾಡಿದ ಕಾಗದ, ಬಟ್ಟೆ (ರಟ್ಟು ಕಟ್ಟುವುದು, ಮೊ. ಕೆಲಸಗಳಿಗೆ ಉಪಯೋಗ). **Leáthern** (ಗು.) ತೊಗಲಿನ(ಂಥ); ತೊಗಲಿನಿಂದ ಮಾಡಿದ. **Leáthery** (ಗು.) (ರೂಪದಲ್ಲಿ ಅಥವಾ ಮಾಟದಲ್ಲಿ) ತೊಗಲಿನಂತಿರುವ; (ಮಾಂಸದ ವಿಷಯದಲ್ಲಿ) ಒರಟಾದ, ಮೃದುವಲ್ಲದ. **Leáthering** (ನಾ.) ಬಾರಿನಿಂದ ಹೊಡೆಯುವುದು; ಬಾರಿನ ಹೊಡೆತ. **Leátheroid** ಲೆದರಾಯ್ಡ್ (ನಾ.) ಕಚ್ಚಾ ಚರ್ಮದಂತೆ ಕಾಣುವಹಾಗೆ ರಾಸಾಯನಿಕವಾಗಿ ಸಂಸ್ಕರಿಸಿದ ಹತ್ತಿಯ ಕಾಗದ: ಚರ್ಮ ಕಾಗದ.

Leave[1] ಲೀವ್ (ನಾ.) ಅಪ್ಪಣೆ; ಅನುಮತಿ; ಅನುಜ್ಞೆ [By your l. (ಸಲಿಗೆ ಅಥವಾ ಸ್ವಾತಂತ್ರ್ಯ ವಹಿಸಿದುದಕ್ಕಾಗಿ, ಅಹಿತವಾದ ಹೇಳಿಕೆಗೆ ಪೀಠಿಕೆಯಾಗಿ, ಅನೇಕ ವೇಳೆ ವ್ಯಂಗ್ಯವಾಗಿ, ಕ್ಷಮೆ ಬೇಡುವುದು) ತಮ್ಮ ಅಪ್ಪಣೆಯಿಂದ. Without a 'with your l.' *or* 'by your l.' (ಬಳ. ಮಾ.) ಹೇಳದೆ ಕೇಳದೆ]. (ಸೇನೆ, ನಾವೆ, ಕಚೇರಿಗಳು, ಪಾಠಶಾಲೆಗಳು — ಇವುಗಳಲ್ಲಿ) (L. of absence) (ಗೈರುಹಾಜರಿಯ) ರಜ; (ಹೀಗೆ ಪಡೆದ) ರಜಾ ಕಾಲ. On l. ರಜದಮೇಲೆ (ಗೈರುಹಾಜರಿ). French L. (French ನೋಡಿ). Ticket of l. (Ticket ನೋಡಿ). Take one's l. (of) ಬೀಳ್ಕೊಳ್ಳು. Take l. of one's senses ಬುದ್ಧಿ ಕೆಡು; ಹುಚ್ಚು ಹಿಡಿ. **L.-breaker** ರಜ ಪೂರೈಸಿದಮೇಲೂ ಕೆಲಸಕ್ಕೆ ಹಾಜರಾಗದೆ ನಿಂತುಬಿಡುವ ನಾವಿಕ. **Leáve-taking** (ನಾ.)

Leave[2] ಲೀವ್ (ಕ್ರಿ. ಸಕ.; ಭೂತ., ಭೂ. ಕೃ. Left ಲೆಫ್ಟ್) ಬಿಡು; ಬಿಟ್ಟುಬಿಡು; ಬಿಟ್ಟುಹೋಗು (Leaves a wife & three sons. Six from seven leaves one ಏಳರಲ್ಲಿ ಆರು ಹೋದರೆ ಒಂದು ಉಳಿಯುತ್ತದೆ. Leaves much to be desired ತೃಪ್ತಿಕರವಾಗಿಲ್ಲ. Has left a soreness behind). (ಸಂತತಿಗೆ ಆಸ್ತಿ, ಗುಣ, ಮೊ. ನ್ನು) ಬಿಟ್ಟುಹೋಗು; ಬಳಸದೆ, ವ್ಯವಹರಿಸದೆ, ಬಿಡು; ತೊರೆದು ಬಿಡು; ಕೈ ಬಿಡು; ಪರಿತ್ಯಾಗ ಮಾಡು. (ಕರ್ಮಣಿ) ಉಳಿ(ತಾಯವಾಗಿರು). This leaves me cool ಇದು ನನ್ನನ್ನು ಉದ್ವೇಗಗೊಳಿಸುವುದಿಲ್ಲ, ಉತ್ಸಾಹಗೊಳಿಸುವುದಿಲ್ಲ. L. it at that (ಬಳ. ಮಾ.) (ಟೀಕಿಸದೆ, ಮುಂದುವರಿಸದೆ) ಅಷ್ಟಕ್ಕೇ ಬಿಟ್ಟುಬಿಡು. Be well left ಬಿಟ್ಟಿರುವ ಪಿತ್ರಾರ್ಜಿತ, ಮೊ. ಆಸ್ತಿ ಹೆಚ್ಚಾಗಿರು. L. undone, unsaid, etc. Nothing was left to accident. L. him to himself ಅವನಷ್ಟಕ್ಕೆ ಅವನನ್ನು ಬಿಟ್ಟುಬಿಡು; ಅವನು ಏನಾದರೂ ಮಾಡಿಕೊಳ್ಳಲಿ, ತಡೆಯಬೇಡ. He left word that he would soon be home ಬೇಗ ಮನೆಗೆ ಬರುವೆನೆಂದು ಹೇಳಿ ಹೋದನು. L. card on person (Card[2] ನೋಡಿ). I left him quite well an hour ago ಒಂದು ಗಂಟೆಯ ಹಿಂದೆ ಅವನು ನೆಮ್ಮದಿಯಾಗಿದ್ದುದನ್ನು ನೋಡಿ ಬಂದೆನು. L. the track ಜಾಡು ಬಿಡು, ತಪ್ಪು. We l. tomorrow *for*— ನಾವು ನಾಳೆ (—ಗೆ) ಹೊರಡುತ್ತೇವೆ. Leaving the temple on the left ದೇವಸ್ಥಾನವನ್ನು ಎಡಕ್ಕೆ ಬಿಟ್ಟು. L. in the lurch

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(Lurch[1] ನೋಡಿ). Get left (ಬಳ. ಮಾ.) ತೊರೆಯಲ್ಪಡು; ಸೋಲಲಪ್ಪಡು. L. alone ಗೋಜಿಗೆ, ತಂಟೆಗೆ, ಹೋಗದಿರು. L. behind (ಹಿಂದೆ) ಬಿಟ್ಟುಹೋಗು; (ಫಲವಾಗಿ, ಗುರುತಾಗಿ) ಬಿಟ್ಟು ಹೋಗು; (ಹಿಂದೆ ಬಿಟ್ಟು) ಮುಂದುವರಿ. L. go (ಗ್ರಾಮ್ಯ) (ಹಿಡಿತ) ಬಿಡು. L. hold of ಹಿಡಿತ ಬಿಡು. L. off (ಉಪಯೋಗಿಸದೆ) ಬಿಟ್ಟು ಬಿಡು; (ಪದ್ಧತಿಯನ್ನು, ಕಾರ್ಯವನ್ನು) ನಿಲ್ಲಿಸಿಬಿಡು; ಕೊನೆಗಾಣು; ಕೊನೆಗಾಣಿಸು. L. out (ಸೇರಿಸದೆ) ಬಿಟ್ಟುಬಿಡು. L. over ನದ್ಯಕ್ಕೆ ಬಿಟ್ಟಿರು; ತಾತ್ಕಾಲಿಕವಾಗಿ ನಿಲ್ಲಿಸಿರು. **Leáving** (ನಾ.; ಸಾ., ಬ. ವ. ದಲ್ಲಿ) ಮಿಕ್ಕದ್ದು; ಉಳಿತ; ಶೇಷ; ಉಚ್ಛಿಷ್ಟ.

Leáven ಲೆವ್‌ನ್ (ನಾ., ಕ್ರಿ. ಸಕ.) (ನಾದಿದ ಹಿಟ್ಟನ್ನು) ಹುಳಿಹಿಡಿಸು ವುದಕ್ಕಾಗಿ ಸೇರಿಸುವ ವಸ್ತು (ಮು., ಹುಳಿಹಿಡಿದ ಹಿಟ್ಟು, ಉದುಗು ಹಿಟ್ಟು); ಕಿಣ್ವ. (ರೂಪ.) ಹರಡಿ ಪರಿವರ್ತಿಸುವ ಪ್ರಭಾವ; ವ್ಯಾಪಕ ಪ್ರಭಾವ. (ಯಾವುದಾದರೂ ಗುಣದ) ವಾಸನೆ, ಛಾಯೆ, ಬೆರಕೆ (The old l. ಅಸಂಸ್ಕೃತ ಸ್ಥಿತಿಯ ಚಿಹ್ನೆಗಳು). (ಕ್ರಿ.) (ನಾದಿದ ಹಿಟ್ಟಿಗೆ) ಉದುಗು ಹಾಕಿ ಹುಳಿಹಿಡಿಸು. (ರೂಪ.) ವ್ಯಾಪಿಸಿ ಪರಿವರ್ತಿಸು; ಹದ ಕೊಡುವ ವಸ್ತುವನ್ನು ಸೇರಿಸಿ ಮಾರ್ಪಡಿಸು; ಹದಗೊಳಿಸು.

Leaves. Leaf[1] ಪದದ ಬ. ವ.

Lécher ಲೆಚರ್ (ನಾ.) (ಪ್ರಾಚೀ. ಪ್ರ.) ವ್ಯಭಿಚಾರಿ; ಕಚ್ಚೆ ಹರುಕ. **Lécherous** (ಗು.); **Lécherously** (ಕ್ರಿ. ವಿ.); **Léchery** (ನಾ.)

Léctern ಲೆಕ್ಟರ್ನ್ (ನಾ.) (ಮು., ಬೈಬಲ್ಲಿನ ಪಾಠಗಳನ್ನು ನಿಂತು ಹೇಳುವ) ಚರ್ಚಿನ ಓದುವ, ಹಾಡುವ, ಮೇಜು; ವಾಚನ ಪೀಠ. **Léctionary** ಲೆಕ್‌ಷನರಿ (ನಾ.) ಆರಾಧನ ಕಾಲದಲ್ಲಿ ಓದಬೇಕೆಂದು ಗೊತ್ತುಮಾಡಿರುವ ಬೈಬಲ್ಲಿನ ಭಾಗಗಳ (ಪಟ್ಟಿಯುಳ್ಳ) ಪುಸ್ತಕ.

Léctionary. Lectern ನೋಡಿ.

Lécture ಲೆಕ್ಚ್ಯುರ್, ಲೆಕ್ಚರ್ (ನಾ., ಕ್ರಿ.) (ಸಾ., ಬೋಧನೆಗಾಗಿ, ಒಂದು ವಿಷಯದಮೇಲೆ, ಶ್ರೋತೃಗಳ ಅಥವಾ ತರಗತಿಯ ವಿದ್ಯಾರ್ಥಿಗಳ ಮುಂದೆ ಹೇಳುವ) ಉಪನ್ಯಾಸ; ಭಾಷಣ; ಪಾಠ ಪ್ರವಚನ. ವಾಗ್ದಂಡನೆ; ಬುದ್ಧಿವಾದ (Read one a l. ತಪ್ಪು ಹಿಡಿದು ಬುದ್ಧಿ ಹೇಳು; ವಾಗ್ದಂಡನೆ ಮಾಡು). (ಕ್ರಿ.) (ಒಂದು ವಿಷಯದಮೇಲೆ) ಉಪನ್ಯಾಸ, ಭಾಷಣ, —ಮಾಡು (*On* ಉಪ. ದೊಡನೆ). (ತರಗತಿ, ಮೊ. ಕ್ಕೆ) (ಉಪನ್ಯಾಸದ ಮೂಲಕ) ಪಾಠ ಹೇಳು. ವಾಗ್ದಂಡನೆ ಮಾಡು; ತಪ್ಪು ಹಿಡಿದು ಬುದ್ಧಿ ಹೇಳು. **Lécturer** (ನಾ.); **Léctureship** (ನಾ.) ಉಪನ್ಯಾಸಕ ಉದ್ಯೋಗ; ಅಧ್ಯಾಪಕತ್ವ.

Led. Lead ಧಾತುವಿನ ಭೂತ., ಭೂ. ಕೃ.

Ledge ಲೆಜ್ (ನಾ.) ಗೋಡೆ, ಮೊ. ಗಳಿಂದ ಮುಂಚಾಚಿಕೊಂಡಿರುವ ಕಿರಿಯಗಲದ ಸಮತಲದ ಭಾಗ; ಬಡು; ಬಂಡೆಯ ಅಥವಾ ಬೆಟ್ಟದ ಬದಿಯಿಂದ ಹೊರಟ ಬಡುವಿನಂಥ ಚಾಚು; (ಮು., ನೀರೊಳಗಿನ) ಬಂಡೆಯ ಉಬ್ಬುಸಾಲು. (ಗಣಿ) ಲೋಹವನ್ನೊಳಕೊಂಡ ಶಿಲೆಯ ಪದರ: ಲೋಹ ಶಿಲಾ ಸ್ತರ. **Lédgy** (ಗು.) —ಉಳ್ಳ; —ತುಂಬಿ ರುವ. **Ledged** (ಗು.) —ಉಳ್ಳ; ಚಾಚು ಉದ್ದಪಟ್ಟಿ ಹಾಕಿರುವ.

Lédger ಲೆಜ್ಜರ್ (ನಾ., ಗು.) ವ್ಯಾಪಾರದ ಲೇವಾದೇವಿ ಲೆಕ್ಕಗಳನ್ನು ಸಂಗ್ರಹ ರೂಪದಲ್ಲಿ ಬರೆದಿಡುವ ವ್ಯಾಪಾರದ ಮುಖ್ಯ ಲೆಕ್ಕಪುಸ್ತಕ: ವರ್ಗ (ಪುಸ್ತಕ). (ಕಟ್ಟಡದ ಮುಖಕ್ಕೆ ಸಮಾಂತರವಾಗಿರುವ) ಸಾರುವೆಯ ಅಡ್ಡಮರ. ಚಪ್ಪಟೆಯ ಸಮಾಧಿ ಶಿಲೆ. ಒಂದು ಕಡೆ ನೆಟ್ಟು ಒಡ್ಡಿರುವ (ಮೀನಿನ) ಎರೆ; ನೆಟ್ಟ ಎರೆ (= L.-bait). L.-hook, -line ನೆಟ್ಟ ಗಾಳ.

Lee ಲೀ (ನಾ.) (ಪಕ್ಕದ ವಸ್ತುವಿನಿಂದ ದೊರೆತ) ಮರೆ, ಆಶ್ರಯ (Under the l. of —ರ ಮರೆಯಲ್ಲಿ); ಮರೆಯಿರುವ ಕಡೆ; ಗಾಳಿಮರೆಯ ಕಡೆ (= L. side) (ವಿರುದ್ಧ ಪದಗಳು: Windward, Weather side). [(ಸಾ., ವಿಶೇಷಣವಾಗಿ ಪ್ರ.) lee or lee- ಹಡಗಿನ ಗಾಳಿ ಮರೆಯ ಕಡೆಯ; ವಸ್ತುವಿನ ಗಾಳಿಮರೆಯ ಕಡೆಯ. **Leémost** (ಗು.) ಗಾಳಿಗೆ ಅತ್ಯಂತ ಮರೆಯಾದ ಕಡೆಯ]. L. shore (ಹಡಗಿನ) ಗಾಳಿಮರೆಯ ಕಡೆಯ (ಸಮುದ್ರ) ತೀರ. **Leéway** ಗಾಳಿಮರೆಯ ಅಡ್ಡದಿಕ್ಕಿಗೆ ಹಡಗಿನ ಮಾರ್ಗಚ್ಯುತಿ [Make up l.-w. (ರೂಪ.) ಹಿಂದೆಬಿದ್ದುಹೋದುದನ್ನು ಕೂಡಿಸಿಕೊಳ್ಳಲು ಪ್ರಯಾಸಪಡು; ದುಃಸ್ಥಿತಿಯಿಂದ ತಪ್ಪಿಸಿಕೊಳ್ಳಲು ಹೋರಾಡು (Much l.-w. to make up)]. **Leéward** ಲೀವರ್ಡ್, ಲ್ಯೂಅರ್ಡ್ (ಗು., ನಾ., ಕ್ರಿ. ವಿ.) (ಗಾಳಿ ಮರೆಯ ಪಕ್ಕ(ದ, —ಕ್ಕೆ) (ವಿರುದ್ಧ ಪದ: Windward); ಗಾಳಿ ಮರೆಯ ದಿಕ್ಕು (To l., On the l. of). **Leéwardmost** (ಗು.); **Leéwardly** (ಕ್ರಿ. ವಿ.) (ಹಡಗಿನ ವಿಷಯದಲ್ಲಿ) ಗಾಳಿಮರೆಯ ಕಡೆಗೆ ಸರಿಯುವಂತೆ (ವಿರುದ್ಧ ಪದ: Weatherly)

Leech[1] ಲೀಚ್ (ನಾ.) ರಕ್ತ ಹೀರುವ ಜಲವಾಸಿಯಾದ ಒಂದು ಹುಳು (ಜಾತಿ): ಜಿಗುಣೆ (ಮು., ಮನುಷ್ಯನ ರಕ್ತ ಹೀರಲು ವೈದ್ಯರು ಉಪ ಯೋಗಿಸುವಂಥದು) (Stick like a l. ಜಿಗುಣೆಯ ಹಾಗೆ ಅಂಟು; ಬಿಡದೆ ಅಂಟಿಕೊ). (ರೂಪ.) ಪರರಿಂದ ಆದಾಯ ಹೀರುವವನು.

Leech[2] ಲೀಚ್ (ನಾ.) (ಪ್ರಾಚೀ. ಪ್ರ., ಕಾವ್ಯ, ಹಾಸ್ಯ ಪ್ರ.) ವೈದ್ಯ; ಚಿಕಿತ್ಸಕ. **Leechcraft** ರೋಗ ವಾಸಿಮಾಡುವ ವಿದ್ಯೆ, ಕಲೆ; ಚಿಕಿತ್ಸಾ ವಿದ್ಯೆ.

Leek ಲೀಕ್ (ನಾ.) ಅಡಿಗೆಗೆ ಉಪಯೋಗಿಸುವ ಈರುಳ್ಳಿಯಂಥ, ಆದರೆ ಉದ್ದುದ್ದನೆಯ ಗಡ್ಡೆ ಬಿಡುವ, ಒಂದು ಗಿಡ. ವೇಲ್ಸಿನ ರಾಷ್ಟ್ರ ಚಿಹ್ನೆಯಾದ ಈ ಗಡ್ಡೆ (Eat the l. ಆದ ಅಪಮಾನವನ್ನು ನುಂಗಿಕೊ)

Leep ಲೀಪ್ (ಕ್ರಿ. ಸಕ.) (ಆಂ. ಇಂ.) (ಗೋಡೆಯನ್ನು, ನೆಲವನ್ನು) ಸಗಣಿಯ ನೀರು ಹಾಕಿ ಸಾರಿಸು.

Leer[1] ಲಿಯರ್ (ಕ್ರಿ. ಅಕ., ನಾ.) (ಮು., ಕಪಟ, ಕಾಮುಕ, ಕುಹಕ, —ಭಾವದ) ಓರೆ ನೋಟ, ಕುಡಿ ನೋಟ (ಬೀರು). **Leéry** (ಗು.) (ಅಸಂ.) ಹುಷಾರಿನ; ಕಳ್ಳ ಕೊರಮನಂಥ. **Leéringly** (ಕ್ರಿ. ವಿ.)

Leer[2] ಲಿಯರ್ (ನಾ.) ಗಾಜಿಗೆ ಹದ ಕೊಡುವ ಕುಲುಮೆ.

Leéry. Leer[1] ನೋಡಿ.

Lees ಲೀಸ್ (ನಾ., ಬ. ವ.) (ಮದ್ಯ, ಮೊ. ಗಳ) ಮಷ್ಟು, ಮಡ್ಡಿ [Drink, drain, to the l. ಮಷ್ಟೂ ಬಿಡದೆ ಪೂರ್ತಿ ಕುಡಿದುಬಿಡು; ಬರಿದು ಮಾಡು (ರೂಪ. ಸಹ)]; ಕಳಪೆ; ಕಸ.

Leéward, etc. Lee ನೋಡಿ.

Left[1] ಲೆಫ್ಟ್ (ಗು., ಕ್ರಿ. ವಿ., ನಾ.) ಎಡ(ದ); ಎಡ ಪಕ್ಕದ(ಲ್ಲಿರುವ); ಎಡಗಡೆಯ(ಲ್ಲಿರುವ) [Marry with the l. hand (ದೊರೆ ಅಥವಾ ಶ್ರೀಮಂತ) ತನ್ನ ಪದವಿಗೆ ತಕ್ಕ ವಂಶದವಳಲ್ಲದ ಕೆಳ ಅಂತಸ್ತಿನ ಹೆಂಗಸನ್ನು ಮದುವೆ ಮಾಡಿಕೊ (ಇದರಿಂದ ಹುಟ್ಟಿದ ಮಕ್ಕಳನ್ನು ಧರ್ಮ ಸಂತಾನವೆಂದು ಪರಿಗಣಿಸಿದರೂ ಅವರಿಗೆ ತಂದೆಯ ಪದವಿಗೂ ಆಸ್ತಿಗೂ ಹಕ್ಕಿರುವುದಿಲ್ಲ); ಎಡಗೈ ಮದುವೆ ಮಾಡಿಕೊ. L.-hand blow ಎಡಗೈಯ ಏಟು. L.-hand rope ಎಡಕ್ಕೆ ಹೊಸೆದ ಹಗ್ಗ; ಎಡಮುರಿ ಹಗ್ಗ. Over the l. (shoulder: ಈಗ ವಿರ. ಪ್ರ.) (ಅಸಂ.) ಹೇಳಿದುದಕ್ಕೆ ವಿರುದ್ಧವಾಗಿ ಅರ್ಥಮಾಡ ಬೇಕಾದ]. (ಕ್ರಿ. ವಿ.) ಎಡಕ್ಕೆ. (ನಾ.) ಎಡಗೈ; ಎಡ ಪಕ್ಕ [Got in one with his l. (ಮುಷ್ಟಿ ಕಾಳಗ) ಎಡಗೈಯಿಂದ ಹೊಡೆತ ಕೊಟ್ಟನು]. ಸೈನ್ಯದ ಎಡ ಪಕ್ಕ. (ರಾಜ್ಯನೀತಿ) (ಯೂರೋಪಿನ ಕೆಲವು ಶಾಸನ ಸಭೆಗಳಲ್ಲಿ ಶಾಸನ ಸಭಾಧ್ಯಕ್ಷನ ಎಡಗಡೆ ಕುಳಿತುಕೊಳ್ಳುವ) ತೀವ್ರ ಪಕ್ಷದ ಸದಸ್ಯರು. ತತ್ತ್ವ ಶಾಸ್ತ್ರದ, ಮತ ಪಂಗಡಗಳ, — ಮುಂದುವರಿದ ಅಥವಾ ನವೀನ ಮಾರ್ಗಗಾಮಿ ಪಕ್ಷದವರು. **Léft-hánded** (ಗು.) ಎಡಗೈಯನ್ನೇ ಹೆಚ್ಚಾಗಿ ಉಪಯೋಗಿಸುವ; ಎಡಚು; ರೊಡ್ಡಗೈಯ. ಒಡ್ಡೊಡ್ಡಾದ; ವಿಕಾರವಾದ; ಸಂದಿಗ್ಧವಾದ; ಎರಡು ಕಡೆಗೂ ತಟ್ಟುವ; ಕಾಪಟ್ಯ ಸೂಚನೆಯ; ನಂಬಲಾಗದ [L.-h. compliment ನಿಂದಾತ್ಮಕ, ಕುಹಕಾತ್ಮಕ, — ಪ್ರಶಂಸೆ. L.-h. marriage ಕೃತಕದ ಮದುವೆ; = Morganatic marriage (Marry with the left hand ಎಂಬುದನ್ನು ಮೇಲೆ ನೋಡಿ)]. (ಮದುವೆಯ ವಿಷಯದಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

= Morganatic (ಇಂಥ ಮದುವೆಗಳಲ್ಲಿ ವರನು ತನ್ನ ಎಡಗೈಯನ್ನು ವಧುವಿಗೆ ಕೊಡುತ್ತಿದ್ದ ಜರ್ಮನ್ ಪದ್ಧತಿಯಿಂದ). (ಪ್ರಾಚೀ. ಪ್ರ.) ಅಪಶಕುನದ ; ಕೇಡು ಸೂಚಿಸುವ ; ಕುಟಿಲ. ಎಡಗೈಯ ಉಪಯೋಗಕ್ಕೆ ಹೊಂದಿಸಿದ, ತಕ್ಕ ; (ಏಟು) ಎಡಗೈಯಿಂದ ಕೊಟ್ಟ. **Left-hándedly** (ಕ್ರಿ. ವಿ.) ; **Left-hándedness** (ನಾ.); **Left-hánder** (ನಾ.) ಎಡಚ; ಎಡಗೈ ಏಟು. **Léftmost** (ಗು.) ಅತ್ಯಂತ ಎಡಗಡೆಯ. **Léftward** (ಗು., ಕ್ರಿ. ವಿ.); **Léftwards** (ಕ್ರಿ. ವಿ.)

Left[2]. Leave ಧಾತುವಿನ ಭೂತ., ಭೂ. ಕೃ.

Leg ಲೆಗ್ (ನಾ., ಕ್ರಿ. ಅಕ.) ಕಾಲು [All legs (ಯುವಕನ ವಿಷಯದಲ್ಲಿ) ಅತಿಯಾಗಿ ಬೆಳೆದು ವಿಕಾರವಾಗಿರುವ. Boot is on other l. (Boot[1] ನೋಡಿ). Pull one's l. (ಬಳ. ಮಾ.) ಪರಿಹಾಸ, ಮೊ. ಗಳಿಂದ ಒಬ್ಬನನ್ನು ಅವಿವೇಕಿಯಾಗಿ ತೋರುವಂತೆ ಮಾಡು, ಬೆಪ್ಪು ಮಾಡು. Give one a l. up ಹತ್ತುವುದಕ್ಕೆ, ಅಡಚಣೆ ದಾಟುವುದಕ್ಕೆ, ಒಬ್ಬನಿಗೆ ಸಹಾಯ ಮಾಡು. Bone in one's l. ಕುಂಟು ನೆಪ. Have the legs of (— ಇಂತ) ವೇಗವಾಗಿ ಹೋಗುವ ಸಾಮರ್ಥ್ಯವಿರು. Put best l. foremost (Best ನೋಡಿ). Shake a l. ಕುಣಿ. Stretch one's legs ವ್ಯಾಯಾಮಕ್ಕಾಗಿ ನಡೆದಾಡು. Take to one's legs ಕಾಲಿಗೆ ಬುದ್ಧಿಹೇಳು ; ಓಡಿಹೋಗು. On one's legs (ಭಾಷಣ ಮಾಡಲು) ನಿಂತುಕೊಂಡು (ಹಾಸ್ಯ ಪ್ರ. : On one's hind legs); ತಿರುಗಾಡುವಷ್ಟು ಆರೋಗ್ಯ ಪಡೆದು ; ಅನುಕೂಲ ಸ್ಥಿತಿಯಲ್ಲಿ; ನೆಮ್ಮದಿ ಪಡೆದು ; ನೆರೆಗೊಂಡು. Set one on his legs ಒಬ್ಬನನ್ನು ಸ್ವಾವಲಂಬಿಯನ್ನಾಗಿ ಮಾಡು. Stand on one's own legs ಸ್ವಾವಲಂಬಿಯಾಗಿರು ; ಸ್ವತಂತ್ರವಾಗಿರು. Fall on one's legs (Fall ನೋಡಿ). Has not a l. to stand on (ತಾನು ಮಾಡಿದ ಪೂರ್ವಪಕ್ಷಕ್ಕೆ ವಾಸ್ತವಾಂಶಗಳ ಅಥವಾ ತಕ್ಕ ಕಾರಣಗಳ) ಯಾವ ಆಧಾರವೂ ಇಲ್ಲ. On one's last legs ಸಾವು ಸಮೀಪಿಸಿ. Walk one off his legs ನಡಸಿ ನಡಸಿ ಸುಸ್ತು ಮಾಡು. Feel, find, one's legs ಎದ್ದು ನಿಂತುಕೊಳ್ಳುವ, ನಡೆದಾಡುವ, ತ್ರಾಣ ಪಡೆ. Keep one's legs (ಬೀಳದೆ) ನಿಂತಿರು ; ನಡೆಯುತ್ತಿರು. L. before wicket (ಸಂಕ್ಷಿಪ್ತ : l. b. w.) ಗುರಿಕೋಲಿಗೆ ಹೋಗುವ ಚೆಂಡನ್ನು ದಾಂಡುಗಾರನ ಕಾಲು ಅಕ್ರಮವಾಗಿ ತಡೆಯುವ ತಪ್ಪು. Sea-legs (Sea ನೋಡಿ)]. ಆಹಾರವಾಗಿ ಉಪಯೋಗಿಸುವ ಮೃಗದ ಕಾಲು (L. of mutton). ಒಂದು ಕಾಲನ್ನು ಹಿಂದಕ್ಕಿಟ್ಟು ಮಾಡುವ ಪ್ರಣಾಮ [ಸಾ., Make a l. (ಪ್ರಾಚೀ. ಪ್ರ.)]. ಮೋಸಗಾರ ; ವಂಚಕ (= Black-l.). (ಕ್ರಿಕೆಟ್) ದಾಂಡುಗಾರನ ಸ್ಥಾನದ ಹಿಂದೆ ಬಲ ಪಕ್ಕದ (ಆಟದ ಮೈದಾನದ) ಭಾಗ (L. stump ಇದಕ್ಕೆ ಕೇವಲ ಹತ್ತಿರದ ಗುರಿಕೋಲು. Long, short, square, l. ಮೈದಾನದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ನಿಂತಿರುವ ಆಟ ಕಾಯುವವರು. Hit to l.). ಕೃತಕವಾಗಿ ಮಾಡಿದ ಕಾಲು (Cork, wooden, etc., l.). ಕಾಲು ಮುಚ್ಚುವ ಉಡುಪಿನ ಭಾಗ. (ಯಂತ್ರ, ಮೇಜು, ಕುರ್ಚಿ, ಮಂಚ, ಮೊ. ಗಳ) ಕಾಲು, ಆಸರೆ, ಆಧಾರ. (ಕವಲಾಗಿರುವುದರ) ಒಂದು ಶಾಖೆ. ತ್ರಿಕೋನದ ಪಕ್ಕ (ರೇಖೆ) (ಆಧಾರರೇಖೆಯಲ್ಲ). [Give l.-bail ಪಲಾಯನ ಮಾಡು ; ಪರಾರಿಯಾಗು. L.-bye (ಕ್ರಿಕೆಟ್) ದಾಂಡುಗಾರನನ್ನು ತಗುಲ ಗುರಿಕೋಲಿನ ಕಾಪಿನವನು ಹಿಡಿಯದೆ ಬಿಟ್ಟ ಚೆಂಡಿಗಾಗಿ ಸಂಪಾದಿಸಿದ ಓಟ. **L.-guard** (ಕ್ರಿಕೆಟ್) (ಮೊಣಕಾಲಿನ, ಕಣಕಾಲಿನ ಮತ್ತು ಹರಡಿನ ರಕ್ಷಣೆಗಾಗಿ ಹಾಕಿಕೊಳ್ಳುವ) ಕಾಲು ಕಾಪು. **L.-pull** (ಒಬ್ಬನನ್ನು) ಬೆಪ್ಪನನ್ನಾಗಿ ಮಾಡುವ ಪ್ರಯತ್ನ. **L.-rest** (ಕುಳಿತಿರುವ ರೋಗಿ, ಮೊ. ರಿಗೆ) ಕಾಲಾಸರೆ. L. theory (ಕ್ರಿಕೆಟ್) ಆಟ ಕಾಯುವವರಲ್ಲಿ ಹೆಚ್ಚು ಮಂದಿಯನ್ನು ದಾಂಡುಗಾರನ ಎಡಗಡೆಯ ಪ್ರಾಂತದಲ್ಲಿ ನಿಲ್ಲಿಸಿ, ಅವನ ಎಡಗಡೆಗೇ ಚೆಂಡೆಸದು ಆಟ ಕಳೆಯುವ ವಾದ]. (ಕ್ರಿ.) [L. it (ಜೋರಾಗಿ) ನಡೆ ; ಓಡು]. ಕಾಲುವೆಯ ಪಕ್ಕವನ್ನು ಕಾಲಿಂದ ಮೆಟ್ಟಿ ಸುರಂಗಕಾಲುವೆಯಲ್ಲಿ ದೋಣಿ ನಡಸು [**Légger** (ನಾ.) ಹೀಗೆ ದೋಣಿ ನಡಸುವವನು]. **(-)legged** (ಗು.) ; **Législess** (ಗು.) ; **Légging** ಲೆಗಿಂಗ್ (ನಾ. ; ಸಾ., ಬ. ವ.) ಸಾ., ಮಂಡಿಯ ವರೆಗೆ ಬರುವ, ತೊಗಲಿನ ಕಾಲುಕಾಪು. **Léggy** ಲೆಗಿ (ಗು.) (ಹುಡುಗ, ಕುದುರೆಯ ಮರಿ, ನಾಯಿ ಮರಿ) ನೀಳವಾದ ತೆಳುಗಾಲುಗಳುಳ್ಳ ; ನಿಡುಗಾಲಿನ. **Léggi-ness** (ನಾ.)

Légacy ಲೆಗಸಿ (ನಾ.) ಅಂತಿಮ ಇಷ್ಟಪತ್ರದ ಮೂಲಕ ಬಿಟ್ಟ, ಕೊಟ್ಟ, — ಹಣ, ವಸ್ತು, ಆಸ್ತಿ. ಹಿಂದಿನವರಿಂದ ಪರಂಪರೆಯಾಗಿ ಬಂದಿರುವ ವಸ್ತುರೂಪವಾದ ಅಥವಾ ಭಾವರೂಪವಾದ ಸ್ವತ್ತುಗಳು ; ಪೂರ್ವಾರ್ಜಿತ ಆಸ್ತಿ. **L.-hunter** ತನಗೇನಾದರೂ ಆಸ್ತಿ, ಹಣ, ಬಿಟ್ಟು ಹೋಗಲೆಂಬ ಆಸೆಯಿಂದ ಮುದುಕರಾದ ಹಣವಂತರನ್ನು ಆಶ್ರಯ ಮಾಡುವವನು.

Légal ಲೀಗಲ್ (ಗು.) ನ್ಯಾಯ ಶಾಸ್ತ್ರದ ; ಕಾನೂನಿನ ; ಶಾಸನಾಧಾರವುಳ್ಳ ; ಕಾನೂನಿಗೊಳಪಡುವ ; ಶಾಸನ ಸಮ್ಮತವಾದ, ಸಂಬಂಧವಾದ ; ಶಾಸನ ಬದ್ಧವಾದ [L. tender (ಸಾಲಗಾರನು ತನಗೆ ಬರಬೇಕಾದ ಸಾಲಕ್ಕಾಗಿ ಒಪ್ಪಿ ತೆಗೆದುಕೊಳ್ಳಲೇಬೇಕೆಂದು ವಿಧಾಯಕವಾಗಿರುವ ರೂಪದ ಹಣ]. (ಧರ್ಮನ್ಯಾಯ ವಿವಕ್ಷೆಯಿಲ್ಲದೆ) ಶಾಸನ ಸಮ್ಮತವಾದ ; ಶಾಸನಾನುಗುಣವಾದ. (ದೇವ. ಶಾ.) ಮೋಸೆಸ್ಸಿನ ಶಾಸನದ ; (ಭಕ್ತಿಯಿಂದಲೇ ಮೋಕ್ಷ ದೊರೆಯದೆಂದೂ ಅದಕ್ಕೆ ಸತ್ಕರ್ಮಾಚರಣೆಯೇ ಸಾಧನವೆಂದೂ ಹೇಳುವ) ಕರ್ಮಮಾರ್ಗ ನ್ಯಾಯದ. **Légalism** ಲೀಗಲಿಸ್ಮ್ (ನಾ.) (ದೇವ. ಶಾ.) ಸುವಾರ್ತೆಗಿಂತ ನ್ಯಾಯ ಭಾಗಕ್ಕೆ (ದೇವರ ಆಜ್ಞೆಗಳು, ಶ್ರುತಿಪ್ರಕಾಶ ವಿಷಯಗಳು —ಇವನ್ನೊಳಕೊಂಡ ಬೈಬಲ್ಲಿನ ಭಾಗಕ್ಕೆ) ಪ್ರಾಶಸ್ತ್ಯ (ಕೊಡುವುದು) ; ಕರ್ಮ ಸಮರ್ಥನ ವಾದ ; ನಿಯಮಕ್ಕೆ, ಸೂತ್ರಕ್ಕೆ, ಅತಿ ಪ್ರಾಶಸ್ತ್ಯ ಕೊಡುವುದು ; ಅತಿಸೂತ್ರತೆ. **Légalist** (ನಾ.) ; **Legálity** ಲಿಗ್ಯಾಲಿಟಿ (ನಾ.) = Legalism. ನ್ಯಾಯಪರತೆ ; ನ್ಯಾಯ ಸಮ್ಮತತೆ. **Légalize** (ಕ್ರಿ. ಸಕ.) ; **Legalizátion** (ನಾ.) ; **Légally** (ಕ್ರಿ. ವಿ.)

Légate[1] ಲೆಗೆಟ್ (ನಾ.) ಪೋಪಿನ ಪ್ರತಿನಿಧಿಯಾಗಿ ನಿಯಮಿತನಾದ ಕ್ರೈಸ್ತ ವೈದಿಕ. (ಪ್ರಾಚೀ. ಪ್ರ.) ರಾಯಭಾರಿ; ನಿಯೋಗಿ; ಪ್ರತಿನಿಧಿ. **Légateship** (ನಾ.) ; **Légatine** ಲೆಗಟಿನ್ (ಗು.) ಪೋಪಿನ ಪ್ರತಿನಿಧಿಯ. **Legátion** ಲಿಗೇಷನ್ (ನಾ.) ಪ್ರತಿನಿಧಿಯನ್ನು, ನಿಯೋಗಿಯನ್ನು, ಕಳುಹಿಸುವುದು ; ಪ್ರತಿನಿಧಿ ವರ್ಗ, ಮಂಡಲಿ. (ಮು., ರಾಯಭಾರಿಯ ಅಂತಸ್ತು ಇಲ್ಲದ) ನಿಯೋಗಿ ಮತ್ತು ಅವನ ಪರಿವಾರ ; ನಿಯೋಗಿಯ ಅಧಿಕಾರ ಗೃಹ ; ನಿಯೋಗಿತನ ; ಪ್ರಾತಿನಿಧ್ಯ.

Legáte[2] ಲಿಗೇಟ್ (ಕ್ರಿ. ಸಕ.) ಅಂತಿಮ ಇಷ್ಟಪತ್ರದ ಮೂಲಕ ಆಸ್ತಿ ಬಿಡು, ವಹಿಸಿಕೊಡು (ಸಾ., Give & l.). **Legátor** ಲಿಗೇಟರ್ (ನಾ.) ಹೀಗೆ ಆಸ್ತಿ ವಹಿಸಿಕೊಡುವವನು. **Legateé** ಲೆಗಟೀ (ನಾ.) — ಪಡೆಯುವವನು.

Legáto (It.) ಲೆ(ೇ)ಗಾಟೊ(ೀ), ಲಿ— (ಗು., ಕ್ರಿ. ವಿ., ನಾ.) (ಸಂ., ಸೂಚನೆ) ಧ್ವನಿ ವಿಚ್ಛಿತ್ತಿಯಿಲ್ಲದೆ ಹೊಂದಿಕೊಂಡು ನಯವಾಗಿ ನುಡಿಯುವ(ವುದಾಗಿ). (ನಾ.) —ನುಡಿಯುವ ಸಂಗೀತ ರೀತಿ ; ಹೀಗೆ ಹಾಡಿದ ಕೃತಿ.

Légend ಲೆಜೆಂಡ್ (ನಾ.) ಸಾಧು ಸಂತರ ಜೀವನ ಕಥೆ, ಮೊ. ಗಳ ಸಂಗ್ರಹ ; (ಇಂತಹುದೇ ಆದ) ಇತರ ಜೀವನ ಕಥೆ [The (Golden) L. (ಚರಿತ್ರೆ) (೧೩ನೆಯ ಶತಮಾನದಲ್ಲಿ ಇಂಗ್ಲಿಷಿನಲ್ಲಿ ಸಂಗ್ರಹಿಸಿದ) ಸಾಧು ಸಂತರ ಜೀವನ ಕಥಾ ಸಂಗ್ರಹ]. ಚಾರಿತ್ರಕವೆಂದು ಜನರು ಸಾಮಾನ್ಯವಾಗಿ ಅಂಗೀಕರಿಸುವ ಪರಂಪರೆಯಾಗಿ ಬಂದ ಐತಿಹ್ಯ ; ಪುರಾಣ ಕಥೆ ; ಆಖ್ಯಾಯಿಕೆ ; ಇಂತಹ ಸಾಹಿತ್ಯ ಅಥವಾ ಪಾರಂಪರ್ಯ (In l.). (ಮು., ನಾಣ್ಯದ, ಪದಕದ, ಮೇಲಿನ) ಆಲೇಖ್ಯ, ಲೇಖನ, ಅಂಕನ, ಆದರ್ಶ ವಚನ. **Légendary** (ಗು., ನಾ.) ಐತಿಹ್ಯಗಳ(ಳು). **Légendry** (ನಾ.) (ಸಾಮೂಹಿಕವಾಗಿ) ಐತಿಹ್ಯಗಳು.

Légerdemaín ಲೆಜರ್ಡಿಮೇನ್ (ನಾ.) ಕೈ ಚಳಕ ; ಗಾರುಡಿ ; ಇಂದ್ರಜಾಲ ; ಕಣ್ಕಟ್ಟು ತಂತ್ರಗಳು, ಮೋಸ ; ಠಕ್ಕು ; ಕುತರ್ಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Légging, Léggy. Leg ನೋಡಿ.

Leghórn ಲೆಗಾರ್‌ನ್, **Léghorn** ಲೆಗ್‌ಹಾರ್‌ನ್ (ನಾ.) ಟೊಪ್ಪಿಗೆ, ಮೊ. ಗಳಿಗೆ ಉಪಯೋಗಿಸುವ ಒಂದು ಬಗೆಯ ಹುಲ್ಲುಹೆಣಿಗೆ. ಒಂದು ಜಾತಿಯ ಸಾಕುಕೋಳಿ. (ಇಟಲಿಯಲ್ಲಿಯ Leghorn ಎಂಬ ಸ್ಥಳದ ಹೆಸರಿನಿಂದ)

Légible ಲೆಜಿಬ್‌ಲ್ (ಗು.) (ಕೈಬರೆವಣಿಗೆ ಅಥವಾ ಮುದ್ರಣ) ಸ್ಪಷ್ಟವಾದ; ಸ್ಫುಟವಾದ; ಸುಲಭವಾಗಿ ಓದಲಾಗುವ. **Legibílity** (ನಾ.); **Légibly** (ಕ್ರಿ. ವಿ.)

Légion ಲೀಜನ್ (ನಾ.) ಪುರಾತನ ರೋಮನ್ ಸೈನ್ಯದಲ್ಲಿ ೩೦೦೦–೬೦೦೦ ಪದಾತಿಗಳೂ ಸುಮಾರು ೩೦೦ ಅಶ್ವ ಸೈನ್ಯವೂ ಇರುತ್ತಿದ್ದ ಸೈನ್ಯ ದಳ. ದೊಡ್ಡ ಗುಂಪು; ಅಪಾರ ಜನ; ಅಸಂಖ್ಯಾತರು (Their name is L. ಅವರು ಅಸಂಖ್ಯಾತರು). L. of Honour ಫ್ರಾನ್ಸಿನಲ್ಲಿ ಕೊಡುವ ಒಂದು ದರ್ಜೆಯ ಪ್ರಶಸ್ತಿ. **Légionary** (ಗು., ನಾ.) ಒಂದು ದಳದ (ಸೈನಿಕ); (ಸೈನಿಕ) ದಳಗಳ. **Légioned** (ಗು.) (ಕಾವ್ಯ) ದಳ ದಳಗಳಾಗಿ ವ್ಯೂಹ ರಚನೆ ಮಾಡಿದ.

Legislátion ಲೆಜಿಸ್ಲೇಷನ್ (ನಾ.) ಶಾಸನ, ಕಾನೂನು (ಮಾಡುವುದು); ಶಾಸನ ರಚನೆ. **Législative** (ಗು.); **Législatively** (ಕ್ರಿ. ವಿ.); **Législator** (ನಾ.) ಶಾಸನಕಾರ; ಶಾಸನ ಸಭೆಯ ಸದಸ್ಯ. **Législatress** (ನಾ., ಸ್ತ್ರೀ.); **Législate** (ಕ್ರಿ. ಅಕ.) ಶಾಸನ, ಕಾನೂನು, — ಮಾಡು. **Legislatórial** (ಗು.) (ವಿರ. ಪ್ರ.) ಶಾಸನ ಮಾಡುವ ಅಧಿಕಾರವುಳ್ಳ; ಶಾಸನಾಧಿಕಾರಿಯ; ಶಾಸನಾಧಿಕಾರದ. **Législature** — ಟ್ಯುರ್, — ಚರ್ (ನಾ.) (ಒಂದು ರಾಷ್ಟ್ರದ) ಶಾಸನ ಸಭೆ; ನ್ಯಾಯವಿಧಾಯಕ ಸಭೆ. **Légist** ಲೀಜಿಸ್ಟ್ (ನಾ.) ನ್ಯಾಯಶಾಸ್ತ್ರ ಪಂಡಿತ.

Législator, Législature, Légist, etc. **Legislation** ನೋಡಿ.

Legítimate ಲೆ(ಲ)ಜಿಟಿಮೆಟ್ (ಗು.), — ಮೇಟ್ (ಕ್ರಿ. ಸಕ.) ಧರ್ಮ ಸಮ್ಮತವಾದ ವಿವಾಹದಿಂದ ಹುಟ್ಟಿದ; ಧರ್ಮ ಸಂತಾನದ (ತಂದೆ, ತಾಯಿ, ಜನನ, ಕುಲ, ಸಂತತಿ, ಮೊ. ಗಳ ವಿಷಯದಲ್ಲಿ ಸಹ ಪ್ರಯೋಗ). ನ್ಯಾಯ ಸಮ್ಮತವಾದ; ಯುಕ್ತವಾದ; ಕ್ರಮ ಬದ್ಧವಾದ; ಸಂಪ್ರದಾಯ ವಿಹಿತವಾದ [The l. drama ನಿಜವಾದ ಯೋಗ್ಯತೆಯುಳ್ಳವೆಂದು ಅಂಗೀಕೃತವಾದ ಷೇಕ್ಸ್‌ಪಿಯರಿನ ನಾಟಕಗಳು ಅಥವಾ ಇತರ ನಾಟಕಗಳು]. (ರಾಜನ ಹಕ್ಕುಬಾಧ್ಯತೆ) ಖಚಿತವಾದ ವಂಶಪಾರಂಪರ್ಯದ ಹಕ್ಕುಳ್ಳ. ತಾರ್ಕಿಕ ನ್ಯಾಯಾನುಸಾರ ಅಂಗೀಕರಿಸಬಹುದಾದ. (ಕ್ರಿ.) (ಶಾಸನದ ಮೂಲಕ ಅಥವಾ ಪ್ರಮಾಣ ಪೂರ್ವಕ) ನ್ಯಾಯಸಮ್ಮತ ಮಾಡು; ಸಮರ್ಥನೆ ಮಾಡು; ಸಮರ್ಥನೆಯಾಗಿರು. **Legítimacy** (ನಾ.); **Legítimately** (ಕ್ರಿ. ವಿ.); **Legitimátion** (ನಾ.); **Legítimatize** (ಕ್ರಿ. ಸಕ.); **Legítimism** ಲಜಿಟಿಮಿಸ್ಮ್ (ನಾ.) (ಮು., ಸ್ಪೆಯ್ನ್ ಮತ್ತು ಫ್ರಾನ್ಸ್ ದೇಶಗಳ ರಾಜ್ಯನೀತಿಯಲ್ಲಿ) ನೇರವಾದ ಸಂತತಿಯ ಹಕ್ಕುಳ್ಳ ದೊರೆಯ, ದೊರೆತನಕ್ಕೆ ಅಂಥ ಹಕ್ಕುಹೂಡಿದವನ, — ಪಕ್ಷ ವಹಿಸುವುದು. **Legítimist** (ನಾ., ಗು.); **Legítimize** (ಕ್ರಿ. ಸಕ.) = Legitimatize. **Legitimizátion** (ನಾ.)

Légum (L) ಲೀಗಮ್ (ನಾ., ಷಷ್ಠೀ ಬ. ವ.; ಸಂಕ್ಷಿಪ್ತ: LL.) (ಪದವಿಗಳಲ್ಲಿ) ನ್ಯಾಯಶಾಸ್ತ್ರದ.

Légume ಲೆಗ್ಯೂಮ್, **Legúme** ಲಗ್ಯೂಮ್, **Legúmen** ಲಗ್ಯೂಮೆನ್ (ನಾ.) ದ್ವಿದಳ ಧಾನ್ಯ ಸಸ್ಯದ ಕಾಯಿ, ಬೀಜಕೋಶ, ಬೀಜ; ಶಿಂಬೆ. ಆಹಾರವಾಗಿ ಉಪಯೋಗಿಸುವ ತಿಂಗಳು ಹುರುಳಿ, ಅವರೆ, ತೊಗರಿ, ಬಟಾಣಿ, ಮೊ. ವು; ತರಕಾರಿ; ಕಾಯಿಪಲ್ಯ. **Legúminous** ಲಗ್ಯೂಮಿನಸ್ (ಗು.) ದ್ವಿದಳ ಧಾನ್ಯದ(ಂಥ); ದ್ವಿದಳ ಧಾನ್ಯ (ಸಸ್ಯ) ಜಾತಿಯ.

Leibnítzian ಲೈಬ್ನಿಟ್ಸಿಯನ್ (ಗು., ನಾ.) (ಜರ್ಮನಿಯ ಪ್ರಸಿದ್ಧ ತತ್ತ್ವಶಾಸ್ತ್ರಜ್ಞನೂ ಗಣಿತಶಾಸ್ತ್ರಜ್ಞನೂ ಆದ) Leibnitz ಎಂಬಾತನ, ಆತನ ತತ್ತ್ವದ (ಅನುಯಾಯಿ)

Leísure ಲೆ(ಲೀ)ಝರ್ (ನಾ.) ಬಿಡುವು; ವಿರಾಮ; ಅವಕಾಶ; ಪುರಸತ್ತು. Wait one's l. ಒಬ್ಬನ ಸಮಯ ಕಾಯಿ. At l. ಕೆಲಸವೇನೂ ಇಲ್ಲದೆ, ಮಾಡದೆ; ಬಿಡುವಾಗಿ; ನಿಧಾನವಾಗಿ; ಸಾವಕಾಶವಾಗಿ. At one's l. (ಒಬ್ಬನಿಗೆ) ಬಿಡುವಾದಾಗ. **Leísured** (ಗು.); **Leísureless** (ಗು.); **Leísurely** (ಗು., ಕ್ರಿ. ವಿ.) ಬಿಡುವಿರುವ; ಸಾವಕಾಶವಾಗಿ, ಸಾವಧಾನವಾಗಿ, — ಆಲೋಚಿಸಿ (ಮಾಡುವ, ಮಾಡಿದ); ಆತುರ ಪಡದೆ. **Leísureliness** (ನಾ.)

Leit-motív, -tif (G) ಲೈಟ್ ಮೊಟೀಫ್ (ನಾ.) (ಸಂ.) ಸಂಗೀತ ನಾಟಕಗಳಲ್ಲಿ ಯಾವುದಾದರೊಂದು ಪಾತ್ರಕ್ಕೆ, ಪರಿಸ್ಥಿತಿಗೆ, ಅಥವಾ ಭಾವಕ್ಕೆ, ಉದ್ದಕ್ಕೂ ಸಂಬಂಧಿಸಿದ ಸಂದರ್ಭ, ಪ್ರಧಾನೋದ್ದೇಶ; ಮುಖ್ಯ ರಸ.

Léman ಲೆ(ಲೀ)ಮನ್ (ನಾ.) (ಪ್ರಾಚೀ. ಪ್ರ.) ನಲ್ಲ; ನಲ್ಲೆ; ಮಿಂಡ; ಇಟ್ಟುಕೊಂಡವನು(ಳು)

Lémma ಲೆಮ (ನಾ.; ಬ. ವ. -ta — ಟ) (ವಾದದಲ್ಲಿ, ಪ್ರತಿಪಾದನೆಯಲ್ಲಿ, ಉಪಯೋಗಿಸುವ) ಸ್ವೀಕೃತ ಅಥವಾ ಸಿದ್ಧಾಂತದ ಪ್ರತಿಜ್ಞೆ; ಪೂರ್ವ ಪಕ್ಷ; ಅವಲಂಬ ಪ್ರತಿಜ್ಞೆ. ಸಾಹಿತ್ಯ ಪ್ರಬಂಧದ, ನಿಘಂಟು ಪ್ರಕರಣದ, ಅಥವಾ ಟಿಪ್ಪಣಿ, ಮೊ. ಗಳ, ಮೊದಲಿನಲ್ಲಿ ಕೊಟ್ಟಿರುವ ವಿಷಯ ಸೂಚಿಕೆ. ಒಂದು ಚಿತ್ರ, ಮೊ. ಕ್ಕೆ ಹಾಕಿದ ಆದರ್ಶ ವಚನ.

Lémon ಲೆಮನ್ (ನಾ.) ಗಜ ನಿಂಬೆ; ಜಂಬೀರ; ಈ ಹಣ್ಣಿನ ಗಿಡ (Salt of l. ಮಸಿಯ ಕಲೆಯನ್ನು ಹೋಗಲಾಡಿಸಲು ಉಪಯೋಗಿಸುವ ಒಂದು 'ಆಕ್ಸಲೇಟ್' ಲವಣ). ನಸು ಹಳದಿ ಬಣ್ಣ. (ಅಮೆ. ನಂ. ಅಸಂ.) ಚೆಲುವೆಯಲ್ಲದ ಹುಡುಗಿ. **L.-drop** ಗಜನಿಂಬೆ ಹಣ್ಣಿನ ರುಚಿಕಟ್ಟಿದ ಬತ್ತಾಸು. **L. kali** ನೀರಿನಲ್ಲಿ ಕರಗಿದ ಸೋಡಾ ಬೈಕಾರ್ಬೊನೇಟ್ ಲವಣಕ್ಕೆ ಟಾರ್ಟಾರಿಕ್ ಆಮ್ಲವನ್ನು ಬೆರಸಿ ಮಾಡಿದ ಪಾನೀಯ. **L.-plant** ಗಜನಿಂಬೆಯ ವಾಸನೆಯ ಒಂದು ಸಸ್ಯ. **L. pudding** ಗಜನಿಂಬೆಯ ರಸ ಹಾಕಿ ಮಾಡಿದ ಒಂದು ಭಕ್ಷ್ಯ. **L. squash** ಸೋಡಾ ಪಾನೀಯಕ್ಕೆ ಗಜನಿಂಬೆಯ ರಸ ಸೇರಿಸಿದ ಪಾನೀಯ. **L.-squeezer** ಗಜನಿಂಬೆಯ ರಸ ಹಿಂಡುವ ಸಲಕರಣೆ. **Lemonáde** (ಲೆಮನೇಡ್) ಇಂಗಾರಾಮ್ಲ ವಾಯು ಹುದುಗಿಸಿ ಸಕ್ಕರೆ ಬೆರಸಿದ ಪಾನೀಯಕ್ಕೆ ಗಜನಿಂಬೆಯ ಹುಳಿ ಹಾಕಿ ಮಾಡಿದ ಪಾನಕ. **Lémony** (ಗು.) ಗಜನಿಂಬೆ ಹಣ್ಣನ್ನು ನೆನಪಿಗೆ ತರುವ.

Lémur ಲೀಮರ್ (ನಾ.) (ಮು., ಮಡಗಾಸ್ಕರ್ ದ್ವೀಪ ವಾಸಿಯಾದ, ವಾನರ ಜಾತಿಯ, ಆದರೆ ಚೂಪು ಮೂತಿಯುಳ್ಳ, ರಾತ್ರಿಸಂಚಾರದ, ಒಂದು ಸಸ್ತನಿ ಪ್ರಾಣಿ) ಕಾಡುಪಾಪ. **Lémurine** ಲೆಮ್ಯುರೈ(ರಿ)ನ್ (ಗು.); **Lémuroid** ಲೆಮ್ಯುರಾಯ್ಡ್ (ಗು., ನಾ.) — ಅಂಥ (ಪ್ರಾಣಿ)

Lend ಲೆಂಡ್ (ಕ್ರಿ. ಸಕ.; ಭೂತ., ಭೂ. ಕೃ. Lent) ಎರವಲು, ಸಾಲ, ಕಡ, — ಕೊಡು; (ಹಣವನ್ನು) ಬಡ್ಡಿಗೆ ಕೊಡು; (ಪುಸ್ತಕ, ಮೊ. ನ್ನು) ಎರವಲಾಗಿ, ಬಾಡಿಗೆಗೆ, ಕೊಡು (Lending-library). ಕೊಡು: L. enchantment, aid, dignity ಸೊಬಗನ್ನು, ಸಹಾಯವನ್ನು, ಗಾಂಭೀರ್ಯವನ್ನು, — ಕೊಡು. L. ear, an ear, one's ears ಕಿವಿಗೊಡು; ಕೇಳು. L. a hand, helping hand ಸಹಾಯ, — ಮಾಡು, ನೀಡು. L. person a box on the ear (ಪ್ರಾಚೀ. ಪ್ರ.) ಕಪಾಳಕ್ಕೆ ಹೊಡೆ, ಕೊಡು. Thing lends itself to ಅದು ಅನುಕೂಲಕ್ಕೆ ಒದಗುತ್ತದೆ, ಸಹಾಯಕವಾಗುತ್ತದೆ. **Léndable** (ಗು.); **Lénder** (ನಾ.); **Lénding** (ನಾ.)

Length ಲೆಂಗ್ತ್ (ನಾ.) ಉದ್ದ; ನೀಳ; ಲಾಂಬಿ; ನಿಡಿದು; ನೀಳು (ಗ್ರಾಂ.) [Know l. of person's foot (Foot ನೋಡಿ)]. (ಕಾಲದ) ವ್ಯಾಪ್ತಿ; ಹೊತ್ತು (A stay of some l. ಸ್ವಲ್ಪ ಹೊತ್ತು ನಿಲ್ಲಬೇಕಾದ ಸಂಭವ). (ವಸ್ತು ವ್ಯಾಪಿಸಿರುವ) ದೂರ [At arm's l. ತೋಳು ಚಾಚಿದರೆ ನಿಲುಕುವಷ್ಟು ದೂರದಲ್ಲಿ. Keep one at arm's l. ಒಬ್ಬನನ್ನು ದೂರವಿಟ್ಟಿರು; ಸಲಿಗೆ ಕೊಡದಿರು. Horse, boat, wins by

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

three lengths ಕುದುರೆ, ದೋಣಿ, ತನ್ನ ಮೂರುದ್ದದಷ್ಟು ದೂರ ಮುಂದಾಗಿ ಗೆಲ್ಲುತ್ತದೆ. Large lengths of seas and shores. L. of cloth. Prepared to go all lengths ಏನು ಮಾಡುವುದಕ್ಕೂ ಸಿದ್ಧನಾಗಿ; ಕೊನೆಯ ವರೆಗೂ ನೋಡಿಬಿಡುವುದಕ್ಕೆ ಸಿದ್ಧನಾಗಿ. Will not go the l. of asserting ಸಾಧಿಸಿ ಹೇಳುವಷ್ಟು ದೂರ ಹೋಗುವುದಿಲ್ಲ]. (ಧಂ.) ಮಾತ್ರೆ. (ಕ್ರಿಕೆಟ್) Bowler keeps a good l. ಎಸಗಾರನು ಗುರಿಕೋಲಿನಿಂದ ತಕ್ಕ ದೂರದಲ್ಲಿ ಒಳ್ಳೆಯ ಪುಟ ವೇಳುವಂತೆ ಚೆಂಡನ್ನು ಎಸೆಯುತ್ತಿದ್ದಾನೆ. L. *or* Good-l. ball ಸರಿಯಾದ ದೂರದಲ್ಲಿ ಪುಟವೇಳುವ ಚೆಂಡು. At l. ಸವಿಸ್ತಾರವಾಗಿ. ಕಟ್ಟಕಡೆಗೆ; ಬಹು ಕಾಲದಮೇಲೆ (At full, great, some, l.). At full l. ದೇಹ ಪೂರ್ತಿ ಚಾಚಿಕೊಂಡು. **Léngthways** (ಕ್ರಿ. ವಿ.); **Léngthwise** (ಕ್ರಿ. ವಿ., ಗು.); **Léngthen** ಲೆಂಗ್ತ್‌ನ್ (ಕ್ರಿ.) (ಮೊದಲಿಗಿಂತ) ಹೆಚ್ಚು ಉದ್ದ, — ಮಾಡು, ಆಗು; ಲಂಬಿಸು. (ಧಂ.) (ಸ್ವರವನ್ನು) ಎಳೆ. **Léngthy** (ಗು.) (ಭಾಷಣ, ಲೇಖನ, ಶೈಲಿ, ಭಾಷಣಕಾರ, ಮೊ. ಗಳ ವಿಷಯದಲ್ಲಿ) ಅತಿ ದೀರ್ಘವಾದ; ಪದಗಳನ್ನು ತುಂಬಿ ಬೆಳಸಿದ; ಲಂಬಿಸಿದ; ಬೇಸರ ಹಿಡಿಸುವ. **Léngthily** (ಕ್ರಿ. ವಿ.); **Léngthiness** (ನಾ.)

Lénient ಲೇನಿಯೆಂಟ್ (ಗು.) ಸಹನೆ, ಸ್ವೈರಣೆ, —ಉಳ್ಳ; ಮೃದು ಸ್ವಭಾವದ; ದಯಾಪರ; (ದಂಡನೆ, ಮೊ.) ಸೌಮ್ಯವಾದ, ಕಟ್ಟು ನಿಟ್ಟಿಲ್ಲದ. (ಪ್ರಾಚೀ. ಪ್ರ.) ಮೃದು ಮಾಡುವ; ಉಪಶಾಮಕ. **Léniently** (ಕ್ರಿ. ವಿ.); **Lénience** (ನಾ.) — ಕಾರ್ಯ, ನಡೆವಳಿ; ಸಹನೆ. **Léniency** (ನಾ.) — ಗುಣ. **Lénitive** ಲೆನಿಟಿವ್ (ಗು., ನಾ.) ಶಾಮಕ (ಔಷಧ, ಮುಲಾಮು, ಲೇಪ); (ನೋವು, ಮೊ. ನ್ನು) ಕಡಮೆ ಮಾಡುವ (ವಸ್ತು). **Lénity** (ನಾ.) ದಯಾಳುತನ; ದಯೆ; ಕರುಣೆ; ಕ್ಷಮೆ.

Léninism ಲೆನಿನಿಸ್ಮ್ (ನಾ.) (ರಷ್ಯಾ ದೇಶದಲ್ಲಿ ೧೯೧೭ರಲ್ಲಾದ ಕ್ರಾಂತಿಯ ಮುಖ್ಯ ನಾಯಕನಾದ) ಲೆನಿನ್ನಿನ ನೀತಿ ಮತ್ತು ಆರ್ಥಿಕ ತತ್ತ್ವಗಳು.

Lénitive, Lénity. **Lenient** ನೋಡಿ.

Léno ಲೀನೊ(ೀ) (ನಾ.) (ಟೋಪಿ, ಮುಖ ಪರದೆ, ಮೊ. ಗಳಿಗೆ ಉಪಯೋಗಿಸುವ) ಒಂದು ಬಗೆಯ ಹತ್ತಿಯ ಜಾಲರಿಬಟ್ಟೆ.

Lens ಲೆನ್ಸ್ (ನಾ.; ಬ. ವ. -ses) ಒಂದು ಪಕ್ಕದಲ್ಲಿ ಅಥವಾ ಎರಡೂ ಪಕ್ಕಗಳಲ್ಲಿ (ಒಳ ಅಥವಾ ಹೊರ) ಬಾಗುಳ್ಳದ್ದಾಗಿ ಬೆಳಕಿನ ಕಿರಣಗಳನ್ನು ಕೇಂದ್ರೀಕರಿಸುವ ಅಥವಾ ಚದರಿಸುವ, ಗಾಜಿನ ಅಥವಾ ಇತರ ಪಾರದರ್ಶಕ ವಸ್ತುವಿನ, — ಬಿಲ್ಲೆ, ತುಂಡು: ಲೆನ್ಸು. (ಛಾಯಾಚಿತ್ರದಲ್ಲಿ) ಲೆನ್ಸುಗಳ ಯೋಜನೆ. (ಅಂ. ರ. ಶಾ.) = Crystalline l. (Crystal ನೋಡಿ). **Lensed** (ಗು.); **Lénsless** (ಗು.)

Lent[1] ಲೆಂಟ್ (ನಾ.) (ಕ್ರೈಸ್ತ) Ash Wednesdayಯಿಂದ Easter ಹಬ್ಬದ ಹಿಂದಿನ ದಿನದ ವರೆಗಿನ ಕಾಲ (ಕಾಡಿನಲ್ಲಿ ಏಸುಕ್ರಿಸ್ತನು ಉಪವಾಸ ಮಾಡಿದುದರ ಜ್ಞಾಪಕಾರ್ಥವಾಗಿ ಈ ನಾಲ್ವತ್ತು ದಿನಗಳೂ ಕ್ರೈಸ್ತರು ಉಪವಾಸ ವ್ರತ ಮಾಡುತ್ತಾರೆ). (ಬ. ವ. ದಲ್ಲಿ; ಕೇಂಬ್ರಿಡ್ಜ್ ವಿಶ್ವವಿದ್ಯಾ ನಿಲಯದಲ್ಲಿ) 'ಲೆಂಟ್' ಕಾಲದ ದೋಣಿಪಂದ್ಯಗಳು. L. term 'ಲೆಂಟ್' ಹಬ್ಬ ಬರುವ ವರ್ಷಭಾಗ. **Lénten** ಲೆಂಟ್‌ನ್ (ಗು.) ಲೆಂಟ್ ಕಾಲದ(ಲ್ಲಿಯ); — ಕಾಲಕ್ಕೆ ಉಚಿತವಾದ. L. fare ಮಾಂಸವಿಲ್ಲದ ಊಟ. L. face ಸಪ್ಪೆ ಮೋರೆ; ನಿರುತ್ಸಾಹದ ಮುಖ (ಭಾವ); ಉಪವಾಸದ ಮುಖ.

Lent.[2] Lend ಧಾತುವಿನ ಭೂತ., ಭೂ. ಕೃ.

Lentícular. **Lentil** ನೋಡಿ.

Léntil ಲೆಂಟಿಲ್ (ನಾ.) ಆಹಾರಕ್ಕಾಗಿ ಬೆಳೆಯುವ ಒಂದು ದ್ವಿದಳ ಧಾನ್ಯದ ಬೀಜ: ಅವರೆ, ಚನ್ನಂಗಿ, ಮೊ. ವು. **Lentícular** ಅವರೆಯ ಕಾಳಿನ ಅಥವಾ ಲೆನ್ಸಿನ ಆಕಾರದ; ಎರಡು (ಕಡೆಯೂ) ಹೊರ ಉಬ್ಬುಳ್ಳ: ದ್ವಿಪಾರ್ಶ್ವ ಪೀನ ಮಧ್ಯ; ಕಣ್ಣಿನ ಲೆನ್ಸಿನ. **Léntoid** ಲೆಂಟಾಯ್ಡ್ (ಗು.) ಲೆನ್ಸಿನಾಕಾರದ.

Léntitude ಲೆಂಟಿಟ್ಯೂಡ್ (ನಾ.) ಜಡತೆ; ಆಲಸ್ಯ; ಮಾಂದ್ಯ.

Léntoid. **Lentil** ನೋಡಿ.

Léo ಲೀಯೊ (ನಾ.) (ಖ. ವಿ.) ಸಿಂಹ (ರಾಶಿ); ಲೇಯ. **Léonid** (ನಾ.) ಸಿಂಹರಾಶಿಯಿಂದ ವಿಕಿರಣವಾಗುವಂತೆ ತೋರುವ ಉಲ್ಕಾಪಾತಗಳಲ್ಲೊಂದು: ಸಿಂಹೋಲ್ಕೆ. **Léonine**[1] —ನೈ(ನಿ)ನ್ (ಗು.) ಸಿಂಹದ(ಂಥ); ಸಿಂಹಗಳ.

Léonine[2] ಲೀಯೊನೈ(ನಿ)ನ್ (ಗು., ನಾ.) (ಮು., ಪೋಪ್ ಗುರುಗಳಲ್ಲೊಬ್ಬನಾದ) ಲೀಯೊ ಎಂಬಾತನ; ಲೀಯೊ ಎಂಬಾತನು ಮಾಡಿದ, ನಿರ್ಮಿಸಿದ. L. City ನಾಲ್ಕನೆಯ ಲೀಯೊ ಎಂಬ ಪೋಪ್ ಗುರು ಕೋಟೆ ಕಟ್ಟಿ ಭದ್ರಪಡಿಸಿದ (ಪೋಪಿನ 'ವ್ಯಾಟಿಕನ್' ಎಂಬ ಅರಮನೆಯ) ರೋಮ್ ಭಾಗ. L. verse ಮಧ್ಯ ಕಾಲದ ಲ್ಯಾಟಿನ್ನಿನ ಮಧ್ಯಪ್ರಾಸವುಳ್ಳ ಆರು ಗಣದ ಒಂದು ಬಗೆಯ ಪದ್ಯಪಾದ(ಗಳು) [= L. (ನಾ.)]

Leópard ಲೆಪರ್ಡ್ (ನಾ.) ಆಫ್ರಿಕದ ಮತ್ತು ದ. ಏಷ್ಯದ ವಾಸಿಯಾದ ಕಪ್ಪು ಮಚ್ಚೆಗಳಿಂದ ಕೂಡಿದ ಕಂದು ಹಳದಿಯ ತೊವಲುಳ್ಳ ಒಂದು ಮಾಂಸಾಹಾರಿ ಚತುಷ್ಪಾದಿ: ಚಿರತೆ; ಚಿರಟು [Black l. ಕಪ್ಪು ತೊವಲಿನ ಚಿರತೆ. American l. = Jaguar. Hunting l. ಪಳಗಿಸಿದ ಚಿರತೆ. Snow l. = Ounce[2]. Can the l. change his spots? ಹುಟ್ಟುಗುಣ ಸುಟ್ಟರೂ ಬಿಟ್ಟೀತೆ?]. (ವಂಶಲಾಂಛನದಲ್ಲಿ) (ಇಂಗ್ಲೆಂಡಿನ ದೇಶಲಾಂಛನದಲ್ಲಿರುವಂಥ) ಸಿಂಹ. (ಮೃಗಗಳ ಹೆಸರು, ಮೊ. ಗಳಲ್ಲಿ) L.- (ಸ. ಪೂ. ಪ.) ಚಿರತೆಯಂತೆ ಮಚ್ಚೆಗಳುಳ್ಳ (L. cat, L. wood). **Leópardess** (ನಾ., ಸ್ತ್ರೀ.)

Lépcha ಲೆಪ್ಚ (ನಾ.) ಸಿಕಿಮ್ಮಿನಲ್ಲಿಯೂ ಟಿಬೆಟ್ಟಿನ ಕೆಲವು ಭಾಗಗಳಲ್ಲಿಯೂ ವಾಸಮಾಡುವ ಒಂದು ಬಣದವನು: 'ಲೆಪ್ಚ'.

Léper ಲೆಪರ್ (ನಾ.) ಕುಷ್ಠ ರೋಗಿ; (ರೂಪ.) ನೀತಿಭ್ರಷ್ಟ. **Léprosy** ಲೆಪ್ರೊಸಿ (ನಾ.) ಕುಷ್ಠ ರೋಗ; ಕುಷ್ಠ; (ರೂಪ.) ನೀತಿಭ್ರಷ್ಟತೆ; ದುರ್ನೀತಿಯ ಸೋಂಕು; ದುರಾಚರಣೆ. **Léprous** ಲೆಪ್ರಸ್ (ಗು.) ಕುಷ್ಠ ರೋಗದ(ಂಥ); ಕುಷ್ಠ ರೋಗವುಳ್ಳ.

Lepidóptera ಲೆಪಿಡಾಪ್ಟೆರ (ನಾ.) ಶಲ್ಕಗಳಿಂದ ಕೂಡಿದ ಪೊರೆಯ ನಾಲ್ಕು ರೆಕ್ಕೆಗಳುಳ್ಳ, ಪತಂಗದ ಹುಳುಗಳನ್ನೂ ಬಣ್ಣದ ಚಿಟ್ಟೆಗಳನ್ನೂ ಒಳಕೊಂಡ, ಒಂದು (ಹಾರು)ಹುಳುವಿನ ಜಾತಿ: ಶಲ್ಕ ಪಕ್ಷ ಕೀಟ ಜಾತಿ. **Lepidópterous** (ಗು.); **Lepidópterist** (ನಾ.)

Léporine ಲೆಪೊರೈನ್ (ಗು.) ಮೊಲದ (ಜಾತಿಯ)

Léprosy. **Leper** ನೋಡಿ.

Lese-májesty ಲೀಸ್ ಮ್ಯಾಜೆಸ್ಟಿ, **Lese-majesté** (F) ಲೆಸ್ ಮಾಝೆಸ್ತೆ (ನಾ.) ರಾಜದ್ರೋಹ.

Lésion ಲೀಷನ್ (ನಾ.) ಗಾಯ. (ವೈ. ಶಾ.) ಅಂಗದ ರಚನಾ ರೀತಿಯಲ್ಲಿ, ಕಾರ್ಯದಲ್ಲಿ, ಉಂಟಾಗುವ ರೋಗ, ವಿಕಾರ, ವೈಲಕ್ಷಣ್ಯ; ರೋಗ ಹತ್ತಿದ ಅಥವಾ ಗಾಯಗೊಂಡ ಅಂಗ (ಭಾಗ)

Less ಲೆಸ್ (ಗು., ಉಪ., ನಾ., ಕ್ರಿ. ವಿ.) (ಗಾತ್ರ, ಪ್ರಮಾಣ, ಕಾಲಾವಧಿ, ಸಂಖ್ಯೆ — ಇವುಗಳ ಅಳತೆಯಲ್ಲಿ) (— ಇಂತ) ಸಣ್ಣ, ಚಿಕ್ಕ, ಕಡಮೆಯ, ಕಿರಿಯ (In a l. degree. Find l. difficulty. May your shadow never be l. ನೀನು ಎಂದಿಗೂ ಬಡವಾಗದಿರು). (—ಇಂತ) ಕೆಳ ದರ್ಜೆಯ, ಕಡಮೆ ವಯಸ್ಸಿನ [ಸಾ., ವಿರ. ಪ್ರ. No l. a person than Devadatta (ಅಸಾಮಾನ್ಯ ದೊಡ್ಡಮನುಷ್ಯನಾದ ದೇವದತ್ತ); James the L. (ಕಿರಿಯ ಜೇಮ್ಸ್) ಎಂಬಲ್ಲಿ ರೂಢಿಯುಂಟು]. (ಉಪ.) ಕಳೆದು; ಕಡಮೆ ಮಾಡಿ (A year l. three days ಮೂರು ದಿನ ಕಡಮೆ ಒಂದು ವರ್ಷ). (ನಾ.) (—ಇಂತ) ಕಡಮೆ ಮೊತ್ತ, ಪ್ರಮಾಣ, ಸಂಖ್ಯೆ. [In l. than no time (ಹಾಸ್ಯ ಪ್ರ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈಗಲೇ ; ಬಲು ಬೇಗ. Far, little, much, nothing, something, l. Expected nothing l. than an attack ದಾಳಿಗಿಂತಲೂ ಕಡಮೆ ಯಾವುದನ್ನೂ ನಿರೀಕ್ಷಿಸಿರಲಿಲ್ಲ]. (ಕ್ರಿ. ವಿ.) (— ಇಂತ) ಕೊಂಚವಾಗಿ, ಕಡಮೆಯಾಗಿ, ಸ್ವಲ್ಪವಾಗಿ (None the l., No l., Not the l.; L. known, L.-known, etc.) **Léssen** (ಕ್ರಿ.) ಕಡಮೆ ಮಾಡು. **Lésser** (ಗು.) (ವಿಶೇಷಣವಾಗಿ ಮಾತ್ರ) ಮತ್ತೊಂದರಷ್ಟು, ಉಳಿದವುಗಳಷ್ಟು, —ದೊಡ್ಡದಲ್ಲದ ; ಲಘು ; ಕಿರಿಯ ; ಸಣ್ಣ (The L. Bear ಲಘು ಸಪ್ತರ್ಷಿ ಮಂಡಲ. The l. evils of life ಜೀವನದ ಸಣ್ಣಪುಟ್ಟ ತೊಂದರೆಗಳು). **-less** (ಅಭಾವಾರ್ಥದ ಪ್ರತ್ಯಯ) —ಇಲ್ಲದ; —ರಹಿತ (Homeless, Doubtless, Countless, Tireless)

Lesseé ಲೆಸೀ (ನಾ.) ಗುತ್ತಿಗೆದಾರ; ಗೇಣಿದಾರ. (ಮನೆ, ನಾಟಕಶಾಲೆ, ಮೊ. ಗಳ) ಕರಾರು ಅನುಭವದಾರ, ಭೋಗ್ಯದಾರ. **Lesseéship** (ನಾ.) ; **Léssor** ಲೆಸಾರ್ (ನಾ.) ಗುತ್ತಿಗೆ, ಬಾಡಿಗೆಗೆ, ಭೋಗ್ಯಕ್ಕೆ, — ಕೊಡುವವನು.

Lésson ಲೆಸ(ಸ್)ನ್ (ನಾ., ಕ್ರಿ.ಸಕ.) (ವಿದ್ಯಾರ್ಥಿ ಕಲಿಯಬೇಕಾದ) ಪಾಠ; ಒಂದು ಸಲಕ್ಕೆ ಹೇಳಿಕೊಟ್ಟ ಪಾಠ; ಪಾಠ(ಕ್ಕೆ ಗೊತ್ತಾದ) ಕಾಲ, ವೇಳೆ. ಪ್ರಾತಃಕಾಲದ ಮತ್ತು ಸಾಯಂಕಾಲದ ಪ್ರಾರ್ಥನಾ ಕಾಲಗಳಲ್ಲಿ ಮಾಡುವ ಬೈಬಲ್ಲಿನ ಪಠನ [First l. ಹಳೆಯ ಒಡಂಬಡಿಕೆಯ ಪಠನ. Second l. ಹೊಸ ಒಡಂಬಡಿಕೆಯ ಪಠನ. Proper l. (Proper ನೋಡಿ)]. (ಬ. ವ. ದಲ್ಲಿ) (ಯಾವುದಾದರೂ ಒಂದು ವಿಷಯದ ಮೇಲೆ ಕ್ರಮಬದ್ಧ) ಶಿಕ್ಷಣ (Give, take, lessons in — ವಿಷಯದ ಮೇಲೆ ಶಿಕ್ಷಣ ಕೊಡು, ಪಡೆ). (ಪ್ರೋತ್ಸಾಹ ಕೊಡುವ) ಘಟನೆ, ಉದಾಹರಣೆ ; ಎಚ್ಚರಿಕೆ ಕೊಡುವ ಘಟನೆ, ಉದಾಹರಣೆ ; ವಾಗ್ದಂಡನೆ ; ಶಿಕ್ಷೆ. (ಕ್ರಿ.) ಪಾಠ ಕಲಿಸು ; ವಾಗ್ದಂಡನೆ ಮಾಡು ; ಶಿಕ್ಷಿಸು.

Léssor. **Lessee** ನೋಡಿ.

Lest ಲೆಸ್ಟ್ (ಸಂ. ಅವ್ಯ.) (—) ಆಗದಂತೆ, ಆಗದ ಹಾಗೆ ; ಆಗದಿರಲೆಂದು ; (— ಎಂಬ) ಶಂಕೆಯಿಂದ.

Let[1] ಲೆಟ್ [ಕ್ರಿ. ಸಕ. (ಪ್ರಾಚೀ. ಪ್ರ.) (ಭೂತ., ಭೂ. ಕೃ. Letted or Let) ; ನಾ.] ತಡೆ(ಯೊಡ್ಡು) ; ಅಡ್ಡಿ (ಮಾಡು) (Without l. or hindrance ಯಾವ ಅಡ್ಡಿಯೂ ಆತಂಕವೂ ಇಲ್ಲದೆ). (ಟೆನಿಸ್, ಮೊ. ಆಟಗಳಲ್ಲಿ : ಚೆಂಡು ಬಲೆಯ ಏಣಿಗೆ ತಗುಲಿ ಮತ್ತೊಂದು ಬಾರಿ ಆಡಬಹುದಾದ ಸಂದರ್ಭದಲ್ಲಿ) ತಡೆ.

Let[2] ಲೆಟ್ (ಕ್ರಿ. ಸಕ., ಸಹಾಯಕ ಕ್ರಿಯೆ, ನಾ.) (ಕ್ರಿ. ಸಕ.) (ದ್ರವ, ಗಾಳಿ) ಹರಿದುಹೋಗಲು ಬಿಡು [L. blood (Blood ನೋಡಿ)]. ಬಾಡಿಗೆಗೆ ಕೊಡು [(ಕರ್ಮಣಿಯ ಅರ್ಥ, ಕ್ರಿ. ಅಕ. ಪ್ರ.) The rooms l. well ಕೊಠಡಿಗಳು ಒಳ್ಳೆಯ ಬಾಡಿಗೆ ಗಳಿಸುತ್ತವೆ. To l. ಬಾಡಿಗೆಗೆ (ದೊರೆಯುತ್ತದೆ)]. (ನಾ.) ಬಾಡಿಗೆಗೆ ಕೊಡುವುದು (Cannot get a l. for the rooms ಕೊಠಡಿಗಳಿಗೆ ಬಾಡಿಗೆ ಬರುವುದಿಲ್ಲ). ಅವಕಾಶ, ಆಸ್ಪದ, —ಕೊಡು; ಬಿಟ್ಟುಬಿಡು [We let them go ಅವರನ್ನು ಹೋಗಲು ಬಿಟ್ಟುಬಿಟ್ಟೆವು. (ಕರ್ಮಣಿ, ಈಗ ವಿರಳ ಪ್ರ.) I was let see him ಅವನನ್ನು ನೋಡುವ ಅವಕಾಶ ದೊರೆಯಿತು (ಕೆಲವು ವೇಳೆ *to* ಉಪ. ದೊಡನೆ). L. one know (ಒಬ್ಬನಿಗೆ) ತಿಳಿಯಗೊಡು, ತಿಳಿಸು]. L. alone ಗೋಜಿಗೆ, ಗೊಡವೆಗೆ, ಹೋಗದಿರು ; ಅದರಷ್ಟಕ್ಕೆ ಅದನ್ನು ಬಿಟ್ಟುಬಿಡು. (ಹೆಚ್ಚಾಗಿ) ಹೇಳಬೇಕಾದದ್ದೇ ಇಲ್ಲ ; (—) ಹಾಗಿರಲಿ (He couldn't hit a barn, let alone a target). [L. well alone ಅನಾವಶ್ಯಕವಾಗಿ ಗೋಜಿಗೆ ಹೋಗಬೇಡ]. L. one alone to do ಅವನು ಮಾಡುವ ಭರವಸೆಯಿದೆ ; ಮಾಡಲು ಅವನಿಗೇ ಬಿಟ್ಟುಬಿಡು. L. be ಗೋಜಿಗೆ ಹೋಗದಿರು; ಅದರಷ್ಟಕ್ಕೆ ಅದನ್ನು ಬಿಟ್ಟುಬಿಡು. L. down (ಕ್ರಿ.) ಕೆಳಕ್ಕೆ ಬಿಡು ; ಇಳಿಸು ; (ಸ್ನೇಹಿತನನ್ನು) ಸಮಯದಲ್ಲಿ ಕೈಬಿಡು ; ಆಶಾ ಭಂಗ ಮಾಡು (L. him down gently ಥಟ್ಟನೆ ಅಪಮಾನ ಮಾಡದೆ ಕ್ರಮೇಣ ಕೈಬಿಡು). L. down (ನಾ.) ಆಶಾ ಭಂಗ. L. drive (Drive ನೋಡಿ). L. fall (ಬೇಕೆಂದು, ಕೈ ತಪ್ಪಿ) ಬೀಳಿಸು. (ರೂಪ.) (ಸೂಚನೆ, ಅರ್ಥವತ್ತಾದ ಪದ — ಇವನ್ನು) ಎಚ್ಚರಿಕೆಯಿಲ್ಲದೆ ಹೊರಗೆಡವು. (ಜ್ಯಾ.) ಒಂದು ರೇಖೆಯ ಮೇಲೆ ಹೊರ ಬಿಂದುವಿನಿಂದ (ಲಂಬ) ರೇಖೆ ಎಳೆ. L. fly (Fly[2] ನೋಡಿ). L. go ಬಿಡುಗಡೆ ಮಾಡು ; ಹೋಗಬಿಡು ; (ಬಂಧನದಿಂದ ಸ್ವೇಚ್ಛೆಯಾಗಿ ಹೋಗಲು) ಬಿಟ್ಟುಬಿಡು ; ಹಿಡಿತ ಬಿಡು. (ಮನಸ್ಸಿನಿಂದ) ತೊಲಗಿಸು. (L. oneself go ಉತ್ಸಾಹ, ಆವೇಗ, ಮೊ. ಕ್ಕೆ ವಶನಾಗು). L. in (ಬಾಗಿಲು ತೆರೆದು) ಒಳಕ್ಕೆ ಬಿಡು [L. in a flood of light. This would l. in all sorts of evils. L. oneself in (ಬಾಗಿಲು ತೆರೆದು) ಒಳ ಹೋಗು]. ಒಂದರ ಮೇಲ್ಮೈಯಲ್ಲಿ ಹುದುಗಿಸು. ನಷ್ಟದಲ್ಲಿ, ಕಷ್ಟದಲ್ಲಿ, — ಸಿಕ್ಕಿಸು (= L. in for). L. into ಒಳಕ್ಕೆ ಬಿಡು ; ಒಂದರ ಮೇಲ್ಮೈಯಲ್ಲಿ ಸೇರಿಸು. (ಗುಟ್ಟು, ಮೊ. ನ್ನು) ತಿಳಿಸು. (ಏಟಿನಿಂದ, ಮಾತಿನಿಂದ) ಮೇಲೆ ಬೀಳು. L. loose (ನಾಯಿ, ರೋಷ, ಹುಚ್ಚ, ಮೊ. ನ್ನು) ಕಟ್ಟು ಹರಿದು ಬಿಡು ; ಸ್ವೇಚ್ಛೆಯಾಗಿ ಬಿಡು. L. off (ಕ್ರಿ.) ಬಿಟ್ಟುಬಿಡು ; (ಬಂದೂಕಿನಿಂದ) ಗುಂಡು ಹಾರಿಸು. (ರೂಪ.) ಗೇಲಿ, ಕುಚೋದ್ಯ, — ಮಾಡು. ಶಿಕ್ಷಿಸದೆ, ಬಲಾತ್ಕರಿಸದೆ, ಸುಲಭ ಶಿಕ್ಷೆ ಕೊಟ್ಟು, ಬಿಟ್ಟುಬಿಡು ; (ಒಬ್ಬನಿಗೆ ದಂಡ, ಮೊ. ನ್ನು) ಮನ್ನಿಸು. (ದ್ರವ, ವಾಯು, ಮೊ. ನ್ನು) ಹರಿದುಹೋಗುವಂತೆ ಬಿಡು, ಮಾಡು. Let-off (ನಾ.) ಅವಕಾಶವನ್ನು ಉಪಯೋಗಿಸಿಕೊಳ್ಳದೆ ಬಿಟ್ಟುಬಿಡುವುದು (ಮು., ಕ್ರಿಕೆಟ್ಟನಲ್ಲಿ, ಆಟ ಕಾಯುವವನು ಅವಕಾಶವಿರುವಾಗ ಬುತ್ತಿ ಹಿಡಿಯದೆ ತಪ್ಪಿ ಆಟಗಾರನ ಆಟ ಕಳೆಯುವ ಅವಕಾಶ ತಪ್ಪಿಹೋದದ್ದು). L. on (ಅಸಂ.) (ಜೊತೆಯ ಆಪಾದಿತನನ್ನು) ಬಿಟ್ಟುಕೊಡು; ಗುಟ್ಟು ಬಿಟ್ಟುಕೊಡು ; (ಸಂಗತಿ) ಹೊರಗೆಡವು. L. out (ಬಾಗಿಲು ತೆರೆದು) ಹೊರಗೆ ಬಿಡು. (ಮನುಷ್ಯ, ಮೊ. ನ್ನು) ತಪ್ಪಿಸಿಕೊಳ್ಳಲು ಬಿಡು ; (ಗುಟ್ಟನ್ನು) ಹೊರಗೆಡವು [L. cat out of bag (Bag ನೋಡಿ)]. (ಉಡುಪನ್ನು) ಸಡಿಲಿಸು. ಬಾಡಿಗೆಗೆ ಕೊಡು. ಕಠಿನೋಕ್ತಿಯಾಡು. L. slip ಕಟ್ಟು ಸಡಿಲಿಸಿ ಬಿಟ್ಟುಬಿಡು ; ಅವಕಾಶ ಕಳೆದುಕೊ. L. up (ಅಮೆ. ಸಂ., ಬಳ. ಮಾ.) ತೀವ್ರತೆ ಕಡಮೆಯಾಗು ; ತಗ್ಗು. L.-up ನಿಂತುಹೋಗುವುದು ; ಕಡಮೆಯಾಗುವುದು. (ಸಹಾಯಕ ಕ್ರಿ.) : L. us pray ಪ್ರಾರ್ಥನೆ ಮಾಡೋಣ; L. it be done at once ಅದನ್ನು ಕೂಡಲೇ ಮಾಡಬೇಕು ; L. AB be equal to CD = AB ರೇಖೆಯು CD ರೇಖೆಗೆ ಸಮವಾಗಿರುವುದೆಂದು ಭಾವಿಸೋಣ ; L. him do his worst ಅವನು ತನ್ನ ಕೈಯಲ್ಲಾದಷ್ಟು ಕೇಡು ಮಾಡಲಿ.

Léthal ಲೀತಲ್ (ಗು.) ಸಾವನ್ನುಂಟುಮಾಡುವ ; ಸಾಯಿಸಲು ಸಾಕಾದ ; ಸಾಯಿಸಲು ಉದ್ದೇಶಿಸಿದ ; ಮಾರಕ ; ಕೊಲ್ಲುವ. L. chamber ಯಾತನೆಯಿಲ್ಲದೆ ಪ್ರಾಣಿಗಳನ್ನು ಕೊಲ್ಲುವ ಕೋಣೆ : ಕೊಲೆ ಕೋಣೆ.

Léthargy ಲೆತರ್ಜಿ (ನಾ.) ರೋಗದ ಮಂಪರ; ಅಸ್ವಾಭಾವಿಕ ದೀರ್ಘ ಕಾಲದ ನಿದ್ರೆ ; ತಾಮಸ ; ಜಡತೆ ; ಮಾಂದ್ಯ ; ಆಲಸ್ಯ ; ನಿರುತ್ಸಾಹ ; ಚಟುವಟಿಕೆಯಿಲ್ಲದಿರುವುದು. **Lethárgic** ಲಿತಾರ್ಜಿಕ್ (ಗು.) ; **Lethárgically** (ಕ್ರಿ. ವಿ.) ; **Léthargize** ಲೆತರ್‌ಜೈಸ್ (ಕ್ರಿ. ಸಕ.)

Léthe ಲೀತಿ (ನಾ.) ಅದರ ನೀರನ್ನು ಕುಡಿದವರು ಹಿಂದಿನದೆಲ್ಲವನ್ನೂ ಮರೆತುಬಿಡುವಂತೆ ಮಾಡುವ ಅಧೋಲೋಕದ ಒಂದು ನದಿ ; ಹಿಂದಿನದೆಲ್ಲ ವಿಷಯಗಳ ಮರವು, ವಿಸ್ಮೃತಿ. **Lethéan** ಲಿತೀಯನ್ (ಗು.)

Létter ಲೆಟರ್ (ನಾ.) (ವರ್ಣಮಾಲೆಯ) ಅಕ್ಷರ ; ವರ್ಣ ; ಲಿಪಿ [Capital l. ದೊಡ್ಡ ಅಕ್ಷರ : A, B, C, etc.; Small l. ಸಣ್ಣ ಅಕ್ಷರ : a, b, c, etc.; Roman, Italic, l. (ಆಯಾ ಪದವನ್ನು ನೋಡಿ)]. (ಮುದ್ರಣ) ಅಚ್ಚಿನ ಮೊಳೆ ; ಒಂದೇ ಮುಖಮಾಟ ಮತ್ತು ಅಳತೆಗೆ ಸೇರಿದ ಅಚ್ಚಿನ ಮೊಳೆಗಳ ಶ್ರೇಣಿ. ಕಾಗದ; ಪತ್ರ; ಓಲೆ (ಗ್ರಾಂ.); (ಕಳುಹಿಸಿದ) ಲೇಖನ [L. of advice (ಸಾಮಾನು ರವಾನೆ ಮಾಡಿದ್ದು, ಹುಂಡಿಯನ್ನು ಒಂದು ಬ್ಯಾಂಕಿನ ಮೇಲೆ ಕೊಟ್ಟದ್ದು, ಮೊ. ಗಳ) ತಿಳಿವಳಿಕೆ ಪತ್ರ. L. of attorney (Attorney ನೋಡಿ). L. of credit ಬಾಪತು ಕಾಗದ]. (ಅನೇಕ ಉದ್ದೇಶಗಳಿಗಾಗಿ ಬರೆದ) ದಸ್ತಾವೇಜು, ಅಧಿಕಾರ ಪತ್ರ, ಮೊ. ವು [Letters Patent (Patent ನೋಡಿ). Letters of

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Administration (Administer ನೋಡಿ). Letters of business ಒಂದು ವಿಷಯದಲ್ಲಿ ಪ್ರವರ್ತಿಸುವುದಕ್ಕಾಗಿ ಕ್ರೈಸ್ತ ಧರ್ಮ ಸಂಸ್ಥೆಯ ಅಥವಾ ವಿಶ್ವವಿದ್ಯಾನಿಲಯದ ಶಾಸನ ಸಭೆಗೆ ರಾಜನು ಕೊಟ್ಟ ಅಧಿಕಾರ ಪತ್ರ]. ಒಂದು ಹೇಳಿಕೆಯ ನಿಷ್ಕೃಷ್ಟಾಂಶಗಳು (To the l. ಅಕ್ಷರಶಃ; ಪ್ರತಿ ವಿವರಕ್ಕೂ ಗಮನಕೊಟ್ಟು); ಶಬ್ದಾರ್ಥ; ವಾಚ್ಯಾರ್ಥ (ಭಾವಾರ್ಥವಲ್ಲ) [(ಎದುರು ಪದ: Spirit). In l. & in spirit ಶಬ್ದಾರ್ಥದಲ್ಲೂ ಭಾವಾರ್ಥದಲ್ಲೂ]. (ಬ. ವ. ದಲ್ಲಿ) ಸಾಹಿತ್ಯ; ಗ್ರಂಥಜ್ಞಾನ; ವಿದ್ವತ್ತು [Man of letters ಪಂಡಿತ; ವಿದ್ವಾಂಸ; ಗ್ರಂಥಕರ್ತ. Commonwealth or republic of letters (ಸಾಮೂಹಿಕವಾಗಿ) ಗ್ರಂಥಕರ್ತರು. The profession of letters ಗ್ರಂಥ ರಚನೋದ್ಯೋಗ. **Léttered** (ಗು.) ಅಕ್ಷರಜ್ಞನಾದ; ಪಾಂಡಿತ್ಯದ; ಪಂಡಿತರ; ಪಾಂಡಿತ್ಯ ಪಡೆದ; ವ್ಯುತ್ಪನ್ನ]. **L.-balance** (ಅಂಚೆಯ) ಕಾಗದ ತೂಗುವ ತಕ್ಕಡಿ. **L.-book** (ದಾಖಲೆಗಾಗಿ) ವ್ಯವಹಾರ ಪತ್ರಗಳ ನಕಲುಗಳನ್ನು ಸೇರಿಸಿಡುವ ಪುಸ್ತಕ: ಪತ್ರ ವ್ಯವಹಾರದ (ದಾಖಲೆ) ಪುಸ್ತಕ. **L.-bound** ಶಬ್ದಾರ್ಥಕ್ಕೆ ಅತಿಯಾಗಿ ಕಟ್ಟುಬಿದ್ದ: ಶಬ್ದ ಶರಣ. **L.-box** ಅಂಚೆಯ (ಕಾಗದ ಹಾಕುವ) ಪೆಟ್ಟಿಗೆ; ಟಪಾಲು ಪೆಟ್ಟಿಗೆ. **L.-card** ಅಂಚೆಯ ಮೂಲಕ ಕಳುಹಿಸಲು ಏಣಿಗೆ ಗೋಂದು ಬಳಿದು, ಹರಿಯಲು ಸಾಲುತೂತು ಮಾಡಿರುವ, ಮಡಿಸಿದ ರಟ್ಟುಕಾಗದ. **L.-case** (ವ್ಯವಹಾರ ಪತ್ರಗಳನ್ನಿಡುವ) ಪತ್ರಕೋಶ. **L.-lock** (ಬೀಗ ಹಾಕಿದವನಿಗೆ ಮಾತ್ರ ತಿಳಿದಿರುವ ಗೊತ್ತಾದ ಅಕ್ಷರ ಸಂಯೋಜನೆಯಿಂದ ತೆಗೆಯಲಾಗುವ) ಅಕ್ಷರಬೀಗ. **L.-paper** ಪತ್ರ ವ್ಯವಹಾರದ ಕಾಗದ (ಹಾಳೆಯ ¼ ಭಾಗ). **L.-perfect** (ನಾಟಕದಲ್ಲಿ) ತನ್ನ ಪಾತ್ರವನ್ನು ಚಾಚೂ ತಪ್ಪದಂತೆ ಗಟ್ಟಿಮಾಡಿರುವ. **Letterpress** (ಚಿತ್ರಪುಸ್ತಕದಲ್ಲಿಯ ಚಿತ್ರಗಳನ್ನುಳಿದ ವಿಷಯಲೇಖದ) ಅಕ್ಷರ ಮುದ್ರಣ; ಚಿತ್ರವಿವರಣ ಮುದ್ರಣ. ಕಾಗದಪತ್ರಗಳ ನಕಲು ಎತ್ತುವ ಒಂದು ಒತ್ತುಯಂತ್ರ. **L.-weight** = L.-balance; (ಮೇಜಿನಮೇಲಿನ) ಕಾಗದಗಳು ಹಾರಿಹೋಗದಂತೆ ಅವುಗಳ ಮೇಲಿಡುವ ಭಾರ. **L.-worship** (ಕಾನೂನು, ಮೊ. ಗಳ) ಶಬ್ದಾರ್ಥಕ್ಕೆ ಅತಿಯಾಗಿ ಕಟ್ಟುಬೀಳುವುದು. **L.-writer** ಕಾಗದ ಬರೆಯುವವನು; ಪತ್ರ ಲೇಖಕ. ಲೇಖ್ಯ ಬೋಧಿನಿ. **Létterless** (ಗು.)

Létter (ಕ್ರಿ. ಸಕ.) (ಪುಸ್ತಕದ ರಕ್ಷಾಪತ್ರದಮೇಲೆ) ಪುಸ್ತಕದ ಹೆಸರು, ಮೊ. ವನ್ನು ಒತ್ತು. ಅಕ್ಷರಕ್ರಮದಲ್ಲಿ ವಿಂಗಡಿಸು. **Léttering** (ನಾ.)

Léttuce ಲೆಟಿಸ್ (ನಾ.) ಕೋಸುಂಬರಿ ಮಾಡುವ ಸುಳಿ ಸುಳಿಯ ಎಲೆಗಳ ಒಂದು ಜಾತಿಯ ತೋಟದ ಸೊಪ್ಪು: 'ಲೆಟಿಸ್' ಸೊಪ್ಪು.

Leuco- ಲ್ಯೂಕೊ — (ಸ. ಪೂ. ಪ.) ಬಿಳಿಯ —; ಶ್ವೇತ —; ಶುಕ್ಲ —. **-cyte** (—ಸೈಟ್) ರಕ್ತದ ಶ್ವೇತ ಕಣ. **-pathy** ಬಿಳಿಚು ರೋಗ (= Albinism). **-rrhoea** (ಹೆಂಗಸಿನ ಜನನಾಂಗದಿಂದ) ಬಿಳುಪು ಸೋರುವುದು; ಬಿಳಿ ಸೆರಗು; ಶ್ವೇತ ಪ್ರದರ.

Levánt[1] ಲವ್ಯಾಂಟ್ (ನಾ.) ಮೆಡಿಟರೇನಿಯನ್ ಸಮುದ್ರದ ಪೂರ್ವ ಭಾಗ (ಮತ್ತು ಅಲ್ಲಿಯ ದ್ವೀಪಗಳೂ ನೆರೆಯ ದೇಶಗಳೂ ಸಹ). **Levánter**[1] (ನಾ.) ಲವ್ಯಾಂಟ್ ಪ್ರದೇಶದವನು. ಮೆಡಿಟರೇನಿಯನ್ ಕಡಲಿನ ಮೂಡಲ ಬಿರುಗಾಳಿ. **Levántine** ಲಿ(ಲೆ)ವ್ಯಾಂಟಿ(ಟೈ)ನ್, ಲೆವಂಟಿನ್ (ಗು., ನಾ.) ಲವ್ಯಾಂಟಿನ(ವನು); ಲವ್ಯಾಂಟಿನೊಡನೆ ವ್ಯಾಪಾರ ನಡಸುವ.

Levánt[2] ಲವ್ಯಾಂಟ್ (ಕ್ರಿ. ಅಕ.) (ಮು., ಜೂಜಾಟದಲ್ಲಿ ಒಡ್ಡಿದ ಪಣವನ್ನು, ಸೋತ ಹಣವನ್ನು, ಕೊಡದೆ) ಓಡಿಹೋಗು, ತಲೆ ತಪ್ಪಿಸಿಕೊಂಡು ಹೋಗು. **Levánter**[2] (ನಾ.)

Levátor ಲವೇಟರ್ (ನಾ.) ಅಂಗವನ್ನು ಮೇಲಕ್ಕೆತ್ತುವ ಸ್ನಾಯು (= L.-muscle)

Lévee[1] ಲೆವಿ(ೀ) (ನಾ.) (ಹಿಂದಿನ ಪ್ರ.) ಬೆಳಗ್ಗೆ ಸೆಜ್ಜೆಯ ದರ್ಬಾರು; ಸುಪ್ರಭಾತ ಸ್ವಾಗತ. ರಾಜನಾಗಲಿ, ರಾಜ ಪ್ರತಿನಿಧಿಯಾಗಲಿ ಪುರುಷರನ್ನು ಮಾತ್ರ ಸ್ವಾಗತಿಸುವ ದರ್ಬಾರು; ಅತಿಥಿ ಗೋಷ್ಠಿ.

Leveé[2], **Lévee** ಲಿವೀ, ಲೆವಿ(ೀ) (ನಾ.) (ಅಮೆ. ಸಂ.) ನದೀ ಪ್ರವಾಹ ತಡೆಯಲು ಹಾಕುವ ಅಣೆಕಟ್ಟು.

Lével ಲೆವೆ(ವ್)ಲ್ (ನಾ., ಗು., ಕ್ರಿ. ಸಕ.) ವಸ್ತುಗಳು ಸಮತಲವಾಗಿವೆಯೆ ಇಲ್ಲವೆ ಎಂಬುದನ್ನು ಪರೀಕ್ಷಿಸಲು ಉಪಯೋಗಿಸುವ ಒಂದು ಸಲಕರಣೆ; ಮಟ್ಟಕೋಲು; ಮೂಲೆ ಮಟ್ಟ; (ರಸ) ಮಟ್ಟ. ಸಮತಲ ರೇಖೆ, ಪ್ರದೇಶ; ಕ್ಷಿತಿಜ ರೇಖೆ, ತಲ [On a l. with (— ಒಡನೆ) ಒಂದೇ ಮಟ್ಟದಲ್ಲಿ, ಸಮತಲದಲ್ಲಿ. On the l. (ಬಳ. ಮಾ.) ಸತ್ಯವಾಗಿ; ಪ್ರಾಮಾಣಿಕತೆಯಿಂದ. Find one's l. ಇತರರೊಂದಿಗೆ ತನ್ನ (ಯೋಗ್ಯತೆಗೆ ತಕ್ಕ) ಸ್ಥಾನ, ಮಟ್ಟ, ಕಂಡುಕೊ. Water finds its l. (ಪರಸ್ಪರ ಒಳ ಸಂಬಂಧವಿರುವ ಪಾತ್ರೆಗಳಲ್ಲಿ) ನೀರು ಒಂದೇ ಮಟ್ಟದಲ್ಲಿ ನಿಲ್ಲುತ್ತದೆ]. (ಸಾಮಾಜಿಕ, ನೈತಿಕ, ಬೌದ್ಧಿಕ, ವಿಷಯಗಳಲ್ಲಿ) ಮಟ್ಟ, ಅಂತಸ್ತು. ಹೆಚ್ಚುಕಡಮೆ ಸಮತಲ ಪ್ರದೇಶ; ಚಪ್ಪಟೆ ದೇಶ; ಸಮ ಭೂಮಿ. (ಗು.) ಮಟ್ಟವಾದ; ಸಮತಲವಾದ; ಒಂದೇ ಮಟ್ಟದ (*With* ಉಪ. ದೊಡನೆ ಸಹ). [L. race ಮುಂದಾಳುಗಳಾಗಿ ಹೋಗುತ್ತಿರುವ ಸ್ಪರ್ಧಿಗಳು ಪರಸ್ಪರ ಬಹಳ ಹತ್ತಿರವಿರುವ ಓಟ, ಪಂದ್ಯ; ಸರಿಸುಮಾರಾಗಿ ಸಮವಾದ ಪಂದ್ಯ. L. crossing (Cross ನೋಡಿ)]. (ಗುಣ, ಶೈಲಿ, ಮನೋಭಾವ, ವಿವೇಚನೆ, ಮೊ. ಗಳಲ್ಲಿ) ಸಮ ತೂಕವಾದ, ಸಮ ಭಾವದ, ಒಂದೇ ಸಮನಾದ. (L.-headed ಸಮ ಬುದ್ಧಿಯ. Do one's l. best ಕೈಯಲ್ಲಾಗುವುದನ್ನೆಲ್ಲ ಮಾಡು). (ಕ್ರಿ.) ಒಂದೇ ಸಮ, ಮಟ್ಟ, — ಮಾಡು; ಒಂದೇ ಮಟ್ಟದಲ್ಲಿರಿಸು; ಒಂದು ಪ್ರಮಾಣಕ್ಕೆ, ಮಟ್ಟಕ್ಕೆ, ಏರಿಸು, ಇಳಿಸು (*Up*, *down* ಉಪ. ದೊಡನೆ). ನೆಲಸಮ ಮಾಡು; ಕೆಡವು; ಉರುಳಿಸು (L. to *or* with the ground, in the dust ನೆಲಸಮ ಮಾಡು; ಮಣ್ಣುಗೂಡಿಸು). (ವಿರ. ಪ್ರ.) (ಒಬ್ಬನನ್ನು) ಹೊಡೆದು ಉರುಳಿಸು, ಕೆಡವು. (ವ್ಯತ್ಯಾಸಗಳನ್ನು) ತೊಡೆದುಹಾಕು. (ಕ್ಷಿಪಣಿಯನ್ನು, ಬಂದೂಕನ್ನು) ಗುರಿಯಿಡು. ವ್ಯಂಗ್ಯೋಕ್ತಿ, ಆಪಾದನೆ, ಮೊ. ನ್ನು (ಒಬ್ಬನಮೇಲೆ) ತಿರುಗಿಸು (*At*, *against* ಉಪ. ದೊಡನೆ). **Levelling-screw** (ಯಂತ್ರಭಾಗ, ಮೊ. ವನ್ನು ಸರಿಯಾದ ಮಟ್ಟಕ್ಕೆ ಅಳವಡಿಸಲಾಗುವ) ಮಟ್ಟತಿರುಪು. **Lévelly** (ಕ್ರಿ. ವಿ.) (ವಿರ. ಪ್ರ.); **Lévelness** (ನಾ.); **Léveller** (ನಾ.) (ಕ್ರಿಯಾರ್ಥಗಳಲ್ಲಿ). ಸಮಾಜದಲ್ಲಿಯ ಭೇದಗಳನ್ನು ತೊಡೆದುಹಾಕಬೇಕೆಂಬ ಅಭಿಪ್ರಾಯವುಳ್ಳವನು; ಸಮತಾ ವಾದಿ.

Léver ಲೀವರ್ (ನಾ., ಕ್ರಿ.) (ಭಾರವಾದ ಅಥವಾ ಹೂತಿರುವ ವಸ್ತುವನ್ನು ಮೇಲಕ್ಕೆ ಮೀಟಿ ಎತ್ತುವ) ಮೀಟುಗೋಲು, ಸನ್ನೆಕೋಲು. (ಯಂತ್ರಶಿಲ್ಪ) ಬಗ್ಗದ ನೇರವಾದ ಒಂದು ಸರಳಿನಲ್ಲಿ ಸ್ಥಿರವಾದ ಒಂದು ಆಧಾರ ಬಿಂದುವೂ, ಸರಳಿನ ಒಂದೆಡೆಯಲ್ಲಿ ಎತ್ತಬೇಕಾದ ಭಾರವೂ, ಮತ್ತೊಂದೆಡೆಯಲ್ಲಿ ಅದಕ್ಕಾಗಿ ಪ್ರಯೋಗಿಸುವ ಬಲವೂ, ಇರುವ ರಚನೆಯುಳ್ಳ ಯಂತ್ರ ಸಲಕರಣೆ: ಸನ್ನೆ(ಕೋಲು) [L. of first order (ಆನಿಕೆ ಮಧ್ಯದಲ್ಲಿರುವ) ಮೊದಲ ವರ್ಗದ ಸನ್ನೆ. L. of second order (ಭಾರ ಮಧ್ಯದಲ್ಲಿರುವ) ಎರಡನೆಯ ವರ್ಗದ ಸನ್ನೆ. L. of third order (ಬಲ ಮಧ್ಯದಲ್ಲಿರುವ) ಮೂರನೆಯ ವರ್ಗದ ಸನ್ನೆ]. ಬಂದೂಕಿನಲ್ಲಿ ಮದ್ದು, ಗುಂಡು, ತುಂಬುವುದಕ್ಕಾಗಿ ಕೋವಿಯನ್ನು ತೆರೆಯುವ ಸನ್ನೆಸಲಕರಣೆ. =L. watch. L.- (ಸ. ಪೂ. ಪ.) ಸನ್ನೆಯಂತೆ, ಸನ್ನೆಯಿಂದ, ಕಾರ್ಯಮಾಡುವ. (L. escapement ಗಡಿಯಾರದಲ್ಲಿ ಚಕ್ರವ್ಯೂಹದ ಚಲನೆಯನ್ನು ನಿಯಂತ್ರಿಸುವ ಒಂದು ಸಲಕರಣೆ. L. watch ಗಡಿಯಾರದ ಚಲನಚಕ್ರದ ಕಾರ್ಯವನ್ನೂ ನಿಯಂತ್ರಕದ ಕಾರ್ಯವನ್ನೂ ಅನುರೂಪಗೊಳಿಸಲು ಇವೆರಡಕ್ಕೂ ಸಂಬಂಧಿಸಿರುವ ಲೋಲಕ ಸನ್ನೆಯುಳ್ಳ ಕಿಸೆಯ ಗಡಿಯಾರ). (ಕ್ರಿ.) ಸನ್ನೆಯನ್ನುಪಯೋಗಿಸು; ಸನ್ನೆಯಿಂದ ಎತ್ತು, ಮೀಟು, ಮುನ್ನೂಕು (*Along*, *away*, *out*, *over*, *up* ಮೊ. ಉಪ. ದೊಡನೆ). **Léverage** ಲೀವರೆಜ್ (ನಾ.) ಸನ್ನೆಯ ಕಾರ್ಯ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರಿಯೆ. ಸನ್ನೆಯನ್ನುಪಯೋಗಿಸುವ ರೀತಿ ; ಸನ್ನೆಯ ವ್ಯೂಹ ; ಸನ್ನೆಯನ್ನುಪಯೋಗಿಸಿದುದರಿಂದಾದ (ಯಾಂತ್ರಿಕ) ಲಾಭ. (ಉದ್ದೇಶ) ಸಾಧನೋಪಾಯ ; ಶಕ್ತಿ ; ಪ್ರಭಾವ.

Léveret ಲೆವರೆಟ್ (ನಾ.) (ಮು., ಒಂದು ವರ್ಷದ) ಮೊಲದ ಮರಿ.

Levíathan ಲವೈಅತನ್ (ನಾ.) (ಬೈಬಲ್) ಸಮುದ್ರದ ಪೆಡಂಭೂತ ; ಬಹು ದೊಡ್ಡ ಹಡಗು ; ಬೃಹನ್ನೌಕೆ. (ಅದರ ಜಾತಿಯಲ್ಲಿ) ಅತಿದೊಡ್ಡದಾದದ್ದು ; ಅಸಾಮಾನ್ಯ ಸಾಮರ್ಥ್ಯಶಾಲಿ ; ಅನುಪಮ ಶಕ್ತ ; ಅತುಲೈಶ್ವರ್ಯವುಳ್ಳವನು.

Lévigate ಲೆವಿಗೇಟ್ (ಕ್ರಿ. ಸಕ.) ನುಣ್ಣಗೆ ಅರೆ, ಪುಡಿ ಮಾಡು. (ದ್ರವ ದೊಡನೆ) ಅರೆದು ದೋಸೆಯ ಹಿಟ್ಟಿನಂತೆ ಮಾಡು (*With* ಉಪ. ದೊಡನೆ). **Levigátion** (ನಾ.)

Lévin ಲೆವಿನ್ (ನಾ.) (ಕಾವ್ಯ) ಮಿಂಚು ; ಮಿಂಚಿನ ಹೊಳಪು.

Lévirate ಲೀವಿರೆಟ್ (ನಾ.) (ಯೆಹೂದ್ಯರು, ಮೊ. ರಲ್ಲಿ ಮಕ್ಕಳಿಲ್ಲದೆ) ಸತ್ತವನ ಹೆಂಡತಿಯನ್ನು ಅವನ ತಮ್ಮ ಅಥವಾ ಹತ್ತಿರದ ರಕ್ತ ಸಂಬಂಧಿ ಮದುವೆಮಾಡಿಕೊಳ್ಳಬೇಕಾದ ನಿರ್ಬಂಧದ ಪದ್ಧತಿ. **Levirátic(al)** ಲೆವಿರ್ಯಾ — (ಗು.)

Lévitate ಲೆವಿಟೇಟ್ (ಕ್ರಿ.) (ಭೂತ ವಿದ್ಯೆ) (ನೆಲ ಬಿಟ್ಟು ಮೇಲೇರಿ) ಗಾಳಿಯಲ್ಲಿ ತೇಲಾಡು(ವಂತೆ ಮಾಡು). **Levitátion** (ನಾ.) ಲಘಿಮಾ ಶಕ್ತಿ.

Lévite ಲೀವೈಟ್ (ನಾ.) (ಯೆಹೂದ್ಯರ) ಲೀವೈ ಎಂಬವನ ಸಂತತಿಯವನು; (ಮು., ಯೆಹೂದ್ಯ ದೇವಸ್ಥಾನಗಳಲ್ಲಿ) ಅರ್ಚಕರ ಸಹಾಯಕರನ್ನೊದಗಿಸುವ (ಲೀವೈ ಸಂತತಿಯ) ಒಂದು ಪಂಗಡದವನು. **Levítical** ಲವಿ — (ಗು.) ಲೀವೈ ಜನರ ; ಲೀವೈ ಕುಲದ ; ಲೀವೈಯರ ಮತ ಪ್ರಕ್ರಿಯೆಯ ; (ಹಳೆಯ ಒಡಂಬಡಿಕೆಯ) 'ಲವಿಟಿಕಸ್' ಪ್ರಕರಣದ. **Levíticism** (ನಾ.) ; **Levíticus** (ನಾ.) (ಸಂಕ್ಷಿಪ್ತ : Lev.) ಹಳೆಯ ಒಡಂಬಡಿಕೆಯ ಮೊದಲನೆಯ ಪಂಚ ಪ್ರಕರಣ ಭಾಗದಲ್ಲಿಯ ಮೂರನೆಯ ಪ್ರಕರಣ (ಇದರಲ್ಲಿ 'ಲೀವೈ' ಮತಪ್ರಕ್ರಿಯೆಯ ವಿಷಯ ಹೇಳಿದೆ)

Lévity ಲೆವಿಟಿ (ನಾ.) (ವಿರ. ಪ್ರ.) ಹಗುರ(ವಾಗಿರುವುದು) ; ತೂಕವಿಲ್ಲದಿರುವುದು ; ಲಾಘವ (ರೂಪ. ಸಹ). ಮುಂದಾಲೋಚನೆಯಿಲ್ಲದಿರುವುದು ; ವಿವೇಕ ರಾಹಿತ್ಯ ; ಹುಡುಗಾಟಿಕೆ ; ಸಮಯೋಚಿತವಲ್ಲದ ಹಾಸ್ಯ (ಪ್ರಸಂಗ) ; ಚಾಂಚಲ್ಯ ; ಚಪಲತೆ ; ಗಂಭೀರವಿಲ್ಲದ ನಡತೆ.

Lévulose = Laevulose.

Lévy ಲೆವಿ (ನಾ., ಕ್ರಿ. ಸಕ.) ಕಂದಾಯ, ತೆರಿಗೆ, — ಹಾಕುವುದು, ವಸೂಲು ಮಾಡುವುದು (Capital l. ರಾಷ್ಟ್ರದ ಸಕಲೈಶ್ವರ್ಯದಲ್ಲೂ ಒಂದು ಗೊತ್ತಾದ ಅಂಶವನ್ನು ಸರ್ಕಾರ ಉಪಯೋಗಿಸಿಕೊಳ್ಳುವುದು ; ಬಂಡವಾಳದ, ಆಸ್ತಿಯ, ತೆರಿಗೆ). ಯುದ್ಧ, ಮೊ. ಗಳಿಗೆ ಜನರನ್ನು (ಕಡ್ಡಾಯವಾಗಿ) ಸೇರಿಸಿಕೊಳ್ಳುವುದು [L. in mass ದೃಢಕಾಯರನ್ನೆಲ್ಲ ಸೈನ್ಯಕ್ಕೆ (ಕಡ್ಡಾಯವಾಗಿ) ಸೇರಿಸುವುದು]. ತೆರಿಗೆಯ ಮೊತ್ತ. (ಯುದ್ಧಕ್ಕೆ) ಸೇರಿಸಿಕೊಂಡವರ ಸಂಖ್ಯೆ, ದಳ. (ಕ್ರಿ.) ಕಂದಾಯ, ತೆರಿಗೆ, ಸುಂಕ, — ಹಾಕು, ಎತ್ತು. (ಕಾನೂನು ಜಾರಿಮಾಡಿ, ಒಬ್ಬನ) ಆಸ್ತಿಯಿಂದ (ಮೊತ್ತವನ್ನು) ವಸೂಲು ಮಾಡು (*On* ಉಪ. ದೊಡನೆ). ಹಣ ಸುಲಿ, ಕೀಳು (L. blackmail ಬೆದರಿಸಿ ಹಣ ಕೀಳು). (ಸಾ., ಯುದ್ಧಕ್ಕಾಗಿ) ಸೈನಿಕರನ್ನೂ ಮದ್ದುಗುಂಡನ್ನೂ ಜಮಾಯಿಸು. ದಂಡೆತ್ತಿ ಹೊರಡು (*Upon, against* ಉಪ. ದೊಡನೆ). **Léviable** (ಗು.) ತೆರಿಗೆ, ಸುಂಕ, ಮೊ. ನ್ನು ಹಾಕಬಹುದಾದ.

Lewd ಲ್ಯೂಡ್ (ಗು.) (ಬೈಬಲ್) ತುಚ್ಛ ; ನೀಚ ; ಅಯೋಗ್ಯ ; ಕೆಲಸಕ್ಕೆ ಬಾರದ ; ಸ್ತ್ರೀ ಲಂಪಟ ; ಕಾಮುಕ ; ವ್ಯಭಿಚಾರದ ; ಮರ್ಯಾದೆಗೆಟ್ಟ ; ಅಶ್ಲೀಲ. **Léwdly** (ಕ್ರಿ. ವಿ.) ; **Léwdness** (ನಾ.)

Léwis ಲೂಯಿಸ್ (ನಾ.) ಭಾರವಾದ ಕಲ್ಲುದಿಮ್ಮಿಗಳನ್ನು ಮೇಲಕ್ಕೆತ್ತುವುದಕ್ಕಾಗಿ ಭದ್ರವಾಗಿ ಹಿಡಿದುಕೊಳ್ಳುವ ಕಬ್ಬಿಣದ ಸಲಕರಣೆ : ಕಲ್ಲುದಿಮ್ಮಿ ಹಿಡಿಕೆ.

Léwis gun ಲೂಯಿಸ್ ಗನ್ (ನಾ.) ಯಾಂತ್ರಿಕ ಬಲದಿಂದ ಸಂತತವಾಗಿ ಗುಂಡಿನ ಮಳೆ ಸುರಿಸುವ ಬಂದೂಕು (Lewis ಎಂಬ ನಿರ್ಮಾಪಕನ ಹೆಸರಿನಿಂದ)

Léxical, Lexicógraphy, etc. **Lexicon** ನೋಡಿ.

Léxicon ಲೆಕ್ಸಿಕ(ಕ್)ನ್ (ನಾ.) ನಿಘಂಟು ; ಶಬ್ದಕೋಶ (ಮು., ಗ್ರೀಕ್, ಹೀಬ್ರು, ಸಿರಿಯಕ್, ಅಥವಾ ಅರಬ್ಬೀ ಭಾಷೆಗಳ ನಿಘಂಟು). **Léxical** (ಗು.) (ಒಂದು ಭಾಷೆಯ) ಪದಗಳ, ಶಬ್ದಗಳ, ಮಾತುಗಳ ; ನಿಘಂಟಿನ(ಂಥ). **Léxically** (ಕ್ರಿ. ವಿ.) ; **Lexicógraphy** — ಕಾಗ್ರಫಿ (ನಾ.) ನಿಘಂಟು ರಚನೆ. **Lexicógrapher** (ನಾ.) ನಿಘಂಟುಕಾರ. **Lexicográphical** — ಕೊಗ್ರ್ಯಾ — (ಗು.) ; **Lexígraphy** (ನಾ.) ಪ್ರತಿ ವರ್ಣವೂ ಒಂದು ಪದವನ್ನು ಸೂಚಿಸುವ ಬರೆವಣಿಗೆಯ ಪದ್ಧತಿ (ಉದಾ., ಚೀನೀಯರದು) : ವರ್ಣಪದ ಪದ್ಧತಿ.

Lex taliónis (L) ಲೆಕ್ಸ್ ಟ್ಯಾಲಿಯೋನಿಸ್ (ನಾ.) ಪ್ರತೀಕಾರ ನ್ಯಾಯ ; ಮುಯ್ಯಿಗೆ ಮುಯ್ಯಿ.

Leýden ಲೈಡ(ಡ್)ನ್ (ನಾ.) ಹಾಲೆಂಡಿನ ಒಂದು ಪಟ್ಟಣ. L. jar (ಲೈಡನ್ನಿನಲ್ಲಿ ೧೭೪೫ರಲ್ಲಿ ನಿರ್ಮಿತವಾದ) ಒಂದು ಬಗೆಯ ವಿದ್ಯುತ್ ಸಂಗ್ರಾಹಕ. L. battery ಲೈಡನ್ ವಿದ್ಯುತ್ ಸಂಗ್ರಾಹಕ ಶ್ರೇಣಿ.

Li ಲೀ (ನಾ.) ಚೀನೀಯರ ಒಂದು ಮೈಲಿ (ಸುಮಾರು ೬೩೩ ಗಜ) ; ಚೀನೀಯರ ಒಂದು ತೂಕ(ದ ಬಟ್ಟು) (= $\frac{3}{5}$ ಗ್ರೇಯ್‌ನು)

Líable ಲೈಅಬ್‌ಲ್ (ಗು.) ಕಾನೂನುಮೇರೆಗೆ ಬದ್ಧನಾದ ; (— ಕ್ಕೆ) ಹೊಣೆಯಾದ, ಜವಾಬ್ದಾರನಾದ (*For* ಉಪ. ದೊಡನೆ) ; ತೆರಿಗೆಗೆ, ದಂಡಕ್ಕೆ, — ಈಡಾದ, ಗುರಿಯಾದ (*To* ಉಪ. ದೊಡನೆ). (ಮಾಡಲು) ಬದ್ಧನಾದ (*To* ಉಪ. ದೊಡನೆ). (ಅನಿಷ್ಟಕ್ಕೆ) ಒಳಗಾಗಬಹುದಾದ (*To* ಉಪ. ದೊಡನೆ) (Difficulties are l. to occur ಕಷ್ಟಗಳು ಒದಗುವ ಸಂಭವವುಂಟು). **Liabílity** (ನಾ.) ಹೊಣೆ(ಗಾರಿಕೆ) ; ಹೊರೆ ; ಜವಾಬ್ದಾರಿ [Limited l. (ವ್ಯಾಪಾರಸಂಸ್ಥೆಯ ಸಾಲಗಳಿಗೆ) ಪರಿಮಿತ ಮೊತ್ತದ ಜವಾಬ್ದಾರಿ. L.-l. company (ಅಧ್ಯಾಹಾರವಾಗಿ : Limited company)]. (ಬ. ವ. ದಲ್ಲಿ) ಸಾಲ ಸೋಲಗಳು ; ಹಣಕಾಸಿನ ಜವಾಬ್ದಾರಿಗಳು.

Liaíson (F) ಲಿಏಸ್‌ನ್, **Liasón** ಲೀಏಸಾನ್ (ನಾ.) (ಸ್ತ್ರೀ ಪುರುಷರ) ಅಕ್ರಮ ಪ್ರಣಯ. (ಫ್ರೆಂಚ್ ಭಾಷೆಯಲ್ಲಿ) ಸಾ., ಉಚ್ಚರಿಸದಿರುವ ಪದಾಂತ ವ್ಯಂಜನವನ್ನು ಸ್ವರ ಅಥವಾ ಉಚ್ಚರಿಸದಿರುವ ಹಕಾರದೊಡನೆ ಆರಂಭವಾಗುವ ಪರ ಪದದೊಡನೆ ಸೇರಿಸಿ ಒಟ್ಟಿಗೆ ಉಚ್ಚರಿಸುವುದು: ಸಂಧ್ಯುಚ್ಚಾರಣೆ. (ಸೇನೆ) ಸಂಬಂಧ, ಸಂಪರ್ಕ, ಸಂಸರ್ಗ (L. officer ಮಿತ್ರಸೈನ್ಯಗಳಿಗೆ ಪರಸ್ಪರ ಸಂಬಂಧಿಯಾಗಿರುವ ಅಧಿಕಾರಿ ; ಮಾಧ್ಯಸ್ಥಿಕ ಸೇನಾಧಿಕಾರಿ)

Líar. **Lie**[1] ನೋಡಿ.

Lías ಲೈಅಸ್ (ನಾ.) (ಇಂಗ್ಲೆಂಡಿನ ನೈರುತ್ಯ ಭಾಗದ ಕೆಲವು ಪ್ರದೇಶಗಳಲ್ಲಿ ದೊರೆಯುವ) ಒಂದು ಬಗೆಯ ನೀಲಿ ಸುಣ್ಣಕಲ್ಲು ಶಿಲೆ. (ಭೂ. ವಿ.) ಪಳೆಯುಳಿಕೆಗಳು ಹೇರಳವಾಗಿ ದೊರೆಯುವ (ನೀಲಿ) ಸುಣ್ಣಕಲ್ಲು ಜೇಡಿಯ ಭೂಪದರ. **Liássic** — ಆ್ಯ — (ಗು.)

Libátion ಲೈಬೇಷನ್ (ನಾ.) (ದೇವರಿಗೆ) ಪಾನೀಯದ ತನಿಯನ್ನೆರೆಯುವುದು ; (ಮದ್ಯ) ತರ್ಪಣ. (ಹಾಸ್ಯ ಪ್ರ.) ಕುಡಿತ ; ಮದ್ಯ ಪಾನ.

Líbel ಲೈಬೆಲ್ (ನಾ., ಕ್ರಿ. ಸಕ.) (ವ್ಯಾವಹಾರಿಕ ಮತ್ತು ಕ್ರೈಸ್ತ ವೈದಿಕ ನ್ಯಾ. ಶಾ.) ವಾದಿ ಬರೆದುಕೊಟ್ಟ (ಪ್ರಮಾಣ ಪೂರ್ವಕವಾದ) ಹೇಳಿಕೆ. (ನ್ಯಾ. ಶಾ.) (ಒಬ್ಬನ ವಿಷಯದಲ್ಲಿ) ಮಾನನಷ್ಟ ಲೇಖನ ; ಇಂತಹ ಲೇಖನ ಪ್ರಕಟನೆ (The greater the truth, the greater the l. ಸತ್ಯಾಂಶ ಹೆಚ್ಚಾಗಿದ್ದಷ್ಟೂ ಮಾನಹಾನಿ ಹೆಚ್ಚು) ; (ಬಳ. ಮಾ.) ಸುಳ್ಳಾದ ಮಾನನಷ್ಟದ ಹೇಳಿಕೆ ; ಅಪಮಾನಕ್ಕೀಡುಮಾಡುವ ನಿಂದೆ ; (ಸರಿಯಾಗಿ ಚಿತ್ರಿಸದಿರುವುದರಿಂದ) ಅಪಮಾನಕಾರಕವಾದದ್ದು (*On* ಉಪ. ದೊಡನೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(The portrait is a l. on him ಆ ಭಾವಚಿತ್ರ ಅವನನ್ನು ಅಪಮಾನ ಕ್ಕೀಡುಮಾಡತಕ್ಕದ್ದಾಗಿದೆ. The book is a l. on human nature ಆ ಗ್ರಂಥವು ಮನುಷ್ಯಸ್ವಭಾವವನ್ನು ಅಪನಿಂದೆ ಮಾಡುತ್ತದೆ). (ಕ್ರಿ.) ಮಾನನಷ್ಟದ ಹೇಳಿಕೆಗಳಿಂದ ಅಪಮಾನಗೊಳಿಸು, ಮಾನನಷ್ಟಪಡಿಸು, ಮಿಥ್ಯಾರೋಪ ಮಾಡು ; ದ್ವೇಷಬುದ್ಧಿಯಿಂದ ದೋಷಾರೋಪಣೆ ಮಾಡು. (ನ್ಯಾ. ಶಾ.) ಮಾನನಷ್ಟ ಲೇಖನ ಪ್ರಕಟಿಸು ; (ಕ್ರೈಸ್ತ ಮಠೀಯ ಮತ್ತು ನೌಕಾ ನ್ಯಾ. ಶಾ.) (ಒಬ್ಬನಮೇಲೆ) ಮೊಕದ್ದಮೆ ಹೂಡು. **Líbellant** (ನಾ.) ಮೊಕದ್ದಮೆ ಹೂಡುವವನು ; ದೋಷಾರೋಪಕ. **Libelleé** (ನಾ.) ಮಾನನಷ್ಟಕ್ಕಾಗಿ ದಾವಾ ಹೂಡಲ್ಪಟ್ಟವನು ; ದೋಷಾರೋಪಿತ. **Líbeller** (ನಾ.) ಮಾನನಷ್ಟ ಲೇಖನ ಪ್ರಕಟಕ. **Líbellist** (ನಾ.) = Libeller. **Líbellous** (ಗು.) ಮಾನನಷ್ಟ ಕರವಾದ. **Líbellously** (ಕ್ರಿ. ವಿ.)

Líberal ಲಿಬರಲ್ (ಗು., ನಾ.) (ಈಗ ವಿರ. ಪ್ರ.) ದೊಡ್ಡಮನುಷ್ಯನಿಗೆ, ಸಭ್ಯನಿಗೆ ಯೋಗ್ಯವಾದ [L. education (ಕೇವಲ ವೃತ್ತಿಗೆ, ಕೈಗಾರಿಕೆಗೆ, ಸಂಬಂಧಿಸದೆ ಮನೋವೈಶಾಲ್ಯವನ್ನುಂಟುಮಾಡುವ) ಸಾಂಸ್ಕೃತಿಕ ವಿದ್ಯಾಭ್ಯಾಸ]. ಉದಾರವಾದ ; ಧಾರಾಳವಾದ ; ಕೊಡುಗೈಯ ; ಹಿಡಿತವಿಲ್ಲದ ; ಮುಕ್ತ ಹಸ್ತ ; ಯಥೇಷ್ಟ ; ಹೇರಳ ; ವಿಪುಲ ; ಪುಷ್ಕಳ. ಸಂಕುಚಿತವಲ್ಲದ ; ಕೇವಲ ಪದಶಃ ಅರ್ಥಮಾಡದ ; ತೆರೆದ ಮನಸ್ಸಿನ ; ಉದಾರ ದೃಷ್ಟಿಯ ; ನಿಷ್ಪಕ್ಷಪಾತವಾದ. (ರಾಜ್ಯನೀತಿ) ಪ್ರಜಾಪ್ರಭುತ್ವಕ್ಕೆ ಅನುಕೂಲವಾದ ಸುಧಾರಣೆಗಳಿಗೂ ವಿಶೇಷ ಹಕ್ಕುಗಳನ್ನು ತೊಡೆದುಹಾಕುವುದಕ್ಕೂ ಅನುಕೂಲನಾದ ; ಪ್ರಗತಿಪರನಾದ ; ಉದಾರ ಪಕ್ಷದ [ಮು., L. party (ಇಂಗ್ಲೆಂಡಿನ) ಉದಾರಾಭಿಪ್ರಾಯ ಪಕ್ಷ (ವಿರುದ್ಧ ಪದ: Conservative). L. conservative ಸಂಪ್ರದಾಯ ಪಕ್ಷದವನಾದರೂ ಸುಧಾರಣೆಗಳನ್ನು ವಿರೋಧಿಸದವನು : ಉದಾರ ಸಂಪ್ರದಾಯ ಪಕ್ಷೀಯ. L. unionist ಗ್ರೇಟ್ ಐರ್ಲೆಂಡಿನ ಸ್ವರಾಜ್ಯ ಮಸೂದೆಗೆ ಬೆಂಬಲಕೊಡರೊಪ್ಪದೆ ಉದಾರ ಪಕ್ಷದಿಂದ ಬೇರ್ಪಟ್ಟ ಪಂಗಡದವನು]. (ನಾ.) (ಮು., ಇಂಗ್ಲೆಂಡಿನ) ಉದಾರ (ರಾಜ್ಯನೀತಿ) ಪಕ್ಷದವನು. **Líberalism** (ನಾ.) ರಾಜ್ಯನೀತಿಯಲ್ಲಿ ಅಥವಾ ದೇವತಾಶಾಸ್ತ್ರದಲ್ಲಿ ಉದಾರಾಭಿಪ್ರಾಯ(ವಿರುವುದು). **Líberalist** (ನಾ., ಗು.) ; **Liberalístic** (ಗು.) ; **Líberalize** (ಕ್ರಿ. ಸಕ.) ; **Liberalizátion** (ನಾ.); **Líberally** (ಕ್ರಿ. ವಿ.); **Liberálity** ಲಿಬೆರ್ಯಾಲಿಟಿ (ನಾ.) ಧಾರಾಳವಾಗಿ ಕೊಡುವುದು ; ಔದಾರ್ಯ ; ದಾತೃತ್ವ ; ನಿಷ್ಪಕ್ಷಪಾತತೆ ; ಹೃದಯ ವೈಶಾಲ್ಯ.

Líberate ಲಿಬರೇಟ್ (ಕ್ರಿ. ಸಕ.) ಬಿಡುಗಡೆ ಮಾಡು ; (ಬಂಧನದಿಂದ) ಬಿಡಿಸು (*From* ಉಪ. ಜೊಡನೆ). (ರ. ವಿ. : ಸಂಯುಕ್ತದಿಂದ) ಹೊರಡಿಸು, ಬಿಡುಗಡೆ ಮಾಡು. **Líberator** (ನಾ.) ; **Liberátion** (ನಾ.) ಬಿಡುಗಡೆ (ಮಾಡುವುದು) ; (ಬಂಧ) ವಿಮೋಚನೆ. L. Society ಚರ್ಚುಗಳಿಗೆ ಸರ್ಕಾರದ ಆಧಾರ ತಪ್ಪಿಸಬೇಕೆಂದು ವಾದಿಸುವ ಸಂಘ. **Liberátionism** (ನಾ.) ; **Liberátionist** (ನಾ., ಗು.)

Libertárian, Libérticide. **Liberty** ನೋಡಿ.

Líbertine ಲಿಬರ್ಟೀನ್ (ನಾ., ಗು.) (ಮತಧರ್ಮ ವಿಷಯದಲ್ಲಿ) ಸ್ವತಂತ್ರ ವಿಚಾರಿ ; ಸ್ವೇಚ್ಛಾಚಾರಿ(ಯಾದ) ; ಸ್ತ್ರೀಲೋಲ ; ವ್ಯಭಿಚಾರಿಯಾದ ; ವಿಷಯ ಲಂಪಟನಾದ ; ದುರ್ವ್ಯಸನಿ(ಯಾದ) ; (ಯಾವ ಕಟ್ಟಿಗೂ ಒಳಪಡದೆ) ಸ್ವೇಚ್ಛಾ ವಿಚಾರ ಮಾಡುವ ; ನೀತಿಶಾಸ್ತ್ರದ ಕಟ್ಟನ್ನು ಒಪ್ಪದ(ವನು). Chartered l. (Charter ನೋಡಿ). **Líbertinage** (ನಾ.) ನಡತೆಯಲ್ಲಿ ಸ್ವೇಚ್ಛಾಚಾರ. **Líbertinism** (ನಾ.) (ಮತಧರ್ಮ ವಿಷಯದಲ್ಲಿ) ವಿಚಾರ ಸ್ವಾತಂತ್ರ್ಯ ; ಸ್ವೇಚ್ಛಾಚಾರ (ಮು., ವ್ಯಭಿಚಾರ)

Líberty ಲಿಬರ್ಟಿ (ನಾ.) ಬಂಧನ, ಸೆರೆ, ಗುಲಾಮಗಿರಿ, ಅಥವಾ ನಿರಂಕುಶಾಧಿಕಾರ, — ಇವುಗಳಿಗೆ ಅಧೀನನಾಗಿಲ್ಲದಿರುವುದು ; ಸ್ವಾತಂತ್ರ್ಯ [Cap of l. (Cap ನೋಡಿ). Natural l. ಕಾಯಿದೆ ಕಟ್ಟಳೆಗಳಿಲ್ಲದ ನೈಜ ಸ್ಥಿತಿ ; ನೈಜ ಸ್ವಾತಂತ್ರ್ಯ. Civil l. (Civil ನೋಡಿ). L. of conscience ತಮ ತಮಗೆ ಸೂಕ್ತವಾದ ಮತಧರ್ಮವನ್ನನುಸರಿಸಲು ಸ್ವಾತಂತ್ರ್ಯ : ಮತಸ್ವಾತಂತ್ರ್ಯ. L. of the press (ಮಾನ ನಷ್ಟದ ಅಥವಾ ತಕ್ಸೀರಾಗುವ ಲೇಖನಗಳಿಗೆ ದಂಡ ತೆರಲು ಬದ್ಧನಾಗಿ) ಸರ್ಕಾರದ ಪೂರ್ವಭಾವಿ ಅನುಮತಿಯಿಲ್ಲದೆ ಬೇಕಾದುದನ್ನು ಮುದ್ರಿಸಿ ಪ್ರಕಟಿಸುವ ಸ್ವಾತಂತ್ರ್ಯದ ಹಕ್ಕು ; ಪ್ರಕಟನ ಸ್ವಾತಂತ್ರ್ಯ ; ಅಚ್ಚಿನ ಸ್ವಾತಂತ್ರ್ಯ]. ತನ್ನ ಮನಸ್ಸು ಬಂದಂತೆ ವರ್ತಿಸುವ, ಯಾವುದಾದರೂ ಕೆಲಸಮಾಡುವ, — ಹಕ್ಕು, ಅಧಿಕಾರ. (ತತ್ತ್ವಶಾಸ್ತ್ರ) ವಿಧಿಯ, ದೈವದ, ಕರ್ಮಬಂಧನದ, ಹಿಡಿತಕ್ಕೆ ಒಳಗಾಗದಿರುವುದು ; ಅನಿರ್ಬಂಧತೆ ; ನಿಯಮಗಳನ್ನು ಲಕ್ಷಿಸದೆ ಸ್ವೇಚ್ಛೆಯಾಗಿ ನಡೆಯುವುದು ; ಸ್ವೇಚ್ಛಾಚಾರ [Take the l. to do, of doing ಮಾಡುವ ಸ್ವಾತಂತ್ರ್ಯ ವಹಿಸು. Take liberties with (person) ಒಬ್ಬನೊಡನೆ ಅತಿ ಸಲಿಗೆಯಿಂದ ನಡೆ. (ನಿಯಮಗಳು, ವಿಚಾರಗಳು, ಮೊ. ಗಳ ವಿಷಯದಲ್ಲಿ) ಮನಸ್ಸಿಗೆ ಬಂದಂತೆ ವರ್ತಿಸು]. (ಬ. ವ. ದಲ್ಲಿ) (ಅನುಭವ, ಸನ್ನದು, ಮೊ. ಗಳಿಂದ ಬಂದ) ವಿಶೇಷಾಧಿಕಾರ, ಹಕ್ಕು, ರಿಯಾಯಿತಿಗಳು. At l. ಸ್ವತಂತ್ರವಾಗಿ (Set at l. ಬಿಡುಗಡೆ ಮಾಡು); ಬಿಡುವಾಗಿ ; (ಮಾಡಲು) ಅಧಿಕಾರವುಳ್ಳವನಾಗಿ, ಹಕ್ಕುಳ್ಳವನಾಗಿ (*To* ಉಪ. ಜೊಡನೆ). L. Hall (Hall ನೋಡಿ). L. man ತೀರಕ್ಕೆ ಹೋಗಲು ಅಪ್ಪಣೆ ಪಡೆದ ನಾವಿಕ. **Libertárian** (ನಾ., ಗು.) (ತತ್ತ್ವಶಾಸ್ತ್ರ) ಇಚ್ಛಾ ಸ್ವಾತಂತ್ರ್ಯ ವಾದಿ (ವಿರುದ್ಧ ಪದ : Necessitarian) ; (ರಾಜಕೀಯ) ಸ್ವಾತಂತ್ರ್ಯ ವಾದಿ (ವಿರುದ್ಧ ಪದ : Authoritarian). **Libertárianism** (ನಾ.); **Libérticide** (ನಾ., ಗು.) ಸ್ವಾತಂತ್ರ್ಯ ನಾಶಕ.

Libídinous ಲಿಬಿಡಿನಸ್ (ಗು.) ಕಾಮುಕನಾದ; ವಿಷಯ ಲಂಪಟನಾದ. **Libídinously** (ಕ್ರಿ. ವಿ.) ; **Libído** (L) ಲಿಬೈಡೋ (ನಾ.) (ಮ. ಶಾ.) ಮನುಷ್ಯನಲ್ಲಿ ಯಾವುದಾದರೊಂದು ಮನೋವಿಕಾರದ (ಮು., ಕಾಮೋದ್ರೇಕದ) ಚಟ ; ಕಾಮ. ಪ್ರೇರಕ ಶಕ್ತಿ.

Libído. Libidinous ನೋಡಿ.

Líbra (L) ಲೈಬ್ರ (ನಾ., ಬ. ವ. -ae) ಪೌಂಡು ತೂಕ (ಸಂಕ್ಷಿಪ್ತದಲ್ಲ ಮಾತ್ರ ಪ್ರ.: lb.; ಉದಾ., 1 lb., 10 lb.); ಪೌಂಡು ನಾಣ್ಯ [(ಸಂಕ್ಷಿಪ್ತದಲ್ಲ ಮಾತ್ರ ಪ್ರ. : £. s. d. ಎಂಬಲ್ಲಿ ; 50*l.*) = ೫೦ ಪೌಂಡು ಹಣ (L. ನೋಡಿ)]. (ಖ. ವಿ. ; L-) ತುಲಾ (ರಾಶಿ) (ಏಳನೆಯ ರಾಶಿ)

Líbrary ಲೈಬ್ರರಿ (ನಾ.) ಓದುವುದಕ್ಕಾಗಲಿ ಪರಾಮರ್ಶಕ್ಕಾಗಲಿ ಪುಸ್ತಕಗಳನ್ನುಳ್ಳ ಕೊಠಡಿ, ಮಂದಿರ ; ಪುಸ್ತಕಾಲಯ ; ಸಾರ್ವಜನಿಕ ಸರಸ್ವತೀ, ಪುಸ್ತಕ, — ಭಂಡಾರ ; (ಮನೆಯಲ್ಲಿ) ಬರೆಯುವ ಮತ್ತು ಓದುವ ಕೊಠಡಿ ; ಪುಸ್ತಕ ಸಂಗ್ರಹದ ಒಂದು ಭಾಗ ; ಇಂಥ ಪುಸ್ತಕ ಸಂಗ್ರಹವನ್ನು ನೋಡಿಕೊಳ್ಳುವ ಸಂಘ(ದ ಸದಸ್ಯರು) [Lending l. ತೆರ ಕೊಟ್ಟು ಅಥವಾ ಕೊಡದೆ ಪುಸ್ತಕಗಳನ್ನು ಎರವಲು ತೆಗೆದುಕೊಂಡು ಹೋಗಬಹುದಾದ ಪುಸ್ತಕ ಭಂಡಾರ: ಎರವಲು ಪುಸ್ತಕ ಭಂಡಾರ. Reference l. (ಅಲ್ಲಿಯೇ ನೋಡಿ ವಿಷಯಸಂಗ್ರಹ ಮಾಡಿಕೊಳ್ಳಬಹುದಾದ) ಪರಾಮರ್ಶ ಪುಸ್ತಕ ಭಂಡಾರ. Free l. (ಸಾ., ಪೌರಸಭೆ ಹಾಕಿರುವ ತೆರಿಗೆಗಳಿಂದ ನಡೆಯುವ) ಧರ್ಮಾರ್ಥದ (ಬಿಡುಗೆಯ) ಪುಸ್ತಕ ಭಂಡಾರ. Circulating l. ಚರ ಪುಸ್ತಕ ಭಂಡಾರ (Circular ನೋಡಿ)] ; (ಒಬ್ಬನ) ಪುಸ್ತಕ ಸಂಗ್ರಹ ; (ಒಂದೇ ಮಾದರಿಯ ರಟ್ಟುಹಾಕಿ ಪ್ರಚಾರ ಮಾಡಿರುವ, ಒಂದು ನಿರ್ದಿಷ್ಟ ಸಂಬಂಧವುಳ್ಳ) ಪುಸ್ತಕಾವಳಿ, ಗ್ರಂಥಮಾಲೆ ; ಒಬ್ಬ ಗ್ರಂಥಕರ್ತನು ಉಪಯೋಗಿಸಿರುವ ಅಥವಾ ಆತನಿಗೆ ಬಳಕೆಯಾಗಿರುವ ಪುಸ್ತಕಗಳು. Walking l. (ಅನೇಕ ವಿಷಯಗಳನ್ನು ತಿಳಿದ) ಉದ್ದಾಮ ಪಂಡಿತ ; ವಿದ್ಯಾ ನಿಧಿ. L. edition (ಗಾತ್ರದಲ್ಲಿಯೂ ಮುದ್ರಣದಲ್ಲಿಯೂ ಅಂದವಾದ) ಪುಸ್ತಕ ಭಂಡಾರಕ್ಕೆ ಒಪ್ಪುವ ಮುದ್ರಣ ಪ್ರತಿ : ಭಂಡಾರ ಪ್ರತಿ. **Librárian** ಲೈಬ್ರೇರಿಯನ್ (ನಾ.) ಪುಸ್ತಕ ಭಂಡಾರದ ಅಧಿಕಾರಿ. **Librárianship** (ನಾ.)

Libráte ಲೈಬ್ರೇಟ್ (ಕ್ರಿ. ಅಕ.) (ತುಲಾ ದಂಡದಂತೆ) ಮೇಲಕ್ಕೂ ಕೆಳಕ್ಕೂ ತೂಗಾಡು ; ಆಂದೋಲವಾಗು ; ಸಮತೂಕವಾಗು ; ಸರಿದೂಗು ; (ಪಕ್ಕದಿಂದ ಪಕ್ಕಕ್ಕೆ) ಓಲಾಡು ; ಕಂಪನ ಮಾಡು. **Librátion** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[L. of moon (ಚಂದ್ರಬಿಂಬದ ಅಂಚಿನ ಹತ್ತಿರದ ಭಾಗಗಳು ಪರ್ಯಾಯ ಕ್ರಮದಲ್ಲಿ, ದೃಷ್ಟಿಗೆ ಬೀಳುತ್ತ, ದೃಷ್ಟಿಗೆ ಬೀಳದೆ, ನಡೆಯುವ) ಚಂದ್ರಬಿಂಬದ (ದೃಗ್ಗೋಚರವಾದ) ಆಂದೋಲನ]. **Líbratory** (ಗು.)

Librétto (It.) ಲಿಬ್ರೆಟೊ (ನಾ. ; ಬ. ವ. -tti — ಟೀ) ಸಂಗೀತ ನಾಟಕದ ಪಾಠ, ಪಾಠ ಪುಸ್ತಕ ; ದೊಡ್ಡ ಸಂಗೀತ ಕೃತಿ. **Librét-tist** (ನಾ.)

Líbyan ಲಿಬಿಯನ್ (ಗು., ನಾ.) ಪ್ರಾಚೀನ ಲಿಬಿಯಾ ದೇಶದ(ವನು); (ಕಾವ್ಯ) ಆಫ್ರಿಕದ(ವನು). ಬರ್ಬರ ಭಾಷೆ(ಯ) ; ಹ್ಯಮಿಟಿಕ್ ಭಾಷಾ ವರ್ಗ(ದ)

Lice. Louse ಪದದ ಬ. ವ.

Lícence, Lícense (ನಾ., ಕ್ರಿ. ಸಕ.) ಅಪ್ಪಣೆ ; ಅನುಮತಿ; ಅನುಜ್ಞೆ (Have I your l. to remove the fence ?). [ಮದುವೆಗೆ, ಮುದ್ರಣ ಮಾಡುವುದಕ್ಕೆ, ಮತಧರ್ಮ ಬೋಧೆ ಮಾಡುವುದಕ್ಕೆ, ವ್ಯಾಪಾರ ಮಾಡುವುದಕ್ಕೆ (ಮು., ಸಾರಾಯಿ ವ್ಯಾಪಾರಕ್ಕೆ) ಸರ್ಕಾರ, ಮೊ. ಗಳ] ಅಧಿಕಾರ ಪತ್ರ, ಅಪ್ಪಣೆ ಚೀಟಿ, ಸನ್ನದು, ಪರವಾನೆ. (ಯಾವುದಾದರೂ ಒಂದು ವಿದ್ಯಾ ವಿಭಾಗದ ಪ್ರವೀಣತೆಗಾಗಿ ವಿಶ್ವ ವಿದ್ಯಾನಿಲಯದವರು ಕೊಡುವ) ಪ್ರಶಸ್ತಿಪತ್ರ. ಕಾರ್ಯ ಸ್ವಾತಂತ್ರ್ಯ. (ಮು., ಸ್ವೇಚ್ಛಾ ವರ್ತನೆಯ ಸ್ವಾತಂತ್ರ್ಯ) ; ಸ್ವಚ್ಛಂದ ವೃತ್ತಿ ; ಸ್ವಾತಂತ್ರ್ಯದ ದುರುಪಯೋಗ ; ನಿಯಮೋಲ್ಲಂಘನೆ ; ವಿನಯೋಲ್ಲಂಘನೆ ; ಅತ್ಯಾಚಾರ ; ಬರಹಗಾರನು ಮಾಡುವ ವ್ಯಾಕರಣ, ಛಂದಸ್ಸು, ಮೊ. ಗಳ ನಿಯಮೋಲ್ಲಂಘನೆ ; ಕಲೆಗಾರನು ಮಾಡುವ ದೃಶ್ಯ ರಚನೆಯ ನಿಯಮೋಲ್ಲಂಘನೆ [Poetic l. ಕವಿ(ತಾ) ಸ್ವಾತಂತ್ರ್ಯ]. (ಕ್ರಿ.) (License, -ce) (ಮಾಡಲು, ಒಬ್ಬನಿಗೆ) ಅಪ್ಪಣೆ, ಅನುಮತಿ, ಅನುಜ್ಞೆ, ಸನ್ನದು, — ಕೊಡು (ವಿರ. ಪ್ರ.). (ವಠಾರವನ್ನು) ಒಂದು ನಿರ್ದಿಷ್ಟೋದ್ದೇಶಕ್ಕೆ ಉಪಯೋಗಿಸಲು ಅನುಮತಿಕೊಡು. **Lícensed** (ಕೃದಂತ ಗು.) ಸಂಪೂರ್ಣ ಸ್ವಾತಂತ್ರ್ಯ ಪಡೆದ ; ಸನ್ನದು, ರಿಯಾಯಿತಿ, ಮೊ. ನ್ನು ಪಡೆದ (L. victualler). **Licenseé** (ನಾ.) ಅಪ್ಪಣೆ ಪಡೆದವನು ; ಸನ್ನದುದಾರ. **Lícenser** (ನಾ.) (ಕ್ರಿಯಾರ್ಥಗಳಲ್ಲಿ) ; L. of the press, L. of plays [ಕಾನೂನು, ನೀತಿ, ಶೀಲ, ಶಿಷ್ಟತೆ — ಇವುಗಳಿಗೆ ಕುಂದಕವಿಲ್ಲವೆಂದು ದೃಢಪಟ್ಟಲ್ಲಿ] (ಪುಸ್ತಕದ) ಪ್ರಕಟನೆಗೆ, (ನಾಟಕದ) ಪ್ರದರ್ಶನಕ್ಕೆ, ಸನ್ನದು ಕೊಡುವ ಅಧಿಕಾರಿ. **Licéntiate** ಲೈಸೆನ್ಸಿಯೆಟ್ (ನಾ.) ವಿಶ್ವವಿದ್ಯಾನಿಲಯದ ಸನ್ನದನ್ನು ಅಥವಾ ಪ್ರೌಢ ವಿದ್ಯಾಶಾಲೆಯ ಅಥವಾ ಪರೀಕ್ಷಾ ಮಂಡಲಿಯ ಪ್ರವೀಣತಾ ಪತ್ರವನ್ನು ಪಡೆದವನು [ಬರುದಿನ ಸಂಕ್ಷಿಪ್ತ: L. (ಉದಾ., L.M.P.)]. ಮು., ಪ್ರೆಸ್ಬಿಟೇರಿಯನ್ ಚರ್ಚಿನಲ್ಲಿ, ಉದ್ಯೋಗವನ್ನು ಇನ್ನೂ ಪಡೆಯದೆ, ಬೋಧಿಸಲು ಸನ್ನದು ಮಾತ್ರ ಪಡೆದ ಉಪದೇಶಕ. **Licén-tious** ಲೈಸೆನ್ಶಸ್ (ಗು.) (ಮು., ವ್ಯಾಕರಣದ, ಶೈಲಿಯ) ಅಂಗೀಕೃತ ನಿಯಮಗಳನ್ನು ಲಕ್ಷ್ಯಮಾಡದ ; ಸ್ವೇಚ್ಛಾಚಾರಿಯಾದ ; ವಿಷಯ ಲಂಪಟನಾದ ; ಕಾಮುಕ. **Licéntiously** (ಕ್ರಿ. ವಿ.) ; **Licén-tiousness** (ನಾ.)

Licéntiate, Licéntious. **Licence** ನೋಡಿ.

Lich, Lych ಲಿಚ್, **Lyke** ಲೈಕ್ (ನಾ.) (ಗ. ಪ್ರ.) ಹೆಣ ; ಶವ. Li(y)ch-gate ಪಾದ್ರಿ ಬರುವ ವರೆಗೂ ಹೆಣದ ಪೆಟ್ಟಿಗೆಯನ್ನು ಇಟ್ಟುಕೊಂಡು ಕಾದಿರುವ, ಮೇಲ್ಛಾವಣಿಯುಳ್ಳ ಶ್ಮಶಾನ ದ್ವಾರ ; ಶ್ಮಶಾನ ದ್ವಾರ ಮಂಟಪ. Li(y)ch-house ಹೆಣದ ಮನೆ ; ಶವಾಗಾರ Li(y)ch-owl (ಸಾವು ಸೂಚಿಸುವುದೆಂದು ಜನರಲ್ಲಿ ನಂಬಿಕೆಯಿರುವ) ಕಿರಿಚು ಗೂಬೆ. Li(y)ch-stone ಶ್ಮಶಾನ ದ್ವಾರ ಮಂಟಪದಲ್ಲಿ ಹೆಣದ ಪೆಟ್ಟಿಗೆಯನ್ನಿಡುವ ಕಲ್ಲು. Lyke-wake ರಾತ್ರಿಯಲ್ಲಿ ಹೆಣಗಾವಲು.

Líchen ಲೈಕೆನ್ (ನಾ.) ಬಂಡೆಗಳಮೇಲೂ, ಮರದ ಬುಡಗಳಮೇಲೂ ಬೆಳೆದು ಅವಕ್ಕೆ ಬಣ್ಣ ಕೊಡುವ, ಸಾ., ಹಸುರು, ಬೂದು, ಅಥವಾ ಹಳದಿಯ ಬಣ್ಣದ (ಬಹುಶಃ ಪಾಚಿಯೊಡನೆ ಕೂಡಿ ಅದರ ಉಪಜೀವಿಯಾಗಿರುವ ಒಂದು ಜಾತಿ ಅಣಬೆಯ) ಗುಪ್ತ ಪುಷ್ಪೀಯ ಸಸ್ಯಜಾತಿ : ಕಲ್ಲುಹೂವು ; ಶಿಲಾವಲ್ಕ. ಕೆಂಪು ಛಾಯೆಯ ಸಣ್ಣ ಗುಳ್ಳೆಗಳೇಳುವ ಒಂದು ಚರ್ಮ ರೋಗ. **Líchened** (ಗು.) ; **Lichenólogy** (ನಾ.) ಶಿಲಾವಲ್ಕ ಶಾಸ್ತ್ರ. **Líchenous** (ಗು.)

Lícit ಲಿಸಿಟ್ (ಗು.) ನಿಷಿದ್ಧವಲ್ಲದ ; ನ್ಯಾಯ ಸಮ್ಮತವಾದ ; ವಿಹಿತವಾದ. **Lícitly** (ಕ್ರಿ. ವಿ.)

Lick ಲಿಕ್ (ಕ್ರಿ., ನಾ.) ನೆಕ್ಕು [L. one's chops or lips (ಆಹಾರದ ರುಚಿ ಹತ್ತಿ ಅಥವಾ ನಿರೀಕ್ಷಣೆಯಿಂದ) ತುಟಿ ಸವರಿಕೊ. L. into shape ತಕ್ಕ ಆಕಾರ ಕೊಡು ; ರೂಪಿಸು ; ನೋಡುವುದಕ್ಕೆ ಅಂದವಾಗಿ, ಪರಿಣಾಮಕಾರಿಯಾಗಿ, ಮಾಡು. L. one's shoes (ಒಬ್ಬನಲ್ಲಿ) ಅತಿ ದೈನ್ಯದಿಂದ ವರ್ತಿಸು ; ದಾಸಾನುದಾಸನಾಗಿ ನಡೆದುಕೊ. L. the dust ಮಣ್ಣು ಮುಕ್ಕು ; ಬಿದ್ದುಹೋಗು ; ಸೋತುಹೋಗು]. ನೆಕ್ಕಿ ನೆಕ್ಕಿ ಒರಸಿಬಿಡು, ಚೊಕ್ಕಟಮಾಡು; ನೆಕ್ಕಿಹಾಕು (*Up, off, clean* ಪದದೊಡನೆ). (ಅಲೆ, ಉರಿ, ಮೊ.) ಮೇಲೆ ಮೇಲೆ ಹಗುರವಾಗಿ ಆಡು ; ಮುಟ್ಟಾಡು. (ಉರಿ) ಮುಂದುವರಿಯುತ್ತ ಕಬಳಿಸಿಬಿಡು (*Up* ಉಪ. ದೊಡನೆ). (ಅಸಂ.) (ಒಬ್ಬನನ್ನು) ಸದೆ ಬಡಿ ; (ಒಬ್ಬನಿಂದ ದೋಷವನ್ನು) ಹೊಡೆದೋಡಿಸು (*Out of* ಉಪ. ದೊಡನೆ) ; (ಕಾಳಗದಲ್ಲಿ, ಸ್ಪರ್ಧೆಯಲ್ಲಿ) ಸೋಲಿಸು, ಮೇಲಾಗು (Licks creation ಎಲ್ಲವನ್ನೂ ಮೀರಿಸಿದೆ). (ಅಸಂ.) ಬುದ್ಧಿಗೆ ನಿಲುಕದಿರು (This licks me ಇದು ನನ್ನ ಬುದ್ಧಿಗೆ ಮೀರಿದ್ದು). (ಅಸಂ.) ಹೊರಡು ; ತ್ವರೆ ಮಾಡು (As hard as he could l. ಕೈಲಾದಷ್ಟು ವೇಗದಿಂದ). (ನಾ.) ನೆಕ್ಕುವುದು ; ಪ್ರಾಣಿಗಳು ಉಪ್ಪು ನೆಕ್ಕುವುದಕ್ಕೆ ಹೋಗುವ ಸ್ಥಳ : ಉಪ್ಪುನೆಕ್ಕಲು (=salt-l.). (ಕೋಲು, ಮೊ. ಗಳಿಂದ) ಚುರುಕೇಟು. (ಅಸಂ.) ವೇಗ; ಹೆಜ್ಜೆ ಹಾಕುವುದು (At a great l., Full or at full l. ದೊಡ್ಡ ಹೆಜ್ಜೆ ಹಾಕುತ್ತ ; ಬಹಳ ವೇಗವಾಗಿ). **Líckspittle** ಎಂಜಲು ನೆಕ್ಕುವವನು ; (ರೂಪ.) ಕಾಲಿಗೆ ಬಿದ್ದು ಅನುಸರಿಸುವವನು ; ಹಲ್ಲು ಕಿರಿದು ಮುಖ ಸ್ತುತಿ ಮಾಡುವವನು. **Lícking** (ನಾ.)

Líckerish, Líquorish ಲಿಕರಿಷ್, **Lickerous** — ರಸ್ (ಗು.) ರುಚಿಭಕ್ಷ್ಯ ಪ್ರಿಯನಾದ ; ರುಚಿತಿಂಡಿಯ ಗೀಳಿನ ; ಅತ್ಯಾಶೆಯ ; ಹಂಬಲಿಸುವ ; ಗೀಳು ಹಿಡಿದ ; ಕಾಮುಕನಾದ.

Lícorice = Liquorice.

Lícorous. Lickerous ಎಂಬುದರ ಪ್ರಭೇದ ; =Lickerish.

Líctor ಲಿಕ್ಟರ್ (ನಾ.) ಪ್ರಾಚೀನ ರೋಮನ್ ದಂಡಾಧಿಕಾರಿಯ, ಸರ್ವಾಧಿಕಾರಿಯ, ಮುಂದೆ ದಂಡಗಳ ಕಟ್ಟನ್ನು ಹಿಡಿದುಕೊಂಡು ಹೋಗುತ್ತಿದ್ದ, ಮತ್ತು ಅಪರಾಧಿಗಳಿಗೆ ವಿಧಿಸಿದ ಶಿಕ್ಷೆಯನ್ನು ಜಾರಿ ಮಾಡುತ್ತಿದ್ದ, ಪರಿಚರರಲ್ಲೊಬ್ಬನು.

Lid ಲಿಡ್ (ನಾ.) (ಕಂಡಿಯ, ಮು., ಪಾತ್ರೆಯ ಬಾಯಿಯ) (ಕೀಲು) ಮುಚ್ಚಳ. ಕಣ್ಣುರೆಪ್ಪೆ (= Eye-lid). (ಸ. ವಿ., ಶಂಖ ಶಾಸ್ತ್ರ) ಮುಚ್ಚಳದಂಥ ಭಾಗ. With the l. off (ಎಲ್ಲ ಭಯಂಕರ ದೃಶ್ಯಗಳು, ಮೊ.) ದೃಷ್ಟಿಗೆ ತೆರೆದು. Put the l. on (ಅಸಂ.) ಎಲ್ಲವನ್ನೂ ಮೆಟ್ಟಿ ನಿಲ್ಲು, ಮೀರಿರು. (-)**lídded** (ಗು.) ; **Lídless** (ಗು.)

Lie[1] ಲೈ (ನಾ. ; ಕ್ರಿ. ; ವರ್ತಮಾನ ಕೃದಂತ lying) (ಮನಸಾರ ಹೇಳಿದ) ಸುಳ್ಳು, ಸಟೆ ; ಹುಸಿ ; ಅನೃತ ; ಅಸತ್ಯ [Tell a l. ಸುಳ್ಳು ಹೇಳು. Act a l. (ಬಾಯಿಲ್ಲ ಸುಳ್ಳು ಹೇಳದೆ) ಕಾರ್ಯದಲ್ಲಿ ವಂಚಿಸು. White l. (ನದುದ್ದೇಶದಿಂದ ಹೇಳಿದ) ಕ್ಷಮಾರ್ಹವಾದ ಸುಳ್ಳು. Give one the l. ಸುಳ್ಳು ಹೇಳಿದನೆಂದು ಅವನ ಎದುರಿಗೇ ಮೂದಲಿಸು. Give the l. to (ಊಹೆ, ಮೊ. ನ್ನು) ಸುಳ್ಳೆಂದು ತೋರಿಸು, ಸುಳ್ಳು ಮಾಡು]. ಮೋಸ ; ಠಕ್ಕು ; ಮಿಥ್ಯಾ ಭಾವನೆ ; ತಪ್ಪು ಸಂಪ್ರದಾಯ (Worship, maintain, a l.). (ಕ್ರಿ.) ಸುಳ್ಳು ಹೇಳು ; ಸಟೆಯಾಡು [You l. in your teeth, throat (ಪ್ರಾಚೀ. ಪ್ರ., ಹಾಸ್ಯ ಪ್ರ.) ; Lies like a gas-meter ತಡೆಬಡೆಯಿಲ್ಲದೆ ಸುಳ್ಳು ಹೇಳುತ್ತಾನೆ]. (ಹೆಸರುವಾಸಿ, ಮೊ. ವನ್ನು) ಸುಳ್ಳುಹೇಳಿ ನಾಶ ಮಾಡು ; ಹೆಸರು ಕೆಡಿಸು (*Away* ಉಪ. ದೊಡನೆ). ಸುಳ್ಳು ಹೇಳಿ (ತಾನು) ಸಿಕ್ಕಿಕೊ, ತಪ್ಪಿಸಿಕೊ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಒಬ್ಬನನ್ನು) ಸಿಕ್ಕಿಸು, ತಪ್ಪಿಸು (*Into, out of* ಉಪ. ದೊಡನೆ); (ವಸ್ತುಗಳ ವಿಷಯದಲ್ಲಿ) ಮೋಸ ಪಡಿಸು; ತಪ್ಪು ತಿಳಿವಳಿಕೆ ಕೊಡು [(ವರ್ತಮಾನ ಕೃದಂತ) ತಪ್ಪು ಅಭಿಪ್ರಾಯ ಕೊಡುವ; ಮೋಸ ಹೋಗುವಂತೆ ಮಾಡುವ]. **Líar** ಲೈಅರ್ (ನಾ.) (ರೂಢಿಯಾಗಿ) ಸುಳ್ಳು ಹೇಳುವವನು; ಸುಳ್ಳ. **Lýing**[1] (ಗು.) (Lie[1] ಧಾತುವಿನ ಅರ್ಥಗಳಲ್ಲಿ). ಮೋಸದ; ಸುಳ್ಳಿನ. **Lýingly** (ಕ್ರಿ. ವಿ.)

Lie[2] ಲೈ [ಕ್ರಿ. ಅಕ.; ವರ್ತಮಾನ ಕೃದಂತ. Lying; ಭೂತ. Lay; ಭೂ. ಕೃ. Lain, (ಬೈಬಲ್) Líen (ಲೈಎನ್); ನಾ.]

೧. ಪ್ರಾಣಿಗಳ ಅಥವಾ ಮನುಷ್ಯರ ವಿಷಯದಲ್ಲಿ.—

ಮಲಗು; ಮಲಗಿಕೊ; ಮಲಗಿರು; ಕೆಡೆದಿರು (ಗ್ರಾಂ.) [L. asleep ನಿದ್ದೆಮಾಡುತ್ತ ಮಲಗಿರು. L. sick ರೋಗದಿಂದ ಮಲಗಿರು. L. doggo (Doggo ನೋಡಿ). Let sleeping dogs l. (Dog ನೋಡಿ). L. on the bed one has made (Bed ನೋಡಿ)]. ಒಬ್ಬನೊ(ಳೊ)ಡನೆ ಮಲಗು, ಸಂಭೋಗಿಸು (*With* ಉಪ. ದೊಡನೆ). (ಸತ್ತವರು) ಗೋರಿಯಲ್ಲಿರು (*At, in* ಉಪ. ದೊಡನೆ). [L. in state (State ನೋಡಿ)]. (ಒಂದು ಗೊತ್ತಾದ ಸ್ಥಿತಿಯಲ್ಲಿ) ಇರು, ಇಡಲ್ಪಟ್ಟಿರು [L. in prison ಸೆರೆಯಲ್ಲಿರು. L. helpless, idle ಏನು ಮಾಡಲೂ ಶಕ್ತಿಯಿಲ್ಲದೆ, ಏನೂ ಕೆಲಸಮಾಡದೆ, ಬಿದ್ದಿರು. L. low (Low ನೋಡಿ). L. in ambush (ಮರೆಯಲ್ಲಿ) ಹೊಂಚುಹಾಕಿಕೊಂಡಿರು. L. in wait (Wait ನೋಡಿ). L. out of one's money ಹಣ ಕೊಡದೆ ಉಳಿದಿರು, ಬಾಕಿ ನಿಂತಿರು]. (ಬೇಟೆ ಹಕ್ಕಿಗಳು) ಏಳದಿರು. (ಸೈನಿಕ ದಳಗಳು, ಒಂದೆಡೆ) ಬೀಡು ಬಿಟ್ಟಿರು (*At, in, near* ಉಪ. ದೊಡನೆ)

೨. ವಸ್ತುಗಳ ವಿಷಯದಲ್ಲಿ.—

(L. in ruins or the dust ಪಾಳು ಬಿದ್ದಿರು; ಮಣ್ಣುಪಾಲಾಗಿರು. L. heavy on one's stomach or conscience ಎದೆಯಮೇಲೆ, ಮನಸ್ಸಿನಮೇಲೆ, ಭಾರವಾಗಿ ಕುಳಿತಿರು, ಒತ್ತುತ್ತಿರು. Money is lying at the bank ಹಣ ಬ್ಯಾಂಕಿನಲ್ಲಿ ಬಿದ್ದಿದೆ). (ಗೊತ್ತಾದ ಸ್ಥಿತಿಯಲ್ಲಿ, ದಿಕ್ಕಿನಲ್ಲಿ) ಇರು [Land lying high, to the east, round. Find out how the land lies (ರೂಪ.) ಪರಿಸ್ಥಿತಿ ಹೇಗಿದೆ ಎಂಬುದನ್ನು ತಿಳಿದುಕೊ. The road lies along the forest. The ship lies at anchor. His acquaintance lay among the rich. He knows where his interest lies. How do they lie to each other? ಅವುಗಳ ಪರಸ್ಪರ ಸಂಬಂಧ ಹೇಗಿದೆ? As far as in me lies ನನ್ನ ಕೈಯಲ್ಲಾದ ಮಟ್ಟಿಗೆ. Lies with you to do (ಇದನ್ನು) ಮಾಡುವುದು ನಿನ್ನ ಕೆಲಸ, ಹಕ್ಕು, ನಿನ್ನ ಕೈಯಲ್ಲಿದೆ. The remedy lies in Education. Lies in a nutshell (Nut ನೋಡಿ)]. (ನ್ಯಾ. ಶಾ.) (ದಾವ) ಹಿಡಿ(ಯುವಂತಿರು); (ದಾವೆಗೆ) ಅವಕಾಶವಿರು (Action will not l. ದಾವೆಗೆ ಅವಕಾಶವಿಲ್ಲ. Appeal, objection, will not l.)

೩. ಕ್ರಿ. ವಿ. ಗಳೊಡನೆ.—

L. by ಉಪಯೋಗಿಸದೆ ಬಿದ್ದಿರು; ತೆಪ್ಪಗಿರು; ಹಚ್ಚಿಕೊಳ್ಳದಿರು. L. down ದೈನ್ಯದಿಂದ ನಡೆದುಕೊ; ಎದುರಾಳನ್ನು ಎದುರಿಸದೆಹೋಗು. Take it lying down (ಸೋಲು, ದಂಡನೆ, ವೊ. ನ್ನು) ಪ್ರತಿ ಹೇಳದೆ ದೈನ್ಯದಿಂದ ಒಪ್ಪಿಕೊ. L. in ಹೆತ್ತಿರು; ಬಾಣಂತಿಯಾಗಿರು. L. off (ನಾವೆ) (ತೀರದಿಂದ, ಮತ್ತೊಂದು ಹಡಗಿನಿಂದ) ಸ್ವಲ್ಪ ದೂರ ಇರು, ನಿಂತಿರು. L. over ಬಿದ್ದಿರು. L. to (ನಾವೆ) ಹಿಂದಕ್ಕೆ ಹೋಗುವುದರಿಂದ ಅಥವಾ ಪಟವನ್ನು ಸಂಕೋಚಿಸುವುದರಿಂದ ಹಡಗಿನ ತಲೆ ಗಾಳಿಯ ದಿಕ್ಕಿಗೆ ತಿರುಗಿ (ಹಡಗು) ಬಹುಮಟ್ಟಿಗೆ ನಿಂತುಬಿಡು. L. up ವಿಶ್ರಾಂತಿ ಹೊಂದು; — ಹೊಂದಿರು; ಹಾಸಿಗೆ ಹಿಡಿ(ದಿರು); ಕೊಠಡಿ ಬಿಟ್ಟು ಹೊರಗೆ ಬರಲು ಆಗದಿರು. (ಹಡಗು) ಕಟ್ಟೆಗೆ ಹೋಗು, ಉಪಯೋಗ ಮಾಡದೆಹೋಗು. **Lié-abed** ಹಾಸಿಗೆಯಿಂದ ಹೊತ್ತುಮೀರಿ ಏಳುವವನು.

Lýing[2] (ನಾ.) (ಕ್ರಿಯಾರ್ಥಗಳಲ್ಲಿ). ಮಲಗುವ ಸ್ಥಳ (Soft, dry, l.). **L.-in** ಹೆತ್ತಿರುವುದು (Lying-in-hospital ಹೆರಿಗೆಯ ಆಸ್ಪತ್ರೆ). Low-lying land ತಗ್ಗಿನಲ್ಲಿರುವ ಭೂಮಿ; ತಗ್ಗು ಭೂಮಿ.

Lie (ನಾ.) (ಒಂದು ವಸ್ತುವಿರುವ) ನಿಲವು, ನೆಲೆ, ಸ್ಥಾನ, ದಿಕ್ಕು. (ಪ್ರಾಣಿ, ಪಕ್ಷಿ, ಮೀನು — ಇವುಗಳ) ಇಕ್ಕೆ, ರೂಢಿಯಾದ ವಾಸಸ್ಥಾನ. L. of the land (ರೂಪ.) ಪರಿಸ್ಥಿತಿ; ಸಂದರ್ಭ.

Lied (G) ಲೀಡ್ (ನಾ.) ಲಾವಣಿಯ ತೆರದ ಜರ್ಮನ್ ಹಾಡು ಅಥವಾ ಕವನ.

Lief ಲೀಫ್ [ಕ್ರಿ. ವಿ.; ತರ ರೂಪ -er (ವಿರ. ಪ್ರ.)] ಸಂತೋಷದಿಂದ; ಮನಃಪೂರ್ವಕವಾಗಿ; ಪ್ರೀತಿಯಿಂದ (I had as l., Would as l., go as not)

Liege ಲೀಜ್ (ಗು., ನಾ.) (ದಣಿಯ ವಿಷಯದಲ್ಲಿ) ಸ್ವಾಮಿನಿಷ್ಠೆ, ಊಳಿಗ, —ಪಡೆಯಲು ಹಕ್ಕುಳ್ಳ; (ಭೃತ್ಯನ ವಿಷಯದಲ್ಲಿ) ಊಳಿಗ ಮಾಡಬೇಕಾದ; ಸ್ವಾಮಿನಿಷ್ಠೆ ಇರಬೇಕಾದ; ಸ್ವಾಮಿ ಭೃತ್ಯ ಸಂಬಂಧದ [L. lord ದಣಿ, ಒಡೆಯ, ಸ್ವಾಮಿ, ಪ್ರಭು. **Liégeman** (ಪ್ರಮಾಣ ತೆಗೆದುಕೊಂಡು) ಊಳಿಗ ಹೊತ್ತಿರುವವನು; ಭೃತ್ಯ; ನಂಬಿಕೆಯ ಅನುಚರ]. (ನಾ.) = L. lord [(ಮು., ಸಂಬೋಧನೆಯಲ್ಲಿ) my l. ನನ್ನೊಡೆಯಾ!]; = Liegeman (ಸಾ., The lieges)

Líen[1] ಲೀಯೆನ್, ಲೈಎನ್, **Lien** ಲೀನ್ (ನಾ.) (ಒಂದು ಆಸ್ತಿಯ ಮೇಲಿನ ಸಾಲ ತೀರುವ ವರೆಗೂ) ಆ ಆಸ್ತಿಯನ್ನು ವಶದಲ್ಲಿಟ್ಟುಕೊಂಡಿರಬಹುದಾದ ಹಕ್ಕು; ಭೋಗ್ಯದ ಹಕ್ಕು; (ಅಧಿಕಾರ, ವೊ. ಗಳ ಮೇಲಿನ) ಹಕ್ಕು (A l. *on* or *upon*)

Líen[2]. **Lie**[2] ನೋಡಿ.

Lieu ಲ್ಯೂ (ನಾ.) In l. of —ರ ಸ್ಥಾನದಲ್ಲಿ; —ಗೆ ಬದಲಾಗಿ.

Lieuténant ಲೆಫ್ಟಿನಂಟ್, (ಅಮೆ. ಸಂ.) ಲ್ಯೂಟೆ— [ನಾ., ಸಂಕ್ಷಿಪ್ತ: Lieut. (ಸ. ಪೂ. ಪ. ದಲ್ಲಿ Lt-)] ಮತ್ತೊಬ್ಬನ (ಸಾ., ಮೇಲಧಿಕಾರಿಯ) ಕೆಲಸ ನೋಡಲು ನಿಯಮಿತನಾದವನು; ಪ್ರತಿನಿಧಿ. Lord l. (Lord ನೋಡಿ). L., L. colonel, L. commander, L. general (ನಾವಿಕ ಸೈನ್ಯದ ಮತ್ತು ಭೂ ಸೈನ್ಯದ) ಹಲವರು ಸೇನಾಧಿಕಾರಿಗಳು. L.-governor(ship) ಗವರ್ನರ್ ಜೆನರಲ್ಲಿನ ಅಧೀನದಲ್ಲಿರುವ ಒಂದು ಚಿಕ್ಕ ಪ್ರಾಂತದ ಗವರ್ನರ್ (ಪದವಿ); ಲೆಫ್ಟಿನಂಟ್ ಗವರ್ನರ್ (ಪದವಿ). **Lieuténancy** (ನಾ.)

Life ಲೈಫ್ (ನಾ.; ಬ. ವ. Lives ಲೈವ್ಸ್) ಪ್ರಾಣ; ಜೀವ; ಜೀವನ; ಉಸಿರು; ಬಾಳು; ಬದುಕು; ಚೇತನ; ಚೈತನ್ಯ; ಸತ್ತ್ವ; ಜೀವಾಳ [A matter of l. & death ಒಬ್ಬನು ಬದುಕುವುದೂ ಸಾಯುವುದೂ ಅದನ್ನವಲಂಬಿಸಿರುವ ವಿಷಯ: ಸಾವು ಬದುಕಿನ ವಿಷಯ. The necessaries of l. (Necessary ನೋಡಿ); Staff of l. (Staff ನೋಡಿ). Come, bring, to l. ಮೂರ್ಛೆ ತಿಳಿ; ಪ್ರಜ್ಞೆಗೆ ತರು. Safe in, escape with, l. & limb ದೇಹಾಪಾಯವಿಲ್ಲದೆ, ಅಂಗಾಂಗಗಳು ಊನವಾಗದೆ, ಸುರಕ್ಷಿತವಾಗಿ (ತಪ್ಪಿಸಿಕೊ). Sell one's l. dearly (Sell ನೋಡಿ). Great sacrifice of l. ಹಲವು ಪ್ರಾಣಿಗಳು ಬಲಿಯಾಗಿ; ಹಲವರು ಕೊಲೆಯಾಗಿ. Have no regard for human l. ಲಕ್ಷ್ಯವಿಲ್ಲದೆ ಮನುಷ್ಯರನ್ನು ಕೊಲ್ಲು, ಸಾಯಗೊಡು. For one's, for dear, l. ಪ್ರಾಣವುಳಿಸಿಕೊಳ್ಳುವುದಕ್ಕಾಗಿ. Cannot for the l. of me (ಉತ್ಪ್ರೇಕ್ಷೆಯಲ್ಲಿ) ಪ್ರಾಣ ಹೋಗುವುದಾದರೂ —ಆರೆ. 'pon my l. ಪ್ರಾಣದಮೇಲೆ ಆಣೆಯಿಟ್ಟು]. ಶಕ್ತಿ; ಲವಲವಿಕೆ; ಚಟುವಟಿಕೆ; ಉತ್ಸಾಹ; ಉಲ್ಲಾಸ; ಗೆಲವು; ಹುಮ್ಮು; ಹುರುಪು; (ಜೀವ)ಕಳೆ; ಚೈತನ್ಯ ಪ್ರಭಾವ [Was the l., or l. & soul, of the party ಆ ಗೋಷ್ಠಿಯ ಜೀವವಾಗಿದ್ದನು. My l. (ಸಂಬೋಧನೆಯಲ್ಲಿ, ಪ್ರೀತಿಸೂಚಕವಾಗಿ) ನನ್ನ ಪ್ರಾಣವೇ!]. ಜೀವಿಗಳು; ಜೀವ ರಾಶಿ; ಜೀವ ಚಲನೆ (Very little l. to be seen).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜೀವಂತ ಮೂರ್ತಿ ; ಸಜೀವಾಕೃತಿ ; ಸಹಜಾಕಾರದ ವಿಗ್ರಹ [Taken from the l. ಜೀವನದಿಂದ ಎತ್ತಿತೆಗೆದ. As large as l., Here he is as large as l. (ಹಾಸ್ಯ ಪ್ರ.) ಇಗೋ! ಇಲ್ಲಿಯೇ ಪ್ರತ್ಯಕ್ಷವಾಗಿದ್ದಾನೆ, ಮೂರ್ತಿಮತ್ತಾಗಿದ್ದಾನೆ. Portray to the l. ಅಸಲಿಗೆ, ಮೂಲ ಪ್ರತಿಗೆ, ಸರಿಯಾಗಿ ರೂಪಿಸು, ವರ್ಣಿಸು]. ಜೀವಮಾನ ; ಹುಟ್ಟಿನಿಂದ ಸಾಯುವ ವರೆಗಿನ, ಹುಟ್ಟಿನಿಂದ ಇಲ್ಲಿಯ ವರೆಗಿನ, ಇಲ್ಲಿಂದ ಸಾಯುವ ವರೆಗಿನ, —ಜೀವಿತ ಕಾಲ [Have the time of one's l. (ಅಸಂ.) ಹಿಂದೆಂದೂ ಇಲ್ಲದಷ್ಟು ಭೋಗ ಪಡು. L. sentence, rent, annuity ಆಜೀವವಾಗಿ ಅನುಭವಿಸಬೇಕಾದ, —ಶಿಕ್ಷೆ, ಕೊಡಬೇಕಾದ ಕಂದಾಯ, ಪಡೆಯುವ ವರ್ಷಾಶನ. Lease for three lives (ನಮೂದಿಸಿರುವ) ಮೂವರಲ್ಲಿ ಹೆಚ್ಚುಕಾಲ ಬದುಕಿರುವವನ ಜೀವಮಾನದ ಪೂರ್ತ ನಡೆಯುವ ಭೋಗ್ಯ, ಗೇಣಿ. Insure one's l. ಜೀವ ವಿಮೆ ಮಾಡು. Expectation of l. ಒಂದು ನಿರ್ದಿಷ್ಟ ವಯಸ್ಸಿನ ಮನುಷ್ಯನು ಬದುಕಬಹುದೆಂದು ನಿರೀಕ್ಷಿಸಬಹುದಾದ ಸರಾಸರಿ ಕಾಲ : ಸರಾಸರಿ ಆಯುಷ್ಯ. A good, bad, l. ಈ ಸರಾಸರಿಗಿಂತ ಹೆಚ್ಚು ಕಾಲ, ಕಡಮೆಯ ಕಾಲ, —ಬದುಕುವವನು. New lease of l. (Lease[1] ನೋಡಿ)]. ಸಾವಿನಿಂದ ಸ್ವಲ್ಪದರಲ್ಲಿ ಪಾರಾಗಿ ಪಡೆದ ಹೊಸ ಹುಟ್ಟು, ಪುನರ್ಜನ್ಮ (ರೂಪ. ಸಹ) [Cat has nine lives ಬೆಕ್ಕು ಸುಲಭವಾಗಿ ಸಾಯುವುದಿಲ್ಲ. Batsman was given a l. (ಸಂದರ್ಭವೊದಗಿದರೂ ಆಟ ಕಳೆಯದೆಹೋಗಿ) ದಾಂಡುಗಾರನಿಗೆ ಆಟ ಉಳಿಯಿತು. With all the pleasure in l. ಜೀವನದಲ್ಲಿ ಸಂಪೂರ್ಣ ಆಸಕ್ತಿಯನ್ನು ಹೊಂದಿ. Nothing in l. ಏನೂ ಇಲ್ಲ. This l. ಐಹಿಕ ಜೀವನ ; ಈ ಬಾಳು. The other, future, eternal, everlasting, l. (ಸತ್ತ ಮೇಲಿನ) ಪರ (ಲೋಕದ), ಭವಿಷ್ಯದ, ಶಾಶ್ವತ,—ಜೀವನ. The simple l. (Simple ನೋಡಿ)]. (ಬರೆದಿಟ್ಟ) ಜೀವನ ಕಥೆ ; ಜೀವನ ಚರಿತ್ರೆ. ಜೀವಮಾನದ ಚಟುವಟಿಕೆಯ ಭಾಗ ; ಪ್ರಪಂಚ ವ್ಯವಹಾರ ಮತ್ತು ಭೋಗಗಳು (See l. ಎಲ್ಲರಲ್ಲಿಯೂ ನಿರಾತಂಕವಾಗಿ ಬೆರೆ. High, low, l. ಸಮಾಜದ ಮೇಲು ವರ್ಗದವರ, ಕೆಳ ವರ್ಗದವರ, —ಜೀವನ, ಸಾಮಾಜಿಕ ಪದ್ಧತಿಗಳು, ಸಂಪ್ರದಾಯಗಳು). (ದೇವ. ಶಾ.) ಮುಕ್ತಿ ; ಸದ್ಗತಿ ; ಉತ್ತಮಪಟ್ಟ ಸ್ಥಿತಿ ; ಶಾಶ್ವತ ಜೀವನ (= Eternal, everlasting, l.). **L. assurance** ಜೀವ ವಿಮೆ. **L.-belt** (ನೀರಿನಲ್ಲಿ ಮುಳುಗದಂತೆ ದೇಹವನ್ನು ತೇಲಿಸುವ ರಬ್ಬರು, ಬೆಂಡು, ಮೊ. ಲಘು ಪದಾರ್ಥಗಳಿಂದ ಮಾಡಿದ) ತೇಲು ನಡುಪಟ್ಟಿ. **L.-blood** ಜೀವಾಧಾರವಾದ ರಕ್ತ : ಜೀವರಕ್ತ ; ಚೈತನ್ಯ (ಕೊಡುವ) ಪ್ರಭಾವ. ತುಟಿಯ ಅಥವಾ ಕಣ್ಣು ರೆಪ್ಪೆಯ ಅನೈಚ್ಛಿಕವಾದ ಸೆಳೆತ. **L.-boat** (ಬಿರುಗಾಳಿ ಮಳೆಯಲ್ಲಿ ಪ್ರಾಣರಕ್ಷಣೆಗಾಗಿ ವಿಶೇಷ ರೀತಿಯಲ್ಲಿ ರಚಿಸಿದ) ಪ್ರಾಣ ರಕ್ಷಕ ದೋಣಿ. **L.-breath** ಜೀವದುಸಿರು ; ಪ್ರಾಣ ವಾಯು ; ಪ್ರೇರಣ ಶಕ್ತಿ, ಪ್ರಭಾವ ; ಆಧಾರಭೂತವಾದದ್ದು. **L.-buoy** (Buoy ನೋಡಿ). **L. estate** ಜೀವಾವಧಿ ಅನುಭವ ಮಾತ್ರವಿದ್ದು ಪರಭಾರೆ ಮಾಡಲಾಗದ ಆಸ್ತಿ : ಜೀವಾವಧಿ ಅನುಭೋಗದ ಆಸ್ತಿ. **L.-giving** (ದೈಹಿಕ ಅಥವಾ ಆಧ್ಯಾತ್ಮಿಕ) ಪ್ರಾಣ ದಾಯಕ, ಪ್ರಾಣ ಸಂರಕ್ಷಕ, ಪ್ರಾಣೋಜ್ಜೀವಕ. **L.-guard** (ಸೈನಿಕರಿಂದ ಕೂಡಿದ) ಅಂಗ ರಕ್ಷೆ ; ಮೈಗಾವಲು (ದಳ). **L. Guards** (ಇಂಗ್ಲೆಂಡಿನಲ್ಲಿ) ಅರಮನೆಯ ರಾವುತ ದಳ. **L.-Guardsman** —ದಳದ ಸಿಪಾಯಿ. **L. interest** ಜೀವಾವಧಿ ಅನುಭೋಗ(ದ ಆಸ್ತಿಗೆ ಹಕ್ಕು). **L.-jacket** (ತೇಲು ನಡುಪಟ್ಟಿಯ ರಚನೆಯಿರುವ) ತೇಲು ಕವಚ. **L.-line** ಪ್ರಾಣರಕ್ಷಣೆಗಾಗಿ ಉಪಯೋಗಿಸುವ ಹಗ್ಗ (ಉದಾ., ಪ್ರಾಣರಕ್ಷಣೆಯ ತೇಲುಬುರುಡೆಗೆ ಕಟ್ಟಿರುವ ಹಗ್ಗ). ನೀರಿನಲ್ಲಿ ಮುಳುಗಿರುವವನು ಸನ್ನೆ ಮಾಡಲಾಗುವ ಹಗ್ಗ. (ಸಾಮುದ್ರಿಕದಲ್ಲಿ) ಆಯುಷ್ಯ ರೇಖೆ. **Lifelong** ಜೀವಾವಧಿ(ಯ). **Life-office** ಜೀವ ವಿಮೆಯ ಕಚೇರಿ. **L. peer(age)** ಜೀವಾವಧಿ ಮಾತ್ರದ ಶ್ರೀಮಂತ (ಪದವಿ). **L.-preserver** ಪ್ರಾಣ ರಕ್ಷಕ ; (ಹಡಗು ಒಡೆದುಹೋದ, ಮೊ. ಸಂದರ್ಭಗಳಲ್ಲಿ ಮನುಷ್ಯನು) ನೀರಿನಲ್ಲಿ ಮುಳುಗಿಹೋಗದಂತೆ ತೇಲಿಸುವ ರಕ್ಷಣೆ. (ಸೀಸ ತುಂಬಿ) ಭಾರವಾಗಿ ಮಾಡಿದ ಕೊನೆಯುಳ್ಳ ಮೋಟು ದೊಣ್ಣೆ. **L.-size** ಸಹಜವಾದ ಆಕಾರ(ದಷ್ಟು). **L.-spring** ಜೀವ ಮೂಲ. **L.-strings** ಪ್ರಾಣ ಸೂತ್ರಗಳು. **L.-table** ಸರಾಸರಿ ಆಯುಷ್ಯದ, ಜೀವಮಾನದ, —ಗಣನ ಪಟ್ಟಿ : ಆಯುರ್ದಾಯ ಕೋಷ್ಟಕ. **Lifetime** (ಒಬ್ಬನ) ಜೀವಮಾನ, ಆಯುಸ್ಸು. **Life-work** ಜೀವಮಾನವೆಲ್ಲ ಶ್ರಮಿಸಿದ ಕಾರ್ಯ. **Lífeless** (ಗು.) ; **Lífelessly** (ಕ್ರಿ. ವಿ.) ; **Lífelessness** (ನಾ.) ; **Lífelike** (ಗು.) ಜೀವಿಯಂತೆ ಇರುವ ; ನಿಜವಾದ ವಸ್ತುವಿನಂತಿರುವ ; ಸಜೀವ ಪ್ರಾಣಿಯನ್ನು ಅನುಕರಿಸುವ. (-)**lived** (ಗು.) [ಮು., Long, short, -l. ದೀರ್ಘಾಯು(ವಾದ), ಅಲ್ಪಾಯು(ವಾದ)]. **Lífer** ಲೈಫರ್ (ನಾ.) (ಅಸಂ.) ಜೀವಾವಧಿ ಶಿಕ್ಷೆ(ಗೆ ಗುರಿಯಾದವನು)

Lífer. Life ನೋಡಿ.

Lift ಲಿಫ್ಟ್ (ಕ್ರಿ., ನಾ.) ಮೇಲಕ್ಕೆತ್ತು ; ಎತ್ತು ; ಎತ್ತಿಕೊ ; ಎತ್ತರಿಸು ; ಮೇಲೇರಿಸು ; ಉದ್ಧರಿಸು ; ನೆಗಪು (ಗ್ರಾಂ.) (ಸಾ., *up, off, out* ಉಪ. ದೊಡನೆ). ಭಾವೋತ್ಕರ್ಷ ಮಾಡು ; ಉತ್ಕೃಷ್ಟ ಮನೋವೃತ್ತಿಗೆ ಏರಿಸು. (ಕಣ್ಣು, ಮುಖ) ಮೇಲಕ್ಕೆತ್ತು ; ಮೇಲ್ಮುಖ ಮಾಡು [L. up or l. one's hands or heart (ಪ್ರಾರ್ಥನೆ, ಮೊ. ಗಳಲ್ಲಿ) ಕೈಯೆತ್ತು ; ಮನವೇರು ; ಕೈಯೆತ್ತಿ, ಮನ ಮುಟ್ಟ, ಪ್ರಾರ್ಥಿಸು]. [L. one's hand ಕೈಯೆತ್ತಿ ಆಣೆಯಿಟ್ಟುಕೊ. L. a hand (—ಮಾಡುವುದಕ್ಕೆ) ಕೊಂಚವಾದರೂ ಪ್ರಯತ್ನಿಸು , ಕೈಯಲುಗಿಸು. Never lifted a hand against one ಎಂದಿಗೂ ಒಬ್ಬನಮೇಲೆ ಕೈಮಾಡಲಿಲ್ಲ. L. up one's head (ರೋಗ ವಾಸಿಯಾಗಿ, ಸೋತುಹೋಗಿದ್ದು, ಅಪಮಾನಪಟ್ಟದ್ದು) ಮತ್ತೆ ತಲೆಯೆತ್ತು, ಚೇತನ ಪಡೆ ; ಚೇತರಿಸಿಕೊ. L. up another's head (ಬೈಬಲ್) (ಒಬ್ಬನಿಗೆ, ಮೊದಲಿನ) ಸ್ವಾತಂತ್ರ್ಯ, ಘನತೆ, —ಕೊಡು. L. up one's heel ಒದೆ. L. up one's horn ಹೆಬ್ಬಯಕೆಯುಂದಿರು ; ಅಹಂಕಾರಪಡು ; ಉದ್ಧತನಾಗಿರು ; ತಲೆ ತಿರುಗಿಹೋಗು. L. up a cry, one's voice ಗಟ್ಟಿಯಾಗಿ ಕೂಗಿಕೊ ; ಮೊರೆಯಿಡು]. (ಬಹು) ಎತ್ತರವಾಗಿರು (Church lifts its spire). (ಮು., ದನಗಳನ್ನು) ಕದಿ, ಕಳ್ಳತನದಿಂದ ಹೊಡೆದುಕೊಂಡು ಹೋಗು. (ಕವಿತೆಯ ಭಾಗ, ಸುದ್ದಿ, ಮೊ. ವನ್ನು) ಚೌರ್ಯ ಮಾಡು. (ಡೇರೆ, ಮೊ. ವನ್ನು) ತೆಗೆದು ಬಿಡು, ಇಳಿಸಿಬಿಡು. (ಉರುಳುಗಡ್ಡೆಯನ್ನು) (ನೆಲದಿಂದ) ಅಗೆದು ತೆಗೆ. (ಕ್ರಿಕೆಟ್ : ಚೆಂಡನ್ನು) ಬಹು ಎತ್ತರಕ್ಕೆ ಹೊಡೆ. (ತೇಲುತ್ತಿರುವ ಹಡಗು : ಅಲೆಯಮೇಲೆ) ಮೇಲೇರು. ಎತ್ತುವುದಕ್ಕಾಗು (Window will not l.). (ಮೋಡ, ಕಾವಳ, ಕತ್ತಲೆ) ಹರಿದುಹೋಗು, ಚೆದರಿಹೋಗು, ಅದೃಶ್ಯವಾಗು. (ನೆಲಗಟ್ಟು) ಎದ್ದುಕೊಂಡಿರು, ಉಬ್ಬಿಕೊ. (ನಾ.) ಎತ್ತುವುದು [Dead l. (Dead ನೋಡಿ). Give one a l. (ನಡಗೆಯಲ್ಲಿ ಹೋಗುತ್ತಿರುವವನನ್ನು) ಗಾಡಿಯಲ್ಲಿ ಸ್ಥಳ ಕೊಟ್ಟು ಕೂಡಿಸಿಕೊ. (ರೂಪ.) (ಒಬ್ಬನಿಗೆ) ಕೈ ನೀಡು, ಸಹಾಯ ಮಾಡು]. (ರೂಪ.) ಸಂಬಳದ ಹೆಚ್ಚಿಗೆ, ಬಡತಿ ; ಬೆಲೆಯ ಏರು. ಬೂಟ್ಸಿನ ಹಿಮ್ಮಡಿಯಲ್ಲಿಯ ಒಂದು ಪದರ ತೊಗಲು. ಜನರನ್ನೂ ವಸ್ತುಗಳನ್ನೂ ಒಂದು ಅಂತಸ್ತಿನಿಂದ ಮತ್ತೊಂದು ಅಂತಸ್ತಿಗೆ ಏರಿಸುವುದಕ್ಕೂ ಇಳಿಸುವುದಕ್ಕೂ ಉಪಯೋಗಿಸುವ ಯಂತ್ರ ಸಲಕರಣೆ : ಎತ್ತು ಯಂತ್ರ ; ಎತ್ತಿಗೆ. ನೆಲದ ಏರು, ಉಬ್ಬು. ಒಂದು ವಿಮಾನವನ್ನು ಭೂಮ್ಯಾಕರ್ಷಣಕ್ಕೆ ವಿರುದ್ಧವಾಗಿ ಎತ್ತುವ ಗಾಳಿಯ ಒತ್ತಡದ ಲಂಬಾಂಶ.

Lígament ಲಿಗಮೆಂಟ್ (ನಾ.) (ಪ್ರಾಚೀ. ಪ್ರ.) ಒಂದು ವಸ್ತುವನ್ನು ಅಥವಾ ಅದರ ಭಾಗವನ್ನು ಮತ್ತೊಂದರೊಡನೆ ಬಿಗಿಯುವಂಥದು ಅಥವಾ ಬಂಧಿಸುವಂಥದು ; ಕಟ್ಟು ; ಬಂಧ(ನ) ; (ಅಂ. ರ. ಶಾ.) ಮೂಳೆಗಳನ್ನು ಒಟ್ಟಿಗೆ ಬಿಗಿಯುವ, ದೃಢವಾದ ಮತ್ತು ಮೆತುವಾದ ಎಳೆಗಳ ರಚನೆಯ ಅಂಗಾಂಶದ, —ಮೋಟು ಬಂಧನಿ ; ಅಸ್ಥಿ ರಜ್ಜು ; (ಶಿಥಿಲವಾಗಿ) ಯಾವುದಾದರೂ ಅಂಗವನ್ನು ಅದರ ಸ್ಥಾನದಲ್ಲಿಟ್ಟಿರುವ ಎಂತಹದಾದರೂ ತೆಳುಚರ್ಮದ ಮಡಿಕೆ. **Ligaméntal** (ಗು.) ; **Ligaméntary** (ಗು.) ; **Ligaméntous** (ಗು.) ಅಸ್ಥಿಬಂಧನಿಯಂಥ ; ಅಸ್ಥಿಬಂಧನಿಯ ; —ರಚನೆಯುಳ್ಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ligáte ಲೈಗೇಟ್ (ಕ್ರಿ. ಸಕ.) (ಶಸ್ತ್ರವೈದ್ಯ) (ರಕ್ತ ಹರಿಯುತ್ತಿರುವ ಅಪಧಮನಿ, ವೊ. ನ್ನು) ಕಟ್ಟು, ಬಿಗಿ, ಬಂಧಿಸು. **Ligátion** (ನಾ.); **Lígature** ಲಿಗಚ್ಯುರ್, —ಚರ್ (ನಾ., ಕ್ರಿ. ಸಕ.) ಕಟ್ಟು; ಪಟ್ಟಿ (ಮು., ರಕ್ತ ಹರಿಯುತ್ತಿರುವ ಅಪಧಮನಿಯನ್ನು ಕಟ್ಟುವುದು, ಸ್ಫೋಟಕವನ್ನು, ಗ್ರಂಥಿಯನ್ನು, ಬಗಿಯುವುದು, ವೊ. ಕ್ಕೆ ಉಪಯೋಗಿಸುವ) ಬಂಧನಿ. ಒಟ್ಟುಗೂಡಿಸುವಂಥದು; ಕಟ್ಟುವುದು; ಬಂಧನ; ಬಂಧಿಸುವುದು. (ಮುದ್ರಣ) ಒಂದೇ ಮೊಳೆಯಲ್ಲಿ ಒಟ್ಟುಗೂಡಿದ ಎರಡು ಅಥವಾ ಹೆಚ್ಚು ಅಕ್ಷರಗಳು: ಜೋಡು ಅಕ್ಷರ(ಗಳು) (ಉದಾ., ff, ffi, ffl) (ಕ್ರಿ.) ಬಂಧನಿಯಿಂದ ಕಟ್ಟು, ಬಂಧಿಸು.

Light[1] ಲೈಟ್ (ನಾ.) ಬೆಳಕು; ಜ್ಯೋತಿ; ಪ್ರಕಾಶ; ಹೊಳಪು; ಪ್ರಭೆ; ಕಾಂತಿ; ತೇಜಸ್ಸು. [Northern lights = Aurora Borealis (Aurora ನೋಡಿ). Zodiacal l. (Zodiac ನೋಡಿ). In a good l. ಒಳ್ಳೆಯ ಬೆಳಕಿನಲ್ಲಿ; ಚೆನ್ನಾಗಿ ಕಾಣುವಂತೆ. Stand in one's l. (ಬೆಳಕಿಗೆ ಅಡ್ಡವಾಗಿ ನಿಂತು) ಒಬ್ಬನಿಗೆ ಬರುತ್ತಿದ್ದ ಬೆಳಕನ್ನು ತಡೆ. (ರೂಪ.) (ಒಬ್ಬನಿಗಿರುವ) ಅವಕಾಶಗಳಿಗೆ ಅಡ್ಡಿಯಾಗಿ ಬರು]. (ಒಬ್ಬನ) ಕಣ್ಣಿನ ತೇಜಸ್ಸು. ಅನುಗ್ರಹ; ಪ್ರಸಾದ [L. of one's countenance ಒಬ್ಬನ ಹಸನ್ಮುಖ; ಪ್ರಸನ್ನದೃಷ್ಟಿ; ಅನುಗ್ರಹ (ಸಾ., ವ್ಯಂಗ್ಯವಾಗಿ)]. ಸೂರ್ಯನ (ಪ್ರತ್ಯಕ್ಷ, ವ್ಯಾಪಿತ, ಪ್ರತಿಫಲತ) ಕಿರಣಗಳು; ಹಗಲ ಬೆಳಕು [See the l. ಹುಟ್ಟು; ಜನಿಸು. Come, bring, to l. ಪ್ರಕಾಶಕ್ಕೆ ಬರು, ತರು]. (ಕಾವ್ಯ) ಕಣ್ಣದೃಷ್ಟಿ; (ಅನಂ., ಬ. ವ. ದಲ್ಲಿ) ಕಣ್ಣುಗಳು. ಬೆಳಗುವ ವಸ್ತು [L. of one's eyes (ಒಬ್ಬನ) ಪ್ರೇಮಾತಿಶಯಕ್ಕೆ ಪಾತ್ರನಾದವನು; ಕಣ್ಣ ಬೆಳಕು]. ಸೂರ್ಯ ಅಥವಾ ಇತರ ಆಕಾಶ ಕಾಯ. ಬೆಳಗುವ ಮೋಂಬತ್ತಿ, ದೀಪ, ವೊ. ವು; (ಸಾಮೂಹಿಕವಾಗಿ) (ಒಂದು ಸ್ಥಳವನ್ನು ಬೆಳಗುವ) ದೀಪಗಳು, ವೊ. ವು; (ಮು., ಹಡಗಿನ ಅಥವಾ ಸಮುದ್ರದ ಬೆಳಕು ಮನೆಯ) ಗುರುತಿನ ಬೆಳಕು. (ಸಮುದ್ರದ) ಬೆಳಕುಮನೆ; ಸಮುದ್ರ ದೀಪಗೃಹ. (ರೂಪ.) ತೇಜೋವಂತ; ಪ್ರಸಿದ್ಧ ಪುರುಷ; ಮಹಿಮಾನ್ವಿತ (ಸಾ., Shining l.). ಮನಃಪ್ರಕಾಶ; ಅಂತಃಸ್ಫೂರ್ತಿ; ವಿಶದೀಕರಣ (Throw, shed, l. upon ಸ್ಪಷ್ಟಪಡಿಸು; ವಿಶದೀಕರಿಸು); ಜ್ಞಾನೋದಯ [By the l. of nature ಸ್ವಭಾವ ಜ್ಞಾನದಿಂದ (ಶ್ರುತಿವಾಕ್ಯದ ಅಥವಾ ಬೋಧನೆಯ ಸಹಾಯದಿಂದಲ್ಲ). Men of l. & leading [Lead² (ಕ್ರಿ.) ನೋಡಿ]. We have many new lights upon it since then ಅಲ್ಲಿಂದೀಚೆಗೆ, ಆ ಸಂಬಂಧದಲ್ಲಿ, ಅನೇಕ ಹೊಸ ವಿಷಯಗಳು ಪ್ರಕಾಶಕ್ಕೆ ಬಂದಿವೆ. Do one's best according to one's lights ತನ್ನ ತಿಳಿವಳಿಕೆಯಿದ್ದಷ್ಟು, ತನ್ನ ತಿಳಿವಳಿಕೆಗೆ ಬಂದಷ್ಟು, —ಮಾಡು. In the l. of these facts ಈ ಅಂಶಗಳಿಂದ ವಿಶದಪಟ್ಟ ತಿಳಿವಳಿಕೆಯಿಂದ. He appeared in the l. of a scoundrel ಅವನು ಪರಮ ನೀಚನಂತೆ ಕಂಡುಬಂದನು. Place thing in a good l. ಒಳ್ಳೆಯ ಅಭಿಪ್ರಾಯ ಬರುವಂತೆ ತೋರ್ಪಡಿಸು]. (ದೇವ. ಶಾ.) ದಿವ್ಯಜ್ಯೋತಿ; ದಿವ್ಯ ತತ್ತ್ವದಿಂದಾಗುವ ಆತ್ಮಪ್ರಕಾಶ. (ಬೆಳಕು ಬರುವುದಕ್ಕಾಗಿ ಗೋಡೆಯಲ್ಲಿ ಮಾಡಿರುವ) ಕಂಡಿ, ತೆರಪು; ಕಿಟಕಿ; ಗವಾಕ್ಷ. ಸಸ್ಯಗೃಹದಲ್ಲಿ ಒಂದು ಪಕ್ಕದ ಅಥವಾ ಛಾವಣಿಯ ಗಾಜುಹಾಕಿದ ಭಾಗ. (ವರ್ಣಚಿತ್ರ) ಬೆಳಗುವಂತೆ ಮಾಡಿದ ಚಿತ್ರದ ಮೇಲ್ಮೈ; (ಚಿತ್ರದ) ಪ್ರಕಾಶಿತ ಭಾಗ; ಬೆಳಕು ಬಿದ್ದಂತೆ ತೋರಿಸಿರುವ ಚಿತ್ರದ ಭಾಗ. (ನ್ಯಾ. ಶಾ.) (ನೆರೆಯವನು ಕಾನೂನು ಮೇರೆಗೆ ತಡೆಯಬಾರದ) ಕಿಟಕಿಯ ಬೆಳಕು [Ancient Lights (Ancient ನೋಡಿ)]. (ಬೆಂಕಿಹೊತ್ತಿಸುವ) ಉರಿ, ಕಿಡಿ [Strike a l. (ಬೆಂಕಿಕಡ್ಡಿ, ವೊ. ನ್ನು ಗೀಚಿ, ಘರ್ಷಣೆ ಮಾಡಿ) ಬೆಳಕು ಹೊತ್ತಿಸು]. ಉರಿಯೆಬ್ಬಿಸಲು ಉಪಯೋಗಿಸುವ ವಸ್ತು; ಉರಿಹೊತ್ತಿಸುವ ತೆಳು ಚಕ್ಕೆ, (ಕಾಗದ, ವೊ. ಗಳ) ಸುರುಳಿ; ಮೋಂಬತ್ತಿ; ದೀಪದ ಕಡ್ಡಿ. L. due, duty ಸಮುದ್ರದ ಬೆಳಕುಮನೆಗಳನ್ನು ನಡಸುವುದಕ್ಕಾಗಿ ಹಡಗುಗಳ ಮೇಲೆ ಹಾಕುವ ತೆರಿಗೆ: ಬೆಳಕುಮನೆಯ ತೆರಿಗೆ. **Light-house** (ಹಡಗುಗಳಿಗೆ ಸೂಚನೆ ಕೊಡುವುದಕ್ಕಾಗಿ ಅಥವಾ ದಾರಿ ತೋರಿಸುವುದಕ್ಕಾಗಿ ಎತ್ತರವಾಗಿ ಕಟ್ಟಿರುವ) ದೀಪದ ಮನೆ; ಸಮುದ್ರದ ಬೆಳಕು ಮನೆ. **Light-ship** ಸಂಜ್ಞಾ ದೀಪಗಳನ್ನುಳ್ಳ ಬಂಧಿಸಿದ ಅಥವಾ ಲಂಗರು ಬಿಟ್ಟಿರುವ ಹಡಗು; ಬೆಳಕಿನ ಹಡಗು. **Líghtless** (ಗು.); **Líghtsome**[1] (ಗು.) (ವಿರ. ಪ್ರ.) ಬೆಳಕು ಕೊಡುವ; ಬೆಳಗುವ; ಚೆನ್ನಾಗಿ ಬೆಳಕು ಬೀಳಿಸಿದ; ಪ್ರಕಾಶಮಾನವಾದ.

Light (ಗು.) ಬೆಳಕು ಚೆನ್ನಾಗಿ ಬೀಳುವ; ಕತ್ತಲಲ್ಲದ. (ಸಾ., ಬಣ್ಣ ಸೂಚಿಸುವ ಗುಣವಾಚಕಗಳಿಗೂ ನಾಮಪದಗಳಿಗೂ ಪೂರ್ವಪದವಾಗಿ ಸೇರಿಸಿದಾಗ) ತೆಳು ಬಣ್ಣದ (ಉದಾ., L.-blue ribbon). **Líghtish**[1] (ಗು.) ಸ್ವಲ್ಪಮಟ್ಟಿಗೆ ಬೆಳಕಿರುವ.

Light [ಕ್ರಿ. (ಭೂತ. ಮತ್ತು ಭೂ. ಕೃ. Lit *or* Lighted)] (ದೀಪ, ಬೆಂಕಿ, ದಾಹ್ಯವಸ್ತು, ವೊ.) ಹೊತ್ತಿಸು, ಹೊತ್ತಿಕೊ [*Up* ಉಪ. ದೊಡನೆ. L. up¹ ಹೊಗೆ ಸೇದಲು ಚುಂಗಾಣಿಯನ್ನು ಹೊತ್ತಿಸು; (ಸಂಜೆಗೆ ಬೀದಿಯಲ್ಲಿ, ಕೊಠಡಿಯಲ್ಲಿ) ದೀಪಗಳನ್ನು ಹಚ್ಚು]. (ಉರುವಲು, ದೀಪ, ವೊ.) ಉರಿ ಹೊತ್ತು, ಉರಿಯಲು ಆರಂಭಿಸು. (ಕೊಠಡಿ, ಬೀದಿ, ವೊ. ಗಳಿಗೆ) ಬೆಳಕು ಕೊಡು; ಬೆಳಗಿಸು (L. up² ಬೆಳಕಿನಿಂದ ಪ್ರಕಾಶ ಮಾಡು, ಎದ್ದು ಕಾಣುವಂತೆ ಮಾಡು, ಗಮನ ಸೆಳೆಯುವಂತೆ ಮಾಡು). (ಕಣ್ಣು, ಮುಖ, ವೊ.) ಉತ್ಸಾಹದಿಂದ ಕಳೆಯೇರು(ರಿಸು). ದೀಪ ಹಿಡಿದು (ಒಬ್ಬನಿಗೆ, ಅವನ) ಹಾದಿ, ಸನ್ನಿವೇಶ, —ತೋರಿಸು. (-) **líghter**[1] (ನಾ.); **Líghten**[1] ಲೈಟ್‌ನ್ (ಕ್ರಿ.) ಬೆಳಕು ಬೀಳಿಸು; ಪ್ರಕಾಶಗೊಳಿಸು. (ಮುಖ, ಕಣ್ಣು, ಆಕಾಶ, ವೊ.) ಹೊಳಪೇರು, ಬೆಳಗು; ಥಳಥಳಿಸು; ಮಿಂಚು. (ಆಕಾಶ, ಮೋಡ) ಮಿಂಚು, ಸಿಡಿಲು, — ಹೊಡೆ. (ರೂಪ.) (ತಿರಸ್ಕಾರ, ವೊ.) ಸೂಸು, ಚಿಮ್ಮು.

Light[2] ಲೈಟ್ (ಗು.) ಭಾರ ಕಡಮೆಯ; ಭಾರವಲ್ಲದ; ಹಗುರ(ವಾದ); ಲಘುವಾದ (L.-armed ಲಘುವಾದ ಸಜ್ಜನ್ನೂ ಆಯುಧಗಳನ್ನೂ ಉಳ್ಳ). ತೂಕ(ದಲ್ಲಿ) ಕಡಮೆಯಾದ; ತೂಕ ಕುಂದಿದ (L. coin, gold, etc.). ಕಡಮೆಯ ವಿಶಿಷ್ಟಗುರುತ್ವವುಳ್ಳ; ಕಡಮೆಯ ಹೇರುಳ್ಳ; ಕಡಮೆಯ ಹೇರಿಗಾಗಿ ಉದ್ದೇಶಿಸಿದ [L. ship ಹೇರಿಲ್ಲದ ಹಡಗು. L. waterline ಖಾಲಿ ಹಡಗಿನ ನೀರುಮಟ್ಟದ ಗೆರೆ. L. engine (ಬಂಡಿಸಾಲಿಲ್ಲದ) ಬರಿ ಎಂಜಿನ್ನು. L. railway ಹೆಚ್ಚು ಭಾರವಿಲ್ಲದ ಹೊರೆಯ ಸಾಗಣೆಗಾಗಿ ಹಾಕಿದ ರೈಲುಮಾರ್ಗ: ಹಗುರ ರೈಲುಮಾರ್ಗ. L. horse ಲಘು ಆಯುಧಗಳುಳ್ಳ ಕುದುರೆಯ ದಳ, ರಾವುತರು. L. horseman ಈ ದಳದ ಸಿಪಾಯಿ. L. infantry ಲಘು ಆಯುಧಗಳನ್ನು ಹೊತ್ತಿರುವ ಪದಾತಿದಳ. L. marching order ಆಯುಧಗಳನ್ನೂ ಮದ್ದು ಗುಂಡುಗಳನ್ನೂ ಮಾತ್ರ ತೆಗೆದುಕೊಂಡು ಹೋಗುವ ಸೈನ್ಯ ಪ್ರಯಾಣ]. (ಹಡಗು, ಬಂಡಿ, ವೊ. ಗಳ ವಿಷಯದಲ್ಲಿ) (ಸ್ವಲ್ಪ ಹೇರಿಗೂ ಹೆಚ್ಚು ವೇಗಕ್ಕೂ ಅನುಕೂಲಿಸುವಂತೆ) ಹಗುರವಾಗಿ ರಚಿಸಿದ; (ಕಟ್ಟಡ) ಹಗುರವಾದ, ಒಡ್ಡೊಡ್ಡಾಗಿಲ್ಲದ, ಅಂದವಾದ. ಮೆತುವಾಗಿ ಕಾರ್ಯ ಮಾಡುವ; ಲಘುವಾಗಿ ಪ್ರಯೋಗಿಸಿದ; ತೀವ್ರವಲ್ಲದ [L. hand ಕರ ಕೌಶಲ; ಕುಶಲತೆಯಿಂದ ನಡಸಿದ ವ್ಯವಹಾರ, ಆಡಳಿತ]. ಗಡುಸಲ್ಲದ; ಜಿಗುಟಿಲ್ಲದ. **L.-hánded** (ಗು.) ಸೂಕ್ಷ್ಮ ಸ್ಪರ್ಶದ; ಕರ ಕೌಶಲದ. ಬಹಳ ಸ್ವಲ್ಪ ಹೇರಿನ. (ಹಡಗು, ಕಾರ್ಖಾನೆ) ಕಡಮೆಯ ಸಂಖ್ಯೆಯ ಕೆಲಸಗಾರರನ್ನುಳ್ಳ. **L.-hándedly** (ಕ್ರಿ. ವಿ.); **L.-hándedness** (ನಾ.). Make light of ಲಘುವಾಗೆಣಿಸು; ಅಲ್ಪವೆಂದು ಭಾವಿಸು. L. accent ಲಘು ಸ್ವರಭಾರ. L. beer ಸಾರ ಕಡಮೆಯಾದ ಬಿಯರ್ ಮದ್ಯ. L. blow ಮೆತ್ತನೆಯ ಏಟು. L.-bob (Bob⁴ ನೋಡಿ). L. bread ಸರಿಯಾಗಿ ಉಬ್ಬಿದ, ಗಡುಸಲ್ಲದ, ಗರುಗಾದ, ಗೋಧಿಹಿಟ್ಟಿನ ರೊಟ್ಟಿ. Is he not l. of brain ಅವನಿಗೆ ಬುದ್ಧಿಭ್ರಮಣೆಯಲ್ಲವೋ? Woman of l. character ನಡತೆ ಸರಿಯಿಲ್ಲದ ಹೆಂಗಸು. L. error ಪ್ರಮಾದವಲ್ಲದ ತಪ್ಪು, ದೋಷ. A girl's l. fancy ಹುಡುಗಿಯ ಚಂಚಲ ಚಿತ್ತ. L. fingers (ಕಳ್ಳತನದಲ್ಲಿ) ಬಹಳ ಸೂಕ್ಷ್ಮಸ್ಪರ್ಶವುಳ್ಳ ಕೈ; **L.-fíngered** (ಗು.). L. food ಸುಲಭವಾಗಿ ಜೀರ್ಣವಾಗುವ ಆಹಾರ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Light-foot (ಗು.) ಎಗುರೆಗುರಿ ಓಡುವ; ಚುರುಕು ಕಾಲಿನ ; ಲಘು, ತೀವ್ರ, — ಗತಿಯ. L. of foot ಕಾಲ್ಚುರುಕುಳ್ಳ ; ಹಗುರಗಾಲನ. **L.-headed** (ಗು.) ತಲೆ ಕೆಟ್ಟುಹೋದ; ಬುದ್ಧಿಭ್ರಮಣೆಯ ; ಹುಡುಗಾಟಿಕೆಯ ; ಚಂಚಲ ಚಿತ್ತದ. **L.-headedness** (ನಾ.). L. heart ನಿರಾತಂಕವಾದ ಮನಸ್ಸು (Did it with a l. heart ಮನಸ್ಸಿಗೆ ಭಾರವಿಲ್ಲದೆ, ನಲಿಯುತ್ತ, ಆ ಕೆಲಸವನ್ನು ಮಾಡಿದೆನು ; ಮುಂದಾಲೋಚನೆಯಿಲ್ಲದೆ ದುಡುಕಿ ಮಾಡಿದೆನು). **L.-hearted** (ಗು.) ; **L.-heartedly** (ಕ್ರಿ. ವಿ.) ; **L.-heartedness** (ನಾ.). **L.-heeled** (ಗು.) ಚುರುಕುಗಾಲಿನ. L. literature (ಮನರಂಜನೆಗಾಗಿ, ವಿನೋದಕ್ಕಾಗಿ, ರಚಿಸಿದ) ಲಘು ಸಾಹಿತ್ಯ. **L.-o'-love** ಚಂಚಲಚಿತ್ತೆ ; ಗುಡಿಸೆಟ್ಟಿ. **Light-minded** (ಗು.) (ಚಿಂತೆ, ಮೊ. ಇಲ್ಲದೆ) ಹಗುರ ಮನಸ್ಸುಳ್ಳ; ಹುಡುಗಾಟಿಕೆಯ. **L.-mindedness** (ನಾ.). A light vain person ಗಂಭೀರವಿಲ್ಲದ ಡಂಭಗಾರ. L. punishment, taxation, rule ಸುಲಭವಾಗಿ ಸಹಿಸಬಹುದಾದ, ವಹಿಸಬಹುದಾದ, ಅನುಸರಿಸಬಹುದಾದ, —ಶಿಕ್ಷೆ, ತೆರಿಗೆ, ನಿಯಮ. **L.-skirts** ಕಚ್ಚೆ ಹರುಕಿ ; ದುರ್ನಡತೆಯ ಹೆಂಗಸು. L. sleeper ಲಘುನಿದ್ದೆ ಮಾಡುವವನು. L. soil ನೀರು ಹೀರುವ, ಪುಡಿ ಪುಡಿಯಾಗುವ, —ನೆಲ. L. step ಹಗುರ ಹೆಜ್ಜೆ ; ಮೃದು ಪದ ನ್ಯಾಸ. L. touch ಮೃದು ಸ್ಪರ್ಶ. **L.-weight** (ಗು., **L. w.** ನಾ.) ಸರಾಸರಿಗಿಂತ ಕಡಮೆಯ ತೂಕದ (ಮನುಷ್ಯ, ಪ್ರಾಣಿ) (ಮು., ಮುಷ್ಟಿಕಾಳಗದಲ್ಲಿ ೧೪೦ ಪೌಂಡಿಗಿಂತ ಕಡಮೆಯ ತೂಕದವನು). L. wind ಮೆಲು ಗಾಳಿ ; ಮಂದ ಮಾರುತ. **Lightly** (ಕ್ರಿ. ವಿ.) ; **Lightness** (ನಾ.) ; **Lighten**[2] ಲೈಟನ್ (ಕ್ರಿ.) ಭಾರವಿಳಿಸು ; ಹಗುರವಾಗು ; — ಮಾಡು ; (ರೂಪ.) ಉಪಶಮನ ಮಾಡು. (ಹಡಗು, ಮೊ. ಗಳ) ಭಾರ ಕಡಮೆಮಾಡು ; (ಹಡಗು) ಭಾರವಿಳಿಸಿಕೊ ; ಹಗುರವಾಗು ; (ಮನಸ್ಸು, ಮೊ. ಗಳ) ಚಿಂತಾಭಾರವಿಳಿಸು ; ಮನಸ್ಸಮಾಧಾನ ಮಾಡು ; (ಮನಸ್ಸು, ಮೊ. ವು) ಸಮಾಧಾನ ಹೊಂದು. **Lighter**[2] (ನಾ., ಕ್ರಿ. ಸಕ.) ಹಡಗುಗಳಿಂದ ಸಾಮಾನು ತರುವುದಕ್ಕೂ ಹಡಗುಭರ್ತಿಗೆ ಸಾಮಾನು ಒಯ್ಯುವುದಕ್ಕೂ ರೇವಿನಿಂದ ಸಾಮಾನು ಸಾಗಿಸುವುದಕ್ಕೂ ಉಪಯೋಗಿಸುವ ಚಪ್ಪಟೆ ತಳದ ದೋಣಿ : ಹಗುರವಾದ ಸಾಮಾನುದೋಣಿ. (ಕ್ರಿ.) ಹಗುರ ದೋಣಿಯಲ್ಲಿ (ಸಾಮಾನು) ಸಾಗಿಸು. **Lighterage** (ನಾ.) ಹೀಗೆ ಸಾಗಿಸುವುದು ; ಇದಕ್ಕಾಗಿ ಕೊಡಬೇಕಾದ ರುಸುಮು. **Lightish**[2] (ಗು.) ಸ್ವಲ್ಪ (ಮಟ್ಟಿಗೆ) ಹಗುರವಾದ. **Lightsome**[2] (ಗು.) (ರೂಪದಲ್ಲಿ) ಹಗುರವಾದ ; ಲಲಿತವಾದ ; ಅಂದವಾದ. ಹರ್ಷ ಚಿತ್ತವುಳ್ಳ ; ಉಲ್ಲಾಸಶೀಲನಾದ ; ವಿನೋದಶೀಲನಾದ ; ಚಟುವಟಿಕೆಯುಳ್ಳ. **Lightsomely** (ಕ್ರಿ. ವಿ.) ; **Lightsomeness** (ನಾ.) ; **Lightwood** (ನಾ.) ಹಗುರ ದಾರುವಿನ ಮರ(ದ ಜಾತಿ) ; ಹಗುರ ದಾರು ಮರ ; ಪ್ರಕಾಶದಿಂದ ಉರಿಯುವ ದಾರುವುಳ್ಳ ಮರ(ದ ಜಾತಿ)

Light (ಕ್ರಿ. ವಿ.) ಹಗುರವಾಗಿ ; ಮೆತುವಾಗಿ ; ಸೂಕ್ಷ್ಮವಾಗಿ (ಮು., tread, sleep, l. ಹಗುರವಾಗಿ ಹೆಜ್ಜೆಯಿಡು, ನಿದ್ದೆಮಾಡು). L. come l. go ಸುಲಭವಾಗಿ ಬಂದದ್ದು ಸುಲಭವಾಗಿ ಹೋಗುವುದು.

Light[3] ಲೈಟ್ (ಕ್ರಿ. ; ಭೂತ., ಭೂ. ಕೃ. Lit or Lighted) (ನಾವೆ) (ಹಗ್ಗ, ಮೊ. ನ್ನು) ಉದ್ದಕ್ಕೂ ಎತ್ತು ; (ಹಗ್ಗ, ಮೊ. ನ್ನು) ಎಳೆಯಲು ಕೈ ನೀಡು, ಸಹಾಯ ಮಾಡು. (ಪ್ರಾಚೀ. ಪ್ರ.) ಇಳಿ, ಕೆಳಗಿಳಿ, ಕೆಳಕ್ಕೆ ಬರು, ಎರಗು ; ಅಕಸ್ಮಾತ್ತಾಗಿ ಸಂಧಿಸು, ಬರು [(*Up*) *on* ಉಪ. ದೊಡನೆ]

Lightning ಲೈಟ್ನಿಂಗ್ (ನಾ.) ಮೋಡಕ್ಕೂ ಮೋಡಕ್ಕೂ ಅಥವಾ ಮೋಡಕ್ಕೂ ಭೂಮಿಗೂ ಹೊಳಪಿನಿಂದ ಹರಿಯುವ ವಿದ್ಯುತ್ಪ್ರವಾಹ : ಮಿಂಚು ; ಸಿಡಿಲು. Forked, chain or chained, l. ಬಳ್ಳಿ ಮಿಂಚು ; ವಿದ್ಯುಲ್ಲತೆ ; ಸೆಳೆ ಮಿಂಚು ; ನರಪಣಿ ಮಿಂಚು ; ಕೋಲ್ಮಿಂಚು. Sheet l ಚೆದರಿದ ಪ್ರಕಾಶವುಳ್ಳ ಮಿಂಚು ; ಹರಡು ಮಿಂಚು. Summer, heat, l. ಗುಡುಗು ದನಿ ಕೇಳಿಸದ ಹರಡು ಮಿಂಚು (ದೂರದ ಬಿರುಗಾಳಿಮಳೆಯ ಫಲವಾಗಿ). Like l. ವಿದ್ಯುದ್ವೇಗದಿಂದ ; ಅತ್ಯಂತ ವೇಗದಿಂದ. With l. speed. **L.-rod** = **L.-conductor** [Conduct (ಕ್ರಿ.) ನೋಡಿ]. L. strike ಮೊದಲೇ ತಿಳಿಸದೆ ಥಟ್ಟನೆ ಹೂಡಿದ ಕೂಲಿಕಾರರ ಮುಷ್ಕರ ; ವಿದ್ಯುದ್ವೇಗದ ಮುಷ್ಕರ.

Lights ಲೈಟ್ಸ್ (ನಾ., ಬ. ವ.) (ಮು., ಬೆಕ್ಕು, ನಾಯಿ, ಮೊ. ಕ್ಕೆ ಆಹಾರವಾಗಿ ಉಪಯೋಗಿಸುವ) ಕುರಿ, ಹಂದಿ, ಎತ್ತು, ಮೊ. ಗಳ ಶ್ವಾಸಕೋಶಗಳು.

Ligneous ಲಿಗ್ನಿಯಸ್ (ಗು.) (ಸಸ್ಯಗಳ ವಿಷಯದಲ್ಲಿ) ದಾರು (ಭಾಗ) ಹೆಚ್ಚಾಗಿರುವ (ಎದುರು ಪದ: Herbaceous); ದಾರುಮಯ. **Ligni-** (ಸ. ಪೂ. ಪ.) ದಾರು —. **Ligniferous** (ಗು.) ದಾರುವುಳ್ಳ ; ದಾರು ಬೆಳೆಯುವ. **Ligniform** (ಗು.) ದಾರು ರೂಪದ. **Lignify** (ಕ್ರಿ.) ದಾರುಮಯ, —ಆಗು, ಮಾಡು. **Lignification** (ನಾ.) ; **Lignite** ಲಿಗ್ನೈಟ್ (ನಾ.) ದಾರುರಚನೆಯ ಗುರುತು ಕಾಣುವ ಒಂದು ಬಗೆಯ ಕಂದು ಕಲ್ಲಿದ್ದಲು.

Lignite. **Ligneous** ನೋಡಿ.

Like[1] ಲೈಕ್ [ಗು. ; ತರರೂಪ More l., ತಮರೂಪ Most l. ; (ವಿರ. ಪ್ರ. ಅಥವಾ ಕಾವ್ಯ) ತರರೂಪ -er, ತಮರೂಪ -est ; ಉಪ., ಕ್ರಿ. ವಿ. (ಪ್ರಾಚೀ. ಪ್ರ.) ; ಸಂ. ಅವ್ಯ. (ಗ್ರಾಮ್ಯ) ; ನಾ.] ಅಂತಹ ; ಅಂಥ ; ಅದೇ ಬಗೆಯ ; ಸದೃಶ ; (ಯಾವುದಾದರೊಂದನ್ನು, ಮೂಲ ವಸ್ತುವನ್ನು, ಅಥವಾ ಒಂದನ್ನೊಂದು) ಹೋಲುವ [In l. manner or wise ಅಂತಹದೇ ರೀತಿಯಲ್ಲಿ. On this & the l. subjects ಇದರ ಮತ್ತು ಇಂತಹ ವಿಷಯಗಳಮೇಲೆ. As l. as two peas (Pea ನೋಡಿ). L. father l. son ತಂದೆಯಂತೆ ಮಗ. L. master l. man ದಣಿಯಂತೆ ಆಳು ; ಯಥಾ ರಾಜಾ ತಥಾ ಪ್ರಜಾಃ. The picture is not l. ಮೂಲದಂತೆ ಚಿತ್ರವಿಲ್ಲ. L. signs (ಬೀ. ಗ.) (ಎರಡೂ ಧನಚಿಹ್ನೆ ಅಥವಾ ಎರಡೂ ಋಣಚಿಹ್ನೆ) : ಸಮಾನ ಚಿಹ್ನೆಗಳು. L. quantities (ಬೀ. ಗ.) ಒಂದೇ ಅಕ್ಷರಸಂಜ್ಞೆಯಿಂದ ನಿರೂಪಿತವಾದ ಪರಿಮಾಣಗಳು ; ಸಮಾನ ಸಂಜ್ಞಾ ಪರಿಮಾಣಗಳು. Liker to God than man. Nothing l. leather (Leather ನೋಡಿ). What is he, it, l. ? ಅವನು ಹೇಗೆ ಕಾಣುತ್ತಾನೆ ? ಅದು ಹೇಗಿದೆ ? Look l. (—ಅಂತೆ) ಕಾಣು, ತೋರು. L. that (ಆಗತಾನೆ ನೋಡಿದುದರ, ಹೇಳಿದುದರ) ಹಾಗೆ ; ಅದರಂತೆ. Something l. 1,000 rupees ಹತ್ತಿರ ಹತ್ತಿರ ೧,೦೦೦ ರೂಪಾಯಿ. Something l. a day (like ಪದವನ್ನು ಒತ್ತಿ ಹೇಳಿದಾಗ, ಬಳ. ಮಾ.) ಬಹು ಸೊಗಸಾದ ದಿನ. This is something l. ಇದು ಸ್ವಲ್ಪಮಟ್ಟಿಗೆ, ಸರಿಸುಮಾರಾಗಿ, (—ಅಂತೆ) ಇದೆ, (—ನ್ನು) ಹೋಲುತ್ತದೆ. Nothing l. as good ಅದರಷ್ಟು ಚೆನ್ನಾಗಿಲ್ಲ. That is l. your impudence ಅದು ನಿನ್ನ ಧಾರ್ಷ್ಟ್ಯಕ್ಕೆ ತಕ್ಕಂತಿದೆ. It was l. him to think of himself last ತನ್ನ ವಿಷಯವನ್ನು ಕೊನೆಗೆ ಯೋಚಿಸಿಕೊಳ್ಳುವುದು ಅವನ ಸ್ವಭಾವಕ್ಕನುಗುಣವಾಗಿದೆ. Looks l. lasting ಬಾಳಿಕೆ ಬರುವಂತೆ ಕಾಣುತ್ತದೆ. Feel l. working ಕೆಲಸಮಾಡಬೇಕೆಂಬ ಮನಸ್ಸಿದೆ. (ಪ್ರಾಚೀ. ಪ್ರ., ಬಳ. ಮಾ.) Had l. to have done ಇನ್ನೇನು, ಮಾಡಿಬಿಡುವುದರಲ್ಲಿದ್ದೆ. **L.-minded** (ಗು.) ಒಂದೇ ಬಗೆಯ ಅಭಿರುಚಿ, ಅಭಿಪ್ರಾಯ, ಮೊ. ಗಳನ್ನುಳ್ಳ ; ಒಂದೇ ಮನೋಧರ್ಮದ ; ಸಮಾನ ಧರ್ಮದ.

ಉಪಸರ್ಗ.—Cannot do it l. you ನೀನು ಮಾಡುವಂತೆ ಅದನ್ನು ಮಾಡಲಾರೆ. Do not talk l. that ಹಾಗೆ(ಲ್ಲ) ಮಾತನಾಡಬೇಡ. L. a shot ಗೊಣಗದೆ ; ಪ್ರತಿ ಹೇಳದೆ ; ಪರಿಣಾಮವನ್ನು ಲಕ್ಷಿಸದೆ. L. fun, blazes, one o'clock, anything, mad, etc. ಲೀಲಾ ಜಾಲವಾಗಿ, ಬಲು ಜೋರಾಗಿ, ಬಿರುಸಾಗಿ, ಹುಚ್ಚುಹಿಡಿದಂತೆ. (ಗಾದೆಗಳಲ್ಲಿ, ಹಾಸ್ಯ ಪ್ರ. ದಲ್ಲಿ) Drink l. a fish (Fish[1] ನೋಡಿ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Fit l. a glove (Glove ನೋಡಿ). L. a house on fire (House ನೋಡಿ). Smoke l. a chimney (ಕಾರ್ಖಾನೆಯ) ಹೊಗೆಕೊಳವೆಯಂತೆ ಹೊಗೆ(ನೂಪ್ಪು) ಸೇದು ; ಮಿತಿ ಮೀರಿ—. Spread l. wildfire ಕಾಳ್ಗಿಚ್ಚಿನಂತೆ ಹಬ್ಬು. Swear l. a trooper ಸೈನಿಕ (ದಳದವ)ನಂತೆ ಆಣೆಯಿಡು. Hate person l. poison ಒಬ್ಬನನ್ನು ವಿಷದಂತೆ ದ್ವೇಷಿಸು.

ಕ್ರಿ. ವಿ.—L. as (ಪ್ರಾಚೀ. ಪ್ರ.) (—) ಹೇಗೊ ಹಾಗೆ ; ಅದೇ ರೀತಿಯಲ್ಲಿ. Very l., L. enough ಪ್ರಾಯಶಃ ; ಬಹುಶಃ (ಸಾ., ಪ್ರಾಸಂಗಿಕ ವಾಕ್ಯವಾಗಿ). (ಗ್ರಾಮ್ಯ) By way of argument l. ವಾದಕ್ಕಾಗಿ ಇಟ್ಟುಕೊಳ್ಳುವುದಾದರೆ.

ಸಂ. ಅವ್ಯ.—(ಗ್ರಾಮ್ಯ, ಬಳ. ಮಾ.) Cannot do it l. you do ನೀನು ಮಾಡುವಂತೆ ಅದನ್ನು ಮಾಡಲಾರೆ. Snow is falling l. in January.

ನಾಮವಾಚಕ.—Mix with your likes ನಿನ್ನಂಥವರೊಡನೆ, ನಿನ್ನ ಸಮಾನರೊಡನೆ, —ಬೆರೆ, ಸೇರು. Shall not see his l. again ಅವನಂಥವನ(ರ)ನ್ನು ಮತ್ತೆ ಕಾಣಲಾರೆವು. Did you ever see the l. of it? ಅದರಂಥದನ್ನು ನೀನೆಂದಾದರೂ ಕಂಡಿದ್ದೆಯಾ? L. cures l. ಅದಕ್ಕೆ ಅದೇ ಮದ್ದು. The likes of me (ಬಳ. ಮಾ.) ನನ್ನಂತೆ ತಗ್ಗಿ ನಡೆಯುವವನು. The likes of you (ಬಳ. ಮಾ.) ನಿಮ್ಮಂಥ ಪ್ರಸಿದ್ಧರು, ಘನತೆವಂತರು. Will never do the l. again ಪುನಃ ಅಂಥದ(ವ)ನ್ನು ಎಂದಿಗೂ ಮಾಡುವುದಿಲ್ಲ. And the l. (ಸಾ., ಬ. ವ. ದಲ್ಲಿ) ಮುಂತಾದುವು (Music, painting, & the l.). Or the l. ಅಥವಾ, ಆ ಜಾತಿಯ (ಬೇರೆಯ)ವು. **Líkelihood** (ನಾ.) ಆದೀತೆಂಬ ಭರವಸೆ ; ಸಂಭವ (In all l. ಬಹುಶಃ ; ಪ್ರಾಯಶಃ). **Líkely** (ಗು., ಕ್ರಿ. ವಿ. ; ತರ ತಮ ರೂಪಗಳು More, Most, l. ; Likelier, Likeliest) ಆಗಬಹುದಾದ : ಆಗುವಂತೆ ತೋರುವ ; ಸಂಭವನೀಯ ; ಇರಬಹುದಾದ ; ನಿಜವೆನಿಸಬಹುದಾದ ; ನಿಜವಿರಬಹುದಾದ [A l. story (ಸಾ., ವ್ಯಂಗ್ಯ ಪ್ರ.) ನಂಬಬಹುದಾದ ಕಥೆ. It is not l. he will come ಅವನು ಬರುವ ಸಂಭವ ಕಾಣುವುದಿಲ್ಲ. His most l. halting-place is— ಪ್ರಾಯಶಃ ಅವನು ತಂಗುವ ಸ್ಥಳ—. He is l. to come ಅವನು ಬರುವ ಸಂಭವವಿದೆ. Called at every l. house ಇರಬಹುದೆಂದು ತೋರಿದ ಪ್ರತಿ ಮನೆಯಲ್ಲಿಯೂ ವಿಚಾರಿಸಿದನು. Six l. young fellows ಆರು ಮಂದಿ ಸರಿ ತರುಣರು. The likeliest place to find him in ಬಹುಮಟ್ಟಿಗೆ ಅವನು ದೊರೆಯುವ ಸ್ಥಳ]. (ಕ್ರಿ. ವಿ.) ಬಹು ಮಟ್ಟಿಗೆ ; ಬಹುಶಃ ; ಪ್ರಾಯಶಃ. **Líken** ಲೈಕನ್ (ಕ್ರಿ. ಸಕ.) ಹೋಲಿಕೆ, —ಕಂಡುಹಿಡಿ, ಮಾಡು ; ಹೋಲಿಸು. (ವಿರ. ಪ್ರ.) —ಅಂತೆ ಮಾಡು. (Its arbitrary character likens it to a despotism ಅದರ ಸ್ವೇಚ್ಛಾ ಸ್ವರೂಪವು ಅದನ್ನು ನಿರಂಕುಶ ಪ್ರಭುತ್ವದಂತೆ ಮಾಡುತ್ತದೆ. **Líkeness** (ನಾ.) ಹೋಲಿಕೆ ; ಎಣೆ ; ಸಾದೃಶ್ಯ ; ಸಾಮ್ಯ (*Between, to* ಉಪ. ದೊಡನೆ) ; ತೋರ್ಕೆ ; ಹೊರ ರೂಪ (Enemy in l. of friend ಮಿತ್ರನಂತೆ ಕಾಣುವ ಶತ್ರು : ಹಿತ ಶತ್ರು). ಪ್ರತಿ ರೂಪ ; ಯಥಾ ಪ್ರತಿ ; ಪ್ರತಿ ಬಿಂಬ (Take one's l. ಒಬ್ಬನ ಪ್ರತಿಬಿಂಬ ತೆಗೆ, ಚಿತ್ರಿಸು) ; (ಮತ್ತೊಬ್ಬನ, ಮತ್ತೊಂದರ) ಪಡಿಯಚ್ಚಿನಂತಿರುವ ವ್ಯಕ್ತಿ, ವಸ್ತು. **Líkewise** (ಕ್ರಿ. ವಿ., ಸಂ. ಅವ್ಯ.) (ಬೈಬಲ್) ಹಾಗೆಯೇ ; ಅಂತೆಯೇ ; ತದ್ವತ್. ಮತ್ತು ; ಅದೂ ಅಲ್ಲದೆ ; ಇನ್ನೂ ; ಸಹ.

-like (ಉ. ಪ್ರ.) [ಸಮಾಸದಲ್ಲಿ : Like (ಗು. ಮತ್ತು ಕ್ರಿ. ವಿ. ಗಳ) ಅರ್ಥದೊಡನೆ] (ನಾಮಪದಗಳೊಡನೆ) Godlike, womanlike. (ಕ್ರಿ. ವಿ., ಪ್ರಾಚೀ. ಪ್ರ.) (He, cowardlike, refused). (ಗುಣವಾಚಕಗಳೊಡನೆ) Humanlike.

Like[2] ಲೈಕ್ (ಕ್ರಿ., ನಾ.) (ಪ್ರಾಚೀ. ಪ್ರ. ಅಥವಾ ಹಾಸ್ಯ ಪ್ರ.) ರುಚಿಸು ; ಮನಸ್ಸಿಗೆ ಸೇರು ; ಹಿತವಾಗಿರು ; ಇಷ್ಟವಾಗಿರು (It likes me not, well ಅದು ನನಗೆ ಹಿತವಾಗಿಲ್ಲ, ಹಿತವಾಗಿದೆ). ಹಿತಕರವಾಗಿರು ; ಒಗ್ಗಿರು ; ತೃಪ್ತಿಕರವಾಗಿರು ; ಮೆಚ್ಚು ; ಪ್ರೀತಿಸು ; ಇಷ್ಟಪಡು ; ಬಯಸು [I should much l. to come ಬರಬೇಕೆಂದು ನನಗೆ ಬಹಳ ಆಸೆಯಿದೆ. I should l. time to consider it ಅದನ್ನು ಪರ್ಯಾಲೋಚಿಸಲು ನನಗೆ ಕಾಲ ಬೇಕು. How do you l. it? ನಿನ್ನ ಮನಸ್ಸಿಗೆ ಅದು ಹೇಗೆನಿಸುತ್ತದೆ? ಅದು ನಿನಗೆ ಒಪ್ಪಿಗೆಯೆ, ಇಲ್ಲವೆ? I am careful if you l., but not miserly ನನ್ನನ್ನು ಮಿತ ವ್ಯಯಿಯೆಂದು ಹೇಳಿದರೆ ನಾನು ಒಪ್ಪಬಹುದು, ಆದರೆ ನಾನು ಲೋಭಿಯಲ್ಲ. I l. it but it does not l. me (ಆ ತಿಂಡಿ) ನನಗೆ ಇಷ್ಟ, ಆದರೆ ಅದು ನನಗೆ ಒಂಟುವುದಿಲ್ಲ]. (ನಾ. ; ಸಾ., ಬ. ವ. ದಲ್ಲಿ) ಇಷ್ಟ ; ಇಷ್ಟವಾದದ್ದು, —ದವುಗಳು ; ಅಭಿರುಚಿ(ಗಳು) ; ಒಲವು (ಮು., Likes & dislikes ಬೇಕಾದವು ಮತ್ತು ಬೇಡದವು ; ಇಷ್ಟವಾದವು ಮತ್ತು ಇಷ್ಟವಿಲ್ಲದವು). **Líkable** (ಗು.) ಒಪ್ಪಿಗೆಗೆ ತಕ್ಕ, ಯೋಗ್ಯವಾದ ; ಪ್ರಿಯವಾದ ; ಹಿತಕರವಾದ. **Líkableness** (ನಾ.) ; **Líking** (ನಾ.) (ಒಬ್ಬನ) ಅಭಿರುಚಿ ; ಇಷ್ಟ (Is it to your l.? ಅದು ನಿನಗೆ ಇಷ್ಟವೆ?). (ಒಂದಕ್ಕೆ, ಒಬ್ಬನಿಗೆ) ಮಮತೆ, ಪ್ರೇಮ, ಪ್ರೀತಿ, ಅಭಿರುಚಿ, ಮೆಚ್ಚಿಕೆ (*For* ಉಪ. ದೊಡನೆ) : I have a l. for him ಅವನ ಮೇಲೆ ನನಗೆ ಪ್ರೀತಿಯಿದೆ.

Lil ಲಿಲ್ (ಅಮೆ. ಸಂ., ಪ್ರಾಂ. ಪ್ರ.) = Little.

Lílac ಲೈಲಕ್ (ನಾ., ಗು.) ಸುವಾಸನೆಯುಳ್ಳ ನಸು ಪಾಟಲ ಊದಾ ಬಣ್ಣದ ಅಥವಾ ಬಿಳಿಯ ಬಣ್ಣದ ಹೂವು ಬಿಡುವ, ಒಂದು ಪೊದೆ. ನಸು ಪಾಟಲ ಊದಾ ಬಣ್ಣ(ದ)

Liliáceous. **Lily** ನೋಡಿ.

Lillibulléro ಲಿಲಿಬುಲಿಯರೊ, — ಲೀರೋ (ನಾ.) ೧೭ನೆಯ ಶತಮಾನದ ಕೊನೆಯಲ್ಲಿ ಇಂಗ್ಲೆಂಡಿನಲ್ಲಿ ಜನಮೆಚ್ಚಿಕೆಯಾಗಿದ್ದ, ಐರಿಷ್ ಜನರನ್ನು ಗೇಲಿಮಾಡುವ, ಒಂದು ಹಾಡು. (ಆ ಹಾಡಿನ ಪಲ್ಲವಿಯ ಭಾಗ)

Lilliputian ಲಿಲಿಪ್ಯೂಷಿಯನ್, —ಷ(ಷ್)ನ್ (ಗು., ನಾ.) ಲಿಲಿಪಟ್ ದೇಶದ(ವನು, ವಸ್ತು): ಮೋಟ, ಪುಟ್ಟ (ಮನುಷ್ಯ, ವಸ್ತು). (Gulliver's Travels ಎಂಬ ವಿಡಂಬನ ಗದ್ಯಗ್ರಂಥದಲ್ಲಿ ಬರುವ Lilliput ಎಂಬ ಕಾಲ್ಪನಿಕ ಪ್ರಾಂತದ ಹೆಸರಿನಿಂದ)

Lilt ಲಿಲ್ಟ್ (ಕ್ರಿ., ನಾ.) ಇಂಪಾಗಿ, ತಾಳಬದ್ಧವಾಗಿ,—ಹಾಡು. ಸ್ಪಷ್ಟವಾಗಿ ಲಯಬದ್ಧವಾದ ಸ್ವರಗತಿ(ಯ ಹಾಡು) ; ಧಾಟಿ ; ಸ್ವರ ಚಲನೆಯಲ್ಲಿ ಏರಿಳಿತ.

Lily ಲಿಲಿ (ನಾ.) ಉದ್ದನೆಯ ಸಣ್ಣ ದಂಟಿನ ತುದಿಯಲ್ಲಿ ಬಿಳಿಯ ಅಥವಾ ಕೆಂಪು ಛಾಯೆಯ ಅಥವಾ ಧೂಮ್ರಚ್ಛಾಯೆಯ ಅಂದವಾದ ದೊಡ್ಡ ಹೂವು ಬಿಡುವ ಗಡ್ಡೆಬೇರಿನ ಒಂದು ಸಸ್ಯಜಾತಿ : 'ಲಿಲಿ' (Orange, tiger, turk's cap, etc., l. ಹಲವು ಜಾತಿಯವು. L. of the valley ಎರಡು ದೊಡ್ಡ ಎಲೆಗಳೂ ಗಂಟೆಯಾಕಾರದ ಸುವಾಸನೆಯುಳ್ಳ ಹೂವಿನ ಗೊಂಚಲುಗಳೂ ಉಳ್ಳ, ಒಂದು ವಸಂತ ಪುಷ್ಪ). ಕೇವಲ ಬಿಳುಪಾದ ಅಥವಾ ಪರಿಶುದ್ಧವಾದ ವ್ಯಕ್ತಿ, ವಸ್ತು (Lilies & roses ಸುಂದರ ದೇಹಕಾಂತಿ). ವಂಶಲಾಂಛನಗಳಲ್ಲಿ ಚಿತ್ರಿಸಿರುವ 'ಲಿಲಿ' ಹೂವು [The lilies ಪುರಾತನ ಫ್ರೆಂಚ್ ರಾಜವಂಶದ (ಬೋರ್ಬನ್ ವಂಶದ) ಬಿರುದಿನ ಲಾಂಛನ]. ಲಿಲಿತವಾದ ಬಿಳುಪಿನ (L. maid, L. hand) ; ಬಿಳಿಚಿಕೊಂಡಿರುವ. **L.-iron** (ಕತ್ತಿಮೂತಿಯ ಮೀನನ್ನು ಕೊಲ್ಲುವುದಕ್ಕಾಗಿ ಎಸೆಯುವ) ಕಳಚುತಲೆಯುಳ್ಳ ಒಂದು ಎಸೆಯೀಟಿ. **L.-livered** ಹೇಡಿ ; ಪುಕ್ಕಲು. **L.-white** ಲಿಲಿಯಂತೆ ಬಿಳುಪಾದ. **Liliáceous** ಲಿಲಿಯೇಷಸ್ (ಗು.) 'ಲಿಲಿ' ಜಾತಿಯ. **Lílied** (ಗು.) ಬಣ್ಣದಲ್ಲಿ ಲಿಲಿಯಂತಿರುವ ; ಲಿಲಿಗಳಿಂದ ತುಂಬಿರುವ ; ವಂಶಲಾಂಛನದಲ್ಲಿ ಲಿಲಿಗಳಿಂದ ಚಿತ್ರಿಸಿರುವ.

Limb[1] ಲಿಮ್ (ನಾ., ಕ್ರಿ.) ಕೈ, ಕಾಲು, ರೆಕ್ಕೆ ; ಅಂಗ ; ಅವಯವ (Escape with life & l. ಹೆಚ್ಚು ದೇಹಾಪಾಯಕ್ಕೊಳಗಾಗದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಪ್ಪಿಸಿಕೊ, ಪಾರಾಗು). ತುಂಟ ಮಗು (ಹಿಂದೆ, L. of the devil or Satan) (L. of the law ವಕೀಲ, ಪೊಲೀಸಿನವನು, ಮೊ. ರು). ಮರದ ಮುಖ್ಯವಾದ ಕೊಂಬೆ. ಶಿಲುಬೆಯ ನಾಲ್ಕು ಶಾಖೆಗಳ ಲ್ಲೊಂದು. ಉಪ ವಾಕ್ಯ. ಬೆಟ್ಟದ ಚಾಚು. (ಕ್ರಿ.) (ಮನುಷ್ಯನ ಅಥವಾ ಪ್ರಾಣಿಯ) ಅಂಗವನ್ನು ಊನಮಾಡು ; (ದೇಹದ) ಅವಯವ ಗಳನ್ನು ಕತ್ತರಿಸಿಹಾಕು. (-)**limbed** — ಲಿಮ್ಡ್ (ಗು.); **Límbless** (ಗು.)

Limb[2] ಲಿಮ್ (ನಾ.) (ವೈಜ್ಞಾನಿಕ ಪ್ರ.) ಮೇಲ್ಮೈಯ ಅಂಚು, ಏಣು. ಕಾಲು ವೃತ್ತಾಕಾರದ ಕೋನಮಾಪಕ, ಮೊ. ಗಳ, ಅಳತೆಗುರುತಿ ಸಿರುವ ಏಣು ; ಸೂರ್ಯ, ಚಂದ್ರ, ಮೊ. ರ ಅಂಚು (Eastern, lower, l.) ; ದಳದ, ಪುಷ್ಪಪಾತ್ರದ, ಎಲೆಯ, — ವಿಸ್ತೃತ ಭಾಗ. **Límbate** ಲಿಂಬೇಟ್ (ಗು.) (ಜೀ. ವಿ., ಸ. ವಿ.) ಸ್ಪಷ್ಟವಾದ ಅಥವಾ ಬೇರೆಯ ಬಣ್ಣದ ಅಂಚುಳ್ಳ, ಅಂಚಿರುವ.

Límbate. **Limb**[2] ನೋಡಿ.

Límbec ಲಿಂಬೆಕ್ (ನಾ.) (ಪ್ರಾಚೀ. ಪ್ರ.) = Alembic.

Límber[1] ಲಿಂಬರ್ (ನಾ., ಕ್ರಿ. ಸಕ.) ಫಿರಂಗಿಗಾಡಿಯ ಕಳಚಲಾಗುವ ಮುಂಭಾಗ (ಎರಡು ಚಕ್ರಗಳು, ಅಚ್ಚು, ಉದ್ದಮರ ಮತ್ತು ಮದ್ದು ಗುಂಡಿನ ಪೆಟ್ಟಿಗೆ —ಉಳ್ಳದ್ದು). (ಕ್ರಿ.) (ಫಿರಂಗಿಗೆ) ಫಿರಂಗಿಗಾಡಿಯ ಕಳಚುಭಾಗವನ್ನು ಸೇರಿಸು ; (ಫಿರಂಗಿಗಾಡಿಯ) ಎರಡು ಭಾಗಗಳನ್ನು ಒಟ್ಟಿಗೆ ಕೂಡಿಸು (*Up* ಉಪ. ದೊಡನೆ)

Límber[2] ಲಿಂಬರ್ (ಗು.) ಬಗ್ಗಿಸಲಾಗುವ ; ನಮ್ಯ ; ಮಣಿಯುವ ; ಬಳುಕುವ ; ಚಳಕವುಳ್ಳ.

Límbo ಲಿಂಬೋ (ನಾ.) ಕ್ರಿಸ್ತನ ಕಾಲಕ್ಕೆ ಹಿಂದೆ ಸತ್ತ ನ್ಯಾಯಶೀಲರೂ ಜ್ಞಾನಸ್ನಾನ ಪಡೆಯದೆ ಸತ್ತ ಹಸುಮಕ್ಕಳೂ ಬಂಧನದಲ್ಲಿರುವ ನರಕದ ಅಂಚಿನ ಪ್ರದೇಶ. ಸೆರೆ ಮನೆ ; ನಿರ್ಬಂಧ ; ಉಪೇಕ್ಷೆಗೆ ಒಳಗಾದ, ಮೂಲೆಗೆ ಬಿದ್ದ, —ಸ್ಥಿತಿ.

Lime[1] ಲೈಮ್ (ನಾ., ಕ್ರಿ. ಸಕ.) (ಸಣ್ಣ ಹಕ್ಕಿಗಳನ್ನು ಹಿಡಿಯುವುದಕ್ಕಾಗಿ 'ಹಾಲಿ' ಎಂಬ ಗಿಡದ ತೊಗಟೆಯಿಂದ ತಯಾರಿಸಿದ) ಅಂಟು ಪದಾರ್ಥ: ಹಕ್ಕಿಯಂಟು [= Bird-lime (Bird ನೋಡಿ)]. ಸುಟ್ಟ ಸುಣ್ಣ (= Quick-l.) (Slaked l. ನೀರಿನೊಡನೆ ಸಂಯೋಗವಾದ ಸುಟ್ಟ ಸುಣ್ಣ : ಸುಣ್ಣದ 'ಹೈಡ್ರೇಟು'). [**L.-burner** ಸುಣ್ಣ ಸುಡುವವನು ; ಸುಣ್ಣಗಾರ. **L.-cast** ಕಟ್ಟಡಕ್ಕೆ ಬಳಿದ ಸುಣ್ಣದ ಹೊರ ಪದರ. **L.-kiln** ಸುಣ್ಣ ಸುಡುವ ಗೂಡು ; ಸುಣ್ಣದ ಗೂಡು. **Limelight** 'ಆಕ್ಸಿಹೈಡ್ರೊಜನ್' ಜ್ವಾಲೆಯಲ್ಲಿ ಸುಣ್ಣದ ಉರುಳೆಯನ್ನು ಸುಡುವುದ ರಿಂದ ಹುಟ್ಟುವ ಅತ್ಯುಜ್ಜ್ವಲವಾದ ಬಿಳುಪು ಕಾಂತಿ. The l.-l. (ರೂಪ.) ರಂಗಸ್ಥಳದ ಬೆಳಕು. **L.-pit** (ಚರ್ಮದಿಂದ ಕೂದಲನ್ನು ತೆಗೆದುಹಾಕುವುದಕ್ಕಾಗಿ ಚರ್ಮವನ್ನು ತೊಯಿಸಿಡುವ) ಸುಣ್ಣದ ಗುಂಡಿ. **Limestone** (ಹಸಿಯ, ಸುಟ್ಟಿರದ) ಸುಣ್ಣಕಲ್ಲು. **L.-twig** ಹಕ್ಕಿ ಯಂಟು ಬಳಿದಿರುವ ರೆಂಬೆ]. (ಕ್ರಿ.) (ರೆಂಬೆಗಳಿಗೆ) ಹಕ್ಕಿಯಂಟು ಬಳಿ; ಹಕ್ಕಿಯಂಟಿನಿಂದ (ಹಕ್ಕಿ) ಹಿಡಿ (ರೂಪ. ಸಹ). (ಜಮೀನಿಗೆ, ಗೊಬ್ಬರ ವಾಗಿ) ಸುಣ್ಣ ಬೆರಸು ; ಚರ್ಮವನ್ನು ಸುಣ್ಣದ ನೀರಿನಲ್ಲಿ ನೆನೆಹಾಕು. **Límeless** (ಗು.) ; **Límy** (ಗು.) ಹಕ್ಕಿಯಂಟು ಬಳಿದ ; ಸುಣ್ಣವುಳ್ಳ ; ಸುಣ್ಣದಂಥ.

Lime[2] ಲೈಮ್ (ನಾ.) ನಿಂಬೆ (ಹಣ್ಣು). **L.-juice** (ಪಾನೀಯವಾಗಿ, ಮು., ರಕ್ತಪಿತ್ತ ನಿವಾರಕವಾಗಿ) ನಿಂಬೆಯ ಹಣ್ಣಿನ ಪಾನೀಯ.

Lime[3] ಲೈಮ್ (ನಾ.) ಹೃದಯಾಕಾರದ ಎಲೆಗಳುಳ್ಳ, ಹಳದಿಯ ಬಣ್ಣದ ಸುವಾಸನೆಯ ಸಣ್ಣ ಹೂವು ಬಿಡುವ, ಒಂದು ಬಗೆಯ ಅಲಂಕಾರದ ಗಿಡ (= L.-tree)

Límen ಲೈಮೆನ್ (ನಾ.) (ಮ. ಶಾ.) ಶಬ್ದ, ಸ್ಪರ್ಶ, ಮೊ. ಅನುಭವವು ನಮ್ಮ ಇಂದ್ರಿಯಕ್ಕೆ ಗೋಚರವಾಗುವುದರ ಪ್ರಾರಂಭ; ಸಂವೇದನೆಯ ಹೊಸ್ತಿಲು ; ಸಂವೇದನೆಯುಂಟಾಗಲು ಆವಶ್ಯಕವಾದ ಕನಿಷ್ಠ ಪ್ರಮಾಣದ ನರ ಪ್ರಚೋದನೆ. **Líminal** ಲಿಮಿನಲ್ (ಗು.)

Límerick ಲಿಮರಿಕ್ (ನಾ.) ಒಂದು ತೆರದ ಐದು ಚರಣಗಳ ಹಾಸ್ಯಪದ್ಯ.

Límit ಲಿಮಿಟ್ (ನಾ., ಕ್ರಿ. ಸಕ.) ಗಡಿ ; ಮೇರೆ ; ಎಲ್ಲೆ ; ಸರಹದ್ದು ; ಕೊನೆ ; (ಪರಿ)ಮಿತಿ ; ಅವಧಿ (Superior, inferior, l. ಅತಿ ಹಿಂದಿನ, ಅತಿ ಈಚಿನ, — ಕಾಲಾವಧಿ ; ಮಹತ್ತಮ, ಅಲ್ಪತಮ, — ಮೊತ್ತದ ಮಿತಿ). Without l. ಕೊನೆಯಿಲ್ಲದೆ ; ಮಿತಿಯಿಲ್ಲದೆ ; ಅಮಿತವಾಗಿ. Is the l. (ಅಸಂ.) ಇದೇ ಪರಮಾವಧಿ ; ಇನ್ನು ತಾಳಲಾಗುವುದಿಲ್ಲ. L. man ಪಂದ್ಯದ ರಿಯಾಯಿತಿಯಲ್ಲಿ ಅತ್ಯಂತ ಮುಂದೋಟ ಪಡೆದವನು [ಎದುರು ಪದ : Scratch (man)]. (ಕ್ರಿ.) ಹದ್ದಿನಲ್ಲಿಡು ; ಮಿತಿ ಕಲ್ಪಿಸು ; (—ಕ್ಕೆ) ಮಿತಗೊಳಿಸು (*To* ಉಪ. ದೊಡನೆ). (ಒಂದಕ್ಕೆ) ಎಲ್ಲೆ, ಗಡಿ, ಮೇರೆ, — ಆಗಿರು. (ಭೂ. ಕೃ.) ಸ್ವಲ್ಪದ ; ಪರಿಮಿತ [Limited company (Liable ನೋಡಿ). Limited mail ಕ್ಲುಪ್ತ ಸಂಖ್ಯೆಯ ಪ್ರಯಾಣಿಕರನ್ನು ಮಾತ್ರ ಒಯ್ಯುವ ಟಪಾಲು ರೈಲು. Limited monarchy (ರಾಜ್ಯವ್ಯವಸ್ಥೆಯ ಕಟ್ಟು ಗಳಿಗೆ ಒಳಪಟ್ಟಿರುವ) ಸಾಂಕುಶ ರಾಜಪ್ರಭುತ್ವ (ಎದುರು ಪದ: Absolute monarchy). **Límitless** (ಗು.) ; **Límitative** — ಟೆಟಿವ್ (ಗು.) ಮಿತಿಗೊಳಪಡಿಸುವ ; ಕಟ್ಟಿನಲ್ಲಿಡುವ. **Limitárian** (ನಾ., ಗು.) ಮನುಷ್ಯವರ್ಗದಲ್ಲಿ ಒಂದು ಪರಿಮಿತ ಭಾಗಕ್ಕೆ ಮಾತ್ರ ಮೋಕ್ಷ ದೊರೆ ಯುವುದೆಂಬ ವಾದದ : ಮಿತಜನ ಮೋಕ್ಷವಾದದ ; — ವಾದಿ. **Límitary** (ಗು.) ಮಿತಿಗೊಳಪಟ್ಟ ; ಮಿತಿಯ ; ಪರಿಮಿತ; ಎಲ್ಲೆಯ ; ಎಲ್ಲೆಯಮೇಲಿನ ; ಎಲ್ಲೆಯಾಗಿರುವ. **Limitátion** (ನಾ.) ಮಿತಿ (ಹೊಂದಿರುವ ಸ್ಥಿತಿ) ; ದೌರ್ಬಲ್ಯ ; ಅಶಕ್ತಿ (Has his limitations ಅವನು ಎಲ್ಲ ವಿಷಯಗಳಲ್ಲೂ ಪ್ರವೀಣನಲ್ಲ ; ಅವನ ಯೋಗ್ಯತೆಗೆ ಮಿತಿ ಯುಂಟು) ; ಮಿತಿ ಕಲ್ಪಿಸುವ, — ನಿಯಮ, ಸಂದರ್ಭ. ಯಾವ ಕಾಲಾವಧಿ ಮೀರಿದನಂತರ ಕಾನೂನುಮೇರೆಗೆ ವ್ಯವಹಾರ ಹೂಡಲು ಅವಕಾಶವಿಲ್ಲವೊ, ಆಸ್ತಿ ಅಥವಾ ಕಾನೂನು ನಡೆದುಬರಲಾರದೊ —ಆ ಕಾಲದ ಮಿತಿ ; ವ್ಯವಹಾರಾವಧಿ ; ವಾಯಿದೆ (Statute of limitations ಕಾಲಾವಧಿಯನ್ನು ನಿರ್ಧರಿಸುವ ಕಾನೂನು)

Límitrophe ಲಿಮಿಟ್ರೋಫ್ (ಗು.) (ಜಿಲ್ಲೆ, ಮೊ. ವು) ಗಡಿಯಲ್ಲಿರುವ, (ಮತ್ತೊಂದು ದೇಶದ) ಪಕ್ಕದಲ್ಲಿರುವ, ಎಲ್ಲೆಯ ಬಳಿಯಿರುವ.

Limn ಲಿಮ್ (ಕ್ರಿ. ಸಕ.) (ಪ್ರಾಚೀ. ಪ್ರ.) (ಚಿತ್ರವನ್ನು) ಬಣ್ಣಗಳಿಂದ ಬರೆ, ರಚಿಸು ; ಚಿತ್ರಿಸು ; ನಿರೂಪಿಸು. **Límner** ಲಿಮ್ನರ್ (ನಾ.) (ತಸಬೀರಿನ) ವರ್ಣಚಿತ್ರಕಾರ.

Limnólogy ಲಿಮ್ನಾಲೊಜಿ (ನಾ.) ಸರೋವರಗಳ ಸಂಬಂಧವಾದ ಭೌತ ವಿಚಾರ ಶಾಸ್ತ್ರ ; ಸ್ವಾದೋದಕ ವಿಚಾರ ಶಾಸ್ತ್ರ ; ಕೊಳ, ಕುಂಟೆ, ಮೊ. ಗಳಲ್ಲಿಯ ಜೀವಿಗಳನ್ನು ಕುರಿತ ಶಾಸ್ತ್ರ : ಕಾಸಾರ ಜೀವಿ ಶಾಸ್ತ್ರ.

Límousine ಲಿಮುಸೀನ್ (ನಾ.) ಸುತ್ತಲೂ ಆವರಣವುಳ್ಳ ಒಡಲೂ, ಹೊರಗಡೆ ಬಂಡಿ ನಡೆಸುವವನು ಕುಳಿತುಕೊಳ್ಳಲು ಚಾವಣಿಯುಳ್ಳ ಆಸನವೂ, ಇರುವ ಒಂದು ತೆರದ ಮೋಟಾರು ಬಂಡಿ.

Limp[1] ಲಿಂಪ್ (ಕ್ರಿ. ಅಕ., ನಾ.) ಕುಂಟುತ್ತ ನಡೆ ; ಕುಂಟು ; (ಪದ್ಯ, ಓಟವಿಲ್ಲದೆ) ಕುಂಟು. (ನಾ.) ಕುಂಟು ನಡೆ ; — ನಡಿಗೆ. **Límpingly** (ಕ್ರಿ. ವಿ.)

Limp[2] ಲಿಂಪ್ (ಗು.) ಬಿಗುಪಿಲ್ಲದ; ಮಣಿಯುವ; ಬಳುಕುವ; (ಪುಸ್ತಕದ ವಿಷಯದಲ್ಲಿ) ಬಳುಕು ರಟ್ಟಿನ. (ರೂಪ.) ಸತ್ತ್ವವಿಲ್ಲದ ; ಶಕ್ತಿಯಿಲ್ಲದ. **Límply** (ಕ್ರಿ. ವಿ.) ; **Límpness** (ನಾ.)

Límpet ಲಿಂಪೆಟ್ (ನಾ.) ಬಂಡೆಗಳಿಗೆ ಭದ್ರವಾಗಿ ಅಂಟಿಕೊಳ್ಳುವ, ಗುಡಾರದಾಕಾರದ ಚಿಪ್ಪುಳ್ಳ, ಉದರಪಾದಿಯಾದ ಒಂದು ಚಿಪ್ಪು ಪ್ರಾಣಿ. (ರೂಪ.) ಅಧಿಕಾರ ಬಿಡಲು ಮನಸ್ಸಿಲ್ಲದೆ ಅದಕ್ಕೆ ಹತ್ತಿ ಕೊಂಡಿರುವವನು (ಮು., ಸರ್ಕಾರದ ನೌಕರ)

Límpid ಲಿಂಪಿಡ್ (ಗು.) (ದ್ರವ, ವಾತಾವರಣ, ಕಣ್ಣು, ಕಾವ್ಯಶೈಲಿ, ಇವುಗಳ ವಿಷಯದಲ್ಲಿ) ತಿಳಿಯಾದ, ಸ್ವಚ್ಛ, ನಿರ್ಮಲ. **Límpidly** (ಕ್ರಿ. ವಿ.) ; **Limpídity** (ನಾ.) ; **Límpidness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Línage ಲೈನೆಜ್ (ನಾ.) ಅಚ್ಚಿನ ಪ್ರತಿಯಲ್ಲಿಯ ಪಂಕ್ತಿಗಳು ; (ಲೇಖಕರಿಗೆ) ಪಂಕ್ತಿಯ ಲೆಕ್ಕದ ಮೇಲೆ ಹಣ ಕೊಡುವುದು.

Línchpin ಲಿಂಚ್‌ಪಿನ್ (ನಾ.) ಚಕ್ರ ಕಳಚಿಹೋಗದಂತೆ ಅಚ್ಚಿನ ತುದಿಯ ರಂಧ್ರದಲ್ಲಿ ಹಾಕಿರುವ ಮೊಳೆ : ಕಡಾಣಿ.

Líncoln green ಲಿಂಕನ್ ಗ್ರೀನ್ (ನಾ.) ಲಿಂಕನ್ ಪಟ್ಟಣದಲ್ಲಿ ತಯಾರಾಗುವ ಹೊಳಪು ಹಸುರಿನ ವರ್ಣದ್ರವ್ಯ.

Línden ಲಿಂಡೆನ್ (ನಾ.) ಯೂರೋಪಿನ ಒಂದು ಜಾತಿಯ ನಿಂಬೆಯ ಮರ.

Line[1] ಲೈನ್ (ನಾ.) ನಾರಗಸೆಯ ನಾರುಗುಂಪಲಿನಿಂದ, ಹರಕಲು ಒರಟುದಾರಗಳನ್ನು ತೆಗೆದುಬಿಟ್ಟ, ಸೂಕ್ಷ್ಮವಾಗಿಯೂ ಉದ್ದವಾಗಿಯೂ ಇರುವ ಎಳೆಗಳುಳ್ಳ, ನಾರು : ನಾರಗಸೆಯ ಸೂಕ್ಷ್ಮ ಎಳೆಗಳ ಉದ್ದವಾದ ನಾರು

Line[2] ಲೈನ್ (ನಾ.) ೧. ಹುರಿ ; ದಾರ ; ಹಗ್ಗ. ೨. ರೇಖೆ ; ಗೆರೆ. ೩. ಸಾಲು ; ಪಂಕ್ತಿ. ೪. ಶ್ರೇಣಿ. ೫. ದಿಕ್ಕು ; ಕಡೆ.

೧. ಹಗ್ಗದ, ಹುರಿಯ, —ತುಂಡು (ಮು., ನಾವೆ : ಆಳ ಅಳೆಯುವುದಕ್ಕಾಗಿ). (Hard lines ದುರದೃಷ್ಟ ; ಕಷ್ಟ ದಶೆ). =Clothes-l. (Clothes ನೋಡಿ). ದೂರಲೇಖಕದ (ಟೆಲಿಗ್ರಾಫಿನ), ದೂರವಾಣಿಯ (ಟೆಲಿಫೋನಿನ), ತಂತಿ ಅಥವಾ ತಂತಿಹೊರಜಿ (Lineman ಈ ತಂತಿ, ಮೊ. ವು ಸರಿಯಾದ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವವನು : ತಂತಿ ಪಾಲಕ). (ದೂರಲೇಖಕದ, ದೂರವಾಣಿಯ) ತಂತಿಮಾರ್ಗ. (ಮೀನು ಹಿಡಿಯುವ) ಗಾಳದ ಹುರಿ [L.-fishing ಗಾಳ ಹಾಕಿ ಮೀನುಹಿಡಿಯುವುದು (ಎದುರು ಪದ : Net-fishing). Give one l. enough (ಒಬ್ಬನನ್ನು ಕೊನೆಗೆ ಹಿಡಿಯುವುದಕ್ಕಾಗಿ ಅಥವಾ ಪತ್ತೆಮಾಡುವುದಕ್ಕಾಗಿ) ಕೆಲವು ಕಾಲ ಸ್ವೇಚ್ಛೆಯಾಗಿ ಹೋಗುವಂತೆ ಬಿಟ್ಟುಬಿಡು]. ಅಳೆಯುವುದು, ಮಟ್ಟ ನೋಡುವುದು, ಮೊ. ಕ್ಕೆ ಉಪಯೋಗಿಸುವ ದಾರ, ಹುರಿ [Plumb-l. (Plumb ನೋಡಿ). By rule & l. ಕರಾರುವಾಕಾಗಿ ; ನಿಕರವಾಗಿ]. (ಬ. ವ. ದಲ್ಲಿ) ಜೀವನದಲ್ಲಿ ಒಬ್ಬನ ಅದೃಷ್ಟ, ಪಾಲಿಗೆ ಬಂದದ್ದು. (ಗತ ಪ್ರ.) ವಿಧಿ ; ನಿಯಮ [L. upon l. (ನಿಧಾನವಾಗಿಯೂ ಕ್ರಮವಾಗಿಯೂ ಅಭಿವೃದ್ಧಿಹೊಂದುತ್ತ) ಎಂಬಲ್ಲಿ ಮಾತ್ರ ರೂಢಿ]

೨. (ಮೇಲ್ಮೈಯಲ್ಲಿ ಎಳೆದ ಉದ್ದವಾದ) ಗೆರೆ. (Boldness, purity, of l. ರೇಖೆಯ ಸ್ಪಷ್ಟತೆ, ಶುದ್ಧತೆ. **L.-drawing** ರೇಖನಿಯಿಂದ ಅಥವಾ ಸೀಸದ ಕಡ್ಡಿಯಿಂದ ರೇಖಿಸಿದ ಚಿತ್ರ : ರೇಖಾ ಚಿತ್ರ. **L.-engraving** ಗೆರೆ ಕೊರೆದು ಮಾಡಿದ ಚಿತ್ರ; ಗೆರೆಯ ಚಿತ್ರಕೆತ್ತನೆ; ರೇಖಾ ಚಿತ್ರಣ. **L.-work** = L.-drawing) (ವ್ಯಾಯಾಮದ ಆಟಗಳಲ್ಲಿ ಆಟದ ಅಂಗಳದ ಅಥವಾ ಅದರ ವಿಶೇಷ ಭಾಗಗಳ ಎಲ್ಲೆಯನ್ನು ಗುರುತಿಸುವ) ಎಲ್ಲೆಗೆರೆ. [L. of life (ಸಾಮುದ್ರಿಕದಲ್ಲಿ) ಆಯುರ್ರೇಖೆ. L. of fortune ಧನ ರೇಖೆ]. (ಗಣಿತ) ಅಗಲವಿಲ್ಲದೆ, ಉದ್ದ ಮಾತ್ರವಿರುವ, ಸರಳ ರೇಖೆ ಅಥವಾ ವಕ್ರ ರೇಖೆ. ಒಂದು ನಿರ್ದಿಷ್ಟ ಸಾಮಾನ್ಯ ಲಕ್ಷಣವುಳ್ಳ ಎಲ್ಲ ಬಿಂದುಗಳನ್ನೂ ಸೇರಿಸುವ ಗೆರೆ [ವಿಶೇಷಣ ಪದದೊಡನೆ : Isothermal l. (Iso- ನೋಡಿ)]. (The l. ಭೂಮಧ್ಯ ರೇಖೆ ; ನಿರಕ್ಷ ರೇಖೆ). ಸರಳ ರೇಖೆ [L. of fire (Fire ನೋಡಿ). L. of force ಬಲಪ್ರಯೋಗದ ದಿಕ್ಕನ್ನು ತೋರಿಸುವ ರೇಖೆ: ಬಲ ರೇಖೆ. Picture hung on the l. ನೋಟಕನ ಕಣ್ಣ ಮಟ್ಟಕ್ಕೆ ಚಿತ್ರದ ಕೇಂದ್ರವಿರುವಂತೆ ತೂಗಕಟ್ಟಿ ಪ್ರದರ್ಶಿಸಿದ ಚಿತ್ರಪಟ. Go as straight as a l.]. ಆಕೃತಿ ರೇಖೆ ; ಬಾಹ್ಯ ರೇಖೆ ; ಮುಖ ಲಕ್ಷಣ (ರೇಖೆ). (ಬ. ವ. ದಲ್ಲಿ) (ಮು., ಹಡಗಿನ ಅಡ್ಡಕೊಯ್ತದ, ಉದ್ದಕೊಯ್ತದ, ಓರೆಕೊಯ್ತದ) ಕ್ಷೇತ್ರ ವಿನ್ಯಾಸ ರೇಖನ; ನಕ್ಷೆ; ನಕಾಸೆ. ಕಾರ್ಯಾನುಸರಣೆಯ ರೀತಿ (On conservative lines ಸಂಪ್ರದಾಯಬದ್ಧ ರೀತಿಯಲ್ಲಿ). (ಅಳತೆ) $\frac{1}{12}$ ಅಂಗುಲ. ಮಿತಿ ; ಎಲ್ಲೆ ; ಮೇರೆ [Draw the l. (Draw ನೋಡಿ). Dividing l. ವಿಭಾಜಕ ರೇಖೆ. On the l. (ಯಾವ ಕಡೆಗೆಂದು ಸ್ಪಷ್ಟಪಡದೆ, ಅಡ್ಡಗೋಡೆಯ ಮೇಲಿನಂತೆ) ಎಲ್ಲೆಯ ಮೇಲೆ]. **Líneament** ಲಿನಿಯಮೆಂಟ್ (ನಾ.) (ಸಾ., ಬ. ವ. ದಲ್ಲಿ) ವಿಶಿಷ್ಟ ಲಕ್ಷಣ(ಗಳು) ; ರೂಪ ರೇಖೆ(ಗಳು) ; ವೈಲಕ್ಷಣ್ಯ(ಗಳು) (ಮು., ಮುಖ ಭಾವ, ಮುಖ ಲಕ್ಷಣ) (ಏ. ವ., ಮು., Every l. ಎಂಬಲ್ಲಿ). **Línear** ಲಿನಿಯರ್ (ಗು.) ರೇಖೆಯ (ಗಳ) ; ರೇಖೆಯಲ್ಲಿ (ಗಳಲ್ಲಿ). [L. perspective (Perspective ನೋಡಿ)]. (ಗಣಿತ, ಭೌ. ವಿ.) ಒಂದು ಪರಿಮಾಣದಲ್ಲಿ ಮಾತ್ರ ಅಳತೆಮಾಡಲಾಗುವ, ಅಳತೆಯುಳ್ಳ ; ಏಕ ಪರಿಮಾಣಾತ್ಮಕ ; ರೇಖಾತ್ಮಕ (L. equation ರೇಖಾತ್ಮಕ ಸಮೀಕರಣ). ಉದ್ದವಾಗಿಯೂ ಕಿರಿದಾಗಿಯೂ ಒಂದೇ ಅಗಲವುಳ್ಳದ್ದಾಗಿಯೂ ಇರುವ. **Línearly** (ಕ್ರಿ. ವಿ.) ; **Lineátion** ಲಿನಿಯೇಷನ್ (ನಾ.) ರೇಖೆಗಳನ್ನೆಳೆಯುವುದು ; ರೇಖೆಗಳಿಂದ ಗುರುತು ಮಾಡುವುದು ; ರೇಖಾ ವಿನ್ಯಾಸ ; ರೇಖನ. (ಚರ್ಮದ) ಮೇಲ್ಮೈಯಲ್ಲಿ ಗುರುತು, ಗೆರೆ. (ಪದ್ಯ) ಸಾಲುಗಳಾಗಿ ವಿಂಗಡ. **Líny** ಲೈನಿ (ಗು.) ಗೆರೆಗಳನ್ನು ಹಾಕಿರುವ; ಗೆರೆಗಳಿಂದ ತುಂಬಿರುವ ; ಗೆರೆ ಗೆರೆಯಾದ ; ಸುಕ್ಕು ಸುಕ್ಕಾದ. **Líniness** (ನಾ.)

೩. (ಮನುಷ್ಯರ, ವಸ್ತುಗಳ) ಸಾಲು, ಪಂಕ್ತಿ, ಶ್ರೇಣಿ [Come, bring, into l. (ಒಬ್ಬರ, ಒಂದರ) ಹಾದಿಗೆ ಬರು, ತರು ; ಸಹಕರಿಸು ; ಸಹಕರಿಸುವಂತೆ ಮಾಡು. Toe the l. (ರೂಪ.) ಒಂದು ಪಕ್ಷದ ಕಾರ್ಯಕ್ರಮ, ಮೊ. ನ್ನು ಅಂಗೀಕರಿಸು]. (ಸೈನ್ಯ) (ಬ. ವ. ದಲ್ಲಿ) (ಪರಸ್ಪರ ಸಂಬಂಧವಿರುವ, ಹಂಗಾಮಿ) ಕೋಟೆ ಕೊತ್ತಲಗಳ ಸಾಲು [Go up the l. (Go ಉಪ. ಗಳೊಡನೆ ನೋಡಿ)]. (ಪಾಳೆಯದ) ಗುಡಾರಗಳ, ಗುಡಿಸಿಲುಗಳ, —ಸಾಲು. [(ನಾವೆ) L. abreast ಅಡಿದಿಮ್ಮಿ ರೇಖೆಗೆ ಸಮಕೋನದಲ್ಲಿರುವ ರೇಖೆಯಲ್ಲಿ ಒಂದಕ್ಕೊಂದಕ್ಕೆ ಸಮಾಂತರವಾಗಿ ನಿಲ್ಲಿಸಿರುವ ಹಡಗುಗಳ ಸಾಲು. L. ahead ಒಂದರ ಹಿಂದೊಂದರಂತೆ ಹೋಗುತ್ತಿರುವ ಹಡಗುಗಳ ಸಾಲು. L. of battle (Battle ನೋಡಿ). All along the l. ಉದ್ದಕ್ಕೂ ; ಪ್ರತಿ ಸ್ಥಳದಲ್ಲಿಯೂ (ಜಯ, ಮೊ. ಗಳ ವಿಷಯದಲ್ಲಿ ರೂಪ.). L.-firing ಸಾಲುಸಿಪಾಯಿಗಳ ಬಂದೂಕು ಹೊಡೆತ. (ಸೇನೆ) The l. ಕ್ರಮಬದ್ಧವಾದ ಮತ್ತು ಸಂಖ್ಯಾನಿರ್ದಿಷ್ಟವಾದ ಸೈನಿಕ ದಳಗಳು]. (ಪುಟದಲ್ಲಿಯ, ವರ್ತಮಾನ ಪತ್ರಿಕೆಯ ಉದ್ದ ಸಾಲಿನಲ್ಲಿಯ) ಪಂಕ್ತಿ [Read between the lines ದಸ್ತೈವಜು, ಭಾಷಣ, ಮೊ. ಗಳಲ್ಲಿಯ ಗೂಢಾರ್ಥವನ್ನು ಕಂಡುಹಿಡಿ. L.-filling ಹಸ್ತಪ್ರತಿಯಲ್ಲಿ ಪಂಕ್ತಿಯ ಕೊನೆಯ ಖಾಲಿ ಸ್ಥಳವನ್ನು ತುಂಬುವುದಕ್ಕಾಗಿ ಬರೆಯುವ ವಕ್ರಾಕೃತಿಯ ಚಿತ್ರ : ಪಂಕ್ತಿಪೂರಕ ಚಿತ್ರ. Just a l. to tell you that —(— ಎಂದು) ನಿನಗೆ ತಿಳಿಸಲು ಒಂದೆರಡು ಪಂಕ್ತಿ ಮಾತ್ರ ಬರೆದಿದ್ದೇನೆ]. ಪದ್ಯದ ಒಂದು ಪಾದ, ಚರಣ. (ಬ. ವ. ದಲ್ಲಿ) ಶಾಲೆಯಲ್ಲಿ ಶಿಕ್ಷಾ ರೂಪವಾಗಿ ಬರೆಯಬೇಕಾದ, ಸಾ., ಲ್ಯಾಟಿನ್ ಪದ್ಯಗಳ ನಿರ್ದಿಷ್ಟ ಸಂಖ್ಯೆಯ, ಚರಣಗಳು. (Marriage lines ಮದುವೆಯ ಪ್ರಮಾಣಪತ್ರಿಕೆ). (ಬ. ವ. ದಲ್ಲಿ) ನಟನ ಪಾತ್ರದ ಮಾತುಗಳು.

೪. (ಕೆಲವು ನಿರ್ದಿಷ್ಟ ಸ್ಥಳಗಳ ಮಧ್ಯೆ ಕ್ರಮವಾಗಿ ಓಡಾಡುವ ಜಹಜುಗಳ, ಬಾಡಿಗೆಬಂಡಿಗಳ, ಅಥವಾ ಮನುಷ್ಯ, ವಸ್ತು, ಮೊ. ಗಳ) ಶ್ರೇಣಿ, ಪರಂಪರೆ. (Can show a long l. of heroes ಶೂರರ ಒಂದು ದೀರ್ಘ ಪರಂಪರೆಯನ್ನು ತೋರಬಲ್ಲುದು. Male, female, direct, l. ಗಂಡು, ಹೆಣ್ಣು, ನೇರ, — ಸಂತತಿ. Comes of a good l. ಒಳ್ಳೆಯ ವಂಶದಲ್ಲಿ ಹುಟ್ಟಿದವನು ; ಸತ್ಕುಲ ಪ್ರಸೂತ)

೫. ದಿಕ್ಕು ; ಕಡೆ; ದಾರಿ; ಮಾರ್ಗ ; ಪಥ. L. of march ಪಯಣದ ಹಾದಿ. L. of communication ಬೇರೆ ಬೇರೆ ಸ್ಥಳಗಳಿಗೆ ಸಂಬಂಧ ಕಲ್ಪಿಸುವ ಸಂಚಾರ ಮಾರ್ಗ. (ರೈಲುಮಾರ್ಗ) Up, down, l. ಕಟ್ಟಕಡೆಯ ಪ್ರಧಾನ ನಿಲ್ದಾಣದ ಕಡೆಗೆ ಹೋಗುವ, ಆ ನಿಲ್ದಾಣದಿಂದ ಬರುವ, ರೈಲುಹಾದಿ. Main, branch, loop, l. ಪ್ರಧಾನ ರೈಲು ಮಾರ್ಗ, ಶಾಖಾ ಮಾರ್ಗ, ಕುಣಿಕೆಯಾಕಾರದ ಮಾರ್ಗ. Mysore State l. ಮೈಸೂರು ಸರ್ಕಾರದ ರೈಲುಮಾರ್ಗ. Keep to one's own l. ತನ್ನ ದಾರಿ ಬಿಟ್ಟು ಹೋಗದಿರು (ರೂಪ. ಸಹ). Something in, out of, one's l. ತನಗೆ ಬಳಕೆಯಲ್ಲಿರುವ, ಬಳಕೆಯಲ್ಲಿಲ್ಲದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

— ವಿಷಯ. In the banking l. ಲೇವಾದೇವಿಯ ವ್ಯಾಪಾರದಲ್ಲಿ. A full l. of hosiery ಕಾಲ್ಚೀಲ, ಮೊ. ವರ್ಗದ ಎಲ್ಲ ಪದಾರ್ಥಗಳು. **Líner**[1] (ನಾ.) ಪ್ರಯಾಣಿಕ ಹಡಗುಗಳ ಅಡಳಿತಕ್ಕೆ ಸೇರಿದ ಹಡಗು (ಸಾ., ಜಹಜು). **Línesman** (ನಾ.) ಸಾಲುದಳದ ಸೈನಿಕ. (ಟೆನಿಸ್ ಆಟ, ಕಾಲ್ಚೆಂಡಾಟ) ಚೆಂಡು ಎಲ್ಲೆಗೆರೆಯನ್ನು ಮುಟ್ಟಿತೇ, ದಾಟಿತೇ, ಎಂದು ಮೊ. ವಿಚಾರಗಳಲ್ಲಿ ಆಟದ ನಿರ್ಣಾಯಕನಿಗೆ ಸಹಾಯ ಮಾಡುವವನು.

Line (ಕ್ರಿ.) (ಕಾಗದ, ಮೊ. ಗಳಮೇಲೆ) ಗೆರೆ ಎಳೆ. ಗೆರೆ ಹಾಕಿ ಪ್ರತ್ಯೇಕಿಸು (*In, off, out*, ಉಪ. ಮೊದನೆ) ; ಗೆರೆ(ಗಳಿಂದ) ತುಂಬು [A face lined with pain ನೋವು ತುಂಬಿದ ಮುಖ. L. through (ಮೇಲೆ ಅಡ್ಡಗೆರೆ ಎಳೆದು) ಹೊಡೆದುಹಾಕು]. (ಜನರನ್ನು, ವಸ್ತುಗಳನ್ನು) ಸಾಲಾಗಿ ನಿಲ್ಲಿಸು, ಇರಿಸು (*Up* ಉಪ. ದೊಡನೆ) ; ಸಾಲಿಗೆ ಬರು, ಸಾಲಾಗು (*Up* ಉಪ. ದೊಡನೆ) ; ಸಾಲಾಗಿ ಹರಡು (*Out* ಉಪ. ದೊಡನೆ). (ರಸ್ತೆ, ಬೇಲಿ, ಮೊ. ಗಳ ಉದ್ದಕ್ಕೂ ಸೈನಿಕರನ್ನು) ಸಾಲಾಗಿ ನಿಲ್ಲಿಸು. (ವಸ್ತುಗಳ ವಿಷಯದಲ್ಲಿ : ಗೋಡೆ, ಮೊ. ಗಳ ಉದ್ದಕ್ಕೂ, ಮಧ್ಯೆ ಮಧ್ಯೆ ಸ್ಥಳ ಬಿಟ್ಟು) ಸಾಲಾಗಿರು, ಸಾಲಾಗಿ ನಿಲ್ಲು.

Line[3] ಲೈನ್ (ಕ್ರಿ. ಸಕ.) (ಉಡುಪು, ಪೆಟ್ಟಿಗೆ, ಪಾತ್ರೆ, ಚೀಲ, ಮೊ. ಗಳ) ಒಳ ಭಾಗಕ್ಕೆ (ಸಾ., ಬೇರೊಂದು ವಸ್ತುವಿನ) ಪದರವನ್ನು ಕೂಡಿಸು, ಹಾಕು ; ಅಸ್ತರಿ ಹಾಕು ; ಅಸ್ತರಿಯಾಗಿರು. (ದುಡ್ಡಿನ ಚೀಲ, ಜೇಬು, ಹೊಟ್ಟೆ, ಮೊ. ನ್ನು) ಉಬ್ಬುವಂತೆ ತುಂಬು. **Líning** (ನಾ.) (Every cloud has a silver l. ಪ್ರತಿ ಕೇಡಿನಲ್ಲಿಯೂ ಒಳ್ಳೆಯದರ ಭರವಸೆ ಸ್ವಲ್ಪ ಇರುತ್ತದೆ). **Líner**[2] (ನಾ.) (ಭಾರವಾದ ಫಿರಂಗಿಗಳಲ್ಲಿಯೂ ಯಂತ್ರಗಳಲ್ಲಿಯೂ) ಸವೆತವನ್ನು ತಡೆಯುವ (ಕಳಚಿಬಿಡಬಹುದಾದ) ಲೋಹದ ಅಸ್ತರಿ, ಒಳ ಆವರಣ.

Line[4] ಲೈನ್ (ಕ್ರಿ. ಸಕ.) (ನಾಯಿ, ತೋಳ, ಮೊ. ಗಳ ವಿಷಯದಲ್ಲಿ) (ಗಂಡು) ಹೆಣ್ಣಿನಮೇಲೆ ಹಾರು, (ಗಂಡು) ಹೆಣ್ಣಿನೊಡನೆ ಕೂಡು.

Líneage ಲಿನಿಏಜ್ (ನಾ.) ವಂಶಕ್ರಮವಾಗಿ ಬರುವುದು ; ವಂಶ ಪರಂಪರೆ ; ಕುಲ ; ಸಂತತಿ ; ಮನೆತನ ; ಪೀಳಿಗೆ. **Líneal** ಲಿನಿಯಲ್ (ಗು.) ನೇರವಾದ ಸಂತತಿಯ (ಎದುರು ಪದ: Collateral). (ವಿರ. ಪ್ರ.) ರೇಖೆಯ(ಗಳ) ; ರೇಖೆಯ(ಗಳ)ಲ್ಲಿಯ ; ರೇಖಾತ್ಮಕ. **Líneally** (ಕ್ರಿ. ವಿ.)

Líneal. **Lineage** ನೋಡಿ.

Líneament, Línear, Lineátion. **Line**[2] (೨) ನೋಡಿ.

Línen ಲಿನೆನ್ (ಗು., ನಾ.) ನಾರಗಸೆಯ ದಾರದಿಂದ ಮಾಡಿದ ; ನಾರಗಸೆಯ ದಾರದ (L. cloth). (ನಾ.) ನಾರಗಸೆಯ (ದಾರದಿಂದ ನೆಯ್ದ) ಬಟ್ಟೆ. (ಬ. ವ. ದಲ್ಲಿ) ಒಂದು ಗೊತ್ತಾದ ಬಗೆಯ ನಾರು ಬಟ್ಟೆಗಳು. (ಸಾಮೂಹಿಕವಾಗಿ) ನಾರುಬಟ್ಟೆ, ಹತ್ತಿಯ ಬಿಳಿಯ ಬಟ್ಟೆ, ಮೊ. ಗಳ ಜುಬ್ಬಾಗಳು, ದುಪ್ಪಟಿಗಳು, ಹಾಸುಬಟ್ಟೆಗಳು, ಮೊ. ವು (Wash one's dirty l., at home, in public ಗೃಹಚ್ಛಿದ್ರಗಳು, ಮೊ. ನ್ನು ಹೊರಗೆತ್ತಿ ಆಡದಿರು, ಆಡು). L.-draper ನಾರುಬಟ್ಟೆ, ಹತ್ತಿಯ ಬಿಳಿಯ ಬಟ್ಟೆ, ಮೊ. ಗಳ ವ್ಯಾಪಾರಿ. **Linenétte** (ನಾ.) ಕೃತಕದ, ಅನುಕರಣದ, —ನಾರುಬಟ್ಟೆ.

Líner[1], **Línesman.** **Line**[2] (೫) ನೋಡಿ.

Líner[2]. **Line**[3] ನೋಡಿ.

-ling —ಲಿಂಗ್ (ಉ. ಪ್ರ.) (೧) 'ಸಂಬಂಧಪಟ್ಟ, (ನಿರ್ದಿಷ್ಟ)ಗುಣವುಳ್ಳ' ಎಂಬ ಅರ್ಥಗಳಲ್ಲಿ (ಉದಾ., Hireling, Darling, Worldling). (೨) ಅಲ್ಪಾರ್ಥಕ ಲಾಘವಾರ್ಥಕಗಳಲ್ಲಿ (ಉದಾ., Duckling, Gosling, Princeling, Underling)

Línger ಲಿಂಗರ್ (ಕ್ರಿ.) (ಮು., ಹೋಗಲು ಮನಸ್ಸಿಲ್ಲದೆ) ಹೊರಡಲು ಹಿಂದು ಮುಂದು ನೋಡು, ತಡ ಮಾಡು; ಹಿಂದೆ ಹಿಂದೆ ನಿಲ್ಲು; ನಿರೀಕ್ಷಿಸಿದ ಅಥವಾ ಸರಿಯಾದ ಕಾಲಕ್ಕೆ ಹೊರಡದಿರು, ಬಂದು ಸೇರದಿರು ; ತಡವಾಗು ; ತಡ ಮಾಡು. (ಒಂದು ಸ್ಥಳವನ್ನು, ವಿಷಯವನ್ನು, ಬಿಟ್ಟು ಮುಂದೆ ಹೋಗದೆ) ಅಲ್ಲಲ್ಲೇ ಬಳಸಾಡು, ಕಾಲ ಹರಣ ಮಾಡು [*Round* place, *over*, (*up*)*on*, subject]. (ಸದಾ ರೋಗ, ಮೊ. ಗಳಿಂದ ನರಳುತ್ತ ದೇಹದಾರ್ಢ್ಯವಿಲ್ಲದವರು, ರೂಢಿಯಳಿಯುತ್ತಿರುವ ಸಂಪ್ರದಾಯಗಳು) ಹೇಗೊ ಕಾಲಪೆಳೆಯುತ್ತ ಜೀವವಿಟ್ಟುಕೊಂಡಿರು (*On* ಉಪ. ದೊಡನೆ) ; ಬಹು ಕಾಲ ಎಳೆಯುತ್ತಿರು (Lingering disease, agonies ದೀರ್ಘ ರೋಗ, ಯಾತನೆ). ತಾಮಸದಿಂದಿರು ; ಯಥಾ ಸಾವಕಾಶವಾಗಿರು ; ತಡ ಮಾಡಿ ಮಾಡಿ (ಕಾಲ) ಕಳೆದುಬಿಡು (*Away* ಉಪ. ದೊಡನೆ). **Língerer** (ನಾ.) ; **Língeringly** (ಕ್ರಿ. ವಿ.)

Lingerié (F) ಲ್ಯಾನ್ಷ್ರೀ (ನಾ.) ನಾರುಡುಪುಗಳು, ನಾರುಬಟ್ಟೆಗಳು ; ಇವುಗಳ ದಾಸ್ತಾನು.

Língo ಲಿಂಗೊ (ನಾ. ; ಬ. ವ. -oes) (ತಿರಸ್ಕಾರ ಭಾವದ ಪದ) ಪರ ಭಾಷೆ ; ಒಂದು ವಿಶೇಷ ವಿಷಯದ, ವಿಶೇಷ ಪಂಗಡದವರ, ಶಬ್ದಕೋಶ, ಪರಿಭಾಷೆ.

Língua fránca ಲಿಂಗ್ವ ಫ್ರ್ಯಾಂಕ (ನಾ.) Levant ಪ್ರದೇಶದಲ್ಲಿ ಬಳಕೆಯಲ್ಲಿರುವ ಇಟ್ಯಾಲಿಯನ್, ಫ್ರೆಂಚ್, ಗ್ರೀಕ್, ಮತ್ತು ಸ್ಪ್ಯಾನಿಷ್ ಭಾಷೆಗಳ ಸಂಕರರೂಪವಾದ ಸಾಮಾನ್ಯ ಭಾಷೆ : ಸಂಕರ ಭಾಷೆ. ಬೇರೆ ಬೇರೆ (ಭಾಷೆಗಳನ್ನಾಡುವ) ಜನರ ಪರಸ್ಪರ ವ್ಯವಹಾರಕ್ಕೆ ಉಪಯೋಗವಾಗುವ ಒಂದು ಸಾಮಾನ್ಯ ಭಾಷೆ : ಸರ್ವ ಸಾಮಾನ್ಯ ಭಾಷೆ. (ರೂಪ.) ಸಾಮಾನ್ಯಾಭಿಪ್ರಾಯಗಳು.

Língual ಲಿಂಗ್ವಲ್ (ಗು., ನಾ.) (ಅಂ. ರ. ಶಾ.) ನಾಲಗೆಯ. (ಧ್ವನಿ ಶಾಸ್ತ್ರ) (ವಿರ. ಪ್ರ.) ನಾಲಗೆಯಿಂದ ಹುಟ್ಟಿದ (ಧ್ವನಿ). (ಮಾತನಾಡುವ) ಭಾಷೆಯ(ಗಳ) (L. studies ಭಾಷಾ ವ್ಯಾಸಂಗ). **Língualize** (ಕ್ರಿ. ಸಕ.); **Línguiform** (ಗು.) (ಅಂ. ರ. ಶಾ., ಸ. ವಿ., ಪ್ರಾ. ವಿ.) ನಾಲಗೆಯಾಕಾರದ ; ಜಿಹ್ವಾಕೃತಿಯ. **Línguist** (ನಾ.) (ಸ್ವಭಾಷೆಯಲ್ಲಿ ಮಾತ್ರವಲ್ಲದೆ) ಪರ ಭಾಷೆಗಳಲ್ಲಿ ಪಂಡಿತ ; ಬಹುಭಾಷಾ ಪಂಡಿತ (Good, bad, no, l.). **Linguístic** (ಗು., ನಾ.) ಭಾಷೆಗಳ ವ್ಯಾಸಂಗದ ; ಭಾಷೆಯ ; ಭಾಷಾ ಸಂಬಂಧವಾದ. (ನಾ.) ಭಾಷಾ ಶಾಸ್ತ್ರ (= Linguistics). **Linguístically** (ಕ್ರಿ. ವಿ.) ; **Língulate** ಲಿಂಗ್ಯುಲೇಟ್ (ಗು.) ನಾಲಗೆಯಾಕಾರದ. **Linguodéntal** ಲಿಂಗ್ವೊ — (ಗು.) (ಧ್ವನಿಗಳ ವಿಷಯದಲ್ಲಿ) ನಾಲಗೆ ಮತ್ತು ಹಲ್ಲುಗಳಿಂದ ಹುಟ್ಟಿದ: ಜಿಹ್ವಾ ದಂತೀಯ.

Línguiform, Linguístic, Língulate, etc. **Lingual** ನೋಡಿ.

Líniment ಲಿನಿಮೆಂಟ್ (ನಾ.) ವಾತ ರೋಗ, ಮೊ. ಗಳಲ್ಲಿ ಮೈಗೆ ಉಜ್ಜುವ (ಸಾ., ಎಣ್ಣೆ ಸೇರಿಸಿ ಮಾಡಿದ) ಒಂದು ದ್ರವ : ಉಜ್ಜುತೈಲ.

Link[1] ಲಿಂಕ್ (ನಾ., ಕ್ರಿ.) ಸರಪಣಿಯ ಒಂದು ಉಂಗುರ, ಕೊಂಡಿ. (ಅಳತೆಯಲ್ಲಿ, ಮೋಜಣಿ ಸರಪಣಿಯ $\frac{1}{100}$ ಭಾಗ = ೭·೯೨ ಅಂಗುಲ). = Sleeve-l. (Sleeve ನೋಡಿ). (ಹೆಣಿಗೆ, ಮೊ. ಗಳಲ್ಲಿ) ಒಂದು ಕುಣಿಕೆ. ಕೂಡಿಸುವ ಭಾಗ ; ಇತರ ವ್ಯಕ್ತಿಗಳಿಗೆ, ವಸ್ತುಗಳಿಗೆ, ಬಂಧಕನಾಗಿರುವವನು, —ವಾಗಿರುವುದು ; ಸಂಬಂಧಕ ; ಸಂಬಂಧ ಸಾಧನ. ಬಿಟ್ಟುಹೋಗಿರುವುದರ ಸ್ಥಳವನ್ನು ತುಂಬಿಕೊಳ್ಳುವಂಥದು : ಅಂತರ ಪೂರಕ; ಒಂದು ಶ್ರೇಣಿಯ ಅಂಶ, ಭಾಗ; ಕೊಂಡಿ [Missing l. (Miss[1] ನೋಡಿ)]. (ಕ್ರಿ.) (ವಸ್ತುಗಳನ್ನು, ವ್ಯಕ್ತಿಗಳನ್ನು) ಪರಸ್ಪರ ಸೇರಿಸು, ಕೂಡಿಸು (*Together* ಪದದೊಡನೆ) ; (—ಗೆ) ಸೇರಿಸು, ಸಂಬಂಧಿಸು, ತಗುಲಹಾಕು, ಗಂಟುಹಾಕು (*To* ಉಪ. ದೊಡನೆ) ; ಬೆರಳಲ್ಲಿ ಬೆರಳು ಸೇರಿಸಿ (ಕೈಯನ್ನು) ಹಿಡಿದುಕೊ. [ಮತ್ತೊಬ್ಬನ ತೋಳಿನೊಳಗೆ ತೋಳು ಹಾಕಿ (*In, through* ಉಪ. ದೊಡನೆ)] ತೆಕ್ಕೆಗಟ್ಟು. (ಒಂದು ಪದ್ಧತಿಗೆ, ಗುಂಪಿಗೆ) ಸೇರಿಕೊ, ಸಂಬಂಧ ಕಲ್ಪಿಸಿಕೊ. Linked battalions (ಹೊರ ದೇಶದಲ್ಲಿ ಕಾರ್ಯಮಾಡುತ್ತಿರುವ ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಟಾಲಮ್ಮಿಗೆ, ಸ್ವದೇಶದಲ್ಲಿರುವ ಮತ್ತೊಂದು ಪಟಾಲಮ್ಮಿನಿಂದ ಸಿಪಾಯಿಗಳನ್ನು ಒದಗಿಸುವಂತೆ ಪರಸ್ಪರ ನಂಬಂಧವಿರುವ) ಕೂಡು ಪಟಾಲಮ್ಮುಗಳು. **Línkage** ಲಿಂಕೆಜ್ (ನಾ.) ಕೂಡಿಕೊಂಡಿರುವ ಸ್ಥಿತಿ, ರೀತಿ ; ಸೇರಿಕೆ. ಕೊಂಡಿಗಳ ವ್ಯೂಹ.

Link² ಲಿಂಕ್ (ನಾ.) (ಹಿಂದೆ, ಬೀದಿಯಲ್ಲಿ ಓಡಾಡುವ ಜನರಿಗೆ ದಾರಿ ಕಾಣುವುದಕ್ಕಾಗಿ ಉಪಯೋಗದಲ್ಲಿದ್ದ) ಕಲ್ಲರಗು ಮತ್ತು ನಾರಿನ ಗುಂಜಿನಿಂದ ಮಾಡಿದ ಪಂಜು. L.-boy, Linkman ಪಂಜು ಹಿಡಿಯುವ ಹುಡುಗ, ಮನುಷ್ಯ ; ಮಷಾಲ್ಚಿ.

Links ಲಿಂಕ್ಸ್ (ನಾ., ಬ. ವ.) (ಸ್ಕಾ. ಪ್ರ.) (ಒರಟು) ಹುಲ್ಲು ಬೆಳೆದಿರುವ, ತೆಂಡೆಗಟ್ಟಿದ, ಮಟ್ಟವಾದ ಅಥವಾ ಏರಿಳಿತಗಳುಳ್ಳ, ಸಮುದ್ರ ತೀರದ ಬಳಿಯ ಮರಳು ನೆಲ. (ಸಾ., ಇದನ್ನು ಹೋಲುವ) ಗಾಲ್ಫ್ ಆಟದ ಬಯಲು [(ಏ. ವ. ದಲ್ಲಿ) A links]

Linn ಲಿನ್ (ನಾ.) (ಮು., ಸ್ಕಾ. ಪ್ರ.) ಜಲಪಾತ ; ನೀರುಬೀಳು ; ಇದರ ಕೆಳಗಿನ ಮಡು, ಹೊಂಡ ; ಪ್ರಪಾತ ; ಕಮರಿ.

Linn(a)éan ಲಿನೀಯನ್ (ಗು., ನಾ.) (ಸಸ್ಯಗಳನ್ನೂ ಜೀವಿಗಳನ್ನೂ ವರ್ಗೀಕರಿಸುವುದರಲ್ಲಿ) ಲಿನೀಯಸ್ಸಿನ ಅಥವಾ ಅವನ ಪದ್ಧತಿಯ (ಅನುಯಾಯಿ)

Línnet ಲಿನೆಟ್ (ನಾ.) ಕಂದು ಬಣ್ಣದ ಅಥವಾ ನರೆ ಬಣ್ಣದ ಒಂದು ಹಾಡುಹಕ್ಕಿ : 'ಲಿನೆಟ್'.

Linóleum ಲಿನೋಲಿಯಂ (ನಾ. ; ಸಂಕ್ಷಿಪ್ತ : **Líno**) ಆಮ್ಲಜನಕ ಸಂಯುಕ್ತಮಾಡಿದ ಅಗಸೆಯೆಣ್ಣೆಯೊಡನೆ ಮರದ ಪುಡಿ, ವರ್ಣದ್ರವ್ಯ, ಮೊ. ನ್ನು ಸೇರಿಸಿ ರಟ್ಟು ಬಟ್ಟೆಯಮೇಲೆ ದಪ್ಪವಾಗಿ ಬಳಿದು ತಯಾರಿಸಿದ ನೆಲದ ಹಾಸುಬಟ್ಟೆ. **Linóleumed** (ಗು.)

Línotype ಲೈನೊಟೈಪ್ (ನಾ.) ಪ್ರತ್ಯೇಕವಾದ ಅಚ್ಚುಮೊಳೆಗಳನ್ನು ಕೈಯಿಂದ ಜೋಡಿಸುವುದಕ್ಕೆ ಬದಲಾಗಿ ಏಕಕಹೊಯ್ದು ಪಂಕ್ತಿಯನ್ನು ತಯಾರಿಸುವ ಯಂತ್ರ : (ಮುದ್ರಣದ ಮೊಳೆಗಳ) ಪಂಕ್ತಿಯೆರಕ ; 'ಲೈನೊಟೈಪ್' ಯಂತ್ರ. (= Line o' type)

Línseed ಲಿನ್‌ಸೀಡ್ (ನಾ.) ನಾರಗಸೆಯ ಬೀಜ. L. cake (ದನಗಳ ತೀನಿಯಾದ) — ಹಿಂಡಿ. L. meal — ಹಿಟ್ಟು. L. oil — ಎಣ್ಣೆ. L. poultice — ಹಿಟ್ಟಿನ ಬಿಸಿಕಟ್ಟು, ಪೋಲ್ಟೀಸು.

Línsey-woólsey ಲಿನ್ಸಿ ವುಲ್ಸಿ (ನಾ.) ಹತ್ತಿಯ ಹಾಸಿನಮೇಲೆ ಒರಟು ಉಣ್ಣೆಯ ಹೊಕ್ಕು ನೆಯ್ದು ತಯಾರಿಸಿದ (ಉಡುಪು) ಬಟ್ಟೆ.

Línstock ಲಿನ್‌ಸ್ಟಾಕ್ (ನಾ.) (ಚರಿತ್ರೆ) (ಹಳೆಯ ಕಾಲದ ಗೋಲಂದಾಜಿನಲ್ಲಿ ಗುಂಡು ಹಾರಿಸಲು ಉಪಯೋಗಿಸುತ್ತಿದ್ದ) ಬೆಂಕಿ ಹೊತ್ತಿಸಿದ ಬತ್ತಿಗೆ ಆಸರೆಯಾದ ಕವಲುಳ್ಳ ದಡಿ.

Lint ಲಿಂಟ್ (ನಾ.) ಗಾಯಕ್ಕೆ ಕಟ್ಟುವುದಕ್ಕಾಗಿ ಒಂದು ಪಕ್ಕದಲ್ಲಿ ಕೆರೆದು ತುಪ್ಪುಳೆಬ್ಬಿಸಿ ಮೃದುಮಾಡಿದ ಬಟ್ಟೆ ; ಗಾಯದ ಮೆತುಬಟ್ಟೆ.

Líntel ಲಿಂಟೆಲ್, —ಟ್‌ರ್ (ನಾ.) ಬಾಗಿಲವಾಡದಮೇಲೆ ಅಥವಾ ಕಿಟಕಿಯಮೇಲೆ, ಮೇಲಿನ ಕಟ್ಟಡದ ಭಾರವನ್ನು ಹೊರಲು, ಹಾಕುವ ಹಾಸುಮರ, ಹಾಸುಗಲ್ಲು. **Líntelled** (ಗು.)

Líny. Line² (೨) ನೋಡಿ.

Líon ಲೈಅನ್ (ನಾ.) ಸಿಂಹ [ಆಫ್ರಿಕದ ಮತ್ತು ದ. ಏಷ್ಯದ ನಿವಾಸಿಯಾದ, ಕುಚ್ಚಿನ ಬಾಲವೂ (ಗಂಡು ಮೃಗದಲ್ಲಿ) ಕತ್ತಿನಮೇಲೆ ಜೋಲು ಬಿದ್ದಿರುವ ಒರಟು ಕೂದಲೂ ಇರುವ, ಕಂದು ಬಣ್ಣದ, ಬಹಳ ದೊಡ್ಡದೂ ಬಲಶಾಲಿಯೂ ಆದ, ಮಾಂಸಾಹಾರಿ ಚತುಷ್ಪಾದಿ] [L. in the way or path (ಮು., ಮನಃಕಲ್ಪಿತ) ಅಡ್ಡಿ, ಅಡಚಣೆ, ಅಪಾಯ. L.'s mouth ಅಪಾಯ ಸ್ಥಾನ, ಸ್ಥಿತಿ. L.'s share ಅತ್ಯಧಿಕ, ಅತ್ಯುತ್ತಮ, ಭಾಗ. L. & unicorn ರಾಜವಂಶ ಲಾಂಛನವನ್ನು ಎತ್ತಿ ಹಿಡಿದಿರುವಂತೆ ಚಿತ್ರಿಸಿರುವ ಸಿಂಹ ಮತ್ತು ಏಕಶೃಂಗಿ (ಯೂನಿಕಾರ್ನ್). L.'s skin ಹುಸಿ ಧೈರ್ಯ ; ತೋರ್ಕೆಯ ಧೈರ್ಯ. Twist l.'s tail (ಪರದೇಶಗಳ, ಮು., ಅಮೆ. ಸಂ. ದ ಪತ್ರಿಕೋದ್ಯೋಗಿಗಳು ಅಥವಾ ವಾಗ್ಮಿಗಳು) ಇಂಗ್ಲೆಂಡನ್ನು ಹೀಯಾಳಿಸು, ಮೂದಲಿಸು]. ಎದೆಗಾರ ; ಧೈರ್ಯಶಾಲಿ [**Lion-hearted** (ಗು.)]. (ಬ. ವ. ದಲ್ಲಿ) (ಪಟ್ಟಣ, ಮೊ. ಗಳಲ್ಲಿ) ನೋಡಬೇಕಾದ ನೋಟಗಳು (Tower of London ಕಟ್ಟಡದಲ್ಲಿಯ ಸಿಂಹಗಳನ್ನು ನೋಟತೋರುಗರು ಹಳ್ಳಿಗರಿಗೆ ತೋರಿಸುವ ಪದ್ಧತಿಯಿಂದ) (See, show, the lions). ಸಭಾಲಂಕಾರಕ್ಕಾಗಿ ಹುಡುಕಿ ಕರೆತರುವ ಪ್ರಸಿದ್ಧ ಸಾಹಿತಿ ಅಥವಾ ಪುರುಷ : "ಸಿಂಹ" (L.-hunter ಇಂಥ ಪ್ರಸಿದ್ಧ ಪುರುಷರನ್ನು ಅನುಸರಣೆ ಮಾಡುವವನು, ಸತ್ಕರಿಸುವವನು). ಗ್ರೇಟ್‌ಬ್ರಿಟನ್ನಿನ ರಾಷ್ಟ್ರಲಾಂಛನ [The British L. (ಮೂರ್ತೀಕೃತ) ಬ್ರಿಟಿಷ್ ಜನಾಂಗ]. ಸಿಂಹ ರಾಶಿ ; —ನಕ್ಷತ್ರ ಪುಂಜ. **Líonhood** (ನಾ.) ; **Líonship** (ನಾ.) ; **Lionésque** (ಗು.) ಸಿಂಹದಂಥ. **Líonlike** (ಗು.) ; **Líoness** (ನಾ.) ಹೆಣ್ಣು ಸಿಂಹ ; ಸಿಂಹಿ. **Líonet** (ನಾ.) ಸಣ್ಣ ಸಿಂಹ ; ಮರಿ ಸಿಂಹ. **Líonize** (ಕ್ರಿ.) (ಊರಿನ) ನೋಡಬೇಕಾದ ನೋಟಗಳನ್ನು ನೋಡು, ತೋರಿಸು. (ಒಬ್ಬನನ್ನು) ಪ್ರಸಿದ್ಧ ಪುರುಷನನ್ನಾಗಿ ಗೌರವಿಸು, ಪುರುಷಸಿಂಹನಂತೆ ಮೆರೆಯಿಸು. **Líonism** (ನಾ.) ಹೀಗೆ ಗೌರವಿಸುವುದು, ಮೆರೆಯಿಸುವುದು, ಗೌರವ ಪಡೆದಿರುವುದು.

Lip ಲಿಪ್ (ನಾ., ಕ್ರಿ. ಸಕ.) ತುಟಿ [Upper, lower or under, l. ಮೇಲ್ತುಟಿ, ಓಷ್ಠ ; ಕೆಳ ತುಟಿ, ಅಧರ, ಅವುಡು. Bite one's l. (ಕೆರಳಿದಾಗ, ಮನೋವಿಕಾರವನ್ನು ಅದುಮುವಾಗ, ನಗುವನ್ನು ತಡೆಯುವಾಗ) ಅವುಡು ಕಚ್ಚು ; ತುಟಿ ಕಚ್ಚು. Stiff upper l. ಧೈರ್ಯ ಸ್ಥೈರ್ಯ ; ಹಠ. Curl one's l. (ತಿರಸ್ಕಾರ ತೋರಲು) ತುಟಿ ಸುರುಳಿಸು. Hang one's l. (ದೈನ್ಯದಿಂದ) ತುಟಿ ಜೋಲುಬಿಡು. Lick, smack, one's lips (ತಿಂಡಿಯ ರುಚಿ ಹತ್ತಿ ಅಥವಾ ನಿರೀಕ್ಷಣೆಯಿಂದ) ತುಟಿ ಸವರಿಕೊ, ಚಪ್ಪರಿಸು (ರೂಪ. ಸಹ). Hang on one's lips ಒಬ್ಬನ (ಬಾಯಿಂದ ಹೊರಟ) ಪ್ರತಿ ಮಾತನ್ನೂ ಗೌರವವಿಟ್ಟು ಕೇಳು(ತ್ತಿರು). Word, etc., escapes one's lips ಮಾತು, ಮೊ. (ಮುಂದಾಲೋಚನೆಯಿಲ್ಲದೆ) ತುಟಿ ಮೀರಿ ಬರುತ್ತದೆ]. ತಲೆಹರಟೆ; ಧೃಷ್ಟತನ [None of your l.! (ಅನಂ.) ಸಾಕು ನಿನ್ನ ಹರಟೆ!]. (ಬಟ್ಟಲು, ಪಾತ್ರೆ, ಕುಳಿ, ಗಾಯ, ಮೊ. ಗಳ) ಅಂಚು, ಅರುಗು. **Lip-** ತುಟಿಗಳಿಂದ ಮಾತ್ರ ; ಹೃತ್ಪೂರ್ವಕವಲ್ಲದ ; ನಿಷ್ಕಪಟವಲ್ಲದ ; ಔಪಚಾರಿಕ. [**L.-homage** ಔಪಚಾರಿಕ ಪ್ರಭುಭಕ್ತಿ. **L.-religion** ಡಂಭಾಚಾರದ ಧರ್ಮಶ್ರದ್ಧೆ. **L.-Christian** ಧರ್ಮಶ್ರದ್ಧೆಯಿಲ್ಲದ ಕ್ರೈಸ್ತ. **L.-service** ಬಾಯಿ ಮರ್ಯಾದೆ, ಸೇವೆ. **L.-worship** ನಟನೆಯ ಪೂಜೆ. **L.-deep** ಮೇಲುಮೇಲಿನ ; ಕಪಟದ. **L.-language** ತುಟಿಗಳ ನಿಶ್ಶಬ್ದ ಚಲನೆಯಿಂದ, ಮೂಕರು ಮಾತನಾಡುವ, ಮೂಕರೊಂದಿಗೆ ಮಾತನಾಡುವ, ಮಾತನಾಡಿದ್ದನ್ನು ಅರ್ಥಮಾಡಿಕೊಳ್ಳುವ, ಭಾಷೆ : ತುಟಿಯ ಭಾಷೆ ; ಮೂಕರ ಭಾಷೆ. **L.-reading ; L.-speaking. Lipsalve** ಹುಣ್ಣುತುಟಿಗೆ ಮುಲಾಮು ; (ರೂಪ.) ಮುಖಸ್ತುತಿ. **Lipstick** ತುಟಿಗಳಿಗೆ ಬಣ್ಣ ಹಾಕಲು ಉಪಯೋಗಿಸುವ ತುಟಿ(ಬಣ್ಣದ) ಕಡ್ಡಿ]. (ಕ್ರಿ.) ತುಟಿಗಳಿಂದ ಮುಟ್ಟು ; ತುಟಿ ಸೋಕಿಸು ; ಮುದ್ದಿಡು. (ನೀರಿನ ವಿಷಯದಲ್ಲಿ) ಸೋಕು. (ದಡಕ್ಕೆ) ಮೆಲ್ಲನೆ ಹೊಡೆ. ಗೊಣಗುಟ್ಟು ; ಪಿಸುಗುಟ್ಟು. **(-)lipped** (ಗು.); **Lípless** (ಗು.)

Lipógraphy ಲಿಪಾಗ್ರಫಿ (ನಾ.) = Haplography.

Lípper ಲಿಪರ್ (ನಾ.) (ನಾವೆ) ಸಮುದ್ರದ ಕಿರು ಅಲೆಗಳ ಚಲನೆ, ಅಲ್ಪ ಕ್ಷೋಭೆ, ಮೇಲ್ಮೈಯ ಉಲ್ಲೋಲ.

Liquáte ಲೈ(ಲಿ)ಕ್ವೇಟ್ (ಕ್ರಿ. ಸಕ.) (ಲೋಹಗಳನ್ನು) ಶಾಖದಿಂದ ಕರಗಿಸಿ ಪ್ರತ್ಯೇಕಿಸು, ಶುದ್ಧ ಮಾಡು. **Liquátion** ಲಿ — (ನಾ.); **Líquefy** ಲಿಕ್ವಿಫೈ (ಕ್ರಿ.) (ಘನ ಅಥವಾ ಅನಿಲ) ದ್ರವೀಕರಿಸು, ದ್ರವವಾಗು. **Liquefácient** — ಫೇಷಿಯೆಂಟ್, — ಫೇಷೆಂಟ್ (ಗು., ನಾ.) ದ್ರವೀಕರಿಸುವ (ಸಾಧನ). **Liquefáction** — ಫ್ಯಾಕ್‌ಷನ್ (ನಾ.);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Líquefactive (ಗು.) ಕರಗುವಂತೆ ಮಾಡುವ. **Líquefiable** (ಗು.) ; **Líquefier** (ನಾ.) ; **Liquéscent** ಲಿಕ್ವೆಸೆ(ಸ್)ಂಟ್ (ಗು.) ದ್ರವವಾಗುವ ; ದ್ರವವಾಗುವಂತಿರುವ ; ಕರಗುತ್ತಿರುವ.

Líquefactive, Líquefy, Liquéscent, etc. Liquate ನೋಡಿ.

Liqueúr ಲಿಕರ್, ಲಿಕ್ಯೂರ್ (ನಾ., ಕ್ರಿ. ಸಕ.) ಸಿಹಿಯಾಗಿಯೂ, ಸುವಾಸನಾ ದ್ರವ್ಯಗಳಿಂದ ರುಚಿಕಟ್ಟಿಯೂ ಮಾಡಿದ (ಸಾ., ಸ್ವಲ್ಪ ಮೊತ್ತದಲ್ಲಿ ಕುಡಿಯುವ) ಒಂದು ತೀವ್ರ ಮದ್ಯ. (ಷಾಂಪೇನ್ ಮದ್ಯಕ್ಕೆ ರುಚಿಕಟ್ಟುವುದಕ್ಕಾಗಿ ಉಪಯೋಗಿಸುವ) ಸಕ್ಕರೆ ಮತ್ತು ಮದ್ಯಸಾರಗಳ ಅಥವಾ ಸಕ್ಕರೆ ಮತ್ತು ದ್ರಾಕ್ಷಾಮದ್ಯಗಳ ಮಿಶ್ರಣ [**L.-glass** (ತೀವ್ರಮದ್ಯ ಕುಡಿಯುವ) ಬಹು ಸಣ್ಣ ಗಾಜುಬಟ್ಟಲು. **L.-frame, -stand** ತೀವ್ರ ಮದ್ಯದ (ಸೀಸೆಗಳನ್ನಿಡುವ) ಚೌಕಟ್ಟು, ನಿಲವು]. (ಕ್ರಿ.) (ಷಾಂಪೇನ್ ಮದ್ಯಕ್ಕೆ) ತೀವ್ರಮದ್ಯ ಮಿಶ್ರಣದಿಂದ ರುಚಿ ಕಟ್ಟು.

Líquid ಲಿಕ್ವಿಡ್ (ಗು., ನಾ.) ಘನ ರೂಪವೂ ವಾಯು ರೂಪವೂ ಅಲ್ಲದ, ನೀರನ್ನು ಅಥವಾ ಎಣ್ಣೆಯನ್ನು ಹೋಲುವ, ಸ್ಥಿತಿಯ (ವಸ್ತು) ; ದ್ರವ (ರೂಪದ) ; ದ್ರವ (ವಸ್ತು) [L. air ಅತ್ಯಧಿಕ ಒತ್ತಡದಿಂದಲೂ ಶೈತ್ಯದಿಂದಲೂ ದ್ರವ ರೂಪಕ್ಕೆ ತಿರುಗಿಸಿದ ವಾಯು : ದ್ರವ ವಾಯು. L. fire (ಯುದ್ಧದಲ್ಲಿ ಉರಿಯೆರಚುವ ಯಂತ್ರದಿಂದ ಶತ್ರುಗಳಮೇಲೆ ಚೆಲ್ಲುವ) ಒಂದು ಉರಿದ್ರವ; ದ್ರವಾಗ್ನಿ]. ನೀರಾದ ; ನೀರಿನಂತಿರುವ ; (ನೀರಿನಂತೆ, ದ್ರಾಕ್ಷಾ ಮದ್ಯದಂತೆ) ಪಾರದರ್ಶಕ ಅಥವಾ ಅರ್ಧ ಪಾರದರ್ಶಕವಾಗಿರುವ, ಹೊಳಪುಳ್ಳ (L. lustre, eyes, sky, air, blue). (ಧ್ವನಿ) ಸ್ಫುಟವಾಗಿ ಹರಿಯುವ ; ನಿರರ್ಗಳ ; ಸ್ವಚ್ಛ ; ಕರ್ಕಶವಲ್ಲದ ; ಲಾಲಿತ್ಯವುಳ್ಳ ; ಕಂಠ್ಯವಲ್ಲದ ; ಸ್ವರದಂಥ (Blackbird's l. notes. In his l. Italian). (ನಾ.) L, r, (ಕೆಲವು ವೇಳೆ) m, n —ಇವುಗಳಲ್ಲಿ ಯಾವುದಾದರೂ ಅಕ್ಷರ ; ಮೃದು ವರ್ಣ. ಒಂದು ಗೊತ್ತಿಲ್ಲದ ; ಅಸ್ಥಿರ ; ಚಂಚಲ (Has very l. convictions or principles ಅವನ ನಂಬಿಕೆಗಳೂ ತತ್ತ್ವಗಳೂ ಬಹಳ ಚಂಚಲವಾದುವು). (ಆಸ್ತಿ, ಆಧಾರಪತ್ರ, ಮೊ.) ಸುಲಭವಾಗಿ ಹಣಕ್ಕೆ ಮಾರ್ಪಡಿಸಲಾಗುವ. **Liquídity** (ನಾ.); **Líquidness** (ನಾ.) ; **Líquidize** (ಕ್ರಿ. ಸಕ.) ; **Líquidly** (ಕ್ರಿ. ವಿ.) ; **Líquidate** (ಕ್ರಿ.) (ಸಾಲ) ಸಲ್ಲಿಸು, ತೀರಿಸಿಬಿಡು. (ಒಂದು ಸಂಘದ, ವ್ಯಾಪಾರ ಸಂಸ್ಥೆಯ) ದೇಣಿ ಎಷ್ಟೆಂಬುದನ್ನು ಗೊತ್ತುಮಾಡಿ ಅದಕ್ಕಿರುವ ಆಸ್ತಿಯನ್ನು ದಾಮಾಷಾಯಿ ಪ್ರಕಾರ ಲೇಣೆದಾರರಲ್ಲಿ ಹಂಚಿ ಆ ಸಂಘವನ್ನು, ಸಂಸ್ಥೆಯನ್ನು, ಮುಚ್ಚಿಬಿಡು. (ಸಂಘ, ವ್ಯಾಪಾರ ಸಂಸ್ಥೆ) ಹೀಗೆ ಲೇವಾದೇವಿ ಫೈಸಲಾಗಿ ಮುಚ್ಚಿಹೋಗು. **Líquidator** (ನಾ.) ಲೇಣಿ ದೇಣಿಗಳ ವ್ಯವಸ್ಥಾಪಕ. **Liquidátion** (ನಾ.) [Go into l. (ಸಂಘ, ಸಂಸ್ಥೆ) ಲೇವಾದೇವಿ ದಾಮಾಷಾಯಿ ಪ್ರಕಾರ ಫೈಸಲಾಗಿ ಮುಚ್ಚಿಹೋಗು, ದಿವಾಳಿಯಾಗು]. **Líquor** ಲಿಕರ್ (ನಾ., ಕ್ರಿ.) (ಒಂದು ಸ್ರಾವದ ಅಥವಾ ರಾಸಾಯನಿಕ ಕ್ರಿಯೆಯ ಉತ್ಪನ್ನವಾಗಿ ಬಂದ) ದ್ರವಾಂಶ. (ಪದಾರ್ಥಗಳನ್ನು) ತೊಳೆಯಲು, ತೊಯಿಸಿಡಲು, ಅನುಗೊಳಿಸಿದ ದ್ರವ ; ಸಾರಾಯಿತಯಾರಿಕೆಯಲ್ಲಿ ಉಪಯೋಗಿಸುವ ನೀರು; (ಸಾ., ಹುಳಿಯಿಸಿ ಅಥವಾ ಬಟ್ಟಿಯಿಳಿಸಿ ತಯಾರಿಸಿದ) ಪಾನ. [Malt l. ಧಾನ್ಯದಿಂದ ತಯಾರಿಸಿದ ಏಲ್, ಬಿಯರ್, ಪೋರ್ಟರ್, ಮೊ. ಮದ್ಯ : ಧಾನ್ಯ ಮದ್ಯ. Spirituous l. ಮದ್ಯಸಾರ ಹೆಚ್ಚಾಗಿರುವ ಸಾರಾಯಿ. Disguised with l. (Disguise ನೋಡಿ). In l., the worse for l. (ತಕ್ಕಮಟ್ಟಿಗೆ) ಕುಡಿದು, ಅಮಲೇರಿ. A l. or l.-up (ಅಸಂ.) ದೇಹೋಪಶಮನಕ್ಕಾಗಿ ಕುಡಿಯುವ ಮದ್ಯ]. ಆಹಾರಪದಾರ್ಥವನ್ನು ಬೇಯಿಸಿದ ನೀರು; ಕಟ್ಟು. (ಔಷಧ) (ಉಚ್ಚಾರಣೆ : ಲಿಕ್ವರ್, ಲೈಕ್ವರ್) ನೀರಿನಲ್ಲಿ ಲೀನವಾಗಿಸಿದ ಒಂದು ಗೊತ್ತಾದ ಔಷಧವಸ್ತುವಿನ ದ್ರಾವಣ (L. ammoniae ಅಮೋನಿಯಾ ದ್ರಾವಣ). (ಕ್ರಿ.) (ತೊಗಲು, ಮೋಜ — ಇವನ್ನು) ಚರಬಿಯಿಂದ ಅಥವಾ ಎಣ್ಣೆಯಿಂದ ತಿಕ್ಕಿ ನಯ ಮಾಡು. (ಮೊಳೆತ ಧಾನ್ಯ, ಮೊ. ನ್ನು) ನೀರಿನಲ್ಲಿ ನೆನೆಹಾಕು. (ಅಸಂ.) ಒಂದು ಕುಡಿತ ಸಾರಾಯಿ ಕುಡಿ (=L. up). **Líquorish** ಲಿಕರಿಷ್ (ಗು.) ಮದ್ಯ ಪ್ರೀತಿಯುಳ್ಳ ; —ಸೂಚಿಸುವ, ತೋರಿಸುವ. **Líquorishly** (ಕ್ರಿ. ವಿ.); **Líquorishness** (ನಾ.)

Líquidate, Líquor, etc. Liquid ನೋಡಿ.

Líquorice, Lícorice ಲಿಕೊ(ಕ)ರಿಸ್ (ನಾ.) ಅತಿಮಧುರದ ಬೇರು, ಸಸ್ಯ ; (ಈ ಬೇರಿನ ರಸದಿಂದ ತಯಾರಿಸಿ ಔಷಧಕ್ಕೂ ಮಿಠಾಯಿಗೂ ಉಪಯೋಗಿಸುವ) ಒಂದು ಬಗೆಯ ಕಪ್ಪುಪದಾರ್ಥ.

Líra ಲೀರ [ನಾ. ; ಬ. ವ. Lire (ಲೀರೇ), Liras. (ಸಂಕ್ಷಿಪ್ತ : L.)] (ಏಕಮಾನವಾಗಿ ಪರಿಗಣಿಸುವ) ಇಟಲಿಯ ಒಂದು ನಾಣ್ಯ : ಲೀರ [ಬೆಳ್ಳಿಯ ನಾಣ್ಯದ ಬೆಲೆ (ಹಿಂದೆ) ಸು., ೧೦ ಪೆನಿ]

Lisle thread ಲೈಲ್ ತ್ರೆಡ್ (ನಾ.) ಹಿಂದೆ ಫ್ರಾನ್ಸಿನ ಲೈಲ್ ಪಟ್ಟಣದಲ್ಲಿ ತಯಾರಾದ ಗಟ್ಟಿ ಹುರಿಯ ನಾಜೂಕಾದ ದಾರ; ಲೈಲ್ ದಾರ.

Lisp ಲಿಸ್ಪ್ (ಕ್ರಿ., ನಾ.) ಮಾತನಾಡುವಾಗ (ನಾಲಗೆಯ ಕುಂದಿನಿಂದಲೊ ಅಥವಾ ಒಯ್ಯಾರದಿಂದಲೊ) ಸ, ಸ್ಸ, ಕಾರಗಳಿಗೆ ಬದಲು ತ, ದ, ಕಾರಗಳನ್ನು ಉಚ್ಚರಿಸು(ವುದು). (ಮಗು) ತೊದಲು ಮಾತಾಡು ; ತೊದಲುತ್ತ ಹೇಳು (*Out* ಉಪ. ದೊಡನೆ). (ನಾ.) ತೊದಲು (ಉಚ್ಚಾರಣೆ). ನೀರಿನ ಗುಳುಗುಳು ಧ್ವನಿ ; ಎಲೆಗಳ ಮರ್ಮರ ಧ್ವನಿ. **Líspingly** (ಕ್ರಿ. ವಿ.)

Líssom(e) ಲಿಸಮ್ (ಗು.) ಹೇಗೆಂದರೆ ಹಾಗೆ ಬಾಗುವ ; ಬಳುಕುವ ; ಚಳಕವುಳ್ಳ. **Líssom(e)ness** (ನಾ.)

List[1] ಲಿಸ್ಟ್ (ನಾ., ಕ್ರಿ.) ೧. ಬಟ್ಟೆಯ ಕರೆ, ಅಂಚು (ಸಾ., ಬೇರೆ ಪದಾರ್ಥದಿಂದ ಮಾಡಿದ್ದು) [**Lísting** (ನಾ.) (ಬಟ್ಟೆಯ) ಅಂಚು]. ಹರಿದು ಇತರ ವಿಧದಲ್ಲಿ ಉಪಯೋಗಿಸುವ ಅಂಥ ಅಂಚುಗಳು [L. slippers. Line edges of door with l. (ಗಾಳಿ ತೂರದಂತೆ) ಕದದ ಏಣಿಗೆ ಅಂಚುಬಟ್ಟೆ ಸೇರಿಸು]. (ಕ್ರಿ.) (ಒಂದರ) ಏಣಿಗೆ ಅಂಚುಬಟ್ಟೆ ಸೇರಿಸು (Have listed my doors). (ಬ. ವ. ದಲ್ಲಿ) ಥಳ್ಲೆಯ ಕಾಳಗದ ಕಳದ ಸುತ್ತಲೂ ನಿಲ್ಲಿಸಿರುವ ದಸಿಗಳ ತಡಕೆ. (ರೂಪ.) ಕಾಳಗದ ಕಳ ; ಮಲ್ಲ ರಂಗ ; ಅಖಾಡ [Enter the lists against (ಸಾ., ವಾಗ್ವಾದಕ್ಕೆ) ಕರೆ ಕೊಡು, ಕರೆ ಒಪ್ಪಿಕೊ ; ರಂಗಕ್ಕಿಳಿ]

೨. (ಹೆಸರುಗಳು, ಒಂದು ವರ್ಗಕ್ಕೆ ಸೇರಿದ ಮನುಷ್ಯರು ಅಥವಾ ವಸ್ತುಗಳು, ಬೆಲೆಹಾಕಿದ ಸಾಮಾನುಗಳು, ಮಾಡಬೇಕಾದ ಕೆಲಸಗಳು —ಇವೇ ಮೊ. ಗಳ) ಪಟ್ಟಿ [Active l. ಯುದ್ಧಕಾರ್ಯಕ್ಕೆ ಕರೆ ಬಂದಲ್ಲಿ ಹೋಗಬೇಕಾದ ಸೈನ್ಯದ, ನಾವೆಯ, —ಅಧಿಕಾರಿಗಳ ಪಟ್ಟಿ. Free l. (Free ಗು. ನೋಡಿ). Civil, Sick, -l. (ಆಯಾ ಪದವನ್ನು ನೋಡಿ)]. (ಕ್ರಿ.) ಪಟ್ಟಿಗೆ ಸೇರಿಸು, ದಾಖಲ್ಮಾಡು ; ಪಟ್ಟಿ ಮಾಡು. (ಈಗ ವಿರ. ಪ್ರ. ಅಥವಾ ಗ್ರಾಮ್ಯ) ಸಿಪಾಯಿಗಿರಿಗೆ ಹೋಗು ; ಸೈನ್ಯಕ್ಕೆ ಸೇರಿಕೊ.

List[2] ಲಿಸ್ಟ್ (ಕ್ರಿ. ಸಕ.) (ಪ್ರಾಚೀ. ಪ್ರ. ; ಪ್ರಥಮ ಪುರುಷ ವರ್ತಮಾನ ಏ. ವ. List, Listeth ; ಭೂತ. List, Listed) (ಒಬ್ಬನಿಗೆ) ಹರ್ಷಕರವಾಗಿರು, ಮನವೊಪ್ಪುವಂತಿರು [I shall do what him listeth (ಅವನಿಗೆ) ಇಷ್ಟ ಹೇಗೊ ಹಾಗೆ ಮಾಡುತ್ತೇನೆ. He did as him list (ಅವನಿಗೆ) ಇಷ್ಟಬಂದಂತೆ ಮಾಡಿದನು]. (ಮಾಡಲು) ಇಚ್ಛೆಪಡು ; ಮನಸ್ಸಿಗೆ ಬರು, ತೋರು ; ಅಪೇಕ್ಷಿಸು (Ye who l. to hear. Wind bloweth where it listeth)

List[3] ಲಿಸ್ಟ್ (ನಾ., ಕ್ರಿ. ಅಕ.) (ಹಡಗು — ತೂತುಬಿದ್ದು, ಸಾಮಾನು ಜರಗಿ, ಮೊ. ದುದರಿಂದ) ಒಂದು ಕಡೆಗೆ ಬಾಗು(ವುದು) ; (ಕಟ್ಟಡ, ಬೇಲಿ, ಮೊ. ವು) ಒಂದು ಪಕ್ಕಕ್ಕೆ ಓಲು(ವುದು)

List[4] ಲಿಸ್ಟ್ (ಕ್ರಿ.) (ಪ್ರಾಚೀ. ಪ್ರ.) (ಕಿವಿಯಿಂದ) ಕೇಳು ; ಕಿವಿಗೊಡು. **Listen** ಲಿಸನ್ (ಕ್ರಿ.) (ಯಾವುದನ್ನಾದರೂ) ಕಿವಿಗೊಟ್ಟು ಕೇಳು ; ಆಲಿಸು ; (ಒಬ್ಬನ ಮಾತನ್ನು) ಗಮನವಿಟ್ಟು ಕೇಳು ; ಕಿವಿಗೊಡು (*To* ಉಪ. ದೊಡನೆ). L. in ಮತ್ತೊಬ್ಬರಿಗೆ ಅಥವಾ ಅನೇಕರಿಗೆ ಉದ್ದೇಶಿಸಿ ಕಳುಹಿಸಿದ ದೂರವಾಣಿಯನ್ನು, ದೂರಲೇಖನವನ್ನು, ಅಥವಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಸ್ತಂತುವಾರ್ತೆಯನ್ನು, ತಾನು ಕೇಳಲಾಗುವಂತೆ ಅನುಕೂಲಪಡಿಸಿಕೊಂಡು ಆಲಿಸು. Listening-post ಶಬ್ದದಿಂದ ಶತ್ರುಗಳ ಚಲನ ವಲನಗಳನ್ನು ಪತ್ತೆ ಮಾಡಬಹುದಾದ ಶತ್ರುಸ್ಸೈನ್ಯದ ಸಮೀಪ ಸ್ಥಾನ : ಕೇಳ್ದಾಣ. **Lístener** (ನಾ.) (Good listener ರೂಢಿಯಾಗಿ ಆಸಕ್ತಿಯಿಂದ, ಸಹಾನುಭೂತಿಯಿಂದ, ಆಲಿಸುವವನು ; ಚೆನ್ನಾಗಿ ಕಿವಿಗೊಡುವವನು)

Lísten, etc. List[4] ನೋಡಿ.

Lísterine ಲಿಸ್ಟರಿ(ೕ)ನ್ (ನಾ.) ಒಂದು ಪೂತಿನಾಶಕ ದ್ರಾವಣ(ದ ಹೆಸರು) : 'ಲಿಸ್ಟರೀನ್'. **Lísterize** (ಕ್ರಿ. ಸಕ.) ಲಿಸ್ಟರಿನ ಪೂತಿ ನಾಶಕ ವಿಧಾನಗಳಿಂದ (ಗಾಯವನ್ನು) ಚಿಕಿತ್ಸೆ ಮಾಡು. **Listérian** ಲಿಸ್ಟೀರಿಯನ್ (ಗು.) ಲಿಸ್ಟರನು ನಿರ್ಮಿಸಿದ ಪೂತಿನಾಶಕ ಶಸ್ತ್ರಚಿಕಿತ್ಸಾ ಪದ್ಧತಿಯ. (Lord Lister ಎಂಬ ಪ್ರಸಿದ್ಧ ವೈದ್ಯನ ಹೆಸರಿನಿಂದ)

Lístless ಲಿಸ್ಟ್‌ಲೆಸ್ (ಗು.) ಉತ್ಸಾಹ ಶೂನ್ಯ ; ಜಡ ; ಉದಾಸೀನ ಭಾವದ ; ನಿರಾಸಕ್ತಿಯ ; ಯಾವುದಕ್ಕೂ ಮನಸ್ಸಿಲ್ಲದ. **Lístlessly** (ಕ್ರಿ. ವಿ.) ; **Lístlessness** (ನಾ.)

Lit ಲಿಟ್. Light ಧಾತುವಿನ ಭೂತ. ಮತ್ತು ಭೂ. ಕೃ.

Lítany ಲಿಟನಿ (ನಾ.) (ಚರ್ಚಿನ ಆರಾಧನೆಗಳಲ್ಲೂ ಮೆರವಣಿಗೆಗಳಲ್ಲೂ ಪಾದ್ರಿಗಳು ಪಠಿಸುವ ಮತ್ತು ಸಭಿಕರು ಅದಕ್ಕೆ ಉತ್ತರವಾಗಿ, ಸಾ., ಒಂದೇ ಪಾಠಕ್ರಮದಲ್ಲಿ, ಹೇಳುವ) ಪ್ರಾರ್ಥನ ಮಾಲೆ : ಲಿಟನಿ. [The L. (ಕ್ರೈಸ್ತ) Common Prayer Book ಎಂಬ ಪುಸ್ತಕದಲ್ಲಿಯ ಸ್ತೋತ್ರ ಪಾಠಗಳು]. L.-desk, -stool ಲಿಟನಿ ಪ್ರಾರ್ಥನೆ ಹೇಳುವಾತನು ಮಂಡಿಯೂರಿಕೊಳ್ಳುವ (ಸ್ಥಳದಲ್ಲಿಯ) ಇಳಿಮೇಜು, ನಾಗಾಲು ಮಣೆ.

Litchí ಲೀಚೀ (ನಾ.) (ಚೀನಾದೇಶದಿಂದ ತಂದ, ಈಗ ಬಂಗಾಳದಲ್ಲಿ ಬೆಳೆಯುವ) ಲೀಚೀ ಹಣ್ಣು(ಮರ)

Líteracy. **Literal** ನೋಡಿ.

Líterae humanióres ಲಿಟೆರೀ ಹ್ಯುಮೇನಿಯೊರೀಸ್ (ನಾ., ಸಂಕ್ಷಿಪ್ತ : Lit. Hum.) ಸುಸಂಸ್ಕೃತ, ಲಲಿತ, — ಸಾಹಿತ್ಯ ; ಪುರಾತನ ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯ (ಮು., ಆಕ್ಸ್‌ಫರ್ಡಿನ ಬಿ.ಎ. ಪರೀಕ್ಷೆಯ, ಅಥವಾ ಗ್ರೀಕ್ ಮತ್ತು ಲ್ಯಾಟಿನ್ ಸಂಪ್ರದಾಯ ಶೈಲಿಯ, ಹೆಸರು)

Líteral ಲಿಟೆರಲ್ (ಗು., ನಾ.) (ವರ್ಣಮಾಲೆಯ) ಅಕ್ಷರದ(ಗಳ); ಅಕ್ಷರದಲ್ಲಿ (ಗಳಲ್ಲಿ), ಅಕ್ಷರದಿಂದ (ಗಳಿಂದ), ವ್ಯಕ್ತಪಡಿಸಿದ [L. error, L. (ನಾ.) ಮುದ್ರಣಾಕ್ಷರ ಸ್ಖಾಲಿತ್ಯ]. ಅಕ್ಷರಶಃ ; ಪದಶಃ ; ಯಥಾ ಮೂಲ (L. translation ಅಕ್ಷರಶಃ ಭಾಷಾಂತರ. L. transcript ಯಥಾ ಮೂಲ ಪ್ರತಿ). (ಗೂಢಾರ್ಥ ರೂಪಕಾರ್ಥಗಳನ್ನು ಬಿಟ್ಟು) ಸಾಮಾನ್ಯ ಶಬ್ದಾರ್ಥವನ್ನು ಮಾತ್ರ ಪರಿಗಣಿಸುವ ; ವಾಚ್ಯಾರ್ಥ [L. interpretation ಕೇವಲ ಶಬ್ದಾರ್ಥ ನಿರೂಪಣೆ. I hear nothing in the l. sense of the word ನನ್ನ ಕಿವಿಗೆ ಏನೂ ಕೇಳಿಸುವುದಿಲ್ಲ]. (ವ್ಯಕ್ತಿಯ ವಿಷಯದಲ್ಲಿ) ನೀರಸನಾದ. ಗದ್ಯಲಕ್ಷಣದ. (ಊಹಾಂಶಕ್ಕೆ ಹೋಗದ) ವಾಸ್ತವಾಂಶಕ್ಕೆ ಮಾತ್ರ ಗಮನ ಕೊಡುವ ; ಕೆಲಸವೆಷ್ಟೋ ಅಷ್ಟರ. (ಉತ್ಪ್ರೇಕ್ಷೆಯಿಲ್ಲದ) ವಾಸ್ತವವಾದ ; ವಾಚ್ಯಾರ್ಥದಂತೆಯೇ ಇರುವ [L. decimation ವಾಸ್ತವವಾಗಿಯೂ ಹತ್ತರಲ್ಲೊಂದರಂತೆ ಧ್ವಂಸ. (ಅಪ ಪ್ರಯೋಗ) A l. flood of pamphlets]. **Líteralism** (ನಾ.) ಪದಶಃ ಅರ್ಥಮಾಡುವ ಪ್ರವೃತ್ತಿ. (ಕುಶಲ ಕಲೆ) ಸ್ವಾಭಾವಿಕ ನಿರೂಪಣೆ ; ಸಹಜ ನಿರೂಪಣೆ. **Líteralist** (ನಾ.) ; **Literálity** (ನಾ.) ; **Líteralness** (ನಾ.) ; **Líterally** (ಕ್ರಿ. ವಿ.) ; **Líteralize** (ಕ್ರಿ. ಸಕ.) (ರೂಪಕ, ಮೊ. ನ್ನು) ವಾಚ್ಯಾರ್ಥದಲ್ಲಿ ಪರಿಗಣಿಸು. **Literárum dóctor** (L) ಲಿಟೆರೇರಂ ಡಾಕ್ಟರ್ (ನಾ.) ಸಾಹಿತ್ಯನಿಧಿ (ಏ. ಏ. ನಿ. ದ ಬಿರುದು). **Líterary** ಲಿಟೆರರಿ (ಗು.) ಸಾಹಿತ್ಯದ ; ಸಾಹಿತ್ಯಾತ್ಮಕವಾದ ; ಗ್ರಂಥಗಳ ಮತ್ತು ಲೇಖನಗಳ [L. history of a thing (ಒಂದರ) ಸಾಹಿತ್ಯ ಚರಿತ್ರೆ. L. property ಪ್ರಕಟನಸ್ವಾಮ್ಯದ ಸಂಪೂರ್ಣಾಧಿಕಾರ ; ಇದಕ್ಕೊಳಪಟ್ಟ ಪುಸ್ತಕಗಳು, ಮೊ. ವು ; ಸಾಹಿತ್ಯರೂಪದ ಆಸ್ತಿ. L. man = man of letters (Letter ನೋಡಿ)]. (ಪದ, ಭಾಷಾ ಮರ್ಯಾದೆ) ಬಳಕೆಯಲ್ಲಿಲ್ಲದ, ಲೇಖಕರ ಪಾಂಡಿತ್ಯ ಲಕ್ಷಿತವಾದ. **Líterarily** (ಕ್ರಿ. ವಿ.); **Líterariness** (ನಾ.) ; **Líterate** ಲಿಟೆರೆಟ್ (ಗು., ನಾ.) ಸ್ವಲ್ಪ ಮಟ್ಟಿಗೆ ಸಾಹಿತ್ಯ ಪರಿಚಯವುಳ್ಳ(ವನು). (ಈಗ ಸಾ.) ಓದು ಬರಹ ಬಲ್ಲ(ವನು) ; ಅಕ್ಷರಸ್ಥ. **Líteracy** ಲಿಟೆರಸಿ (ನಾ.) ಓದು ಬರಹ ತಿಳಿದಿರುವುದು : ಅಕ್ಷರ ಜ್ಞಾನ. **Literáti** (L) — ರೇಟೈ (ನಾ., ಬ. ವ.) ಸಾಹಿತಿಗಳು ; ಪಂಡಿತ ವರ್ಗ. **Literátim** (L) — ರೇಟಿಮ್ (ಕ್ರಿ. ವಿ.) ಅಕ್ಷರಕ್ಕೆ ಅಕ್ಷರದಂತೆ ; ಅಕ್ಷರಶಃ ; ಯಥಾ ಮೂಲವಾಗಿ. **Líterator** — ರೇಟರ್ (ನಾ.) ಸಾಹಿತಿ ; ಪಂಡಿತ. **Líterature** ಲಿಟೆರಟ್ಯೂರ್, — ಚರ್ (ನಾ.) (ಪ್ರಾಚೀ. ಪ್ರ.) ಸಾಹಿತ್ಯ ಸಂಸ್ಕಾರ ; ಸಾಹಿತ್ಯ ನಿರ್ಮಾಣ (Engaged in l. ಸಾಹಿತ್ಯಕಾರ್ಯದಲ್ಲಿ ನಿರತನಾಗಿ). ಸಾಹಿತ್ಯ; ಸಾಹಿತ್ಯೋದ್ಯೋಗ; ಸಾಹಿತ್ಯಸಂಪತ್ತು; ಸಾಹಿತ್ಯ ಕ್ಷೇತ್ರ ; ಒಂದು ದೇಶದ, ಕಾಲದ, ಸಾಹಿತ್ಯ (ಗ್ರಂಥಗಳು) (ಕಾವ್ಯ) ರೂಪಸೌಂದರ್ಯ, ರಸ ಪ್ರಭಾವ — ಇವುಗಳಿಂದ ರಮಣೀಯವಾಗಿರುವ ಲೇಖನಗಳು, ಗ್ರಂಥಗಳು [Light l. (Light[2] ನೋಡಿ)]. ಒಂದು ವಿಷಯದಮೇಲಿನ ಗ್ರಂಥಗಳು. (ಬಳ. ಮಾ.) ಅಚ್ಚಾದ ವಿಷಯ.

Líterate, Líterature, etc. **Literal** ನೋಡಿ.

Lítharge ಲಿಥಾರ್ಜ್ (ನಾ.) ಸೀಸದ ಆದ್ಯ ಆಮ್ಲಜನಕ ಸಂಯುಕ್ತ ; ಮುರದಾರಸಿಂಗಿ.

Lithe ಲೈದ್ (ಗು.) ಬಾಗುವ ; ಬಳುಕುವ ; ನಮ್ಯ. **Lítheness** (ನಾ.) ; **Líthesome** (ಗು.)

Líthia ಲಿತಿಯ (ನಾ.) 'ಲಿತಿಯಂ' ಎಂಬ ಲೋಹಧಾತುವಿನ ಆಮ್ಲಜನಕ ಸಂಯುಕ್ತ : ಲಿತಿಯ. **L.-water** (ಸಂಧಿವಾತ ರೋಗಕ್ಕೆ ಔಷಧವಾಗಿ ಉಪಯೋಗಿಸುವ) ಲಿತಿಯ ದ್ರಾವಣ. **Líthic[1]** ಲಿತಿಕ್ (ಗು.) (ರ. ವಿ.) ಲಿತಿಯಮ್ಮಿನ. **Líthium** ಲಿತಿಯಂ (ನಾ.) ಕ್ಷಾರೀಯ ವರ್ಗಕ್ಕೆ ಸೇರಿದ ಒಂದು ಲೋಹಧಾತು : 'ಲಿತಿಯಂ'.

Líthic[2] ಲಿತಿಕ್ (ಗು.) ಕಲ್ಲಿನ ; ಅಶ್ಮರಿಯ.

Líthograph ಲಿತೊಗ್ರಾಫ್ (ನಾ., ಕ್ರಿ. ಸಕ.) ಕಲ್ಲಚ್ಚಿನಿಂದ ಮುದ್ರಿಸಿದ್ದು ; ಕಲ್ಲಚ್ಚು ; ಶಿಲಾ ಮುದ್ರಣ. (ಕ್ರಿ.) ಕಲ್ಲಚ್ಚಿನಿಂದ ಮುದ್ರಿಸು ; ಶಿಲಾ ಮುದ್ರಣ ಮಾಡು. **Lithógrapher** ಲಿತಾಗ್ರಫರ್ (ನಾ.) ; **Lithógraphy** (ನಾ.) ಸ್ಲೇಟಿನಂಥ ಒಂದು ಬಗೆಯ ಹಳದಿಯ ಸುಣ್ಣದ ಶಿಲೆಯಮೇಲೆ ನಕ್ಷಾರೇಖೆಗಳನ್ನು ಅಥವಾ ಅಕ್ಷರಗಳನ್ನು ಒಂದು ತೆರದ ಮಸಿಯಿಂದ ಬರೆದು ಪ್ರತಿಗಳನ್ನೆತ್ತುವ ವಿಧಾನ ; ಶಿಲಾ ಮುದ್ರಣ ಕಲೆ, ವಿಧಾನ. **Lithográphic** ಲಿತೊಗ್ರಾಫಿಕ್ (ಗು.) (L. stone ಶಿಲಾಮುದ್ರಣದ ಕಲ್ಲು)

Lithólogy ಲಿತಾಲೊಜಿ (ನಾ.) ಕಲ್ಲುಗಳ, ಕಲ್ಲುಬಂಡೆಗಳ, — ಸ್ವಭಾವವನ್ನೂ ರಚನೆಯನ್ನೂ ಕುರಿತ ಶಾಸ್ತ್ರ : ಶಿಲಾ ಶಾಸ್ತ್ರ. ವೈದ್ಯ ಶಾಸ್ತ್ರದಲ್ಲಿ ಅಶ್ಮರೀ ರೋಗಗಳನ್ನು ಕುರಿತ ಶಾಖೆ ; ಅಶ್ಮರೀ ಶಾಸ್ತ್ರ. **Lithológical** ಲಿತೊಲಾಜಿಕಲ್ (ಗು.)

Líthontríptic ಲಿತಾನ್‌ಟ್ರಿಪ್ಟಿಕ್ (ಗು., ನಾ.) ಮೂತ್ರಕೋಶದಲ್ಲಿರುವ ಅಶ್ಮರಿಯನ್ನು ಶಿಥಿಲಮಾಡುವ, ಕರಗಿಸುವ, (ಔಷಧ); ಅಶ್ಮರೀ ಭೇದಕ

Líthophyte ಲಿತೊಫೈಟ್ (ನಾ.) (ಪ್ರಾ. ವಿ.) (ಕೆಲವು ಹವಳಗಳಂತೆ) ಒಡಲ ದ್ರವ್ಯವು ಸುಣ್ಣದಪದಾರ್ಥವಾಗಿರುವ ಒಂದು ಸಮುದ್ರಕೀಟ (ಸ. ವಿ.) ಕಲ್ಲಿನಮೇಲೆ ಬೆಳೆಯುವ ಸಸ್ಯ : ಶಿಲಾ ಸಸ್ಯ.

Lithótomy ಲಿತಾಟೊಮಿ (ನಾ.) ಮೂತ್ರಕೋಶದಲ್ಲಿಯ ಅಶ್ಮರಿಯನ್ನು ಕತ್ತರಿಸಿಹಾಕುವ ಶಸ್ತ್ರಚಿಕಿತ್ಸೆ : ಅಶ್ಮರೀ ಕರ್ತನ. **Lithótomist** (ನಾ.) ; **Lithótomize** (ಕ್ರಿ. ಸಕ.) ; **Lithotómic(al)** ಲಿತೊಟಾ — (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Lithótrity ಲಿತಾಟ್ರಿಟಿ (ನಾ.) (ಮೂತ್ರನಾಳದ ಮೂಲಕ ಹೊರಗೆ ಬರಲು ಅನುಕೂಲನುವಂತೆ, ಮೂತ್ರಕೋಶದಲ್ಲಿಯ) ಅಶ್ಮರಿಯನ್ನು ಸಣ್ಣ ಸಣ್ಣ ಚೂರುಗಳಾಗಿ ಒಡೆಯುವುದು : ಅಶ್ಮರೀ ಭಂಜನ. **Lithótritist** (ನಾ.) ; **Lithótritize** (ಕ್ರಿ. ಸಕ.)

Lithuánian ಲಿತ್ಯುಏನಿಯನ್ (ಗು., ನಾ.) ಲಿತ್ಯುಏನಿಯದ (ಭಾಷೆ, ನಿವಾಸಿ)

Lítigate ಲಿಟಿಗೇಟ್ (ಕ್ರಿ.) ನ್ಯಾಯಕ್ಕಾಗಿ ಕೋರ್ಟಿಗೆ ಹೋಗು ; (ನ್ಯಾಯಸ್ಥಾನದಲ್ಲಿ) ವ್ಯವಹಾರ ಹೂಡು, ಮಾಡು ; ಮೊಕದ್ದಮೆಗೆ ಕಕ್ಷಿಯಾಗಿರು ; (ಒಂದು ವಿಷಯದ ನ್ಯಾಯನಿರ್ಣಯದ ಬಗ್ಗೆ) ವಿವಾದ ಹೂಡು. **Lítigable** — ಗಬ್‌ಲ್ (ಗು.) ವ್ಯವಹಾರ ಯೋಗ್ಯ, ಸಾಧ್ಯ. **Lítigant** — ಗಂಟ್ (ನಾ., ಗು.) ಕೋರ್ಟಿನ ವ್ಯವಹಾರದಲ್ಲಿ, ವ್ಯಾಜ್ಯದಲ್ಲಿ, ತೊಡಗಿರುವವನು ; ಕಕ್ಷಿಗಾರ. **Litigátion** — ಗೇ — (ನಾ.) (ನ್ಯಾಯಸ್ಥಾನದಲ್ಲಿ) ಮೊಕದ್ದಮೆ, ವ್ಯವಹಾರ, — ಹೂಡುವುದು ; ದಾವೆ, ಖಟ್ಲೆ, — ಮಾಡುವುದು ; ವ್ಯವಹಾರ. **Litígious** ಲಿಟಿಜಸ್ (ಗು.) ಕೋರ್ಟುವ್ಯವಹಾರದಲ್ಲಿ ಆಸಕ್ತನಾದ ; ಕೋರ್ಟುವ್ಯವಹಾರ ಪ್ರಿಯ; ಕೋರ್ಟುವ್ಯವಹಾರ ಯೋಗ್ಯ; ಕೋರ್ಟು ವ್ಯವಹಾರಕ್ಕೆ ವಿಷಯವನ್ನು ಒದಗಿಸುವ ; ಕೋರ್ಟುವ್ಯವಹಾರಗಳ. **Litígiously** (ಕ್ರಿ. ವಿ.) ; **Litígiousness** (ನಾ.)

Lítmus ಲಿಟ್ಮಸ್ (ನಾ.) ಆಮ್ಲದಿಂದ ಕೆಂಪಾಗುವ, ಕ್ಷಾರದಿಂದ ಮತ್ತೆ ನೀಲಿಯಾಗುವ, ಕಲ್ಲುಹೂವಿನಿಂದಾದ ಒಂದು ನೀಲಿ ವರ್ಣದ್ರವ್ಯ : 'ಲಿಟ್ಮಸ್'. L.-paper ಆಮ್ಲಪರೀಕ್ಷೆಗಾಗಿ ತಯಾರಿಸಿದ, ಲಿಟ್ಮಸ್ ಬಣ್ಣ ಕೊಟ್ಟ ಹಸಿಯ ಕಾಗದ : 'ಲಿಟ್ಮಸ್' ಕಾಗದ.

Lítotes ಲೈ(ಲಿ)ಟೊಟೀಸ್ (ನಾ.) (ಅಲಂ.) ವ್ಯಂಗ್ಯಾರ್ಥ ಸೂಚಕವಾದ ಸೌಮ್ಯ ರೂಪದ ಮಾತು (ಉದಾ., *Scoundrel is* rather *a rude word* 'ನೀಚ' ಎಂಬುದು ಸ್ವಲ್ಪಮಟ್ಟಿಗೆ ಒರಟು ಮಾತು) ; (ಮು.) ಆಕ್ಷೇಪಣೆಗೆ ಅವಕಾಶ ಕೊಡದಿರುವುದಕ್ಕಾಗಿ ಅಥವಾ ಹೆಚ್ಚು ಪರಿಣಾಮವುಂಟುಮಾಡುವುದಕ್ಕಾಗಿ ಅಹುದೆನ್ನುವ ಪದವನ್ನು ಪ್ರಯೋಗಿಸದೆ ಅದರ ವಿರುದ್ಧ ಪದದ ನಿಷೇಧ ರೂಪವನ್ನು ಪ್ರಯೋಗಿಸುವುದು [ಉದಾ., A citizen of no mean city (that is, of an illustrious city) 'ಯಾವುದೋ ಕ್ಷುದ್ರ ಪಟ್ಟಣದ ಪ್ರಜೆಯಲ್ಲ' (ಎಂದರೆ, 'ಮಹಾ ಪಟ್ಟಣದ ಪ್ರಜೆ' ಎಂದು ಅಭಿಪ್ರಾಯ)]

Lítre ಲೀಟರ್ (ನಾ.) ('ಮೆಟ್ರಿಕ್' ಪದ್ಧತಿಯಲ್ಲಿ) ಘನ ಅಳತೆಯ (ಏಕ) ಮಾನ ($\frac{1}{10}$ ಮೀಟರ್ ಏಣುಳ್ಳ ಘನಾಕೃತಿಯ ಅಳತೆ : ಸು., $1\frac{3}{4}$ ಪೈಂಟು)

Lítter ಲಿಟರ್ (ನಾ., ಕ್ರಿ.) ಅಂದಳ; ಶಿಬಿಕೆ; ಮೇನ (ಒಳಗೆ ಸುಪ್ಪತ್ತಿಗೆಯನ್ನು ಹಾಸಿದ, ಸುತ್ತಲೂ ಪರದೆಗಳಿಂದ ಮುಚ್ಚಿದ, ಮನುಷ್ಯರ ಹೆಗಲ ಮೇಲೆ ಅಥವಾ ಪ್ರಾಣಿಗಳಮೇಲೆ ಹೊರಿಸಿ ಕಳುಹಿಸುವ, ಒಂದು ವಾಹನ); (ರೋಗಿಗಳನ್ನೂ ಗಾಯಪಟ್ಟವರನ್ನೂ ಸಾಗಿಸಲು ಉಪಯೋಗಿಸುವ) ಸುಪ್ಪತ್ತಿಗೆ ಹಾಸಿದ ಚೌಕಟ್ಟು ; ಡೋಲಿ. (ಮು., ಪ್ರಾಣಿಗಳ ಹಾಸಿಗೆಯಾದ) ಒಣ ಹುಲ್ಲು, ಜೊಂಡು, ಮೊ. ವು; (ದನದ) ಹುಲ್ಲುಹಾಸಿಗೆ; ಕೊಟ್ಟಿಗೆಯ ಹುಲ್ಲು ಮತ್ತು ಸಗಣಿ ; (ಒಂದು ಸ್ಥಳದಲ್ಲಿ ಬಿದ್ದಿರುವ) ಚೂರುಪಾರು, ಕಸಕಡ್ಡಿ, ತಿನ್ನದೆ ಚೆಲ್ಲಿದ ತಿಂಡಿ, ಗೊತ್ತಿಲ್ಲದೆ ಎಸೆದ ಕಾಗದ, ಮೊ. ಗಳ ರಾಶಿ ; ಸೆತ್ತೆ ; ಕಸ [**Líttery** (ಗು.)]. ಒಂದು ಸೂಳಿಗೆ ಈದ ಮರಿಗಳು. (ಕ್ರಿ.) (ಕುದುರೆ, ಮೊ. ಕ್ಕೆ) ಹಾಸಿಗೆಯಾಗಿ ಹುಲ್ಲು, ಮೊ. ನ್ನು ಹಾಸು (*Down* ಉಪ. ದೊಡನೆ). ಅಲ್ಲಲ್ಲಿ ಬಿದ್ದಿರುವ ಚೂರು ಪಾರುಗಳಿಂದ (ಸ್ಥಳವನ್ನು) ಒಪ್ಪ ಓರಣವಿಲ್ಲದಂತೆ ಮಾಡು ; ಗಲೀಜು ಮಾಡು. (ನಾಯಿಮರಿ, ಮೊ. ನ್ನು) ಈ(ನು) ; ಮರಿ ಹಾಕು.

Litterateúr (F) ಲಿಟೆ(ಟ)ರಟರ್ (ನಾ.) ಸಾಹಿತಿ.

Líttle ಲಿಟ್‌ಲ್ [(ಗು.) ; (ತರ ರೂಪ Less, Lesser ; ತಮ ರೂಪ Least ; ಮತ್ತು smaller, smallest)] ಸಣ್ಣ ; ಪುಟ್ಟ ; ಸ್ವಲ್ಪ ; ಕೊಂಚ ; ತುಸ ; ಚಿಕ್ಕ ; ಕಿರಿಯ ; ದೊಡ್ಡದಲ್ಲದ ; ಮಹತ್ತಿಲ್ಲದ. (ಭೇದ ತೋರಿಸುವ ವಿಶೇಷಣವಾಗಿ) The l. Auk ಚಿಕ್ಕರೂಪಿನ 'ಆಕ್' ಪಕ್ಷಿ. The L. Bear ಲಘು ಸಪ್ತರ್ಷಿ (ನಕ್ಷತ್ರ ಪುಂಜ). The l. finger or, toe (ಕೈಯ ಅಥವಾ ಕಾಲಿನ) ಕಿರು ಬೆರಳು. The l. Joneses ಜೋನ್ಸಿನ ಮಕ್ಕಳು. L. man or woman (ಮು., ಸಂಬೋಧನೆಯಲ್ಲಿ) ಹುಡುಗ, ಹುಡುಗಿ. His, her, its, our, l. ones — ಮಕ್ಕಳು, ಮರಿಗಳು. Her poor l. efforts to please ಪಾಪ ! ಮೆಚ್ಚಿಕೆ ಪಡೆಯಲು ಮಾಡಿದ ಅವಳ ಅಲ್ಪ ಪ್ರಯತ್ನಗಳು. We know his l. ways ಅವನ ಅಲ್ಪ, ನೀಚ, ವರ್ತನೆಗಳು ನಮಗೆ ಗೊತ್ತು. So that is your l. game (Game[1] ನೋಡಿ). A l. man ಪುಟ್ಟ ಮನುಷ್ಯ ; ಕುಳ್ಳ. The l. people = Fairies. I will go a l. way with you ನಿನ್ನ ಜೊತೆಯಲ್ಲಿ ಸ್ವಲ್ಪ ದೂರ ಬರುತ್ತೇನೆ. Wait a l. while ಸ್ವಲ್ಪ (ಹೊತ್ತು) ತಡೆ. Every l. difficulty ಪ್ರತಿ ಅಲ್ಪ ತೊಂದರೆಯೂ. With the l. cunning of l. minds ಕ್ಷುದ್ರ ಜನರ ನೀಚ ತಂತ್ರಗಳಿಂದ. Gained l. advantage from it ಅದರಿಂದ ನನಗೆ ಪ್ರಯೋಜನವಾಗಲಿಲ್ಲ. The l. ಅಲ್ಪಾಧಿಕಾರಿಗಳು ; ಅಮುಖ್ಯರು ; ಅಲ್ಪವಾದದ್ದು. In l. ಸ್ವಲ್ಪ ಪ್ರಮಾಣದಲ್ಲಿ ; ಸ್ವಲ್ಪವಾಗಿ. L.-Englandism ಗ್ರೇಟ್‌ಬ್ರಿಟನ್ನು ನೆಲಸು ನಾಡುಗಳ ಮತ್ತು ಅಧೀನ ದೇಶಗಳ ವಿಷಯದಲ್ಲಿ ತನ್ನ ಜವಾಬ್ದಾರಿಯನ್ನು ಕಡಮೆ ಮಾಡಿಕೊಳ್ಳಬೇಕೆಂಬ ಮತ (ಎದುರು ಪದ: Imperialism). L.-Englander (ಎದುರು ಪದ: Imperialist). L.-go (ಬಳ. ಮಾ.) ಕೇಂಬ್ರಿಜ್ಜಿನ B.A. ಪಟ್ಟದ ಪ್ರಥಮ ಪರೀಕ್ಷೆ. L. Mary (ಬಳ. ಮಾ.) ಹೊಟ್ಟೆ. L. Masters (Durer ಎಂಬಾತನ ಅನುಯಾಯಿಗಳಾದ ೧೬ನೆಯ ಶತಮಾನದ) ಜರ್ಮನ್ ನಕಾಸಗಾರರು (ಅವರ ನಕಾಸೆಗಳು ಗಾತ್ರದಲ್ಲಿ ಸಣ್ಣವಾಗಿದ್ದ ಕಾರಣದಿಂದ). **Líttleness** (ನಾ.) ಕಿರಿಮೆ ; ಸಣ್ಣತನ.

Líttle (ನಾ.; ಕ್ರಿ. ವಿ., ತರ ತಮಗಳು Less, Least) ಹೆಚ್ಚಲ್ಲದ್ದು; ಸ್ವಲ್ಪಮೊತ್ತದ್ದು ; ಅತ್ಯಲ್ಪವಾದದ್ದು ; ರವೆಯಷ್ಟು ; ಕೆಲಸಕ್ಕೆ ಬಾರದಷ್ಟು [L. or nothing ಏನೂ ಇಲ್ಲವೆಂದೇ ಹೇಳಬೇಕು. Did not a l. for the cause ಉದ್ದೇಶಸಾಧನೆಗಾಗಿ ಪಟ್ಟ ಶ್ರಮ ಸ್ವಲ್ಪವಲ್ಲ. Got but, very, rather, l. out of it ಅದರಿಂದ ಏನು ಫಲವೂ ದೊರೆಯಲಿಲ್ಲ. Gives me l. of his company ಅವನು ನನ್ನ ಜೊತೆ ಸೇರುವುದೇ ಇಲ್ಲ. Did what l. he could. The l. of his work that remains ಅವನ ಉಳಿದಿರುವ ಸ್ವಲ್ಪ ಕೆಲಸ. Knows a l. of everything ಪ್ರತಿಯೊಂದೂ ಕೊಂಚ ಕೊಂಚ ಬಲ್ಲನು. A l. ಸ್ವಲ್ಪ ಮಾತ್ರ. Not a l. ಸ್ವಲ್ಪ ಮಾತ್ರವಲ್ಲ. After a l. ಸ್ವಲ್ಪ ಹೊತ್ತು ಕಳೆದ ಬಳಿಕ. L. by l., By l. & l. ಕೊಂಚ ಕೊಂಚವಾಗಿ ; ಕ್ರಮೇಣ]. (ಕ್ರಿ. ವಿ.) ಸ್ವಲ್ಪ ಮಟ್ಟಿಗೆ ಮಾತ್ರ ; ಸ್ವಲ್ಪ(ವಾಗಿ) : I like him l. ಅವನನ್ನು ನಾನು ಅಷ್ಟೇನೂ ಮೆಚ್ಚುವುದಿಲ್ಲ. L. known authors ಅಪ್ರಸಿದ್ಧ ಗ್ರಂಥಕರ್ತರುಗಳು. He l. knows, dreams ಅವನಿಗೆ ಗೊತ್ತೇ ಇಲ್ಲ, ಅವನು ಕನಸಿನಲ್ಲೂ ಕಾಣನು.

Líttoral ಲಿಟೊರಲ್ (ಗು., ನಾ.) (ಕಡಲ) ಕರೆಯ(ಲ್ಲಿರುವ) ; ತೀರದ(ಲ್ಲಿರುವ) ; ತೀರ ಪ್ರದೇಶ.

Líturgy ಲಿಟರ್ಜಿ (ನಾ.) Eastern Church ಎಂಬ (ಕ್ರೈಸ್ತ) ಮತದ ಪ್ರಭುಭೋಜನ ಸಂಸ್ಕಾರ ; (ಇದಕ್ಕೆ ವಿಧಾಯಕವಾಗಿರುವ) ಸಾರ್ವಜನಿಕ ಪೂಜಾವಿಧಾನ, ವಿಧಾನ ಸೂತ್ರಗಳು. Book of Common Prayer ಎಂಬ ಪ್ರಾರ್ಥನಾ ಪುಸ್ತಕ (The l.). **Litúrgical** (ಗು.) ; **Litúrgically** (ಕ್ರಿ. ವಿ.)

Lívable. **Live** (ಕ್ರಿ.) ನೋಡಿ.

Live ಲೈವ್ (ಗು.) (ವಿಶೇಷಣವಾಗಿ) ಜೀವಂತವಾಗಿರುವ ; ಜೀವದಿಂದಿರುವ ; ಜೀವಿಸಿರುವ ; ಸಜೀವ ; ಬದುಕಿರುವ. (ಹಾಸ್ಯ ಪ್ರ.) (ನಟನೆ, ಕಲ್ಪನೆ, ಚಿತ್ರ, ಆಟ, — ಮೊ. ಕ್ಕೆ ಸಂಬಂಧ ಪಡದೆ) ನಿಜವಾದ ; ವಾಸ್ತವಿಕ (A real l. burglar). ಶಕ್ತಿಪೂರ್ಣ ; ಸತ್ತ್ವಪೂರ್ಣ ; ಪ್ರಾಮುಖ್ಯತೆಯುಳ್ಳ ; ರೂಢಿಯಳಿದಿದ್ದಲ್ಲದ ; ಪ್ರಸಕ್ತವಾದ (Make

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

the question a l. issue ಆ ಪ್ರಶ್ನೆಗೆ ಜೀವಗೂಡಿಸು). ಉರಿಯುತ್ತಿರುವ; ನಿಗ ನಿಗನೆ ಬೆಳಗುತ್ತಿರುವ; ಜ್ವಲಿಸುತ್ತಿರುವ (L. embers); (ಸಿಡಿಗುಂಡು) ಇನ್ನೂ ಸಿಡಿದಿಲ್ಲದ ; (ದೀಪದ ಕಡ್ಡಿ) ಇನ್ನೂ ಹೊತ್ತಿಸಿಲ್ಲದ ; (ತಂತಿ) ವಿದ್ಯುತ್ಪ್ರವಾಹ ಭರಿತ [L. wire (ರೂಪ.) ವಿದ್ಯುತ್ತಿನಂತೆ ಶಕ್ತಿಯುಳ್ಳ ಮನುಷ್ಯ ; ಮಿಂಚಿನ ಬಳ್ಳಿ]. (ಬಂಡೆ) ಸಿಡಿದು ಬೇರೆಯಾಗಿಲ್ಲದ ; ಭೂಮಿಯ ಒಡಲಿಗೆ ಸೇರಿಕೊಂಡಿರುವಂತೆ ಕಾಣುವ. (ಯಂತ್ರದ ಚಕ್ರ, ಮೊ. ವು) ಚಲಿಸುತ್ತಿರುವ, ಚಲನೆ ಕೊಡುತ್ತಿರುವ. L.-bait (Bait ನೋಡಿ). L.-stock (ಕೆಲಸಕ್ಕಾಗಿ, ಲಾಭ ಸಂಪಾದನೆಗಾಗಿ, ಇಟ್ಟುಕೊಂಡಿರುವ) ದನ ಕರುಗಳು ; ಜಾನುವಾರು ; ಪಶುಧನ. **Livelihood** (ನಾ.) ಜೀವನೋಪಾಯ ; ಜೀವನಾಧಾರ ; ಹೊಟ್ಟೆಪಾಡು. **Livelong** ಲಿವ್‌ಲಾಂಗ್ (ಗು.) (ಕಾವ್ಯ, ಅಲಂ.) ಮೊದಲಿಂದ ಕಡೆಯ ವರೆಗಿನ ; ಸಂಪೂರ್ಣವಾದ ; ಇಡಿಯ. The l. day, night, summer (ಬೇಸರಿಕೆಯ ಅಥವಾ ಸಂತೋಷದ ಭಾವನೆಯಿಂದ). **Lively** ಲೈವ್ಲಿ (ಗು.) ಜೀವವಿರುವಂತೆ ತೋರುವ ; ಯಥಾವತ್ತಾದ (A l. description ಕಣ್ಣಿಗೆ ಕಟ್ಟುವ ವರ್ಣನೆ. Give a l. idea of ಯಥಾವತ್ತಾದ ಭಾವ ಬರುವಂತೆ ತಿಳಿಯಹೇಳು). ಉತ್ಸಾಹ ತುಂಬಿರುವ; ಶಕ್ತಿಯಿಂದ ಕೂಡಿದ ; ವೀರ್ಯವತ್ತಾದ ; ಚಟುವಟಿಕೆಯುಳ್ಳ ; ಜೋರಾದ ; ಸ್ಫುಟವಾದ ; ಸ್ವಾರಸ್ಯವಾದ. (ಹಾಸ್ಯ ಪ್ರ.) ಉದ್ವೇಗಗೊಳಿಸುವ; ಕೆರಳಿಸುವ ; ಕುತೂಹಲ ಹೆಚ್ಚಿಸುವ ; ಅಪಾಯಕರವಾದ; ಕಷ್ಟವಾದ [Police had a l. time ಪೊಲೀಸಿನವರು ಬಹಳ ಕಷ್ಟಪಡಬೇಕಾಯಿತು. Press is making things l. for— ವೃತ್ತಪತ್ರಿಕೆಗಳು (— ಗೆ) ತೊಂದರೆಯುಂಟುಮಾಡುತ್ತಿವೆ]. (ಬಣ್ಣದ ವಿಷಯದಲ್ಲಿ) ಹೊಳಪಿನ ; ಉಜ್ಜ್ವಲ. ಉಲ್ಲಾಸಕರವಾದ ; ಗೆಲುವಿನ ; ಉತ್ಸಾಹ ತುಂಬಿದ. (ದೋಣಿ, ಮೊ. ವು) ಅಲೆಗಳಮೇಲೆ ಹಗುರವಾಗಿ ಏಳುವ. **Livelily** (ಕ್ರಿ. ವಿ.) ; **Liveliness** (ನಾ.) ; **Liven** ಲೈವ್‌ನ್ (ಕ್ರಿ.) ಉಲ್ಲಾಸಗೊಳ್ಳು, — ಗೊಳಿಸು ; ಕಳೆಗೂಡು, — ಡಿಸು ; ಹುರಿದುಂಬು, — ಬಿಸು (*Up* ಉಪ. ಜೊಡನೆ)

Live ಲಿವ್ (ಕ್ರಿ.) ಜೀವದಿಂದಿರು ; ಜೀವಿಸಿರು ; ಬದುಕಿರು ; ಬಾಳು ; (ಪ್ರಾಣಿಯಾಗಿ ಅಥವಾ ಸಸ್ಯವಾಗಿ) ಜೀವವಿರು. [L. (up)on (ತಿಂದು) ಜೀವಿಸು (L. on fruit)]. ಒಬ್ಬರ ಆಶ್ರಯದಲ್ಲಿ, ಆಧಾರದ ಮೇಲೆ, ಬದುಕು (Lives upon his wife's earnings. Lives on his name). (ಬುದ್ಧಿಚಾತುರ್ಯ, ಮೊ. ಗಳಿಂದ, ಕಾರ್ಯಮಾಡುವುದರಿಂದ) ಜೀವನೋಪಾಯ ಸಂಪಾದಿಸು (*By* ಉಪ. ಜೊಡನೆ). L. & let l. ಇತರರು ತನ್ನ ಹುಳುಕನ್ನು ಎತ್ತಿಹಾಕದಿರಲೆಂದು ತಾನು ಇತರರ ಹುಳುಕನ್ನು ಗಮನಿಸದಿರು. L. from hand to mouth (Hand ನೋಡಿ). L. honestly, viciously, like a saint, etc. L. up to one's principles ತಾನು ಹಾಕಿದ ನಿಯಮಕ್ಕೆ ಅನುಸಾರವಾಗಿ ಬಾಳು. L. fast [Fast[2] (ಕ್ರಿ. ವಿ.) ನೋಡಿ]. L. in clover (Clover ನೋಡಿ). L. well (ಮೃಷ್ಟಾನ್ನ ಭೋಜನ ಮಾಡುತ್ತ) ಸುಖದಿಂದ ಜೀವಿಸು. L. on air ನಿರಾಹಾರಿಯಾಗಿರು(ವಂತೆ ತೋರು). L. in a small way ಸ್ವಲ್ಪ ವೆಚ್ಚದಲ್ಲಿ, ಗಲಾಟೆಯಿಲ್ಲದೆ, ಜೀವನ ಮಾಡು. L. close ಜಿಪುಣನಾಗಿ ಜೀವಿಸು. L. a double life = Lead— (Lead[2] ನೋಡಿ). L. to oneself (ಮತ್ತೊಬ್ಬರೊಡನೆ ಬೆರೆಯದೆ) ತನ್ನಷ್ಟಕ್ಕೆ ತಾನು ಜೀವಿಸು ; ಸ್ವಾರ್ಥ ಜೀವನ ಮಾಡು. L. a virtuous life ಪರಿಶುದ್ಧ ಜೀವನ ನಡಸು. He lived what he narrated ಅವನು ತಾನು ನುಡಿದಂತೆ ನಡೆದನು. L. a lie ಸುಳ್ಳುಬಾಳು ಬಾಳು. Patient cannot l. ರೋಗಿ ಬದುಕಲಾರನು. Lived to see his children's children ತನ್ನ ಮಕ್ಕಳ ಮಕ್ಕಳನ್ನು (ಮೊಮ್ಮಕ್ಕಳನ್ನು) ನೋಡುವ ವರೆಗೂ ಬದುಕಿದ್ದನು. L. & learn (ಹೊಸ ಅನುಭವದಿಂದ ಆಡುವ ಮಾತು) ಬದುಕಿದ್ದು ಬುದ್ಧಿ ಕಲಿ. L. out the night ರಾತ್ರಿಯೆಲ್ಲ ಜೀವವಿಟ್ಟುಕೊಂಡಿರು. His memory lives ಅವನ ನೆನಪು ಉಳಿದಿದೆ. **Livable** (ಗು.) (ಮನೆ, ಕೊಠಡಿ, ವಾಯುಗುಣ, ಮೊ. ಗಳ ವಿಷಯದಲ್ಲಿ) ವಾಸಯೋಗ್ಯವಾದ ; (ಬಾಳಿಕೆ) ಹಿತಕರವಾದ ; ಹಿತಕರವಾಗಿ ತೋರುವ ; ಸಹವಾಸಯೋಗ್ಯ ; ಜೊತೆಯಲ್ಲಿ ತೊಂದರೆಯಿಲ್ಲದೆ ಜೀವಿಸಬಹುದಾದ. **Livableness** (ನಾ.) ; **Liver**[1] (ನಾ.) (ಒಂದು ಗೊತ್ತಾದ ಕ್ರಮದಲ್ಲಿ) ಜೀವಿಸುವವನು (Clean, loose, l. ಪರಿಶುದ್ಧ, ಸಡಿಲ, — ಜೀವನ ನಡಸುವವನು. Good l. ಸತ್ಪುರುಷ ; ಸುಖ ಭೋಗಿ). **Living**[1] (ನಾ.) (ಕ್ರಿಯಾರ್ಥಗಳಲ್ಲಿ) ; ಜೀವನೋಪಾಯ ; ಹೊಟ್ಟೆಪಾಡು ; ಬದುಕು (Make one's l. ಹೊಟ್ಟೆ ಹೊರೆದುಕೊ). (ಕ್ರೈಸ್ತ ಮತ) ಮಠ ಮಾನ್ಯ ; ಧರ್ಮಾದಾಯ. Good l. ಮೃಷ್ಟಾನ್ನ ಭೋಜನ. Plain l. & high thinking ಸರಳ ಜೀವನ, ಉನ್ನತ ಭಾವನೆ. L.-room ಹಗಲು (ಹೊತ್ತು) ಮನೆಯವರೆಲ್ಲರೂ ಉಪಯೋಗಿಸಬಹುದಾದ ವಾಸದ ಕೊಠಡಿ. L. wage ಜೀವನಕ್ಕೆ ಸಾಕಾಗುವಷ್ಟು ಕೂಲಿ. **Living**[2] (ಗು.) (ಕ್ರಿಯಾರ್ಥಗಳಲ್ಲಿ) ; ಸಮ ಕಾಲಿಕ ; ಈಗ ಇರುವ ; ಜೀವಂತ (No man l. could do better. The first of l. artists. The l. ಈಗ ಬದುಕಿರುವವರು. In the land of the l. ಜೀವಂತನಾಗಿ). (ಪ್ರತಿ ಕೃತಿ) ತದ್ರೂಪವಾದ ; ಮೂಲಕ್ಕೆ ಸರಿಯಾದ. L. water ಎಲ್ಲ ಕಾಲಗಳಲ್ಲೂ ಹರಿಯುತ್ತಿರುವ ನೀರು. L. language ಇನ್ನೂ ದೇಶದ ಬಳಕೆಯಲ್ಲಿರುವ ಭಾಷೆ ; ಜೀವಂತ ಭಾಷೆ. L. death ನಿರಾಶೆಯಿಂದ ಕೂಡಿದ ಅತ್ಯಂತ ದುಃಖ ಸ್ಥಿತಿ ; ಸತ್ತ ಬಾಳು. Within l. memory ಇನ್ನೂ ಬದುಕಿರುವವರ ನೆನಪಿನಲ್ಲಿ. **Livingly** (ಕ್ರಿ. ವಿ.)

Liver[2] ಲಿವರ್ (ನಾ.) ಪಿತ್ತಜನಕಾಂಗ ; ಯಕೃತ್ತು [ಕಶೇರುಕ ಪ್ರಾಣಿಗಳಲ್ಲಿ ಪಿತ್ತರಸವನ್ನು ರಕ್ತದಿಂದ ಸ್ರವಿಸುವ, (ತನ್ನಲ್ಲಿ ಹರಿಯುವ) ರಕ್ತದಲ್ಲಿ ವಿಶೇಷ ಪರಿಣಾಮವನ್ನುಂಟುಮಾಡುವ, ಜಠರದ ಬಲಭಾಗದಲ್ಲಿರುವ, ಕಡುಗೆಂಪು ಬಣ್ಣದ, ರಸ ಗ್ರಂಥಿಯುತವಾದ ಒಂದು ದೊಡ್ಡ ಅಂಗ]. ಯಕೃತ್ತಿನ ರೋಗ (ಸ್ಥಿತಿ), ವ್ಯಾಧಿ (= L.-complaint). ಎಣ್ಣೆಗೆಂಪು ಛಾಯೆಯ ಕಂದು ಬಣ್ಣ ; ಯಕೃತ್ತಿನ ವರ್ಣ (= L.-colour). (ಆಹಾರಕ್ಕಾಗಿ ಉಪಯೋಗಿಸುವ ಕೆಲವು ಪ್ರಾಣಿಗಳ) ಯಕೃತ್ತಿನ ಮಾಂಸ. (ಪ್ರಾಚೀ. ಪ್ರ.) ಮನೋರಾಗಗಳ ನೆಲೆ [Hot l. ರಾಗೋದ್ರೇಕ ಸ್ವಭಾವ ; ಕಾಮೋದ್ರೇಕ ಸ್ವಭಾವ. White or lily l. ಹೇಡಿತನ ; ಪುಕ್ಕಲು. **-livered** (ಗು.)]. L.-line ಸಾಮುದ್ರಿಕ ಶಾಸ್ತ್ರದ ರೀತಿಯಾಗಿ ಅರ್ಥಗರ್ಭಿತವಾದ ಅಂಗೈಯ ಒಂದು ರೇಖೆ. L. wing (ಹಾಸ್ಯ ಪ್ರ.) ಬಲ ತೋಳು. **Liverwort** ಯಕೃತ್ತಿನ ಆಕಾರದ ಭಾಗಗಳುಳ್ಳ ಅಥವಾ ಯಕೃತ್ತಿನ ರೋಗಗಳಲ್ಲಿ ಉಪಯೋಗಿಸುವ (ಹಲವು ಬಗೆಯ) ಸಸ್ಯ. **Liverish** (ಗು.) ಯಕೃತ್ತಿನಂತಿರುವ ; ಯಕೃತ್ತಿನ ರೋಗದ ಚಿಹ್ನೆಗಳುಳ್ಳ. **Liverless** (ಗು.) ; **Livery**[1] (ಗು.) ಯಕೃತ್ತಿನ ಸಾಂದ್ರತೆಯುಳ್ಳ ; ಯಕೃತ್ತಿನ ಬಣ್ಣದ ; ಯಕೃತ್ತಿನ ರೋಗವುಳ್ಳ ; ರೋಗದ ಯಕೃತ್ತುಳ್ಳ ; ಇರುಸು ಮುರುಸಾಗಿರುವ ; ರೇಗುವ; ಬೇಗ ಕೆರಳುವ. (ಜಮೀನಿನ ಮಣ್ಣು) ಜಿಗುಟಾದ, ಬಿಗಿಯಾದ.

Livery[2] ಲಿವರಿ (ನಾ.) (ಚರಿತ್ರೆ) ಆಶ್ರಿತರು, ಊಳಿಗದವರು, ಮೊ. ರಿಗೆ ಕೊಡಲು ಮಾಡಿರುವ ಅನ್ನದ ಅಥವಾ ಬಟ್ಟೆಯ ಏರ್ಪಾಡು. ಕುದುರೆಗಳಿಗೆ ಕೊಡಲು ಗೊತ್ತುಮಾಡಿರುವ ಮೇವು [At l. (ಕುದುರೆಯ ವಿಷಯದಲ್ಲಿ) ಗೊತ್ತಾದ ಕೂಲಿಗಾಗಿ ಮೇವು ತಿನ್ನಿಸಿ, ಮಾಲೀಸು ಮಾಡಿ, ಯಜಮಾನನಿಗಾಗಿ ಕಾಪಾಡಿಕೊಂಡಿರುವ]. ಒಬ್ಬನ ಸೇವಕ, ಒಂದು ಅಧಿಕಾರವುಳ್ಳವನು, ತನ್ನ ತನ್ನ ವಿಶೇಷತೆಯ ಗುರುತಿಗಾಗಿ ಧರಿಸುವ ಉಡುಪು : ವೈಶಿಷ್ಟ್ಯದ ಪೋಷಾಕು [In, out of, l. (ಆಳಿನ ವಿಷಯದಲ್ಲಿ) ವೈಶಿಷ್ಟ್ಯದ ಪೋಷಾಕು ಧರಿಸಿ, ಧರಿಸದೆ (ಸಾಮಾನ್ಯ ಉಡುಪು ತೊಟ್ಟು). (ರೂಪ.) Birds in their winter l.]. (ನ್ಯಾ. ಶಾ.) ಕಾನೂನುಪ್ರಕಾರ ಒಬ್ಬನಿಗೆ ಆಸ್ತಿ ವಶಪಡಿಸುವುದು (Sue one's l. ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಪ್ರೋಷ್ಯರ ನ್ಯಾಯಸ್ಥಾನದಲ್ಲಿ ಉತ್ತರಾಧಿಕಾರಿಯಾಗಿ ವ್ಯವಹಾರ ಹೂಡು) ; ಆಸ್ತಿ ವಶಪಡಿಸುವ ಆಜ್ಞೆ. L. company ಹಿಂದೆ ಒಂದೊಂದು ವೈಶಿಷ್ಟ್ಯದ ಪೋಷಾಕನ್ನು ಸದಸ್ಯರು ಧರಿಸುತ್ತಿದ್ದ ಲಂಡನ್ ಪಟ್ಟಣದ ಸಂಸ್ಥೆಗಳಲ್ಲೊಂದು. L. fine ಈ ಸಂಸ್ಥೆಗೆ ಸದಸ್ಯನಾಗಿ ಸೇರಲು ಕೊಡಬೇಕಾದ ರುಸುಮು. L. servant ವೈಶಿಷ್ಟ್ಯದ ಪೋಷಾಕಿನ ಸೇವಕ. **Liveryman** ವೈಶಿಷ್ಟ್ಯದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೋಷಾಕಿನ ಸಂಸ್ಥೆಯ ಸದಸ್ಯ. ಬಾಡಿಗೆ ಕುದುರೆಗಳ ರಾಯ ವನ್ನಿಟ್ಟಿರುವವನು; ಈ ರಾಯದ ಚಾಕರ. **Líveried** — ರಿಡ್ (ಗು.)

Lívid ಲವಿಡ್ (ಗು.) ನೀಲಿ ಛಾಯೆಯ ಸೀಸ ವರ್ಣದ ; (ಮೂಗುಗಾಯ ದಿಂದಾದಂತೆ) ವಿವರ್ಣವಾಗಿರುವ, ನೀಲಿಗಟ್ಟಿದ. **Livídity** (ನಾ.) ; **Lívidly** (ಕ್ರಿ. ವಿ.)

Livre (F) ಲೀವ್ರ್ (ನಾ.) ಒಂದು ಹಳೆಯ ಫ್ರೆಂಚ್ ನಾಣ್ಯ.

Lixíviate ಲಿಕ್ಸಿವಿಯೇಟ್ (ಕ್ರಿ. ಸಕ.) (ನೀರು ಹರಿಸಿ ತೊಳೆಯುವುದರಿಂದ) ಒಂದು ಪದಾರ್ಥದ ವಿಲೀನವಾಗುವ ಭಾಗವನ್ನು ವಿಲೀನವಾಗದ ಭಾಗದಿಂದ ಬೇರ್ಪಡಿಸು. **Lixiviátion** (ನಾ.) ವಿಲೀನ ಶೋಧನ ಕಾರ್ಯ.

Lízard ಲಿಸರ್ಡ್ (ನಾ.) ಹಲ್ಲಿ (ಸಾ., ಉದ್ದವಾದ ಒಡಲೂ ಬಾಲವೂ ನಾಲ್ಕು ಕಾಲುಗಳೂ ವಲ್ಕಗಳಿಂದ ಅಥವಾ ಬೀಜಕಗಳಿಂದ ಕೂಡಿದ ಚರ್ಮವೂ ಉಳ್ಳ ಒಂದು ಸರೀಸೃಪ) ; (ವೈಜ್ಞಾನಿಕ ಪ್ರ.) ಈ ಜಾತಿಗೆ ಸೇರಿದ — ಓತಿ, ಹೆಂಟೆಗೊದ್ದ, ಊಸರವಳ್ಳಿ, ಮೊ. ವು, ಮತ್ತು ವಂಶನಷ್ಟವಾದ ಪೆಡಂಭೂತ ಪ್ರಾಣಿವರ್ಗ. ಒಂದು ಬಗೆಯ ಮೆಚ್ಚಿನ ಸಾಕು ಕನೇರಿಹಕ್ಕಿ (ಜಾತಿ)

'll ಲ್. Will ಶಬ್ದದ ಸಂಕ್ಷಿಪ್ತ (I'll, he'll, that'll ಮೊ. ಗಳಲ್ಲಿ)

Lláma ಲಾಮ, ಲ್ಯಾಮ (ನಾ.) ಒಂಟೆಯ ಜಾತಿಗೆ ಸೇರಿದ, ಆದರೆ ಅದಕ್ಕಿಂತ ಗಾತ್ರದಲ್ಲಿ ಬಹಳ ಚಿಕ್ಕದಾದ, ಡುಬ್ಬವಿಲ್ಲದ, ಉಣ್ಣೆ ಗೂದಲಿನ, ದ. ಅಮೆರಿಕದ ಒಂದು ಹೊರೆಹೊರುವ ಪ್ರಾಣಿ : 'ಲಾಮ'. ಲಾಮದ ತುಪ್ಪಟ(ದ ಬಟ್ಟೆ)

Lloyd's ಲಾಯ್ಡ್ಸ್ (ನಾ.) ಲಂಡನ್ನಿನಲ್ಲಿ ಸ್ಥಾಪಿತವಾಗಿರುವ ಒಂದು ನೌಕಾ ವಿಮಾ ಸಂಘ. L. list ನೌಕಾ ವರ್ತಮಾನ ಪತ್ರಿಕೆ. L. register ಹಡಗುಗಳ ಹೆಸರು, ಮೊ. ವಿವರಗಳನ್ನು ಕೊಟ್ಟು, ಅಕಾರಾದಿ ಕ್ರಮದಲ್ಲಿ ಪ್ರತಿ ವರ್ಷವೂ ಪ್ರಕಟಿಸುವ ಪಟ್ಟಿ ; 'ಲಾಯ್ಡ್ಸ್' ಸಂಸ್ಥೆಯ ನೌಕಾ ವಿವರದ ದಾಖಲೆ ಪುಸ್ತಕ.

Lo ಲೋ (ಭಾವ. ಅವ್ಯ.) (ಪ್ರಾಚೀ. ಪ್ರ.) ಅಗೋ ! ನೋಡು ! ಗಮನಿಸು ! [ಸಾ., Lo and behold ! (ಆಶ್ಚರ್ಯಕರವಾದ ವಿಷಯಕ್ಕೆ ಹಾಸ್ಯ ರೂಪದ ಪೀಠಿಕೆಯಾಗಿ) ಅಗೋ ನೋಡು ! ಗಮನಿಸು !]

Load ಲೋಡ್ (ನಾ.) ಹೊರೆ ; ಹೇರು ; ಭಾರ ; (ಸಾ.) ಹೊರುವ ಮೊತ್ತ ; ಹೇರಿನ ಮೊತ್ತ (Cart-l. ಬಂಡಿಯ ಹೊರೆ). ಕೆಲವು ವಸ್ತುಗಳ ಗೊತ್ತಾದ ಅಳತೆಯ, ತೂಕದ, —ಮಾನ; ಒಂದು ಭಾರ; ಭಾರವಾಗಿ, ತೊಡರಾಗಿ, ವರ್ತಿಸುವ ಒಂದು ವಸ್ತು ಅಥವಾ ಶಕ್ತಿ ; ಒಂದು ಚಾಲಕಯಂತ್ರವು ಎದುರಿಸಿ ಪರಿಹರಿಸಿಕೊಳ್ಳಬೇಕಾದ ಬಾಹ್ಯ ನಿರೋಧ (ಪ್ರಮಾಣ) ; ಕಮಾನು, ಮೊ. ಗಳ ಮೇಲೆ ಮೇಲ್ಕಟ್ಟಡದ ಒತ್ತಡ. (ವಿದ್ಯುತ್) (ಒಂದು ಗೊತ್ತಾದ ಕಾಲದಲ್ಲಿ ವಿದ್ಯುಜ್ಜನಕ ಯಂತ್ರವಾಗಲ ವಿದ್ಯುದುತ್ಪಾದಕ ಕಾರ್ಖಾನೆಯಾಗಲ ಒದಗಿಸುವ) ವಿದ್ಯುತ್ ಪ್ರವಾಹದ ಮೊತ್ತ. ಜವಾಬ್ದಾರಿಯ, ರಕ್ಷಣೆಯ, ದುಃಖದ, —ಭಾರ, ಹೊರೆ [Take a l. off one's mind ಒಬ್ಬನ ಮನಸ್ಸಿನಮೇಲಿನ ಭಾರವಿಳಿಸು. ಒಬ್ಬನ ಮನಸ್ಸಿನ ಆತಂಕವನ್ನು ಪರಿಹರಿಸು]. (ಬ. ವ. ದಲ್ಲಿ, ಬಳ. ಮಾ.) ಸಮೃದ್ಧಿ ; ಹೇರಳ ; ರಾಶಿ ರಾಶಿ ; ರಾಶಿಗಟ್ಟಳೆ. L.-displacement, -draught ಭರತಿಯ ಹಡಗು ಆಕ್ರಮಿಸಿರುವ ನೀರಿನ ತೂಕ, ತೇಲುನೀರಿನ ಆಳ. L.-(water)line ಪೂರ್ತಿ ಭರತಿಯಾದ ಹಡಗು ನೀರಿನಲ್ಲಿ ತೇಲುವಾಗ, ಹಡಗು ಮುಳುಗಿದ ಮಟ್ಟವನ್ನು ತೋರಿಸುವ ನೀರ ಗೆರೆ. **Loadstone, lodestone** ಕಾಂತಾಕರ್ಷಣ ಗುಣವುಳ್ಳ ಅಯಸ್ಸಿಂದೂರ ; ಅಯಸ್ಕಾಂತವಾಗಿ ಉಪಯೋಗಿಸುವ ಇದರ ಒಂದು ಚೂರು ; ಸೂಜಿಗಲ್ಲು ; ಆಕರ್ಷಕ(ವಸ್ತು). ('ದಾರಿ ತೋರಿಸುವ ಕಲ್ಲು' ಎಂಬುದು ಇದರ ಅವಯವಾರ್ಥ)

Load (ಕ್ರಿ.) (ಮನುಷ್ಯ, ವಾಹನ, ಹಡಗು, ಮೊ. ಗಳಮೇಲೆ) ಭಾರ ಹಾಕು, ಹೇರು ; (ಸಾಮಾನು) ತುಂಬು ; (ಹೊರೆ) ಹೊರಿಸು, ಹೇರು. (ಹಡಗು, ವಾಹನ, ಮನುಷ್ಯ, ಮೊ. ಗಳ ವಿಷಯದಲ್ಲಿ) ಭಾರ, ಹೊರೆ, ಸಾಮಾನು, — ಹೊತ್ತುಕೊ, ತುಂಬಿಕೊ (*Up* ಉಪ. ದೊಡನೆ) (L cargo ಹಡಗಿಗೆ ಸರಕು ತುಂಬು) ; ಭಾರ ಹಾಕು ; ಹೊರೆಯಾಗು ; ಭಾರವಾಗಿ ಒತ್ತುತ್ತಿರು (Stomach loaded with food ತಿಂದು ಬರಿಯುತ್ತಿರುವ ಹೊಟ್ಟೆ). (ಮು., ಸೀಸ ತುಂಬಿ) ಭಾರವಾಗಿಸು (A loaded cane. Loaded dice ಒಂದು ಗೊತ್ತಾದ ಮುಖ ಮೇಲ್ಮುಖವಾಗಿ ಬೀಳುವಂತೆ ಒಂದು ಕಡೆ ಭಾರ ತುಂಬಿದ ದಾಳ ; ಹೇರು ದಾಳ). (ಒಂದರ) ಭಾರ ತಡೆಯುವ ಶಕ್ತಿಯ ಮೊತ್ತ. ತೂಕ ಹೆಚ್ಚಿಸಲು, (ಮದ್ಯದ ವಿಷಯದಲ್ಲಿ) ಸಾಂದ್ರತೆ ಹೆಚ್ಚಿಸಲು, ಬೇರೆ ವಸ್ತುವನ್ನು ಬೆರಕೆ ಮಾಡು. ಹೊರಲಾರದಷ್ಟು, ಅತಿಯಾಗಿ, — ತುಂಬು, ಹೊರಿಸು (*With* ಉಪ. ದೊಡನೆ) (Loaded her with gifts, praise, abuse. Air loaded with carbon). (ಫಿರಂಗಿ, ಬಂದೂಕು, ಮೊ. ನ್ನು) ಬಾರು ಮಾಡು, (ಅವಕ್ಕೆ) ಮದ್ದು ಗುಂಡು ತುಂಬು (Am loaded ನನ್ನ ಬಂದೂಕು ಬಾರುಮಾಡಿದೆ). ಬಂಡವಾಳ ಪತ್ರಗಳನ್ನು ಬಹಳವಾಗಿ ಕೊಳ್ಳು (Loaded up with ಕೈಯಲ್ಲಿ ಬಹಳ ಮೊತ್ತದ ಬಂಡವಾಳ ಪತ್ರಗಳನ್ನು ಆಧಾರವಾಗಿ ಇಟ್ಟುಕೊಂಡು). (ಜೀವ ವಿಮೆ) ವಿಶೇಷ ಕಾರಣಗಳಿಂದ ವಿಮೆಯ ಕಂತಿನ ಮೊತ್ತವನ್ನು ಹೆಚ್ಚಿಸು, ಹೆಚ್ಚು ಮೊತ್ತದ ಕಂತು ಕೇಳು. **Loáding** (ನಾ.) (ಕ್ರಿಯಾರ್ಥಗಳಲ್ಲಿ). (ಜೀವ ವಿಮೆ) ವಿಶೇಷ ಕಾರಣಗಳಿಂದ ರೂಢಿಯ ಕಂತಿನ ಜೊತೆಗೆ ತೆಗೆದುಕೊಳ್ಳುವ ಹೆಚ್ಚು ಹಣ. **Loáder** (ನಾ.) (ಕ್ರಿಯಾರ್ಥಗಳಲ್ಲಿ). ಬೇಟೆಗಾರನ ಕೋವಿಯನ್ನು ಬಾರುಮಾಡುವ ಆಳು, ಅನುಚರ. ಭಾರ ಹೇರುವ, ಸಾಮಾನು ತುಂಬುವ, ಯಂತ್ರ. **-loader** ಒಂದು ಗೊತ್ತಾದ ರೀತಿಯಲ್ಲಿ ಬಾರುಮಾಡುವ ಬಂದೂಕು, ಫಿರಂಗಿ (Breech, muzzle, single, -l.). **-loáding** (ಗು.)

Loaf[1] ಲೋಫ್ (ನಾ. ; ಬ. ವ. Loaves —ವ್ಸ್) ಪರಂಗಿರೊಟ್ಟಿಯ ಮುದ್ದೆ, ತುಂಡು [Brown l. (ಮೆತು ತವುಡು ಕೂಡಿದ ಹಿಟ್ಟಿನಿಂದ ಮಾಡಿದ) ಕಂದು ಬಣ್ಣದ ರೊಟ್ಟಿ. White l. (ತವುಡೆಲ್ಲ ತೆಗೆದ ಬಿಳಿಯ ಹಿಟ್ಟಿನಿಂದ ಮಾಡಿದ) ಬಿಳಿಯ ರೊಟ್ಟಿ. Loaves and fishes ಅಧಿಕಾರ ಸ್ಥಾನದಿಂದ ಪಡೆಯಲಾಗುವ ಸ್ವಪ್ರಯೋಜನಗಳು (ಹೊಸ ಒಡಂಬಡಿಕೆಯಲ್ಲಿ, ಏಸುಕ್ರಿಸ್ತನು ಉಪದೇಶ ಮಾಡಿದಮೇಲೆ ಹಂಚಿದ ರೊಟ್ಟಿ ಮತ್ತು ಮೀನಿನ ಸಾಮ್ಯದಿಂದ). Half a l. is better than no bread ಬರಿ ಹೊಟ್ಟೆಗಿಂತ ಅರೆ ಹೊಟ್ಟೆ ಮೇಲು]. ಶಂಕುವಿನಾಕಾರದಲ್ಲಿ ಅಚ್ಚು ಹೊಯ್ದ ಸಕ್ಕರೆ ; ಸಕ್ಕರೆ ಮುದ್ದೆ (=Sugar-l.) (L. sugar ಸಕ್ಕರೆಯಚ್ಚು). ಕೋಸಿನ ಅಥವಾ 'ಲೆಟಸ್ಸಿ'ನ ಗುಂಡು ತಲೆ. **Loaved** (ಗು.)

Loaf, Loave (ಕ್ರಿ. ಅಕ.) (ಕೋಸು, ಮೊ. ಗಳ ವಿಷಯದಲ್ಲಿ) ಮುದ್ದೆಯಂತಾಗು ; ತಲೆಯಂತಾಗು.

Loaf[2] ಲೋಫ್ (ಕ್ರಿ., ನಾ.) ಸೋಮಾರಿಯಾಗಿ ಕಾಲ ಕಳೆ; (ಸುಮ್ಮನೆ) ಅಲೆದಾಡು [L. (time) away ಅಲೆತದಲ್ಲಿ (ಕಾಲ) ಕಳೆ]. (ನಾ.) ಅಲೆತ ; ಕಾಲ ಹರಣ (On the l.). **Loáfer** (ನಾ.) ಅಲೆಮಾರಿ ; ಪೋಲಿ.

Loam ಲೋಮ್ (ನಾ.) ನೀರು ಹಾಕಿ ಕಲಸಿದ ಜೇಡಿಮಣ್ಣು ; ಜೇಡಿ ಮಣ್ಣು, ಮರಳು, ಕೊಚ್ಚಿದ ಹುಲ್ಲು, ಮೊ. ನ್ನು ಬೆರಸಿ ನೀರು ಹಾಕಿ ಹದಮಾಡಿ ಇಟ್ಟಿಗೆಯಾಗಿ ಕೊಯ್ಯುವುದಕ್ಕೂ, ಗೋಡೆಯ ಮೆತ್ತಡ, ಮೊ. ಕ್ಕೂ ಉಪಯೋಗಿಸುವ ಮಿಶ್ರಣ. ಕೊಳೆತ ಸಸ್ಯಪದಾರ್ಥಗಳಿಂದ ಕೂಡಿ ಜೇಡಿ ಮತ್ತು ಮರಳು ಬೆರಕೆಯಾಗಿರುವ ಫಲವತ್ತಾದ ಮಣ್ಣು. **Loámy** (ಗು.)

Loan ಲೋನ್ (ನಾ., ಕ್ರಿ. ಸಕ.) (ಬಡ್ಡಿಗೆ, ಬಡ್ಡಿಯಿಲ್ಲದೆ) ಸಾಲ ಕೊಟ್ಟದ್ದು (ಮು., ಹಣ) ; ಸಾಲ(ದ ಹಣ) ; ಕಡ ; ಎರವಲು ; ಋಣ. ಒಂದು ಜನಾಂಗದವರು ಮತ್ತೊಂದು ಜನಾಂಗದವರಿಂದ ತೆಗೆದುಕೊಂಡ ಪದ, ಪದ್ಧತಿ, ಮೊ. ವು: ಎರವಲು ಮಾತು, ಪದ್ಧತಿ, ಮೊ. (L.-word, -god, -myth). ಸಾಲ ಕೊಡುವುದು ; ಸಾಲವಾಗಿರುವುದು (On l. ಸಾಲವಾಗಿ). ರಾಷ್ಟ್ರದ ವೆಚ್ಚಗಳಿಗಾಗಿ ಜನರು ಅಥವಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾರ್ವಜನಿಕ ಸಂಸ್ಥೆಗಳು ಸಾಲವಾಗಿ ಕೊಟ್ಟ ಹಣ ; (ಸಾ., ಒಂದು ಗೊತ್ತಾದ ಬಡ್ಡಿಯಮೇಲೆ) ಸರ್ಕಾರದವರು ಜನರಿಂದ ಮುಂಗಡವಾಗಿ ಹಣ ಪಡೆಯುವ ಏರ್ಪಾಡು, ಕರಾರು ; ಸರ್ಕಾರದ ಸಾಲ. [L.-collection ಪ್ರದರ್ಶನಕ್ಕಾಗಿ ಮಾಲೀಕರು ಎರವಲಾಗಿ ಕೊಟ್ಟ ಚಿತ್ರಪಟ, ಮೊ. ಗಳ ಸಂಗ್ರಹಣ. L.-holder ಒಂದು ಸಂಸ್ಥೆಯ ಅಥವಾ ಇತರ ಸಾಲಪತ್ರಗಳನ್ನು ಪಡೆದಿರುವವನು. L.-office (ಸಾಲ ಬೇಕಾದ ಖಾಸಗಿ ಜನರಿಗೆ) ಸಾಲ ಕೊಡುವ ಕಚೇರಿ. L. society (ನಿಯತಕಾಲಕವಾಗಿ ಚಂದಾ ಕೊಟ್ಟು ಏರ್ಪಡಿಸಿದ ನಿಧಿಯಿಂದ ಸದಸ್ಯರು ಸಾಲ ಪಡೆಯ ಬಹುದಾದ) ಸಾಲ ಕೊಡುವ ಸಂಘ]. (ಕ್ರಿ.) (ಮು., ಅಮೆ. ಸಂ.) ಸಾಲ ಕೊಡು ; ಎರವಲಾಗಿ ಕೊಡು. **Loánable** (ಗು.); **Loaneé** (ನಾ.) ಸಾಲ ಪಡೆಯುವವನು. **Loáner** (ನಾ.) ಸಾಲ ಕೊಡುವವನು.

Lo(a)th ಲೋತ್ (ಗು.) ಇಷ್ಟವಿಲ್ಲದ ; ಮನಸ್ಸಿಲ್ಲದ (*For* person, *to* do) (Nothing l. ಇಷ್ಟವಿಲ್ಲದೆ ಏನೂ ಇಲ್ಲ ; ಪೂರ್ತಿ ಮನಸ್ಸಿದೆ ; ಮನಃಪೂರ್ತಿಯಾಗಿ. L.-to-depart ಬೀಳ್ಕೊಡುವ ಸಂಗೀತ). **Loathe** ಲೋದ್ (ಕ್ರಿ. ಸಕ.) ಅಸಹ್ಯತೆಯಿಂದ ಕಾಣು ; ಅಸಹ್ಯ ಪಡು ; ಜುಗುಪ್ಸೆಪಡು ; ಹೇಸು ; ರೋಸು. **Loáthing** (ನಾ.) ; **Loáthingly** (ಕ್ರಿ. ವಿ.) ; **Loáthly** ಲೋದ್‌ಲಿ (ಗು.) (ಪ್ರಾಚೀ. ಪ್ರ. ಮತ್ತು ಸಾಹಿತ್ಯ ಪ್ರ.) =Loathsome. **Loáthliness** (ನಾ.) ; **Loáthsome** ಲೋದ್(ತ್)ಸಮ್ (ಗು.) ಅಸಹ್ಯ ಹುಟ್ಟಿಸುವ ; ಓಕರಿಕೆ ಬರಿಸುವ ; ಜುಗುಪ್ಸೆಯುಂಟುಮಾಡುವ ; ಹೇಸಿಕೆಯ ; ಬೀಭತ್ಸಕರ. **Loáthsomely** (ಕ್ರಿ. ವಿ.) ; **Loáthsomeness** (ನಾ.)

Loaves. **Loaf**[1] ನೋಡಿ.

Lob ಲಾಬ್ (ಕ್ರಿ., ನಾ.) ಜಗ್ಗು ಹಾಕುತ್ತ, ಭಾರ ಹೊತ್ತಂತೆ, ಒಡ್ಡೊಡ್ಡಾಗಿ, ನಿಧಾನವಾಗಿ, — ನಡೆ, ಓಡು, ಚಲಿಸು (*Along* ಉಪ. ದೊಡನೆ); (ಚೆಂಡನ್ನು) ನಿಧಾನವಾಗಿ ಅಥವಾ ಎತ್ತರದಲ್ಲಿ ಹೋಗುವಂತೆ ಎಸೆ, ಕಳುಹಿಸು. (ನಾ.) (ಕ್ರಿಕೆಟ್) ಕೆಳಗೈಯಾಗಿ ಎಸೆದ ಚೆಂಡು. (ಟೆನಿಸ್ ಆಟ) ಬಹಳ ಎತ್ತರಕ್ಕೆ ಹೊಡೆದ ಚೆಂಡು.

Lóbate, etc. **Lobe** ನೋಡಿ.

Lóbby ಲಾಬಿ (ನಾ., ಕ್ರಿ.) (ಒಂದು ಕಟ್ಟಡದ) ಮುಖ ಮಂಟಪ ; ದ್ವಾರ ಮಂಟಪ ; ಮುಂಗೋಣೆ ; ಪ್ರವೇಶಾಂಗಣ ; ಮೊಗಸಾಲೆ ; ನಡವೆ. (House of Commons, ಮೊ. ಶಾಸನ ಸಭೆಗಳಲ್ಲಿ) ಮು., ಹೊರಗಿನವರು ಶಾಸನ ಸಭೆಯ ಸದಸ್ಯರನ್ನು ಭೇಟಿಮಾಡಲು ಉಪಯೋಗಿಸುವ, ಸಾರ್ವಜನಿಕರಿಗೆ ಪ್ರವೇಶವಿರುವ, ದೊಡ್ಡ ಸಭಾಂಗಣ : ಸಾರ್ವಜನಿಕಾಂಗಣ ; ಶಾಸನ ಸಭೆಯ ಸದಸ್ಯರು ಅಭಿಮತ ಕೊಡುವುದಕ್ಕಾಗಿ ಹೋಗುವ ಎರಡು ಮೊಗಸಾಲೆಗಳಲ್ಲೊಂದು (Division l.). (ಕ್ರಿ.; ಮು., ಅಮೆ. ಸಂ.) ಮೊಗಸಾಲೆಯಲ್ಲಿ ಶಾಸನಸಭಾ ಸದಸ್ಯರನ್ನು ಭೇಟಿಮಾಡಿ ಅವರಮೇಲೆ ಪ್ರಭಾವ ಬೀರು ; — ಪ್ರಭಾವ ಬೀರಿ (ಮಸೂದೆ, ಮೊ.) ಅಂಗೀಕೃತವಾಗುವಂತೆ ಮಾಡು (*Through* ಪದದೊಡನೆ) ; ಭೇಟಿಯಿಂದ ಪ್ರೇರೇಪಿಸು ; ಶಾಸನ ಸಭೆಯ ಮೊಗಸಾಲೆಗೆ ಪದೇ ಪದೇ ಹೋಗುತ್ತಿರು ; (ಶಾಸನ ಸಭೆಯ) ಸದಸ್ಯರ ಅಭಿಮತಗಳನ್ನು ಪ್ರಾರ್ಥಿಸು. **Lóbbyist** (ನಾ.) ಶಾಸನ ಸಭೆಯ ಸದಸ್ಯರ ಅಭಿಮತಗಳನ್ನು ತನ್ನ ಇಷ್ಟದಂತೆ ಪಡೆಯಲು ಸಭೆಯ ಮೊಗಸಾಲೆಗೆ ಪದೇ ಪದೇ ಹೋಗುವವನು.

Lobe ಲೋಬ್ (ನಾ.) ಸರಿಸುಮಾರಾಗಿ ದುಂಡಗೂ, ಚಪ್ಪಟೆಯಾಗಿಯೂ ಇರುವ, — ಮುಂಚಾಚಿನ ಅಥವಾ ಜೋಲಾಡುವ ಭಾಗ ; (ಹಲವು ವೇಳೆ) ಸೀಳಿಕೆಯಿಂದ ಪ್ರತ್ಯೇಕವಾಗಿರುವ ಇಂಥ ಎರಡು ಅಥವಾ ಹೆಚ್ಚು ಭಾಗಗಳಲ್ಲೊಂದು : ಹಾಲೆ ; ಪಾಲಿ. L. of liver, lungs. Lobes of brain. L. of ear ಹೊರಗಿವಿಯ ಮೆತುವಾದ ತಳಭಾಗ : ಕಿವಿಯ ಹಾಲೆ ; ಕರ್ಣ ಪಾಲಿ. **Lóbed** (ಗು.) ; **Lóbeless** (ಗು.) ; **Lóbar** ಲೋಬರ್ (ಗು.) (ಮು., ಶ್ವಾಸಕೋಶಗಳ : Lobar pneumonia). **Lóbate** ಲೋಬೇಟ್ (ಗು.) (ಪ್ರಕೃತಿ ಚರಿತ್ರೆ) ಹಾಲೆಯುಳ್ಳ (ಗಳುಳ್ಳ). **Lobátion** (ನಾ.) ; **Lóbule** ಲಾಬ್ಯೂಲ್ (ನಾ.) ಸಣ್ಣ ಹಾಲೆ, ಪಾಲಿ. **Lóbular** (ಗು.)

Lobélia ಲೊಬೀಲಿಯ (ನಾ.) ನೀಲಿಯ, ಕಡುಗೆಂಪಿನ, ಅಥವಾ ಧೂಮ್ರ ವರ್ಣದ, ಹೂವು ಬಿಡುವ ಒಂದು ಸಸ್ಯಜಾತಿ.

Lóbster ಲಾಬ್‌ಸ್ಟರ್ (ನಾ.) ಸಮುದ್ರ ನಳ್ಳಿ (ಏಡಿ) (ಹತ್ತು ಕಾಲುಗಳೂ ಉದ್ದ ಬಾಲವೂ ವೃಂತಸ್ಥ ಕಣ್ಣುಗಳೂ ದೊಡ್ಡ ಕಾಲುಗುರುಗಳೂ ನೀಲಛಾಯೆಯ ಕಪ್ಪು ಬಣ್ಣವೂ ಉಳ್ಳ, ತಿನ್ನಲು ಯೋಗ್ಯವಾದ, ಸಮುದ್ರವಾಸಿಯಾದ ಒಂದು ದೊಡ್ಡ ವಲ್ಕವಂತ ಪ್ರಾಣಿ); (ಆಹಾರವಾಗಿ) ಇದರ ಮಾಂಸ. (ತಿರಸ್ಕಾರವಾಗಿ) ಬ್ರಿಟಿಷ್ ಸಿಪಾಯಿ. **L.-eyed** ಉಬ್ಬುಗಣ್ಣಿನ. **L.-pot** ಸಮುದ್ರ ನಳ್ಳಿಗಳನ್ನು ಹಿಡಿಯುವ ಕುಕ್ಕೆ.

Lóbule. **Lobe** ನೋಡಿ.

Lócal[1] ಲೋಕಲ್ (ಗು., ನಾ.) ಸ್ಥಳದ ; ಸ್ಥಳಿಕ ; ಎಡೆಯ [L. habitation (ಒಂದು ವಸ್ತುವಿನ ಅಸ್ತಿತ್ವದ ಗುರುತೊ ಎಂಬಂತೆ ಅದರ) ಸ್ಥಳೀಯ ವಸತಿ : ಒಕ್ಕಡೆ ನೆಲೆ. Bangalore is a l. name ಬೆಂಗಳೂರು ಎಂಬುದು ಒಂದು ಸ್ಥಳದ ಹೆಸರು]. ಒಂದು ನಿರ್ದಿಷ್ಟ ಸ್ಥಳಕ್ಕೆ ಸೇರಿದ, ಸ್ಥಳದಲ್ಲಿರುವ, ಸ್ಥಳಕ್ಕೆ ವಿಶೇಷ ಲಕ್ಷಣವಾದ ; ಸ್ಥಳೀಯ [L. time (ಅ) ಸ್ಥಳದ ಮಧ್ಯಾಹ್ನ ರೇಖೆಯನ್ನು ಸೂರ್ಯನು ದಾಟಿದ ಕ್ಷಣದಿಂದ ಗಣಿಸಿದ ಕಾಲ : ಸ್ಥಳೀಯ ಕಾಲ(ಮಾನ). The l. lawyer ಸ್ಥಳದ ವಕೀಲ. Nutmeg is very l. ಜಾಕಾಯಿ ಗೊತ್ತಾದ ಸ್ಥಳಗಳಲ್ಲಿ ಮಾತ್ರ ಬೆಳೆಯುತ್ತದೆ. L. government ಪಟ್ಟಣ, ಮೊ. ಗಳ ಆಡಳಿತವನ್ನು (ಕೇಂದ್ರ ಸರ್ಕಾರದಿಂದ ಅಧಿಕಾರ ಪಡೆದು) ಅಲ್ಲಿಯ ಪ್ರಜೆಗಳೇ ನಡಸಿಕೊಂಡುಹೋಗುವುದು : ಸ್ಥಳೀಯ ಸರ್ಕಾರ, ಆಡಳಿತ L. examination (ವಿ. ವಿ. ನಿ. ದ ಮಂಡಲಿಯ ಅಧೀನದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ನಡೆಯುವ, ಮತ್ತು ತೇರ್ಗಡೆಹೊಂದುವ ಹುಡುಗರಿಗೂ ಹುಡುಗಿಯರಿಗೂ ಪ್ರಶಸ್ತಿ ಪತ್ರಗಳನ್ನು ಕೊಡುವ) ಸ್ಥಳೀಯ ಪರೀಕ್ಷೆ. L. preacher ತನ್ನ ನಿವಾಸ ಪ್ರಾಂತದಲ್ಲಿ ಉಪದೇಶ ಮಾಡಲು ಅಧಿಕಾರ ಪಡೆದ ಮೆಥೊಡಿಸ್ಟ್ ಪಂಗಡದ (ಪಾದ್ರಿಯಲ್ಲದ) ಲೌಕಿಕ ಉಪದೇಶಿ, ಬೋಧಕ. L. option ಒಂದು ಪ್ರಾಂತದಲ್ಲಿ ಮದ್ಯ, ಮೊ. ಗಳ ಮಾರಾಟ ಬೇಡವೆಂದು ತೀರ್ಮಾನಿಸುವ ಅಧಿಕಾರವನ್ನು ಅಲ್ಲಿಯ ನಿವಾಸಿಗಳಿಗೇ ಕೊಡುವ ಪದ್ಧತಿ : ಸ್ಥಳಿಕ ತೀರ್ಮಾನ. L. veto (ಈ ಪದ್ಧತಿಯ ಮೇರೆಗೆ ಜಾರಿಗೆ ತಂದ ಮದ್ಯ, ಮೊ. ಗಳ ಮಾರಾಟದ) ನಿಷೇಧ : ಸ್ಥಳಿಕ ನಿಷೇಧ. L. colour (Colour ನೋಡಿ) ; (ಚಿತ್ರ) ಒಂದು ಚಿತ್ರದ ಸಾಮಾನ್ಯ ವರ್ಣವಿನ್ಯಾಸದೊಳಗೆ ಆಯಾ ವಸ್ತುವಿಗೆ ಅನುಗುಣವಾದ ಬಣ್ಣ : ಪ್ರತ್ಯೇಕ ವಸ್ತುವರ್ಣ]. ಒಂದು ಭಾಗದ, ಒಂದು ಭಾಗಕ್ಕೆ ಮಾತ್ರ ಸಂಬಂಧಿಸಿದ ; ಸ್ಥಳೀಯ (L. disease, pain, remedy ಒಂದು ಸ್ಥಳದ, ಭಾಗದ, —ರೋಗ, ನೋವು, ಚಿಕಿತ್ಸೆ). (ಗಣಿತ) ಒಂದು ಚಲನ ಬಿಂದು, ರೇಖೆ, ಕ್ಷೇತ್ರ —ಇವು ರಚಿಸುವ ಪಥದ. (ಅಂಚೆ) (ಅಂಚೆಕಚೇರಿಯ ನೌಕರರಿಗೆ ಎಚ್ಚರಿಕೆಯಾಗಿ ಕಾಗದದ ಮೇಲೆ ಬರೆಯುವುದು): ಈ ಊರಿನಲ್ಲಿ, ಈ ಪ್ರಾಂತದಲ್ಲಿ, —ಬಟವಾಡೆಗಾಗಿ : ಸ್ಥಳೀಯ ಬಟವಾಡೆಗಾಗಿ. (ನಾ.) ಒಂದು ಪ್ರಾಂತದಲ್ಲಿ, —ವಾಸಮಾಡುವವನು, ಉದ್ಯೋಗ ನಡಸುವವನು ; ಸ್ಥಳದವನು ; ಸ್ಥಳಿಕ. ಸ್ಥಳೀಯ ಲೌಕಿಕ (ಕ್ರೈಸ್ತ) ಉಪದೇಶಿ. (ವೃತ್ತಪತ್ರಿಕೆಯಲ್ಲಿ) ಸ್ಥಳೀಯ ವರ್ತಮಾನ. ಒಂದು ಪರಿಮಿತ ಪ್ರದೇಶದಲ್ಲಿ ಬಳಕೆಯಲ್ಲಿರುವ ಅಂಚೆಯ ತಲೆಚೀಟಿ. ಒಂದು ಗೊತ್ತಾದ ಪ್ರಾಂತದ ಊರುಗಳ ನಿಲ್ದಾಣಗಳಿಗೆ ಮಾತ್ರ ಹೋಗಿ ಬರುವ ರೈಲುಬಂಡಿ ; ಸ್ಥಳಿಕ ರೈಲುಬಂಡಿ. (ಬ. ವ. ದಲ್ಲಿ) ಸ್ಥಳೀಯ ಪರೀಕ್ಷೆ(ಗಳು). **Locál**[2]**(e)** ಲೊಕಾಲ್ (ನಾ.) (ಕಾರ್ಯಗಳು, ಘಟನೆಗಳು, —ನಡೆಯುವ) ಸ್ಥಳ, ಪ್ರದೇಶ ; ಘಟನಾ ಸ್ಥಳ. **Lócally** ಲೋಕಲಿ (ಕ್ರಿ. ವಿ.) ಸ್ಥಳೀಯವಾಗಿ. **Lócalism** (ನಾ.) ಸ್ಥಳೀಯಾಭಿಮಾನ ; ಪ್ರಾಂತಾಭಿಮಾನ ; (ಇದರಿಂದುಂಟಾಗುವ) ಸಂಕುಚಿತ ಭಾವ, ಮೊ.; ಸ್ಥಳೀಯ ಪಕ್ಷಪಾತ. ಸ್ಥಳೀಯ ಭಾಷಾಮರ್ಯಾದೆ, ನುಡಿಗಟ್ಟು, ಸಂಪ್ರದಾಯ, ಮೊ. ವು. **Locálity** ಲೊಕ್ಯಾಲಿಟಿ (ನಾ.) (ಒಂದು ವಸ್ತುವಿನ) ಸ್ಥಾನ, ಇರುವ ಸ್ಥಳ; ಒಂದರ ನೆಲೆ, ಕಾರ್ಯಸ್ಥಾನ; ಸ್ಥಳಗಳನ್ನು ನೆನಪಿಟ್ಟುಕೊಂಡು ಗುರುತಿಸುವ, ಅವಕ್ಕೆ ದಾರಿ ಗೊತ್ತುಮಾಡಿಕೊಂಡು ಹೋಗುವ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬುದ್ಧಿಶಕ್ತಿ. **Lócalize** (ಕ್ರಿ. ನಕ.) ಒಂದು ಗೊತ್ತಾದ ಸ್ಥಳದ ವಿಶೇಷ ಲಕ್ಷಣಗಳನ್ನು ಕೊಡು, ಆರೋಪಿಸು ; ಒಂದು ಗೊತ್ತಾದ ಸ್ಥಳಕ್ಕೆ ಕಟ್ಟುಪಡಿಸು ; ಪ್ರಾಂತಗಳಿಗೆ ವಹಿಸಿಬಿಡು ; ಕೇಂದ್ರಾಡಳಿತ ತಪ್ಪಿಸು ; ಒಂದರಮೇಲೆ (ಗಮನವನ್ನು) ಕೇಂದ್ರೀಕರಿಸು (*Upon* ಉಪ. ದೊಡನೆ). = Locate (ವಿರ. ಪ್ರ.). **Lócalizable** (ಗು.) ; **Localizátion** (ನಾ.) ; **Lócate** ಲೋಕೇಟ್, **Locáte** ಲೊಕೇಟ್ (ಕ್ರಿ. ನಕ.) (ಮು., ಅಮೆ. ಸಂ.) ಒಂದು ಸ್ಥಳದಲ್ಲಿ ಸ್ಥಾಪಿಸು, ಪ್ರತಿಷ್ಠಿಸು; (ಕರ್ಮಣಿ) ನೆಲಸಿರು. (ಒಂದರ) ಸ್ಥಾನನಿರ್ದೇಶ ಮಾಡು, ಸ್ಥಳವನ್ನು ಹೇಳು; (ಒಂದರ) ನೆಲೆ ಗೊತ್ತುಮಾಡು (L. the enemy's camp). **Locátion** (ನಾ.) ; **Lócative** ಲಾಕಟಿವ್ (ಗು., ನಾ.) (ವ್ಯಾ.) ಸ್ಥಳ ನಿರ್ದೇಶಕ (ವಿಭಕ್ತಿ) ; ಸಪ್ತಮೀ ವಿಭಕ್ತಿ(ಯ)

Locále, Lócalism, etc. **Local**[1] ನೋಡಿ.

Locárno ಲೊಕಾರ್ನೋ (ನಾ.) Pact of L. (ಸದ್ಯದ ಎಲ್ಲೆಗಳನ್ನು ಮೀರಲಾಗದಂತೆ ರಕ್ಷಣೆ ಕಲ್ಪಿಸುವುದಕ್ಕೂ, ಶಾಂತಿಪಾಲನೆಗೆ ಆವಶ್ಯಕವಾದ ರಕ್ಷಣೆಗಳನ್ನು ಪಡೆಯುವುದಕ್ಕೂ ೧೯೨೫ರಲ್ಲಿ ಫ್ರಾನ್ಸ್, ಬೆಲ್ಜಿಯಂ ಮತ್ತು ಜರ್ಮನಿ ರಾಜ್ಯಗಳು ಮುಖ್ಯ ಪಕ್ಷೀಯರಾಗಿಯೂ, ಗ್ರೇಟ್‌ಬ್ರಿಟನ್ ಮತ್ತು ಇಟಲಿ ರಾಜ್ಯಗಳು ಜವಾಬ್ದಾರರಾಗಿಯೂ ನಿಂತು ಮಾಡಿಕೊಂಡ) ಲೊಕಾರ್ನೋ ಒಪ್ಪಂದಗಳು. The spirit of L. (ಮು., ಫ್ರಾನ್ಸಿಗೂ ಜರ್ಮನಿಗೂ ಇದ್ದ) ಹಳೆಯ ಹಗೆತನವನ್ನು ಪೂರ್ತಿಯಾಗಿ ತ್ಯಜಿಸುವುದು ; ಪೂರ್ವ ವೈರ ತ್ಯಾಗ.

Locáte, Lócative. **Local**[1] ನೋಡಿ.

Loch ಲಾಖ್ (ನಾ.) (ಸ್ಕಾಟ್ಲೆಂಡಿನ) ಸರೋವರ, ಇಕ್ಕಟ್ಟಾದ ಅಥವಾ ಬಹುಮಟ್ಟಿಗೆ ನೆಲ ಸುತ್ತುಗಟ್ಟಿದ, ಸಮುದ್ರದ ಚಾಚು.

Lock[1] ಲಾಕ್ (ನಾ.) ಕೇಶ ಗುಚ್ಛ ; ಕುರುಳು. (ಬ. ವ. ದಲ್ಲಿ) ತಲೆ ಗೂದಲು. ಉಣ್ಣೆಯ ಅಥವಾ ಹತ್ತಿಯ ಕಂತೆ, ಕುಚ್ಚು. **-locked** (ಗು.)

Lock[2] ಲಾಕ್ (ನಾ.) (ಬಾಗಿಲು, ಮುಚ್ಚಳ, ಮೊ. ನ್ನು ಭದ್ರಪಡಿಸುವ) ಬೀಗ, ಕೀಲಿ (Under l. & key ಬೀಗ ಹಾಕಿ). ಒಂದು ಚಕ್ರ ಸುತ್ತದಂತೆ ತಡೆಯುವ ಸಾಧನ : ಚಕ್ರದ ತಡೆ. (ಬಂದೂಕಿನಲ್ಲಿ) ಮದ್ದುಗುಂಡನ್ನು ಸಿಡಿಸುವ ಸಾಧನ : ಕುದುರೆ ; ಚಾಪು (L., stock, & barrel ಎಲ್ಲವೂ ; ಸಂಪೂರ್ಣವಾಗಿ). ಹಡಗುಗಳು ಅಥವಾ ದೋಣಿಗಳು ಸಂಚರಿಸಬೇಕಾದ ಕಾಲುವೆ ಒಂದೇ ಮಟ್ಟದಲ್ಲಿರದೆ ಬೇರೆ ಬೇರೆ ಮಟ್ಟಗಳಲ್ಲಿರುವ ಸಂದರ್ಭದಲ್ಲಿ, ಮಟ್ಟ ಬದಲಾಯಿಸುವ ಸ್ಥಳಗಳಲ್ಲಿ ಕಾಲುವೆಯ ಒಂದು ಪ್ರದೇಶವನ್ನು ತಕ್ಕ ಹೆಬ್ಬಾಗಿಲುಗಳಿಂದ ಒಂದು ಕಟ್ಟೆಯಂತೆ ಏರ್ಪಡಿಸಿ, ದೋಣಿಯು ತಳಮಟ್ಟದಲ್ಲಿದ್ದು ಮೇಲ್ಮಟ್ಟಕ್ಕೆ ಏರಬೇಕಾದ ಸಂದರ್ಭದಲ್ಲಿ ಕಟ್ಟೆಯ ನೀರಿನ ಮಟ್ಟವನ್ನು ತೂಬಿನ ಮೂಲಕ ತಕ್ಕ ಮಟ್ಟಕ್ಕೆ ತಗ್ಗಿಸಿ, ದೋಣಿಯನ್ನು ಕಟ್ಟೆಯೊಳಕ್ಕೆ ಸಾಗಿಸಿ, ಹೆಬ್ಬಾಗಿಲನ್ನು ಮುಚ್ಚಿ, ಕಟ್ಟೆಯೊಳಕ್ಕೆ ಹೊರಗಿನಿಂದ ನೀರನ್ನು ಬಿಟ್ಟುಕೊಂಡು ನೀರಿನ ಮಟ್ಟವನ್ನು ತಕ್ಕಂತೆ ಎತ್ತರಿಸಿ, ದೋಣಿ ಮುಂದೆ ಸಾಗಲು ಅನುಕೂಲ ಮಾಡಿಕೊಡುವ ಏರ್ಪಾಡು : ಮಟ್ಟಬದಲಾವಣೆಯ ಕಟ್ಟೆ. ಒತ್ತರಿಸಿದ ವಾಯುವಿನಲ್ಲಿ ಶಿಲ್ಪಕೆಲಸ ನಡೆಯುತ್ತಿರುವ ಕೊಠಡಿಗೆ ಪ್ರವೇಶ ಕೊಡುವ, ಗಾಳಿ ತೂರದ ಬಾಗಿಲುಗಳುಳ್ಳ, ಮುಂಗೋಣೆ. ಒಂದರೊಡನೊಂದು ತೊಡರಿಕೊಳ್ಳುವುದು (ಉದಾ., ಬೀದಿಯಲ್ಲಿ ಬಂಡಿಗಳ ಕಿಕ್ಕಿರಿತ). ಮೇಹ ಜಾಡ್ಯಗಳ ಚಿಕಿತ್ಸಾಲಯ (= L. Hospital). **Lockfast** ಬೀಗಹಾಕಿ ಭದ್ರಪಡಿಸಿದ. **L.-keeper** = **Locksman** (ಕಾಲುವೆಯ) ಮಟ್ಟಬದಲಾವಣೆಯ ಕಟ್ಟೆಯ ಕಾವಲುಗಾರ. **Locksmith** ಬೀಗ(ಗಳನ್ನು) ಮಾಡುವವನು ; ಬೀಗ ದುರಸ್ತು ಮಾಡುವವನು. **Lóckless** (ಗು.). **Lócket** (ನಾ.) ಕತ್ತಿಯ ಒರೆಯಮೇಲಿನ ಲೋಹದ ತಗಡು ಅಥವಾ ಪಟ್ಟಿ. ಒಬ್ಬರ, ಒಂದರ, ಜ್ಞಾಪಕಾರ್ಥವಾಗಿ, ಭಾವಚಿತ್ರ, ಕುರುಳುಗೂದಲು, ಮೊ. ನ್ನು ಇಟ್ಟಿರುವ, ಸಾ., ಹಾರದಲ್ಲಿ ಧರಿಸುವ, ಚಿನ್ನದ ಅಥವಾ ಬೆಳ್ಳಿಯ ಸಣ್ಣ ಸಂಪುಟ.

Lock (ಕ್ರಿ.) (ಬಾಗಿಲು, ಪೆಟ್ಟಿಗೆ, ಮೊ. ಗಳಿಗೆ) ಬೀಗ ಹಾಕು ; (ಬಾಗಿಲಿಗೆ) ಬೀಗ ಹಾಕಿ (ಮನೆ, ಮೊ. ನ್ನು) ಮುಚ್ಚಿಬಿಡು (*Up* ಉಪ. ದೊಡನೆ). (ಬಾಗಿಲು, ಮೊ. ದು) ಬೀಗ ಹಾಕುವಂತಿರು, ಬೀಗವುಳ್ಳದ್ದಾಗಿರು ; (ಮನುಷ್ಯನನ್ನು, ವಸ್ತುವನ್ನು) ಒಳಗೆ ಕೂಡಿ ಬೀಗ ಹಾಕು (*Up*, *in*, *into* ಉಪ. ದೊಡನೆ) (L. the stable door after the horse has been stolen ಊರು ಕೊಳ್ಳೆಹೋದಮೇಲೆ ಊರ ಬಾಗಿಲು ಹಾಕು. ಕೆಲಸ ಕೆಟ್ಟಮೇಲೆ ಎಚ್ಚರಿಕೆ ತೆಗೆದುಕೊ). (ನೆಲ, ಬೆಟ್ಟ, ಮೊ. ಗಳ ವಿಷಯದಲ್ಲಿ) ಸುತ್ತುಗಟ್ಟು (ಸಾ., ಕರ್ಮಣಿಯಲ್ಲಿ). (ರೂಪ.) ಸುಲಭವಾಗಿ ದೊರೆಯದಂತೆ ಇಡು (*Up*, *away* ಉಪ. ದೊಡನೆ) [Facts locked up in hieroglyphics ಅರ್ಥವಾಗದಂತೆ ಚಿತ್ರಲಿಪಿಯಲ್ಲಿ ಅಡಗಿ(ಸಿಟ್ಟ)ರುವ ಸಂಗತಿಗಳು. Capital locked up in land ಭೂಸ್ವತ್ತಿಯಮೇಲೆ ಹಾಕಿ, ಸುಲಭವಾಗಿ ಹಣ ಪಡೆಯಲಾಗದ ಬಂಡವಾಳ]. ಸೆರೆ ಹಾಕು (Senses locked in sleep ನಿದ್ರಾ ಮುದ್ರಿತವಾದ ಇಂದ್ರಿಯಗಳು). ಬಾಗಿಲಿಗೆ ಬೀಗ ಹಾಕಿ (ಒಬ್ಬನನ್ನು) ಒಳಕ್ಕೆ ಸೇರಿಸದಿರು (ಮು., ಕೆಲಸಗಾರರನ್ನು ಕೆಲಸಕ್ಕೆ ತೆಗೆದುಕೊಳ್ಳದೆ ನಿರ್ಬಂಧಪಡಿಸುವ ಯಜಮಾನನ ವಿಷಯದಲ್ಲಿ) (*Out* ಉಪ. ದೊಡನೆ); [**L.-out** (ನಾ.) ಕೂಲಿಕಾರರಿಗೆ ಬಹಿಷ್ಕಾರ]. ಅತ್ತಿತ್ತ ಅಲುಗಾಡಲಾಗದಂತೆ ಒಂದೆಡೆಯಲ್ಲಿ ಸಿಕ್ಕಿಸು, ಸಿಕ್ಕಿಕೊ ; ಒಂದರೊಳಗೊಂದು ತೊಡರಿಕೊ, ಸಿಕ್ಕಿಕೊ ; ಸಿಕ್ಕಿಕೊಳ್ಳುವಂತೆ ಮಾಡು ; ಸೇರಿಕೆಯ ಭಾಗಗಳನ್ನು ಒಂದರಲ್ಲೊಂದು ಸೇರುವಂತೆ ಮಾಡಿ ಭದ್ರಪಡಿಸು ; ತೊಡರಿಸು. (ಭೂ. ಕೃ.) ಶತ್ರುಭಾವದಿಂದ ಅಥವಾ ಇತರ ಭಾವದಿಂದ, ತೆಕ್ಕೆಗೊಂಡ, ತಬ್ಬಿಕೊಂಡ. (ಸೈನ್ಯ : ಹಿಂದಿನ ಸಾಲಿನ ವಿಷಯದಲ್ಲಿ) ಮುಂದಿನ ಸಾಲಿನವರ ಪಾದಗಳಮೇಲೆ ತಮ್ಮ ಪಾದಗಳು ಬೀಳುವಷ್ಟು ಹತ್ತಿರಕ್ಕೆ ಮುಂದುವರಿ. (ವಾಹನ ಅಥವಾ ಚಕ್ರಗಳು) ಮುಂದಿನ ಚಕ್ರಗಳು ಹಿಂದಿನವುಗಳ ಕ್ಷೇತ್ರವನ್ನು ಅಡ್ಡಯಿಸದೆ ತಿರುಗುವಂತಿರು. (ಕಾಲುವೆ, ಮೊ. ಕ್ಕೆ) ಮಟ್ಟಕಟ್ಟೆಗಳನ್ನು ಹವಣಿಸು ; ಮಟ್ಟಕಟ್ಟೆಯ ಮೂಲಕ (ದೋಣಿಯನ್ನು) ಮೇಲೇರಿಸು, ಕೆಳಗಿಳಿಸು (*Up* or *down*) ; ಮಟ್ಟಕಟ್ಟೆಯ ಮೂಲಕ ಹೋಗು. **L.-chain** ಒಂದು ವಾಹನದ ಚಕ್ರಗಳನ್ನು (ಉರುಳದಂತೆ) ತಡೆಗಟ್ಟುವ ಸರಪಣಿ : ಸರಪಣಿ ಕಟ್ಟು. **L.-jaw, Locked-jaw** ಅಗಿಯುವ ಸ್ನಾಯುಗಳ ಸೆಳವಿನಿಂದ ದವಡೆಗಳು ತೆರೆಯಲಾಗದಂತೆ ಮುಚ್ಚಿಕೊಂಡಿರುವ ಒಂದು ಬಗೆಯ ಧನುರ್ವಾಯು: ದವಡೆ ಸೆಳವು. **L.-nut** (ತಿರುಪು ಸಡಿಲ ಬಿದ್ದುಹೋಗದಂತೆ ತಿರುಪು ಬಿಲ್ಲೆಯಮೇಲೆ ತಿರುಗಿಸುವ) ತಡೆ ತಿರುಪುಬಿಲ್ಲೆ. **L.-spring** ಕಿಸೆಯ ಗಡಿಯಾರದ ಮುಚ್ಚಳವನ್ನು ಹಾಕುವ, ತೆರೆಯುವ, ಎಗುರುಪಟ್ಟಿ. **L.-stitch** ಎರಡು ದಾರಗಳು ಒಂದರೊಡನೊಂದು ಭದ್ರವಾಗಿ ಹೆಣೆದುಕೊಳ್ಳುವಂತೆ ಹಾಕಿದ ಹೊಲಿಗೆಯಂತ್ರದ ಹೊಲಿಗೆ: ಜಡೆ ಹೊಲಿಗೆ. **L.-up** (ಪಾಠಶಾಲೆ, ಮೊ. ನ್ನು ರಾತ್ರಿ) ಬೀಗ ಹಾಕುವುದು ; ಬೀಗ ಹಾಕುವ ಹೊತ್ತು. ಹಾಕಿದ ಬಂಡವಾಳ ನಗದಾಗಿ ಕೈಗೆ ಬರದೆ ಬಂಧನದಲ್ಲಿರುವ ಸ್ಥಿತಿ ; ಬಂಧನದಲ್ಲಿರುವ ಬಂಡವಾಳ. ಬಂದಿಗಳನ್ನು ತಾತ್ಕಾಲಿಕವಾಗಿ ಬಂಧಿಸಿಡುವ ಮನೆ, ಕೋಣೆ : ಬಂಧನ ಗೃಹ. (ವಿಶೇಷಣವಾಗಿ) ಬೀಗ ಹಾಕಿ ಭದ್ರಪಡಿಸಬಹುದಾದ (L.-up coach-house). **Lóckage** ಲಾಕೆಜ್ (ನಾ.) ಕಾಲುವೆಯ ಮಟ್ಟಕಟ್ಟೆಗಳಲ್ಲಿ ಮಾಡಿದ ನೀರಿನ ಏರಿಳಿತಗಳ ಮೊತ್ತ ; ಮಟ್ಟಕಟ್ಟೆಯನ್ನು ಉಪಯೋಗಿಸಿಕೊಂಡದ್ದಕ್ಕೆ ಕೊಡಬೇಕಾದ ಸುಂಕ ; ಮಟ್ಟಕಟ್ಟೆಗಳನ್ನುಪಯೋಗಿಸುವುದು ; ಮಟ್ಟಕಟ್ಟೆಗಳ ಸಂಖ್ಯೆ. **Lócker** (ನಾ.) (ಕ್ರಿಯಾರ್ಥಗಳಲ್ಲಿ). (ಕ್ರಿಕೆಟ್ ಮಂಟಪ, ವಿದ್ಯಾಶಾಲೆಯ ಕೋಣೆ, ಮೊ. ಸಾರ್ವಜನಿಕ ಕೋಣೆಗಳಲ್ಲಿ ಒಬ್ಬೊಬ್ಬರಿಗೂ ಕೊಡುವ) ಬೀಗ ಹಾಕಿ ಇಟ್ಟುಕೊಳ್ಳಬಹುದಾದ ಸಣ್ಣ ಮಾಡ: ಭದ್ರ ಕಪಾಟ. (ನಾವೆ) ಬಟ್ಟೆ, ಸಾಮಾನು, ಮದ್ದುಗುಂಡು, ಮೊ. ನ್ನು ಇಟ್ಟುಕೊಳ್ಳುವ ಪೆಠಾರಿ ಅಥವಾ ಅರೆ (Not a shot in the l. ಜೇಬಿನಲ್ಲಿ ಕಾಸೇ ಇಲ್ಲ). Davy Jones's Locker ಸಮುದ್ರ ; (ಹಡಗಿನಲ್ಲಿ ಸತ್ತವರನ್ನು ಸಮುದ್ರದಲ್ಲಿ ಹಾಕುವ) ಜಲ ಸಮಾಧಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Lóckage, Lócker, Lócket. **Lock**[2] ನೋಡಿ.

Lóckian ಲಾಕಿಯನ್ (ಗು., ನಾ.) John Locke ಎಂಬ ತತ್ತ್ವಜ್ಞನ; ಆತನ ತತ್ತ್ವಶಾಸ್ತ್ರದ ; ಆತನ ಅನುಯಾಯಿಗಳ. (ನಾ.) 'ಲಾಕಿ'ನ ಅನುಯಾಯಿ. **Lóckist** (ನಾ.)

Lóco ಲೋಕೊ (ನಾ.) Locomotive engine ಎಂಬುದರ ಸಂಕ್ಷಿಪ್ತ. (Locomotion ನೋಡಿ)

Lóco citáto (L) ಲೋಕೋ ಸೈ(ಸಿ)ಟೇಟೋ (ಕ್ರಿ. ವಿ.) (ಸಂಕ್ಷಿಪ್ತ : l. c.) ಹಿಂದೆ ಹೇಳಿದ ಸ್ಥಳದಲ್ಲಿ; ಹಿಂದೆ ಉದ್ಧರಿಸಿದ ಗ್ರಂಥಭಾಗದಲ್ಲಿ.

Lócomote. **Locomotion** ನೋಡಿ.

Locomótion ಲೋಕೊಮೋಷನ್ (ನಾ.) ಸ್ಥಳದಿಂದ ಸ್ಥಳಕ್ಕೆ ಚಲಿಸುವುದು ; —ಚಲಿಸುವ ಶಕ್ತಿ ; ಚಲನ ಶಕ್ತಿ ; ಪ್ರಯಾಣ ; (ಮು., ಯಾವುದಾದರೂ ಸಾಧನದ ಮೂಲಕ) ಪ್ರಯಾಣ ಮಾಡುವುದು ; ಪ್ರಯಾಣ ಸಾಧನ. **Lócomotive, Locomótive** —ಮೋಟಿವ್ (ಗು., ನಾ.) ಸ್ಥಳದಿಂದ ಸ್ಥಳಕ್ಕೆ ಹೋಗುವ ; ಸಂಚಾರದ (L. faculty, power ಮನಸ್ಸಂಕಲ್ಪದಿಂದ ಸ್ಥಳದಿಂದ ಸ್ಥಳಕ್ಕೆ ಹೋಗುವ ಯೋಗ್ಯತೆ, ಸಾಮರ್ಥ್ಯ ; ಚಲನ ಶಕ್ತಿ). (ಹಾಸ್ಯ ಪ್ರ.) ಪ್ರಯಾಣದ (In these l. days ಪ್ರಯಾಣದ ವಾಡಿಕೆಯ ಈ ದಿನಗಳಲ್ಲಿ) ; ಚಲನ ಸಾಮರ್ಥ್ಯವುಳ್ಳ ; ಚಲನಶೀಲ ; ಒಂದೆಡೆಯಲ್ಲಿ ನಿಂತಿರದ ; ಸಂಚರಿಸುತ್ತಿರುವ [The l. bivalves ಸಂಚರಿಸುವ ಇಚ್ಚಿಪ್ಪು ಪ್ರಾಣಿಗಳು. A l. person (ಹಾಸ್ಯ ಪ್ರ.) ಸದಾ ಪ್ರಯಾಣಮಾಡುತ್ತಿರುವವನು. L. engine ಸ್ವಸಾಮರ್ಥ್ಯದಿಂದಲೇ ಸ್ಥಳದಿಂದ ಸ್ಥಳಕ್ಕೆ ಸಂಚರಿಸುವ ಎಂಜಿನು (ಮು., ರೈಲುಕಂಬಿಗಳಮೇಲೆ ಬಂಡಿಗಳ ಸಾಲನ್ನೆಳೆದುಕೊಂಡು ಹೋಗುವ ಆವಿಯೆಂಜಿನು) : ಸ್ವಯಂಚಲ ಎಂಜಿನು]. ಸ್ಥಾನಾಂತರ ಚಲನೆಯುಂಟುಮಾಡುವ (The l. organs). (ನಾ.) = L. engine ; (ಅಸಂ., ಬ. ವ. ದಲ್ಲಿ) ಕಾಲುಗಳು (Use your locomotives). ಸ್ಥಳದಿಂದ ಸ್ಥಳಕ್ಕೆ ಸಂಚರಿಸುವ ಪ್ರಾಣಿ. **Lócomotor** —ಮೋಟರ್ (ನಾ., ಗು.) ಸ್ಥಾನಾಂತರ ಚಲನಶಕ್ತಿಯುಳ್ಳವನು, —ಯುಳ್ಳದ್ದು. (ಗು.) ಸ್ಥಾನಾಂತರ ಚಲನೆಯ [L. ataxy (Ataxy ನೋಡಿ)]. **Lócomotory** — ಮೋಟೊರಿ (ಗು.) ಸ್ಥಾನಾಂತರ ಚಲನೆಯ ; ಸ್ಥಾನಾಂತರ ಚಲನಶಕ್ತಿಯುಳ್ಳ. **Lócomote** (ಕ್ರಿ. ಅಕ.) (ಜೀ. ವಿ.) ಸ್ಥಳದಿಂದ ಸ್ಥಳಕ್ಕೆ ಚಲಿಸು, ನಡೆ.

Lóculus ಲಾಕ್ಯುಲಸ್ (ನಾ.) (ಪ್ರಾ. ವಿ., ಸ. ವಿ., ಅಂ. ರ. ಶಾ. ; ಬ. ವ. -li —ಲೈ) ಪ್ರತ್ಯೇಕಿಸಲ್ಪಟ್ಟ ಹಲವು ಸಣ್ಣ ಸಣ್ಣ ಕುಹರಗಳಲ್ಲೊಂದು ; ಸಣ್ಣ ಕುಹರ. **Lócular** (ಗು.)

Lócum ténens (L) ಲೋಕಂ ಟೀನೆನ್ಜ್ (ಬಳ. ಮಾ. **Locum**) (ನಾ.) ಒಬ್ಬನ ಕೆಲಸವನ್ನು ಹಂಗಾಮಿಯಾಗಿ ಬದಲಿ ನೋಡುತ್ತಿರುವವನು ; (ಮು., ಪಾದ್ರಿಯ ಅಥವಾ ವೈದ್ಯನ) ಬದಲಿ. **Locum-ténency** (ನಾ.)

Lócus ಲೋಕಸ್ (ನಾ. ; ಬ. ವ. -ci ಲೋಸೈ) (ಒಂದರ) ನಿಷ್ಕೃಷ್ಟವಾದ ಸ್ಥಾನ, ಸ್ಥಳ. (ಗಣಿತ) ಸ್ಥಾನನಿರ್ದೇಶಕಗಳ ಸಂಬಂಧವನ್ನು ಸೂಚಿಸುವ ಒಂದು ನಿರ್ದಿಷ್ಟ ಸಮೀಕರಣಕ್ಕೆ ಅನ್ವಯಿಸುವ ಎಲ್ಲ ಬಿಂದುಗಳಿಂದಲೂ ರಚಿತವಾದ, ಅಥವಾ ಗಣಿತೋಕ್ತ ನಿಯಮಾನುಸಾರ ಚಲಿಸುತ್ತಿರುವ ಒಂದು ಬಿಂದು, ರೇಖೆ ಅಥವಾ ಕ್ಷೇತ್ರದಿಂದ ರಚಿತವಾದ, ವಕ್ರ ರೇಖೆ, ಮೊ. ವು : ಬಿಂದು ಪಥ, ರೇಖಾ ಪಥ, ಕ್ಷೇತ್ರ ಪಥ. L. classicus ಒಂದು ವಿಷಯದಮೇಲೆ ಸುಪ್ರಸಿದ್ಧವಾದ ಅಥವಾ ಅತ್ಯಂತ ಪ್ರಮಾಣವಾದ ವಾಕ್ಯಪ್ರಕರಣ. L. in quo ಘಟನೆ ನಡೆದ ಸ್ಥಳ. L. poenitentiae (ನ್ಯಾ. ಶಾ.) ನಿರ್ಧಾರಕ (ಕಾರ್ಯ) ಕ್ರಮ ನಡಸುವುದರೊಳಗಾಗಿ ಹಿಮ್ಮರಳಿ ಹೋಗಲು ಒಬ್ಬನಿಗೆ ಕೊಡುವ ಅವಕಾಶ. L. standi ಅಂಗೀಕೃತ ಸ್ಥಾನ. ನ್ಯಾಯಸ್ಥಾನದಲ್ಲ ಅಥವಾ ಶಾಸನ ಸಭೆಯಲ್ಲಿ ಒಂದು ಗೊತ್ತಾದ ವಿಚಾರಣೆ ನಡೆಯುತ್ತಿರುವಲ್ಲಿ ಹಾಜರಾಗಿರುವ ಅಧಿಕಾರ, ಅಭಿಪ್ರಾಯ ಕೊಡುವ ಅಧಿಕಾರ.

Lócust ಲೋಕಸ್ಟ್ (ನಾ.) ಮಿಡತೆ ; ಶಲಭ (ಆಫ್ರಿಕ ಮತ್ತು ಏಷ್ಯಾ ಖಂಡಗಳಲ್ಲಿ ಸ್ಥಳದಿಂದ ಸ್ಥಳಕ್ಕೆ ಗುಂಪು ಕಟ್ಟಿಕೊಂಡು ಹಾರಿಹೋಗುತ್ತ, ಆಯಾ ಪ್ರಾಂತಗಳ ಸಸ್ಯಾದಿಗಳನ್ನೆಲ್ಲ ತಿಂದು ನಾಶಮಾಡುವ, ಆಹಾರ ಯೋಗ್ಯವಾದ ಹಲವು ಬಗೆಯ ರೆಕ್ಕೆಹುಳು). ತಿಂದುಹಾಕುವ, ಹಾಳು ಮಾಡುವ, ಪ್ರವೃತ್ತಿಯುಳ್ಳವನು ; ವಿಧ್ವಂಸಕ. 'ಕ್ಯಾರಬ್' ಹಣ್ಣು, ಮರ (L.-tree). L.-bird, L.-eater ಮಿಡತೆಗಳನ್ನು ತಿನ್ನುವ ಹಕ್ಕಿಜಾತಿ.

Locútion ಲೊಕ್ಯೂಷನ್ (ನಾ.) ಮಾತಿನ ರೀತಿ ; ಭಾಷಣ ಶೈಲಿ ; ಶೈಲಿ, ಭಾಷಾ ಮರ್ಯಾದೆ, —ಇವುಗಳ ದೃಷ್ಟಿಯಿಂದ ಪರಿಗಣಿಸಿದ ಪದ, ನುಡಿ, ವಚನ (A barbarous l. ; To use the Greek l.). **Lócutory** ಲಾಕ್ಯುಟೊರಿ (ನಾ.) (ಸಂನ್ಯಾಸಿ ಮಠದಲ್ಲಿ) ಸಂಭಾಷಣೆಯ ಕೋಣೆ ; (ಮಠನಿವಾಸಿಗಳಿಗೂ ಹೊರಗಿನವರಿಗೂ ನೇರವಾದ ಸಂಪರ್ಕವಿಲ್ಲದಂತೆ ಸಂಭಾಷಣೆ ನಡಸಬಹುದಾದ) ಅಡ್ಡ ಹಾಯುವ ಕಂಬಿಗಳ ತಡೆ, ಜಾಲರ.

Lócutory. **Locution** ನೋಡಿ.

Lode ಲೋಡ್ (ನಾ.) ನೀರು ಹರಿಯುವ ಕಾಲುವೆ ; (ಜವುಗುಪ್ರದೇಶಗಳಲ್ಲಿ ನೀರು ಹರಿದುಹೋಗಲು ಮಾಡಿದ) ಚರಂಡಿ. ಲೋಹದ ಅದುರಿನ ಎಳೆ, ರೇಖೆ. **Lodestar, Loadstar** ದಿಕ್ಕನ್ನು ತೋರಿಸುವ ನಕ್ಷತ್ರ (ಮು., ಧ್ರುವ ನಕ್ಷತ್ರ). (ರೂಪ.) ಮಾರ್ಗದರ್ಶಕ ತತ್ತ್ವ ; (ಸಾಧಿಸಬೇಕೆಂದಿರುವ) ಧ್ಯೇಯ ; ಗುರಿ. **Lodestone** = Loadstone (Load ನೋಡಿ)

Lodge ಲಾಡ್ಜ್ (ನಾ., ಕ್ರಿ.) ಸಣ್ಣ ಮನೆ ; ಕುಟೀರ ; ಬಿಡದಿ ; (ಉದ್ಯಾನದ ಅಥವಾ ವಿಸ್ತಾರವಾದ ಸುತ್ತುಬಯಲಿರುವ ಭಾರಿ ಮನೆ, ಮೊ. ಗಳ ಹೆಬ್ಬಾಗಿಲ ಬಳಿ ತೋಟದ ಆಳಾಗಲಿ ಇತರ ಸೇವಕನಾಗಲಿ ಇರುವ) ಕುಟೀರ. (Freemasonry, ಮೊ. ಸಂಸ್ಥೆಗಳಲ್ಲಿ) ಒಂದು ಶಾಖೆಯ ಸದಸ್ಯರು ; ಇವರು ಸಭೆ ಸೇರುವ ಸ್ಥಳ (Grand l. ಫ್ರೀಮೇಸನ್ನುಗಳ ಮತ್ತು ಅವರನ್ನು ಅನುಸರಿಸುವ ಇತರ ಸಂಘಗಳ ಆಡಳಿತ ಮಹಾಮಂಡಲ). (ಕೇಂಬ್ರಿಡ್ಜಿನಲ್ಲಿ) ಪ್ರೌಢ ವಿದ್ಯಾಶಾಲೆಯ ಅಧ್ಯಕ್ಷನ ವಾಸದ ಮನೆ. (ಉ. ಅಮೆ. ಇಂಡಿಯನರ) ಗುಡಾರ, ಕುಟೀರ. (ಕ್ರಿ.) ಮಲಗಲು ಸ್ಥಳಕೊಡು ; ಹಂಗಾಮಿಯಾಗಿ ಸ್ಥಳವಸತಿ ಕಲ್ಪಿಸಿಕೊಡು ; ಅತಿಥಿಯಾಗಿ, ಮನೆಯವನನ್ನಾಗಿ, ಸ್ವೀಕರಿಸು. [ಮನೆಯಲ್ಲಿ, ಕೊಠಡಿಯಲ್ಲಿ (ಗಳಲ್ಲಿ)] ವಾಸಕ್ಕೆ ಅನುಕೂಲ ಮಾಡಿಕೊಡು, ಬಿಡದಿ ಮಾಡಿಕೊಡು (*In* ಉಪ. ದೊಡನೆ). (ಕರ್ಮಣಿ) ಬಿಡದಿ ಪಡೆದಿರು (Be well, ill, lodged ಅನುಕೂಲವಾಗಿ, ಅನುಕೂಲವಿಲ್ಲದೆ, ಸ್ಥಳವಸತಿ ಪಡೆದಿರು) ; ವಾಸಸ್ಥಾನವಾಗಿರು ; ಒಳಕೊಳ್ಳು. (ಕರ್ಮಣಿ) ಒಳಕೊಂಡಿರು (*In* ಉಪ. ದೊಡನೆ) ; ಭದ್ರತೆಗಾಗಿ ಒಂದು ಸ್ಥಳದಲ್ಲಿ, ಒಬ್ಬನಲ್ಲಿ, —ಇಟ್ಟಿರು (*In* place, *with* person) ; ನ್ಯಾಸವಾಗಿಡು. (ಫಿರ್ಯಾದು, ಸಮಾಚಾರ, ಮೊ. ಗಳ) ಹೇಳಿಕೆಯನ್ನು ನ್ಯಾಯಸ್ಥಾನದಲ್ಲಿ ಅಥವಾ ಅಧಿಕಾರಿಯಲ್ಲಿ ಕೊಡು. (ಬಳ. ಮಾ.) (ಆಕ್ಷೇಪಣೆ, ಮೊ. ನ್ನು) ಆರೋಪಿಸು, ಆಪಾದಿಸು. (ಅಧಿಕಾರ, ಮೊ. ನ್ನು ಒಬ್ಬನಲ್ಲಿ, ಒಬ್ಬನ ಕೈಯಲ್ಲಿ) ಇಡು (*In*, *with*, *in the hands of* ಪದಗಳೊಡನೆ). (ಗಾಳಿಯ ವಿಷಯದಲ್ಲಿ) (ಪಯಿರನ್ನು) ಮಲಗಿಸು. (Bullet lodged in his brain ಅವನ ಮಿದುಳಿನಲ್ಲಿ ನೆಟ್ಟಿರುವ ಗುಂಡು. Tide lodges mud in the cavities ನೀರ ಭರತವು ಮಣ್ಣು ತಂದು ಹಳ್ಳಗಳಲ್ಲಿ ತುಂಬುತ್ತದೆ). ವಾಸವಾಗಿರು ; ನೆಲಸಿರು ; ಮತ್ತೊಬ್ಬರ ಮನೆಯಲ್ಲಿ ಬಾಡಿಗೆ ಕೊಟ್ಟು ವಾಸವಾಗಿರು. **Lódger** (ನಾ.) ; **Lódging** (ನಾ.) (ಕ್ರಿಯಾರ್ಥಗಳಲ್ಲಿ) ; ಬಾಡಿಗೆಯ ಕೊಠಡಿಗಳಲ್ಲಿ ವಸತಿ ; ವಾಸಸ್ಥಳ ; ನಿವಾಸ ; ನೆಲೆ. (ಬ. ವ. ದಲ್ಲಿ) ಹೋಟಲಿನಲ್ಲಲ್ಲದೆ ಬೇರೆಯ ಕಡೆ ವಾಸಕ್ಕಾಗಿ ಬಾಡಿಗೆಗೆ ತೆಗೆದುಕೊಂಡ ಕೊಠಡಿ(ಗಳು). **L.-house** ಕೊಠಡಿಗಳನ್ನು ವಾಸಕ್ಕಾಗಿ ಬಾಡಿಗೆಗೆ ಕೊಡುವ ಮನೆ. Common l.-h. (ಹಾಸಿಗೆಯ ಏರ್ಪಾಡುಳ್ಳ) ಮಲಗುವ ಕೋಣೆಯಿರುವ ಬಾಡಿಗೆ ಬಿಡದಿಯ ಮನೆ. **Lódgement, -gment** (ನಾ.) (ಸೈನ್ಯ) ಶತ್ರುಗಳ ಕಾರ್ಯಸ್ಥಾನಗಳನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾಧೀನ ಪಡಿಸಿಕೊಂಡು ಅಲ್ಲಿ ಕಟ್ಟಿದ ತಾತ್ಕಾಲಿಕ ರಕ್ಷಣ ಸಾಧನ ; (ಕಾಲೂರಲು) ಸಂಪಾದಿಸಿದ ಸ್ಥಿರ ಸ್ಥಾನ ; ನಿಲ್ಲೆಡೆ (Make, effect, a l.) (ನ್ಯಾ. ಶಾ.) ಹಣ ಠೇವಣಿಯಿಡುವುದು ; ಠೇವಣಿಯಿಟ್ಟ ಹಣ. ಬೀಳುವಾಗ ಅಥವಾ ಸಾಗಿ ಬರುವಾಗ ತಡೆಯುಂಟಾಗಿ ಒಂದು ಕಡೆ ಒಟ್ಟುಗೂಡಿದ ಪದಾರ್ಥ.

Lóess ಲೋಯೆಸ್, ಲಸ್ (ನಾ.) Rhine ಮತ್ತು ಇತರ ನದಿಗಳ ಕಣಿವೆಯಲ್ಲಿ ಶೇಖರವಾಗುವ ಹಳದಿ ಛಾಯೆಯ ಬೂದು ಬಣ್ಣದ ನುಣುಪು ಬಂಕೆ ಮಣ್ಣು, ಮೆಕ್ಕಲು ಮಣ್ಣು.

Loft ಲಾಫ್ಟ್ (ನಾ., ಕ್ರಿ. ಸಕ.) ಅಟ್ಟ ; (ಕುದುರೆಯ) ಲಾಯದ ಮೇಲಿನ ಕೋಣೆ ; ಪಾರಿವಾಳಗಳ ಗೂಡು ; ಪಾರಿವಾಳಗಳ ಹಿಂಡು. (ಚರ್ಚಿನ ಅಥವಾ ಸಭಾಂಗಣದ) ಚಾಚು ಪೀಠಪಂಕ್ತಿ, 'ಗ್ಯಾಲರಿ'. (ಗಾಲ್ಫ್ ಆಟ) ದಾಂಡಿನ ತಲೆಯ ಹಿಂಬಾಗು ; (ಚೆಂಡು ಮೇಲಕ್ಕೇರುವಂತೆ ಹೊಡೆಯುವ) ಏರು ಹೊಡೆತ. (ಕ್ರಿ.) ಗಾಲ್ಫ್ ಚೆಂಡನ್ನು ಬಹಳ ಮೇಲಕ್ಕೆ ಹೊಡೆ; ಹೀಗೆ ಹೊಡೆದು (ಅಡಚಣೆ) ದಾಟಿಸು. ಪಾರಿವಾಳದ ಗೂಡಿನಲ್ಲಿ (ಪಾರಿವಾಳಗಳನ್ನು) ಇಟ್ಟಿರು. **Lófter** (ನಾ.) (ಚೆಂಡನ್ನು ಮೇಲಕ್ಕೆ ಹೊಡೆಯುವ) ಗಾಲ್ಫ್ ದಾಂಡು. **Lófty** ಲಾಫ್ಟಿ (ಗು.) ಅತ್ಯಂತ ಎತ್ತರವಾದ; ಉನ್ನತ; ಬಹಳ ಮೇಲಕ್ಕೆ ಹೋಗುವ, ಏರುವ (ವ್ಯಕ್ತಿಗಳ ವಿಷಯದಲ್ಲಲ್ಲ) (L. mountain, flight, stature). ದುರಹಂಕಾರದ ; ಅಹಂಭಾವದ ; ಪ್ರತಿಷ್ಠೆಯ (L. contempt ದೊಡ್ಡಸ್ತಿಕೆಯ ತಿರಸ್ಕಾರ. L. good humour ದೊಡ್ಡತನದ ಸುಪ್ರಸನ್ನತೆ). ಉದಾತ್ತ ; ಘನ ; ಗಂಭೀರ ; ಪ್ರಖ್ಯಾತ ; ಪ್ರೌಢ ; ಉಚ್ಚ ; ವಾಗ್ಡೋರಣೆಯ; ಮಹದಾಡಂಬರದ. **Lóftily** (ಕ್ರಿ. ವಿ.); **Lóftiness** (ನಾ.)

Log[1] ಲಾಗ್ (ನಾ., ಕ್ರಿ. ಸಕ.) (ಕೆತ್ತಿ ಸಮಮಾಡದೆ ಬಿದ್ದಿರುವ) ಮರ, ದಿಮ್ಮಿ ; ಕೊರಡು ; ಒಡ್ಡೊಡ್ಡಾದ ಇಂಥ ಮರದ ತುಂಡು [In the l. ಕೆತ್ತಿ ಸಮಮಾಡದಿರುವ ; ಕೊರಡುಕೊರಡಾಗಿರುವ. Float, lie, fall, like a l. ನಿಸ್ಸಹಾಯ ಸ್ಥಿತಿಯಲ್ಲಿ ಅಥವಾ ನಿಶ್ಚೇಷ್ಟವಾಗಿ, ಕೊರಡಿನಂತೆ, — ತೇಲು, ಬಿದ್ದಿರು, ಬೀಳು. King L. (King ನೋಡಿ) Roll my l. & I'll roll yours ಅಪ್ರಾಮಾಣಿಕ ರಾಜಕೀಯ, ಮೊ. ದ ಪಂಗಡಗಳ ವಿಷಯದಲ್ಲಿ ಪರಸ್ಪರ ಹೊಗಳಿಕೆ. **Lóg-roll** (ಕ್ರಿ. ಅಕ.) ಹೀಗೆ ಹೊಗಳು. **Lóg-rolling** (ನಾ., ಗು.)]. ಹಡಗಿನ ವೇಗವನ್ನು ಅಳೆಯುವುದಕ್ಕಾಗಿ ಒಂದು ಉರುಳೆಗೆ ಸುತ್ತಿದ ದಾರಕ್ಕೆ ಕಟ್ಟಿ ತೇಲಬಿಟ್ಟ (ಮರದ) ಸಲಕರಣೆ ; ಹಡಗಿನ ವೇಗಮಾಪಕ ; ಅದೇ ಉದ್ದೇಶದ ಇತರ ಸಲಕರಣೆ [Heave, throw, the l. (ಹಡಗಿನ) ವೇಗಮಾಪಕವನ್ನು ಎತ್ತಿ ಬಿಡು, ಎಸೆ. Sail by the l. ವೇಗಮಾಪಕದ ಸಹಾಯದಿಂದ ಹಡಗಿನ ನೆಲೆಯನ್ನು ಗೊತ್ತುಮಾಡು]. ಕೂಲಿ ದರ್ಜಿಯವನ ಹೊಲಿಗೆಯ ಕೆಲಸದ ಕಾಲ ಗಣನೆಮಾಡುವ ಕೋಷ್ಟಕ ; = L.-book. [**L.-board** ಹಡಗಿನ ದಿನಚರಿ ಪುಸ್ತಕಕ್ಕೆ ಎತ್ತಿ ಬರೆಯುವ ಮೊದಲು ವಿಷಯಗಳನ್ನು ಗುರುತುಹಾಕುವ ಹಲಗೆ. **L.-book** ಹಡಗಿನ ಪ್ರಯಾಣ ಕಾಲದಲ್ಲಿ ನಡೆಯುವ ಎಲ್ಲ ಸಂಗತಿಗಳನ್ನೂ ವೇಗಮಾಪಕದಿಂದ ತೋರಿಬರುವ ಹಡಗಿನ ವೇಗವನ್ನೂ ಬಹು ಕಾಲವಿರುವಂತೆ ದಿನ ದಿನವೂ ಬರೆದಿಡುವ ದಾಖಲೆ ಪುಸ್ತಕ : ಹಡಗಿನ ದಿನಚರಿ. ಪ್ರಯಾಣದ, ಪ್ರಯಾಣಿಕರ, ದಿನಚರಿ, ಮೊ. ವು. **L. cabin** ಮರದ ಕೊರಡುಗಳಿಂದ ಕಟ್ಟಿದ ಗುಡಿಸಿಲು. **L.-line** ಹಡಗಿನ ವೇಗಮಾಪಕದ ತೇಲುವೆಗೆ ಕಟ್ಟುವ ದಾರ. **Logwood** (ಬಟ್ಟೆ, ಮೊ. ಗಳಿಗೆ) ಬಣ್ಣ ಕಟ್ಟುವುದರಲ್ಲಿ ಉಪಯೋಗಿಸುವ ಅಮೆರಿಕದ ಒಂದು ಬಗೆಯ ಮರದ ಚಕ್ಕೆ]. (ಕ್ರಿ.) ಕೊರಡುಗಳಾಗಿ, ತುಂಡುಗಳಾಗಿ, ಕತ್ತರಿಸು. ಹಡಗಿನ ದಿನಚರಿ ಪುಸ್ತಕದಲ್ಲಿ (ಪ್ರಯಾಣಮಾಡಿದ ದೂರ, ಮೊ. ನ್ನು) ಬರೆ(ದಿಡು) ; (ಹಡಗು) ದೂರಮಾಪಕದಿಂದ ತಿಳಿದುಬರುವಂತೆ (ಒಂದು ಗೊತ್ತಾದ ದೂರ) ಮುಂದೆ ಹೋಗು. (ನಾವಿಕನ ಹೆಸರನ್ನೂ ಅವನು ಮಾಡಿದ ಅಪರಾಧವನ್ನೂ) ದಿನಚರಿ ಪುಸ್ತಕದಲ್ಲಿ ಬರೆ ; (ಅಪರಾಧಿಗೆ) ಜುರ್ಮಾನೆ ಹಾಕು.

Log[2]. Logarithm ಎಂಬುದರ ಸಂಕ್ಷಿಪ್ತ.

Lógan(-stone) ಲಾಗನ್(ಸ್ಟೋನ್) (ನಾ.) ಸ್ವಲ್ಪ ಮುಟ್ಟಿದರೂ ತೂಗಾಡುವಂತೆ (ಸಮತೂಕದಲ್ಲಿ) ನಿಂತಿರುವ ಭಾರವಾದ (ದೊಡ್ಡ) ಕಲ್ಲು, ಬಂಡೆ ; ತೂಗು ಕಲ್ಲು, ಬಂಡೆ.

Lógarithm ಲಾಗರಿತ್‌ಮ್ (ನಾ.) ಲಘು ಗಣಕ ; 'ಲಾಗರಿತ್‌ಮ್' (ಲೆಕ್ಕಾಚಾರ ಮಾಡುವುದನ್ನು ಸುಲಭಗೊಳಿಸಲು ಗುಣಾಕಾರ ಭಾಗಾಕಾರಗಳಿಗೆ ಬದಲಾಗಿ ಸಂಕಲನ ವ್ಯವಕಲನಗಳನ್ನೂ, ಸಂಖ್ಯಾ ಘಾತ ಮತ್ತು ಘಾತಮೂಲವನ್ನು ಕಂಡುಹಿಡಿಯುವುದಕ್ಕೆ ಬದಲಾಗಿ ಗುಣಾಕಾರ ಭಾಗಾಕಾರಗಳನ್ನೂ ಉಪಯೋಗಿಸುವಂತೆ ಕೋಷ್ಟಕವನ್ನು ರಚಿಸಿರುವ ಗಣನಾ ಸೌಲಭ್ಯ ಪದ್ಧತಿ) ; ನಿರ್ದಿಷ್ಟ ಸಂಖ್ಯೆ ಬರಬೇಕಾದರೆ ಆಧಾರ ಸಂಖ್ಯೆಯನ್ನು ಯಾವ ಘಾತಕ್ಕೆ ಏರಿಸಬೇಕೋ ಆ ಘಾತಪರಿಮಾಣ : ಘಾತಾಂಕ [(ಸಾಮಾನ್ಯವಾಗಿ) ಆಧಾರಸಂಖ್ಯೆ = ೧೦ ; ಆದುದರಿಂದ ೧,೦೦೦ದ ಲಾಗರಿತ್‌ಮ್ = ೩]. Common logarithms ೧೦ ಆಧಾರಸಂಖ್ಯೆಯಾಗಿರುವ ಲಾಗರಿತಮ್ಮುಗಳು : ಸಾಮಾನ್ಯ ಲಾಗರಿತಮ್ಮುಗಳು. **Logaríthmic** (ಗು.) ; **Logaríthmically** (ಕ್ರಿ. ವಿ.)

Lóggerhead ಲಾಗರ್‌ಹೆಡ್ (ನಾ.) (ಪ್ರಾಚೀ. ಪ್ರ.) ದಡ್ಡ ; ಹೆಡ್ಡ. ಕಲ್ಲರಗು, ಮೊ. ನ್ನು ಕರಗಿಸುವುದಕ್ಕಾಗಿ ತುದಿಯಲ್ಲಿಯ ಗುಂಡನ್ನು ಕಾಯಿಸುವ, ಉದ್ದಹಿಡಿಯ ಒಂದು ಕಬ್ಬಿಣದ ಸಲಕರಣೆ. ಸರಿಯುತ್ತಿರುವ ಹಗ್ಗದ ಒಂದು ಸುತ್ತನ್ನು ಹಿಡಿದುಕೊಳ್ಳಲು ದೋಣಿಯಲ್ಲಿ ನೆಟ್ಟಿರುವ ಮರದ ಕಂಬ. ದೊಡ್ಡ ತಲೆಯುಳ್ಳ ಹಲವು ಬಗೆಯ ಆಮೆ(ಜಾತಿ), ಪಕ್ಷಿ(ಜಾತಿ). At loggerheads (with) (— ಒಡನೆ) ಒಪ್ಪದೆ ಕಲಹಮಾಡುತ್ತ, ಪರಸ್ಪರ ತಲೆಯೊಡೆದುಕೊಳ್ಳುತ್ತ.

Lógic ಲಾಜಿಕ್ (ನಾ.) ತರ್ಕ(ಶಾಸ್ತ್ರ) ; ನ್ಯಾಯ ಶಾಸ್ತ್ರ (ವಿವೇಚನೆ ಮಾಡುವ, ಪ್ರಮಾಣ ಕೊಡುವ, ವಿಮರ್ಶೆ ಮಾಡುವ, ಅನುಮಾನ ಮಾಡುವ, — ಶಾಸ್ತ್ರ) ; ತರ್ಕ ಪದ್ಧತಿ ; ತರ್ಕ (ಶಾಸ್ತ್ರ) ಗ್ರಂಥ. ವಾದ ಸರಣಿ ; ಪ್ರಮಾಣದ, ವಾದದ, (ಸರಿಯಾದ ಅಥವಾ ತಪ್ಪಾದ) ಪ್ರಯೋಗ ; ವಾದ ಸಾಮರ್ಥ್ಯ ; ವಾದಗಳು ; ತರ್ಕಗಳು. [Chop l. (Chop[3] ನೋಡಿ). Argues with great learning & l. Is not governed by l. ತರ್ಕಬದ್ಧವಾಗಿಲ್ಲ]. (ಉದ್ದೇಶಪೂರ್ವಕವಾಗಿ ವಿಪರೀತಾರ್ಥದಲ್ಲಿ ಉಪಯೋಗಿಸಿದಾಗ) ಪರಿವರ್ತನ ಸಾಮರ್ಥ್ಯ, ಬಲಾತ್ಕಾರ (The l. of events, facts, necessity, grape-shot, war, etc.). **Logícian** ಲೊಜಿಷನ್ (ನಾ.) ತಾರ್ಕಿಕ ; ನೈಯಾಯಿಕ. **Lógical** ಲಾಜಿಕಲ್ (ಗು.) ತರ್ಕದ ; ತರ್ಕನಿಯಮಗಳನ್ನುಲ್ಲಂಘಿಸದ ; ತರ್ಕಶುದ್ಧವಾದ ; ತರ್ಕಸೂತ್ರ ಬದ್ಧವಾದ ; ಸಮಂಜಸವಾಗಿರುವುದರಿಂದ, ಅನುಮಾನಿಸಬಹುದಾದ, ಸಮರ್ಥಿಸಬಹುದಾದ ; ಸಕಾರಣವಾಗಿ ನಂಬಬಹುದಾದ, ಮಾಡಬಹುದಾದ ; ಸರಿಯಾಗಿ ತರ್ಕಿಸರಾಗುವ. **Lógically** (ಕ್ರಿ. ವಿ.) ; **Logicálity** — ಕ್ಯಾ — (ನಾ.)

Lógie ಲೋಗಿ (ನಾ.) ನಾಟಕಶಾಲೆಗಳಲ್ಲಿ ಉಪಯೋಗಿಸುವ, ಬೆಲೆಯುಳ್ಳ ಒಡವೆಯಂತೆ ಕಾಣುವ, ಸತ್ತುವಿನ ಆಭರಣ.

Lógion ಲಾಗಿಯಾನ್ (ನಾ. ; ಬ. ವ. -ia) ಬೈಬಲ್ಲಿನಲ್ಲಿ ಹೇಳದೆ, ಇತರ ಕಡೆ ಇರುವ ಕ್ರಿಸ್ತ ವಚನ.

Logístics ಲೊಜಿಸ್ಟಿಕ್ಸ್ (ನಾ., ಬ. ವ.) ಸೈನಿಕ ದಳಗಳನ್ನು (ಸ್ಥಳದಿಂದ ಸ್ಥಳಕ್ಕೆ) ಸಾಗಿಸುವ ಮತ್ತು ಬೀಡು ಬಿಡಿಸುವ ಕಲೆ, ವಿದ್ಯೆ.

Lógogram ಲಾಗೊಗ್ರ್ಯಾಮ್ (ನಾ.) ಸಂಕ್ಷಿಪ್ತ ಲಿಪಿಯಲ್ಲಿ ಒಂದು ಪದವನ್ನು ಸೂಚಿಸುವ ಚಿಹ್ನೆ ಅಥವಾ ಅಕ್ಷರ : ಪದ ಚಿಹ್ನೆ. **Lógo-graph** — ಗ್ರಾಫ್ (ನಾ.) = Logogram ; = Logotype. **Logógrapher** ಲಗಾಗ್ರಫರ್ (ನಾ.) (ಗ್ರೀಕ್‌ಪ್ರಾಚೀನ) Herodotus ಎಂಬ ಗ್ರೀಕ್ ಗ್ರಂಥಕರ್ತನಿಗೆ ಹಿಂದೆ ಜೀವಿಸಿದ್ದ ಗದ್ಯಾತ್ಮಕ ಚರಿತ್ರ ಲೇಖಕ(ರಲ್ಲೊಬ್ಬನು). (ಪುರಾತನ ಗ್ರೀಕ್) ಭಾಷಣಲೇಖನಗಳ ವೃತ್ತಿಯವನು ; ಭಾಷಣ ಲೇಖಕ.

Logómachy ಲಗಾಮಕಿ (ನಾ.) ಬರಿಯ ಪದಗಳ ವಿಷಯವಾದ ಜಗಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Lógos ಲಾಗಾಸ್ (ನಾ. ; ಬ. ವ. ಇಲ್ಲ) (ಕ್ರೈಸ್ತ) ತ್ರಿಮೂರ್ತಿಗಳಲ್ಲಿ ಎರಡನೆಯ ವ್ಯಕ್ತಿ : ಏಸುಕ್ರಿಸ್ತ.

Lógotype ಲಾಗೊಟೈಪ್ (ನಾ.) (ಮುದ್ರಣದಲ್ಲಿ ಉಪಯೋಗಿಸುವುದಕ್ಕಾಗಿ) ಒಂದು ಪದವನ್ನಾಗಲಿ, ಒಂದಕ್ಕಿಂತ ಹೆಚ್ಚು ಅಕ್ಷರಗಳನ್ನಾಗಲಿ ಒಟ್ಟಿಗೆ ಎರಕಹೊಯ್ದಿರುವ ಅಚ್ಚುಮೊಳೆ (ಉದಾ., and, the, ಮೊ. ವು)

Loin ಲಾಯ್ನ್ (ನಾ.) ತೇಲು ಪಕ್ಕೆಲುಬುಗಳಿಗೂ ಟೊಂಕದ ಎಲುಬುಗಳಿಗೂ ಮಧ್ಯೆ ಬೆನ್ನುಮೂಳೆಯ ಎರಡು ಪಕ್ಕಗಳಲ್ಲಿಯೂ ಇರುವ ದೇಹಭಾಗ : ಟೊಂಕ [Gird up one's loins (Gird[1] ನೋಡಿ). Fruit, child, of, sprung from, one's loins ಹೊಟ್ಟೆಯಲ್ಲಿ ಹುಟ್ಟಿದ್ದು, —ಹುಟ್ಟಿದ ಮಗು]. ಸೊಂಟದ ಬಳಿಯ ಮಾಂಸ(ದ ತುಂಡು). **L.-cloth** (ಮಾನ ಮುಚ್ಚಲು) ನಡುವಿನ ಸುತ್ತಲೂ ಕಟ್ಟಿಕೊಳ್ಳುವ ಬಟ್ಟೆ : ತುಂಡು ದಟ್ಟಿ. **-loined** (ಗು.)

Loíter ಲಾಯ್ಟರ್ (ಕ್ರಿ.) ದಾರಿಯಲ್ಲಿ ನಿಂತು ನಿಂತು ಹೋಗು, ಸಾವಕಾಶವಾಗಿ ಪ್ರಯಾಣಮಾಡು ; ಅಲ್ಲಲ್ಲೇ ಸುತ್ತುತ್ತಿರು ; ಅಲೆದಾಡು ; ಅಲೆದಾಟದಲ್ಲಿ ಕಾಲಕಳೆ (*Away* ಉಪ. ದೊಡನೆ). **Loíterer** (ನಾ.) ; **Loíteringly** (ಕ್ರಿ. ವಿ.)

Loll ಲಾಲ್ (ಕ್ರಿ.) (ನಾಲಗೆಯನ್ನು) ಜೋಲುಬಿಡು (*Out* ಉಪ. ದೊಡನೆ) ; (ನಾಲಗೆ) ಜೋಲುಬೀಳು (ಸಾ., *Out* ಉಪ. ದೊಡನೆ). ಸೋಮಾರಿತನದಿಂದ ನಿಂತಿರು, ಕುಳಿತಿರು, ಒರಗಿಕೊಂಡಿರು ; (ತಲೆಯನ್ನು ಅಥವಾ ಕೈ ಕಾಲುಗಳನ್ನು) ಸೋಮಾರಿತನದಿಂದ ಯಾವುದರಮೇಲಾದರೂ ಹಾಕಿರು, ಚಾಚಿರು. **Lóllingly** (ಕ್ರಿ. ವಿ.)

Lóllard ಲಾಲರ್ಡ್ (ನಾ.) Wyclif ಎಂಬಾತನ ಅನುಯಾಯಿಗಳಾದ ಅಥವಾ ಆತನ ಅಭಿಪ್ರಾಯಗಳುಳ್ಳ ೧೪ನೆಯ ಶತಮಾನದ ಪಾಷಂಡರಲ್ಲೊಬ್ಬನು. **Lóllardism** (ನಾ.)

Lóllipop ಲಾಲಿಪಾಪ್ (ನಾ. ; ಸಾ., ಬ. ವ. ದಲ್ಲಿ) ಸಕ್ಕರೆಮಿಠಾಯಿ.

Lóllop ಲಾಲಪ್ (ಕ್ರಿ. ಅಕ.) (ಬಳ. ಮಾ.) ತೂಗಾಡುತ್ತ ಅಥವಾ ವಕ್ರ ವಕ್ರವಾಗಿ, — ಚಲಿಸು, ನಡೆ ; ಜಗ್ಗುಹಾಕಿಕೊಂಡು ನಡೆ.

Lómbard ಲಾಂ(ಲಂ)ಬರ್ಡ್ (ನಾ., ಗು.) ಆರನೆಯ ಶತಮಾನದಲ್ಲಿ ಇಟಲಿಯನ್ನು ಜಯಿಸಿದ ಜರ್ಮನ್ ಕುಲದವನು ; ಲಾಂಬರ್ಡಿ ಪ್ರಾಂತದವನು. (ಗು.) ಲಾಂಬರ್ಡರ ; ಲಾಂಬರ್ಡಿ ಪ್ರಾಂತದ. L. street ಹಿಂದೆ ಲಾಂಬರ್ಡಿಯ ಹಣವ್ಯಾಪಾರಿಗಳು ವಾಸವಾಗಿದ್ದ, ಈಗಲೂ ಅನೇಕ ಪ್ರಧಾನ ಬ್ಯಾಂಕುಗಳಿರುವ, ಲಂಡನ್ನಿನ ಒಂದು ಬೀದಿ. ಹಣವ್ಯಾಪಾರದ ಪೇಟೆ ; ಬಂಡವಾಳಗಾರರು. **Lombárdic** ಲಾಂಬಾರ್ಡಿಕ್ (ಗು.) ಲಾಂಬರ್ಡರ ; ಲಾಂಬರ್ಡಿಯ (ಮು., ಉ. ಇಟಲಿಯ ೭-೧೩ನೆಯ ಶತಮಾನಗಳ ವಾಸ್ತುಶಿಲ್ಪದ ಮತ್ತು ೧೩-೧೬ನೆಯ ಶತಮಾನಗಳ ಚಿತ್ರಕಲೆಯ ವಿಷಯದಲ್ಲಿ)

Lóment ಲೋಮೆಂಟ್ (ನಾ.) (ಸ. ವಿ.) ಬಲಿತಮೇಲೆ ಒಂದೊಂದೇ ಬೀಜವುಳ್ಳ ಕೋಶದ ತುಂಡುಗಳಾಗಿ ಒಡೆಯುವ ಒಂದು ಬಗೆಯ (ದ್ವಿದಳ ಧಾನ್ಯದ) ಕಾಯಿ. **Lomentáceous** (ಗು.)

Lóndon ಲಂಡನ್ (ನಾ., ಗು.) ಲಂಡನ್ ಪಟ್ಟಣ. (ಗು.) L. clay (ಇಂಗ್ಲೆಂಡಿನ ಆಗ್ನೇಯ ಭಾಗದಲ್ಲಿ ಭೂ ಚರಿತ್ರೆಯ ಮೂರನೆಯ ವಿಜ್ಞಾನ ಯುಗದ ಅತಿ ಕೆಳ ಭಾಗ ಸ್ತರದಲ್ಲಿ ದೊರೆಯುವ) ಲಂಡನ್ ಜೇಡಿಯ ರಚನೆ. L. ivy ಲಂಡನ್ನಿನ ಕಾವಳ, ಹೊಗೆ. L. particular (ಬಳ. ಮಾ.) ಲಂಡನ್ನಿನಲ್ಲಿ ಮಾತ್ರ ಕಾಣಬರುವ ಕಾವಳ. L. smoke ಮಾಸಲು ನರೆ ಬಣ್ಣ. **Lóndoner** (ನಾ.) ; **Lóndonism** (ನಾ.) ಲಂಡನ್ನಿನವರ ಪದ್ಧತಿಗಳು, ನಡೆ ನುಡಿಗಳು, ಮಾತಿನ ವೈಶಿಷ್ಟ್ಯ. **Lóndonize** (ಕ್ರಿ. ಸಕ.)

Lone ಲೋನ್ (ಗು.) (ಕಾವ್ಯ ಅಥವಾ ಅಲಂ.) ಏಕಾಂಗಿಯಾದ ; ಏಕಾಕಿಯಾದ ; ಒಬ್ಬೊಂಟಿಗನಾದ ; ಸಂಗಾತಿಗಳಿಲ್ಲದ ; ಜನಸಂಚಾರವಿಲ್ಲದ ; ನಿರ್ಜನ ; ಏಕಾಂತ ; ಒಂಟಿಗನೆಂಬ ಭಾವನೆಯ, ಭಾವನೆ ಹುಟ್ಟಿಸುವ ; (ಹೆಂಗಸು) ಮದುವೆಯಿಲ್ಲದೆ ಒಂಟಿಯಾಗಿರುವ ; ವಿಧವೆಯಾದ. **Lónely** (ಗು.) ಒಂಟಿಯಾಗಿರುವ ; ಸಂಗಾತಿಗಳಿಲ್ಲದ ; ಪ್ರತ್ಯೇಕವಾಗಿರುವ ; ಜನಸಂಚಾರವಿಲ್ಲದ. **Lóneliness** (ನಾ.) ; **Lónesome** (ಗು.) ; **Lónesomely** (ಕ್ರಿ. ವಿ.) ; **Lónesomeness** (ನಾ.)

Long[1] ಲಾಂಗ್ (ಗು.) ಉದ್ದವಾದ ; ನಿಡಿದಾದ ; (ಕಾಲ) ಹೆಚ್ಚಾದ ; ದೀರ್ಘವಾದ (L. line, distance, journey ; L. life). Has a l. arm ಬಹು ದೂರ ತನ್ನ ಅಧಿಕಾರವನ್ನೂ ಪ್ರಭಾವವನ್ನೂ ಬೀರಬಲ್ಲನು. Make a l. arm (ಮು., ಊಟಮಾಡುತ್ತಿರುವಲ್ಲಿ ಪದಾರ್ಥವನ್ನು ಎಟುಕಿಸಿಕೊಳ್ಳುವುದಕ್ಕಾಗಿ) ಕೈ ಚಾಚು. As broad as it is l. (Broad ನೋಡಿ). Vacation is two months l. **L. bill**[1] ಅನೇಕ ಬಾಬುಗಳನ್ನು ಒಳಕೊಂಡಿರುವ ಬೆಲೆಪಟ್ಟಿ. **L.-bill**[2] ಉದ್ದ ಕೊಕ್ಕಿನ (ಹಲವು) ಪಕ್ಷಿಜಾತಿ (ಮು., snipe). **L.-boat** ಪ್ರಯಾಣದ ಹಡಗಿನ ಅತಿ ದೊಡ್ಡ ದೋಣಿ. **L.-bow** (ಕೈಯಿಂದ ಎಳೆದು ಉದ್ದನೆಯ ಗರಿಯಂಬನ್ನು ಎಸೆಯುವ) ಉದ್ದ ಬಿಲ್ಲು (Cross-bow ಒಡನೆ ಹೋಲಿಸಿ) (Draw the l.-bow ಉತ್ಪ್ರೇಕ್ಷಿಸಿ ಹೇಳು ; ಕಥೆ ಕಟ್ಟಿ ಹೇಳು). **L. bowls** (ಶತ್ರುವಿಗೆ) ದೂರದಲ್ಲೇ ನಿಂತು ಯುದ್ಧ ಮಾಡುವುದು (ವಿರುದ್ಧ ಪದ : Close quarters). **L. butt** ಹೆಚ್ಚು ಉದ್ದದ ಬಿಲಿಯರ್ಡ್ಸ್ ದಾಂಡು. By a l. chalk (Chalk ನೋಡಿ). **L. clay** ಉದ್ದವಾದ ಚುಂಗಾಣಿ. **L. cloth** ಉದ್ದ ಥಾನುಗಳಲ್ಲಿ ತಯಾರಿಸುವ ಬೆಳ್ಳನೆಯ ಹತ್ತಿಯ ಬಟ್ಟೆ. **L.-clothes,** (ಪ್ರಾಚೀ. ಪ್ರ.) **L.-coats** ಕೈಗೂಸಿನ ಬಟ್ಟೆ ಬರೆಗಳು. A l. custom ಬಹು ಹಿಂದಿನಿಂದ ಬಂದ ಪದ್ಧತಿ. **L. date** (ಹುಂಡಿ, ಮೊ. ನ್ನು ಹಣಕ್ಕೆ ಪರಿವರ್ತಿಸಲು) ದೂರ ವಾಯಿದೆ. **Long-dated** (ಗು.). L. division (Divide ನೋಡಿ). **L. dozen, L. hundred** (ಆಯಾ ಪದವನ್ನು ನೋಡಿ). **L. drink** ಉದ್ದನೆಯ ಗಾಜುಲೋಟದಲ್ಲಿ ಕೊಟ್ಟ ಮದ್ಯ. **L. ears** (ಕತ್ತೆಗಿರುವಂತೆ) ಮೊದ್ದುತನ, ಹೆಡ್ಡತನ. Little pitchers have l. ears (Pitcher[1] ನೋಡಿ). **Long-eared** (ಗು.). **L. face** ಗೋಳು ಮೋರೆ ; ಖಿನ್ನಮುಖ. **L. family** ಬಹು ಮಂದಿ ಮಕ್ಕಳಿರುವ ಕುಟುಂಬ. A l. farewell ದೀರ್ಘಕಾಲ ಒಟ್ಟಿಗೆ ಸೇರುವ ಸಂಭವವಿಲ್ಲದ ಬೀಳ್ಕೊಳಿಕೆ. **L. field** =L. off or on ; (ಕ್ರಿಕೆಟ್) ಎಸೆಗಾರನ ಹಿಂದಿರುವ (ಆಟದ) ಮೈದಾನ ಭಾಗ. **L. figure** or **price** ಭಾರಿ ಬೆಲೆ. **L. finger** ನಡು ಬೆರಳು. **L. firm** (Firm[1] ನೋಡಿ). **Long-hand** (ಸಂಕ್ಷೇಪಿಸದ) ಸಾಧಾರಣ ಲಿಪಿ (ಎದುರು ಪದ : Shorthand ಸಂಕ್ಷಿಪ್ತ ಲಿಪಿ). **L.head** (ಸರಾಸರಿಗಿಂತ) ಉದ್ದವಾದ ತಲೆ ; (ರೂಪ.) ಚುರುಕು ಬುದ್ಧಿ ; ದೂರ ದೃಷ್ಟಿ. **Longheaded, Long-headedness** (ರೂಪ. ಸಹ). **L. hop** (ಕ್ರಿಕೆಟ್) ಸಮೀಪದಲ್ಲಿಯೇ ನೆಲ ಮುಟ್ಟಿ ಪುಟವೆದ್ದು ದೂರ ಹೋಗುವ ಎಸೆಚೆಂಡು. **L. jump** (Jump ನೋಡಿ). **Long-lived** ದೀರ್ಘಾಯುವಾದ ; ಬಹು ಕಾಲ ಬಾಳುವ. **L. mark** ಒಂದು ಸ್ವರದ ಉಚ್ಚಾರಣೆಯ ಹೆಚ್ಚು ಕಾಲವನ್ನು ತೋರಿಸಲು ಅದರಮೇಲೆ ಬರೆಯುವ ಅಡ್ಡಗೀಟು : ದೀರ್ಘ ಚಿಹ್ನೆ. **L. measure** (ಮೈಲ, ಗಜ, ಅಂಗುಲ, ಮೊ.) ಉದ್ದಳತೆ. **L. memory** ಬಹು ಕಾಲ ಮರೆಯದಿರುವ ಜ್ಞಾಪಕ ಶಕ್ತಿ ; ನಿಡು ನೆನಪು. **L. metre** (ಛಂ.) ಎಂಟಕ್ಷರದ ನಾಲ್ಕು ಪಾದಗಳುಳ್ಳ ಒಂದು ಸ್ತೋತ್ರವೃತ್ತ. Two l. miles ಎರಡು ಮೈಲಿಗಿಂತ ಹೆಚ್ಚು. Make a l. nose (ಅನಂ.) (ಹೀಯಾಳಿಸುವುದಕ್ಕಾಗಿ) ಹೆಬ್ಬೆಟ್ಟನ್ನು ಮೂಗಿನಮೇಲಿಟ್ಟು ಕೈಯಗಲಿಸು. **L. odds** (ಪಂದ್ಯ ಕಟ್ಟುವುದರಲ್ಲಿ) ಬಹಳ ಅಸಮವಾದ. **L. off, on** ಎಸೆಗಾರನ ಹಿಂದೆ ಎಡಕ್ಕೆ, ಬಲಕ್ಕೆ, ನಿಂತು ಆಟ ಕಾಯುವವನು. **L. Parliament** (೧೬೪೦ರಲ್ಲಿ ಚುನಾವಣೆಯಾಗಿ ೧೬೬೦ರಲ್ಲಿ ಉಚ್ಚಾಟನೆಯಾದ, ಇಂಗ್ಲೆಂಡಿನ) ದೀರ್ಘಾವಧಿಯ ಪಾರ್ಲಿಮೆಂಟು. **L. pig** ಮನುಷ್ಯ ಮಾಂಸ(ಕ್ಕೆ ನರಭಕ್ಷಕರು ಉಪಯೋಗಿಸುವ ಪದದ ನಾವಿಕ ಭಾಷಾಂತರ). **L. primer** (Primer ನೋಡಿ). **L. pull** (ಗಿರಾಕಿಯನ್ನು ಆಕರ್ಷಿಸುವುದಕ್ಕಾಗಿ ಮದ್ಯದಂಗಡಿಯವರು ಕೊಡುವ) ಹೆಚ್ಚಳತೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

L. robe ನ್ಯಾಯೋದ್ಯೋಗಿಗಳ, ನ್ಯಾಯ ವಾದಿಗಳ, —ನಿಲುವಂಗಿ (ಮು., Gentlemen of the l. robe ನ್ಯಾಯ ವಾದಿಗಳು; ವಕೀಲರು). In the l. run (ತೊಂದರೆಗಳೆಲ್ಲ ಮುಗಿದು) ಕಟ್ಟಕಡೆಯಲ್ಲಿ. **Long-shanks** ಒಂದು ಬಗೆಯ ಉದ್ದಗಾಲಿನ ಹಕ್ಕಿ. **L. sight** ದೂರದ ವಸ್ತುಗಳನ್ನು ನೋಡಲಾಗುವ ದೃಷ್ಟಿ; ದೂರದ ವಸ್ತುಗಳು ಮಾತ್ರ ಕಣ್ಣಿಗೆ ಸ್ಫುಟವಾಗಿ ಕಾಣುವ ಕಣ್ಣಿನ ಕುಂದು: ಚಾಳೀಸು. (ರೂಪ.) ದೂರ ದೃಷ್ಟಿ; ಒಳಹೊಕ್ಕು ನೋಡುವ ಶಕ್ತಿ. **Long-sighted, Long-sightedness** (ರೂಪ. ಸಹ). **Long-spun** ಬೇಸರ ಹಿಡಿಸುವ. **Longstop** (ಕ್ರಿಕೆಟ್) ಗುರಿಕೋಲು ಕಾಯುವವನಿಗೆ ನೇರವಾಗಿ ಹಿಂದೆ ನಿಂತು ಆಟ ಕಾಯುವವನು. (ಕ್ರಿ.) ಅಲ್ಲಿ ಆಟ ಕಾಯಿ. **L. suit**[1] (ಇಸ್ಪೀಟಾಟ) ಒಂದು ಕೈಯಲ್ಲಿ ಒಂದೇ ರಂಗಿನ ಹಲವು ಎಲೆಗಳು. **L. suit**[2] (ಬಳ. ಮಾ.) (ಒಬ್ಬನ) ವೈಶಿಷ್ಟ್ಯ; (ಒಂದರಲ್ಲಿ ಒಬ್ಬನ) ಹೆಚ್ಚುಗಾರಿಕೆ. **L. Tom** ಬಹಳ ಉದ್ದವಾದ ಅಥವಾ ಬಹಳ ದೂರದ ವ್ಯಾಪ್ತಿಯುಳ್ಳ ಫಿರಂಗಿ. **L. tongue** ವಾಚಾಲತೆ; ಅತಿ ಮಾತು. **L. vacation** (ನ್ಯಾಯಸ್ಥಾನಗಳಿಗೂ ವಿಶ್ವವಿದ್ಯಾನಿಲಯಗಳಿಗೂ ಕೊಡುವ) ಬೇಸಗೆಯ ಹೆಚ್ಚು ರಜಾಕಾಲ. Take long views ದೂರಾಲೋಚನೆ ಮಾಡು. **L. waist** (ಉಡುಪಿನಲ್ಲಿ) ಬಹಳ ಕೆಳಗೆ ಇಟ್ಟಿರುವ ಸೊಂಟಭಾಗ. **L. wave** (ನಿಸ್ತಂತು) ಸು. ೮೦೦ ಮೀಟರುಗಳ ಅಥವಾ ಅದಕ್ಕೆ ಹೆಚ್ಚಿನ ಉದ್ದದ ತರಂಗ: ದೀರ್ಘ ತರಂಗ. **L. wind** (ಮಧ್ಯೆ ವಿಶ್ರಾಂತಿ ತೆಗೆದುಕೊಳ್ಳದೆ) ಒಂದೇ ಸಮನಾಗಿ ಬಹು ದೂರ ಓಡುವ ಸಾಮರ್ಥ್ಯ; (ರೂಪ.) ಬೇಸರ ಹಿಡಿಸುವಷ್ಟು ದೀರ್ಘ ಕಾಲ ಒಂದೇ ಸಮನಾಗಿ ಮಾತನಾಡುವ, ಬಹಳ ಬೆಳಸಿ ಬರೆಯುವ, —ಶಕ್ತಿ. **Long-winded** (ಗು.); **Longwindedness** (ನಾ.); **Lóngish** (ಗು.); **Lóngways** (ಕ್ರಿ. ವಿ.); **Lóngwise** (ಕ್ರಿ. ವಿ.)

Long (ನಾ.) ಬಹಳ ಅಂತರ; ಬಹು ಕಾಲ [Shall see you before l. ಇಷ್ಟರಲ್ಲೇ ನಿನ್ನನ್ನು ನೋಡುತ್ತೇನೆ. It is l. since I saw him ನಾನು ಅವನನ್ನು ನೋಡಿ ಬಹಳ ದಿನವಾಯಿತು. At longest ಬಹಳ ಹೆಚ್ಚು ಕಾಲವೆಂದರೆ; ಕಟ್ಟಕಡೆಯ ಅವಧಿಯನ್ನು ಹೇಳುವುದಾದರೆ]. ಪೂರ್ತಿ ಹೇಳಿಕೆ (The l. and the short of it ಅದರ ವಿಷಯದಲ್ಲಿ ಹೇಳಬೇಕಾದದ್ದೆಲ್ಲ; ಒಟ್ಟು ತಾತ್ಪರ್ಯ). ದೀರ್ಘ ಉಚ್ಚಾರಾಂಶ [Longs & shorts (ಮು., ಲ್ಯಾಟಿನ್ನಿನ ಪದ್ಯ. (ವಾ. ಶಾ.) ಒಂದು ಉದ್ದದ ಪಕ್ಕದಲ್ಲಿ ಒಂದು ಮೋಟು ಬರುವಂತೆ ಜೋಡಿಸಿರುವ ಕಲ್ಲುದಿಮ್ಮಿಗಳು]. =L. vacation.

Long (ಕ್ರಿ. ವಿ.) (ತರ ತಮ ರೂಪಗಳು -er, -est) ಬಹು ಕಾಲದ ವರೆಗೆ; ಬಹು ಕಾಲದಿಂದ; ಬಹಳ ಹೊತ್ತು; ಬಹು ಕಾಲ [Have l. thought so ಬಹು ಕಾಲ(ದಿಂದ) ಹಾಗೆ ಭಾವಿಸಿದ್ದೇನೆ. So long as, As l. as — ವರೆಗೂ, — ತನಕ. He was l. finding it out ಅದನ್ನು ಕಂಡುಹಿಡಿಯಲು ಬಹಳ ಹೊತ್ತು ತೆಗೆದುಕೊಂಡನು. Not be l. for this world ಈ ಲೋಕದಲ್ಲಿರಲು ಉಳಿದಿರುವುದು ಸ್ವಲ್ಪ ಕಾಲವೇ]. L. before; L. after; L. since, L. ago ಬಹಳ ಹಿಂದೆಯೇ. All day l.; His life l.; Shall not wait any longer. No longer (ಹಿಂದಿನಂತೆ) ಇನ್ನು ಮೇಲೆ ಇಲ್ಲ. **L.-ago** (ಗು., ನಾ.) ಬಹಳ ಹಿಂದಿನ, ಪೂರ್ವ, —ಕಾಲ(ದ). **L.-drawn (-out)** ಅನಾವಶ್ಯಕವಾಗಿ ಬೆಳಸಿದ. **L.-liver** ದೀರ್ಘಾಯು. **L.-standing** ಬಹು ಕಾಲದಿಂದಿರುವ. **L.-suffering** (ನಾ., ಗು.) ತಾಳ್ಮೆಯಿಂದ ಸಹಿಸಿಕೊಳ್ಳುವ(ವುದು); ತಾಳ್ಮೆ; ಸ್ಥೈರಣೆ; (—ಉಳ್ಳ)

Long[2] ಲಾಂಗ್[6] (ಕ್ರಿ. ಅಕ.) ಹಂಬಲಿಸು; ಹಾರೈಸು; ಹಾತೊರೆ (*For*, *to* do). **Lónging** (ನಾ.); **Lóngingly** (ಕ್ರಿ. ವಿ.)

Longanímity ಲಾಂಗನಿಮಿಟಿ (ನಾ.) (ವಿರ. ಪ್ರ.) =Long-suffering [Long[1] (ಕ್ರಿ. ವಿ.) ನೋಡಿ]; ಸಹನೆ; ತಾಳ್ಮೆ; ಕ್ಷಾಂತಿ.

Longéval, -gaé- ಲಾಂಜೀವಲ್ (ಗು.) ಬಹು ಕಾಲ ಬದುಕುವ, ಬಾಳುವ. **Longévity** ಲಾಂಜೆವಿಟಿ (ನಾ.) ದೀರ್ಘಾಯುಸ್ಸು.

Lóngitude ಲಾಂಜಿಟ್ಯೂಡ್ (ನಾ.) ಉದ್ದ(ಈಗ ಹಾಸ್ಯ ಪ್ರ.). (ಭೂಗೋಳ) ಒಂದು ನಿರ್ದಿಷ್ಟ ಮಧ್ಯಾಹ್ನರೇಖೆಯಿಂದ (ಉದಾ., ಗ್ರೀನಿಚ್ಚಿನದರಿಂದ) ಪೂರ್ವಕ್ಕೆ ಅಥವಾ ಪಶ್ಚಿಮಕ್ಕೆ ಇರುವ ಸ್ಥಳದ ಮಧ್ಯಾಹ್ನರೇಖೆಯ ಕೋನದೂರ; ರೇಖಾಂಶ (ಸಂಕ್ಷಿಪ್ತ: Long.). (ಖ. ವಿ.) ಖಗೋಳ ರೇಖಾಂಶ. **Longitúdinal** (ಗು.) ಉದ್ದದ; ಉದ್ದದಲ್ಲಿಯ; ಉದ್ದದಲ್ಲಿ ಹರಡಿರುವ; ಉದ್ದುದ್ದವಾಗಿ ಹೋಗುತ್ತಿರುವ; —ಇಟ್ಟಿರುವ, ನೆಲಸಿರುವ. ರೇಖಾಂಶದ. **Longitúdinally** (ಕ್ರಿ. ವಿ.)

Lóng-shore ಲಾಂಗ್‌ಷೋರ್ (ಗು.) (ಕಡಲ) ಕರೆಯಲ್ಲಿರುವ, ಕರೆಯಲ್ಲಿ ಸಿಕ್ಕುವ, ಕರೆಯಲ್ಲಿ ಕೆಲಸವಿರುವ, ಕರೆಗೆ ಪದೇ ಪದೇ ಹೋಗಿ ಬರುವ; ಕಡಲ ಕರೆಯ; ಸಮುದ್ರ ತೀರದ. **L. S.-man** ಹಡಗಿಗೆ ಸಾಮಾನು ಭರತಿ ಮಾಡುವುದು, ಹಡಗಿನಿಂದ ಸಾಮಾನು ಇಳಿಸುವುದು, ಕರೆಯಲ್ಲಿ ಮೀನು, ಮೊ. ಹಿಡಿಯುವುದು, — ಇಂತಹ ಕೆಲಸ ಮಾಡುವವನು.

Longueur (F) ಲಾಂಗರ್ (ನಾ.; ಸಾ., ಬ. ವ. ದಲ್ಲಿ) (ಗ್ರಂಥದಲ್ಲಾಗಲಿ ನಾಟಕದಲ್ಲಾಗಲಿ) ಬೇಸರ ಹಿಡಿಸುವ ಭಾಗ.

Loo ಲೂ (ನಾ.) ಐದು ಅಥವಾ ಮೂರು ಎಲೆಗಳಿಂದ ಆಡುವ ಒಂದು ತೆರದ ಇಸ್ಪೀಟಾಟ. **L.-table** (ವ್ಯಾಪಾರದ ಹೆಸರು) ಕೂಡುವ ಕೋಣೆಯ ಒಂದು ತೆರದ ದುಂಡು ಮೇಜು (ಸಾ., 'ಲೂ' ಆಟ ಆಡುವಂಥದು)

Loóby ಲೂಬಿ (ನಾ.) ಹೆಡ್ಡ; ಮುಟ್ಠಾಳ; ಸೋಮಾರಿ; ಒಡ್ಡ ಮನುಷ್ಯ.

Look ಲುಕ್[6] (ಕ್ರಿ.) ನೋಡು; ದಿಟ್ಟಿಸು; ಕಾಣು; ತೋರು; (ಒಂದು ಕಡೆಗೆ) ಕಣ್ಣನ್ನು ತಿರುಗಿಸು; (ಒಂದರ ಕಡೆಗೆ) ದೃಷ್ಟಿಯಿಡು [Fair to l. at ನೋಡಲು, ಹೊರಗಡೆಗೆ, ಅಂದವಾಗಿರುವ. L. before you leap ನೋಡಿ ನುಗ್ಗು; ದುಡುಕಿ ಕಾರ್ಯ ಮಾಡಬೇಡ. To l. at him (ಬಳ. ಮಾ.) ಅವನ ಮುಖಭಾವದಿಂದ ನಿರ್ಧರಿಸುವುದಾದರೆ; ಅವನನ್ನು ನೋಡಿದರೆ. I will not l. at ಕಣ್ಣೆತ್ತಿ ನೋಡುವುದಿಲ್ಲ; ತಿರಸ್ಕರಿಸುತ್ತೇನೆ; ನಾನೊಲ್ಲೆ]. ದುರುಗುಟ್ಟಿಕೊಂಡು ನೋಡು; ಆಶ್ಚರ್ಯ ತೋರು; ಅವಲೋಕಿಸು; ಪರೀಕ್ಷಿಸು [Looked me through & through ಮರ್ಮ ತಿಳಿಯುವಂತೆ (ತೀಕ್ಷ್ಣ ದೃಷ್ಟಿಯಿಂದ) ನನ್ನನ್ನು ನೋಡಿದನು. L. gift horse in mouth (Gift ನೋಡಿ). L. one, death, in the face ಒಬ್ಬನನ್ನು, ಮೃತ್ಯುವನ್ನು, ಧೈರ್ಯವಾಗಿ ಎದುರಿಸು]. (ತನ್ನ) ದೃಷ್ಟಿಯಿಂದ, —ವ್ಯಕ್ತಗೊಳಿಸು, ಹೆದರಿಸು, ತೋರಿಸು (L. compassion, death, daggers, etc.). ನೋಡಿ ತಿಳಿ, ಗೊತ್ತುಮಾಡು (Who, how, whether, ಮೊ. ಪದದೊಡನೆ). (ರೂಪ.) ತನ್ನೊಳಗೇ ವಿಚಾರ ಮಾಡು (Let him l. at home. When one looks deeper ಒಳ ಹೊಕ್ಕು ವಿಮರ್ಶಿಸಿ ನೋಡಿದರೆ. Way of looking at things ವಸ್ತುಗಳನ್ನು, ವಿಷಯಗಳನ್ನು, — ಗಮನಿಸುವ ರೀತಿ, ವಿಮರ್ಶಿಸುವ ರೀತಿ). L. alive (ಆಜ್ಞೆ) ಜಾಗ್ರತೆ ಮಾಡು; ಬೇಗ! L. as if ನೋಡಿದರೆ (—) ಇರಬಹುದೆಂದು ನಂಬಿಕೆ ತೋರು. L. black ಕೋಪದಿಂದ, ಹುಬ್ಬು ಗಂಟಿಕ್ಕಿ, ನುಂಗಿಬಿಡುವಂತೆ, — ನೋಡು. L. blue (Blue ನೋಡಿ). L. a fool. L. grave ಗಂಭೀರವಾಗಿ, ಆಲೋಚನಾ ಪರನಾಗಿ, ಅನಿಷ್ಟ ಸೂಚಕವಾಗಿ, ಕಾಣು. L. here! (ಆಜ್ಞಾರ್ಥಕ: ಗಮನ ಕೊಡಬೇಕೆಂಬ ಅಥವಾ ಬುದ್ಧಿವಾದ ಹೇಳುವ ಸಂದರ್ಭದಲ್ಲಿ) ಇಲ್ಲಿ ನೋಡು! L.-in ಸುಮ್ಮನೆ ನೋಡಿ ಬರುವುದು; ಭೇಟಿ. Will have a l.-in (ವ್ಯಾಯಾಮದಾಟ) ಇನ್ನೇನು ಗೆಲ್ಲುವುದರಲ್ಲಿರು; ಬಹುಶಃ ಗೆಲ್ಲು. L. like ಅಂತೆ ಕಾಣು. ಭಯ ತೋರು: ಭಯವನ್ನ ತೋರು. L. oneself again ಮೊದಲಿನಂತೆಯೇ (ಆರೋಗ್ಯವಾಗಿ) ಕಾಣು. L.-out ಎಚ್ಚರಿಕೆಯಿಂದ ನೋಡುವುದು (Keep a good l.-o. On the l.-o. for). ಕಾಯುತ್ತಿರುವ ಸ್ಥಳ; ವೀಕ್ಷಣ ಸ್ಥಾನ; ಕಾವಲರಲು ಇಟ್ಟಿರುವ ಮನುಷ್ಯ, ಮಂದಿ, ದೋಣಿ. ಭೂ ಪ್ರದೇಶದ ದೃಶ್ಯ, ನೋಟ. ಅದೃಷ್ಟ ಸಂಭವ (It's a bad l.-o. for him ಅವನಿಗೆ ದುರದೃಷ್ಟ ಸಂಭವಿಸುವಂತಿದೆ). (ಮೇಲೆ ಬಿದ್ದ) ಜವಾಬ್ದಾರಿ (That is his l.-o.). L. sharp (ಹಿಂದಿನ ಪ್ರ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಟ್ಟುನಿಟ್ಟಾಗಿ ನೋಡಿಕೊ ; (ಈಗಿನ ಅರ್ಥ) ತಡ ಮಾಡಬೇಡ ; ಚುರುಕಿನಿಂದ ಮಾಡು. L. small ತುಚ್ಛನಾಗಿ ತೋರು. L. you (ಆಜ್ಞಾರ್ಥಕ) ಜೋಕೆ ! ಗಮನಿಸು ! ಎಚ್ಚರವಿರು ! ನೆನಪಿನಲ್ಲಿಡು ! L. well or ill ಆರೋಗ್ಯವಾಗಿರುವಂತೆ, ಆರೋಗ್ಯವಾಗಿಲ್ಲದಂತೆ, —ಕಾಣು. (ವಸ್ತು, ಮೊ. ವು) ಒಳ್ಳೆಯ ಸ್ಥಿತಿಯಲ್ಲಿರುವಂತೆ, ಹೀನ ಸ್ಥಿತಿಯಲ್ಲಿರುವಂತೆ, —ಕಾಣು. Looks his age ವಯಸ್ಸಿಗನುಗುಣವಾಗಿ ಕಾಣುತ್ತಾನೆ. Looks to be —ಇರುವ ಹಾಗೆ ತೋರುತ್ತದೆ. **-looking** (ಗು.). **Looking-glass** ಕನ್ನಡಿ ; ದರ್ಪಣ.

(ಉಪ. ಜೊತೆ).— L. about one ತನ್ನ ಸುತ್ತಮುತ್ತಣ ಪರಿಸ್ಥಿತಿಯನ್ನು ಪರೀಕ್ಷಿಸು ; ಸಾವಕಾಶವಾಗಿ ಆಲೋಚಿಸಿ ಹಂಚಿಕೆ ಹಾಕು. L. after ಕಣ್ಣು ತೆಗೆಯದೆ ನೋಡುತ್ತಿರು ; ಹುಡುಕು ; ಗಮನ ಕೊಡು ; ಯೋಗಕ್ಷೇಮ ನೋಡಿಕೊ. L. down one's nose at (ಬಳ. ಮಾ.) ಗುಪ್ತ ಅಸಮಾಧಾನದಿಂದ, ತಿರಸ್ಕಾರದಿಂದ, ಕಾಣು. L. for ನಿರೀಕ್ಷಿಸು ; ಬಯಸು; ಎದುರುನೋಡುತ್ತಿರು; ಹುಡುಕು(ತ್ತಿರು) [L. for trouble (Trouble ನೋಡಿ)] . L into (ಪೆಟ್ಟಿಗೆ, ಮೊ. ಗಳ) ಒಳಗೆ ನೋಡಿ ಪರೀಕ್ಷಿಸು ; (ಪುಸ್ತಕವನ್ನು) ಅಲ್ಲಲ್ಲಿ ಓದಿ ನೋಡು ; ವಿಚಾರಮಾಡು. L. on (*as* ಪದದೊಡನೆ) (— ಎಂದು) ಭಾವಿಸು, ಗಣಿಸು, ಎಣಿಸು ; (ಅಪನಂಬಿಕೆ, ಮೊ. ಗಳಿಂದ) ನೋಡು (*with* ಪದದೊಡನೆ) ; ಪ್ರೇಕ್ಷಕನಾಗಿ ನೋಡುತ್ತಿರು. L. over ಪರೀಕ್ಷಿಸು ; ಪರಾಮರ್ಶಿಸು. (ತಪ್ಪನ್ನು) ಗಮನಿಸದಿರು ; ಮನ್ನಿಸು. L. through (ಕಿಟಕಿ, ಮೊ. ಗಳ) ಮೂಲಕ ನೋಡು ; (ತೆರೆ, ಮೊ. ಗಳಲ್ಲಿ) ದೃಷ್ಟಿಹಾಯಿಸಿ ನೋಡು ; (ನಟನೆಯನ್ನು, ಬೂಟಾಟಿಕೆಯವನನ್ನು) ಮರ್ಮ ತಿಳಿಯುವಂತೆ ನೋಡು ; — ಮೂಲಕ ವ್ಯಕ್ತವಾಗು, ಗೋಚರಿಸು (His greed looks through his eyes ಅವನ ದುರಾಶೆ ಅವನ ಕಣ್ಣುಗಳಲ್ಲಿ ಕಾಣುತ್ತಿದೆ). (ಪುಸ್ತಕ, ಮೊ.) ಅಲ್ಲಲ್ಲಿ ನೋಡು. L. to ಗಮನ ಕೊಡು ; ಎಚ್ಚರಿಕೆ ತೆಗೆದುಕೊ ; ಜೋಕೆಯಿಂದಿರು (L. to your manners. L. to it that—). ಕಾವಲು ಕಾಯುತ್ತಿರು. (ಯಾವುದಕ್ಕಾದರೂ, ಒಬ್ಬನಮೇಲೆ, ಒಂದರಮೇಲೆ) ಭರವಸೆಯಿಟ್ಟಿರು (*For* ಉಪ. ಜೊತೆ). ನಿರೀಕ್ಷಿಸು ; ಗುರಿಯಿಟ್ಟಿರು. L. towards (ಬಳ. ಮಾ.) (— ನು) ಆರೋಗ್ಯವಾಗಿರಲೆಂದು ಹರಸಿ ಕುಡಿ. L. upon (with) — ಭಾವನೆಯಿಂದ ನೋಡು, ಪರಿಗಣಿಸು (L. upon favourably ಅನುಗ್ರಹ ಪೂರ್ವಕವಾಗಿ ನೋಡು. L. upon as —ಎಂದು ಪರಿಗಣಿಸು)

(ಕ್ರಿ. ವಿ. ಗಳೊಡನೆ).—L. about ಕಾಯುತ್ತಿರು; ಹುಡುಕುತ್ತಿರು (*For* ಉಪ. ಜೊತೆ) ; ದೃಷ್ಟಿ ಹರಿಸು. L. ahead (ದೋಣಿ ನಡಸುವವನ ವಿಷಯದಲ್ಲಿ : ದೋಣಿ) ಎತ್ತ ಕಡೆ ಹೋಗುತ್ತಿದೆಯೆಂದು ತಿಳಿಯಲು ತಿರುಗಿ ನೋಡು (ಮು., ವಿಧಿ ರೂಪದಲ್ಲಿ). L. back (ಕೈಕೊಂಡ ಕಾರ್ಯದ ವಿಷಯದಲ್ಲಿ) ಹಿಂದೇಟು ಹೊಡೆ ; ಉತ್ಸಾಹ ಕುಗ್ಗು. ಯಾವುದೋ ಹಿಂದಿನ ಘಟನೆಯಮೇಲೆ, ಕಡೆಗೆ, ಮನಸ್ಸು ತಿರುಗಿಸು (*Upon, to* ಉಪ. ಜೊತೆ). ಮುಂದುವರಿಯದೆ ನಿಂತುಬಿಡು (ಸಾ., ನಿಷೇಧಾರ್ಥಕದೊಡನೆ). L. down ನೋಟದಿಂದ ಅಡಗಿಸಿಬಿಡು. (ವಾಣಿಜ್ಯ) ಬೆಲೆ ಇಳಿ, ಬಿದ್ದು ಹೋಗು. L. d. (up)on (ತಾನು ಮೇಲೆಂದು ಭಾವಿಸಿ ಇತರರನ್ನು) ಕಡೆಗಣಿಸು, ಕೀಳಾಗಿ ಕಾಣು. L. forward to (ಸಾ., ಸಂತೋಷದಿಂದ) ನಿರೀಕ್ಷಿಸುತ್ತಿರು. L. in ಹೊಕ್ಕು ಹೋಗು. L. on ಸುಮ್ಮನೆ ನೋಡುತ್ತಿರು ; ಕೇವಲ ಪ್ರೇಕ್ಷಕನಾಗಿರು [**Looker-ón** (ನಾ.)] . L. on with (ಪುಸ್ತಕ, ಮೊ. ನ್ನು ಮತ್ತೊಬ್ಬನು ಓದುತ್ತಿರುವಾಗಲೇ) ತಾನೂ ಜೊತೆಯಲ್ಲಿ ಓದು. L. out (ಕಿಟಕಿ, ಮೊ. ಗಳಿಂದ) ಹೊರಕ್ಕೆ ನೋಡು ; ಇಣಿಕಿ ನೋಡು ; ಎಚ್ಚರಿಕೆಯಿಂದ ನೋಡುತ್ತಿರು ; (ನಿರೀಕ್ಷಿತ ವ್ಯಕ್ತಿಯನ್ನು) ಎದುರುನೋಡುತ್ತಿರು (*For* ಉಪ. ಜೊತೆ). (ಬಿರುಗಾಳಿ, ಮಳೆ, ಮೊ. ಕ್ಕೆ) ಸಿದ್ಧನಾಗಿರು (*For* ಉಪ. ಜೊತೆ) ; — ಕಡೆಗೆ ನೋಟವಿರು (*On, over*, ಮೊ. ಉಪ. ಜೊತೆ) ; ಪರೀಕ್ಷಿಸಿ ಆಯ್ದುಕೊ. L. over ಒಂದೊಂದಾಗಿ ಅಥವಾ ಭಾಗ ಭಾಗವಾಗಿ ಪರೀಕ್ಷಿಸು. L. round (ಮು., ಕಾರ್ಯಕ್ರಮವನ್ನು ನಿರ್ಧರಿಸುವುದಕ್ಕಾಗಿ) ಸಾಧ್ಯಾಸಾಧ್ಯತೆಗಳು ಮೊ. ವನ್ನು ಪರೀಕ್ಷಿಸಿ ನೋಡು. L. through ಆಮೂಲಾಗ್ರವಾಗಿ ಪರೀಕ್ಷಿಸು (Looked him through). L. up (ಮು., ವಾಣಿಜ್ಯ) ಬೆಲೆಯೇರು. ಅಭಿವೃದ್ಧಿಗೆ ಬರು. (ಮು., ನಿಘಂಟಿನಲ್ಲಿ ಶಬ್ದಕ್ಕಾಗಿ, ಪರಾಮರ್ಶೆ ಗ್ರಂಥದಲ್ಲಿ ವಿಷಯಕ್ಕಾಗಿ) ಹುಡುಕಿ ನೋಡು. (ಒಬ್ಬನ) ಭೇಟಿಗಾಗಿ ಹೋಗು. ಕಣ್ಣೆತ್ತಿ ನೋಡು (L. up to ಗೌರವಿಸು ; ಪೂಜ್ಯ ಭಾವದಿಂದ ನೋಡು). L. one up & down (ಒಬ್ಬನನ್ನು) ಅಡಿಯಿಂದ ಮುಡಿಯ ವರೆಗೆ ತೀಕ್ಷ್ಣ ದೃಷ್ಟಿಯಿಂದ, ತಿರಸ್ಕಾರ ದೃಷ್ಟಿಯಿಂದ, ಪರೀಕ್ಷಿಸಿ ನೋಡು.

Look (ನಾ.) ನೋಡುವುದು ; ನೋಟ ; ದೃಷ್ಟಿ ; ನಸು ನೋಟ (A kind, scornful, l.). (ಏ. ವ. ದಲ್ಲಿ ಅಥವಾ ಬ. ವ. ದಲ್ಲಿ) ಮುಖ ಲಕ್ಷಣ ; ಮುಖ ಭಾವ ; ಭಂಗಿ [Good looks (Good ನೋಡಿ)] . (ವಸ್ತುಗಳ ವಿಷಯದಲ್ಲಿ) ತೋರ್ಕೆ (The place has a European l.)

Loom[1] ಲೂಮ್ (ನಾ.) ನೂಲಿನಿಂದ ಬಟ್ಟೆಯನ್ನು ನೆಯ್ಯುವ ಯಂತ್ರ : ಮಗ್ಗ. (ದೋಣಿಯ) ಹುಟ್ಟಿನ ಕಾವು.

Loom[2] ಲೂಮ್ (ಕ್ರಿ. ಅಕ., ನಾ.) ಅಸ್ಪಷ್ಟವಾಗಿ, ಮಸುಕು ಮಸುಕಾಗಿ, — ಕಾಣು, ಕಾಣಿಸಿಕೊ ; ಸ್ಪಷ್ಟವಿಲ್ಲದೆ, ಅನೇಕ ವೇಳೆ ಅಸಹಜವಾದ ದೊಡ್ಡ ಪ್ರಮಾಣವುಳ್ಳದ್ದಾಗಿಯೂ ಭಯ ಹುಟ್ಟಿಸುವಂಥದಾಗಿಯೂ ಕಾಣಿಸಿಕೊ (ರೂಪ. ಸಹ) (ಸಾ., L. large, etc.). (ನಾ.) (ಸಮುದ್ರ ಪ್ರಯಾಣ, ಮೊ. ಗಳಲ್ಲಿ) ದೂರದಲ್ಲಿ ಕಾಣುವ ಭೂಮಿಯ ಅಸ್ಪಷ್ಟವಾದ ಮೊದಲ ನೋಟ.

Loon ಲೂನ್ (ನಾ.) (ಸ್ಕಾ. ಪ್ರ. ಮತ್ತು ಪ್ರಾಚೀ. ಪ್ರ.) ಅಲೆಮಾರಿ ; ಸೋಮಾರಿ ; ಹಳ್ಳಿ ಗಮಾರ ; ಒರಟ ; ಪೋರ ; ಹುಡುಗ.

Loóny, Lú- ಲೂನಿ (ನಾ., ಗು.) (ಅಸಂ.) ಹುಚ್ಚು ಹಿಡಿದ(ವನು)

Loop[1] ಲೂಪ್ (ನಾ., ಕ್ರಿ.) ಒಂದು ವಕ್ರ ರೇಖೆ, ಕೊಂಕಿಸಿದ ದಾರ, ಅಥವಾ ಬಳ್ಳಿ — ಇವುಗಳ ಒಂದು ಕೊನೆಯು ಉಳಿದ ಭಾಗದಮೇಲೆ ಅಡ್ಡಹಾಯುವುದರಿಂದಾದ ಆಕೃತಿ : ಕುಣಿಕೆ; ಗೋಣಸು ; ದಾರ, ಹುರಿ, ಮೊ. ಗಳ ಕುಣಿಕೆಯಾಕೃತಿಯ ಎರಡು ಕೊನೆಗಳು ಅಡ್ಡ ಹಾಯುವ ಸ್ಥಳದಲ್ಲಿ ಅವನ್ನು ಬಂಧಿಸಿ ಈ ಆಕೃತಿಯನ್ನು ಯಾವುದಕ್ಕಾದರೂ ಹಚ್ಚಿದ ಸೇರಿಕೆ, ಅಲಂಕಾರ: ಕುಣಿಕೆಯಲಂಕಾರ ; ಹಿಡಿ, ಮೊ. ವಾಗಿ ಉಪಯೋಗಿಸುವ ಲೋಹದ ಬಳೆ ಅಥವಾ ಕೊಂಡಿ ; ಪ್ರಧಾನ ಮಾರ್ಗದಿಂದ ಕವಲೊಡೆದು, ಬಳಸಿಕೊಂಡುಬಂದು ಮತ್ತೆ ಅದೇ ಮಾರ್ಗಕ್ಕೆ ಸೇರುವ ರೈಲುಹಾದಿ, ದೂರ ಲೇಖಕ (ಟೆಲಿಗ್ರಾಫ್) ತಂತುಮಾರ್ಗ: ಕುಣಿಕೆ ಹಾದಿ (= L. line). (ಕ್ರಿ.) (ದಾರ, ಮೊ. ನ್ನು) ಕುಣಿಕೆ ಮಾಡು, ಹಾಕು ; ಕುಣಿಕೆಯಾಕಾರವಾಗು (ಮು., ಕುಣಿಕೆಯಂತೆ ಮೈ ಬಾಗಿಸುವ ಒಂದು ಜಾತಿಯ ಹುಳುಮರಿಯ ವಿಷಯದಲ್ಲಿ) ; ಕುಣಿಕೆಯಿಂದ (ಹೇಗೋ ಹಾಗೆ) ಸುತ್ತುಗಟ್ಟು ; ಕುಣಿಕೆಗಳಿಂದ ಬಂಧಿಸು ; (ಒಟ್ಟಿಗೆ) ಕೂಡಿಸು (*Up, back* ಉಪ. ಜೊತೆ). Looping the loop ಬೈಸಿಕಲ್ ಅಥವಾ ವಿಮಾನವು ಕುಣಿಕೆಯಾಕಾರದಲ್ಲಿ ಸಂಚರಿಸುತ್ತ ಸುತ್ತುಹೊಡೆಯುವ ಸಾಹಸ ಕಾರ್ಯ.

Loop[2] ಲೂಪ್ (ನಾ.) (ವಿರ. ಪ್ರ.) = Loop-hole.

Loóper ಲೂಪರ್ (ನಾ.) ಮುಂದುವರಿಯುವಲ್ಲಿ, ಮೈಯನ್ನು ಎತ್ತಿ ಕುಣಿಕೆಯಂತೆ ಬಾಗಿಸುವ ಕೆಲವು ಜಾತಿಯ ಹುಳುಮರಿ. (ಹೊಲಿಯುವ ಯಂತ್ರ, ಮೊ. ಗಳಲ್ಲಿ) ಕುಣಿಕೆಗಳನ್ನು ಮಾಡುವ ಸಲಕರಣೆ.

Loóp-hole ಲೂಪ್‌ಹೋಲ್ (ನಾ., ಕ್ರಿ. ಸಕ.) (ಬಂದೂಕು, ಮೊ. ನ್ನು ಹೊಡೆಯುವುದಕ್ಕೊ, ಹೊರಗಡೆ ನೋಡುವುದಕ್ಕೊ, ಅಥವಾ ಗಾಳಿ ಮತ್ತು ಬೆಳಕು ಒಳಗೆ ಬರುವುದಕ್ಕೊ) ಗೋಡೆಯಲ್ಲಿ ಮಾಡಿರುವ ಕಿರಿದಾದ ಉದ್ದಗಂಡಿ; ಜೇರುಗಂಡಿ; ಹೊರಬೀಳುವ ಹಾದಿ; ಛಿದ್ರ. ನಿಯಮ, ಮೊ. ಗಳಿಂದ ತಪ್ಪಿಸಿಕೊಳ್ಳುವ ಉಪಾಯ. (ಕ್ರಿ.) (ಗೋಡೆ, ಮೊ. ಗಳಲ್ಲಿ) ಉದ್ದಗಂಡಿಗಳನ್ನು ಮಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Loose ಲೂಸ್ (ಗು.) ಬಂಧನವಿಲ್ಲದ; ಯಾವುದಕ್ಕೂ ಸೇರಿಕೊಂಡಿರದ; (ಬಂಧನದಿಂದ ಅಥವಾ ನಿರ್ಬಂಧದಿಂದ) ಬಿಡುಗಡೆ ಹೊಂದಿದ; ಬಂಧ ಮುಕ್ತ; (ಅದರ ಸ್ಥಾನದಿಂದ) ಕಳಚಿದ, ಕಳಚಲಾಗುವ; ಬಿಡಿ ಯಾದ; ಸಡಿಲವಾದ [Come, get, l. ಕಳಚಿಕೊಂಡು ಬರು; ಕಳಚಿಕೊ. Play fast & l. (Fast[2] ನೋಡಿ)]. ಒತ್ತಾಗಿಲ್ಲದ; ಸಾಂದ್ರ ವಿಲ್ಲದ; ಒತ್ತುಗೂಡಿರದ; ವಿರಳವಾದ; ಜಾಳಾದ (L. soil; L. fabric). (ಹೇಳಿಕೆ, ಅಭಿಪ್ರಾಯ, ಮೊ. ವು) ನಿಷ್ಕೃಷ್ಟವಲ್ಲದ; ಅನಿರ್ದಿಷ್ಟ; ಅಸ್ಪಷ್ಟ; ತಪ್ಪುತಪ್ಪಾದ. (ಭಾಷಾಂತರ) ಯಥಾ ಮೂಲವಲ್ಲದ. (ಶೈಲಿ) ವ್ಯಾಕರಣಶುದ್ಧವಲ್ಲದ. (ಕರ್ತ) ಅಶ್ರದ್ಧೆ ಯಿಂದ ಕಾರ್ಯಮಾಡುವ; ಹರುಕು ಮುರುಕಾಗಿ ಕಾರ್ಯಮಾಡುವ. ನೀತಿಗೆಟ್ಟ; ಸಡಿಲ ನಡತೆಯ; ವಿಷಯ ಲಂಪಟನಾದ; ಅಶ್ಲೀಲ; ವ್ಯಭಿಚಾರಿಯಾದ; ಮಾತಿನಲ್ಲಿ, ಕಾರ್ಯದಲ್ಲಿ, ಗಂಭೀರವಿಲ್ಲದ. (ರ. ವಿ.) ಸಂಯುಕ್ತವಾಗಿಲ್ಲದ; ಅಸಂಯುಕ್ತ. ಒಂದು ಭಾಗ ಕಟ್ಟಿಲ್ಲದೆ ಜೋಲಾಡುತ್ತಿರುವ (L. end. At a l. end ಒಂದು ಗೊತ್ತಾದ ಉದ್ಯೋಗವಿಲ್ಲದೆ); ಭದ್ರವಾಗಿ ಬಿಗಿದಿಲ್ಲದ; ಅಲುಗಾಡುವ [Have a screw l. (Screw ನೋಡಿ)]. ಸಡಿಲವಾಗಿರುವ; ಬಿಗಿಯಾಗಿಲ್ಲದ; ಅಳ್ಳಕವಾದ [With a l. rein (ಕುದುರೆಸವಾರಿಯಲ್ಲಿ) ಲಗಾಮು ಸಡಿಲ ಬಿಟ್ಟು. (ರೂಪ.) ಹತೋಟಿ ಸಡಿಲಸಿ]. L. bowels ಭೇದಿ ಯಾಗುವ ಸ್ಥಿತಿ. L. bowling ಪುಟ ಸರಿಯಾದ ಕಡೆ ಬೀಳದ ಚೆಂಡೆಸತ. L. box (Box[1] ನೋಡಿ). L. build or make ಅಂದವಿಲ್ಲದ, ವಿಕಾರವಾದ, — ಆಕಾರ, ಮೈಕಟ್ಟು. L. fielding ಅಲಕ್ಷ್ಯತೆಯಿಂದ, ತಪ್ಪುತಪ್ಪಾಗಿ, ಆಟ ಕಾಯುವುದು. L. fish ವ್ಯಭಿಚಾರಿ; ವಿಷಯ ಲಂಪಟ. L.-fitting (ಉಡುಪು, ಮೊ. ವು) ಸಡಿಲವಾಗಿರುವ. L. hand-writing ಸೊಟ್ಟಸೊಟ್ಟ ಬರವಣಿಗೆ. L.-leaf (ಲೆಕ್ಕಪುಸ್ತಕ, ಮೊ. ವಿಷಯದಲ್ಲಿ) ಹಾಳೆಗಳನ್ನು ಹೊಲಿಯದೆ ಬಿಡಿ ಬಿಡಿಯಾಗಿ ತೆಗೆಯಲಾಗುವಂತೆ ಸೇರಿಸಿರುವ. L. order (ಸೈನ್ಯ) ನಡು ನಡುವೆ ಹೆಚ್ಚು ಅಂತರ ಬಿಟ್ಟು ನಿಲ್ಲಿಸಿದ ವ್ಯೂಹ; ವಿರಳ ವ್ಯೂಹ. L. play or game (ಕಾಲ್ಚೆಂಡಾಟ ದಲ್ಲಿ) ಆಟಗಾರರು ಹೊಂದಿಕೊಂಡು ಆಡದ ಆಟ; ಬಿಗಿಯಿಲ್ಲದ ಆಟ. L. thinker ವಿಚಾರ ಮಾಡುವುದರಲ್ಲಿ ಕ್ರಮಬದ್ಧನಲ್ಲದವನು. L. tongue ಹರಟುವ ನಾಲಗೆ. On the l. ಕುಡಿತ, ಮೊ. ಖುಷಿಯಲ್ಲಿ. **Lóosely** (ಕ್ರಿ. ವಿ.); **Lóoseness** (ನಾ.); **Lóosish** (ಗು.); **Lóosen** — ಸ್ನ್ (ಕ್ರಿ.) (ನಾಲಗೆ) ಸಡಿಲ ಬಿಡು; ಸಡಿಲವಾಗು, —ಮಾಡು; ವಿರಳವಾಗು, — ಮಾಡು; ಬಿಗಿ ಕಡಮೆಯಾಗು, —ಮಾಡು. ಮಲಬದ್ಧತೆ ತಪ್ಪಿಸು. ಒಣಗೆಮ್ಮಲನ್ನು ತಪ್ಪಿಸಿ ಶ್ಲೇಷ್ಮ ಬರುವಂತೆ ಮಾಡು. (ಶಿಸ್ತು, ಮೊ. ನ್ನು) ಸಡಿಲಿಸು.

Loose (ಕ್ರಿ. ಸಕ.) ಬಂಧನ ಬಿಡಿಸು; ಕಟ್ಟು ಕಳಚು; ಬಿಡುಗಡೆ ಮಾಡು; ಸ್ವೇಚ್ಛೆಯಾಗಿ ಬಿಡು (Wine loosed his tongue ಮದ್ಯದ ಅಮಲೇರಿ ನಾಲಗೆಗೆ ಕಟ್ಟು ತಪ್ಪಿತು; ಹುಚ್ಚುಹುಚ್ಚಾಗಿ ಹರಟಿದನು). (ಗಂಟು, ಬೇಡಿ, ಮುದ್ರೆ, ತಲೆಗೂದಲು, ಮೊ. ನ್ನು) ಬಿಚ್ಚು, ಕಳಚು. (ಹಡಗು) ಲಂಗರು ಎತ್ತಿ ಬಿಡು. (ಬಾಣ) ಎಸೆ, ಬಿಡು; ಗುಂಡು ಹಾರಿಸು; ಬಂದೂಕು ಹೊಡೆ (*At* ಉಪ. ದೊಡನೆ). (L. hold ಹಿಡಿತ ಬಿಡು; ಹತೋಟಿ ಬಿಡು)

Loose (ನಾ.) ತಡೆಯಿಲ್ಲದೆ ಹೇಳಿಬಿಡುವುದು, ಆಡಿಬಿಡುವುದು (Give l. or a l. to one's feelings ತನ್ನ ಮನೋಭಾವನೆಗಳನ್ನು ಧಾರಾಳವಾಗಿ ಹೇಳಿಬಿಡು)

Loot ಲೂಟ್ (ನಾ., ಕ್ರಿ.) ಶತ್ರುಗಳಿಂದ ದೋಚಿಕೊಂಡ ಸಾಮಾನು; ಲೂಟಿ; ಸೂರೆ; ಕೊಳ್ಳೆ. (ಅಧಿಕಾರ ಮಾಡುವವನ) ಅನ್ಯಾಯದ ಸಂಪಾದನೆ: ಲಂಚ, ಮೊ. ವು. (ಕ್ರಿ.) (ಪಟ್ಟಣ, ಮೊ. ನ್ನು) ಲೂಟಿ, ಸೂರೆ, — ಮಾಡು; ಕೊಳ್ಳೆ ಹೊಡೆ; ದೋಚಿಕೊಂಡು ಹೋಗು. **Lóoter** (ನಾ.)

Lop[1] ಲಾಪ್ (ನಾ., ಕ್ರಿ.) ಮರಗಳ ಸಣ್ಣ ಕೊಂಬೆಗಳು, ಕಡ್ಡಿಗಳು [L. & top, L. & crop (ಮರವನ್ನು ಸವರಿದುದರಿಂದ ಬಂದ) ಕಡ್ಡಿ ಪುಳ್ಳೆಗಳು]. (ಮರದ) ಕೊಂಬೆಗಳನ್ನೂ ಕಡ್ಡಿಗಳನ್ನೂ, (ವಿ. ಪ್ರ.) ತುದಿಯನ್ನೂ, ಕತ್ತರಿಸಿಹಾಕು, ಸವರು (*Off*, *away* ಉಪ. ದೊಡನೆ); (ಮನುಷ್ಯನ ಕೈಕಾಲುಗಳನ್ನು ಅಥವಾ ತಲೆಯನ್ನು) ಕತ್ತರಿಸಿಹಾಕು; ಕತ್ತರಿಸುವ ಏಟುಗಳನ್ನು ಕೊಡು (*At* ಉಪ. ದೊಡನೆ). **Lóppings** (ನಾ., ಬ. ವ.)

Lop[2] ಲಾಪ್ (ಕ್ರಿ., ನಾ.) ಸಡಿಲವಾಗಿ ಜೋಲುಬೀಳು; (ಕಿವಿ) ಜೋಲ ಬೀಳಿಸು; ವಕ್ರವಾಗಿ ಮೈ ಬಗ್ಗಿಸು. ಸೋಮಾರಿಯಾಗಿ ಕಾಲ ಕಳೆ; ಅಲ್ಲಲ್ಲೇ ಸುಳಿದಾಡುತ್ತಿರು (*About* ಉಪ. ದೊಡನೆ). = Lope. (ನಾ.) ಜೋಲುಗಿವಿಯ (ಒಂದು ಜಾತಿಯ) ಮೊಲ (= **L.-ear**). **L.-ears** ಜೋಲುಗಿವಿ(ಗಳು). **Lóp-eared** (ಗು.); **Lóppy** (ಗು.); **Lopsíded** (ಗು.) ಒಂದು ಪಕ್ಕ ಇನ್ನೊಂದಕ್ಕಿಂತಲೂ ಕೆಳಗಿರುವ ಅಥವಾ ಸಣ್ಣದಾಗಿರುವ; ಒಂದು ಕಡೆ ಭಾರ ಹೆಚ್ಚಾಗಿರುವ; ಸಮ ತೂಕವಿಲ್ಲದ. **Lopsídedly** (ಕ್ರಿ. ವಿ.); **Lopsídedness** (ನಾ.)

Lop[3] ಲಾಪ್ (ಕ್ರಿ. ಅಕ., ನಾ.) (ನೀರಿನ ವಿಷಯದಲ್ಲಿ: ಗಾಳಿಯಿಂದ) ರಾಶಿಗೂಡಿದ ಸಣ್ಣ ಸಣ್ಣ ಅಲೆಗಳಾಗಿ ಒಡೆ. (ನಾ.) ನೀರಿನ ಈ ತೆರದ ಅಲೆಗಳ ಚಲನೆ.

Lope ಲೋಪ್ (ಕ್ರಿ. ಅಕ., ನಾ.) (ಮು., ಪ್ರಾಣಿಗಳ ವಿಷಯದಲ್ಲಿ) ದೂರ ದೂರಕ್ಕೆ ಹಾಕುವ ಹಾರುಗಾಲಿನ ಓಟ (ಓಡು)

Lopsíded. **Lop**[2] ನೋಡಿ.

Loquácious ಲೊಕ್ವೇಷಸ್ (ಗು.) ಅತಿಯಾಗಿ ಮಾತಾಡುವ; ಮಾತಾಳಿ ಯಾದ; ಹರಟೆಯಮಲ್ಲನಾದ; (ಪಕ್ಷಿ) ಚಿಲಿಪಿಲಿಗುಟ್ಟುವ; (ನೀರು) ಗುಳು ಗುಳು ಶಬ್ದ ಮಾಡುವ. **Loquáciously** (ಕ್ರಿ. ವಿ.); **Loquáciousness** (ನಾ.); **Loquácity** — ಕ್ವ್ಯಾಸಿಟಿ (ನಾ.)

Lóquat ಲೋಕ್ವ್ಯಾಟ್ (ನಾ.) (ಇತರ ದೇಶಗಳಲ್ಲೂ ಬೆಳೆಯುವ) ಚೀನ ಜಪಾನ್ ದೇಶಗಳ ಒಂದು ಹಣ್ಣು (ಮರ): ಲಕ್ಕೋಟೆ ಹಣ್ಣು (ಮರ)

Lóquitur (L) ಲಾಕ್ವಿಟರ್ [ಕ್ರಿ. ಅಕ., ಪ್ರಥಮ ಪುರುಷ ಏ. ವ., ವರ್ತಮಾನ ಕಾಲ; ಸಂಕ್ಷಿಪ್ತ: loq.] (ರಂಗಸ್ಥಳದ ಅಥವಾ ಪಾಠಕನ ಸೂಚನೆಗಾಗಿ) (— ನು) ಮಾತನಾಡುತ್ತಾನೆ.

Lor, Lor' ಲಾರ್ (ಭಾವ. ಅವ್ಯ.) Lord ಪದದ ಗ್ರಾಮ್ಯ ರೂಪ.

Lóral. **Lore**[2] ನೋಡಿ.

Lord ಲಾರ್ಡ್ (ನಾ., ಭಾವ. ಅವ್ಯ.) ಯಜಮಾನ; ಧಣಿ; ಒಡೆಯ; ಸ್ವಾಮಿ; ದೊರೆ; ರಾಜ; ಪ್ರಭು; ಅಧಿಪತಿ [Our sovereign l. the King. Lords of creation ಮನುಷ್ಯ ಜಾತಿ; ಮಾನವರು; (ಹಾಸ್ಯ ಪ್ರ.) ಗಂಡಸರು (ಹೆಂಗಸರಲ್ಲ)]. (ಕಾವ್ಯ) ಧಣಿ; ಸ್ವಾಮಿ; ಮಾಲೀಕ; ಯಜಮಾನ [L. of a few acres ಕೆಲವು ಎಕರೆಗಳಿಗೆ ಯಜಮಾನ (Landlord ಪದದೊಡನೆ ಹೋಲಿಸಿ)]. ಯಾವುದಾದ ರೊಂದು ವ್ಯಾಪಾರದಲ್ಲಿ, ಕೈಗಾರಿಕೆಯಲ್ಲಿ, ದೊರೆಗೆ ಸಮಾನ ನಾದವನು: ಪ್ರಭು (The cotton lords). (ಊಳಿಗ ಮಾನ್ಯ ಪದ್ಧತಿಯಲ್ಲಿ) ಧಣಿ [Mesne l., L. of the manor, L. paramount (ಆಯಾ ಪದವನ್ನು ನೋಡಿ)]. (ಕಾವ್ಯ ಮತ್ತು ಹಾಸ್ಯ ಪ್ರ.) ಗಂಡ (= L. & master). (ಜ್ಯೋ.) ಅಧಿಪತಿ. ದೇವರು; ಭಗವಂತ [ಸಾ., The L. (God) (ಸಂಬೋಧನೆಯಲ್ಲಿ ವಿನಾ). L. knows who, how, etc. ಯಾರೊ, ಹೇಗೊ . . . . . ದೇವರೇ ಬಲ್ಲ (ನನಗೆ ಗೊತ್ತಿಲ್ಲ ಎಂಬ ಅರ್ಥದಲ್ಲಿ). L. have mercy, L. bless me or us or my soul or you (ಆಶ್ಚರ್ಯ, ಮೊ. ನ್ನು ಸೂಚಿಸುವ ಉದ್ಗಾರಗಳು). Lord! (ಭಾವ. ಅವ್ಯ.) ದೇವರೇ! (ಆಶ್ಚರ್ಯ ಸೂಚಕ ಉದ್ಗಾರ)]. ಯೇಸುಕ್ರಿಸ್ತ [ಸಾ., The L., Our L.; In the year of Our L. ಕ್ರಿಸ್ತಶಕದಲ್ಲಿ. L.'s prayer = "Our Father" ಎಂಬ ಪದಗಳಿಂದ ಪ್ರಾರಂಭವಾಗುವ ಪ್ರಭು ಪ್ರಾರ್ಥನೆ. L.'s supper = Eucharist. L.'s table ಕ್ರೈಸ್ತ ಬಲಿಪೀಠ; = Eucharist. L.'s day ಭಾನುವಾರ]. ಶ್ರೀಮಂತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ವರ್ಗದವನು) ; (House of Lords ಎಂಬ) ಶ್ರೀಮಂತ ಸಭೆಯ ಸದಸ್ಯ; ಔಪಚಾರಿಕವಾಗಿ Lord ಎಂಬ ಬಿರುದನ್ನು ತನ್ನ ಹೆಸರಿನ ಹಿಂದೆ ಸೇರಿಸಿಕೊಳ್ಳುವ ಹಕ್ಕುಳ್ಳವನು [Live, treat, like a l. ಶ್ರೀಮಂತನಂತೆ ಬಾಳು, — ಉಪಚಾರ ಮಾಡು. Drunk as a l. ಅತಿಯಾಗಿ ಕುಡಿದ. Swear like a l. ಮಿತಿಮೀರಿ ಆಣೆಯಿಡು. L. in waiting, L. of the Bedchamber ಅರಮನೆಯ ಆಪ್ತ ಬಕ್ಷಿ. The Lords ಪಾರ್ಲಿಮೆಂಟಿನ ಶ್ರೀಮಂತ (ಸದಸ್ಯ)ರು. House of Lords ಇಂಗ್ಲೆಂಡಿನ ಶಾಸನ ಸಭೆಗಳಲ್ಲಿ ಮೇಲಿನದು : ಶ್ರೀಮಂತ ಸಭೆ; (ಈ ಸಭೆಯ ಸದಸ್ಯರಲ್ಲಿ ವಿಶೇಷ ಯೋಗ್ಯತೆಯುಳ್ಳ ಕೆಲವರನ್ನು ಆಯ್ದು ಸಂಪೂರ್ಣಾಧಿಕಾರದ ನ್ಯಾಯಸ್ಥಾನವಾಗಿ ನಿಯಮಿಸಿದ) ಶ್ರೀಮಂತ ನ್ಯಾಯ ಸಮಿತಿ]. (ಬ. ವ. ದಲ್ಲಿ) ಒಂದು ಕಾರ್ಯಮಾಡಲು ನಿಯಮಿತವಾಗಿ, ಸರ್ಕಾರದ ಉಚ್ಚ ಅಧಿಕಾರ ಮಾಡುವ ಮಂಡಲಿಯ ಸದಸ್ಯರು (= Lords Commissioners) [Lords of the Admiralty, Treasury, etc. ; First L. ಇಂಥ ಮಂಡಲಿಯ ಅಧ್ಯಕ್ಷ. Civil L. ನೌಕಾ ಮಂಡಲಿಯ ಅಸೈನಿಕ ಸದಸ್ಯ (ಎದುರು ಪದ : Naval Lords = ನೌಕಾಧಿಕಾರಿಗಳು)]. [ಕೆಲವು ಅಧಿಕಾರಿಗಳ ಹೆಸರಿನ ಮೊದಲನೆಯ ಪದ : L. Chamberlain, L. Chancellor, L. Chief Justice, L. High Commissioner. L. Lieutenant (೧೯೨೨ರ ವರೆಗೆ ಇಂಗ್ಲೆಂಡಿನ ದೊರೆ ನೇಮಿಸುತ್ತಿದ್ದ) ಐರ್ಲೆಂಡಿನ ರಾಜಪ್ರತಿನಿಧಿ (ವೈಸ್‌ರಾಯ್); ಪ್ರತಿ ಕೌಂಟಿಯಲ್ಲೂ ಆಡಳಿತದ ಮುಖ್ಯಾಧಿಕಾರಿ ಮತ್ತು ದಂಡಾಧ್ಯಕ್ಷ [**Lord-liéutenancy** (ನಾ.)]. L. Rector ಸ್ಕಾಟ್ಲೆಂಡಿನ ವಿ. ವಿ. ನಿ. ದ Court ಎಂಬ ಮಂಡಲಿಗೆ ಮೂರು ವರ್ಷಕ್ಕೊಮ್ಮೆ ಚುನಾಯಿತನಾಗಿ ಬರುವ ಗೌರವಾಧ್ಯಕ್ಷ. L. Mayor (ಲಂಡನ್, ಯಾರ್ಕ್, ಡಬ್ಲಿನ್, ಮೊ. ಕೆಲವು ದೊಡ್ಡ ಪಟ್ಟಣಗಳ) ಪೌರ ಸಭಾಧ್ಯಕ್ಷ. L. Bishop (ಬಿಷಪ್ಪಿಗೆ ಉಚಿತವಾದ ಸಂಪ್ರದಾಯದ ಒಕ್ಕಣೆ)]. [ಶ್ರೀಮಂತ ವರ್ಗದವರನ್ನು (ಎಂದರೆ, Marquis, Earl, Viscount ಅಥವಾ Baron ವರ್ಗದವರನ್ನು) ವ್ಯಕ್ತಿನಿರ್ದೇಶದಿಂದ ಹೇಳುವಾಗ ಒಕ್ಕಣೆ : Earl of Derby, or L. Derby. My l. (ಶ್ರೀಮಂತ, ಬಿಷಪ್, ಪೌರ ಸಭಾಧ್ಯಕ್ಷ, ಶ್ರೇಷ್ಠ ನ್ಯಾಯಸ್ಥಾನದ ನ್ಯಾಯಾಧಿಪತಿಗಳು —ಇವರನ್ನು ಸಂಬೋಧಿಸುವಾಗ ಗೌರವದ ಒಕ್ಕಣೆ) ಪ್ರಭುವೇ !]. **Lórdless** (ಗು.) ಪ್ರಭುವಿಲ್ಲದ; (ಹೆಂಗಸು) ಗಂಡನಿಲ್ಲದ. **Lórdling** (ನಾ.) ಸಣ್ಣ, ಪುಟ್ಟ, —ಶ್ರೀಮಂತ (ಅನೇಕ ವೇಳೆ ತುಚ್ಛವಾಗಿ). **Lordólatry** (ನಾ.) ಶ್ರೀಮಂತರನ್ನು ಪೂಜಿಸುವುದು. **Lórdly** (ಗು.) ಶ್ರೀಮಂತನ ; ಶ್ರೀಮಂತೋಚಿತ. ಸೊಕ್ಕಿನ ; ಪ್ರತಿಷ್ಠೆಯ ; ಅಟ್ಟಹಾಸದ ; ವೈಭವದ ; ಉದ್ಧತ. **Lórdliness** (ನಾ.); **Lórdship** (ನಾ.) ಆಧಿಪತ್ಯ ; ಆಳಿಕೆ ; ಪ್ರಭುತ್ವ ; ಒಡೆತನ ; ಯಜಮಾನಿಕೆ (*Of*, *over* ಉಪ. ದೊಡನೆ). ಅಧಿಕಾರ ಪ್ರದೇಶ ; ಜಮೀನುದಾರಿ. Your l., His l. (ಗೌರವ ಪೂರ್ವಕವಾಗಿ ಶ್ರೀಮಂತನನ್ನು ಕುರಿತು ಮಾತನಾಡುವಲ್ಲಿ ; ಇತರರ ವಿಷಯದಲ್ಲೂ ಪ್ರಾಣಿಗಳ ವಿಷಯದಲ್ಲೂ ಹಾಸ್ಯ ಪ್ರ.)

Lord (ಕ್ರಿ.) (ಒಬ್ಬನ ಮೇಲೆ) ಪ್ರಭುತ್ವ ಮಾಡು, ಅಧಿಕಾರ ಚಲಾಯಿಸು [(*Over* ಉಪ. ದೊಡನೆ). (ಸಾ., ಕರ್ಮಣಿಯಲ್ಲಿ) Will not be lorded over ಅಧಿಕಾರಕ್ಕೆಡೆಗೊಡುವುದಿಲ್ಲ. Lording it over his household]. ಶ್ರೀಮಂತನನ್ನಾಗಿ ಮಾಡು ; Lord ಎಂಬ ಬಿರುದು ಕೊಡು.

Lord's ಲಾರ್ಡ್ಸ್ (ನಾ.) ಲಂಡನ್ನಿನಲ್ಲಿ ಪ್ರಸಿದ್ಧವಾದ ಕ್ರಿಕೆಟ್ ಮೈದಾನ. (Thomas Lord ಎಂಬಾತನ ಹೆಸರಿನಿಂದ)

Lore[1] ಲೋರ್ (ನಾ.) (ಪ್ರಾಚೀ. ಪ್ರ.) ತತ್ತ್ವ. (ಪ್ರಾಚೀ. ಪ್ರ.) ವಿದ್ವತ್ತು ; ಪಾಂಡಿತ್ಯ. ಒಂದು ವಿಷಯಕ್ಕೆ ಸಂಬಂಧಪಟ್ಟ ಸಂಗತಿಗಳು ಮತ್ತು ಸಾಂಪ್ರದಾಯಿಕವಾಗಿ ಬಂದ ವಿಷಯಗಳು (Ghost, bird, animal, fairy, etc. l.)

Lore[2] ಲೋರ್ (ನಾ.) (ಪ್ರಕೃತಿ ಚರಿತ್ರೆ) (ಹಕ್ಕಿಗಳಲ್ಲಿ ಕಣ್ಣುಗಳಿಗೂ ಕೊಕ್ಕಿನ ಮೇಲ್ಭಾಗಕ್ಕೂ, ಹಾವುಗಳಲ್ಲಿ ಕಣ್ಣುಗಳಿಗೂ ಮೂಗಿನ ಹೊಳ್ಳೆಗಳಿಗೂ, ಮಧ್ಯೇ ಇರುವ) ಪಟ್ಟೆಯಂಥ ಮೇಲ್ಮೈ. **Lóral** (ಗು.)

Lóricate ಲಾರಿಕೆ(ೕ)ಟ್ (ಗು.) (ಪ್ರಾ. ವಿ.) (ಮೂಳೆ, ಫಲಕಗಳು, ಶಲ್ಕ, ಮೊ.) ರಕ್ಷಣ ಸಾಧನವುಳ್ಳ.

Lóris ಲೋರಿಸ್ (ನಾ.) ಬಾಲವಿಲ್ಲದ ಕಪಿಜಾತಿಗೆ ಸೇರಿದ, ರಾತ್ರಿ ಸಂಚಾರದ, ಸೂಕ್ಷ್ಮದೇಹದ, ಸಿಂಹಳ ದ್ವೀಪದ ಒಂದು ಸಣ್ಣ ಸಸ್ತನಿ ಪ್ರಾಣಿ(ಜಾತಿ) : (ಸಿಂಹಳದ) ಕಾಡುಪಾಪ.

Lorn ಲಾರ್ನ್ (ಗು.) (ಕಾವ್ಯ ಮತ್ತು ಹಾಸ್ಯ ಪ್ರ.) ಹಾಳಾದ ; ನಾಶವಾದ ; ಗತಿಗೆಟ್ಟ ; ತೊರೆದುಬಿಟ್ಟ ; ವಿರಹಿತ (ಅನೇಕ ವೇಳೆ Lone l.)

Lórry ಲಾರಿ (ನಾ.) ಚಪ್ಪಟೆಯ ತಳದ, ನಾಲ್ಕು ಗಿಡ್ಡ ಚಕ್ರಗಳುಳ್ಳ, ಉದ್ದನೆಯ ಸಾಮಾನುಬಂಡಿ ; (ರೈಲುಮಾರ್ಗದ ಅಥವಾ ಟ್ರ್ಯಾಮ್ ಮಾರ್ಗದ) ಮೇಲ್ಮುಚ್ಚಿಲ್ಲದ ಸಾಮಾನುಬಂಡಿ : 'ಲಾರಿ'.

Lóry ಲೋರಿ (ನಾ.) ಹೊಳಪು ಬಣ್ಣದ ಗರಿಗಳುಳ್ಳ ಗಿಣಿಯಂಥ ಹಕ್ಕಿ(ಜಾತಿ)

Lose ಲೂಸ್ (ಕ್ರಿ. ; ಭೂತ., ಭೂ. ಕೃ. Lost ಲಾಸ್ಟ್) ಕಳೆದುಕೊ ; ನೀಗಿಕೊ ; ಹೋಗಲಾಡಿಸಿಕೊ ; (ದುರದೃಷ್ಟ, ಅಗಲಿಕೆ, ಸಾವು, ನಿರ್ಲಕ್ಷ್ಯತೆ, ಮೊ. ಗಳಿಂದ ಆಸ್ತಿ, ಪ್ರಾಣ, ಯೋಗ್ಯತೆ, ಅಂಗ, ತಂದೆ, ಸ್ನೇಹಿತ, ಮೊ. ಗಳ) ನಷ್ಟ ಹೊಂದು (Doctor loses patient ವೈದ್ಯನು ರೋಗಿಯ ಪ್ರಾಣವನ್ನುಳಿಸಲಾರದೆಹೋಗುವನು ; ವೈದ್ಯನು ಗಿರಾಕಿಯನ್ನು ಕಳೆದುಕೊಳ್ಳುವನು). (ಕರ್ಮಣಿ) ಮಾಯವಾಗು ; ಕಾಣದೆಹೋಗು ; ನಾಶವಾಗು ; ಸಾಯಿ ; ಸತ್ತುಹೋಗು ; ನಷ್ಟಪಡು ; ಕೇಡಿಗೊಳಗಾಗು ; ಅನನುಕೂಲ ಪಡೆ ; ವ್ಯವಹಾರ, ಮೊ. ಗಳಿಂದ ಹಣ, ಮೊ. ಗಳಲ್ಲಿ ತೊಂದರೆಗೀಡಾಗು. L. ground (Ground[1] ನೋಡಿ). L. one's head (Head ನೋಡಿ). L. heart, L. one's heart (Heart ನೋಡಿ). L. interest ಆಸಕ್ತಿ ತಪ್ಪಿಹೋಗು ; (ವಸ್ತು) ಆಸಕ್ತಿ ಹುಟ್ಟಿಸದಿರು. L. a legacy (ಅಂತಿಮ ಇಷ್ಟಪತ್ರ, ಮೊ. ದರಿಂದ ಬಂದ) ಆಸ್ತಿ ಕಳೆದುಕೊ. L. patience, one's temper ಸೈರಣೆ ತಪ್ಪು ; ರೇಗು ; ಸಿಟ್ಟಿಗೇಳು ; ಕೋಪಗೊಳ್ಳು. Will l. you your place ನಿನ್ನ ಸ್ಥಾನವನ್ನು ಕಳೆದುಕೊಳ್ಳುವಂತೆ ಮಾಡುವುದು. Story does not l. in the telling ಹೇಳುವುದರಲ್ಲಿ ಕಥೆಯ ಸ್ವಾರಸ್ಯ ಕಡಮೆಯಾಗುವುದಿಲ್ಲ. L. the thread of a discourse ಪ್ರವಚನದ ಆನುಪೂರ್ವಿ ತಪ್ಪಿಹೋಗು ; ಪೂರ್ವಾಪರ ಸಂಬಂಧ ತಪ್ಪಿಹೋಗು. L. one's train ರೈಲು ತಪ್ಪು. L. one's way ದಾರಿ ತಪ್ಪು. L. a word or remark ಮಾತು ಕಿವಿಗೆ ಬೀಳದೆಹೋಗು. Losing game ಸೋಲು ಅನಿವಾರ್ಯವಾಗಿ ತೋರುವ ಆಟ. Cannot play a losing game ಆಟ ಸೋಲುವ ಸಂದರ್ಭದಲ್ಲಿ ಎದೆಗುಂದದೆ, ರೇಗದೆ, ಆಡಲಾರನು. Losing hazard (Hazard ನೋಡಿ). The publisher lost by it. The ship and all hands were lost ಹಡಗೂ ಅದರ ಎಲ್ಲ ಕೆಲಸಗಾರರೂ ಮುಳುಗಿಹೋದರು. Letter-writing is a lost art ಪತ್ರಲೇಖನ ಒಂದು ನಷ್ಟವಾಗಿ ಹೋದ ಕಲೆ. Lost to sense of duty, shame ಕರ್ತವ್ಯಬುದ್ಧಿ ಹೋದ, ಲಜ್ಜೆಗೆಟ್ಟ. Lost soul ಪತಿತ ; ಆತ್ಮ ನಾಶವಾದವನು. Be lost upon ಪರಿಣಾಮ ಮಾಡದೆ, ಪ್ರಭಾವ ಬೀರದೆ, ಹೋಗು. **Lósable** (ಗು.) ; **Lóser** (ನಾ.) (ಕ್ರಿಯಾರ್ಥಗಳಲ್ಲಿ). [Be a l. by (—ಇಂದ) ನಷ್ಟ ಹೊಂದು. Good l. (ಆಟ, ಮೊ. ಗಳಲ್ಲಿ) ಸೋತರೂ ಖಿನ್ನನಾಗದವನು, ಸಿಟ್ಟಾಗದವನು]. **Loss**[1] ಲಾಸ್ (ನಾ.) ಕಳೆದುಕೊಳ್ಳುವುದು ; ಕಳೆದುಹೋಗುವುದು ; ಕಳೆತ ; ನಷ್ಟ ; ನಷ್ಟದಿಂದಾದ ಪ್ರತಿಕೂಲ [Person, etc. is a great l. (ವ್ಯಕ್ತಿ, ಮೊ.) ಕಳೆದುಹೋದದ್ದು ದೊಡ್ಡ ನಷ್ಟವಾಗಿದೆ]. ಕಳೆದುಹೋದವನು ; ಕಳೆದುಹೋದ ವಸ್ತು, ಮೊತ್ತ. Cut a l. [Cut (ಕ್ರಿ.) ನೋಡಿ]. At a l. (ಏನು ಹೇಳಬೇಕೆಂದು, ಮಾಡಬೇಕೆಂದು) ತಿಳಿಯದೆ ದಿಗ್ಭ್ರಾಂತನಾಗಿ (*For*, *to* discover, etc.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Lósel ಲೋಸ್ಸೆಲ್ (ನಾ.) (ಪ್ರಾಚೀ. ಪ್ರ.) ವ್ಯಭಿಚಾರಿ ; ಕೆಲಸಕ್ಕೆ ಬಾರದವನು ; ತುಚ್ಛ.

Loss[1]. **Lose** ನೋಡಿ.

Loss[2] (G) ಲಸ್ = Loess.

Lost ಲಾಸ್ಟ್. Lose ಧಾತುವಿನ ಭೂತ., ಭೂ. ಕೃ.

Lot ಲಾಟ್ (ನಾ., ಕ್ರಿ. ಸಕ.) (ವಸ್ತುಗಳನ್ನು ಪಾಲು ಮಾಡಿಕೊಳ್ಳುವುದು, ಅಧಿಕಾರ, ಮೊ. ಕ್ಕೆ ಜನರನ್ನು ಆಯ್ಕೆಮಾಡುವುದು, ಇವೇ ಮೊ. ಗಳಲ್ಲ, ಒಂದು ಗೊತ್ತಾದ ನಿರ್ಧಾರ ಮಾಡಲಾಗದ ಸಂದರ್ಭದಲ್ಲಿ) ಆಯ್ಕೆಗಾಗಿ ಉಪಯೋಗಿಸುವ ಸಂಕೇತ ವಸ್ತು ; ಅದೃಷ್ಟದ ಆಯ್ಕೆ [Draw, cast, lots (*Between*, *for*, etc.) ಎಂಬಲ್ಲಿಯೂ, Throw or cast in one's l. with (Cast ನೋಡಿ) ಎಂಬಲ್ಲಿಯೂ ಮಾತ್ರ ಪ್ರ.]. ಚೀಟಿ ಹಾಕಿ ಆಯ್ಕೆಮಾಡುವುದು (The l., By l.) ; (ಅದೃಷ್ಟದ ಆಯ್ಕೆಯಲ್ಲಿ) ಪಾಲಿಗೆ ಬಂದದ್ದು (The l. fell upon me ಅದೃಷ್ಟದ ಆಯ್ಕೆ ನನಗೆ ಬಂದಿತು) ; ಪಾಲು ; ಭಾಗ (Have no part nor l. in) ; ಅದೃಷ್ಟ ; ವಿಧಿ ; ಪ್ರಾಪ್ತಿ ; ಹಣೆಯ ಬರಹ ; ಸ್ಥಿತಿ (The l. falls to me. It falls to my l.). ತೆರಿಗೆ ; ಸಲ್ಲಬೇಕಾದದ್ದು (Scot and l. ಕಂದಾಯ ಕವಳಿಗೆ). ಜಮೀನಿನ ತಾಕು ; ಪಾಲಿಗೆ ಬಂದ ನೆಲ. ಮಾರಾಟಕ್ಕೆ, ಹರಾಜಿಗೆ, ಬೇರೆ ಬೇರೆಯಾಗಿ ಇಟ್ಟ ವಸ್ತುಗಳು, ವಸ್ತುಗಳ ತಂಡ. [Bad l. ಕೆಟ್ಟ ಹೆಸರು ಪಡೆದಿರುವವನು ; ದುಷ್ಟ ; ದುರ್ಜನ]. (ಒಂದೇ ಜಾತಿಗೆ ಸೇರಿರುವ ಅಥವಾ ಹೇಗೋ ಸಂಬಂಧ ಪಡೆದಿರುವ) ಜನರ, ವಸ್ತುಗಳ, —ತಂಡ ; ಮೊತ್ತ ; ಗುಂಪು (The l. ತಂಡಕ್ಕೆ ತಂಡವೇ ; ಎಲ್ಲವೂ). (ಬಳ. ಮಾ.) ಬಹಳ (ಸಂಖ್ಯೆ ಅಥವಾ ಮೊತ್ತ) ; ಅನೇಕ (Has lots of friends). (ಕ್ರಿ.) (ಜಮೀನನ್ನು) ತಾಕುಗಳಾಗಿ ವಿಂಗಡಿಸು (*Out* ಉಪ. ದೊಡನೆ) ; (ಮಾರಾಟಕ್ಕೆ ಸಾಮಾನನ್ನು) ತಂಡ ತಂಡವಾಗಿ ಪ್ರತ್ಯೇಕಿಸಿಡು.

Loth = Loath.

Lothário ಲೊತೇರಿಯೊ (ನಾ.) ಅತಿ ವ್ಯಭಿಚಾರಿ (The Fair Penitent ಎಂಬ ಕಾದಂಬರಿಯ ಒಂದು ಪಾತ್ರದ ಹೆಸರಿನಿಂದ)

Lótion ಲೋಷ(ಷ್)ನ್ (ನಾ.) (ಹುಣ್ಣನ್ನು ವಾಯಿಸುವುದಕ್ಕೂ ಚರ್ಮ ರೋಗವನ್ನು ವಾಸಿಮಾಡುವುದಕ್ಕೂ ಮುಖವನ್ನು ಸ್ವಚ್ಛಮಾಡುವುದಕ್ಕೂ ಉಪಯೋಗಿಸುವ) ಔಷಧ ದ್ರವ. (ಅಸಂ.) ಮದ್ಯ ಪಾನೀಯ.

Lóttery ಲಾಟರಿ (ನಾ.) (ಹಣ ಕೊಟ್ಟು ಪಡೆದ 'ಟಿಕೆಟ್ಟು' ಚೀಟಿಗಳ ಮೂಲಕ ಕೆಲವರಿಗೆ ಕೇವಲ ಅದೃಷ್ಟದಿಂದ ಬಹುಮಾನ ದೊರೆಯುವಂತೆ ಏರ್ಪಡಿಸಿದ) ಅದೃಷ್ಟದ ಆಯ್ಕೆ : ಲಾಟರಿ [**L.-wheel** (ಅದೃಷ್ಟದ ಚೀಟಿಯನ್ನು ಎತ್ತುವುದಕ್ಕೆ ಮೊದಲು ಒಂದು ಮುಚ್ಚು ಪೆಟ್ಟಿಗೆಯಲ್ಲಿ ಹಾಕಿರುವ ಎಲ್ಲ ಟಿಕೆಟ್ಟುಸಂಖ್ಯೆಗಳನ್ನೂ ಬೇರೆ ಬೇರೆಯಾಗುಳ್ಳ ಚೀಟಿಗಳು ಚೆಲ್ಲಾ ಪಿಲ್ಲಿಯಾಗುವ ಹಾಗೆ ಕದಡಲು ಏರ್ಪಡಿಸಿರುವ) ಲಾಟರಿ ಚಕ್ರ]. (ರೂಪ.) ಲೆಕ್ಕಾಚಾರಕ್ಕೆ, ಮುಂದಾಲೋಚನೆಗೆ, ಸಿಕ್ಕದ್ದು ; ನಿರೀಕ್ಷಣೆಯಂತೆ ನಡೆಯದ್ದು (Life, marriage, is a l.)

Lótto ಲಾಟೊ (ನಾ.) (ಲಾಟರಿಯಲ್ಲಿ ಹೇಗೋ ಹಾಗೆ, ಸಂಖ್ಯೆ ಹಾಕಿರುವ ಬಿಲ್ಲೆಗಳನ್ನು ಎತ್ತಿ ಬಹುಮಾನ ಪಡೆಯಬಹುದಾದ) ಒಂದು ಅದೃಷ್ಟದ ಆಟ : 'ಲಾಟೊ' ಆಟ.

Lótus ಲೋಟಸ್ (ನಾ.) (ಪ್ರಾಚೀನ ಗ್ರೀಕ್ ಪುರಾಣ) ಅದರ ಹಣ್ಣು ತಿಂದರೆ ಸಂತೋಷಸ್ಥಿತಿಯನ್ನುಂಟುಮಾಡಿ ಕಾರ್ಯಪ್ರವೃತ್ತಿಯನ್ನು ತಪ್ಪಿಸಿ ಹಾಯಾಗಿ ಕಾಲ ಕಳೆಯುವ ಮನಸ್ಸನ್ನು ಹುಟ್ಟಿಸುವ ಒಂದು ಗಿಡ : 'ಲೋಟಸ್' ಗಿಡ [L.-eater (ಗ್ರೀಕ್ ಪುರಾಣದಲ್ಲಿ ಹೇಳಿರುವ) ಲೋಟಸ್ ಹಣ್ಣು ತಿಂದು ಜೀವಿಸುವ ಜನರಲ್ಲೊಬ್ಬನು ; (ರೂಪ.) ಸುಖ ಸೋಮಾರಿ. L.-eating (ಗು., ನಾ.) ; L.-land ಸೋಮಾರಿತನದ ಸುಖಾನುಭವದ ಪ್ರದೇಶ]. (ಈಜಿಪ್ಟ್ ಮತ್ತು ಏಷ್ಯದ) ತಾವರೆ, ಕಮಲ. ಕುದುರೆಯ ಮೇವಿನ ಕೆಲವು ಜಾತಿಯ ಸಸ್ಯ, ಮೊ. ವು.

Loud ಲೌಡ್ (ಗು., ಕ್ರಿ. ವಿ.) ಗಟ್ಟಿಯಾಗಿ ಕೇಳಿಸುವ ; (ಧ್ವನಿ) ಗಟ್ಟಿಯಾದ ; ದೊಡ್ಡ ಧ್ವನಿಯ ; ಎತ್ತರ ಸ್ವರದ [**L.-speaker** (ಧ್ವನಿ ಗ್ರಾಹಕವನ್ನು ಕಿವಿಗಿಟ್ಟುಕೊಳ್ಳದೆ ನಿಸ್ತಂತು ವಾರ್ತಾ ಧ್ವನಿಯನ್ನು ಗಟ್ಟಿಯಾಗಿ ಕೇಳಲಾಗುವ) ಧ್ವನಿ ವರ್ಧಕ (ಯಂತ್ರ)]. ಕೂಗಾಟದ ; ಗದ್ದಲದ ; ಗಲಾಟೆಯ. (ಬಣ್ಣ, ಉಡುಪು, ಮಾದರಿ, ನಡತೆ) ಎದ್ದು ಕಾಣುವ, ಆಡಂಬರದ, ಥಳುಕಿನ. (ಕ್ರಿ. ವಿ.) ಗಟ್ಟಿಯಾಗಿ (Don't talk so l., Laughed l. and long). **L.-spoken** (ಗು.) ; **Loúden** ಲೌಡ್‌ನ್ (ಕ್ರಿ.) ದನಿ ಎತ್ತರವಾಗು, ಎತ್ತರಿಸು. **Loúdish** (ಗು.) ; **Loúdly** (ಕ್ರಿ. ವಿ.) ; **Loúdness** (ನಾ.)

Lough ಲಾಖ್ (ನಾ.) (ಆ್ಯಂಗ್ಲೊ ಐರಿಷ್) ಸರೋವರ ; ಸಮುದ್ರ ಶಾಖೆ ; —ಬಾಹು.

Lounge ಲೌಂಜ್ (ಕ್ರಿ., ನಾ.) ಸೋಮಾರಿತನದಿಂದ ಸುತ್ತಾಡು, ಅಲೆದಾಡು. (ಕೈ ಕಾಲು ಚಾಚಿಕೊಂಡು) ಹಾಯಾಗಿ ಒರಗಿರು ; ಆರಾಮವಾಗಿ ಮಲಗಿರು ; ವ್ಯರ್ಥವಾಗಿ ಕಾಲ ಕಳೆ (L. *away*). (ನಾ.) ಸೋಮಾರಿತನದ ಸುತ್ತಾಟ, ಅಡ್ಡಾಟ. ಸೋಮಾರಿತನದಿಂದ ಹಾಯಾಗಿ ಕಾಲು ನೀಡಿ ಒರಗಿಕೊಳ್ಳುವ ಸ್ಥಳ ; (ಮು., ಅದಕ್ಕಾಗಿಯೇ ಏರ್ಪಡಿಸಿರುವ) ಪೀಠೋಪಕರಣಗಳುಳ್ಳ ಕೈಸಾಲೆ ; ಆರಾಮ ಶಾಲೆ [L.-lizard (ಅಸಂ.) ಹೋಟಲಿನ ಆರಾಮ ಶಾಲೆಯ ನರ್ತನ ಗೋಷ್ಠಿಗಳಲ್ಲಿ (ಒಬ್ಬರ) ಜೊತೆಗೆ ಕುಣಿಯುವ ಕಸಬುದಾರಿ ನರ್ತಕಿ]. ಮಂಚ ಕುರ್ಚಿ ('ಸೋಫ'); ಆರಾಮ ಕುರ್ಚಿ. **Loúnger** (ನಾ.) ; **Loúngingly** (ಕ್ರಿ. ವಿ.)

Lour ಲೌರ್, **Lower** ಲೌಅರ್ (ಕ್ರಿ. ಅಕ., ನಾ.) ಹುಬ್ಬು ಗಂಟಿಕ್ಕು ; ಮುಖ ಗಂಟು ಹಾಕಿಕೊ ; ಸಿಡುಕಿನಿಂದಿರು (*On*, *upon*, *at* ಉಪ. ದೊಡನೆ). (ಮೋಡ, ಆಕಾಶ, ಬಿರುಗಾಳಿ) ಕಪ್ಪಗೆ ಕವಿದುಕೊಂಡಿರು, ಭಯ ತೋರುವಂತಿರು. (ನಾ.) ಸಿಡುಕು (ಮೋರೆ). (ಆಕಾಶ, ಮೊ.) ಮುಬ್ಬು ಕವಿದಿರುವುದು, ಭಯ ತೋರುವಂತಿರುವುದು. **Loúringly, Lowéringly** (ಕ್ರಿ. ವಿ.) ; **Loúry** (ಗು.)

Louse ಲೌಸ್ (ನಾ. ; ಬ. ವ. Lice ಲೈಸ್) (ಮನುಷ್ಯನ ಕೂದಲಿಗೂ ಚರ್ಮಕ್ಕೂ ಹತ್ತುವ) ಹೇನು. (ಸಸ್ತನಿ ಪ್ರಾಣಿಗಳು, ಪಕ್ಷಿಗಳು, ಮೀನು ಮತ್ತು ಸಸ್ಯಗಳು —ಇವಕ್ಕೆ ಹತ್ತುವ) ಪರ ಸತ್ವೋಪಜೀವಿ ಕ್ರಿಮಿಜಾತಿ. **Loúsy** ಲೌಸಿ (ಗು.) ಹೇನು ತುಂಬಿದ. (ರೂಪ.) ಕೊಳಕಾದ ; ಅಸಹ್ಯವಾದ ; ಅಶ್ಲೀಲ. **Loúsiness** (ನಾ.)

Lout[1] (ಲೌಟ್) (ನಾ.) ಒಡ್ಡ ಮನುಷ್ಯ ; ಹಳ್ಳಿಗ ; ಹೆಡ್ಡ. **Loútish** (ಗು.) ; **Loútishly** (ಕ್ರಿ. ವಿ.) ; **Loútishness** (ನಾ.)

Lout[2] ಲೌಟ್ (ಕ್ರಿ. ಅಕ.) (ಪ್ರಾಚೀ. ಪ್ರ.) ಬಾಗು ; ನಮಸ್ಕರಿಸು.

Loúver ಲೂವರ್ (ನಾ.) (ಮಧ್ಯ ಯುಗದ ಕಟ್ಟಡಗಳ ಮಧ್ಯಾಂಗಣದ ಮೇಲ್ಛಾವಣಿಯಲ್ಲಿ ಹೊಗೆ ಹೋಗುವುದಕ್ಕೂ ಗಾಳಿ ಬೆಳಕು ಒಳಕ್ಕೆ ಬರುವುದಕ್ಕೂ ಪಕ್ಕಗಳಲ್ಲಿ ತಕ್ಕಂತೆ ಅವಕಾಶ ಮಾಡಿರುವ) ಗುಮ್ಮಟದಾಕಾರದ ಗೋಪುರ ; (ಗಾಳಿ ಹೋಗಲು ಅವಕಾಶವಿರುವಂತೆಯೂ ಮಳೆಯ ನೀರು ಒಳಗೆ ಸುರಿಯದಂತೆಯೂ) ಒಂದರಮೇಲೊಂದು ಚಾಚಿರುವ ಹಲಗೆಗಳ ಅಥವಾ ಗಾಜು ಪಟ್ಟಿಗಳ ಏರ್ಪಾಡು. **Loúvered** (ಗು.)

Loúvre (F) ಲೂವ್ರ್ (ನಾ.) The l. ಪ್ಯಾರಿಸ್ಸಿನಲ್ಲಿರುವ ಪೂರ್ವದ ಅರಮನೆ (ಈಗ ಕಲಾ ಪ್ರದರ್ಶನ ಶಾಲೆ)

Love ಲವ್ (ನಾ.) ಪ್ರೀತಿ ; ಪ್ರೇಮ ; ಅಕ್ಕರೆ ; ಒಲವು ; ಒಲುಮೆ ; ವಾತ್ಸಲ್ಯ ; ಪ್ರಣಯ ; ಎರಕ (ಗ್ರಾಂ.) (*Of*, *for*, *to* ಉಪ. ದೊಡನೆ. *Towards* person, *for* or *to* thing) [Give l. to ಪ್ರೇಮ ತಿಳಿಸು. For the l. of (ಮು., ಶ್ರದ್ಧಾ ಪೂರ್ವಕವಾದ ಪ್ರಾರ್ಥನೆಯಲ್ಲಿ) —ಒನ್ನರವಾಗಿ ; (—ರ) ಪ್ರೀತ್ಯರ್ಥವಾಗಿ. For l. or money ಪ್ರೀತಿಗಾಗಲಿ ಹಣಕ್ಕಾಗಲಿ ; ಯಾವುದರಿಂದಾಗಲಿ (Cannot get it for l. or money). Labour of l. (Labour ನೋಡಿ). There's no l. lost between them ಅವರಲ್ಲಿ ಪರಸ್ಪರ ಪ್ರೀತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶ್ವಾಸಗಳಲ್ಲ. Play for l. ಪ್ರೀತಿಗಾಗಿ, ಸಂತೋಷಕ್ಕಾಗಿ, ಆಟ ವಾಡು (ಪಣವೊಡ್ಡಿ ಅಲ್ಲ)]. (ಸ್ತ್ರೀ ಪುರುಷರ ಪರಸ್ಪರ) ಅನುರಾಗ; ಪ್ರಣಯ; ಕಾಮ; ಮನ್ಮಥ; ಶೃಂಗಾರ [In l. ಪ್ರೇಮವುಳ್ಳವನಾಗಿ; ಅನುರಕ್ತನಾಗಿ. In l. with ಮೋಹಿತನಾಗಿ. (ವಸ್ತು, ಹವ್ಯಾಸ, ಮೊ. ಗಳಲ್ಲಿ) ಆಸಕ್ತಿಯುಳ್ಳವನಾಗಿ. Fall in l. ಮೋಹಗೊಳ್ಳು; ಪ್ರಣಯಕ್ಕೊಳಗಾಗು. All's fair in l. & war (Fair ನೋಡಿ). L. in a cottage ತಕ್ಕಷ್ಟು ದ್ರವ್ಯಾನುಕೂಲವಿಲ್ಲದೆ ಮಾಡಿಕೊಂಡ ಮದುವೆ; ಬಡತನದ ಮದುವೆ. Make l. (to) ಪ್ರಣಯ ತೋರಿಸು. **Lóve-making** (ನಾ.)]. (ಮು.) ಪ್ರಿಯೆ; ನಲ್ಲೆ [My l. (ಗಂಡ ಹೆಂಡಿರು ಒಬ್ಬರನ್ನೊಬ್ಬರು ಸಂಬೋಧಿಸುವಲ್ಲಿ) ಪ್ರಿಯಾ! ಪ್ರಿಯೇ!]. [**Lóvey** (ನಾ.) (ಮುದ್ದು ಮಾತು) = Darling]. (ಬಳ. ಮಾ.) ಮನೋಹರ ವ್ಯಕ್ತಿ; ರಮ್ಯ ವಸ್ತು (He is an old l.). (ಟೆನಿಸ್, ಮೊ. ಆಟಗಳಲ್ಲಿ) ಗೆಲ್ಲುಸಂಖ್ಯೆ ಇಲ್ಲ, ಸೊನ್ನೆ (L. all ಎರಡು ಪಕ್ಕದಲ್ಲೂ ಸೊನ್ನೆ. L. game ಎದುರು ಆಟಗಾರನಿಗೆ ಒಂದು ಗೆಲ್ಲುಸಂಖ್ಯೆಯೂ ಬಾರದಂತೆ ಗೆದ್ದುಕೊಂಡ ಆಟ). **L.-affair** ಪ್ರಣಯ ಪ್ರಸಂಗ. **L.-apple** ಟೊಮೇಟೊ ಹಣ್ಣು (ಹಳೆಯ ಹೆಸರು). **L.-begotten** ಕೇವಲ ಪ್ರಣಯ ಸಂಬಂಧದಿಂದ ಹುಟ್ಟಿದ; ಪ್ರಣಯ ಸಂಜಾತ. **L.-bird** (ತನ್ನ ಪ್ರಣಯಿ ಸತ್ತರೆ ತಾನೂ ಸತ್ತುಹೋಗುವುದೆಂದು ಪ್ರತೀತಿ ಯಿರುವ) ಗಿಣಿಜಾತಿಯ ಒಂದು ಸಣ್ಣ ಹಕ್ಕಿ. **L.-child** ಕೇವಲ ಪ್ರಣಯ ಸಂಬಂಧದಿಂದ ಹುಟ್ಟಿದ ಮಗು: ಪ್ರಣಯ ಶಿಶು. **L.-feast** (ಆದಿ ಕ್ರೈಸ್ತರಲ್ಲಿ) ಸೋದರ ಪ್ರೇಮ ಸೂಚಕವಾದ ಹಬ್ಬದೂಟ, ಒಲುಮೆಯೂಟ. **L.-knot** ಅಲಂಕಾರ ಪಟ್ಟಿಯಲ್ಲಿ ಒಂದು ತರ ವಾಗಿ ಹೆಣೆದು ಹಾಕುವ ಅಲಂಕಾರದ ಗಂಟು; ಪ್ರಣಯದ ಗಂಟು. **L.-letter** (ಪ್ರಣಯಿಗಳು ಒಬ್ಬರೊಬ್ಬರಿಗೆ ಬರೆಯುವ) ಪ್ರಣಯ ಪತ್ರ. **Lovelock** ಕೆನ್ನೆಯ ಅಥವಾ ಹಣೆಯ ಮೇಲೆ ಬೀಳುವಂತೆ ಅಳವಡಿಸಿರುವ ಮುಂಗುರುಳು: ಒಲುಮೆಗುರುಳು. **L.-lorn** ವಿರಹ ವ್ಯಥೆಯನುಭವಿಸುತ್ತಿರುವ; ನಲ್ಲ (ನಲ್ಲೆ) ತೊರೆದ. **L.-match** ಕೇವಲ ಪ್ರಣಯಕ್ಕಾಗಿ ಮಾಡಿಕೊಂಡ ಮದುವೆ: ಪ್ರಣಯ ವಿವಾಹ. **L.-philtre** ವಶೀಕರಣದ ಔಷಧ; ಮೆಚ್ಚು ಮದ್ದು. **Love-sick** ವಿರಹ ತಪ್ತ. **L.-song** ಪ್ರಣಯ ಗೀತೆ. **L.-story** ಪ್ರಣಯ ವಿಚಾರವೇ ಪ್ರಧಾನವಾಗುಳ್ಳ ಕಥೆ: ಪ್ರಣಯ ಕಥೆ. **L.-token** ಪ್ರೇಮ ಸೂಚಕವಾಗಿ ಕೊಟ್ಟ ವಸ್ತು: ಒಲುಮೆಯ ಗುರುತು. **Lóveless** (ಗು.); **Lóvelessly** (ಕ್ರಿ. ವಿ.); **Lóvelessness** (ನಾ.); **Lóvely** (ಗು.) ಮನೋಹರವಾದ; ಸೊಗಸಾದ; ಚೆಲುವಾದ. (ಬಳ. ಮಾ.) ಆನಂದಕರವಾದ; ಅಚ್ಚುಮೆಚ್ಚಾದ; ಅತ್ಯಂತ ರಮ್ಯವಾದ. **Lóvelily** (ಕ್ರಿ. ವಿ.) (ವಿರ. ಪ್ರ.); **Lóveliness** (ನಾ.); **Lóveworthy** (ಗು.); **Lóveworthiness** (ನಾ.)

Love (ಕ್ರಿ.) ಪ್ರೀತಿ, ಒಲುಮೆ, —ಇಡು; ಪ್ರೀತಿಸು; ಪ್ರಣಯ ದಿಂದಿರು; ಪ್ರೀತಿಯಿಂದಿರು; ಅಭಿಮಾನದಿಂದಿರು; ಇಷ್ಟವಾಗಿರು [L. me, l. my dog (Dog ನೋಡಿ). Lord l. you! (ಒಬ್ಬನ ಪ್ರಮಾದವನ್ನು ಕಂಡು ಆಡುವ ಆಶ್ಚರ್ಯದ ಮಾತು) ನಿನಗೆ ದೇವರೇ ಗತಿ!]. (ಪ್ರಾಣ, ಗೌರವ, ಸೌಖ್ಯ, ಕಾರ್ಯಾಚರಣೆ, ಸೌಶೀಲ್ಯ —ಇವುಗಳ ವಿಷಯದಲ್ಲಿ) ಬಿಡದೆ ಅಂಟಿಕೊಂಡಿರು, ಸಂತೋಷಾನುಭವ ಮಾಡು; ಲೋಲುಪನಾಗಿರು; ಮೆಚ್ಚು [Children l. to ape their elders. (ಬಳ. ಮಾ.) He simply loves to find mistakes. Will you come? —I should l. to]. **Lóvable** (ಗು.) ಪ್ರೀತಿ ಯೋಗ್ಯ; ವಿಶ್ವಾಸಪರ. **Lóvably** (ಕ್ರಿ. ವಿ.); **Lóvableness** (ನಾ.); **Lóver** (ನಾ.) ಪ್ರಿಯ; ನಲ್ಲ; ಇನಿಯ; ಪ್ರಣಯಿ. (ಬ. ವ. ದಲ್ಲಿ) ನಲ್ಲ ನಲ್ಲೆಯರು; ಮಿಂಡ; ಸ್ತ್ರೀ ಪರಾಯಣ. (ವಸ್ತುವಿನ, ಕಾರ್ಯದ, ಅಭಿಪ್ರಾಯದ) ಮೆಚ್ಚುಗಾರ, ಭಕ್ತ, ಪ್ರೇಮಿ (*Of* ಉಪ. ದೊಡನೆ). [Lover's knot = Love-knot (ಮೇಲೆ ನೋಡಿ)]. **Lóverless** (ಗು.); **Lóverlike** (ಗು., ಕ್ರಿ. ವಿ.); **Lóverly** (ಗು., ಕ್ರಿ. ವಿ.); **Lóving** (ಗು.) ಪ್ರೀತಿಸುವ; ಪ್ರೀತಿ ಪಾತ್ರನಾದ; ಒಲುಮೆಯ [Our l. subjects (ರಾಜಘೋಷಣೆಯಲ್ಲಿ ಸಂಪ್ರದಾಯದ ಒಕ್ಕಣೆ) ನಮ್ಮ ಪ್ರೀತಿಪಾತ್ರರಾದ ಪ್ರಜೆಗಳು. Your l. friend (ಕ್ಷೇಮ ಸಮಾಚಾರ ಪತ್ರಗಳಲ್ಲಿ ಕೊನೆಯ ಒಕ್ಕಣೆ) ನಿನ್ನ ಪ್ರಿಯ ಮಿತ್ರ]. ಪ್ರೇಮ ವನ್ನು ವ್ಯಕ್ತಗೊಳಿಸುವ; ಪ್ರೀತಿಯಿಂದ ಹೊರಟ (L.-cup ಔತಣದ ಊಟದಲ್ಲಿ ಸುತ್ತುತ್ತಕಳುಹುವ ದೊಡ್ಡ ಮದ್ಯಪಾತ್ರೆ. L.-kindness ಪ್ರೀತಿ ಪೂರ್ವಕವಾದ ಕರುಣೆ, ದಯೆ). **Lóvingly** (ಕ್ರಿ. ವಿ.); **Lóvingness** (ನಾ.)

Lóvelace ಲವ್‌ಲೇಸ್ (ನಾ.) ಕಟ್ಟಿಲ್ಲದ ಸ್ತ್ರೀಲಂಪಟ (Clarissa Harlowe ಎಂಬ ಕಾದಂಬರಿಯಲ್ಲಿಯ ಒಂದು ಪಾತ್ರದ ಹೆಸರಿನಿಂದ)

Low[1] ಲೋ (ಗು.; ತರ ತಮ ರೂಪಗಳು -er, -est) ಬಹು ಮೇಲಕ್ಕೆ ಹೋಗದ; ಎತ್ತರವಿಲ್ಲದ; ತಗ್ಗಾದ (ವ್ಯಕ್ತಿಗಳ ವಿಷಯದಲ್ಲಿ ಪ್ರಯೋಗ ವಿಲ್ಲ) (L. house, forehead ತಗ್ಗಾದ ಮನೆ, ಹಣೆ). ಕೆಳ ದರ್ಜೆಯ, —ಅಂತಸ್ತಿನ; ಕೀಳಾದ (The lower orders or classes). ಪ್ರಸಿದ್ಧವಲ್ಲದ; ಸಾಮಾನ್ಯವಾದ; ಗಂಭೀರವಾದದ್ದಲ್ಲದ; ನಾಗರಿಕತೆ ಕಡಮೆಯಾಗಿರುವ; ಉತ್ತಮ ರಚನೆಯಿಲ್ಲದ; ನೀಚ; ಅಧಮ; ಕೀಳ್ತರದ; ಒರಟಾದ; ಅಸಭ್ಯವಾದ; 'ಹಲ್ಕಾ' [High & l. ಉಚ್ಚರೂ ನೀಚರೂ; (ಮೇಲು ಕೀಳು) ಎಲ್ಲರೂ]. L. birth ಕೀಳು ಹುಟ್ಟು; ಹೀನ ಜಾತಿ. L.-brow ಹೆಚ್ಚು ಮೇಧಾವಿಯಲ್ಲದ(ವನು); ಸುಸಂಸ್ಕೃತನಲ್ಲದ(ವನು) (ವಿರುದ್ಧ ಪದ: High-brow). L.-browed ತಗ್ಗು ಹುಬ್ಬಿನ. (ಬಂಡೆ) ಮುಂಚಾಚಿರುವ; (ಕಟ್ಟಡ, ಮೊ. ಗಳ ವಿಷಯದಲ್ಲಿ) ತಗ್ಗಾದ ಬಾಗಿಲುಳ್ಳ. ಮಂಕು ಕವಿದಿರುವ. L. Church (ಕ್ರೈಸ್ತ) ಬಿಷಪ್ಪುಗಳ ಅಥವಾ ಪುರೋಹಿತರ ಅಧಿಕಾರ, ಸಂಸ್ಕಾರ ಗಳ ಪ್ರಭಾವ, ಮೊ. ಕ್ಕೆ ಅಷ್ಟು ಪ್ರಾಧಾನ್ಯ ಕೊಡದ ಮತಪಂಗಡ (L. Churchman). L. comedy ವಸ್ತು ಮತ್ತು ಪ್ರತಿಪಾದನ ಕ್ರಮವು ಪ್ರಹಸನದ ಮಟ್ಟಕ್ಕಿಳಿಯುವ ಹರ್ಷ ನಾಟಕ: ಕೀಳ್ತರದ ಹರ್ಷ ನಾಟಕ. L. comedian ಇಂಥ ನಾಟಕದ ನಟ. L. condition ಕುಗ್ಗಿದ, ಹೀನ, ದುರ್ಬಲ, —ಸ್ಥಿತಿ. L. countries ತಗ್ಗು ನಾಡು, ಪ್ರದೇಶ (= Netherlands). L. cunning ಕುತಂತ್ರ; ಕುಯುಕ್ತಿ. L. diet ಪುಷ್ಟಿ ಕೊಡದ ಆಹಾರ. L.-down (ಗು.) ಕೀಳಾದ; ಹೀನ; ತುಚ್ಛ; ನೀತಿಗೆಟ್ಟ. L. dress ಕುತ್ತಿಗೆ, ಹೆಗಲು ಮತ್ತು ಎದೆಯ ಸ್ವಲ್ಪ ಭಾಗ —ಇವು ಕಾಣುವಂತೆ ತೆರೆದಿರುವ ಉಡುಪು. L. fever ಅಲ್ಪ ಜ್ವರ. L. German, Dutch (ಆಯಾ ಪದವನ್ನು ನೋಡಿ). **Lowland** (ನಾ.; ಸಾ., ಬ. ವ. ದಲ್ಲಿ) ತಗ್ಗು (ಪ್ರ)ದೇಶ. **Lowlands** ಸ್ಕಾಟ್ಲೆಂಡಿನ ಆಗ್ನೇಯ ಪ್ರಾಂತ [**Lowlander** (ನಾ.)]. L. Latin (Latin ನೋಡಿ). L. latitudes (Latitude ನೋಡಿ). L. life (Life ನೋಡಿ) [**Low-lived** (ಗು.)]. L. moon ಕ್ಷಿತಿಜದ ಹತ್ತಿರವಿರುವ ಚಂದ್ರ. L. neck ಕುತ್ತಿಗೆಯ ಭಾಗ ತೆರೆದಿರುವ ಉಡುಪು. Have l. opinion of (—ಲ್ಲ) ಒಳ್ಳೆಯ ಅಭಿಪ್ರಾಯವಿಲ್ಲದಿರು. L. pitch ತಗ್ಗು ಸ್ವರ; (ಮೇಲ್ಛಾವಣಿಯ ವಿಷಯದಲ್ಲಿ) ತಕ್ಕಷ್ಟು ಓಟವಿಲ್ಲದ [**Low-pitched** (ಗು.)]. L. power ಅಲ್ಪ ಸಾಮರ್ಥ್ಯ. L. pressure (Pressure ನೋಡಿ). L. price, wages ಕಡಮೆಯ ಬೆಲೆ, ಕೂಲಿ. L. relief ಅರೆಯುಬ್ಬು ಚಿತ್ರ; —ಕೆತ್ತನೆ. L. sound ತಗ್ಗು ದನಿ. L. spirits ನಿರುತ್ಸಾಹ [**Low-spírited** (ಗು.)]. L. stature ಕುಳ್ಳ ಆಕೃತಿ. L. temperature ಅಲ್ಪ ಶಾಖ. L. tide or water ಕಡಲ ಇಳಿತ(ದ ಮಟ್ಟ); ಕಡಲ ಹೆಚ್ಚು ಇಳಿತದ ಕಾಲ. In l. water ಕೈಯಲ್ಲಿ ಕಾಸಿಲ್ಲದೆ; ಹಣದ ತಾಪತ್ರಯದಲ್ಲಿ. L.-water mark ನೀರಿಳಿತದ ಅತಿ ಕೆಳಮಟ್ಟದ ಗುರುತು; (ರೂಪ.) (ಸಂಖ್ಯೆ, ಮೊತ್ತ, ಲಕ್ಷಣ —ಇವುಗಳ) ಕೆಳ ಮಟ್ಟ. Bring l. (ಆರೋಗ್ಯ, ಐಶ್ವರ್ಯ, ಸ್ಥಾನ ಮಾನ) ಕುಗ್ಗಿಸು, ಕೆಳಗಿಳಿಸು, ಕುಂದಿಸು. Burn l. (ಎಣ್ಣೆ, ಮೊ. ವು ಕಡಮೆಯಾಗಿ) ಉರಿ ತಗ್ಗು. Lay l. ಕೆಳಕ್ಕುರುಳಿಸು; ಸೋಲಿಸು. Lie l. ಕೆಳ ಮಟ್ಟದಲ್ಲಿರು; ಮುದುರಿಕೊಂಡು ಬಿದ್ದಿರು; ಸತ್ತು ಬೀಳು; ನೆಲದಮೇಲೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದ್ದಕ್ಕೆ ಬದ್ದುಕೊ: (ರೂಪ.) ದೈನ್ಯಸ್ಥಿತಿಗೆ ತರಲ್ಪಡು ; ಹೀನಾಯ ಹೊಂದು ; (ಅಸಂ.) ಸುಮ್ಮನಿರು ; ಅಡಗಿರು ; ಸಮಯ ಕಾಯುತ್ತಿರು. Run l. ಬಹುಮಟ್ಟಿಗೆ ಖರ್ಚಾಗಿಹೋಗಿರು ; (ಹಣದ ವಿಷಯದಲ್ಲಿ) ಕೈ ಬರಿದಾಗುತ್ತ ಬರು. Lower case (Case[2] ನೋಡಿ). Lower Chamber = Lower House. Lower critic(ism) (ಗ್ರಂಥದಲ್ಲಿ) ಬರಿ ಪದಗಳ ಅಥವಾ ಮೂಲಪಾಠದ ವಿಮರ್ಶಕ, — ವಿಮರ್ಶೆ. (ಮು., ಬೈಬಲ್ಲಿನಲ್ಲಿ) Belongs to a lower date ಈಚಿನ ಕಾಲಕ್ಕೆ ಸೇರಿದ್ದು. Lower deck (ಹಡಗಿನ) ತಳ ಅಟ್ಟ (The l. d. ನೌಕಾ ಸೈನ್ಯದ ಅಥವಾ ಹಡಗಿನ ಕೆಳ ಅಧಿಕಾರಿಗಳು ಮತ್ತು ಕೆಲಸಗಾರರು). Lower Empire ಸಾ., Constantine ಚಕ್ರವರ್ತಿಯಿಂದ ಈಚಿನ ರೋಮನ್ ಚಕ್ರಾಧಿಪತ್ಯ. Lower House (ಶಾಸನ ಸಭೆಗಳಲ್ಲಿ) ಕೆಳ ಸಭೆ (ಉದಾ., ಇಂಗ್ಲೆಂಡಿನಲ್ಲಿ House of Commons). Lower school ಕೆಳಗಿನ ತರಗತಿಗಳು ಮಾತ್ರವಿರುವ ಸಾರ್ವಜನಿಕ ಪಾಠಶಾಲೆ. Lower world ಭೂಲೋಕ ; ಅಧೋಲೋಕ ; ನರಕ. At lowest ಅತಿ ಕಡಮೆಯೆಂದರೆ ; ಕನಿಷ್ಠ ಪಕ್ಷ. **Lowermost** (ಗು.) ; **Lowish** (ಗು.) ; **Lowness** (ನಾ.) ; **Lowly** (ಗು., ಕ್ರಿ. ವಿ.) ದೀನ ಭಾವನೆಯ, ನಡತೆಯ, ಸ್ಥಿತಿಯ ; ವಿನೀತ ; ನಮ್ರ ; ಅಹಂಭಾವ ವಿಲ್ಲದ. (ಕ್ರಿ. ವಿ.) ದೈನ್ಯ ಭಾವದಿಂದ, ವಿನಯದಿಂದ. **Lowlily** (ಕ್ರಿ. ವಿ.) ; **Lowliness** (ನಾ.)

Low (ಕ್ರಿ. ವಿ.) ಕೆಳಗೆ ; ಕೆಳಕ್ಕೆ ; ಕೀಳು ಗತಿಗೆ, ಸ್ಥಿತಿಗೆ ; ತಳದಲ್ಲಿ. Hangs l. ತಳಕ್ಕೆ ತೂಗಬಿದ್ದಿದೆ. Collar l. (ಕಾಲ್ಚೆಂಡಾಟ ದಲ್ಲಿ) (ಚೆಂಡು ಹಿಡಿದಿರುವ ಎದುರಾಳಿಯನ್ನು ಅವನ) ಸೊಂಟ ಅಥವಾ ಸೊಂಟದ ಕೆಳಗೆ ಹಿಡಿದು ನಿಲ್ಲಿಸು. Never fell so l. as that. Live l. for a time ಕೆಲವು ಕಾಲ ಬಡ ಆಹಾರ ತಿಂದು ಜೀವಿಸು. Play l. ಕಡಮೆ ಪಣವೊಡ್ಡಿ ಆಡು. Talk l. ಮೆಲ್ಲಗೆ ಮಾತನಾಡು. Find it as l. as the 18th century ೧೮ನೆಯ ಶತಮಾನ ದಷ್ಟು ಈಚೆಗೆ ದೊರೆಯುತ್ತದೆ. L.-born ಕೆಳ ಅಂತಸ್ತಿನಲ್ಲಿ ಹುಟ್ಟಿದ. L.-bred ಕೀಳು ಮಾರ್ಗದಲ್ಲಿ ಬೆಳೆದ ; ಕೀಳು ರೀತಿ ನೀತಿಗಳ ; ಲುಚ್ಚ. L. down ಬಹಳ ಕೆಳಗೆ ; ತುಚ್ಛ ರೀತಿಯಲ್ಲಿ ; ಉದಾರ ಭಾವನೆಯಿಲ್ಲದೆ. Play it l. d., *or* l., upon ತುಚ್ಛ, ನೀಚ, —ಭಾವನೆಯಿಂದ ನೋಡು.

Low[2] ಲೋ (ಕ್ರಿ., ನಾ.) (ಹಸು) ಕೂಗು ; ಹಸುವಿನ ಕೂಗಿನಂತೆ ಕೂಗು ; ಹಸುವಿನಂತೆ ಕೂಗಿ ಹೇಳು. (ನಾ.) ಹಸುವಿನ ಕೂಗು.

Lower[1] ಲೋಅರ್ (ಕ್ರಿ.) ಕೆಳಕ್ಕಿಳಿಸು ; ಇಳಿಸು ; ತಗ್ಗಿಸು. (ನಾವೆ) ದೋಣಿಯನ್ನು ನೀರಿಗಿಳಿಸು ; ಪಟ, ಮೊ. ನ್ನು ಕೆಳಕ್ಕಿಳಿಸು. ಎತ್ತರ ಕಡಮೆ ಮಾಡು ; ಕೆಳಕ್ಕಿಳಿ. ಇಳಿಜಾರು ಮಾಡು ; ಇಳುಕಲಾಗು. (ಬೆಲೆ, ಮೊ. ನ್ನು) ಕಡಮೆ ಮಾಡು, ತಗ್ಗಿಸು, ಇಳಿಸು ; (ಬೆಲೆ, ಮೊ. ವು) ಕಡಮೆಯಾಗು, ತಗ್ಗು, ಇಳಿ ; (ದನಿ ಮಟ್ಟ, ದನಿ ತೀವ್ರತೆ) ಕಡಮೆ ಮಾಡು, ಕಡಮೆಯಾಗು ; ಕೆಳ ದರ್ಜೆಗಿಳಿಸು ; ಹೀನಯಿಸು ; ಅಪಮಾನ ಗೊಳಿಸು. ಬಡವಾಗಿಸು (A lowering diet)

Lower[2] = Lour.

Loyal ಲಾಯಲ್ (ಗು., ನಾ.) ಕರ್ತವ್ಯ ನಿಷ್ಠೆಯುಳ್ಳ ; ದೃಢ ಭಕ್ತಿ ಯುಳ್ಳ ; ಆಡಿದ ಮಾತಿನಂತೆ ನಡೆಯುವ ; ರಾಜನಲ್ಲಿ, ಸರ್ಕಾರದಲ್ಲಿ, ಮಾತೃಭೂಮಿಯಲ್ಲಿ, —ಶ್ರದ್ಧಾ ಭಕ್ತಿಯುಳ್ಳ ; (ರಾಜ) ಭಕ್ತಿ, ನಿಷ್ಠೆ, —ತೋರುವ. (ನಾ.) (ಪ್ರಜೆಗಳಲ್ಲಿ ಅಸಂತುಷ್ಟಿಯಿರುವ ಸಂದರ್ಭದಲ್ಲೂ) ರಾಜನಿಷ್ಠೆಯಿಂದಿರುವವನು ; ದೃಢ ಭಕ್ತ. **Loyalism** (ನಾ.) ; **Loyalist** (ನಾ.) ; **Loyalize** (ಕ್ರಿ. ಸಕ.) ; **Loyally** (ಕ್ರಿ. ವಿ.) ; **Loyalty** (ನಾ.) (ರಾಜ) ಭಕ್ತಿ, ನಿಷ್ಠೆ.

Lózenge ಲಾಸೆಂಜ್ (ನಾ.) ಆಕ್ರಷ್ಟ ಸಮಚತುರಸ್ರ ; ವಜ್ರಾಕೃತಿ (ಮು., ವಂಶಲಾಂಛನ ಚಿಹ್ನೆ) ; (ಕಡೆದ ಮಣಿಯ) ವಜ್ರಾಕೃತಿಯ ಪಟ್ಟೆ ; (ಆದಿಯಲ್ಲಿ, ವಜ್ರಾಕೃತಿಯಲ್ಲಿ ಮಾಡುತ್ತಿದ್ದ, ಬಾಯಲ್ಲಿ ಕರಗಿಹೋಗುವ) ಒಂದು ತೆರದ ಬತ್ತಾಸು ; ಕೀಲು ಕಿಟಕಿಯ(ಲ್ಲಿಯ) ವಜ್ರಾಕೃತಿಯ ಗಾಜು ಹಲಗೆ. **Lózenged** (ಗು.)

£.s.d. ಎಲೆಸ್‌ಡೀ (ನಾ.) ಪೌಂಡು, ಷಿಲಿಂಗು, ಮತ್ತು ಪೆನಿ ; ಹಣ ; ಧನ ; ಸಿರಿ ; ಐಶ್ವರ್ಯ. L. S. Deism (ಹಾಸ್ಯ ಪ್ರ.) ಧನಾರಾಧನೆ.

Lúbber ಲಬರ್ (ನಾ.) ದೊಣ್ಣೆಭಾಗವತ ; ದಾಂಡಿಗ. ನಾಜೂಕಿಲ್ಲದ ನಾವಿಕ. **Lúbberlike** (ಗು.) ; **Lúbberly** (ಗು., ಕ್ರಿ. ವಿ.) ; **Lúbberliness** (ನಾ.)

Lúbricate ಲ್ಯೂ(ಲೂ)ಬ್ರಿಕೇಟ್ (ಕ್ರಿ. ಸಕ.) (ದ್ರವವನ್ನು ಅಥವಾ ಅನು ಲೇಪವನ್ನು ಬಳಿದು) ನುಣುಪುಚಲನೆಯುಳ್ಳದ್ದನ್ನಾಗಿ ಅಥವಾ ಜಾರು ವಂತೆ ಮಾಡು ; ಚರಬಿ, ಎಣ್ಣೆ, ಮೊ. ನ್ನು ಹಾಕಿ (ಯಂತ್ರದ) ಘರ್ಷಣೆ ಕಡಮೆಮಾಡು, ಚಲನಸೌಲಭ್ಯವುಂಟುಮಾಡು ; (ಯಂತ್ರ, ಮೊ.) ಸುಲಭವಾಗಿ ತಿರುಗುವಂತೆ ಎಣ್ಣೆ, ಚರಬಿ, ಮೊ. ನ್ನು ಹಚ್ಚು ; ಎರೆ, ಕಂದನೆ, —ಹಾಕು ; (ರೂಪ.) ಬೆಣ್ಣೆ ಹಚ್ಚು. **Lúbricant** —ಕಂಟ್ (ಗು., ನಾ.) (ಘರ್ಷಣ ಕಡಮೆಮಾಡುವ ಎಣ್ಣೆ, ಮೊ.) ಮೃದು ಚಾಲಕ. **Lúbricator** (ನಾ.) ; **Lubricátion** (ನಾ.) ; **Lubrícity** (ನಾ.) ಜಾರಿಕೆ ; ನುಣುಪು ; ಎಣ್ಣೆ ಬಳಿದಿರುವುದು. (ರೂಪ.) ಜಾರಿಕೊಳ್ಳುವುದು ; ನುಣುಚಿಕೊಂಡು ಹೋಗುವುದು ; ಸ್ಥಿರತೆ ಯಿಲ್ಲದಿರುವುದು ; (ಕೈಗೆ) ಸಿಕ್ಕದಂತೆ ತಪ್ಪಿಸಿಕೊಳ್ಳುವುದು ; ಕಟ್ಟಿಲ್ಲ ದಿರುವುದು ; ವ್ಯಭಿಚಾರ. **Lubrícious** (ಗು.) = **Lúbricous** (ಗು.)

Lúcan ಲ್ಯೂ(ಲೂ)ಕನ್ (ಗು.) (ಕ್ರೈಸ್ತ) ಸೆಯ್‌ಂಟ್ ಲ್ಯೂಕಿನ.

Lúcent ಲ್ಯೂ(ಲೂ)ಸೆಂಟ್ (ಗು.) ಹೊಳೆಯುವ ; ಪ್ರಕಾಶಿಸುವ ; ಪಾರ ದೀಪಕ. **Lúcency** (ನಾ.)

Lucérn(e) ಲ್ಯೂ(ಲೂ)ಸರ್ನ್ (ನಾ.) ಮೇವಿಗಾಗಿ ಉಪಯೋಗಿಸುವ ಒಂದು ಸಸ್ಯ(ಜಾತಿ) ; ಕುದುರೆ ಮಸಾಲೆ ಸೊಪ್ಪು.

Luciánic ಲೂಸಿಯ್ಯಾನಿಕ್ (ಗು.) Lucian ಎಂಬ ಗ್ರೀಕ್ ಕವಿಯ (ಚಮತ್ಕಾರದ ಮತ್ತು ಅಣಕದ) ಶೈಲಿಯ(ಂಥ)

Lúcid ಲ್ಯೂ(ಲೂ)ಸಿಡ್ (ಗು.) (ಕಾವ್ಯ) ಬೆಳಗುವ ; ಪ್ರಕಾಶಮಾನವಾದ. (ಕೀಟ ಶಾಸ್ತ್ರ, ಸ. ವಿ.) ನುಣುಪಾಗಿ ಹೊಳೆಯುವ ಮೇಲ್ಮೈಯುಳ್ಳ. ತಿಳಿಯಾದ ; ನಿರ್ಮಲ ; ಸ್ವಚ್ಛ (ಸಾ., ರೂಪ. : ವಾದಸರಣಿ, ಶೈಲಿ, ಮೊ. ಗಳ ವಿಷಯದಲ್ಲಿ). L. interval ಹುಚ್ಚಿನ ಆವೇಶಗಳ ನಡುವೆ ಬುದ್ಧಿ ಸ್ತಿಮಿತವಾಗಿರುವ ಕಾಲ : ಹುಚ್ಚಿಳಿದ ಹೊತ್ತು ; ಗಲಭೆಗಳ ಮಧ್ಯೆ ಶಾಂತಿಕಾಲ. **Lucídity** (ನಾ.) ; **Lúcidly** (ಕ್ರಿ. ವಿ.)

Lúcifer ಲ್ಯೂ(ಲೂ)ಸಿಫರ್ (ನಾ.) ಬೆಳಗಿನ ಜಾವದಲ್ಲಿ ಕಾಣುವ ಶುಕ್ರ ನಕ್ಷತ್ರ ; ಬೆಳ್ಳಿ ಚುಕ್ಕಿ. ದೇವರಿಗೆ ವಿರುದ್ಧವಾಗಿ ದಂಗೆಯೆದ್ದ ದೇವದೂತರ ನಾಯಕ : ಸೈತಾನ (As proud as L.). L. match or l. ಯಾವುದಾದರೂ ಒರಟು ಹೊರಮೈಮೇಲೆ ಗೀರಿ ಹೊತ್ತಿಸ ಬಹುದಾದ ಬೆಂಕಿಯ ಕಡ್ಡಿ (ಈಗ ಇದರ ಉಪಯೋಗ ವಿರಳ)

Lucífugous ಲ್ಯೂಸಿಫ್ಯುಗಸ್ (ಗು.) (ಪ್ರಕೃತಿ ಚರಿತ್ರೆ) ಹಗಲ ಬೆಳಕಿಗೆ ಬಾರದ, ತರೆಯುದದ ; ಹಗಲು ಬೆಳಕು ಸಹಿಸದ.

Luck ಲಕ್ (ನಾ.) (ಒಳ್ಳೆಯ, ಕೆಟ್ಟ) ಅದೃಷ್ಟ ; ಹಣೆಯ ಬರಹ ; ವಿಧಿ ; ದಶೆ. Bad l. to him ! (ಶಪನ) ಅವನಿಗೆ ಕೇಡು ತಟ್ಟಲಿ ! As l. would have it ಒಳ್ಳೆಯ ಅದೃಷ್ಟದಿಂದ, ದುರದೃಷ್ಟದಿಂದ. Down on one's l. ದುರದೃಷ್ಟದಿಂದ ಎದೆಗುಂದಿ ; ತಾತ್ಕಾಲಿಕವಾಗಿ ದುರದೃಷ್ಟ ಹೊಂದಿ. Try one's l. (ಜೂಜಾಟದಲ್ಲಾಗಲಿ ಇತರ ಯಾವ ಕೆಲಸದಲ್ಲಾಗಲಿ) ಅದೃಷ್ಟ ನೋಡಿಬಿಡು. Just my l. ನನ್ನ ಅದೃಷ್ಟ ಅಷ್ಟೆ (ಎಂದಿನಂತೆಯೇ ದುರದೃಷ್ಟ). Worse l. ನನ್ನ (ನಮ್ಮ) ದುರದೃಷ್ಟ ! Have the l. to (—ಕ್ಕೆ) ಅದೃಷ್ಟವಿರು, ಭಾಗ್ಯ ಪಡೆದಿರು. For l. ಒಳ್ಳೆಯ ಅದೃಷ್ಟಕ್ಕಾಗಿ. In, out of, l. ; L.-money, -penny ಅದೃಷ್ಟ ಬರಲೆಂದು ತೆಗೆದಿಟ್ಟ ಹಣ, ನಾಣ್ಯ ; (ಮು., ದನದ ವ್ಯಾಪಾರದಲ್ಲಿ) ಕೊಂಡವನಿಗೆ ಮಾರಿದವನು, ಒಳ್ಳೆಯ ಅದೃಷ್ಟ ತರಲೆಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿಂದಕ್ಕೆ ಕೊಡುವ ಹಣ, ನಾಣ್ಯ. **Lúckless** (ಗು.) ; **Lúcklessness** (ನಾ.) ; **Lúcky**[1] ಲಕಿ (ಗು.) ಅದೃಷ್ಟ ತರುವ ; ಶುಭ ಕೊಡುವ; (ಸದಾ) ಅದೃಷ್ಟಶಾಲಿಯಾದ ; ಅರ್ಹತೆಯುಳ್ಳಷ್ಟು ಅಥವಾ ಹೆಚ್ಚಾಗಿ ಜಯ ಅಥವಾ ಸುಖ ಸಂತೋಷಗಳನ್ನು ಪಡೆದಿರುವ. You're a l. dog (ಮು., ತನ್ನ ಪ್ರೀತಿಯವಳೊಡನೆ ಮದುವೆ ಒಪ್ಪಿತವಾದ ಪ್ರಣಯಿಗೆ ಹೇಳುವ ಅಭಿನಂದನೆಯ ಮಾತು). L. beggar! L. bargee! ಒಳ್ಳೆಯ ಅದೃಷ್ಟಶಾಲಿ! L. guess, hit, shot ಅದೃಷ್ಟವಶದಿಂದ ಆಕಸ್ಮಾತ್ತಾಗಿ, ಸರಿಹೋದ ಊಹೆ, ಗುರಿ ತಾಕಿದ ಏಟು, ಗುಂಡು. L. penny, stone ಅದೃಷ್ಟ ತರುವುದೆಂದು ಇಟ್ಟುಕೊಂಡಿರುವ ಕಾಸು, ಶಿಲೆ. L.-bag, -tub ಸಂತೆ, ವಿನೋದ ಕೂಟ, ಮೊ. ಗಳಲ್ಲಿ ಒಂದು ಗೊತ್ತಾದ ಸ್ವಲ್ಪ ಹಣ ಕೊಟ್ಟು ಕಣ್ಣಿಗೆ ಕಾಣದಂತಿರುವ ಹೆಚ್ಚು ಅಥವಾ ಕಡಮೆ ಬೆಲೆಯ ಯಾವುದಾದರೂ ಪದಾರ್ಥವನ್ನು ಕೈ ಹಾಕಿ ತೆಗೆದುಕೊಳ್ಳಬಹುದಾದ, — ಅದೃಷ್ಟದ ಚೀಲ, ತೊಟ್ಟಿ. **Lúckily** (ಕ್ರಿ. ವಿ.) ಅದೃಷ್ಟವಶದಿಂದ (ವಿರ. ಪ್ರ.) (ಈಗ ವಾಕ್ಯವಿಶೇಷಣವಾಗಿ ಮಾತ್ರ ಪ್ರ.: L. for me I was wrong ನನ್ನ ಎಣಿಕೆ ತಪ್ಪಾಗಿದ್ದುದು ನನ್ನ ಅದೃಷ್ಟ). **Lúckiness** (ನಾ.)

Lúcky[2] ಲಕಿ (ನಾ.) (ಅಸಂ.) Cut one's l. (ಹೇಳದೆ ಕೇಳದೆ) ಓಡಿ ಹೋಗು ; ಕಂಬಿ ಕೀಳು.

Lúcrative ಲ್ಯೂ(ಲೂ)ಕ್ರಟಿವ್ (ಗು.) ಆದಾಯ, ಲಾಭ, —ಕೊಡುವ ; ಲಾಭಕರ. **Lúcratively** (ಕ್ರಿ. ವಿ.) ; **Lúcrativeness** (ನಾ.) ; **Lúcre** ಲ್ಯೂ(ಲೂ)ಕರ್ (ನಾ.) ಅನ್ಯಾಯದ ಲಾಭ, ಹಣ ; ಕೆಟ್ಟ ಸಂಪಾದನೆ ; ಕೆಲಸಮಾಡಲು ಆಸೆ ತೋರಿಸುವ ದುಡ್ಡು. Filthy l. (Filth ನೋಡಿ)

Lúcre. Lucrative ನೋಡಿ.

Lucrétia ಲ್ಯುಕ್ರೀಷಿಯ, —ಷ (ನಾ.) ಆದರ್ಶ ಪತಿವ್ರತೆ ; ಮಾನವನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಗಣಿಸುವವಳು.

Lúcubrate ಲ್ಯೂ(ಲೂ)ಕ್ಯುಬ್ರೇಟ್ (ಕ್ರಿ. ಅಕ.) ತನ್ನ ಚಿಂತನೆಗಳನ್ನು ಬರೆದಿಡು. (ಮು.) ಆಡಂಬರವಾಗಿ ಅಥವಾ ಬಹಳ ಕಷ್ಟಪಟ್ಟು ಸಾಹಿತ್ಯಕೃತಿ ರಚಿಸು. (ಪದದ ಅರ್ಥ: ದೀಪದ ಬೆಳಕಿನಲ್ಲಿ ಕಾರ್ಯ ಮಾಡು). **Lúcubrator** (ನಾ.) ; **Lucubrátion** (ನಾ.) ನಿದ್ದೆಗೆಟ್ಟು ಮಾಡುವ ವಿದ್ಯಾವ್ಯಾಸಂಗ ಅಥವಾ ಚಿಂತನೆ. (ಮು.) ಆಡಂಬರದ ಅಥವಾ ಬಹಳ ಕಷ್ಟಪಟ್ಟು ಬರೆದ ಸಾಹಿತ್ಯಕೃತಿ.

Lúculent ಲ್ಯೂ(ಲೂ)ಕ್ಯುಲೆಂಟ್ (ಗು.) (ವಿರ. ಪ್ರ.) ತಿಳಿಯಾದ ; ಸ್ಪಷ್ಟವಾದ ; ವಿಶದವಾದ ; ಮನಸ್ಸಿಗೆ ಹಿಡಿಯುವ (L. proof, instance, explanation). **Lúculently** (ಕ್ರಿ. ವಿ.)

Lud ಲಡ್ (ನಾ.) (Lord ಪದದ ವಿಕೃತ ರೂಪ). My l. (ನ್ಯಾಯಾಧಿಪತಿಯನ್ನು ಸಂಬೋಧಿಸುವಾಗ ವಕೀಲರ ಉಚ್ಚಾರಣೆ)

Lúdicrous ಲ್ಯೂ(ಲೂ)ಡಿಕ್ರಸ್ (ಗು.) ಹಾಸ್ಯಾಸ್ಪದವಾದ ; ಪರಿಹಾಸಾಸ್ಪದವಾದ ; ನಗೆಗೀಡಾಗುವ ; ಹುಚ್ಚುತನದ. **Lúdicrously** (ಕ್ರಿ. ವಿ.) ; **Lúdicrousness** (ನಾ.)

Lúes (L) ಲ್ಯೂ(ಲೂ)ಯಾಸ್ (ನಾ.) ಪ್ಲೇಗು ; ಅಂಟು ರೋಗ ; ರೋಗದ ಸೋಂಕು [L. Boswelliana ಜೀವನ ಕಥಾ ಲೇಖಕನು ತನ್ನ ಕಥಾನಾಯಕನನ್ನು ಉತ್ಪ್ರೇಕ್ಷಿಸುವ ಪ್ರವಣತೆ, ಸ್ವಭಾವ (Boswell ನೋಡಿ)]. ಒಂದು ತೆರದ ಮೇಹ ರೋಗ (= L. venerea). **Luétic** ಲ್ಯೂ(ಲು)ಎಟಿಕ್ (ಗು.)

Lug[1] ಲಗ್ (ಕ್ರಿ., ನಾ.) (ಭಾರವಾದ ವಸ್ತುವನ್ನು) ಪ್ರಯಾಸದಿಂದ, ರಭಸದಿಂದ, —ಎಳೆ, ಜಗ್ಗು, ತುಯ್ಯಿ. (ವಿಷಯ, ಮೊ. ನ್ನು) ಅಸಂಬದ್ಧವಾಗಿ ತಂದು ಸೇರಿಸು (*In, Into* ಉಪ. ದೊಡನೆ). (ಒಬ್ಬನನ್ನು) ಬಲವಂತವಾಗಿ ಎಳೆದುಕೊಂಡು ಹೋಗು (*Along* ಉಪ. ದೊಡನೆ). (ನಾ.) ಬಲವಾದ, ಒರಟಾದ, —ಎಳೆತ, ತುಯ್ತ.

Lug[2] ಲಗ್ (ನಾ.) (ಸ್ಕಾ. ಪ್ರ.) ಕಿವಿ. (ಯಂತ್ರವಿದ್ಯೆ: ಎರಕ ಹೊಯ್ದ ಅಥವಾ ಇತರ ವಸ್ತುವಿನಲ್ಲಿ, ಅದನ್ನು ಅದರ ಸ್ಥಾನದಲ್ಲಿ ಬಂಧಿಸಲು, ಮಾಡಿದ) ಚಾಚು ಕಿವಿ.

Lúggage ಲಗೆ(ಗಿ)ಜ್ (ನಾ.) ಪ್ರಯಾಣಿಕನ ಸಾಮಾನು (ಗಂಟು, ಮೂಟೆ, ಪೆಟ್ಟಿಗೆ, ಮೊ. ವು)

Lúgger ಲಗರ್ (ನಾ.) ಉದ್ದಸಾಲಿನಲ್ಲಿ ಹಾಕಿರುವ ನಾಲ್ಕು ಮೂಲೆಯ ಹಾಯಿಗಳುಳ್ಳ ಸಣ್ಣ ಹಡಗು.

Lugúbrious ಲ್ಯು(ಲೂ, ಲ್ಯೂ)ಗ್ಯೂಬ್ರಿಯಸ್ (ಗು.) ವ್ಯಥೆಯ ; ಗೋಳು ಕರೆಯ ; ದುಃಖಕರವಾದ ; ಮಂಕು ಕವಿದ. **Lugúbriously** (ಕ್ರಿ. ವಿ.) ; **Lugúbriousness** (ನಾ.)

Lúkewarm ಲ್ಯೂ(ಲೂ)ಕ್‌ವಾರ್ಮ್ (ಗು., ನಾ.) ಉಗುರುಬೆಚ್ಚಗಿರುವ ; ಮಂದೋಷ್ಣ. ಉತ್ಸಾಹವಿಲ್ಲದ ; ಆಸಕ್ತಿಯಿಲ್ಲದ ; ಉದಾಸೀನ ಭಾವದ. (ನಾ.) ಶ್ರದ್ಧೆ ಯಿಲ್ಲದವನು. **Lúkewarmly** (ಕ್ರಿ. ವಿ.) ; **Lúkewarmness** (ನಾ.)

Lull ಲಲ್ (ಕ್ರಿ., ನಾ.) ಜೋಗುಳ ಹೇಳಿ, ಮುದ್ದಿಸಿ, —ಸಂತಯಿಸು, ನಿದ್ದೆ ಬರಿಸು. (ಸಂಶಯ, ಮೊ. ನ್ನು) ವಂಚನೆಯಿಂದ ಶಮನಗೊಳಿಸು ; (ಸಾ., ಕರ್ಮಣಿಯಲ್ಲಿ) (ಸಮುದ್ರ, ಬಿರುಗಾಳಿ, ಮೊ.) ಶಾಂತ ಮಾಡು ; (ಬಿರುಗಾಳಿ, ಸದ್ದು) ಕಡಮೆಯಾಗು, ಅಡಗಿಹೋಗು, ಶಾಂತವಾಗು. (ನಾ.) ಬಿರುಗಾಳಿಯ ಮಧ್ಯೆ, ಶಾಂತಿಸ್ಥಿತಿ (ರೂಪ. ಸಹ). **Lúllingly** (ಕ್ರಿ. ವಿ.) ; **Lúllaby** ಲಲಬೈ (ನಾ., ಕ್ರಿ. ಸಕ.) (ಮಗುವಿಗೆ ನಿದ್ದೆಬರಿಸಲು ಹಾಡುವ) ಜೋಗುಳ, ಹಾಡು. (ಕ್ರಿ.) —ಹಾಡಿ ನಿದ್ದೆ ಬರಿಸು.

Lumbágo ಲಂಬೇಗೊ (ನಾ.) ಸೊಂಟದಲ್ಲಿ ಬರುವ ವಾತರೋಗ ; ಕಟಿ ವಾಯು. **Lumbáginous** —ಬ್ಯಾ(ಬೇ)ಜಿನಸ್ (ಗು.)

Lúmbar ಲಂಬರ್ (ಗು., ನಾ.) ಸೊಂಟದ(ಲ್ಲಿಯ) (ಅಪಧಮನಿ, ಅಭಿಧಮನಿ, ನರ, ಬೆನ್ನೆಲುಬು)

Lúmber[1] ಲಂಬರ್ (ಕ್ರಿ. ಅಕ.) ಗದ್ದಲಮಾಡಿಕೊಂಡು ಅಡ್ಡಾದಿಡ್ಡಿಯಾಗಿ ತಡವರಿಸುತ್ತ ನಡೆ (*Along, past, by,* ಮೊ. ಉಪ. ದೊಡನೆ). **Lúmbering** (ಗು.) ; **Lúmberingly** (ಕ್ರಿ. ವಿ.) ; **Lúmbersome** (ಗು.)

Lúmber[2] ಲಂಬರ್ (ನಾ., ಕ್ರಿ.) (ಸ್ಥಳವನ್ನು ಆಕ್ರಮಿಸಿಕೊಂಡು ಬಿದ್ದಿರುವ) ಉಪಯೋಗವಿಲ್ಲದ ಹಳೆಯ ಪೀಠೋಪಸ್ಕರ, ಮೊ. ವು ; ಉಪಯೋಗವಿಲ್ಲದ ಅಥವಾ ಹೊರೆಯಾದ ಹರುಕು ಮುರುಕು ಸಾಮಾನುಗಳು (L.-room ಇಂಥ ಸಾಮಾನನ್ನು ಒಟ್ಟಿರುವ ಕೊಠಡಿ). ಅತಿ ಬೊಜ್ಜು. ಒರಟೊರಟಾಗಿ ಕೆತ್ತಿ ತಯಾರಿಸಿದ ಮರದ ದಿಮ್ಮಿ, ನಾಟ (L.-carrier ಮರದ ದಿಮ್ಮಿಗಳನ್ನು ಸಾಗಿಸುವ ದೋಣಿ. L.-mill ಮರದ ದಿಮ್ಮಿಗಳನ್ನು ರಂಪದಿಂದ ಕೊಯ್ಯುವ ಕಾರ್ಖಾನೆ. Lumberman ಮರವನ್ನು ಕಡಿದುರುಳಿಸುವವನು, ದಿಮ್ಮಿಯಾಗಿ ಕೆತ್ತುವವನು, ಸಾಗಿಸುವವನು ; ಚೌಬೀನೆಯವನು. L.-scaler ಚೌಬೀನೆಯನ್ನು ಅಳತೆ ಮಾಡುವವನು). (ಕ್ರಿ.) (ಕೊಠಡಿಯನ್ನು, ಸ್ಥಳವನ್ನು) (ಒಬ್ಬರಿಗೆ) ಅನನುಕೂಲವಾಗುವಂತೆ ಆಕ್ರಮಿಸು, ತುಂಬು ; (ಒಳಹೊಗಲು) ತಡೆಯಾಗುವಂತೆ (ಸಾಮಾನುಗಳನ್ನು) ಒಟ್ಟು ; ತಡೆಯಾಗಿ ಬಿದ್ದಿರು (ಸಾ., *Up, over* ಉಪ. ದೊಡನೆ) ; (ಒಂದು ಗೊತ್ತಿಲ್ಲದೆ) ರಾಶಿಯಾಗಿ ಒಟ್ಟು ; ಹಳೆಯ ಮುರುಕು ಸಾಮಾನುಗಳಂತೆ, ಬರಿ ಹೊರೆಯಂತೆ, —ಕಾಣು. ಕಾಡಿನ ಮರವನ್ನು ಕತ್ತರಿಸಿ, ಕೆತ್ತಿ, ಸರಿ ಮಾಡು. **Lúmberer** (ನಾ.)

Lúmbrical ಲಂಬ್ರಿಕಲ್ (ಗು., ನಾ.) L. muscle or l. ಕೈಬೆರಳುಗಳನ್ನು ಅಥವಾ ಕಾಲುಬೆರಳುಗಳನ್ನು ಬಗ್ಗಿಸುವ ಸ್ನಾಯು.

Lúmen ಲ್ಯೂಮೆನ್ (ನಾ. ; ಬ. ವ. -mina — ಮಿನ) (ಅಂ. ರ. ಶಾ., ಸ. ವಿ.) ಒಂದು ನಳಿಕೆ, ಜೀವಕಣ, ಮೊ. ಗಳ ಮೈಯೊಳಗಡೆಯಿರುವ ಸ್ಥಳಾವಕಾಶ ಅಥವಾ ಕಂಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Lúmiere ಲೂಮಿಯೇರ್ (ನಾ.) L. process ಬಣ್ಣದ ಛಾಯಾ ಚಿತ್ರ ತೆಗೆಯುವ ಒಂದು ವಿಧಾನ. L. plate ಇಂಥ ಚಿತ್ರವನ್ನು ತೆಗೆಯುವ ಫಲಕ. (ಇದನ್ನು ಕಂಡುಹಿಡಿದ Lumiere ಎಂಬ ಸಹೋದರರ ಹೆಸರಿನಿಂದ)

Lúminary ಲ್ಯೂ(ಲೂ)ಮಿನರಿ (ನಾ.) ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ಬೆಳಕು ಕೊಡುವ ವಸ್ತು (ಮು., ಸೂರ್ಯ, ಚಂದ್ರ) ; ಜ್ಯೋತಿ. ತೇಜಸ್ವಿ ; ಜ್ಞಾನ ನಿಧಿ ; ಧಾರ್ಮಿಕ ಜ್ಯೋತಿ ; ಪ್ರತಿಭಾಶಾಲಿ ; ಪ್ರಭಾವಶಾಲಿ. **Luminíferous** (ಗು.) ಬೆಳಕು ಕೊಡುವ ; ಬೆಳಕು ಸಾಗಿಸುವ ; ತೇಜೋವಾಹಿ. **Lúminous** (ಗು.) ಬೆಳಕು ಸೂಸುವ ; — ತುಂಬಿದ ; ಬೆಳಗುವ ; ಹೊಳೆಯುವ [L. paint (ರಾತ್ರಿಯ ಹೊತ್ತು ಒಂದು ವಸ್ತು ಬೆಳಗುವಂತೆ ಮಾಡುವುದಕ್ಕಾಗಿ ಅದಕ್ಕೆ ಬಳಿದ ಸುರ ದೀಪ್ತಿಯ) ತೇಜೋಮಯ ವರ್ಣ : ಬೆಳಗು ಬಣ್ಣ]. (ಬರಹಗಾರರು, ಮೊ. ರ ವಿಷಯದಲ್ಲಿ) ಒಂದು ವಿಷಯದಮೇಲೆ ಬೆಳಕು ಚೆಲ್ಲುವ, ವಿಷಯವನ್ನು ಸ್ಪಷ್ಟಗೊಳಿಸುವ. **Luminósity** (ನಾ.) ; **Lúminousness** (ನಾ.) ; **Lúminously** (ಕ್ರಿ. ವಿ.)

Lump[1] ಲಂಪ್ (ನಾ., ಕ್ರಿ.) (ಗೊತ್ತಾದ ಆಕಾರವಿಲ್ಲದ) ಮುದ್ದೆ, ಗಟ್ಟಿ, ಗಡ್ಡೆ [L. in throat (ಭಾವಾವೇಶದಿಂದಾದ) ಕೊರಳ ಬಿಗಿತ. Is a l. of selfishness ಸ್ವಾರ್ಥದ ಮುದ್ದೆ ; ಮೈಯೆಲ್ಲ ಸ್ವಾರ್ಥ]. ದೊಡ್ಡ ಮೊತ್ತ ; ಗುಡ್ಡೆ ; ರಾಶಿ. (ಆಕಾರ ಕೊಡಲು ಸಿದ್ಧಗೊಳಿಸಿರುವ ಜೇಡಿಮಣ್ಣಿನ, ಸುಡಲು ಸಿದ್ಧಗೊಳಿಸಿರುವ ನಾದಿದ ಹಿಟ್ಟಿನ) ಮುದ್ದೆ. (ಮು., ರೋಗದಿಂದ, ಏಟಿನಿಂದ, ಆದ) ಗಂಟು ; ಗಂತಿ ; ಊತ ; ಮೂಗುಗಾಯ. ದೊಣ್ಣೆ ಭಾಗವತ ; ಒಡ್ಡ ; ದಡ್ಡ. [In the l. ಒಟ್ಟಿನಲ್ಲಿ ; ಸಾಕಲ್ಯವಾಗಿ ; ರಾಶಿಯಮೇಲೆ. L. sugar ಚೂರುಗಳಾಗಿ ಅಥವಾ ಘನಾಕೃತಿಗಳಾಗಿ ಕತ್ತರಿಸಿರುವ ಗಟ್ಟಿಸಕ್ಕರೆ. L. sum (ಹಲವು ಬಾಬುಗಳನ್ನೊಳಕೊಂಡ) ಒಟ್ಟು ಮೊತ್ತ ; ಒಂದೇ ಗಂಟಿನಲ್ಲಿ ಕೊಟ್ಟದ್ದು (ಪ್ರತಿ ಪದ : Instalments)]. (ಕ್ರಿ.) ಮುದ್ದೆ ಮಾಡು ; ಒಟ್ಟಿಗೆ ಸೇರಿಸು ; ಎಲ್ಲವೂ ಒಂದೇ ವಿಧವಾಗಿರುವಂತೆ ಕಾಣು ; ಪರಸ್ಪರ ವ್ಯತ್ಯಾಸ, ತಾರತಮ್ಯ, — ಗಣಿಸದಿರು (*Together, with, in with*, ಮೊ. ಪದದೊಡನೆ). (ಯಾವುದಾದರೂ ಸಂದರ್ಭ, ಜೂಜು ಕುದುರೆ, ಮೊ. ಗಳ ಮೇಲೆ) (ಹಣದ) ಮೊತ್ತವೆಲ್ಲವನ್ನೂ ಪಣವಾಗಿ ಒಡ್ಡು (*On* ಉಪ. ದೊಡನೆ). ಮುದ್ದೆಗೂಡು ; ಗಂಟು ಗಂಟುಗಳಾಗಿ ಎದ್ದುಕೊ. L. along ಭಾರವಾಗಿ ನಡೆ. L. down ತೊಪ್ಪನೆ ಭಾರವಾಗಿ ಕುಕ್ಕರಿಸು. **Lúmper** (ನಾ.) ಹಡಗಿಗೆ ಸಾಮಾನು ತುಂಬುವ, ಹಡಗಿನಿಂದ ಸಾಮಾನು ಇಳಿಸುವ, ಕೂಲಿಕಾರ. (ಒಟ್ಟಾಗಿ ಕೆಲಸವನ್ನು ಗುತ್ತಿಗೆಗೆ ತೆಗೆದುಕೊಂಡು ಇತರರಿಗೆ ಚಿಲ್ಲರೆ ಚಿಲ್ಲರೆಯಾಗಿ ಹಂಚಿಕೊಡುವ) ಒಟ್ಟು ಗುತ್ತಿಗೆದಾರ. ಸಣ್ಣ ವಿಭಾಗಗಳನ್ನು ಗಮನಿಸದೆ ವರ್ಗೀಕರಣ ಮಾಡುವವನು : ಸ್ಥೂಲ ವಿಂಗಡಕ. **Lúmping** (ಗು.) (ಬಳ. ಮಾ.) ದೊಡ್ಡ ; ಭಾರಿ ; ಯಥೇಚ್ಛ (L. weight ಒಳ್ಳೆಯ ಭಾರ). **Lúmpish** (ಗು.) ಭಾರವಾಗಿಯೂ ಒಡ್ಡೊಡ್ಡಾಗಿಯೂ ಇರುವ ; ದಡ್ಡ ; ಹೆಡ್ಡ ; ಅಲಸ. **Lúmpishly** (ಕ್ರಿ. ವಿ.) ; **Lúmpishness** (ನಾ.); **Lúmpy** (ಗು.) ಮುದ್ದೆ ಮುದ್ದೆಯಾದ ; ಮುದ್ದೆಗಳಿಂದ ತುಂಬಿದ. (ನೀರಿನ ವಿಷಯದಲ್ಲಿ) ಗಾಳಿಯಿಂದ ಸಣ್ಣ ಸಣ್ಣ ಅಲೆಗಳಾಗಿ ಒಡೆದ. **Lúmpily** (ಕ್ರಿ. ವಿ.) ; **Lúmpiness** (ನಾ.)

Lump[2] ಲಂಪ್ (ಕ್ರಿ. ಸಕ.) (ಒಂದರ ವಿಷಯದಲ್ಲಿ) ಅಸಮಾಧಾನ ಪಡು ; ಅಸಮಾಧಾನದಿಂದ ತಾಳಿಕೊ (If you don't like it you may l. it ಎಂಬಲ್ಲಿ ಮಾತ್ರ ಈಗ ಪ್ರ.)

Lúmper, Lúmping. **Lump**[1] ನೋಡಿ.

Lúnacy ಲ್ಯೂ(ಲೂ)ನಸಿ (ನಾ.) ಬುದ್ಧಿ ಸ್ತಿಮಿತವಿಲ್ಲದಿರುವುದು ; ಹುಚ್ಚು ; ಮತಿ ಭ್ರಮಣೆ ; ಉನ್ಮಾದ (ಚಂದ್ರನ ವೃದ್ಧಿ ಕ್ಷಯಗಳನ್ನನುಸರಿಸಿ ಕೆಲವು ವೇಳೆ ಹೆಚ್ಚಾಗಿಯೂ ಕೆಲವು ವೇಳೆ ಇಲ್ಲದೆಯೂ ಇರುತ್ತಿದ್ದಿತೆಂದು ಹಿಂದಿನ ಸಾ. ಭಾವನೆ). (ನ್ಯಾ. ಶಾ.) ಪ್ರಜಾ ಹಕ್ಕುಗಳಿಗೂ ವ್ಯವಹಾರಕ್ಕೂ ಅಡ್ಡಿಯಾಗುವಂಥ ಮತಿ ಭ್ರಮಣೆ [Commission of l. (ಒಬ್ಬನಿಗೆ) ಬುದ್ಧಿಭ್ರಮಣೆಯುಂಟೆ ಇಲ್ಲವೆ ಎಂಬುದನ್ನು ವಿಚಾರಣೆ ಮಾಡಲು ಕೊಟ್ಟ ಅಧಿಕಾರ. Commissioner in l. ಹುಚ್ಚಾಸ್ಪತ್ರೆಗಳ ವಿಚಾರಣಾ ಮಂಡಲಿಯ ಸದಸ್ಯ(ರಲ್ಲೊಬ್ಬನು). Master in l. (ಆರೋಪಿಸಿರುವ) ಹುಚ್ಚನ್ನು ವಿಚಾರಣೆ ಮಾಡುವ ಅಧಿಕಾರಿ : ಉನ್ಮಾದ ಪರೀಕ್ಷಕ]. ದೊಡ್ಡ ಪ್ರಮಾದ, — ಅವಿವೇಕ. **Lúnatic** (ಗು., ನಾ.) ಹುಚ್ಚು ಹಿಡಿದ (ವನು) ; ಹುಚ್ಚ ; ಉನ್ಮತ್ತ. (ಕಾರ್ಯಗಳು, ಮೊ.) ಹುಚ್ಚು ಹುಚ್ಚಾದ ; ಶುದ್ಧ ಅವಿವೇಕದ ; ವಕ್ರ ಮಾರ್ಗದ, ಅವಿವೇಕದ (ಮನುಷ್ಯ). L. asylum (Asylum ನೋಡಿ)

Lúnar ಲ್ಯೂ(ಲೂ)ನರ್ (ಗು., ನಾ.) ಚಂದ್ರನ ; ಚಂದ್ರನಲ್ಲಿಯ ; ಚಂದ್ರನಂಥ ; ಚಾಂದ್ರ(ಮಾನ) [L. cycle ಈಸ್ಟರ್ ತಿಥಿಯನ್ನು ನಿರ್ಧರಿಸಲು ಬಳಸುವ ೧೯ ವರ್ಷಗಳ ಚಾಂದ್ರಮಾನ ಚಕ್ರ. L. distance ಸೂರ್ಯನಿಂದ, ನಿರ್ದಿಷ್ಟ ಗ್ರಹದಿಂದ, ಅಥವಾ ನಕ್ಷತ್ರದಿಂದ, ಚಂದ್ರನಿರುವ ದೂರ (ಸಮುದ್ರದಲ್ಲಿ ರೇಖಾಂಶವನ್ನು ಕಂಡುಹಿಡಿಯಲು ಉಪಯೋಗ) : ಚಂದ್ರಾಂತರ. L. month ಅಮಾವಾಸ್ಯೆಯಿಂದ ಅಮಾವಾಸ್ಯೆಯ ವರೆಗಿನ ಕಾಲ (ಸು. ೨೯½ ದಿನಗಳು) ; (ಬಳಕೆಯಲ್ಲಿ) ನಾಲ್ಕು ವಾರಗಳು ; ಚಾಂದ್ರ ಮಾಸ ; ತಿಂಗಳು. L. nodes ಚಾಂದ್ರ ಪಥವು ಕ್ರಾಂತಿ ಚಕ್ರವನ್ನು ಛೇದಿಸುವ ಬಿಂದುಗಳು : ಚಾಂದ್ರ ಪಾತ ಬಿಂದುಗಳು. L. observation ಚಂದ್ರಾಂತರದಿಂದ ರೇಖಾಂಶವನ್ನು ಕಂಡುಹಿಡಿಯುವುದು. L. politics ವ್ಯವಹಾರ ಸಾಧ್ಯವಲ್ಲದ ವಿಷಯಗಳು. L. rainbow ಚಂದ್ರನ ಮಳೆಬಿಲ್ಲು ; ಚಂದ್ರ ಚಾಪ]. (ಬೆಳಕು, ಖ್ಯಾತಿ, ಮೊ. ಗಳ ವಿಷಯದಲ್ಲಿ) ಮಸುಕಾದ ; ಕಾಂತಿ ಹೀನ ; ಕ್ಷೀಣ. ಬಾಲ ಚಂದ್ರಾಕೃತಿಯ (ಮು., L. bone ಮಣಿಕಟ್ಟಿನಲ್ಲಿರುವ ಬಾಲ ಚಂದ್ರಾಕೃತಿಯ ಮೂಳೆ). ಬೆಳ್ಳಿಯ ; ಬೆಳ್ಳಿಯಿರುವ (ರಸವಾದಿಗಳು ಬೆಳ್ಳಿಗೆ luna ಎಂದು ಉಪಯೋಗಿಸುತ್ತಿದ್ದ ಕಾರಣದಿಂದ) (L. caustic ಶಾಖದಿಂದ ಕರಗಿಸಿ ಘನೀಕರಿಸಿದ Silver nitrate ಲವಣ). (ನಾ.) ಚಂದ್ರಾಂತರ ; ಚಂದ್ರಾಂತರದಿಂದ ರೇಖಾಂಶವನ್ನು ಕಂಡುಹಿಡಿಯುವುದು. = L. bone. **Lunárian** ಲ್ಯು(ಲು)ನೇರಿಯನ್ (ನಾ.) ಚಂದ್ರ(ಲೋಕದ) ನಿವಾಸಿ. ಚಂದ್ರಮಂಡಲದ ವಿಷಯದಲ್ಲಿ ವಿಶೇಷ ಜ್ಞಾನವುಳ್ಳ ಜ್ಯೋತಿರ್ವಿಜ್ಞಾನಿ ಅಥವಾ ನಾವಿಕ : ಚಾಂದ್ರ ಜ್ಞಾನಿ. **Lúnate** ಲ್ಯೂ(ಲೂ)ನೇಟ್ (ಗು.) (ಪ್ರಕೃತಿ ಚರಿತ್ರೆ) ಬಾಲ ಚಂದ್ರಾಕೃತಿಯ. **Lunátion** ಲ್ಯು(ಲು)ನೇಷನ್ (ನಾ.) ಅಮಾವಾಸ್ಯೆಯಿಂದ ಅಮಾವಾಸ್ಯೆಯ ವರೆಗಿನ ಕಾಲ ; ಚಾಂದ್ರ ಮಾಸ.

Lúnatic. **Lunacy** ನೋಡಿ.

Lunch ಲನ್ಷ್, ಲಂಚ್ (ನಾ., ಕ್ರಿ.), **Lúncheon** ಲನ್ಷನ್, — ಚನ್ (ನಾ.) (ಮುಖ್ಯವಾದ ಊಟವನ್ನು ಹೊತ್ತಾಗಿ ಮಾಡುವವರ ವಿಷಯದಲ್ಲಿ) ಮಧ್ಯಾಹ್ನದ ಊಟ. (ಮುಖ್ಯವಾದ ಊಟವನ್ನು ಮಧ್ಯಾಹ್ನ ಮಾಡುವವರ ವಿಷಯದಲ್ಲಿ) ಮೊದಲೂಟಕ್ಕೂ ಮಧ್ಯಾಹ್ನದೂಟಕ್ಕೂ ಮಧ್ಯೆ ತೆಗೆದುಕೊಳ್ಳುವ ಅಲ್ಪಾಹಾರ, ಉಪಾಹಾರ. (ಕ್ರಿ.) (Lunch) ಉಪಾಹಾರ ತೆಗೆದುಕೊ, — ಕೊಡು.

Lune ಲ್ಯೂ(ಲೂ)ನ್ (ನಾ.) (ಜ್ಯಾ.) ಗೋಳದ ಮೇಲಾಗಲಿ ಸಮತಲ ಕ್ಷೇತ್ರದಲ್ಲಾಗಲಿ ಪರಸ್ಪರ ಛೇದಿಸುವ ಎರಡು ವೃತ್ತರೇಖೆಗಳ ಚಾಪಗಳು ಒಳಕೊಂಡ ಆಕೃತಿ : ಖಂಡ ಚಂದ್ರಾಕೃತಿ. **Lunétte** ಲ್ಯುನೆಟ್, ಲ್ಯೂ(ಲೂ) — (ನಾ.) ಒಳ ಬಾಗುಳ್ಳ ಒಳ ಮಾಳಿಗೆಯಲ್ಲಿ ಬೆಳಕು ಬರುವುದಕ್ಕಾಗಿ ಮಾಡಿರುವ ಕಮಾನು ಕಿಂಡಿ ; ಬಾಲಚಂದ್ರ ಗವಾಕ್ಷ. (ಗುಮ್ಮಟದಲ್ಲಿ ಅಥವಾ ಒಳ ಮಾಳಿಗೆಯಲ್ಲಿ) ವರ್ಣಚಿತ್ರ, ಮೊ. ಗಳಿಂದ ಅಲಂಕರಿಸಿರುವ ಬಾಲಚಂದ್ರಾಕೃತಿಯ ಅಥವಾ ಅರ್ಧ ಚಂದ್ರಾಕೃತಿಯ ಅಂತರ, ಅವಕಾಶ. (ಗಡಿಯಾರದ) ಚಪ್ಪಟೆಯಾಕಾರದ ಗಾಜು ಬಿಲ್ಲೆ. (Guillotine ಎಂಬ ಶಿರಚ್ಛೇದಕಯಂತ್ರದಲ್ಲಿ) ಕತ್ತನ್ನು ಇಡಲು ಮಾಡಿರುವ ಕಂಡಿ.

Lung ಲಂಗ್ (ನಾ.) (ಮನುಷ್ಯನಲ್ಲಿಯೂ ಅನೇಕ ಇತರ ಕಶೇರುಕ ಪ್ರಾಣಿಗಳಲ್ಲಿಯೂ ಇರುವ) ಉಸಿರು ಚೀಲ ; ಶ್ವಾಸ ಕೋಶ ; ಪುಪ್ಪುಸ. Good lungs ಬಲವಾದ ದನಿ. Lungs of London, etc.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಂಡನ್, ಮೊ. ಪಟ್ಟಣಗಳಲ್ಲಿ (ಗಾಳಿ ಚೆನ್ನಾಗಿ ಸಂಚರಿಸುವುದಕ್ಕಾಗಿ) ಪಟ್ಟಣದ ನಡು ನಡುವೆ ಅಥವಾ ಒತ್ತಿನಲ್ಲಿ ಬಿಟ್ಟಿರುವ ಬಯಲು ಪ್ರದೇಶಗಳು. Lungs of oak = Lungwort. L.-fish ಶ್ವಾಸಕೋಶಗಳನ್ನೂ ಜಲ ಪುಪ್ಪುಸಗಳನ್ನೂ ಸಹ ಉಳ್ಳ ಒಂದು ಮೀನು (ಜಾತಿ). L.-power ವಾಗ್ಬಲ; ಧ್ವನಿ ಶಕ್ತಿ. Lungwort ರೋಗ ತಗುಲದ ಶ್ವಾಸ ಕೋಶದಂತೆ ಬಿಳಿಯ ಮಚ್ಚೆಗಳಿಂದ ಕೂಡಿದ ಎಲೆಗಳುಳ್ಳ ಒಂದು ಜಾತಿಯ ಗಿಡ; ಶ್ವಾಸ ಕೋಶ ರೋಗಕ್ಕೆ ಒಳ್ಳೆಯದೆಂದು ಹೇಳುವ ಒಂದು ಜಾತಿಯ ಕಲ್ಲುಹೂವು (=Lungs of oak). **-lunged** (ಗು.); **Lúngless** (ಗು.)

Lunge[1], Longe ಲಂಜ್ (ನಾ., ಕ್ರಿ. ಸಕ.) ಕುದುರೆ ಪಳಗಿಸುವವನು ಕುದುರೆಯನ್ನು ತನ್ನ ಸುತ್ತಲೂ ಗುಂಡಗೆ ಸುತ್ತುವಂತೆ ಮಾಡಲು ಅದಕ್ಕೆ ಕಟ್ಟಿ ಹಿಡಿದುಕೊಳ್ಳುವ ಉದ್ದನೆಯ ಹಗ್ಗ; ಕುದುರೆಗಳನ್ನು ಪಳಗಿಸುವ ವರ್ತುಲಾಕಾರದ ಮೈದಾನ. (ಕ್ರಿ.) (ಕುದುರೆಗೆ ಕಟ್ಟಿದ) ಹಗ್ಗವನ್ನು ಹಿಡಿದುಕೊಂಡು (ಕುದುರೆಯನ್ನು) ಸುತ್ತಿಸಿ ಪಳಗಿಸು.

Lunge[2] ಲಂಜ್ (ನಾ., ಕ್ರಿ. ಅಕ.) (ಮು., ಕತ್ತಿವರಿಸೆಯಲ್ಲಿ) ಕತ್ತಿ, ಮೊ. ಆಯುಧದಿಂದ ತಿವಿಯುವುದು. ಥಟ್ಟನೆಯ ಮುನ್ನುಗ್ಗು; ಥಟ್ಟನೆ ಮುನ್ನುಗ್ಗುವುದು, ದುಮುಕುವುದು. (ಕ್ರಿ.) [(ಕತ್ತಿವರಿಸೆಯಲ್ಲಿ) L. at, out ಕತ್ತಿಯಿಂದ ತಿವಿ; (ಮುಷ್ಟಿಕಾಳಗದಲ್ಲಿ) ಭುಜದಿಂದ ಹೊಡೆ. (ಕುದುರೆಯ ವಿಷಯದಲ್ಲಿ) L. out ಒದ್ದುಬಿಡು]. [ಆಯುಧ, (ಕಣಜ, ಮೊ. ಗಳ) ಕೊಂಡಿ, ಮೊ.] ಬಲವಾಗಿ ಚುಚ್ಚು. (ಒಂದು ಕಡೆಗೆ) ಥಟ್ಟನೆ ಮುನ್ನುಗ್ಗು.

Lunisólar ಲ್ಯೂ(ಲೂ)ನಿಸೋಲರ್ (ಗು.) ಚಂದ್ರ ಸೂರ್ಯರ; ಚಾಂದ್ರ ಸೌರ. L. period ಚಾಂದ್ರಮಾನ ಸೌರಮಾನ ಕಾಲಚಕ್ರಗಳು ಒಂದುಗೂಡಲು ಬೇಕಾಗುವ ೫೩೨ ವರ್ಷಗಳ ಕಾಲಾವಧಿ. L. year ಚಾಂದ್ರಮಾನದ ತಿಂಗಳುಗಳಾಗಿ ವಿಭಾಗಿಸಿದ, ಆದರೆ ವರ್ಷದ ಸರಾಸರಿ ಕಾಲಾವಧಿಯ ಸೌರಮಾನಾನುಗುಣವಾಗಿರುವಂತೆ ಅಳವಡಿಸಿದ, ವರ್ಷ; ಚಾಂದ್ರ ಸೌರ ವರ್ಷ.

Lúnkah ಲಂಕ (ನಾ.) ಇಂಡಿಯದ ಒಂದು ಬಗೆಯ ಕಟುವಾದ ಚುಟ್ಟ. [ಹಿಂದಿ: ಲಂಕ = ನದೀಮುಖದಲ್ಲಿಯ ದ್ವೀಪಗಳು; ಇಲ್ಲಿ ಬೆಳೆಯುವ ಹೊಗೆಯಸೊಪ್ಪು]

Lúny = Loony.

Lúpin(e)[1] ಲ್ಯೂ(ಲೂ)ಪಿನ್ (ನಾ.) ನೀಲಿ, ಹಳದಿ, ಬಿಳುಪು, ಮೊ. ಬಣ್ಣಗಳ ಹೂಗೊಂಚಲು ಬಿಡುವ ಒಂದು ಬಗೆಯ (ಹೂದೋಟದ ಅಥವಾ ಮೇವಿನ) ಸಸ್ಯ; (ಸಾ., ಬ. ವ. ದಲ್ಲಿ) ಇದರ ಬೀಜ.

Lúpine[2] ಲ್ಯೂ(ಲೂ)ಪೈನ್ (ಗು.) ತೋಳದ; ತೋಳಗಳ; ತೋಳದಂಥ.

Lúpus ಲ್ಯೂ(ಲೂ)ಪಸ್ (ನಾ.) ವ್ರಣವಾಗುವ ಒಂದು ಚರ್ಮರೋಗ. **Lúpoid** (ಗು.) —ಅಂಥ; **Lúpous** (ಗು.) — ದ, —ಅಂಟಿರುವ.

Lurch[1] ಲರ್ಚ್ (ನಾ.) Leave in the l. ಕಷ್ಟದಲ್ಲಿರುವ (ಸ್ನೇಹಿತನನ್ನು, ಮಿತ್ರರಾಷ್ಟ್ರ ಅಥವಾ ರಾಜನನ್ನು) ತೊರೆದುಬಿಡು, ಕೈಬಿಡು.

Lurch[2] ಲರ್ಚ್ (ನಾ., ಕ್ರಿ. ಅಕ.) ಥಟ್ಟನೆ ಒಂದು ಕಡೆಗೆ ಓಲು(ವುದು), ಹೊರಳು(ವುದು); ತತ್ತರಿಸು(ವುದು)

Lúrcher ಲರ್ಚರ್ (ನಾ.) ಸಣ್ಣ ಕಳ್ಳತನ ಮಾಡುವವನು; ಚಿಲ್ಲರೆ ಕಳ್ಳ; ಮೋಸಗಾರ; ಠಕ್ಕ; ದಗಾಕೋರ; ಗೂಢ ಚಾರ. (ಮು., ಕಳ್ಳ ಬೇಟೆಗಾರರು ಉಪಯೋಗಿಸುವ) ಒಂದು ಬಗೆಯ ಬೆರಕೆ ಜಾತಿಯ ನಾಯಿ.

Lure ಲ್ಯೂರ್ (ನಾ., ಕ್ರಿ. ಸಕ.) ಡೇಗೆ ಸಾಕುವವರು ಹಾರಿಹೋದ ತಮ್ಮ ಡೇಗೆಯನ್ನು ಹಿಂದಕ್ಕೆ ಬರುವಂತೆ ಮಾಡಲು ಇಟ್ಟುಕೊಂಡಿರುವ ಒಂದು ಸಾಧನ (ಒಳಗಡೆ ಮಾಂಸವಿಟ್ಟು ಹಕ್ಕಿಯಂತೆ ಕಾಣುವಹಾಗೆ ಮಾಡಿ, ಅದಕ್ಕೆ ಉದ್ದವಾದ ತೊಗಲುಬಾರನ್ನು ಕಟ್ಟಿರುವ ಹಕ್ಕಿಯ ಗರಿಗಳ ಕಂತೆ): ಸೆಳೆಯೆರೆ; ಆಸೆ ತೋರಿಸಿ ಸೆಳೆಯುವ ವಸ್ತು: ಸೆಳೆ ವಸ್ತು. (ಒಂದು ಕಾರ್ಯಪ್ರವೃತ್ತಿ, ಮೊ. ಗಳಲ್ಲಿಯ) ಆಕರ್ಷಕ ಗುಣ. (ಕ್ರಿ.) ಸೆಳೆಯೆರೆಯಿಂದ ಡೇಗೆಯನ್ನು ಹಿಂದಕ್ಕೆ ಕರೆ. (ವ್ಯಕ್ತಿಯನ್ನು, ಪ್ರಾಣಿಯನ್ನು) ಆಸೆ ತೋರಿಸಿ ಸೆಳೆ (ಸಾ., *Away*, *into* ಉಪ. ದೊಡನೆ)

Lúrid ಲ್ಯೂರಿಡ್ (ಗು.) (ಬಣ್ಣದಲ್ಲಿ) ಬಿಳಿಚಿಕೊಂಡ, ವಿವರ್ಣವಾದ; ಸಾವು ಬಣ್ಣದ; ಘೋರ ವರ್ಣದ; ಮಂಕು ಕವಿದ; ಅತಿ ಭಯಂಕರವಾದ, ಕತ್ತಲಲ್ಲಿ ಉರಿಗೆಂಪಾಗಿ ಕಾಣುವ (ಮುಖಕಾಂತಿ, ಭೂ ಪ್ರದೇಶ, ಆಕಾಶ, ಸಿಡಿಲು, ಮಿಂಚು, ಗುಡುಗು, ಮೋಡ, ಹೊಗೆಗೂಡಿದ ಉರಿ, ಕಣ್ಣಿನ ನೋಟ —ಇವೇ ಮೊ. ಗಳ ವಿಷಯದಲ್ಲಿ). (Casts a l. light on facts or character ಸಂಗತಿಗಳನ್ನು, ಸ್ವಭಾವವನ್ನು, ವಿಷಾದಕರವಾಗಿ, ಘೋರವಾಗಿ, ಬೆಳಗುತ್ತದೆ). (ಸ. ವಿ.) ಮಸುಕು ಹಳದಿ ಮಿಶ್ರವಾದ ಕಂದು ಬಣ್ಣದ. **Lúridly** (ಕ್ರಿ. ವಿ.); **Lúridness** (ನಾ.)

Lurk ಲರ್ಕ್ (ಕ್ರಿ. ಅಕ., ನಾ.) (ಒಳಗೆ, ಕೆಳಗೆ, ಹತ್ತಿರ) ಅಡಗಿಕೊಂಡಿರು (*In*, *under*, *about*, ಮೊ. ಉಪ. ದೊಡನೆ). ದೃಷ್ಟಿಗೆ ಬೀಳದಿರು; (ಯಾರಿಗೂ ಕಾಣದಂತೆ) ಗುಪ್ತವಾಗಿರು. (ನಾ.) On the l. ಹೊಂಚು ಕಾಯುತ್ತ; ಬೇಹು ನೋಡುತ್ತ. Lurking-place ಅವಿತುಕೊಳ್ಳುವ ಸ್ಥಳ.

Lúscious ಲಷಸ್ (ಗು.) ಬಹು ರುಚಿಯಾಗಿ, ಘಮ ಘಮಿಸುತ್ತ, ಇರುವ; ರಸ ಭರಿತವಾದ; ಅತಿ ಸಿಹಿಯಾದ; ಅಸಹ್ಯವಾಗುವಷ್ಟು, ವೆಗಟಾಗುವಷ್ಟು, — ಸಿಹಿಯಾದ. (ಭಾಷೆ, ಸಾಹಿತ್ಯಶೈಲಿ) ಅತ್ಯಲಂಕಾರದ, ಭಾವಾತಿರೇಕದ, ಅತಿ ಮನೋಹರವಾದ, ಶೃಂಗಾರಾತಿರೇಕದ. **Lúsciously** (ಕ್ರಿ. ವಿ.); **Lúsciousness** (ನಾ.)

Lush[1] ಲಷ್ (ಗು.) (ಸಸ್ಯಗಳು, ಮು., ಹುಲ್ಲು) ಹುಲುಸಾಗಿಯೂ ಸಾರವತ್ತಾಗಿಯೂ ಇರುವ.

Lush[2] ಲಷ್ (ನಾ., ಕ್ರಿ.) (ಅಸಂ.) ಮದ್ಯ. (ಕ್ರಿ.) ಮದ್ಯ ಕುಡಿ, ಕುಡಿಸು. **Lúshy** (ಗು.) (ಅಸಂ.) (ಮತ್ತೇರುವಂತೆ) ಕುಡಿದ.

Lust ಲಸ್ಟ್ (ನಾ., ಕ್ರಿ. ಅಕ.) (ಬೈಬಲ್, ದೇವ. ಶಾ.) (ಪಾಪವೆಂದೆಣಿಸುವ) ಕಾಮ ತೃಷ್ಣೆ, ವಿಷಯಾಭಿಲಾಷೆ. (ಪ್ರಾಣಿಗಳ) ಕಾಮಾಸಕ್ತಿ; ಸಂಭೋಗಾಕಾಂಕ್ಷೆ; ಅತಿ ಭೋಗ. ಅತ್ಯಾಶೆ (L. of battle, conquest, accumulation, applause). (ಕ್ರಿ.) (—ಕ್ಕಾಗಿ) ಅತ್ಯಾಶೆ ಪಡು; (—ನ್ನು) ಕಾಮಿಸು (ಸಾ., *after*, *for* ಉಪ. ದೊಡನೆ). **Lústful** (ಗು.); **Lústfulness** (ನಾ.)

Lústral ಲಸ್ಟ್ರಲ್ (ಗು.) ಶುದ್ಧಿ ಸಂಸ್ಕಾರದ; — ದಲ್ಲಿ ಉಪಯೋಗಿಸುವ. **Lustráte** (ಕ್ರಿ. ಸಕ.) (ಪ್ರಾಯಶ್ಚಿತ್ತ ರೂಪವಾದ ಬಲಿದಾನ, ವಿಧಿವಿಹಿತ ಸ್ನಾನ, ಮೊ. ಗಳ ಮೂಲಕ) ಶುದ್ಧ ಮಾಡು, ಪವಿತ್ರ ಮಾಡು. **Lustrátion** (ನಾ.)

Lústre[1] ಲಸ್ಟರ್ (ನಾ., ಕ್ರಿ. ಸಕ.) ಹೊಳಪು; ಹೊಗರು; ಥಾಳಥಳ್ಯ; ಹೊಳೆಯುವ ಮೇಲ್ಮೈ; ಕಳೆ; ಕಾಂತಿ; ಪ್ರಭೆ; ತೇಜಸ್ಸು; ಉಜ್ಜ್ವಲ ಪ್ರಕಾಶ; ಸೂಸುವ ಸೌಂದರ್ಯ; ವೈಭವ; ಸೊಬಗು; ಯಶಸ್ಸು; ಮಹಿಮೆ (Add l. to ಕಳೆಯೇರಿಸು. Throw or shed l. on ಕಾಂತಿ ಬೀರು). ಗೊಂಚಲುದೀಪ(ದ ಮುಪ್ಪಟ್ಟೆಯಾಕಾರದ ತೂಗುಗಾಜು). ನೂಲಿನ ಹಾಸೂ ಉಣ್ಣೆಯ ಹೊಕ್ಕೂ ಇರುವಂತೆ ತಯಾರಿಸಿದ ಹೊಳಪುಮೈಯ ತೆಳ್ಳನೆಯ ಬಟ್ಟೆ; ಹೊಳಪು ಮೇಲ್ಮೈಯುಳ್ಳ ಒಂದು ಬಗೆಯ ಉಣ್ಣೆ. (ಕ್ರಿ.) (ಬಟ್ಟೆ, ಕುಂಬಾರ ಸಾಮಾನು, ಮೊ. ಕ್ಕೆ) ಹೊಳಪು ಕೊಡು. **Lústreless** (ಗು.); **Lústrous** (ಗು.); **Lústrously** (ಕ್ರಿ. ವಿ.)

Lústre[2] ಲಸ್ಟರ್ (ನಾ.) = Lustrum.

Lústrum ಲಸ್ಟ್ರಮ್ (ನಾ.; ಬ. ವ. -a, -ums) ಐದು ವರ್ಷ ಕಾಲ; ವರ್ಷ ಪಂಚಕ.

Lústy ಲಸ್ಟಿ (ಗು.) ಆರೋಗ ದೃಢಕಾಯನಾದ; ಓಜಸ್ವಿಯಾದ; ವೀರ್ಯವಂತನಾದ; ಉತ್ಸಾಹಶಾಲಿಯಾದ. **Lústihood** (ನಾ.); **Lústiness** (ನಾ.); **Lústily** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Lúsus naturáe ಲ್ಯೂ(ಲೂ)ಸಸ್ ನೆಟ್ಯೂರಿ (ನಾ.) ಸ್ವಭಾವ ವ್ಯತಿರಿಕ್ತ ವಾಗಿ ಹುಟ್ಟಿ ಬೆಳೆದದ್ದು. ಪ್ರಕೃತಿಯ ಉತ್ಪನ್ನದ ಕೇವಲ ಅಸಹಜ ರೂಪ; ಪ್ರಕೃತಿ ಲೀಲೆ.

Lute[1] ಲ್ಯೂ(ಲೂ)ಟ್ (ನಾ.) ವೀಣೆಯಂಥ ಒಂದು ತಂತಿವಾದ್ಯ [Rift within the l. (Rift ನೋಡಿ)]. **Lútanist** (ನಾ.) —ಬಾಜಿಸುವವನು.

Lute[2] ಲ್ಯೂ(ಲೂ)ಟ್ (ನಾ., ಕ್ರಿ. ಸಕ.) (ತೂತು ಮುಚ್ಚುವುದು, ಸೇರಿಕೆಯ ಭಾಗದಲ್ಲಿ ಗಾಳಿ ಹೊಗದಂತೆ ಭದ್ರಪಡಿಸುವುದು, ಮೂಸೆಯಮೇಲೆ ಬಳಿಯುವುದು, ಚೀರು ಮಾಡುವುದು, ಕಸಿಕಟ್ಟಿನಮೇಲೆ ಮೆತ್ತಿ ಕಟ್ಟನ್ನು ರಕ್ಷಿಸುವುದು, — ಇವೇ ಮೊ. ಕ್ಕೆ ಉಪಯೋಗಿಸುವ) ಒಂದು ಬಗೆಯ ಜೇಡಿಮಣ್ಣು ಅಥವಾ ಸಿಮೆಂಟು. (ಕ್ರಿ.) ಮುಚ್ಚಿ ಭದ್ರಪಡಿಸಲು ಬಂಕೆಮಣ್ಣು ಹಚ್ಚು. **Lúting** (ನಾ.)

Lútheran ಲ್ಯೂ(ಲೂ)ತರನ್ (ಗು., ನಾ.) Martin Luther ನ (ಅನುಯಾಯಿ); ಲ್ಯೂತರ್ ಮಠೀಯ. **Lútheranism** (ನಾ.); **Lútheranize** (ಕ್ರಿ.)

Luxáte ಲಕ್ಸೇಟ್ (ಕ್ರಿ. ಸಕ.) (ದೇಹದ ಕೀಲು, ಮೊ. ನ್ನು) ಸ್ಥಳ ತಪ್ಪಿಸು **Luxátion** (ನಾ.)

Luxe (F) ಲಕ್ಸ್ (ನಾ.) De l. ಅಸಾಧಾರಣವಾದ ಸೊಗಸಿನ, ಸುಖ ಸಂಪತ್ತಿನ. Edition de l. ಅತ್ಯಂತ ಸೊಗಸಾದ ಮುದ್ರಣ. Train de l. ಅತ್ಯಂತ ಸುಖ ಸೌಕರ್ಯಗಳುಳ್ಳ ರೈಲುಬಂಡಿ.

Luxúriant, Luxúrious, etc. **Luxury** ನೋಡಿ.

Lúxury ಲಕ್‌ಷು(ಸ್ಯು)ರಿ, — ಷ — (ನಾ.) (ಅತ್ಯುತ್ತಮವಾದ ಅಥವಾ ಬಹಳ ಬೆಲೆಯ ಆಹಾರ, ಉಡುಪು, ಪೀಠೋಪಸ್ಕರಗಳು, ಮೊ. ದ) ಭೋಗ ಸಾಮಗ್ರಿ(ಗಳನ್ನು ರೂಢಿಯಾಗಿ ಉಪಭೋಗಿಸುವುದು); (ಒಬ್ಬನು) ಸುಖಪಡುವ ವಸ್ತುಗಳು; ಅನುಭವಿಸಬಹುದಾದ, ಆದರೆ ಅವಶ್ಯಕ ವಲ್ಲದ, ವಸ್ತು: ಭೋಗ ವಸ್ತು; ಸುಖ ಭೋಗ. **Luxúriant** ಲಗ್‌ಸ್ಯೂ(ಝೂ, ಘೂ, ಕ್‌ಸ್ಯೂ)ರಿಯಂಟ್ (ಗು.) ಸಮೃದ್ಧ; ಸೊಂಪಾಗಿ ಬೆಳೆದ; ಹುಲುಸಾದ; ಹೊರವಾದ; ಬೋದು ಬೆಳೆದ. (ಶೈಲಿ) ಅತ್ಯಲಂಕಾರದ; ಆಡಂಬರದ. **Luxúriance** (ನಾ.); **Luxúriantly** (ಕ್ರಿ. ವಿ.); **Luxúriate** — ಯೇಟ್ (ಕ್ರಿ. ಅಕ.) ಅತಿಯಾಗಿ ಭೋಗಾನುಭವ ಮಾಡು; ಸುಖಲೋಲನಾಗು (*In, on* ಉಪ. ದೊಡನೆ); ಹಾಯಾಗಿರು; ಭೋಗ ಪಡು. **Luxúrious** (ಗು.) ಭೋಗಾಸಕ್ತನಾದ: ಭೋಗಪ್ರದನಾದ; ಇಷ್ಟ ಬಂದಂತೆ ಸುಖ ಪಡುವ; ವಿಷಯಲಂಪಟನಾದ; ಬಹಳ ಸುಖಕರವಾದ. **Luxúriously** (ಕ್ರಿ. ವಿ.); **Luxúriousness** (ನಾ.)

Lyceé, Lý- (F) ಲೀಸೇ (ನಾ.) (ಫ್ರಾನ್ಸಿನಲ್ಲಿ) ಸರ್ಕಾರಿ ಮಾಧ್ಯಮಿಕ ವಿದ್ಯಾಶಾಲೆ.

Lycéum ಲೈಸೀಯಮ್ (ನಾ.) Aristotle ಎಂಬ ತತ್ತ್ವಜ್ಞನು ಪಾಠ ಪ್ರವಚನ ನಡಸುತ್ತಿದ್ದ ಅಥೆನ್ಸಿನಲ್ಲಿಯ ಒಂದು ತೋಟ. ಅರಿಸ್ಟಾಟಲನ ತತ್ತ್ವ, —ಅನುಯಾಯಿಗಳು. ಸಾಹಿತ್ಯ ಸಂಸ್ಥೆ; ಪ್ರವಚನ, ಉಪನ್ಯಾಸ, — ಮಂದಿರ; ಪಾಠಶಾಲೆ.

Lych = Lich.

Lýcopod, -pódium ಲೈಕೊಪಾಡ್, — ಪೋಡಿಯಂ (ನಾ.) ಒಂದು ತೆರದ ಪಾಚಿಯ ಗಿಡ; (-ium ಮಾತ್ರ) (ಶಸ್ತ್ರಚಿಕಿತ್ಸೆಯಲ್ಲಿ ದ್ರವ ಹೀರುವ ಪದಾರ್ಥವಾಗಿಯೂ ರಂಗಸ್ಥಳದಲ್ಲಿ ಸಿಡಿಲುಮಿಂಚನ್ನು ಅನುಕರಿಸುವುದಕ್ಕಾಗಿಯೂ ಉಪಯೋಗಿಸುವ) ನುಣ್ಣನೆಯ ಲೈಕೊಪೋಡಿಯಂ ಪುಡಿ.

Lýddite ಲಿಡ್ಡೈಟ್ (ನಾ.) [ಸಾ., ಸಿಡಿಗುಂಡುಗಳಲ್ಲಿ ಉಪಯೋಗಿಸುವ (ಮು., 'ಪಿಕ್ರಿಕ್' ಆಮ್ಲದ)] ಅತ್ಯುಗ್ರವಾದ ಸಿಡಿಮದ್ದು: 'ಲಿಡ್ಡೈಟ್'.

Lýdian ಲಿಡಿಯನ್ (ಗು., ನಾ.) (ಏಷ್ಯಾಮೈನರಿನ ಪುರಾತನ ಭಾಗವಾದ) ಲಿಡಿಯಾ ದೇಶದ(ವನು); ಲಿಡಿಯಾ (ದೇಶದ) ಭಾಷೆ. L. mode (ಸಂ.) ಶೋಕ ರಸದ, ಸ್ತ್ರೀ ಕಂಠದಂಥ, —ಕೋಮಲ ರಾಗ.

Lye ಲೈ (ನಾ.) ಕಟ್ಟಿಗೆಯ ಬೂದಿಯನ್ನು ಹಾಕಿ ಕದಡಿದುದರಿಂದ ಅದರಲ್ಲಿಯ ಕ್ಷಾರಾಂಶವನ್ನು ವಿಲೀನ ಮಾಡಿಕೊಂಡ ನೀರು; (ಮು., ತೊಳೆಯಲು ಉಪಯೋಗಿಸುವ ಯಾವುದಾದರೂ) ತೀವ್ರ ಕ್ಷಾರಜಲ; ಕೊಳೆ ಕಳೆಯುವ ದ್ರವ.

Lýing[1,2]. **Lie**[1,2] ನೋಡಿ.

Lýke-wake. **Lich** ನೋಡಿ.

Lýme-grass ಲೈಮ್‌ಗ್ರಾಸ್ (ನಾ.) (ಮರಳು ಸ್ಥಳಬಿಟ್ಟು ಮುಂದುವರಿಯದಿರಲು ಮರಳಿನಮೇಲೆ ಬೆಳಸಿದ) ಒಂದು ಬಗೆಯ ಹುಲ್ಲು: ಮರಳುತಡೆ ಹುಲ್ಲು.

Lymph ಲಿಂಫ್ (ನಾ.) (ಕಾವ್ಯ) ಶುದ್ಧವಾದ ನೀರು. (ಶ. ವಿ.) ದೇಹದ ಅಂಗಗಳಲ್ಲಿ ಅಥವಾ ಅಂಗಾಂಶಗಳಲ್ಲಿ ಇರುವ ಕೆಂಪು ಕಣಗಳಿಲ್ಲದ ರಕ್ತದಂಥ ನಿರ್ವರ್ಣ ಕ್ಷಾರದ್ರವ: ದುಗ್ಧರಸ. ಹುಣ್ಣು ಮೊ. ಗಳಿಂದ ಬರುವ ಸ್ರಾವ; ಸಿಡುಬು ಹಾಕುವುದಕ್ಕಾಗಿ ಉಪಯೋಗಿಸುವ (ಕರುವಿನ ಸಿಡುಬುಗುಳ್ಳೆಗಳಿಂದ ತೆಗೆದ) ದ್ರವ: ಸಿಡುಬು ಹಾಲು. ರೋಗಪರಿಹಾರಕ್ಕಾಗಿ ಈ ರೀತಿಯಾಗಿ ಉಪಯೋಗಿಸುವ ಇತರ ದ್ರವ, ಹಾಲು. **Lýmphous** (ಗು.) ದುಗ್ಧರಸವಿರುವ; ದುಗ್ಧರಸದಂಥ. **Lymphátic** ಲಿಂಫ್ಯಾಟಿಕ್ (ಗು., ನಾ.) ದುಗ್ಧರಸದ; ದುಗ್ಧರಸವನ್ನು ಸ್ರವಿಸುವ; ದುಗ್ಧರಸ ವಾಹಕ (L. gland, vessel. L. system ದುಗ್ಧರಸ ಗ್ರಂಥಿಗಳ ಮತ್ತು ನಾಳಗಳ ವ್ಯೂಹ). (ಮನುಷ್ಯ) ಜಬ್ಬುಲುಬಿದ್ದ ಮಾಂಸವುಳ್ಳ; ಬಿಳಿಚಿಕೊಂಡಿರುವ ಚರ್ಮವುಳ್ಳ; (ಮನೋಭಾವ) ಜಡ; ಅಲಸ (ಹಿಂದೆ ದುಗ್ಧರಸಾಧಿಕ್ಯದಿಂದ ಈ ಲಕ್ಷಣಗಳು ಉಂಟಾಗುವುವೆಂಬ ಊಹೆಯಿದ್ದಿತು). (ನಾ.) ದುಗ್ಧರಸ ವಾಹಕ ನಾಳ.

Lyncéan. **Lynx** ನೋಡಿ.

Lynch ಲಿನ್ಷ್, ಲಿಂಚ್ (ನಾ., ಕ್ರಿ. ಸಕ.) [L. law ಅಪರಾಧ ಮಾಡಿದವನನ್ನು ಕಾನೂನಿಗೆ ವಿರುದ್ಧವಾಗಿ ಗಲ್ಲಿಗೇರಿಸಲು ಸ್ವತಃ ಏರ್ಪಡಿಸಿಕೊಂಡ ನಡವಳಿ: 'ಲಿಂಚ್' ನ್ಯಾಯ. Judge L. ಇಂಥ ತೀರ್ಪು ಕೊಡುವ ಕಾಲ್ಪನಿಕ ನ್ಯಾಯಾಧಿಪತಿ: 'ಲಿಂಚ್' ನ್ಯಾಯಾಧಿಪತಿ]. (ಕ್ರಿ.) ಹೀಗೆ ಗಲ್ಲಿಗೇರಿಸು.

Lynx ಲಿಂಕ್ಸ್ (ನಾ.) ಗೊಂಚಲುಕೂದಲುಳ್ಳ ಕಿವಿತುದಿಯ, ಸಣ್ಣ ಬಾಲದ, ಚುಕ್ಕೆ ಚುಕ್ಕೆಯ ತುಪ್ಪಳಿನ, ತೀಕ್ಷ್ಣ ದೃಷ್ಟಿಗೆ ಹೆಸರುವಾಸಿಯಾದ, ಬೆಕ್ಕಿನ ಜಾತಿಯ ಒಂದು ಪ್ರಾಣಿ; ಇದರ ತುಪ್ಪಳುಚರ್ಮ. **L.-eyed** ಚುರುಕು ಕಣ್ಣಿನ; ತೀಕ್ಷ್ಣ ದೃಷ್ಟಿಯ. **Lyncéan** ಲಿನ್ಸೀಯನ್ (ಗು.) = Lynx-eyed.

Lýra ಲೈರ (ನಾ.) ಉತ್ತರ ದಿಕ್ಕಿನಲ್ಲಿರುವ ಒಂದು ನಕ್ಷತ್ರ ಪುಂಜ: ಅಭಿಜಿತ್ ಪುಂಜ. **Lýraid** ಲೈರೆಯಿಡ್, **Lýrid** ಲೈರಿಡ್ (ನಾ.) (ಸಾ., ಬ. ವ. ದಲ್ಲಿ) (ಸು., ಏಪ್ರಿಲ್ ೨೦ನೆಯ ತಾರೀಖಿನಲ್ಲಿ) ಅಭಿಜಿತ್ ನಕ್ಷತ್ರ ಪುಂಜದಿಂದ ಹೊರಡುವ ಉಲ್ಕೆ(ಗಳು)

Lýrate. **Lyre** ನೋಡಿ.

Lyre ಲೈರ್ (ನಾ.) ಬಾಯಿ ಹಾಡುಗಾರಿಕೆಯ ಜೊತೆಯಲ್ಲಿ ಬಾರಿಸುವ (ಹಳೆಯ ಕಾಲದ ಗ್ರೀಕರ) ಒಂದು ತಂತಿವಾದ್ಯ. L.-bird 'ಲೈರ್' ಆಕಾರದ ಪುಕ್ಕವುಳ್ಳ ಆಸ್ಟ್ರೇಲಿಯದ ಒಂದು ಹಕ್ಕಿ. **Lýrate** (ಗು.) (ಪ್ರಕೃತಿ ಚರಿತ್ರೆ) 'ಲೈರ್' ಆಕಾರದ. **Lýrist** (ನಾ.); **Lýric** ಲಿರಿಕ್ (ಗು., ನಾ.) 'ಲೈರ್' ವಾದ್ಯದ; — ಕ್ಕೆ ತಕ್ಕ; ಹಾಡಿನ; ಹಾಡಲು ತಕ್ಕ (L. drama, The l. stage ಸಂಗೀತ ನಾಟಕ). (ಕವಿತೆ, ಪದ್ಯ) ಕವಿಯ ಸ್ವಂತ ಮನೋಭಾವಗಳನ್ನು ವ್ಯಕ್ತಗೊಳಿಸುವ, ಸಾ., ದೀರ್ಘವಲ್ಲದ, ಗೀತಾ ರೂಪದ; ಭಾವ ಗೀತೆಯ (ರೂಪದ). (ಕವಿ) ಭಾವ ಗೀತೆ ಬರೆಯುವ. (ನಾ.) ಭಾವ ಗೀತೆ. (ಬ. ವ. ದಲ್ಲಿ) —ಯ ಪದ್ಯಗಳು. **Lýrical** (ಗು.) = Lyric (ವಿರ. ಪ್ರ.); ಭಾವ ಗೀತೆಯಂಥ; ಭಾವ ಗೀತೆಗೆ ತಕ್ಕ ಭಾಷೆಯ, ಶೈಲಿಯ; —ಲ್ಲಿ ಬರೆದ. **Lýrically** (ಕ್ರಿ. ವಿ.); **Lýricism** ಲಿರಿಸಿಸ್‌ಮ್ (ನಾ.) ಭಾವ ಗೀತಾ ಲಕ್ಷಣ: (ಬ. ವ. ದಲ್ಲಿ) ಭಾವ ಗೀತಾ ಶೈಲಿ; ಆಡಂಬರದ ಭಾವಗಳು.

Lýsol ಲೈಸಾಲ್ (ನಾ.) ವಿಷಾಪಹಾರಿಯಾಗಿ ಉಪಯೋಗಿಸುವ ಒಂದು ದ್ರವ ('ಕ್ರಿಸಾಲ್' ಎಂಬ ಪದಾರ್ಥವನ್ನೂ ಎಣ್ಣೆಯನ್ನೂ ಸಂಯುಕ್ತ ಮಾಡಿ ಪಡೆದ, ನೀರಿನಲ್ಲಿ ಲೀನವಾಗುವ, ಒಂದು ಸಾಬೂನುಪದಾರ್ಥ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

M

M ಎಮ್. ಇಂಗ್ಲಿಷ್ ವರ್ಣಮಾಲೆಯ ಹದಿಮೂರನೆಯ ಅಕ್ಷರ. (ಸಂಖ್ಯಾ ಸೂಚಕ) M = ೧,೦೦೦ (MMCI ೨,೧೦೧, MCMLI ೧,೯೫೧). (ಮುದ್ರಣ) m = Em.

ಸಂಕ್ಷಿಪ್ತಗಳು : (1) Master [**M. A.** (—of Arts) ಕಲಾ ವಿಶಾರದ ; **M. C.** (—of Ceremonies) (Ceremony ನೋಡಿ)]. (2) Mean ಸರಾಸರಿ [**M. S. L.** (—sea level) ಸರಾಸರಿ ಸಮುದ್ರ(ದ) ಮಟ್ಟ]. (3) Medical ವೈದ್ಯದ [**M. O. (H.)** —Officer (of Health) (ಆರೋಗ್ಯ) ವೈದ್ಯಾಧಿಕಾರಿ. **M. B.** (Medicinae Baccalaureus = Bachelor of Medicine); **M. D.** (Medicinae Doctor = Doctor of Medicine)]. (4) Member ಸದಸ್ಯ [**M. B. E.** (—of Order of British Empire); **M. I(nst). C. E.** (—of Institution of Civil Engineers); **M. P.** (—of Parliament); **M. R. C. P., M. R. C. S.** (—of Royal College of Physicians, Surgeons); **M. V. O.** (—of Victorian Order)]. (5) Middle ಮಧ್ಯ ಕಾಲದ [**M. E.** (—English)]. (6) Military ಸೈನಿಕ [**M. C.** (—Cross) ಸೈನಿಕ ಬಿರುದುಪದಕ]. (7) Monsieur (ಬ. ವ. **MM.,** Messieurs). (8) Mile(s) [**m. p. h.** (—per hour)]

Matric.(ulation); **Matt.**(hew); **memo.**(randum); **Messrs** (= Messieurs); **mg.** = Milligram(s); **Mlle** = Mademoiselle; **mm.** = Millimetre(s); **Mme** = Madame (ಬ. ವ. **Mmes**); **Mr, Mrs** (Mr, Mrs ನೋಡಿ); **MS(S).** = Manuscript(s); **Mt** = Mount; **Mus.**(icae) **Bac.**(calaureus), **Doc.**(tor) = Bachelor, Doctor, of Music.

Ma ಮಾ (ನಾ.) (ಗ್ರಾಮ್ಯ) = Mamma[1].

Ma'am ಮ್ಯಾಮ್, ಮಾಮ್, ಮ್‌ಮ್ (ನಾ.) (Madam ಪದದ ಸಂಕ್ಷಿಪ್ತ : ಸ್ತ್ರೀಯನ್ನು ಸಂಬೋಧಿಸುವ ಮರ್ಯಾದೆಯ ಒಕ್ಕಣೆ) ಅಮ್ಮಾ ! ತಾಯಾ !

Macábre ಮಕಾಬ್‌ರ್ (ಗು.) (Danse m. ಮೃತ್ಯು ನೃತ್ಯ). ಭಯಂಕರ ; ಭೀಕರ ; ಉಗ್ರ ; ರೌದ್ರ ; ಘೋರ.

Macádam ಮ್ಯಕ್ಯಾಡಂ (ಗು., ನಾ.) (ರಸ್ತೆಗಳ ವಿಷಯದಲ್ಲಿ) ಒಂದೇ ಗಾತ್ರದ ಜಲ್ಲಿಕಲ್ಲನ್ನು ಒಂದು ಪದರ ಹರಡಿ ಗಟ್ಟಣೆಮಾಡಿ, ಬಳಿಕ ಮತ್ತೊಂದು ಪದರ ಹರಡಿ ಗಟ್ಟಣೆಮಾಡಿ, — ಹೀಗೆಯೇ ಪದರ ಪದರವಾಗಿ ಹಾಕಿ ತಯಾರಿಸಿದ. (ನಾ.) ಇಂತಹ ರಸ್ತೆಗೆ ಬೇಕಾದ ಪದಾರ್ಥ. (McAdam ಎಂಬಾತನ ಸಲಹೆಯಿಂದ ಆದದ್ದು). **Macádamize** (ಕ್ರಿ. ಸಕ.); **Macadamizátion** (ನಾ.)

Macaróni ಮ್ಯಾಕರೋನಿ (ನಾ.) ಗೋಧಿಯ ಹಿಟ್ಟಿನ ಕಣಕದಿಂದ ಮಾಡಿದ ತೆಳ್ಳಗಿರುವ ಉದ್ದನೆಯ ಕೊಳವೆಗಳಂಥ ಆಹಾರಪದಾರ್ಥ : ಟೊಳ್ಳು ಸೇವಿಗೆ. (ಚರಿತ್ರೆ) (೧೮ನೆಯ ಶತಮಾನದಲ್ಲಿ ಯೂರೋಪು ಖಂಡದ ನಾನಾ ದೇಶಗಳಲ್ಲಿ ಸಂಚಾರಮಾಡಿ ವಿದೇಶೀಯ ಅಭಿರುಚಿಗಳನ್ನು ಅನುಕರಿಸುತ್ತಿದ್ದ) ಸೊಗಸುಗಾರ. **Macarónism** (ನಾ.); **Macarónic** ಮ್ಯಾಕರಾನಿಕ್ (ಗು. ; ನಾ., ಬ. ವ. ದಲ್ಲಿ) ಲ್ಯಾಟಿನ್ (ಮತ್ತು ಇತರ ಪರ ಭಾಷೆಗಳ) ಶಬ್ದಗಳೂ ದೇಶೀಯ ಶಬ್ದಗಳೂ ಕೂಡಿದ ಮತ್ತು ಲ್ಯಾಟಿನ್, ಮೊ. ಪರ ಭಾಷೆಗಳ ಪ್ರತ್ಯಯಗಳನ್ನು ಹಚ್ಚಿದ ವಿಡಂಬನ ಕವಿತೆಯ (ಪದ್ಯಗಳು) ; ಕಲಬೆರಕೆಯ (ಹಾಡು). **Macaroón** ಮ್ಯಾಕರೂನ್ (ನಾ.) (ಅರೆದ ಬಾದಾಮಿ, ಮೊಟ್ಟೆಯ ಬಿಳಿಯ ಲೋಳೆ, ಸಕ್ಕರೆ, ಮೊ. ನ್ನು ಬೆರಸಿ ಮಾಡಿದ) ಸಣ್ಣ ರೊಟ್ಟಿ, ಬಿಸ್ಕತ್ತು.

Macaroón. **Macaroni** ನೋಡಿ.

Macássar ಮಕ್ಯಾಸರ್ (ಗು., ನಾ.) M. (oil) ಒಂದು ಬಗೆಯ ಕೂದಲೆಣ್ಣೆ, ಕೇಶ ತೈಲ. (Mangkasara ಎಂಬ ಸ್ಥಳದ ಹೆಸರಿನಿಂದ)

Macaẃ[1] ಮಕಾ (ನಾ.) (ಬೆಡಗಿನ ಗರಿಗಳುಳ್ಳ, ಹಲವು ಜಾತಿ) ಗಿಣಿ.

Macaẃ[2] ಮಕಾ (ನಾ.) (ಹಲವು ಜಾತಿಯ) ತಾಳೆಯ ಮರ.

Mace[1] ಮೇಸ್ (ನಾ.) (ಚರಿತ್ರೆ) ಸಾ., ಲೋಹದ ತಲೆಯೂ, ಅದರಲ್ಲಿ ಅನೇಕ ವೇಳೆ ಲೋಹದ ಮುಳ್ಳುಗಳೂ, ಉಳ್ಳ ಭಾರವಾದ ದಂಡ ; ಅಧಿಕಾರ ದಂಡ (ಕೆಲವರು ದೊಡ್ಡ ಅಧಿಕಾರಿಗಳ ಮುಂದುಗಡೆ ಹೊತ್ತುಕೊಂಡು ಹೋಗುವಂಥದು) (M.-bearer). Bagatelle ಎಂಬ ಆಟದ ದಾಂಡು.

Mace[2] ಮೇಸ್ (ನಾ.) ಜಾಯಿಕಾಯಿಯ ಮೇಲಿನ ಒಣಗಿಸಿದ ಸಿಪ್ಪೆ ; ಜಾ(ಯಿ) ಪತ್ರೆ.

Mácerate ಮ್ಯಾಸರೇಟ್ (ಕ್ರಿ.) (ದ್ರವದಲ್ಲಿ) ನೆನೆಯಹಾಕಿ ಮೆತುಮಾಡು, ನೆನೆದು ಮೆತುವಾಗು. ಉಪವಾಸ ಮಾಡಿ ಕೃಶವಾಗಿ ಹೋಗು. **Macerátion** (ನಾ.)

Machán ಮಚಾನ್ (ನಾ.) (ಆಂ. ಇಂ.) ಹುಲಿ ಷಿಕಾರಿ, ಮೊ. ಗಳಲ್ಲಿ ಎತ್ತರವಾದ ಅಟ್ಟಣೆ.

Machéte ಮಾಚೇಟೆ (ನಾ.) = Matchet.

Máchiavel ಮ್ಯಾಕಿಯವೆಲ್ (ನಾ.) ನೀತಿ ನಿಯಮಗಳನ್ನು ಲಕ್ಷ್ಯಮಾಡದ ಸಂಚುಗಾರ, ತಂತ್ರಗಾರ ; ಕಳಿಂಗ ; ಕೌಟಿಲ್ಯ. **Machiavéllian** (ಗು.) ; **Machiavéllism** (ನಾ.). (Niccolo Machiavelli ಎಂಬ ಇಟಲಿಯ ರಾಜ ತಂತ್ರಜ್ಞನ ಹೆಸರಿನಿಂದ)

Máchinate ಮ್ಯಾಕಿನೇಟ್ (ಕ್ರಿ. ಸಕ.) ಒಳ ಸಂಚು ನಡಸು ; ತಂತ್ರ ಮಾಡು. **Machinátion** (ನಾ.) ; **Máchinator** (ನಾ.)

Machíne ಮಷೀನ್ (ನಾ., ಕ್ರಿ.) ಪ್ರತಿಯೊಂದು ಭಾಗಕ್ಕೂ ಒಂದು ಗೊತ್ತಾದ ಕಾರ್ಯವಿರುವ ಅನೇಕ ಭಾಗಗಳುಳ್ಳದ್ದಾಗಿ, ಯಾಂತ್ರಿಕ ಶಕ್ತಿಯನ್ನು ನಿಯೋಜಿಸಲಾಗುವ ಸಲಕರಣೆ : ಯಂತ್ರ (Sewing, printing, -m. ಹೊಲಿಗೆ ಯಂತ್ರ, ಮುದ್ರಣ ಯಂತ್ರ) ; ಇಗ್ಗಾಲಿ (ಬೈಸಿಕಲ್) ; ಮುಗ್ಗಾಲಿ (ಟ್ರೈಸಿಕಲ್). [Bathing-m. (Bathe ನೋಡಿ)]. ಬುದ್ಧಿ ಉಪಯೋಗಿಸದೆ ಯಂತ್ರದಂತೆ ಕೆಲಸಮಾಡುವವನು ; ಸ್ವಲ್ಪವೂ ಕ್ರಮ ತಪ್ಪದೆ ಯಂತ್ರದಂತೆ ನಡೆಯುವವನು ; ಯಂತ್ರಪ್ರಾಯನಾದವನು. (ಯಂತ್ರ ಶಿಲ್ಪ) (ನಿಯೋಜಿತ) ಬಲವನ್ನು ಸಾಗಿಸುವ ಅಥವಾ ಅದರ ಯೋಜನೆಯನ್ನು ಪರಿವರ್ತಿಸುವ ಸಲಕರಣೆ [Simple m. (ಪ್ರತ್ಯೇಕ ಭಾಗಗಳು ಕೂಡಿ ಆಗಿರದ) ಸರಳ ಯಂತ್ರ (ಉದಾ., ಸನ್ನೆಕೋಲು)]. (ಮು., ಅಮೆ. ಸಂ.) ಒಂದು ರಾಜಕೀಯ ಪಂಗಡದ ನಿಯಂತ್ರಕ ಸಂಸ್ಥೆ, ಆಡಳಿತ ಯಂತ್ರ. [**M.-gun** (ದೃಢವಾದ ಪೀಠವುಳ್ಳದ್ದಾಗಿ, ಯಂತ್ರಸಹಾಯದಿಂದ ಬಾರು ಮಾಡಿ ಎಡೆಬಿಡದೆ ಗುಂಡುಹಾರಿಸುವ) ಯಂತ್ರಫಿರಂಗಿ. M.-made ಯಂತ್ರ ನಿರ್ಮಿತ]. (ಕ್ರಿ.) (ಮು., ಹೊಲಿಗೆಯ ಮತ್ತು ಮುದ್ರಣದ ವಿಷಯದಲ್ಲಿ) ಯಂತ್ರ (ಸಹಾಯ)ದಿಂದ ಮಾಡು, ಕೆಲಸ ನಡಸು. **Machínery** ಮಷೀನ(ನ)ರಿ (ನಾ.) ಯಂತ್ರಗಳು ; ಯಂತ್ರದ ಕೆಲಸ ; ಯಂತ್ರ ಭಾಗಗಳು (Machinery of a watch). (ಸಾಹಿತ್ಯ ಕೃತಿಯಲ್ಲಿ ಉಪಯೋಗಿಸುವ) (ಮು., ಅತಿಮಾನುಷ) ಸಾಧನಗಳು, ಕಲ್ಪನೆಗಳು. **Machínist** (ನಾ.) ಯಂತ್ರ ಮಾಡುವವನು ; ಯಂತ್ರ ಶಿಲ್ಪಿ ; ಯಂತ್ರ ನಡಸುವವನು ; ಯಂತ್ರ ಚಾಲಕ. (ಮು., ಹೊಲಿಗೆಯ) ಯಂತ್ರದಲ್ಲಿ ಕೆಲಸ ಮಾಡುವವನು. **Machínize** (ಕ್ರಿ. ಸಕ.) ಯಂತ್ರೀಕರಿಸು.

Máckerel ಮ್ಯಾಕರೆಲ್ (ನಾ.) ಬೇಸಗೆಯಲ್ಲಿ ಮೊಟ್ಟೆಯಿಡುವುದಕ್ಕಾಗಿ ಗುಂಪು ಗುಂಪಾಗಿ ಕರೆಗೆ ಬರುವ ಆಹಾರೋಪಯೋಗವಾದ ಒಂದು ಜಾತಿಯ ಕಡಲಮೀನು. M. breeze, gale ಈ ಮೀನನ್ನು ಹಿಡಿಯಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಕೂಲವಾದ ಬಿರುಸು ಗಾಳಿ. M. sky (ತುಪ್ಪಟದಂತೆ ಕಾಣುವ) ಬಿಳಿಯ ಮೋಡಗಳಿಂದ ಮಚ್ಚೆ ಮಚ್ಚೆಯಾಗಿರುವ ಆಕಾಶ.

Máckintosh ಮ್ಯಾಕಿಂಟಾಷ್ (ನಾ.) (ಉಡುಪುಗಳಿಗೆ ಉಪಯೋಗಿಸಲು ನೀರಿಳಿಯದಂತಿರುವುದಕ್ಕಾಗಿ ಬಟ್ಟೆಯ ಪದರಗಳನ್ನು ರಬ್ಬರಿನಿಂದ ಅಂಟಿಸಿ ತಯಾರಿಸಿದ) ಒಂದು ತರದ ನೀರಿಳಿಯದ ಬಟ್ಟೆ: ಮ್ಯಾಕಿಂಟಾಷ್ ಬಟ್ಟೆ. (ಮೊದಲು Macintosh ಎಂಬಾತನು ತಯಾರಿಸಿ ಸ್ವಾಮ್ಯ ಪಡೆದದ್ದು). ಇದರಿಂದ ಮಾಡಿದ ಉಡುಪು (ನಿಲುವಂಗಿ, ಅಂಗಿ, ಮೊ.)

Mácle ಮ್ಯಾಕ್‌ಲ್ (ನಾ.) ಅವಳಿ ಹರಳು; ಯಮಳ ಸ್ಫಟಿಕ. ಖನಿಜದಲ್ಲಿಯ ಕಪ್ಪು ಚುಕ್ಕೆ.

Macro- ಮ್ಯಾಕ್ರೊ — (ಸ. ಪೂ. ಪ.) ನಿಡು —; ದೀರ್ಘ —; ದೊಡ್ಡ —; ಬೃಹತ್ —. **-cephálic** (— ಸಿಫ್ಯಾಲಿಕ್) ನಿಡುತಲೆಯ; ದೊಡ್ಡ ತಲೆಯ; — ಯುಳ್ಳ. **-cosm** (— ಕಾಸ್ಜ್‌ಮ್) ಬ್ರಹ್ಮಾಂಡ; ವಿಶ್ವ (Microcosm ಹೋಲಿಸಿ). **-meter** (ಮ್ಯಾಕ್ರಾಮಿಟರ್) ದೂರದ ವಸ್ತುಗಳನ್ನು ಅಳೆಯುವ ಯಂತ್ರಸಲಕರಣೆ: ದೂರವಸ್ತುಮಾಪಕ. **-scópic** (ಮ್ಯಾಕ್ರೊಸ್ಕಾಪಿಕ್) ಬರಿಯ ಕಣ್ಣಿಗೆ ಕಾಣುವ(ಷ್ಟು ದೊಡ್ಡದಾಗಿರುವ)

Mácron ಮ್ಯಾಕ್ರಾನ್, ಮೇ — (ನಾ.) ದೀರ್ಘವೆಂದು ಸೂಚಿಸಲು ಸ್ವರದಮೇಲೆ ಹಾಕುವ ಅಡ್ಡಗೆರೆ: ದೀರ್ಘ ಚಿಹ್ನೆ (ಉದಾ., ā)

Mácula ಮ್ಯಾಕ್ಯು(ಕ್ಯೂ)ಲ (ನಾ.; ಬ. ವ. -ae —ಲೀ) ಸೂರ್ಯಮಂಡಲದಲ್ಲಿ ಕಾಣುವ ಕಪ್ಪು ಕಲೆ: ಸೂರ್ಯ ಕಳಂಕ. ಖನಿಜ(ದಲ್ಲಿಯ) ಕಲೆ, ಚುಕ್ಕೆ; ಚರ್ಮದಲ್ಲಿಯ (ಸಾ., ಶಾಶ್ವತವಾಗಿರುವ) ಕಲೆ, ಮಚ್ಚೆ. **Mácular** (ಗು.); **Maculátion** (ನಾ.) ಮಚ್ಚೆ, ಕಲೆ, — ಮಾಡುವುದು; —ಆಗಿರುವ ಸ್ಥಿತಿ.

Mad ಮ್ಯಾಡ್ (ಗು.) ಬುದ್ಧಿ ಕೆಟ್ಟ; ಬುದ್ಧಿ ಸ್ತಿಮಿತವಿಲ್ಲದ; ಹುಚ್ಚಿನ; ಉನ್ಮತ್ತ; (ವ್ಯಕ್ತಿ ಅಥವಾ ನಡತೆ) ಅತಿ ಅವಿವೇಕತನದ, ಬುದ್ಧಿಗೇಡಿತನದ [Like m. ಹುಚ್ಚು ಹಿಡಿದಂತೆ; ಅತಿ ಜೋರಾಗಿ (I ran like m.)]. ಅತ್ಯಾವೇಶಗೊಂಡ; ಹುಚ್ಚು ಹಿಡಿದಂತಿರುವ (*After*, *about*, *for*, *on*, thing, subject, etc.). (ಬಳ. ಮಾ.) ಅಸಮಾಧಾನ ಹುಟ್ಟಿದ; ಬೇಸರವುಂಟಾದ; ರೇಗಿದ (I was rather m. at missing my train ರೈಲು ತಪ್ಪಿದ್ದರಿಂದ ನನಗೆ ಬಹಳ ರೇಗಿ ಹೋಯಿತು). (ಪ್ರಾಣಿಗಳ ವಿಷಯದಲ್ಲಿ) ಹುಚ್ಚು ಹಿಡಿದ [Mad as a March Hare (Hare ನೋಡಿ)]. ಅತಿ ವಿಲಾಸದ; ಅತಿ ಕ್ರೀಡಾಸಕ್ತನಾದ. **Madcap** ಹುಚ್ಚನಂತೆ ನಡೆಯುವವನು; ಅತಿ ದುಡುಕಿನವನು; ವಿಚಾರಮಾಡದೆ ಮುನ್ನುಗ್ಗುವವನು. **M.-doctor** ಹುಚ್ಚರ ವೈದ್ಯ. **Madhouse** ಹುಚ್ಚಾಸ್ಪತ್ರೆ. **Madman, -woman** ಹುಚ್ಚ, ಹುಚ್ಚಿ. **Mádly** (ಕ್ರಿ. ವಿ.); **Mádness** (ನಾ.) ಹುಚ್ಚು.

Mad (ಕ್ರಿ.) (ವಿರ. ಪ್ರ.) ಹುಚ್ಚು ಹಿಡಿಸು; ಹುಚ್ಚನಾಗು; ಹುಚ್ಚುಹುಚ್ಚಾಗಿ ನಡೆ. [The madding crowd ಹುಚ್ಚು ಹುಚ್ಚಾಗಿ ನಡೆಯುವ ಜನಸಂದಣಿ (ಈಗ, 'ಹುಚ್ಚು ಹಿಡಿಸುವ' ಎಂಬ ಅರ್ಥ ಹೇಳುತ್ತಾರೆ)]. **Mádden** — ಡ್‌ನ್ (ಕ್ರಿ.) ಹುಚ್ಚು ಹಿಡಿಸು, — ಹಿಡಿ; ಹುಚ್ಚನಂತಾಡು; ರೇಗಿಸು; ಕೆರಳಿಸು. **Máddeningly** (ಕ್ರಿ. ವಿ.)

Mádam ಮ್ಯಾಡಂ (ನಾ.) ಹೆಂಗಸನ್ನು ಸಂಬೋಧಿಸುವ ಮರ್ಯಾದೆಯ ಒಕ್ಕಣೆ: ಅಮ್ಮಾ! ತಾಯಿ!

Madáme (F) ಮಾ(ಮ)ಡಾಂ, **Má-** ಮ್ಯಾಡಂ (ನಾ.; ಬ. ವ. Mesdames ಮೇಡಾಂ) Madam ಶಬ್ದದ ಫ್ರೆಂಚ್ ರೂಪ. M. Tussaud's (ಮಡಾಂ ಟುಸೋಸ್) M. Tussaud ಎಂಬಾಕೆ ಲಂಡನ್ನಿನಲ್ಲಿ ಏರ್ಪಡಿಸಿದ ಮೇಣದ ಬೊಂಬೆಗಳ (ಪ್ರಸಿದ್ಧ ಪುರುಷರ ಮತ್ತು ಘಾತಕರ ಪ್ರತಿಕೃತಿಗಳ) ಪ್ರದರ್ಶನ.

Mádder ಮ್ಯಾಡರ್ (ನಾ.) ನಸು ಹಳದಿಯ ಹೂವು ಬಿಡುವ ಒಂದು ಜಾತಿಯ ಅಡರು ಬಳ್ಳಿ; ಇದರಿಂದ ತಯಾರಿಸಿದ ಬಣ್ಣ: 'ಮ್ಯಾಡರ್' ಬಣ್ಣ.

Made ಮೇಡ್ (Make ಧಾತುವಿನ ಭೂತ ಮತ್ತು ಭೂ. ಕೃ.) M. dish (Dish ನೋಡಿ). A m. man ಏಳಿಗೆ ಖಂಡಿತವಾದವನು. Well, stoutly, loosely, powerfully, -m. ಚೆನ್ನಾದ, ಸ್ಥೂಲವಾದ, ಸಡಿಲವಾದ, ಬಲವಾದ, —ಮೈಕಟ್ಟುಳ್ಳ.

Madeíra ಮಡಿಯರ, ಮಡೀರ (ನಾ.) ಅಟ್ಲಾಂಟಿಕ್ ಸಾಗರದಲ್ಲಿರುವ ಒಂದು ದ್ವೀಪ; ಅಲ್ಲಿ ತಯಾರಾಗುವ ಒಂದು ಬಗೆಯ ಬಿಳಿಯ ದ್ರಾಕ್ಷಾ ಮದ್ಯ. M. cake ಸ್ಪಂಜಿನಂತೆ ಮೆತುವಾಗಿರುವ ಒಂದು ಬಗೆಯ ಪರಂಗಿ ರೊಟ್ಟಿ.

Mademoiséllé (F) ಮಾಡ್‌ಮ್‌ವಾಸ್ಸೆಲ್, ಮ್ಯಾಡಮೊಸ್ಸೆಲ್ (ನಾ.; ಬ. ವ. Mesdemoiselles ಮೇ—) ಇನ್ನೂ ಮದುವೆಯಿಲ್ಲದ ಫ್ರೆಂಚ್ ಹೆಂಗಸು; ಫ್ರೆಂಚ್ ಕನ್ಯೆ(ಯ ಗೌರವದ ಒಕ್ಕಣೆ). (ಮನೆಯಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುವ) ಫ್ರೆಂಚ್ ಉಪಾಧ್ಯಾಯಿನಿ, ಶಿಕ್ಷಕಿ.

Madónna ಮಡಾನ (ನಾ.) ಮೇರೀ ಕನ್ಯೆ(ಯ ಚಿತ್ರ, ವಿಗ್ರಹ)

Madrásah ಮಡ್ರ್ಯಾಸ, **Medrésseh** ಮೆಡ್ರೆಸೇ (ನಾ.) ಮಹಮ್ಮದೀಯ ಪ್ರೌಢ ವಿದ್ಯಾಶಾಲೆ, ಕಾಲೇಜು.

Mádrepore ಮ್ಯಾಡ್ರಿಪೋರ್ (ನಾ.) ರಂಧ್ರಗಳಿರುವ ಹವಳಗಳ ಜಾತಿ; ಸರಂಧ್ರ ಪ್ರವಾಳ; ಇದನ್ನು ಮಾಡುವ ಹವಳದ ಹುಳು. **Madrepóric** — ಪಾರಿಕ್ (ಗು.); **Madrepóriform** — ಪೋರಿಫಾರ್ಮ್ (ಗು.)

Mádrigal ಮ್ಯಾಡ್ರಿಗ(ಗ್)ಲ್ (ನಾ.) ಚಿಕ್ಕ ಪ್ರಣಯ ಕವನ; ಲಘು ಶೃಂಗಾರ ಗೀತ; ಪಕ್ಕವಾದ್ಯಗಳ ಸಹಾಯವಿಲ್ಲದೆ ಹಲವರು ದನಿಗೂಡಿಸಿ ಹಾಡುವ ಒಂದು ಬಗೆಯ ಸಂವಾದ ಗೀತ. **Madrigálian** — ಗೇಲಿಯನ್ (ಗು.)

Maecénas ಮಿಸೀನ್ಯಾಸ್ (ನಾ.) ಸಾಹಿತ್ಯಕ್ಕೆ ಅಥವಾ ಕಲೆಗೆ ಉದಾರವಾಗಿ ಆಶ್ರಯ ಕೊಡುವವನು; ಸಾಹಿತ್ಯ ಪೋಷಕ; ಕಲಾ ಪೋಷಕ. (Horace ಮತ್ತು Virgil ಎಂಬ ಲ್ಯಾಟಿನ್ ಕವಿಗಳ ಆಶ್ರಯದಾತ)

Maélstrom ಮೆಯ್‌ಲ್‌ಸ್ಟ್ರೊಮ್, ಮೇಲ್— (ನಾ.) ನಾರ್ವೇ ದೇಶದ ಪ. ತೀರದಲ್ಲಿಯ ಸಮುದ್ರದ ಸುಳಿ; ದೊಡ್ಡ ನೀರುಸುಳಿ (ರೂಪ. ಸಹ)

Maénad ಮೀನ್ಯಾಡ್ (ನಾ.) ಬ್ಯಾಕಸ್ ದೇವತೆಯ ಉಪಾಸಕ.

Máffick ಮ್ಯಾಫಿಕ್ (ಕ್ರಿ. ಅಕ.) ಕೋಲಾಹಲವಾಗಿ ಹಿಗ್ಗು, ನಲಿ, ಹರ್ಷಗೊಳ್ಳು. (೧೯೦೦ನೆಯ ಇಸವಿಯಲ್ಲಿ ದ. ಆಫ್ರಿಕದ Mafeking ಪಟ್ಟಣವು ಶತ್ರುಗಳಿಂದ ಬಿಡುಗಡೆಯಾದಾಗ ಲಂಡನ್ನಿನ ಪ್ರಜೆಗಳು ಪಟ್ಟ ಹರ್ಷೋದ್ರೇಕದಿಂದ)

Mag ಮ್ಯಾಗ್ (ನಾ.) Magneto ಪದದ ಸಂಕ್ಷಿಪ್ತ (ಮು., ಸಮಾಸದಲ್ಲಿ: M.-generator)

Magazíne ಮ್ಯಾಗಸ್ಸೀನ್ (ನಾ.) ಯುದ್ಧ ಕಾಲದಲ್ಲಿ ಸೈನ್ಯಕ್ಕೆ ಆಯುಧಗಳನ್ನೂ ಮದ್ದುಗುಂಡುಗಳನ್ನೂ ಆಹಾರಪದಾರ್ಥಗಳನ್ನೂ ಸಂಗ್ರಹಿಸಿಟ್ಟಿರುವ ಕೋಠಿ; ಬಂದೂಕುಮದ್ದಿನ, ಅಥವಾ ಇತರ ಸ್ಫೋಟಕ ವಸ್ತುಗಳ, ಉಗ್ರಾಣ (M. gun ತಾನಾಗಿಯೇ ತಮ್ಮ ಹಾರುವ ಸ್ಥಳಕ್ಕೆ ಬಂದು ಸೇರುವಂತೆ ಅಳವಡಿಸಿರುವ ತೋಟಾಗಳನ್ನುಳ್ಳ ಅರೆಯ ಬಂದೂಕು). (ಹಲವರು ಬರೆದ ಲೇಖನಗಳನ್ನೊಳಕೊಂಡ) ನಿಯತ ಕಾಲಿಕ ಲೇಖನ ಸಂಗ್ರಹ ಪ್ರಕಟನೆ; ಸಂಕೀರ್ಣ ಪತ್ರಿಕೆ.

Mágdalen ಮ್ಯಾಗ್ಡಲೆನ್, **-lene** —ಲೀನ್ (ನಾ.) ಹಾದರಗಿತ್ತಿಯಾಗಿದ್ದು ಗರತಿಯಾದವಳು (ಬೈಬಲ್ಲಿನಲ್ಲಿ ಬರುವ Mary Magdalene ಎಂಬವಳ ಹೆಸರಿನಿಂದ)

Mage ಮೇಜ್ (ನಾ.) (ಪ್ರಾಚೀ. ಪ್ರ.) ಮಂತ್ರವಾದಿ; ಪಂಡಿತ.

Magénta ಮಜೆಂಟ (ನಾ.) ಒಂದು ಉಜ್ಜ್ವಲ ಕಡುಗೆಂಪು ವರ್ಣದ್ರವ್ಯ: 'ಮಜೆಂಟ' (ಇಟಲಿಯ Magenta ಎಂಬ ಸ್ಥಳದಲ್ಲಿ ೧೮೫೯ರಲ್ಲಿ ನಡೆದ ಯುದ್ಧದ ತರುವಾಯ ಕಂಡುಹಿಡಿದದ್ದು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mággot ಮ್ಯಾಗಟ್ (ನಾ.) (ಮು., Cheese ನೊಣದ ಮತ್ತು Blue-bottle ಎಂಬ ನೊಣದ) ಮರಿಹುಳು. ಚಿತ್ತಭ್ರಾಂತಿಯ ವಿಚಿತ್ರ ಕಲ್ಪನೆ; ಹುಚ್ಚು ಹುಚ್ಚು ಕಲ್ಪನೆ (M. in one's head). **Mággoty** (ಗು.)

Mági, Mágian, etc. **Magus** ನೋಡಿ.

Mágic ಮ್ಯಾಜಿಕ್ (ಗು., ನಾ.) ಪ್ರಕೃತಿಯನ್ನೂ ಭೂತ ಪ್ರೇತಾದಿಗಳನ್ನೂ ರಹಸ್ಯ ರೀತಿಯಲ್ಲಿ ಅಧೀನದಲ್ಲಿಟ್ಟುಕೊಂಡು ಘಟನೆಗಳ ಗತಿಯನ್ನು ಮಾರ್ಪಡಿಸಲಾಗುವುದೆಂಬ ಮಿಥ್ಯಾಭಿಪ್ರಾಯವುಳ್ಳ ವಿದ್ಯೆ(ಯ); ಮಂತ್ರ ವಿದ್ಯೆ(ಯ); ಮೋಡಿ(ಯ); ಮಾಟ(ದ); ಇಂದ್ರಜಾಲ(ದ); ಯಕ್ಷಿಣಿ(ಯ); ಕಣ್ಕಟ್ಟು(ಟ್ಟಿನ); ಗಾರುಡಿ ವಿದ್ಯೆ(ಯ); ಅಭಿಚಾರ(ದ); ಬೇಳುವೆ(ಯ) (Black m. ಪಿಶಾಚಿಗಳ ಸಹಾಯದಿಂದ ನಡಸುವ ಕೆಡುಕು ಮಾಟ. White m. ದೇವತೆಗಳ ಸಹಾಯದಿಂದ ನಡಸುವ ಒಳ್ಳೆಯ ಮಾಟ. Natural m. ಯಾವ ವ್ಯಕ್ತಿಯ ಸಹಾಯವೂ ಇಲ್ಲದೆ ಸ್ವಾಭಾವಿಕವಾಗಿ ನಡಸುವ ಮಾಟ; ಕಣ್ಕಟ್ಟು). ಆಶ್ಚರ್ಯಕರವಾದ ಫಲ ಕೊಡುವ, ವಿವರಿಸಲಸಾಧ್ಯವಾದ ಅಥವಾ ಗಮನಾರ್ಹವಾದ, — ಪ್ರಭಾವ; ಅದ್ಭುತ ಪರಿಣಾಮ(ದ). M. square ಉದ್ದಸಾಲಿನ ಅಥವಾ ಲಂಬ ಸಾಲಿನ ಅಥವಾ ಮೂಲೆಯ ಮೇಲಿನ ಸಂಖ್ಯೆಗಳನ್ನು ಹೇಗೆ ಕೂಡಿದರೂ ಒಂದೇ ಮೊತ್ತವಾಗುವಂತೆ ಪ್ರತಿ ಸಣ್ಣಚೌಕದ ಮನೆಯಲ್ಲಿಯೂ ಒಂದೊಂದು ಸಂಖ್ಯೆ ಬರೆದಿರುವ ಹಲವು ಚೌಕದ ಮನೆಗಳುಳ್ಳ ಒಂದು (ದೊಡ್ಡ) ಚೌಕ; ಮಾಂತ್ರಿಕ ಸಮಚತುರಸ್ರ. M. lantern ಗಾಜುಹಲಗೆಯಮೇಲಿನ ಚಿತ್ರದ (ಪ್ರತಿ)ಬಿಂಬವನ್ನು ಕತ್ತಲೆಯ ಕೋಣೆಯಲ್ಲಿಯ ಬಿಳಿಯ ಪರದೆಯಮೇಲೆ ದೊಡ್ಡದಾಗಿ ಬೀಳಿಸುವ ದೀಪಯಂತ್ರ: ಮಾಯಾ ದೀಪ. M. mirror ಭವಿಷ್ಯದ ಅಥವಾ ದೂರದ ದೃಶ್ಯಗಳನ್ನು ಪ್ರೇಕ್ಷಕನು ನೋಡಲಾಗುವುದೆಂದು ಭಾವಿಸುವ ಒಂದು ಕನ್ನಡಿ: ಮಾಯಾ ದರ್ಪಣ. **Mágical** (ಗು.); **Mágically** (ಕ್ರಿ. ವಿ.); **Magícian** ಮಜಿಷನ್ (ನಾ.) ಮಂತ್ರವಾದಿ; ಗಾರುಡಿಗ; ಐಂದ್ರಜಾಲಿಕ; ಮಾಟಗಾರ.

Magílp = Megilp.

Magistérial ಮ್ಯಾಜಿಸ್ಟಿಯರಿಯಲ್, — ಸ್ಟೀ — (ಗು.) ದಂಡಾಧಿಕಾರಿಯ; ದಂಡಾಧಿಕಾರ ನಡಸುವ; ಅಧಿಕಾರಯುಕ್ತ; ಪೂರ್ಣ ವಿಧಾಯಕ; (ಅಭಿಪ್ರಾಯಗಳು) ಅಧಿಕಾರ ಯುಕ್ತ, ಆಧಾರಪೂರ್ವಕ. **Magistérially** (ಕ್ರಿ. ವಿ.)

Magístral ಮಜಿಸ್ಟ್ರಲ್ (ಗು.) ಉಪಾಧ್ಯಾಯನ(ರ); ಯಜಮಾನನ(ರ) (The m. staff ಪಾಠಶಾಲೆಯ, ಅಧಿಕಾರಿ ವರ್ಗ). (ಔಷಧಪ್ರಯೋಗ ಪುಸ್ತಕದಲ್ಲಿಲ್ಲದೆ) ಒಂದು ನಿರ್ದಿಷ್ಟ ರೋಗಕ್ಕಾಗಿ ವೈದ್ಯನು (ಔಷಧವಾಗಿ) ಕಲ್ಪಿಸಿದ: ವೈದ್ಯ ಸ್ವಕಲ್ಪಿತ (Officinal ಪದದೊಡನೆ ಹೋಲಿಸಿ)

Mágistrate ಮ್ಯಾಜಿಸ್ಟ್ರೇಟ್ (ನಾ.) ರಾಜ್ಯಸಂಸ್ಥಿತಿ ಶಾಖೆಯ ದಂಡಾಧಿಕಾರಿ; ಸಂಸ್ಥಿತಿ ಪಾಲಕ ನ್ಯಾಯಾಧಿಪತಿ. **Mágistracy** —ಸ್ಟ್ರಸಿ (ನಾ.) ದಂಡಾಧಿಕಾರಿಯ ಪದವಿ. (ಸಾಮೂಹಿಕವಾಗಿ) ದಂಡಾಧಿಕಾರಿಗಳು. **Mágistrateship** (ನಾ.); **Mágistrature** —ಸ್ಟ್ರೆಟ್ಯುರ್ (ನಾ.) = Magistracy; ದಂಡಾಧಿಕಾರಿಯ ಅಧಿಕಾರಾವಧಿ.

Mágma ಮ್ಯಾಗ್ಮ (ನಾ.; ಬ. ವ. -ta, -s) ಖನಿಜ ವಸ್ತುಗಳ ಅಥವಾ ಜೈವಿಕವಸ್ತುಗಳ, ದ್ರವ ಪಿಷ್ಟದಂಥ ಒರಟುಮಿಶ್ರಣ. ಭೂಮಿಯ ಗಟ್ಟಿ ಮೇಲ್ಪದರದ ಕೆಳಗಡೆ ಇರುವುದೆಂದು ಊಹಿಸಿರುವ ಪ್ರವಾಹಿ ಸ್ತರ(ಗಳಲ್ಲೊಂದು)

Mágna C(h)arta ಮ್ಯಾಗ್ನ ಕಾರ್ಟ (ನಾ.) (೧೨೧೫ರಲ್ಲಿ ಇಂಗ್ಲೆಂಡಿನ ಜಾನ್ ದೊರೆಯಿಂದ ಇಂಗ್ಲಿಷ್ ಪ್ರಜೆಗಳು ಪಡೆದುಕೊಂಡ) ವೈಯಕ್ತಿಕ ಮತ್ತು ರಾಜಕೀಯ ಸ್ವಾತಂತ್ರ್ಯದ ಮಹಾ ಸನ್ನದು; ಮಹಾ ಸ್ವಾತಂತ್ರ್ಯ ಶಾಸನ.

Magnálium ಮ್ಯಾಗ್ನೇಲಿಯಂ (ನಾ.) ಅಲ್ಯೂಮಿನಿಯಂ ಲೋಹದೊಡನೆ ವಿವಿಧ ಪ್ರಮಾಣಗಳಲ್ಲಿ ಮ್ಯಾಗ್ನೀಸಿಯಂ ಲೋಹವನ್ನು ಬೆರಸಿ ಮಾಡಿದ, ಹಗುರವೂ ದೃಢವೂ ಆದ, ಒಂದು ಮಿಶ್ರ ಲೋಹ: 'ಮ್ಯಾಗ್ನೇಲಿಯಂ'.

Magnánimous ಮ್ಯಾಗ್ನ್ಯಾನಿಮಸ್ (ಗು.) ದೊಡ್ಡ ಮನಸ್ಸಿನ; ಉದಾತ್ತ; ಉದಾರ ಹೃದಯದ; ಮಹಾಶಯನಾದ; ಅಲ್ಪ ಮನೋಭಾವಗಳಿಲ್ಲದ. **Magnánimously** (ಕ್ರಿ. ವಿ.); **Magnanímity** ಮ್ಯಾಗ್ನನಿಮಿಟಿ (ನಾ.)

Mágnate ಮ್ಯಾಗ್ನೇಟ್ (ನಾ.) ಪ್ರಭು; ಧಣಿ; ಘನವಂತ; ದೊಡ್ಡ ಕೈಗಾರಿಕೆಯ ಅಥವಾ ಇತರ ದೊಡ್ಡ ಉದ್ಯಮದ ಯಜಮಾನ.

Magnésium ಮ್ಯಾಗ್ನೀಸಿ(ಸಿ, ಷಿ)ಯಂ (ನಾ.) ಮ್ಯಾಗ್ನೀಸಿಯಂ (ಮೂಲ) ಲೋಹ. M. light ಮ್ಯಾಗ್ನೀಸಿಯಮ್ಮಿನ ತಂತಿ ಉರಿಯುವುದರಿಂದಾದ, ಕಣ್ಣು ಕೋರೈಸುವ ಬೆಳಕು. **Magnésia** ಮ್ಯಾಗ್ನೀಷ(ಷ್ಯ) (ನಾ.) ಮ್ಯಾಗ್ನೀಸಿಯಮ್ಮಿನ ಆಮ್ಲಜನಕ ಸಂಯುಕ್ತ: ಮ್ಯಾಗ್ನೀಷ; (ರೂಢಿಯಲ್ಲಿ) ಪ್ರತ್ಯಾಮ್ಲವಾಗಿಯೂ ವಿರೇಚಕವಾಗಿಯೂ ಉಪಯೋಗಿಸುವ ಜಲ ಸಂಯುಕ್ತ ಮ್ಯಾಗ್ನೀಸಿಯಂ ಇಂಗಾಲಾಮ್ಲ ಲವಣ(ದ ಬಿಳಿಯ ಪುಡಿ). **Magnésian** (ಗು.) ಮ್ಯಾಗ್ನೀಸಿಯದ; ಮ್ಯಾಗ್ನೀಸಿಯವುಳ್ಳ.

Mágnet ಮ್ಯಾಗ್ನೆಟ್ (ನಾ.) (ಸ್ವಾಭಾವಿಕವಾಗಿಯೊ ಅಥವಾ ಬೇರೊಂದು ಅಯಸ್ಕಾಂತದ ಸಂಪರ್ಕದಿಂದ ಪ್ರೇರಿತವಾಗಿಯೊ ಅಥವಾ ವಿದ್ಯುತ್ಪ್ರವಾಹದಿಂದಲೊ) ಕಬ್ಬಿಣವನ್ನು ಆಕರ್ಷಿಸುವ ಗುಣವೂ ತೂಗಬಿಟ್ಟಾಗ ದಕ್ಷಿಣೋತ್ತರವಾಗಿ ನಿಲ್ಲುವ ಪ್ರವೃತ್ತಿಯೂ ಉಳ್ಳ ಕಬ್ಬಿಣದ ತುಂಡು ಅಥವಾ ಸೂಜಿಗಲ್ಲು: ಅಯಸ್ಕಾಂತ; ಕಾಂತ (Horse-shoe m. ಕುದುರೆಯ ಲಾಳದ ಆಕಾರದ ಕಾಂತ; ಲಾಳಾಕಾರ ಕಾಂತ); ದಿಕ್ಸೂಚಿ ಕಲ್ಲು. (ರೂಪ.) ಆಕರ್ಷಕ. **Magnétic** ಮ್ಯಾಗ್ನೆಟಿಕ್ (ಗು., ನಾ.) ಕಾಂತ ಗುಣಗಳುಳ್ಳ; ಕಾಂತತೆಯನ್ನುಂಟುಮಾಡುವ; ಕಾಂತತೆಯಿಂದಾದ; ಕಾಂತತೆಯಿಂದ ವರ್ತಿಸುವ; ಕಾಂತತೆಯ [M. equator = Aclinic line (Aclinic ನೋಡಿ). M. needle, M. north (ಆಯಾ ಪದವನ್ನು ನೋಡಿ)]. ಸೂಜಿಗಲ್ಲಿನ ಗುಣಗಳನ್ನು, ಕಾಂತತೆಯನ್ನು, ಪಡೆಯಬಲ್ಲ; ಸೂಜಿಗಲ್ಲಿನಿಂದ ಆಕರ್ಷಿತವಾಗುವ; ಕಾಂತಾಕರ್ಷಿತ. (ರೂಪ.) ಅತ್ಯಾಕರ್ಷಕ; ಬಲವಾಗಿ ಮನಸೆಳೆಯುವ; ಮೋಹವುಂಟುಮಾಡುವ. (ನಾ.; ಬ. ವ. ದಲ್ಲಿ) ಕಾಂತ ವಿಜ್ಞಾನ. **Magnétically** (ಕ್ರಿ. ವಿ.); **Mágnetism** —ಟಿಸ್‌ಮ್ (ನಾ.) ಕಾಂತತೆ; ಕಾಂತ ಧರ್ಮ; ಕಾಂತತೆಯ ಗೋಚರ ವಿಷಯಗಳು; ಕಾಂತ ಶಕ್ತಿ (Terrestrial m. ಭೂಗೋಳದ ಕಾಂತ ಗುಣ. Animal m. = Mesmerism). (ರೂಪ.) ಆಕರ್ಷಣೆ; ಆಕರ್ಷಣ ಶಕ್ತಿ. (ಒಬ್ಬನಲ್ಲಿರುವ) ಮೋಹಕ ಶಕ್ತಿ. **Mágnetist** (ನಾ.) ಕಾಂತ ವಿಜ್ಞಾನಿ. ಸಮ್ಮೋಹನ ವಿದ್ಯಾ ಪ್ರಯೋಗಿ. **Mágnetite** (ನಾ.) ಕಾಂತಾಕರ್ಷಣವುಳ್ಳ ಅಯಸ್ಸಿಂದೂರ: 'ಮ್ಯಾಗ್ನಿಟೈಟ್'. **Mágnetize** (ಕ್ರಿ. ಸಕ.) ಕಾಂತ ಗುಣ ಕೊಡು; ಕಾಂತವನ್ನಾಗಿ ಮಾಡು; ಕಾಂತದಂತೆ ಆಕರ್ಷಿಸು (ರೂಪ. ಸಹ); ಸಮ್ಮೋಹನಗೊಳಿಸು. **Magnetizátion** (ನಾ.); **Magnéto** ಮ್ಯಾಗ್ನೀಟೊ (ನಾ., ಬ. ವ. -os) Magneto-electric machine ಎಂಬುದರ ಸಂಕ್ಷಿಪ್ತ; ಕಾಂತ ವಿದ್ಯುದ್ಯಂತ್ರ (ಮು., ಅಂತರ್ದಾಹಕ ಎಂಜಿನುಗಳಲ್ಲಿ ಉರಿ ಹೊತ್ತಿಸುವ ಸಲಕರಣೆಯ ಹೆಸರು). **Magnéto-** (ಸ. ಪೂ. ಪ.) ಕಾಂತ — [**-electricity** (ವಿದ್ಯುದ್ವಾಹಕಗಳ ಮತ್ತು ಕಾಂತಗಳ ಪರಸ್ಪರ ಸ್ಥಾನಾಂತರ ಚಲನೆಯಿಂದ ಹುಟ್ಟುವ) ಕಾಂತ ವಿದ್ಯುತ್ತು. **-meter** (ಮ್ಯಾಗ್ನಿಟಾಮಿಟರ್) ಕಾಂತ ಬಲಗಳನ್ನು (ಮು., ಭೂಮಿಯ ಅಯಸ್ಕಾಂತ ಬಲಗಳನ್ನು) ಅಳೆಯುವ ಸಲಕರಣೆ: ಕಾಂತ ಬಲ ಮಾಪಕ. **-graph** ಕಾಂತಮಾಪಕದ ಚಲನ ವಲನಗಳನ್ನು ತಾನಾಗಿ ಗುರುತಿಸುವ ಯಂತ್ರಸಲಕರಣೆ; ಕಾಂತ ಬಲ ಲೇಖಕ]

Magnífic(al) ಮ್ಯಾಗ್ನಿಫಿಕ್, —ಕಲ್ (ಗು.) (ಪ್ರಾಚೀ. ಪ್ರ.) = Magnificent.

Magníficat (L) ಮ್ಯಾಗ್ನಿಫಿಕ್ಯಾಟ್ (ನಾ.) (ಬೈಬಲ್) ಆರಾಧನೆಯಲ್ಲಿ ಹಾಡುವ ಮೇರೀ ಕನ್ಯೆಯ ಮೇಲಿನ ಸ್ತೋತ್ರ ಗೀತ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Magníficent ಮ್ಯಾಗ್ನಿಫಿಸೆಂಟ್ (ಗು.) ಮಹಾ ವೈಭವದಿಂದ ಕೂಡಿದ ; ಉಜ್ಜ್ವಲವಾದ ; ಶೋಭಾಯಮಾನವಾದ ; ಮಹತ್ತಾದ ; ಘನವಾದ; ಅತ್ಯಂತ ಗಂಭೀರವಾದ ; ಸಮೃದ್ಧವಾಗಿ ರಚಿಸಿದ ಅಥವಾ ಅಲಂಕರಿಸಿದ ; ಅತ್ಯಂತ ಔದಾರ್ಯದಿಂದ ಕೂಡಿದ. (ಬಳ. ಮಾ.) ಸೊಗಸಾದ ; ಅತ್ಯುತ್ಕೃಷ್ಟವಾದ. **Magníficence** (ನಾ.) ; **Magníficently** (ಕ್ರಿ. ವಿ.) ; **Magnífico** (ನಾ.) ವೆನಿಸ್ ಪಟ್ಟಣದ ಶ್ರೀಮಂತ(ನ ಬಿರುದು) ; ಮಹಾ ಶ್ರೀಮಂತ ; ವಿಭವಾನ್ವಿತ.

Magnífico. **Magnificent** ನೋಡಿ.

Mágnify ಮ್ಯಾಗ್ನಿಫೈ (ಕ್ರಿ. ಸಕ.) (ಲೆನ್ಸಿನಿಂದಾಗಲ ಸೂಕ್ಷ್ಮದರ್ಶಕದಿಂದಾಲ) (ಒಂದು ವಸ್ತು) ದೊಡ್ಡದಾಗಿ ಕಾಣುವಂತೆ ಮಾಡು. ಉತ್ಪ್ರೇಕ್ಷಿಸು. (ವಿರ. ಪ್ರ.) ಹೆಚ್ಚಿಸು ; ವೃದ್ಧಿ ಮಾಡು. (ಪ್ರಾಚೀ. ಪ್ರ.) ಹೊಗಳು. **Magnificátion** (ನಾ.) ; **Mágnifier** (ನಾ.) ವರ್ಧಕ.

Magníloquent ಮ್ಯಾಗ್ನಿಲೊಕ್ವೆಂಟ್ (ಗು.) ಉದಾತ್ತ ವಾಗ್ಧೋರಣೆಯ ; ವಾಗಾಡಂಬರದ ; ಬಡಾಯಿ ಕೊಚ್ಚುವ. **Magníloquence** (ನಾ.) ; **Magníloquently** (ಕ್ರಿ. ವಿ.)

Mágnitude ಮ್ಯಾಗ್ನಿಟ್ಯೂಡ್ (ನಾ.) ಮಹತ್ತ್ವ ; ಬೃಹತ್ತ್ವ ; ವಿಸ್ತಾರ ; ಪ್ರಮಾಣ ; ಗಾತ್ರ ; ಪ್ರಮುಖತೆ. First, seventh, etc., m. (ನಕ್ಷತ್ರಗಳನ್ನು ಅವುಗಳ ಪ್ರಕಾಶಕ್ಕನುಗುಣವಾಗಿ ವರ್ಗೀಕರಿಸುವಲ್ಲಿ) ಮೊದಲನೆಯ, ಏಳನೆಯ, ಮೊ. ಪರಿಮಾಣ. Of the first m. (ರೂಪ.) ಆದ್ಯ ; ಮೊದಲ ; ಪ್ರಮುಖತೆಯ.

Magnólia ಮ್ಯಾಗ್ನೋಲಿಯ (ನಾ.) ಎಲೆಗುಂಪಲ ಅಂದಕ್ಕಾಗಿಯೂ ಹೂವಿಗಾಗಿಯೂ ಬೆಳಸುವ ಒಂದು ಜಾತಿಯ ದೊಡ್ಡ ಮರ: ಸಂಪಗೆಯ ಜಾತಿಯ ಮರ. (Magnol ಎಂಬ ಸಸ್ಯ ವಿಜ್ಞಾನಿಯ ಹೆಸರಿನಿಂದ)

Mágnum bónum (L) ಮ್ಯಾಗ್ನಂ ಬೋನಂ (ನಾ.) ಅಡಿಗೆಯಲ್ಲಿ ಉಪಯೋಗಿಸುವ ಹಳದಿಯ ಬಣ್ಣದ, ದೊಡ್ಡ 'ಪ್ಲಂ' ಕಾಯಿ ; ಒಂದು ಬಗೆಯ ಆಲೂ ಗಡ್ಡೆ.

Mágnum ópus (L) ಮ್ಯಾಗ್ನಂ ಓಪಸ್ (ನಾ.) ಮಹತ್ತ್ವದ ಕೃತಿ (ಮು., ವಿಶೇಷದ ಸಾಹಿತ್ಯ ಕೃತಿ ಅಥವಾ ಕಲಾ ಕೃತಿ) ; ಪ್ರಧಾನ ಕೃತಿ ; ಒಬ್ಬನು ಮಾಡಿದ, ಸಾಧಿಸಿದ, ಮಹಾ ಕಾರ್ಯ.

Mágpie ಮ್ಯಾಗ್‌ಪೈ (ನಾ.) ಉದ್ದನೆಯ ಚೂಪು ತೋಕೆಯೂ, ಕಪ್ಪೂ ಬಿಳುಪೂ ಕೂಡಿದ ಗರಿಗಳೂ ಉಳ್ಳ ಯೂರೋಪಿನ ಒಂದು (ಜಾತಿಯ) ಹಕ್ಕಿ : 'ಮ್ಯಾಗ್‌ಪೈ'. ಒಣ ಹರಟೆಯ ಮಲ್ಲ. ಒಂದು ಬಗೆಯ ಪಾರಿವಾಳ. (ಬಂದೂಕಿನ) ಗುರಿಹಲಗೆಯ ಅತ್ಯಂತ ಹೊರ ಭಾಗ ಬಿಟ್ಟು ಅದರ ಒತ್ತಿನ ಒಳಸುತ್ತು ; ಈ ಭಾಗಕ್ಕೆ ತಗುಲುವ ಗುಂಡಿನೇಟು.

Mágus ಮೇಗಸ್ (ನಾ. ; ಬ. ವ. Magi ಮೇಜೈ) ಪುರಾತನ ಪರ್ಷಿಯನ್ ಪುರೋಹಿತ ವರ್ಗದವನು. ಮಂತ್ರವಾದಿ ; ಮಾಟಗಾರ. The (three) Magi ಶಿಶುತನದಲ್ಲಿದ್ದ ಯೇಸುಕ್ರಿಸ್ತನಿಗೆ ಕಾಣಿಕೆ ತಂದು ಒಪ್ಪಿಸಿದ ಪೂರ್ವ ದೇಶದ (ಮೂವರು) ಜ್ಞಾನಿಗಳು: 'ಮೇಗಸ್ಸು' ಗಳು. **Mágian** ಮೇಜಿಯನ್ (ಗು., ನಾ.) ಮೇಗಸ್ಸುಗಳ ; ಮೇಗಸ್ಸುಗಳಲ್ಲೊಬ್ಬನು ; ಮಾಂತ್ರಿಕ. **Mágianism** (ನಾ.) ಮೇಗಸ್ಸುಗಳ ಮತ ತತ್ತ್ವ.

Mágyar ಮಾಡ್ಯಾರ್, ಮ್ಯಾಗ್ಯಾರ್ (ನಾ., ಗು.) ಈಗ ಹಂಗೇರಿಯಲ್ಲಿ ಪ್ರಬಲವಾಗಿರುವ ಮಾಂಗೊಲಾಯ್ಡ್ ಬುಡಕಟ್ಟಿಗೆ ಸೇರಿದ(ವನು) ; ಮ್ಯಾಗ್ಯಾರರ ಭಾಷೆ.

Máhdi ಮಾಡಿ (ನಾ.) ಮುಂದೆ ಅವತರಿಸುವನೆಂದು ಮಹಮ್ಮದೀಯರು ನಂಬಿರುವ (ಆಮುಷ್ಮಿಕ ಮತ್ತು ಐಹಿಕ) ನಾಯಕ: ಮಾದಿ ; (ಸೂಡಾನಿನಲ್ಲಿ ದಂಗೆಕಾರ ನಾಯಕನಿಗೆ ಅನೇಕ ವೇಳೆ ಈ ಹೆಸರನ್ನು ಕೊಡುವುದುಂಟು). **Máhd(i)ism** (ನಾ.) ಮಾದಿಗಳ ನೇತೃತ್ವದಲ್ಲಿ ೧೮೮೦ರ ಸುಮಾರಿನಲ್ಲಿ ಸೂಡಾನಿನಲ್ಲಿ ನಡೆದ ದಂಗೆಗಳ ಚಳವಳಿ.

Máhlstick = Maulstick.

Mahógany ಮಹಾಗನಿ (ನಾ.) ಪೀಠೋಪಸ್ಕರಗಳಿಗೆ ಹೆಚ್ಚಾಗಿ ಉಪಯೋಗಿಸುವ, ಸೊಗಸಾದ ಮೆರುಗು ಕೊಡಲಾಗುವ, ಅಮೆರಿಕದ ಉಷ್ಣ ಪ್ರಾಂತಗಳ ಒಂದು ಬಗೆಯ ಮರದ ದಾರು : 'ಮಹಾಗನಿ' ಮರ. ಊಟದ ಮೇಜು [Have one's knees under person's m. (—ನ) ಜೊತೆಯಲ್ಲಿ ಊಟಮಾಡು]. ಮಹಾಗನಿಯ ಬಣ್ಣ ; ಕೆಂಪು ಛಾಯೆಯ ಕಂದು ಬಣ್ಣ.

Mahoút ಮಹೌಟ್ (ನಾ.) ಆನೆಯನ್ನು ನಡಸುವವನು ; ಮಾವುತ : ಮಾವಟಿಗ.

Máhseer ಮಾಸಿಯರ್ (ನಾ.) ಇಂಡಿಯಾ ದೇಶದ ಒಂದು ಜಾತಿಯ ದೊಡ್ಡ ಸೀನೀರ ಮೀನು : ಮಹಾ ಶಿರ (ಹಿಂದಿ)

Maid ಮೇಡ್(ಯ್ಡ್) (ನಾ.) ಹುಡುಗಿ ; ಬಾಲೆ ; ಕನ್ಯೆ ; ಕೊಡಗೂಸು ; ಮದುವೆಯಿಲ್ಲದ ಹೆಂಗಸು (Old m. ವೃದ್ಧ ಕನ್ಯೆ. ಒಂದು ಬಗೆಯ ಇಸ್ಪೀಟಾಟ). ಹೆಣ್ಣಾಳು. (=Maidservant). House-m. (House ನೋಡಿ). Nurse-m. (Nurse ನೋಡಿ). Lady's-m. (Lady ನೋಡಿ). M.-of-all-work ಎಲ್ಲ ಕೆಲಸವನ್ನೂ ಮಾಡುವ ಹೆಣ್ಣಾಳು, ಪರಿಚಾರಿಕೆ. M. of honour ರಾಣಿಯ ಅಥವಾ ರಾಜಕುಮಾರಿಯ ಪರಿವಾರದ, (ಸಾ., ದೊಡ್ಡ ಮನೆತನದ, ಮದುವೆಯಿಲ್ಲದ) ಮಹಿಳೆ : ಗೌರವಾನುಚರೆ. **Maídish** (ಗು.) —ಸ್ವಭಾವದ. **Maidy** (ನಾ.) ಚಿಕ್ಕ ಕನ್ಯೆ. **Maíden** ಮೇಡ್‌ನ್ (ನಾ., ಗು.)=Maid ; (ಗು.) ಮದುವೆಯಾಗಿಲ್ಲದ [M. name (ಹೆಂಗಸಿನ) ಮದುವೆಗೆ ಮೊದಲನ ಹೆಸರು]. =M. over. (ಹೆಣ್ಣುಪ್ರಾಣಿಯ ವಿಷಯದಲ್ಲಿ) ಗಂಡಿನ ಸಂಪರ್ಕ ಪಡೆದಿಲ್ಲದ. (ಕುದುರೆಯ ವಿಷಯದಲ್ಲಿ) ಎಂದೂ ಬಹುಮಾನವನ್ನು ಪಡೆದಿಲ್ಲದ ; (ಕುದುರೆಯ ಜೂಜು) ಇಂಥ ಕುದುರೆಗಳು ಸ್ಪರ್ಧಿಸಬಹುದಾದ. (ಸಸ್ಯ) ಬೀಜ ಬಿತ್ತಿ ಬೆಳಸಿದ. (ಸಿಪಾಯಿ, ಕತ್ತಿ) ಯೋಗ್ಯತಾ ಪರೀಕ್ಷೆ ಮಾಡಿಲ್ಲದ. M. assize ವಿಚಾರಣೆಗೆ ಮೊಕದ್ದಮೆಗಳೇ ಇಲ್ಲದ ನ್ಯಾಯದರ್ಶಿ ಸಮಕ್ಷ ವಿಚಾರಣಾ ಸಭೆ. M. over (ಕ್ರಿಕೆಟ್) ಆಟಗಾರನಿಗೆ ಒಂದು ಓಟವನ್ನೂ ಕೊಡದ ಚೆಂಡೆಸೆತದ ಆವರ್ತಿ. M. speech (ಶಾಸನ ಸಭೆಯಲ್ಲಿ ಸದಸ್ಯನ) ಪ್ರಥಮ ಭಾಷಣ. **Maidenhair** (ಕೂದಲನಂಥ ಕಾಂಡಗಳೂ ಕೋಮಲವಾದ ಎಲೆಗರಿಗಳೂ ಉಳ್ಳ) ಒಂದು ಬಗೆಯ ಜರೀ ಗಿಡ. **Maidenhead** ಕನ್ಯಾತ್ವ ; ಕನ್ನೆತನ. **Maídenhood** (ನಾ.); **Maídenish** (ಗು.) ; **Maídenlike** (ಗು.); **Maídenly** (ಗು.)

Maieútic ಮೇಯೂಟಿಕ್ (ಗು.) (ಸಾಕ್ರಟೀಸ್ ಎಂಬ ತತ್ತ್ವಜ್ಞನ ಜಿಜ್ಞಾಸಾ ಕ್ರಮದ) ಭಾವ ಪ್ರಸೂತಿಯ; (ಒಬ್ಬನ ಮನಸ್ಸಿನಲ್ಲಿ) ಅಸ್ಫುಟವಾಗಿ ಅಡಗಿರುವ ಭಾವಗಳನ್ನು ಸ್ಫುಟವಾದ ಅರಿವಿಗೆ ತರಲು ಸಹಾಯಕವಾದ.

Mail[1] ಮೇಲ್(ಯ್ಲ್) (ನಾ., ಕ್ರಿ. ಸಕ.) (ಉಂಗುರಗಳಿಂದ ಅಥವಾ ಸರಪಣಿ ಕೆಲಸದಿಂದ ಅಥವಾ ಒಂದು ಹಿನ್ನೆಲೆಯಮೇಲೆ ಬಗಿಸಿದ ತಗಡುಗಳಿಂದ ಮಾಡಿದ) ಉಕ್ಕಿನ ಮೈಜೋಡು, ಯುದ್ಧ ಕವಚ (Chain, plate, ring, -m.). (ಕ್ರಿ.) ಯುದ್ಧ ಕವಚ(ದಂತೆ) ತೊಡಿಸು. The mailed fist (ರೂಪ.) ಶಸ್ತ್ರಸಜ್ಜಿತ ಸೈನ್ಯಬಲದ ಬೆದರಿಕೆ ; ಮುಷ್ಟಿಬಲ.

Mail[2] ಮೇಲ್(ಯ್ಲ್) (ನಾ., ಕ್ರಿ. ಸಕ.) ಅಂಚೆಯ ಮೂಲಕ ರವಾನಿಸಲು (ಸಮಾಚಾರ) ಕಾಗದಗಳನ್ನು ತುಂಬಿದ ಚೀಲ: ಟಪಾಲು; ಅಂಚೆಯ ರವಾನೆ (ಮು., ಹೊರ ದೇಶದ ಟಪಾಲು) [The m. ಒಂದು ಸಲ(ಕ್ಕೆ) ಹೀಗೆ ರವಾನಿಸಿದ ಒಟ್ಟು ಟಪಾಲು. M. (train) ಟಪಾಲು ರೈಲು. **M.-cart** ರಸ್ತೆಯ ಮೂಲಕ ಟಪಾಲು ಸಾಗಿಸುವ ಬಂಡಿ : ಟಪಾಲು ಬಂಡಿ. ಮಕ್ಕಳನ್ನು ಕುಳ್ಳಿರಿಸಿಕೊಂಡು ಹೋಗುವ ಹಗುರವಾದ ಬಂಡಿ : ಮಕ್ಕಳ ಬಂಡಿ. **M.-coach**=(ಈಗ) M.-cart ; (ಹಿಂದೆ) ಟಪಾಲು ಸಾಗಿಸುತ್ತಿದ್ದ ಮಜಲು ಬಂಡಿ. **M. order** ಸಾಮಾನು ಕಳುಹಿಸಬೇಕೆಂದು ಅಂಚೆಯ ಮೂಲಕ ರವಾನಿಸಿದ ಕೋರಿಕೆಯ ಪತ್ರ (ಇಂತಹ ಸಾಮಾನನ್ನು ಅಂಚೆಯ ಮೂಲಕವೇ ಕಳುಹಿಸಲಾಗುವುದು). M. order firm ಈ ಪದ್ಧತಿಯಲ್ಲಿ ವ್ಯಾಪಾರ ನಡಸುವ ವ್ಯಾಪಾರಸಂಸ್ಥೆ] (ಕ್ರಿ.) ಅಂಚೆಯ ಮೂಲಕ (ಕಾಗದ, ಮೊ. ನ್ನು) ಕಳುಹಿಸು.

Maim ಮೇಮ್(ಯ್ಮ್) (ಕ್ರಿ. ಸಕ.) ಊನ ಮಾಡು ; ಅಂಗಹೀನ ಮಾಡು ; ಕುಂಟು ಮಾಡು. (ರೂಪ.) ಶಕ್ತಿಗುಂದಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Main[1] ಮೇನ್(ಯ್ನ್) (ನಾ.) ದೇಹ ಬಲ [With might & m. (ಸರ್ವ ಶಕ್ತಿಯನ್ನೂ ಉಪಯೋಗಿಸಿ) ಎಂಬಲ್ಲಿ ಮಾತ್ರ ಪ್ರ.]. =Spanish m. (Spanish ನೋಡಿ). (ಕಾವ್ಯ) ಮಹಾ ಸಾಗರ. (In the m. ಬಹು ಮಟ್ಟಿಗೆ; ಮುಖ್ಯವಾಗಿ). (ನೀರು, ಗ್ರಾಮ ಸಾರ, ಮೊ. ವು ಹರಿಯುವು ದಕ್ಕಾಗಿ ಮಾಡಿರುವ) ಪ್ರಧಾನ ಕಾಲುವೆ, ಚರಂಡಿ.

Main (ಗು.) ಪೂರ್ತಿಯಾಗಿ ಪ್ರಯೋಗಿಸಿದ (By m. force ಪೂರ್ಣ ಬಲದಿಂದ). (ಗಾತ್ರದಲ್ಲಾಗಲಿ, ವಿಸ್ತಾರದಲ್ಲಾಗಲಿ, ವ್ಯಾಪ್ತಿಯಲ್ಲಾಗಲಿ) ಪ್ರಧಾನವಾದ; ಅತಿ ಮುಖ್ಯವಾದ; ಪ್ರಮುಖವಾದ [The m. body (of army, etc.). The m. point (in argument). M. line (of railway) (ರೈಲುಹಾದಿಯ) ಪ್ರಧಾನ ಮಾರ್ಗ]. (Have an eye to the m. chance ಸ್ವಪ್ರಯೋಜನದಮೇಲೆ ದೃಷ್ಟಿಯಿಟ್ಟರು). **M. deck** ಹಡಗಿನ ಪ್ರಧಾನವಾದ ಅಟ್ಟ. **Mainmast** ಮುಖ್ಯ ಕೂವೆ. **Maínstay** ಪ್ರಧಾನ ಕೆಳ ಕೂವೆಯಿಂದ ಮುಂಕೂವೆಯ ಬುಡಕ್ಕೆ ಬಿಗಿದಿರುವ ಕಟ್ಟು (ಹಗ್ಗ, ಮೊ.). (ರೂಪ.) ಮುಖ್ಯಾಧಾರ. M. yard ಮುಖ್ಯ ಪಟವನ್ನು ಹರಡಿರುವ ಅಡ್ಡ ದಿಮ್ಮಿ. **Mainland** (ದ್ವೀಪ ಪ್ರದೇಶವಲ್ಲದ) ವಿಸ್ತಾರವಾದ ಭೂಭಾಗ. **Mainspring** (ಗಡಿಯಾರ, ಮೊ. ಗಳ) ಪ್ರಧಾನ ಎಗುರುಪಟ್ಟಿ (ಸ್ಪ್ರಿಂಗು); (ರೂಪ.) ಮುಖ್ಯವಾದ ಅಥವಾ ಅತ್ಯಂತ ಪ್ರಬಲವಾದ ಉದ್ದೇಶ, ಕರ್ತೃ ಅಥವಾ ಕರ್ತೃತ್ವ; ಒಂದು ಕಾರ್ಯ ಮಾಡಲು ಮುಖ್ಯ ಪ್ರೇರಕ. **Mainly** (ಕ್ರಿ. ವಿ.) ಮುಖ್ಯವಾಗಿ; ಪ್ರಧಾನವಾಗಿ.

Main[2] ಮೇನ್(ಯ್ನ್) (ನಾ.) (ಒಂದು ತೆರದ ಪಗಡೆಯ ಆಟದಲ್ಲಿ). ದಾಳ ಎಸೆಯುವುದಕ್ಕೆ ಮೊದಲು ಎಸೆಗಾರನು ಕೇಳುವ (೫ ರಿಂದ ೯ರ ವರೆಗಿನ ಯಾವುದಾದರೂ ಒಂದು) ಸಂಖ್ಯೆ. ಹುಂಜದ ಕಾಳಗ.

Maintaín ಮೇ(ಮೆಂ)ಂಟೇನ್ (ಕ್ರಿ. ಸಕ.) (ಯುದ್ಧ, ಸ್ಪರ್ಧೆ, ನ್ಯಾಯ ವ್ಯವಹಾರ, ಸ್ಥಾನ ಮಾನ, ನಂಸ್ಥಿತಿ, ಸಂಬಂಧಗಳು, ಪತ್ರವ್ಯವಹಾರ, —ಇವನ್ನು) ನಡಸಿಕೊಂಡು ಬರು, ತಪ್ಪದೆ ಉಳಿಸಿಕೊಂಡು ಬರು. (ವ್ಯಕ್ತಿ, ಮೊ. ನ್ನು ಒಂದು ಸ್ಥಿತಿಯಲ್ಲಿ, ಒಂದರ ಅನುಭವದಲ್ಲಿ) ಇದ್ದುಕೊಂಡು ಬರುವಂತೆ ಮಾಡು (*In* ಉಪ. ದೊಡನೆ). ಆಹಾರ ಪೋಷಣೆಯಿಂದ ಜೀವನ ನಡಸು; (ಹಣವ್ಯಯ, ಮೊ. ಗಳಿಂದ, ಜೀವನದಲ್ಲಿ ತನ್ನ ಸ್ಥಾನ ಮಾನವನ್ನು) ಉಳಿಸಿಕೊಂಡು ಬರು. ಜೀವನೋಪಾಯ ಕಲ್ಪಿಸಿಕೊ; (ತನ್ನ ಮಕ್ಕಳಿಗೆ) ಅನ್ನ ಬಟ್ಟೆ ಒದಗಿಸು; ಸಲಹು; ಸಂರಕ್ಷಣೆ ಮಾಡು. (ರಸ್ತೆ, ಮೊ. ನ್ನು) ದುರಸ್ತಾಗಿಟ್ಟರು. (ಒಂದು ಉದ್ದೇಶ ಸಾಧನೆಗೆ, ಪಕ್ಷಕ್ಕೆ) ಬೆಂಬಲ ಕೊಡು. (ಅಭಿಪ್ರಾಯ, ಹೇಳಿಕೆ) ನಿಜವೆಂದು ಸಾಧಿಸು, ಸಮರ್ಥಿಸು. **Maintaínable** (ಗು.); **Maíntenance** ಮೇಂಟೆ(ಟಿ) ನನ್ಸ್ (ನಾ.) (ಕ್ರಿಯಾರ್ಥಗಳಲ್ಲಿ); ಜೀವನಾಧಾರಕ್ಕೆ ಸಾಕಾದಷ್ಟು; ಜೀವನಾಂಶ (Cap of m. ಅಧಿಕಾರ ಚಿಹ್ನೆಯಾಗಿ ಧರಿಸುವ, ಅಥವಾ ದೊರೆ, ಮೊ. ರ ಮುಂದೆ ಹಿಡಿದುಕೊಂಡು ಹೋಗುವ ಟೋಪಿ). (ನ್ಯಾ. ಶಾ.) ನ್ಯಾಯಕಾರಣವಿಲ್ಲದೆ ಕೋರ್ಟುವ್ಯಾಜ್ಯದಲ್ಲಿ ಒಂದು ಕಕ್ಷಿಗೆ ಸಹಾಯ ಮಾಡುವ ಅಪರಾಧ.

Maitre d'hotél ಮೇಟ್ರ್ ಡೋಟೆಲ್ (ನಾ.) (ಇಟಲಿಯಲ್ಲಿ ಅಥವಾ ಸ್ಪೈನ್ ದೇಶದಲ್ಲಿ) ಅರಮನೆಯ ಮುಖ್ಯಾಧಿಕಾರಿ, ಬಕ್ಷಿ. ಹೋಟಲಿನ ವ್ಯವಸ್ಥಾಪಕ.

Maize ಮೇಸ್(ಯ್ಸ್) (ನಾ.) ಮುಸುಕಿನ ಜೋಳ(ದ ಕಾಳು). **Maizéna** —ಜೀನ (ನಾ.) (ಆಹಾರಕ್ಕೆ ಉಪಯೋಗವಾಗುವಂತೆ ತಯಾರಿಸಿದ) ಮುಸುಕಿನ ಜೋಳದ ಹಿಟ್ಟು.

Maizéna. **Maize** ನೋಡಿ.

Májesty ಮ್ಯಾಜೆಸ್ಟಿ (ನಾ.) (ಭಾವ, ಭಂಗಿ, ಭಾಷೆ, ಮೊ. ವಿಷಯದಲ್ಲಿ) ಘನತೆ, ಗಾಂಭೀರ್ಯ, ಪ್ರಭಾವ, ಮಹಿಮೆ. ಪ್ರಭು ಶಕ್ತಿ; ಸಾರ್ವಭೌಮತ್ವ. [(ದೊರೆಯೊಡನೆ, ದೊರೆಯ ವಿಷಯವಾಗಿ, ಮಾತನಾಡುವಾಗ) Your, His, Her, M. ಮಹಾ ಪ್ರಭುಗಳು]. ಸುತ್ತು ಬಳಸಿದ ಪ್ರಭಾಮಂಡಲದ ಮಧ್ಯದಲ್ಲಿರುವಂತೆ ಚಿತ್ರಿಸಿದ ದೇವರು (ದೇವರ ಮಗ ಅಥವಾ ಯೇಸುಕ್ರಿಸ್ತ). **Majéstic** ಮಜೆಸ್ಟಿಕ್ (ಗು.) ಘನ ಗಾಂಭೀರ್ಯವುಳ್ಳ; ಮಹಾ ವೈಭವದಿಂದ ಕೂಡಿದ; ಪ್ರಭಾವ ಬೀರುವ; ಠೀವಿಯುಳ್ಳ. **Majéstically** (ಕ್ರಿ. ವಿ.)

Májor[1] ಮೇಜರ್ (ನಾ.) Lieutenant-colonel ಹುದ್ದೆಗೆ ಕೆಳಗಿನ, ಮತ್ತು Captain ಹುದ್ದೆಗೆ ಮೇಲಿನ, ಒಬ್ಬ ಸೈನ್ಯಾಧಿಕಾರಿ: 'ಮೇಜರ್'. **Májorship** (ನಾ.)

Májor[2] ಮೇಜರ್ (ಗು., ನಾ.) (ಎರಡು ವಸ್ತುಗಳು, ವರ್ಗಗಳು, ಮೊ. ಗಳಲ್ಲಿ) ದೊಡ್ಡದಾದ (*Than* ಎಂಬ ಉತ್ತರ ಪದ ಪ್ರ. ಇಲ್ಲ); ಪ್ರಧಾನ; ಪ್ರಮುಖ [M. axis (ಶಂಕುಚ್ಛೇದದ) ನಾಭಿಗಳ ಮೂಲಕ ಹಾದು ಹೋಗುವ ಅಕ್ಷ: ಪ್ರಧಾನಾಕ್ಷ. M. epilepsy (ನಿಜವಾದ) ಅಪಸ್ಮಾರ, ಮಲರೋಗ. M. part (ಒಂದರ) ಹೆಚ್ಚು ಭಾಗ, ಅಧಿಕಾಂಶ. M. prophets (Prophet ನೋಡಿ). M. premiss ಆಧಾರ ವಾಕ್ಯ. M. term (ತರ್ಕ) ಆಧಾರವಾಕ್ಯದಲ್ಲಿಯ ಆಖ್ಯಾತ; ವ್ಯಾಪಕ ಪದ. M. general ಒಬ್ಬ ದೊಡ್ಡ ಸೈನ್ಯಾಧಿಕಾರಿ. Sergeant m., bugle m., drum m., pipe m., trumpet m. ಸೈನ್ಯದ ಬೇರೆ ಬೇರೆ ಅಧಿಕಾರಿಗಳು]. (ಪಾಠಶಾಲೆಯಲ್ಲಿ) ಹಿರಿಯ; ದೊಡ್ಡ; ಮೊದಲು ಸೇರಿದ (Brown, Smith, m.). ಪ್ರಾಯಕ್ಕೆ ಬಂದ(ವನು); ಪ್ರಾಪ್ತ ವಯಸ್ಕ(ನಾದ). (ತರ್ಕದಲ್ಲಿ) ಪ್ರಧಾನ ಪದ, —ವಾಕ್ಯ (ಎಂಬುದಕ್ಕೆ ಸಂಕ್ಷಿಪ್ತ) (I deny your m.). **M.-domo** (ಇಟಲಿ ಮತ್ತು ಸ್ಪೈನ್ ದೇಶಗಳಲ್ಲಿ) ಅರಮನೆಯ ಮುಖ್ಯಾಧಿಕಾರಿ, ಬಕ್ಷಿ; (ಶಿಥಿಲವಾಗಿ) ಪಾರುಪತ್ಯಗಾರ; ಮನೆವಾರ್ತೆಯವನು. **Majórity** ಮಜಾರಿಟಿ (ನಾ.) (ಒಂದರ) ಹೆಚ್ಚು ಸಂಖ್ಯೆ, ಭಾಗ; ಅಧಿಕಾಂಶ. [The m. ನತ್ತುಹೋದವರು. Join the m. ಸಾಯಿ. Absolute m. of votes ಅರ್ಧಕ್ಕಿಂತ ಹೆಚ್ಚು ಸಂಖ್ಯೆಯ ಅಭಿಮತಗಳು; ಚುನಾವಣೆದಾರರಲ್ಲಿ ಅಥವಾ ಅಭಿಮತ ಕೊಡುವವರಲ್ಲಿ ಅರ್ಧಕ್ಕಿಂತಲೂ ಅಧಿಕ ಸಂಖ್ಯೆ: ಅಭಿಮತದ ಪರಮಾಧಿಕ್ಯ]. ಒಂದು ಪಕ್ಷಕ್ಕಿಂತ ಮತ್ತೊಂದು ಪಕ್ಷಕ್ಕೆ ಬಂದ ಹೆಚ್ಚು ಅಭಿಮತ ಸಂಖ್ಯೆ: ಬಹು ಮತ. ಪ್ರಾಪ್ತ ವಯಸ್ಸು; ಪ್ರೌಢ ವಯಸ್ಸು (Attained his m.). ಮೇಜರಿನ ಅಧಿಕಾರ.

Make ಮೇಕ್ (ಕ್ರಿ.; ಭೂತ, ಭೂ. ಕೃ. Made) ಮಾಡು; ನಿರ್ಮಿಸು; ರಚಿಸು; ಸೃಷ್ಟಿಸು [Bees m. cells of wax. God made man (a rational creature)]. ಆಗು (He made the thirteenth at the table ಅವನು ಊಟದ ಮೇಜಿನಲ್ಲಿ ಹದಿಮೂರನೆಯವನಾದನು). You were made for this work ನಿನಗೂ ಈ ಕೆಲಸಕ್ಕೂ ಒಳ್ಳೆಯ ಹೊಂದಿಕೆ; ನೀನು ಈ ಕೆಲಸಕ್ಕೆ ತಕ್ಕವನು. M. an example of, M. an exhibition of oneself, M. a face, M. a fool of, M. free, M. friends, M. good, M. a hash of, M. hay, M. head, M. head or tail of, M. it hot, M. a house, M. light of, M. love, M. merry, M. oneself scarce, M. sure, M. water (ಆಯಾ ಪದವನ್ನು ನೋಡಿ). M. after (ಪ್ರಾಚೀ. ಪ್ರ.) ಬೆನ್ನಟ್ಟಿ ಹೋಗು. M. against ಪ್ರತಿಕೂಲವಾಗಿರು. M. as if one had (ಒಬ್ಬನಿಗೆ, ಒಂದಕ್ಕೆ) ಇದ್ದಂತೆ ನಟಿಸು. M. away ತ್ವರೆ ಮಾಡು. M. away with ತೊಲಗಿಸಿಬಿಡು; ಎಗುರಿಸಿಕೊಂಡು ಹೋಗು; ಅಪಹರಿಸು; ಕೊಂದುಹಾಕು. ದುಂದುಮಾಡು. M. a bag ಹಲವು ಬೇಟೆಯ ಪ್ರಾಣಿಗಳನ್ನು ಕೊಲ್ಲು. M. a beast of oneself ಪಶುಪ್ರಾಯನಾಗು. M. a bed ಹಾಸಿಗೆ ಹಾಸು. M. believe ನಟನೆ ಮಾಡು. M.-believe ನಟನೆ. M. no bones (Bone ನೋಡಿ). M. a book (ಪಂದ್ಯ) ಒಂದೇ ಘಟನೆಯಮೇಲೆ ಬೇರೆ ಬೇರೆ ಅನೇಕ ಪಣಗಳನ್ನು ಒಡ್ಡು, ಬಾಜಿ ಕಟ್ಟು. M. both ends meet ತನ್ನ ವರಮಾನದಲ್ಲೇ ಸಂಸಾರ ನಡಸು. M. a bow ತಲೆವಾಗು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಮಸ್ಕರಿಸು. M. a good breakfast ಬೆಳಗಿನೂಟ ತೃಪ್ತಿಯಾಗಿ ಮಾಡು. M. a corner in rice ಪೇಟೆಯಲ್ಲಿ ಅಕ್ಕಿಯೆಲ್ಲವನ್ನೂ ಕೊಂಡುಕೊಂಡು ತಾನೊಬ್ಬನೇ ಅಕ್ಕಿವ್ಯಾಪಾರಿಯಾಗು. M. the distance on foot ಈ ದೂರವನ್ನು ನಡೆದುಹೋಗು. M. fast ಭದ್ರಪಡಿಸು. M. a fire ಬೆಂಕಿ ಹೊತ್ತಿಸು. M. for (ಆ) ಕಡೆಗೆ ನುಗ್ಗು; ಮೇಲೆ ಬೀಳು. (ಸುಖ, ಸಂತೋಷ, ಮೊ. ಕ್ಕೆ) ಅನುಕೂಲವಾಗು. (ಅಭಿಪ್ರಾಯವನ್ನು) ಸ್ಥಿರೀಕರಿಸು. M fun, game, of ತಮಾಷೆ ಮಾಡು; ಗೇಲಿಯೆಬ್ಬಿಸು. She will m. a good wife ಆಕೆ ಅನುಕೂಲಳಾದ ಹೆಂಡತಿಯಾಗುತ್ತಾಳೆ. M. it hot ಬಿಸಿ ತಟ್ಟಿಸು; ತೊಂದರೆಗೆ ಈಡುಮಾಡು. M. London on the way to Rome ರೋಮಿಗೆ ಹೋಗುವ ದಾರಿಯಲ್ಲಿ ಲಂಡನ್ನಿಗೆ ಹೋಗಿ ಬರು. M. or mar ಬದುಕಿಸು, ಇಲ್ಲದಿದ್ದರೆ ಕೆಡಿಸು. M. one's mark in the world ಪ್ರಪಂಚದಲ್ಲಿ ಪ್ರಸಿದ್ಧನಾಗು. M. a mountain out of a mole-hill ಅಲ್ಪ ವಿಷಯವನ್ನು ಬಹಳ ದೊಡ್ಡದಾಗಿ ಎಣಿಸು. M. much of ಬಹಳ ವಿಶ್ವಾಸ ಗೌರವಗಳಿಂದ ನೋಡು; ಅತಿ ಪ್ರಾಶಸ್ತ್ಯ ಕೊಡು. (ಅದರಿಂದ) ಬಹಳ ಪ್ರಯೋಜನ ಪಡೆ. M. a night of it (ಉತ್ಸವ, ಮೊ. ನ್ನು) ರಾತ್ರಿಯೆಲ್ಲ ನಡಸು. I do not know what to m. of it ಅದರ ಅಭಿಪ್ರಾಯ ನನಗೆ ಗೊತ್ತಾಗಲಿಲ್ಲ. M. off ಓಡಿಹೋಗು (M. off with stolen goods, etc.). M. out (ಪಟ್ಟಿ, ದಸ್ತೈವಜು, ಹುಂಡಿ, ಮೊ. ನ್ನು) ಬರೆ, ತಯಾರಿಸು. ತಿಳಿ; ಗ್ರಹಿಸು; ಸಮರ್ಥಿಸು; ಸಿದ್ಧಗೊಳಿಸು (I can't m. him out ಅವನು ಹೇಳುವುದು ನನಗೆ ಅರ್ಥವಾಗುವುದಿಲ್ಲ. How do you m. that out ಅದನ್ನು ಹೇಗೆ ಸಮರ್ಥಿಸುತ್ತೀಯೆ? I cannot m. out his handwriting ಅವನ ಬರವಣಿಗೆಯನ್ನು ನಾನು ಓದಲಾರೆ. I made out a figure in the distance ದೂರದಲ್ಲಿ ಒಂದು ಆಕಾರವನ್ನು ಗುರುತಿಸಿದೆನು. Articles put in to m. out a volume ಸಂಪುಟ ಸಿದ್ಧಗೊಳಿಸಲು ಯತ್ನವಿಲ್ಲದೆ ಸೇರಿಸಿದ ಲೇಖನಗಳು). M. over (ಒಂದು ವಸ್ತುವನ್ನು ಒಬ್ಬನಿಗೆ, ಮು., ವಿಧಿ ವಿಹಿತವಾದ ಕರಾರು ಮೂಲಕ) ವಹಿಸಿಕೊಡು. Will you m. one of the party? ಈ ಗುಂಪಿಗೆ ನೀನೂ ಸೇರುವೆಯಾ? M. peace ಸಂಧಿ, ಕೌಲು, ಮಾಡಿಕೊ. Makepeace ಸಂಧಿ, ರಾಜಿ, —ಮಾಡುವವನು. M. place, room, way, for others ಇತರರಿಗೆ ಸ್ಥಳ, ಹಾದಿ, ಕೊಡು. M. a price ಬೆಲೆ ಗೊತ್ತು ಮಾಡು. M. sail (ಹಡಗು) ಹೊರಡು; ಹೆಚ್ಚು ಪಟವೇರಿಸು. M. oneself scarce ಕಾಣದೆಹೋಗು. Makeshift ಹಂಗಾಮಿ ಏರ್ಪಾಡು; ತಾತ್ಕಾಲಿಕ ಉಪಾಯ. One swallow does not m. a summer ಒಂದು ಬಾನಕ್ಕಿಯನ್ನು ಕಂಡರೆ ಬೇಸಗೆ ಬಂದಹಾಗೆ ಆಗಲಿಲ್ಲ. What do you m. the time? ಈಗ ಎಷ್ಟು ಹೊತ್ತೆಂದು ತಿಳಿಯುತ್ತೀಯೆ? M. a train ರೈಲು ಹೊರಡುವ ಹೊತ್ತಿನೊಳಗಾಗಿ ಅಲ್ಲಿಗೆ ಹೋಗಿ ಸೇರು. (ಇಸ್ಪೀಟಾಟ) M. a trick ಒಂದು ಪಟ್ಟು ತೆಗೆದುಕೊ. M. up (ಸಾಲದೆ ಹೋದದ್ದನ್ನು) ಭರತಿ ಮಾಡು. ನಷ್ಟ ಸರಿಪಡಿಸಿಕೊ (M. up for lost time ಕಳೆದುಹೋದ ಕಾಲವನ್ನು ಕೂಡಿಸಿಕೊ. We must m. it up to him somehow ಹೇಗಾದರೂ ಮಾಡಿ ನಾವು ಅವನಿಗೆ ನಷ್ಟ ಕಟ್ಟಿ, ತುಂಬಿ, ಕೊಡಬೇಕು). (ನಟನಿಗೆ) ವೇಷ ಹಾಕು. ಕೂಡಿಸು; ಜೋಡಿಸು [M.-up (ನಾ.) (ನಟನ) ವೇಷ; ಇದಕ್ಕಾಗಿ ಉಪಯೋಗಿಸುವ ಬಣ್ಣ, ಮೊ. ವು. ಕಲ್ಪಿತ ಕಥೆ]. M. up to ಅನುಸರಣೆ ಮಾಡು; ಅನುಗ್ರಹ ಪಡೆಯಲು ಆಶ್ರಯಿಸು. M. up accounts ಲೆಕ್ಕ ತಯಾರಿಸು. M. up a difference ವ್ಯಾಜ್ಯ ಬಗೆಹರಿಸು; ರಾಜಿಯಾಗು. M. up a dispute ವ್ಯಾಜ್ಯ ಬಗೆಹರಿಸು. M. up a face ಮುಖ ವಿಕಾರಮಾಡು; ವೇಷ ಹಾಕು; ಮತ್ತೊಬ್ಬನಂತೆ ನಟಿಸು. M. up a garment ಉಡಿಗೆ ತಯಾರಿಸು. M. up a marriage ಮದುವೆ ಏರ್ಪಡಿಸು. M. up medicine ಔಷಧ ತಯಾರಿಸು. M. up one's mind ನಿರ್ಧರ ಮಾಡು; ಒಂದು ಗೊತ್ತಿಗೆ ಬರು. M. up a parcel ಭಾಂಗಿ ಕಟ್ಟು. M. up the requisite sum ಗೊತ್ತಾದ ಮೊತ್ತವಾಗಲು ಕೊರೆ ಸೇರಿಸು. M. up a story ಕಥೆ ಕಟ್ಟು. M. up type ಜೋಡಿಸಿದ ಮೊಳೆಗಳನ್ನು ಮುದ್ರಣ ಮಾಡಲು (ಪುಟಗಳಾಗಿ, ಸಾಲುಗಳಾಗಿ) ಸಿದ್ಧಪಡಿಸು. M. it up ರಾಜಿ ಮಾಡಿಕೊ. M. verses ಪದ್ಯಗಳನ್ನು ಬರೆ. M. war ಯುದ್ಧ ನಡಸು. M. way ಮುಂದುವರಿ; ಅಭಿವೃದ್ಧಿ ಹೊಂದು. Makeweight ಸರಿ ತೂಕ ಮಾಡಲು, ದಡ ಕಟ್ಟಲು, ಸೇರಿಸಿದ ಸ್ವಲ್ಪ ಮೊತ್ತ (ವ್ಯಕ್ತಿಗಳ ವಿಷಯದಲ್ಲಿ ರೂಪ.). ಒಂದು ಪಕ್ಷದ ವಾದ ಬಲವತ್ತರವಾಗಿ ಕಾಣುವಂತೆ ಮಾಡಲು ಸೇರಿಸಿದ ಒಂದು ಲಾಘವ ವಿಷಯ. M. a written will ಅಂತಿಮ ಇಷ್ಟಪತ್ರವನ್ನು ಬರೆದು ತಯಾರಿಸು. M. work ಕೆಲಸ ಮಾಡಲು ಅವಕಾಶ ಕಲ್ಪಿಸು; ತೊಂದರೆ ಕೊಡು. He makes Richard die in 1026 ರಿಚರ್ಡ್ ದೊರೆ ೧೦೨೬ರಲ್ಲಿ ಸತ್ತಂತೆ ಅವನು ನಿರೂಪಿಸುತ್ತಾನೆ. We made the coast of Galway this 10th ಗಾಲ್ವೆಯ ತೀರವನ್ನು ಈ ಹತ್ತನೆಯ ದಿನ ಕಂಡೆವು. He made his fortune ಅವನು ಐಶ್ವರ್ಯ ಗಳಿಸಿದನು. He made to go ಅವನು ಹೊರಡಲು ಸಿದ್ಧನಾದನು. The snow makes fast now ಈಗ ಘನಹಿಮವು ಹೆಚ್ಚಾಗಿ ಸೇರುತ್ತಿದೆ. This makes pleasant reading ಇದು ಓದುವುದಕ್ಕೆ ಸ್ವಾರಸ್ಯವಾಗಿದೆ. This makes the tenth time ಇದು ಸೇರಿ ಹತ್ತನೆಯ ಸಲ. The road makes towards Rome ಈ ದಾರಿ ರೋಮಿನ ಕಡೆಗೆ ಹೋಗುತ್ತದೆ. 'Find' makes in the past tense 'Found'. 'Find' ಧಾತು ಭೂತ ರೂಪದಲ್ಲಿ 'Found' ಆಗುತ್ತದೆ. Two & Two make four ಎರಡಕ್ಕೆ ಎರಡು ಸೇರಿದರೆ ನಾಲ್ಕು ಆಗುತ್ತದೆ. **Máker** (ನಾ.) (ಕ್ರಿಯಾರ್ಥಗಳಲ್ಲಿ). ಮು., The M., Our M. ಸೃಷ್ಟಿಕರ್ತ; ದೇವರು. **Máking** (ನಾ.) (ಕ್ರಿಯಾರ್ಥಗಳಲ್ಲಿ). [(ಮು.) Be the m. of ಜಯಕ್ಕೆ, ಅಭಿವೃದ್ಧಿಗೆ, ಕಾರಣನಾಗು]. (ಬ. ವ. ದಲ್ಲಿ) ಸಂಪಾದನೆ; ಲಾಭ; ಗಳಿಕೆ. (ಬ. ವ. ದಲ್ಲಿ) ಅವಶ್ಯ ಗುಣಗಳು (He has the makings of a general)

Make (ನಾ.) (ಸ್ವಾಭಾವಿಕ ವಸ್ತುವಿನ ಅಥವಾ ತಯಾರಿಸಿದ ವಸ್ತುವಿನ) ರಚನೆ(ಯ ರೀತಿ) ಅಥವಾ ಘಟನಾವಯವಗಳು. ಮನೋಭಾವ; ನೈತಿಕ ಪ್ರವೃತ್ತಿ. [American m. ಅಮೇರಿಕದಲ್ಲಿ ತಯಾರಾದದ್ದು. On the m. (ಅಸಂ.) ಲಾಭದ ದೃಷ್ಟಿಯಿಂದ]. (ವಿದ್ಯುತ್) ಅನ್ಯೋನ್ಯ ಸಂಪರ್ಕ ಕಲ್ಪನೆ; ಸಂಪರ್ಕ ಸ್ಥಾನ (At m. ಸಂಪರ್ಕ ಸ್ಥಾನದಲ್ಲಿ)

Malácca ಮಲ್ಯಾಕ (ನಾ.) ಮಲಯ ಪರ್ಯಾಯ ದ್ವೀಪದಲ್ಲಿಯ ಒಂದು ಪಟ್ಟಣ, ಜಿಲ್ಲೆ. M. cane ಮಲ್ಯಾಕದ ತಾಳೆಯ ಕಾಂಡದಿಂದ ಮಾಡಿದ ಕೈಬೆತ್ತ.

Málachite ಮ್ಯಾಲಕೈಟ್ (ನಾ.) ತಾಮ್ರದ ಜಲಸಂಯುಕ್ತ ಇಂಗಾಲಾಮ್ಲ ಲವಣ: 'ಮ್ಯಾಲಕೈಟ್'; ಉಜ್ವಲವಾದ ಮೆರುಗು ಕೊಡರಾಗುವ ಹಸುರು ಬಣ್ಣದ ಒಂದು ಖನಿಜ.

Malacólogy ಮ್ಯಾಲಕಾಲೊಜಿ (ನಾ.) ಮೃದ್ವಂಗಿ ಪ್ರಾಣಿಶಾಸ್ತ್ರ. **Malacólogist** (ನಾ.) —ಶಾಸ್ತ್ರಜ್ಞ.

Maladjústment ಮ್ಯಾಲಡ್ಜಸ್ಟ್‌ಮೆಂಟ್ (ನಾ.) ತಪ್ಪು ಹೊಂದಾವಣೆ; ಹೊಂದಿಕೆಯಿಲ್ಲದಿರುವುದು; ಅವ್ಯವಸ್ಥೆ.

Maladministrátion ಮ್ಯಾಲ್ಯಡ್ಮಿನಿಸ್ಟ್ರೇಷನ್ (ನಾ.) ಅಂದಗೆಟ್ಟ ಆಡಳಿತ; ಅವಿವೇಕದ ಕಾರುಬಾರು.

Máladroít ಮ್ಯಾಲಡ್ರಾಯ್ಟ್ (ಗು.) ಚಾತುರ್ಯವಿಲ್ಲದ; ನಾಜೂಕಿಲ್ಲದ; ಅವಿವೇಕವಾದ; ವಿಚಕ್ಷಣೆಯಿಲ್ಲದ; ಅವ್ಯವಸ್ಥೆಯಾದ. **Máladroítly** (ಕ್ರಿ. ವಿ.); **Máladroítness** (ನಾ.)

Málady ಮ್ಯಾಲಡಿ (ನಾ.) ರೋಗ; ಉಪದ್ರವ; ವ್ಯಾಧಿ; ಬೇನೆ (ರೂಪ. ಸಹ)

Mála fíde (L) ಮೇಲ ಫೈಡಿ (ಕ್ರಿ. ವಿ., ಗು.) ದುರಭಿಪ್ರಾಯದಿಂದ (ವರ್ತಿಸುತ್ತಿರುವ, ಮಾಡಿದ); ದುರುದ್ದೇಶದ; —ದಿಂದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Málaise (F) ಮ್ಯಾ(ಮಾ)ಲೇಸ್ (ನಾ.) (ಮು., ಗೊತ್ತಾದ ರೋಗ ಯಾವುದೂ ಕಾಣಿಸಿಕೊಳ್ಳದೆ) ದೇಹದ ಇರುಸು ಮುರುಸು, ಅಸ್ವಸ್ಥತೆ, ಆಲಸ್ಯ.

Málapert ಮ್ಯಾಲಪರ್ಟ್ (ಗು., ನಾ.) (ಪ್ರಾಚೀ. ಪ್ರ.) ಉದ್ಧತ; ಧೃಷ್ಟ; ಮರ್ಯಾದೆಗೆಟ್ಟವನು.

Málaprop(ism) ಮ್ಯಾಲಪ್ರಾಪ್, —ಪಿಸ್‌ಮ್ (ನಾ.) ಒಂದನ್ನೊಂದು ಸ್ವಲ್ಪ ಮಟ್ಟಿಗೆ ಹೋಲುವ ಪದಗಳ ಅರ್ಥ ಸರಿಯಾಗಿ ತಿಳಿಯದೆ ತಪ್ಪು ಪದವನ್ನು ಹಾಸ್ಯಾಸ್ಪದವಾಗುವಂತೆ ಪ್ರಯೋಗಿಸುವುದು : ಸಾದೃಶ್ಯ ಪದದ ಅಪಪ್ರಯೋಗ [ಉದಾ., *Allegory* on the banks of the Nile (*Alligator* ಎಂಬುದಕ್ಕೆ ಬದಲಾಗಿ)]. **Malaprópian** (ಗು.). (Sheridan ಎಂಬ ಇಂಗ್ಲಿಷ್ ಕವಿಯ Rivals ಎಂಬ ನಾಟಕ ದಲ್ಲಿ ಬರುವ Mrs Malaprop ಎಂಬ ಪಾತ್ರದ ಹೆಸರಿನಿಂದ)

Malapropós ಮಾಲಾಪ್ರೊಪೊ, ಮ್ಯಾಲ್ಯಾಪ್ರೊಪೋ (ಕ್ರಿ. ವಿ., ಗು., ನಾ.) ಅಸಂಗತ(ವಾಗಿ); ಅನುಚಿತ(ವಾಗಿ); ಅಪ್ರಸ್ತುತ(ವಾಗಿ); ಅಪ್ರಾಸಂಗಿಕವಾಗಿ. (ನಾ.) —ಹೇಳಿದ್ದು, ಮಾಡಿದ್ದು, ನಡೆದದ್ದು.

Málar ಮೇಲರ್ (ಗು., ನಾ.) ಕೆನ್ನೆಯ (ಮೂಳೆ); ಗಂಡಾಸ್ಥಿ.

Maláriа ಮಲೇರಿಯ (ನಾ.) [ಸೊಳ್ಳೆಯ ಕಡಿತದಿಂದ ರೋಗಾಣುಗಳು (ಮನುಷ್ಯನ) ರಕ್ತದಲ್ಲಿ ಸೇರಿ ಹುಟ್ಟುವ, ಬಿಟ್ಟು ಬಿಟ್ಟು ಬರುವ ಮತ್ತು ಬಿಡದೆ ಬರುವ] ಒಂದು ತೆರದ ಜ್ವರ; ಮಲೇರಿಯಾ ಜ್ವರ; ಚಳಿಜ್ವರ. (ಈ ರೋಗಕ್ಕೆ ಮೂಲ ಕಾರಣವೆಂದು ಹಿಂದೆ ಹೇಳುತ್ತಿದ್ದ) ಜೌಗು ಪ್ರದೇಶದ ಕೆಟ್ಟ ಹವೆ. **Malárial** = **Malárian** = **Malárious** (ಗು.)

Málcontent ಮ್ಯಾಲ್‌ಕಂಟೆಂಟ್ (ಗು., ನಾ.) (ಸದ್ಯಃಸ್ಥಿತಿಯಲ್ಲಿ) ಸಮಾಧಾನವಿಲ್ಲದ(ವನು); ಅಸಂತುಷ್ಟ; ಎದುರು ಬೀಳುವ, ದಂಗೆ ಯೇಳುವ, —ಪ್ರವೃತ್ತಿಯುಳ್ಳ(ವನು)

Mal de mér (F) ಮ್ಯಾಲ್ ಡ ಮೇರ್ (ನಾ.) (ಸಮುದ್ರಪ್ರಯಾಣದಲ್ಲಿ ಬರುವ) ಸಮುದ್ರ ಪಿತ್ತರೋಗ.

Male ಮೇಲ್ (ಗು., ನಾ.) ಗಂಡು (ಲಿಂಗದ) (ವ್ಯಕ್ತಿ, ಪ್ರಾಣಿ, ಸಸ್ಯ); ಗಂಡಸಿನ, —ಸರ; ಗಂಡು ಪ್ರಾಣಿಯ, —ಗಳ. (ಯಂತ್ರಭಾಗಗಳ ವಿಷಯದಲ್ಲಿ) ರಂಧ್ರದಂಥ ಭಾಗಕ್ಕೆ ಹೊಂದುವಂತೆ ಮಾಡಿದ ಬೆಣೆ ಯಂಥ ಭಾಗ: ಗಂಡು ಭಾಗ [M. screw ಗಂಡು ತಿರುಪು (ಮೊಳೆ); ತಿರುಪು ಗೂಟ]. (ನಾ.) ಗಂಡಸು; ಗಂಡು (ಪ್ರಾಣಿ)

Maledíction ಮ್ಯಾಲಡಿಕ್‌ಷನ್ (ನಾ.) ಶಾಪ. **Maledíctory** (ಗು.)

Málefactor ಮ್ಯಾಲಫ್ಯಾಕ್ಟರ್ (ನಾ.) ದುಷ್ಕರ್ಮಿ; ಕೇಡಿಗ; ತಕ್ಸೀರು ದಾರ; ಅಪರಾಧಿ; ಅಪಕಾರಿ (Benefactor ಎಂಬುದಕ್ಕೆ ವಿರುದ್ಧ ಪದ). **Malefáction** (ನಾ.)

Maléfic ಮಲೆಫಿಕ್ (ಗು.) (ಮಂತ್ರ ಮಾಟಗಳ ವಿಷಯದಲ್ಲಿ) ಕೆಡುಕು ಮಾಡುವ, ಹಾನಿಕರ; ಉಪದ್ರವಕಾರಿ. **Maléficent** —ಸೆಂಟ್ (ಗು.) ಕೆಡುಕು ಮಾಡುವ; ಹಾನಿಕರ (*To* ಉಪ. ಜೊತೆನೆ). ಅಪರಾಧದ; ತಕ್ಸೀರಿನ. **Maléficence** (ನಾ.)

Malévolent ಮಲೆವೊಲೆಂಟ್ (ಗು.) (ಮತ್ತೊಬ್ಬರಿಗೆ) ಕೇಡೆಣಿಸುವ. **Malévolence** (ನಾ.); **Malévolently** (ಕ್ರಿ. ವಿ.)

Malfeásance ಮ್ಯಾಲ್‌ಫೀಸನ್ಸ್ (ನಾ.) (ನ್ಯಾ. ಶಾ.) ಅಕೃತ್ಯ ಮಾಡು ವುದು; ದುಷ್ಕೃತ್ಯ (ಮು., ಅಧಿಕಾರದ ದುರ್ವರ್ತನೆ). **Malfeásant** (ಗು., ನಾ.)

Malformátion ಮ್ಯಾಲ್‌ಫಾರ್ಮೇಷನ್ (ನಾ.) ವಿಕಾರ ರಚನೆ; ವಿಕೃತಿ; ವೈರೂಪ್ಯ. **Malfórmed** (ಗು.)

Málic ಮೇಲಿಕ್ (ಗು.) (ರ. ವಿ.) M. acid ಸೇಬು ಮತ್ತು ಇತರ ಹಣ್ಣುಗಳಲ್ಲಿ ದೊರೆಯುವ ಒಂದು ಆಮ್ಲ: 'ಮೇಲಿಕ್' ಆಮ್ಲ.

Málice ಮ್ಯಾಲಿಸ್ (ನಾ.) ಮತ್ಸರ; ಹಗೆಸಾಧನೆ; ದ್ವೇಷ; ಕೇಡಿಗ ತನ; ಪೀಡಿಸಬೇಕೆಂಬ ಇಚ್ಛೆ. Bear m. (to) (ಒಬ್ಬನಮೇಲೆ) ದ್ವೇಷ ಕಾರು. (ನ್ಯಾ. ಶಾ.) (ಮು., ಖೂನಿ, ಮೊ. ತಕ್ಸೀರುಗಳಲ್ಲಿ ಅಪರಾಧವನ್ನು ಹೆಚ್ಚಿಸುವ) ದುರುದ್ದೇಶ, ದ್ವೇಷಕಾರ್ಯ. M. prepense (Prepense ನೋಡಿ). **Malícious** (ಗು.); **Malíciously** (ಕ್ರಿ. ವಿ.)

Malígn ಮಲೈನ್ (ಗು., ಕ್ರಿ. ಸಕ.) (ವಸ್ತುಗಳ ವಿಷಯದಲ್ಲಿ) ಕೇಡು ಮಾಡುವ; ಹಾನಿಕರ. (ರೋಗಗಳ ವಿಷಯದಲ್ಲಿ) = Malignant. (ವಿರ. ಪ್ರ.) = Malevolent. (ಕ್ರಿ.) (ಒಬ್ಬನ ವಿಷಯದಲ್ಲಿ) ಕೆಟ್ಟದ್ದು ಆಡು, ದೂಷಣೆ ಮಾಡು; ಅಪವಾದ ಹೊರಿಸು; ಹೆಸರು ಕೆಡಿಸು; ಹಳಿ; ದೂರು. **Malígnly** (ಕ್ರಿ. ವಿ.); **Malígnant** ಮಲಿಗ್ನಂಟ್ (ಗು., ನಾ.) (ರೋಗದ ವಿಷಯದಲ್ಲಿ) ಅತ್ಯುಗ್ರವಾದ ಅಥವಾ ಹರಡಿ ಕೊಳ್ಳುವುದಾದ [ಈಗ ಸಾ., ರೋಗದ ಒಂದು ವಿಶೇಷ ಅವಸ್ಥೆಯನ್ನು ಸೂಚಿಸುವಲ್ಲಿ ಪ್ರ. (ಉದಾ., M. Cholera ಪ್ರಾಣಾಪತ್ತಿನ ವಿಷೂಚಿ)]. ಕೇಡುಂಟುಮಾಡುವ; ಹಾನಿಕರ. ಬದ್ಧ ವೈರ ಭಾವನೆಯುಳ್ಳ; ಬದ್ಧ ವೈರ ತೋರಿಸುವ. **Malígnancy** (ನಾ.); **Malígnantly** (ಕ್ರಿ. ವಿ.); **Malígnity** ಮಲಿಗ್ನಿಟಿ (ನಾ.) ಬದ್ಧ ವೈರ. (ರೋಗದ ವಿಷಯದಲ್ಲಿ) ಅತ್ಯುಗ್ರತೆ; ಬಹು ಕ್ರೂರ ಸ್ವಭಾವ, ಲಕ್ಷಣ.

Malígnant, Malígnity, etc. **Malign** ನೋಡಿ.

Malínger ಮಲಿಂಗರ್ (ಕ್ರಿ. ಅಕ.) (ಮು., ಸಿಪಾಯಿ ಅಥವಾ ನಾವಿಕನ ವಿಷಯದಲ್ಲಿ) ಕೆಲಸ ತಪ್ಪಿಸಿಕೊಳ್ಳಲು ಕಾಯಿಲೆ ನಟಿಸು, ತಂದುಕೊ, ಬೆಳಸು. **Malíngerer** (ನಾ.)

Málism ಮೇಲಿಸ್‌ಮ್ (ನಾ.) 'ಪ್ರಪಂಚ ಕೆಟ್ಟದು' ಎಂಬ ವಾದ.

Málison ಮ್ಯಾಲಿಸ(ಸ್, ಸ್)ನ್ (ನಾ.) (ಪ್ರಾಚೀ. ಪ್ರ.) ಶಾಪ.

Mall ಮಾಲ್ (ನಾ.) ನೆರಳಿರುವ ಅಂದವಾದ ನಡೆದಾರಿ, ವಿಹಾರ ಮಾರ್ಗ. [The M. ಲಂಡನ್ನಿನ St James's Park ಎಂಬ ಉದ್ಯಾನದಲ್ಲಿಯ ಇಂಥ ವಿಹಾರಮಾರ್ಗ (ಆದಿಯಲ್ಲಿ, Pall-mall ಎಂಬ ಆಟ ಆಡುವ ಓಣಿ)]. Pall-mall ಎಂಬ ಆಟ; ಈ ಆಟದ ಓಣಿ; ಈ ಆಟದ ಕೊಡತಿ(ಯ ದಾಂಡು)

Mállard ಮ್ಯಾಲಡ್ (ನಾ.) ಕಾಡು ಬಾತು; —ಬಾತಿನ ಮಾಂಸ.

Mílleable ಮ್ಯಾಲಿಅಬ್‌ಲ್ (ಗು.) (ಲೋಹ, ಮೊ. ಗಳ ವಿಷಯದಲ್ಲಿ) ಬಡಿಯುವುದರಿಂದ, ಬಲ ಪೀಡನದಿಂದ, ಒಡೆದುಹೋಗದೆ ತಗಡಾಗಿ, ರೇಕುಗಳಾಗಿ, ವಿಸ್ತರಿಸಬಹುದಾದ; ತಗಡು ಬಡಿಯಲಾಗುವ. (ರೂಪ.) (ಹೇಗೆಂದರೆ ಹಾಗೆ) ಹೊಂದಿಕೊಳ್ಳುವ, ತಿರುಗಿಸಲಾಗುವ; ಸುಲಭ ನಮ್ಯ; ಮೆತುವಾದ. **Malleabílity** (ನಾ.)

Mállet ಮ್ಯಾಲೆಟ್ (ನಾ.) (ಮರದ) ಕೊಡತಿ. ('ಕ್ರೋಕೆ' ಅಥವಾ 'ಪೋಲೊ' ಆಟದಲ್ಲಿ) ಮರದ ಚೆಂಡನ್ನು ಹೊಡೆಯಲು ಉಪಯೋ ಗಿಸುವ ಉದ್ದವಾದ ಹಿಡಿಯುಳ್ಳ ಕೊಡತಿ (ದಾಂಡು)

Málleus (L) ಮ್ಯಾಲಿಯಸ್ (ನಾ.) [ಕರ್ಣದುಂದುಭಿಯ (ಧ್ವನಿ) ಕಂಪನ ಗಳನ್ನು (ಅಡಿಗಲ್ಲಿನಾಕಾರದ) ಸ್ಥೂಣಾಸ್ಥಿ ಎಂಬ ಎಲುಬಿಗೆ ವಹಿಸುವ ಮಧ್ಯಕಿವಿಯೊಳಗಿನ ಕೊಡತಿಯಾಕಾರದ] ಒಂದು ಸಣ್ಣ ಎಲುಬು: ಮುದ್ಗರಾಸ್ಥಿ.

Mállow ಮ್ಯಾಲೋ (ನಾ.) (ಧೂಮ್ರ ವರ್ಣದ ಹೂವು ಬಿಡುವ ಒಂದು ಕಾಡು ಬೆಳೆಯ ಅಥವಾ ತೋಟದ ಬೆಳೆಯ) ಬಿಂದಿಗೆ ಹೂವಿನ ಜಾತಿಯ ಗಿಡ.

Málm ಮಾಮ್ (ನಾ.) ಮೆತುವಾದ ಸೀಮೆಸುಣ್ಣದ ಬಂಡೆ. ಇಂಥ ಶಿಲೆ ಶೈಥಿಲ್ಯಹೊಂದಿ ಆದ ಫಲವತ್ತಾದ ಜಿಗುಟುಮಣ್ಣು.

Málmsey ಮಾಂಸಿ (ನಾ.) ತೀವ್ರವಾದ ಸಿಹಿ ದ್ರಾಕ್ಷಾಮದ್ಯ.

Malnutrítion ಮ್ಯಾಲ್‌ನ್ಯೂಟ್ರಿಷನ್ (ನಾ.) ತಕ್ಕಷ್ಟು, ಸರಿಯಾದ, ಆಹಾರ ಪೋಷಣೆ ಇಲ್ಲದಿರುವುದು; ನ್ಯೂನ ಪೋಷಣೆ.

Malódorous ಮ್ಯಾಲೋಡೊ(ಡ)ರಸ್ (ಗು.) ಕೆಟ್ಟ ನಾತದ; ದುರ್ವಾಸನೆಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Malpráctice ಮ್ಯಾಲ್‌ಪ್ರ್ಯಾಕ್ಟಿಸ್ (ನಾ.) ತಪ್ಪು ಕೆಲಸ ; ಅಕಾರ್ಯ. (ನ್ಯಾ. ಶಾ.) (ರೋಗಿಯನ್ನು ತಕ್ಕಂತೆ ನೋಡಿಕೊಳ್ಳದ) ವೈದ್ಯನ ಅಯೋಗ್ಯ ಅಥವಾ ಉದಾಸೀನತೆಯ ಚಿಕಿತ್ಸೆ. (ನ್ಯಾ. ಶಾ.) ನಂಬಿಕೆಯ ಸ್ಥಾನದಲ್ಲಿರುವಾಗ ಸ್ವಂತ ಪ್ರಯೋಜನಕ್ಕಾಗಿ ಮಾಡುವ ನ್ಯಾಯವಿರುದ್ಧವಾದ ಕಾರ್ಯ, ದುಷ್ಪ್ರವರ್ತನೆ.

Malt ಮಾಲ್ಟ್ (ನಾ., ಕ್ರಿ.) ಹುಳಿಸಿ ಅಥವಾ ಬಟ್ಟಿಗೆ ಹಾಕಿ ಸಾರಾಯಿ ಇಳಿಸುವುದಕ್ಕಾಗಿ, ನೆನೆಹಾಕಿ ಮೊಳೆಯಿಸಿ, ಶಾಖಕೊಟ್ಟು ಒಣಗಿಸಿ, ಅನುಗೊಳಿಸಿದ ಜವೆಗೋಧಿ ಅಥವಾ ಇತರ ಧಾನ್ಯ ; ಮೊಳೆ ಧಾನ್ಯ : 'ಮಾಲ್ಟು'. (ಕ್ರಿ.) (ಧಾನ್ಯವನ್ನು) ಮಾಲ್ಟನ್ನಾಗಿ ಮಾರ್ಪಡಿಸು ; (ಧಾನ್ಯಬೀಜವು ನೀರಿಲ್ಲದೆ ಮೊಳೆಯುವುದು ನಿಧಾನವಾಗಿ) 'ಮಾಲ್ಟ್' ಸ್ಥಿತಿಗೆ ಬರು. Extract of m. (ರೋಗದಿಂದ ಅಶಕ್ತರಾದವರಿಗೆ ಆಹಾರವಾಗಿ ಕೊಡುವ) ಮೊಳೆಧಾನ್ಯದ ಸತ್ತ್ವಸಾರ. **M. liquor** (ಬಟ್ಟಿಯಿಳಿಸದೆ) ಹುಳಿಸಿ ಮಾಡಿದ ಮೊಳೆಧಾನ್ಯದ ಮದ್ಯ (ಉದಾ., Beer, stout ಮದ್ಯಗಳು). **M.-house** ಮೊಳೆಧಾನ್ಯವನ್ನು ತಯಾರಿಸುವ ಮತ್ತು ಇಟ್ಟಿರುವ ಮನೆ. **M.-worm** (ರೂಪ.) ಅತಿ ಕುಡುಕ. **Málting** (ನಾ.) (ಕ್ರಿಯಾರ್ಥಗಳಲ್ಲಿ). = M.-house. **Máltose** ಮಾಲ್ಟೋಸ್ (ನಾ.) (ರ. ವಿ.) ಮೊಳೆಧಾನ್ಯದ ಕರ್ತೃತ್ವದ ಮೂಲಕ ಜಲಪಿಷ್ಟದಿಂದ ತಯಾರಾದ ಸಕ್ಕರೆ ; ಮಾಲ್ಟ್‌ಸಕ್ಕರೆ. **Máltster** ಮಾಲ್ಟ್‌ಸ್ಟರ್ (ನಾ.) ಮೊಳೆಧಾನ್ಯ ಮಾಡುವವನು ; ಮಾಲ್ಟುಕಾರ.

Malthúsian ಮ್ಯಾಲ್‌ತ್ಯೂಸಿಯನ್ (ಗು., ನಾ.) ಪ್ರಜಾ ಸಂಖ್ಯೆ ಹೆಚ್ಚುವುದನ್ನು ತಡೆಗಟ್ಟುವುದಕ್ಕಾಗಿ ಸಂಯಮವನ್ನು ಬಳಕೆಗೆ ತರ ಬೇಕೆಂದು ಬೋಧಿಸಿದ Malthus ಎಂಬಾತನ (ಅನುಯಾಯಿ). **Malthúsianism** (ನಾ.) ಮ್ಯಾಲ್ತಸ್ಸಿನ ಸಂತಾನ ನಿರೋಧ ಬೋಧೆ, ಉಪದೇಶ.

Maltreát ಮ್ಯಾಲ್‌ಟ್ರೀಟ್ (ಕ್ರಿ. ಸಕ.) ಕೆಡುಕು ಮಾಡು ; ಕ್ರೌರ್ಯ ತೋರಿಸು ; ಬಯ್ಯು ; ಹಿಂಸಿಸು ; ಒರಟಾಗಿ ಕೈಮಾಡು. **Maltreátment** (ನಾ.)

Malváceous ಮ್ಯಾಲ್ವೇಷಸ್ (ಗು.) ದಾಸವಾಣ, ಹತ್ತಿ, ಬೆಂಡೆ— ಈ ಗಿಡಗಳ ಜಾತಿಯ.

Malversátion ಮ್ಯಾಲ್‌ವರ್ಸೇಷನ್ (ನಾ.) ನಂಬಿಕೆಯ ಸ್ಥಾನದಲ್ಲಿದ್ದು ನಡೆಯುವ ದುರ್ನಡತೆ, ಮಾಡುವ ದುರ್ವ್ಯಾಪಾರ ; ದುರಾಚರಣೆ ; (ಸಾರ್ವಜನಿಕವಾದ ಹಣ, ಮೊ. ಗಳ) ದುರಾಡಳಿತ, ದುರುಪಯೋಗ.

Mámeluke ಮ್ಯಾಮೆಲೂ(ಲ್ಯೂ)ಕ್ (ನಾ.) (ಚರಿತ್ರೆ) ೧೨೫೪ರಲ್ಲಿ ಈಜಿಪ್ಟ್ ದೇಶದ ಸಿಂಹಾಸನವನ್ನು ಆಕ್ರಮಿಸಿಕೊಂಡ (ಮೊದಲು, ಕಾಕಸಸ್ ಪ್ರಾಂತದ ಗುಲಾಮರಾಗಿದ್ದ) ಸೈನಿಕ ವರ್ಗದವನು. (ಮಹಮ್ಮದೀಯ ರಾಜ್ಯಗಳಲ್ಲಿ) ಗುಲಾಮ.

Mamílla, etc. **Mamma²** ನೋಡಿ.

Mam(m)á¹ ಮಮಾ (ನಾ.) ಅಮ್ಮ (ಮು., ಮಕ್ಕಳ ಮಾತು)

Mámma² ಮ್ಯಾಮ (ನಾ. ; ಬ. ವ. -ae —ಮೀ) (ಸಸ್ತನಿಗಳಲ್ಲಿ) ಹಾಲು ಹುಟ್ಟುವ ಅವಯವ : ಮೊಲೆ ; ಸ್ತನ. (ಗಂಡಿನಲ್ಲೂ) ಸ್ತನ. **Mámmary** (ಗು.) (ಹೆಣ್ಣಿನ) ಸ್ತನಗಳ. **Mammíferous** (ಗು.) (ಹೆಣ್ಣು) ಸ್ತನಗಳುಳ್ಳ ; = Mammalian. **Mámmiform** (ಗು.) ; **Mámmal** (ನಾ.) ಸಸ್ತನಿ (ವರ್ಗಕ್ಕೆ ಸೇರಿದ ಪ್ರಾಣಿ). **Mammália** (L) ಮ್ಯಮೇಲಿಯ (ನಾ., ಬ. ವ.) ಮರಿಗಳಿಗೆ ಆಹಾರ ಕೊಟ್ಟು ಪೋಷಿಸಲು ಸ್ತನಗಳಿರುವ ಪ್ರಾಣಿವರ್ಗ : ಸಸ್ತನಿ (ಪ್ರಾಣಿ)ವರ್ಗ. **Mammálian** (ಗು., ನಾ.) ; **Mammálogy** ಮ್ಯಮ್ಯಾಲಜಿ (ನಾ.) ಸಸ್ತನಿ ಪ್ರಾಣಿ ಶಾಸ್ತ್ರ. **Mammálogist** (ನಾ.) ; **Mammalíferous** ಮ್ಯಾಮಲ— (ಗು.) (ಭೂ. ವಿ.) ಸಸ್ತನಿ ಪ್ರಾಣಿಗಳ ಪಳೆಯುಳಿಕೆಗಳನ್ನುಳ್ಳ. **Mamílla** ಮ್ಯಾಮಿಲ (ನಾ.) (ಹೆಣ್ಣು) ಮೊಲೆಯ ತೊಟ್ಟು ; ಚೂಚುಕ, ಮೊಲೆತೊಟ್ಟಿನಾಕಾರದ ಅವಯವ, ಮೊ. ವು. **Mámillary** (ಗು.) ; **Mámillate(d)** (ಗು.) ಮೊಲೆ ತೊಟ್ಟುಳ್ಳ ; ಮೊಲೆತೊಟ್ಟಿನಂತಿರುವ ಸಣ್ಣ ಉಬ್ಬುಗಳುಳ್ಳ. **Mamílliform** (ಗು.)

Mámmal, etc. **Mamma²** ನೋಡಿ.

Mámmon ಮ್ಯಾಮನ್ (ನಾ.) ಧನ, (ಭಗವಂತನಿಗೆ ವಿರೋಧಿಯೆಂದು ಕ್ರೈಸ್ತರು ಭಾವಿಸುವ ದೇವತೆ) ; ಧನ ಪಿಶಾಚಿ ; ಧನ ಪೀಡೆ ; (ಕೇವಲ ಐಹಿಕ ಕಾಮಿಯಾದ) ಧನ ಲೋಭಿ. The m. of unrighteousness ದುರ್ವ್ಯಯ ಮಾಡುವ ಅಥವಾ ಅನ್ಯಾಯಾರ್ಜಿತವಾದ ಧನ, ಐಶ್ವರ್ಯ. **Mámmonish** (ಗು.) ಐಶ್ವರ್ಯ ಪ್ರೇರಿತ ; ದ್ರವ್ಯಾನುರಕ್ತ. **Mámmonism** (ನಾ.) ಅರ್ಥ ಪರಾಯಣತೆ. **Mámmonist** (ನಾ.), **Mámmonite** (ನಾ.) ಧನಾರಾಧಕ.

Mámmoth ಮ್ಯಾಮತ್ (ನಾ., ಗು.) ವಂಶ ನಷ್ಟವಾಗಿ ಹೋದ, ದೊಡ್ಡ ಗಾತ್ರದ ಆನೆ(ಯ ಜಾತಿ) ; ಬೃಹದ್ಗಜ(ದಂಥ) ; ವಿಪರೀತ ದೊಡ್ಡ.

Mámmy ಮ್ಯಾಮಿ (ನಾ.) (ಮಕ್ಕಳ ಮಾತು) ಅಮ್ಮ. (ಅಮೆ. ಸಂ.) ಬಿಳಿಯ ಕುಲದವರ ಮಕ್ಕಳನ್ನು ನೋಡಿಕೊಳ್ಳುವ ಕಪ್ಪು (ಕುಲದ) ಹೆಂಗಸು, ದಾದಿ.

Man ಮ್ಯಾನ್ (ನಾ. ; ಬ. ವ. Men ಮೆನ್) ಮನುಷ್ಯ (A man & a brother ನಮ್ಮಂತೆ ಮನುಷ್ಯ ; ನಮ್ಮ ಅಣ್ಣ ತಮ್ಮ). (ಅನಿರ್ದಿಷ್ಟ ಅಥವಾ ಸಾಮಾನ್ಯ ಪ್ರ.) ಒಬ್ಬ ಮನುಷ್ಯ ; ವ್ಯಕ್ತಿ ; ಆಳು [Any, no, m. ; Some, few, men. (All) to a man (ಒಬ್ಬನೂ ಉಳಿಯದೆ) ಎಲ್ಲರೂ]. ಮನುಷ್ಯ ಕುಲ, ವರ್ಗ [M. wants but little here below ಮನುಷ್ಯನಿಗೆ ಈ ಲೋಕದಲ್ಲಿ ಬೇಕಾಗಿರುವುದು ಅತ್ಯಲ್ಪ. Inner, outer, m. ಅಂತರಾತ್ಮ, ಸ್ಥೂಲ ದೇಹ. (ಹಾಸ್ಯ ಪ್ರ.) ದೇಹದ ಒಳ ಭಾಗ (ಮು., ಹೊಟ್ಟೆ) ; ಹೊರ ದೇಹ. New, old, m. (ಆಯಾ ಪದವನ್ನು ನೋಡಿ)]. ಪ್ರಾಯದ ಗಂಡು (ಎದುರು ಪದ : Boy, woman). [M. & boy (ಕ್ರಿ. ವಿ.) ಬಾಲ್ಯ ದಿಂದಲೂ ; ಬಾಲ್ಯಾರಭ್ಯ. (ತಾಳ್ಮೆಯಿಲ್ಲದಿರುವಾಗ ಅಥವಾ ಉತ್ಸಾಹದಲ್ಲಿ) Nonsense, m. ! (ಹಾಸ್ಯವಾಗಿ ಅಥವಾ ಪ್ರೀತಿಯಿಂದ) Little m. ಸಣ್ಣವನು ; ಹುಡುಗ ; ಮರಿ ; ಪುಟ್ಟಸಾಮಿ. What can a m. do in such a case ? ಅಂಥ ಸಂದರ್ಭದಲ್ಲಿ ಮನುಷ್ಯಮಾತ್ರದವನು ಏನು ತಾನೆ ಮಾಡಲಾದೀತು ? M. for m. (ಸ್ಪರ್ಧಿ ಪ್ರತಿಸ್ಪರ್ಧಿಗಳಲ್ಲಿ) ಆಳಿಗೆ ಆಳು. Between m. & m. ಮನುಷ್ಯ ಮನುಷ್ಯನಲ್ಲಿ. As a m. ಮನುಷ್ಯನೆಂದು ನೋಡಿದರೆ. If you want noise, he is your m. ನಿನಗೆ ಗದ್ದಲ ಬೇಕಾದರೆ ಅಗೋ ಅವನು. I'm your m. ನಾನು ನಿಮ್ಮವನು. Be one's own m. ಇನ್ನೊಬ್ಬರ ಆಳಾಗದೆ ತನಗೆ ತಾನೆ ಸ್ವತಂತ್ರನಾಗಿರು. ಬುದ್ಧಿಶಕ್ತಿ, ಇಂದ್ರಿಯಶಕ್ತಿ, ಮೊ. ವು ಪೂರ್ಣ ಸ್ವಾಧೀನದಲ್ಲಿರು. Every m. Jack (Jack¹ ನೋಡಿ). (ಸಮಾಸ ಪದಗಳಲ್ಲಿ : ಉದ್ಯೋಗ, ವೃತ್ತಿ, ವ್ಯಾಪಾರ, ಮೊ. ನ್ನು ಸೂಚಿಸುವ ಪದ) Clergym., Postm., Penm., Best m., Handy m. (ಆಯಾ ಪದವನ್ನು ನೋಡಿ)]. ಹೆಚ್ಚಾಗಿ ಗಂಡುಗುಣ ವುಳ್ಳವನು ; ಪೌರುಷಶಾಲಿ (Play the m. ಗಂಡಿನಂತೆ ನಡೆ ; ಪೌರುಷ ತೋರಿಸು). ಗಂಡ (M. & wife ಗಂಡ ಹೆಂಡಿರು). (ಚರಿತ್ರೆ) ಆಶ್ರಿತ ; ಆಳು ; ಸೇವಕ ; ಕೆಲಸಗಾರ (The masters locked out the men ಕಾರ್ಖಾನೆಯ ಧಣಿಗಳು ಕೆಲಸಗಾರರನ್ನು ಒಳಕ್ಕೆ ಬಿಡದೆ ಬೀಗ ಹಾಕಿದರು). (ಸಾ., ಬ. ವ. ದಲ್ಲಿ) (ಮು., ಸಾಮಾನ್ಯ) ಸಿಪಾಯಿಗಳು. (ಚದುರಂಗ, ಮೊ. ಆಟಗಳಲ್ಲಿ) ಕಾಯಿ. M. of straw (Straw ನೋಡಿ). **M.-of-war** (ಒಂದು ದೇಶದ ನೌಕಾ ದಳಕ್ಕೆ ಸೇರಿದ ಶಸ್ತ್ರಸಜ್ಜಿತವಾದ) ಯುದ್ಧದ ಹಡಗು. **Indiaman** (India ನೋಡಿ). **Merchantman** (Merchant ನೋಡಿ). M. of the world (World ನೋಡಿ). **M. Friday** ಅಡಿಯಾಳು ; ತನ್ನ ಧಣಿಗಾಗಿ ಎಲ್ಲ ಕೆಲಸಗಳನ್ನೂ ಮಾಡುವ ಸೇವಕ (ನಿರ್ಜನ ಪ್ರದೇಶ ವಾಸಿಯಾದ Robinson Crusoe ಎಂಬಾತನು ತನ್ನ ಆಳಿಗೆ ಇಟ್ಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆಸರಿನಿಂದ). M. about town (ಲಂಡನ್) ಪಟ್ಟಣದ ಸಮಾಜದ ಅಲೆಮಾರಿ. **M.-at-arms** ಮು., ಭಾರವಾದ ಆಯುಧಗಳನ್ನು ಧರಿಸಿರುವ ರಾವುತ ಸಿಪಾಯಿ. **M.-child** ಗಂಡು ಮಗು. **M.-eater** ನರ ಭಕ್ಷಕ; ಕಚ್ಚುವ ಕುದುರೆ; ಮನುಷ್ಯರನ್ನು ತಿನ್ನುವ 'ಷಾರ್ಕ್' ಮೀನು ಅಥವಾ ಹುಲಿ. **M.-handle** ಮನುಷ್ಯಬಲದಿಂದ ಸಾಗಿಸು. (ಅನಂ.) ಒರಟುತನದಿಂದ ಹಿಡಿದು ಜಗ್ಗಾಡಿಸು; ಹೊಡೆ. **M.-hole** ನೆಲ, ಚರಂಡಿ, ಮೊ. ಗಳಲ್ಲಿ ಮನುಷ್ಯನು ಒಳಹೊಗುವುದಕ್ಕಾಗಿ ಮಾಡಿರುವ ಕಂಡಿ: ಆಳುಗಂಡಿ. M. in the moon ಚಂದ್ರ ಮಂಡಲದಲ್ಲಿ ಕಾಣುವಂತೆ ಊಹಿಸುವ ಮನುಷ್ಯಾಕೃತಿ; ಊಹಾ ವ್ಯಕ್ತಿ. The m. in the street ಸಾಮಾನ್ಯ ಮನುಷ್ಯ (ಮು., 'ಯಾವುದಾದರೂ ವಿಷಯದಲ್ಲಿ ನಿಪುಣತೆ ಪಡೆದಿರುವವನು' ಎಂಬುದಕ್ಕೆ ಪ್ರತಿಯಾಗಿ). **M.-milliner** (Milliner ನೋಡಿ). M. of letters (Letter ನೋಡಿ). **M.-power** (ಸೈನ್ಯದ ಕೆಲಸ, ಮೊ. ಕ್ಕೆ ಒದಗಬಹುದಾದ) ಆಳುಬಲ. **Man-slaughter** ಮನುಷ್ಯರ ಕೊಲೆ; ನರ ಹತ್ಯೆ. (ನ್ಯಾ. ಶಾ.) ದ್ವೇಷವಿಲ್ಲದೆ ಆಕಸ್ಮಿಕವಾಗಿ ಮಾಡಿದ ನರಹತ್ಯೆ(ಯ ಅಪರಾಧ); ನಿರುದ್ದೇಶದ ಕೊಲೆ. **M.-trap** (ಮು., ಅತಿಕ್ರಮ ಪ್ರವೇಶ ಮಾಡುವ) ಜನರನ್ನು ಹಿಡಿಯುವ ಬೋನು. **Mánful** (ಗು.) ಧೈರ್ಯಶಾಲಿಯಾದ; ದೃಢ ಸಂಕಲ್ಪದ. **Mánfully** (ಕ್ರಿ. ವಿ.); **Mánfulness** (ನಾ.); **Mánhood** (ನಾ.) ಮನುಷ್ಯತ್ವ; ಮನುಷ್ಯ ದಶೆ; ಪ್ರಾಯ; ಗಂಡಸುತನ; ಪೌರುಷ; ಒಂದು ದೇಶದ ಗಂಡಸರು. M.h. suffrage ಕಾನೂನುಮೇರೆಗೆ ಪ್ರಾಪ್ತವಯಸ್ಕರಾಗಿ ತಕ್ಕೀರು, ಹುಚ್ಚು, ಮೊ. ಗಳಿಂದ, ಅರ್ಹತೆ ಕಳೆದುಕೊಂಡಿರದ ಗಂಡು ಪ್ರಜೆಗೆಲ್ಲರಿಗೂ ಕೊಟ್ಟಿರುವ ಚುನಾವಣೆಯ ಹಕ್ಕು: ಪ್ರಾಯಸ್ಥರ ಚುನಾವಣೆ ಹಕ್ಕು. **Mánikin** (ನಾ.) ಗುಜ್ಜಾರಿ ಮನುಷ್ಯ; ವಾಮನ; ಗಿಡ್ಡ; ಕುಳ್ಳ; (ಶಿಲ್ಪ, ದರ್ಜಿ, ಮೊ. ರು ಮಾದರಿಗಾಗಿ ಉಪಯೋಗಿಸುವ) ಕೀಲು ಮನುಷ್ಯಾಕೃತಿ; (ಮನುಷ್ಯದೇಹದ ಅಂಗರಚನೆಯನ್ನು ತೋರಿಸುವ) ಮನುಷ್ಯಾಕೃತಿ. **Mankínd** (ನಾ.) ಮನುಷ್ಯ ಜಾತಿ; ಮಾನವ ಕುಲ; ಮನುಷ್ಯರು. **Mánlike** (ಗು.) ಮನುಷ್ಯನಂಥ; ಮನುಷ್ಯನ (ಒಳ್ಳೆಯ ಅಥವಾ ಕೆಟ್ಟ) ಗುಣಗಳುಳ್ಳ; (ಹೆಂಗಸು) ಗಂಡುಬೀರಿಯಾದ. **Mánless** (ಗು.); **Mánly** (ಗು.) ಗಂಡಸಿಗೆ ತಕ್ಕ (ಸದ್ಗುಣ, ಧೈರ್ಯ, ಸರಳತೆ, ಮೊ.) ಗುಣಗಳುಳ್ಳ; ಪುರುಷಯೋಗ್ಯವಾದ; (ಹೆಂಗಸಿನ ವಿಷಯದಲ್ಲಿ) ಗಂಡಸಿನ ಗುಣಗಳುಳ್ಳ; (ವಸ್ತುಗಳು, ಗುಣ, ಮೊ. ಗಳ ವಿಷಯದಲ್ಲಿ) ಗಂಡಸಿಗೆ ತಕ್ಕ; ಪುರುಷಯೋಗ್ಯ. **Mánliness** (ನಾ.); **Mánnish** (ಗು.) (ಹೆಂಗಸಿನ ವಿಷಯದಲ್ಲಿ) ಗಂಡಸಿನಂಥ. **Mánnishness** (ನಾ.); **Mánward** (ಗು.) ಮನುಷ್ಯನ ಕಡೆಗಿರುವ; —ಕಡೆಗೆ ಪ್ರವಣತೆಯುಳ್ಳ.

Man (ಕ್ರಿ. ಸಕ.) (ಕೋಟೆ, ಹಡಗು, ಮೊ. ಕ್ಕೆ ರಕ್ಷಣೆಗಾಗಿ ಅಥವಾ ಕಾರ್ಯ ನಡೆಸುವುದಕ್ಕಾಗಿ) ಜನ ಒದಗಿಸು. (ನಾವೆ) (ಹಡಗಿನ ಗೊತ್ತಾದ ಕಡೆಯಲ್ಲಿ) ಜನರನ್ನಿಡು. (ಕೆಲಸಕ್ಕೆ, ಉದ್ಯೋಗಕ್ಕೆ) ಜನರನ್ನು ನೇಮಿಸು. ಧೈರ್ಯ ತುಂಬಿಕೊ (ಮು., oneself)

Mánacle ಮ್ಯಾನಕ್‌ಲ್ [ನಾ. (ಸಾ., ಬ. ವ. ದಲ್ಲಿ); ಕ್ರಿ. ಸಕ.] (ಕೈ) ಕೋಳ; (ಹಾತ್) ಬೇಡಿ. (ರೂಪ.) ತೊಡರು; ನಿರ್ಬಂಧ. (ಕ್ರಿ.) (ಕೈ) ಕೋಳ ಹಾಕು.

Mánage[1] ಮ್ಯಾನೆಜ್ (ಕ್ರಿ.) (ಆಯುಧ, ಮೊ. ನ್ನು) ಹಿಡಿ; ಬಳಸು, ಉಪಯೋಗಿಸು; (ಕೈಕೊಂಡ ಕೆಲಸ, ಮೊ. ನ್ನು) ನಿರ್ವಹಿಸು; (ಸಂಸಾರ, ಸಂಸ್ಥೆ, ರಾಜ್ಯ —ಇವುಗಳ) ಆಡಳಿತ ನಡೆಸು; —ನ್ನು ಹತೋಟಿಯಲ್ಲಿಟ್ಟುಕೊ; ಜವಾಬ್ದಾರಿ ವಹಿಸಿಕೊ; ಅಂಕೆಯಲ್ಲಿಟ್ಟುಕೊ; (ಮುಖಸ್ತುತಿ, ಮೊ. ಗಳಿಂದ ಒಬ್ಬನನ್ನು ಒಲಿಸಿಕೊಂಡು) ಉದ್ದೇಶ ನೆರವೇರಿಸಿಕೊ; ಸಂಧಾನ ಮಾಡು; [(ಅನೇಕ ವೇಳೆ ವ್ಯಂಗ್ಯವಾಗಿ) He managed to muddle it ಅದನ್ನೆಲ್ಲ ಅವ್ಯವಸ್ಥೆ ಮಾಡಿಟ್ಟನು]. (ನಾ., ತಕ್ಕಷ್ಟು ಸಾಧನಗಳಿಲ್ಲದಿದ್ದರೂ) ಉದ್ದೇಶ ಸಾಧಿಸು (*With* ಉಪ. ದೊಡನೆ). (Can you m. another slice? ಇನ್ನೊಂದು ಹೋಳನ್ನು ನಿಭಾಯಿಸಬಲ್ಲೆಯಾ?). **Mánageable** —ಜಬ್‌ಲ್ (ಗು.); **Mánageableness** (ನಾ.); **Manageabílity** (ನಾ.); **Mánageably** (ಕ್ರಿ. ವಿ.); **Mánaging** (ಗು.); **Mánagement** (ನಾ.) (ಕ್ರಿಯಾರ್ಥಗಳಲ್ಲಿ). ತಂತ್ರ; ಮೋಸದ ಹೂಟ. The m. ನಿರ್ವಾಹಕ ಮಂಡಲ; ಆಡಳಿತ ಮಂಡಲ. **Mánager** (ನಾ.) (ವ್ಯಾಪಾರ, ಸಂಸ್ಥೆ, ಮೊ. ಗಳ) ಕಾರ್ಯ ನಿರ್ವಾಹಕ, ವ್ಯವಸ್ಥಾಪಕ; ಪಾರುಪತ್ಯಗಾರ. ಪಾರ್ಲಿಮೆಂಟಿನ ಎರಡು ಸಭೆಗಳಿಗೂ ಸಂಬಂಧಿಸಿದ ಒಂದು ಕಾರ್ಯಕ್ಕಾಗಿ ಇತರರ ಜೊತೆಗೆ ನೇಮಕನಾದ ಪಾರ್ಲಿಮೆಂಟಿನ ಸದಸ್ಯ. [Good, bad, m. (ಹಣಕಾಸು, ಗೃಹಕೃತ್ಯ, ಮೊ. ಗಳ) ಯೋಗ್ಯ, ಅಯೋಗ್ಯ, —ನಿರ್ವಾಹಕ]. (ನ್ಯಾ. ಶಾ.) ಸಾಲ ಕೊಟ್ಟವರು, ಮೊ. ರ ಹಿತಸಾಧನೆಗಾಗಿ ಒಂದು ಉದ್ಯಮವನ್ನು ನಿರ್ವಹಿಸುವಂತೆ, ಸಾ., ಪ್ರಧಾನ ನ್ಯಾಯಸ್ಥಾನದಿಂದ ನಿಯಮಿತನಾದವನು: ನಿರ್ವಾಹಕ. **Mánageress** (ನಾ., ಸ್ತ್ರೀ.); **Mánagership** (ನಾ.); **Managérial** ಮ್ಯಾನಜೀರಿಯಲ್ (ಗು.) ವ್ಯವಸ್ಥಾಪಕನ; ವ್ಯವಸ್ಥಾಪಕನ ವೈಲಕ್ಷಣ್ಯದ.

Manage[2] (ನಾ.) (ಪ್ರಾಚೀ. ಪ್ರ.); (ಈಗ) = Manege.

Mandámus ಮ್ಯಾಂಡೇಮಸ್ (ನಾ.) ಮೇಲಿನ ನ್ಯಾಯಸ್ಥಾನದಿಂದ ಕೆಳಗಿನ ನ್ಯಾಯಸ್ಥಾನಕ್ಕೆ ಅಥವಾ ಅಧಿಕಾರಿಗೆ ಒಂದು ಸಾರ್ವಜನಿಕ ಕರ್ತವ್ಯವನ್ನು ನೆರವೇರಿಸುವ ಬಗ್ಗೆ ಕಳುಹಿಸುವ ಆಜ್ಞಾ ಪತ್ರ.

Mándarin[1] ಮ್ಯಾಂಡರಿನ್ (ನಾ.) (ಒಂಬತ್ತು ತರಗತಿಗಳಲ್ಲಿ ಯಾವುದಕ್ಕಾದರೂ ಸೇರಿದ) ಚೀನದ ಅಧಿಕಾರಿ: 'ಮ್ಯಾಂಡರಿನ್'. ಕಾಲಕ್ಕೆ ತಕ್ಕಂತೆ ಮುಂದುವರಿಯದ ಪಕ್ಷ ನಾಯಕ. ಚೀನೀಯರ ಉಡುಪು ತೊಡಿಸಿದ ತಲೆಯಾಡಿಸುವ ಬೊಂಬೆ.

Mándarin[2] ಮ್ಯಾಂಡರಿನ್, -ine —ರೀನ್ (ನಾ.) ದಟ್ಟ ಬಣ್ಣದ, ಚಪ್ಪಟೆಯ, —ಸಣ್ಣ ಕಿತ್ತಳೆಯ ಹಣ್ಣು. (ಟಾರೆಣ್ಣೆಯಿಂದ ತಯಾರಿಸಿದ) ಈ ತೆರದ ಬಣ್ಣ. ಒಂದು ಬಗೆಯ ರುಚಿಕಟ್ಟಿದ ಮದ್ಯ.

Mándate ಮ್ಯಾಂಡಟ್ (ನಾ.), **Mandáte** ಮ್ಯಾಂಡೇಟ್ (ಕ್ರಿ. ಸಕ.) ಮೇಲಧಿಕಾರಿಯಿಂದ ಬರುವ, ನ್ಯಾಯಸ್ಥಾನದ ಅಥವಾ ಕಾನೂನಿಗನುಸಾರವಾದ, ಆಜ್ಞೆ; ಮತ್ತೊಬ್ಬರಿಗಾಗಿ ಕಾರ್ಯ ನಿರ್ವಾಹ ಮಾಡಲು ಕೊಟ್ಟ ನಿಯೋಗ (ಮು., ಸ್ವಾತಂತ್ರ್ಯಕ್ಕೆ ಅರ್ಹವಲ್ಲದ ಜನರನ್ನು ಆಳುವಂತೆ ಒಂದು ರಾಷ್ಟ್ರಕ್ಕೆ ಜನಾಂಗ ಸಂಘವು ಕೊಡುವ ನಿಯೋಗ). (ಕಾವ್ಯ) ಆಜ್ಞೆ; ಪೋಪ್ ಗುರುವಿನ ನಿರ್ಣಯದ ಆಜ್ಞೆ. (ನ್ಯಾ. ಶಾ.) ನಿಯೋಗ ಪಡೆದವನು ತನಗೆ ಒಪ್ಪಿಸಿದುದರ ವಿಷಯದಲ್ಲಿ ಪ್ರತಿ ಫಲ ತೆಗೆದುಕೊಳ್ಳದೆ ಕಾರ್ಯಮಾಡಲು ಒಪ್ಪಿ ಮಾಡಿಕೊಳ್ಳುವ ಕರಾರು. ಶಾಸನ ಸಭೆಯ ಚುನಾವಣೆದಾರರು ತಾವು ಆರಿಸಿದ ಸದಸ್ಯನಿಗೆ ಕೊಡುವುದಾಗಿ ಭಾವಿಸುವ ರಾಜಕೀಯ ಸಲಹೆಗಳು. (ಕ್ರಿ.) (ರಾಜ್ಯ, ಮೊ. ನ್ನು ನಿಯೋಗ ಪಡೆದವನಿಗೆ) ಒಪ್ಪಿಸು, ವಹಿಸಿಕೊಡು. **Mándatary** ಮ್ಯಾಂಡಟರಿ (ನಾ.) (ನ್ಯಾ. ಶಾ.) ನಿಯೋಗ ಪಡೆದವನು; ಅಜ್ಞಪ್ತ. **Mándatory** —ಟ(ಟೋ)ರಿ (ಗು., ನಾ.) ಆಜ್ಞೆಯ; ಆಜ್ಞೆ ಕೊಡುವ; ಆಜ್ಞಾಪಕ. (ನಾ.) = Mandatary.

Mándible ಮ್ಯಾಂಡಿಬ್‌ಲ್ (ನಾ.) ದವಡೆ (ಮು., ಸಸ್ತನಿಗಳ ಮತ್ತು ಮೀನುಗಳ ಕೆಳ ದವಡೆ). ಹಕ್ಕಿಯ ಕೊಕ್ಕಿನ ಮೇಲಿನ ಅಥವಾ ಕೆಳಗಿನ ಭಾಗ. (ಕೀಟಗಳಲ್ಲಿ) ಮೇಲಿನ ಜೋಡುದವಡೆಯಲ್ಲಿ ಯಾವುದಾದರೂ ಅರ್ಧ ಭಾಗ. **Mandíbular** —ಬ್ಯುಲರ್ (ಗು.); **Mandíbulate** —ಬ್ಯುಲೆ(ೇ)ಟ್ (ಗು.) ಅಗಿಯುವ ದವಡೆಗಳುಳ್ಳ.

Mandóla, -dóra. **Mandolin(e)** ನೋಡಿ.

Mándolin(e) ಮ್ಯಾಂಡೊಲಿನ್ (ನಾ.) ಲೋಹದ ತಂತಿಗಳುಳ್ಳ ವೀಣೆಯಂಥ ಒಂದು ವಾದ್ಯ: ಮ್ಯಾಂಡೊಲಿನ್ ವಾದ್ಯ. **Mandóla, -dóra** —ಡೋಲ(ರ) (ನಾ.) ದೊಡ್ಡ—.

Mandrágora ಮ್ಯಾಂಡ್ರ್ಯಾಗೊರ (ನಾ.) = Mandrake (ಮು., ಮತ್ತು ಬರಿಸುವ ಗುಣಪ್ರಧಾನವಾದದ್ದು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mándrake ಮ್ಯಾಂಡ್ರೇಕ್ (ನಾ.) ವಾಂತಿ ಮಾಡಿಸುವ ಮತ್ತು ಮತ್ತುಬರಿಸುವ ಗುಣವುಳ್ಳ ಒಂದು ವಿಷಸಸ್ಯ (ಇದರ ಬೇರು ಮನುಷ್ಯಾಕಾರವಾಗಿರುವುದೆಂದೂ ಕಿತ್ತಾಗ ಕಿರಿಚಿಕೊಳ್ಳುವುದೆಂದೂ ನಂಬಿಕೆ)

Mándrel ಮ್ಯಾಂಡ್ರೆಲ್, **-il** —ಡ್ರಿಲ್ (ನಾ.) (ಚರಕಯಂತ್ರದಲ್ಲಿ) ಕಡೆಯಬೇಕಾದ ಸಾಮಾನನ್ನು ಬಿಗಿಯಾಗಿ ಹಿಡಿದುಕೊಳ್ಳುವಂತೆ ಬಂಧಿಸಲಾಗುವ ಅಕ್ಷ(ಭಾಗ); ಹಿಡಿಕೆ; ಬಂಧನಿ. ಲೋಹದ ಅಥವಾ ಇತರ ವಸ್ತುಗಳಿಗೆ ರೂಪ ಕೊಡುವುದಕ್ಕಾಗಿ ಬಡಿಯಲು ಅಥವಾ ಎರಕ ಹೊಯ್ಯಲು ಆಧಾರವಾಗಿ ಉಪಯೋಗಿಸುವ ಉರುಳೆಯಾಕಾರದ ಸರಳು, ದಂಡ. (ಪ್ರಾಂ. ಪ್ರ.) ಗಣಿಕೆಲಸದವನ ಪಿಕಾಸಿ.

Mándrill ಮ್ಯಾಂಡ್ರಿಲ್ (ನಾ.) ಅತಿ ವಿಕಾರ ರೂಪಿಯೂ ಭಯಂಕರವೂ ಆದ ಒಂದು ಜಾತಿಯ ದೊಡ್ಡ ಕೋತಿ.

Mánducate ಮ್ಯಾಂಡ್ಯುಕೇಟ್ (ಕ್ರಿ. ಸಕ.) (ಹಲ್ಲಿನಿಂದ) ಅಗಿ; ತಿನ್ನು. **Manducátion** (ನಾ.); **Mánducatory** —ಕಟ(ಟೋ)ರಿ (ಗು.)

Mane ಮೇನ್ (ನಾ.) ಕುದುರೆ, ಸಿಂಹ, ಮೊ. ಗಳ ಕುತ್ತಿಗೆಯಮೇಲಿನ ಉದ್ದವಾದ ಕೂದಲು: ಅಯಾಲು; ಕೇಸರ (ಮನುಷ್ಯನ ವಿಷಯವಾಗಿ ರೂಪ.); ಸಮುದ್ರದ ಅಲೆಗಳ ಮೇಲೆ ಕಾಣುವ ನೊರೆಯ ಸಾಲು. **(-)maned** (ಗು.); **Máneless** (ಗು.)

Manége (F) ಮಾನೇಷ್ (ನಾ.) ಕುದುರೆಸವಾರಿ ಕಲಿಸುವ ಪಾಠಶಾಲೆ. ತರಪೇತು ಮಾಡಿದ ಕುದುರೆಯ ನಡೆ, ಗತಿ; ರಾವುತತನ.

Mánes ಮೇನೀಸ್ (ನಾ., ಬ. ವ.) ಪಿತೃದೇವತೆಗಳು; ಪೂಜ್ಯ ಭಾವನೆಯ ವಸ್ತುವಾದ (ಮೃತನ) ಪ್ರೇತ.

Mánganese ಮ್ಯಾಂಗನೀಸ್ (ನಾ.) ಗಾಜುತಯಾರಿಕೆ, ಮೊ. ಗಳಲ್ಲಿ ಉಪಯೋಗಿಸುವ ಒಂದು ಕಪ್ಪು ಖನಿಜ (ವಸ್ತು); ಭಸ್ಮವಾದ ಈ ಖನಿಜದ ಘಟಕವಾಗಿರುವ ಮೂಲ ಲೋಹಧಾತು: 'ಮ್ಯಾಂಗನೀಸು'. **Manganésian** —ನ್ಸಿಯನ್ (ಗು.) ಮ್ಯಾಂಗನೀಸಿಗೆ ಸಂಬಂಧಪಟ್ಟ; ಮ್ಯಾಂಗನೀಸು ಉಳ್ಳ. **Mangánic** —ಗ್ಯಾ— (ಗು.)

Mánge ಮೇಂಜ್ (ನಾ.) (ಕೂದಲಿನಿಂದ ಅಥವಾ ಉಣ್ಣೆಯಿಂದ ಕೂಡಿದ ಚರ್ಮವುಳ್ಳ ಪ್ರಾಣಿಗಳಿಗೆ ಜೇಡನ ಜಾತಿಯ ಒಂದು ಪರೋಪಜೀವಿಯಿಂದ ಬರುವ) ಒಂದು ಚರ್ಮರೋಗ. (ಶಿಥಿಲವಾಗಿ) ಚರ್ಮದ ಕೊಳಕು ಸ್ಥಿತಿ. **Mángy** (ಗು.) Mange ಎಂಬ ಚರ್ಮರೋಗವುಳ್ಳ; ಕೊಳಕಾದ; ಒಪ್ಪ ಓರಣವಿಲ್ಲದ; ಅಂದಗೆಟ್ಟ. **Mángily** (ಕ್ರಿ. ವಿ.); **Mánginess** (ನಾ.)

Mángel (-wúrzel), Mángold- ಮ್ಯಾಂಗ್'ಲ್ (ವರ್ಸ್ಲ್), ಮ್ಯಾಂಗೊಲ್ಡ್ = (ನಾ.) ದೊಡ್ಡ ಜಾತಿಯ ಗಾಜಿನಗಡ್ಡೆ (ಜಾನುವಾರು ಮೇವಿಗಾಗಿ ಉಪಯೋಗಿಸುವಂಥದು)

Mánger ಮೇಂಜರ್ (ನಾ.) (ಲಾಯದಲ್ಲಿ) ಕುದುರೆಗಳಿಗೆ ಅಥವಾ (ಕೊಟ್ಟಿಗೆಯಲ್ಲಿ) ದನಗಳಿಗೆ, ಮೇವು ಹಾಕಿಡುವ ಪೆಟ್ಟಿಗೆ, ತೊಟ್ಟಿ; ಗೋದಣಿಗೆ. Dog in the manger (Dog ನೋಡಿ)

Mángle[1] ಮ್ಯಾಂಗ್'ಲ್ (ನಾ., ಕ್ರಿ. ಸಕ.) ಒಗೆದು ಮಡಿ ಮಾಡಿದ ಬಟ್ಟೆಗಳಮೇಲೆ ಬಲವಾಗಿ ಒತ್ತಿ ಉರುಳಿಸಿ ನಯಮಾಡುವ ಎರಡು ಅಥವಾ ಹೆಚ್ಚಿನ ಉರುಳೆಗಳುಳ್ಳ ಯಂತ್ರ. (ಕ್ರಿ.) (ಬಟ್ಟೆಯನ್ನು) ಈ ಯಂತ್ರದಲ್ಲಿ ಒತ್ತಿ ನಯಮಾಡು.

Mángle[2] ಮ್ಯಾಂಗ್'ಲ್ (ಕ್ರಿ. ಸಕ.) ಹೊಡೆದು ಹೊಡೆದು ಕೊಚ್ಚು; ಕಚ್ಚುಕಚ್ಚುಮಾಡು; ವಿಕಾರವಾಗುವಂತೆ, ಒರಟೊರಟಾಗಿ, ಕತ್ತರಿಸು. (ಉದ್ಧೃತ ಭಾಗ, ಗ್ರಂಥ ಭಾಗ, ಮೊ. ನ್ನು) ತಪ್ಪು ತಪ್ಪಾಗಿ ಎತ್ತಿ ಬರೆದು ಕುಲಗೆಡಿಸು; ತಪ್ಪು ಉಚ್ಚಾರಣೆಯಿಂದ (ಪದಗಳ) ಸ್ವರೂಪ ತಿಳಿಯದಂತೆ ಮಾಡು.

Mángo ಮ್ಯಾಂಗೋ (ನಾ.; ಬ. ವ. -os, -oes —ಗೋಸ್) ಮಾವು; ಮಾವಿನ ಕಾಯಿ, ಹಣ್ಣು, ಮರ. **M.-fish** ಚಿನ್ನದ ಬಣ್ಣದ ಇಂಡಿಯದ ಒಂದು ಮೀನ ಜಾತಿ. **M. trick** ಸ್ವಲ್ಪ ಹೊತ್ತಿನೊಳಗಾಗಿ ಮಾವಿನ ಬೀಜ ಮೊಳೆತು, ಬೆಳೆದು, ಫಲಬಿಡುವಂತೆ ಪ್ರದರ್ಶನ ಮಾಡುವ ಒಂದು ಕಣ್ಕಟ್ಟು: ಮಾವಿನ ಮಾಟ.

Mángold (-wurzel). **Mangel** ನೋಡಿ.

Mángonel ಮ್ಯಾಂಗೊನೆಲ್ (ನಾ.) (ಚರಿತ್ರೆ) ಕಲ್ಲುಗಳು, ಮೊ. ನ್ನು ಎಸೆಯುವ ಒಂದು ಯುದ್ಧಯಂತ್ರ.

Mángosteen ಮ್ಯಾಂಗ(ಗೊ)ಸ್ಟೀನ್ (ನಾ.) ದಪ್ಪವಾದ ಕೆಂಪು ಸಿಪ್ಪೆಯೂ ಬಿಳಿಯ ರಸವುಳ್ಳ ತಿರುಳೂ ಉಳ್ಳ ಹಣ್ಣನ್ನು ಬಿಡುವ, ಈಸ್ಟ್ ಇಂಡಿಯದ ಒಂದು ಜಾತಿಯ ಮರ.

Mángrove ಮ್ಯಾಂಗ್ರೋವ್ (ನಾ.) ತೊಗಟೆಯು ಔಷಧಕ್ಕೂ ಚರ್ಮ ಹದಮಾಡುವುದಕ್ಕೂ ಉಪಯೋಗವಾಗುವ ಉಷ್ಣವಲಯದ ಒಂದು ಜಾತಿಯ ಮರ ಅಥವಾ ಗುಲ್ಮ.

Mánia ಮೇನಿಯ (ನಾ.) ಬುದ್ಧಿ ವಿಕಲ್ಪ; ಹುಚ್ಚು; ಉನ್ಮಾದ; (ಒಂದು ಕೆಲಸ ಮಾಡಲು ಅಥವಾ ಒಂದರ ವಿಚಾರವಾಗಿ) ಅತ್ಯುತ್ಸಾಹ; ಹೆಚ್ಚಿನ ಗೀಳು. **-mania** (ಉ. ಪ್ರ.) [(ಒಂದು ಗೊತ್ತಾದ ಹುಚ್ಚನ್ನು ನಿರ್ದೇಶಿಸುವಲ್ಲಿ) —ಹುಚ್ಚು; —ಉನ್ಮಾದ (Kleptomania, Megalomania); (ಜನಬಳಕೆಯಲ್ಲಿ) ಅತ್ಯಂತಾಸಕ್ತಿ (Bibliomania), ಅತ್ಯಂತ ಮೆಚ್ಚಿಕೆ (Anglomania)]. **Mániac** ಮೇನಿಅ್ಯ(ಅ್ಯ)ಕ್ (ಗು., ನಾ.) ಹುಚ್ಚು ಹಿಡಿದ(ವನು). ಆವೇಶದ ಹುಚ್ಚು (ಹುಚ್ಚ). **Maníacal** ಮನೈಅಕಲ್ (ಗು.); **Maníacally** (ಕ್ರಿ. ವಿ.)

Mánicure ಮ್ಯಾನಿಕ್ಯೂರ್ (ನಾ., ಕ್ರಿ. ಸಕ.) ಕೈಗಳನ್ನೂ ಉಗುರುಗಳನ್ನೂ ಸೊಗಸುಮಾಡು(ವ ಕಸಬಿನವನು)

Mánifest[1] ಮ್ಯಾನಿಫೆಸ್ಟ್ (ನಾ.) (ಸುಂಕದ ಅಧಿಕಾರಿಗಳ ಉಪಯೋಗಕ್ಕಾಗಿರುವ) ಹಡಗಿನ ಸರಕುಪಟ್ಟಿ.

Mánifest[2] ಮ್ಯಾನಿಫೆಸ್ಟ್ (ಗು., ಕ್ರಿ.) (ಕಣ್ಣಿಗೆ ಅಥವಾ ಮನಸ್ಸಿಗೆ) ಸ್ಪಷ್ಟವಾಗಿರುವ, ವಿಶದವಾಗಿರುವ. (ಕ್ರಿ.) (ಕಣ್ಣಿಗೆ ಅಥವಾ ಮನಸ್ಸಿಗೆ) ಸ್ಪಷ್ಟವಾಗಿ ತೋರು, ತೋರಿಸು; ವ್ಯಕ್ತಪಡು, —ಪಡಿಸು. (ಒಂದಕ್ಕೆ) ರುಜುವಾತಾಗಿರು; ರುಜುವಾತು ಪಡಿಸು; ಪ್ರಮಾಣೀಕರಿಸು. (ಗುಣ, ಭಾವ, ಮೊ. ನ್ನು ತನ್ನ ಕಾರ್ಯ, ಮೊ. ಗಳಿಂದ) ತೋರಿಸು, ಪ್ರದರ್ಶಿಸು, ಪ್ರಕಟಿಸು. (ವಸ್ತುವಿನ ವಿಷಯದಲ್ಲಿ) ಹೊರಪಡು, ತೋರಿಸಿಕೊ, ಪ್ರಕಾಶಕ್ಕೆ ಬರು (*Itself* ಪದದೊಡನೆ). ಹಡಗಿನ ಸರಕುಪಟ್ಟಿಯಲ್ಲಿ ದಾಖಲು ಮಾಡು. (ಸರ್ಕಾರದ ಅಥವಾ ರಾಜಕೀಯ ಪಕ್ಷದ ವಿಷಯದಲ್ಲಿ) ಅಭಿಪ್ರಾಯವನ್ನು ಸಾರ್ವಜನಿಕವಾಗಿ ವ್ಯಕ್ತಪಡಿಸಲು ಕಾರ್ಯಕ್ರಮ ನಡಸು; ಸಾರ್ವಜನಿಕ ಸಭೆ, ಮೊ. ನ್ನು ಸೇರಿಸು. (ಭೂತ, ಪ್ರೇತ) ಮೈದೋರು, ಕಾಣಿಸಿಕೊ. **Manifestátion** (ನಾ.); **Maniféstative** —ಸ್ಟಟಿವ್ (ಗು.); **Mánifestly** (ಕ್ರಿ. ವಿ.); **Manifésto** (ನಾ.) (ಪ್ರಭು, ಸರ್ಕಾರ ಅಥವಾ ಒಂದು ಮಂಡಲಿ, ತಾವು ಹಿಂದೆ ಮಾಡಿದ ಕಾರ್ಯಗಳನ್ನೂ ಮುಂದೆ ಮಾಡಲಿರುವ ಕಾರ್ಯಕಲಾಪಗಳ ಉದ್ದೇಶಗಳನ್ನೂ ಪ್ರಸಿದ್ಧಪಡಿಸುವ) ಸಾರ್ವಜನಿಕ ಪ್ರಕಟನೆ, ಘೋಷಣೆ.

Manifésto. **Manifest**[2] ನೋಡಿ.

Mánifold ಮ್ಯಾನಿಫೋಲ್ಡ್ (ಗು., ನಾ., ಕ್ರಿ. ಸಕ.) ಬಗೆ ಬಗೆಯ (ರೂಪಗಳು, ಉಪಯೋಗಗಳು, ಮೊ. ಗಳುಳ್ಳ); ನಾನಾ ಬಗೆಯ; ಒಂದೇ ಕಾಲದಲ್ಲಿ ಹಲವು ಕಾರ್ಯಗಳನ್ನು ಮಾಡುವ; ಹಲವು ಮತ್ತು ಬಗೆ ಬಗೆಯ [M. vexations. M. writer ಮಸಿಕಾಗದವನ್ನು ಉಪಯೋಗಿಸಿ ಒಟ್ಟಿಗೆ ಹಲವು ಪ್ರತಿಗಳನ್ನು ತಯಾರಿಸುವ ಸಲಕರಣೆ: ಬಹುಪ್ರತಿ ರೇಖಕ (ಸಲಕರಣೆ)]. (ನಾ.) (ಯಂತ್ರಶಿಲ್ಪ) ಇತರ ಕೊಳವೆಗಳು, ಮೊ. ಗಳೊಡನೆ ಸಂಬಂಧ ಕಲ್ಪಿಸುವ ಹಲವು ದ್ವಾರಗಳು ಅಥವಾ ಕವಾಟಗಳು ಉಳ್ಳ ಕೊಳವೆ ಅಥವಾ ಕೋಷ್ಠ. (ಕ್ರಿ.) ಬಹುಪ್ರತಿ ರೇಖಕದಿಂದ (ಪತ್ರಗಳು, ಮೊ. ಗಳ) ಹಲವು ಪ್ರತಿಗಳನ್ನು ಎತ್ತು. **Mánifoldly** (ಕ್ರಿ. ವಿ.); **Mánifoldness** (ನಾ.)

Mánikin. **Man** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Manílla, -íla ಮಾ(ಮ)ನಿಲ (ನಾ.) Philippine ದ್ವೀಪಗಳ ರಾಜಧಾನಿ. ಹಗ್ಗ, ಚಾಪೆ, ಮೊ. ಕ್ಕೆ ಉಪಯೋಗಿಸುವ ಒಂದು ಬಗೆಯ ನಾರು: ಮನಿಲಾ ನಾರು (= M. hemp). ಮನಿಲಾ (ಪಟ್ಟಣ ದಲ್ಲ ಮಾಡಿದ) ಚುಟ್ಟ. M. paper ಮನಿಲಾ ನಾರು, ಮೊ. ಗಳಿಂದ ಮಾಡಿದ ಕಂದು ಬಣ್ಣದ ಗಟ್ಟಿ ಕಾಗದ: ಮನಿಲಾ ಕಾಗದ.

Manípulate ಮನಿಪ್ಯುಲೇಟ್ (ಕ್ರಿ. ಸಕ.) (ವಸ್ತುವನ್ನು, ಸಮಸ್ಯೆಯನ್ನು) ಕೌಶಲದಿಂದ ನಿರ್ವಹಿಸು, ನಡಸು. (ಪ್ರಭಾವ, ಮೊ. ನ್ನು ಜಾಣ್ಮೆಯಿಂದ, ಸಾ., ಔಚಿತ್ಯ ಮೀರಿ, ಉಪಯೋಗಿಸಿ ಒಬ್ಬನನ್ನು) ನಿರ್ವಹಿಸು, ಅಧೀನ ಪಡಿಸಿಕೊ; ಸಂಧಾನ ಮಾಡು; ಕೈವಾಡ ತೋರಿಸು. **Manipulátion** (ನಾ.); **Manípulator** (ನಾ.); **Manípulative** (ಗು.); **Manípulatory** (ಗು.)

Mankínd, Mánly, etc, **Man** ನೋಡಿ.

Mánna ಮ್ಯಾನ (ನಾ.) (ಬೈಬಲ್) (ನಿರ್ಜನ ಪ್ರಾಂತದಲ್ಲಿ ಹೋಗುತ್ತಿದ್ದಾಗ) ಇಸ್ರೇಯೆಲರಿಗೆ ದೈವಿಕವಾಗಿ ದೊರೆತ ಆಹಾರವಸ್ತು; ಅಮೃತಾ ಹಾರ; ಆಧ್ಯಾತ್ಮಿಕ ಆಹಾರ (ಮು., ಪ್ರಭುಭೋಜನ). M.-ash ಎಂಬ ಮತ್ತು ಇತರ ಕೆಲವು ಗಿಡಗಳಲ್ಲಿ ಕಚ್ಚುಮಾಡಿದಾಗ ಒಸರುವ, ಸುಖ ವಿರೇಚಕವಾಗಿ ಉಪಯೋಗಿಸುವ, ಸಿಹಿ ರಸ. M.-croup ಗೋಧಿಯ ದಪ್ಪ ರವೆ. **Mánnite** (ನಾ.) ಮ್ಯಾನಾ ರಸದಿಂದ ದೊರೆಯುವ ಒಂದು ಸಿಹಿಪದಾರ್ಥ (= manna sugar): ಮ್ಯಾನಾ ಸಕ್ಕರೆ. **Mánnitose** (ನಾ.) (ರ. ವಿ.) = Laevulose.

Mánnequin ಮ್ಯಾನೆಕಿನ್ (ನಾ.) ತಮ್ಮ ಹೊಸ ಮಾದರಿಯ ಉಡುಪು ಗಳನ್ನು ತೊಟ್ಟುಕೊಂಡು ಪ್ರದರ್ಶಿಸುವುದಕ್ಕಾಗಿ (ಹೆಂಗಸರ ತೊಡಿಗೆಯ) ಉಡುಪುಗಾರರು, ಮೊ. ರು ನೇಮಿಸಿಕೊಳ್ಳುವ ವ್ಯಕ್ತಿ.

Mánner ಮ್ಯಾನರ್ (ನಾ.) (ಮಾಡುವ, ನಡೆಯುವ) ಬಗೆ, ತೆರ, ರೀತಿ, ವಿಧಾನ, ಕ್ರಮ (*In, after*, this m.); [(ಪ್ರಾಚೀ. ಪ್ರ.) In a m. of speaking ಒಂದು ಅರ್ಥದಲ್ಲಿ; ಒಂದು ರೀತಿಯ ಮಾತಿನಲ್ಲಿ. Adverb of m. (ವ್ಯಾ.) ಪ್ರಕಾರ ವಾಚಕ ಕ್ರಿಯಾವಿಶೇಷಣ. To the m. born ಆ ಸಂಪ್ರದಾಯದಲ್ಲೇ ಹುಟ್ಟಿ ಬೆಳೆದವನಂತೆ. (ಬಳಕೆಯಲ್ಲಿ) (ಒಂದು) ಸ್ಥಾನಕ್ಕೆ ಸ್ವಾಭಾವಿಕವಾಗಿ ಅರ್ಹನಾಗಿ]. (ಬ. ವ. ದಲ್ಲಿ) ಜೀವನದ ರೀತಿಗಳು; ಸಮಾಜದ ಸ್ಥಿತಿ ಗತಿಗಳು. ಹೊರ ಚರ್ಯೆ; ನಡೆವಳಿ (The grand m. ಹಳೆಯ ರೀತಿಯ ಗಾಂಭೀರ್ಯ). (ಬ. ವ. ದಲ್ಲಿ) ಸಾಮಾಜಿಕ ವ್ಯವಹಾರದಲ್ಲಿ ನಡೆವಳಿ, ವರ್ತನೆ (Good, bad, manners ಸಭ್ಯ ನಡತೆ, ಅಸಭ್ಯ —. He has no manners ಅವನಿಗೆ ಮರ್ಯಾದೆ ತಿಳಿಯದು). (ಸಾಹಿತ್ಯದ, ಕಲೆಯ) ರೀತಿ, ಶೈಲಿ. = Mannerism. (ಪ್ರಾಚೀ. ಪ್ರ.) What m. of man is he? ಅವನು ಯಾವ ತೆರದ ಮನುಷ್ಯ? All m. of ಎಲ್ಲ ಬಗೆಯ. No m. of right ಯಾವ ತೆರದ ಹಕ್ಕೂ ಇಲ್ಲ. In a m. ಏನೋ ಒಂದರ್ಥದಲ್ಲಿ, ಒಂದು ರೀತಿಯಲ್ಲಿ; ಸ್ವಲ್ಪಮಟ್ಟಿಗೆ. **Mánnered** (ಗು.) (Ill, well, rough, -m. ಕೆಟ್ಟ, ಒಳ್ಳೆಯ, ಒರಟು, — ನಡತೆಯುಳ್ಳ). (ಶೈಲಿ, ಕಲೆಗಾರ, ಲೇಖಕ — ಇವರ ವಿಷಯದಲ್ಲಿ) ವೈಲಕ್ಷಣ್ಯ ತೋರುವ. **Mánnerism** (ನಾ.) ಕಲೆ, ಸಾಹಿತ್ಯ, ನಡೆನುಡಿ, ಮೊ. ಗಳಲ್ಲಿ ಯಾವುದಾದರೂ ಒಂದು ವಿಶಿಷ್ಟ ರೀತಿಯನ್ನು ಅತಿಯಾಗಿ ಅನು ಸರಿಸುವುದು; (ಅಭ್ಯಾಸ, ಪದ್ಧತಿ, ಚಾಳಿ — ಇವುಗಳ) ವಿಲಕ್ಷಣತೆ; ಶೈಲಿಯ ಠಕ್ಕು. **Mánnerist** (ನಾ.); **Mannerístic(al)** (ಗು.); **Mánnerless** (ಗು.) ಮರ್ಯಾದೆಯಿಲ್ಲದ. **Mánnerly** (ಗು.) ಒಳ್ಳೆಯ ಮರ್ಯಾದೆ ಅನುಸರಿಸುವ; ಮರ್ಯಾದಾಪರನಾದ; ವಿನಯಶೀಲ. **Mánnerliness** (ನಾ.)

Mánnerism, etc. **Manner** ನೋಡಿ.

Mánnish. **Man** ನೋಡಿ.

Mánnite, Mánnitose. **Manna** ನೋಡಿ.

Manoeúvre ಮನೂ(ನ್ಯೂ)ವರ್ (ನಾ., ಕ್ರಿ.) ಯುದ್ಧದ ದಳಗಳ ಅಥವಾ ಹಡಗುಗಳ ನಿರ್ದಿಷ್ಟ ಚಲನೆ; ಸೇನಾ ಚಾಲನ; ವ್ಯೂಹ ಯೋಜನೆ. ಮೋಸದ, ತಪ್ಪಿಸಿಕೊಳ್ಳುವ, — ಚಲನೆ, ವರ್ತನೆ. ಕೌಶಲದ ಹಂಚಿಕೆ, ವಿನ್ಯಾಸ, ಉಪಾಯ [Mass of m. (Mass² ನೋಡಿ)]. (ಕ್ರಿ.) ಹಂಚಿಕೆಯಂತೆ ದಳಗಳನ್ನು ನಿಯೋಜಿಸು. ಕುತಂತ್ರ ಮಾಡು; ಹೂಟ ಹೂಡು; (ಒಂದು ರೀತಿಯಲ್ಲಿ ನಡೆಯುವಂತೆ) ಯುಕ್ತಿಯಿಂದ ಯೋಜಿಸು (*Into, out, away*, ಮೊ. ಪದದೊಡನೆ). ಚಾತುರ್ಯ ದಿಂದ, ಉಪಾಯವಾಗಿ, ನಿರ್ವಹಿಸು. **Manoeúvrer** (ನಾ.)

Manómeter ಮನಾಮಿಟರ್ (ನಾ.) ಅನಿಲಗಳ ಅಥವಾ ಹಬೆಗಳ ಒತ್ತಡವನ್ನು ಅಳೆಯುವ ಸಲಕರಣೆ: ಅನಿಲ ಪೀಡನ ಮಾಪಕ. **Manométric** ಮ್ಯಾನೊ — (ಗು.)

Mánor ಮ್ಯಾನರ್ (ನಾ.) ಇಂಗ್ಲೆಂಡಿನಲ್ಲಿ ಭೂಪ್ರದೇಶದ ಏಕಮಾನ [ಹಿಂದೆ, ಊಳಿಗಮಾನ್ಯ ಪದ್ಧತಿಯ ಪ್ರಭುತ್ವದ ರೀತಿಯದು; (ಈಗ) ಜಹಗೀರುದಾರನ ಸ್ವಾಧೀನಾನುಭವದಲ್ಲಿರುವ ಮತ್ತು ಹಿಡುವಳಿದಾರ ರಿಂದ ಕೆಲವು ತೆರಿಗೆಗಳನ್ನು ಎತ್ತುವ ಹಕ್ಕುಳ್ಳ ಭೂಮಿ]; ಜಹಗೀರು. Lord of the m. ಇಂಥ ಜಹಗೀರುದಾರ; ಇಂಥ ಯಾಜಮಾನ್ಯ ವಿರುವ ಸಂಸ್ಥೆ. M.-house ಜಹಗೀರುದಾರನ ಭವನ; ಗುತ್ತಿನ ಮನೆ. **Manórial** ಮನೋರಿಯಲ್ (ಗು.)

Manqué (F) ಮಾನ್‌ಕೇ (ಗು.) ಆಗಬಹುದಾಗಿದ್ದು ಆಗದೆಹೋದ; ಸಾಧ್ಯವಿದ್ದು ಸಿದ್ಧಿ ಸದೆಹೋದ (A poet m.)

Mánsard ಮ್ಯಾನ್‌ಸರ್ಡ್ (ನಾ.) (ಸಾ., M. roof) = Curb roof (Curb ನೋಡಿ)

Manse ಮ್ಯಾನ್ಸ್ (ನಾ.) (ಕ್ರೈಸ್ತ) ಪುರೋಹಿತನ ವಾಸದ ಮನೆ (ಮು., ಸ್ಕಾಟ್ಲೆಂಡಿನ ಹಳ್ಳಿಯ ಪಾದ್ರಿಯ ಮನೆ)

Mánsion ಮ್ಯಾನ್‌ಷನ್ (ನಾ.) ದೊಡ್ಡ ವಾಸದ ಮನೆ; ಭವನ; ಮಹಲು; (ಬ. ವ. ದಲ್ಲಿ) ವಾಸದ ಕೋಣೆಗಳಾಗಿ ವಿಂಗಡಿಸಿರುವ ದೊಡ್ಡ ಮಹಡಿಯ ಮನೆಗಳು. M.-house ಜಹಗೀರುದಾರನ ಅಥವಾ ಜಮೀನ್ದಾರನ ಮಹಲು; ಶ್ರೀಮಂತ ಭವನ; ಅಧಿಕಾರ ವಾಸಸ್ಥಾನ [ಮು., ಲಂಡನ್ನಿನ ಪೌರಸಭಾಧ್ಯಕ್ಷನದು (The M.-house)]

Mánsuetude ಮ್ಯಾನ್‌ಸ್ವಿಟ್ಯೂಡ್ (ನಾ.) (ವಿರ. ಪ್ರ.) ನಮ್ರತೆ; ದೈನ್ಯ; ವಿನಯ.

Mántel ಮ್ಯಾಂಟ್‌ಲ್ (ನಾ.) (ಈಗ ಸಾ., mantelpiece) ಬೆಂಕಿ ಗೂಡಿನ ಮೇಲ್ಗಡೆಯೂ ಸುತ್ತಲೂ ಮರ, ಅಮೃತಶಿಲೆ, ಮೊ. ಗಳಿಂದ ಕಟ್ಟಿದ ಕಟ್ಟಡ: ಅಗ್ನಿಕೋಷ್ಠದ ಆವರಣ; ಬೆಂಕಿಗೂಡಿನ ಮೇಲ್ಗಡೆ ಗೋಡೆಯಿಂದ ಮುಂಚಾಚಿರುವ ಹಲಗೆ (ಸಾ., mantelshelf): ಬೆಂಕಿಗೂಡಿನ ಬಡು. M.-tree ಬೆಂಕಿಗೂಡಿನ (ತೆರೆದ ಭಾಗದ ಮೇಲೆ ಇರುವ) ಅಡ್ಡ ತೊಲೆ.

Mánt(e)let ಮ್ಯಾಂಟ್ಲೆಟ್ (ನಾ.) ತೋಳಿಲ್ಲದ ಸಡಿಲವಾದ ಮೋಟು ಮೇಲಂಗಿ, ದಗಲೆ. ಗೋಲಂದಾಜರಿಗೆ ಶತ್ರುಗಳ ಗೋಲಿಯೇಟು ತಗುಲದಂತಿರುವ ರಕ್ಷಣೆಯ ತೆರೆ: ಗುಂಡಿನೇಟು ತಡೆ.

Mántic ಮ್ಯಾಂಟಿಕ್ (ಗು.) ಭವಿಷ್ಯ ಜ್ಞಾನದ; ಕಣಿಯ.

Mantílla ಮ್ಯಾಂಟಿಲ (ನಾ.) (ತಲೆಗೂದಲು ಮತ್ತು ಭುಜಗಳನ್ನು ಮುಚ್ಚುವಂತಿರುವ) ಹೆಂಗಸಿನ ದೊಡ್ಡ ಮುಖಾವರಣ. ತೋಳಿಲ್ಲದ ಸಡಿಲವಾದ ಮೋಟು ಮೇಲಂಗಿ.

Mántis ಮ್ಯಾಂಟಿಸ್ (ನಾ.) ಮಿಡತೆಯ ಜಾತಿಯ ಒಂದು ಕೀಟ: ಒಂಟೆ ಹುಳು; ಮಳ್ಳಿ. Praying m. ಪ್ರಾರ್ಥನೆಗಾಗಿ ಕೈ ಜೋಡಿಸಿ ಕೊಂಡಿದೆಯೊ ಎಂಬಂತೆ ಮುಂಗಾಲು ಜೋಡಿಸಿಕೊಂಡಿರುವ ಒಂದು ಜಾತಿಯ ಕೀಟ.

Mantíssa (L) ಮ್ಯಾಂಟಿಸ (ನಾ.) 'ಲಾಗರಿತಮ್ಮಿ'ನ ದಶಮಾಂಶ (ಭಾಗ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mántle ಮ್ಯಾಂಟ್ಲ್ (ನಾ., ಕ್ರಿ.) ಹೆಂಗಸಿನ ಸಡಿಲವಾದ ತೋಳಿಲ್ಲದ ಮೇಲಂಗಿ. (ರೂಪ.) ಹೊದಿಕೆ. (ಉಜ್ವಲ ಪ್ರಕಾಶ ಕೊಡುವುದಕ್ಕಾಗಿ ದೀಪದ ಉರಿಹಜೆಯ ಸುತ್ತಲೂ ಅಳವಡಿಸುವ ಸೂಕ್ಷ್ಮ ರಚನೆಯ) ಜಾಲಾಂಧ್ರ ನಳಿಕೆ. (ಚಿಪ್ಪಿನ ಪ್ರಾಣಿ, ಮೊ.) ಮೃದ್ವಂಗಿಯ ಕರುಳು, ಮೊ. ಭಾಗಗಳನ್ನೊಳಕೊಂಡಿರುವ ಚರ್ಮದ ಹೊರ ಮಡಿಕೆ. (ಕ್ರಿ.) ಸಡಿಲವಾದ ತೋಳಿಲ್ಲದ ಮೇಲಂಗಿ(ಯಿಂದ ಹೇಗೊ ಹಾಗೆ) ತೊಡಿಸು, ತೊಟ್ಟುಕೊ. ಮುಚ್ಚು; ಮರೆ ಮಾಡು; ಆವರಿಸು. (ದ್ರವಗಳ ವಿಷಯದಲ್ಲಿ) ತೇಲುಕಲ್ಮಷದ ಪದರ ಕಟ್ಟು. (ರಕ್ತದ ವಿಷಯದಲ್ಲಿ) ಕೆನ್ನೆಗಳಿಗೆ ಹೆಚ್ಚಾಗಿ ಹರಿ; (ಮುಖ, ನಾಚಿಕೆಯಿಂದ) ಕೆಂಪೇರು.

Mántlet = Mantelet.

Mántua ಮ್ಯಾಂಟ್ಯುಅ (ನಾ.) ಹಿಂದೆ ಇಂಗ್ಲೆಂಡಿನಲ್ಲಿ ಬಳಕೆಯಲ್ಲಿದ್ದ ಹೆಂಗಸರ ಒಂದು ಬಗೆಯ ಸಡಿಲವಾದ ಮೇಲುಡುಪು. M.-maker (ಹೆಂಗಸರ) ಉಡುಪು ಮಾಡುವವನು.

Mánual ಮ್ಯಾನ್ಯುಅಲ್ (ಗು., ನಾ.) ಕೈಯ; ಕೈಯಿಂದ ಮಾಡಿದ. [M. labour ಕೈ ದುಡಿಮೆ. M. (exercise) (ಸೈನ್ಯ) (ಬಂದೂಕು ಉಪಯೋಗಿಸುವುದನ್ನು ಕಲಿಸುವ) ಬಂದೂಕು ಕವಾಯತು. M. fire-engine (ಆವಿಯ ಸಹಾಯದಿಂದಲ್ಲದೆ) ಕೈಯಿಂದ ಕೆಲಸ ಮಾಡುವ ಬೆಂಕಿ ಆರಿಸುವ ಯಂತ್ರ. M. alphabet (ಕಿವುಡರು, ಮೂಗರು —ಇವರಿಗೆ ಅಭಿಪ್ರಾಯ ಸೂಚಿಸುವಾಗ ಮಾಡುವ) ಬೆರಳುಸನ್ನೆ. Sign m. (Sign ನೋಡಿ)]. (ನಾ.) ಕೈಪಿಡಿ. ಬೆರಳೊತ್ತಿ ಬಾರಿಸುವ ಆರ್ಗನ್ ವಾದ್ಯದ ಕೀಲಕೈಗಳ ಮಣೆ. (ಚರಿತ್ರೆ) (ಕ್ರೈಸ್ತ ಪುರೋಹಿತರ ಉಪಯೋಗಕ್ಕಾಗಿರುವ ವಿಧಿಗಳ) ಪ್ರಯೋಗ ಪುಸ್ತಕ. **Mánually** (ಕ್ರಿ. ವಿ.)

Manufáctory. **Manufacture** ನೋಡಿ.

Manufácture ಮ್ಯಾನ್ಯುಫ್ಯಾಕ್ಚ್ಯರ್, —ಚರ್ (ನಾ., ಕ್ರಿ. ಸಕ.) ಕೈಯಿಂದ ಅಥವಾ ಯಂತ್ರಶಕ್ತಿಯಿಂದ, ಸಾ., ಹೆಚ್ಚು ಪ್ರಮಾಣದಲ್ಲಿ ಸಾಮಾನು ತಯಾರಿಸುವುದು; ಸಾಮಾನು ತಯಾರಿಕೆ; ಕೈಗಾರಿಕೆಯ ಒಂದು ಶಾಖೆ (Woollen m. ಉಣ್ಣೆ ಕೈಗಾರಿಕೆ. Home m. ಸ್ವದೇಶೀ ತಯಾರಿಕೆ). (ಸಾಹಿತ್ಯ, ಮೊ. ಗಳ ವಿಷಯದಲ್ಲಿ, ತಿರಸ್ಕಾರವಾಗಿ) ಯಂತ್ರದಲ್ಲಿಯಂತೆ ತಯಾರಿಕೆ. (ಕ್ರಿ.) (ಕಚ್ಚಾ ವಸ್ತುಗಳನ್ನು) ಸಿದ್ಧವಸ್ತುಗಳನ್ನಾಗಿ ತಯಾರಿಸು; ದುಡಿಮೆಯಿಂದ ಸಾಮಾನುಗಳನ್ನು, ಸಾ., ಹೆಚ್ಚು ಪ್ರಮಾಣದಲ್ಲಿ, ತಯಾರಿಸು. (ಸಾಹಿತ್ಯ, ಮೊ. ಗಳ ವಿಷಯದಲ್ಲಿ ತಿರಸ್ಕಾರ ಪ್ರ.). (ಕಥೆ) ಸೃಷ್ಟನೆ ಮಾಡು, ಕಲ್ಪಿಸು. **Manufáctory** —ಕ್ಟರಿ (ನಾ.) ಕಾರ್ಖಾನೆ; ಕೈಗೆಲಸದ ಕಾರ್ಯಾಲಯ. **Manufácturer** (ನಾ.)

Manumít ಮ್ಯಾನ್ಯುಮಿಟ್ (ಕ್ರಿ. ಸಕ.) (ಚರಿತ್ರೆ) (ಗುಲಾಮನನ್ನು) ಬಿಡುಗಡೆ ಮಾಡು. **Manumíssion** (ನಾ.)

Manúre ಮನ್ಯೂರ್ (ನಾ., ಕ್ರಿ. ಸಕ.) (ಮಣ್ಣನ್ನು ಫಲವತ್ತಾಗಿ ಮಾಡಲು ಅದರೊಡನೆ ಬೆರಸುವ) ಗೊಬ್ಬರ. (ಕ್ರಿ.) ಗೊಬ್ಬರ ಹಾಕು; (ರೂಪ.) ಕೃಷಿ ಮಾಡು. **Manúrial** (ಗು.)

Mánuscript ಮ್ಯಾನ್ಯುಸ್ಕ್ರಿಪ್ಟ್ (ಗು., ನಾ.) (ಸಂಕ್ಷಿಪ್ತ: MS., ಬ. ವ. MSS.) ಕೈಬರಹದ (ಪುಸ್ತಕ, ದಸ್ತೈವಜು, ಮೊ. ವು) (ಮುದ್ರಣದ್ದಲ್ಲ); ಹಸ್ತಪ್ರತಿ.

Mánward. **Man** ನೋಡಿ.

Manx ಮ್ಯಾಂಕ್ಸ್ (ಗು., ನಾ.) Isle of Man ಎಂಬ ದ್ವೀಪದ (M. cat ಬಾಲವಿಲ್ಲದ ಒಂದು ಜಾತಿಯ ಬೆಕ್ಕು. Manxman ಮ್ಯಾನ್ ದ್ವೀಪದ ನಿವಾಸಿ). (ನಾ.) = M. cat; ಮ್ಯಾನ್ ದ್ವೀಪದ ಭಾಷೆ; (ಬ. ವ. ವಾಗಿ: Manx) ಮ್ಯಾನ್ ದ್ವೀಪದ ಜನರು.

Mány ಮೆನಿ (ಗು., ನಾ.) ಹಲವು; ಬಹು; ಅನೇಕ. M. times. M. a time. How m. (of them) can I have? His reasons were m. and good. Six mistakes in as m. lines. M.'s the tale he has told us. The m. ಜನಗುಂಪು. One too m. ಬೇಡವಾದದ್ದು; ಅಡ್ಡಿಯಾದದ್ದು. He was (one) too m. for us ಅವನು ನಮ್ಮೆಲ್ಲರನ್ನೂ ಮೀರಿಸಿದನು; ಅವನು ನಮ್ಮ ಕೈ ಸಾಗದಂತೆ ಮಾಡಿದನು. A good m. ತಕ್ಕಷ್ಟು ಮಂದಿ, ಸಂಖ್ಯೆ. A great m. ಬಹು ಮಂದಿ, ಸಂಖ್ಯೆ. M.-headed beast, monster ಜನತೆ; ಜನ ಸಮೂಹ. **Mányplies** —ಪ್ಲೈಸ್ (ಪ್ರಾಂ. ಪ್ರ.) ಮೆಲುಕುಹಾಕುವ ಪ್ರಾಣಿಗಳ ಮೂರನೆಯ ಹೊಟ್ಟೆ. **M.-sided** ಅನೇಕ ಪಕ್ಕಗಳುಳ್ಳ; ಅನೇಕ ದೃಷ್ಟಿಕೋನಗಳು, ಶಕ್ತಿಸಾಮರ್ಥ್ಯಗಳು, ಮೊ. ವು ಉಳ್ಳ; ಬಹು ಮುಖವಾದ. **M.-sidedness** (ನಾ.)

Máori ಮಾಒರಿ, ಮಾರಿ, **Maóri** ಮೌರಿ (ನಾ.) ನ್ಯೂಜೀಲೆಂಡಿನಲ್ಲಿರುವ ಕಂದು ಜನಾಂಗದವನು: 'ಮೌರಿ'; ಮೌರಿ ಭಾಷೆ.

Map ಮ್ಯಾಪ್ (ನಾ., ಕ್ರಿ. ಸಕ.) (ಭೂಮಿಯ, ಭೂಪ್ರದೇಶಗಳ, —ಪ್ರಕೃತಿ ಲಕ್ಷಣಗಳು, ರಾಷ್ಟ್ರೀಯ ವಿಭಾಗಾದಿಗಳು, ಮೊ. ನ್ನಾಗಲಿ ಖಗೋಳದ ಲಕ್ಷಣಗಳನ್ನಾಗಲಿ ಕಾಗದ, ಮೊ. ಗಳಮೇಲೆ ರೇಖಿಸಿದ) ನಕ್ಷೆ; ನಿರೂಪಣ ಪಟ; ಭೂಪಟ. [Off the m. (ಬಳ. ಮಾ.) ಗಣನೆಯುಲ್ಲಲ್ಲದ; (ಬಳಕೆ) ಬಿಟ್ಟುಹೋದ. On the m. (ಬಳ. ಮಾ.) ಗಣನೆಗೆ ತೆಗೆದುಕೊಳ್ಳಬೇಕಾದ; ಗಣ್ಯ]. (ಕ್ರಿ.) ನಿರೂಪಣ ಪಟದಲ್ಲಿ ಗುರುತಿಸು, ರೇಖಿಸು; ನಕ್ಷೆ ಮಾಡು, ಬರೆ. M. out (ನಡೆವಳಿಯ ಕ್ರಮ, ಕಾಲ, ಮೊ. ನ್ನು) ಹಂಚಿಕೆ ಹಾಕಿಡು, ವಿವರವಾಗಿ ವ್ಯವಸ್ಥೆ ಮಾಡು. **Mápless** (ಗು.)

Máple ಮೇಪ್ಲ್ (ನಾ.) ನೆರಳು, ಅಲಂಕಾರ, ದಾರು, ಅಥವಾ ಅದರಿಂದ ದೊರೆಯುವ ಸಕ್ಕರೆ, ಮೊ. ವಕ್ಕಾಗಿ ಬೆಳಸುವ ಒಂದು ಜಾತಿಯ ಮರ ಅಥವಾ ಗುಲ್ಮ: 'ಮೇಪ್ಲ್'; ಇದರ ದಾರು. M.-leaf ಕ್ಯಾನಡಾ ದೇಶದ ರಾಷ್ಟ್ರಚಿಹ್ನೆ(ಯಾದ 'ಮೇಪ್ಲ್' ಎಲೆ)

Mar ಮಾರ್ (ಕ್ರಿ. ಸಕ.) ಕೆಡಿಸು; ಹಾಳುಮಾಡು; ನಾಶಪಡಿಸು. Make (or mend) or mar ಬದುಕಿಸು, ಇಲ್ಲವೆ ಕೆಡಿಸು. Mar-plot ಒಂದು ಉದ್ದೇಶಸಾಧನೆಗೆ, ಹಂಚಿಕೆಗೆ, ಸಂಚಿಗೆ, ತಾನು ತರಹಾಕಿ ಭಂಗ ತರುವವನು; —ಇವನ್ನು ನಡೆಯದಂತೆ ಮಾಡುವವನು; ಉದ್ದೇಶ ವಿಘಾತಕ.

Marásmus ಮರ್ಯಾಸ್ಮಸ್ (ನಾ.) ಮೈ ಸವೆತ; ದೇಹಕ್ಷಯ. **Marásmic** (ಗು.)

Márathon ಮ್ಯಾರಥಾ(ತ)ನ್ (ನಾ.) ಒಂದು ಗ್ರೀಕ್ ಪಟ್ಟಣ; M. race ಬಹು ದೂರದ ಓಟದ ಪಂದ್ಯ (ಈಗ ಸಾ., ೨೬ ಮೈಲಿ ಮತ್ತು ೩೮೫ ಗಜದ ಉದ್ದದ ದೂರ, ತಡೆಯಿಲ್ಲದ ರಸ್ತೆಯಲ್ಲಿ). (ಕ್ರಿ. ಪೂ. ೪೯೦ರಲ್ಲಿ Marathon ಯುದ್ಧದ ವಿಜಯ ವಾರ್ತೆಯನ್ನು ಅಲ್ಲಿಂದ ಆತೆನ್ಸ್ ಪಟ್ಟಣಕ್ಕೆ ಒಯ್ಯುವುದಕ್ಕಾಗಿ ಓಡಿದ ಗ್ರೀಕನ ಸಾಹಸವನ್ನು ನೆನಪಿಗೆ ತರುವಂಥದು)

Maraúd ಮರಾಡ್ (ಕ್ರಿ.) ಕೊಳ್ಳೆಯ ದಾಳಿ ಮಾಡು; ಕೊಳ್ಳೆ ಹೊಡೆ (*On* ಉಪ. ದೊಡನೆ); ಸೂರೆ ಮಾಡುತ್ತ ಹೋಗು; ಲೂಟಿ ಮಾಡು. **Maraúder** (ನಾ.)

Márble ಮಾರ್ಬ್ಲ್ (ನಾ., ಕ್ರಿ. ಸಕ.) ಅಮೃತ ಶಿಲೆ (ಸ್ಫಟಿಕ ಸ್ಥಿತಿಯಲ್ಲಿ, ಕಣಗೂಡಿದ ಸ್ಥಿತಿಯಲ್ಲಿ ಸಹ, ದೊರೆಯುವ, ಮೆರುಗು ಕೊಡರಾಗುವ, ವಿಗ್ರಹ ರಚನೆಯಲ್ಲೂ ವಾಸ್ತು ಶಿಲ್ಪದಲ್ಲೂ ಉಪಯೋಗಿಸುವ, ಒಂದು ಬಗೆಯ ಸುಣ್ಣಕಲ್ಲು. (ಗಡುಸು ಅಥವಾ ನುಣುಪು ಗುಣಕ್ಕೆ ಅನೇಕ ವೇಳೆ ವಿಶೇಷಣವಾಗಿ ಪ್ರ.: M. heart, M. brow). (ಬ. ವ. ದಲ್ಲಿ) ಶಿಲಾ ವಿಗ್ರಹಗಳ ಸಂಗ್ರಹ (ಉದಾ., Elgin marbles). (ಅಮೃತಶಿಲೆಯ, ಜೇಡಿಮಣ್ಣಿನ, ಗಾಜಿನ) (ಆಟದ) ಗೋಲಿ, ಗುಂಡು. (ಕ್ರಿ.) (ಕಾಗದ, ಪುಸ್ತಕದ ಅಂಚು, ಸಾಬೂನು — ಇವಕ್ಕೆ) ಚಿತ್ರವರ್ಣದ ಅಮೃತಶಿಲೆಯಂತೆ ಕಾಣುವಹಾಗೆ ಕರೆ ಮಾಡು, ಬಣ್ಣ ಕೊಡು (ಮು., ಭೂ. ಕೃ. ನಲ್ಲಿ). Marbled paper ಪಂಚರಂಗಿ ಕಾಗದ. **Márbly** (ಗು.) ಅಮೃತಶಿಲೆಯಂತಿರುವ; ಶೀತಲವಾಗಿರುವ; ಗಡುಸಾಗಿರುವ.

Marc ಮಾರ್ಕ್ (ನಾ.) (ದ್ರಾಕ್ಷಿ, ಮೊ. ಹಣ್ಣುಗಳ ರಸ ಹಿಂಡಿದಮೇಲೆ ಉಳಿಯುವ) ಹಣ್ಣಿನ ಚರಟ.

Marcél ಮಾರ್ಸೆಲ್ (ನಾ.) ತಲೆಗೂದಲನಲ್ಲಿ ಕೃತಕವಾಗಿ ಮಾಡಿದ ಒಂದು ತೆರದ ಗುಂಗುರು (= M. wave)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

March[1] ಮಾರ್ಚ್ (ನಾ. ; ಸಂಕ್ಷಿಪ್ತ : Mar.) ಇಂಗ್ಲಿಷ್ ವರ್ಷದ ಮೂರನೆಯ ತಿಂಗಳು. M. Hare (Hare ನೋಡಿ)

March[2] ಮಾರ್ಚ್ (ನಾ., ಕ್ರಿ. ಅಕ.) (ಚರಿತ್ರೆ) ಎಲ್ಲೆ ; ಮೇರೆ(ಗಳು). (ಅನೇಕ ವೇಳೆ ಬ. ವ. ದಲ್ಲಿ) ಇಂಗ್ಲೆಂಡಿಗೂ ಮತ್ತು ಸ್ಕಾಟ್ಲೆಂಡ್ ಅಥವಾ ವೇಲ್ಸಿಗೂ ಮಧ್ಯೇ ಇರುವ ಗಡಿನಾಡು. ಎರಡು ರಾಜ್ಯಗಳ ನಡುವಣ (ಅನೇಕ ವೇಳೆ ಚರ್ಚಾಸ್ಪದವಾದ) ಗಡಿನಾಡು. (ಕ್ರಿ.) (ದೇಶಗಳು, ಸ್ವಾಸ್ತ್ಯಗಳು, ಮೊ. ಗಳ ವಿಷಯದಲ್ಲಿ) (— ರ) ಒತ್ತಿನಲ್ಲಿರು, ಎಲ್ಲೆಯಲ್ಲಿರು (*Upon* ಉಪ. ದೊಡನೆ) ; ಸಮಾನ ಮೇರೆ ಪಡೆದಿರು (*With* ಉಪ. ದೊಡನೆ)

March[3] ಮಾರ್ಚ್ (ನಾ., ಕ್ರಿ.) (ಸೈನ್ಯ) ದಂಡುಗಳ ಪ್ರಯಾಣ, ಶಿಸ್ತಿನ ನಡಗೆ (Line of m. ಸೇನಾಪ್ರಯಾಣ ಮಾರ್ಗ) ; ದೂರದ ಆಯಾಸ ನಡಗೆ. (ಘಟನೆ, ಕಾಲ, ಬುದ್ಧಿ, ಮನಸ್ಸು — ಇವುಗಳ) ಮುನ್ನಡೆ, ಪ್ರಗತಿ. ದಂಡು ಒಂದು ದಿನದಲ್ಲಿ ನಡೆದ ದೂರ. [Forced m. (Force ಕ್ರಿ. ಸಕ. ನೋಡಿ). Quick m. ತ್ವರಿತ ಗತಿ ; ಜೋರು ನಡಗೆ. Slow m. ಮಂದ ಗತಿ ; ನಿಧಾನದ ನಡಗೆ. M. past ಸೈನ್ಯಪರೀಕ್ಷೆಯಲ್ಲಿ ವಂದನಾ ಸ್ಥಾನದ ಮುಂದೆ ದಂಡು ಸಾಲುಗಟ್ಟಿ (ಶಿಸ್ತಿನಿಂದ) ಹೋಗುವುದು] . (ಸಂ.) (ನಡೆಯ) ಗತಿಗೆ ಹೊಂದಿಸಿದ ವಾದನ, ಗಾನ [Dead m. (Dead ನೋಡಿ)] . (ಕ್ರಿ.) ಸೈನ್ಯದ ಶಿಸ್ತಿನಲ್ಲಿ ಕ್ರಮವಾದ ಮತ್ತು ತಾಳಬದ್ಧವಾದ ನಡಗೆಯಲ್ಲಿ ನಡೆದು ಕೊಂಡು ಹೋಗು [*Away, forth, past* (ಪರೀಕ್ಷಾಧಿಕಾರಿಯ ಅಥವಾ ಪ್ರಭುವಿನ ಮುಂದೆ), *out* ಮೊ. ಪದದೊಡನೆ] ; ಒಂದೇ ಸಮನಾಗಿ ನಡೆದುಹೋಗು, ಮುಂದುವರಿ ; (Marching orders ಯುದ್ಧ, ಮೊ. ಕ್ಕೆ ಹೊರಡಲು ಸೇನೆಗೆ ಆಜ್ಞೆ). ಮುಂದುವರಿಯುವಂತೆ, ನಡೆಯುವಂತೆ, ಮಾಡು (*On, off* ಉಪ. ದೊಡನೆ)

Márchioness ಮಾರ್ಷನೆ(ನಿ)ಸ್ (ನಾ.) ಮಾರ್ಕ್ವಿಸ್ಸಿನ ಹೆಂಡತಿ, ವಿಧವೆ ; ತನ್ನ ಸ್ವಂತ ಹಕ್ಕಿನಿಂದಲೇ ಮಾರ್ಕ್ವಿಸ್ಸಿಗೆ ಸಮಾನವಾದ ಸ್ಥಾನ ಪಡೆದಿರುವವಳು.

Marcóni ಮಾರ್ಕೋನಿ (ನಾ., ಕ್ರಿ.) (ನಿಸ್ತಂತು ವಾರ್ತಾ ಪದ್ಧತಿಯ ಕಲ್ಪಕನಾದ) Marconi ಎಂಬ ಇಟ್ಯಾಲಿಯನ್ನನು (ಜನನ ೧೮೭೪). (ಮಾರ್ಕೋನಿ ಪದ್ಧತಿಯಲ್ಲಿ) ನಿಸ್ತಂತು(ವಾಗಿ ಕಳುಹಿಸಿದ) ವಾರ್ತೆ (=**Marcónigram**). (ಕ್ರಿ.) ನಿಸ್ತಂತು ವಾರ್ತೆ ಕಳುಹಿಸು.

Marcónigram. **Marconi** ನೋಡಿ.

Máre[1] (L) ಮೇರೀ, ಮಾರೇ (ನಾ.) M. clausum ಒಂದು ನಿರ್ದಿಷ್ಟ ದೇಶದ ಅಧಿಕಾರಕ್ಕೆ ಒಳಪಟ್ಟಿರುವ ಸಮುದ್ರ. M. liberum ಎಲ್ಲ ಜನಾಂಗಗಳಿಗೂ ತೆರಪುಳ್ಳ ಸಮುದ್ರ.

Mare[2] ಮೇರ್ (ನಾ.) ಕುದುರೆಯ ಜಾತಿಯ ಪ್ರಾಣಿಯಲ್ಲಿ ಹೆಣ್ಣು (ಮು., ಹೆಣ್ಣು ಕುದುರೆ). Grey m. (Grey ನೋಡಿ). Shanks's m. (Shank ನೋಡಿ). M.'s -nest ಕುದುರೆಯ ಮೊಟ್ಟೆ: ಅದ್ಭುತವನ್ನು ಕಂಡುಹಿಡಿದಿರುವೆನೆಂಬ ಬರಿಯ ಭ್ರಾಂತಿ.

Marémma (It.) ಮರೆಮ (ನಾ.) ಕಡಲ ಕರೆಯಲ್ಲಿಯ ಅನಾರೋಗ್ಯದ ತಗ್ಗು ಜವುಗು ಪ್ರದೇಶ.

Márgarine ಮಾರ್ಗ(ರ್ಜ)ರಿ(ೀ)ನ್ (ನಾ.) ಕೃತಕವಾಗಿ ತಯಾರಿಸಿದ ಬೆಣ್ಣೆ(ಗಳಿಗೆ ಕಾನೂನಿನ ಹೆಸರು) : 'ಮಾರ್ಜರಿನ್'.

Marge ಮಾರ್ಜ್ (ನಾ.) (ಕಾವ್ಯ) = Margin.

Márgin ಮಾರ್ಜಿನ್ (ನಾ., ಕ್ರಿ. ಸಕ.) (ಮೇಲ್ಮೈಯ) ಕರೆ, ಅಂಚು, ಅರುಗು ; ಯಾವ ಮಿತಿಯನ್ನು ಅಥವಾ ಎಲ್ಲೆಯನ್ನು ಮೀರಿ ಹೋದರೆ ಒಂದು ಸಂಭವವು ಅಸಾಧ್ಯವಾಗುವುದೋ ಆ ಮಿತಿಯ ಬಳಿಯ ಸ್ಥಿತಿ ; ಮಿತಿ ; ಅವಶ್ಯಕವಾದುದಕ್ಕಿಂತಲೂ ಹೆಚ್ಚಾದ (ಕಾಲ, ಹಣ, ಮೊ.) ಮೊತ್ತ. (ವಾಣಿಜ್ಯ) (ಒಟ್ಟಿನ ಪರವಾಗಿ ಮಾಡಿದ ವ್ಯಾಪಾರದಲ್ಲಿ ಆಗ ಬಹುದಾದ ನಷ್ಟವನ್ನು ಕಟ್ಟಿಕೊಳ್ಳುವುದಕ್ಕಾಗಿ ಬಂಡವಾಳಪತ್ರ ಮಾರುವೆ ಮಾಡುವ ದಳ್ಳಾಳಿಯ ಬಳಿ ಇಡುವ) ಠೇವಣಿ ಹಣ. ಪುಟದಲ್ಲಿ ಬರೆದ ಅಥವಾ ಅಚ್ಚಾದ ಭಾಗಕ್ಕೂ ಅಂಚಿಗೂ ಮಧ್ಯೆ (ಸುತ್ತಲೂ) ಇರುವ ಭಾಗ (ಸಾ., ಅಕ್ಕ ಪಕ್ಕಗಳಲ್ಲ ಮಾತ್ರ) ; ಪರಿಸರ ; ಪಕ್ಕ ; ಬದಿ. (ಕ್ರಿ.) ಅಂಚು ಬಿಡು ; ಪಕ್ಕ ಟಿಪ್ಪಣಿ ಬರೆ. (ಬಂಡವಾಳಪತ್ರದಮೇಲೆ) ಠೇವಣಿ ಇಡು. **Márginal** (ಗು.) ಪರಿಸರದ(ಲ್ಲಿ ಬರೆದ) ; ಪಕ್ಕ ಟಿಪ್ಪಣಿಯುಳ್ಳ. ಅಂಚಿನ(ಲ್ಲಿಯ) ; ಅಂಚಿನ ಬಳಿಯ ; ಎಲ್ಲೆಗೆ ಅತಿ ಸಮೀಪವಾದ. **Márginally** (ಕ್ರಿ. ವಿ.) ; **Marginália** —ನೇಲಿಯ (ನಾ., ಬ. ವ.) ಪಕ್ಕ ಟಿಪ್ಪಣಿಗಳು. **Márginate** —ನೇಟ್ (ಗು.), **Márginated** — ನೇ — (ಗು.) ಸ್ಪಷ್ಟವಾದ ಅಂಚುಳ್ಳ.

Marginália, Márginate. **Margin** ನೋಡಿ.

Márgrave ಮಾರ್ಗ್ರೇವ್ (ನಾ.) (ಚರಿತ್ರೆ) Holy Roman Empire ಎಂಬ ಸಾಮ್ರಾಜ್ಯದ ಕೆಲವು ರಾಜ(ಪುತ್ರ)ರ ಜರ್ಮನ್ ಬಿರುದು (ಆದಿಯಲ್ಲಿ ಗಡಿ ನಾಡಿನ ಸೈನಿಕ ಮಂಡಲಾಧಿಪತಿಯ ಬಿರುದು) : 'ಮಾರ್ಗ್ರೇವ್'. **Márgravine** — ಗ್ರೆ(ಗ್ರ)ವಿನ್ (ನಾ. ; ಸ್ತ್ರೀ.) ಮಾರ್ಗ್ರೇವಿನ ಹೆಂಡತಿ.

Márguerite ಮಾರ್ಗರೀಟ್ (ನಾ.) ಒಂದು ಬಗೆಯ ಡೇಯ್ಸಿ ಹೂವು(ಗಿಡ)

Mariage de convenance (F) ಮಾರ್ಯಾರ್ಝ್ ಡ ಕಾನ್ವ್ನಾನ್ಸ್ (ನಾ.) ಸೌಕರ್ಯಕ್ಕಾಗಿ ಮಾಡಿಕೊಂಡ ಮದುವೆ ; ಅನುಕೂಲದ ಮದುವೆ.

Márian ಮೇರಿಯನ್ (ಗು., ನಾ.) ಮೇರಿ ಕನ್ಯೆಯ ; ಇಂಗ್ಲೆಂಡಿನ ಮೇರಿ ರಾಣಿಯ ; ಸ್ಕಾಟ್ಲೆಂಡಿನ ಮೇರಿ ರಾಣಿಯ. (ನಾ.) ಸ್ಕಾಟ್ಲೆಂಡಿನ ಮೇರಿ ರಾಣಿಯ ಪಕ್ಷದವನು.

Márigold ಮ್ಯಾರಿಗೋಲ್ಡ್ (ನಾ.) ಚಿನ್ನದ ಬಣ್ಣದ ಅಥವಾ ಹಳದಿಯ ಹೂವು ಬಿಡುವ ಸಸ್ಯಜಾತಿ : ಚೆಂಡುಮಲ್ಲಿಗೆ (ಗಿಡ)

Maríne ಮರೀನ್ (ಗು., ನಾ.) ಕಡಲಿನ ; ಕಡಲಿನಲ್ಲಿ ದೊರೆಯುವ ; ಕಡಲಿನಿಂದ ಉತ್ಪತ್ತಿಯಾಗುವ ; ಹಡಗುಗಳ ; ನೌಕಾ ವಿಷಯದ. [M. insurance ಕಡಲ, ಸಮುದ್ರದ, ವಿಮೆ. M. stores (ಮಾರುವ ಸರಕಾಗಿ) ಹಳೆಯ ಹಡಗಿನ ಸಾಮಾನು ಮತ್ತು ಅಂಥ ಚಿಲ್ಲರೆ ಪಲ್ಲರೆ ; ಇವನ್ನು ಮಾರುವ ಅಂಗಡಿ] . ಸಮುದ್ರದ ಮೇಲಿರುವಾಗ (ಉಪಯೋಗಕ್ಕೆ) ಬೇಕಾದ; ಸಮುದ್ರ ಪ್ರಯಾಣಕ್ಕೆ ಬೇಕಾದ. (ಸಿಪಾಯಿಗಳ ವಿಷಯದಲ್ಲಿ) ಹಡಗಿನಲ್ಲಿ ಕೆಲಸ ಮಾಡುವ. (ನಾ.) ಒಂದು ದೇಶದ ಎಲ್ಲ ಹಡಗುಗಳು, ಹಡಗು ಪಡೆ, ನೌಕಾ ಸೇನೆ (Mercantile m. ವ್ಯಾಪಾರದಲ್ಲಿ ನಿಯೋಜಿತವಾಗಿರುವ ಎಲ್ಲ ಹಡಗುಗಳು). ಯುದ್ಧದ ಹಡಗಿನಲ್ಲಿ ಕೆಲಸ ಮಾಡುವ (ಭೂ) ಸೈನಿಕ [Blue, red, marines ಗೋಲಂದಾಜ ಸೈನ್ಯ, ಲಘು ಪದಾತಿ ಸೈನ್ಯ. Tell that to the (horse) marines (Horse ನೋಡಿ)] . **Máriner** ಮ್ಯಾರಿನರ್ (ನಾ.) ನಾವಿಕ. Master m. ವ್ಯಾಪಾರನೌಕೆಯ ನಾಯಕ.

Mariólatry ಮೇರಿಯಾಲಟ್ರಿ (ನಾ.) ಮೇರಿ ಕನ್ಯೆಯ ವಿಗ್ರಹ ಪೂಜೆ.

Marionétte ಮ್ಯಾರಿಯೊನೆಟ್ (ನಾ.) ಸೂತ್ರದ ಬೊಂಬೆ [ಮನುಷ್ಯನ (ಅಥವಾ ಪ್ರಾಣಿಯ) ಚಲನ ವಲನಗಳನ್ನು ತೋರಿಸುವಂಥದು]

Márish ಮ್ಯಾರಿಷ್ (ನಾ., ಗು.) (ಕಾವ್ಯ) ಜವುಗಾದ (ನೆಲ)

Márital ಮ್ಯಾರಿಟಲ್, **Marítal** ಮರೈಟ(ಟ್)ಲ್ (ಗು.) ಗಂಡನ ; ಮದುವೆಯ. **Máritally** (ಕ್ರಿ. ವಿ.)

Máritime ಮ್ಯಾರಿಟೈಮ್ (ಗು.) ಕಡಲ ಬಳಿ ವಾಸ ಮಾಡುವ, ದೊರೆಯುವ; ಕಡಲ ಸಂಬಂಧವಾದ (M. insurance = Marine insurance)

Márjoram ಮಾರ್ಜರಂ (ನಾ.) ತುಲಸಿ, ಪುದೀನ, ಮೊ. ಸಸ್ಯಜಾತಿಗೆ ಸೇರಿದ ಒಂದು ಸೊಪ್ಪು (Sweet M. ಅಡಿಗೆಯಲ್ಲಿ ಉಪಯೋಗಿಸುವ ಈ ಜಾತಿಯ ಸುವಾಸನೆಯ ಸೊಪ್ಪು)

Mark[1] ಮಾರ್ಕ್ (ನಾ.) ಗುರಿಯಾಗಿ ಉಪಯೋಗಿಸುವ ಗುರಿಹಲಗೆ ಅಥವಾ ಇತರ ವಸ್ತು ; ಗುರಿ [Beside, wide of, the m. ಗುರಿ ತಪ್ಪಿದ ; ಗುರಿ ಬಿಟ್ಟು ದೂರಕ್ಕೆ ಹೋದ. (ರೂಪ.) ವಿಷಯಕ್ಕೆ ಸಂಬಂಧ ಪಡದ ; ಅಪ್ರಾಸಂಗಿಕ] . (ಮುಷ್ಟಿ ಕಾಳಗ) ಹೊಟ್ಟೆಯ ಭಾಗದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎದೆಮೂಳೆಯ ತಳದಲ್ಲಿರುವ ಕುಳಿ. ಉದ್ದೇಶ ವಸ್ತು ; ಗುರಿ (Hit, miss, the m.). (ಗುಣ, ಸ್ವಭಾವ, ಮೊ.) ಗುರುತು ; ಚಿಹ್ನೆ ; ಸೂಚನೆ (M. of mouth ಕುದುರೆಗೆ ವಯಸ್ಸಾಗಿರುವುದಕ್ಕೆ ಗುರುತಾದ ಅದರ ಹಲ್ಲಿನಲ್ಲಿಯ ಕುಳಿ). ಹಚ್ಚಿದ, ಹಾಕಿದ, ಒತ್ತಿದ, — ಗುರುತು, ಮುದ್ರೆ, ಮೊ. ವು [Ear-m. (Ear[1] ನೋಡಿ). Hall, trade, -m. (ಆಯಾ ಪದವನ್ನು ನೋಡಿ)] . ಅನಕ್ಷರಸ್ಥನು ತನ್ನ ರುಜುವಿಗೆ ಬದಲಾಗಿ ಹಾಕುವ ಕತ್ತರಿ ಗುರುತು, ಮೊ. ವು; ಸಂಕೇತದ ಗುರುತು (Good, bad, m. ಒಳ್ಳೆಯ, ಕೆಟ್ಟ, ನಡತೆ ತೋರಿಸುವ ಸಂಕೇತ, ಚಿಹ್ನೆ). (ಪರೀಕ್ಷೆಯಲ್ಲಿ ಯೋಗ್ಯತೆಯನ್ನು ಸೂಚಿಸಲು ಕೊಡುವ) ಗುಣಾಂಕ (He gained 46 marks). ಸ್ಥಾನಸೂಚಕವಾದ ಗೆರೆ, ಮೊ. [Plimsoll's m. (ಸರಕನ್ನು ಹಡಗಿಗೆ ಭರತಿ ಮಾಡುವಾಗ, ಹಡಗು ಕಾನೂನುಮೇರೆಗೆ ಯಾವ ಮಟ್ಟ ಮುಳುಗುವ ವರೆಗೂ ಭರತಿ ಮಾಡಬಹುದು ಎಂಬುದನ್ನು ತೋರಿಸುವ) ಹಡಗಿನ ಮುಳುಗು ಗೆರೆ (Plimsoll ಎಂಬಾತನ ಹೆಸರಿನಿಂದ)] ; ಗೊತ್ತಾದ ಮಟ್ಟ (Below, up to, the m.). (ರಗ್ಬಿ ಕಾಲ್ಚೆಂಡಾಟ) ನ್ಯಾಯವಾಗಿ ಬುತ್ತಿ ಹಿಡಿದ ಆಟಗಾರನು ನೆಲದಮೇಲೆ ಮಾಡಿದ ಹಿಮ್ಮಡಿ ಗುರುತು ; ಕರೆ ; ಕಲೆ ; ಕಳಂಕ ; ಮಚ್ಚೆ. [Make one's m. ಪ್ರಸಿದ್ಧಿ ಪಡೆ ; ಘನತೆ ಹೊಂದು. (God) save the m. (ಅವಾಚ್ಯ ನುಡಿಯುವಾಗ ಕ್ಷಮೆಗಾಗಿ ಆಡುವ ಮಾತು): ದೇವರು ತಪ್ಪಿಸಲಿ! ಶಾಂತಂ ಪಾಪಂ ! Of m. ಗಣ್ಯವಾದ]. (ವ್ಯಾಯಾಮ) ಆರಂಭಿಸುವ ಸ್ಥಳವನ್ನು ಸೂಚಿಸುವ ಗೆರೆ ; ಆರಂಭ ರೇಖೆ. Get off the m. ಹೊರಡು. Easy m. (ಅಮೆ. ಸಂ., ಅಸಂ.) ಸುಲಭವಾಗಿ ಮೋಸ ಹೋಗುವವನು.

Mark (ಕ್ರಿ.) (ವಸ್ತುವಿನಮೇಲೆ ಮುದ್ರೆಯೊತ್ತುವುದು, ಕೆತ್ತುವುದು, ಬರೆಯುವುದು, ಮೊ. ಗಳಿಂದ) ಗುರುತು ಮಾಡು ; ಅಂಕಿಸು ; (ಗುರುತಿಸಲಾಗುವಂತೆ, ಬಟ್ಟೆಗೆ) ಗುರುತು ಹಾಕು, ಹೆಸರು ಹಾಕು ; (ಕರ್ಮಣಿ) ಸ್ವಾಭಾವಿಕವಾದ ಮಚ್ಚೆಗಳಿರು (The species are marked with silvery spots). ಬೇಟೆಯ ಹಕ್ಕಿ ಅವಿತುಕೊಂಡಿರುವ ಸ್ಥಳವನ್ನು ಗುರುತಿಟ್ಟುಕೊ (=M. down). [M. down (ಸಾಮಾನಿನಮೇಲೆ) ಕಡಮೆಯ ಬೆಲೆ ಹಾಕು, M. up ಹೆಚ್ಚಿನ ಬೆಲೆ ಹಾಕು. M. out (ಒಂದು ಪ್ರದೇಶಕ್ಕೆ) ಎಲ್ಲೆ ಗುರುತು ಮಾಡು. Melancholy marked him for her own ಅವನ ಹಣೆಯಲ್ಲಿ ವ್ಯಥೆಯೇ ಬರೆದಿದೆ. Marked out for slaughter ಕೊಲ್ಲಲು ಗೊತ್ತುಮಾಡಿದ. M. off (ಎಲ್ಲೆ ಗುರುತಿಸಿ) ಒಂದರಿಂದೊಂದನ್ನು ಪ್ರತ್ಯೇಕಿಸು. M. the accent ಸ್ವರಭಾರವನ್ನು ಗುರುತಿಸು. M. the score ಆಟದ ಗೆಲ್ಲಂಕಗಳನ್ನು ಗುರುತಿಸು. M. one's displeasure ಒಬ್ಬನ ಅಸಮಾಧಾನ ವ್ಯಕ್ತಪಡಿಸು. This tendency is strongly marked (ಕರ್ಮಣಿ) ಈ ಪ್ರವೃತ್ತಿ ಬಲವಾಗಿ ಕಾಣುತ್ತಿದೆ. A marked difference ಸ್ಪಷ್ಟವಾದ ವ್ಯತ್ಯಾಸ. No triumph marks her manner ಅವಳ ರೀತಿಯಲ್ಲಿ ಜಯೋತ್ಸಾಹದ ಲಕ್ಷಣಗಳಿಲ್ಲ. M. time (ಮುಂದುವರಿಯದೆ, ನಡೆಯುವಾಗ ಹೇಗೊ ಹಾಗೆ) ಹೆಜ್ಜೆ ಎತ್ತಿಹಾಕುತ್ತಿರು. (ರೂಪ.) ಸಮಯ ಕಾಯುತ್ತಿರು. M. my words ನನ್ನ ಮಾತನ್ನು ಗಮನಿಸು. A marked m. ಗುಮಾನಿಗೆ ಒಳಗಾದವನು]. (ಕಾಲ್ಚೆಂಡಾಟ) ಎದುರಾಳಿಗೆ ಚೆಂಡು ಸಿಕ್ಕುವ ಸಂದರ್ಭದಲ್ಲಿ ಅವನನ್ನು ತಡೆಯುವುದಕ್ಕಾಗಿ ಅವನ ಪಕ್ಕದಲ್ಲೇ ಅಂಟಿಕೊಂಡಿರು. **Márkedly** —ಕೆಡ್ಲಿ (ಕ್ರಿ. ವಿ.) ; **Márkedness** (ನಾ.) ; **Márker** (ನಾ.) (ಕ್ರಿಯಾರ್ಥಗಳಲ್ಲಿ). ಬೇಟೆ ಅಡಗಿಕೊಂಡಿರುವ ಸ್ಥಳವನ್ನು ಗುರುತಿಸುವವನು. (ಬಿಲಿಯರ್ಡ್ಸ್ ಆಟದಲ್ಲಿ) ಗೆಲ್ಲಂಕಗಳನ್ನು ಬರೆದಿಡುವವನು. =Book-marker (Book ನೋಡಿ). **Márking** (ನಾ.) (ಕ್ರಿಯಾರ್ಥಗಳಲ್ಲಿ). (ಹಕ್ಕಿಯ ಗರಿಗಳ, ಚರ್ಮ, ಮೊ. ಗಳ) ವರ್ಣವಿನ್ಯಾಸ. M.-ink (ಬಟ್ಟೆಗಳಿಗೆ ಗುರುತುಮಾಡಲು ಉಪಯೋಗಿಸುವ, ಅಳಿಸಿಹೋಗದ) ಗುರುತು ಮಸಿ. **Márksman** ಮಾರ್ಕ್ಸ್‌ಮ್ಯನ್ (ನಾ.) ಗುರಿ(ಯಿಟ್ಟು) ಹೊಡೆಯುವುದರಲ್ಲಿ ಕುಶಲನಾದವನು, ಅಭ್ಯಾಸ ಪಡೆದಿರುವವನು (ಮು., ಬಂದೂಕು ಹೊಡೆಯುವುದರಲ್ಲಿ ಒಂದು ಗೊತ್ತಾದ ಸಾಮರ್ಥ್ಯ ಪಡೆದವನು) : ಗುರಿಗಾರ. **Márksmanship** (ನಾ.)

Mark[2] ಮಾರ್ಕ್ (ನಾ.) ಚಿನ್ನವನ್ನೂ ಬೆಳ್ಳಿಯನ್ನೂ ತೂಗುವ ಒಂದು ತೂಕ(ದ ಪರಿಮಾಣ) (ಸಾ., ೮ ಔನ್ಸು). ಷಿಲಿಂಗಿಗೆ ಹೊಂದಿಕೆಯಾಗುವ ಒಂದು ಜರ್ಮನ್ ನಾಣ್ಯ. (ಚರಿತ್ರೆ) ೧೩ ಷಿಲಿಂಗ್ ೪ ಪೆನಿ ಬೆಲೆಯ ಒಂದು ಇಂಗ್ಲಿಷ್ ನಾಣ್ಯ.

Márket ಮಾರ್ಕೆಟ್ (ನಾ., ಕ್ರಿ.) ದಿನಸಿಗಳು, ಜಾನುವಾರು, ಮೊ. ವನ್ನು ಕೊಳ್ಳುವುದಕ್ಕೂ ಮಾರುವುದಕ್ಕೂ ಸೇರುವ ಜನಸಂದಣಿ : ಸಂತೆ ; ಪೇಟೆ ; ಮಾರಿಕೆಯ ಕಟ್ಟೆ ; ಸಂತೆಯ ಕಾಲ [Bring one's eggs or hogs to a bad m. (ಒಬ್ಬನ) ಯೋಜನೆಗಳು ವಿಫಲವಾಗು]. ದನ ಕರು, ಮೊ. ನ್ನು ಮಾರಾಟಕ್ಕಿಟ್ಟಿರುವ ಬಯಲು ಅಥವಾ ಚಾವಣಿಯುಳ್ಳ ಕಟ್ಟಡ ; ಸಂತೆಮಾಳ [Make a m. of (ರೂಪ.) ವಿನಿಮಯ ಮಾಡು ; ವ್ಯಾಪಾರಕ್ಕಾಗಿ, ಲಾಭಸಂಪಾದನೆಗಾಗಿ, ಇಟ್ಟುಕೊ]. (ಸರಕಿಗೆ) ಗಿರಾಕಿ (*For* ಉಪ. ದೊಡನೆ) [The corn m. ಧಾನ್ಯವ್ಯಾಪಾರ. Come into the m. ಮಾರಾಟಕ್ಕೆ ಬಂದಿರು. Put on the m. ಮಾರಾಟಕ್ಕಿಡು. Money-m. (Money ನೋಡಿ)]. ಧಾರಣೆವಾಸಿ ; ಬೆಲೆ ; ದರ (The m. fell). ವ್ಯಾಪಾರ ಸ್ಥಳ [M. cross ಸಂತೆಮಾಳದಲ್ಲಿ, ವ್ಯಾಪಾರದ ಚೌಕದಲ್ಲಿ, —ನಿಲ್ಲಿಸಿದ ಶಿಲುಬೆ, ಶಿಲುಬೆಯಾಕಾರದ ಸ್ಮಾರಕ (Cross ನೋಡಿ). M.-day ಸಂತೆಯ ದಿನ. M. garden ಸಂತೆಯ, ಪೇಟೆಯ, ವ್ಯಾಪಾರಕ್ಕೆ ತರಕಾರಿ ಬೆಳೆಯುವ ತೋಟ. M.-place ಸಂತೆ ನೆರೆಯುವ ಸ್ಥಳ, ಬಯಲು : ವ್ಯಾಪಾರದ ಚೌಕ. M.-town ಸಂತೆ ಕೂಡುವ ಊರು]. (ಕ್ರಿ.) ಸಂತೆಯಲ್ಲಿ, ಪೇಟೆಯಲ್ಲಿ, —ಕೊಳ್ಳು, ಮಾರು. (ಸರಕನ್ನು) ಪೇಟೆಯಲ್ಲಿ, ಸಂತೆಯಲ್ಲಿ, —ವಿಕ್ರಯಿಸು, ಬಿಕರಿ ಮಾಡು. **Márketable** (ಗು.) ; **Márketably** (ಕ್ರಿ. ವಿ.)

Marl ಮಾರ್ಲ್ (ನಾ., ಕ್ರಿ. ಸಕ.) ಮುಖ್ಯವಾಗಿ ಜೇಡಿ ಮತ್ತು ಸುಣ್ಣಕಲ್ಲು ಸೇರಿ ಆಗಿರುವ ಫಲವತ್ತಾದ ಒಂದು ಬಗೆಯ ಮಣ್ಣು : ಸುಣ್ಣಜೇಡಿ. (ಕ್ರಿ.) ನೆಲಕ್ಕೆ ಸುಣ್ಣಜೇಡಿ ಹಾಕು. **Márly** (ಗು.)

Mármalade ಮಾರ್ಮಲೇಡ್ (ನಾ.) ಕಿತ್ತಿಳೆಯ (ಅಥವಾ ಇತರ ಹಣ್ಣಿನ) ಮುರಬ್ಬ (ಹಣ್ಣನ್ನು ಸಕ್ಕರೆಯೊಡನೆ ಕುದಿಸಿ ತಯಾರಿಸಿದ್ದು)

Marmóreal ಮಾರ್ಮೋರಿಯಲ್ (ಗು.) (ಕಾವ್ಯ) ಅಮೃತಶಿಲೆಯ(ಂಥ)

Mármot ಮಾರ್ಮಟ್ (ನಾ.) ಅಳಿಲಿನ ಜಾತಿಗೆ ಸೇರಿದ ಒಂದು ದಂಶಕ ವರ್ಗದ ಪ್ರಾಣಿ.

Maroón[1] ಮರೂನ್ (ನಾ., ಗು.) ಕಂದು ಛಾಯೆಯ ಕಡುಗೆಂಪು ಬಣ್ಣ(ದ). (ಗಟ್ಟಿಯಾದ ಸದ್ದಿನೊಡನೆ ಸಿಡಿಯುವ ಒಂದು ಬಗೆಯ) ಫಿರಂಗಿ ಪಟಾಸು.

Maroón[2] ಮರೂನ್ (ನಾ., ಕ್ರಿ.) ಒಂದು ನೀಗ್ರೋ ಪಂಗಡದವನು. ಶಿಕ್ಷೆ ಅನುಭವಿಸುವುದಕ್ಕಾಗಿ ಒಂದು ನಿರ್ಜನ ದ್ವೀಪದಲ್ಲಿ ಅಥವಾ ಸಮುದ್ರತೀರದಲ್ಲಿ ಬಿಡಲ್ಪಟ್ಟವನು. (ಕ್ರಿ.) ಶಿಕ್ಷೆಯಾಗಿ ನಿರ್ಜನ ದ್ವೀಪದಲ್ಲಿ ಅಥವಾ ಸಮುದ್ರತೀರದಲ್ಲಿ ಬಿಟ್ಟುಬಿಡು. ಸೋಮಾರಿಯಾಗಿ ಕಾಲ ಕಳೆ ; ಅಲೆದಾಡು.

Marque ಮಾರ್ಕ್ (ನಾ.) Letter(s) of m. (& reprisal) ಶಸ್ತ್ರಸಜ್ಜಿತವಾದ ಹಡಗನ್ನು ಸಿದ್ಧಪಡಿಸಿಕೊಂಡು ಶತ್ರುಗಳ ವ್ಯಾಪಾರದ ಹಡಗುಗಳನ್ನು ವಶಪಡಿಸಿಕೊಳ್ಳಲು ಅದನ್ನು ಉಪಯೋಗಿಸಬಹುದೆಂದು ಕೊಡುವ ಪರವಾನೆ, ಅಧಿಕಾರ ಪತ್ರ. (ಏ. ವ.) ಇಂಥ ಅಧಿಕಾರ ಪತ್ರ ಪಡೆದಿರುವ ಹಡಗು.

Marqueé ಮಾರ್ಕೀ (ನಾ.) ದೊಡ್ಡ ಗುಡಾರ, ಡೇರೆ.

Márquetry, -terie ಮಾರ್ಕೆಟ್ರಿ (ನಾ.) (ಮು., ಪೀಠೋಪಸ್ಕರಗಳಲ್ಲಿಯ ಅಲಂಕಾರದ) ಗೂಡಿಗೆಯ ಕೆಲಸ.

Márquis ಮಾರ್ಕ್ವಿಸ್, **-quess** ಮಾರ್ಕ್ವೆಸ್ (ನಾ.) (ಇಂಗ್ಲೆಂಡು ಮತ್ತು ಯೂರೋಪಿನ ಇತರ ದೇಶಗಳಲ್ಲಿ) ಒಂದು ದರ್ಜೆಯ ಶ್ರೀಮಂತ : 'ಮಾರ್ಕ್ವಿಸ್'. **Márquisate** (ನಾ.) —ಪದವಿ ; —ನ ಭೂಸ್ವತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Marquíse ಮಾರ್ಕೀಸ್ (ನಾ.) (ಇಂಗ್ಲೆಂಡುಹೊರತು ಉಳಿದ ಯೂರೋಪಿನ ದೇಶಗಳಲ್ಲಿ) = Marchioness. ಮಣಿಗಳನ್ನು ಚೂಪು ಕೊನೆಗಳ ಅಂಡಾಕಾರದಲ್ಲಿ ಕೆತ್ತಿದ ಬೆರಳುಂಗುರ. (ಪ್ರಾಚೀ. ಪ್ರ.) ಗುಡಾರ; ಡೇರೆ.

Márquois ಮಾರ್ಕ್ವಾಯ್ಸ್ (ನಾ.) M. scale ಸಮ ದೂರವಿರುವಂತೆ ಸಮಾಂತರ ರೇಖೆಗಳನ್ನೆಳೆಯುವ ಸಲಕರಣೆ : ಸಮ ಸಮಾಂತರ ಲೇಖಕ.

Márriage ಮ್ಯಾರೆ(ರಿ)ಜ್ (ನಾ.) ಮದುವೆ; ವಿವಾಹ; ಲಗ್ನ; ದಾಂಪತ್ಯ (ಸಂಬಂಧ) [Give in m. ಮದುವೆ ಮಾಡಿಕೊಡು. Take in m. ಮದುವೆ ಮಾಡಿಕೊ. Civil m. (Civil ನೋಡಿ). Communal m. ಒಂದು ಸಣ್ಣ ಕೋಮಿನ ಎಲ್ಲ ಗಂಡಸರೂ ಆ ಕೋಮಿನ ಎಲ್ಲ ಹೆಂಗಸರನ್ನೂ ಸಾಮುದಾಯಿಕವಾಗಿ ಮದುವೆ ಮಾಡಿಕೊಳ್ಳುವುದು : ಸಾಮೂಹಿಕ ವಿವಾಹ. Companionate m. (ಅಮೆ. ಸಂ.) (ವಿವಾಹ ಸಂಸ್ಕಾರವಿಲ್ಲದ) ಪರೀಕ್ಷಾರ್ಥ ದಾಂಪತ್ಯ]. ಮದುವೆಯಾಗುವುದು; ವಿವಾಹ ಸಂಸ್ಕಾರ. (ರೂಪ.) ಅನ್ಯೋನ್ಯ ಸಮ್ಮಿಳನ, ಸಾಂಗತ್ಯ. (ಇಸ್ಪೀಟು) (ಒಂದೇ ರಂಗಿನ ರಾಜ ರಾಣಿಗಳ) ಜೋಡಿ. M. articles ಆಸ್ತಿಗೆ ಹಕ್ಕು, ಉತ್ತರಾಧಿಕಾರ, ಮೊ. ಗಳ ವಿಷಯದಲ್ಲಿ ಮದುವೆಗೆ ಮೊದಲು ಮಾಡಿಕೊಳ್ಳುವ ಕರಾರು. M.-bed (ರೂಪ.) ದಂಪತಿ ಸಮಾಗಮ. M. Licence ವಿವಾಹವಾಗಲು (ತಕ್ಕ ಅಧಿಕಾರಿಯಿಂದ ಪಡೆದ) ಅಧಿಕಾರ ಪತ್ರ. M. lines ಮದುವೆಯ ಪ್ರಮಾಣಪತ್ರ. M. market ಮದುವೆಗೆ ತಕ್ಕ ಹೆಣ್ಣು ಗಂಡುಗಳ ಒದಗು. M. settlement (ಮುಂದೆ) ಹೆಂಡತಿಗೆ, ಕೆಲವು ವೇಳೆ ಮಕ್ಕಳಿಗೆ ಸಹ, ಗೊತ್ತುಮಾಡುವ ಆಸ್ತಿಯ ವ್ಯವಸ್ಥೆ. **Márriageable** ಮ್ಯಾರೆ(ರಿ)ಜಬ್‌ಲ್ (ಗು.) ಮದುವೆಗೆ ತಕ್ಕ (ವಯಸ್ಸಿನ); ವಿವಾಹ ವಯಸ್ಕ. (ವಯಸ್ಸು) ಮದುವೆಯಾಗಲು ತಕ್ಕ. **Márried** (ಗು.) ಮದುವೆಯಾದ; ವಿವಾಹಿತ; ಮದುವೆಯಾದವನ(ರ). M. life ದಾಂಪತ್ಯ ಜೀವನ; ಗೃಹಸ್ಥ ಜೀವನ. **Márry**[1] ಮ್ಯಾರಿ (ಕ್ರಿ.) (ಪುರೋಹಿತ, ಮೊ. ರ ವಿಷಯದಲ್ಲಿ) (ಒಬ್ಬರನ್ನೊಬ್ಬರಿಗೆ) ಮದುವೆ ಮಾಡಿಸು; ದಾಂಪತ್ಯ ಗೂಡಿಸು. (ತಂದೆ ತಾಯಿ ಮತ್ತು ಪೋಷಕರ ವಿಷಯದಲ್ಲಿ) (ಮಗಳನ್ನು) ಮದುವೆ ಮಾಡಿಕೊಡು, (ಮಗನಿಗೆ ಹೆಣ್ಣು ತಂದು) ಮದುವೆ ಮಾಡು. (ವಧು ಅಥವಾ ವರ) ಮದುವೆ ಮಾಡಿಕೊ. (ರೂಪ.) ಅನ್ಯೋನ್ಯವಾಗಿ ಸಮ್ಮಿಳನ ಮಾಡು, — ಆಗು.

Márrow[1] ಮ್ಯಾರೊ (ನಾ.) ಮೂಳೆಯ ಪೊಳ್ಳು ಭಾಗದಲ್ಲಿರುವ ಮೆತ್ತನೆಯ ಕೊಬ್ಬುಪದಾರ್ಥ; ಎಲುಬಿನ ನೆಣ. [Spinal m. ಬೆನ್ನುಮೂಳೆಯೊಳಗಿನ ಮಜ್ಜಾ ರಜ್ಜು. Chilled to the m. ಮೂಳೆಗೆಲ್ಲ ಕೊರೆತ ಹತ್ತಿ; ದೇಹವಾದ್ಯಂತ ಚಳಿ ವ್ಯಾಪಿಸಿ]. ಮಾದರಿಯ ಸಾರವತ್ತಾದ ಆಹಾರ; ಸಾರವತ್ತಾದ ಭಾಗ; ತಿರುಳು (Pith & m.). Vegetable m. ಒಂದು ಬಗೆಯ ಕುಂಬಳಕಾಯಿ. Marrowbone ಆಹಾರಯೋಗ್ಯವಾದ ಮಜ್ಜೆಯಿಂದ ಕೂಡಿದ ಮೂಳೆ; (ಬ. ವ. ದಲ್ಲಿ ಹಾಸ್ಯ ಪ್ರ.) ಮೊಣಕಾಲುಗಳು. Marrow (fat) ಒಂದು ಬಗೆಯ ದೊಡ್ಡ ಬಟಾಣಿ. M.-spoon ಮೂಳೆಯಿಂದ ಮಜ್ಜೆಯನ್ನು ತೆಗೆಯುವ ಚಮಚ. **Márrowless** (ಗು.); **Márrowy** (ಗು.)

Márrow[2] ಮ್ಯಾರೊ (ನಾ.) (ಪ್ರಾಂ. ಪ್ರ.) ಜೊತೆಗಾರ; ಸಂಗಾತಿ; ಗಂಡ ಅಥವಾ ಹೆಂಡತಿ; (ಮೇಲಾಟದಲ್ಲಿ) ಎಣೆ, ಸಮ ದಂಡಿ; (ಒಂದರ) ಪ್ರತಿ ಬಿಂಬ, ಪಡಿಯಚ್ಚು.

Márry[1]. **Marriage** ನೋಡಿ.

Márry[2] ಮ್ಯಾರಿ (ಭಾವ. ಅವ್ಯ.) (ಪ್ರಾಚೀ. ಪ್ರ.) (ಆಶ್ಚರ್ಯ, ಪ್ರತಿಜ್ಞಾಪೂರ್ವಕವಾದ ಹೇಳಿಕೆ, ಕೋಪ, ಮೊ. ನ್ನು ವ್ಯಕ್ತಗೊಳಿಸುವ ಅವ್ಯಯ) ನಿಜವಾಗಿ! ಸತ್ಯವಾಗಿ! ಸರಿ ಸರಿ! M. come up! (ಕೋಪದಿಂದ, ತಿರಸ್ಕಾರದಿಂದ, ಕೂಡಿದ ಆಶ್ಚರ್ಯದ ಉದ್ಗಾರ)

Mars ಮಾರ್ಸ್ (ನಾ.) ಯುದ್ಧದಲ್ಲಿ ಜಯಲಾಭಕ್ಕಾಗಿ ಆರಾಧಿಸುತ್ತಿದ್ದ (ರೋಮನರ) ಯುದ್ಧ ದೇವತೆ; ಯುದ್ಧ. ಸೂರ್ಯನಿಂದ (ದೂರದಲ್ಲಿ) ನಾಲ್ಕನೆಯ ಗ್ರಹ : ಅಂಗಾರಕ; ಕುಜ.

Marseillaíse (F) ಮಾರ್ಸೆಯೇಸ್, — ಲೇಸ್ (ನಾ.) ಫ್ರೆಂಚ್ ಪ್ರಜಾ ಪ್ರಭುತ್ವದ ರಾಷ್ಟ್ರಗೀತೆ (ಮೊತ್ತ ಮೊದಲು Marseilles ಪಟ್ಟಣದ ದೇಶಭಕ್ತರು ಹಾಡಿದ ಕಾರಣದಿಂದ)

Marseílles ಮಾರ್ಸೇಲ್ಸ್ (ನಾ.) ದ. ಫ್ರಾನ್ಸಿನಲ್ಲಿ ಒಂದು ರೇವು ಪಟ್ಟಣ. ಒಂದು ಬಗೆಯ ಬಿರುಸಾದ, ಬಿಗುವಿನ, ಹತ್ತಿಯ ಬಟ್ಟೆ.

Marsh ಮಾರ್ಷ್ (ನಾ.) ಚಳಿಗಾಲದಲ್ಲಿ ನೀರು ತುಂಬಿಕೊಂಡಿರುವ, ಸಾಮಾನ್ಯವಾಗಿ ಸದಾ ನೀರು ನಿಂತಿರುವ, — ತಗ್ಗು ನೆಲ; ಜವುಗು ಭೂಮಿ. M. gas ಹಗುರವಾದ ಇಂಗಾಲಸಂಯುಕ್ತ ಜಲಜನಕ ವಾಯು. **Márshiness** (ನಾ.); **Márshy** (ಗು.)

Márshal ಮಾರ್ಷಲ್ (ನಾ., ಕ್ರಿ.) [Earl-m. (Earl ನೋಡಿ)]. (ಇಂಗ್ಲೆಂಡು ಅಲ್ಲದ ಇತರ ದೇಶಗಳ ಸೈನ್ಯದಲ್ಲಿ) ಅತ್ಯುನ್ನತ ಸೈನ್ಯಾಧಿಕಾರಿ : 'ಮಾರ್ಷಲ್'. [Provost-m., Field-m. (ಆಯಾ ಪದವನ್ನು ನೋಡಿ). M. of the air, Air-m. ಆಕಾಶ ಸೈನ್ಯದ ಅತ್ಯುನ್ನತಾಧಿಕಾರಿ]. ಉತ್ಸವ, ಮೊ. ಗಳ ಮೇಲ್ವಿಚಾರಣಾಧಿಕಾರಿ. (ಕ್ರಿ.) (ಉತ್ಸವ ಸಮಾರಂಭಗಳಲ್ಲಿ ಜನರನ್ನು) ತಾರತಮ್ಯಾನುಸಾರ ಉಚಿತ ಕ್ರಮದಲ್ಲಿ ಕೂಡಿಸು; ಸೈನಿಕರನ್ನು ತಕ್ಕ ರೀತಿಯಲ್ಲಿ ನಿಲ್ಲಿಸು; ವಿಷಯಗಳನ್ನು ತಕ್ಕ ಕ್ರಮದಲ್ಲಿ ಜೋಡಿಸು; (ವಂಶಲಾಂಛನಗಳನ್ನು) ಗುರಾಣಿಯಮೇಲೆ ತಕ್ಕ ರೀತಿಯಲ್ಲಿ ಯೋಜಿಸು. (ಒಬ್ಬನನ್ನು ಒಬ್ಬರ ಸಮ್ಮುಖಕ್ಕೆ) ತಕ್ಕ ಮರ್ಯಾದೆಯನುಸರಿಸಿ ಕರೆದುಕೊಂಡು ಹೋಗು (*Into* ಉಪ. ದೊಡನೆ). **Márshalship** (ನಾ.)

Marsúpial ಮಾರ್ಸ್ಯೂಪಿಯಲ್ (ಗು., ನಾ.) (ಅಂ. ರ. ಶಾ., ಪ್ರಾ. ವಿ.) ಚೀಲದ(ಂಥ) (M. muscle). (ಪೂರ್ತಿ ಬೆಳೆಯದೆ ಹುಟ್ಟುವ ತಮ್ಮ ಮರಿಗಳನ್ನು ಹೊತ್ತು ಸಲಹುವುದಕ್ಕಾಗಿ) ಹೊಟ್ಟೆಯ ಚೀಲವುಳ್ಳ ಸಸ್ತನಿ ವರ್ಗದ (ಪ್ರಾಣಿ)

Mart ಮಾರ್ಟ್ (ನಾ.) (ಕಾವ್ಯ) ವ್ಯಾಪಾರ ಸ್ಥಳ; ಪೇಟೆ; ಸಂತೆ ಮಾಳ; ಹರಾಜು ನಡಸುವ ಕೋಣೆ; ವ್ಯಾಪಾರ ಕೇಂದ್ರ.

Martéllo ಮಾರ್ಟೆಲೊ (ನಾ.) M. tower (ಶತ್ರುಗಳು ದಡದಲ್ಲಿ ಬಂದು ಇಳಿಯದಂತೆ ನೋಡಿಕೊಳ್ಳುವುದಕ್ಕಾಗಿ, ಸಾ., ಸಮುದ್ರತೀರದಲ್ಲಿ, ಕಟ್ಟಿರುವ) ಸಣ್ಣ ದುಂಡು ಕೋಟೆ.

Márten ಮಾರ್ಟೆನ್ (ನಾ.) ಬೆಲೆಯ ತುಪ್ಪುಳುಚರ್ಮವುಳ್ಳ ಒಂದು ಜಾತಿಯ ಸಣ್ಣ ಪ್ರಾಣಿ.

Mártial ಮಾರ್ಷ(ರ್ಷ)ಲ್ (ಗು.) ಯುದ್ಧದ; ಯುದ್ಧೋಚಿತ. [M. law (ಸಾಮಾನ್ಯ ಕಾಯಿದೆಗಳನ್ನು ರದ್ದುಮಾಡಿ ಸೈನ್ಯಾಧಿಕಾರಿಗಳು ನಡಸುವ) ಸೈನಿಕಾಡಳಿತ; ಸೈನಿಕ ಶಾಸನ]. ಕೆಚ್ಚೆದೆಯ; ಯುದ್ಧೋತ್ಸಾಹಿ(ಯಾದ). ಕುಜ ಗ್ರಹದ. **Mártialize** (ಕ್ರಿ. ಸಕ.); **Mártially** (ಕ್ರಿ. ವಿ.)

Mártian ಮಾರ್ಷ(ರ್ಷ)ನ್ (ನಾ.) ಅಂಗಾರಕ ಗ್ರಹ ನಿವಾಸಿ.

Mártin ಮಾರ್ಟಿನ್ (ನಾ.) (ಮನೆಯ ಗೋಡೆ, ಮೊ. ಸ್ಥಳಗಳಲ್ಲಿ ಮಣ್ಣಿನಿಂದ ಗೂಡು ಕಟ್ಟಿಕೊಳ್ಳುವ) ಬಾನಕ್ಕಿ ಜಾತಿಯ ಒಂದು ಹಕ್ಕಿ.

Martinét ಮಾರ್ಟಿನೆಟ್ (ನಾ.) (ಮು., ಸೈನಿಕ ಅಥವಾ ನಾವಿಕ) ನಿಯಮಗಳು ಕಟ್ಟುನಿಟ್ಟಾಗಿ ನಡೆಯುವಂತೆ ನೋಡಿಕೊಳ್ಳುವವನು : ಶಿಸ್ತಿ ಪ್ರವರ್ತಕ. **Martinét(t)ism** (ನಾ.); **Martinét(t)ish** (ಗು.)

Mártingale ಮಾರ್ಟಿಂಗೇಲ್ (ನಾ.) ಕುದುರೆ ತನ್ನ ಹಿಂಗಾಲುಗಳ ಮೇಲೆ ನಿಲ್ಲುವುದು, ಮೊ. ತುಂಟತನವನ್ನು ಮಾಡದಂತೆ ತಡೆಯುವುದಕ್ಕಾಗಿ ಒಂದು ತುದಿಯನ್ನು ಅದರ ಕಡಿವಾಣಕ್ಕೂ ಮತ್ತೊಂದು ತುದಿಯನ್ನು ಅದರ ಸೊಂಟಪಟ್ಟಿಗೂ ತಳದಲ್ಲಿ ಸೇರಿಸಿ ಬಂಧಿಸಿರುವ ತೊಗಲ ಪಟ್ಟಿ(ಗಳು) : ತಂಗು ಪಟ್ಟಿ. ಕೊನೆಗೆ ಒಳ್ಳೆಯ ಅದೃಷ್ಟ ತಿರುಗಬಹುದೆಂಬ ಆಸೆಯಿಂದ ಪಣವನ್ನು ಇಮ್ಮಡಿಸುತ್ತ ಹೋಗುವ ಒಂದು ಬಗೆಯ ಜೂಜಾಟ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Martíni ಮಾರ್ಟೀನಿ(ೕ) (ನಾ.) ಒಂದು ಬಗೆಯ ಬಂದೂಕು [The M.-Henry (rifle) ಎಂಬುದರ ಸಂಕ್ಷಿಪ್ತ: Martin ಮತ್ತು Henry ಎಂಬ ಕಲ್ಪಕರ ಹೆಸರಿನಿಂದ]

Mártyr ಮಾರ್ಟರ್ (ನಾ., ಕ್ರಿ. ಸಕ.) ಕ್ರೈಸ್ತ ಮತದಲ್ಲಿ ಅಚಲವಾದ ನಂಬಿಕೆಯಿಟ್ಟಿರುವ ಕಾರಣದಿಂದ ಅಥವಾ ಕ್ರೈಸ್ತ ಮತ ಶಾಸನಕ್ಕೆ ವಿಧೇಯನಾಗಿರುವ ಕಾರಣದಿಂದ ಮರಣ ದಂಡನೆ ಅನುಭವಿಸುವವನು; ಯಾವುದಾದರೊಂದು ಮಹಾ ಕಾರ್ಯಕ್ಕಾಗಿ, ಮಹೋದ್ದೇಶಕ್ಕಾಗಿ, ಮರಣವನ್ನೊ ಚಿತ್ರ ಹಿಂಸೆಯನ್ನೊ ಅನುಭವಿಸುವವನು: ಧರ್ಮ ಬಲಿ; ಆಹುತಾತ್ಮ; ಧರ್ಮ ವೀರ; [M. to gout ವಾತ ರೋಗಕ್ಕೆ ಬಲಿಯಾದವನು. Make a m. of oneself (ಹಾಸ್ಯವಾಗಿ) (ಖ್ಯಾತಿಲಾಭದ ಉದ್ದೇಶದಿಂದ) ತನ್ನ ಪ್ರವೃತ್ತಿಯನ್ನು, ಒಲವನ್ನು, ಬಲಿಗೊಡು(ವಂತೆ ನಟಿಸು)]. (ಕ್ರಿ.) ಧರ್ಮಬಲಿಯಾಗಿ ಕೊಲ್ಲು; ಚಿತ್ರ ಹಿಂಸೆ ಕೊಡು. **Mártyrdom** (ನಾ.) ಧರ್ಮ ವೀರನ(ನಾಗಿ) ಹಿಂಸಾನುಭವ, ಮರಣ; ಚಿತ್ರ ಹಿಂಸೆ. **Mártyrize** ಮಾರ್ಟರೈಸ್ (ಕ್ರಿ. ಸಕ.) ಧರ್ಮಬಲಿ ಕೊಡು; ಧರ್ಮಬಲಿಯಾಗು. **Martyrólogy** (ನಾ.) ಧರ್ಮಬಲಿಯಾದವರ ಪಟ್ಟಿ, ಪುಸ್ತಕ, ಚರಿತ್ರೆ. **Mártyry** ಮಾರ್ಟರಿ (ನಾ.) ಧರ್ಮಬಲಿಯ (ಗೌರವಾರ್ಥವಾಗಿ ಕಟ್ಟಿದ) ಗುಡಿ, ಆರಾಧನ ಮಂದಿರ, ಮೊ. ವು.

Márvel ಮಾರ್ವೆಲ್, —ವ್‌ಲ್ (ನಾ., ಕ್ರಿ. ಅಕ.) ಆಶ್ಚರ್ಯಕರವಾದದ್ದು. (ಗುಣಕ್ಕೆ, ಲಕ್ಷಣಕ್ಕೆ) ಅದ್ಭುತವಾದ ದೃಷ್ಟಾಂತ (*Of* ಉಪ. ದೊಡನೆ). (ಪ್ರಾಚೀ. ಪ್ರ.) ಆಶ್ಚರ್ಯ; ಬೆರಗು. (ಕ್ರಿ.) (ಸಾಹಿತ್ಯ ಪ್ರ.) ಆಶ್ಚರ್ಯ ಪಡು; ಚೋದ್ಯಗೊಳ್ಳು (*At*, *that*, *how*, *why*, ಮೊ. ಪದದೊಡನೆ). **Márvellous** (ಗು.) ಆಶ್ಚರ್ಯಕರವಾದ; ಅದ್ಭುತವಾದ; ನಂಬಲಾರದಷ್ಟು ಅಸಂಭವವಾದ (The m.). **Márvellously** (ಕ್ರಿ. ವಿ.); **Márvellousness** (ನಾ.)

Márxian ಮಾರ್ಕ್ಸಿಯನ್ (ಗು., ನಾ.) (ಜರ್ಮನ್ ಸಮಾಜ ಸಮತಾವಾದಿಯಾದ) Karl Marx ನ ತತ್ತ್ವಗಳ (ಅನುಯಾಯಿ)

Máscot ಮ್ಯಾಸ್ಕಾಟ್ (ನಾ.) ಒಳ್ಳೆಯ ಅದೃಷ್ಟ ತರುವವನು, —ವದು; ಅದೃಷ್ಟ ವಸ್ತು; ಶುಭಕಾರಿ.

Másculine ಮ್ಯಾಸ್ಕ್ಯುಲಿನ್ (ಗು., ನಾ.) ಪುಲ್ಲಿಂಗದ; ಗಂಡು (ಲಿಂಗದ); ಗಂಡುತನದ; ಪೌರುಷವುಳ್ಳ. (ಹೆಂಗಸಿನ ವಿಷಯದಲ್ಲಿ) ಗಂಡಸಿಗೆ ತಕ್ಕ ಗುಣಗಳುಳ್ಳ; ಗಂಡುಬೀರಿಯಾದ. (ನಾ.) ಪುಲ್ಲಿಂಗ (ಪದ). **Másculineness** (ನಾ.); **Masculínity** (ನಾ.)

Mash[1] ಮ್ಯಾಷ್ (ನಾ., ಕ್ರಿ. ಸಕ.) (ಸಾರ ಸೇರಿ ಸಿಹಿರಸವಾಗುವುದಕ್ಕಾಗಿ) ಬಿಸಿನೀರು ಹಾಕಿಟ್ಟ ಮೊಳೆಧಾನ್ಯ, ಮಾಲ್ಟು. (ಕುದುರೆ, ಮೊ. ಗಳಿಗೆ ಕೊಡುವ) ಬೇಯಿಸಿದ ಕಾಳು, ತವುಡು, ಮೊ. ನ್ನು ಬೆರಸಿದ ಬೆಚ್ಚನೆಯ ತೀನಿ; (ನೀರು, ಮೊ. ಗಳಲ್ಲಿ ನೆನಸಿ, ಜಜ್ಜಿ, ಕುಟ್ಟಿ ಅಥವಾ ಅರೆದು, ಮೆತು ಮಾಡಿದ) ದ್ರವ ಪೇಷ; (ಅಸಂ.) ಆಲೂಗಡ್ಡೆಯ ಬಜ್ಜಿ (Sausage & m.). ಕಲ ಬೆರಕೆ. (M.-tub ಮಾಲ್ಟಿನ ಸಾರವಿಳಿಸುವ ತೊಟ್ಟಿ). (ಕ್ರಿ.) (ಮಾಲ್ಟಿಗೆ) ಬಿಸಿನೀರು ಸೇರಿಸು; ಬಜ್ಜಿಯಾಗುವಂತೆ, ದ್ರವ ಪೇಷವಾಗುವಂತೆ, — ಜಜ್ಜು, ಅರೆ; (ಆಲೂಗಡ್ಡೆ, ಮೊ. ನ್ನು ಜಜ್ಜಿ) ಬಜ್ಜಿ ಮಾಡು.

Mash[2] ಮ್ಯಾಷ್ (ಕ್ರಿ. ಸಕ., ನಾ.) (ಅಸಂ.) (ಗಂಡಸು ಹೆಂಗಸನ್ನು, ಹೆಂಗಸು ಗಂಡಸನ್ನು) ಮೋಹೋದ್ರೇಕಗೊಳಿಸು [Be mashed on (— ನ) ಮೇಲೆ ಮೋಹಗೊಂಡಿರು]; ಮೋಹಗೊಳಿಸಿದವನು, —ವಳು. **Másher** (ನಾ.) ಹೆಂಗಸರನ್ನು ಬಲೆಗೆ ಹಾಕಿಕೊಳ್ಳುವೆನೆಂದು ಮೆರೆಯುವ ಸೊಗಸುಗಾರ, ಷೋಕಿಲಾಲ.

Mask ಮಾಸ್ಕ್ (ನಾ., ಕ್ರಿ. ಸಕ.) (ನರ್ತನ ಗೋಷ್ಠಿ, ಮೊ. ಗಳಲ್ಲಿ, ಗುರುತು ಕಾಣದಂತೆ ಮುಖ ಮುಚ್ಚಲು ಹಾಕಿಕೊಳ್ಳುವ, ಸಾ., ಮುಖಮಲ್ಲಿನ ಅಥವಾ ರೇಷ್ಮೆಯ) ಮುಖದ ಮುಸುಕು; (ರಕ್ಷಣೆಗಾಗಿ ಮುಖಕ್ಕೆ ಹಾಕಿಕೊಳ್ಳುವ) ತಂತಿಬಲೆಯ ಅಥವಾ ಜಾಲಕದ ಮೊಗಕಾಪು. (ಗ್ರೀಕ್ ಮತ್ತು ರೋಮನ್ ನಟರು ಮುಖಕ್ಕೆ ಇಟ್ಟುಕೊಳ್ಳುತ್ತಿದ್ದ) ಮನುಷ್ಯನ ತಲೆಯ ಟೊಳ್ಳು ಆಕೃತಿ; ಮೊಗವಾಡ; (ಜೇಡಿಯಲ್ಲಿ ಅಥವಾ ಮೇಣದಲ್ಲಿ ಮಾಡಿದ, ಒಬ್ಬನ) ಮುಖದ ಪ್ರತಿಕೃತಿ [ಮು., ಸತ್ತವನ ಮುಖದ ಅಚ್ಚೊತ್ತಿ ತೆಗೆದ ಪಡಿಯಚ್ಚು (=Death-m.)]. (ರೂಪ.) (ಗುರುತು ತಿಳಿಯದಂತೆ ಹಾಕುವ, ಮೋಸದ) ವೇಷ (Throw off the m. ವೇಷವನ್ನು ಕಿತ್ತೊಗೆ); ವೇಷ ಹಾಕಿಕೊಂಡಿರುವವನು; ವೇಷ ಧಾರಿ. ನರಿಯ ಮುಖ, ತಲೆ. (ಕ್ರಿ.) (ಮುಖವನ್ನು) ಮೊಗವಾಡ, ಮುಸುಕು, ಮೊ. ಗಳಿಂದ ಮುಚ್ಚು, ಮುಚ್ಚಿಕೊ. (ಕರ್ಮಣಿ) ಮೊಗವಾಡದಿಂದ ರೂಪ ಮರಸಿಕೊಂಡಿರು, ವೇಷ ಹಾಕಿಕೊಂಡಿರು. (ಸೈನ್ಯ) ಶತ್ರುಗಳ ದೃಷ್ಟಿಗೆ ಬೀಳದಂತೆ (ದಂಡು, ಮೊ. ನ್ನು) ಮರಸಿಡು; (ಶತ್ರುಸೈನ್ಯ, ಮೊ. ವು) ಕಾರ್ಯ ನಡಸದಂತೆ ತಕ್ಕಷ್ಟು ಸೈನ್ಯದೊಡನೆ ಕಾವಲಿದ್ದು ತಡೆ(ಯೊಡ್ಡು); ಗುಂಡು ಹಾರಿಬರುವ ಮಾರ್ಗದಲ್ಲಿ ನಿಂತು (ಮಿತ್ರ ಸೈನ್ಯ) ಕಾರ್ಯ ಮಾಡದಂತೆ ತಡೆಯೊಡ್ಡು. (ಮನೋಭಾವ, ಮೊ. ನ್ನು) ಮರೆಮಾಜು. Masked ball ಮುಖಕ್ಕೆ ಮುಸುಕು ಹಾಕಿಕೊಂಡು ಕುಣಿಯುವ ನೃತ್ಯ ಗೋಷ್ಠಿ. **Másker, -quer** ಮಾಸ್ಕರ್ (ನಾ.) ಅಂಥ ನೃತ್ಯಗೋಷ್ಠಿಯಲ್ಲಿ ಅಥವಾ ಅಂಥ ನಾಟಕದಲ್ಲಿ ಭಾಗ ವಹಿಸುವ ನರ್ತಕ(ಕಿ), ನಟ(ಟಿ)

Máson ಮೇಸ್‌ನ್ (ನಾ., ಕ್ರಿ. ಸಕ.) ಕಲ್ಲುಕೆಲಸದವನು; ಕಲ್ಲುಕುಟಿಗ; ಕಲ್ಲು ಕಟ್ಟಡ ಕಟ್ಟುವವನು. =Freemason. (ಕ್ರಿ.) ಕಲ್ಲು ಕಟ್ಟಡ ಕಟ್ಟು; ಕಲ್ಲು ಕಟ್ಟಿ ಭದ್ರಪಡಿಸು. **Masónic** ಮ(ಮೆ)ಸಾನಿಕ್ (ಗು.); **Másonry** ಮೇಸ್‌ನ್ರಿ (ನಾ.) ಕಲ್ಲು ಕೆಲಸ; ಕಲ್ಲು ಕಟ್ಟಡ.

Masque ಮಾಸ್ಕ್ (ನಾ.) (ಕರಾ ವಿನೋದಿಗಳು ಮೊಗವಾಡ ಧರಿಸಿ ಆದಿಯಲ್ಲಿ ಮೂಕ ನಾಟಕವಾಗಿ ಆಡುತ್ತಿದ್ದ, ಅನಂತರ ಸಂವಾದ, ಸಂಭಾಷಣೆ, ಸಂಗೀತ, ಮೊ. ನ್ನೊಳಕೊಂಡಿದ್ದ) ನಾಟಕ ವಿನೋದ; ಮೊಗವಾಡ ನಾಟಕ; — ಗ್ರಂಥ. **Masqueráde** ಮಾಸ್ಕರೇಡ್ (ನಾ., ಕ್ರಿ. ಅಕ.) =Masked ball (Mask ನೋಡಿ). ಸೋಗು; ವೇಷ; ನಟನೆ. (ಕ್ರಿ.) ವೇಷ ಹಾಕಿಕೊಂಡು ಕಾಣಿಸಿಕೊ, ತಿರುಗಾಡು. ಸ್ವರೂಪ ಮರೆಮಾಜಿ ಬೇರೆಯಾಗಿ ಕಾಣುವಂತೆ ವೇಷ ತಾಳು.

Masqueráde. Masque ನೋಡಿ.

Mass[1] ಮ್ಯಾಸ್, ಮಾಸ್ (ನಾ.) (ಈಗ ಸಾ., ರೋ. ಕ್ಯಾ.) ಪ್ರಭು ಭೋಜನ, ಇದಕ್ಕೆ ಸಂಬಂಧಪಟ್ಟ ಸ್ತೋತ್ರ ಪಾಠಗಳು, ವ್ರತಾಚರಣೆ ಮತ್ತು ಆರಾಧನೆ (M. was said; We attend, go to, hear, m.; Masses were said for his soul). ಈ ಸಂಸ್ಕಾರದ ಆರಾಧನ ವಿಧಿ; ಇದರ ಭಾಗಗಳಿಗೆ ಹೊಂದಿಸಿದ ಸಂಗೀತ. High m. (ಧೂಪದಿಂದಲೂ ಗಾನದಿಂದಲೂ ಕೆಲವರು ಕ್ರೈಸ್ತ ಮತಾಧಿಕಾರಿಗಳ ಸಹಾಯದಿಂದ ನಡಸುವ) ದೊಡ್ಡ ಆರಾಧನೆ. Low m. (ಗಾನವಿಲ್ಲದೆ, ಅತ್ಯಾವಶ್ಯಕವಾದ ಕರ್ಮಾಚರಣೆಗಳಿಂದ ಮಾತ್ರ ನಡಸುವ) ಸಾಮಾನ್ಯ ಆರಾಧನೆ.

Mass[2] ಮ್ಯಾಸ್ (ನಾ., ಕ್ರಿ.) (ಒಂದು ಗೊತ್ತಾದ ಆಕಾರವಿಲ್ಲದ) ಮುದ್ದೆ; ಮೊತ್ತ; ಗುಂಪು; ರಾಶಿ; (ವಸ್ತುಗಳ) ಒತ್ತಾದ ಒಟ್ಟಿಲು, ದಟ್ಟವಾದ ಕೂಡಣೆ (A m. of fibres ನಾರಿನ ಗುಂಪಲು). ಅಧಿಕ ಸಂಖ್ಯೆ; ಹಲವು (He is a m. of bruises ಅವನ ಮೈತುಂಬ ಜಜ್ಜುಗಾಯಗಳಾಗಿವೆ). (ಬೆಳಕು, ಮೊ. ಗಳ) ಎಡೆಬಿಡದ ಹರವು; ಅವಿಚ್ಛಿನ್ನ ವಿಸ್ತಾರ; [The (great) m. of (—ರ) ಬಹು ಭಾಗ, ಅಧಿಕಾಂಶ. The masses ಕೆಳ ದರ್ಜೆಯ ಜನರು (Classes ಒಡನೆ ಹೋಲಿಸಿ). In the m. ಒಟ್ಟಿನಲ್ಲಿ; ಮೊತ್ತದಲ್ಲಿ]. (ಭೌ. ವಿ.) (ಒಂದು ವಸ್ತುವಿನಲ್ಲಿರುವ) ದ್ರವ್ಯದ ಪರಿಮಾಣ. [M. meeting (ಸಾ., ರಾಜಕೀಯದ) ಜನಸಾಮಾನ್ಯರ ದೊಡ್ಡ ಸಭೆ; ಮಂದಿ ಸಭೆ. M. of manoeuvre ಯುದ್ಧತಂತ್ರದ ಆವಶ್ಯಕತೆಗಳಿಗಾಗಿ ಸಮಯಾನುಸಾರ ಉಪಯೋಗಿಸಲು ಬಿಡುವಾಗಿಟ್ಟುಕೊಂಡಿರುವ ಸೈನ್ಯ. M. production (ನಿಷ್ಕೃಷ್ಟ ಯಂತ್ರಕಾರ್ಯದಿಂದ, ನಿಷ್ಕೃಷ್ಟ ಪ್ರಮಾಣದಲ್ಲಿ ಸಾಮಾನಿನ) ರಾಶಿಗಟ್ಟಳೆ ತಯಾರಿಕೆ]. (ಕ್ರಿ.) ಮುದ್ದೆಗೂಡು, — ಗೂಡಿಸು; ಒಟ್ಟುಗೂಡು, —ಗೂಡಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಸೈನ್ಯದಳಗಳನ್ನು) ಕೇಂದ್ರೀಕರಿಸು, (ಒಂದು ಸ್ಥಾನದಲ್ಲಿ) ಒಟ್ಟುಗೂಡಿಸು. **Mássive** ಮ್ಯಾಸಿವ್ (ಗು.) ಸ್ಥೂಲವೂ ಭಾರವುಳ್ಳದ್ದೂ ಆದ; ಸಾಂದ್ರತೆಯುಳ್ಳ. (ಮುಖಭಾಗ, ತಲೆ, ಆಕಾರ, ಮೊ. ಗಳ ವಿಷಯದಲ್ಲಿ) ಸ್ಥೂಲವಾದ; ಬಹಳ ದಪ್ಪವಾದ ಮಾಟದ. (ರೂಪ.) ಸುದೃಢವಾದ; ಗಟ್ಟಿಯಾದ; ತೂಕವಾದ; ಮಜಬೂತಾದ. (ವು. ಶಾ.) (ವೇದನೆ, ಮೊ. ಗಳ ವಿಷಯದಲ್ಲಿ) ಅಧಿಕ ಪ್ರಮಾಣದ. **Mássively** (ಕ್ರಿ. ವಿ.); **Mássiveness** (ನಾ.); **Mássy** (ಗು.) (ಅಧಿಕ) ದ್ರವ್ಯ ಸಾಂದ್ರತೆಯುಳ್ಳ; ಭಾರಿಯಾದ; ಭಾರವಾದ. **Mássiness** (ನಾ.)

Mássacre ಮ್ಯಾಸಕರ್ (ನಾ., ಕ್ರಿ. ಸಕ.) (ಮನುಷ್ಯರ, ಕೆಲವು ವೇಳೆ ಪ್ರಾಣಿಗಳ) ಸಾಮೂಹಿಕ ಸಂಹಾರ; ಬಹುಜನ ಹತ್ಯೆ; ಕಗ್ಗೊಲೆ. (ಕ್ರಿ.) ಕಗ್ಗೊಲೆ ಮಾಡು; ಕ್ರೂರವಾಗಿ, ಉಗ್ರವಾಗಿ, ಪ್ರಚಂಡವಾಗಿ, — ಕೊಲೆ ಮಾಡು, ಕಡಿದು ಹಾಕು.

Masságe ಮ್ಯಾಸಾಷ್ (ನಾ., ಕ್ರಿ. ಸಕ.) ದೇಹದ ಸ್ನಾಯುಗಳನ್ನೂ ಅಸ್ಥಿಸಂಧಿಗಳನ್ನೂ, ಅವುಗಳ ಕಾರ್ಯ ಚುರುಕಾಗುವಂತೆ, ಕೈಗಳಿಂದ ತಿಕ್ಕುವುದು, ಹಿಸುಕುವುದು; ನೀವುವುದು; ನೀವುವ ಚಿಕಿತ್ಸೆ; ಸಂವಾಹನ; ಅಂಗ ಮರ್ದನ. (ಕ್ರಿ.) (ಅಂಗ ಭಾಗವನ್ನು, ಒಬ್ಬನನ್ನು) ನೀವು. **Masseúr** ಮಾ(ಮ್ಯಾ)ಸರ್ [ನಾ.; ಸ್ತ್ರೀ. -euse —ಸರ್ಜ್(F)] (ಮ್ಯೊ ಕ್ಸ್) ನೀವುವವನು; ಸಂವಾಹಕ. **Másser** (ನಾ.), **Mássor** (ನಾ.) = Masseur, Masseuse.

Masseúr, etc. **Massage** ನೋಡಿ.

Mássif ಮ್ಯಾಸಿಫ್ (ನಾ.) ದಟ್ಟವಾಗಿ ಗುಂಪುಗೂಡಿರುವ ಪರ್ವತ ಶಿಖರಗಳು; ಪರ್ವತ ಶ್ರೇಣಿಯ ದಟ್ಟವಾದ ಭಾಗ.

Mássive, Mássy. **Mass**[2] ನೋಡಿ.

Mast[1] ಮಾಸ್ಟ್ (ನಾ.) ಹಡಗಿನ ಪಟಗಳ ಆಶ್ರಯಕ್ಕಾಗಿ ಹಡಗಿನ ಅಡಿಗಟ್ಟಿನಿಂದ ಹೊರಟ ಕಬ್ಬಿಣದ ಅಥವಾ ಮರದ ಉದ್ದವಾದ ಕಂಬ; (ಹಡಗಿನ) ಪಟ ಸ್ತಂಭ; ಕೂವೆ (ಮರ) [Half-m. high (Half ಕ್ರಿ. ವಿ. ನೋಡಿ). M.-head (ನಾ.) ಕೂವೆಯ ನೆತ್ತಿ; (ಮು., ನಿಂತು ಕಾವಲು ನೋಡುವ ಅಥವಾ ಶಿಕ್ಷೆ ಅನುಭವಿಸುವ ಸ್ಥಾನವಾದ) ಕೆಳ ಕೂವೆಯ ನೆತ್ತಿ. (ಕ್ರಿ.) (ನಾವಿಕನನ್ನು) (ಕೆಳ) ಕೂವೆಯ ನೆತ್ತಿಗೆ ಕಳುಹಿಸು. (ಪಟವನ್ನು) ಅದರ ಸ್ಥಾನಕ್ಕೆ ಎತ್ತಿ ಕಟ್ಟು]. ನಿಸ್ತಂತು ವಾರ್ತಾ ಪ್ರಸರಣದ ಅಥವಾ ಸಂಗ್ರಹದ ತಂತಿಗೆ ಆಧಾರವಾಗಿರುವ ಕಂಬ, ಅಥವಾ ಜಾಲಕದ ಕಟ್ಟಡ; ರೇಡಿಯೊ ಕಂಬ; (ಅದರ) ನೆತ್ತಿಗೆ ಆಕಾಶ ನೌಕೆಯನ್ನು ಬಿಗಿಯಬಹುದಾದ ಬಲವಾದ ಉಕ್ಕಿನ ಗೋಪುರ (= mooring-m.). **-masted** (ಗು.); **-master** (ನಾ.)

Mast[2] ಮಾಸ್ಟ್ (ನಾ.) (ಮು., ಹಂದಿಗಳಿಗೆ ಆಹಾರವಾಗಿ ಉಪಯೋಗಿಸುವ) 'ಬೀಚ್', 'ಓಕ್' ಮತ್ತು ಇತರ ಕಾಡು ಮರಗಳ ಹಣ್ಣು, ಕಾಯಿ.

Máster ಮಾಸ್ಟರ್ (ನಾ.) ಅಧಿಕಾರ, ಹತೋಟಿ, —ಉಳ್ಳವನು; ಯಜಮಾನ; ಧಣಿ; ಸ್ವಾಮಿ; ಒಡೆಯ. ಬೋಧಕ; ಶಿಕ್ಷಕ; ಗುರು; (ಮು., ಪಾಠಶಾಲೆಯ) ಉಪಾಧ್ಯಾಯ (= Schoolm.); ಓಜ (ಗ್ರಾಂ.). (ವ್ಯಾಪಾರದ) ಹಡಗಿನ ನಾಯಕ, ಯಜಮಾನ. (ಕೆಲಸಗಾರನನ್ನು) ಚಾಕರಿಗಿಟ್ಟುಕೊಳ್ಳುವವನು. (ನಾಯಿ, ಕುದುರೆ, ಮೊ. ಗಳ) ಮಾಲೀಕ, ಯಜಮಾನ [M. of the house ಮನೆಯ ಯಜಮಾನ. Be m. of ತನ್ನ ವಶದಲ್ಲಿ, ಅಧೀನದಲ್ಲಿ, ಇಟ್ಟುಕೊಂಡಿರು. Be one's own m. ತನ್ನ ಇಷ್ಟ ಬಂದಂತೆ ನಡೆಯಲು ಸ್ವತಂತ್ರನಾಗಿರು. Make oneself m. of (ಒಂದರ) ಸಂಪೂರ್ಣ ಜ್ಞಾನ ಪಡೆ, (ಒಂದನ್ನು ಉಪಯೋಗಿಸುವುದರಲ್ಲಿ) ಪೂರ್ಣಾನುಭವ ಪಡೆ. We will see which of us is m. ನಮ್ಮಲ್ಲಿ ಯಾರು ಮೇಲುಗೈಯೊ ನೋಡಿಬಿಡೋಣ. House-m. (House ನೋಡಿ). The M. ಗುರುದೇವ; ಯೇಸು ಕ್ರಿಸ್ತ. M. of Arts (ಸಂಕ್ಷಿಪ್ತ: M.A.) (Art[2] ನೋಡಿ). M. carpenter ನುರಿತ, ಕುಶಲಿಯಾದ, ಬಡಗಿ; ಸ್ವತಂತ್ರವಾಗಿ ಕೆಲಸಮಾಡುವ ಬಡಗಿ. Old m. (೧೩-೧೭ನೆಯ ಶತಮಾನಗಳಲ್ಲಿ ಬಾಳಿದ) ಶ್ರೇಷ್ಠ ಕಲೆಗಾರರೊಲ್ಲೊಬ್ಬ(ನ ಕೃತಿ) (ವರ್ಣಚಿತ್ರ, ಮೊ.)]. (ಕೆಲವು ಪ್ರೌಢ ವಿದ್ಯಾಶಾಲೆಗಳಲ್ಲಿ) ಅಧ್ಯಕ್ಷ, ಮುಖ್ಯೋಪಾಧ್ಯಾಯ. M. in Chancery (ಇಂಗ್ಲೆಂಡಿನಲ್ಲಿ) ಪ್ರಧಾನ ನ್ಯಾಯಸ್ಥಾನದ ಮುಖ್ಯ ಸಹಾಯಾಧಿಕಾರಿ(ಗಳಲ್ಲೊಬ್ಬನು). M. of (the) Ceremonies (Ceremony ನೋಡಿ). M. of misrule, rolls (ಆಯಾ ಪದವನ್ನು ನೋಡಿ). M. of the revels (ಇಂಗ್ಲೆಂಡಿನ ಅರಮನೆಯಲ್ಲಿಯೂ Inns of Court ಎಂಬ ವಕೀಲರ ಸಂಘಗಳಲ್ಲಿಯೂ) ಉತ್ಸವಗಳ ವ್ಯವಸ್ಥಾಪಕ. M. of the Horse (ಇಂಗ್ಲೆಂಡಿನಲ್ಲಿ) ಅರಮನೆಯ ಒಬ್ಬ ಅಧಿಕಾರಿ. [(ದೊಡ್ಡಮನುಷ್ಯರ) ಹುಡುಗರ ಮತ್ತು ತರುಣರ ವಿಷಯದಲ್ಲಿ, ಸೇವಕರು, ಮೊ. ರು ಗೌರವಾರ್ಥವಾಗಿ ಸೇರಿಸುವ ಒಕ್ಕಣೆ: M. Tom, M. Jones]. A m. mind ಸರ್ವ ನಿಯಂತ್ರಕ ಪ್ರಜ್ಞೆ; ಪ್ರಜ್ಞಾವಂತ. **M.-at-arms** ಯುದ್ಧದ ಹಡಗಿನ(ಲ್ಲಿರುವ) ಪೊಲೀಸ್ ಅಧಿಕಾರಿ. **M.-key** (ಪ್ರತಿಯೊಂದಕ್ಕೂ ಪ್ರತ್ಯೇಕವಾಗಿ ಬೀಗದಕ್ಕೆಯಿರುವ ಹಲವು ಬೀಗಗಳನ್ನು ತಾನೊಂದೇ ತೆರೆಯಬಲ್ಲ) ನಾಯಕ ಬೀಗದಕ್ಕೆ. M. mason (ಕಲ್ಲು ಕಟ್ಟಡಗಳ ನಕ್ಷೆ ಮಾಡಿ ಕೆಲಸ ನಡೆಸುವ ಅಥವಾ ತನ್ನ ಕೈಕೆಳಗಿನ ಕೆಲಸಗಾರರಿಂದ ಕಲ್ಲು ಕಟ್ಟಡಗಳ ಕೆಲಸ ಮಾಡಿಸುವ) ಕಲ್ಲು ಕೆಲಸದ ನಾಯಕ; ಕುಶಲಿಯಾದ ಕಲ್ಲು ಕೆಲಸಗಾರ. ಮೂರನೆಯ ಅಂತಸ್ತನ್ನು ದಾಟಿ ಪೂರ್ಣ ಯೋಗ್ಯತೆ ಪಡೆದ 'ಫ್ರೀಮೇಸನ್' (ಭ್ರಾತೃ ವರ್ಗದವನು). **Masterpiece** (ಒಬ್ಬನು ಮಾಡಿದ್ದರಲ್ಲೆಲ್ಲ) ಅತ್ಯುತ್ತಮ ಕೌಶಲದ ಕೃತಿ, ಕೆಲಸಗಾರಿಕೆ; ನಾಯಕ ಕೃತಿ. **M.-stroke** (ರಾಜ್ಯನೀತಿ, ಮೊ. ಗಳಲ್ಲಿ) ಅತ್ಯಂತ ಚಾತುರ್ಯದ ಹೊಡೆತ. **Másterdom** (ನಾ.) ಯಾಜಮಾನ್ಯ, ಪ್ರಭುತ್ವ. **Másterhood** (ನಾ.) ಯಾಜಮಾನ್ಯ ಸ್ಥಿತಿ. **Másterless** (ಗು.); **Másterful** (ಗು.) ತನ್ನ ಮನಸ್ಸು ಬಂದಂತೆ ನಡೆಯುವ; ಉದ್ಧತ; ದರ್ಪವುಳ್ಳ. **Másterfully** (ಕ್ರಿ. ವಿ.); **Másterfulness** (ನಾ.); **Másterly** (ಗು.) ನಿಪುಣತೆಯ; ಪ್ರಭುಮಾರ್ಗದ; ಪೂರ್ಣಾಧಿಕಾರ ಧೋರಣೆಯ. **Másterliness** (ನಾ.); **Mástership** (ನಾ.) ಆಧಿಪತ್ಯ; ಯಾಜಮಾನ್ಯ; (ಮು., ಪಾಠಶಾಲೆಯಲ್ಲಿ) ಉಪಾಧ್ಯಾಯಗಿರಿ. **Mástery** (ನಾ.) ಅಧಿಕಾರ; ಆಧಿಪತ್ಯ; ಪ್ರಭುತ್ವ. (ಯುದ್ಧದಲ್ಲಿ, ಸ್ಪರ್ಧೆಯಲ್ಲಿ) ಮೇಲುಗೈ; ಅತಿಶಯ ಕೌಶಲ, ನೈಪುಣ್ಯ. (ಯಂತ್ರೋಪಕರಣದ ಬಳಕೆಯಲ್ಲಿ, ಒಂದು ವಿಷಯದಲ್ಲಿ) ಪ್ರವೀಣತೆ.

Máster (ಕ್ರಿ. ಸಕ.) ಗೆಲ್ಲು; ಸೋಲಿಸು; ಅಧೀನ ಪಡಿಸಿಕೊ; ಕೈವಶ ಮಾಡಿಕೊ. (ಒಂದು ವಿಷಯದಲ್ಲಿ, ಯಂತ್ರೋಪಕರಣದ ಬಳಕೆಯಲ್ಲಿ) ಸಂಪೂರ್ಣ ನಿಪುಣತೆ ಪಡೆ; ಪಾರಂಗತನಾಗು; ಯಜಮಾನಿಕೆ ನಡಸು.

Mástic ಮ್ಯಾಸ್ಟಿಕ್ (ನಾ.) ಮೆರುಗೆಣ್ಣೆಯ ತಯಾರಿಕೆಯಲ್ಲಿ ಉಪಯೋಗಿಸುವ, ಕೆಲವು ಮರಗಳ ತೊಗಟೆಯಿಂದ ಸ್ರವಿಸುವ, ಗೋಂದು ಅಥವಾ ರಾಳಪದಾರ್ಥ: 'ಮ್ಯಾಸ್ಟಿಕ್'; ಈ ಗೋಂದು ಸ್ರವಿಸುವ ಮರ. ಒಂದು ಬಗೆಯ ಕಲ್ಲುಗಾರೆ (ಸಿಮೆಂಟು). ಮ್ಯಾಸ್ಟಿಕ್ ರುಚಿ ಕಟ್ಟಿದ ಒಂದು ಬಗೆಯ ಮದ್ಯ; ಮ್ಯಾಸ್ಟಿಕ್ ಬಣ್ಣ; ನಸು ಹಳದಿ ಬಣ್ಣ. **Mastícic** —ಸಿಕ್ (ಗು.) ಮ್ಯಾಸ್ಟಿಕ್ಕಿನ; —ಗೆ ಸಂಬಂಧಿಸಿದ.

Másticate ಮ್ಯಾಸ್ಟಿಕೇಟ್ (ಕ್ರಿ. ಸಕ.) (ಆಹಾರವನ್ನು) ಹಲ್ಲಿನಿಂದ (ನುಣ್ಣಗೆ) ಅರೆ; ಅಗಿ. **Masticabílity** (ನಾ.); **Masticátion** (ನಾ.); **Másticator** (ನಾ.); **Másticatory** — ಕಟರಿ (ಗು., ನಾ.) ಅಗಿಯುವ; ಅಗಿಯಲು ತಕ್ಕ; (ಜೊಲ್ಲನ್ನು ಹೆಚ್ಚಿಸಲು) ಅಗಿಯತಕ್ಕ (ಔಷಧ ಪದಾರ್ಥ)

Mastícic. **Mastic** ನೋಡಿ.

Mástiff ಮಾಸ್ಟಿಫ್ (ನಾ.) (ಜೋಲು ಕಿವಿಗಳೂ ತೊಂಗು ತುಟಿಗಳೂ ಉಳ್ಳ ಬಲಶಾಲಿಯಾದ) ಒಂದು ದೊಡ್ಡ ನಾಯಿ: 'ಮಾಸ್ಟಿಫ್' ನಾಯಿ.

Mastítis ಮ್ಯಾಸ್ಟೈಟಿಸ್ (ನಾ.) (ಹೆಂಗಸರ) ಮೊಲೆಯ ಉರಿಯೂತ; ಸ್ತನ ತಪನ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mástodon ಮ್ಯಾಸ್ಟೊಡಾನ್ (ನಾ.) ಆನೆಯನ್ನು ಹೋಲುವ, ಈಗ ವಂಶನಷ್ಟವಾಗಿ ಹೋಗಿರುವ, ಒಂದು ದೊಡ್ಡ ಸಸ್ತನಿಪ್ರಾಣಿ. **Mastodóntic** —ಡಾಂಟಿಕ್ (ಗು.)

Mástoid ಮ್ಯಾಸ್ಟಾಯ್ಡ್ (ಗು.) (ಅಂ. ರ. ಶಾ.) (ಹೆಂಗಸರ) ಮೊಲೆಯ ಆಕೃತಿಯ; ಸ್ತನಾಕಾರದ. ಕಿವಿಯ ಮೇಲ್ಭಾಗದಲ್ಲಿರುವ ತಲೆ ಯೆಲುಬಿನಲ್ಲಿಯ, ಮೊಲೆತೊಟ್ಟಿನಾಕಾರದ ಉಬ್ಬು (=M. process)

Másturbate ಮ್ಯಾಸ್ಟರ್‌ಬೇಟ್ (ಕ್ರಿ. ಅಕ.) ಮುಷ್ಟಿಮೈಥುನ ಮಾಡು. **Masturbátion** (ನಾ.)

Mat[1] ಮ್ಯಾಟ್ (ನಾ., ಕ್ರಿ.) (ಮಲಗಿಕೊಳ್ಳುವುದಕ್ಕೂ ಸಾಮಾನು ಸುತ್ತು ವುದು, ಮೊ. ಕ್ಕೂ ಉಪಯೋಗಿಸುವ) ಚಾಪೆ; (ಕಾಲನ್ನೂ ಪಾದರಕ್ಷೆಯನ್ನೂ ಒರಸಿಕೊಳ್ಳುವುದಕ್ಕಾಗಿ ಹೊಸ್ತಿಲ ಮುಂದೆ ಹಾಕುವ) ಸಣ್ಣ ಚಾಪೆ, ಮೊ.: ಕಾಲೊರಸು (=Door-m.). (ಕ್ರಿ.) ಚಾಪೆ ಹಾಸು, —ಆಣಿ ಮಾಡು. ದಪ್ಪವಾಗಿ ಜಡೆಗಟ್ಟು; ದೊಂತೆಗಟ್ಟಿಸು (ಅನೇಕ ವೇಳೆ *together* ಪದದೊಡನೆ). (ಮು., ಭೂ. ಕೃತ್ತಿನಲ್ಲಿ: ಉದಾ., Matted hair). **Mátting** (ನಾ.) (ಕ್ರಿಯಾರ್ಥಗಳಲ್ಲಿ); (ಮು., ಸಣಬು, ಹುಲ್ಲು, ಮೊ. ಗಳಿಂದ ಹೆಣೆದು ಮಾಡಿದ, ನೆಲಕ್ಕೆ ಹಾಸುವುದು, ಚಾವಣಿಗೆ ಹೊದ್ದಿಸುವುದು, ಸಾಮಾನು ಸುತ್ತುವುದು, ಮೊ. ಕೆಲಸಗಳಿಗೆ ಉಪಯೋಗಿಸುವ) ಚಾಪೆ (Coco-nut m. ತೆಂಗಿನ ಚಾಪೆ)

Mat[2] ಮ್ಯಾಟ್ (ಗು., ನಾ., ಕ್ರಿ. ಸಕ.) (ಬಣ್ಣಗಳು, ಹೊರಮೈ, ಮೊ. ಗಳ ವಿಷಯದಲ್ಲಿ) ಮಬ್ಬಾದ; ಹೊಳಪಿಲ್ಲದ. (ನಾ.) ಚೌಕಟ್ಟು ಹಾಕಿದ ಚಿತ್ರಪಟದಲ್ಲಿ ಸುತ್ತಲೂ ಕಟ್ಟಿರುವ ಹೊಳಪಿಲ್ಲದ ಹೊನ್ನಿನ ಅಂಚು. ಒಪ್ಪವಿಟ್ಟಿರದ ಚಿನ್ನದ ತೋರ್ಕೆ, ಕಾಣ್ಕೆ; ತರಕಲು ಅಥವಾ ಅರೆ ಬೆಳಕು ಮಾಡಿದ ತಲ ಪ್ರದೇಶ. (ಕ್ರಿ.) (ಚಿನ್ನದ ಮುಲಾಮು, ಮೊ. ನ್ನು) ಹೊಳಪಿಲ್ಲದಂತೆ ಮಾಡು; (ಗಾಜನ್ನು) ಅರೆಬೆಳಕಾಗುವಂತೆ ತರಕಲು ಮಾಡು.

Mátador ಮ್ಯಾಟಡಾರ್ (ನಾ.) ಗೂಳಿಕಾಳಗದಲ್ಲಿ ಗೂಳಿಯನ್ನು ಕೊಲ್ಲಲು ನಿಯಮಿತನಾದವನು. ಕೆಲವು (ಇಸ್ಪೀಟು) ಆಟಗಳಲ್ಲಿ ಪ್ರಧಾನವಾದ ಎಲೆ.

Match[1] ಮ್ಯಾಚ್ (ನಾ.) ಮತ್ತೊಬ್ಬನೊಡನೆ ಸರಿಸಮನಾಗಿ ಹೋರಾಡಬಲ್ಲವನು; ಸರಿಜೋಡಿ; ಸಮದಂಡಿ; ಎಣೆ; ಈಡು; ಸಾಮ್ಯ (Find, meet, one's m. Be more than a m. for. We shall never see his m.). (ಒಬ್ಬನ, ಒಂದರ) ಸಮರೂಪಿ, ಪಡಿಯಚ್ಚು. (ಆಟಗಾರರು ಸ್ಪರ್ಧಿಪ್ರತಿಸ್ಪರ್ಧಿಗಳಾಗಿ ನಿಂತು ಆಡುವ) ಮೇಲಾಟ, ಪಂದ್ಯ (Cricket-m.). ವಿವಾಹಸಂಬಂಧ [Make a m. ವಿವಾಹಸಂಬಂಧ ಕಲ್ಪಿಸು. It is an excellent m. ಈ ವರಸಾಮ್ಯ ಶ್ಲಾಘ್ಯವಾಗಿದೆ. M.-board (ಇತರ ಅಂತಹ ಹಲಗೆಗಳೊಡನೆ ಹೊಂದಿಸಲಾಗುವಂತೆ ಹಲಗೆಯ ಒಂದು ಏಣಿನಲ್ಲಿ ಚಾಚುಗಳೂ ಮತ್ತೊಂದು ಏಣಿನಲ್ಲಿ ಅದಕ್ಕೆ ಜವಾಬಾಗಿರುವ ತೆರಪುಗಳೂ ಉಳ್ಳ) ಹೊಂದಿಕೆಯ ಹಲಗೆ. Match-maker ಮದುವೆಯ ಸಂಬಂಧಗಳನ್ನು ಮಾಡಿಸುವುದರಲ್ಲಿ ಪ್ರವೃತ್ತನಾದವನು; ವಿವಾಹ ಘಟನಕಾರ]. **Mátchless** (ಗು.) ಅಸಮಾನ; ಎಣೆಯಿಲ್ಲದ. **Mátchlessly** (ಕ್ರಿ. ವಿ.)

Match (ಕ್ರಿ.) ಮದುವೆಯ ಸಂಬಂಧ ಕಲ್ಪಿಸು (*With* ಉಪ. ದೊಡನೆ). (ಒಬ್ಬನಿಗೆ) ಸರಿಜೋಡಿಯಾಗು; ಸ್ಪರ್ಧೆಗೆ, ಪಂಥಕ್ಕೆ, (ಮತ್ತೊಬ್ಬನಮೇಲೆ) ನಿಲ್ಲಿಸು (*Against* ಉಪ. ದೊಡನೆ); [Well matched (ಸ್ಪರ್ಧಿಸಲು) ಸರಿಜೋಡಿಯಾದ. ಪರಸ್ಪರಾನುರಾಗದಿಂದ (ಒಬ್ಬರೊಡನೊಬ್ಬರು ಹೊಂದಿಕೊಂಡು) ಒಟ್ಟಿಗೆ ಬಾಳುವ; ಅನುಕೂಲ ದಾಂಪತ್ಯದ]. (ಒಬ್ಬನೊಡನೆ, ಒಂದರೊಡನೆ) ಸ್ಪರ್ಧೆಗೆ ನಿಲ್ಲು, ನಿಲ್ಲಿಸು (*With* ಉಪ. ದೊಡನೆ); ಸಮ ಸಮವಾಗಿರು; (ಪರಿಮಾಣ, ಗುಣ, ಬಣ್ಣ, ಮೊ. ಗಳಲ್ಲಿ) ಪರಸ್ಪರ ಹೊಂದು, ಹೊಂದಿಕೆಯಾಗು (The carpets m. the wall-paper. These ribbons do not m. Trimmed with velvet to m. Can you m. me this silk ಈ ರೇಷ್ಮೆಗೆ ಹೊಂದುವುದನ್ನು ಕೊಡಬಲ್ಲೆಯಾ?)

Match[2] ಮ್ಯಾಚ್ (ನಾ.) ಬೆಂಕಿಯ ಕಡ್ಡಿ; ದೀಪದ ಕಡ್ಡಿ (ಬೆಂಕಿ ಹೊತ್ತುವ ಪದಾರ್ಥವು ಕೊನೆಯಲ್ಲಿದ್ದು ಯಾವ ಒರಟು ಹೊರಮೈಯ ಮೇಲಾದರೂ ಗೀಚಿದರೆ ಹೊತ್ತಿಕೊಳ್ಳುವ, ಅಥವಾ ಬೆಂಕಿ ಹೊತ್ತಿಸುವ ತಕ್ಕ ಪದಾರ್ಥಗಳನ್ನು ಕಡ್ಡಿಪೆಟ್ಟಿಗೆಯ ಪಕ್ಕಮೈಗಳಲ್ಲಿ ಲೇಪಿಸಿದ್ದು ಅದರಮೇಲೆ ಗೀಚಿದರೆ ಮಾತ್ರ ಹೊತ್ತಿಕೊಳ್ಳುವ ಕಡ್ಡಿ) [Safety m. (ಹಿಂದೆ ಹೇಳಿದ ಎರಡನೆಯ ತೆರದ) ನಿರಪಾಯದ ಬೆಂಕಿಯ ಕಡ್ಡಿ]. (ಫಿರಂಗಿ, ಮೊ. ನ್ನು ಹಾರಿಸಲು ಉಪಯೋಗಿಸುವ, ಉರಿ ಹಾಯುವ ವೇಗಗತಿ ಒಂದೇ ಸಮವಾಗಿರುವ) ಜಾವಿಗೆ ಬತ್ತಿ. **M.-box** (ಬೆಂಕಿ) ಕಡ್ಡಿಯ ಪೆಟ್ಟಿಗೆ. **Match-lock** ಮದ್ದನ್ನು ಹೊತ್ತಿಸಲು ಜಾವಿಗೆ ಬತ್ತಿಯನ್ನಿಡುವ ಬಂದೂಕಿನ ಭಾಗ; ಇಂಥ ಭಾಗವುಳ್ಳ ಬಂದೂಕು. **Matchwood** ಬೆಂಕಿಯ ಕಡ್ಡಿಗೆ ತಕ್ಕ ದಾರು; ಸಣ್ಣ ಸಣ್ಣ ಸಿಗುರು (Make m.-w. of ಚೂರು ಚೂರು ಮಾಡು)

Mátchet, Matchét ಮ್ಯಾಚೆಟ್ (ನಾ.) (ಅಮೆರಿಕ, ಮೊ. ಕಡೆಗಳಲ್ಲಿ ಕೆಲಸದ ಅಥವಾ ಹೊಡೆಯುವ ಆಯುಧವಾಗಿ ಉಪಯೋಗಿಸುವ) ಅಗಲವೂ ಭಾರವೂ ಆದ ಮಚ್ಚುಕತ್ತಿ (ಅಮೆರಿಕದಲ್ಲಿ ಸಾ., ಕಬ್ಬಿನ ಬೆಳೆಯನ್ನು ಕತ್ತರಿಸುವುದಕ್ಕೆ ಉಪಯೋಗ)

Mate[1] ಮೇಟ್ (ನಾ., ಕ್ರಿ. ಸಕ.) (ಚದುರಂಗ) =(1) Checkmate. (2) Stalemate (Stale[1] ನೋಡಿ)

Mate[2] ಮೇಟ್ (ನಾ., ಕ್ರಿ.) (ಕೆಲಸಗಾರರಲ್ಲಿ) ಜೊತೆ (ಕೆಲಸ)ಗಾರ; ಸಹೋದ್ಯೋಗಿ; ಸಹಕರ್ಮಿ; ಸಂಗಾತಿ; (ಮು., ಪಕ್ಷಿಗಳ ವಿಷಯದಲ್ಲಿ) ಜೋಡಿಯರಲ್ಲೊಂದು, ಜೊತೆಯದು; (ದಾಂಪತ್ಯದಲ್ಲಿ) ತಕ್ಕ ಹೆಂಡತಿ, ಗಂಡ. (ನಾವೆ) ನಾಯಕನ ಅಪ್ಪಣೆಗಳು ನಡೆಯುವಂತೆ ನೋಡಿಕೊಳ್ಳುವ ಮತ್ತು ನಾಯಕನ ಗೈರುಹಾಜರಿಯಲ್ಲಿ ತಾನೇ ನಾಯಕತ್ವ ವಹಿಸುವ, ವ್ಯಾಪಾರದ ಹಡಗಿನ ಒಬ್ಬ ಅಧಿಕಾರಿ: ನಾಯಕನ ಸಹಾಯಕ; (ಯಾವನೊಬ್ಬ ಅಧಿಕಾರಿಯ) ಸಹಾಯಕ (Cook's, Gunner's, Surgeon's, m.). (ಕ್ರಿ.) (ಒಬ್ಬ ಗಂಡಿಗೂ ಒಂದು ಹೆಣ್ಣಿಗೂ ಗಂಟು ಹಾಕಿ) ಮದುವೆ ಮಾಡು, —ಡಿಸು (*With* ಉಪ. ದೊಡನೆ); ಮದುವೆಯಾಗು; ಮದುವೆ ಮಾಡಿಕೊ. (ಹಕ್ಕಿಗಳನ್ನು) (ಗಂಡು ಹೆಣ್ಣು) ಕೂಡಿಸು; (ಹಕ್ಕಿಗಳು) (ಗಂಡು ಹೆಣ್ಣು) ಕೂಡು. (ಒಬ್ಬನೊಡನೆ) ಸಹವಾಸ ಮಾಡು; ಜೊತೆಗೂಡು (*With* ಉಪ. ದೊಡನೆ). **Máteless** (ಗು.)

Máter ಮೇಟರ್ (ನಾ.) (ಪಾಠಶಾಲೆಯ ಅಸಂ.) ತಾಯಿ. Dura mater, Pia mater (ಆಯಾ ಪದವನ್ನು ನೋಡಿ). **Máterfamílias** (L) —ಫಮಿಲಿಯಸ್ (ನಾ.) ಮನೆಯ ಯಜಮಾನಿ; ಒಂದು ಕುಟುಂಬದ ತಾಯಿ; ಗೃಹಮಾತೆ.

Matérial ಮಟೀರಿಯಲ್ (ಗು., ನಾ.) (ತರ್ಕ) ವಿಷಯಕ್ಕೆ ಸಂಬಂಧಿಸಿದ (ರೀತಿಗಲ್ಲ); ವಿಷಯಿಕ. ಭೌತದ್ರವ್ಯದ; ಪದಾರ್ಥದ; ಭೌತ (M. theory of heat 'ಉಷ್ಣವು ಒಂದು ಭೌತದ್ರವ್ಯ' ಎನ್ನುವ ವಾದ: ಉಷ್ಣದ್ರವ್ಯತಾ ವಾದ). (ನಡತೆ, ದೃಷ್ಟಿಕೋನ, ಅಭಿಪ್ರಾಯ, ಮೊ. ಗಳಲ್ಲಿ) ಪಾರಮಾರ್ಥಿಕವಲ್ಲದ, ಪ್ರಾಪಂಚಿಕ; ದೈಹಿಕ; ದೇಹಸೌಖ್ಯ, ಮೊ. ಗಳ (M. well-being ಐಹಿಕ ಸುಖಸಂಪತ್ತು). ಗಣ್ಯವಾದ; ಮುಖ್ಯವಾದ; ಸಾರಭೂತವಾದ. (ನಾ.) (ಯಾವ ಪದಾರ್ಥದಿಂದ ಸಾಮಾನು ತಯಾರಾಗುವುದೊ ಆ) ಪದಾರ್ಥ (Raw m. ಕಚ್ಚಾಪದಾರ್ಥ) ಒಂದು ಪದಾರ್ಥದ ಅಂಗಾಂಶಗಳು, ಘಟಕಾಂಶಗಳು. (ಇತಿಹಾಸ, ಲೇಖನ, ಮೊ. ಕ್ಕೆ ಬೇಕಾದ) ಮೂಲ ವಿಷಯಗಳು, ಸಾಮಗ್ರಿ; ಸರಕು; ನೆಯ್ದ ವಸ್ತು. Writing-materials ಲೇಖನ ಸಾಮಗ್ರಿ. **Materiálity** —ಲ್ಯಿ— (ನಾ.); **Matérially** —ಯಲಿ (ಕ್ರಿ. ವಿ.); **Matérialism** —ಲಿಸ್ಮ್ (ನಾ.) ಭೌತದ್ರವ್ಯ, ಅದರ ರೂಪಾಂತರಗಳು, ಅದರ ಚಲನೆ —ಇವು ಹೊರತು ಮತ್ತೆ ಯಾವುದೂ ಸೃಷ್ಟಿಯಲ್ಲಿಲ್ಲವೆಂಬ ವಾದ: ದ್ರವ್ಯವಾಸ್ತವತಾ ವಾದ; ಮನಃಕಾರ್ಯಗಳೆಲ್ಲ ಸಂಪೂರ್ಣವಾಗಿ ಭೌತದ್ರವ್ಯದಿಂದಲೇ ಆಗುವುವೆಂಬ ವಾದ:

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಹಾತ್ಮ ವಾದ. ಐಹಿಕ ಭೋಗಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡುವ ಪ್ರವೃತ್ತಿ: ದೇಹಸೌಖ್ಯ ಪ್ರವೃತ್ತಿ. **Matérialist** (ನಾ.); **Materialístic** (ಗು.); **Materialístically** (ಕ್ರಿ. ವಿ.); **Matérialize** (ಕ್ರಿ.) ದ್ರವ್ಯವನ್ನಾಗಿ ಮಾಡು; ದ್ರವ್ಯವೆಂದು ನಿರೂಪಿಸು; ಮೂರ್ತ ರೂಪ ಕೊಡು, ಪಡೆ. (ಪ್ರೇತ) ದೇಹ ತಾಳಿ ಬರು(ವಂತೆ ಮಾಡು); ಮೈದೋರು(ವಂತೆ ಮಾಡು). (ಮು., ಅಮೆ. ಸಂ.) ವಾಸ್ತವವಾಗು; ಸಿದ್ಧಿಸು; ದೈಹಿಕವಾಗಿ, ಪ್ರಾಪಂಚಿಕವಾಗಿ, ಮಾಡು. **Materialization** (ನಾ.)

Matéria médica (L) ಮಟೀರಿಯ ಮೆಡಿಕ (ನಾ.) (ವೈದ್ಯದಲ್ಲಿ ರೋಗ ಪರಿಹಾರಕ್ಕಾಗಿ ಕೊಡುವ) ಔಷಧ (ದ್ರವ್ಯ)ಗಳು; (ರೋಗ ವಾಸಿಮಾಡಲು ಉಪಯೋಗಿಸುವ ಎಲ್ಲ ಔಷಧಪದಾರ್ಥಗಳ ಸ್ವಭಾವವನ್ನೂ ಗುಣಗಳನ್ನೂ ವಿಮರ್ಶಿಸುವ) ಔಷಧವಸ್ತು ಶಾಸ್ತ್ರ.

Materiél (F) ಮಟೇರಿಯೆಲ್ (ನಾ.) (ಒಂದು ಸಂಸ್ಥೆಯ, ಒಂದು ಏರ್ಪಾಡಿನ) ಸಾಮಾನು ಸರಂಜಾಮು, ಉಪಕರಣ ಮತ್ತು ಇತರ ಸರಬರಾಯಿ (ಪ್ರತಿ ಪದ: Personnel)

Matérnal ಮಟರ್ನಲ್ (ಗು.) ತಾಯಿಯ(ರ); ತಾಯ್ತನದ. ತಾಯಿಯ ಸ್ವಭಾವದ; ತಾಯಿ ಕಡೆಯ (ಸಂಬಂಧದ) [M. uncle ತಾಯಿಯ ಸೋದರ (ಸೋದರ ಮಾವ)]. **Matérnally** (ಕ್ರಿ. ವಿ.); **Matérnity** (ನಾ.) ತಾಯ್ತನ; ಮಾತೃತ್ವ; ಮಾತೃ ಸ್ವಭಾವ [M. bag (ಒಂದು ಊರಿನವರು ಅಲ್ಲಿಯ ಬಡ ಸಂಸಾರಗಳಿಗೆ ಒದಗಿಸಿಕೊಟ್ಟ) ಹೆರಿಗೆಗೆ ಬೇಕಾದ ಸಾಮಾನುಗಳುಳ್ಳ ಚೀಲ]. ಹೆರಿಗೆಯ ಆಸ್ಪತ್ರೆ (M. hospital ಎಂಬುದರ ಸಂಕ್ಷಿಪ್ತ)

Mathemátics ಮ್ಯಾತಿಮ್ಯಾಟಿಕ್ಸ್ (ನಾ., ಬ. ವ.; ಸಾ., ಏ. ವ. ದಂತೆ ಪ್ರ.) ಗಣಿತ ಶಾಸ್ತ್ರ. (ರೇಖಾ ಗಣಿತ, ಅಂಕ ಗಣಿತ, ಬೀಜ ಗಣಿತ, ಮೊ. ನ್ನೊಳಕೊಂಡ, ಸಂಖ್ಯಾ ಪರಿಮಾಣಗಳ) ಶುದ್ಧ ಗಣಿತ (= Pure m.); [ವಾಸ್ತವಾಂಶಗಳಿಗೆ ಈ ಶುದ್ಧಗಣಿತವನ್ನು ಪ್ರಯೋಗಿಸಿ ಅನುಮಿತಿ (ಫಲ) ಪಡೆಯುವ] ಮಿಶ್ರ ಗಣಿತ, ಪ್ರಯೋಗ ಗಣಿತ (ಉದಾ., ಖಗೋಳ ವಿಜ್ಞಾನ, ಮೊ.) (= Mixed, applied, m.). **Mathematícian** — ಮಟಿಷನ್ (ನಾ.) ಗಣಿತ (ಶಾಸ್ತ್ರ)ಜ್ಞ. **Mathemátical** — ಮ್ಯಾ — (ಗು.) ಗಣಿತ (ಶಾಸ್ತ್ರ)ದ. (ನಿದರ್ಶನಗಳು, ಮೊ. ಗಳ ವಿಷಯದಲ್ಲಿ) ನ್ಯೂನಾತಿರೇಕಗಳಿಲ್ಲದೆ ಯಥಾರ್ಥವಾದ; ಖಚಿತ ವಾದ; ನಿಷ್ಕೃಷ್ಟವಾದ. **Mathemátically** (ಕ್ರಿ. ವಿ.)

Mátin ಮ್ಯಾಟಿನ್ (ನಾ.) (ಬ. ವ. ದಲ್ಲಿ) (Church of England ನ ಕ್ರೈಸ್ತ ಆರಾಧನ ಮಂದಿರಗಳಲ್ಲಿ) ಪ್ರಾತಃಕಾಲದ ಪ್ರಾರ್ಥನೆ (ಅನೇಕ ವೇಳೆ mattins). (ಕಾವ್ಯ, ಏ. ವ. ಅಥವಾ ಬ. ವ.) ಹಕ್ಕಿಗಳ ಬೆಳಗಿನ ಹಾಡು, ಉಷಾ ಗಾನ.

Mátinee ಮ್ಯಾಟಿನೇ (ನಾ.) ಮಧ್ಯಾಹ್ನದಮೇಲೆ ಇಳಿಹೊತ್ತಿನಲ್ಲಿ ನಡಸುವ ನಾಟಕ ಅಥವಾ ಸಂಗೀತ ಕಚೇರಿ.

Mátriarch ಮೇಟ್ರಿಯಾರ್ಕ್ (ನಾ.) ಮನೆಯ ಪಾರುಪತ್ಯ ಮಾಡುವ ಯಜಮಾನಿ, ಗೃಹಿಣಿ (Patriarch ಎಂಬುದಕ್ಕೆ ಜವಾಬಾಗಿ). **Mátriarchy** (ನಾ.) ಒಂದು ಕುಟುಂಬದಲ್ಲಿ ತಾಯಿಯೇ ಯಜ ಮಾನಿಕೆ ನಡಸುವ ಸಮಾಜ ಪದ್ಧತಿ; ತಾಯಾಳಿಕೆ; ಮಾತೃ ಯಾಜ ಮಾನ್ಯ. **Matriárchal** (ಗು.)

Mátricide ಮೇ(ಮ್ಯಾ)ಟ್ರಿಸೈಡ್ (ನಾ.) (ತನ್ನ) ತಾಯಿಯನ್ನೇ ಕೊಲ್ಲು ವವನು(ಳು); ಮಾತೃ ಘಾತಕ(ಕಿ); ತಾಯ್‌ಕೊಲೆ; ಮಾತೃ ಹತ್ಯ. **Mátricidal** (ಗು.)

Matríeulate ಮಟ್ರಿಕ್ಯುಲೇಟ್ (ಕ್ರಿ., ನಾ.) (ವಿದ್ಯಾರ್ಥಿಗೆ) ವಿಶ್ವ ವಿದ್ಯಾ ನಿಲಯಕ್ಕೆ ಪ್ರವೇಶ ಕೊಡು; (ವಿದ್ಯಾರ್ಥಿ) ವಿಶ್ವ ವಿದ್ಯಾನಿಲಯಕ್ಕೆ ಪ್ರವೇಶ ಪಡೆ(ದವನು). **Matriculátion** (ನಾ.); **Matriculatory** ಲಟರಿ— (ಗು.)

Mátrimony ಮ್ಯಾಟ್ರಿಮನಿ (ನಾ.) ಮದುವೆ; ವಿವಾಹ (ಸಂಸ್ಕಾರ). ಮದುವೆಯಾಗಿರುವುದು; ವಿವಾಹಿತ ಸ್ಥಿತಿ. ಒಂದು ಬಗೆಯ ಇಸ್ಪೀ ಟಾಟ; (ಕೆಲವು ಇಸ್ಪೀಟಾಟಗಳಲ್ಲಿ) ತುರುಫು ಜೋಡಿ. **Matrimónial** — ಮೋನಿಯಲ್ (ಗು.); **Matrimónially** (ಕ್ರಿ. ವಿ.)

Mátrix ಮೇ(ಮ್ಯಾ)ಟ್ರಿಕ್ಸ್ (ನಾ.; ಬ. ವ. -ixes, -ices — ಸೀಸ್) ಗರ್ಭಕೋಶ. (ಒಂದು ವಸ್ತು) ವಿಕಾಸವಾಗುವ, ಹೊಮ್ಮುವ, ಸ್ಥಳ; (ಪ್ರಾಣಿಯ ಅಂಗ) ರೂಪುಗೊಳ್ಳುವ ಭಾಗ. ರತ್ನ, ಮೊ. ವನ್ನೊಳ ಕೊಂಡಿರುವ ಶಿಲೆ, ಮೊ. ವು: ರತ್ನಗರ್ಭ ಶಿಲೆ. (ಜೀ. ವಿ.) ಜೀವ ಕಣಗಳ ಮಧ್ಯೇ ಇರುವ ದ್ರವ್ಯ, ವಸ್ತು. (ಮುದ್ರಣಾಕ್ಷರ, ಮೊ. ನ್ನು) ಎರಕ ಹೊಯ್ಯುವ, ರೂಪಿಸುವ, ಅಚ್ಚು; ಮಾತೃಕೆ.

Mátron ಮೇಟ್ರನ್ (ನಾ.) ಮದುವೆಯಾದ ಹೆಂಗಸು. (ಆಸ್ಪತ್ರೆ, ಪಾಠಶಾಲೆ, ಮೊ. ಗಳಲ್ಲಿ) ಮನೆವಾರ್ತೆ ನಡಸುವ ಹೆಂಗಸು; ವ್ಯವ ಸ್ಥಾಪಿಕೆ. **Mátronage** (ನಾ.) — ಸ್ಥಿತಿ; —(ರ) ತಂಡ; — ಇಂದ ಪಡೆದ ರಕ್ಷಣೆ. **Mátronhood** (ನಾ.) — ಸ್ಥಿತಿ. **Mátronship** (ನಾ.); **Mátronal** (ಗು.); **Mátronly** (ಗು.)

Matt (Mat² ಪದದ ಮತ್ತೊಂದು ರೂಪ; ಮು., ಛಾಯಾ ಚಿತ್ರದಲ್ಲಿ)

Máttamore ಮ್ಯಾಟಮೋರ್ (ನಾ.) ನೆಲ ಮನೆ; ನೆಲ ಮಾಳಿಗೆ (ಉಗ್ರಾಣ, ಗಡಂಗು)

Mátter ಮ್ಯಾಟರ್ (ನಾ.) (ಯಾವುದರಿಂದ ಭೌತ ವಸ್ತು ಆಗಿರುವುದೊ ಆ) ಭೌತ ದ್ರವ್ಯ; ಪದಾರ್ಥ; ವಸ್ತು. ಕೀವು; ರಸಿಕೆ [**Máttery** (ಗು.) ಕೀವು ತುಂಬಿದ; ಕೀತುಗೊಂಡ]. (ಆತ್ಮ, ಮನಸ್ಸು, ಮೊ. ಗಳಿಗೆ ವ್ಯತಿರಿಕ್ತವಾಗಿ) ಭೌತ ವಸ್ತು; ಜಡ ದ್ರವ್ಯ. (ತರ್ಕ) (ಒಂದು ಪ್ರತಿಜ್ಞೆಯ) ವಿಷಯ (ರೂಪ ರೀತಿಗಳಲ್ಲ). ಆಲೋಚನಾ ವಿಷಯ; ನಿರೂಪಣ ವಿಷಯ; ಗ್ರಂಥ ವಿಷಯ; ಭಾಷಣ ವಿಷಯ (ವ್ಯತಿರಿಕ್ತ ಪದ: manner). (Matter of, for, complaint ಫಿರ್ಯಾದು, ಪಶ್ಚಾತ್ತಾಪ, ಮೊ. ಗಳ ವಿಷಯ, ಸಂಗತಿ, ವಿಚಾರ). Printed m. ಅಚ್ಚಾದ ಸರಕು. No m. ಅಷ್ಟು ಗಣ್ಯವಾದುದಲ್ಲ; ಪರವಾಯಿಲ್ಲ. What m.? ಅದರಿಂದಾಗುವುದೇನು? ಚಿಂತೆಯೇಕೆ? A hanging m. (Hang ನೋಡಿ). No laughing m. (Laugh ನೋಡಿ). Money matters ಹಣಕಾಸಿನ ವಿಷಯ. That is a m. of habit ಅದು ಅಭ್ಯಾಸ(ದಿಂದ ಬಂದ ಸ್ಥಿತಿ, ವಿಷಯ). For that m. ಹಾಗಿದ್ದರೆ; ಆ ವಿಷಯದಲ್ಲಿ. A m. of 40 years ಸುಮಾರು ೪೦ ವರ್ಷ. What is the m. (with him) ಏನು ಸಮಾಚಾರ? ಅವನಿಗೆ ಏನಾಯಿತು? In the m. of (— ರ) ವಿಷಯದಲ್ಲಿ. M. of course ಸ್ವಾಭಾವಿಕ ವಾಗಿ ನಿರೀಕ್ಷಿಸಬಹುದಾದದ್ದು; ಯಥಾ ಕ್ರಮದಲ್ಲಿ ಆಗತಕ್ಕದ್ದು. [**M.-of-course** (ಗು.)]. M of fact ನಡೆದ ಸಂಗತಿ; ವಾಸ್ತವಾಂಶ (ಬರಿಯ ಊಹೆ, ಅಭಿಪ್ರಾಯ, ಅಲ್ಲ. ವ್ಯತಿರಿಕ್ತ ಪದ: m. of opinion); (ನ್ಯಾ. ಶಾ.) ವಾಸ್ತವಾಂಶದ್ದು, ಕಾನೂನುವಿಚಾರದ್ದಲ್ಲ (ವ್ಯತಿರಿಕ್ತ ಪದ: M. of law). **M.-of-fact** (ಗು.) ವಿಷಯವೆಷ್ಟೊ ಅಷ್ಟರ; ಊಹೆ ಅಥವಾ ಕಲ್ಪನೆಯಿಲ್ಲದ; ನೀರಸವಾದ.

Mátter (ಕ್ರಿ. ಅಕ.) ಗಣ್ಯವಾದದ್ದಾಗಿರು; ಗಮನ ಕೊಡಬೇಕಾದ ದ್ದಾಗಿರು; ಪ್ರಮುಖತೆಯುಳ್ಳದ್ದಾಗಿರು. ಕೀವುಗೂಡು, ಕೀವು ಸುರಿಸು.

Mátting. Mat¹ ನೋಡಿ.

Máttins. **Matin** ನೋಡಿ.

Máttock ಮ್ಯಾಟಕ್ (ನಾ.) (ಒಂದು ಕೊನೆ ಬಾಚಿಯಂತೆಯೂ ಮತ್ತೊಂದು ಕೊನೆ ಉಳಿಯಲಗಿನಂತೆಯೂ ಅಥವಾ ಚೂಪು ಬೆಣೆಯಂತೆಯೂ ಇರುವ) ಒಂದು ತೆರದ ಪಿಕಾಸಿ.

Máttoid ಮ್ಯಾಟಾಯ್ಡ್ (ನಾ.) ಬುದ್ಧಿ ಸ್ತಿಮಿತವಿಲ್ಲದವನು; ಅರೆ ಮರುಳನಾದ ಪ್ರತಿಭಾಶಾಲಿ; ಅವ್ಯವಸ್ಥಿತ ಪ್ರಜ್ಞ(ನು)

Máttress ಮ್ಯಾಟ್ರೆಸ್ (ನಾ.) ಹಾಸಿಗೆಯಾಗಿ ಅಥವಾ ಅದಕ್ಕೆ ಆಧಾರ ವಾಗಿ ಉಪಯೋಗಿಸುವ (ಕೂದಲು, ಒಣ ಹುಲ್ಲು, ತೆಂಗಿನ ನಾರು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊ. ನ್ನು ಒರಟು ಬಟ್ಟೆಯ ಚೀಲದಲ್ಲಿ ತುಂಬಿದ) ಮೆತ್ತೆ, ಲೇಪು. (ಒಂದು ಚೌಕಟ್ಟಿನಲ್ಲಿ ದಪ್ಪ ತಂತಿಯ ಎಗುರುಸುರುಳಿಗಳನ್ನು ತಂತಿಗಳಿಂದ ಬಿಗಿಯಾಗಿ ಚಾಚಿ ಮಾಡಿರುವ) ತಂತಿ ಹಾಸು, ತಂತಿ ಮಂಚ (=spring m.)

Máturate, etc. Mature ನೋಡಿ.

Matúre ಮಟ್ಯೂರ್ (ಗು., ಕ್ರಿ.) (ಸಹಜವಾದ) ಬೆಳವಣಿಗೆ ಪೂರ್ತಿಯಾದ ; ಪೂರ್ತಿಯಾಗಿ ಬೆಳೆದ ; ಪಕ್ವವಾದ ; ಬಲಿತ. ದೇಹಶಕ್ತಿಯೂ ಮನಶ್ಶಕ್ತಿಯೂ ಪೂರ್ತಿ ವಿಕಾಸ ಹೊಂದಿದ ; ಪ್ರಾಯಕ್ಕೆ ಬಂದಿರುವ; (M. deliberation ಬಹು ಜೋಕೆಯಿಂದ ಮಾಡಿದ ಆಲೋಚನೆ, ವಿಚಾರ. M. plans ಹೀಗೆ ಮಾಡಿದ ಕಲ್ಪನೆ, ಯೋಜನೆ). (ಹುಂಡಿಯ ವಿಷಯದಲ್ಲಿ) ವಾಯಿದೆ ತುಂಬಿದ ; ಹಣ ಕೊಡಬೇಕಾದ. (ಕ್ರಿ.) ಪೂರ್ತಿಯಾಗಿ ಬೆಳೆ ; ಬಲಿ ; ಪಕ್ವವಾಗು ; ಮಾಗು ; ಮಾಗಿಸು. (ಯೋಜನೆ, ಮೊ. ನ್ನು) ಸಂಪೂರ್ತಿಗೊಳಿಸು. ಪ್ರಾಯಕ್ಕೆ, ಪಕ್ವಕ್ಕೆ, ಬರು. (ಹುಂಡಿ) ವಾಯಿದೆ ತುಂಬು ; ಹಣ ಪಾವತಿಯಾಗಬೇಕಾಗಿರು. **Maturély** (ಕ್ರಿ. ವಿ.) ; **Maturéness** (ನಾ.) ; **Matúrity** (ನಾ.) ; **Máturate** ಮ್ಯಾಟ್ಯುರೇಟ್ (ಕ್ರಿ. ಅಕ.) (ವೈದ್ಯ) (ಗುಳ್ಳೆ, ಮೊ. ಗಳ ವಿಷಯದಲ್ಲಿ) ಪಕ್ವಕ್ಕೆ ಬರು. **Maturátion** (ನಾ.) (ಕುರು, ಮೊ.) ಪಕ್ವಕ್ಕೆ ಬರುವುದು, ಬರಿಸುವುದು. (ಫಲ) ಹಣ್ಣಾಗುವುದು, ಬಲಿಯುವುದು ; (ಪೂರ್ತಿ) ಬೆಳವಣಿಗೆ ; ವಿಕಸನ. **Matúrative** ಮಟ್ಯೂರಟಿವ್ (ಗು.) ಬಲಿಯುವ ; ಹಣ್ಣಾಗುವ ; ಪಕ್ವಕ್ಕೆ ಬರುವ, ತರುವ ; ಪಕ್ವ ಸ್ಥಿತಿಯ.

Matutínal ಮ್ಯಾಟ್ಯುಟೈನಲ್, **Matútinal** ಮಟ್ಯೂಟಿನಲ್ (ಗು.) ಬೆಳಗಿನ, ಪ್ರಾತಃಕಾಲದ ; ಬೆಳಗ್ಗೆ, ಪ್ರಾತಃಕಾಲದಲ್ಲಿ, ನಡೆಯುವ ; ಹೊತ್ತಿಗೆ ಮುಂಚಿನ. **Mátutine** ಮ್ಯಾಟ್ಯುಟೈನ್ (ಗು.) (ಪ್ರಾಚೀ. ಪ್ರ.) = Matutinal ; (ಖ. ವಿ., ಜ್ಯೋ.) (ನಕ್ಷತ್ರದ ವಿಷಯದಲ್ಲಿ) ಹೊತ್ತಿಗೆ ಮುಂಚೆಯೇ ಹುಟ್ಟುವ ; ಸೂರ್ಯೋದಯಕ್ಕೆ ಮೊದಲೇ ಮೇಲಕ್ಕೆ ಬಂದಿರುವ.

Maúdlin ಮಾಡ್‌ಲಿನ್ (ಗು., ನಾ.) ಜುಗುಪ್ಸೆಯುಂಟುಮಾಡುವಂತೆ ಭಾವಾತಿರೇಕದಿಂದ ಕೂಡಿದ (ಮು., ಕುಡಿದು ಅಮಲೇರಿ ಕಣ್ಣೀರು ಸುರಿಸುವ ಸ್ಥಿತಿಯಲ್ಲಿರುವ). (ನಾ.) ಜುಗುಪ್ಸೆ ಹುಟ್ಟಿಸುವ ಭಾವಾತಿರೇಕ, ಮನೋ ವಿಕಾರ.

Maúgre ಮಾಗರ್ (ಉಪ.) (ಪ್ರಾಚೀ. ಪ್ರ.) ಹಾಗಿದ್ದರೂ ಕೂಡ ; ಆದಾಗ್ಗೂ.

Maul ಮಾಲ್ (ನಾ., ಕ್ರಿ. ಸಕ.), **Mall** (ನಾ.) (ಗೂಟಗಳನ್ನು ಹೊಡೆಯುವುದು, ಹಡಗು ಕಟ್ಟುವ ಕೆಲಸ, ಮೊ. ಗಳಲ್ಲಿ ಉಪಯೋಗಿಸುವ) ವಿಶೇಷ ನಮೂನೆಯ (ಸಾ., ಮರದ) ಕೊಡತಿ. (ಕ್ರಿ.) (Maul) ಬಡಿದು ಚಚ್ಚು ; ಜಜ್ಜು ಬಡಿ. (ವಸ್ತು, ವಿಷಯ, ಉದ್ಧೃತ ಭಾಗ —ಇವನ್ನು) ಒರಟಾಗಿ, ಅಲಕ್ಷ್ಯತೆಯಿಂದ, —ಬಳಸು, ಉಪಯೋಗಿಸು; ಕಟುವಾದ ಟೀಕೆಯಿಂದ ಖಂಡಿಸು, ಹಾನಿ ಮಾಡು, ಚೂರು ಚೂರು ಮಾಡು.

Maúley ಮಾಲಿ (ನಾ.) (ಅಸಂ.) ಮುಷ್ಟಿ ; ಕೈ.

Maúlstick ಮಾಲ್‌ಸ್ಟಿಕ್ (ನಾ.) =Guiding-stick (Guide ನೋಡಿ)

Maund ಮಾಂಡ್ (ನಾ.) ಮಣ [ಏಷ್ಯಾ ಖಂಡದ ಕೆಲವು ಪ್ರದೇಶಗಳ ತೂಕದ ಮಾನ : ಎಲ್ಲ ಪ್ರಾಂತಗಳಲ್ಲೂ ಒಂದೇ ಸಮವಾದ ತೂಕದ್ದಲ್ಲ : ಮೈಸೂರು ದೇಶದ ಮಣ ಸು. 25 ಪೌಂಡು ತೂಕ, ಬಂಗಾಳದ ಮಣ $82\frac{2}{7}$ ಪೌಂಡುಗಳ ತೂಕ (ಇದು ರೈಲ್ವೆ ತೂಕ)]

Maúnder ಮಾಂಡರ್ (ಕ್ರಿ. ಅಕ.) ಮನಸ್ಸು ಸರಿಯಿಲ್ಲದೆ, ಏನೋ ಚಿಂತೆಯಿಂದ, ಆಸಕ್ತಿಯಿಲ್ಲದೆ, —ನಡೆ, ಕಾರ್ಯ ಮಾಡು. ಕನಸಿನಲ್ಲಿ ಹೇಗೋ ಹಾಗೆ ಅಸಂಬದ್ಧವಾಗಿ, ಅಸ್ಪಷ್ಟವಾಗಿ, — ಮಾತಾಡು, ಗೊಣಗು.

Maúndy ಮಾಂಡಿ (ನಾ.) (ರೋ. ಕ್ಯಾ. ಮತಾಧಿಕಾರದ ದೇಶಗಳಲ್ಲಿ) ಬಡವರ ಕಾಲು ತೊಳೆದು ಅವರಿಗೆ ದಾನ ಧರ್ಮ ಮಾಡುವ ಮತಾಚರಣೆ. (ಇಂಗ್ಲೆಂಡಿನಲ್ಲಿ) ಈಸ್ಟರ್ ಹಬ್ಬದ ಹಿಂದಿನ ಗುರುವಾರ (=M. Thursday). ಅರಮನೆಯ ದಾನಾಧಿಕಾರಿ ಬಡವರಿಗೆ ಹಣ ಹಂಚುವುದು, ದಾನ ಮಾಡುವುದು. M. money ಹೀಗೆ ದಾನ ಮಾಡುವ ಹಣ.

Maúser ಮೌಸರ್ (ನಾ.) ಒಂದು ಬಗೆಯ ಸೈನಿಕ ಬಂದೂಕು (Mauser ಎಂಬ ಕಲ್ಪಕನ ಹೆಸರಿನಿಂದ)

Mausoléum ಮಾಸೊಲೀಯಂ (ನಾ.) ಶೋಭಾಯಮಾನವಾದ ಸಮಾಧಿ ಭವನ (ಕ್ರಿ. ಪೂ. ೪ನೆಯ ಶತಮಾನದಲ್ಲಿ Mausolus ಎಂಬ ದೊರೆಗೆ ಆತನ ರಾಣಿ ಕಟ್ಟಿಸಿದ ಸಮಾಧಿಯಿಂದ)

Mauve ಮೋವ್ (ನಾ., ಗು.) (ಟಾರೆಣ್ಣೆಯಿಂದ ತೆಗೆದ ಒಂದು ವರ್ಣ ದ್ರವ್ಯದಿಂದ ತಯಾರಿಸಿದ) ಉಜ್ಜ್ವಲವೂ ಕೋಮಲವೂ ಆದ ಒಂದು ಧೂಮ್ರ ವರ್ಣ(ದ್ರವ್ಯ) ; — ವರ್ಣದ.

Maw ಮಾ (ನಾ.) ಹೊಟ್ಟೆ (ಮನುಷ್ಯರ ವಿಷಯದಲ್ಲಿ ಹಾಸ್ಯ ಪ್ರ.). ಮೆಲುಕು ಹಾಕುವ ಪ್ರಾಣಿಗಳ, ಕೊನೆಯದಾದ ನಾಲ್ಕನೆಯ ಹೊಟ್ಟೆ. Mawworm ಕರುಳಿನ ಜಂತು (ಹುಳು). ಠಕ್ಕ ; ಆಷಾಢಭೂತಿ (The Hypocrite ಎಂಬ ನಾಟಕದ ಒಂದು ಪಾತ್ರದ ಹೆಸರಿನಿಂದ)

Mawkish ಮಾಕಿಷ್ (ಗು.) ಓಕರಿಕೆ ಬರಿಸುವ (ರುಚಿ ವಾಸನೆಯ) ; ಅಸಹ್ಯವಾದ, ಸತ್ತ್ವವಿಲ್ಲದ, ಅಥವಾ ಮಿಥ್ಯಾ ಕಲ್ಪನೆಯ. **Mawkishly** (ಕ್ರಿ. ವಿ.) ; **Mawkishness** (ನಾ.)

Mawseed ಮಾಸೀಡ್ (ನಾ.) ಗಸಗಸೆ (ಬೀಜ)

Maxílla ಮ್ಯಾಕ್ಸಿಲ (ನಾ. ; ಬ. ವ. -ae —ಲೀ) ದವಡೆ(ಯಲುಬು) ; (ಪ್ರಾಣಿಗಳಲ್ಲಿ, ಸಾ., ಎಲ್ಲ ಕಶೇರುಕ ಪ್ರಾಣಿಗಳಲ್ಲಿ) ಮು., ಮೇಲು ದವಡೆ. **Maxíllary** (ಗು.) ; **Maxílliform** (ಗು.) —ಆಕಾರದ.

Máxim[1] ಮ್ಯಾಕ್ಸಿಮ್ (ನಾ.) (ಶಾಸ್ತ್ರದಿಂದ ಅಥವಾ ಅನುಭವದಿಂದ ಪಡೆದ) ಸಾರ್ವತ್ರಿಕ ತತ್ತ್ವ; ಸೂತ್ರ; ಚರ್ಯೆಯ, ನಡೆವಳಿಯ, —ವಿಧಿ, ನಿಯಮ.

Máxim[2] ಮ್ಯಾಕ್ಸಿಮ್ (ನಾ.) ಬೇಗ ಬೇಗ ಗುಂಡು ಹಾರಿಸುವ, ಒಂದೇ ಕೋವಿಯ, ಒಂದು ತೆರದ ಯಂತ್ರದ ಬಂದೂಕು (Sir Hiram S. Maxim ಎಂಬ ಕಲ್ಪಕನ ಹೆಸರಿನಿಂದ)

Máximalist, Máximize, etc. **Maximum** ನೋಡಿ.

Máximum ಮ್ಯಾಕ್ಸಿಮಮ್ (ನಾ. ; ಬ. ವ. -ma -ಮ) ಅತ್ಯಂತ ಹೆಚ್ಚಿನ ಪ್ರಮಾಣ ; ಅಧಿಕತಮ ; ಪರಮಾವಧಿ ; ಪರಾಕಾಷ್ಠೆ. [ಅನೇಕ ವೇಳೆ ವಿಶೇಷಣವಾಗಿ ಪ್ರ. : M. price ಪರಮಾವಧಿಯ ಬೆಲೆ. M. thermometer (ಒಂದು ಗೊತ್ತಾದ ಅವಧಿಯಲ್ಲಿಯ ಅಧಿಕತಮ ಶಾಖವನ್ನು ತೋರಿಸುವ) ಪರಮಾವಧಿ ಶಾಖಮಾಪಕ]. **Máximalist** (ನಾ.) (ಯಾವ ಮಧ್ಯಸ್ಥಿಕೆಗೂ ಒಪ್ಪದೆ) ತಾನು ಕೇಳಿರುವುದೆಲ್ಲವನ್ನೂ ಕೊಂಚವೂ ಬಿಡದೆ ಕೊಡಬೇಕೆಂದು ಪಟ್ಟುಹಿಡಿಯುವವನು (ಮು., ರಷ್ಯದ ಸಮಾಜ ಸಮತಾ ವಾದಿಗಳಲ್ಲಿ ಒಂದು ಪಂಗಡದವನು). **Máximize** (ಕ್ರಿ. ಸಕ.) ಪರಮಾವಧಿಗೆ ಹೆಚ್ಚಿಸು, ತರು ; ಅತ್ಯಂತ ದೊಡ್ಡದಾಗಿ ಮಾಡು. (ತತ್ತ್ವ, ಕರ್ತವ್ಯ, ಮೊ. ಕ್ಕೆ) ಅತ್ಯಂತ ವ್ಯಾಪಕವಾಗಿ ಅರ್ಥಮಾಡು. **Maximizátion** (ನಾ.) ; **Máximus** (ಗು.) (ಪಾಠಶಾಲೆಗಳಲ್ಲಿ) (ಆ ಹೆಸರಿನವರಲ್ಲಿ) ಹಿರಿಯ (Jones m.)

Máximus. **Maximum** ನೋಡಿ.

May[1] ಮೇ (ಸಹಾಯಕ ಕ್ರಿ. ; ಪ್ರಥಮ ಪುರುಷ ಏ. ವ. May, ಭೂತ. Might) (ಸಂಭವ, ಅನುಜ್ಞೆ, ಸಂದೇಹ, ಕೋರಿಕೆ — ಈ ಅರ್ಥಗಳಲ್ಲಿ) ಬಹುದು. It may be true. He may or might lose his way. You may go. You may not go ನೀನು ಹೋಗಕೂಡದು, ಹೋಗಲಾಗದು. I wish I might. You might call at the

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

baker's ನೀನು ರೊಟ್ಟಿಯ ಅಂಗಡಿಗೆ ಹೋಗಿ ಬಾ. You might offer to help ನೀನು ಸಹಾಯ ಮಾಡಬಹುದಾಗಿದೆ (ಮಾಡುವುದಿಲ್ಲ). You might have offered help ನೀನು ಸಹಾಯ ಮಾಡಬಹುದಾಗಿದ್ದಿತು. I hope he may succeed ಅವನು ಜಯಶಾಲಿಯಾಗಲೆಂದು ಆಶಿಸುತ್ತೇನೆ; ಅವನು ಜಯಶಾಲಿಯಾಗುವನೆಂದು ನಂಬುತ್ತೇನೆ. I hoped he might succeed. May you live to repent it ಅದಕ್ಕಾಗಿ ನೀನು ತಕ್ಕದ್ದು ಅನುಭವಿಸುವಂತಾಗಲಿ, ಪಶ್ಚಾತ್ತಾಪ ಪಡುವಂತಾಗಲಿ. Who may you be? ನೀನು ಯಾರಾಗಿರಬಹುದು? **Maýbe** [(ಪ್ರಾಚೀ. ಪ್ರ.) **Maýhap**] ಇರಬಹುದು; ಬಹುಶಃ; ಪ್ರಾಯಶಃ. **Might-have-been** ಆಗಬಹುದಾಗಿದ್ದದ್ದು.

May[2] ಮೇ (ನಾ.) (ಕಾವ್ಯ) ಕನ್ಯೆ.

May[3] ಮೇ (ನಾ.) ಇಂಗ್ಲಿಷ್ ವರ್ಷದ ಐದನೆಯ ತಿಂಗಳು: ಮೇ. (ರೂಪ.) ಯೌವನೋದಯ; ಪ್ರಾಯ; ತಾರುಣ್ಯ; ಉಚ್ಛ್ರಾಯ ಕಾಲ [Queen of (the) M. ಮೇ ಡೇ ಎಂಬ ಉತ್ಸವ ದಿನದ ಆಟಗಳಲ್ಲಿ ರಾಣಿಯಾಗಿರಲು ಆರಿಸಿದ ತರುಣಿ]. (ಕೇಂಬ್ರಿಡ್ಜ್ ವಿ. ವಿ. ನಿ.) (ಬ. ವ. ದಲ್ಲಿ) ಮೇ ವಾರದಲ್ಲಿ ನಡೆಯುವ ಪರೀಕ್ಷೆಗಳು, ದೋಣಿ ಪಂದ್ಯಗಳು. **M.-day** ಮೇ ತಿಂಗಳ ಮೊದಲನೆಯ ದಿನ (ಮಾಡುವ ಉತ್ಸವ) (**Maying** ಈ ಉತ್ಸವ ಆಚರಿಸುವುದು). **Mayfair** ಲಂಡನ್ ಪಟ್ಟಣದಲ್ಲಿ ನೀಟುಗಾರರು ವಾಸಮಾಡುವ ಒಂದು ಪ್ರಾಂತ (ಹಿಂದೆ ಮೇ ತಿಂಗಳಲ್ಲಿ ಅಲ್ಲಿ ನೆರೆಯುತ್ತಿದ್ದ ಜಾತ್ರೆಯಿಂದ). **M.-fly** ಹುಟ್ಟಿ ಬೇಗ ಸಾಯುವ ಒಂದು ಬಗೆಯ ಕೀಟ. **M.-games** ಮೇ ಉತ್ಸವ ದಿನದ ವ್ಯಾಯಾಮ ಕ್ರೀಡೆಗಳು. M. meetings (ಮತಸಂಸ್ಥೆಗಳೂ ಜನೋಪಕಾರಿ ಸಂಘಗಳೂ) ಮೇ ತಿಂಗಳಲ್ಲಿ ಲಂಡನ್ನಿನಲ್ಲಿ ನಡಸುವ ಸಭೆಗಳು. **May-pole** ಮೇ ಉತ್ಸವದ ದಿನ ಅದರ ಸುತ್ತಲೂ ಕುಣಿಯುವುದಕ್ಕಾಗಿ ಬಣ್ಣ ಬಳಿದು ಹೂವಿನಿಂದ ಅಲಂಕರಿಸಿದ ಕಂಬ. **M.-week** (ಕೇಂಬ್ರಿಡ್ಜ್ ವಿ. ವಿ. ನಿ. ದಲ್ಲಿ ಪರೀಕ್ಷೆಗಳೂ ದೋಣಿ ಪಂದ್ಯಗಳೂ ನಡೆಯುವ) ಮೇ ತಿಂಗಳ ಕೊನೆಯ ವಾರ ಅಥವಾ ಜೂನ್ ತಿಂಗಳ ಮೊದಲ ವಾರ.

Maýor ಮೇಅರ್, ಮೇರ್ (ನಾ.) ಪೌರ ಸಭಾಧ್ಯಕ್ಷ. Lord m. (Lord ನೋಡಿ). **Maýoral** (ಗು.); **Maýoralty** —ರಲ್ಟಿ (ನಾ.) ಪೌರ ಸಭಾಧ್ಯಕ್ಷಗಿರಿ, —ನ ಅಧಿಕಾರಾವಧಿ. **Maýoress** —ರೆ(ರಿ)ಸ್, ಮೇರೆ(ರಿ)ಸ್ (ನಾ.) ಪೌರ ಸಭಾಧ್ಯಕ್ಷನ ಹೆಂಡತಿ.

Mázard ಮ್ಯಾಸರ್ಡ್ (ನಾ.) (ಪ್ರಾಚೀ. ಪ್ರ.) ತಲೆ; ಮುಖ.

Mazaríne ಮ್ಯಾಸರೀನ್ (ನಾ., ಗು.) ಗಾಢ ಉಜ್ಜ್ವಲ ನೀಲ ವರ್ಣ.

Mázdaism ಮ್ಯಾಸ್‌ಡೇಇಸ್ಮ್ (ನಾ.) ಪ್ರಾಚೀನ ಪರ್ಷಿಯನ್ನರ ಮತ; ಝೋರೊಆಸ್ಟರ್ ಮತ.

Maze ಮೇಸ್ (ನಾ., ಕ್ರಿ. ಸಕ.) ದಿಗ್ಭ್ರಮೆ ಹಿಡಿಸುವಂತಿರುವ ಅನೇಕ ಹಾದಿಗಳ ತೊಳಸು ಬಳಸು; ಕಲಸು ಮೆಲಸು; ಅವ್ಯವಸ್ಥೆ. (ಕ್ರಿ.) ದಿಗ್ಭ್ರಮೆ ಹಿಡಿಸು (ಮು., ಭೂ. ಕೃ. ನಲ್ಲಿ). **Mázily** (ಕ್ರಿ. ವಿ.); **Máziness** (ನಾ.); **Mázy** (ಗು.)

Me ಮೀ, ಮಿ (ಸ. ನಾ.; I ಪದದ ದ್ವಿತೀಯಾ ವಿಭಕ್ತಿ) ನನ್ನನ್ನು; ನನಗೆ [(ಬಳ. ಮಾ.) ಕರ್ತೃವಾಗಿಯೂ ಪ್ರಯೋಗವುಂಟು: It's only me ನಾನೇ]. (ಪ್ರಾಚೀ. ಪ್ರ.: ಕಾವ್ಯ, ಸ್ವಾರ್ಥಕ) I laid me down ಮಲಗಿಕೊಂಡೆನು. (ಭಾವ ಸೂಚಕವಾಗಿ) Ah me! Dear me! ಅಕಟಾ! ಅಯ್ಯೋ!

Mead[1] ಮೀಡ್ (ನಾ.) ಹುಳಿಸಿದ ಜೇನ್ನೀರಿನ ಒಂದು ಮಾದಕ ದ್ರವ.

Mead[2] ಮೀಡ್ (ನಾ.) (ಕಾವ್ಯ) = Meadow.

Meádow ಮೆಡೋ (ನಾ.) (ಕೊಯ್ದು ಒಣ ಹುಲ್ಲು ಮಾಡುವುದಕ್ಕಾಗಿರುವ) ಹುಲ್ಲುಗಾವಲು; ಹುಲ್ಲು ಮಾಳ. (ಮು., ನದಿಯ ಬಳಿಯ) ಜಲ ಸಮೃದ್ಧಿಯುಳ್ಳ ತಗ್ಗುನೆಲ. M.-sweet ತಂಪು ಹುಲ್ಲುಗಾವಲಿನಲ್ಲಿ ಬೆಳೆಯುವ, ಸುವಾಸನೆಯ ಹೂವು ಬಿಡುವ, ಒಂದು ಗಿಡ. **Meádowy** (ಗು.)

Meágre ಮೀಗರ್ (ಗು.) (ಮನುಷ್ಯ, ಪ್ರಾಣಿ, ವೊ. ಗಳ ವಿಷಯದಲ್ಲಿ) ಸಣಕಲಾಗಿರುವ; ತೆಳ್ಳನೆಯ; ಕೃಶವಾಗಿರುವ; ಬಡಕಲಾದ. ಸಾರವಿಲ್ಲದ; ಸತ್ತ್ವವಿಲ್ಲದ; ಅತ್ಯಲ್ಪವಾದ; (ಸಾಹಿತ್ಯಕೃತಿ, ಭಾವಗಳು, ವೊ. ಗಳ ವಿಷಯದಲ್ಲಿ) ತುಂಬು ಇಲ್ಲದ; ಕೊರತೆಯಾದ. **Meágrely** (ಕ್ರಿ. ವಿ.); **Meágreness** (ನಾ.)

Meal[1] ಮೀಲ್ (ನಾ.) (ಸಾ., ಗೋಧಿ ಹೊರತು ಮಿಕ್ಕ ಧಾನ್ಯಗಳ) ಹಿಟ್ಟು. Whole m. (Whole ನೋಡಿ). **Meály** ಮೀಲಿ (ಗು.) ಹಿಟ್ಟಿನ(ಂಥ); ಹಿಟ್ಟುಳ್ಳ; (ಬೇಯಿಸಿದ ಆಲೂಗಡ್ಡೆಯ ವಿಷಯದಲ್ಲಿ) ತೇವವಿಲ್ಲದೆ ಹಿಟ್ಟು ಹಿಟ್ಟಾದ; [M.-bug (ದ್ರಾಕ್ಷಿಯ ಬಳ್ಳಿ, ವೊ. ನ್ನು ನಾಶಮಾಡುವ) ಮೈಮೇಲೆ ಹಿಟ್ಟಿನಂಥ ಬಿಳಿಯ ಪುಡಿಯುಳ್ಳ ಒಂದು ಜಾತಿಯ ಕೀಟ]. (ಕುದುರೆಗಳ ವಿಷಯದಲ್ಲಿ) ಚುಕ್ಕೆಗಳುಳ್ಳ. (ಮುಖಚ್ಛಾಯೆ) ಬಿಳಿಚಿಕೊಂಡಿರುವ. ನಿಜಾಂಶವನ್ನು ಸ್ಪಷ್ಟವಾಗಿ ಹೇಳಲು ಸಂಕೋಚ, ಭಯ, ಪಡುವ; ಬೆಣ್ಣೆ ಮಾತಿನ (= M.-mouthed). **Meáliness** (ನಾ.)

Meal[2] ಮೀಲ್ (ನಾ., ಕ್ರಿ. ಅಕ.) (ರೂಢಿಯ) ಊಟ, ಭೋಜನ [M.-time (ರೂಢಿಯ) ಊಟದ ಹೊತ್ತು]. (ಊಟದಲ್ಲಿ ತೆಗೆದುಕೊಳ್ಳುವ) ಅನ್ನ, ಆಹಾರ; ಉಣಿಸು. (Make a m. of ತಿನ್ನು; ಉಣ್ಣು; ಊಟ ಮಾಡು). ಹಸು ಒಂದು ಕರೆತದಲ್ಲಿ ಕೊಡುವ ಹಾಲಿನ ಮೊತ್ತ. (ಕ್ರಿ.) ಊಟ ಮಾಡು.

Meálie ಮೀಲಿ (ನಾ.) (ಸಾ., ಬ. ವ. ದಲ್ಲಿ) (ದ. ಆಫ್ರಿಕದಲ್ಲಿ) ಮುಸುಕಿನ ಜೋಳ.

Mean[1] ಮೀನ್ (ನಾ.) (ಸಾ., ದೂಷಣಾರ್ಹವಾದ ಅತಿ ಹೆಚ್ಚೂ ಅತಿ ಕಡಮೆಯೂ ಎರಡೂ ಅಲ್ಲದ) ಮಧ್ಯಮ ಸ್ಥಿತಿ, ಲಕ್ಷಣ; ಮಧ್ಯ ಮಾರ್ಗ; ನಡು ನೆರೆ [The golden m. (Golden ನೋಡಿ); Happy m.]. (ಗಣಿತ) (ಗಣಿತ ಶ್ರೇಣಿ, ಜ್ಯಾಮಿತೀಯ ಶ್ರೇಣಿ, ವೊ. ಸಂಖ್ಯಾ ಶ್ರೇಣಿಗಳಲ್ಲಿ ಮೊದಲನೆಯ ಮತ್ತು ಕಡೆಯ ಪದಗಳ ನಡುವಣ) ಮಧ್ಯ ಪದ. (ಬ. ವ. ದಲ್ಲಿ; ಅನೇಕ ವೇಳೆ ಏ. ವ. ವಾಗಿ ಪ್ರ.) ಸಾಧನ [A means ಒಂದು ಸಾಧನ. It has been the means of extending our trade. By fair means (Fair[2] ನೋಡಿ). Ways & means (Way ನೋಡಿ). Means of grace ಭಗವಂತನ ಪ್ರಸಾದಕ್ಕೆ ಸಾಧನವೆಂದು ಭಾವಿಸುವ ಮತ ಸಂಸ್ಕಾರಗಳು (ರೋ. ಕ್ಯಾ., ವೊ. ಪಂಗಡಗಳಲ್ಲಿ ಜ್ಞಾನಸ್ನಾನ, ವೊ. ಏಳು ಕರ್ಮಗಳು)]. (ಬ. ವ. ದಲ್ಲಿ) ಆದಾಯ; ಸಂಪಾದನೆ (He lives beyond his means. He lives on his own means); ಐಶ್ವರ್ಯ (A man of means ಸ್ಥಿತಿವಂತ; ಹಣವಂತ). By all (manner of) means ಸರ್ವ ಪ್ರಕಾರದಿಂದಲೂ; ಏನೇ ಆಗಲಿ; ಅವಶ್ಯವಾಗಿ. By no (manner of) means ಇಲ್ಲವೇ ಇಲ್ಲ; ಖಂಡಿತವಾಗಿಯೂ ಇಲ್ಲ. By means of (person, thing) —ರ ಮೂಲಕ, ಮುಖಾಂತರ.

Mean (ಗು.) (ಗಣಿತ) ನಡುವಣ; ಮಧ್ಯಸ್ಥ (5 is the m. quantity between 2 & 8). M. sea level (ಪೂರ್ಣ ಭರತದ ಮಟ್ಟಕ್ಕೂ ಪೂರ್ತಿ ಇಳಿಮಟ್ಟಕ್ಕೂ ಮಧ್ಯಸ್ಥವಾದ) ಸಮುದ್ರದ ಮಧ್ಯಸ್ಥ ಮಟ್ಟ. M. Sun (ಖಗೋಳ ಮಧ್ಯ ರೇಖೆಯಲ್ಲಿ ಸೂರ್ಯನು ಚಲಿಸುತ್ತಿರುವ ಸರಾಸರಿ ವೇಗದಿಂದ ಚಲಿಸುತ್ತಿರುವುದಾಗಿ ಊಹಿಸುವ) ಕಲ್ಪಿತ ಸೂರ್ಯ. M. proportional (ಮೂರು ಮೊತ್ತಗಳಲ್ಲಿ ಮೊದಲನೆಯದಕ್ಕೂ ಎರಡನೆಯದಕ್ಕೂ ಇರುವ ಅನುಪಾತದಷ್ಟೇ ಎರಡನೆಯದಕ್ಕೂ ಮೂರನೆಯದಕ್ಕೂ ಇರುವ) ಮಧ್ಯಮ ಪರಿಮಾಣ. In the m. time, while ಈ ಮಧ್ಯೆ; ಈ ನಡುವೆ. **Meántime, Meánwhile** (ಕ್ರಿ. ವಿ.) ಅಷ್ಟರಲ್ಲಿ (= In the m. time)

Mean[2] ಮೀನ್ (ಗು.) (ಸಾಮರ್ಥ್ಯ, ತಿಳವಳಿಕೆ, ವೊ. ಗಳ ವಿಷಯದಲ್ಲಿ) ಕೀಳಾದ; ಹುರುಳಿಲ್ಲದ; ಅಲ್ಪವಾದ. [(ಚರಿತ್ರೆ) M. white (ದ. ಅಮೆ. ಸಂ. ಗಳಲ್ಲಿ) ಜಮೀನಿಲ್ಲದ ಬಿಳಿಯವನು]. ದೌಲಾಗಿಲ್ಲದ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿಖಾವಾಗಿಲ್ಲದ ; ಅಂದವಿಲ್ಲದ ; ಹರುಕು ಪರುಕಾಗಿರುವ (He is no m. scholar ಅವನು ಪಾಂಡಿತ್ಯದಲ್ಲ ಕಡಮೆಯಿಲ್ಲ) ; ಗೌರವವಿಲ್ಲದ ; ಕೀಳು ಮನಸ್ಸಿನ ; ತುಚ್ಛ ; ನೀಚ ; ಜಿಪುಣತನದ. **Meánly** (ಕ್ರಿ. ವಿ.) ; **Meánness** (ನಾ.)

Mean[3] ಮೀನ್ (ಕ್ರಿ. ಸಕ. ; ಭೂತ., ಭೂ. ಕೃ. Meant ಮೆಂಟ್) ಉದ್ದೇಶವಿರು ; ಮನಸ್ಸಿನಲ್ಲಿರು (He means business ಅವನಿಗೆ ಕಾರ್ಯೋದ್ದೇಶವಿದೆ). (ಒಂದು ಉದ್ದೇಶ, ಮೊ. ಕ್ಕಾಗಿ) ಯೋಜಿಸು, ಕಲ್ಪಿಸು. He was meant for a soldier ಅವನನ್ನು ಸಿಪಾಯಿಯನ್ನಾಗಿ ಮಾಡುವ ಉದ್ದೇಶವಿದ್ದಿತು ; ಅವನು ಸಿಪಾಯಿಯಾಗುವ ದೈವೇಚ್ಛೆಯಿದ್ದಿತು. I m. you to go ನೀನು ಹೋಗಗಲೇ ಬೇಕೆಂದು ನಿರ್ಧರಿಸಿದ್ದೇನೆ. M. well to, by (—ರ) ವಿಷಯದಲ್ಲ ಒಳ್ಳೆಯ ಮನೋಭಾವವಿರು, ವಿಶ್ವಾಸವಿರು. I m. his father ನಾನೆನ್ನುವುದು ಅವನ ತಂದೆ(ಯನ್ನು ಕುರಿತು). What do you m. by it ? (ಕೋಪದಿಂದ ಸಂಬೋಧಿಸುವಲ್ಲಿ) ಏನು ಹಾಗೆಂದರೆ ? ಅದು ಹೇಗೆ ಸಮರ್ಥಿಸುವೆ ? **Meáning** (ನಾ., ಗು.) ಅರ್ಥ ; ಅಭಿಪ್ರಾಯ (With m. ಅರ್ಥವತ್ತಾಗಿ). (ಗು.) ಅರ್ಥವತ್ತಾದ; ಭಾವಗರ್ಭಿತ. Well-m. ಒಳ್ಳೆಯ ಅಭಿಪ್ರಾಯವುಳ್ಳ ; ಸದುದ್ದೇಶವುಳ್ಳ. **Meáningless** (ಗು.) ; **Meáningly** (ಕ್ರಿ. ವಿ.)

Meánder ಮಿಆ್ಯಂಡರ್ (ನಾ., ಕ್ರಿ. ಅಕ.) (ಬ. ವ. ದಲ್ಲಿ) ನದಿಯ ಹಲವು ತಿರುವು ಮುರಿವುಗಳು. (ಬ. ವ. ದಲ್ಲಿ) ತಿರುವು ಮುರಿವು ಹಾದಿಗಳು. (ಸಾ., ಬ. ವ. ದಲ್ಲಿ) ಬಳಸು ಪ್ರಯಾಣ. ಒಳಕ್ಕೂ ಹೊರಕ್ಕೂ ಸುತ್ತುಬಳಸಿಕೊಂಡು ಹೋಗುವ ಗೆರೆಗಳ ಚಿತ್ರಾಲಂಕಾರ. (ಕ್ರಿ.) ಗುರಿಯಿಲ್ಲದೆ, ಉದ್ದೇಶವಿಲ್ಲದೆ, ಸುತ್ತಾಡು. (ನದಿ) ಡೊಂಕು ಡೊಂಕಾಗಿ ಹರಿ. **Meándrine** —ಡ್ರಿನ್ (ಗು.) ತಿರುವು ಮುರಿವುಗಳಿಂದ ತುಂಬಿದ (ಮು., ಮನುಷ್ಯನ ಮಿದುಳಿನ ಸುತ್ತುಬಳಸನ್ನು ಹೋಲುವ ಹೊರಮೈಯುಳ್ಳ ಒಂದು ಹವಳದ ಜಾತಿಯ ವಿಷಯದಲ್ಲಿ)

Meáning. Mean[3] ನೋಡಿ.

Meásles ಮೀಸ್‌ಲ್ಸ್ (ನಾ., ಬ. ವ.) ಕೆಂಪು ಗುಳ್ಳೆಗಳೇಳುವ, ಮನುಷ್ಯನ ಒಂದು ಅಂಟುರೋಗ : ಗೋಣಿತಟ್ಟು ; ದಡಾರ ; ಈ ರೋಗದ ಗುಳ್ಳೆಗಳು. ಹಂದಿಗಳ ಒಂದು ಬಗೆಯ ರೋಗ . = German m. (German[2] ನೋಡಿ). **Meásly** (ಗು.) ದಡಾರದ ; ದಡಾರವೆದ್ದಿರುವ. (ಅಸಂ.) ನಿಕೃಷ್ಟ ; ಕೆಲಸಕ್ಕೆ ಬಾರದ ; ತುಚ್ಛ.

Meásure ಮೆಷರ್ (ನಾ.) ಅಳತೆ ; ಮಾನ ; (ಅಳತೆಯಿಂದ ಬಂದ) ಗಾತ್ರ, ಪರಿಮಾಣ ; ಅಳವು (ಗ್ರಾಂ.) [Short m. ಕಡಮೆಯ ಅಳತೆ. Full m. ಪೂರ್ತಿಯ ಅಳತೆ. Clothes made to m. (ತೆಗೆದುಕೊಂಡ) ಅಳತೆಗೆ ಸರಿಯಾಗಿ ಮಾಡಿದ ಉಡುಪು. Take (person's) m. (ಉಡುಪು ಹೊಲಿಯುವುದು, ಮೊ. ಕ್ಕಾಗಿ) (ಒಬ್ಬನ) ಅಳತೆ ತೆಗೆದುಕೊ. (ರೂಪ.) (ಶೀಲಸ್ವಭಾವ, ಮೊ. ನ್ನು) ಪರೀಕ್ಷಿಸಿ ನೋಡು. In a m., In some m. ಸ್ವಲ್ಪ ಮಟ್ಟಿಗೆ]. (ಧಾನ್ಯ, ದ್ರವ, ಮೊ. ವನ್ನು ಅಳೆಯುವ) ಘನ ಅಳತೆಯ ಮಾನ ; ಅಳತೆಯ ಪಾತ್ರೆ (ಸೇರು, ಪಾವು, ಮೊ. ವು ; Pint m.). ಅಳತೆಯ ಕಡ್ಡಿ, ಕೋಲು, ಪಟ್ಟಿ (Tape-m. ಉದ್ದಳತೆಯ ಪಟ್ಟಿ. Yard-m. ಗಜಕಡ್ಡಿ). ಅಳತೆಯ ಪದ್ಧತಿ (Liquid m., Linear m.). (ಒಂದು ವಸ್ತುವನ್ನು ಯಾವುದರಿಂದ ಅಳೆಯುತ್ತೇವೆಯೊ ಅ) ಅಳತೆ, ಮಾನ (A chain's weakest link is the m. of its strength ಒಂದು ಸರಪಣಿಯ ಶಕ್ತಿ ಅದರ ಅತ್ಯಂತ ಬಲಹೀನವಾದ ಕೊಂಡಿಯ ಶಕ್ತಿಯಷ್ಟೇ). ಒಂದು ಮೊತ್ತದ ನಿಶ್ಶೇಷ ಭಾಜಕ ; ಅಪವರ್ತನ (Greatest common measure ಮಹತ್ತಮ ಸಾಮಾನ್ಯ ಅಪವರ್ತನ). ಎಲ್ಲೆ ; (ಪರಿ)ಮಿತಿ (Set measures to ಪರಿಮಿತಿ ಗೊತ್ತುಮಾಡು. Beyond m. ಎಲ್ಲೆ ಮೀರಿ ; ಮಿತಿ ಮೀರಿ). (ಕವಿತೆಯಲ್ಲಿ) ಛಂದಸ್ಸು, ಲಯ ; (ಸಂಗೀತದಲ್ಲಿ) ತಾಳ. (ಪ್ರಾಚೀ. ಪ್ರ.) ನೃತ್ಯ (Tread a m. ನೃತ್ಯ ಮಾಡು). ಸೂಕ್ತ ಕಾರ್ಯ(ಕ್ರಮ) (Take measures). ಕಾಯಿದೆ ; ಕಾನೂನು. **Meásureless** (ಗು.) ಮಿತಿ ಮೀರಿದ ; ಅಪರಿಮಿತ.

Meásure (ಕ್ರಿ. ಸಕ.) (ಯುಕ್ತ ಮಾನದಿಂದ) ಅಳೆ, ಅಳತೆ ಮಾಡು ; (ಉಡುಪು ಹೊಲಿಯಲು) (ಒಬ್ಬನ) ಅಳತೆ ತೆಗೆದುಕೊ [M. with one's eye (ಒಬ್ಬನ ಚಹರೆ ತಿಳಿಯಲು) ಅಡಿಯಿಂದ ಮುಡಿಯ ವರೆಗೆ ದೃಷ್ಟಿಸಿ ನೋಡು]. (ಗೊತ್ತಾದ ಉದ್ದಕ್ಕೆ ಸರಿಯಾಗಿ ರೇಖೆ, ಮೊ. ನ್ನು) ಅಳೆದು ಗುರುತುಮಾಡು (*Off* ಉಪ. ಜೊತೆ). [M. one's length ಉದ್ದಕ್ಕೆ ಬಿದ್ದುಬಿಡು. M. swords (ದ್ವಂದ್ವ ಯುದ್ಧ ಮಾಡುವವರ ವಿಷಯದಲ್ಲಿ) ಇಬ್ಬರ ಕತ್ತಿಗಳ ಉದ್ದವೂ ಒಂದೇ ಸಮವಾಗಿರುವುದನ್ನು ಅಳೆದು ನೋಡು ; (ಒಬ್ಬನೊಡನೆ) ಹೋರಾಟಕ್ಕೆ ನಿಲ್ಲು. It measures 7 inches ಅದು ಏಳಂಗುಲ ಉದ್ದವಿದೆ. M. your desires by your fortune ನಿನ್ನ ಕೋರಿಕೆಗಳನ್ನು ನಿನ್ನ ಉಪಪತ್ತಿಗೆ ತಕ್ಕಂತೆ ಹೊಂದಿಸಿಕೊ]. **Meásurable** (ಗು.) (Within measurable distance of ruin ಸರ್ವನಾಶವಾಗುವುದಕ್ಕೆ ಹತ್ತಿರ ಹತ್ತಿರದಲ್ಲಿ). **Meásurably** (ಕ್ರಿ. ವಿ.) ; **Meásurement** (ನಾ.) [(ಮು., ಬ. ವ. ದಲ್ಲಿ) ತಪಸೀಲಾಗಿ ತೆಗೆದ ಅಳತೆಗಳು]. **Meásured** (ಗು.) (ಕ್ರಿಯಾರ್ಥಗಳಲ್ಲಿ). ಛಂದೋಬದ್ಧವಾದ ; ತಾಳಬದ್ಧವಾದ ; ಕ್ರಮ ಗತಿಯ [M. tread ಕ್ರಮ ಗತಿ(ಯ ನಡಗೆ)]. (ಭಾಷೆ) ಜೋಕೆಯಿಂದ ತೂಕ ಮಾಡಿ ಹೇಳಿದ.

Meat ಮೀಟ್ (ನಾ.) (ಆಹಾರವಾಗಿ ಉಪಯೋಗಿಸುವ, ಮೀನು ಮತ್ತು ಕೋಳಿಯ ಮಾಂಸ ಹೊರತಾದ) ಮಾಂಸ (= Butcher's m.) [Green m. (ಆಹಾರವಾಗಿ) ಹುಲ್ಲು, ಹಸುರು ತರಕಾರಿ]. (ಪ್ರಾಚೀ. ಪ್ರ.) (ಯಾವುದಾದರೂ ತೆರದ) ಆಹಾರ ; (As full as an egg is of m. ಸಂಪೂರ್ತಿಯಾಗಿ ; ತುಂಬ. One man's m. is another man's poison. This was m. & drink to him ಇದು ಅವನಿಗೆ ಬಹು ಸಂತೋಷ ಕೊಡುವುದಾಗಿದ್ದಿತು). (ಪ್ರಾಚೀ. ಪ್ರ.) ಊಟ (Before, after, m.). M.-safe ಮಾಂಸವನ್ನು ಜೋಪಾನವಾಗಿಡುವ (ಸಾ., ತಂತಿಜಾಲರಿಯ) ಅಲಮಾರು. **Meátless** (ನಾ.) ; **Meáty** (ಗು.) ಮಾಂಸ ತುಂಬಿದ ; ಮಾಂಸದ(ಂಥ) ; ಮಾಂಸಲ. (ರೂಪ.) ಸತ್ತ್ವ ತುಂಬಿದ.

Meátus (L) ಮಿಯೇಟಸ್ [ನಾ. ; ಬ. ವ. Meatus —ಟ್ಯೂಸ್, -tuses —ಟಸ(ಸೀ)ಸ್] (ಅಂ. ರ. ಶಾ.) (ದೇಹದಲ್ಲಿಯ) ನಾಳ, ಮಾರ್ಗ (Auditory m. ಕರ್ಣನಾಳ)

Mécca ಮೆಕ (ನಾ.) ಮಹಮ್ಮದ್ ಪೈಗಂಬರರ ಜನ್ಮಸ್ಥಳ : ಮಕ್ಕ. (ರೂಪ.) (ಯಾತ್ರೆ) ಹೋಗಿಬರಲು (ಒಬ್ಬನಿಗೆ) ಕುತೂಹಲವಿರುವ ಸ್ಥಳ. (ಮತ, ರಾಜ್ಯನೀತಿ, ಹವ್ಯಾಸ, ಮೊ. ಗಳ) ಜನ್ಮಸ್ಥಳ, ಮೂಲಸ್ಥಾನ.

Meccáno ಮೆಕಾನೊ (ನಾ.) ದೊಡ್ಡ ಕಟ್ಟಡ, ಮೊ. ಗಳ ಮಾದರಿಯಲ್ಲಿ (ಹುಡುಗರ ಆಟಕ್ಕಾಗಿ) ಉಕ್ಕಿನಿಂದ ತಯಾರಿಸಿರುವ ಅವುಗಳ ಪುಟ್ಟ ಮಾದರಿಯ ಭಾಗಗಳ ತಂಡ. (ವ್ಯಾಪಾರ ಸ್ವಾಮ್ಯದ ಗುರುತಿನ ಹೆಸರು)

Mechánic ಮಿಕ್ಯಾನಿಕ್ (ನಾ.) ಕೈ ಕಸಬಿನವನು ; ಕುಶಲನಾದ ಕೆಲಸಗಾರ (ಮು., ಯಂತ್ರ ತಯಾರಿಸುವವನು, ಯಂತ್ರಕೆಲಸ ಮಾಡುವವನು) ; ಯಂತ್ರ ಶಿಲ್ಪಿ ; ಯಂತ್ರ ಕರ್ಮಿ ; ಯಂತ್ರಿಗ. (ಬ. ವ. ದಲ್ಲಿ) ಚಲನೆ ಮತ್ತು ಅದರ ಪ್ರವೃತ್ತಿಗಳನ್ನು ಕುರಿತ ಪ್ರಯೋಗ ಗಣಿತ ಭಾಗ ; (ಪ್ರಯೋಗ) ಚಲನ ಶಾಸ್ತ್ರ ; ಯಂತ್ರ ಶಾಸ್ತ್ರ. **Mechánical** (ಗು.) ಯಂತ್ರದ ; ಯಂತ್ರ ರಚನೆಯ [The m. powers (ಸನ್ನೆ, ಗಾಲ ಮತ್ತು ಅಚ್ಚು, ರಾಟೆ ಅಥವಾ ಕಪ್ಪಿ, ಇಳುಕಲು ಸಮತಲ, ಬೆಣೆ, ತಿರುಪು— ಎಂಬ ಆರು ಸರಳ ಯಂತ್ರಗಳು, ಯಾಂತ್ರಿಕ ಶಕ್ತಿಗಳು]. ಕೈಕಸಬಿನ ತೆರದ; ಯಂತ್ರದಿಂದ ನಡೆಯುವ, ಮಾಡಿದ ; ಯಾಂತ್ರಿಕ [M. drawing ಕೈವಾರ, ಮೊ. (ಯಂತ್ರೋಪಕರಣ)ಗಳಿಂದ ಬರೆದ ರೇಖನ : ಯಾಂತ್ರಿಕ ರೇಖನ, ನಕ್ಷೆ]. (ವ್ಯಕ್ತಿಯ ಅಥವಾ ಕಾರ್ಯದ ವಿಷಯದಲ್ಲಿ) ಯಂತ್ರಸ್ವಾಯದ ; (ಅಪ್ರಯತ್ನವಾಗಿ) ತನ್ನಷ್ಟಕ್ಕೆ ತಾನೇ ನಡೆಯುವ ; ಕಲ್ಪನಾ ಸಾಮರ್ಥ್ಯ ಕಾಣದ. (ಸಾಧನಗಳು, ಮೂಲ ತತ್ತ್ವಗಳು, ಮೊ. ಗಳ ವಿಷಯದಲ್ಲಿ) ಕೇವಲ ಯಾಂತ್ರಿಕ ; [ಅನೇಕ ವೇಳೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Chemical ಎಂಬುದಕ್ಕೆ ಎದುರು ಪದವಾಗಿ : ಉದಾ., Air is a m. mixture, not a chemical compound ವಾಯು (ಅದರಲ್ಲಿರುವ ಅನಿಲಗಳ) ಭೌತ ಮಿಶ್ರಣವಲ್ಲದೆ ರಾಸಾಯನಿಕ ಸಂಯುಕ್ತವಲ್ಲ]. (ತತ್ತ್ವ, ವಾದ, ಮೊ. ಗಳ ವಿಷಯದಲ್ಲಿ) ಗೋಚರ ವಿಷಯಗಳನ್ನು ಯಾಂತ್ರಿಕ ಕಾರ್ಯಫಲಗಳನ್ನಾಗಿ ಊಹಿಸಿ ವಿವರಿಸುವ ; [**Mechánicalism** (ನಾ.) ಗೋಚರ ವಿಷಯಗಳು ಯಾಂತ್ರಿಕ ರೀತಿಯಲ್ಲಿ ಸಂಭವಿಸುವು ವೆಂಬ ತಾತ್ತ್ವಿಕ ವಾದ ; ಯಾಂತ್ರೀಯ ವಾದ]. ಯಂತ್ರ ಶಾಸ್ತ್ರದ. **Mechánically** (ಕ್ರಿ. ವಿ.) ; **Mechánicalness** (ನಾ.) ; **Mechanícian** ಮೆಕನಿಷ(ಷ್)ನ್ (ನಾ.) ಯಂತ್ರರಚನೆಯಲ್ಲಿ ನಿಪುಣ (ನಾದವನು) ; ಯಂತ್ರ ಶಿಲ್ಪಿ. **Méchanism** ಮೆಕನಿಸ್ಮ್ (ನಾ.) ಯಂತ್ರ ರಚನೆ ; ಯಂತ್ರಭಾಗಗಳ ಪರಸ್ಪರ ಸಂಯೋಜನೆ (ರೂಪ. ನಹ). ಯಂತ್ರದಲ್ಲಿ (ಹೇಗೋ ಹಾಗೆ) ಪರಸ್ಪರವಾದ ಹೊಂದಿಕೆಯಿಂದ ಒಟ್ಟಿಗೆ ಕೆಲಸಮಾಡುವ ಭಾಗಗಳ ವ್ಯೂಹ. (ಕಲೆ) ಯಂತ್ರಪ್ರಾಯವಾದ ರಚನೆ; ಯಾಂತ್ರಿಕ ಕೌಶಲ. **Méchanist** (ನಾ.) = Machinist (ಈಗ ವಿರ. ಪ್ರ.); ಯಂತ್ರ ಶಿಲ್ಪಿ ; ಯಂತ್ರ ಶಾಸ್ತ್ರ ಪ್ರವೀಣ. (ತ. ಶಾ.) (ಜೈವ ವ್ಯಾಪಾರಗಳನ್ನೆಲ್ಲ ಯಾಂತ್ರಿಕ-ರಾಸಾಯನಿಕ ಕಾರ್ಯಫಲಗಳ ನ್ನಾಗಿ ವಿವರಿಸಬಹುದೆಂಬ) ಜೈವ ಯಾಂತ್ರಿಕ ವಾದಿ (ಎದುರು ಪದ: Vitalist). **Mechanístic** (ಗು.) ; **Méchanize** ಮೆಕನೈಸ್ (ಕ್ರಿ. ಸಕ.) (—ಕ್ಕೆ) ಯಂತ್ರಲಕ್ಷಣ ಕೊಡು. **Mechanizátion** (ನಾ.) (ಮು., ಯುದ್ಧದಲ್ಲಿ) ಟ್ಯಾಂಕ್ (ಶತ್ರು ವಿನಾಶಕ ಸಾಧನಗಳುಳ್ಳ ಸ್ವಯಂಚಲ ಬಂಡಿ), ವಿಮಾನ, ಮೊ. ಯಂತ್ರ ಸಾಧನಗಳನ್ನು ಹೆಚ್ಚಾಗಿ ಉಪಯೋಗಿಸುವುದು : ಯಾಂತ್ರಿಕೀ ಕರಣ.

Médal ಮೆಡಲ್ (ನಾ.) ಯಾವುದಾದರೂ ವಿಶೇಷ ಸಂಭವ, ಮೊ. ಗಳ ಸ್ಮಾರಕವಾಗಿ ಲೇಖಾಂಕನ ಮತ್ತು ಚಿತ್ರ ರೇಖನಗಳನ್ನುಳ್ಳ, ಟಂಕ ಹೊಡೆದು ಅಥವಾ ಎರಕ ಹೊಯ್ದು ಮಾಡಿದ, ನಾಣ್ಯದಾಕಾರದ ಲೋಹದ ಬಿಲ್ಲೆ : ಸ್ಮಾರಕ ಪದಕ. (ಸೈನಿಕನು ಸಲ್ಲಿಸಿದ ಸೇವೆಗೆ, ವಿದ್ಯಾರ್ಥಿ ಪಡೆದ ಪ್ರವೀಣತೆಗೆ, ಕೊಡುವ) ಪ್ರಶಸ್ತಿ ಪದಕ. (The reverse of the m. ಒಂದು ವಿಚಾರದ ವ್ಯತಿರಿಕ್ತ ಪಕ್ಷ, ಪ್ರತಿ ಪಕ್ಷ). **Médalled** (ಗು.) ; **Medállic** ಮಿಡ್ಯಾಲಿಕ್ (ಗು.) ; **Medállion** ಮಿಡ್ಯಾಲ್ಯನ್ (ನಾ.) ದೊಡ್ಡ (ಸ್ಮಾರಕ, ಪ್ರಶಸ್ತಿ) ಪದಕ ; ಪದಕದ ಆಕಾರದ ವಸ್ತು (ಉದಾ., ಬಾಗಿಲಿನ ಅಲಂಕಾರ ಭಾಗ, ಅಲಂಕಾರ ಫಲಕ, ಭಾವ ಚಿತ್ರ, ಮೊ. ವು) **Médallist** ಮೆಡಲಿಸ್ಟ್ (ನಾ.) ಪದಕ ಕೆತ್ತುವವನು ; —ದ ನಕ್ಷೆ, ವಿನ್ಯಾಸ, ಮಾಡುವವನು ; ಪದಕಕಾರ. ಪ್ರಶಸ್ತಿ ಪದಕ ಪಡೆದವನು (Gold m.)

Méddle ಮೆಡ್ಲ್ (ಕ್ರಿ. ಅಕ.) (ತನಗೆ ಸಂಬಂಧ ಪಡದ ವಿಷಯದಲ್ಲಿ) ತಾನಾಗಿ ತಲೆ ಹಾಕು, ಮಧ್ಯೇ ಪ್ರವೇಶಿಸು (*With*, *in* ಉಪ. ದೊಡನೆ). **Méddler** (ನಾ.) ; **Méddlesome** (ಗು.) ; **Méddlesomeness** (ನಾ.)

Média[1] (L) ಮೀಡಿಯ (ನಾ. ; ಬ. ವ. -ae —ಯಾ) ಮೃದು ವರ್ಣ (ಉದಾ., b, d, g). (ಅಘೋಷ ಮಹಾಪ್ರಾಣ ದ್ರವನಾಳದ) ನಡು ಪೊರೆ.

Média[2]. Medium ಪದದ ಬ. ವ.

Mediaéval, -diéval ಮೆ(ಮೀ)ಡಿಈವಲ್ (ಗು.) ಮಧ್ಯ ಯುಗದ ; —ದ ಅನುಕರಣೆಯ. **Medi(a)évalism** (ನಾ.) ಮಧ್ಯ ಯುಗದ ನಂಬಿಕೆಗಳು, ಸಂಪ್ರದಾಯಗಳು, ಭಾವನೆಗಳು, ಮತ ಧರ್ಮ, ಕಲೆ, ಮೊ. ವು. ; ಇವುಗಳ ಅನುಸರಣೆ, ಅನಕ್ತಿ. **Medi(a)évalist** (ನಾ.); **Medi(a)évalize** (ಕ್ರಿ.) ; **Medi(a)évally** (ಕ್ರಿ. ವಿ.)

Médial ಮೀಡಿಯಲ್ (ಗು.) ಮಧ್ಯದಲ್ಲಿರುವ; ಮಧ್ಯಸ್ಥ ವಾದ; ಸರಾಸರಿ ಪ್ರಮಾಣದ. **Médially** (ಕ್ರಿ. ವಿ.) ; **Médian** ಮೀಡಿಯನ್ (ಗು., ನಾ.) ಮಧ್ಯದಲ್ಲಿರುವ ; ಮಧ್ಯಸ್ಥ. (ನಾ. ; ಅಂ. ರ. ಶಾ.) ಮಧ್ಯಸ್ಥ ಅಪಥಮನಿ, ಅಭಿಧಮನಿ, ನರ, ಮೊ. ವು. **Médiant** (ನಾ.) (ಸಂ.) ಯಾವುದಾದರೂ ಸ್ವರಗ್ರಾಮದ ಮೂರನೆಯ ಸ್ವರ.

Médian, Médiant. **Medial** ನೋಡಿ.

Médiate ಮೀಡಿಯೆಟ್ (ಗು.), —ಯೇಟ್ (ಕ್ರಿ.) ನೇರವಾದ ಸಂಬಂಧ ವಿಲ್ಲದೆ ಮತ್ತೊಬ್ಬರ ಅಥವಾ ಮತ್ತೊಂದರ ಮೂಲಕ ಸಂಬಂಧ ಪಡೆದಿರುವ ; ಮಧ್ಯಸ್ಥಿಕೆಯ ಸಂಬಂಧವುಳ್ಳ, ಕರ್ತೃತ್ವವುಳ್ಳ; ವ್ಯವಹಿತ. (ಕ್ರಿ.) ಸಂಬಂಧಕವಾಗಿರು ; ಪರಸ್ಪರ ಸಂಬಂಧ ಕಲ್ಪಿಸು ; (ಇಬ್ಬರು ಕಕ್ಷಿಗಳಿಗೆ ರಾಜಿ ಮಾಡಿಸಲು) ಮಧ್ಯಸ್ಥಿಕೆ ವಹಿಸು. (ಒಂದು ಫಲವಾಗು ವುದಕ್ಕೆ) ಸಾಧನವಾಗಿರು; (ಒಂದು ಕೊಡುಗೆ, ಮೊ. ನ್ನು) ವರ್ಗಕೊಡಲು ಮಧ್ಯವರ್ತಿಯಾಗಿರು. **Médiately** (ಕ್ರಿ. ವಿ.) ; **Mediátion** (ನಾ.) ; **Médiatize** ಮೀಡಿಯಟೈಸ್ (ಕ್ರಿ. ಸಕ.) ಒಂದು ಸಂಸ್ಥಾನದ ದೊರೆಗೆ ದೊರೆಯೆಂಬ ಬಿರುದನ್ನೂ ರಾಜ್ಯಾಧಿಕಾರಗಳಲ್ಲಿ ಕೆಲವನ್ನೂ ಉಳಿಸಿ, ಆ ಸಂಸ್ಥಾನವನ್ನು ಮತ್ತೊಂದು ರಾಜ್ಯಕ್ಕೆ ಸೇರಿಸಿಬಿಡು. **Mediatizátion** (ನಾ.); **Médiator** — ಯೇ — (ನಾ.) ಮಧ್ಯಸ್ಥಗಾರ (ಮು., ಯೇಸು ಕ್ರಿಸ್ತ). **Mediatórial** — ಯಟೋರಿಯಲ್ (ಗು.) ; **Médiatory** —ಯಟರಿ (ಗು.); **Mediátrix** —ಯೇಟ್ರಿಕ್ಸ್ (ನಾ., ಸ್ತ್ರೀ.)

Médicable, Médical, Medícament, etc. **Medicine** ನೋಡಿ.

Medicéan ಮೆಡಿಸೀಅನ್, —ಚೀ— (ಗು.) (೧೫ನೆಯ ಶತಮಾನದಲ್ಲಿ Florence ಪಟ್ಟಣದಲ್ಲಿ ಆಳುತ್ತಿದ್ದ) ಮೆಡಿಚೀ ವಂಶದ. (Lorenzo de' Medici ಎಂಬಾತನು Florence ಪಟ್ಟಣದಲ್ಲಿ ಸ್ಥಾಪಿಸಿದ ಪುಸ್ತಕ ಭಂಡಾರದ, ಅದರಲ್ಲಿಯ ಕೈಬರಹದ ಪುಸ್ತಕಗಳ, ಹೆಸರಾಗಿ)

Médicine ಮೆಡ್ಸ್‌ನ್, ಮೆಡಿಸಿ(ಸ್)ನ್ (ನಾ., ಕ್ರಿ. ಸಕ.) (ಮು., ಔಷಧ, ಪಥ್ಯ, ಮೊ. ಗಳಿಂದ ರೋಗ ವಾಸಿಮಾಡುವ ಮತ್ತು ಆರೋಗ್ಯ ರಕ್ಷಣೆ ಮಾಡುವ) ಔಷಧ ವೈದ್ಯ (ಶಸ್ತ್ರ ಚಿಕಿತ್ಸೆ, ಮೊ. ವಲ್ಲ). (ಮು., ಹೊಟ್ಟೆಗೆ ತೆಗೆದುಕೊಳ್ಳುವ) ಮದ್ದು, ಔಷಧ. (ಅನಾಗರಿಕ ಜನರಲ್ಲಿ) ಮಂತ್ರ, ಯಂತ್ರ, ತಾಯಿತಿ, ಮೊ. ವು (M.-man ಮಾಂತ್ರಿಕ). [Take one's m. (ಮನಸ್ಸಿಗೆ) ಒಪ್ಪದ್ದನ್ನು ಸಹಿಸಿಕೊ. M. ball ವ್ಯಾಯಾಮಕ್ಕಾಗಿ ಎಸದು ಹಿಡಿಯುವ, ಮೆತ್ತನೆಯ ಪದಾರ್ಥವನ್ನು ತುಂಬಿದ, ತೊಗಲಿನ ಚೆಂಡು]. (ಕ್ರಿ.) (ರೋಗ ವಾಸಿಮಾಡಲು) ಔಷಧ ಕೊಡು ; ಔಷಧದಿಂದ ರೋಗ ವಾಸಿಮಾಡು. **Médicable** (ಗು.) ವೈದ್ಯ ಚಿಕಿತ್ಸಾ ಸಾಧ್ಯ ವಾದ. **Médical** ಮೆಡಿಕಲ್ (ಗು., ನಾ.) ರೋಗ ವಾಸಿಮಾಡುವ ವಿದ್ಯೆಯ ; ವೈದ್ಯದ ; ವೈದ್ಯಕೀಯ [M. man (ಶಸ್ತ್ರ) ವೈದ್ಯ]. (ಶಸ್ತ್ರ ಚಿಕಿತ್ಸೆ, ಹೆರಿಗೆ, ಮೊ. ಗಳಲ್ಲದೆ) ಔಷಧದ ; ಔಷಧ ಚಿಕಿತ್ಸೆ (ಶಸ್ತ್ರ ಚಿಕಿತ್ಸೆಯಲ್ಲಿ) ಬೇಕಾಗಿರುವ. (M. jurisprudence ವೈದ್ಯನು ಅವಶ್ಯಕವಾಗಿ ಪಡೆದಿರಬೇಕಾದ ನ್ಯಾಯಶಾಸ್ತ್ರ ಜ್ಞಾನ ; ವೈದ್ಯ ನ್ಯಾಯ ಶಾಸ್ತ್ರ). (ನಾ.) (ಬಳ. ಮಾ.) ವೈದ್ಯ ವಿದ್ಯಾರ್ಥಿ. **Médically** (ಕ್ರಿ. ವಿ.) ; **Medícament, Méd-** (ನಾ.) (ವ್ಯಾಧಿ ವಾಸಿಮಾಡಲು ಉಪಯೋಗಿಸುವ) ಔಷಧ ದ್ರವ್ಯ. **Médicaster** —ಕ್ಯಾಸ್ಟರ್ (ನಾ.) ವೈದ್ಯಜ್ಞಾನ ಪಡೆದಿರದ ಠಕ್ಕು ವೈದ್ಯ ; ಅಳಲೆಕಾಯಿ ಪಂಡಿತ. **Médicate** —ಕೇಟ್ (ಕ್ರಿ. ಸಕ.) (ವೈದ್ಯಶಾಸ್ತ್ರ ರೀತಿಯಲ್ಲಿ) ಚಿಕಿತ್ಸೆ ಮಾಡು ; ಔಷಧದ್ರವ್ಯವನ್ನು ಒಳಸೇರಿಸು. **Medicátion** (ನಾ.) ; **Médicative** — ಕೇ(ಕ) —(ಗು.); **Medícinal** ಮಿಡಿಸಿನಲ್ (ಗು.) ಔಷಧದ ; ರೋಗವಾಸಿಮಾಡುವ ಗುಣವುಳ್ಳ; ರೋಗ ಹರ. **Medícinally** (ಕ್ರಿ. ವಿ.) ; **Médico** (It.) ಮೆಡಿಕೊ (ನಾ. ; ಬ. ವ. -os) (ಹಾಸ್ಯವಾಗಿ) ವೈದ್ಯ ; ವೈದ್ಯ ವಿದ್ಯಾರ್ಥಿ. **Medico-** ಮೆಡಿಕೊ— (ಸ. ಪೂ. ಪ.) ವೈದ್ಯ— ; ವೈದ್ಯಕೀಯ— (**-botánical, -galvánic, -judícial**)

Médico. **Medicine** ನೋಡಿ.

Mediéval = Mediaeval.

Médiocre ಮೀಡಿಯೋಕರ್ (ಗು.) ಮಧ್ಯಮ ಹಂತದ ಗುಣ, ಯೋಗ್ಯತೆ, ಉಳ್ಳ ; ಸಾಮಾನ್ಯ ಯೋಗ್ಯತೆಯ ; ಒಳ್ಳೆಯದೂ ಅಲ್ಲದ ಕೆಟ್ಟದ್ದೂ ಅಲ್ಲದ. **Mediócrity** —ಯಾಕ್ರಿಟಿ (ನಾ.) (ಗುಣವಾಚಕಾರ್ಥಗಳಲ್ಲಿ). ಸಾಮಾನ್ಯ ಯೋಗ್ಯತೆಯುಳ್ಳವನು ; ಮಧ್ಯಮ ತೆರದವನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Méditate ಮೆಡಿಟೇಟ್ (ಕ್ರಿ.) ಮನಸ್ಸಿನಲ್ಲೇ ಯೋಚಿಸು ; ಚಿಂತನೆ ಮಾಡು; ಮನನ ಮಾಡು; ಧ್ಯಾನ ಮಾಡು (*On, upon* ಉಪ. ಜೊಡನೆ). **Meditátion** (ನಾ.) ; **Méditator** (ನಾ.) ; **Méditative** — ಟೆ(ೇ) — (ಗು.) ; **Méditatively** (ಕ್ರಿ. ವಿ.) ; **Méditativeness** (ನಾ.)

Mediterránean ಮೆಡಿಟರೇನಿಯನ್ (ಗು., ನಾ.) (ಭೂಮಿಯ ವಿಷಯದಲ್ಲಿ) ಕಡಲ ಕರೆಗೆ (ಬಹು) ದೂರದಲ್ಲಿರುವ ; ಒಳ ನಾಡಿನ ; ನಡು ನಾಡಿನ. (ಜಲಭಾಗ) ಭೂಮಿಯಿಂದ ಸುತ್ತಲ್ಪಟ್ಟ. (ನಾ.) (ಯೂರೋಪನ್ನು ಆಫ್ರಿಕದಿಂದ ಪ್ರತ್ಯೇಕಿಸುವ) ಭೂಮಧ್ಯ ಸಮುದ್ರ (= M. sea)

Médium ಮೀಡಿಯಂ (ನಾ.; ಬ. ವ. Media[2], Mediums ; ಗು.) (ಅತಿ ಹೆಚ್ಚೂ ಅತಿ ಕಡಮೆಯೂ ಅಲ್ಲದೆ, ಎರಡಕ್ಕೂ) ಮಧ್ಯಸ್ಥ ಗುಣದ್ದು, ತೆರದ್ದು ; ಮಧ್ಯಮ; ಎಡತರ [M. wave (ನಿಸ್ತಂತು ವಾರ್ತಾ ಪ್ರಸರಣದಲ್ಲಿ) ೧೦೦ ಮೀಟರುಗಳಿಂದ ೮೦೦ ಮೀಟರುಗಳ ವರೆಗಿನ ಉದ್ದಳತೆಯ ತರಂಗ : ಮಧ್ಯಮ ತರಂಗ]. (ಇಂದ್ರಿಯಗಳಿಗೆ ಗೋಚರ ಭಾವಗಳನ್ನು ಒಯ್ಯುವ) ಮಧ್ಯಸ್ಥ ಪದಾರ್ಥ, ವಾಹಕ; ಪ್ರಾಪಕ (ಉದಾ., ವಾಯು). (ರೂಪ.) (ಜೀವದ ಅನುಕೂಲ) ಸನ್ನಿವೇಶ ; ಸಾಧನ ; ಕರಣ [By, through, the m. of. M. of circulation ವಾಣಿಜ್ಯ ವ್ಯವಹಾರಗಳಿಗೆ ಸಾಧನವಾದದ್ದು ; ಚಲಾವಣೆಯ ಸಾಧನ (ಉದಾ., ನಾಣ್ಯ)]. (ಚಿತ್ರ ಕಲೆ) (ವರ್ಣದ್ರವ್ಯಗಳನ್ನು ಉಪಯೋಗಿಸಲು ಅನುಕೂಲಿಸುವಂತೆ, ದ್ರವವಾಗಿ ಮಾಡಲು ಬೆರಸುವ) ವಾಹಕ ದ್ರವ; ವರ್ಣ ವಾಹಕ (ಉದಾ., ಎಣ್ಣೆ, ನೀರು). ಪ್ರೇತಲೋಕ ದೃಷ್ಟಿಯುಳ್ಳವನೆಂದೂ ಪ್ರೇತಗಳಿಂದ ತಿಳಿದುಕೊಂಡ ಸಮಾಚಾರಗಳನ್ನು ಇತರರಿಗೆ ತಿಳಿಸುವನೆಂದೂ ಭಾವನೆ ಕಲ್ಪಿಸುವವನು : (ಪ್ರೇತ ವಿಷಯ) ವಾಹಕ [**Médiumism** (ನಾ.) ; **Médiumístic** (ಗು.) ; **Médiumize** (ಕ್ರಿ. ಸಕ.)]. (ಗು.) ಮಧ್ಯಸ್ಥವಾದ ; ಮಧ್ಯಮವಾದ ; ಸರಾಸರಿಯಾದ; ಸಾಮಾನ್ಯವಾದ [M. bowler ಸಾಮಾನ್ಯ ವೇಗದ(ಲ್ಲಿ ಚೆಂಡೆಸೆಯುವ) ಎಸೆಗಾರ]

Médley ಮೆಡ್ಲಿ (ನಾ., ಗು., ಕ್ರಿ. ಸಕ.) ಕಲ ಬೆರಕೆ ; ಕಲಸು ಮೆಲಸು ; ಕಲ ಬೆರಕೆಯ ಗುಂಪು ; ಮಿಶ್ರ ಗೋಷ್ಠಿ. (ಸಾಹಿತ್ಯ) ಹಲವು ತೆರದ (ಲೇಖನಗಳ) ಸಮುದಾಯ, ಸಂಕಲನ. (ಗು.) (ಅಸಮಂಜಸವಾಗಿ) ಮಿಶ್ರ ಮಾಡಿದ; ಕಲ ಬೆರಕೆಯ. (ಕ್ರಿ.) ಕಲ ಬೆರಕೆ ಮಾಡು; ಸಂಮಿಶ್ರಣ ಮಾಡು.

Medúlla (L) ಮಿಡಲ (ನಾ.) ಎಲುಬಿನೊಳಗಿರುವ ಕೊಬ್ಬು ಪದಾರ್ಥ, ನೆಣ ; = Spinal marrow (Marrow ನೋಡಿ). [M. (oblongata) ಮಿದುಳಿನ ಅತ್ಯಂತ ಹಿಂದಿನ ಚಾಚುಭಾಗ]. ಕೆಲವು ಅಂಗಗಳ (ಮು., ಮೂತ್ರಪಿಂಡದ) ಮಧ್ಯ ಭಾಗ ; ಸಸ್ತನಿಗಳ ಕೂದಲಿನ ರಂಧ್ರ ಗೂಡಿದ ಮೆತು ಮಧ್ಯ ಭಾಗ ; ಸಸ್ಯಗಳ ಒಳ ಭಾಗದ ಮೆತು ಅಂಗಾಂಶ, ಬೆಂಡು (ಭಾಗ). **Medúllary** (ಗು.)

Medúsa ಮಿಡ್ಯೂಸ(ಸ) (ನಾ.) (ಗ್ರೀಕ್ ಪುರಾಣ) ಹಾವುಗೂದಲಿನ ಮೂವರು ಸ್ತ್ರೀರಾಕ್ಷಸಿಯರಲ್ಲೊಬ್ಬಳು. (ಪ್ರಾ. ವಿ.) = Jelly-fish (Jelly ನೋಡಿ). **Medúsal** (ಗು.) ; **Medúsan** (ಗು.) ; **Medúsoid** (ಗು., ನಾ.)

Meed ಮೀಡ್ (ನಾ.) (ಕಾವ್ಯ) ಪಾರಿತೋಷಿಕ ; ಪ್ರತಿ ಫಲ ; ಯೋಗ್ಯತೆಗೆ ನ್ಯಾಯವಾಗಿ ಸಲ್ಲಬೇಕಾದ ಶ್ಲಾಘನೆ, ಗೌರವ, ಮೊ. ವು.

Meek ಮೀಕ್ (ಗು.) ಭಕ್ತಿಯುತವಾದ ನಮ್ರಭಾವದಿಂದ ಇರುವ ; ನಮ್ರ ; ವಿನೀತ ; ನಷ್ಟ, ಕೇಡು, ಮೊ. ನ್ನು ಗೊಣಗುಟ್ಟದೆ ಅನುಭವಿಸುವ ; ಬಹಳ ಸಾಧು ಸ್ವಭಾವದ (As m. as a lamb, as Moses). **Meékly** (ಕ್ರಿ. ವಿ.) ; **Meékness** (ನಾ.)

Meérschaum (G) ಮಿಯರ್‌ಷಾ(ಷ, ಷ್)ಮ್ (ನಾ.) (ಮೃದುವಾದ ಬಿಳಿಯ ಗಡ್ಡೆಗಳಾಗಿ ದೊರೆಯುವ) ಮ್ಯಾಗ್ನೀಸಿಯಮ್ಮಿನ ಜಲಸಂಯುಕ್ತ ಸಿಲಿಕೇಟು ; ಇದರಿಂದ ಮಾಡಿದ ಬಟ್ಟಲುಳ್ಳ ಚುಂಗಾಣಿ.

Meet[1] ಮೀಟ್ (ನಾ., ಕ್ರಿ.) (ಬೇಟೆಗಾಗಿ ಬೇಟೆನಾಯಿಗಳ ಮತ್ತು ಮನುಷ್ಯರ) ಸೇರುವಿಕೆ, ನೆರವಿ ; ಸ್ಕೇಟರ್ ಸವಾರರು, ಮೊ. ರ ನೆರವಿ. (ಕ್ರಿ.) (ಎದುರಿಗೆ ಬರುತ್ತಿರುವವನ್ನು) ಸಂಧಿಸು. (ವ್ಯಕ್ತಿ, ರೈಲುಬಂಡಿ, ಮೊ.) ಬರುವಲ್ಲಿ ಸ್ಥಳಕ್ಕೆ ಹೋಗಿ ಎದುರುಗೊಳ್ಳು, ಬರಮಾಡಿಕೊ. (ಒಬ್ಬನ) ಪರಿಚಯ ಮಾಡಿಕೊ [(ವಿಧಿ ರೂಪ ; ಅಮೆ. ಸಂ.) ಪರಿಚಯ ಮಾಡಿಕೊಡುವ ಒಕ್ಕಣೆ : M. Dr Smith ನಿನ್ನ ಎದುರಿಗಿರುವವರು ಡಾಕ್ಟರ್ ಸ್ಮಿತ್ ಅವರು. M. (person) half-way ನೀಡಿದ ಸ್ನೇಹ ಹಸ್ತವನ್ನು ಹಿಡಿ ; (—ಒಡನೆ) ಒಪ್ಪಂದಕ್ಕೆ ಬರು ; ಕೊಟ್ಟು, ಪಡೆದು, ರಾಜಿ ಮಾಡಿಕೊ]. (ರೇಖೆ, ರಸ್ತೆ, ಮೊ. ಗಳ ವಿಷಯದಲ್ಲಿ, ಮತ್ತೊಂದು ರೇಖೆ, ಮೊ. ನ್ನು) ಸಂಧಿಸು, ಸೇರು, ಕೂಡು. [M. the eye, ear ಕಣ್ಣಿಗೆ, ಕಿವಿಗೆ, —ಬೀಳು. M. person's eye (ಒಬ್ಬನ) ದೃಷ್ಟಿಗೆ ಬೀಳು ; ಮರುದೃಷ್ಟಿ ಬೀರು]. (ಕಾಳಗದಲ್ಲಿ, ದ್ವಂದ್ವ ಯುದ್ಧದಲ್ಲಿ) ಎದುರಿಸಿ ನಿಲ್ಲು. (ಕೇಡು, ಮೊ. ಗಳೊಡನೆ) ಹೋರಾಡು. (ಅಕಸ್ಮಾತ್ತಾಗಿ ಅಥವಾ ಉದ್ದೇಶ ಪೂರ್ವಕವಾಗಿ, ಒಬ್ಬನ) ಭೇಟಿಯಾಗು, ಜೊತೆಗೆ ಸೇರು ; (ಒಬ್ಬನಿಗೆ, ಒಬ್ಬನ ಅಭಿರಾಷೆಗಳಿಗೆ) ಹೊಂದಿಕೊ, ಅನುಕೂಲವಾಗಿರು. (ಗಿರಾಕಿ, ಕೇಳಿಕೆ, ಆವಶ್ಯಕತೆ —ಇವನ್ನು) ಸಲ್ಲಿಸು (M. the case ಸಂದರ್ಭಕ್ಕೆ ಸಾಕಾಗಿರು. M. a bill ವಾಯಿದೆ ಮುಗಿದಾಗ ಹುಂಡಿಗೆ ಹಣ ಪಾವತಿ ಮಾಡು). ನಿಲುಕು, ಮುಟ್ಟು (Waistcoat won't m. ಸೊಂಟದಂಗಿ ಬಹಳ ಬಿಗಿ). (ಗುಣಗಳು) ಒಬ್ಬನಲ್ಲಿ ಒಟ್ಟಿಗೆ ಸೇರಿರು, ಒಂದುಗೂಡು. M. with (ವ್ಯಕ್ತಿ, ಅಡಚಣೆ, ಮೊ. ನ್ನು) ಸಂಧಿಸು. (ವರ್ತನೆ, ಆದರಣೆ, ಮೊ.) ಅನುಭವಕ್ಕೆ ಬರು, ಅನುಭವಿಸು. **Meéting** ಮೀಟಿಂಗ್ (ನಾ.) (ಕ್ರಿಯಾರ್ಥಗಳಲ್ಲ). ದ್ವಂದ್ವ ಯುದ್ಧ ; ಕುದುರೆಯ ಜೂಜಿನ ಸಮಾರಂಭ; (ವಿನೋದ, ಸತ್ಕಾರ, ಮೊ. ಗಳ) ಸಭೆ, ಗೋಷ್ಠಿ ; (ಆರಾಧನೆಗಾಗಿ ಸೇರಿದ) ಭಕ್ತರ ಸಭೆ, ಗೋಷ್ಠಿ; ಸಭಿಕರು (Address the m.). M.-house ಆರಾಧನ ಮಂದಿರ (ಸಾ., ಕ್ವೇಕರ್ ಪಂಗಡದವರನ್ನು ಳಿದು, ಇತರರಲ್ಲಿ ತಿರಸ್ಕಾರ ಪ್ರ.). M.-place ಸಭೆ ಸೇರಲು ಗೊತ್ತಾದ ಸ್ಥಳ ; ಸಭಾ ಸ್ಥಳ.

Meet[2] ಮೀಟ್ (ಗು.) (ಪ್ರಾಚೀ. ಪ್ರ.) ತಕ್ಕ ; ಯೋಗ್ಯ(ವಾದ); ಸರಿಯಾದ (It is m. that —ಯುಕ್ತವಾದದ್ದು). **Meétly** (ಕ್ರಿ. ವಿ.) ; **Meétness** (ನಾ.)

Mega- ಮೆಗ— (ಸ. ಪೂ. ಪ.) ದೊಡ್ಡ—; ಬೃಹತ್— ; ಮಹಾ—. **-cephálic** (—ಸಿಫ್ಯಾಲಿಕ್) ದೊಡ್ಡ ತಲೆಯ. **-lith** ದೊಡ್ಡ ಕಲ್ಲು (ಮು., ಸ್ಮಾರಕವಾಗಿ). **-líthic** ದೊಡ್ಡ ಕಲ್ಲುಗಳಿಂದ ಕಟ್ಟಿದ, ಕೂಡಿದ. **-phone** ಧ್ವನಿಯನ್ನು ಬಹು ದೂರ ಕಳುಹಿಸಲಾಗುವ ಒಂದು ಸಲಕರಣೆ; ದೂರಘೋಷಣದ ದೊಡ್ಡ ಕಹಳೆ ; ದೂರ ಘೋಷಿಣಿ. (ಕ್ರಿ. ಸಕ.) ದೂರಘೋಷಿಣಿಯಿಂದ ಪ್ರಕಟಿಸು. **-scope** ಒಂದು ತೆರದ ಚಿತ್ರ ವಿಸ್ತಾರಕ ದೀಪ. **-scópic** (—ಸ್ಕಾಪಿಕ್) ಬರಿಯ ಕಣ್ಣಿಗೆ ಕಾಣುವ. **-thérium** (—ತೀರಿಯಂ) ಈಗ ವಂಶನಷ್ಟವಾಗಿರುವ, ಸಸ್ಯಾಹಾರಿಯಾಗಿದ್ದ, ಬಹು ದೊಡ್ಡ ಒಡಲಿನ, ಒಂದು ಪ್ರಾಣಿಜಾತಿ.

Mégalo- ಮೆಗಲೊ— (ಸ. ಪೂ. ಪ.) ದೊಡ್ಡ— ; ಮಹಾ—. **-mánia** ದೊಡ್ಡತನದ, ಅಹಂಭಾವದ, ಸ್ವಪ್ರತಿಷ್ಠೆಯ, —ಹುಚ್ಚು ; ಮಹತ್ತಾದುದನ್ನು ಬಯಸುವ, ಮಾಡಲೆಳಸುವ, —ಹುಚ್ಚು; ಮಹತ್ತ್ವೋನ್ಮಾದ. **-saúrus** ಈಗ ವಂಶನಷ್ಟವಾಗಿರುವ, ಮಾಂಸಾಹಾರಿಯಾಗಿದ್ದ, ಹಲ್ಲಿಯ ವರ್ಗದ ಒಂದು ದೊಡ್ಡ ಪ್ರಾಣಿಜಾತಿ.

Megáss ಮೆಗ್ಯಾಸ್ (ನಾ.) ಕಬ್ಬಿನಿಂದ ರಸವನ್ನೆಲ್ಲ ತೆಗೆದಮೇಲೆ ಉಳಿಯುವ ಸಿಪ್ಪೆ, ನಾರು : ಕಬ್ಬಿನ ಹಿಪ್ಪೆ.

Mégger ಮೆಗರ್ (ನಾ.) (ವಿದ್ಯುತ್) ವಿದ್ಯುಚ್ಚಲನ ನಿರೋಧಕದ ನಿರೋಧ ಶಕ್ತಿಯನ್ನು ಅಳೆಯುವ ಸಾಧನ : ವಿದ್ಯುಚ್ಚಲನ ನಿರೋಧ ಶಕ್ತಿ ಮಾಪಕ.

Megílp ಮಿಗಿಲ್ಪ್ (ನಾ.) ತೈಲವರ್ಣಗಳ ವಾಹಕ ಪದಾರ್ಥ (ಸಾ., ಅಗಸೆಯೆಣ್ಣೆ ಮತ್ತು ಕರ್ಪೂರ ತೈಲ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mégohm ಮೆಗೋಮ್ (ನಾ.) ವಿದ್ಯುಚ್ಚಲನ ನಿರೋಧ ಶಕ್ತಿಯ (ಅಳತೆಯ) ಮಾನ (ಹತ್ತು ಲಕ್ಷ ಓಮುಗಳು)

Mégrim ಮಿಾಗ್ರಿಮ್ (ನಾ.) ಕಠಿನವಾದ (ಸಾ., ಅರೆ) ತಲೆನೋವು. ಥಟ್ಟನೆಯ ಮನಬದಲಾವಣೆ ; ಬುದ್ಧಿಚಾಪಲ್ಯ ; ಮನೋ ವಿಕಲ್ಪ ; ಹುಚ್ಚಾಟ. (ಬ. ವ. ದಲ್ಲಿ) ದುಮ್ಮಾನ ; ವಿಷಣ್ಣತೆ ; ಮಂಕು. (ಬ. ವ. ದಲ್ಲಿ) (ಕುದುರೆ, ಮೊ. ಗಳಿಗೆ ಬರುವ) ಸುತ್ತಿಬೀಳುವಂತೆ ಮಾಡುವ ಒಂದು ಬಗೆಯ ನರಗಳ ರೋಗ.

Meiósis ಮೈಓಸಿಸ್ (ನಾ.) = Litotes.

Melanchólia, etc. **Melancholy** ನೋಡಿ.

Mélancholy ಮೆಲಂಕಲಿ (ನಾ., ಗು.) (ರೂಢಿಯ ಅಥವಾ ಸ್ವಭಾವ ಜನ್ಯವಾದ) ವಿಷಣ್ಣತೆ, ಖಿನ್ನತೆ, ಉಮ್ಮಳ, ಉದ್ವೇಗ, ದುಮ್ಮಾನ ; ಚಿಂತಾಕುಲ(ತೆ). (ವ್ಯಕ್ತಿಗಳ ವಿಷಯದಲ್ಲಿ) ವ್ಯಥೆಯಿಂದ, ಚಿಂತೆಯಿಂದ, ಕೂಡಿದ ; ಖಿನ್ನ ಮನಸ್ಸಿನ ; (ವಸ್ತುಗಳ ವಿಷಯದಲ್ಲಿ) ವ್ಯಾಕುಲ ಉಂಟುಮಾಡುವ ; ವಿಷಾದಕರ ; ಖಿನ್ನತೆಯ. **Melanchólia** —ಕೋಲಿಯ (ನಾ.) ಖಿನ್ನತೆಯೂ ಬುಡವಿಲ್ಲದ ಭಯವೂ ಕೂಡಿದ ಒಂದು ಮನೋರೋಗ ; ವಿಷಣ್ಣ(ತೆಯ) ಜಾಡ್ಯ. **Melanchólic** —ಕಾಲಿಕ್ (ಗು.) ವಿಷಣ್ಣ ; ಖಿನ್ನ ; ಖಿನ್ನತೆಗೊಳಗಾಗುವ.

Melánge (F) ಮೆಲಾನ್ಷ್ (ನಾ.) ಮಿಶ್ರಣ ; ಕಲ ಬೆರಕೆ.

Mélanism ಮೆಲನಿಸ್ಮ್ (ನಾ.) (ಹೊರ ಚರ್ಮ, ಕೂದಲು, ಮೊ. ಗಳಲ್ಲಿ ಕಪ್ಪು ವರ್ಣದ್ರವ್ಯ ಅತಿಯಾಗಿ ವೃದ್ಧಿಹೊಂದುವುದರಿಂದಾಗುವ) ಮೈಕಪ್ಪು. **Melanósis** —ನೋಸಿಸ್ (ನಾ.) ಅಂಗಾಂಶಗಳಲ್ಲಿ ರೋಗಕಾರಣ ದಿಂದಾದ ಕಪ್ಪು ವರ್ಣದ್ರವ್ಯದ ವಿಪರೀತ ವೃದ್ಧಿ ; ಕಪ್ಪು ಅರ್ಬುದ ರೋಗ. **Melanótic** —ನಾಟಿಕ್ (ಗು.)

Melanóchroi ಮೆಲನಾಕ್ರೊಐ (ನಾ., ಬ. ವ.) (ಮಾನವ ಶಾಸ್ತ್ರ) ನುಣುಪಾದ ಕಪ್ಪು ಕೂದಲೂ ಬಿಳಿಚಾದ ಮೈಬಣ್ಣವೂ ಉಳ್ಳ ಒಂದು ಮನುಷ್ಯವರ್ಗ.

Melanósis, etc. **Melanism** ನೋಡಿ.

Mélee (F) ಮೆಲೇ (ನಾ.) ದೊಂಬಿ ಹೊಡೆದಾಟ ; ತುಮುಲ ಯುದ್ಧ ; ಉದ್ರೇಕದಿಂದ ಕೂಡಿದ ವಾಗ್ವಾದ.

Mélic ಮೆಲಿಕ್ (ಗು.) (ಕವನ, ಮು., ಗ್ರೀಕ್ ಭಾವಗೀತೆಯ ವಿಷಯದಲ್ಲಿ) ಹಾಡುವುದಕ್ಕಾಗಿ ರಚಿಸಿದ.

Mélinite ಮೆಲಿನೈಟ್ (ನಾ.) ಫ್ರೆಂಚ್ ನಿರ್ಮಾಣದ ಒಂದು ತೀವ್ರ ಸಿಡಿಮದ್ದು.

Méliorate ಮಿಾಲಿಯೊರೇಟ್ (ಕ್ರಿ.) = Ameliorate. **Meliorátion** (ನಾ.) ; **Méliorism** (ನಾ.) ಮನುಷ್ಯಪ್ರಯತ್ನದಿಂದ ಪ್ರಪಂಚ ವನ್ನು ಉತ್ತಮಗೊಳಿಸಬಹುದೆಂಬ ವಾದ. **Méliorist** (ನಾ.)

Méliorism, etc. **Meliorate** ನೋಡಿ.

Mellíferous ಮೆಲಿಫೆರಸ್ (ಗು.) ಜೇನುತುಪ್ಪ ಕೊಡುವ, ಉತ್ಪತ್ತಿ ಮಾಡುವ. **Mellífluous** (ಗು.) (ಕಂಠ, ಮಾತು) ಜೇನಿನಂತೆ ಇಂಪಾ ಗಿರುವ; ಮಧು ಮಧುರ. **Mellífluence** (ನಾ.); **Mellífluent** (ಗು.)

Mellífluous, etc. **Melliferous** ನೋಡಿ.

Méllow ಮೆಲೊ [ಗು. (ತರ ತಮ ರೂಪಗಳು -er, -est); ಕ್ರಿ.] (ಹಣ್ಣು) ಮೃದುವಾಗಿಯೂ ಸೀಯಾಗಿಯೂ ರಸವತ್ತಾಗಿಯೂ ಇರುವ, ಹದ ವಾದ ; ಮಾಗಿದ ; ಪಕ್ವವಾದ. (ದ್ರಾಕ್ಷಾ ಮದ್ಯ) ಚೆನ್ನಾಗಿ ಊರಿದ, ಮಾಗಿದ. (ಮಣ್ಣು) ಸಸ್ಯಸಾರ ಬೆರಕೆಯ ಮರಳಿನಿಂದಲೂ ಜೇಡಿ ನಿಂದಲೂ ಕೂಡಿದ ; ಫಲವತ್ತಾದ. (ಶೀಲ ಸ್ವಭಾವ) ವಯಸ್ಸಿನಿಂದ ಅಥವಾ ಅನುಭವದಿಂದ ಹದಕ್ಕೆ ಬಂದ. (ನಾದ, ಬಣ್ಣ, ಬೆಳಕು) (ಕರ್ಕಶ ವಲ್ಲದೆ) ಪೂರ್ಣವೂ ಸ್ವಚ್ಛವೂ ಆದ ; ಸ್ನಿಗ್ಧ ; ಲಲಿತ. ಗೆಲವಿನ ; ಉಲ್ಲಾಸದ ; ಸ್ವಲ್ಪ ಅಮಲೇರಿದ. (ಕ್ರಿ.) —ಮಾಡು ; —ಆಗು. **Méllowly** (ಕ್ರಿ. ವಿ.) ; **Méllowness** (ನಾ.)

Melódeon, -dion ಮಿಲೋಡಿಯನ್ **-dium** —ಯಮ್ (ನಾ.) ಅಮೆರಿಕದ ಮೊದ ಮೊದಲಿನ 'ಆರ್ಗನ್' ವಾದ್ಯ ; ಒಂದು ಬಗೆಯ ರಾಗಮಾಲಿಕೆ.

Melodráma ಮೆಲೊಡ್ರಾಮ (ನಾ.) ಹರ್ಷಾಂತವಾದ, ಭಾವ ರಸಾತಿರೇಕವುಳ್ಳ, ಪ್ರಾಯಿಕವಾಗಿ ಸದ್ಗುಣಕ್ಕೆ ಜಯವನ್ನು ತೋರಿ ಸುವ, ಒಂದು ಉದ್ರೇಕ ನಾಟಕ. (ಇದರಂತೆ ತೋರುವ) ರಸಾವೇಶ ಭಾಷೆ, ವರ್ತನೆ. (ಹಿಂದಿನ ಅರ್ಥ) ಮಧ್ಯೇ ಮಧ್ಯೇ ಹಾಡುಗಳು ಬರುವ ನಾಟಕ. **Melodramátic** —ಡ್ರಮ್ಯಾ— (ಗು.) ; **Melodramátically** (ಕ್ರಿ. ವಿ.) ; **Melodrámatist** —ಡ್ರ್ಯಾಮ— (ನಾ.) ; **Melodrámatize** (ಕ್ರಿ. ಸಕ.)

Mélody ಮೆಲೊಡಿ (ನಾ.) ಇಂಪಾದ ಸಂಗೀತ ; ಸುಸ್ವರ ; ಗಾನಾನು ಗುಣವಾದ ಪದಸರಣಿ ; ರಾಗ ವಿನ್ಯಾಸ ; ಸ್ವರ ವಿನ್ಯಾಸ ; ಸಂಗೀತ ಕೃತಿಯ ಮಟ್ಟು, ರಾಗ. **Melódious** ಮಿಲೋಡಿಯಸ್ (ಗು.) ಸುಸ್ವರದ ; ಕಿವಿಗಿಂಪಾದ ; (ಧ್ವನಿ) ಮಧುರವಾದ. **Melódiously** (ಕ್ರಿ. ವಿ.) ; **Melódiousness** (ನಾ.) ; **Mélodist** ಮೆಲೊಡಿಸ್ಟ್ (ನಾ.) ಗಾಯಕ ; ಸಂಗೀತಗಾರ ; ಸಂಗೀತ ರಚನ ಕಾರ. **Mélodize** (ಕ್ರಿ.) ಸಂಗೀತವನ್ನು ರಚಿಸು ; ಸಾಹಿತ್ಯಕ್ಕೆ ಸ್ವರ ಹಾಕು ; ಕಿವಿಗಿಂಪಾಗಿಸು.

Mélon ಮೆಲನ್ (ನಾ.) ಕಲ್ಲಂಗಡಿ, ಕರಬೂಜು, ಮೊ. ಹಣ್ಣು (ಮು., Water m.). M.-cutting (ಅಸಂ.) ಕೊಳ್ಳೆಯ, ಲಾಭದ, ಹಂಚಿಕೆ.

Melt ಮೆಲ್ಟ್ (ಕ್ರಿ.; ಭೂತ. Melted, ಭೂ. ಕೃ. Melted, Molten) ಶಾಖದಿಂದ ದ್ರವವಾಗು, —ವಾಗಿಸು ; —ಕರಗು, —ಕರಗಿಸು [M. away ಕರಗಿಹೋಗು ; ಕರಗಿ ಕಾಣದೆಹೋಗು. (ಬಳ. ಮಾ., ವ್ಯಕ್ತಿಯ ವಿಷಯದಲ್ಲಿ) ಬಹಳ ಸೆಕೆಯಿಂದ (ಬೆವರಿ) ನೀರಾಗು, ತಪಿಸು. It melts in the mouth ಅದು ಬಾಯಲ್ಲಿ ಕರಗಿಹೋಗುತ್ತದೆ. (ಮೋಡದ ವಿಷಯದಲ್ಲಿ) M. into rain ಮಳೆ ಸುರಿ. Melting with tenderness and kind compassion ಮೃದು ಭಾವದಿಂದಲೂ ಮರುಕದಿಂದಲೂ (ಮನಸ್ಸು) ಕರಗಿಹೋಗಿ. M. into tears ಕಣ್ಣೀರು ಸುರಿಸು. The melting mood ಮನ ಕರಗುವ, ಕಣ್ಣೀರಿಡುವ, ಭಾವ]. ಕಡಮೆಯಾಗುತ್ತ ಹೋಗು ; ಕರಗಿಹೋಗು (*Away* ಉಪ. ದೊಡನೆ). (ಧ್ವನಿ) ಮೃದುವಾಗಿರು, ಲಲಿತವಾಗಿರು. (ಒಂದು ಬಣ್ಣ ಮತ್ತೊಂದು ಬಣ್ಣದಲ್ಲಿ, ಒಂದು ಸ್ವರ ಮತ್ತೊಂದು ಸ್ವರದಲ್ಲಿ) ತಿಳಿಯದಂತೆ ಕಲೆತುಹೋಗು ; ಲೀನವಾಗು (*Into* ಉಪ. ದೊಡನೆ). [M. down ಕಚ್ಚಾ ಪದಾರ್ಥವಾಗಿ ಉಪಯೋಗಿಸಲು (ಮು., ಚಿನ್ನದ, ಬೆಳ್ಳಿಯ, —ತಟ್ಟೆ, ನಾಣ್ಯ, ಮೊ. ನ್ನು) (ಶಾಖದಿಂದ) ಕರಗಿಸಿಬಿಡು. Go into the melting-pot (ರೂಪ.) ಸಂಪೂರ್ಣವಾಗಿ ಬದಲಾವಣೆ ಹೊಂದು]. ಮನಸ್ಸನ್ನು ಕರಗಿಸು, ಮೃದು ಮಾಡು. **Méltingly** (ಕ್ರಿ. ವಿ.) ಮನ ಕರಗುವಂತೆ.

Melt (ನಾ.) ಶಾಖದಿಂದ ಕರಗಿದ ಲೋಹ ; ಒಂದು ಸಲಕ್ಕೆ ಕರಗಿಸಿದ (ಲೋಹದ) ಮೊತ್ತ.

Mémber ಮೆಂಬರ್ (ನಾ.) ದೇಹದ ಭಾಗ, ಅಂಗ, ಅವಯವ (ಮು., ಕೈ ಅಥವಾ ಕಾಲು) [Unruly m. ನಾಲಗೆ. (ರೂಪ.) M. of Christ ಕ್ರೈಸ್ತ]. (ಸಂಕೀರ್ಣ ರಚನೆಯ) ಘಟಕ, ಅಂಶ. (ಸಂಘ, ಮೊ. ಗಳ) ಸದಸ್ಯ [M. of Parliament (ಸಂಕ್ಷಿಪ್ತ : M.P.)]. (ರಾಜಕೀಯ ಸಂಸ್ಥೆಯ) ಅಂಗ, ಶಾಖೆ. ವಾಕ್ಯ ಭಾಗ ; ಉಪ ವಾಕ್ಯ. (ಗಣಿತ) ಸಂಯುಕ್ತ ಸಂಖ್ಯಾ ಪದದ ಭಾಗ ; ಘಟಕ ಪದ. **(-)membered** (ಗು.) ; **Mémberless** (ಗು.) ; **Mémbership** (ನಾ.) ಸದಸ್ಯತ್ವ ; ಸದಸ್ಯ ಸಂಖ್ಯೆ ; (ಗ್ರಾಮ್ಯ) ಸದಸ್ಯರು.

Mémbrane ಮೆಂಬ್ರೇನ್ (ನಾ.) (ಪ್ರಾಣಿಯ ಅಥವಾ ಸಸ್ಯದ ದೇಹದಲ್ಲಿಯ) ತಂತುಮಯ ಸಂಯೋಜಕಾಂಶದ ಹಾಳೆ ; ತ್ವಕ್ಕು ; ಒಳ ಚರ್ಮ ; ಸೂಕ್ಷ್ಮ ಚರ್ಮ ; ಪೊರೆ. (ಕೆಲವು ವ್ಯಾಧಿಗಳಲ್ಲಿ) ರೋಗದ ಪೊರೆ. (ಸಕ್ಕಾರಿ, ಮೊ. ದವುಗಳ ದಸ್ತ್ರಾವೇಜಿನ ಅಂಗವಾದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚರ್ಮದ ಕಾಗದ. **Membranáceous** ಮೆಂಬ್ರನೇಷಸ್ (ಗು.) = **Membráneous** —ಬ್ರೇ— (ಗು.) = **Mémbranous** —ಬ್ರ— (ಗು.)

Mémbrum viríle (L) (ನಾ.) = Penis.

Meménto ಮಿಮೆಂಟೊ (ನಾ. ; ಬ. ವ. -oes, -os) ಜ್ಞಾಪಕಕ್ಕೆ ತರುವ, ಎಚ್ಚರಿಕೆ ಕೊಡುವ, —ವಸ್ತು : ಜ್ಞಾಪಕ ವಸ್ತು. (ಒಬ್ಬನ, ಒಂದು ಘಟನೆಯ) ಸ್ಮರಣಾರ್ಥಕ ವಸ್ತು ; ಸ್ಮಾರಕ. **M. mori** (L) —ಮೋರೈ (= ನೀನು ಸಾಯಬೇಕು ಎಂಬುದು ನೆನಪಿನಲ್ಲಿರಲಿ) ಮರಣದ ಎಚ್ಚರಿಕೆ (ಉದಾ., ತಲೆಬುರುಡೆ ; ಕಪಾಲ)

Mémo. **Memory** ನೋಡಿ.

Mémoir ಮೆಮ್ವಾರ್ (ನಾ.) ಘಟನೆಗಳ ಲಿಖಿತ ; (ಸ್ವಂತ ತಿಳಿವಳಿಕೆಯ ಮೇಲೆ ಅಥವಾ ವಿಶೇಷ ಆಕರಗಳಿಂದ ಸಂಗ್ರಹಿಸಿ ಬರೆದ) ಚರಿತ್ರೆ ; ಬಖೈರು ; ಬಖರ್ ; (ಸ್ವಂತ) ಜೀವನ ಚರಿತ್ರೆ ; (ಲೇಖಕನು ವಿಶೇಷವಾಗಿ ವ್ಯಾಸಂಗ ಮಾಡಿ ಬರೆದ ವಿದ್ವದ್ವಿಷಯದಮೇಲಿನ) ಪ್ರೌಢ ಪ್ರಬಂಧ.

Mémorabília, Memorándum, etc. **Memory** ನೋಡಿ.

Memória téchnica (L) ಮಿಮೋರಿಯ ಟೆಕ್ನಿಕ (ನಾ.) ನೆನಪಿಗೆ ಬರಲು, ಜ್ಞಾಪಕಕ್ಕೆ ತರಲು, —ಸಹಾಯ ಮಾಡುವ ಸಾಧನ, ಪದ್ಧತಿ : ಜ್ಞಾಪಕ ಸಾಧನ.

Mémory ಮೆಮೊರಿ (ನಾ.) ಜ್ಞಾಪಕ ಶಕ್ತಿ (A good, bad, m.; Convenient or accommodating m. ಸ್ವಂತಕ್ಕೆ ಅನುಕೂಲ ವಾದುದನ್ನು ಮಾತ್ರ ನೆನಪಿನಲ್ಲಿಟ್ಟುಕೊಳ್ಳುವ ಜ್ಞಾಪಕ ಶಕ್ತಿ : ಸ್ವಾನುಕೂಲ ಜ್ಞಾಪಕ ಶಕ್ತಿ) ; (ಹಿಂದಿನದರ) ಸ್ಮರಣೆ, ನೆನಪು (In m. of ನೆನಪಾಗಿ ; ಸ್ಮಾರಕವಾಗಿ). ಮರಣಾನಂತರದ ಖ್ಯಾತಿ, ಕೀರ್ತಿ [His m. has been censured ಅವನು ಸತ್ತಮೇಲೆ ಅಪಖ್ಯಾತಿಗೀಡಾದನು. Of blessed, happy, m. ಕೀರ್ತಿ ಶೇಷನಾದ (ಮು., ಸತ್ತ ದೊರೆ, ಮೊ. ನ್ನು ಕುರಿತು ಹೇಳುವಾಗ)]. ಜ್ಞಾಪಕ ಕಾಲ (Beyond, within, the m. of men ಈಗಿನವರ ಜ್ಞಾಪಕಕ್ಕೆ ಮೀರಿ, —ಜ್ಞಾಪಕದಲ್ಲ. Within living m. ಬದುಕಿರುವವರ ನೆನಪಿನಲ್ಲಿ). **Mémorable** ಮೆಮೊರಬ್‌ಲ್ (ಗು.) ಸ್ಮರಣಯೋಗ್ಯ ; ಜ್ಞಾಪಕದಲ್ಲಿಡ ಬೇಕಾದ; ನೆನಪಿಡತಕ್ಕ; ಮರೆಯಬಾರದ. **Memorability** (ನಾ.) ; **Mémorably** (ಕ್ರಿ. ವಿ.) ; **Mémorabília** (L) (ನಾ., ಬ. ವ.) ಚಿರ ಸ್ಮರಣೀಯವಾದ, ನೆನಪಿನಲ್ಲಿಡಬೇಕಾದ, ಪ್ರಖ್ಯಾತವಾದ,—ವಸ್ತುಗಳು, ವಿಷಯಗಳು. **Memorándum** —ರ್‍ಯಾಂಡಂ (ನಾ. ; ಬ. ವ. -da, -dums. ಸಂಕ್ಷಿಪ್ತ : **Memo.**) (ಜ್ಞಾಪಕಕ್ಕೆ ತರಲು ಸಹಾಯಕವಾದ) ನೆನಪಿನ ಟಿಪ್ಪಣಿ ; ಜ್ಞಾಪಕ ಪತ್ರ ; (ಮುಂದಿನ ಉಪಯೋಗಕ್ಕಾಗಿ ಬರೆದಿಟ್ಟ) ಘಟನೆ, ಮೊ. ಗಳ ಲಿಖಿತ. (ನ್ಯಾ. ಶಾ.) ಒಪ್ಪಂದದ (ಷರತ್ತು, ಮೊ. ಗಳನ್ನೊಳಕೊಂಡ) ದಸ್ತೈವಜು ; (ಸಾ., Memorandum ಅಥವಾ Memo. ಎಂಬ ಶಿರನಾಮೆಯುಳ್ಳ ಕಾಗದದ ಮೇಲೆ ರುಜು, ಮೊ. ಗಳಿಲ್ಲದೆ ಬರೆದ) ನಿಯಮ ಬದ್ಧವಲ್ಲದ ಪತ್ರ : ಮೆಮೊ. **Memórial** ಮಿಮೋರಿಯಲ್ (ಗು., ನಾ.) (ಪ್ರತಿಮೆ, ಉತ್ಸವ, ಮೊ. ಗಳ ವಿಷಯದಲ್ಲಿ) ಸ್ಮಾರಕವಾದ, ಜ್ಞಾಪಕಾರ್ಥವಾದ ; ನೆನಪಿನ ; ಜ್ಞಾಪಕದ ; ಸ್ಮಾರಕ (ವಸ್ತು, ಸಂಪ್ರದಾಯ, ಮೊ. ವು) ; (ಸಾ., ಬ. ವ. ದಲ್ಲಿ) ಲಿಖಿತ ; ಬಖೈರು ; ಕಾಲಾನುಕ್ರಮಣಿ ; ನಿಯಮಬದ್ಧವಲ್ಲದ ಹಲವು ಬಗೆಯ ಸರ್ಕಾರಿ ಕಾಗದಪತ್ರ ; ಅರ್ಜಿ, ಮೊ. ಕ್ಕೆ ಆಧಾರವಾದ ಸಂಗತಿಗಳ ಬಿನ್ನಪ. **Memórialist** (ನಾ.) ; **Memórialize** (ಕ್ರಿ. ಸಕ.) ಜ್ಞಾಪಕದಲ್ಲಿರುವಂತೆ ಮಾಡು ; ಸ್ಮಾರಕ ಮಾಡು. (ಅಧಿಕಾರಿಗೆ) ಮನವಿ ಮಾಡಿಕೊ. **Mémorize** ಮೆಮೊರೈಸ್ (ಕ್ರಿ. ಸಕ.) (ದಾಖಲೆಗಾಗಿ) ಬರೆದಿಡು ; ನೆನಪಿಗೆ ಬರುವಂತೆ ಮಾಡಿಡು ; ಸ್ಮರಣಯೋಗ್ಯ ಮಾಡು ; (ಬಾಯಿಗೆ) ಗಟ್ಟಿ ಮಾಡು.

Mém-sahib ಮೆಮ್ ಸಾಹಿಬ್ (ನಾ.) (ಇಂಡಿಯಾದಲ್ಲಿ ದೇಶೀಯ ಸೇವಕರು ಐರೋಪ್ಯ ಮಹಿಳೆಯರನ್ನು ಸಂಬೋಧಿಸುವ ಮಾತು)

Ménace ಮೆನಸ್ (ನಾ., ಕ್ರಿ. ಸಕ.) ಕೇಡಿನ, ವಿಪತ್ತಿನ, —ಭಯ, ಸೂಚನೆ ; ಬೆದರಿಕೆ. (ಕ್ರಿ.) ಬೆದರಿಸು ; ಕೇಡಾಗುವುದೆಂದು ಹೆದರಿಸು. **Ménacingly** (ಕ್ರಿ. ವಿ.)

Menáge (F) ಮೆನಾಷ್ (ನಾ.) ಮನೆಯಾಡಳಿತ ; ಮನೆವಾರ್ತೆ ; ಮನೆವಾರ್ತೆಯ ಸಿಬ್ಬಂದಿ.

Menágerie ಮೆನ್ಯಾಜೆರಿ (ನಾ.) (ಮು., ಪ್ರದರ್ಶನಕ್ಕಾಗಿ) ಬೋನು, ಮೊ. ಗಳಲ್ಲಿ ಬಂಧಿಸಿಟ್ಟಿರುವ ಕಾಡುಮೃಗಗಳ ಸಂಗ್ರಹ ; ಮೃಗಾಲಯ.

Mend ಮೆಂಡ್ (ಕ್ರಿ., ನಾ.) ಸುಸ್ಥಿತಿಗೆ ತರು ; ನೇರ್ಪು ಮಾಡು ; ಸರಿ ಮಾಡು ; ತಿದ್ದು ; (ಮುರಿದ ಸಾಮಾನು, ಹರುಕು ಬಟ್ಟೆ, ರಸ್ತೆ, ಮೊ. ನ್ನು) ದುರಸ್ತು ಮಾಡು [M. one's ways ನಡತೆಯನ್ನು ತಿದ್ದಿಕೊ. Least said soonest mended (Least ನೋಡಿ). M. fire (ಒಲೆಯನ್ನು) ಚೆನ್ನಾಗಿ ಉರಿಯುವಂತೆ ಮಾಡು]. (ಸೀಸದ ಕಡ್ಡಿ, ಮೊ. ನ್ನು) ಉಪಯೋಗಕ್ಕೆ ತಕ್ಕಂತೆ (ಹೆರೆದು) ಸರಿ ಮಾಡು. ಮರಳಿ ಆರೋಗ್ಯ ಪಡೆ. (M. matters ಪರಿಸ್ಥಿತಿಯನ್ನು ಉತ್ತಮ ಗೊಳಿಸು, ಸರಿಪಡಿಸು. M. one's pace ಬೇಗ ಬೇಗ ಹೆಜ್ಜೆ ಹಾಕು ; ದೊಡ್ಡ ಹೆಜ್ಜೆ ಹಾಕು. M. or end ಸರಿಪಡಿಸು ಇಲ್ಲವೆ ಕೊನೆಗಾಣಿಸು). (ನಾ.) (ವಸ್ತ್ರ, ಮೊ. ಗಳಲ್ಲಿಯ) ನೇರ್ಪಡಿಸಿದ, ದುರಸ್ತು ಮಾಡಿದ, —ಕಂಡಿ, ತೂತು ; ದುರಸ್ತು ಮಾಡಿದ್ದು (On the m. ಆರೋಗ್ಯ, ಪರಿಸ್ಥಿತಿ, ಮೊ. ವು ಉತ್ತಮಗೊಳ್ಳುತ್ತ). **Méndable** (ಗು.)

Mendácious ಮೆಂಡೇಷಸ್ (ಗು.) ಸುಳ್ಳು ಹೇಳುವ ; ಸಟೆಯ ; ಅನೃತವಾಡುವ. **Mendáciously** (ಕ್ರಿ. ವಿ.) ; **Mendácity** ಮೆಂಡ್ಯಾಸಿಟಿ (ನಾ.)

Méndelism ಮೆಂಡೆಲಿಸ್‌ಮ್ (ನಾ.) (ವಂಶಾರ್ಜಿತ ಲಕ್ಷಣಗಳು ಪುನರಾವೃತ್ತಿಯಾಗುವ ವಿಧಾನವನ್ನು ಸಂಖ್ಯಾತತ್ತ್ವಕ್ಕೆ ಇಳಿಸಲು ಪ್ರಯತ್ನಿಸುವ) ಮೆಂಡೆಲನ ಅನುವಂಶ ತತ್ತ್ವ. **Mendélian** —ಡೀಲಿಯನ್ (ಗು., ನಾ.) ಮೆಂಡೆಲನ (ತತ್ತ್ವದ) ; ಮೆಂಡೆಲ್ ತತ್ತ್ವವಾದಿ. (Mendel ಎಂಬ ಜೀವ ವೈಜ್ಞಾನಿಕನ ಹೆಸರಿನಿಂದ)

Méndicant ಮೆಂಡಿಕಂಟ್ (ಗು., ನಾ.) ಭಿಕ್ಷೆ ಬೇಡುವ ; ತಿರುಪೆ ಎತ್ತುವ (M. friars ಭಿಕ್ಷುಗಳು). (ನಾ.) ತಿರುಕ ; ಭಿಕ್ಷು ; ಭಿಕ್ಷುಕ. **Méndicancy** (ನಾ.) ; **Mendícity** —ಸಿಟಿ (ನಾ.)

Ménhir ಮೆನ್‌ಹಿಯರ್ (ನಾ.) (ಯೂರೋಪು, ಆಫ್ರಿಕ ಮತ್ತು ಏಷ್ಯಾಗಳಲ್ಲಿ ಕಂಡುಬರುವ) ಎತ್ತರವಾಗಿಯೂ ನೆಟ್ಟಗೂ ನಿಲ್ಲಿಸಿರುವ ಅಖಂಡ ಶಿಲಾ ಸ್ಮಾರಕ.

Ménial ಮೀನಿಯಲ್ (ಗು., ನಾ.) ಕೀಳು ಕೆಲಸದ ; ದಾಸ್ಯ ವೃತ್ತಿಯ ; (ಆಳಿನ ವಿಷಯದಲ್ಲಿ, ಸಾ., ತಿರಸ್ಕಾರ ಪ್ರ.) ಮನೆಗೆಲಸದ. ಕೀಳು ಕೆಲಸದ ಆಳು. **Ménially** (ಕ್ರಿ. ವಿ.)

Menínngeal, Meningítis, Meníngocele. **Meninx** ನೋಡಿ.

Méninx ಮೀನಿಂಕ್ಸ್ (ನಾ. ; ಬ. ವ. Meninges ಮಿನಿಂಜೀಸ್) ಮಿದುಳನ್ನೂ ಮಿದುಳುಬಳ್ಳಿಯನ್ನೂ ಆವರಿಸಿಕೊಂಡಿರುವ (Dura mater, arachnoid, pia mater ಎಂಬ ಮೂರು) ಪೊರೆ(ಗಳಲ್ಲಿ ಒಂದು). **Menínngeal** ಮಿನಿಂಜಿಯಲ್ (ಗು.) ; **Meningítis** ಮೆನಿಂಜೈಟಿಸ್ (ನಾ.) ಮಿದುಳಿನ ಅಥವಾ ಮಿದುಳುಬಳ್ಳಿಯ ಪೊರೆಗಳ ಉರಿಯೂತ. **Meníngocele** ಮಿನಿಂಗೊಸೀಲ್ (ನಾ.) ಮಿದುಳುಪೊರೆಯ ಬಾವು (ಸಾ., ನೀರಿನಂಥ ದ್ರವದಿಂದ ಕೂಡಿದ್ದು)

Meníscus ಮಿನಿಸ್ಕಸ್ (ನಾ. ; ಬ. ವ. Menisci ಮಿನಿಸ್ಸೈ) ಒಂದು ಪಕ್ಕ ಹೊರಬಾಗೂ ಮತ್ತೊಂದು ಪಕ್ಕ ಒಳಬಾಗೂ ಉಳ್ಳ ಲೆನ್ಸು ; (ಗಣಿತ) ಬಾಲಚಂದ್ರಾಕೃತಿ.

Meno- ಮೆನೊ— (ಸ. ಪೂ. ಪ.) ಋತು— ; ರಜಸ್—. **-pause** (ಹೆಂಗಸರ) ಮುಟ್ಟು (ರಜಸ್ಸು) ಕಡೆಯದಾಗಿ ನಿಂತುಹೋಗುವುದು ; ಋತು ಬಂಧ. **-rrhágia** ಅತಿ ಋತುಸ್ರಾವ. **-rrhoéa** (ಸಾಮಾನ್ಯ) ಋತುಸ್ರಾವ ; ಮುಟ್ಟು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Menólogy ಮಿನಾಲೊಜಿ (ನಾ.) (ಸಾಧು ಸಂತರ ಜೀವನ ಚರಿತ್ರೆಯನ್ನು ಒಳಕೊಂಡ, ಮು., ಗ್ರೀಕ್ ಚರ್ಚಿನ) ಪಂಚಾಂಗ.

Mens cónscia récti (L) ಮೆನ್ಸ್ ಕಾನ್ಷಿಯ ರೆಕ್‌ಟೈ (ವಾಕ್ಯ ಭಾಗ) (ತನ್ನಲ್ಲಿ ದೋಷವಿಲ್ಲವೆಂಬ) ಶುದ್ಧಾಂತರಂಗ.

Ménses ಮೆನ್ಸೀಸ್ (ನಾ., ಬ. ವ.) (ಸಹಜ ಸ್ಥಿತಿಯಲ್ಲಿ ತಿಂಗಳು ತಿಂಗಳಿಗೆ ಸಂಭವಿಸುವ ಹೆಂಗಸರ) ಮುಟ್ಟು; ಋತು; ರಜಸ್ಸು. **Ménstrual** ಮೆನ್‌ಸ್ಟ್ರುಅಲ್ (ಗು.) ಮುಟ್ಟಿನ; ರಜಸ್ಸಿನ. (ಖ. ವಿ.) ಪ್ರತಿ ತಿಂಗಳಿನ; ಮಾಸಿಕ. **Ménstruous** (ಗು.) = Menstrual (ಮೊದಲನೆಯ ಅರ್ಥ). **Ménstruate** (ಕ್ರಿ. ಅಕ.) ಮುಟ್ಟಾಗು; ರಜಸ್ವಲೆಯಾಗು. **Menstruátion** (ನಾ.)

Ménshevik ಮೆನ್ಷೆವಿಕ್ (ನಾ.) ಮಿತಗಾಮಿ ಪಕ್ಷಕ್ಕೆ ಸೇರಿದ ರಷ್ಯದ ಸಮತಾ ವಾದಿ (Bolshevik ಪದದೊಡನೆ ಹೋಲಿಸಿ)

Mens sána in córpore sáno (L) ಮೆನ್ಸ್ ಸೇನ ಇನ್ ಕಾರ್ಪೊರೀ ಸೇನೋ (ವಾಕ್ಯಭಾಗ) (ಶಿಕ್ಷಣದ ಆದರ್ಶವನ್ನು ನಿರೂಪಿಸುವ ಸೂಕ್ತಿ): ಸ್ವಸ್ಥ ದೇಹದಲ್ಲಿ ಸ್ವಸ್ಥ ಬುದ್ಧಿ.

Ménstrual, etc. **Menses** ನೋಡಿ.

Ménstruum ಮೆನ್‌ಸ್ಟ್ರುಅಮ್ (ನಾ.; ಬ. ವ. -trua) ದ್ರವೀಕರಣ ವಸ್ತು: ದ್ರಾವಣಿ.

Ménsurable ಮೆನ್‌ಸ್ಯು(ಷು, ಷು)ರಬ್‌ಲ್ (ಗು.) ಅಳೆಯಬಹುದಾದ; ಮಾಪನೀಯ; ನಿರ್ದಿಷ್ಟ ಪರಿಮಿತಿಯುಳ್ಳ. (ಸಂ.) ನಿರ್ದಿಷ್ಟ ತಾನ, ಲಯ, —ಉಳ್ಳ. **Ménsural** (ಗು.) ಅಳತೆಯ. (ಸಂ.) = Mensurable. **Mensurátion** (ನಾ.) ಅಳೆಯುವುದು; ಅಳತ; (ಗಣಿತ) ಉದ್ದ, ಚದರ, ಘನ, —ಅಳತೆಗಳನ್ನು ಕಂಡುಹಿಡಿಯುವ ಸೂತ್ರಗಳ ಶಾಸ್ತ್ರ: ಕ್ಷೇತ್ರ ಗಣಿತ.

Méntal[1] ಮೆಂಟಲ್ (ಗು., ನಾ.) ಮನಸ್ಸಿನ; ಮಾನಸಿಕ [M. arithmetic (ಬರೆಯದೆ ಮನಸ್ಸಿನಲ್ಲೇ ಮಾಡುವ) ಮಾನಸಿಕ ಗಣಿತ; ಬಾಯಿ ಲೆಕ್ಕ. M. patient ಬುದ್ಧಿ ವಿಕಲ್ಪವಾಗಿ ಮೇಲ್ವಿಚಾರಣೆಯಲ್ಲಿರುವವನು, ಚಿಕಿತ್ಸೆ ಪಡೆಯುತ್ತಿರುವವನು. M. home ಹುಚ್ಚಾಸ್ಪತ್ರೆ]. (ಬಳ. ಮಾ.) ಮನೋ ದೌರ್ಬಲ್ಯದ(ವನು); ಮಂದ ಬುದ್ಧಿಯ(ವನು). **Méntally** (ಕ್ರಿ. ವಿ.); **Mentálity** ಮೆಂಟ್ಯಾಲಿಟಿ (ನಾ.) ಮನಸ್ಸಿನ ಸ್ವಭಾವ, ಸ್ಥಿತಿ; ಮನೋ ಭಾವ; ಮನೋ ವೃತ್ತಿ; ಮನೋ ಗುಣ; ಬುದ್ಧಿ ಶಕ್ತಿ(ಯ ಮಟ್ಟ). (ಶಿಥಿಲವಾಗಿ, ಈಚಿನ ಪ್ರ.) ಮನಸ್ಸು; ಪ್ರವೃತ್ತಿ; ಶೀಲ ಸ್ವಭಾವ. **Mentátion** (ನಾ.) ಮಾನಸಿಕ ಕಾರ್ಯ; ಮಿದುಳಿನ ವ್ಯಾಪಾರ; ಮನಸ್ಸಿನ ಸ್ಥಿತಿ.

Méntal[2] ಮೆಂಟಲ್ (ಗು.) ಗಲ್ಲದ.

Mentátion. **Mental**[1] ನೋಡಿ.

Ménthol ಮೆಂಥಾ(ತೋ)ಲ್ (ನಾ.) ಪೆಪ್ಪರ್‌ಮೆಂಟ್ ಎಣ್ಣೆ, ಮೊ. ಗಳಿಂದ ತೆಗೆದ ಕರ್ಪೂರದಂಥ ಪದಾರ್ಥ: 'ಮೆಂತಾಲ್'. M. pencil ಮುಖದ ನರಗಳ ಕಠಿನವಾದ ನೋವಿಗೆ ಔಷಧವಾಗಿ ಉಪಯೋಗಿಸುವ, ಮೆಂತಾಲಿಗೆ 'ಸ್ಪರ್ಮಸಿಟಿ' ಎಂಬ ತಿಮಿಯ ಕೊಬ್ಬನ್ನು ಸೇರಿಸಿ ಮಾಡಿದ, ಚೂಪು ಕಡ್ಡಿ.

Méntion ಮೆನ್‌ಷನ್ (ನಾ., ಕ್ರಿ. ಸಕ.) ಹೇಳುವುದು; ಹೆಸರಿಸುವುದು; ಉಲ್ಲೇಖ; ಪ್ರಸ್ತಾಪ [Honourable m. (ಪರೀಕ್ಷೆ, ಕಲಾ ಕೃತಿ, ಮೊ. ಗಳಲ್ಲಿ ಬಹುಮಾನ ಪಡೆಯಲು ಅರ್ಹನಾಗದವನ) ಗಣ್ಯತಾ ನಿರ್ದೇಶ]. (ಕ್ರಿ.) (ಹೆಸರು) ಹೇಳು; ಪ್ರಸ್ತಾಪಿಸು; ನಮೂದಿಸು. (ಪ್ರಾಸಂಗಿಕವಾಗಿ) ಎತ್ತಿ ಹೇಳು [This was expressly mentioned ಇದನ್ನು ಕಂಠೋಕ್ತವಾಗಿ ಹೇಳಲಾಯಿತು. Don't m. it (ಕ್ಷಮಾ ಯಾಚನೆ ಅಥವಾ ಉಪಕಾರ ಸ್ಮರಣೆ, ಮೊ. ವು ಅನಾವಶ್ಯಕವೆಂದು ಸೂಚಿಸುವಾಗ) ಅದನ್ನೆಲ್ಲ ಹೇಳಬೇಡಿ; ಉಪಚಾರೋಕ್ತಿ ಬೇಡ. Not to m. (ಅಷ್ಟು ಮುಖ್ಯವಲ್ಲದ ಅಂಶವನ್ನು ಹೇಳುವಾಗ ಅಥವಾ ಮುಖ್ಯವಾದ ಅಂಶವನ್ನು ಅಲಂಕಾರಿಕವಾಗಿ ಹೇಳುವಾಗ): (ಅದನ್ನು) ಹೇಳಬೇಕಾದುದಿಲ್ಲ]

Méntor ಮೆಂಟಾರ್ (ನಾ.) ಅನುಭವಶಾಲಿಯಾದ ಮತ್ತು ನಂಬಿಕೆಯ ಸಲಹೆಗಾರ, ಬುದ್ಧಿವಾದಿ.

Ménu ಮೆನ್ಯೂ, ಮೆನೂ (ನಾ.) ಭೋಜನಕ್ಕೆ ಇಟ್ಟಿರುವ ಭಕ್ಷ್ಯ, ಮೊ. ಗಳ ಪಟ್ಟಿ; ಹಾಗಿಟ್ಟ ಭಕ್ಷ್ಯಗಳು, ಮೊ. ವು.

Mephistópheles ಮೆಫಿಸ್ಟಾಫೆ(ಫ)ಲೀಸ್ (ನಾ.) (ಜರ್ಮನಿಯ ಒಂದು ಪುರಾಣ ಕಥೆಯಲ್ಲಿ) Faust ಎಂಬವನು ತನ್ನ ಆತ್ಮವನ್ನು ಯಾರಿಗೆ ಮಾರಿಕೊಂಡನೊ ಆ ಪಾಪ ಪುರುಷ: ನರ ಪಿಶಾಚಿ. **Mephistophélean** ಮೆ(ಮಿ)ಫಿಸ್ಟೊಫೀಲಿಯನ್, **-léan** —ಸ್ಟಾಫೆಲೀಯನ್, **-phélian** —ಸ್ಟೊಫೀಲಿಯನ್, —ಫೀಲ್ಯನ್ (ಗು.)

Mephítis ಮಿಫೈಟಿಸ್ (ನಾ.) (ಮು., ನೆಲದಿಂದ ಹೊರಡುವ) ದುರ್ಗಂಧ (ವಾಯು); ದುರ್ವಾಯು. (ಅನಾರೋಗ್ಯಕರವಾದ) ಪೂತಿ ಗಂಧ; ವಿಷ ವಾಯು. **Mephític** —ಫಿ— (ಗು.)

Mércantile ಮರ್ಕಂಟೈಲ್ (ಗು.) ವ್ಯಾಪಾರದ; ವಾಣಿಜ್ಯದ [M. theory ಹಣವೊಂದೇ ಸಂಪತ್ತು ಎಂಬ ವಾದ. M. marine (Marine ನೋಡಿ)]. ಕೇವಲ ಹಣಸಂಪಾದನೆಯ ದೃಷ್ಟಿಯ; ಕೊಸರಾಡುವ, ಜುಗ್ಗಾಡುವ, — ಸ್ವಭಾವದ. **Mércantilism** (ನಾ.) ವ್ಯಾಪಾರೋದ್ಯಮ; ವ್ಯಾಪಾರ ಪ್ರವೃತ್ತಿ. **Mércantilist** (ನಾ.) ವ್ಯಾಪಾರ ಪ್ರವೃತ್ತಿಯುಳ್ಳವನು.

Mercátor. **Projection** ನೋಡಿ.

Mércenary ಮರ್ಸಿನರಿ (ಗು., ನಾ.) ಹಣಕ್ಕಾಗಿಯೇ ಅಥವಾ ಇತರ ಪ್ರತಿಫಲಕ್ಕಾಗಿಯೇ ಕೆಲಸ ಮಾಡುವ; ಕೂಲಿಯ (ಸಿಪಾಯಿ). **Mércenariness** (ನಾ.)

Mércer ಮರ್ಸರ್ (ನಾ.) (ಮು., ರೇಷ್ಮೆಯ ಮತ್ತು ಇತರ ಬೆಲೆಬಾಳುವ) ಬಟ್ಟೆಗಳ ವ್ಯಾಪಾರಿ; ಜವಳಿ ವ್ಯಾಪಾರಿ. **Mércery** (ನಾ.) (ವ್ಯಾಪಾರದ) ಜವಳಿ.

Mércerize ಮರ್ಸರೈಸ್ (ಕ್ರಿ. ಸಕ.) ರಾಸಾಯನಿಕ ದ್ರವ್ಯಗಳನ್ನು ಉಪಯೋಗಿಸಿ (ಹತ್ತಿಯ ಬಟ್ಟೆಗಳನ್ನು) ಬಣ್ಣ ಹಾಕುವುದಕ್ಕೆ ಸಿದ್ಧಪಡಿಸು. (ಭೂ. ಕೃ.) (ರಾಸಾಯನಿಕ ಕ್ರಿಯೆಯಿಂದ) ರೇಷ್ಮೆಯಂತೆ ಹೊಳಪು ಕೊಟ್ಟ, ಪಡೆದ.

Mérchandise ಮರ್ಚಂಡೈಸ್ (ನಾ.) ವ್ಯಾಪಾರದ ಸರಕು; ಮಾರಾಟದ, ಮಾರಿಕೆಯ, — ಸಾಮಾನು.

Mérchant ಮರ್ಚಂಟ್ (ನಾ., ಗು.) ವ್ಯಾಪಾರಿ; ವರ್ತಕ; ಪರದ (ಗ್ರಾಂ.); (ಮು., ಹೊರ ದೇಶದೊಡನೆ ವ್ಯಾಪಾರ ನಡಸುವ) ರಾಶಿ ವ್ಯಾಪಾರಿ. M. prince ವರ್ತಕ ಶ್ರೀಮಂತ. Law m. (Law[1] ನೋಡಿ). M. ship, Merchantman (ಸರಕು ಸಾಗಿಸುವ) ವ್ಯಾಪಾರದ ಹಡಗು. M. service = Mercantile marine (Marine ನೋಡಿ). -m. (ಅಸಂ.) (—ಲ್ಲಿ) ಅನುರಕ್ತಿಯುಳ್ಳವನು, ಹುಚ್ಚುಳ್ಳವನು [Speed-m. ಪ್ರಾಣಾಪಾಯವನ್ನು ಗಣಿಸದೆ ಹುಚ್ಚು ವೇಗದಲ್ಲಿ ಮೋಟಾರು ಬಂಡಿ ನಡಸುವವನು. Lob-m. (ಕ್ರಿಕೆಟ್) ಹೊಡೆತಕ್ಕೆ ಚೆಂಡನ್ನು ನಿಧಾನವಾಗಿ ಎಸೆಯುವವನು]. **Mérchantable** (ಗು.) ಮಾರಿಕೆಯಾಗುವ; ಗಿರಾಕಿಯುಳ್ಳ.

Mércury ಮರ್ಕ್ಯುರಿ (ನಾ.) (ವಾಗ್ಮಿತೆ, ಚಾತುರ್ಯ, ಚೌರ್ಯ, ಮೊ. ಗಳ ಅಧಿದೇವತೆಯೂ ದೇವತೆಗಳ ದೂತನೂ ಆದ) ಒಬ್ಬ ರೋಮನ್ ದೇವತೆ. ದೂತ; ಹರಿಕಾರ (ಹಾಸ್ಯವಾಗಿ, ಮತ್ತು ಅನೇಕ ವೇಳೆ ವೃತ್ತ ಪತ್ರಿಕೆಗಳ ಹೆಸರಾಗಿ). (ಸೂರ್ಯನಿಗೆ ಅತ್ಯಂತ ಸಮೀಪದಲ್ಲಿರುವ) ಬುಧ ಗ್ರಹ. ಪಾದರಸ (ಒಂದು ಕಡೆ ನಿಲ್ಲದೆ ಹರಿದುಹೋಗುವ, ಭಾರವಾದ, ಬಿಳಿಯ ದ್ರವ ಲೋಹಧಾತು; ಭಾರ ಮಾಪಕ, ಉಷ್ಣ ಮಾಪಕ, ರಸ ಮಿಶ್ರ ಲೋಹ, ನೋಟದ ಕನ್ನಡಿ, ಮೊ. ಗಳಲ್ಲಿ ಉಪಯೋಗ). [The m. is rising (ಚಳಿ ಬಿಟ್ಟು) ಶಾಖವೇರುತ್ತಿದೆ, ಹವ ಉತ್ತಮಗೊಳ್ಳುತ್ತಿದೆ. (ರೂಪ.) ಸ್ಥಿತಿ, ಸನ್ನಿವೇಶ, — ಉತ್ತಮವಾಗುತ್ತಿದೆ; ಉದ್ರೇಕ ಏರುತ್ತಿದೆ]. (ರೂಪ.) ಗೆಲವು; ಉತ್ಸಾಹ (Has no m.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

in him ಅವನಲ್ಲ ಚಟುವಟಿಕೆಯಿಲ್ಲ). **Mercúrial** ಮರ್ಕ್ಯೂರಿಯಲ್ (ಗು., ನಾ.) (ಪಾದರಸದಂತೆ) ಚಟುವಟಿಕೆಯುಳ್ಳ, ಚುರುಕಾದ; ಬುದ್ಧಿ ಚಾತುರ್ಯವುಳ್ಳ; ಚಂಚಲವಾದ [**Mercuriálity** (ನಾ.)]. ಪಾದ ರಸದ; —ವುಳ್ಳ. ಬುಧ ಗ್ರಹದ. (ನಾ.) ಪಾದರಸದಿಂದ ತಯಾರಿಸಿದ ಯಾವುದಾದರೂ ಔಷಧ: ರಸೌಷಧ. **Mercúrialism** (ನಾ.) ಹೆಚ್ಚಾಗಿ ಪಾದರಸವು ದೇಹಗತವಾದದ್ದರಿಂದುಂಟಾದ ಒಂದು ರೋಗಸ್ಥಿತಿ: ರಸ ವೇಧೆ. **Mercúrialize** (ಕ್ರಿ. ಸಕ.) ಪಾದರಸದ ಕಾರ್ಯಕ್ಕೆ, ಪ್ರಭಾವಕ್ಕೆ, —ಒಳಪಡಿಸು. ರಸಪ್ರಕೃತಿಗೊಳಿಸು; ಚುರುಕುಗೊಳಿಸು. **Mercúrially** (ಕ್ರಿ. ವಿ.); **Mercúric** (ಗು.) (ರ. ವಿ.) ಸಂಯುಕ್ತದಲ್ಲಿ ಪಾದರಸವು ದ್ವಿಪ್ರಮಾಣದಲ್ಲಿ ಸೇರಿರುವ. **Mércurous** —ಕ್ಯ(ಕ್ಯೂ)— (ಗು.) (ರ. ವಿ.) ಸಂಯುಕ್ತದಲ್ಲಿ ಪಾದರಸವು ಏಕಪ್ರಮಾಣದಲ್ಲಿ ಸೇರಿರುವ.

Mércy ಮರ್ಸಿ (ನಾ.) (ತನ್ನ ಅಧೀನದಲ್ಲಿದ್ದು ಯಾವ ದಯೆಗೂ ಪಾತ್ರನಲ್ಲ ದವನ ವಿಷಯದಲ್ಲಿ) ಕೃಪೆ; ಕರುಣೆ; ದಯೆ [Have m. on or upon. Show m. to. M.! M. on or upon us! (ಕೃಪಾ ಭಿಕ್ಷೆಯನ್ನು ಬೇಡುವ ಉದ್ಗಾರಗಳು; ಸಾ., ಭಯ, ಆಶ್ಚರ್ಯ — ಇವನ್ನು ಹಾಸ್ಯ ರೂಪದಲ್ಲಿ ಸೂಚಿಸುವ ಉದ್ಗಾರಗಳು). At the m. of ಸಂಪೂರ್ಣವಾಗಿ (—ನ) ಅಧೀನದಲ್ಲಿ; (— ಇಂದ) ಅಪಾಯಕ್ಕೆ, ಕೇಡಿಗೆ, ಈಡಾಗಿ. That is a m. ಅದು ಒಂದು ಅನುಗ್ರಹ, ಪ್ರಸಾದ. (ಹಾಸ್ಯ ಪ್ರ.) Left to the tender mercies of (— ನ) ಕ್ರೌರ್ಯಕ್ಕೆ ಈಡಾಗಿ, ಸಿಕ್ಕಿ]. M.-seat ಯೆಹೂದ್ಯರ ಧರ್ಮಶಾಸ್ತ್ರ ಪತ್ರಗಳನ್ನಿಟ್ಟಿರುವ ಮರದ ಪೆಟ್ಟಿಗೆಯ ಸ್ವರ್ಣಾವರಣ, ದೇವರ ಸಿಂಹಾಸನ. **Mérciful** (ಗು.) — ಉಳ್ಳ, — ತೋರುವ. **Mércifully** (ಕ್ರಿ. ವಿ.); **Mércifulness** (ನಾ.); **Mérciless** (ಗು.) — ಇಲ್ಲದ, — ತೋರದ; ನಿಷ್ಕರುಣೆಯ. **Mércilessly** (ಕ್ರಿ. ವಿ.); **Mércilessness** (ನಾ.)

Mere[1] ಮಿಯರ್ (ನಾ.) ಸರಸ್ಸು; ಕೊಳ.

Mere[2] ಮಿಯರ್ (ಗು.) ಬರಿಯ; ಕೇವಲ. A m. swindler ಬರಿಯ ಠಕ್ಕ. The merest buffoonery. M. right (ನ್ಯಾ. ಶಾ.) (ಅನುಭೋಗವಿಲ್ಲದ) ಬರಿಯ ಹಕ್ಕು. **Mérely** (ಕ್ರಿ. ವಿ.)

Meretrícious ಮೆರಿಟ್ರಿಷಸ್ (ನಾ.) ಗುಡಿಸೆಟ್ಟಿಯ; —ಗೆ ತಕ್ಕ. (ಆಭರಣ, ಸಾಹಿತ್ಯಶೈಲಿ, ಮೊ. ಗಳ ವಿಷಯದಲ್ಲಿ) ಬರಿಯ ಥಳುಕಿನ, ಹೊರ ಬೆಡಗಿನ, ವಯ್ಯಾರದ. **Meretríciously** (ಕ್ರಿ. ವಿ.); **Meretríciousness** (ನಾ.)

Merge ಮರ್ಜ್ (ಕ್ರಿ.) (ಗುಣ, ಲಕ್ಷಣ, ವ್ಯಕ್ತಿತ್ವ, ಮೊ. ವು) ಮತ್ತೊಂದರಲ್ಲಿ ಐಕ್ಯವಾಗು(ವಂತೆ ಮಾಡು); ಐಕ್ಯವಾಗಿಹೋಗು; ಮಗ್ನ ಮಾಡು; —ವಾಗು; ಮತ್ತೊಂದರಲ್ಲಿ ಲೀನವಾಗಿಹೋಗು (*In* ಉಪ. ದೊಡನೆ). (ನ್ಯಾ. ಶಾ.) (ಆಸ್ತಿ, ಹಕ್ಕು, ಮೊ. ವು) ದೊಡ್ಡದರಲ್ಲಿ ಐಕ್ಯವಾಗುವಂತೆ ಮಾಡು, —ವಾಗಿಹೋಗು; ಅಂತರ್ಗತವಾಗು (*In* ಉಪ. ದೊಡನೆ). **Mérgence** (ನಾ.); **Mérger** (ನಾ.) ಐಕ್ಯ(ವಾಗುವುದು); ಏಕೀಭಾವ.

Merídian ಮೆರಿಡಿಯನ್ (ನಾ., ಗು.) (ಖ. ವಿ.) ಖಗೋಳ ಧ್ರುವ ಗಳನ್ನೂ (ಭೂಮಿಯಮೇಲಿನ ಆಯಾ ಸ್ಥಳದ) ಖ ಮಧ್ಯ ಬಿಂದುವನ್ನೂ ಹಾದುಹೋಗುವ ವೃತ್ತರೇಖೆ: ಖಗೋಳ ಮಧ್ಯಾಹ್ನ ರೇಖೆ (=Celestial m.); (ಭೂಗೋಳ ಶಾಸ್ತ್ರ) ಭೂಗೋಳ ಧ್ರುವಗಳನ್ನೂ ಭೂಮಿಯ ಮೇಲಿನ ಒಂದು ಗೊತ್ತಾದ ಸ್ಥಳವನ್ನೂ ಹಾದುಹೋಗುವ, ಸಾ., ಖಗೋಳ ಮಧ್ಯಾಹ್ನರೇಖೆಯ ಕ್ಷೇತ್ರದಲ್ಲಿರುವ, ಭೂಮಿಯಮೇಲಿನ ಮಧ್ಯಾಹ್ನ ವೃತ್ತರೇಖೆ: ಭೂಗೋಳ ಮಧ್ಯಾಹ್ನರೇಖೆ (=Terrestrial m.) [M. of Greenwich ಗ್ರಿನಿಚ್ಚಿನ ರೇಖಾಂಶ: ಸೊನ್ನೆ (೦) ರೇಖಾಂಶ (ಬ್ರಿಟಿಷ್ ರಚನೆಯ ಭೂಪಟಗಳಲ್ಲಿ)]. (ಒಂದು ಪ್ರದೇಶದಲ್ಲಿ) (ಸೂರ್ಯನ ಅಥವಾ ನಕ್ಷತ್ರದ) ಅತ್ಯುಚ್ಚ ಸ್ಥಾನ. ಪೂರ್ಣ ಪ್ರಾಯ; ಅತ್ಯುಚ್ಛ್ರಾಯ (ಕಾಲ); ಪೂರ್ಣ ವಿಭವ. [Calculated for the m. (ಒಂದು ಪ್ರದೇಶದ, ಅದರ ಜನರ) ಅಭಿರುಚಿಗಳು, ಮೊ. ಕ್ಕೆ ತಕ್ಕಂತೆ ಯೋಜಿಸಿದ, ಗುಣಿಸಿದ]. (ಗು.) ಮಧ್ಯಾಹ್ನದ. (ರೂಪ.) ಅತ್ಯಂತ ಶಕ್ತಿ ಸಾಹಸ, ಉಚ್ಛ್ರಾಯ, ವೈಭವ, —ಕಾಲದ. **Merídional** — ಯೊನಲ್ (ಗು., ನಾ.) ದ. ಯೂರೋಪಿನ (ನಿವಾಸಿಗಳ). ಮಧ್ಯಾಹ್ನ ರೇಖೆಯ. (ನಾ.) ದ. ಪ್ರಾಂತದ (ಮು., ಫ್ರಾನ್ಸಿನ) ನಿವಾಸಿ.

Meríno ಮೆರೀನೊ (ನಾ.) ನಯವಾದ ತುಪ್ಪಟವುಳ್ಳ ಸ್ಪ್ಯಾನಿಷ್ ತಳಿಯ ಕುರಿ (=M. sheep). (ಮೊದಲು ಮೆರೀನೊ ತುಪ್ಪಟದಿಂದ ಮಾಡು ತ್ತಿದ್ದ ಫ್ರೆಂಚ್ ಶಾಲನಂಥ) ನಯವಾದ ಉಣ್ಣೆಯ, ಅಥವಾ ಉಣ್ಣೆ ಮತ್ತು ಹತ್ತಿಯ ಮಿಶ್ರಣದ, ಬಟ್ಟೆ; ನಯವಾದ ಉಣ್ಣೆಯ ನೂಲು.

Mérit ಮೆರಿಟ್ (ನಾ., ಕ್ರಿ. ಸಕ.) (ಒಳ್ಳೆಯ) ಯೋಗ್ಯತೆ; ಅರ್ಹತೆ; ಉತ್ಕೃಷ್ಟತೆ; ಶ್ರೇಷ್ಠತೆ; (ಸಾ., ಬ. ವ. ದಲ್ಲಿ) ಬಹುಮಾನಕ್ಕೆ, ಪ್ರತಿಫಲಕ್ಕೆ, ಕೃತಜ್ಞತೆಗೆ, ಪಾತ್ರ ಮಾಡುವ ಗುಣ, ಕಾರ್ಯ. (ದೇವ. ಶಾ.) ಪರಲೋಕದಲ್ಲಿ ಫಲ ದೊರೆಯುವ ಪುಣ್ಯಕಾರ್ಯ. [Make a m. of (ತನ್ನ ನಡತೆ) ಶ್ಲಾಘ್ಯವಾದುದೆಂದು, — ಭಾವಿಸು, ತೋರಿಸಿಕೊ. The merits (ಮು., ನ್ಯಾ. ಶಾ.: ಮೊಕದ್ದಮೆಯ ವಿಷಯ, ಮೊ. ಗಳ) ವಾಸ್ತವಿಕ ಗುಣ ದೋಷಗಳು. Judge (proposal, etc.) on its merits (ಯಾವುದಾದರೂ ಸೂಚನೆ, ಸಲಹೆ, ಮೊ. ನ್ನು) ಅದರ ನಿಜವಾದ ಯೋಗ್ಯತೆ ಹಿಡಿದು ನಿರ್ಣಯಿಸು]. (ಕ್ರಿ.) (ಪಾರಿತೋಷಿಕ, ದಂಡನೆ — ಇವಕ್ಕೆ) ಪಾತ್ರನಾಗಿರು. **Meritórious** —ಟೋ—(ಗು.) (ವ್ಯಕ್ತಿ ಅಥವಾ ಕಾರ್ಯ) ಬಹುಮಾನ, ಸ್ತೋತ್ರ, ಕೃತಜ್ಞತೆ — ಇವಕ್ಕೆ ಅರ್ಹತೆ ಪಡೆದ; ಶ್ಲಾಘ್ಯವಾದ. ಸದಭಿಪ್ರಾಯದ; ಸದುದ್ದೇಶದ. **Meritóriously** (ಕ್ರಿ. ವಿ.); **Meritóriousness** (ನಾ.)

Mérlon ಮರ್ಲನ್ (ನಾ.) (ಎರಡು ಜೇರುಗಂಡಿಗಳ ಮಧ್ಯದ) ಕೋಟೆಯ ತೆನೆ.

Mérmaid ಮರ್‌ಮೇಡ್ (ನಾ.) ಹೆಂಗಸಿನ ತಲೆಯೂ ಮುಂಡವೂ ಮೀನಿನ ಬಾಲವೂ ಉಳ್ಳ ಊಹನೆಯ ಅರೆಮನುಷ್ಯ ವ್ಯಕ್ತಿ: ಮತ್ಸ್ಯ ಕನ್ಯೆ. **Mérman** (ನಾ.) (ಇದಕ್ಕೆ ಜವಾಬಾದ) ಮತ್ಸ್ಯ ಪುರುಷ.

Merohédral ಮೆರೊಹೀಡ್ರಲ್ (ಗು.) (ಸ್ಫಟಿಕಾಕೃತಿ) ಸಹಜವಾಗಿ ಇರಬೇಕಾದುದಕ್ಕಿಂತ ಕಡಮೆಯ ಸಂಖ್ಯೆಯ ಮುಖಗಳುಳ್ಳ.

Mérry ಮೆರಿ (ಗು.) ಸಂತೋಷಕರವಾದ; ಸಂತೋಷದ; ಹರ್ಷದ; ಉಲ್ಲಾಸದ; ನಲಿವಿನ; ನಗಿಸುವ; ವಿನೋದದ, ತಮಾಷೆಯ. (ಕುಡಿದು) ಸ್ವಲ್ಪ ಮತ್ತೇರಿದ. M. England ಸಂತೋಷದ ನೆಲೆಯಾದ ಇಂಗ್ಲೆಂಡು. The M. Monarch (ಇಂಗ್ಲೆಂಡಿನ) Charles II ದೊರೆ. Make m. ಸಂತೋಷ ಸಂಭ್ರಮದಲ್ಲಿರು; ಉತ್ಸವದಲ್ಲಿ ಮಗ್ನನಾಗಿರು. Make m. over ತಮಾಷೆ ಮಾಡು; ಗೇಲಿಯೆಬ್ಬಿಸು. M. andrew ವಿಥ್ಯಾವೈದ್ಯನ ಸಹಾಯಕ; ಹಾಸ್ಯಗಾರ; ನಕಲಿ; ವಿದೂಷಕ (ರೂಪ. ಸಹ). M. dancers [Dance (ಕ್ರಿ.) ನೋಡಿ]. **M.-go-round** ಮರದ ಕುದುರೆಗಳು, ತೊಟ್ಟಿಲುಗಳು, ಮೊ. ಗಳುಳ್ಳ ತಿರುಗು ಯಂತ್ರ; ರಂಕ ರಾಟಣ. M.-making ಸಂತೋಷ ಸಮಾರಂಭ; ಉತ್ಸವ. **Mérrily** (ಕ್ರಿ. ವಿ.); **Mérriment** (ನಾ.) ಉಲ್ಲಾಸಾನುಭವ; ನಲಿವು; ವಿನೋದ. **Mérriness** (ನಾ.) (ವಿರ. ಪ್ರ.)

Mesalliance (F) ಮೆಸಲ್ಯಾನ್ಸ್ (ನಾ.) ಸಮಾಜದಲ್ಲಿ ತನಗಿಂತಲೂ ಕೆಳ ಅಂತಸ್ತಿನವನೊ(ಳೊ)ಡನೆ ಮದುವೆ.

Mesdámes, Mesdemoisellés. Madame, Mademoíselle ಪದಗಳ ಬ. ವ.

Meseéms ಮಿಸೀಮ್ಸ್ (ಕ್ರಿ. ಅಕ.) (ಪ್ರಾಚೀ. ಪ್ರ.) ನನಗೆ ತೋರುತ್ತದೆ.

Mésentery ಮೆಸೆ(ನ್ಸ)ಂಟರಿ (ನಾ.) ಕರುಳಿನ ನಾಳದ ಕೊಂಡ ಭಾಗ ವನ್ನು ಹೊಟ್ಟೆಯ ಹಿಂಭಾಗದ ಗೋಡೆಗೆ ಬಂಧಿಸುವ ಅಂತ್ರ ಪಟಲದ ಮಡಿಕೆ. **Mesentéric** (ಗು.); **Mesenterítis** —ರೈಟಿಸ್ (ನಾ.) ಇದರ ಉರಿಯೂತ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mesh ಮೆಷ್ (ನಾ., ಕ್ರಿ.) ಬಲೆಯ ಕಣ್ಣು. (ಬ. ವ. ದಲ್ಲಿ) ಬಲೆಯಂಥ ರಚನೆ; (ರೂಪ.) ಬಲೆ. (ಶ. ವಿ.; ಬ. ವ. ದಲ್ಲಿ) ಹೆಣಿಗೆಯ ರಚನೆ. [In m. (ಹಲ್ಲುಚಕ್ರಗಳು) ಹಲ್ಲು ಹಲ್ಲುಗೂಡಿ]. (ಕ್ರಿ.) ಬಲೆಯಲ್ಲಿ ಹಿಡಿ (ರೂಪ. ಸಹ). (ಹಲ್ಲುಚಕ್ರಗಳು) ಹಲ್ಲು ಹಲ್ಲುಗೂಡಿರು (*With* ಉಪ. ದೊಡನೆ)

Mésial ಮೀಸಿಯಲ್, ಮೆಸಿ — (ಗು.) ಒಂದು ಕಾಯದ ಮಧ್ಯರೇಖೆಯ(ಲ್ಲಿಯ); — ಕಡೆಗೆ ತಿರುಗಿರುವ. **Mésially** (ಕ್ರಿ. ವಿ.)

Mésmerism ಮೆಸ್ಮೆರಿಸ್ಮ್ (ನಾ.) (ತನ್ನ ಶಕ್ತಿಗೊಳಗಾದವನ ಬುದ್ಧಿಯ ಮೇಲೂ ನರವ್ಯೂಹದಮೇಲೂ ಪ್ರಭಾವ ಬೀರುವುದರಿಂದ, ಸಾ., ನೋವಿನ ಅರಿವಿಲ್ಲದಂತಾಗಿ ಮಾಂಸಖಂಡಗಳು ಸೆಡೆತುಕೊಳ್ಳುವ) ವಶೀಕರಣ ಸುಪ್ತಸ್ಥಿತಿ; ಸುಪ್ತ್ಯಾವಾಹನ ತತ್ತ್ವ, ವಿದ್ಯೆ. **Mesméric** (ಗು.); **Mésmerist** (ನಾ.); **Mesmerizátion** (ನಾ.); **Mésmerize** (ಕ್ರಿ. ಸಕ.). (ಆಸ್ಟ್ರಿಯಾ ದೇಶದ ವೈದ್ಯನಾದ Mesmer ಎಂಬಾತನ ಹೆಸರಿನಿಂದ)

Mesne ಮೀನ್ (ಗು.) ಮಧ್ಯೆ ಬರುವ, ಸಂಭವಿಸುವ; ಮಧ್ಯಸ್ಥ. M. profits ಎರಡು ತೇದಿಗಳ ಮಧ್ಯೆ ಅಕ್ರಮ ಅನುಭವದಾರನು ಒಂದು ಸ್ವತ್ತಿನಿಂದ ಪಡೆದ ಲಾಭ: ಮಧ್ಯಕಾಲದ ಲಾಭ. M. process (ನ್ಯಾ. ಶಾ.) ದಾವೆಯ ಪ್ರಾರಂಭಕ್ಕೂ ಮುಕ್ತಾಯಕ್ಕೂ ನಡುವೆ ಜರುಗುವ ನ್ಯಾಯಸ್ಥಾನದ ಕಾರ್ಯಕಲಾಪಗಳು. M. lord (ಊಳಿಗ ಮಾನ್ಯ ಪದ್ಧತಿಯಲ್ಲಿ, ತನಗಿಂತ ಅಧಿಕ ಶ್ರೀಮಂತನಿಗೆ ಗೇಣಿದಾರನಾಗಿಯೂ ತನ್ನ ಗೇಣಿದಾರರಿಗೆ ಸ್ವಾಮಿಯಾಗಿಯೂ ಇರುವ) ಮಧ್ಯಮ ಶ್ರೀಮಂತ.

Meso- ಮೆಸೊ — (ಸ. ಪೂ. ಪ.) ಮಧ್ಯಸ್ಥ —; ನಡುವಣ —. **-lithic** (ಪ್ರಾಚೀನ ಶಿಲಾ ಯುಗಕ್ಕೂ ನವೀನ ಶಿಲಾ ಯುಗಕ್ಕೂ ನಡುವಣ) ಮಧ್ಯ ಶಿಲಾ ಯುಗದ. **-zóic** ಎರಡನೆಯ ಭೂ ಯುಗದ.

Méspot ಮೆಸ್ಪಾಟ್ (ನಾ.) (ಅಸಂ.) = Mesopotamia (ಎಂಬುದರ ಸಂಕ್ಷಿಪ್ತ)

Mess ಮೆಸ್ (ನಾ., ಕ್ರಿ.) ಅಂಬಲಿ, ಗಂಜಿ, ಪಾಯಸ, ಮೊ. ದ್ರವ ರೂಪದ, ಅಥವಾ ದೃಢವಿಲ್ಲದ ಘನ ರೂಪದ, — ಆಹಾರ [M. of pottage (ಹೆಚ್ಚು ಪ್ರಯೋಜನವನ್ನು ಬಲಿಕೊಟ್ಟು ಪಡೆದ) ದೇಹಸುಖ, ಮೊ. ವು]. (ಬೇಟೆನಾಯಿಗಳು, ಮೊ. ಕ್ಕೆ ಹಾಕುವ) ದ್ರವಾಹಾರ, ಮಿಶ್ರಾಹಾರ. ಬೆರಕೆ ತಯಾರಿ; ಕಲ ಬೆರಕೆ; ಕಲಸು ಮೆಲಸು. ಚೊಕ್ಕಟವಿಲ್ಲದ, ಅವ್ಯವಸ್ಥೆಯ, — ಸ್ಥಿತಿ; ಅಸ್ತವ್ಯಸ್ತತೆ [Make a m. of (ಕಾರ್ಯವನ್ನು) ಅವ್ಯವಸ್ಥೆ ಮಾಡು, ಹೊಲಸು ಮಾಡು]. ಭೋಜನ ಗೋಷ್ಠಿ: ಮು., ಸೈನ್ಯ ಮತ್ತು ನೌಕಾ ದಳಗಳಲ್ಲಿ ಒಟ್ಟಿಗೆ ಊಟ ಮಾಡಲು ವಿಂಗಡಿಸಿರುವ ಸೈನಿಕ, ನಾವಿಕ, ತಂಡ(ಗಳಲ್ಲೊಂದು): ಊಟದ ತಂಡ; (ಹೀಗೆ ಮಾಡಿದ) ತಂಡದೂಟ [At m., Go to m. M.-jacket ತಂಡದೂಟದಲ್ಲಿ ಹಾಕಿಕೊಳ್ಳುವ ಜುಬ್ಬ. Messmate (ಸಾ., ಹಡಗಿನ) ಊಟದ ತಂಡದ ಜೊತೆಗಾರ]. (ಕ್ರಿ.) = Make a m. of. ನೀರಿನಲ್ಲಿ, ಕೆಸರಿನಲ್ಲಿ, ಅಲೆದಾಡು (*About* ಉಪ. ದೊಡನೆ). ಊಟಮಾಡು (*With* ಉಪ. ದೊಡನೆ). **Méssy** (ಗು.) ಹೊಲಸಾದ; ಅವ್ಯವಸ್ಥೆಯ (M. floor, food, job). **Méssily** (ಕ್ರಿ. ವಿ.); **Méssiness** (ನಾ.)

Méssage ಮೆಸೆ(ಸಿ)ಜ್ (ನಾ., ಕ್ರಿ. ಸಕ.) (ಒಬ್ಬನು ಮತ್ತೊಬ್ಬನಿಗೆ ಕಳುಹಿದ, ಬಾಯಿಮಾತಿನ ಅಥವಾ ಬರೆಹದ) ಸುದ್ದಿ, ವರ್ತಮಾನ, ಸಮಾಚಾರ. (ಪ್ರವಾದಿಯ, ಭವಿಷ್ಯದ್ವಾದಿಯ, ದಿವ್ಯ ಪ್ರೇರಣೆಯ) ಸಂದೇಶ. (ಕ್ರಿ.) ಸಮಾಚಾರವಾಗಿ ಕಳುಹಿಸು; (ಯೋಜನೆ, ಮೊ. ನ್ನು) ಸಂಕೇತ, ಮೊ. ಗಳ ಮೂಲಕ ಕಳುಹಿಸು.

Méssenger ಮೆಸೆಂಜರ್ (ನಾ.) ಸುದ್ದಿ, ಸಮಾಚಾರ, — ಒಯ್ಯುವವನು; ಓಲೆಕಾರ; ಹರಿಕಾರ; ದೂತ. ಗಾಳಿಪಟ ಹಾರಿಸುವವನು ಅದರ ದಾರದ ಮೂಲಕ ಪಟದ ಬಳಿಗೆ ಕಳುಹಿಸುವ ಸಣ್ಣ ಕಾಗದ. (ನಾವೆ) (ಹಡಗಿನ ಹೊರಜಿಯನ್ನು ಮೇಲಕ್ಕೆ ಎತ್ತಿಹಾಕಿಕೊಳ್ಳುವುದಕ್ಕಾಗಿ) ಹಾಯಿರಾಟೆಯನ್ನೂ ಹೊರಜಿಯನ್ನೂ ಸುತ್ತಿ ಬಳಸಿದ ಕೊನೆಯಿಲ್ಲದ ಹಗ್ಗ.

Messíah ಮೆ(ಮ)ಸೈಯ (ನಾ.) (ದೇವರ ವಚನದಂತೆ ಅವತರಿಸಿದ) ಯೆಹೂದ್ಯರ ಉದ್ಧಾರಕ: ಯೇಸು ಕ್ರಿಸ್ತ. ಹಿಂಸೆಗೊಳಗಾದ ಜನವನ್ನಾಗಲಿ ದೇಶವನ್ನಾಗಲಿ ಉದ್ಧರಿಸಲು ಬಂದವನು: ಉದ್ಧಾರಕ. **Messíahship** (ನಾ.); **Messiánic** ಮೆಸಿಅ್ಯನಿಕ್ (ಗು.) ಉದ್ಧಾರಕನ; ಉದ್ಧಾರಕನು ಅವತರಿಸುವನೆಂಬ, ಅಥವಾ ಅವನಲ್ಲಿರುವ, ನಂಬಿಕೆಯಿಂದ ಪ್ರೇರಿತವಾದ.

Messieúrs ಮೆಸರ್ಸ್(ರ್ಜ್), ಮೆಸ್ಯರ್ಜ್, ಮೆಸ್ಯರ್, ಮೆಸ್ಯ (F) (ನಾ., ಬ. ವ.) Monsieur ಪದದ ಬ. ವ. (ಮೆಸ್ಯ); Mr ಪದದ ಬ. ವ. [ಮು., ವ್ಯಾಪಾರ ಸಂಸ್ಥೆಯ ಹೆಸರಿನ ಹಿಂದೆ, ಅಥವಾ ದೊಡ್ಡಮನುಷ್ಯರ ಹೆಸರಿನ ಪಟ್ಟಿಯ ಆದಿಯಲ್ಲಿ, ಸೇರಿಸುವ ಒಕ್ಕಣೆ (ಸಂಕ್ಷಿಪ್ತ: Messrs ಮೆಸರ್ಸ್‌, —ಸ್ಯ—)]

Méssrs. **Messieurs** ನೋಡಿ.

Méssuage ಮೆಸ್ವೆ(ಸ್ವಿ)ಜ್ (ನಾ.) (ನ್ಯಾ. ಶಾ.) ವಾಸದ ಮನೆಯೂ ಅದರ ಉಪಯೋಗಕ್ಕಾಗಿರುವ ಹೊರ ಕಟ್ಟಡಗಳೂ, ಹಿತ್ತಿಲೂ, ಬಯಲೂ, ಮೊ. ವು.

Meta- ಮೆಟ— (ಸ. ಪೂ. ಪ.) [ಸ್ವರದ ಹಿಂದೆ Met- (ಉದಾ., Metempiric), ಮಹಾಪ್ರಾಣದ ಹಿಂದೆ Meth- (ಉದಾ., Methaemoglobin)] ಹಿಂದುಗಡೆಯ, ತರುವಾಯದ, ಮಾರ್ಪಾಟಿನ —ಇವೇ ಮೊ. ಅರ್ಥಗಳಲ್ಲಿ (ಉದಾ., Metathorax, Metachronism, Metabolism)

Metábolism ಮೆಟ್ಯಾಬೊಲಿಸ್ಮ್ (ನಾ.) ಜೀವಿಯಲ್ಲಾಗಲಿ ಒಂದು ಜೀವ ಕಣದಲ್ಲಾಗಲಿ (ದೇಹ)ಪೋಷಕ ದ್ರವ್ಯವು ಜೀವಿಯ ದೇಹ ಭಾಗವಾಗಿ ಮಾರ್ಪಡುವುದು (=Constructive m.); ಅಥವಾ, ಜೀವದ್ರವ್ಯವು ಒಡೆದು ಸುಲಭ ರಚನೆಯ ರಾಸಾಯನಿಕ ಪದಾರ್ಥಗಳಾಗಿ ಮಾರ್ಪಡುವುದು (= Destructive m.): ಜೀವದ್ರವ್ಯ ಪರಿಣಾಮ. **Metábolize** (ಕ್ರಿ. ಸಕ.); **Metabólic** ಮೆಟಬಾಲಿಕ್ (ಗು.)

Metacárpus ಮೆಟಕಾರ್ಪಸ್ (ನಾ.) ಮಣಿಕಟ್ಟಿಗೂ ಬೆರಳುಗಳಿಗೂ ನಡುವಣ ಹಸ್ತಭಾಗ; ಹಸ್ತ ಮಧ್ಯ; ಅಂಗೈ.

Métacentre ಮೆಟಸೆಂಟರ್ (ನಾ.) (ಜಲ ಸಮಸ್ಥಿತಿ ಶಾಸ್ತ್ರ) ದ್ರವದಲ್ಲಿ ತೇಲುತ್ತಿರುವ ಒಂದು ವಸ್ತು ಸ್ತಿಮಿತದಲ್ಲಿರುವಾಗ ಅದರ ಗುರುತ್ವ ಕೇಂದ್ರದ ಮೂಲಕ ಹಾಯುವ ಲಂಬರೇಖೆಯೂ, ಆ ವಸ್ತು ಓಲಿದಾಗ ಅದರ ಪ್ಲವನ ಕೇಂದ್ರದ ಮೂಲಕ ಹಾಯುವ ಲಂಬರೇಖೆಯೂ ಸಂಧಿಸುವ ಬಿಂದು: ಅತೀತ ಕೇಂದ್ರ (ಸ್ಥಿರತೆಗೆ ಈ ಬಿಂದುವು ವಸ್ತುವಿನ ಗುರುತ್ವ ಕೇಂದ್ರದ ಮೇಲ್ಗಡೆ ಇರಬೇಕು)

Métage ಮೀಟೆ(ಟಿ)ಜ್ (ನಾ.) (ಕಲ್ಲಿದ್ದಲು, ಧಾನ್ಯ, ಮೊ. ನ್ನು) ಅಧಿಕಾರಿಕವಾಗಿ ತೂಕ ಮಾಡುವುದು; ಇದಕ್ಕಾಗಿ ಕೊಡುವ ಸುಂಕ.

Metagénesis ಮೆಟಜೆನಿಸಿಸ್ (ನಾ.) ಒಂದು ಸಂತತಿ ಲಿಂಗ ಕಾರ್ಯದಿಂದಲೂ ಮರು ಸಂತತಿ ನಿರ್ಲಿಂಗ ಕಾರ್ಯದಿಂದಲೂ ಪರ್ಯಾಯ ಕ್ರಮದಲ್ಲಿ ಜನನವಾಗುವುದು: ಪರ್ಯಾಯ ಜನನ. **Metagenétic** (ಗು.)

Métal ಮೆಟ(ಟ್)ಲ್ (ನಾ., ಕ್ರಿ. ಸಕ.) (ಚಿನ್ನ, ಬೆಳ್ಳಿ, ಕಬ್ಬಿಣ, ಮೊ.) ಲೋಹ. [Bell m., Britannia m., Gun m., Heavy m., White m., Yellow m. (ಆಯಾ ಪದವನ್ನು ನೋಡಿ)]. ಶಾಖದಿಂದ ಕರಗಿ ಸಿದ್ಧವಾದ ಗಾಜುಮಾಡುವ ಪದಾರ್ಥ. (ಗಟ್ಟನೆಮಾಡುವ ರಸ್ತೆಗೆ ಅಥವಾ ರೈಲು ರಸ್ತೆಗೆ ಉಪಯೋಗಿಸುವ) ಜಲ್ಲಿಕಲ್ಲು (=road-m.). (ಬ. ವ. ದಲ್ಲಿ) ರೈಲು (ಹಾದಿಯ) ಕಂಬಿಗಳು (Train leaves the metals ರೈಲುಬಂಡಿಯು ಕಂಬಿಸಾಲನ್ನು ಬಿಟ್ಟುಹೋಗುತ್ತದೆ). (ಕ್ರಿ.) ಲೋಹ(ದಿಂದ) ಹೊದಿಸು, ಹೊಂದಿಸು, ಸೇರಿಸು. (ರಸ್ತೆಯನ್ನು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಲ್ಲಿ ಹಾಕಿ ದುರಸ್ತು ಮಾಡು. **Metállic** ಮಿಟ್ಯಾಲಿಕ್ (ಗು.) ಲೋಹದ(ಗಳ) [M. currency (ಚಿನ್ನ, ಬೆಳ್ಳಿ, ತಾಮ್ರ, ಮೊ. ಗಳ) ಚಲಾವಣೆ ನಾಣ್ಯ ; ಲೋಹ ನಾಣ್ಯ ; ಲೋಹ ಚಲಾವಣೆ (Paper currency ಯೊಡನೆ ಹೋಲಿಸಿ)] ; ಲೋಹದಂಥ ; ಲೋಹದ ಗುಣ ಗಳುಳ್ಳ (M. lustre ಲೋಹದ ಹೊಳಪು. M. sound ಲೋಹ ಧ್ವನಿ). **Métalline** ಮೆಟಲೈ(ಲಿ)ನ್ (ಗು.) = Metallic; ಲೋಹದಿಂದ ಮಾಡಿದ ; ಲೋಹ ಸೇರಿರುವ. **Métallize** (ಕ್ರಿ. ಸಕ.) ಲೋಹದಂತೆ ಮಾಡು ; ಲೋಹದ ರೂಪ ಕೊಡು. (ರಬ್ಬರನ್ನು) ಗಂಧಕ ಪ್ರಯೋಗಕ್ಕೆ ಒಳಪಡಿಸು. **Metallizátion** (ನಾ.) ; **Metallógraphy** ಮೆಟಲಾಗ್ರಫಿ (ನಾ.) ಲೋಹಗಳ ಒಳ ರಚನೆಯ ವಿವರಣ ಶಾಸ್ತ್ರ ; ಲೋಹ ರಚನೆಯ ವಿವರಣೆ. **Métalloid** (ಗು., ನಾ.) ಲೋಹದ ರೂಪ, ತೋರ್ಕೆ, —ಉಳ್ಳ ; ಲೋಹಕಲ್ಪ ; ಅಲೋಹ ಧಾತು. **Metállurgy** (ನಾ.) ಲೋಹ (ಕೆಲಸದ) ವಿದ್ಯೆ (ಮು., ಅದುರಿನಿಂದ ಲೋಹ ತೆಗೆಯುವುದು). **Metallúrgic(al)** (ಗು.) ; **Metállurgist** (ನಾ.)

Metallógraphy, Métalloid, Metállurgy, etc. Metal ನೋಡಿ.

Métamere ಮೆಟಮಿಯರ್ (ನಾ.) (ಪ್ರಾ. ವಿ.) ಅನೇಕ ಪ್ರಾಣಿಗಳ ದೇಹದ ರಚನೆಯಲ್ಲಿ (ಸಾ., ಉದ್ದ ಸಾಲಿನಲ್ಲಿ ನೆಲಸಿರುವ) ಏಕರೂಪದ ಅನೇಕ ಭಾಗಗಳಲ್ಲೊಂದು ; ಸದೃಶ ಭಾಗ. **Metaméric** ಮೆಟಮೆರಿಕ್ (ಗು.) (ಪ್ರಾ. ವಿ.) ಸದೃಶ ಭಾಗಗಳ. (ರ. ವಿ.) ಒಂದೇ ಬಗೆಯ ಸಂಯೋಜನೆಯೂ ಒಂದೇ ಅಣುಭಾರವೂ ಉಳ್ಳ, ಆದರೆ ರಾಸಾಯನಿಕ ಧರ್ಮಗಳು ಬೇರೆ ಬೇರೆಯಾದ. **Metámerism** ಮೆಟ್ಯಾಮೆರಿಸ್ಮ್ (ನಾ.)

Métamerism. Metamere ನೋಡಿ.

Metamórphosis ಮೆಟಮಾರ್ಫೊ(ೞ)ಸಿಸ್ (ನಾ. ; ಬ. ವ. -oses — ಸೀಸ್) (ಯಕ್ಷಿಣಿಯಿಂದ, ಸ್ವಾಭಾವಿಕ ಬೆಳವಣಿಗೆಯಿಂದ, ಮೊ. ಗಿ) ರೂಪಾಂತರ ಹೊಂದುವುದು ; ರೂಪದ ಮಾರ್ಪಾಡು; ರೂಪಾಂತರ; ಸ್ವಭಾವ, ಸ್ಥಿತಿ, ಮೊ. ಗಳ ಬದಲಾವಣೆ. **Metamórphic** (ಗು.) ರೂಪ ಪರಿವರ್ತನೆಯ ; ರೂಪ ಪರಿವರ್ತನೆಯ ಲಕ್ಷಣವುಳ್ಳ ; (ಭೂ. ವಿ., ಶಿಲೆಯ ವಿಷಯದಲ್ಲಿ) ಪ್ರಕೃತಿ ಕರ್ತೃತ್ವದಿಂದ ರೂಪ ಪರಿವರ್ತನೆ ಹೊಂದಿದ. **Metamórphism** (ನಾ.) ; **Metamórphose** — ಫೋಸ್, — ಫೊಸ್ (ಕ್ರಿ. ಸಕ.) ರೂಪಾಂತರ ಮಾಡು ; ಹೊಸ ರೂಪಕ್ಕೆ ತಿರುಗಿಸು (*To, into* ಉಪ. ದೊಡನೆ) ; (— ರ) ಸ್ವಭಾವ ಮಾರ್ಪಡಿಸು.

Métaphor ಮೆಟಫರ್ (ನಾ.) ಹೋಲಿಕೆಯನ್ನು ಸೂಚಿಸುವುದಕ್ಕಾಗಿ ಎರಡು ಬೇರೆ ಬೇರೆ ವಸ್ತುಗಳನ್ನು ಒಂದೇ ಎಂದು ಹೇಳುವುದು : ರೂಪಕಾಲಂಕಾರ ; ರೂಪಕ (ಉದಾ., Ye are the salt of the earth). Mixed m. ಒಂದರೊಡನೊಂದು ಹೊಂದದ ರೂಪಕಗಳ ಜೋಡಣೆ ; ಮಿಶ್ರ ರೂಪಕ (ಉದಾ., To take arms against a sea of troubles). **Metaphórical** — ಫಾ — (ಗು.) ; **Metaphórically** (ಕ್ರಿ. ವಿ.)

Métaphrase ಮೆಟಫ್ರೇಸ್ (ನಾ., ಕ್ರಿ. ಸಕ.) (ಮು., ಪದಶಃ) ಭಾಷಾಂತರ. (ಕ್ರಿ.) ಬೇರೆ ಮಾತುಗಳಲ್ಲಿ ಹೇಳು, ಬರೆ. **Metaphrástic** — ಫ್ರ್ಯಾಸ್ಟಿಕ್ (ಗು.)

Metaphýsics ಮೆಟಫಿಸಿಕ್ಸ್ (ನಾ., ಬ. ವ. ; ಹಲವು ವೇಳೆ ಏ. ವ. ವಾಗಿ ಪ್ರ.) ಭೌತಾತೀತ ವಿದ್ಯೆ ; ಮಾನಸ ಮೂಲತತ್ತ್ವ ಶಾಸ್ತ್ರ ; ಅಧ್ಯಾತ್ಮ ಶಾಸ್ತ್ರ. (ಬಳ. ಮಾ.) ಗೂಢವಾದ ಅಥವಾ ಅತಿ ಸೂಕ್ಷ್ಮಾರ್ಥವುಳ್ಳ ಮಾತು ; ಕೇವಲ ತತ್ತ್ವ. **Metaphýsical** (ಗು.) ಆಧ್ಯಾತ್ಮಿಕ ; ಗೂಢವಾದ ಸಾಮಾನ್ಯ ತಾರ್ಕಿಕ ವಿಚಾರವನ್ನವಲಂಬಿಸಿದ ; ಸೂಕ್ಷ್ಮತಮವಾದ; ಅಶರೀರ; ಅಪ್ರಾಕೃತ; ಮನಃಕಲ್ಪಿತ. **Metaphýsically** (ಕ್ರಿ. ವಿ.) ; **Metaphysícian** — ಷನ್ (ನಾ.) ; **Metaphýsicize** (ಕ್ರಿ. ಅಕ.) ಆಧ್ಯಾತ್ಮಿಕವಾಗಿ ಆಲೋಚಿಸು, ಮಾತನಾಡು, ಬರೆ.

Métaplasm ಮೆಟಪ್ಲ್ಯಾಸ್ಮ್ (ನಾ.) (ಜೀ. ವಿ.) ಜೀವ ಕಣದ ರಚನ ದ್ರವ್ಯ ಭಾಗ.

Metapólitics ಮೆಟಪಾಲಿಟಿಕ್ಸ್ (ನಾ., ಬ. ವ.) ತಾತ್ತ್ವಿಕ ರಾಜ್ಯಶಾಸ್ತ್ರ (ಹಲವು ವೇಳೆ ತಿರಸ್ಕಾರ ಪ್ರ.). **Metapolítical** — ಪೊ — (ಗು.) ; **Metapolitícian** — ಪಾಲಿಟಿಷನ್ (ನಾ.)

Metapsýchics ಮೆಟಸೈಕಿಕ್ಸ್ (ನಾ., ಬ. ವ.) ಪ್ರೇತಾವಾಹನೆಯ ವಿಚಾರವಾದ ಶೋಧನೆ.

Metástasis ಮೆಟ್ಯಾಸ್ಟಸಿಸ್ (ನಾ.) (ದೇಹವ್ಯಾಪಾರ, ವ್ಯಾಧಿ, ಮೊ. ವು ದೇಹದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಅಥವಾ ಒಂದು ಅಂಗದಿಂದ ಮತ್ತೊಂದು ಅಂಗಕ್ಕೆ) ಸ್ಥಾನಾಂತರ ಹೊಂದುವುದು ; ಸ್ಥಿತಿಯ, ಸ್ಥಾನದ, — ಬದಲಾವಣೆ. ಒಂದು ಜೀವಿಯಲ್ಲಿ ರಾಸಾಯನಿಕ ಸಂಯುಕ್ತಗಳು ದೇಹಗತವಾಗುವಾಗ, ಅವು ಬೇರೆ ಪದಾರ್ಥಗಳಾಗಿ ಏರ್ಪಡುವ ಪರಿವರ್ತನೆ. **Metastátic** ಮೆಟಸ್ಟ್ಯಾಟಿಕ್ (ಗು.)

Metatársus ಮೆಟಟಾರ್ಸಸ್ (ನಾ.) (ಅಂ. ರ. ಶಾ.) ಹರಡಿಗೂ ಪಾದದ ಬೆರಳುಗಳಿಗೂ ಮಧ್ಯೇ ಇರುವ ಐದು ಉದ್ದ ಎಲುಬುಗಳ ತಂಡ. **Metatársal** (ಗು.)

Metáthesis ಮೆಟ್ಯಾಥಿಸಿಸ್ (ನಾ.) (ವ್ಯಾ.) (ಪದದಲ್ಲಿಯ ಅಕ್ಷರಗಳ ಅಥವಾ ಧ್ವನಿಗಳ) ಪರಸ್ಪರ ಸ್ಥಾನವ್ಯತ್ಯಯ ; ವರ್ಣ ವ್ಯತ್ಯಯ ; ಧ್ವನಿ ವ್ಯತ್ಯಯ. (ರ. ವಿ.) ಎರಡು ಅಣುಗಳಲ್ಲಿಯ ಪರಮಾಣುಗಳು (ಒಂದು ಅಣುವಿನಿಂದ ಮತ್ತೊಂದು ಅಣುವಿಗೆ) ಪರಸ್ಪರ ಸ್ಥಾನವ್ಯತ್ಯಯ (ಹೊಂದುವುದು), ವಿನಿಮಯ(ವಾಗುವುದು) : ಪರಮಾಣು ವಿನಿಮಯ.

Métayage (F) ಮೆಟೆ(ೞ)ಯಾಷ್ (ನಾ.) [ರೈತನು ತಾನು ಬೆಳೆದದ್ದರಲ್ಲಿ ಒಂದು ಭಾಗವನ್ನು (ಸಾ., ಅರ್ಧವನ್ನು) ಜಮೀನ್ದಾರನಿಗೆ ಕೊಡುವಂತೆಯೂ ಜಮೀನ್ದಾರನು ರೈತನ ಉಳುಮೆಗೆ ಬೇಕಾದ ಪಶುಗಳನ್ನೂ ಬಿತ್ತನೆಯ ಕಾಳನ್ನೂ ಕೊಡುವಂತೆಯೂ ಮಾಡಿಕೊಂಡ] ವಾರ ಗುತ್ತಿಗೆ. **Métayer** (F) ಮೆಟೆ(ೞ)ಯೆ(ೞ) (ನಾ.) ವಾರ ಗುತ್ತಿಗೆದಾರ.

Métayer. Metayage ನೋಡಿ.

Mete[1] ಮೀಟ್ (ನಾ.) ಎಲ್ಲೆ ; ಮೇರೆ ; ಗಡಿ ; ಸರಹದ್ದು ; ಬಾಂದು ಕಲ್ಲು ; ಗಡಿ ಕಲ್ಲು. (ನ್ಯಾ. ಶಾ.) Metes & bounds ಗಡಿಗಳೂ ಗಡಿ ಕಲ್ಲುಗಳೂ.

Mete[2] ಮೀಟ್ (ಕ್ರಿ. ಸಕ.) (ಸಾಹಿತ್ಯ ಪ್ರ. ; ಕಾವ್ಯ) ಅಳೆ, ಹಂಚಿ ಕೊಡು ; (ಶಿಕ್ಷೆಯನ್ನು, ಬಹುಮಾನವನ್ನು) ವಿಧಿಸಿ ಕೊಡು (*Out* ಉಪ. ದೊಡನೆ). Mete-wand, -yard (ರೂಪ.) ಮಾನ ದಂಡ.

Metempíric ಮೆಟೆಂಪಿರಿಕ್ (ನಾ.) ಅನುಭವಾತೀತ (ವಿಷಯಗಳ) ತತ್ತ್ವ (= -ics). —ವಾದಿ [= **Metempíricist** — ಸಿಸ್ಟ್ (ನಾ.)] . **Metempírical** (ಗು.)

Metempsychósis ಮೆಟೆಂಪ್ಸಿಕೋಸಿಸ್ (ನಾ.) ಸತ್ತ ಮೇಲೆ ಮನುಷ್ಯನ ಅಥವಾ ಪ್ರಾಣಿಯ ಆತ್ಮವು ಅದೇ ವರ್ಗದ ಅಥವಾ ಬೇರೆ ವರ್ಗದ ಪ್ರಾಣಿಯ ದೇಹವನ್ನು ಪ್ರವೇಶಿಸುವುದು : ದೇಹಾಂತರ ಪ್ರವೇಶ. **Metempsychósist** (ನಾ.)

Méteor ಮೀಟಿಯರ್ (ನಾ.) (ವಾಯುಮಂಡಲದ ಯಾವುದಾದರೂ ಗೋಚರ ವಿಷಯ: ಮು.,) ಉಲ್ಕ(ಲ್ಕೆ) ; ಉಲ್ಕಾಪಾತ (ಆಕಾಶದಿಂದ ಹೊರಟು ವೇಗ ವೇಗವಾಗಿ ಚಲಿಸುತ್ತ ಭೂಮಿಯ ವಾಯುಮಂಡಲದೊಡನೆ ಘರ್ಷಣ ಹೊಂದಿ ಬೆಳಗುವ ಅಲ್ಪ ಮೊತ್ತದ ದ್ರವ್ಯ). **Meteóric** — ಯಾರಿಕ್ (ಗು.) ವಾಯುಮಂಡಲದ; ವಾಯುಮಂಡಲ ಸ್ಥಿತಿಯನ್ನವಲಂಬಿಸಿದ. ಉಲ್ಕೆಗಳ ; ಉಲ್ಕಾಪಾತದ. (ರೂಪ.) (ಉಲ್ಕೆಯಂತೆ ಕ್ಷಣಿಕವಾದ) ಉಜ್ಜ್ವಲ ಪ್ರಕಾಶದ ; ಅತಿ ವೇಗದ. **Méteorite** — ಯರೈಟ್ (ನಾ.) ನೆಲಕ್ಕೆ ಬಿದ್ದ ಉಲ್ಕೆ ; ಉಲ್ಕಾ ಶಿಲೆ. **Méteorolite** (ನಾ.) = Meteorite. **Méteorograph** (ನಾ.) ವಾಯುಮಂಡಲದಲ್ಲಿಯ ಗೋಚರ ವಿಷಯಗಳನ್ನು ರೇಖಿಸುವ ಸಲಕರಣೆ : ವಾಯುಸ್ಥಿತಿ ಲೇಖಕ. **Méteoroid** (ನಾ.) ವಾಯುಮಂಡಲಕ್ಕೆ ಪ್ರವೇಶಿಸಿದರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಲ್ಕೆಯಾಗಿ ಪರಿಣಮಿಸುವ ಚಲ ಆಕಾಶಕಾಯ ; ಉಲ್ಕಾ ಕಲ್ಪ. **Meteoroídal** (ಗು.) ; **Meteorólogy** —ರಾಲೊಜಿ (ನಾ.) (ಮು., ವಾಯುಸ್ಥಿತಿಯ ಮುನ್‌ಸೂಚನೆ ಕೊಡುವುದಕ್ಕಾಗಿ ಅಭ್ಯಾಸ ಮಾಡುವ) ವಾಯುವಿನ ಚಲನೆ, ವಾಯುಮಂಡಲದ ಗೋಚರ ವಿಷಯಗಳು — ಇವನ್ನು ಕುರಿತ ಶಾಸ್ತ್ರ : ಪವನ ಶಾಸ್ತ್ರ ; (ಒಂದು ಪ್ರದೇಶದ) ವಾಯು ಲಕ್ಷಣ. **Meteorológic(al)** —ರೊಲಾ— (ಗು.) ; **Meteorológically** (ಕ್ರಿ. ವಿ.) ; **Meteorólogist** —ರಾಲೊ— (ನಾ.) ಪವನ ಶಾಸ್ತ್ರಜ್ಞ.

Meteorólogy, etc. Meteor ನೋಡಿ.

Méter ಮೀಟರ್ (ನಾ.) ಅಳತೆ ಮಾಡುವವನು, — ವದು ; ಮಾಪಕ. Gas, Water, etc. -m. (ಅನಿಲ, ನೀರು, ಮೊ. ಗಳ ಮೊತ್ತವನ್ನು ಅಳೆಯುವ) ಅನಿಲ ಮಾಪಕ, ಜಲ ಮಾಪಕ, ಮೊ. ವು.

Methínks ಮಿತಿಂಕ್ಸ್ (ಕ್ರಿ. ಅಕ.) (ಪ್ರಾಚೀ. ಪ್ರ.; ಭೂತ., methought ಮಿತಾಟ್) (— ಎಂದು) ನನಗೆ ತೋರುತ್ತದೆ.

Méthod ಮೆತಡ್ (ನಾ.) ಕ್ರಮಾನುಸರಣೆ ; ವಿಧಾನ ; ಪದ್ಧತಿ ; ಮಾರ್ಗ ; ಕ್ರಮ ; ರೀತಿ ; ಕ್ರಮಬದ್ಧವಾದ ಅಭ್ಯಾಸಗಳು, ಪದ್ಧತಿಗಳು [There's m. in his madness (ಹಾಸ್ಯ ಪ್ರ.) ಅವನ ಹುಚ್ಚಿನಲ್ಲಿಯೂ ಒಂದು ಕ್ರಮವಿದೆ]. (ಪ್ರಕೃತಿ ಚರಿತ್ರೆ) ವರ್ಗೀಕರಣ ಕ್ರಮ, ವಿಧಾನ. **Methódical** ಮಿತಾಡಿಕಲ್ (ಗು.) ; **Methódically** (ಕ್ರಿ. ವಿ.) ; **Methodólogy** —ತೊಡಾ— (ನಾ.) ಕ್ರಮ, ವಿಧಾನ, — ಶಾಸ್ತ್ರ ; ಶಿಕ್ಷಣ ವಸ್ತುಗಳ ಯೋಜನ ವಿಧಾನವನ್ನು ವಿವರಿಸಿ ಅದರ ಪ್ರಯೋಜನವನ್ನು ನಿರ್ಣಯಿಸುವ ಶಾಸ್ತ್ರ : ವಿಧಾನ ಶಾಸ್ತ್ರ. (ಪ್ರಕೃತಿ ಚರಿತ್ರೆ) ಕ್ರಮಬದ್ಧ ವರ್ಗೀಕರಣ. **Méthodist** ಮೆತೊಡಿಸ್ಟ್ (ನಾ.) ಒಂದು ಗೊತ್ತಾದ ಪದ್ಧತಿಯನ್ನು ಅನುಸರಿಸುವವನು (ಮು., ಪ್ರಕೃತಿ ಚರಿತ್ರೆಯಲ್ಲಿ). (ತಿರಸ್ಕಾರ ಪ್ರ.) ಕಟ್ಟುನಿಟ್ಟಾದ ಮತ ಧರ್ಮಾಭಿಪ್ರಾಯಗಳುಳ್ಳವನು ; ಕರ್ಮಠ ; ನಿಷ್ಠ. (ಕೆಲವರ ಧಾರ್ಮಿಕ ಚಳವಳಿಯ ಫಲವಾಗಿ ಸ್ಥಾಪನೆಯಾದ) ಹಲವು ಕ್ರೈಸ್ತ ಧರ್ಮ ಸಂಘಗಳಲ್ಲೊಂದರ ಸದಸ್ಯ. **Methodístic(al)** (ಗು.); **Methodístically** (ಕ್ರಿ. ವಿ.). **Méthodism** (ನಾ.) ಕ್ರಮಾನುಸರಣೆಯ ಹುಚ್ಚು. ಮೆತೊಡಿಸ್ಟರ ತತ್ತ್ವ, ಸಂಪ್ರದಾಯ, ಆಚರಣೆ. **Méthodize** (ಕ್ರಿ. ಸಕ.)

Méthodist, etc. Method ನೋಡಿ.

Methoúght. Methinks ಧಾತುವಿನ ಭೂತ ರೂಪ.

Methúselah ಮಿತೂ(ತ್ಯೂ)ಸೆಲ (ನಾ.) (ಕ್ರೈಸ್ತರ ಹಳೆಯ ಒಡಂಬಡಿಕೆಯಲ್ಲಿ) ನೋವ ಎಂಬಾತನಿಗಿಂತಲೂ ಹಿಂದೆ ಇದ್ದ, ೯೬೯ ವರ್ಷ ಕಾಲ ಬದುಕಿದ್ದನೆಂದು ಹೇಳುವ, ಯೆಹೂದ್ಯರ ಒಬ್ಬ ಕುಲಪತಿ (ದೀರ್ಘಾಯುಷ್ಯದ ಆದರ್ಶವಾಗಿ)

Méthyl ಮೆತಿಲ್ (ನಾ.) ಕಾಷ್ಠಾಸವದ (Wood-spirit), ಫಾರ್ಮಿಕ್ ಆಮ್ಲದ, ಮತ್ತು ಅನೇಕ ಇತರ ಜೈವಿಕ ಸಂಯುಕ್ತಗಳ, ಮೂಲಘಟಕ: 'ಮೆತಿಲ್'. **Methýlic** ಮಿ — (ಗು.) ; **Méthylate** ಮೆ — (ಕ್ರಿ. ಸಕ.) (ಮು., ದ್ರಾಕ್ಷಾ ಮದ್ಯಸಾರವನ್ನು ಕುಡಿಯುವುದಕ್ಕೆ ಉಪಯೋಗವಿಲ್ಲದಂತೆ ಮಾಡಿ ಸುಂಕದ ವಿನಾಯಿತಿ ಪಡೆಯಲು, ಅದಕ್ಕೆ) 'ಮೆತಿಲ್' ಬೆರಸು (Methylated spirit ಮೆತಿಲ್ ಬೆರಸಿದ ಮದ್ಯಸಾರ)

Metículous ಮಿಟಿಕ್ಯುಲಸ್ (ಗು.) ಸೂಕ್ಷ್ಮ ವಿವರಗಳಿಗೆ, ಅಪ್ರಧಾನ ವಿಷಯಗಳಿಗೆ, ಮಿತಿ ಮೀರಿ ಗಮನ ಕೊಡುವ ; ಅತಿ ನಚ್ಚಿನ. **Metículously** (ಕ್ರಿ. ವಿ.)

Métier (F) ಮೆಟ್ಯೇ (ನಾ.) (ಒಬ್ಬನು ಅವಲಂಬಿಸಿರುವ, ದಕ್ಷತೆ ಪಡೆದಿರುವ) ಕಸಬು, ವೃತ್ತಿ, ವ್ಯಾಪಾರ.

Métol (G) ಮೆ(ಮೀ)ಟಾಲ್ (ನಾ.) ಛಾಯಾ ಚಿತ್ರದಲ್ಲಿ ಹೆಚ್ಚು ವರ್ಣ ವ್ಯತ್ಯಯಗಳಿಲ್ಲದ ವಿಷಮ ಪ್ರತಿಯನ್ನು ತಯಾರಿಸಲು ಉಪಯೋಗಿಸುವ ಒಂದು ಸ್ಫುಟಕಾರಕ (Developer) : 'ಮೆಟಾಲ್' (ವ್ಯಾಪಾರದ ಹೆಸರು)

Metónymy ಮಿಟಾನಿಮಿ (ನಾ.) ಹೇಳಬೇಕಾದ ವಸ್ತುವಿಗೆ ಬದಲಾಗಿ ಅದರ ಲಕ್ಷಣ ವಾಚಿಯನ್ನು ಪ್ರಯೋಗಿಸುವ ಅಲಂಕಾರ : ಅಜಹಲ್ಲಕ್ಷಣೆ (ಉದಾ., The pen is mightier than the sword). **Metonýmical** ಮೆಟೊ — (ಗು.) ; **Metonýmically** (ಕ್ರಿ. ವಿ.)

Métre[1] ಮೀಟರ್ (ನಾ.) ಗಣಗಳ ಸ್ವರೂಪದಿಂದಲೂ ಸಂಖ್ಯೆಯಿಂದಲೂ ಗೊತ್ತಾದ ಲಯವುಳ್ಳ ಪದ್ಯಪಂಕ್ತಿ ; ಛಂದಸ್ಸು ; ವೃತ್ತ (ಮು., Iambic ಮತ್ತು ಇತರ ದ್ವಿಗಣಗಳು). **Métrical**[1] ಮೆಟ್ರಿಕಲ್ (ಗು.) ಛಂದಸ್ಸಿನಲ್ಲಿ ರಚಿಸಿದ. **Métrically**[1] (ಕ್ರಿ. ವಿ.) ; **Metrícian** ಮಿಟ್ರಿಷನ್ (ನಾ.) ಛಂದೋ ವ್ಯಾಸಂಗಿ. **Métrics** ಮೆ — (ನಾ.) ಛಂದಶ್ಶಾಸ್ತ್ರ. **Métrist** (ನಾ.) ಛಂದೋ ಬದ್ಧವಾಗಿ ಬರೆಯುವವನು ; ಪದ್ಯಕಾರ.

Métre[2] ಮೀಟರ್ (ನಾ.) ('ಮೆಟ್ರಿಕ್' ಪದ್ಧತಿಯಲ್ಲಿ) ಉದ್ದಳತೆಯ (ಏಕ) ಮಾನ (= ೩೯.೩೭ ಅಂಗುಲಗಳು) : 'ಮೀಟರ್'. **Métric** ಮೆಟ್ರಿಕ್ (ಗು.) ಮೀಟರಿನ ; ಮೀಟರ್ ಮಾನದ. M. system ದಶಮಾನ ಅಳತೆಯ ಪದ್ಧತಿ : 'ಮೆಟ್ರಿಕ್' ಪದ್ಧತಿ (ಇದರಲ್ಲಿ ಉದ್ದ, ಘನ ಅಳತೆ, ತೂಕ — ಇವುಗಳ ಮಾನಗಳು ಕ್ರಮವಾಗಿ ಮೀಟರ್, ಲೀಟರ್, ಗ್ರ್ಯಾಂ). Deca-, hecto-, kilo- ಎಂಬ ಪೂರ್ವ ಪ್ರತ್ಯಯಗಳು ಸೇರಿದಾಗ ಕ್ರಮವಾಗಿ ೧೦, ೧೦೦, ಮತ್ತು ೧೦೦೦ ದ ಗುಣಲಬ್ಧವನ್ನು ಸೂಚಿಸುತ್ತವೆ (ಉದಾ., Kilometre ೧೦೦೦ ಮೀಟರುಗಳು). Deci-, centi-, milli- ಎಂಬ ಪೂರ್ವ ಪ್ರತ್ಯಯಗಳು ಸೇರಿದಾಗ ಕ್ರಮವಾಗಿ ದಶಮಾಂಶ, ಶತಾಂಶ, ಸಹಸ್ರಾಂಶ — ಇವನ್ನು ಸೂಚಿಸುತ್ತವೆ (ಉದಾ., Decilitre ಲೀಟರಿನ ದಶಾಂಶ). **Métrical**[2] (ಗು.) ಅಳತೆಯ ; ಅಳತೆ ಮಾಡಬೇಕಾದ ಸಂದರ್ಭದ ; ಅಳತೆಯಿಂದ ನಿಷ್ಕರ್ಷಿಸಿದ. M. geometry ಮಾಪನ ಜ್ಯಾಮಿತಿ. **Métrically**[2] (ಕ್ರಿ. ವಿ.) ; **Metrólogy** ಮೆಟ್ರಾಲೊಜಿ (ನಾ.) ತೂಕದ ಮತ್ತು ಅಳತೆಯ ಶಾಸ್ತ್ರ, ಪದ್ಧತಿ ; ಮಾಪನ ಶಾಸ್ತ್ರ, ಪದ್ಧತಿ. **Metrológical** ಮೆಟ್ರೊಲಾಜಿಕಲ್ (ಗು.) ; **Métronome** ಮೆಟ್ರೊನೋಮ್ (ನಾ.) (ಸಂ.) ಲೋಲಕದ ಮೂಲಕ ತಾಳವನ್ನು ಸೂಚಿಸುವ ಸಲಕರಣೆ : ತಾಳ ಸೂಚಿ. **Metronómic** — ನಾ — (ಗು.)

Métrics, Métrist. Metre[1] ನೋಡಿ.

Metrólogy, Métronome, etc. Metre[2] ನೋಡಿ.

Metrópolis ಮಿಟ್ರಾಪೊಲಿಸ್ (ನಾ.) ಒಂದು ದೇಶದ ಮುಖ್ಯ ಪಟ್ಟಣ ; ರಾಜಧಾನಿ ; (The m. ಲಂಡನ್). ಪ್ರಧಾನ ಬಿಷಪ್ಪಿನ ಅಧಿಕಾರ ಪ್ರಾಂತ ; ಕಾರ್ಯ ಕಲಾಪಗಳ ಕೇಂದ್ರ ಸ್ಥಾನ. **Metropólitan** ಮೆಟ್ರೊಪಾಲಿಟನ್ (ಗು., ನಾ.): (ಗು.) (Metropolis ಪದದ ಅರ್ಥಗಳಲ್ಲಿ) (ನಾ.) (ಒಂದು ಪ್ರಾಂತದ ಎಲ್ಲ ಬಿಷಪ್ಪುಗಳಮೇಲೂ ಅಧಿಕಾರವುಳ್ಳ) ಪ್ರಧಾನ ಬಿಷಪ್ಪು (= M. bishop). ರಾಜಧಾನಿಯ ನಿವಾಸಿ. **Metropólitanate** —ನೆಟ್ (ನಾ.) ಪ್ರಧಾನ ಬಿಷಪ್ಪಿನ ಅಧಿಕಾರ (ಪ್ರಾಂತ)

Metropólitan, etc. Metropolis ನೋಡಿ.

Méttle ಮೆಟ್‌ಲ್ (ನಾ.) ಮನೋ ಧರ್ಮ ; ಸ್ವಾಭಾವಿಕವಾದ ಉತ್ಸಾಹ ; ಸತ್ತ್ವ ; ಕೆಚ್ಚು ; ಧೈರ್ಯ. Be on one's m. ತನ್ನ ಸತ್ತ್ವವನ್ನು ತೋರಿಸು. **(-)mettled** (ಗು.) ; **Méttlesome** (ಗು.) ಉತ್ಸಾಹಪೂರ್ಣನಾದ ; ಸತ್ತ್ವಶಾಲಿಯಾದ.

Méum (L) ಮೀಅಮ್ (ನಾ.) M. & tuum (ಆಸ್ತಿಯ ಹಕ್ಕನ್ನು ಹೇಳುವಲ್ಲಿ) ನನ್ನ (ಮತ್ತು) ನಿನ್ನ.

Mew[1] ಮ್ಯೂ (ನಾ., ಕ್ರಿ. ಸಕ.) (ಮು., ಗರಿಯುದುರುವ ಕಾಲದಲ್ಲಿ) ಡೇಗೆಯನ್ನಿಡಲು ಉಪಯೋಗಿಸುವ ಪಂಜರ. (ಕ್ರಿ.) (ಡೇಗೆಯನ್ನು) ಪಂಜರದಲ್ಲಿಡು. (ಪ್ರಾಚೀ. ಪ್ರ.) (ಡೇಗೆಯ ವಿಷಯದಲ್ಲಿ) ಗರಿಯುದುರು. (ರೂಪ.) ಸೆರೆ ಹಾಕು ; ಬಂಧನದಲ್ಲಿಡು ; ಮುಚ್ಚಿಡು ; ಬಚ್ಚಿಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mew[2] ಮ್ಯೂ (ಕ್ರಿ. ಅಕ., ನಾ.) (ಬೆಕ್ಕು) 'ಮಿಯಾವ್' ಎನ್ನು ; (ಮು., ಬೆಕ್ಕಿನ) 'ಮಿಯಾವ್' (ಕೂಗು). **Mewl, Mule** ಮ್ಯೂಲ್ (ಕ್ರಿ. ಅಕ.) (ಕೂಸಿನಂತೆ) ಕುಗ್ಗಿದ ದನಿಯಿಂದ ಅಳು ; ಬೆಕ್ಕಿನಂತೆ ಮಿಯ್‌ಗುಟ್ಟು.

Mewl. Mew[2] ನೋಡಿ.

Mews ಮ್ಯೂಸ್ (ನಾ.) (ಅಂಗಳದ ಸುತ್ತಲೂ ಕಟ್ಟಿರುವ) ಕುದುರೆಯ ಲಾಯಗಳ ಸಾಲು.

Mézzanine ಮೆಜ಼ನೀನ್ (ನಾ.) ಕಟ್ಟಡದಲ್ಲಿಯ ಎತ್ತರದ ಎರಡು ಅಂತಸ್ತುಗಳ ನಡುವಣ (ಸಾ., ನೆಲ ಅಂತಸ್ತಿಗೂ ಮೊದಲ ಮಹಡಿಗೂ ಮಧ್ಯದಲ್ಲಿಯ) ತಗ್ಗು ಅಂತಸ್ತು. (ನಾಟಕ ರಂಗದಲ್ಲಿ) ರಂಗದ ಕೆಳಗಿನ ಅಂತಸ್ತು.

Mézzo (It.) ಮೆಡ್ಜೊ, ಮೆಟ್ಸೊ (ಕ್ರಿ. ವಿ.) (ಸಂ.) ಅರ್ಧದಷ್ಟು; ಮಧ್ಯಮವಾಗಿ (M. forte, piano). **M.-riliévo** —ರಿಲ್ಯೇವೋ (ನಾ.) ನಿಜವಾದ ಪ್ರಮಾಣದ ಅರ್ಧದಷ್ಟು ಮಾತ್ರ ಮುಂಚಾಚಿ ಕೊಂಡಿರುವ ಚಿತ್ರ: ಅರೆಯುಬ್ಬು ಚಿತ್ರ. **M.-sopráno** —ಸೊಪ್ರಾನೊ (ನಾ.) (ಹೆಂಗಸಿನ ಉಚ್ಚತಮ ಸ್ವರಕ್ಕೂ ಮಂದ್ರತಮ ಸ್ವರಕ್ಕೂ ನಡುವಣ) ಮಧ್ಯ ಸ್ವರ(ದ ಗಾಯಕಿ, ಗಾನ)

Mézzotint ಮೆ(ಡ್)ಜೊಟಿಂಟ್, ಮೆಟ್ಸೊ— (ನಾ., ಕ್ರಿ. ಸಕ.) ತಾಮ್ರದ ಅಥವಾ ಉಕ್ಕಿನ ಫಲಕದ ಮೇಲ್ಮೈಯನ್ನು ಒಂದೇ ಸಮನಾಗಿ ತರ ತರಕಲಾಗಿ ಮಾಡಿ, ಬೆಳಕಿನ ಮತ್ತು ಮಬ್ಬಿನ ಎಡೆಗಳನ್ನು ತೋರಿಸಲು ಆಯಾ ಭಾಗಗಳನ್ನು ನಯ ಮಾಡಿ ಹೊಳಪು ಕೊಟ್ಟು, ಅಥವಾ ಹಾಗೆಯೇ ಒರಟಾಗಿ ಬಿಟ್ಟು, ಛಾಯಾ ವ್ಯತ್ಯಾಸಗಳನ್ನುಂಟುಮಾಡಿ ಚಿತ್ರ ಕೊರೆಯುವ ಪದ್ಧತಿ; ಹೀಗೆ ಕೊರೆದ ಚಿತ್ರ(ದ ಮುದ್ರಣ ಪ್ರತಿ). (ಕ್ರಿ.) ಹೀಗೆ ಚಿತ್ರ ಕೊರೆ.

Mi ಮೀ (ನಾ.) (ಸಂ.) (ಸ್ವರಾಷ್ಟಕ ಶ್ರೇಣಿಯಲ್ಲಿ) ಮೂರನೆಯ ಸ್ವರ : 'ಗ'.

Miaow ಮಿಯ್ಔ (ನಾ., ಕ್ರಿ. ಅಕ.) (ಬೆಕ್ಕಿನ) 'ಮಿಯಾವ್' ಧ್ವನಿ. (ಬೆಕ್ಕಿನಂತೆ) 'ಮಿಯಾವ್' ಎನ್ನು.

Miásma ಮೈಆ್ಯಸ್ಮ (ನಾ. ; ಬ. ವ. -mata, -mas) ಸೋಂಕಿನ, ದುರ್ಗಂಧದ, ಹಬೆ (ಮು., ಮಲೇರಿಯಾ ಹಬೆ). ಕೆಡುಕು ಮಾಡುವ ಪ್ರಭಾವ. **Miásmal** (ಗು.) ; **Miasmátic** — ಮ್ಯಾ— (ಗು.)

Miaúl ಮಿಔಲ್ (ಕ್ರಿ. ಅಕ.) (ಬೆಕ್ಕಿನಂತೆ) 'ಮಿಯಾವ್' ಎನ್ನು.

Míca ಮೈಕ (ನಾ.) ಅಲ್ಯೂಮಿನಿಯಮ್ಮಿನ ಸಿಲಿಕೇಟು ಮತ್ತು ಇತರ ಸಿಲಿಕೇಟುಗಳಿಂದ ಕೂಡಿದ, ಸಣ್ಣ ಸಣ್ಣ ಹೊಳಪಿನ ರೇಕುಗಳಾಗಿ ಗ್ರಾನೈಟು ಕಲ್ಲಿನಲ್ಲಿ ಅಥವಾ ಸ್ಫಟಿಕಾಕೃತಿಯಲ್ಲಿ ದೊರೆಯುವ, ಹಲವು ಖನಿಜಗಳಲ್ಲೊಂದು : ಅಭ್ರಕ ; ಕಾಗೆಬಂಗಾರ. M.-schist, -slate ಬೆಣಚು ಕಲ್ಲೂ ಅಭ್ರಕವೂ ಸೇರಿದ, ಸ್ಲೇಟುಗಲ್ಲು. **Micáceous** ಮೈಕೇಷಿಅಸ್ (ಗು.)

Micawber ಮಿಕಾಬರ್ (ನಾ.) M., Mr M., Wilkins M. ಏನಾದರೂ ಒಳ್ಳೆಯ ಫಲವು ತಾನಾಗಿ ಬರುವುದೆಂದು ನಂಬಿ ಆಸೆ ಯಿಟ್ಟುಕೊಂಡಿರುವ ಸೋಮಾರಿ. **Micawberism** (ನಾ.). (David Copperfield ಎಂಬ ಕಾದಂಬರಿಯಲ್ಲಿಯ ಒಂದು ಪಾತ್ರದ ಹೆಸರಿನಿಂದ)

Míchael ಮೈಕೆಲ್ (ನಾ.) ಒಬ್ಬ ಪ್ರಧಾನ ದೇವದೂತ. Order of St M. & St George ಇಂಗ್ಲಿಷರ ಒಂದು ದರ್ಜೆಯ 'ನೈಟ್' ಪಟ್ಟ. **Michaelmas** (ಮಿಕಲ್ಮಸ್) ಮೈಕೆಲ್ ಸಂತನ ಹಬ್ಬ (ಸೆಪ್ಟೆಂಬರ್ ೨೯) ; (ಇಂಗ್ಲೆಂಡಿನಲ್ಲಿ ತ್ರೈಮಾಸಿಕ ಹಣಪಾವತಿ, ಮೊ. ವನ್ನು ಮಾಡಬೇಕಾದ) (ನಾಲ್ಕು) ತ್ರೈಮಾಸಿಕ ದಿನಗಳಲ್ಲೊಂದು.

Míckle ಮಿಕ್‌ಲ್, **Mú-** ಮಕ್‌ಲ್ (ಗು., ನಾ.) (ಸ್ಕಾಟ್ಲೆಂಡಿನ ಪ್ರಾಚೀ. ಪ್ರ.) ಬಹಳ ; ದೊಡ್ಡ ; ದೊಡ್ಡ ಮೊತ್ತ [Many a little (or pickle) makes a m. 'ಹನಿಗೂಡಿದರೆ ಹಳ್ಳ' ಎಂಬ ಅರ್ಥ]

Micro-[1] ಮೈಕ್ರೊ— (ಸ. ಪೂ. ಪ.) ಸಣ್ಣ — ; ಕಿರು — ; ಸೂಕ್ಷ್ಮ —. **-cephálic** —ಸಿಫ್ಯಾಲಿಕ್ (ಗು., ನಾ.) ಅಸಹಜವಾಗಿ ಸಣ್ಣದಾದ ತಲೆಯುಳ್ಳ(ವನು). **-céphalous** ಸೆಫಲಸ್ (ಗು.) ; **-líthic** ಸಣ್ಣ ಸಣ್ಣ ಕಲ್ಲುಗಳಿಂದ ಕಟ್ಟಿದ, ಮಾಡಿದ ; ಹೀಗೆ ಕಟ್ಟಿದ ಸ್ಮಾರಕಗಳು ಗುರುತಾಗಿರುವ. **-logy** (ಮೈಕ್ರಾ —) ಅತಿ ಸೂಕ್ಷ್ಮ ತರ್ಕ ; ಅತಿಸೂಕ್ಷ್ಮ ವಸ್ತುಗಳ ಪರೀಕ್ಷಾ ಶಾಸ್ತ್ರ. **-meter** ಸೂಕ್ಷ್ಮ ವಸ್ತು ಮಾಪಕ ; (ಖ. ವಿ.) ಅಲ್ಪ ದೂರ ಮಾಪಕ. **-métrical** (—ಕ್ರೊ—) ; **-metry** (—ಕ್ರಾ—) ; **-phone** (—ಕ್ರೊ—) ಸೂಕ್ಷ್ಮ ಧ್ವನಿ ವರ್ಧಕ (ಮು., ದೂರವಾಣಿಯ ಗ್ರಾಹಕದಲ್ಲಿರುವ ದನಿಸಾಗಣೆಯ ತಗಡುಬಿಲ್ಲೆ). **-phótograph** ಸೂಕ್ಷ್ಮ ವಸ್ತುವಿನ ವಿಸ್ತರಿಸಿದ ಛಾಯಾ ಚಿತ್ರ. **-phyte** ಸೂಕ್ಷ್ಮ ದರ್ಶಕೀಯ ಸಸ್ಯ ; ಸೂಕ್ಷ್ಮಾಣು ಸಸ್ಯ (ಮು., ಏಕಾಣು ಜೀವಿ). **-seism** (—ಸೈಸ್ಮ್) ಸೂಕ್ಷ್ಮ ಭೂಕಂಪದಿಂದಾದ ಅಲುಗಾಟ. **-seísmic** (ಗು.) ; **-seísmograph; -seismólogy. -spore** ಸೂಕ್ಷ್ಮ ಬೀಜಕಲ್ಪಗಳುಳ್ಳ ಪರೋಪಜೀವಿಯಾದ ಶಿಲೀಂಧ್ರ. **-tome** ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸುವುದಕ್ಕಾಗಿ ಅತಿ ತೆಳ್ಳನೆಯ ಹಾಳೆಗಳನ್ನು ಸೀಳಲು ಉಪ ಯೋಗಿಸುವ ಸಲಕರಣೆ ; ಸೂಕ್ಷ್ಮ ಕೃಂತಕ. **-zyme** (—ಝೈಮ್) ಕಿಣ್ವ ಕ್ರಿಯೆಯಲ್ಲಿ ಹುಟ್ಟುವ ಸೂಕ್ಷ್ಮಾಣು ಜೀವಿ.

Micro-[2] ಮೈಕ್ರೊ— (ಸ. ಪೂ. ಪ.) (ಭೌ. ವಿ.) ದಶ ಲಕ್ಷಾಂಶ — (-ampere, -coulomb, -gramme, -litre, -metre, -millimetre, -ohm, -volt, ಮೊ. ವು)

Mícrobe ಮೈಕ್ರೋಬ್ (ನಾ.) ಸೂಕ್ಷ್ಮ ದರ್ಶಕೀಯ ಜೀವಿ (ಸಸ್ಯ ಅಥವಾ ಪ್ರಾಣಿ : ಮು., ರೋಗಕಾರಕ ಅಥವಾ ಕಿಣ್ವಕಾರಕ ಜೀವಾಣು). **Micróbial** —ಬಿ— (ಗು.) ; **Microbiólogy** —ಡೈ— (ನಾ.) ಸೂಕ್ಷ್ಮ ದರ್ಶಕ ವ್ಯಕ್ತ ಜೀವಿ ಶಾಸ್ತ್ರ.

Mícrocosm ಮೈಕ್ರೊಕಾಸ್ಮ್ (ನಾ.) ಬ್ರಹ್ಮಾಂಡದ ಸಂಕ್ಷೇಪಾಕೃತಿ ಯೆಂದು ಭಾವಿಸಲ್ಪಡುವ ಮನುಷ್ಯ ; ಪಿಂಡಾಂಡ ; ಸೂಕ್ಷ್ಮ ಜಗತ್ತು. ಹೀಗೆ ಸಂಕ್ಷೇಪಾಕೃತಿಯೆಂದು ಭಾವನೆ ಮಾಡುವ ಯಾವುದಾದರೂ ಜನಸಮಾಜ, ಮೊ. ವು. (ಒಂದರ) ಅತಿಸೂಕ್ಷ್ಮ ರೂಪ (*Of* ಉಪ. ದೊಡನೆ). **Microcósmic** (ಗು.)

Mícron ಮೈಕ್ರಾನ್ (ನಾ.) ಮೀಟರಿನ ದಶ ಲಕ್ಷಾಂಶ.

Mícroscope ಮೈಕ್ರೊಸ್ಕೋಪ್ (ನಾ.) ಬರಿಯ ಕಣ್ಣಿಗೆ ಕಾಣದ ವಿವರಗಳು ಸ್ಪಷ್ಟವಾಗಿ ಕಾಣುವಂತೆ ಲೆನ್ಸು(ಗಳ) ಮೂಲಕ ಒಂದು ವಸ್ತುವಿನ ಆಕೃತಿಯನ್ನು ವಿಸ್ತರಿಸುವ ಸಲಕರಣೆ : ಸೂಕ್ಷ್ಮದರ್ಶಕ. **Microscópic** — ಸ್ಕಾಪಿಕ್ (ಗು.) ಸೂಕ್ಷ್ಮದರ್ಶಕದ ; ಸೂಕ್ಷ್ಮ ದರ್ಶಕದ ಸಹಾಯವಿಲ್ಲದೆ ವಿವರಗಳು ಬರಿಯ ಕಣ್ಣಿಗೆ ಕಾಣಿಸದಷ್ಟು ಅತಿ ಸೂಕ್ಷ್ಮವಾಗಿರುವ ; ಸೂಕ್ಷ್ಮದರ್ಶಕೀಯ. **Microscópical** (ಗು.) ; **Microscópically** (ಕ್ರಿ. ವಿ.) ; **Micróscopy** ಮೈಕ್ರಾಸ್ಕೊಪಿ (ನಾ.) ಸೂಕ್ಷ್ಮದರ್ಶಕವನ್ನು ಉಪಯೋಗಿಸುವುದು ; ಈ ಶಾಸ್ತ್ರ. **Micróscopist** (ನಾ.)

Micturítion ಮಿಕ್ಚ್ಯುರಿಷನ್ (ನಾ.) (ಅತಿ)ಮೂತ್ರ ರೋಗ. (ತಪ್ಪಾಗಿ) ಮೂತ್ರ ವಿಸರ್ಜನೆ.

Mid ಮಿಡ್ [ಗು. (ತಮ ರೂಪ midmost)] ನಡು(ವಣ) ; ಮಧ್ಯದ ; ಮಧ್ಯದಲ್ಲಿಯ ; ಮಧ್ಯಸ್ಥ ; ಅರ್ಧ [(ಸಾ., in ಪದದ ತರುವಾಯ ಪ್ರ.: In m. air, m. career, m. stream, m. winter) ; (*From, to* ಮೊ. ಉಪ. ದೊಡನೆ) (From m. June to m. August) ; (ಸಮಾನ ಪದಗಳಲ್ಲಿ : A m.-winter day)]. **Mídday** (ನಾ.) ನಡು ಹಗಲು ; ಮಧ್ಯಾಹ್ನ. **Mídland** — ಲಂಡ್ (ಗು., ನಾ.) (ಒಂದು ದೇಶದ) ಮಧ್ಯ ಭಾಗ ; ನಡು ನಾಡು. (ಬ. ವ. ದಲ್ಲಿ) ಇಂಗ್ಲೆಂಡಿನ ಮಧ್ಯ ಪ್ರಾಂತದ ಜಿಲ್ಲೆಗಳು. (ಗು.) ನಡು ನಾಡಿನ(ಲ್ಲಿಯ); ಮಧ್ಯ ಜಿಲ್ಲೆಗಳ(ಲ್ಲಿಯ). **Mídnight** —ನೈಟ್ (ನಾ.) ಮಧ್ಯ ರಾತ್ರಿ); ನಟ್ಟಿರುಳು ; ರಾತ್ರಿ ೧೨ ಗಂಟೆ ; ಕಗ್ಗತ್ತಲೆ ; (ಅನೇಕ ವೇಳೆ ವಿಶೇಷಣ ವಾಗಿ ಪ್ರ.). Mid off, on (ಕ್ರಿಕೆಟ್) = Midwicket off, on

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಮುಂದೆ ನೋಡಿ). **Mídrib** (ನಾ.) ಎಲೆಯ ನಡು ದಿಂಡು. **Mídship** (ನಾ.) ಹಡಗಿನ ಅಥವಾ ದೋಣಿಯ ಮಧ್ಯ ಭಾಗ. **Mídshipman** (ಸಂಕ್ಷಿಪ್ತ: Middy) ಹಡಗಿನ ಒಂದು ದರ್ಜೆಯ ಅಧಿಕಾರಿ. **Midships** = Amidships. **Mídsummer** (ನಾ.) ಕರ್ಕಾಟಕ ಸಂಕ್ರಾಂತಿಯ ಕಾಲ; ನಡು ಬೇಸಗೆ (ಸು., ಜೂನ್ ೨೧). M. s. day ಜೂನ್ ೨೪; (ಬಾಡಿಗೆ, ಕಂದಾಯ, ವೊ. ನ್ನು ಕೊಡುವ) ತ್ರೈಮಾಸಿಕ ಖಿಸ್ತಿನ ದಿನ. M. s. madness ಹುಚ್ಚಿನ ಪರಮಾವಧಿ; ಅತ್ಯಂತ ಹುಚ್ಚು. **Midwaý** (ಕ್ರಿ. ವಿ.) ನಡು ದಾರಿಯಲ್ಲಿ; ಮಧ್ಯ ಮಾರ್ಗದಲ್ಲಿ. Mídwicket off or on ಎಸೆಗಾರನ ಸಮೀಪವಾಗಿ ಅವನ ಎಡಕ್ಕೆ, ಬಲಕ್ಕೆ, ನಿಂತು ಆಟ ತೋರಿಸುವವನು.

Mid (ಉಪ.) (ಕಾವ್ಯ) = Amid.

Mídden ಮಿಡ್‌ನ್ (ನಾ.) (ಪ್ರಾಂ. ಪ್ರ.) ಗೊಬ್ಬರದ ಕುಪ್ಪೆ; ತಿಪ್ಪೆ. Kitchen m. ಚರಿತ್ರಪೂರ್ವ ಕಾಲದ (ಮು., ಚಿಪ್ಪುಗಳ ಮತ್ತು ಮೂಳೆಗಳ) ತಿಪ್ಪೆ.

Míddle ಮಿಡ್‌ಲ್ [ಗು., (ಅಪೂರ್ವವಾಗಿ) ತಮ ರೂಪ Middlemost] (ಒಂದು ಗುಂಪಿನ, ಸಾಲಿನ) ನಡು(ವಣ); ಮಧ್ಯದ; (ದರ್ಜೆ, ಗುಣ) ಮಧ್ಯಸ್ಥವಾದ [M. course, way (ಎರಡು ಪರಮಾವಧಿಗಳಿಗೆ) ಮಧ್ಯಸ್ಥ ಮಾರ್ಗ]. (ವ್ಯಾ.) (ಮು., ಗ್ರೀಕಿನಲ್ಲಿ) ಕರ್ಮಣಿ ರೂಪದಲ್ಲಿದ್ದರೂ ಅರ್ಥದಲ್ಲಿ ಸ್ವಾರ್ಥ ವಾಚಕವಾಗಿ, ಕರ್ತೃ ವಾಚಕವಾಗಿ, ಇರುವ ಕ್ರಿಯಾ ರೂಪ. M. age (ಯೌವನಕ್ಕೂ ವಾರ್ಧಕ್ಯಕ್ಕೂ ನಡುವಣ) ಮಧ್ಯ ವಯಸ್ಸು. M.-aged ಮಧ್ಯ ವಯಸ್ಸಿನ. The M. Ages ಮಧ್ಯ ಯುಗ [ಕ್ರಿ. ಶ. ಸು., ೧೦೦೦-೧೪೦೦ರ ವರೆಗಿನ ಕಾಲ; (ವಿಶಾಲವಾದ ಅರ್ಥದಲ್ಲಿ) ಕ್ರಿ. ಶ. ೬೦೦-೧೫೦೦ರ ವರೆಗಿನ ಕಾಲ]. M. article ವಾರಪತ್ರಿಕೆಗಳಲ್ಲಿ ಅಥವಾ ಇತರ ವೃತ್ತಪತ್ರಿಕೆಗಳಲ್ಲಿ (ಅನೇಕ ವೇಳೆ) ರಾಜಕೀಯ ಲೇಖನಗಳಿಗೂ ಗ್ರಂಥ ವಿಮರ್ಶೆಗಳಿಗೂ ಮಧ್ಯೆ ಹಾಕುವ ಸಣ್ಣ ಸಾಹಿತ್ಯ ಪ್ರಬಂಧ. M. class ಸಮಾಜದ ಮಧ್ಯ(ಮ) ಶ್ರೇಣಿ (ಅನೇಕ ವೇಳೆ ವಿಶೇಷಣವಾಗಿ ಪ್ರ.: m.-class). M. English (English ನೋಡಿ). M. finger ಮಧ್ಯದ, ನಡು, — ಬೆರಳು; ಮಧ್ಯಮ. M. Kingdom ಚೀಣಾ ರಾಜ್ಯ (ಆದಿಯಲ್ಲಿ ಕೇಂದ್ರ ಪ್ರಭುತ್ವ ರಾಷ್ಟ್ರವಾದ Honan). M. life ಜೀವನದ ಮಧ್ಯ ಭಾಗ; ನಡು ಬಾಳು; ಮಧ್ಯ ವಯಸ್ಸು. In the m. of (doing) (ಕೆಲಸದ, ಕಾರ್ಯಗತಿಯ) ಮಧ್ಯದಲ್ಲಿ. (ತರ್ಕ) M. (term) ಉಭಯ ಪ್ರತಿಜ್ಞೆಗಳಿಗೂ ಸಮಾನವಾದ ಪದ. Principle of excluded m. ಎರಡು ಪ್ರತಿಜ್ಞಾವಾಕ್ಯಗಳಲ್ಲಿ ಯಾವುದಕ್ಕಾದರೂ ಒಂದಕ್ಕೆ ಅಥವಾ ಅದರ ವ್ಯತಿರೇಕಕ್ಕೆ ಸೇರಿರಬೇಕೇ ಹೊರತು ಎರಡಕ್ಕೂ ಸೇರದೆ ಮಧ್ಯಸ್ಥವಾಗಿರಲು ಅವಕಾಶವಿಲ್ಲ ಎಂಬ ತತ್ತ್ವ: ಮಧ್ಯಮ ಬಹಿಷ್ಕಾರ ತತ್ತ್ವ. **Middleman** (ವ್ಯಾಪಾರದ ವಸ್ತುವನ್ನು ಉತ್ಪತ್ತಿ ಮಾಡುವವರಿಗೂ ಅದನ್ನು ಬಳಸುವವರಿಗೂ ಮಧ್ಯೇ ಬರುವ) ಮಧ್ಯಸ್ಥಗಾರ (ವ್ಯಾಪಾರಿ). M. weight (ಮುಷ್ಟಿ ಯುದ್ಧದಲ್ಲಿ) ೧೪೭ರಿಂದ ೧೬೦ ಪೌಂಡು ಭಾರವುಳ್ಳ ಮುಷ್ಟಿಮಲ್ಲ.

Míddle (ನಾ., ಕ್ರಿ. ಸಕ.) ಮಧ್ಯ ಬಿಂದು; —ಭಾಗ. ನಡು; ಸೊಂಟ. (ಕ್ರಿ.) (ಕಾಲ್ಚೆಂಡಾಟ) (ಚೆಂಡನ್ನು ಒಂದು ಪಕ್ಕದಿಂದ ಗುರಿಗಂಬಗಳ ಮುಂಭಾಗದ) ಮಧ್ಯಕ್ಕೆ ಒದೆ. (ನಾವೆ) ಮಧ್ಯದಲ್ಲಿ ಮಡಿಚು. **Míddling** ಮಿಡ್ಲಿಂಗ್ (ಗು., ಕ್ರಿ. ವಿ.) (ವ್ಯಾಪಾರ: ಸರಕುಗಳ ವಿಷಯದಲ್ಲಿ) (ಮೂರು ದರ್ಜೆಗಳಲ್ಲಿ) ಎರಡನೆಯ ದರ್ಜೆಯ; ಮಧ್ಯಮ ದರ್ಜೆಯ; ದುಯ್ಯಂ [**Míddlings** (ನಾ., ಬ. ವ.) ಮಧ್ಯಮ ದರ್ಜೆಯ (ದುಯ್ಯಂ) ಸರಕುಗಳು; ನುಣ್ಣನೆಯ ತೌಡುಳ್ಳ ಸಾಮಾನ್ಯವಾದ ನಯವುಳ್ಳ (ಧಾನ್ಯದ) ಹಿಟ್ಟು]. ಸಾಮಾನ್ಯ ಗುಣದ; ನಡು ತೆರದ; ಮಧ್ಯಮ; ಎರಡನೆಯ ದರ್ಜೆಯ. (ಕ್ರಿ. ವಿ.) ಸುಮಾರಾಗಿ; ತಕ್ಕ ಮಟ್ಟಿಗೆ (M. good ತಕ್ಕ ಮಟ್ಟಿಗೆ ಒಳ್ಳೆಯ); (ಬಳ. ಮಾ.) ಇದ್ದ ಮಟ್ಟಿಗೆ (ಆರೋಗ್ಯವಾಗಿ) (I am only m.). **Míddlingly** (ಕ್ರಿ. ವಿ.)

Míddy. (Midshipman ಪದದ ಸಂಕ್ಷಿಪ್ತ) Mid ನೋಡಿ.

Mídge ಮಿಜ್ (ನಾ.) (ಒಂದು ಜಾತಿಯ) ಮಶಕ. ಸಣ್ಣ ಆಕಾರದ ಮನುಷ್ಯ; ಗಿಡ್ಡ ಮನುಷ್ಯ. **Mídget** (ನಾ.) (ಕೌತುಕ ವಸ್ತುವಾಗಿ ಪ್ರದರ್ಶಿಸುವ) ಅತಿ ಸಣ್ಣ ಆಕಾರದ ಮನುಷ್ಯ; ಬಲು ಸಣ್ಣ ಆಕಾರದ ಛಾಯಾ ಚಿತ್ರ.

Mídland, Mídnight. Mid ನೋಡಿ.

Mídrash ಮಿಡ್ರ್ಯಾಷ್ (ನಾ.; ಬ. ವ. -shim) ಹೀಬ್ರೂ (ಭಾಷೆಯ) ಮತ ಗ್ರಂಥಗಳ ಕೆಲವು ಭಾಗಗಳಿಗಿರುವ ಪುರಾತನ ಯೆಹೂದ್ಯ ವ್ಯಾಖ್ಯಾನ.

Mídriff ಮಿಡ್ರಿಫ್ (ನಾ.) (ಒಳ ಎದೆಗೂ ಹೊಟ್ಟೆಗೂ ಮಧ್ಯೇ ಇರುವ) ವಿಭಾಜಕಾಂಗ.

Mídship, etc. Mid ನೋಡಿ.

Midst ಮಿಡ್‌ಸ್ಟ್ (ನಾ., ಕ್ರಿ. ವಿ., ಉಪ.) [In the m. of (—ರ) ಮಧ್ಯದಲ್ಲಿ, ನಡುವೆ. In our, your, m. ನಮ್ಮ ಪೈಕಿ, ನಿಮ್ಮ ಪೈಕಿ]. (ಕ್ರಿ. ವಿ.) [First, m. & last ಆದಿ, ಮಧ್ಯ, ಅಂತ (ಎಂಬಲ್ಲಿ ಮಾತ್ರ ಪ್ರ.)]. (ಉಪ.) (ಕಾವ್ಯ) (— ರ) ನಡುವೆ.

Mídsummer. Mid ನೋಡಿ.

Mídwife ಮಿಡ್‌ವೈಫ್ (ನಾ.; ಬ. ವ. -wives) ಹೆರಿಗೆಯಲ್ಲಿ ಸಹಾಯ ಮಾಡುವ ಹೆಂಗಸು: ಸೂಲಗಿತ್ತಿ. **Mídwifery** ಮಿಡ್‌ವಿಫ್ರಿ (ನಾ.) ಸೂಲಗಿತ್ತಿತನ; ಪ್ರಸವ ವೃತ್ತಿ; —ಶಾಸ್ತ್ರ.

Mien ಮೀನ್ (ನಾ.) (ಸಾಹಿತ್ಯ ಪ್ರ.) (ಶೀಲ ಸ್ವಭಾವವನ್ನು, ಮನೋಭಾವವನ್ನು, ತೋರಿಸುವ) ಮುಖ ಭಾವ; —ಭಂಗಿ.

Miff ಮಿಫ್ (ನಾ., ಕ್ರಿ.) (ಬಳ. ಮಾ.) ಕ್ಷುದ್ರ ಜಗಳ; ರೇಗಾಟ; ಸಿಡುಕು. (ಕ್ರಿ.) ತಪ್ಪೆಣಿಸು; ರೇಗು; ರೇಗಿಸು.

Might[1] ಮೈಟ್ (ನಾ.) ಅಧಿಕ ಬಲ (ದೈಹಿಕ ಅಥವಾ ಮಾನಸಿಕ); ಶಕ್ತಿ; ಅಪು, ಅರ್ಪು (ಗ್ರಾಂ.). With m. & main [Main (ನಾ.) ನೋಡಿ]. **Míghty** (ಗು., ಕ್ರಿ. ವಿ.) (ದೇಹ ಅಥವಾ ಬುದ್ಧಿ) ಬಲವಾದ; ಶಕ್ತಿಗೂಡಿದ; ಬಲಿಷ್ಠ. [(ಬೈಬಲ್) M. works ಅದ್ಭುತ ಕಾರ್ಯಗಳು; ಪವಾಡಗಳು]. ಸ್ಥೂಲ ರೂಪದ; ದೊಡ್ಡ ಆಕಾರದ. (ಬಳ. ಮಾ.) ದೊಡ್ಡ; ಬಹಳವಾದ. [High & m. (High ನೋಡಿ)]. (ಕ್ರಿ. ವಿ.) (ಬಳ. ಮಾ.) ಬಹಳ; ಅತಿ (That is m. easy). **Míghtily** (ಕ್ರಿ. ವಿ.); **Míghtiness** (ನಾ.) (ಮು., your high mightiness ಎಂಬ ಹಾಸ್ಯದ ಬಿರುದಿನಲ್ಲಿ)

Might[2]. May ಕ್ರಿಯೆಯ ಭೂತ.

Mignon (F) ಮಿನ್ಯಾನ್ (ಗು.) ಸಣ್ಣ ಮತ್ತು ಸೂಕ್ಷ್ಮ ರಚನೆಯ; ನಯವಾದ.

Mignonétte ಮಿನ್ಯನೆಟ್ (ನಾ.) ಸುವಾಸನೆಯ ಹೂವು ಬಿಡುವ ಒಂದು ಗಿಡ. (ಇದರ) ನರೆ ಹಸುರು ಬಣ್ಣ. ನಯವಾದ, ನಾಜೂಕಿನ, — ಅಲಂಕಾರ ಪಟ್ಟಿ (M. lace)

Migraíne (F) ಮಿಗ್ರೇನ್ (ನಾ.) ಕಠಿನವಾದ (ಅರೆ) ತಲೆನೋವು.

Migráte ಮೈಗ್ರೇಟ್ (ಕ್ರಿ. ಅಕ.) ಒಂದು ಸ್ಥಳದಿಂದ (ದೇಶದಿಂದ, ಊರಿನಿಂದ, ಮನೆಯಿಂದ, ಪ್ರೌಢ ವಿದ್ಯಾಶಾಲೆಯಿಂದ) ಮತ್ತೊಂದಕ್ಕೆ ಹೋಗು; ವಲಸೆ ಹೋಗು. (ಹಕ್ಕಿಗಳು, ಮೀನುಗಳು) ಆಯಾ ಋತುಗಳಲ್ಲಿ ಬರು, ಹೋಗು. **Mígrant** (ಗು., ನಾ.); **Migrátion** (ನಾ.); **Migrátor** (ನಾ.); **Mígratory** ಮೈಗ್ರಟರಿ (ಗು.)

Mikádo ಮಿಕಾಡೊ (ನಾ.) ಜಪಾನಿನ ಚಕ್ರವರ್ತಿ.

Mike[1] ಮೈಕ್ (ಕ್ರಿ. ಅಕ., ನಾ.) (ಅಸಂ.) ಕೆಲಸ ಮಾಡಲು ಹಿಂಜರಿ; ಮೈಗಳ್ಳನಾಗಿರು. (ನಾ.) ಸೋಮಾರಿತನದಿಂದ ಕಾಲ ಕಳೆಯುವುದು (= On the m.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mike[2] ಮೈಕ್ (ಬಳ. ಮಾ.) = Microphone (ಪದದ ಸಂಕ್ಷಿಪ್ತ) (Micro ನೋಡಿ)

Mil ಮಿಲ್ (ನಾ.) (ಒಂದು) ಸಾವಿರ, ಸಹಸ್ರ (Per m. ಸಾವಿರಕ್ಕೆ). (ಔಷಧದ ಅಳತೆ: Millilitre ನ ಸಂಕ್ಷಿಪ್ತ) ಲೀಟರಿನ ಸಹಸ್ರಾಂಶ. ಚಲಾವಣೆಗೆ ತರಬೇಕೆಂದು ಸಲಹೆಯುಳ್ಳ ಒಂದು ನಾಣ್ಯ (=£ $\frac{1}{1000}$; Pound & m. scheme). ತಂತಿ, ಮೊ. ಗಳ ವ್ಯಾಸ ಮಾಪನದಲ್ಲಿ (ಏಕ) ಮಾನ (= $\frac{1}{1000}$ ಅಂಗುಲ)

Mílage. **Mile** ನೋಡಿ.

Milánese ಮಿಲನೀಸ್ (ಗು., ನಾ.; ಬ. ವ. ದಲ್ಲೂ ಅದೇ ರೂಪ) (ಲಾಂಬರ್ಡಿ ಪ್ರಾಂತದ ರಾಜಧಾನಿಯಾದ) ಮಿಲನ್ ಪಟ್ಟಣದ(ವನು). The m. ಪುರಾತನ ಮಿಲನ್ ಜಹಗೀರು ಪ್ರಾಂತ (Duchy)

Mílch ಮಿಲ್ಚ್ (ಗು.) (ಸಾಕಿದ ಸಸ್ತನಿ ಪ್ರಾಣಿಗಳ ವಿಷಯದಲ್ಲಿ) ಹಾಲು ಕೊಡುವ; ಹಾಲಿಗಾಗಿ ಇಟ್ಟುಕೊಂಡಿರುವ; ಕರಾವಿನ. M. cow (ರೂಪ.) ಲಾಭ ಕೊಡುವಂಥದು (ಮು., ಕಷ್ಟ ಪಡದೆ ಹಣ ಕೀಳಬಹುದಾದವನು)

Mild ಮೈಲ್ಡ್ (ಗು.) ಸೌಮ್ಯ; ಸಾಧುವಾದ; ಮೃದು ಸ್ವಭಾವದ; ಮೆತ್ತನೆಯ; (ನಿಯಮ, ಶಿಕ್ಷೆ, ಮೊ. ವು) ಕಠಿನವಲ್ಲದ. (ವಾಯು ಸ್ಥಿತಿ) ಶಾಂತವಾಗಿಯೂ ಸುಖೋಷ್ಣವಾಗಿಯೂ ಇರುವ; ಹಿತಕರವಾದ. (ಔಷಧ) ತೀಕ್ಷ್ಣತೆಯಿಲ್ಲದ, ಮೃದು ಪರಿಣಾಮದ; (ಆಹಾರ, ಹೊಗೆ ಸೊಪ್ಪು, ಮೊ. ವು) ರುಚಿ, ಮೊ. ಗಳಲ್ಲಿ ಖಾರವಿಲ್ಲದ, ಕಟುವಲ್ಲದ, ಸಪ್ಪೆಯಾದ; (ಬಿಯರ್ ಮದ್ಯ) Hops ಕಾಯಿಗಳಿಂದ ಕಟುರುಚಿ ಕಟ್ಟಿಲ್ಲದ: (Bitter ಎಂಬುದಕ್ಕೆ ವ್ಯತಿರಿಕ್ತವಾಗಿ). ಪೇಲವವಾದ; ದುರ್ಬಲವಾದ; ತ್ರಾಣವಿಲ್ಲದ; ಉತ್ಸಾಹಶೂನ್ಯ. M. steel (ಸ್ವಲ್ಪ ಭಾಗ ಇಂಗಾಲಾಂಶವಿದ್ದು, ಬಲವಾಗಿಯೂ ಬಗುವಾಗಿಯೂ ಇರುವ, ಆದರೆ ಸುಲಭವಾಗಿ ಹದ ಕೊಡಲಾಗದ) ಮೆತು ಉಕ್ಕು. **Mílden** (ಕ್ರಿ.) ಮೆತು ಮಾಡು; ಮೆತುವಾಗು. **Míldly** (ಕ್ರಿ. ವಿ.); **Míldness** (ನಾ.)

Míldew ಮಿಲ್ಡ್ಯೂ (ನಾ., ಕ್ರಿ.) ಸಸ್ಯಗಳನ್ನು ಹಾಳುಮಾಡುವ ಒಂದು ಸೂಕ್ಷ್ಮ ಶಿಲೀಂಧ್ರ; (ತೇವ ತಟ್ಟಿದ ಕಾಗದ, ಚರ್ಮ, ಮೊ. ಗಳಮೇಲೆ ಬೆಳೆಯುವ, ಸಾ., ತೆಳ್ಳಗೂ ಬೆಳ್ಳಗೂ ಇರುವ) ಒಂದು ತೆರದ ಬೂಷ್ಟು. (ಕ್ರಿ.) ಬೂಷ್ಟು ಹಿಡಿ. **Míldewy** (ಗು.)

Mile ಮೈಲ್ (ನಾ.) ಉದ್ದಳತೆಯ ಮಾನ: ಮೈಲಿ (ಇಂಗ್ಲೆಂಡು, ಮೊ. ದೇಶಗಳಲ್ಲಿ, ಈಗ ೧,೭೬೦ ಗಜಗಳು. ಹಿಂದೆ ರೋಮನರ ೧,೦೦೦ ಹೆಜ್ಜೆಯ ಅಳತೆ: ಸು., ೧,೬೧೮ ಗಜಗಳು); [Geographical, nautical, m. ಭೂಮಿಯ ಬೃಹದ್ವೃತ್ತ ರೇಖೆಯ ೧ ಮಿನಿಟ್ ಕೋನಾಂತರ ಭಾಗ (ಎಂದರೆ, $\frac{1}{21600}$ ಭಾಗ); British Admiraltyಯವರು ಇದನ್ನು ೬,೦೮೦ ಅಡಿಯೆಂದು ನಿಗದಿಮಾಡಿರುತ್ತಾರೆ]. ಒಂದು ಮೈಲಿಯ ದೂರದ ಓಟದ ಪಂದ್ಯ. [Not 100 miles from (ಹಾಸ್ಯವಾಗಿ) ನೂರು ಮೈಲಿಯೇನೂ ಇಲ್ಲ: ಎಂದರೆ, ಹತ್ತಿರದಲ್ಲಿಯೇ]. **Mílage, Míleage** ಮೈಲೆ(ಲ)ಜ್ (ನಾ.) ಪ್ರಯಾಣ ಮಾಡಿದ, ಬಳಸಿದ, ಮೈಲಿಗಳ ದೂರ, ಉದ್ದ; ಒಂದು ಮೈಲಿಗೆ ಆಗುವ ವೆಚ್ಚ, ಭತ್ಯ (ಭತ್ತೆ). **Míler** (ನಾ.) (ಬಳ. ಮಾ.) ಒಂದು ಮೈಲಿ ದೂರ ಓಡಲು ದಕ್ಷತೆಯುಳ್ಳ, ತರಪೇತು ಮಾಡಿರುವ, —ಮನುಷ್ಯ, ಕುದುರೆ (ಸಮಾಸವಾಗಿ ಸಹ: Two-m.). **Milestone** ಮೈಲಿಯ ಕಲ್ಲು; (ರೂಪ.) ಜೀವನದಲ್ಲಿ ಒಂದು ಘಟ್ಟ, ಮಜಲು, ಘಟನೆ, ದಶೆ.

Míl(e)age, Míler. **Mile** ನೋಡಿ.

Milésian ಮೈ(ಮಿ)ಲೀಷ(ಷ್ಇ)ನ್ (ಗು., ನಾ.) ಐರ್ಲೆಂಡಿನ(ವನು)

Míliary ಮಿಲಿಯರಿ (ಗು.) (ರೋಗ ನಿದಾನ) ಗಾತ್ರದಲ್ಲಾಗಲಿ ಆಕಾರದಲ್ಲಾಗಲಿ ಸಾವೆಯ ಕಾಳಿನಂಥ (M. gland, tubercle). M. fever (ಗೋಣಿತಟ್ಟಿನಂತೆ) ಸಾವೆಯ ಕಾಳಿನ ಆಕಾರದ ಗುಳ್ಳೆಗಳೇಳುವ ಒಂದು ತೆರದ ಜ್ವರ.

Milieú (F) ಮಿಲ್ಯೋ, ಮಿಾಲ್ಯ (ನಾ.) ಪರಿಸರ; ಪರಿಸ್ಥಿತಿ; ಜೀವನ ಸ್ಥಿತಿ; ಸಾಮಾಜಿಕ ಸನ್ನಿವೇಶ.

Mílitant ಮಿಲಿಟಂಟ್ (ಗು.) (ಮು., ಧಾರ್ಮಿಕ) ಯುದ್ಧದಲ್ಲಿ ತೊಡಗಿರುವ [The Church m. (Church ನೋಡಿ)]; ಹೋರಾಡುವ (ಸ್ವಭಾವದ); ಜಗಳಗಂಟನಾದ. **Mílitancy** (ನಾ.); **Mílitantly** (ಕ್ರಿ. ವಿ.); **Mílitate** (ಕ್ರಿ. ಅಕ.) ಯುದ್ಧದಲ್ಲಿ ಭಾಗ ವಹಿಸು, ತೊಡಗು (ಸಾ., ರೂಪ.). (ನಿಶ್ಚಯಾಂಶ, ಸಾಕ್ಷ್ಯ, ಮೊ. ವು ಒಂದು ನಿರ್ಣಯಕ್ಕೆ ಅಥವಾ ಪರಿಣಾಮಕ್ಕೆ, ಸಾ., ವಿರುದ್ಧವಾಗಿ, ಪ್ರತಿಕೂಲವಾಗಿ) ಪರಿಪುಷ್ಟವಾಗಿರು, ಬಲವತ್ತರವಾಗಿರು (*Against* ಪದ ದೊಡನೆ)

Mílitary ಮಿಲಿಟರಿ (ಗು., ನಾ.) ಸಿಪಾಯಿಗಳ; ಸಿಪಾಯಿಗಳು ಮಾಡಿದ; ಸಿಪಾಯಿಗಳಿಗೆ ತಕ್ಕ; ಸೇನೆಯ; ಸೈನಿಕ [M. fever ವಿಷಮಶೀತ ಜ್ವರ. M. chest ಸೇನೆಯ ಖಜಾನೆ. M. testament ಸಿಪಾಯಿಯ ಬಾಯಿಹೇಳಿಕೆಯ ಅಂತಿಮ ಇಷ್ಟ ಪತ್ರ (ಲಿಖಿತವಲ್ಲ)]. (ನಾ.) The m. ಸಿಪಾಯಿಗಳು; ಸೈನ್ಯ [ಗ್ರಾಮ್ಯ ಪ್ರ.: the ಪದ ಬಿಟ್ಟು; = ಕೆಲವು ಸಿಪಾಯಿಗಳು (ಉದಾ., M. had been seen in the vicinity)]. **Mílitarily** (ಕ್ರಿ. ವಿ.); **Mílitarism** (ನಾ.) ಸಿಪಾಯಿ ಕಸಬಿನವನ ಸ್ವಭಾವ, ಪ್ರವೃತ್ತಿ; ಕ್ಷಾತ್ರ ಭಾವ; ಯುದ್ಧ ಮನಸ್ಕತೆ. **Mílitarist** (ನಾ.) ಯುದ್ಧ ಶಾಸ್ತ್ರಜ್ಞ; ಸೈನಿಕ ಭಾವನೆಗಳ ಪ್ರಭಾವ ತುಂಬಿದವನು. **Militarizátion** (ನಾ.); **Mílitarize** (ಕ್ರಿ. ಸಕ.)

Mílitate. **Militant** ನೋಡಿ.

Milítia ಮಿಲಿಷ (ನಾ.) ಸೈನ್ಯ(ಬಲ), (ಮು.) ಪ್ರಜಾ ಸೈನ್ಯ; ಸಾ., ತಾವಾಗಿ ಒಪ್ಪಿ ಬಂದವರನ್ನು ಕೂಡಿಸಿ, ಹಿಂದೆ ಬ್ರಿಟನ್ನಿನ ಹಲವು ಜಿಲ್ಲೆಗಳವರು ಏರ್ಪಡಿಸುತ್ತಿದ್ದ ಬ್ರಿಟಿಷ್ ಸೈನ್ಯದ ಒಂದು ಶಾಖೆ. **Militiaman** ಪ್ರಜಾ(ಸೈನ್ಯದ) ಸೈನಿಕ.

Milk ಮಿಲ್ಕ್ (ನಾ.) (ಸಸ್ತನಿ ಸ್ತ್ರೀಪ್ರಾಣಿಗಳಲ್ಲಿ ಅವುಗಳ ಮರಿಗಳ ಆಹಾರಕ್ಕಾಗಿ ಉತ್ಪತ್ತಿಯಾಗುವ) ಹಾಲು; ಕ್ಷೀರ. M. for babes (ರೂಪ.) ಸುಲಭ ಸಾಹಿತ್ಯ, ತತ್ತ್ವ, ಮೊ. ವು: ಮಕ್ಕಳ ಸಾಹಿತ್ಯ [ಎದುರು ಪದ: Strong meat (Strong ನೋಡಿ)]. M. & honey ಸಮೃದ್ಧ ಭೋಗ ಸಾಮಗ್ರಿ; ಧನ ಧಾನ್ಯ ಸಮೃದ್ಧಿ. M. of human kindness ಮನುಷ್ಯ ಸಹಜವಾದ ದಯೆ, ಕರುಣೆ. No use crying over spilt m. [Cry (ಕ್ರಿ.) ನೋಡಿ]. ಮರದ ಹಾಲು; ಸಸ್ಯ ಕ್ಷೀರ (ಮೆತು ಸಸ್ಯಗಳಿಂದ ಅಥವಾ ಔಷಧ ವಸ್ತು, ಮೊ. ಗಳಿಂದ ತಯಾರಿಸಿದ) ಹಾಲನಂಥ ದ್ರವ (ಉದಾ., M. of almonds). M. & water ನೀರಸವಾದ ಭಾಷಣ, ಭಾವ (ವಿಶೇಷಣವಾಗಿ ಸಹ: m.-&-w.). **M.-crust** ಗುಳ್ಳೆಗಳೇಳುವ ಮಕ್ಕಳ ಒಂದು ಚರ್ಮರೋಗ. **M. fever** (ಹೆತ್ತ ಎರಡು ಮೂರು ದಿನಗಳಲ್ಲಿ ಹಾಲುಗೂಡುವಾಗ ಬಾಣಂತಿಯರಿಗೆ ಬರುವ) (ಅಲ್ಪ) ಸ್ತನ್ಯ ಜ್ವರ. **M.-float** ಹಾಲನ್ನು (ಮನೆ ಮನೆಗೆ) ಹಂಚುವುದಕ್ಕಾಗಿ ಉಪಯೋಗಿಸುವ, ತಗ್ಗಾಗಿಯೂ ಹಗುರವಾಗಿಯೂ ಇರುವ, ಕುದುರೆಯ ಬಂಡಿ. **M.-leg** (ಬಾಣಂತಿಯರಿಗೆ ಕೆಲವು ವೇಳೆ ಬರುವ) ಕಾಲೂತ. **Milkmaid** ಹೈನಿನ ಮನೆಯಲ್ಲಿ ಹಾಲು ಕರೆಯುವವಳು ಅಥವಾ ಕೆಲಸ ಮಾಡುವವಳು; ಹಾಲಿನವಳು; ಗೌಳಿಗಿತ್ತಿ. **Milkman** ಹಾಲು ಮಾರುವವನು; ಗೌಳಿಗ. **M. pudding** (ಅಕ್ಕಿ, ಸಬ್ಬಕ್ಕಿ, ಮೊ. ಗಳಿಂದ ಮಾಡಿ ಹಾಲನಲ್ಲಿ ಬೇಯಿಸಿದ) ಹಾಲುಗಡುಬು. **M. punch** ಹಾಲನ್ನೂ ಮದ್ಯವನ್ನೂ ಬೆರಸಿ ಮಾಡಿದ ಪಾನೀಯ. **Mílksop** ಸತ್ತ್ವಹೀನ: ಸಪ್ಪೆ ಮನುಷ್ಯ. **M.-tooth** ಹಾಲುಹಲ್ಲು. **Milkweed** ಹಾಲನಂಥ ರಸವುಳ್ಳ ಜಾತಿಯ ಕಾಡು ಗಿಡಗಳಲ್ಲೊಂದು. **M.-white** ಹಾಲುಬಿಳುಪಿನ. **Milkwort** ಹಲವು ಬಗೆಯ ಸಸ್ಯಜಾತಿ. **Milky** (ಗು.) ಹಾಲಿನ(ಂಥ); ಹಾಲು ಬೆರಸಿದ. (ದ್ರವ) ಬಿಳಿಯ ಮಬ್ಬಿನಿಂದ ಕೂಡಿದ; ತಿಳಿಯಾಗಿಲ್ಲದ. ಪೌರುಷವಿಲ್ಲದ; ಸೌಮ್ಯ ಸ್ವಭಾವದ. **Milky Way** (ಅಸಂಖ್ಯಾತ ನಕ್ಷತ್ರಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಹು ಒತ್ತಾಗಿರುವುದರಿಂದ) ಆಕಾಶದಲ್ಲಿ ಹಾಲು ಚೆಲ್ಲಿದಂತೆ ಸುತ್ತು ವರಿದು ಕಾಣುವ ತೇಜಃಪುಂಜ ; ಕ್ಷೀರ ಪಥ ; ಆಕಾಶ ಗಂಗೆ. **Mílkiness** (ನಾ.)

Milk (ಕ್ರಿ. ಸಕ.) (ಹಸು, ಮೇಕೆ, ಮೊ. ಗಳ) ಹಾಲು ಕರೆ (M. the ram or bull ಉಪಯೋಗವಾಗದ ಕೆಲಸದಲ್ಲಿ ತೊಡಗು). (ಒಬ್ಬನಿಂದ) ಹಣ ಕೀಳು, ಸ್ವಪ್ರಯೋಜನ ಪಡೆ. (ಅಸಂ.) (ದೂರವಾಣಿಯ, ದೂರ ಲೇಖನದ, —ತಂತಿಯಿಂದ) ವಾರ್ತೆಯನ್ನು ಕದಿ. (ಹಾವು, ಮೊ. ಗಳಿಂದ) ವಿಷ, ರಸ, ಮೊ. ನ್ನು ತೆಗೆ.

Míll[1] ಮಿಲ್ (ನಾ.) ಧಾನ್ಯ ಬೀಸುವ ಯಂತ್ರ(ಗಳುಳ್ಳ ಕಾರಖಾನೆ) [Watermill ನೀರಿನ ಶಕ್ತಿಯಿಂದ ನಡೆಯುವ ಬೀಸುಯಂತ್ರ. Windmill ಗಾಳಿಯ ಶಕ್ತಿಯಿಂದ—. Put, go, through the m. ಚೆನ್ನಾಗಿ ತರಪೇತು ಮಾಡು, ಆಗು ; ಅನುಭವ ಪಡೆ, ಮಾಡಿಸು. The mills of God grind slowly ದೈವಶಿಕ್ಷೆ ಅನೇಕ ವೇಳೆ ನಿಧಾನವಾಗಿ (ಆದರೆ ತಪ್ಪದೆ) ಬರುತ್ತದೆ]. ಯಾವುದಾದರೂ ಘನ ಪದಾರ್ಥವನ್ನು ಪುಡಿ ಮಾಡುವ ಅಥವಾ ತಿರುಳು ತಿರುಳಾಗಿ ಮಾಡುವ ಯಂತ್ರಸಲಕರಣೆ (Coffee, pepper, paper, -m.). (ರಾಶಿಗಟ್ಟಳೆ ತಯಾರಿಕೆಯ) ಯಾವುದಾದರೂ ಯಂತ್ರ ಅಥವಾ ಯಂತ್ರಸಜ್ಜಿತ ಕಾರಖಾನೆ ; ಯಂತ್ರಶಾಲೆ ; ಗಿರಣಿ (Saw, cotton, silk, -m. ; M.-hand ಕಾರಖಾನೆಯ ಕೆಲಸಗಾರ) ; ಗಾಣ (Sugar-m., oil-m.). ಮುಷ್ಟಿ ಯುದ್ಧ ; ಮಲ್ಲ ಯುದ್ಧ. **Millboard** (ಪುಸ್ತಕಗಳಿಗೆ ರಟ್ಟು ಕಟ್ಟುವುದು, ಮೊ. ಕ್ಕೆ ಉಪಯೋಗಿಸುವ) ದಪ್ಪ ರಟ್ಟು (ಹಾಳೆ). **Mill-dam** ಬೀಸುವ ಯಂತ್ರಕ್ಕೆ ನೀರು ಒದಗಿಸುವುದಕ್ಕಾಗಿ ಹೊಳೆಗೆ ಹಾಕಿದ ಅಣೆಕಟ್ಟು. **M.-pond** ಬೀಸುಯಂತ್ರದ ಕಾರಖಾನೆಯ ಕುಂಟೆ (ಪ್ರಶಾಂತ ಸಮುದ್ರದ ವಿಷಯದಲ್ಲಿ : Like a m.-pond); (ಹಾಸ್ಯ ಪ್ರ.) ಉ. ಅಟ್ಲಾಂಟಿಕ್ ಸಾಗರ. **M.-race** ಸುತ್ತುಯಂತ್ರದ ಚಕ್ರವನ್ನು (ಗರ ಗರನೆ) ತಿರುಗಿಸುವ ನೀರುಹರಿವು, ನೀರೋಟ. **Millstone** ಬೀಸುವ ಕಲ್ಲಿನ (ಮೇಲಿನ ಅಥವಾ ಕೆಳಗಿನ) ಹೋಳು. Nether millstone (Nether ನೋಡಿ). See far into a millstone (ಸಾ., ವ್ಯಂಗ್ಯ ಪ್ರ.) ಅಸಾಧಾರಣವಾದ ತೀಕ್ಷ್ಣ ಬುದ್ಧಿಯುಳ್ಳವನಾಗಿರು. Between upper & nether millstones ತಡೆಯಲಾಗದ ಒತ್ತಡಕ್ಕೆ ಈಡಾಗಿ ; ಇಕ್ಕಟ್ಟಿನಲ್ಲಿ ಸಿಕ್ಕಿ. Millstone grit ಕಠಿನವಾದ ಒಂದು ಸ್ಫಟಿಕ ಶಿಲೆ. **Mill-wheel** (ಮು., ನೀರಿನ ಓಟದಿಂದ ತಿರುಗುವ) ಯಂತ್ರದ ಚಕ್ರ. **Millwright** ಸುತ್ತುಯಂತ್ರಗಳನ್ನು ನಕ್ಷೆ ಹಾಕಿ ನಿರ್ದೇಶಿಸುವ ಅಥವಾ ಕಟ್ಟುವ ಶಿಲ್ಪಿ. **Míller** (ನಾ.) (ಧಾನ್ಯ) ಬೀಸುವ ಕಾರಖಾನೆಯ ಯಜಮಾನ ; ಯಾವುದಾದರೂ ಸುತ್ತುಯಂತ್ರದ ಕಾರಖಾನೆಯನ್ನು ನಡಸುವವನು. ಹಲವು ಬಗೆಯ ಬಿಳಿಯ ಅಥವಾ ಬಿಳಿಯ ಪುಡಿಯುಳ್ಳ ಹುಳು ; ಒಂದು ಜಾತಿಯ ಹಾರುಹುಳು. M.'s thumb ಹಲವು ಬಗೆಯ ಮೀನು.

Mill (ಕ್ರಿ.) (ಬಟ್ಟೆ, ಮೊ. ನ್ನು) ಗಟ್ಟಿಸಿ ದಟ್ಟವಾಗಿ ಮಾಡು. (ಧಾನ್ಯವನ್ನು) ಬೀಸುಯಂತ್ರದಲ್ಲಿ ಬೀಸು, ಹಿಟ್ಟು ಮಾಡು. (ನಾಣ್ಯದ ಏಣಿನಲ್ಲಿ) ಒಂದೇ ಸಮನಾದ ಗೀರುಗಳನ್ನು ಮಾಡು (ಮು., ಘೂ. ಕ್ರ. ನಲ್ಲಿ). ನೊರೆಗಟ್ಟುವಂತೆ (ಚಾಕೊಲೇಟನ್ನು) ಕಡೆ. (ಒಬ್ಬನನ್ನು) ಬಡಿ, ಹೊಡೆ, ಚಚ್ಚು ; (ಒಬ್ಬನೊಡನೆ) ಕಾದಾಡು. (ದನಗಳ ವಿಷಯದಲ್ಲಿ) ಗುಂಪಾಗಿ, ಒಟ್ಟಾಗಿ, ಸುತ್ತುತಿರುಗು.

Mill[2] ಮಿಲ್ (ನಾ.) (ಅಮೆ. ಸಂ.) $\frac{1}{1000}$ ಡಾಲರು [ರೆಕ್ಕಾಚಾರಕ್ಕಾಗಿ ಮಾತ್ರ ಇಟ್ಟುಕೊಂಡಿರುವ ಮೊತ್ತ (ಛಾಪಿಸಿದ್ದಲ್ಲ)]

Millenárian, Míllenary, etc. Millennium ನೋಡಿ.

Millénnium ಮಿಲೆನಿಯಂ (ನಾ.) (ಮು., ಯೇಸು ಕ್ರಿಸ್ತನು ಸಶರೀರಿಯಾಗಿ ಭೂಮಿಯಮೇಲೆ ಬಂದು ಸಾಕ್ಷಾತ್ತಾಗಿ ರಾಜ್ಯಭಾರ ಮಾಡುವನೆಂದು ನಂಬುವ) ಸಾವಿರ ವರ್ಷ ಕಾಲ ; ಧರ್ಮಯುಗ ; ಸುಯುಗ. **Millénnial** (ಗು.) ; **Millenárian** —ಲ— (ಗು., ನಾ.) ಈ ಸಹಸ್ರ ವರ್ಷ ಕಾಲದ ; ಇದರಲ್ಲಿ ನಂಬಿಕೆಯುಳ್ಳ(ವನು). **Millenárianism** (ನಾ.); **Míllenary** (ಗು., ನಾ.) ಸಹಸ್ರ ವರ್ಷದ ; ಧರ್ಮಯುಗದ ; ಸುಯುಗದ ; ಇದರಲ್ಲಿ ನಂಬಿಕೆಯುಳ್ಳವನು.

Míllepede ಮಿಲಿಪೀಡ್ (ನಾ.) (ಅನೇಕ ಕಾಲುಗಳುಳ್ಳ ಹುಳುಗಳ ಜಾತಿಯ) ಸಹಸ್ರಪಾದಿ ; ಭೂವಾಸಿಯಾದ ವಲ್ಕವಂತ ಪ್ರಾಣಿಜಾತಿ (ಉದಾ., ಮರ ಹೇನು, ಅರ್ಮಡಿಲೊ, ಮೊ.)

Millésimal ಮಿಲೆಸಿಮಲ್ (ಗು., ನಾ.) ಸಹಸ್ರಾಂಶ(ದ) ; ಸಹಸ್ರಾಂಶಗಳುಳ್ಳ.

Míllet ಮಿಲೆಟ್ (ನಾ.) (ಇಂಡಿಯಾ ತವರಿನ) ಪುಷ್ಟಿಕರವಾದ ಸಣ್ಣ ಕಾಳುಗಳುಳ್ಳ ತೆನೆ ಬಿಡುವ ಒಂದು ಸಸ್ಯ (ಸಾವೆ, ರಾಗಿ, ಮೊ. ವು) ; ಇದರ ಕಾಳು. M.-grass ಎತ್ತರವಾಗಿ ಬೆಳೆಯುವ ಅಂದವಾದ ಒಂದು ಹುಲ್ಲುಜಾತಿ.

Mílli- ಮಿಲಿ— (ಸ. ಪೂ. ಪ.) (ಮೆಟ್ರಿಕ್ ಪದ್ಧತಿಯಲ್ಲಿ) (ಒಂದರ) ಸಹಸ್ರಾಂಶ (ಉದಾ., -gramme ಗ್ರ್ಯಾಮಿನ ಸಹಸ್ರಾಂಶ = ·೦೧೫೪ ಇಂಗ್ಲಿಷ್ ಗ್ರೈನು ; -litre = ·೦೬೧ ಘನ ಅಂಗುಲ; -metre = ·೦೩೯೩ ಅಂಗುಲ)

Mílliard ಮಿಲಿಅರ್ಡ್ (ನಾ.) = A thousand millions : ನೂರು ಕೋಟಿ.

Mílliner ಮಿಲಿನರ್ (ನಾ.) ಹೆಂಗಸರ ಟೊಪ್ಪಿಗೆ, ಮೊ. ತಲೆಯುಡಿಗೆಗಳನ್ನು ತಯಾರು ಮಾಡುವವಳು(ನು). Man m. (ರೂಪ.) ಅಲ್ಪ, ಚಿಲ್ಲರೆ, — ಹವ್ಯಾಸಗಳಲ್ಲಿ ತೊಡಗಿರುವವನು. **Míllinery** (ನಾ.)

Míllion ಮಿಲ್ಯನ್ (ನಾ., ಗು.) ಹತ್ತು ಲಕ್ಷ ; ಹತ್ತು ಲಕ್ಷ ಪೌಂಡು ; (ಅಮೆ. ಸಂ.) ಹತ್ತು ಲಕ್ಷ ಡಾಲರು. The m. ಜನರು ; ಮಂದಿ ; ಜನಸಾಮಾನ್ಯ. **Míllionfold** (ಗು., ಕ್ರಿ. ವಿ.) ಹತ್ತು ಲಕ್ಷ ಸೂಳು, ಬಾರಿ. **Míllionth** (ಗು., ನಾ.) ಒಂದರಲ್ಲಿ ಹತ್ತು ಲಕ್ಷ ಭಾಗ(ದ). **Millionaíre** —ನೇರ್ (ನಾ.) ಲಕ್ಷಾಧಿಪತಿ ; ಕೋಟೀಶ್ವರ ; ಬಹು ಭಾರಿ ಐಶ್ವರ್ಯವಂತ.

Millionaíre. Míllion ನೋಡಿ.

Mills bomb ಮಿಲ್ಸ್ ಬಾಂಬ್ (ನಾ.) ಕಳೆದ ಮಹಾ ಯುದ್ಧದಲ್ಲಿ ಬಹುವಾಗಿ ಉಪಯೋಗಿಸುತ್ತಿದ್ದ, ಕೈಯಿಂದ ಎಸೆಯುವ, ಅಂಡಾಕಾರದ ಸಿಡಿಗುಂಡು. (ಕಲ್ಪಕನಾದ Mills ಎಂಬಾತನ ಹೆಸರಿನಿಂದ)

Milór(d) (F) ಮಿ(ಮಿ)ಲಾರ್ (ನಾ.) ಇಂಗ್ಲಿಷ್ ಐಶ್ವರ್ಯವಂತ ಶ್ರೀಮಂತ(ನಿಗೆ ಫ್ರೆಂಚ್ ಪದ)

Mílreis ಮಿಲ್‌ರೇ(ಇ)ಸ್ (ನಾ.) (೪ ಶಿಲಿಂಗ್ ೫। ಪೆನಿ ಬೆಲೆಯ) ಪೋರ್ಚುಗೀಸರ ಹಿಂದಿನ ಕಾಲದ ಒಂದು ಚಿನ್ನದ ನಾಣ್ಯ.

Milt ಮಿಲ್ಟ್ (ನಾ., ಕ್ರಿ. ಸಕ.) (ಸಸ್ತನಿ ಪ್ರಾಣಿಗಳಲ್ಲಿಯ) ಗುಲ್ಮ ; ಇತರ ಕಶೇರುಕ ಪ್ರಾಣಿಗಳಲ್ಲಿ ಇದಕ್ಕೆ ಜವಾಬಾದ ಅಂಗ ; ಗಂಡು ಮೀನಿನ ಶುಕ್ಲ. (ಕ್ರಿ.) (ಹೆಣ್ಣು ಮೀನಿನ ರಜಸ್ಸನ್ನು) ಗರ್ಭವತ್ತಾಗಿ ಮಾಡು. **Mílter** (ನಾ.) ಶುಕ್ಲ ಸೂಸುವ ಕಾಲದ ಗಂಡು ಮೀನು.

Miltónic ಮಿಲ್ಟಾನಿಕ್ (ಗು.) (ಇಂಗ್ಲಿಷ್ ಮಹಾ ಕವಿ) ಮಿಲ್ಟನ್ನಿನ (ಶೈಲಿಯಂಥ). **Miltónian** (ಗು.) = Miltonic.

Mime ಮೈಮ್ (ನಾ., ಕ್ರಿ. ಅಕ.) (ಗ್ರೀಕ್ ಅಥವಾ ರೋ. ಪ್ರಾ.) ಅಣಕದಿಂದ ಕೂಡಿದ ಒಂದು ಸರಳ ನಕಲಿಯ ನಾಟಕ : ಅಣಕ ನಾಟಕ ; ಅಣಕ ನಟ ; ಮೂಕ ನಟ ; ಹಾಸ್ಯಗಾರ. (ಕ್ರಿ.) (ಸಾ., ಮಾತುಗಳಿಲ್ಲದೆ) ಮೂಕಾಭಿನಯ ಮಾಡು. **Mímic** ಮಿಮಿಕ್ (ಗು., ನಾ., ಕ್ರಿ. ಸಕ.) ಅನುಕರಿಸುವ ; ಅನುಕರಣದ (Real ಎಂಬ ಪದಕ್ಕೆ ವ್ಯತಿರಿಕ್ತವಾಗಿ). (ನಾ.) ನಗೆ ಬರಿಸುವಂತೆ ಅಣಕ ಮಾಡುವುದರಲ್ಲಿ ನಿಪುಣನಾದವನು : ಅನುಕರಣ ನಿಪುಣ. (ಕ್ರಿ.) (ವ್ಯಕ್ತಿ, ರೀತಿ, ಮೊ. ನ್ನು) ಅಣಕಿಸಿ ಹಾಸ್ಯ ಮಾಡು. ಅತಿ ಸೂಕ್ಷ್ಮವಾಗಿ, ದಾಸನಂತೆ, ಅನುಕರಣ ಮಾಡು. (ವಸ್ತುಗಳು) ಬಹಳ ಹತ್ತಿರವಾಗಿ ಹೋಲು. **Mímicry** ಮಿಮಿಕ್ರಿ (ನಾ.) ಅಣಕಿಸುವುದು; (ಮತ್ತೊಂದನ್ನು) ಅಣಕಿಸುವಂಥದು. (ಜೀ. ವಿ.) = Mimesis.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mímeograph ಮಿಮಿಯೊಗ್ರಾಫ್ (ನಾ.) ತಕ್ಕ ರಚನೆಯ ತೆಳುವಾದ ಫಲಕದಮೇಲೆ ಲೇಖನಿಯಿಂದ ಕೆತ್ತಿ ಅಥವಾ ಅಕ್ಷರವೊಳೆಗಳಿಂದ ಅಚ್ಚೊತ್ತಿ, ಅದರಿಂದ ಅನೇಕ ಪ್ರತಿಗಳನ್ನು ತೆಗೆಯಲಾಗುವ, ಪ್ರತಿಯೆತ್ತುವ ಸಲಕರಣೆ.

Mimésis ಮೈ(ಮಿ)ಮಿಸಿಸ್ (ನಾ.) (ಜೀ. ವಿ.) ಒಂದು ಪ್ರಾಣಿಗೂ ಮತ್ತೊಂದು ಪ್ರಾಣಿಗೂ, ಅಥವಾ ಒಂದು ಪ್ರಾಣಿಗೂ ಜಡ ವಸ್ತುವಿಗೂ ಇರುವ ಹತ್ತಿರದ ಹೊರ ಹೋಲಿಕೆ ; ಅನುಕರಣ. **Mimétic** —ಮೆ— (ಗು.) ಅನುಕರಣದ ; ಅನುಕರಣ ಸ್ವಭಾವದ ; ಅಣಕದ ; ನಿಕಟವಾದ ಹೊರ ಹೋಲಿಕೆಯ. **Mimétically** (ಕ್ರಿ. ವಿ.)

Mímic, Mímicry. **Mime** ನೋಡಿ.

Míminy-píminy ಮಿಮಿನಿ ಪಿಮಿನಿ (ಗು.) (ಹಾಸ್ಯಾಸ್ಪದವಾಗುವಷ್ಟು) ಅತಿ ಸೊಗಸಿನ, ನಯದ.

Mimósa ಮಿಮೋಸ(ಸ) (ನಾ.) 'ಮುಟ್ಟಿದರೆ ಮುನಿ' ಎಂಬ ಸಸ್ಯ ಸೇರಿದ ದ್ವಿದಳ ಬೀಜ ಸಸ್ಯಜಾತಿ.

Mína ಮೈನ (ನಾ.) ಮೈನ ಹಕ್ಕಿ ; ಗೊರವಂಕ.

Minácious ಮಿನೇಷಸ್ (ಗು.) ಬೆದರಿಸುವ ; ಹೆದರಿಸುವ. **Mi-náciously** (ಕ್ರಿ. ವಿ.) ; **Minácity** ಮಿನ್ಯಾಸಿಟಿ (ನಾ.)

Minár ಮಿನಾರ್ (ನಾ.) (ಕಡಲು) ದೀಪದ ಮನೆ ; (ಎತ್ತರವಾದ) ಸ್ತಂಭ ಗೋಪುರ : ಮಿನಾರು. **Mínaret** ಮಿನರೆಟ್ (ನಾ.) (ಮುಸ್ಲಿಂ ಘೋಷಕನು ದೈವ ಪ್ರಾರ್ಥನೆಗೆ ಮುಸ್ಲಿಮರನ್ನು ಎಚ್ಚರಿಸುವ) ಮಸೀದಿಯ ಸ್ತಂಭಗೋಪುರ : ಮಿನರೆಟ್ಟು.

Mínatory ಮಿನಟೊರಿ (ಗು.) = Minacious.

Mince ಮಿನ್ಸ್ (ನಾ., ಕ್ರಿ.) ಸಣ್ಣ ಚೂರುಗಳಾಗಿ ಕತ್ತರಿಸಿದ ಮಾಂಸ ; [Mincemeat ದ್ರಾಕ್ಷಿ, ಸಕ್ಕರೆ, ಸೇಬು, ಮೊ. ನ್ನೂ ಕೆಲವು ಸಂದರ್ಭಗಳಲ್ಲಿ ಮಾಂಸವನ್ನೂ ಸಣ್ಣ ಚೂರುಗಳಾಗಿ ಕತ್ತರಿಸಿ ಬೆರಸಿ ಮಾಡಿದ ರಸಾಯನ. M. pie (ಈ ಮಿಶ್ರಣವನ್ನು ಹಾಕಿ ಮಾಡಿದ) ಗುಂಡಾದ ಒಂದು ಸಣ್ಣ ಭಕ್ಷ್ಯ. Make m.-meat of (ಮನುಷ್ಯನನ್ನು, ವಾದವನ್ನು) ಚೂರು ಚೂರು ಮಾಡು, ಧ್ವಂಸ ಮಾಡು]. (ಕ್ರಿ.) (ಮಾಂಸ, ಮೊ. ನ್ನು) ಸಣ್ಣ ಚೂರುಗಳಾಗಿ ಕತ್ತರಿಸು, ಕೊಚ್ಚು. [M. matters (ಖಂಡನೆ ಮಾಡುವುದರಲ್ಲಿ) ನಯವಾಗಿ ಹೇಳು, ನುಂಗಿಕೊಂಡು ಹೇಳು]. ವಿನಯದ ಮೇರೆ ಮೀರದಂತೆ (ತನ್ನ ಮಾತನ್ನು) ಹದ್ದಿನಲ್ಲಿಟ್ಟುಕೊ ; ಕೃತಕವಾದ ನಾಜೂಕಿನಿಂದ, ಬಿನ್ನಾಣದಿಂದ, ಮಾತನಾಡು, ನಡೆ. **Míncing** (ಗು.) ; **Míncingly** (ಕ್ರಿ. ವಿ.)

Míncing Lane ಮಿನ್ಸಿಂಗ್ ಲೇನ್ (ನಾ.) ತೇಯೆಲೆ ಮತ್ತು ಅಂಥ ಇತರ ಆಮದು ಸರಕಿನ ಒಟ್ಟು ವ್ಯಾಪಾರ. (ಲಂಡನ್ನಿನ ಒಂದು ಬೀದಿಯ ಹೆಸರು)

Mind ಮೈಂಡ್ (ನಾ.) ಮನಸ್ಸು ; ಚಿತ್ತ ; ಬುದ್ಧಿ ; ಅಂತಃಕರಣ ; ಬಗೆ ; ಪ್ರಜ್ಞೆ, ಆಲೋಚನೆ, ಸಂಕಲ್ಪ, ಇಚ್ಛೆ, ಭಾವ — ಇತ್ಯಾದಿ ಅಂತಃಕರಣ ವೃತ್ತಿಗಳ ನೆಲೆ ; ಆತ್ಮ (ದೇಹವಲ್ಲ). ಪ್ರಜ್ಞಾಶಾಲಿ ; ಪ್ರಜ್ಞಾ ಸಾಮರ್ಥ್ಯ ; ನೆನಪು ; ಸ್ಮರಣೆ. Have or keep in m. ನೆನಪಿನಲ್ಲಿಟ್ಟುಕೊ. Bring or call to m. ನೆನಪಿಗೆ ತಂದುಕೊ, ತರು. Go or pass out of m. ಮರೆತುಹೋಗು. Time out of m. (Time ನೋಡಿ). Speak one's m. (ತನ್ನ) ಮನಸ್ಸಿನ ಅಭಿಪ್ರಾಯ ಹೇಳಿಬಿಡು. Give (person) a piece of one's m. (Give ನೋಡಿ). Be of (person's) m. (— ಒಡನೆ) ಏಕಾಭಿಪ್ರಾಯವಿರು. To my m. ನನ್ನ ಮನಸ್ಸಿಗೆ ; ನನ್ನ ಅಭಿಪ್ರಾಯದಲ್ಲಿ. Be of a m., of one m. ಒಂದೇ ಮನಸ್ಸಿರು ; ಏಕಾಭಿಪ್ರಾಯವಿರು. Know one's own m. ದೃಢ ಮನಸ್ಸಿನಿಂದಿರು. Make up one's m. ಮನಸ್ಸು ಮಾಡು ; ನಿರ್ಧಾರಕ್ಕೆ ಬರು ; ಮನಸ್ಸು ಗಟ್ಟಿಮಾಡಿಕೊ (The crop is ruined, we must make up our minds to that ಬೆಳೆ ಹಾಳಾಗಿ ಹೋಯಿತು, ನಾವು ಚಿಂತಿಸಿ ಫಲವಿಲ್ಲ, ಮನಸ್ಸು ಗಟ್ಟಿಮಾಡಿಕೊಳ್ಳಬೇಕು). Have a good or great m. (*to* do) ತುಂಬ ಬಲವಾದ, ಮನಸ್ಸಿರು. Have half a m. (*to* do) ತಕ್ಕ ಮಟ್ಟಿನ ಮನಸ್ಸಿರು. Be in two minds ಇಬ್ಬಗೆಯಾಗಿರು ; ಡೋಲಾಯಮಾನನಾಗಿರು ; ಅನಿಶ್ಚಯದಲ್ಲಿರು. Month's m. (Month ನೋಡಿ). Set one's m. on (ಪಡೆಯಲು) ಮನಸ್ಸು ಮಾಡು. Give one's m. to (— ಕ್ಕೆ) ಗಮನ ಕೊಡು. To one's m. (ತನ್ನ) ಮನಸ್ಸಿನಂತೆ, ಇಷ್ಟಾನುಸಾರ. Frame, state, of m. ಮನೋಭಾವ ; ಮನಸ್ಥಿತಿ ; ಚಿತ್ತ ವೃತ್ತಿ. M.'s eye ಮನೋದೃಷ್ಟಿ ; ಒಳಗಣ್ಣು. Absence, presence, of m. (ಆಯಾ ಪದವನ್ನು ನೋಡಿ). M.-stuff (ತ. ಶಾ.) ಅಂತರಿಕವಾಗಿ ಮನಸ್ಸಿನ ಲಕ್ಷಣದ, ಬಾಹ್ಯವಾಗಿ ಅಥವಾ ನಮಗೆ ತೋರುವಂತೆ ತಥ್ಯತೆಗೆ ಆಧಾರವೆಂದು ಭಾವಿಸುವ, ದ್ರವ್ಯರೂಪದ ಮೂಲ ವಸ್ತು : ಮನೋ ದ್ರವ್ಯ. **Mínded** (ಗು.) (ಮಾಡಲು) ಮನಸ್ಸುಳ್ಳ (*To* do) ; (ಒಂದು ನಿರ್ದಿಷ್ಟವಾದ) ಮನಸ್ಸುಳ್ಳ (High, small, -m. ಉದಾತ್ತ, ತುಚ್ಛ, — ಭಾವವುಳ್ಳ). **Míndful** (ಗು.) ಗಮನವಿರುವ ; ಲಕ್ಷ್ಯವಿರುವ ; ಆಲೋಚನೆಯಿರುವ (*Of* ಉಪ. ಜೊಡನೆ ಸಹ). **Míndfully** (ಕ್ರಿ. ವಿ.) ; **Míndfulness** (ನಾ.) ; **Míndless** (ಗು.)

Mind (ಕ್ರಿ.) ಮನಸ್ಸಿನಲ್ಲಿರಲಿ ! ಎಚ್ಚರಿಕೆ ! (ಮು., ಆಜ್ಞಾರ್ಥಕವಾಗಿ) ; ಮನಸ್ಸಿಡು ; ಮನಸ್ಸು ಮಾಡು ; ಮನಸ್ಸಿಗೆ ತಂದುಕೊ ; ಲಕ್ಷ್ಯ ಮಾಡು ; ಗಮನ ಕೊಡು. Never m. the expense ಖರ್ಚನ್ನು ಲಕ್ಷಿಸಬೇಡ. Never m. (ಆಜ್ಞಾರ್ಥಕ) ತೊಂದರೆ ಪಡಬೇಡ ; ಪರವಾಯಿಲ್ಲ. M. your own business ನಿನ್ನ ಕೆಲಸವನ್ನು ನೀನು ನೋಡಿಕೊ, ಮತ್ತೊಬ್ಬರ ಗೋಜಿಗೆ ಹೋಗಬೇಡ. Would you m. ringing ? ಗಂಟೆ ಬಾರಿಸಲು ನಿನ್ನ ಅಭ್ಯಂತರವುಂಟೆ ? ಗಂಟೆ ಬಾರಿಸುವೆಯಾ ? I should not m. a cup of tea ಒಂದು ಬಟ್ಟಲು ಚಹ ಕೊಟ್ಟರೆ ಅಭ್ಯಂತರವಿಲ್ಲ. If you don't m. ನಿನಗೆ ಅಭ್ಯಂತರವಿಲ್ಲದಿದ್ದರೆ. M. you *or* m. (ಆಜ್ಞಾರ್ಥಕ) ನೆನಪಿನಲ್ಲಿರಲಿ ! ಎಚ್ಚರಿಕೆ ! (But I have no objection, m. you ಆದರೆ ನನ್ನ ಅಭ್ಯಂತರವೇನೂ ಇಲ್ಲ, ಗೊತ್ತಿರಲಿ). Now m., not a word till I give the signal ಇಗೋ ಗಮನ ಕೊಡು ! ನಾನು ಸಂಜ್ಞೆ ಕೊಡುವವರೆಗೂ ಬಾಯಿ ತೆರೆಯಬೇಡ. M. your eye (ಅಸಂ.) ಕಣ್ಣು ಬಿಟ್ಟುಕೊಂಡಿರು ; ಹುಷಾರಾಗಿರು. M. one's P's & Q's ತಾನಾಡುವ ಮಾತಿನಲ್ಲಿ, ನಡತೆಯಲ್ಲಿ, ಎಚ್ಚರಿಕೆಯಿಂದಿರು. M. the step ಮೆಟ್ಟಲಿದೆ, ಎಚ್ಚರಿಕೆ ! Let me m. your pigeons ನಿನ್ನ ಪಾರಿವಾಳಗಳ ವಿಚಾರ ನನಗಿರಲಿ. **Mínder** (ನಾ.) ಯಾವುದನ್ನಾದರೂ ಎಚ್ಚರಿಕೆಯಿಂದ ನೋಡಿಕೊಳ್ಳುವವನು ; ವಿಚಾರಕ (ಉದಾ., Machine-minder)

Mínder, Míndful, etc. **Mind** ನೋಡಿ.

Mine[1] ಮೈನ್ (ನಾ., ಕ್ರಿ.) (ಲೋಹ, ಕಲ್ಲಿದ್ದಲು, ಉಪ್ಪು, ಮೊ. ಗಳಿಗಾಗಿ ಭೂಮಿಯಲ್ಲಿ ತೋಡಿದ) ಗಣಿ ; ಆಕರ. (ರೂಪ.) (ತಿಳಿವಳಿಕೆ, ಸಮಾಚಾರ, ಮೊ. ಗಳ) ಸಮೃದ್ಧ ಭಂಡಾರ, ಗಣಿ. ಕಬ್ಬಿಣದ ಅದುರು. (ಸೈನ್ಯ) (ಕೋಟೆ, ಮೊ. ರಕ್ಷಣೆಯ ಸಾಧನಗಳನ್ನು ಹಾರಿಸುವುದಕ್ಕಾಗಿ ಸಿಡಿಮದ್ದನ್ನು ಸ್ಥಾಪಿಸಲು ಮಾಡಿದ) ನೆಲದಲ್ಲಿಯ ಸುರಂಗ ; (ಹಿಂದಿನ ಕಾಲದಲ್ಲಿ) ಮುತ್ತಿಗೆ ಹಾಕಿದ ಕೋಟೆಯ ಗೋಡೆಯ ಕೆಳಗಿನ ಸುರಂಗ ಮಾರ್ಗ. (ನಾವೆ) (ಮು., ಬಂದರಿನ ಪ್ರವೇಶದ್ವಾರದಲ್ಲಿ ಮುಳುಗಿಸಿ ಇಟ್ಟಿರುವ) ಸಿಡಿಮದ್ದು (ತುಂಬಿದ) ಪಾತ್ರೆ [M.-field (ತೇಲುವ ಅಥವಾ ಮುಳುಗಿಸಿಟ್ಟಿರುವ) ಸಿಡಿಮದ್ದು ಪಾತ್ರೆಗಳನ್ನು ಹರಡಿರುವ ಸಮುದ್ರ ಪ್ರದೇಶ. M.-layer (ಸಮುದ್ರದಲ್ಲಿ) ಸಿಡಿಮದ್ದು ಪಾತ್ರೆಗಳನ್ನು ಸ್ಥಾಪಿಸುವ ಹಡಗು. M.-sweeper (ಸಮುದ್ರದಲ್ಲಿ ಶತ್ರುಗಳಿಟ್ಟಿರುವ) ಸಿಡಿಮದ್ದು ಪಾತ್ರೆಗಳನ್ನು ತೆಗೆದುಹಾಕುವ ಹಡಗು]. (ಕ್ರಿ.) (ನೆಲದಲ್ಲಿ) ತೋಡು ; ನೆಲದೊಳಗೆ ಕಂಡಿ ಮಾಡು ; ಕೆಳಗೆ ಸುರಂಗಮಾರ್ಗ ಮಾಡು. (ರೂಪ.) ಬುಡಕ್ಕೇ ಅಪಾಯ ತರು ; ಒಳಗೊಳಗೇ ನಾಶ ಮಾಡು. (ಸೈನ್ಯ, ನಾವೆ) ತಳದಲ್ಲಿ ಸಿಡಿಮದ್ದು (ಪಾತ್ರೆಗಳನ್ನು) ಇಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಣಿಯಿಂದ (ಲೋಹ, ಮೊ. ನ್ನು) ತೆಗೆ. ಅದುರು, ಮೊ. ಗಳಿಗಾಗಿ (ನೆಲದಲ್ಲಿ) ಗಣಿತೋಡು. **Míner** (ನಾ.) ಗಣಿಕೆಲಸದವನು. ಸಿಡಿ ಮದ್ದನ್ನು ಸ್ಥಾಪನೆಮಾಡುವ (ಕೆಲಸದ) ಸಿಪಾಯಿ. Sappers & miners (Sapper ನೋಡಿ)

Mine[2] ಮೈನ್ (ಸ. ನಾ., ಗು.) ನನ್ನ; ನನ್ನದು. It is m. ಅದು ನನ್ನದು. Me & m. ನಾನೂ ನನ್ನವರೂ (ಬಂಧುಗಳೂ). He is a friend of m.

Míneral ಮಿನೆರಲ್ (ಗು., ನಾ.) ಗಣಿಯಿಂದ ತೆಗೆದ (ವಸ್ತು); ಖನಿಜ; ಅಜೈವಿಕ ಪದಾರ್ಥಗಳ (ವರ್ಗಗಳಲ್ಲೊಂದಕ್ಕೆ ಸೇರಿದ ವಸ್ತು); M. Kingdom ಖನಿಜ ಪ್ರಪಂಚ. (ಮು., ಬ. ವ. ದಲ್ಲಿ) ತಯಾರಿಕೆಯ ಖನಿಜ ಜಲ. M. jelly = Vaseline. M. water (ಖನಿಜ ಪದಾರ್ಥಗಳು ಲೀನವಾಗಿ ಪ್ರಕೃತಿಯಲ್ಲಿ ದೊರೆಯುವ) ಖನಿಜ ಜಲ; ಕೃತಕ ತಯಾರಿಕೆಯ ಇಂತಹ ನೀರು (ಸೋಡಾನೀರು, ಮೊ. ದ ಉಕ್ಕೇರುವ ಪಾನೀಯಗಳು). M. wool (Wool ನೋಡಿ). **Míneralize** (ಕ್ರಿ.); **Mineralizátion** (ನಾ.); **Minerálogy** ಮಿನೆರ್ಯಾಲೊಜಿ (ನಾ.) ಖನಿಜ ಶಾಸ್ತ್ರ. **Minerálogist** (ನಾ.) ಖನಿಜ ಶಾಸ್ತ್ರಜ್ಞ. **Mineralógical** —ರಲಾ— (ಗು.); **Mineralógically** (ಕ್ರಿ. ವಿ.)

Minerálogy, etc. Mineral ನೋಡಿ.

Minérva ಮಿನರ್ವ (ನಾ.) ರೋಮನರ ಪ್ರಜ್ಞಾ ದೇವತೆ: 'ಮಿನರ್ವ'.

Míngle ಮಿಂಗ್ಲ್ (ಕ್ರಿ.) ಬೆರೆ; ಬೆರಸು; ಮಿಶ್ರವಾಗು, —ಮಾಡು. They m. their tears ಅವರು ಒಟ್ಟಿಗೆ ಅಳುತ್ತಾರೆ, M. with —ಒಡನೆ ಬೆರೆ, ಸೇರು.

Míniate ಮಿನಿಯೇಟ್ (ಕ್ರಿ. ಸಕ.) ಚಂದ್ರದ ಬಣ್ಣ ಹಾಕು, ಬಳಿ. (ಬರವಣಿಗೆಯ ಪ್ರತಿಗೆ) ಉಜ್ಜ್ವಲಾಲಂಕಾರ ಮಾಡು.

Míniature ಮಿನಿ(ಯ)ಟ್ಯುರ್, — ಚರ್ (ನಾ., ಗು., ಕ್ರಿ. ಸಕ.) ಉಜ್ಜ್ವಲಾಲಂಕಾರ ಮಾಡಿದ ಬರೆವಣಿಗೆಯ ಪ್ರತಿಯಲ್ಲಿಯ ಚಿತ್ರ. (ದಂತ, ಚರ್ಮಪತ್ರ, ಮೊ. ಗಳಮೇಲೆ ಸಣ್ಣ ಆಕಾರದಲ್ಲಿ ವಿವರಗಳೆಲ್ಲ ಬರುವಂತೆ ನಾಜೂಕಾಗಿ ರಚಿಸಿದ) ಸೂಕ್ಷ್ಮ ಪ್ರತಿರೂಪ, ತಸಬೀರು; ಈ ಸೂಕ್ಷ್ಮ ಪ್ರತಿರೂಪ ಕಲೆ (Portrait in m. ಸೂಕ್ಷ್ಮಾಕಾರದ ಪ್ರತಿ ರೂಪ, ಚಿತ್ರ). ಸೂಕ್ಷ್ಮಾಕಾರಕ್ಕಿಳಿಸಿದ ಪ್ರತಿರೂಪ (In m. ಸೂಕ್ಷ್ಮ ಪ್ರಮಾಣದಲ್ಲಿ). (ಗು.) ಸೂಕ್ಷ್ಮ ಪ್ರಮಾಣದಲ್ಲಿ ರೂಪಿಸಿದ; ಸೂಕ್ಷ್ಮ ಪ್ರಮಾಣದ. (ಕ್ರಿ.) ಸೂಕ್ಷ್ಮ ಪ್ರಮಾಣದಲ್ಲಿ ತೋರಿಸು. **Míniaturist** (ನಾ.)

Mínify ಮಿನಿಫೈ (ಕ್ರಿ. ಸಕ.) ಇರುವುದಕ್ಕಿಂತ ಸಣ್ಣದಾಗಿ, ಕಡಮೆಯ ಪ್ರಾಧಾನ್ಯವುಳ್ಳದ್ದಾಗಿ, —ತೋರಿಸು, ನಿರೂಪಿಸು; (ಆಕಾರದಲ್ಲಿ, ಪ್ರಾಧಾನ್ಯದಲ್ಲಿ) ಕಡಮೆ ಮಾಡು.

Mínikin ಮಿನಿಕಿನ್ (ನಾ., ಗು.) ಅತಿ ಸಣ್ಣ, ಗಿಡ್ಡ (ಪ್ರಾಣಿ). ಒಲಪಿನ; ಕೃತಕತೆಯ.

Mínim ಮಿನಿಮ್ (ನಾ.) ರೇಖನಿಯ ಕೆಳ ಎಳೆತದ ಒಂದು ಗೀಟು. ಅತ್ಯಂತ ಸಣ್ಣ, ಅತ್ಯಂತ ಅಪ್ರಧಾನ, —ಪ್ರಾಣಿ. ಒಂದು (ಸಣ್ಣ) ತೊಟ್ಟು; ದ್ರವದ ಒಂದು ಡ್ರಾಮ್ ಅಳತೆಯ $\frac{1}{60}$ ಭಾಗ. **Mínimal** (ಗು.) ಅತಿ ಸೂಕ್ಷ್ಮವಾದ; ಅತ್ಯಂತ ಸ್ವಲ್ಪವಾದ; ಕನಿಷ್ಠ. **Mínimalist** (ನಾ.) ತಾತ್ಕಾಲಿಕವಾಗಿ ಕನಿಷ್ಠವಾದುದನ್ನು ಒಪ್ಪಿಕೊಳ್ಳಲು ಸಿದ್ಧನಾಗಿರುವವನು (ಎದುರು ಪದ: Maximalist). **Mínimize** (ಕ್ರಿ. ಸಕ.) ಕನಿಷ್ಠ ಮೊತ್ತಕ್ಕೆ, ಪ್ರಮಾಣಕ್ಕೆ, ದರ್ಜೆಗೆ, —ಇಳಿಸು, ತರು; ನಿಕೃಷ್ಟ ಮಾಡು; ಆಗುವಷ್ಟು ಕಡಮೆ ಮಾಡು; ಅತ್ಯಂತ ಕಡಮೆಯ ಅಂದಾಜು ಕಟ್ಟು. **Minimizátion** (ನಾ.); **Mínimum** (ನಾ.; ಬ. ವ. -ma —ಮ) ಕನಿಷ್ಠ ಸಂಖ್ಯೆ, ಮೊತ್ತ, ಪ್ರಮಾಣ. M. thermometer (ಒಂದು ಗೊತ್ತಾದ ಅವಧಿಯಲ್ಲಿಯ ಕನಿಷ್ಠ ಶಾಖ ವನ್ನು ತಾನಾಗಿ ತೋರಿಸುವ) ಕನಿಷ್ಠ ಶಾಖಮಾಪಕ. M. wage (ಕಾನೂನಿನ ಮೇರೆಗಾಗಲಿ, ಒಪ್ಪಂದದ ಮೇರೆಗಾಗಲಿ, ಅದಕ್ಕಿಂತ ಕಡಮೆ ಕೊಡಬಾರದ) ಕನಿಷ್ಠವಾದ ಕೂಲಿ. **Mínimus** (ಗು.) (ಪಾಠಶಾಲೆ ಗಳಲ್ಲಿ ಆ ಹೆಸರಿನ) ಅತ್ಯಂತ ಕಿರಿಯ (Jones m.); ಅನಾಮಧೇಯ.

Mínimal, Mínimize, Mínimum, etc. Minim ನೋಡಿ.

Mínion ಮಿನ್ಯನ್ (ನಾ.) ಅಚ್ಚುಮೆಚ್ಚಿನ ಮಗು, ಆಳು, ಪ್ರಾಣಿ, ಮೊ. (ಸಾ., ತಿರಸ್ಕಾರಾರ್ಥದಲ್ಲಿ). ಗುಲಾಮ; ದಾಸ. Minions of the law ಜೈಲಿನ ಅಧಿಕಾರಿಗಳು, ಪೋಲೀಸಿನವರು, ಮೊ. ರು. (ಮುದ್ರಣ) ಒಂದು ಸಣ್ಣ ಪ್ರಮಾಣದ ಅಚ್ಚುಮೊಳೆ.

Mínish ಮಿನಿಷ್ (ಕ್ರಿ.) (ಪ್ರಾಚೀ. ಪ್ರ.) ಕಡಮೆಯಾಗು; ಕಡಮೆ ಮಾಡು; ತಗ್ಗು; ತಗ್ಗಿಸು. (ಅಧಿಕಾರ, ಪ್ರಾಬಲ್ಯ, ಮೊ. ನ್ನು) ತಗ್ಗಿಸು, ಕುಗ್ಗಿಸು.

Mínister ಮಿನಿಸ್ಟರ್ (ನಾ., ಕ್ರಿ.) ಉದ್ದೇಶ, ಕೋರಿಕೆ, ಮೊ. ನ್ನು ನಡಸಲು ನಿಯಮಿತನಾದವನು; ನಿರ್ವಾಹಕ; ಆಡಳಿತಗಾರ; ಸರ್ಕಾರದ ಯಾವುದಾದರೂ ಇಲಾಖೆಯ ಆಡಳಿತ ನಡಸುವವನು: ಸಚಿವ; ಮಂತ್ರಿ (Prime m. ಮುಖ್ಯ ಮಂತ್ರಿ; ಪ್ರಧಾನಿ); (ಒಂದು ರಾಜ್ಯ ಮತ್ತೊಂದು ರಾಜ್ಯಕ್ಕೆ ಕಳುಹಿಸಿಕೊಡುವ ಅಧಿಕೃತ) ನಿಯೋಗಿ. ಕ್ರೈಸ್ತ ಪುರೋಹಿತ; ಪಾದ್ರಿ; (ಕ್ರೈಸ್ತ ಮತಗಳಲ್ಲಿ ಕೆಲವು ತಂಡಗಳ) ಮೇಲಧಿಕಾರಿ, ಅಧ್ಯಕ್ಷ (= M. general). (ಕ್ರಿ.) (ಒಬ್ಬನಿಗೆ, ಒಂದು ಧ್ಯೇಯ, ಮೊ. ಕ್ಕೆ) ಸಹಾಯ ಮಾಡು, ಸೇವೆ ಸಲ್ಲಿಸು, ಉಪಚರಿಸು; ಶುಶ್ರೂಷೆ ಮಾಡು [Ministering angel ಹಿತಕಾರಿ ದೇವತೆ (ಮು., ರೋಗಿಯ ಉಪಚಾರ, ಮೊ. ವಿಷಯದಲ್ಲಿ)]. (ಫಲ ದೊರೆಯಲು) ಸಹಾಯಮಾಡು, ನೆರವಾಗು. (ಪ್ರಾಚೀ. ಪ್ರ.) (ಸಹಾಯ, ಮೊ. ನ್ನು) ಒದಗಿಸು, ಕೊಡು. **Ministérial** —ಸ್ಟೀರಿಯಲ್ (ಗು.) ಕಾನೂನನ್ನು ನಡಸುವುದಕ್ಕೆ ಸಂಬಂಧಿಸಿದ; ಕಾನೂನಿನ ಆಡಳಿತದ; ಗುಮಾಸ್ತೆಗಿರಿಯ; ಅಧೀನ ನೌಕರಿಯ; ಸಹಾಯಕವಾದ. (ಕ್ರೈಸ್ತ) ಪುರೋಹಿತನ, ಪೌರೋಹಿತ್ಯದ. ಸಚಿವನ; ಮಂತ್ರಿಯ; (ಪ್ರತಿ ಪಕ್ಷೀಯರಿಗೆ ವಿರುದ್ಧವಾದ) ಮಂತ್ರಿ (ಮಂಡಲ) ಪಕ್ಷದ; ಸರ್ಕಾರದ ಪಕ್ಷದ. **Ministérialist** (ನಾ.); **Ministérially** (ಕ್ರಿ. ವಿ.); **Ministrátion** (ನಾ.) (ಮು., ಮತವಿಷಯದಲ್ಲಿ) ಧರ್ಮ ಬೋಧೆ, ಪೌರೋಹಿತ್ಯ, ಸೇವೆ, ಉಪಚಾರ; (—ನ್ನು) ಒದಗಿಸುವುದು. **Mínistrant** (ಗು., ನಾ.) (ಸಹಾಯ, ಮೊ. ನ್ನು) ಒದಗಿಸುವ(ವನು). **Mínistrative** (ಗು.); **Mínistry** (ನಾ.) ಸೇವೆ; ಸಹಾಯ; ಪೌರೋಹಿತ್ಯ. (The m. ಮಂತ್ರಿ ಮಂಡಲ; ಪುರೋಹಿತ ವರ್ಗ). ಸರ್ಕಾರದ ಇಲಾಖೆ, ಖಾತೆ; ಮಂತ್ರಿಸ್ಥಾನ; ಮಂತ್ರಿಕೆ. (M. of Health ಆರೋಗ್ಯ ಖಾತೆ. Air M., M. of Agriculture & Fisheries, of Labour, of Transport)

Ministrátion, Mínistry, etc. Minister ನೋಡಿ.

Mínium ಮಿನಿಯಮ್ (ನಾ.) ಸೀಸ ಮತ್ತು ಆಮ್ಲಜನಕ ಸಂಯುಕ್ತದ ಒಂದು ಕೆಂಪು ವರ್ಣಪದಾರ್ಥ; (ಸೀಸ) ಸಿಂದೂರ; ಚಂದ್ರ; ರಸ ಸಿಂದೂರ.

Mink ಮಿಂಕ್ (ನಾ.) ಒಂದು ಸಣ್ಣ ಭೂಚರ ಜಲಚರ ಪ್ರಾಣಿ; ಅದರ ತುಪ್ಪುಳು ಚರ್ಮ.

Mínnesinger ಮಿನಿ(ನೆ)ಸಿಂಗರ್ (ನಾ.) ಜರ್ಮನಿಯಲ್ಲಿ ೧೨-೧೪ನೆಯ ಶತಮಾನಗಳಲ್ಲಿದ್ದ (ಪ್ರಣಯ) ಭಾವಗೀತಾ ಕವಿ(ಗಳಲ್ಲೊಬ್ಬನು). [Minne (G) = ಪ್ರಣಯ]

Mínnow ಮಿನೋ (ನಾ.) ಸೀನೀರಿನ ಒಂದು ಸಣ್ಣ ಮೀನುಜಾತಿ. Triton among the minnows ಉಳಿದವರು ಸಣ್ಣವರಾದುದರಿಂದ ದೊಡ್ಡವನಾಗಿ ಕಾಣುವವನು.

Minóan ಮಿನೋಅನ್ (ಗು.) (ಪ್ರಾಚೀ. ಶಾ.) (ಕ್ರಿ. ಪೂ. ೩೦೦೦ ದಿಂದ ೧೫೦೦ ರ ವರೆಗಿನ) ಕ್ರೀಟ್ ದೇಶದ ನಾಗರಿಕತೆಯ. (Minos ಎಂಬ ದೊರೆಯ ಹೆಸರಿನಿಂದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mínor ಮೈನರ್ (ಗು., ನಾ.) ಕಡಮೆಯ ; ಕಿರಿಯ ; ಅಲ್ಪ ; ಲಘು ; ಎರಡನೆಯ ದರ್ಜೆಯ (ಇದರೊಡನೆ *Than* ಎಂಬ ಪದ ಪ್ರಯೋಗವಾಗುವುದಿಲ್ಲ) ; ಅಪ್ರಧಾನ ; ಅಮುಖ್ಯ (M. poet). [(ತರ್ಕ) M. term ಅನುಮಾನ ಕ್ರಮದಲ್ಲ ಸಿದ್ಧಾಂತ ವಾಕ್ಯದ ಕರ್ತೃ ಪದ. M. premiss ಇದನ್ನುಳ್ಳ ಪ್ರತಿಜ್ಞಾ ವಾಕ್ಯ]. [Conversation in a m. key (ರೂಪ.) ಗೋಳುಕರೆಯ ಸಂಭಾಷಣೆ. Jones m. (ಪಾಠಶಾಲೆಗಳಲ್ಲಿ) ಕಿರಿಯ ಜೋನ್ಸ್]. (ನಾ.) (= M. term *or* premiss). ಫ್ರಾನ್ಸಿಸ್ಕನ್ ಪಂಥದ ಕ್ರೈಸ್ತ ಸಂನ್ಯಾಸಿ. ಅಪ್ರಾಪ್ತ ವಯಸ್ಕ; ಪ್ರಾಯ ತುಂಬಿರದವನು. **Minórity** ಮೈ(ಮಿ)ನಾರಿಟಿ (ನಾ.) ಅಪ್ರಾಪ್ತ ವಯಸ್ಕತೆ ; ಅಪ್ರಾಪ್ತ ವಯಸ್ಸು. ಕಡಮೆಯ ಸಂಖ್ಯೆ, ಭಾಗ ; (ಮು., ಬಹುಸಂಖ್ಯಾತರಿಗೆ ವಿರುದ್ಧವಾಗಿ ಮತಗಳನ್ನು ಕೊಟ್ಟ) ಅಲ್ಪ ಸಂಖ್ಯಾತ ಪಕ್ಷ ; ಅಲ್ಪಸಂಖ್ಯಾತ ಪಕ್ಷದ ಮತಸಂಖ್ಯೆ.

Minórca ಮಿನಾರ್ಕ (ನಾ.) Balearic ದ್ವೀಪಗಳಲ್ಲೊಂದು. ಸ್ಪೆಯ್ನ್ ದೇಶದಿಂದ ತಂದ ಕರಿಯ (ಸಾಕು) ಕೋಳಿಜಾತಿ (= M. fowl)

Mínotaur ಮಿನೊಟಾರ್ (ನಾ.) ನರಮಾಂಸ ಭಕ್ಷಣೆಯ, ಅರ್ಧ ಗೂಳಿಯ ಅರ್ಧ ಮನುಷ್ಯನ ಆಕಾರದ, ಒಂದು ಗ್ರೀಕ್ ಪೌರಾಣಿಕ ರಾಕ್ಷಸ.

Mínster ಮಿನ್‌ಸ್ಟರ್ (ನಾ.) (ಕ್ರೈಸ್ತ) ಸಂನ್ಯಾಸಿಮಠದ ಆರಾಧನ ಮಂದಿರ ; ದೊಡ್ಡ, ಪ್ರಧಾನವಾದ, —ಕ್ರೈಸ್ತ ಆರಾಧನ ಮಂದಿರ ; ಬಿಷಪ್ಪಿನ ಪೀಠವಿರುವ ಆರಾಧನ ಮಂದಿರ.

Mínstrel ಮಿನ್‌ಸ್ಟ್ರೆಲ್ (ನಾ.) (ಅನೇಕ ವೇಳೆ ಸ್ವಂತ ರಚನೆಯ) ಕವಿತೆಗಳನ್ನು ಹಾಡುತ್ತಿದ್ದ ಮಧ್ಯ ಯುಗದ ಗಾಯಕ, ಸಂಗೀತಗಾರ, ಲಾವಣಿಕಾರ ; ಚಾರಣ. (ಚರಿತ್ರೆ) ತನ್ನ ಆಶ್ರಯದಾತರನ್ನು ಹಾಡು, ನಕಲಿ, ಮೊ. ಗಳಿಂದ ವಿನೋದಗೊಳಿಸುತ್ತಿದ್ದವನು : ವಿಕಟ ಕವಿ. (ಬ. ವ. ದಲ್ಲಿ) ಮುಖಕ್ಕೆ ಕಪ್ಪು ಹಚ್ಚಿಕೊಂಡು (ನೀಗ್ರೊ ಜನರದೆಂದು ತೋರುವಂತೆ) ಹಾಡು, ನಕಲಿ, ಮೊ. ಗಳಿಂದ ಜನರನ್ನು ವಿನೋದಗೊಳಿಸುವ ಗಾಯಕ ತಂಡ. **Mínstrelsy** (ನಾ.) ಮಧ್ಯ ಯುಗದ ಗಾಯಕರ ಕಲೆ ; ಚಾರಣ ಕಲೆ ; ಮಧ್ಯ ಯುಗದ ಗಾಯಕರು ; ಮಧ್ಯ ಯುಗದ ಹಾಡು, ಪದ್ಯ.

Mint[1] ಮಿಂಟ್ (ನಾ., ಕ್ರಿ. ಸಕ.) (ಸಾ., ಸರ್ಕಾರದ) ನಾಣ್ಯ ಛಾಪಿಸುವ ಕಾರ್ಖಾನೆ : ಟಂಕಸಾಲೆ. (ರೂಪ.) ಕಲ್ಪನೆ, ಮೊ. ಗಳ ಉಗಮ ಸ್ಥಾನ ; ನಿರ್ಮಾಣ ಸ್ಥಾನ. ಅಗಾಧವಾದ (ಧನ) ರಾಶಿ. [M.-mark ಯಾವ ಟಂಕಸಾಲೆಯಲ್ಲ ಛಾಪಿಸಿತೆಂದು ತೋರಿಸುವ ನಾಣ್ಯದಮೇಲಿನ ಗುರುತು (ರೂಪ. ಸಹ). M.-master ಟಂಕಸಾಲೆಯ ಮೇಲ್ವಿಚಾರಕ, ಅಧ್ಯಕ್ಷ. M. state, condition (ಪುಸ್ತಕ, ಮುದ್ರಣ, ಅಂಚೆಯ ತರೆಚೀಟಿ, ಮೊ. ಗಳ ವಿಷಯದಲ್ಲಿ) ಹೊಸತಾದ, ಮಾಸಿಲ್ಲದ, ಕುಂದಿಲ್ಲದ, —ಸ್ಥಿತಿ]. (ಕ್ರಿ.) (ಲೋಹದಮೇಲೆ) ಟಂಕ ಒತ್ತು (ನಾಣ್ಯ) ಮಾಡು ; ಟಂಕ ಒತ್ತು. (ಪದ, ಮಾತು, ಮೊ. ನ್ನು) ಹೊಸತಾಗಿ ರಚಿಸು, ಕಲ್ಪಿಸು, ಸೃಷ್ಟಿಸು. **Míntage** (ನಾ.) ಟಂಕಿಸುವ ಕಾರ್ಯ ; ಒಂದು ಟಂಕಸಾಲೆಯ ಉತ್ಪನ್ನ ; ಟಂಕದ ಖರ್ಚು ವೆಚ್ಚಗಳು, ಸುಂಕ ; ಟಂಕ ಮುದ್ರೆ.

Mint[2] ಮಿಂಟ್ (ನಾ.) ಅಡಿಗೆಯಲ್ಲಿ ಹೆಚ್ಚಾಗಿ ಉಪಯೋಗಿಸುವ ಒಂದು ಸುವಾಸನೆಯ ಸೊಪ್ಪು : ಪುದೀನ.

Minuét ಮಿನ್ಯುಯೆಟ್ (ನಾ.) ಇಬ್ಬರಿಗಾಗಿ ಏರ್ಪಡಿಸಿದ ಗಂಭೀರವಾದ ಒಂದು ಬಗೆಯ ಮಂದ ನೃತ್ಯ ; ಇದಕ್ಕೆ ಹೊಂದಿಸಿದ ಸಂಗೀತ.

Mínus ಮೈನಸ್ (ಉಪ., ಗು.) ಕಳೆದರೆ, ಕಳೆದು(ಬಿಟ್ಟರೆ) (ವ್ಯವಕಲನ ಚಿಹ್ನೆ—) [7 minus 4 is equal to 3. He came back minus an arm (ಬಳ. ಮಾ.) ಅವನು ಒಂದು ತೋಳು ಕಳೆದುಕೊಂಡು ಹಿಂದಕ್ಕೆ ಬಂದನು. A m. quantity ಋಣ ಮೊತ್ತ ; —ಸಂಖ್ಯೆ]

Minúscule ಮಿನಸ್ಕ್ಯೂಲ್ (ಗು., ನಾ.) (೭ನೆಯ ಶ. ಮಾ. ದಲ್ಲಿ ಪ್ರಚಾರಕ್ಕೆ ಬಂದ ಒಂದು ಬಗೆಯ ಮೋಡಿಯ ಬರವಣಿಗೆಯ ವಿಷಯದಲ್ಲಿ) ಸಣ್ಣಕ್ಷರ(ದ)

Mínute[1] ಮಿನಿಟ್ (ನಾ., ಕ್ರಿ. ಸಕ.) ಒಂದು ಗಂಟೆಯ $\frac{1}{60}$ ಭಾಗ : ನಿಮಿಷ ; ಕ್ಷಣ (ಕಾಲ) ; ನಿಷ್ಕೃಷ್ಟ ಕಾಲ. [The m. (that) —ಒಡನೆಯೇ, —ತತ್‌ಕ್ಷಣವೇ]. (ಕೋನ ಮಾನದ) ಒಂದು ಡಿಗ್ರಿಯ $\frac{1}{60}$ ಭಾಗ : ಕಲೆ. ಕರಡು ಲೇಖನ. ಜ್ಞಾಪಕ ಪತ್ರ. (ಬ. ವ. ದಲ್ಲಿ) (ಸಭೆ, ಸಮಿತಿ, ಮೊ. ಗಳ) ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ, ಗೋಷ್ವಾರೆ. (ಒಂದು ಮಾರ್ಗವನ್ನು ಅನುಸರಿಸಬೇಕೆಂದು ಅಧಿಕಾರ ಕೊಡುವ ಅಥವಾ ಶಿಫಾರಸು ಮಾಡುವ) ಕಚೇರಿಯ ಸೂಚನಾ ಪತ್ರ (Treasury-m.). [M.-book ಸಂಕ್ಷಿಪ್ತ ವರದಿ (ಬರೆಯುವ) ಪುಸ್ತಕ ; ನಡವಳಿಕೆಯ ಪುಸ್ತಕ. M.-gun (ಮರಣದ ಅಥವಾ ಆಪತ್ತಿನ ಸೂಚಕವಾಗಿ) ನಿಮಿಷಕ್ಕೊಂದರಂತೆ ಹೊಡೆಯುವ ತೋಪು, ಗುಂಡು : ನಿಮಿಷದ ತೋಪು. M.-hand (ಗಡಿಯಾರದ) ನಿಮಿಷದ ಮುಳ್ಳು. M.-mark ಮಿನಿಟಿನ ಗುರುತು (′)]. (ಕ್ರಿ.) ನಿಷ್ಕೃಷ್ಟವಾದ ಕಾಲವನ್ನು ಕಂಡುಹಿಡಿ. (ದಸ್ತೈವಜು, ಯೋಜನೆ, ಮೊ. ಗಳ) ಕರಡು ಪ್ರತಿ ತಯಾರಿಸು. ಸಂಕ್ಷಿಪ್ತ ವರದಿಯಲ್ಲಿ ನಮೂದಿಸು, ಬರೆದಿಡು. **Mínutely**[1] (ಗು., ಕ್ರಿ. ವಿ.) ಪ್ರತಿ ನಿಮಿಷವೂ (ನಡೆಯುವ)

Minúte[2] ಮೈ(ಮಿ)ನ್ಯೂಟ್ (ಗು.) ಬಲು ಸಣ್ಣ ; ಅತಿ ಸೂಕ್ಷ್ಮ ; ಅಲ್ಪ ; ಕ್ಷುದ್ರ. (ವಿಚಾರಣೆ, ವಿಚಾರಕ, ಮೊ. ಗಳ ವಿಷಯದಲ್ಲಿ) ನಿಷ್ಕೃಷ್ಟವಾದ ; ಖಚಿತ. **Minútely**[2] (ಕ್ರಿ. ವಿ.) ; **Minúteness** (ನಾ.) ; **Minútia** ಮೈ(ಮಿ)ನ್ಯೂಷಿಯ (ನಾ. ; ಸಾ., ಬ. ವ. ದಲ್ಲಿ, -ae —ಷಿಯಾ) ನಿಷ್ಕೃಷ್ಟ ವಿವರ ; ಬಹು ಸಣ್ಣ, ಅತ್ಯಲ್ಪ, —ವಿವರ, ವಿಷಯ.

Minútia. **Minute**[2] ನೋಡಿ.

Minx ಮಿಂಕ್ಸ್ (ನಾ.) ದಿಟ್ಟ ಹುಡುಗಿ ; ಹರಾಮಿ ; ಗಂಡುಬೀರಿ ; ಒಲಪುಗಾತಿ.

Míocene ಮೈಯೊಸೀನ್ (ಗು.) (ಭೂ. ವಿ.) ಮೂರನೆಯ ಭೂಯುಗದ ಸ್ತರಗಳ ಮಧ್ಯ ಭಾಗದ.

Míracle ಮಿರಕ್‌ಲ್ (ನಾ.) ಅಮಾನುಷ ಕರ್ತೃತ್ವದಿಂದಾದ ಆಶ್ಚರ್ಯ ಘಟನೆ : ಅದ್ಭುತ ; ಪವಾಡ. (ಚಾತುರ್ಯ, ದಾಷ್ಟಿಕತನ, ಮೊ. ಗಳ) ಅಸಾಮಾನ್ಯವಾದ ಮಾದರಿ, ಆದರ್ಶ (To a m. ಆಶ್ಚರ್ಯವಾಗುವಷ್ಟು ಉತ್ತಮವಾಗಿ). ಯೇಸು ಕ್ರಿಸ್ತನ ಅಥವಾ ಸಾಧು ಸಂತರ ಜೀವನ ಚರಿತ್ರೆಯನ್ನು ಕುರಿತ, ಮಧ್ಯ ಯುಗದ ನಾಟಕ : ಪವಾಡ ನಾಟಕ (=M. play). **Miráculous** ಮಿರ್ಯಾಕ್ಯುಲಸ್ (ಗು.) ಅಮಾನುಷ ; ಅಲೌಕಿಕ ; ಅದ್ಭುತದ ; ಆಶ್ಚರ್ಯಕರ. **Miráculously** (ಕ್ರಿ. ವಿ.) ; **Miráculousness** (ನಾ.)

Miráge ಮಿರಾಷ್ (ನಾ.) ಮು., ಉಷ್ಣ ಪ್ರದೇಶದ ಮರಳುಗಾಡು, ಮೊ. ಗಳಲ್ಲಿ ನೀರಿನ ಹರವಿನಂತೆ ಕಣ್ಣಿಗೆ ತೋರುವ ಭ್ರಾಂತಿಯ ದೃಶ್ಯ ; ಬಿಸಿಲ್ದೊರೆ ; ಬಿಸಿಲ್ಗುದುರೆ ; ಬಯಲುದೊರೆ ; ಮೃಗ ಜಲ ; ಮೃಗ ತೃಷ್ಣೆ ; ಮರೀಚಿಕೆ (ರೂಪ. ಸಹ)

Mire ಮೈ(ಅ)ರ್ (ನಾ., ಕ್ರಿ. ಸಕ.) ಜವುಗು ನೆಲ ; ಬದಿಯ ನೆಲ ; ಉಸುಬು ; ಕೆಸರು ; ಕೊಚ್ಚೆ (Stick, find oneself, in the m. ಕಷ್ಟದಲ್ಲಿ ಸಿಕ್ಕಿಬೀಳು). (ಕ್ರಿ.) ಉಸುಬಿನಲ್ಲಿ ಹೂಳು. (ರೂಪ.) ಕಷ್ಟದಲ್ಲಿ ಸಿಕ್ಕಿಸು. ಕೊಚ್ಚೆ, ಕೊಳೆ, — ಮಾಡು ; ಕೆಸರೆರಚು. **Míry** (ಗು.)

Mírror ಮಿರರ್ (ನಾ., ಕ್ರಿ. ಸಕ.) ಪ್ರತಿಬಿಂಬಿಸುವ, ಸಾ., ಗಾಜಿನ, ಮೆರುಗು ಕೊಟ್ಟ ಮೇಲ್ಮುಖ : ಕನ್ನಡಿ ; ದರ್ಪಣ. (ರೂಪ.) ನಿಜ ಬಿಂಬವನ್ನು, ನಿಜ ಸ್ವರೂಪವನ್ನು, ತೋರಿಸುವಂಥದು ; ಪ್ರತಿಬಿಂಬಕ. (ಕ್ರಿ.) (ಕನ್ನಡಿಯಂತೆ) ಪ್ರತಿಬಿಂಬಿಸು.

Mirth ಮರ್ತ್ (ನಾ.) ಸಂತೋಷ ; ನಲವು ; ಉಲ್ಲಾಸ ; ವಿನೋದ. **Mírthful** (ಗು.) ; **Mírthfully** (ಕ್ರಿ. ವಿ.) ; **Mírthfulness** (ನಾ.) ; **Mírthless** (ಗು.)

Mírza ಮಿರ್ಝಾ (ನಾ.) (ಪರ್ಷಿಯದಲ್ಲಿ) ರಾಜ ಕುಮಾರನ, ಅಧಿಕಾರಿಯ, ಅಥವಾ ವಿದ್ವಾಂಸನ, ಹೆಸರಿನೊಡನೆ ಸೇರಿಸುವ ಗೌರವ ಸೂಚಕ ಪದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mis- ಮಿಸ್— (ಪೂ. ಪ್ರ.) ತಪ್ಪಾಗಿ, ಕೆಟ್ಟದಾಗಿ, ಪ್ರತಿಕೂಲವಾಗಿ— ಎಂಬ ಅರ್ಥಗಳನ್ನು ಕೊಡುವಂಥದು: ಅಪ— (ಉದಾ., Misaccent, Misconduct, Misdecision); ಅನಿಷ್ಟಾರ್ಥದ ಆಧಿಕ್ಯದಲ್ಲಿಯೂ ಪ್ರ. ಉಂಟು. (ಉದಾ., Misdoubt, Misdread)

Misadvénture ಮಿಸ್ಅ್ಯಡ್ವೆಂಚ್ಯುರ್, —ಚರ್ (ನಾ.) ದುರದೃಷ್ಟ; ಅನರ್ಥ; ದುರ್ಘಟನೆ. (ನ್ಯಾ. ಶಾ.) Homicide by m. ಅಕಸ್ಮಾತ್ತಾದ ನರಹತ್ಯೆ.

Misallíance ಮಿಸ್ಅಲೈಅನ್ಸ್ (ನಾ.) ಅಸಮ ಬಾಂಧವ್ಯ (ಮು., ವಿಷಮ ವಿವಾಹ)

Mísanthrope ಮಿಸ್ಅ್ಯಂತ್ರೋಪ್ (ನಾ.) ಮನುಷ್ಯ ದ್ವೇಷಿ; ಮನುಷ್ಯ ಸಂಬಂಧ ಒಲ್ಲದವನು; ಜನ ಸೇರದವನು. **Misanthrópic(al)** —ತ್ರಾ— (ಗು.); **Misánthropist** —ಅ್ಯಂತ್ರೊ— (ನಾ.) = Misanthrope. **Misánthropism, Misánthropy** (ನಾ.) ಮನುಷ್ಯ ದ್ವೇಷ. **Misánthropize** (ಕ್ರಿ. ಅಕ.)

Misapplicátion ಮಿಸ್ಅಪ್ಲಿಕೇಷನ್ (ನಾ.) ದುರನ್ವಯ; ಅಪ ಪ್ರಯೋಗ; (ಮು., ಹಣದ) ದುರುಪಯೋಗ. **Misapplý** (ಕ್ರಿ. ಸಕ.) —ಮಾಡು.

Misapprehénd ಮಿಸ್ಅ್ಯಪ್ರಿಹೆಂಡ್ (ಕ್ರಿ. ಸಕ.) (ಮಾತುಗಳನ್ನು, ವ್ಯಕ್ತಿಯನ್ನು) ತಪ್ಪು ತಿಳಿ, ತಪ್ಪಾಗಿ ಗ್ರಹಿಸು. **Misapprehénsion** (ನಾ.); **Misapprehénsive** (ಗು.)

Misapprópriate ಮಿಸ್ಅಪ್ರೋಪ್ರಿಯೇಟ್ (ಕ್ರಿ. ಸಕ.) ದುರುಪಯೋಗ ಪಡಿಸು (ಮು., ಮತ್ತೊಬ್ಬರ ಹಣವನ್ನು ಸ್ವಂತಕ್ಕೆ ಬಳಸಿಕೊ); ಹಣ ದಸ್ತು ಮಾಡು. **Misappropriátion** (ನಾ.)

Misbecóme ಮಿಸ್ಬಿಕಮ್ (ಕ್ರಿ. ಸಕ.) ಹೊಂದದಿರು; (—ಗೆ) ಅನುಚಿತವಾಗಿರು. **Misbecóming** (ಗು.)

Misbegótten ಮಿಸ್ಬಿಗಾಟನ್ (ಗು.) ಹಾದರಕ್ಕೆ ಹುಟ್ಟಿದ; ಜಾರಜ; ಅಡನಾಡಿ(ಯಾದ) (ಸಾ., ನಿಂದಿಸಿ, ಬಯ್ದು, ಅಪಮಾನ ಪಡಿಸುವಲ್ಲಿ ಪ್ರ.)

Misbeháve ಮಿಸ್ಬಿಹೇವ್ (ಕ್ರಿ.) ಅಯೋಗ್ಯವಾಗಿ ವರ್ತಿಸು; ನಡತೆಯಲ್ಲಿ ದಾರಿ ಬಿಟ್ಟು ಹೋಗು. **Misbeháviour** (ನಾ.)

Misbeliéf ಮಿಸ್ಬಿಲೀಫ್ (ನಾ.) ಮತ ಧರ್ಮದಲ್ಲಿ ತಪ್ಪು ನಂಬಿಕೆ; ತಪ್ಪು ಅಭಿಪ್ರಾಯ; ಮಿಥ್ಯಾಭಿಪ್ರಾಯ. **Misbeliéver** (ನಾ.); **Misbeliéving** (ಗು.)

Misbeseém ಮಿಸ್ಬಿಸೀಮ್ (ಕ್ರಿ. ಸಕ.) = Misbecome.

Miscálculate ಮಿಸ್ಕ್ಯಾಲ್ಕ್ಯುಲೇಟ್ (ಕ್ರಿ.) (ಮೊತ್ತ, ಫಲ, ಮೊ. ನ್ನು) ತಪ್ಪೆಣಿಕೆ ಮಾಡು. **Miscalculátion** (ನಾ.)

Miscáll ಮಿಸ್ಕಾಲ್ (ಕ್ರಿ. ಸಕ.) ತಪ್ಪು ಹೆಸರಿನಿಂದ ಕರೆ. (ಪ್ರಾಂ. ಪ್ರ.) (ಒಬ್ಬನನ್ನು) ಬಯ್ಯಿ.

Miscárriage ಮಿಸ್ಕ್ಯಾರೆಜ್ (ನಾ.) (ಕಳುಹಿಸಿದ ಕಾಗದ) ವಿಳಾಸದಾರನಿಗೆ ತಲುಪದೆ ಬೇರೆ ಕಡೆಗೆ ಹೋಗುವುದು; [M. of justice (ನ್ಯಾಯಸ್ಥಾನದಲ್ಲಿ) ನ್ಯಾಯ ದೊರೆಯದೆಹೋಗುವುದು]. (ಹೆಂಗಸಿನ ವಿಷಯದಲ್ಲಿ) ಅಕಾಲ ಪ್ರಸವ; ಗರ್ಭ ಸ್ರಾವ; ಗರ್ಭ ಪಾತ; ಮೈಯಿಳಿದು ಹೋಗುವುದು. (ಉದ್ದೇಶ, ಯೋಜನೆ, ಮೊ. ಗಳ) ಭಂಗ. **Miscárry** (ಕ್ರಿ. ಅಕ.) (ಮನುಷ್ಯ, ಕಾರ್ಯ) ಜಯವಾಗದೆ ಹೋಗು, ವಿಫಲವಾಗು, ಭಂಗವಾಗು. (ಹೆಂಗಸಿನ ವಿಷಯದಲ್ಲಿ) ಅಕಾಲ ಪ್ರಸವವಾಗು; ಮೈಯಿಳಿ. (ಕಾಗದ) ವಿಳಾಸದಾರನಿಗೆ ತಲುಪದೆ ಹೋಗು.

Miscásting ಮಿಸ್ಕಾಸ್ಟಿಂಗ್ (ನಾ.) (ಲೆಕ್ಕವನ್ನು) ತಪ್ಪಾಗಿ ಕೂಡುವುದು.

Miscegenátion ಮಿಸಿಜಿನೇಷನ್ (ನಾ.) ಜಾತಿ ಸಂಕರ (ಮು., ಬಿಳಿಯರು ನೀಗ್ರೋ ಜನರೊಡನೆ ಮಾಡುವ ಸ್ತ್ರೀ ಪುರುಷ ಸಂಪರ್ಕ)

Miscellánea. **Miscellaneous** ನೋಡಿ.

Miscelláneous ಮಿಸೆಲೇನಿಯಸ್ (ಗು.) ಕಲಬೆರಕೆಯ; ಹಲವು ಗುಣ ಸೇರಿದ. (ಬ. ವ. ದ ನಾಮಪದದೊಡನೆ) ಹಲವು ಬಗೆಯ; ನಾನಾ ವಿಧದ; ವಿವಿಧ; (ಮನುಷ್ಯರ ವಿಷಯದಲ್ಲಿ) ನಾನಾ ಮುಖದ; ನಾನಾ ಪ್ರಕಾರದ. **Miscelláneously** (ಕ್ರಿ. ವಿ.); **Miscelláneousness** (ನಾ.); **Miscellánea** (ನಾ.) ಸಾಹಿತ್ಯಲೇಖನಗಳ ಮಿಶ್ರ ಸಂಗ್ರಹ. **Miscéllany** —ಲನಿ (ನಾ.) ಕಲಬೆರಕೆ; ಮಿಶ್ರಣ. (ಒಂದು ಸಂಪುಟದಲ್ಲಿ ಅಡಕ ಮಾಡಿದ) ವಿವಿಧ ವಿಷಯ ಸಂಗ್ರಹ; ಸಂಕೀರ್ಣ ಸಂಪುಟ. **Miscéllanist** (ನಾ.) —ಲೇಖಕ.

Mischánce ಮಿಸ್ಚಾನ್ಸ್ (ನಾ.) ದುರದೃಷ್ಟ; ದುರ್ಘಟನೆ (ಮು., By m.)

Míschief ಮಿಸ್ಚಿಫ್ (ನಾ.) (ವ್ಯಕ್ತಿಯಿಂದ ಅಥವಾ ಇತರ ಕರ್ತೃತ್ವದಿಂದ ಆದ) ಕೇಡು; ಹಾನಿ; ಬಾಧೆ [Do one a m. (ಗ್ರಾಮ್ಯ) (—ನ್ನು) ಗಾಯಗೊಳಿಸು, ಕೊಂದುಹಾಕು. Make m. ಜಗಳ ಹುಟ್ಟಿಸು (M.-maker, -making). The m. of it is that —ಅದರಿಂದುಂಟಾದ ಕಿರುಕುಳವೇನೆಂದರೆ]. ಕೇಡಿಗ; ಕಿರುಕುಳದ ಮೂಲ ಕಾರಣ. (ಮು., ಮಕ್ಕಳ) (ಕೋಪ ಬರಿಸುವ) ಚೇಷ್ಟೆ; ತಂಟೆ; ತುಂಟಾಟ; ಕೀಟಲೆ; ಹಾವಳಿ; ಕುಚೇಷ್ಟೆ. ಸಂಕಟ (Get into m. ತೊಂದರೆಗೆ ಸಿಕ್ಕು. Keep out of m. —ಸಿಕ್ಕದಿರು). ಕುಚೋದ್ಯ; ಪರಿಹಾಸ್ಯ; ಕಟು ವ್ಯಂಗ್ಯ (Eyes full of m. ಕುಹಕ ನೂರುವ ಕಣ್ಣುಗಳು). Where the m. have you been? ಎಲ್ಲಿ ಹಾಳಾಗಿ ಹೋಗಿದ್ದೆ? **Míschievous** ಮಿಸ್ಚಿವಸ್ (ಗು.) (ವಸ್ತುಗಳ ವಿಷಯದಲ್ಲಿ) ಹಾನಿಕರ; ಕೇಡು ತರುವ. (ವ್ಯಕ್ತಿ, ನಡತೆ, ಮೊ.) ಚೇಷ್ಟೆಯ; ಕುಚೋದ್ಯದ; ಕಿರುಕುಳದ. **Míschievously** (ಕ್ರಿ. ವಿ.); **Míschievousness** (ನಾ.)

Míscible ಮಿಸಿಬ್ಲ್ (ಗು.) (ಒಂದರೊಡನೆ) ಬೆರಸಬಹುದಾದ; ಮಿಶ್ರಯೋಗ್ಯ (*With* ಉಪ. ದೊಡನೆ). **Miscibílity** (ನಾ.)

Misconceíve ಮಿಸ್ಕನ್ಸೀವ್ (ಕ್ರಿ.) ತಪ್ಪು ತಿಳಿವಳಿಕೆ, ಗ್ರಹಿಕೆ, —ಇರು; (ಮಾತಿನ, ವ್ಯಕ್ತಿಯ, ವಿಷಯದಲ್ಲಿ) ತಪ್ಪು ತಿಳಿವಳಿಕೆ ಪಡೆ; ಅಪಾರ್ಥ ಮಾಡಿಕೊ. **Misconcéption** (ನಾ.)

Miscónduct ಮಿಸ್ಕಾಂಡಕ್ಟ್ (ನಾ.) ತರವಲ್ಲದ, ತಪ್ಪು, —ನಡತೆ; ಅಯೋಗ್ಯ ವರ್ತನೆ (ಮು., ವ್ಯಭಿಚಾರ); ಅವಿವೇಕದ ಆಡಳಿತ; ಅವ್ಯವಸ್ಥೆ. **Miscondúct** —ಕಂ— (ಕ್ರಿ. ಸಕ. ಮತ್ತು ಸ್ವಾರ್ಥಕ)

Miscónstrue ಮಿಸ್ಕಾನ್ಸ್ಟ್ರು, **-construé** —ಕನ್ಸ್ಟ್ರೂ (ಕ್ರಿ. ಸಕ.) (ಮಾತಿಗೆ, ಕಾರ್ಯಕ್ಕೆ) ಅಪಾರ್ಥ ಮಾಡು. (ಒಬ್ಬನ) ಅಭಿಪ್ರಾಯವನ್ನು ತಪ್ಪಾಗಿ ಗ್ರಹಿಸು. **Misconstrúction** (ನಾ.)

Miscoúnt ಮಿಸ್ಕೌಂಟ್ (ನಾ., ಕ್ರಿ.) (ಮು., ಅಭಿಮತಗಳ) ತಪ್ಪೆಣಿಕೆ (ಮಾಡು); (ವಸ್ತುಗಳನ್ನು) ತಪ್ಪಾಗಿ ಎಣಿಸು; ತಪ್ಪುಲೆಕ್ಕ ಮಾಡು.

Míscreant ಮಿಸ್ಕ್ರಿಯಂಟ್ (ಗು., ನಾ.) (ಪ್ರಾಚೀ. ಪ್ರ.) ಪಾಷಂಡಿ (ಯಾದ); ಧೃಷ್ಟ; ನೀಚ; ದುಷ್ಟ.

Miscreáted ಮಿಸ್ಕ್ರಿಯೇಟೆಡ್ (ಗು.) ವಿಕಾರ ಸೃಷ್ಟಿಯ (ಸಾ., ಬಯ್ಯುವ ಪದ). **Miscreátion** (ನಾ.)

Mis-cué ಮಿಸ್ ಕ್ಯೂ (ನಾ.) (ಬಿಲ್ಯರ್ಡ್ಸ್ ಆಟ) ಚೆಂಡನ್ನು ದಾಂಡಿನಿಂದ ಸರಿಯಾಗಿ ಹೊಡೆಯದೆ ತಪ್ಪುವುದು.

Misdáte ಮಿಸ್ಡೇಟ್ (ಕ್ರಿ. ಸಕ., ನಾ.) ತಪ್ಪು ತಾರೀಖು (ಹಾಕು)

Misdeál ಮಿಸ್ಡೀಲ್ (ಕ್ರಿ., ನಾ.) (ಇಸ್ಪೀಟೆಲೆಯನ್ನು) ತಪ್ಪಾಗಿ ಹಂಚು; ಅನುಚಿತವಾಗಿ ವರ್ತಿಸು, ವ್ಯವಹರಿಸು. (ನಾ.) ತಪ್ಪು ಹಂಚಿಕೆ.

Misdeéd ಮಿಸ್ಡೀಡ್ (ನಾ.) ಕೆಟ್ಟ ಕೆಲಸ; ದುಷ್ಕಾರ್ಯ; ಅಪರಾಧ; ಪಾತಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Misdeém ಮಿಸ್‌ಡೀಮ್ (ಕ್ರಿ.) (ಪ್ರಾಚೀ. ಪ್ರ., ಕಾವ್ಯ) ತಪ್ಪು ಅಭಿಪ್ರಾಯ, ಭಾವನೆ, —ಪಡೆದಿರು. (ಒಬ್ಬನನ್ನು ಮತ್ತೊಬ್ಬನೆಂದು, ಒಂದನ್ನು ಮತ್ತೊಂದನ್ನಾಗಿ) ತಪ್ಪು ತಿಳಿದುಕೊ ; (ಒಂದರ ವಿಷಯದಲ್ಲಿ) ತಪ್ಪು ಭಾವನೆ ಮಾಡು.

Misdemeánour ಮಿಸ್‌ಡಿಮೀನರ್ (ನಾ.) (ನ್ಯಾ. ಶಾ.) (ಪಾಪ ಕೃತ್ಯದ ಮಟ್ಟಕ್ಕೆ ಕಡಮೆಯಾದ, ಶಿಕ್ಷಾರ್ಹವಾದ) ಕೆಟ್ಟ ನಡತೆ, ದುರ್ವರ್ತನೆ ; ಅಪರಾಧ ; ದುರ್ನಡತೆ. **Misdemeánant** (ನಾ.) ದುರ್ವರ್ತನೆಯ ತಪ್ಪಿತಸ್ಥ ; ಕೆಟ್ಟ ನಡತೆಗಾಗಿ ಶಿಕ್ಷೆ ಪಡೆದವನು (First, second, -class m. ಈ ಅಪರಾಧಿಗಳಲ್ಲಿ ಹೆಚ್ಚಿನ, ಕಡಮೆಯ, ರಿಯಾಯಿತಿ ಪಡೆಯತಕ್ಕವರು)

Misdiréct ಮಿಸ್‌ಡೈ(ಡಿ)ರೆಕ್ಟ್ (ಕ್ರಿ. ಸಕ.) (ವ್ಯಕ್ತಿಗೆ) ತಪ್ಪುಮಾರ್ಗ ತೋರಿಸು. (ಏಟು, ಮೊ. ನ್ನು) ತಪ್ಪುಕಡೆಗೆ ತಿರುಗಿಸು ; ತಪ್ಪು ಗುರಿಯಿಡು ; ತಪ್ಪು ವಿಳಾಸ ಹಾಕು. **Misdiréction** (ನಾ.)

Misdóing ಮಿಸ್‌ಡೂಇಂಗ್ (ನಾ.) = Misdeed.

Misdoúbt ಮಿಸ್‌ಡೌಟ್ (ಕ್ರಿ. ಸಕ.) (ಪ್ರಾಚೀ. ಪ್ರ.) (ಒಂದರ ನಿಜಾಂಶದ ಅಥವಾ ಅಸ್ತಿತ್ವದ ಬಗ್ಗೆ, ಒಂದರ ವಿಷಯದಲ್ಲಿ) ಸಂಶಯವುಳ್ಳವನಾಗಿರು, ಶಂಕೆ ಪಡು.

Mise ಮೀಸ್, ಮೈಸ್ (ನಾ.) (ಚರಿತ್ರೆ) ಒಪ್ಪಂದ ; ಕರಾರು ; ಕೌಲು (M. of Lewes ಕ್ರಿ. ಶ. ೧೨೬೪ರಲ್ಲಿ ಇಂಗ್ಲೆಂಡಿನ ಮೂರನೆಯ ಹೆನ್ರಿಗೂ ಶ್ರೀಮಂತ ಸಭೆಯ ಸದಸ್ಯರಿಗೂ ನಡೆದ ಒಪ್ಪಂದ). **Mise en scene** (F) (ಮೀಸಾನ್ ಸೇನ್) ನಾಟಕದ ದೃಶ್ಯೋಪ ಕರಣ, ನೇಪಥ್ಯ, ಮೊ. ವು ; ನಾಟಕ ಸಲಕರಣೆ. (ರೂಪ.) ಒಂದು ಘಟನೆಯ ಸನ್ನಿವೇಶಗಳು.

Míser[1] ಮೈಸರ್ (ನಾ.) ಐಶ್ವರ್ಯವನ್ನು ಗಳಿಸಿದ್ದರೂ ಕಷ್ಟಪಟ್ಟು ಕೊಂಡು ಜೀವನ ನಡಸುವವನು ; ಜಿಪುಣ ; ಜೀನ ; ಕೃಪಣ ; ಲೋಭಿ. **Míserly** (ಗು.) ; **Míserliness** (ನಾ.)

Míser[2] ಮೈಸರ್ (ನಾ.) ಬಾವಿ ತೋಡುವುದಕ್ಕಾಗಿ ಭೂಮಿಯಲ್ಲಿ ರಂಧ್ರ ಕೊರೆಯುವ ಯಂತ್ರ.

Míserable, etc. Misery ನೋಡಿ.

Miserére (L) ಮಿಸರಿಯರಿ—ರೇರಿ (ನಾ.) (ಬೈಬಲ್ಲಿನ) ೫೧ನೆಯ ಸ್ತೋತ್ರ ಗೀತ. ಕ್ಷಮಾ ಪ್ರಾರ್ಥನೆ ; ಮೊರೆ.

Miséricord ಮಿಸರಿಕಾರ್ಡ್ (ನಾ.) (ಕ್ರೈಸ್ತ) ಸಂನ್ಯಾಸಿ ಮಠದಲ್ಲಿ ಆಹಾರ ಪಾನಗಳ ವಿಷಯದಲ್ಲಿ ನಿಯಮಗಳನ್ನು ಅಷ್ಟು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿಲ್ಲದ ಕೋಣೆ. ಬಿದ್ದ ಶತ್ರುವನ್ನು ಕರುಣೆಯಿಂದ ಸಾಯಿಸಲು ಉಪಯೋಗಿಸುತ್ತಿದ್ದ ಕಠಾರಿ.

Mísery ಮಿಸ(ಸ)ರಿ (ನಾ.) ಕ್ಲೇಶ; ಸಂಕಟ; ದುರವಸ್ಥೆ; ಹೊಟ್ಟೆಗಿಲ್ಲದ್ದ ರಿಂದ ಅಥವಾ ದಾರಿದ್ರ್ಯದಿಂದ ಉಂಟಾದ ವ್ಯಥೆ. (ಇಸ್ಪೀಟಾಟ, ಬಳ. ಮಾ.) ಆಟಗಾರನು (ತುರುಫಿಲೆಗಳಿಲ್ಲದ್ದರಿಂದ) ಒಂದು ಪಟ್ಟನ್ನೂ ತೆಗೆದುಕೊಳ್ಳೆನೆಂದು ಆಟ ಹೇಳುವುದು. **Míserable** (ಗು.) ಅತಿ ಸಂಕಟಕ್ಕೆ, ದುಃಖಕ್ಕೆ, ಈಡಾದ; ದುಃಖಾರ್ತ ; ಅತ್ಯಂತ ದಾರಿದ್ರ್ಯದ. (ಘಟನೆ, ಮೊ. ವು) ಸಂಕಟಕರ. ತುಚ್ಛ ; ಕ್ಷುದ್ರ ; ದರಿದ್ರ ; ಕೀಳು ತೆರದ (A m. hovel ಪಾಳು ಗುಡಿಸಿಲು). **Míserably** (ಕ್ರಿ. ವಿ.)

Misfeásance ಮಿಸ್‌ಫೀಸನ್ಸ್ (ನಾ.) (ನ್ಯಾ. ಶಾ.) ಅತಿಕ್ರಮ ; ಅನ್ಯಾಯಾಚರಣೆ ; ಒಬ್ಬನು ನ್ಯಾಯಾನುಗುಣವಾಗಿ ಮಾಡಲು ಅಧಿಕಾರವುಳ್ಳ ಕಾರ್ಯವನ್ನು ಅನುಚಿತವಾಗಿ, ಕೆಡುಕಾಗುವಂತೆ, ಮಾಡುವುದು ; ಅಧಿಕಾರದ ಅತ್ಯಾಚಾರ.

Misfíre ಮಿಸ್‌ಫೈಅರ್ (ಕ್ರಿ. ಅಕ., ನಾ.) (ಬಂದೂಕು) ಹಾರದೆ ಹೋಗು (ವುದು). (ಮೋಟಾರ್ ಎಂಜಿನ್, ಮೊ. ಗಳ ವಿಷಯದಲ್ಲಿ) ಸ್ಫೋಟಕವು ಹೊತ್ತಿಕೊಳ್ಳದೆ ಯಂತ್ರ ನಡೆಯದಿರುವುದು.

Misfít ಮಿಸ್‌ಫಿಟ್ (ನಾ.) (ಯಾರಿಗಾಗಿ ಮಾಡಿದೆಯೊ ಅವನಿಗೆ) ಸರಿಯಾಗಿ ಹೊಂದದ ಉಡುಪು, ಮೊ. ದ್ದು ; ಹೊಂದಿಕೆಯಿಲ್ಲದ್ದು ; ಎಡವಟ್ಟು ; ತನ್ನ ಸನ್ನಿವೇಶಕ್ಕೆ ಹೊಂದದವನು.

Misfórtune ಮಿಸ್‌ಫಾರ್ಚ(ಚು)ನ್ (ನಾ.) ದುರದೃಷ್ಟ ; ದೌರ್ಭಾಗ್ಯ ; ದುರ್ದೈವ.

Misgíve ಮಿಸ್‌ಗಿವ್ (ಕ್ರಿ. ಸಕ.) ಶಂಕೆ, ಭಯ, —ಹುಟ್ಟಿಸು [(Person's) mind misgives him (*about* thing, *that*) ಮನಸ್ಸಿನಲ್ಲಿ ಶಂಕೆ, ದಿಗಿಲು, ಹುಟ್ಟುತ್ತದೆ]. **Misgíving** (ನಾ.) ಶಂಕೆ ; ದಿಗಿಲು.

Misgóvern ಮಿಸ್‌ಗವರ್ನ್ (ಕ್ರಿ. ಸಕ.) (ರಾಜ್ಯ, ಮೊ. ನ್ನು) ಅಯೋಗ್ಯ ರೀತಿಯಲ್ಲಿ ಆಳು; ಕೆಟ್ಟ ಆಡಳಿತ ನಡಸು. **Misgóvernment** (ನಾ.)

Misguíde ಮಿಸ್‌ಗೈಡ್ (ಕ್ರಿ. ಸಕ. : ಮು., ಭೂ. ಕೃ. ನಲ್ಲಿ) ತಪ್ಪು ದಾರಿಗೆ ಸೆಳೆ ; ಅಮಾರ್ಗಕ್ಕೆ ಎಳೆ. **Misguídedly** (ಕ್ರಿ. ವಿ.)

Mishándle ಮಿಸ್‌ಹ್ಯಾಂಡ್ಲ್ (ಕ್ರಿ. ಸಕ.) (ಮನುಷ್ಯನನ್ನು, ವಸ್ತುವನ್ನು) ಒರಟೊರಟಾಗಿ ಹಿಡಿದಾಡು ; ಹಿಂಸೆ ಕೊಡು ; ಸರಿಯಾಗಿ ನಡಸದೆ ಹೋಗು ; ಕೆಡಿಸು.

Misháp ಮಿಸ್‌ಹ್ಯಾಪ್ (ನಾ.) ದುರ್ಘಟನೆ.

Misheár ಮಿಸ್‌ಹಿಯರ್ (ಕ್ರಿ. ಸಕ.) ತಪ್ಪಾಗಿ, ಅಸ್ಪಷ್ಟವಾಗಿ, (ಕಿವಿ ಯಿಂದ) ಕೇಳು ; ಸರಿಯಾಗಿ ಕೇಳದಿರು.

Míshmash ಮಿಷ್‌ಮ್ಯಾಷ್ (ನಾ.) ಕಲಸು ಮೆಲಸು ; ಕಲ ಬೆರಕೆ.

Misinfórm ಮಿಸ್‌ಇನ್‌ಫಾರ್ಮ್ (ಕ್ರಿ. ಸಕ.) ತಪ್ಪು ತಿಳಿವಳಿಕೆ, ತಪ್ಪು ಸಮಾಚಾರ, —ಕೊಡು ; ತಪ್ಪು ದಾರಿ ತೋರಿಸು. **Misinformátion** (ನಾ.)

Misintérpret ಮಿಸ್‌ಇಂಟರ್‌ಪ್ರೆಟ್ (ಕ್ರಿ. ಸಕ.) ತಪ್ಪು ಅರ್ಥ ಕೊಡು ; ಅಪಾರ್ಥ ಮಾಡು. (—ಇಂದ) ತಪ್ಪಾಗಿ ಅನುಮಾನಿಸು. **Misinterpretátion** (ನಾ.)

Misjoín ಮಿಸ್‌ಜಾಯ್ನ್ (ಕ್ರಿ. ಸಕ.) ತಪ್ಪಾಗಿ ಜೋಡಿಸು ; (ನ್ಯಾ. ಶಾ.) ವ್ಯವಹಾರದಲ್ಲಿ ಒಟ್ಟಿಗೆ ಸೇರಿಸಕೂಡದ ಕಕ್ಷಿಗಾರರ ನ್ನಾಗಲಿ ವ್ಯಾಜ್ಯ ಕಾರಣಗಳನ್ನಾಗಲಿ ಸೇರಿಸು. **Misjoínder** (ನಾ.) (ನ್ಯಾ. ಶಾ.)

Misjúdge ಮಿಸ್‌ಜಜ್ (ಕ್ರಿ.) (ಮನುಷ್ಯ, ಮೊ. ರ ವಿಷಯದಲ್ಲಿ) ತಪ್ಪು ತೀರ್ಮಾನಕ್ಕೆ ಬರು ; (—ವಿಷಯದಲ್ಲಿ) ತಪ್ಪು ಅಭಿಪ್ರಾಯ ಪಡು ; ತಪ್ಪು ಭಾವನೆಯುಳ್ಳವನಾಗಿರು.

Mislaý ಮಿಸ್‌ಲೇ (ಕ್ರಿ. ಸಕ.) ಥಟ್ಟನೆ ಕೈಗೆ ಸಿಕ್ಕದಂತೆ ಎಲ್ಲಿಯೋ ಮರೆತು ಇಟ್ಟುಬಿಡು : ಕೈಮರೆತಿಡು.

Misleád ಮಿಸ್‌ಲೀಡ್ (ಕ್ರಿ. ಸಕ.) (ನಡತೆಯಲ್ಲಿ) ತಪ್ಪುದಾರಿಗೆ ಎಳೆ, ದಾರಿ ತಪ್ಪಿಸು ; (—ಗೆ) ತಪ್ಪು ಅಭಿಪ್ರಾಯ ಕೊಡು.

Mislíke ಮಿಸ್‌ಲೈಕ್ (ಕ್ರಿ. ಸಕ.) (ಪ್ರಾಚೀ. ಪ್ರ.) = Dislike.

Mismánage ಮಿಸ್‌ಮ್ಯಾನೆಜ್ (ಕ್ರಿ. ಸಕ.) ಅವ್ಯವಸ್ಥೆಯಾಗಿ ನಡಸು, ನಿರ್ವಹಿಸು. **Mismánagement** (ನಾ.)

Misnáme ಮಿಸ್‌ನೇಮ್ (ಕ್ರಿ. ಸಕ.) ತಪ್ಪು ಹೆಸರಿನಿಂದ ಕರೆ.

Misnómer ಮಿಸ್‌ನೋಮರ್ (ನಾ.) ತಪ್ಪು ಹೆಸರು ; ತಪ್ಪು ಹೆಸರಿನ ಪ್ರಯೋಗ ; (ಪದದ) ಅಪ ಪ್ರಯೋಗ.

Miságamy ಮಿ(ಮೈ)ಸಾಗಮಿ (ನಾ.) ವಿವಾಹ ದ್ವೇಷ. **Miságamist** (ನಾ.)

Misógynist ಮಿ(ಮೈ)ಸಾಜಿನಿಸ್ಟ್ (ನಾ.) ಸ್ತ್ರೀ ದ್ವೇಷಿ. **Misogýnic** —ಸೊ— (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mispláce ಮಿಸ್‌ಪ್ಲೇಸ್ (ಕ್ರಿ. ಸಕ.) ತಪ್ಪುಸ್ಥಳದಲ್ಲಿಡು ; ತಪ್ಪುಜನರ ಕೈಗೆ ಕೊಡು ; ಅಪಾತ್ರದಲ್ಲಿ (ಪ್ರೀತಿ, ನಂಬಿಕೆ) ಇಡು ; (ಮಾತುಗಳನ್ನು, ಕಾರ್ಯವನ್ನು) ಸಮಯ ನೋಡದೆ, ಅನುಚಿತವಾಗಿ, ಪ್ರಯೋಗಿಸು. **Misplácement** (ನಾ.)

Misprínt ಮಿಸ್‌ಪ್ರಿಂಟ್ (ನಾ., ಕ್ರಿ. ಸಕ.) ಅಚ್ಚಿನ ತಪ್ಪು. (ಕ್ರಿ.) ತಪ್ಪಾಗಿ ಮುದ್ರಿಸು.

Misprísion[1] ಮಿಸ್‌ಪ್ರಿಷನ್ (ನಾ.) (ನ್ಯಾ. ಶಾ.) ಅಕಾರ್ಯ ; ದುಷ್ಕಾರ್ಯ ; ದುರ್ನಡತೆ (ಮು., ಅಧಿಕಾರಿಯ ದುರ್ವರ್ತನೆ, ಕರ್ತವ್ಯ ಲೋಪ). M. of treason or felony (ಹಿಂದೆ) ರಾಜದ್ರೋಹ ಅಥವಾ ಇತರ ಮಹಾಪರಾಧ ; (ಈಗ) ರಾಜದ್ರೋಹದ ಸಂಚು, ಮೊ. ಗಳ ವಿಷಯವಾಗಿ ತನಗೆ ತಿಳಿದದ್ದನ್ನು ಮುಚ್ಚಿಡುವುದು.

Misprísion[2] ಮಿಸ್‌ಪ್ರಿಷನ್ (ನಾ.) (ಪ್ರಾಚೀ. ಪ್ರ.) ಕಡೆಗಣಿಕೆ ; ತಿರಸ್ಕಾರ. (ಒಂದರ) ತಕ್ಕ ಬೆಲೆಯನ್ನು, ಯೋಗ್ಯತೆಯನ್ನು, —ಕಟ್ಟದೆ, ಗ್ರಹಿಸದೆ, ಹೋಗುವುದು. **Misprize** ಮಿಸ್‌ಪ್ರೈಸ್ (ಕ್ರಿ. ಸಕ.) ಕಡೆಗಣಿಸು. ತಕ್ಕ ಬೆಲೆ ಕಟ್ಟದೆ, ಗ್ರಹಿಸದೆ, ಹೋಗು.

Mispríze. **Misprision** ನೋಡಿ.

Mispronoúnce ಮಿಸ್‌ಪ್ರೊನೌನ್ಸ್ (ಕ್ರಿ. ಸಕ.) ತಪ್ಪಾಗಿ, ಅಶುದ್ಧವಾಗಿ, —ಉಚ್ಚರಿಸು. **Mispronunciátion** —ನನ್ಸಿ— (ನಾ.)

Misquóte ಮಿಸ್‌ಕ್ವೋಟ್ (ಕ್ರಿ. ಸಕ.) ತಪ್ಪಾಗಿ ಉದಾಹರಿಸು, ಅನುವದಿಸು. **Misquotátion** —ಕ್ವೋ— (ನಾ.)

Misreád ಮಿಸ್‌ರೀಡ್ (ಕ್ರಿ. ಸಕ., ಭೂತ., ಭೂ. ಕೃ., -read —ರೆಡ್) ತಪ್ಪಾಗಿ ಓದು, ಅರ್ಥ ಕೊಡು, ವ್ಯಾಖ್ಯಾನ ಮಾಡು.

Misrepresént ಮಿಸ್‌ರೆಪ್ರಿಸೆಂಟ್ (ಕ್ರಿ. ಸಕ.) ತಪ್ಪಾಗಿ ನಿರೂಪಿಸು, ತಿಳಿಸು. (ಒಂದರ) ತಪ್ಪು ವೃತ್ತಾಂತ ಕೊಡು. **Misrepresentátion** (ನಾ.)

Misrúle ಮಿಸ್‌ರೂಲ್ (ನಾ.) ಕೆಟ್ಟ, ಅವ್ಯವಸ್ಥೆಯ, —ಆಡಳಿತ, ರಾಜ್ಯಭಾರ. Abbot, Lord, Master, of M. ಕ್ರಿಸ್ಮಸ್ಸಿನ ಪಾನಗೋಷ್ಠಿಯ ಮೆರೆದಾಟದಲ್ಲಿ ಅಧ್ಯಕ್ಷತೆ ವಹಿಸುವವನು.

Miss[1] ಮಿಸ್ (ನಾ., ಕ್ರಿ.) (ಗುರಿ ತಾಕಲು, ಏನನ್ನಾದರೂ ಪಡೆಯಲು) ತಪ್ಪುವುದು [A m. is as good as a mile ಕೂದಲನಷ್ಟು ತಪ್ಪಿಹೋದರೂ ಮೈಲಿಯಷ್ಟು ತಪ್ಪಿಹೋದಷ್ಟೇ. (ಬಿಲ್ಯರ್ಡ್ಸ್ ಆಟ) Give a m. ತನ್ನ ಚೆಂಡಿನ ಸ್ಥಾನರಕ್ಷಣೆಗಾಗಿ ಗುರಿಚೆಂಡನ್ನು ಹೊಡೆಯದೆ ಹೋಗು]. (ಕ್ರಿ.) (ಮನುಷ್ಯ, ಕ್ಷಿಪಣಿ) (ಗುರಿ) ತಪ್ಪು ; ಕಂಡುಹಿಡಿಯದೆ ಹೋಗು ; ಪಡೆಯದೆ ಹೋಗು ; ಸಂಧಿಸದೆ ಹೋಗು. (ಸಮಯ) ಕಳೆದುಕೊ ; (ರೈಲುಬಂಡಿ) ಸಿಕ್ಕದೆ ಹೋಗು. (ಸಂದರ್ಭೋಕ್ತಿ, ಮೊ. ನ್ನು) ಕೇಳದೆ, ಅರ್ಥ ಮಾಡಿಕೊಳ್ಳದೆ, ಹೋಗು. (ಓದುವುದರಲ್ಲಿ, ಬರೆಯುವುದರಲ್ಲಿ, ಮಾತು, ಮೊ. ನ್ನು) ಬಿಟ್ಟುಬಿಡು (= M. out). (ಗೊತ್ತು ಮಾಡಿದಂತೆ ಕಾಲಕ್ಕೆ ಬರದೆ, ಕೆಲಸ ನಡಸದೆ) ತಪ್ಪು. (ಒಬ್ಬರು) ಅಲ್ಲಿಲ್ಲದುದಕ್ಕೆ ವಿಷಾದಪಡು ; (ಒಂದರ) ಅಭಾವ, ಕೊರತೆ, —ಮನಸ್ಸಿಗೆ ತಟ್ಟು. M. fire (ಬಂದೂಕು) ಹಾರದೆ ಹೋಗು ; (ರೂಪ.) ಉದ್ದೇಶ ಭಂಗವಾಗು. **Missing** ಮಿಸಿಂಗ್ (ಗು.) (ಕ್ರಿಯಾರ್ಥಗಳಲ್ಲಿ). ಇಲ್ಲದೆ ಹೋಗಿರುವ; ಲೋಪವಾಗಿರುವ ; (ಅದರ) ಸ್ಥಳದಲ್ಲಿಲ್ಲದ (There is a page m.). The m. (ಕೊರೆಯಾದ ರೆಂದಾಗಲ ಗಾಯ ಪಟ್ಟರೆಂದಾಗಲ ತಿಳಿಯದೆ ಯುದ್ಧಾನಂತರ) ಪತ್ತೆಯಿಲ್ಲದ ಸೈನಿಕರು. M. link ಶ್ರೇಣಿಯಲ್ಲಿ ಬಿಟ್ಟುಹೋಗಿರುವ ಭಾಗ ; ನರಣಿ ಲೋಪ ; ಕಳೆದ ಕೊಂಡಿ ; (ಪ್ರಾ. ವಿ.) (ಮು., ಮನುಷ್ಯನಿಗೂ ಮನುಷ್ಯ ಸದೃಶವಾದ ವಾನರಕ್ಕೂ ಮಧ್ಯವರ್ತಿಯಾಗಿದ್ದಿರಬಹುದೆಂದು ಶಾಸ್ತ್ರಜ್ಞರು ಊಹಿಸುವ) ಮಧ್ಯವರ್ತಿ ಪ್ರಾಣಿರೂಪ.

Miss[2] ಮಿಸ್ (ನಾ.) ಮದುವೆಯಿಲ್ಲದ ಹೆಂಗಸಿಗೆ ಅಥವಾ ಹುಡುಗಿಗೆ ಒಕ್ಕಣೆಯ ಪದ : ಕುಮಾರಿ (M. Smith ; ಬ. ವ. The M. Smiths, The Misses Smith. M. 1941 ೧೯೪೧ನೆಯ ಇಸವಿಯ ಪರಮ ಸುಂದರಿ. M. America ಅಮೆರಿಕದ ಪರಮ ಸುಂದರಿ). (ತಿರಸ್ಕಾರವಾಗಿ ಅಥವಾ ಹಾಸ್ಯವಾಗಿ) ಹುಡುಗಿ (ಮು., ಪಾಠಶಾಲೆಯ ಹುಡುಗಿ). A pert m. ವಿನಯವಿಲ್ಲದ ಹುಡುಗಿ. **Míssish** (ಗು.) ಕನ್ಯೆಗೆ ವೈಲಕ್ಷಣ್ಯವಾದ ; ಒಯ್ಯಾರದ ; ಸೋಗಿನ ; ಭಾವಪ್ರಧಾನವಾದ. **Míssishness** (ನಾ.); **Míssy** (ನಾ.) (Miss ಪದದ ಪ್ರೀತಿಪೂರ್ವಕವಾದ, ಹಾಸ್ಯದ ಅಥವಾ ತಿರಸ್ಕಾರ ಸೂಚಕವಾದ, ರೂಪ)

Mis-shápen ಮಿಸ್‌ಷೇಪ್(ಪೆ)ನ್ (ಗು.) ಕುರೂಪಿನ ; ವಿಕಾರ ರೂಪಿನ.

Míssile ಮಿಸ್ಸೈ(ಸಿ)ಲ್ (ಗು., ನಾ.) [ಯಂತ್ರದಿಂದಾಗಲಿ, ಬೇರೆ ಸಾಧನದಿಂದಾಗಲಿ (ಅಪೂರ್ವವಾಗಿ ಬಂದೂಕಿನಿಂದಾಗಲಿ)] ಎಸೆಯಲಾಗುವ, ಅಥವಾ ಹಾರಿಸಲಾಗುವ (ವಸ್ತು, ಆಯುಧ) ; ಕ್ಷಿಪಣಿ.

Míssion ಮಿಷ(ಷ್)ನ್ (ನಾ.) ವ್ಯವಹಾರ ನಡಸಲು ಪರ ರಾಷ್ಟ್ರಕ್ಕೆ ಕಳುಹಿಸಿದ ಮಂಡಲಿ : ನಿಯೋಗಿ ಮಂಡಲಿ ; ಕ್ರೈಸ್ತೇತರರನ್ನು ಕ್ರೈಸ್ತರನ್ನಾಗಿ ಮಾಡಲು ಕ್ರೈಸ್ತ ಮತೀಯ ಪಂಗಡದವರು ಕಳುಹಿಸಿದ (ಪಾದ್ರಿಗಳ) ಮಂಡಲಿ : ಕ್ರೈಸ್ತ ಧರ್ಮ ಪ್ರಚಾರ(ಕ) ಮಂಡಲಿ ; ಈ ಮಂಡಲಿಯ ವ್ಯವಹಾರ ಕ್ಷೇತ್ರ; ಧರ್ಮ ಪ್ರಚಾರಕನ ಉದ್ಯೋಗ; ಒಂದು ಪ್ರಾಂತದಲ್ಲಿ ಜನರನ್ನು ಕ್ರೈಸ್ತ ಧರ್ಮಕ್ಕೆ ತಿರುಗಿಸಲು ನಿಯಾಮಕವಾದ ಸಂಸ್ಥೆ ; ಈ ಕಾರ್ಯ ಮಾಡಲು ಅನುಸರಿಸಬೇಕಾದ ವಿಧಿ, ಕರ್ಮ, ಮೊ. ವು ; (ರಾಜಕೀಯ ಅಥವಾ ಇತರ) ನಿಯೋಗಿ ಮಂಡಲದ ಉದ್ದಿಷ್ಟ ಕಾರ್ಯ. (ಒಬ್ಬನ) ಜೀವನದ ಧ್ಯೇಯ, ದೈವ ನಿಯಮಿತ ಕಾರ್ಯ. **Míssionary** (ಗು., ನಾ.) ಧರ್ಮ ಪ್ರಚಾರ(ಕ) ಮಂಡಲಿಯ ; —ಗೆ ಸಂಬಂಧಿಸಿದ (M.-box ಧರ್ಮ ಪ್ರಚಾರ ಮಂಡಲಿಯ ಗೋಲಕ). (ನಾ.) ಧರ್ಮ ಪ್ರಚಾರಕ (ಸಂಸ್ಥೆಯವನು). ಪೋಲೀಸ್ ಕೋರ್ಟುಗಳಲ್ಲಿ (ಅಪರಾಧಿಗಳು, ಮೊ. ಗೆ ಧರ್ಮ ಬೋಧೆ ಮಾಡಲು) ನಿಯಮಿತನಾಗಿರುವ ಧರ್ಮ ಪ್ರಚಾರಕ, ಪಾದ್ರಿ. **Míssioner** (ನಾ.) = Missionary ; ಪ್ರಾಂತ ಧರ್ಮ ಪ್ರಚಾರ ಸಂಸ್ಥೆಯ ಮೇಲ್ವಿಚಾರಕ.

Míssis ಮಿಸಿಸ್(ಸ್), **Míssus** ಮಿಸಸ್ (ನಾ.) [Mistress ಪದದ ಅಪಭ್ರಂಶ (ಆಳುಗಳು ಹೇಳುವಂತೆ)]. (ಗ್ರಾಮ್ಯ, ಹಾಸ್ಯ,—ಪ್ರ.) The m. ತನ್ನ ಅಥವಾ ಮತ್ತೊಬ್ಬನ ಹೆಂಡತಿ.

Míssive ಮಿಸಿವ್ (ಗು., ನಾ.) [Letter(s) m. ಬಿಷಪ್ ಪದವಿಗೆ ಚುನಾಯಿಸಬೇಕಾದವನ ಹೆಸರನ್ನು ತಿಳಿಸಿ ಕ್ರೈಸ್ತ ಸಭಾಧಿಕಾರಿಗೂ ಸಭೆಗೂ ರಾಜನು ಕಳುಹಿಸುವ (ನಾಮಕರಣ) ಪತ್ರ]. (ಮು., ಸರ್ಕಾರಿಯ) ಕಾಗದ, ಪತ್ರ.

Mis-spéll ಮಿಸ್ ಸ್ಪೆಲ್ (ಕ್ರಿ. ಸಕ. ; ಭೂತ., ಭೂ. ಕೃ. -spelt) ತಪ್ಪಾಗಿ ಅಕ್ಷರ ಸಂಯೋಜನೆ ಮಾಡು.

Mis-spénd ಮಿಸ್ ಸ್ಪೆಂಡ್ (ಕ್ರಿ. ಸಕ. ; ಭೂತ., ಭೂ. ಕೃ. -spent) ಅಪವ್ಯಯ ಮಾಡು ; ದುಂದು ವೆಚ್ಚ ಮಾಡು.

Mis-státe ಮಿಸ್ ಸ್ಟೇಟ್ (ಕ್ರಿ. ಸಕ.) ತಪ್ಪಾಗಿ ಹೇಳು. **Mis-státement** (ನಾ.) ತಪ್ಪು ಹೇಳಿಕೆ.

Mist ಮಿಸ್ಟ್ (ನಾ., ಕ್ರಿ.) ಮಳೆಹನಿಗಿಂತಲೂ ಬಹಳ ಸಣ್ಣ ಹನಿಗಳಾಗಿ ಆಕಾಶದಿಂದ ಬೀಳುವ ನೀರಿನ ಆವಿರೂಪ : ಮಂಜು ; ಇಬ್ಬನಿ. ಕಣ್ಣೀರಿನಿಂದಾಗಲಿ ದೇಹದ ಅಸ್ವಸ್ಥತೆಯಿಂದಾಗಲಿ ಕಣ್ಣಿಗೆ ಕಟ್ಟುವ ಮಂಜು. (ಕ್ರಿ.) ಮಂಜುಗಟ್ಟು ; ಮಂಜುಗವಿ(ಸು). **Místful** (ಗು.) ; **Místlike** (ಗು., ಕ್ರಿ. ವಿ.) ; **Místy** (ಗು.) ಮಂಜಿನ ; ಮಂಜುಗವಿದ ; ಮಬ್ಬು ಮಬ್ಬಾದ ; ಮಸುಕು ಮಸುಕಾದ ; (ರೂಪ.) ಅಸ್ಪಷ್ಟ (A m. idea). **Místily** (ಕ್ರಿ. ವಿ.) ; **Místiness** (ನಾ.)

Mistáke ಮಿಸ್ಟೇಕ್ (ನಾ., ಕ್ರಿ.) ತಪ್ಪು ತಿಳಿವಳಿಕೆ, ಗ್ರಹಿಕೆ ; (ಆಲೋಚನೆಯಲ್ಲಿ, ಕಾರ್ಯದಲ್ಲಿ) ತಪ್ಪು ; ದೋಷ ; ಸ್ಖಾಲಿತ್ಯ ; ಪ್ರಮಾದ [And, *or* make, no m. (ಹಿಂದಿನ ಹೇಳಿಕೆಯನ್ನು ಒತ್ತಿ ಹೇಳುವ ಸಂದರ್ಭದಲ್ಲಿ) ತಪ್ಪದೆ, ಖಂಡಿತವಾಗಿ, ನಿಸ್ಸಂಶಯವಾಗಿ]. (ಕ್ರಿ.) (ಒಬ್ಬನ ಹೇಳಿಕೆಯ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದ್ದೇಶದ, —ಅರ್ಥವನ್ನು, ಅಭಿಪ್ರಾಯವನ್ನು) ತಪ್ಪುತಿಳಿ; ತಪ್ಪಾಗಿ ಗ್ರಹಿಸು ; ತಪ್ಪು ಮಾಡು; ತಪ್ಪು ಅಭಿಪ್ರಾಯ ಪಡು. (ಭೂ. ಕೃ.) ತಪ್ಪು ಅಭಿಪ್ರಾಯದ ; (ಕಾರ್ಯ, ಮೊ. ನ್ನು) ಸರಿಯಾಗಿ ವಿವೇಚಿಸದ. You are mistaken. Mistaken kindness ವಿವೇಚನೆಯಿಲ್ಲದ ದಯೆ. Mistake A for B ಏ ಎಂಬುದನ್ನು ಬೀ ಎಂದು ಭ್ರಾಂತಿ ಪಡು. There is no mistaking (ವ್ಯಕ್ತಿಯನ್ನಾಗಲಿ ವಿಷಯವನ್ನಾಗಲಿ) ಯಾರೂ ತಪ್ಪಾಗಿ ಗ್ರಹಿಸುವಂತೆಯೇ ಇಲ್ಲ. **Mistákable** (ಗು.); **Mistákenly** (ಕ್ರಿ. ವಿ.); **Mistákenness** (ನಾ.)

Míster ಮಿಸ್ಟರ್ (ನಾ., ಕ್ರಿ. ಸಕ.) [ಒಬ್ಬನ ಹೆಸರಿನ ಅಥವಾ ಅಧಿಕಾರದ ಹೆಸರಿನ ಹಿಂದೆ ಸೇರಿಸುವ ಗೌರವದ ಒಕ್ಕಣೆಯ ಪದ (ಬರವಣಿಗೆಯಲ್ಲಿ ಸಂಕ್ಷಿಪ್ತ: Mr): ('ಶ್ರೀಮಾನ್', 'ಮಹಾರಾಜಶ್ರೀ' ಎಂಬ ಪದಗಳಿಗೆ ಸಮಾನವಾದದ್ದು); Mr Jones, Mr Secretary, Mr Speaker. Mr Right ಹಣೆಯಲ್ಲಿ ಬರೆದ ಗಂಡ]. (ಹೆಸರಿನ ಹಿಂದಲ್ಲದೆ ಬರಿಯ ಪದವನ್ನೇ ಸಂಬೋಧನೆಯಾಗಿ ಉಪಯೋಗಿಸುವುದು ಗ್ರಾಮ್ಯ) ಅಯ್ಯಾ! ಸ್ವಾಮಿ! (= Sir); 'ಅಯ್ಯಾ' ಎಂಬ ಒಕ್ಕಣೆ (Please don't call me m. ದಯವಿಟ್ಟು ನನ್ನನ್ನು ಅಯ್ಯಾ ಗಿಯ್ಯಾ ಎಂದು ಕರೆಯಬೇಡ). ಬಿರುದು ಯಾವುದೂ ಇಲ್ಲದ ವ್ಯಕ್ತಿ (Be he prince or mere m. ಅವನು ಅರಸಾಗಿರಲಿ ಸಾಮಾನ್ಯ ವ್ಯಕ್ತಿಯಾಗಿರಲಿ). (ಕ್ರಿ.) 'ಮಿಸ್ಟರ್' (ಶ್ರೀಮಾನ್) ಎಂದು ಸಂಬೋಧಿಸು (Don't m. me)

Místigris ಮಿಸ್ಟಿಗ್ರಿಸ್ (ನಾ.) (ಇಸ್ಪೀಟಾಟ) Poker ಎಂಬ ಒಂದು ಬಗೆಯ ಆಟ(ದಲ್ಲಿ ಬರಿಯ ಎಲೆ)

Mistíme ಮಿಸ್‌ಟೈಮ್ (ಕ್ರಿ. ಸಕ.) ತಪ್ಪಾಗಿ ಅಥವಾ ಅನುಚಿತವಾಗಿ ಕಾಲವಿಡು. ಅನುಚಿತ ಕಾಲದಲ್ಲಿ ಹೇಳು, ಮಾಡು (ಮು., ಭೂ. ಕೃ. ನಲ್ಲಿ)

Místletoe ಮಿಸ್(ಸ್)ಲ್‌ಟೋ (ನಾ.) ಸೇಬು, ಮೊ. ಮರಗಳಲ್ಲಿ ಬದನಿಕೆಯಾಗಿ ಬೆಳೆದು ಜಿಗುಟು ಹಣ್ಣನ್ನು ಬಿಡುವ ಒಂದು ಜಾತಿಯ ಸಸ್ಯ. Kiss under the m. (ಕ್ರಿಸ್ಮಸ್ ಕಾಲದಲ್ಲಿ ಅಲಂಕಾರಕ್ಕಾಗಿ ಉಪಯೋಗಿಸುವ ಈ ಬದನಿಕೆಯ ಕೆಳಗೆ ನಿಂತಿರುವ ಹುಡುಗಿಯನ್ನು ಕಂಡ ಯುವಕನು ಅವಳನ್ನು ಮುತ್ತಿಟ್ಟುಕೊಳ್ಳಲು ಅನುಮತಿಯಿರುವ ಸಂಪ್ರದಾಯ ದಿಂದ)

Mistransláte ಮಿಸ್‌ಟ್ರಾನ್ಸ್‌ಲೇಟ್ (ಕ್ರಿ. ಸಕ.) ತಪ್ಪಾಗಿ ಭಾಷಾಂತರಿಸು, ಪರಿವರ್ತಿಸು. **Mistranslátion** (ನಾ.)

Místress ಮಿಸ್ಟ್ರೆಸ್ (ನಾ.) (ಮನೆಯ ಆಳುಗಳಮೇಲೆ ಅಧಿಕಾರವಿರುವ) ಯಜಮಾನಿ, ಒಡತಿ; ಅಧಿಕಾರಿಣಿ; ಸ್ವಾಮಿನಿ [You are your own m. ನಿನ್ನಿಚ್ಛೆಯಂತೆ ನಡೆಯಲು ನೀನು ಸ್ವತಂತ್ರಳು. (ರೂಪ.) (ದೇಶಗಳ ವಿಷಯದಲ್ಲಿ) M. of the world]. (ಒಂದು ವಿಷಯದಲ್ಲಿ) ಪೂರ್ಣ ಪಾಂಡಿತ್ಯವುಳ್ಳವಳು: ಪಾರಂಗತೆ. ಪ್ರಣಯಿನಿ; ನಲ್ಲೆ; ಉಪ ಪತ್ನಿ; ಇಟ್ಟುಕೊಂಡವಳು. (ಪಾಠಶಾಲೆಯ ಅಥವಾ ಒಂದು ವಿಶೇಷ ಪಾಠದ) ಉಪಾಧ್ಯಾಯಿನಿ (Music-m.); (ಒಕ್ಕಣೆಯ ಪದವಾಗಿ: Mrs ನೋಡಿ). M. of the Robes (ಇಂಗ್ಲೆಂಡಿನ) ರಾಣಿಯ ಉಡುಪುಗಳನ್ನು ನೋಡಿಕೊಳ್ಳುವವಳು. **Místress-ship** (ನಾ.) —ಅಧಿಕಾರ.

Mistríal ಮಿಸ್‌ಟ್ರೈಅಲ್ (ನಾ.) ದೋಷಕಾರಣದಿಂದ, ನಿಲ್ಲಲಾರದ ನ್ಯಾಯವಿಚಾರಣೆ; ಅಕ್ರಮ, ತಪ್ಪು, —ವಿಚಾರಣೆ.

Mistrúst ಮಿಸ್‌ಟ್ರಸ್ಟ್ (ಕ್ರಿ. ಸಕ., ನಾ.) (ಒಬ್ಬನಲ್ಲಿ, ತನ್ನಲ್ಲಿ, ತನ್ನ ಶಕ್ತಿ, ಮೊ. ಗಳಲ್ಲಿ) ಅಪನಂಬಿಕೆ(ಪಡು), ನಂಬಿಕೆಯಿಲ್ಲದಿರು(ವುದು). **Mistrústful** (ಗು.); **Mistrústfully** (ಕ್ರಿ. ವಿ.); **Mistrústfulness** (ನಾ.)

Misunderstánd ಮಿಸ್‌ಅಂಡರ್‌ಸ್ಟ್ಯಾಂಡ್ (ಕ್ರಿ. ಸಕ.; ಭೂತ., ಭೂ. ಕೃ. -stood) ತಪ್ಪು ಅರ್ಥದಲ್ಲಿ, ತಪ್ಪಾಗಿ, —ತಿಳಿದುಕೊ, ಗ್ರಹಿಸು. (ಒಬ್ಬನ ಮಾತು, ಕಾರ್ಯ, ಮೊ. ಕ್ಕೆ) ಅಪಾರ್ಥ ಮಾಡಿಕೊ. **Misunderstánding** (ನಾ.) (ಕ್ರಿಯಾರ್ಥಗಳಲ್ಲಿ). ಮನಸ್ತಾಪ; ವೈಮನಸ್ಯ.

Misúse ಮಿಸ್‌ಯೂಸ್ (ಕ್ರಿ. ಸಕ.; ನಾ., — ಯೂಸ್) ತಪ್ಪಾಗಿ ಬಳಸು, ಪ್ರಯೋಗಿಸು, ಉಪಯೋಗಿಸು; ತಪ್ಪುಉದ್ದೇಶಕ್ಕೆ ಬಳಸು; ದುರುಪಯೋಗಮಾಡು; ದುರ್ವಿನಿಯೋಗಿಸು. (ಒಬ್ಬನ ವಿಷಯದಲ್ಲಿ) ಕಠಿನವಾಗಿ ವರ್ತಿಸು; ತೊಂದರೆ ಕೊಡು. (ನಾ.) —ವುದು.

Mite ಮೈಟ್ (ನಾ.) (ಹಿಂದೆ) ಫ್ಲ್ಯಾಂಡರ್ಸಿನ ಅಲ್ಪ ಬೆಲೆಯ ಒಂದು ತಾಮ್ರದ ನಾಣ್ಯ. (ಬಳ. ಮಾ.) ಅರ್ಧ ಫಾರ್ದಿಂಗು. ಅಲ್ಪ ಸಹಾಯ; ಸಾಧ್ಯವಾಗುವ ಮಟ್ಟಿನ, ಯಥಾ ಶಕ್ತಿ, —ಸಹಾಯ [Let me offer my m. of comfort. Not a m. (ಬಳ. ಮಾ.) ಏನೇನೂ ಇಲ್ಲ. ರವೆಯಷ್ಟೂ ಇಲ್ಲ]. ಸಣ್ಣ, ಪುಟ್ಟ, —ವಸ್ತು (ಮು., ಮಗು, ಚಿಳ್ಳೆ: A m. of a child ಸಣ್ಣ ಮಗು; ಪಿಳ್ಳೆ). ಜೇಡರ ಜಾತಿಯ ಹುಳು (ಮು., Cheese-m.). **Míty** (ಗು.) ಹುಳು ತುಂಬಿದ (ಮು., ಚೀಸಿನಲ್ಲಿ)

Míthras ಮಿತ್ರ್ಯಾಸ್, **Míthra** ಮಿತ್ರ (ನಾ.) ಪಾರಸಿಕರ ಸೂರ್ಯ ದೇವತೆ: ಮಿಥ್ರ. **Mithráic** ಮಿತ್ರೇಯಿಕ್ (ಗು.) ಮಿಥ್ರ ದೇವತೆಯ; — ಸಂಬಂಧವಾದ; ಮಿಥ್ರೋಪಾಸನೆಯ. **Míthraism** (ನಾ.) ಮಿಥ್ರೋಪಾಸನೆ. **Míthraist** (ನಾ.)

Mithrídatize ಮಿತ್ರಿಡೇಟೈಸ್ (ಕ್ರಿ. ಸಕ.) (ಕ್ರಮೇಣ ಹೆಚ್ಚು ಹೆಚ್ಚಾಗಿ ವಿಷ ಸೇವನೆಮಾಡಿ, ದೇಹಕ್ಕೆ) ವಿಷ ತಟ್ಟದಂತೆ ಮಾಡು. **Mithridátic** —ಡ್ಯಾ— (ಗು.); **Míthridatism** —ಡೇ— (ನಾ.). (Pontus ದೊರೆಯಾದ Mithridates VI ಎಂಬಾತನ ಹೆಸರಿನಿಂದ)

Mítigate ಮಿಟಿಗೇಟ್ (ಕ್ರಿ. ಸಕ.) (ಕೋಪ, ಮೊ. ನ್ನು) ಶಮನ ಮಾಡು. (ನೋವು, ದುಃಖ —ಇವನ್ನು) ತಗ್ಗಿಸು, ಕಡಮೆ ಮಾಡು, ಸಹಿಸಿಕೊಳ್ಳುವಂತೆ ಮಾಡು. (ದಂಡನೆಯ) ಕಾಠಿನ್ಯವನ್ನು ತಗ್ಗಿಸು. (ಉಷ್ಣ, ಶೀತ, ಉಗ್ರತೆ, ಮೊ. ನ್ನು) ಮಿತವಾಗಿಸು. **Mitigátion** (ನಾ.); **Mítigatory** (ಗು.)

Mitósis ಮಿಟೋಸಿಸ್ (ನಾ.; ಬ. ವ. -oses —ಸೀಸ್) (ಜೀ. ವಿ.) ಜೀವಕಣದ ಗರ್ಭಬಿಂದು ಸೂಕ್ಷ್ಮತಂತುಗಳಾಗಿ ವಿಭಾಗವಾಗುವುದು; ಜೀವಕಣ ವಿಭಾಗ. **Mitótic** —ಟಾ— (ಗು.)

Mitrailleúse (F) ಮಿಟ್ರಾಯಸ್(F) (ನಾ.) ಹಲವು ನಳಿಕೆಗಳುಳ್ಳ, ಏಕ ಕಾಲದಲ್ಲಿ ಅಥವಾ ಅವಿರಳ ಪರಂಪರೆಯಾಗಿ ಹಲವು ಸಣ್ಣ ಕ್ಷಿಪಣಿಗಳನ್ನು ಹಾರಿಸಬಲ್ಲ ಒಂದು ಯಂತ್ರಬಂದೂಕು.

Mítre, -er ಮೈಟರ್ (ನಾ., ಕ್ರಿ. ಸಕ.) ಅಧಿಕಾರ ಚಿಹ್ನೆಯಾಗಿ ಧರಿಸುವ, ಮೇಲುದಿಯಲ್ಲಿ ಆಳವಾದ ಸೀಳಿಕೆಯಿರುವ, ಬಿಷಪ್ಪಿನ ಉದ್ದ ಟೋಪಿ. [**Mítred** (ಗು.) —ನ್ನು ಧರಿಸಲು ಅಧಿಕಾರವುಳ್ಳ; —ನ್ನು ಧರಿಸಿರುವ; —ಇಂದ ಅಲಂಕರಿಸಿರುವ; —ಯ ರಚನೆಯುಳ್ಳ, ಆಕಾರವುಳ್ಳ]. (ಮರಗೆಲಸ) ಎರಡು ಮರದ ಕಂಬಿಗಳು ಒಂದರೊಡನೊಂದು ಸಾ., ಸಮಕೋನದಲ್ಲಿರುವಂತೆ ಸೇರಿಸಲು, ಈ ಸಮಕೋನವನ್ನು ಅರ್ಧಿಸುವಂತೆ ಮಾಡಿದ ಸೇರಿಕೆಯ ಗೆರೆ (=M. joint); 'ಮೈಟರ್' ಸೇರುವೆ; ೪೫° ಕೋನ. [M.-block, -board, -box ಇಂಥ ಸೇರಿಕೆಯ ಕೊಯ್ತು ಮಾಡಲು ಗರಗಸ ಓಡುವುದಕ್ಕೆ ಅಳವಡಿಸಿದ ಗಾಡಿಯುಳ್ಳ ನಲಕರಣೆ (ಪಟಗಳ ಕಂಬಿಗಳನ್ನು ಸೇರಿಸುವುದಕ್ಕೆ ಕೊಯ್ಯುವಂಥದು). M.-wheels ಹಲ್ಲುಗಳು ೪೫° ಕೋನದಲ್ಲಿ ಇರುವಂತೆಯೂ, ಎರಡು ಚಕ್ರಗಳ ಅಚ್ಚುಗಳೂ ಸಮಕೋನದಲ್ಲಿರುವಂತೆಯೂ ಅಳವಡಿಸಿರುವ ಹಲ್ಲುಚಕ್ರಗಳ ಜೊತೆ]. (ಕ್ರಿ.) ಬಿಷಪ್ಪಿಗೆ ಕಿರೀಟ ಧಾರಣೆ ಮಾಡಿಸು. ೪೫°ಯ ಮೂಲೆಸೇರುವೆ ಮಾಡು; (ಮರದ ತುಂಡು, ಮೊ. ಗಳ) ತುದಿಯನ್ನು ಮೈಟರ್ ಸೇರುವೆಯ ಏಣಾಗಿ ರೂಪಿಸು. Mitring-machine ಮೈಟರ್ ಸೇರುವೆಯ ಏಣು ಮಾಡುವ ಯಂತ್ರ. **Mítral** (ಗು., ನಾ.) ಬಿಷಪ್ಪಿನ ಕಿರೀಟದ(ಂಥ). ರಕ್ತಕೋಶದ ಒಂದು ಕವಾಟ (=M. valve = Bicuspid valve)

Mítten ಮಿಟ(ಟ್)ನ್, **Mitt** ಮಿಟ್ (ನಾ.) (Mitten) (ಶಾಬಕ್ಕಾಗಿ, ಅಥವಾ ಬೇಲ ಸವರುವಾಗ ರಕ್ಷಣೆಗಾಗಿ, ಹಾಕಿಕೊಳ್ಳುವ) ಬೆರಳುಗಳಿಲ್ಲದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆಬ್ಬೆಟ್ಟು ಮಾತ್ರವಿರುವ ಕೈಗವಸು. (ಈಗ ಸಾ., Mitt) ಬೆರಳು ಗಳನ್ನು ಬಿಟ್ಟು ಮುಂದೋಳನ್ನೂ ಮಣಿಕಟ್ಟನ್ನೂ ಹಸ್ತದ ಸ್ವಲ್ಪ ಭಾಗವನ್ನೂ ಮಾತ್ರ ಮುಚ್ಚುವ, ಹೆಂಗಸಿನ, ಹೆಣಿಗೆಯ ಗವಸು. Give the mitten (ಪ್ರಣಯಿಯನ್ನು) ತಿರಸ್ಕರಿಸಿ ಕಳುಹಿಸಿಬಿಡು. Get the mitten (ಪ್ರಣಯಿನಿಯಿಂದ) ತಿರಸ್ಕೃತನಾಗು ; (ಸಾ., ಕೆಲಸದಿಂದ, ಅಧಿಕಾರದಿಂದ) ವಿಸರ್ಜಿತನಾಗು, ವಜಾ ಆಗು. **Míttened** (ಗು.) — ಕೈಚೀಲವುಳ್ಳ.

Míttimus ಮಿಟಿಮಸ್ (ನಾ.) (ಒಬ್ಬನನ್ನು) ಸೆರೆಮನೆಗೆ ಕಳುಹಿಸಲು ಅಧಿಕಾರ ಪತ್ರ : ಕೈದು ಪತ್ರ. (ಬಳ. ಮಾ.) ಕೆಲಸದಿಂದ ವಿಸರ್ಜನೆ, ವಜಾ (Get one's m.)

Mix ಮಿಕ್ಸ್ (ಕ್ರಿ.) (ಒಂದನ್ನು ಮತ್ತೊಂದರಲ್ಲಿ) ಬೆರಸು, ಕಲಸು, ಮಿಶ್ರ ಮಾಡು ; ಕರೆ ; ಬೆರೆ ; ಸೇರು ; ಮಿಶ್ರವಾಗು ; ಹೊಕ್ಕು ಬಳಸು ; (ನೇರಬೇಕಾದ ಪದಾರ್ಥಗಳನ್ನು) ಬೆರಸಿ (ಮಿಶ್ರಣವನ್ನು) ತಯಾರಿಸು ; (— ಒಡನೆ) ವ್ಯವಹಾರ, ಸಂಪರ್ಕ, —ಇರು (*With* ಉಪ. ದೊಡನೆ). [Oil will not m. with water. They do not m. well ಅವರು ಪರಸ್ಪರ ಹೊಂದಿಕೊಂಡುಹೋಗುವುದಿಲ್ಲ. M. up ಚೆನ್ನಾಗಿ ಬೆರೆ, ಬೆರಸು ; (ಮು., ಭಾವಗಳನ್ನು) ಕಲಸು ಮೆಲಸು ಮಾಡು. Be mixed up (ಅಗೌರವದ ವ್ಯವಹಾರ, ಮೊ. ಗಳಲ್ಲಿ) ಸೇರಿರು]. **Mixed** ಮಿಕ್ಸ್‌ಟ್ (ಗು.) (ಕ್ರಿಯಾರ್ಥಗಳಲ್ಲಿ). ಬೇರೆ ಬೇರೆ ಗುಣಗಳು, ಅಂಶ ಗಳು, —ಸೇರಿದ ; ಬಗೆ ಬಗೆಯ ; ವಿವಿಧ ; ಸಂಕೀರ್ಣ ; (ಗೋಷ್ಠಿ) ಆಯ್ದದ್ದಲ್ಲದ ; ಆರಿಸಿದ್ದಲ್ಲದ ; ಉತ್ತಮವಲ್ಲದ ; ನಾನಾ ಬಗೆಯ ಜನರುಳ್ಳ. (ಬಳ. ಮಾ.) ಅಸ್ತವ್ಯಸ್ತ ಬುದ್ಧಿಯ ; ದಿಗ್ಭ್ರಮೆ ಹಿಡಿದ. ಗಂಡಸು ಹೆಂಗಸರಿಬ್ಬರಿಗೂ ಉದ್ದೇಶಿಸಿದ (M. school, M. bathing). [M. mathematics (Mathematics ನೋಡಿ)]. **Míxedness** (ನಾ.) ; **Míxer** (ನಾ.) (ಕ್ರಿಯಾರ್ಥಗಳಲ್ಲಿ). ವಾಕ್ಚಿತ್ರ ರಚನೆಯಲ್ಲಿಯೂ ನಾಟಕ ವಿಸರಣದಲ್ಲಿಯೂ ಹಲವು ಧ್ವನಿಗಳ ಸಂಮಿಳನವನ್ನು ನಿಯೋಜಿಸುವ ಸಲಕರಣೆ : ಧ್ವನಿ ಸಂಯೋಜಕ. Good, bad, mixer (ಮು., ಸಮಾಜದ ಇತರ ಶ್ರೇಣಿಯವರೊಡನೆ) ಹೊಂದಿಕೊಂಡು ಹೋಗುವವನು, — ಹೋಗದವನು. **Míxture** ಮಿಕ್ಸ್‌ಟ್ಯುರ್, —ಚರ್ (ನಾ.) ಬೆರಸುವುದು ; ಬೆರಕೆ ; ಮಿಶ್ರಣ (ಮು., ಔಷಧ ಮಿಶ್ರಣ). [Heather m. (Heather ನೋಡಿ)]. ಸಹಜ ಗುಣಗಳು ಮಾರ್ಪಡದಂತೆ ಬೆರೆಯುವ ಎರಡು ಪದಾರ್ಥಗಳ ಧೌತ ಮಿಶ್ರಣ (Chemical combination ಎಂಬುದಕ್ಕೆ ವ್ಯತಿರಿಕ್ತ). ಅಂತರ್ದಾಹಕ ಎಂಜಿನಿನಲ್ಲಿ ಸಿಡಿದು ಶಕ್ತಿ ಹುಟ್ಟಿಸಲು ಉಪಯೋಗಿ ಸುವ ವಾಯುವಿನ ಮತ್ತು ಅನಿಲದ ಅಥವಾ ವಾಯುವಿನ ಮತ್ತು ಎಣ್ಣೆಯಆವಿಯ, ಮಿಶ್ರಣ : ಸ್ಫೋಟಕ ಮಿಶ್ರಣ.

Míxen ಮಿಕ್ಸ(ಕ್ಸ್)ನ್ (ನಾ.) (ಪ್ರಾಂ. ಪ್ರ.) ತಿಪ್ಪೆಗುಡ್ಡೆ.

Míz(z)en ಮಿಜ್‌ನ್ (ನಾ.) (ನಾವೆ) ಹಡಗಿನ ತೀರ ಹಿಂಭಾಗದ ಚದರ ಕೂವೆಯ ಪಟ (= M. sail). M.-mast (ಮೂರು ಕೂವೆಗಳ ಹಡಗಿನಲ್ಲಿ) ತೀರ ಹಿಂಭಾಗದ ಕೂವೆ. M. yard (ಈ) ಹಿಂಗೂವೆಯ ಪಟ ಹರಡುವ ತೊಲೆ.

Mízzle[1] ಮಿಜ್ಲ್‌ರ್ (ಕ್ರಿ., ನಾ.) ತುಂತುರು ಮಳೆ (ಬೀಳು) ; ಸೋನೆ ಮಳೆ (ಸುರಿ). **Mízzly** (ಗು.)

Mízzle[2] ಮಿಜ್ಲ್‌ರ್ (ಕ್ರಿ. ಅಕ.) (ಅಸಂ.) ಹೊರಟು ಹೋಗು ; ಪಲಾಯನ ಮಾಡು.

Mnemónic ನಿಮಾನಿಕ್ (ಗು., ನಾ.) ಜ್ಞಾಪಕ ಶಕ್ತಿಯ ; — ಗೆ ಸಹಾಯಕವಾದ ; ಜ್ಞಾಪಕ ಸಾಧನ(ವಾದ) ; ಜ್ಞಾಪಕ ಸೂತ್ರ. (ನಾ., ಬ. ವ. ದಲ್ಲಿ) ಜ್ಞಾಪಕ ಶಕ್ತಿಯನ್ನು ಉತ್ತಮಗೊಳಿಸುವ ವಿದ್ಯೆ, ಪದ್ಧತಿ. **Mnémonist** ನೀಮೊ — (ನಾ.) ; **Mnemotéchny** (ನಾ.) = Mnemonics. **Mnemotéchnic** (ಗು.)

Mo ಮೊ (ಗ್ರಾಮ್ಯ, ಹಾಸ್ಯ ಪ್ರ.) = Moment (ಎಂಬುದರ ಸಂಕ್ಷಿಪ್ತ) (Wait half a mo)

Moan ಮೋನ್ (ನಾ., ಕ್ರಿ.) (ದೇಹದ ಅಥವಾ ಮನಸ್ಸಿನ ವ್ಯಥೆಯಿಂದ, —ಯಿಂದಾದ) ಮುಲುಕು ; ನರಳು ; ನರಳಾಟ. [(ಪ್ರಾಚೀ. ಪ್ರ.) Make (one's) m. ಗೋಳಾಡು ; ಗೋಳು ಕರೆ]. (ಕ್ರಿ.) ಗೋಳಾಡು ; ಹಲುಬು ; ಗೋಳಾಡುತ್ತ ಹೇಳು ; (ದುರದೃಷ್ಟ, ದುರ್ಘಟನೆ, ಸತ್ತವರು, ಮೊ. ಗಳಿಗಾಗಿ) ಅಳು, ಪ್ರಲಾಪಿಸು. **Moánful** (ಗು.)

Moat ಮೋಟ್ (ನಾ., ಕ್ರಿ. ಸಕ.) (ಪಟ್ಟಣ, ಅರಮನೆ, ದುರ್ಗ, ಮೊ. ನ್ನು ಸುತ್ತುಗಟ್ಟಿದ, ಸಾ., ನೀರು ತುಂಬಿರುವ) ಅಗಳು ; ಅಗಳ್ತೆ ; ಕಂದಕ. (ಕ್ರಿ.) ಅಗಳಿನಿಂದ (ಹೇಗೊ ಹಾಗೆ) ಸುತ್ತುಗಟ್ಟು.

Mob ಮಾಬ್ (ನಾ., ಕ್ರಿ.) (ಸಮಾಜದ) ಕೆಳದರ್ಜೆಯವರು ; ಜನ ಜಂಗುಳಿ ; ದೊಂಬಿ ; ಗಲಭೆಯ ಗುಂಪು ; ಬಗೆ ಬಗೆಯ ಜನರ ಗುಂಪಲು [M. law ದೊಂಬಿ(ಜನರು ಚಲಾಯಿಸುವ) ನ್ಯಾಯ. Swell m. ಠೀಕು ಉಡುಪಿನ ಜೇಬುಗಳ್ಳರು]. (ಕ್ರಿ.) (ದೊಂಬಿಯ ವಿಷಯದಲ್ಲಿ) ಮೇಲೆ ಬೀಳು ; ಕೈ ಮಾಡು ; ಉಪದ್ರವ ಕೊಡು ; ದೊಂಬಿ ಸೇರು, ಮಾಡು. **Móbbish** (ಗು.) ದೊಂಬಿಯಂಥ ; ಗಲಭೆ ಮಾಡುವ ; ಅಸಭ್ಯತೆಯ. **Mobócracy** ಮಾಬಾಕ್ರಸಿ (ನಾ.) ದೊಂಬಿಯ ಪ್ರಭುತ್ವ.

Móbile ಮೋಬೈ(ಬಿ, ಬೀ)ಲ್ (ಗು.) ಚಲಿಸಲಾಗುವ ; ಚಲಿಸುವಂತೆ ಮಾಡ ಲಾಗುವ ; ಚಲಿಸುವ ; ಸ್ಥಾಯಿಯಲ್ಲದ ; ಚಲನ ಸ್ವಾತಂತ್ರ್ಯವಿರುವ. (ವ್ಯಕ್ತಿ, ಮನಸ್ಸು) (ಅತಿ) ಸುಲಭವಾಗಿ ವ್ಯತ್ಯಾಸವಾಗುವ ; (ಅತಿ) ಚಂಚಲ. (ಸೈನ್ಯ) ಸ್ಥಳದಿಂದ ಸ್ಥಳಕ್ಕೆ ಸುಲಭವಾಗಿ ಒಯ್ಯಲಾಗುವ, ಸಾಗಿಸಲಾಗುವ : ಸುಲಭ ಸಾಗಣೆಯ. **Mobílity** ಮೊ— (ನಾ.) ; **Móbilize** ಮೋಬಿ — (ಕ್ರಿ. ಸಕ.) ಚಲಿಸುವಂತೆ ಮಾಡು ; ಚಲನೆಗೊಳಿಸು ; ಚಲಾವಣೆಗೆ ತರು. (ಸ್ಥಳ ಅಥವಾ ಜಲ ಸೈನ್ಯವನ್ನು) ಯುದ್ಧಸನ್ನದ್ಧ ಮಾಡು, ಸಜ್ಜುಗೊಳಿಸು. (ಸೇನೆ) ಸಜ್ಜುಗೊಳ್ಳು. (ರೂಪ.) ಶೇಖರಿಸಿ ಸಿದ್ಧಗೊಳಿಸು (M. one's resources). **Móbilizable** (ಗು.) ; **Mobilizátion** (ನಾ.)

Móccasin ಮಾಕಸಿನ್ (ನಾ.) ಉ. ಅಮೆರಿಕದ ಇಂಡಿಯನರು, ಬೇಟೆ ಗಾರರು, ಮೊ. ರು ಹಾಕಿಕೊಳ್ಳುವ, ಜಿಂಕೆಯ ಚರ್ಮ, ಮೊ. ಗಳಿಂದ ಮಾಡಿದ, —ಪಾದ ರಕ್ಷೆ, ಹೆಜ್ಜೆತೊಡಿಗೆ.

Mócha[1] ಮೋಕ (ನಾ.) ಒಂದು ಬಗೆಯ ಪ್ರಶಸ್ತ ಶಿಲೆ.

Mócha[2] ಮೋಕ (ನಾ.) (ಕೆಂಪು ಕಡಲಿನ ಮುಖದಲ್ಲಿರುವ ಮೋಕ ಎಂಬ ಅರಬ್ಬಿಯ ರೇವುಪಟ್ಟಣದಿಂದ ಮೊದಲು ಬರುತ್ತಿದ್ದ ಉತ್ಕೃಷ್ಟವಾದ) ಒಂದು ಬಗೆಯ ಕಾಫಿ (ಬೀಜ) (= M. coffee)

Mock ಮಾಕ್ (ಕ್ರಿ., ನಾ., ಗು.) ಅಪಹಾಸ್ಯ, ಅವಹೇಳನ, —ಮಾಡು ; ತಿರಸ್ಕಾರದಿಂದ ಪ್ರತಿಭಟಿಸು ; ಮೋಸಗೊಳಿಸು. ಅಣಕಿಸು ; ಗೇಲಿ ಮಾಡು ; ಅಣಕಿಸಿ ಹಾಸ್ಯ ಮಾಡು ; (Mocking-bird ಇತರ ಹಕ್ಕಿಗಳ ದನಿಯನ್ನು ಅನುಕರಿಸುವ ಒಂದು ಅಮೆರಿಕದ ಹಾಡುಹಕ್ಕಿ ; ಅಣಕ ಹಕ್ಕಿ). (ನಾ.) (ಪ್ರಾಚೀ. ಪ್ರ.) ಅಪಹಾಸ್ಯ ; ಧಿಕ್ಕಾರ ಯೋಗ್ಯ ವಾದದ್ದು. ಅನುಕರಣ ಮಾಡಿದ್ದು ; ಕೃತಕವಾದದ್ದು ; ಖೋಟಾ. (ಗು.) ಅಭಾಸದ ; ಹುಸಿಯ ; ತೋರ್ಕೆಯ ; ನಿಜವಲ್ಲದ. M. sun = Parhelion. M. moon = Paraselene. M.-heroic (ಗು., ನಾ.) ಪರಿಹಾಸದ ಉದಾತ್ತ ಶೈಲ(ಯ) ; ಉದಾತ್ತ ಶೈಲಿಯ ವಿಕಟಾನುಕರಣ(ದ) ; ಉದಾತ್ತಾಭಾಸ(ದ). **Móckery** ಮಾಕರಿ (ನಾ.) ಅಣಕ ; ಪರಿಹಾಸ (ವಿಷಯ, ಸಂದರ್ಭ) ; ನಗೆಗೀಡಾದದ್ದು ; ವಿಕಟಾನುಕರಣ ; ಹಾಸ್ಯಾಸ್ಪದವಾದ ಅಥವಾ ಅವಹೇಳನಾಸ್ಪದ ವಾದ ನಿರರ್ಥಕ ಕಾರ್ಯ, ಮೊ. ವು. **Móckingly** (ಕ್ರಿ. ವಿ.)

Módal, etc. Mode ನೋಡಿ.

Mode ಮೋಡ್ (ನಾ.) (ಒಂದನ್ನು ಮಾಡುವ) ರೀತಿ, ಕ್ರಮ, ಮಾರ್ಗ. (ವಾಡಿಕೆಯಲ್ಲಿರುವ) ಪದ್ಧತಿ, ರೂಢಿ ; ಸಂಪ್ರದಾಯ ; ಸಮಯಾಚಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[(ಪ್ರಾಚೀ. ಪ್ರ.) The m. (ಉಡುಪು, ಮೊ. ಗಳಲ್ಲಿ) ಕಾಲೋಚಿತವಾದ ಮೆಚ್ಚಿಕೆಯ ರೀತಿ]. (ಸಂ.) (ಆಧುನಿಕ ಸಂಗೀತದಲ್ಲಿ: Major, Minor ಎಂಬ ಎರಡು ತೆರದ) ರಾಗ ಪದ್ಧತಿ(ಗಳಲ್ಲೊಂದು); (ಪುರಾತನ ಸಂಗೀತದಲ್ಲಿ) Dorian, Lydian, Ionian, ಮೊ. ಪದ್ಧತಿಗಳಲ್ಲೊಂದು. (ತರ್ಕ) (ಪರಿಮಿತ ಪ್ರತಿಜ್ಞೆಯ) ಪ್ರಕಾರ, ಲಕ್ಷಣ. **Módal** (ಗು.) ರೀತಿಯ, ರೂಪದ, ಆಕಾರದ (ಸಾಮಗ್ರಿ ಎಂಬುದಕ್ಕೆ ವ್ಯತಿರಿಕ್ತವಾಗಿ) (M. legacy ವಿನಿಯೋಗದ ರೀತಿಯನ್ನು ನಿರ್ದೇಶಿಸಿರುವ ಅಂತಿಮ ಇಷ್ಟಪತ್ರದ ಮೂಲಕ ಬಿಟ್ಟ ಆಸ್ತಿ); (ವ್ಯಾ.) ಕ್ರಿಯಾ ರೀತಿಯ; (ಅವ್ಯಯದಲ್ಲಿ) ರೀತಿ ನಿರ್ದೇಶಕ. (ತರ್ಕ) M. proposition ಕರ್ತೃವಿನ ವಿಷಯದಲ್ಲಿ ಕ್ರಿಯೆಯನ್ನು ಯಾವುದಾದರೊಂದು ವಿಶೇಷಣಗೂಡಿಸಿ ಹೇಳುವ ಪ್ರತಿಜ್ಞೆ. ಸಾಧ್ಯತೆ, ಅಸಾಧ್ಯತೆ, ಆವಶ್ಯಕತೆ ಅಥವಾ ಸಂಭವ — ಇವುಗಳಲ್ಲಿ ಯಾವುದಾದರೊಂದರ ಸ್ಥಿರೀಕರಣ ಹೇಳುವ ಪ್ರತಿಜ್ಞೆ. **Modálity** ಮೊಡ್ಯಾ— (ನಾ.) (ಮು., ಬ. ವ. ದಲ್ಲಿ) (ಕರ್ತವ್ಯಾಚರಣೆ, ಮೊ. ಗಳ) ಸೂತ್ರಕ್ರಮ, ವಿಧಿತ ಕ್ರಮ; ಹಾಕಿ ಕೊಟ್ಟ ರೀತಿ, ಪದ್ಧತಿ. **Módally** ಮೋಡಲಿ (ಕ್ರಿ. ವಿ.)

Módel ಮಾಡೆ(ಡ್)ಲ್ (ನಾ., ಕ್ರಿ. ಸಕ.) [ಕಟ್ಟಲಿರುವ ಕಟ್ಟಡ, ಮೊ. ಗಳ (ಉದ್ದ, ಅಗಲ, ಎತ್ತರ —ಇವನ್ನೊಳಕೊಂಡ) ತ್ರಿ ಪರಿಮಾಣದ] ಆಕೃತಿ, ನಮೂನೆ, ಮಾದರಿ (Working m. ಒಂದು ಯಂತ್ರದ ಚಲನ ವಲನಗಳನ್ನು ನಿರೂಪಿಸುವ ಅದರ ಮಾದರಿ, ಪ್ರತಿಮೆ). ಇತರ ಪದಾರ್ಥದಲ್ಲಿ ರಚಿಸಬೇಕಾದ ಕೃತಿಗೆ ಜೇಡಿಮಣ್ಣು, ಮೇಣ, ಮೊ. ಗಳಲ್ಲಿ ಮಾದರಿಗಾಗಿ ಮಾಡಿದ ಪ್ರತಿಕೃತಿ. ಕಟ್ಟಡದ ವಿನ್ಯಾಸ, ಶೈಲಿ, ಬಂಧ. ಅನುಕರಿಸಲುಳ್ಳ, ಅನುಕರಣೀಯವಾದ,— ವ್ಯಕ್ತಿ, ವಸ್ತು; ಆದರ್ಶ; ಮಾದರಿ; ಮೇಲ್ಪಂಕ್ತಿ; ಕಲೆಗಾರರು ತಮಗೆ ಮಾದರಿಯಾಗಿ ಭಂಗಿ ತೋರಲು ನೇಮಿಸಿಕೊಳ್ಳುವ ವ್ಯಕ್ತಿ; ಜವಳಿಯಂಗಡಿಯಲ್ಲಿ ಗಿರಾಕಿಗಳಿಗೆ ಉಡುಪಿನ ವಿನ್ಯಾಸವನ್ನು, ನಿರುಗೆಯನ್ನು, ತೋರಿಸುವುದಕ್ಕಾಗಿ ಅವನ್ನು ತೊಟ್ಟು ಪ್ರದರ್ಶಿಸುವ ಹೆಂಗಸು. (ವಿಶೇಷಣವಾಗಿ) ಆದರ್ಶವಾದ; ಪರಿಪೂರ್ಣ ಗುಣಾದರ್ಶದ. (ಕ್ರಿ.) (ಜೇಡಿಮಣ್ಣು, ಮೇಣ, ಮೊ. ಗಳಲ್ಲಿ ಆಕೃತಿಯನ್ನು) ರೂಪಿಸು, ಮಾದರಿ ರಚಿಸು. (ದಸ್ತೈವಜು, ವಾದ, ಮೊ. ನ್ನು) ರೂಪಿಸು. ಒಂದರ ಮಾದರಿಯನ್ನನುಸರಿಸಿ (ವಸ್ತುವನ್ನು) ರಚಿಸು (*After*, *on*, *upon* ಉಪ. ಬೊಡನೆ)

Módena ಮಾಡಿನ (ನಾ.) ದಟ್ಟ ಊದಾ ಬಣ್ಣ. (ಇಟಲಿಯ Modena ಎಂಬ ಪಟ್ಟಣದ ಹೆಸರಿನಿಂದ)

Móderate ಮಾಡೆರೆಟ್ (ಗು., ನಾ.), —ರೇಟ್ (ಕ್ರಿ.) ಅತಿಗೆ ಹೋಗದ; ಮಿತವಾದ; (ನಡತೆಯಲ್ಲಿ, ಮಾತಿನಲ್ಲಿ) ಸೌಮ್ಯವಾದ; ಹಾಳತವಾದ. ತಕ್ಕ ಮಟ್ಟಿಗೆ ದೊಡ್ಡದಾದ, ಒಳ್ಳೆಯದಾದ; ಸಾಧಾರಣವಾದ; [M. prices ಹೆಚ್ಚಲ್ಲದ, ಕಡಮೆಯ, ಬೆಲೆಗಳು: (ವ್ಯಾಪಾರದ ಪ್ರಕಟನೆಗಳು, ಮೊ. ಗಳಲ್ಲಿ: Prices strictly moderate)]. (ನಾ.) (ರಾಜಕೀಯದಲ್ಲಿ) ಮಿತ ವಾದಿ; ಮಧ್ಯಮ ಮಾರ್ಗ ಗಾಮಿ. (ಕ್ರಿ.) (ಉಗ್ರತೆ, ತೀಕ್ಷ್ಣತೆ, ಗಾಢತೆ, ಮೊ.) ತಗ್ಗಿಸು, ಕಡಮೆ ಮಾಡು; ನ್ಯೂನಾತಿರೇಕಗಳನ್ನು ಸರಿಪಡಿಸು. (ಕೋಪಾವೇಶ, ಬಿರುಗಾಳಿ, ಮೊ.) ತೀವ್ರತೆ ಕಡಮೆಯಾಗು. ಮಧ್ಯಸ್ಥಗಾರನಾಗು. **Móderatism** (ನಾ.) ರಾಜಕೀಯದಲ್ಲಿ ಮಿತಗಾಮಿಗಳೆಂದು ಹೇಳಿಸಿಕೊಳ್ಳುವ ಯಾವುದಾದರೊಂದು ಪಕ್ಷದ ಮತ ಅಥವಾ ನೀತಿ. **Móderately** (ಕ್ರಿ. ವಿ.); **Móderateness** (ನಾ.); **Moderátion** (ನಾ.) (ಕ್ರಿಯಾರ್ಥಗಳಲ್ಲಿ). (In m. ಮಿತವಾಗಿ). **Móderator** (ನಾ.) ನ್ಯಾಯ ವಿಮರ್ಶಕ; ಮಧ್ಯಸ್ಥಗಾರ; ಅಧ್ಯಕ್ಷ. (ಕೇಂಬ್ರಿಡ್ಜಿನಲ್ಲಿ) ಗಣಿತ ಶಾಸ್ತ್ರದ Tripos ಪರೀಕ್ಷೆಯ ಇಬ್ಬರು ಅಧ್ಯಕ್ಷರಲ್ಲೊಬ್ಬನು; (ಆಕ್ಸ್‌ಫರ್ಡಿನಲ್ಲಿ) Moderations ಪರೀಕ್ಷೆಯ ಪರೀಕ್ಷಕ. Presbyterian (ಕ್ರೈಸ್ತ) ಮತಗಳಲ್ಲಿ ಯಾವುದಾದರೂ ಮತ ಸಂಸ್ಥೆಯ ಅಧ್ಯಕ್ಷನಾದ ಪಾದ್ರಿ. M. lamp ಎಣ್ಣೆಯ ಹರಿವನ್ನು ತಕ್ಕಂತೆ ಅನುಗೊಳಿಸಲಾಗುವ ಸಲಕರಣೆಯುಳ್ಳ ದೀಪ. **Móderatorship** (ನಾ.)

Módern ಮಾಡರ್ನ್ (ಗು., ನಾ.) ಈಗಿನ (ಮತ್ತು ಈಚಿನ) ಕಾಲದ; ಪ್ರಕೃತ ಕಾಲದ; ಆಧುನಿಕ. [M. school, side (ಪ್ರಾಚೀನ ಭಾಷೆಗಳಲ್ಲದೆ) ಮುಖ್ಯವಾಗಿ ಅಥವಾ ಪೂರ್ತಿಯಾಗಿ ಆಧುನಿಕ ವಿಷಯಗಳ ಶಿಕ್ಷಣ ಕೊಡುವ ಪಾಠಶಾಲೆ, ಶಾಖೆ]. ನವ ನಾಗರಿಕತೆಯ; ನವೀನ; ಹಳೆಯ ಕಂದಾಚಾರದ್ದಲ್ಲದ. (ನಾ.) ಈಗಿನ ಕಾಲದವನು; ಆಧುನಿಕ. **Módernism** (ನಾ.) ಆಧುನಿಕ ಅಭಿಪ್ರಾಯ(ಗಳು), ಪದ್ಧತಿ(ಗಳು); ಆಧುನಿಕತೆ (ಮು., ಮತಧರ್ಮ ವಿಷಯದಲ್ಲಿ ಆಧುನಿಕ ಭಾವನೆಗಳಿಗೆ ಹೊಂದುವಂತೆ ಹಳೆಯ ಸಂಪ್ರದಾಯಗಳನ್ನು ಅಪ್ರಧಾನ ಮಾಡುವ ಪ್ರವೃತ್ತಿ). ಆಧುನಿಕ ಪದ, ಪ್ರಯೋಗ. **Módernist** (ನಾ.); **Modérnity** (ನಾ.); **Módernness** (ನಾ.); **Modernizátion** (ನಾ.); **Módernize** (ಕ್ರಿ.); **Módernly** (ಕ್ರಿ. ವಿ.)

Módest ಮಾಡೆಸ್ಟ್ (ಗು.) ತನ್ನ ಯೋಗ್ಯತೆಯ ವಿಷಯದಲ್ಲಿ ಅಭಿಮಾನ ಮಿತಿಯುಳ್ಳ; ನಿಗರ್ವಿಯಾದ; ವಿನಯಶೀಲನಾದ; ಅಹಂಕಾರ, ಸ್ವಪ್ರತಿಷ್ಠೆ, — ಇಲ್ಲದ; ನಿರಭಿಮಾನದ; ಗೋಷ್ಠಿಯಲ್ಲಿ ಸೇರದ; ಸಂಕೋಚ ಪ್ರಕೃತಿಯ. (ಹೆಂಗಸರ ವಿಷಯದಲ್ಲಿ: ನಡತೆಯಲ್ಲೂ ಶೀಲ ಸ್ವಭಾವದಲ್ಲೂ) ಗಾಂಭೀರ್ಯಪುಳ್ಳ, ಮಾನ ಮರ್ಯಾದೆಯುಳ್ಳ; ಸಚ್ಚಾರಿತ್ರದ; ಪರಿಶುದ್ಧವಾದ. (ಕೇಳಿಕೆ, ಹೇಳಿಕೆ, ಮೊ. ವು) ಅತಿಯಲ್ಲದ; ಮಿತವಾದ. (ವಸ್ತುಗಳ ವಿಷಯದಲ್ಲಿ) (ನೋಟದಲ್ಲಿ, ಮೊತ್ತದಲ್ಲಿ, ಮೊ. ಗಿ) ಆಡಂಬರವಿಲ್ಲದ; ಸಾಧಾರಣ ರೀತಿಯ. **Módestly** (ಕ್ರಿ. ವಿ.); **Módesty** (ನಾ.)

Módicum ಮಾಡಿಕಂ (ನಾ.) (ಆಹಾರ, ಮೊ. ಗಳ) ಸ್ವಲ್ಪ ಮೊತ್ತ, ಅಲ್ಪ ಪರಿಮಾಣ.

Módify ಮಾಡಿಫೈ (ಕ್ರಿ. ಅಕ.) (ಉಗ್ರತೆ, ನಿರ್ಧಾರ, ಮೊ.) ಮಿತ ಮಾಡು, ಇಳಿಸು; (ರೂಪ.) (ಧ್ವನಿ) ಇಳಿಸು; (ಕೆಲವು ಅಂಶಗಳಲ್ಲಿ) ಮಾರ್ಪಡಿಸು, ಬದಲಾಯಿಸು; (ಒಂದರಲ್ಲಿ) ಅಲ್ಪ ಸ್ವಲ್ಪ ವ್ಯತ್ಯಾಸ ಮಾಡು. (ವ್ಯಾ.) (ಪದ, ಮೊ. ಗಳ) ಅರ್ಥವನ್ನು ವಿಶೇಷಿಸು. (ಸ್ವರ) ಬದಲಾಯಿಸು. **Módifiable** (ಗು.); **Modifiabílity** (ನಾ.); **Modificátion** (ನಾ.); **Módificatory** (ಗು.)

Módish ಮೋಡಿಷ್ (ಗು.) ಠೀಕಾದ; ನೀಟಿನ; ನವ ನಾಜೂಕಿನ (ಸಾ., ಅಲ್ಲಗಳೆಯುವ ಸೂಚನೆಯಿಂದ ಕೂಡಿದ್ದು). **Módishly** (ಕ್ರಿ. ವಿ.); **Módishness** (ನಾ.); **Modíste** (F) ಮೊಡಿ(ೕ)ಸ್ಟ್ (ನಾ.) ಹೆಂಗಸರ ಠೀಕು ತಲೆಯುಡಿಗೆ, ಮೊ. ನ್ನು ತಯಾರಿಸುವವಳು(ನು), ಅಥವಾ ಮಾರುವವಳು(ನು); ಉಡುಪುಗಾತಿ; —ಗಾರ.

Modíste. **Modish** ನೋಡಿ.

Módulate ಮಾಡ್ಯುಲೇಟ್ (ಕ್ರಿ.) ಸಂದರ್ಭಕ್ಕೆ ತಕ್ಕಂತೆ ಹೊಂದಿಸು, ಅಳವಡಿಸು; (ಒಂದಕ್ಕೆ ಹೊಂದಿಕೊಳ್ಳುವಂತೆ) ಮಾರ್ಪಡಿಸು, ಬದಲಾಯಿಸು; ಹದಗೊಳಿಸು. (ದನಿಯನ್ನು) ಶ್ರುತಿಗೂಡಿಸು. (ಸಂ.) ಸ್ವರದಿಂದ ಸ್ವರಕ್ಕೆ ಬದಲಾಯಿಸು; ಸ್ಥಾಯಿಯನ್ನು ಕ್ರಮವಾಗಿ ಬದಲಾಯಿಸು. **Modulátion** (ನಾ.); **Módulator** (ನಾ.)

Módule ಮಾಡ್ಯೂಲ್ (ನಾ.) ಅಳತೆಯ ಪ್ರಮಾಣ, (ಏಕ) ಮಾನ. (ವಾ. ಶಾ.) ಪ್ರಮಾಣಗಳನ್ನು ಸೂಚಿಸುವುದಕ್ಕಾಗಿ ಉಪಯೋಗಿಸುವ ಮಾನ (ಸಾ., ಕಂಬದ ತಳದ ಅರ್ಧ ವ್ಯಾಸ)

Módulus ಮಾಡ್ಯುಲಸ್ (ನಾ.; ಬ. ವ. -li —ಲೈ) (ಮು., ನೇಪಿಯರ್ ಲಾಗರಿತಮನ್ನು ಸಾಮಾನ್ಯ ಲಾಗರಿತಮಾಗಿ ಪರಿವರ್ತಿಸಲು ಉಪಯೋಗಿಸುವ) ನಿಯತ ಗುಣಕ. (ಒಂದು ಭೌತ ಪರಿಣಾಮಕ್ಕೂ ಅದನ್ನುಂಟುಮಾಡುವ ಬಲಕ್ಕೂ ಇರುವ ಸಂಬಂಧವನ್ನು ಸೂಚಿಸುವ) ನಿಯತಾಂಕ.

Módus ಮೋಡಸ್ (ನಾ.) [M. operandi (ಒಬ್ಬನು ಅಥವಾ ಒಂದು ವಸ್ತು) ಕಾರ್ಯ ಮಾಡುವ ರೀತಿ, ವಿಧಾನ. M. vivendi (ಪದದ ಅರ್ಥ) ಜೀವನ ನಡಸುವ ಒಂದು ರೀತಿ; ವ್ಯಾಜ್ಯ ವಿಷಯ ತೀರ್ಮಾನವಾಗುವ ವರೆಗೂ ಎರಡು ಪಕ್ಷದವರೂ ಮಾಡಿಕೊಂಡ ಒಂದು ವ್ಯವಸ್ಥೆ].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಭೂಮಿಯಿಂದ ಆದಾಯ, ಮೊ. ಗಳ $\frac{1}{10}$ ಭಾಗವನ್ನು ಪದಾರ್ಥರೂಪದಲ್ಲಿ ತೆರಿಗೆಯಾಗಿ ಕೊಡುವ ಬದಲು) ಗೊತ್ತುಮಾಡಿಕೊಂಡು ಕೊಡುವ ಹಣ (= M. decimandi)

Mofétte (F) ಮೊಫೆಟ್ (ನಾ.) ವಿಷಪ್ರಾಯವಾದ ದುರ್ಗಂಧ ವಾಯು (ಹೊರಡುವ ನೆಲದ ಬಿರುಕು)

Mofússil ಮೊಫಸಿಲ್ (ನಾ.) (ಆಂ. ಇಂ.) (ಮುಖ್ಯ ಸ್ಥಳವಲ್ಲದ) ಗ್ರಾಮಾಂತರ ಪ್ರದೇಶ; ಹಳ್ಳಿಗಾಡು.

Mogúl ಮೊ(ೕ)ಗಲ್ (ನಾ., ಗು.) ಮಂಗೋಲಿಯದ(ವನು). [The (Great or Grand) M. ಡೆಲ್ಲಿಯ ಚಕ್ರವರ್ತಿ]. (ಬ. ವ. ದಲ್ಲಿ) ಅತ್ಯುತ್ತಮ ತೆರದ ಇಸ್ಪೀಟು ಎಲೆಗಳ ಕಟ್ಟು (ಅದರ ಸುತ್ತುಹಾಳೆಯ ಮೇಲಿರುವ ಡೆಲ್ಲಿಯ ಚಕ್ರವರ್ತಿಯ ಚಿತ್ರದಿಂದ)

Móhair ಮೋಹೇರ್ (ನಾ.) ಆ್ಯಂಗೋರದ ಆಡಿನ ಕೂದಲು; ಇದರಿಂದ ಮಾಡಿದ ನಯವಾದ ನೆಯ್ಗೆಯ ದಾರ, ಹಗುರವಾದ ಬಟ್ಟೆ.

Mohámmedan ಮೊಹ್ಯಾಮೆಡನ್ (ಗು., ನಾ.) (ಮುಸ್ಲಿಂ ಮತವನ್ನು ಸ್ಥಾಪಿಸಿದ) ಮಹಮ್ಮದ್ ಪೈಗಂಬರನ (ಅನುಯಾಯಿ); ಈತನು ಸ್ಥಾಪಿಸಿದ ಮತ, ಸಂಸ್ಥೆಗಳು, ಮೊ. ಕ್ಕೆ ಸಂಬಂಧಿಸಿದ; ಮಹಮ್ಮದೀಯ. **Mohámmedanism** (ನಾ.) ಮಹಮ್ಮದನ ಮತ ಧರ್ಮ, ತತ್ತ್ವಗಳು, ಉಪದೇಶಗಳು; ಇಸ್ಲಾಂ. **Mohámmedanize** (ಕ್ರಿ. ಸಕ.)

Mohárram, Mu- ಮೊಹರಮ್, ಮು— (ನಾ.) ಮಹಮ್ಮದೀಯ ವರ್ಷದ ಮೊದಲನೆಯ ತಿಂಗಳು; ಈ ತಿಂಗಳ ಮೊದಲ ಹತ್ತು ದಿನ ನಡಸುವ (ಷಿಯಾ ಪಂಗಡದವರ) ಉಪವಾಸ (ವ್ರತ): ಮೊಹರಂ.

Móhawk ಮೋಹಾಕ್ (ನಾ.) ಉ. ಅಮೆರಿಕದ ಇಂಡಿಯನರ ಒಂದು ಬುಡಕಟ್ಟು; ಅವರ ಭಾಷೆ.

Móhock ಮೋಹಾಕ್ (ನಾ.) ೧೮ನೆಯ ಶತಮಾನದಲ್ಲಿ ಲಂಡನ್ನಿನ ಬೀದಿಗಳಲ್ಲಿ ರಾತ್ರಿ ಹೊತ್ತು ಕಾಟ ಕೊಡುತ್ತಿದ್ದ ಶ್ರೀಮಂತ ತುಂಟರ ತಂಡದವನು.

Móhur ಮೋಹರ್ (ನಾ.) ೧೫ ರೂಪಾಯಿ ಬೆಲೆಯ, ಬ್ರಿಟಿಷ್ ಇಂಡಿಯದ ಒಂದು ಚಿನ್ನದ ನಾಣ್ಯ (=Gold m.); ಮೊಹರ.

Moíder ಮಾಯ್ಡರ್ (ಕ್ರಿ. ಸಕ.) (ಪ್ರಾಂ. ಪ್ರ.) ಏನೂ ತೋರದಂತೆ ಮಾಡು; ತಬ್ಬಿಬ್ಬು ಮಾಡು; ಪೀಡಿಸು; ಕಾಡಿಸು (ಮು., ಭೂ. ಕೃ. ನಲ್ಲಿ)

Moídore ಮಾಯ್ಡೋರ್ (ನಾ.) ೨೭ ಷಿಲಿಂಗು (ಬೆಲೆ ಬಾಳುವ, ಹಿಂದೆ ಇಂಗ್ಲೆಂಡಿನಲ್ಲಿ ಚಲಾವಣೆಯಲ್ಲಿದ್ದ, ಪೋರ್ಚುಗೀಸರ ಒಂದು ಚಿನ್ನದ ನಾಣ್ಯ)

Moíety ಮಾಯೆ(ಯಿ)ಟಿ (ನಾ.) (ಮು., ನ್ಯಾಯಸಂಬಂಧದ ಬಳಕೆಯಲ್ಲಿ) ಅರ್ಧ. (ಶಿಥಿಲವಾಗಿ) (ಒಂದು ಪದಾರ್ಥದ) ಎರಡು ಭಾಗಗಳಲ್ಲೊಂದು; ಏಕಾಂಶ.

Moíl ಮಾಯಿಲ್ (ಕ್ರಿ. ಅಕ.) ಮೈಮುರಿದು ಕೆಲಸ ಮಾಡು; ದುಡಿ (ಮು., Toil & m. ಎಂಬಲ್ಲಿ)

Moire[1] ಮ್ವಾರ್, ಮ್ವೋರ್, ಮೋರ್ (ನಾ.) ನೀರು ಚಿಮುಕಿಸಿ ತೆರೆ ತೆರೆಯಾಗಿ ಕಾಣುವಂತೆ ಹೊಳಪುಇಸ್ತ್ರಿ ಮಾಡಿದ ಬಟ್ಟೆ [ಸಾ., ರೇಷ್ಮೆಯದು; (ಹಿಂದೆ) ಆ್ಯಂಗೋರ ಆಡಿನ ಕೂದಲನದು (= M. antique)]. **Moíre**[2] ಮ್ವಾರೇ (ಗು., ನಾ.) (ರೇಷ್ಮೆಯ ವಿಷಯದಲ್ಲಿ) ಹೊಳಪುಇಸ್ತ್ರಿ ಮಾಡಿದ. (ಲೋಹದ ವಿಷಯದಲ್ಲಿ) ಹೊಳಪುಇಸ್ತ್ರಿ ಮಾಡಿದ ರೇಷ್ಮೆಯ ಮೇಲ್ಮೈಯಂತೆ ಕಾಣುವ. (ನಾ.) ಇಂಥ ತೋರ್ಕೆ.

Moist ಮಾಯ್‌ಸ್ಟ್ (ಗು.) ಕೊಂಚ ನೆನೆದ; ತೇವವಾದ. (ಋತು) ಮಳೆಗಾಲದ; (ಹವ, ವಾಯುಸ್ಥಿತಿ) ತೇವಗೂಡಿದ, ಆರ್ದ್ರ. (ರೋಗದ ವಿಷಯದಲ್ಲಿ) ರಸಿ(ಕೆ), ಮೊ. ವು ಸುರಿಯುತ್ತಿರುವ. **Moístness** (ನಾ.); **Moísten** ಮಾಯ್‌ಸ್‌ನ್ (ಕ್ರಿ.) ನೆನಸು; ಒದ್ದೆ ಮಾಡು; ನೆನೆ; ಒದ್ದೆಯಾಗು. **Moísture** —ಸ್ಚ್ಯುರ್, —ಸ್ಚರ್ (ನಾ.) ಹಬೆಯಾಗಿ ವ್ಯಾಪಿಸಿರುವ, ಒಂದರ ಮೇಲ್ಮೈಯಲ್ಲಿ ಹನಿಗೂಡಿರುವ, ಸ್ವಲ್ಪ ಮೊತ್ತದ ನೀರು ಅಥವಾ ಇತರ ದ್ರವ; ತೇವ; ಆರ್ದ್ರತೆ. **Moístureless** (ಗು.)

Moke ಮೋಕ್ (ನಾ.) (ಅಸಂ.) ಕತ್ತೆ; ಮುಟ್ಠಾಳ.

Mólar[1] ಮೋಲರ್ (ಗು., ನಾ.) (ಸಾ., ಸಸ್ತನಿಗಳಲ್ಲಿ) ಅರೆಯುವ (ಹಲ್ಲು); ದವಡೆ ಹಲ್ಲು.

Mólar[2] ಮೋಲರ್ (ಗು.) (ಭೌತ ದ್ರವ್ಯದ) ಮೊತ್ತದ (ಅಣು, ಪರಮಾಣುಗಳದಲ್ಲದ). ದೊಡ್ಡ ಮೊತ್ತಗಳ ಮೇಲೆ, —ಮೂಲಕ, ಕಾರ್ಯ ಮಾಡುವ. (Molecular ಎಂಬ ಪದಕ್ಕೆ ವ್ಯತ್ಯಸ್ತವಾದದ್ದು)

Molásses ಮೊಲ್ಯಾಸೆಸ್ (ನಾ., ಬ. ವ.; ಆದರೆ ಏ. ವ. ವಾಗಿ ಪ್ರ.) ಕಚ್ಚಾ ಸಕ್ಕರೆಯಿಂದ ಹರಿದು ಬಂದ, ಅಥವಾ ಸಕ್ಕರೆಯನ್ನು ಶುದ್ಧಿ ಮಾಡುವುದರಲ್ಲಿ ದೊರೆಯುವ, ಹಳುಕುಗಟ್ಟದೆ ಹೋದ ಪಾಕ: ಕಾಕಂಬಿ.

Mole[1] ಮೋಲ್ (ನಾ.) (ಮನುಷ್ಯನ ಚರ್ಮದಮೇಲಿನ) ಮಚ್ಚೆ, ಕಲೆ.

Mole[2] ಮೋಲ್ (ನಾ.) (ಸಾ., ನಸುಕಪ್ಪಿನ) ಮುಖಮಲ್ಲಿನಂಥ ತುಪ್ಪುಳು ಚರ್ಮವೂ ಬಲು ಸಣ್ಣ ಕಣ್ಣುಗಳೂ ಉಳ್ಳ ಒಂದು ಬಿಲವಾಸಿ ಪ್ರಾಣಿ: ಮುಖಮಲ್ ಹೆಗ್ಗಣ; ಇದೇ ಜಾತಿಯ ಇತರ ಸಸ್ತನಿ ಪ್ರಾಣಿ. Blind as a mole ತೀರ ಕುರುಡು. M.-hill (ಈ ಪ್ರಾಣಿಯು ಬಿಲ ತೋಡಿ ಹೊರಹಾಕಿದ) ಸಣ್ಣ ಮಣ್ಣುದಿಬ್ಬ. Make mountains out of m.-hills ಅಲ್ಪ ವಿಷಯವನ್ನು ವಿಪರೀತ ಮಾಡು; ಅಣುವನ್ನು ಬೆಟ್ಟ ಮಾಡು. **Moleskin** ಮುಖಮಲ್ ಹೆಗ್ಗಣದ ತುಪ್ಪುಳುಚರ್ಮ. ಹತ್ತಿಯ ಒಂದು ತೆರದ ಫಸ್ಟಿಯನ್ ಬಟ್ಟೆ; (ಬ. ವ. ದಲ್ಲಿ) ಈ ಬಟ್ಟೆಯ ಉಡುಪು (ಮು., ಷರಾಯಿ)

Mole[3] ಮೋಲ್ (ನಾ.) ಬಹಳ ಭಾರಿಯಾಗಿ, ಸಾ., ಕಲ್ಲಿನಿಂದ, ಕಟ್ಟಿದ, ಸಮುದ್ರದಲ್ಲಿ ಚಾಚಿಕೊಂಡುಹೋಗಿರುವ, ಹಡಗಿನ ಇಳಿದಾಣ, ಅಲೆತಡೆ; ಅಥವಾ ನೀರಿನಿಂದ ಪ್ರತ್ಯೇಕಿಸಲ್ಪಟ್ಟ ಎರಡು ಭೂಭಾಗಗಳನ್ನು ಕೂಡಿಸುವ ಸೇತುವೆ; ಕೃತಕ ಬಂದರು.

Mólecule ಮಾ(ಮೋ)ಲಿಕ್ಯೂಲ್ (ನಾ.) (ಭೌ. ವಿ.; ರ. ವಿ.) ಭೌತ ವಸ್ತುಗಳ ರಚನೆಯಲ್ಲಿ, ಕಟ್ಟಡದ ಇಟ್ಟಿಗೆಗಳಂತೆ ಭಾವಿಸಬಹುದಾದ ಬಹು ಸೂಕ್ಷ್ಮ ಪರಮಾಣು ತಂಡಗಳಲ್ಲೊಂದು; ಭೌತ ವಸ್ತುವನ್ನು ವಿಭಾಗಿಸುತ್ತ ಹೋದರೆ ಅದರ ರಾಸಾಯನಿಕ ಗುಣ ಬದಲಾಯಿಸದಂತೆ ಕಡೆಗೆ ಉಳಿಯುವ ಅತ್ಯಂತ ಸಣ್ಣ ಕಣ: ಅಣು; (ಶಿಥಿಲವಾಗಿ) ಸಣ್ಣ ಕಣ. **Molécular** ಮೊಲೆಕ್ಯುಲರ್ (ಗು.) ಅಣುಗಳ; ಅಣುವಿನ; (ದ್ರವ್ಯದ) ಅಣುಗಳಲ್ಲಿ ಕಾರ್ಯಮಾಡುವ, ಸಹಜವಾಗಿರುವ; ಆಣವ. M. weight (ಒಂದು ಪದಾರ್ಥದ) ಅಣುಭಾರ (ಎಂದರೆ, ಜಲಜನಕದ ಅಣುಭಾರವನ್ನು ಮಾನವಾಗಿಟ್ಟುಕೊಂಡು ಅಳೆಯುವ ಭಾರ). **Molecularity** (ನಾ.); **Molécularly** (ಕ್ರಿ. ವಿ.)

Molést ಮೊಲೆಸ್ಟ್ (ಕ್ರಿ. ಸಕ.) (ಸಾ., ನಿಷೇಧ ವಾಚಕಾನಂತರ ಪ್ರ.) (ಒಬ್ಬನನ್ನು) ಕಾಡಿಸು, ಪೀಡಿಸು, ಹಿಂಸಿಸು. **Molestátion** ಮೋ(ಮಾ)— (ನಾ.)

Móllify ಮಾಲಿಫೈ (ಕ್ರಿ. ಸಕ.) ಶಮನ ಮಾಡು; ಮೃದು ಮಾಡು; ಶಾಂತಗೊಳಿಸು; ಸಮದಾಯಿಸು; ಸಮಾಧಾನ ಮಾಡು. **Mollification** ಮಾಲಿ— (ನಾ.)

Móllusc ಮಾಲಸ್ಕ್ (ನಾ.) (ಬಸವನ ಹುಳು, ಸಿಂಪು, ಕಟ್ಲ್ ಮೀನು, ಮೊ. ನ್ನೊಳಕೊಂಡ) ಮೃದು ಶರೀರವೂ ಗಟ್ಟಿ ಚಿಪ್ಪೂ ಉಳ್ಳ ಒಂದು ಜಾತಿಯ ಪ್ರಾಣಿ: ಮೃದ್ವಂಗಿ. **Mollúscan** ಮ— (ಗು.); **Mollúscous** (ಗು.); **Mollúscoid** (ಗು., ನಾ.) ಮೃದ್ವಂಗಿ ಕಲ್ಪ (ಪ್ರಾಣಿ); ಮೃದ್ವಂಗಿಯಂಥ (ಪ್ರಾಣಿ)

Mólly ಮಾಲಿ (ನಾ.) ಹೆಣ್ಣಿಗ; ಪೌರುಷವಿಲ್ಲದವನು. M.-coddle (ನಾ.) ಹೆಣ್ಣಿಗ. (ಕ್ರಿ. ಸಕ.) ಅತ್ಯುಪಚಾರ ಮಾಡು; ಅತಿ ಲಾಲನೆ ಮಾಡು.

Móloch ಮೋಲಾಕ್ (ನಾ.) (ಬೈಬಲ್) ಕೇನನ್ ಜನರು ಮಕ್ಕಳನ್ನು ಬಲಿಕೊಡುತ್ತಿದ್ದ ಒಂದು ದೇವತಾ ವಿಗ್ರಹ (ಅನೇಕ ವೇಳೆ ರೂಪ.). ಮುಳ್ಳು ಹಲ್ಲಿ; ಆಸ್ಟ್ರೇಲಿಯದ ಅತಿ ವಿಕಾರ ರೂಪಿನ ಒಂದು ಸರೀಸೃಪ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Molóssus ಮೊಲಾಸಸ್ (ನಾ.) (ಗ್ರೀಕ್) ಮೂರು ಗುರುಗಳ ಒಂದು ಗಣ.

Mólten. Melt ಧಾತುವಿನ ಭೂ. ಕೃ.

Molybdénum ಮಾಲಿಬ್ಡೀನಮ್, **Molýb-** ಮೊಲಿಬ್ಡಿನಮ್ (ನಾ.) ವೇಗಚಲನೆಯ ಆಯುಧಗಳ ರಚನೆಗಾಗಿ ಉಕ್ಕನ್ನು ತಯಾರಿಸುವಲ್ಲಿ ಉಪಯೋಗಿಸುವ, ಬೆಳ್ಳಿ ಬಿಳುಪಿನ, ಭಿದುರವಾದ ಒಂದು ಮೂಲ ಲೋಹ: 'ಮಾಲಿಬ್ಡೀನಮ್'.

Móment ಮೋಮೆಂಟ್ (ನಾ.) ಅತ್ಯಲ್ಪ ಕಾಲ; ಕ್ಷಣ [One m., Half a m. ಒಂದು ಕ್ಷಣ, ಅರೆ ಕ್ಷಣ, —ತಾಳು (ಎಂಬುದರ ಅಧ್ಯಾಹಾರ ಪ್ರ.). Come here this m. ಈ ಕ್ಷಣ, ಕೂಡಲೆ, ಬಾ. Came the very m. I heard of it ನಾನು ಕೇಳಿದ ತತ್‌ಕ್ಷಣವೇ ಬಂದೆನು. Timed to the m. ಅತ್ಯಂತ ಕರಾರುವಾಕಾಗಿ ಕಾಲನಿರ್ದೇಶ ಮಾಡಿ. The m. ತಕ್ಕ, ಅನುಕೂಲ, —ಸಮಯ. Men of the m. (ಆಗಿನ, ಈಗಿನ) ಪ್ರಮುಖರು, ಮುಖಂಡರು. (ಚಲನ ಶಾಸ್ತ್ರ) M. of a force about a point ಒಂದು ಬಿಂದುವಿನ ಸುತ್ತಲೂ ಸುತ್ತಿಸಲುಳ್ಳ ಒಂದು ಬಲದ ಶಕ್ತಿಯ ಪ್ರಮಾಣ ಅಥವಾ ಭ್ರಾಮಕ ಶಕ್ತಿ]. [**Móment-ary** (ಗು.) ಕ್ಷಣಿಕ; ಅಲ್ಪ ಕಾಲಿಕ; ಅಚಿರ. **Mómentarily** (ಕ್ರಿ. ವಿ.); **Mómentariness** (ನಾ.); **Mómently** (ಕ್ರಿ. ವಿ.) ಕ್ಷಣ ಕ್ಷಣಕ್ಕೆ; ಪ್ರತಿ ಕ್ಷಣವೂ; ಒಂದು ಕ್ಷಣ (ಕಾಲ)]. ಪ್ರಮುಖತೆ; ಪ್ರಾಧಾನ್ಯ (Of great, little, no, m.). **Moméntous** (ಗು.) ಬಹು ಮುಖ್ಯವಾದ; ಬಹು ಪರಿಣಾಮಕಾರಿಯಾದ. **Moméntously** (ಕ್ರಿ. ವಿ.); **Moméntousness** (ನಾ.); **Moméntum** (ನಾ.; ಬ. ವ. -ta —ಟ). (ಚಲನ ಶಾಸ್ತ್ರ) ಒಂದು ಚಲ ಕಾಯದ ಚಲನದ ಮೊತ್ತ: ಆವೇಗ ಪರಿಮಾಣ; ಕಾಯದ ದ್ರವ್ಯ ಪರಿಮಾಣವನ್ನು ಗತಿ ಪರಿಮಾಣ ದಿಂದ ಗುಣಿಸಿ ಬರುವ ಗುಣಲಬ್ಧ. (ಬಳಕೆಯಲ್ಲಿ) (ಒಂದು ಚಳವಳಿಯ, ಚಲನೆಯ) ಉರುಬು, ರಭಸ, ಆವೇಗ (ರೂಪ. ಸಹ)

Moméntum. **Moment** ನೋಡಿ.

Mómus ಮೋಮಸ್ (ನಾ.) (ಗ್ರೀಕರ) ಅಪಹಾಸ್ಯ ದೇವತೆ. ತಪ್ಪುಹುಡುಕು ವವನು.

Mónac(h)al ಮಾನಕಲ್ (ಗು.) =Monastic. **Mónachism** (ನಾ.)

Mónad ಮಾನ್ಯ(ನ್ಯಾ)ಡ್, ಮೋನ್ಯಾಡ್ (ನಾ.) (ಸಂಖ್ಯೆ) ಒಂದು; ಏಕ. ಪರಮ ಮೂಲವಸ್ತು (ಆತ್ಮ, ಪರಮಾಣು, ಮನುಷ್ಯ, ದೇವರು) (ಮು., Leibnitz ಎಂಬಾತನ ತತ್ತ್ವಶಾಸ್ತ್ರದಲ್ಲಿ). [**Mónadism** (ನಾ.)]. (ಜೀ. ವಿ.) ಜೀವಿಗಳ ಪರಂಪರೆಯಲ್ಲಿ ಪ್ರಥಮ ವಸ್ತುವೆಂದು ಪರಿಗಣಿಸುವ ಸರಳ ರಚನೆಯ ಜೀವಾಣು. (ರ. ವಿ.) ಜಲಜನಕದ ಒಂದು ಪರಮಾಣುವಿನ ಸಂಯೋಗ ಶಕ್ತಿಯುಳ್ಳ ಮೂಲ ಧಾತು ಅಥವಾ ಮೂಲ ಘಟಕ: ಏಕ ಮಾನ ಸಂಯೋಗಿ. **Monádic** ಮಾ(ಮೊ)ನ್ಯಾ— (ಗು.)

Monadélphous ಮಾನಡೆಲ್ಫಸ್ (ಗು.) (ಸ. ವಿ.) ಕೇಸರ ತಂತು ಗಳೆಲ್ಲವೂ ಒಟ್ಟಾಗಿ ಸೇರಿಕೊಂಡಿರುವ: ಮಿಲಿತ ಕೇಸರ ತಂತು(ವುಳ್ಳ); (ಸಸ್ಯಗಳು) ಮಿಲಿತ ತಂತು ಕೇಸರಗಳುಳ್ಳ.

Monándrous ಮಾ(ಮೊ)ನ್ಯಾಂಡ್ರಸ್ (ಗು.) (ಸ. ವಿ.) ಏಕ ಕೇಸರವುಳ್ಳ; ಏಕ ಕೇಸರಿ.

Monándry ಮಾ(ಮೊ)ನ್ಯಾಂಡ್ರಿ (ನಾ.) ಒಂದು ಕಾಲದಲ್ಲಿ ಒಬ್ಬನೇ ಗಂಡನುಳ್ಳ ಪದ್ಧತಿ: ಏಕ ಪತಿತ್ವ.

Mónarch[1] ಮಾನರ್ಕ್ (ನಾ.) (ರಾಜ, ರಾಣಿ, ಚಕ್ರವರ್ತಿ, ಚಕ್ರವರ್ತಿನಿ, ಅಥವಾ ಅದರ ಸಮಾನದ ಅಧಿಕಾರ ನಾಮವುಳ್ಳ ಸರ್ವಸ್ವತಂತ್ರ) ರಾಜ (ಅನೇಕ ವೇಳೆ ರೂಪ.); ಅಧೀಶ್ವರ. **Monárchal** ಮ(ಮೊ)ನಾ— (ಗು.) ರಾಜನ; ರಾಜಯೋಗ್ಯವಾದ; ರಾಜಪದವಿಯುಳ್ಳ; ರಾಜಾಧಿ ಕಾರ ನಡಸುವ. **Monárchic(al)** (ಗು.) ರಾಜ ಪ್ರಭುತ್ವದ; ರಾಜ ಪ್ರಭುತ್ವಾಭಿಮಾನದ; (-ic) (ಸರ್ಕಾರ) ರಾಜ ಪ್ರಭುತ್ವ ಲಕ್ಷಣದ. **Monárchally** (ಕ್ರಿ. ವಿ.); **Monárchically** (ಕ್ರಿ. ವಿ.); **Món-archism** ಮಾನರ್ಕಿಸ್ಮ್ (ನಾ.) (ಸರ್ವ ಸ್ವತಂತ್ರ) ರಾಜ ತತ್ತ್ವ; —ಭಕ್ತಿ. **Mónarchist** (ನಾ.) ರಾಜ ಪ್ರಭುತ್ವಾಭಿಮಾನಿ. **Món-archy** (ನಾ.) ರಾಜ ಸರ್ಕಾರ (ಉಳ್ಳ ದೇಶ); ರಾಜ ಪ್ರಭುತ್ವ. Constitutional, limited, m. ಸಾಂಕುಶ ರಾಜ ಪ್ರಭುತ್ವ.

Mónarch[2] ಮಾನರ್ಕ್ (ನಾ.) ಕೆಂಪು ಮತ್ತು ಕಪ್ಪು ಬಣ್ಣಗಳುಳ್ಳ ಒಂದು ಬಹಳ ದೊಡ್ಡ ಚಿಟ್ಟೆ.

Mónastery ಮಾನಸ್ಟರಿ (ನಾ.) (ಕ್ರೈಸ್ತ) ಸಂನ್ಯಾಸಿ ಮಠ. **Monástic** ಮನ್ಯಾಸ್ಟಿಕ್ (ಗು., ನಾ.) ಸಂನ್ಯಾಸಿಗಳ; ಸಂನ್ಯಾಸಿ ಮಠದ(ಗಳ). (ನಾ.) —ಮಠದ ಸದಸ್ಯ; ಸಂನ್ಯಾಸಿ; ಯತಿ. [**Monástically** (ಕ್ರಿ. ವಿ.); **Monásticism** (ನಾ.); **Monásticize** (ಕ್ರಿ. ಸಕ.)]. (ಪುಸ್ತಕದ ರಟ್ಟು ಕಟ್ಟು) (ಚಿನ್ನದ ರೇಕು ಹಾಕದೆ) ಬರಿ ಅಚ್ಚೊತ್ತಿದ.

Mónday ಮಂಡೆ(ಡಿ) (ನಾ.) ವಾರದ ಎರಡನೆಯ ದಿನ: ಸೋಮವಾರ. Black M. (ಪಾಠಶಾಲೆಯ ಅಸಂ.) (ರಜ ದಿನಗಳು ಮುಗಿದು ಪಾಠ ಶಾಲೆಯ ಆರಂಭದ) ಅಧ್ಯಯನ ಪರ್ವದ ಮೊದಲನೆಯ ದಿನ. St M. (ಕೆಲಸಗಾರನು ಭಾನುವಾರದ ದಿನ ಕುಡಿತ, ಮೊ. ಗಳಲ್ಲಿ ಕಾಲ ಕಳೆದು) ಕೆಲಸವೇನೂ ಮಾಡದ ಸೋಮವಾರ. **Móndayish** (ಗು.) (ಪಾದ್ರಿ ಗಳ ವಿಷಯದಲ್ಲಿ: ಭಾನುವಾರದ ಕೆಲಸದಿಂದ) ಆಲಸ್ಯಗೊಂಡ; (ಇತರರ ವಿಷಯದಲ್ಲಿ: ಭಾನುವಾರ ರಜದ ಪ್ರಯುಕ್ತ) ಕೆಲಸದಲ್ಲಿ ಜಾಗ್ರತೆಯಿಲ್ಲದ; ಮನಸ್ಸಿಟ್ಟು ಕೆಲಸ ಮಾಡದ.

Monde (F) ಮಾಂಡ್ (ನಾ.) ನೀಟುಗಾರರ, ನವನಾಗರಿಕ, —ಪ್ರಪಂಚ, ಸಮಾಜ. ಒಬ್ಬನ ಸಹವಾಸ ಗೋಷ್ಠಿ.

Móndial ಮಾಂಡಿಯಲ್ (ಗು.) ಪ್ರಪಂಚದಲ್ಲೆಲ್ಲ ಹರಡಿರುವ; ಲೋಕ ವಿಸ್ತೃತ.

Mónetary, Mónetize, etc. **Money** ನೋಡಿ.

Móney ಮನಿ (ನಾ.) (ಚಲಾವಣೆಯಲ್ಲಿರುವ) ನಾಣ್ಯ, ಕಾಗದದ ಹಣ (ಮು., ಸರ್ಕಾರದ ಮತ್ತು ಬ್ಯಾಂಕಿನ 'ನೋಟು'ಗಳು); ರೊಕ್ಕ; ಹಣ. (ಬ. ವ. ದೊಡನೆ) ಒಂದು ಗೊತ್ತಾದ ನಾಣ್ಯ. (ಬ. ವ., ಪ್ರಾಚೀ. ಪ್ರ., ನ್ಯಾ. ಶಾ.) ಹಣದ ಮೊತ್ತ. [M. of account ಲೆಕ್ಕಾಚಾರದ ಹಣ (ನಾಣ್ಯ ಅಥವಾ ಕಾಗದದ ಹಣವಲ್ಲ). Conscience m. (Conscience ನೋಡಿ)]. ಹಣಕ್ಕೆ ತಿರುಗಿಸಬಹುದಾದ ಆಸ್ತಿ. ನಾಣ್ಯದ (ಪದಾರ್ಥ ಕೊಂಡುಕೊಳ್ಳಲಾಗುವ) ಬೆಲೆ. M. makes the mare to go ಹಣವಿದ್ದರೆ ಬೇಕಾದುದನ್ನು ಮಾಡಬಹುದು. Time is m. For love or m. (Love ನೋಡಿ). Make m. ಹಣ ಮಾಡು. Coin m. ಬೇಗ ಬೇಗ ಹಣ ಸೇರಿಸು. Not everyman's m. ಪ್ರತಿಯೊಬ್ಬರೂ ಬೆಲೆಯುಳ್ಳದ್ದೆಂದು ಭಾವಿಸುವಂಥದಲ್ಲ; ಮೆಚ್ಚಿಕೆ ಎಲ್ಲರಿಂದಲೂ ಪಡೆಯುವಂಥದಲ್ಲ. **M.-bag** ಹಣದ ಚೀಲ, ಥೈಲಿ. **M.-bags** ಐಶ್ವರ್ಯ; ಹಣಗಾರ; ದುರಾಶೆಯ ಮನುಷ್ಯ. **M.-box** ಉಳಿತಾಯ ಮಾಡುವ ಹಣವನ್ನು ಅಥವಾ ಧರ್ಮದ ಹಣವನ್ನು ಹಾಕಿಡುವುದಕ್ಕಾಗಿ, ಬಿರುಕುಳ್ಳ, (ಬೀಗ ಹಾಕಿ) ಮುಚ್ಚಿದ, ಪೆಟ್ಟಿಗೆ: ಹುಂಡಿ ಪೆಟ್ಟಿಗೆ. **M.-changer** ಗೊತ್ತಾದ ದರದಲ್ಲಿ ನಾಣ್ಯಮಾರುವೆ ಮಾಡುವವನು. **M.-grubber** ಹಣ ಶೇಖರಿಸುವ ದುರಾಶೆಯುಳ್ಳ ವನು; ಧನ ಲೋಭಿ. **M.-grubbing** (ಗು., ನಾ.) ಹಣ ಶೇಖರಿಸುವ ದುರಾಶೆ(ಯ). **M.-lender** ಬಡ್ಡಿಗೆ ಸಾಲ ಕೊಡುವವನು. **M.-market** ಸಾಲ ಪತ್ರ, ಬಂಡವಾಳ ಪತ್ರ, ಮೊ. ಗಳ ವ್ಯಾಪಾರದ ಕಾರ್ಯಕ್ಷೇತ್ರ; ಹಣದ ಪೇಟೆ. **M. order** [Order (ನಾ.) ನೋಡಿ]. **M.-spinner** ಒಳ್ಳೆಯ ಅದೃಷ್ಟ ತರುವುದೆಂದು ಕೆಲವರು ನಂಬುವ ಒಂದು (ಜಾತಿಯ) ಸಣ್ಣ ಜೇಡ. **Money-wort** ಹೊಳಪಿನ ಗುಂಡಗೆಲೆಗಳುಳ್ಳ ಒಂದು ಸಸ್ಯವಿಶೇಷ. **M.'s-worth** (ಅಷ್ಟು) ಹಣ ಬಾಳುವುದೆಂದು, (ಅಷ್ಟು) ಹಣಕ್ಕೆ ಸಮವೆಂದು, ಪರಿಗಣಿಸುವಂಥದು; ಕೊಟ್ಟ ಹಣಕ್ಕೆ ತಕ್ಕ ಬೆಲೆಯುಳ್ಳದ್ದು. **Móneyed** ಮನಿಡ್ (ಗು.) ಹಣವುಳ್ಳ; ಧನಿಕ ನಾದ; ಹಣ ರೂಪದ. M. resources, assistance ಧನ ಸಂಪತ್ತು, ಧನ ಸಹಾಯ. M. interest ಹಣವನ್ನು ಆಸ್ತಿಯಾಗುಳ್ಳವರ ವರ್ಗ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಧನಿಕ ವರ್ಗ. **Móneyless** (ಗು.) ; **Mónetary** ಮ(ಮಾ)ನಿಟರಿ (ಗು.) (ಚಲಾವಣೆಯ) ನಾಣ್ಯದ ; ಹಣದ ; ಹಣ ಕಾಸಿನ. **Mónetize** (ಕ್ರಿ. ಸಕ.) (ಒಂದು ಲೋಹಕ್ಕೆ) ಆ ದೇಶದ ಚಲಾವಣೆಯ ನಾಣ್ಯದಲ್ಲಿ ನಿರ್ದಿಷ್ಟ ಮೂಲ್ಯ ಪರಿಮಾಣ ಕೊಡು ; ಒಂದು ಲೋಹವನ್ನು ಹಣವಾಗಿ ಚಲಾವಣೆಗೆ ತರು. **Monetizátion** (ನಾ.)

Mónger ಮಂಗರ್ (ನಾ.) ಮಾರುವವನು ; ವ್ಯಾಪಾರಿ (ಮು., ಸಮಾನ ಪದಗಳಲ್ಲಿ : Cheesem., Fishm., Ironm.). (ರೂಪ.) Scandal-m. ಅಪವಾದ ಹರಡುವವನು ; ಕೊಂಡೆಗಾರ ; ಕೊಂಡೆಯ.

Móngol ಮಾಂಗಾಲ್ (ನಾ., ಗು.) ಮಂಗೋಲಿಯ ಬುಡಕಟ್ಟಿನ(ವನು). **Mongólian** ಮಾಂಗೋಲಿಯನ್ (ಗು., ನಾ.) = Mongol. (ಮಾನವ ಶಾಸ್ತ್ರ) ಹಳದಿ ಚರ್ಮದ, ನೇರಗೂದಲಿನ, ಲಕ್ಷಣವುಳ್ಳ ಮನುಷ್ಯ ಕುಲದ. **Móngoloid** ಮಾಂಗ — (ಗು., ನಾ.) ಮಂಗೋಲಿಯನರ ಲಕ್ಷಣಗಳುಳ್ಳ(ವನು) ; (ನಾ.) = Mongolian.

Móngoose ಮಾಂಗೂಸ್, **Mún-** ಮಂ — (ನಾ.) ಮುಂಗುಸಿ (ತನಗೆ ಅಪಾಯ ಮಾಡಿಕೊಳ್ಳದಂತೆ ವಿಷಸರ್ಪಗಳನ್ನು ಕೊಲ್ಲುವ ಇಂಡಿಯದ ಒಂದು ಪ್ರಾಣಿಜಾತಿ). ಒಂದು ಜಾತಿಯ ಕಾಡುಪಾಪ.

Móngrel ಮಂ(ಮಾಂ)ಗ್ರೆಲ್ (ನಾ., ಗು.) (ಗೊತ್ತಾದ ತಳಿಗೆ ಸೇರದ) ಅಡ್ಡ ತಳಿಯ ನಾಯಿ. (ಹಲವು ತಳಿಗಳ ಅಥವಾ ಜಾತಿಗಳ ಸೇರಿಕೆಯಿಂದ ಹುಟ್ಟುವ) ಬೆರಕೆಯ ಪ್ರಾಣಿ, ಗಿಡ ; ಬೆರಕೆ ತಳಿಯವನು ; ಅಡನಾಡಿ. (ಗು.) ಬೆರಕೆ ಹುಟ್ಟಿನ ; ಮಿಶ್ರ ಸ್ವಭಾವದ, ಗುಣದ. **Móngrelism** (ನಾ.) ; **Móngrelize** (ಕ್ರಿ. ಸಕ.) ; **Móngrelly** (ಗು.)

Mónial ಮೋನಿಯಲ್ (ನಾ.) = Mullion.

Moníliform ಮಾನಿಲಿಫಾರ್‌ಮ್ (ಗು.) ಕಂಠಹಾರವನ್ನು ಹೋಲುವ ; (ಸಮ ದೂರಗಳಲ್ಲಿ ವರಿಸೆಯಾಗಿ ಉಬ್ಬು ತಗ್ಗುಗಳುಳ್ಳದ್ದಾಗಿ) ಮಣಿ ಮಾಲೆಯನ್ನು ಹೋಲುವ.

Mónism ಮಾ(ಮೋ)ನಿಸ್ಮ್ (ನಾ.) ಒಂದೇ ಒಂದು ಸತ್ತ್ವದ ಅಸ್ತಿತ್ವವನ್ನು ಪ್ರತಿಪಾದಿಸುವ ವಾದ : ಏಕ ತತ್ತ್ವ ವಾದ ; ಭೌತ ದ್ರವ್ಯ ಮತ್ತು ಮಾನಸಿಕ ದ್ರವ್ಯ ಬೇರೆ ಬೇರೆ ಎಂಬ ಭಾವನೆಯನ್ನು ನಿರಾಕರಿಸುವ ವಾದಗಳಲ್ಲೊಂದು. **Mónist** (ನಾ.) ; **Monístic** ಮೊ— (ಗು.)

Monítion ಮೊನಿಷನ್ (ನಾ.) (ಅಪಾಯದ) ಮುನ್ ಸೂಚನೆ, ಮುನ್ನೆಚ್ಚರಿಕೆ. ಒಂದು ನಿರ್ದಿಷ್ಟ ಅಪರಾಧ ಮಾಡಕೂಡದೆಂದು ಒಬ್ಬನಿಗೆ ಮಠದ ಬಿಷಪ್ಪಾಗಲಿ, ಮಠದ ನ್ಯಾಯಸ್ಥಾನವಾಗಲಿ, ಕೊಡುವ ಎಚ್ಚರಿಕೆಯ ಪತ್ರ. (ವ್ಯವಹಾರ ಧರ್ಮದ) ನ್ಯಾಯಸ್ಥಾನದ ಕರೆ.

Mónitor ಮಾನಿಟರ್ (ನಾ.) (ಪ್ರಾಚೀ. ಪ್ರ.) ಎಚ್ಚರಿಕೆ ಕೊಡುವವನು ; ಪಾಠಶಾಲೆಯಲ್ಲಿ ಶಿಸ್ತು ನೋಡಿಕೊಳ್ಳುವ ಹಿರಿಯ ವಿದ್ಯಾರ್ಥಿ : ಹಿರೇಮಣಿ (ಹಿರಿಯ ಮಾಣಿ) [**Mónitorship** (ನಾ.) ; **Mónitress** (ನಾ., ಸ್ತ್ರೀ) ; **Monitórial** — ಟೋ — (ಗು.)]. ಮೊಸಳೆಗಳು ಬರುತ್ತಿರುವುವೆಂದು ಮುನ್‌ಸೂಚನೆ ಕೊಡುವುದಾಗಿ ಭಾವನೆಯಿರುವ ಒಂದು ಜಾತಿಯ ಹಲ್ಲಿ. ಸಮುದ್ರ ತೀರದ ರಕ್ಷಣೆಗಾಗಿ ಭಾರಿ ಫಿರಂಗಿಗಳಿಂದಲೂ ಕಬ್ಬಿಣದ ಕವಚದಿಂದಲೂ ಸಜ್ಜಿತವಾಗಿರುವ ಯುದ್ಧದ ಹಡಗು. **Mónitory** —ಟರಿ (ಗು., ನಾ.) ಎಚ್ಚರಿಕೆ ಕೊಡುವ ; ವಾಗ್ದಂಡನೆಯ. (ನಾ.) (ಬಿಷಪ್ಪು ಅಥವಾ ಪೋಪ್‌ಗುರು ತಪ್ಪು ತೋರಿಸಿ) ಎಚ್ಚರಿಕೆ ಕೊಡುವ ಪತ್ರ.

Monk ಮಂಕ್ (ನಾ.) ದಾರಿದ್ರ್ಯ, ಬ್ರಹ್ಮಚರ್ಯ, ವಿಧೇಯತೆ —ಇವುಗಳ ವ್ರತವನ್ನು ಧರಿಸಿ ವಿವಿಕ್ತ ವಾಸಿಗಳಾಗಿರುವವರ ಒಂದು ಸಮಾಜದವನು : ಭಿಕ್ಷು ; ಸಂನ್ಯಾಸಿ. **Mónkhood** (ನಾ.) —ಸ್ಥಿತಿ ಅಥವಾ ವೃತ್ತಿ ; (ಸಾಂಘಿಕವಾಗಿ) ಸಂನ್ಯಾಸಿಗಳು. **Mónkship** (ನಾ.) — ಪದ್ಧತಿ, ನೀತಿ ; (ಸಾಂಘಿಕವಾಗಿ) ಸಂನ್ಯಾಸಿಗಳು. **Monk's-hood** ಒಂದು ಸಸ್ಯಜಾತಿ. **Mónkery** ಮಂಕರಿ (ನಾ.) ಸಂನ್ಯಾಸಿ ಜೀವನ ; ಸಂನ್ಯಾಸಾಶ್ರಮ ; ಸಂನ್ಯಾಸಿ ಮಠ ; ಸಂನ್ಯಾಸಿಗಳು ; ಸಂನ್ಯಾಸಿಗಳ ಆಚಾರ ವ್ಯವಹಾರಗಳು. **Mónkdom** (ನಾ.) ಸಂನ್ಯಾಸ ; ಸಂನ್ಯಾಸಿಗಳು ; ಸಂನ್ಯಾಸಿ ಕ್ಷೇತ್ರ. **Mónkish** (ಗು.) ಸಂನ್ಯಾಸಿಗಳ ; ಸಂನ್ಯಾಸಿ ಮಠದ ; (ಸಾ., ಕೆಟ್ಟ ಅರ್ಥದಲ್ಲಿ) ಸಂನ್ಯಾಸಿ ಲಕ್ಷಣದ.

Mónkey ಮಂಕಿ (ನಾ., ಕ್ರಿ.) ಕೋತಿ ; ಮಂಗ ; ಕೋಡಗ ; ಕಪಿ ; ವಾನರ [Young m. (ಮನುಷ್ಯನ ವಿಷಯವಾಗಿ, ಹಾಸ್ಯಗೂಡಿದ ತಿರಸ್ಕಾರಾರ್ಥದಲ್ಲಿ)]. ದಸಿ ನೆಡಲು ಅದನ್ನು ಹೊಡೆಯುವ ಯಂತ್ರದ ಚಮ್ಮಟಿಗೆ. (ಗುಂಡು ಒಡಲೂ ನೇರವಾದ ಲಂಬ ಕಂಠವೂ ಉಳ್ಳ) ಒಂದು ತೆರದ ಮಣ್ಣಿನ ಹೂಜಿ, ಕೂಜ. [Put his m. up ರೇಗಿಸು ; ಕೆರಳಿಸು. Get one's m. up ಕೋಪಗೊಳ್ಳು ; ರೇಗು]. (ಅಸಂ.) ೫೦೦ ಪೌಂಡು ಹಣ. [**M.-bread** ಬೇಒಬ್ಯಾಬ್ ಎಂಬ ಮರದ ಕಾಯಿ, ಹಣ್ಣು. **M.-cup** ಹೂಜಿಯಾಕಾರದ ಎಲೆಯುಳ್ಳ ಒಂದು ಸಸ್ಯಜಾತಿ. **M.-jacket** ನಾವಿಕರು, ಮೊ. ರು ತೊಡುವ ಗುತ್ತನಾದ ಗಿಡ್ಡ ಜುಬ್ಬ. **M.-nut** ನೆಲಗಡಲೆ. **M.-puzzle** (Puzzle-m.) ಚಿಲೀ ದೇಶದ ಪೈನ್ ಮರ. **M.-wrench** (ಸ್ಥಿರವಾದ ದವಡೆಯ ಕಡೆಗೆ ಅಥವಾ ಅದರಿಂದ ದೂರಕ್ಕೆ ಸರಿಯಿಸಲಾಗುವ ಚಲದವಡೆಯುಳ್ಳದ್ದಾಗಿ, ಮಧ್ಯೆ ಒಂದು ಪದಾರ್ಥವನ್ನು ಬಿಗಿಯಾಗಿ ಹಿಡಿದುಕೊಳ್ಳಲಾಗುವ) ಕಪಿಮುಷ್ಟಿ ತಿರುಪು (ಸಲಕರಣೆ)]. (ಕ್ರಿ.) ಅಣಕಿಸು ; ಕಪಿಚೇಷ್ಟೆ ಮಾಡು ; ತುಂಟಾಟವಾಡು. **Mónkeyish** (ಗು.) ಕಪಿಯಣಕದ; ಕಪಿಚೇಷ್ಟೆಯ. **Mónkeyishness** (ನಾ.)

Móno- ಮಾನೊ —, ಮನಾ — (ಸ. ಪೂ. ಪ.) (ಸ್ವರಗಳ ಹಿಂದೆ mon-) ಒಂದು — ; ಒರ್ — ; ಏಕ —. **-básic** (ರ. ವಿ.) (ಆಮ್ಲಗಳ ವಿಷಯದಲ್ಲಿ) ಲೋಹದಿಂದ ಅಥವಾ ಪ್ರತ್ಯಾಮ್ಲ ಘಟಕದಿಂದ ಸ್ಥಾನಾಕ್ರಮಣ ಪಡೆಯಲುಳ್ಳ ಒಂದೇ ಒಂದು ಜಲಜನಕ ಪರಮಾಣುವುಳ್ಳ : ಏಕ ಪ್ರತ್ಯಾಮ್ಲಿಯ. **-cárpic, -cárpous** ಒಂದು ಸಲ ಮಾತ್ರ ಹಣ್ಣು ಬಿಡುವ. **-céphalous** —ಸೆಫ— (ಸ. ವಿ.) ಒಂದೇ ತಲೆಭಾಗವುಳ್ಳ ; ಏಕ ಶೀರ್ಷಿ. **-clínal** — ಕ್ಲೈ — (ಭೂಸ್ತರ) ಒಂದೇ ದಿಕ್ಕಿನಲ್ಲಿ ಬಾಗಿರುವ ; ಏಕ ಪ್ರವಣ. **-cotylédon** (—ಕಾಟಿಲೀಡನ್) ಏಕ ಬೀಜದಳವುಳ್ಳ ಸಸ್ಯ. **-cotyledonous** ಏಕ ಬೀಜ ದಳವುಳ್ಳ. **Monócracy** [ಮ(ಮೊ)ನಾಕ್ರಸಿ] ಏಕ ನಾಯಕ ಪ್ರಭುತ್ವ. **Monócular** ಒಂದು ಕಣ್ಣಿನ ; ಒಕ್ಕಣ್ಣಿನ ; ಒಂದು ಕಣ್ಣಿಗೆ ಮಾತ್ರ ಹೊಂದಿಸಿದ. **-cycle** (ಮಾನೊ—) (ಹಗುರವಾದ) ಒಗ್ಗಾಲಿ ಬಂಡಿ. **-dáctylous** —ಡ್ಯಾಕ್ಟಿ— (ಕೈಯ ಅಥವಾ ಕಾಲಿನ) ಒಂದೇ ಬೆರಳುಳ್ಳ. **-drama** ಏಕ ನಟ ನಾಟಕ. **Monoécious** ಮಾ(ಮೊ)ನೀಷಸ್ (ಸ. ವಿ., ಪ್ರಾ. ವಿ.) ಒಂದೇ ಸಸ್ಯದಲ್ಲಿ ಅಥವಾ ಒಂದೇ ಪ್ರಾಣಿಯಲ್ಲಿ ಪುಂ ಸ್ತ್ರೀ ಅಂಗಗಳೆರಡೂ ಇರುವ: ಉಭಯ ಲಿಂಗಿ; ದ್ವಿಲಿಂಗಿ. **-génesis** ಎಲ್ಲ ಜೀವಿಗಳೂ ಒಂದೇ ಜೀವಕಣದಿಂದ ಉತ್ಪನ್ನವಾಗುವುದು : ಏಕ ಜೀವಕಣ ಜನನ. **-genétic** (ಗು.); **Monógeny** [ಮ(ಮೊ)ನಾಜಿ(ಜೆ)ನಿ] ಒಂದೇ ದಂಪತಿಗಳಿಂದ ಮನುಷ್ಯ ಜಾತಿಯ ಹುಟ್ಟು. **-glot** ಮಾನೊಗ್ಲಾಟ್ (ಗು., ನಾ.) ಒಂದೇ ಭಾಷೆಯಾಡುವ(ವನು) ; ಏಕ ಭಾಷಿ. **Monógynous** ಮ(ಮೊ)ನಾಜಿನಸ್ (ಸ. ವಿ.) ಒಂದೇ ಶಲಾಕವುಳ್ಳ ; ಏಕ ಶಲಾಕೀಯ. **Monógyny** ಒಬ್ಬಳೇ ಹೆಂಡತಿಯನ್ನುಳ್ಳ ಪದ್ಧತಿ : ಏಕ ಪತ್ನೀತ್ವ. **Monoidéism** (ಮಾನೊಐಡೀಇಸ್ಮ್) (ಯಾವಾಗಲೂ) ಒಂದೇ ಕಲ್ಪನೆಯಮೇಲೆ ಮನ ನೆಟ್ಟಿರುವುದು ; ಏಕ ವಿಷಯ ಧ್ಯಾನ (ಮು., ಒಂದು ಬಗೆಯ ಮನೋವಿಕಾರವಾಗಿ). **Monólatry** ಮ(ಮೊ)ನಾಲಟ್ರಿ (ಇತರ ದೈವಗಳಿರಬಹುದೆಂಬುದನ್ನು ನಿರಾಕರಿಸದ) ಏಕ ದೈವಾರಾಧನೆ. **-mánia** (ಮಾನೊ —) ಒಂದೇ ವಿಷಯದಮೇಲಿನ ಹುಚ್ಚು ; ಏಕ ವಿಷಯ ಭ್ರಮೆ. **-mániac** (ನಾ.) ; **-maníacal** (ಗು.) ; **-métallism** ಏಕ ಲೋಹ ಪ್ರಮಾಣ ನಾಣ್ಯ ಪದ್ಧತಿ. **-metállic** (ಗು.) ; **-mórphic, -mórphous** ಬೆಳವಣಿಗೆಯಲ್ಲಿ ರೂಪ ಪರಿವರ್ತನ ಹೊಂದದ; ಏಕ ರೂಪಿ(ಯಾದ). **-pétalous** ಅವಿಭಕ್ತ ಪುಷ್ಪದಳ ವಲಯವುಳ್ಳ. **-phthong** ಏಕ ಸ್ವರ ಧ್ವನಿ. **-plane** ಏಕ ಫಲಕದ ಫಲಕ ವಿಮಾನ. **-psýchism** ಎಲ್ಲ ಆತ್ಮಗಳೂ ಒಂದೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂಬ ವಾದ; ಆತ್ಮೈಕ್ಯ ವಾದ. **-rail** ಒಂದೇ ಕಂಬಿಯ ರೈಲು ರಸ್ತೆ. **-rhyme** ಒಂದೇ ಅಂತ್ಯಪ್ರಾಸವುಳ್ಳ ಪದ್ಯ. **-spérmous** (ಸ. ವಿ.) ಏಕ ಬೀಜಿ. **Monóstichous** ಮ(ಮೊ)ನಾಸ್ಟಿಕಸ್ (ಸ. ವಿ., ಪ್ರಾ. ವಿ.) ಒಂದೇ ಪದರದಲ್ಲಿ, ಒಂದೇ ಸಾಲಿನಲ್ಲಿ, —ಅಳವಟ್ಟಿರುವ; ಒಂದೇ ಪದರ, ಸಾಲು, —ಉಳ್ಳ. **-stróphic** (ಮಾನೊಸ್ಟ್ರಾ—) ಗ್ರೀಕ್ ಮೇಳ ಗೀತದ ಒಂದು ನಿರ್ದಿಷ್ಟ ಕ್ರಮದ ಆವರ್ತನೆಗಳುಳ್ಳ. **-tint** ಏಕ ವರ್ಣ ಚಿತ್ರ. **Mónotreme** ಮೂತ್ರ ನಾಳ, ಯೋನಿ, ಜೀರ್ಣಾಂಗ —ಇವೆಲ್ಲಕ್ಕೂ ಒಂದೇ ದ್ವಾರವುಳ್ಳ ಅತ್ಯಂತ ಕೆಳ ಮಟ್ಟದ ಸಸ್ತನಿ ಪ್ರಾಣಿ. **-type** ಅಚ್ಚು ಮೊಳೆಗಳನ್ನು ಎರಕ ಹೊಯ್ದು ಜೋಡಿಸುವ ಯಂತ್ರ. **-týpic** ಒಂದೇ ಮಾದರಿಯ (ನಿರೂಪಣೆಯುಳ್ಳ). [(ರ. ವಿ.) ಏಕ ಪರಮಾಣು ಅಥವಾ ಏಕ ಸಂಯೋಜನ ಘಟಕವಿರುವುದನ್ನು ಸೂಚಿಸುವ ರಾಸಾಯನಿಕ ಪದಗಳಲ್ಲಿ ಪ್ರ.: **-brómide, -cárbon, -chlóride; Monóxide** ಸಂಯೋಜನೀಯ ಆಮ್ಲ ಜನಕ ಏಕಾಂಶಯುತ ಭಸ್ಮ: ಏಕ ಆಮ್ಲ ಜನಕೀಯ]

Mónochord ಮಾನೊಕಾರ್ಡ್ (ನಾ.) ಸಂಗೀತ ಸ್ವರಗಳ ಅಂತರಗಳನ್ನು ಅಳೆಯುವ ಏಕ ತಂತ್ರಿಯ ಸಲಕರಣೆ: ಸ್ವರ ಮಾಪಕ ಏಕ ತಂತ್ರಿ.

Monochromátic ಮಾನೊಕ್ರೊಮ್ಯಾಟಿಕ್ (ಗು.) (ಬೆಳಕು) ಏಕ ವರ್ಣದ; ಏಕ ವರ್ಣ ರಚಿತ. **Mónochrome** (ನಾ., ಗು.) ಒಂದೇ ಬಣ್ಣದ ಹಲವು ಛಾಯೆಗಳಲ್ಲಿ ಚಿತ್ರಿಸಿದ ಚಿತ್ರ: ಏಕ ವರ್ಣ ವಿವಿಧ ಛಾಯಾ ಚಿತ್ರ; ಏಕ ವರ್ಣ ರೂಪಣೆ. (ಗು.) ಏಕ ವರ್ಣದ.

Mónocle ಮಾನಕ್‌ಲ್ (ನಾ.) ಒಂದು ಕಣ್ಣಿನ ಕನ್ನಡಕ; ಒಕ್ಕಣ್ಣಡಕ.

Mónody ಮಾನೊಡಿ (ನಾ.) ಗ್ರೀಕ್ ರುದ್ರನಾಟಕದಲ್ಲಿ ಒಬ್ಬನೇ ನಟನು ಹಾಡುವ ಗೀತೆ; ತನಿ ಗೀತೆ. (ಒಬ್ಬನ ಮರಣವನ್ನು ಕುರಿತ) ಪ್ರಲಾಪ ಗೀತೆ; ಶೋಕ ಗೀತೆ. **Mónodist** (ನಾ.); **Monódic** ಮ(ಮೊ) ನಾ— (ಗು.)

Monógamy ಮ(ಮೊ)ನಾಗಮಿ (ನಾ.) ಒಬ್ಬಳು ಹೆಂಡತಿಯನ್ನು ಅಥವಾ ಒಬ್ಬ ಗಂಡನನ್ನು ಮಾತ್ರ ಒಂದು ಬಾರಿಗೆ ಮದುವೆಯಾಗಿರುವ ಪದ್ಧತಿ: ಏಕ ಪತಿತ್ವ: ಏಕ ಪತ್ನೀತ್ವ; (ವಿರ. ಪ್ರ.) ಒಂದು ಬಾರಿ ಮಾತ್ರ ಮದುವೆಮಾಡಿಕೊಳ್ಳುವ ಪದ್ಧತಿ: ಒಮ್ಮದುವೆ; ಅಪುನರ್ವಿವಾಹ ಪದ್ಧತಿ. (ಪ್ರಾ. ವಿ.) ಒಂದೇ ಗಂಡಿನಲ್ಲಿ, ಒಂದೇ ಹೆಣ್ಣಿನಲ್ಲಿ, ಕೂಡುವ ಪದ್ಧತಿ. **Monógamist** (ನಾ.); **Monógamous** (ಗು.)

Mónogram ಮಾನೊಗ್ರ್ಯಾಮ್ (ನಾ.) ಒಟ್ಟಿಗೆ ಹೆಣೆದಿರುವ ಎರಡು ಅಥವಾ ಹೆಚ್ಚಾದ ಅಕ್ಷರಗಳು (ಮು., ಒಬ್ಬನ ಹೆಸರಿನ ಮೊದಲಕ್ಷರಗಳು): ಕೂಡಕ್ಷರ. **Monogrammátic** —ಗ್ರಮ್ಯಾ— (ಗು.)

Mónograph ಮಾನೊಗ್ರಾಫ್ (ನಾ., ಕ್ರಿ. ಸಕ.) ಒಂದೇ ವಿಷಯದ ಅಥವಾ ವಸ್ತುವಿನ ಮೇಲೆ, ಅಥವಾ ಒಂದೇ ವರ್ಗಕ್ಕೆ ಸೇರಿದ ವಸ್ತುಗಳ ಮೇಲೆ, ಬರೆದ ಪ್ರಬಂಧ, ಲೇಖನ: ಏಕ ವಿಷಯ ಪ್ರಬಂಧ. (ಕ್ರಿ.) —ಬರೆ. **Monográphic** (ಗು.); **Monográphically** (ಕ್ರಿ. ವಿ.); **Monógrapher** ಮನಾಗ್ರ —(ನಾ.); **Monógraphist** (ನಾ.)

Mónolith ಮಾನೊಲಿತ್ (ನಾ.) (ಮು., ಸ್ತಂಭಾಕೃತಿಯಾಗಿ, ಸ್ಮಾರಕವಾಗಿ, ರೂಪಿಸಿದ) ಅಖಂಡ, ಏಕ, —ಶಿಲೆ. **Monolíthic** (ಗು.)

Mónologue ಮಾನೊಲಾಗ್ (ನಾ.) ಏಕ ಪಾತ್ರ ನಾಟಕದಲ್ಲಿ ಒಬ್ಬನೇ ಮಾತನಾಡುವ ದೃಶ್ಯ; ಸ್ವಗತ ಭಾಷಣ; ಏಕ ನಟ ನಾಟಕ; (ಒಂದು ಗೋಷ್ಠಿಯಲ್ಲಿ) ಒಬ್ಬನದೇ ದೀರ್ಘ ಭಾಷಣ. **Monológical** —ಜಿ— (ಗು.); **Mónologuist** —ಗಿ— (ನಾ.); **Monólogist** ಮೊನಾಲೊಜಿಸ್ಟ್ (ನಾ.); **Monólogize** (ಕ್ರಿ. ಸಕ.)

Monómial ಮ(ಮೊ)ನೋಮಿಯಲ್ (ನಾ., ಗು.) (ಬೀ. ಗ.) ಏಕ ಪದವುಳ್ಳ (ರಾಶಿ): ಏಕ ಪದಿ.

Monóphysite ಮ(ಮೊ)ನಾಫಿಸೈಟ್ (ನಾ.) ಯೇಸು ಕ್ರಿಸ್ತನಲ್ಲಿ (ದೇವಾಂಶ ಮನುಷ್ಯಾಂಶಗಳು ಬೇರೆ ಬೇರೆಯಾಗಿರದೆ ಮಿಳಿತವಾಗಿ) ಏಕ ಸ್ವಭಾವ ಮಾತ್ರ ಇದೆಯೆಂದು ನಂಬುವವನು: ಏಕ ಪ್ರಕೃತಿ ವಾದಿ.

Monópoly ಮ(ಮೊ)ನಾಪೊಲಿ (ನಾ.) (ಯಾವುದಾದರೂ ಸರಕಿನ ವ್ಯಾಪಾರ ಮಾಡುವುದರಲ್ಲಿ) ಏಕ ಸ್ವಾಮ್ಯ; (ಸರ್ಕಾರವು ವಿಶೇಷ ಹಕ್ಕಾಗಿ ಒಬ್ಬನಿಗೆ ಕೊಟ್ಟ) ಏಕ ಸ್ವಾಮ್ಯತೆ; (ಒಂದರ) ಏಕಾನುಭೋಗ, ಪೂರ್ಣಾಧಿಕಾರ. **Monópolist** (ನಾ.) ಏಕ ಸ್ವಾಮ್ಯ ವಾದಿ; (ಒಂದರ) ಏಕ ಸ್ವಾಮ್ಯ ಪಡೆದಿರುವವನು. **Monópolize** (ಕ್ರಿ. ಸಕ.) (ವ್ಯಾಪಾರ, ಸರಕು, ಸಂಭಾಷಣೆ, ಒಬ್ಬನ ಗಮನ, ಮೊ. ಗಳ) ಏಕ ಸ್ವಾಮ್ಯ, ಏಕ ಸ್ವಾಧೀನ, —ಪಡೆ. **Monopolizátion** (ನಾ.)

Monopólylogue ಮಾನೊಪಾಲಿಲಾಗ್ (ನಾ.) ಒಬ್ಬನೇ ಹಲವು ಪಾತ್ರಗಳನ್ನು ವಹಿಸಿ ನಟಿಸುವ ಒಂದು ವಿನೋದ ಪ್ರದರ್ಶನ.

Monosýllable ಮಾನೊಸಿಲಬ್‌ಲ್ (ನಾ.) ಏಕೋಚ್ಚಾರ; ಏಕ ಉಚ್ಚಾರಾಂಶ. Speak in monosyllables (ಉದ್ದೇಶಪೂರ್ವಕವಾದ ಸಂಕ್ಷಿಪ್ತತೆಯಿಂದ) 'ಅಹುದು', 'ಅಲ್ಲ' ಎಂಬ ಮಾತಲ್ಲದೆ ಹೆಚ್ಚು ಆಡದಿರು. **Monosýllabism** (ನಾ.); **Monosýllabize** (ಕ್ರಿ. ಸಕ.); **Monosyllábic** — ಲ್ಯಾ — (ಗು.); **Monosyllábically** (ಕ್ರಿ. ವಿ.)

Mónotheism ಮಾನೊತೀಯಿಸ್ಮ್ (ನಾ.) ಒಬ್ಬನೇ ದೇವರು ಎಂಬ ವಾದ: ಏಕ ದೇವ ವಾದ. **Mónotheist** (ನಾ.); **Monotheístic** (ಗು.)

Mónotone ಮಾನೊಟೋನ್ (ಗು., ನಾ., ಕ್ರಿ. ಸಕ.) ಒಂದೇ ರಾಗದ(ಲ್ಲಿ ಹೇಳುವುದು); (ಲೇಖನ, ಕೃತಿ) ಏಕ ಶೈಲಿಯಲ್ಲಿರುವುದು. (ಕ್ರಿ.) ಒಂದೇ ಶೈಲಿ, ಒಂದೇ ಸ್ವರ, ಒಂದೇ ರಾಗ — ಇವುಗಳಲ್ಲಿ ಹೇಳು, ಮಾತನಾಡು, ಹಾಡು. **Monotónic** —ಟಾ— (ಗು.) (ಸಂ.) ಒಂದೇ ರಾಗದ, ಸ್ವರದ. **Monótonous** ಮ(ಮೊ)ನಾಟೊನಸ್ (ಗು.) (ಧ್ವನಿ, ಮಾತು) ಒಂದೇ ರಾಗದ, ವೈವಿಧ್ಯವಿಲ್ಲದ; ಏಕ ರೀತಿಯಾಗಿದ್ದು, ಒಂದೇ ರಾಗದಲ್ಲಿದ್ದು, —ಬೇಸರ ಹಿಡಿಸುವ. **Monótonously** (ಕ್ರಿ. ವಿ.); **Monótonousness** (ನಾ.); **Monótonize** (ಕ್ರಿ. ಸಕ.); **Monótony** (ನಾ.) (ಬೇಸರ ಹಿಡಿಸುವಂಥ) ಒಂದೇ ರಾಗ, ಒಂದೇ ಹಾಡು; ಏಕ ರೀತಿ; ವೈವಿಧ್ಯವಿಲ್ಲದಿರುವುದು.

Monótonous, Monótony, etc. Monotone ನೋಡಿ.

Monroéism ಮನ್ರೋಇಸ್ಮ್ (ನಾ.) ಭೂಗೋಳದ ಪಶ್ಚಿಮಾರ್ಧದಲ್ಲಿಯ ಯಾವ ಯಾವ ರಾಜ್ಯಗಳನ್ನು ಅಮೆ. ಸಂ. ದ ರಾಜ್ಯವು ಸ್ವತಂತ್ರ ರಾಜ್ಯಗಳೆಂದು ಅಂಗೀಕರಿಸಿದೆಯೊ ಅಂತಹ ರಾಜ್ಯಗಳ ಸ್ವಾತಂತ್ರ್ಯಕ್ಕೆ ಭಂಗ ಬರುವಂತೆ ಯೂರೋಪಿನಲ್ಲಿರುವ ಯಾವ ರಾಜ್ಯವಾದರೂ ತನ್ನ ರಾಜ್ಯಪದ್ಧತಿಯನ್ನು ಪ್ರಚಾರಮಾಡಲು ಪ್ರಯತ್ನಿಸಿದರೆ ಆ ಪ್ರಯತ್ನವನ್ನು ಅಮೆ. ಸಂ. ದ ಸರ್ಕಾರವು ವಿರೋಧವೆಂದು ಪರಿಗಣಿಸುವುದು ಎಂಬ ತತ್ತ್ವ. ಅಮೆರಿಕಾ ಖಂಡದ ರಾಜಕೀಯ ವ್ಯವಹಾರಗಳಿಗೆ ಯೂರೋಪ್ ಖಂಡದ ರಾಜ್ಯಗಳು ಕೈಹಾಕಬಾರದೆಂಬ ಮತ್ತು ಅಮೆರಿಕದ ಭೂ ಪ್ರದೇಶಗಳನ್ನು ಯೂರೋಪ್ ಖಂಡದ ರಾಜ್ಯಗಳು ತಮ್ಮ ಸ್ವಾಸ್ತ್ಯ ರಾಜ್ಯಗಳಂತೆ ಭಾವಿಸಕೂಡದೆಂಬ ತತ್ತ್ವ. (ಇದನ್ನು ಅಮೆ. ಸಂ. ದ ಅಧ್ಯಕ್ಷ Monroe ಮಹಾಶಯನು ೧೮೨೩ನೆಯ ಇಸವಿ ಡಿಸೆಂಬರು ೨ರಲ್ಲಿ ಉದ್ಘೋಷಿಸಿದನು). **Monroéist** (ನಾ.)

Monseigneúr (F) ಮಾನ್‌ಸೆನ್ಯರ್ (ನಾ.; ಬ. ವ. Messeigneurs ಮೆಸೆನ್ಯರ್ಸ್, ಮೇಸನ್ಯರ್) (ಮು., ರಾಜ ಕುಮಾರರು, ಮಠಾಧಿಪತಿಗಳು, ಮೊ.) ಘನವಂತರ ವಿಷಯದಲ್ಲಿ ಉಪಯೋಗಿಸುವ ಫ್ರೆಂಚ್ ಒಕ್ಕಣೆಯ ಪದ.

Monsieúr (F) ಮಸ್ಯ, ಮೆಸ್ಯರ್ (ನಾ.; ಬ. ವ. Messieurs ಮೆಸ್ಯ) ಇಂಗ್ಲಿಷಿನ Mister ಪದಕ್ಕೆ ಫ್ರೆಂಚಿನ ಸಾಮ್ಯ ಪದ; (ಹೆಸರಿಗೆ ಬದಲು ಪ್ರತ್ಯೇಕವಾಗಿಯೂ ಪ್ರಯೋಗವುಂಟು: ಉದಾ., Did M. ring?);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಫ್ರೆಂಚರವನು; (ಚರಿತ್ರೆ) ಫ್ರೆಂಚ್ ದೊರೆಯ ಎರಡನೆಯ ಮಗ, ಬೆಂಬಳಿಯ ತಮ್ಮ —ಇವರಿಗೆ ಒಕ್ಕಣೆಯ ಪದ.

Monsignór(e) (F) ಮಾನ್‌ಸೀನ್ಯಾರ್(ರೆ) (ನಾ.; ಬ. ವ. -ori —ನ್ಯಾರಿ) ಮಠಾಧಿಪತಿಗಳು, ಮಠ ಸಂಸ್ಥಾನಾಧಿಕಾರಿಗಳು, ಮೊ.ರ ಒಕ್ಕಣೆಯ ಪದ.

Monsoón ಮಾನ್‌ಸೂನ್ (ನಾ.) ದ. ಏಷ್ಯದಲ್ಲಿ (ಮು., ಹಿಂದೂ ಸಾಗರದಲ್ಲಿ) ಬೀಸುವ ಒಂದು ಕ್ಲುಪ್ತ ಮಾರುತ [ಬೇಸಗೆಯಲ್ಲಿ ನೈರುತ್ಯದಿಂದಲೂ (= Wet m. ವರ್ಷ ವಾತ; ನೈರುತ್ಯ ಮಾರುತ), ಚಳಿಗಾಲದಲ್ಲಿ ಈಶಾನ್ಯದಿಂದಲೂ (= Dry m. ಶುಷ್ಕ ವಾತ; ಈಶಾನ್ಯ ಮಾರುತ) ಬೀಸುವದು]: ಹಿಂಗಾರು, ಮುಂಗಾರು; ಮಳೆಗಾಲ; ಕಾರ್ಗಾಲ; ನಿಯತವಾಗಿ ದಿಕ್ಕು ಬದಲಾಯಿಸಿ ಬೀಸುವ ಇತರ ಮಾರುತ(ಗಳು)

Mónster ಮಾನ್‌ಸ್ಟರ್ (ನಾ., ಗು.) ವಿಕಾರ ರೂಪದ ಪ್ರಾಣಿ ಅಥವಾ ಸಸ್ಯ; ವಿಪರೀತ ರೂಪದ ಹುಟ್ಟು; ಹಲವು ಅಸಮಂಜಸ ಭಾಗಗಳು ಸೇರಿ ಆದ ಯಾವುದಾದರೂ ಕಾಲ್ಪನಿಕ ಪ್ರಾಣಿ (ನರಾಶ್ವ, ಕಿಂಪುರುಷ, ಮೊ. ವು); (ಕ್ರೌರ್ಯ, ಮೊ. ಗಳಲ್ಲಿ) ಅಮಾನುಷ, ಕಿರಾತ, —ವ್ಯಕ್ತಿ; ಬೃಹದಾಕಾರದ ಪ್ರಾಣಿ, ವಸ್ತು; ಪೆಡಂಭೂತ; ಪಿಶಾಚಿ; ರಾಕ್ಷಸ. (ಗು.) ವಿಪರೀತ ದೊಡ್ಡ; ಬೃಹದಾಕಾರದ. **Monstrósity** —ಸ್ಟ್ರಾ— (ನಾ.) ಅತಿ ಘೋರತೆ; ವಿಕಾರ, ಅತಿ ಘೋರ, —ವಸ್ತು, ಪ್ರಾಣಿ; ಅಸಹಜ ರೂಪದಲ್ಲಿ ಹುಟ್ಟಿದ ಪ್ರಾಣಿ; ಕಾಲ್ಪನಿಕ ರಾಕ್ಷಸ. **Mónstrous** (ಗು., ಕ್ರಿ. ವಿ.) ಅಸಹಜ ರಚನೆಯ; ವಿಕಾರವಾದ; ವಿಲಕ್ಷಣವಾದ; ರಾಕ್ಷಸ ಸ್ವಭಾವದ; ಅತ್ಯಂತ ದೊಡ್ಡ; ಅತಿ ಪ್ರಮಾದವಾಗಿ ತಪ್ಪಾದ; ಅಸಂಬದ್ಧವಾದ; ಘೋರವಾದ; ಬೀಭತ್ಸ. (ಕ್ರಿ. ವಿ., ಪ್ರಾಚೀ. ಪ್ರ.) ಅತ್ಯಂತವಾಗಿ (M. good friends). **Mónstrously** (ಕ್ರಿ. ವಿ.); **Mónstrousness** (ನಾ.)

Mónstrance ಮಾನ್‌ಸ್ಟ್ರನ್ಸ್ (ನಾ.) (ರೋ. ಕ್ಯಾ.) ಪವಿತ್ರ ಮಾಡಿದ ರೊಟ್ಟಿಯನ್ನು ದರ್ಶನಕ್ಕಾಗಿಡುವ ಪಾರದರ್ಶಕವಾದ, ಚಿನ್ನದ ಅಥವಾ ಬೆಳ್ಳಿಯ, ತೆರೆದಿರುವ ಪಾತ್ರೆ.

Monstrósity. **Monster** ನೋಡಿ.

Móntane ಮಾಂಟೇನ್ (ಗು.) ಬೆಟ್ಟದ ಪ್ರದೇಶದ; ಮಲೆನಾಡಿನ(ಲ್ಲಿ ವಾಸಿಸುವ)

Montessóri sýstem ಮೊಂಟೆಸ್ಸೋರಿ ಸಿಸ್ಟಮ್ (ನಾ.) ಮೂರರಿಂದ ಆರು ವರ್ಷದ ಮಕ್ಕಳಿಗೆ ಶಿಕ್ಷಣ ಕೊಡಲೂ ಬೋಧನೆ ಮಾಡಲೂ ರೋಮಿನ Dr Maria Montessori ಎಂಬ ಶಿಕ್ಷಣ ಶಾಸ್ತ್ರ ಪಂಡಿತೆ ಕಲ್ಪಿಸಿರುವ ಒಂದು ಪದ್ಧತಿ (ಇದರ ವಿಶೇಷ ಲಕ್ಷಣಗಳೇನೆಂದರೆ: ಅನಿರ್ಬಂಧವಾದ ದೇಹ ಚಟುವಟಿಕೆ, ಸೂತ್ರನಿಯಮವಿಲ್ಲದ ವ್ಯಕ್ತಿಶಿಕ್ಷಣ, ಕೇವಲ ಆದಿ ಭಾಗದಲ್ಲಿಯೇ ಓದು ಬರಹಗಳ ಅಭಿವೃದ್ಧಿ, ವಿಸ್ತಾರವಾದ ಇಂದ್ರಿಯ ಜಾಗೃತಿಯ ಮತ್ತು ಅಂಗ ಚಟುವಟಿಕೆಯ ಶಿಕ್ಷಣ)

Month ಮಂತ್ (ನಾ.) ವರ್ಷದ ಹನ್ನೆರಡು ವಿಭಾಗಗಳಲ್ಲೊಂದು: ತಿಂಗಳು; ಮಾಸ (= Calendar m.); ಒಂದು ತಿಂಗಳ ಕಾಲ (ಒಂದು ತಾರೀಖಿನಿಂದ ಮುಂದಿನ ತಿಂಗಳ ಅದೇ ತಾರೀಖಿನ ವರೆಗೆ). Lunar m. ಚಂದ್ರನು ಭೂಮಿಯ ಸುತ್ತಲೂ ಒಂದು ಬಾರಿ ಸುತ್ತುವುದಕ್ಕೆ ಬೇಕಾಗುವ ಕಾಲ: ಚಾಂದ್ರ ಮಾನ; ೨೮, ೨೯ ಅಥವಾ ೩೦ ದಿನಗಳ ಕಾಲ. M. of Sundays ಅನಿಶ್ಚಿತ ಕಾಲ. This day m. ಇಂದಿನಿಂದ ಒಂದು ತಿಂಗಳು. M.'s mind ಸತ್ತ ಒಂದು ತಿಂಗಳಿಗೆ ಸತ್ತವನ ಜ್ಞಾಪಕಾರ್ಥವಾಗಿ ಮಾಡುವ ಆರಾಧನೆ: ಮಾಸಿಕ. ಒಲವು; ಇಷ್ಟ; ಅಭಿರುಚಿ. **Mónthly** (ಗು., ನಾ., ಕ್ರಿ. ವಿ.) ತಿಂಗಳಿಗೊಂದು ಬಾರಿ ಮಾಡುವ, ಬರುವ, ಕೊಡುವ; (ಪ್ರತಿ) ತಿಂಗಳಿನ; (M. nurse ಮೊದಲ ತಿಂಗಳ ಬಾಣಂತಿತನ ಮಾಡುವ ದಾದಿ). (ನಾ.) ಮಾಸ ಪತ್ರಿಕೆ. (ಬ. ವ. ದಲ್ಲಿ) ಮುಟ್ಟು; ರಜಸ್ಸು. (ಕ್ರಿ. ವಿ.) ತಿಂಗಳಿಗೊಮ್ಮೆ; ಪ್ರತಿ ತಿಂಗಳೂ; ತಿಂಗಳುಗಟ್ಟಳೆ.

Mónticule ಮಾಂಟಿಕ್ಯೂಲ್ (ನಾ.) ಸಣ್ಣ ಗುಡ್ಡ; (ಅಗ್ನಿಪರ್ವತದಿಂದ ಚಿಮ್ಮಿಬಂದು ಆದ) ಸಣ್ಣ ದಿಬ್ಬ. (ಪ್ರಾಣಿ, ಮೊ. ಗಳ ಮೈಮೇಲಿನ) ಸಣ್ಣ ಉಬ್ಬು, ಗಂತಿ.

Mónument ಮಾನ್ಯುಮೆಂಟ್ (ನಾ.) ಬರೆದಿಟ್ಟ ದಾಖಲೆ, ಲಿಖಿತ. ಸ್ಮಾರಕ, ಜ್ಞಾಪಕಾರ್ಥ (ಮು., ಕಟ್ಟಡ) (The M. ಕ್ರಿ. ಶ. ೧೬೬೬ನೆಯ ವರ್ಷದಲ್ಲಿ ಲಂಡನ್ನಿನಲ್ಲಿ ನಡೆದ ಬೆಂಕಿಯ ಅನಾಹುತದ ನೆನಪಾಗಿ ಕಟ್ಟಿದ ಸ್ಮಾರಕ ಸ್ತಂಭ); ಸತ್ತವರ ಸ್ಮಾರಕವಾಗಿ ಗೋರಿಯ ಮೇಲಾಗಲಿ, ಕ್ರೈಸ್ತ ಆರಾಧನ ಮಂದಿರದಲ್ಲಾಗಲಿ, ಸ್ಥಾಪಿಸಿದ ಶಿಲೆಯ ಅಥವಾ ಇತರ ಕಟ್ಟಡ; ಸಮಾಧಿ ಕಟ್ಟಡ. **Monuméntal** (ಗು.) ಸ್ಮಾರಕದ; ಸ್ಮಾರಕವಾಗಿರುವ (M. mason ಸಮಾಧಿ ಶಿಲ್ಪಿ). (ಸಾಹಿತ್ಯ ಕೃತಿಗಳ ವಿಷಯದಲ್ಲಿ) ಗುರುತರವಾದದ್ದೂ ಚಿರ ಸ್ಥಾಯಿಯೂ ಆದ; ಶಾಶ್ವತ ಸ್ಮಾರಕವಾದ. ಅದ್ಭುತವಾದ (M. ignorance). **Monuméntally** (ಕ್ರಿ. ವಿ.); **Monuméntalize** (ಕ್ರಿ. ಸಕ.) ಸ್ಮಾರಕದಿಂದ (ಹೇಗೊ ಹಾಗೆ) ಚಿರ ಸ್ಥಾಯಿ ಮಾಡು, ಚಿರ ಕಾಲ ಜ್ಞಾಪಕದಲ್ಲಿರುವಂತೆ ಮಾಡು.

Moo ಮೂ (ಕ್ರಿ. ಅಕ., ನಾ.) (ಹಸು ಅಥವಾ ಎತ್ತು) ಮೂ (ಅನ್ನು); ಗುಟರೆ (ಹಾಕು)

Mooch, Mouch ಮೂಚ್ (ಕ್ರಿ.) (ಅಸಂ.) ಅಲೆದಾಡು; ಸುಳಿದಾಡು (*About* ಉಪ. ದೊಡನೆ). ಕಳ್ಳತನ ಮಾಡು.

Mood[1] ಮೂಡ್ (ನಾ.) ಮನಸ್ಸಿನ ಸ್ಥಿತಿ; ಮನೋಭಾವ; ಮನೋವೃತ್ತಿ; ಮನೋ ಧರ್ಮ. In the m. (ಕೆಲಸ ಮಾಡಲು ಅಥವಾ ಯಾವುದಕ್ಕಾದರೂ) ಒಲವಿದ್ದು, ಮನಸ್ಸಿದ್ದು. In no m. —ಒಲವಿಲ್ಲದೆ; ಮನಸ್ಸಿಲ್ಲದೆ. **Moódy** (ಗು.) ಮಂಕು ಕವಿದ; ದುಮ್ಮಾನದ; ದುಗುಡದಿಂದ ಕೂಡಿದ; ಚಿಂತಾಕುಲ; ಅಸಮಾಧಾನದಿಂದಿರುವ; ಸಿಡುಕಿನ. **Moódily** (ಕ್ರಿ. ವಿ.); **Moódiness** (ನಾ.)

Mood[2] ಮೂಡ್ (ನಾ.) (ವ್ಯಾ.) (ನಿರ್ದೇಶಕ, ವಿಧಿ, ಆಶೀಃ, ಸಂಭಾವನಾ, ಇತ್ಯಾದಿ) ವಿವಕ್ಷಿತ ಕ್ರಿಯಾರ್ಥಗಳಲ್ಲೊಂದನ್ನು ಸೂಚಿಸುವ ಧಾತು ರೂಪ (Indicative, Imperative, Subjunctive, m.). (ಸಂ.) = Mode.

Moóllah = Mulla.

Moólvie ಮೂಲ್ವಿ, **Moúl-** ಮೌಲ್ವಿ (ನಾ.) ಮುಸಲ್ಮಾನ ನ್ಯಾಯ ಶಾಸ್ತ್ರಜ್ಞ, ಧರ್ಮ ಶಾಸ್ತ್ರಜ್ಞ, ಪಂಡಿತ, ಬೋಧಕ: ಮೌಲ್ವಿ. (ಮು., ಇಂಡಿಯದ ಮುಸಲ್ಮಾನರಲ್ಲಿ ಗೌರವದ ಪದ)

Moon ಮೂನ್ (ನಾ.) ಭೂಮಿಯ ಸುತ್ತಲೂ ತಿಂಗಳಿಗೊಂದಾವೃತ್ತಿ ಸುತ್ತುತ್ತ, ಸೂರ್ಯನಿಂದ ಪಡೆದ ಬೆಳಕನ್ನು ಭೂಮಿಗೆ ಪ್ರತಿಫಲಿಸುವ ಉಪಗ್ರಹ: ಚಂದ್ರ; ತಿಂಗಳು; ಪೆರೆ (ಗ್ರಾಂ.); (Age of the m. ಹೋದ ಅಮಾವಾಸ್ಯೆಯಿಂದ ಪ್ರಕೃತ ದಿನದ ವರೆಗೆ ಚಂದ್ರನಿಗೆ ತುಂಬಿದ ದಿನಗಳು; ಕಲೆಗಳು. New m. ಅಮಾವಾಸ್ಯೆ. Full m. ಹುಣ್ಣಿಮೆ; ಪೂರ್ಣಿಮಾ). (ಕಾವ್ಯ) ಮಾಸ; ತಿಂಗಳು (Where summer is but three moons long). Once in a blue m. (Blue ನೋಡಿ). Old m. in new m.'s arms ಶುಕ್ಲ ಪಕ್ಷದ ಮೊದಲ ಪಾದದ ಚಂದ್ರ (ಆಗ ಚಂದ್ರನ ನಿಸ್ತೇಜ ಭಾಗವು ಭೂಮಿಯ ಬೆಳಕಿನಿಂದ ಸ್ವಲ್ಪ ಬೆಳಕುಗೂಡಿ ಕಾಣುವುದರಿಂದ). **Moónbeam** ಚಂದ್ರ ಕಿರಣ. **Mooncalf** ಹುಟ್ಟು ಮಂಕ. **Moónlight** ತಿಂಗಳ ಬೆಳಕು; ಬೆಳ್ದಿಂಗಳು; ಚಂದ್ರಿಕೆ; (ಹಲವು ವೇಳೆ ವಿಶೇಷಣವಾಗಿ ಪ್ರ.): Moonlight flitting ಬಾಡಿಗೆ ಕೊಡದೆ ತಪ್ಪಿಸಿಕೊಂಡು ಹೋಗುವುದಕ್ಕಾಗಿ ಮನೆಯ ಸಾಮಾನನ್ನು ಬೇರೆಯ ಕಡೆಗೆ ರಾತ್ರಿ ಹೊತ್ತಿನಲ್ಲಿ ಸಾಗಿಸುವುದು. **Moónlighter** ರಾತ್ರಿ ಹೊತ್ತು ದಾಳಿ, ದರೋಡೆ, ಮೊ. ಅಕೃತ್ಯಗಳನ್ನು ನಡಸುವವನು (ಮು., ಐರ್ಲೆಂಡಿನಲ್ಲಿ Land League ಎಂಬ ರೈತರ ಸಂಘದ ವೈರ ಕಟ್ಟಿಕೊಂಡ ಹಿಡುವಳಿದಾರರ ಮೇಲೆ ರಾತ್ರಿ ಹೊತ್ತು ಅತ್ಯಾಚಾರ ನಡಸಿದ ತಂಡದವನು). **Moónlit** ಬೆಳ್ದಿಂಗಳು ಬೆಳಗುವ. **Moónshine** ಕಾರ್ಯಗತವಾಗದ, ಮನಃ ಕಲ್ಪನೆಯ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬರಿ ಊಹೆಯ, —ಮಾತು, ಭಾವ; ಭ್ರಾಂತಿ. ಸುಂಕ ಕೊಡದೆ ಕದ್ದು ಸಾಗಿಸಿದ ಸಾರಾಯಿ. **Moónshiner** (ಅಮೆ. ನಂ. ಅಸಂ.) ಕಳ್ಳ ಭಟ್ಟಿಗಾರ; ಮದ್ಯವನ್ನು ಸುಂಕ ಕೊಡದೆ ಕದ್ದು ಸಾಗಿಸುವವನು. **Moónshiny** ಬೆಳ್ದಿಂಗಳಿಂದ ಬೆಳಗುವ. ಬರಿ ಊಹೆಯ; ಕಾಲ್ಪನಿಕ. **Moónstone** (ಮುತ್ತಿನ ಹೊಳಪುಳ್ಳ) Feldspar ಖನಿಜ. **Moónstruck** ಬುದ್ಧಿ ವಿಕಲ್ಪವಾದ; ಹುಚ್ಚು ಹಿಡಿದ. **Moónless** (ಗು.); **Moóny** (ಗು.) ಚಂದ್ರನ(ಂಥ). ಕನಸು ಕಾಣುತ್ತಿರುವ; ಬೆಪ್ಪು ಹಿಡಿದ; ಉದಾಸೀನ; ಉತ್ಸಾಹ ಶೂನ್ಯ.

Moon (ಕ್ರಿ.) ನಿರುತ್ಸಾಹದಿಂದ, ಬೆಪ್ಪನಂತೆ, —ನೋಡು, ತಿರುಗಾಡು (*About*, *around* ಉಪ. ದೊಡನೆ); ಗಮನವಿಲ್ಲದೆ, ಸೋಮಾರಿಯಾಗಿ, ಹೊತ್ತು ಕಳೆ (*Away* ಉಪ. ದೊಡನೆ)

Moónshee, Múnshi ಮೂನ್ಷಿ (ನಾ.) (ಇಂಡಿಯದಲ್ಲಿ) ದೇಶೀಯ ಕಾರ್ಯದರ್ಶಿ; ದೇಶಭಾಷೆಯಲ್ಲಿ ಉಪಾಧ್ಯಾಯ; ಪಂಡಿತ; ಮುನ್ಷಿ.

Moor[1] ಮೂರ್, ಮೋರ್ (ನಾ.) (ಮು. ಕುರುಚಲು ಬೆಳೆದಿರುವ) ಪಾಳು ಭೂಮಿ, ಬಯಲು, ಬಂಜರು; (ಇಂಗ್ಲೆಂಡಿನ ಕಾರ್ನ್‌ವಾಲ್ ಪ್ರಾಂತದಲ್ಲಿ) ತವರ ಸಿಕ್ಕುವ ಬಂಜರು ಭೂಮಿ. **Moórland** ಕುರುಚಲು ಬೆಳೆದಿರುವ ಪ್ರಾಂತ. **Moórstone** ಒಂದು ಬಗೆಯ ಕಗ್ಗಲ್ಲು. **Moórish**[1] (ಗು.); **Moóry** (ಗು.)

Moor[2] ಮೂರ್, ಮೋರ್ (ನಾ.) ವಾಯುವ್ಯ ಆಫ್ರಿಕದಲ್ಲಿ ವಾಸಿಸುವ (ಬರ್ಬರ ಮತ್ತು ಅರಬ್ಬಿ ಜಾತಿಗಳ ಸಂಕರದ) ಮುಸಲ್ಮಾನ್ ಜಾತಿಯವನು: ಮೂರ್. **Moórish**[2] (ಗು.)

Moor[3] ಮೂರ್, ಮೋರ್ (ಕ್ರಿ. ಸಕ.) (ಹಡಗು, ದೋಣಿ ಅಥವಾ ಇತರ ತೇಲುವಸ್ತುವನ್ನು) ಸ್ಥಾಯಿ ಆಶ್ರಯಕ್ಕೆ ಬಿಗಿ, ಕಟ್ಟಿಹಾಕು. **Moórage** (ನಾ.) — ಕಟ್ಟಿಹಾಕುವುದು; — ಕಟ್ಟಿಹಾಕುವ ಸ್ಥಳ; ಕಟ್ಟಿಹಾಕುವ ಆಶ್ರಯಕ್ಕೆ ಬಾಡಿಗೆ. **Moóring** (ನಾ.; ಸಾ., ಬ. ವ. ದಲ್ಲಿ) ಹಡಗನ್ನು ಬಿಗಿಯುವುದಕ್ಕಾಗಿ ಹಾಕಿರುವ ಸ್ಥಾಯಿ ಲಂಗರುಗಳು ಮತ್ತು ಸರಪಣಿಗಳು; ತೇಲುವೆಯನ್ನು ಕಟ್ಟಿಹಾಕುವ ಆಧಾರ, ನೆಲೆ; (ಬ. ವ. ದಲ್ಲಿ) ಹಡಗನ್ನು ಕಟ್ಟಿಹಾಕುವ ಸ್ಥಳ (ರೂಪ. ಸಹ)

Moose ಮೂಸ್ (ನಾ.) ಉ. ಅಮೆರಿಕದ ಒಂದು ಜಾತಿಯ ಕಡವೆ.

Moot ಮೂಟ್ (ನಾ., ಗು., ಕ್ರಿ. ಸಕ.) (ಚರಿತ್ರೆ) ಸಭೆ. (ನ್ಯಾ. ಶಾ.) ಅಭ್ಯಾಸಕ್ಕಾಗಿ ವಿದ್ಯಾರ್ಥಿಗಳು ಕಾಲ್ಪನಿಕ ವ್ಯಾಜ್ಯವಿಷಯಗಳನ್ನು ಚರ್ಚಿಸುವುದು; ಅಭ್ಯಾಸದ ಚರ್ಚೆ. (ಗು.) ವಿವಾದಾಸ್ಪದ; ಚರ್ಚಾಸ್ಪದ. (ಕ್ರಿ.) (ವಿಷಯ, ಸಮಸ್ಯೆ, ಮೊ. ನ್ನು) ಚರ್ಚೆಗೆ ಎತ್ತು, ತರು.

Mop[1] ಮಾಪ್ (ನಾ., ಕ್ರಿ. ಸಕ.) (ನೆಲ, ಮೊ. ಗಳ ಕಸ ಹೊಡೆಯಲು ಒರಟು ನೂಲು, ಬಟ್ಟೆ ಚೂರು, ಮೊ. ನ್ನು ಕೋಲಿನ ತುದಿಗೆ ಕಟ್ಟಿ ಮಾಡಿದ) ದೂಳುತೊಡಪ; ಹಲವು ಕೆಲಸಗಳಿಗೆ ಉಪಯೋಗಿಸುವ ಇಂಥ ಸಲಕರಣೆ. [**M.-head** (ರೂಪ.) ದಟ್ಟವಾದ ಕೂದಲ ಗುಂಪುಳ್ಳವನು. **Móppy** (ಗು.)]. (ಕ್ರಿ.) ದೂಳುತೊಡಪದಿಂದ (ಹೇಗೊ ಹಾಗೆ) ದೂಳು ತೆಗೆ, ಕಸ ಹೊಡೆ, ಚೊಕ್ಕಟ ಮಾಡು. (ಹುಬ್ಬು, ಮೊ. ಗಳಿಂದ) ಬೆವರು, ಕಣ್ಣೀರು, ಮೊ. ನ್ನು ಒರಸು. M. the floor with (ಅಸಂ.) (ಜಟ್ಟಿಕಾಳಗದಲ್ಲಿ ಎದುರಾಳಿಯನ್ನು) ಮಿಡುಕಾಡದಂತೆ ಬಲವಾಗಿ ಸಿಕ್ಕಿಸಿಕೊಳ್ಳಲು ಅವಕಾಶ ಪಡೆದು ಮೇಲೇಳದಂತೆ ಮಾಡು. M. up ದೂಳುತೊಡಪದಿಂದ (ಹೇಗೊ ಹಾಗೆ) ಒರಸಿಬಿಡು, ತೊಡೆದುಹಾಕು. (ಅಸಂ.) (ಲಾಭ, ಮೊ. ನ್ನು) ನುಂಗಿಹಾಕು; ಪೂರಯಿಸಿಬಿಡು; ಕೊನೆಗಾಣಿಸು.

Mop[2] ಮಾಪ್ (ಕ್ರಿ. ಅಕ., ನಾ.) M. & mow ಸೊಟ್ಟ ಮೋರೆ ಮಾಡು; ಮುಖ ವಿಕಾರ ಮಾಡು. Mops and mows ಮುಖ ಚೇಷ್ಟೆ.

Mope ಮೋಪ್ (ಕ್ರಿ., ನಾ.) ಉತ್ಸಾಹವಿಲ್ಲದ ಸ್ಥಿತಿ ತಂದುಕೊ; ಮಂಕು ಹಿಡಿದಿರು; ಬೇಸರದಿಂದ, ಜುಗುಪ್ಸೆಯಿಂದ, —ಕೂಡಿರು. (ನಾ.) ಉತ್ಸಾಹವಿಲ್ಲದೆ ಬಿದ್ದಿರುವವನು. The mopes ವಿಷಣ್ಣತೆ; ಉತ್ಸಾಹ ಶೂನ್ಯತೆ; ಮಂಕು. **Mópish** (ಗು.); **Mópishly** (ಕ್ರಿ. ವಿ.); **Mópishness** (ನಾ.)

Móra ಮೋರ (ನಾ.) (ಛಂದಸ್ಸಿನಲ್ಲಿ) ಮಾತ್ರೆ.

Moraíne (F) ಮೊರೇನ್ (ನಾ.) ನೀರ್ಗಲ್ಲ ಪ್ರವಾಹವು ಬೆಟ್ಟದ ಮೇಲಿನಿಂದ ಕೆಳಕ್ಕೆ ತಂದು ಒಟ್ಟಿದ ಮುರುಕಲುಗುಪ್ಪೆ.

Móral ಮಾರಲ್ (ಗು., ನಾ.) ಶೀಲ ಸ್ವಭಾವದ ಅಥವಾ ಮನಃಪ್ರವೃತ್ತಿಯ ವಿಚಾರದ. (ಕಾರ್ಯಗಳು, ಸಂಕಲ್ಪಗಳು, ಶೀಲ ಸ್ವಭಾವ —ಇವಕ್ಕೆ ಸಂಬಂಧಪಟ್ಟಂತೆ) ನ್ಯಾಯ ಅನ್ಯಾಯ, ಒಳ್ಳೆಯದು ಕೆಟ್ಟದ್ದು ಧರ್ಮ ಅಧರ್ಮ —ಇವುಗಳ ವಿವೇಚನೆಯ; ನಡತೆಯ; ನೀತಿಯ; ನೈತಿಕ; ನೀತಿ ತತ್ತ್ವದ (M. sense ನೀತಿ ಸೂಕ್ಷ್ಮ ವಿವೇಚನೆ; ನೀತಿ ಜ್ಞಾನ). (ಸಾಹಿತ್ಯ ಕೃತಿ, ಮೊ. ವಿಷಯದಲ್ಲಿ) ನಡವಳಿಯ ನೀತಿಗೆ ಸಂಬಂಧಿಸಿದ (M. science ನೀತಿ ಶಾಸ್ತ್ರ. M. philosophy ನೀತಿ ತತ್ತ್ವ ಶಾಸ್ತ್ರ. M. law ನೀತಿ ನಿಯಮ). (ಹಕ್ಕು, ಮೊ.) ನೀತಿ ಸಮ್ಮತವಾದ; ನೀತಿ ಶೀಲ (M. victory ಪ್ರತ್ಯಕ್ಷವಾಗಿ ಅಪಜಯವಾಗಿದ್ದರೂ ಜಯವಾಗಿದ್ದರೆ ಹೇಗೊ ಹಾಗೆ ನೀತಿಪರಿಣಾಮಕಾರಿಯಾದ ಫಲತಾಂಶ: ತಾತ್ತ್ವಿಕ ಜಯ. M. courage ಋಜು ಮಾರ್ಗವನ್ನು ಬಿಡಲೊಲ್ಲದೆ ಇತರರ ಅವಹೇಳನ, ತಿರಸ್ಕಾರ, ಮೊ. ನ್ನು ಎದುರಿಸಿ ನಿಲ್ಲುವ ಧೈರ್ಯ: ನೈತಿಕ ಧೈರ್ಯ). ಸದ್ಧರ್ಮದ; ನೀತಿ ನಿಯಮ ಬದ್ಧ; ಒಳ್ಳೆಯ ನಡತೆಯುಳ್ಳ; ನೀತಿವಂತನಾದ; (M. certainty ಅಂತಸ್ಸಾಕ್ಷಿಗೆ ನಿಶ್ಚಯದ ತೋರಿಕೆ). (ನಾ.) [(ಕಟ್ಟು) ಕಥೆ, ಘಟನೆ, ಮೊ. ಗಳ] ನೀತಿ(ಬೋಧೆ) (Draw the m. ಬೋಧಿಸುವ ನೀತಿಯನ್ನು ನಿರೂಪಿಸು, ಗ್ರಹಿಸು). ನೀತಿ ಸೂತ್ರ, ತತ್ತ್ವ (Point a m. ನೀತಿ ತೋರಿಸು, ಅನ್ವಯಿಸು). [The very m. of (ಗ್ರಾಮ್ಯ) (—ದ) ಪಡಿಯಚ್ಚು]. (ಬ. ವ. ದಲ್ಲಿ) ನೀತಿ ನಡವಳಿ (ಮು., ಸ್ತ್ರೀ ಪುರುಷರ ಸಂಬಂಧದ ಶೀಲ). = Morale. **Mórally** (ಕ್ರಿ. ವಿ.); **Morále** ಮೊರಾಲ್ (ನಾ.) (ಮು., ಸೈನ್ಯದ) ಶಿಸ್ತು ಪಾಲನೆ, ಭರವಸೆ —ಇವುಗಳ ಸಂಬಂಧವಾದ ನೈತಿಕ ಸ್ಥಿತಿ; ಧೈರ್ಯ (ಸ್ಥೈರ್ಯ). **Móralism** ಮಾರಲಿಸ್ಮ್ (ನಾ.) ಮತಧರ್ಮದ ಅವಲಂಬನೆಯಿಲ್ಲದ ಪ್ರಾಕೃತಿಕ, ಸ್ವಾಭಾವಿಕ, ನೀತಿ ಪದ್ಧತಿ; ಸದ್ವರ್ತನೆ; ಸದಾಚಾರ. **Móralist** (ನಾ.) ನೀತಿ ಬೋಧಕ; ನೀತಿಜ್ಞ; ನೀತಿವಂತ; (ಮತಧರ್ಮದ ಅವಲಂಬನೆಯಿಲ್ಲದೆ) ಕೇವಲ ನೀತಿಗೆ ಗಮನ ಕೊಡುವವನು; ಕೇವಲ ನೀತಿ ನಿಷ್ಠ. **Moralístic** (ಗು.); **Morálity** ಮೊರ್ಯಾಲಿಟಿ (ನಾ.) ನೀತಿ ಶಾಸ್ತ್ರ; ಧರ್ಮ ಶಾಸ್ತ್ರ; (ಬ. ವ. ದಲ್ಲಿ) ನೀತಿ ನಿಯಮಗಳು, ತತ್ತ್ವಗಳು; (ಒಂದು ಗೊತ್ತಾದ) ನೀತಿ ಪದ್ಧತಿ, ವರ್ತನೆ (Commercial m. ವ್ಯಾಪಾರ ನೀತಿ); (ಸಾ., ಒಳ್ಳೆಯ) ನಡತೆ; ಧರ್ಮೋಪದೇಶ ಮಾಡುವುದು; (ಚರಿತ್ರೆ) (೧೬ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಬಳಕೆಯಲ್ಲಿದ್ದ) ನೀತಿ ಬೋಧಕ ನಾಟಕ. **Móralize** ಮಾರ— (ಕ್ರಿ.) (ಯಾವುದಾದರೂ ವಿಷಯದಮೇಲೆ) ನೀತಿ ವಿಚಾರ ಮಾಡು ಅಥವಾ ನೀತ್ಯುಪದೇಶ ಮಾಡು; ನೀತಿ ದೃಷ್ಟಿಯಿಂದ ವ್ಯಾಖ್ಯಾನ ಮಾಡು; ನೀತಿಯನ್ನು ನಿರ್ದೇಶಿಸು; (—ರ) ನೀತಿಯನ್ನು ತಿದ್ದು. **Moralizátion** (ನಾ.)

Morále. Moral ನೋಡಿ.

Moráss ಮೊರ್ಯಾಸ್ (ನಾ.) ಜವುಗು ಪ್ರದೇಶ; ಜಿದಿ ನೆಲ; ಉಸುಬು ನೆಲ; ಹೂಳು.

Moratórium ಮಾರಟೋರಿಯಂ (ನಾ.) ಸಾಲ ತೀರಿಸಬೇಕಾದವರು ತಮ್ಮ ಸಾಲದ ಪಾವತಿಯನ್ನು ಮುಂದಕ್ಕೆ ತಳ್ಳಲು ಕಾನೂನಿನ ಮೇರೆಗೆ ಕೊಟ್ಟ ಅಧಿಕಾರ.

Mórbid ಮಾರ್ಬಿಡ್ (ಗು.) (ಮನಸ್ಸು, ಭಾವನೆ, ಮೊ.) ಅನಾರೋಗ್ಯದ; ಜಾಡ್ಯದ; ವಿಕಾರವಾದ; ಅಸ್ವಸ್ಥ ಭಾವನೆಯಿಂದ ಕೂಡಿದ. ಅತಿ ಹಚ್ಚಿಕೊಂಡ; ಗೀಳು ಹಿಡಿದ. (ವೈ. ಶಾ.) ರೋಗ ಸ್ವಭಾವದ; ವ್ಯಾಧಿ ಲಕ್ಷಣದ; ರೋಗ ಸೂಚಕವಾದ. M. anatomy ರೋಗ ಹಿಡಿದಿರುವ ಅಂಗಗಳ ಸವಿಸ್ತರ ಪರೀಕ್ಷಾ ಶಾಸ್ತ್ರ. **Mórbidly** (ಕ್ರಿ. ವಿ.);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mórbidness (ನಾ.); **Morbídity** (ನಾ.) (ಗುಣವಾಚಕಾರ್ಥ ಗಳಲ್ಲಿ). (ಒಂದು ಪ್ರಾಂತದಲ್ಲಿ) ರೋಗ ವ್ಯಾಪನೆ. **Morbífic** (ಗು.) ವ್ಯಾಧಿಕಾರಕ ; ರೋಗ ಜನಕ.

Morbífic. Morbid ನೋಡಿ.

Mórdant ಮಾರ್ಡಂಟ್ (ಗು., ನಾ.) (ವ್ಯಂಗ್ಯೋಕ್ತಿ, ವೊ.) ಚುಚ್ಚುವ, ಕಟುವಾದ ; ಮರ್ಮಭೇದಕ ; ಖಾರವಾದ ; ವೇಧಕ [**Mordácious** —ಡೇ— (ಗು.) ; **Mordácity** —ಡ್ಯಾ— (ನಾ.) ; **Mórdancy** —ಡನ್ಸಿ (ನಾ.)]. (ಆಮ್ಲದ ವಿಷಯದಲ್ಲಿ) ತಿಂದು ಹಾಕುವ, ಶುಚಿ ಮಾಡುವ (ಆಮ್ಲ). ಬಣ್ಣ ಕಚ್ಚಿಸುವ, ಚಿನ್ನದ ರೇಕು ಕಚ್ಚಿಸುವ, (ಪದಾರ್ಥ) : ಬಣ್ಣಗಚ್ಚು.

More ಮೋರ್ (ಗು., ಕ್ರಿ. ವಿ.) (ಪರಿಮಾಣ, ವೊತ್ತ, ಮಟ್ಟ, ವೊ. ಗಳಲ್ಲಿ) ಹೆಚ್ಚಿನ; ಹೆಚ್ಚಾದ; ಹೆಚ್ಚಾಗಿ ; ಅಧಿಕ ; ಇನ್ನೂ (ಸಂಸ್ಕೃತದ ತರ ಪ್ರತ್ಯಯಾರ್ಥ : ಉದಾ., More beautiful ಸುಂದರತರ) ; I hope to see m. of you ನಿನ್ನನ್ನು ಹೆಚ್ಚಾಗಿ ನೋಡಲು, ನಿನ್ನ ವಿಷಯ ಹೆಚ್ಚಾಗಿ ತಿಳಿದುಕೊಳ್ಳಲು, ಬಯಸುತ್ತೇನೆ. What is m. ಅದಕ್ಕೂ ಮುಖ್ಯವಾಗಿ, ಹೆಚ್ಚಾಗಿ. M. absurd(ly). M. & m. ಹೆಚ್ಚು ಹೆಚ್ಚಾಗಿ. M. or less ಹೆಚ್ಚು ಕಡಮೆ. The m. (The ನೋಡಿ). Be no m. ತೀರಿಹೋಗು. Once m. ಮತ್ತೊಂದು ಬಾರಿ. Twice m. ಮತ್ತೆ ಎರಡು ಬಾರಿ. Never m. ಇನ್ನು ಎಂದೆಂದಿಗೂ ಇಲ್ಲ. Neither m. nor less than absurd ಶುದ್ಧ ಅವಿವೇಕ.

Moreóver ಮೋರ್ಓವರ್ (ಕ್ರಿ. ವಿ.) (ಮುಂದೆ ಇನ್ನೂ ಹೇಳುವಲ್ಲಿ) (ಅದೂ) ಅಲ್ಲದೆ ; ಇನ್ನೂ ; ಮೇಲಾಗಿ.

Morganátic ಮಾರ್ಗನ್ಯಾಟಿಕ್ (ಗು.) M. marriage ಶ್ರೀಮಂತನಿಗೂ (ಅವನ ಪದವಿಗೆ ತಕ್ಕ ವಂಶದವಳಲ್ಲದ) ಕೆಳ ಅಂತಸ್ತಿನ ಹೆಂಗಸಿಗೂ ಆಗುವ ಮದುವೆ : ಎಡಗೈ ಮದುವೆ (ಹೆಂಡತಿ ಕೆಳ ಅಂತಸ್ತಿನಲ್ಲಿಯೇ ಇರುವುದಲ್ಲದೆ ಹುಟ್ಟಿದ ಮಕ್ಕಳಿಗೆ ತಂದೆಯ ಪದವಿಗಾಗಲಿ ಆಸ್ತಿಗಾಗಲಿ ಹಕ್ಕಿರುವುದಿಲ್ಲ). M. wife ಎಡಗೈ ಮದುವೆಯ ಹೆಂಡತಿ. **Morganátically** (ಕ್ರಿ. ವಿ.)

Morgue[1] (F) ಮಾರ್ಗ್ (ನಾ.) (ಮು., ಹಿಂದೆ ಪ್ಯಾರಿಸ್ ಪಟ್ಟಣದಲ್ಲಿ) ಯಾರ ಹೆಣವೆಂದು ತಿಳಿಯದ ಸಂದರ್ಭದಲ್ಲಿ ಅಂಥ ಹೆಣಗಳನ್ನು ಗುರುತಿಸುವುದಕ್ಕಾಗಿ ಪ್ರದರ್ಶಿಸುತ್ತಿದ್ದ ಕಟ್ಟಡ : ಹೆಣದ ಮನೆ.

Morgue[2] (F) ಮಾರ್ಗ್ (ನಾ.) (ಮು., ಇಂಗ್ಲಿಷರ ಲಕ್ಷಣವಾದ) ಗರ್ವದ, ಪ್ರತಿಷ್ಠೆಯ, ಬಿಗುಮಾನದ, —ನಡೆ, ಚರ್ಯೆ, ವರ್ತನೆ (=M. anglaise)

Móribund ಮಾರಿಬಂಡ್ (ಗು.) ಸಾಯುತ್ತಿರುವ ; ಮರಣಾವಸ್ಥೆಯಲ್ಲಿರುವ; ಮೃತಪ್ರಾಯ; (ರೂಪ.) ಪ್ರಚಾರದಿಂದ ತಪ್ಪಿಹೋಗುತ್ತಿರುವ.

Morísco ಮೊರಿಸ್ಕೊ (ಗು., ನಾ.) ಮೂರ್ ಜನರ(ದಂಥ). (ಸ್ಪೈನಿನ) ಮೂರ್ ಜನ ; =Morris dance (Morris ನೋಡಿ)

Mórmon ಮಾರ್ಮನ್ (ನಾ.) (ಕಾಲ್ಪನಿಕ ಗ್ರಂಥಕರ್ತನಾದ Mormon ಎಂಬುವನ Book of M. ಎಂಬ ಗ್ರಂಥದ ಆಧಾರದಮೇಲೆ ನ್ಯೂಯಾರ್ಕಿನಲ್ಲಿ ೧೮೩೦ರಲ್ಲಿ Joseph Smith ಎಂಬಾತನು ಸ್ಥಾಪಿಸಿದ) ಒಂದು ಧರ್ಮ ಪಂಥದ ಅನುಯಾಯಿ : ಮಾರ್ಮನ್ ಪಂಥದವನು (ಬಹು ಪತ್ನೀತ್ವವು ಈ ಪಂಥದ ಮುಖ್ಯ ಲಕ್ಷಣ); ಬಹು ಪತ್ನೀತ್ವ ಚಾಪಲ್ಯವುಳ್ಳವನು. Book of M. ಈ ಪಂಥದ ಮತಗ್ರಂಥ. **Mórmonism** (ನಾ.)

Morn ಮಾರ್ನ್ (ನಾ.) (ಕಾವ್ಯ) = Morning.

Mórning ಮಾರ್ನಿಂಗ್ (ನಾ.) ಬೆಳಗ್ಗೆ ; ಪ್ರಾತಃಕಾಲ ; ಹೊತ್ತಾರೆ ; ಪೊಳ್ತರೆ (ಗ್ರಾಂ.) (ಮಧ್ಯಾಹ್ನದ ವರೆಗಿನ ಅಥವಾ ಮಧ್ಯಾಹ್ನದ ಊಟದ ವರೆಗಿನ ಹೊತ್ತು) [Good m. (ಪರಿಚಿತರು, ವೊ. ರನ್ನು ಪ್ರಾತಃಕಾಲದಲ್ಲಿ ನೋಡಿದಾಗ ವಂದಿಸುವ ಒಕ್ಕಣೆ) ಸುಪ್ರಭಾತ !]. (ಕಾವ್ಯ) ಮುಂಜಾನೆ ; ಅರುಣೋದಯ ; ಉಷಃ ಕಾಲ. (ಉಡುಪಿನ ವಿಷಯದಲ್ಲಿ ವಿಶೇಷಣವಾಗಿ) ಬೆಳಗ್ಗೆ ತೊಟ್ಟುಕೊಳ್ಳುವ (M. coat). M. call ಮಧ್ಯಾಹ್ನಾತ್ಪರ ಮಾಡಿದ ಭೇಟಿ. M. draught ಬೆಳಗಿನ ಊಟಕ್ಕೆ ವೊದಲು ಕುಡಿಯುವ ಮದ್ಯ. M. gift ನಿಷೇಕ ಪ್ರಸ್ತವಾದ ಮಾರನೆಯ ಬೆಳಗ್ಗೆ ಗಂಡನು ಹೆಂಡತಿಗೆ ಕೊಡುವ ಕೊಡುಗೆ, ಶುಲ್ಕ (ಸಾ., ಎಡಗೈ ಮದುವೆಯಲ್ಲಿ). M. performance ಇಳಿಹೊತ್ತಿನ ನಾಟಕ ಅಥವಾ ಸಂಗೀತ ಕಚೇರಿ. M. prayer (ಆ್ಯಂಗ್ಲಿಕನ್ನರ) ಬೆಳಗಿನ ಪ್ರಾರ್ಥನೆ. M.-room ಬೆಳಗಿನ ಹೊತ್ತು ಕುಳಿತುಕೊಳ್ಳುವ ಕೊಠಡಿ. M. sickness ಹೆಂಗಸರಿಗೆ ಗರ್ಭ ಧರಿಸಿದ ಆರಂಭದಲ್ಲಿ ಬೆಳಗಿನ ಹೊತ್ತು ಉಂಟಾಗುವ ಓಕರಿಕೆ ಮತ್ತು ವಾಂತಿ. M. star (ಸೂರ್ಯೋದಯಕ್ಕೆ ವೊದಲು ಪೂರ್ವ ದಿಕ್ಕಿನಲ್ಲಿ ಕಾಣುವ) ಶುಕ್ರ, ಬೆಳ್ಳಿ (ಅಥವಾ ಇತರ ಗ್ರಹ ಅಥವಾ ಪ್ರಕಾಶವಾದ ನಕ್ಷತ್ರ). M. watch (ನಾವೆ) ಬೆಳಗ್ಗೆ ೪ರಿಂದ ೮ರ ವರೆಗಿನ ಸರತಿ ಕಾವಲು.

Morócco ಮೊರಾಕೊ (ನಾ.) (ವೊದಲು ವೊರಾಕೋವಿನಲ್ಲಿ, ಈಗ ಯೂರೋಪಿನಲ್ಲಿ ಸಹ, ತಯಾರಾಗುವ) ಹದ ಮಾಡಿದ ಆಡಿನ ಚರ್ಮ : 'ವೊರಾಕೊ'. French m. ಸಣ್ಣ ಕಣಗಳುಳ್ಳ ಇದೇ ಜಾತಿಯ ಕೀಳು ತರದ ಚರ್ಮ. Levant m. ದೊಡ್ಡ ಕಣಗಳ ಮೇಲು ತರದ ಚರ್ಮ.

Móron ಮೋರಾನ್ (ನಾ.) (ಏಳನೆಯ ವಯಸ್ಸಿನ ಮಗುವಿಗೆ ಸಹಜವಾಗಿರುವ ಬುದ್ಧಿಸ್ಥಿತಿಗೆ ಮೀರದೆ) ಬುದ್ಧಿಯ ಬೆಳವಣಿಗೆ ನಿಂತುಹೋದ ಪ್ರಾಪ್ತ ವಯಸ್ಕ ; ವಿವೇಕ ಮಟ್ಟಾದವನು ; ಮಂದ ಬುದ್ಧಿ.

Moróse ಮೊರೋಸ್ (ಗು.) ಚಿಂತಾಕ್ರಾಂತ ; ವ್ಯಾಕುಲತ ; ವಿಷಣ್ಣ ; ಉತ್ಸಾಹರಹಿತ ; ಜನರೊಂದಿಗೆ ಬೆರೆಯದ. **Morósely** (ಕ್ರಿ. ವಿ.) ; **Moróseness** (ನಾ.)

Mórpheus ಮಾರ್ಫ್ಯೂಸ್, —ಫಿಯಸ್ (ನಾ.) ಸ್ವಪ್ನದೇವತೆ ; ನಿದ್ರಾದೇವತೆ. In the arms of M. ನಿದ್ದೆಹೋಗುತ್ತ : ಸುಖ ನಿದ್ರೆಯಲ್ಲಿ.

Mórphia ಮಾರ್ಫಿಯ, **-phine** — ಫಿ(ೕ)ನ್ (ನಾ.) ಅಫೀಮಿನ ಸಸ್ಯ ಕ್ಷಾರಾಂಶವಾದ ನಿದ್ರೌಷಧ (ಇದನ್ನು ನೋವು ತಿಳಿಯದಂತೆ ಮಾಡಲು ಉಪಯೋಗಿಸುತ್ತಾರೆ) : 'ಮಾರ್ಫಿಯ' ; 'ಮಾರ್ಫಿನ್'. **Mórphinism** (ನಾ.) ಮಾರ್ಫಿಯವು ದೇಹದಮೇಲೆ ಮಾಡುವ ಪರಿಣಾಮ ; (ನೋವು ಅರಿವಿಗೆ ಬರದಂತೆ ಮಾಡಲು) ಮಾರ್ಫಿಯವನ್ನು ರಕ್ತದೊಳಕ್ಕೆ ಚುಚ್ಚಿ ಸೇರಿಸುವುದು ; ಮಾರ್ಫಿನ್ ಪ್ರಭಾವ, ಪ್ರಯೋಗ.

Morphólogy ಮಾರ್ಫಾಲಜಿ (ನಾ.) (ಜೀ. ವಿ.) (ಪ್ರಾಣಿಗಳ ಮತ್ತು ಸಸ್ಯಗಳ ರೂಪು, ಆಕಾರ —ಇವನ್ನು ವಿವರಿಸುವ) ಆಕೃತಿ ರಚನ ಶಾಸ್ತ್ರ. (ಭಾ. ಶಾ.) ಶಬ್ದ ರೂಪ ರಚನ ಶಾಸ್ತ್ರ. **Morphológical** —ಫೊಲಾ— (ಗು.) ; **Morphológically** (ಕ್ರಿ. ವಿ.) ; **Morphólogist** —ಫಾಲೊ— (ನಾ.)

Mórris ಮಾರಿಸ್ (ಗು., ನಾ.) (ಹಿಂದೆ ಇಂಗ್ಲೆಂಡಿನಲ್ಲಿ ಅಸಾಮಾನ್ಯ ಚೋರತಂಡದ ಅಧಿಪತಿಯಾಗಿದ್ದ Robin Hood ಎಂಬುವನ ಕಥೆಗಳ ಪಾತ್ರಗಳಂತೆ ವಿಚಿತ್ರ ವೇಷ ಹಾಕಿಕೊಂಡು ವಿಕಾರವಾಗಿ ಕುಣಿಯುವ) ಒಂದು ತೆರದ ವಿಕಟ ನೃತ್ಯ (=M. dance)

Mórrow ಮಾರೋ (ನಾ.) (ಸಾಹಿತ್ಯ ಪ್ರ.) The m. ಮರು ದಿನ ; ಮಾರನೆಯ ದಿನ. On the m. of (a long war, etc.) (ರೂಪ.) (ದೀರ್ಘ ಯುದ್ಧ, ವೊ. ವು) ಆದ ಒಡನೆಯೇ.

Morse[1] ಮಾರ್ಸ್ (ಗು.) (ಒಂದು ಸ್ಥಳದಿಂದ ಕಳುಹಿಸಿದ ಸಮಾಚಾರವನ್ನು ದೂರದಲ್ಲಿರುವ ಮತ್ತೊಂದು ಸ್ಥಳದಲ್ಲಿ, ಚುಕ್ಕೆ ಮತ್ತು ಗೆರೆಗಳಿಂದ ಬರೆಯುವ) Morse ಎಂಬಾತನು ಕಲ್ಪಿಸಿದ ದೂರಲೇಖನ ಪದ್ಧತಿಯ. M. alphabet, code ಮಾರ್ಸ್ ವರ್ಣಮಾಲೆ, ಸಂಕೇತ (ಭಾಷೆ) (ಚುಕ್ಕೆಗಳೂ ಗೆರೆಗಳೂ, ಬೆಳಕಿನ ಸ್ವಲ್ಪ ಮತ್ತು ಹೆಚ್ಚಿನ ಕಾಲದ ಹೊಳಪು, ಎರಡು ಬಾವುಟಗಳು—ಇವುಗಳ ಸಂಯೋಜನೆಯಿಂದ ಅಕ್ಷರಗಳನ್ನು ಸಂಕೇತಿಸುವುದು)

Morse[2] ಮಾರ್ಸ್ (ನಾ.) ಪಾದ್ರಿಯ ನಿಲುವಂಗಿಯ (ಸಾ., ರತ್ನ ಖಚಿತವಾದ) ಬಂಧನಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mórsel ಮಾರ್ಸೆಲ್ (ನಾ.) (ಆಹಾರ, ಮೊ. ಗಳ) ತುತ್ತು, ತುಂಡು, ತುಣುಕು ; (ಒಡೆದ) ಚೂರು.

Mort ಮಾರ್ಟ್ (ನಾ.) ಬೇಟೆಯಲ್ಲಿ ಜಿಂಕೆ ಸತ್ತಾಗ ಊದುವ ಕೊಂಬು.

Mórtal ಮಾರ್ಟಲ್ (ಗು., ನಾ.) ಸಾಯುವ ; ಮರ್ತ್ಯ ; ಸಾಯಿಸುವ ; ಕೊಲ್ಲುವ ; ಪ್ರಾಣ ನಾಶಕ ; ಮಾರಕ (*To* ಉಪ. ದೊಡನೆ) (ರೂಪ. ಸಹ) ; (ಕದನ) ಮರಣಾಂತ ; (ಶತ್ರು) ಬದ್ಧ ವೈರದ. (ನೋವು, ಭಯ, ಮೊ.) ಕೊಲ್ಲುವಂಥ ; ಮಾರಕ ; ಘಾತುಕ. (ಪಾಪ) ಆತ್ಮ ನಾಶಕ ; ಘೋರ ; ಕೊಲ್ಲುವಂಥ ; ಮರಣದ (M. agony ಮರಣ ಯಾತನೆ). (ಅಸಂ.) ಅತ್ಯಂತ ; ವಿಪರೀತ (In a m. hurry). (ಅಸಂ.) ದೀರ್ಘವೂ ಬೇಸರವೂ ಆದ (Two m. hours). (ನಾ.) ಮನುಷ್ಯ ; ಮರ್ತ್ಯ [A thirsty m. (ಹಾಸ್ಯ ಪ್ರ.) ಬಾಯಾರಿದ ಮನುಷ್ಯ] . **Mórtally** (ಕ್ರಿ. ವಿ.); **Mortálity** ಮಾಟ್ಯಾರ್ಲಟಿ (ನಾ.) ಮರ್ತ್ಯ ಸ್ಥಿತಿ ; ಮರ್ತ್ಯತೆ ; (ಸಾ., ಯುದ್ಧದಿಂದ, ಜಾಡ್ಯದಿಂದ, ಆದ) ಅಪಾರ ಪ್ರಾಣನಷ್ಟ ; (ಒಂದು ನಿರ್ದಿಷ್ಟ ಕಾಲದಲ್ಲಿ, ಒಂದು ಗೊತ್ತಾದ ಪ್ರಾಂತದಲ್ಲಿ ಅಥವಾ ಒಂದು ರೋಗ ಕಾರಣದಿಂದ, ಆದ) ಮರಣ ಸಂಖ್ಯೆ ; ಸಾವಿನ ದರ. Bills of m. ಒಂದು ಪ್ರಾಂತದಲ್ಲಾದ ಸಾವುಗಳ ನಿಯತ ಕಾಲಿಕ ಅಧಿಕಾರ ಪ್ರಕಟನೆ : ಸಾವು ಪಟ್ಟಿ. M tables ಆಯಾ ವಯಸ್ಸುಗಳಲ್ಲಿ ಆಯುಃ ಪ್ರಮಾಣವನ್ನು ಗುರುತುಮಾಡಿರುವ ಪಟ್ಟಿಗಳು.

Mórtar ಮಾರ್ಟರ್ (ನಾ., ಕ್ರಿ. ಸಕ.) (ಕಲ್ಲು, ಕಬ್ಬಿಣ, ಮೊ. ಗಟ್ಟಿ ಪದಾರ್ಥದಿಂದ ಮಾಡಿ, ಒನಕೆ, ಹಾರೆ, ಗುಂಡು, ಮೊ. ಗಳಿಂದ ಪದಾರ್ಥ ಗಳನ್ನು ಕುಟ್ಟುವ) ಒರಳು, ಕಲಬತ್ತು. ಸಿಡಿಗುಂಡುಗಳನ್ನು ಉಚ್ಚ ಕೋನದಲ್ಲಿ ಹಾರಿಸುವ ಸಣ್ಣ ಫಿರಂಗಿ. ಜ್ವಾಲಾ ಪ್ರದರ್ಶನದಲ್ಲಿ ಬಾಣ ಬಿರುಸುಗಳನ್ನು ಹೊತ್ತಿಸಿ ಎಸೆಯುವ ಸಲಕರಣೆ. (ಸುಣ್ಣ, ಮರಳು, ನೀರು, ಬೆರಸಿ ಅರೆದ) ಗಾರೆ. [**M.-board** ಗಾರೆಯಿಟ್ಟು ಎತ್ತಿ ಹಿಡಿದುಕೊಳ್ಳಲು ಉಪಯೋಗಿಸುವ, ತಳದಲ್ಲಿ ಹಿಡಿಯುಳ್ಳ, ಚಚ್ಚೌಕದ ಹಲಗೆ. (ರೂಢಿಯಲ್ಲಿ) ಪ್ರೌಢ ವಿದ್ಯಾಶಾಲೆಯವರ ಚೌಕನೆಯ ಟೋಪಿ. **Mórtarless** (ಗು.) ; **Mórtary** (ಗು.) ಗಾರೆಯ(ಂಥ) ; ಗಾರೆ ತುಂಬಿದ] . (ಕ್ರಿ.) (ಗೋಡೆ, ಮೊ. ಕ್ಕೆ) ಗಾರೆ ಹಾಕು, ಮಾಡು ; ಗಾರೆ ಯಿಂದ ಕೂಡಿಸು.

Mórtgage ಮಾರ್ಗೇಜ್ (ನಾ., ಕ್ರಿ. ಸಕ.) (ಸಾಲ ಪಡೆಯುವವನು ತನ್ನ ಆಸ್ತಿಯನ್ನು ಸಾಲ ಕೊಟ್ಟವನಿಗೆ, ಸಾಲಕ್ಕೆ ಆಧಾರವಾಗಿ, ಕೊಡುವ) ಆಧಾರ, ಈಡು, ಅಡಮಾನ, ಭೋಗ್ಯ (—ಪತ್ರ). (ಕ್ರಿ.) —ಮಾಡು. **Mortgageé** —ಗೆಜೀ (ನಾ.) — ಮಾಡಿಕೊಂಡವನು; ಆಧಿಗ್ರಾಹಕ. **Mórtgager, -ór** — ಗೆಜರ್ (ನಾ.) — ಮಾಡಿಕೊಟ್ಟವನು ; ಆಧಾತೃ.

Mortícian ಮಾರ್ಟಿಷನ್ (ನಾ.) (ಅಮೆ. ಸಂ.) ಶವ ಸಂಸ್ಕಾರದ ಏರ್ಪಾಟು ಮಾಡುವವನು ; ಶವ ಸಂಸ್ಕಾರ ವ್ಯವಸ್ಥಾಪಕ.

Mórtify ಮಾರ್ಟಿಫೈ (ಕ್ರಿ.) (ದೇಹ, ರಾಗ ದ್ವೇಷಗಳು, ಮೊ. ನ್ನು) ದಮನ ಮಾಡು ; ವಿರಕ್ತಿಯಿಂದ ನಿಗ್ರಹಿಸು ; ದೇಹ ದಂಡನೆ ಮಾಡು. (ಒಬ್ಬನನ್ನು) ತೇಜೋವಧೆ ಮಾಡು, ಹೀನಯಿಸು, ಅಪಮಾನಕ್ಕೊಳ ಗಾಗಿಸು ; ಗರ್ವ ಮುರಿ ; (ಒಬ್ಬನ) ಮನಸ್ಸು ನೋಯಿಸು. (ದೇಹ ಭಾಗ, ಎಲುಬು, ಮೊ. ವು) ಕೊಳೆತು ಸತ್ತುಹೋಗು. **Mórtifying** (ಗು.) ; **Mortificátion** (ನಾ.)

Mórtise, -ice ಮಾರ್ಟಿಸ್ (ನಾ., ಕ್ರಿ. ಸಕ.) [ಹಲಗೆ, ಮೊ. ಗಳ ಕೂರು (ಕೂಲು), ಹಲ್ಲು, ಬೆಣೆ, ಮೊ. ನ್ನು ಕೂರಿಸುವುದಕ್ಕಾಗಿ ಒಂದು ಚೌಕಟ್ಟನಲ್ಲಿ ಮಾಡಿರುವ] ವೆಜ್ಜ, ಉಗಿಲು, ಹುಗುಲು ; ಕೂಲು ವೆಜ್ಜ (M. chisel ಕೂಲುಳಿ ; ವೆಜ್ಜದ ಉಳಿ). (ಕ್ರಿ.) ಕೂಲು ಕೂರಿಸಿ ಭದ್ರವಾಗಿ ಜೋಡಿಸು (*Together, to, into* ಉಪ. ದೊಡನೆ)

Mórtmain ಮಾರ್ಟ್‌ಮೆಯ್‌ನ್ (ನಾ.) (ಕ್ರೈಸ್ತ ಮಠಸಂಸ್ಥೆಯ ಅಥವಾ ಇತರ ಸಂಸ್ಥೆಯ ಹಿಡುವಳಿಯಲ್ಲಿರುವ) ಪರಭಾರೆ ಮಾಡಲಾಗದ ಜಮೀನಿನ, ಮಾನ್ಯದ, —ಸ್ಥಿತಿ ; ಮೃತನ ಹಿಡಿತ. In m. (ರೂಪ.) ಮೃತನ ಇಷ್ಟಶಾಸನಕ್ಕೊಳಪಟ್ಟು ; ಮೃತನ ಹಿಡಿತದಲ್ಲಿ.

Mórtuary ಮಾಚ್ಯುರ್ಅರಿ (ಗು., ನಾ.) ಸಾವಿನ ; ಮರಣದ ; ಶವ ಸ್ಥಾಪನೆಯ. (ನಾ.) ಹೆಣಗಳನ್ನು ಸ್ವಲ್ಪಕಾಲ ಇಟ್ಟಿರುವ ಕಟ್ಟಡ, ಮನೆ.

Mosáic[1] ಮೊಸ್ಸೇಇಕ್ [ಗು., ನಾ., ಕ್ರಿ. ಸಕ. (ಭೂತ., ಭೂ. ಕೃ. -cked ; ವರ್ತಮಾನ ಕೃದಂತ -cking)] ನಾನಾ ಬಣ್ಣಗಳ ಸಣ್ಣ ಸಣ್ಣ ಗಾಜು ಚೂರು, ಕಲ್ಲು ಚೂರು, ಮೊ. ನ್ನು ಜೋಡಿಸಿ ಮಾಡಿದ ಚಿತ್ರಕೆಲಸ(ದ) ; ಶಬಲ ಖಚಿತ ಚಿತ್ರ (ಕಲೆ) (ರೂಪ. ಸಹ : ವೈವಿಧ್ಯ ದಿಂದ ಕೂಡಿರುವ ಒಟ್ಟುರೂಪಿನ ವಿಷಯದಲ್ಲಿ). [M. disease (ಮು., ಹೊಗೆಸೊಪ್ಪು, ಮುಸುಕಿನ ಜೋಳ ಮತ್ತು ಕಬ್ಬು—ಇವುಗಳಿಗೆ ತಗುಲುವ) ಒಂದು ತೆರದ ಮಚ್ಚೆಯ (ಸಸ್ಯ) ರೋಗ. M. woolwork (ರತ್ನಗಂಬಳಿ, ಊರ್ಣದ ಹಚ್ಚಡ, ಮೊ. ಗಳಲ್ಲಿ) ಶಬಲ ಚಿತ್ರದ ನೆಯ್ಗೆ. M. gold (ಅಗ್ಗದ ಒಡವೆ, ಮೊ. ಗಳಲ್ಲಿ ಉಪಯೋಗಿಸುವ) ತವರದ ದ್ವಿಸಲ್ಫೈಡು ಅಥವಾ ತಾಮ್ರದ ಮತ್ತು ಸತುವಿನ ಮಿಶ್ರ ಲೋಹ : ಸುನೇರಿ] . (ಕ್ರಿ.) ಶಬಲ ಖಚಿತ ಚಿತ್ರದಿಂದ ಅಲಂಕರಿಸು ; — ದಂತೆ ಜೋಡಿಸು. **Mosáicist** —ಸಿಸ್ಟ್ (ನಾ.)

Mosáic[2] ಮೊಸ್ಸೇಇಕ್ (ಗು.) ಮೋಸೆಸ್ಸಿನ (ಮು., M. Law)

Móses ಮೋಸ್ಸಿಸ್ (ನಾ.) ಲೇವಾದೇವಿ ಮಾಡುವ ಯೆಹೂದ್ಯನ ಅಡ್ಡ ಹೆಸರು)

Móslem ಮಾಸ್(ಸ್)ಲೆಮ್, **Múslim** ಮಸ್(ಸ್)ಲಿಮ್ (ಗು., ನಾ. ; ಬ. ವ. -ms, -min) ಮಹಮ್ಮದೀಯ ; ಮುಸಲ್ಮಾನ ; ಮುಸ್ಲಿಮ. **Móslemism** (ನಾ.)

Mósque ಮಾಸ್ಕ್ (ನಾ.) ಮುಸ್ಲಿಮರ ಆರಾಧನ ಮಂದಿರ : ಮಸೀದಿ.

Mosquíto ಮಸ್ಕೀಟೊ (ನಾ.) ಸೊಳ್ಳೆ (ಹೆಣ್ಣು ಸೊಳ್ಳೆಯು ಪ್ರಾಣಿಗಳ ಚರ್ಮವನ್ನು ಉದ್ದವಾದ ತನ್ನ ಸೊಂಡಲಿನಿಂದ ಚುಚ್ಚಿ ರಕ್ತ ಹೀರುತ್ತದೆ). M.-net, -curtain (ಸೊಳ್ಳೆ ಬಾಧಿಸದಂತೆ ಹಾಕುವ) ಸೊಳ್ಳೆಯ ಪರದೆ. M.-craft (ನೌಕೆ) ಅವಸರದ ಓಡಾಟಕ್ಕೆ ತಕ್ಕ ಹಗುರವಾದ ಸಣ್ಣ ಹಡಗು.

Moss ಮಾಸ್ (ನಾ., ಕ್ರಿ. ಸಕ.) ತೇವದ ಹೀರುನೆಲ ; ಕೊಳೆತ ಸಸ್ಯ ಪದಾರ್ಥ ಸೇರಿರುವ ಜೌಗು ಪ್ರದೇಶ. (ಜೌಗಿನಲ್ಲಿಯೂ ನೆಲ, ಗೋಡೆ, ಕಲ್ಲು, ಮರ, ಮೊ. ಗಳ ಮೇಲೂ ಬೆಳೆಯುವ) ಪಾಚಿ ; ಹಾವಸೆ. [Rolling stone gathers no m. (Gather ನೋಡಿ). M. grown ಪಾಚಿ ಬೆಳೆದ. M.-rose (ಪುಷ್ಪಪಾತ್ರದ ಮೇಲೂ ಕಾವಿನ ಮೇಲೂ ಪಾಚಿಯಂಥ ರಚನೆಯುಳ್ಳ) ಒಂದು ಬಗೆಯ ಗುಲಾಬಿ] . (ಕ್ರಿ.) ಪಾಚಿ ಬೆಳೆದು ಮುಚ್ಚು. **Móssiness** (ನಾ.) ; **Móssy** (ಗು.)

Most ಮೋಸ್ಟ್ (ಗು., ಕ್ರಿ. ವಿ.) ಅತ್ಯಂತ ಹೆಚ್ಚಿನ ; ಅತ್ಯಧಿಕ ಮೊತ್ತದ ; ಹೆಚ್ಚು ಭಾಗದ (ಸಂಸ್ಕೃತದ ತಮ ಪ್ರತ್ಯಯಾರ್ಥಕ : M. beautiful ಸುಂದರ ತಮ) [You have made m. mistakes. See who can make m. noise. (ಅರ್ಥ ನಾಮವಾಚಕವಾಗಿ ಪ್ರ.) This is the m. I can do. Make the m. of it ಅದರಿಂದ ಆದಷ್ಟು ಹೆಚ್ಚು ಪ್ರಯೋಜನ ಪಡೆ ; ಅದಕ್ಕೆ ಅತ್ಯಂತ ಪ್ರಾಶಸ್ತ್ಯ ಕೊಡು ; ಅತ್ಯಂತ ಉತ್ತಮವಾದುದೆಂದಾಗಲಿ ಅತ್ಯಂತ ನಿಕೃಷ್ಟವಾದುದೆಂದಾಗಲಿ ನಿರೂಪಿಸು] . ಅಧಿಕ ಸಂಖ್ಯೆ(ಯವರು) [M. people think so. (ಅರ್ಥ ನಾಮವಾಚಕವಾಗಿ ಪ್ರ.) M. of them are broken. For the m. part ಮುಖ್ಯವಾಗಿ ; ಸಾಮಾನ್ಯವಾಗಿ ; ಪ್ರಾಯಶಃ] . (ಕ್ರಿ. ವಿ.) ಬಹುಮಟ್ಟಿಗೆ ; ಅತ್ಯಧಿಕವಾಗಿ [What m. annoys me. M. ludicrous(ly), M. certain(ly). Ten at m. ಅತಿ ಹೆಚ್ಚೆಂದರೆ ಹತ್ತು ; ಹತ್ತಕ್ಕಿಂತ ಹೆಚ್ಚಿಲ್ಲ. This is at m. a makeshift ಬಹು ಮಟ್ಟಿಗೆ ಇದು ತಾತ್ಕಾಲಿಕವಾದ, ಹಂಗಾಮಿಯ, ಏರ್ಪಾಡು] . **Móstly** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

-most —ಮೋ(ಮ)ಸ್ಟ್ (ಉ. ಪ್ರ.) (ಗುಣವಾಚಕದ ತಮ ರೂಪದ ಪ್ರತ್ಯಯ) —ತಮ (ಉಪ. ದ ಅಥವಾ ನಿರ್ದೇಶಕ ಗುಣವಾಚಕದ ಮೂಲ ಪದದಮೇರೆ ಹತ್ತುವ ಪ್ರತ್ಯಯ; ನಿಜವಾದ ಗುಣವಾಚಕಗಳಮೇಲಲ್ಲ) : ಉದಾ., Afterm., Forem., Inm., Utm. (ಸ್ಥಾನ, ಕಾಲ, ಕ್ರಮ—ಇವನ್ನು ಸೂಚಿಸುವ ಪದಗಳಿಗೆ ಹತ್ತುವ ಪ್ರತ್ಯಯ) : ಉದಾ., Backm., Topm., Centrem. (Bettermost ಎಂಬಲ್ಲಿ ಸಹ ಪ್ರ.)

Mot (F) ಮೋ, ಮಾಟ್ (ನಾ. ; ಬ. ವ. mots ಮೋಜ್) ಚಮತ್ಕಾರೋಕ್ತಿ; ಚತುರೋಕ್ತಿ. **Mot juste** (F) ಮೋ ಝುಸ್ಟ್ ಎಲ್ಲಕ್ಕಿಂತಲೂ ಹೆಚ್ಚು ಖಚಿತವಾಗಿ ಉದ್ದಿಷ್ಟ ಭಾವವನ್ನು (ಭಾಯಾರ್ಥವನ್ನು) ತಿಳಿಸುವ ವಚನ; ಖಚಿತ ಯುಕ್ತ ವಚನ.

Mote ಮೋಟ್ (ನಾ.) ದೂಳು ಕಣ; ರೇಣು. M. in (another's) eye (Eye ನೋಡಿ)

Motét ಮೊಟೆಟ್ (ನಾ.) (ಸಂ.) (ಕ್ರೈಸ್ತ ಆರಾಧನ ಮಂದಿರದ ಉಪಯೋಗಕ್ಕಾಗಿ) ಬೈಬಲ್ಲಿನ ವಚನಗಳನ್ನೇ ಬಾಯಿ ಹಾಡುಗಾರಿಕೆಗೆ ಹೊಂದಿಸಿ ಕಟ್ಟಿದ (ಸಂಗೀತ) ಕೃತಿ.

Moth ಮಾತ್ (ನಾ.) (ಹತ್ತಿಯ, ಉಣ್ಣೆಯ, —ಬಟ್ಟೆ, ಮೊ. ಗಳಲ್ಲಿ ತತ್ತಿಯಿಟ್ಟು ಅದರಿಂದ ಹುಟ್ಟಿದ ಮರಿಗಳು ಬಟ್ಟೆ, ಮೊ. ನ್ನು ತಿಂದು ಕಂಡಿ ಮಾಡುವ) ರಾತ್ರಿ ಸಂಚಾರದ ಒಂದು ಸಣ್ಣ ಹಾರುಕೀಟ : ಬಟ್ಟೆಯ ನುಸಿ (= Clothes-m.). (ದೀಪಕ್ಕೆ ಮುತ್ತುವುದರಿಂದ ರೆಕ್ಕೆ ಉದುರಿ ಹೋಗುವ) ದೀಪದ ಹುಳು, ಪತಂಗ; ಈಚಲು ಹುಳು. (ರೂಪ.) ಒಂದರ ಆಸೆಗೆ ಮನ ಸೋತು ಅದರ ಸುತ್ತ ಅಲೆಯುತ್ತಿರುವವನು. ಒಂದು ಬಗೆಯ ಹಗುರ ಫಲಕ ವಿಮಾನ. M.-eaten ನುಸಿ ತಿಂದ ; ಹುಳು ತಿಂದು ನಾಶವಾದ. (ರೂಪ.) ಬಹಳ ಹಿಂದಿನ ಕಾಲದ; ರೂಢಿಯಳಿದ; ಹಳೆಯ ಕಂದಾಚಾರದ. **Móthy** (ಗು.)

Móther[1] ಮದರ್ (ನಾ.) ತಾಯಿ ; ಅಮ್ಮ ; ಅವ್ವ ; ಮಾತೆ ; ಜನನಿ. (ರೂಪ.) ಉತ್ಪತ್ತಿಯ ಮೂಲ ; ತಾಯಿಯಂಥದು (Necessity is the m. of invention ಆವಶ್ಯಕತೆ ಬಂದಾಗ ಉಪಾಯ ತಾನಾಗಿ ಹುಟ್ಟುತ್ತದೆ ; ಆವಶ್ಯಕತೆಯು ಕಲ್ಪನೆಯ ತಾಯಿ). ಧಾರ್ಮಿಕ ಸ್ತ್ರೀ ಸಂಸ್ಥೆಯ ಯಜಮಾನಿ, ಅಧ್ಯಕ್ಷೆ (= M. Superior). ಕೆಳ ದರ್ಜೆಯ ಹಿರಿಯ ಹೆಂಗಸು (ಈಕೆಗೆ ಉಪಯೋಗಿಸುವ ಒಕ್ಕಣೆಯ ಪದ). ಕೋಳಿಮರಿಗಳನ್ನು ಕೃತಕ ರೀತಿಯಲ್ಲಿ ಸಾಕುವ ಸಲಕರಣೆ (= Artificial m.). (ಪ್ರಾಚೀ. ಪ್ರ.) ಗರ್ಭೋನ್ಮಾದ (ರೋಗ). M. Carey's chicken (Chicken[1] ನೋಡಿ). M. country (ವಲಸನಾಡುಗಳ ವಿಷಯದಲ್ಲಿ) ತಾಯಿನಾಡು, ಮಾತೃಭೂಮಿ. **M.-craft** ತಾಯಿ ಮಕ್ಕಳನ್ನು ಪೋಷಿಸುವ ಕಲೆ : ತಾಯ್ತನದ ಕಲೆ. **M. earth** ಭೂಮಿತಾಯಿ ; ಭೂ ಮಾತೆ. (ಹಾಸ್ಯವಾಗಿ) ನೆಲ ; ಭೂಮಿ. **M. Hubbard** ಇಂಗ್ಲಿಷ್ ಶಿಶುಗೀತೆಯೊಂದರಲ್ಲಿಯ ವ್ಯಕ್ತಿ. ಒಂದು ಬಗೆಯ ದಗಲೆ. **M.-in-law** ಹೆಂಡತಿಯ ತಾಯಿ, ಗಂಡನ ತಾಯಿ : ಅತ್ತೆ. **Mother-land** ತಾಯಿನಾಡು ; ಸ್ವದೇಶ. **M. lodge** 'ಫ್ರೀಮೇಸನ್' ದೀಕ್ಷೆ ಕೊಟ್ಟ ಸಂಸ್ಥೆ. **M. of pearl** ಕೆಲವು (ಕಪ್ಪೆ)ಚಿಪ್ಪುಗಳ ಒಳ ಪಕ್ಕದಲ್ಲಿ ನಯವಾದ ಮೇರ್ಮೈಯುಳ್ಳ ಬಣ್ಣ ಸೂಸುವ ಹೊಳಪಿನ ಪದರ (ವಿಶೇಷಣವಾಗಿ : M.-of-pearl). **M. ship** (ಸಿಡಿದು ಹಡಗುಗಳನ್ನು ನಾಶಗೊಳಿಸುವ ನಾಳಿಸ್ಫೋಟಕ ಯಂತ್ರವನ್ನುಳ್ಳ ಮುಳುಗುದೋಣಿಗಳು, ಕಡಲ ಫಲಕವಿಮಾನಗಳು, ಮೊ. ಗಳ ವಿಚಾರಣೆಯನ್ನುಳ್ಳ) ತಾಯಿ ಹಡಗು. **M.'s son** ಮನುಷ್ಯ ; ಆಳು (Every m.'s son of you ನಿಮ್ಮಲ್ಲಿ ಪ್ರತಿಯೊಬ್ಬನೂ). **M. tongue** (ಒಬ್ಬನ) ತಾಯಿನುಡಿ, ಮಾತೃಭಾಷೆ ; (ಇತರ ಭಾಷೆಗಳು ಹುಟ್ಟಿದ) ಮೂಲ ಭಾಷೆ ; ಜನಕ ಭಾಷೆ. **M. wit** ಸಹಜ ಬುದ್ಧಿ ; ವ್ಯವಹಾರ ಜ್ಞಾನ. **Mótherhood** (ನಾ.) ; **Mótherless** (ಗು.) ; **Mótherlike** (ಗು.) ; **Mótherly** (ಗು.) ತಾಯ್ತನದ ಸುಗುಣವುಳ್ಳ; —ಸುಗುಣ ತೋರುವ ; ತಾಯಿಯಂಥ ; ಮಾತೃ ಸ್ವಭಾವದ. **Mótherliness** (ನಾ.)

Móther (ಕ್ರಿ. ಸಕ.) ಹಡೆ ; ಹೆರು ; ಜನ್ಮ ಕೊಡು (ಸಾ., ರೂಪ.) ; ತಾಯಿಯಂತೆ ಕಾಪಾಡು ; (ಒಂದು ಮಗುವಿನ) ತಾಯಿಯೆಂದು ಒಪ್ಪಿಕೊ, ಹೇಳಿಕೊ (ರೂಪ. ಸಹ). Mothering Sunday (ಇಂಗ್ಲೆಂಡಿನಲ್ಲಿ ತಾಯಿ ತಂದೆಗಳನ್ನು ನೋಡಿಕೊಂಡು ಉಡುಗೊರೆ ಕೊಟ್ಟು ಅಥವಾ ಪಡೆದು ಬರುವ ಪದ್ಧತಿಯಿರುವ) ಮಧ್ಯ 'ಲೆಂಟ್' ಭಾನುವಾರ.

Móther[2] ಮದರ್ (ನಾ.) ದ್ರಾಕ್ಷೀ ರಸ ಹುಳಿಗೂಡುವಾಗ ಅದರಮೇಲೆ ಕಟ್ಟುವ ಒಂದು ಬಗೆಯ ಅಂಟು ಲೋಳೆಯ ಬೂಷ್ಟು (= M. of vinegar). **Móthery** (ಗು.)

Motíf ಮೊಟೀಫ್ (ನಾ.) (ಒಂದು ಕಲಾ ಕೃತಿಯ) ಅಂತರ್ಭಾವ, ಮೂಲಾಶಯ, ಮುಖ್ಯೋದ್ದೇಶ. ಉಡುಪಿನಮೇಲೆ ಪ್ರತ್ಯೇಕವಾಗಿ ಸೇರಿಸಿ ಹೊಲಿದ ಸರಿಗೆಯ, ಹೆಣಿಗೆಯ, ಮೊ. ಅಲಂಕಾರ.

Mótile ಮೋಟಿಲ್ (ಗು.) (ಪ್ರಾ. ವಿ., ಸ. ವಿ.) ಚಲನಶಕ್ತಿಯುಳ್ಳ ; ಚಲಿಸಬಲ್ಲ. **Motílity** ಮೊ— (ನಾ.)

Mótion ಮೋಷ(ಷ್)ನ್ (ನಾ., ಕ್ರಿ.) ಚಲನೆ ; ಸ್ಥಳ ಬದಲಾವಣೆ ; (ನಡಗೆ, ಮೊ. ಗಳಲ್ಲಿ) ಅಂಗಚಲನೆಯ ರೀತಿ ; ಅಂಗಸ್ಥಿತಿ ವ್ಯತ್ಯಾಸ ; ಭಾವ ಸೂಚನೆ ; ಅಳ್ಳಾಟ ; ಅಲುಗಾಟ ; ಎಡೆಯಾಟ [In m. ಚಲಿಸುತ್ತ. Put in m. ಚಲಿಸುವಂತೆ ಮಾಡು ; ಆಚರಣೆಗೆ ತರು ; ಕಾರ್ಯರೂಪಕ್ಕೆ ತರು. M. picture (ಮು., ಅಮೆ. ಸಂ.) ಚಲನ ಚಿತ್ರ (ಪಟಲ)]. (ಶಾಸನ ಸಭೆ, ಮೊ. ಗಳಲ್ಲಿ) ವಿಧಿಗನುಸಾರವಾದ ಸೂಚನೆ. (ನ್ಯಾ. ಶಾ.) ನ್ಯಾಯಸ್ಥಾನದ ನಿರ್ಣಯವನ್ನು ಅಥವಾ ಆಜ್ಞೆಯನ್ನು ಬೇಡಿ ಕಕ್ಷಿಗಾರರು, ಮೊ. ರು ಹಾಕುವ ಅರ್ಜಿ. ಮಲ ವಿಸರ್ಜನೆ ; ಕಾಲ ಪ್ರವೃತ್ತಿ. (ಯಾಂತ್ರಿಕ) ಚಲನ ಸಲಕರಣೆ. (ಕ್ರಿ.) (ಮಾಡಲು, ಬರಲು, ಹೋಗಲು, ಮೊ. ಗಿ) ಕೈಸನ್ನೆ, ಮೊ. ಗಳಿಂದ ಸೂಚಿಸು, ಅಭಿಪ್ರಾಯ ತಿಳಿಸು (*To, towards, away* ಮೊ. ಉಪ. ದೊಡನೆ). **Mótional** (ಗು.) ; **Mótionless** (ಗು.)

Mótive ಮೋಟಿವ್ (ಗು., ನಾ., ಕ್ರಿ. ಸಕ.) ಚಲನ ಪ್ರೇರಕ ; ಚಾಲಕ [M. power ಚಾಲಕ ಶಕ್ತಿ, ಪ್ರೇರಕ ಶಕ್ತಿ (ಯಂತ್ರಗಳನ್ನು ನಡಸುವ ಆವಿ, ವಿದ್ಯುಚ್ಛಕ್ತಿ, ಮೊ.)]. ಚಲನೆಯ ; ಚಲನ ಸಂಬಂಧವಾದ. (ನಾ.) ಕಾರ್ಯ ಮಾಡಲು ಪ್ರೇರಿಸುವಂಥದು ; ಪ್ರೇರಣೆ (ಆಸೆ, ಭಯ, ಸಂದರ್ಭ, ಮೊ. ವು) ; ಉದ್ದೇಶ ; =Motif. (ಕ್ರಿ.) ಪ್ರೇರಕವಾಗಿರು ; ಪ್ರೇರಿಸು ; ಚೋದಿಸು ; ಪ್ರಧಾನೋದ್ದೇಶವಾಗಿರು. **Mótiveless** (ಗು.) ; **Motívity** ಮೊ— (ನಾ.) ಚಲನ ಪ್ರೇರಕ ಶಕ್ತಿ. **Mótivate** ಮೋ— (ಕ್ರಿ. ಸಕ.) =Motive (ಕ್ರಿ.). **Motivátion** (ನಾ.)

Mótley ಮಾಟ್ಲಿ (ಗು., ನಾ.) ವಿವಿಧ ವರ್ಣದ ; ನಾನಾ ಲಕ್ಷಣದ, ತೆರದ (M. assembly). (ನಾ.) ಅಸಮಂಜಸ ಮಿಶ್ರಣ ; ಕಲಬೆರಕೆ. (ಚರಿತ್ರೆ) ನಕಲಿಗಾರನ ಬಣ್ಣ ಬಣ್ಣದ ಉಡಿಗೆ (Wear m. ನಕಲ ಮಾಡು)

Mótor ಮೋಟರ್ (ನಾ., ಗು., ಕ್ರಿ.) ಚಲನೆ ಕೊಡುವಂಥದು ; ಚಾಲಕ ; (ವಾಹನಕ್ಕಾಗಲಿ ನೌಕೆಗಾಗಲಿ) ಚಲನಶಕ್ತಿಯನ್ನೊದಗಿಸುವ ಯಂತ್ರ : ಚಾಲಕ ಯಂತ್ರ (ಮು., ಅಂತರ್ದಾಹಕ ಯಂತ್ರ) ; ಸ್ವಯಂ ಚಲಿ ; ಮೋಟರು [ವಿಶೇಷಣವಾಗಿ ಪ್ರ. : M. bicycle, cab, (omni-) bus, boat, ship. M. bandit ಲೂಟಿ ಮಾಡಲು ಮೋಟಾರು ಬಂಡಿಯನ್ನುಪಯೋಗಿಸುವ ದರೋಡೆಕೋರ]. (ಸಾಮಾನ್ಯ ರಸ್ತೆಯಲ್ಲಿ ಚಾಲಕ ಯಂತ್ರದಿಂದ ನಡೆಯುವ) ಮೋಟಾರು ಬಂಡಿ (=m.-car) ; (M. cycle ಮೋಟರು ಎಂಜಿನಿನಿಂದ ನಡಸುವ ಬೈಸಿಕಲ್, ಮೊ. ದು). (ಅಂ. ರ. ಶಾ.) ಯಾವುದಾದರೂ ದೇಹಭಾಗವನ್ನು ಚಲಿಸುವಂತೆ ಮಾಡಲು ಇರುವ ಸ್ನಾಯು : ಚಾಲಕ ಸ್ನಾಯು ; ಸ್ನಾಯು ಚಟುವಟಿಕೆಯನ್ನು ಪ್ರಚೋದಿಸುವ (ನರ) : ಚಾಲಕ ನರ. (ಕ್ರಿ.) ಮೋಟಾರು ಬಂಡಿಯಲ್ಲಿ ಹೋಗು, ಒಯ್ಯಿ. **Motórial** ಮೊಟೋ— (ಗು.) ಚಲನ ಸಂಬಂಧದ (ಮು., ಚಾಲಕ ನರದ) ; =Motor (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mótorist ಮೋಟ— (ನಾ.) ಸಾಮಾನ್ಯವಾಗಿ ಯಾವಾಗಲೂ ಮೋಟಾರಿನಲ್ಲಿ ತಿರುಗುವವನು : ಮೋಟರಿಗ. **Mótory** (ಗು.) ಚಾಲಕ.

Móttle ಮಾಟ್‌ಲ್ (ನಾ., ಕ್ರಿ. ಸಕ.) ಬಣ್ಣದ ಚುಕ್ಕೆಗಳ ಅಥವಾ ಕಲೆಗಳ ವಿನ್ಯಾಸ; (ಇಂಥ) ಬಣ್ಣದ ಒಂದು ಕಲೆ. ಬಣ್ಣಬಣ್ಣದ ಉಣ್ಣೆಯ ನೂಲು. (ಕ್ರಿ.) (ಮು., ಸಾಬೂನನ್ನು) ಬಣ್ಣಬಣ್ಣದ ಕಲೆಗಳಿಂದ ಚಿತ್ರಿಸು (ಮು., ಭೂ. ಕೃ. ನಲ್ಲಿ)

Mótto ಮಾಟೊ (ನಾ.) ಯುಕ್ತ ಭಾವವನ್ನು ಸೂಚಿಸಿ ಯಾವುದಾದರೂ ವಸ್ತುವಿನಮೇಲೆ ಬರೆದಿರುವ, ಕೆತ್ತಿರುವ, (ಒಬ್ಬನು ತನ್ನ ನಡೆವಳಿಗೆ ಆದರ್ಶವಾಗಿಟ್ಟುಕೊಂಡಿರುವ) ವಚನ; ಸೂಕ್ತಿ; ಆದರ್ಶ ಸೂತ್ರ; ಧ್ಯೇಯ ಮಂತ್ರ; ಮಿಠಾಯಿ ಸುತ್ತುವ ಕಾಗದದಮೇಲೆ ಬರೆದಿರುವ ಪದ್ಯ, ಮೊ. ದು; (ಗ್ರಂಥದ, ಅಧ್ಯಾಯದ, —ಮೊದಲಲ್ಲಿ) ಉದ್ಧರಿಸಿ ಹಾಕಿದ ವಾಕ್ಯ; ಆದರ್ಶ ವಾಕ್ಯ. (ಸಂ.) ಪುನಃ ಪುನಃ ಬರುವ ವಚನ.

Moújik, Múzhik ಮೂಝಿಕ್ (ನಾ.) ರಷ್ಯದ ಹಳ್ಳಿಗ, ಒಕ್ಕಲಿಗ, ರೈತ. (ಹೆಂಗಸಿನ) ಸಡಿಲವಾದ, ತೋಳಿಲ್ಲದ, ತುಪ್ಪುಳಿನ ಮೇಲಂಗಿ.

Mould[1] ಮೋಲ್ಡ್ (ನಾ.) ಪುಡಿ ಮಣ್ಣು; ಬೇಸಾಯದ ನೆಲದ ಮೇಲ್ಮಣ್ಣು. Man of m. ಕೇವಲ ಮರ್ತ್ಯ. M.-board ಮಣ್ಣನ್ನು ಮಗುಚಿಹಾಕುವ ನೇಗಿಲಿನ ಹಲಗೆ.

Mould[2] ಮೋಲ್ಡ್ (ನಾ., ಕ್ರಿ. ಸಕ.) (ಕಲ್ಲು, ಇಟ್ಟಿಗೆ —ಇವನ್ನು ಕಟ್ಟುವವರು, ಮೊ. ರು ಗೋಲುಕೆಲಸ, ಮೊ. ನ್ನು ಮಾಡಲು ಉಪಯೋಗಿಸುವ) ಅಚ್ಚುಪಟ್ಟಿ; ಮಾಲು. (ಬೇಕಾದ ಆಕಾರ ಬರುವಂತೆ, ಕರಗಿದ ಲೋಹ, ಮೊ. ನ್ನು, ಹೊಯ್ದು ಆರಿಸುವ) ಎರಕದ ಅಚ್ಚು; ಇಡ್ಡಲ, ಮೊ. ಗಳಿಗೆ ಆಕಾರ ಕೊಡುವ (ಲೋಹದ ಅಥವಾ ಮಣ್ಣಿನ) ಪಾತ್ರೆ; ಹೀಗೆ ಆಕಾರ ಪಡೆದ ಇಡ್ಡಲ, ಮೊ. ದು. [Cast in heroic m. (ರೂಪ.) ವೀರ ಪ್ರಮಾಣದಲ್ಲಿ ಮೂರ್ತಿವೆತ್ತ]. (ಪ್ರಾಣಿದೇಹದ) ಆಕಾರ, ಮೂರ್ತಿ. (ವಾ. ಶಾ.) ಅಲಂಕಾರ ರಚನೆಗಳ ತಂಡ. (M. candle ಅಚ್ಚು ಹೊಯ್ದು ಮಾಡಿದ ಮೋಂಬತ್ತಿ. M.-loft ನೆಲದಮೇಲೆ ಹಡಗಿನ ಪೂರ್ಣಾಕಾರದ ಚಿತ್ರವನ್ನು, ವಿನ್ಯಾಸವನ್ನು, ರೇಖಿಸುವ ಕೋಣೆ). (ಕ್ರಿ.) ಘಟಕ ವಸ್ತುಗಳಿಂದ ರೂಪಿಸು; ಅಚ್ಚೊತ್ತುವುದರಿಂದ ಒಂದು ಗೊತ್ತಾದ ಆಕೃತಿಯನ್ನು ರಚಿಸು; ಅಚ್ಚೊತ್ತು (ರೂಪ. ಸಹ). ರೂಪ, ಆಕಾರ, —ಕೊಡು; ಒಂದು ಗೊತ್ತಾದ ಆಕಾರಕ್ಕೆ ತರು; ಆಕೃತಿ ಕೊಟ್ಟು ಪರಂಗಿರೊಟ್ಟಿಗಳನ್ನು ತಯಾರಿಸು. **Moúlder**[1] (ನಾ.) ಅಚ್ಚು, ಎರಕ, —ಹೊಯ್ಯುವವನು; ಎರಕ ಹೊಯ್ಯಲು ಅಚ್ಚುಗಳನ್ನು ತಯಾರಿಸುವವನು; ಎರಕಗಾರ; ಅಚ್ಚುಗಾರ. **Moúlding** (ನಾ.) (ಕ್ರಿಯಾರ್ಥಗಳಲ್ಲಿ). ಅಲಂಕಾರದ ರೂಪು ಕೊಟ್ಟ ವಸ್ತು (ಮು., ಕಟ್ಟಡ, ಮರಗೆಲಸ, ಮೊ. ಗಳಲ್ಲಿ ಅಲಂಕಾರವಾಗಿ ಮಾಡಿದ ಭಾಗ). M.-board ಹಿಟ್ಟು ನಾದುವ ಮಣೆ.

Mould[3] ಮೋಲ್ಡ್ (ನಾ.) (ತೇವದ ಬೆಚ್ಚನೆಯ ಗಾಳಿಯಲ್ಲಿ ಸ್ವಲ್ಪ ಕಾಲ ಇರುವ ಕೆಲವು ವಸ್ತುಗಳಮೇಲೆ ಹತ್ತಿಯ ಅಥವಾ ತುಪ್ಪಟದ ನವಿರೆಳೆಗಳಂತೆ ಕಟ್ಟುವ ಶಿಲೀಂಧ್ರದ) ಬೂಷ್ಟು, ಬೂಸು. **Moúldy**[1] (ಗು.) ಬೂಷ್ಟು ಹಿಡಿದ; (ರೂಪ.) ಹಳಸಲಾದ; ರೂಢಿಯಳಿದ. (ಅಸಂ.) ನೀರಸ; ಮಂದ; ಸಪ್ಪೆಯಾದ; ಬೇಸರ ಹಿಡಿಸುವ. **Moúldiness** (ನಾ.)

Moúlder[2] ಮೋಲ್ಡರ್ (ಕ್ರಿ. ಅಕ.) ಮಣ್ಣು ಹಿಡಿದುಹೋಗು; ದೂಳಾಗಿ ಹೋಗು; ಕೊಳೆತು ಜೀರ್ಣಿಸಿಹೋಗು; ಲಡ್ಡಾಗಿಹೋಗು; ಹಾಳಾಗು (*Away* ಉಪ. ದೊಡನೆ) (ರೂಪ. ಸಹ)

Moúldy[2] ಮೋಲ್ಡಿ (ನಾ.) (ನಾವೆ, ಅಸಂ.) ಹಡಗಿನಲ್ಲಿ ತೂತು ಹೊಡೆದು ಸಿಡಿದು ಹಡಗನ್ನು ಮುಳುಗಿಸುವ ಯಂತ್ರ; ನೌಕಾಸ್ಫೋಟಿ; 'ಟಾರ್ಪಿಡೊ'.

Moult ಮೋಲ್ಟ್ (ಕ್ರಿ., ನಾ.) (ಹಕ್ಕಿಗಳ ವಿಷಯದಲ್ಲಿ ಹೊಸ ಗರಿ ಹುಟ್ಟುವ ಸಂಭವದಲ್ಲಿ) ಗರಿಯುದುರ್ಚು; ಗರಿ ಕಳೆ; ಗರಿಯುದುರಿಹೋಗು; (ರೂಪ. ಸಹ). (ನಾ.) — ವುದು. [ಅನೇಕ ಸಸ್ತನಿಗಳು ತಮ್ಮ ಕೂದಲನ್ನು ವರ್ಷಕ್ಕೊಂದಾವೃತ್ತಿಯೂ, ಹಕ್ಕಿಗಳು ತಮ್ಮ ಗರಿಗಳನ್ನು ವರ್ಷಕ್ಕೆ ಎರಡು ಮೂರಾವೃತ್ತಿಯೂ, ಸರೀಸೃಪಗಳು ತಮ್ಮ ಪೊರೆಯನ್ನೂ, ಪಲ್ಕವಂತ ಪ್ರಾಣಿಗಳು ತಮ್ಮ ಹೊರಚರ್ಮ ಮಾತ್ರವಲ್ಲದೆ ಕೆಲವು ಸಂದರ್ಭಗಳಲ್ಲಿ ದೇಹದೊಳಗಿನ ಕೊಂಬಿನ ರಚನೆಯ ಅಂಗಭಾಗಗಳನ್ನೂ, (ರೇಶಿಮೆ ಹುಳು, ಮೊ. ದ) ಹುಳುಮರಿಗಳು ತಮ್ಮ ಬೆಳವಣಿಗೆಯ ಕಾಲದಲ್ಲಿ ತಮ್ಮ ಹೊರಚರ್ಮವನ್ನೂ, ಅನೇಕ ಬಾರಿಯೂ, —ಉಚ್ಚಬಿಡುತ್ತವೆ]

Mound[1] ಮೌಂಡ್ (ನಾ.) ಕಿರೀಟ, ಮೊ. ಗಳಮೇಲೆ ಇರುವ ಭೂಮಂಡಲ ಸೂಚಕವಾದ, ಚಿನ್ನ, ಮೊ. ಗಳ ಗೋಳ. (ವಂಶಲಾಂಛನದಲ್ಲಿ) ಇದರ ಚಿತ್ರ.

Mound[2] ಮೌಂಡ್ (ನಾ., ಕ್ರಿ. ಸಕ.) (ಮಣ್ಣು, ಕಲ್ಲು, ಮೊ. ಗಳ) ದಿಬ್ಬ, ದಿಣ್ಣೆ (ಮು., ಗೋರಿಯಮೇಲಿನ ಮಣ್ಣಿನದು); ಮೊರಡಿ; ಸಣ್ಣ ಗುಡ್ಡ [M.-builder ದಿಬ್ಬಗಳನ್ನು ಕಟ್ಟುತ್ತಿದ್ದ ಚರಿತ್ರಪೂರ್ವ ಕಾಲದ, ಉ. ಅಮೆರಿಕದ ಇಂಡಿಯನ್ ಜನಾಂಗದವನು. ಗುಡ್ಡೆಯಾಗಿ ಮೊಟ್ಟೆಯಿಡುವ ಹಲವು ಹಕ್ಕಿಜಾತಿ]. (ಕ್ರಿ.) ಸುತ್ತಲೂ ಕಟ್ಟೆ ಕಟ್ಟು; ದಿಬ್ಬ ಹಾಕು.

Mount[1] ಮೌಂಟ್ (ನಾ., ಕ್ರಿ.) ಪರ್ವತ; ಬೆಟ್ಟ; ಮಲೆ (ಸಂಕ್ಷಿಪ್ತ: Mt; ಬೆಟ್ಟಗಳ ಹೆಸರಿನ ಹಿಂದೆ: Mt Vesuvius, Mt Sinai). (ಸಾಮುದ್ರಿಕ ಶಾಸ್ತ್ರ) ಅಂಗೈಯಲ್ಲಿಯ ಮಾಂಸದ ಉಬ್ಬುಭಾಗಗಳಲ್ಲೊಂದು. (ಕ್ರಿ.) (ಬೆಟ್ಟ, ಮೊ. ನ್ನು) ಏರು, ಹತ್ತು; ಏರಿ ಹೋಗು; ಹತ್ತಿ ಹೋಗು; ಮೇಲಕ್ಕೆ ಹೋಗು. (ರಕ್ತ) (ಕೆನ್ನೆಗೆ) ಏರು. (ಮೇಲ್ಪದವಿ, ಮೇಲಧಿಕಾರ, ತೀವ್ರತೆ, ಮೊ. ಕ್ಕೆ) ಏರು. (ಮೊತ್ತ, ಬೆಲೆ) ಏರು (= M. up). (ಸವಾರಿಗಾಗಿ ಕುದುರೆ, ಮೊ. ಗಳ) ಮೇಲೆ ಹತ್ತಿಕೊ (*On* ಉಪ. ದೊಡನೆ); (ಕುದುರೆ, ಮೊ. ಗಳ ಮೇಲೆ ಒಬ್ಬನನ್ನು) ಹತ್ತಿಸು; (ಒಬ್ಬನಿಗೆ) ಕುದುರೆಯೊದಗಿಸು. (ಫಿರಂಗಿಗಳನ್ನು ಅವುಗಳ) ಸ್ಥಾನಕ್ಕೇರಿಸು. (ಮಗ್ಗ, ಮೊ. ನ್ನು) ಕೆಲಸಮಾಡುವ ಸ್ಥಿತಿಯಲ್ಲಿಡು. (ಚಿತ್ರ, ಮೊ. ನ್ನು) ರಟ್ಟಿನಮೇಲೆ ಹಚ್ಚು. (ಕುಂದಣ, ಮೊ. ಗಳಲ್ಲಿ ಮಣಿಯನ್ನು) ಖಚಿತ ಮಾಡು, ಕೂರಿಸು. (ಸೂಕ್ಷ್ಮದರ್ಶಕದ ಪರೀಕ್ಷಾಫಲಕದ ಮೇಲೆ ವಸ್ತುವನ್ನು) ನೆಲೆಗೊಳಿಸು. (ನಾಟಕವನ್ನು ರಂಗಸ್ಥಳದಲ್ಲಿ) ಪ್ರದರ್ಶಿಸು. (ಉಡುಪು, ಮೊ. ನ್ನು) ಪ್ರದರ್ಶಿಸು, ಮೆರಸು. M. guard ಕಾವಲಾಗಿ ನಿಲ್ಲು, ಹೋಗು (*Over* ಉಪ. ದೊಡನೆ ಸಹ)

Mount[2] ಮೌಂಟ್ (ನಾ.) ಒಂದು ಚಿತ್ರದ ಸುತ್ತಲಿರುವ ಅಂಚು; ರೇಖನವನ್ನು ಅಥವಾ ಚಿತ್ರವನ್ನು ಹಚ್ಚುವ ರಟ್ಟು. (ಒಂದು ವಸ್ತುವಿನ) ಅಲಂಕಾರ ಲೋಹಭಾಗ. ಸವಾರಿ ಕುದುರೆ; ಸವಾರಿಗೆ ಅವಕಾಶ (ಮು., ಜೂಜುಸವಾರನಾಗಿ)

Moúntain ಮೌಂಟೆ(ಟಿ)ನ್ (ನಾ.) ಬೆಟ್ಟ; ಪರ್ವತ; ಮಲೆ. (Waves ran mountains high —ಅತ್ಯಂತ ಎತ್ತರವಾಗಿ—). ಬೆಟ್ಟದಂಥ ರಾಶಿ, ಗುಡ್ಡೆ. M. chain ಬೆಟ್ಟದ ಸಾಲು; ಪರ್ವತ ಶ್ರೇಣಿ. M. sickness ಪರ್ವತಾಗ್ರದ ವಿರಳ ವಾಯುವಿನಿಂದುಂಟಾಗುವ ಒಂದು ವ್ಯಾಧಿ: ಪರ್ವತ ವ್ಯಾಧಿ. **Mountaineér** — ನಿಯರ್ (ನಾ.) ಪರ್ವತ ನಿವಾಸಿ; ಪರ್ವತ ಹತ್ತುವುದರಲ್ಲಿ ನಿಪುಣ. **Mountaineéring** (ನಾ.); **Moúntainous** (ಗು.) ಪರ್ವತಗಳು ಹೆಚ್ಚಾಗಿರುವ; ಪರ್ವತ ಮಯ; ಬೆಟ್ಟದಾಕಾರದ; ಬಹು ದೊಡ್ಡ.

Mountébank ಮೌಂಟಿಬ್ಯಾಂಕ್ (ನಾ.) (ಜನರನ್ನು ಕಥೆ, ಮೊ. ಗಳಿಂದಲೂ ಕೈಚಳಕ, ಯಕ್ಷಿಣಿ, ಮೊ. ಗಳಿಂದಲೂ ಮರುಳುಗೊಳಿಸಿ ಔಷಧಿ ಮಾರುವ) ಸಂಚಾರಿ ಠಕ್ಕುವೈದ್ಯ; ಅಳಲೆಕಾಯಿ ಪಂಡಿತ; ಪಂಡಿತವೇಷಿ; ಬೂಟಾಟಿಗ. **Moúntebankery** (ನಾ.)

Mourn ಮೋರ್ನ್ (ಕ್ರಿ.) (ಸತ್ತವನು, ನಷ್ಟ, ನಷ್ಟವಸ್ತು, ದುರದೃಷ್ಟ, ಮೊ. ಗಳಿಗಾಗಿ) ಶೋಕಿಸು, ದುಃಖಿಸು, ಮರುಗು, ಗೋಳಾಡು, ವ್ಯಥೆಪಡು (*For, over* ಉಪ. ದೊಡನೆ). (ಸತ್ತವನಿಗಾಗಿ ಒಂದು ಗೊತ್ತಾದ ಕಾಲ, ಸಂಪ್ರದಾಯದಂತೆ) ಶೋಕಪ್ರದರ್ಶನ ಮಾಡು. **Moúrner** ಶೋಕಪಡುವವನು (ಮು., ಸ್ನೇಹಿತನ ಅಥವಾ ಸಂಬಂಧಿಯ ಶವದೊಡನೆ ಶ್ಮಶಾನಕ್ಕೆ ಶವಸಂಸ್ಕಾರಕ್ಕಾಗಿ ಹೋಗುವವನು); ದುಃಖಿ; ಶವಸಂಸ್ಕಾರದಲ್ಲಿ ದುಃಖಪ್ರದರ್ಶನಕ್ಕಾಗಿ ನಿಯಮಿತನಾದ ಕೂಲಿಯಾಳು. **Moúrnful** (ಗು.) ಗೋಳಾಟದ; ದುಃಖದ; ಶೋಕದ; ವ್ಯಥೆಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Moúrnfully (ಕ್ರಿ. ವಿ.) ; **Moúrnfulness** (ನಾ.) ; **Moúrning** (ನಾ.) (ಕ್ರಿಯಾರ್ಥಗಳಲ್ಲಿ). ಶೋಕಪ್ರದರ್ಶನದ ಕರಿಯ ಉಡುಪು (ಧರಿಸುವುದು). Deep m., half m. (ಆಯಾ ಪದವನ್ನು ನೋಡಿ). Complimentary m. ಸಂಬಂಧಿಯಲ್ಲದ ಮೃತನಿಗೆ ಗೌರವ ತೋರು ವುದಕ್ಕಾಗಿ ಶೋಕದ ಉಡುಪು ಧರಿಸುವುದು. In m. ದುಃಖದ ಉಡುಪು ತೊಟ್ಟು. (ಕಣ್ಣು) (ಹೊಡೆದಾಟ, ಮೊ. ಗಳಿಂದ) ಕಪ್ಪುಗಟ್ಟಿದ ; (ಉಗುರು) ಕೊಳೆಯಾದ. M.-coach ಅಂತ್ಯ ಕ್ರಿಯೆಗೆ ದುಃಖಭಾಗಿಗಳು ಹೋಗುವ ಮುಚ್ಚಿದ ಕಪ್ಪು ಬಂಡಿ. M.-paper (ಸಾವಿನ) ದುಃಖ ಸೂಚಿಸುವ ಕಪ್ಪಂಚಿನ ಕಾಗದ. M.-ring ಸತ್ತವನ ಸ್ಮಾರಕವಾಗಿ ಇಟ್ಟುಕೊಳ್ಳುವ ಉಂಗುರ : ದುಃಖಾಂಗುಲೀಯ.

Mouse ಮೌಸ್ (ನಾ. ; ಬ. ವ. mice ಮೈಸ್ ; ಕ್ರಿ. ಅಕ.) ಇಲಿ, ಮೂಷಕ (House m. ಮನೆಯಿಲಿ. Field-m. ಹೊಲದಿಲಿ. Harvest-m. ಕಣದಿಲಿ). ಭೀರು ; ಸಿಗ್ಗಾಳಿ ; ಒಬ್ಬರೊಡನೆ ಸೇರ ದವನು. (ಅಸಂ.) ಪೆಟ್ಟಿನಿಂದ ಕಪ್ಪುಗಟ್ಟಿದ ಕಣ್ಣು. (M.-colour ಹಳದಿಛಾಯೆಯ ಕಪ್ಪು ಬೂದುಬಣ್ಣ. Mousetrap ಇಲಿಯ ಬೋನು). (ಕ್ರಿ.) (ಮೌಸ್) (ಬೆಕ್ಕು ಅಥವಾ ಗೂಬೆಯ ವಿಷಯದಲ್ಲಿ) ಇಲಿ ಹಿಡಿ ; ಶ್ರಮ ಪಟ್ಟು ಹುಡುಕು, ಅನ್ವೇಷಣ ಮಾಡು ; ಯಾವುದನ್ನಾದರೂ ಹುಡುಕಲು ಸದ್ದು ಮಾಡದೆ ಸುತ್ತಾಡು (*About* ಉಪ. ದೊಡನೆ). **Moúser** (ನಾ.) ಇಲಿ ಹಿಡಿಯುವ ಪ್ರಾಣಿ (ಬೆಕ್ಕು, ಗೂಬೆ). **Moúsy** (ಗು.) ಇಲಿಯಂಥ (ಬಣ್ಣ, ವಾಸನೆ, ಮೊ. ಉಳ್ಳ) ; ಇಲಿಯಂತೆ ಗದ್ದಲ ವಿಲ್ಲದಿರುವ ; ಇಲಿಯ ಕಾಟ ಹೆಚ್ಚಾಗಿರುವ.

Moustáche ಮು(ಮ)ಸ್ಟಾಷ್ (ನಾ.) (ಮನುಷ್ಯನ, ಇತರ ಕೆಲವು ಪ್ರಾಣಿ ಗಳ) ಮೀಸೆ. M.-cup ಕುಡಿಯುವಾಗ (ಪಾನೀಯವು) ಮೀಸೆಗೆ ತಗುಲದಂತಿರಲು, ಅರೆ ಮುಚ್ಚಳವುಳ್ಳ ಬಟ್ಟಲು : ಮೀಸೆಬಟ್ಟಲು.

Mouth ಮೌತ್ (ನಾ.) ಬಾಯಿ. (ಚೀಲ, ಗುಹೆ, ಕುಲುಮೆ, ನದಿ, ಮೊ. ಗಳ) ಬಾಯಿ, ಮುಖ. (ಅಸಂ.) ವಿನಯವಿಲ್ಲದ, ದುರ್ಲಕ್ಷ್ಯದ, ದಿಟ್ಟತನದ, ದುರಹಂಕಾರದ, — ಮಾತು ; ಧಾರ್ಷ್ಟ್ಯ. (ಕುದುರೆಯ ವಿಷಯ ದಲ್ಲಿ) Good, bad, hard, m. ಕಡಿವಾಣಕ್ಕೆ ಬಗ್ಗುವ, ಬಗ್ಗದ,— ಕುದುರೆ. M. waters at (food) (ತಿಂಡಿಯ, ಆಹಾರದ, ನಿರೀಕ್ಷಣೆ ಯಿಂದ) ಬಾಯಿ ನೀರೂರುತ್ತದೆ. Useless m. ಕೆಲಸ ಮಾಡದೆ ದಂಡದ ಕೂಳು ತಿನ್ನುವವನು : ದಂಡ ಪಿಂಡದವನು. This sounds strange in your m. ಇದು ನಿನ್ನ ಬಾಯಲ್ಲಿ ಬರುವುದು ಆಶ್ಚರ್ಯವಾಗಿದೆ. Put words into his m. ಅವನು ಹೇಳಬೇಕಾದುದನ್ನು ಹೇಳಿಕೊಡು. Put (speech) into person's m. (ಮಾತು) ಅವನು ಆಡಿದನೆಂದು, ಹೇಳಿದನೆಂದು, ಆರೋಪಿಸು. Take the words out of person's m. ಒಬ್ಬನು ಹೇಳಬೇಕೆಂದಿದ್ದುದನ್ನು ತಾನು ಹೇಳು. Give m. (ನಾಯಿ) ಬಗುಳು. Down in the m. ಮನಗುಂದಿ ; ಖಿನ್ನನಾಗಿ. Laugh on wrong side of one's m. (Laugh ನೋಡಿ). Make a wry m. (ಅಸಮ್ಮತಿ, ಮೊ. ನ್ನು ಸೂಚಿಸಲು) ಮುಖ ಸೊಟ್ಟಗೆ ಮಾಡು. M.-filling ವಾಗಾಡಂಬರದ. M.-organ ಬಾಯಿಂದ ಬಾಜಿಸುವ ಕೆಲವು ತೆರದ ವಾದ್ಯ. Mouthpiece (ಕೊಳವಿ ಅಥವಾ ವಾದ್ಯ, ಮೊ. ನ್ನು) ಬಾಯಿಯ, ತುಟಿಗಳ, ಬಳಿ ಇಟ್ಟುಕೊಳ್ಳುವ ಭಾಗ ; ಬಾಯಿ ; ವದನಕ. ಮತ್ತೊಬ್ಬರಿಗಾಗಿ ಮಾತನಾಡುವವನು. (-)**mouthed** ಮೌದ್ಡ್ (ಗು.) ; **Moúthless** (ಗು.) ; **Moúthful** (ನಾ.) ಬಾಯಿತುಂಬು ; ಸ್ವಲ್ಪ ಮೊತ್ತ. **Moúthy** ಮೌದಿ (ಗು.) ಹಳಿಯುವ; ಬಯ್ಯುವ ; ಕೆಟ್ಟ ಬಾಯಿಯ ; ವಾಗಾಡಂಬರದ.

Mouth ಮೌದ್ (ಕ್ರಿ.) (ಮಾತನ್ನು) ಆಡಂಬರದಿಂದ, ಬಹಳ ಸ್ಪಷ್ಟ ವಾಗಿ, — ಉಚ್ಚರಿಸು, ಹೇಳು ; ಬಾಯಿತುಂಬ ಹೇಳು. (ಆಹಾರ, ಮೊ. ನ್ನು) ಬಾಯೊಳಗೆ ಹಾಕಿಕೊ ; (ವಸ್ತುವನ್ನು) ಬಾಯಿಂದ ಹಿಡಿದುಕೊ. (ಕುದುರೆಯನ್ನು) ಕಡಿವಾಣಕ್ಕೆ ಪಳಗಿಸು. ಮುಖ ಸೊಟ್ಟಗೆ ಮಾಡು.

Move ಮೂವ್ (ನಾ., ಕ್ರಿ.) ಚಲನೆ ; (ಚದುರಂಗ, ಮೊ. ಆಟಗಳಲ್ಲಿ) ಕಾಯಿ ನಡಸುವುದು; (ಆಟಗಾರನ) ಕಾಯಿ ನಡಸುವ ಸರದಿ. (ಉದ್ದೇಶ ಸಾಧನೆಗಾಗಿ ಕೈಕೊಂಡ) ಪ್ರಯತ್ನ, ಉಪಾಯ. [On the m. ಸಂಚರಿಸುತ್ತ ; ಸುತ್ತಾಡುತ್ತ ; ಪ್ರಯಾಣ ಮಾಡುತ್ತ. Make a m. ಹೊರಡು, (ಮು., ಊಟದ ಮೇಜು, ಮೊ. ನ್ನು) ಬಿಟ್ಟು ಎದ್ದು ಹೊರಡು. Get a m. on (ಅಸಂ.) ತ್ವರೆ ಮಾಡು ; ತವಕ ಪಡು]. (ಕ್ರಿ.) (ಒಂದರ) ಸ್ಥಳ ಬದಲಾಯಿಸು ; ಚಲಿಸು ; ಆಡು ; ಅಳ್ಳಾಡು ; ಕದಲು ; ಕದಲಿಸು ; ಸಂಚರಿಸು ; ಪ್ರಯಾಣ ಮಾಡು ; (ನಿರ್ಜೀವ ವಸ್ತುಗಳ ವಿಷಯದಲ್ಲಿ) ಸ್ಥಳ ಬದಲಾವಣೆ ಹೊಂದು. (ಚದುರಂಗ, ಮೊ. ಆಟಗಳಲ್ಲಿ ಕಾಯಿಯನ್ನು) ನಡಸು. ಚಲಿಸುವಂತೆ ಮಾಡು; ಅಳ್ಳಾಡು; ಅಳ್ಳಾಡಿಸು; ಕಲಕು [M. heaven & earth (ಮಾಡಲು) ಸರ್ವ, ವಿಶ್ವ, —ಪ್ರಯತ್ನ ಮಾಡು] ; (ಕೈಕಾಲು) ಆಡಿಸು ; ದೇಹದ ಆಸನ ಸ್ಥಿತಿಯನ್ನು ಬದ ಲಾಯಿಸು. (ಮಲ) ವಿಸರ್ಜನೆಯಾಗು(ವಂತೆ ಮಾಡು). (ನಗು, ಕೋಪ, ಮೊ. ನ್ನು, ಒಬ್ಬನಲ್ಲಿ) ಕೆರಳಿಸು (M. anger *in* person, M. person *to* anger). (ಒಬ್ಬನಲ್ಲಿ) ಸಾ., ಅನುಕಂಪ, ಕನಿಕರ, — ಹುಟ್ಟುವಂತೆ ಮಾಡು ; ಮನ ಕರಗಿಸು [**Móving** (ಗು.) ; **Móvingly** (ಕ್ರಿ. ವಿ.)]. (ಕಾರ್ಯದಲ್ಲಿ) ಪ್ರವೃತ್ತನಾಗುವಂತೆ ಮಾಡು, ಪ್ರೇರಿಸು [The spirit moves me (ಹಿಂದೆ Quaker ಪಂಥದವರ ಅರ್ಥದಲ್ಲಿ) ನನಗೆ ದೈವಪ್ರೇರಣೆಯಾಗಿದೆ ; (ಈಗಿನ ಅರ್ಥ) (ಮಾಡಲು) ನನಗೆ ಮನಸ್ಸು ಹುಟ್ಟಿದೆ]. (ನ್ಯಾಯಸ್ಥಾನ, ಮೊ. ಗಳಲ್ಲಿ) ವಿಧಿವಿಹಿತವಾಗಿ ಅಹವಾಲು ತರು, ಕೇಳಿಕೊ (*For* ಉಪ. ದೊಡನೆ). (ಒಂದು ಕಾರ್ಯ ನಡೆಯಬೇಕೆಂದು ಶಾಸನ ಸಭೆ, ಮೊ. ಗಳಲ್ಲಿ) ವಿಷಯವನ್ನು ತರು, ನಿರ್ಣಯ ಸೂಚಿಸು (*That* ಪದದೊಡನೆ). ಸ್ಥಳದಿಂದ ಸ್ಥಳಕ್ಕೆ ಹೋಗು, ಪ್ರಯಾಣ ಮಾಡು (*About*, *away* ಉಪ. ದೊಡನೆ) ; ಮುಂದುವರಿ ; ಸಾಗು (The work moves slowly). ಮನೆ ಬದಲಾಯಿಸು [M. about (ವಾಸಸ್ಥಾನವನ್ನು) ಪದೇ ಪದೇ ಬದಲಾಯಿಸುತ್ತಿರು. M. in ಹೊಸ ಮನೆಗೆ ಪ್ರವೇಶ ಮಾಡು ; —ಯನ್ನು ಸ್ವಾಧೀನಕ್ಕೆ ತೆಗೆದುಕೊ. M. on (ಒಂದೇ ಸ್ಥಳದಲ್ಲಿ ಬಹಳ ಹೊತ್ತು ನಿಂತಿರುವವನಿಗೆ ಪೊಲೀಸಿನವನ ಆಜ್ಞೆ) ಮುಂದಕ್ಕೆ ನಡೆ(ಯಿರಿ)! (ಹೀಗೆ ಆಜ್ಞೆ ಮಾಡಿ, ಒಬ್ಬನು) ಮುಂದಕ್ಕೆ ಸರಿಯುವಂತೆ ಮಾಡು]. (ಒಂದು ವಿಷಯದಲ್ಲಿ) ಕಾರ್ಯ ಕೈಕೊಳ್ಳು, ಮುಂದುವರಿ. **Móveless** (ಗು.) (ವಿರ. ಪ್ರ.) ; **Móvable, móveable** (ಗು., ನಾ.) ಚಲಿಸಲಾಗುವ ; ಚಲಿಸುವಂತೆ ಮಾಡಲಾಗುವ ; ಚಲ. (ಆಸ್ತಿ) ಚರ [ಸ್ಥಿರ (Real) ಎಂಬುದಕ್ಕೆ ಎದುರು ಪದವಾಗಿ]. [M. feast ವಾರದ ದಿನ ಒಂದೇ ಆಗಿರಬೇಕಾದುದ ರಿಂದ ಪ್ರತಿ ವರ್ಷವೂ ತಾರೀಖು ಬದಲಾಯಿಸಿ ಬರುವ ಹಬ್ಬ ; (ಹಾಸ್ಯ ವಾಗಿ) ಕಾಲ ಕ್ಲುಪ್ತವಿಲ್ಲದ ಊಟ]. (ನಾ.) (ಮನೆಯಿಂದ ಸಾಗಿಸ ಬಹುದಾದ ಪೀಠೋಪಸ್ಕರ, ಮೊ.) ಚರ ಸ್ವತ್ತು (Fixture ಎಂಬುದಕ್ಕೆ ಎದುರು ಪದವಾಗಿ). (ಬ. ವ. ದಲ್ಲಿ) (ಒಬ್ಬನ) ಚರಾಸ್ತಿ. **Movability** (ನಾ.) ; **Móvableness** (ನಾ.) ; **Móvement** (ನಾ.) ಚಲನೆ ; ಅಲುಗಾಟ ; ಸೈನ್ಯದ ಚಲನ ವಿನ್ಯಾಸ. ಯಂತ್ರದ ಚಲ ಭಾಗಗಳು ; ಇಂಥ ಭಾಗಗಳ ಗೊತ್ತಾದ ತಂಡ. ಮನಃಪ್ರವೃತ್ತಿ. (ಪದ್ಯ, ಕಥೆ, ಮೊ. ಗಳ) ವಿಕಸನ, ಬೆಳವಣಿಗೆ, ಮುನ್ನಡೆ. (ಸಂ.) ಓಟದ, ತಾಳದ, ನಡೆ ; ಸಂಗೀತಕೃತಿಯ ಮುಖ್ಯ ವಿಭಾಗ. (ಒಂದು ವಿಶೇಷೋದ್ದೇಶ ಸಾಧನೆಗಾಗಿ, —ಒಂದು ಸಂಸ್ಥೆಯ, ಜನತಂಡದ) ಕಾರ್ಯ ಪರಂಪರೆ, ಪ್ರಯತ್ನ ಪರಂಪರೆ, ಚಳವಳಿ (The prohibition m.). (ಒಂದು ಸರಕಿಗೆ, ಪೇಟೆಯಲ್ಲಿ) ಗಿರಾಕಿಯ ಚಟುವಟಿಕೆ. **Móver** (ನಾ.) (ಕ್ರಿಯಾರ್ಥಗಳಲ್ಲಿ). (ಸಭೆಯಲ್ಲಿ) ಸೂಚನೆ ತರುವವನು : ಸೂಚಕ. [Prime m. ಚಾಲಕ ಶಕ್ತಿಯ (ಪ್ರಾಕೃತಿಕ ಅಥವಾ ಯಾಂತ್ರಿಕ) ಆದಿಮೂಲ ; ಆದಿ; ಮೂಲ ; ಚಾಲಕ (ರೂಪ. ಸಹ)]. **Móvies** ಮೂವಿಸ್ (ನಾ., ಬ. ವ.) (ಅಸಂ.) ಚಲನ ಚಿತ್ರಗಳು. **Móvietone** ಒಂದು ಬಗೆಯ ವಾಕ್‌ಚಲನ ಚಿತ್ರ (= Moving pictures)

Mow[1] ಮೌ (ನಾ.) ಹುಲ್ಲು ಮೆದೆ, ಬಣವೆ ; ಧಾನ್ಯದ ರಾಶಿ, ಒಟ್ಟಿಲು ; ಇವನ್ನು ಇಡುವ ಚಾವಣಿಯುಳ್ಳ ಸ್ಥಳ ; ರೈತನ ದಾಸ್ತಾನು. Mow-burnt ಮೆದೆಯಲ್ಲಿ ಶಾಖವೇರಿ ಕೆಟ್ಟುಹೋದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Mow[2] ಮೋ, ಮೌ (ನಾ., ಕ್ರಿ. ಅಕ.). **Mop**[2] ನೋಡಿ.

Mow[3] ಮೋ (ಕ್ರಿ. ಸಕ.; ಭೂತ., ಭೂ. ಕೃ. mowed, mown) ಕುಡುಗೋಲಿನಿಂದ, ಯಂತ್ರದಿಂದ, (ಹುಲ್ಲು, ಬೆಳೆ, ಮೊ. ನ್ನು) ಕೊಯ್ಯಿ; ಕೊಯ್ಲು ಮಾಡು; ಕಟಾವು ಮಾಡು. ಒಟ್ಟೊಟ್ಟಾಗಿ ಧ್ವಂಸ ಮಾಡು; ಅಧಿಕ ಸಂಖ್ಯೆಯಲ್ಲಿ ಕತ್ತರಿಸಿ, ತರಿದು, ಹಾಕು (*Off, down* ಉಪ. ದೊಡನೆ). **Mower** (ನಾ.)

Moxa ಮಾಕ್ಸ (ನಾ.) ಸಂಧಿವಾತ ರೋಗದಲ್ಲಿ ಪ್ರತ್ಯುದ್ರೇಕಕಾರಿಯಾಗಿ ಚರ್ಮದಮೇಲಿಟ್ಟು ಸುಡುವ 'ಮೋಕ್ಸ' ಗಿಡದ ಒಣಗಿ(ಸಿ)ದ ಎಲೆಗಳಿಂದ ತಯಾರಿಸಿದ ತುಪ್ಪುಳಿನಂಥ ಪದಾರ್ಥ; ಹೀಗೆ ಪ್ರತ್ಯುದ್ರೇಕಕಾರಿಯಾಗಿ ಉಪಯೋಗಿಸುವ ಯಾವುದಾದರೂ ಪದಾರ್ಥ.

Moya ಮೋಯ (ನಾ.) ಜ್ವಾಲಾಮುಖಿ ಸಂಬಂಧವಾದ ಮಣ್ಣು.

Mr ಮಿಸ್ಟರ್ (Mister ಪದದ ಸಂಕ್ಷಿಪ್ತ)

Mrs ಮಿಸಿಸ್ (Mistress ಪದದ ಸಂಕ್ಷಿಪ್ತ)

Mu (Gk) ಮ್ಯೂ, ಮೂ (ನಾ.) ಗ್ರೀಕ್ ವರ್ಣಮಾಲೆಯಲ್ಲಿ ಇಂಗ್ಲಿಷಿನ M ವರ್ಣಕ್ಕೆ ಜವಾಬಾದ ಅಕ್ಷರ (M, μ)

Much ಮಚ್ (ಗು., ಕ್ರಿ. ವಿ.) ಹೆಚ್ಚಾದ; ಹೆಚ್ಚು ಮೊತ್ತದ; ಹೆಚ್ಚಾಗಿ; ಅಧಿಕ, ಬಹಳ, ಹೇರಳ, — ಆದ; — ಆಗಿ. [Too m. noise. M. of what you say is true. Too m. for — ಮೀರಿದ್ದು, ಅಸಾಧ್ಯವಾದದ್ದು. Think, make, m. of (ಆಯಾ ಪದವನ್ನು ನೋಡಿ). He is not m. of a scholar ಅವನು ಅಷ್ಟೇನೂ ಪಂಡಿತನಲ್ಲ. I m. regret the mistake ತಪ್ಪಿಗಾಗಿ ನಾನು ಬಹಳ ವಿಷಾದಪಡುತ್ತೇನೆ. M. the most likely]. ಬಹು ಮಟ್ಟಿಗೆ; ಹತ್ತಿರ ಹತ್ತಿರ; ಸರಿ ಸುಮಾರಾಗಿ. M. of a size ಸರಿ ಸುಮಾರು ಅದೇ ಗಾತ್ರ. **Múchly** (ಕ್ರಿ. ವಿ.) (ಹಾಸ್ಯ ಪ್ರ.) ಬಹಳವಾಗಿ; ವಿಪರೀತವಾಗಿ. **Múchness** (ನಾ.) (ಮೊತ್ತದಲ್ಲಿ ಅಥವಾ ಪರಿಮಾಣದಲ್ಲಿ) ಹೆಚ್ಚು, ಆಧಿಕ್ಯ, ಬಾಹುಳ್ಯ. Much of a m. ಬಹು ಮಟ್ಟಿಗೆ, ಸರಿ ಸುಮಾರು, — ಅದೇ, ಒಂದೇ.

Múcilage ಮ್ಯೂಸಿಲೆ(ಲಿ)ಜ್ (ನಾ.) (ಹಲವು ಸಸ್ಯಗಳ) ಅಂಟು (ಪದಾರ್ಥ); ಗೋಂದು; (ಪ್ರಾಣಿದೇಹದಲ್ಲಿ) ಅಂಟು ದ್ರವ (ಉದಾ., ಸಿಂಬಳ, ಶ್ಲೇಷ್ಮ). **Muciláginous** — ಲ್ಯಾಜಿ— (ಗು.)

Muck ಮಕ್ (ನಾ., ಕ್ರಿ.) ಕೊಟ್ಟಿಗೆಯ ಗೊಬ್ಬರ; ಕೊಳಕು; ಕಶ್ಮಲ. (ಬಳ. ಮಾ.) ಅಸಹ್ಯವಾದದ್ದು; ಹೇಸಿಗೆ; ಕೊಳಕು ಸ್ಥಿತಿ; ಹೊಲಸು; [M.-rake ಗೊಬ್ಬರ ಬಾಚುವ ಹಲುಬೆ (ಸಾ., ರೂಪ.). Muckworm ಕೊಳಕಿನಲ್ಲಿಯ, ಗೊಬ್ಬರದ, ಹುಳು. (ರೂಪ.) ಧನ ಲೋಭಿ. ಬೀದಿ ಪೋರ; ದಿಕ್ಕಿಲ್ಲದ ಮಗು]. (ಕ್ರಿ.) ಕೊಳೆ ಮಾಡು; ಹೇಸಿಕೆ ಮಾಡು. (ಅಸಂ.) (ಕೆಲಸವನ್ನು) ಅವ್ಯವಸ್ಥೆ ಮಾಡು, ಕುಲಗೆಡಿಸು. (ಅಸಂ.) ಯಾವ ಗುರಿಯೂ ಇಲ್ಲದೆ ಸುಮ್ಮನೆ ಅಲೆದಾಡು (*About* ಉಪ. ದೊಡನೆ). **Múcky** (ಗು.)

Múcker ಮಕರ್ (ನಾ.) (ಅಸಂ.) ಬಲವಾಗಿ ಬೀಳುವುದು (ರೂಪ. ಸಹ). Come a m. ಬಲವಾಗಿ ಬೀಳು; ಕೇಡಿಗೆ ಈಡಾಗು. Go a m. ದುಂದುವೆಚ್ಚಕ್ಕೆ ಬೀಳು (*On, over* ಉಪ. ದೊಡನೆ)

Múckle ಮಕ್‌ಲ್ (ಗು., ನಾ.) = Mickle.

Múcous, etc. **Mucus** ನೋಡಿ.

Múcro ಮ್ಯೂಕ್ರೊ (ನಾ.) (ಸ. ವಿ., ಪ್ರಾ. ವಿ.) ಮೊನಚು ಭಾಗ; ಮೊನಚು ಅಂಗ. **Múcronate** — ನೆಟ್ (ಗು.) ಮೊನಚಾದ.

Múcus ಮ್ಯೂಕಸ್ (ನಾ.) (ಹೊರಕ್ಕೆ ತೆರೆದಿರುವ ದೇಹದ ಒಳಭಾಗಗಳ ನಯಚರ್ಮದಿಂದ ಒಸರುವ) ಜಾರಿಕೆಯ, ಲೋಳೆಯ, — ಪದಾರ್ಥ. (ಸಸ್ಯಗಳ) ಅಂಟುಪದಾರ್ಥ; ಗೋಂದು; ಕೆಲವು ಪ್ರಾಣಿಗಳು (ಮು., ಮೀನುಗಳು) ಒಸರಿಸುವ ಲೋಳೆಯ ಪದಾರ್ಥ. **Múcous** (ಗು.) ದೇಹದ ಲೋಳೆಯ; — ಲೋಳೆ ಹರವಿದ (M. membrane ಲೋಳೆಗೂಡಿದ ನಯಚರ್ಮ). **Mucósity** ಮ್ಯುಕಾ— (ನಾ.) — ಗುಣ, ಲಕ್ಷಣ.

Mud ಮಡ್ (ನಾ.) ಒದ್ದೆಯಾದ ಮೆತುಮಣ್ಣು; ಹಸಿ ಮಣ್ಣು; ಕೆಸರು (ಮಣ್ಣು); ಬುರುದೆ. (ರೂಪ.) ತೀರ ನಿಕೃಷ್ಟವಾದದ್ದು; ಕಳಂಕ (ಮಾಡುವಂಥದು); ಪಂಕ. Fling, throw, m. ಒಬ್ಬನ ಹೆಸರಿಗೆ ಕೆಸರೆರಚು, ಕಳಂಕ ಹಚ್ಚು; (ಒಬ್ಬನ) ಹೆಸರು ಕಡಿಸು; ಅಪಮಾನಕರವಾದ ಆರೋಪಣೆ ಮಾಡು. Stick in the m. (Stick ನೋಡಿ). M.-bath (ವಾತರೋಗ, ಮೊ. ಗಳ ಚಿಕಿತ್ಸೆಗಾಗಿ ಖನಿಜ ಜಲದ ಬುಗ್ಗೆಗಳ) ಮೃತ್ತಿಕಾ ಸ್ನಾನ. Mudguard (ಸವಾರನಿಗೆ ಕೆಸರು ಸಿಡಿಯದಂತೆ ಬೈಸಿಕಲ್, ಮೊ. ಗಳ ಚಕ್ರದ ಮೇಲ್ಗಡೆ ಹಾಕಿರುವ) ಲೋಹದ ತಡೆಪಟ್ಟಿ; ಕೆಸರುಕಾಪು. Mudlark ಮಣ್ಣಿನಲ್ಲಿ ಆಡುವವನು, ಕೆಲಸಮಾಡುವವನು (ಮು., ಬೀದಿಯ ಪೋರ). M. pie (ಮಗು ಮಾಡಿದ) ಮಣ್ಣಿನ ರೊಟ್ಟಿ. M. volcano ಮಣ್ಣು ಕಾರುವ ಜ್ವಾಲಾಮುಖಿ. **Múddy** ಮಡಿ (ಗು., ಕ್ರಿ. ಸಕ.) ಮಣ್ಣಿನಿಂದ ಕೂಡಿದ; ಕೆಸರಿನಂಥ; ಕೆಸರು ತುಂಬಿದ; ಕೆಸರು ತೊಡೆದ; ಕೆಸರಾದ; ಬುರುದೆಯ. (ಬೆಳಕು) ಮಬ್ಬಾದ; (ಧ್ವನಿ) ದಪ್ಪವಾದ, ಭಾರವಾದ; ಗಲಿಬಿಲಿಯಾದ; ದಿಗ್ಭ್ರಮೆ ಹಿಡಿದ; ಮಸುಕಾದ; ಅಸ್ಪಷ್ಟವಾದ. (ಕ್ರಿ.) — ಮಾಡು. **Múddily** (ಕ್ರಿ. ವಿ.); **Múddiness** (ನಾ.)

Mudár, Ma- ಮಡಾರ್ (ನಾ.) (ಬೇರುತೊಗಟೆ ಔಷಧಕ್ಕೂ ಕಾಂಡದ ಒಳತೊಗಟೆ ರೇಷ್ಮೆಯಂಥ ನಾರು ತೆಗೆಯುವುದಕ್ಕೂ ಉಪಯೋಗವಾದ) ಇಂಡಿಯದ ಒಂದು ಗಿಡ: ಎಕ್ಕದ ಗಿಡ. (ಹಿಂದಿ: ಮದಾರ್)

Múddle ಮಡ್‌ಲ್ (ನಾ., ಕ್ರಿ.) ಅವ್ಯವಸ್ಥೆ; ಗಲಿಬಿಲಿ; ತೊಡಕು (Make a m. of); [Muddle-headed(ness) ಬುದ್ಧಿ ತೊಡರಿನ; — ರು]. (ಕ್ರಿ.) (ಮು., ಕುಡಿತದಿಂದ) ತಬ್ಬಿಬ್ಬು ಮಾಡು; ತೊಡಕು ಮಾಡು; ದಿಗ್ಭ್ರಮೆ ಹಿಡಿಸು; (ವಸ್ತುಗಳನ್ನು) ತಪ್ಪು ತಪ್ಪಾಗಿ ಸೇರಿಸು, ಬೆರಸು (*Up, together* ಪದದೊಡನೆ). (ಸಂದರ್ಭವನ್ನು) ಅವ್ಯವಸ್ಥೆ ಮಾಡಿಸು; ಬರಿಯ ಗಲಿಬಿಲಿ ಮಾಡು. M. on ಅದೃಷ್ಟ ನಡಸಿದಂತೆ ತಳ್ಳಿಕೊಂಡು ಹೋಗು. M. through (ಬುದ್ಧಿಯಿಂದಲ್ಲದೆ) ಹಾಗೂ ಹೀಗೂ ಗುರಿ ಮುಟ್ಟು, ತೊಂದರೆಯಿಂದ ಬಚಾಯಿಸಿಕೊ.

Muézzin ಮುಯೆಸಿನ್ (ನಾ.) (ಮಸೀದಿಯ ಸ್ತಂಭಗೋಪುರದಿಂದ ಪ್ರಾರ್ಥನೆಯ ಕಾಲಗಳನ್ನು ಘೋಷಿಸುವ) ಮಹಮ್ಮದೀಯ ಘೋಷಕ.

Muff[1] ಮಫ್ (ನಾ.) (ಕೈಗಳೆರಡನ್ನೂ ಬೆಚ್ಚಗಿಟ್ಟುಕೊಳ್ಳುವುದಕ್ಕಾಗಿ ಒಳಕ್ಕೆ ತೂರಿಸುವ) (ಸಾ., ಉರುಳೆಯಾಕಾರದ, ತುಪ್ಪುಳು, ಮೊ. ಗಳಿಂದ ಮಾಡಿದ) ಹೆಂಗಸಿನ ಕೈಗವಸು. Foot-m. ಕಾಲ್ಜೋಡಿಗೆಯಾಗಿ ಉಪಯೋಗಿಸುವ ಇದೇ ತರದ ಗವಸು.

Muff[2] ಮಫ್ (ನಾ., ಕ್ರಿ. ಸಕ.) ಗುಗ್ಗು; ದಡ್ಡ; ಹೆಡ್ಡ (ಹಿಂದೆ, ಯಾವುದಾದರೂ ವ್ಯಾಯಾಮದ ಆಟದಲ್ಲಿ). ತಪ್ಪಿಹೋಗುವುದು; ಅಪಜಯ ಪಡೆಯುವುದು (ಮು., ಕ್ರಿಕೆಟ್, ಮೊ. ಆಟದಲ್ಲಿ ಚೆಂಡನ್ನು ಬುತ್ತಿ ಹಿಡಿಯದೆ ತಪ್ಪುವುದು). (ಕ್ರಿ.) ಅವ್ಯವಸ್ಥೆ ಮಾಡು; (ಬುತ್ತಿ, ಚೆಂಡು, ಮೊ. ನ್ನು) ಹಿಡಿಯದೆ ತಪ್ಪು. **Múffish** (ಗು.)

Muffeteé ಮಫಟೀ (ನಾ.) ಉಣ್ಣೆಯ ಮಣಿಕಟ್ಟು ಪಟ್ಟಿ.

Múffin ಮಫಿನ್ (ನಾ.) ಹಗುರವಾದ, ದುಂಡಗೂ ಚಪ್ಪಟೆಯಾಗಿಯೂ ಇರುವ, ಮೆತು ದೋಸೆ. M.-bell ಈ ದೋಸೆ ಮಾರುವವನು ಬಾರಿಸುವ ಗಂಟೆ. M.-man ಈ ದೋಸೆ ಮಾರುವವನು. **Muffineér** ಮಫಿನಿಯರ್ (ನಾ.) ದೋಸೆಯಮೇಲೆ ಉಪ್ಪು ಅಥವಾ ಸಕ್ಕರೆ ಉದುರಿಸುವ, ಕಂಡಿಗಳುಳ್ಳ ಸಣ್ಣ ಡಬ್ಬಿ.

Muffineér. **Muffin** ನೋಡಿ.

Múffle[1] ಮಫ್‌ಲ್ (ನಾ.) (ಹಲ್ಲುಗಳಿಂದ ಕಡಿಯುವ ಪ್ರಾಣಿಗಳ ಮತ್ತು ಮೆಲುಕುಪ್ರಾಣಿಗಳ) ಮೇಲ್ಮೂಸುಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Múffle[2] ಮಫ್ಲ್ (ನಾ., ಕ್ರಿ. ಸಕ.) (ಬಟ್ಟೆ, ಮೊ. ನ್ನು ಹರಿದುಹಾಕುವ ಪ್ರವೃತ್ತಿಯುಳ್ಳ ಹುಚ್ಚರ ಕೈಗೆ ತೊಡಿಸುವ) ತೊಗಲಿನ ಕೈಚೀಲ. (ಬೇಲ ನವರುವವನು ಹಾಕಿಕೊಳ್ಳುವ, ಹೆಬ್ಬೆಟ್ಟು ಮಾತ್ರವುಳ್ಳ) ಮೊಂಡು ಕೈಚೀಲ. (ಬೆಂಕಿಗೆ, ಉರಿಗೆ, ಸಾಕ್ಷಾತ್ತಾಗಿ ಸಂಪರ್ಕವಿಲ್ಲದಂತೆ ಪದಾರ್ಥಗಳನ್ನು ಕಾಯಿಸಲು) ಶಾಖದ ಗೂಡಿನಲ್ಲಿಡುವ ಪಾತ್ರೆ; ಆವಿಗೆಯಲ್ಲಿ ಕುಂಬಾರ ವಸ್ತುಗಳನ್ನು ಸುಡುವ ಪ್ರತ್ಯೇಕ ಆವರಣ. (ಕ್ರಿ.) ಬೆಚ್ಚಗಿಡುವುದಕ್ಕಾಗಿ, ಶಾಖಕ್ಕಾಗಿ, ಕುತ್ತಿಗೆ, ಮೊ. ಕ್ಕೆ ಸುತ್ತಿಕೊ, ಹೊದೆದುಕೊ (*Up* ಉಪ. ದೊಡನೆ). ಮಾತನಾಡಲಾಗದಂತೆ (ಒಬ್ಬನ) ತಲೆಗೆ ಮುಸುಕುಗಟ್ಟು. ಶಬ್ದವನ್ನು ಮಂದಗೊಳಿಸಲು (ದೋಣಿಯ ಹುಟ್ಟು, ಗಂಟೆ, ನಗಾರಿ, ಕುದುರೆಯ ಗೊರಸು— ಇವಕ್ಕೆ) ಬಟ್ಟೆ, ಮೊ. ನ್ನು ಸುತ್ತು ; ದನಿಗುಂದಿಸು. (ಶಾಪ, ಮೊ. ಗಳ) ಶಬ್ದವನ್ನು ಅಡಗಿಸು, ಕುಂದಿಸು (ನಾ., ಭೂ. ಕೃ. ನಲ್ಲಿ). **Múffler** ಮಫ್ಲರ್ (ನಾ.) (ಬೆಚ್ಚಗಿಡುವುದಕ್ಕಾಗಿ, ಶಾಖಕ್ಕಾಗಿ, ಸುತ್ತಿಕೊಂಡ) ಕೊರಳಸುತ್ತು ; ಕಂಠವಸ್ತ್ರ, ಮುಷ್ಟಿಕಾಳಗದ ಕೈಚೀಲ ; ದಪ್ಪ ಕೈಚೀಲ. ಶಬ್ದ ಮಂದಕಾರಿ (ಮು., Piano ವಾದ್ಯದ ಸುತ್ತಿಗೆಗೂ ತಂತಿಗೂ ಮಧ್ಯದ ಫಲ್ಲನ ಮೆತ್ತೆ)

Múfti ಮಫ್ಟಿ (ನಾ.) ಮುಸಲ್ಮಾನ್ ಪುರೋಹಿತ, ನ್ಯಾಯ ಪ್ರತಿಪಾದಕ (ಮು., ತುರ್ಕಿಯಲ್ಲಿ ಅಧಿಕಾರಯುತ ಮತಧರ್ಮಾಧ್ಯಕ್ಷ). (ಅಧಿಕಾರದ ಉಡುಪು ಧರಿಸಲುಳ್ಳವನು ತೊಡುವ) ಸಾದಾ ಉಡುಪು ; ವೇಷ ದಿರುಸು (ಮು., In m.)

Mug[1] ಮಗ್ (ನಾ.) (ಸಾ., ಉರುಳೆಯಾಕಾರದ, ಹಿಡಿಯಿರುವ ಅಥವಾ ಇಲ್ಲದ) ಕುಡಿಯುವ ಪಾತ್ರೆ ; ಸಣ್ಣ ಕೊಳಗಪಾತ್ರೆ ; ಅದರ ತುಂಬು ; (ಅದರಲ್ಲಿರುವ) ಪಾನೀಯ ; ಶೀತಲ ಪಾನೀಯ. (ಅಸಂ.; ಬೇರೆ ಪದ ವಿರಬಹುದು) ಮುಖ ; ಬಾಯಿ.

Mug[2] ಮಗ್ (ನಾ.) (ಅಸಂ.) ಗುಗ್ಗು ; ಗಾಂಪ ; ಶುಂಠ.

Mug[3] ಮಗ್ (ಕ್ರಿ., ನಾ.) (ಅಸಂ.) (ಪಾಠವನ್ನು) ಕಷ್ಟಪಟ್ಟು ಗಟ್ಟಿ ಮಾಡು, ಉರುಹಾಕು ; (ಯಾವುದಾದರೂ ಒಂದು ವಿಷಯವನ್ನು) ಹೃದ್ಗತ ಮಾಡಿಕೊ (= M. up). (ನಾ.) ಕಷ್ಟಪಟ್ಟು ಓದುವವನು ; ಉರು ಹಚ್ಚುವವನು. ಪರೀಕ್ಷೆ.

Múgger ಮಗರ್ (ನಾ.) ಅಗಲವಾದ ಮುಸುಡಿಯ ಇಂಡಿಯದ ಮೊಸಳೆ. (ಹಿಂದಿ : ಮಗರ್)

Múggins ಮಗಿನ್ಸ್ (ನಾ.) = Mug[2]. ಮಕ್ಕಳ ಒಂದು ತೆರದ ಇಸ್ಪೀಟಾಟ ; 'ಡಾಮಿನೋಸ್' ಆಟ.

Múggy ಮಗಿ (ಗು.) (ವಾಯುಸ್ಥಿತಿ, ದಿನ, ಮೊ. ವು) ತೇವಗೂಡಿಯೂ ಬೆಚ್ಚಗೂ ಇರುವ ; ಆರ್ದ್ರ ಶಾಖಯುತ ; ಉಸಿರು ಕಟ್ಟುವಂತಿರುವ ; ಉಸಿರಾಡಲು ತಕ್ಕಷ್ಟು ಗಾಳಿಯಿಲ್ಲದ. **Mùgginess** (ನಾ.)

Múgwump ಮಗ್‌ವಂಪ್ (ನಾ.) (ಅಮೆ. ಸಂ.) ದೊಡ್ಡ ವ್ಯಕ್ತಿ ; ಪ್ರಸಿದ್ಧ, ಗಣ್ಯ, —ಪುರುಷ, ಯಜಮಾನ ; ಧಣಿ. ರಾಜಕೀಯದ ಯಾವ ಪಕ್ಷಕ್ಕೂ ಸೇರದಿರುವವನು.

Muhámmadan = Mohammedan.

Mulátto ಮ್ಯುಲ್ಯಾಟೊ (ನಾ., ಗು.) ಐರೋಪ್ಯನಿಗೂ ನೀಗ್ರೋವಿಗೂ ಹುಟ್ಟಿದ ಸಂತಾನ : 'ಮ್ಯುಲ್ಯಾಟೊ'. (ಗು.) ಮ್ಯುಲ್ಯಾಟೊ ವರ್ಣದ ; ಹಳದಿಗೂಡಿದ ಕಂದುಬಣ್ಣದ.

Múlberry ಮಲ್‌ಬೆರಿ (ನಾ.) ಉಪ್ಪುನೇರಿಳೆ (ಗಿಡ, ಹಣ್ಣು) (ಎಲೆಯನ್ನು ರೇಷ್ಮೆಹುಳುಗಳಿಗೆ ಮೇವಿಗಾಗಿ ಉಪಯೋಗಿಸುತ್ತಾರೆ). M. bush ಮಕ್ಕಳು ಹಾಡುತ್ತ ಆಡುವ ಒಂದು ತೆರದ ಆಟ.

Mulch ಮಲ್ಷ್(ರ್ಚ್) (ನಾ., ಕ್ರಿ. ಸಕ.) ಹೊಸದಾಗಿ ನಾಟಿದ ಗಿಡಗಳ ಬೇರಿಗೆ ರಕ್ಷಣೆಯಾಗಿ ಹೊದಿಸುವ ಅರ್ಧ ಕೊಳೆತ ಹುಲ್ಲು, ಎಲೆ, ಮಣ್ಣು, ಮೊ. ಗಳ ಮಿಶ್ರಣ. (ಕ್ರಿ.) ಈ ಮಿಶ್ರಣ ಹೊದಿಸು.

Mulct ಮಲ್ಕ್ಟ್ (ನಾ., ಕ್ರಿ. ಸಕ.) ತಪ್ಪಿತಕ್ಕಾಗಿ ವಿಧಿಸಿದ ದಂಡ, ಜುಲ್ಮಾನೆ. (ಕ್ರಿ.) ಜುಲ್ಮಾನೆ ಹಾಕು ; ದಂಡ ವಿಧಿಸು. (ಒಬ್ಬನ ಅನುಭವದಲ್ಲಿರುವುದನ್ನು) ಕಿತ್ತುಕೊ ; ಹಕ್ಕು ತಪ್ಪಿಸು (*Of* ಉಪ. ದೊಡನೆ)

Mule[1] ಮ್ಯೂಲ್ (ನಾ.) [ಹೆಣ್ಣುಕುದುರೆಯಲ್ಲಿ ಗಂಡುಕತ್ತೆಗೆ, ಅಥವಾ (ಬಳಕೆಯಲ್ಲಿ) ಹೆಣ್ಣುಕತ್ತೆಯಲ್ಲಿ ಗಂಡುಕುದುರೆಗೆ ಹುಟ್ಟಿದ (ರೂಢಿ ಪದ Hinny), ಭಾರವೆಳೆಯಲು ಅಥವಾ ಭಾರ ಹೊರಲು ಉಪಯೋಗಿಸುವ, ಮೊಂಡುತನಕ್ಕೆ ಹೆಸರಾದ] ಹೇಸರಗತ್ತೆ. ದಡ್ಡ ; ಮೊಂಡ. ಬೆರಕೆ ಜಾತಿಯ ಸಸ್ಯ, ಪ್ರಾಣಿ. ಒಂದು ಬಗೆಯ ನೂಲುವ ಯಂತ್ರ. **Múlish** (ಗು.) ; **Múlishly** (ಕ್ರಿ. ವಿ.) ; **Múlishness** (ನಾ.) ; **Muleteér** ಮ್ಯೂಲೆಟಿಯರ್ (ನಾ.) ಹೇಸರಗತ್ತೆಯನ್ನು ನಡಸುವವನು.

Mule[2] ಮ್ಯೂಲ್ (ಕ್ರಿ. ಅಕ.) = Mewl.

Muleteér. **Mule**[1] ನೋಡಿ.

Mull[1] ಮಲ್ (ನಾ.) ತೆಳುವಾದ ಸಾದಾ ಮಸ್ಲಿನ್ ಬಟ್ಟೆ : ಮಲ್ ಬಟ್ಟೆ.

Mull[2] ಮಲ್ (ನಾ., ಕ್ರಿ. ಸಕ.) ಅವ್ಯವಸ್ಥೆ ; ಗಲಿಬಿಲಿ (ಮು., Make a m. of). (ಕ್ರಿ.) —ಮಾಡು.

Mull[3] ಮಲ್ (ಕ್ರಿ. ಸಕ.) (ದ್ರಾಕ್ಷಾ ಮದ್ಯವನ್ನು ಅಥವಾ ಬಿಯರ್ ಮದ್ಯವನ್ನು) ಸಕ್ಕರೆ, ಸುವಾಸನಾ ದ್ರವ್ಯಗಳು, ಮೊಟ್ಟೆಯ ಲೋಳೆ, ಮೊ. ನ್ನು ಸೇರಿಸಿ, ಬಿಸಿಕುಡಿತ ಮಾಡು.

Múllah, Moóllah ಮಲ, ಮುಲ (ನಾ.) ದೇವತಾ ಶಾಸ್ತ್ರದಲ್ಲೂ ಧರ್ಮ ಶಾಸ್ತ್ರದಲ್ಲೂ ಪಂಡಿತನಾದ ಮಹಮ್ಮದೀಯ : ಮುಲ್ಲ.

Múllein ಮಲೆ(ಲಿ)ನ್ (ನಾ.) ಉಣ್ಣೆಯಂತಿರುವ ಮೈಯಿಂದ ಕೂಡಿದ ಎಲೆಗಳುಳ್ಳ, ಹಳದಿಯ ಹೂವು ಬಿಡುವ, ಒಂದು ಸಸ್ಯ : ಕಾಡು ಹೊಗೆ ಸೊಪ್ಪು.

Múller ಮಲರ್ (ನಾ.) (ಚಪ್ಪಟೆ ತಳದ) ಅರೆಯುವ ಕಲ್ಲು (ಬಣ್ಣ, ಔಷಧ ವಸ್ತುಗಳು, ಮೊ. ನ್ನು ಅರೆಯುವುದಕ್ಕೆ ಉಪಯೋಗ)

Múllet ಮಲೆಟ್ (ನಾ.) ಒಂದು ಜಾತಿಯ ಮೀನು (Red & Grey M.)

Mulligatawny ಮಲಿಗಟಾನಿ (ನಾ.) ಮೆಣಸಿನ ನೀರು ('ಮಿಳಗು ತಣ್ಣಿ' ಎಂಬ ತಮಿಳು ಪದದಿಂದ) (= M. soup). M. paste ಮೆಣಸಿನ ನೀರಿಗೆ ಹಾಕುವ ಸಂಬಾರದ ಕಲ್ಕ, ಚಟ್ನಿ.

Múlligrubs ಮಲಿಗ್ರಬ್ಸ್ (ನಾ., ಬ. ವ.) ಉತ್ಸಾಹ ಶೂನ್ಯತೆ; ವಿಷಣ್ಣತೆ; ಖಿನ್ನತೆ. ಹೊಟ್ಟೆಯ ನೋವು.

Múllion ಮಲ್ಯನ್ (ನಾ.) ಕಿಟಕಿಯ ಭಾಗಗಳ ಉದ್ದ ಪಟ್ಟಿ. **Múllioned** (ಗು.)

Múllock ಮಲಕ್ (ನಾ.) (ಆಸ್ಟ್ರೇಲಿಯ) ಚಿನ್ನ ದೊರೆಯದ ಶಿಲೆ ; (ಚಿನ್ನ ತೆಗೆದುಕೊಂಡು ಉಳಿದ) ಅದುರಿನ ಕಸರು ; ಅದುರುಳಿಕೆ ; (ಪ್ರಾಂ. ಪ್ರ.) ಕಸ.

Multángular ಮಲ್ಟ್ಯಾಂಗ್ಯುಲರ್ (ಗು.) ಬಹು ಕೋನಗಳುಳ್ಳ ; ಬಹು ಕೋನಿ.

Multéity ಮಲ್ಟೀಯಿಟಿ (ನಾ.) ನಾನಾತ್ವ ; ಬಹುತ್ವ.

Múlti- ಮಲ್ಟಿ— (ಸ. ಪೂ. ಪ.) (ಸ್ವರದ ಹಿಂದೆ ಕೆಲವು ವೇಳೆ mult-) ಹಲವು— ; ಅನೇಕ— ; ಬಹು—. **-colour(ed)** ಹಲವು ಬಣ್ಣ(ದ) ; ಬಹು ವರ್ಣ(ರ್ಣಿ). **-fid** (ಸ. ವಿ., ಪ್ರಾ. ವಿ.) ಹಲವು ಭಾಗಗಳಾಗಿ ಸೀಳಿರುವ : ಬಹು ವಿಭಕ್ತ. **-flórous** (ಕಾಂಡದಲ್ಲಿ) ಮೂರಕ್ಕಿಂತ ಹೆಚ್ಚು ಹೂವುಳ್ಳ : ಬಹು ಪುಷ್ಪೀಯ. **-foil** (ವಾ. ಶಾ.) (ಅಲಂಕಾರದ ಕಿಟಕಿಯಲ್ಲಿ) ಐದಕ್ಕಿಂತ ಹೆಚ್ಚಾದ ಎಲೆಯಾಕಾರದ ಕಮಾನುಗಳ ಅಲಂಕಾರ. **-form** ಬಹು ರೂಪಿ(ಯಾದ) ; ಬಹು ವಿಧದ. **-fórmity** (ನಾ.) ಬಹು ರೂಪತೆ. **-láteral** ಅನೇಕ ಪಾರ್ಶ್ವಗಳುಳ್ಳ ; ಬಹು ಭುಜಿ. **-millionaíre** ಕೋಟ್ಯಧೀಶ ; ನವ ಕೋಟಿ ನಾರಾಯಣ. **-nómial** (ಗು., ನಾ.) (ಬೀ. ಗ.) ಎರಡು ಪದಗಳಿಗಿಂತ ಹೆಚ್ಚಾಗಿರುವ ರಾಶಿ ; ಬಹು ಪದ ರಾಶಿ. **Multíparous** (—ಪರಸ್)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ಸಲಕ್ಕೆ ಹಲವು ಮರಿಗಳನ್ನು ಹಾಕುವ; (ಹೆಂಗಸು) ಒಂದಕ್ಕಿಂತ ಹೆಚ್ಚು, ಹಲವು, ಮಕ್ಕಳನ್ನು ಹಡೆದಿರುವ. **-pártite** ಬಹು ಭಾಗಗಳಾಗಿ ವಿಂಗಡಿಸಿರುವ. **-valve** (ಗು., ನಾ.) (ಹಲವು ಪ್ರತ್ಯೇಕ ಭಾಗಗಳುಳ್ಳ) (ಪ್ರಾಣಿಯ) ಚಿಪ್ಪು; ಇಂಥ ಚಿಪ್ಪಿನ ಪ್ರಾಣಿ. **Multívocal** (— ಟಿವೊ —) ನಾನಾರ್ಥಗಳುಳ್ಳ (ಪದ). **Multócular** (— ಟಾ —) ಹಲವು ಕಣ್ಣುಗಳುಳ್ಳ. **Multúngulate** ಮಲ್ಟಂಗ್ಯುಲೆಟ್ (ಗು., ನಾ.) ಉಪಯೋಗಕ್ಕೆ ಬರುವ ಎರಡಕ್ಕಿಂತಲೂ ಹೆಚ್ಚು ಗೊರಸುಗಳುಳ್ಳ (ಪ್ರಾಣಿ)

Multifárious ಮಲ್ಟಿಫೇರಿಯಸ್ (ಗು.) ಬಹು ಪ್ರಕಾರದ; ನಾನಾ ಬಗೆಯ; ವಿವಿಧ. (ಬ. ವ. ದ ನಾಮವಾಚಕದೊಡನೆ) ಅನೇಕ ಮತ್ತು ವಿವಿಧ. **Multifáriously** (ಕ್ರಿ. ವಿ.); **Multifáriousness** (ನಾ.)

Múltiple ಮಲ್ಟಿಪ್‌ಲ್ (ಗು., ನಾ.) ಹಲವು ಭಾಗಗಳುಳ್ಳ; ಬಹ್ವಂಶಗಳುಳ್ಳ; ಬಹು ಘಟಕಗಳುಳ್ಳ (M. shop ಹಲವೆಡೆಗಳಲ್ಲಿ ಶಾಖೆಗಳುಳ್ಳ ಅಂಗಡಿ). (ಬ. ವ. ದ ನಾಮವಾಚಕದೊಡನೆ) ಅನೇಕ ಮತ್ತು ವಿವಿಧ. ಅಪವರ್ತ್ಯ (14 is a m. of 7); Least common m. (ಸಂಕ್ಷಿಪ್ತ: L.C.M.) ಲಘುತಮ ಸಾಮಾನ್ಯ ಅಪವರ್ತ್ಯ (ಲ. ಸಾ. ಅ.)

Múltiplex ಮಲ್ಟಿಪ್ಲೆಕ್ಸ್ (ಗು.) ಬಹು ಪ್ರಕಾರದ; ಹಲವು ಘಟಕಗಳು, ಅಂಶಗಳು, — ಉಳ್ಳ.

Múltiplicable, Multiplicánd, Multiplicátion, etc. Multiply ನೋಡಿ.

Múltiply ಮಲ್ಟಿಪ್ಲೈ (ಕ್ರಿ.) (ಗಣಿತ) ಗುಣಾಕಾರ ಮಾಡು; ಗುಣಿಸು; ಹೆಚ್ಚಿಸು. (ದೃಷ್ಟಾಂತ, ವೊ. ನ್ನು) ಅನೇಕವಾಗಿ ಕೊಡು. (ಪ್ರಾಣಿಗಳ, ಸಸ್ಯಗಳ) ಸಂತಾನವೃದ್ಧಿ ಮಾಡು; ಬಹುಸಂಖ್ಯಾಕ ಮಾಡು; —ಆಗು; ತಳಿ ಬೆಳಸು; —ಬೆಳೆ. **Múltipliable** (ಗು.) = Multiplicable. **Múltiplicable** —ಪ್ಲಿಕ— (ಗು.) ಗುಣಿಸಲ್ಪಡಲು ಸಾಧ್ಯವಾದ; ಗುಣನೀಯ. **Multiplicánd** (ನಾ.) ಗುಣಿಸಬೇಕಾದ ಸಂಖ್ಯೆ; ಗುಣ್ಯ. **Multiplicátion** (ನಾ.) ಗುಣಿಸುವುದು (ಮು., ಅಂಕಗಣಿತದ ರೀತಿಯಲ್ಲಿ); ಗುಣಾಕಾರ (ಗುಣಾಕಾರದ ಚಿಹ್ನೆ ×: ಉದಾ., ೨ × ೩). (M. table ಮಗ್ಗಿ ಕೋಷ್ಠಕ). (ಪ್ರಾಣಿಗಳ ಅಥವಾ ಸಸ್ಯಗಳ) ಸಂತಾನ ವೃದ್ಧಿ. **Múltiplicative** (ಗು.) ವೃದ್ಧಿಯಾಗುವ, ಸಂಖ್ಯೆ ಹೆಚ್ಚುವ, — ಪ್ರವೃತ್ತಿಯುಳ್ಳ, ಶಕ್ತಿಯುಳ್ಳ; ಸಂಖ್ಯೆಗಳನ್ನು ಗುಣಿಸಲಾಗುವ; ಗುಣಾಕಾರದಲ್ಲಿ ತೆಗೆದುಕೊಂಡ. (ವ್ಯಾ.) ಇಷ್ಟು ಸಲ ಎಂದು ಸೂಚಿಸುವ ಸಂಖ್ಯಾವಾಚಿಗಳ. **Multiplícity** (ನಾ.) ಹಲವು ಭಾಗಗಳಿರುವ, ಹಲವು ವೈವಿಧ್ಯಗಳಿರುವ, —ಲಕ್ಷಣ, ಸ್ಥಿತಿ; ನಾನಾತ್ವ; ವೈವಿಧ್ಯ. A, the, m. of (—ರ) ಬಹು ಸಂಖ್ಯೆ, ಅನೇಕ. **Múltiplier** (ನಾ.) (ಕ್ರಿಯಾರ್ಥಗಳಲ್ಲಿ); ಯಾವುದರಿಂದ ಗುಣಿಸಬೇಕೊ ಆ ಸಂಖ್ಯೆ; ಗುಣಕ. (ವಿದ್ಯುತ್ತು, ಕಾಂತ ಶಕ್ತಿ) ಬಲದ, ವಿದ್ಯುತ್ಪ್ರವಾಹದ, ತೀವ್ರತೆಯನ್ನು ಗಣನಾರ್ಹವಾಗುವಷ್ಟು ವೃದ್ಧಿಪಡಿಸುವ ಸಲಕರಣೆ: ವರ್ಧಕ.

Múltitude ಮಲ್ಟಿಟ್ಯೂಡ್ (ನಾ.) ಅನೇಕ(ತೆ); ಹಲವು; (—ರ) ಬಹು ಸಂಖ್ಯೆ (*Of* ಉಪ. ದೊಡನೆ); ಜನರ ದೊಡ್ಡ ನೆರವಿ, ಗುಂಪು; ಜನ ಸಮುದಾಯ; ಜನಸ್ತೋಮ. The m. ಸಾಮಾನ್ಯ ಮಂದಿ; ಜನತೆ. **Multitúdinous** (ಗು.); **Multitúdinously** (ಕ್ರಿ. ವಿ.); **Multitúdinousness** (ನಾ.); **Multitúdinism** (ನಾ.) ವ್ಯಕ್ತಿಗಳ ಹಿತಕ್ಕಿಂತ ಜನತೆಯ ಹಿತಕ್ಕೆ (ಸಮಷ್ಟಿ ಹಿತಕ್ಕೆ) ಹೆಚ್ಚು ಗಮನ ಕೊಡಬೇಕೆಂದು ಹೇಳುವ ತತ್ತ್ವ: ಸಾಮುದಾಯಿಕ ಹಿತ ತತ್ತ್ವ. **Multitúdinist** (ನಾ.)

Multitúdinism, etc. Multitude ನೋಡಿ.

Múltum in párvo (L) ಮಲ್ಟಮ್ ಇನ್ ಪಾರ್ವೊ (ನಾ.) ಸ್ವಲ್ಪವಾದ ಅವಕಾಶದಲ್ಲಿ ಅಧಿಕ; ಕಿರಿದರಲ್ಲಿ ಹಿರಿದು. Multum-in-parvo (ವಿಶೇಷಣವಾಗಿ) ಸ್ವಲ್ಪದ್ದಾದರೂ ಹಲವನ್ನು ಅಡಕಮಾಡಿಕೊಂಡಿರುವ; ಚಿಕ್ಕದಾದರೂ ವ್ಯಾಪಕವಾದ.

Múlture ಮಲ್‌ಟ್ಯುರ್, —ಚರ್ (ನಾ.) ಧಾನ್ಯ ಬೀಸುವ ಯಂತ್ರದವನಿಗೆ ಕೊಡುವ ಧಾನ್ಯದ ಅಥವಾ ಹಿಟ್ಟಿನ ರುಸುಮು.

Mum[1] ಮಮ್ (ಭಾವ. ಅವ್ಯ., ಗು., ಕ್ರಿ. ಅಕ.) ಸದ್ದು! ಸುಮ್ಮನಿರು! ಗಪ್‌ಚಿಪ್! [ಮು., m.'s the word ಎಂಬಲ್ಲಿ: ನಾವು (ಅಥವಾ ನಾನು) ಈ ವಿಷಯವನ್ನು ಗುಟ್ಟಾಗಿಟ್ಟುಕೊಂಡಿರೋಣ]. (ಗು.) ಮೌನದ; ಮಾತಾಡದ; ಸದ್ದು ಮಾಡದ. (ಕ್ರಿ.) ಮೂಕಾಭಿನಯ ಮಾಡು. **Múmchance** (ಪ್ರಾಚೀ. ಪ್ರ.) ಸದ್ದು ಮಾಡದ; ತುಟಿ ಪಿಟಕ್ಕೆನ್ನದ; ಬಾಯಲುಗಿಸದ. **Múmmer** ಮಮರ್ (ನಾ.) (ತಿರಸ್ಕಾರವಾಗಿ) ನಾಟಕ ನಟ; (ಚರಿತ್ರೆ) ಮೂಕ ನಾಟಕ ನಟ. **Múmmery** (ನಾ.) ಮೂಕ ನಟರ ಆಟ, ನಾಟಕ. ಹಾಸ್ಯಾಸ್ಪದವಾದ, ಅರ್ಥವಿಲ್ಲದ, (ಮು., ಮತ ಧರ್ಮದ) ಸಂಸ್ಕಾರ, ಪೂಜಾ ವಿಧಾನ.

Mum[2] ಮಮ್ (ನಾ.) (ಮಕ್ಕಳ ಮಾತು) = Mummy[2].

Múmble ಮಂಬ್‌ಲ್ (ಕ್ರಿ., ನಾ.) ತುಟಿ ಮುಚ್ಚಿಕೊಂಡು, ಅಸ್ಪಷ್ಟವಾಗಿ, ಮಾತನಾಡು; ಗೊಣಗು. ಹಲ್ಲಿಲ್ಲದ ಒಸಡುಗಳಿಂದ, ಬಚ್ಚು ಬಾಯಿಂದ (ಹೇಗೊ ಹಾಗೆ), —ಕಚ್ಚು, ಅಗಿ. (ನಾ.) ಅಸ್ಪಷ್ಟ ಉಚ್ಚಾರಣೆ.

Múmbo Júmbo ಮಂಬೊ ಜಂಬೊ (ನಾ.) ಕೆಲವು (ನೀಗ್ರೋ) ಬುಡಕಟ್ಟಿನವರು ಪೂಜಿಸುತ್ತಿದ್ದರೆಂದು ಹೇಳುವ ವಿಕಾರ ವಿಗ್ರಹ; ಮೊದ್ದು ಬೊಂಬೆ; (ರೂಪ.) ಮೂಢಾರಾಧನೆಯ ವಸ್ತು; ವಿವೇಕವಿಲ್ಲದೆ ಪೂಜ್ಯವಾಗೆಣಿಸುವ ವಸ್ತು.

Múmmer, Múmmery. Mum[1] ನೋಡಿ.

Múmmy[1] ಮಮಿ (ನಾ.) (ಹೂಳುವುದಕ್ಕಾಗಿ) ಕೆಡದಂತೆ ಸುವಾಸನಾ ದ್ರವ್ಯಗಳಿಂದ ಸಂಸ್ಕರಿಸಿದ (ಮನುಷ್ಯನ ಅಥವಾ ಪ್ರಾಣಿಯ) ಮೃತ ದೇಹ; ರಕ್ಷಿತ ಶವ. ಬತ್ತಿಹೋದ ದೇಹ; ಶುಷ್ಕ ದೇಹ. ಮೆತು ತಿರುಳಿನಂಥ ಪದಾರ್ಥ ಅಥವಾ ಒಟ್ಟಿಲು [Beat (thing) to a m. ಎಂಬಲ್ಲಿ: (ಒಂದು ವಸ್ತುವನ್ನು) ಬಜ್ಜಿಬಜ್ಜಿಯಾಗಿ ಚೆಚ್ಚು]. ಉಜ್ಜ್ವಲ ಕಂದುಬಣ್ಣ (ವರ್ಣ ದ್ರವ್ಯ). **Múmmify** (ಕ್ರಿ. ಸಕ.) (ಮೃತ ದೇಹವನ್ನು) ಸುವಾಸನಾ ದ್ರವ್ಯಗಳಿಂದ ಪರಿಷ್ಕರಿಸಿ ರಕ್ಷಿಸಿಡು. (ಅಂಗಾಂಶ, ವೊ. ವು) ಬತ್ತಿಹೋಗು; ಮುದುರಿಕೊಂಡುಹೋಗು; ಶೋಷಿಸಿಹೋಗು (ಮು., ಭೂ. ಕೃ. ನಲ್ಲಿ). **Mummificátion** (ನಾ.)

Mummy[2] ಮಮಿ (ನಾ.) (Mamma ಎಂಬುದಕ್ಕೆ ಮಕ್ಕಳ ಮಾತು) ತಾಯಿ; ಅಮ್ಮ.

Mump[1] ಮಂಪ್ (ಕ್ರಿ. ಅಕ.) ಮಾತನಾಡದೆ ಅಸಮಾಧಾನದಿಂದ ಗುಮ್ಮನಿರು; ಮ್ಲಾನತೆಯಿಂದಿರು; ಖಿನ್ನನಾಗಿರು. **Múmping** (ಗು.)

Mump[2] ಮಂಪ್ (ಕ್ರಿ. ಅಕ.) ಬೇಡು; ಯಾಚಿಸು; ತಿರುಪೆಗೆ ಹೋಗು.

Mumps ಮಂಪ್ಸ್ (ನಾ.; ಬ. ವ., ಏ. ವ. ದಂತೆ ಪ್ರ.) ಕರ್ಣೋಪಾಂತ ಗ್ರಂಥಿಗಳೂ ಲಾಲಾ ಗ್ರಂಥಿಗಳೂ ಊದಿಕೊಳ್ಳುವ ಒಂದು ಅಂಟುಜಾಡ್ಯ: ಗದ್ದಕಟ್ಟು; ಮಂಗನ ಬಾವು; ಕೆಪ್ಪಟೆ. ಖಿನ್ನತೆ; ಅಂತಸ್ತಾಪ. **Múmpish** (ಗು.)

Munch ಮನ್ಷ್, ಮಂಚ್ (ಕ್ರಿ.) (ದನ ಹುಲ್ಲು ಅಗಿಯುವಂತೆ) (ತಿಂಡಿಯನ್ನು) ದವಡೆಗಳಿಂದ ಅಗಿದು ಅಗಿದು ತಿನ್ನು; ಕುರುಕು.

Muncháusen ಮಂಚಾಸನ್, ಮಂಚೌಸನ್ (ನಾ.) [Baron M. ಒಬ್ಬ ಜರ್ಮನ್ ಗ್ರಂಥಕರ್ತನು ಇಂಗ್ಲಿಷಿನಲ್ಲಿ ಬರೆದ, ಎಲ್ಲೆಮೀರಿದ ಸಾಹಸ ಕಾರ್ಯಗಳನ್ನು ಕುರಿತ, ಗ್ರಂಥದ ನಾಯಕ]; ವಿಪರೀತ ಸುಳ್ಳುಗಳ ಕಥೆ.

Múndane ಮಂಡೇನ್ (ಗು.) ಈ ಪ್ರಪಂಚದ; ಐಹಿಕ; ಲೌಕಿಕ. **Múndanely** (ಕ್ರಿ. ವಿ.); **Múndaneness** (ನಾ.)

Munícipal ಮ್ಯುನಿಸಿಪಲ್ (ಗು.) ಸ್ಥಳೀಯ ಸರಕಾರದ, ಆಡಳಿತದ, ಆಡಳಿತದಲ್ಲಿರುವ; ಪೌರ ಸಂಸ್ಥೆಯ, ಸಭೆಯ (ಆಡಳಿತದ, — ಕ್ಕೆ ಸೇರಿದ: M. debt, M. kitchen, M. trading, M. undertaking). M. law (ಅಂತರ ರಾಷ್ಟ್ರೀಯದ್ದಲ್ಲದ) ಒಂದು ಗೊತ್ತಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಂಸ್ಥಾನದ ಕಾನೂನು, ನ್ಯಾಯಶಾಸ್ತ್ರ: ಸ್ಥಳೀಯ, ದೇಶೀಯ, —ಕಾನೂನು. **Munícipalism** (ನಾ.) ಸ್ಥಳೀಯ ಅಭಿಮಾನ; ಸ್ಥಳೀಯ ಆಡಳಿತದ ಸಂಸ್ಥೆಗಳು. **Munícipalist** (ನಾ.) ಸ್ಥಳೀಯಾಡಳಿತದ ಅಭಿಮಾನಿ; ಸ್ಥಳೀಯಾಡಳಿತ ಪಟು. **Munícipalize** (ಕ್ರಿ. ಸಕ.) ಪೌರ ಸಂಸ್ಥೆಯ ಒಡೆತನಕ್ಕೆ, ಆಡಳಿತಕ್ಕೆ, ಒಳಪಡಿಸು; (ಒಂದು ಊರಿಗೆ) ಪೌರ ಸಂಸ್ಥೆಗಳನ್ನು ಕೊಡು. **Munícipally** (ಕ್ರಿ. ವಿ.) ಒಂದು ಪೌರ ಸಂಸ್ಥೆಯ ಅಥವಾ ಪೌರ ವಿಚಾರಗಳ ವಿಷಯವಾಗಿ. **Municipálity** —ಪ್ಯಾಲಟಿ (ನಾ.) ಸ್ಥಳೀಯ ಆಡಳಿತಾಧಿಕಾರವುಳ್ಳ — ಪಟ್ಟಣ, ನಗರ, ಪ್ರಾಂತ; ಪೌರ ಸಂಸ್ಥೆ.

Munificent ಮ್ಯುನಿಫಿಸೆಂಟ್ (ಗು.) ಬಹು ಶ್ಲಾಘ್ಯವಾದ ಔದಾರ್ಯದ; ಧಾರಾಳವಾದ; ಕೊಡುಗೈಯ. **Munificently** (ಕ್ರಿ. ವಿ.); **Munificence** (ನಾ.)

Múniment ಮ್ಯೂನಿಮೆಂಟ್ (ನಾ.) (ಸಾ., ಬ. ವ. ದಲ್ಲಿ) ಹಕ್ಕು ಬಾಧ್ಯತೆಗಳ ರುಜುವಾತಿಗಾಗಿಟ್ಟಿರುವ ದಸ್ತಾವೇಜು.

Munítion ಮ್ಯುನಿಷನ್ (ನಾ., ಕ್ರಿ. ಸಕ.) (ಸಮಾಸ ಪದಗಳಲ್ಲಿ ವಿನಾ ಬ. ವ.) ಯುದ್ಧದಲ್ಲಿ ಶತ್ರುವಿನಮೇಲೆ ಬೀಳುವುದಕ್ಕಾಗಲಿ ರಕ್ಷಣೆ ಮಾಡಿಕೊಳ್ಳುವುದಕ್ಕಾಗಲಿ ಉಪಯೋಗಿಸುವ ಸಾಮಗ್ರಿ (ಆಯುಧಗಳು, ಮದ್ದುಗುಂಡು, ಸೈನಿಕ ಸಜ್ಜು ಮತ್ತು ಇತರ ಸಂಗ್ರಹ): ಯುದ್ಧ ಸಾಮಗ್ರಿ [M.-factory ಯುದ್ಧಸಾಮಗ್ರಿಯ ಕಾರಖಾನೆ. Munition(s) of war (ಪ್ರಾಚೀ. ಪ್ರ.) ಯುದ್ಧದ ರಕ್ಷಣ ಸಾಧನಗಳು]. (ಕ್ರಿ.) (ಮದ್ದು, ಗುಂಡು, ಮೊ. ದ) ಯುದ್ಧಸಾಮಗ್ರಿಯನ್ನು ಒದಗಿಸು. **Munítioner, -neér** (ನಾ.) ಯುದ್ಧಸಾಮಗ್ರಿಯನ್ನು ತಯಾರಿಸುವವನು.

Múnnion ಮನ್ಯನ್ (ನಾ.) = Mullion.

Muntz ಮಂಟ್ಸ್ (ನಾ.) M. (metal) (ಹಡಗಿನ ತಳ, ಮೊ. ಕ್ಕೆ ಹೊದ್ದಿಸುವ) ತಾಮ್ರ ಮತ್ತು ಸತು ಬೆರಸಿದ ಒಂದು ಮಿಶ್ರಲೋಹ. (Muntz ಎಂಬ ಕಲ್ಪಕನ ಹೆಸರಿನಿಂದ)

Múrage ಮ್ಯೂರೆಜ್ (ನಾ.) (ಚರಿತ್ರೆ) ಊರಿನ ಕೋಟೆಗೋಡೆಯನ್ನು ಕಟ್ಟುವುದಕ್ಕೂ ದುರಸ್ತು ಮಾಡುವುದಕ್ಕೂ ಹಾಕುವ ತೆರಿಗೆ.

Múral ಮ್ಯೂರಲ್ (ಗು.) ಗೋಡೆಯ(ಂಥ); ಗೋಡೆಯಮೇಲಿನ (M. paintings ಗೋಡೆಯಮೇಲೆ ರಚಿಸಿದ ವರ್ಣ ಚಿತ್ರಗಳು; ಭಿತ್ತಿ ಚಿತ್ರಗಳು). (ರೋ. ಪ್ರಾ.) M. crown ಮುತ್ತಿಗೆ ಹಾಕಿದ ಪಟ್ಟಣದ ಕೋಟೆಗೋಡೆಯನ್ನು ಮೊದಲು ಹತ್ತಿದ (ಹತ್ತಿ ಧ್ವಜವನ್ನೇರಿಸಿದ) ಧೀರನಿಗೆ ಬಹುಮಾನವಾಗಿ ಕೊಡುತ್ತಿದ್ದ, ಕೋಟೆತೆನೆಯ ಆಕೃತಿಗಳುಳ್ಳ, ಚಿನ್ನದ ಕಿರೀಟ: ಕೋಟೆತೆನೆಯ ಕಿರೀಟ.

Múrder ಮರ್ಡರ್ (ನಾ., ಕ್ರಿ. ಸಕ.) ಮೊದಲೇ ಹಂಚಿಕೆ ಹಾಕಿಕೊಂಡಿದ್ದು ಜಿದ್ದಿನಿಂದ ಒಬ್ಬನನ್ನು (ನ್ಯಾಯವಿರುದ್ಧವಾಗಿ) ಕೊಲ್ಲುವುದು: ಖೂನಿ; ಕೊಲೆ; ಹತ್ಯ [Judicial m. (Judicial ನೋಡಿ). M. will out (ಗಾದೆ) ಕೊಲೆ ಬಯಲಿಗೆ ಬಂದೇ ಬರುತ್ತದೆ. The m. is out ಗುಟ್ಟು ರಟ್ಟಾಯಿತು; ಗೂಢ ವಿಷಯ ಸ್ಪಷ್ಟವಾಯಿತು. M! (ಭಯದ, ಅಪಾಯದ, ಕೂಗು) ಕೊಲೆ! Cry blue m. ವಿಪರೀತವಾಗಿ ಹುಯ್ಯಲಿಡು]. (ಕ್ರಿ.) ಖೂನಿ, ಕೊಲೆ, ಹತ್ಯ, — ಮಾಡು. (ಅಪ ಪ್ರಯೋಗ, ತಪ್ಪು ಉಚ್ಚಾರಣೆ, ಅಪಕೃತ್ಯ, ಮೊ. ಗಳಿಂದ) ಕುಲಗೆಡಿಸು, ಹಾಳು ಮಾಡು. **Múrderer** (ನಾ.); **Múrderess** (ನಾ., ಸ್ತ್ರೀ.); **Múrderous** (ಗು.) (ಮನುಷ್ಯ, ಆಯುಧ, ಕಾರ್ಯ, ಮೊ. ಗಳ ವಿಷಯದಲ್ಲಿ) ಕೊಲೆ ಮಾಡುವ, ಕೊಲ್ಲುವ, —ದೃಢ ಸಂಕಲ್ಪವುಳ್ಳ; ಕೊಲೆ ಮಾಡುವ; ಕೊಲೆಯೂ ಸೇರಿದ. **Múrderously** (ಕ್ರಿ. ವಿ.)

Mure ಮ್ಯೂರ್ (ಕ್ರಿ. ಸಕ.) ಸೆರೆ ಹಾಕು; ಬಂಧಿಸು; ಒಳಗೆ ಕೂಡಿಬಿಡು (*Up* ಉಪ. ದೊಡನೆ)

Múrex ಮ್ಯೂರೆಕ್ಸ್ (ನಾ.; ಬ. ವ. -exes, -ices —ರಿಸೀಸ್) ಕೆಂಪು ಬಣ್ಣ ದೊರೆಯುವ ಚಿಪ್ಪುಮೀನು.

Múriate ಮ್ಯೂರಿಯೆಟ್ (ನಾ.) (ಆಮ್ಲಜನಕ ರಹಿತವಾದ) ಕ್ಲೋರಿನ್ ಸಂಯುಕ್ತ; ಕ್ಲೋರೈಡು (ಈಗ ವ್ಯಾಪಾರದ ಮಾತಾಗಿ ಮಾತ್ರ). **Muriátic** — ಆ್ಯಟಿಕ್ (ಗು.): M. acid ಹೈಡ್ರೊಕ್ಲೋರಿಕ್ ಆಮ್ಲ.

Murk, Mirk ಮರ್ಕ್ (ಗು.) (ಪ್ರಾಚೀ. ಪ್ರ., ಕಾವ್ಯ) = **Múrky** (ಗು.) (ರಾತ್ರಿ, ಹಗಲು, ಸ್ಥಳ, ಮೊ. ಗಳ ವಿಷಯದಲ್ಲಿ) ಕತ್ತಲೆಗವಿದ; ಮಬ್ಬಾದ; ಮಂಕಾದ; (ಕತ್ತಲೆ) ದಟ್ಟವಾದ, ಗಾಢವಾದ. **Múrkily** (ಕ್ರಿ. ವಿ.); **Múrkiness** (ನಾ.)

Múrmur ಮರ್ಮರ್ (ನಾ., ಕ್ರಿ.) (ಅಲೆಗಳು, ಸಣ್ಣ ಹೊಳೆ, ಮೊ. ವು ಮಾಡುವಂತೆ) ಮರ್ಮರ ಧ್ವನಿ; ಅಸ್ಪಷ್ಟ ಧ್ವನಿ; (ಅಸಮ್ಮತಿ, ಅಸಮಾಧಾನ, —ಸೂಚಕವಾದ) ಗೊಣಗಾಟ; ಮೆಲುನುಡಿ; —ಮಾತು. (ಕ್ರಿ.) ಮರ್ಮರ ಧ್ವನಿ ಮಾಡು; ಗೊಣಗು; ಗೊಣಗುಟ್ಟು (*At, against* ಉಪ. ದೊಡನೆ); ತಗ್ಗು ದನಿಯಲ್ಲಿ ನುಡಿ, ಮಾತನಾಡು. **Múrmurous** (ಗು.); **Múrmurously** (ಕ್ರಿ. ವಿ.)

Múrphy ಮರ್ಫಿ (ನಾ.) (ಅಸಂ.) ಉರುಳು ಗಡ್ಡೆ (ಐರಿಷರ ಉಪನಾಮ)

Múrrain ಮರೆ(ರಿ)ನ್ (ನಾ.) ದನಗಳ ಒಂದು ಅಂಟುಜಾಡ್ಯ (ಮು., ಕಾಲುಬಾಯಿ ಜ್ವರ). (ಪ್ರಾಚೀ. ಪ್ರ.) A m. on you! ನಿನಗೆ ಪ್ಲೇಗು ಬರ!

Múscadine ಮಸ್ಕಡೈ(ಡಿ)ನ್ (ನಾ.) ಕಸ್ತೂರಿ ರುಚಿಯ ಅಥವಾ ವಾಸನೆಯ ದ್ರಾಕ್ಷಿ ಜಾತಿ.

Múscardine ಮಸ್ಕಾರ್ಡಿನ್ (ನಾ.) ಸಸ್ಯ ಪರೋಪಜೀವಿಗಳಿಂದುಂಟಾಗುವ, ರೇಷ್ಮೆ ಹುಳುವಿನ ಒಂದು ರೋಗ.

Múscat ಮಸ್‌ಕ್ಯಾಟ್, **-catél** — ಕಟೆಲ್, **-cadél** — ಕಡೆಲ್ (ನಾ.) = Muscadine; ಇದರಿಂದ ತೆಗೆದ ತೀಕ್ಷ್ಣವಾದ ಸಿಹಿಮದ್ಯ. (-tel) ಕಸ್ತೂರಿ ದ್ರಾಕ್ಷಿ.

Múscle ಮಸ್‌ಲ್ (ನಾ.) ಪ್ರಾಣಿದೇಹದಲ್ಲಿ ಚಲನಕ್ಕೆ ಕಾರಣವಾಗಿ ಸಂಕೋಚನ ಶಕ್ತಿಯುಳ್ಳ ತಂತು ತಂಡ ಅಥವಾ ತಂತುಗಳ ಕಂತೆ, ಕಟ್ಟು; ಸ್ನಾಯು (Not move a m. ಸ್ವಲ್ಪವೂ ಅಲುಗದಿರು, ಮಿಸುಕದಿರು); ಸ್ನಾಯುಗಳಿಂದ ಕೂಡಿದ ದೇಹಭಾಗ; ಮಾಂಸದ ಪ್ರಧಾನಾಂಶ; ಮಾಂಸ ಖಂಡ. **Múscleless** (ಗು.); **Múscular** ಮಸ್ಕ್ಯುಲರ್ (ಗು.) ಸ್ನಾಯುವಿನ; ಸ್ನಾಯುಗಳಿಗೆ ತಟ್ಟುವ; ಮಾಂಸ ಪುಷ್ಟಿಯುಳ್ಳ; ಮಾಂಸಲ. M. Christianity (Charles Kingsley ಎಂಬ ಲೇಖಕನ ಗ್ರಂಥಗಳಲ್ಲಿ ಪ್ರತಿಪಾದಿತವಾಗಿರುವ) ದೃಢ ಕಾಯವು ನೈತಿಕ ಮತ್ತು ಧಾರ್ಮಿಕ ಶ್ರದ್ಧೆಗೆ ಸಹಕಾರಿಯೆಂಬುದನ್ನು ಒತ್ತಿ ಹೇಳುವ ಮತ. **Musculárity** —ಲ್ಯಾ— (ನಾ.); **Músculature** ಮಸ್ಕ್ಯುಲಟ್ಯುರ್, —ಚರ್ (ನಾ.) (ದೇಹದ, ಅಂಗದ) ಸ್ನಾಯು ವ್ಯೂಹ.

Muscólogy ಮಸ್ಕಾಲೊಜಿ (ನಾ.) ಶೈವಲ (ಪಾಚಿಜಾತಿಯ ಸಸ್ಯಗಳ) ಶಾಸ್ತ್ರ. **Muscólogist** (ನಾ.)

Muscovádo ಮಸ್ಕೊವಾ(ವೇ)ಡೋ(ೕ) (ನಾ.) ಕಬ್ಬಿನ ಹಾಲನ್ನು ಕಾಯಿಸಿ, ಇಂಗಿಸಿ, ಕಾಕಂಬಿಯನ್ನು ಹೊರಡಿಸಿ, ತಯಾರಿಸಿದ ಕಚ್ಚಾ ಸಕ್ಕರೆ; ಮೊಗದುಂ ಸಕ್ಕರೆ.

Múscovite[1] ಮಸ್ಕೊವೈಟ್ (ನಾ.) (ಸಾಮಾನ್ಯವಾದ) ಕಾಗೆಬಂಗಾರ, ಅಭ್ರಕ (ಹಿಂದಿನ ಪ್ರ.: Muscovy glass)

Múscovy ಮಸ್ಕೊವಿ (ನಾ.) (ಪ್ರಾಚೀ. ಪ್ರ.) ರಷ್ಯ. **Múscovite**[2] (ನಾ., ಗು.) (ಪ್ರಾಚೀ. ಪ್ರ.) ರಷ್ಯದ(ವನು)

Múscular, Músculature. **Muscle** ನೋಡಿ.

Muse[1] ಮ್ಯೂಸ್ (ನಾ.) [The Muses (Zeus ಮತ್ತು Mnemosyne ಎಂಬ ದೇವ ದಂಪತಿಗಳ ಪುತ್ರಿಯರೂ ಕಾವ್ಯ, ಸಂಗೀತ, ಮೊ. ಗಳ ಪ್ರೇರಕರೂ ಆದ) (ಒಂಬತ್ತು) ಗ್ರೀಕ್ ಕಲಾಭಿಮಾನಿ ಸ್ತ್ರೀ ದೇವತೆಗಳು. The m. ಕವಿಯ ಪ್ರೇರಣಾ ದೇವತೆ; ಕವಿಯ ಸ್ಫೂರ್ತಿ, ಪ್ರತಿಭೆ]; (ಕಾವ್ಯ) ಕವಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Muse[2] ಮ್ಯೂಸ್ (ಕ್ರಿ. ಅಕ., ನಾ.) (ಒಂದನ್ನು ಕುರಿತು) ಮನಸ್ಸಿನಲ್ಲೇ ಆಲೋಚಿಸು, ಚಿಂತಿಸು (*On, upon* ಉಪ. ಡೊಡನೆ). (ದೃಶ್ಯ, ಮೊ. ನ್ನು) ಧ್ಯಾನಾಸಕ್ತನಾಗಿ ದೃಷ್ಟಿಸು, ನೋಡು (*On* ಉಪ. ದೊಡನೆ). (ನಾ., ಪ್ರಾಚೀ. ಪ್ರ.) ಧ್ಯಾನ ಮಗ್ನತೆ ; ತಲ್ಲೀನತೆ.

Muséum ಮ್ಯೂಸೀಯಮ್ (ನಾ.) ಪುರಾತನ ಅವಶೇಷಗಳನ್ನೂ ಪ್ರಕೃತಿ ಚರಿತ್ರೆ, ಕಲೆ, ಮೊ. ಗಳನ್ನು ನಿದರ್ಶಿಸುವ ವಸ್ತುಗಳನ್ನೂ ಶೇಖರಿಸಿ ಪ್ರದರ್ಶಿಸುವ ಮಂದಿರ ; ವಿವಿಧ ವಸ್ತು ಸಂಗ್ರಹ ಶಾಲೆ. M. piece ವಿವಿಧ ವಸ್ತು ಸಂಗ್ರಹ ಶಾಲೆಗೆ ತಕ್ಕ (ಕಲೆ, ಕೈಗಾರಿಕೆ, ಮೊ. ಗಳ) ಮಾದರಿ ವಸ್ತು. (ರೂಪ.) ಅಸ್ವಾಭಾವಿಕ ವ್ಯಕ್ತಿ, ವಸ್ತು.

Mush[1] ಮಷ್ (ನಾ.) (ಅಂಬಲಿಯಂಥ) ಮೆತ್ತನೆಯ ಕಲಸುಹಿಟ್ಟು ; ತಿರುಳು. (ಉ. ಅಮೆ.) ಒಂದು ತೆರದ ಅಂಬಲಿ. **Múshiness** (ನಾ.) ; **Múshy** (ಗು.)

Mush[2] ಮಷ್ (ನಾ.) (ಅಸಂ.) ಕೊಡೆ ; ಛತ್ರಿ. ಬಾಡಿಗೆಯ ಸಣ್ಣ ಸವಾರಿ ಬಂಡಿಯ ಯಜಮಾನ.

Múshroom ಮಷ್‌ರೂಮ್ (ನಾ., ಕ್ರಿ. ಅಕ.) (ತಿನ್ನಲು ಯೋಗ್ಯವಾದ, ಬಲು ಬೇಗ ಬೆಳೆಯುವ) ನಾಯಿಕೊಡೆ, ಅಣಬೆ. (M. growth ಥಟ್ಟನೆಯ ಬೆಳವಣಿಗೆ ; ಥಟ್ಟನೆ ಬೆಳೆದದ್ದು ; ಕ್ಷಣಿಕವಾದದ್ದು ; ಬೇಗ ಹುಟ್ಟಿ ಬೇಗ ಸಾಯುವುದು). (ರೂಪ.) ಹೀನ ಸ್ಥಿತಿಯಿಂದ ಥಟ್ಟನೆ ಪ್ರಮುಖತೆಗೆ ಬಂದವನು. (ಬಳ. ಮಾ.) ಕೆಳ ಬಾಗಿದ ಅಂಚುಳ್ಳ, ಜಂಬುಹುಲ್ಲಿನ, ಹೆಂಗಸಿನ ಟೊಪ್ಪಿಗೆ. (ಕ್ರಿ.) ನಾಯಿಕೊಡೆಗಳನ್ನು ಸಂಗ್ರಹಿಸು. (ಬಂದೂಕು ಗುಂಡು) ಹಿಗ್ಗಿ ಚಪ್ಪಟೆಯಾಗು.

Músic ಮ್ಯೂಸಿಕ್ (ನಾ.) ಅಂದವಾಗಿಯೂ ರಸವತ್ತಾಗಿಯೂ ಸ್ವರಗಳನ್ನು ಹೊಂದಿಸುವ ಕಲೆ ; ಸಂಗೀತ (ಕಲೆ) ; ಗೀತ ; ಪಾಟ ; ಹಾಡು(ಗಾರಿಕೆ) ; ರಾಗ ; ಗಾನ ; ಗಾಯನ ; ಇಂಪಾದ, ಮಧುರ ವಾದ, ಧ್ವನಿ (ಉದಾ., ಹಕ್ಕಿಯ ಹಾಡು, ಕಿರು ಹೊಳೆಯ ಕಲರವ, ಬೇಟೆ ನಾಯಿಗಳ ಕೂಗು) [Set to m. (ಕವನ, ಮೊ. ನ್ನು) ಸಂಗೀತಕ್ಕೆ ಹೊಂದಿಸು] ; ಕೈಯಿಂದ ಬರೆದ ಅಥವಾ ಮುದ್ರಿಸಿದ ಸಂಗೀತ ಲಿಪಿ, ರೇಖನ. Face the m. ತನ್ನ ಮೇಲೆ ಟೀಕೆಮಾಡುವವರು, ಮೊ. ರ ಎದುರಿಗೆ ಹೆದರದೆ ನಿಲ್ಲು ; ತನ್ನ ಕಾರ್ಯದ ಪರಿಣಾಮವನ್ನು ಧೈರ್ಯದಿಂದ ತಾಳಿಕೊ. Rough m. (ಮು., ಕಿರುಕುಳ ಕೊಡುವ ಉದ್ದೇಶದಿಂದ ಎಬ್ಬಿಸಿದ) ಗಲಭೆಯ ಗೊಂದಲ. M.-hall (ಸಂಗೀತ, ನೃತ್ಯ, ಮೊ. ವಿನೋದ ಪ್ರದರ್ಶನಗಳು ನಡೆಯುವ) ಗಾಯನ ಮಂದಿರ. M.-stool (ತಕ್ಕಂತೆ ಅಳವಡಿಸಿಕೊಳ್ಳಬಹುದಾದ) ಪಿಯಾನೊ ವಾದ್ಯಗಾರನ ಕಾಲು ಮಣೆ. **Músical** (ಗು.) ಸಂಗೀತದ ; (ಶಬ್ದ, ದನಿ) ಇಂಪಾದ ; ಸುಶ್ರಾವ್ಯ(ವಾದ) ; ಸಂಗೀತ ಪ್ರಿಯ(ನಾದ) ; ಸಂಗೀತ ಕುಶಲ(ನಾದ). ಸಂಗೀತಕ್ಕೆ ಹೊಂದಿಸಿದ ; ಸಂಗೀತದಿಂದ ಕೂಡಿದ. **M.-box** ಹಲ್ಲುಗೂಡಿದ ಉರುಳೆಯು ಸುತ್ತುವಾಗ ಅದರ ಹಲ್ಲುಗಳು ಹಣಿಗೆ ಯಂಥ ಲೋಹಫಲಕಕ್ಕೆ ತಾಕಿ ಸಂಗೀತ ನುಡಿಸುವ ಯಂತ್ರ ಸಲಕರಣೆ ; ಸಂಗೀತದ ಪೆಟ್ಟಿಗೆ. **M. chairs** ಒಂದು ತೆರದ ದಿವಾನ್ ಖಾನೆಯ ಆಟ (ಇದರಲ್ಲಿ ಆಟಗಾರರ ಸಂಖ್ಯೆಗಿಂತ ಒಂದು ಕಡಮೆಯಾಗಿ ಕುರ್ಚಿಯಿದ್ದು, ಸಂಗೀತ ನಡೆಯುತ್ತಿರುವಾಗ ಎಲ್ಲರೂ ಕುರ್ಚಿಗಳ ಸುತ್ತಲೂ ಸುತ್ತುತ್ತ ಸಂಗೀತ ನಿಂತೊಡನೆಯೇ ತಮ ತಮಗೆ ಸಿಕ್ಕಿದ ಕುರ್ಚಿಯ ಮೇಲೆ ಥಟ್ಟನೆ ಕುಳಿತು, ಕುಳಿತುಕೊಳ್ಳಲು ಕುರ್ಚಿ ಸಿಕ್ಕದವನು ಸೋತನೆಂದು ಮುಂದಿನ ಆಟಕ್ಕೆ ಅವನನ್ನು ಸೇರಿಸದೆ ಬಿಟ್ಟು, ಅದರ ಮುಂದಿನ ಆಟ ನಡೆಯುತ್ತಿರುವಲ್ಲಿ ಅಲ್ಲಿರುವ ಕುರ್ಚಿಗಳಲ್ಲೊಂದನ್ನು ತೆಗೆದುಬಿಟ್ಟು, ಹೀಗೆಯೇ ಆಡುವ ಒಂದು ಆಟ). **M. comedy** ಹೆಚ್ಚು ಕಥೆಯೇನೂ ಇಲ್ಲದೆ ಹಾಡು, ಸಂಭಾಷಣೆ ಮತ್ತು ನೃತ್ಯ —ಇವುಗಳಿಂದ ಕೂಡಿದ ಲಘು ನಾಟಕ ವಿನೋದ ; ಸಂಗೀತ ಹರ್ಷನಾಟಕ. **M. glasses** ತಕ್ಕಂತೆ ಅಳವಡಿಸಿರುವ ಅರ್ಧ ವರ್ತುಲಾಕಾರದ ಗಾಜಿನ ಬಟ್ಟಲುಗಳ ಏಣನ್ನು ತೇವದ ಬೆರಳಿನಿಂದ ಉಜ್ಜುವುದರಿಂದ ಸಂಗೀತ ಸ್ವರಗಳನ್ನು ಹೊರಡಿಸುವ ಒಂದು ಸಂಗೀತವಾದ್ಯ. **M. ride** ರಾವುತ ಸೈನಿಕರು ಸಂಗೀತಕ್ಕೆ ಹೊಂದಿಕೊಂಡು ಮಾಡುವ, ಕುಣಿತದಂಥ ಕುದುರೆಯ ಕವಾಯತು. **Musicálity** (ನಾ.) ; **Músicalness** (ನಾ.) ; **Músically** (ಕ್ರಿ. ವಿ.) ; **Musicále** —ಕಾಲ್ (ನಾ.) (ಅಮೆ. ಸಂ.) ಸಂಗೀತ ಗೋಷ್ಠಿ. **Musícian** ಮ್ಯೂಸಿಷ(ಷ್)ನ್ (ನಾ.) ಸಂಗೀತ ಗಾರ ; ಸಂಗೀತ ಶಾಸ್ತ್ರಜ್ಞ.

Musicále, Musícian. Music ನೋಡಿ.

Musk ಮಸ್ಕ್ (ನಾ.) ಕಸ್ತೂರಿ (ಗಂಡು ಕಸ್ತೂರಿಮೃಗದ ಒಂದು ಗ್ರಂಥಿಯಲ್ಲಿ ಅಥವಾ ನಂಚಿಯಲ್ಲಿ ಉತ್ಪತ್ತಿಯಾಗುವ ಕೆಂಪು ಛಾಯೆಯ ಕಂದು ಬಣ್ಣದ ಬಹಳ ಸುವಾಸನೆಯ ದ್ರವ್ಯ. ಇದನ್ನು ಸುವಾಸನೆಯ ಪದಾರ್ಥಗಳಲ್ಲೂ ಔಷಧಗಳಲ್ಲಿ ಉತ್ತೇಜಕವಾಗಿಯೂ ಸೆಳವುರೋಗಕ್ಕೆ ತಡೆಯಾಗಿಯೂ ಉಪಯೋಗಿಸುತ್ತಾರೆ) ; ಕಸ್ತೂರಿವಾಸನೆಯ ಸಸ್ಯಜಾತಿ. **M.-deer** ಮಧ್ಯ ಏಷ್ಯದ, ಕೊಂಬಿಲ್ಲದ ಸಣ್ಣ ಜಿಂಕೆಯ ಜಾತಿ : ಕಸ್ತೂರಿ ಮೃಗ. **M.-duck** ಕಸ್ತೂರಿವಾಸನೆಯ ಒಂದು ಬಾತುಕೋಳಿ ಜಾತಿ (ಗಂಡಿನಲ್ಲಿ ಮಾತ್ರ ಈ ವಾಸನೆ ಇರುತ್ತದೆ) (= Muscovy duck). **M. melon** (ಸಾಮಾನ್ಯ) ಕೆಕ್ಕರಿಕೆಯ ಹಣ್ಣು. **M.-ox** ಉ. ಅಮೆರಿಕದ ಶೀತ ವಲಯ ಪ್ರಾಂತಗಳಲ್ಲಿ ದೊರೆಯುವ, ತೀಕ್ಷ್ಣವಾದ ಕಸ್ತೂರಿವಾಸನೆಯ ಒಂದು ಮೆಲುಕುಹಾಕುವ ಪ್ರಾಣಿ : ಕಸ್ತೂರಿ ವೃಷಭ. **M.-rat** ಉ. ಅಮೆರಿಕದ ಒಂದು ಜಲವಾಸಿ ದಂಶಕ ಪ್ರಾಣಿ : ಕಸ್ತೂರಿ ಇಲಿ ; ಮೂಗಿಲಿ (= Musquash) ; ಇದರ ತುಪ್ಪುಳು ಚರ್ಮ. **M.-rose** ಸುವಾಸನೆಯ ದೊಡ್ಡ ಬಿಳಿಯ ಹೂವು ಬಿಡುವ ಬಳ್ಳಿ ಗುಲಾಬಿ : ಕಸ್ತೂರಿ ಗುಲಾಬಿ. **M.-tree, -wood** ಕಸ್ತೂರಿವಾಸನೆಯ ಮರದ ಜಾತಿ. **Músky** (ಗು.)

Músket ಮಸ್ಕೆಟ್ (ನಾ.) (ಕಾಲಾಳಿನ) ಬಂದೂಕು, ತುಪಾಕಿ (ಈಗ ಸಾ., ಬಳಕೆಯಲ್ಲಿಲ್ಲ). M.-shot ಈ ಬಂದೂಕಿನಿಂದ ಹಾರಿಸಿದ ಗುಂಡು ; ಇದರ ಹಾರು ದೂರ. **Musketeér** —ಟಿಯರ್ (ನಾ.) ಬಂದೂಕು ಸಿಪಾಯಿ. **Músketry** (ನಾ.) ಬಂದೂಕುಗಳು ; ಬಂದೂಕನ್ನು ಪ್ರಯೋಗಿಸುವ ವಿದ್ಯೆ ; ಬಂದೂಕಿನ ದಳ. (ಸೈನ್ಯ : ಆಧುನಿಕ ಪ್ರ.) ರೈಫ್ಲ್‌ರ್ (ಬಂದೂಕು) ಹಾರಿಸುವುದರಲ್ಲಿ ಶಿಕ್ಷಣ, ಅಭ್ಯಾಸ.

Múslim = Moslem.

Múslin ಮಸ್ಲಿನ್ (ನಾ.) ಹೆಂಗಸರ ಉಡಿಗೆ, ಪರದೆ, ಮೊ. ಗಳಿಗೆ ಉಪಯೋಗಿಸುವ ಬಹು ಸೂಕ್ಷ್ಮ ನೆಯ್ಗೆಯ ಹತ್ತಿಯ ಬಟ್ಟೆ : ಮಸ್ಲಿನ್ ಬಟ್ಟೆ. Bit of m. (ಬಳ. ಮಾ.) ಹೆಂಗಸು ; ಹುಡುಗಿ. **Múslined** ಮಸ್ಲಿಂಡ್ (ಗು.) ; **Muslinét** (ನಾ.) ದಪ್ಪ ಮಸ್ಲಿನ್ ಬಟ್ಟೆ.

Músquash ಮಸ್‌ಕ್ವಾಷ್ (ನಾ.). **Musk** ನೋಡಿ.

Mussál ಮಸಾಲ್ (ನಾ.) (ಆಂ. ಇಂ.) ಮಷಾಲು ; ಪಂಜು ; —ಹಿಡಿಯು ವವನು ; ಮಷಾಲ್ಚಿ (= **Mussálchu**)

Mússel ಮಸ್‌ಲ್ (ನಾ.) ಹಲವು ಜಾತಿಯ ಜೋಡು ಚಿಪ್ಪಿನ ಪ್ರಾಣಿ (Sea, Fresh-water, m.)

Mússulman ಮಸಲ್‌ಮ್ಯಾನ್ (ನಾ., ಗು. ; ಬ. ವ. -mans) ಮುಸ ಲ್ಮಾನ ; ಮಹಮ್ಮದೀಯ.

Must[1] ಮಸ್ಟ್ (ನಾ.) ಹೊಸ ದ್ರಾಕ್ಷಾ ಮದ್ಯ ; ಪೂರ್ತಿಯಾಗಿ ಮಂಡ ಕಟ್ಟದ ದ್ರಾಕ್ಷಾ ರಸ.

Must[2] ಮಸ್ಟ್ (ನಾ.) ಬೂಷ್ಟು ; ಬೂಜು. **Músty** (ಗು.) ಬೂಷ್ಟು ಹಿಡಿದ ; ಬೂಷ್ಟಿನ ಅಥವಾ ಹಳಸು ವಾಸನೆಯುಳ್ಳ ಅಥವಾ ರುಚಿ ಯುಳ್ಳ. (ರೂಪ.) ಹಳಸರಾದ ; ವಾಡಿಕೆ ತಪ್ಪಿದ. **Mústiness** (ನಾ.)

Must[3] ಮಸ್ಟ್ (ಗು., ನಾ.) (ಗಂಡಾನೆ ಗಂಡೊಂಟೆಗಳ ವಿಷಯದಲ್ಲಿ) ಮದವೇರಿದ. (ನಾ.) ಮಸ್ತಿ ; ಮದ.

Must[4] ಮಸ್ಟ್ (ಸಹಾಯಕ ಕ್ರಿ.) (ಅವಶ್ಯ) ಬೇಕು. You m. find it ನೀನು ಅದನ್ನು ಕಂಡುಹಿಡಿಯಲೇ ಬೇಕು. (ಒತ್ತಾಯ ಕಡಮೆಯಾದಾಗ) It m. be found ಅದನ್ನು ಕಂಡುಹಿಡಿಯಬೇಕು. We m. see what can be done ಏನು ಮಾಡಲು ಸಾಧ್ಯವೊ ನೋಡಲೇ ಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

You m. know ನೀನು ತಿಳಿದುಕೊ. He m. be mad ಅವನಿಗೆ ಹುಚ್ಚು ಹಿಡಿದಿರಬೇಕು. Just as I was getting better, what m. I do but break my leg! ನನಗೆ ಗುಣವಾಗುತ್ತ ಬರುತ್ತಿದ್ದಾಗ ನನ್ನ ಅದೃಷ್ಟಕ್ಕೆ ಕಾಲು ಮುರಿದುಹೋಗಬೇಕೇ ?

Mustáchio ಮು(ಮ)ಸ್ಟಾಷೋ (ನಾ.) (ಪ್ರಾಚೀ. ಪ್ರ.) = Moustache.

Mústard ಮಸ್ಟರ್ಡ್ (ನಾ.) ಸಾಸವೆ (ಗಿಡ) (Black, white, m.) [ಬೀಜವನ್ನು ಅರೆದು ಪಿಷ್ಟವನ್ನಾಗಿ ಮಾಡಿ ಮಸಾಲೆಯಾಗಿಯೂ ಲೇಪ ಕಟ್ಟಾಗಾಗಿಯೂ (M. plaster) ಉಪಯೋಗಿಸುತ್ತಾರೆ]. (ರೂಪ.) (ಅಮೆ. ಸಂ.) ಹುರುಪುಳ್ಳದ್ದು ; ಹುರಿಯಾಳು ; ಉತ್ಸಾಹಿ. M. gas ಬಲವಾದ ಉರಿತವನ್ನುಂಟುಮಾಡುವ ಮತ್ತು ಬೊಬ್ಬೆಯೆಬ್ಬಿಸುವ ಒಂದು ಬಗೆಯ ವಿಷಾನಿಲ. M. plaster ಸಾಸವೆ ಪಟ್ಟು. Grain of m. seed ಪ್ರಬಲವಾಗಿ ಬೆಳೆಯಬಲ್ಲ ಸಣ್ಣವಸ್ತು (ಹೆಮ್ಮರವಾಗಬಲ್ಲ ಸಣ್ಣ ಆಲದ ಬೀಜದಂತೆ). M.-pot ಊಟದ ಮೇಜಿನಮೇಲಿನ ಸಾಸವೆಪುಡಿಯುಳ್ಳ ಮುಚ್ಚಳದ ಕುಡಿಕೆ.

Múster ಮಸ್ಟರ್ (ನಾ., ಕ್ರಿ.) (ಪರೀಕ್ಷೆ ಮಾಡಲು, ಮೊ. ಕ್ಕಾಗಿ) ಜನವನ್ನು ಸೇರಿಸುವುದು, —ಜನ ಸೇರುವುದು (Pass m. ತಕ್ಕವನೆಂದು, ತಕ್ಕದ್ದೆಂದು, ಕುಂದಿಲ್ಲವೆಂದು, —ಅಂಗೀಕೃತವಾಗು). ನೆರವಿ ; ಗುಂಪು ; [M.-book ಸೈನಿಕ ದಳಗಳ ದಾಖಲೆ ಪುಸ್ತಕ. M.-roll ಸೈನ್ಯದ ಅಥವಾ ಹಡಗಿನ ಅಧಿಕಾರಿಗಳ ಮತ್ತು ಸೈನಿಕರ ಅಥವಾ ಕಲಾಸಿಗಳ ಪಟ್ಟಿ ; (ರೂಪ.) ಹಾಜರಿ ಪಟ್ಟಿ]. (ಕ್ರಿ.) (ಪರಾಮರ್ಶೆ, ಗಣತಿ, ಮೊ. ಗಳಿಗಾಗಿ) (ಸಿಪಾಯಿಗಳನ್ನು) ಸೇರಿಸು, ಜಮಾಯಿಸು ; ನೆರೆ ; ಸೇರು ; ಒಟ್ಟುಗೂಡು. (ಧೈರ್ಯ, ಶಕ್ತಿ, ಮೊ. ನ್ನು) ತಂದುಕೊ (ಸಾ., *up* ಉಪ. ದೊಡನೆ)

Músty. **Must**[2] ನೋಡಿ.

Mútable ಮ್ಯೂಟಬ್‌ಲ್ (ಗು.) ವ್ಯತ್ಯಾಸ ಸಾಧ್ಯವಾದ ; ಮಾರ್ಪಡುವ ; ಅಸ್ಥಿರ ; ಚಂಚಲ. **Mutabílity** (ನಾ.) ; **Mutátion** (ನಾ.) ಬದಲಾವಣೆ ; ಮಾರ್ಪಾಟು ; ವ್ಯತ್ಯಾಸ. (ಜೀ. ವಿ.) ಹೊಸ ವಂಶ ಉತ್ಪನ್ನವಾಗುವ ಪರಿಣಾಮವುಳ್ಳ ವ್ಯತ್ಯಾಸ ; ಹೊಸ ವಂಶ ಹುಟ್ಟುವ ಮಾರ್ಪಾಟು. (ವ್ಯಾ.) ಸ್ವರ ವ್ಯತ್ಯಯ.

Mutátion. **Mutable** ನೋಡಿ.

Mutátis mutándis (L) ಮ್ಯುಟೇಟಿಸ್ ಮ್ಯುಟ್ಯಾಂಡಿಸ್ (ಕ್ರಿ. ವಿ.) (ವಿಷಯಗಳನ್ನು ಹೋಲಿಸುವಾಗ, ವಿವರಗಳಲ್ಲಿ) ಅವಶ್ಯಕವಾದ ಬದಲಾವಣೆಗಳೊಂದಿಗೆ ; ಉಚಿತ ವ್ಯತ್ಯಾಸಗಳೊಡನೆ.

Mute[1] ಮ್ಯೂಟ್ (ಗು., ನಾ.) ಮೌನದಿಂದಿರುವ ; ಮೂಗುವಟ್ಟಿರುವ ; (ಮಾತು) ನುಡಿಯದಿರುವ ; ಸೊಲ್ಲಿಲ್ಲದ. [(ನ್ಯಾ. ಶಾ.) Stand m. of malice ವಾದಿಸದೆ ಬೇಕೆಂದು ಮೌನ ವಹಿಸು]. (ಮನುಷ್ಯ, ಪ್ರಾಣಿ) ಮೂಕ ; (ಬೇಟೆನಾಯಿ, ಬೇಟೆಯಾಡುವಲ್ಲಿ) ಬಗುಳದ. ಮಾತಿನಲ್ಲಿ ಹೇಳದ, ವ್ಯಕ್ತಗೊಳಿಸದ (M. appeal, adoration ಮೌನದ ಮೊರೆ, ಆರಾಧನೆ). ತಾತ್ಕಾಲಿಕವಾಗಿ ಮಾತುಡುಗಿದ. (ವ್ಯಂಜನಾಕ್ಷರ) ಶ್ವಾಸ ಮಾರ್ಗದ ಪೂರ್ಣ ನಿರೋಧದಿಂದ ಉಚ್ಚರಿಸುವ (ಸಾ., b, p, ph, d, t, th, k, g). (ಅಕ್ಷರ) ಉಚ್ಚರಿಸದ ; ಮೂಕ (The e in 'late' is mute). (ನಾ.) ಮೂಕ ವ್ಯಂಜನ. ಮೂ(ಕ)ಗ ; ಮೂಕ ನಾಟಕದ ನಟ ; (ಪೂರ್ವ ದೇಶಗಳಲ್ಲಿ) ಮೂಕ ಸೇವಕ. (ಶವ ಸಂಸ್ಕಾರದಲ್ಲಿ) ಶೋಕ ಪ್ರದರ್ಶನಕ್ಕಾಗಿರುವ ಕೂಲಿಯಾಳು. ತಂತಿ ವಾದ್ಯಗಳ ಅನುನಾದವನ್ನು ಕುಂದಿಸುವ, ಮಂದಯಿಸುವ, —ಹಿಡಿಕೆ ; ಗಾಳಿ ವಾದ್ಯಗಳ ನಾದವನ್ನು ಮಂದಯಿಸುವ ಮೆತ್ತೆ : ಧ್ವನಿ ಮಂದಕಾರಿ. **Mútely** (ಕ್ರಿ. ವಿ.) ; **Múteness** (ನಾ.) ; **Mútism** (ನಾ.) = Muteness ; ಮೂಕತನ ; ಮೌನ.

Mute (ಕ್ರಿ. ಸಕ.) (ಮು., ಸಂಗೀತವಾದ್ಯದ) ನಾದವನ್ನು ಮಂದಯಿಸು, ಕುಂದಿಸು.

Mute[2] ಮ್ಯೂಟ್ (ಕ್ರಿ.) (ಪಕ್ಷಿಗಳ ವಿಷಯದಲ್ಲಿ) ಹಿಕ್ಕೆ ಹಾಕು ; ಅಚ್ಚಿಕ್ಕು.

Mútilate ಮ್ಯೂಟಿಲೇಟ್ (ಕ್ರಿ. ಸಕ.) (ಒಬ್ಬನಿಗೆ) ಅಂಗಹೀನ ಮಾಡು ; (ಅಂಗ, ಮೊ. ನ್ನು) ಕತ್ತರಿಸಿಹಾಕು ; ಉಪಯೋಗಕ್ಕೆ ಬರದಂತೆ ಮಾಡು. (ಕೆಲವು ಭಾಗಗಳನ್ನು ತೆಗೆದು ಗ್ರಂಥ, ಮೊ. ನ್ನು) ಊನ ಮಾಡು, ಅಪೂರ್ಣಗೊಳಿಸು. **Mutilátion** (ನಾ.) ; **Mútilator** (ನಾ.)

Mútiny ಮ್ಯೂಟಿನಿ (ನಾ., ಕ್ರಿ. ಅಕ.) (ವಿಧಿಬದ್ಧವಾಗಿ ಏರ್ಪಟ್ಟ ಅಧಿಕಾರದ ಮೇಲೆ) (ಪ್ರತ್ಯಕ್ಷವಾದ) ದಂಗೆ (ಏಳು) (ಮು., ಸಿಪಾಯಿಗಳು ಅಥವಾ ಕಲಾಸಿಗಳು ಅವರ ಅಧಿಕಾರಿಗಳಮೇಲೆ ಮಾಡುವಂಥದು) ; ಬಂಡಾಯ (ಮಾಡು) ; ತಿರುಗಿಬೀಳು(ವುದು). **Mutineér** —ನಿಯರ್ (ನಾ.) ದಂಗೆಕೋರ ; ಬಂಡಾಯಗಾರ. **Mútinous** (ಗು.) ದಂಗೆಯೇಳುವ, ಎದುರು ಬೀಳುವ, —ಸ್ವಭಾವದ ; **Mútinously** (ಕ್ರಿ. ವಿ.)

Mútism. **Mute**[1] ನೋಡಿ.

Mútograph ಮ್ಯೂಟೊಗ್ರಾಫ್ (ನಾ., ಕ್ರಿ. ಸಕ.) ಚಲಿಸುತ್ತಿರುವ ವಸ್ತುಗಳ ಛಾಯಾ ಚಿತ್ರ ಪರಂಪರೆಯನ್ನು ತೆಗೆಯುವ ಯಂತ್ರ ಸಲಕರಣೆ : ಚಲಚ್ಚಿತ್ರ ಛಾಯಾಗ್ರಾಹಿ. (ಕ್ರಿ.) —ಇಂದ ಚಿತ್ರ ತೆಗೆ.

Mútoscope ಮ್ಯೂಟೊಸ್ಕೋಪ್ (ನಾ.) ಛಾಯಾ ಚಲಚ್ಚಿತ್ರ ದರ್ಶಕ. **Mutoscópic** —ಸ್ಕಾ— (ಗು.)

Mutt ಮಟ್ (ನಾ.) (ಅಮೆ. ಸಂ. ಅಸಂ.) ತಿಳಿಗೇಡಿತನದಿಂದ ತಪ್ಪು ಮಾಡುವವನು ; ಮುಟ್ಠಾಳ ; ದಡ್ಡ. (ತಿರಸ್ಕಾರಾರ್ಥದಲ್ಲಿ) (ನಾಯಿ) ಕುನ್ನಿ.

Mútter ಮಟರ್ (ಕ್ರಿ., ನಾ.) (ಕೇಳಿ ಕೇಳಿಸದಂತೆ) ತಗ್ಗು ದನಿಯಲ್ಲಿ ಮಾತನಾಡು ; ಗೊಣಗು (*Against*, *at* ಉಪ. ದೊಡನೆ). (ಮಾತು, ಮೊ. ನ್ನು) ತಗ್ಗು ದನಿಯಲ್ಲಿ ಆಡು, ಉಚ್ಚರಿಸು. (ರೂಪ.) ಗುಟ್ಟಾಗಿ ಹೇಳು ; ಪಿಸುಮಾತಾಡು ; ಗುಸು ಗುಸು ಮಾತನಾಡು. ಜಪಿಸು. (ನಾ.) — ವುದು ; ಪಿಸುಮಾತು ; ಗೊಣಗು (ಮಾತು)

Mútton ಮಟನ್ (ನಾ.) (ಆಹಾರವಾಗಿ) ಕುರಿಯ ಮಾಂಸ ; (ತಮಾಷೆಯಾಗಿ) ಕುರಿ. [To our muttons (ಫ್ರೆಂಚ್ ಪ್ರ.) ಪ್ರಸಕ್ತ ವಿಷಯಕ್ಕೆ ಹಿಂದಿರುಗಿ ಬರೋಣ]. M. head (ಬಳ. ಮಾ.) ದಡ್ಡ ; ಹೆಡ್ಡ. Dead as m. ಪೂರ್ತಿ ಸತ್ತ. Eat one's m. with (—) ಒಡನೆ ಊಟ ಮಾಡು. M. chop (ಕರಿಯುವುದಕ್ಕೆ ಉಪಯೋಗಿಸುವ) ಕುರಿಯ ಮಾಂಸದ ತುಂಡು ; ಈ ಆಕಾರದ ಗಲ್ಲಮೀಸೆ. **Múttony** ಮಟ್ನಿ (ಗು.) ಕುರಿಯ ಮಾಂಸದ ಗುಣವುಳ್ಳ.

Mútual ಮ್ಯೂಟ್ಯು(ಚ್ಯು)ಅಲ್ (ಗು.) (ಭಾವಗಳು, ಕಾರ್ಯಗಳು, ಮೊ. ವು) ಒಬ್ಬರಿಗಾಗೊಬ್ಬರು ಅನುಭವಿಸುವ, ಮಾಡುವ; ಒಂದಕ್ಕೊಂದಕ್ಕಿರುವ ; ಪರಸ್ಪರ ; ಅನ್ಯೋನ್ಯ, (M. affection, benefit, suspicion) ; ನಿರ್ದಿಷ್ಟವಾದ ಅನ್ಯೋನ್ಯ ಸಂಬಂಧವುಳ್ಳ (M. well-wishers ಪರಸ್ಪರ ಕ್ಷೇಮಾಭಿಲಾಷಿಗಳು); [M. admiration society (ಒಬ್ಬರನ್ನೊಬ್ಬರು ಯೋಗ್ಯತೆಗೆ ಮೀರಿ ಹೊಗಳುವ) ಪರಸ್ಪರ ಹೊಗಳಿಕೆಯ ಸಂಘ. M. Insurance Company ಲಾಭದ ಒಂದು ಭಾಗವನ್ನೊ ಅಥವಾ ಎಲ್ಲವನ್ನೂ ವಿಮೆದಾರರಲ್ಲಿ ಹಂಚುವ ಏರ್ಪಾಡಿನ ವಿಮಾ ಸಂಸ್ಥೆ. M. terms (ವಾಣಿಜ್ಯ) (ಬೆಲೆಯ) ಹಣ ಕೊಡುವುದಕ್ಕೆ ಬದಲಾಗಿ ಕಾರ್ಯ ರೂಪದ ವಿನಿಮಯವುಳ್ಳ ಒಪ್ಪಂದ]. (ಅನುಚಿತ ಪ್ರ.) ಇಬ್ಬರಿಗೆ ಅಥವಾ ಹೆಚ್ಚು ಮಂದಿಗೆ ಸಮಾನ ಸಂಬಂಧದ (Our m. friend). **Mutuálity** (ನಾ.) ಪರಸ್ಪರತೆ. **Mútually** (ಕ್ರಿ. ವಿ.) ; **Mútualism** (ನಾ.) ಕ್ಷೇಮಾಭ್ಯುದಯಕ್ಕೆ ಪರಸ್ಪರಾವಲಂಬನ ಅವಶ್ಯಕವೆಂಬ ವಾದ : ಪರಸ್ಪರಾವಲಂಬನ ವಾದ. **Mútualist** (ನಾ.)

Mútualism. **Mutual** ನೋಡಿ.

Múzhik (ನಾ.) = Moujik.

Muzz. **Muzzy** ನೋಡಿ.

Múzzle ಮಸ್‌ಲ್ (ನಾ., ಕ್ರಿ. ಸಕ.) (ಪ್ರಾಣಿಯ) (ಮೂಗು ಮತ್ತು ಬಾಯಿ ಕೂಡಿದ) ಮೂತಿ; ಮುಸುಡಿ. ಬಂದೂಕಿನ ತೆರೆದ ತುದಿ, ಬಾಯಿ [M.-loader ಬಾಯಿಯ ಮೂಲಕ (ಮದ್ದು ಗುಂಡು ಹಾಕಿ) ಬಾರು ಮಾಡುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಂದೂಕು]. (ಕಚ್ಚದಂತೆ, ತಿನ್ನದಂತೆ, ತೋಡದಂತೆ, ಪ್ರಾಣಿಗಳ ತಲೆಗೆ ಕಟ್ಟುವ) (ಬಾಯಿ) ಕುಕ್ಕೆ, ಬಾಯಿ ಕಲ್ಲಿ. (ಕ್ರಿ.) (ಪ್ರಾಣಿಗೆ) ಬಾಯಿ ಕುಕ್ಕೆ ಹಾಕು. (ರೂಪ.) (ಮಾತಾಡದಂತೆ, ಒಬ್ಬನ) ಬಾಯಿ ಕಟ್ಟು, ಮುಚ್ಚಿಸು. (ಹಡಗಿನ) ಪಟ ಸುತ್ತಿಬಿಡು.

Múzzy ಮಸ್ಜಿ (ಗು.) ಮಂಕು ಕವಿದ; ಗೆಲವಿಲ್ಲದ; ನಿರುತ್ಸಾಹದ. (ಕುಡಿದು) ಮತಿಗೆಟ್ಟ. **Múzzily** (ಕ್ರಿ. ವಿ.); **Múzziness** (ನಾ.); **Muzz** (ಕ್ರಿ. ಸಕ.) (ಅಸಂ.) ಮತಿಗೆಡಿಸು; ನಿರುತ್ಸಾಹಗೊಳಿಸು.

My ಮೈ, (ಒತ್ತರದೆ ಉಚ್ಚರಿಸಿದಾಗ) ಮಿ (ಸ. ನಾ.) ನನ್ನ (My boy, friend, man, son, daughter) (ಇತರ ಬಂಧುವಾಚಕಗಳೊಡನೆ ಬಳಕೆಯಿಲ್ಲ). My dear, darling, love. My (ಗ್ರಾಮ್ಯ mine) & her father ನನ್ನ ಮತ್ತು ಅವಳ ತಂದೆ. My (ಗ್ರಾಮ್ಯ mine) & her father(s) ನನ್ನ ತಂದೆ ಮತ್ತು ಅವಳ ತಂದೆ. (ಉದ್ಗಾರಗಳಲ್ಲಿ) My! My eye!, etc.

Myálgia ಮೈಯಾಲ್ಜಿಯ (ನಾ.) (ವೈ. ಶಾ.) ಸ್ನಾಯು(ಗಳ) ವಾತ (ರೋಗ)

Myálism ಮೈಅಲಿಸ್‌ಮ್ (ನಾ.) (ವೆಸ್ಟ್‌ಇಂಡೀಸ್ ದ್ವೀಪಗಳಲ್ಲಿ ಪ್ರಯೋಗ ಮಾಡುವ) ಒಂದು ಬಗೆಯ ಶೂನ್ಯ, ಮಾಟ.

Mycélium ಮೈಸೀಲಿಯಂ (ನಾ.) (ಸ. ವಿ.) ಅಣಬೆಯ (ನಾಯಿಕೊಡೆಯ) ಹುಟ್ಟಿಗೆ ಕಾರಣವಾದ ಬಿಳಿಯ ಸೂಕ್ಷ್ಮ ನಾಳಗಳ ತಂತು ಜಾಲ. **Mycélial** (ಗು.)

Mycenaéan ಮೈಸಿನೀಯನ್ (ಗು.) (ಪ್ರಾಚೀ. ಶಾ.) ಪುರಾತನ ಗ್ರೀಸಿನಲ್ಲಿರುವ Mycenae ಎಂಬ ಸ್ಥಳದ ಅವಶೇಷಗಳಿಂದ ತಿಳಿದು ಬರುವ ಗ್ರೀಸಿನ ಅಥವಾ ಅಕೀಯ ಪ್ರಾಂತದ ಸಂಸ್ಕೃತಿಯ.

Mycetóma ಮೈಸಿಟೋಮ (ನಾ.) ಕೈಗೆ ಅಥವಾ ಕಾಲಿಗೆ ಬರುವ ಅಣಬೆಯ ಸ್ವಭಾವದ ರೋಗ.

Mycólogy ಮೈಕಾಲೊಜಿ (ನಾ.) ಶಿಲೀಂಧ್ರ ಶಾಸ್ತ್ರ. **Mycólogist** (ನಾ.); **Mycósis** ಮೈಕೋಸಿಸ್ (ನಾ.) ಪರೋಪಜೀವಿಯಾದ ಶಿಲೀಂಧ್ರವಿರುವುದು; ಈ ಶಿಲೀಂಧ್ರ(ದಿಂದಾದ) ರೋಗ.

Mycósis. **Mycology** ನೋಡಿ.

Myelítis ಮೈಎಲೈಟಿಸ್ (ನಾ.) ಬೆನ್ನಿನ ನರರಜ್ಜುವಿನ ಉರಿಯೂತ.

Mýna = Mina.

Mynheér ಮೈನ್‌ಹೇ(ಹಿಯ)ರ್, ಮನೇರ್ (ನಾ.) ಡಚ್ಚರವನು.

Myo- ಮೈಓ — (ಸ. ಪೂ. ಪ.) ಸ್ನಾಯು—. **-cárdium** ಹೃದಯದ ಸ್ನಾಯುದ್ರವ್ಯ. **-cardítis** ಹೃದಯ ಸ್ನಾಯುವಿನ ಉರಿಯೂತ. **-logy** ಸ್ನಾಯು ಶಾಸ್ತ್ರ.

Mýope ಮೈಓಪ್ (ನಾ.) ಸಮೀಪ ದೃಷ್ಟಿಯವನು. **Myópia,** **Mýopy** ಮೈಓಪಿ (ನಾ.) ಹತ್ತಿರದ ದೃಷ್ಟಿ; ಹ್ರಸ್ವ ದೃಷ್ಟಿ (ದೋಷ). **Myópic** —ಆ— (ಗು.)

Myósis ಮೈಓಸಿಸ್ (ನಾ.) ಕಣ್ಣುಪಾಪೆಯ ರಂಧ್ರದ ಸಂಕೋಚನ. **Myótic** —ಆಟಿಕ್ (ಗು.)

Mýosote ಮೈಓಸೋಟ್ (ನಾ.) Forget-me-not ಎಂಬ ಸಸ್ಯ (Forget ನೋಡಿ). **Myosótis** (ನಾ.) ಈ ಸಸ್ಯ ಸೇರಿದ ಸಣ್ಣ ಸಸ್ಯಗಳ ಜಾತಿ.

Mýriad ಮಿರಿಯಡ್ (ಗು., ನಾ.) (ಕಾವ್ಯ., ಅಲಂ.) ಹತ್ತು ಸಾವಿರ; ಒಂದು ಗೊತ್ತಿಲ್ಲದಷ್ಟು ದೊಡ್ಡ ಸಂಖ್ಯೆ(ಯ); ಕೋಟ್ಯನುಕೋಟಿ; ಅಸಂಖ್ಯಾತ.

Mýriapod ಮಿರಿಯಪಾಡ್ (ಗು., ನಾ.) (ಶತಪಾದಿ, ಸಹಸ್ರಪಾದಿ ಜಾತಿಯ ಪ್ರಾಣಿಗಳನ್ನೊಳಕೊಂಡ) ಬಹುಪಾದಿ (ಪ್ರಾಣಿ)

Myrioráma ಮಿರಿಯೊರಾ(ರ್ಯಾ)ಮ (ನಾ.) ಹಲವು ಸಣ್ಣ ಚಿತ್ರಗಳನ್ನು ವಿವಿಧ ದೃಶ್ಯಗಳಾಗಿ ಕಾಣುವಂತೆ ಅನೇಕ ಬಗೆಗಳಲ್ಲಿ ಕೂಡಿಸಲಾಗುವ ಚಿತ್ರ; (ಇಂಥ) ಬಹು ದೃಶ್ಯಾವಳಿ ವಿನೋದ.

Mýrmidon ಮರ್ಮಿಡನ್ (ನಾ.) (M-: ದೊಡ್ಡಕ್ಷರ) ಅಕಿಲೀಸ್ (Achilles) ಎಂಬ ಗ್ರೀಕ್ ವೀರನ ಹಿಂದೆ ಟ್ರೋಜನ್ ದಂಡಯಾತ್ರೆಗೆ ಹೋದ ಯುದ್ಧೋತ್ಸಾಹಿ ಥೆಸಲಿಯ ಶೂರರ ಕುಲದವನು. ಕೊಲೆ ಮಾಡಲು ಕೂಲಿಗೆ ನಿಯಮಿತನಾದ ಘಾತುಕ; ನೀಚ ಸೇವಕ. M. of the law ಪೋಲೀಸಿನವನು; (ಕೋರ್ಟಿನ) ಅಮೀನ, ಮೊ. ರು.

Myróbalan ಮೈರಾಬಲನ್ (ನಾ.) (ಬಣ್ಣಕಟ್ಟುವುದರಲ್ಲಿಯೂ ತೊಗಲು ಹದಮಾಡುವುದರಲ್ಲಿಯೂ ಮೊ. ಗಿ ಉಪಯೋಗಿಸುವ) ಅಳಲೆಯ ಕಾಯಿ.

Myrrh[1] ಮರ್ (ನಾ.) (ಸುಗಂಧ ದ್ರವ್ಯಗಳಲ್ಲಿಯೂ ಔಷಧದಲ್ಲಿಯೂ ಧೂಪದಲ್ಲಿಯೂ ಉಪಯೋಗಿಸುವ) ಸಾಂಬ್ರಾಣಿಯಂಥ ಒಂದು ಬಗೆಯ ಗೋಂದು ರಾಳ: ಗೋಲ ರಸ. **Mýrrhic** (ಗು.) ಗೋಲ ರಸದ. **Mýrrhy** (ಗು.) ಗೋಲ ರಸ ತುಂಬಿದ; —ದ ವಾಸನೆ ಕಟ್ಟಿದ; —ದ ವಾಸನೆಯುಳ್ಳ.

Myrrh[2] ಮರ್ (ನಾ.) ಒಂದು ಸುವಾಸನಾ ಸಸ್ಯ.

Myrtáceous. **Myrtle** ನೋಡಿ.

Mýrtle ಮರ್ಟ್‌ಲ್ (ನಾ.) (ನೇರಳೆಯ ಮತ್ತು ಪನ್ನೇರಳೆಯ ಜಾತಿಗೆ ಸೇರಿದ) ಹೊಳಪಿನ ನಿತ್ಯಹಸುರು ಎಲೆಗಳುಳ್ಳ, ಸುವಾಸನೆಯ ಬಿಳಿಯ ಹೂವು ಬಿಡುವ, ('ವೀನಸ್' ದೇವತೆಗೆ ಪವಿತ್ರವಾದ), ಒಂದು ಪೊದರು ಸಸ್ಯ ಜಾತಿ (ಮು., Common M.). **Myrtáceous** ಮರ್ಟೇಷಸ್ (ಗು.)

Myséif ಮೈ(ಮಿ)ಸೆಲ್ಫ್ (ಸ. ನಾ.) ನಾನೇ (ನಾನು ಎಂಬುದನ್ನು ಒತ್ತಿ ಹೇಳುವ ಆತ್ಮಾರ್ಥಕ ರೂಪ). I saw it m.; I have hurt m.; I am not m. ನಾನು (ದೇಹದಲ್ಲಿ, ಮನಸ್ಸಿನಲ್ಲಿ) ನೆಮ್ಮದಿಯಾಗಿಲ್ಲ; ನನಗೆ ಸ್ವಸ್ಥವಿಲ್ಲ.

Mýstagogue ಮಿಸ್ಟಗಾಗ್ (ನಾ.) ರಹಸ್ಯ ತತ್ತ್ವಗಳನ್ನು ಬೋಧೆ ಮಾಡುವವನು (ಮು., Eleusinian mysteries, ಮೊ. ರಹಸ್ಯ ತತ್ತ್ವಗಳಲ್ಲಿ ದೀಕ್ಷೆ ಕೊಡುವ ಗುರು). **Mystagógic(al)** —ಗಾಜಿ— (ಗು.)

Mýstery[1] ಮಿಸ್ಟರಿ (ನಾ.) ಗೂಢವಾದ, ತಿಳಿಯಹೇಳಲು ಸಾಧ್ಯವಲ್ಲದ, —ವಿಷಯ; ಗುಹ್ಯ, ಗುಪ್ತ, —ವಿದ್ಯೆ; ರಹಸ್ಯ; ಗೂಢ ತತ್ತ್ವ; ಗುಟ್ಟು; (Make a m. of ಗುಟ್ಟು ಮಾಡು; ರಹಸ್ಯವಾಗಿಡು. Wrapt in m. ತಿಳಿಯಲಾಗದಂತೆ ರಹಸ್ಯದಲ್ಲಿ ಅಡಗಿ). (ಅಪ್ರಧಾನ) ವಿಷಯಗಳನ್ನು ರಹಸ್ಯವಾಗಿ ಮುಚ್ಚಿಡುವುದು; —ವ ಅಭ್ಯಾಸ. (ತರ್ಕಕ್ಕೆ ಸಿಕ್ಕದ) ದಿವ್ಯ ಪ್ರಭಾವದಿಂದ ಪ್ರಕಾಶಕ್ಕೆ ಬಂದ ಧಾರ್ಮಿಕ ಸತ್ಯ, ತತ್ತ್ವ; ಮತ ಪ್ರಕ್ರಿಯೆ; (ಮು., ಬ. ವ. ದಲ್ಲಿ) ಪ್ರಭುಭೋಜನ ಸಂಸ್ಕಾರ. (ಬ. ವ. ದಲ್ಲಿ) (ಗ್ರೀಕರು, ರೋಮನರು, ಮೊ. ರ) ರಹಸ್ಯ ಮತ ಪ್ರಕ್ರಿಯೆಗಳು. ಪವಾಡ ನಾಟಕ. M.-ship (ಹಿಂದಿನ ಮಹಾಯುದ್ಧದಲ್ಲಿ) ಅಂತರ್ನೌಕೆಗಳನ್ನು ಏಮಾರಿಸಿ ಹತ್ತಿರ ಬರುವಂತೆ ಮಾಡಲು ಅರೆದಾಟದ ಜಹಜಿನಂತೆ ವೇಷ ಹಾಕಿದ ಯುದ್ಧದ ಹಡಗು. **Mystérious** ಮಿಸ್ಟೀರಿಯಸ್ (ಗು.) ರಹಸ್ಯ ಗರ್ಭಿತವಾದ; ಗೂಢವಾದ. (ಮನುಷ್ಯನ ವಿಷಯದಲ್ಲಿ) ರಹಸ್ಯ ಪ್ರಕೃತಿಯ; ರಹಸ್ಯವನ್ನು ಬಚ್ಚಿಡುವುದರಲ್ಲಿ ಆಸಕ್ತಿ ಪಡುವ. **Mystériously** (ಕ್ರಿ. ವಿ.); **Mystériousness** (ನಾ.)

Mýstery[2] ಮಿಸ್ಟರಿ (ನಾ.) (ಪ್ರಾಚೀ. ಪ್ರ.) ಕೈಕಸಬು; ವೃತ್ತಿ (ಮು., ಕರಾರುಪತ್ರಗಳಲ್ಲಿ: Art & m. ಕರಾವೃತ್ತಿ ಮತ್ತು ಕಸಬು)

Mýstic ಮಿಸ್ಟಿಕ್ (ಗು., ನಾ.) ಆಧ್ಯಾತ್ಮಿಕವಾಗಿ ರೂಪಕಾರ್ಥವುಳ್ಳ; ರಹಸ್ಯಾರ್ಥವುಳ್ಳ; = Mysterious; ರಹಸ್ಯ ಗರ್ಭಿತವೂ ಭಯ ಭಕ್ತಿ ಪ್ರಚೋದಕವೂ ಆದ. (ನಾ.) ಧ್ಯಾನದಿಂದಲೂ ಆತ್ಮಾರ್ಪಣದಿಂದಲೂ ಪರಮಾತ್ಮನಲ್ಲಿ ಐಕ್ಯವಾಗಲು ಅಥವಾ ಸಾಯುಜ್ಯವನ್ನು ಪಡೆಯಲು ಪ್ರಯತ್ನಿಸುವ ಮುಮುಕ್ಷು; ಬುದ್ಧಿಗೆ ಮೀರಿದ ತತ್ತ್ವಗಳನ್ನು ಆಧ್ಯಾತ್ಮಿಕ ಗ್ರಹಣ ಮಾಡಲು ಸಾಧ್ಯವೆಂಬ ನಂಬಿಕೆಯುಳ್ಳವನು; ಅತೀಂದ್ರಿಯ (ಗ್ರಹಣ) ವಾದಿ; ಯೋಗಿ. **Mýstical** (ಗು.); **Mýstically** (ಕ್ರಿ. ವಿ.); **Mýsticism** — ಸಿಸ್‌ಮ್ (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯೋಗ ರಹಸ್ಯ ; ಅಧ್ಯಾತ್ಮ ಯೋಗ ; ರಹಸ್ಯ ವಾದ (ಹಲವು ವೇಳೆ ತಿರಸ್ಕಾರ ಸೂಚಕ ಪ್ರ.). **Mýsticize** (ಕ್ರಿ. ಸಕ.)

Mýstify ಮಿಸ್ಟಿಫೈ (ಕ್ರಿ. ಸಕ.) (ತಮಾಷೆಗಾಗಿ) ಮೋಸ ಹೋಗುವಂತೆ ಮಾಡು; ಕಣ್ಣಿಗೆ ಮಣ್ಣೆರಚು; ದಿಗ್ಭ್ರಮೆಗೊಳಿಸು; ತಿಳಿವಿಗೆ ಬರಲಾಗದಂತೆ ಗೂಢ ಮಾಡು. **Mystificátion** (ನಾ.)

Myth ಮಿತ್ (ನಾ.) (ಸಾ., ಅಮಾನುಷ ವ್ಯಕ್ತಿಗಳು, ಮೊ. ಗಳಿಂದ ಕೂಡಿದು ದಾಗಿಯೂ ಪ್ರಕೃತಿಯ ಗೋಚರಾನುಭವಗಳ ವಿಷಯದಲ್ಲಿ ಜನಸಾಮಾನ್ಯಾಭಿಪ್ರಾಯಗಳನ್ನು ಹೇಳುವುದಾಗಿಯೂ ಇರುವ) ಶುದ್ಧ ಕಾಲ್ಪನಿಕ ಕಥನ; ಪುರಾಣ ಕಥೆ; ಮಿಥ್ಯೆ; ಕಾಲ್ಪನಿಕ ವ್ಯಕ್ತಿ, ವಸ್ತು. **Mýthic**(**al**) (ಗು.); **Mýthically** (ಕ್ರಿ. ವಿ.); **Mýthicize** (ಕ್ರಿ. ಸಕ.) (ಕಥೆ, ಮೊ. ನ್ನು) ಪುರಾಣ ಕಥೆಯಾಗಿ, ಕಟ್ಟು ಕಥೆಯಾಗಿ, —ಭಾವಿಸು, ನಿರೂಪಿಸು; ಪುರಾಣ ಕಥೆಯಾಗಿ ವ್ಯಾಖ್ಯಾನ ಮಾಡು. **Mýthicism** (ನಾ.); **Mýthicist** (ನಾ.); **Mythólogy** ಮಿತಾಲೊಜಿ (ನಾ.) (ಒಂದು ನಿರ್ದಿಷ್ಟ ವ್ಯಕ್ತಿಗೆ ಅಥವಾ ವಿಷಯಕ್ಕೆ ಸಂಬಂಧಿಸಿದ) ಪುರಾಣ; ಪುರಾಣ ಸಾಹಿತ್ಯ. **Mythóloger** (ನಾ.) = **Mythólogist** (ನಾ.); **Mythológic**(**al**) ಮಿತೊಲಾ — (ಗು.); **Mythológically** (ಕ್ರಿ. ವಿ.); **Mythólogize** (ಕ್ರಿ.)

Mytho- ಮೈ(ಮಿ)ತೊ(ತಾ) (ಸ. ಪೂ. ಪ.) ಪುರಾಣ— . **-grapher** (ಮಿತಾಗ್ರಫರ್) ಪುರಾಣ ಕರ್ತೃ; —ಲೇಖಕ. **-graphy** ಆಕೃತಿಶಿಲ್ಪ ಕಲೆಯ ಮೂಲಕ ಪುರಾಣಕಥಾ ನಿರೂಪಣ. **-poéic** (ಮಿತೊಪೀ—), **-poétic** ಪುರಾಣಕಥಾ ರಚನೆಯ; ಪುರಾಣಕಥಾ ಕಾರಕ. **-póet** ಪುರಾಣಕಥಾ ಕವಿ. **-póetry** —ಪುರಾಣ ಕಾವ್ಯ.

Mythólogy, etc. **Myth** ನೋಡಿ.

Mýthus ಮೈತಸ್ (ನಾ.) = Myth.

N

N ಎನ್. ಇಂಗ್ಲಿಷ್ ವರ್ಣಮಾಲೆಯ ಹದಿನಾಲ್ಕನೆಯ ಅಕ್ಷರ. ಮುದ್ರಣದಲ್ಲಿ ಅಗಲದ ಮಾನ (=en). (ಗಣಿತ) ಅನಿಯತ, ಅನಿರ್ದಿಷ್ಟ, ಸಂಖ್ಯೆ [To the nth (power) ಯಾವುದಾದರೂ ಬೇಕಾದ ಘಾತಕ್ಕೆ. (ರೂಪ.) ಎಷ್ಟಕ್ಕೆ ಬೇಕಾದರೂ; ಪರಮಾವಧಿಗೆ]. N-rays, N¹-rays ಕೆಲವು ಬಗೆಯ ಪ್ರಸರಣ ಕಿರಣಗಳು : ಎನ್ ಕಿರಣಗಳು.

ಸಂಕ್ಷಿಪ್ತಗಳು: N.: (1) Natural ಸ್ವಾಭಾವಿಕ; ಸಹಜ [**N.O.** (Natural Order)]. (2) New ಹೊಸ; ನವ [**N.E.D.** New English Dictionary: Oxford English Dictionary ಯ ಮೊದಲಿನ ಹೆಸರು (ಈಗಲೂ ಬಹಳವಾಗಿ ಪ್ರಯೋಗದಲ್ಲಿದೆ). **N.S.**(tyle). **N.T.**(estament). **N.Y.**(ork)]. (3) Non ಅಲ್ಲದ [**N.C.O.** (Non-commissioned Officer)]. (4). North ಉತ್ತರ; ಬಡಗಲು [**N.** & **N.E.**(ast) & **N.W.**(est) ಉತ್ತರ, ಈಶಾನ್ಯ, ವಾಯವ್ಯ, —ದಿಕ್ಕುಗಳು. **N.W. Prov.**(inces)]. (5) Nota ನೋಡು, ಗಮನಿಸು [**N.B.**(ene) ಚೆನ್ನಾಗಿ ಗಮನಿಸು; ಅವಶ್ಯಕವಾಗಿ ನೋಡು]. (6) Neuter ನಪುಂಸಕ. (7) No ಇಲ್ಲ [**n.d.**(ate) ತಾರೀಖಿಲ್ಲ]. (8) Noon ಮಧ್ಯಾಹ್ನ. (9) Noun ನಾಮಪದ.

N°, N°s [Number(s)]. **Non-com.** (missioned Officer)

Nab[1] ನ್ಯಾಬ್ (ನಾ.) ಚಾಚು ನೆಲ; — ಬಂಡೆ; ಭೂಶಿರ. ಬೀಗದೊಳಗಿನ ಅಗುಳಿಯ ನಾಲಗೆ.

Nab[2] ನ್ಯಾಬ್ (ಕ್ರಿ. ಸಕ.) (ಅಸಂ.) ಹಿಡಿದು ನಿಲ್ಲಿಸು; ದಸ್ತಗಿರಿ ಮಾಡು; ತಪ್ಪಿತ ಮಾಡುತ್ತಿರುವಾಗ ಹಿಡಿ.

Nábob ನೇಬಾಬ್ (ನಾ.) (ಚರಿತ್ರೆ) ಮೊಗಲ್ ಸಾಮ್ರಾಜ್ಯದಲ್ಲಿ ಮುಸಲ್ಮಾನ ಅಧಿಕಾರಿ, ಪ್ರಾಂತಾಧಿಕಾರಿ : ನವಾಬ. ಭೋಗಾಸಕ್ತನಾದ ಐಶ್ವರ್ಯವಂತ (ಮು., ಇಂಡಿಯದಲ್ಲಿ ಐಶ್ವರ್ಯ ಗಳಿಸಿ ಇಂಗ್ಲೆಂಡಿಗೆ ಹಿಂದಿರುಗಿದವನು)

Náboth's vinéyard ನೇಬಾ(ಬೋ)ತ್ಸ್ ವಿನ್‌ಯರ್ಡ್ (ನಾ.) ಸ್ವಾಧೀನ ಪಡೆಯಲು ಒಬ್ಬನು ಯಾವ ಕೆಲಸಕ್ಕೂ ಹೇಸದಂಥ ಆಸ್ತಿ; ಅತ್ಯಾಕಾಂಕ್ಷೆ ಹುಟ್ಟಿಸುವ ಆಸ್ತಿ.

Nácre ನೇಕರ್ (ನಾ.) ಮುತ್ತಿನಚಿಪ್ಪು(ಳ್ಳ ಚಿಪ್ಪುಮೀನು). **Nácreous** — ಕ್ರಿಯಸ್ (ಗು.) = **Nácrous** (ಗು.) —ಕೂಡಿದ, ಹೋಲುವ.

Nádir ನೇಡರ್ (ನಾ.) ಖಮಧ್ಯಕ್ಕೆ ನೇರಿದಿರಾಗಿ ಪ್ರೇಕ್ಷಕನ ತಳ ಭಾಗದಲ್ಲಿರುವ ಬಿಂದು: ಅಧೋ ಬಿಂದು (ಎದುರು ಪದ : Zenith). (ರೂಪ.) ಅತ್ಯಂತ ಕೆಳಗಿನ ಬಿಂದು, ಪ್ರದೇಶ; ಅತ್ಯಂತ ಅವನತಿ, ಮೊ. ಗಳ ಸ್ಥಾನ, ಕಾಲ.

Nag[1] ನ್ಯಾಗ್ (ನಾ.) ಸಣ್ಣ ಸವಾರಿಕುದುರೆ; ತಟ್ಟು; (ಬಳ. ಮಾ.) ಕುದುರೆ.

Nag[2] ನ್ಯಾಗ್ (ಕ್ರಿ.) ಬಿಡದೆ ತಪ್ಪು ಹುಡುಕುತ್ತಿರು, ಮೂದಲಿಸುತ್ತಿರು (*At* person). (ಹೀಗೆ) ಕಾಡು, ಪೀಡಿಸು. **Nágging** (ನಾ.)

Nagána ನಗಾನ (ನಾ.) (ಪಶುವೈದ್ಯ) (ದ. ಆಫ್ರಿಕದ) 'ಟ್ಸೆಟ್ಸೆ' ಎಂಬ ನೊಣದ ಕಡಿತದಿಂದ ಬರುವ ದನಗಳ ಒಂದು ರೋಗ.

Naíad ನೈಆ್ಯಡ್, ನೇ— (ನಾ.) ಜಲ ಸ್ತ್ರೀದೇವತೆ; ನದೀ ಸ್ತ್ರೀದೇವತೆ.

Nail ನೇಯ್‌ಲ್ (ನಾ., ಕ್ರಿ. ಸಕ.) ಉಗುರು; ನಖ [N.-brush ಉಗುರನ್ನು ಚೊಕ್ಕಟ ಮಾಡುವ ಕುಂಚ : ಉಗುರು ಕುಂಚ. N.-scissors ಉಗುರು (ಕತ್ತರಿಸುವ) ಕತ್ತರಿ. Tooth & n. (Tooth ನೋಡಿ). **-nailed** (ಗು.)]. (ಮೃಗಗಳ, ಹಕ್ಕಿಗಳ, —ಕಾಲಿನ) ಮೊನೆಯುಗುರು; (ಮೃದು ಕೊಕ್ಕುಳ್ಳ ಕೆಲವು ಹಕ್ಕಿಗಳಲ್ಲಿ) ಕೊಕ್ಕಿನ ಮೇಲ್ಭಾಗದಲ್ಲಿಯ ಉಗುರು ಪದಾರ್ಥದ ಗಟ್ಟಿ ಗಂತಿ. ಮೊಳೆ; ಆಣಿ [Hit n., or right n., on head (Hit ನೋಡಿ). N. in one's coffin (Coffin ನೋಡಿ). On the n. (ಮು., ಹಣ ಪಾವತಿಯ ವಿಷಯದಲ್ಲಿ) ತಡ ಮಾಡದೆ; ಒಡನೆಯೇ. Hard as nails ಒಳ್ಳೆಯ ತರಪೇತು ಹೊಂದಿ; ಲಾಯಖ್ ಆಗಿ. Right as nails ಪೂರ್ತಿ ಸರಿಯಾಗಿ; ಠೀಕಾಗಿ. N.-head (ವಾ. ಶಾ.) ಕಟ್ಟಡದ ಒಂದು ತೆರದ ಗೋಲುಅಲಂಕಾರ]. ಹಿಂದೆ ಉಪಯೋಗಿಸುತ್ತಿದ್ದ ಒಂದು ಉದ್ದಳತೆ (ಗಜದ ೧೬ರಲ್ಲೊಂದು ಭಾಗ : 2¼ ಅಂಗುಲ). (ಕ್ರಿ.) ಮೊಳೆ ಹೊಡೆ(ದು ಬಂಧಿಸು) (*On, to, together, down, in* ಮೊ. ಉಪ. ದೊಡನೆ). [N. colours to mast (Colour ನೋಡಿ). N. to counter, barndoor ಕೃತ್ರಿಮವೆಂದು, ನೀಚವಾದದ್ದೆಂದು, —ಸ್ಪಷ್ಟಗೊಳಿಸು, ಬಹಿರಂಗ ಪಡಿಸು. N. up ಮುಚ್ಚಿ ಮೊಳೆ ಹೊಡೆ; ಸ್ವಲ್ಪ ಎತ್ತರದಲ್ಲಿ ಮೊಳೆ ಹೊಡೆದು ಬಂಧಿಸು. Nailed-up drama ವ್ಯವಸ್ಥೆಯಿಲ್ಲದ ರಚನೆಯ, ಹೊಂದಿಸದ ಜೋಡಣೆಯ, —ನಾಟಕ; ಅನನ್ವಯ ನಾಟಕ]. (ವ್ಯಕ್ತಿ, ಗಮನ, ಮೊ. ನ್ನು) ಬಂಧಿಸು, ಚಲಿಸದಂತಿಡು; ನಾಟಿಸು; (ಮನುಷ್ಯನನ್ನು, ವಸ್ತುವನ್ನು) ಭದ್ರಪಡಿಸು, ಹಿಡಿ, ನಿಲ್ಲಿಸಿಕೊ. **Náiler** (ನಾ.) ಮೊಳೆ ಮಾಡುವವನು; ಮೊಳೆಗಾರ. (ಅಸಂ.) ಅತ್ಯುತ್ತಮವಾದ ಮಾದರಿ; (—ರಲ್ಲಿ) ಪ್ರವೀಣನಾದವನು (*At* ಉಪ. ದೊಡನೆ). **Náilery** (ನಾ.) ಮೊಳೆ ಮಾಡುವ ಸ್ಥಳ ಅಥವಾ ಕಾರಖಾನೆ. **Náiling** (ಗು.) (ಕ್ರಿಯಾರ್ಥಗಳಲ್ಲಿ). (ಅಸಂ.) ಅತ್ಯುತ್ತಮ; ಸರ್ವೋತ್ಕೃಷ್ಟ (A n., or n. good, race). **Náilless** (ಗು.)

Nainsoók ನೇಯ್‌ನ್‌ಸುಕ್ (ನಾ.) ನಾಜೂಕಾದ ಹತ್ತಿಯ ಬಟ್ಟೆ (ಆದಿಯಲ್ಲಿ ಇಂಡಿಯದ ತಯಾರಿಕೆಯದು). (ಹಿಂದಿ ಮಾತು : ನಯನ ಸುಖ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Naíve ನಾಈವ್, **Naive** ನೇವ್ (ಗು.) ಅಕೃತ್ರಿಮ ; ನಿಷ್ಕಪಟ ; ಮಗುವಿನಂತೆ ಸರಳವಾದ ; ಋಜುವಾದ. **Naívely** (ಕ್ರಿ. ವಿ.) ; **Naívete** ನಾಈವ್‌ಟೇ (ನಾ.) ; **Naívety** ನಾಈವ್‌ಟಿ (ನಾ.)

Náked ನೇಕೆಡ್ (ಗು.) ಬಟ್ಟೆ ತೊಟ್ಟಿಲ್ಲದ ; ಬತ್ತಲೆಯ ; ನಗ್ನ (As n. as my mother bore me ನನ್ನ ತಾಯಿ ಹಡೆದಾಗ ಹೇಗಿದ್ದೆನೊ ಹಾಗೆಯೇ ಬತ್ತಲೆಯಾಗಿ). ಕಾಪಿಲ್ಲದ ; ಅರಕ್ಷಿತ ; ಒರೆಯಿಲ್ಲದ ; ಮುಚ್ಚು ಮರೆಯಿಲ್ಲದ ; ಪರಿಸ್ಫುಟ ; ಸ್ಪಷ್ಟ (The n. truth. N. facts. In its n. absurdity). ಪರೀಕ್ಷೆಗಾಗಿ ಹೊದಿಕೆ ತೆಗೆದ (His n. heart). (—) ಇಲ್ಲದ ; (—) ರಹಿತ (*Of* ಉಪ. ಜೊಡನೆ); ಮರ ಗಿಡಗಳಿಲ್ಲದ ; ಹಸುರೆಲೆ ಇಲ್ಲದ ; ಬಂಜರಾದ. (ಬಂಡೆ) ಮುಚ್ಚು ಕಳೆದ, ತೆರೆದ. (ಕೊಠಡಿ) ಪೀಠೋಪಸ್ಕರಗಳಿಲ್ಲದ ; ಅಲಂಕಾರವಿಲ್ಲದ ; ನಿರಾಭರಣ. (ಹಟ್ಟಿದ ಮೋಂಬತ್ತಿ, ಮೊ. ವು) ಗಾಳಿಗೊಡ್ಡಿದ. ಸಿಪ್ಪೆ, ಎಲೆ, ಕೂದಲು, ಶಲ್ಕಗಳು, ಚಿಪ್ಪು, ಮೊ. ಗಳು ಇಲ್ಲದ ; ಬೋಳಾದ; ಸೇರಿಕೆ, ಟೀಕೆ, ವ್ಯಾಖ್ಯಾನ, ಆಧಾರ, ರುಜುವಾತು, ಮೊ. ಇಲ್ಲದ ; ಬರಿಯ (N. faith, quotations, word, assertion) ; (ಇತರ) ಸಹಾಯವಿಲ್ಲದ (N. eye ದೂರದರ್ಶಕ, ಮೊ. ಗಳ ಸಹಾಯವಿಲ್ಲದ ; ಬರಿಯ ಕಣ್ಣು). N. Lady, N. Boys ಹುಲ್ಲುಮೈದಾನದ ಕೆಲವು ಸಸ್ಯಜಾತಿಗಳು. **Nákedly** (ಕ್ರಿ. ವಿ.) ; **Nákedness** (ನಾ.). The nakedness of the land ವ್ಯಕ್ತಿಯ, ಸಂಸ್ಥೆಯ ಅಥವಾ ರಾಷ್ಟ್ರದ ನಿರ್ಗತಿಕ ಸ್ಥಿತಿ ; ರಾಷ್ಟ್ರದ ಅರಕ್ಷಿತ ಸ್ಥಿತಿ.

Náker ನೇಕರ್ (ನಾ.) (ಚರಿತ್ರೆ) ಭೇರಿ ; ಸಣ್ಣ ನಗಾರಿ.

Námby-pámby ನ್ಯಾಂಬಿ ಪ್ಯಾಂಬಿ (ಗು., ನಾ.) ನಿಸ್ಸಾರವಾದ ಅಂದದ (ಮಾತು) ; ಮುದ್ದು ಮುದ್ದು ; ಸಪ್ಪೆಯ ಬಿನ್ನಾಣ.

Name ನೇಮ್ (ನಾ.) ಹೆಸರು ; ನಾಮ ; ನಾಮಧೇಯ ; ಅಭಿಧಾನ; ಕೀರ್ತಿ ; ಪ್ರಖ್ಯಾತಿ ; ಒಂದು ಗೊತ್ತಾದ ಹೆಸರಿನವರು, ಕುಲ, ಬಣ, ಮನೆತನ. Mention person by n. ವ್ಯಕ್ತಿಯನ್ನು ಹೆಸರು ಹಿಡಿದು ಹೇಳು. Rama by n. ; By n. Rama. Know by n. ವ್ಯಕ್ತಿಶಃ ತಿಳಿದಿರು ; ಹೆಸರು ಮಾತ್ರ ಕೇಳಿರು. Of or by the n. of. Put one's n. down for ಉಮೇದುವಾರ, ಮೊ. ಗಿ ದರಖಾಸ್ತು ಕೊಡು, ಹೆಸರು ಕೊಡು. Keep one's n. on the books (ಪ್ರೌಢ ವಿದ್ಯಾಶಾಲೆ, ಒಂದು ಸಂಸ್ಥೆ, ಮೊ. ಗಳ) ಸದಸ್ಯನಾಗಿರು ; Take one's n. off the books — ಸದಸ್ಯತ್ವವನ್ನು ಬಿಟ್ಟುಬಿಡು. Call person names ಒಬ್ಬನ ವಿಷಯದಲ್ಲಿ ಅವಮರ್ಯಾದೆಯ ಮಾತುಗಳನ್ನಾಡು ; ಬಯ್ಯು. Give it a n. (ಬಳ. ಮಾ.) ನಿನಗೆ ಅಭಿಲಾಷೆಯಿರುವ ಪಾನೀಯ, ಬಹುಮಾನ, ಮೊ. ಗಳ ಹೆಸರನ್ನು ಹೇಳು. Nelson himself and many great names (ಪ್ರಸಿದ್ಧ ವ್ಯಕ್ತಿಗಳು) were there. An ill n., a good n. ಕೆಟ್ಟ, ಒಳ್ಳೆಯ, —ಹೆಸರು. Has a n. for honesty, the n. of being honest ಪ್ರಾಮಾಣಿಕನೆಂದು ಪ್ರಖ್ಯಾತಿ ಇದೆ. Win oneself a n. ಹೆಸರು ಗಳಿಸು. Bequeath a great n. ಮುಂದೆ ಬರತಕ್ಕವರಿಗೆ ಹೆಸರುವಾಸಿಯನ್ನು ಬಿಟ್ಟುಹೋಗು. Persons of n. ಹೆಸರುವಾಸಿಯಾದವರು. One's good n. ಒಬ್ಬನ ಒಳ್ಳೆಯ ಹೆಸರು. Virtuous in n. ಹೆಸರಿಗೆ ಶೀಲವಂತ. Honour had become a n. ಗೌರವವೆಂಬುದು ಹೆಸರಿಗೆ ಮಾತ್ರ ಉಳಿದಿದ್ದಿತು. In God's n. ದೇವರಿಗಾಗಿ ; ದೇವರಲ್ಲಿ ಭಕ್ತಿಯಿಟ್ಟು ; ದೇವರ ಸಾಕ್ಷಿಯಾಗಿ. In the n. of goodness, fortune, common sense. In one's own n. ಅಧಿಕಾರವಿಲ್ಲದೆ, —ಪಡೆಯದೆ ; ಸ್ವತಂತ್ರವಾಗಿ. **N.-child** ಗೌರವ, ಮೊ. ಕ್ಕಾಗಿ ಮತ್ತೊಬ್ಬನ ಹೆಸರಿಟ್ಟಿರುವ ಮಗು. (My n.-c. ನನ್ನ ಹೆಸರಿನ ಮಗು). **N.-day** ತಾನು ಯಾವ ಸಂತನ ಹೆಸರನ್ನಿಟ್ಟುಕೊಂಡಿರುವನೊ ಆ ಸಂತನ ದಿನ. (ಮು., ಯೂರೋಪ್ ಖಂಡದ ರಾಜರ ವಿಷಯದಲ್ಲಿ) ನಾಮಕರಣದ ದಿನ. **N.-part** ನಾಟಕಕ್ಕೆ ಹೆಸರುಕೊಟ್ಟ ಪಾತ್ರ. **N. plate** ಹೆಸರು ಹಲಗೆ. **Namesake** ಅದೇ ಹೆಸರಿನವನು ; —ದು ; ಸ್ವನಾಮಕ (His, etc. namesake). **Námeless** (ಗು.) ಅಜ್ಞಾತ ; ಅನಾಮಧೇಯ ; ಅಪ್ರಸಿದ್ಧ; (ಬೇಕೆಂದು) ಹೆಸರು ಹೇಳದಿರುವ (Who shall be n. ಎಂಬಲ್ಲಿ) ; ಹೆಸರು ಮುಚ್ಚಿಟ್ಟ ; ಹೆಸರು ತಿಳಿಯದ ; ಹೆಸರಿಲ್ಲದ ; ಅನಾಮಕ ; ಅನಿರ್ದೇಶಕ. ಹೆಸರು ಹೇಳಬಾರದಷ್ಟು ಕೆಟ್ಟ ; ಅವಾಚ್ಯ (ಮು., n. vices). **Námely** (ಕ್ರಿ. ವಿ.) ಎಂದರೆ; ಏನೆಂದರೆ.

Name (ಕ್ರಿ. ಸಕ.) ಹೆಸರು ಕೊಡು ; ಹೆಸರಿಡು ; ಹೆಸರಿಸು (*After, from* ಉಪ. ಜೊಡನೆ) ; (—ಎಂದು) ಕರೆ, ನಾಮಕರಣ ಮಾಡು ; ಸರಿಯಾದ ಹೆಸರಿನಿಂದ (ವ್ಯಕ್ತಿಯನ್ನು, ವಸ್ತುವನ್ನು) ಕರೆ. (ಅಧಿಕಾರ, ಮೊ. ಕ್ಕೆ) (ಒಬ್ಬನ) ಹೆಸರು ಸೂಚಿಸು; ನೇಮಿಸು (*To* ಉಪ. ಜೊಡನೆ). ಹೇಳು ; ನಮೂದಿಸು ; ನಿರ್ದೇಶಿಸು (Not to be named on or in the same day with ಒಂದೇ ಬಾಯಲ್ಲಿ ಹೇಳಬಾರದ ; —ಕ್ಕಿಂತ ಬಹಳ ಕೀಳಾದ. N. your price ನಿನ್ನ ಬೆಲೆ ಹೇಳು). (ಶಾಸನ ಸಭೆಯ ಅಧ್ಯಕ್ಷನು) ಸದಸ್ಯನನ್ನು ಅವಿಧೇಯನೆಂದು ಹೆಸರಿಸಿ ಹೇಳು [Name ! (ಕ್ರಿ., ನಾ.) (ಸದಸ್ಯನು ಅಧ್ಯಕ್ಷನನ್ನು ಕುರಿತು) ಆ ಅವಿಧೇಯನ ಹೆಸರು ಹೇಳಿ ! (ನಾ.) —ಎಂಬ ಕೋರಿಕೆ ; (ಭಾಷಣದಲ್ಲಿ ಪ್ರಾಸಂಗಿಕವಾಗಿ ಸೂಚಿಸಿದವನ) ಹೆಸರು ಹೇಳಿ !]. ದೃಷ್ಟಾಂತವಾಗಿ ಕೊಡು. ಅಪೇಕ್ಷೆಯನ್ನು ಸ್ಪಷ್ಟವಾಗಿ ಹೇಳು [N. the day (ಹೆಂಗಸು) ಮದುವೆಯ ದಿನವನ್ನು ಗೊತ್ತುಮಾಡಿ ಹೇಳು]. **Námable** (ಗು.) ಹೆಸರಿಸರಾಗುವ ; ಹೆಸರಿಸಿ ಹೇಳಲು ಯೋಗ್ಯವಾದ ; ಜ್ಞಾಪಕವಿಟ್ಟುಕೊಳ್ಳಬೇಕಾದ.

Námmet. Nummet ಪದದ ಬೇರೆಯ ರೂಪ.

Nankeén ನ್ಯಾನ್‌ಕೀನ್ (ನಾ.) (ಹಿಂದೆ ಸಹಜವಾದ ಹಳದಿಯ ಬಣ್ಣದ ಹತ್ತಿಯಿಂದ ಮಾಡುತ್ತಿದ್ದ) ಒಂದು ತೆರದ ಹತ್ತಿಯ ಬಟ್ಟೆ. (ಬ. ವ. ದಲ್ಲಿ) ಈ ಬಟ್ಟೆಯ ಷರಾಯಿ. ಹಳದಿ ಅಥವಾ ಮಾಸಲು ಹಳದಿಯ ಬಣ್ಣ. [Nankin(g) ಪಟ್ಟಣದ ಹೆಸರಿನಿಂದ]

Nánny ನ್ಯಾನಿ (ನಾ.) (ಹೆಣ್ಣು) ಮೇಕೆ (= N.-goat). ಮಗುವಿನ ದಾದಿ. (ಹೆಂಗಸಿನ ಹೆಸರಿನಿಂದ)

Nantz ನ್ಯಾಂಟ್ಸ್ (ನಾ.) (ಪ್ರಾಚೀ. ಪ್ರ.) ಬ್ರಾಂದಿ (= Right N.). (ಫ್ರಾನ್ಸಿನಲ್ಲಿಯ Nantes ಪಟ್ಟಣದ ಹೆಸರಿನಿಂದ)

Nap[1] ನ್ಯಾಪ್ (ಕ್ರಿ. ಅಕ., ನಾ.) (ಮು., ಹಗಲಿನಲ್ಲಿ) ಸ್ವಲ್ಪ ಹೊತ್ತು ನಸುನಿದ್ದೆ (ಮಾಡು) [Take a n. ; Catch napping (Catch ನೋಡಿ)]

Nap[2] ನ್ಯಾಪ್ (ನಾ., ಕ್ರಿ. ಸಕ.) ಬಟ್ಟೆಯ ಮೋಟು ಎಳೆಗಳನ್ನು ಮೇಲೆತ್ತಿ ತಕ್ಕಂತೆ ಕತ್ತರಿಸಿ ನಯ ಮಾಡಿದ ಬಟ್ಟೆಯ ಮೈ ; ಜುಂಜು. ಮೃದುವಾದ, ನಯವಾದ, ತುಪ್ಪುಳುಗೂಡಿದ ಮೇಲ್ಮೈ. (ಕ್ರಿ.) (ಬಟ್ಟೆಯ ಮೈಮೇಲೆ) ಜುಂಜನ್ನು ಎಬ್ಬಿಸು. **Nápless** (ಗು.)

Nap[3] ನ್ಯಾಪ್ (ನಾ.) ಒಂದು ತೆರದ ಇಸ್ಪೀಟಾಟ [N. hand (ರೂಪ.) ನಷ್ಟವಾದರೆ ಆಗಲೆಂದು ಧೈರ್ಯದಿಂದ ನುಗ್ಗಿ (ಕಾರ್ಯ, ಆಟ) ಕೈಕೊಂಡರೆ ಜಯವಾಗುವುದೆಂಬ ನಿರೀಕ್ಷಣೆಯನ್ನು ಒಪ್ಪಬಹುದಾದ ಸ್ಥಿತಿ. Go n. ನ್ಯಾಪ್ ಆಟದಲ್ಲಿ ಅತ್ಯಂತ ಹೆಚ್ಚಿನ ಗೆಲ್ಲನ್ನು ಪಡೆಯಲು ಧೈರ್ಯ ಮಾಡಿ ನುಗ್ಗು (ರೂಪ. ಸಹ)]. (ಜೂಜು, ಬಾಜಿ, —ಕಟ್ಟುವುದರಲ್ಲಿ) ಒಬ್ಬನಲ್ಲಿರುವ ಎಲ್ಲ ಹಣವನ್ನೂ ಒಂದು ಆಟದಮೇಲೆಯೇ ಒಡ್ಡಿಬಿಡುವುದು ; ಜೂಜು ಸಲಹೆಗಾರನು ಇದಕ್ಕಾಗಿ ಮಾಡುವ ಆಯ್ಕೆ. (Napoleon ಹೆಸರಿನ ಸಂಕ್ಷಿಪ್ತ)

Nape ನೇಪ್ (ನಾ.) ಕತ್ತಿನ ಹಿಂಭಾಗ; ಹೆಡಕು (ಸಾ., N. of the neck)

Nápery ನೇಪರಿ (ನಾ.) (ಸ್ಕಾ. ಪ್ರ. ; ಪ್ರಾಚೀ. ಪ್ರ.) ಮನೆಯ ಉಪಯೋಗದ ಬಟ್ಟೆ (ಮು., ಊಟದ ಮೇಜಿನ ಬಟ್ಟೆ)

Náptha ನ್ಯಾಫ್ಥ, ನ್ಯಾಪ್ಥ (ನಾ.) ಕಲ್ಲಿದ್ದಲು, ಬಿಟ್ಯುಮೆನ್ ಉಳ್ಳ ಪದರಗಲ್ಲು, ಪೆಟ್ರೋಲಿಯಂ, ಮೊ. ಜೈವಿಕ ಪದಾರ್ಥಗಳನ್ನು ಕಾಯಿಸಿ ಒಣಬಟ್ಟಿಯಿಳಿಸುವುದರಿಂದ ದೊರೆಯುವ ಹಲವು ಬಗೆಯ ಶೀಘ್ರದಾಹ್ಯ ತೈಲ : 'ನ್ಯಾಫ್ಥ'. **Náphthalene, -line** ನ್ಯಾಫ್ಥಲೀನ್, —ಲೈನ್ (ನಾ.) ಟಾರೆಣ್ಣೆಯನ್ನು ಕಾಯಿಸಿ ಬಟ್ಟಿಯಿಳಿಸುವಲ್ಲಿ ದೊರೆಯುವ ಬಿಳಿಯ ಸ್ಫಟಿಕ ಪದಾರ್ಥ (ಇದನ್ನು ಸೋಂಕು ನಿವಾರಕವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಪಯೋಗಿಸುತ್ತಾರೆ) : ನ್ಯಾಫ್ತಲೀನ್. **Náphthalize** (ಕ್ರಿ. ಸಕ.) ನ್ಯಾಫ್ತ ದೊಡನೆ ಬೆರಸು ; ನ್ಯಾಫ್ತದಿಂದ ಅಭಿಸಿಕ್ತ ಮಾಡು, ನೆನಸು.

Nápkin ನ್ಯಾಪ್‌ಕಿನ್ (ನಾ.) (ಊಟ ಮಾಡುವಾಗ ತುಟಿಗಳನ್ನು ಅಥವಾ ಬೆರಳುಗಳನ್ನು ಒರಸಿಕೊಳ್ಳುವುದಕ್ಕಾಗಲಿ, ಅಥವಾ ಅದರಮೇಲೆ ಮೀನು, ಮೊ. ನ್ನು ಬಡಿಸುವುದಕ್ಕಾಗಲಿ, ಉಪಯೋಗಿಸುವ) (ಬಟ್ಟೆಯ) ಚೌಕ (= Table-n.) ; ಕೈಚೌಕ ; ಕರ ವಸ್ತ್ರ ; ಎಳೆಮಕ್ಕಳ ಉಪಯೋಗಕ್ಕಾಗಿರುವ ಸಣ್ಣ ಚೌಕ. Lay up in a n. ಬಳಸದೆ ಇಟ್ಟುಬಿಡು. N.-ring ಇಂಥವರದೆಂದು ಗೊತ್ತುಹಿಡಿಯುವುದಕ್ಕಾಗಿ ಮೇಜಿನ ಚೌಕಕ್ಕೆ ತೊಡಿಸುವ ಬಳೆ.

Napóleon ನಪೋಲಿಯನ್ (ನಾ.) ಮೊದಲನೆಯ ನಪೋಲಿಯನ್ನಿನ ಠಸ್ಸೆಯಿರುವ, ೨೦ ಫ್ರಾಂಕು ಬೆಲೆಯ, ಫ್ರಾನ್ಸಿನ ಒಂದು ಚಿನ್ನದ ನಾಣ್ಯ (Double n. ೪೦ ಫ್ರಾಂಕು ಬೆಲೆಯ ನಾಣ್ಯ). ಒಂದು ಬಗೆಯ ಎತ್ತರದ ಬೂಟ್ಸು. = nap³ (ಇಸ್ಪೀಟಾಟ). **Napoleónic** —ಯಾನಿಕ್ (ಗು.) ಮೊದಲನೆಯ ನಪೋಲಿಯನ್ನಿನ(ಂಥ). **Napoleónically** (ಕ್ರಿ.ವಿ.); **Napóleonism** (ನಾ.) ನಪೋಲಿಯನ್ನಿನ (ಮು., ಮೊದಲನೆಯ ನಪೋಲಿಯನ್ನಿನ) ತತ್ತ್ವ, ರಾಜ ನೀತಿ, ಮೊ. ವು ; ನಪೋಲಿಯನ್ ರಾಜವಂಶದ ಮಮತೆ, ಪಕ್ಷ ವಾದ. **Napóleonist** (ನಾ.) ; **Napóleonize** (ಕ್ರಿ.) ನಪೋಲಿಯನ್ ತತ್ತ್ವದ ಮೇರೆಗೆ ಆಳು, — ತತ್ತ್ವಕ್ಕೆ ಅಧೀನಪಡಿಸು.

Napoó ನಾಪೂ (ಭಾವ. ಅವ್ಯ.) (ಸೈನಿಕ ಅಸಂ.) ಎಲ್ಲಾ ಹೋಯಿತು ! ಸರ್ವನಾಶವಾಯಿತು ! ಮುಗಿಯಿತು ! ಸತ್ತಿತು ! ಹಾಳಾಗಿ ಹೋಯಿತು ! ಯತ್ನವಿಲ್ಲ ! ಇನ್ನೇನೂ ಮಾಡುವಂತಿಲ್ಲ !

Nápu ನಾಪೂ (ನಾ.) ಜಾವಾ ಮತ್ತು ಸುಮಾತ್ರಾ ದ್ವೀಪಗಳಲ್ಲಿರುವ ಕಸ್ತೂರಿ ಜಿಂಕೆ.

Nárceine ನಾರ್ಸಿಯಿನ್, —ಯ್ಯೆನ್ (ನಾ.) 'ಮಾರ್ಫಿಯಾ'ಕ್ಕೆ ಬದಲಾಗಿ ಕೆಲವು ವೇಳೆ ಉಪಯೋಗಿಸುವ, ಅಫೀಮಿನಿಂದ ತೆಗೆದ ಒಂದು ಸಸ್ಯಕ್ಷಾರ.

Narcíssism ನಾರ್ಸಿಸಿಸ್‌ಮ್ (ನಾ.) (ಮ. ಶಾ.) ಸ್ವಾರಾಧನಾ ಪ್ರವೃತ್ತಿ ; ತನ್ನನ್ನು ತಾನೇ ಮೆಚ್ಚಿಕೊಳ್ಳುವುದು ; ಆತ್ಮ ಶ್ಲಾಘನೆ ; ತನ್ಮೋಲವು ; ಸ್ವಾನುರಕ್ತಿ ; ಸ್ವಸಂಪೂರ್ಣತಾ ಧ್ಯಾನ. **Narcissístic** (ಗು.). (ನೀರಿನಲ್ಲಿ ಪ್ರತಿಫಲಿತವಾದ ಸ್ವಸ್ವರೂಪದಲ್ಲಿ ಮೋಹಗೊಂಡ Narkissos ಎಂಬ ಗ್ರೀಕ್ ತರುಣನ ಹೆಸರಿನಿಂದ)

Narcíssus ನಾರ್ಸಿಸಸ್ (ನಾ. ; ಬ. ವ. -ssuses, -ssi —ಸೈ) ಬಹಳ ಸುವಾಸನೆಯ, ಕೆಂಪು ಮತ್ತು ಹಳದಿಯ ಬಣ್ಣದ ಅಂಚಿನ ಒಂದೇ ಬಿಳಿಯ ಹೂವನ್ನು ಬಿಡುವ ಗಡ್ಡೆಸಸ್ಯದ ಜಾತಿ.

Nárcolepsy ನಾರ್ಕೊಲೆಪ್ಸಿ (ನಾ.) ಆಗಾಗ್ಗೆ ಗಾಢ ನಿದ್ರೆ ಹತ್ತುವ ಜಾಡ್ಯ ; ಅತಿ ನಿದ್ರೆಯ ರೋಗ.

Narcósis ನಾರ್ಕೋಸಿಸ್ (ನಾ.) ನಿದ್ರಾಜನಕ ವಸ್ತುಗಳ ಕ್ರಿಯೆ ಅಥವಾ ಪ್ರಭಾವ ; ವೇದನೆ ತಿಳಿಯದಿರುವ ಸ್ಥಿತಿ ; ವೇದನಾ ಜಡತೆ ; ಮಯಕ.

Narcótic ನಾರ್ಕಾಟಿಕ್ (ಗು., ನಾ.) ಮಂಪರ, ನಿದ್ದೆ, ಇಂದ್ರಿಯ ಸ್ತಂಭ, ವೇದನಾ ಜಡತೆ —ಇವನ್ನು ಬರಿಸುವ (ವಸ್ತು) ; (ರೂಪ.) ನಿದ್ರಾಜನಕ (ಗು., ನಾ.) ; ವೇದನೆ ತಿಳಿಯದ ಸ್ಥಿತಿ(ಯ). **Narcótically** (ಕ್ರಿ. ವಿ.) ; **Nárcotize** —ಕೊ— (ಕ್ರಿ. ಸಕ.) ನಿದ್ರಾಜನಕ ವಸ್ತುವನ್ನು ಪ್ರಯೋಗಿಸಿ ಪ್ರಜ್ಞೆ ತಪ್ಪಿಸು. **Narcotizátion** (ನಾ.) ; **Nárcotism** (ನಾ.) ನಿದ್ರಾಜನಕ ವಸ್ತು ಪ್ರಯೋಗದಿಂದಾದ ಸ್ಥಿತಿ ; ವೇದನಾ ಸುಪ್ತಿ ; ನಿದ್ರಾವೇಗ. **Nárcotist** (ನಾ.) ನಿದ್ರಾಜನಕ ವಸ್ತು ಸೇವನೆಯ ಚಾಳಿ ಹಿಡಿದವನು.

Nárghile ನಾರ್ಗಿಲೆ (ನಾ.) ಹುಕ್ಕ ; ಗುಡುಗುಡಿ.

Nark ನಾರ್ಕ್ (ನಾ.) (ಅಸಂ.) ಪೊಲೀಸಿನವರಿಂದ ನಿಯಮಿತನಾದ ಬೇಹುಕಾರ, ಗೂಢಚಾರ, ಆಕರ್ಷಕ.

Narráte ನ್ಯರೇಟ್ (ಕ್ರಿ. ಸಕ.) (ಕಥೆಯಂತೆ) ಹೇಳು ; ಕಥಿಸು ; ಕಥನ ಮಾಡು ; —ಬರೆ ; (—ರ) ಅವಿಚ್ಛಿನ್ನ ವೃತ್ತಾಂತವನ್ನು ಕೊಡು ; ಒರೆ (ಗ್ರಾಂ.). **Narrátion** (ನಾ.) ಕಥನ. **Narrátor** (ನಾ.) ; **Narrátress** (ನಾ. ; ಸ್ತ್ರೀ.) ; **Nárrative** ನ್ಯಾರಟಿವ್ (ನಾ., ಗು.) ಕಥೆ ; ಕಥನ ; ಆಖ್ಯಾನ ; ಆಖ್ಯಾಯಿಕೆ ; (ವೃತ್ತಾಂತ) ಕಥನ. (ಗು.) ಕಥನ ರೂಪದ ; ಕಥಾ ರೂಪದ, ಸಂಬಂಧದ. **Nárratively** (ಕ್ರಿ. ವಿ.)

Nárrative, etc. **Narrate** ನೋಡಿ.

Nárrow ನ್ಯಾರೋ [ಗು. (ತರ ತಮ ರೂಪಗಳು -er, -est), ನಾ., ಕ್ರಿ.] (ಉದ್ದಕ್ಕೆ ಹೋಲಿಸಿದರೆ) ಕಡಮೆಯಗಲದ ; ಅಗಲ ಕಡಮೆಯಾದ ; ಕಿರಿದಾದ ; ಅಗಲ ಸಾಲದ ; ಇಕ್ಕಟ್ಟಾದ (The n. way ಪುಣ್ಯ ಮಾರ್ಗ ; ಸದಾಚಾರ ಮಾರ್ಗ. N. vowels ನಾಲಗೆ ಕಿರುನಾಲಗೆಗಳನ್ನು ಬಿಗುಮಾಡಿ ಉಚ್ಚರಿಸುವ ಸ್ವರಗಳು). ಅಲ್ಪ ಪ್ರಮಾಣದ ; ಸಂಕುಚಿತ ; ಪರಿಮಿತ ; ಬಂಧಿತ ; ಬಂಧಿಸುವ (The n. bed, cell, house ಗೋರಿ ; ಸಮಾಧಿ. Within n. bounds. In the narrowest sense ಅತ್ಯಂತ ಸಂಕುಚಿತಾರ್ಥದಲ್ಲಿ. N. circumstances ಇಕ್ಕಟ್ಟಿನ ಸ್ಥಿತಿ ; ಬಡತನ) ; ಅಲ್ಪ ಅಂತರದ (A n. majority, escape) ; ದೃಷ್ಟಿ ವೈಶಾಲ್ಯವಿಲ್ಲದ ; ಅನುತಾಪ, ಔದಾರ್ಯ, —ಇಲ್ಲದ ; ಸಣ್ಣ ಮನಸ್ಸಿನ ; ಅನುದಾರ ; ದುರಾಗ್ರಹದ ; ಪ್ರತ್ಯೇಕತೆಯ ; ಸ್ವವಿಚಾರ ಮಗ್ನ [**Nárrow-mínded** (ಗು.); **Narrow-míndedly** (ಕ್ರಿ. ವಿ.); **Narrow-míndedness** (ನಾ.)] . ಶೋಧನೆಯ ; ನಿಷ್ಕರ್ಷೆಯಾದ ; ಕಟ್ಟುನಿಟ್ಟಾದ ; ಸೂಕ್ಷ್ಮ (After a n. examination). [N. cloth ೫೨ ಅಂಗುಲಗಳಿಗಿಂತ ಕಡಮೆಯ ಅಗಲದ್ದು ; ಒಂಟಿ ಪನ್ನದ್ದು (ಸುಮಾರು ೩೬ ಅಂಗುಲದ್ದು). N. goods ಕಿರು ಪಟ್ಟಿ, ಜಡೆಯ ಪಟ್ಟಿ, ಮೊ. ವು. N. gauge (Gauge ನೋಡಿ). N. seas ಇಂಗ್ಲಿಷ್ ಮತ್ತು ಐರಿಷ್ ಕಡಲ್ಗಾಲುವೆಗಳು] . (ನಾ. ; ಬ. ವ. ದಲ್ಲಿ) (ಜಲಸಂಧಿ, ನದಿ, ಕಣಿವೆ ಅಥವಾ ಬೀದಿ —ಇವುಗಳ) ಇಕ್ಕಟ್ಟು ಭಾಗ. (ಕ್ರಿ.) ಕಿರಿದು ಮಾಡು, ಆಗು ; ಕಡಮೆ ಮಾಡು, ಆಗು ; ಸಂಕುಚಿತ ಮಾಡು, ಆಗು. **Nárrowish** (ಗು.) ; **Nárrowly** (ಕ್ರಿ. ವಿ.) ; **Nárrowness** (ನಾ.)

Násal ನೇಸ(ಸ್)ಲ್ (ಗು., ನಾ.) ಮೂಗಿನ ; ನಾಸಿಕ(ದ) [N. organ (ಹಾಸ್ಯ ಪ್ರ.) ಮೂಗು] . (ಅಕ್ಷರ, ಧ್ವನಿ) ಮೂಗಿನಿಂದ ಉಚ್ಚರಿಸಬೇಕಾದ ; ಅನುನಾಸಿಕ [(ನಾ.) ಅನುನಾಸಿಕಾಕ್ಷರ (ಉದಾ., m, n, ng)] ; (ದನಿ, ಮಾತು) ಮೂಗಿನಿಂದುಚ್ಚರಿಸುವ. **Nasálity** ನೇಸ್ಯಾ— (ನಾ.) ಅನುನಾಸಿಕತೆ. **Násally** ನೇಸಲಿ (ಕ್ರಿ. ವಿ.) ; **Násalize** (ಕ್ರಿ.) ಮೂಗಿನಿಂದ ಉಚ್ಚರಿಸು. **Nasalizátion** (ನಾ.)

Náscent ನ್ಯಾಸೆಂಟ್ (ಗು.) ಹುಟ್ಟುತ್ತಲಿರುವ ; ಈಗ ತಾನೆ ಆರಂಭವಾಗುತ್ತಿರುವ ; ಇನ್ನೂ ಬಲಿತಿಲ್ಲದ ; ಎಳತಾದ. (ರ. ವಿ.) (ಮೂಲ ಧಾತು) ಸಂಯುಕ್ತದಿಂದ ಆಗ ತಾನೆ ಬೇರ್ಪಟ್ಟ. **Náscency** (ನಾ.)

Naso- ನೇಸೊ— (ಸ. ಪೂ. ಪ.) ನಾಸಾ— ; ಮೂಗು— . **-fróntal** ಮೂಗಿನ ಮತ್ತು ಹಣೆಯ.

Nastúrtium ನಸ್ಟರ್ಷ(ಷ್)ಮ್ (ನಾ.) (ಸ. ವಿ.) ಕಿತ್ತಿಳೆಯ ಬಣ್ಣದ ಅಂದವಾದ ಹೂವು ಬಿಡುವ ಹೂದೋಟದ ಒಂದು ಬಳ್ಳಿಜಾತಿ ; ತಿನ್ನ ಬಹುದಾದ ಕಟು ರುಚಿಯ ಎಲೆಗಳುಳ್ಳ ಒಂದು ಸಸ್ಯಜಾತಿ (= Indian cress)

Násty ನಾಸ್ಟಿ (ಗು.) ಅಸಹ್ಯವಾಗುವಷ್ಟು ಕೊಳಕಾದ ; ರೋತೆಯ ; ಗಲೀಜಾದ ; ಬಲು ಹೊಲಸಾದ ; ಹೇಸಿಕೆಯಾದ ; ಅಶ್ಲೀಲ ; ಅಶ್ಲೀಲ ಪ್ರಿಯ ; ಮೂಗಿಗೆ, ನಾಲಗೆಗೆ, ಅಹಿತವಾದ ; ಅರೋಚಕ (ರೂಪ. ನಹ). ಪೀಡಿಸುವ ; ಅನಿಷ್ಟದ ; ಆಕ್ಷೇಪಣೀಯ. (ವಾಯುಸ್ಥಿತಿ, ಮೊ.) ಅಸಹ್ಯವಾದ, ತಂಡಿಯಾದ, (ಬಿರು)ಗಾಳಿ ಮಳೆಯ. ಎಗಲು, ತೊಲಗಿಸಲು, ಕಷ್ಟವಾದ ; ಕಠಿನವಾದ [A n. sea, fence, blow, illness. A n. one (ಆದ) ಅಪಮಾನ, ತಿರಸ್ಕಾರ, ಮೊ. ವು ; ಶಕ್ತಿಗುಂದಿಸುವ ಏಟು] . ದುಸ್ಸ್ವಭಾವದ ; ಹಗೆ ಸಾಧಿಸುವ (*To* ಉಪ. ದೊಡನೆ). **Nástily** (ಕ್ರಿ. ವಿ.) ; **Nástiness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Nátal ನೇಟಲ್ (ಗು.) (ಒಬ್ಬನ) ಹುಟ್ಟಿನ ; ಹುಟ್ಟಿದಾಗಿನಿಂದ ಬಂದ ; ಜಾಯಮಾನದ. **Natálity** ನಟ್ಯಾಲಿಟಿ (ನಾ.) ಜನನ ಸಂಖ್ಯಾ ಪರಿಮಾಣ ; ಹುಟ್ಟಿನ ದರ.

Natátion ನಟೇಷನ್ (ನಾ.) ಈಜು(ವುದು). **Natatórial** ನೇಟಟೋರಿಯಲ್ (ಗು.), **Nátatory** (ಗು.) ಈಜುವ ; ಈಜಿನ.

Nátes (L) ನೇಟೀಸ್ (ನಾ. ; ಬ. ವ.) (ಅಂ. ರ. ಶಾ.) ಪಿರ್ರೆಗಳು ; ಅಂಡು. ಮಿದುಳಿನಲ್ಲಿಯ ದೃಷ್ಟಿಖಂಡಗಳ ಮುಂಭಾಗದ ಜೋಡಿ.

Náth(e)less ನೇ(ನ್ಯಾ)ಥ್ಲೆಸ್ (ಕ್ರಿ. ವಿ.) (ಪ್ರಾಚೀ. ಪ್ರ.) =Nevertheless.

Nátion ನೇಷನ್ (ನಾ.) ಸಾ., ಒಂದೇ ಕುಲ, ಭಾಷೆ, ಚರಿತ್ರೆ, ರಾಜಕೀಯ ಸಂಸ್ಥೆಗಳು, ಮೊ. ವನ್ನುಳ್ಳ ಪ್ರತ್ಯೇಕ ಬುಡಕಟ್ಟಿನವರು ; ಜನಾಂಗ ; ಜನತೆ; ಜನಪದ [Most favoured n. (Favour ಕ್ರಿ. ಸಕ. ನೋಡಿ)]. (ಮಧ್ಯ ಯುಗದ ಮತ್ತು ಸ್ಕಾಟ್ಲೆಂಡಿನ ಕೆಲವು ವಿ. ವಿ. ನಿ. ಗಳಲ್ಲಿ) ಒಂದು (ಗೊತ್ತಾದ) ದೇಶದಿಂದ, ಪ್ರಾಂತದಿಂದ, ಬಂದ ವಿದ್ಯಾರ್ಥಿತಂಡ. Law of nations (Law ನೋಡಿ). **Nátionhood** (ನಾ.) ; **Nátional** ನ್ಯಾಷನಲ್ (ಗು., ನಾ.) ಜನಾಂಗದ ; ಜನತೆಯ ; ಒಟ್ಟು ಜನಾಂಗಕ್ಕೆ ಸಾಮಾನ್ಯವಾದ ; ರಾಷ್ಟ್ರೀಯ ; ದೇಶೀಯ. (ಒಂದು) ಜನಾಂಗಕ್ಕೆ ವಿಶಿಷ್ಟವಾದ, ಲಕ್ಷಣವಾದ [N. anthem ರಾಷ್ಟ್ರ ಗೀತೆ (ಬ್ರಿಟಿಷರದು: 'God Save the King' ಎಂಬ ಗೀತೆ). N. debt (Debt ನೋಡಿ). N. Gallery, N. Portrait Gallery ರಾಷ್ಟ್ರದ ಸ್ವತ್ತಾದ (ವರ್ಣ) ಚಿತ್ರಗಳನ್ನೂ ಭಾವ ಚಿತ್ರಗಳನ್ನೂ ಶಾಶ್ವತವಾಗಿ ಪ್ರದರ್ಶನಕ್ಕಿಟ್ಟಿರುವ (ಲಂಡನ್ನಿನಲ್ಲಿಯ) ಪ್ರದರ್ಶನ ಮಂದಿರ : ರಾಷ್ಟ್ರೀಯ ಚಿತ್ರಶಾಲೆ. N. Insurance (Insurance ನೋಡಿ). N. Liberal Club (ಇಂಗ್ಲೆಂಡಿನಲ್ಲಿ) ರಾಜಕೀಯ ಉದಾರಾಭಿಪ್ರಾಯ ಪಕ್ಷದವರ (ನಿಕಟ ಸಂಬಂಧವಿರುವ) ಸಂಘ (Carlton Club ಹೋಲಿಸಿ)]. (ನಾ. ; ಬ. ವ. ದಲ್ಲಿ) (ರಾಯಭಾರದ ಪ್ರ.) ಸ್ವದೇಶೀಯರು (Consul's powers over his own nationals). **Nátionally** (ಕ್ರಿ. ವಿ.) ; **Nátionalism** (ನಾ.) ದೇಶೀಯ, ರಾಷ್ಟ್ರೀಯ, ಜಾನಪದ, — ಭಾವನೆ, ತತ್ತ್ವಗಳು ಅಥವಾ ಉದ್ಯಮಗಳು ; ರಾಷ್ಟ್ರೀಯತೆ ; ಕೈಗಾರಿಕೆಗಳು ರಾಷ್ಟ್ರದ ಸ್ವಾಮ್ಯವಾಗಿರಬೇಕೆಂಬ ನೀತಿ **Nátionalist** (ನಾ.) ; **Nationálity** (ನಾ.) ಜನಾಂಗ ಲಕ್ಷಣ ; ರಾಷ್ಟ್ರೀಯತೆ (What is his n. ?). (ಒಂದು) ಜನಾಂಗ (Men of all nationalities) ; ಜನಾಂಗವಾಗಿರುವುದು ; ಒಂದು ಅಥವಾ ಹೆಚ್ಚಿನ ರಾಜಕೀಯ ರಾಷ್ಟ್ರಗಳ ಭಾಗವಾಗಿರುವ ಕುಲ. **Nátionalize** (ಕ್ರಿ. ಸಕ.) ರಾಷ್ಟ್ರೀಯ(ವನ್ನಾಗಿ) ಮಾಡು ; ಒಂದು ಜನಾಂಗವನ್ನಾಗಿ ಮಾಡು. (ಪರ ದೇಶದವನನ್ನು) ಆ ದೇಶೀಯತೆಗೆ (ಅದಕ್ಕೆ ಸಂಬಂಧಪಟ್ಟ ಹಕ್ಕು ಬಾಧ್ಯತೆಗಳಿಗೆ) ಅರ್ಹನನ್ನಾಗಿ ಮಾಡು. (ಜಮೀನು, ರೈಲು, ಕೈಗಾರಿಕೆ, ಮೊ. ನ್ನು) ರಾಷ್ಟ್ರೀಯ ಸ್ವತ್ತನ್ನಾಗಿ, ರಾಷ್ಟ್ರೀಯ ಉದ್ಯಮಗಳನ್ನಾಗಿ, ಪರಿವರ್ತಿಸು ; ರಾಷ್ಟ್ರೀಯ ಮಾಡು ; ರಾಷ್ಟ್ರದ ಸ್ವತ್ತನ್ನಾಗಿ ಮಾಡು. **Nationalizátion** (ನಾ.)

Nátive ನೇಟಿವ್ (ನಾ., ಗು.) (ಒಂದು ಗೊತ್ತಾದ) ಸ್ಥಳದಲ್ಲಿ ಹುಟ್ಟಿದವನು ಅಥವಾ ಆ ಸ್ಥಳದಲ್ಲಿ ಸ್ಥಾಪಿತರಾದ, ನೆಲಸಿದ, ತಂದೆ ತಾಯಿಗಳುಳ್ಳವನು (*Of* ಉಪ. ಜೊಡನೆ) ; ಸ್ಥಳೀಯ ; ದೇಶೀಯ ; ನಾಡಿಗ. (ಆಸ್ಟ್ರೇಲಿಯ) ಆಸ್ಟ್ರೇಲಿಯದಲ್ಲಿ ಹುಟ್ಟಿದ ಬಿಳಿಯ ಜನಾಂಗದವನು. ಯೂರೋಪಿಯನ್ ಕುಲಕ್ಕೆ ಸೇರಿಲ್ಲದವನು ; ಅನಾಗರಿಕ ಜನಾಂಗದವನು. ಸ್ಥಳದ, ದೇಶದ, —ಪ್ರಾಣಿ, ಸಸ್ಯ. (ಗು.) (ಒಬ್ಬನಿಗೆ, ಒಂದಕ್ಕೆ) ಸ್ವಾಭಾವಿಕವಾಗಿ ಬಂದಿರುವ ; ಹುಟ್ಟಿನಿಂದ ಬಂದ ; ಸಹಜವಾಗಿ ನೆಲಸಿರುವ; ಜಾಯಮಾನವಾದ (*To* ಉಪ. ಜೊಡನೆ) [**Nátively** (ಕ್ರಿ. ವಿ.)]. ಅಲಂಕಾರವಿಲ್ಲದ ; ಸರಳ ; ಅಕೃತಕ ; ನೈಜ ಸ್ವಭಾವದ ; (ಒಬ್ಬನ) ಹುಟ್ಟಿನ ; ಹುಟ್ಟಿದ ಸ್ಥಳದ ; ಹುಟ್ಟಿದ ಹಕ್ಕಿನಿಂದ ಬಂದ ; ಜನ್ಮಸಿದ್ಧವಾದ. (ಲೋಹ, ಮೊ. ವು) ಶುದ್ಧ ರೂಪದಲ್ಲಿ ಅಸಂಯುಕ್ತವಾಗಿ ದೊರೆಯುವ (N. rock ಅದರ ಜನ್ಮಸ್ಥಾನದಲ್ಲಿರುವ ಶಿಲೆ). (ಮು., ಯೂರೋಪಿಯನೇತರರ ವಿಷಯದಲ್ಲಿ) ಸ್ಥಳದಲ್ಲಿ ಹುಟ್ಟಿದ ; ಹೊರಗಿನಿಂದ ಬಂದು ನೆಲಸಿದವರಲ್ಲದ ; ದೇಶೀಯ [The N. States (ಹಿಂದೂಸ್ಥಾನದಲ್ಲಿ) ದೇಶೀಯ (ರಾಜರು ಆಳುವ) ಸಂಸ್ಥಾನಗಳು]. (ಒಂದು ಸ್ಥಳದ) ನಾಡಿಗರ. **Nátivism** (ನಾ.) (ತ. ಶಾ.) ಬಾಹ್ಯ ವೇದನೆಯಿಂದ ಪ್ರೇರಿತವಾಗದೆ ಜ್ಞಾನದ ಮೂಲಾಂಶಗಳನ್ನು ಮನಸ್ಸು ಸಹಜವಾಗಿ ಪಡೆದಿರುವುದೆಂಬ ವಾದ: ಸಹಜ ಜ್ಞಾನ ವಾದ. **Nátivist** (ನಾ.) ; **Natívity** ನ(ನೆ)ಟಿವಿಟಿ (ನಾ.) ಹುಟ್ಟು ; ಜನನ ; ಯೇಸು ಕ್ರಿಸ್ತನ, ಮೇರಿ ಕನ್ಯೆಯ ಅಥವಾ ಜಾನ್ ಸಂತನ, —ಹುಟ್ಟು, ಜನನ ; ಇವರ ಹುಟ್ಟಿದ ಹಬ್ಬ ; ಯೇಸು ಕ್ರಿಸ್ತನ ಜನನದ ಚಿತ್ರ. (ಜ್ಯೋ.) ಜಾತಕ.

Nátivism, Natívity, etc. **Native** ನೋಡಿ.

Nátron ನೇಟ್ರನ್ (ನಾ.) (ಸ್ವಭಾವಜನ್ಯವಾದ, ಒಂದು ನಿರ್ದಿಷ್ಟ ಸಂಯುಕ್ತದ) ಸೋಡಾ ಕಾರ್ಬೋನೇಟು ಖನಿಜ.

Nátty ನ್ಯಾಟಿ (ಗು.) ನೀಟಾದ ; ಠೀಕಾದ ; ನಾಜೂಕಾದ ; ಕೈಚಳಕವುಳ್ಳ ; ಚತುರ. **Náttily** (ಕ್ರಿ. ವಿ.) ; **Náttiness** (ನಾ.)

Náture ನೇಟ್ಯುರ್, —ಚರ್ (ನಾ.) (ಅಸ್ತಿತ್ವಕ್ಕೆ ಅವಶ್ಯಕವಾದ) ವಸ್ತುವಿನ ಸಹಜ ಗುಣ, ಸ್ವರೂಪ ಲಕ್ಷಣ, ಧರ್ಮ (*In* or *by* or *from* the n. of the case or *of* things ತತ್ತ್ವತಃ; ವಸ್ತುತಃ). (ಮನುಷ್ಯನ, ಪ್ರಾಣಿಯ) ಪ್ರಕೃತಿ, ಸ್ವಭಾವ ; ಹುಟ್ಟುಗುಣ [**-natured** (ಗು.)]. [By n. ಸ್ವಭಾವತಃ. Good, ill, second, n. (ಆಯಾ ಪದವನ್ನು ನೋಡಿ)]. ಮನುಷ್ಯ(ಜಾತಿಯ) ಸ್ವಭಾವ ಲಕ್ಷಣ ಮತ್ತು ಭಾವನೆಗಳು [Human n. ಮನುಷ್ಯ ಸ್ವಭಾವ. Touch of n. (Touch ನೋಡಿ)]. ಒಂದು ಗೊತ್ತಾದ ಸ್ವಭಾವ(ವುಳ್ಳವನು) (The rational, animal, moral, n. ವಿಚಾರ ಯುಕ್ತವಾದ, ಪಶುಪ್ರಾಯವಾದ, ನೈತಿಕ, —ಸ್ವಭಾವ. Sanguine natures do not feel this ಉತ್ಸಾಹ ಸ್ವಭಾವದವರಿಗೆ ಇದರ ಭಾವನೆ ಇರುವುದಿಲ್ಲ. There are natures who can never —). ತೆರ ; ಬಗೆ ; ವರ್ಗ (Things of this n.; Is in, or of, the n. of a command) (ಕರೆಯಲ್ಲ) ಸ್ವಾಭಾವಿಕತೆ, ನೈಸರ್ಗಿಕತೆ. ಮರದ ದಾರುವಿನಲ್ಲಿಯ ಜೀವರಸ ಅಥವಾ ರಾಳಪದಾರ್ಥ (ಮು., Full of n. ಇನ್ನೂ ರಾಳ ತುಂಬಿರುವ). (ಫಿರಂಗಿ ಮತ್ತು ಗುಂಡುಗಳ ವಿಷಯದಲ್ಲಿ) ಗಾತ್ರ (100 of each n. of case-shot). ಪ್ರಕೃತಿ ; ಸೃಷ್ಟಿ ; ನಿಸರ್ಗ ; ಸ್ವಭಾವ ; (N-) ಪ್ರಕೃತಿ ದೇವಿ. [N.'s engineering ಪ್ರಕೃತಿಯ ಶಿಲ್ಪ. All n. looks gay ಸೃಷ್ಟಿಯೆಲ್ಲ ನಲಿಯುತ್ತಿದೆ. N. is the best physician ಪ್ರಕೃತಿ ಅತ್ಯುತ್ತಮ ವೈದ್ಯ. In the course of n. ಸಾಮಾನ್ಯ ಕ್ರಮದಲ್ಲ ; ಪ್ರಕೃತಿಯ ಗತಿಯಲ್ಲಿ. Law of n. (Law[1] ನೋಡಿ). Debt of n. ಪ್ರಕೃತಿಯ ಋಣ ; ಸಾವು. In n. ವಾಸ್ತವವಾಗಿ ಇರುವ. ಎಲ್ಲಿ ಬೇಕಾದರೂ ; ಏನಾದರೂ ; ಒಂದು ವೇಳೆ. Against or contrary to n. ಅಪ್ರಾಕೃತ(ವಾಗಿ) ; ಸ್ವಭಾವ ವಿರುದ್ಧವಾಗಿ ; ಅತಿಮಾನುಷ(ವಾಗಿ). State of n. ಪ್ರಾಕೃತ ಸ್ಥಿತಿ ; ದೈವಾನುಗ್ರಹವಿಲ್ಲದ ಸ್ಥಿತಿ (ಎದುರು ಪದ: State of grace) ; (ಸಮಾಜವು ವ್ಯವಸ್ಥೆಹೊಂದುವುದಕ್ಕಿಂತ ಪೂರ್ವದ) ಮನುಷ್ಯನ ಅಸಂಸ್ಕೃತ, ಅನಾಗರಿಕ, —ಸ್ಥಿತಿ ; (ಪ್ರಾಣಿಗಳ, ಸಸ್ಯಗಳ) ಪಳಗಿಸಿಲ್ಲದ, ರೂಢಿಸಿಲ್ಲದ, —ಸ್ಥಿತಿ. ಬತ್ತಲೆಯ ಸ್ಥಿತಿ ; ನಗ್ನತೆ. N.-printing ತಕ್ಕಂತೆ ಸಂಸ್ಕರಿಸಿದ ಫಲಕದಮೇಲೆ ಎಲೆ, ಮೊ. ಗಳನ್ನು ಒತ್ತಿ ಚಿತ್ರ ತೆಗೆಯುವ ಪದ್ಧತಿ : ಪ್ರಕೃತಿಮುದ್ರಣ. N. study (ಪಾಠಶಾಲೆಯ ಪಠ್ಯ ವಿಷಯವಾಗಿ) (ಪ್ರತ್ಯಕ್ಷ ಪರೀಕ್ಷೆಯಿಂದ) ಸಸ್ಯಗಳು, ಪ್ರಾಣಿಗಳು, ಪ್ರಕೃತಿಗೋಚರ ವಿಷಯಗಳು, ಮೊ. ಗಳ ವ್ಯಾಸಂಗ : ಪ್ರಕೃತಿ ಪಾಠ. Against n. ಅಸ್ವಾಭಾವಿಕ ; ಅನೈತಿಕ : ಅಧಾರ್ಮಿಕ. N. is exhausted ಚೈತನ್ಯ ಕುಗ್ಗಿ, ಕುಂದಿ, —ಹೋಗಿದೆ. Such a diet will not support n. ಇಂಥ ಆಹಾರ ಜೀವಪೋಷಕವಾಗಲಾರದು. Call of n. ದೇಹ ಬಾಧೆ. Ease n.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಹಬಾಧೆ ತೀರಿಸಿಕೊ ; ಮಲಮೂತ್ರ ವಿಸರ್ಜನೆ ಮಾಡು]. **Nátural** ನ್ಯಾಟ್ಯು(ಚು)ರಲ್ (ಗು., ನಾ.) ಸ್ವಭಾವ ಸಿದ್ಧ ; ನೈಜ ; ನೈಸರ್ಗಿಕ (N. law, justice); ಹುಟ್ಟುಗುಣವಾದ ; ಕೃತಕವಲ್ಲದ ; ಅಂತರ್ಗತ. ಸ್ವತಃ ಬಿತ್ತಿಕೊಂಡ ; ವ್ಯವಸಾಯ ಮಾಡಿರದ. ಸಜೀವವಾಗಿರುವಂತೆ ತೋರುವ ; ಸಹಜ ಮರ್ಯಾದೆಯ ; ನಟನೆಯಲ್ಲದ ; ರೂಪಗೆಟ್ಟಿಲ್ಲದ ; ರೂಪ ಮರಸಿಲ್ಲದ ; ಆಶ್ಚರ್ಯಕರವಲ್ಲದ ; ನಿರೀಕ್ಷಿಸಲಾದ ; ಸುಲಭ (ಸಾಧ್ಯ) (*To* ಉಪ. ದೊಡನೆ) (Comes n. to him) ; ಪ್ರಕೃತಿಸಿದ್ಧ (N. day, year ಸಹಜ ದಿನ , ವರ್ಷ). [(ಸಂ.) N. note or key (ಉಚ್ಚ ಸ್ವರವೂ ಮಟ್ಟ ಸ್ವರವೂ ಅಲ್ಲದೆ) ಸ್ವಾಭಾವಿಕ ಸ್ವರದ, ಧ್ವನಿಯ. N. classification, orders (ಹಲವು ವಿಜ್ಞಾನದಲ್ಲಿ, ಮು., ಸ. ವಿ. ದಲ್ಲಿ ; ಸಂಕ್ಷಿಪ್ತ : N.O.) ಸಾದೃಶ್ಯ ಮುಖ್ಯವಾದ ಗೋತ್ರ ವರ್ಗೀಕರಣ, ಗೋತ್ರಗಳು (Jussieu ಎಂಬ ಸಸ್ಯ ವೈಜ್ಞಾನಿಕನ ಪದ್ಧತಿ ; Linnaeus ಎಂಬ ವೈಜ್ಞಾನಿಕನ ಲೈಂಗಿಕ ಪದ್ಧತಿಯಲ್ಲ). N. magic (Magic ನೋಡಿ). N. death (ಮುಪ್ಪಿನಿಂದಲೋ ವ್ಯಾಧಿಯಿಂದಲೊ ಸಂಭವಿಸಿದ) ಸ್ವಾಭಾವಿಕ ಮರಣ (ಅಪಾಯ ಸಂಘಟನೆ, ವಿಷ ಸೇವನೆ, ಬಲ ಪ್ರಯೋಗ, ಮೊ. ಗಳಿಂದ ಆದದ್ದಲ್ಲ). The n. man ನಾಗರಿಕತೆಯ ಪ್ರಭಾವ, ಸತ್ಯಾಭಾಸ, ಧರ್ಮ ಸಂಸ್ಕಾರ —ಇವುಗಳ ಸೋಂಕಿಲ್ಲದವನು ; ಸಹಜ, ಸರಳ, — ಮನುಷ್ಯ. N. religion ಮನುಷ್ಯನ ವಿಚಾರಶಕ್ತಿಯಿಂದಲೂ ಅನುಭವದಿಂದಲೂ ಏರ್ಪಟ್ಟ ಮತಧರ್ಮ (ಅಲೌಕಿಕ ದಿವ್ಯ ದರ್ಶನದಿಂದಲ್ಲ); ಪ್ರಾಕೃತ ಮತಧರ್ಮ. N. theology ಪ್ರಾಕೃತ ದೇವತಾ ಶಾಸ್ತ್ರ. The n. world ಭೌತ ಪ್ರಪಂಚ ; ಪ್ರಕೃತಿ ಪ್ರಪಂಚ. One's n. life ಒಬ್ಬನ ಐಹಿಕ ಆಯುಃ ಪ್ರಮಾಣ. N. law ಮಾನವ ಸಂಸ್ಥೆಗಳಲ್ಲಿ ನಿರ್ದಿಷ್ಟ ನಿಯಮಗಳು ಇಲ್ಲದಿರುವ ಸಂದರ್ಭದಲ್ಲಿ, ಅಥವಾ ಆ ನಿಯಮಗಳ ಜೊತೆಗೆ ಮನುಷ್ಯ ಸಮಾಜಕ್ಕೆ ಆವಶ್ಯಕವೆಂದು, ಮಾಡಿದ ಮತ್ತು ಅವನ್ನು ಪಾಲಿಸಲೇಬೇಕಾದ, ನಿಯಮಗಳು, ವಿಧಿಗಳು ; = Law of nature (Law[1] ನೋಡಿ). N. enemies ಹುಟ್ಟು ಹಗೆಗಳು ; ಸ್ವಾಭಾವಿಕ ವೈರಿಗಳು. N.antithesis ಸ್ವಾಭಾವಿಕ ವಿರುದ್ಧ. N. (ಧರ್ಮಸಂತಾನ ವಲ್ಲದ) son, child, brother, etc. N. history (ಮು., ಜನ ಸಾಮಾನ್ಯಕ್ಕಾಗಿ ಬರೆದ) ಪ್ರಾಣಿ ಜೀವನ ಚರಿತ್ರೆ ; (ಒಂದು ಸ್ಥಳದ, ವರ್ಗದ) ಪ್ರಕೃತಿ ಚರಿತ್ರೆ (*Of* ಉಪ. ದೊಡನೆ). N. historian — ಚರಿತ್ರಕಾರ. N. philosophy ಭೌತ ವಿಜ್ಞಾನ. N. philosopher ಭೌತ ವಿಜ್ಞಾನಿ. N. science (Science ನೋಡಿ). N.-born ಹುಟ್ಟಿನಿಂದ ಬಂದ (ಲಕ್ಷಣ, ಸ್ಥಾನ, — ಉಳ್ಳ)]. (ನಾ.) ಹುಟ್ಟಿದಂದಿನಿಂದ ಅರೆ ಮರುಳ. (ಸಂ.) (ಉಚ್ಚವಾಗಲ ಮಟ್ಟವಾಗಲ ಅಲ್ಲದ) ಸ್ವಾಭಾವಿಕ ಸ್ವರ. **Náturalness** (ನಾ.) ; **Náturalism** (ನಾ.) ಸ್ವಾಭಾವಿಕವಾಗಿ ಬಂದ ಹುಟ್ಟುಗುಣಗಳ (ಆಧಾರದಿಂದಾದ) ಕಾರ್ಯ. ಶುದ್ಧಪ್ರಕೃತಿಯ ಆಧಾರದಮೇಲೆ ಏರ್ಪಟ್ಟ ನೈತಿಕ ಧರ್ಮ, ಮತಧರ್ಮ. (ತ. ಶಾ.) (ಅತಿಮಾನುಷವನ್ನಾಗಲ ಆಧ್ಯಾತ್ಮಿಕವನ್ನಾಗಲ ಪರಿಗಣಿಸದ) ಭೌತ ಪ್ರಪಂಚ ದೃಷ್ಟಿ. (ಸಾಹಿತ್ಯ ದಲ್ಲಿಯೂ ಕಲೆಯಲ್ಲಿಯೂ) ಯಥಾರ್ಥ ನಿರೂಪಣೆಯ ಪದ್ಧತಿ ; ಪ್ರಕೃತಿ ಸಹಜ ಪದ್ಧತಿ ; ನೈಸರ್ಗಿಕತೆ; ಸಂಪ್ರದಾಯಗಳ ಅಲಕ್ಷ್ಯತೆ, ಉಪೇಕ್ಷೆ. **Náturalist** (ನಾ., ಗು.) ಪ್ರಕೃತಿ ತತ್ತ್ವ ವಾದಿ ; ಸಸ್ಯ ವಿಜ್ಞಾನಿ ; ಪ್ರಾಣಿ ವಿಜ್ಞಾನಿ ; ಪ್ರಕೃತಿ ಶಾಸ್ತ್ರಜ್ಞ. (ವ್ಯಾಪಾರ) ಬೋನಿನ ಪ್ರಾಣಿಗಳು, ನಾಯಿಗಳು, ಮೊ. ನ್ನು ಮಾರುವವನು. ಸತ್ತ ಪ್ರಾಣಿಗಳ ಚರ್ಮವನ್ನು ಜೀವಂತ ಪ್ರಾಣಿಗಳಂತೆ ತೋರಲು ರೂಪು ಕೊಟ್ಟು ಅಳವಡಿಸುವವನು. (ಗು.) =**Naturalístic** ಸ್ವಾಭಾವಿಕತೆಗೆ, ಪ್ರಕೃತಿತತ್ತ್ವಕ್ಕೆ, ಅನುಸಾರವಾದ ; ಪ್ರಕೃತಿ ಚರಿತ್ರೆಯ. **Naturalístically** (ಕ್ರಿ. ವಿ.); **Náturalize** (ಕ್ರಿ.) (ಪರದೇಶದವನಿಗೆ) ಪ್ರಜಾ ಹಕ್ಕನ್ನು ಕೊಡು. (ಪರದೇಶದ ಪದ, ಪದ್ಧತಿ, ಮೊ. ನ್ನು) ಸ್ವೀಕರಿಸು, ಬಳಸಿಕೊ ; ದೇಶೀಯ ಮಾಡು. (ಪ್ರಾಣಿ, ಸಸ್ಯ) ಮತ್ತೊಂದು ದೇಶದಲ್ಲಿ ರೂಢಿಸು, ಪಳಗಿಸು, ಪಳಗು, ಬಳಕೆಗೆ ಬರು ; ದೇಶೀಯವಾಗು. ಸಂಪ್ರದಾಯ ಬದ್ಧತೆಯನ್ನು, ಅಲೌಕಿಕತೆಯನ್ನು, — ತಪ್ಪಿಸು ; ಸ್ವಾಭಾವಿಕ ಮಾಡು ; ಪ್ರಕೃತಿತತ್ತ್ವವನ್ನವಲಂಬಿಸು ; ಪ್ರಕೃತಿ (ಶಾಸ್ತ್ರದಲ್ಲಿ) ಸಂಶೋಧನೆ ನಡಸು. **Naturalizátion** (ನಾ.) ; **Náturally** (ಕ್ರಿ. ವಿ.) (ಗುಣವಾಚಕಾರ್ಥಗಳಲ್ಲಿ). ನಿರೀಕ್ಷಿಸಲಾಗುವಂತೆ ; ಸಹಜವಾಗಿ ; ಸ್ವಭಾವತಃ.

Náturalism, Náturalist, etc. **Nature** ನೋಡಿ.

Naught ನಾಟ್ (ನಾ., ಗು.) (ಪ್ರಾಚೀ. ಪ್ರ.) = Nought ; (ಗು.) ನಿಷ್ಪ್ರಯೋಜಕ ; ಕೆಲಸಕ್ಕೆ ಬಾರದ.

Naúghty ನಾಟಿ (ಗು.) (ಮಕ್ಕಳ ವಿಷಯದಲ್ಲಿ, ಮಕ್ಕಳಿಗೆ, ಮಕ್ಕಳು, — ಹೇಳುವ ಅಥವಾ ಮಕ್ಕಳ ಮಾತಿನ ಅನುಕರಣದ ಪ್ರ.) ಹಠಮಾರಿತನದ ; ಮನಸ್ಸಿಗೆ ಬಂದಂತೆ ನಡೆಯುವ ; ಅವಿಧೇಯ(ತೆಯ) ; ನಡೆವಳಿ ಸರಿಯಿಲ್ಲದ ; ತುಂಟತನದ ; ತಂಟೆಯ ; ಕೆಟ್ಟ ; ದುಷ್ಟ ; ನಿಂದಾರ್ಹ ; ಅಸಭ್ಯ ; ಅಶ್ಲೀಲ. **Naúghtily** (ಕ್ರಿ. ವಿ.) ; **Naúghtiness** (ನಾ.)

Naúsea ನಾಸಿ(ಷಿ)ಯ (ನಾ.) ಹೊಟ್ಟೆ ತೊಳಸಿ ಓಕರಿಕೆ ಬರುವಂತಿರುವುದು ; ಪಿತ್ತೋದ್ರೇಕ ; ಉಬ್ಬಳಿಕೆ ; ಸಮುದ್ರಪಿತ್ತ ; ಅಸಹ್ಯತೆ ; ಹೇವರಿಕೆ. **Naúseate** —ಯೇಟ್ (ಕ್ರಿ.) (ಆಹಾರ, ಮೊ. ವು ಸೇರದೆ) ಅಸಹ್ಯವಾಗು (ರೂಪ. ಸಹ) ; ಓಕರಿಕೆ ಬರು. (ಅನ್ನ, ಉದ್ಯೋಗ, ಮೊ. ವು) ಬೇಡವೆನಿಸು ; ಹೇಸಿಕೆಯಾಗು. **Naúseating** (ಗು.) ; **Naúseous** ನಾಸಿಯಸ್, ನಾಷಿಯೆಸ್ (ಗು.) ಓಕರಿಕೆ ಬರಿಸುವ ; ಅಸಹ್ಯಕರವಾದ ರುಚಿಯ, ವಾಸನೆಯ ; ಜುಗುಪ್ಸೆ ಹುಟ್ಟಿಸುವ ; ಹೇವರಿಕೆಯುಂಟುಮಾಡುವ. **Naúseously** (ಕ್ರಿ. ವಿ.) ; **Naúseousness** (ನಾ.)

Nautch ನಾಚ್ (ನಾ.) (ಈಸ್ಟ್ಇಂಡಿಯದ) ಸೂಳೆಯರ ಕುಣಿತ ; ತಾಫೆ. N. girl ಕುಣಿತದ ಸೂಳೆ ; ನಟುವಗಿತ್ತಿ ; ನಾಟ್ಯ ಸ್ತ್ರೀ.

Naútical ನಾಟಿಕಲ್ (ಗು.) ನಾವಿಕರ ; ಸಮುದ್ರ ಯಾನದ ; ಹಡಗು ನಡಸುವುದರ ; ನೌಕೆಯ ; ನಾವೆಯ ; ಕಡಲ ಸಂಬಂಧವಾದ [N. almanac (ಖಗೋಳ ವಿಷಯಗಳನ್ನೂ ಕಡಲ ಏರಿಳಿತದ ವಿಷಯಗಳನ್ನೂ ಸಮುದ್ರ ಸಂಚಾರಿಗಳು, ಮೊ. ರ ಉಪಯೋಗಕ್ಕಾಗಿ ಪ್ರಕಟಿಸುವ) ನಾವಿಕ ಪಂಚಾಂಗ]. **Naútically** (ಕ್ರಿ. ವಿ.)

Naútilus ನಾಟಿಲಸ್ (ನಾ. ; ಬ. ವ. -li —ಲೈ) Paper n. (ಹೆಣ್ಣಿಗೆ ಬಲು ತೆಳುವಾದ ಚಿಪ್ಪೂ, ಹಡಗಿನ ಪಟದಂಥ ಜಾಲಬಾಹುಗಳೂ ಇರುವ) ಒಂದು ಸಣ್ಣ ಶೀರ್ಷಪಾದಿ ; ಗಂಟೆಯಾಕಾರದ ಒಂದು ತೆರದ ಮುಳುಗು ಸಲಕರಣೆ. Pearly n. ದೇಹದೊಳಗಡೆ, ಮುತ್ತಿನ ಚಿಪ್ಪಿನೊಳಗಿನದರಂಥ ಪದಾರ್ಥದ ಅಡ್ಡವಿಭಾಜಕಗಳಿರುವ ಒಂದು ಶೀರ್ಷಪಾದಿ.

Nával. **Navy** ನೋಡಿ.

Nave[1] ನೇವ್ (ನಾ.) ಅಚ್ಚನ್ನೂ ಅರೆಕಾಲುಗಳನ್ನೂ ಹಿಡಿದುಕೊಂಡಿರುವ ಚಕ್ರದ ಮಧ್ಯಭಾಗ : ಗುಂಬ ; ಚಕ್ರನಾಭಿ.

Nave[2] ನೇವ್ (ನಾ.) ಕ್ರೈಸ್ತ ಆರಾಧನ ಮಂದಿರದ ಒಳ ಬಾಗಿಲಿನಿಂದ ಪುರೋಹಿತರು ಅಥವಾ ಗಾಯಕರು ಕೂಡುವ ಸ್ಥಳದ ವರೆಗಿನ ಮಧ್ಯ ಭಾಗ, ಮಧ್ಯಾಂಗಣ (ಇಕ್ಕೆಲದ ಹಜಾರಗಳು, ಸಾ., ಕಂಬಸಾಲಿನಿಂದ ಪ್ರತ್ಯೇಕಿಸಲ್ಪಟ್ಟಿರುವುವು)

Nável ನೇವ್‌ಲ್ (ನಾ.) ಹೊಕ್ಕುಳು; ನಾಭಿ; (ಯಾವುದಾದರೂ ವಸ್ತುವಿನ) ಮಧ್ಯ ಬಿಂದು, ಕೇಂದ್ರ. N. orange ಮೇಲ್ಗಡೆ ಹೊಕ್ಕುಳಿನಾಕಾರದ ರಚನೆಯುಳ್ಳ ಒಂದು ದೊಡ್ಡ ಕಿತ್ತಿಳೆಯ ಹಣ್ಣಿನ ಜಾತಿ. N.-string (ಭ್ರೂಣವನ್ನೂ ಗರ್ಭಾಶಯದಲ್ಲಿಯ ಸ್ಪಂಜಿನಂಥ ಪೋಷಕಾಂಗವನ್ನೂ ಸಂಬಂಧಿಸುವ) ಹೊಕ್ಕುಳುಬಳ್ಳಿ ; ನಾಭಿ ನಾಳ. N.-wort ಹಲವು ಸಸ್ಯ ಜಾತಿ.

Navícular ನವಿಕ್ಯುಲರ್ (ಗು., ನಾ.) ದೋಣಿಯಾಕಾರದ (ಮು., ದೇಹದ ಕೆಲವು ಎಲುಬುಗಳ ವಿಷಯದಲ್ಲಿ). N. bone (ಅಂಗೈಯಲ್ಲಿಯ ಅಥವಾ ಅಂಗಾಲಿನಲ್ಲಿಯ) ದ್ರೋಣಾಸ್ಥಿ. N. (disease) ಕುದುರೆಯ ದ್ರೋಣಾಸ್ಥಿ ರೋಗ.

Návigable. **Navigate** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Návigate ನ್ಯಾವಿಗೇಟ್ (ಕ್ರಿ.) ಸಮುದ್ರಯಾನ ಮಾಡು ; ಹಡಗು ನಡಸು ; (ಸಮುದ್ರ, ನದಿ, ಮೊ. ಗಳಮೇಲೆ) ಹಡಗಿನಲ್ಲಿ ಓಡಾಡು, ಸಂಚರಿಸು ; ಆಕಾಶಯಾನವನ್ನು ನಡಸು. **Navigátion** (ನಾ.) ಸಮುದ್ರಯಾನ [Inland n. (ಕಾಲುವೆಗಳ ಮೂಲಕವೂ ನದಿಗಳ ಮೂಲಕವೂ) ಒಳನಾಡ ಜಲ(ಮಾರ್ಗ) ಸಂಚಾರ; Aerial n. (ಆಕಾಶ ನೌಕೆಯ ಅಥವಾ ಫಲಕ ವಿಮಾನದ) ಆಕಾಶ ಸಂಚಾರ ; ವಾಯು ಯಾನ ವಿದ್ಯೆ]. ಜ್ಯಾಮಿತಿಯ ಮತ್ತು ನೌಕಾ ಖಗೋಳ ಶಾಸ್ತ್ರದ ಸಹಾಯ ದಿಂದ ಹಡಗಿನ ಸ್ಥಾನವನ್ನೂ ಗಮನ ಮಾರ್ಗವನ್ನೂ ನಿರ್ಧರಿಸುವ ಕ್ರಮ(ಗಳು) : ನೌಕಾ ಗತಿ ಶಾಸ್ತ್ರ. ಸಮುದ್ರ ಪ್ರಯಾಣ. N.-coal ಆವಿಯ ಕುದಿಪಾತ್ರೆಗಳ ಕೆಳಗೆ ಉರಿಸಲು ಯೋಗ್ಯವಾದ ಕಲ್ಲಿದ್ದಲು. **Návigator** (ನಾ.) ಸಮುದ್ರಯಾನ ಕುಶಲ ; ನಾವಿಕ ; ಸಮುದ್ರ ಸಂಚಾರ ಮಾಡಿ ಪರಿಶೋಧನೆ ನಡಸುವವನು. = Navvy (ಈಗ ವಿರ. ಪ್ರ.). **Návigable** (ಗು.) (ನದಿ, ಸಮುದ್ರ, ಮೊ. ಗಳ ವಿಷಯದಲ್ಲಿ) ಹಡಗಿನ ಸಂಚಾರಕ್ಕೆ ಯೋಗ್ಯವಾದ ; ನೌಕಾ ಸಂಚಾರ ಯೋಗ್ಯ, (In n. condition); (ಆಕಾಶಬುಟ್ಟಿಯ ವಿಷಯದಲ್ಲಿ, ದಿಕ್ಕನ್ನನುಸರಿಸಿ) ನಡಸಲಾಗುವ. **Navigabílity** (ನಾ.)

Návvy ನ್ಯಾವಿ (ನಾ.) (ಕಾಲುವೆ, ರಸ್ತೆ, ರೈಲುರಸ್ತೆ, ಮೊ. ಗಳ) ತೋಡು ಗೆಲಸದ ಕೂಲಿಯಾಳು ; ತೋಡು ಯಂತ್ರ (= Steam-n.)

Návy ನೇವಿ (ನಾ.) (ಕಾವ್ಯ) ನೌಕಾ ತಂಡ ; (ಕಲಾಸಿಗಳು ಮತ್ತು ಅವರ ಪೋಷಣೆಗಾಗಿರುವ ಸಿಬ್ಬಂದಿ, ಮೊ. ನ್ನೆಲ್ಲ ಒಳಕೊಂಡ ಒಂದು ರಾಷ್ಟ್ರದ) ಒಟ್ಟು ಸಮರನೌಕಾ ಬಲ : ಹಡಗು ಪಡೆ. ನೌಕಾ ಸೈನ್ಯದ ಅಧಿಕಾರಿಗಳು ಮತ್ತು ಸೈನಿಕರು. N. bill (ನೌಕಾಧಿಪತ್ಯದ ಕಚೇರಿಯವರು ನಗದು ಹಣಕ್ಕೆ ಬದಲಾಗಿ ಕೊಡುವ) ನೌಕಾ ಹುಂಡಿ. N. blue (ನಾ.), N.-blue (ಗು.) (ನೌಕಾ ಬಲದವರ ಉಡುಪಿನ) ಗಾಢ ನೀಲವರ್ಣ(ದ). N. cut ತೆಳುವಾಗಿ ಸೀಳಿದ ಬಿಲ್ಲೆ ಹೊಗೆಸೊಪ್ಪು. N. list ಎಲ್ಲ ನೌಕಾ ಸೈನ್ಯಾಧಿಕಾರಿಗಳ ಹೆಸರನ್ನೂ ಇತರ ಸಮಾಚಾರಗಳನ್ನೂ ತಿಳಿಸುವ ಸರ್ಕಾರಿ ಪುಸ್ತಕ : ನೌಕಾ ವಿಷಯ ಸೂಚಿ. **Nával** (ಗು.) ಹಡಗಿನ(ಲ್ಲಿಯ) ; ಹಡಗಿಗಾಗಿರುವ ; ನಾವೆಯ ; ನೌಕಾ ಸೈನ್ಯದ ; ನಾವಿಕ (N. stores ನೌಕಾ ಸಾಮಗ್ರಿ. N. officer ನೌಕಾಧಿಕಾರಿ). ಯುದ್ಧದ ಹಡಗುಗಳು ಕಾದಿದ, ಗೆದ್ದ ; ಯುದ್ಧದ ಹಡಗುಗಳುಳ್ಳ ; —ನ್ನು ಅವಲಂಬಿಸಿದ. **Návally** (ಕ್ರಿ. ವಿ.)

Nawáb ನವಾಬ್ (ನಾ.) (ಇಂಡಿಯಾ ದೇಶದಲ್ಲಿ) (ಮುಸ್ಲಿಂ) ದೇಶೀಯ ಪ್ರಾಂತಾಧಿಕಾರಿ, ಶ್ರೀಮಂತ ; ನವಾಬ ; ಆ ಪದವಿಯಿಂದ ಬಂದ ಬಿರುದು. (ವಿರ. ಪ್ರ.) ಅಧಿಕಾರದಿಂದ ವಿಶ್ರಾಂತಿ ಪಡೆದ ಐಶ್ವರ್ಯ ವಂತನಾದ ಆ್ಯಂಗ್ಲೊ ಇಂಡಿಯನ್ (=Nabob)

Nay ನೇ (ನಾ.), (ನಿಷೇಧವಾಕ್ಯಕ್ಕೆ ಸಮನಾದ ಅವ್ಯಯ) ; (ಪ್ರಾಚೀ. ಪ್ರ.) = No. (ಮತ್ತೊಬ್ಬನ ಹೇಳಿಕೆಗೆ ಅಸಮ್ಮತಿಯನ್ನು ಸೂಚಿಸುವಲ್ಲಿ) (ಪ್ರಾಚೀ. ಪ್ರ.) ಏಕೆ ! ಒಳ್ಳೆಯದು ! . ಅಲ್ಲದೆ ; ಮತ್ತು ; ಅದಕ್ಕಿಂತ ಹೆಚ್ಚಾಗಿ (Weighty, nay, unanswerable ತೂಕವಾದದ್ದು ; ಅಷ್ಟೇ ಅಲ್ಲ, ಪ್ರತಿ ಹೇಳಲಾಗದಂಥದು). (ನಾ.) Nay ಎಂಬ ಪದ (Will not take n. ಇಲ್ಲ ಎಂದರೆ ಕೇಳುವುದಿಲ್ಲ). Yea & n. ಮಾಡೋಣವೆ, ಬೇಡವೆ, ಎಂದು ಓಲಾಟ. Say n. ಇಲ್ಲ ಎಂದು ಹೇಳಿ ಬಿಡು ; ಇಲ್ಲವೆನ್ನು ; ನಿರಾಕರಿಸು ; ವಿರುದ್ಧವಾಗಿ ನುಡಿ (Cannot say him n. ಅವನಿಗೆ ಇಲ್ಲವೆನ್ನಲಾಗುವುದಿಲ್ಲ)

Nazaréne ನ್ಯಾಝರೀನ್ (ನಾ., ಗು.) ನ್ಯಾಝರತ್ತಿನವನು ; (ಯೆಹೂದ್ಯ ಮತ್ತು ಮುಸ್ಲಿಂ ಪ್ರಯೋಗದಲ್ಲಿ) ಕ್ರೈಸ್ತ. ಆದಿಕಾಲದ ಯೆಹೂದ್ಯ ಕ್ರೈಸ್ತ ಪಂಗಡದವನು. **Názarite**[1] (ನಾ.) ನ್ಯಾಝರತ್ತಿನವನು.

Názarite[2] ನ್ಯಾಝರೈಟ್ (ನಾ.) ಕೆಲವು ಭೋಗ ವರ್ಜನ ವ್ರತಗಳನ್ನು ಹಿಡಿದ ಯೆಹೂದ್ಯ.

Naze ನೇಸ್ (ನಾ.) ಭೂಶಿರ.

Názi ನಾಟ್ಸಿ, ನಾಸಿ (ನಾ.) ಜರ್ಮನಿಯ ರಾಷ್ಟ್ರೀಯ(ತಾ) ಸಮಾಜ ಪಾರಮ್ಯ ಪಕ್ಷದವನು : ನಾಸಿ (ವಿಶೇಷಣವಾಗಿ ಸಹ ಪ್ರ.) ; ಹಿಟ್ಲರಿನ ಅನುಯಾಯಿ.

Neap ನೀಪ್ (ಗು., ನಾ., ಕ್ರಿ.) ಚಾಂದ್ರಮಾನದ ಮೊದಲನೆಯ ಮತ್ತು ಮೂರನೆಯ ಪಾದಗಳಾದ ಕೂಡಲೆ ಸಮುದ್ರದ ಭರತವು ಅತ್ಯಂತ ಕೆಳ ಮಟ್ಟದಲ್ಲಿರುವ ; — ಅತ್ಯಂತ ಕೆಳ ಮಟ್ಟದಲ್ಲಿರುವ ಸಮುದ್ರದ ಭರತ, ಉಬ್ಬರ (= N.-tide). (ಕ್ರಿ.) (ಭರತ) ಅತ್ಯಂತ ಕೆಳ ಮಟ್ಟಕ್ಕೆ ಬರು(ವಂತಿರು). (ಹಡಗಿನ ವಿಷಯದಲ್ಲಿ ಕರ್ಮಣಿ ಪ್ರ.) ಸಮುದ್ರದ ಇಳಿತ ಒದಗಿದುದರಿಂದ ಪ್ರಯಾಣ ಮಾಡಲಾಗದೆ ತಡೆ ಹೊಂದು.

Neapólitan ನಿ(ಇ)ಯಪಾಲಿಟನ್ (ಗು., ನಾ.) ನೇಪಲ್ಸ್ ಪಟ್ಟಣ ದ(ವನು). N. ice (ಬೇರೆ ಬೇರೆ ಪದರಗಳಲ್ಲಿ ಬೇರೆ ಬೇರೆ ಬಣ್ಣಗಳೂ ರುಚಿಗಳೂ ಇರುವಂತೆ ತಯಾರಿಸಿದ) ಮಂಜುಕೆನೆಯ ಹಲ್ವಾ ; ಇದೇ ತೆರದ ರೂಪಿನ ಇತರ ಮಿಠಾಯಿ. N. violet ಸುವಾಸನೆಯುಳ್ಳ (Viola ಜಾತಿಯ) ಒಂದು ಸುತ್ತುಹೂವು.

Near ನಿಯರ್ (ಕ್ರಿ. ವಿ., ಉಪ.) (ತರ ತಮ ರೂಪಗಳು : -er, -est) (ಸ್ಥಳದಲ್ಲಾಗಲಿ ಕಾಲದಲ್ಲಾಗಲಿ) ಹತ್ತಿರ(ವಾಗಿ, ದಲ್ಲಿ) ; ಸಮೀಪ (ವಾಗಿ, ದಲ್ಲಿ) [Far & n. ಎಲ್ಲೆಲ್ಲೂ. N. at hand ಸುಲಭವಾಗಿ (ಕೈಗೆ) ಸಿಕ್ಕುವಂತೆ ; ಹತ್ತಿರದಲ್ಲೇ ; ಶೀಘ್ರದಲ್ಲೇ ; ನಿಕಟ ; ಸನ್ನಿಹಿತ. N. by (ಮು., ಅಮೆ. ಸಂ.) ಹತ್ತಿರದಲ್ಲೇ. N. upon ಇಷ್ಟರಲ್ಲೇ ; ಬೇಗನೆಯೇ] ; ಬಹುಮಟ್ಟಿಗೆ ; ಹತ್ತಿರ ಹತ್ತಿರ (ಈಗ ಸಾ., nearly ಎಂಬ ಪದ ಪ್ರ.) [Was n. dead with fright. Lasted n. a century. Not n. so numerous. As n. as one can guess. The nearer it resembles him the less I like it] ; ಬಹಳ ಹಿಡಿತದಿಂದ ; ಜಿಪುಣತನದಿಂದ (Lives very n.) ; [Go n. to do, come or go n. doing ಇನ್ನೇನು ! ಮಾಡುವು ದರಲ್ಲಿರು. (ಉಪ.) Comes no nearer the end ಕೊನೆ ಮುಟ್ಟು ವಂತೆಯೇ ಇಲ್ಲ. Lies n. his heart ಅವನ ಮನಸ್ಸಿಗೆ ಬಹಳ ಹತ್ತಿದೆ. The time draws n. Christmas. Sun is n. setting. Hope came n. fulfilment. Who comes nearest him in wit ?]. (ಸಮಾನ ಪದಗಳಲ್ಲಿ) ಹೋಲುವ; ಪ್ರತಿಯಾದ (N.-beer)

Near (ಗು.) ಹತ್ತಿರದ ; ಹತ್ತಿರ ಸಂಬಂಧದ (N. relation. Is n. akin to. Is n. me in blood. N. & dear ಆಪ್ತೇಷ್ಟರು. A n. friend ಆಪ್ತ ಸ್ನೇಹಿತ). ಎಡ(ಗಡೆಯ) (*Off* ಪದಕ್ಕೆ ವ್ಯತಿರಿಕ್ತವಾಗಿ) (The n. fore leg ಎಡಗಡೆಯ ಮುಂಗಾಲು. The n. wheel ಎಡ ಚಕ್ರ). (ಸ್ಥಾನ ಅಥವಾ ಕಾಲ) ಹತ್ತಿರವಿರುವ, ಸಮೀಪದ ; ನೆರೆಯ, ಪಕ್ಕದ [= N.-by (ಮು., ಅಮೆ. ಸಂ.)] [The Near East ಸಮೀಪ ಪೂರ್ವ (ಪ್ರಪಂಚದ ಮಹಾಯುದ್ಧದ ಸಂದರ್ಭದಲ್ಲಿ ಪಾಶ್ಚಾತ್ಯರ ಪ್ರ.) ; ಮೆಡಿಟರೇನಿಯನ್ ಸಮುದ್ರದ ಪೂರ್ವಭಾಗದ ಸುತ್ತುಮುತ್ತಲರುವ ದೇಶಗಳು (ಬಾಲ್ಕನ್ಸ್, ಗ್ರೀಸ್, ಏಷ್ಯಾಮೈನರ್, ಪ್ಯಾಲೆಸ್ಟೈನ್, ಸಿರಿಯ, ಈಜಿಪ್ಟ್, ಅರೇಬಿಯಾ, ಇರಾಕ್, ಮೊ. ವು). The nearest man. On a n. day. The man n. or nearest you. Is nearer to, or nearer, us. N. work ಕಣ್ಣು ಹತ್ತಿರವಿಟ್ಟುಕೊಂಡು ಮಾಡಬೇಕಾದ ಕೆಲಸ. The n. distance ಹಿನ್ನೆಲೆಗೂ ಮುನ್ನೆಲೆಗೂ ಮಧ್ಯದ ದೃಶ್ಯ(ಭಾಗ). The n. prospect of reward ಬೇಗ ಪ್ರತಿಫಲ ಬರುವ ಸಂಭವ]. (ರಸ್ತೆ, ದಾರಿ) ನೇರವಾದ ; ಬಹು ಹತ್ತಿರದ ; ಕಿರಿದಾದ ; ಸ್ವಲ್ಪವಾದ (A n. guess, resemblance, translation, race, escape. N.-sighted ಹತ್ತಿರ ದೃಷ್ಟಿಯ). ಜಿಪುಣತನದ. **Neárish** (ಗು.) ; **Neárly** ನಿಯರ್ಲಿ (ಕ್ರಿ. ವಿ.) ಸೂಕ್ಷ್ಮವಾಗಿ ; ಹೆಚ್ಚು ಗಮನ ಕೊಟ್ಟು (Examine it n.); ಬಹಳ ನಿಕಟವಾಗಿ, ಹತ್ತಿರವಾಗಿ (N. related.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Concerns me n. Approached the place n. Correspond, resemble, n.). ಬಹುಮಟ್ಟಿಗೆ ; ಪ್ರಾಯಶಃ. Not n. ಹಾಗೇನೂ ಇಲ್ಲ ; ಸ್ವಲ್ಪವೂ ಹೋಲಿಕೆಯಿಲ್ಲ. **Néarness** (ನಾ.)

Near (ಕ್ರಿ.) ಹತ್ತಿರ(ಕ್ಕೆ) ಬರು, ಹೋಗು ; ಸಮೀಪಿಸು.

Neárctic ನಿಯಾರ್ಕ್ಟಿಕ್ (ಗು.) (ಪ್ರಾ. ವಿ.) ಉ. ಅಮೆರಿಕದ ಶೀತ ಮತ್ತು ಸಮಶೀತೋಷ್ಣ ಭಾಗಗಳ.

Neat[1] ನೀಟ್ (ನಾ. ; ಏ. ವ., ಸಾಮೂಹಿಕವಾಗಿ ಬ. ವ.) ಎತ್ತಿನ ಜಾತಿಯ (ಯಾವುದಾದರೂ) ಪ್ರಾಣಿ. (ಸಾಮೂಹಿಕವಾಗಿ) ದನ. N.-herd ದನ ಕಾಯುವವನು. N.-house ದನದ ಕೊಟ್ಟಿಗೆ N.'s-foot, N.'s-tongue (ಆಹಾರವಾಗಿ ಉಪಯೋಗಿಸುವ) ದನದ ಕಾಲು, ನಾಲಗೆ. N.'s-leather ದನದ ತೊಗಲು.

Neat[2] ನೀಟ್ (ಗು.) (ಮದ್ಯ) ನೀರು ಬೆರಸಿಲ್ಲದ. ಅಂದವಾದ ; ಸರಳತೆಯುಳ್ಳ ; ನೀಟಾದ ; ನಾಜೂಕಾದ ; ಅಚ್ಚುಕಟ್ಟಾದ. (ಭಾಷೆ, ಶೈಲಿ, ಸೂಕ್ತಿ) ಸಂಗ್ರಹವೂ ಸ್ಪಷ್ಟವೂ ಏಕಾಗ್ರವೂ ಆದ ಚತುರೋಕ್ತಿಯ ; ಸಾರೋಕ್ತಿಯ ; ತಿರುಳುಳ್ಳ. ಕುಶಲ ; ನಿಪುಣ ; ಕೈಚಳಕವುಳ್ಳ ; ಬುದ್ಧಿವಂತಿಕೆಯಿಂದ ಮಾಡಿದ ; ಒಪ್ಪವಾದ ; ಓರಣದ ; ಕ್ರಮಬದ್ಧವಾದ. N.-handed ಚತುರ ; ಕೈಚಳಕವುಳ್ಳ. **Neátly** (ಕ್ರಿ. ವಿ.) ; **Neátness** (ನಾ.)

Neath ನೀತ್ (ಉಪ.) (ಕಾವ್ಯ) = Beneath.

Neb ನೆಬ್ (ನಾ.) (ಸ್ಕಾ. ಪ್ರ.) ಹಕ್ಕಿಯ ಕೊಕ್ಕು ; ಚಂಚು ; ಮೂಗು ; ಮೂತಿ ; ಮೊನೆ.

Nébula ನೆಬ್ಯುಲ (ನಾ. ; ಬ. ವ. -lae —ಲೀ) ದೃಷ್ಟಿಯನ್ನು ಊನಮಾಡುವ, (ಕಣ್ಣುಗುಡ್ಡೆಯ) ಪಾರದರ್ಶಕ ಪಟಲದಮೇಲಿನ, ಮಬ್ಬು ಮಚ್ಚೆ : ಶುಕ್ಲ (ಪಟಲ). (ಖ. ವಿ.) ಸೌರವ್ಯೂಹದಿಂದಾಚೆಗಿರುವ ದೂರ ನಕ್ಷತ್ರಪುಂಜಗಳಿಂದಾಗಲಿ, ಅನಿಲದ್ರವ್ಯ ಅಥವಾ ನಕ್ಷತ್ರದ್ರವ್ಯದಿಂದಾಗಲಿ, ಆದ ಆಕಾಶದ ಕಾಂತಿ ಪ್ರದೇಶ : ಜ್ಯೋತಿಃಪಟಲ ; ಜ್ಯೋತಿರ್ಮೇಘ ; ನೀಹಾರಿಕ. **Nébular** (ಗು.) (N. theory or hypothesis ನೀಹಾರಿಕೆಗಳಿಂದ ಸೌರವ್ಯೂಹವೂ ನಕ್ಷತ್ರವ್ಯೂಹಗಳೂ ರೂಪುಗೊಂಡುವೆಂಬ ವಾದ) : ನೀಹಾರಿಕಾ ವಾದ. **Nébulous** (ಗು.) (ಖ. ವಿ.) ನೀಹಾರಿಕದ(ಂಥ) ; —ಗಳ(ಂಥ) (N. star ಅಸ್ಪಷ್ಟ ನಕ್ಷತ್ರಪುಂಜ ; ಕಾಂತಿಮೇಘದಲ್ಲಿಯ ನಕ್ಷತ್ರ ; ನೀಹಾರಿಕಾ ನಕ್ಷತ್ರ). ಮೋಡದಂಥ ; ಮಸುಕಾದ ; ಮಬ್ಬಾದ ; ಅಸ್ಪಷ್ಟ ; ಆಕಾರವಿಲ್ಲದ ; ರೂಪರಹಿತ ; ತಿಳಿಯಾಗಿಲ್ಲದ ; ಕದಡಿದ ; ಒಂಡಾದ. **Nebulósity** (ನಾ.)

Nebúlium ನಿಬ್ಯೂಲಿಯಂ (ನಾ.) ಅನಿಲ ನೀಹಾರಿಕೆಗಳ ವರ್ಣಪಟಲದಲ್ಲಿ ಕಾಣುವ ಹಸುರು ಗೆರೆಯಿಂದ, ಅದಕ್ಕೆ ಕಾರಣವೆಂದು, ಊಹಿಸುವ ಒಂದು ಮೂಲಧಾತು : 'ನಿಬ್ಯೂಲಿಯಂ'.

Necessárian. Necessary ನೋಡಿ.

Nécessary ನೆಸೆಸ(ಸ)ರಿ (ಗು., ನಾ.) ಅಗತ್ಯವಾದ ; ಆವಶ್ಯಕವಾದ ; ಅನಿವಾರ್ಯವಾದ ; ಬೇಕೇಬೇಕಾದ (*To* or *for* person, etc. It is n. that, to do). ಮಾಡಲೇ ಬೇಕಾದ ; ಆಗಲೇ ಬೇಕಾದ ; ದೈವ ಸಂಕಲ್ಪಿತವಾದ ; (ಪ್ರಕೃತಿ ನಿಯಮಗಳಿಂದ) ನಿಯತವಾದ ; ಸ್ವೇಚ್ಛೆಯಿಂದಲ್ಲದ ; ಅನಿವಾರ್ಯವಾಗಿ ಸಂಭವಿಸುವ, ಇರುವ ; (ಭಾವ ಅಥವಾ ಮನಃಪ್ರವೃತ್ತಿ) (ವಸ್ತುಸ್ಥಿತಿಯಿಂದ) ಅನಿವಾರ್ಯವಾಗಿ ಸಿದ್ಧಿಸಲೇ ಬೇಕಾದ ; (ಪೂರ್ವ ಸ್ಥಿತಿಯಿಂದ) ಫಲಿಸದೇಕಾವ ; (ಕರ್ತೃವಿನ ವಿಷಯದಲ್ಲಿ) ಸ್ವತಂತ್ರವಾದ ಇಚ್ಛಾ ಶಕ್ತಿಯಿಲ್ಲದ ; ನಿರ್ಬಂಧದ (A n. penance). (ನಾ.) ಜೀವನಾಧಾರಕ್ಕೆ ಆವಶ್ಯಕವಾದದ್ದು (The necessaries of life). (ಶಿಥಿಲವಾಗಿ) (ಸಾ., ಭೋಗವಸ್ತುವೆಂದು ಪರಿಗಣಿಸದ) ಅಪೇಕ್ಷಣೀಯ ವಸ್ತು ; ಅಗತ್ಯ ವಸ್ತು. The n. (ಅಸಂ.) ಒಂದು ಉದ್ದೇಶಕ್ಕಾಗಿ ಬೇಕಾದ ಹಣ, ಕಾರ್ಯ ; ಸಾಧನ ಸಂಪತ್ತು (Provide, find, do, the n.). **Necessárian** ನೆಸೆಸೇರಿಯನ್ (ಗು., ನಾ.) = **Necessitárian** ನಿ— (ನಾ., ಗು.) (ಮನುಷ್ಯನಿಗೆ ಇಚ್ಛಾಸ್ವಾತಂತ್ರ್ಯವಿಲ್ಲವೆಂದೂ, ಎಲ್ಲ ಕಾರ್ಯಗಳೂ ಅದರ ಹಿಂದಿರುವ ಕಾರಣಗಳಿಂದ ನಿರ್ಧರವಾಗುವುವೆಂದೂ ಹೇಳುವ) ನಿಯತಿ ವಾದದ. (ನಾ.) —ವಾದಿ. **Necessárianism** ನೆ— (ನಾ.) =**Necessitárianism** ನಿ— (ನಾ.) ; **Nécessarily** (ಕ್ರಿ. ವಿ.) ಆವಶ್ಯಕ(ತೆಯ ಫಲ)ವಾಗಿ ; ಅನಿವಾರ್ಯವಾಗಿ. **Necéssitate** (ಕ್ರಿ. ಸಕ.) (ಒಂದು ಕೆಲಸ ಮಾಡಲು, ಒಬ್ಬನನ್ನು) ಬಲಾತ್ಕರಿಸು, ನಿರ್ಬಂಧಿಸು (ಈಗ ವಿರ. ಪ್ರ.) ; ಆವಶ್ಯಕ, ಅಗತ್ಯ, ಅನಿವಾರ್ಯ, —ಮಾಡು. **Necéssitous** (ಗು.) ಬಡವನಾದ ; ಬಡತನದ ; ನಿರ್ಗತಿಕ. **Necéssity** (ನಾ.) (ಭೌತ ಪ್ರಪಂಚದಲ್ಲಿ ಒಂದು ನಿಯಮವಾಗಿದ್ದು ಮನುಷ್ಯನ ಎಲ್ಲ ಕಾರ್ಯಗಳನ್ನೂ ನಿರ್ಧರಿಸುವುದೆಂದು ಪರಿಗಣಿಸುವ) ಒತ್ತಾಯ, ನಿರ್ಬಂಧ, ನಿಯತಿ (ಸಾ., Physical n. ; Logical n. ಒಂದು ತತ್ತ್ವಕ್ಕೆ ವಿರುದ್ಧವಾದದ್ದನ್ನು ಊಹಿಸಲು ಸಾಧ್ಯವಿಲ್ಲದ್ದರಿಂದ ಅದನ್ನೇ ನಂಬಬೇಕಾದ ನಿರ್ಬಂಧ. Absolute, moral, natural, etc. n.). ಅನಿವಾರ್ಯವಾದದ್ದು ; ಆವಶ್ಯಕವಾದದ್ದು ; ಆವಶ್ಯಕತೆ ; ಅನಿವಾರ್ಯತೆ [Of n. ಅನಿವಾರ್ಯವಾಗಿ ; ಗತ್ಯಂತರವಿಲ್ಲದೆ. Make a virtue of n. ಯತ್ನವಿಲ್ಲದೆ ಮಾಡಬೇಕಾಗಿಬಂದದ್ದನ್ನು ಮಾಡಿ ಅದನ್ನು ಒಂದು ಸತ್ಕಾರ್ಯವಾಗಿ ತೋರ್ಪಡಿಸು. (ಯತ್ನವಿಲ್ಲದೆ) ಮಾಡಬೇಕಾದದ್ದನ್ನು ಮನಸ್ಸಂತೋಷದಿಂದ ಮಾಡು. Am under the n. of doing. N. knows no law ಗತ್ಯಂತರವಿಲ್ಲದೆ ಮಾಡಿದ್ದಕ್ಕೆ (ಆಪದ್ಧರ್ಮದಂತೆ) ನಿಯಮವಿಲ್ಲ. N. is the mother of invention (Mother ನೋಡಿ). The n. of protecting life & property]. (ಸಾ., ಬ. ವ. ದಲ್ಲಿ) ಜೀವನಕ್ಕೆ ಅಭಾವ ; ಬಡತನ ; ದಾರಿದ್ರ್ಯ ; ಕಷ್ಟದಶೆ. ತುರ್ತಾಗಿ ಬೇಕಾದದ್ದು.

Necessitárian, Necéssity, etc. Necessary ನೋಡಿ.

Neck[1] ನೆಕ್ (ನಾ.) ಕೊರಳು ; ಕತ್ತು ; ಕುತ್ತಿಗೆ ; ಗೋಣು ; ಕಂಠ [Break one's n. ಗೋಣು ಮುರಿ(ದು ಸಾಯಿ). Break n. of task ಕಾರ್ಯದ ಕಠಿನ ಭಾಗವನ್ನು ದಾಟಿ ಮುಗಿಸು. Save one's n. ತಲೆಯುಳಿಸಿಕೊ. N. & crop ಒಟ್ಟಿಗೆ ; ರಭಸದಿಂದ ; ಥಟ್ಟನೆ. Get it in the n. (ಅಸಂ.) ಕುತ್ತಿಗೆಗೆ ಬರು ; ಪ್ರಾಣಾಪಾಯದ, ಕಠಿನವಾದ, —ಪೆಟ್ಟು ತಿನ್ನು, ಅನುಭವಿಸು. N. or nothing ಆದದ್ದಾಗಲೆಂದು ; ಗೆಲ್ಲಲು ಇದ್ದದ್ದೆಲ್ಲವನ್ನೂ ಪಣವಾಗಿ ಒಡ್ಡಿ (It is n. or nothing ಆದದ್ದಾಗಲೆಂದು ನುಗ್ಗುವ ಸಂದರ್ಭ). N. & n. (ಜೂಜಿನಲ್ಲಿ) ಸಮ ಸಮವಾಗಿ ಓಡುತ್ತ]. (ಆಹಾರಕ್ಕಾಗಿ ಉಪಯೋಗಿಸುವ ಪ್ರಾಣಿಯ) ಕತ್ತಿನ ಮಾಂಸ (ಮು., N. of mutton). (ಷರ್ಟು, ಮೊ. ಉಡುಪಿನ) ಕೊರಳ ಭಾಗ ; [ಪಾತ್ರೆಯ (ಮು., ಸೀಸೆಯ)] ಕಂಠ (*Of* ಉಪ. ದೊಡನೆ). ದಾರಿ, ಕಣಿವೆ, ಕಾಲುವೆ, ಮೊ. ಗಳ ಕಿರಿದಾದ ಭಾಗ, ಇಕ್ಕಟ್ಟು ಮಾರ್ಗ (*Of* ಉಪ. ದೊಡನೆ) ; ಕಿರುಗಾಲುವೆ ; ಜಲಸಂಧಿ ; ಭೂಕಂಠ. ಒಂದು ವಸ್ತುವಿನ ಎರಡು ಭಾಗಗಳನ್ನು ಕೂಡಿಸುವ ಇಕ್ಕಟ್ಟಾದ ಭಾಗ. (ವಾ. ಶಾ.) ಬೋದಿಗೆಯ ಕೆಳ ಭಾಗ. **N.-band** ಕೊರಳ ಪಟ್ಟಿ. **Neckcloth, Néckerchief** ಕಂಠ ವಸ್ತ್ರ. **Necklace** (ನೆಕ್‌ಲೆಸ್) ಕಂಠ ಹಾರ ; ರತ್ನ ಹಾರ ; ಮಣಿ ಸರ. **N.-tie** [(ಷರ್ಟಿನ ಕೊರಳಪಟ್ಟಿಯನ್ನು ಬಂಧಿಸುವ(ಂತೆ ತೋರುವ) ರೇಷ್ಮೆ, ಮೊ. ಗಳಿಂದ ಮಾಡಿದ] ಕಂಠ ಬಂಧ. **N.-wear** (ಅಂಗಡಿಯ ಮಾತು) ಕೊರಳ ಪಟ್ಟಿಗಳು ಮತ್ತು ಕಂಠ ಬಂಧಗಳು. **(-)necked** (ಗು.) ; **Nécking** (ನಾ.) (ವಾ. ಶಾ.) ಕಾಂಡಕ್ಕೂ ಬೋದಿಗೆಗೂ ಮಧ್ಯದ ಕಂಬಭಾಗ. **Nécklet** (ನಾ.) ಕಂಠಾಭರಣ ; ತುಪ್ಪುಳು ಚರ್ಮದ ಕೊರಳ ಕಾಪು.

Neck (ಕ್ರಿ. ಅಕ.) (ಅಮೆ. ಸಂ. ಅಸಂ.) (ದಂಪತಿಗಳು) ಕಂಠಾಲಿಂಗನ ಮಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Neck[2] ನೆಕ್ (ನಾ.) (ಕೊಳ್ಳಿನಲ್ಲಿ) ಕೊಯ್ದ ಕೊನೆಯ ಕಂತೆ.

Nécking, Nécklet. **Neck**[1] ನೋಡಿ.

Necro- ನೆಕ್ರೊ(ಕ್ರಾ)— (ಕೆಲವು ವೇಳೆ : **Necr-**) (ಸ. ಪೂ. ಪ.) ಹೆಣ—; ಶವ— ; ಪ್ರೇತ— . **-génic** ಶವಸಂಪರ್ಕದಿಂದುಂಟಾದ. **-phore** ನೆಲದಲ್ಲಿ (ಸತ್ತ ಹುಳುಗಳನ್ನು) ಹೂಳುವ ಒಂದು ಬಗೆಯ ಜೀರುಂಡೆ. **-biósis** (—ಬಯೋ —) ದೇಹದಲ್ಲಿ ಅಂಗಾಂಶಗಳು ಕ್ಷಯಿಸಿ (ನಶಿಸಿ) ಹೋಗುವುದು. **-latry** (ನೆಕ್ರಾಲಟ್ರಿ) ಪ್ರೇತ ಪೂಜೆ. **-logy** ಸಾವಿನ ಸುದ್ದಿ ; ಸತ್ತವರ ಪಟ್ಟಿ ; ಮೃತ ಸೂಚಿ. **-phagous** (—ಫಗಸ್) ಕೊಳೆತ ಮಾಂಸ ತಿನ್ನುವ ; ಹೆಣ ತಿನ್ನುವ. **-polis** (ಮು., ಪಟ್ಟಣಗಳ ಬಳಿಯ) ಗೋರಿಸ್ಥಾನ, ಶ್ಮಶಾನ. **-psy** (ನೆಕ್ರಾಪ್ಸಿ), **-scopy** ಶವಪರೀಕ್ಷೆ.

Nécromancy ನೆಕ್ರೊಮ್ಯಾನ್ಸಿ (ನಾ.) ಸತ್ತವರೊಂದಿಗೆ ವ್ಯವಹಾರ ನಡಸಿ ಭವಿಷ್ಯ ಹೇಳುವ ವಿದ್ಯೆ : ಪ್ರೇತ ವಿದ್ಯೆ. ಕಣ್ಕಟ್ಟು ; ಯಕ್ಷಿಣಿ ; ಇಂದ್ರಜಾಲ. **Nécromancer** (ನಾ.) ; **Necromántic** (ಗು.)

Necrósis ನೆಕ್ರೋಸಿಸ್ (ನಾ.) (ವ್ಯೆ. ಶಾ.) ಸುತ್ತು ಆವರಣವುಳ್ಳ ಅಂಗಾಂಶದ ಸಾವು (ಮು., ಮೂಳೆಯ ಕೊಳೆತ). **Necrótic** —ಕ್ರಾ— (ಗು.) ; **Nécrotize** —ಕ್ರೊ— (ಕ್ರಿ. ಅಕ.)

Néctar ನೆಕ್ಟರ್ (ನಾ.) (ಗ್ರೀಕ್ ಪುರಾಣ) ದೇವತೆಗಳ ಪಾನೀಯ ; ಅಮೃತ ; (ಯಾವುದಾದರೂ) ಆಪ್ಯಾಯಮಾನವಾದ ಪಾನ ; ಇಂಗಾಲಾಮ್ಲ ಹುದುಗಿಸಿದ ಒಂದು ಬಗೆಯ ಪಾನೀಯ. ಸಸ್ಯಗಳು ಸ್ರವಿಸುವ ಮಧುದ್ರವ ; ಮಕರಂದ ; ಬಂಡು. **Nectárean** ನೆಕ್ಟೇರಿಯನ್ (ಗು.), **Nectáreous** (ಗು.) —ಅಂಥ ; —ವುಳ್ಳ ; —ಅಂತೆ ಸೀಯಾಗಿರುವ ; ಬಹಳ ರುಚಿಯಾದ. **Néctared** ನೆಕ್ಟರ್ಡ್ (ಗು.) ಮಧು ತುಂಬಿದ ; ಮಧುವಿನಿಂದ ವ್ಯಾಪಿತವಾದ, —ರುಚಿ ಗಟ್ಟಿದ ; ಬಹಳ ಸೀಯಾಗಿಯೂ ಸುವಾಸನೆಯುಳ್ಳದ್ದಾಗಿಯೂ ಇರುವ (ರೂಪ. ಸಹ). **Nectaríferous** (ಗು.) —ತಳೆದಿರುವ ; —ಉತ್ಪತ್ತಿ ಮಾಡುವ. **Néctarous** (ಗು.) —ಅಂತಿರುವ. **Néctary** (ನಾ.) (ಸಸ್ಯದ, ಹೂವಿನ) ಮಕರಂದ ಸ್ರವಿಸುವ ಅಂಗ : ಮಧು ಗ್ರಂಥಿ ; ಮಕರಂದ ಗ್ರಂಥಿ.

Néctarine ನೆಕ್ಟರಿ(ೀ)ನ್ (ನಾ.) ತುಪ್ಪುಳಿಲ್ಲದ ತೆಳು ಸಿಪ್ಪೆಯೂ ಗಟ್ಟಿ ತಿರುಳೂ ಉಳ್ಳ ಒಂದು ಬಗೆಯ ಪೀಚ್ ಹಣ್ಣು.

Néddy ನೆಡಿ (ನಾ.) ಕತ್ತೆ. (Edward ಪದದ ಅಲ್ಪಾರ್ಥಕ)

Nee (F) ನೇ (ಗು.) ಹುಟ್ಟಿದ. [ಮದುವೆಯಾದ ಹೆಂಗಸಿನ ಹೆಸರಿನೊಡನೆ ಕನ್ಯಾನಾಮ ಸೇರಿಸುವ ಪದ (ಉದಾ., Mrs Smith, n. Jones)]

Need ನೀಡ್ (ನಾ., ಕ್ರಿ. ; ಪ್ರಥಮ ಪುರುಷ, ಏ. ವ., ವರ್ತಮಾನ ರೂಪ needs, need) ಬೇಕಾದದ್ದು ; ಕೊರತೆ ; ಅವಶ್ಯಕತೆ ; ಅಗತ್ಯ ; ದರದು [If n. be or were. There is no n. (to do). Have n. ಆವಶ್ಯಕವಾಗಿರು. Had n. remember ನೆನೆಪಿನಲ್ಲಿಟ್ಟು ಕೊಳ್ಳುವುದು ಆವಶ್ಯಕ. My needs are few ನನಗೆ ಬೇಕಾದದ್ದು ಬಹಳ ಕೊಂಚ]. ಅವಸರದ ಸಂದರ್ಭ ; ವಿಷಮ ಸ್ಥಿತಿ ; ಆಪತ್ಕಾಲ ; ಕಷ್ಟಕಾಲ (A friend in n. is a friend indeed ಆಪತ್ಕಾಲಕ್ಕೆ ಆದವನೇ ನಿಜವಾದ ಸ್ನೇಹಿತ. Good at n. ಸಮಯಕ್ಕೆ ಒದಗುವ, ಆಗುವ. Failed him in his n. ಅವನ ಕಷ್ಟಕ್ಕಾಗಲಿಲ್ಲ). ನಿರ್ಗತಿ ; ಆವಶ್ಯಕ ವಸ್ತುಗಳ ಅಭಾವ ; ಬಡತನ [**Néedy** (ಗು.) ; **Néediness** (ನಾ.)]. (ಬ. ವ. ದಲ್ಲಿ) ದೇಹ ಬಾಧೆಗಳು ; ಪ್ರಕೃತಿ ವ್ಯಾಪಾರಗಳು (Do one's needs). [**Néedfire** (ನಾ.) ಒಣ ಮರದ ತುಂಡುಗಳನ್ನು ಉಜ್ಜಿ ಹುಟ್ಟಿಸಿದ ಬೆಂಕಿ : ಅರಣಿಯ ಅಗ್ನಿ]. (ಕ್ರಿ.) ಅವಶ್ಯವಾಗಿರು ; ಅಗತ್ಯವಾಗಿರು ; ಬೇಕಾಗಿರು. ಸಹಾಯ ಬೇಕಾದವನಾಗಿರು ; ಬಡತನದಲ್ಲಿರು (Give to them who n.) ; ಮಾಡದೆ ಯತ್ನವಿಲ್ಲದಿರು (It needs not ಅದು ಅನವಶ್ಯಕ). More than needs ಬೇಕಾದದ್ದಕ್ಕಿಂತ ಹೆಚ್ಚಾಗಿ. Why n. he have come tonight ಅವನು ಈ ರಾತ್ರಿ ಏಕೆ ಬರಬೇಕಾಗಿತ್ತು ? **Néedful** (ಗು.) ಆವಶ್ಯಕವಾದ ; ಇಲ್ಲದಿದ್ದರೆ (ಕೆಲಸ) ನಡೆಯದ (*To, for* ಉಪ. ದೊಡನೆ ಸಹ) [It is n. to do. The n. ಆವಶ್ಯಕವಾದದ್ದು ; (ಮು., ಅಸಂ.) ಬೇಕಾದ ಹಣ. Do the n. (ಕಾಲ್ಚೆಂಡಾಟದಲ್ಲಿ) ಚೆಂಡನ್ನು ಗುರಿ ಹೊಗಿಸು]. **Néedfulness** (ನಾ.) ; **Néedless** (ಗು.) ಅನವಶ್ಯಕವಾದ ; ಬೇಕಿಲ್ಲದ [N. to say (—ನ್ನು) ಹೇಳಬೇಕಾಗಿಯೇ ಇಲ್ಲ (ಪ್ರಕ್ಷೇಪ ವಾಕ್ಯವಾಗಿ)]. **Néedlessly** (ಕ್ರಿ. ವಿ.) ; **Néedlessness** (ನಾ.) ; **Néedments** (ನಾ., ಬ. ವ.) ಆವಶ್ಯಕವಾದವು (ಮು., ಪ್ರಯಾಣದಲ್ಲಿ ಸ್ವಂತ ಉಪಯೋಗಕ್ಕೆ ಬೇಕಾದ ವಸ್ತುಗಳು). **Needs** (ಕ್ರಿ. ವಿ.) ಅಗತ್ಯವಾಗಿ ; ಆವಶ್ಯಕವಾಗಿ (ಈಗ must ಪದದ ಹಿಂದೆ ಅಥವಾ ಮುಂದೆ ಮಾತ್ರ ಪ್ರ.). N. must do ಮಾಡಿ ತೀರಬೇಕು ; ಮಾಡದಿದ್ದರೆ ಏಧಿಯಿಲ್ಲ. Must n. do (ಕೆಲವು ವೇಳೆ N. must do) (ಸಾ., ಅವಿವೇಕತನದಿಂದ) ಮಾಡಲೇಬೇಕೆಂದು ಹಠ ಹಿಡಿಯುತ್ತಾನೆ, ಹಠ ಹಿಡಿದನು.

Neédle ನೀಡ್ಲ್ (ನಾ., ಕ್ರಿ.) (ಹೊಲಿಗೆಯಲ್ಲಿ ಉಪಯೋಗಿಸುವ) ಸೂಜಿ ; ಸೂಚಿ (Knitting, darning, packing, crochet, -n.); [Sharp as a n. ಸೂಜಿಯಂತೆ ಮೊನಚಾದ ; ತೀಕ್ಷ್ಣವಾದ ; (ರೂಪ.) ಕುಶಾಗ್ರ ಬುದ್ಧಿಯ ; ಸೂಕ್ಷ್ಮ ದೃಷ್ಟಿಯ. Look for n. in bottle of hay (Bottle[2] ನೋಡಿ). Pins & needles (Pin ನೋಡಿ). N.'s eye ಸೂಜಿಗಣ್ಣು ; ಅತಿ ಸಣ್ಣ ರಂಧ್ರ]. (ದಿಕ್ಸೂಚೀ ಫಲಕದಲ್ಲೂ, ಹಲವು ಅಯಸ್ಕಾಂತದ ಮತ್ತು ವಿದ್ಯುತ್ತಿನ ಸಲಕರಣೆಗಳಲ್ಲಿಯೂ, ಮು., ದೂರವಾರ್ತಾ ಸಲಕರಣೆಯಲ್ಲಿ, —ಉಪಯೋಗಿಸುವ) ಕಾಂತ ಸೂಚಿ (= Magnetic n.). ಧ್ವನಿಪುನರಾವೃತ್ತಿ ಯಂತ್ರದಲ್ಲಿ (ಗ್ರಾಮಫೋನಿನಲ್ಲಿ) ಸುತ್ತುವ ಧ್ವನಿಸಂಗ್ರಹ ಫಲಕದಿಂದ ಕಂಪನಗಳನ್ನು ಪಡೆದು ಅವನ್ನು ಹೊರಸಾಗಿಸುವ ಚೂಪುಮೊನೆಯ ಲೋಹದ, ಮರದ, ಅಥವಾ ನಾರು ಬೇರಿನ, — ಮುಳ್ಳು. (ಚಿನ್ನವನ್ನೂ ಬೆಳ್ಳಿಯನ್ನೂ ಒರೆಹಚ್ಚಿ ಬಣ್ಣನೋಡುವುದರಲ್ಲಿ, ಪ್ರಮಾಣವಾಗಿ ಉಪಯೋಗಿಸುವ ಆಯಾ ಲೋಹದ) ಒರೆಕಡ್ಡಿ. ಮೊನಚಾದ ಕೊರೆಸೂಜಿ. (ಶಸ್ತ್ರ ಚಿಕಿತ್ಸೆ) ಮೆತ್ತನೆಯ ಕಣ್ಣಿನ ಪೊರೆಯನ್ನು ತೆಗೆಯುವಲ್ಲಿ ಉಪಯೋಗಿಸುವ ಮೊನಚಾದ ಸೂಜಿ : ಶಸ್ತ್ರ ಸೂಚಿ. ಚರ್ಮದ ಕೆಳಗೆ ಔಷಧವನ್ನು ಚುಚ್ಚಿ ಹರಿಸುವ ಪಿಚಕಾರಿಯ ಮೊನೆಸೂಜಿ. (ಹಿಂಭಾಗದಿಂದ ಮದ್ದು ತುಂಬುವ ಬಂದೂಕಿನ) ತೋಟಾವನ್ನು ಸಿಡಿಸುವ ಉಕ್ಕಿನ ಸೂಜಿ. ಸೂಚ್ಯಗ್ರ ಸ್ತಂಭ. ಮೊನಚುಕೊನೆಯ ಬಂಡೆ ; ಬೆಟ್ಟದ ಕೋಡು, ಶಿಖರ. [ಕಟ್ಟಡದ (ಗೋಡೆ, ಮೊ. ಗಳ) ತಳ ಭಾಗದಲ್ಲಿ ಕೆಲಸಮಾಡುವಾಗ ಆಸರೆ ಕೊಡುವುದಕ್ಕಾಗಿ ಹಂಗಾಮಿಯಾಗಿ ಉಪಯೋಗಿಸುವ] ಆಸರೆಯ ದೂಲ. ಸೂಚ್ಯಾಕಾರದ ಸ್ಫಟಿಕ. ಫರ್ ಅಥವಾ ಪೈನ್ ಮರದ ಎಲೆ. (ಅಸಂ.) The n. ನರಗಳ ಬಲಹೀನತೆಯ ಉದ್ರೇಕ. [**N.-bath** ತುಂತುರು ಧಾರೆಯ ಸ್ನಾನ. **N.-book** ಪುಸ್ತಕದ ಆಕಾರದ ಸೂಜಿಪೆಟ್ಟಿಗೆ. **N.-case** ಸೂಚೀ ಕೋಶ. (**Néedleful** ಒಂದು ಸಲ ಸೂಜಿಗೆ ಪೋಣಿಸಿದ ದಾರ, ಮೊ. ಗಳ ಉದ್ದ). **N.-gun** ಸೂಜಿಯ ಸಂಘಟ್ಟನೆಯಿಂದ ತೋಟಾ ಸಿಡಿಯುವ ಬಂದೂಕು. **N.-point** ಸೂಜಿ ಮೊನೆ. **Néedlewoman** ಹೊಲಿಗೆಯ ಕೆಲಸ ಮಾಡುವವಳು (Good, bad ವಿಶೇಷಣಗಳೊಡನೆ). **Néedlework** ಹೊಲಿಗೆಯ ಕೆಲಸ ; ಕಸೂತಿ ಕೆಲಸ ; ಸೂಚೀ ಶಿಲ್ಪ]. (ಕ್ರಿ.) ಸೂಜಿಯಿಂದ ಹೊಲಿ, ಚುಚ್ಚು, ಕೆಲಸ ಮಾಡು. ವಸ್ತುಗಳ ಮಧ್ಯೆ ದಾರಿ ಮಾಡಿಕೊಂಡು ಹೋಗು, ನುಸುಳಿಕೊಂಡು ಹೋಗು. (ಕಳ ಆಸರೆ ಕೊಡಬೇಕಾದ ಕಟ್ಟಡಕ್ಕೆ) ಆಸರೆದೂಲ ಹಾಕು. ಸೂಚೀ ಸ್ಫಟಿಕಗಳಾಗು.

Ne'er ನೇರ್ (ಕ್ರಿ. ವಿ.) (ಕಾವ್ಯ) = Never. N. a ಒಂದಾದರೂ ಇಲ್ಲ ; ಒಬ್ಬರಾದರೂ ಇಲ್ಲ. N.-do-well, -weel ಕೆಲಸಕ್ಕೆ ಬಾರದ(ವನು)

Nefárious ನಿಫೇರಿಯಸ್ (ಗು.) ಅತಿ ದುಷ್ಟ ; ಮಹಾ ಪಾತಕದ. **Nefáriously** (ಕ್ರಿ. ವಿ.) ; **Nefáriousness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Negáte ನಿಗೇಟ್ (ಕ್ರಿ. ಸಕ.) ಇಲ್ಲದಂತೆ ಮಾಡು ; ಇಲ್ಲ, ಅಲ್ಲ, —ಎನ್ನು ; ಅಲ್ಲವೆನಿಸು ; ಅಭಾವಗೊಳಿಸು ; ನಿರಾಕರಿಸು. **Negátion** (ನಾ.) ನಿಷೇಧ (ಕಥನ, ತತ್ತ್ವ) ; ಇಲ್ಲಮೆ ; ನಕಾರ ; ನಿರಾಕರಣೆ ; ವಿರೋಧೋಕ್ತಿ ; ಪ್ರತಿಷೇಧ ; (ತರ್ಕ) ಭೇದವನ್ನಾಗಲಿ ವ್ಯಾವೃತ್ತಿಯನ್ನಾಗಲಿ ಸಾಧಿಸುವುದು ; (ವಾಸ್ತವವಾಗಿರಬೇಕಾದುದರ) ಅಭಾವ; ಅನಸ್ತಿತ್ವ; ಅವಾಸ್ತವ; ಇಲ್ಲದ್ದು ; ವಿರುದ್ಧತೆ. **Negátionist** ನಿಗೇಷನಿಸ್ಟ್ (ನಾ.) ಸಾಮಾನ್ಯವಾಗಿ ಅಂಗೀಕರಿಸಿರುವ ನಂಬಿಕೆಗಳನ್ನು ನಿರಾಕರಿಸಿ ಅವಕ್ಕೆ ಪ್ರತಿಯಾಗಿ ಏನನ್ನೂ ಸೂಚಿಸದೆ ಇರುವವನು ; ನೇತಿ ವಾದಿ. **Négatory** ನೆಗಟೊರಿ (ಗು.) ; **Négative** ನೆಗಟಿವ್ (ಗು., ನಾ., ಕ್ರಿ. ಸಕ.) ನಿರಾಕರಣಾರ್ಥಕ ; ನಿಷೇಧಾರ್ಥಕ ; ನೇತ್ಯರ್ಥಕ [N. proposition (ತರ್ಕ) ನಿಷೇಧ ವಾಕ್ಯ ; ನೇತ್ಯರ್ಥಕ ಪ್ರತಿಜ್ಞೆ. N. statute, vote, answer. N. voice ನಿರಾಕರಣಾಧಿಕಾರ]. (ಸಾಕ್ಷಾತ್ತಾದ, ಸ್ಪಷ್ಟವಾದ, ಗುಣಗಳ) ಅಭಾವದ, ಅಭಾವವುಳ್ಳ (N. virtue ತಪ್ಪು ಮಾಡದಿರುವ, ಪಾಪ ಮಾಡದಿರುವ, —ಗುಣ : ದುರ್ಗುಣಾಭಾವ. N. instance, evidence ಅಘಟನೆಯ, ನಿಷೇಧ ರೂಪದ, —ನಿದರ್ಶನ, ಸಾಕ್ಷ್ಯ. N. causes of dissatisfaction ಕರ್ತವ್ಯ ಲೋಪ ದೋಷ ; ಅಕರಣ ದೋಷ). (ಬೀ. ಗ.) (ಒಂದು ಮೊತ್ತದಿಂದ ಅಥವಾ ಸೊನ್ನೆಯಿಂದ) ಕಳೆಯಬೇಕಾದುದನ್ನು ಸೂಚಿಸುವ ; ಋಣ [N. sign ಋಣ ಚಿಹ್ನೆ (—). (ಬಳ. ಮಾ., ಹಾಸ್ಯ ಪ್ರ.) N. quantity ಸೊನ್ನೆ ; ಶೂನ್ಯ]. (ವಿದ್ಯುತ್) ರಾಳ, ಮೊ. ನ್ನು ಉಜ್ಜುವುದರಿಂದ ಅದರಲ್ಲಿ ಹುಟ್ಟುವಂಥ ತೆರದ : ಋಣ [ವಿರುದ್ಧ ಪದ : Positive (ಗಾಜನ್ನು ಉಜ್ಜುವುದರಿಂದ ದೊರೆಯುವ ತೆರದ)] ; ಋಣ ವಿದ್ಯುತ್ತುಳ್ಳ ; —ತ್ತನ್ನು ಉತ್ಪಾದನೆ ಮಾಡುವ. ನಿಷೇಧ ಸ್ವರೂಪದ (Debt is n. capital & capital is n. debt ಸಾಲವು ನಿಷೇಧ ರೂಪದ ಬಂಡವಾಳ, ಬಂಡವಾಳವು ನಿಷೇಧ ರೂಪದ ಸಾಲ). (ಛಾಯಾಚಿತ್ರ) ಸಹಜ ವಸ್ತುವಿನ ಅಥವಾ ದೃಶ್ಯದ ಬೆಳಕು ನೆರಳುಗಳು ಅದಲು ಬದಲಾಗಿರುವ : ವಿಷಮ. (ನಾ.) ಅಭಾವಾತ್ಮಕ ಕಥನ ; ನಿಷೇಧ ಪದ, ಉತ್ತರ (It is hard to prove a n. ನಿಷೇಧವನ್ನು ರುಜುವಾತು ಮಾಡುವುದು ಕಷ್ಟ. He returned a n. ಇಲ್ಲವೆಂದನು. Two negatives make an affirmative ಎರಡು ನಾಸ್ತಿಗಳು ಸೇರಿದರೆ ಒಂದು ಅಸ್ತಿಯಾಗುತ್ತದೆ; ಎರಡು ನಿಷೇಧಗಳು ಸೇರಿ ಅಹುದೆನ್ನುವ ಅರ್ಥ ಕೊಡುತ್ತದೆ). ನಿರಾಕರಿಸುವ ಅಧಿಕಾರ ; [In the n. ನಾಸ್ತ್ಯರ್ಥದಲ್ಲಿ, ಅಭಾವ ಸೂಚಕವಾಗಿ (ಮು., ಶಾಸನ ಸಭೆಗಳಲ್ಲಿ ಮಂತ್ರಿಗಳ ಉತ್ತರಗಳಲ್ಲಿ ಪ್ರ.) : The answer is in the n. ಇಲ್ಲವೆಂದು ಅದಕ್ಕೆ ಉತ್ತರ. It was decided in the n. ಸೂಚನೆ ತಿರಸ್ಕೃತವಾಯಿತು]. ಅಭಾವ ಗುಣ (His character is made up of negatives ಅವನ ಸ್ವಭಾವವೆಲ್ಲ ಅಭಾವಮಯವಾಗಿದೆ). (ಬೀ. ಗ.) ಋಣ ಸಂಖ್ಯೆ, ಮೊತ್ತ. (ಛಾಯಾ ಚಿತ್ರ: ವಾಸ್ತವ ಚಿತ್ರಗಳನ್ನು ಪಡೆಯಲಾಗುವ, ಗಾಜು, ಮೊ. ಗಳಮೇಲಿನ) ವಿಷಮ ಚಿತ್ರ. (ವಾಲ್ಟಾ ವಿದ್ಯುಜ್ಜನಕ ಕೋಶದಲ್ಲಿ) ಋಣ ಫಲಕ, ಋಣ ಲೋಹ. (ಕ್ರಿ.) ನಿರಾಕರಿಸು ; ತಳ್ಳಿಹಾಕು ; ನಿಷೇಧಿಸು ; ಅಂಗೀಕರಿಸದಿರು. (ಅನುಮಾನ, ಊಹಾ ಪ್ರತಿಜ್ಞೆ —ಇವನ್ನು) ಅಪ್ರಮಾಣವೆಂದು ಸ್ಥಾಪಿಸು. (ಹೇಳಿಕೆಯನ್ನು) ವಿರೋಧಿಸು, ನಿಷೇಧಿಸು, ಖಂಡಿಸು. (ಪ್ರಭಾವವನ್ನು) ಇಲ್ಲದಂತೆ ಮಾಡು. **Négatively** (ಕ್ರಿ. ವಿ.) ; **Négativeness** (ನಾ.) ; **Negatívity** (ನಾ.) ಅಭಾವತೆ ; ಅಭಾವತೆಯ ಗುಣ. **Négativism** (ನಾ.) ನಿಷೇಧ ವಾದ. **Négativist** (ನಾ.)

Négative, Negativism, etc. **Negate** ನೋಡಿ.

Negléct ನಿಗ್ಲೆಕ್ಟ್ (ಕ್ರಿ. ಸಕ., ನಾ.) ಅಸಡ್ಡೆ, ಅಲಕ್ಷ್ಯ, ಮಾಡು ; ಗಮನ ಕೊಡದಿರು ; ಲಕ್ಷ್ಯಮಾಡದಿರು ; ಮಾಡದೆ ಬಿಡು ; (—ವಿಷಯದಲ್ಲಿ) ಉದಾಸೀನನಾಗಿರು. (ನಾ.) ಅಸಡ್ಡೆ ; ಅಲಕ್ಷ್ಯ ; ಕಡೆಗಣಿಕೆ ; ಅವಜ್ಞತೆ ; ಉದಾಸೀನತೆ. **Negléctable** (ಗು.) (ವಿರ. ಪ್ರ.) ; **Negléctful** (ಗು.) ; **Negléctfully** (ಕ್ರಿ. ವಿ.) ; **Negléctfulness** (ನಾ.)

Néglige (F) ನೆಗ್ಲಿಷೇ (ನಾ.) ಸಡಿಲವಾದ, ಸುಲಭವಾದ, ಅಥವಾ ಸಂಪ್ರದಾಯಕ್ಕೆ ಗಮನ ಕೊಡದ, — ಉಡುಪು.

Négligeable ನೆಗ್ಲಿಜಿಬ್‌ಲ್ (ಗು.) (ವಿರ. ಪ್ರ.) = Negligible.

Négligence ನೆಗ್ಲಿಜೆನ್ಸ್ (ನಾ.) ಸರಿಯಾದ ಜೋಕೆ, ಗಮನ, —ಇಲ್ಲದಿರುವುದು ; ಅಲಕ್ಷ್ಯತೆ ; ಉದಾಸೀನತೆ ; ಅಸಡ್ಡೆ ; ಉಪೇಕ್ಷೆ ; (Contributory n. ತಾನನುಭವಿಸಿದ ಕೇಡಿಗೆ ತನ್ನಿಂದಲೇ ಸಹಾಯವಾದ ಅಲಕ್ಷ್ಯತೆ). (ಸಾಹಿತ್ಯದಲ್ಲಾಗಲಿ ಕಲೆಯಲ್ಲಾಗಲಿ) ನಿರ್ಬಂಧ, ಕೃತಕತೆ, — ಇಲ್ಲದಿರುವುದು, ರಾಹಿತ್ಯ. **Négligent** (ಗು.) ನಿರ್ಲಕ್ಷತೆಯ; ಕರ್ತವ್ಯ ಲೋಪದ (*Of* duty, etc.). **Négligently** (ಕ್ರಿ. ವಿ.) ; **Négligible** (ಗು.) ನಿರ್ಲಕ್ಷಿಸಬಹುದಾದ ; ಗಣನೆಗೆ ಬಾರದ ; ಬಿಟ್ಟುಬಿಡಬಹುದಾದ (ಮು., N. quantity)

Negótiate ನಿಗೋಷಿಯೇಟ್ (ಕ್ರಿ.) (ರಾಜಿ ಅಥವಾ ಒಪ್ಪಂದ ಮಾಡಿಕೊಳ್ಳಲು ಮತ್ತೊಬ್ಬನೊಡನೆ) ಪ್ರಸ್ತಾವಿಸು ; ಸಂಧಾನ ನಡಸು; ಸಮಾಲೋಚನೆಯಿಂದ (ಸಂದರ್ಭವನ್ನು) ಏರ್ಪಡಿಸು; (ಉದ್ದೇಶವನ್ನು) ನೆರವೇರಿಸು ; ನಿರ್ವಹಿಸು. ಪ್ರತಿಫಲ ಪಡೆದು (ಹುಂಡಿಯನ್ನು) ಮತ್ತೊಬ್ಬನಿಗೆ ವರ್ಗಾಯಿಸು; ನಗದಿಗಾಗಲಿ ನೋಟುಗಳಿಗಾಗಲಿ (ಹುಂಡಿಯನ್ನು) ಮುರಿಸು ; (ಹುಂಡಿ, ಚೆಕ್ಕು —ಇವಕ್ಕೆ) ಬೆಲೆ ಪಡೆ, ಕೊಡು. (ಬೇಲಿ, ಅಡಚಣೆ, ತೊಂದರೆ, ಮೊ. ನ್ನು) ದಾಟು, ನಿವಾರಿಸು, ಪರಿಹರಿಸಿಕೊ. **Negótiable** —ಷಿಯಬ್‌ಲ್, —ಷಬ್‌ಲ್ (ಗು.) ; **Negótiant** —ಷಿಅಂಟ್ (ನಾ.) = **Negótiator** (ನಾ.) ; **Negotiátion** (ನಾ.) ; **Negótiatress, Negótiatrix** (ನಾ., ಸ್ತ್ರೀ.)

Negríllo, Negríto. **Negro** ನೋಡಿ.

Négro ನೀಗ್ರೊ(ೀ) [ನಾ. (ಸ್ತ್ರೀ. Negress ನೀಗ್ರೆಸ್), ಗು.] ಕಪ್ಪು ಚರ್ಮದ, ಉಣ್ಣೆಗೂದಲಿನ, ಚಪ್ಪಟೆ ಮೂಗಿನ, ದಪ್ಪ ತುಟಿಯ,— ಆಫ್ರಿಕದ ಒಂದು ಬುಡಕಟ್ಟಿನ(ವನು) : ನೀಗ್ರೊ ಜಾತಿಯ(ವನು) (N. minstrels ನೀಗ್ರೊ ನರ್ತನ ಮತ್ತು ಗಾಯನ ಮಾಡುವ ನೀಗ್ರೋಗಳ ಅಥವಾ ಅವರ ವೇಷ ಹಾಕಿಕೊಂಡವರ ತಂಡ). ನೀಗ್ರೊ ಜನರ; —ರಿಂದ ಆಕ್ರಮಿತವಾದ; —ರಿಗೆ ಸಂಬಂಧಪಟ್ಟ. ಕಪ್ಪು ಚರ್ಮದ, ಬಣ್ಣದ [N. (ಕಪ್ಪು) ant, bat, monkey]. **Negroland** ನೀಗ್ರೋಗಳು ವಾಸಿಸುವ ಆಫ್ರಿಕದ ಪ್ರಾಂತ : ನೀಗ್ರೊ ನಾಡು. **Négroid** (ಗು., ನಾ.) ನೀಗ್ರೊ ಮಾದರಿಯ(ವನು). **Negroídal** (ಗು.) ; **Négrophil** (ಗು., ನಾ.) ನೀಗ್ರೊ ಪ್ರೇಮವುಳ್ಳ ; —ಪ್ರೇಮಿ. **Negróphilism** ನಿಗ್ರಾ— (ನಾ.) ; **Negrophóbia** ನೀಗ್ರೊ— (ನಾ.) ನೀಗ್ರೋಗಳ ಮೇಲೆ ಬದ್ಧ ದ್ವೇಷ. **Negríllo** ನಿಗ್ರಿಲೊ(ೀ) (ನಾ.) ಸಣ್ಣ, ಪುಟ್ಟ, —ನೀಗ್ರೊ ; (ಮಧ್ಯ ಮತ್ತು ದ. ಆಫ್ರಿಕದ ನಿವಾಸಿಯಾದ) ಮೋಟು ನೀಗ್ರೋ ಜಾತಿಯವನು. **Negríto** ನಿಗ್ರೀಟೊ(ೀ) (ನಾ.) ಮಲಯೋ ಪಾಲಿನೀಷಿಯ ಪ್ರದೇಶದ ಪುಟ್ಟ ನೀಗ್ರೋಕಲ್ಪ ಜಾತಿಯವನು.

Négus[1] ನೀಗಸ್ (ನಾ.) ಅಬಿಸೀನಿಯದ ದೊರೆ.

Négus[2] ನೀಗಸ್ (ನಾ.) ಬಿಸಿಯಾದ, ಸಿಹಿಮಾಡಿದ, ಜಲಮಿಶ್ರ ದ್ರಾಕ್ಷಾ ಮದ್ಯ.

Neigh ನೇ (ಕ್ರಿ. ಅಕ., ನಾ.) (ಕುದುರೆಯ) ಕೆನೆತ ; (ಕುದುರೆಯಂತೆ) ಕೆನೆ ; ಹೇಷಾ ರವ (ಮಾಡು) ; ಕಿಳಿರ್ (ಗ್ರಾಂ.)

Neíghbour ನೇಬರ್ (ನಾ., ಕ್ರಿ.) ಪಕ್ಕದ ಮನೆಯವನು ; ನೆರೆಯವನು; ನೆರೆ ಹೊರೆಯಲ್ಲಿ, ಅದೇ ಬೀದಿಯಲ್ಲಿ, ಅದೇ ಹಳ್ಳಿಯಲ್ಲಿ, ಅದೇ ಜಿಲ್ಲೆಯಲ್ಲಿ ಪಕ್ಕದ ನಾಡಿನಲ್ಲಿ, —ವಾಸಿಸುವವನು (My n. Jones. They are next-door neighbours. His nearest n. is 12 miles off. Our neighbours across the channel). ಸ್ನೇಹ ಭಾವದಿಂದ, ವಿಶ್ವಾಸದಿಂದ, —ಇರಬೇಕಾದವನು ; ನೆರೆ ಹೊರೆಯವನು (Good, bad, neighbours) ; ಇತರರ ಸ್ನೇಹಕ್ಕೆ, ವಿಶ್ವಾಸಕ್ಕೆ, —ಬಾಧ್ಯತೆಯುಳ್ಳವನು (Duty to one's n. ಮನುಷ್ಯನು ಮನುಷ್ಯನಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡಬೇಕಾದ ಕರ್ತವ್ಯ, ಉಪಕಾರ) ; ಪಕ್ಕದವನು ; ಪಕ್ಕದ್ದು (My n. at dinner. Falling tree brought down its n.). (ವಿಶೇಷಣವಾಗಿ) ಪಕ್ಕದ ; ಬಳಿಯ ; ನೆರೆಯ. (ಕ್ರಿ.) ಪಕ್ಕದಲ್ಲಿರು ; ನೆರೆಯಲ್ಲಿರು ; ಹೊದ್ದಿರು. **Neíghbouring** (ಗು.) ; **Neíghbourly** (ಗು.) ನೆರೆ ಹೊರೆಯ ; ಸ್ನೇಹದ. **Neíghbourliness** (ನಾ.) ಸ್ನೇಹಭಾವ ; ವಿಶ್ವಾಸ. **Neíghbourless** (ಗು.) ನೆರೆ ಹೊರೆಯಿಲ್ಲದ **Neíghbourship** (ನಾ.) ನೆರೆ ಹೊರೆತನ. **Neíghboured** ನೇಬರ್ಡ್ (ಗು.) —ನೆರೆ ಹೊರೆಯುಳ್ಳ ; (ಒಂದು ಗೊತ್ತಾದ) ಆವರಣವುಳ್ಳ ; ಸುತ್ತಮುತ್ತಲಿನ (Ill n. ; A beautifully n. town). **Neíghbourhood** (ನಾ.) ನೆರೆ ಹೊರೆ ; ಸ್ನೇಹ ಭಾವ, ಸ್ನೇಹದ ನಡತೆ (ಸಾ., Good n. ಒಳ್ಳೆಯ ನೆರೆ). ಹತ್ತಿರ ಹತ್ತಿರ (*Of* ಉಪ. ದೊಡನೆ. In the n. of £ 100 ಸುಮಾರು ೧೦೦ ಪೌಂಡುಗಳು). ನೆರೆ ಹೊರೆ(ಯವನು) ; ಒಂದು ಪ್ರಾಂತದವರು ; ಪ್ರಾಂತ.

Neíther ನೈ(ನೀ)ದರ್ (ಕ್ರಿ. ವಿ., ಸಂ. ಅವ್ಯ., ಗು., ಸ. ನಾ.) (ಕ್ರಿ. ವಿ.) Either ನ ನಿಷೇಧ ಪದ : ಎರಡರಲ್ಲಿ ಒಂದೂ ಅಲ್ಲ (Neither-nor : N. here nor there). [ಹಿಂದಿನ ನಿಷೇಧಾರ್ಥವನ್ನು ಒತ್ತಿಹೇಳುವಲ್ಲಿ : I don't know that n. ನನಗೆ ಅದೂ ಗೊತ್ತಿಲ್ಲ. If you do not go, n. shall I. (ಸಂ. ಅವ್ಯ.) I know not, n. can I guess]. (ಗು., ಸ. ನಾ.) ಯಾವುದೂ ಅಲ್ಲ ; ಇದಾಗಲಿ ಅದಾಗಲಿ ಅಲ್ಲ (N. accusation, n. of the accusations, is true). (ಶಿಥಿಲವಾಗಿ) (ನಿರ್ದೇಶಿಸಿದ ಎಷ್ಟೋ ವಸ್ತುಗಳಲ್ಲಿ) ಯಾವುದೂ ಅಲ್ಲ.

Nématode ನೆಮಟೋಡ್, **Nématoid** ನೆಮಟಾಯ್ಡ್ (ಗು., ನಾ.) ತೆಳ್ಳನೆಯ ಉರುಳೆಯಾಕಾರದ, ತಂತುವಿನಾಕಾರದ (—ಹುಳು)

Némesis ನೆಮಿಸಿಸ್ (ನಾ.) (ಪಾಪ) ಪ್ರತೀಕಾರ ದೇವತೆ ; ಪ್ರತೀಕಾರ ನ್ಯಾಯ ; ದುಷ್ಕರ್ಮ ಫಲ ; ತಕ್ಕ ಶಾಸ್ತಿ.

Némine (L) ನೀಮಿನೆ. N. contradicente, n. dissentiente (ಸಂಕ್ಷಿಪ್ತ : nem. con., nem. diss.) ಸರ್ವಾನುಮತದಿಂದ (ಅಥವಾ ಯಾರ ಆಕ್ಷೇಪಣೆಯೂ ಇಲ್ಲದೆ)

Neo- ನೀಯೊ— (ಸ. ಪೂ. ಪ.) (ಹೊಸ, ನವ, ನವೀನ, ಪುನರ್ರಚಿತ, ಆಧುನಿಕ, ಈಚಿನ, ಈಚೆಗೆ ಕಂಡುಹಿಡಿದ ಅಥವಾ ಕಲ್ಪಿಸಿದ —ಎಂಬ ಅರ್ಥಗಳಲ್ಲಿ). **-Cámbrian** (ಭೂ. ವಿ.) ಈಚಿನ ಕೇಂಬ್ರಿಯನ್ ಯುಗದ. **-Cátholic** ಈಚಿನ ಕ್ಯಾತೊಲಿಕ್ ಪಂಥದ(ವನು). **-Hél-lenism** ಗ್ರೀಕ್ ಆದರ್ಶಗಳ ಪುನರುದ್ಧಾರ. **-Malthúsianism** ಗರ್ಭನಿರೋಧಕಗಳನ್ನು ಉಪಯೋಗಿಸುವ ಪದ್ಧತಿ ; ಬಸಿರು ತಡೆ. **-Plátonism** (ಪ್ಲೇಟೋವಿನ ತತ್ತ್ವಗಳನ್ನೂ ಪೌರಸ್ತ್ಯರ ಯೋಗ ರಹಸ್ಯ ಜ್ಞಾನವನ್ನೂ ಒಟ್ಟಿಗೆ ಒಳಕೊಂಡ, ಮೂರನೆಯ ಶ. ಮಾ. ದ) ನವೀನ ಪ್ಲೇಟೋ ತತ್ತ್ವ. **Néodoxy** ನವೀನ ತತ್ತ್ವ ; ನವೀನ ದೃಷ್ಟಿ. **Neontólogy** ವಂಶ ನಷ್ಟವಾಗದೆ ಉಳಿದುಬಂದಿರುವ ಪ್ರಾಣಿಗಳನ್ನು ಕುರಿತ ಶಾಸ್ತ್ರ. **Neozóic** (ಭೂ. ವಿ.) ಈಚಿನ ಭೂಯುಗದ.

Neolíthic ನೀಯೊಲಿತಿಕ್ (ಗು.) (ಉಜ್ಜಿಮಾಡಿದ ಅಥವಾ ಸಾಣೆ ಹಿಡಿದು ಮೆರುಗುಕೊಟ್ಟ ಶಿಲಾಯುಧಗಳು ಬಳಕೆಯಲ್ಲಿದ್ದ) ನವ ಶಿಲಾಯುಗದ.

Neológian ನೀಯೊಲೋಜಿಯನ್ (ಗು., ನಾ.) (ದೇವ. ಶಾ. ದಲ್ಲಿ) ಆಧುನಿಕ ತತ್ತ್ವದ (ಪ್ರವಣತೆಯುಳ್ಳ) ; —ವನು.

Neólogism ನಿಯಾಲೊಜಿಸ್ಮ್ (ನಾ.), **Neólogy** ನಿಯಾಲೊಜಿ (ನಾ.) ಹೊಸ ಪದಗಳನ್ನು ಸೃಷ್ಟಿಸುವುದು ; ನವ ಪದ ಪ್ರಯೋಗ ; ಹೊಸ ರಚನೆಯ ಪದ. ಮತಧರ್ಮದಲ್ಲಿ ನವೀನ ಅಥವಾ ವಿಚಾರಪೂರ್ಣ ಅಭಿಪ್ರಾಯಗಳ (ಕಡೆ) ಒಲವು, ಅನುಸರಣೆ. **Neólogist** (ನಾ.) ; **Neólogize** (ಕ್ರಿ. ಅಕ.)

Néon ನೀಯಾನ್ (ನಾ.) (ರ. ವಿ.) ಹೊಸದಾಗಿ ಕಂಡುಹಿಡಿದ, ವಾಯು ಮಂಡಲದಲ್ಲಿಯ ಒಂದು ಅನಿಲ : 'ನೀಯಾನ್'. Neon Signboard ನಿಯಾನ್ ಬೆಳಕಿನ ಹೆಸರು ಫಲಗೆ,

Néophyte ನೀಯೊಫೈಟ್ (ನಾ.) (ಮು., ಆದಿ ಕ್ರೈಸ್ತರಲ್ಲಿ ಅಥವಾ ರೋ. ಕ್ಯಾ. ರಲ್ಲಿ) ಹೊಸದಾಗಿ ಮತಕ್ಕೆ ಸೇರಿದವನು ; ಹೊಸದಾಗಿ ದೀಕ್ಷೆ ಪಡೆದ ರೋ. ಕ್ಯಾ. ಪುರೋಹಿತ ; (ಒಂದು ಮತ ಪಂಗಡಕ್ಕೆ) ಹೊಸದಾಗಿ ಸೇರಿದವನು ; ನವ ಶಿಷ್ಯ. ಹೊಸಬ ; ಆರಂಭ ದಶೆಯಲ್ಲಿರುವವನು ; ಅನನುಭವಿ.

Neotéric ನೀಯೊಟೆರಿಕ್ (ಗು.) ಈಚಿನ ; ನವೀನ (ರೀತಿಯ) ; ನವ ಕಲ್ಪಿತ ; ಆಧುನಿಕ.

Neotrópical ನೀಯೊಟ್ರಾಪಿಕಲ್ (ಗು.) ಅಮೆರಿಕದ ಉಷ್ಣವಲಯದ ಮತ್ತು ದ. ಅಮೆರಿಕದ ಪ್ರಾಂತಗಳ(ಲ್ಲಿಯ)

Nepénthe(s) ನಿಪೆಂತಿ(ಸ್) (ನಾ.) (ಕಾವ್ಯ) ದುಃಖವನ್ನು ಮರೆಯುವಂತೆ ಮಾಡುವ ಔಷಧ ; ದುಃಖ ವಿಸ್ಮಾರಕ. (-s) ಹೂಜಿಯಾಕಾರದ ಎಲೆ ಬಿಡುವ ಸಸ್ಯಜಾತಿ : ಹೂಜಿಯ ಗಿಡ.

Néphew ನೆವ್ಯು, ನೆಫ್ಯು (ನಾ.) ಸೋದರನ ಅಥವಾ ಸೋದರಿಯ ಮಗ ; ಭ್ರಾತ್ರೀಯ ; ಭಾಗಿನೇಯ ; ಸೋದರಳಿಯ.

Nephólogy ನೆಫಾಲೊಜಿ (ನಾ.) ಮೇಘ ಶಾಸ್ತ್ರ.

Nephrític ನೆಫ್ರಿಟಿಕ್ (ಗು.) ಮೂತ್ರಪಿಂಡದ(ಲ್ಲಿಯ). **Nephrítis** —ಫ್ರೈತಿ— (ನಾ.) ಮೂತ್ರಪಿಂಡದ ಉರಿಯೂತ. **Nephréctomy** ನೆ(ನಿ)ಫ್ರೆಕ್‌ಟೊಮಿ (ನಾ.) ಮೂತ್ರಪಿಂಡಚ್ಛೇದನ.

Ne plus últra (L) ನೀ ಪ್ಲಸ್ ಅಲ್ಟ್ರ (ನಾ.) ಮುಂದೆ ಹೋಗಬೇಡ (ವೆಂಬ ಆಜ್ಞೆ) ; ದಾಟಲಾಗದ ಅಡಚಣೆ. ಮುಟ್ಟಿದ, ಮುಟ್ಟಲಾಗುವ, ತುತ್ತತುದಿ ; (—ರ) ಪರಾಕಾಷ್ಠತೆ, ಪರಮಾವಧಿ ; ಪರಮೋನ್ನತಿ.

Népotism ನೆಪೊಟಿಸ್ಮ್, ನೀಪೊ— (ನಾ.) ಮೇಲಧಿಕಾರಸ್ಥಾನದಲ್ಲಿರುವವರು ಭ್ರಾತ್ರೀಯ, ಭಾಗಿನೇಯ, ಮೊ. ಬಂಧುವರ್ಗದವರಿಗೆ (ಯೋಗ್ಯತೆ ನೋಡದೆ) ತೋರುವ ಪಕ್ಷಪಾತ : ಸ್ವಜನ ಪಕ್ಷಪಾತ. **Népotist** (ನಾ.)

Néptune ನೆಪ್ಟ್ಯೂನ್ (ನಾ.) (ಪ್ರಾಚೀನ ರೋಮನರ) ಸಮುದ್ರ (ದೇವತೆ) (ಹಿಂದೂ ಮತದಲ್ಲಿ ವರುಣನಂತೆ). (N.'-s cup ಹಲವು ಬಗೆಯ ಹವಳ). ಸೌರವ್ಯೂಹದಲ್ಲಿ ಬಹಳ ದೂರದಲ್ಲಿರುವ ಗ್ರಹಗಳಲ್ಲೊಂದು : 'ನೆಪ್ಟ್ಯೂನ್' ಗ್ರಹ. **Neptúnian** (ಗು., ನಾ.) (ಭೂ. ವಿ.) ನೀರಿನ ಕಾರ್ಯದಿಂದಾದ ; ಕೆಲವು ಶಿಲೆಗಳು ಜಲೋತ್ಪನ್ನವೆಂದು ವಾದಿಸುವ(ವನು). ನೆಪ್ಟ್ಯೂನ್ ಗ್ರಹದ. **Néptunist** (ನಾ.) =Neptunian.

Néreid ನೀರಿಯಿಡ್ (ನಾ.) ಸಮುದ್ರ ಸ್ತ್ರೀ ದೇವತೆ. (ಪ್ರಾ. ವಿ.) ಉದ್ದನೆಯ ಒಂದು ಕಡಲ ಹುಳು ಅಥವಾ ಶತಪದಿ.

Néro antíco (It.) ನೇರೋ ಆಂಟೀಕೊ (ನಾ.) (ರೋಮಿನ ಪಾಳು ಪ್ರದೇಶಗಳಲ್ಲಿ ದೊರೆಯುವ) ಒಂದು ಜಾತಿಯ ಕರಿಯ ಅಮೃತಶಿಲೆ.

Néroli ನಿಯ(ನೆ, ನೀ)ರೊಲಿ (ನಾ.) (ಪರಿಮಳ ದ್ರವ್ಯಗಳ ತಯಾರಿಕೆಯಲ್ಲಿ ಉಪಯೋಗಿಸುವ) ಕಿತ್ತಿಳೆ ಹೂವಿನ ಚಂಚಲ ತೈಲ.

Nerónian ನಿರೋನಿಯನ್ (ಗು.) ರೋಮನ್ ಚಕ್ರವರ್ತಿ ನೀರೋವಿನ(ಂಥ) ; ನೀರೋ ಕಾಲದ(ಂಥ). ಕ್ರೂರ ; ನಿರ್ದಯ ; ಸ್ವಚ್ಛಂದ ; ಹಿಂಸಕ.

Nérvate. **Nerve** ನೋಡಿ.

Nerve ನರ್ವ್ (ನಾ.) ಸ್ನಾಯು ಖಂಡವನ್ನು ಎಲುಬಿಗೆ ಬಿಗಿಯುವ ಜಿಗಿಬಿಗಿಯಾದ ತಂತುಮಯ ಅಂಗಾಂಶ ; ಪೇಶೀ ರಜ್ಜು ; ಸ್ನಾಸೆ (Tendon) [ಈಗ ಕಾವ್ಯದಲ್ಲಿಯೂ Strain every n. (ಸಾಧ್ಯವಾದ ಸರ್ವ ಪ್ರಯತ್ನವನ್ನೂ ಮಾಡು) ಎಂಬಲ್ಲಿಯೂ ಮಾತ್ರ. (ಬ. ವ. ದಲ್ಲಿ, ರೂಪ.) Good laws are the nerves of a State]. ವೀರ್ಯ ; ಶಕ್ತಿ ; ಕಸುವು ; ಆರ್ಪು (ಗ್ರಾಂ.). (ಸ. ವಿ.) ಎಲೆಯ ಆಧಾರ ರೇಖೆ (ಮು., ಮಧ್ಯದ ದಿಂಡು) [**Nérvate** (ಗು.) (ಎಲೆಗಳ ವಿಷಯದಲ್ಲಿ) ಆಧಾರ ರೇಖೆಗಳುಳ್ಳ. **Nervátion** (ನಾ.)].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಅಂ. ರ. ಶಾ.) ಮಿದುಳು ಅಥವಾ ಮಿದುಳು ಬಳ್ಳಿ ಅಥವಾ ನರ ಗ್ರಂಥಿಗಳು —ಇವಕ್ಕೂ ದೇಹದ ಯಾವುದಾದರೂ ಒಂದು ಭಾಗಕ್ಕೂ ವೇದನೆಗಳನ್ನೂ ಚಲನಪ್ರವೃತ್ತಿಯನ್ನೂ ಸಾಗಿಸುವ ತಂತು(ವ್ಯೂಹ); ನರತಂತು (ತಂಡ). (ಬ. ವ. ದಲ್ಲಿ) ದೇಹದ ಸೂಕ್ಷ್ಮ ವೇದನೆಯ ವಿಷಯದಲ್ಲೂ ಮಿದುಳಿನ ಮತ್ತು ದೇಹದ ಇತರ ಭಾಗಗಳ ಪರಸ್ಪರ ಕ್ರಿಯಾ ಪರಿಣಾಮದ ವಿಷಯದಲ್ಲೂ ಇರುವ ದೇಹದ ಸ್ಥಿತಿ; ತೀಕ್ಷ್ಣವಾದ, ಅನೇಕ ವೇಳೆ ಉನ್ಮಾದ ಕೆರಳಿಸುವ, ನರಸಂಸ್ಥೆಯ ಸ್ಥಿತಿ; ಈ ವಿಷಯವಾದ ಅಸ್ವಸ್ಥ ಸ್ಥಿತಿ; ವಿಪರೀತವಾದ ಸೂಕ್ಷ್ಮ ವೇದನೆ; ನರಸಂಸ್ಥಾ ಸ್ಥಿತಿಯ ಉದ್ರೇಕ [Does not know what nerves are ಉದ್ರೇಕ ಭಾವವೇನೆಂಬುದನ್ನು ಅರಿಯನು; ಅವನು (ಯಾವಾಗಲೂ) ಸಮಾಧಾನ ಸ್ಥಿತಿಯಲ್ಲೇ ಇರುತ್ತಾನೆ. A fit of nerves ನರ ಕ್ಷೋಭೆ. Get on one's nerves ಆತಂಕ ಪಡಿಸುವಂಥದಾಗಿ, ಮನಸ್ಸು ಕಲಕುವಂಥದಾಗಿ, —ಇರು; ಕಾಡು; ಮನಸ್ಸಿಗೆ ಸಮಾಧಾನ ಕೊಡದಂತಿರು. Has iron nerves, nerves of steel, etc. ಅವನಿಗೆ ಸಾಮಾನ್ಯವಾಗಿ ಭಯ ತಟ್ಟುವುದಿಲ್ಲ; ಅವನಿಗೆ ಎಂಥ ಎಡರನ್ನಾದರೂ ತಾಳಿಕೊಳ್ಳುವ ದಾರ್ಢ್ಯವಿದೆ]. ಅಪಾಯದಲ್ಲಿ ಶಾಂತ ಚಿತ್ತತೆ, ಅಕ್ಷುಬ್ಧತೆ; ಧೈರ್ಯ; ಸ್ಥೈರ್ಯ (Lose one's n. ಸ್ಥೈರ್ಯ ತಪ್ಪಿಹೋಗು; ಭೀರುವಾಗು; ಎದೆಗುಂದು). N.-centre ಅನ್ಯೋನ್ಯ ಸಂಬಂಧವಿರುವ ನರಪದಾರ್ಥದ ಜೀವಕಣಗಳ ತಂಡ: ನರ ಕೇಂದ್ರ. N.-knot ನರ ಗ್ರಂಥಿ. **(-)nerved** (ಗು.); **Nérveless** (ಗು.) ಜಡ; ಚೈತನ್ಯವಿಲ್ಲದ; ಉತ್ಸಾಹವಿಲ್ಲದ; ನಿರ್ವೀರ್ಯ. (ಶೈಲಿ) ಬಿಗಿಯಿಲ್ಲದ; ಸಡಿಲವಾದ; ಸತ್ತ್ವವಿಲ್ಲದ; ಶಿಥಿಲ. (ಸ. ವಿ., ಕೀಟ ಶಾಸ್ತ್ರ) (ಎಲೆ) ನಾಡಿಗಳಿಲ್ಲದ; ಆಧಾರ ತಂತುಗಳಿಲ್ಲದ; (ಕೀಟ) ರೆಕ್ಕೆಯ ಗರಿಕೊಳವೆಗಳಿಲ್ಲದ. (ಅಂ. ರ. ಶಾ., ಪ್ರಾ. ವಿ.) ನರಗಳಿಲ್ಲದ. **Nérvelessly** (ಕ್ರಿ. ವಿ.); **Nérvelessness** (ನಾ.); **Nérvine** ನರ್ವೈನ್ (ಗು., ನಾ.) (ವೈ. ಶಾ.) ನರಗಳ ಅಸ್ವಸ್ಥತೆಯನ್ನು ಶಮನ ಮಾಡುವ (ಔಷಧ); ನರ ಶಾಮಕ; ನರ ಶಕ್ತಿ ವರ್ಧಕ. **Nérvo-** (ಸ. ಪೂ. ಪ.); **Nérvous** (ಗು.) ಸ್ನಾಯುಮಯ; ಮಾಂಸಲ; ಕಟ್ಟುಮಟ್ಟಾದ. (ಶೈಲಿ) ಸತ್ತ್ವವುಳ್ಳ, ಬಿಗಿಯಾದ, ಅಡಕವಾದ. ನರಪೂರ್ಣವಾದ; ನರಗಳ (N. system ನರ ವ್ಯೂಹ); ನರಗಳ ಮೇಲೆ ಕಾರ್ಯ ಮಾಡುವ; ಅಸ್ವಸ್ಥ, ದುರ್ಬಲ, —ನರಗಳುಳ್ಳ; ಸೂಕ್ಷ್ಮ ನರಗಳುಳ್ಳ; ರೇಗು ಸ್ವಭಾವದ; ಥಟ್ಟನೆ ಕೆರಳುವ; ಸುಲಭವಾಗಿ ಕ್ಷೋಭೆಗೊಳ್ಳುವ; ಪುಕ್ಕಲಾದ. **Nérvously** (ಕ್ರಿ. ವಿ.); **Nérvousness** (ನಾ.); **Nérvure** ನರ್ವ್ಯೂರ್ (ನಾ.) ಕೀಟದ ರೆಕ್ಕೆಯ ಕಟ್ಟಡದ ಭಾಗವಾಗಿರುವ ಸೂಕ್ಷ್ಮವಾದ ಕೊಳವೆಗಳಲ್ಲೊಂದು; ಎಲೆಯ ಮುಖ್ಯ ಶಿರೆ, ನರ. **Nérvy** (ಗು.) (ಕಾವ್ಯ) ಸ್ನಾಯುಪೂರ್ಣವಾದ; ಬಲದಿಂದ ಕೂಡಿದ; ಶಕ್ತಿಯುತ. (ಅಸಂ.) ಶಾಂತ ಚಿತ್ತದ; ದೃಢತೆಯುಳ್ಳ; ಧಾರ್ಷ್ಟ್ಯವುಳ್ಳ. ಕಂಪಿಸುವ; ನಡುಕವುಳ್ಳ. (ಅಸಂ.) ನರಗಳನ್ನು ಕುಕ್ಕುವ; ತಾಳ್ಮೆ ಕೆಡಿಸುವ.

Nerve (ಕ್ರಿ.) ಶಕ್ತಿ, ಚೈತನ್ಯ, ಧೈರ್ಯ, —ಕೊಡು. (ಅಪಾಯವನ್ನಾಗಲಿ ವೇದನೆಯನ್ನಾಗಲಿ ತಡೆದುಕೊಳ್ಳಲು, ಎದುರಿಸಲು) ಧೈರ್ಯ ತಂದುಕೊ.

Nérvine, Nérvure, etc. **Nerve** ನೋಡಿ.

Néscience ನೆ(ನೀ)ಷಿ(ಸಿ)ಎನ್ಸ್, ನೆಷೆನ್ಸ್ (ನಾ.) (—ರ) ಅರಿವು ಇಲ್ಲದಿರುವುದು; ಅರಿಯಮೆ (ಗ್ರಾಂ.); ಅಜ್ಞಾನ; ಅಜ್ಞತೆ; ಅಜ್ಞಾತತೆ; ಅಜ್ಞೇಯತೆ (*Of* ಉಪ. ದೊಡನೆ). **Néscient** (ಗು., ನಾ.) (—ರ) ಜ್ಞಾನವಿಲ್ಲದ (*Of* ಉಪ. ದೊಡನೆ); ಅಜ್ಞೇಯತಾ ವಾದದ;—ವಾದಿ.

Ness ನೆಸ್ (ನಾ.) ಭೂಶಿರ.

Nest ನೆಸ್ಟ್ (ನಾ., ಕ್ರಿ.) (ಹಕ್ಕಿಯ) ಗೂಡು [It's an ill bird that fouls its own nest ತನ್ನ ಮನೆಗೆ ತಾನೇ ಕಳಂಕ ತರುವವನು ನೀಚ ಮನುಷ್ಯ. Feather one's n. (Feather ಕ್ರಿ. ನೋಡಿ)]. (ಪ್ರಾಣಿಯ, ಕೀಟದ) ನಿವಾಸ, ಇಕ್ಕೆ; ಮೊಟ್ಟೆ ಹಾಕುವ, ಮರಿ ಮಾಡುವ,—ಸ್ಥಳ. ಸುಖಕರವಾದ, ಅನುಕೂಲವಾದ, ಪ್ರತ್ಯೇಕವಾದ, —ನಿಲಯ; ವಿವಿಕ್ತ ಸ್ಥಾನ; ಹಕ್ಕೆ; ಮರೆ; ಮಲಗುವ ಸ್ಥಳ; ಆಧಾರ; ಆಶ್ರಯ (ಸ್ಥಾನ). ಕಳ್ಳ ಕಾಕರು ವಿಶೇಷವಾಗಿ ಸೇರುವ ಸ್ಥಳ. ಪಾಪ, ಮೊ. ವು ಬೆಳೆಯುವ ಸ್ಥಳ. ಹಿಂಡು; (ಒಂದೇ ತೆರದ ವಸ್ತುಗಳ) ಸಂಗ್ರಹ, ತಂಡ, ಪಂಕ್ತಿ. ಸೆಳೆಖಾನೆಗಳುಳ್ಳ ಸಣ್ಣ ಪೆಠಾರಿ (N. of drawers). (N.-egg ಮೊಟ್ಟೆಗಳನ್ನಿಡುತ್ತಹೋಗುವಂತೆ ಕೋಳಿಯನ್ನು ಪ್ರೇರಿಸಲು ಗೂಡಿನಲ್ಲಿಟ್ಟ ನಿಜವಾದ ಅಥವಾ ಕೃತಕವಾದ ಮೊಟ್ಟೆ. ಕೈಗಾವಲಿಗಾಗಲಿ ಮುಂದೆ ಅಭಿವೃದ್ಧಿಯಾಗುವಂತೆ ಮಾಡುವುದಕ್ಕಾಗಲಿ ತೆಗೆದಿಟ್ಟ ಹಣ: ಮೀಸಲು ಹಣ). (ಕ್ರಿ.) (ಗೊತ್ತಾದ ಸ್ಥಳದಲ್ಲಿ) ಗೂಡು ಕಟ್ಟು, ಗೂಡು ಪಡೆದಿರು; ಗೂಡು ಕಟ್ಟಲು ತೊಡಗು. (ಭೂ. ಕೃ.) ಗೂಡಿನಲ್ಲಿ (ಹೇಗೊ ಹಾಗೆ) ನೆಲಸಿದ; (ಪೆಟ್ಟಿಗೆಗಳನ್ನು, ಪಾತ್ರೆ, ಮೊ. ಗಳನ್ನು) ಒಂದರೊಳಗೊಂದನ್ನಿಟ್ಟು ಅಡಕುಮಾಡಿದ. ಹಕ್ಕಿಯ ಗೂಡುಗಳಿಗಾಗಿ ಬೇಟೆ ಹೋಗು; ಹಕ್ಕಿಯ ಗೂಡುಗಳಲ್ಲಿರುವುದನ್ನು ಲೂಟಿ ಮಾಡು. **Néstful** (ನಾ.) ಗೂಡುತುಂಬು. **Néstlike** (ಗು.); **Néstle** ನೆಸ್ಲ್ (ಕ್ರಿ.) ಗೂಡು ಕಟ್ಟು (ವಿರ. ಪ್ರ.). (ಎಲೆ, ಹೊದಿಕೆ, ಕುರ್ಚಿ, ಮೊ. ಗಳಲ್ಲಿ) ಸುಖವಾಗಿ, ಆಯಕಟ್ಟಾಗಿ, —ನೆಲಸು, ಕುಳಿತುಕೊ (*Down, in, into, among* ಮೊ. ಉಪ. ದೊಡನೆ). ಪ್ರೀತಿಯಿಂದ ಅಪ್ಪಿಕೊ; ಪಕ್ಕದಲ್ಲಿ ಹುದುಗಿಕೊ (N. *close to* person); ಅರೆಮರೆಯಾಗಿ ಅಥವಾ ಒಳಗೆ ಸೇರಿಕೊಂಡಿರು; (ತಲೆ, ಮುಖ, ಭುಜ, ಮೊ. ನ್ನು) ಪ್ರೀತಿಯಿಂದ, ಬೆಚ್ಚಗಿರುವಂತೆ, ಒಳದೂರಿಸು (*In* ಉಪ. ದೊಡನೆ). ತಬ್ಬಿಕೊಂಡಿರು (ಸಾ., ಭೂ. ಕೃ. ನಲ್ಲಿ). **Néstling** ನೆಸ್ಲಿ(ಸ್ಟ್ಲಿ)ಂಗ್ (ನಾ.) ಗೂಡು ಬಿಟ್ಟು ಬರಲಾಗದಷ್ಟು ಎಳೆಯ ಹಕ್ಕಿ: ಗೂಡಿನ ಮರಿ.

Néstle, etc. **Nest** ನೋಡಿ.

Néstor ನೆಸ್ಟರ್ (ನಾ.) ಪ್ರಜ್ಞಾಶಾಲಿಯಾದ ಹಿರಿಯ; ಜ್ಞಾನವೃದ್ಧ ವಯೋವೃದ್ಧ. (Homer ನ ಕಾವ್ಯದ ಒಂದು ಪಾತ್ರ)

Nestórian ನೆಸ್ಟೋರಿಯನ್ (ಗು., ನಾ.) (ಯೇಸು ಕ್ರಿಸ್ತನಿಗೆ ಪ್ರತ್ಯೇಕವಾದ ದಿವ್ಯ ಮತ್ತು ಮಾನವ ರೂಪಗಳಿದ್ದುವೆಂದು ಪ್ರತಿಪಾದಿಸಿದ, ಕ್ರಿ. ಶ. ೪೨೮ರಲ್ಲಿ ಕಾನ್‌ಸ್ಟಾಂಟಿನೋಪಲ್ಲಿನ ಮಠಾಧಿಪತಿಯಾಗಿದ್ದ) Nestorius ಎಂಬಾತನ ತತ್ತ್ವದ (ಅನುಯಾಯಿ). **Nestórianism** (ನಾ.)

Net[1] ನೆಟ್ (ನಾ., ಕ್ರಿ.) (ಹುರಿ, ಹಗ್ಗ, ಕೂದಲು, ಮೊ. ಗಳಿಂದ ಮಾಡಿದ) ಬಲೆ; ಜಾಲ (ರೂಪ. ಸಹ); ಕಲ್ಲಿ; ಮೀನು (ಮೊ. ನ್ನು ಹಿಡಿಯುವುದಕ್ಕೆ ಉಪಯೋಗಿಸುವ) ಬಲೆ (Beach, casting, trawl, herring, lark, clap, etc. -n.). (ಮುಚ್ಚುವ, ಅಡಕವಾಗಿಸುವ, ರಕ್ಷಣೆಯ, ತುಂಬಿ ಹಿಡಿದುಕೊಂಡುಹೋಗುವ,—ಮೊ. ಉಪಯೋಗಗಳುಳ್ಳ) ಬಲೆ; (Fruit, hair, tennis, cricket, etc. -n.). ಜೇಡನ ಬಲೆ. ಬಲೆಗೆಲಸದಂತಿರುವದು; [**N.-ball** (ಸುತ್ತಲೂ ತಳಗಡೆ ಬಲೆಯ ಚೀಲ ಕಟ್ಟಿರುವ ಒಂದು ಬಳೆಯನ್ನು, ಎತ್ತರದಲ್ಲಿ ಬಿಗಿದು ನಿಲ್ಲಿಸಿರುವ ಒಂದು ಹಲಗೆಯಲ್ಲಿ ಸಮತಲವಾಗಿ ನೆಟ್ಟು, ಆ) ಬಲೆಯೊಳಕ್ಕೆ ಬೀಳುವಂತೆ ಚೆಂಡನ್ನು ಎಸೆಯಬೇಕಾದ (ಹೆಣ್ಣುಮಕ್ಕಳ) ಒಂದು ಆಟ: ಬಲೆಚೀಲದ ಚೆಂಡಾಟ. **Nétwork** (ಅಡ್ಡಡ್ಡವಾಗಿ ಹಾಯುವ ಸಾಲುಗಳಿಂದ ಕೂಡಿ, ಮಧ್ಯೇ ಮಧ್ಯೇ ಅಂತರಗಳುಳ್ಳ) ಬಲೆಗೆಲಸ; ಜಾಲ ಬಂಧ; (ರೈಲುದಾರಿಗಳು, ನದಿಗಳು, ಕಾಲುವೆಗಳು, ಮೊ. ಗಳ) ಬಲೆಯಂಥ ಹರಡಿಕೆ, ಜಾಲ; ಶಾಖೋಪಶಾಖೆಗಳಾಗಿ ಹರಡಿಕೆ]. (ಕ್ರಿ.) ಬಲೆಯಿಂದ(ಗಳಿಂದ)ಮುಚ್ಚು, ಸುತ್ತುಗಟ್ಟು, ಹಿಡಿ; ಬಲೆ ಬೀಸು, ಒಡ್ಡು; ಬಲೆಯಿಂದ (ನದಿ, ಮೊ. ಗಳಲ್ಲಿ) ಮೀನು ಹಿಡಿ; (ನದಿಯಲ್ಲಿ) ಬಲೆಗಳನ್ನು ಕಟ್ಟು; ಬಲೆಗೆಲಸ ಮಾಡು; ಬಲೆ ಹೆಣೆ; ಬಲೆಹೆಣಿಗೆಯಿಂದ (ಚೀಲ, ಜೋಲಿ, ಮೊ. ನ್ನು) ಮಾಡು. (ಸಾ., ಭೂ. ಕೃ. ನಲ್ಲಿ) ಜಾಲರದ ಮಾದರಿಯಲ್ಲಿ ಗುರುತು ಮಾಡು. **Nétful** (ನಾ.) ಬಲೆತುಂಬು. **Nétting** ನೆಟಿಂಗ್ (ನಾ.) (ಕ್ರಿಯಾರ್ಥಗಳಲ್ಲಿ). ಹೆಣೆದ ದಾರದ, ಹುರಿಯ, ತಂತಿಯ,—ಬಲೆ ಅಥವಾ ಬಲೆಗೆಲಸ. (ಹಲವು ಕಾರ್ಯಗಳಿಗಾಗಿ) ಇಂಥ ಬಲೆ(ಯ ಭಾಗ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Net[2] ನೆಟ್ (ಗು., ಕ್ರಿ. ಸಕ.) ಕಳೆತವಿಲ್ಲದ ; ವಜಾಮಾಡಬೇಕಾದದ್ದಿಲ್ಲದ ; ಕಳೆಯಬೇಕಾದದ್ದನ್ನೆಲ್ಲ ಕಳೆದು ಉಳಿದ ; ನಿವ್ವಳ ; ಐನು [N. profit ವೆಚ್ಚ ಕಳೆದುಳಿದ ನಿಜವಾದ ಲಾಭ ; ನಿವ್ವಳ ನಫೆ (ಎದುರು ಪದ : Gross profit). N. price (ವಟ್ಟ ಕೊಡದ, ಸೋಡಿ ಬಿಡದ) ನಿವ್ವಳ ಬೆಲೆ (ಎದುರು ಪದ : Nominal, publisher's, price)]. (ಕ್ರಿ.) (ಮೊತ್ತ) ನಿವ್ವಳ ಲಾಭವಾಗಿ ಪಡೆ, ಬರು.

Néther ನೆದರ್ (ಗು.) (ಪ್ರಾಚೀ. ಪ್ರ. ಅಥವಾ ಹಾಸ್ಯ ಪ್ರ.) ಕೆಳ(ಗಿನ). N. lip or jaw ಕೆಳ ತುಟಿ ; ಕೆಳ ದವಡೆ. N. garments ಷರಾಯಿ. N. man or person ಕಾಲುಗಳು, ಮೊ. ವು. N. millstone ಕಠಿನ ಹೃದಯ, ಮೊ. (ಕ್ಕೆ ಉಪಮೆ). N. world (ವಿರ. ಪ್ರ.) ಭೂಲೋಕ [ಸಾ., ಅಧೋ ಲೋಕ, ನರಕ (=N. regions)]. **Néther-most** (ಗು.)

Nétherlander ನೆದರ್‌ಲ್ಯಾಂಡರ್ (ನಾ.) 'ನೆದರ್‌ಲಂಡ್ಸ್' ಪ್ರಾಂತದವನು (ಸಾ., ಹಾಲಂಡ್, ಬೆಲ್ಜಿಯಮ್ ದೇಶಗಳವನು). **Néther-landish** —ಲ್ಯಾಂ— (ಗು., ನಾ.) ನೆದರ್‌ಲಂಡಿನ ; ಅದರ ಸಂಬಂಧದ, ಜನರ, ಭಾಷೆಯ ; —ಭಾಷೆ : ಡಚ್ ಭಾಷೆ.

Néttle ನೆಟ್‌ಲ್ (ನಾ., ಕ್ರಿ. ಸಕ.) (ಬಂಜರು ನೆಲದಲ್ಲಿ ಯಥೇಚ್ಛವಾಗಿ ಬೆಳೆಯುವ ಕುಟುಕುಗೂದಲುಗಳಿಂದ ಕೂಡಿದ, ಕೆಲವು ಜಾತಿಯ) ತುರುಚಿಯ, ಚುರುಚುರುಕನ, — ಗಿಡ. (N.-rash ತುರುಚಿಯ ಮುಳ್ಳಿನಿಂದ ಆಗುವಂಥ ಚರ್ಮದಮೇಲಿನ ದದ್ದುಗಳು). (ಕ್ರಿ.) ತುರುಚಿ(ಕಡ್ಡಿ)ಯಿಂದ ಹೊಡೆ ; ತುರುಚಿ ಚುಚ್ಚು. (ರೂಪ.) ರೇಗಿಸು ; ಕೆರಳಿಸು ; ಕಾಡು.

Neúral ನ್ಯೂರಲ್ (ಗು.) ನರಗಳ ; ಕೇಂದ್ರ ನರವ್ಯೂಹದ. **Neurátion** (ನಾ.) ಎಲೆಯ ನರಗಳ, ಕೀಟ ಪಕ್ಷ ವಿಸ್ತಾರಕಗಳ, —ವಿನ್ಯಾಸ. **Neuróma** ನ್ಯುರೋಮ (ನಾ.; ಬ. ವ. -ta) ನರದ ಮೇಲಿನ ಅಥವಾ ನರ ಪದಾರ್ಥದ ಮೇಲಿನ ಗಂತಿ : ನರ ಸ್ಫೋಟ. **Neurósis** (ನಾ.) ನರವ್ಯೂಹದ ಅಸ್ವಸ್ಥತೆಯಿಂದ ದೇಹಸ್ಥಿತಿ ಕೆಟ್ಟುಹೋಗಿರುವುದು : ನರ ವ್ಯಾಧಿ. ಮನೋವ್ಯಾಪಾರ ನಡೆಯುವುದಕ್ಕೆ ಮೊದಲು ಮಿದುಳಿನ ನರಕಣಗಳಲ್ಲಾಗುವ ವ್ಯತ್ಯಾಸ. **Neurótic** ನ್ಯುರಾಟಿಕ್ (ಗು., ನಾ.) ನರವ್ಯೂಹ ಪರಿಣಾಮಿ (ಔಷಧವಸ್ತು). ನರವ್ಯಾಧಿಯುಳ್ಳ(ವನು); ನರ ರೋಗಿ ; ವಿಪರೀತ ಸೂಕ್ಷ್ಮವೇದಿಯಾದ.

Neur(o)- ನ್ಯೂರ್—, ನ್ಯೂರೊ— (ಸ. ಪೂ. ಪ.) ನರ— . [Neur]: **-álgia** (ಸಾ., ತಲೆಯ ಅಥವಾ ಮುಖದ) ನರಗಳ ವೇದನೆ ; ನರ ಶೂಲೆ ; ತೀವ್ರವಾದ ತಲೆನೋವು. **-álgic** (ಗು.) ; **-asthénia** (ನ್ಯೂರ್ಯಸ್ತೀ—) ನರಗಳ ದೌರ್ಬಲ್ಯ. **-thénic** (ಗು.) ; **-éctomy** ನರವನ್ನು ಕತ್ತರಿಸಿಹಾಕುವುದು ; ನರಚ್ಛೇದ. **Neúrine** ನ್ಯೂರೈನ್ ನರದ್ರವ್ಯ. **Neurítis** (ನಾ.) ನರಗಳ ಉರಿಯೂತ [Neuro-]: **-logy** ನರ(ವ್ಯೂಹ)ರೋಗ ಶಾಸ್ತ್ರ. **-logist**; **-lógical**. **-múscular** ನರಗಳ ಮತ್ತು ಸ್ನಾಯುಗಳ. **-path** (—ಪ್ಯಾತ್) ಅತಿ ಸೂಕ್ಷ್ಮವೇದಿಯಾದ ನರಗಳುಳ್ಳವನು ; ನರ ರೋಗಿ. **-páthic** (ಗು.) ; **-pathólogy** (— ಪತಾ —) ; **-pathy** (ನ್ಯುರಾಪತಿ) ; **-pathist** ನರವ್ಯಾಧಿ ಚಿಕಿತ್ಸಾ ನಿಪುಣ. **-physiólogy** (ನ್ಯೂರೊ—) ನರವ್ಯೂಹ ಶಾಸ್ತ್ರ. **-psýchic** ನರಗಳ ಮತ್ತು ಮನಸ್ಸಿನ ವ್ಯಾಪಾರವನ್ನು ಕುರಿತ. **Neuróptera** (ನ್ಯುರಾ—) ಪಾರದರ್ಶಕ ನಗ್ನ ಚರ್ಮದ ನಾಲ್ಕು ರೆಕ್ಕೆಗಳೂ ಜಾಲ ರೂಪ ಪಕ್ಷ ವಿಸ್ತಾರಕಗಳೂ ಉಳ್ಳ ಒಂದು ಕೀಟ ವರ್ಗ. **Neurópterous**; **Neurótomy** ವೇದನೆ ತಿಳಿಯದಂತೆ ಮಾಡಲು ನರವನ್ನು ಕತ್ತರಿಸುವುದು : ನರ ವಿಚ್ಛೇದ. **Neurypnólogy** (ನ್ಯೂರಿಪ್‌ನಾಲೊಜಿ) ಸುಪ್ತ್ಯಾವಾಹನ ಶಾಸ್ತ್ರ.

Neuróma, Neurósis, Neurótic. **Neural** ನೋಡಿ.

Neúter ನ್ಯೂಟರ್ (ಗು., ನಾ.) (ವ್ಯಾ.) ಪುಲ್ಲಿಂಗವೂ ಸ್ತ್ರೀಲಿಂಗವೂ ಅಲ್ಲದ : ನಪುಂಸಕ (ಲಿಂಗ) (Common, Epicene ಪದಗಳನ್ನು ಹೋಲಿಸಿ). (ಕ್ರಿಯಾ ಪದ) ಅಕರ್ಮಕ. (ಯುದ್ಧ, ವಾದ, ಅಭಿಪ್ರಾಯ, ಮೊ. ಗಳಲ್ಲಿ) ಯಾವ ಪಕ್ಷಕ್ಕೂ ಸೇರದ, ಸಹಾಯ ಮಾಡದ ; ತಟಸ್ಥ (Stand n. ತಟಸ್ಥನಾಗಿರು; ತಾಟಸ್ಥ್ಯ ವಹಿಸು). (ಸ. ವಿ.) ಶಲಾಕೆಗಳೂ ಕೇಸರಗಳೂ ಇಲ್ಲದ; ನಿರ್ಲಿಂಗ. (ಕೀಟ ಶಾಸ್ತ್ರ) ಜನನೇಂದ್ರಿಯಗಳು ವ್ಯಕ್ತಪಟ್ಟಿಲ್ಲದ, ಹೊಮ್ಮಿಲ್ಲದ ; ಬಂಜೆಯಾದ ; ಬರಡಾದ. (ನಾ.) ನಪುಂಸಕ —ನಾಮಪದ, ಗುಣವಾಚಕ, ಲಿಂಗ ; ಅಕರ್ಮಕ ಕ್ರಿಯಾ ಪದ. ತಟಸ್ಥ(ನಾಗಿರುವವನು). ಜನನೇಂದ್ರಿಯ ವ್ಯಕ್ತಪಟ್ಟಿಲ್ಲದ ಹೆಣ್ಣು ಕೀಟ (ಮು., ಜೇನುಹುಳು, ಇರುವೆ). ಬೀಜವೊಡೆದ ಪ್ರಾಣಿ. **Neútral** (ಗು., ನಾ.) ಯುದ್ಧರಾಷ್ಟ್ರಗಳಲ್ಲಿ ಯಾವ ಪಕ್ಷಕ್ಕೂ ಸಹಾಯ ಮಾಡದಿರುವ ; ತಟಸ್ಥ ; ತಟಸ್ಥ ರಾಷ್ಟ್ರಕ್ಕೆ ಸೇರಿದ. ವಾದದಲ್ಲಿ, ಅಭಿಪ್ರಾಯ ಭೇದದಲ್ಲಿ, ಯಾವ ಪಕ್ಷವನ್ನೂ ವಹಿಸದ ; ಉದಾಸೀನ ಭಾವದ ; ನಿಷ್ಪಕ್ಷಪಾತ. ಸ್ಪಷ್ಟವಾದ ಗುರುತು, ಬಣ್ಣ, —ಇಲ್ಲದ ; ಅನಿರ್ದಿಷ್ಟ ; ಅಸ್ಪಷ್ಟ ; ಅನಿಯತ ; (N. tint ಬೂದು ಬಣ್ಣ ಅಥವಾ ಸ್ಲೇಟು ಬಣ್ಣ) [**N.-tinted** (ಗು.) (ರೂಪ. ಸಹ)]. (ರ. ವಿ.) ಆಮ್ಲೀಯವೂ ಅಲ್ಲದ ಕ್ಷಾರೀಯವೂ ಅಲ್ಲದ. (ವಿದ್ಯುತ್ತು) ಧನವೂ ಅಲ್ಲದ ಋಣವೂ ಅಲ್ಲದ. (ಕೀಟ ಶಾಸ್ತ್ರ, ಸ. ವಿ.) ಜನನೇಂದ್ರಿಯ ವ್ಯಕ್ತಪಟ್ಟಿಲ್ಲದ ; ನಿರ್ಲಿಂಗ. (ನಾ.) ತಟಸ್ಥ [ರಾಷ್ಟ್ರ (ದವನು)]. ಚಾಲಕ ಯಂತ್ರಸಲಕರಣೆಯಲ್ಲಿ ಶಕ್ತಿಯನ್ನು ಸಾಗಿಸದೆ ಇರುವ ಯಂತ್ರಭಾಗಗಳ ಸ್ಥಾನ. **Neutrálity** ನ್ಯುಟ್ರ್ಯಾ— (ನಾ.) ; **Neútrally** ನ್ಯೂಟ್ರಲಿ (ಕ್ರಿ. ವಿ.) ; **Neútralize** (ಕ್ರಿ. ಸಕ.) (ಪ್ರತಿಬಲದಿಂದ, ಪ್ರತಿ ಪ್ರಭಾವದಿಂದ) ಸಮತೂಕ ಮಾಡು, ನಿಷ್ಪರಿಣಾಮವಾಗಿಸು ; (ಒಂದು ಸ್ಥಳವನ್ನು) ಯುದ್ಧ ವ್ಯಾಪನೆಯಿಂದ, ಯುದ್ಧ ಕಾರ್ಯಾಚರಣೆಯಿಂದ, —ವಿನಾಯಿಸು, ಹೊರಗು ಮಾಡು. **Neu-tralizátion** (ನಾ.)

Neútral, Neútralize, etc. **Neuter** ನೋಡಿ.

Neútron ನ್ಯೂಟ್ರಾನ್ (ನಾ.) (ಧನ ವಿದ್ಯುದಂಶವೂ ಋಣ ವಿದ್ಯುದಂಶವೂ ನಿಕಟವಾಗಿ ಸಂಬಂಧಿಸಿ ಆದ) ಸಮ ವಿದ್ಯುತ್ಕಣ.

Neve (F) ನೆವೆ(ಲ), ನೇವೇ (ನಾ.) (ನೀರ್ಗಲ್ಲ ಪ್ರವಾಹದ ಶಿರೋಭಾಗದಲ್ಲಿ ನೀರ್ಗಲ್ಲಾಗಿ ಇನ್ನೂ ಬಂಧನಗೊಂಡಿಲ್ಲದ) ಮರಳು ಮರಳಾದ ಹಿಮದ ಹರವು.

Néver ನೆವರ್ (ಕ್ರಿ. ವಿ.) ಯಾವಾಗಲೂ, ಯಾವ ಸಂದರ್ಭದಲ್ಲೂ, ಎಂದಿಗೂ, —ಇಲ್ಲ ; ಇಲ್ಲವೇ ಇಲ್ಲ (N. before, since, after, yet ; ಒತ್ತಿ ಹೇಳುವಲ್ಲಿ ದ್ವಿರುಕ್ತಿ ಪ್ರ.); Now or n. (Now ನೋಡಿ). N. is a long word or day 'ಎಂದಿಗೂ ಸಾಧ್ಯವಿಲ್ಲ' ಎಂದು ದುಡುಕಿ ಹೇಳಬಾರದು. It is n. too late to mend ತಿದ್ದಿಕೊಳ್ಳಲು ಎಂದಿಗೂ ಕಾಲ ಮೀರಿಹೋಗದು. (ಆಶ್ಚರ್ಯವನ್ನಾಗಲಿ ಸಂದೇಹವನ್ನಾಗಲಿ ಸೂಚಿಸುವಲ್ಲಿ) You n. left the key in the lock! 'He ate the whole jack-fruit.' —'Never!'; I n. did! Well, I never!; N. fear, N. mind ತೊಂದರೆ ಪಡಬೇಡ ; ಪರವಾಯಿಲ್ಲ. N. a, N. a one ಒಬ್ಬರೂ, ಒಂದೂ, ಇಲ್ಲ. N. so ಅಮಿತವಾಗಿ ; ಎಷ್ಟೋ. (ಮುಂದೆ, ತರ ಪದ) N. the (better, etc.) ಎಂದಿಗೂ, ಖಂಡಿತವಾಗಿಯೂ (ಅದಕ್ಕಿಂತ ಉತ್ತಮ, ಮೊ.) ಅಲ್ಲ. N.-to-be-forgotten ಎಂದೆಂದಿಗೂ ಮರೆಯ(ಲಾಗ)ದ. N.-ceasing ವಿಚ್ಛಿತ್ತಿಯೇ ಇಲ್ಲದ. N.-dying, -ending, -fading, -failing. Nevermore. Never Never (Land) ಆಸ್ಟ್ರೇಲಿಯದಲ್ಲಿ ಉ. ಕ್ವೀನ್ಸ್‌ಲ್ಯಾಂಡ್ ಪ್ರಾಂತ. **Neverthelèss** (ಕ್ರಿ. ವಿ., ಸಂ. ಅವ್ಯ.) ಆದರೂ ; ಅಷ್ಟಾದರೂ.

New ನ್ಯೂ (ಗು.) ಹಿಂದೆ ಇರಲಿಲ್ಲದ ; ಈಗಲೇ ಮೊದಲ ಸಲ ಮಾಡಿದ, ನಿರ್ಮಿಸಿದ, ಕಲ್ಪಿಸಿದ, ಬಳಕೆಗೆ ತಂದ, ತಿಳಿದ, ಕೇಳಿದ, ಅನುಭವಕ್ಕೆ ಬಂದ, ಕಂಡುಹಿಡಿದ ; ಹೊಸ(ದಾದ) ; ನವ ; ನವೀನ ; ನೂತನ [N. Testament (ಬೈಬಲ್) ಹೊಸ ಒಡಂಬಡಿಕೆ]. (—ಗೆ) ಅಪರಿಚಿತ. ನವೀಕರಿಸಿದ ; ಹೆಚ್ಚಿನ ; ಸೇರಿಸಿದ ; ಬೇರೆಯಾದ ; ಬದಲಾವಣೆ ಹೊಂದಿದ [A n. morality ಒಂದು ಹೊಸ ನೀತಿ ಪದ್ಧತಿ. N. man (ದೇವ. ಶಾ.) ಕ್ರೈಸ್ತ ಮತಕ್ಕೆ ಪರಿವರ್ತಿತನಾದವನು. Put on the n. man (ಗುಣ) ಬದಲಾವಣೆಯಿಂದ (ಮತ) ಪರಿವರ್ತನವನ್ನು ತೋರಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

A n. fashion ಹೊಸ ಮಾದರಿ. **New-fáshioned** (ಗು.)]. [Lead a n. life ಹೊಸ ಬಾಳು ಬಾಳು. N. style (Style ನೋಡಿ). Turn over n. leaf (Leaf[1] ನೋಡಿ)]. (ಲಕ್ಷಣ ವ್ಯತ್ಯಾಸವನ್ನು ಸೂಚಿಸುವ the ವಿಶೇಷಣದೊಡನೆ) ಈಚಿನ; ಆಧುನಿಕ; ನವೀನ; ನವೀನತೆಗೆ ಪ್ರಾಶಸ್ತ್ಯ ಕೊಟ್ಟ [The n. diplomacy, journalism, theology, etc. (ಸಾ., ತಿರಸ್ಕಾರಾರ್ಥದಲ್ಲಿ). The n. poor, rich ಮಹಾಯುದ್ಧದ ಫಲವಾಗಿ ಬಡವರಾದವರು, ಹಣವಂತರಾದವರು. The n. woman (ಸಂಪ್ರದಾಯವನ್ನು ನಿರಾಕರಿಸಿ ಸ್ವಾತಂತ್ರ್ಯವನ್ನು ಬಯಸುವ) ನವೀನ ಸ್ತ್ರೀಯರು. The N. World ಅಮೆರಿಕ]'. ಈಚೆಗೆ ಸೃಷ್ಟಿಯಾದ, ಬೆಳೆದ, ಬಂದ, ತಯಾರಾದ (N. red sandstone); ಈಗ ಮೊದಲು ಉಪಯೋಗಿಸಿದ; (ಹಿಂದೆ) ಬಳಸಿದ್ದಲ್ಲದ, ಧರಿಸಿದ್ದಲ್ಲದ; ಹೊಸದಾಗಿ ಬೆಳೆದ, ತಯಾರಿಸಿದ (N. potatoes, wine, cheese). [N. furniture, clothes. N. countries, soil. A heart, pleasures, ever n. N. chum (Chum ನೋಡಿ)]. (—ಕ್ಕೆ) ಇನ್ನೂ ಪಳಗಿಲ್ಲದ, ಒಗ್ಗಿಲ್ಲದ (*To* ಉಪ. ದೊಡನೆ). (ಮನೆತನ ಅಥವಾ ವ್ಯಕ್ತಿ) ಈಚೆಗೆ ಪದವಿಗೇರಿದ. N. comer ಹೊಸದಾಗಿ, ಈಚೆಗೆ, —ಬಂದವನು. N. England ಅಮೆ. ಸಂ. ಗಳ ಆರು ಈಶಾನ್ಯ ಪ್ರಾಂತಗಳು: ನ್ಯೂ ಇಂಗ್ಲೆಂಡು. N. Englander. N. moon ಅಮಾವಾಸ್ಯ; (ಬೈಬಲ್) ಒಂದು ಹೀಬ್ರೂ ಹಬ್ಬ. N. year ಹೊಸ ವರ್ಷ(ದ ಮೊದಲ ಕೆಲವು ದಿನಗಳು). N.-year's gift, wishes, etc. N.-year's day ವರ್ಷದ ಆರಂಭದ ದಿನ; ಜನವರಿ ಮೊದಲನೆಯ ತಾರೀಖು. N.-year's eve ಡಿಸೆಂಬರ್ ೩೧ನೆಯ ತಾರೀಖು. N. Zealander ನ್ಯೂಜಿಲೆಂಡಿನ ನಿವಾಸಿ (ಮಾವೊರಿ ಜನಾಂಗದವನು, ಮತ್ತು ಅಲ್ಲಿ ನೆಲಸಿರುವ ಐರೋಪ್ಯ).

Newfángled (ಗು.) ನವ್ಯತಾ ಅಭಿಮಾನವುಳ್ಳ (ಈಗ ವಿರ. ಪ್ರ.); ಒಳ್ಳೆಯ ಹಳೆಯ ಸಂಪ್ರದಾಯಕ್ಕೆ ಭಿನ್ನವಾದ; ಹೊಸ ಕಲ್ಪನೆಯ; ಸರಿಬೀಳದಷ್ಟು ನವೀನತೆಯ. **Néwly** (ಕ್ರಿ. ವಿ.) ಹೊಸದಾಗಿ; ಈಚೆಗೆ; ಈಗ ತಾನೆ (ಸಾ., ಭೂತಕೃತ್ತಿನೊಡನೆ) (The n.-discovered country. A guest n. arrived). ಹೊಸ ಕ್ರಮದಲ್ಲಿ, ರೀತಿಯಲ್ಲಿ. **Néwish** (ಗು.); **Néwness** (ನಾ.)

New (ಕ್ರಿ. ವಿ.) (ವಿಶೇಷಣ ಪದಕ್ಕೆ ಹಿಂದೆ; ಈಗ ಸಾ., ಕೂಡು ಗೆರೆಯಿಂದ ಕೂಡಿಸಿ ಪ್ರ.) ಹೊಸದಾಗಿ; ಈಚೆಗೆ; ಈಗ ತಾನೆ [N.-blown ಈಗ ತಾನೆ ಅರಳಿದ (ರೂಪ. ಸಹ). N.-born ಹೊಸದಾಗಿ ಹುಟ್ಟಿದ; ಪುನರ್ಜನ್ಮ ತಾಳಿದ. N.-built ಹೊಸದಾಗಿ, ಮತ್ತೆ, ಕಟ್ಟಿದ. N.-coined (ಮು., ಪದಗಳ ವಿಷಯದಲ್ಲಿ) ಹೊಸದಾಗಿ ಕಲ್ಪಿಸಿದ, ನಿರ್ಮಿಸಿದ. N.-come ಹೊಸದಾಗಿ ಬಂದ. N.-fledged; N.-found; N.-laid (eggs); N.-made; N.-mown (hay or lawn). N.-create; N.-front ಹೊಸ ಮುಂಭಾಗ ಹಾಕು. N.-furnish; N.-model ಮರಳಿ ರೂಪಿಸು]

Néwel ನ್ಯೂಎಲ್ (ನಾ.) ಸುತ್ತುಮೆಟ್ಟಲು ಹಂತದ ನಡುಗಂಬ (Open or hollow n. ಸುತ್ತುಮೆಟ್ಟಲು ಹಂತದ ನಡು ತೆರಪು). ಹಂತದ ಕೆಳಗಾಗಲಿ ಮೇಲಾಗಲಿ ಕೈಕಂಬಿಗೆ ಆಸರೆಯಾಗಿರುವ ಕಂಬ.

Newfóundland ನ್ಯೂಫೌಂಡ್‌ಲ್ಯಂಡ್, **-lánd** —ಲ್ಯಾಂಡ್ (ನಾ.) ಉ. ಅಮೆರಿಕದಲ್ಲಿ St Lawrence ನದಿಯ ಮುಖದಲ್ಲಿರುವ ಒಂದು ದ್ವೀಪ. [N. (dog), Newfoundlander[1] ಒಳ್ಳೆಯ ಈಜುವ ಶಕ್ತಿಯುಳ್ಳ ದೊಡ್ಡ ನಾಯಿಜಾತಿ]. **Newfóundlander**[2] (ನಾ.) —ದ್ವೀಪದ ನಿವಾಸಿ, ಹಡಗು.

Néwgate ನ್ಯೂಗೆ(ಗಿ)ಟ್ (ನಾ.) (೧೯೦೨ರಲ್ಲಿ ಕೆಡವಿಬಿಟ್ಟ) ಲಂಡನ್ನಿನ ಪ್ರಸಿದ್ಧವಾದ ಸೆರೆಮನೆ. N. Calendar ನ್ಯೂಗೇಟ್ ಸೆರೆಮನೆಯ ಕೈದಿಗಳ ವಿವರಣ ಪುಸ್ತಕ. N. fringe, frill ಮುಖವೆಲ್ಲ ಕ್ಷೌರ ಮಾಡಿ ಕೊಂಡು ಗದ್ದದ ಕೆಳಗೆ ಮಾತ್ರ ಬಿಟ್ಟಿರುವ ಗಡ್ಡ. N. knocker ಹಣ್ಣು ಹಂಪಲಿನ ಬೀದಿ ವ್ಯಾಪಾರಿಗಳು, ಮೊ. ರು ಬಿಟ್ಟಿರುವ ಕುರುಳು.

Néwmarket ನ್ಯೂಮಾರ್ಕೆಟ್ (ನಾ.) ಕುದುರೆಯ ಜೂಜಿಗೆ ಪ್ರಸಿದ್ಧವಾದ (ಇಂಗ್ಲೆಂಡಿನ) ನ್ಯೂಮಾರ್ಕೆಟ್ ಎಂಬ ಪಟ್ಟಣ. ಗಂಡಸರ ಅಥವಾ ಹೆಂಗಸರ ಗುತ್ತನಾದ ಮೇಲಂಗಿ (= N. coat). ಒಂದು ಬಗೆಯ ಇಸ್ಪೀಟಾಟ.

News ನ್ಯೂಸ್ (ನಾ.; ಬ. ವ.; ಸಾ., ಏ. ವ. ದ ಕ್ರಿಯಾಪದದೊಡನೆ) ಸುದ್ದಿ; ಸಮಾಚಾರ; (ಹೊಸ) ವರ್ತಮಾನ; ವೃತ್ತಾಂತ; ವಾರ್ತೆ. ಹೊಸ ವಿಷಯ; ಹೊಸ ಘಟನೆ. Have you heard the, this (ವಿರಳವಾಗಿ these), n.? Ill n. flies apace ಕೆಟ್ಟ ಸುದ್ದಿ ಬೇಗ ಹಬ್ಬುತ್ತದೆ. No n. is good n. ಸುದ್ದಿಯಿಲ್ಲದ್ದೇ ಒಳ್ಳೆಯ ಸುದ್ದಿ. That is no n. ಅದೇನೂ ಹೊಸ ಸುದ್ದಿಯಲ್ಲ. Is there any n.? What is the n.? (ವರ್ತಮಾನ ಪತ್ರಿಕೆಗಳ ಹೆಸರಿನ ಭಾಗವಾಗಿ: Evening N.). **N.-agent** ವೃತ್ತಪತ್ರಿಕೆ, ಮೊ. ಗಳ ವ್ಯಾಪಾರಿ. **N.-boy, -man** ಬೀದಿಗಳಲ್ಲಿ ವೃತ್ತಪತ್ರಿಕೆ ಮಾರುವ ಹುಡುಗ, ಮನುಷ್ಯ. **N.-letter** (ಚರಿತ್ರೆ) ಆಗಾಗ್ಗೆ ಒಳನಾಡಿನ ಊರುಗಳು, ಮೊ. ಕ್ಕೆ ಸುದ್ದಿಗಳನ್ನು ಬರೆದು ಕಳುಹಿಸುವ ಪತ್ರ: ಸುದ್ದಿಯ ಪತ್ರ. [**Newsmonger** ಸುದ್ದಿ ಹರಡುವವನು: ಸುದ್ದಿಮಲ್ಲ. **Newspaper** (ಸುದ್ದಿಗಳನ್ನೂ ಜಾಹೀರಾತುಗಳನ್ನೂ ಸಾಹಿತ್ಯ ವಿಷಯಗಳನ್ನೂ ಒಳಕೊಂಡ, ಸಾಮಾನ್ಯವಾಗಿ ಪ್ರತಿ ದಿನವೂ ಅಥವಾ ವಾರಕ್ಕೊಂದು ಬಾರಿ ಹೊರಡುವ) ವೃತ್ತಪತ್ರಿಕೆ]. **N.-print** ವೃತ್ತಪತ್ರಿಕೆ ಮುದ್ರಿಸುವ (ಅಗ್ಗದ) ಕಾಗದ. **N.-reel** ಆಯಾ ದಿನದ ಸುದ್ದಿ ತಿಳಿಸುವ ಚಲನಚಿತ್ರ (ಪಟಲ). **N.-room** ವೃತ್ತಪತ್ರಿಕೆಗಳನ್ನು ಓದಲು ಪ್ರತ್ಯೇಕವಾಗಿಟ್ಟಿರುವ ಕೋಣೆ: ಪತ್ರಿಕಾ ವಾಚನಾಲಯ. **N.-sheet** ಸುದ್ದಿಯ ಹಾಳೆ. **N.-stand** ವೃತ್ತಪತ್ರಿಕೆಗಳ ವ್ಯಾಪಾರ ಕಟ್ಟೆ. **N.-vendor** ವೃತ್ತಪತ್ರಿಕೆಯ ವ್ಯಾಪಾರಿ. **Néwsless** (ಗು.); **Néwsy** —ಸಿ (ಗು.) ಸುದ್ದಿ ತುಂಬಿದ, ಹರಡುವ. **Néwsiness** (ನಾ.)

Newt ನ್ಯೂಟ್ (ನಾ.) ಸ್ಥಲ ಜಲಗಳಲ್ಲಿ ವಾಸಿಸಲು ಅನುಕೂಲ ಪಡೆದಿರುವ ಸಣ್ಣ ಬಾಲದ ಒಂದು ಉಭಯಜೀವಿ.

Newtónian ನ್ಯೂಟೋನಿಯನ್ (ಗು., ನಾ.) ನ್ಯೂಟನ್ನಿನ; — ವಿಶ್ವವಾದದ, ನ್ಯೂಟನ್ ಕಂಡುಹಿಡಿದ, ನಿರ್ಮಿಸಿದ. (ನಾ.) ನ್ಯೂಟನ್ನಿನ ಅನುಯಾಯಿ; ನ್ಯೂಟನ್ನಿನ ದೂರದರ್ಶಕ. (Sir Isaac Newton ಎಂಬ ಭೌತ ವೈಜ್ಞಾನಿಕನ ಹೆಸರಿನಿಂದ)

Next ನೆಕ್ಸ್ಟ್ [ಗು. (ಕೆಲವು ವೇಳೆ ನಾಮಪದಕ್ಕೆ ವಿಶೇಷಣವಾಗಿ), ಕ್ರಿ. ವಿ., ಉಪ., ನಾ.] (ಗು.) ಅತ್ಯಂತ ಹತ್ತಿರದಲ್ಲಿ, ಮಗ್ಗುಲಲ್ಲಿ, ಪಕ್ಕದಲ್ಲಿ, —ಇರುವ, ವಾಸಿಸುವ; ನೆರೆಯ; ಪಕ್ಕದ (In the n. house. My n. neighbour. Lives n. door ಪಕ್ಕದ ಮನೆಯಲ್ಲಿ ವಾಸಮಾಡುತ್ತಾನೆ. N.-door neighbours. N.-door to felony, to blasphemous ಮಹಾಪಾತಕಕ್ಕೆ, ದೇವದೂಷಣೆಗೆ, ಹತ್ತಿರವಾದ. N. to nothing, none, impossible ಬಹುಮಟ್ಟಿಗೆ ಶೂನ್ಯ, ಏನೂ ಇಲ್ಲ, ಅಸಾಧ್ಯ. The chair n. the fire. The skin with the flesh n. it. The shop n. to the corner). ಒಡನೆಯೇ ಅನುಸರಿಸಿ ಬರುವ; ಹಿಂದೆಯೇ ಬರುವ; ಮಾರನೆಯ; ಅಮೇಲಿನ; ಮುಂದಿನ [N. man. N. year. Not till n. time (ಹಾಸ್ಯ ಪ್ರ.) ಮುಂದಿನ ಸಲದ ವರೆಗೂ ಇಲ್ಲ (ಬಿಟ್ಟು ಬಿಡುತ್ತೇನೆಂದು ಭಾಷೆ ಕೊಡುವಾಗ ಸೇರಿಸುವ ಒಕ್ಕಣೆ). The n. town to London in size. N.-best]. (ಕ್ರಿ. ವಿ.) ತರುವಾಯ; ಅನಂತರ; ಅಮೇಲೆ; ಮುಂದಿನ ಸಂದರ್ಭದಲ್ಲಿ [In the week n. ensuing. What n.? ಇನ್ನೇನು ಅವಿವೇಕವೊ!]. (ನಾ.) Her n. (husband, child) ಅವಳ ಮುಂದಿನ ಗಂಡ, ಮಗು.

Néxus ನೆಕ್ಸಸ್ (ನಾ.) ಸೇರಿಕೆ; ಜೋಡಣೆ; ಸಂಬಂಧ (ರೂಪ.). The cash n. ಬರಿಯ ಹಣದ ಸಂಬಂಧ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Niágara ನೈಆಗ್ಗರ (ನಾ.) (ಉ. ಅಮೆರಿಕದ ಒಂದು) ದೊಡ್ಡ ಜಲಪಾತ. ಎಡೆಬಿಡದೆ ಆಗುತ್ತಿರುವ ಬಲವಾದ ಗದ್ದಲ, ಮೊರೆತ. Shoot N. ಭಯಂಕರವಾದ ಅಪಾಯಗಳಿಗೆ ಗುರಿಯಾಗು.

Nib ನಿಬ್ (ನಾ., ಕ್ರಿ. ಸಕ.) ಗರಿಲೇಖನಿಯ ಮೊನೆ; (ಲೇಖನಿಕಡ್ಡಿಯಲ್ಲಿ ಸಿಕ್ಕಿಸುವ ಲೋಹದ ಅಥವಾ ಗರಿಯ) ಬರೆಯುವ ಮುಳ್ಳು. (ಆಯುಧ, ಮೊ. ಗಳ) ಮೊನೆ. (ಬ. ವ. ದಲ್ಲಿ) ಜಜ್ಜಿದ ಕೋಕೋ ಬೀಜದ ಚೂರುಗಳು. (ಕ್ರಿ.) (ಲೇಖನಿಗೆ) ಬರೆಯುವ ಮುಳ್ಳು ಸಿಕ್ಕಿಸು; ಗರಿಲೇಖನಿಯನ್ನು ಹೆರೆದು ಸರಿಮಾಡು, ಮೊನಚು ಮಾಡು.

Níbble ನಿಬ್'ಲ್ (ಕ್ರಿ., ನಾ.) (೧) ಕೊಂಚ ಕೊಂಚವಾಗಿ ಕಚ್ಚಿ ತಿನ್ನು; ಮೆಲ್ಲಗೆ, ಎಚ್ಚರಿಕೆಯಿಂದ, ಆಟವಾಡುವಂತೆ, ಕಚ್ಚು [(ಮು., ಗಾಳದ ಎರೆಯನ್ನು ಮೀನು ಕಚ್ಚುವ ಸಂದರ್ಭದಲ್ಲಿ, ಅಥವಾ ಮೊಲಗಳ ವಿಷಯದಲ್ಲಿ). N. at ಸ್ವಲ್ಪ ಸ್ವಲ್ಪವಾಗಿ ಕಚ್ಚು; (ರೂಪ.) ಆಶಾಮೋಹದೊಡನೆ ಸರಸವಾಡು. (ವ್ಯಾಪಾರ, ಮೊ. ರಲ್ಲಿ) ಜುಗ್ಗಾಡು]. (೨) ತಪ್ಪುಹಿಡಿ (*At* ಉಪ. ದೊಡನೆ); ಅಲ್ಪವಿಷಯಗಳಲ್ಲಿ ಟೀಕಿಸು, ಆಕ್ಷೇಪಿಸು. (ನಾ.) (ಕ್ರಿಯೆಯ ೧ನೆಯ ಅರ್ಥಗಳಲ್ಲಿ); ಒಂದು ಸಲ ಕಚ್ಚಿ ತಿನ್ನಲು ಸಾಕಾಗುವಷ್ಟು (ಹುಲ್ಲು, ಮೊ. ದು); ಒಂದು ಕಚ್ಚು.

Nice ನೈಸ್ (ಗು., ಕ್ರಿ. ವಿ.) ಸೊಗಸಿನ; ಸೂಕ್ಷ್ಮಾಭಿರುಚಿಯ; ಮೆಚ್ಚಿಸಲು ಕಷ್ಟವಾದ; ನಾಜೂಕಿನ; ನಿಯಮನಿಷ್ಠ; ನಿಷ್ಕೃಷ್ಟ; ಕರಾರುವಾಕಾದ; ಕಟ್ಟುನಿಟ್ಟಾದ (Must not be too n. about the means ಸಾಧನೋಪಾಯಗಳ ವಿಷಯದಲ್ಲಿ ಅತಿ ಧರ್ಮಸೂಕ್ಷ್ಮವನ್ವೇಷಿಸಬಾರದು). ನಿಷ್ಕೃಷ್ಟತೆ, ಎಚ್ಚರಿಕೆ, ಕೌಶಲ, ವಿವೇಚನೆ,—ಆವಶ್ಯಕವಾದ (A n. experiment, question, point, negotiation). [A n. (ಸೂಕ್ಷ್ಮ) distinction, shade of meaning]. ಗಮನವಿಟ್ಟು ನೋಡುವ; ಸೂಕ್ಷ್ಮ ದೃಷ್ಟಿಯ; ಏಕಾಗ್ರತೆಯ [A n. inquiry. A n. observer. A n. ear ಸೂಕ್ಷ್ಮಗ್ರಾಹಿಯಾದ ಕಿವಿ. A n. judgement ಸೂಕ್ಷ್ಮ ವಿವೇಚನೆಯ ತೀರ್ಪು. A n. hand ಕೌಶಲ ತೋರುವ ಕೈ. Weighed in the nicest scales ಅತಿ ಸೂಕ್ಷ್ಮ ತೋಲನ ಮಾಡಿದ (ರೂಪ. ಸಹ)]. (ಬಳ. ಮಾ.) ಹಿತವಾದ; ಆಕರ್ಷಕ; ರಮ್ಯ; ಮನೋಹರ; ಕೋಮಲ; ಅಂದವಾದ; ಮುದ್ದಾದ; ಹಸನಾದ [N.-looking. (ಅನೇಕ ವೇಳೆ ವ್ಯಂಗ್ಯವಾಗಿ) Here is a n. mess ಒಳ್ಳೆಯ ಅವ್ಯವಸ್ಥೆಯಿದು!]; ಒಳ್ಳೆಯ ರುಚಿಗೂಡಿಸಿದ; ತೃಪ್ತಿಕರವಾದ; ದಯಾಪರ; ಸ್ನೇಹಪರ; ವಿವೇಚನಪರ. (The house stands n. & high ಮನೆ ತಕ್ಕಷ್ಟು ಅಂದವಾಗಿಯೂ ಎತ್ತರವಾಗಿಯೂ ಇದೆ. Car is going n. & fast). **Nícely** (ಕ್ರಿ. ವಿ.); **Níceness** (ನಾ.); **Nícish** (ಗು.); **Nícety** ನೈಸೆ(ಸಿ)ಟಿ (ನಾ.) ಸೂಕ್ಷ್ಮತೆ; ಸೂಕ್ಷ್ಮಾಂಶ (To a n. ಅತಿ ಸೂಕ್ಷ್ಮವಾಗಿ). ಜಟಿಲ, ಸೂಕ್ಷ್ಮ, —ಭಾವ (A point of great n.). ಕೇವಲ ಸೂಕ್ಷ್ಮ ಭೇದ; ಅತಿ ಸೂಕ್ಷ್ಮ, ಅಮುಖ್ಯ, —ವಿವರ. (ಬ. ವ. ದಲ್ಲಿ) ಸೂಕ್ಷ್ಮ, ಕೇವಲ ಲಘು, —ವಿವರಗಳು.

Niche ನಿಚ್ (ನಾ., ಕ್ರಿ. ಸಕ.) (ಪ್ರತಿಮೆ, ಅಲಂಕಾರ ಪಾತ್ರೆ, ಕುಂಡ, ಮೊ. ನ್ನು ಇಡುವುದಕ್ಕಾಗಿ ಗೋಡೆಯಲ್ಲಿ ಮಾಡಿದ, ಹೆಚ್ಚು ಒಳಹೊಗದ) ಗೂಡು, ಮಾಡ. (ರೂಪ.) (ಒಬ್ಬನಿಗಾಗಿ ಗೊತ್ತಾಗಿರುವ) ಸ್ಥಳ, ಸ್ಥಾನ [ಮು., N. in the temple of fame (ಸಂಪಾದಿಸಿರುವ ಯಶಸ್ಸಿಗಾಗಿ) ಕೀರ್ತಿಮಂದಿರದಲ್ಲಿ ಒಂದು ಗಣ್ಯಸ್ಥಾನ; ಯಶೋವಂತರ ಪಂಕ್ತಿಗೆ ಸೇರಲು ಅರ್ಹತೆ]. (ಕ್ರಿ.) (ಪ್ರತಿಮೆ, ಮೊ. ನ್ನು) ಒಂದು ಮಾಡದಲ್ಲಿ ಪ್ರತಿಷ್ಠಿಸು (ಸಾ., ಭೂ. ಕೃ. ನಲ್ಲಿ); ಒಂದು ಗೂಡಿನಲ್ಲಿ, ಮೂಲೆಯಲ್ಲಿ, ಸೇರಿಕೊ (ಸಾ., ಭೂ. ಕೃ. ನಲ್ಲಿ)

Nick ನಿಕ್ (ನಾ., ಕ್ರಿ.) (ಹಿಡಿಕೆಗಾಗಿ, ಮಾರ್ಗದರ್ಶಕವಾಗಿ, ಗುರುತಾಗಿ, ಉಪಯೋಗಿಸಲಾಗುವ) ಕಚ್ಚು, ಗಾಡಿ, ಸೀಳಿಕೆ. ಬೆಟ್ಟದ ಸಾಲಿನಲ್ಲಿಯ ತೆರಪು. (Hazard ಎಂಬ ಅದೃಷ್ಟದ ಆಟದಲ್ಲಿ) ದಾಳದ ಉರುಳು, ಗರ. [In the n. (of time) (ಅ) ಕ್ಷಣಕ್ಕೆ; ಗೊತ್ತಾದ ಕಾಲಕ್ಕೆ; ಸರಿಯಾಗಿ]. (ಕ್ರಿ.) (—ಲ್ಲಿ) ಕಚ್ಚು, ಗಾಡಿ, ಸೀಳಿಕೆ, —ಮಾಡು. (ಕುದುರೆ ತನ್ನ ಬಾಲವನ್ನು ಎತ್ತರಿಸಿಟ್ಟುಕೊಳ್ಳುವಂತೆ, ಬಾಲದ) ಬುಡದ ತಳಗಡೆ ಕಚ್ಚು ಮಾಡು. ಗುರಿಹೊಡೆದಂತೆ ಹೇಳು; ಸರಿಯಾಗಿ ಊಹಿಸು (N. it, the truth, etc.). (ಮುಹೂರ್ತ, ರೈಲು, ಮೊ. ವಿಷಯದಲ್ಲಿ) ಹೊತ್ತಿಗೆ ಸರಿಯಾಗಿ (ಮುಹೂರ್ತ) ಸಾಧಿಸು, (ರೈಲು) ಹಿಡಿ. (ಅಪರಾಧಿ, ಮೊ. ರನ್ನು) (ತಪ್ಪು ಮಾಡುತ್ತಿದ್ದಹಾಗೆಯೇ) ಸುಳಿವು ಕೊಡದೆ ಹಿಡಿ, ದಸ್ತಗಿರಿ ಮಾಡು. (Hazard ಎಂಬ ಆಟದಲ್ಲಿ) ಕೆಲವು ಗೊತ್ತಾದ ಗೆಲ್ಲು ಗರಗಳನ್ನು ಎಸೆ. (ಬೇಟೆಯಲ್ಲಿ ಅಥವಾ ಜೂಜಿನಲ್ಲಿ) ಸುಳಿವು ಕೊಡದೆ ಥಟ್ಟನೆ ಅಡ್ಡದಾರಿಯಲ್ಲಿ ಹೋಗು (*In* ಉಪ. ದೊಡನೆ). (ತಳಿಯೆಬ್ಬಿಸುವುದರಲ್ಲಿ) ಇತರ ತಳಿಯವುಗಳೊಡನೆ ಸಮರ್ಪಕವಾಗಿ ಸಂಗಮ ಮಾಡಿಸು, ಸಂಗಮವಾಗು.

Níckel ನಿಕ'ಲ್ (ನಾ., ಕ್ರಿ. ಸಕ.) ಬೆಳ್ಳಿಯಂತೆ ಬಿಳಿಯ, ಹೊಳಪಿನ, ರೇಕುಗಳಾಗಿ ಸಾಗುಬಡಿಯಲಾಗುವ, ತಂತಿಯೆಳೆಯಲಾಗುವ, ಒಂದು ಲೋಹ: 'ನಿಕಲ್' (ಮಿಶ್ರಲೋಹ ಮಾಡಲು ಸಾ., ಹೆಚ್ಚು ಉಪಯೋಗ). (ಇಂಗ್ಲಿಷ್ ಮತ್ತು ಫ್ರೆಂಚ್ ತಾಮ್ರದ ನಾಣ್ಯಗಳಿಗೆ ಸರಿಹೋಗುವ) ಅಮೆ. ಸಂ. ದ ಐದು ಸೆಂಟಿನ ನಿಕಲ್ ನಾಣ್ಯ, ಯೂರೋಪಿನ ಮತ್ತು ಇತರ ದೇಶಗಳ ನಿಕಲ್ ನಾಣ್ಯಗಳು. (N. silver ಜರ್ಮನ್ ಸಿಲ್ವರಿನಂಥ ಒಂದು ಮಿಶ್ರಲೋಹ: ನಿಕಲ್ ಬೆಳ್ಳಿ. N. steel ನಿಕಲ್ ಮತ್ತು ಕಬ್ಬಿಣದ ಮಿಶ್ರಲೋಹ: ನಿಕಲ್ ಉಕ್ಕು). (ಕ್ರಿ.) ನಿಕಲ್ ಲೇಪ ಕೊಡು, ಮುಲಾಮು ಮಾಡು.

Níck-nack = Knick-knack.

Níckname ನಿಕ್'ನೇಮ್ (ನಾ., ಕ್ರಿ. ಸಕ.) (ಮನುಷ್ಯನ, ಸ್ಥಳದ, ವಸ್ತುವಿನ, ನಿಜವಾದ ಹೆಸರಿಗೆ ಬದಲಾಗಿ ಅಥವಾ ಹೆಸರಿನೊಡನೆ, ಹಾಸ್ಯ ಮಾಡುವುದಕ್ಕಾಗಲಿ ತಮಾಷೆಗಾಗಲಿ ಉಪಯೋಗಿಸುವ) ಅಡ್ಡ ಹೆಸರು; ಉಪ ನಾಮ. (ಒಬ್ಬನ) ಕ್ರೈಸ್ತ ನಾಮದ ಸಂಕ್ಷಿಪ್ತ ಅಥವಾ ರೂಢಿಯ ರೂಪ (ಉದಾ., Thomas, Richard, William ಎಂಬ ಹೆಸರುಗಳಿಗೆ ಬದಲಾಗಿ Tom, Dick, Bill ಎಂದೂ, ಇಂಗ್ಲಿಷಿನವನಿಗೆ John Bull ಎಂದೂ ರೂಢಿ). (ಕ್ರಿ.) (ಒಬ್ಬನನ್ನು, ಒಂದು ವಸ್ತುವನ್ನು) ಅಡ್ಡ ಹೆಸರಿನಿಂದ ಕರೆ; (—ಗೆ) ಅಡ್ಡಹೆಸರಿಡು (They n. patience cowardice ಅವರು ತಾಳ್ಮೆಗೆ ಹೇಡಿತನ ಎಂದು ಅಡ್ಡಹೆಸರಿಡುತ್ತಾರೆ)

Nicótian. **Nicotine** ನೋಡಿ.

Nicotine ನಿಕೊಟೀನ್ (ನಾ.) ಹೊಗೆಸೊಪ್ಪಿನಿಂದ ಬಟ್ಟಿಯಿಳಿಸಿ ಎಣ್ಣೆಯಾಗಿ ತೆಗೆದ ಒಂದು ಸಸ್ಯಕ್ಷಾರ ವಿಷ: ಹೊಗೆಸೊಪ್ಪಿನ ವಿಷ. **Nícotinism** (ನಾ.) ಹೊಗೆಸೊಪ್ಪನ್ನು ಹೆಚ್ಚಾಗಿ ಉಪಯೋಗಿಸುವುದರಿಂದಾದ ರೋಗಸ್ಥಿತಿ. **Nicotinize** (ಕ್ರಿ. ಸಕ.) ನಿಕೊಟಿನ್(ವಿಷ) ಪ್ರಯೋಗಿಸು, ತುಂಬಿ ಬಿಡು. **Nicótian** ನಿಕೋಷಿಯನ್, —ಷನ್ (ಗು., ನಾ.) ಹೊಗೆಸೊಪ್ಪಿನ. (ನಾ.) ಹೊಗೆ (ಬೀಡಿ, ಚುಟ್ಟಾ) ಸೇದುವವನು. (ಫ್ರಾನ್ಸ್ ದೇಶದಲ್ಲಿ ಪ್ರಥಮತಃ ಹೊಗೆಸೊಪ್ಪನ್ನು ರೂಢಿಗೆ ತಂದ Nicot ಎಂಬವನ ಹೆಸರಿನಿಂದ)

Níctate ನಿಕ್ಟೇಟ್, **Níctitate** ನಿಕ್ಟಿಟೇಟ್ (ಕ್ರಿ. ಅಕ.) ಕಣ್ಣು ಮಿಟುಕಿಸು; ರೆಪ್ಪೆ ಬಡಿ [ಮು., Nict(it)ating membrane (ಹಲವು ಪ್ರಾಣಿಗಳಲ್ಲಿ ಮೂರನೆಯ ಅಥವಾ ಒಳ ಕಣ್ಣುರೆಪ್ಪೆ) ಎಂಬಲ್ಲಿ]. **Nictátion** (ನಾ.); **Nictitátion** (ನಾ.)

Nícy ನೈಸಿ (ನಾ.) (ಮಕ್ಕಳ ಮಾತು) ಒಂದು ತೆರದ ಸಕ್ಕರೆಮಿಠಾಯಿ.

Níddle-nóddle ನಿಡ್'ಲ್ ನಾಡ್'ಲ್ (ಗು., ಕ್ರಿ.) ತಲೆ ತೂಗಾಡಿಸು(ವ); ನಡುಗು(ವ); ಕಂಪಿಸುವ; ಅದೃಢ. (ಕ್ರಿ.) (ತಲೆ)ತೂಗು, ತೂಗಾಡುತ್ತಿರು; ಕಾಲು ಅದಿರುತ್ತ ಬೀಳುವಂತಾಗು; ತತ್ತರಿಸು.

Nídificate ನಿಡಿಫಿಕೇಟ್, **Nídify** ನಿಡಿಫೈ (ಕ್ರಿ. ಅಕ.) ಗೂಡು ಕಟ್ಟು. **Nidificátion** (ನಾ.)

Nid-nod ನಿಡ್ ನಾಡ್ (ಕ್ರಿ.) ತಲೆ ತೂಗಾಡು(ಡಿಸು)ತ್ತಿರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Nídus ನೈಡಸ್ (ನಾ. ; ಬ. ವ. -di, -duses) ಹುಳು, ಕೀಟ, ಮೊ. ವು ಮೊಟ್ಟೆಯಿಡುವ ಸ್ಥಳ ; ಸಂತಾನಾಭಿವೃದ್ಧಿಯ ಸ್ಥಳ (ಮು., ರೋಗಬೀಜಗಳು ಅಥವಾ ರೋಗಾಣುಗಳು ಅಭಿವೃದ್ಧಿಯಾಗುವ, ಪ್ರಾಣಿಯಲ್ಲಿಯ ಅಥವಾ ಸಸ್ಯದಲ್ಲಿಯ ಸ್ಥಳ, ಅಥವಾ ಪದಾರ್ಥ). ಯಾವುದಾದರೂ ಗುಣ, ಲಕ್ಷಣ, ತತ್ತ್ವ, ಮೊ. ವು ಅಭಿವೃದ್ಧಿಹೊಂದುವ ಸ್ಥಳ : ವೃದ್ಧಿ ಸ್ಥಾನ. ಸ್ವಾಭಾವಿಕವಾದ, ಸಹಜವಾದ, —ಪಾತ್ರೆ, ಕೋಶ. ಮೊಟ್ಟೆಗಳ, ಸಣ್ಣ ಗಂಟಿಗಳ, ಸಮುದಾಯ.

Niece ನೀಸ್ (ನಾ.) ಸೋದರನ ಅಥವಾ ಸೋದರಿಯ ಮಗಳು ; ಸೋದರ ಮಗಳು ; ಸೋದರ ಸೊಸೆ ; ಭ್ರಾತ್ರೀಯಳು ; ಸ್ವಸ್ರೀಯೆ.

Níggard ನಿಗರ್ಡ್ (ನಾ., ಗು.) ಜಿಪುಣ ; ಜೀನ ; ಕೃಪಣ ; ಲೋಭಿ ; ಕೈಹಿಡಿತದ(ವನು). **Níggardly** (ಗು., ಕ್ರಿ. ವಿ.) ; **Níggardliness** (ನಾ.)

Nígger ನಿಗರ್ (ನಾ.) ನೀಗ್ರೊ [(ಸಾ., ತಿರಸ್ಕಾರದ ಪ್ರ.) ; N. in the woodpile or fence (ಅಮೆ. ಸಂ. ಅಸಂ.) ಸಂಶಯಕ್ಕೆಡೆಗೊಡುವ ಸಂದರ್ಭ ; ಒಂದು ಒಳ್ಳೆಯದನ್ನು ಕೆಡಿಸುವಂಥದು]. (ಶಿಥಿಲವಾಗಿ) ಯಾವುದಾದರೂ ಜನಾಂಗದ ಕರಿದೊವಲಿನವನು. (ಮೂಲಂಗಿ ಜಾತಿಯ ಗಡ್ಡೆಯನ್ನು ನಾಶಮಾಡುವ) ಒಂದು ಜಾತಿಯ ಕಪ್ಪು (ಕಂಬಳಿ)ಹುಳು. N. minstrel (Negro ನೋಡಿ). N. melody, song, etc. ಅಮೆರಿಕದ ನೀಗ್ರೋಗಳ ಬಳಕೆಯಲ್ಲಿರುವ ಸಂಗೀತ, ರಾಗ, ಗೀತ. **Níggerdom** (ನಾ.) ನೀಗ್ರೋ ಜನಾಂಗ.

Níggle ನಿಗ್‌ಲ್ (ಕ್ರಿ. ಅಕ.) ಅಪ್ರಧಾನ ವಿವರಗಳಮೇಲೆ ಅನಾವಶ್ಯಕವಾಗಿ ಕಾಲ ಕಳೆ ; ಅತಿ ವಿಸ್ತರ ವಿವರಣೆ ಕೊಡು. **Níggling** ನಿಗ್ಲಿಂಗ್ (ಗು.) ಅಲ್ಪವಾದ; ಕ್ಷುಲ್ಲಕವಾದ ; ಕೇವಲ ಸಣ್ಣ ವಿಷಯಗಳ ಸಂಬಂಧವಾದ ; ವೈಶಾಲ್ಯಭಾವ ರಹಿತ. (ಕೈಬರವಣಿಗೆ) ಕುರುಕಿ, ಇರುಕಿಸಿ, —ಬರೆದ; ಓದಲು ಕಷ್ಟವಾದ.

Nigh ನೈ [ಕ್ರಿ. ವಿ., ಉಪ., ಗು. (ಹಿಂದೆ, ತರ ತಮ ರೂಪಗಳು : near, next ; ಈಗ, nigher, nighest)] (ಪ್ರಾಚೀ. ಪ್ರ., ಕಾವ್ಯ, ಅಥವಾ ಪ್ರಾಂ. ಪ್ರ.) = Near.

Night ನೈಟ್ (ನಾ.) ಇರುಳು ; ರಾತ್ರಿ ; ಸೂರ್ಯಾಸ್ತದಿಂದ ಸೂರ್ಯೋದಯದ ವರೆಗಿನ ಕಾಲ ; ಮುಂಗತ್ತಲೆ ; ಮುಚ್ಚಂಜೆ ; ಮಬ್ಬು (=Nightfall); ರಾತ್ರಿಯ, —ವಾಯುಸ್ಥಿತಿ, ಅನುಭವಗಳು, ಕೆಲಸ ಕಾರ್ಯಗಳು ; (Black, dark, as n. Went forth into the n. The n. of ignorance or barbarism ಅಜ್ಞಾನಾಂಧಕಾರ ; ಅಸಂಸ್ಕೃತಿಯ ತಮಸ್ಸು. Stayed three nights with them. A dirty n. ಬಿರುಗಾಳಿಯ ಮಳೆ ಸುರಿಯುತ್ತಿರುವ ರಾತ್ರಿ ; ಹಾಳಿರುಳು. Have a good, bad, n. ರಾತ್ರಿ ಸುಖನಿದ್ರೆ ಮಾಡು, ರಾತ್ರಿ ನಿದ್ರೆಯಿಲ್ಲದೆ ಬಾಧೆಪಡು. Make a n. of it (Make ನೋಡಿ). N. out ಉತ್ಸವ ನಡೆಯುವ ಸಂಜೆ ; ಮನೆ ಬಿಟ್ಟು ಹೊರಗೆ (ಮು., ವಿನೋದದಲ್ಲಿ) ಕಳೆದ ರಾತ್ರಿ. ಆಳು ಹೊರಗೆ ಹೋಗಿ ಬರಲು ಕೆಲಸದಿಂದ ಬಿಡುವು ಕೊಟ್ಟ ರಾತ್ರಿ. N. & day ರಾತ್ರಿಯೂ ಹಗಲೂ ; ಎಡೆಬಿಡದೆ ; ಯಾವಾಗಲೂ ; ಸದಾ. All n., All n. long ಇರುಳೆಲ್ಲ. By n. ರಾತ್ರಿಯಲ್ಲಿ ; ಇರುಳ ಮರೆಯಲ್ಲಿ. At n. ಸಂಜೆಯಲ್ಲಿ ; ಕತ್ತಲಾದಮೇಲೆ ; ರಾತ್ರಿಯಲ್ಲಿ (ಸಂಜೆ ೬ರಿಂದ ಮಧ್ಯರಾತ್ರಿಯ ವರೆಗಿನ ಕಾಲದಲ್ಲಿ) (In the morning ಮಧ್ಯರಾತ್ರಿ ಕಳೆದಮೇಲೆ ಬೆಳಗ್ಗೆ ೬ ಗಂಟೆಯ ವರೆಗಿನ ಕಾಲದಲ್ಲಿ). Cannot sleep o'nights for thinking of (—ರ) ಯೋಚನೆಯಲ್ಲಿ ರಾತ್ರಿ ನಿದ್ದೆಯೇ ಬರುವುದಿಲ್ಲ. **Night-** (ಸ. ಪೂ. ಪ.) ('ರಾತ್ರಿಯಿಂದ, ರಾತ್ರಿಯಂತೆ, ರಾತ್ರಿಯಲ್ಲಿ, ರಾತ್ರಿಗೆ ತಕ್ಕ, ರಾತ್ರಿಗೆಲಸದ, ರಾತ್ರಿ ಚಟುವಟಿಕೆಯ' ಎಂಬ ಅರ್ಥಗಳಲ್ಲಿ) (-veiled, -black, -walking, -haunted, -brawl, -attire, -lamp, -porter, -moth). **N.-bird** (ಮು.) ಗೂಬೆ ; 'ಬುರ್ ಬುರ್' ಪಕ್ಷಿ. ರಾತ್ರಿ ಸಂಚಾರಿ (ಮು., ಬದ್ಧ ಚಾಲನವನು, ಕೆಟ್ಟ ನಡತೆಯವನು). **N.-blindness** ಇರುಳುಗಣ್ಣು ; ರಾತ್ರಿಕುರುಡು. **N.-boat** ರಾತ್ರಿಸಂಚಾರದ ಪ್ರಯಾಣಿಕ ಹಡಗು, ದೋಣಿ. **N.-cap** ರಾತ್ರಿ ಮಲಗುವಾಗ ಹಾಕಿಕೊಳ್ಳುವ ಟೋಪಿ ; ರಾತ್ರಿ ಮಲಗುವುದಕ್ಕೆ ಮುಂಚೆ ಕುಡಿಯುವ ಮದ್ಯ. **N.-cellar** ಕೀಳು ದರ್ಜೆಯ, ನೆಲ ಮಾಳಿಗೆಯ ಮದ್ಯದಂಗಡಿ. **N.-chair** = N.-stool. **N.-clothes** ರಾತ್ರಿ ಮಲಗುವಾಗ ಹಾಕಿಕೊಳ್ಳುವ ಉಡುಪು. **N.-club** (ರಾತ್ರಿಯೂಟ, ನರ್ತನ, ಮೊ. ಗಳಿಗಾಗಿ ಸದಸ್ಯರಿಗೆ ಮಾತ್ರ ಅವಕಾಶವಿರುವ) ರಾತ್ರಿ ವಿಹಾರ ಮಂದಿರ. **N.-dress, N.-gown** (ಹೆಂಗಸಿನ ಅಥವಾ ಮಗುವಿನ) ರಾತ್ರಿಯುಡುಪು [= **Nighty** (ನಾ.)]. **N.-flower** (ರಾತ್ರಿಅರಳಿ ಹಗಲು ಮುಗಿಯುವ) ಇರುಳು ಹೂವು. **N.-glass** ಸಮುದ್ರ ಪ್ರಯಾಣದಲ್ಲಿ ರಾತ್ರಿಯ ಹೊತ್ತು ಉಪಯೋಗಿಸುವ ದೂರದರ್ಶಕ. **N.-hag** ರಾತ್ರಿಯ ಹೊತ್ತು ಗಾಳಿಯನ್ನೇರಿ ಬರುವುದೆಂದು ಪ್ರತೀತಿಯಿರುವ ಒಂದು ಹೆಣ್ಣು ದೆವ್ವ ; = Nightmare. **N.-hawk** ರಾತ್ರಿಗಳ್ಳ, ಮೊ. ರಾತ್ರಿ ಸಂಚಾರಿಗಳು. [**Nightjar** = Goatsucker (Goat ನೋಡಿ)]. **N.-light** ರಾತ್ರಿ ದೀಪ. **N.-line** ರಾತ್ರಿಯ ಹೊತ್ತು ಮೀನು ಹಿಡಿಯುವುದಕ್ಕಾಗಿ ಕೊಂಡಿಗೆ ಎರೆ ಚುಚ್ಚಿ ನೀರಿನಲ್ಲಿ ಬಿಟ್ಟ ಗಾಳ. **N.-long** (ಗು.) ಇರುಳೆಲ್ಲ ನಡೆಯುವ, ನಡೆದ; (ಕ್ರಿ. ವಿ.) ರಾತ್ರಿಯೆಲ್ಲ. [**Nightman** ಪಾಯಿಖಾನೆ ಎತ್ತಿಹಾಕುವವನು, ಚೊಕ್ಕಟ ಮಾಡುವವನು. **Nightmare** ನಿದ್ದೆಯಲ್ಲಿ ಎದೆಯಮೇಲೆ ಕುಳಿತುಕೊಂಡು ಉಸಿರುಕಟ್ಟಿಸುವಂತೆ ಮನಸ್ಸಿಗೆ ತೋರುವ ಒಂದು ಹೆಣ್ಣು ದೆವ್ವ : ಸ್ವಪ್ನ ಪಿಶಾಚಿ ; ಭಯಂಕರ, ಘೋರ, — ಸ್ವಪ್ನ (**Nightmarish**, ಗು.). ಬೆನ್ನುಹತ್ತಿರುವ ಭೀತಿ]. **N.-piece** (ಒಂದು ಪ್ರದೇಶದ) ರಾತ್ರಿದೃಶ್ಯ(ದ ವರ್ಣಚಿತ್ರ). **N.-school** (ಹಗಲು ದುಡಿದಾದಮೇಲೆ ಕೆಲಸಗಾರರಿಗೆ ಶಿಕ್ಷಣ ಕೊಡುವ) ರಾತ್ರಿಯ ಪಾಠಶಾಲೆ. **N. season** = N.-time (ಕಾವ್ಯ, ಅಲಂ.). **N.-shirt** (ಹುಡುಗನ, ಗಂಡಸಿನ) ಮಲಗುವಾಗ ಹಾಕಿಕೊಳ್ಳುವ ಉದ್ದನೆಯ ಜುಬ್ಬ. **N.-soil** (ರಾತ್ರಿಯ ಹೊತ್ತು ಎತ್ತಿಹಾಕುವ ಅಭ್ಯಾಸವಿದ್ದುದರಿಂದ) ಪಾಯಿಖಾನೆ, ಮೊ. ಗಳ ಕಶ್ಮಲ ಪದಾರ್ಥ ; ಮಲ. **N.-stool** ರಾತ್ರಿ ಉಪಯೋಗಕ್ಕಿರುವ ಮಲಪಾತ್ರೆಯ ನಾಗಾಲು. **N.-suit** ಪಾಯಿಜಾಮೆ; ಇಜಾರು. **N.-time ; N.-watch** ರಾತ್ರಿಗಾವಲು ; ರಾತ್ರಿಗಾವಲಿನವನು(ರು). (ಹೀಬ್ರೂ ಅಥವಾ ರೋಮನ್ ಪದ್ಧತಿಯಲ್ಲಿ) ಇರುಳನ್ನು ವಿಭಾಗಿಸಿರುವ ಮೂರು ಅಥವಾ ನಾಲ್ಕು ಭಾಗಗಳಲ್ಲಿ ಒಂದು : ಜಾವ ; ಯಾಮ (In the n.-watches ಆತಂಕದ, ಕಳವಳದ, ಆಯಾಸದ, ನಿದ್ದೆಯಿಲ್ಲದ, ಮೊ. ರಾತ್ರಿಯಲ್ಲಿ). **N.-work; Níghtless** (ಗು.) ; **Níghtly** (ಗು., ಕ್ರಿ. ವಿ.) ರಾತ್ರಿಯಲ್ಲಿ ನಡೆಯುವ, ನಡೆದ, ಸಂಭವಿಸುವ, ಇರುವ ; ರಾತ್ರಿಯ ; ಪ್ರತಿ ರಾತ್ರಿಯೂ ನಡೆಯುವ. (ಕಾವ್ಯ) ಇರುಳಿನ ; ರಾತ್ರಿಗೆ ತಕ್ಕ. (ಕ್ರಿ. ವಿ.) ಪ್ರತಿ ರಾತ್ರಿಯೂ.

Níghtingale ನೈಟಿಂಗೇಲ್ (ನಾ.) ರಾತ್ರಿಯೂ ಹಗಲೂ ಇಂಪಾಗಿಯೂ ಉಚ್ಚ ಸ್ವರದಿಂದಲೂ ಹಾಡುವ, ಕೆಂಪು ಛಾಯೆಯ ಕಂದು ಬಣ್ಣದ, ಒಂದು ದೇಶಾಂತರ ಸಂಚಾರಿ ಪಕ್ಷಿ ; 'ಬುಲ್‌ಬುಲ್' ಹಕ್ಕಿ.

Níghtshade ನೈಟ್‌ಷೇಡ್ (ನಾ.) ಒಂದು ಸಸ್ಯವಿಶೇಷ. Black N. ಬಿಳಿಯ ಹೂವೂ ಕಪ್ಪನೆಯ ವಿಷದ ಕಾಯಿಗಳೂ ಬಿಡುವಂಥದು. Woody N. ಧೂಮ್ರ ವರ್ಣದ ಹೂವೂ ಹೊಳಪಿನ ಕೆಂಬಣ್ಣದ ಕಾಯಿಗಳೂ ಬಿಡುವ ಜಾತಿ. Deadly N. = Belladonna.

Nigréscent ನೈ(ನಿ)ಗ್ರೆಸೆಂಟ್ (ಗು.) ನಸು ಕಪ್ಪಾದ. **Nigréscence** (ನಾ.) ; **Nígritude** (ನಾ.) ಕಪ್ಪು ; ಕೃಷ್ಣತೆ (ರೂಪ. ಸಹ)

Nígritude. **Nigrescent** ನೋಡಿ.

Níhil ad rem (L) ನೈಹಿಲ್ ಆ್ಯಡ್ ರೆಮ್ (ಗು.) ಅಸಂಬದ್ಧ ; ಅಪ್ರಸಕ್ತ.

Níhilism ನೈಇ(ಹಿ)ಲಿಸ್‌ಮ್ (ನಾ.) ಶೂನ್ಯ ವಾದಗಳು, ತತ್ತ್ವಗಳು ; ಧಾರ್ಮಿಕ ಅಥವಾ ನೈತಿಕ ವಿಷಯಗಳಲ್ಲಿ ರೂಢಿಯ ನಂಬಿಕೆಗಳನ್ನೆಲ್ಲ ಸಂಪೂರ್ಣವಾಗಿ ತಿರಸ್ಕರಿಸುವುದು, ಅಲ್ಲಗಳೆಯುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ತತ್ತ್ವ ಶಾಸ್ತ್ರ) ಯಾವುದೂ ಇಲ್ಲವೆಂದು ಸಾಧಿಸುವ ವಾದ: ಸರ್ವ ಶೂನ್ಯ ವಾದ. ಇರುವ ವ್ಯವಸ್ಥಾಕ್ರಮದಲ್ಲಿ ಯಾವುದನ್ನೂ ಒಪ್ಪದ, ೧೯ನೆಯ ಶತಮಾನದ ರಷ್ಯದಲ್ಲಿದ್ದ, ಅತ್ಯುಗ್ರ ಕ್ರಾಂತಿಕಾರಿ ಪಕ್ಷದವರ ತತ್ತ್ವಗಳು. **Níhilist** (ನಾ.); **Nihilístic** (ಗು.); **Nihílity** (ನಾ.) ನಾಸ್ತಿತ್ವ; ಶೂನ್ಯತೆ; ಗಣನೆಗೆ ಬಾರದ್ದು; ಕೇವಲ ಶೂನ್ಯ; ಸೊನ್ನೆ.

Nil ನಿಲ್ (ನಾ.) ಸೊನ್ನೆ ; ಶೂನ್ಯ ; ಏನೂ (ಸಂಖ್ಯೆ, ಮೊತ್ತ) ಇಲ್ಲದಿರುವುದು (ಮು., ವ್ಯಾಯಾಮದಾಟಗಳ ಗೆಲ್ಲಂಕಗಳಲ್ಲಿ ; ಉದಾ., Three goals to n.). **N. admirari** (L) (ಯಾವುದಕ್ಕೂ) ಆಶ್ಚರ್ಯ ಪಡದ, (ಏನನ್ನೂ) ಮೆಚ್ಚದ, —ಮನೋಭಾವ ; ಔದಾಸೀನ್ಯ ; ಉಪೇಕ್ಷೆ.

Nill ನಿಲ್ (ಕ್ರಿ. ಅಕ., ಪ್ರಥಮ ಪುರುಷ, ಏ. ವ., ವರ್ತಮಾನ ಕಾಲ, ಸಂಭಾವನಾ ರೂಪ) Will he n. he ಅವನು ಇಷ್ಟ ಪಡಲಿ, ಪಡದಿರಲಿ (ಈಗ ಸಾ., Willy-nilly)

Nilómeter ನೈಲಾಮಿಟರ್ (ನಾ.) ನೈಲ್ ನದಿ ನೆರೆಯೇರುವ ಎತ್ತರವನ್ನು ತೋರಿಸುವ ಅಳತೆಯ (ರೇಖೆಗಳನ್ನುಳ್ಳ) ಕಂಬ, ಮೊ. ದು : ನೈಲ್‌ನೆರೆ ಮಾಪಕ.

Nilótic ನೈಲಾಟಿಕ್ (ಗು.) ನೈಲ್ ನದಿಯ, ಪ್ರಾಂತದ; ಆ ಪ್ರಾಂತದ ನಿವಾಸಿಗಳ.

Nímble ನಿಂಬ್‌ಲ್ (ಗು.) ಚುರುಕು ಗತಿಯುಳ್ಳ ; ಚಟುವಟಿಕೆಯುಳ್ಳ ; ವೇಗವುಳ್ಳ [The n. shilling (ಪ್ರಾಚೀ. ಪ್ರ.) ಬೇಗ ಬೇಗ ಚಲಾವಣೆಯಾಗುವ ಷಿಲಿಂಗು]. (ಮನಸ್ಸು, ಮೊ. ಗಳ ವಿಷಯದಲ್ಲಿ) ಒಂದು ವಿಷಯದಿಂದ ಮತ್ತೊಂದಕ್ಕೆ ಸುಲಭವಾಗಿ ಪ್ರವೇಶಿಸುವ; ಅನೇಕ ವಿಷಯಗಳಲ್ಲಿ ಪರಿಶ್ರಮವುಳ್ಳ ; ಚತುರ ; ಸೂಕ್ಷ್ಮ ಗ್ರಾಹಿ. (ಮನುಷ್ಯ) ಕೈಚಳಕವುಳ್ಳ ; ನಿಪುಣ. **Nímbleness** (ನಾ.) ; **Nímbly** (ಕ್ರಿ. ವಿ.)

Nímbus ನಿಂಬಸ್ (ನಾ. ; ಬ. ವ. -bi —ಬೈ) (ದೇವರ, ಮನುಷ್ಯನ ಅಥವಾ ಒಂದು ವಸ್ತುವಿನ ಸುತ್ತಲೂ ಆವರಿಸಿಕೊಂಡಿರುವ) ಪ್ರಕಾಶ ಮೇಘ, ಪ್ರಭಾ ಮಂಡಲ. (ಚಿತ್ರದಲ್ಲಿ ಸಂತ, ಮೊ. ವರ ತಲೆಯ ಸುತ್ತಲೂ ಅಥವಾ ಮೇಲೆ ಇರುವ) ಪ್ರಕಾಶ ಬಿಂಬ ಅಥವಾ ಪ್ರಭಾ ಮಂಡಲ. (ಪ. ಶಾ.) ಮಳೆಯ ಮೋಡ. **Nímbused** (ಗು.)

Nimíety ನಿಮ್ಮೈಎಟಿ (ನಾ.) (ವಿರ. ಪ್ರ.) ಮೀರಿಕೆ ; ಹೆಚ್ಚು ; ಅತಿ ; ಅತಿರೇಕ.

Níminy-píminy ನಿಮಿನಿ ಪಿಮಿನಿ (ಗು.) ಅಸಹಜ ನಡತೆಯ ; ಕೃತಕ ರೀತಿಯ ; ಬೆಡಗಿನ ; ಠೀಕಿನ ; ಅತಿ ನಾಜೂಕಿನ ; ಗಾಂಭೀರ್ಯ ಪ್ರದರ್ಶನದ.

Nímmer ನಿಮರ್ (ನಾ.) ಕಳ್ಳ.

Nímrod ನಿಮ್‌ರಾಡ್ (ನಾ.) ಪ್ರಸಿದ್ಧ ಬೇಟೆಗಾರ.

Níncompoop ನಿನ್‌ಕಂಪೂಪ್ (ನಾ.) ಹೆಡ್ಡ ; ಗುಗ್ಗು ; ಬೆಪ್ಪ ; ಬುದ್ಧಿಯಾಗಲಿ ಯೋಗ್ಯತೆಯಾಗಲಿ ಇಲ್ಲದವನು.

Nine ನೈನ್ (ಗು., ನಾ.) ಒಂಬತ್ತು (೯, 9, IX) [N. of the men. N. of them. N. o'clock *or* n. Cost n. & six ೯ ಷಿಲಿಂಗೂ ೬ ಪೆನಿಯೂ ಬೆಲೆಯಾಯಿತು. Will be n. next birthday. N.-o'clock wind ಬಂದೂಕು ಸಿಪಾಯಿಯ ಎಡ ಪಕ್ಕದಿಂದ ಬೀಸುವ ಗಾಳಿ. Twenty-n.; N. & twenty. The N. ಒಂಬತ್ತು ಕಾವ್ಯ ದೇವಿಯರು. N. days' wonder ಒಂಬತ್ತು ದಿನದ ಆಶ್ಚರ್ಯ ; ಸ್ವಲ್ಪ ಕಾಲ ಬಹು ಆಕರ್ಷಕವಾಗಿದ್ದು ಬೇಗ ಮರೆತುಹೋಗುವಂಥದು. N. times out of ten ಸಾಮಾನ್ಯವಾಗಿ ; ಮುಕ್ಕಾಲು ಮೂರುವೀಸ ಪಾಲು. Possession is n. points of the law (Point ನೋಡಿ). Cat has n. lives (Life ನೋಡಿ). N. tenths ಹೆಚ್ಚುಕಡಮೆ ಪೂರ್ತಿಯಾಗಿ. **Ninepins** (ಚಪ್ಪಟೆ ತಳದ ಒಂಬತ್ತು ಗೂಟಗಳನ್ನು ನಿಲ್ಲಿಸಿ ಅವಕ್ಕೆ ಚೆಂಡೆಸೆದು, ಕಡಮೆಯ ಎಸೆತಗಳಿಂದ ಉರುಳಿಸಬೇಕಾದ) ಒಂದು ಬಗೆಯ ಆಟ]. (ನಾ.) ಒಂಬತ್ತನೆಯ ಸಂಖ್ಯೆ ; ಒಂಬತ್ತು ; (ಇಸ್ಪೀಟೆಲೆ) ಒಂಬತ್ತನೆಯ ಬಂದು. To the nines ಅತ್ಯಂತ ಠೀಕಾಗಿ, ಪರಿಷ್ಕಾರವಾಗಿ (ಮು., dressed up to the nines). **Nínefold** (ಗು., ಕ್ರಿ. ವಿ.) ಒಂಬತ್ತು ಮಡಿ ; ಒಂಬತ್ತರಷ್ಟು. **Ninth** (ಗು., ನಾ.) ಒಂಬತ್ತನೆಯ(ದು) ; ನವಮ (On the n. ಒಂಬತ್ತನೆಯ ತಾರೀಖಿನಲ್ಲಿ). N. part ಒಂಬತ್ತರಲ್ಲಿ ಒಂದು ಭಾಗ. N. part of a man ದರ್ಜಿ. **Nínthly** (ಕ್ರಿ. ವಿ.) ಒಂಬತ್ತನೆಯದಾಗಿ (ಎಣಿಕೆಯಲ್ಲಿ). **Níneteén** (ಗು., ನಾ.) ಹತ್ತೊಂಬತ್ತು (೧೯, 19, XIX). Is nearly n. ಹತ್ತಿರ ಹತ್ತಿರ ೧೯ ವರ್ಷ. A n.-&-sixpenny pair of shoes. N. to the dozen (Dozen ನೋಡಿ). **Nineteénth** (ಗು., ನಾ.) ಹತ್ತೊಂಬತ್ತನೆಯ(ದು). N.-hole (ಹಾಸ್ಯವಾಗಿ) ಗಾಲ್ಫ್ ಸಂಘದ ಪಾನ ಶಾಲೆ. **Nínety** (ಗು., ನಾ.) ತೊಂಬತ್ತು (೯೦, 90, XC) (N.-one, One & n. N.-first. N.-nine out of a hundred ಹೆಚ್ಚುಕಡಮೆ ಎಲ್ಲ). (ನಾ.) ತೊಂಬತ್ತನೆಯ ಸಂಖ್ಯೆ ; ತೊಂಬತ್ತು. (ಬ. ವ. ದಲ್ಲಿ) The nineties ಶಾಖಮಾಪಕ, ಮೊ. ಗಳಲ್ಲಿ ೮೯ ಮತ್ತು ೧೦೦ರ ನಡುವಿನ ಡಿಗ್ರೀಗಳು ; ಶತಮಾನದಲ್ಲಿ, ಆಯುಸ್ಸಿನಲ್ಲಿ, —ವರ್ಷಗಳು. **Nínetieth** (ಗು., ನಾ.) ತೊಂಬತ್ತನೆಯ(ದು)

Níneteén, Nínety, etc. **Nine** ನೋಡಿ.

Ninevíte ನಿನಿ(ನೆ)ವೈಟ್ (ನಾ.) ನಿನೆವೆ ಪಟ್ಟಣದವನು.

Nínny ನಿನಿ (ನಾ.) ಗುಗ್ಗು ; ಹೆಡ್ಡ ; ಬುದ್ಧಿಯಿಲ್ಲದವನು.

Níobe ನೈಒಬೀ (ನಾ.) ಪ್ರಿಯ ಬಾಂಧವರ ವಿಯೋಗದಿಂದ, ಸಂತಯಿಸಲಾಗದ ದುಃಖವುಳ್ಳ ಸ್ತ್ರೀ. **Niobéan** —ಬೀಯನ್ (ಗು.). (ಮಕ್ಕಳನ್ನು ಕಳೆದುಕೊಂಡು ಅಳುತ್ತಿದ್ದವಳು ಕಲ್ಲಾಗಿ ಮಾರ್ಪಡಿಸಲ್ಪಟ್ಟ Niobe ಎಂಬ ಗ್ರೀಕ್ ಸ್ತ್ರೀಯ ಹೆಸರಿನಿಂದ)

Nióbium ನೈಓಬಿಯಂ (ನಾ.) (ರ. ವಿ.) ಒಂದು ಲೋಹ ಮೂಲಧಾತು. **Nióbic** (ಗು.) (ರ. ವಿ.) ; **Nióbous** (ಗು.) (ರ. ವಿ.)

Nip[1] ನಿಪ್ (ಕ್ರಿ., ನಾ.) ಚಿವುಟು ; ಬಿರುಸಾಗಿ, ಕಠಿನವಾಗಿ, ಅಮುಕು, ಹಿಂಡು ; ಕಚ್ಚು ; ಕಡಿ ; (ಮೊಗ್ಗು, ಮೊ. ನ್ನು) ಚಿವುಟಿಹಾಕು (*Off* ಉಪ. ದೊಡನೆ). (—-ರ) ಬೆಳವಣಿಗೆಯನ್ನು ತಡೆ (ರೂಪ. ಸಹ) [ಮು., N. in the bud (Bud ನೋಡಿ)]. (ಶೀತ, ಚಳಿ) ಕೆಡುಕು ಮಾಡು ; ನೋವು ಕೊಡು [**Nípping** (ಗು.) ; **Níppingly** (ಕ್ರಿ. ವಿ.)]. (ಫಕ್ಕನೆ, ಮತ್ತೊಬ್ಬರಿಗೆ ಕಾಣದಂತೆ) ಎತ್ತಿಕೊ, ಹಾರಿಸಿಬಿಡು. (ಅಸಂ.) ತೀವ್ರವಾಗಿ, ಚಳಕದಿಂದ, ಫಕ್ಕನೆ, —ದಾಟಿಕೊ, ಜಾರಿಕೊ (*In, into, out, up* ಉಪ. ದೊಡನೆ) [**Níppy** (ಗು.)]. (ನಾ.) (ಕ್ರಿಯಾರ್ಥಗಳಲ್ಲಿ). ಚುಚ್ಚು ನುಡಿ ; ಕಟಕಿ ನುಡಿ ; ಕುಟುಕುವ ವ್ಯಂಗ್ಯೋಕ್ತಿ. ಗಾಳಿಯ ಶೈತ್ಯ(ದಿಂದ ಸಸ್ಯದ ಬೆಳವಣಿಗೆಗೆ ತಡೆ). **Nípper** (ಕ್ರಿಯಾರ್ಥಗಳಲ್ಲಿ). ಹಲವು ಮೀನುಜಾತಿ. ಹುಡುಗ; ಪೋರ; ಹಣ್ಣು ಹಂಪಲಿನ ಬೀದಿವ್ಯಾಪಾರಿಯ ಸೇವಕ ; ಬೀದಿ ಪೋರ. (ಬ. ವ. ದಲ್ಲಿ) ಬಲವಾಗಿ ಹಿಡಿದುಕೊಳ್ಳುವುದಕ್ಕಾಗಲಿ, ತಂತಿ, ಮೊ. ನ್ನು ಕತ್ತರಿಸುವುದಕ್ಕಾಗಲಿ ದವಡೆಯಂಥ ಭಾಗಗಳುಳ್ಳ ಆಯುಧ: ಚಿಮುಟ; ಚಿಮುಟ ಕತ್ತರಿ (ಸಾ. Pair of nippers). (ಬ. ವ. ದಲ್ಲಿ) ಮೂಗು ಕನ್ನಡಕ. ಕುದುರೆಯ ಬಾಚಿ ಹಲ್ಲು. (ವಲ್ಕವಂತದ) ನಖರ.

Nip[2] ನಿಪ್ (ನಾ., ಕ್ರಿ.) (ಚುರುಕುಗೊಳಿಸುವುದಕ್ಕಾಗಿ ಸೇವಿಸುವ) ಮದ್ಯ, ಮೊ. ಗಳ ಒಂದು ಗುಟುಕು (ಕುಡಿ)

Nípa ನೀ(ನೈ)ಪ (ನಾ.) (ಈಸ್ಟ್)ಇಂಡಿಯದ ಒಂದು ಜಾತಿಯ ತಾಳೆಯ ಮರ.

Nípper. **Nip**[1] ನೋಡಿ.

Nípple ನಿಪ್‌ಲ್ (ನಾ.) (ಸಸ್ತನಿ ಪ್ರಾಣಿಗಳ, ಮು., ಹೆಣ್ಣಿನ) ಮೊಲೆ ತೊಟ್ಟು ; ಚೂಚುಕ ; ಮಗು ಮೊಲೆಯುಣ್ಣುವಾಗ ಮೊಲೆತೊಟ್ಟಿನ ರಕ್ಷಣೆಗಾಗಿ ಹಾಕುವ ಕಾಪು : ಮೊಲೆತೊಟ್ಟು ಕಾಪು ; ಹಾಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬುಡ್ಡಿಯ ಮೊರೆತೊಟ್ಟು (ರಬ್ಬರಿನದು). (ಚರ್ಮ, ಗಾಜು, ಲೋಹ, ಮೊ. ಗಳ ಮೇಲಿನ) ಮೊರೆತೊಟ್ಟಿನಾಕಾರದ ಉಬ್ಬು, ಗುಬುಟು. ಬೆಟ್ಟದಮೇಲಿನ ಸಣ್ಣ ದುಂಡು ಉನ್ನತಿ, ಉಬ್ಬು. ತುಪಾಕಿಯ ಚಾಪಿನಲ್ಲಿ ಕೇಪು ಇಡುವುದಕ್ಕಾಗಿ ಮಾಡಿರುವ, ತೂತುಗಳುಳ್ಳ ಚಾಚು ಭಾಗ : ಕೇಪು ತೊಟ್ಟು.

Níppon ನಿಪನ್ (ನಾ.) ಜಪಾನ್. **Nippónian** (ಗು.)

Nirvána ನ(ನಿ)ರ್ವಾನ (ನಾ.) ನಿರ್ವಾಣ ; ಮುಕ್ತಿ ; ಪರಮಾನಂದ.

Nísi (L) ನೈಸೈ (ನಂ. ಅವ್ಯ.) (ನ್ಯಾ. ಶಾ.) ಹೊರತು ; ವಿನಾ [Decree, order, rule, etc. n. ಗೊತ್ತಾದ ಅವಧಿಯೊಳಗಾಗಿ ರದ್ದುಮಾಡಲು ತಕ್ಕ ಕಾರಣಗಳನ್ನು ತೋರಿಸದೆಹೋದಲ್ಲಿ ತರುವಾಯ ಅದನ್ನು ನಿರುಪಾಧಿಕ ಪಡಿಸಲಾಗುವುದೆಂದು ಕೊಡುವ ತೀರ್ಪು, ಆಜ್ಞೆ, ವಿಧಿ, ಮೊ. ದು : ಸೋಪಾಧಿಕ ನಿರ್ಣಯ (Decree ನೋಡಿ)]. N. prius ಇಂಗ್ಲಿಷ್ ನ್ಯಾಯವಿಚಾರಣೆಯ ಪದ್ಧತಿಯಲ್ಲಿ ಒಂದು ವಿಶೇಷ ಕ್ರಮ.

Nit ನಿಟ್ (ನಾ.) ಹೇನಿನ ಅಥವಾ ಇತರ ಪರೋಪಜೀವಿ ಕೀಟದ ಮೊಟ್ಟೆ : ಸೀರು.

Níton ನೈಟಾನ್ (ನಾ.) ರೇಡಿಯಂ ಧಾತು ತಾನಾಗಿ ಒಡೆಯುವಲ್ಲಿ ಮೊದಲು ಉತ್ಪನ್ನವಾಗುವ ಹಬೆ : 'ನೈಟಾನ್' (ಈಗ Radon ಎಂದು ಹೆಸರು)

Nítrate. **Nitre** ನೋಡಿ.

Nítre ನೈಟರ್ (ನಾ.) ಪೆಟ್ಲುಪ್ಪು ; ಕಡ್ಡಿಯುಪ್ಪು ; 'ಪೊಟ್ಯಾಸಿಯಂ ನೈಟ್ರೇಟ್' ಲವಣ : 'ನೈಟರ್'. Cubic n. 'ಸೋಡಿಯಂ ನೈಟ್ರೇಟ್' ಲವಣ. **Nítrate** ನೈಟ್ರೇಟ್ (ನಾ.), —ಟ್ರೇಟ್ (ಕ್ರಿ. ಸಕ.) ನೈಟ್ರಿಕಾಮ್ಲದೊಡನೆ ಒಂದು ಕ್ಷಾರವು ಸಂಯೋಗಹೊಂದಿ ಆದ ಲವಣ ; ನೈಟ್ರಿಕಾಮ್ಲವು ಮದ್ಯಸಾರದೊಡನೆ ಕ್ರಿಯಾಪರಿಣಾಮ ಹೊಂದಿ ಆದ ಪದಾರ್ಥ : ನೈಟ್ರೇಟು. Potassium n. ಅಥವಾ Sodium n. (ಎಂಬುದರ ಸಂಕ್ಷಿಪ್ತ). (ಕ್ರಿ.) ನೈಟ್ರಿಕಾಮ್ಲದಿಂದ ಸಂಸ್ಕರಿಸು ; —ದೊಡನೆ ಸಂಯೋಗ ಮಾಡು ; —ದಿಂದ ಶೋಧನ ಮಾಡು. **Nitrátion** (ನಾ.) ; **Nítric** (ಗು.) ಪೆಟ್ಲುಪ್ಪಿನ ; ಪೊಟ್ಯಾಸಿಯಂ ನೈಟ್ರೇಟಿನ ; ನೈಟರಿನ. N. acid ನೈಟ್ರಿಕಾಮ್ಲ (ಪಾರದರ್ಶಕವಾಗಿಯೂ ವರ್ಣರಹಿತವಾಗಿಯೂ ಘಾಟುಳ್ಳದ್ದಾಗಿಯೂ ಪದಾರ್ಥಗಳನ್ನು ಬಲವಾಗಿ ತಿಂದುಹಾಕುವುದಾಗಿಯೂ ಸುಡುವುದಾಗಿಯೂ ಇರುವ ಒಂದು ದ್ರವ). **Nítrify** (ಕ್ರಿ. ಸಕ.) ಸಾರಜನಕವನ್ನು (ಒಂದರೊಡನೆ) ಅನ್ಯೋನ್ಯವಾಗಿ ಮಿಲನ ಮಾಡು, ಸಂಯುಕ್ತ ಮಾಡು ; ನೈಟ್ರಸ್ ಅಥವಾ ನೈಟ್ರಿಕ್ ಆಮ್ಲವಾಗಿ ಅಥವಾ ಅವುಗಳ ಲವಣಗಳಾಗಿ ಪರಿವರ್ತಿಸು. **Nitrificátion** (ನಾ.) ; **Nítrite** (ನಾ.) ನೈಟ್ರಸ್ ಆಮ್ಲದೊಡನೆ ಒಂದು ಕ್ಷಾರ ಅಥವಾ ಮದ್ಯಸಾರ ಸಂಯೋಗ ಹೊಂದಿ ಆದ ಸಂಯುಕ್ತ : ನೈಟ್ರೈಟು. **Nítrous** (ಗು.) ಪೆಟ್ಲುಪ್ಪಿನ ; ಪೆಟ್ಲುಪ್ಪಿನಂಥ ; ಪೆಟ್ಲುಪ್ಪಿನಿಂದ ವ್ಯಾಪಿತವಾದ. N. acid ನೈಟ್ರಿಕಾಮ್ಲಕ್ಕಿಂತ ಕಡಮೆಯ ಆಮ್ಲಜನಕವಿರುವ ಆಮ್ಲ : ನೈಟ್ರಸ್ ಆಮ್ಲ. N. oxide (ಸ್ಪರ್ಶಜ್ಞಾನವಿಲ್ಲದಂತೆ ಮಾಡಲು ಉಪಯೋಗಿಸುವ) ನೈಟ್ರಸ್ ಆಕ್ಸೈಡ್ (=Laughing gas)

Nitr(o)- ನೈಟ್ರೊ— (ಸ. ಪೂ. ಪ.) ನೈಟ್ರಿಕಾಮ್ಲ, ನೈಟ್ರಾಕ್ಸಿಲ್, ನೈಟರ್, ಅಥವಾ ನೈಟ್ರೊಜೆನ್ (ಸಾರಜನಕ)—ಇವುಗಳಲ್ಲೊಂದರ, —(ಒಂದು) ಇರುವ, —(ಒಂದ)ರಿಂದ ಮಾಡಿದ. **-ácid** ಒಂದು ಜೈವಿಕಾಮ್ಲದೊಡನೆ ನೈಟ್ರಿಕಾಮ್ಲ ಸೇರಿ ಆದ ಸಂಯುಕ್ತ. **-cómpound** ನೈಟ್ರಿಕಾಮ್ಲದ ಕ್ರಿಯೆಯಿಂದ ಆದ ಸಂಯುಕ್ತ. **-explósive** ನೈಟ್ರಿಕಾಮ್ಲದ ಮೂಲಕ ತಯಾರಿಸಿದ ಸಿಡಿಮದ್ದು. **-glýcerine** ನೈಟ್ರಿಕ್ ಮತ್ತು ಸಲ್ಫ್ಯೂರಿಕ್ ಆಮ್ಲಗಳ ಮಿಶ್ರಣಕ್ಕೆ ಗ್ಲಿಸರಿನ್ನನ್ನು ಸೇರಿಸಿ ತಯಾರಿಸಿದ, ಬಹಳ ತೀವ್ರವಾಗಿ ಸಿಡಿಯುವ, ಎಣ್ಣೆಯಂಥ, ಹಳದಿಯ ದ್ರವ : ನೈಟ್ರೊಗ್ಲಿಸರಿನ್. **-powder** ನೈಟ್ರಿಕಾಮ್ಲದಿಂದ ತಯಾರಿಸಿದ ಬಂದೂಕು ಮದ್ದು. **-sulphúric** ನೈಟ್ರಿಕ್ ಮತ್ತು ಸಲ್ಫ್ಯೂರಿಕ್ ಆಮ್ಲಗಳ ಮಿಶ್ರಣದಿಂದ ಆದ. **Nitróxyl** ಸಾರಜನಕ ಆಮ್ಲಜನಕಗಳ ರಾಸಾಯನಿಕ ಘಟಕ (No_2)

Nítrogen ನೈಟ್ರೊಜೆನ್ (ನಾ.) ಬಣ್ಣವೂ ರುಚಿಯೂ ವಾಸನೆಯೂ ಇಲ್ಲದ, ವಾಯು ಮಂಡಲದಲ್ಲಿ ಸೇಕಡ ೮೦ ಭಾಗವಿರುವ, ಒಂದು ಸ್ಥಿರಾನಿಲ : ಸಾರಜನಕ ; ನೈಟ್ರೊಜೆನ್. **Nitrógenous** ನೈಟ್ರಾಜಿನಸ್ (ಗು.)

Nítwit ನಿಟ್‌ವಿಟ್ (ನಾ.) ಅಲ್ಪ ಮತಿ ; ದಡ್ಡ. **Nítwitted** (ಗು.)

Nix[1] ನಿಕ್ಸ್ (ಭಾವ. ಅವ್ಯ.) (ಅಸಂ.) ಯಜಮಾನ, ಮೊ. ರು ಬರುತ್ತಿದ್ದಾರೆಂದು ಸೂಚಿಸಲು ಸಹೋದ್ಯೋಗಿಗಳಿಗೆ ಕೊಡುವ ಎಚ್ಚರಿಕೆ.

Nix[2] ನಿಕ್ಸ್ (ನಾ., ಸ್ತ್ರೀ. **Nixie**[1] ನಿಕ್ಸಿ) ಜಲ ವೇತಾಳ.

Nix[3] ನಿಕ್ಸ್ (ನಾ.) (ಅಸಂ.) ಏನೂ ಇಲ್ಲ ; ಶೂನ್ಯ. (ಅಮೆ. ಸಂ. ; ಅಂಚೆ) ಸರಿಯಾದ ವಿಳಾಸ ಬರೆಯದೆ ಇರುವುದರಿಂದ ಪಾವತಿ ಮಾಡಲಾಗದ ಅಂಚೆಯ ಸನಗು (=**Níxie**[2], **Níxy**)

Nizám ನಿಜಾಮ್ (ನಾ.) ಹೈದರಾಬಾದಿನ ದೊರೆ. ತುರ್ಕಿಯ ನಿಯತ ಸೈನ್ಯ(ದ ಸಿಪಾಯಿ, ಸಿಪಾಯಿಗಳು)

No ನೋ [ಅವ್ಯಯ, ನಾ. (ಬ. ವ. noes)] ಇಲ್ಲ ; ಅಲ್ಲ ; ಆಗುವುದಿಲ್ಲ ; ಸರಿಯಲ್ಲ ; ನ(ಹಿ) (ಮೊ. ಉತ್ತರ) [(ಹೆಚ್ಚಾಗಿ ಒತ್ತಿ ಹೇಳುವಲ್ಲಿ) A man could not lift it, no, nor half a dozen]. (ನಾ.) No ಎಂಬ ಪದ ; ಇಲ್ಲ ; ಅಲ್ಲ (ಎಂಬ ಉತ್ತರ). [Two noes make a yes ಎರಡು ನಕಾರ ಒಂದು ಅಂಗೀಕಾರ ; ಎರಡು ನಾಸ್ತಿ ಒಂದು ಅಸ್ತಿ. Will not take no for an answer 'ಇಲ್ಲ' ಎಂದು ಹೇಳಿದರೆ ಒಪ್ಪುವುದಿಲ್ಲ]. (ಬ. ವ. ದಲ್ಲಿ) ಒಂದು ನಿರ್ಣಯಕ್ಕೆ ವಿರೋಧಿಗಳು, ವಿರುದ್ಧ ಮತದಾರರು (The noes have it ವಿರೋಧಿಗಳು ಬಹು ಮತದಲ್ಲಿದ್ದಾರೆ)

No (ಗು.) (ಯಾವುದೂ) ಅಲ್ಲದ, ಇಲ್ಲದ. No circumstances could justify it ಯಾವ ಸಂದರ್ಭದಲ್ಲೂ ಅದನ್ನು ಸಮರ್ಥಿಸಲಾಗುವುದಿಲ್ಲ. No date (ಸಂಕ್ಷಿಪ್ತ : n.d.) (ಪುಸ್ತಕಭಂಡಾರದ ಪಟ್ಟಿಗಳು, ಮೊ. ಗಳಲ್ಲಿ) ತಾರೀಖು ನಮೂದಿಸಿಲ್ಲದ. No song no supper ಹಾಡಿಲ್ಲ ಎಂದರೆ ಊಟವೂ ಇಲ್ಲ. No end (End ನೋಡಿ). By no means (Mean[1] ನೋಡಿ). Is no distance ದೂರವೇನಲ್ಲ ; ಬಹು ಸಮೀಪ. These opinions or rather no opinions ಈ ಅಭಿಪ್ರಾಯಗಳು ಅಥವಾ ಅಭಿಪ್ರಾಯವೇ ಅಲ್ಲದವುಗಳು. No surrender ಶರಣಾಗತರಾಗುವುದಿಲ್ಲ ; ಬಿಟ್ಟುಕೊಡುವುದಿಲ್ಲ. A no-confidence vote ಅಪನಂಬಿಕೆಯ, ಅವಿಶ್ವಾಸದ, —ಮತ, ವೋಟು. No cards, no flowers ಅಂತ್ಯಸಂಸ್ಕಾರಕ್ಕೆ ಆಹ್ವಾನ ಕಳುಹಿಸುವುದಿಲ್ಲ, ಪುಷ್ಪಕಾಣಿಕೆ ಕಳುಹಿಸಬೇಕಾಗಿಲ್ಲ. No ball (ಕ್ರಿಕೆಟ್) ನಿಯಮ ವಿರುದ್ಧವಾಗಿ ಎಸೆದ ಚೆಂಡು (ಎಂದು ತೀರ್ಪುಗಾರನ ಘೋಷಣೆ). (ಕ್ರಿ.) (no-b.) ಎಸೆಗಾರನು ಅನ್ಯಾಯದೆಸೆತ ಮಾಡಿದನೆಂದು ಹೇಳು. No-being ಅಸ್ತಿತ್ವವಿಲ್ಲದಿರುವುದು. **Nóbody** ನೋಬಡಿ (ನಾ.) ಒಬ್ಬನೂ ಅಲ್ಲ ; ಯಾವನೂ ಅಲ್ಲ [Everybody's business is nobody's business ಎಲ್ಲರಿಗೂ ಸೇರಿದ ಕೆಲಸ ಯಾರ ಕೆಲಸವೂ ಅಲ್ಲ. Nobody did his work (ಅಕ್ರಮ ಪ್ರ. their work) better ಅವನಷ್ಟು ಚೆನ್ನಾಗಿ ಯಾವನೂ ತನ್ನ ಕೆಲಸವನ್ನು ಮಾಡಲಿಲ್ಲ]. ಗಣನೆಗೆ ಬಾರದವನು ; ಅಧಿಕಾರ, ಪದವಿ, ಸ್ಥಾನ, —ಇಲ್ಲದವನು ; ಅನಾಮಧೇಯ. No bon (ಸೈನಿಕ ಅಸಂ.) ಪ್ರಯೋಜನವಿಲ್ಲ ; ಉಪಯೋಗವಿಲ್ಲ. No doubt, No fear (ಆಯಾ ಪದವನ್ನು ನೋಡಿ). No go [Go (ನಾ.) ನೋಡಿ]. Nohow ಹೇಗೂ ಇಲ್ಲ ; ಖಂಡಿತವಾಗಿಯೂ ಇಲ್ಲ (Be, feel, look, nohow ಸ್ವಸ್ಥವಿಲ್ಲದಿರು). No man ಯಾವನೂ ಅಲ್ಲ ; ಒಬ್ಬನೂ ಅಲ್ಲ. [No man's land ಪಾಳು ನೆಲ ; ಯಾರಿಗೂ ಸೇರಿಲ್ಲದ, ವಿವಾದಾಸ್ಪದವಾದ, — ನೆಲ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಮು., ಸೈನ್ಯ) ಪಕ್ಷ ಪ್ರತಿಪಕ್ಷಗಳ ಎದುರು ಬದುರು ಕಂದಕಗಳ ನಡುವೆ ಇರುವ ನೆಲ]. No meaning ಅರ್ಥವಿಲ್ಲ; ಶುದ್ಧ ಅವಿವೇಕ. No one man could lift it ಯಾವೊಬ್ಬನೂ ಅದನ್ನು ಎತ್ತಲಾರನಲ್ಲ. No side (ಕಾಲ್ಚೆಂಡಾಟ) ಆಟದ ಮುಕ್ತಾಯ (ಎಂದು ತೀರ್ಪುಗಾರನ ಘೋಷಣೆ). No thoroughfare ಹಾದಿ, ಬೀದಿ, ಮೊ. ಗಳಲ್ಲ ಮತ್ತೊಂದು ಕೊನೆ ಮುಚ್ಚಲಾಗಿದೆಯೆಂದಾಗಲ ಹಾದು ಹೋಗಲು ಅನುಮತಿಯಿಲ್ಲವೆಂದಾಗಲ ಸೂಚನೆ, ತಿಳಿವಳಿಕೆ: ಭಾಟಾ ಮಾರ್ಗವಲ್ಲ; ಸಾಮಾನ್ಯ ಸಂಚಾರದ ದಾರಿಯಲ್ಲ; ಇಂಥ ದಾರಿ, ರಸ್ತೆ; (ಹೊರಗಿನವರಿಗೆ) ಪ್ರವೇಶವಿಲ್ಲದ ರಸ್ತೆ. No trump(s) (ಬ್ರಿಡ್ಜ್ ಇಸ್ಪೀಟಾಟದಲ್ಲಿ) ತುರುಪಿಲ್ಲದಾಟ (ಎಂದು ಘೋಷಿಸು). No-trumper ತುರುಪಿಲ್ಲದಾಟ ಹೇಳಬಹುದಾದ, ಘೋಷಿ ಘೋಷಿಸು). Noway(s), Nowise ಯಾವ ವಿಧದಲ್ಲೂ ಇಲ್ಲ; ಸಿದ, —ಕೈ. Nowhence ಎಲ್ಲಿಂದಲೂ ಇಲ್ಲ. No whit ಸ್ವಲ್ಪವೂ ಇಲ್ಲವೇ ಇಲ್ಲ. ಇಲ್ಲ; ಇಲ್ಲವೇ ಇಲ್ಲ (ಸಾ., ತರ ರೂಪದ ಗುಣವಾಚಕಗಳೊಡನೆ). No-whither ಎಲ್ಲಿಗೂ ಇಲ್ಲ. No wonder (Wonder ನೋಡಿ)

No (ಕ್ರಿ. ವಿ.) [(ಯಾವಾಗಲೂ or ಪದದ ಮುಂದೆ, ಪಕ್ಷಾಂತರವಾಗಿ) Whether or no ಇರಲಿ, ಇರದಿರಲಿ, —ಎರಡು ಸಂದರ್ಭಗಳಲ್ಲೂ; Tell me whether or no ಉಂಟೋ ಅದರೂ ಆಗದಿದ್ದರೂ. ಇಲ್ಲವೋ ಹೇಳಿಬಿಡು. Pleasant or no, it is true ಹಿತವೋ ಅಹಿತವೋ, ಅದಂತೂ ನಿಜ. No compree (ಸೈನಿಕ ಅಸಂ.) ಅರ್ಥವಾಗುವುದಿಲ್ಲ]. (ಯಾವಾಗಲೂ ತರ ರೂಪಗಳೊಡನೆ) ಸ್ವಲ್ಪವೂ, ಕೊಂಚವೂ, ಇಲ್ಲ: Is no better than she should be ಅವಳು ಅಷ್ಟೇನೂ ಯೋಗ್ಯಳಲ್ಲ. No sooner had he said it than ಅವನು ಹೇಳಿದ ಕೂಡಲೆ—. No sooner said than done ಹೇಳಿದ್ದೇ ತಡ, ಆಗಿಹೋಯಿತು. No longer [Long[1] (ಕ್ರಿ. ವಿ.) ನೋಡಿ]. No less (than) (—ಗಿಂತ) ಕಡಮೆಯಿಲ್ಲದಷ್ಟು (Gave me £ 50, no less, no less than £ 50. No more (ನಾ.) Have no more to say ಇನ್ನು ಹೆಚ್ಚಿಗೆ ಹೇಳುವುದೇನೂ ಇಲ್ಲ. (ಗು.) No more wine? ಇನ್ನಷ್ಟು ಮದ್ಯವಿಲ್ಲವೊ? (ಕ್ರಿ. ವಿ.) Is no more ಜೀವದಿಂದಿಲ್ಲ; ತೀರಿಹೋದನು. You did not come, no more did he ನೀನು ಬರಲಿಲ್ಲ, ಅವನೂ ಬರಲಿಲ್ಲ.

Nóah ನೋಅ (ನಾ.) ನೋವ (ಯೆಹೂದ್ಯರ ಒಬ್ಬ ಕುಲಪತಿ). N.'s ark (ಬೈಬಲ್) ಮಹಾ ಪ್ರಳಯದಲ್ಲಿ ನೋವನನ್ನೂ ಅವನ ಕುಟುಂಬವನ್ನೂ ಇತರ ಪ್ರಾಣಿಗಳನ್ನೂ ಉಳಿಸಿದ ಹಡಗು; (ಇದರ ಮಾದರಿಯಲ್ಲಿ ಮಾಡಿದ) ಮಕ್ಕಳ ಆಟದ ಹಡಗು. ದೊಡ್ಡದಾದ, ಅಥವಾ ಅಡಕವಾಗಿಲ್ಲದ, ಅಥವಾ ಹಳೆಯ ಮಾದರಿಯ, —ಪೆಠಾರಿ, ವಾಹನ. ಒಂದು ಸಣ್ಣ ಇಚ್ಚಿಪ್ಪಿನ ಪ್ರಾಣಿ. (ಹಾರಿ ಹೋಗುತ್ತಿರುವ ನೋವದಿಂದ ಕಳಚಿ ಬೇರೆಯಾದ) ತುಂಡು ಮೋಡ. **Noáchian** ನೋಏಕಿಯನ್ (ಗು.), **Noáchic** ನೋಅಕ್ಕಿಕ್ (ಗು.) ನೋವನ; —ಕಾಲದ. (ರೂಪ.) ಬಹಳ ಪುರಾತನದ.

Nob[1] ನಾಬ್ (ನಾ., ಕ್ರಿ. ಸಕ.) (ಅಸಂ.) ತಲೆ. (ಒಂದು ತರದ ಇಸ್ಪೀಟಾಟ ದಲ್ಲಿ) ಮಗುಚಿ ಎತ್ತಿದ ಎಲೆಯ ರಂಗಿನ ಗುಲಾಮ. (ಕ್ರಿ.) (ಮುಷ್ಟಿ ಯುದ್ಧ) ತಲೆಯಮೇಲೆ ಹೊಡೆ.

Nob[2] ನಾಬ್ (ನಾ.) (ಅಸಂ.) (ಸಮಾಜದಲ್ಲಿ) ಮೇಲು ದರ್ಜೆಯವನು, ಐಶ್ವರ್ಯವಂತ. **Nóbby** (ಗು.) (ಅಸಂ.) (—ಗೆ) ತಕ್ಕ; ಸುಟಿ ಯಾದ; ಸೊಗಸಾದ.

Nóbble ನಾಬ್‌ಲ್ (ಕ್ರಿ. ಸಕ.) (ಅಸಂ.) (ಒಂದು ಜೂಜುಕುದುರೆ) ಗೆಲ್ಲ ದಂತೆ ಮಾಡಲು (ಅದಕ್ಕೆ ಮದ್ದಿಟ್ಟೊ ಕಾಲು ಊನಮಾಡಿಯೊ) ಕೃತ್ರಿಮ ನಡಸು. (ಲಂಚ, ಮೊ.) ಅನ್ಯಾಯ ಮಾರ್ಗಗಳಿಂದ (ಒಬ್ಬನನ್ನು, ಮೊ. ಗಿ) ತನ್ನ ಕಡೆಗೆ ಒಲಿಸಿಕೊ. (ಹಣ, ಮೊ. ನ್ನು) ಅಪ್ರಾಮಾಣಿಕತೆ ಯಿಂದ ಪಡೆ; ಕದಿ. (ಅಪರಾಧಿಯನ್ನು) ಹಿಡಿ.

Nóble ನೋಬ್‌ಲ್ (ಗು., ನಾ.) (ಅಂತಸ್ತಿನಿಂದ, ಬಿರುದಿನಿಂದ, ಅಥವಾ ಹುಟ್ಟಿನಿಂದ) ಶ್ರೇಷ್ಠ, ಯಶಸ್ವಿ, ಕೀರ್ತಿವಂತ; ಕುಲೀನ; ಶ್ರೀಮಂತ; ಉದಾತ್ತ ಧೈರ್ಯಗಳು, ಉತ್ತಮ ಶೀಲ ಸ್ವಭಾವಗಳು, —ಉಳ್ಳ [**Noble-minded** (ಗು.); **Noble-míndedness** (ನಾ.)]. ಉದಾರ ಭಾವನೆಯ; ಉದಾತ್ತ ನೀತಿಯ; ಆರ್ಯ; ಘನ; ಉಜ್ವಲ; ವಿಭವವುಳ್ಳ; ಬಹು ಗಂಭೀರವಾದ; ಪ್ರಭಾವದಿಂದ ಕೂಡಿದ; ಅತ್ಯಂತ ಸೊಗಸಾದ; ಅತ್ಯುತ್ತಮವಾದ; ಶ್ಲಾಘ್ಯವಾದ (A n. horse, cellar, etc.). (ನಾ.) = Nobleman. ಬಳಕೆಯಲಿದ ಒಂದು ಹಳೆಯ ನಾಣ್ಯ (ಸು., ೬ ಷಿಲಿಂಗು, ೮ ಪೆನಿ ಬೆಲೆಯುಳ್ಳದ್ದು). **Nóbleman** ಕುಲೀನ; ದೊಡ್ಡ ಮನೆತನದವನು; ಶ್ರೀಮಂತ (ವರ್ಗದವನು); ಪದವಿಯುಳ್ಳವನು. **Nóblewoman** (ಸ್ತ್ರೀ.); **Nóbleness** (ನಾ.); **Nóbly** (ಕ್ರಿ. ವಿ.). **Nobíliary** ನೊಬಿಲಿಯರಿ (ಗು.) ಶ್ರೀಮಂತಿ ಕೆಯ; ಉತ್ತಮ ವರ್ಗದ [N. particle ಒಕ್ಕಣೆಯಲ್ಲಿ ಗೌರವ ಸೂಚಕ ಉಪಸರ್ಗ: ಉದಾ. (ಫ್ರೆಂಚ್ *de*, ಜರ್ಮನ್ *von*). N. pride, rank, etc.]. **Nobílity** (ನಾ.) ಉದಾತ್ತ ಗುಣ; ದೊಡ್ಡ ಮನಸ್ಸು; ಘನತೆ; ಶ್ರೀಮಂತ ಪದವಿ; ಗೌರವದ ಅಂತಸ್ತು; ಕುಲೀನತೆ. The n., A n. ಶ್ರೀಮಂತ ವರ್ಗ(ದವರು). **Noblésse** (F) ನೊಬ್ಲೆಸ್ (ನಾ.) (ಇಂಗ್ಲೆಂಡು ಹೊರತು ಉಳಿದ ದೇಶಗಳ, ಮು., ಫ್ರಾನ್ಸಿನ) ಶ್ರೀಮಂತ(ವರ್ಗದವ)ರು. N. oblige (—ಒಬ್ಲೀಷ್) ಪದವಿಯೊಂದಿಗೆ ಜವಾಬ್ದಾರಿಯೂ ಸೇರಿದೆ.

Noblésse. **Noble** ನೋಡಿ.

Nock[1] ನಾಕ್ (ನಾ., ಕ್ರಿ. ಸಕ.) ಬಿಲ್ಲಿನ ತುದಿಗಳಲ್ಲಿ (ಜಾರದಂತೆ) ಹೆದೆ ಯನ್ನು ಹಿಡಿದಿರಲು ಮಾಡಿರುವ ಕಚ್ಚು; ಬಿಲ್ಲಿನ ಕೊಪ್ಪು; ಬಿಲ್ಲಿನ ಹೆದೆ ಕೂಡುವಂತೆ ಮಾಡಿರುವ ಅಂಬಿನ (ಕೊಂಬುತುದಿಯ) ಕಚ್ಚು. (ಕ್ರಿ.) ಅಂಬು ಹೂಡು; ಬಾಣ ಸಂಧಾನ ಮಾಡು.

Nock[2] ನಾಕ್ (ನಾ.) ಕೆಲವು ಹಾಯಿಗಳ ಮುಂಭಾಗದ ಮೇಲ್ಮೂಲೆ.

Noct(i)- ನಾಕ್ಟ್—, ನಾಕ್ಟಿ— (ಸ. ಪೂ. ಪ.) ರಾತ್ರಿ—. **Noct-ámbulant** ರಾತ್ರಿ ಸಂಚಾರ ಮಾಡುವ; ರಾತ್ರಿ ಚರ. **Nocti-flórous** ರಾತ್ರಿ ಅರಳುವ ಹೂವುಳ್ಳ. **Noctilúca** ರಾತ್ರಿ (ಸಮುದ್ರ ದಲ್ಲಿ) ಬೆಳಕು ಸೂಸುವ ಒಂದು ಅಣುಪ್ರಾಣಿ: ಇರುಳ್ಮಿಂಚಿ. **Noctí-vagant, -vagous** ರಾತ್ರಿ ಅಲೆಯುವ.

Nóctule ನಾಕ್ಟ್ಯೂಲ್ (ನಾ.) ಬ್ರಿಟನ್ನಿನ ಅತ್ಯಂತ ದೊಡ್ಡ ಬಾವಲಿ ಜಾತಿ.

Noctúrnal ನಾಕ್ಟರ್ನಲ್ (ಗು.) ರಾತ್ರಿಯ; ರಾತ್ರಿಯಲ್ಲಿಯ; ರಾತ್ರಿ —ಮಾಡಿದ, ನಡೆಯುವ, ಚಟುವಟಿಕೆಯ.

Nócturne ನಾಕ್ಟರ್ನ್ (ನಾ.) (ಸಂ.) ರಾತ್ರಿ ಹಾಡುವ ಭಕ್ತಿ ಗೀತ, ಪ್ರಣಯ ಗೀತ, ಗಾನ. (ಚಿತ್ರ ಕಲೆ) ರಾತ್ರಿ ದೃಶ್ಯ.

Nod ನಾಡ್ (ಕ್ರಿ., ನಾ.) (ವಂದನೆ, ಒಪ್ಪಿಗೆ, ಅಪ್ಪಣೆ—ಇವನ್ನು ಸೂಚಿಸಲು) ತಲೆ ಅಲುಗಿಸು, ತೂಗು [Nodding acquaintance (ವ್ಯಕ್ತಿಯ, ವಿಷಯದ) ಅಲ್ಪ ಪರಿಚಯ]. ತೂಕಡಿಸು; ಮಂಪರದಿಂದಿರು; ಎಚ್ಚರಿಕೆ ಯಿಲ್ಲದೆ ಸ್ವಲ್ಪ ತಪ್ಪು ಮಾಡು (Homer sometimes nods ಎಂಥ ಪ್ರಭಾವಶಾಲಿಯಾದರೂ ಒಮ್ಮೊಮ್ಮೆ ತೂಕಡಿಸುವುದುಂಟು, ಪ್ರಮಾದಕ್ಕೊಳ ಗಾಗುತ್ತಾನೆ, ನೀರಸವಾಗಬಹುದು). (ಕಟ್ಟಡ, ಮೊ. ಗಳ ವಿಷಯದಲ್ಲಿ, ಮತ್ತು ರೂಪ. ಸಹ) ಓಲು, (ಒಂದು ಕಡೆಗೆ) ಬಾಗು (ಮು., Nods to its fall ಬೀಳುವಷ್ಟು ಓರೆಯುತ್ತದೆ). (ಒಪ್ಪಿಗೆ, ಮೊ. ನ್ನು) ತಲೆ ತೂಗಿ ಸೂಚಿಸು. (ನಾ.) (ಕ್ರಿಯಾರ್ಥಗಳಲ್ಲಿ). The empire was at his n. ಆ ಸಾಮ್ರಾಜ್ಯವು ಅವನ ಶಿರಃ ಕಂಪನಕ್ಕೆ ಅಧೀನವಾಗಿತ್ತು. Land of Nod ನಿದ್ದೆ. **Nóddle**[1] ನಾಡ್‌ಲ್ (ಕ್ರಿ. ಸಕ.) (ತಲೆ ಯನ್ನು ಬೇಗ ಬೇಗ ಅಥವಾ ಸ್ವಲ್ಪ ಮಟ್ಟಿಗೆ) ಆಡಿಸು, ತೂಗು.

Nóddle[1]. **Nod** ನೋಡಿ.

Nóddle[2] ನಾಡ್‌ಲ್ (ನಾ.) (ಬಳ. ಮಾ.) ತಲೆ.

Nóddy ನಾಡಿ (ನಾ.) ಹೆಡ್ಡ; ದಡ್ಡ; ಗುಗ್ಗು. ಉಷ್ಣ ವಲಯದ ಒಂದು ಸಮುದ್ರಪಕ್ಷಿ ಜಾತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Node ನೋಡ್ (ನಾ.) (ಬೇರಿನ ಅಥವಾ ಕೊಂಬೆಯ ಮೇಲಿನ) ಗಂಟು, ಉಬ್ಬು. ಎಲೆ ಹೊರಡುವ ಸ್ಥಳ ; ಗೆಣ್ಣು ; ಪರ್ವ. (ಮು., ವಾತ ರೋಗದಿಂದ ಕೀಲಿನಲ್ಲಾದ) ಗಟ್ಟಿ ಗಂತಿ. ಒಂದು ಗ್ರಹಪಥ ಮತ್ತು ಕ್ರಾಂತಿವೃತ್ತ ಸಂಧಿಸುವ, ಅಥವಾ ಖಗೋಳದ ಎರಡು ಮಹಾ ವೃತ್ತಗಳು ಪರಸ್ಪರ ಸಂಧಿಸುವ, ಬಿಂದು : ಸಂಪಾತ [**Nódical** (ಗು.)]. ಸ್ಪಂದಿಸುತ್ತಿರುವ ವಸ್ತುವಿನಲ್ಲಿ ಸ್ಥಾಯೀ ಬಿಂದು ಅಥವಾ ಸ್ಥಾಯೀ ರೇಖೆ. ಒಂದು ವ್ಯೂಹದ ಕೇಂದ್ರ (ಬಿಂದು). ಒಂದು ವಕ್ರ ರೇಖೆ ತನ್ನನ್ನು ತಾನೇ ಸಂಧಿಸುವ ಬಿಂದು ; ಛೇದ ಬಿಂದು ; ಸಂಧಿ ಸ್ಥಾನ. **Nódal** (ಗು.) ; **Nodóse** ನೊಡೋಸ್ (ಗು.) ಗಂಟು ಗಂಟಾದ; ಗುಬುಟುಗಳುಳ್ಳ. **Nodósity** ನೊಡಾಸಿಟಿ (ನಾ.) ಗಂಟು ಗಂಟಾಗಿರುವುದು ; ಗಂಟು ; ಉಬ್ಬು ; ಗಂತಿ ; ಗುಬುಟು. **Nódule** ನಾಡ್ಯೂಲ್ (ನಾ.) (ಯಾವುದಾದರೂ ಪದಾರ್ಥದ, ಖನಿಜದ) ಸಣ್ಣ ಗುಂಡು, ಗೋಲಿ. (ಸಸ್ಯದಲ್ಲಿಯ) ಸಣ್ಣ ಗಂಟು ; ದೇಹದಲ್ಲಿಯ ಸಣ್ಣ ಗಂತಿ, ಗಡ್ಡೆ. **Nódular** (ಗು.) ; **Nódulated** (ಗು.) ; **Nódulose** (ಗು.) ; **Nódulous** (ಗು.) ಸಣ್ಣ ಸಣ್ಣ ಗಂಟುಗಳುಳ್ಳ. **Nodulátion** (ನಾ.) ; **Nódus** ನೋಡಸ್ (ನಾ. ; ಬ. ವ. -di —ಡೈ) (ಕಥಾ ವಸ್ತು, ಮೊ. ಗಳಲ್ಲಿ) ಗಂಟು (ವಿಷಯ), ಕ್ಲಿಷ್ಟ ವಿಷಯ, ತೊಡಕು, ಸಮಸ್ಯೆ.

Nodóse, Nódule, Nódus, etc. **Node** ನೋಡಿ.

Noél ನೋಎಲ್ (ಭಾವ. ಅವ್ಯ.) = Nowel.

Noétic ನೊಎಟಿಕ್ (ಗು., ನಾ.) ಪ್ರಜ್ಞೆಯ ; ಬುದ್ಧಿಮಾತ್ರ ಗ್ರಾಹ್ಯ ವಾದ ; ತರ್ಕಾತ್ಮಕ ಪರನಾದ ; ವಿಮರ್ಶನ ಪ್ರಕೃತಿಯ. (ನಾ. ; ಏ. ವ. ಅಥವಾ ಬ. ವ.) ಬುದ್ಧಿ ಶಾಸ್ತ್ರ.

Nog ನಾಗ್ (ನಾ., ಕ್ರಿ. ಸಕ.) ಮರದ ಗೂಟ ; ಸಣ್ಣ ಮೊಳೆ ; (ಅನೇಕ ಕೆಲಸಗಳಿಗೆ ಒದಗುವ) ಮರದ ತುಂಡು ; ಒಂದು ಮರದಮೇಲಿನ ಮೊದ್ದು, ಮೋಟು. (ಕ್ರಿ.) ಮೊಳೆ, ಗೂಟ, ಮೊ. ಗಳಿಂದ ಭದ್ರಪಡಿಸು. ಮರದ ಚೌಕಟ್ಟು, ಜಂತೆ, ಮೊ. ಗಳ ಮಧ್ಯೆ ಇಟ್ಟಿಗೆ, ಮೊ. ಗಳಿಂದ ಕಟ್ಟು. **Nógging** (ನಾ.) ಇಂಥ ಕಟ್ಟಡ.

Noise ನಾಯ್ಸ್ (ನಾ., ಕ್ರಿ.) ಗಟ್ಟಿಯಾದ ಕೂಗಾಟ ; ಬೊಬ್ಬೆ ; ಸದ್ದು ; ಗದ್ದಲ ; ಕಲಕಲ ; ಕೋಲಾಹಲ ; ಸಪ್ಪಳ ; ಶಬ್ದ (ಮು., ಗಟ್ಟಿ ಅಥವಾ ಕರ್ಕಶವಾದದ್ದು). [Big n. (ಸ್ಥಳದ) ಪ್ರಮುಖ, ದೊಡ್ಡ ಮನುಷ್ಯ. Make a n. ಸದ್ದು ಮಾಡು ; ಗೊಂದಲವೆಬ್ಬಿಸು ; ಒಂದರ ವಿಷಯವಾಗಿ ಬಹಳ ಮಾತನಾಡು, ಗಲಾಟೆ ಮಾಡು, ಆಕ್ಷೇಪಿಸು. (ಒಬ್ಬನ ವಿಷಯವಾಗಿ) ಹೊರಗೆ ಹೆಚ್ಚು ಮಾತಾಡು ಅಥವಾ ಆಕ್ಷೇಪಿಸು ; ಹೆಚ್ಚು ಜನರ ಕಿವಿಗೆ ಬಿದ್ದಿರು; ಪ್ರಪಂಚದಲ್ಲಿ ಅಪ ಪ್ರಖ್ಯಾತಿ ಪಡೆ]. (ಕ್ರಿ.) (ಒಬ್ಬನ ಖ್ಯಾತಿಯನ್ನು, ಸಂಗತಿಯನ್ನು) ಪ್ರಕಟ ಮಾಡು, ಬಹಿರಂಗ ಪಡಿಸು, ಹೊರಗೆ ಹರಡು (It was noised abroad that—). (ವಿರ. ಪ್ರ.) ಗದ್ದಲ ಮಾಡು. **Noíseless** (ಗು.) ; **Noíselessly** (ಕ್ರಿ. ವಿ.) ; **Noíselessness** (ನಾ.) ; **Noísy** ನಾಯ್ಸಿ (ಗು.) ಗದ್ದಲ, ಗಲಾಟೆ, —ಮಾಡುವ, ಮಾಡುತ್ತಿರುವ ; ಗದ್ದಲ ತುಂಬಿರುವ. (ಬಣ್ಣ, ಉಡಿಗೆ, ಸಾಹಿತ್ಯ ಶೈಲಿ) ಎದ್ದು ಕಾಣುವ ; ಆಡಂಬರದ ; ಅರ್ಭಟದ. **Noísily** (ಕ್ರಿ. ವಿ.) ; **Noísiness** (ನಾ.)

Noísome ನಾಯ್ಸಮ್ (ಗು.) ಕೇಡು ಮಾಡುವ; ಕೆಡುಕಾದ; ಅಪಾಯ ಕರ ; ಆಕ್ಷೇಪಣೆಗೊಳಗಾದ ; ಅಹಿತವಾದ ; ಅಸಹ್ಯಕರ ; ಕೆಟ್ಟ ನಾತದ. **Noísomeness** (ನಾ.)

Nólens vólens (L) ನೋಲೆನ್ಸ್ ವೋಲೆನ್ಸ್ (ಕ್ರಿ. ವಿ.) ಬೇಕಾಗಿರಲಿ ಬೇಡದಿರಲಿ ; ಮನಸ್ಸಿರಲಿ ಇಲ್ಲದಿರಲಿ ; ಬಲವಂತದಿಂದ ; ಕಡ್ಡಾಯ ವಾಗಿ.

Noll ನೋಲ್ (ನಾ.) (ಈಗ ಪ್ರಾಂತ ಪ್ರ.) ನೆತ್ತಿ ; ತಲೆ.

Nólo episcopári (L) ನೋಲೊ ಎಪಿಸ್ಕೊಪೇರೈ (ನಾ.) ಜವಾಬ್ದಾರಿಯ ಅಧಿಕಾರವನ್ನು ತಪ್ಪಿಸಿಕೊಳ್ಳುವುದು ; ಇದನ್ನು ಹೇಳುವ ಸೂತ್ರ. (ಶಬ್ದಾರ್ಥ=ನಾನು ಬಿಷಪ್ಪನಾಗಲೊಲ್ಲೆ)

Nómad ನಾ(ನೋ)ಮ್ಯಾಡ್ [**Nómade** (ವಿರ. ಪ್ರ.)] (ನಾ., ಗು.) (ದನಗಳ ಮೇವಿಗಾಗಿ) ಹುಲ್ಲುಮೈದಾನಗಳನ್ನು ಹುಡುಕಿಕೊಂಡು ಸ್ಥಳದಿಂದ ಸ್ಥಳಕ್ಕೆ ಸುತ್ತುತ್ತಿರುವ (ಕುಲದವನು) ; ಚರ ಪಶುಪಾಲ ಕುಲದ(ವನು). ಅಲೆಯುತ್ತಿರುವ(ವನು). **Nomádic** ನೊ— (ಗು.) ; **Nomádically** (ಕ್ರಿ. ವಿ.) ; **Nómadism** ನೋ— (ನಾ.) ಅಲೆ ಯುತ್ತಿರುವ ಅಭ್ಯಾಸ, ಜೀವನ ಪದ್ಧತಿ, ಸ್ಥಿತಿ. **Nómadize** (ಕ್ರಿ. ಅಕ.) ಚರ ಪಶುಪಾಲ ಕುಲದವನಂತೆ, ಅಲೆಮಾರಿಯಾಗಿ ಜೀವಿಸು.

Nom de guérre (F) ನಾನ್ ಡ ಗೇರ್ (ನಾ.) (ಯುದ್ಧ, ಅಭಿನಯ, ಲೇಖನ, ಮೊ. ಗಳಲ್ಲಿ ಒಬ್ಬನು ಇಟ್ಟುಕೊಂಡ) ಗುಪ್ತ ನಾಮ, ಸಂಕೇತ ನಾಮ. (ಪದದ ಅರ್ಥ = ಯುದ್ಧ ನಾಮ)

Nóm de plume (F) ನಾಮ್(ನ್) ಡ ಪ್ಲೂಮ್ (ನಾ.) (ಗ್ರಂಥಕರ್ತನ) ಕಲ್ಪಿತ ನಾಮ, ಸಂಕೇತ ನಾಮ, ಗುಪ್ತ ನಾಮ ; (ಬರವಣಿಗೆಯಲ್ಲಿ ಸ್ವಂತ ಹೆಸರಿಗೆ ಬದಲಾಗಿ ಹಾಕುವ) ಲೇಖಕನ ಬಿರುದು, ಹೆಸರಿನ ಮೊದಲಕ್ಷರಗಳು ಅಥವಾ ಇಟ್ಟುಕೊಂಡ ಹೆಸರು.

Nómenclator ನೋಮೆನ್‌ಕ್ಲೇಟರ್ (ನಾ.) (ರೋ. ಪ್ರಾ.) ಭೇಟಿ ಯಾದವರ ಹೆಸರುಗಳನ್ನು ತನ್ನ ಯಜಮಾನನಿಗೆ, ಆಶ್ರಯದಾತನಿಗೆ, ತಿಳಿಸಲು ನಿಯಮಿತನಾಗಿದ್ದ ದಾಸ, ಸೇವಕ, ಆಶ್ರಿತ: ನಾಮ ನಿವೇದಕ ; ಭೋಜನ ಸಮಾರಂಭಗಳಲ್ಲಿ ಅತಿಥಿಗಳಿಗೆ ಸ್ಥಳ ನಿರ್ದೇಶ ಮಾಡುತ್ತಿದ್ದ ಸೇವಕ (ಈ ಅರ್ಥಗಳಲ್ಲಿ ಈಗಲೂ ಪ್ರ. ಉಂಟು). (ಮು., ಪ್ರಕೃತಿ ಚರಿತ್ರೆಯಲ್ಲಿ ಜಾತಿ ವಿಂಗಡ ಮಾಡುವಾಗ) ಹೆಸರು ಕೊಡುವವನು, —ಕಲ್ಪಿಸುವವನು. **Nómenclature** ನೋಮೆನ್‌ಕ್ಲೇಟ್ಯು(ಚ)ರ್, **Nomén-** ನೊಮೆನ್‌ಕ್ಲೆ(ಕ್ಲ)— (ನಾ.) ಹೆಸರು ಪಟ್ಟಿ ; ದಾಖಲೆ ಪುಸ್ತಕ (ಈಗ ವಿರ. ಪ್ರ.) ; (ಒಬ್ಬನು ಅಥವಾ ಒಂದು ಜನಾಂಗವು ವಸ್ತುಗಳಿಗೆ ಕೊಡುವ) ಹೆಸರು ಪದ್ಧತಿ ; ನಾಮಕರಣ ವ್ಯವಸ್ಥೆ ; (ಒಂದು ಶಾಸ್ತ್ರ, ಮೊ. ಗಳ) ಪರಿಭಾಷೆ ; ಒಂದು ಪದ್ಧತಿಯನ್ನನುಸರಿಸಿ ನಾಮಕರಣ ಮಾಡುವುದು. **Nómenclative** ನೋಮೆನ್‌ಕ್ಲೇಟಿವ್ (ಗು.) ನಾಮಕರಣ ಪ್ರವೃತ್ತಿಯುಳ್ಳ.

Nómenclature, etc. **Nomenclator** ನೋಡಿ.

Nóminal ನಾಮಿನಲ್ (ಗು.) ನಾಮವಾಚಕದ(ಂಥ) (N. & verbal roots ನಾಮ ಪ್ರಕೃತಿಗಳು ಮತ್ತು ಧಾತುಗಳು); ಹೆಸರಿನ ; ಹೆಸರಿನಲ್ಲಿಯ (N. & essential distinctions ನಾಮಕ ಮತ್ತು ವಾಸ್ತವಿಕ ವ್ಯತ್ಯಾಸಗಳು. N. definition ಒಂದು ಭಾವನಾ ವಾಚಕದಲ್ಲಿ ಅಡಕ ವಾಗಿರುವ ಎಲ್ಲ ಲಕ್ಷಣಗಳನ್ನೂ ಹೇಳುವ ನಿರೂಪಣೆ). ಹೆಸರಿಗೆ ಮಾತ್ರ ವಿರುವ ; ನಾಮ ಮಾತ್ರದ ; ವಾಸ್ತವವಲ್ಲದ (N. sum, rent, etc. ಹೆಸರಿಗೆ ಮಾತ್ರ ಹಾಕಿರುವ ಅತ್ಯಲ್ಪ ಮೊತ್ತ, ಬಾಡಿಗೆ, ಮೊ.). ಹೆಸರು ಗಳುಳ್ಳ ; ಹೆಸರುಗಳನ್ನು ತಿಳಿಸುವ, ನಮೂದಿಸಿರುವ (N. list of officers, etc. ಅಧಿಕಾರಿಗಳು, ಮೊ. ರ ಹೆಸರುಪಟ್ಟಿ). **Nóminally** (ಕ್ರಿ. ವಿ.) ; **Nóminalism** (ನಾ.) (ತತ್ತ್ವ ಶಾಸ್ತ್ರ) ವಸ್ತುಗಳಿಗೆ ಅಸ್ತಿತ್ವವೇ ಹೊರತು ಅವುಗಳಿಂದ ಪ್ರತ್ಯೇಕಿಸಿ ಹೇಳುವ ಗುಣಗಳಿಗೆ ಅಸ್ತಿತ್ವವಿಲ್ಲ, ಅಂಥ ಗುಣವಾಚಕ ಪದಗಳು ಬರಿಯ ಹೆಸರುಗಳು, ಗುಣಗಳು ನಾಮ ಮಾತ್ರದವು —ಎಂಬ ವಾದ (ಎದುರು ಪದ: Realism). **Nóminalist** (ನಾ.) ; **Nominalístic** (ಗು.) ; **Nóminate** —ನೇಟ್ (ಕ್ರಿ. ಸಕ.) (—ಎಂಬ) ಹೆಸರಿನಿಂದ ಕರೆ ; ಹೆಸರಿಡು ; ನಾಮಕರಣ ಮಾಡು ; ಹೆಸರು ಹೇಳು ; ಗೊತ್ತಾಗಿ ಹೇಳು ; (ತಾರೀಖು, ಸ್ಥಳ) ಹೇಳು, ಗೊತ್ತುಮಾಡು (ಈಗ ವಿರ. ಪ್ರ.). ಒಂದು ಅಧಿಕಾರಕ್ಕೆ, ಚುನಾವಣೆಗೆ, ಒಬ್ಬನ ಹೆಸರನ್ನು ಸೂಚಿಸು, ನಾಮ ಕರಣ ಮಾಡು (A board of six nominated & six elected members). **Nóminator** (ನಾ.) ; **Nominátion** (ನಾ.) (ಕ್ರಿಯಾರ್ಥಗಳಲ್ಲಿ). ಒಂದು ಅಧಿಕಾರಕ್ಕೆ ನಾಮಕರಣ ಮಾಡುವ ಹಕ್ಕು (Have a n. at your service). **Nóminative** —ನಟಿವ್ (ಗು., ನಾ.) (ವ್ಯಾ.) ಪ್ರಥಮಾ ವಿಭಕ್ತಿ(ಯ) [N. absolute ಒಂದು ಬಗೆಯ ಪ್ರಥಮಾ ವಿಭಕ್ತಿ ಪ್ರಯೋಗ (ಉದಾ., This being so, I did

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

nothing). N. ending ಪ್ರಥಮಾ ವಿಭಕ್ತಿ ಪ್ರತ್ಯಯ. N. form ಪ್ರಥಮಾ ವಿಭಕ್ತಿ ರೂಪ]; ಪ್ರಥಮಾ ವಿಭಕ್ತಿಯ ಪದ; (ಶಿಥಿಲವಾಗಿ) ಕರ್ತೃ ಪದ [**Nominatíval** —ಟೈ— (ಗು.) ಪ್ರಥಮಾ ವಿಭಕ್ತಿಯ; —ಗೆ ಸಂಬಂಧಿಸಿದ]. ನಾಮಕರಣದ; ನಾಮಕರಣ ಮಾಡಿ ನೇಮಿಸಿದ (The n. & the elective principles, members). **Nomineé** (ನಾ.) ನಾಮಕರಣವಾದವನು.

Non (L) ನಾನ್ (ಕ್ರಿ. ವಿ.) ಇಲ್ಲ, ಅಲ್ಲ (ಎಂಬ ನಿಷೇಧಾರ್ಥದ ಹಲವು ವಾಕ್ಯಭಾಗಗಳಲ್ಲಿ): N. assumpsit (ಅವನು ಒಪ್ಪಿಕೊಳ್ಳಲಿಲ್ಲ); ಪ್ರತಿವಾದಿ ಮಾತುಕೊಡಲಿಲ್ಲವೆಂಬ ವಾದ. N. compos (mentis) [Compos (mentis) ನೋಡಿ]. N. esse ಇಲ್ಲದಿರುವುದು; ಅಭಾವ. N. est inventus ಅವನು ದೊರೆಯಲಿಲ್ಲ; ಅವನು ಪತ್ತೆಯಾಗಲಿಲ್ಲ. N. est *or* n. inventus (ನ್ಯಾಯಸ್ಥಾನದ ಆಜ್ಞಾಪತ್ರವನ್ನು ಹಿಂದಕ್ಕೆ ಕೊಡುವಾಗ ನ್ಯಾಯಾಧಿಕಾರಿಯ ಹೇಳಿಕೆ) ಪ್ರತಿವಾದಿ ಅವನ ನಿಯತ ವಾಸಸ್ಥಾನದಲ್ಲಿರಲಿಲ್ಲ (ಸಾಮಾನ್ಯ ಪ್ರ. ದಲ್ಲಿ ನಹ). N. liquet ಸ್ಪಷ್ಟವಾಗಿಲ್ಲ (ಸಂದೇಹವಿರುವ ವ್ಯವಹಾರವನ್ನು ಮರು ದಿನಕ್ಕೆ ಮುಂದುವರಿಸುವಾಗ ನ್ಯಾಯದರ್ಶಿಮಂಡಲಿ ಕೊಡುವ ತೀರ್ಮಾನ). N. nobis ನಮ್ಮದಲ್ಲ (ಜಯ, ಮೊ. ವು ತನ್ನದಲ್ಲವೆಂದೂ ದೇವರದೆಂದೂ ಹೇಳುವ ಮಾತು); ಈ ಮಾತುಗಳಿಂದ ಆರಂಭವಾಗುವ ಒಂದು ಆನಂದ ಗೀತ. N. placet ಒಪ್ಪಿಕೆಯಿಲ್ಲ; ಹಿತವಾಗಿಲ್ಲ (ವಿ. ವಿ. ನಿ. ದ ಮತ್ತು ಮತ ಸಂಸ್ಥೆಗಳ ಸಭೆಗಳಲ್ಲಿ ವಿರೋಧ ಅಭಿಮತ ಕೊಡುವಲ್ಲಿ ಹೇಳುವ ಮಾತು); ವಿರೋಧ ಮತ. (ಕ್ರಿ. ಸಕ.) ವಿರೋಧ ಮತ ಕೊಡು; ತಳ್ಳಿಹಾಕು. N. plus ultra =Ne plus ultra. N. possumus ನಾವು ಮಾಡಲಾರೆವು; ಆಗುವುದಿಲ್ಲ; ಸಾಧ್ಯವಿಲ್ಲ (ಕಾರ್ಯ ನಡಸುವುದು, ಚಲಿಸುವುದು, ಮೊ. ನ್ನು ಒಪ್ಪದಿರುವಾಗ ಹೇಳುವ ಮಾತು); ಅಡಚಣೆ. N. sequitur [=ಅದರಿಂದ (ಅದು) ಸಿದ್ಧಿಸುವುದಿಲ್ಲ]; ಅಪ ಸಿದ್ಧಾಂತ; ಅಸಿದ್ಧಿ.

Non- ನಾನ್— (ನಿಷೇಧಾರ್ಥಕ ಪೂ. ಪ್ರ.) ಅ—; ಅನ್—; ಅಪ—; ನಿರ್—. **-abstaíner** (ಮು., ಮದ್ಯವನ್ನು) ಬಿಡದಿರುವವನು, ತ್ಯಜಿಸದವನು. **-accéptance** ಅನಂಗೀಕಾರ; ಅಸ್ವೀಕಾರ. **-áccess** ಅಪ್ರವೇಶ; ಸಂಭೋಗಕ್ಕೆ ಅಸಾಧ್ಯತೆ [ತಂದೆ ಯಾರೆಂದು ನಿರ್ಧರಿಸುವ ಸಂದರ್ಭಗಳಲ್ಲಿ ಸಂಭೋಗಕ್ಕೆ ಸಾಧ್ಯವಿರಲಿಲ್ಲವೆಂಬ ಸಂಗತಿ (ಉದಾ., ಗಂಡ ಸ್ಥಳದಲ್ಲಿಲ್ಲದೆ ಹೊರಗೆ ಪ್ರವಾಸಮಾಡುತ್ತಿದ್ದ ಸಂದರ್ಭ)]. **-acquaíntance** ಅಪರಿಚಯ. **-appeárance** (ಮು., ನ್ಯಾಯಸ್ಥಾನಕ್ಕೆ ಕಕ್ಷಿಗಾರನಾಗಲಿ ಸಾಕ್ಷಿಯಾಗಲಿ) ಬಾರದಿರುವುದು; ಗೈರ್ ಹಾಜರಿ. **-atténdance** ಗೈರ್ ಹಾಜರಿ. **-claim** (ಕಾನೂನು ವಿಧಿಸಿರುವ ಅವಧಿಯೊಳಗಾಗಿ) ಹಕ್ಕುಹೂಡಲು ತಪ್ಪುವುದು. **-collégiate** (ಗು., ನಾ.) ಪ್ರೌಢ ವಿದ್ಯಾಶಾಲೆಯ ಸಂಬಂಧವಿಲ್ಲದ (ವಿದ್ಯಾರ್ಥಿ); (ವಿ. ವಿ. ನಿ. ಗಳ ವಿಷಯದಲ್ಲಿ) ಪ್ರೌಢ ವಿದ್ಯಾಶಾಲೆಗಳಿಲ್ಲದ. **-cóm-batant** (ಮು.,ಯುದ್ಧ ಸೈನ್ಯಗಳಲ್ಲಿ) ಯುದ್ಧೋದ್ಯೋಗಿಯಲ್ಲದ(ವನು), ಅಯೋಧ (ಉದಾ., ಶಸ್ತ್ರ ವೈದ್ಯ, ಪುರೋಹಿತ, ಚರ ಚಿಕಿತ್ಸಾಲಯದವನು). **-commíssioned** (ಸಂಕ್ಷಿಪ್ತ: N.C.O., Non-com.) ಸನ್ನದು ಪಡೆದಿಲ್ಲದ; ನಾಸನ್ನದಿನ (ಮು., ಸೈನ್ಯಾಧಿಕಾರಿಗಳ ವಿಷಯದಲ್ಲಿ: ಉದಾ., Sergeant, Corporal). **-commíttal** ಯಾವುದೊಂದು ಕಾರ್ಯಕ್ರಮಕ್ಕೂ, ಯಾವ ಪಕ್ಷಕ್ಕೂ, ತಾನಾಗಿ ಕಟ್ಟುಬೀಳದಿರುವುದು (ಸಾ., ವಿಶೇಷಣವಾಗಿ ಪ್ರ.; ಉದಾ., N.-c. answer). **-commúnicant** ಪ್ರಭುಭೋಜನ ಸಂಸ್ಕಾರದಲ್ಲಿ ಭಾಗ ವಹಿಸದ(ವನು). **-complíance** (ಕೋರಿಕೆಯಂತೆ) ನಡಸದಿರುವುದು. **-con-dénsing** (ಆವಿಯೆಂಜಿನಿನ ವಿಷಯದಲ್ಲಿ) ಉಪಯೋಗಿಸಿದ ಆವಿಯನ್ನು ಶೀತಕದಲ್ಲಿ ಸಾಂದ್ರೀಕರಿಸದೆ ಹೊರಕ್ಕೆ ಬಿಟ್ಟುಬಿಡುವ. **-condúcting** ಉಷ್ಣವನ್ನಾಗಲಿ ವಿದ್ಯುತ್ತನ್ನಾಗಲಿ ತನ್ನ ಮೂಲಕ ಸಾಗಿಸಲಾರದ: ಅವಾಹಕ. **-condúctor** ಅವಾಹಕ. **-conductibílity** ಅವಾಹಕತೆ. **-content** ಇಂಗ್ಲೆಂಡಿನ House of Lords ಎಂಬ ಶ್ರೀಮಂತ ಸಭೆಯಲ್ಲಿ ಗೊತ್ತುವಳಿಯನ್ನು ವಿರೋಧಿಸಿ ಮತ ಕೊಡುವವನು: ಅಸಮ್ಮತಿ ಸೂಚಕ. **-conténtiously** ನಿರ್ವಿವಾದವಾಗಿ. **-co-operátion** (ಇಂಡಿಯದ ರಾಜಕೀಯ: ಬ್ರಿಟಿಷರೊಡನೆ) ಅಸಹಕಾರ. **-efféctive** (ಸಿಪಾಯಿ, ನಾವಿಕ) ಯುದ್ಧೋದ್ಯೋಗಕ್ಕೆ ಅರ್ಹತೆಯಿಲ್ಲದ (Ineffective ಪದದೊಡನೆ ಹೋಲಿಸಿ). **-égo** (ಅಧ್ಯಾತ್ಮ ವಿದ್ಯೆ) ಅಹಂ ಪ್ರತ್ಯಯೇತರ; ಆತ್ಮಗೋಚರವಾದ ಪ್ರಪಂಚ, ವಿಷಯ; ಜ್ಞೇಯ. **-esséntial** (ಗು., ನಾ.) ಅಪ್ರಧಾನ; ಗೌಣ. **-Euclidéan** ಯೂಕ್ಲಿಡ್ಡಿನ ಜ್ಯಾಮಿತಿಯ ಊಹಾ ಪ್ರತಿಜ್ಞೆಗಳೆಲ್ಲವನ್ನೂ ನಿರಾಕರಿಸುವ, ಅಥವಾ ಯಾವುದನ್ನೂ ಉಪಯೋಗಿಸದ. **-exístent** ಅಸ್ತಿತ್ವವಿಲ್ಲದ. **-exístence** ಇಲ್ಲಮೆ. **-feásance** (ನ್ಯಾ. ಶಾ.) ಮಾಡಬೇಕಾಗಿದ್ದುದನ್ನು ಮಾಡದೆ ಬಿಡುವುದು; ಕರ್ತವ್ಯ ಲೋಪ. **-flámmable** (ಕೃತಕ ಫ್ಲಾನಲ್‌ಬಟ್ಟೆ, ಮೊ. ಗಳ ವಿಷಯದಲ್ಲಿ) ಉರಿ ಹೊತ್ತಿಕೊಳ್ಳದ. **-húman** ಮನುಷ್ಯಕುಲಕ್ಕೆ ಸೇರಿರದ; ಮನುಷ್ಯೇತರ (Inhuman ಪದದೊಡನೆ ಹೋಲಿಸಿ). **-interférence, -intervén-tion** (ಮು., ರಾಜ್ಯನೀತಿಯಲ್ಲಿ ಮತ್ತು ಅಂತರ ರಾಷ್ಟ್ರೀಯ ವ್ಯವಹಾರದಲ್ಲಿ) ಇತರರ ವ್ಯಾಜ್ಯಗಳಲ್ಲಿ ಪ್ರವೇಶಿಸದೆ ತಟಸ್ಥವಾಗಿರುವ ತತ್ತ್ವ, ನೀತಿ: ತಾಟಸ್ಥ್ಯ ನೀತಿ. **-intrúsion** (ಸ್ಕಾಟ್ಲೆಂಡಿನ ಕ್ರೈಸ್ತ ಮತಕ್ಕೆ) ಪಾದ್ರಿಯನ್ನು ನೇಮಿಸುವ ಅಧಿಕಾರವುಳ್ಳ ಪೋಷಕರು ಸಭೆಗೆ ಬೇಡವಾದ ಪಾದ್ರಿಯನ್ನು ಬಲಾತ್ಕಾರವಾಗಿ ನೇಮಿಸಲಾಗದೆಂಬ ತತ್ತ್ವ. **-joínder** (ನ್ಯಾ. ಶಾ.) ಪಾಲುದಾರ, ಮೊ. ರು ವ್ಯವಹಾರದಲ್ಲಿ ಮತ್ತೊಬ್ಬ ಪಾಲುದಾರನೊಡನೆ ಸಹಭಾಗಿಯಾಗಿ ಸೇರದೆ ತಪ್ಪುವ ಲೋಪ. **-júry** ನ್ಯಾಯದರ್ಶಿಗಳಿಲ್ಲದೆ ವಿಚಾರಣೆ ಮಾಡಿದ. **-lógic-al** ತರ್ಕಮಾರ್ಗವನ್ನು ಬಿಟ್ಟು ಬೇರೆ ಮಾರ್ಗದಲ್ಲಿ ಪ್ರವರ್ತಿಸುವ (Illogical ಪದದೊಡನೆ ಹೋಲಿಸಿ). **-mémber** ಸದಸ್ಯನಲ್ಲದವನು (**-mémbership**). **-métal** (ಮು., ರ. ವಿ.) ಅಲೋಹ ಮೂಲಧಾತು (**-metállic**). **-móral** ನೀತಿಗೆ, ನೀತಿ ತತ್ತ್ವಕ್ಕೆ, —ಸಂಬಂಧಿಸದ (Immoral ಪದದೊಡನೆ ಹೋಲಿಸಿ). **-nátural** ಪ್ರಕೃತಿಮಾರ್ಗವನ್ನು ಬಿಟ್ಟು ನಡೆಯುವ; —ವನ್ನನುಸರಿಸದ (Unnatural ಪದದೊಡನೆ ಹೋಲಿಸಿ). **-óffice-holding** ಅಧಿಕಾರ ವಹಿಸಿರದ. **-párty** ಯಾವ ರಾಜಕೀಯ ಪಕ್ಷದ ಸಂಬಂಧವೂ ಇಲ್ಲದೆ ವ್ಯವಹರಿಸಬಹುದಾದ. **-paýment** ಹಣ ಸಲ್ಲಿಸದಿರುವುದು. **-percéption** (ಮನಸ್ಸಿನಲ್ಲಿ) ಗ್ರಹಿಸದಿರುವುದು. **-perfórmance** ಮಾಡದಿರುವುದು; ನಡಸದಿರುವುದು; ಅಕರಣ. **-províded** (ಪಾಠಶಾಲೆಗಳ ವಿಷಯದಲ್ಲಿ) ಸ್ಥಳೀಯ ಸಂಸ್ಥೆಗಳ ಸಹಾಯವಿಲ್ಲದ. **Non-résident** —ರೆಸಿ— (ಗು., ನಾ.) (ಪಾದ್ರಿ) ತನ್ನ ಕರ್ತವ್ಯವಿರುವ ಸ್ಥಳದಲ್ಲಿ ವಾಸವಾಗಿಲ್ಲದ(ವನು); ಸ್ಥಳಾಂತರದಲ್ಲಿ ವಾಸಿಸುವ (ಪಾದ್ರಿ); ಸ್ಥಳದಲ್ಲಿ ಸ್ವಲ್ಪ ಕಾಲ ಮಾತ್ರ ವಾಸವಾಗಿರುವ(ವನು); ಸ್ಥಳಾಂತರದಲ್ಲಿ ವಾಸಿಸುವ(ವನು). **Non-résidence** (ನಾ.); **-resístance** (ಚರಿತ್ರೆ) ಅಧಿಕಾರವನ್ನು ಅನ್ಯಾಯವಾಗಿ ಪ್ರಯೋಗಿಸಿದರೂ ಅದನ್ನು ಪ್ರತಿಭಟಿಸಬಾರದೆಂಬ ತತ್ತ್ವ: ಅಪ್ರತಿರೋಧ. **-skíd** (ಚಕ್ರಗಳ ರಬ್ಬರು ಪಟ್ಟಿಯ ವಿಷಯದಲ್ಲಿ) ಜಾರುವುದೆಂಬ ಭಯವಿಲ್ಲದ; ಜಾರದ. **-society, -únion** (also **N.-únionist**) ಕೆಲಸಗಾರರ ಸಂಘಕ್ಕೆ ಅಥವಾ ವೃತ್ತಿ ಸಂಘಕ್ಕೆ ಸೇರಿರದ. **-succéss** ಜಯವಿಲ್ಲದಿರುವುದು. **-stop** (ಗು.) (ರೈಲುಗಾಡಿ, ಬಸ್ಸು, ಮೊ. ವು) ನಡುವಣ ನಿಲ್ದಾಣಗಳಲ್ಲಿ ನಿಲ್ಲದ; ಮಧ್ಯೆ ನಿಲ್ಲದ. (ಪ್ರಯಾಣ) ಮಧ್ಯೆ ಎಲ್ಲೂ ತಂಗದೆ ನಡಸಿದ; (ಪ್ರಯಾಣ) ಮಧ್ಯೆ ನಿಲ್ಲದೆ ಮಾಡಿದ. (ನಾ.) ಮಧ್ಯೆ ನಿಲ್ಲದ ರೈಲುಗಾಡಿ, ಬಸ್ಸು, ಅಥವಾ ಅವುಗಳಲ್ಲಿಯ ಪ್ರಯಾಣ. (ಕ್ರಿ. ವಿ.) ಮಧ್ಯೆ ಎಲ್ಲಿಯೂ ನಿಲ್ಲದೆ. **-úsage** ವಾಡಿಕೆಯಿಲ್ಲದಿರುವುದು; ಅರೂಢಿ. **-úse** ಉಪಯೋಗಿಸದಿರುವುದು. **-úser** (ನ್ಯಾ. ಶಾ.) ಇರುವ ಹಕ್ಕನ್ನು ಚಲಾಯಿಸದೆ ಅಲಕ್ಷ್ಯದಿಂದಿರುವುದು (ಹಾಗೆ ಬಿಟ್ಟದ್ದರಿಂದ ಹಕ್ಕು ತಪ್ಪಿಹೋಗಬಹುದು)

Nónage ನೋನೆಜ್, ನಾನಿಜ್ (ನಾ.) ಚಿಕ್ಕ ವಯಸ್ಸಿನಲ್ಲಿರುವುದು; ಬಾಲ್ಯಾವಸ್ಥೆ; ಅಪಕ್ವತೆ; ಪ್ರಾರಂಭ ದಶೆ.

Nonagenárian ನಾ(ನೋ)ನಜಿನೇರಿಯನ್ (ಗು., ನಾ.) ೮೯ಕ್ಕೂ ೧೦೦ಕ್ಕೂ ಮಧ್ಯದ, ತೊಂಬತ್ತರ, ವಯಸ್ಸಿನ(ವನು); ನವತಿ ವರ್ಷೀಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Nónary ನೋನರಿ (ಗು., ನಾ.) (ಗಣಿತ ಮತ್ತು ಅಂಕನ ಪ್ರಮಾಣದ ವಿಷಯದಲ್ಲಿ) ಒಂಬತ್ತನ್ನು ಆಧಾರವಾಗುಳ್ಳ; ನವ ಮಾನ. (ನಾ.) ಒಂಬತ್ತರ ತಂಡ; ನವಕ.

Non avenu (F) ನಾನ್ ಅವ್‌ನೂ (ಗು.) ಸಂಭವಿಸಿಲ್ಲದ; ನಡೆದಿಲ್ಲದ(ಂತೆ ಭಾವಿಸಿದ)

Nonce ನಾನ್ಸ್ (ನಾ.) ತಾತ್ಕಾಲಿಕ; ಪ್ರಕೃತ ಸಂದರ್ಭ; ಸದ್ಯ (For the n. ಎಂಬಲ್ಲಿ ಮಾತ್ರ). N.-word ಸಂದರ್ಭಕಲ್ಪಿತ ಪದ.

Nónchalant ನಾನ್‌ಷಲಂಟ್ (ಗು.) ಉದ್ರೇಕಗೊಳ್ಳದ; ಮನಸ್ಸು ಕದಲದ, ಕಲಕದ; ಶಾಂತ; ಉದಾಸೀನ. **Nónchalance** (ನಾ.); **Nónchalantly** (ಕ್ರಿ. ವಿ.)

Nonconfórmist ನಾನ್‌ಕನ್‌ಫಾರ್ಮಿಸ್ಟ್ (ನಾ.) ರಾಜ್ಯ ಸ್ಥಾಪಿತ ಮತದ ತತ್ತ್ವಗಳನ್ನು ಅಥವಾ ನಿಯಮ ಪಾಲನೆಯನ್ನು ಒಪ್ಪದಿರುವವನು: (ಪ್ರಾಟೆಸ್ಟಂಟ್ ಮತಕ್ಕೆ ಸೇರಿದ) ಅನಂಗೀಕಾರಿ. The n. conscience ಧರ್ಮಾಧರ್ಮಗಳ ವಿಷಯವಾಗಿ ಅನಂಗೀಕಾರಿಗಳಲ್ಲಿ ರೂಢಿಯಾಗಿರುವ (ಮು., ಅವರ ರಾಜಕೀಯ ದೃಷ್ಟಿಯಮೇಲೆ ಪರಿಣಾಮ ಮಾಡುವ) ಅಭಿಪ್ರಾಯಗಳು. **Nonconfórmity** (ನಾ.) ಅನಂಗೀಕಾರಿಗಳ ಮತ ತತ್ತ್ವಗಳು, ಆಚಾರ ವ್ಯವಹಾರಗಳು; ಅನಂಗೀಕಾರಿ ಪಂಗಡ; ಪ್ರಾಟೆಸ್ಟಂಟರ ಅನಂಗೀಕಾರ. (ನಿಯಮ, ಮೊ. ನ್ನು) ಅನುಸರಿಸದಿರುವುದು; ಅನನುಸರಣೆ. ವಸ್ತುಗಳಲ್ಲಿ ಒಂದಕ್ಕೊಂದಕ್ಕೆ ಹೊಂದಿಕೆಯಿಲ್ಲದಿರುವುದು; ಅಸಾಂಗತ್ಯ.

Nóndescript ನಾನ್‌ಡಿಸ್ಕ್ರಿಪ್ಟ್ (ಗು., ನಾ.) ಸುಲಭವಾಗಿ ವರ್ಗೀಕರಿಸಲಾಗದ (ವ್ಯಕ್ತಿ, ವಸ್ತು): ಅವರ್ಗ್ಯ; ಇದೂ ಅಲ್ಲ ಅದೂ ಅಲ್ಲ; ಇಬ್ಬಂದಿ; ಅಡ್ಡ ಜಾತಿ.

None ನನ್ (ಸ. ನಾ., ಗು., ಕ್ರಿ. ವಿ.) ಒಂದೂ ಇಲ್ಲ; ಒಬ್ಬನೂ ಇಲ್ಲ; ಸ್ವಲ್ಪವೂ ಇಲ್ಲ. N. of them came. N. of them is *or* are (ಅರ್ಥಕ್ಕೆ ತಕ್ಕಂತೆ). N. of your impudence! ನಿನ್ನ ಧೃಷ್ಟತನ ಸಾಕು! N. can tell. You have money & I have n. He is n. of my friends. His understanding is n. of the clearest. This is n. other but the house of God. Seeking rest & finding n. If a linguist is wanted, I am n. Would rather have a bad reputation than n. at all. Am n. the better for it. N. the less = Nevertheless.

Nonéntity ನಾನೆಂಟಿಟಿ (ನಾ.) ಇಲ್ಲದಿರುವುದು; ಅಭಾವ; ಶೂನ್ಯತೆ; ಇಲ್ಲಮೆ; ಇಲ್ಲದ್ದು; ಇಲ್ಲದ ವಸ್ತು; ಮನಃಕಲ್ಪನೆ; ಗಣನೆಗೆ ಬಾರದ ವ್ಯಕ್ತಿ, ವಸ್ತು; ಅನಾಮಧೇಯ; ಸೊನ್ನೆ.

Nones ನೋನ್ಸ್ (ನಾ., ಬ. ವ.) (ರೋ. ಪ್ರಾ.) ಮಾರ್ಚ್, ಮೇ, ಜುಲೈ ಮತ್ತು ಅಕ್ಟೋಬರ್ ತಿಂಗಳುಗಳ ೭ನೆಯ ತಾರೀಖು; ಉಳಿದ ತಿಂಗಳುಗಳ ೫ನೆಯ ತಾರೀಖು. (ಕ್ರೈಸ್ತ ಮತ) ಹಿಂದೆ ಒಂಬತ್ತನೆಯ ಗಂಟೆಯಲ್ಲಿ (ಎಂದರೆ, ಮಧ್ಯಾಹ್ನ ೩ ಗಂಟೆಗೆ) ಮಾಡುತ್ತಿದ್ದ ಪ್ರಾರ್ಥನೆ.

Nónesuch ನನ್‌ಸಚ್ (ನಾ.) = Nonsuch.

Nonét ನೋನೆಟ್ (ನಾ.) (ಸಂ.) ಒಂಬತ್ತು ವಾದ್ಯಗಳಿಗೆ ಅಥವಾ ಧ್ವನಿಗಳಿಗೆ ಹೊಂದುವಂತೆ ರಚಿಸಿದ ಗೀತ.

Nonillion ನಾನಿಲ್ಯನ್ (ನಾ.) ಒಂದು ಮಿಲ್ಯನ್ ಸಂಖ್ಯೆಯನ್ನು ೯ರ ಘಾತಕ್ಕೆ ಏರಿಸಿದರೆ ಬರುವ ಸಂಖ್ಯೆ; ೧ರ ಮುಂದೆ ೫೪ ಸೊನ್ನೆ ಹಾಕಿದರೆ ಆಗುವ ಸಂಖ್ಯೆ.

Nónius ನೋನಿಯಸ್ (ನಾ.) ಗಣಿತೋಪಕರಣಗಳಿಗೆ ಅಳತೆಗುರುತು ಮಾಡಲು ಉಪಯೋಗಿಸುವ ಒಂದು ಸಲಕರಣೆ (ಇವುಗಳಲ್ಲಿ Vernier ಎಂಬ ಸಲಕರಣೆಯು ಉತ್ತಮ ರಚನೆಯದು): ಅಂಕನ ಸಲಕರಣೆ.

Nonpareíl ನಾನ್‌ಪರೆಲ್ (ಗು., ನಾ.) ಎಣೆಯಿಲ್ಲದ, ಅಪ್ರತಿಮ, ಅದ್ವಿತೀಯ (ವಸ್ತು, ವ್ಯಕ್ತಿ). (ಮುದ್ರಣ) ಒಂದು ಸಣ್ಣ ಪ್ರಮಾಣದ ಅಚ್ಚಿನ ಮೊಳೆ. ಮಿಠಾಯಿ, ಸೇಬು, ಹಕ್ಕಿ, ಗೋಧಿ, ಚಿಟ್ಟೆ, ಮೊ. ಗಳ ಜಾತಿವಿಶೇಷ.

Nonplús ನಾನ್‌ಪ್ಲಸ್ (ನಾ., ಕ್ರಿ. ಸಕ.) ದಿಕ್ಕು ತೋರದ ಸ್ಥಿತಿ; ದಿಗ್ಭ್ರಮೆ; ತಬ್ಬಿಬ್ಬು; ಸ್ತಬ್ಧತೆ (ಸಾ., At a n. ದಿಕ್ಕು ತೋರದೆ. Reduce to a n. ದಿಗ್ಭ್ರಮೆ ಹಿಡಿಸು). (ಕ್ರಿ.) ಚೇತರಿಸಿಕೊಳ್ಳದಂತೆ ದಿಗ್ಭ್ರಮೆಗೊಳಿಸು.

Nónsense ನಾನ್‌ಸೆನ್ಸ್ (ನಾ.; ಭಾವ. ಅವ್ಯ.) ತೀರ ಅವಿವೇಕದ, ಅಸಂಬದ್ಧದ, ಅರ್ಥವಿಲ್ಲದ, —ಮಾತು, ಕಲ್ಪನೆ; ಹುಚ್ಚು ಮಾತು; ವಿಪರೀತದ ನಡವಳಿ, ಏರ್ಪಾಟು, ಮೊ. ದು. (ಭಾವ. ಅವ್ಯ.) ತೀರ ಅಸಂಬದ್ಧ! (ಖಂಡಿತವಾಗಿಯೂ ನಿಜವಿರಲಾರದು). N.-book ಅಸಂಬದ್ಧತೆಯಿಂದ ವಿನೋದಗೊಳಿಸುವ ಪುಸ್ತಕ. N.-verses ಅರ್ಥವಿಲ್ಲದ ಅಥವಾ ಅಸಂಬದ್ಧಾರ್ಥದ ಪದ್ಯಗಳು. **Nonsénsical** (ಗು.); **Nonsénsically** (ಕ್ರಿ. ವಿ.)

Nónsuch ನಾನ್‌ಸಚ್, **Nóne-** ನನ್— (ನಾ.) ಎಣೆಯಿಲ್ಲದ, ಅಪ್ರತಿಮ, —ವ್ಯಕ್ತಿ, ವಸ್ತು; ಅನುಪಮವಾದದ್ದು, —ವಾದವನು. ಒಂದು ಜಾತಿಯ ಕುದುರೆಮಸಾಲೆ ಸೊಪ್ಪು.

Nónsuit ನಾನ್‌ಸ್ಯೂಟ್ (ನಾ., ಕ್ರಿ. ಸಕ.) (ವಾದಿ ವ್ಯವಹಾರಕಾರಣವನ್ನು ಕಾನೂನಿಗನುಸಾರವಾಗಿ ಸ್ಥಾಪಿಸಲಾರದೆಹೋದಲ್ಲಿ ಅಥವಾ ತಕ್ಕಷ್ಟು ಸಾಕ್ಷ್ಯ ತರಲಾರದೆಹೋದಲ್ಲಿ) ನ್ಯಾಯಾಧಿಪತಿ ವ್ಯವಹಾರವನ್ನು ನಿಲ್ಲಿಸಿ ಬಿಡುವುದು; ದಾವಾ ರದ್ದು. (ಕ್ರಿ.) ವ್ಯವಹಾರ ರದ್ದು ಮಾಡು.

Nónus ನೋನಸ್ (ಗು., ನಾ.) ಒಂಬತ್ತನೆಯ(ವನು) [ಹುಡುಗರ ಪಾಠಶಾಲೆಯಲ್ಲಿ ಒಂದೇ ಹೆಸರಿನ ಹುಡುಗರ ಹೆಸರನ್ನು ಗುರುತಿಸುವಾಗ ವಯಸ್ಸನ್ನು ಹಿಡಿದು ಅಥವಾ ಶಾಲೆಯಲ್ಲಿರುವ ಕಾಲ ಹಿಡಿದು ಹೇಳುವ ಸಂಖ್ಯಾ ಪದ: ಉದಾ., Jones nonus (IX)]

Noódle ನೂಡ್‌ಲ್ (ನಾ.) ದಡ್ಡ; ಹೆಡ್ಡ; ಗುಗ್ಗು. **Noódledom** (ನಾ.) ಹೆಡ್ಡತನ; ಹೆಡ್ಡರು, —ರ ಗುಂಪು.

Nook ನುಕ್ (ನಾ.) (ನೇರವಾದ ಹಾದಿಯಲ್ಲಿಲ್ಲದ) ಕಡೆ ಮೂಲೆ; ಮೂಲೆ ತಾಕು; ಗೊಂದಿ.

Noon ನೂನ್ (ನಾ.) ಮಧ್ಯಾಹ್ನ (ಹನ್ನೆರಡು ಗಂಟೆ); ಮಟ್ಟ ಮಧ್ಯಾಹ್ನ; ನಡು ಹಗಲು. **Noónday, Noóntide** ನಡು ಹಗಲು.

Noose ನೂಸ್(ಜ್) (ನಾ., ಕ್ರಿ. ಸಕ.) (ಎಳೆದರೆ ಬಿಗಿಯುವಂಥ ಸರಿಗಂಟುಳ್ಳ) ಕುಣಿಕೆ; ಸರಿಗುಣಿಕೆ (ಮು., ಬಲೆ, ಜೀರುಗುಣಿಕೆಯ ಬಾರು, ಮೊ. ಗಳಲ್ಲಿ); ಉರುಲು. ವಿವಾಹ ಬಂಧ. ಬಲೆ; ಪಾಶ; ಬಂಧನ. (ಕ್ರಿ.) ಜೀರುಗುಣಿಕೆಯ ಹಗ್ಗ ಹಾಕಿ ಹಿಡಿ; ಬಲೆಗೆ ಬೀಳಿಸು; (ಹಗ್ಗದಲ್ಲಿ) ಜೀರುಗುಣಿಕೆ ಮಾಡು. (ಕತ್ತು, ಮೊ. ಗಳ ಸುತ್ತಲೂ ಹಗ್ಗವನ್ನು) ಜೀರುಗುಣಿಕೆ ಮಾಡಿ ಹಾಕು; ಉರುಲು ಹಾಕು.

Nópal ನೋಪಲ್ (ನಾ.) (ಕಿರುಮಂಜಿ ಹುಳುವನ್ನು ಬೆಳಸುವುದಕ್ಕಾಗಿ ನೆಡುವನಗಳಲ್ಲಿ ಬೆಳೆಯುವ) ಅಮೆರಿಕದ ಪಾಪಾಸುಕಳ್ಳಿ ಜಾತಿ. **Nópalry** (ನಾ.) ಇದರ ನೆಡುವನ.

Nor ನಾರ್ (ಕ್ರಿ. ವಿ., ಸಂ. ಅವ್ಯ.) (ಪ್ರಾಚೀ. ಪ್ರ.) = Neither (N. gold n. silver ಎಂಬಲ್ಲಿ ಮೊದಲನೆಯ 'Nor'). (ಸಂ. ಅವ್ಯ.) ಮತ್ತು ಅಲ್ಲ; ಮತ್ತೇನೂ ಇಲ್ಲ, ಅಲ್ಲ; (ಎರಡರಲ್ಲಿ) ಯಾವುದೂ ಅಲ್ಲ. Had neither arms n. provisions. Not a man n. a child was to be seen. All that is true, n. must we forget. (ಕಾವ್ಯ; ಪ್ರಾಚೀ. ಪ್ರ.) Thou nor I have made the world.

Nor'- North ಪದದ ಸಂಕ್ಷಿಪ್ತ.

Nórdenfelt ನಾರ್ಡೆನ್‌ಫೆಲ್ಟ್ (ನಾ.) ಒಂದು ಬಗೆಯ ಯಂತ್ರಫಿರಂಗಿ. (ಕಲ್ಪಕನ ಹೆಸರಿನಿಂದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Nórdic ನಾರ್ಡಿಕ್ (ಗು.) (ಮಾನವಕುಲ ಶಾಸ್ತ್ರ) (ಮು., ಸ್ಕ್ಯಾಂಡಿನೇವಿಯ ದಲ್ಲೂ ಉ. ಬ್ರಿಟನ್ನಿನಲ್ಲೂ ಇರುವ ಎತ್ತರವಾದ, ನಸು ಹೊಂಬಣ್ಣದ ದೇಹವೂ ಕೂದಲೂ ಉಳ್ಳ, ನಿಡುದಲೆಯ) ಒಂದು ಮಾನವ ಕುಲದ: ನಾರ್ಡಿಕ್ ಕುಲದ. (Teutonic ಎಂಬ ಪದದ ವ್ಯಾಪ್ತಿಗಿಂತ ಕಡಮೆಯ ವ್ಯಾಪ್ತಿಯುಳ್ಳದ್ದು)

Nórland ನಾರ್ಲಂಡ್ (ನಾ.) ಉತ್ತರ ಪ್ರದೇಶ ; ಬಡಗ ನಾಡು.

Norm ನಾರ್ಮ್ (ನಾ.) ರೂಢಿಯಾದ ಮಟ್ಟ ; ಕ್ಲುಪ್ತ ಪ್ರಮಾಣ ; ಮಾದರಿ. **Nórmative** (ಗು.) ಕ್ಲುಪ್ತ ಪ್ರಮಾಣ ಸಂಬಂಧವಾದ ; ಪ್ರಮಾಣಕ.

Nórmal ನಾರ್ಮಲ್ (ಗು., ನಾ.) (ಜ್ಯಾ.) ಸಮಕೋನವಾಗಿ ನಿಂತಿರುವ (ರೇಖೆ) ; ಲಂಬ (ರೇಖೆ). (ಗೊತ್ತಾದ) ಪ್ರಮಾಣಕ್ಕನುಸಾರವಾದ ; ಕ್ರಮಬದ್ಧವಾದ ; ರೂಢಿಯ ; ಆದರ್ಶಪ್ರಾಯ ; (N. School ಉಪಾಧ್ಯಾಯರಿಗೆ ಶಿಕ್ಷಣ ಕೊಡುವ ಪಾಠಶಾಲೆ : ಶಿಕ್ಷಕರ ಪಾಠಶಾಲೆ). (ನಾ.) (ಜ್ಯಾ.) ಲಂಬ ರೇಖೆ. (ಭೌ. ವಿ.) (ಗಣಿಸಿದ ಮೊತ್ತಗಳ) ಸರಾಸರಿ. ಎಂದಿನಂತಹ ಸ್ಥಿತಿ, ರೀತಿ, ಮಟ್ಟ, ಮೊ. ; ಯಥಾ ಸ್ಥಿತಿ. ಮನುಷ್ಯದೇಹದ ಸಹಜ ಸ್ಥಿತಿಯ ಶಾಖ (೯೮.೪°F.). **Normálity** —ಮ್ಯಾಲಿಟಿ (ಅಪ್ರಮಾಣವಾಗಿ : **Nórmalcy**) (ನಾ.) ; **Nórmalize** —ಮ— (ಕ್ರಿ. ಸಕ.) ; **Normalizátion** (ನಾ.) ; **Nórmally** (ಕ್ರಿ. ವಿ.)

Nórman ನಾರ್ಮನ್ (ನಾ., ಗು.) ನಾರ್ಮಂಡಿ ಪ್ರಾಂತದವನು ; ನಾರ್ಮಂಡಿಯಲ್ಲಿ ನೆಲಸಿದ ಸ್ಕ್ಯಾಂಡಿನೇವಿಯನ್ ಮತ್ತು ಫ್ರ್ಯಾಂಕಿಷ್ ಬುಡಕಟ್ಟುಗಳ ವಿಶ್ರಸಂತತಿಯವನು : ನಾರ್ಮನ್. =N. French (ಮುಂದೆ ನೋಡಿ). =N. style (ಮುಂದೆ ನೋಡಿ). (ಗು.) ನಾರ್ಮನರ [N. Conquest (of England in 1066)]. N.-English ನಾರ್ಮನರು ಆಡುತ್ತಿದ್ದ, ನಾರ್ಮನರ ಪ್ರಭಾವದಿಂದ ಮಾರ್ಪಟ್ಟ, ಇಂಗ್ಲಿಷ್ ಭಾಷೆ. N. French ನಾರ್ಮನರು ಆಡುತ್ತಿದ್ದ ಫ್ರೆಂಚ್ ಭಾಷೆ ; (ಈಚೆಗೆ) ಇಂಗ್ಲೆಂಡಿನ ನ್ಯಾಯಸ್ಥಾನಗಳಲ್ಲಿ ಬಳಸುತ್ತಿದ್ದ ಫ್ರೆಂಚ್ ಭಾಷೆ. N. style ವಾಸ್ತುಶಿಲ್ಪದಲ್ಲಿ ನಾರ್ಮನ್ ಶೈಲಿ. **Normanésque** (ಗು.) ನಾರ್ಮನ್ ವಾಸ್ತುಶೈಲಿಯ ಹೋಲಿಕೆಯುಳ್ಳ. **Nórmanism** (ನಾ.) ನಾರ್ಮನ್ ಪ್ರಭುತ್ವದ ಅಥವಾ ವೈಶಿಷ್ಟ್ಯಗಳ ಪ್ರಾಬಲ್ಯ. **Nórmanize** (ಕ್ರಿ.) ; **Normanizátion** (ನಾ.)

Norn ನಾರ್ನ್ (ನಾ.) (ಸ್ಕ್ಯಾಂಡಿನೇವಿಯದ ಪುರಾಣ) ಅದೃಷ್ಟ ದೇವತೆಗಳಲ್ಲೊಬ್ಬಳು.

Norse ನಾರ್ಸ್ (ನಾ., ಗು.) ನಾರ್ವೆ ದೇಶದ ಭಾಷೆ (Old N. ನಾರ್ವೆ ಮತ್ತು ಅದರ ನೆಲಸುನಾಡುಗಳ ೧೪ನೆಯ ಶತಮಾನದ ವರೆಗಿನ ಭಾಷೆ). (ಗು.) ನಾರ್ವೆ ದೇಶದ(ವನ) ; —ಭಾಷೆಯ. **Nórseland** (ನಾ.) ; **Nórseman** (ನಾ.)

Norsk ನಾರ್ಸ್ಕ್ (ನಾ., ಗು.) =Norse.

North ನಾರ್ತ್ (ಕ್ರಿ. ವಿ.) (ಸಂಕ್ಷಿಪ್ತ : N., Nor'-) ಉತ್ತರಕ್ಕೆ ; ಉತ್ತರದಲ್ಲಿ. N. by east (By ನೋಡಿ). N. of (—ರ) ಉತ್ತರಕ್ಕೆ. Due n. (Due ನೋಡಿ). Lies n. & south ದಕ್ಷಿಣೋತ್ತರವಾಗಿ ನೆಲಸಿದೆ. **N.-eást** (ನಾ., ಗು., ಕ್ರಿ. ವಿ.) ಈಶಾನ್ಯ (ದಿಕ್ಕು) ; ಈಶಾನ್ಯದ ; — ದಿಕ್ಕಿಗೆ , — ದಿಕ್ಕಿನಲ್ಲಿ. **N.-wést** (ನಾ., ಗು., ಕ್ರಿ. ವಿ.) ವಾಯವ್ಯ (ದಿಕ್ಕು) ; ವಾಯವ್ಯದ ; —ದಿಕ್ಕಿಗೆ ; —ದಿಕ್ಕಿನಲ್ಲಿ. **N.-n.-east** (ನಾ., ಗು., ಕ್ರಿ. ವಿ.) ಉತ್ತರಕ್ಕೂ ಈಶಾನ್ಯಕ್ಕೂ ಮಧ್ಯೇ ಇರುವ ದಿಕ್ಕು : ಉತ್ತರೇಶಾನ್ಯ(ದ, ಕ್ಕೆ, ದಲ್ಲಿ). **N.-n.-west** (ನಾ., ಗು., ಕ್ರಿ. ವಿ.) ಉತ್ತರಕ್ಕೂ ವಾಯವ್ಯಕ್ಕೂ ಮಧ್ಯೇ ಇರುವ ದಿಕ್ಕು : ಉತ್ತರ ವಾಯವ್ಯ(ದ, ಕ್ಕೆ, ದಲ್ಲಿ). **N.-eásterly, -wésterly, -eástern, -wéstern, -eástward, -wéstward, -eástwardly, -wéstwardly; Nórthward** (ಕ್ರಿ. ವಿ., ನಾ., ಗು.); **Nórthwards** (ಕ್ರಿ. ವಿ., ನಾ.)

North (ನಾ.) ಬಡಗ, ಉತ್ತರ (ದಿಕ್ಕು) (Magnetic n. ದಿಕ್ಸೂಚಿಯ ಉತ್ತರದ ಕೊನೆ ತೋರಿಸುವ ದಿಕ್ಕು ; ಕಾಂತೋತ್ತರ). ಒಂದು ದೇಶದ ಉತ್ತರ ಭಾಗ ; ಉತ್ತರ ಮಾರುತ.

North (ಗು.) ಉತ್ತರದಲ್ಲಿ, ಉತ್ತರಕ್ಕೆ — ಇರುವ, ವಾಸಿಸುವ; ಉತ್ತರದ [N. Germany, N. America. The N. Germans. N. latitude. N. Pole. **North-pólar** (ಗು.)]. ಉತ್ತರ ಮುಖವಾದ (N. window, aspect). ಉತ್ತರದಿಂದ ಬರುವ [N. wind. N. light (ಮು., ಚಿತ್ರಕಾರರು ಬಯಸುವ) ಬಡಗಣ ಬೆಳಕು]. N. Britain ಸ್ಕಾಟ್ಲೆಂಡ್ ದೇಶ. N. Briton —ದೇಶಸ್ಥ. N. country ಇಂಗ್ಲೆಂಡಿನ ಅಥವಾ ಗ್ರೇಟ್ ಬ್ರಿಟನ್ನಿನ ಉತ್ತರ ಭಾಗ (N.-countryman ಉತ್ತರ ಇಂಗ್ಲೆಂಡಿನವನು). Northland (ಕಾವ್ಯ) ಉತ್ತರ ದೇಶಗಳು ; ಒಂದು ದೇಶದ ಉತ್ತರ ಪ್ರಾಂತಗಳು. North light = Aurora Borealis. Northman ನಾರ್ವೆ ಅಥವಾ ಸ್ಕ್ಯಾಂಡಿನೇವಿಯ ದೇಶದವನು. N. Sea (ಬ್ರಿಟನ್ನಿಗೂ ನೆದರ್ಲಂಡ್ಸ್, ಜರ್ಮನಿ ಮತ್ತು ಸ್ಕ್ಯಾಂಡಿನೇವಿಯಗಳಿಗೂ ಮಧ್ಯವಿರುವ) ಉತ್ತರ ಸಮುದ್ರ. N. star ಧ್ರುವ ನಕ್ಷತ್ರ. **North-eáster** (ನಾ.) ಈಶಾನ್ಯ ಮಾರುತ. **Nórtherly** ನಾರ್ದರ್ಲಿ (ಗು., ಕ್ರಿ. ವಿ.) (ವಿರ. ಪ್ರ.) = Northern ; (ದಿಕ್ಕು) ಬಡಗಣ ; ಉತ್ತರದ (ಕಡೆಗೆ) ; (ಗಾಳಿ) ಸರಿ ಸುಮಾರು ಉತ್ತರದ ಕಡೆಯಿಂದ ಬೀಸುವ. **Nórthern** ನಾರ್ದರ್ನ್ (ಗು., ನಾ.) (ಮು., ಇಂಗ್ಲೆಂಡಿನ ಅಥವಾ ಯೂರೋಪಿನ) ಉತ್ತರದಲ್ಲಿ, —ಇರುವ, ವಾಸಿಸುವ ; ಉತ್ತರದಿಂದ ಬಂದ ; ಉತ್ತರದ. (ಅಮೆ. ಸಂ.) ಉತ್ತರ ಸಂಸ್ಥಾನಗಳ. (ಗಾಳಿ) ಉತ್ತರದಿಂದ ಬೀಸುವ (ವಿರ. ಪ್ರ.) ; ಉತ್ತರ ಪ್ರದೇಶದ ವೈಲಕ್ಷಣ್ಯಗಳುಳ್ಳ (A pallid n. day). N. lights = Aurora Borealis. (ನಾ.) ಔತ್ತರೇಯ (=**Nórtherner**). **Nórthernmost** (ಗು.) ; **Nórthing** ನಾರ್ದಿಂಗ್ (ನಾ.) (ಸಮುದ್ರಪ್ರಯಾಣದಲ್ಲಿ ಅಥವಾ ಭೂಪ್ರಯಾಣದಲ್ಲಿ) ಉತ್ತರದ ಕಡೆಗೆ ಹೋದ, ತಿರುಗಿದ, —ದೂರ (Two miles n. Have made very little n.). **Nórthwardly** (ಕ್ರಿ. ವಿ., ಗು.) ಉತ್ತರದ ಕಡೆಗೆ ; ಉತ್ತರಾಭಿಮುಖವಾಗಿ. (ಗಾಳಿ) ಉತ್ತರದಿಂದ ಬೀಸುವ. **North-wéster** (ನಾ.) ವಾಯವ್ಯ ಮಾರುತ. **Nórward(s)** =Northward(s). **Nor'-wéster** =North-wester. ಒಂದು ಬಟ್ಟಲು ತೀಕ್ಷ್ಣ ಮದ್ಯ. ಮೇಣಗಪ್ಪಟದ ಟೊಪ್ಪಿಗೆ (=**Sou'-wester**)

North-eáster, Nórthing, etc. **North** ನೋಡಿ.

Norwégian ನಾರ್ವೀಜನ್ (ಗು., ನಾ.) ನಾರ್ವೆ ದೇಶದ(ವನು, ಭಾಷೆ)

Nose ನೋಸ್ (ನಾ.) ಮೂಗು ; ನಾಸಿಕ ; ಘ್ರಾಣೇಂದ್ರಿಯ ; ಘ್ರಾಣ ಶಕ್ತಿ [Has a good n. (ಮು., ನಾಯಿಗಳ ವಿಷಯದಲ್ಲಿ) ; (ರೂಪ.) ಗುಪ್ತ ಪೋಲೀಸರು, ಮೊ. ರ ವಿಷಯದಲ್ಲಿ]. (ಒಣ ಹುಲ್ಲು, ತೇಯಿರೆ, ಮೊ. ಗಳ) ವಾಸನೆ, ಕಂಪು, ಗಂಧ. (ನಾಳ, ಕೊಳವೆ, ತಿದಿ, ಬಕ ಪಾತ್ರೆ, ಮೊ. ಗಳ) ತೆರೆದ ತುದಿ, ಮೂತಿ. ಹಡಗಿನ, ದೋಣಿಯ, ಮೂತಿ ; ಚಾಚು ಭಾಗ. N. of wax ಸುಲಭವಾಗಿ ತಿದ್ದಬಹುದಾದ, ತಿರುಗಿಸಬಹುದಾದ, ಒಲಿಸಿಕೊಳ್ಳಬಹುದಾದ, —ಮನುಷ್ಯ, ವಸ್ತು : ಮೇಣದಂಥವನು ; —ಥದು. Make long n. (Long[1] ನೋಡಿ). Keep n. to grindstone (Grind ನೋಡಿ). As plain as the n. in your face ಸ್ಪಷ್ಟವಾಗಿ ಕಾಣುವಂತೆ. Count or tell noses ಬೆಂಬಲ ಕೊಡುವವರನ್ನು, ಅನುಮೋದಿಸುವವರನ್ನು, ಲೆಕ್ಕ ಮಾಡು ; (ಒಂದು ವಿಷಯವನ್ನು) ಕೇವಲ ಸಂಖ್ಯಾಬಲದಿಂದ ನಿರ್ಧರಿಸು. Follow one's n. (Follow ನೋಡಿ). Poke, thrust, one's n. (ತನಗೆ ಸಂಬಂಧವಿಲ್ಲದ್ದರಲ್ಲಿ) ಕೈಹಾಕು ; ಮಧ್ಯೆ ತಲೆ ಹಾಕು. Turn up one's n. at ತಿರಸ್ಕಾರ ತೋರಿಸು ; ತುಚ್ಛೀಕರಿಸು ; ಧಿಕ್ಕರಿಸು ; ಮೂಗು ಮುರಿ. Cut off one's n. to

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

spite one's face ಮುಖದಮೇಲನ ಮುನಿಸಿಗೆ ಮೂಗು ಕೊಯ್ದುಕೊ; ತನ್ನ ಮುನಿಸಿನಿಂದ ತನ್ನ ಕೆಲಸವನ್ನೇ ಕೆಡಿಸಿಕೊ. Put one's n. out of joint (ಒಬ್ಬನ) ಉದ್ದೇಶ ಈಡೇರದಂತೆ ಮಾಡು, ಕಾರ್ಯಭಂಗ ಮಾಡು; ಒಬ್ಬನ ಅನುಗ್ರಹ ಸಂಪಾದಿಸುವುದಕ್ಕಾಗಿ ಆತನ ಅನುಗ್ರಹಕ್ಕೆ ಪಾತ್ರನಾದ ಮತ್ತೊಬ್ಬನನ್ನು ತೊಲಗಿಸಿಬಿಡು; ಉದ್ದೇಶ ಭಂಗ ಮಾಡು. Bite or snap one's n. off ರೇಗಿ ಮುಖಮುರಿಯುವಂತೆ ಉತ್ತರ ಹೇಳು. Pay through the n. ಸಲ್ಲಬೇಕಾದುದಕ್ಕಿಂತ ವಿಪರೀತ ಹೆಚ್ಚಾಗಿ ಕೊಡಬೇಕಾಗು; ದುಬಾರಿ ಬೆಲೆ ಕೊಡಬೇಕಾಗು. Speak through one's n. ಮೂಗಿನಲ್ಲಿ ಮಾತಾಡು. Lead by the n. (Lead² ನೋಡಿ). Under one's n. ಕಣ್ಣೆದುರಿನಲ್ಲೇ; (ಒಬ್ಬನಿಗಾಗುವ) ಅಸಮಾಧಾನಕ್ಕೆ ಲಕ್ಷ್ಯಕೊಡದೆ. **N.-ape, -monkey** ಸೊಂಡಿಲ ಕೋತಿ. **N.-bag** ದಾಣ ತುಂಬಿ ಕುದುರೆಯ ಬಾಯಿಗೆ ಕಟ್ಟುವ ದಾಣದ ಚೀಲ; ತೋಬರ(ರಿ). **N.-band** ಲಗಾಮಿನ ಮೂಗುಪಟ್ಟಿ. **N.-dive** ಮೂಗು ಮುಂದಾಗಿ (ಭೂಮಿಗೆ) ಥಟ್ಟನೆ ಎರಗು(ವ ಫಲಕವಿಮಾನದ ಮುಳುಕು). **N.-flute** (ಸಯಾಮಿನವರು, ಫೀಜಿಯವರು, ಮೊ. ರಲ್ಲಿ ಬಳಕೆಯಾಗಿರುವ) ಮೂಗಿನಿಂದ ಊದುವ ಒಂದು ವಾದ್ಯ: ಮೂಗು ಕೊಳಲು. [Nosegay (ಸಾ., ಸುವಾಸನೆಯ) ಹೂಗೊಂಚಲು, ಪುಷ್ಪಗುಚ್ಛ]. **N.-piece** = N.-band; ಸೂಕ್ಷ್ಮದರ್ಶಕದಲ್ಲಿ ವಸ್ತುಸಮೀಪದ ಯವವನ್ನು (ಲೆನ್ಸನ್ನು) ತೊಡಿಸುವ ಭಾಗ. **N.-pipe** ಮೂತಿಯಂತೆ ಉಪಯೋಗಿಸುವ ನಾಳಭಾಗ: ಮೂತಿ ಕೊಳವೆ. **N.-ring** (ಹಗ್ಗ ಕಟ್ಟಿ ಎಳೆದುಕೊಂಡು ಹೋಗಲು ಗೂಳಿ, ಮೊ. ಗಳ ಮೂಗಿಗೆ ತೊಡಿಸುವ) ಮೂಗು ಬಳೆ; (ಅಲಂಕಾರಕ್ಕಾಗಿ ಹಾಕಿಕೊಳ್ಳುವ) ಮೂಗುಂಗುರ, ಮೂಗು ಮುರು, ಮುಕರ. **N.-warmer** (ಅಸಂ.) ಗಿಡ್ಡ ಚುಂಗಾಣಿ. **(-)nosed** (ಗು.); **Nóseless** (ಗು.); **Nóser** (ನಾ.) (ಮುಖಕ್ಕೆ ಬಡಿಯುವ) ಬಲವಾದ ಎದುರು ಗಾಳಿ (ಮು., Dead n.). **Nósing** (ನಾ.) ಮೆಟ್ಟಿಲು, ಎರಕದಚ್ಚು, ಮೊ. ಗಳ ದುಂಡುಮಾಡಿದ ಏಣು, ಗೋಲು; ಇದಕ್ಕೆ ತೊಡಿಸುವ ಲೋಹದ ಕಾಪು. **Nósy** (ಗು., ನಾ.) ದೊಡ್ಡ ಮೂಗಿನ(ವನು) (ಮು., Duke of Wellington ನ ವಿಷಯದಲ್ಲಿ). (ಮು., ಸಕೆ ತಟ್ಟಿದ ಕಾಳು, ಮುಗ್ಗಿದ ಹುಲ್ಲು, ಮೊ. ಗಳ ವಿಷಯದಲ್ಲಿ) ಕೆಟ್ಟನಾತ(ದ), ದುರ್ವಾಸನೆ(ಯ); (ತೇಯಲೆಯ ವಿಷಯದಲ್ಲಿ) ಸುವಾಸನೆಯ, ಘಮಘಮಿಸುವ; ದುರ್ವಾಸನೆಗಳ ವಿಷಯದಲ್ಲಿ ಸೂಕ್ಷ್ಮಗ್ರಹಣ ಶಕ್ತಿಯುಳ್ಳ. (ಅಸಂ.) ತಾನಾಗಿ ಒಳ ವಿಷಯಗಳನ್ನು ತಿಳಿಯಲು ಪ್ರಯತ್ನಿಸುವ; ಅಧಿಕಪ್ರಸಂಗಿತನದಿಂದ ತಲೆಹಾಕುವ (ಮು., N. Parker ಅಧಿಕ ಪ್ರಸಂಗಿ)

Nose (ಕ್ರಿ.) (—ರ) ವಾಸನೆ ತಿಳಿ, ಕಂಡುಹಿಡಿ; ಮೂಸಿ ನೋಡು; ಆಘ್ರಾಣಿಸು; ವಾಸನೆಯಿಂದ ಕಂಡುಹಿಡಿ. (ರೂಪ.) ಪತ್ತೆಹಚ್ಚು; ಕಂಡುಹಿಡಿ (Noses a job in everything ಪ್ರತಿಯೊಂದರಲ್ಲಿಯೂ ಸ್ವಾರ್ಥ ಪ್ರಯೋಜನವನ್ನು ಕಂಡುಹಿಡಿಯುತ್ತಾನೆ). ಮೂಗಿನಿಂದ ಉಜ್ಜು. (ಒಂದರ ಮೇಲೆ, ಒಂದರೊಳಗೆ) ಮೂಗು ತಿವಿ, ತೂರಿಸು. ಮೂಸಿನೋಡು; ವಾಸನೆ ಸೇದಿಕೊ (*At, about* ಪದ ದೊಡನೆ). ಹೊಂಚುಹಾಕು; ಹುಡುಕು; ಬೆದಕು; ಅನ್ವೇಷಣ ಮಾಡು (*After, for* ಉಪ. ದೊಡನೆ). ದಾರಿ ಮಾಡಿಕೊಂಡು, ನುಗ್ಗಿಕೊಂಡು, —ಹೋಗು; (ಮು., ಹಡಗಿನ ವಿಷಯದಲ್ಲಿ) ಮೂತಿಯಿಂದ ನೂಕಿಕೊಂಡು ಮುಂದುವರಿ. (ಸ್ತರ, ಮೊ. ಗಳ ವಿಷಯದಲ್ಲಿ) ಒಳಕ್ಕೆ ಬಾಗು (*In* ಉಪ. ದೊಡನೆ), ಭೂಪದರದ ಮೇಲಕ್ಕೆ ತಲೆಯೆತ್ತು (*Out* ಉಪ. ದೊಡನೆ)

Nóser, etc. **Nose** (ನಾ.) ನೋಡಿ.

Noso- ನಾಸೊ—, ನೊಸಾ— (ಸ. ಪೂ. ಪ.) ರೋಗ—. **-graphy** (ನೊಸಾಗ್ರಫಿ) ರೋಗವಿವರಣ ಶಾಸ್ತ್ರ. **-logy** ರೋಗ ವರ್ಗೀಕರಣ ವೈದ್ಯಶಾಸ್ತ್ರ ಭಾಗ. **-logist** (ನಾ.), **-lógical** (ನಾಸೊಲಾ—)

Nostálgia ನಾಸ್ಟ್ಯಾಲ್ಜಿಯ (ನಾ.) ಮನೆಯನ್ನು ಅಥವಾ ಸ್ವದೇಶವನ್ನು ಬಿಟ್ಟು ಹೊರಗಿರುವುದರಿಂದಾಗುವ ಮನೋವ್ಯಥೆಯ ರೋಗ: ಮನೆಯ ಹಂಬಲನ ರೋಗ. **Nostálgic** (ಗು.)

Nostradámus ನಾಸ್ಟ್ರಡೇಮಸ್ (ನಾ.) ಭವಿಷ್ಯ ಹೇಳುವ ವ್ಯಕ್ತಿಯವನು; ಭವಿಷ್ಯವಾದಿ; ಕಣಿ ಹೇಳುವವನು. (Nostredame ಎಂಬ ಫ್ರೆಂಚ್ ವೈದ್ಯನ ಹೆಸರಿನಿಂದ)

Nóstril ನಾಸ್ಟ್ರಿಲ್ (ನಾ.) ಮೂಗಿನ ಸೊಳ್ಳೆ; ಹೊಳ್ಳೆ; ನಾಸಾ ಪುಟ [Stink in one's nostrils (ತನಗೆ) ಬಹಳ ಅಸಹ್ಯವಾಗಿರು]. **(-)nostrilled** (ಗು.)

Nóstrum ನಾಸ್ಟ್ರಮ್ (ನಾ.) ತಯಾರಿಸಿದವನೇ ಸರ್ವೋತ್ತಮವಾದುದೆಂದು ಹೊಗಳುವ ಔಷಧ; ಬೂಟಾಟಿಕೆಯ ಮದ್ದು; ಸ್ವಾಮ್ಯ ಪಡೆದ ಔಷಧ. (ರೂಪ.) (ರಾಜಕೀಯ, ಸಾಮಾಜಿಕ, ಮೊ. ಗಳಲ್ಲಿ) ತನ್ನದೇ ಸರ್ವೋತ್ತಮವೆಂದು ವಾದಿಸುವ ಯುಕ್ತಿ, ಯೋಜನೆ, ಉಪಾಯ.

Not ನಾಟ್ (ಸಂಕುಚಿತ ರೂಪ: **n't**) (ಕ್ರಿ. ವಿ.) ಅಲ್ಲ; ಇಲ್ಲ. I know n. I doubt n. Say n. so. Fear n. Saidst thou n.? I cannot say, can't say. He will n., won't, (ಪ್ರಾಚೀ. ಪ್ರ.) he'll n. come. She is n., isn't, (ಗ್ರಾಮ್ಯ ಪ್ರ.) ain't, here. Do not, (ಸಾ.) don't, stir. Didn't you, (ಅಥವಾ ಔಪಚಾರಿಕವಾಗಿ) did you n., —tell me? Am I n., ain't I, aren't we, —smart? N. knowing, I cannot say ತಿಳಿಯದೆ ನಾನು ಹೇಳಲಾರೆ. Are you ill? N. at all. N. so. If it clears we will go out; if n., n. Popular or n., it is right. I would as soon do it as n. ಬಿಡುವುದಕ್ಕೆ ಎಷ್ಟು ಇಷ್ಟವುಂಟೊ ಮಾಡುವುದಕ್ಕೂ ಅಷ್ಟು ಇಷ್ಟವುಂಟು. If he said so— n. that he ever did —he lied ಅವನು ಹಾಗೆ ಹೇಳಿದ್ದರೆ —ಹಾಗೇನೂ ಹೇಳಿದನೆನ್ನುವುದಿಲ್ಲ—ಅದು ಸುಳ್ಳು. I cannot do it; n. but what a stronger man might ಅದನ್ನು ಮಾಡಲು ನನ್ನಿಂದ ಸಾಧ್ಯವಿಲ್ಲ; ಆದರೆ ನನಗಿಂತ ಬಲಶಾಲಿಯಾದವನು ಮಾಡಲಾರನೆಂದಲ್ಲ. (ಒತ್ತಿ ಹೇಳುವಲ್ಲಿ) The Chinese will not fight, n. they. N. a few ಅಲ್ಪಸ್ವಲ್ಪವಲ್ಲ; ಬಹಳ (ಮಂದಿ). N. seldom ಒಮ್ಮೊಮ್ಮೆಯಲ್ಲ; ಅನೇಕ ವೇಳೆ. N. unconnected with ಸಂಬಂಧವಿಲ್ಲದೆ ಇಲ್ಲ. N. at home (Home ನೋಡಿ). N. half (ಕ್ರಿ. ವಿ.; ಅಸಂ.) ಬಹಳ ಹೆಚ್ಚಾಗಿ (Was he annoyed? N. half). N. out (Out ನೋಡಿ). N.-being ಇಲ್ಲಮೆ; ನಾಸ್ತಿತ್ವ. N.-self = non-ego (Non- ನೋಡಿ). N. sufficient (ಸಾ., N.S.) ತಕ್ಕಷ್ಟಿಲ್ಲ (ತಿರಸ್ಕರಿಸಿದ ಚೆಕ್ಕಿನಮೇಲೆ ಬ್ಯಾಂಕಿನವನು ಬರೆಯುವ ಗುರುತು)

Nóta béne (L) ನೋಟ ಬೀನಿ(ೕ), —ನೆ (ಕ್ರಿ., ವಿಧ್ಯರ್ಥ; ಸಂಕ್ಷಿಪ್ತ: N.B.) ಚೆನ್ನಾಗಿ ಗಮನಿಸು; ಮುಂದೆ ಬರುವುದನ್ನು ಗಮನಿಸು; ಗಮನವಿಡು (ಸಾ., ಹಿಂದೆ ಬಂದುದರ ಗುಣವಿಶಿಷ್ಟತೆಗೆ ಗಮನ ಸೆಳೆಯುವಲ್ಲಿ)

Nótable ನೋಟಬ್ಲ್ (ಗು., ನಾ.) ಗಮನಾರ್ಹವಾದ; ಅತಿಶಯವಾದ; ಪ್ರಖ್ಯಾತ; ಪ್ರಸಿದ್ಧ; ಪ್ರಮುಖ; ಗಮನ ಸೆಳೆಯುವ. (ರ. ವಿ.) ಕಾಣುವಷ್ಟುಮಟ್ಟಿನ; ಗುರುತಿಸಲಾಗುವಷ್ಟರ (A n. quantity of). (ಹೆಂಗಸರ ವಿಷಯದಲ್ಲಿ; ಉಚ್ಚಾರಣೆ: ನಾಟಬ್ಲ್) ಶಕ್ತಳಾದ; ಸಮರ್ಥಳಾದ; ಸಂಭ್ರಮದ; ಗಡಿಬಿಡಿಯ; ಗೃಹಕೃತ್ಯ ಕುಶಲಳಾದ. (ನಾ.) ಪ್ರಸಿದ್ಧ, ಪ್ರಖ್ಯಾತ, —ವ್ಯಕ್ತಿ [ಮು., Assembly of Notables (ಜರೂರು ಸಂದರ್ಭಗಳಲ್ಲಿ ತಾತ್ಕಾಲಿಕ ಶಾಸನ ಸಭೆಯಂತೆ ಕೆಲಸ ಮಾಡುವ) ಪ್ರಖ್ಯಾತರ ಅನಿಯತ ಸಭೆ]. **Nótably** (ಕ್ರಿ. ವಿ.); **Notabílity** (ನಾ.) ಪ್ರಖ್ಯಾತ (ವ್ಯಕ್ತಿ); ಪ್ರಸಿದ್ಧ ಪುರುಷ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ವಿರ. ಪ್ರ.) ಗಮನಾರ್ಹವಾದ, ನೋಡಬೇಕಾದ, —ವಸ್ತು; ಗಮನಾರ್ಹತೆ; ಪ್ರಾಧಾನ್ಯ (Names of no historical n.). (ಪ್ರಾಚೀ. ಪ್ರ.) ಗೃಹಕೃತ್ಯ ಕೌಶಲ.

Nótary ನೋಟರಿ (ನಾ.) (ಮು., ಇಂಗ್ಲೆಂಡಲ್ಲದ ಇತರ ದೇಶಗಳಲ್ಲಿ) ಕರಾರು, ಮೊ. ಗಳನ್ನು ಬರೆಯುವುದು ಅಥವಾ ಪ್ರಮಾಣೀಕರಿಸುವುದು, ಸಲ್ಲಿಕೆಗಾಗಿ ಕೊಟ್ಟ ಹುಂಡಿಗಳು, ಮೊ. ನ್ನು ತಿರಸ್ಕರಿಸಲಾಯಿತೆಂದು ಪ್ರಮಾಣಪತ್ರ ಕೊಡುವುದು, ಮತ್ತು ಕಾನೂನಿಗನುಸಾರವಾದ ಇತರ ನಿಯಮಗಳನ್ನು ನಡಸುವುದು—ಇವೇ ಮೊದಲಾದ ಅಧಿಕಾರಗಳುಳ್ಳ ಒಬ್ಬ ಸಾರ್ವಜನಿಕ ಅಧಿಕಾರಿ (=N. public). **Notárial** ನೋಟೇರಿಯಲ್ (ಗು.); **Notárially** (ಕ್ರಿ. ವಿ.)

Notátion ನೊಟೇಷನ್ (ನಾ.) ಸಂಖ್ಯೆ, ಮೊತ್ತ, ಮೊ. ನ್ನು ಸಂಕೇತಗಳಿಂದ ತೋರಿಸುವುದು; ಅಂಕನ; ಅಂಕ ಕರಣ; (ಇದಕ್ಕಾಗಿ ಉಪಯೋಗಿಸುವ, ಯಾವುದಾದರೂ) ಅಂಕನ ಪದ್ಧತಿ; ಅಂಕಗಳು; ಚಿಹ್ನೆಗಳು (ಮು., ಅಂಕಗಣಿತ ಬೀ. ಗ. ಗಳಲ್ಲಿ, ಸಂಗೀತದಲ್ಲಿ). Scale of n. (Scale³ ನೋಡಿ)

Notch ನಾಚ್ (ನಾ., ಕ್ರಿ. ಸಕ.) (ಅಂಚಿನಲ್ಲಿ ಅಥವಾ ಹೊರ ಬಾಗುಳ್ಳ ಮೇಲ್ಮೈಯಲ್ಲಿ ಮಾಡಿದ) V-ಆಕಾರದ ಕಚ್ಚು. (ಎಣಿಕೆಗಾಗಿ ಕೋಲು, ಮೊ. ಗಳಮೇಲೆ ಮಾಡಿರುವ) ಕೊಯ್ತ, ಕಚ್ಚು. ಕ್ರಿಕೆಟ್ ಆಟದಲ್ಲಿ ಗೆದ್ದ ಓಟ (ಈಗ ವಿರ. ಪ್ರ.). (ಅಮೆ. ಸಂ.) ಇಕ್ಕಟ್ಟು ದಾರಿ; ಕಣಿವೆ. (N.-wing ಹಲವು ಚಿಟ್ಟೆಗಳ ಜಾತಿ). (ಕ್ರಿ.) ಕಚ್ಚು ಮಾಡು; ಕೊಯ್ದು ಗೆರೆ ಮಾಡು. ಹಲ್ಲು ಕೊಯ್ದು ಗರಗಸ, ಮೊ. ಗಿ ಮಾಡು (*Into* ಉಪ. ದೊಡನೆ). ಕಚ್ಚು ಮಾಡಿ ಗೆಲ್ಲುಸಂಖ್ಯೆ ಗುರುತಿಸು (ಸಾ., *Up*, *down* ಉಪ. ದೊಡನೆ). (ಕ್ರಿಕೆಟ್ ಆಟದಲ್ಲಿ) (ಹಲವು) ಓಟಗಳನ್ನು ಮಾಡು. (ಸೋಪಾನದ ಚೌಕಟ್ಟಿನಲ್ಲಿ) ಉಗಿಲು ಮಾಡಿ (ಮೆಟ್ಟಲನ್ನು) ಭದ್ರವಾಗಿ ಸೇರಿಸು, ಜೋಡಿಸು. **Nótchy** (ಗು.); **Notched** (ಗು.) (ನ. ವಿ., ಪ್ರಾ. ವಿ.) ಒರಟು ಒರಟಾಗಿ ಕಚ್ಚುಗಳು ಮಾಡಿದಂತಿರುವ; ಗರಗಸದ ಏಣಿನಾಕಾರದ.

Note ನೋಟ್ (ನಾ.) (ಸಂ.) ಸ್ವರ ಚಿಹ್ನೆ; Pianoforte, ಮೊ. ವಾದ್ಯಗಳಲ್ಲಿ ಧ್ವನಿಯನ್ನು ಹುಟ್ಟಿಸುವ ಕೀಲಿಕೈ; (ಸಂಗೀತ ವಾದ್ಯ, ಧ್ವನಿ, ಮೊ. ಗಳು ಮಾಡುವ) ನಿರ್ದಿಷ್ಟ ಶ್ರುತಿಯ ಸ್ವರ; ಹಕ್ಕಿಯ ಹಾಡಿನ ಸ್ವರ. (ಒಬ್ಬನು ತನ್ನ ಅಭಿಪ್ರಾಯವನ್ನು ಸೂಚಿಸುವ) ಒಂದು ವಿಶಿಷ್ಟ ಧ್ವನಿ, ರೀತಿ (There is a n. of self-complacency in his voice ಅವನ ಮಾತಿನ ಧೋರಣೆಯಲ್ಲಿ ಒಂದು ಆತ್ಮತೃಪ್ತಿಯ ಧ್ವನಿಯಿದೆ. Sound the n. of war ಯುದ್ಧದ ಸೂಚನೆ ಕೊಡು. (Change one's n. ಸ್ವರ ಬದಲಾಯಿಸು; ಥಟ್ಟನೆ ಮೇಲೆ ಬೀಳುವ ಭಾವವನ್ನಾಗಲಿ ಅಥವಾ ದೈನ್ಯ, ಮೊ. ನ್ನಾಗಲಿ ತೋರು). ಚಿಹ್ನೆ; ಗುರುತು; ಲಕ್ಷಣ; ವೈಶಿಷ್ಟ್ಯ; ಖಾತರಿ (*Of* ಉಪ. ದೊಡನೆ). ಕಳಂಕ; ಖಂಡನೆಯ ಚಿಹ್ನೆ (On which the law has set a n. of infamy ಕಾನೂನು ಅದರಮೇಲೆ ಅಪಖ್ಯಾತಿಯ ಕಳಂಕ ಹೊರಿಸಿದೆ). ಉದ್ಗಾರದ, ಮೆಚ್ಚಿಕೆಯ, ಅಥವಾ ಪ್ರಶ್ನಾರ್ಥಕ, —ಚಿಹ್ನೆ. (ಸಾ., ಬ. ವ. ದಲ್ಲಿ) (ಭಾಷಣಕ್ಕಾಗಲಿ ಲೇಖನಕ್ಕಾಗಲಿ ಮಾಡಿಕೊಂಡ) ವಿಷಯಗಳ, ಅಭಿಪ್ರಾಯಗಳ, —ಟಿಪ್ಪಣಿ; ಮುಖ್ಯಾಂಶಗಳ ಪಟ್ಟಿ [Make or take a n. of; Make notes. Compare notes (Compare ನೋಡಿ). Preaches from notes ಟಿಪ್ಪಣಿಯ ಸಹಾಯದಿಂದ ಬೋಧನೆ ಮಾಡುತ್ತಾನೆ. Spoke for an hour without a n. ಟಿಪ್ಪಣಿಯೇ ಇಲ್ಲದೆ ಒಂದು ಗಂಟೆಯ ವರೆಗೆ ಭಾಷಣ ಮಾಡಿದನು]. (ಗ್ರಂಥಭಾಗಗಳನ್ನು, ವಿಷಯಗಳನ್ನು, ವಿಶದಪಡಿಸುವುದಕ್ಕಾಗಿ ಸೇರಿಸಿರುವ) ಟಿಪ್ಪಣಿ. ಸಣ್ಣ, ಅಥವಾ ಉಚಿತ ಪದ್ಧತಿಯನ್ನನುಸರಿಸದೆ ಬರೆದ, ಪತ್ರ; ಚೀಟಿ. ವಿಧಿವಿಹಿತವಾದ ರಾಜಕೀಯ ನಿಯೋಗ ಪತ್ರ. (ಒಂದು ಗೊತ್ತಾದ ಅವಧಿಯಲ್ಲಿ ನಮೂದಾದ ಹಣವನ್ನು ಕೊಡುವುದಾಗಿ ಬರೆದು ಕೊಟ್ಟ) ಕೈಪತ್ರ (=N. of hand); =Bank-n. (Bank² ನೋಡಿ); =Circular n. (Circular ನೋಡಿ). ಘನತೆ; ಪ್ರಸಿದ್ಧಿ; ಪ್ರಖ್ಯಾತಿ (Critic, philosopher, person, —of n.); ಗಮನ; ಲಕ್ಷ್ಯ (Worthy of n. Take n. of) [**Nóteworthy** (ಗು.)]. N.-book ನೆನಪಿನ ವಿಷಯಗಳನ್ನು ಬರೆದಿಡುವ ಪುಸ್ತಕ: ಟಿಪ್ಪಣಿ ಪುಸ್ತಕ. N.-paper (ಮು., ಖಾಸಗಿ) ಪತ್ರವ್ಯವಹಾರ (ಮಾಡಲು ಉಪಯೋಗಿಸುವ) ಕಾಗದದ ಹಾಳೆ. **Nóteless** (ಗು.); **Nótelet** (ನಾ.) ಸಣ್ಣ ಟಿಪ್ಪಣಿ; —ಕಾಗದಪತ್ರ.

Note (ಕ್ರಿ. ಸಕ.) ನೋಡು; ದೃಷ್ಟಿಯಿಡು; ಗಮನಿಸು; ಗಮನ, ಲಕ್ಷ್ಯ, —ಕೊಡು. (ನೆನಪಿಗಾಗಿ, ಗಮನಿಸುವುದಕ್ಕಾಗಿ) ಗುರುತು ಹಾಕಿಕೊ, ಬರೆದಿಟ್ಟುಕೊ (*Down* ಪದದೊಡನೆ ಸಹ). (ಗ್ರಂಥ, ಮೊ. ಕ್ಕೆ) ಟಿಪ್ಪಣಿ, ಟೀಕು, —ಬರೆ. (ಭೂ. ಕೃ.) ಪ್ರಖ್ಯಾತವಾದ; ಪ್ರಸಿದ್ಧವಾದ; (—ಗೆ) ಹೆಸರುವಾಸಿಯಾದ (Noted *for*)

Nóthing ನತಿಂಗ್ (ನಾ., ಕ್ರಿ. ವಿ.) ಯಾವುದೂ ಇಲ್ಲ, ಅಲ್ಲ; ಇಲ್ಲಮೆ; ನಾಸ್ತಿ. (ಗಣಿತ) ಸೊನ್ನೆ (Multiply 6 by n. & the result is n.). ಅಲ್ಪ, ಕ್ಷುಲ್ಲಕ, —ವಿಷಯ. (ಕ್ರಿ. ವಿ.) ಇಲ್ಲವೇ ಇಲ್ಲದೆ; ಏನೇನೂ ಇಲ್ಲದೆ. N. great is easy ದೊಡ್ಡದು ಯಾವುದೂ ಸುಲಭವಲ್ಲ. Has n. in him ಅವನಲ್ಲೇನೂ (ಹುರುಳು) ಇಲ್ಲ. There is n. in it ಅದು ಸುಳ್ಳು, ಪ್ರಯೋಜನವಿಲ್ಲದ್ದು [In⁽²⁾ ಅನ್ನೂ ನೋಡಿ]. N. doing (ಅಸಂ.) ಏನೂ ಆಗದು; —ಸಾಧ್ಯವಿಲ್ಲ (ಅಪಜಯವನ್ನಾಗಲಿ ನಿರಾಕರಣೆಯನ್ನಾಗಲಿ ಸೂಚಿಸುವಲ್ಲಿ). N. venture n. have ಧೈರ್ಯವೂ ಇಲ್ಲ, ಕಾರ್ಯವೂ ಇಲ್ಲ. N. like leather (Leather ನೋಡಿ). Neck or n. (Neck¹ ನೋಡಿ). Dance on n. ಗಲ್ಲಿಗೇರಿಸಲ್ಪಡು. Fade away to n. ಕ್ರಮೇಣ ಅದೃಶ್ಯವಾಗು. No n. (ಬಳ. ಮಾ.) (ಇಲ್ಲದ ಪದಾರ್ಥಗಳ ಪಟ್ಟಿಯಲ್ಲಿ ಹೇಳುವ ಕೊನೆಯ ಮಾತು) ಯಾವುದೂ ಇಲ್ಲ (No bread, no butter, no cheese, no n.). N. else than (or but), n. but, force ಕೇವಲ ಬಲ ಪ್ರಯೋಗ (ಬೇರೆ ಏನೂ ಅಲ್ಲ); ಬಲವಂತವೊಂದೇ; ನಿಸ್ಸಂದೇಹವಾಗಿ ಬಲ ಪ್ರಯೋಗ. There is n. for it but to— —ಹೊರತು ಬೇರೆ ಮಾರ್ಗವಿಲ್ಲ; ಉಪಾಯಾಂತರವಿಲ್ಲ; ವಿಧಿಯಿಲ್ಲ. N. if not critical ತಪ್ಪು ಕಂಡು ಹಿಡಿಯುವುದೇ ಮುಖ್ಯ ಲಕ್ಷಣ. Get thing for n. (ವಸ್ತುವನ್ನು) ಪುಕ್ಕಟೆಯಾಗಿ ಪಡೆ. Have endured it for n. ವೃಥಾ ಅನುಭವಿಸಿದೆನು. So it was not for n. that he read Plato ಅವನು ಪ್ಲೇಟೋವನ್ನು ಓದಿದ್ದು ಸಾರ್ಥಕವಾಗದೆ ಹೋಗಲಿಲ್ಲ. That is n. to you ಅದು ನಿನಗೆ ಸಂಬಂಧಪಟ್ಟದ್ದಲ್ಲ. Make n. of ಅಲಕ್ಷ್ಯವಾಗೆಣಿಸು. Make n. of doing ಹಿಂದು ಮುಂದು ನೋಡದೆ, ಸಾಮಾನ್ಯ ವಿಷಯವೆಂದು, —ಮಾಡಿಬಿಡು. Can make n. of it ಏನೂ ಅರ್ಥವಾಗುವುದಿಲ್ಲ; ಯಾವ ಉಪಯೋಗಕ್ಕೂ ಬರುವುದಿಲ್ಲ. Come to n. ವ್ಯರ್ಥವಾಗಿ ಪರಿಣಮಿಸು; ನಿಷ್ಫಲವಾಗು; ಏನೂ (ಪ್ರಯೋಜನ) ಆಗದಿರು. Have n. to do with (—ಒಡನೆ) ಸಂಬಂಧ ಪಡೆಯದಿರು; ಜೊತೆಗೂಡದಿರು; ವ್ಯವಹರಿಸದಿರು. All to n. ಎಲ್ಲ ವ್ಯರ್ಥವಾಯಿತು. That is n. ಅದು ತೃಣಪ್ರಾಯ. He is n. without his money. Learning is n. to genius ಪ್ರತಿಭೆಯ ಮುಂದೆ ಪಾಂಡಿತ್ಯವಲ್ಲ. The little nothings of life ಜೀವನದ ಅತ್ಯಲ್ಪ ವಿಷಯಗಳು. The new commander-in-chief was a n. ಹೊಸ ಮುಖ್ಯ ಸೇನಾಪತಿ ಏನೂ ಉಪಯೋಗವಿಲ್ಲದವನಾಗಿದ್ದನು. (ಮತ ವಿಷಯದಲ್ಲಿ) Be n. ಯಾವ ನಿರ್ದಿಷ್ಟ ಸಂಗಡಕ್ಕೂ ಸೇರಿರದಿರು; ನಾಸ್ತಿಕನಾಗಿರು; ಅಜ್ಞೇಯತಾ ವಾದಿಯಾಗಿರು [**Nothingárian** (ನಾ.) ಮತ ಸಂಬಂಧವಾದ ಯಾವ ನಂಬಿಕೆಯೂ ಇಲ್ಲದವನು]. Differs n. from (—ಇಂದ) ಏನೂ ವ್ಯತ್ಯಾಸವಿಲ್ಲ. Is n. less than monstrous ಅದು ನಿಜವಾಗಿಯೂ ಪೈಶಾಚಿಕಕ್ಕೇನೂ ಕಡಮೆಯಲ್ಲ. Helps us n. ನಮಗೆ ಏನೂ ಸಹಾಯಕವಾಗಿಲ್ಲ. Avails n. ಏನೂ ಪ್ರಯೋಜನವಿಲ್ಲ. Is n. like as or so good (—ಅಷ್ಟು) ಒಳ್ಳೆಯದಲ್ಲವೇ ಅಲ್ಲ. N. Lo(a)th [Lo(a)th ನೋಡಿ]. **Nóthingness** (ನಾ.) ಇಲ್ಲಮೆ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಭಾವ ; ಶೂನ್ಯ(ತೆ) ; ಇಲ್ಲದ್ದು ; ಅವಸ್ತು. ಅಯೋಗ್ಯತೆ ; ನಿಷ್ಪ್ರಯೋಜಕತೆ ; ಅಲ್ಪತೆ ; ಅಮುಖ್ಯತೆ ; ಅಪ್ರಾಧಾನ್ಯತೆ ; ಇದ್ದರೂ ಇಲ್ಲದಷ್ಟೇ ಪ್ರಯೋಜನವುಳ್ಳದ್ದು ; ಉಪಯೋಗವಿಲ್ಲದ್ದು.

Nothingárian. **Nothing** ನೋಡಿ.

Nótice ನೋಟಿಸ್ (ನಾ., ಕ್ರಿ. ಸಕ.) ತಿಳಿವಳಿಕೆ ; ಸೂಚನೆ ; ಎಚ್ಚರಿಕೆ [Give, have, n. ; At short n. (ಸಿದ್ಧವಾಗಲು) ಬಹಳ ಸ್ವಲ್ಪ ಕಾಲದ ಅವಕಾಶಕೊಟ್ಟು] ; ಗಮನ ; ಲಕ್ಷ್ಯ ; ದೃಷ್ಟಿ. (ತಿಳಿವಳಿಕೆ ಅಥವಾ ಸೂಚನೆ ಕೊಡುವ, ಗೋಡೆ, ಮೊ. ಕ್ಕೆ ಅಂಟಿಸಿದ) ಪ್ರಕಟನ ಪತ್ರ, ಸೂಚನ ಪತ್ರ ; ತಿಳಿವಳಿಕೆ ಚೀಟಿ, ಜಾಹೀರಾತು, ಇಸ್ತಿಹಾರು, ಮೊ. ದು. ವೃತ್ತ ಪತ್ರಿಕೆಯಲ್ಲಿ ಯಾವುದಾದರೊಂದು ವಿಷಯದಮೇಲೆ ಬರುವ ಲೇಖನ (ಮು., ಪುಸ್ತಕ, ನಾಟಕ, ಮೊ. ಗಳ ವಿಮರ್ಶೆ). [N. to quit ವಾಸ, ಮೊ. ಕ್ಕೆ ತೆಗೆದುಕೊಂಡಿರುವ ಮನೆ, ಮೊ. ನ್ನು ಬಿಡಬೇಕೆಂದು ಕೊಡುವ ತಗಾದೆ. Till further n. ಮುಂದೆ ತಗಾದೆ ಕೊಡುವ ವರೆಗೂ (ಮಾಲೀಕನಿಗೂ ಬಾಡಿಗೆದಾರನಿಗೂ, ಅಥವಾ ದಣಿಗೂ ಕೆಲಸಗಾರರಿಗೂ, ಸಂಬಂಧಪಟ್ಟದ್ದಾಗಿ: Give a week's n.). Come into n. ಗಮನ ಸೆಳೆ ; ಕಣ್ಣಿಗೆ ಬೀಳು. Takes no n. of it ಅದನ್ನು ಗಮನಿಸುವುದಿಲ್ಲ ; (ಅದರ ಫಲವಾಗಿ) ಯಾವ ಕಾರ್ಯ(ಕ್ರಮ)ವನ್ನೂ ಕೈಕೊಳ್ಳುವುದಿಲ್ಲ. Take n. that— (—ಎಂದು) ನಾನು ನಿನಗೆ ಎಚ್ಚರಿಕೆ ಕೊಡುತ್ತೇನೆ. Baby takes n. ಮಗು ಅರಿವಿನ, ಗ್ರಹಿಕೆಯ, —ಚಿಹ್ನೆ ತೋರಿಸುತ್ತದೆ. N.-board ಪ್ರಕಟನ ಪತ್ರಗಳು, ಇಸ್ತಿಹಾರು, ಮೊ. ನ್ನು ಉಳ್ಳ, ಅಥವಾ ಅಂಟಿಸುವುದಕ್ಕಾಗಿರುವ, —ಹಲಗೆ: ಪ್ರಕಟನೆಯ ಹಲಗೆ]. (ಕ್ರಿ.) (—ರ ಮೇಲೆ) ಟೀಕೆ ಮಾಡು ; (—ವಿಷಯವಾಗಿ) ಮಾತಾಡು ; ಗಮನಿಸು ; ಲಕ್ಷ್ಯಕೊಡು ; ಮರ್ಯಾದೆಯಿಂದ, ಅನುಗ್ರಹ ತೋರಿಸುವಂತೆ,—ಸತ್ಕರಿಸು, ಕಾಣು ; ಎಚ್ಚರಿಕೆ ಕೊಡು ; ತಿಳಿವಳಿಕೆ ಕೊಡು (Was noticed to quit ಬಿಟ್ಟುಹೋಗಬೇಕೆಂದು ಎಚ್ಚರಿಕೆ ಕೊಡಲಾಯಿತು). **Nóticeable** (ಗು.) ; **Nóticeably** (ಕ್ರಿ. ವಿ.)

Nótify ನೋಟಿಫೈ (ಕ್ರಿ. ಸಕ.) ತಿಳಿಸು ; ತಿಳಿಯಪಡಿಸು ; ತಿಳಿವಳಿಕೆ ಕೊಡು ; ಪ್ರಸಿದ್ಧಪಡಿಸು ; ಇಸ್ತಿಹಾರು ಕೊಡು ; ಘೋಷಿಸು. (ಒಬ್ಬನಿಗೆ) ಎಚ್ಚರಿಕೆ ಕೊಡು (Person *of*, *that*). **Notificátion** ಪ್ರಕಟನೆ ; ಪ್ರಸಿದ್ಧ ಪತ್ರಿಕೆ ; ಇಸ್ತಿಹಾರು. **Nótifiable** (ಗು.) (ರೋಗಗಳ ವಿಷಯದಲ್ಲಿ) ಆರೋಗ್ಯಾಧಿಕಾರಿಗಳಿಗೆ ತಿಳಿಸಲೇ ಬೇಕಾದ.

Nótion ನೋಷ(ಷ್)ನ್ (ನಾ.) (ಒಂದು ನಿರ್ದಿಷ್ಟ ವಸ್ತುವನ್ನು ಅಥವಾ ವ್ಯಕ್ತಿಯನ್ನು ಯಾವ ವರ್ಗಕ್ಕೆ ಸೇರಿಸಬಹುದೊ ಆ) ಸಾಮಾನ್ಯ ಭಾವನೆ. [(ತತ್ತ್ವಶಾಸ್ತ್ರ) First, Second, n. = First, Second, intention (Intention ನೋಡಿ)]. ಭಾವನೆ ; ಕಲ್ಪನೆ ; ಎಣಿಕೆ (The n. of my doing it is absurd. What he means I have not the haziest n.). ಅಭಿಪ್ರಾಯ ; ಮತ ; ತತ್ತ್ವ (Has a n. that—. Such is the common n.). ಯೋಗ್ಯತೆ ; ಸಾಮರ್ಥ್ಯ ; ಉದ್ದೇಶ (Has no n. of obeying). (ಅಮೆ. ಸಂ.) (ಮು., ಅಗ್ಗವೂ ಉಪಯೋಗವೂ ಚಾತುರ್ಯ ಕಲ್ಪಿತವೂ ಆದ) ಚಿಲ್ಲರೆ ಸಾಮಾನು. **Nótional** (ಗು.) (ಜ್ಞಾನ, ಮೊ. ಗಳ ವಿಷಯದಲ್ಲಿ) (ಪ್ರಯೋಗ ಪರೀಕ್ಷೆ ಅಥವಾ ನಿದರ್ಶನಗಳಮೇಲೆ ಅವಲಂಬಿಸಿರದೆ) ಭಾವನಾ ಮಾತ್ರವಾದ ; ಕೇವಲ ಕಲ್ಪನೆಯ. (ವಸ್ತುಗಳು, ಸಂಬಂಧಗಳು, ಮೊ. ಗಳ ವಿಷಯದಲ್ಲಿ) ಭಾವನೆಯಲ್ಲಿ ಮಾತ್ರವಿರುವ ; ಕಾಲ್ಪನಿಕ. (ವ್ಯಕ್ತಿಗಳ ವಿಷಯದಲ್ಲಿ) ವಿಚಿತ್ರ ಭಾವನೆಯುಳ್ಳ. **Nótionalist** (ನಾ.) ಕಲ್ಪನಾಶೀಲ. **Nótionally** (ಕ್ರಿ. ವಿ.) ಭಾವನಾಮಾತ್ರವಾಗಿ.

Nótochord ನೋಟೊಕಾರ್ಡ್ (ನಾ.) ಕಶೇರುಕಗಳಲ್ಲಿ ಬೆನ್ನುಮೂಳೆಯ ಆಧಾರವಾದ ಆದ್ಯ ಮೃದ್ವಸ್ಥಿಯ ಪಟ್ಟಿ.

Notórious ನೊಟೋರಿಯಸ್ (ಗು.) (ವಿಷಯಗಳು) ಸರ್ವಸಾಮಾನ್ಯವಾಗಿ ಅಥವಾ ಚೆನ್ನಾಗಿ ತಿಳಿದಿರುವ (It is n. that—). (ಹೆಸರು, ನಡತೆ, ಮೊ. ಗಳ ವಿಷಯದಲ್ಲಿ, ನಿಂದಾ ಸೂಚಕವಾಗಿ) ಮುಚ್ಚುಮರೆಯಿಲ್ಲದ, ಎಲ್ಲೆಲ್ಲಿಯೂ ಮಾತನಾಡಿಕೊಳ್ಳುವ, ಪ್ರಸಿದ್ಧವಾದ ; ಆ ಹೆಸರು ಸರಿಯೆಂದು ಸಾಮಾನ್ಯವಾಗಿ ತಿಳಿದಿರುವ (N. smuggler, offender, vice). (ಒಂದು ಗುಣಕ್ಕೆ, ನಡತೆಗೆ) ಅಪಕೀರ್ತಿ ಪಡೆದಿರುವ ; ಕುಪ್ರಸಿದ್ಧ (*For* ಉಪ. ಜೊತೆ) (A ship n. for ill-luck. The n. Titus Oates). **Notóriously** (ಕ್ರಿ. ವಿ.) ; **Notoríety** ನೋಟೊರೈಟಿ (ನಾ.)

Notre-Dáme (F) ನೋಟ್ರ ಡಾಮ್, ನಾಟ್ರ್— (ನಾ.) ಪ್ಯಾರಿಸ್ ಪಟ್ಟಣದ ಪ್ರಮುಖ ಕ್ರೈಸ್ತ ಆರಾಧನ ಮಂದಿರ. (ಪದದ ಅರ್ಥ = ನಮ್ಮ ಮಹಿಳೆ : ಮೇರಿ ಕನ್ಯೆ)

Notwithstánding ನಾಟ್‌ವಿದ್(ತ್)ಸ್ಟ್ಯಾಂಡಿಂಗ್ (ಉಪ., ಕ್ರಿ. ವಿ., ಸಂ. ಅವ್ಯ.) ಆದರೂ ; ಆದಾಗ್ಯೂ ; ಹಾಗಿದ್ದರೂ ; ಹೇಗಾದರೂ ; ಪರಂತು. N. his resistance. This n. (ಇದು) ಹೀಗಿದ್ದರೂ.

Nought ನಾಟ್ (ನಾ.) (ಕಾವ್ಯ, ಪ್ರಾಚೀ. ಪ್ರ., ಗಣಿತ) (= Nothing) (Come to n. ಹಾಳಾಗು ; ಬಿದ್ದುಹೋಗು ; ನಿಷ್ಫಲವಾಗು. Bring to n. ಹಾಳುಮಾಡು ; ಭಗ್ನಮಾಡು. Set at n. ಕಡೆಗಣಿಸು ; ಅವಹೇಳನ ಮಾಡು). ಸೊನ್ನೆ (೦) ; ಶೂನ್ಯ. Noughts and crosses ಮಕ್ಕಳ ಒಂದು ಆಟ.

Noúmenon ನೌಮೆನಾನ್ (ನಾ. ; ಬ. ವ. -ena) ಅಂತಸ್ತತ್ತ್ವ ; ಇಂದ್ರಿಯಗೋಚರವಾದ ಬಾಹ್ಯ ಪ್ರಪಂಚಕ್ಕೆ ಆಧಾರವಾಗಿ, ಆದರೆ, ಆ ಪ್ರಪಂಚದ ಮೂಲಕ ತಿಳಿಯಲು ಸಾಧ್ಯವಾಗದೆ ಬುದ್ಧಿಯ ಸಹಜ ಶಕ್ತಿಯೊಂದರಿಂದಲೇ ಗ್ರಾಹ್ಯವಾಗುವ, ಪಾರಮಾರ್ಥಿಕ ವಿಷಯ. **Noúmenal** (ಗು.) ; **Noúmenally** (ಕ್ರಿ. ವಿ.)

Noun ನೌನ್ (ನಾ.) (ವ್ಯಾ.) ನಾಮ ವಾಚಕ ; ನಾಮ ಪದ. (ಹಿಂದೆ) ನಾಮ ವಾಚಕ ಅಥವಾ ಗುಣ ವಾಚಕ (N. substantive ನಾಮ ವಾಚಕ. N. adjective ಗುಣವಾಚಕ). **Noúnal** (ಗು.) (ವಿರ. ಪ್ರ.)

Noúrish ನರಿಷ್ (ಕ್ರಿ. ಸಕ.) (ಆಹಾರ ಕೊಟ್ಟು) ಪೋಷಿಸು, ಪುಷ್ಟೀಕರಿಸು (ರೂಪ. ಸಹ). (ಭಾವನೆ, ಆಸೆ, ಮೊ. ನ್ನು) ಮನಸ್ಸಿನಲ್ಲಿ ಪೋಷಿಸು, ಆದರಿಸು, ಪಾಲಿಸು. **Noúrishing** (ಗು.) ; **Noúrishment** (ನಾ.) ಪೋಷಣೆ, ಪುಷ್ಟಿ (ಕೊಡುವಂಥದು) ; ಆಹಾರ.

Nous ನೌಸ್ (ನಾ.) (ಗ್ರೀಕ್ ತತ್ತ್ವಶಾಸ್ತ್ರ) ಮನಸ್ಸು ; ಬುದ್ಧಿ. (ಬಳ. ಮಾ.) ಸಾಮಾನ್ಯ ಬುದ್ಧಿಶಕ್ತಿ ; ವ್ಯವಹಾರ ಜ್ಞಾನ ; ಧಾತಿ.

Nóvel ನಾವೆಲ್ (ನಾ.) (ಮು., ಬ. ವ. ದಲ್ಲಿ) (ಕೆಲವು ಪಾಶ್ಚಾತ್ಯ ಪ್ರಸಿದ್ಧ ಕಥಾವಳಿಗಳಲ್ಲಿಯ, ಅಥವಾ ಈ ತೆರದ) ಒಂದು ಸಣ್ಣ ಕಥೆ. ಒಂದು ಅಥವಾ ಹೆಚ್ಚು ಸಂಪುಟಗಳನ್ನು ತುಂಬುವಷ್ಟು ದೊಡ್ಡದಾಗಿಯೂ ಅವಿಚ್ಛಿನ್ನವಾದ ಕಥಾವಸ್ತುವಿನಲ್ಲಿ ಯಥಾರ್ಥ ಜೀವನದ ಪಾತ್ರಗಳನ್ನೂ ಕಾರ್ಯ ಕಲಾಪಗಳನ್ನೂ ಚಿತ್ರಿಸುವುದಾಗಿಯೂ ಇರುವ ಕಾಲ್ಪನಿಕ ಗದ್ಯ ಕಥೆ ; ಕಾದಂಬರಿ ; ಪರಿ ಕಥೆ ; 'ನಾವೆಲ್ಲು'. The n. ಕಾದಂಬರೀ ಸಾಹಿತ್ಯ. **Novelése** —ಲೀಸ್ (ನಾ.) ಕೀಳ್ತರದ ಕಾದಂಬರಿಗಳ ಭಾಷಾಶೈಲಿ. **Novelétte** (ನಾ.) ಸಣ್ಣ ಕಾದಂಬರಿ; ತಕ್ಕಮಟ್ಟಿಗೆ ದೊಡ್ಡ ಕಥೆ. (ಸಂ.) ರೂಪನಿರ್ಬಂಧವಿಲ್ಲದ, ವಿವಿಧ ಪ್ರಕರಣಗಳನ್ನೊಳಕೊಂಡ, ಒಂದು ಬಗೆಯ ಪಿಯಾನೊ ಸಂಗೀತ. **Nóvelist** (ನಾ.) ಕಾದಂಬರಿ ಲೇಖಕ ; ಕಾದಂಬರಿಕಾರ. **Novelístic** (ಗು.) ಕಾದಂಬರಿಗಳ ; —ಳಿಗೆ ಸಂಬಂಧಪಟ್ಟ ; —ಳ ವೈಶಿಷ್ಟ್ಯದ. **Nóvelize** (ಕ್ರಿ. ಸಕ.) (ನಾಟಕವನ್ನು, ವಿಷಯಗಳನ್ನು) ಕಾದಂಬರಿರೂಪಕ್ಕೆ ಮಾರ್ಪಡಿಸು, ಕಾದಂಬರಿಯಾಗಿ ಬರೆ. **Novelizátion** (ನಾ.)

Nóvel (ಗು.) ಹೊಸ ರೀತಿಯ, ತೆರದ, ಬಗೆಯ ; ನವೀನ ; ಅಪೂರ್ವ ; ವಿಚಿತ್ರ. **Nóvelty** (ನಾ.) —ವಸ್ತು, ವಿಷಯ, ಘಟನೆ. (ಒಂದರ) ಹೊಸತನ ; ನವೀನತೆ.

Novémber ನೊವೆಂಬರ್ (ನಾ.) ಇಂಗ್ಲಿಷ್ ವರ್ಷದ ಹನ್ನೊಂದನೆಯ ತಿಂಗಳು : ನೊವೆಂಬರ್.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Novércal ನೊವರ್ಕಲ್ (ಗು.) ಮಲತಾಯಿ ಗುಣದ.

Nóvice ನಾವಿಸ್ (ನಾ.) (ಪ್ರತಿಜ್ಞೆ ಮಾಡಿ ದೀಕ್ಷೆ ವಹಿಸುವುದಕ್ಕೆ ಮೊದಲು) ಒಂದು ಮತ ಸಂಸ್ಥೆಗೆ ಉಮೇದುವಾರನಾಗಿ ಸೇರಿಸಿಕೊಳ್ಳಲ್ಪಟ್ಟವನು; ಹೊಸದಾಗಿ ಮತಾಂತರ ಹೊಂದಿದವನು; ನವ ಶಿಷ್ಯ. ಅನನುಭವಿ; ಆರಂಭಿಗ; ನುರಿತಿಲ್ಲದವನು. **Novíciate, -iti-** ನೊವಿಷಿಯೆಟ್ (ನಾ.) ನವ ಶಿಷ್ಯನ ಉಮೇದುವಾರಿ ಕಾಲ, ಪರೀಕ್ಷಾ ಕಾಲ; ನವ ಶಿಷ್ಯ; ನವ ಶಿಷ್ಯರಿಗೆ ಗೊತ್ತುಮಾಡಿರುವ ವಸತಿ.

Nóvocaine ನಾವೊಕೇನ್, **Novocaíne** ನೋ— (ನಾ.) (ವೈ. ಶಾ.) ದೇಹಭಾಗದಲ್ಲಿ ಸ್ಪರ್ಶಾನುಭವವಿಲ್ಲದಂತೆ ಮಾಡುವ ಒಂದು ಪದಾರ್ಥ: 'ನಾವೊಕೇನ್'.

Now ನೌ (ಕ್ರಿ. ವಿ., ಸಂ. ಅವ್ಯ., ನಾ.) ಈಗ; ಈ ಹೊತ್ತಿಗೆ; ಈ ಹೊತ್ತಿನಲ್ಲಿ; ಈ, ಪ್ರಕೃತ, —ಸಂದರ್ಭದಲ್ಲಿ (I cannot n. ever believe you again ಇನ್ನು ಎಂದಿಗೂ ನಿನ್ನನ್ನು ನಂಬಲಾರೆ. N. that I know you, it is different ಈಗ ನಿನ್ನ ವಿಷಯ ತಿಳಿಯಬಂದದ್ದರಿಂದ ಸ್ಥಿತಿ ಬೇರೆಯಾಯಿತು). ಕೂಡಲೇ; ತತ್‌ಕ್ಷಣ (Must go n.). ಈ ಹಿಂದೆ; ಸ್ವಲ್ಪ ಹಿಂದೆ [Just n. ಈಗ ತಾನೆ. (ಪ್ರಾಚೀ. ಪ್ರ.) Even n., but n.]. (ಕಥನದಲ್ಲಿ) ಆಗ; ತರುವಾಯ; ಆ ಹೊತ್ತಿಗೆ (Caesar now marched east. It was n. clear). [(Every) n. & then *or* again ಆಗಾಗ; ಮತ್ತೆ ಮತ್ತೆ; ಪದೇ ಪದೇ. N.—n., n.—then, n.—& again ಒಮ್ಮೆ—ಒಮ್ಮೆ; ಆಗ—ಆಗ. N. or never! ತಕ್ಕ ಸಮಯ! ಬಿಟ್ಟರೆ ಹೋಯಿತು! (ಆಕ್ಷೇಪಣೆ, ಬೇಡಿಕೆ, ಬೆದರಿಕೆ, ವಿವರಣೆ, ಸಮಾಧಾನ ಮಾಡುವುದು—ಇವೇ ಮೊ. ಸಂದರ್ಭಗಳಲ್ಲಿ ತಕ್ಕಂತೆ ಧ್ವನಿ ಕೊಟ್ಟು ಪ್ರ.) N. what do you mean by it? ಅದಿರಲಿ, ಏನು ಹಾಗೆಂದರೆ? Oh, come n.! ಬನ್ನಿರಪ್ಪಾ! ಬನ್ನಿ! No nonsense n.! N. then, what mischief are you at? ಸರಿ! ಇನ್ನು ಮುಂದೆ ಏನು ಕೇಡು ಮಾಡಬೇಕೆಂದಿದ್ದೀಯೆ?]. (ಸಂ. ಅವ್ಯ.) ಆದಕಾರಣದಿಂದ; ಆಗಿರುವುದರಿಂದ [N. I am a man, I think otherwise ಈಗ ನಾನು ದೊಡ್ಡವನಾಗಿರುವುದರಿಂದ ಬೇರೆ ರೀತಿ ಆಲೋಚಿಸುತ್ತೇನೆ. N. you mention it, I do remember ನೀನು ಈಗ ಹೇಳಿದೆಯಾದದ್ದರಿಂದ ನನಗೆ ಜ್ಞಾಪಕ ಬಂದಿತು]. (ನಾ.) By n., ere n., till n. ಇಷ್ಟು ಹೊತ್ತಿಗೆ, ಇದಕ್ಕೆ ಮೊದಲೇ, ಇದು ವರೆಗೂ. From n. till evening ಈಗಿನಿಂದ ಸಾಯಂಕಾಲದ ವರೆಗೂ. Read the future in the n. ವರ್ತಮಾನ ಸ್ಥಿತಿಯಿಂದ ಭವಿಷ್ಯ ಸ್ಥಿತಿಯನ್ನು ಕಂಡುಕೊ. **Nówaday** (ಗು.) ಈಗಿನ ಕಾಲದ; ಆಧುನಿಕ. **Nówadays** (ಕ್ರಿ. ವಿ., ನಾ.) ಈಗಿನ ಕಾಲ(ದಲ್ಲಿ); ಈ ಮುಂದುವರಿದ, ನವ ನಾಗರಿಕ, —ಕಾಲ(ದಲ್ಲಿ)

Nowél ನೋಎಲ್ (ಭಾವ. ಅವ್ಯ.) (ಕ್ರಿಸ್‌ಮಸ್ ಹಬ್ಬದ ಆನಂದ ಗೀತದಲ್ಲಿ, ಸಂತೋಷ ಸೂಚಕವಾದ ಭಾವ. ಅವ್ಯ.)

Nówhere ನೋಹ್ವೇರ್, —ವೇರ್ (ಕ್ರಿ. ವಿ.) ಎಲ್ಲೂ ಇಲ್ಲ. N. near ಹತ್ತಿರವೆಲ್ಲೂ, ಹತ್ತಿರವೇನೂ, —ಇಲ್ಲ. Be n., Come in n. ಪಂದ್ಯದಲ್ಲ, ಸ್ಪರ್ಧೆಯಲ್ಲ, ಜಯಸ್ಥಾನ ಪಡೆಯುವ ಸಂದರ್ಭವಿಲ್ಲದಿರು.

Nóxious ನಾಕ್‌ಷಸ್ (ಗು.) ಕೆಡುಕು ಮಾಡುವ; ಹೊಲಸಿನ; ಆರೋಗ್ಯ ಕೆಡಿಸುವ. **Nóxiously** (ಕ್ರಿ. ವಿ.); **Nóxiousness** (ನಾ.)

Noyáde (F) ನ್ವಾಯಾಡ್ (ನಾ.) (ಮು., ಫ್ರಾನ್ಸಿನಲ್ಲಿ ೧೭೯೪ರಲ್ಲಿ ನಡಸುತ್ತಿದ್ದಂತೆ, ಜನರನ್ನು ಗುಂಪು ಗುಂಪಾಗಿ) ನೀರಿನಲ್ಲಿ ಮುಳುಗಿಸಿ ಕೊಲ್ಲುವ ಮರಣದಂಡನೆ.

Nózzle ನಾಸ್ಲ್ (ನಾ.) ಸೂಸುಬಾಯಿ; ಮೂತಿ; ಮೆತು ಕೊಳವೆ, ಮೊ. ಗಳ ತುದಿಗೆ ಸಿಕ್ಕಿಸಿದ ಸೂಸುಬಾಯಿ.

Nu ನೂ, ನ್ಯೂ (ನಾ.) ಗ್ರೀಕ್ ವರ್ಣಮಾಲೆಯ 'ನ'ಕಾರ (N, ν) = n.

Núance (F) ನ್ಯೂಆನ್ಸ್ (ನಾ.) (ಅರ್ಥ, ಭಾವನೆ, ಅಭಿಪ್ರಾಯ, ಬಣ್ಣ, ಮೊ. ಗಳಲ್ಲಿ, ಅಥವಾ ಅವುಗಳ ಛಾಯೆಯಲ್ಲಿ) ಸೂಕ್ಷ್ಮ ವ್ಯತ್ಯಾಸ.

Nub ನಬ್, **Núbble** ನಬ್‌ಲ್ (ನಾ.) (ಮು., ಕಲ್ಲಿದ್ದಲಿನ) ಸಣ್ಣ ತುಂಡು. **Núbbly** (ಗು.)

Núbile ನ್ಯೂಬಿಲ್ (ಗು.) (ಮು., ಹೆಂಗಸರ ವಿಷಯದಲ್ಲಿ) ಮದುವೆಯಾಗಲುಳ್ಳ; ವಿವಾಹಯೋಗ್ಯ; ಮದುವೆಗೆ ನೆರೆದ. **Nubílity** (ನಾ.)

Núchal ನ್ಯೂಕ(ಕ್)ಲ್ (ಗು.) ಕತ್ತಿನ ಹಿಂಭಾಗದ; ಹೆಡಗತ್ತಿನ.

Núcleole, etc. **Nucleus** ನೋಡಿ.

Núcleus ನ್ಯೂಕ್ಲಿ(ಕ್ಲೆ)ಯಸ್ (ನಾ.; ಬ. ವ. -ei —ಯೈ) (ಖ. ವಿ.) ಧೂಮಕೇತುವಿನ ತಲೆಯ ಸಾಂದ್ರ ಭಾಗ; (ಧೂಮಕೇತುವಿನ) ನಾಭಿ, ಅಥವಾ ಇತರ ಭಾಗಗಳು ಸುತ್ತಲೂ ಆವರಿಸಿಕೊಂಡಿರುವ ಮಧ್ಯಭಾಗ, ಕೇಂದ್ರ. ಗುಂಬ. ಒಟ್ಟಲಿನ, ಮೊತ್ತದ, —ತಿರುಳು; ಮುಂದೆ ಕ್ರಮೇಣ ಸೇರುತ್ತ ಬೆಳೆಯಲು ಆರಂಭಮಾಡಿ ಇಟ್ಟದ್ದು; ಮೂಲ ದ್ರವ್ಯ. ಅಂಡ, ಬೀಜ, ಸಸ್ಯದ ಅಥವಾ ಪ್ರಾಣಿಯ ಜೀವಕಣ, ಮೊ. ಗಳ ಕೇಂದ್ರ ಭಾಗ; (ಮಿದುಳಿನಿಂದ, ಕಶೇರುಕಾ ರಜ್ಜುವಿನಿಂದ) ನರಗಳು ಹೊರ ಹೊರಡುವ ನರದ್ರವ್ಯ ಭಾಗ. The n. of a sun-spot, community, library, story, empire, etc. ಸೂರ್ಯ ಕಳಂಕ, ಸಮಾಜ, ಪುಸ್ತಕ ಭಂಡಾರ, ಕಥೆ, ಸಾಮ್ರಾಜ್ಯ, ಮೊ. ಗಳ ನಾಭಿಭಾಗ ಅಥವಾ ಮೂಲಭಾಗ. **Núcleal, Núclear** (ಗು.) ನಾಭಿಯ; ನಾಭಿ ಸಂಬಂಧವಾದ: ನಾಭಿಯಾಗಿರುವ; ನಾಭಿಯಂಥ. **Núcleary** (ಗು.) ನಾಭಿ ಸ್ವಭಾವದ. **Núcleo-** (ಸ. ಪೂ. ಪ.); **Núcleole** (ನಾ.) (ಜೀ. ವಿ.) ನಾಭಿಯೊಳಗಿನ ನಾಭಿ (= **Nucléolus** ನ್ಯುಕ್ಲೀಯೊ—). **Nucléolar** (ಗು.) —ಸ್ವಭಾವದ, —ಸಂಬಂಧಪಟ್ಟ. **Núcleo-lated** ನ್ಯೂಕ್ಲಿಯೊ— (ಗು.) —ಉಳ್ಳ. **Nucléolo-** ನ್ಯುಕ್ಲೀಯೊಲೊ— (ಸ. ಪೂ. ಪ.)

Nude ನ್ಯೂಡ್ (ಗು., ನಾ.) ಬತ್ತಲೆ(ಯಾದ); ನಗ್ನ; ನಿರ್ವಾಣ; ಬಟ್ಟೆ ತೊಟ್ಟಿಲ್ಲದ; [N. contract (ನ್ಯಾ. ಶಾ.) ಪ್ರತಿಫಲವಿಲ್ಲದಿರುವ, ಆದುದರಿಂದ ಅಧಿಕಾರಮುದ್ರೆಯಿಲ್ಲದ ಪಕ್ಷದಲ್ಲಿ ಊರ್ಜಿತವಾಗದ, ಒಪ್ಪಂದ]. (ಬಣ್ಣದ ವಿಷಯದಲ್ಲಿ) ಮಾಂಸ ವರ್ಣದ (ಮು., ಕಾಲುಚೀಲ). (ನಾ.) (ಚಿತ್ರ ಅಥವಾ ಶಿಲ್ಪ) ಬತ್ತಲೆಯ, ನಗ್ನ, —ಚಿತ್ರ, ಪ್ರತಿಮೆ (The n. ನಗ್ನಾಕೃತಿ; ನಗ್ನಸ್ಥಿತಿ). **Nudi-** (ಸ. ಪೂ. ಪ.) (ಪ್ರಾ. ವಿ. ದಲ್ಲಿ). **Núdist** (ನಾ.) ನಗ್ನಪಂಥ ವಾದಿ (ವಿಶೇಷಣವಾಗಿ ಸಹ: Nudist colony ನಗ್ನಪಂಥವಾದಿಗಳ ಪಟ್ಟಿ). **Núdity** (ನಾ.)

Núdge ನಜ್ (ಕ್ರಿ. ಸಕ., ನಾ.) (ಇತರರಿಗೆ ತಿಳಿಯದಂತೆ ಗಮನ ಸೆಳೆಯುವುದಕ್ಕಾಗಿ) ಮೊಳಕೈಯಿಂದ ಮೆತ್ತಗೆ ತಿವಿ; (ರೂಪ.) (—ರ) ಗಮನ ಸೆಳೆ. (ನಾ.) (—ಸೆಳೆಯುವ) ಮೊಳಕೈ ತಿವಿತ.

Núgae (L) ನ್ಯೂಗೀ(ಜೀ) (ನಾ., ಬ. ವ.) ಅಲ್ಪ ವಿಚಾರಗಳು; ಪಾಂಡಿತ್ಯ ಪ್ರದರ್ಶಕಗಳಾದ ಅಲ್ಪ ವಿಷಯಗಳು; ನಿಷ್ಪ್ರಯೋಜಕವಾದ ಅಲ್ಪ ವಿವರಗಳು. **Núgatory** ನ್ಯೂಗಟರಿ (ಗು.) ಕೆಲಸಕ್ಕೆ ಬಾರದ; ನಿಷ್ಪ್ರಯೋಜಕ; ವ್ಯರ್ಥ; ನಿರರ್ಥಕ; ಕಾರ್ಯಸಾಧಕವಲ್ಲದ; ಊರ್ಜಿತವಾಗದ.

Núgatory. **Nugae** ನೋಡಿ.

Núgget ನಗೆಟ್ (ನಾ.) ಸ್ವಾಭಾವಿಕವಾಗಿ ದೊರೆಯುವ ಚಿನ್ನದ ಒರಟು ಗಟ್ಟಿ.

Nuísance ನ್ಯೂಸನ್ಸ್ (ನಾ.) ಜನಕ್ಕಾಗಲಿ ಯಾವೊಬ್ಬನಿಗಾಗಲಿ ಕೇಡುಂಟುಮಾಡುವ ಅಥವಾ ಅನಿಷ್ಟಕರವಾದ ತೊಂದರೆ (ನ್ಯಾಯ ಪರಿಹಾರ ಪಡೆಯಬಹುದಾದದ್ದು). ಹೇಸಿಕೆ; ಗಲೀಜು; ಪೀಡೆ [Commit no n. ಹೇಸಿಕೆ ಮಾಡಬೇಡಿ (ಪ್ರಯಾಣಿಕರಿಗೆ, ದಾರಿಗರಿಗೆ, —ಎಚ್ಚರಿಕೆ)]. ಕೇಡಿಗ; ಅನಿಷ್ಟ ಮನುಷ್ಯ; ಕೇಡು ಮಾಡುವ ವಸ್ತು; ರೇಗಿಸುವ ಕಾರ್ಯ; ಅಸಹ್ಯಕರವಾದದ್ದು.

Null ನಲ್ (ಗು., ನಾ.) ಬಂಧಕವಲ್ಲದ; ಊರ್ಜಿತವಾಗದ (ಅನೇಕ ವೇಳೆ N. & void); ವ್ಯಕ್ತಿತ್ವವಿಲ್ಲದ; ಲಕ್ಷಣ, ಭಾವ, —ಇಲ್ಲದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ವಿರ. ಪ್ರ.) ಇಲ್ಲವೇ ಇಲ್ಲದ ; ಶೂನ್ಯಪ್ರಾಯವಾದ. (ನಾ.) (ಸಂಕೇತ ಲಿಪಿಯಲ್ಲಿ) ಅರ್ಥಕ್ಕಾಗಿ ಕೊಟ್ಟಿಲ್ಲದ ಅಕಾರಮಾತ್ರದ ಅಕ್ಷರ. **Núllify** (ಕ್ರಿ. ಸಕ.) ಇಲ್ಲದಂತೆ ಮಾಡು ; ತೊಡೆದುಹಾಕು ; ರದ್ದು ಮಾಡು ; ಪರಿಣಾಮಶೂನ್ಯ ಮಾಡು. **Nullificátion** (ನಾ.) ; **Núllity** ನಲಿಟಿ (ನಾ.) ಇಲ್ಲದಿರುವುದು ; ಇಲ್ಲಮೆ ; ಊರ್ಜಿತವಾಗದಿರುವುದು; ಅನೂರ್ಜಿತತೆ (ಮು., N. of marriage ಮದುವೆಯ ರದ್ದು, ಅನೂರ್ಜಿತತೆ. N. suit ಮದುವೆಯ ರದ್ದಿನ ದಾವೆ). ಅನುಪಯೋಗದ ಕಾರ್ಯ ; ಬಂಧಕವಲ್ಲದ ದಸ್ತೈವಜು. ಶುದ್ಧ ಶೂನ್ಯ ; ಗಣನೆಗೆ ಬಾರದ್ದು.

Núlla bóna (L) ನಲ ಬೋನ (ನಾ.) ಜಪ್ತಿ ಮಾಡಲು (ಕಕ್ಷಿಗಾರನ) ಸಾಮಾನು ಯಾವುದೂ ಇಲ್ಲವೆಂದು 'ಷರಿಫ್' ಎಂಬ ನ್ಯಾಯಾಧಿಕಾರಿ ಕಳುಹಿಸುವ ವರದಿ. (ಪದದ ಅರ್ಥ = ಸರಕೇನೂ ಇಲ್ಲ)

Núllah ನಲ (ನಾ.) (ಆಂ. ಇಂ.) ತೊರೆ ; ನೀರುಹಾದಿ ; ನಾಲೆ ; ಕೊರಕಲು. (ಹಿಂದಿ : ನಾಲಾ)

Numb ನಮ್ (ಗು., ಕ್ರಿ. ಸಕ.) ವೇದನೆ, ಚಲನ ಶಕ್ತಿ, —ತಪ್ಪಿಹೋದ ; ಜೋವು ಹಿಡಿದ ; ಜಡವಾದ ; ಮರವಟ್ಟ [N. with cold. N. hand (ಅಸಂ.) ನಾಜೂಕಿಲ್ಲದ ಮನುಷ್ಯ. N.-fish ವಿದ್ಯುತ್‌ಧಕ್ಕೆ ಕೊಡುವ ಒಂದು ಜಾತಿಯ ಮೀನು. N.-skull = Numskull]. (ಕ್ರಿ.) ಜೋವು ಹಿಡಿಸು ; (ರೂಪ.) ಮಂಕುಗವಿಸು ; ಸ್ತಂಭೀಕರಿಸು ; ಮರವಡಿಸು. **Númbly** (ಕ್ರಿ. ವಿ.) ; **Númbness** (ನಾ.)

Númber ನಂಬರ್ [ನಾ. ; N° (Numero ಎಂಬುದರ ಸಂಕ್ಷಿಪ್ತ) ಎಂದೂ, ಬ. ವ. ದಲ್ಲಿ Nos ಎಂದೂ ಬರೆಯುವ ರೂಢಿ : Room N° 15, Nos 1-10] (ಜನರ, ವಸ್ತುಗಳ, ಅಥವಾ ಬರಿಯ) ಸಂಖ್ಯೆ; (ಸಂಖ್ಯೆಯನ್ನು ನಿರ್ದೇಶಿಸುವ) ಅಂಕ, ಅಂಕಿ ; ಗೊತ್ತಾದ ಅಂಕವಿರುವ ಗುರುತಿನ ಬಿಲ್ಲೆ, ಚೀಟಿ; ಸಂಖ್ಯೆಯಿಂದ ಸೂಚಿತವಾದವನು ; ಶ್ರೇಣಿಯಲ್ಲಿ —ನೆಯವನು, —ನೆಯದು (ಮು., ವೃತ್ತಪತ್ರಿಕೆಯ ಸಂಚಿಕೆ). [**Numbers** (ಸಂಕ್ಷಿಪ್ತ : Num.) ಹಳೆಯ ಒಡಂಬಡಿಕೆಯಲ್ಲಿ ಜನಗಣತಿಯಿರುವ ನಾಲ್ಕನೆಯ ಅಧ್ಯಾಯ : ಸಂಖ್ಯಾ ಕಾಂಡ]. [The n. of fools is infinite. The greatest n. on record is 59 persons. To the n. of 80 ಎಂಬತ್ತರವರೆಗೆ. Golden n. (Golden ನೋಡಿ). Science of numbers ಅಂಕ ಗಣಿತ. Took the cabman's n. ಬಂಡಿಯ(ವನ) ಅಂಕವನ್ನು ಗುರುತುಮಾಡಿಕೊಂಡೆನು. Sleeps in N° 5 ಐದನೆಯ ಕೊಠಡಿಯಲ್ಲಿ ಮಲಗುತ್ತಾನೆ. N° 9 (pill) ಸೈನ್ಯದ ವೈದ್ಯರು ಕೊಡುವ (ಸರ್ವ ರೋಗ ಪರಿಹಾರಕವಾದ) ಒಂದು ಪ್ರಸಿದ್ಧ ಮಾತ್ರೆ. N° 10 (Downing Street) ಇಂಗ್ಲೆಂಡಿನ ಮುಖ್ಯ ಮಂತ್ರಿಯ ಸರ್ಕಾರಿ ನಿವಾಸ. Lose the n. of one's mess ಸಾಯಿ. One's n. goes up ಅವನು ಸಾಯುತ್ತಾನೆ. N. one ತಾನು (ಮು., Take care of n. one ಎಂಬಲ್ಲಿ). (ನೌಕಾಸೈನ್ಯದ ಅಸಂ.) ಮೊದಲನೆಯ ಲೆಫ್ಟಿನೆಂಟು. Story issued in numbers (ಒಂದಾಗುತ್ತರೊಂದು ಕ್ರಮವಾಗಿ ಬರುವ) ಸಂಚಿಕೆಗಳಲ್ಲಿ ಪ್ರಕಟಿಸುವ ಕಥೆ. Back n. (Back[1] ನೋಡಿ). Is not of our n. ನಮ್ಮವನಲ್ಲ ; ನಮ್ಮ ಗುಂಪಿಗೆ ಸೇರಿದವನಲ್ಲ. (Large, small, ಮೊ. ಗುಣವಾಚಕಗಳೊಡನೆ ಏ. ವ. ದಲ್ಲಿ ಅಥವಾ ಬ. ವ. ದಲ್ಲಿ ಪ್ರ.): Were present in great, only in small, numbers. Saw a n. of, great n. of, birds. There are numbers who live by begging]. (ಬ. ವ. ದಲ್ಲಿ) ಸಂಖ್ಯಾ ಬಲ; ಸಂಖ್ಯೆಯ ಹೆಚ್ಚಿಗೆ (Won by numbers or force of numbers). ಎಣಿಕೆ [The laws of n. and proportion pervade Nature. Without n. ಲೆಕ್ಕವಿಲ್ಲದಷ್ಟು ; ಅಸಂಖ್ಯಾತ (= **Númberless**, ಗು.). In n. ಎಣಿಕೆಯಲ್ಲಿ ; ಎಣಿಸಿದಲ್ಲಿ ; ಸಂಖ್ಯೆಯಲ್ಲಿ (One people exceeds another in n.)]. (ವ್ಯಾ.) ವಚನ [Sanskrit has three numbers : ಏ. ವ., ದ್ವಿವಚನ, ಬ. ವ. ; 'Things' is of the plural n.]. ತಾಳ, ಲಯ. (ಸಂ.) (ಬ. ವ. ದಲ್ಲಿ) ಸಂಗೀತ ಸ್ವರ ತಂಡ ; ಗಣಗಳು ; ಚರಣಗಳು ; ಪದ್ಯಗಳು.

Númber (ಕ್ರಿ. ಸಕ.) ಎಣಿಸು ; ಲೆಕ್ಕಮಾಡು ; ಸಂಖ್ಯೆಯನ್ನು ಗೊತ್ತುಮಾಡು. (ಕರ್ಮಣಿ) ಸಂಖ್ಯೆಯಲ್ಲಿ ಪರಿಮಿತವಾಗಿರು (His days are numbered ಅವನ ದಿನಗಳು ಮುಗಿಯುತ್ತಬಂದುವು ; ಅವನು ಬಹು ದಿನ ಬದುಕುವುದಿಲ್ಲ). (ಒಂದು ವರ್ಗದಲ್ಲಿ) ಸೇರಿಸು, ಸೇರಿದ್ದೆಂದು ಎಣಿಸು (*Among, in, with* ಉಪ. ದೊಡನೆ). (ಯಾವುದಕ್ಕಾದರೂ) ಒಂದು ಸಂಖ್ಯೆ ಕೊಡು ; ಒಂದು ಸಂಖ್ಯೆಯಿಂದ ನಿರ್ದೇಶಿಸು. (ಇಷ್ಟು ವರ್ಷ) ಬದುಕು, ಬದುಕಿರು ; (ಅಷ್ಟು ನಿವಾಸಿಗಳು, ಮೊ. ನ್ನು) ತೋರಿಸಲಾಗು. (ಒಂದು ನಿರ್ದಿಷ್ಟ ಸಂಖ್ಯೆಯಷ್ಟು) ಮೊತ್ತವಾಗು.

Númerable. Numeral ನೋಡಿ.

Númeral ನ್ಯೂಮೆರಲ್ (ಗು., ನಾ.) ಸಂಖ್ಯೆಯನ್ನು ಸೂಚಿಸುವ, ಸಂಖ್ಯಾವಾಚಕ (—ಪದ, ಅಂಕ, ಅಂಕ ಗಣ); ಸಂಖ್ಯೆಯ; ಅಂಕಿಯ. **Númerable** (ಗು.) ಎಣಿಸಲಾಗುವ; ಸಂಖ್ಯಾ ಸೂಚನೆ ಮಾಡಲಾಗುವ ; ಗಣನೀಯ. **Numerátion** (ನಾ.) ಎಣಿಕೆಯ ಪದ್ಧತಿ ; ಸಂಖ್ಯಾನ ; ಲೆಕ್ಕಮಾಡುವುದು ; ಗಣಿಸುವುದು ; ಗಣನೆ; ಸಂಖ್ಯೆ ಕೊಡುವುದು. (ಅಂಕ ಗಣಿತ) ಅಂಕಿಯಲ್ಲಿ ಬರೆದದ್ದನ್ನು ಪದಗಳಲ್ಲಿ ಹೇಳುವುದು : ಸಂಖ್ಯಾ ಪಠನ (N. table ಅಂಕನ ಪದ್ಧತಿಯಲ್ಲಿ ಅಂಕಿಯ ಸ್ಥಾನಕ್ಕೆ ಅನುಗುಣವಾದ ಅದರ ಬೆಲೆಯನ್ನು ತೋರಿಸುವ ಕೋಷ್ಟಕ). **Númerator** (ನಾ.) ಭಿನ್ನರಾಶಿಯಲ್ಲಿ (ಛೇದದಿಂದ ಸೂಚಿತವಾದ ಭಾಗಗಳಲ್ಲಿ ಎಷ್ಟು ಭಾಗಗಳನ್ನು ತೆಗೆದುಕೊಂಡಿದೆ ಎಂದು ಸೂಚಿಸುವ) ಅಡ್ಡಗೆರೆಯಮೇಲಿನ ಸಂಖ್ಯೆ : ಅಂಶ. ಎಣಿಸುವವನು ; ಗಣಕ ; ಸಂಖ್ಯೆಯನ್ನು ಗುರುತು ಮಾಡುವವನು ; ಸಂಖ್ಯಾಕಾರ. **Numéric** (ನಾ.) (ಯಾವುದಾದರೂ) ಸಂಖ್ಯೆ, ಶುದ್ಧ ಅಥವಾ ವಿಷಮ ಭಿನ್ನಾಂಕ, ಅಥವಾ ಅನಪವರ್ತ್ಯ ಪ್ರಮಾಣ. **Numérical** (ಗು.) ಸಂಖ್ಯೆಯ ; ಸಂಖ್ಯಾ ಸೂಚಕ ; ಸಂಖ್ಯಾತ್ಮಕ. **Numérically** (ಕ್ರಿ. ವಿ.); **Númerous** (ಗು.) ಅನೇಕ; ಅನೇಕ ಏಕಪರಿಮಾಣಗಳುಳ್ಳ; ಬಹು ಸಂಖ್ಯಾಕ (A n. acquaintance, library, family, army, class) ; ಅನೇಕರಿಂದ ಬರುವ, ಬಂದ (The n. voice of the people. A n. hum). (ಪ್ರಾಚೀ. ಪ್ರ.) ತುಂಬಿದ; ಕಿಕ್ಕಿರಿದ; ಭರಿತ (A n. country ಜನಭರಿತ ದೇಶ. A n. university, dinner). (ಪದ್ಯ ಅಥವಾ ಗದ್ಯದ ವಿಷಯದಲ್ಲಿ) ಲಯ ಬದ್ಧ, ಸುಶ್ರಾವ್ಯ. **Númerously** (ಕ್ರಿ. ವಿ.)

Numerátion, Numéric, Númerous, etc. Numeral ನೋಡಿ.

Numismátic ನ್ಯೂಮಿಸ್(ಸ್)ಮ್ಯಾಟಿಕ್ (ಗು.) ನಾಣ್ಯಗಳ ; ನಾಣ್ಯ ರಚನೆಯ; ಟಂಕ ವಿಷಯಕ. **Numismátically** (ಕ್ರಿ. ವಿ.); **Numismátics** (ನಾ.) ನಾಣ್ಯ (ಪರಿಚಯ) ವಿದ್ಯೆ. **Numísmatist** ನ್ಯುಮಿಸ್(ಸ್)ಮಟಿಸ್ಟ್ (ನಾ.) ; **Numismatólogy** (ನಾ.) = Numismatics.

Númmary ನಮರಿ, **Númmulary** ನಮ್ಯು(ಮ್ಯೂ)ಲರಿ (ಗು.) ನಾಣ್ಯದ ; ಹಣದ ; —ಸಂಬಂಧವಾದ ; —ದಲ್ಲಿ ವ್ಯವಹರಿಸುವ.

Númmet ನಮೆಟ್ (ನಾ.) (ಪ್ರಾಂ. ಪ್ರ.) (ಮಧ್ಯಾಹ್ನದ) ಉಪಾಹಾರ.

Númmulite ನಮ್ಯು(ಮ್ಯೂ)ಲೈಟ್ (ನಾ.) ಮೂರನೆಯ ಭೂಯುಗದ ಸ್ತರಗಳಲ್ಲಿ ದೊರೆಯುವ ಪ್ರಾಣಿಯ ಪಳೆಯುಳಿಕೆಯ ಬಿಲ್ಲೆಯಂಥ ಚಿಪ್ಪು.

Númnah ನಮ್‌ನಾ (ನಾ.) (ಕುದುರೆಯ) ಜೀನಿನ ತಳಗಡೆ ಹಾಕುವ ಮೆತ್ತೆ : ಜೀನು ಬಟ್ಟೆ, ಮೆತ್ತೆ.

Númskull ನಮ್‌ಸ್ಕಲ್ (ನಾ.) ದಡ್ಡ(ನ ತಲೆ)

Nun ನನ್ (ನಾ.) [(ಕ್ರೈಸ್ತ) ಮಠಕ್ಕೆ ಸೇರಿ ದಾರಿದ್ರ್ಯ, ಬ್ರಹ್ಮಚರ್ಯ, ವಿಧೇಯತೆ—ಇವನ್ನು ಆಚರಿಸುವ ವ್ರತ ಹಿಡಿದ] ಸಂನ್ಯಾಸಿನಿ. ಕೆಲವು ಬಗೆಯ ಹಕ್ಕಿಗಳ, ಚಿಟ್ಟೆಗಳ, ಜಾತಿ. N.'s cloth ಒಂದು ಬಗೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೆಳ್ಳನೆಯ ಉಣ್ಣೆಯ ಬಟ್ಟೆ. N.'s thread ಒಂದು ಬಗೆಯ ತೆಳುವೆಳೆಯ, ಬಿಳಿಯ, ಹೊಲಿಗೆಯ ದಾರ. N.'s veiling ಉಡುಪಿಗೆ ಉಪಯೋಗಿಸುವ ತೆಳ್ಳನೆಯ ಬಟ್ಟೆ. **Núnhood** (ನಾ.); **Núnnery** (ನಾ.) ಸಂನ್ಯಾಸಿನಿಯರ ಮಠ, ನಿವಾಸ; —ತಂಡ. **Núnship** (ನಾ.); **Núnlike** (ಗು.); **Núnnish** (ನಾ.) ಕ್ರೈಸ್ತ ಸಂನ್ಯಾಸಿನಿಗೆ ಸಂಬಂಧಪಟ್ಟ; —ಸಂನ್ಯಾಸಿನಿಯಂಥ.

Nún-buoy ನನ್ ಬಾಯ್, —ಬ್ವಾಯ್ (ನಾ.) ನಡುವೆ ವೃತ್ತಾಕಾರವಾಗಿದ್ದು ಎರಡು ತುದಿಗಳ ಕಡೆಗೂ ಚೂಪಾಗುತ್ತ ಹೋಗುವ ತೇಲುವೆ.

Nunc dimíttis ನಂಕ್ ಡಿ(ಡೈ)ಮಿಟಿಸ್ (ನಾ.) (ಈ ಮಾತುಗಳಿಂದ ಪ್ರಾರಂಭವಾಗುವ) ಒಂದು (ಕ್ರೈಸ್ತ) ದೇವರ ಪ್ರಾರ್ಥನೆ (Sing n.d. ಪರಲೋಕ ಪ್ರಯಾಣಕ್ಕೆ ಮನಃಪೂರ್ವಕವಾಗಿ ಸಿದ್ಧನಾಗಿರು)

Núnciature. Nuncio ನೋಡಿ.

Núncio ನನ್ಷಿಯೊ (ನಾ.) ಪರದೇಶದ ರಾಜಾಸ್ಥಾನದಲ್ಲಿ ಪೋಪ್ ಗುರುವಿನ ರಾಯಭಾರಿ, ನಿಯೋಗಿ. **Núnciature** ನನ್ಷಿಯಟ್ಯೂರ್, ನನ್ಷಟ್ಯೂರ್ (ನಾ.) —ಯ ಹುದ್ದೆ, ಪದವಿ(ಯ ಅವಧಿ)

Núncupate ನನ್ಕ್ಯು(ಕ್ಯೂ)ಪೇಟ್ (ಕ್ರಿ. ಸಕ.) ಅಂತಿಮ ಇಷ್ಟಪತ್ರವನ್ನು ಬರೆವಣಿಗೆಯಲ್ಲಿಲ್ಲದೆ ಬಾಯಲ್ಲೇ ದೃಢೀಕರಿಸಿ ಹೇಳು, ತಿಳಿಯಪಡಿಸು. **Nuncupátion** (ನಾ.); **Núncupative** (ಗು.) —ವಾಚಾ ದೃಢೀಕರಿಸಿ ಹೇಳಿದ.

Nunnátion ನನೇಷನ್ (ನಾ.) (ಹಿಂದೆ ಅರಬ್ಬೀ ಭಾಷೆಯಲ್ಲಿ) ನಾಮವಾಚಕಗಳ ವಿಭಕ್ತಿರೂಪ ನಡಸುವಾಗ ಕಡೆಯಲ್ಲಿ 'ನ' ಕಾರ ಸೇರಿಸುವುದು.

Núptial ನಪ್ಷ(ಷ್)ಲ್ (ಗು., ನಾ.) ಮದುವೆಯ; ವಿವಾಹದ; ಶೋಭನ ಪ್ರಸ್ತದ. (ನಾ., ಸಾ., ಬ. ವ. ದಲ್ಲಿ) ಮದುವೆ; ಶೋಭನ ಪ್ರಸ್ತ.

Nurse[1] ನರ್ಸ್ (ನಾ.) ಮಗುವಿಗೆ ಮೊಲೆಯೂಡಿಸಿ ಆರೈಕೆ ಮಾಡಲು ನೇಮಿತಳಾದ ಹೆಂಗಸು: ಮೊಲೆಯೂಡುವ ದಾದಿ (=Wet-n.), ಮಕ್ಕಳ ಯೋಗಕ್ಷೇಮ ಮಾತ್ರ ನೋಡಿಕೊಳ್ಳುವ ದಾದಿ (=Dry-n.); ಧಾತ್ರಿ. ಒಂದು ಗೊತ್ತಾದ ಗುಣ, ಮೊ. ನ್ನು ಪ್ರವೃದ್ಧಿಮಾಡುವ ದೇಶ, ಮೊ. ದು: ಪೋಷಕ ಸ್ಥಾನ (The n. of liberty). ಮೊಲೆಯೂಡುವುದು; —ಊಡಿಸಲ್ಪಡುವುದು; ಪೋಷಣೆ; ಆರೈಕೆ [At n. ದಾದಿಯ ಪೋಷಣೆಯಲ್ಲಿ, ಆರೈಕೆಯಲ್ಲಿ. Put out or put to n. ದಾದಿಯ ವಶಕ್ಕೆ, ಆರೈಕೆಗೆ, ಒಪ್ಪಿಸು; (ರೂಪ.) ಆಸ್ತಿಯನ್ನು ಪಾಲಿಸುವವರ ವಶಕ್ಕೆ ಒಪ್ಪಿಸು, ಕೊಡು]. ರೋಗಿಗಳ, ಅಶಕ್ತರ, ಉಪಚಾರಕ್ಕಾಗಿ ನೇಮಿಸಿರುವ ಅಥವಾ ತರಪೇತು ಪಡೆದಿರುವ ಹೆಂಗಸು ಅಥವಾ ಗಂಡಸು: ಪೋಷಣ ಪರಿಚಾರಿಕೆ (ರಕ); ಶುಶ್ರೂಷಕಿ(ಕ); (ರೋಗಿಗಳ) ದಾದಿ. (ಅರಣ್ಯ ವಿದ್ಯೆ) ಇತರ ಮರಗಳಿಗೆ ಮರೆಯಾಗಿ ಬೆಳಸಿದ ಮರ. (ಕೀಟ ಶಾಸ್ತ್ರ) ಮರಿಗಳನ್ನು ಸಲಹುವ ಕೆಲಸವುಳ್ಳ ಷಂಡ ಜೇನುಹುಳು, ಷಂಡ ಇರುವೆ, ಮೊ. ದು; ಕೆಲಸದ ಹುಳು (ಜೇನು, ಮೊ. ದು). (ಪ್ರಾ. ವಿ.) ಪರ್ಯಾಯ ಜನನಕ್ರಮದಲ್ಲಿ (ಎಂದರೆ, ಒಂದು ಸಂತತಿ ಲಿಂಗಕಾರ್ಯದಿಂದಲೂ ಮರು ಸಂತತಿ ನಿರ್ಲಿಂಗ ಕಾರ್ಯದಿಂದಲೂ ಹುಟ್ಟುವ ಸಂದರ್ಭದಲ್ಲಿ) ನಿರ್ಲಿಂಗಾವಸ್ಥೆಯಲ್ಲಿರುವ ಪ್ರಾಣಿವ್ಯಕ್ತಿ. **N.-child** ಸಾಕುಮಗು. **N.-frog** ಮೊಟ್ಟೆಯೊಡೆದು ಮರಿಯಾಗುವ ವರೆಗೂ ಆ ಮೊಟ್ಟೆಗಳನ್ನು ಗಂಡು ಕಪ್ಪೆ ಹೊತ್ತಿರುವ ಒಂದು ಜಾತಿಯ ಕಪ್ಪೆ. **N.-maid** ಮಗುವನ್ನು, ಮಕ್ಕಳನ್ನು, ನೋಡಿಕೊಳ್ಳುವ ಹುಡುಗಿ. **N. ship** (ನಾವೆ) = Mother ship (Mother ನೋಡಿ). **Núrsey** (ನಾ.) ದಾದಿ ಎಂಬುದಕ್ಕೆ ಪ್ರೀತಿಸೂಚಕದ ಅಥವಾ ಸಲಿಗೆಯ ಮಾತು. **Núrsy** (ಗು.) ದಾದಿಯಂಥ. **Núrsery** ನರ್ಸರಿ (ನಾ.) ಮಕ್ಕಳಿಗೂ ಅವರ ದಾದಿಯರಿಗೂ ಗೊತ್ತುಮಾಡಿರುವ ಕೋಣೆ: ಕೂಸು ಕೋಣೆ. (N. governess ದಾದಿಯಾಗಿಯೂ ಶಿಕ್ಷಕಿಯಾಗಿಯೂ ಇರುವ ಹೆಂಗಸು). ಗುಣಗಳನ್ನಾಗಲಿ ಕೆಲವು ವರ್ಗಗಳ ಜನಗಳನ್ನಾಗಲಿ ಪೋಷಿಸುವ, ಬೆಳಸುವ, —ಪದ್ಧತಿ, ಸಂಸ್ಥೆ, ಕ್ಷೇತ್ರ, ಸ್ಥಳ: ಪೋಷಣ ಸ್ಥಾನ, ಮಂದಿರ. ನಾಟಿ ಹಾಕುವುದಕ್ಕಾಗಿ ಗಿಡಗಳನ್ನು ಬೆಳಸುವ ಪಾತಿ, ಮಡಿ: ಒಟ್ಟಲು ಪಾತಿ (Nurseryman ಸಸಿಗಳ ತೋಟದ ಮಾಲೀಕ; ಸಸಿಗಳ ಮಾರಾಟಗಾರ). ಮೀನು ಸಾಕುವ ಕೊಳ. ಜೀವಜಂತು ಅಭಿವರ್ಧಕ ಸ್ಥಳ. (ಬಿಲ್ಯರ್ಡ್ಸ್ ಆಟ) ಒಂದು ಕ್ರಮದಲ್ಲಿ ಗುಂಪಾಗಿಟ್ಟ ಚೆಂಡುಗಳು. **Núrs(e)ling** (ನಾ.) ಕೂಸು, ಶಿಶು (ಮು., ಅದಕ್ಕೆ ಮೊಲೆಯುಣಿಸುವ ದಾದಿಯ ಸಂಬಂಧದಲ್ಲಿ). N. of (—ಅಲ್ಲಿ) ಬೆಳಸಲ್ಪಟ್ಟ, (—ಇಂದ) ಪೋಷಿತವಾದ, —ವ್ಯಕ್ತಿ, ವಸ್ತು.

Nurse (ಕ್ರಿ.) (ಮಗುವಿಗೆ) ಮೊಲೆಯುಣಿಸು; ಸ್ತನ್ಯ ಕೊಡು; ಮೊಲೆಯೂಡಿಸುವ ದಾದಿಯಾಗಿರು; (—ಗೆ) ಪೋಷಣ ದಾದಿಯಾಗಿರು; (ಮಕ್ಕಳ) ವಿಚಾರಣೆಯುಳ್ಳವಳಾಗಿರು. (ಕರ್ಮಣಿ) (ಭೋಗ ಭಾಗ್ಯಗಳಲ್ಲಿ, ಒಂದು ಗೊತ್ತಾದ ಸ್ಥಳದಲ್ಲಿ, ಮೊ. ಗಿ) ಬೆಳಸಲ್ಪಟ್ಟಿರು (*In* ಉಪ. ದೊಡನೆ). (ಕಲೆ, ದ್ವೇಷ, ಮೊ. ನ್ನು) ಬೆಳಸು, ಪೋಷಿಸು, ಅಭಿವರ್ಧಿಸು, ಅಭಿವೃದ್ಧಿಪಡಿಸು. (ಸಸ್ಯಗಳನ್ನು, ಆಸ್ತಿಯನ್ನು) ಆರೈಕೆ ಮಾಡು, ಆದರದಿಂದ ಕಾಪಾಡು, ನಿರ್ವಹಿಸು. (ಅಸಮಾಧಾನ, ಮೊ. ನ್ನು) ಮನಸ್ಸಿನಲ್ಲಿ ಪೋಷಿಸು, ಬೆಳಸು. (ರೋಗಿಗೆ) ಶುಶ್ರೂಷೆ ಮಾಡು; (ರೋಗವನ್ನು) ವಾಸಿಮಾಡಿಕೊಳ್ಳಲು ಯತ್ನಿಸು (To n. a cold or a sore finger). (ಮೊಣಕಾಲು, ಮೊ. ನ್ನು) ಒತ್ತಿ ಹಿಡಿದುಕೊ. (ಮಗುವನ್ನು) ಅಪ್ಪಿಕೊಂಡು ಮುದ್ದಾಡು. (ಉರಿಯನ್ನು) ಸರಿ ನೋಡಿಕೊಳ್ಳುವಂತೆ ಹತ್ತಿರ ಕುಳಿತುಕೊ. (ಚುನಾವಣೆದಾರರನ್ನು) ತಕ್ಕಂತೆ ಉಪಚರಿಸಿ (ತನ್ನಲ್ಲಿ) ವಿಶ್ವಾಸವುಳ್ಳವರನ್ನಾಗಿ ಮಾಡಿಕೊ, ಇಟ್ಟುಕೊ. (ಬಿಲ್ಯರ್ಡ್ಸ್ ಆಟದಲ್ಲಿ) ಆಟಗಾರನ ಚೆಂಡಿನಿಂದ ಒಂದಾದಮೇಲೊಂದು ಚೆಂಡನ್ನು ಹೊಡೆಯಲಾಗುವಂತೆ (ಚೆಂಡುಗಳನ್ನು) ಕ್ರಮದಲ್ಲಿ ಒಟ್ಟಿಗೆ ಇಟ್ಟಿರು. (ಪ್ರತಿಪಕ್ಷದವನ 'ಬಸ್' ಬಂಡಿಗೆ ಗಿರಾಕಿ ಕಡಮೆಮಾಡಲು ಅದರ) ಬೆನ್ನುಹತ್ತಿ ಹೋಗು. (ಓಡುತ್ತಿರುವ ಜೂಜಿನ ಕುದುರೆಯನ್ನು ಅಡ್ಡಯಿಸಲು) ನಿಧಾನವಾಗಿ ಹೋಗುವ ಇತರ ಕುದುರೆಗಳಿಂದ ಸುತ್ತುಗಟ್ಟು. Nursing home ಶಸ್ತ್ರಚಿಕಿತ್ಸೆ, ರೋಗಿಗಳ ಉಪಚಾರ, ಮೊ. ಗಳಿಗಾಗಿರುವ ಮಂದಿರ: ರೋಗೋಪಚಾರ ಗೃಹ. Nursing father, mother ಸಾಕು ತಂದೆ, ಸಾಕು ತಾಯಿ.

Nurse[2] ನರ್ಸ್ (ನಾ.) ಹಲವು ಬಗೆಯ ಮೀನಜಾತಿ; ಷಾರ್ಕ್ ಮೀನು.

Núrture ನರ್ಚ್ಯರ್, ನರ್ಚರ್ (ನಾ., ಕ್ರಿ. ಸಕ.) ಸಾಕು(ವುದು); ಪೋಷಿಸು(ವುದು); ಪಾಲನೆ, ಆರೈಕೆ (ಮಾಡು); ಶಿಕ್ಷಣ (ಕೊಡು); ಪುಷ್ಟಿ ಕೊಡು(ವ ಆಹಾರ)

Nut ನಟ್ (ನಾ., ಕ್ರಿ. ಅಕ.) ಗಡುಸಾದ ಅಥವಾ ಮೆತುವಾದ ಚಿಪ್ಪಿನೊಳಗಡೆ ಆಹಾರಯೋಗ್ಯವಾದ ತಿರುಳಿರುವ ಕಾಯಿ; ಕರಟಕಾಯಿ [Earth-n., Pea-n., Deaf-n. (ಆಯಾ ಪದವನ್ನು ನೋಡಿ). Can't shoot for nuts (ಅಸಂ.) (ಕೆಲಸವನ್ನು) ಸುಮಾರಾಗಿ ಕೂಡ ಮಾಡಲಾರನು. Hard n. to crack (Hard ನೋಡಿ). Be nuts to (ಅಸಂ.) ಬಹು ಸಂತೋಷಪಡಿಸು; ಆನಂದಗೊಳಿಸು. Be nuts or dead nuts on (ಅಸಂ.) (—ರಲ್ಲಿ) ಆನಂದಿಸು, ಚತುರನಾಗಿರು]. (ಅಸಂ.) ತಲೆ (Off one's n. ತಲೆ ಕೆಟ್ಟು; ಕುಡಿದು ಅಮಲೇರಿ; ಹುಚ್ಚು ಹಿಡಿದು); (ಅಸಂ.) ಸೊಗಸುಗಾರ ಪುಟ್ಟಸಾಮಿ. ಹಲ್ಲುಚಕ್ರವನ್ನು ನೂಕಲು ತಿರುಗುಕದಿರಿನಮೇಲಿರುವ ಹಲ್ಲುಚಾಚು; ವ್ಯಾಸಾರ್ಧ ರೇಖೆಗಳ ಮುಂಬರಿವಿನ ಹಲ್ಲುಗಳುಳ್ಳ ಹಲ್ಲುಚಕ್ರ. (ತಿರುಪುಳ್ಳ ಮೊಳೆಯನ್ನು ತಿರುಗಿಸಿ ಬಿಗಿಸುವುದಕ್ಕೆ ತಕ್ಕಂತೆ ಮಾಡಿರುವ, ಸಾ., ಲೋಹದ, ಸಣ್ಣ) ಒಳತಿರುಪು ಗಟ್ಟಿ; ಹೆಣ್ಣು ಮೊರೆಯ ಗಟ್ಟಿ. ಪಿಟೀಲುಕಮಾನು, ಮೊ. ಗಳಲ್ಲಿಯ ಕುದುರೆಯ ಜವಿ, ಮೊ. ನ್ನು ಬಿಗಿಸುವ ಅಥವಾ ಸಡಿಲಿಸುವ ಹಿಡಿಕೆ. (ಬ. ವ. ದಲ್ಲಿ) ಕಲ್ಲಿದ್ದಲ ಸಣ್ಣ ತುಂಡುಗಳು. [**N.-brown** (ಮು., ಹುಡುಗಿಯ ಮೈಬಣ್ಣ, 'ಏಲ್' ಮದ್ಯದ ಬಣ್ಣ, ಮೊ. ಗಳ ವಿಷಯದಲ್ಲಿ) (ಕರಟಕಾಯಿ) ಕಂದು ಬಣ್ಣದ. **N.-butter** ಕರಟಕಾಯಿಗಳಿಂದ ತಯಾರಿಸಿದ ಬೆಣ್ಣೆಯಂಥ ಆಹಾರವಸ್ತು: ಕೊಬ್ಬರಿಯೆಣ್ಣೆ. **N.-cracker** (ಸಾ., ಬ. ವ. ದಲ್ಲಿ) (Crack ನೋಡಿ);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾಭಾವಿಕವಾಗಿಯೊ ಹಲ್ಲಿಲ್ಲದ್ದರಿಂದಲೊ ತುದಿಗಳು ಒಂದಕ್ಕೊಂದು ಹತ್ತಿರವಿರುವ ಮುಂಚಾಚಿನ ಗದ್ದವೂ ಮೂಗೂ. **N.-gall**= Oak-gall (Gall[3] ನೋಡಿ). **N.-oil** (ಬಳಿಯುವ ಬಣ್ಣಗಳಿಗೂ ಮೆರುಗೆಣ್ಣೆಗಳಿಗೂ ಉಪಯೋಗಿಸುವ, ಕೆಲವು ತೆರದ ಕರಟಕಾಯಿಗಳಿಂದ ತೆಗೆದ) ಕರಟಕಾಯಿಯೆಣ್ಣೆ. **N.-palm** ಕರಟಕಾಯಿ ಬಿಡುವ ಆಸ್ಟ್ರೇಲಿಯದ ಒಂದು ತಾಳೆಯ ಜಾತಿಯ ಮರ. **N.-tree** ಕರಟ ಕಾಯಿ ಬಿಡುವ ಮರ (ಮು., ಹೇಸ್ಲ್ ಮರ). **Nútshell** (ಕರಟ ಕಾಯಿಯ) ಚಿಪ್ಪು; ಕರಟ. ಹೇಳುವುದರಲ್ಲಿ ಅತ್ಯಂತ ಸಂಗ್ರಹ ರೂಪ; ಬಹಳ ಅಡಕ ರೀತಿ; ಸಂಕ್ಷಿಪ್ತ ನಿರೂಪಣೆ (Can give it you in a nutshell)]. (ಕ್ರಿ.) ಕರಟಕಾಯಿಗಳನ್ನು ಹುಡುಕು, ಆಯಿ (Went nutting). **Nútty** (ಗು.) ಕರಟಕಾಯಿ ತುಂಬಿದ; ಕರಟ ಕಾಯಿ ರುಚಿಯ; ಹಿತವಾದ ಮಾಗಿದ ರುಚಿಯುಳ್ಳ. (ಅಸಂ.) (—ಮೇಲೆ) ಒಲುಮೆಯುಳ್ಳ, ಬೇಟವುಳ್ಳ; ಉತ್ಸಾಹವುಳ್ಳ (*Upon* ಉಪ. ದೊಡನೆ). (ಅಮೆ. ಸಂ. ಅಸಂ.) ಹುಚ್ಚು ಹಿಡಿದ; ಉನ್ಮತ್ತ.

Nútant. Nutate ನೋಡಿ.

Nútate ನ್ಯೂಟೇಟ್ (ಕ್ರಿ. ಅಕ.) (ಸ. ವಿ.) ತಲೆಬಾಗು; ಜೋಲಬೀಳು. **Nútant** (ಗು.); **Nutátion** ನ್ಯು— (ನಾ.) ತಲೆ ತೂಗುವುದು. (ಖ. ವಿ.) ಕ್ರಾಂತಿವೃತ್ತ ಧ್ರುವದ ಸುತ್ತಲೂ ಭೂಮಧ್ಯ ವೃತ್ತ ಧ್ರುವ ಮಾಡುವ ಚಲನೆಯನ್ನು ತರಂಗಗಳಂತೆ ಮಾಡುವ ಭೂಮ್ಯಕ್ಷದ ಆಂದೋಲನ. ತಿರುಗುತ್ತಿರುವ ಬುಗುರಿಯ ತೂಗಾಟ. ಬೆಳೆಯು ತ್ತಿರುವ ಗಿಡದ ಕಾಂಡದ ಡೊಂಕು, ಬಾಗು.

Nútmeg ನಟ್‌ಮೆಗ್ (ನಾ.) ಈಸ್ಟ್ ಇಂಡಿಯದ ಒಂದು ನಿತ್ಯ ಹಸುರಿನ ಮರದ (N.-tree) ಗಟ್ಟಿಯಾದ ಗೋಳಾಕಾರದ ಸುವಾಸನೆಯ ಬೀಜ: ಜಾ(ಯಿ)ಕಾಯಿ (ಸಂಬಾರದಲ್ಲೂ ಔಷಧದಲ್ಲೂ ಉಪಯೋಗ). N.-apple (ಜಾಪತ್ರೆಯೂ ಜಾಕಾಯಿಯೂ ದೊರೆಯುವ) ಜಾಯಿಕಾಯಿ ಹಣ್ಣು. N.-liver ಯಕೃತ್ತಿನ ಒಂದು ರೋಗ(ಸ್ಥಿತಿ); ಕೆಂಪು ಕ್ಷಯ.

Nútrient ನ್ಯೂಟ್ರಿಯೆಂಟ್ (ಗು.) ಪುಷ್ಟಿ, ಪೋಷಣೆ, —ಕೊಡುವ; ಪುಷ್ಟಿಕರ. **Nútriment** (ನಾ.) ಪುಷ್ಟಿಯ ಆಹಾರ (ರೂಪ. ಸಹ). **Nutriméntal** (ಗು.) (ವಿರ. ಪ್ರ.); **Nutrítion** ನ್ಯು— (ನಾ.) ಪುಷ್ಟಿ, ಪೋಷಣೆ (—ಕೊಡುವುದು, ಪಡೆಯುವುದು). **Nutrítious** (ಗು.) ಪುಷ್ಟಿಕರವಾದ; ಪೋಷಕ; ಪೋಷಕ ಆಹಾರವಾದ. **Nutrítiously** (ಕ್ರಿ. ವಿ.); **Nutrítiousness** (ನಾ.); **Nútritive** ನ್ಯೂ— (ಗು., ನಾ.) ಪೋಷಕ ಆಹಾರವಾಗಬಲ್ಲ; —ಗುಣವುಳ್ಳ; ದೇಹ ಪೋಷಣೆಯ. (ನಾ.) ಪೋಷಕ ಆಹಾರ(ಪದಾರ್ಥ)

Nútriment, Nutrítion, etc. Nutrient ನೋಡಿ.

Nux vómica (L) ನಕ್ಸ್ ವಾಮಿಕ (ನಾ.) Strychnia ಎಂಬ (ಔಷಧ) ವಿಷವನ್ನು ಕೊಡುವ ಈಸ್ಟ್ ಇಂಡಿಯದ ಒಂದು ಜಾತಿಯ ಮರದ ಬೀಜ: ನಂಜಿನ ಕೊರಡಿನ, ಹೆಮ್ಮುಷ್ಟಿ ಮರದ, ಕಾಸರ್ಕಿನ, —ಬೀಜ.

Núzzle ನಸ್ಲ್ (ಕ್ರಿ.) ಮೂಗಿನಿಂದ, —ಮೂಸಿ ನೋಡು, (ಬಿಲ) ತೋಡು, ಒತ್ತು, ಉಜ್ಜು; ಮೂಗನ್ನು ಒಂದರೊಳಕ್ಕೆ, ಒಂದರಮೇಲೆ, —ಒತ್ತು, ನೂಕು (*Into, against* ಉಪ. ದೊಡನೆ); ಬೆಚ್ಚಗೆ ಒಳಗೆ ತೂರಿಕೊ, ಮುದುರಿಕೊಂಡಿರು.

Nyctalópia ನಿಕ್ಟಲೋಪಿಯ (ನಾ.) ರಾತ್ರಿಯ ಹೊತ್ತು ಕಣ್ಣು ಕಾಣದಿರು ವುದು; ಸೂರ್ಯಾಸ್ತವಾದಮೇಲೆ ನಿತ್ಯವೂ ದೃಷ್ಟಿ ಹೋಗಿಬಿಡುವುದು. (Hemeralopia ಪದದ ಭ್ರಾಂತಿಯಿಂದ) ರಾತ್ರಿ ಮಾತ್ರ ಕಣ್ಣು ಕಾಣುವುದು: ಇರುಳುಗಣ್ಣು.

Nyctitrópic ನಿಕ್ಟಿಟ್ರಾಪಿಕ್ (ಗು.) (ಸ. ವಿ.) ರಾತ್ರಿಯಲ್ಲಿ ಒಂದು ಗೊತ್ತಾದ ಕಡೆಗೆ ತಿರುಗಿಕೊಳ್ಳುವ.

Nymph ನಿಂಫ್ (ನಾ.) (ಕಡಲು, ಹೊಳೆ, ಕಾರಂಜಿ, ಬೆಟ್ಟ, ಕಾಡು, ಮರ, ವೊ. ಗಳಲ್ಲಿ ನೆಲಸಿರುವ, ಅಥವಾ ಮೇಲ್ತರದ ದೇವತೆಗಳಿಗೆ ಪರಿವಾರವಾಗಿರುವ) ಪುರಾಣದ ಸ್ತ್ರೀ ಉಪದೇವತೆ(ಗಳಲ್ಲೊಬ್ಬಳು): ಅಪ್ಸರೆ. (ಕಾವ್ಯ) ಸುಂದರ ತರುಣಿ. (ಕೋಶದಲ್ಲಿರುವ) ಪೊರೆಹುಳು. **Nymphéan** ನಿಂಫೀಯನ್ (ಗು.); **Nýmphish** (ಗು.); **Nýmphlike** (ಗು.)

Nýmpholepsy ನಿಂಫೊಲೆಪ್ಸಿ (ನಾ.) ದುರ್ಲಭ ವಸ್ತುವಿನಮೇಲಿನ ಮೋಹದಿಂದಾದ ಆವೇಶ, ಉನ್ಮಾದ. **Nýmpholept** (ನಾ.) (ಮು., ಒಂದು ಅಸಾಧ್ಯ ಮನೋರಥಕ್ಕಾಗಿ) ಹುಚ್ಚು ಉತ್ಸಾಹವುಳ್ಳವನು. **Nympholéptic** (ಗು.)

Nymphománia ನಿಂಫೊಮೇನಿಯ (ನಾ.) (ರೋಗ ನಿದಾನ) (ಕೆಲವು ಹೆಂಗಸರಿಗಿರುವ) ಅದಮ್ಯ ಕಾಮ(ರೋಗ); ಕಾಮೋನ್ಮಾದ.

Nystágmus ನಿಸ್ಟ್ಯಾಗ್ಮಸ್ (ನಾ.) ಗಣಿಕೆಲಸಗಾರರಿಗೆ ಸಾಮಾನ್ಯ ವಾಗಿ ಬರುವ, ಕಣ್ಣುಗುಡ್ಡೆ ಎಡೆಬಿಡದೆ ಅಲುಗುತ್ತಿರುವ, ಒಂದು ಬಗೆಯ ರೋಗ.

O

O[1] ಓ. ಇಂಗ್ಲಿಷ್ ವರ್ಣಮಾಲೆಯ ಹದಿನೈದನೆಯ ಅಕ್ಷರ; O ಆಕಾರದ ಗುರುತು, ಉರುಟು; ವೃತ್ತ (ಮು., *Round O*)

ಸಂಕ್ಷಿಪ್ತಗಳು: (1) Officer [**O.B.E.**[1] (—of British Empire); **O.T.C.** (Officers' training corps)]. (2) Old [**O.S.**(tyle); **O.T.**(estament); **OE**(nglish)]. (3) On [**O.H.M.S.** (—His, Her, Majesty's Service)]. (4) Order [**O.B.E.**[2] (—of British Empire); **O.M.** (—of Merit)]. (5) Out [**O.P.** (—of print)]. (6) Over [**o.p.** (—proof)]. (7) (ಹಾಸ್ಯ ಪ್ರ.) All [**O.K.** (—correct)]. (8) Oxford [**O.E.D.** (—English Dictionary) =N.E.D.]

ob.(iit). **Obad.**(iah) (ಹಳೆಯ ಒಡಂಬಡಿಕೆಯಲ್ಲಿ ಒಂದು ಪ್ರಕರಣ). **Oct.**(ober). **oct.**(avo). **op.**(us). **op. cit.** (Opere citato) =ಉದಾಹೃತ ಗ್ರಂಥದಲ್ಲಿ. **Oxon.** (Oxfordshire; Bishop of Oxford). **oz.** Ounce(s)

O[2], **Oh** ಓ (ಭಾವ. ಅವ್ಯ.) [ಸಂಬೋಧನೆಯ ಹಿಂದೆ O ರೂಪವೂ, ಭಾವಸೂಚನೆಯಲ್ಲಿ ರೇಖನಚಿಹ್ನೆಗಳಿಂದ ಪ್ರತ್ಯೇಕಿಸಿದಾಗ ಸಾ., Oh ರೂಪವೂ, ಉಳಿದ ಕಡೆ O ರೂಪವೂ ಪ್ರ.] ಓ! ಓಹೊ! O dear me! ಅಯ್ಯೋ! ಆಹಾ! ನನ್ನ ಪಾಡೇ! O for a breathing-space! ಓ, ಉಸಿರಾಡಲು ಅವಕಾಶ ಸಿಕ್ಕಿತೆ! Oh, what a lie! ಅಯ್ಯೋ, ಅಹಾ, ಎಂಥ ಸುಳ್ಳು! Oh, is that so? ಓಹೋ, ಹಾಗೋ! O yes! ಓಹೋ, ಅಹುದು!; =Oyez.

O'[1] ಓ (ಪೂ. ಪ್ರ.) ಐರಿಷರ ಹೆಸರುಗಳಲ್ಲಿ ಸೇರುವ ಪೂ. ಪ್ರ.: —ಸಂತತಿ ಯವನು; — ಕುಲದವನು (O'Connor)

o'[2] ಒ, ಅ (ಉಪ.) (ಕೆಲವು ಪದಸಮುದಾಯಗಳಲ್ಲಿ): of, on ಪದಗಳ ಸಂಕ್ಷಿಪ್ತ [(=of): o'clock, Jack-o'-lantern, Will-o'-the-wisp, Man-o'-war. (=on): Cannot sleep o' nights]

-o- ಸಮಾಸದಲ್ಲಿ ಪೂರ್ವ ಪದವನ್ನು ಉತ್ತರ ಪದದೊಡನೆ ಸೇರಿಸುವ ಸಂಧ್ಯಕ್ಷರ (ಸಾ., ಗ್ರೀಕ್ ಸಮಾಸ ಪದಗಳಲ್ಲಿ; ಆದರೆ ಈಗ ಗ್ರೀಕೇತರ ಪಾರಿಭಾಷಿಕ ಸಮಾನ ಪದಗಳಲ್ಲಿಯೂ ಪ್ರ. ಉಂಟು): Occipito-frontal ತಲೆಯ ಹಿಂಭಾಗ ಮುಂಭಾಗಗಳ. Joco-serious ಹಾಸ್ಯ ಗಂಭೀರ (ಮಿಶ್ರವಾದ). Franco-German ಕೆಲವು ಫ್ರೆಂಚ್ ಲಕ್ಷಣ ಗಳುಳ್ಳ ಜರ್ಮನ್ ಪ್ರಾಮುಖ್ಯತೆಯ. Franco-German war ಫ್ರೆಂಚ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜರ್ಮನರ ಯುದ್ಧ. (-cracy, -logy ಮೊದಲಾದ ಗ್ರೀಕ್ ರೂಪಗಳು ಅಂತವಾಗುಳ್ಳ ಶಬ್ದಗಳಲ್ಲಿ ಸಹಜವಾಗಿ ಆಗುವ ವ್ಯುತ್ಪನ್ನ ಪದಗಳನ್ನು ಮಾಡುವಾಗ ಸಹ ಪ್ರ. : ಉದಾ., Aristocracy, Philosophy)

Oaf ಓಫ್ (ನಾ. ; ಬ. ವ. -s, oaves ಓವ್ಸ್) (ಪ್ರಾಚೀ. ಪ್ರ.) (ಒಂದು ತೆರದ) ಅಣುಯಕ್ಷನ ಮಗು ; (ಕಳ್ಳತನದಿಂದ, ಮು., ವನ ದೇವತೆ) ಬದಲಾಯಿಸಿದ ಕೂಸು. ಹಾದರಕ್ಕೆ ಹುಟ್ಟಿದ, ಕುರೂಪಿಯಾದ, ಹುಟ್ಟು ದಡ್ಡ, —ಮಗು ; ಒಡ್ಡತೆರದ ಮನುಷ್ಯ. **Oáfish** (ಗು.)

Oak ಓಕ್ (ನಾ.) ಓಕ್ ಮರ (ಮು., ಗಟ್ಟಿ ದಾರುವಿನ ಒಂದು ದೊಡ್ಡ ಮರ) ; ಓಕ್ ಗುಲ್ಮ ; ಓಕ್ ಮರದ ದಾರು [Heart of o. (Heart ನೋಡಿ)]. ಓಕ್ ಮರದ ಎಳೆಯೆಲೆಗಳ ಬಣ್ಣ. ಓಕ್ (ಮರದ) ಎಲೆಗಳು (O. is still worn on the 29th May). (ಕಾವ್ಯ) ಮರದ ಹಡಗುಗಳು. (ವಿ. ವಿ. ನಿ.) ಕೊಠಡಿಗಳ ತಂಡದ ಹೊರ ಬಾಗಿಲು [Sport one's o. (ನೋಡಬರುವವರನ್ನು ತಡೆಯಲು) ಹೊರ ಬಾಗಿಲು ಮುಚ್ಚು]. [The Oaks ಇಂಗ್ಲೆಂಡಿನ ಎಪ್ಸಂ ಪಟ್ಟಣದಲ್ಲಿ ನಡೆಯುವ, ಮೂರು ವರ್ಷ ವಯಸ್ಸಿನ ಹೆಣ್ಣು ಕುದುರೆ (ಮರಿ)ಗಳ ಜೂಜು (ಅಲ್ಲಿರುವ ಹೊಲಮನೆಯ ಹೆಸರಿನಿಂದ)]. (ಗು. ವಾಗಿ ಪ್ರ.) [=Oaken (ಆದರೆ Oak ಪದವೇ ಹೆಚ್ಚು ಬಳಕೆ) : O.-apple, -fig, -gall, -plum, -potato, -spangle, -wart ಓಕ್ ಮರಗಳಲ್ಲಿ Gall-flies ಎಂಬ ಒಂದು ಬಗೆಯ ಹಾರುಹುಳುಗಳಿಂದ ಆಗುವ ನಾನಾ ತೆರದ ಗಂಟು]. O.-apple day ಮೇ ೨೯ನೆಯ ತಾರೀಖು [ಇಂಗ್ಲೆಂಡಿನಲ್ಲಿ ದೊರೆಯ ರಾಜ್ಯಭಾರ ೧೬೬೦ರಲ್ಲಿ ಪುನರ್ನಿರ್ಮಿತವಾಗಿ Charles II ಗೆ ದೊರೆತನವಾದ ದಿನ. ಈತನು ತನ್ನ ಶತ್ರುಗಳಿಂದ ತಪ್ಪಿಸಿಕೊಳ್ಳಲು (೬-೯-೧೬೫೧ರಲ್ಲಿ) ಒಂದು ಓಕ್ ಮರದಲ್ಲಿ ಅವಿತುಕೊಂಡಿದ್ದುದರ ಜ್ಞಾಪಕಾರ್ಥವಾಗಿ ಹಳ್ಳಿಯವರು ಮೇ ೨೯ರಲ್ಲಿ ಓಕ್ ಸೇಬನ್ನು ಅಥವಾ ಓಕ್ ಎಲೆಯನ್ನು ಧರಿಸುವ ವಾಡಿಕೆ]. O.-beauty, -egger, -hooktip, -lappet, -moth ಓಕ್ ಎಲೆ ತಿಂದು ಬೆಳೆಯುವ, ಅಥವಾ ಆ ಎಲೆಗಳನ್ನು ಹೋಲುವ, ಹಲವು ಬಗೆಯ ಚಿಟ್ಟೆ. O.-wood ಓಕ್ ಮರಗಳ ಅಥವಾ ಕುರುಚಲನ ಕಾಡು, ಮೊ. ದು; ಓಕ್ ನಾಟ. **Oáken** ಓಕೆನ್ (ಗು.) ಓಕಿನ. **Oáklet** (ನಾ.) ಸಣ್ಣ ಓಕ್ ಮರ. **Oákling** (ನಾ.) ಓಕ್ ಸಸಿ.

Oákum ಓಕಮ್ (ನಾ.) ಹಳೆಯ (ಸಣಬಿನ) ಹಗ್ಗವನ್ನು ಹುರಿ ಬಿಚ್ಚಿ ತೆಗೆದ ಎಳೆ, ನಾರು (ಮು., ಹಡಗಿನಲ್ಲಿಯ ಸಂದುಗಳನ್ನು ಮುಚ್ಚುವುದಕ್ಕೆ ಉಪಯೋಗ). Pick o. ಹೀಗೆ ಹಗ್ಗದ ಎಳೆ, ನಾರು, —ಬಿಡಿಸು (ಮು., ಹಿಂದೆ ಕೈದಿಗಳಿಗೂ ದಿವಾಳಿಗಳಿಗೂ ಸಾ. ವಿಧಿಸುತ್ತಿದ್ದ ಕೆಲಸ)

Oar ಓರ್ (ನಾ., ಕ್ರಿ.) (ದೋಣಿ ನಡಸುವ) ಹುಟ್ಟು(ಗೋಲು) [Chained to the o. ಹೆಚ್ಚು ಕಾಲ ಮೈಮುರಿಯುವಂತಹ ಕೆಲಸ ಮಾಡಬೇಕಾದ ನಿರ್ಬಂಧಕ್ಕೆ ಸಿಕ್ಕಿ (ಹುಟ್ಟುಹಾಕಿ ನಡಸಬೇಕಾದ ಹಡಗಿನ ಕೆಲಸಗಾರ-ಗುಲಾಮರ ಉದಾಹರಣೆಯಿಂದ). Pair-o., four-o., etc. ಜೋಡಿ ಹುಟ್ಟಿನ, ನಾಲ್ಕು ಹುಟ್ಟಿನ, ಮೊ. ದೋಣಿ. Pulls a good o. ಒಳ್ಳೆಯ ಹುಟ್ಟು(ಗೋಲು)ಗಾರ. Put in one's o. ನಡುವೆ ತಲೆಹಾಕು, ಕೈಹಾಕು. Have an o. in every man's boat (Boat ನೋಡಿ). Rest on one's oars ಕಷ್ಟಪಟ್ಟು ಕೆಲಸ ಮಾಡಿದಮೇಲೆ ಸ್ವಲ್ಪ ವಿಶ್ರಾಂತಿ ತೆಗೆದುಕೊ ; ಕೆಲಸ ಮಾಡುವುದರಲ್ಲಿ ಹೆಚ್ಚು ಶ್ರಮ ವಹಿಸದಿರು]. ಹುಟ್ಟು ಹಾಕುವವನು (Good, bad, young, practised, etc. o.). (ರೂಪ.) ಈಜುವುದರಲ್ಲಿ ಹುಟ್ಟಿನಂತೆ ಉಪಯೋಗಿಸುವ ರೆಕ್ಕೆ, ಈಜುರೆಕ್ಕೆ, ಕೈ. (**Oarsman, -woman** ಹುಟ್ಟುಹಾಕುವವನು, —ಳು). (ಕ್ರಿ.) (ಕಾವ್ಯ) ಹುಟ್ಟು ಹಾಕು ; —ಹಾಕಿ ನಡಸು (O. boat, water, air, one's way. O. one's arms or hands ಈಜುವಾಗ ಹೇಗೊ ಹಾಗೆ ತೋಳುಗಳನ್ನು ಅಥವಾ ಕೈಗಳನ್ನು ಆಡಿಸು). **Oársmanship** (ನಾ.) ; **Oárage** (ನಾ.) (ಕಾವ್ಯ) ಹುಟ್ಟುಗಳ ಕಾರ್ಯ ; —ಗಳ ಚಲನೆಯಂತೆ ಅಂಗಗಳ ಚಲನೆ. ಹುಟ್ಟಿನಂಥ ಸಲಕರಣೆ ; ಹುಟ್ಟುಗಳ ಸರಂಜಾಮು. **(-)oared** (ಗು.) ; **Oárless** (ಗು.) ; **Oáry** (ಗು.) (ಕಾವ್ಯ) ಹುಟ್ಟಿನ(ಂಥ) ; ಹುಟ್ಟುಗಳುಳ್ಳ.

Oásis ಓಯೇಸಿಸ್, **Óasis** ಓಅಸಿಸ್ (ನಾ. ; ಬ. ವ. Oases —ಸೀಸ್) ಮರಳುಗಾಡಿನ (ಮಧ್ಯದ)ಲ್ಲಿ ಫಲವತ್ತಾದ ಪ್ರದೇಶ (ರೂಪ. ಸಹ) ; ಮರುಮಧ್ಯದ ತಂಪು ಜಾಗ.

Oat ಓಟ್ (ನಾ.) (ಬ. ವ. ದಲ್ಲಿ) ತೋಕೆ ಗೋಧಿ ; ಓಟ್ಸ್ ಧಾನ್ಯ (ಇದು ಆಹಾರವಾಗಿ ಉಪಯೋಗಿಸುವ, ತಂಪು ವಾಯುಗುಣವುಳ್ಳ ಪ್ರದೇಶಗಳಲ್ಲಿ ಬೆಳೆಯುವ, ಒಂದು ಗಟ್ಟಿಧಾನ್ಯ) (ಏಕವಚನ ಪ್ರಯೋಗವು ಸಮಾಸಗಳಲ್ಲಿ ಹೊರತು ಬೇರೆ ಕಡೆ ವಿರಳ) ; ಓಟ್ಸ್ ಸಸ್ಯ ; —ಜಾತಿಯ ಸಸ್ಯ, ಧಾನ್ಯ. [Wild O. ಓಟ್ಸ್ ಹುಲ್ಲಿನಂಥ ಉದ್ದನೆಯ ಹುಲ್ಲುಜಾತಿ (Sow one's wild oats ಯೌವನದ ಹಮ್ಮಿನಲ್ಲಿ ಸ್ವೇಚ್ಛಾಚಾರ ನಡಸು)]. (ಕಾವ್ಯ) ಕುರುಬರು, ಮೊ. ವರು ಕೊಳಲಾಗಿ ಉಪಯೋಗಿಸುವ ಓಟ್ಸ್ ಸಸ್ಯದ ಕಾಂಡ. ಗೊಲ್ಲಗೀತೆ ; ಹಳ್ಳಿಯ ಹಾಡು. **Oatcake** ಉದುಗು ಹಾಕದೆ ಮಾಡಿದ ಓಟ್ಸ್ ಹಿಟ್ಟಿನ ತೆಳು ರೊಟ್ಟಿ. **Oatmeal** ಓಟ್ಸ್ ಹಿಟ್ಟು. **Oáten** (ಗು.)

Oath ಓತ್ (ನಾ. ; ಬ. ವ. Oaths ಓದ್ಸ್) ಹೇಳಿಕೆ ನಿಜವೆಂಬುದಾಗಿ ಅಥವಾ ವಾಗ್ದಾನ ನಡಸಿಕೊಡುವುದಾಗಿ ದೇವರನ್ನು ಅಥವಾ ಯಾರಾದರೂ ಪೂಜ್ಯರನ್ನು, ಅಥವಾ ಭಯ ಹುಟ್ಟಿಸುವವರನ್ನು, ಸಾಕ್ಷಿ ಕೋರುವ ಪ್ರಾರ್ಥನೆ; ಆಣೆ; ಪ್ರಮಾಣ ; ಸೂರುಳ್ (ಗ್ರಾಂ.) [Take an, make, swear an, o. ಆಣೆಯಿಟ್ಟುಕೊ ; ಪ್ರಮಾಣ ಮಾಡು. On o. ಪ್ರಮಾಣ ಮಾಡಿ ; ಪ್ರಮಾಣ ಮಾಡಿದವನು ಹೇಳಿದ, ಮಾಡಿದ, ಅಥವಾ ಕೊಟ್ಟ. Bible, Corporal[1], o. (ಆಯಾ ಪದವನ್ನು ನೋಡಿ)] ; ಪ್ರಮಾಣ ವಚನ (O. of allegiance, office, supremacy). ಒತ್ತಿ ಹೇಳುವಲ್ಲಿ ಅಥವಾ ಕೋಪ, ಮೊ. ನ್ನು ವ್ಯಕ್ತಪಡಿಸುವಲ್ಲಿ (ಭರ್ತಿಯ ಉದ್ಗಾರವಾಗಿ ಸೇರಿಸುವ) ದೇವರ ಹೆಸರು, ಮೊ. ದು ; ದುರ್ಭಾಷೆ ; ಶಪನೆ.

Ob- (ಪೂ. ಪ್ರ.) ಮುಂದೆ ಹೇಳುವ ಅರ್ಥಗಳಲ್ಲಿ : (೧) ಗೆ, ಕಡೆಗೆ, ಎದುರಿಗೆ, ಹಿಂದೆ (ಉದಾ., Obstacle, Obverse) ; (೨) ಪ್ರತಿಯಾಗಿ, ವಿರುದ್ಧವಾಗಿ (ಉದಾ., Object, Obstruct); (೩) ಮೇಲೆ, ಕೆಳಗೆ (ಉದಾ., Obfuscate, Oblige) ; (೪) ಸಂಪೂರ್ಣವಾಗಿ, ಬಹಳ ಹೆಚ್ಚಾಗಿ (ಉದಾ., Obdurate) ; (೫) (ಆಧುನಿಕ ಶಾಸ್ತ್ರ ಪರಿಭಾಷೆಯಲ್ಲಿ) ವಿಪರ್ಯಯವಾಗಿ, ವಿರುದ್ಧ ದಿಕ್ಕಿನಲ್ಲಿ (ಉದಾ., Obconical, Obcordate). [c, f, p ಅಕ್ಷರಗಳ ಹಿಂದೆ Ob- ಪ್ರತ್ಯಯವು ಸಾಮಾನ್ಯವಾಗಿ oc-, of-, -op ಎಂದು ಮಾರ್ಪಡುವುದು (ಉದಾ., Occasion, offend, oppose)]

Obbligáto (It.) ಆ(ಬ)ಬ್ಲಿಗಾಟೋ (ಗು., ನಾ.) (ಸಂ.) ಅವಶ್ಯವಾದ ; (ಹಿಮ್ಮೇಳದ ಅಥವಾ ಗಾನಾಂಶದ ವಿಷಯದಲ್ಲಿ) ಪ್ರತ್ಯೇಕಿಸಲಾಗದ ; ಕೃತಿಯ ಸಮಗ್ರತೆಯಲ್ಲಿ ಸೇರಿರುವ (ಎದುರು ಪದ : Ad libitum). (ನಾ.) ಅಂಥ ಗಾನಾಂಶ ಅಥವಾ ಹಿಮ್ಮೇಳ.

Obcónic(al) ಆಬ್‌ಕಾನಿಕ್, —ಕಲ್ (ಗು.) (ಸ. ವಿ.) ತಲೆಕೆಳಗು ಶಂಕುವಿನ ಆಕಾರದ.

Obcórdate ಆಬ್‌ಕಾರ್ಡೇಟ್ (ಗು.) (ಸ. ವಿ.) ತಲೆಕೆಳಗು ಹೃದಯಾಕಾರದ (ಎಂದರೆ, ಕೊನೆಯ ಭಾಗ ಮೇಲ್ಗಡೆಯುದ್ದ ಸೇರಿಕೆ ಪಡೆದಿರುವ)

Óbdurate ಆಬ್‌ಡ್ಯುರೆಟ್, **Obdúrate** ಆಬ್‌ಡ್ಯೂ— (ಗು.) ಜಗ್ಗದ ; ಪಶ್ಚಾತ್ತಾಪ ಪಡದ ; ಮೊಂಡುಬಿದ್ದ ; ಒಂದೇ ಹಟದ, ಹಟಮಾರಿತನದ. **Óbduracy** (ನಾ.) ; **Óbdurately** (ಕ್ರಿ. ವಿ.)

Obédience ಒಬೀಡಿಯೆನ್ಸ್ (ನಾ.) (ಕ್ರಿಯೆಯಾಗಿ, ಅಭ್ಯಾಸವಾಗಿ, ಅಥವಾ ಗುಣವಾಗಿ) ಹೇಳಿದಂತೆ ಕೇಳುವುದು, ನಡೆಯುವುದು ; ವಿಧೇಯನಾಗಿರುವುದು ; ವಿಧೇಯತೆ ; ಮತ್ತೊಬ್ಬರ ಅಧಿಕಾರಕ್ಕೆ ತಲೆವಾಗುವುದು ; ಆಜ್ಞಾನುವರ್ತನೆ ; ಆಜ್ಞೆಯ ಅಥವಾ ಕಾನೂನಿನ ಪಾಲನೆ [In o. to (—ಕ್ಕೆ) ವಿಧೇಯನಾಗಿ, ಅನುಸಾರವಾಗಿ. Passive o.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನಸ್ಸಿಲ್ಲದ, ಸಹಕರಿಸದ, —ವಿಧೇಯತೆ, ಅನುಸರಣೆ; ಆಜ್ಞೆ ಏನೇ ಆಗಿರಲಿ, ಎದುರಾಡದೆ ಅದರಂತೆ ನಡೆಯುವುದು: ಎದುರಾಡದ ವಿಧೇಯತೆ]. (ಮು., ರೋ. ಕ್ಯಾ.) ವಿಧೇಯತೆಯನ್ನು ಸಲ್ಲಿಸಿಕೊಳ್ಳುವ ಸ್ಥಿತಿ; ಅಧಿಕಾರ (ಕ್ಷೇತ್ರ, ವ್ಯಾಪ್ತಿ); ಕಡ್ಡಾಯವಾಗಿ ವಿಧೇಯತೆಯಿಂದಿರಬೇಕಾದ ಪ್ರಾಂತ, ಜನರು; ವಿಧೇಯ ವರ್ಗ (Not belonging to either the Roman or the Byzantine o.). **Obédient** (ಗು.) (ದೊಡ್ಡವರು) ಹೇಳಿದಂತೆ ಕೇಳುವ; ವಿಧೇಯ(ನಾದ); ಕರ್ತವ್ಯ ಪಾಲಿಸುವ [Your o. servant (ಹಿಂದೆ ಮರ್ಯಾದೆಗಾಗಿ ಆಡುತ್ತಿದ್ದ, ಈಗ ವ್ಯಂಗ್ಯವಾಗಿ ಪ್ರಯೋಗಿಸುವ, ಮಾತು; ಬೀಳ್ಕೊಳ್ಳುವಲ್ಲಿ, ಸರ್ಕಾರದ ಅಥವಾ ಸಾರ್ವಜನಿಕ ಕಾಗದಪತ್ರಗಳ ಕೊನೆಯ ಒಕ್ಕಣೆಯಲ್ಲಿ, ಈಗ ರೂಢಿ)]. **Obédiently** (ಕ್ರಿ. ವಿ.); **Obeý** ಒಬೇ (ಕ್ರಿ.) (ಒಬ್ಬನ) ಅಪ್ಪಣೆ ನಡಸು; ವಿಧೇಯತೆಯಿಂದಿರು; (ಆಜ್ಞೆಯನ್ನು) ನೆರವೇರಿಸು; (ಶಕ್ತಿ, ಅಂತರಂಗ) ಚೋದಿಸಿದಂತೆ ನಡೆ.

Obeísance ಒಬೇಸನ್ಸ್ (ನಾ.) (ಮು., ಭಕ್ತಿ ಗೌರವಗಳನ್ನು ತೋರಿಸಲು ಮಾಡುವ) ತಲೆವಾಗು, ನಮಸ್ಕಾರ, (ಸಾಷ್ಟಾಂಗ) ಪ್ರಣಾಮ. [(ಪ್ರಾಚೀ. ಪ್ರ.) Make an, do, pay, o. ಪ್ರಣಾಮ ಮಾಡು; ಮುಜರೆಯೊಪ್ಪಿಸು]; ಗೌರವ; ಮರ್ಯಾದೆ; ಮನ್ನಣೆ; ಶರಣು (Do, make, pay, o.)

Óbelisk ಅಬೆ(ಬಿ)ಲಿಸ್ಕ್ (ನಾ.) ಅಡ್ಡಕೊಯ್ತಿನಲ್ಲಿ ಸಮಚತುರಸ್ರ ಅಥವಾ ದೀರ್ಘ ಚತುರಸ್ರವಾಗಿದ್ದು ತುದಿಯ ಕಡೆಗೆ ಚೂಪಾಗುತ್ತ ಹೋಗುವ 'ಪಿರಮಿಡ್' ಆಕೃತಿಯ ಅಗ್ರವುಳ್ಳ, ಸಾ., ಒಂದೇ ಕಲ್ಲಿನ, ನಿಲುಗಂಬ: ಚೌಕ ಸೂಚ್ಯಾಕಾರದ ಕಂಬ; ಈ ಆಕಾರದ ಬೆಟ್ಟ, ಮರ, ಮೊ. ದು. ಒಂದು ಪದ ಅಥವಾ ಗ್ರಂಥಭಾಗ ಪ್ರಮಾಣಾರ್ಹವಲ್ಲವೆಂದಾಗಲಿ ಪ್ರಕ್ಷಿಪ್ತವೆಂದಾಗಲಿ ಸೂಚಿಸಲು ಪ್ರಾಚೀನ ಹಸ್ತಪ್ರತಿಗಳಲ್ಲಿ ಉಪಯೋಗಿಸುತ್ತಿದ್ದ ಚಿಹ್ನೆ (—, ÷) (=Obelus); ಪಕ್ಕ ಟಿಪ್ಪಣಿ, ಮೊ. ಗಳ ಗಮನಸೂಚಕವಾಗಿ ಉಪಯೋಗಿಸುವ ಕಠಾರಿಯ ಗುರುತು (†) (=Obelus). Double o. ಇಕ್ಕಠಾರಿ (‡). **Óbelize** ಆಬಿಲೈಸ್ (ಕ್ರಿ. ಸಕ.) (ಪ್ರಕ್ಷಿಪ್ತ ಎಂದು ಮೊ. ಗಿ ಸೂಚಿಸಲು) —ಚಿಹ್ನೆ ಹಾಕು.

Óbelus ಅಬಿಲಸ್ (ನಾ.). **Obelisk** ನೋಡಿ.

Obése ಒಬೀಸ್ (ಗು.) ಸ್ಥೂಲಕಾಯವುಳ್ಳ; ಬೊಜ್ಜು ಮೈಯ. **Obésity** —ಬೀ—, —ಬೆ— (ನಾ.)

Obeý. **Obedience** ನೋಡಿ.

Óbfuscate ಅಬ್‌ಫಸ್ಕೇಟ್ (ಕ್ರಿ. ಸಕ.) (ಮನಸ್ಸು, ಮೊ. ನ್ನು) ಮಬ್ಬುಗವಿಸು, ಮಂಕು ಮಾಡು; (ಬುದ್ಧಿ)ಮಾಂದ್ಯಗೊಳಿಸು; ದಿಕ್ಕು ತೋರದಂತೆ ಮಾಡು. **Obfuscátion** (ನಾ.)

Óbiit (L) ಓ(ಅ)ಬಿಇಟ್ (ಕ್ರಿ. ಅಕ.; ಪ್ರಥಮ ಪುರುಷ ಏ. ವ., ಭೂತ; ಸಂಕ್ಷಿಪ್ತ: ob.) (—ನೆಯ ತಾರೀಖಿನಲ್ಲಿ) ಸತ್ತನು.

Óbit. **Obituary** ನೋಡಿ.

Óbiter (L) ಆಬಿಟರ್ (ಕ್ರಿ. ವಿ.) ಪ್ರಾಸಂಗಿಕವಾಗಿ; ಹೇಳಿಕೆಯ ಮಧ್ಯೆ. O. dictum (ಬ. ವ. -ta) ನ್ಯಾಯಾಧಿಪತಿ ಒಂದು ವಿಷಯವನ್ನು ಚರ್ಚಿಸುವಾಗ ಅಥವಾ ತೀರ್ಪುಕೊಡುತ್ತಿರುವಾಗ ಹೇಳುವ, ಆದರೆ ಆ ತೀರ್ಪಿಗೆ ಅವಶ್ಯಕವಲ್ಲದ, ಆದುದರಿಂದಲೇ ಬಂಧನಾಧಿಕಾರವಿಲ್ಲದ, ಅಭಿಪ್ರಾಯದ ಹೇಳಿಕೆ; (ಸಾಮಾನ್ಯವಾಗಿ) ಪ್ರಾಸಂಗಿಕೋಕ್ತಿ.

Obítuary ಒಬಿಟ್ಯುಅರಿ (ನಾ., ಗು.) (ಮು., ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುವ) ಸಾವು(ಗಳ) ಸುದ್ದಿ; ಮೃತಿ ಪ್ರಕಟನೆ; ಮೃತನ ಸಂಕ್ಷಿಪ್ತ ಜೀವನ ಚರಿತ್ರೆ. (ಗು.) ಸಾವನ್ನು ಬರೆದಿಡುವ; ಮೃತಿ ಪ್ರಕಟನೆಯ; ಮೃತನ ವಿಷಯಕವಾದ. **Obítuarist** (ನಾ.) ಮೃತಿ ಪ್ರಕಟನೆ ಬರೆಯುವವನು; ಸಾವು ಸುದ್ದಿಗಾರ. **Óbit** ಆ(ಓ)ಬಿಟ್ (ನಾ.) (ಪ್ರಾಚೀ. ಪ್ರ.) (ಮು., ಒಂದು ಸಂಸ್ಥೆಯಲ್ಲಿ, ಸ್ಥಾಪಕನ ಅಥವಾ ದಾತನ ವಾರ್ಷಿಕ ಶ್ರಾದ್ಧದ ದಿನ ನಡಸುವ) ಸ್ಮಾರಕ ಆರಾಧನೆ.

Óbject ಅಬ್‌ಜೆಕ್ಟ್ (ನಾ.) (ಕಣ್ಣ ಮುಂದೆ ಅಥವಾ ಇಂದ್ರಿಯಗೋಚರವಾಗುವಂತೆ, ಇಟ್ಟ) ವಸ್ತು; ಪದಾರ್ಥ; ದ್ರವ್ಯ; ಚಿತ್ರದಲ್ಲಿ ನಿರೂಪಿಸಿದ ವಸ್ತು. ಕರುಣೆ ಹುಟ್ಟಿಸುವ ಅಥವಾ ಹಾಸ್ಯಾಸ್ಪದವಾದ ಸ್ಥಿತಿಯ,—ವ್ಯಕ್ತಿ, ವಸ್ತು; ಕಾರ್ಯ ಅಥವಾ ಮನೋಭಾವನೆ ಯಾವುದರ ಕಡೆಗೆ ತಿರುಗಿದೆಯೊ ಆ ವ್ಯಕ್ತಿ, ವಸ್ತು; ಗುರಿ; ಉದ್ದೇಶ; (ಒಂದರ, ಒಂದಕ್ಕೆ) ವಿಷಯ [The Bible had been the o. of his study. He is a proper o. of *or* for charity ಅವನು ದಾನಕ್ಕೆ ಸತ್ಪಾತ್ರ. No o. ನಮ್ಮ ಗುರಿಯಲ್ಲ; ನಮಗೆ ಸೇರಿದ ವಿಷಯವಲ್ಲ (Money, time, distance, etc., no o.)]. (ಅಧ್ಯಾತ್ಮ ವಿದ್ಯೆ) ಜ್ಞಾತೃವಿನ ಜ್ಞಾನಕ್ಕೆ ವಿಷಯವಾದದ್ದು: ಜ್ಞೇಯ ವಸ್ತು; ಬಾಹ್ಯ ವಿಷಯ, ವಸ್ತು; ಅಹಂ ಭಿನ್ನ ಪದಾರ್ಥ. (ವ್ಯಾ.) ಕರ್ಮ(ಪದ) [Direct, indirect, o. ಪ್ರಧಾನ ಕರ್ಮಪದ, ಅಪ್ರಧಾನ ಕರ್ಮಪದ (I gave him a rupee ಎಂಬಲ್ಲಿ rupee ಎಂಬುದು ಪ್ರಧಾನ ಕರ್ಮಪದ, him ಎಂಬುದು ಅಪ್ರಧಾನ ಕರ್ಮಪದ)]. **O.-ball** (ಬಿಲ್ಯರ್ಡ್ಸ್, ಮೊ. ಆಟಗಳಲ್ಲಿ) ಆಟಗಾರನು ತನ್ನ ಚೆಂಡಿನಿಂದ ಹೊಡೆಯಬೇಕೆಂದು ಗುರಿಯಿಡುವ ಚೆಂಡು: ಗುರಿಚೆಂಡು. **O.-finder** ಸೂಕ್ಷ್ಮದರ್ಶಕದಲ್ಲಿ ದೃಷ್ಟಿವಿಷಯವಾದ ವಸ್ತುವನ್ನು ಹಚ್ಚಿರುವ ಚಲ ಫಲಕದ (ಚಲಕದ) ಸ್ಥಾನವನ್ನು ನಿರ್ದೇಶಿಸುವ ಸಲಕರಣೆ: ದೃಗ್ವಸ್ತು ನಿರ್ದೇಶಕ. **O.-glass, -lens** ದೂರದರ್ಶಕ, ಮೊ. ಗಳಲ್ಲಿ ವಸ್ತುವಿಗೆ ಹೆಚ್ಚು ಸಮೀಪದಲ್ಲಿಯ ಲೆನ್ಸು: ವಸ್ತು ಯವ. **O.-lesson** ವಸ್ತುವನ್ನು ಪ್ರತ್ಯಕ್ಷವಾಗಿ ತೋರಿಸಿ ಅದರ ವಿಷಯವಾಗಿ ಪಾಠ(ಹೇಳುವುದು): ವಸ್ತುಪಾಠ. (ರೂಪ.) (ಯಾವುದಾದರೊಂದು ತತ್ತ್ವಕ್ಕೆ) ಪ್ರತ್ಯಕ್ಷ ನಿದರ್ಶನ. **O.-plate** ಸೂಕ್ಷ್ಮದರ್ಶಕದಲ್ಲಿ ಪರೀಕ್ಷೆ ಮಾಡುವುದಕ್ಕಾಗಿ ವಸ್ತುವನ್ನಿಡುವ ಫಲಕ: ವಸ್ತು ಫಲಕ. **O.-staff** ಮೋಜಣಿದಾರನ ಮಟ್ಟನೋಡುವ ಸಲಕರಣೆ.

Objéctify ಅಬ್— (ಕ್ರಿ. ಸಕ.) ಇಂದ್ರಿಯಕ್ಕೆ ವಿಷಯವಾಗಿಡು; ವಿಷಯಾಕರಿಸು; ವಾಸ್ತವಿಕ ರೂಪದಲ್ಲಿ ತಿಳಿಸು; ಮೂರ್ತೀಕರಿಸು. **Objectificátion** (ನಾ.); **Objéctive** (ಗು., ನಾ.) (ತ. ಶಾ.) (ಜ್ಞಾತೃವಿಗೆ ಸಂಬಂಧಿಸದೆ) ಜ್ಞೇಯಕ್ಕೆ ಮಾತ್ರ ಸಂಬಂಧಿಸಿದ; ಮನಸ್ಸಿನಿಂದ ಹೊರಗಿನ; ಬಾಹ್ಯವಸ್ತುವಿನ; ವಾಸ್ತವ(ವಾದ); (ವ್ಯಕ್ತಿ, ಲೇಖನ, ಚಿತ್ರ, ಮೊ. ಗಳ ವಿಷಯದಲ್ಲಿ) (ಮನಸ್ಸಿಗೆ ಅಲ್ಲದೆ) ಬಾಹ್ಯ ವಸ್ತುಗಳಿಗೆ ಸಂಬಂಧಿಸಿದ; ಬಾಹ್ಯ ಸಂಬಂಧಿ; (ಲೇಖಕನ ಭಾವ ಅಭಿಪ್ರಾಯಗಳಿಂದ ಬಣ್ಣ ಕಟ್ಟದೆ) ವಾಸ್ತವಿಕ (ಸಂಗತಿಗಳನ್ನು ತಿಳಿಸುವ). (ವೈ. ಶಾ.) ರೋಗಲಕ್ಷಣಗಳ ವಿಷಯದಲ್ಲಿ ರೋಗಿಯ ಅನುಭವ ಮಾತ್ರವಲ್ಲದೆ ಹೊರಗಿನವನ (ವೈದ್ಯನ) ಗೋಚರಕ್ಕೂ ಬರುವ; ಬಾಹ್ಯ ಗೋಚರದ. (ವ್ಯಾ.) ಕರ್ಮ(ಪದ)ದ; ಕರ್ಮ(ಪದ)ಕ್ಕೆ ತಕ್ಕ; ಕರ್ಮವಾಚಕ: [O. case ದ್ವಿತೀಯಾ ವಿಭಕ್ತಿ. O. genitive ಕರ್ಮಣಿ ಷಷ್ಠಿ (ಉದಾ., The fear *of God*). Subjective genitive ಕರ್ತರಿ ಷಷ್ಠಿ (ಉದಾ., By the act *of God*). (ಸೈನ್ಯ) O. point (ಸೇನೆಯನ್ನು ಯಾವ ಎಡೆಗೆ ನಡಸುತ್ತಿದೆಯೊ ಆ) ಉದ್ದಿಷ್ಟ ಸ್ಥಾನ; (ರೂಪ.) ಗುರಿ; ಲಕ್ಷ್ಯ; ಉದ್ದಿಷ್ಟ ಸ್ಥಾನ]. (ನಾ.) =Object-glass, O. case, O. point. **Objéctively** (ಕ್ರಿ. ವಿ.); **Objéctiveness** (ನಾ.) =**Objectivity** (ನಾ.). **Objéctivism** (ನಾ.) ಬಾಹ್ಯ ವಿಷಯಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡುವ ಪ್ರವೃತ್ತಿ; ವಾಸ್ತವಿಕತಾ ಪ್ರವೃತ್ತಿ; ಜ್ಞಾತೃ ಸಂಬಂಧವಾದ ಅರಿವಿಗಿಂತ ಅಹಂ ಭಿನ್ನವಾದ ಅರಿವೇ ಪೂರ್ವಭಾವಿಯೆಂದೂ ಉತ್ತಮವಾದುದೆಂದೂ ಪ್ರತಿಪಾದಿಸುವ ವಾದ; ಜ್ಞೇಯ ಪ್ರಾಧಾನ್ಯ ವಾದ. **Óbjectless** (ಗು.) ವಸ್ತು, ವಿಷಯ, —ರಹಿತ; ಗುರಿಯಿಲ್ಲದ; ಉದ್ದೇಶವಿಲ್ಲದ.

Objéct ಅಬ್‌ಜೆಕ್ಟ್ (ಕ್ರಿ.) (ಒಂದು ಸಿದ್ಧಾಂತ, ಮೊ. ಕ್ಕೆ ಲಕ್ಷಣ, ಸಂಗತಿ, ಮೊ. ನ್ನು) ಆಕ್ಷೇಪಣೆಯಾಗಿ ಒಡ್ಡು (*To* ಉಪ. ದೊಡನೆ); ಆಕ್ಷೇಪಿಸು; ಆಕ್ಷೇಪಣೆ ಹೇಳು; ಅಡ್ಡಿ ಹೇಳು; ಅಸಮ್ಮತಿ ಪಡು, ಹೇಳು [I o. to being treated like this. I o. (ಪಾರ್ಲಿಮೆಂಟಿನಲ್ಲಿ ತಂದ ಗೊತ್ತುವಳಿಯನ್ನು ವಿರೋಧಿಸುವ ಉದ್ದೇಶವಿದೆಯೆಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸದಸ್ಯನು ಸೂಚಿಸುವಾಗ ಉಪಯೋಗಿಸುವ ಮಾತು) : ನಾನು ಆಕ್ಷೇಪಿಸು ತ್ತೇನೆ, ನಿಷೇಧಿಸುತ್ತೇನೆ (ಇಂಥ ಗೊತ್ತುವಳಿಯನ್ನು ವಿರೋಧವಿರುವ ವಿಷಯ ವೆಂದು ತಗೆದಿಡುತ್ತಾರೆ)]. **Objéction** (ನಾ.) ಆಕ್ಷೇಪಿಸುವುದು ; ಆಕ್ಷೇಪಣೆ ; ಆಕ್ಷೇಪಿಸಿದ ವಸ್ತು ವಿಷಯ ; ವಿರುದ್ಧ ಕಾರಣ, ಹೇಳಿಕೆ ; ಅಸಮ್ಮತಿ ; ಅಸಹ್ಯ ಸೂಚಿಸುವ ಹೇಳಿಕೆ, ಭಾವನೆ. **Objéction-able** (ಗು) ಆಕ್ಷೇಪಣೀಯ ; ಅಪೇಕ್ಷಣೀಯವಲ್ಲದ ; ಹಿತವಲ್ಲದ ; ರೇಗಿಸುವ ; ಒಪ್ಪದ ; ದೂಷ್ಯ. **Objéctionably** (ಕ್ರಿ. ವಿ.) ; **Objéctor** (ನಾ.) ಆಕ್ಷೇಪಕ. Conscientious o. (Conscience ನೋಡಿ)

Óbjurgate ಆಬ್‌ಜರ್‌ಗೇಟ್ (ಕ್ರಿ. ಸಕ.) ತಪ್ಪು ಹಿಡಿ ; ಛೀಪೆಟ್ಟು ಹಾಕು ; ಬಯ್ಯು. **Objurgátion** (ನಾ.) ; **Óbjurgatory** —ಗೇಟೊರಿ, **Objúrgatory** —ಗಟೋ(ಟ)ರಿ (ಗು.)

Óblate[1] ಆಬ್ಲೇಟ್ (ನಾ.) ಧಾರ್ಮಿಕ ಜೀವನಕ್ಕೆ ಅಥವಾ ಕಾರ್ಯಕ್ಕೆ ಅಥವಾ ಮಠದೀಕ್ಷೆಗೆ ಅರ್ಪಣೆ ಮಾಡಿಕೊಂಡವನು, ಮೀಸಲಾದ ವನು(ಳು) ; ದೀಕ್ಷೆ ಹಿಡಿದವನು(ಳು). **Oblátion** ಅ(ಅ)— (ನಾ.) (ಕ್ರೈಸ್ತ) ಪ್ರಭುಭೋಜನ ಸಂಸ್ಕಾರ(ದಲ್ಲಿ ರೊಟ್ಟಿಯನ್ನೂ ದ್ರಾಕ್ಷಾ ಮದ್ಯ ವನ್ನೂ ದೇವರಿಗೆ ಅರ್ಪಿಸುವುದು) ; ದೇವರಿಗೆ ಅರ್ಪಿಸಿದ್ದು : ನೈವೇದ್ಯ ; ಕಾಣಿಕೆ ; ಬಲಿ ; ಆಹುತಿ ; ಬಲಿಯಾದವನು (ಮನುಷ್ಯರ ಪಾಪ ಪರಿಹಾರ ಕ್ಕಾಗಿ ಆತ್ಮಾರ್ಪಣೆ ಮಾಡಿದ ಯೇಸು ಕ್ರಿಸ್ತ) ; (ಪವಿತ್ರ ಕಾರ್ಯಕ್ಕಾಗಿ ಭಕ್ತಿಯಿಂದ ಅರ್ಪಿಸಿದ) ಧರ್ಮದ ಕಾಣಿಕೆ ; ದತ್ತಿ. **Oblátional** (ಗು.) ; **Óblatory** ಅಬ್ಲಟ(ಟೋ)ರಿ (ಗು.)

Obláte[2], **Óblate** ಅಬ್ಲೇಟ್ (ಗು.) (ಜ್ಯಾ.) (ವೃತ್ತಕಲ್ಪದ ವಿಷಯದಲ್ಲಿ) ಧ್ರುವಗಳಲ್ಲಿ ಚಪ್ಪಟೆಯಾಗಿರುವ (Prolate ಪದವನ್ನು ಹೋಲಿಸಿ)

Óbligate. **Oblige** ನೋಡಿ.

Oblíge ಒಬ್ಲೈಜ್ (ಕ್ರಿ. ಸಕ.) (ಪ್ರಾಚೀ. ಪ್ರ., ನ್ಯಾ. ಶಾ.) (ಆಣೆ, ಭಾಷೆ, ಕರಾರು, ಮೊ. ಗಳಿಂದ ಒಬ್ಬನಿಗೆ ಅಥವಾ ಒಂದು ಕೆಲಸ ಮಾಡಲು) ಕಟ್ಟು ಬೀಳು, —ಬೀಳಿಸು (*To* person, *to* do) ; ಬಂಧಕವಾಗಿರು ; (ಅನುಗ್ರಹ, ಉಪಕಾರ, ಮಾಡಿ) ಋಣಿಯನ್ನಾಗಿ ಮಾಡು ; (ಉಪಕರಿಸಿ) ಸಂತೋಷಪಡಿಸು (*By* doing or *with*) ; (ಬಳ. ಮಾ.) (ಹಾಡು, ಮೊ. ಗಳ ಮೂಲಕ) ಸಂತೋಷಗೋಷ್ಠಿಗೆ ಸಹಾಯ ಕೊಡು ; (ಕರ್ಮಣಿ) (ಒಬ್ಬನ ಉಪಕಾರ, ಮೊ. ಗಳಿಗಾಗಿ) ಕೃತಜ್ಞನಾಗಿರು (*To* person, *for* service) : (ಮಾಡಲು) ಬಲಾತ್ಕರಿಸು, ನಿರ್ಬಂಧ ಪಡಿಸು, ಒತ್ತಾಯ ಮಾಡು. **Obligeé** ಅಬ್ಲೈ(ಬ್ಲಿ)ಜೀ (ನಾ.) (ನ್ಯಾ. ಶಾ.) ಕರಾರು ಮೇರೆಗೆ ತನಗೆ ಬದ್ಧನಾಗಿ ಮತ್ತೊಬ್ಬನನ್ನು ಉಳ್ಳವನು ; (ಒಬ್ಬನು ಬದ್ಧನಾಗಿರುವಂತೆ) ಕರಾರು ಬರಸಿಕೊಂಡವನು (Obligor ಪದದೊಡನೆ ಹೋಲಿಸಿ). (ವಿರ. ಪ್ರ.) ಅನುಗ್ರಹ ಪಡೆದವನು. **Oblíging** (ಗು.) ವಿನೀತ ; ಉಪಕಾರಶೀಲ ; ದಾಕ್ಷಿಣ್ಯಪರ ; ದಯಾಶಾಲಿ ; ಆದರ ತೋರಿಸುವ. **Oblígingly** (ಕ್ರಿ. ವಿ.) ; **Oblígingness** (ನಾ.) ; **Óbligor** ಅಬ್ಲೈಜಾರ್, ಅಬ್ಲಿಗಾರ್ (ನಾ.) (ನ್ಯಾ. ಶಾ.) (ಮತ್ತೊಬ್ಬ ನಿಗೆ ಕರಾರಿನಿಂದ) ಬದ್ಧನಾದವನು ಅಥವಾ ಪತ್ರ ಬರೆದುಕೊಟ್ಟವನು. **Óbligate** ಅಬ್ಲಿಗೇಟ್ (ಕ್ರಿ. ಸಕ.) (ಒಬ್ಬನನ್ನು, ಮು., ಕಾಯಿದೆಗೆ ಅನುಸಾರವಾಗಿ ಒಂದು ಕೆಲಸ ಮಾಡುವಂತೆ) ಬದ್ಧ ಮಾಡು, ಬಂಧಿಸು, ಕಟ್ಟುಬೀಳಿಸು (ಮು., ಭೂ. ಕೃ. ನಲ್ಲಿ). **Obligátion** (ನಾ.) (ಮು., ಹಾಗೆ ನಡೆಯಲೇಬೇಕೆಂದು ಬದ್ಧಪಡಿಸಬಹುದಾದ) ಕರಾರು, ಒಪ್ಪಂದ ; ಬರೆದ ಕರಾರು, ಮುಚ್ಚಳಿಕೆ ; (ಕಾಯಿದೆ, ಉಪದೇಶ, ಕರ್ತವ್ಯ, ಕರಾರು, ಮೊ. ಗಳ) ನಿರ್ಬಂಧಕ ಶಕ್ತಿ, ಬಂಧನ, ಕಟ್ಟು (Of o. ಮಾಡಲೇಬೇಕಾದ, ನಿರ್ಬಂಧವಾದ) ; (ಒಬ್ಬನ) ಅವಶ್ಯ ಕರ್ತವ್ಯ ; ಹೊರೆಯಾದ ಕೆಲಸ ; ಸೇವೆ ; ಉಪಕಾರ ; ಉಪಕಾರ ಭಾರ ; ಹಂಗು ; ಆಭಾರ ; ಋಣ (Be, put, under an o. Repay an o.). **Óbligatory** ಅಬ್ಲಿಗಟ(ಟೋ)ರಿ, —ಗೇಟೊರಿ. **Oblí—** ಅಬ್ಲಿಗಟ(ಟೋ)ರಿ (ಗು.) (ಕಾನೂನಿನ ಮೇರೆಗೆ ಅಥವಾ ನೈತಿಕವಾಗಿ) ಬಂಧಕವಾದ ; ಮಾಡಲೇ ಬೇಕಾದ ; ನಿರ್ಬಂಧವಾದ ; ಋಣಿಯ ನ್ನಾಗಿ ಮಾಡುವ.

Oblíque ಅಬ್ಲೀಕ್ (ಗು., ಕ್ರಿ. ಅಕ.) (ಲಂಬದಿಂದ ಅಥವಾ ಮಟ್ಟತಲದಿಂದ) ಓರೆಯಾದ, ಬಾಗಿದ ; (ಸರಳರೇಖೆಯಿಂದ, ನೇರ ದಾರಿಯಿಂದ) ಅಗಲುತ್ತ ಬೇರೆ ದಿಕ್ಕಿಗೆ ಹೋಗುವ ; ಸೊಟ್ಟ ; ನೇರ ತಪ್ಪಿದ. (ಜ್ಯಾ.) (ರೇಖೆ, ಏಕ ತರಾಕೃತಿ, ಮೇಲ್ಮೈ —ಇವುಗಳ ವಿಷಯದಲ್ಲಿ) ಅಸಮ ಕೋನ ದಲ್ಲಿ ಬಾಗಿರುವ ; (ಕೋನದ ವಿಷಯದಲ್ಲಿ) ಸಮಕೋನಕ್ಕಿಂತ ಕಡಮೆ ಯಾಗಿರುವ ಅಥವಾ ಹೆಚ್ಚಾಗಿರುವ ; ಲಘು ಕೋನ ಅಥವಾ ಅಧಿಕ ಕೋನ ; ವಿಷಮ ಕೋನ ; (ಶಂಕು, ವರ್ತುಲ ಸ್ತಂಭಾಕೃತಿ, ಮೊ. ಗಳ ವಿಷಯದಲ್ಲಿ) ಆಧಾರ ತಲಕ್ಕೆ ಲಂಬವಾಗಿಲ್ಲದ ಅಕ್ಷವುಳ್ಳ. (ಅಂ. ರ. ಶಾ.) ದೇಹದ ಅಥವಾ ಅಂಗದ ದೀರ್ಘ ಅಕ್ಷಕ್ಕೆ ಸಮಾಂತರವಾಗಿಯಾಗಲಿ ಲಂಬ ಮಾನವಾಗಿಯಾಗಲಿ ಇಲ್ಲದ. (ಸ. ವಿ. : ಎಲೆಯ ವಿಷಯದಲ್ಲಿ) ಅಸಮ ಪಕ್ಕಗಳುಳ್ಳ. ನೇರವಾಗಿ ವಿಷಯಕ್ಕೆ ಹೋಗದ ; ಬಳಸಿಕೊಂಡು, ಸುತ್ತಿ, —ಬರುವ ; ಪರೋಕ್ಷ. [(ವ್ಯಾ.) O. case ಪ್ರಥಮಾ ಅಥವಾ ಸಂಬೋಧನ ವಿಭಕ್ತಿ ಬಿಟ್ಟು ಬೇರೆಯ ವಿಭಕ್ತಿ : ದ್ವಿತೀಯಾದಿ ವಿಭಕ್ತಿ. O. oration or narration, or speech ಒಬ್ಬನ ಭಾಷಣವನ್ನು ತಕ್ಕ ಪುರುಷ ಮತ್ತು ಕಾಲ ಭೇದಗಳಿಂದ ಮಾರ್ಪಡಿಸಿ ಮತ್ತೊಬ್ಬನು ವರದಿ ಮಾಡಿ ಹೇಳುವ ರೀತಿ : ಪರೋಕ್ತಿ ಕಥನ]. (ಕ್ರಿ.) (ಮು., ಸೈನ್ಯ) ಓರೆಯಾಗಿ ಮುಂದುವರಿ. **Oblíquely** (ಕ್ರಿ. ವಿ.) ; **Oblíquity** ಅಬ್ಲಿಕ್ವಿಟಿ (ನಾ.)

Oblíterate ಅಬ್ಲಿಟೆರೇಟ್ (ಕ್ರಿ. ಸಕ.) ಅಳಿಸಿಬಿಡು ; ತೊಡೆದುಹಾಕು ; ಒರಸಿಬಿಡು ; ನಾಶಮಾಡು ; ನಿರ್ನಾಮಗೊಳಿಸು ; ಗುರುತಿಲ್ಲದಂತೆ ಮಾಡು ; ಹುಟ್ಟಡಗಿಸಿಬಿಡು. **Obliterátion** (ನಾ.)

Oblívion ಅಬ್ಲಿವಿಯನ್ (ನಾ.) ಮರವೆ ; ವಿಸ್ಮೃತಿ ; ಮರೆತಿರುವುದು ; ಮರೆಯಲ್ಪಟ್ಟಿರುವುದು ; ಹಿಂದಿನ ಅಪರಾಧವನ್ನು ಮರೆಯುವುದು [Act, Bill, of O. ಕ್ಷಮಾದಾನದ ಕಾನೂನು, ಮಸೂದೆ (ಇಂಗ್ಲೆಂಡಿನ ದೊರೆಯಾದ ಎರಡನೆಯ ಚಾರ್ಲ್ಸ್‌ನ ಆಳಿಕೆಯಲ್ಲಿ). Fall into o. ಮರೆ ಯಲ್ಪಡು ; ಮೂಲೆಗೆ ಬೀಳು ; ಬಳಕೆ ತಪ್ಪಿಹೋಗು]. **Oblívious** (ಗು.) ಮರೆತುಹೋಗುವ ; —ಬಿಡುವ ; ಗಣನೆಗೆ ತೆಗೆದುಕೊಳ್ಳದಿರುವ (*Of* ಉಪ. ದೊಡನೆ). (ಕಾವ್ಯ) ಮರವೆಯ ; ಮರವು ಹುಟ್ಟಿಸುವ. **Oblíviously** (ಕ್ರಿ. ವಿ.) ; **Oblíviousness** (ನಾ.)

Óblong ಅಬ್ಲಾಂಗ್ (ಗು., ನಾ.) ಒಂದು ಹೆಚ್ಚು ಉದ್ದದ ಅಕ್ಷವನ್ನು ಪಡೆದು ಶುದ್ಧವೃತ್ತಕ್ಕೆ ಅಥವಾ ಸಮಚತುರಸ್ರಕ್ಕೆ ಭಿನ್ನವಾಗಿರುವ ; (ಗೋಳಕಲ್ಪದ ವಿಷಯದಲ್ಲಿ) = Prolate. (ಜ್ಯಾ.) ಅನುಗತ ಭುಜ ಗಳು ಅಸಮವಾಗಿರುವ ಚತುರಸ್ರಾಕಾರದ ; ದೀರ್ಘ ಚತುರಸ್ರ. (ಕಾಗದ, ಪುಸ್ತಕ, ದೀರ್ಘ ಚತುರಸ್ರಾಕಾರದ ಅಂಚೆಯ ತರೆಟೀಟ ಅಥವಾ ಬಾಗಿಲು ಮೊ. ಗಳ ಪುಟೀಪು—ಇವೇ ಮೊ. ಗಳ ವಿಷಯದಲ್ಲಿ) ಎತ್ತರ ಕ್ಕಿಂತ ಅಗಲ ಹೆಚ್ಚಾಗಿರುವ, ಅಥವಾ ಅಗಲಕ್ಕಿಂತ ಉದ್ದ ಹೆಚ್ಚಾಗಿ ರುವ. (ನಾ.) ದೀರ್ಘ ಚತುರಸ್ರಾಕಾರದ ಆಕೃತಿ, ವಸ್ತು. **Ob-longó-** (ಸ. ಪೂ. ಪ.) (ಸ. ವಿ.)

Óbloquy ಆಬ್ಲೊಕ್ವಿ (ನಾ.) ಬೈಗುಳು ; ತೆಗಳಿಕೆ ; ನಿಂದೆ ; ದೂಷಣೆ ; ಅವಮರ್ಯಾದೆ ; ಸಾಮಾನ್ಯವಾಗಿ ಕೆಟ್ಟ ಹೆಸರು ಪಡೆದಿರುವುದು ; ಅಪಕೀರ್ತಿ.

Obmutéscence ಅಬ್‌ಮ್ಯುಟೆಸೆನ್ಸ್ (ನಾ.) ಹಟದ ಮೌನ ; ಮೂಕೀ ಭಾವ. **Obmutéscent** (ಗು.)

Obnóxious ಅಬ್‌ನಾಕ್‌ಷಸ್ (ಗು.) (ವಿರ. ಪ್ರ.) ಹಾನಿಗೆ, ಕೇಡಿಗೆ, ಆಕ್ರಮಣಕ್ಕೆ, —ಈಡಾಗುವ. ರೇಗಿಸುವ ; ವಿರುದ್ಧ ಭಾವದ ; ಆಕ್ಷೇಪಣೀಯ ; ಅಸಹ್ಯಕರ ; ಅನಿಷ್ಟದ. **Obnóxiously** (ಕ್ರಿ. ವಿ.) ; **Obnóxiousness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Óboe ಓಬಾಯ್, ಓಬೋ (ನಾ.) ಮರದಿಂದ ಮಾಡಿದ, ಆರ್ಗನ್ ವಾದ್ಯದ ಒಂದು ಬಗೆಯ ಉಚ್ಚಸ್ವರದ ಪಿಳ್ಳಂಗೋವಿ (Hautboy ನೋಡಿ). **Óboist** ಓಬೋಇಸ್ಟ್ (ನಾ.)

Obscéne ಅಬ್ಸೀನ್ (ಗು.) (ಪ್ರಾಚೀ. ಪ್ರ.) ಜುಗುಪ್ಸೆ ಹುಟ್ಟಿಸುವ; ಹೇಸಿಕೆಯ; ಹೊಲಸಾದ; ಅಸಹ್ಯಕರವಾದ. ಅಶ್ಲೀಲ; ಧಂಡ; ಪುಂಡ; ಬಂಡು; ಬೂತು. **Obscénely** (ಕ್ರಿ. ವಿ.); **Obscénity** (ನಾ.)

Obscúre ಅಬ್‌ಸ್ಕ್ಯೂರ್ (ಗು., ನಾ., ಕ್ರಿ. ಸಕ.) ಕತ್ತಲೆ ಕವಿದ; ಮಬ್ಬಾದ; ಮಂಕಾದ; ಮಸುಕಾದ (O. rays ಸೌರ ವರ್ಣಪಟಲ ದಲ್ಲಿಯ ಅದೃಶ್ಯ ಶಾಖಕಿರಣಗಳು). (ಬಣ್ಣದ ವಿಷಯದಲ್ಲಿ) ಮಾಸಲಾದ, ಮಾಸಿ ಕಪ್ಪಾದ, ಮಂಕಾದ; ಅಸ್ಫುಟ; ಅಸ್ಪಷ್ಟ; ಅವ್ಯಕ್ತ; ಅಗೋಚರ; ದೃಷ್ಟಿಗೆ ಬೀಳದ(ಂತೆ ದೂರವಾಗಿರುವ); ಅಜ್ಞಾತ; ಗಮನಕ್ಕೆ ಬರದ; ದೃಷ್ಟಿಗೆ ಬಿದ್ದಿಲ್ಲದ; ಪ್ರಸಿದ್ಧಿ ಪಡೆದಿಲ್ಲದ; ಅರ್ಥ ವಾಗದ; ಸಂದೇಹಾಸ್ಪದವಾದ; ಸ್ಪಷ್ಟವಾಗಿಲ್ಲದ; ವ್ಯಕ್ತವಾಗಿ ಹೇಳಿಲ್ಲದ. (ನಾ.) ಮಬ್ಬು; ಮಂಕು; ಅಸ್ಪಷ್ಟತೆ. (ಕ್ರಿ.) ಮಂಕು, ಮಾಸಲು, —ಮಾಡು; ಅಸ್ಪಷ್ಟ ಮಾಡು; ಅರ್ಥವಾಗದಂತೆ, ತಿಳಿಯ ದಂತೆ, —ಮಾಡು. (ಒಬ್ಬನ) ಯಶಸ್ಸನ್ನು ಮಸುಳಿಸು; (ಒಂದರ) ಕಳೆಗೆಡಿಸು; (ಕಾಂತಿಯಲ್ಲಿ, ಕೀರ್ತಿಯಲ್ಲಿ) ಮೀರಿಸು; ದೃಷ್ಟಿಗೆ ಮರೆ ಮಾಡು. **Obscúrely** (ಕ್ರಿ. ವಿ.); **Obscúrity** (ನಾ.); **Obscurátion** ಅಬ್‌ಸ್ಕ್ಯು— (ನಾ.); **Obscúrant** ಅಬ್‌ಸ್ಕ್ಯೂರಂಟ್ (ನಾ.) ಶೋಧನೆ, ಜ್ಞಾನೋದಯ, ಸುಧಾರಣೆ—ಇವಕ್ಕೆ ವಿರೋಧಿ; ಪ್ರಗತಿ ವಿರೋಧಿ; ಅಂಧಶ್ರದ್ಧಾಳು. **Obscúrantism** (ನಾ.); **Obscúrantist** (ನಾ.)

Obsecrátion ಅಬ್‌ಸಿಕ್ರೇಷನ್ (ನಾ.) ಶ್ರದ್ಧಾಪೂರ್ವಕವಾದ ಪ್ರಾರ್ಥನೆ; ಆಸಕ್ತಿಗೂಡಿದ ಮೊರೆ; ಕ್ರೈಸ್ತರ ಒಂದು ಸ್ತೋತ್ರ.

Óbsequies ಅಬ್‌ಸಿಕ್ವಿಸ್ (ನಾ., ಬ. ವ.) ಪ್ರೇತಸಂಸ್ಕಾರ; ಉತ್ತರ ಕ್ರಿಯೆ; ಮೃತಸಂಸ್ಕಾರ; ಅಂತ್ಯ ವಿಧಿ. **Obséquial** ಅಬ್‌ಸೀ—(ಗು.)

Obséquious ಅಬ್‌ಸೀಕ್ವಿಯಸ್ (ಗು.) (ಪ್ರಾಚೀ. ಪ್ರ.) ಕರ್ತವ್ಯಪರ. ಅತಿ ವಿಧೇಯ; ಗುಲಾಮನಂತೆ, ದಾಸಾನುದಾಸನಂತೆ, ವರ್ತಿಸುವ; ಹಲ್ಲುಗಿರಿಯುವ; ಅತ್ಯನುಸರಣೆಯ. **Obséquiously** (ಕ್ರಿ. ವಿ.); **Obséquiousness** (ನಾ.)

Obsérvance, Obsérvatory, etc. **Observe** ನೋಡಿ.

Obsérve ಅಬ್ಜರ್ವ್ (ಕ್ರಿ.) (ಕಾಯಿದೆ, ಆಜ್ಞೆ, ನಿಯಮಿತ ಕಾಲ, ಕಾರ್ಯ ಕ್ರಮ, ತತ್ತ್ವ, ಮತಕ್ರಿಯೆ, ವಾರ್ಷಿಕ, ಮೊ. ನ್ನು) ನಡೆಸಿಕೊಂಡು ಬರು, ಆಚರಿಸು, ಅನುಸರಿಸು, ಪಾಲಿಸು (O. silence ಮೌನವನ್ನಾಚರಿಸು). ದೃಷ್ಟಿಯಿಟ್ಟು ನೋಡು; ಲಕ್ಷ್ಯವಿಡು; (ಸೂಕ್ಷ್ಮರೀತಿಯಲ್ಲಿ) ಗಮನಿಸು; ಲಕ್ಷಿಸು; ಗಮನಕ್ಕೆ ಬರು [The observed of all observers ಗಮನಿಸುವವರೆಲ್ಲರ ಗಮನಕ್ಕೂ ಗುರಿಯಾದವನು (ಯಾದದ್ದು)]. ಪರೀಕ್ಷಾ ಪ್ರಯೋಗದ ಸಹಾಯವಿಲ್ಲದೆ ಹಾಗೆಯೇ ಪ್ರಕೃತಿ ಗೋಚರಗಳನ್ನು ಪರೀಕ್ಷಿಸಿ ಗುರುತುಮಾಡಿಕೊ; ಗಮನದಲ್ಲಿಟ್ಟುಕೊ; (ಮು., ಟೀಕೆ ಯಾಗಿ) ಅಭಿಪ್ರಾಯ ಹೇಳು; (ಒಂದರ ವಿಷಯದಲ್ಲಿ) ಟೀಕೆ ಮಾಡು (*On* ಉಪ. ಜೊತೆ). **Obsérvable** (ಗು.); **Obsérver** (ನಾ.) (ಮು., ಆಸಕ್ತಿಪಡೆದಿರುವ) ಪ್ರೇಕ್ಷಕ; ಶತ್ರುಸ್ಥಾನ, ಮೊ. ನ್ನು ಹಾರಾಟದಲ್ಲಿ ಗಮನಿಸಿ ಗುರುತುಮಾಡಿಕೊಳ್ಳಲು ವಿಮಾನ ನಡಸುವವ ನೊಡನೆ ಫಲಕ ವಿಮಾನದಲ್ಲಿ ಹೋಗುವವನು. (O. ವೃತ್ತಪತ್ರಿಕೆಯ ಹೆಸರಾಗಿ). **Obsérvingly** (ಕ್ರಿ. ವಿ.); **Obsérvance** —ವನ್ಸ್ (ನಾ.) ಕಾಯಿದೆ, ಕರ್ತವ್ಯ, ಸಂಪ್ರದಾಯ, ಮತಸಂಸ್ಕಾರ, ಮೊ. ನ್ನು ಆಚರಣೆಯಲ್ಲಿಟ್ಟುಕೊಳ್ಳುವುದು, ಆಚರಿಸುವುದು; ಆಚರಣೆ; ಪಾಲನೆ; ಅನುಷ್ಠಾನ (*Of* ಉಪ. ಜೊತೆ ಸಹ); ಮತಪ್ರಕ್ರಿಯೆ; ಸಂಪ್ರದಾಯಾಚರಣೆ; (ಮತ) ಕರ್ಮಾಚರಣೆ; ಒಂದು ಮತ ಪಂಥದ ನಿಯಮ, ಆಚಾರ, ವಿಧಿ. (ಪ್ರಾಚೀ. ಪ್ರ.) ಗೌರವ, ಮನ್ನಣೆ, —ಸಲ್ಲಿಸುವುದು. **Obsérvancy** (ನಾ.); **Obsérvant** (ಗು., ನಾ.) ಗಮನವಿಟ್ಟು ಆಚರಿಸುವ, ನಡಸುವ, ನೋಡುವ; ಲಕ್ಷ್ಯವಿಟ್ಟು, ಶ್ರದ್ಧೆಯಿಂದ, ಗಮನಿಸುವ; ಜಾಗರೂಕ. (ನಾ.) ಕಟ್ಟುನಿಟ್ಟಾದ ನಿಯಮವನ್ನು ಪಾಲಿಸುವ ಫ್ರಾನ್ಸಿಸ್ಕನ್ ಪಂಥದ ಒಂದು ಶಾಖೆಯ ಸದಸ್ಯ. **Obsérvantly** (ಕ್ರಿ. ವಿ.); **Obsertvátion** ಅಬ್ಜರ್‌ವೇಷನ್ (ನಾ.) ಗಮನವಿಟ್ಟು ನೋಡುವುದು, ನೋಡಲ್ಪಡುವುದು; ಅವಲೋಕನ; ಪರಿಶೀಲನ; ಗಮನಿಸುವ ಶಕ್ತಿ; ಅಭಿಪ್ರಾಯೋಕ್ತಿ. [Post, attitude, of o. ಒಂದು ಸ್ಥಾನದಿಂದ ನೋಡುವುದಕ್ಕೆ ಅನುಕೂಲವಾದ ನೆಲೆ, ಭಂಗಿ. O. car (ಮು., ಅಮೆ. ಸಂ.) ಸುತ್ತಲಿನ ದೃಶ್ಯಗಳನ್ನು ನೋಡುವುದಕ್ಕೆ ಅನುಕೂಲಿಸುವಂತೆ ರಚಿಸಿದ ರೈಲುಬಂಡಿ]. (ಸೈನ್ಯ) ಶತ್ರುಗಳ ದುರ್ಗ, ನೆಲೆ, ಚಲನವಲನ— ಇವುಗಳ ನಿರೀಕ್ಷಣೆಯಲ್ಲಿರುವುದು [Army of o. ಇಂಥ ನಿರೀಕ್ಷಣ ಸೈನ್ಯ (ದಳ). O. post (ಸಂಕ್ಷಿಪ್ತ: O. Pip). (ಅಸಂ.) ಫಿರಂಗಿ ಹೊಡೆತದ ಪರಿಣಾಮವನ್ನು ನಿರೀಕ್ಷಿಸಲು ನಿಲ್ಲುವ ನೆಲೆ]. ಪ್ರಕೃತಿಯಲ್ಲಿ ಸಂಭವಿಸುವ ಗೋಚರ ವಿಷಯಗಳ ಕಾರಣ ಕಾರ್ಯಗಳು ಅಥವಾ ಪರಸ್ಪರ ಸಂಬಂಧ—ಇವುಗಳ ವಿಷಯದಲ್ಲಿ ನಿಷ್ಕರ್ಷೆಯಾದ ಸಮೀಕ್ಷೆ ಮತ್ತು ಲಕ್ಷ್ಯ: ಪ್ರಕೃತಿ ಸಮೀಕ್ಷೆ (Experiment ಪದ ದೊಡನೆ ಹೋಲಿಸಿ). ಅಕ್ಷಾಂಶವನ್ನಾಗಲಿ ರೇಖಾಂಶವನ್ನಾಗಲಿ ಕಂಡುಹಿಡಿಯುವುದಕ್ಕಾಗಿ ಸೂರ್ಯನ ಅಥವಾ ಬೇರೆ ಆಕಾಶಸ್ಥ ಕಾಯದ ಕೋನೋನ್ನತಿಯನ್ನು ಪರಿಗಣಿಸುವುದು. (ಮು., ಟೀಕಾತ್ಮಕ ವಾದ) ಅಭಿಪ್ರಾಯ, ಹೇಳಿಕೆ. **Observátional** (ಗು.); **Observátionally** (ಕ್ರಿ. ವಿ.); **Obsérvatory** ಅಬ್ಜರ್ವಟರಿ (ನಾ.) ಪ್ರಕೃತಿಗೋಚರಗಳನ್ನು (ಮು., ಖಗೋಳ ದೃಶ್ಯಗಳನ್ನು) ಪರೀಕ್ಷಿಸಲು ಕಟ್ಟಿರುವ ಕಟ್ಟಡ: ಸಮೀಕ್ಷಾ ಮಂದಿರ.

Obséss ಅಬ್ಸೆಸ್ (ಕ್ರಿ. ಸಕ.) (ದೆವ್ವ, ಭ್ರಾಂತಿ, ಒಂದೇ ವಿಷಯದ ಗೀಳು) ಬೆನ್ನುಹತ್ತಿರು, ಎಡೆಬಿಡದೆ ಹಿಡಿದಿರು, ಕಾಡು, ಪೀಡಿಸು; ಮನಸ್ಸನ್ನು ಆಕ್ರಮಿಸು, ತುಂಬಿರು (-ed *by*, *with*). **Obséssion** (ನಾ.)

Obsídian ಅಬ್ಸಿಡಿಯನ್ (ನಾ.) (ಖನಿಜ ಶಾಸ್ತ್ರ) ಸೀಸೆಯ ಗಾಜನ್ನು ಹೋಲುವ ಕಪ್ಪಾದ, ಗಾಜಿನಂಥ (ರಚನೆಯ), ಶಿಲಾರಸ ಅಥವಾ ಜ್ವಾಲಾಮುಖಿಯ ಶಿಲೆ: ಕಾಚ ಶಿಲೆ.

Obsoléscent, etc. **Obsolete** ನೋಡಿ.

Óbsolete ಆಬ್ಸೊಲೀಟ್ (ಗು., ನಾ.) ಬಳಕೆಯಲ್ಲಿಲ್ಲದ; ಪ್ರಯೋಗ ವಳಿದ; ರೂಢಿ ತಪ್ಪಿದ; ತ್ಯಜಿಸಿಬಿಟ್ಟ; ಹಳತಾಗಿಹೋದ; (ಪ್ರಯೋಗ) ಲುಪ್ತ. (ಜೀ. ವಿ.) ಹಿಂದಿನ ಹಂತಗಳಲ್ಲಿ ಇದ್ದುದಕ್ಕಿಂತ, ಅಥವಾ ಅದೇ ಕುಲದ ಇತರ ಪ್ರಾಣಿಗಳಲ್ಲಿ ಇರುವುದಕ್ಕಿಂತ, ಕಡಮೆ ವಿಕಸನ ಹೊಂದಿರುವ; (ಪ್ರವರ್ಧನದೆ) ಮೂಲಸ್ಥಿತಿಯಲ್ಲೇ ಇರುವ. (ನಾ.) ಬಳಕೆ ತಪ್ಪಿದ್ದು (ಮು., ಪದ ಅಥವಾ ಪದಸಮುಚ್ಚಯ); ಹಳೆಯ ಕಂದಾಚಾರದವನು. **Óbsoleteness** (ನಾ.); **Óbsoletism** (ನಾ.) ರೂಢಿಯಳಿದದ್ದು (ಮು., ಪದ ಅಥವಾ ಪದಸಮುಚ್ಚಯ); =Obsoleteness. **Obsoléscent** —ಲೆ— (ಗು.) ಬಳಕೆ ತಪ್ಪುತ್ತಿರುವ; ಲುಪ್ತವಾಗುತ್ತಿರುವ; ಪ್ರಯೋಗವಳಿಯುತ್ತಿರುವ; ಹಿಂದೆಬಿದ್ದು ಹೋಗುತ್ತಿರುವ. (ಜೀ. ವಿ.) (ಹಿಂದೆ ಪೂರ್ಣ ವಿಕಾಸ ಹೊಂದಿದ್ದ ಅಥವಾ ಸ್ಫುಟವಾಗಿದ್ದ ಅಂಗದ ವಿಷಯದಲ್ಲಿ) ಕ್ರಮೇಣ ಅದೃಶ್ಯವಾಗುತ್ತಿರುವ, ಲುಪ್ತವಾಗುತ್ತಿರುವ. **Obsoléscence** (ನಾ.)

Óbstacle ಅಬ್‌ಸ್ಟಕ್‌ಲ್ (ನಾ.) ಅಡ್ಡಿ; ಅಡಚಣೆ; ತಡೆ; ಎಡರು. O.-race ಸ್ವಾಭಾವಿಕವಾಗಿರುವ ಅಥವಾ ಕೃತಕವಾದ ತಡೆಗಳನ್ನು ದಾಟಿ ಕೊಂಡು ಓಡಬೇಕಾದ ಜೂಜೋಟ: ತಡೆಯೋಟ.

Obstétric(al) ಅಬ್‌ಸ್ಟೆಟ್ರಿಕ್, —ಕಲ್ (ಗು.) ಸೂಲಗಿತ್ತಿ ವಿದ್ಯೆಯ; ಹೆರಿಗೆ ಮತ್ತು ಅದರ ಪೂರ್ವಾಪರಗಳನ್ನೊಳಕೊಂಡ ವೈದ್ಯಶಾಸ್ತ್ರ ಭಾಗದ: ಪ್ರಸವ ಶಾಸ್ತ್ರದ. **Obstétrics** (ನಾ.) —ವಿದ್ಯೆ, ಶಾಸ್ತ್ರ. **Obstetrícian** ಅಬ್‌ಸ್ಟೆಟ್ರಿಷನ್ (ನಾ.) —ವಿದ್ಯಾ ಚತುರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Óbstinate ಆಬ್‌ಸ್ಟಿನೆಟ್ (ಗು.) ತನ್ನ ಮಾರ್ಗವನ್ನೇ ಹಿಡಿಯುವುದರಲ್ಲಿ ಅಗ್ರಹವುಳ್ಳ; ಹಟದ; ಹಟಮಾರಿ(ತನದ); ಮೊಂಡ(ತನದ); ಬಗ್ಗದ; ಜಗ್ಗದ; ತನ್ನಿಚ್ಛೆಯ(ಂತೆಯೇ ನಡೆಯುವ); ಪಟ್ಟು ಬಿಡದ. **Óbstinacy** (ನಾ.); **Óbstinately** (ಕ್ರಿ. ವಿ.)

Obstréperous ಅಬ್‌ಸ್ಟ್ರೆಪೆರಸ್ (ಗು.) ಗದ್ದಲ ಮಾಡುವ; (ಗಟ್ಟಿಯಾಗಿ) ಕೂಗಾಡುವ; ದೊಂಬಿ ಮಾಡುವ; ಗೊಂದಲವೆದ್ದು—ಹತೋಟಿ ಮೀರಿರುವ, ಅಧಿಕಾರಿಗಳನ್ನು ಪ್ರತಿಭಟಿಸುವ. **Obstréperously** (ಕ್ರಿ. ವಿ.); **Obstréperousness** (ನಾ.)

Obstrúct ಅಬ್‌ಸ್ಟ್ರಕ್ಟ್ (ಕ್ರಿ.) ತಡೆ; ತಡೆಯೊಡ್ಡು; ಅಡ್ಡಗಟ್ಟು; ಅಡಚಣೆಗಳನ್ನು ತಂದೊಡ್ಡು; ದುರ್ಗಮ ಮಾಡು; ಹಾದುಹೋಗಲು ಕಷ್ಟವಾದುದನ್ನಾಗಿ ಮಾಡು; (ಅಭಿವೃದ್ಧಿಯನ್ನು) ನಿಲ್ಲಿಸು, ತಡೆಗಟ್ಟು; ನಿರೋಧಿಸು (ಮು., ಶಾಸನ ಸಭೆಯಲ್ಲಿ ಬರಿಯ ಮಾತಿನಿಂದ ಕಾಲಹರಣ ಮಾಡಿ ಕಾರ್ಯಕ್ಕೆ ಅಡಚಣೆಯೊಡ್ಡು). **Obstrúction** (ನಾ.) (ಕ್ರಿಯಾರ್ಥಗಳಲ್ಲಿ); ಅಡ್ಡಿ; ತಡೆ; ಅಡಚಣೆ (O.-guard ಕಂಬಿಗಳ ಮೇಲಿರಬಹುದಾದ ತಡೆಯನ್ನು ದೂಡಿಹಾಕಲು ರೈಲ್ವೆ ಎಂಜಿನಿನ ಮುಂಭಾಗಕ್ಕೆ ಸೇರಿಸಿರುವ ಅಡ್ಡ ಸಲಾಕಿ). **Obstrúctionism** (ನಾ.); **Obstrúctionist** (ನಾ.); **Obstrúctive** (ಗು., ನಾ.) ತಡೆಯೊಡ್ಡುವ; ಅಡ್ಡಿಪಡಿಸುವ; ಪ್ರತಿಬಂಧಕ; —ಉದ್ದೇಶದ. (ನಾ.) (ಮು., ಶಾಸನ ಸಭೆಯಲ್ಲಿ) ತಡೆಯೊಡ್ಡುವವನು. **Obstrúctively** (ಕ್ರಿ. ವಿ.); **Obstrúctiveness** (ನಾ.)

Obtaín ಅಬ್ಟೇನ್ (ಕ್ರಿ.) ಪಡೆ; ಹೊಂದು; ಸಂಪಾದಿಸು; ದೊರಕಿಸಿಕೊ. ಪ್ರಚಲಿತವಾಗಿರು; ಸಲ್ಲು, ಬಳಕೆಯಲ್ಲಿರು; ಪ್ರಚಾರದಲ್ಲಿರು; ಸ್ಥಾಪಿತವಾಗಿರು. **Obtaínment** (ನಾ.) (ವಿರ. ಪ್ರ.) ಹೊಂದುವುದು. **Obtaínable** (ಗು.)

Obtécted ಅಬ್‌ಟೆಕ್‌ಟೆಡ್ (ಗು.) (ಕೀಟ ಶಾಸ್ತ್ರ) (ಕೆಲವು ಕೀಟಗಳ ಪೊರೆಹುಳುವಿನ ಸ್ಥಿತಿಯ ವಿಷಯದಲ್ಲಿ) ಸುತ್ತುವರಿದಿರುವ ಹೊರ ಕೋಶದ ಮೂಲಕ ಹುಳುವಿನ ಅವಯವ, ಮೊ. ಗಳು ಮಸುಕು ಮಸುಕಾಗಿ ಕಾಣಬರುತ್ತಿರುವ.

Obtést ಅಬ್‌ಟೆಸ್ಟ್ (ಕ್ರಿ.) (ಪ್ರಾಚೀ. ಪ್ರ.) ಆಣೆಯಿಟ್ಟು ವಿಧಿಸು, ಕೇಳು; ದೈನ್ಯದಿಂದ ಕೇಳಿಕೊ; (ದೇವರನ್ನು) ಸಾಕ್ಷಿ ಕೋರು. **Obtestátion** (ನಾ.)

Obtrúde ಅಬ್‌ಟ್ರೂಡ್ (ಕ್ರಿ. ಸಕ.) ತಲೆಹಾಕಿಕೊಂಡು ಬಾ; (ಒಬ್ಬನ ಮೇಲೆ, ಒಬ್ಬನ ಗಮನಕ್ಕೆ ಬರುವಂತೆ) ಒತ್ತಿನುಗ್ಗು; ಎದ್ದುಕಾಣು (*Upon, on* ಉಪ. ದೊಡನೆ). **Obtrúsion** —ಷನ್ (ನಾ.); **Obtrúsive** —ಸಿವ್ (ಗು.); **Obtrúsively** (ಕ್ರಿ. ವಿ.); **Obtrúsiveness** (ನಾ.)

Obtrúncate ಅಬ್‌ಟ್ರಂಕೇಟ್ (ಕ್ರಿ. ಸಕ.) ತಲೆಯನ್ನು ಅಥವಾ ಮೇಲ್ತುದಿಯನ್ನು ಕತ್ತರಿಸಿ ಹಾಕು.

Obtúnd ಅಬ್‌ಟಂಡ್ (ಕ್ರಿ. ಸಕ.) (ವೈ. ಶಾ.) (ಯಾವುದಾದರೂ ಇಂದ್ರಿಯವನ್ನು ಅಥವಾ ಮನಸ್ಸನ್ನು) ಜಡ ಮಾಡು, ಮಂದ ಮಾಡು; ವೇದನವಿಲ್ಲದಂತೆ ಮಾಡು.

Óburate ಅಬ್‌ಟ್ಯುರೇಟ್ (ಕ್ರಿ. ಸಕ.) (ದೇಹದ್ವಾರ, ಫಿರಂಗಿಯ ಅಥವಾ ಬಂದೂಕಿನ ಹಿಂಭಾಗದ ಬಾಯಿ—ಇವೇ ಮೊ. ನ್ನು) ಮುಚ್ಚಿಬಿಡು, ಬಂದು ಮಾಡು. **Obturátion** (ನಾ.); **Óburator** (ನಾ.)

Obtúse ಅಬ್‌ಟ್ಯೂಸ್ (ಗು.) ಮೊಂಡಾದ; ಚೂಪಿಲ್ಲದ; ಹರಿತವಲ್ಲದ; ಅತೀಕ್ಷ್ಣ. (ಜ್ಯಾ.) (ಕೋನದ ವಿಷಯದಲ್ಲಿ) ಒಂದು ಸಮ ಕೋನಕ್ಕಿಂತ ದೊಡ್ಡದಾಗಿಯೂ ಎರಡಕ್ಕಿಂತ ಕಡಮೆಯಾಗಿಯೂ ಇರುವ: ಅಧಿಕ ಕೋನದ. (ನೋವು, ಇಂದ್ರಿಯಗಳು, ಮೊ. ಗಳ ವಿಷಯದಲ್ಲಿ) ಮಂದ; ತೀಕ್ಷ್ಣವಲ್ಲದ; ಮಂದ ಬುದ್ಧಿಯ; ಮಂದಗ್ರಾಹಿ. **Obtúsely** (ಕ್ರಿ. ವಿ.); **Obtúseness** (ನಾ.); **Obtúsi-** (ಸ. ಪೂ. ಪ.)

Obvérse ಅಬ್‌ವರ್ಸ್ (ಗು., ನಾ.) ತುದಿಗಿಂತ ಬುಡ ಅಥವಾ ಸಂಧಿಸ್ಥಾನ ಕಿರಿದಾಗಿರುವ; ಬುಡಕಿರಿದಾದ; ಆಯತಾಗ್ರ (ಮು., ಪ್ರಕೃತಿ ಚರಿತ್ರೆಯಲ್ಲಿ). ಮತ್ತೊಂದರೊಡನೆ ಸೇರಿ ಪೂರ್ಣವಾಗುವ. (ನಾ.) ನಾಣ್ಯದಲ್ಲಿ ಅಥವಾ ಪದಕದಲ್ಲಿ ತಲೆಯ ಚಿತ್ರ ಅಥವಾ ಪ್ರಧಾನ ಚಿತ್ರವಿರುವ ಭಾಗ; ಮೇಲ್ಮುಖ (Reverse ಪದದೊಡನೆ ಹೋಲಿಸಿ). ತೋರಿಕೆಗಾಗಿರುವ (ಒಂದರ) ಮುಖ (ಭಾಗ); ಮುಂಭಾಗ. ಒಂದು ಸಂಗತಿಯ ಅಥವಾ ಸತ್ಯದ ಮತ್ತೊಂದು ಮುಖ ಅಥವಾ ಪಕ್ಷ. **Obvérsely** (ಕ್ರಿ. ವಿ.); **Obvért** ಅಬ್‌ವರ್ಟ್ (ಕ್ರಿ. ಸಕ.). (ತರ್ಕ) ಒಂದು ಪ್ರತಿಜ್ಞೆಯನ್ನು (ಅದರ ಅಸ್ತಿ ರೂಪ ಅಥವಾ ನಾಸ್ತಿ ರೂಪವನ್ನು ಬದಲಾಯಿಸುವುದರಿಂದ) ಅದಕ್ಕೆ ವಿರುದ್ಧ ರೂಪದ ಕರ್ಮ ಭಾಗವುಳ್ಳ ಪ್ರತಿಜ್ಞೆಯನ್ನಾಗಿ ಮಾರ್ಪಡಿಸು: ಪ್ರತಿರೂಪ ಪ್ರತಿಜ್ಞೆ(ಯಾಗಿ) ಮಾಡು; ಪ್ರತಿವರ್ತಿಸು. **Obvérsion** (ನಾ.) ಪ್ರತಿ ವರ್ತನೆ.

Obvért. **Obverse** ನೋಡಿ.

Óbviate ಅಬ್‌ವಿಯೇಟ್ (ಕ್ರಿ. ಸಕ.) (ಅಪಾಯ, ಅನನುಕೂಲ, ಮೊ. ನ್ನು) ತೊಲಗಿಸಿಬಿಡು, ನಿವೃತ್ತಿಮಾಡು, (ಉಪಾಯದಿಂದ) ನಿವಾರಿಸು, ನಿಷ್ಪರಿಣಾಮ ಮಾಡು.

Óbvious ಅಬ್‌ವಿಯಸ್ (ಗು.) (ಕಣ್ಣಿಗೆ ಅಥವಾ ಮನಸ್ಸಿಗೆ) ಸ್ಪಷ್ಟವಾದ; ಸ್ವತಸ್ಸಿದ್ಧ; ಸ್ಫುಟವಾಗಿ ಗೋಚರಿಸುವ; ಕಂಡಂತೆ ಇರುವ; ವಿಶದವಾದ; ನಿಸ್ಸಂಶಯವಾದ. **Óbviously** (ಕ್ರಿ. ವಿ.); **Óbviousness** (ನಾ.)

Occásion ಅಕೇಷನ್ (ನಾ., ಕ್ರಿ. ಸಕ.) (ಒಂದು ಕಾರ್ಯ ಮಾಡಲು) ತಕ್ಕ ಸಮಯ; ಸಂದರ್ಭ; ಅವಕಾಶ [Take o. (ಮಾಡಲು) ಅವಕಾಶವನ್ನು ಉಪಯೋಗಿಸಿಕೊ. Take o. by the forelock (Fore- ಸ. ಪೂ. ಪ. ದಲ್ಲ Forelock[1] ನೋಡಿ)]. ಕಾರಣ; ಆಧಾರ; ಪ್ರೇರಣೆ; ಆವಶ್ಯಕತೆ [There is no o. to be angry ಕೋಪಿಸಿಕೊಳ್ಳಲು ಕಾರಣವಿಲ್ಲ. Avoid all occasions of quarrel ಜಗಳ ಹುಟ್ಟುವ ಎಲ್ಲ ಸಂದರ್ಭಗಳನ್ನೂ ತಪ್ಪಿಸಿಕೊ. King has no o. for services of— (—ನ) ಸೇವೆ ದೊರೆಗೆ ಆವಶ್ಯಕವಿಲ್ಲ (ಅಧಿಕಾರಿಯನ್ನು ಕೆಲಸದಿಂದ ತೆಗೆದುಬಿಡುವ ಒಕ್ಕಣೆ)]. ಗೌಣ, ಪ್ರಾಸಂಗಿಕ, ನೇರವಾದ, —ಕಾರಣ; ಸಂದರ್ಭ (The cause of revolution may be obscure while its o. is obvious). (ಬ. ವ. ದಲ್ಲಿ) ವಿಚಾರಗಳು; ಕೆಲಸ ಕಾರ್ಯಗಳು; ವ್ಯವಹಾರಗಳು (ಮು., Go about one's lawful occasions ಎಂಬಲ್ಲಿ). ವಿಶೇಷ ಸಂದರ್ಭದಿಂದ ಸೂಚಿತವಾದ ಒಂದು ಗೊತ್ತಾದ ಸಮಯ [On the o. of his marriage. Celebrate the o. Rise to the o. ಸಂದರ್ಭಕ್ಕೆ ತಕ್ಕ ಯೋಗ್ಯತೆಯನ್ನು ತೋರಿಸು. Up(on) o. ಅಗತ್ಯಬಿದ್ದಾಗಲೆಲ್ಲ; ಆಗಾಗ]. (ಕ್ರಿ.) ಅವಕಾಶ ಕೊಡು; ಕಾರಣವಾಗು; (ಮು., ಸಂದರ್ಭಾನುಸಾರವಾಗಿ) ಆಗುವಂತೆ ಮಾಡು. **Occásional** (ಗು.) ವಿಶೇಷ ಸಂದರ್ಭದಿಂದ(ಗಳಿಂದ) ಹುಟ್ಟುವ; —ಕ್ಕಾಗಿ (ಗಳಿಗಾಗಿ) ಮಾಡಿದ, ಉದ್ದೇಶಿಸಿದ; —ದಲ್ಲಿ (ಗಳಲ್ಲಿ) ನಡೆಯುವ; ಸಮಯೋಪಯುಕ್ತ; ಸಂದರ್ಭ ಬಂದಂತೆ, ಒಂದು ಗೊತ್ತಿಲ್ಲದೆ,—ಸಂಭವಿಸುವ; ಆಗಾಗ ಸಂಭವಿಸುವ, ಬರುವ; ಒಂದು ಕ್ರಮವಿಲ್ಲದ; ಪದೇ ಪದೇ ಬರದ. O. cause ಗೌಣ ಕಾರಣ, ಸಂದರ್ಭ; ಹೊರಕ್ಕೆ ತೋರುವ ಕಾರಣ. O. licence ಗೊತ್ತಾದ ಕಾಲಗಳಲ್ಲಿ, ಸ್ಥಳಗಳಲ್ಲಿ, ಮಾತ್ರ ಮದ್ಯವನ್ನು ಮಾರಲು ಕೊಟ್ಟ ಅಪ್ಪಣೆಚೀಟಿ. **Occasionálity** —ನ್ಯಾ— (ನಾ.); **Occásionally** (ಕ್ರಿ. ವಿ.); **Occásionalism** (ನಾ.) ಭೌತ ವಸ್ತುವೂ ಮನಸ್ಸೂ ಅಥವಾ ದೇಹವೂ ಆತ್ಮವೂ ಪರಸ್ಪರ ಪರಿಣಾಮವನ್ನುಂಟುಮಾಡಲಾರವೆಂದೂ ಅವುಗಳ ಸಂಮೇಳನವು ಪ್ರತಿ ಸಂದರ್ಭದಲ್ಲೂ ಭಗವಂತನ ಮೂಲಕವಾಗಿಯೇ ನಡೆಯುವುದೆಂದೂ ಹೇಳುವ 'ಕಾರ್ಟೀಸಿಯನ್' ತತ್ತ್ವಜ್ಞರ ಮತ. **Occásionalist** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Óccident ಆಕ್ಸಿಡೆಂಟ್ (ನಾ.) (ಕಾವ್ಯ, ಅಲಂ.) ಪಶ್ಚಿಮ (ದಿಕ್ಕು, ದೇಶ) ; ಪಶ್ಚಿಮ ಯೂರೋಪು; ಯೂರೋಪು ; ಯೂರೋಪು ಮತ್ತು ಅಮೆರಿಕ; ಅಮೆರಿಕ ; (ಪೌರಸ್ತ್ಯ ನಾಗರಿಕತೆಗೆ ಪ್ರತಿಯಾಗಿ) ಯೂರೋಪಿನ ನಾಗರಿಕತೆ. **Occidéntal** (ಗು.) ; **Occidéntally** (ಕ್ರಿ. ವಿ.) ; **Occidéntalism** (ನಾ.) ; **Occidéntalist** (ನಾ.) ; **Occidéntalize** (ಕ್ರಿ. ಸಕ.)

Ócciput ಆಕ್ಸಿಪಟ್ (ನಾ.) ತಲೆಯ ಹಿಂಭಾಗ ; ಹೆಡ ತಲೆ. **Occípital** —ಪಿಟಲ್ (ಗು.) ; **Occípito-** (ಸ. ಪೂ. ಪ.)

Occlúde ಅ(ಅ)ಕ್ಲೂಡ್ (ಕ್ರಿ. ಸಕ.) (ವಿಜ್ಞಾನ) (ಸೂಕ್ಷ್ಮ ರಂಧ್ರಗಳು, ತೂತುಗಳು, ವೊ. ನ್ನು) ಮುಚ್ಚಿಬಿಡು, ತಡೆದುಬಿಡು ; ಸಂದಿಲ್ಲದಂತೆ ಮಾಡು. (ರ. ವಿ.) (ಅನಿಲಗಳನ್ನು) ಹೀರಿಕೊಂಡು ಸಂಗ್ರಹಿಸು. **Occlúsion** (ನಾ.) ; **Occlúsor** —ಸರ್ (ನಾ.)

Occúlt ಅಕಲ್ಟ್ (ಗು., ಕ್ರಿ.) ಗುಟ್ಟಾಗಿಟ್ಟಿರುವ; ರಹಸ್ಯವಾದ ; ಗೋಪ್ಯವಾದ ; ನಿಗೂಢ ; ಗಹನ ; ಸಾಮಾನ್ಯ ತಿಳಿವಿಗೆ ಮೀರಿದ ; ಅತೀಂದ್ರಿಯ ; ಆಧ್ಯಾತ್ಮಿಕ ; ಪ್ರಕೃತ್ಯತೀತ ; ಐಂದ್ರಜಾಲಿಕ ; ಮಾಯಾವಿಕ ; ಯಾಕ್ಷಿಣಿಕ ; ಮಾಂತ್ರಿಕ. (ಕ್ರಿ.) (ಸಾ., ಖಗೋಳ ವಿಜ್ಞಾನದಲ್ಲಿ : ಮರೆಮಾಡುವ ಕಾಯವು ಮರೆಯಾಗುವ ಕಾಯಕ್ಕಿಂತಲೂ ಬಹಳ ದೊಡ್ಡದಾಗಿ ತೋರುವ ಸಂದರ್ಭದಲ್ಲಿ ಮಾತ್ರ) ಮುಂಭಾಗದಲ್ಲಿ ಚಲಿಸಿ ದೃಷ್ಟಿಗೋಚರವಾಗದಂತೆ ಮಾಡು, ಮರೆಮಾಡು, ಆಚ್ಛಾದಿಸು, ಗ್ರಹಣಗೊಳಿಸು. Occulting light (ಸಮುದ್ರದಲ್ಲಿಯ ದೀಪಗೃಹಗಳಲ್ಲಿ) ಕ್ರಮವಾದ ಅಂತರಗಳಲ್ಲಿ, ಕಾಣದಂತೆ ಮರೆಯಾಗುವ ಬೆಳಕು. **Occultátion** (ನಾ.) ; **Occúltism** (ನಾ.) ; **Occúltist** (ನಾ.) ; **Occúltly** (ಕ್ರಿ. ವಿ.) ; **Occúltness** (ನಾ.)

Óccupant, Occupátion, etc. **Occupy** ನೋಡಿ.

Óccupy ಆಕ್ಯುಪೈ (ಕ್ರಿ. ಸಕ.) (ದೇಶ, ಪ್ರಾಂತ, ಪಟ್ಟಣ, ಯುದ್ಧತಂತ್ರದ ಕಾರ್ಯಕ್ಕನುಕೂಲವಾದ ಸ್ಥಾನ—ಇವನ್ನು) ಸೈನಿಕ ಶಕ್ತಿಯಿಂದ ಅಥವಾ ಅಲ್ಲಿ ನೆಲಸುವುದರಿಂದ, —ಆಕ್ರಮಿಸು, ಸ್ವಾಧೀನಕ್ಕೆ ತೆಗೆದುಕೊ. (ಅಧಿಕಾರ) ವಹಿಸಿರು. (ಒಂದು ಸ್ಥಳದಲ್ಲಿ) ಇರು, ವಾಸವಾಗಿರು, ಒಕ್ಕಲಿರು, ಬಾಡಿಗೆಗೆ ಇರು ; ಒಂದು ಸ್ಥಾನದಲ್ಲಿರು ; (ಸ್ಥಳ, ಕಾಲ—ಇವನ್ನು) ಆಕ್ರಮಿಸು, ವ್ಯಾಪಿಸು, ಹಿಡಿ [ಮು., ಕರ್ಮಣಿಯಲ್ಲಿ ಮತ್ತು ಸ್ವಾರ್ಥಕವಾಗಿ : Occupied with *or* in (—ಲ್ಲಿ) ತೊಡಗಿ. O. oneself with *or* in]. **Óccupant** ಆಕ್ಯುಪಂಟ್ (ನಾ.) ಆಸ್ತಿಯ (ಮು., ಜಮೀನಿನ) ಹಿಡುವಳಿದಾರ, ಅನುಭವದಾರ ; (ಒಂದು ಸ್ಥಳದಲ್ಲಿ) ಇರುವವನು, ವಾಸಮಾಡುವವನು, ಒಕ್ಕಲಿರುವವನು. ಯಾರ ಹಕ್ಕುದಾರಿಯೂ ಇಲ್ಲದುದನ್ನು ವಶಪಡಿಸಿಕೊಂಡು ತನ್ನ ಹಕ್ಕನ್ನು ಸ್ಥಾಪಿಸುವವನು ; ಆಕ್ರಮಣಕಾರ. **Óccupancy** (ನಾ.) ; **Occupátion** (ನಾ.) (ಕ್ರಿಯಾರ್ಥಗಳಲ್ಲಿ). (Army of o. ವಶಪಡಿಸಿಕೊಂಡಿರುವ ಪ್ರಾಂತದಲ್ಲಿ ಕ್ರಮವಾದ ಸರ್ಕಾರ ಏರ್ಪಡುವವರೆಗೂ ಅಲ್ಲಿ ಬಿಟ್ಟಿರುವ ಸೈನ್ಯ: ಆಕ್ರಮಣ ಸೈನ್ಯ). ಸ್ವಾಧೀನಾನುಭವ. (ಒಬ್ಬನ) (ಕಾಲ ಕಳೆಯಲು) ಕೆಲಸ ; ಹವ್ಯಾಸ ; ಉದ್ಯೋಗ ; ವೃತ್ತಿ ; ಜೀವನೋಪಾಯ ; ಕಸಬು [O. franchise ಹಿಡುವಳಿದಾರನಾಗಿರುವುದರಿಂದ 'ವೋಟು' ಕೊಡುವ ಹಕ್ಕು. O. bridge, road, etc. (ಜಮೀನಿನ ಹಿಡುವಳಿದಾರರ ಸ್ವಂತ ಉಪಯೋಗಕ್ಕಾಗಿರುವ) ಖಾಸಗಿ ಸೇತುವೆ, ರಸ್ತೆ, ವೊ. ದು]. **Occupátional** (ಗು.) (ಮು., ಒಬ್ಬನ) ಉದ್ಯೋಗಕ್ಕೆ ಅನುಗತವಾದ ; ಆ ಉದ್ಯೋಗದಿಂದ ಹುಟ್ಟುವ (O. disease). **Óccupier** —ಪೈಅರ್ (ನಾ.) (ಮು., ಜಮೀನನ್ನು ಅಥವಾ ಮನೆಯನ್ನು ತಾತ್ಕಾಲಿಕವಾಗಿ ಅಥವಾ ಮತ್ತೊಬ್ಬನಿಗೆ ಅಧೀನನಾಗಿ) ಅನುಭವಿಸುತ್ತಿರುವವನು ; ಅನುಭವದಾರ ; ಒಕ್ಕಲು.

Occúr ಅಕರ್ (ಕ್ರಿ. ಅಕ.) (ಒಂದು ಸ್ಥಳದಲ್ಲಿ, ಸ್ಥಿತಿಯಲ್ಲಿ) ಇರು, ಸಿಕ್ಕು ; ದೊರೆ ; ದೊರಕು ; ಮನಸ್ಸಿಗೆ ಬರು, ಹೊಳೆ (ಮು., It occurs or occurred to me that—ಎಂಬಲ್ಲಿ). ಆಗು ; ನಡೆ ; ಸಂಭವಿಸು. **Occúrrence** (ನಾ.) ದೊರೆಯುವುದು ; ಆಗುವುದು ; ಸಂಭವಿಸುವುದು (Is of frequent o.). ಘಟನೆ ; ನಡವಳಿಕೆ ; ಸಂಭವ.

Ócean ಓಷ(ಷ್)ನ್ (ನಾ.) (ಭೂಗೋಳದ ಭೂಭಾಗವನ್ನು ಸುತ್ತುವರಿದಿರುವ) ಮಹಾ ಸಮುದ್ರ ; ಭೂಗೋಳ ಶಾಸ್ತ್ರಜ್ಞರು ಸಾಮಾನ್ಯವಾಗಿ ವಿಭಾಗಿಸಿರುವ ಪಂಚ ಸಮುದ್ರಗಳಲ್ಲೊಂದು : ಸಾಗರ [(Atlantic, Pacific, Indian, Arctic, & Antarctic, Oceans). German O. = North Sea (North ನೋಡಿ)]. ಕಡಲು ; ಸಮುದ್ರ. (ಯಾವುದಾದರೊಂದರ) ಅಪಾರ ವಿಸ್ತಾರ, ಮೊತ್ತ (ಸಾ., Oceans of—). O. greyhound ವೇಗಸಂಚಾರಿಯಾದ (ಮು., ಪ್ರಯಾಣಿಕರ) ಹಡಗು. O. lane (ಜಹಜುಗಳ ಸಂಚಾರಕ್ಕೆ ಗೊತ್ತುಮಾಡಿರುವ) ಸಾಗರ ಮಾರ್ಗ. O. tramp ಒಂದೇ ವ್ಯಾಪಾರಕ್ಕೆ ಕಟ್ಟುಬದ್ಧಿಲ್ಲದ, ಸಾಮಾನು ಸಾಗಿಸುವ ಜಹಜು. **Oceanógraphy** ಓಷಿಯ(ಓಷ)ನಾಗ್ರಫಿ (ನಾ.) (ಆಕಾರ, ಪ್ರಾಕೃತಿಕ ಲಕ್ಷಣಗಳು, ವೊ. ನ್ನು ವಿವರಿಸುವ) ಸಾಗರ ವಿವರಣೆ. **Oceanográphic(al)** —ನೊಗ್ರಾಫಿಕ್(ಕಲ್) — (ಗು.). **Óceanward(s)** (ಕ್ರಿ. ವಿ.). **Oceánia** ಓಷಿ(ಸಿ)ಏನಿಯ (ನಾ.) ಪೆಸಿಫಿಕ್ ಸಾಗರದ ಮತ್ತು ಅದರ ನೆರೆಯ ಸಮುದ್ರಗಳಲ್ಲಿಯ ದ್ವೀಪಗಳು : ಓಷಿಯೇನಿಯ. **Oceánian** (ಗು., ನಾ.) ಓಷಿಯೇನಿಯದ (ನಿವಾಸಿ). **Oceánic** —ಆ್ಯನಿಕ್ (ಗು.) ಸಾಗರದ(ಂಥ) ; ಓಷಿಯೇನಿಯದ.

Oceánia, etc. **Ocean** ನೋಡಿ.

Océanid ಒಸೀಯನಿಡ್ (ನಾ. ; ಬ. ವ. -s, -anides ಒಸಿಆ್ಯನಿಡೀಸ್) (ಗ್ರೀಕ್ ಪುರಾಣ) ಸಾಗರದ ಸ್ತ್ರೀ ದೇವತೆ.

Ócellate. **Ocellus** ನೋಡಿ.

Océllus (L) ಒಸೆಲಸ್ (ನಾ. ; ಬ. ವ. -lli —ಲೈ) ಕೀಟಗಳ ಸರಳವಾದ ಕಣ್ಣು(ಗಳಲ್ಲೊಂದು) (ಸಂಯುಕ್ತ ನೇತ್ರವಲ್ಲ) ; ಸಂಯುಕ್ತ ನೇತ್ರದ ಒಂದು ಮುಖ. ಬೇರೆಯ ಬಣ್ಣದ ವಲಯವು ಸುತ್ತುವರಿದಿರುವ ಒಂದು ಬಣ್ಣದ ಕಲೆ. **Océllate** ಒಸೆಲೆಟ್, **Ócellate** ಆಸೆಲೇಟ್ (ಗು.); **Ócellated** —ಲೇ— (ಗು.)

Ochlócracy ಆಕ್ಲಾಕ್ರಸಿ (ನಾ.) ದೊಂಬಿ ಜನದ ಪ್ರಭುತ್ವ. **Óchlocrat** ಆಕ್ಲೊಕ್ರ್ಯಾಟ್ (ನಾ.) ; **Ochlocrátic** (ಗು.)

Óchre ಓಕರ್ (ನಾ.) ನಸು ಹಳದಿಗೂ ಕಂದು ಬಣ್ಣಕ್ಕೂ ಮಧ್ಯಸ್ಥವಾದ ಹಲವು ಬಣ್ಣಗಳುಳ್ಳ, ವರ್ಣದ್ರವ್ಯವಾಗಿ ಉಪಯೋಗಿಸುವ, ಜೇಡಿ ಮತ್ತು ಜಲ ಸಂಯುಕ್ತ ಅಯಸ್ಸಂದೂರಗಳಿಂದ ಕೂಡಿದ ಒಂದು ಮಣ್ಣು ಜಾತಿ : ಕಾವಿ ಮಣ್ಣು. ಮಾಸಲು ಕಂದು ಛಾಯೆಯ ಹಳದಿ. **Óchreish** (ಗು.) ; **Ochráceous** (ಗು.) = **Óchreous** (ಗು.) = **Óchrous** (ಗು.) = **Óchry** (ಗು.) ; **Óchreo-** (ಸ. ಪೂ. ಪ.)

O'clock. **Clock**[1] ನೋಡಿ.

Octa- (ಸ. ಪೂ. ಪ.) ಎಂಟು—. **Octámerous** ಆಕ್‌ಟ್ಯಾಮರಸ್ (ಗು.) (ಸ. ವಿ., ಪ್ರಾ. ವಿ.) ಎಂಟೆಂಟರ ತಂಡಗಳಾಗಿ ಅಳವಡಿಸಿರುವ ಅಂಗಗಳು ಅಥವಾ ಭಾಗಗಳು ಉಳ್ಳ.

Óctachord ಆಕ್ಟಕಾರ್ಡ್ (ಗು., ನಾ.) ಎಂಟು ತಂತಿಯ (ವಾದ್ಯ) ; ಎಂಟು ಸ್ವರಗಳ ಶ್ರೇಣಿ : ಸ್ವರಾಷ್ಟಕ(ದ). **Octachórdal** (ಗು.)

Óctad ಆಕ್ಟ್ಯಾಡ್ (ನಾ.) ಎಂಟರ ತಂಡ, ಗುಂಪು ; ಅಷ್ಟಕ. (ರ. ವಿ.) ಸಂಯೋಗ ಶಕ್ತಿ ಎಂಟು ಮಾನವಿರುವ ಮೂಲ ಧಾತು ಅಥವಾ ಮೂಲಧಾತು ಕಲ್ಪ : ಅಷ್ಟ ಸಂಯೋಗಿ.

Óctagon ಆಕ್ಟಗನ್ (ನಾ., ಗು.) ಎಂಟು ಕೋನಗಳೂ ಬಾಹುಗಳೂ ಉಳ್ಳ (ಸಮತಲಾಕೃತಿ) ; ಅಷ್ಟಕೋನಾಕೃತಿಯ (ವಸ್ತು, ಕಟ್ಟಡ). **Octágonal** ಆಕ್ಟ್ಯಾಗೊ— (ಗು.) ; **Octágonally** (ಕ್ರಿ. ವಿ.)

Octahédron ಆಕ್ಟಹೀ(ಹೆ)ಡ್ರನ್ (ನಾ.) ಎಂಟು ಸಮತಲದ ಮುಖಗಳಿಂದ (ಸಾ., ಎಂಟು ತ್ರಿಕೋನಗಳಿಂದ) ಆದ ಘನಾಕೃತಿ : ಅಷ್ಟಮುಖಾಕೃತಿ (Regular o. ಎಂಟು ಸಮಬಾಹು ತ್ರಿಕೋನಗಳಿಂದಾದ ಅಷ್ಟಮುಖ : ನಿಯತಾಷ್ಟಮುಖ) ; ನಿಯತಾಷ್ಟಮುಖಾಕೃತಿಯ ವಸ್ತು (ಮು., ಸ್ಫಟಿಕ, ಹರಳು). **Octahédral** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Óctant ಅಕ್ಟಂಟ್ (ಜ್ಯಾ.) ವೃತ್ತಪರಿಧಿಯ $\frac{1}{8}$ ಭಾಗ; ವೃತ್ತಪರಿಧಿಯ ಅಷ್ಟಮಾಂಶ; ಎರಡು ತ್ರಿಜ್ಯಗಳು, ಅವನ್ನು ಕೂಡಿಸುವ ಚಾಪ— ಈ ಮಧ್ಯೆ ಅಡಕವಾಗಿರುವ $\frac{1}{8}$ ವೃತ್ತಭಾಗ; ಮೂರು ಸಮತಲಗಳು ಒಂದು ಬಿಂದುವಿನಲ್ಲಿ (ಸಾ., ಒಂದು ಗೋಲವನ್ನು ಕೇಂದ್ರದಲ್ಲಿ, ಪರಸ್ಪರ ಸಮಕೋನಗಳಲ್ಲಿರುವಂತೆ) ಒಂದನ್ನೊಂದು ಛೇದಿಸಿದಾಗ ಆಗುವ ೮ ಭಾಗಗಳಲ್ಲೊಂದು; ಅಷ್ಟಮಾಂಶ. (ಖ. ವಿ.) ಒಂದು ನಿರ್ದಿಷ್ಟ ಬಿಂದುವಿಗೆ ೪೫° ದೂರದಲ್ಲಿರುವ ಒಂದು ಗ್ರಹದ ದೃಷ್ಟಿಗೋಚರ ಪಥದಲ್ಲಿಯ ಬಿಂದು (ಮು., ಸೂರ್ಯ ಚಂದ್ರರ ಸಮಾಗಮ ಬಿಂದುವಿನಿಂದ ಅಥವಾ ಪ್ರತಿಯೋಗ ಬಿಂದುವಿನಿಂದ ೪೫° ಅಂತರದಲ್ಲಿ ಚಂದ್ರನಿರುವ ಬಿಂದು); (ಖ. ವಿ. ದಲ್ಲಿಯೂ ಸಮುದ್ರ ಪ್ರಯಾಣದಲ್ಲಿಯೂ ಕೋನಗಳನ್ನು ಅಳೆಯುವುದಕ್ಕೆ ಉಪಯೋಗಿಸುವ, ಅಳತೆ ಗುರುತಿಸಿರುವ) ವೃತ್ತಾಷ್ಟಮಾಂಶ ಆಕಾರದ ಒಂದು ಕೋನ ಮಾಪಕ ಸಲಕರಣೆ.

Óctarchy ಅಕ್ಟಾರ್ಕಿ (ನಾ.) ಎಂಟು ಸಣ್ಣ ರಾಜ್ಯಗಳ ಸಮಷ್ಟಿ, ಸಮುದಾಯ; ಎಂಟು ಮಂದಿ ದೊರೆಗಳ ಆಳಿಕೆ: ಅಷ್ಟ ಪ್ರಭುತ್ವ (ಕೆಲವು ಚರಿತ್ರೆಕಾರರು Heptarchy ಎಂಬುದಕ್ಕೆ ಬದಲಾಗಿ ಉಪಯೋಗಿಸುತ್ತಾರೆ)

Óctastyle ಅಕ್ಟಸ್ಟೈಲ್ (ಗು., ನಾ.) ಮುಂಭಾಗದಲ್ಲಾಗಲಿ ತುದಿಯಲ್ಲಾಗಲಿ ಎಂಟು ಕಂಬಗಳಿರುವ (ಕಟ್ಟಡ ಅಥವಾ ಮೊಗಸಾಲೆ): ಅಷ್ಟ ಸ್ತಂಭಿ.

Óctateuch ಅಕ್ಟಟ್ಯೂಕ್ (ನಾ.) (ಬೈಬಲಿನ) ಹಳೆಯ ಒಡಂಬಡಿಕೆಯ ಮೊದಲಿನ ಎಂಟು ಪ್ರಕರಣಗಳು, ಕಾಂಡಗಳು.

Óctave ಅಕ್ಟೇ(ಲ)ವ್, ಅಕ್ಟಿವ್ (ನಾ.) ಒಂದು ಹಬ್ಬವಾದ (ಮೇಲೆ ಬರುವ) ಅದೇ ವಾರ ದಿನ (ಎಂಟನೆಯ ದಿನ); ಹಬ್ಬದ ದಿನವೂ ಮುಂದಿನ ಅದೇ ವಾರ ದಿನವೂ ಸೇರಿ ಆದ ಎಂಟು ದಿನಗಳು. (ಛಂ.) ಎಂಟು ಸಾಲಿನ, ಚರಣಗಳ,—ಪದ್ಯ,. (ಸಂ.) (ಒಂದು ಸ್ವರದ ಮೇಲಿನ ಅಥವಾ ಕೆಳಗಿನ) ಎಂಟನೆಯ ಸ್ವರ (ಎಂದರೆ, ಎರಡರಷ್ಟು ಅಥವಾ ಅರ್ಧದಷ್ಟು ಕಂಪನ ಪ್ರಮಾಣವುಳ್ಳ ಸ್ವರ); ಅಷ್ಟಮ ಸ್ವರ (Second o. ಅಷ್ಟಮ ಸ್ವರದ ಅಷ್ಟಮ ಸ್ವರ. Third o. ಅಷ್ಟಮ ಸ್ವರದ ಅಷ್ಟಮದ ಅಷ್ಟಮ ಸ್ವರ); ಒಂದು ಸ್ವರಕ್ಕೂ ಅದರ ಅಷ್ಟಮ ಸ್ವರಕ್ಕೂ ಇರುವ ಅಂತರ; ಈ ಅಂತರದಲ್ಲಿ ಅಳವಟ್ಟಿರುವ ಸ್ವರ ಶ್ರೇಣಿ: ಸ್ವರಾಷ್ಟಕ, ಸ್ವರ ಗ್ರಾಮ; ಒಂದು ಸ್ವರದ ಮತ್ತು ಅದರ ಅಷ್ಟಮ ಸ್ವರದ ಕೂಡು ನುಡಿತ. ಎಂಟರ ತಂಡ: ಅಷ್ಟಕ. ಖಡ್ಗ ವಿದ್ಯೆಯಲ್ಲಿ ಒಂದು ವರಿಸೆ. $13\frac{1}{8}$ ಗ್ಯಾಲನ್ ಹಿಡಿಯುವ ದ್ರಾಕ್ಷಾ ಮದ್ಯದ ಪೀಪಾಯಿ. O.-coupler ಆರ್ಗನ್ ವಾದ್ಯದ ಕೀಲಕೈಗಳಲ್ಲಿ ಒಂದನ್ನು ಅದರ ಅಷ್ಟಮದೊಡನೆ ಸೇರಿಸುವ ಒಂದು ಸಲಕರಣೆ. O.-flute = Piccolo; ಸಾಮಾನ್ಯ ರೀತಿಯದಕ್ಕಿಂತ ಒಂದು ಅಷ್ಟಕದಷ್ಟು ಮೇಲ್ಮಟ್ಟದ ಧ್ವನಿ ಕೊಡುವ ಆರ್ಗನ್‌ಕೊಳಲು.

Octávo ಅಕ್ಟೇವೊ (ನಾ.) (ಸಂಕ್ಷಿಪ್ತ: 8vo, oct.) ದೊಡ್ಡ ಕಾಗದದ ಹಾಳೆಯನ್ನು ಮೂರು ಸಲ (ಅಥವಾ ೮ ಎಲೆಗಳಾಗುವಂತೆ) ಮಡಿಸುವುದರಿಂದಾದ ಪುಟ(ದ ಅಥವಾ ಪುಸ್ತಕದ ಆಕಾರ): ಅಷ್ಟಪತ್ರ; ಅಷ್ಟಪತ್ರಾಕಾರದ ಪುಸ್ತಕ.

Octávus ಅಕ್ಟೇವಸ್ (ಗು.) (ಅ ಹೆಸರಿನಲ್ಲಿ) ಎಂಟನೆಯ (ಉದಾ., James o.)

Octénnial ಅಕ್ಟೆನಿಯಲ್ (ಗು.) ಎಂಟು ವರ್ಷ ಇರುವ, ಬಾಳುವ; ಎಂಟು ವರ್ಷಕ್ಕೊಂದು ಸಲ ಬರುವ: ಅಷ್ಟ ವಾರ್ಷಿಕ.

Octét(te) ಅಕ್ಟೆಟ್ (ನಾ.) ಎಂಟು ಜನ ಗಾಯಕರು ಅಥವಾ ವಾದಕರು (ಹಾಡಲು, ನುಡಿಸಲು, ಅನುಕೂಲವಾಗುವಂತೆ ರಚಿಸಿದ ಕೃತಿ). ಎಂಟು ಸಾಲುಗಳ, ಪಾದಗಳ, ತಂಡ (ಮು., Sonnet ಪದ್ಯದ ಮೊದಲನೆಯ ಎಂಟು ಪಾದಗಳು): ಅಷ್ಟಕ.

Octíllion ಅಕ್ಟಿಲ್ಯನ್ (ನಾ.) ಹತ್ತು ಲಕ್ಷದ ಎಂಟನೆಯ ಘಾತ(ದ ಸಂಖ್ಯೆ): (ಎಂದರೆ, ೧ರ ಮುಂದೆ ೪೮ ಸೊನ್ನೆಗಳನ್ನಿಟ್ಟರೆ ಆಗುವ ಸಂಖ್ಯೆ). **Octíllionth** (ಗು., ನಾ.)

Octingenténary ಅಕ್ಟಿಂಜೆಂಟಿ(ಲ)ನರಿ (ನಾ.) ೮೦೦ನೆಯ ವಾರ್ಷಿಕೋತ್ಸವ, ಸ್ಮಾರಕೋತ್ಸವ: ಅಷ್ಟ ಶತಮಾನೋತ್ಸವ.

Octóber ಅಕ್ಟೋಬರ್ (ನಾ.) ಇಂಗ್ಲಿಷ್ ವರ್ಷದ ಹತ್ತನೆಯ ತಿಂಗಳು: ಅಕ್ಟೋಬರು.

Octodécimo ಅಕ್ಟೊಡೆಸಿಮೊ (ನಾ.) (ಸಂಕ್ಷಿಪ್ತ: 18mo) ಒಂದು ದೊಡ್ಡ ಹಾಳೆಯನ್ನು ೧೮ ಎಲೆಗಳಾಗುವಂತೆ ಮಡಿಸಿದರೆ ಆಗುವ ಪುಟ(ದ ಆಕಾರ); ಈ ಆಕಾರದ ಪುಸ್ತಕ: ಅಷ್ಟಾದಶ ಪತ್ರಾಕಾರ(ದ ಪುಸ್ತಕ)

Octogenárian ಅಕ್ಟೊಜಿನೇರಿಯನ್ (ಗು., ನಾ.) ೮೦ ವರ್ಷದ, ೮೦ರ ಮೇಲೆ ೯೦ರ ಒಳಗಿನ, ವಯಸ್ಸಿನ(ವನು); —ವಯಸ್ಸಿನವನ.

Óctonal ಅಕ್ಟೊನಲ್ (ಗು.) ಎಂಟರ; (ನಾಣ್ಯ ಪದ್ಧತಿ, ಸಂಖ್ಯಾ ಪದ್ಧತಿ, ಮೊ.) ಎಂಟೆಂಟಾಗಿ ಏರುತ್ತ ಹೋಗುವ. (ಗಣಿತ) ಎಂಟನ್ನು ಆಧಾರ ಸಂಖ್ಯೆಯಾಗುಳ್ಳ: ಅಷ್ಟ ಮಾನ.

Octonárian ಅಕ್ಟೊನೇರಿಯನ್ (ಗು., ನಾ.) (ಛಂ.) ಎಂಟು ಗಣದ (ಸಾಲು); ಅಷ್ಟ ಗಣದ (ಪಾದ). **Óctonary** ಅಕ್ಟೊನರಿ (ಗು., ನಾ.) = Octonal. ಎಂಟರ ತಂಡ; ಅಷ್ಟಕ; ಎಂಟು ಸಾಲಿನ ಪದ್ಯ; ಅಷ್ಟ ಪದಿ (ಮು., ಕ್ರೈಸ್ತ ಸ್ತೋತ್ರ ಗೀತದ ೧೧೯ನೆಯ ಸ್ತೋತ್ರದಲ್ಲಿ ಉಪಯೋಗಿಸಿರುವದು)

Óctopus ಅಕ್ಟೊಪಸ್, **Octópus** —ಕ್ಟೋ— (ನಾ.) ಬಾಯ ಸುತ್ತಲೂ ಹೀರುನಳಿಕೆಯ, ಎಂಟು ತೋಳುಗಳಿರುವ ಒಂದು ಶೀರ್ಷಪಾದಿ ಮೃದ್ವಂಗಿ (ಜಾತಿ): ಅಷ್ಟಪಾದಿ. ಸುವ್ಯವಸ್ಥಿತವಾದ, ನಾನಾ ದಿಕ್ಕುಗಳಲ್ಲಿ ಹರಡಿರುವ, ಸಾ., ಕೇಡುಂಟುಮಾಡುವ, —ಅಧಿಕಾರ, ಪ್ರಭಾವ.

Octosyllábic ಅಕ್ಟೊಸಿಲ್ಯಾಬಿಕ್ (ಗು., ನಾ.) ಎಂಟು ಉಚ್ಚಾರಾಂಶಗಳುಳ್ಳ (ಪಾದ, ಚರಣ). **Octosýllable** (ನಾ., ಗು.) = Octosyllabic; ಎಂಟು ಉಚ್ಚಾರಾಂಶಗಳುಳ್ಳ ಪದ.

Óctroi ಅಕ್‌ಟ್ರ್ವಾ, ಅಕ್ಟ್ರಾಯ್ (ನಾ.) (ಕೆಲವು ದೇಶಗಳಲ್ಲಿ) ಪಟ್ಟಣದೊಳಕ್ಕೆ ಬರುವ ಸಾಮಾನುಗಳಮೇಲೆ ಹಾಕುವ ಸುಂಕ: ಅಕ್ಟ್ರಾಯಿ; ಸುಂಕದ ಕಟ್ಟೆ; ಉಕ್ಕಡ; ಸುಂಕದ ಅಧಿಕಾರಿಗಳು.

Óctuple ಅಕ್‌ಟ್ಯು(ಟ್ಯೂ)ಪ್‌ಲ್ (ಗು., ನಾ., ಕ್ರಿ. ಸಕ.) ಎಂಟು ಮಡಿ. (ನಾ.) ಎಂಟರಿಂದ ಗುಣಿಸಿಬಂದ ಲಬ್ಧ. (ಕ್ರಿ.) ಎಂಟರಿಂದ ಗುಣಿಸು.

Ócular ಅಕ್ಯುಲರ್ (ಗು., ನಾ.) ಕಣ್ಣಿನ; ಕಣ್ಣುಗಳ; ಕಣ್ಣುಗಳಿಗೆ ಉದ್ದೇಶಿಸಿದ; ಕಣ್ಣಿನಿಂದಾದ; ದೃಷ್ಟಿ—. ಚಾಕ್ಷುಷ; ಪ್ರತ್ಯಕ್ಷ (O. demonstration ಕಣ್ಣಿಂದ ಕಂಡ ನಿದರ್ಶನ: ಪ್ರತ್ಯಕ್ಷ ಪ್ರಮಾಣ). (ನಾ.) (ದೃಷ್ಟಿಸಹಾಯಕ ಸಲಕರಣೆಯ, ಎಂದರೆ, ಸೂಕ್ಷ್ಮದರ್ಶಕ, ಮೊ. ಗಳ) ಕಣ್ಣಲೆನ್ಸು ತಂಡ. **Ócularly** (ಕ್ರಿ. ವಿ.); **Ócularist** (ನಾ.) ಕೃತಕ ನೇತ್ರಗಳನ್ನು ಮಾಡುವವನು. **Óculist** (ನಾ.) ನೇತ್ರ ವೈದ್ಯ; ನೇತ್ರ ಚಿಕಿತ್ಸಕ. **Oculístic** (ಗು.); **Óculo-** ಅಕ್ಯುಲೊ— (ಸ. ಪೂ. ಪ.) (ಉದಾ., O.-nasal ಕಣ್ಣು ಮೂಗುಗಳ)

Óculate(d) ಅಕ್ಯುಲೆಟ್, —ಲೇಟೆಡ್ (ಗು.) = Ocellate (Ocellus ನೋಡಿ)

Od ಆ(ಓ)ಡ್ (ನಾ.) ಪ್ರಕೃತಿಯಲ್ಲೆಲ್ಲ ವ್ಯಾಪಿಸಿ ಕಾಂತತೆ, ಸ್ಫಟಿಕೀಭವನ, ರಾಸಾಯನಿಕ ಕ್ರಿಯೆ, ಸುಪ್ತ್ಯಾವಾಹನೆ, ಮೊ. ಗಳಿಗೆ ಕಾರಣವಾಗಿರುವುದೆಂದು ಭಾವಿಸುವ ಅಥವಾ ಊಹಿಸುವ, —ಒಂದು ಶಕ್ತಿ ವಿಶೇಷ. **Ódic** (ಗು.)

Ódalisque ಓಡಲಿಸ್ಕ್ (ನಾ.) ಪೌರಸ್ತ್ಯ ದೇಶಗಳಲ್ಲಿ, ಗುಲಾಮಳು ಅಥವಾ ಉಪಪತ್ನಿ (ಮು., ತುರ್ಕಿಯ ಸುಲ್ತಾನನ ಜನಾನಾದಲ್ಲಿ)

Odd ಆಡ್ (ಗು.) ಸಮಾನ ಸಂಖ್ಯೆಯ ಎರಡು ತಂಡಗಳಾಗಿ ಭಾಗಿಸಿದ ಮೇಲೆ ಉಳಿದ: ಬೆಸ [The o. man ಬೆಸ ಸಂಖ್ಯೆಯ ಸದಸ್ಯರಿರುವ ಸಮಿತಿ, ಮೊ. ಗಳಲ್ಲಿ ನಿರ್ಧಾರಕ ಅಭಿಮತ ಕೊಡುವವನು. The o. trick (ವ್ಹಿಸ್ಟ್ ಆಟದಲ್ಲಿ) ಎರಡು ಪಕ್ಷಗಳೂ ಆರಾರು ಪಟ್ಟನ್ನು ಹಿಡಿದಮೇಲೆ ಉಳಿದ ಹದಿಮೂರನೆಯದು. O. man out ನಾಣ್ಯ ಹಾರಿಸಿ ಮೂವರಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಬ್ಬನನ್ನು ಮಾತ್ರ ಆಯ್ದುಕೊಳ್ಳುವ ಒಂದು ಉಪಾಯ]. (ಸಂಖ್ಯೆಯ ವಿಷಯದಲ್ಲಿ) ಎರಡರಿಂದ ನಿಶ್ಶೇಷವಾಗಿ ಭಾಗವಾಗದ: ಬೆಸ; ವಿಷಮ (O. & even ಸರಿ ಬೆಸ ಎಂಬ ಒಂದು ಆಟ). (ಕ್ರಮಸಂಖ್ಯೆ ಹಾಕಿರುವ ವಸ್ತುಗಳ ಅಥವಾ ವ್ಯಕ್ತಿಗಳ ವಿಷಯದಲ್ಲಿ) ಬೆಸ ಸಂಖ್ಯೆಯ. (ಸಂಖ್ಯೆ, ಮೊತ್ತ, ತೂಕ, ಮೊ. ಗಳ ಸೂಚ್ಯ ಪದಕ್ಕೆ ಸೇರಿಸಿದಾಗ) (—ಕ್ಕಿಂತ) ಸ್ವಲ್ಪ ಹೆಚ್ಚಿನ; ಮತ್ತು ಸ್ವಲ್ಪ ಚಿಲ್ಲರೆ [Forty o. ೪೦ರಿಂದ ೫೦ರೊಳಗೆ, ನಲವತ್ತೂ ಚಿಲ್ಲರೆ. Sixty thousand o. ಅರವತ್ತು ಸಾವಿರ (ಮತ್ತು) ಚಿಲ್ಲರೆ (ಎಂದರೆ, ಕೆಲವು ಶತಕಗಳು, ದಶಕಗಳು ಅಥವಾ ಏಕಗಳು). Sixty o. thousand ೬೦ ಸಾವಿರದಿಂದ ೭೦ ಸಾವಿರದೊಳಗೆ. Twelve pounds o. ಹನ್ನೆರಡು ಪೌಂಡು ಮತ್ತು ಸ್ವಲ್ಪ ಚಿಲ್ಲರೆ (ಕೆಲವು ಷಿಲಿಂಗು, ಪೆನಿ). Here is a sovereign; pay the bill & keep the o. money. There are 1006; what shall we do with the o. six?]. ಹೆಚ್ಚಿಗೆಯ; ಆಕಸ್ಮಿಕವಾಗಿ ಬಂದ; ಅನಿಯತ; ಲೆಕ್ಕಕ್ಕೆ ಸೇರಿದಮೇಲೆ ಉಳಿದ; ಸಂಬಂಧವಿಲ್ಲದ; ಕೆಲಸವಿಲ್ಲದಾಗಿನ; ಬಿಡುವಾದಾಗಿನ. [Picks up o. jobs. In some o. corner. Do it at o. moments. O. numbers, volumes (ನಿಯತಕಾಲಿಕ ಪತ್ರಿಕೆ, ಮೊ. ಗಳಲ್ಲಿ ಅಸಮಗ್ರ ಸಂಪುಟಕ್ಕೆ, —ಸಂಪುಟ ತಂಡಕ್ಕೆ, ಸೇರಿದ) ಬಿಡಿ ಸಂಚಿಕೆ, ಸಂಪುಟ]. ಅಸಾಮಾನ್ಯದ; ಅಚ್ಚರಿಯ; ವಿಲಕ್ಷಣದ; ಲೋಕೋತ್ತರವಾದ; ವಕ್ರವಾದ. [Odd-come-short ಉಳಿದ ತುಂಡು; ಥಾನಿನಲ್ಲಿ ಉಳಿದ ಕೊನೆಯ ತುಂಡು; (ಕಡೆಯ) ಉಳಿಕೆ. (ಬ. ವ. ದಲ್ಲಿ) ಚೂರು ಪಾರುಗಳು. O.-come-shortly (ನಾ.) ಸಮೀಪದ ಯಾವುದೋ ಒಂದು ದಿನ (One of these o.-c.-shortlies ಈ ಸಮೀಪ ದಿನಗಳಲ್ಲೊಂದು Oddfellow ('ಫ್ರೀಮೇಸನ್' ಸಂಘದವರ ಮತಪ್ರಕ್ರಿಯೆಗಳನ್ನು ಅನುಕರಣ ಮಾಡುವ) Oddfellows ಎಂಬ ಮಿತ್ರಸಂಘದ ಸದಸ್ಯ]. **Óddish** (ಗು.); **Óddly** (ಕ್ರಿ. ವಿ.); **Óddness** (ನಾ.); **Óddity** (ನಾ.) ವಿಚಿತ್ರತೆ; ವಿಲಕ್ಷಣತೆ; ವೈಲಕ್ಷಣ್ಯ; ವಿಚಿತ್ರ ವ್ಯಕ್ತಿ; ವಿಲಕ್ಷಣ ವಸ್ತು; ಅಪೂರ್ವ ಘಟನೆ. **Óddments** (ನಾ., ಬ. ವ.) ಚೂರು ಪಾರುಗಳು. **Odds** ಆಡ್ಸ್ (ನಾ., ಬ. ವ.) ಹೆಚ್ಚುಕಡಮೆ [Make o. even ಹೆಚ್ಚುಕಡಮೆ ಇಲ್ಲದಂತೆ ಮಾಡು; ಸರಿಸಮ ಮಾಡು (ಇಲ್ಲಿ odds ಪದ ಏ. ವ.)]. ವ್ಯತ್ಯಾಸ [What's the o.? ಅದರಿಂದೇನು (ವ್ಯತ್ಯಾಸವಾಗುತ್ತದೆ)? ಅದರಿಂದೇನು ಬಾಧಕ?]; ಪ್ರತಿಕೂಲ; ವಿರೋಧ (Are at o. with fate ವಿಧಿಯೊಡನೆ ಹೋರಾಡುತ್ತಾರೆ; ಅದೃಷ್ಟ ಪ್ರತಿಕೂಲವಾಗಿದೆ). ಹೆಚ್ಚು ಸೌಕರ್ಯ, ಅನುಕೂಲ [The o. are in our favour (ಸಂದರ್ಭ) ನಮಗೆ ಹೆಚ್ಚು ಅನುಕೂಲವಾಗಿದೆ. Have fought against longer o. ಇದಕ್ಕಿಂತ ಹೆಚ್ಚು ಪ್ರತಿಕೂಲಗಳನ್ನು ಎದುರಿಸಿದ್ದೇನೆ, ನಿಭಾಯಿಸಿದ್ದೇನೆ]. ಶಕ್ತಿ ಕಡಮೆಯಾಗಿರುವ ಸ್ಪರ್ಧಿಗೆ ಇತರರೊಡನೆ ಸಮ ಮಾಡಲು ಕೊಡುವ ರಿಯಾಯಿತಿ [(Give, receive, o.). I lay, give, o. of three to one (ರಿಯಾಯಿತಿ ಕೊಡುವವನು ಹೇಳುವಾಗ) ಒಂದಕ್ಕೆ ಮೂರು ಒಡ್ಡುತ್ತೇನೆ, ಕೊಡುತ್ತೇನೆ. I take o. (ಅಂಥ ರಿಯಾಯಿತಿಯನ್ನು) ಅಂಗೀಕರಿಸುತ್ತೇನೆ. It is o. that (or but), he will do it; The o. are that he will do it ಅವನು ಮಾಡುವ ಸಂಭವವೇ ಹೆಚ್ಚು]. O. & ends ಉಳಿಕೆ ಪಳಿಕೆ; ಚಿಲ್ಲರೆ ಪಲ್ಲರೆ; ಚೂರು ಪಾರು.

Ode ಓಡ್ (ನಾ.) (ಆದಿ ಪ್ರ.) ಹಾಡುವುದಕ್ಕಾಗಿ ರಚಿಸಿದ ಪದ್ಯ (Choral o. ಗ್ರೀಕ್ ನಾಟಕ, ಮೊ. ಗಳ ಮೇಳಗಾನ); ಹಾಡು; ಗೀತ; (ಈಗ) ಪ್ರಾಸವಿರುವ (ಅಪೂರ್ವವಾಗಿ ಪ್ರಾಸವಿಲ್ಲದ), ಸಾ., ಪ್ರಶಂಸಾ ರೂಪವಾದ, ಉದಾತ್ತ ಶೈಲಿಯೂ ಉತ್ಸಾಹ ಭಾವವೂ ಉಳ್ಳ, ಅನೇಕ ವೇಳೆ ನಾನಾ ಬಗೆಯ ವೃತ್ತಗಳಿಂದ (ಛಂದಸ್ಸುಗಳಿಂದ) ಕೂಡಿದ, ಸಾ., ೫೦ ರಿಂದ ೨೦೦ ರ ವರೆಗೆ ಪಂಕ್ತಿಗಳುಳ್ಳ ಭಾವಗೀತೆ: ಪ್ರಗಾಥ.

Odéum ಒಡೀಯಂ (ನಾ.; ಬ. ವ. -s, -ea ಒಡೀಯ) (ಮು., ಪುರಾತನ ಗ್ರೀಕರ ಮತ್ತು ರೋಮನರ) ಸಂಗೀತ ಶಾಲೆ, ಗಾಯನ ಮಂದಿರ.

Ódic. **Od** ನೋಡಿ.

Ódious ಓಡಿಯಸ್ (ಗು.) ಅಸಹ್ಯವಾದ; ದ್ವೇಷಕರ; ಜುಗುಪ್ಸೆ ಹುಟ್ಟಿಸುವ. **Ódiously** (ಕ್ರಿ. ವಿ.); **Ódiousness** (ನಾ.); **Ódium** (ನಾ.) ದ್ವೇಷ; ವಿರೋಧ ಭಾವ; ಅಸಹ್ಯತೆ; ಜುಗುಪ್ಸೆ; ಹೇವರಿಕೆ (Exposed me to o. The o. of the transaction). O. theologicum ಮತಛಲವುಳ್ಳವರಲ್ಲಿ ಲೋಕಪ್ರಸಿದ್ಧವಾಗಿ ಕಂಡುಬರುವ ಕಠೋರ ದ್ವೇಷ: ಮತಛಲದ ನಿಷ್ಠುರ.

Odium. **Odious** ನೋಡಿ.

Odómeter = Hodometer.

Odóntoid ಒಡಾಂಟಾಯ್ಡ್ (ಗು.) (ಅಂ. ರ. ಶಾ., ಜೀ. ವಿ.) ಹಲ್ಲಿನ ಆಕಾರದ; ದಂತಾಕಾರದ; ಹಲ್ಲಿನಂಥ. O. process or peg ಕತ್ತಿನಲ್ಲಿಯ 'ಆಕ್ಸಿಸ್' ಎಂಬ ಕಶೇರುಕದ ಒಂದು ಮೂಳೆಯ ಗಟ್ಟಿ ಮುಂಭಾಗದ ಮಧ್ಯದಿಂದ ಎದ್ದಿರುವ ಹಲ್ಲಿನಂಥ ಗೂಟ (ಈ ಗೂಟದ ಸುತ್ತಲೂ ಆಕ್ಸಿಸ್ಸಿನ ಮೇಲಿರುವ ಕಶೇರುಕದ 'ಆ್ಯಟ್ಲಸ್' ಎಂಬ ಮೂಳೆಯು ತಲೆಯನ್ನು ಹೊತ್ತು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುತ್ತಲಾಗುತ್ತದೆ). **Odontólogy** (ನಾ.) ಹಲ್ಲುಗಳ ರಚನೆ, ಬೆಳವಣಿಗೆ, ವ್ಯಾಧಿ, ಮೊ. ನ್ನು ವಿವರಿಸುವ ಶಾಸ್ತ್ರ: ದಂತ ಶಾಸ್ತ್ರ.

Odoríferous. **Odour** ನೋಡಿ.

Ódour ಓಡರ್ (ನಾ.) (ಹಿತವಾದ ಅಥವಾ ಅಹಿತವಾದ) ವಾಸನೆ, ಕಂಪು; ಗಂಧ; ನಾತ [**Ódourless** (ಗು.)]. ಸುವಾಸನೆ; ಸುಗಂಧ; ಪರಿಮಳ; ನಲ್ಗಂಪು; (ಪ್ರಾಚೀ. ಪ್ರ.; ಸಾ., ಬ. ವ. ದಲ್ಲಿ) ಪರಿಮಳ ವಸ್ತು(ಗಳು); ಸುಗಂಧ ದ್ರವ್ಯ(ಗಳು). (ರೂಪ.) ವಾಸನೆ; ಸೆಲೆ; ಸುಳಿವು (No o. of intolerance attaches to it). (ಒಳ್ಳೆಯ, ಕೆಟ್ಟ) ಖ್ಯಾತಿ, ಹೆಸರು (Is in bad o. with the orthodoxy. O. of sanctity ಪವಿತ್ರತೆಗೆ ಖ್ಯಾತಿ, ಹೆಸರು). **Odoríferous** ಓಡೊರಿಫರಸ್ (ಗು.) (ಸಾ., ಹಿತವಾದ) ವಾಸನೆ ಸೂಸುವ; ಸುವಾಸನೆಯ; ಪರಿಮಳದ. **Odoríferously** (ಕ್ರಿ. ವಿ.); **Ódorous** ಓಡೊರಸ್ (ಗು.) (ಮು., ಕಾವ್ಯ) = Odoriferous. **Ódorously** (ಕ್ರಿ. ವಿ.)

Ódyl ಓ(ಅ)ಡಿಲ್ (ನಾ.) = Od.

Ódyssey ಆಡಿಸಿ (ನಾ.; ಬ. ವ. -eys —ಸಿಸ್) ಟ್ರಾಯ್ ಪಟ್ಟಣದ ಮುತ್ತಿಗೆಯಿಂದ ಹಿಂದಿರುಗಿದ ಒಡಸಿಯಸ್ ಅಥವಾ ಯುಲಿಸೀಸ್ ಎಂಬ ವೀರನ ಸಾಹಸಗಳನ್ನು ವರ್ಣಿಸುವ ಪುರಾತನ ಗ್ರೀಕ್ ಮಹಾ ಕಾವ್ಯ: 'ಆಡಿಸಿ'. ಈ ಕಾವ್ಯದ ೨೪ ಕಾಂಡಗಳಲ್ಲೊಂದು (In the fourth, etc. O.). (ರೂಪ.) ಅಲೆದಾಟಗಳ ಪರಂಪರೆ; ಸಾಹಸ ಕಾರ್ಯಗಳಿಂದ ಕೂಡಿದ ದೂರ ಸಂಚಾರ. (Iliad ನೋಡಿ)

Oécist ಈಸಿಸ್ಟ್ (ನಾ.) (ಮು., ಪ್ರಾಚೀನ ಗ್ರೀಕ್) ನೆಲಸುನಾಡಿನ ಸ್ಥಾಪಕ.

Oecólogy ಈಕಾಲೊಜಿ (ನಾ.) ಸಸ್ಯಗಳಿಗೂ ಪ್ರಾಣಿಗಳಿಗೂ ಅವುಗಳ ಸುತ್ತಲ ಸನ್ನಿವೇಶದೊಡನೆ ಇರುವ ಸಂಬಂಧವನ್ನೂ ಅವುಗಳ ಶೀಲ ಸ್ವಭಾವ, ಜೀವನ ರೀತಿ, ಮೊ. ನ್ನೂ ಕುರಿತ ಜೀವ ವಿಜ್ಞಾನದ ವಿಭಾಗ: ಜೀವಿ ಪರಿಸ್ಥಿತಿ ಶಾಸ್ತ್ರ.

Oecuménical ಈಕ್ಯುಮೆನಿಕಲ್ (ಗು.) ಸಮಸ್ತ ಕ್ರೈಸ್ತ ಪ್ರಪಂಚದ; —ಕ್ಕೆ ಸೇರಿದ; ವಿಶ್ವ ಕ್ರೈಸ್ತ. (ಆದಿ ಕಾಲದ ಮತ್ತು ಈಗಿನ ರೋ. ಕ್ಯಾ. ಮತೀಯರ ಸಾಮಾನ್ಯ ಮಂಡಲಗಳ ವಿಷಯದಲ್ಲಿ) ಸರ್ವ ಸಾಧಾರಣ, ಸಾರ್ವಲೌಕಿಕ, ಸಾರ್ವತ್ರಿಕ. ಪ್ರಪಂಚದಲ್ಲೆಲ್ಲ ಹರಡಿದ; ಲೋಕ ವ್ಯಾಪಿ. **Oecumenícity** (ನಾ.)

Oedéma ಇಡೀಮ (ನಾ.)(ವೈ. ಶಾ.; ಬ. ವ. ಇಲ್ಲ) ಅಂಗಾಂಶ, ಮೊ. ವು ಜಲರೂಪದ ರಸ ತುಂಬಿ ಊದಿಕೊಂಡಿರುವ ಸ್ಥಿತಿ; ಅಂಗ ಶೋಫ; ಊದು. **Oedemátic** (ಗು.); **Oedématose** (ಗು.) = **Oedématous** ಇಡೀ(ಡೆ)ಮಟಸ್ (ಗು.) ಅಂಗಶೋಫ ಸಂಬಂಧದ, ಸ್ವಭಾವದ; ಅಂಗಶೋಫ ವ್ಯಾಧಿಗೂಡಿದ. **Oedématously** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Oédipus ಈಡಿಪಸ್ (ನಾ.) ಸಮಸ್ಯೆಗಳನ್ನು, ತೊಡಕುಗಳನ್ನು, ಬಿಡಿಸುವವನು; ಸಮಸ್ಯಾ ಪರಿಹಾರಕ. O. complex (ಮ. ಶಾ.) 'ಫ್ರಾಯ್ಡ್' ಎಂಬ ಶಾಸ್ತ್ರಜ್ಞನ ಮತಾವಲಂಬಿಗಳಾದ ಮನೋವಿಶ್ಲೇಷಣ ಶಾಸ್ತ್ರಜ್ಞರ ಅಭಿಪ್ರಾಯದಂತೆ, ಭಿನ್ನ ಲಿಂಗದ ಜನ್ಮದಾತೃವಿನಲ್ಲಿ ಹೆಚ್ಚಾದ ಆದ್ಯ ಅನುರಾಗವೂ ಸಮಾನ ಲಿಂಗದ ಜನ್ಮದಾತೃವಿನಲ್ಲಿ ದ್ವೇಷವೂ ಮಗುವಿನ ಕೇವಲ ಬಾಲ್ಯದಲ್ಲಿಯೇ ಹುಟ್ಟುವ ಮನಃಪ್ರವೃತ್ತಿ (ಗಂಡುಮಕ್ಕಳಿಗೆ ಮಾತ್ರ ಅನ್ವಯಿಸುವಂತೆ ಕೆಲವು ವೇಳೆ ಭಾವನೆ). (Sphinx ಎಂಬ ರಾಕ್ಷಸಿಯ ಸಮಸ್ಯೆಯನ್ನು ಬಿಡಿಸಿದ ಮತ್ತು ಅಜ್ಞಾನ ವಶದಿಂದ ತನ್ನ ತಾಯಿಯನ್ನೇ ಮದುವೆಯಾದ 'ಈಡಿಪಸ್' ಎಂಬ ಗ್ರೀಕ್ ದೊರೆಯ ಹೆಸರಿನಿಂದ)

O'er ಓಅರ್, ಓರ್ (ಕ್ರಿ. ವಿ., ಉಪ.) (ಕಾವ್ಯ) =Over.

Oesóphagus ಈಸಾಫಗಸ್ (ನಾ.; ಬ. ವ. -gi —ಜೈ, -guses) ಬಾಯಿಂದ ಜಠರಕ್ಕೆ ಹೋಗುವ ನಾಳ: ಅನ್ನನಾಳ. **Oesophágeal** ಈಸೊಫ್ಯಾಜಿಯಲ್ (ಗು.) ಅನ್ನನಾಳದ. **Oesóphago-** ಈಸಾಫಗೊ— (ಸ. ಪೂ. ಪ.)

Oéstrum ಈಸ್ಟ್ರಂ, **Oéstrus** ಈಸ್ಟ್ರಸ್ (ನಾ.) ತೊಣಚಿ. ಚೋದನೆ; ರೇಗಿಸುವಂಥದು; ಅತ್ಯಾವೇಶ; ಕೆರಳು; ಹುಚ್ಚಾಟ.

Of ಆವ್, ಅವ್ (ಉಪ.) (ಒಂದು ನಾಮವಾಚಕವನ್ನು ಅದಕ್ಕೆ ಹಿಂದಿರುವ ನಾಮವಾಚಕ, ಗುಣವಾಚಕ, ಕ್ರಿಯಾವಿಶೇಷಣ ಅಥವಾ ಕ್ರಿಯಾಪದ— ಇವುಗಳೊಡನೆ ಸೇರಿಸಿ ಮುಂದೆ ಕೊಡುವ ಸಂಬಂಧಗಳನ್ನು ಸ್ಥೂಲವಾಗಿ ಸೂಚಿಸುವಂಥದು): —ರ; —ಇಂದ; —ಕಡೆಗೆ; —ಕ್ಕಾಗಿ; —ಎಂಬ; —ಕುರಿತು; —ವಿಷಯವಾಗಿ; —ಸಂಬಂಧದಲ್ಲಿ.

(೧) ಚಲನೆ, ದೆಸೆ, ದೂರ.—[Of late, Of recent years, Of old, Of yore (ಇವುಗಳಲ್ಲಿ during ಎಂಬ ಅರ್ಥ ಬಂದಿದೆ; ಈ ಪ್ರಯೋಗಗಳಲ್ಲಿ ವಿನಾ ಅರೂಢಿ). North of, Within an hour of, Within an ace of, Upwards of, Back of]

(೨) ಬಿಡುಗಡೆ, ಅಭಾವ.—(Rid of, Free of, Strip of, Barren of, Void of)

(೩) ಮೂಲ, ಉಗಮ ಸ್ಥಾನ.—(Of English parents, Swift was born in Dublin. You expect too much of your sister. There was one child of the marriage)

(೪) ಕಾರ್ಯ, ಭಾವ, ಮೊ. ಗಳ ಮೂಲ; ಉದ್ದೇಶ; ಕಾರಣ; ಹೇತು; ಆಧಾರ.—(Of one's own accord. The goats would come of themselves to be milked. How can we excuse ourselves of negligence? I am dying of fatigue. I wish him joy of her. Sick of inaction)

(೫) ಕರ್ತೃ, ಕಾರ್ಯಮಾಡುವವನು.—(A wretch forsaken of God and man. It was kind of you to help him. He had the secret approbation of his prince)

(೬) ಸಾಧನ, ಉಪಕರಣ.—(They live of bread made of pith of trees. It was pouring of rain)

(೭) (ಒಂದು ವಸ್ತುವಿನ) ರಚನಾ ದ್ರವ್ಯವು ಯಾವುದರ ಉದಾಹರಣೆಯಾಗಿದೆಯೊ ಆ ನಿರ್ದಿಷ್ಟ ವರ್ಗ.—(A house of cards. The hour of eleven. Will you make an ass of me? That scamp of a husband of hers)

(೮) ಆಲೋಚನೆಯ, ಭಾವದ ಅಥವಾ ಕಾರ್ಯದ, ವಿಷಯ.—(Of man's first disobedience. Mr. Hobbs in his Discourse of Human Nature. The same observations are true of all other contracts)

(೯) (ಕ್ರಿಯಾಪದವನ್ನು ಅಥವಾ ಗುಣವಾಚಕವನ್ನು ಅವಲಂಬಿಸಿರುವ) ಆದ್ಯ ಷಷ್ಠೀ ವಿಭಕ್ತಿ ಸೂಚಕ.—(Hopeful of, Envious of, Expressive of. Have mercy of me. As for the earthquake, I heard not of it)

(೧೦) ಕರ್ಮಾರ್ಥಕ ಷಷ್ಠೀ ವಿಭಕ್ತಿ ಸೂಚಕ.—(For the avoiding of strife. We must cease throwing of stones either at saints or squirrels. They being altering of the stage. The betrayal of a secret. I am a great eater of tomatoes)

(೧೧) ಒಂದರ ವಿಷಯವಾಗಿ ಒಂದು ಲಕ್ಷಣವನ್ನು ಸೂಚಿಸುವಲ್ಲಿ, ಅಥವಾ ಒಂದು ಸಂಗತಿಯನ್ನು ತಿಳಿಸುವಲ್ಲಿ.—(Infirm of purpose. Of able body, sound of limb and wind. He is 53 years of age. He is hard of hearing)

(೧೨) ಒಬ್ಬನ ಅಥವಾ ಒಂದು ವಸ್ತುವಿನ ವೈಶಿಷ್ಟ್ಯವನ್ನು ತೋರಿಸುವ ಒಂದು ಗುಣವನ್ನು ಅಥವಾ ಇತರ ಗುರುತನ್ನು, ಕಾಲ, ಸ್ಥಳ, ಮೊ. ನ್ನು, ಸೂಚಿಸುವಲ್ಲಿ.—(One vice, but of a minute old. She was all of a muck of sweat. Is it the hour of prayer? A boy of fourteen)

(೧೩) (ವಸ್ತುಗಳ ಅಥವಾ ವಸ್ತುವಿನ ಒಂದು ಭಾಗ ಮಾತ್ರ ಸೂಚಿತವಾಗುವ) ಅಂಶಸೂಚಕ ವಾಕ್ಯಗಳಲ್ಲಿ.—(More than any of his predecessors. That sacred head of thine. It is what I desire of all things. As though of hemlock I had drunk. Whatever of best he can conceive. He had three sons, of whom Krishna married twice. The most dangerous of enemies)

(೧೪) (ಒಬ್ಬನಿಗೆ, ಒಂದಕ್ಕೆ) ಸೇರಿರುವ, ಸಂಬಂಧಪಟ್ಟಿರುವ.—(Don Quixote of the Mancha. He was not of an age, but for all time. I am glad you understand the reason of it. The tomb of England's first martyr. The weather is the solitary topic of conversation)

(೧೫) ಒಂದು ಗೊತ್ತಾದ ಕಾಲ ಅಥವಾ ಕಾಲಾಂತರ ಸೂಚಕ.—(Of old, Of yore, Of late years. Of a Thursday my dear father and mother were married. Shut up by himself of nights. Not seeing or hearing from him of a long time)

(೧೬) (ವಾಕ್ಯ ಭಾಗ). ಮುಂದೆ ನಾಮವಾಚಕ ಬಂದಲ್ಲಿ Of ಪದ ಗುಣವಾಚಕ ಅಥವಾ ಕ್ರಿಯಾವಿಶೇಷಣವಾಗುತ್ತದೆ.—(Of age, Of a certainty, Of choice, Of course, Of necessity)

ಅನೇಕ ಉಪಸರ್ಗೀಯ ವಾಕ್ಯ ಭಾಗಗಳಲ್ಲಿ Of ಪದವು ಕಡೆಯ ಅಂಶವಾಗಿರುತ್ತದೆ (Because of, By means of, By reason of, For fear of, In case of, In consequence of, Instead of, In spite of, etc.)

Off ಆಫ್ (ಕ್ರಿ. ವಿ.) ದೂರ(ಕ್ಕೆ); ದೂರದಲ್ಲಿ; ಆಚೆಗೆ [Rode o. ದೌಡೋಡಿಸಿಕೊಂಡು ಹೋಗಿಬಿಟ್ಟನು. Beat o. the attack ದಾಳಿಯನ್ನು ಹೊಡೆದೋಡಿಸು. Keep assailant o. Ward o. disaster. Take oneself, be, make, o. ಹೊರಡು; ಹೊರಟುಹೋಗು. O. with you! ಹೊರಡು; ತೊಲಗು. O. with his head! ಅವನ ತಲೆ ಕಡಿ. Fall o., Go o. (ಆಯಾ ಪದವನ್ನು ನೋಡಿ). The bullet glanced o. ಗುಂಡು ಸೋಕಿಕೊಂಡು ಹೋಯಿತು. Is far, three miles, two years, o.]. ನೆರೆ ತಪ್ಪಿ; ಸೇರಿರದೆ; ಸೋಕಿರದೆ; ಅವಲಂಬಿಸಿಲ್ಲದೆ; ಬಂಧಿಸಿಲ್ಲದೆ; ಕಳಚಿ; ಸಡಿಲವಾಗಿ; ಪ್ರತ್ಯೇಕವಾಗಿ [My hat is o. Take

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

his clothes o. Cut, break, shake, o. Throw o. reserve ಸಂಕೋಚ ಬಿಡು ; ಮುಚ್ಚುಮರೆಯಿಲ್ಲದೆ ವರ್ತಿಸು. Be o. with the old love ಹಳೆಯ ಪ್ರಣಯಿನಿಯ ಸಂಬಂಧವನ್ನು ತೊರೆದುಬಿಡು. Get one's daughters o. ತನ್ನ ಹೆಣ್ಣುಮಕ್ಕಳನ್ನು ಮದುವೆ ಮಾಡಿ ಕೊಟ್ಟುಬಿಡು. The gilt is o. ಹೊರ ಹೊಳಪು ಹೊರಟುಹೋಯಿತು ; ನಿಜ ಸ್ವರೂಪ ಹೊರಬಿದ್ದಿತು. We are o. now ಇಗೊ ಹೊರಟಿದ್ದೇವೆ, ಹೊರಡುತ್ತಿದ್ದೇವೆ, ಹೊರಡುವುದರಲ್ಲಿದ್ದೇವೆ. Broke o. (ಮಾತು, ಮೊ. ನ್ನು) ನಿಲ್ಲಿಸಿಬಿಟ್ಟನು. Leave o. work. The engagement, bargain, negotiation, is o. ಗೊತ್ತುಪಾಡು, ವ್ಯಾಪಾರ, ಸಂಧಾನ, —ಮುರಿದುಬಿದ್ದಿತು. Declare o. ಗೊತ್ತುಪಾಡನ್ನು ರದ್ದುಮಾಡು. Cut o. supplies ಸರಬರಾಯಿ ನಿಲ್ಲಿಸಿಬಿಡು. The gas is o. (ದೀಪದ) ಅನಿಲ ನಿಂತುಹೋಯಿತು. Clear, drink, pay, polish, work, o. —ಮುಗಿಸಿಬಿಡು. Buy, Come, Dash, Get, Mark, Palm[3], Pass, Rattle, Show, Take, o. (ಆಯಾ ಪದವನ್ನು ನೋಡಿ). Right, Straight, o. (ಆಯಾ ಪದವನ್ನು ನೋಡಿ). Well, badly, comfortably, o. ಒಳ್ಳೆಯ ಸ್ಥಿತಿಯಲ್ಲಿ (ಹಣ ಕಾಸು ಉಳ್ಳವನಾಗಿ), ದುಃಸ್ಥಿತಿಯಲ್ಲಿ (ಬಡತನದಲ್ಲಿ), ಸುಖವಾಗಿ. O. & on ಬಿಟ್ಟು ಬಿಟ್ಟು ; ಆಗಾಗ]

Off (ಉಪ.) ಇಂದ ; ಇಂದ —ದೂರಕ್ಕೆ, ಕೆಳಕ್ಕೆ, ಮೇಲಕ್ಕೆ ; (ಇಂದ) ಬಿಡುಗಡೆ ಹೊಂದಿ; (ಇಂದ) ದೂರದಲ್ಲಿ. Drove them o. the seas ಅವರನ್ನು ಸಮುದ್ರ(ದಿಂ)ದಾಚೆ ಓಡಿಸಿಬಿಟ್ಟರು. Is o. the beaten track ಜಾಡುತಪ್ಪಿ ಹೋಗಿದ್ದಾನೆ. Fell o. a ladder. Take cover o. dish ಪರಾತದ ಮೇಲಿನಿಂದ ಮುಚ್ಚಳ ತೆಗೆದುಬಿಡು. Eats o. silver plate ಬೆಳ್ಳಿಯ ತಟ್ಟೆಯಲ್ಲಿ ಊಟ ಮಾಡುತ್ತಾನೆ. Take matter o. one's hands ವಿಷಯವನ್ನು ಒಬ್ಬನ ಕೈ (ಜವಾಬ್ದಾರಿ) ತಪ್ಪಿಸಿ ತೆಗೆದುಕೊ. Had borrowed £ 20 o. plaintiff (ಗ್ರಾಮ್ಯ). O. one's head, feed (ಆಯಾ ಪದವನ್ನು ನೋಡಿ). O. colour ಆರೋಗ್ಯ ಕೆಟ್ಟು ; ಸ್ವಸ್ಥವಿಲ್ಲದೆ (ಬಣ್ಣಗೆಟ್ಟು). Took something o. the price. Is o. duty or work ಕೆಲಸದ ಮೇಲಿಲ್ಲ. Cut a slice o. the joint. Was only a yard o. of me. Keep ship two points o. the wind. O. the point ಪ್ರಕೃತ ವಿಷಯ ಬಿಟ್ಟು(ಟ್ಟ) ; ಅಸಂಬದ್ಧ(ವಾಗಿ). O. the map (Map ನೋಡಿ). In a street o. the beach ಸಮುದ್ರ ತೀರದಿಂದ ಹೊರಡುವ ಒಂದು ಬೀದಿಯಲ್ಲಿ. From o. (ಪ್ರಾಚೀ. ಪ್ರ., ಕಾವ್ಯ, ಗ್ರಾಮ್ಯ) = Off. O.-hand ಪೂರ್ವ ಸಿದ್ಧತೆಯಿಲ್ಲದೆ ; ಮೊದಲು ಆಲೋಚನೆ ಮಾಡದೆ; ಥಟ್ಟನೆ ; ಸಂಪ್ರದಾಯವನ್ನು ಲಕ್ಷಿಸದೆ [**Offhánd** (ಗು.); **Offhánded** (ಗು.) ; **Offhándedly** (ಕ್ರಿ. ವಿ.) ; **Offhándedness** (ನಾ.)] . O. shore (ಕರೆಯಿಂದ) ಸಮುದ್ರದೊಳಗೆ ಸ್ವಲ್ಪ ದೂರದಲ್ಲಿ (O.-shore fisheries. O.-shore wind ಕಡಲ ಕಡೆಗೆ ಬೀಸುವ ಗಾಳಿ). Anchored o. the point ಒಂದು ನೆರೆಯ ಎದುರಿಗೆ ಸ್ವಲ್ಪ ದೂರದಲ್ಲಿ ಲಂಗರು ಹಾಕಿ. O. side (ಕಾಲ್ಚೆಂಡಾಟ) ಚೆಂಡಿನ ಸ್ಥಾನಕ್ಕೂ ಎದುರು ಪಕ್ಷದವರ ಗುರಿಗಂಬಕ್ಕೂ ಮಧ್ಯೆ ; ತನ್ನ ಸ್ಥಾನದಿಂದಾಚೆ ; ತಪ್ಪು ಸ್ಥಾನದಲ್ಲಿ (O.-side play, rule)

Off (ಗು.) ದೂರದ ; ಆಚೆಯ (On the o. side of the wall ಗೋಡೆಯ ಆಚೆಯ ಕಡೆ). (ಕುದುರೆ, ವಾಹನ, ಮೊ. ಗಳ ವಿಷಯದಲ್ಲಿ) ಬಲಗಡೆಯ [ಎದುರು ಪದ : Near (ಸಾ., ಕುದುರೆಯನ್ನು ಹತ್ತುವ ಕಡೆ). The o. front wheel ಬಲಗಡೆಯ ಮುಂಗಾಲಿ. The o. side ಬಲ ಭಾಗ]. (ಕ್ರಿಕೆಟ್) ಎಸೆಗಾರನ ಎಡಗಡೆಯ ಆಟದ ಬಯಲಿನ (ಎದುರು ಪದಗಳು : On, Leg). An o. drive ಚೆಂಡು ಮುಂಭಾಗದ ಬಯಲಿನ ಕಡೆಗೆ ಹೋಗುವಂತೆ ಹೊಡೆದ ಹೊಡೆತ : ಬಲಗಡೆಯ ಹೊಡೆತ [**Offdríve** (ಕ್ರಿ. ಸಕ.)] . O. stump ಆಟಗಾರನ ಕಡೆಯಲ್ಲಿರುವ ಮೂರು ಗುರಿಕೋಲುಗಳಲ್ಲಿ ಬಲ ಕೊನೆಯ ಗುರಿಕೋಲು (ಕಾಲಬಳಿಯದಲ್ಲ). Long o. (Long[1] ನೋಡಿ). ಅಧೀನ ; ಅಪ್ರಧಾನ ; ಗೌಣ. (ಮುಖ್ಯ ಭಾಗದಿಂದ) ಕವಲೊಡೆದ, ಅಗಲುತ್ತ ಹೋಗುವ (In an o. street). (ವಾದ, ಮೊ. ಗಳ ವಿಷಯದಲ್ಲಿ ರೂಪ. : ಉದಾ., That is an o. issue ಅದು ಗೌಣ ಅಂಶ). ಬಹು ದೂರ ಸಂಭವದ (There is an o. chance that—). (ಕೆಲಸದಿಂದ) ಬಿಡುವಾದ (Will do it on my next o. day). O.-licence ಬಿಯರ್, ಮೊ. ನ್ನು ಅದಕ್ಕೆ ಗೊತ್ತಾದ ಸ್ಥಳ ಬಿಟ್ಟು ಹೊರಗಡೆ ಮಾರುವುದಕ್ಕೆ ಕೊಟ್ಟ ಅಪ್ಪಣೆ ಚೀಟಿ. O.-print (ಒಂದು ದೊಡ್ಡ ಪ್ರಕಟನೆಯ ಅಥವಾ ಲೇಖನ ಸಂಗ್ರಹದ ಭಾಗವಾಗಿರುವುದನ್ನು ಬೇರೆ ಹಂಚುವುದಕ್ಕಾಗಿ ಮಾಡಿದ) ಒಂದರ ಹೆಚ್ಚು ಪ್ರತಿಗಳ ಪ್ರತ್ಯೇಕ ಮುದ್ರಣ.

Off (ನಾ.) (ಕ್ರಿಕೆಟ್) ಎಸೆಗಾರನ ಎಡಗಡೆಯ ಆಟದ ಬಯಲು, ಎಡ ಪಕ್ಕ.

Off (ಕ್ರಿ. ಸಕ.) (ಬಳ. ಮಾ.) (ಸಂಧಾನ, ಒಪ್ಪಂದ, ಕೈಕೊಂಡದ್ದು, ಮೊ. ನ್ನು) ತೊರೆಯುವ ಅಥವಾ ರದ್ದುಗೊಳಿಸುವ ಉದ್ದೇಶವನ್ನು ತಿಳಿಯಪಡಿಸು ; (ಒಬ್ಬನೊಡನೆ ಮಾಡಿಕೊಂಡ) ಸಂಧಾನದಿಂದ, ಒಪ್ಪಂದದಿಂದ, —ಹಿಂದೆಗೆ, ಹಿಂದು ಸರಿ.

Óffal ಆಫಲ್ (ನಾ.) ಕಸ ; ಉಪಯೋಗವಿಲ್ಲದೆ ಬಿಸುಟದ್ದು ; ಚೂರು ಪಾರು ; ಹೊಲಸು; ಕೆಲಸಕ್ಕೆ ಬಾರದ್ದು ; ಕೊಳೆ ; ಆಹಾರಕ್ಕೆ ಉಪಯೋಗವಿಲ್ಲವೆಂದು ಬಿಸುಟ ಪ್ರಾಣಿಯ ಅಟ್ಟೆಯ ಭಾಗಗಳು (ಮು., ಕರುಳು, ತಲೆ, ಬಾಲ, ಮೊ. ವು) ; ಕೊಳೆತ ಮಾಂಸ; ಅಗ್ಗದ ಮೀನು. (ಧಾನ್ಯದ) ಹೊಟ್ಟು, ಗುನಿ, ಸಿಪ್ಪೆ, ಮೊ. (ಸಾ., ಬ. ವ. ದಲ್ಲಿ). ಚರಟ ; ಗಸಿ ; ಗಪ್ಪು. O. milk, wheat, wood, etc. ಕೀಳ್ತರದ, ಕಳಪೆಯ— .

Offénce ಅಫೆನ್ಸ್ (ನಾ.) ಅಡಚಣೆ ; ಎಡರು ; ವಿಘ್ನ ; ನಂಬಿಕೆಯಿಲ್ಲದ ಸಂಭವ (ಈಗ ವಿರ. ಪ್ರ.) ; ಮೇಲೆಬೀಳುವುದು ; ಆಕ್ರಮಣ ಮಾಡುವುದು ; ಹೋರಾಡಲು ತಾನಾಗಿ ಮುನ್ನುಗ್ಗುವುದು (The most effective defence is o. ತಾನಾಗಿ ಮೊದಲು ಆಕ್ರಮಣ ಮಾಡುವುದೇ ಅತ್ಯಂತ ಪರಿಣಾಮಕಾರಿಯಾದ ರಕ್ಷಣೆ). ಮನಸ್ಸು ನೋಯಿಸುವುದು ; ನೊಂದ ಮನಸ್ಸು ; ಕಿರಿ ಕಿರಿ ; ಕಿರುಕುಳ ; ಅಪಚಾರ ; ಕಾಟ ; ರೇಗು ; ಸಿಟ್ಟು ; ಮನ ನೋಯುವುದು (No o. was meant ಮನಸ್ಸು ನೋಯಿಸಬೇಕೆಂಬ ಉದ್ದೇಶವಿರಲಿಲ್ಲ. Too quick to take o. ಬಹು ಬೇಗ ತಪ್ಪು ತಿಳಿದುಕೊಳ್ಳುವ. Give o. to. Cannot be done without o.). (ನಿಯಮ, ಮೊ. ಗಳ) ಉಲ್ಲಂಘನೆ ; ತಪ್ಪು ನಡೆವಳಿ ; ಅಸಭ್ಯತೆ; ಅಪರಾಧ (ಮು., Commit an o. against). **Offénceless** (ಗು.) ; **Offénd** (ಕ್ರಿ.) ನೀತಿ ತಪ್ಪಿ ನಡೆ ; (ಕಾನೂನು, ಮರ್ಯಾದೆ, ಮೊ. ನ್ನು) ಮೀರಿ, ಅತಿಕ್ರಮಿಸಿ, ಉಲ್ಲಂಘಿಸಿ, —ನಡೆ ; ಅಪರಾಧ ಮಾಡು (*Against* ಉಪ. ದೊಡನೆ). ಮನಸ್ಸು ನೋಯಿಸು ; ರೇಗಿಸು ; ಕೋಪ, ಅಸಹ್ಯ, —ಹುಟ್ಟಿಸು ; ಜುಗುಪ್ಸೆಯುಂಟುಮಾಡು ; ಜುಲುಮೆ ನಡಸು (Am sorry you are offended. Offended *at* or *by* thing, *with* or *by* person. O. her delicacy, my sense of justice). **Offénder** (ನಾ.) ; **Offénding** (ಗು.) ; **Offéndedly** (ಕ್ರಿ. ವಿ.); **Offénsive** (ಗು., ನಾ.) ಮೇಲೆ ಬೀಳುವ ; ಆಕ್ರಮಣದ(ಲ್ಲಿ ಉಪಯೋಗಿಸುವ) ; ಆಕ್ರಮಣಕ್ಕಾಗಿ ಉದ್ದೇಶಿಸಿದ [O. arms, movement (ಎದುರು ಪದ : Defensive)] . ಮನ ನೋಯಿಸುವ ; ರೇಗಿಸುವ; ಅಪಮಾನ ಪಡಿಸುವ (O. language). ಅಸಹ್ಯಕರ ; ದುರ್ವಾಸನೆಯ ; ಹೊಲಸಾದ; ಓಕರಿಕೆ ಬರಿಸುವ ; ಜುಗುಪ್ಸೆ ಹುಟ್ಟಿಸುವ. (ನಾ.) ಮೇಲೆ ಬೀಳುವವನ ಭಾವ ; ಮೇಲೆ ಬೀಳುವುದು ; ಆಕ್ರಮಣ (Take, Act on, Abandon, the o.). ದಾಳಿ ; ದಂಡ ಯಾತ್ರೆ ; ದಾಳಿ ಹೊಡೆತ (The long expected German o.). **Offénsively** (ಕ್ರಿ. ವಿ.) ; **Offénsiveness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Offénd, etc. **Offence** ನೋಡಿ.

Óffer ಆಫರ್ (ಕ್ರಿ., ನಾ.) (ಬಲಿ, ಮೊದಲ ಫಲ, ಪ್ರಾರ್ಥನೆ—ಇವನ್ನು ದೇವತೆ, ಪೂಜ್ಯ ವ್ಯಕ್ತಿ, ಮೊ. ರಿಗೆ) ಒಪ್ಪಿಸು, ನಿವೇದಿಸು, ಅರ್ಪಿಸು ; ಭಕ್ತಿಯಿಂದ, ಪೂಜೆಯಾಗಿ, —ಸಮರ್ಪಿಸು ; ಆಹುತಿ ಕೊಡು. (ಒಬ್ಬನು ಅಂಗೀಕರಿಸಲು ಅಥವಾ ತಿರಸ್ಕರಿಸಲು) ನೀಡು ; ಕೈನೀಡಿ ಕೊಡು. ಮಾತಿನಲ್ಲಿ ಹೇಳು; ಬೆಲೆ ಹೇಳು. ಮದುವೆಯ ಪ್ರಸ್ತಾಪ ಮಾಡು. ಮಾರಾಟಕ್ಕಿಡು. ಕದನ ಮಾಡಲು ಶತ್ರುವಿಗೆ ಅವಕಾಶ ಕೊಡು ; ಕಾಳಗ ಕೊಡು (Offer battle). ಅಪೇಕ್ಷೆ ಪಟ್ಟರೆ ಮಾಡಲು ಸಿದ್ಧನಾಗಿರುವೆನೆಂದು ಹೇಳು. (ಬಲಪ್ರಯೋಗ, ಪ್ರತಿಭಟನೆ, ಮೊ. ನ್ನು) ತೋರು, ತೋರಲು ಯತ್ನಿಸು (ಸಾ., *To* ಉಪ. ದೊಡನೆ). ಮಾಡುವ ಉದ್ದೇಶ ತೋರು (Offered to strike me). (ವಸ್ತುಗಳ ವಿಷಯದಲ್ಲಿ) ದೃಷ್ಟಿಗೆ, ಗಮನಕ್ಕೆ, ತರು (Each age offers its characteristic riddles ಪ್ರತಿ ಯುಗವೂ ಅದರದರ ವಿಶೇಷ ಲಕ್ಷಣದ ಸಮಸ್ಯೆಗಳನ್ನು ತೋರುತ್ತದೆ). ಕಾಣಿಸಿಕೊಳ್ಳು ; ಸಂಭವಿಸು (As opportunity offers. The first path that offered). (ನಾ.) (ಅಪೇಕ್ಷೆ ಪಟ್ಟಲ್ಲಿ ಕೊಡಲು ಅಥವಾ ಮಾಡಲು, ಅಥವಾ ಒಪ್ಪಂದ ಮಾಡಿಕೊಂಡು ಮಾರಲು) ಸಿದ್ಧನಾಗಿರುವೆನೆಂದು ಹೇಳುವುದು ; ನೀಡಿಕೆ [On o. (—ಇಷ್ಟು) ಬೆಲೆಗೆ ಮಾರಾಟಕ್ಕಿದೆ]. (ಮು., ಮದುವೆಗೆ) ಪ್ರಸ್ತಾಪ. ಕೊಡಲು ಒಪ್ಪಿ ಹೇಳಿದ ಬೆಲೆ ; ಸವಾಲು. **Óffering** (ನಾ.) (ಕ್ರಿಯಾರ್ಥಗಳಲ್ಲಿ) ; ಅರ್ಪಿಸಿದ್ದು ; ನಿವೇದನೆ ; ಬಲಿ ; ಆಹುತಿ. ಒಬ್ಬನು ಅಂಗೀಕರಿಸುವಂತೆ ನೀಡಿದ್ದು ; ಬಹುಮಾನ ; ಕಾಣಿಕೆ. **Óffertory** ಆಫರ್ಟರಿ (ನಾ.) ಪ್ರಭುಭೋಜನ ಸಂಸ್ಕಾರ ಕಾಲದಲ್ಲಿ ಜನರು ಕಾಣಿಕೆಗಳನ್ನು ಒಪ್ಪಿಸುವಾಗ ಹೇಳುವ ಸ್ತೋತ್ರ, ಮಂತ್ರ : ಅರ್ಪಣ ಸ್ತೋತ್ರ, ಮಂತ್ರ; ಪದಾರ್ಥಗಳ, ಕಾಣಿಕೆಗಳ, ಅರ್ಪಣ ; ಹೀಗೆ ಒಪ್ಪಿಸಿದ ಕಾಣಿಕೆ ; ಆರಾಧನೆಯ ಕಾಲದಲ್ಲಿ ಎತ್ತಿದ ಹಣ, ಕಾಣಿಕೆ.

Óffertory. **Offer** ನೋಡಿ.

Óffice ಆಫಿಸ್ (ನಾ.) ದಯೆ (ತೋರಿಸುವುದು) ; ಮರ್ಯಾದೆ(ಯಿಂದ ನೋಡುವುದು) ; ಉಪಕಾರ (Ill o. ಅಪಕಾರ ; Owing to, by, the good or ill offices of). ಒಬ್ಬನ ಸ್ಥಾನಕ್ಕೆ ಸೇರಿದ ಕರ್ತವ್ಯ ; (ಮಾಡಬೇಕಾದ) ಕೆಲಸ, ಕಾರ್ಯ (It is my o., the o. of the arteries, to—). ಕರ್ತವ್ಯಗಳ ಜವಾಬ್ದಾರಿಯ(ಯುಳ್ಳ) (ಮು., ಸಾರ್ವಜನಿಕ) ಹುದ್ದೆ ; ಅಧಿಕಾರ (ಸ್ಥಾನ) ; ಉದ್ಯೋಗ ; ಪದವಿ (Was given an o. under Government) ; ಅಧಿಕಾರಾವಧಿ (ಮು., ಸಚಿವನದು) [Take, enter upon, hold, leave, resign, o. Jack in o. (Jack[1] ನೋಡಿ)]. ವಿಧಿವಿಹಿತ ಕ್ರಿಯೆ, ಸಂಸ್ಕಾರ [ಮು., Perform the last offices to (—ಗೆ) ಮೃತ ಸಂಸ್ಕಾರ, ಅಂತ್ಯ ಕ್ರಿಯೆ, —ಮಾಡು]. (ಕ್ರೈಸ್ತ ಮತ) ಅಧಿಕೃತ ಆರಾಧನ ಕ್ರಮ ; (ರೋ. ಕ್ಯಾ. ಆರಾಧನ ಮಂದಿರಗಳಲ್ಲಿ ಗೊತ್ತುಮಾಡಿರುವ ಪಾರಾಯಣ ಪುಸ್ತಕದ) ದಿನಚರಿ ಪಾರಾಯಣ (=Divine o.; Say o. ಈ ಪಾರಾಯಣ ಮಾಡು) ; (ಆ್ಯಂಗ್ಲಿಕನ್ ಮತೀಯ ಪಂಗಡ) ಬೆಳಗಿನ ಮತ್ತು ಸಾಯಂಕಾಲದ ಪ್ರಾರ್ಥನೆ ; ಪ್ರಭುಭೋಜನ ಸಂಸ್ಕಾರ ಸಂಬಂಧವಾದ ಭಜನೆ, ಆರಾಧನೆ ; ಸಂದರ್ಭಾನುಸಾರವಾದ ಇತರ ಆರಾಧನೆ, ಭಜನೆ. ಕಾರ್ಯಸ್ಥಾನ ; ಕಚೇರಿ (Goes down to the o. at 9 a.m.) ; (ಒಂದು ಕಚೇರಿಯ, ಸಂಸ್ಥೆಯ) ಗುಮಾಸ್ತರು ಕೆಲಸ ಮಾಡುವ ಕೊಠಡಿ, ಮೊ.ದು ; ಲೆಕ್ಕದ ಮನೆ. ಒಂದು ದೊಡ್ಡ ಕಾರ್ಯಕಾರಿ ಸಂಸ್ಥೆಯಲ್ಲಿ, ಒಂದು ಗೊತ್ತಾದ ಕೆಲಸ ನಡಸಲು ಗೊತ್ತುಮಾಡಿರುವ ಕೊಠಡಿ ; (ರೈಲ್ವೆ ನಿಲ್ದಾಣದಲ್ಲಿ : Booking, Inquiry, Goods, Lost-property, -o.). ಒಂದು ದೊಡ್ಡ ಸಂಸ್ಥೆಯ ಶಾಖೆಯ ಕಚೇರಿ (Our Manchester o. ; A post, telegraph, -o.). ಒಂದು ಗೊತ್ತಾದ ಉದ್ದೇಶದ ಸಂಸ್ಥೆ, ಕಂಪೆನಿ (Insurance, Fire or Fire-insurance, -o.). ಒಂದು ಸರ್ಕಾರಿ ಇಲಾಖೆಯ, —ಕಾರ್ಯಸ್ಥಾನ, ಅಧಿಕಾರಿ ವರ್ಗ, ಒಟ್ಟು ಅಧಿಕಾರ (The Foreign, War, Post, o.); (Holy O. = The Inquisition). (ಬ. ವ. ದಲ್ಲಿ) ಮನೆಯ ಬೇರೆ ಬೇರೆ ಕೆಲಸಗಳಿಗೂ, ಉಗ್ರಾಣ, ಮೊ. ಗಳಿಗೂ ಉಪಯೋಗಿಸುವ ಮನೆಯ ಭಾಗಗಳು. (ಅಸಂ.) (Give, take, the o. ಸೂಚನೆ, ತಿಳಿವಳಿಕೆ, ಸಂಜ್ಞೆ, —ಕೊಡು, ಪಡೆ). O.-bearer ಅಧಿಕಾರಿ ; ಉದ್ಯೋಗಸ್ಥ ; ಹುದ್ದೇದಾರ. **Ófficer** (ನಾ., ಕ್ರಿ. ಸಕ.) (ಸಾರ್ವಜನಿಕ, ಆಯೋಧ, ಮತಸಂಸ್ಥೆಯ) ಅಧಿಕಾರಿ ; ಉದ್ಯೋಗಸ್ಥ ; ಹುದ್ದೇದಾರ ; ದೊರೆಯ ಸೇವಕ ಅಥವಾ ಮಂತ್ರಿ ; ನಿಯಮಿತನಾದ ಅಥವಾ ಚುನಾಯಿತನಾದ ಅಧಿಕಾರಿ [ಸಾ., ವಿಶೇಷಣಗಳೊಡನೆ ಪ್ರ.: O. of Health (Health ನೋಡಿ). O. of the Household (ಇಂಗ್ಲೆಂಡಿನಲ್ಲಿ) ಅರಮನೆಯ ಅಧಿಕಾರಿ, ಬಕ್ಷಿ. Public, Medical, o. Relieving o. (Relieve ನೋಡಿ)]. ಒಂದು ಸಂಘದ ಅಧ್ಯಕ್ಷ, ಕಾರ್ಯದರ್ಶಿ, ಕೋಶಾಧಿಕಾರಿ, ಮೊ. ರು. (ಸಣ್ಣ) ನ್ಯಾಯಾಧಿಕಾರಿ ; ಧತ್ತಾಮೀನ. (ವಿರ. ಪ್ರ.) ಪೋಲೀಸ್ ಪ್ಯಾದೆ. ನೌಕಾ ಸೈನ್ಯ, ಭೂ ಸೈನ್ಯ, ಆಕಾಶ ಸೈನ್ಯ, ಅಥವಾ ವ್ಯಾಪಾರ ನೌಕೆ, ಮೊ. ಗಳಲ್ಲಿ ಅಧಿಕಾರಿ (ಮು., ಸನ್ನದು ಪಡೆದಿರುವ ನೌಕಾ ಸೈನ್ಯಾಧಿಕಾರಿ, ಭೂ ಸೈನ್ಯಾಧಿಕಾರಿ) : (General, Staff, Commissioned, Warrant, etc. o.) ; ನೌಕಾ ಸೈನ್ಯದ ಅಧಿಕಾರಿ (Flag, Commissioned, Warrant, Petty, etc., o.) [Officers' Training Corps (ಸಂಕ್ಷಿಪ್ತ : O.T.C.) ಸೈನ್ಯಾಧಿಕಾರಿಗಳ ಶಿಕ್ಷಣ ದಳ]. (ಕ್ರಿ.) (ಸಾ., ಭೂ. ಕೃ. ನಲ್ಲಿ) ಅಧಿಕಾರಿಗಳನ್ನು ಒದಗಿಸು ; (—ರ) ಸೇನಾಧಿಪತಿಯಾಗಿರು. **Offícial** ಅಫಿಷಲ್ (ಗು.,ನಾ.) ಕಚೇರಿಯ; ಹುದ್ದೆಯ; ಅಧಿಕಾರದ (ಕರ್ತವ್ಯವಾಗಿರುವ); ಉದ್ಯೋಗದ ; ಅಧಿಕಾರದಲ್ಲಿರುವ ; ಸಾರ್ವಜನಿಕ ಸಂಬಂಧದಲ್ಲಿ ನಿಯಮಿತನಾದ ; ಅಧಿಕಾರಿಯಿಂದ(ಗಳಿಂದ) ಪಡೆದ ; ಅಧಿಕೃತ. (ವೈದ್ಯ) ಅಧಿಕೃತ ಔಷಧವಸ್ತು ಗ್ರಂಥಕ್ಕೆ ಅನುಸಾರವಾದ. ಅಧಿಕಾರಿಗಳಿಗೆ, ಕಚೇರಿಯವರಿಗೆ, —ವಾಡಿಕೆಯಾದ (O. solemnity, red tape, etc. ಅಧಿಕಾರ ಸಹಜವಾದ ಗಾಂಭೀರ್ಯ, ಅತಿ ನಿಯಮಾನುಸರಣೆ, ಮೊ.). (ನಾ.) (ಆರ್ಚ್‌ಬಿಷಪ್, ಬಿಷಪ್, ಅಥವಾ ಮು., ಆರ್ಚ್‌ಡೀಕನ್ —ಇವರ) ನ್ಯಾಯ ಸ್ಥಾನದ ಅಧ್ಯಕ್ಷ (ಸಾ., O. principal). ಸಾರ್ವಜನಿಕ ಸಂಸ್ಥಾಧಿಕಾರಿ ; —ಸಂಸ್ಥಾ ಕಾರ್ಯಗಳಲ್ಲಿ ತೊಡಗಿರುವವನು ; ಉದ್ಯೋಗಸ್ಥ. **Offícially** (ಕ್ರಿ. ವಿ.) ; **Offícialize** (ಕ್ರಿ. ಸಕ.) ; **Offícialdom** (ನಾ.) ; **Offícialism** (ನಾ.) ; **Offíciate** ಅಫಿಷಿಯೇಟ್ (ಕ್ರಿ. ಅಕ.) ಪೌರೋಹಿತ್ಯ, ಆರಾಧನೆ, —ನಡಸು. ಬದಲಿಯಾಗಿ (ಒಂದು ಅಧಿಕಾರ ಸ್ಥಾನದ) ಕಾರ್ಯ ನಡಸು (O. as host, best man, etc.). **Offíciant** (ನಾ.) ಪೌರೋಹಿತ್ಯ ನಡಸುವವನು.

Offícial, Offíciant, Offíciate, etc. **Office** ನೋಡಿ.

Offícinal ಆಫಿಸಿನಲ್ (ಗು.) (ಮೂಲಿಕೆಯ, ಔಷಧವಸ್ತುಗಳ, ವಿಷಯದಲ್ಲಿ) ಔಷಧದಲ್ಲುಪಯೋಗಿಸುವ, ಕಲೆಗಳಲ್ಲಿ ಬಳಸುವ ; (ತಯಾರಿಸುವ ಔಷಧಗಳ ವಿಷಯದಲ್ಲಿ) (ಔಷಧದಂಗಡಿಯಲ್ಲಿ) ಸಿದ್ಧಮಾಡಿಟ್ಟಿರುವ ; ಅಧಿಕೃತ ಔಷಧವಸ್ತುಗ್ರಂಥಕ್ಕನುಸಾರವಾಗಿ ತಯಾರಿಸಿದ (ಈಗ ಸಾ., Official) ; (ಹೆಸರಿನ ವಿಷಯದಲ್ಲಿ) ಅಧಿಕೃತ ಔಷಧವಸ್ತು ಗ್ರಂಥದಲ್ಲಿ ಬಳಸುವ. **Offícinally** (ಕ್ರಿ. ವಿ.)

Offícious ಅಫಿಷಸ್ (ಗು.) ಬೇಡವಾದ, ಕೇಳದ, —ಸಹಾಯವನ್ನು ಕೊಡಲು ಹೋಗುವ (ಪ್ರವೃತ್ತಿಯುಳ್ಳ) ; ಎಷ್ಟು ಬೇಕೊ ಅಷ್ಟಕ್ಕಿಂತ ಹೆಚ್ಚಾಗಿ ಮಾಡುವ ಅಥವಾ ಕೈಕೊಳ್ಳುವ ; (ತನಗೆ ಸಂಬಂಧಪಡದ ವಿಷಯದಲ್ಲಿ) ಕೈ ಹಾಕುವ, ತಲೆ ಹಾಕುವ ; ಅಧಿಕ ಪ್ರಸಂಗಿ(ಯಾದ, ತನದ). (ರಾಯಭಾರ, ರಾಜ್ಯನೀತಿ) ವಿಧಿಯನುಸರಿಸದೆ ಮಾಡುವ ; ಅನಧಿಕಾರ ರೀತಿಯಲ್ಲಿ ಸ್ನೇಹಪರನಾ(ವಾ)ದ, ಅಥವಾ ಸರಳ ವರ್ತನೆಯ ; ಬಂಧಕವಲ್ಲದ (ಎದುರು ಪದ : Official). **Offíciously** (ಕ್ರಿ. ವಿ.) ; **Offíciousness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Óffing ಆಫಿಂಗ್ (ನಾ.) ದಡದಿಂದ ದೂರದಲ್ಲಿ, ಅಥವಾ ಲಂಗರುಸ್ಥಳಕ್ಕೆ ಆಚೆ, ಕಣ್ಣಿಗೆ ಕಾಣುವ ಕಡಲ ಭಾಗ: ದೂರಗೋಚರ ಸಮುದ್ರ ಭಾಗ (Was seen in the o.); ತೀರದಿಂದ ದೂರವಿರುವ (ಸಮುದ್ರ) ಸ್ಥಾನ (Gain, keep, an o.)

Óffish ಆಫಿಷ್ (ಗು.) (ಬಳ. ಮಾ.) ಒಬ್ಬರೊಡನೆ ಬೆರೆಯದಿರುವ ಸ್ವಭಾವದ; ನಡತೆಯಲ್ಲಿ ದೂರ ದೂರವಾಗಿರುವ; ಸಲಿಗೆ ಕೊಡದ; ವಿವಿಕ್ತ ಸ್ವಭಾವದ. **Óffishness** (ನಾ.)

Óffscourings ಆಫ್‌ಸ್ಕೌಅರಿಂಗ್ಸ್ (ನಾ.; ಬ. ವ.) ಕಸ; ಹೊಲಸು; ರೊಚ್ಚು; ಗಚ್ಚು; ಚರಟ [ಸಾ., *Of* ಉಪ. ದೊಡನೆ; (ವ್ಯಕ್ತಿಗಳ ವಿಷಯದಲ್ಲಿ ರೂಪ. ಸಹ) The o. of humanity ನೀಚ, ಕೀಳು, ಹೊಲಸು, —ಜನರು]

Óffset ಆಫ್‌ಸೆಟ್ (ನಾ.) (ವಿರ. ಪ್ರ.) ಹೊರಡುವುದು; ಆರಂಭ ದಶೆ. (ಕಾಂಡದಿಂದ ಅಥವಾ ಬೇರಿನಿಂದ ಮೊಳೆತು ಬೇರೆ ಗಿಡವಾಗಿ ಬೆಳೆಯಲು ಉಪಯೋಗಕ್ಕೆ ಬರುವ) ಸಣ್ಣ ಕುಡಿ, ಮೊಳಕೆ. (ರೂಪ.) (ಒಂದು ವಂಶದ) ಶಾಖೆ. ಬೆಟ್ಟದ ಚಾಚು ಭಾಗ. ಪರಿಹಾರ; ಈಡು; ವ್ಯತಿರಿಕ್ತ ಪ್ರಭಾವವನ್ನು ತಗ್ಗಿಸುವ ಅಥವಾ ನಿಷ್ಪ್ರಯೋಜನಗೊಳಿಸುವ ಯೋಜನೆ ಅಥವಾ ಮೊತ್ತ. ಪ್ರತಿಭಾರ; ಪ್ರತಿಯೋಜನೆ. (ಮೋಜಣಿ) ಅಳತೆಯ ಮುಖ್ಯ ರೇಖೆಯಿಂದ ಅದಕ್ಕೆ ಲಂಬವಾಗಿ ಅಳೆದ ಸ್ವಲ್ಪ ದೂರ: ಲಂಬ ದೂರ. (ವಾ. ಶಾ.) ಗೋಡೆ, ಮೊ. ಗಳಲ್ಲಿ ಮೇಲ್ಭಾಗದ ದಪ್ಪ ಕಡಮೆಯಾಗಲು ಆರಂಭವಾಗುವ ಸ್ಥಳದಲ್ಲಿ ಮಾಡಿದ ಇಳಿಜಾರು ಅಂಚು. ಒಂದು ನಾಳದ ಮಾರ್ಗಕ್ಕೆ ಅಡ್ಡ ಬರುವ ತಡೆಯನ್ನು ದಾಟಿ ಹೋಗಲು ಅದರಲ್ಲಿ ಮಾಡಿದ ಬಾಗು. (ಮುದ್ರಣದಲ್ಲಿ) ಆಗತಾನೆ ಮುದ್ರಿಸಿದುದರ ಮೇಲ್ಮೈಯ ಮೇಲೆ ಇಡುವುದರಿಂದ ಶುದ್ಧ ಕಾಗದಕ್ಕೆ ಮಸಿ ಹತ್ತಿ ಕೊಳೆಯಾಗುವುದು (O. process ರಬ್ಬರಿನ ಸಮತಲ ಪ್ರದೇಶದ ಅಥವಾ ಉರುಳೆಯ ಮೈಮೇಲೆ ಒಂದು ಚಿತ್ರವನ್ನೋ ನಕಾಸೆಯನ್ನೋ ತಕ್ಕಂತೆ ಒತ್ತುವುದರಿಂದ ಆ ಪ್ರದೇಶದಮೇಲೆ ರೂಪುಗೊಂಡ ಚಿತ್ರ, ಮೊ. ದುದರ ಪ್ರತಿಗಳನ್ನು ಎತ್ತಿತೆಗೆಯುವ ವಿಧಾನ)

Óffshoot ಆಫ್‌ಷೂಟ್ (ನಾ.) ಪಕ್ಕದಲ್ಲಿ ಒಡೆದ ಕವಲು, ಕೊಂಬೆ; ಉಪ ಶಾಖೆ (ರೂಪ. ಸಹ); ಮತ್ತೊಂದರಿಂದ ಹುಟ್ಟಿದ್ದು; ನಿಷ್ಪನ್ನ.

Óffspring ಆಫ್‌ಸ್ಪ್ರಿಂಗ್ (ನಾ.) ಸಂತಾನ; ಸಂತತಿ; (ರೂಪ.) ಫಲ, ಪರಿಣಾಮ.

Oft ಆಫ್ಟ್ (ಕ್ರಿ. ವಿ.) = Often. [ಭೂ. ಕೃ. ಮತ್ತು ವರ್ತಮಾನ ಕೃದ್ವಾಚಿಯೊಡನೆ ಸಮಾಸಗಳಲ್ಲಿ ಹೊರತು ಉಳಿದ ಕಡೆ ಪ್ರಾಚೀನ ಪ್ರ.: ಉದಾ., O.-told, -recurring. Many a time & o. ಅನೇಕ ವೇಳೆ. O.-times (ಪ್ರಾಚೀ. ಪ್ರ.) = Often]. **Óften** ಆಫ್ನ್ (ಗ್ರಾಮ್ಯ: ಆಫ್ಟ್‌ನ್) (ಕ್ರಿ. ವಿ., ಗು.; ತರ ತಮ ರೂಪಗಳು -er, -est) ಪದೇ ಪದೇ; ಅನೇಕ ವೇಳೆ; ಆಗಿಂದಾಗ್ಗೆ; ಹಲವು ಸಂದರ್ಭಗಳಲ್ಲಿ; ಹಲವು ಬಾರಿ (The victim o. dies of it). [O. & o. (ಒತ್ತಿ ಹೇಳುವಲ್ಲ ಪ್ರ.)]. (ಗು.; ಪ್ರಾಚೀ. ಪ್ರ.) ಪದೇ ಪದೇ ಮಾಡುವ; ಅನೇಕ ಬಾರಿಯ (By o. study of it)

Óften. **Oft** ನೋಡಿ.

Ógdoad ಆಗ್ಡೊಆ್ಯಡ್ (ನಾ.) ಎಂಟರ ಸಂಖ್ಯೆ, ತಂಡ; ಅಷ್ಟಕ.

Ógle ಓಗ್‌ಲ್ (ಕ್ರಿ., ನಾ.) ಪ್ರಣಯ ದೃಷ್ಟಿ (ಬೀರು); ಕಾಮಾಸಕ್ತನಾಗಿ ನೋಡು, ಕಣ್ಣು ಹಾಕು. **Ógler** (ನಾ.)

Ógre ಓಗರ್ (ನಾ.) ಮನುಷ್ಯನನ್ನು ತಿನ್ನುವ ರಾಕ್ಷಸ. **Ógreish** (ಗು.), **Ógrish** (ಗು.) —ನಂಥ, —ನ ಲಕ್ಷಣವಾದ. **Ógress** (ನಾ., ಸ್ತ್ರೀ.)

Ogýgian ಒಜಿಜಿಯನ್ (ಗು.) (ಅಜ್ಞಾತವಾದ) ಬಹು ಪುರಾತನ ಕಾಲದ; ಚರಿತ್ರ ಪೂರ್ವ ಕಾಲದ; ಓಜೀರಾಯನ ಕಾಲದ (Attica ಅಥವಾ Boeotia ದ ಪುರಾಣದ ದೊರೆಯಾದ Ogugios ಎಂಬಾತನ ಹೆಸರಿನಿಂದ)

Oh ಓ (ಭಾವ. ಅವ್ಯ.) = O².

Ohm ಓಮ್ (ನಾ.) ವಿದ್ಯುನ್ನಿರೋಧದ (ಏಕ) ಮಾನ: ಓಮ್ **O.-ammeter** ವಿದ್ಯುತ್ಪ್ರವಾಹವನ್ನೂ ವಿದ್ಯುನ್ನಿರೋಧವನ್ನೂ ಅಳೆಯುವ ಸಲಕರಣೆ. **Óhmmeter** ವಿದ್ಯುನ್ನಿರೋಧ ಮಾಪಕ: ಓಮ್ ಮಾಪಕ. (ಜರ್ಮನ್ ಭೌತ ವೈಜ್ಞಾನಿಕನಾದ G. S. Ohm ಎಂಬಾತನ ಹೆಸರಿನಿಂದ)

Ohó ಒಹೋ (ಭಾವ. ಅವ್ಯ.) ಓಹೋ! (ಆಶ್ಚರ್ಯ, ಹಿಗ್ಗು, ಆನಂದ— ಇವನ್ನು ಸೂಚಿಸುವ ಉದ್ಗಾರ)

Oh yes. **Oyez** ನೋಡಿ.

-oid —ಆಯ್ಡ್ (ಗುಣವಾಚಕಗಳನ್ನೂ ನಾಮವಾಚಕಗಳನ್ನೂ ಮಾಡಲು ಉಪಯೋಗಿಸುವ ಉ. ಪ್ರ.) (—ರ) ಆಕಾರವುಳ್ಳದ್ದು; (—ನ್ನು) ಹೋಲುವಂಥದು. —ಕಲ್ಪ (ಉದಾ., Rhomboid, Alkaloid, Asteroid)

Oil ಆಯ್‌ಲ್ (ನಾ.) ಎಣ್ಣೆ; ತೈಲ (ರಾಸಾಯನಿಕವಾಗಿ ತಾಟಸ್ಥ್ಯ ಸ್ಥಿತಿಯ, ನೀರಿಗಿಂತಲೂ ಹಗುರವಾದ ಮತ್ತು ಅದರಲ್ಲಿ ಲೀನವಾಗದ, ಮದ್ಯಸಾರದಲ್ಲಿಯೂ ಈತರ್ ದ್ರವದಲ್ಲಿಯೂ ಲೀನವಾಗುವ, ಎಳೆದರೆ ದಾರವಾಗಿ ಬರುವ, ಜಿಡ್ಡುಜಿಡ್ಡಾದ, ಬೆಂಕಿ ಹೊತ್ತಿಸಿದರೆ ಉರಿಯುವ, ದ್ರವ ಪದಾರ್ಥ). [Fatty or fixed oils ಜಿಡ್ಡುಜಿಡ್ಡಾಗಿಯೂ ಬಟ್ಟಿಯಿಳಿಸಲು ಬಾರದೆಯೂ ಇರುವ ಪ್ರಾಣಿಸಂಬಂಧವಾದ ಅಥವಾ ಸಸ್ಯಸಂಬಂಧವಾದ ತೈಲಗಳು; ಸ್ಥಿರ ತೈಲಗಳು. ಇವುಗಳಲ್ಲಿ ಎರಡು ಪಂಗಡ: Drying oils (ಗಾಳಿಗೊಡ್ಡಿದರೆ ಕ್ರಮೇಣ ಗಟ್ಟಿಯಾಗಿ ಮೆರುಗಾಗುವ) ಆರುವ ಎಣ್ಣೆಗಳು, Non-drying oils (ಗಾಳಿಗೊಡ್ಡಿದರೆ ಮಣುಕಾಗುವ) ಒಣಗದ ಎಣ್ಣೆಗಳು; ಆರ್ದ್ರ ತೈಲಗಳು (ಘರ್ಷಣ ಹಾರಕಗಳಾಗಿಯೂ ಪ್ರಕಾಶಕಗಳಾಗಿಯೂ ಸಾಬೂನು ತಯಾರಿಕೆ, ಮೊ. ಗಳಲ್ಲಿಯೂ ಉಪಯೋಗ). Essential or volatile oils ಕಟುವೂ ತೀಕ್ಷ್ಣವೂ ಆದ, ಬಟ್ಟಿಯಿಳಿಸಲಾಗುವ, ಸಸ್ಯ, ಮೊ. ಗಳ ಸುವಾಸನೆಗೆ ಆಧಾರವಾದ, ಔಷಧಗಳಲ್ಲಿಯೂ ಪರಿಮಳ ದ್ರವ್ಯಗಳಲ್ಲಿಯೂ ಉಪಯೋಗಿಸುವ, ಮು., ಸಸ್ಯಸಂಬಂಧವಾದ, ತೈಲಗಳು; ಚಂಚಲ ತೈಲಗಳು. Mineral oils (ಪ್ರಕಾಶಕಗಳಾಗಿ ಉಪಯೋಗಿಸುವ) ಖನಿಜ ತೈಲಗಳು. O. of almonds ಬಾದಾಮಿಯೆಣ್ಣೆ. O. of vitriol = Sulphuric acid. Cod-liver, Olive, Salad, Hair, o. Pour o. on the flame ಉರಿಯುವ ಬೆಂಕಿಗೆ ಎಣ್ಣೆ (ತುಪ್ಪ) ಸುರಿ; (ರೂಪ.) ಉದ್ರೇಕವನ್ನು, ರೇಗನ್ನು, ಮತ್ತೂ ಹೆಚ್ಚಿಸು. Pour o. on the waters ಸಮಾಧಾನ ಸ್ಥಿತಿಗೆ ತರು; ಕ್ಷೋಭೆಯನ್ನು ಶಾಂತಿಗೊಳಿಸು. Smell of o. ಕಷ್ಟಪಟ್ಟು ವ್ಯಾಸಂಗಮಾಡಿರುವ ಲಕ್ಷಣ ತೋರು. Burn the midnight o. (Burn² ನೋಡಿ). Strike o. ಬಾವಿ, ಸುರಂಗ, ತೋಡಿ ಕಲ್ಲೆಣ್ಣೆಯ (ಪೆಟ್ರೋಲಿಯಂ) ಊಟೆಯನ್ನು ಕಾಣು, ಪಡೆ; (ರೂಪ.) ಸಮೃದ್ಧಿ ಪಡೆ; ಜಯ ಹೊಂದು. O. & vinegar ಪರಸ್ಪರ ವಿರುದ್ಧ ವಸ್ತುಗಳು; ಎಣ್ಣೆ ಸೀಗೇಕಾಯಿ. Strap o. ಬಾರಿನಿಂದ ತೀಡುವುದು]. (ಕಲೆ) ಎಣ್ಣೆಯ ಬಣ್ಣ; ತೈಲ ವರ್ಣ (= O.-colour) (ಸಾ., ಬ. ವ. ದಲ್ಲಿ). ನೀರಿಳಿಯದ ಬಟ್ಟೆ; ಮೇಣಗಪಟ (Oil-skin ನ ಸಂಕ್ಷಿಪ್ತ) (ಸಾ., ಬ. ವ. ದಲ್ಲಿ). **O.-bird, -nut, -palm, -plant, -seed, -tree** ಎಣ್ಣೆ ದೊರೆಯುವ ಹಕ್ಕಿ, ಮೊ. ವು. **O.-cake** (ಎಣ್ಣೆ ತೆಗೆದಮೇಲೆ ಉಳಿಯುವ) ಹಿಂಡಿ (ದನಗಳ ಮೇವಿಗೂ ಗೊಬ್ಬರಕ್ಕೂ ಉಪಯೋಗ). **O.-can** (ಮು., ಯಂತ್ರಗಳಿಗೆ ಎಣ್ಣೆ ಹಾಕುವುದಕ್ಕಾಗಿ, ಉದ್ದ ಮೂತಿಯುಳ್ಳ) ಎಣ್ಣೆಯ ಡಬ್ಬಿ; ಮೂತಿಯ ಡಬ್ಬಿ. **O.-cloth** ಎಣ್ಣೆಯಿಂದ ಪರಿಷ್ಕರಿಸಿ ನೀರಿಳಿಯದಂತೆ ಮಾಡಿದ ಬಟ್ಟೆ; ಮೇಣಗಪಟ; ತೈಲ ಪಟ; (ಆರುವ ಎಣ್ಣೆಯನ್ನು ಹಾಕಿ ಮಾಡಿ) ಮೇಜಿನಮೇಲೆ ಅಥವಾ ನೆಲದಮೇಲೆ ಹಾಸುವುದಕ್ಕೆ ಉಪಯೋಗಿಸುವ ಕಿತ್ತಾನಾರು, ಮೊ. ಬಟ್ಟೆ. **O.-coat** ಮೇಣಗಪಟದ ಅಂಗಿ. **O.-colour** (ಸಾ., ಬ. ವ. ದಲ್ಲಿ) ವರ್ಣದ್ರವ್ಯಕ್ಕೆ ಎಣ್ಣೆ ಹಾಕಿ ಅರೆದು ಮಾಡಿದ ಬಣ್ಣ: ತೈಲ ವರ್ಣ. **O.(-)engine** ಎಣ್ಣೆಯ ಹಬೆಯ ಸ್ಫೋಟನದಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಡೆಯುವ ಎಂಜಿನು: ಎಣ್ಣೆ ಎಂಜಿನು. **O.-field** ಖನಿಜ ತೈಲ ದೊರೆಯುವ ಪ್ರದೇಶ. **O.-gauge** ಎಣ್ಣೆಗಳ ವಿಶಿಷ್ಟಗುರುತ್ವವನ್ನು ಅಳೆಯುವ ಸಲಕರಣೆ: ತೈಲ ವಿಶಿಷ್ಟಗುರುತ್ವ ಮಾಪಕ. **O.-gilding, -gold** (ಅಗಸೆಯೆಣ್ಣೆಗೆ ಹಳದಿಯನ್ನು ಬೆರಸಿದ) ತೈಲವರ್ಣದ ಮೇಲೆ ಚಿನ್ನದ ರೇಕನ್ನು ಹಚ್ಚಿ ಮಾಡಿದ ಮುಲಾಮು. **O.-gland** ಎಣ್ಣೆಯನ್ನು ಸ್ರವಿಸುವ ಗ್ರಂಥಿ: ತೈಲ ಗ್ರಂಥಿ. **O.-hole** ಯಂತ್ರಗಳಲ್ಲಿ ತಿಕ್ಕಾಟ, ಮಸೆದಾಟ, ಕಡಮೆ ಮಾಡಲು, ಘರ್ಷಣಾಪಹರಣಕ್ಕಾಗಿ ಎಣ್ಣೆ ಒಳಪೊಸರುವಂತೆ ಮಾಡಿರುವ ರಂಧ್ರ: ತೈಲ ರಂಧ್ರ. (**Oilman** ಎಣ್ಣೆ ಮಾಡುವವನು; —ಮಾರುವವನು; ಗಾಣಿಗ; ಎಣ್ಣೆಯವನು). **O.-meal** ಪುಡಿಹಿಂಡಿ. **O.-paint** = O.-colour. **O.-painting** ತೈಲ(ವರ್ಣ)ಚಿತ್ರ (ಕಲೆ). **O.-paper** ಎಣ್ಣೆಯಲ್ಲಿ ಅದ್ದಿ ಪಾರದರ್ಶಕವಾಗಿ ಅಥವಾ ನೀರಿಳಿಯದಂತೆ ಮಾಡಿದ ಕಾಗದ: ಎಣ್ಣೆ ಕಾಗದ. **O.-press** ಬೀಜ, ಮೊ. ಗಳಿಂದ ಎಣ್ಣೆ ತೆಗೆಯುವ ಯಂತ್ರ; ಗಾಣ. **Oilskin** ಎಣ್ಣೆಯುಪಯೋಗಿಸಿ ನೀರಿಳಿಯದಂತೆ ಮಾಡಿದ ಬಟ್ಟೆ; ಮೇಣಗಪಟ; ಇದರ ಉಡಿಗೆ; (ಬ. ವ. ದಲ್ಲಿ) ಇದರಿಂದ ಮಾಡಿದ ತೊಡುವ ಉಡಿಗೆಗಳು. **O.-spring** ಕಲ್ಲೆಣ್ಣೆಯ, ಖನಿಜ ತೈಲದ, ಊಟೆ. **Oilstone** ಎಣ್ಣೆ ಹಾಕಿ ಚೂರಿ, ಮೊ. ನ್ನು ಮಸೆಯುವ (ಸೂಕ್ಷ್ಮ ಕಣಗಳುಳ್ಳ) ಸಾಣೆಯ ಕಲ್ಲು; ಮಸೆಗಲ್ಲು. **Óilless** (ಗು.); **Óily** ಆಯ್ಲಿ (ಗು.) ಎಣ್ಣೆಯ(ಂಥ); ಎಣ್ಣೆ ಬಳಿದ; ಎಣ್ಣೆಯಿಂದ ನೆನೆದ, ನೆನಸಿದ. (ನಡೆವಳಿ, ಮೊ. ದು) ಅತಿ ದೈನ್ಯ ತೋರಿಸುವ; ಹಲ್ಲುಗಿರಿಯುವ; ಹೊಸೆದುಕೊಂಡುಹೋಗುವ; ನುಸಿದುಕೊಳ್ಳುವ; ಮುಖಸ್ತುತಿ ಮಾಡುವ; ಬೆಣ್ಣೆಯಂತೆ ನಯ ತೋರುವ. **Óilily** (ಕ್ರಿ. ವಿ.); **Óiliness** (ನಾ.)

Oil (ಕ್ರಿ.) ಎಣ್ಣೆ ಹಚ್ಚು, ಬಳಿ; ಘರ್ಷಣಾಪಹಾರಿಯನ್ನು, ನಯಕಾರಿಯನ್ನು, —ಹಾಕು [O. the wheels (ನಲೀಸಾಗಿ ಹೋಗುವಂತೆ) ಗಾಲಗಳಿಗೆ ಎರೆ, ಕಂದನೆ,—ಹಾಕು. (ರೂಪ.) (ಮರ್ಯಾದೆ ತೋರಿ, ಲಂಚ, ಮೊ. ನ್ನು ಕೊಟ್ಟು) ಕೆಲಸ ಸರಾಗವಾಗಿ ನಡೆಯುವಂತೆ ಮಾಡು. O. one's hand *or* O. one ಲಂಚ ಕೊಡು; ಕೈ ಬೆಚ್ಚಗೆ ಮಾಡು. O. one's tongue ಬೆಣ್ಣೆಮಾತಾಡು; ಮುಖಸ್ತುತಿ ಮಾಡು]. (ಬೆಣ್ಣೆ, ಚರಬಿ, ಮೊ.) ಕರಗಿಸಿ ಎಣ್ಣೆಯಂತೆ ಮಾಡು, ಕರಗಿ ಎಣ್ಣೆಯಂತಾಗು. ಎಣ್ಣೆ ಹಾಕು; ಎಣ್ಣೆಯಿಂದ ನೆನೆಯಿಸು (Oiled sardines. Oiled silk ಎಣ್ಣೆ ಉಪಯೋಗಿಸಿ ನೀರಿಳಿಯದಂತೆ ಮಾಡಿದ ರೇಷ್ಮೆ: ಎಣ್ಣೆರೇಷ್ಮೆ). **Oiled** (ಗು.) ಎಣ್ಣೆಹಾಕಿದ. (ಅಸಂ.) ಸ್ವಲ್ಪ (ಕುಡಿದು) ಅಮಲೇರಿದ. **Óiler** (ನಾ.) (ಕ್ರಿಯಾರ್ಥಗಳಲ್ಲಿ). ಯಂತ್ರಕ್ಕೆ ಎಣ್ಣೆಹಾಕುವ ಉದ್ದಮೂತಿಯ ಡಬ್ಬಿ. (ಅಸಂ.) ಬೆಣ್ಣೆ ಮಾತಾಡುವವನು; ಹೊಗಳುಭಟ್ಟ.

Óintment ಆಯ್‌ಂಟ್‌ಮೆಂಟ್ (ನಾ.) ಗಾಯ ವಾಸಿಮಾಡಲು, ಸೌಂದರ್ಯ ಹೆಚ್ಚಿಸಲು, ಚರ್ಮಕ್ಕೆ ಬಳಿಯುವ ಜಿಡ್ಡುಪದಾರ್ಥ; ಮುಲಾಮು; ಅನುಲೇಪ(ನ)

Okápi ಒಕಾಪಿ (ನಾ.) ಜಿರಾಫ್ಹೆ, ಜಿಂಕೆ (ಚಿಗರಿ), ಸ್ಸೀಬ್ರ—ಇವುಗಳ ಹೋಲಿಕೆಯುಳ್ಳ, ಮಧ್ಯ ಆಫ್ರಿಕ ನಿವಾಸಿಯಾದ, ಒಂದು ಮೆಲುಕು ಹಾಕುವ ಪ್ರಾಣಿ: 'ಒಕಾಪಿ'.

Old ಓಲ್ಡ್ [ಗು.; ತರ ತಮ ರೂಪಗಳು: (ವಿಶೇಷಾರ್ಥಗಳಲ್ಲಿ) Elder, Eldest; (ಸಾಮಾನ್ಯವಾಗಿ) Older, Oldest] ವಯಸ್ಸಾದ; (—ಇಷ್ಟು) ವಯಸ್ಸಾದ; ಮುದಿ; ಮುಪ್ಪಿನ; ವೃದ್ಧ; ಎಳಸಲ್ಲದ; ಆರಂಭ ದಸೆ ಮೀರಿದ; ಹಳೆಯದಾದ; ಉಪಯೋಗವಳಿದ; ಶಿಥಿಲವಾದ; ವಿಕಾರವಾದ. ನುರಿತ; ಪಳಗಿದ; ಅನುಭವ ಪಡೆದ. ಬಹಳ ಹಿಂದಿನ; ಪುರಾತನ; ಪ್ರಾಚೀನ; ಈಗಿನದಲ್ಲದ. O. boy, chap, fellow, man (ಸಲಿಗೆಯ ಮಾತು). The o. ವಯಸ್ಸಾದವರು; ಮುದುಕರು; ವೃದ್ಧರು. Young & o. ಆಬಾಲವೃದ್ಧರು; ಎಲ್ಲರೂ. O. age ಮುಪ್ಪು; ಅಪರ ವಯಸ್ಸು. O.-age pensions (ಇಂಗ್ಲೆಂಡಿನಲ್ಲಿ ಕ್ರಿ. ಶಕ ೧೯೦೮-೧೯೨೫ರ ಕಾನೂನಿನ ಮೇರೆ ೬೫, ೭೦ಕ್ಕೆ ಮೇಲ್ಪಟ್ಟ ವಯಸ್ಸಿನವರಿಗೆ ಸಂದರ್ಭಾನುಸಾರ ಕೊಡುವ ವಾರಾಶನ): ವೃದ್ಧಾಶನ. O. Lady of Threadneedle Street ಬ್ಯಾಂಕ್ ಆಫ್ ಇಂಗ್ಲೆಂಡ್ (ಎಂಬ ಇಂಗ್ಲೆಂಡಿನ ಪ್ರಮುಖ ಬ್ಯಾಂಕು). O. man of the sea ಜಿಗುಣೆಯಂತೆ, ಹತ್ತಿದರೆ (ಸುಲಭವಾಗಿ) ಬಿಡದವನು. My o. man (ಬಳ. ಮಾ.) ನನ್ನ ಗಂಡ. My o. woman (ಬಳ. ಮಾ.) ನನ್ನ ಹೆಂಡತಿ. O. woman ಗಡಿಬಿಡಿಯ, ಪುಕ್ಕಲ, —ಮನುಷ್ಯ [**Old-wómanish** (ಗು.); **Old-wómanishness** (ನಾ.); **Old-wómanly** (ಗು.); **Old-wómanliness** (ನಾ.)]. My o. bones ಮುದುಕನಾದ ನಾನು, ನನ್ನನ್ನು. The century grows o. ಶತಮಾನ ಮುಗಿಯುತ್ತಿದೆ. O. head on young shoulders (Head ನೋಡಿ). A man is as o. as he feels ಮನೋಭಾವನೆಗೆ ತಕ್ಕಂತೆ ವಯಸ್ಸು. O. clothes ಹಳೆಯ ಬಟ್ಟೆಬರೆ. Is ten years o. ಹತ್ತು ವರ್ಷ (ವಯಸ್ಸು) ಆಗಿದೆ. A ten-year-o. boy, A boy of ten years o. Four, etc. year o. ನಾಲ್ಕು (ಮೊ.) ವರ್ಷ ವಯಸ್ಸಿನ ವ್ಯಕ್ತಿ, ಪ್ರಾಣಿ [ಆ ವಯಸ್ಸಿನ ಜೂಜು ಕುದುರೆ; (ಬ. ವ. -olds)]. O. in crime, folly, cunning, diplomacy —ಲ್ಲಿ ನುರಿತವನು, ಪಳಗಿದವನು. An o. campaigner (Campaign ನೋಡಿ). An o. offender (ಹಿಂದೆ ಅನೇಕ ಬಾರಿ ಶಿಕ್ಷೆ ಪಡೆದಿರುವ) ಹಳೆಯ ಅಪರಾಧಿ. O. bird (Bird ನೋಡಿ). O. hand ನುರಿತ, ಪಳಗಿದ, ಕೈ; ಅನುಭವಶಾಲಿ (*At* doing); ಪಕ್ಕಾ ಕಳ್ಳ. O. stager (Stager ನೋಡಿ). O. bachelor ವೃದ್ಧ ಅವಿವಾಹಿತ. O. maid ವೃದ್ಧ ಕನ್ಯೆ [**Old-maídish** (ಗು.)]. ಕರಾರುವಾಕಾದ ಮತ್ತು ಅಚ್ಚುಕಟ್ಟಿನ, ಗಡಿಬಿಡಿಯ ಮತ್ತು ಪುಕ್ಕಲೆದೆಯ,—ಮನುಷ್ಯ. ಒಂದು ತೆರದ ಇಸ್ಪೀಟಾಟ. O. Ocean, Night, etc. ಅನಾದಿಯಾದ—. Of o. standing ಬಹಳ ಹಿಂದಿನಿಂದ ಇರುವ; ದೀರ್ಘಸ್ಥಾಪಿತ. O.-established (ಗು.). O. as the hills. O. countries ಬಹು ಹಿಂದಿನಿಂದ ಜನರು ವಾಸವಾಗಿರುವ ಅಥವಾ ನಾಗರಿಕರಾಗಿರುವ ದೇಶಗಳು; ಪ್ರಾಚೀನ ದೇಶಗಳು. O. scores (Score ನೋಡಿ). An o. name, family ಹಿಂದಿನಿಂದ ಪ್ರಸಿದ್ಧವಾದ ಹೆಸರು, ಕುಲ., O. gold (Gold ನೋಡಿ). The o. ಹೊಸತಲ್ಲದ್ದು. O. Testament (ಬೈಬಲ್) ಹಳೆಯ ಒಡಂಬಡಿಕೆ. (ಆಧುನಿಕ ಅಸಂ.) O. bean, egg, fruit, thing, top ಹಳೆಯ ಆಸಾಮಿ. O. England ಹಳೆಯ ಇಂಗ್ಲೆಂಡು (ಅಮೆರಿಕದ New England ಎಂಬುದು ಬೇರೆ). O. English (type) ೧೬ನೆಯ ಶತಮಾನದ ಇಂಗ್ಲಿಷ್ ಮುದ್ರಣಕಾರರು ಉಪಯೋಗಿಸುತ್ತಿದ್ದ ಒಂದು ತೆರದ ಕಪ್ಪಕ್ಷರ. O. Glory ಅಮೆ. ಸಂ. ದ (ನಕ್ಷತ್ರಗಳೂ ಪಟ್ಟೆಗಳೂ ಇರುವ) ನಿಶಾನಿ, ಧ್ವಜ. The o. one or gentleman. O. Harry, Nick, Scratch, etc. ಸೈತಾನ. Good o. (ವ್ಯಕ್ತಿಯ ಅಥವಾ ವಸ್ತುವಿನ ವಿಷಯದಲ್ಲಿ ನಿಜವಾದ ಅಥವಾ ವ್ಯಂಗ್ಯವಾದ ಮೆಚ್ಚಿಕೆ ತೋರಿಸುವಾಗ, ಅದರ ಹೆಸರಿನೊಡನೆ ಪ್ರ.: The good o. times ಹಳೆಯ ಕಾಲದ ಸಂಪ್ರದಾಯಗಳು, ಮೊ. ವು). Any o. thing (ಅಸಂ.) ಯಾವುದೋ ಒಂದು; ಯಾವುದಾದರೂ ಸರಿ. O. fashions ಬಳಕೆ ತಪ್ಪಿದ ಪದ್ಧತಿಗಳು, ರೀತಿಗಳು. **Old-fáshioned** (ಗು.): **Old-fáshionedness** (ನಾ.) (ಎದುರು ಪದ: New-fangled, ಮೊ. ದು). Am old-fashioned enough to think ನಾನು (ಹೀಗೆ) ಯೋಚನೆ ಮಾಡುವಷ್ಟುಮಟ್ಟಿನ ಹಳೆಯ ಪದ್ಧತಿಯವನು. Of the old school ಹಳೆಯ ಸಂಪ್ರದಾಯದ; —ಕಂದಾಚಾರದ. The o. country, home, etc. (ನೆಲಸು ನಾಡಿನವರು ತಮ್ಮ ತಾಯಿನಾಡನ್ನು ಕುರಿತು ಆಡುವ ಮಾತು). Call up o. memories ಹಳೆಯ ನೆನಪುಗಳನ್ನು ಜ್ಞಾಪಕಕ್ಕೆ ತರು. The o. order changeth ಹಳೆಯ ಸಂಪ್ರದಾಯಗಳು ಮಾರ್ಪಡುತ್ತವೆ. O. boy (ಶಾಲೆಯ) ಹಳೆಯ ವಿದ್ಯಾರ್ಥಿ. O. Masters ಹಿಂದಿನ ಪ್ರಸಿದ್ಧ ಚಿತ್ರಕಲಾ ಕುಶಲಗಳು; ಅಂಥವರ ಕೃತಿಗಳು (Master ನೋಡಿ). O. Paris, England, London ಪುರಾತನದ—; ಇವುಗಳ ಪುರಾತನ ಅವಶೇಷಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

The o. man ಪ್ರಾಕೃತ ಮನುಷ್ಯತ್ವ. The O. World ಪೂರ್ವಾರ್ಧ ಗೋಳ. O.-world ಅಮೆರಿಕದ್ದಲ್ಲದ ; ಹಳೆಯ ಕಾಲದ. O.-time (ವಿಶೇಷಣವಾಗಿ) ಹಳೆಯ ಕಾಲದ. O. style (ಸಂಕ್ಷಿಪ್ತ : O.S.) (Style ನೋಡಿ). The o. year ಆಗ ತಾನೆ ಮುಗಿದ, ಮುಗಿಯುತ್ತಿರುವ, ವರ್ಷ. O.-clothes-man ಹಳೆಯ ಬಟ್ಟೆಗಳ ವ್ಯಾಪಾರಿ. **Óldish** (ಗು.); **Óldness** (ನಾ.) (ವಿರ. ಪ್ರ.); **Ólden** (ಗು., ಕ್ರಿ.) (ಪ್ರಾಚೀ. ಪ್ರ.; ಸಾಹಿತ್ಯ) ಹಳೆಯ ಕಾಲದ ; ಪ್ರಾಚೀನ ; ಪುರಾತನ (ಮು., The o. time). (ಕ್ರಿ.) ಮುಪ್ಪು ಮಾಡು ; ಮುಪ್ಪಾಗು ; ಮುಪ್ಪಿನಿಂದ ಶಕ್ತಿಗುಂದು ; (—ಹೇಗೊ ಹಾಗೆ) ಶಕ್ತಿಗುಂದಿಸು. **Óldster** (ನಾ.) ಪ್ರಾಯ ಮೀರಿದವನು (ಸಾ., Youngster ಎಂಬುದಕ್ಕೆ ವಿರುದ್ಧ ಪ್ರ.)

Old (ನಾ.) ಹಿಂದಿನ, ಪೂರ್ವ, —ಕಾಲ (Of o. ಎಂಬಲ್ಲಿ ಮಾತ್ರ. ಗು., ಕ್ರಿ. ವಿ.: The men of o. ಪುರಾತನರು. Of o. there were giants ಹಿಂದೆ ಮಹಾ ಮಹಾ ಪುರುಷರಿದ್ದರು. Have heard it of o. ಬಹು ಕಾಲ ಹಿಂದೆಯೇ ಅದನ್ನು ಕೇಳಿದ್ದೇನೆ)

Oleáginous ಓಲಿಯ್ಯಾಜಿನಸ್ (ಗು.) ಎಣ್ಣೆಯ ಲಕ್ಷಣಗಳುಳ್ಳ ; ಎಣ್ಣೆ ಇರುವ, ಬರುವ ; ಎಣ್ಣೆಯಂಥ ; ಜಿಡ್ಡು ಜಿಡ್ಡಾದ.

Oleánder ಓಲಿಯ್ಯಾಂಡರ್ (ನಾ.) ಈಟಿಯಾಕಾರದ ಎಲೆಗಳೂ ಅಂದವಾದ ಕೆಂಪು ಅಥವಾ ಬಿಳಿಯ ಹೂವುಗಳೂ ಬಿಡುವ ಒಂದು ನಿತ್ಯ ಹಸುರಿನ ವಿಷ ಸಸ್ಯ ; ಕಣಿಗಿಲು ಗಿಡ ; ಕರವೀರ ; ಪದ್ಮಳಿ.

Oleáster ಓಲಿಯ್ಯಾಸ್ಟರ್ (ನಾ.) ಕಾಡು ಆಲಿವ್ ಮರ ; ಹಳದಿ ಹೂವು ಬಿಡುವ ಇಂಥ ಒಂದು ಸಣ್ಣ ಮರ.

Oleo- ಓಲಿಯೊ— (ಸ. ಪೂ. ಪ.) ಎಣ್ಣೆ— ; ತೈಲ— . **-graph** ತೈಲವರ್ಣ ಮುದ್ರಣದ ಚಿತ್ರ. **-graphy** ತೈಲವರ್ಣ ಮುದ್ರಣ. **-márgarine** ಮಾರ್ಗರೀನ್ ಎಂಬ ಕೃತಕ ಬೆಣ್ಣೆಯನ್ನು ಮಾಡಲು ಬೆರಸುವ, ದನದ ಕೊಬ್ಬಿನಿಂದ ತೆಗೆದ, ಒಂದು ಜಿಡ್ಡು ಪದಾರ್ಥ. **-meter** (ಓಲಿಯಾಮಿಟರ್) ಎಣ್ಣೆಗಳ ಸಾಂದ್ರತೆಯನ್ನೂ ಪರಿಶುದ್ಧತೆಯನ್ನೂ ಅಳೆಯುವ ಸಲಕರಣೆ. **-résin** ಚಂಚಲ ತೈಲ ಮತ್ತು ರಾಳ—ಇವುಗಳ ಸ್ವಾಭಾವಿಕ ಮಿಶ್ರಣ ; =A balsam ; (ಸ್ಥಿರ ತೈಲ ಅಥವಾ ಚಂಚಲ ತೈಲವನ್ನು ರಾಳ, ಮೊ. ಗಳೊಡನೆ ಬೆರಸಿ ಮಾಡಿದ) ಕೃತಕ ರಾಳತೈಲ.

Olfáction ಆಲ್‌ಫ್ಯಾಕ್‌ಷನ್ (ನಾ.) ಮೂಸಿ ನೋಡುವುದು ; ಆಘ್ರಾಣ ಶಕ್ತಿ. **Olfáctive** (ಗು.) ; **Olfáctory** (ಗು., ನಾ.) ವಾಸನೆ ನೋಡುವುದಕ್ಕೆ ಸಂಬಂಧಿಸಿದ ; ಘ್ರಾಣ ಸಂಬಂಧಿ (O. organ ಮೂಗು. O. nerves ಘ್ರಾಣೇಂದ್ರಿಯದ ನರಗಳು). (ನಾ. ; ಸಾ., ಬ. ವ. ದಲ್ಲಿ) ಮೂಗು ; ನಾಸಿಕ ; ಘ್ರಾಣೇಂದ್ರಿಯ.

Olfáctory. **Olfaction** ನೋಡಿ.

Olíbanum ಒಲಿಬನಂ (ನಾ.) ಧೂಪವಾಗಿ ಉಪಯೋಗಿಸುವ ಸುವಾಸನೆಯ ಒಂದು ಗೋಂದುಪದಾರ್ಥ : ಗುಗ್ಗುಲ ; ಲೋಬಾನ.

Ólid ಆಲಿಡ್ (ಗು.) ಗಬ್ಬುನಾತದ ; ದುರ್ವಾಸನೆಯ.

Óligarch. **Oligarchy** ನೋಡಿ.

Óligarchy ಆಲಿಗಾರ್ಕಿ (ನಾ.) ಕೆಲ ಮಂದಿ ಮಾತ್ರ ಆಡಳಿತ ನಡಸುವ ರಾಷ್ಟ್ರ, ಸರ್ಕಾರ ; ಸ್ವಲ್ಪಜನಾಧಿಪತ್ಯ. **Óligarch** (ನಾ.) —ದ ಸದಸ್ಯ. **Oligárchic(al)** (ಗು.) ; **Oligárchically** (ಕ್ರಿ. ವಿ.)

Óligocene ಆಲಿಗೊಸೀನ್ (ಗು.) (ಭೂ. ವಿ.) ತೃತೀಯ ಯುಗದ ಧೂಪದರದ ಅತ್ಯಂತ ಕೆಳಗಿನ ಭಾಗಕ್ಕೂ ಮಧ್ಯ ಭಾಗಕ್ಕೂ ನಡುವಣ.

Ólio ಓಲಿಯೊ (ನಾ.) ಹಲವು ಪದಾರ್ಥಗಳನ್ನು ಬೆರಸಿ ಮಾಡಿದ ಭಕ್ಷ್ಯ (ಮು., ಹಲವು ಮಾಂಸಗಳನ್ನೂ ತರಕಾರಿಗಳನ್ನೂ ಬೆರಸಿ ಮಾಡಿದ್ದು). ಕಲಬೆರಕೆ ; ಮಿಶ್ರ ಸಂಕಲನ ; ಸಂಕೀರ್ಣ ವಸ್ತು ಸಂಗ್ರಹ.

Ólive ಆಲಿವ್ (ನಾ., ಗು.) ಆಲಿವ್ ಮರ (=O.-tree) ; ಆಲಿವ್ ಕಾಯಿ, ಬೀಜ (ಕಾಯಿ ಉಪ್ಪಿನಕಾಯಿ ಹಾಕುವುದಕ್ಕೂ ಬೀಜ ಎಣ್ಣೆ ತೆಗೆಯುವುದಕ್ಕೂ ಉಪಯೋಗ). (ಶಾಂತಿ ಸೂಚಕವಾಗಿ) ಆಲಿವ್ ಎಲೆ, ಕೊಂಬೆ, ಎಲೆಗಳ ದಂಡೆ [=O.-branch. Hold out the o.-b. (ರೂಪ.) ಶಾಂತಿ ಸಂಧಾನ ನಡಸು ; ಸಂಧಾನಕ್ಕೆ ಬರಲು ಒಲವು ತೋರು]. ಆಲಿವ್ ಮರದ ದಾರು (=O.-wood). ಉದರಪಾದಿ ಮೃದ್ವಂಗಿಗಳಲ್ಲಿ ಆಲಿವ್ ಕಾಯಿಯ ಆಕಾರದ ಚಿಪ್ಪುಳ್ಳ ಜಾತಿ. ಆಲಿವ್ ಬಣ್ಣ. [O. crown ಆಲಿವ್ ಎಲೆಗಳ ಜಯ ಮಾಲೆ. O.-branch (ಮೇಲೆ ನೋಡಿ) ; (ಸಾ., ಬ. ವ. ದಲ್ಲಿ) ಮಗು, ಮಕ್ಕಳು (ಬೈಬಲ್). O.-oil ಆಲಿವ್ ಎಣ್ಣೆ]. (ಗು.) ಎಳೆಯ ಆಲಿವ್ ಕಾಯಿ ಬಣ್ಣದ (=O.-green). (ಮೈಬಣ್ಣ) ಹಳದಿ ಕಂದು. **Oliváceous** ಆಲಿವೇಷಸ್ (ಗು.) (ಪ್ರಕೃತಿ ಚರಿತ್ರೆ) ಆಲಿವ್ ಹಸುರು ಬಣ್ಣದ ; ಮಬ್ಬು ಹಳದಿ ಛಾಯೆಯ ಹಸುರು ಬಣ್ಣದ. **Ólivary** ಆಲಿವರಿ (ಗು.) (ಅಂ. ರ. ಶಾ.) ಆಲಿವ್ ಆಕಾರದ ; ಅಂಡಾಕಾರದ. **Ólivin(e)** ಆಲಿವಿ(ೕ)ನ್, —ವೈನ್ (ನಾ.) (ಸಿಲಿಕ, ಮ್ಯಾಗ್ನೀಸಿಯಂ ಮತ್ತು ಕಬ್ಬಿಣ—ಇವುಗಳ ಸಂಯೋಜನದ) ಆಲಿವ್ ಹಸುರಿನ ಒಂದು ಮಣಿ : 'ಆಲಿವೈನ್'.

Óliver[1] ಆಲಿವರ್ (ನಾ.) ಮೊಳೆ, ಮೊ. ಕ್ಕೆ ರೂಪು ಕೊಡಲು ಉಪಯೋಗಿಸುವ, ಒಂದು ಅಚ್ಚಿಗೆ ಬಂಧಿಸಿ ಕಾಲೊತ್ತಿನಿಂದ ಕೆಲಸ ಮಾಡಲಾಗುವ, ಒಂದು ಬಗೆಯ ಎದ್ದುಬೀಳುವ ಸುತ್ತಿಗೆ.

Óliver[2]. **Roland** ನೋಡಿ.

Ólivin(e). **Olive** ನೋಡಿ.

Ólla podrída (Spanish) ಆಲ ಪೊಡ್ರೀಡ, **Ólla** (ವಿರ. ಪ್ರ.) (ನಾ.) =Olio.

(-)ology —ಆಲೊಜಿ (ಉ. ಪ್ರ.) —ಶಾಸ್ತ್ರ, —ವಿಜ್ಞಾನ. **Ólogy** (ನಾ.) (ಹಾಸ್ಯ ಪ್ರ.) ಯಾವುದಾದರೂ ಶಾಸ್ತ್ರ, ವಿಜ್ಞಾನ ; (ಬ. ವ. ದಲ್ಲಿ) ಶಾಸ್ತ್ರಗಳು ; ಬರಿಯ ತತ್ತ್ವ.

Olýmpiad, etc. **Olympus** ನೋಡಿ.

Olýmpus ಒಲಿಂಪಸ್ (ನಾ.) (ಪ್ರಮುಖ ಗ್ರೀಕ್ ದೇವತೆಗಳ ನಿವಾಸ ಸ್ಥಾನವಾದ, ತೆಸಲೀ ದೇಶದ) ಒಲಿಂಪಸ್ ಬೆಟ್ಟ ; ದೇವ ನಿವಾಸ ; ಸ್ವರ್ಗ. **Olýmpiad** ಒಲಿಂಪಿಯ್ಯಾಡ್ (ನಾ.) ಪುರಾತನ ಗ್ರೀಕರು ಕಾಲಗಣನೆಗೆ ಬಳಸುತ್ತಿದ್ದ, ಎರಡು ಒಲಿಂಪಿಕ್ ವ್ಯಾಯಾಮ ಪಂದ್ಯಗಳ ನಡುವಣ, ನಾಲ್ಕು ವರ್ಷಗಳ ಅಂತರ : ಒಲಿಂಪಿಕ್ ಶಕ (ಸಂಕ್ಷಿಪ್ತ : Ol.) ; ಒಲಿಂಪಿಕ್ ವ್ಯಾಯಾಮ ಪಂದ್ಯಗಳ ಮೊದಲನೆಯ ವರ್ಷ (ಕ್ರಿ. ಪೂ. ೭೭೬ ; ಇಲ್ಲಿಂದ ಕಾಲಗಣನೆ). **Olýmpian** (ಗು., ನಾ.) ಒಲಿಂಪಸ್ಸಿನ ; ದೇವಲೋಕದ ; ಸ್ವರ್ಗದ. (ನಡವಳಿ, ಮೊ. ವು) ದಿವ್ಯವಾದ ; ಶ್ರೇಷ್ಠವಾದ ; ಅನುಗ್ರಹ ತೋರಿಸುವ. =Olympic. (ನಾ.) ಒಲಿಂಪಸ್ಸಿನ ನಿವಾಸಿ ; ಪುರಾತನ ಗ್ರೀಕ್ ಮಹಾದೇವತೆ (ಗಳಲ್ಲೊಬ್ಬನು). ಅತಿಮಾನುಷ ಶಾಂತಿ ಮತ್ತು ತಾಟಸ್ಥ್ಯ ಉಳ್ಳವನು. **Olýmpic** (ಗು.) ಒಲಿಂಪಿಯದ ; ಒಲಿಂಪಿಯದಲ್ಲಿಯ (O. games ಪುರಾತನ ಗ್ರೀಕರು ಒಲಿಂಪಿಯ ಪಟ್ಟಣದಲ್ಲಿ ನಾಲ್ಕು ವರ್ಷಕ್ಕೊಮ್ಮೆ ನಡಸುತ್ತಿದ್ದ ವ್ಯಾಯಾಮದ, ಸಾಹಿತ್ಯ ಮತ್ತು ಸಂಗೀತದ, ಸ್ಪರ್ಧೆಗಳು : ಒಲಿಂಪಿಕ್ ಸ್ಪರ್ಧೆಗಳು. ಮೊದಲು ಆಥೆನ್ಸ್ ಪಟ್ಟಣದಲ್ಲಿ ಆರಂಭವಾಗಿ ನಾಲ್ಕು ವರ್ಷಕ್ಕೊಮ್ಮೆ ಈಗ ಬೇರೆ ಬೇರೆ ಕಡೆಗಳಲ್ಲಿ ನಡೆಯುವ ಅಂತರ ರಾಷ್ಟ್ರೀಯ ವ್ಯಾಯಾಮ ಸ್ಪರ್ಧೆಗಳು)

Ómega ಓಮಿಗ, **Oméga** —ಮೆ— (ನಾ.) ಗ್ರೀಕ್ ವರ್ಣಮಾಲೆಯ ಕೊನೆಯ ಅಕ್ಷರ : ಓ (Ω, ω) ; ಶ್ರೇಣಿಯಲ್ಲಿ ಕೊನೆಯದು ; ಅಂತ್ಯ ಪರಿಣಾಮ, ಪರ್ಯವಸಾನ, ಮೊ.ದು (Alpha & O. ಆದಿಯೂ ಅಂತ್ಯವೂ)

Ómelet(te) ಆಮ್ಲೆಟ್ (ನಾ.) ಕಡೆದ ಮೊಟ್ಟೆಯ ಲೋಳೆಯನ್ನು ಬೆಂದ ಕಾವಲಿಯಮೇಲೆ ಹಾಕಿ ಸುರುಳಿ ಸುತ್ತಿ (ಅನೇಕ ವೇಳೆ ಇತರ ಪದಾರ್ಥಗಳಿಂದ ರುಚಿಕಟ್ಟಿ) ಮಾಡಿದ ಒಂದು ಬಗೆಯ ದೋಸೆ. Cannot make an o. without breaking eggs ('ಹಾಲು ಹುಳಿಯದೆ ಮೊಸರಾಗದು' ಎಂಬಂತೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ómen ಓಮೆನ್ (ನಾ., ಕ್ರಿ. ಸಕ.) ಒಳ್ಳೆಯದರ ಅಥವಾ ಕೆಟ್ಟದ್ದರ ಸೂಚನೆ ಕೊಡುವ ಘಟನೆ, ವಸ್ತು : ಶಕುನ ; ನಿಮಿತ್ತ ; ಭವಿಷ್ಯ (ಸೂಚನೆ) (Is of good o. ಶುಭ ಶಕುನವಾಗಿದೆ). (ಕ್ರಿ.) —ತೋರು, ಸೂಚಿಸು ; ಶಕುನವಾಗು. **Óminous** ಆ(ಓ)ಮಿನಸ್ (ಗು.) (ವಿರ. ಪ್ರ.) (ಒಳ್ಳೆಯ, ಕೆಟ್ಟ) ಶಕುನ ತೋರುವ, ಶಕುನವಾಗಿರುವ ; ಭವಿಷ್ಯ ಸೂಚಕ. ಅಪಶಕುನದ ; ಅನಿಷ್ಟಕರ ; ಅಶುಭದ ; ಕೇಡು ತೋರುವ ; ವಿಪತ್ತು ಬರುವುದನ್ನು ಸೂಚಿಸುವ ; ಭಯ ಸೂಚಕ. **Óminously** (ಕ್ರಿ. ವಿ.)

Oméntum ಒಮೆಂಟಂ (ನಾ. ; ಬ. ವ. -ta) (ಅಂ. ರ. ಶಾ.) ಜಠರವನ್ನು ಹೊಟ್ಟೆಯಲ್ಲಿಯ ಇತರ ಅಂಗಗಳೊಡನೆ ಸಂಬಂಧಿಸುವ ಸೂಕ್ಷ್ಮ ಚರ್ಮದ ಮಡಿಕೆ. **Oméntal** (ಗು.)

Ómicron ಆಮಿಕ್ರಾನ್, **Omícron** ಒಮೈಕ್ರನ್ (ನಾ.) ಗ್ರೀಕ್ ವರ್ಣಮಾಲೆಯ 'ಒ' ಅಕ್ಷರ (O, o)

Óminous. **Omen** ನೋಡಿ.

Omíssion, etc. **Omit** ನೋಡಿ.

Omít ಒಮಿಟ್ (ಕ್ರಿ. ಸಕ.) ಬಿಟ್ಟುಬಿಡು ; ಸೇರಿಸದಿರು ; ಮಾಡದೆ ಬಿಡು ; ಮಾಡದೆ ತಪ್ಪು. **Omíssible** (ಗು.) ; **Omíssion** (ನಾ.) (ಕ್ರಿಯಾರ್ಥಗಳಲ್ಲಿ). ಕರ್ತವ್ಯ ಲೋಪ (Sins of o. & commission ಮಾಡಬೇಕಾದದ್ದನ್ನು ಬಿಟ್ಟು ಮಾಡಬಾರದುದನ್ನು ಮಾಡಿ ಬಂದ ಪಾಪಗಳು). **Omíssive** (ಗು.)

Omni- ಅಮ್ನಿ— (ಸ. ಪೂ. ಪ. : 'ಎಲ್ಲ, ಸರ್ವ, ಎಲ್ಲ ವಸ್ತುಗಳ, ಎಲ್ಲ ಮಾರ್ಗಗಳಲ್ಲಿ, ಎಲ್ಲ ಸ್ಥಳಗಳಲ್ಲಿ,' ಮೊ. ಅರ್ಥಗಳಲ್ಲಿ) **-cómpetent** (ನ್ಯಾ. ಶಾ.) ಎಲ್ಲ ವ್ಯವಹಾರಗಳಲ್ಲೂ ಅಧಿಕಾರವ್ಯಾಪ್ತಿಯಿರುವ. **-fárious** ಎಲ್ಲ ಬಗೆಯ. **-fic** ಎಲ್ಲವನ್ನೂ ಸೃಷ್ಟಿಸುವ ; ಸರ್ವ ಸೃಷ್ಟಿಕರ್ತನಾದ. **-genous** ಎಲ್ಲ ಬಗೆಗಳ. **-potence** ಅನಂತ ಶಕ್ತಿ ; ದೇವರು ; ಮಹತ್ವಭಾವ ; ಅಪಾರ ಮಹಿಮೆ. **-potent** (ಗು.) (The O. ಸರ್ವ ಶಕ್ತ : ದೇವರು). **-potently** (ಕ್ರಿ. ವಿ.) ; **-présence** ಸರ್ವ ವ್ಯಾಪಕತೆ; ವಿಸ್ತಾರ ವ್ಯಾಪ್ತಿ; ಸರ್ವತ್ರ ಗೋಚರ. **-présent** (ಗು.) ; **-science** (—ಷೆನ್ಸ್, —ಷಿಯೆನ್ಸ್) ಸಂಪೂರ್ಣ ಪ್ರಜ್ಞೆ ; ಸರ್ವಜ್ಞತ್ವ. ದೇವರು. ವಿಶಾಲ ಜ್ಞಾನ(ದ ನಟನೆ). **-scient** (ಗು.) The O. ದೇವರು). **-sciently** (ಕ್ರಿ. ವಿ.); **-vorous** ಸಿಕ್ಕಿದ್ದನ್ನೆಲ್ಲ ತಿನ್ನುವ ; ಸರ್ವ ಭಕ್ಷಕ ; ಸರ್ವ ಗ್ರಾಹಿ (ಮು., ರೂಪ. : ಓದಿನ ವಿಷಯದಲ್ಲಿ). **-vorously** (ಕ್ರಿ. ವಿ.) ; **-vorousness** (ನಾ.)

Ómnibus ಅಮ್ನಿಬಸ್ (ನಾ. ; ಬ. ವ. -uses ; ಗು.) ಸಾ., ಮೇಲ್ಮುಚ್ಚು ಇರುವ, ಅದರ ಮೇಲ್ಗಡೆಯೂ ಒಳಗೂ ಕುಳಿತುಕೊಳ್ಳಲು ಪೀಠಗಳುಳ್ಳ, ಗೊತ್ತಾದ ದಾರಿಯಲ್ಲಿ ಸಂಚರಿಸುತ್ತ ಗೊತ್ತಾದ ಕಡೆ ಅಥವಾ ಬೇಕಾದ ಕಡೆ ನಿಂತು ಜನರನ್ನು ಇಳಿಸುವ ಅಥವಾ ಹತ್ತಿಸಿಕೊಳ್ಳುವ, ಸರ್ವರ ಉಪಯೋಗದ, ನಾಲ್ಕು ಚಕ್ರದ ಬಾಡಿಗೆ ಬಂಡಿ : '(ಅಮ್ನಿ)ಬಸ್ಸು' (=Bus). ಹೋಟಲಿನ ಆಗಂತುಕರನ್ನು ರೈಲ್ವೆ ನಿಲ್ದಾಣದಿಂದ ಹೋಟಲಿಗೂ ಹೋಟಲಿನಿಂದ ರೈಲ್ವೆ ನಿಲ್ದಾಣಕ್ಕೂ ಸಾಗಿಸುವ ವಾಹನ : ಹೋಟಲು ಬಸ್ಸು (= Hotel o.). ರೈಲ್ವೆ ಕಂಪೆನಿಯವರು ಪ್ರಯಾಣಿಕರನ್ನೂ ಅವರ ಸಾಮಾನನ್ನೂ ರೈಲ್ವೆ ನಿಲ್ದಾಣದಿಂದ ಅವರ ಮನೆಗೂ, ಮನೆಯಿಂದ ರೈಲ್ವೆ ನಿಲ್ದಾಣಕ್ಕೂ ಸಾಗಿಸುವುದಕ್ಕಾಗಿ ಇಟ್ಟಿರುವ ಬಸ್ಸು ; = Private *or* family o. (ಗು.) ಒಂದೇ ಬಾರಿ ಹಲವು ಉದ್ದೇಶಗಳನ್ನು ಪೂರಯಿಸಲುಳ್ಳ ; ಹಲವು ವಿಷಯಗಳನ್ನೊಳಕೊಂಡ [An o. bill, resolution, clause, etc. O. (book) (ಸಾ., ಒಬ್ಬನೇ ಲೇಖಕನ ಹಲವು ಕಥೆಗಳು, ನಾಟಕಗಳು, ಮೊ. ನ್ನುಳ್ಳ, ಎಲ್ಲರೂ ಕೊಳ್ಳಲು ಅನುಕೂಲನುವಂತೆ ಅಗ್ಗವಾಗಿ ಮುದ್ರಿಸಿ ಪ್ರಕಟಿಸಿದ) ಅನೇಕ ವಿಷಯ ಸಂಗ್ರಹ ಪುಸ್ತಕ. O. box ಸಂಗೀತ ನಾಟಕ ಮಂದಿರದ ಕುಳಿಯಲ್ಲಿಯ ಅಂತಸ್ತುಗಳಲ್ಲಿ ಹಲವರು ಚಂದಾದಾರರು ಒಟ್ಟಿಗೆ ಉಪಯೋಗಿಸಲಾಗುವ ದೊಡ್ಡ ಪ್ರತ್ಯೇಕ ಪೀಠಪೆಟ್ಟಿಗೆ. O. train ಎಲ್ಲ ನಿಲ್ದಾಣಗಳಲ್ಲೂ ನಿಲ್ಲುವ ರೈಲುಬಂಡಿ. O. bar, wire, etc. (ವಿದ್ಯುತ್) ಒಟ್ಟು ವಿದ್ಯುತ್ಪ್ರವಾಹವು ಹರಿಯುವ ಸಲಾಕಿ, ತಂತಿ, ಮೊ. ದು]

Ómnium gátherum ಅಮ್ನಿಯಂ ಗ್ಯಾದರಂ (ನಾ.) ನಾನಾ ಜನರ ಅಥವಾ ವಸ್ತುಗಳ ನೆರವಿ ; ಕಲಬೆರಕೆ ಕೂಟ ; ವಿಲಕ್ಷಣ ಕೂಟ ; ಎಲ್ಲರಿಗೂ ಆಹ್ವಾನವಿರುವ ಸಭೆ.

Ómoplate ಓಮೊಪ್ಲೇಟ್ (ನಾ.) ಹೆಗಲು ಮೂಳೆ ; ಸ್ಕಂಧಾಸ್ಥಿ.

On ಆನ್ (ಉಪ.) ಮೇಲೆ ; —ಲ್ಲಿ ; ಆಧಾರದಮೇಲೆ ; —ಗೆ ; —ಕ್ಕೆ. (ಮುಂದೆ ಕೊಡುವ ಅರ್ಥಸೂಚಕವಾಗಿ) :—

(೧) ಸ್ಥಾನ ವಿಷಯಕ (ಒಂದಕ್ಕೆ ತಗುಲುವಂತೆ ಅದರಮೇಲೆ, ಸ್ವಲ್ಪ ದೂರದಲ್ಲಿ ಮೇಲ್ಗಡೆ, ಹತ್ತಿರ, ಕಡೆ).—Floats on the water —ಮೇಲೆ—. Travels on foot ಕಾಲ್ನಡಗೆಯಲ್ಲಿ—. On horseback —ಮೇಲೆ—. Took a solemn oath on the Bible —ಮೇಲೆ—. They browse on shrubs ಪೊದರನ್ನು ಮೇಲೆ ಮೇಲೆ ಮೇಯುತ್ತವೆ. It hangs on a wall —ಮೇಲೆ—. The place is on the State frontier —ಗಡಿಯಲ್ಲಿದೆ. The numbers on either side ಪ್ರತಿ ಪಕ್ಕದಲ್ಲಿಯು—.

(೨) ಕಾಲ ವಿಷಯಕ, ಕಾಲ ಸೂಚಕ.—It was presented to him on the day of his wedding —ಅಂದು—. On hearing this I changed my plan —ಬಳಿಕ—.

(೩) ಕ್ರಮ, ಅಳವಡಿಕೆ, ರೀತಿ, ಸ್ಥಿತಿ.—Nine little islands on a row ಒಂದು ಸಾಲನಲ್ಲಿ—. The birth of Christ was on this wise —ಈ ಪ್ರಕಾರದಲ್ಲಿ—. On the cheap ಅಗ್ಗವಾಗಿ. On fire ಉರಿಯುತ್ತ. On the watch ಕಾವಲುಮೇಲೆ.

(೪) ಭೌತ ವಸ್ತುವಿನದಲ್ಲದ ಆಧಾರ.—On account of —ಕಾರಣದಿಂದ. On an average ಸರಾಸರಿಯ ಮೇಲೆ. On the whole ಒಟ್ಟಿನಮೇಲೆ. A scholar on the foundation ಧರ್ಮನಿಧಿಯ ಆಧಾರದಮೇಲೆ—. Imprisonment on suspicion ಗುಮಾನಿಯಮೇಲೆ—.

(೫) ಒಂದು ಕಡೆಗೆ, ದಿಕ್ಕಿಗೆ, ಸ್ಥಿತಿಗೆ, —ಚಲನೆ, ಉದ್ದೇಶ, ಮಾರ್ಗದರ್ಶನ.—He threw the coins on the table —ಮೇಲೆ—. A blow on the head —ಮೇಲೆ—. Lay hold on —ಮೇಲೆ ಹಿಡಿತವಿಡು. He drew his knife on her —ಮೇಲೆ—. Turn one's back on —ಕಡೆಗೆ—. The decision which is binding on us —ಮೇಲೆ—. The appellants had failed on the main question —ವಿಷಯದಲ್ಲಿ—. Laplace's book on the stars —ಕುರಿತು—. A tax on paper —ಮೇಲೆ—. On penalty of death ಮರಣ ದಂಡನೆಗೀಡಾಗಿ.

(೬) ಇತರ ಅರ್ಥಗಳು.—Consult with a person on something —ಕುರಿತು—. Congratulate him on his victory —ಜಯಕ್ಕಾಗಿ—

On (ಕ್ರಿ. ವಿ., ಗು., ನಾ.) ಸ್ಥಾನದಲ್ಲಿ : ಆಧಾರದಮೇಲೆ ; ಗೊತ್ತಾದ ಸ್ಥಾನಕ್ಕೆ ; ಒಂದರ ಕಡೆಗೆ (ತಿರುಗಿ, ತಿರುಗಿಸಿ). ಮುಂಮುಂದಕ್ಕೆ. He had a clean shirt on. The gas is on (ಕೊಳವೆಯಲ್ಲಿ) ಅನಿಲ ಹರಿಯುತ್ತಿದೆ. Keep your hair on. From that day on they are foes. Macbeth is on ಮ್ಯಾಕ್‌ಬೆತ್ ನಾಟಕ ನಡೆಯುತ್ತಿದೆ. It was now well on in the afternoon. There was a considerable sea on. If there's going to be a fight, I'm on. To be on (ಬಳ. ಮಾ.) (ಒಂದರ ವಿಷಯದಲ್ಲಿ) ಒಲವಿರುವುದು ; (ಒಂದರಲ್ಲಿ) ಪಕ್ಷ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಹಿಸಲು ಇಷ್ಟವಿರುವುದು (There's a show tonight; are you on ? —ಇಷ್ಟವಿದೆಯೆ ?). On to (ಉಪ.) (—ಮೇಲೆ) ಒಂದು ಸ್ಥಾನಕ್ಕೆ (Jumped on to the landing-stage). Be on to (person) (ಒಬ್ಬನ) ಅಭಿಪ್ರಾಯ ಅರಿತಿರು. (ಕ್ರಿಕೆಟ್) An on drive ದಾಂಡುಗಾರನ ಎಡ ಪಕ್ಕದ ಮೈದಾನದ ಕಡೆಗೆ ಹೊಡೆತ [**On-drive** (ಕ್ರಿ. ಸಕ.)]. On licence ವ್ಯಾಪಾರ ಸ್ಥಳದಲ್ಲಿಯೇ ಮದ್ಯ, ಮೊ. ನ್ನು ಕುಡಿಯುವಂತೆ ಮಾರುವುದಕ್ಕಾಗಿ ಕೊಟ್ಟ ಅಪ್ಪಣೆ ಚೀಟಿ. (ನಾ.) (ಕ್ರಿಕೆಟ್) A fine drive to the on. **Óncoming** (ಗು.) ಹತ್ತಿರಕ್ಕೆ ಬರುತ್ತಿರುವ; ಸಮೀಪಿಸುತ್ತಿರುವ. (ನಾ.) —ವುದು. **Ónfall** (ನಾ.) ಧಾಳಿ; ಆಕ್ರಮಣ. **Ónflow** ಮುಂದು ಹರಿವು. **Óngoing** (ಗು.) ನಡೆಯುತ್ತಿರುವ; ಮುಂದುವರಿಯುತ್ತಿರುವ. **On-goings** (=Goings-on) (ಸಾ., ವಿಲಕ್ಷಣ ಅಥವಾ ಅಕ್ರಮ ವಾದ) ನಡೆವಳಿ. **Ónhanger** =Hanger-on. **Ónlooker** (=Looker-on) ನೋಡುತ್ತಿರುವವನು; ಪ್ರೇಕ್ಷಕ. **Ónrush** (ನಾ.) ಮುಂದೆ ನುಗ್ಗುವುದು; ಮುನ್ನುಗ್ಗು; ಆತುರದ ಅಥವಾ ಜೋರಾದ ನುಗ್ಗು. **Ónset** ಬಹಳ ಬಿರುಸಾದ ದಾಳಿ, ನುಗ್ಗುವಿಕೆ; ಸೈನ್ಯದ ಅಥವಾ ಸೈನ್ಯದಳದ ಆಕ್ರಮಣ, ಮೇಲ್ನುಗ್ಗು (ಮು., At the first onset ಎಂಬಲ್ಲಿ). **Ónslaught** ದಾಳಿ; ಮೇಲ್ನುಗ್ಗು; ಆಕ್ರಮಣ. **Ónward** (ಕ್ರಿ. ವಿ., ಗು.); **Ónwards** (ಕ್ರಿ. ವಿ.) ಇನ್ನೂ ಮುಂದಕ್ಕೆ; ಮುಂದುಗಡೆಗೆ; ಮುಂದುವರಿಯುತ್ತ.

Ónager ಆನಜರ್ (ನಾ.; ಬ. ವ. -s, -gri —ಗ್ರೈ) ಕಾಡುಕತ್ತೆ(ಯಜಾತಿ)

Ónanism ಓನನಿಸ್ಮ್ (ನಾ.) ಮುಷ್ಟಿ ಮೈಥುನ.

Once ವನ್ಸ್ (ಕ್ರಿ. ವಿ., ಸಂ. ಅವ್ಯ., ನಾ.) ಒಂದು ಸಲ; ಒಂದೇ ಸಲ; ಒಂದೇ ಸಂದರ್ಭದಲ್ಲಿ; ಒಮ್ಮೆ; ಒಂದು ಬಾರಿ; ಒಂದರಿಂದ ಗುಣಿಸಿ; ಒಂದು ಅಂತಸ್ತಿನಷ್ಟು. ಹಿಂದೆ; ಒಂದಾನೊಂದು ಕಾಲ ದಲ್ಲಿ; ಎಂದೋ ಒಂದು ಸಲ. [Have read it more than o. Shall die o. O. or twice. O. & again ಕೆಲವು ವೇಳೆ. O. more, again ಮತ್ತೊಂದು ಸಲ; ಮತ್ತೊಮ್ಮೆ. O. for all ಕಡೆಯದಾಗಿ; ಮುಕ್ತಾಯವಾಗಿ; ಒಮ್ಮೆಗೇ. O. in a while *or* way ಬಹಳ ಅಪೂರ್ವವಾಗಿ; ಯಾವಾಗಲೊ ಒಂದೊಂದು ಸಲ. O. & away =O. for all, o. in a way. O. bit twice shy ಒಂದು ಸಲ ಕಚ್ಚಿಸಿಕೊಂಡರೆ ಎರಡು ಸಲ ಹುಷಾರ್. O. two is two ಎರಡೊಂದರೆರಡು. Second cousin o. removed ಒಂದು ತಲೆ ಕಳೆದ ಜ್ಞಾತಿ. If we o. lose sight of him ಒಂದು ಸಲ ಅವನು ನಮ್ಮ ಕಣ್ಣು ತಪ್ಪಿದರೆ. When o. he understands ಒಂದು ಸಲ ಅವನು ಗ್ರಹಿಸಿದರೆ. Have not seen him o. ಒಂದು ಸಲವೂ ಅವನನ್ನು ನೋಡಿಲ್ಲ. O. within call, we are safe ಕೂಗಿದರೆ ಕೇಳುವಷ್ಟು ಹತ್ತಿರಕ್ಕೆ ಹೋದೆವೆಂದರೆ ನಮಗೆ ಭಯವಿಲ್ಲ. O. there was a giant ಒಂದಾನೊಂದು ಕಾಲದಲ್ಲಿ—. A o.-famous doctrine. O.-loved friend. My o. master ನನ್ನ ಹಿಂದಿನ ಯಜಮಾನ. O.-over (ಅಮೆ. ಸಂ. ಅಸಂ.) ಪೂರ್ವಭಾವಿ ಪರೀಕ್ಷೆ (ಸಾ., ಅವಸರವಾದದ್ದು). At o. ಕೂಡಲೇ; ಒಡನೆಯೇ; ತತ್ಕ್ಷಣ; ತಡ ಮಾಡದೆ; ಒಂದೇ ಕಾಲದಲ್ಲಿ. Do it at o., please. Don't all speak at o. ಎಲ್ಲರೂ ಒಟ್ಟಿಗೆ ಮಾತಾಡಬೇಡಿರಿ (ವ್ಯಂಗ್ಯವಾಗಿ ಸಹ: ಮಾತನಾಡಲು ಮನಸ್ಸಿಲ್ಲದವರನ್ನು ಮಾತನಾಡಿರೆಂದು ಆಹ್ವಾನಿಸುವ, ಇತರರನ್ನು ನಿಷೇಧಿಸುವ, ಒಕ್ಕಣೆ). At o. stern & tender. For, this *or* that, o. (ವಿನಾಯಿತಿಯಾಗಿ) ಈ, ಆ, ಒಂದು ಸಲ]. (ಸಂ. ಅವ್ಯ.) —ಕೂಡಲೆ; ಒಮ್ಮೆ; ಒಂದು ಸಲ; —ರೆ (O. he hesitates, we have him ಒಂದು ಸಲ ಅವನು ಅನುಮಾನಿಸಿದನೆಂದರೆ ಅವನು ನಮಗೆ ಅಧೀನನಾದಂತೆಯೇ). (ನಾ.) ಒಂದು ಸಲ (ಮಾಡಿದ್ದು) (O. is enough for me). **Óncer** (ನಾ.) (ಬಳ. ಮಾ.) (ಭಾನುವಾರ) ಒಮ್ಮೆ ಮಾತ್ರ (ಕ್ರೈಸ್ತ) ದೇವಾಲಯಕ್ಕೆ ಹೋಗುವವನು.

On dit (F) ಆನ್ ಡಿ(ೕ) (ನಾ.) ಕೇಳಿಕೆಯ ಮಾತು; ಗಾಳಿ ವರ್ತಮಾನ.

One ವನ್ (ಗು., ನಾ., ಸ. ನಾ.) (ಸಂಖ್ಯಾ ಗು.) ಒಂದು (೧, 1, I); ಏಕ; ಒಬ್ಬ. ಏಕ ಮಾನ; ಒಂದು ವಸ್ತು, ವ್ಯಕ್ತಿ, ಉದಾಹರಣೆ. (ಸ.ನಾ.) (ಪ್ರಾಚೀ. ಪ್ರ.) ಯಾರೋ ಗೊತ್ತಾದ ಒಂದು ವ್ಯಕ್ತಿ. O. man o. vote ಒಂದಾಳಿಗೆ ಒಂದು 'ವೋಟು' (ಅಭಿಮತ ಕೊಡುವಲ್ಲ ಎಲ್ಲರಿಗೂ ಸಮಾನತೆಯಿರಬೇಕೆಂಬ ತತ್ತ್ವ). O. vote o. value ಒಂದು 'ವೋಟು' ಒಂದು ಬೆಲೆ (ಚುನಾವಣಾ ಕ್ಷೇತ್ರಗಳಲ್ಲಿ ಸಮಾನತೆಯಿರಬೇಕೆಂಬ ತತ್ತ್ವ). O.-&-twenty, etc. =Twenty, etc. -o. O.-&-twentieth =Twenty-first. O. man in ten, a thousand ಹತ್ತಕ್ಕೊಬ್ಬ, ಸಾವಿರಕ್ಕೊಬ್ಬ. Some o. man must direct. For o. thing, he drinks ಅವನ ವಿಷಯದಲ್ಲಿ ಒಂದು ವಿಶೇಷವೇನೆಂದರೆ, ಅವನು ಕುಡಿಯುತ್ತಾನೆ. O. or two people ಒಬ್ಬಿಬ್ಬರು. God is o. ದೇವರು ಒಬ್ಬ(ನೇ). The o. way to do it ಅದನ್ನು ಮಾಡುವುದಕ್ಕಿರುವ ಒಂದೇ ದಾರಿ. No o. man is equal to it ಯಾವ ಒಬ್ಬನಿಂದಲೂ ಅದು ಸಾಧ್ಯವಿಲ್ಲ. Is o. & undivided ಏಕ ಮತ್ತು ಅಖಂಡ. Cried out with o. voice ಏಕ ಕಂಠದಿಂದ, ಒಟ್ಟಿಗೆ, —ಕೂಗಿದರು. Were made o. ಮದುವೆ ಯಾದರು. Become o. ಒಂದಾಗು; ಒಂದುಗೂಡು; ಏಕೀಭವಿಸು. Remains for ever o. ಯಾವಾಗಲೂ ಒಂದೇ ರೀತಿಯಲ್ಲಿ ಇರುತ್ತಾನೆ, ಇರುತ್ತದೆ. O. man's meat is another man's poison. O. is half of two. In the year o. ಬಹು ಹಿಂದಿನ ಕಾಲದಲ್ಲಿ. Ramayana, book o. —ಮೊದಲನೆಯ ಕಾಂಡ. Number o. ತಾನು (ಮು., ಸ್ವಾರ್ಥದ ದೃಷ್ಟಿಯಲ್ಲಿ). Write down a o., three ones ಒಂದು ಒಂದನ್ನು, ಮೂರು ಒಂದುಗಳನ್ನು, —ಬರೆ. Came by ones & twos ಒಬ್ಬೊಬ್ಬರಾಗಿ, ಇಬ್ಬಿಬ್ಬರಾಗಿ, ಬಂದರು. Sell scores where they sold ones ಅವರು ಒಂದೊಂದು ಮಾರಿದ ಕಡೆ (ನೀನು) ಇಪ್ಪತ್ತಿಪ್ಪತ್ತು ಮಾರು. Never a o. ಒಂದೂ ಇಲ್ಲ; ಒಬ್ಬನೂ ಇಲ್ಲ. Will you make o. ? (ಪ್ರಾಚೀ. ಪ್ರ.) ನೀನೂ ಗೋಷ್ಠಿಗೆ, ಗುಂಪಿಗೆ, ಸೇರುವೆಯಾ ? Ten to o. ಒಂದಕ್ಕೆ ಹತ್ತರಷ್ಟು (ಪಾಲು); ಹೆಚ್ಚು ಬಾಜಿ; ಹೆಚ್ಚಾದ ಸಂಭವ. All in o. ಎಲ್ಲ ಒಂದರಲ್ಲೇ (ಸೇರಿ); ಒಟ್ಟುಗೂಡಿ. The all & the o. ಒಟ್ಟು ಮತ್ತು ಏಕ. At o. (ಒಬ್ಬರೊಡನೊಬ್ಬರು) ಸಮಾಧಾನ ದಿಂದ, ಒಂದಾಗಿ, —ಇರುತ್ತ; ಏಕೀಭವಿಸಿ; ಒಮ್ಮನಸ್ಸಿನಿಂದ. I lose a neighbour & you gain o. Pick me out a good o., some good ones. What kind of o. or ones do you like ? At o. o'clock, or o. ಒಂದು ಗಂಟೆಗೆ. O. & six pence ಒಂದು ಷಿಲಿಂಗು ಆರು ಪೆನ್ನಿ. I gave him o. in the eye ಅವನ ಕಣ್ಣಿಗೊಂದು ಏಟು ಕೊಟ್ಟೆನು. Owe him o. ಅವನಿಗೊಂದು ಏಟು ಕೊಡಬೇಕು. That was a nasty o. (Nasty ನೋಡಿ). At o.-&-twenty ಇಪ್ಪತ್ತೊಂದನೆಯ ವಯಸ್ಸಿನಲ್ಲಿ. I for o. do not believe it ನಾನಂತೂ ಅದನ್ನು ನಂಬುವುದಿಲ್ಲ. Go o. better (ಹಿಂದಿನದಕ್ಕಿಂತ) ಒಂದು ಹೆಚ್ಚಾಗಿ ಸವಾಲು ಮಾಡು, ಕೊಡು, ಒಡ್ಡು; ಒಂದು ಹೆಚ್ಚು ಮಾಡು. Is o. too many for him ಅವನಿಗಿಂತ ಒಂದು ಕೈ ಹೆಚ್ಚು; ಅವನ ಶಕ್ತಿಗೆ ಒಂದು ಕೈ ಮೀರಿದ್ದು. It is all o. to me ನನಗೆ ಎಲ್ಲ ಒಂದೇ. O. & all ಎಲ್ಲರೂ (ಒಟ್ಟಿಗೆ) ಮತ್ತು ಬೇರೆ ಬೇರೆಯಾಗಿ. O. by o., O. after another ಒಬ್ಬೊಬ್ಬರಾಗಿ, ಒಬ್ಬರಾದಮೇಲೊಬ್ಬರು. O. with another ಸರಾಸರಿಯಾಗಿ. O. *or* the o., —the other [ಒಂದು ಜೋಡಿಗೆ ಸೇರಿದ ವಸ್ತುಗಳಲ್ಲಿ ಒಂದಕ್ಕೊಂದಕ್ಕೆ ವ್ಯತ್ಯಾಸ ತೋರಿಸುವಾಗ ಉಪಯೋಗಿಸುವ ಒಕ್ಕಣೆ (ಉದಾ., O. is immoral, the other non-moral ಒಂದು ನೀತಿಗೆಟ್ಟದ್ದು, ಮತ್ತೊಂದು ನೀತಿಗೆ ಸಂಬಂಧವಿಲ್ಲದ್ದು). (ಬ. ವ. ದ ಅನ್ವಯಕ್ಕೆ ಉದಾ.) Sheep & goats, of which the o. are the good —ಮೊದಲನೆಯದು—].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

O. another ಒಬ್ಬರನ್ನೊಬ್ಬರು; ಒಬ್ಬರೊಬ್ಬರಲ್ಲಿ; ಪರಸ್ಪರ. O. came running. Every, Some, No, Such a, o. Many a o. (ಅಲಂ.) ಅನೇಕರು; ಬಹುಮಂದಿ. Little, Dear, Loved, ones. The Holy O., O. above ದೇವರು. The Evil O. ಸೈತಾನ. What a o. he is to make excuses! (ಬಳ. ಮಾ.). Bought it from o. Stephens. If o. cuts off o.'s nose, o. hurts only oneself. **O.-eyed** ಒಂದೇ ಕಣ್ಣುಳ್ಳ; ಒಂದು ಕಣ್ಣು ಕುರುಡಾದ; ಒಕ್ಕಣ್ಣ. **O.-handed** ಒಂದೇ ಕೈಯುಳ್ಳ; ಒಕ್ಕೈಯ; ಒಂದೇ ಕೈಯಿಂದ ಮಾಡಿದ. **O.-horse** ಒಂದೇ ಕುದುರೆ ಕಟ್ಟಿದ; ಒಂಟಿ ಕುದುರೆಯ. (ರೂಪ.) ಅಲ್ಪವಾದ; ಬಹಳ ಸ್ವಲ್ಪವಾಗಿ ಸಜ್ಜುಗೊಳಿಸಿದ. **O.-idea'd, -ideaed** ಒಂದೇ ಅಭಿಪ್ರಾಯ, ಉದ್ದೇಶ, —ದಿಂದ ಕೂಡಿದ; ಒಂದೇ ಭಾವನೆಯ; ಸಂಕುಚಿತ ಮನಸ್ಸಿನ. **O.-legged** ಒಂದೇ ಕಾಲುಳ್ಳ. (ರೂಪ.) ಏಕ ಪಕ್ಷದ; ಅಸಮರ್ಪಕ; ಅಪೂರ್ಣ. **O.-man** ಒಬ್ಬನು ಬೇಕಾದ; ಒಬ್ಬನಿರುವ; ಒಬ್ಬನು ಮಾಡುವ, ನಿರ್ವಹಿಸುವ. **Oneself** (ಸ್ವಾರ್ಥ ವಾಚಿ ಮತ್ತು ಒತ್ತಿ ಹೇಳುವಲ್ಲಿ) ತಾನು, ತಾನೇ, ತನ್ನನ್ನೇ (To starve oneself is suicide. To do right oneself is the great thing). **O.-sided** ಒಂದೇ ಪಕ್ಕವಿರುವ; ಒಂದೇ ಪಕ್ಕದ; ಒಕ್ಕಡೆಯ (A o.-s. street ಒಂದು ಪಕ್ಕದಲ್ಲಿ ಮಾತ್ರ ಮನೆಗಳಿರುವ ಬೀದಿ. A o.-s. plant ಕಾಂಡದ ಒಂದು ಪಕ್ಕದಲ್ಲಿ ಮಾತ್ರ ಎಲೆ, ಹೂವು, ಎಲ್ಲವೂ ಇರುವ ಗಿಡ). ಒಂದು ಕಡೆಗೆ ಹೆಚ್ಚಾಗಿರುವ, ದೊಡ್ಡದಾಗಿರುವ, ಮೊ.; ಏಕ ಪಕ್ಷದ; ಪಕ್ಷಪಾತವುಳ್ಳ; (ಒಂದು ಕಡೆಯ) ಒಲವಿನ, ದ್ವೇಷದ. **O.-sídedly** (ಕ್ರಿ. ವಿ.); **O.-sídedness** (ನಾ.). **One-way street** ಒಂದು ದಿಕ್ಕಿನಲ್ಲಿ ಮಾತ್ರ ವಾಹನ ಸಂಚಾರಕ್ಕೆ ಅವಕಾಶವಿರುವ ರಸ್ತೆ, ಬೀದಿ. **Ónefold** (ಗು.) ಒಂದೇ ಅಂಗ ಅಥವಾ ಘಟಕ ಉಳ್ಳ; ಏಕ ಮಾತ್ರ; ಸರಳ (ಸ್ವಭಾವದ); ಏಕ ನಿಷ್ಠೆಯ. **Óneness** (ನಾ.) ಒಂದಾಗಿರುವುದು; ಒಂಟಿಯಾಗಿರುವುದು; ಏಕತ್ವ; ವಿಶಿಷ್ಟತೆ; ಪೂರ್ಣತೆ; ಅಖಂಡತ್ವ; ಐಕಮತ್ಯ; ಸಂಘಟನೆ; ಐಕ್ಯ; ಒಮ್ಮನಸ್ಸು; ಹೊಂದಿಕೆ; ಸಮಗ್ರ ಸಮತೆ; ಸಾಮ್ಯ; ವ್ಯತ್ಯಾಸ ರಾಹಿತ್ಯ. **Óner** ವನರ್ (ನಾ.) ಅಸಾಧಾರಣ, ಅದ್ವಿತೀಯ, —ವ್ಯಕ್ತಿ, ವಸ್ತು; ಮಹಾ ಘನವಂತ, ಘನ ವಸ್ತು (A o. at—, —ರಲ್ಲಿ ನುರಿತವನು, ನಿಪುಣ, ಪ್ರವೀಣ. Gave him a o. ಅವನಿಗೆ ಬಲವಾದ ಏಟು ಕೊಟ್ಟೆನು). (ಬಳ. ಮಾ.) ಒಂದೆಣಿಕೆಯ ಹೊಡೆತ, (ಮು., ಕ್ರಿಕೆಟ್ ಆಟದಲ್ಲಿ) ಒಂದು ಓಟದ ಹೊಡೆತ.

Óner. **One** ನೋಡಿ.

Ónerous ಆನೆರಸ್ (ಗು.) ಹೊರೆಯಾದ; ದುರ್ಭರ; ದುಸ್ಸಹ; ತೊಂದರೆ ಕೊಡುವ; ತೊಂದರೆ ತೆಗೆದುಕೊಳ್ಳಬೇಕಾದ; ಕಷ್ಟಸಾಧ್ಯವಾದ; O. property (ನ್ಯಾ. ಶಾ.) ಕರ್ತವ್ಯಭಾರವುಳ್ಳ ಆಸ್ತಿ. **Ónerously** (ಕ್ರಿ. ವಿ.); **Ónerousness** (ನಾ.)

Ónion ಅನ್ಯನ್ (ನಾ., ಕ್ರಿ. ಸಕ.) ಈರುಳ್ಳಿ ಗಡ್ಡೆ, —ಗಿಡ; ನೀರುಳ್ಳಿ— (ಕಟು ವಾಸನೆಯೂ ರುಚಿಯೂ ಉಳ್ಳ, ಅಡಿಗೆಯಲ್ಲಿ ಉಪಯೋಗಿಸುವ, ಸಮಾನ ಕೇಂದ್ರದ ಅನೇಕ ಮೇಲ್ಪೊರೆಗಳುಳ್ಳ, ಗುಂಡನೆಯ, ತಿನ್ನುವ ಗಡ್ಡೆ). (ಅಸಂ.) ಬರ್ಮ್ಯುಡಾ (ದ್ವೀಪ ಸಮುದಾಯ) ನಿವಾಸಿ. (ಯುದ್ಧದ ಅಸಂ.) ಶತ್ರುವಿಮಾನಗಳ ಮೇಲೆ ಹಾರಿಸುವ ಉರಿಕಾರುವ (ಆಕಾಶ) ಬಾಣ. [Off one's o. (ಅಸಂ.) ತಲೆ ಕೆಟ್ಟು; ಬುದ್ಧಿ ವಿಕಲ್ಪವಾಗಿ. O.-couch *or* -grass *or* -twitch ಒಂದು ಬಗೆಯ ಕಾಡು ತೋಕೆಯಗೋಧಿ (ಸಸ್ಯ). O.-shell ಹಲವು ಬಗೆಯ ವಲ್ಕವಂತ ಮೃದ್ವಂಗಿ ಪ್ರಾಣಿ]. (ಕ್ರಿ.) ಕಣ್ಣೀರು ಸುರಿಸಲು (ಕಣ್ಣಿಗೆ) ನೀರುಳ್ಳಿ ಉಜ್ಜು. **Óniony** (ಗು.)

Ónly ಓನ್ಲಿ (ಗು., ಕ್ರಿ. ವಿ., ಸಂ. ಅವ್ಯ.) ಒಂದೇ; ಒಬ್ಬನೇ(ಳೇ); ಏಕ ಮಾತ್ರ; ಮಾತ್ರ; ಕೇವಲ (The o. way is to die. The o. child of his parents. One o. object was visible. Motley's the o. wear ಹಲವು ಬಣ್ಣದ ಉಡುಪೊಂದೇ ಯೋಗ್ಯವಾದದ್ದು). (ಕ್ರಿ. ವಿ.) ಅದೊಂದೇ; ಮಾತ್ರ; ಮತ್ತೇನೂ ಅಲ್ಲದೆ [Is right o. because it is customary. O. you *or* you o. can guess. You can o. guess, *or* guess o. ನೀನು ಊಹಿಸಲು ಮಾತ್ರ ಸಾಧ್ಯ (ಇನ್ನೇನು ಮಾಡಲೂ ಸಾಧ್ಯವಿಲ್ಲ). I o. thought I would do it ಅದನ್ನು ಮಾಡಬೇಕೆಂದು ಯೋಚನೆ ಮಾತ್ರ ಮಾಡಿದೆನು (ಆದರೆ ಕೆಲಸ ಮಾಡಲಿಲ್ಲ). (ಇತರ ಪ್ರೇರಣೆಯಿಲ್ಲದೆ) ಅದನ್ನು ಮಾಡಬೇಕೆನ್ನಿಸಿತು (ಮಾಡಿಬಿಟ್ಟೆನು). If o. (ಊಹೆಗಾಗಿ) ಹಾಗೆ ಮಾತ್ರ ಆದರೆ; ಹಾಗಾಗುವುದಾದರೆ (If o. some one would leave me a legacy!)]. (ಸಂ. ಅವ್ಯ.) ಆದರೆ(ಮಾತ್ರ) (He makes good resolutions, o. he never keeps them. He does well, o. that he is nervous at the start)

Ónomatop(e). **Onomatopoeia** ನೋಡಿ.

Onómatopoéia ಒನಾ(ನ)ಮಟೊಪೀಯ, ಅನೊಮ್ಯ(ಮ್ಯಾ)ಟೊಪೀಯ (ನಾ.) ಯಾವ ವಸ್ತುವಿಗೆ ಅಥವಾ ಕಾರ್ಯಕ್ಕೆ ಹೆಸರಿಡಬೇಕೊ ಆ ವಸ್ತುವಿಗೆ ಅಥವಾ ಕಾರ್ಯಕ್ಕೆ ಸಂಬಂಧಿಸಿದ, ಅಥವಾ ಅದರ ಲಕ್ಷಣಗಳನ್ನು ಸ್ವಭಾವವಾಗಿ ಸೂಚಿಸುವಂತೆ ತೋರುವ, ಧ್ವನಿಗಳಿಂದ ಹೆಸರನ್ನು ಅಥವಾ ಶಬ್ದವನ್ನು ರಚಿಸುವುದು: ಧ್ವನ್ಯನುಕರಣ ಶಬ್ದ (ರಚನೆ) [ಉದಾ., Cuckoo (ಕುಕೂ ಎಂದು ಕೂಗುವ ಧ್ವನಿಯಿಂದ) ಕೋಗಿಲೆ]. **Onomatopoéic** = **Onomatopoétic** —ಪೋ(ೀ)— (ಗು.); **Onomatopoéically, Onomatopoétically** (ಕ್ರಿ. ವಿ.); **Ónomatop(e)** ಒ(ಅ)ನಾಮಟಾ(ಟೊ)ಪ್ (ನಾ.) ಅನುಕರಣ ಶಬ್ದ.

Ónset, Ónslaught. **On** ನೋಡಿ.

Ontogénesis ಆಂಟೊಜೆನಿಸಿಸ್ (ನಾ.) ವ್ಯಕ್ತಿಯ ಉತ್ಪತ್ತಿ ಮತ್ತು ವಿಕಸನ (Phylogenesis ಹೋಲಿಸಿ). **Ontogenétic** (ಗು.); **Ontogenétically** (ಕ್ರಿ. ವಿ.); **Ontógeny** ಆಂಟಾಜಿನಿ (ನಾ.) = Ontogenesis.

Ontólogy ಆಂಟಾಲೊಜಿ (ನಾ.) ವಸ್ತುಗಳ ಮೂಲ ತತ್ತ್ವವನ್ನು ಕುರಿತ, ಅಥವಾ ಸದಸದ್ವಿಚಾರ ಮಾಡುವ, ಅಧ್ಯಾತ್ಮ ಶಾಸ್ತ್ರ ಭಾಗ. **Ontólogist** (ನಾ.); **Ontológical** ಆಂಟೊಲಾಜಿ— (ಗು.); **Ontológically** (ಕ್ರಿ. ವಿ.)

Ónus ಓನಸ್ (ನಾ.; ಬ. ವ. ಇಲ್ಲ) ಭಾರ; ಹೊರೆ; ಕರ್ತವ್ಯ; ಜವಾಬ್ದಾರಿ. O. probandi (—ಪ್ರೊಬ್ಯಾಂಡೈ) ಹೇಳಿಕೆ ಕೊಡುವವನೇ, ಅಥವಾ ಹಕ್ಕು ಹೂಡುವವನೇ, ರುಜುವಾತು ಮಾಡಿಕೊಡಬೇಕೆಂಬ ಜವಾಬ್ದಾರಿ.

Ónward, etc. **On** ನೋಡಿ.

Ónymous ಆನಿಮಸ್ (ಗು.) ಅನಾಮಧೇಯವಲ್ಲದ; ಹೆಸರಿರುವ ಸನಾಮಕ.

Ónyx ಓ(ಅ)ನಿಕ್ಸ್ (ನಾ.) ಬೇರೆ ಬೇರೆ ಪದರಗಳಲ್ಲಿ ಬೇರೆ ಬೇರೆ ಬಣ್ಣಗಳುಳ್ಳ agate ಎಂಬ ಪ್ರಶಸ್ತ ಶಿಲೆಯ ಜಾತಿಯ ಒಂದು ಬಗೆಯ ಬೆಣಚು ಕಲ್ಲು; ಗೋಮೇದಿಕ. (ವೈ. ಶಾ.) (ಕೀವು ಸೇರುವುದರಿಂದಾದ) ಕಣ್ಣುಗುಡ್ಡೆಯ ಪಾರದರ್ಶಕ ಪಟಲದ ಕೆಳ ಭಾಗದ ಅಪಾರದರ್ಶಕತೆ. O. marble ಗೋಮೇದಿಕದಂಥ ರಚನೆಯುಳ್ಳ, ಪಟ್ಟೆ ಪಟ್ಟೆಯ ಪದರಗಳ ಒಂದು ಬಗೆಯ ಅಮೃತ ಶಿಲೆ.

Oof ಊಫ್ (ನಾ.) (ಅಸಂ.) ಹಣ; ರೊಕ್ಕ; ನಗದು (ಹಣ); ಧನ. O.-bird ನಿಕ್ಷೇಪ; ಹಣವಂತ. **Oófy** (ಗು.)

Oogénesis ಓವೊಜೆನಿಸಿಸ್ (ನಾ.) ಅಂಡೋತ್ಪತ್ತಿ; ಅಂಡಾಭಿವೃದ್ಧಿ.

Oolite ಓವೊಲೈಟ್ (ನಾ.) ಸಣ್ಣ ಸಣ್ಣ ದುಂಡು ಕಣಗಳು ಒಟ್ಟುಗೂಡಿ ಆಗಿರುವ ಒಂದು ಬಗೆಯ ಸುಣ್ಣಕಲ್ಲು: 'ಓವೊಲೈಟ್'. (ಭೂ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಳೆಯುಳಿಕೆಗಳನ್ನೊಳಕೊಂಡ ಈ ರಚನೆಯುಳ್ಳ ಶಿಲಾ ಶ್ರೇಣಿ. **Oolític** —ಲಿಟಿಕ್ (ಗು.)

Oólogy ಓವಾಲೊಜಿ (ನಾ.) ಹಕ್ಕಿಗಳ ಮೊಟ್ಟೆಗಳ ವಿವರಣ ಶಾಸ್ತ್ರ: ಖಗಾಂಡ ಶಾಸ್ತ್ರ; ಹಕ್ಕಿಗಳ ಮೊಟ್ಟೆಗಳನ್ನು ಕೂಡಹಾಕುವುದು: ಖಗಾಂಡ ಸಂಗ್ರಹಣ. **Oólogist** (ನಾ.); **Oológical** ಓವೊ ಲಾಜಿ— (ಗು.)

Oom (ಡಚ್ ಭಾಷೆ) ಊಮ್, ಓಮ್ (ನಾ.) (ದ. ಆಫ್ರಿಕ) ಚಿಕ್ಕಪ್ಪ, ದೊಡ್ಡಪ್ಪ ಅಥವಾ ಸೋದರ ಮಾವ (ಮು., O. Paul = President Kruger)

Oont ಉ(ಊ)ಂಟ್ (ನಾ.) (ಆಂ. ಇಂ.) ಒಂಟೆ.

Ooze ಊಸ್ (ನಾ., ಕ್ರಿ.) (ಮು., ನದಿಯ ತಳದ, ಅಳಿವೆಯ, ಅಥವಾ ಸಮುದ್ರದ ತಳದ) ಕೆಸರುಮಣ್ಣು, ಜೇಡುಮಣ್ಣು. ಚರ್ಮ ಹದಮಾಡಲು ಉಪಯೋಗಿಸುವ (ಮು., ಓಕ್ ಮರದ ತೊಗಟೆಯನ್ನು ನೆನೆಹಾಕಿ ಮಾಡಿದ) ಊನಿ ನೀರು. (O.-calf ಬಣ್ಣವನ್ನು ಯಂತ್ರನಲಕರಣೆಯಿಂದ ಒಳ ನುಗ್ಗಿಸಿದ ಕರುವಿನ ತೊಗಲು). ಜಿನುಗುವುದು; ಒಸರುವುದು; ಸ್ರವಿಸುವುದು; ಜಿನುಗಿದ್ದು; ಸ್ರಾವ. (ಕ್ರಿ.) (ತೇವದ ವಿಷಯದಲ್ಲಿ) ವಸ್ತುವಿನಲ್ಲಿಯ ರಂಧ್ರಗಳ ಮೂಲಕ ನಿಧಾನವಾಗಿ ಹರಿ; ಜಿನುಗು; ಒಸರು; ಸ್ರವಿಸು. (ವಸ್ತುವಿನ ವಿಷಯದಲ್ಲಿ) ದ್ರವವನ್ನು ಒಸರಿಸು, ಜಿನುಗಿಸು. (ರೂಪ.) ಹೊರಕ್ಕೆ ಬರು; ಬಯಲಿಗೆ ಬೀಳು (*Out, away* ಉಪ. ದೊಡನೆ) (The secret oozed out ಗುಟ್ಟು ಹೊರಬಿದ್ದಿತು. My courage is oozing away ನನ್ನ ಧೈರ್ಯ ಇಳಿದುಹೋಗುತ್ತಿದೆ). (ತೇವ, ಸುದ್ದಿ, ಪ್ರೋತ್ಸಾಹ—ಇವನ್ನು) ಹೊರ ಸೂಸು. **Oózy** (ಗು.); **Oózily** (ಕ್ರಿ. ವಿ.); **Oóziness** (ನಾ.)

Opácity. **Opaque** ನೋಡಿ.

Ópal ಓಪಲ್ (ನಾ.) ಬೇರೆ ಬೇರೆ ಬಣ್ಣಗಳನ್ನು (ಪ್ರತಿಫಲನೆಯಿಂದ) ತೋರುವ ಕೆಲವು ಬಗೆಯ, ಜಲ ಸಂಯುಕ್ತವಾದ, ಅಸ್ಫಟಿಕ ಬೆಣಚುಕಲ್ಲು ರೂಪದ, ಸಿಲಿಕ ಶಿಲೆ: ಕ್ಷೀರ ಸ್ಫಟಿಕ (Common o. ಹಸುರು, ಹಳದಿ ಮತ್ತು ಕೆಂಪು—ಈ ಬಣ್ಣಗಳ ಪ್ರತಿಫಲನವುಳ್ಳ ಹಾಲುಬಿಳುಪಿನ ಅಥವಾ ನಸು ನೀಲಿಯ ಮಣಿ). (ವ್ಯಾಪಾರ) ಅರ್ಧ ಪಾರದೀಪ್ತಿಯ ಬಿಳಿಯ ಗಾಜು. **Opaléscent** —ಲೆಸೆಂಟ್ (ಗು.) ಕ್ಷೀರ ಸ್ಫಟಿಕದಂತೆ ವರ್ಣ ವಿವಿಧತೆಯನ್ನು ಪ್ರದರ್ಶಿಸುವ. **Opaléscence** (ನಾ.); **Opalésque** (ಗು.); **Ópaline** —ಲಿನ್, ಲೈನ್ (ಗು., ನಾ.) ಕ್ಷೀರ ಸ್ಫಟಿಕದಂಥ; —ದಂತೆ ವರ್ಣವೈವಿಧ್ಯವನ್ನು ಪ್ರದರ್ಶಿಸುವ; ಶಬಲ (ವರ್ಣದ). (ನಾ.) ಅರ್ಧ ಪಾರದೀಪ್ತಿಯ ಬಿಳಿಯ ಗಾಜು. **Ópalize** (ಕ್ರಿ. ಸಕ.)

Opáque ಒಪೇಕ್ [(ಗು.) (ತರ ತಮ ರೂಪಗಳು -er, -est); ನಾ.]. (ವಿರ. ಪ್ರ.) ಬೆಳಕನ್ನು ಪ್ರತಿಫಲಿಸದ. ತನ್ನಲ್ಲಿ ಬೆಳಕನ್ನು ಹಾಯಿಸದ; ನಿಷ್ಪಾರದರ್ಶಕ. (ವಿರ. ಪ್ರ.) ಹೊಳಪಿಲ್ಲದ. ದೃಷ್ಟಿ ಹಾಯದ; ತಿಳಿಯಲ್ಲದ; ಮಬ್ಬಾದ; ಮಸುಕಾದ. ಮಂದ (ಬುದ್ಧಿಯ); ದಡ್ಡ. (ನಾ.) ಅಪಾರದರ್ಶಕವಾದದ್ದು (The o. ಕತ್ತಲೆ; ಮಬ್ಬು). **Opáquely** (ಕ್ರಿ. ವಿ.); **Opáqueness** (ನಾ.); **Opácity** ಒಪ್ಯಾಸಿಟಿ (ನಾ.) ಅಪಾರದರ್ಶಕತೆ; ಬೆಳಕನ್ನು (ತನ್ನಲ್ಲಿ) ಹಾಯಗೊಡದ ಗುಣ; (ವಿರ. ಪ್ರ.) ಪ್ರತಿಫಲಿಸದ ಗುಣ. ಅಪಾರ ದೀಪ್ತಿ; ಮಬ್ಬು; ಮಸುಕು. ಅರ್ಥ ಸ್ಪಷ್ಟವಿಲ್ಲದಿರುವುದು; ಅಸ್ಪಷ್ಟತೆ; ಬುದ್ಧಿ ಮಾಂದ್ಯ.

Ope ಓಪ್ (ಕ್ರಿ.) (ಕಾವ್ಯ) = Open (ಕ್ರಿ.)

Ópen ಓಪ್(ಪೆ)ನ್ [ಗು. (ತರ ತಮ ರೂಪಗಳು -er, -est), ನಾ.] ತೆರೆದಿರುವ; ಮುಚ್ಚಿಲ್ಲದ; ತಡೆಗಟ್ಟಿಲ್ಲದ; ಪ್ರವೇಶಕ್ಕೆ, ಸಂಚಾರಕ್ಕೆ, ಹರಿವಿಗೆ, —ಅವಕಾಶವಿರುವ; (ಬಾಗಿಲು, ಮುಚ್ಚಳ, ಮೊ. ದು) ತೆರೆದಿರುವ; ಎಲ್ಲೆಯ ಒಂದು ಭಾಗ ತೆಗೆದುಬಿಟ್ಟಿರುವ; ಆವರಣವಿಲ್ಲದ; ಬಂಧಿಸಿಲ್ಲದ; ಮೇಲ್ಮುಚ್ಚಿಲ್ಲದ; ಮರೆ ತೆಗೆದಿರುವ; ಅನಾವೃತ; ಮುಚ್ಚುಮರೆಯಿಲ್ಲದ; ಮರಸಿಲ್ಲದ; ಬಹಿರಂಗವಾದ; ಪ್ರಕಟ; ವ್ಯಕ್ತ; ಅಪ್ರತ್ಯೇಕ; ಮಿತಿಗೊಳಿಸಿಲ್ಲದ; ವಿಸ್ತರಿಸಿರುವ; ಹರಡಿರುವ; ಚಾಚಿಕೊಂಡಿರುವ; ಒತ್ತಾಗಿಲ್ಲದ; ಅಂತರಗಳಿರುವ; ಸರಂಧ್ರ. ಅರಳಿರುವ; ವಿಕಸಿತವಾದ; ಮನ ಬಿಚ್ಚುವ; ಸರಳ ಹೃದಯದ. (ಸಂ., ಸ್ವರ) ತಂತಿಯಲ್ಲಾಗಲಿ ಕೊಳಲಿನಲ್ಲಾಗಲಿ ಯಾವ ತಡೆಯೂ ಹಾಕದೆ ನುಡಿಸುವ; (ಧ್ವನಿ ಶಾಸ್ತ್ರ: ಸ್ವರದ ವಿಷಯದಲ್ಲಿ) ಸ್ವಲ್ಪ ಹೆಚ್ಚಾಗಿಯೇ ಬಾಯಿ ತೆರೆದು ಉಚ್ಚರಿಸುವ; ವಿವೃತ [Close (ಗು.) ಹೋಲಿಸಿ]. (ಅಕ್ಷರ) ಸ್ವರಾಂತವಾದ. O. gate, passage, church, drawer, box, field, grave, carriage. O. hostilities ಪ್ರತ್ಯಕ್ಷ ಯುದ್ಧ ಪ್ರವೃತ್ತಿ. O. scandal, O. contempt ಬಹಿರಂಗ ಅಪವಾದ, ತಿರಸ್ಕಾರ. O. air (ಮನೆಯಿಂದ ಹೊರಗಿನ) ಬಯಲು. Door flew o. O. boat ಅಟ್ಟವಿಲ್ಲದ, ತೆರೆದ, ದೋಣಿ. Lay o. (ಮು., ಚರ್ಮ, ಮೊ. ನ್ನು ಕತ್ತರಿಸಿ) ತೆರೆದಿಡು, ಕಾಣುವಂತೆ ಮಾಡು. O. ears ಆಸಕ್ತಿಯಿಂದ ಗಮನಿಸುವ (ತೆರೆದ) ಕಿವಿಗಳು. [**Open-eared** (ಗು.). O. mouth (ಹೊಟ್ಟೆಬಾಕತನದಲ್ಲಿ, ಮರೆ ಮಾಜದ ಮಾತಿನಲ್ಲಿ) ತೆರೆದ ಬಾಯಿ; ಹೆಡ್ಡತನ ಅಥವಾ ಆಶ್ಚರ್ಯ ತೋರಿಸುವ ಬಿಟ್ಟಬಾಯಿ. **Open-mouthed** —ದ್‌ಡ್ (ಗು.). O. mind ಹೊಸ ಭಾವಗಳನ್ನೂ ಅಭಿಪ್ರಾಯಗಳನ್ನೂ ಅಂಗೀಕರಿಸುವ ಮನಸ್ಸು; ಪೂರ್ವ ದುರಭಿಪ್ರಾಯವಿಲ್ಲದ, ಪೂರ್ವ ನಿಶ್ಚಯವಿಲ್ಲದ, —ಸ್ಥಿತಿ; ತೆರೆದ, ನಿಷ್ಪಕ್ಷಪಾತವಾದ, —ಮನಸ್ಸು. **Open-mínded** (ಗು.); **Open-míndedly** (ಕ್ರಿ. ವಿ.); **Open-míndedness** (ನಾ.)]. He is o. to conviction ಮನಸ್ಸಿಗೆ ಒಪ್ಪಿಸಿದರೆ ಅಂಗೀಕರಿಸಲು ಸಿದ್ಧನಾಗಿದ್ದಾನೆ. Keep o. doors or house (House ನೋಡಿ). The o. door ಒಂದು ದೇಶದಲ್ಲಿ ವ್ಯಾಪಾರ ಮಾಡಲು ಪರದೇಶೀಯರಿಗೆ ಧಾರಾಳವಾಗಿ ಪ್ರವೇಶ ಕೊಡುವುದು: (ವ್ಯಾಪಾರಕ್ಕೆ) ತೆರೆದ ಬಾಗಿಲು. Force an o. door ಅನುಕೂಲವಾಗಿರುವವರನ್ನು ಒತ್ತಾಯಪಡಿಸು. The exhibition is now o. ಈಗ ಪ್ರದರ್ಶನ (ಪ್ರೇಕ್ಷಕರಿಗೆ) ತೆರೆದಿದೆ. O. heart ಮುಚ್ಚುಮರೆಯಿಲ್ಲದಿರುವುದು; ತೆರೆದ ಹೃದಯ; ನಿಷ್ಕಾಪಟ್ಯ; ಸಂಶಯ ರಾಹಿತ್ಯ. ದಯಾ ಪರತೆ; ಸೌಹಾರ್ದ. **Open-héarted** (ಗು.); **Open-héartedly** (ಕ್ರಿ. ವಿ.); **Open-héartedness** (ನಾ.). O. champion, scholarship ಎಲ್ಲರಿಗೂ ಅವಕಾಶವಿರುವ, ಸಾರ್ವಜನಿಕ, —ಸ್ಪರ್ಧೆಯಲ್ಲಿ ಗೆದ್ದವನು; ಹೀಗೆ ಗೆದ್ದ ವಿದ್ಯಾರ್ಥಿ ವೇತನ. Position is o. to attack (ಈ) ಸ್ಥಾನವು ಆಕ್ರಮಣ ಸಾಧ್ಯವಾಗಿದೆ. O. time ಅನಿರ್ಬಂಧ ಕಾಲ; ನಿಷಿದ್ಧವಲ್ಲದ ಕಾಲ. River, harbour, is o. (ನೀರ್ಗಲ್ಲು ಮುಚ್ಚಿಲ್ಲದೆ) ನದಿ, ರೇವು, —ತೆರಪಾಗಿದೆ. O. weather, winter ಘನ ಹಿಮವಿಲ್ಲದ ವಾಯು ಸ್ಥಿತಿ, ಚಳಿಗಾಲ. Bowels are o. ಮಲಬದ್ಧತೆಯಿಲ್ಲ. O. country (ಬೇಲಿ, ಮೊ. ಇಲ್ಲದ, ವಿಶಾಲ ದೃಶ್ಯಗಳಿಗೆ ಅವಕಾಶವಿರುವ) ಬಯಲು ಪ್ರದೇಶ. There are three courses o. to us. O. question ನ್ಯಾಯವಾಗಿ ಭಿನ್ನಾಭಿಪ್ರಾಯಗಳಿರಬಹುದಾದ ವಿಷಯ; ಇನ್ನೂ ಇತ್ಯರ್ಥವಾಗಿಲ್ಲದ ವಿಷಯ. O. verdict (Verdict ನೋಡಿ). O. book ತೆರೆದ ಪುಸ್ತಕ. O. flower ಅರಳಿದ ಹೂವು. O. letter ಒಬ್ಬ ವ್ಯಕ್ತಿಗೆ ಬರೆದ, ಸಾ., ವೃತ್ತಪತ್ರಿಕೆಗಳಲ್ಲಿ ಪ್ರಕಟಪಡಿಸುವ, ಖಂಡನೆಯ, ಪ್ರತಿಭಟನೆಯ, —ಪತ್ರ: ಬಹಿರಂಗ ಪತ್ರ. O. order (ಸೈನ್ಯ, ನಾವೆ) ನಡುನಡುವೆ ಹೆಚ್ಚು ಅಂತರ ಬಿಟ್ಟಿರುವ ಸೈನಿಕ ಅಥವಾ ನೌಕಾ ವ್ಯೂಹ ವಿನ್ಯಾಸ. O. harmony (ರಾಗ ರಾಗಕ್ಕೂ) ಹೆಚ್ಚು ಅಂತರವಿರುವ ಸ್ವರ ಮೇಳನ. O. ice ಹಡಗಿನ ಪ್ರಯಾಣಕ್ಕೆ ತೆರಪು ಕೊಡುವ ನೀರ್ಗಲ್ಲ ಹರವು. Receive with o. arms ಆದರದಿಂದ, ಹೃತ್ಪೂರ್ವಕವಾಗಿ, ಕರೆದುಕೊ [**Open-armed** (ಗು.)]. With o. eyes ತಿಳಿದೂ ತಿಳಿದೂ; ಕಣ್ಣು ತೆರೆದುಕೊಂಡೇ (ಗೊತ್ತಿಲ್ಲದೆ, ತಪ್ಪು ತಿಳಿವಳಿಕೆಯಿಂದ, —ಅಲ್ಲ); (ಅತ್ಯಾಸಕ್ತಿಯಿಂದ, ಅತ್ಯಾಶ್ಚರ್ಯದಿಂದ) ಎವೆಯಿಕ್ಕದೆ [**Open-eyed** (ಗು.)]. Has an o. hand ಧಾರಾಳವಾಗಿ, ಮುಕ್ತಹಸ್ತನಾಗಿ, ಕೊಡುತ್ತಾನೆ; ಬಹು ಧಾರಾಳಿ [**Open-hánded** (ಗು.); **Open-hándedly** (ಕ್ರಿ. ವಿ.); **Open-hándedness** (ನಾ.)]. O. face ತೆರೆದ ಮುಖ; ಸರಳ, ನಿಷ್ಕಪಟ, —ಮುಖ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಭಾವ) ; ದೃಢತೆ ; ಭರವಸೆ [**Open-faced** (ಗು.)]. O. work, O.-work (ಲೋಹದ ಕೆಲಸ, ಹೆಣಿಗೆಯ ಕೆಲಸ, ಮೊ. ಗಳಲ್ಲಿ) ನಡುನಡುವೆ ರಂಧ್ರಗಳುಳ್ಳ ಚಿತ್ರಾಕೃತಿ : ತೆರಪು ಚಿತ್ರಗೆಲಸ. (ನಾ.) The o. ಬಯಲು (ಪ್ರದೇಶ) ; ಬಹಿರಂಗ ; ಸಾರ್ವಜನಿಕ ಸ್ಥಳ. **Ópenness** (ನಾ.)

Ópen (ಕ್ರಿ.) ತೆರೆ ; (ಹೆಚ್ಚು) ತೆರೆದುಕೊ ; ಬಿಚ್ಚು ; ಅರಳು ; ವಿಕಸಿಸು ; ಬಾಯಿ ಬಿಡು ; ವಿಸ್ತರಿಸು. O. sesame (Sesame ನೋಡಿ). O. a business, shop, account —ತೆರೆ, ಸ್ಥಾಪಿಸು, ನಡಸಿಕೊಂಡು ಬರು. O. a campaign ಯುದ್ಧಾರಂಭ ಮಾಡು. O. fire ಗುಂಡು ಹಾರಿಸು (—ಹಾರಿಸಲು ಆರಂಭಿಸು). O. ground (ನೇಗಿಲು, ಮೊ. ಗಳಿಂದ) ನೆಲವನ್ನು ಉತ್ತು ಸಡಿಲಿಸು. O. bowels ಮಲವಿಸರ್ಜನೆ ಮಾಡಿಸು ; ಹೊಟ್ಟೆ ಕಳಸು. Opens a prospect ದೃಷ್ಟಿಗೆ ತರುತ್ತದೆ (ರೂಪ. ಸಹ). O. the door to (—ಕ್ಕೆ) ಅವಕಾಶ ಮಾಡಿಕೊಡು. O. one's designs (ಒಬ್ಬನ) ಎಣಿಕೆಗಳನ್ನು, ಹಂಚಿಕೆಗಳನ್ನು, —ಹೊರಪಡಿಸು, ತಿಳಿಸು. O. one's eyes ಕಣ್ಣು ಬಿಡು ; ಬೆರಗಾಗಿ ನೋಡು ; ಅಚ್ಚರಿಗೊಳ್ಳು. O. another's eyes (ಮತ್ತೊಬ್ಬನ) ಕಣ್ಣು ತೆರೆ ; ತಪ್ಪು ತಿಳಿವಳಿಕೆ ಪರಿಹರಿಸು ; ತಿಳಿವಳಿಕೆ ಕೊಡು. O. the mind, heart, etc. ಮನಸ್ಸು ತೆರೆ ; ಹೃದಯ, ಮೊ. ನ್ನು ವಿಶಾಲ ಮಾಡು. Not o. lips ತುಟಿ ಮಿಟುಕದಿರು ; ಮೌನವಾಗಿರು. O. the ball[2], O. parliament (ಆಯಾ ಪದವನ್ನು ನೋಡಿ). O. the case (ನ್ಯಾಯ ಸ್ಥಾನದಲ್ಲಿ, ನ್ಯಾಯ ವಾದಿ) ಸಾಕ್ಷಿಗಳ ವಿಚಾರಣೆಗೆ ಮೊದಲು ವ್ಯವಹಾರ ವಿಚಾರವಾಗಿ ಪೂರ್ವ ಭಾಷಣ ಮಾಡು ; ವ್ಯವಹಾರದ ಆರಂಭ ಭಾಷಣ ಮಾಡು. The door opens into passage, on to lawn. The wonders of astronomy were opening to him —ಗೋಚರವಾಗತೊಡಗಿದುವು. O. one's shoulders (ಕ್ರಿಕೆಟ್ ಆಟದಲ್ಲಿ ಬಲವಾಗಿ ಚೆಂಡನ್ನು ಹೊಡೆದೋಡಿಸಲು ದಾಂಡುಗಾರನು) ಭುಜಗಳನ್ನು ಅಗಲಿಸಿ ನಿಲ್ಲು. Cotton opened active ಹತ್ತಿಯ ಪೇಟೆ ತೆರೆದ ಕೂಡಲೆ ಬಹಳ ಗಿರಾಕಿ ಬಂದಿತು. The harbour light opened ಬಂದರಿನ ದೀಪ ಕಾಣಬಂದಿತು. O. out ತೆರೆ ; ಬಿಚ್ಚು ; ಅರಳು ; ವಿಕಸಿಸು ; ವಿಸ್ತರಿಸು ; (ಸುದ್ದಿ, ಮೊ. ನ್ನು) ಹೊರಗೆಡವು. O. up (ನೋಟಕ್ಕೆ, ಪ್ರಯಾಣಕ್ಕೆ, ಸಂಚಾರಕ್ಕೆ) ತೆರೆದಿಡು, ಅವಕಾಶ ಕೊಡು ; ಗಮನಕ್ಕೆ ತರು ; (ಗುಟ್ಟನ್ನು) ಹೊರಗೆಡವು. **Ópen-able** (ಗು.) ; **(-)ópener** (ನಾ.) ; **Ópening** (ನಾ., ಗು.) (ಕ್ರಿಯಾರ್ಥಗಳಲ್ಲದೆ). ತೆರಪು ; ಹಾದಿ ; ತೂತು ; ಕಂಡಿ. ಅವಕಾಶ ; (ಅನುಕೂಲ) ಸಮಯ (*For* ಉಪ. ಜೊಡನೆ). ಆರಂಭ ; ಆದಿ ಭಾಗ. (ನ್ಯಾಯ ವಾದಿಯ) ವ್ಯವಹಾರದ ಉಪಕ್ರಮ ಭಾಷಣ. (ಚದುರಂಗ) ಆಟದ ಪ್ರಾರಂಭದಲ್ಲಿ ನಿಯಮಾನುಸಾರವಾದ ಕಾಯಿಗಳ ವ್ಯವಸ್ಥಿತಿ. (ಗು.) (ಕ್ರಿಯಾರ್ಥಗಳಲ್ಲದೆ). ಆದಿಯ ; ಆರಂಭದ (His o. remarks). **Ópenly** (ಕ್ರಿ. ವಿ.) ಮುಚ್ಚುಮರೆಯಿಲ್ಲದೆ ; ಬಹಿರಂಗವಾಗಿ ; ಮನ ಬಿಚ್ಚಿ.

Ópera ಆಪೆರ (ನಾ.) ಸಂಗೀತ ಪ್ರಧಾನ ನಾಟಕ (ಪ್ರದರ್ಶನ); ಸಂಗೀತ ನಾಟಕ ಕಲೆ. Grand o. (ಸಂಭಾಷಣೆಗಳಿಲ್ಲದ) ಸಂಗೀತಮಯ ನಾಟಕ. Comic o. or opera comique (F) (Comic ನೋಡಿ). O. bouffe (ಒಪೆರ ಬೂಫ್) ಸಂಗೀತ ಪ್ರಹಸನ. O.-cloak, -hood ಸಂಗೀತ ನಾಟಕಗಳಿಗೆ ಅಥವಾ ಸಂಜೆಯ ಗೋಷ್ಠಿಗಳಿಗೆ ಹೋಗುವಾಗ ಮಹಿಳೆಯರು ಧರಿಸುವ ದಗಲೆಯ ಮೇಲಂಗಿ, ಗವನು. O.-glass(es) ನಾಟಕ ಮಂದಿರದಲ್ಲಿ ಉಪಯೋಗಿಸುವ ಇಕ್ಕಣ್ಣಿನ ಸಣ್ಣ ದುರ್ಬೀನು. O.-hat (Hat ನೋಡಿ). O.-house (ಸಂಗೀತ) ನಾಟಕ ಮಂದಿರ. **Operátic** ಆಪೆರ್ಯಾಟಿಕ್ (ಗು.) (ಸಂಗೀತ) ನಾಟಕದ(ಂಥ). **Operátically** (ಕ್ರಿ. ವಿ.) ; **Óperatize** (ಕ್ರಿ. ಸಕ.) ಸಂಗೀತ ನಾಟಕದ ರೂಪಕ್ಕೆ ತಿರುಗಿಸು. **Operétta** ಆಪೆರೆಟ (ನಾ.) ಏಕಾಂಕ ಸಂಗೀತನಾಟಕ ; ಲಘು ಸಂಗೀತನಾಟಕ.

Óperable (ಗು.). **Operate** ನೋಡಿ.

Óperate ಆಪೆರೇಟ್ (ಕ್ರಿ.) ಕಾರ್ಯ ನಡಸು ; ಕೆಲಸ ಮಾಡು ; ಪರಿಣಾಮ ತರು ; ಫಲವುಂಟುಮಾಡು ; ಪ್ರಭಾವ ಬೀರು (The tax operates to our disadvantage) ; ನಡೆ ; ಸಲ್ಲು ; (ಒಬ್ಬನ ಹೆದರಿಕೆ, ಮೊ. ನ್ನು ಕೆರಳಿಸಿ) ಕಾರ್ಯಭಾಗ ನಡಸು [*Up* (on) ಉಪ. ಜೊಡನೆ]. (ಔಷಧ, ಮೊ. ಗಳ ವಿಷಯದಲ್ಲಿ) ಅಪೇಕ್ಷಿಸಿದ ಫಲ ಕೊಡು, (ದೇಹಕ್ಕೆ) ಹಿಡಿ. (ವೈದ್ಯ) ಶಸ್ತ್ರಚಿಕಿತ್ಸೆ ಅಥವಾ ಇತರ ಚಿಕಿತ್ಸೆ ಮಾಡು. [**Óperable** (ಗು.) ; Operating-room, -table ಶಸ್ತ್ರ ಚಿಕಿತ್ಸೆ ಮಾಡುವ—. Operating-theatre (ವಿದ್ಯಾರ್ಥಿಗಳ ಬೋಧನೆಗಾಗಿ, ಅವರ ಮುಂದೆ ಶಸ್ತ್ರಚಿಕಿತ್ಸೆ ನಡಸುವ) ಶಸ್ತ್ರಚಿಕಿತ್ಸೆಯ ಪ್ರದರ್ಶನಾಲಯ]. ಉದ್ದೇಶಸಾಧನೆ ಮಾಡು ; —ಮಾಡಲು ಪ್ರಯತ್ನಿಸು. (ಸೈನ್ಯ) ಯುದ್ಧ ತಂತ್ರದ ಚಲನ ವಲನಗಳನ್ನು ನಡಸು. (ಬಂಡವಾಳ ಪತ್ರಗಳ ದಳ್ಳಾಳಿ, ಮೊ. ಗಳ ವಿಷಯದಲ್ಲಿ : ಮು., ಬೆಲೆ ಹತೋಟಿಯ ಉದ್ದೇಶದಿಂದ) ಕೊಳ್ಳು, ಮಾರು. ಆಗಿಸು ; ನೆರವೇರಿಸು (Energy operates changes) ; (ಮು., ಅಮೆ. ಸಂ.) ನಿರ್ವಹಿಸು, ಕಾರ್ಯ ಮಾಡು, ನಡಸು. **Óperator** (ನಾ.) ; **Operátion** (ನಾ.) (ಕ್ರಿಯಾರ್ಥಗಳಲ್ಲದೆ). ಕಾರ್ಯ ; ಕ್ರಿಯೆ ; ಕೆಲಸಮಾಡುವ ರೀತಿ ; ಜಾರಿ ; ಕಾರ್ಯಕಾರಿತ್ವ ; ಊರ್ಜಿತತ್ವ ; ವ್ಯಾಪ್ತಿ (Is in, comes into, o. ಜಾರಿಯಲ್ಲಿದೆ, ಜಾರಿಗೆ ಬರುತ್ತದೆ. Its o. is easily explained ಅದರ ಕಾರ್ಯರೀತಿಯನ್ನು—. Must extend its o. ಇನ್ನೂ ಹೆಚ್ಚು ಕಾಲ, ಅಥವಾ ಇನ್ನೂ ಹೆಚ್ಚು ವಿಸ್ತಾರವಾಗಿ, ಅದು ಅನ್ವಯಿಸುವಂತೆ ಮಾಡಬೇಕು). ಕ್ರಿಯಾ ಗತಿ ; ಚಟುವಟಿಕೆ ; ಕಾರ್ಯಾಚರಣೆ; ಕರ್ತವ್ಯ ನಿರ್ವಹಣ (The o. of breathing, thinking, pruning). ಹಣಕಾಸಿನ ವ್ಯವಹಾರ. (ವೈದ್ಯ) (ಅಂಗ ವಿಕಾರ, ಗಾಯ, ವ್ಯಾಧಿ, ನೋವು, ಮೊ. ನ್ನು ವಾಸಿಮಾಡಲು ಕೈಕೊಳ್ಳುವ) ಶಸ್ತ್ರ ಚಿಕಿತ್ಸೆ. (ಭೂ ಸೈನ್ಯ, ನೌಕಾ ಸೈನ್ಯ) ಸೈನ್ಯಗಳ, ಹಡಗುಗಳ, ಚಲನ ವಲನಗಳು. (ಗಣಿತ) ಒಂದು ಸಂಖ್ಯೆಯ ಮೊತ್ತವನ್ನಾಗಲಿ ಬೆಲೆಯನ್ನಾಗಲಿ ಗುಣಾಕಾರ, ಭಾಗಾಕಾರ, ಮೊ. ಗಳಿಂದ ವ್ಯತ್ಯಾಸ ಪಡಿಸುವ ಗಣಿತ ಕ್ರಿಯೆ. **Óperative** ಆಪೆರಟಿವ್ (ಗು., ನಾ.) ಪರಿಣಾಮವುಂಟುಮಾಡುವ ; ಸಲ್ಲುವ ; ಜಾರಿಯಲ್ಲಿರುವ ; ಕಾರ್ಯಕಾರಿ, ಪರಿಣಾಮಕಾರಿ, —ಆದ ; ಕಾರ್ಯರೂಪದ(ಲ್ಲಿರುವ) (ತತ್ತ್ವಪ್ರಾಯವಾಗಿಯೊ ಭಾವನಾ ಮಾತ್ರವಾಗಿಯೊ ಅಲ್ಲದ) (The o. part of the work). ಶಸ್ತ್ರ ಚಿಕಿತ್ಸೆಯ. (ನಾ.) ಕೆಲಸಗಾರ ; ಕಾರೇಗಾರ ; ಕೂಲಿಕಾರ ; ಕಾರ್ಮಿಕ ; ಯಂತ್ರ ಶಿಲ್ಪಿ ; ಗಿರಣಿ ಕೆಲಸಗಾರ. **Óperatively** (ಕ್ರಿ. ವಿ.)

Operátic, etc. **Opera** ನೋಡಿ.

Opérculum ಒಪರ್‌ಕ್ಯುಲಂ (ನಾ. ; ಬ. ವ. -la) ಮೀನಿನ ಕಿವಿರು ಮುಚ್ಚಳ ; ಚಿಪ್ಪಿನ ಪ್ರಾಣಿ ತನ್ನ ಅಂಗಗಳನ್ನು ಒಳಸೆಳೆದುಕೊಂಡಾಗ (ಚಿಪ್ಪಿನ) ತೆರಪನ್ನು ಮುಚ್ಚುವ ಮುಚ್ಚಳ ಅಥವಾ ಕವಾಟ ; ಸಸ್ಯ, ಮೊ. ಗಳಲ್ಲಿ ಇದೇ ತೆರದ ಮುಚ್ಚಳ(ದಂಥ ಭಾಗ). **Opércular** (ಗು.) ; **Opérculate** (ಗು.) ; **Opérculated** (ಗು.) ; **Opérculi-** (ಸ. ಪೂ. ಪ.)

Operétta. **Opera** ನೋಡಿ.

Óperose ಆಪೆರೋಸ್ (ಗು.) ಬಹು ಕಷ್ಟಸಾಧ್ಯವಾದ ; ಬಹಳ ತೊಂದರೆ, ಕಷ್ಟ, —ಪಟ್ಟು ಮಾಡಿದ ; ಬಹಳ ಕಷ್ಟಪಟ್ಟು ಮಾಡಬೇಕಾದ. **Operósely** (ಕ್ರಿ. ವಿ.) ; **Operóseness** (ನಾ.)

Ophídian ಒಫಿಡಿಯನ್ (ಗು., ನಾ.) ಸರ್ಪಗಳನ್ನೊಳಕೊಂಡ ಸರೀಸೃಪ ವರ್ಗದ (ಒಂದು ಪ್ರಾಣಿ) : ಹಾವು ; ಹಾವಿನ(ಂಥ). **Ophiólater** ಒಫಿಯಾಲಟರ್ (ನಾ.) ಸರ್ಪ ಪೂಜಕ. **Ophiólatry** (ನಾ.) ಸರ್ಪಾರಾಧನೆ. **Ophiólogy** (ನಾ.) ಸರ್ಪ ಶಾಸ್ತ್ರ.

Ophiólater, etc. **Ophidian** ನೋಡಿ.

Óphite ಆಫೈಟ್ (ನಾ.) ಹಾವುಮಚ್ಚೆಗಳಂತಿರುವ ಗುರುತುಗಳುಳ್ಳ ಹಸುರು ಬಣ್ಣದ ಒಂದು ಶಿಲೆ : ಸರ್ಪ ಶಿಲೆ ; ಸರ್ಪಾಮೃತಶಿಲೆ. **Ophític** ಒಫಿಟಿಕ್ (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ophthálmia ಅಫ್‌ತ್ಯಾಲ್ಮಿಯ (ನಾ.) ಕಣ್ಣಿನ ಉರಿಯೂತ; ಕಣ್ಣು ಬೇನೆ. **Ophthálmic** (ಗು., ನಾ.) ಕಣ್ಣಿನ; ನೇತ್ರದ; ಕಣ್ಣಿನ ಉರಿಯೂತವಿರುವ. ಕಣ್ಣಿನ ರೋಗಕ್ಕೆ ತಕ್ಕ (ಔಷಧ); ಕಣ್ಣು ಮದ್ದು; ನೇತ್ರೌಷಧ.

Ophthalm(o)- ಅಫ್‌ತ್ಯಾಲ್ಮೊ— (ಸ. ಪೂ. ಪ.) ಕಣ್ಣು—; ನೇತ್ರ—. [**Ophthalmítis** —ಲ್ಮೈಟಿಸ್ =Ophthalmia. **Ophthalmólogy** ಕಣ್ಣಿನ ರಚನೆ, ಕಾರ್ಯ, ರೋಗ—ಇವನ್ನು ಕುರಿತ ಶಾಸ್ತ್ರ: ನೇತ್ರ ಶಾಸ್ತ್ರ]. **-logist** ನೇತ್ರ ಚಿಕಿತ್ಸಕ; ನೇತ್ರ ವೈದ್ಯ. **-tomy** ನೇತ್ರದ ಶಸ್ತ್ರ ಚಿಕಿತ್ಸೆ. **Ophthálmoscope** ಕಣ್ಣಿನ ಒಳಭಾಗವನ್ನು (ಮು., ದೃಷ್ಟಿಪಟವನ್ನು) ಪರೀಕ್ಷಿಸುವ ಯಂತ್ರ ಸಲಕರಣೆ: ನೇತ್ರ ಪರೀಕ್ಷಕ (ಯಂತ್ರ)

Ópiate ಒಪಿಯೆಟ್ (ಗು., ನಾ.), —ಯೇಟ್ (ಕ್ರಿ. ಸಕ.). (ಗು.; ಪ್ರಾಚೀ. ಪ್ರ.) ಅಫೀಮಿರುವ; ನೋವು ತಿಳಿಯದಂತೆ ಮಾಡುವ; ನಿದ್ದೆ ಬರಿಸುವ; ನಿದ್ರಾಜನಕ. (ನಾ.) —ಔಷಧ ವಸ್ತು. (ಕ್ರಿ.) ಅಫೀಮು ಬೆರಸು; ಅಫೀಮಿನಿಂದ ಮಯಕ ಬರಿಸು ಅಥವಾ ನಿದ್ದೆ ಬರಿಸು.

Opíne. **Opinion** ನೋಡಿ.

Opínion ಒಪಿನ್ಯನ್ (ನಾ.) ಅಭಿಪ್ರಾಯ; (ಸದ್ಯದ) ನಂಬಿಕೆ, ಎಣಿಕೆ (In my o. ನನ್ನ ಅಭಿಪ್ರಾಯದಲ್ಲಿ; ನನಗೆ ತೋರುವುದರಲ್ಲಿ. A matter of o. ಭಿನ್ನಾಭಿಪ್ರಾಯದ ವಿಷಯ). ಜನಸಾಮಾನ್ಯದಲ್ಲಿ ರೂಢಿಯಾಗಿರುವ, ಮು., ನೈತಿಕ ವಿಷಯಗಳಮೇಲಿನ, ಅಭಿಪ್ರಾಯ: ಜನಾಭಿಪ್ರಾಯ; ಲೋಕ ಮತ (=Public o.). (ಒಬ್ಬನ) ದೃಢಾಭಿಪ್ರಾಯ, ದೃಢ ನಂಬಿಕೆ [The courage of one's opinions (Courage ನೋಡಿ). Act up to one's opinions ತನ್ನ ದೃಢ ನಂಬಿಕೆಯಂತೆ ನಡೆ]. (ವೃತ್ತಿ) ನಿಪುಣನ ಅಭಿಪ್ರಾಯ (You had better have another o). I have formed a very high, low, favourable, o. of him. I have no o. of Frenchmen —ಒಳ್ಳೆಯ ಅಭಿಪ್ರಾಯ—. **Opínionated** ಒಪಿನ್ಯೊನೇಟೆಡ್ (ಗು.) ತನ್ನ ಅಭಿಪ್ರಾಯದ ವಿಷಯವಾಗಿ ಪಟ್ಟು ಹಿಡಿಯುವ; ತಾನು ಹೇಳಿದ್ದೇ ಸರಿಯೆನ್ನುವ; ಸ್ವಂತ ನಿಶ್ಚಯದಂತೆ ನಡೆಯುವ. **Opínionatedness** (ನಾ.); **Opínionative** (ಗು.) =Opinionated. **Opíne** ಒಪೈನ್ (ಕ್ರಿ. ಸಕ.) (—ಎಂದು) ಅಭಿಪ್ರಾಯ ಕೊಡು, ಪಡು (*That* ಪದದೊಡನೆ)

Opisómeter ಅಪಿಸಾಮಿಟರ್ (ನಾ.) ಭೂಪಟ, ಮೊ. ಗಳ ಮೇಲಿನ ವಕ್ರ ರೇಖೆಗಳನ್ನು ಅಳೆಯುವುದಕ್ಕಾಗಿ ವಕ್ರ ಮಾರ್ಗದಲ್ಲಿ ಚಲಿಸುವಂತೆ, ಒಂದು ತಿರುಪಿನಮೇಲೆ ಓಡಾಡುವ ಚಕ್ರವನ್ನುಳ್ಳ ಒಂದು ಸಲಕರಣೆ: ವಕ್ರರೇಖಾ ಮಾಪಕ.

Ópium ಓಪಿಯಮ್ (ನಾ., ಕ್ರಿ. ಸಕ.) ಅಫೀಮು [ಒಂದು ಬಗೆಯ ಗಸಗಸೆ(ಕಸಕಸೆ)ಯ ಗಿಡದ ಕಾಯಿಯ ಸಿಪ್ಪೆಯನ್ನು ಗೀರಿದುದರಿಂದ ಹೊರಟ ರಸ ತಾನಾಗಿ ಗಟ್ಟಿಯಾಗುವುದರಿಂದ ಆದ, ಉತ್ತೇಜಕವಾಗಿಯೂ ಮಯಕ ಅಥವಾ ನಿದ್ದೆ ಬರಿಸುವುದಕ್ಕಾಗಿಯೂ ಅದರ ಹೊಗೆಯನ್ನು ಸೇದುವ, ಅಥವಾ ಹಾಗೆಯೇ ತಿನ್ನುವ, ಶಾಮಕವಾಗಿ ಔಷಧದಲ್ಲುಪಯೋಗಿಸುವ, ಕೆಂಪು ಛಾಯೆಯ ಕಂದು ಬಣ್ಣದ, ಕಟು ವಾಸನೆಯ, ಕಹಿಯಾದ ಔಷಧವಸ್ತು]. [O. den ಅಫೀಮುಕೋರರ (ಸೇದುವವರ) ಮಠ. O. habit ಅಫೀಮು (ಸೇವಿಸುವ) ಅಭ್ಯಾಸ. **Ópiumism** (ನಾ.) =O. habit; ಹೆಚ್ಚಾದ ಅಫೀಮು ಸೇವನೆಯಿಂದಾದ ರೋಗ ವಿಕಾರ. **Ópiumize** (ಕ್ರಿ. ಸಕ.)]. (ಕ್ರಿ.) ಅಫೀಮನ್ನು (ಹೆಚ್ಚಾಗಿ) (ಔಷಧವಾಗಿ) ಸೇವಿಸಲು ಕೊಡು; ಅಫೀಮಿನಿಂದ ಸಂಸ್ಕರಿಸು.

Opóssum ಒಪಾಸಮ್ (ನಾ.) ಹೆಬ್ಬೆಟ್ಟುಳ್ಳ ಹಿಂಗಾಲಿರುವ, ವೃಕ್ಷವಾಸಿ ಅಥವಾ ಜಲವಾಸಿಯಾದ, ರಾತ್ರಿಹೊತ್ತು ಚಟುವಟಿಕೆಯಿಂದಿರುವ, ಹೊಟ್ಟೆಯ ಚೀಲವುಳ್ಳ, ಅಮೆರಿಕದ ಒಂದು ಸಣ್ಣ ಸಸ್ತನಿ ಪ್ರಾಣಿ. (ಆಸ್ಟ್ರೇಲಿಯ) =Phalanger.

Óppilate ಆಪಿಲೇಟ್ (ಕ್ರಿ. ಸಕ.) (ವೈ. ಶಾ.) ಅಡಚು; ತಡೆಗಟ್ಟು. **Oppilátion** (ನಾ.)

Oppónency. **Opponent** ನೋಡಿ.

Oppónent ಅಪೋನೆಂಟ್ (ಗು., ನಾ.) ಎದುರಾಗುವ (O. muscle ಹೆಬ್ಬೆಟ್ಟನ್ನು ಅಥವಾ ಇತರ ಬೆರಳನ್ನು ಮಿಕ್ಕ ಬೆರಳೊಂದಕ್ಕೆ ಎದುರಾಗುವಂತೆ ಸೆಳೆಯುವ ಸ್ನಾಯು). ವಿರೋಧಿಸುವ; ವಿರುದ್ಧ; ವ್ಯತಿರಿಕ್ತ (ಈಗ ವಿರ. ಪ್ರ.). (ನಾ.) ಎದುರಾಳಿ; ವಿರೋಧಿ; ಪ್ರತಿ ಕಕ್ಷಿ. **Oppónency** (ನಾ.) (ವಿರ. ಪ್ರ.) ವಿರೋಧ; ಪ್ರತಿಭಟನೆ.

Ópportune, Opportúne ಅಪರ್ಟ್ಯೂನ್ (ಗು.) (ಕಾಲದ ವಿಷಯದಲ್ಲಿ) ತಕ್ಕ; ಉಚಿತ; ಅನುಕೂಲವಾದ; ತಕ್ಕಂತೆ ಗೊತ್ತುಮಾಡಿದ; ಅರಿಸಿಟ್ಟಂತೆ ಅನುಕೂಲವಾದ. (ಕಾರ್ಯ, ಘಟನೆ) ಸಮಯೋಚಿತ; ಸಂದರ್ಭೋಚಿತ; ಅನುಕೂಲ ಸಂದರ್ಭಕ್ಕೆ (ಮೊದಲೇ ಆಲೋಚಿಸಿ) ಮಾಡಿದ, ನಡೆದ, ನಡೆಯುವ; ಅನುಕೂಲ ಸಂದರ್ಭಕ್ಕೆ ಅಕಸ್ಮಾತ್ತಾಗಿ ಒದಗುವ. **Ópportunely** (ಕ್ರಿ. ವಿ.); **Ópportuneness** (ನಾ.); **Opportúnism** (ನಾ.) ಕಾರ್ಯನೀತಿಯನ್ನು ನಿರ್ಧರಿಸುವಲ್ಲಿ ಸಮಯ ಸಂದರ್ಭಗಳಿಗೆ ಯುಕ್ತವಾದ ಅಥವಾ ಮಿತಿ ಮೀರಿದ ಪ್ರಾಶಸ್ತ್ಯ ಕೊಡುವುದು; ಸಮಯಾನುವರ್ತನೆ: "ಅನುಕೂಲ ಸಿಂಧು". ಮಾಡಲು ಅವಶ್ಯಕವಾದುದಕ್ಕಿಂತ ಸಾಧ್ಯವಾದುದಕ್ಕೆ ಪ್ರಾಶಸ್ತ್ಯ ಕೊಡುವುದು; ಮಧ್ಯಸ್ಥಿಕೆ; ಕಾರ್ಯಸಾಧ್ಯ ವ್ಯವಹಾರ; ಸಂದರ್ಭಾನುಸರಣೆಗಾಗಿ ನಿಯಮಪಾಲನೆಯನ್ನು ಲಕ್ಷಿಸದೆ ಹೋಗುವುದು; ರಾಜಕೀಯದಲ್ಲಿ ಕಾಲಾನುಸರಣೆ. **Opportúnist** (ನಾ.); **Opportúnity** (ನಾ.) =Opportuneness (ವಿರ. ಪ್ರ.); ಅನುಕೂಲ ಸಂದರ್ಭ; ಸುಯೋಗ; ಸದವಕಾಶ; ಅನುವು (*Of* doing, *to* do, *for* action) (Find, make, get, seize, give, afford, an o.)

Oppóse ಅಪೋಸ್ (ಕ್ರಿ. ಸಕ.) ತಡೆಯಾಗಿ, ವಿರೋಧವಾಗಿ, ಪ್ರತಿಭಾರವಾಗಿ, ವೈದೃಶ್ಯ ತೋರುವಂತೆ (ವಸ್ತುವನ್ನು, ವ್ಯಕ್ತಿಯನ್ನು) ಇಡು, ಒಡ್ಡು, ಹೇಳು; ಮಾರೊಡ್ಡು; ಎದುರಿಸು; ಪ್ರತಿಭಟಿಸು; (ವಸ್ತುಗಳನ್ನು) ಪರಸ್ಪರ ವಿರೋಧ ಭಾವದಲ್ಲಿ ತಿಳಿಸು (To fury let us o. patience ರೋಷವನ್ನು ತಾಳ್ಮೆಯಿಂದ ಎದುರಿಸೋಣ. To Plato I o. Aristotle ಪ್ಲೇಟೋವಿಗೆ ಅರಿಸ್ಟಾಟಲನನ್ನು ಪ್ರತಿ ದ್ವಂದ್ವಿಯಾಗಿಡುತ್ತೇನೆ. The thumb can be opposed to any of the fingers ಹೆಬ್ಬೆಟ್ಟನ್ನು ಯಾವ ಬೆರಳಿಗಾದರೂ ಎದುರು ಬದುರು ಮಾಡಬಹುದು). ತಡೆಯೊಡ್ಡು; ಅಡಚಣೆ ಮಾಡು. (ನಿರ್ಣಯ, ಸೂಚನೆ, ಮೊ. ನ್ನು) ವಿರೋಧಿಸು; ತಳ್ಳಿಹಾಕಬೇಕೆಂದು ಹೇಳು; ವಿರುದ್ಧವಾಗಿ, ತಡೆಯಾಗಿ, ವರ್ತಿಸು. (ಭೂ. ಕೃ.) ವಿರುದ್ಧ; ಪ್ರತಿಕೂಲ; ಪರಸ್ಪರ ವ್ಯತಿರಿಕ್ತ. **Oppósable** (ಗು.); **Opposability** (ನಾ.); **Oppóseless** (ಗು.) (ಕಾವ್ಯ) ಪ್ರತಿಭಟಿಸಲಾಗದ; ಅಪ್ರತಿಹತ. **Oppóser** (ನಾ.)

Ópposite ಆಪೊಸಿಟ್ (ಗು., ನಾ., ಕ್ರಿ. ವಿ., ಉಪ.) ಎದುರುಬದುರು (ಆದ, ಆಗಿ); (ಪರಸ್ಪರ) ಅಭಿಮುಖ(ವಾದ, —ವಾಗಿ), ವಿಮುಖ (ವಾದ, —ವಾಗಿ) [On o. sides of the square ಚೌಕದ ಎದುರುಬದುರು ಕಡೆಗಳಲ್ಲಿ. Came from, went in, o. directions. The tree o. (to) the house. O. leaves (ಸ. ವಿ.) ತಾಳಿನಲ್ಲಿ ಎದುರುಬದುರಾಗಿ ಒಂದೇ ಎತ್ತರದಲ್ಲಿರುವ ಎಲೆಗಳು: ಅಭಿಮುಖ ಪರ್ಣಗಳು. O. number ಮತ್ತೊಂದು ಸಾಲಿನಲ್ಲಿ, ಶ್ರೇಣಿಯಲ್ಲಿ, ಇದೇ ಸ್ಥಾನದಲ್ಲಿರುವಂತೆ ಇಟ್ಟಿರುವ ವಸ್ತು, ವ್ಯಕ್ತಿ: ಜವಾಬಾದದ್ದು]. ವಿರುದ್ಧ ತೆರದ; ತೀರ ವ್ಯತ್ಯಾಸವಾದ (*To, from* ಉಪ. ದೊಡನೆ) (Much liked by the o. sex). (ನಾ.) ಪ್ರತಿಯಾದದ್ದು; ವಿರುದ್ಧವಾದದ್ದು (You are cold-blooded, she is the o. The most extreme opposites have some qualities in common ಅತ್ಯಂತ ವಿರುದ್ಧವಾದವುಗಳಲ್ಲಿಯೂ ಕೆಲವು ಸಮಾನ ಗುಣಗಳಿರುತ್ತವೆ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕ್ರಿ. ವಿ., ಉಪ.) ಎದುರು ಸ್ಥಾನದಲ್ಲಿ; ಎದುರು ಕಡೆ [There was an explosion o. ಎದುರು ಕಡೆಯಲ್ಲ ಸಿಡಿತವಾಯಿತು. O. prompter (ಸಂಕ್ಷಿಪ್ತ: O.P.) ರಂಗಭೂಮಿಯಲ್ಲಿ ನಟನ ಎಡಕ್ಕೆ ಮರೆಯಲ್ಲಿದ್ದು ಮರೆತದ್ದನ್ನು ಹೇಳಿಕೊಡುವವನು]. **Óppositely** (ಕ್ರಿ. ವಿ.); **Óppositeness** (ನಾ.); **Opposítion** (ನಾ.) ಎದುರು ಬದುರಾಗಿ, ಅಭಿಮುಖವಾಗಿ, —ಇಡುವುದು (O. of the thumb). ನೇರಿದಿರು ಸ್ಥಾನ [ಮು., ಖ. ವಿ.: ಎರಡು ಆಕಾಶಸ್ಥ ಕಾಯಗಳಿಗೆ ೧೮೦° ರೇಖಾಂಶ ವ್ಯತ್ಯಾಸವಿರುವ ಸ್ಥಾನ: ಪ್ರತಿ ಯೋಗ (ಎದುರು ಪದ: Conjunction). Planet is in o. ಗ್ರಹವು ಪ್ರತಿ ಯೋಗದಲ್ಲಿದೆ]. ಪರಸ್ಪರ ಭಿನ್ನತೆ; ವಿರೋಧ; ವಿರೋಧ ನ್ಯಾಸ. (ತರ್ಕ) ಒಂದೇ ಕರ್ತೃ ಕ್ರಿಯಾಪದಗಳಿರುವ, ಆದರೆ ಪ್ರಮಾಣದಲ್ಲಾಗಲಿ ಗುಣ ದಲ್ಲಾಗಲಿ ಅಥವಾ ಎರಡರಲ್ಲೂ ವ್ಯತ್ಯಾಸವುಳ್ಳ ಎರಡು ಪ್ರತಿಜ್ಞೆಗಳಿಗೆ ಇರುವ ಸಂಬಂಧ. ವೈರ; ಅಡ್ಡಿ; ಅಡಚಣೆ (Offer a determined o. Did it in o. to public opinion. Was in o. at the time). (ಸರ್ಕಾರ ನಡಸುವವರ) ಎದುರು ಪಕ್ಷ, ವಿರೋಧ ಪಕ್ಷ [The o., His Majesty's o. ಬ್ರಿಟಿಷ್ ಪಾರ್ಲಿಮೆಂಟಿನಲ್ಲ ಸರ್ಕಾರದ ಪ್ರತಿ ಪಕ್ಷ(ದವರು). The leader of the o.]. ಸೂಚನೆಯನ್ನು ವಿರೋಧಿಸುವ ಪಕ್ಷ. **Opposítional** (ಗು.) (ವಿರ. ಪ್ರ.); **Opposítionist** (ನಾ., ಗು.) (ವಿರ. ಪ್ರ.); **Oppósitive** ಅಪಾಸಿಟಿವ್ (ಗು.) (ವಿರ. ಪ್ರ.) ವಿರುದ್ಧಾರ್ಥ ಸೂಚಕ; ವಿರೋಧ ನ್ಯಾಸವುಳ್ಳ; ಪ್ರತಿಘಟಿಸುವ ಸ್ವಭಾವದ.

Oppósiti- ಅಪಾಸಿಟಿ— (ಸ. ಪೂ. ಪ.: ಸ. ವಿ. ದಲ್ಲಿ) ಎದುರು ಬದುರಾದ—; ಪರಸ್ಪರಾಭಿಮುಖ—. **-fólious** ಅಭಿಮುಖ ಪರ್ಣ. **-sépalous** (ಕೇಸರಗಳ ವಿಷಯದಲ್ಲಿ) ಪುಷ್ಪ ದಳಕ್ಕೆ ನೇರಿದಿ ರಾಗಿ ಅಳವಟ್ಟಿರುವ.

Oppréss ಅಪ್ರೆಸ್ (ಕ್ರಿ. ಸಕ.) ಹೆಚ್ಚಾದ ಭಾರದಿಂದಾಗಲಿ ಸಂಖ್ಯೆ ಯಿಂದಾಗಲಿ ಅಥವಾ ತಡೆಯಲಾಗದ ಶಕ್ತಿಯಿಂದಾಗಲಿ, ಅದುಮಿ ಬಿಡು, ತಲೆಯೆತ್ತದಂತೆ ಮಾಡು. (ಉತ್ಸಾಹ, ಭಾವನೆ, ಮೊ. ನ್ನು) ಹೊರಹೊಮ್ಮದಂತೆ ಮಾಡು, ತುಳಿ. ದಬ್ಬಾಳಿಕೆಯಿಂದ ಅಧಿಕಾರ ಮಾಡು, ರಾಜ್ಯಭಾರ ನಡಸು. ಬಲವಂತದಿಂದ ಅದುಮಿಡು; ಸಂತತ ವಾದ ಕಠಿಣ ಕಾರ್ಯಕ್ಕೆ ಅಥವಾ ಅನ್ಯಾಯಕ್ಕೆ ಗುರಿ ಮಾಡು; ಪೀಡಿಸು; ಗೋಳುಗುಟ್ಟಿಸು; ಹಿಂಸಿಸು. **Oppréssion** (ನಾ.); **Oppréssive** (ಗು.); **Oppréssively** (ಕ್ರಿ. ವಿ.); **Oppréssiveness** (ನಾ.); **Oppréssor** (ನಾ.)

Opprόbrium ಅಪ್ರೋಬ್ರಿಯಮ್ (ನಾ.) (ಮಾಡಿದ ಒಂದು ಕಾರ್ಯಕ್ಕೆ ಅಥವಾ ನಡತೆಗೆ ಹತ್ತಿರುವ) ಅಪಮಾನ; ಕಳಂಕ; ನಿಂದೆ; ಅಪ ಕೀರ್ತಿ; ಕೆಟ್ಟ ಹೆಸರು; ನಾಚಿಕೆಗೇಡಿತನ. **Opprόbrious** (ಗು.) ಅಪಮಾನಕ್ಕೀಡಾದ; ನಿಂದಾತ್ಮಕ; ಬಯ್ಯುವ; ತೆಗಳಿಕೆಯ. **Opprόbriously** (ಕ್ರಿ. ವಿ.)

Oppúgn ಅಪ್ಯೂನ್ (ಕ್ರಿ. ಸಕ.) ಖಂಡಿಸು; ಎದುರಿಸು; ನಿಜವೆಂದು ಒಪ್ಪದಿರು. (ವಿರ. ಪ್ರ.) ಮೇಲೆ ಬೀಳು; ತಡೆಯೊಡ್ಡು; ವಿರೋಧ ವಾಗಿರು. **Oppúgner** (ನಾ.). **Oppúgnant** ಅಪಗ್ನಂಟ್ (ಗು., ನಾ.), **Oppúgnance** (ನಾ.), **Oppúgnancy** (ನಾ.), **Oppugnátion** (ನಾ.) —(ಇವೆಲ್ಲ ವಿರ. ಪ್ರ.)

Ópsimath ಅಪ್ಸಿಮ್ಯಾತ್ (ನಾ.) (ವಿರ. ಪ್ರ.) ವಯಸ್ಸಾದಮೇಲೆ ವಿದ್ಯಾಭ್ಯಾಸವನ್ನಾರಂಭಿಸುವವನು. **Opsímathy** —ಮತಿ (ನಾ.)

Opsónic ಅಪ್ಸಾನಿಕ್ (ಗು.) ರಕ್ತದಲ್ಲಿಯ ವಿಷಾಣು ಜೀರ್ಣಕಗಳಾದ ಬಿಳಿಯ ರಕ್ತಕಣಗಳಿಗೆ ಜೀರ್ಣಿಸಿಕೊಳ್ಳಲು ಸುಲಭವಾಗುವಂತೆ ವಿಷಾಣುಗಳಮೇಲೆ ಪರಿಣಾಮವುಳ್ಳ; ವಿಷಾಣು ಜೀರ್ಣಕ (O. action, power ವಿಷಾಣು ಜೀರ್ಣಕ ಕಾರ್ಯ, ಶಕ್ತಿ). **Ópsonin** ಆಪ್ಸೊನಿನ್ (ನಾ.) ರೋಗಿ ನರಳುತ್ತಿರುವ ರೋಗಕ್ಕೆ ಸಂಬಂಧಪಟ್ಟ ನಿರ್ಜೀವ ರೋಗಾಣುಗಳನ್ನು ಸಂಸ್ಕರಿಸಿ ತಯಾರಿಸಿದ ಪದಾರ್ಥವನ್ನು ಅವನ ರಕ್ತಕ್ಕೆ ಸೇರಿಸುವುದರ ಮೂಲಕ ಆ ರಕ್ತದಲ್ಲಿ ಉತ್ಪತ್ತಿ ಯಾಗುವ ಪದಾರ್ಥ.

Opt. **Option** ನೋಡಿ.

Óptative ಆಪ್ಟಟಿವ್, **Optátive** ಆಪ್ಟೇ— (ಗು., ನಾ.) (ವ್ಯಾ.) ಇಚ್ಛಾರ್ಥಕ [O. mood ಇಚ್ಛಾರ್ಥಕ ಭಾವರೂಪ (ಮು., ಗ್ರೀಕ್ ಮತ್ತು ಸಂಸ್ಕೃತ ಭಾಷೆಗಳಲ್ಲಿ). O. use of subjunctive]. **Optátively** (ಕ್ರಿ. ವಿ.)

Óptic ಆಪ್ಟಿಕ್ (ಗು., ನಾ.) (ಅಂ. ರ. ಶಾ.) ಕಣ್ಣಿನ; ದೃಷ್ಟಿಯ; ಚಕ್ಷುರಿಂದ್ರಿಯದ (O. nerve ದೃಷ್ಟಿ ನರ. O. neuritis ದೃಷ್ಟಿ ನರದ ಉರಿಯೂತ. O. angle ವಸ್ತುವಿನ ಎರಡು ಕೊನೆಗಳಿಂದ ಹೊರಟು ಕಣ್ಣಿಗೆ ಸೇರುವ, ಅಥವಾ ಎರಡು ಕಣ್ಣುಗಳಿಂದಲೂ ಹೊರಟು ಒಂದು ಬಿಂದುವಿನಲ್ಲಿ ಸೇರುವ, ಎರಡು ರೇಖೆಗಳ ಮಧ್ಯದ ಕೋನ: ದೃಷ್ಟಿ ಕೋನ). (ನಾ.) (ಈಗ ಸಾ., ಹಾಸ್ಯ ಪ್ರ.) ಕಣ್ಣು. (ಬ. ವ. ದಲ್ಲಿ, ಆದರೆ ಏ. ವ. ದ ಅನ್ವಯ) ದೃಷ್ಟಿ ಶಾಸ್ತ್ರ (ಮು., ದೃಷ್ಟಿಹೇತುವಾದ ಬೆಳಕಿನ ನಿಯಮಗಳನ್ನು ಕುರಿತ ಶಾಸ್ತ್ರ); ದೃಗ್ವಿಜ್ಞಾನ. **Óptical** (ಗು.) ನೋಟದ; ಕಣ್ಣಿನ; ದೃಷ್ಟಿಯ (O. illusion ದೃಷ್ಟಿ ಪ್ರಮಾಣಕ್ಕೆ ಅತಿ ಬೆರೆಕೊಡುವುದರಿಂದಾಗುವ ಭ್ರಾಂತಿ: ದೃಷ್ಟಿ ಭ್ರಾಂತಿ; ಚಾಕ್ಷುಷ ಭ್ರಾಂತಿ). ಬೆಳಕಿನ; ದೃಗ್ವಿಜ್ಞಾನದ; ದೃಷ್ಟಿ ಸಹಾಯಕವಾಗಿ ರಚಿಸಿದ; ದೃಗ್ವಿಜ್ಞಾನದ ತತ್ತ್ವಾನುಸಾರ ರಚಿಸಿದ. **Óptically** (ಕ್ರಿ. ವಿ.); **Optícian** ಆಪ್ಟಿಷನ್ (ನಾ.) ದೃಗ್ಯಂತ್ರ ಸಲಕರಣೆ ಗಳನ್ನು ಮಾಡುವವನು, ಮಾರುವವನು; ದೃಗ್ಯಂತ್ರಕಾರ.

Óptime. **Wrangler** ನೋಡಿ.

Óptimism ಆಪ್ಟಿಮಿಸ್‌ಮ್ (ನಾ.) ವಾಸ್ತವಿಕ ಪ್ರಪಂಚವೇ (ಇಹ ಲೋಕವೇ) ಇತರ ಎಲ್ಲ ಸಾಧ್ಯ ಪ್ರಪಂಚಗಳಿಗಿಂತಲೂ ಉತ್ತಮ ವಾದದ್ದೆಂಬ (ಲೈಬ್ನಿಟ್ಸ್ ಎಂಬ ತತ್ತ್ವಜ್ಞನ) ತತ್ತ್ವ. ಪ್ರಪಂಚದಲ್ಲಿ ಕೊನೆಗೆ ಧರ್ಮವು ಅಧರ್ಮವನ್ನು ತುಳಿದು ಜಯಿಸಲೇಬೇಕೆಂಬ ದೃಷ್ಟಿ, ವಾದ; ಆಶಾ ವಾದ, —ವಾದಿತ್ವ; ಶುಭ, ಸತ್, —ಪ್ರತೀಕ್ಷೆ; ಗೆಲವು ನೋಟ. **Óptimist** (ನಾ.); **Optimístic** (ಗು.); **Optimístically** (ಕ್ರಿ. ವಿ.); **Óptimize** (ಕ್ರಿ. ಅಕ.)

Óptimum ಆಪ್ಟಿಮಂ (ನಾ.) (ಮು., ಜೀ. ವಿ.) (ಬೆಳವಣಿಗೆ, ಸಂತಾನಾಭಿ ವೃದ್ಧಿ, ಮೊ. ಗಳಿಗೆ) ಅತ್ಯಂತ ಅನುಕೂಲವಾದ (ಸ್ವಾಭಾವಿಕ) ಪರಿಸ್ಥಿತಿ. (ವಿಶೇಷಣವಾಗಿ) ಅತ್ಯುತ್ತಮ(ವಾದ); ಅತ್ಯಂತ ಹಿತವಾದ (O. temperature)

Óption ಆಪ್ಷನ್ (ನಾ.) ಆಯ್ಕೆ; ಆಯುವುದು; ಆಯ್ದದ್ದು; ಆಯ ಬಹುದಾದದ್ದು (Make one's o.; None of the options is satisfactory). ಆಯ್ಕೆಯ ಸ್ವಾತಂತ್ರ್ಯ [Local o. (Local[1] ನೋಡಿ). Imprisonment without the o. of fine ಜೈಲಿಗೆ ಬದಲಾಗಿ ಜುಲ್ಮಾನೆಯ ಅವಕಾಶಕೊಡದ ಸೆರೆ. Have no o. but to ಬೇರೆ ಮಾರ್ಗವಿಲ್ಲದಿರು; ಗತ್ಯಂತರವಿಲ್ಲದಿರು]. (ಪತ್ರವ್ಯಾಪಾರ, ಮೊ. ಗಳಲ್ಲಿ) ಗೊತ್ತಾದ ಬಂಡವಾಳಪತ್ರ, ಮೊ. ಗಳನ್ನು ಗೊತ್ತಾದ ಕಾಲದಲ್ಲಿ, ಗೊತ್ತಾದ ಬೆಲೆಗೆ, ಕೊಳ್ಳಲು ಅಥವಾ ಮಾರಲು, ಹಣ ಕೊಟ್ಟು ಪಡೆದ ಹಕ್ಕು. **Óptional** (ಗು., ನಾ.) ನಿರ್ಬಂಧವಲ್ಲದ; ಐಚ್ಛಿಕ; ವಿಕಲ್ಪ. (ನಾ.) ಐಚ್ಛಿಕ ವ್ಯಾಸಂಗ; ಚುನಾಯಿಸಿದ್ದು. **Opt** (ಕ್ರಿ. ಅಕ.) (ವಿರ. ಪ್ರ.) ಆಯ್ಕೆಯ ಸ್ವಾತಂತ್ರ್ಯವನ್ನು ಉಪಯೋಗಿಸು; ಆಯ್ಕೆ ಮಾಡು; (ಎರಡರಲ್ಲ ಒಂದನ್ನು, ಒಂದಕ್ಕೆ ಬದಲಾಗಿ ಮತ್ತೊಂದನ್ನು) ಆಯ್ದುಕೊ, ನಿರ್ಧರಿಸು.

Optómeter ಆಪ್ಟಾಮಿಟರ್ (ನಾ.) ಕಣ್ಣಿನ ಕಿರಣ ವಕ್ರೀಕರಣ ಶಕ್ತಿ ಯನ್ನೂ ದೃಷ್ಟಿ ಪರಿಮಿತಿಯನ್ನೂ ಪರೀಕ್ಷಿಸುವ ಸಲಕರಣೆ; ಕಣ್ಣಿನ ಸ್ಪಷ್ಟ ದೃಷ್ಟಿಯ ದೂರವನ್ನಾಗಲಿ ಅಥವಾ ಅದರ ಹೊಂದಿಕೊಳ್ಳುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿಮಿತಿಯನ್ನಾಗಲಿ ಅಳೆಯುವ ಸಲಕರಣೆ : ದೃಷ್ಟಿ ಮಾಪಕ (ಮು., ತಕ್ಕ ಕನ್ನಡಕದ ಬಿಲ್ಲೆಗಳನ್ನು ಆಯ್ಕೆಮಾಡುವ ಸಂದರ್ಭದಲ್ಲಿ)

Óptophone ಆಪ್ಟೊಫೋನ್ (ನಾ.) ಬೆಳಕನ್ನು ಶಬ್ದವನ್ನಾಗಿ ಮಾರ್ಪಡಿಸಿ ಕುರುಡರು ಮುದ್ರಣಾಕ್ಷರಗಳನ್ನು ಕಿವಿಯ ಮೂಲಕ ಗ್ರಹಿಸುವಂತೆ ಮಾಡುವ ಸಲಕರಣೆ : ದೃಷ್ಟಿಧ್ವನಿ ಯಂತ್ರ.

Ópulent ಆಪ್ಯುಲೆಂಟ್ (ಗು.) ಧನಿಕನಾದ ; ಐಶ್ವರ್ಯವುಳ್ಳ ; ತುಂಬಿ ತುಳುಕುವ ; ಯಥೇಷ್ಟವಾದ ; ಪುಷ್ಕಲವಾದ ; ಸಮೃದ್ಧ ; ಭರಿತ. **Ópulence** (ನಾ.) ; **Ópulently** (ಕ್ರಿ. ವಿ.)

Ópus ಅ(ಓ)ಪಸ್ (ನಾ., ಬ. ವ. ಇಲ್ಲ) ಸಂಗೀತಗಾರನ (ಯಾವುದಾದರೂ ಬಗೆಯ) ಪ್ರತ್ಯೇಕ ಕೃತಿ [(ಮು., ಅವನ ಕೃತಿಗಳಿಂದ ಇಷ್ಟನೆಯದೆಂದು ಎತ್ತಿಹೇಳುವ ಸಂದರ್ಭದಲ್ಲಿ ಪ್ರ.). ಸಂಕ್ಷಿಪ್ತ : Op. (ಉದಾ., Beethoven op. 15). Magnum o., O. magnum, O. (Magnum opus ನೋಡಿ)]. **Opúscule** ಒಪಸ್ಕ್ಯುಲ್ (ನಾ.) ; **Opúsculum** (L) —ಸ್ಕ್ಯುಲಮ್ (ನಾ.; ಬ. ವ. -la) (ಸಂಗೀತದ ಅಥವಾ ಸಾಹಿತ್ಯದ) ಲಘು ಕೃತಿ.

Opúscule, etc. **Opus** ನೋಡಿ.

Or[1] ಆರ್ (ನಾ.) ವಂಶಲಾಂಛನದಲ್ಲಿ ಚಿನ್ನದ ಅಥವಾ ಹಳದಿಯ ಬಣ್ಣ.

Or[2] ಆರ್ (ಉಪ., ಸಂ. ಅವ್ಯ.) (ಪ್ರಾಚೀ. ಪ್ರ.) ಮೊದಲು ; ಮುಂಚೆ ; ಮುನ್ನ (ಗ್ರಾಂ.) [ಮು., ಈಗ Or ever, Or e'er (ಕಾವ್ಯ) ಎಂಬಲ್ಲಿ ಮಾತ್ರ ಪ್ರ.]

Or[3] ಆರ್ (ಸಂ. ಅವ್ಯ.) ಅಥವಾ ; ಇಲ್ಲ(ವೆ) ; ಮೇಣ್ (ಗ್ರಾಂ.). (ಪಕ್ಷಾಂತರವನ್ನು ಹೇಳುವಾಗ) White or grey or black. (ಕಾವ್ಯ) Or (=either) in the heart or in the head. Any Tom, Dick, or Harry. (ಸಂದೇಹದಲ್ಲಿ) One or two, five or six, etc. (ಮೊದಲನದರ ವಿವರಣ ಹೇಳುವಲ್ಲಿ) A dug-out or hollowed-tree boat. (ಒಂದೇ ಸಂಭವವನ್ನು ಸೂಚಿಸುವಲ್ಲಿ) A thing must surely be or not be. For goodness' sake either take it or leave it. (ಮೊದಲನದನ್ನು ನಿರಾಕರಿಸಿದರೆ ಅದರಿಂದಾಗುವ ಫಲವನ್ನು ಹೇಳುವಲ್ಲಿ ; ಹಲವು ವೇಳೆ *else* ಪದದೊಡನೆ) She must weep or she must die. Make haste or else you will be late. (*Whether* ಪದದ ತರುವಾಯ) Ask him whether he was there or not. Must do it whether I like or dislike it.

Órach ಆರ(ರಿ)ಚ್ (ನಾ.) ಅಡಿಗೆಯಲ್ಲಿ ಉಪಯೋಗಿಸುವ ಒಂದು ಸಸ್ಯ, ಸೊಪ್ಪು : ಚಕ್ಕೊತ್ತಿ ಸೊಪ್ಪು.

Óracle ಆರಕ್‌ಲ್ (ನಾ.) ಪುರಾತನ ಗ್ರೀಕರು, ಮೊ. ರು ತಮ್ಮ ದೇವತೆಗಳನ್ನು ಬುದ್ಧಿವಾದ, ಭವಿಷ್ಯ, ಕೇಳುತ್ತಿದ್ದ ಸ್ಥಳ : ದಿವ್ಯವಾಣಿ (ಸ್ಥಾನ) [Work the o. ಅರ್ಚಕರು, ಮೊ. ರನ್ನು ಒಳಹಾಕಿಕೊಂಡು ದಿವ್ಯವಾಣಿಯಿಂದ ತನಗೆ ಬೇಕಾದ ಉತ್ತರವನ್ನು ಪಡೆ : (ರೂಪ.) ತನಗೆ ಅನುಕೂಲವಾಗುವಂತೆ ಗೂಢ ಸನ್ನಾಹ ನಡಸು]. ದಿವ್ಯವಾಣಿ ಸ್ಥಾನದಿಂದ ಬಂದ (ಸಾ., ಸಂದಿಗ್ಧವಾದ ಅಥವಾ ಅಸ್ಪಷ್ಟವಾದ) ಉತ್ತರ. ಯೆಹೂದ್ಯ ದೇವಾಲಯದಲ್ಲಿ ಗರ್ಭ ಗುಡಿ ಅಥವಾ ದೇವರ ಸಿಂಹಾಸನ. ದೈವ ಪ್ರೇರಣೆಯ, ದಿವ್ಯೋಕ್ತಿಯ, —ಮನುಷ್ಯ ರೂಪದ (ಅಥವಾ ಇತರ) ವಾಹಕ. ಅಮೋಘವಾದ, ತಪ್ಪದ, —ಮಾರ್ಗದರ್ಶಕ, ಪ್ರಮಾಣ ಸೂಚಿ, ನಿರ್ದೇಶಕ. ಅಧಿಕಾರಯುತವಾದ, ಮಹಾ ಜ್ಞಾನದಿಂದ ಕೂಡಿದ ಉಪದೇಶಕ ಅಥವಾ ಉಪದೇಶ, ನ್ಯಾಯಾಧಿಪತಿ ಅಥವಾ ನ್ಯಾಯ ತೀರ್ಪು ; ಗೂಢೋಪದೇಶ(ಕ) ; ಪ್ರಮಾಣ ವಚನ ; ಭವಿಷ್ಯವಾದಿ ಅಥವಾ ಭವಿಷ್ಯ ವಾದ. **Orácular** ಒರ್ಯಾಕ್ಯುಲರ್ (ಗು.) (ಮು.) ಗೂಢವಾದ ; ದ್ವಂದ್ವಾರ್ಥ ಕೊಡುವ ; ಒಗಟಾದ. **Orácularly** (ಕ್ರಿ. ವಿ.) ; **Oraculárity** (ನಾ.)

Óral ಓರಲ್ (ಗು.) ಬಾಯಲ್ಲಿ ಆಡಿದ ; ವಾಚಿಕ ; ಬಾಯಿಮಾತಿನ. (ಅಂ. ರ. ಶಾ.) ಬಾಯಿಯ. **Órally** (ಕ್ರಿ. ವಿ.)

Órange[1] ಆರೆಂ(ರಿಂ)ಜ್ (ನಾ., ಗು.) ಕಿತ್ತಿಳೆಯ (ಹಣ್ಣು, ಗಿಡ) ; ಕಿತ್ತಿಳೆಯ ಬಣ್ಣ(ದ), ಕೆಂಪುಗೂಡಿದ ಹಳದಿಯ ಬಣ್ಣ(ದ) (=O.-colour). Squeeze the o. ಸಾರವನ್ನೆಲ್ಲ ಹಿಂಡಿಕೊ. ಯಾವುದರಿಂದಲಾದರೂ ದೊರೆಯಬಹುದಾದ ಪ್ರಯೋಜನವನ್ನೆಲ್ಲ ಪೂರಾ ಪಡೆದುಕೊ. Squeezed o. ಇನ್ನೇನೂ ಪ್ರಯೋಜನ ಪಡೆಯಲಾಗದ ವಸ್ತು ; ಸಾರಕಳೆದ ವಸ್ತು. China o. ಸಾಮಾನ್ಯ ಕಿತ್ತಿಳೆ(ಗೆ ಹಿಂದಿನ ಹೆಸರು). Oranges & lemons ಎಳೆ ಮಕ್ಕಳ ಒಂದು ಬಗೆಯ ಆಟ. Blenheim o. ಒಂದು ಬಗೆಯ ಸೇಬು. O.-blossom (ಮದುವೆಯಲ್ಲಿ ಮದುವಣಗಿತ್ತಿ ಧರಿಸಿಕೊಳ್ಳುವ) ಕಿತ್ತಿಳೆಯ ಹೂವು. **Órangery** ಕಿತ್ತಿಳೆಯ ಗಿಡಗಳನ್ನು ಬೆಳಸುವ ಸ್ಥಳ; ಕಿತ್ತಿಳೆಯ ತೋಟ. **Orangeáde** —ಜೇಡ್ (ನಾ.) ಕಿತ್ತಿಳೆಯ ರಸ, ಮೊ. ಗಳ (ಉಕ್ಕೇಳುವ ಅಥವಾ ಏಳದಿರುವ) ಪಾನೀಯ.

Órange[2] ಆರೆಂ(ರಿಂ)ಜ್ (ನಾ.) ರ್ಹೋನ್ ನದಿಯ ಮೇಲಿರುವ ಒಂದು ಪಟ್ಟಣ; [Princes of O. ಈ ಹೆಸರನ್ನು ಅಂಕಿತವಾಗುಳ್ಳ ದೊರೆಗಳು. William of O. (ಇಂಗ್ಲೆಂಡಿನ ಚರಿತ್ರೆಯಲ್ಲಿ) ಮುಮ್ಮಡಿ ವಿಲಿಯಂ ದೊರೆ]. **Órangeman** (ನಾ.) ಐರ್ಲಂಡಿನಲ್ಲಿ ಪ್ರಾಟೆಸ್ಟೆಂಟರ ಪ್ರಾಬಲ್ಯ ಸ್ಥಾಪನೆಗಾಗಿ ೧೭೯೫ರಲ್ಲಿ ಏರ್ಪಟ್ಟ ರಾಜಕೀಯ ಸಂಘದ ಸದಸ್ಯ. **Órangism** (ನಾ.) ಈ ಸಂಘದ ತತ್ತ್ವಗಳು, ಪದ್ಧತಿ.

Oráng-outáng ಒರ್ಯಾಂಗುಟ್ಯಾಂಗ್, **Oráng-útan** ಒರ್ಯಾಂಗೂಟ್ಯಾನ್, ಒರಂಗೂಟನ್ (ನಾ.) (ಬೋರ್ನಿಯೊ ಮತ್ತು ಸುಮಾತ್ರಾ ದ್ವೀಪಗಳಲ್ಲಿ) ಮರದಲ್ಲಿ ವಾಸಿಸುವ, ಉದ್ದ ತೋಳುಗಳ, ಒಂದು ದೊಡ್ಡ ನರವಾನರ ; ಒರಾಂಗೊಟಾಂಗ್ (=ಕಾಡು ಮನುಷ್ಯ)

Oráte. **Oration** ನೋಡಿ.

Orátion ಒರೇಷನ್ (ನಾ.) ಸಭೆಯಲ್ಲಿ ಮಾಡುವ, ಮು., ಸಂಪ್ರದಾಯ ರೀತಿಯ, ಭಾಷಣ, ಉಪನ್ಯಾಸ, ಪ್ರವಚನ ; ಮಹಾ ಭಾಷಣ. (ವ್ಯಾ.) ಭಾಷೆ ; ಭಾಷಣ ರೀತಿ (Direct, Indirect *or* Oblique, o. ಪ್ರತ್ಯಕ್ಷ ಕಥನ, ಪರೋಕ್ಷ ಕಥನ). **Oráte** (ಕ್ರಿ. ಅಕ.) (ಹಾಸ್ಯ ಪ್ರ.) ಭಾಷಣ ಮಾಡು ; ವಾಗ್ಮಿಯಂತೆ ಮಾತನಾಡು. **Órator** ಆರಟರ್ (ನಾ.) ಸಾರ್ವಜನಿಕ ಭಾಷಣಕಾರ; ವಾಕ್ಚತುರ ; ವಾಗ್ಮಿ ; ವಾಕ್ಪಟು. Public O. (ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿ. ವಿ. ನಿ. ಗಳ) ವಿಶೇಷ ಸಭೆಗಳಲ್ಲಿ ವಿ. ವಿ. ನಿ. ದ ಪರವಾಗಿ ಭಾಷಣ ಮಾಡುವ ಅಧಿಕಾರಿ. **Óratress** (ನಾ., ಸ್ತ್ರೀ.) ; **Oratório** —ಟೋರಿಯೊ(ೀ) (ನಾ.) (ಅಭಿನಯ, ದೃಶ್ಯ, ವೇಷಗಳು—ಇವು ಯಾವುದೂ ಇಲ್ಲದೆ, ಗಾಯಕರೂ ಮೇಳದವರೂ ವಿವಿಧ ವಾದ್ಯಗಾರರೂ ಸೇರಿ ನಡಸುವ, ಯಾವುದಾದರೂ ಪವಿತ್ರ ವಿಷಯವನ್ನು ಕುರಿತ) ನಾಟಕಪ್ರಾಯವಾದ ಸಂಗೀತ. **Óratorize** ಆರಟರೈಸ್ (ಕ್ರಿ. ಅಕ.) =Orate. **Óratory**[1] ಆರಟರಿ (ನಾ.) ಭಾಷಣ (ಕಲೆ) ; ವಾಗ್ಮಿತೆ. ಅಲಂಕಾರಿಕ ವಿಷಯ ನಿರೂಪಣೆ; ಚತುರತೆಯ ಅಥವಾ ಅತ್ಯುಕ್ತಿಯ ಭಾಷೆ. **Oratórical** —ಟಾರಿ— (ಗು.) ; **Oratórically** (ಕ್ರಿ. ವಿ.)

Órator, Oratório, Óratory[1]**, etc.** **Oration** ನೋಡಿ.

Óratory[2] ಆರಟರಿ (ನಾ.) (ಕ್ರೈಸ್ತರ) ಸಣ್ಣ ಆರಾಧನ ಮಂದಿರ; ಏಕಾಂತ ಆರಾಧನ ಮಂದಿರ. ಯಾವ ವ್ರತವನ್ನೂ ಹಿಡಿದಿಲ್ಲದ, ಜನ ಸೇವೆಯೇ ಗುರಿಯಾಗುಳ್ಳ, ರೋ. ಕ್ಯಾ. ಸಾಮಾನ್ಯ ಪುರೋಹಿತರ (ಮತ) ಧರ್ಮ ಸಂಘ. **Oratórian** (ಗು., ನಾ.) ಈ ಸಂಘದ (ಪುರೋಹಿತ)

Orb ಆರ್ಬ್ (ನಾ., ಕ್ರಿ.) ವೃತ್ತ ರೇಖೆ ; ವರ್ತುಲ ಬಿಂಬ ; ವಲಯ ; ಮಂಡಲ (—ಈ ಅರ್ಥಗಳು ಈಗ ವಿರ. ಪ್ರ.). ವೃತ್ತ ; ಗೋಳ ; ಆಕಾಶ ಕಾಯ. ಕಣ್ಣುಗುಡ್ಡೆ ; (ಕಾವ್ಯ) ಕಣ್ಣು. (ಪ್ರಭುತ್ವ ಚಿಹ್ನೆಯಾದ) ಶಿರದಲ್ಲಿ ಶಿಲುಬೆಯುಳ್ಳ ಚಿನ್ನದ ಗೋಳ. ಒಟ್ಟು ; ಸಮಗ್ರ (An orb of witnesses). (ಕ್ರಿ.) ವಲಯದಿಂದ (ಹೇಗೊ ಹಾಗೆ) ಸುತ್ತುಗಟ್ಟು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗುಂಡಗಾಗು ; ಗುಂಡಾಗಿ ಮಾಡು. **Órbless** (ಗು.) ; **Orbícular** (ಗು.) ವೃತ್ತಾಕಾರದ ; ಚಕ್ರಾಕಾರದ ; ವಲಯಾಕಾರದ ; ಬಿಂಬಾಕಾರದ ; ಬಟ್ಟಿನಯ [O. muscle (ರಂಧ್ರವನ್ನಾಗಲಿ ನಾಳವನ್ನಾಗಲಿ ಮುಚ್ಚಲು ಅನುಕೂಲಿಸುವಂತೆ, ಅದನ್ನು ಸುತ್ತುವರಿದಿರುವ) ವರ್ತುಲ ಸ್ನಾಯು]. ಗುಂಡಾದ ; ಗೋಳಾಕಾರದ ; (ರೂಪ.) ಸಮಗ್ರ ಸಂಪೂರ್ಣ. **Orbiculárity** (ನಾ.) ; **Orbícularly** (ಕ್ರಿ. ವಿ.) ; **Orbículate** (ಗು.) (ಪ್ರಕೃತಿ ಚರಿತ್ರೆ) ವರ್ತುಲಪ್ರಾಯವಾದ.

Órbit ಆರ್ಬಿಟ್ (ನಾ.) ಕಣ್ಣು ಕುಳಿ ; ಕಣ್ಣು ಗೂಡು. (ಹಕ್ಕಿಯ ಅಥವಾ ಹುಳುವಿನ) ಕಣ್ಣಿನ ಸುತ್ತಲಿರುವ ಅಂಚು. ಗ್ರಹ, ಧೂಮಕೇತು, ಉಪಗ್ರಹ, ಯುಗ್ಮತಾರೆ, ಮೊ. ಗಳ ವಕ್ರಪಥ ; ಕಕ್ಷೆ. **Órbital** (ಗು.) ; **Orbito-** (ಸ. ಪೂ. ಪ.)

Órchard ಆರ್ಚರ್ಡ್ (ನಾ.) ಹಣ್ಣಿನ ಗಿಡಗಳನ್ನೊಳಕೊಂಡ ಆವರಣ ; ಹಣ್ಣು ತೋಟ. **Órchardist** (ನಾ.) ಹಣ್ಣು ಬೆಳೆಯುವವನು = **Órchardman** (ನಾ.)

Orchéstic ಆರ್ಕೆಸ್ಟಿಕ್ (ಗು.) ಕುಣಿತದ ; ನಾಟ್ಯದ. **Orchéstics** (ನಾ.) ನೃತ್ಯ ಕಲೆ ; ನಾಟ್ಯ ಶಾಸ್ತ್ರ.

Órchestra ಆರ್ಕೆಸ್ಟ್ರ (ನಾ.) (ಪುರಾತನ ಗ್ರೀಕ್ ನಾಟಕ ಶಾಲೆಗಳಲ್ಲಿ ರಂಗದ ಮುಂಭಾಗದಲ್ಲಿ ಮೇಳದವರು ಹಾಡುತ್ತ ಕುಣಿಯುತ್ತಿದ್ದ ಅರ್ಧ ವೃತ್ತಾಕಾರದ) ಮೇಳ ರಂಗ. (ಆಧುನಿಕ ನಾಟಕ ಶಾಲೆಗಳಲ್ಲಿ ಅಥವಾ ಸಂಗೀತ ಶಾಲೆಗಳಲ್ಲಿ) ವಾದ್ಯಾಂಗಣ ಅಥವಾ ಮೇಳಾಂಗಣ. (ನಾಟಕ ಶಾಲೆಯ ಅಥವಾ ಸಂಗೀತ ಶಾಲೆಯ) ವಾದ್ಯಗಾರರು ; ಅಂಥ ವಾದ್ಯಗಾರರ ತಂಡ ಅಥವಾ ಮೇಳದವರು ; ವಾದ್ಯ ಮೇಳ ; ಗಾನ ಮೇಳ. **Orchéstral** (ಗು.) ; **Órchestrate** (ಕ್ರಿ.) ಸಂಗೀತ ಮೇಳನಕ್ಕಾಗಿ ರಚಿಸು, ಹೊಂದಿಸು, ಏರ್ಪಡಿಸು. **Orchestrátion** (ನಾ.) ; **Orchestrína** —ಸ್ಟ್ರೀನ (ನಾ.) ಸಂಗೀತ ಮೇಳನದಂಥ ಸಂಗೀತ ನುಡಿಯಬಲ್ಲ ದೊಡ್ಡ ಉರುಳೆಯಾಕಾರದ ಒಂದು ಆರ್ಗನ್ ವಾದ್ಯ.

Órchid ಆರ್ಕಿಡ್, **Órchis** ಆರ್ಕಿಸ್ (ನಾ.) ಏಕ ಬೀಜದಳ ವರ್ಗದ, ಉಜ್ಜ್ವಲ ವರ್ಣದ ಚಿತ್ರವಿಚಿತ್ರ ಹೂವು ಬಿಡುವ, ಗಡ್ಡೆ ಬೇರಿನ ಒಂದು ಸಸ್ಯಜಾತಿ ; ಸೀತೆಹೂವಿನ ಗಿಡ ; ಸೀತಾಳ ಗಡ್ಡೆ ; ಸಾಲಾಮಿಸ್ರಿ. **Orchidáceous** (ಗು.); **Órchidist** (ನಾ.) ; **Orchidólogy** (ನಾ.)

Órchil ಆರ್ಚಿಲ್ (ನಾ.) ಕಲ್ಲುಹೂವಿನಿಂದ ತೆಗೆದ ಕೆಂಪು ಅಥವಾ ಊದಾ ವರ್ಣದ್ರವ್ಯ.

Órcin(e) ಆರ್ಸಿನ್ (ನಾ.) (ರ. ವಿ.) ಕಲ್ಲುಹೂವಿನಿಂದ ತೆಗೆದ, ಇತರ ವಸ್ತುಗಳೊಂದಿಗೆ ಸಂಯೋಗವಾದರೆ ಹಲವು ವರ್ಣದ್ರವ್ಯಗಳನ್ನು ಕೊಡುವ, ನಿರ್ವರ್ಣ ಸ್ಫಟಿಕವಸ್ತು.

Orchítis ಆರ್ಕೈಟಿಸ್ (ನಾ.) ವೃಷಣಗಳ ಉರಿಯೂತ.

Ordaín ಆರ್ಡೇನ್ (ಕ್ರಿ. ಸಕ.) (ಕ್ರೈಸ್ತ ಧರ್ಮ) ವಿಧಿ ಪೂರ್ವಕವಾಗಿ ಪೌರೋಹಿತ್ಯಕ್ಕೆ ನೇಮಿಸು ; ಪುರೋಹಿತನ, ಪಾದ್ರಿಯ, —ದೀಕ್ಷೆ ಕೊಡು (Was ordained priest, elder, etc.). (ದೇವರು, ವಿಧಿ, ಮೊ. ಗಳ ವಿಷಯದಲ್ಲಿ) ಮೊದಲೇ ಗೊತ್ತುಮಾಡು ; ಹಣೆಯಲ್ಲಿ ಬರೆ ; ದೈವ ಸಂಕಲ್ಪ ಮಾಡು ; ವಿಧಿಸು ; ನಿಯಮಿಸು (Has ordained the time, death as our lot, us mortal, us to die, that we should live) ; ಅಧಿಕಾರ ಪೂರ್ವಕವಾಗಿ ನಿಯಮಿಸು; ಕಟ್ಟಳೆ ಮಾಡು ; ವಿಧಿಸು (What the laws o. ; O. that—). **Ordaínment** (ನಾ.) (ವಿರ. ಪ್ರ.) ವಿಧಿ(ಸುವುದು), ಕಟ್ಟಳೆ (ಮಾಡುವುದು)

Ordéal ಆರ್ಡಿಯಲ್, ಆರ್ಡೀಲ್ (ನಾ.) [ತಪ್ಪಿತಸ್ಥನೆಂಬ ಸಂಶಯಕ್ಕೆ ಈಡಾದವನು ನಿಜವಾಗಿ ಅಪರಾಧಿಯೆ ಅಥವಾ ನಿರಪರಾಧಿಯೆ ಎಂಬುದನ್ನು ತೀರ್ಮಾನಿಸಲು ಪೂರ್ವಕಾಲದಲ್ಲಿ ರೂಢಿಯಲ್ಲಿದ್ದ (ಉದಾಹರಣೆಗಾಗಿ, ಕುದಿಯುವ ನೀರಿನಲ್ಲಿ ಕೈ ಅದ್ದಿದರೆ ಸುಡದಿದ್ದಲ್ಲಿ ನಿರಪರಾಧಿಯೆಂಬುದು ದೈವದ ತೀರ್ಮಾನವೆಂದು ತಿಳಿಯುತ್ತಿದ್ದ)] ಉಗ್ರ ಪರೀಕ್ಷೆ ; ದಿವ್ಯ ಪರೀಕ್ಷೆ. ಶೀಲವನ್ನಾಗಲಿ ಸಹನೆಯನ್ನಾಗಲಿ ಪರೀಕ್ಷಿಸುವ ಅನುಭವ ; ಕಠಿನ ಪರೀಕ್ಷೆ ; ವಿಷಮ ಪರೀಕ್ಷೆ.

Órder ಆರ್ಡರ್ (ನಾ.) (ಮುಖ್ಯವಾದ ಅರ್ಥಗಳು) : ೧. ದರ್ಜೆ ; ಅಂತಸ್ತು ; ಪಂಕ್ತಿ ; ಶ್ರೇಣಿ ; ವರ್ಗ ; ತರಗತಿ ; ಪಂಗಡ. ೨. ಅನುಕ್ರಮ ; ಅನ್ವಯ ; ಪಾಳಿ ; ಅಣಿ ; ಪರಿವಿಡಿ ; ಓರಣ ; ಪರಿಪಾಟಿ. ೩. ಆಜ್ಞೆ ; ಕಟ್ಟಳೆ ; ಶಾಸನ ; ಹುಕುಮು.

೧. (ಈಗ ವಿರ. ಪ್ರ.) O. on o. of sculptured figures ಶಿಲ್ಪ ವಿಗ್ರಹಗಳ—ಅಂತಸ್ತುಗಳಮೇಲೆ ಅಂತಸ್ತು, ವರಿಸೆಯಮೇಲೆ ವರಿಸೆ. The higher, lower, orders (ಸಮಾಜದ) ಮೇಲು, ಕೆಳ,—ಅಂತಸ್ತುಗಳು. All orders & degrees of men ಎಲ್ಲ ತೆರದ, ದರ್ಜೆಯ, —ಜನರು. The o. of baronets. The clerical, military, o. ಪುರೋಹಿತ ವರ್ಗ, ಸೈನಿಕ ವರ್ಗ. Talents of a high o. Considerations of quite another o. ತೀರ ಬೇರೆ ರೀತಿಯ ವಿಚಾರಗಳು, ಎಣಿಕೆಗಳು. (Seraphim, cherubim, thrones, dominations, principalities, powers, virtues, archangels, angels—ಎಂಬ) ಒಂಬತ್ತು ದೇವದೂತ ವರ್ಗಗಳಲ್ಲೊಂದು. Holy orders (ಕ್ರೈಸ್ತ ಆ್ಯಂಗ್ಲಿಕನ್ ಮತದ) ಬಿಷಪ್, ಪುರೋಹಿತ ಮತ್ತು ಡೀಕನ್ —ಇವರನ್ನೊಳಕೊಂಡ ಮೇಲುವರ್ಗದ ಅಧಿಕಾರಿಗಳು. Take orders ದೀಕ್ಷೆ ಪಡೆ. In orders ದೀಕ್ಷೆ ಪಡೆದು. The Franciscan o. (ಕ್ರೈಸ್ತ) ಸಂನ್ಯಾಸಿಗಳು, ಭಿಕ್ಷುಗಳು—ಇವರ ಭ್ರಾತೃ ವರ್ಗ, ಬಿರಾದಾರಿ. The Teutonic o. ಟ್ಯೂಟಾನಿಕ್ ವೀರ ವರ್ಗ. The o. of Templars (ಕ್ರೈಸ್ತ ಯಾತ್ರಿಕರ ಸಂರಕ್ಷಣೆಗಾಗಿ ಏರ್ಪಟ್ಟಿದ್ದ) ಕ್ರೈಸ್ತ ಧರ್ಮವೀರ ವರ್ಗ. O. of the Garter, the Bath, Merit, etc. ಘನತೆಗಾಗಿ, ಬಹುಮಾನಕ್ಕಾಗಿ, ಪ್ರಸಿದ್ಧ ಪುರುಷರಿಗೆ, ಸಾ., ದೊರೆಗಳು ಪ್ರವೇಶ ಕೊಡುತ್ತಿದ್ದ ವಿವಿಧ ಗೌರವ ವರ್ಗಗಳು. Wears the o. of the Golden Fleece —ಎಂಬ ಗೌರವ ವರ್ಗದ ಲಾಂಛನವನ್ನು ಧರಿಸುತ್ತಾನೆ. (ವಾ. ಶಾ.) Classical orders (Tuscan, Doric, Ionic, Corinthian, & Composite ಎಂಬ) ವಾಸ್ತು ಶಿಲ್ಪದ ಐದು ಶೈಲಿಗಳು. (ಗಣಿತ) Equation of the first o. ಪ್ರಥಮ ಶ್ರೇಣಿಯ ಸಮೀಕರಣ. (ಗಣಿತ) Measurements of the o. of one in a million ಹತ್ತು ಲಕ್ಷ ಭಾಗಗಳಲ್ಲಿ ಒಂದು ಭಾಗದಷ್ಟು ಮಾತ್ರ ತಪ್ಪಿರಬಹುದಾದ ಮಟ್ಟಿನ ಅಳತೆಗಳು. (ಸ. ವಿ.) Natural o. (Nature ನೋಡಿ)

೨. In alphabetical, chronological, o. ವರ್ಣಾನುಕ್ರಮದಲ್ಲಿ, ಕಾಲಾನುಕ್ರಮದಲ್ಲಿ. Out of o. ಒಂದು ಕ್ರಮವಿಲ್ಲದೆ ; ಅವ್ಯವಸ್ಥೆಯಾಗಿ. Inverts the natural o. ಸಹಜ ಕ್ರಮವನ್ನು ತಲೆಕೆಳಗು ಮಾಡುತ್ತದೆ. Take them in o. ಒಂದು ಕ್ರಮವನ್ನನುಸರಿಸಿ ಅವನ್ನು ತೆಗೆದುಕೊ. Is out of o. ಸರಿಯಾಗಿ ಕೆಲಸಮಾಡುತ್ತಿಲ್ಲ ; ಕೆಟ್ಟುಹೋಗಿದೆ. (ಪ್ರಾಚೀ. ಪ್ರ.) Take o. to do ಮಾಡಲು ತಕ್ಕ ಏರ್ಪಾಟು ಮಾಡು. Take o. with ಏರ್ಪಡಿಸು ; ಪ್ಲ್ಯಾನು ಮಾಡು ; ಯುಕ್ತ ತೋರಿದಂತೆ ನಡಸು. The o. of nature ಪ್ರಕೃತಿ ವ್ಯವಸ್ಥೆ. The o. of the world ಪ್ರಪಂಚದ ರೀತಿ. The old o. changeth ಹಳೆಯ ಪದ್ಧತಿ ಬದಲಾಗುತ್ತದೆ. Whether there is a moral o. or not ನೈತಿಕ ನಿಯಮವುಂಟೊ ಇಲ್ಲವೊ. The o. of confirmation (ಕ್ರೈಸ್ತ) ಸ್ಥಿರೀಕರಣ ಸಂಸ್ಕಾರ ವಿಧಿ. Speaker called him to o. ಅಧ್ಯಕ್ಷನು ಆತನನ್ನು ಸಭಾ ನಿಯಮಗಳಿಗೂ ಮರ್ಯಾದೆಗೂ ಗಮನ ಕೊಡುವಂತೆ ಎಚ್ಚರಿಸಿದನು. Order ! Order ! ಸಭಾ ನಿಯಮಗಳಿಗೆ ಗಮನ ಕೊಡಿ (ಎಂಬ ಕೂಗು). Point of o. (ಸಭಾ) ನಿಯಮ ವಿಚಾರ. In o. ಸಭಾ ಮರ್ಯಾದೆಗೆ ಅನುಸಾರವಾಗಿದೆ. Out of o. —ಇಲ್ಲ. O. of the day ದಿನದ ಕಾರ್ಯಕ್ರಮ ; ನಡಸಲು ಗೊತ್ತುಮಾಡಿರುವ ಕಾರ್ಯ. (ಸಾ.) ಇಂದಿನ (ವಸ್ತು) ಸ್ಥಿತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(Industry, thunder, cricket, is the o. of the day). O.-paper (ಕೈಬರವಣಿಗೆಯ ಅಥವಾ ಮುದ್ರಿಸಿದ) ಕಾರ್ಯ ಕ್ರಮದ ಪಟ್ಟಿ. O.-book[1] ಶಾಸನ ಸಭೆ, ಮೊ. ಗಳಲ್ಲಿ ತರಬೇಕಾದ ಸೂಚನಾ ಪ್ರಮೇಯಗಳನ್ನು ಬರೆದಿಡುವ ಪುಸ್ತಕ. Law & o. (Law[1] ನೋಡಿ). O. was restored ಮತ್ತೆ ಶಾಂತ ಸ್ಥಿತಿ ತರಲಾಯಿತು. Keep o. ಶಾಂತಿಯಿರುವಂತೆ ನೋಡಿಕೊ. Marching orders (March[3] ನೋಡಿ). Review o. ಪ್ರದರ್ಶನ ಕಾಲದಲ್ಲಿ ಸೈನಿಕರು ಧರಿಸಿರಬೇಕಾದ ಉಡುಪು, ಉಪಕರಣ. In o. to do ಮಾಡುವುದಕ್ಕಾಗಿ. In o. that (—) ಉದ್ದೇಶದಿಂದ.

೨. Gave orders ಆಜ್ಞೆ ಮಾಡಿದನು. Is obedient to orders ಆಜ್ಞಾ ಪಾಲಕನಾಗಿದ್ದಾನೆ. O. in Council ಅಪ್ರ ನಚಿವ ಮಂಡಲಿಯ ನಲಹೆಯಮೇರೆ ರಾಜನಿಂದ ಹೊರಟ ಆಜ್ಞೆ. By o. (ನರಿಯಾದ ಅಧಿಕಾರಿಯ) ಆಜ್ಞೆಯ ಮೇರೆಗೆ. O. cheque, Cheque to person's o. ಹಣ ಪಡೆಯುವವನು ಹಣ ಪಡೆಯುವ ಮೊದಲು ಮೇಲೆ ರುಜು ಮಾಡಿ ಕೊಡಬೇಕಾದ 'ಚೆಕ್ಕು'. Postal o., Money o., Post-office o. ಯಾರಾಗಲಿ (ಮತ್ತೊಬ್ಬರಿಗೆ) ಹಣ ಕಳುಹಿಸಲು ಅನುಕೂಲಪಡಿಸಿರುವ ಅಂಚೆ ಇಲಾಖೆಯ ಚೆಕ್ಕುಗಳು (ಎರಡನೆಯದನ್ನು ಮತ್ತೊಬ್ಬರ ಹೆಸರಿಗೆ ವರ್ಗಾಯಿಸ ರಾಗುವುದಿಲ್ಲ). (ವ್ಯಾಪಾರ) ಸರಕು ಒದಗಿಸಬೇಕೆಂದು, ಯಾವುದನ್ನಾದರೂ ತಯಾರಿಸಬೇಕೆಂದು, ವ್ಯಾಪಾರಿಗೆ ಕೊಟ್ಟ ಕೋರಿಕೆ. Made to o. ಹೇಳಿ ಮಾಡಿಸಿದ ; ಅಳತೆ, ಮೊ. ನ್ನು ಕೊಟ್ಟು (ತನ್ನ ಅನುಕೂಲಕ್ಕೆ ತಕ್ಕಂತೆ) ಮಾಡಿ(ಸಿ)ದ (ಎದುರು ಪದ : Ready-made). Is on o. ತಯಾರಿಕೆಯ ಕೋರಿಕೆ ಪತ್ರ ಬಂದಿದೆ, ಆದರೆ ಸಾಮಾನನ್ನು ಇನ್ನೂ ಕೊಟ್ಟಿಲ್ಲ. A large o. (ಬಳ. ಮಾ.) ಸುಲಭ ಸಾಧ್ಯವಲ್ಲದ, ಕಷ್ಟದ, ತೊಂದರೆಯ, —ಕೆಲಸ. Standing o. ಸ್ಥಾಯಿ ನಿಬಂಧನೆ ಅಥವಾ ಒಟ್ಟಿಗೆ ಹೊರಡಿಸಿದ ಅಂತಹ ನಿಬಂಧನಾ ಶ್ರೇಣಿ. (ಸೈನಿಕ) ಸ್ಥಾಯಿ ಅನುಜ್ಞೆ (ಹಂಗಾಮಿಯಾಗಿ ಬಂದ ಸೇನಾಧಿಪತಿ ಬದಲಾಯಿಸ ರಾಗದ್ದು). (ಬ. ವ. ದಲ್ಲಿ) ಪಾರ್ಲಿಮೆಂಟಿನಲ್ಲಿ ಕ್ರಮಾನುಸರಣೆಯ ಸ್ಥಾಯಿ ನಿಯಮಗಳು (ರದ್ದು ಮಾಡುವ ಅಥವಾ ಬದಲಾಯಿಸುವ ವರೆಗೂ ಜಾರಿಯಲ್ಲಿರುವಂಥವು). O.-book[2] ವ್ಯಾಪಾರಸ್ಥನು ಪದಾರ್ಥಗಳಿಗಾಗಿ ತನಗೆ ಬರುವ ಕೋರಿಕೆಗಳನ್ನು ಬರೆದಿಡುವ ಪುಸ್ತಕ: (ಗಿರಾಕಿಗಳ) ಕೋರಿಕೆಯ ಪುಸ್ತಕ. O.-clerk (ಪದಾರ್ಥಗಳ) ಕೋರಿಕೆಗಳನ್ನು ಬರೆದಿಡುವ ಕೆಲಸದ ಗುಮಾಸ್ತ. O.-form ಗಿರಾಕಿಯು ತನ್ನ ಕೋರಿಕೆಯನ್ನು ಬರೆದು ಕಳುಹಿಸುವ ಪತ್ರ, ನಮೂನೆ. **Órderly** (ಗು., ನಾ.) ಕ್ರಮವಾದ ; ಅಣಿಯಾದ; ಸುವ್ಯವಸ್ಥಿತ ; ಓರಣವಾದ ; ಕ್ರಮಬದ್ಧ ; ಶಿಸ್ತಿ ಪಾಲಕ(ನಾದ) ; ವಿನೇಯ ; ವಿನೀತ ; ಒಳ್ಳೆಯ ನಡತೆಯ. (ಸೈನಿಕ) ಆಜ್ಞೆಯ ; ಆಜ್ಞೆಯನ್ನು ಮುಟ್ಟಿಸುವ ಕರ್ತವ್ಯವುಳ್ಳ ; ಆಜ್ಞಾ ಪಾಲನೆಯ [O. officer ಅಂದಿನ ದಿನದ ಅಧಿಕಾರಿ. O. bin (ಬೀದಿಯ) ಕಸದ ತೊಟ್ಟಿ. O. room ಸೈನಿಕರ ನಿವಾಸ ಸ್ಥಾನದಲ್ಲಿ ಸೈನಿಕ ದಳದ ಕಾರ್ಯಭಾರ ನಡಸುವ ಕೋಣೆ ; ಸೈನಿಕ ಕಚೇರಿ]. (ನಾ.) ಅಧಿಕಾರಿಯ ಬಳಿಯಿದ್ದು ಅವನ ಅಪ್ಪಣೆಗಳನ್ನು ನಡಸುವ ಜವಾನ ; ತೈನಾತಿ ; ಆಜ್ಞಾ ವಾಹಕ. (ಮು., ಸೈನಿಕ ಆಸ್ಪತ್ರೆಯಲ್ಲಿ) ಪರಿಚಾರಕ. **Órderliness** (ನಾ.)

Órder (ಕ್ರಿ. ಸಕ.) ಕ್ರಮದಲ್ಲಿಡು ; ವ್ಯವಸ್ಥೆಗೊಳಿಸು ; ಅಣಿಮಾಡು; ಗೊತ್ತಿಗೆ ತರು ; ಅಪ್ಪಣೆ ಮಾಡು ; ವಿಧಿಸು ; ನಿಯಮಿಸು ; ನಿಯಾಮಕ ಮಾಡು. [(ಪ್ರಾಚೀ. ಪ್ರ.) Ordered his troops ತನ್ನ ಸೈನ್ಯಗಳನ್ನು ಅಣಿಗೊಳಿಸಿದನು. O. one's affairs ಸ್ವವ್ಯವಹಾರ ವಿಚಾರಗಳನ್ನು ವ್ಯವಸ್ಥೆ ಮಾಡು. Has ordered his life well ಅವನು ತನ್ನ ಬದುಕನ್ನು ಚೆನ್ನಾಗಿ ವ್ಯವಸ್ಥೆಪಡಿಸಿಕೊಂಡಿದ್ದಾನೆ]. (ಸೈನಿಕ) O. arms ಬಂದೂಕಿನ ಬಡ್ಡೆಯನ್ನು ನೆಲಕ್ಕಿಟ್ಟು ನಿಲ್ಲಿಸಿ ಬಂದೂಕು ತನ್ನ ಬಲಕ್ಕೆ ತಾಕುವಂತೆ ಹಿಡಿದುಕೊ. So we hoped, but it was otherwise ordered ನಾವು ಹಾಗೆ ಆಶಿಸಿದ್ದೆವು, ಆದರೆ ವಿಧಿನಿಯಾಮಕವು ಬೇರೆಯಾಯಿತು. O. a retreat ಹಿಂದಕ್ಕೆ ಹೋಗಲು ಆಜ್ಞೆ ಕೊಡು. Ordered him a mustard plaster ಅವನಿಗೆ ಸಾಸವೆಯ ಪಟ್ಟು ಹಾಕುವಂತೆ ವಿಧಿಸಲಾಯಿತು. He was ordered to Egypt ಈಜಿಪ್ಟಿಗೆ ಹೋಗಬೇಕೆಂದು ಅವನಿಗೆ ಅಪ್ಪಣೆಯಾಯಿತು. O. about ಇಲ್ಲಿಗೆ ಅಲ್ಲಿಗೆ ಕಳುಹಿಸು, ಸುತ್ತಾಡಿಸು ; (—ಮೇಲೆ) ಆಧಿಪತ್ಯ ಮಾಡು. O. dinner ಊಟಕ್ಕೆ ಇಂತಿಂತಹ ಪದಾರ್ಥಗಳನ್ನು ಅಣಿಮಾಡಬೇಕೆಂದು ಗೊತ್ತು ಹೇಳು.

Órderly. **Order** ನೋಡಿ.

Órdinal ಆರ್ಡಿನಲ್ (ಗು., ನಾ.) (ಶ್ರೇಣಿಯಲ್ಲಿ ಒಂದರ) ಸ್ಥಾನ ಸೂಚಕ (ಸಂಖ್ಯೆ) ; ಕ್ರಮ ಸಂಖ್ಯೆ [First, twentieth, etc., are ordinals *or* o. numbers (Cardinal ಹೋಲಿಸಿ)]. ಪ್ರಕೃತಿ ಚರಿತ್ರೆಯ ಒಂದು ವರ್ಗದ. (ನಾ.) ಬಿಷಪ್, ಮೊ. ರಿಗೆ ದೀಕ್ಷೆ ಕೊಡುವಾಗ ಉಪಯೋಗಿಸುವ ವಿಧಿ ಪುಸ್ತಕ.

Órdinance ಆರ್ಡಿನನ್ಸ್ (ನಾ.) ಅಧಿಕಾರಯುತ ಆದೇಶ, ಆಜ್ಞೆ ; ವಿಧಿ ; ಕಟ್ಟಳೆ ; ಶಾಸನ [Self-denying o. (Self ನೋಡಿ)]. ಮತ ಸಂಸ್ಕಾರ ವಿಧಿ. (ವಿರ. ಪ್ರ.) (ಸಾಹಿತ್ಯ ಕೃತಿಯ ಅಥವಾ ಶಿಲ್ಪ ಕೃತಿಯ) ಭಾಗಗಳ ಜೋಡಣೆ, ಒಟ್ಟು ಸೇರಿಕೆ.

Órdinand ಆರ್ಡಿನ್ಯಾಂಡ್ (ನಾ.) ದೀಕ್ಷೆ ಪಡೆಯಲು ನಿಂತವನು ; ದೀಕ್ಷಾರ್ಥಿ.

Órdinary ಆರ್ಡಿನರಿ (ಗು., ನಾ.) ಯಥಾ ಕ್ರಮದ ; ಯಥಾ ಸ್ಥಿತಿಯ ; ವಾಡಿಕೆಯಾದ; ಪದ್ಧತಿಯಾದ; ರೂಢಿಯಾದ; ಬಳಕೆಯಾದ ; ವಿಶೇಷವಲ್ಲದ ; (ಸರ್ವ) ಸಾಮಾನ್ಯವಾದ; ಸಾಧಾರಣವಾದ. [Physician in o. ಸ್ಥಾಯಿ, ಕಾಯಂ, ವೈದ್ಯ (ತಾತ್ಕಾಲಿಕ ಅಥವಾ ವಿಶೇಷ ಸಂದರ್ಭದ ನೇಮಕವಲ್ಲ). In an o. way I should refuse (ವಿಶೇಷ ಸಂದರ್ಭವಲ್ಲದಿದ್ದರೆ) ಸಾಮಾನ್ಯ ಪರಿಸ್ಥಿತಿಯಲ್ಲಿ ನಾನು ಒಪ್ಪಿಗೆ ಕೊಡುತ್ತಿರಲಿಲ್ಲ. Something out of the o. ಅಸಾಧಾರಣವಾದದ್ದು. In o. (ಹಡಗುಗಳ ವಿಷಯದಲ್ಲಿ) ಉಪಯೋಗ ತೊರೆದ ; ಕಾರ್ಯಾಚರಣೆಯಲ್ಲಿಲ್ಲದ]. ಪ್ರತ್ಯಕ್ಷಾಧಿಕಾರವುಳ್ಳ ; ಸ್ಥಾನಾಶ್ರಯ ಬಲದ ಅಧಿಕಾರವುಳ್ಳ (ಪ್ರತಿನಿಧಿಯಾಗಿ ಕೊಟ್ಟದ್ದಲ್ಲ). (ನಾ.) (ಕ್ರೈಸ್ತ) ಆರಾಧನ ವಿಧಿ (ಪುಸ್ತಕ). ಗೊತ್ತಾದ ಕಾಲಕ್ಕೆ, ಗೊತ್ತಾದ ಬೆಲೆಗೆ, ಊಟದಂಗಡಿ, ಮೊ. ಗಳಲ್ಲಿ ಹಾಕುವ ಊಟ. ಒಂದು ಚಕ್ರ ಬಹಳ ದೊಡ್ಡದೂ ಮತ್ತೊಂದು ಚಕ್ರ ಬಹಳ ಸಣ್ಣದೂ ಆದ ಹಿಂದಿನ ಕಾಲದ ಬೈಸಿಕಲ್ಲು ; ಹಲ್ಲುಚಕ್ರಗಳ ಯೋಜನೆಯಿಲ್ಲದ ಬೈಸಿಕಲ್ಲು (ಎದುರು ಪದ: Safety bicycle). **Órdinarily** (ಕ್ರಿ. ವಿ.) ; **Órdinariness** (ನಾ.)

Órdinate ಆರ್ಡಿನೆಟ್ (ನಾ.) (ಜ್ಯಾ.) ಸಮಭಾಜಕ ವ್ಯಾಸಕ್ಕೆ ಸಂಬಂಧಪಟ್ಟಿರುವಂಥ ಒಂದು ಶಂಕುಚ್ಛೇದದ ಸಮಾನಾಂತರ ಜ್ಯಾರೇಖಾ ಶ್ರೇಣಿಯಲ್ಲೊಂದು (ಸಾ., ವಕ್ರರೇಖೆಯಿಂದ ವ್ಯಾಸಕ್ಕೆ ಸೇರುವ ಅರ್ಧ ಜ್ಯಾರೇಖೆ): ಸ್ಥಾನ ನಿರ್ದೇಶಕ ಅಕ್ಷವೊಂದಕ್ಕೆ ಸಮಾನಾಂತರವಾಗಿ ಯಾವ ಬಿಂದುವಿನಿಂದಾಗಲಿ ಎಳೆದು ಮತ್ತೊಂದು ಅಕ್ಷವನ್ನು ಸಂಧಿಸುವ ಋಜು ರೇಖೆ.

Ordinátion ಆರ್ಡಿನೇಷನ್ (ನಾ.) ಅಂತಸ್ತು ಅಂತಸ್ತಾಗಿ ವ್ಯವಸ್ಥೆ (ಮಾಡುವುದು) ; ವರ್ಗೀಕರಣ. (ಕ್ರೈಸ್ತ) ದೀಕ್ಷೆ ಕೊಡುವುದು ; (ಕ್ರೈಸ್ತ) ಪುರೋಹಿತ ವರ್ಗಕ್ಕೆ ಪ್ರವೇಶ ಕೊಡುವುದು. ಕಟ್ಟಳೆ, ಶಾಸನ, —ಮಾಡುವುದು ; ವಿಧಿ(ಸುವುದು)

Ordineé ಆರ್ಡಿನೀ (ನಾ.) (ಕ್ರೈಸ್ತ) ಹೊಸದಾಗಿ ದೀಕ್ಷೆಗೊಂಡ 'ಡೀಕನ್'.

Órdnance ಆರ್ಡ್‌ನನ್ಸ್ (ನಾ.) (ಏರಿಸಿ ಸಿದ್ಧಪಡಿಸಿಟ್ಟ) ಫಿರಂಗಿಗಳು ; ಗೋಲಂದಾಜು ಇಲಾಖೆ ; ಸೈನಿಕ ಸಾಮಗ್ರಿಯ, ಯುದ್ಧೋಪಕರಣಗಳ, —ಖಾತೆ. O. survey ಗ್ರೇಟ್‌ಬ್ರಿಟನ್ ಮತ್ತು ಐರ್ಲಂಡುಗಳ ಸರ್ಕಾರಿ ಮೋಜಣಿ. O. datum ಸರ್ಕಾರಿ ಮೋಜಣಿಗಾಗಿ ಗೊತ್ತು ಮಾಡಿದ ಸರಾಸರಿ ಸಮುದ್ರ ಮಟ್ಟ.

Órdure ಆರ್ಡ್ಯುರ್, ಆರ್ಜರ್ (ನಾ.) ಅಮೇಧ್ಯ ; ಹೇಲು ; ಸಗಣಿ ; ಮಲ. ಹೊಲಸು ಮಾತು ; ಅಶ್ಲೀಲತೆ.

Ore ಓರ್ (ನಾ.) (ಪ್ರಶಸ್ತವಾದ ಅಥವಾ ಉಪಯುಕ್ತವಾದ ಲೋಹವನ್ನು ಲಾಭಕರವಾಗಿ ತೆಗೆಯಬಹುದಾದ) ಅದುರು. (ಕಾವ್ಯ) ಲೋಹ(ಮು., ಚಿನ್ನ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Oréctic ಒರೆಕ್ಟಿಕ್ (ಗು.) (ತತ್ತ್ವ ಶಾಸ್ತ್ರ, ವೈ. ಶಾ.) ಕಾಮನೆಯ ; ಬಯಕೆಯ ; ಆಕಾಂಕ್ಷೆಯ ; ಬಯಕೆ ತೀರಿಸಿಕೊಳ್ಳಲು ಚೋದಿಸುವ.

Óreide ಒರಿಯಿಡ್ (ನಾ.) ಹೋಲುವೆಯ ಒಡವೆಗಳಲ್ಲಿ ಉಪಯೋಗಿಸುವ, ಚಿನ್ನದಂತೆ ಕಾಣುವ ಒಂದು ಬಗೆಯ ಹಿತ್ತಾಳೆ: ಹೊನ್ನು ಹಿತ್ತಾಳೆ.

Órgan ಆರ್ಗನ್ (ನಾ.) (ಒಂದು ವಿಶೇಷ ಜೀವನ ಕಾರ್ಯ ನಿರ್ವಾಹಕ್ಕೆ ಹೊಂದಿಕೆಯಾಗಿರುವ ಪ್ರಾಣಿದೇಹದ ಅಥವಾ ಸಸ್ಯದ) ಅಂಗ, ಅವಯವ [Organs of speech, perception, digestion, generation, etc. Nasal o. (ಹಾಸ್ಯ ಪ್ರ.) ಮೂಗು]. (ಒಬ್ಬನ) ಶಾರೀರ, ಕಂಠ, ಧ್ವನಿ (Has a magnificent o. ಅವನಿಗೆ ದಿವ್ಯವಾದ ಶಾರೀರವಿದೆ). ವಾರ್ತಾ ವಾಹಕ ; ಅಭಿಪ್ರಾಯ ತಿಳಿಸುವಂಥದು, ಮು., ಒಂದು ಪಕ್ಷ, ತತ್ತ್ವ, ಉದ್ದೇಶ, ಸಂಘ, ಮೊ. ಗಳ ಪ್ರಚಾರ ಪತ್ರಿಕೆ. ತಿದಿಯೊತ್ತಿ ಕೀಲಿಕೈಗಳ ಮೂಲಕ ಪಿಳ್ಳಂಗೋವಿಗಳಲ್ಲಿ ಗಾಳಿ ಹರಿಸಿ, ಸಂಗೀತ ನುಡಿಸುವ ಒಂದು ವಾದ್ಯ: ಆರ್ಗನ್ ವಾದ್ಯ (Great, Choir, Swell, Solo, Pedal, o. ಎಂಬ ಬಗೆ ಬಗೆಯ ಆರ್ಗನ್ ವಾದ್ಯಗಳು) [**Órganist** (ನಾ.) ಆರ್ಗನ್ ವಾದ್ಯಗಾರ. Barrel-o. (ಸುತ್ತುತ್ತಿರುವ ಉರುಳೆಯಮೇಲೆ ಅಳವಡಿಸಿರುವ ಲೋಹದ ಸೂಜಿಗಳು ಕೀಲಿಕೈಗಳನ್ನು ತಕ್ಕಂತೆ ಚಾಲನಮಾಡುವುದರಿಂದ ಸಂಗೀತ ನುಡಿಯುವ) ವರ್ತುಲ ನಾಳಿ ಆರ್ಗನ್ ವಾದ್ಯ. **O.-grinder** ಆರ್ಗನ್ ವಾದ್ಯಗಾರ]. ಲೋಹದ ನಾಲಗೆಗಳಿಂದ ನಾದಗಳು ಹುಟ್ಟುವಂತೆ ಕೀಲಿಕೈಗಳನ್ನಳವಡಿಸಿದ ಮಣೆಯುಳ್ಳ ಒಂದು ಗಾಳಿವಾದ್ಯ ; ಹಾರ್ಮೋನಿಯಂ (ವಾದ್ಯ) [American o. ಗಾಳಿಯನ್ನು ವಾದ್ಯದ ನಾಲಗೆಗಳ ಬಳಿಗೆ ಒಳ ಸೆಳೆದುಕೊಳ್ಳುವ ರಚನೆಯುಳ್ಳ ಆರ್ಗನ್ ವಾದ್ಯ. Mouth o. ಮಕ್ಕಳ (ಆಟದ) ರಾಗಮಾಲಿಕೆ]. O.-blower ಆರ್ಗನ್ ವಾದ್ಯದ ತಿದಿಯೊತ್ತುವವನು ಅಥವಾ ತಿದಿಯೊತ್ತುವ ಯಂತ್ರಸಲಕರಣೆ. O.-builder ಆರ್ಗನ್ ವಾದ್ಯ ತಯಾರಿಸುವವನು. O.-loft (ಕ್ರೈಸ್ತ ಆರಾಧನ ಮಂದಿರದಲ್ಲಿಯ ಅಥವಾ ಗಾನ ಮಂದಿರದಲ್ಲಿಯ) ಆರ್ಗನ್ ವೇದಿಕೆ. O. piano ಆರ್ಗನ್ ವಾದ್ಯದಂತೆ ಸಂತತವಾದ ಸ್ವರಶ್ರೇಣಿಯುಳ್ಳ ಪಿಯಾನೊ ವಾದ್ಯ. O.-stop ಆರ್ಗನ್ ವಾದ್ಯದಲ್ಲಿ ಸಾದೃಶ್ಯ ಸ್ವರಗಳನ್ನು ನುಡಿಯುವ ಪಿಳ್ಳಂಗೋವಿಗಳ ತಂಡ ; ಇವನ್ನು ನುಡಿಸುವ ಯಂತ್ರಸಲಕರಣೆಯ ಹಿಡಿ. **Órganless** (ಗು.) ; **Orgánic** ಆರ್ಗ್ಯಾನಿಕ್ (ಗು.) (ಶ. ವಿ.) ದೇಹದ ಅಂಗಗಳ ; ಅವಯವಗಳ ; ಜೈವಿಕ. (ವೈ. ಶಾ., ರೋಗದ ವಿಷಯದಲ್ಲಿ) ಅಂಗದ ಕಟ್ಟಡವನ್ನು, ರಚನೆಯನ್ನು, —ಬಾಧಿಸುವ (ಎದುರು ಪದ: Functional) ; ಅಂಗಗಳುಳ್ಳ ; ವ್ಯವಸ್ಥಿತ ಅಂಗ ರಚನೆಯುಳ್ಳ. ಪ್ರಾಣಿಗಳ ಅಥವಾ ಸಸ್ಯಗಳ (ಎದುರು ಪದ : Inorganic). (ರ. ವಿ.) (ಸಂಯುಕ್ತಗಳು, ಮೊ. ಗಳ ವಿಷಯದಲ್ಲಿ) ಪದಾರ್ಥಗಳ ವ್ಯವಸ್ಥಿತ ರಚನೆಯಲ್ಲಿ ಒಂದು ಭಾಗವಾಗಿರುವ; ಹೀಗಿರುವ ಪದಾರ್ಥಗಳಿಂದ ಆದ; ಜಲಜನಕ ಇಂಗಾಲ ಸಂಯುಕ್ತಗಳ ಅಥವಾ ಅವುಗಳ ಉತ್ಪನ್ನಗಳ (O. chemistry ಇಂಗಾಲ ಸಂಯುಕ್ತಗಳ ರಸಾಯನ ವಿಜ್ಞಾನ). ರಚನೆಗೆ ಸಂಬಂಧಪಟ್ಟ ; ರಚನಾತ್ಮಕವಾದ ; ಸ್ವಭಾವತಃ ಇರುವ ; ಸಹಜವಾಗಿ ನೆಲಸಿರುವ ; ಮೂಲಭೂತವಾದ ; (ಪದಾರ್ಥದ) ಕಟ್ಟಡಕ್ಕೆ ಸಂಬಂಧಪಟ್ಟ ; ಸುವ್ಯವಸ್ಥಿತ; ಸುಸಂಘಟಿತ; ಅನ್ಯೋನ್ಯ ಸಂಬಂಧವುಳ್ಳ (O. unity ಜೈವಿಕ ಏಕತೆ. An o. whole ಜೈವಿಕ ಸಮಷ್ಟಿ). **Orgánically** (ಕ್ರಿ. ವಿ.). **Órganism** ಆರ್ಗನಿಸ್ಮ್ (ನಾ.) ಒಂದರೊಡನೊಂದು ಸೇರಿ ಪರಸ್ಪರಾವಲಂಬಿಗಳಾಗಿ ಸಮಾನ ಜೀವನದಲ್ಲಿ ಭಾಗಿಗಳಾದ ಅಂಗಗಳುಳ್ಳ ವ್ಯವಸ್ಥಿತ ದೇಹ; ಪ್ರಾಣಿ ವ್ಯಕ್ತಿ, ಸಸ್ಯ ವ್ಯಕ್ತಿ (ಯ ಭೌತಿಕ ರಚನೆ) ; ಶರೀರ ; ಜೀವಿ. (ಜೀವಂತ ವ್ಯಕ್ತಿಗೆ ಹೋಲಿಸಬಹುದಾದ) ಪರಸ್ಪರಾವಲಂಬಿ ಭಾಗಗಳುಳ್ಳ ಒಂದು ಸಮಷ್ಟಿ. **Organizátion** (ನಾ.) (ಕ್ರಿಯಾರ್ಥಗಳಲ್ಲಿ) ; ವ್ಯವಸ್ಥಿತ—ಸಂಸ್ಥೆ, ಸಂಘ, ವ್ಯೂಹ, ರಚನೆ. **Organize** (ಕ್ರಿ.) ಅಂಗಗಳನ್ನೊದಗಿಸು ; ಪರಸ್ಪರಾವಲಂಬಿಯಾಗಿ ಮಾಡು ; ಜೀವಿಯಾಗಿ, ಜೀವಂತ ಅಂಗಾಂಶವಾಗಿ, —ಮಾಡು (ಸಾ., ಭೂ. ಕೃ. ನಲ್ಲ) ; (ಕ್ರಿ. ಅಕ.) —ಆಗು. ಒಂದು ವ್ಯವಸ್ಥಿತ ಸಮಷ್ಟಿಯಾಗಿ ಮಾಡು ; ಕ್ರಮವಾದ ರಚನೆ ಕೊಡು ; ಕಾರ್ಯರೂಪಕ್ಕೆ ತಂದು ನಡಸು. (ಸಹಕಾರ ಬೇಕಾದ ಉದ್ಯಮವನ್ನು) ಏರ್ಪಡಿಸು, ಸಂಘಟನೆ ಮಾಡು. **Órganizable** (ಗು.) ; **Órganizer** (ನಾ.)

Órganism, etc. **Organ** ನೋಡಿ.

Órganon ಆರ್ಗನಾನ್, **Órganum** ಆರ್ಗನಮ್ (ನಾ.) ಜ್ಞಾನ ಸಾಧನ ; (ಶಾಸ್ತ್ರೀಯ) ವಿಚಾರ ಸಾಧನ ; ಚಿಂತನೋಪಕರಣ ; ಒಂದು ತರ್ಕ ಪದ್ಧತಿ ; ತರ್ಕ ಶಾಸ್ತ್ರ (ಗ್ರಂಥ)

Órgasm ಆರ್ಗ್ಯಾಸ್ಮ್ (ನಾ.) ತೀವ್ರೋದ್ರೇಕ ; ರೋಷ ; ಆವೇಶ ; (ಸಂಭೋಗ ಸಮಯದಲ್ಲಿ) ಸಂಭೋಗೋದ್ರೇಕ. **Orgástic** (ಗು.)

Orgiástic. **Orgy** ನೋಡಿ.

Órgy ಆರ್ಜಿ (ನಾ.) (ಗ್ರೀಕ್ ಮತ್ತು ರೋ. ಪ್ರಾ. ; ಸಾ., ಬ. ವ. ದಲ್ಲಿ) ಹಲವು ದೇವತೆಗಳ (ಮು., ಬ್ಯಾಕಸ್ ದೇವತೆಯ) ಆರಾಧನೆಯಲ್ಲಿ ಹುಚ್ಚು ಕುಣಿತ, ಕುಡಿತ, ಹಾಡು—ಇವುಗಳಿಂದ ಕೂಡಿದ ರಹಸ್ಯೋಪಾಸನೆ. ಕುಡಿತದ, ಸ್ವೇಚ್ಛಾಚಾರದ, —ಉಲ್ಲಾಸ ಕೋಲಾಹಲ ; ಕಾಮ ಕೇಳಿ ; ಸ್ವಚ್ಛಂದ ಸಂರಂಭ. (ಬ. ವ. ದಲ್ಲಿ) ವಿಷಯ ಲೋಲುಪ್ತಿ ; ವ್ಯಭಿಚಾರ. **Orgiástic** (ಗು.) —ರೀತಿಯ.

Óriel ಓರಿಯೆಲ್ (ನಾ.) ಸಾ., ಉಪ್ಪರಿಗೆಯ ಗೋಡೆಯಿಂದ ಮುನ್ ಚಾಚಿಕೊಂಡು, ನೆಲದಿಂದ ಕೊಟ್ಟ ಆಸರೆಯಮೇಲೆಯೊ ಗೋಡೆಯಲ್ಲಿಯ ಚಾಚು ಆಸರೆಯಮೇಲೆಯೊ ನೆಲಸಿರುವ ದೊಡ್ಡ ಕಿಟಕಿಯುಳ್ಳ ಬಹು ಮುಖದ ಚಾಚು ಕಟ್ಟಡ ; (ಉಪ್ಪರಿಗೆಯ) ಚಾಚು ಕಿಟಕಿ (=O. window)

Órient ಓರಿಯೆಂಟ್ (ನಾ., ಗು.) (ಕಾವ್ಯ) (ಆಕಾಶದ ಅಥವಾ ಭೂಮಿಯ) ಪೂರ್ವ ಭಾಗ ; ಪೂರ್ವ ದಿಕ್ಕು ; ಮೆಡಿಟರೇನಿಯನ್ನಿನ ಮತ್ತು ದ. ಯೂರೋಪಿನ ಪೂರ್ವ ದಿಕ್ಕಿನಲ್ಲಿರುವ ದೇಶಗಳು : ಪೌರಸ್ತ್ಯ ದೇಶಗಳು. ಪೂರ್ವ ದೇಶದ ಮುತ್ತು ; ಅತ್ಯುತ್ತಮ ಗುಣದ ಮುತ್ತಿನ ವಿಶೇಷ ರೀತಿಯ ಹೊಳಪು. (ಗು.) (ಕಾವ್ಯ) ಪೌರಸ್ತ್ಯ ; (ಪ್ರಶಸ್ತ ಶಿಲೆಗಳ, ಮು., ಅತ್ಯುತ್ತಮ ತೆರದ ಮುತ್ತುಗಳ, ವಿಷಯದಲ್ಲಿ : ಅವು ಹಿಂದೆ ಪೌರಸ್ತ್ಯ ದೇಶಗಳಿಂದ ಬರುತ್ತಿದ್ದ ಕಾರಣದಿಂದ) ಒಳ್ಳೆಯ ಹೊಳಪಿನ, ಥಳಥಳಿಸುವ, ಪ್ರಶಸ್ತ. (ಸೂರ್ಯ, ಹಗಲು, ಮೊ. ಗಳ ವಿಷಯದಲ್ಲಿ) ಮೂಡುತ್ತಿರುವ ; ಹುಟ್ಟುತ್ತಿರುವ (ರೂಪ. ಸಹ). **Oriéntal** ಓರಿಯೆಂಟಲ್ (ಗು., ನಾ.) (ಪ್ರಾಚೀ. ಪ್ರ.) ಪೂರ್ವ ದಿಕ್ಕಿನ ; ಮೂಡಲ. (ಮೆಡಿಟರೇನಿಯನ್ನಿಗೆ, ದ. ಯೂರೋಪಿಗೆ, ಪೂರ್ವ ದಿಕ್ಕಿನಲ್ಲಿರುವ) ಪೂರ್ವ ದೇಶದ(ವನು) ; ಪ್ರಾಚ್ಯ [ಮು., ಏಷ್ಯದ(ವನು)]. ಪೌರಸ್ತ್ಯ ಸಂಸ್ಕೃತಿಯ. (ಮುತ್ತು, ಮೊ. ಗಳ ವಿಷಯದಲ್ಲಿ) =Orient. **Oriéntalism** ಪೌರಸ್ತ್ಯ ಸ್ವಭಾವ, ಶೈಲಿ, ಗುಣ, ವೈಶಿಷ್ಟ್ಯ. **Oriéntalist** ಪೌರಸ್ತ್ಯ ಭಾಷಾ ಸಾಹಿತ್ಯಗಳ ಪಂಡಿತ. **Oriéntalize** (ಕ್ರಿ.) ; **Oriéntally** (ಕ್ರಿ. ವಿ.)

Oriént, Órientate ಓರಿಯೆಂಟೇಟ್ (ಕ್ರಿ.) (ಕಟ್ಟಡ, ಮೊ. ನ್ನು) ಪೂರ್ವಾಭಿಮುಖ ಮಾಡು. ಹೆಣದ ಕಾಲನ್ನು ಪೂರ್ವ ದಿಕ್ಕಿಗೆ ಮಾಡಿ ಹೂಳು. ದಿಕ್ಸೂಚಿಗನುಗುಣವಾಗಿ ದಿಕ್ಕು ಗೊತ್ತುಮಾಡು, ನೆರೆ ನಿರ್ಧರಿಸು. (ರೂಪ.) ಸ್ಪಷ್ಟವಾಗಿ ತಿಳಿಯಬರುವಂಥ ಸಂಬಂಧಕ್ಕೆ ತರು (O. oneself ತನ್ನ ನೆರೆ, ಪರಿಸ್ಥಿತಿ, ಗೊತ್ತುಮಾಡಿಕೊ). ಪೂರ್ವ ದಿಕ್ಕಿಗೆ ಅಥವಾ ಒಂದು ಗೊತ್ತಾದ ದಿಕ್ಕಿಗೆ, —ತಿರುಗು, ಅಭಿಮುಖವಾಗು. **Orientátion** (ನಾ.) (ಕ್ರಿಯಾರ್ಥಗಳಲ್ಲಿ) ; (ಒಂದರ) ನೆರೆ. (ರ. ವಿ.) ಸಂಕೀರ್ಣ ಅಣುಗಳಲ್ಲಿ ಪರಮಾಣುಗಳ ಅಥವಾ ಪರಮಾಣು ತಂಡಗಳ ಪರಸ್ಪರ ಸ್ಥಾನವಿನ್ಯಾಸ. ಪೂರ್ವ ದಿಕ್ಕಿನ ಸ್ಥಾನ ; ಹಕ್ಕಿಗಳು ಮತ್ತು ಕೆಲವು ಇತರ ಪ್ರಾಣಿಗಳು (ಉದಾ., ಸಾಕಿದ ಪಾರಿವಾಳ, ದೇಶಾಂತರ ಗಾಮಿ ಪಕ್ಷಿಗಳು) ಒಂದು ಸ್ಥಳದಿಂದ ದೂರದಲ್ಲಿಯ ಮತ್ತೊಂದು ಸ್ಥಳಕ್ಕೆ ಹೋದಮೇಲೆ ಅಥವಾ ಅವನ್ನು ತೆಗೆದುಕೊಂಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೋದಮೇಲೆ ಹಿಂದಿನ ಸ್ಥಳವನ್ನು ಗುರುತಿಸಿ ಹಿಂದಕ್ಕೆ ಬರುವ ಶಕ್ತಿ. (ರೂಪ.) ಹೊಂದಿಕೆ ; ಯಾವುದಕ್ಕಾದರೂ ಸಂಬಂಧಿಸಿದಂತೆ, ಸ್ಥಾನ ಅಥವಾ ಪರಿಸ್ಥಿತಿ. ಪರಿಸ್ಥಿತಿ, ಭಾವನೆ, ಮೊ. ಗಳಿಗೆ ಸಂಬಂಧಿಸಿದಂತೆ ಒಬ್ಬನ ನೆರೆಯನ್ನು ನಿರ್ದೇಶಿಸುವುದು.

Órifice ಆರಿಫಿಸ್ (ನಾ.) ಕಂಡಿ ; ತೂತು ; ಸಂದು ; ಕುಳಿಯ ಬಾಯಿ; ರಂಧ್ರ.

Órigin ಆರಿಜಿನ್ (ನಾ.) ಮೂಲ; (ಯಾವುದಾದರೂ ಒಂದರಿಂದ) ಆರಂಭ ; ಉತ್ಪತ್ತಿ ; ಹುಟ್ಟು ; (ಒಬ್ಬನ) ವಂಶ ; ಆರಂಭದೆಡೆ ; ಮೂಲ (ಸ್ಥಾನ). **Oríginal** ಒರಿಜಿನಲ್ (ಗು., ನಾ.) ಮೊದಲಿನಿಂದಲೂ ಇರುವ ; ಆದ್ಯ ; ಸ್ವಭಾವಸಿದ್ಧವಾದ ; ಮೊತ್ತಮೊದಲಿನ ; ಅತ್ಯಂತ ಹಿಂದಿನ ; ಮೂಲಭೂತ (O. sin ಆದಮನ ಪಾತಕದ ಫಲವಾಗಿ ಎಲ್ಲ ಮನುಷ್ಯರಿಗೂ ಜನ್ಮತಃ ಬಂದಿರುವ ಸ್ವಭಾವಸಿದ್ಧವಾದ ಪಾತಿತ್ಯ). ಮಾದರಿಯಾಗಿ ಉಪಯೋಗಿಸಿದ; ಮಾತೃಕೆಯಾದ ; (ನಕಲು ಅಥವಾ ಭಾಷಾಂತರಕ್ಕೆ ಆಧಾರವಾದ) ಮೂಲದ, ಅಸಲಿನ ; (ಒಂದರಿಂದ) ವ್ಯುತ್ಪನ್ನವಾಗಿಲ್ಲದ ; (ಒಂದನ್ನು) ಅವಲಂಬಿಸಿಲ್ಲದ ; ಸಾಕ್ಷಾತ್ತಾಗಿ ಬಂದ ; ಅನುಕರಣವಲ್ಲದ ; (ಲಕ್ಷಣ, ಶೈಲಿ—ಇವುಗಳಲ್ಲಿ) ನವೀನ ವಾದ ; ಕಲ್ಪನಾ, ನಿರ್ಮಾಪಕ, —ಶಕ್ತಿಯುಳ್ಳ ; ಸ್ವಕಪೋಲ ಕಲ್ಪಿತ ; ಸ್ವೋಪಜ್ಞ ; ಸ್ವತಂತ್ರವಾಗಿ ಆಲೋಚಿಸುವ, ಕಾರ್ಯಮಾಡುವ (Where is the o. picture ? ಮೂಲಚಿತ್ರವೆಲ್ಲಿ ? What does the o. Greek say ? ಗ್ರೀಕ್ ಮೂಲದಲ್ಲಿ ಏನು ಹೇಳಿದೆ ? Where hooping-cough is o. ಎಲ್ಲ ನಾಯಿಕೆಮ್ಮು ಮೊದಲಿಂದಲೂ ಇದೆಯೊ. Made a very o. remark ಬಹಳ ಅಪೂರ್ವ ಟೀಕೆ ಮಾಡಿದನು. Has an o. mind ಅವನಿಗೆ ಸ್ವತಂತ್ರ ಕಲ್ಪನಾ ಶಕ್ತಿಯಿದೆ). (ನಾ.) (ವಿರ. ಪ್ರ.) ಮೂಲ ; ಉತ್ಪತ್ತಿ ; ಹುಟ್ಟು. ಮಾದರಿ ; ಮೂಲ ಪ್ರತಿ ; (ಯಾವುದರ ನಕಲು ತೆಗೆದಿದೆಯೊ ಅಥವಾ ಯಾವುದರ ಭಾಷಾಂತರ ಮಾಡಿದೆಯೊ ಅ) ಮಾತೃಕೆ, ಅಸಲು ಪ್ರತಿ (Several transcripts from the same o. Reads Don Quixote in the o.). ವಿಲಕ್ಷಣ, ವಿಚಿತ್ರ, —ವ್ಯಕ್ತಿ. **Originálity** (ನಾ.) ; **Oríginally** (ಕ್ರಿ. ವಿ.) ; **Óriginate** ಒರಿಜಿನೇಟ್ (ಕ್ರಿ.) (ಒಂದಕ್ಕೆ) ಜನ್ಮ ಕೊಡು ; ಪ್ರಾರಂಭಿಸು ; ಆರಂಭಿಸುವಂತೆ ಮಾಡು ; ಉದ್ಭವಿಸು ; ಹುಟ್ಟು ; ಉತ್ಪತ್ತಿಯಾಗು (ಸಾ., *From* or *in* thing or place, *with* or *from* person). **Óriginative** (ಗು.) ; **Originátion** (ನಾ.) ; **Óriginator** (ನಾ.)

Oríginal, Óriginate, etc. **Origin** ನೋಡಿ.

Orinásal ಓರಿನೇಸ(ಸ್)ರ್ (ಗು., ನಾ.) ಬಾಯಿ ಮೂಗುಗಳ ; —ಗಳಿಂದ ಉಚ್ಚರಿಸಿದ (ಸ್ವರ) (ಮು., ಫ್ರೆಂಚ್ ಅನುನಾಸಿಕ ಸ್ವರಗಳು)

Oríon ಒರೈಅನ್ (ನಾ.) (ಖ. ವಿ.) ನಡುಪಟ್ಟಿಯೂ ಕತ್ತಿಯೂ ಉಳ್ಳ ಬೇಟೆಗಾರನ ಆಕೃತಿಗೆ ಹೋಲಿಸಿದ, ರಾಶಿ ಚಕ್ರಕ್ಕೆ ದಕ್ಷಿಣದಲ್ಲಿರುವ, ಒಂದು ಉಜ್ಜ್ವಲ ನಕ್ಷತ್ರ ಪುಂಜ ; ಮೃಗಶಿರ ನಕ್ಷತ್ರವನ್ನೊಳಕೊಂಡ ಒರೈಅನ್ ಎಂಬ ಪುಂಜ. O.'s belt ಈ ನಕ್ಷತ್ರ ಪುಂಜದಲ್ಲಿ (ನಡು ಪಟ್ಟಿಯಂತೆ) ಅಡ್ಡ ಸಾಲಾಗಿರುವ ಮೂರು ಪ್ರಕಾಶಮಾನವಾದ ನಕ್ಷತ್ರಗಳು. O.'s hound ವ್ಯಾಧ, ಲುಬ್ಧಕ (ಎಂಬ ನಕ್ಷತ್ರ). **Oríonid** ಒರೈಯ ನಿಡ್ (ನಾ.) (ಖ. ವಿ.) ತನ್ನ ಪ್ರಧಾ ಕೇಂದ್ರವು ಒರೈಅನ್ ನಕ್ಷತ್ರ ಪುಂಜದಲ್ಲಿರುವಂತೆ ಕಾಣುವ ಒಂದು ಉಲ್ಕೆ.

Órison ಆರಿಸ(ಜ್)ನ್ (ನಾ., ಸಾ., ಬ. ವ. ದಲ್ಲಿ) (ಪ್ರಾಚೀ. ಪ್ರ.) (ದೇವತಾ) ಪ್ರಾರ್ಥನೆ.

Órlop ಆರ್‌ಲಾಪ್ (ನಾ.) (ಮೂರು ಅಥವಾ ಹೆಚ್ಚು ಅಟ್ಟಗಳುಳ್ಳ) ಹಡಗಿನ ಅತ್ಯಂತ ತಳದ ಅಟ್ಟ.

Órmolu ಆರ್ಮೊಲೂ (ನಾ., ಗು.) (ಪೀಠೋಪಕರಣಗಳನ್ನು ಅಲಂಕರಿಸು ವುದಕ್ಕೆ ಉಪಯೋಗಿಸುವ) ಚಿನ್ನದ ಮುಲಾಮಿನ ಕಂದು ಕಂಚು ; ತಾಮ್ರ, ಸತು ಮತ್ತು ತವರ—ಇವುಗಳ ಮಿಶ್ರಣದಿಂದಾದ ಚಿನ್ನದ ಬಣ್ಣದ ಒಂದು ಮಿಶ್ರ ಲೋಹ ; ಇವುಗಳಿಂದ ಮಾಡಿದ ಅಥವಾ ಅಲಂಕರಿಸಿದ ವಸ್ತುಗಳು. (ಗು., ನಾವಿಕ ಅಸಂ.) ಉಜ್ಜ್ವಲ.

Órnament ಆರ್ನಮೆಂಟ್ (ನಾ., ಕ್ರಿ. ಸಕ.) ಒಡವೆ ; ಆಭರಣ ; ಅಲಂಕಾರ (ವಸ್ತು) ; ಭೂಷಣ(ವೆನಿಸುವ ಗುಣ, ವ್ಯಕ್ತಿ) (Was an o. to his country or age). ಅಲಂಕರಿಸುವುದು ; ಅಲಂಕಾರ ; ಅಲಂಕೃತಿ ; ಶೃಂಗಾರ (A tower rich in o. By way of o. ಅಲಂಕಾರಕ್ಕಾಗಿ). (ಕ್ರೈಸ್ತ, ಸಾ., ಬ. ವ. ದಲ್ಲಿ) ಕ್ರೈಸ್ತ ದೇವಾಲಯದ, ಅದರಲ್ಲಿಯ ಆರಾಧನೆಯ, —ಉಪಕರಣಗಳು (ಉದಾ., ಬಲಿಪೀಠದ ವಸ್ತ್ರ, ಪುರೋಹಿತರ ಉಡುಪು, ತಟ್ಟೆ, ಆರ್ಗನ್ ವಾದ್ಯ, ಗಂಟೆಗಳು). (ಕ್ರಿ.) ಅಲಂಕಾರ ಮಾಡು ; ಸಿಂಗರಿಸು. **Ornaméntal** (ಗು.) ; **Ornaméntally** (ಕ್ರಿ. ವಿ.) ; **Ornaméntalist** (ನಾ.) ಅಲಂಕಾರದ ಉದ್ಯೋಗದವನು. **Ornaméntalism** (ನಾ.) ಅಲಂಕಾರ ರಚನೆ ಯಲ್ಲಿ ಆಸಕ್ತಿ ; —ಯ ತತ್ತ್ವ. **Ornamentátion** (ನಾ.)

Ornáte ಆರ್ನೇಟ್ (ಗು.) ವಿಸ್ತಾರವಾಗಿ ಅಲಂಕಾರ ಮಾಡಿದ ; ಅಲಂಕಾರಮಯ. (ಸಾಹಿತ್ಯ ಶೈಲಿ) ಆಲಂಕಾರಿಕ. **Ornátely** (ಕ್ರಿ. ವಿ.) ; **Ornáteness** (ನಾ.)

Ornith(o)- ಆರ್ನಿ(ರ್ನೈ)ತೊ— (ಸ. ಪೂ. ಪ.) ಪಕ್ಷಿ— . (ಹಲವು ವೈಜ್ಞಾನಿಕ ಪದಗಳಲ್ಲಿ ಪ್ರ.) : **Órnithoid** (ಕೆಲವು ಸರೀಸೃಪಗಳ ವಿಷಯದಲ್ಲಿ) ಹಕ್ಕಿಯ ರಚನೆಯಂತಿರುವ. **Ornithólogy** ಪಕ್ಷಿ ಶಾಸ್ತ್ರ. **Ornithológical** (ಗು.) ; **Ornithólogist** (ನಾ.) ; **Orníthomancy** (ಪಕ್ಷಿಗಳನ್ನೂ ಅವುಗಳ ಹಾರಾಟವನ್ನೂ ಗಮನಿಸಿ ಹೇಳುವ) ಪಕ್ಷಿ ಶಕುನ. **Ornithorhýncus** ಬಾತಿನ ಕೊಕ್ಕಿನಂತೆ ಮೂತಿ ಇರುವ, ಆಸ್ಟ್ರೇಲಿಯದ ಒಂದು ವಿಚಿತ್ರ ಪ್ರಾಣಿ. **Ornithóscopy** ಪಕ್ಷಿ ಶಕುನ (ಶಾಸ್ತ್ರ)

Orógraphy ಒರಾಗ್ರಫಿ, **Oreó-** ಆರಿಯಾಗ್ರಫಿ (ನಾ.) ಪ್ರಾಕೃತ ಭೂವಿವರಣೆಯಲ್ಲಿ ಪರ್ವತಗಳನ್ನು ಕುರಿತ ಭಾಗ ; ಪರ್ವತ ವಿವರಣೆ. **Orográphic(al)** ಆರೊಗ್ರ್ಯಾಫಿ— (ಗು.) ; **Or(e)ólogy** (ನಾ.) ಪರ್ವತ ಶಾಸ್ತ್ರ. **Or(e)ológical** (ಗು.) ; **Or(e)ólogist** (ನಾ.)

Orohíppus ಆರೊಹಿಪಸ್ (ನಾ.) ಕುದುರೆಯ ವಂಶದ ಆದಿ ಪ್ರಾಣಿ ಯೆಂದು ಹೇಳುವ, ಪಳೆಯುಳಿಕೆಯ ಒಂದು ಚತುಷ್ಪಾದಿ.

Órotund ಓರೊಟಂಡ್ (ಗು.) (ಮಾತು, ಭಾಷೆ) (ಬಾಯಿ)ತುಂಬಿ ಬರುವ. ಅದ್ಭುತ ; ಗಂಭೀರ ; ಆಡಂಬರದ ; ಉದಾತ್ತ ವಾಗ್ಧೋರಣೆಯ.

Órphan ಆರ್ಫ(ಫ್F)ನ್ (ನಾ., ಗು., ಕ್ರಿ. ಸಕ.) ತಂದೆ ತಾಯಿ ಇಲ್ಲದ, ದಿಕ್ಕಿಲ್ಲದ, —(ಮಗು) ; ತಬ್ಬಲಿ (ಮಗು). (ಕ್ರಿ.) ತಬ್ಬಲಿ(ಯಾಗಿ) ಮಾಡು. **Órphanhood** (ನಾ.) ; **Órphanize** (ಕ್ರಿ. ಸಕ.) ; **Órphanage** —ನೆ(ನಿ)ಜ್ (ನಾ.) ತಬ್ಬಲಿ(ಮಗು)ತನ ; ತಬ್ಬಲಿ ಮಕ್ಕಳ ವಿದ್ಯಾಭ್ಯಾಸ, ಮೊ. ಗಳಿಗಾಗಿರುವ ಸಂಸ್ಥೆ ; ಅನಾಥಾಲಯ.

Órphic ಆರ್ಫಿಕ್ (ಗು.) ಆರ್ಫ್ಯೂಸಿನ ; ಆರ್ಫ್ಯೂಸಿನದೆಂದು ಪ್ರತೀತಿ ಯಿರುವ ರಹಸ್ಯೋಪಾಸನೆಯ, ತತ್ತ್ವಗಳ ; ಒಗಟು ಭವಿಷ್ಯ ವಾದದ ; ರಹಸ್ಯ ; ಗೂಢ. ಆರ್ಫ್ಯೂಸಿನ ಸಂಗೀತದಂಥ ; ಮಧುರ ; ಸುಶ್ರಾವ್ಯ ; ಪರವಶಗೊಳಿಸುವ. [(ಗ್ರೀಕ್ ಪುರಾಣ) ಕವಿಯೂ ಗಾಯಕನೂ ಆದ ಆರ್ಫಿಯಸ್ ಎಂಬ ಗ್ರೀಕನು ತನ್ನ ' ಲಯರ್ ' ಎಂಬ ತಂತ್ರೀ ವಾದ್ಯದ ವಾದನದಿಂದ ಮೃಗಗಳು ಪರವಶಗೊಳ್ಳುವಂತೆಯೂ ವೃಕ್ಷಗಳೂ ಶಿಲೆಗಳೂ ಚಲಿಸುವಂತೆಯೂ ಮಾಡುತ್ತಿದ್ದನಂತೆ]

Órphrey, Órfray ಆರ್ಫ್ರಿ, ಆರ್ಫ್ರೆ (ನಾ.) ಕ್ರೈಸ್ತ ಪುರೋಹಿತರ ಉಡುಪಿನ (ಅನೇಕ ವೇಳೆ ಹೆಚ್ಚು ಜರತಾರಿ ಕೆಲಸಮಾಡಿರುವ) ಅಲಂ ಕಾರದ ಅಂಚು.

Órpiment ಆರ್ಪಿಮೆಂಟ್ (ನಾ.) ಗಂಧಕ ಮತ್ತು ಆರ್ಸನಿಕ್ ಧಾತು ಗಳ ಸಂಯುಕ್ತವಾದ, ಹಳದಿಯ ಬಣ್ಣವಾಗಿ ಉಪಯೋಗಿಸುವ, ಒಂದು ಖನಿಜ ; ಹರಿದಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Órrery ಆರರಿ (ನಾ.) ಗ್ರಹಗಳ ಚಲನೆಯನ್ನು ತೋರಿಸುವ (ಗಡಿಯಾರದ ರಚನೆಯ) ಮಾದರಿ: ಗ್ರಹಗತಿ ದರ್ಶಕ. (Earl of Orrery ಎಂಬಾತನಿಗಾಗಿ ಮೊದಲು ತಯಾರಿಸಿದ ಕಾರಣದಿಂದ)

Órris[1] ಆರಿಸ್ (ನಾ.) 'ಐರಿಸ್' ಜಾತಿಯ ಒಂದು ಸಸ್ಯ : (ಪರಿಮಳ ದ್ರವ್ಯಗಳಲ್ಲೂ ಔಷಧದಲ್ಲೂ ಉಪಯೋಗಿಸುವ ಮೂರು ಬಗೆಯ) 'ಐರಿಸ್' ಗಿಡದ ಬೇರು (=O.-root)

Órris[2] ಆರಿಸ್ (ನಾ.) (ಹಲವು ಬಗೆಯ ಚಿನ್ನದ ಅಥವಾ ಬೆಳ್ಳಿಯ) ಜರತಾರಿ, ಕಸೂತಿ.

Ort ಆರ್ಟ್ (ನಾ.) (ಪ್ರಾಚೀ. ಪ್ರ.; ಸಾ., ಬ. ವ. ದಲ್ಲಿ ಪ್ರ.) ತಿಂದು ಮಿಕ್ಕದ್ದು ; ಉಚ್ಛಿಷ್ಟ ; ಎಂಜಲು.

Orth(o)- ಆರ್ಥೊ— (ಸ. ಪೂ. ಪ.) (ಅನೇಕ ವೈಜ್ಞಾನಿಕ ಪದಗಳಲ್ಲಿ 'ನೇರವಾದ, ಋಜು ಕೋನಿಕ, ಸರಿಯಾದ' ಎಂಬ ಅರ್ಥಗಳಲ್ಲಿ ಪ್ರ.). **Orthocephálic** ಕಪಾಲದ ಅಗಲವು ಅದರ ಉದ್ದದ $\frac{3}{4}$ ರಿಂದ $\frac{4}{5}$ ರ ವರೆಗಿರುವ : ಋಜು ಶಿರದ. **Órthocentre** (ಜ್ಯಾ.) ಒಂದು ತ್ರಿಕೋನದ ಪ್ರತಿ ಕೋನದಿಂದಲೂ ಅದರ ಅಭಿಮುಖ ಬಾಹುವಿಗೆ ಎಳೆದ ಲಂಬರೇಖೆಗಳು ಪರಸ್ಪರ ಸಂಧಿಸುವ ಬಿಂದು : ಲಂಬ ಕೇಂದ್ರ. **Orthochromátic** (ಛಾಯಾಚಿತ್ರ ಕ್ರಿಯೆಯಲ್ಲಿ) ಬಣ್ಣಗಳಿಗೆ ತಾರತಮ್ಯದಿಂದ ಸರಿಯಾದ ಗಾಢತೆಯನ್ನು ಕೊಡುವ : ಋಜು ವರ್ಣದ. **Órthoclase** ಒಂದಕ್ಕೊಂದು ಸಮಕೋನವಾಗಿರುವ ಎರಡು ಸೀಳುಗಳಾಗಿ ಒಡೆಯುವ ಲಕ್ಷಣವುಳ್ಳ, ಹರಳುಗಳಾಗಿ ದೊರೆಯುವ, ಸಾಮಾನ್ಯ ಫೆಲ್‌ಸ್ಪಾರ್ ಖನಿಜ. **Orthóepy** (ಆರ್ಥೋಇಪಿ) ಶುದ್ಧೋಚ್ಚಾರಣೆಯ ಶಾಸ್ತ್ರ. **Orthoépic** (ಗು.) ; **Orthóepist** (ನಾ.) ; **Orthogénesis** ಜನನ ವ್ಯತ್ಯಾಸಗಳು ಒಂದು ನಿರ್ದಿಷ್ಟ ಕ್ರಮವನ್ನನುಸರಿಸಿ ಆಗುವುವೇ ವಿನಾ ಕೇವಲ ಆಕಸ್ಮಿಕಗಳಲ್ಲವೆಂದು ಹೇಳುವ ಪರಿಣಾಮ ವಾದದ ಒಂದು ದೃಷ್ಟಿ. **Orthógnathous** (ಆರ್ಥಾಗ್ನತಸ್) ನಿಗುರು ದವಡೆಗಳುಳ್ಳ. **Orthógonal** ಸಮ ಕೋನಗಳ ; ಸಮ ಕೋನೀಯ. **Orthóptera** (ಜಿರಲೆ, ಮಿಡತೆ, ಮೊ. ವನ್ನೊಳಕೊಂಡ) ನೇರವೂ ಕಿರಿದಗಲವೂ ಆದ ಮುನ್‌ರೆಕ್ಕೆಗಳುಳ್ಳ ಕೀಟ ವರ್ಗ : ಋಜುಪಕ್ಷ ಕೀಟವರ್ಗ. **Orthópterous** (ಗು.). **Orthóptic** (ಗು., ನಾ.) ಋಜು ದೃಷ್ಟಿಯ ; ಸಮ ದೃಷ್ಟಿಯ ; (ಮು., ಬಂದೂಕು ಹೊಡೆಯುವುದರಲ್ಲಿ) ಗುರಿಯಿಡಲು ಸಹಾಯಕವಾದ ರಂಧ್ರವುಳ್ಳ ಅಪಾರದರ್ಶಕ ಕನ್ನಡಕ(ದ). **Órthotone** (ಆರ್ಥೊ—) ಸ್ವತಂತ್ರ ಸ್ವರಭಾರವುಳ್ಳ (ಪದ)

Órthodox ಆರ್ಥೊಡಾಕ್ಸ್ (ಗು.) (ಮು., ಮತತತ್ತ್ವಗಳ ವಿಷಯದಲ್ಲಿ) ಸರಿಯಾದ ಅಥವಾ ರೂಢಿಸಮ್ಮತವಾದ ಅಭಿಪ್ರಾಯಗಳನ್ನುಳ್ಳ ; ಸಂಪ್ರದಾಯ ಬದ್ಧ ; ಶಾಸ್ತ್ರ, ಆಚಾರ, —ಸಮ್ಮತ ; ಪಾಷಂಡವಲ್ಲದ ; ಸ್ವತಂತ್ರ ವಿಚಾರದಿಂದ ಬಂದದ್ದಲ್ಲದ ; ಹೊಸದಾಗಿ ಆಚರಣೆಗೆ ತಂದದ್ದಲ್ಲದ ; (ಮು., ದೇವ. ಶಾ. ದಲ್ಲಿ) ಸಾಮಾನ್ಯವಾಗಿ ಸರಿಯೆಂದು, ಶಾಸ್ತ್ರೀಯವೆಂದು, —ಅಂಗೀಕರಿಸಿರುವ ; ಸಾಂಪ್ರದಾಯಿಕ. The O. Church=Greek Church (Greek ನೋಡಿ). **Órthodoxly** (ಕ್ರಿ. ವಿ.) ; **Órthodoxy** (ನಾ.) ಸಂಪ್ರದಾಯ ಬದ್ಧತೆ ; ಶಾಸ್ತ್ರೀಯ ವರ್ತನೆ.

Orthógraphy ಆರ್ಥಾಗ್ರಫಿ (ನಾ.) ಸರಿಯಾದ, ಸಂಪ್ರದಾಯ ಬದ್ಧವಾದ, —ಅಕ್ಷರ ಸಂಯೋಜನೆ (His o. is shocking ಅವನ ಅಕ್ಷರ ಸಂಯೋಜನೆ ಘೋರವಾಗಿದೆ). (ವ್ಯಾ.) ಅಕ್ಷರ (ಸಂಯೋಜನ) ಪ್ರಕರಣ. (ದೃಷ್ಟಿಬಿಂದು ಅನಂತ ದೂರದಲ್ಲಿರುವುದೆಂದು ಊಹಿಸಿ ಕಿರಣಗಳು ಸಮಾಂತರವಾಗಿರುವಂತೆ, ಸಾಮಾನ್ಯ ನಕ್ಷೆಗಳಲ್ಲಿಯೂ ಉನ್ನತಿದರ್ಶಕ ನಕ್ಷೆಗಳಲ್ಲಿಯೂ ಉಪಯೋಗಿಸುವ) ಸಹಜ ಘನರೂಪ ಪ್ರದರ್ಶಕ ಚಿತ್ರರೇಖನ; ಹೀಗೆ ರಚಿಸಿದ ನಕ್ಷೆ. **Orthográphic(al)**; **Orthográphically** (ಕ್ರಿ. ವಿ.)

Órthopaedy, -pedy ಆರ್ಥೊಪೀಡಿ (ನಾ.) ಮಕ್ಕಳಲ್ಲಿ (ಅಥವಾ ಇತರರಲ್ಲಿ) ಅಂಗ ವಿಕಾರಗಳನ್ನು ಸರಿಪಡಿಸುವುದು ; ಇದಕ್ಕಾಗಿ ಮಾಡುವ ಶಸ್ತ್ರಚಿಕಿತ್ಸೆ. **Orthopaédic** (ಗು.)

Óscillate ಆಸಿಲೇಟ್ (ಕ್ರಿ.) (ಲೋಲಕದಂತೆ) ತೂಗು, ತೂಗಾಡು ; ಎರಡು ಬಿಂದುಗಳಿಗೆ ನಡುವೆ ಹಿಂದಕ್ಕೂ ಮುಂದಕ್ಕೂ ಚಲಿಸಾಡು ; ಆಂದೋಲನ ಮಾಡು; ಡೋಲಾಯಮಾನನಾಗು ; ಅನಿಶ್ಚಿತನಾಗಿರು ; ಅನುಮಾನದಲ್ಲಿರು. (ಪರಮಾವಧಿ ಪ್ರತಿಪಕ್ಷಗಳ ಅಭಿಪ್ರಾಯಗಳ ಮಧ್ಯೆ) ಓಲಾಡು. **Oscillátion** (ನಾ.) ; **Óscillator** (ನಾ.) ಆಂದೋಲಕ. **Óscillatory** (ಗು.)

Oscitátion ಆಸಿಟೇಷನ್ (ನಾ.) (ವಿರ. ಪ್ರ.) ಆಕಳಿಕೆ ; ಅನವಧಾನ ; ಅಸಡ್ಡೆ ; ಅಜಾಗರೂಕತೆ.

Óscular. **Osculate** ನೋಡಿ.

Ósculate ಆಸ್ಕ್ಯುಲೇಟ್ (ಕ್ರಿ.) (ವಿರ. ಪ್ರ., ಸಾ., ಹಾಸ್ಯವಾಗಿ) ಮುತ್ತಿಡು ; ಚುಂಬಿಸು. (ಪ್ರಕೃತಿ ಚರಿತ್ರೆ, ಗೋತ್ರ ವಿಷಯದಲ್ಲಿ) ನಡುವಣ ಗೋತ್ರಗಳ ಮೂಲಕ ಸಂಪರ್ಕವಿರು ; (ಮತ್ತೊಂದರೊಡನೆ, ಪರಸ್ಪರವಾಗಿ) ಸಮಾನ ಗುಣಗಳನ್ನು ಹೊಂದಿರು (*With* ಉಪ. ದೊಡನೆ). (ಗಣಿತ) (ವಕ್ರರೇಖೆಯ ಅಥವಾ ಕ್ಷೇತ್ರದ ವಿಷಯದಲ್ಲಿ) ಮೂರು ಅಥವಾ ಹೆಚ್ಚು ಬಿಂದುಗಳಲ್ಲಿ ತಾಕುವಂತೆ ನಿಕಟ ಸ್ಪರ್ಶವಿರು ; (—ಒಡನೆ) ಅಧಿಕತರ ಸ್ಪರ್ಶವಿರು. **Óscular** (ಗು.) ಬಾಯಿಯ ; ಮುತ್ತಿಡುವುದರ ; ಚುಂಬನದ. (ಗಣಿತ) (Osculate ನೋಡಿ). **Ósculant** (ಗು.) (ಮು., ಪ್ರಕೃತಿ ಚರಿತ್ರೆಯಲ್ಲಿ); **Osculátion** (ನಾ.) ; **Ósculatory** (ಗು.) (ಮು., ಗಣಿತದಲ್ಲಿ)

Ósier ಓಷಿಯರ್, ಓಷರ್ (ನಾ.) ಕುಕ್ಕೆ ಹೆಣೆಯುವುದರಲ್ಲಿ ಉಪಯೋಗಿಸುವ, 'ವಿಲೊ' ಎಂಬ ಗಿಡ(ದ ಮೆತು ಕಡ್ಡಿ) ; ಇದನ್ನು ಬೆಳಸುವ ಪಾತಿಗಳುಳ್ಳ ಪ್ರದೇಶ (=O.-bed)

Ósmium ಆಸ್(ಸ್)ಮಿಯಮ್ (ನಾ.) ಪ್ಲಾಟಿನಂ ವರ್ಗದ ಒಂದು ಲೋಹ.

Ósmose, Osmósis ಆಸ್(ಸ್)ಮೋಸ್, —ಸಿಸ್ (ನಾ.) (ಭೌ. ವಿ.) ಸೂಕ್ಷ್ಮ ರಂಧ್ರಮಯ ವಿಭಾಜಕದಿಂದ ಪ್ರತ್ಯೇಕಿಸಲ್ಪಟ್ಟ ಪ್ರವಾಹಿ ಪದಾರ್ಥಗಳು (ಅನಿಲಗಳು ಅಥವಾ ದ್ರವಗಳು) ವಿಭಾಜಕದ ಮೂಲಕ ಒಂದರೊಳಕ್ಕೊಂದು ಮೆಲ್ಲಮೆಲ್ಲನೆ ಜನಿಯುತ್ತ ಮಿಶ್ರವಾಗುವುದು : ಸೂಕ್ಷ್ಮಾಭಿಸರಣ. **Osmótic** (ಗು.) ; **Osmótically** (ಕ್ರಿ. ವಿ.)

Ósprey ಆಸ್ಪ್ರೇ, ಆಸ್ಪ್ರಿ (ನಾ.) ಮೀನು ತಿನ್ನುವ ಒಂದು ದೊಡ್ಡ ಪಕ್ಷಿ (ಜಾತಿ) ; ಕಡಲ ಹದ್ದು ; ಕಡಲ ಡೇಗೆ. ಪರಂಗಿ ಟೋಪಿಯ ಮೇಲಿನ ಅಲಂಕಾರದ ಗರಿ, ಪುಕ್ಕ (—ಇದಕ್ಕೆ ಟೋಪಿಕಾರನ ಮಾತು)

Ósseous ಆಸಿಯಸ್ (ಗು.) ಎಲುಬುಳ್ಳ ; ಎಲುಬಿನ ; ಅಸ್ಥಿಮಯ ; ಎಲುಬಾಗಿಹೋದ ; ಅಸ್ಥಿಪಂಜರವುಳ್ಳ (O. & cartilaginous fishes ಅಸ್ಥಿಗಳುಳ್ಳ, ಮೃದ್ವಸ್ಥಿಗಳುಳ್ಳ, —ಮೀನುಗಳು) ; ಪಳೆಯುಳಿಕೆಯ ಎಲುಬುಗಳು ತುಂಬಿರುವ. **Óssicle** (ನಾ.) (ಅಂ. ರ. ಶಾ.) ಸಣ್ಣ ಎಲುಬು ; ಪ್ರಾಣಿಯ ದೇಹಪಂಜರದಲ್ಲಿಯ ಎಲುಬಿನ, ಕೊಂಬಿನ, ಅಥವಾ ಸುಣ್ಣದ, ಪದಾರ್ಥ. **Óssify** (ಕ್ರಿ.) ಎಲುಬಾಗು ; ಎಲುಬಾಗಿಸು ; ಗಡುಸಾಗು ; ಗಡುಸಾಗಿಸು ; ಜಡ್ಡುಗಟ್ಟುವಂತೆ, ಅಭಿವೃದ್ಧಿಯಾಗದಂತೆ, —ಮಾಡು, ಆಗು ; ಕಠಿನ ಮಾಡು, ಆಗು. **Ossífic** (ಗು.) ಎಲುಬಾಗಿ ಮಾಡುವ ; ಎಲುಬಾಗುವ. **Ossificátion** (ನಾ.) ; **Óssuary** ಆಸ್ಯುಅರಿ (ನಾ.) ಸತ್ತವರ ಮೂಳೆಗಳನ್ನಿಡುವ ಪಾತ್ರೆ ; ಅಸ್ಥಿ ಪಾತ್ರೆ ; ಅಸ್ಥಿ ಕುಂಭ ; ಹೆಣ ಮಾಳಿಗೆ ; ಪುರಾತನದ ಮೂಳೆಗಳು ಸಿಕ್ಕುವ ಗುಹೆ : ಪ್ರಾಚೀನಾಸ್ಥಿ ಗುಹೆ.

Óssicle, Ossífic, etc. Osseous ನೋಡಿ.

Óssifrage ಆಸಿಫ್ರೆ(ಫ್ರಿ)ಜ್ (ನಾ.) =Osprey.

Óssify, Óssuary, etc. Osseous ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Osténsible ಆಸ್ಟೆನ್ಸಿಬ್‌ರ್ (ಗು.) ಮೇಲೆ ತೋರುವ; ಹೇಳಿಕೊಳ್ಳುವ; ತೋರಿಕೆಯ; ಪ್ರದರ್ಶಿಸಿದ; ನಿಜವಾದುದನ್ನು ಮರೆಮಾಜುವುದಕ್ಕಾಗಿ ಮುಂದಿಟ್ಟ (His o. errand was to—). **Osténsibly** (ಕ್ರಿ. ವಿ.); **Ostentátion** (ನಾ.) (ಸಂಪತ್ತಿನ, ಭೋಗದ) ಡಾಂಭಿಕ ಪ್ರದರ್ಶನ; ಮೆರೆತ; ಗಮನ ಸೆಳೆಯುವ ಪ್ರಯತ್ನ, ಅಭಿಲಾಷೆ; ಆಕರ್ಷಣೋದ್ದೇಶ. **Ostentátious** (ಗು.); **Ostentátiously** (ಕ್ರಿ. ವಿ.)

Osténsory ಆಸ್ಟೆನ್ಸರಿ (ನಾ.) (ರೋ. ಕ್ಯಾ.) ಪವಿತ್ರಮಾಡಿದ ರೊಟ್ಟಿಯನ್ನು ಗೋಷ್ಠಿಗೆಲ್ಲ ಕಾಣುವಂತೆ ಪ್ರದರ್ಶಿಸುವ ಪಾತ್ರೆ.

Ostentátion, etc. **Ostensible** ನೋಡಿ.

Oste(o)- ಆಸ್ಟಿ(ಯೊ)— (ಸ. ಪೂ. ಪ.) ಎಲುಬು—; ಅಸ್ಥಿ—. (ವೈದ್ಯಶಾಸ್ತ್ರದ ಮತ್ತು ಅಂ. ರ. ಶಾ. ದ ಪದಗಳಲ್ಲಿ ಪ್ರ.): **Osteítis** (ಆಸ್ಟಿಐಟಿಸ್) ಎಲುಬಿನ ಉರಿಯೂತ. **Osteogénesis** ಎಲುಬಾಗುವುದು; ಅಸ್ಥಿ ರಚನೆ. **Osteógraphy** (—ಯಾಗ್ರಫಿ) ಅಸ್ಥಿ ವರ್ಣನಾ ಶಾಸ್ತ್ರ. **Ósteoid** (ಗು.) ಎಲುಬಿನ(ಂಥ). **Osteólogy** (ಕಶೇರುಕಗಳ) ಅಸ್ಥಿ ರಚನಾ ಶಾಸ್ತ್ರ. **Osteomalácia** (—ಮಲೇಷಿಯ) (ಮೃತ್ತಿಕಾ ಲವಣಗಳು ನಷ್ಟವಾದದ್ದರಿಂದ) ಎಲುಬುಗಳು ಮೆತುವಾಗಿಹೋಗುವ ವ್ಯಾಧಿ: ಮೆತುಮೂಳೆಯ ರೋಗ. **Osteópathy** (ಆಸ್ಟಿಯಾಪತಿ) ಎಲುಬುಗಳ ಸ್ಥಾನ ಪಲ್ಲಟ ಅಥವಾ ವಿಕೃತಿ ಎಲ್ಲ ರೋಗಗಳಿಗೂ ಮುಖ್ಯ ಕಾರಣವೆಂಬ ತತ್ತ್ವವನ್ನವಲಂಬಿಸಿದ ರೋಗ ಚಿಕಿತ್ಸೆ: ಅಸ್ಥಿ ಚಿಕಿತ್ಸೆ. **Ósteopath** (ಆಸ್ಟಿಯೊಪ್ಯಾತ್) ಅಸ್ಥಿ ಚಿಕಿತ್ಸಕ.

Óstler ಆಸ್ಲರ್ (ನಾ.) (ಪ್ರವಾಸಿ) ತಂಗುದಾಣದ ಕುದುರೆಯಲಾಯದವನು, ಕಾಸ್ತಾರ.

Óstracize ಆಸ್ಟ್ರಸೈಜ಼್ (ಕ್ರಿ. ಸಕ.) (ಗ್ರೀಕ್ ಪ್ರಾಚೀನ: ಆಥೆನ್ಸಿನಲ್ಲಿ ಬಲಿಷ್ಠನಾದ ದುರ್ಜನನನ್ನೊ ಜನಮೆಚ್ಚಿಕೆಯಿಲ್ಲದ ಪ್ರಜೆಯನ್ನೊ ಐದು ಅಥವಾ ಹತ್ತು ವರ್ಷಗಳ ಕಾಲ) ದೇಶಭ್ರಷ್ಟ ಮಾಡು, ಗಡೀಪಾರು ಮಾಡು [ಅಂಥವನ ಹೆಸರನ್ನು ಜನರು (ಹೆಂಚಿನ) ಬೋಕಿಯಮೇಲೆ ಬರೆದು ಅಭಿಮತ ಕೊಡುವ ಪದ್ಧತಿಯಿಂದ]. (ಈಗಿನ ಅರ್ಥ) (ಸಮಾಜದಿಂದ, ಕೃಪಾದೃಷ್ಟಿಯಿಂದ, ಸಾಮಾನ್ಯ ಹಕ್ಕುಬಾಧ್ಯತೆಗಳಿಂದ) ಬಹಿಷ್ಕರಿಸು; ಬಹಿಷ್ಕಾರ ಹಾಕು; ಹೊರಹಾಕು. **Óstracism** (ನಾ.)

Óstreiculture ಆಸ್ಟ್ರಿಕಲ್ಚರ್ (ನಾ.) ಚಿಪ್ಪುಮೀನಿನ ಕೃಷಿ, ಅಭಿವರ್ಧನೆ.

Ostreóphagous ಆಸ್ಟ್ರಿಯಾಫ಼ಗಸ್ (ಗು.) ಚಿಪ್ಪುಮೀನು ತಿಂದು ಜೀವಿಸುವ.

Óstrich ಆಸ್ಟ್ರಿಚ್ (ನಾ.) ಉಷ್ಟ್ರಪಕ್ಷಿ (ಅಲಂಕಾರಕ್ಕಾಗಿ ಉಪಯೋಗಿಸುವ ಗರಿಗಳಿಂದ ಕೂಡಿದ ರೆಕ್ಕೆಗಳೂ ತೋಕೆಯೂ ಉಳ್ಳ, ಆಹಾರ ಜೀರ್ಣಕ್ಕಾಗಿ ಗಡುಸು ಪದಾರ್ಥಗಳನ್ನು ನುಂಗುವ, ಶತ್ರು ಅಟ್ಟಿಸಿಕೊಂಡು ಬಂದರೆ ಕಾಣದೆ ಮರೆಯಾಗುವೆನೆಂಬ ಭ್ರಮೆಯಿಂದ ಮರಳಿನಲ್ಲಿ ತಲೆಯನ್ನು ಹೂತುಕೊಳ್ಳುವ, ವೇಗವಾಗಿ ಓಡಾಡುವ, ಆಫ್ರಿಕದ ಮತ್ತು ಅರೇಬಿಯದ ನಿವಾಸಿಯಾದ ಒಂದು ದೊಡ್ಡ ಪಕ್ಷಿ); ಬೆಂಕಿಕೋಳಿ. Has the digestion of an o. ಕಲ್ಲು ತಿಂದು ಕಲ್ಲು ಅರಗಿಸಿಕೊಳ್ಳುವ ಜೀರ್ಣ ಶಕ್ತಿ ಇದೆ. O. policy, belief, etc. ಅಪಾಯವನ್ನು ಎದುರಿನದೆ ಕಣ್ಣುಮುಚ್ಚಿಕೊಂಡಿದ್ದು ಅದರಿಂದ ಅನುಕೂಲವಾದೀತೆಂಬ ಭ್ರಾಂತಿಯ ನೀತಿ, ನಂಬಿಕೆ, ವೊ. ವು. O.-farm (ಅವುಗಳ ಗರಿಗಳಿಗಾಗಿ) ಉಷ್ಟ್ರ ಪಕ್ಷಿಗಳನ್ನು ಸಾಕುವ ಬೀಡು. O.-plume ಉಷ್ಟ್ರಪಕ್ಷಿಯ ಗರಿ ಅಥವಾ ಗರಿಗಳ ಗೊಂಚಲು. O.-tip —ಗರಿಯ ತುದಿ.

Óther ಅದರ್ (ಗು., ನಾ., ಸ. ನಾ., ಕ್ರಿ. ವಿ.) ಇನ್ನೊಂದು; ಇನ್ನೊಬ್ಬ; ಮತ್ತೊಂದು; ಮತ್ತೊಬ್ಬ; ಇತರ; ಅನ್ಯ; ಪರ; ಹೆರ; ಬೇರೆ; ಬೇರೆಯ(ದು); ಬೇರೊಬ್ಬ; ಉಳಿದ(ದ್ದು); ಉಳಿದವನು; ಮಿಕ್ಕ(ವನು); ಮಿಕ್ಕದ್ದು; ಆಚೆ(ಯ). (ಕ್ರಿ. ವಿ.) ಬೇರೆ ರೀತಿಯಲ್ಲಿ (O. than cursorily). We have o. evidence ನಮಗೆ ಬೇರೆ ರುಜುವಾತು ಇದೆ. O. people think otherwise. O. things being equal ಮಿಕ್ಕ ವಿಷಯಗಳು ಸಮವಾಗಿದ್ದು(ದ್ದರೆ). Give me some o. ones. Happens every o. day ದಿನ ಬಿಟ್ಟು ದಿನ, ಪ್ರತಿ ಮರುದಿನ, ಸಂಭವಿಸುತ್ತದೆ. Any person o. than yourself. Do not wish him o. than he is. A world far o. from ours. On the o. hand ಮತ್ತೊಂದು ಸಂದರ್ಭ ಯೋಚಿಸಿದರೆ (ಹಿಂದಿನದಕ್ಕೆ ವಿರುದ್ಧವಾದ ಅಥವಾ ವ್ಯತ್ಯಾಸವಾದ ಸಂಗತಿಯನ್ನು ಅಥವಾ ವಾದವನ್ನು ಮುಂದಿಡುವಾಗ ಪ್ರ.). The o. day ಕೆಲವು ದಿನಗಳ ಹಿಂದೆ; ಮೊನ್ನೆ ತಾನೆ. Some time or o. (ಕ್ರಿ. ವಿ.) ಒಂದಲ್ಲ ಒಂದು ದಿನ; ಎಂದಾದರೂ. Some one or o. ಯಾವನಾದರೊಬ್ಬ; ಯಾರಾದರೂ. It was none o. than Ramu. The o. world ಪರಲೋಕ; ಆಮುಷ್ಮಿಕ ಜೀವನ. O.-world ಪರಲೋಕದ; ಕೇವಲ ಪರಲೋಕ ಚಿಂತೆಯ [**Other-wórldly** (ಗು.); **Other-wórldliness** (ನಾ.)]. (ಸಂಖ್ಯಾವಾಚಿಯೊಡನೆ) Another ಬೇರೆ ಮತ್ತೊಬ್ಬ, ಮತ್ತೊಂದು. The o. two ಮತ್ತಿಬ್ಬರು; ಮತ್ತೆರಡು (ಅನಿರ್ದಿಷ್ಟವಾಗಿ ಹೇಳುವಲ್ಲಿ ಪ್ರ.). One or o. of us will be there. I can do no o. (ಪ್ರಾಚೀ. ಪ್ರ.) ಬೇರೆಯೇನನ್ನೂ ಮಾಡಲಾರೆ. You are the man of all others for the work. They neutralize each o. *or* one another. In others of his sermons. **Ótherguess** (ಗು.) (ಪ್ರಾಚೀ. ಪ್ರ.; ಬಳ. ಮಾ.) ಬೇರೆ ರೀತಿಯ; ಬೇರೆ ವಿಧದ [**Othergates** (ಕ್ರಿ. ವಿ.) ಎಂಬ ಪದದ ಅಶುದ್ಧ ರೂಪ]. **Ótherwhence** (ಕ್ರಿ. ವಿ.) ಬೇರೆಯ ಕಡೆಯಿಂದ. **Ótherwhere(s)** (ಕ್ರಿ. ವಿ.) (ಕಾವ್ಯ) ಬೇರೆಯ ಕಡೆ. **Ótherwhile(s)** (ಕ್ರಿ. ವಿ.) ಬೇರೆಯ ಕಾಲದಲ್ಲಿ. **Ótherness** (ನಾ.) (ವಿರ. ಪ್ರ.) ಬೇರೆ ಆಗಿರುವುದು; ಮತ್ತೊಂದಾಗಿರುವುದು; ಬೇರೆತನ; ಭಿನ್ನತೆ; ವ್ಯತ್ಯಾಸ; ಭಿನ್ನ ವಸ್ತು, ವಿಷಯ. **Ótherwise** (ಕ್ರಿ. ವಿ.) ಬೇರೆ ರೀತಿಯಾಗಿ; ಅನ್ಯಥಾ (Could not have acted o. Judas o. called, *or* o., Iscariot. Does not influence him any o. than by example). ಪರಿಸ್ಥಿತಿ ಬೇರೆಯಾದರೆ, —ಯಾಗಿದ್ದರೆ; ಇಲ್ಲದಿದ್ದರೆ (Seize the chance, o. you will regret it). (ಪ್ರತಿಷೇಧಾರ್ಥದಲ್ಲಿ): (He is rude, but not o. blameworthy ಅವನು ಒರಟ, ಅನ್ಯಥಾ ದೋಷಿಯಲ್ಲ. His o. dullness ಇತರ ವಿಚಾರಗಳಲ್ಲಿ ಅವನ ಮಂಕುತನ. The merits or o. of the Bill. Additions automatic & o. —(ಇವೆರಡು ಬಗೆಯ ಪ್ರಯೋಗಗಳೂ ವ್ಯಾಕರಣ ವಿರುದ್ಧಗಳು). O.-minded ಪ್ರಚಲಿತ ಅಭಿಪ್ರಾಯಗಳಿಗೆ ವಿರುದ್ಧವಾದ ಬೇರೆ ಅಥವಾ ಅಸಂಗತವಾದ ಅಭಿಪ್ರಾಯಗಳುಳ್ಳ.

Otióse ಓಷಿಯೋಸ್ (ಗು.) (ವಿರ. ಪ್ರ.) ಬಿಡುವಾದ; ಕೆಲಸವಿಲ್ಲದಿರುವ; ಸೋಮಾರಿಯಾದ. (ವಿರ. ಪ್ರ.) ನಿಷ್ಫಲವಾದ; ವ್ಯರ್ಥವಾದ; ಬೇಕಾಗಿಲ್ಲದ; ನಿರುಪಯೋಗದ; ನಿಯತ ಕಾರ್ಯವಿಲ್ಲದ. **Otiósely** (ಕ್ರಿ. ವಿ.); **Otióseness** (ನಾ.)

Ótium cum dignitáte (L) ಓಷಿಯಂ ಕಂ ಡಿಗ್ನಿಟಾಟೆ (ನಾ.) ಗಾಂಭೀರ್ಯ ಕೂಡಿದ ವಿಶ್ರಾಂತಿ; ಘನತೆ ಕೂಡಿದ ನಿಶ್ಚಿಂತೆ.

Ot(o)- (ಸ. ಪೂ. ಪ.) ಕಿವಿ—; ಕರ್ಣ—. **Otólogy** ಕರ್ಣ (ರಚನೆಯ, ರೋಗದ) ಶಾಸ್ತ್ರ. **Ótoscope** ಕಿವಿಯ ಕುಹರವನ್ನು ಪರೀಕ್ಷಿಸುವ ಅಥವಾ ಕಿವಿಯಲ್ಲಿಯ ಧ್ವನಿಗಳನ್ನು ಆಲಿಸಿ ಕೇಳುವ ಸಲಕರಣೆ; ಕರ್ಣ ಪರೀಕ್ಷಕ.

Ótter ಆಟರ್ (ನಾ.) ನೀರು ನಾಯಿ; ನೀರು ಬೆಕ್ಕು; ಉದ್ರ (ತುಪ್ಪುಳು ಚರ್ಮವೂ, ಈಜುರೆಕ್ಕೆಯಂಥ ಕಾಲುಗಳೂ, ಜಾಲಪಾದಗಳೂ, ಉದ್ದವಾದ ಚಪ್ಪಟೆಯ ಬಾಲವೂ, ಉಳ್ಳ, ಮತ್ಸ್ಯಾಹಾರಿಯಾದ ಒಂದು ಜಲಚರ ಸಸ್ತನಿ ಪ್ರಾಣಿ); ಇದರ ತುಪ್ಪುಳು ಚರ್ಮ. ಮೀನು ಹಿಡಿಯುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ಬಗೆಯ ಸಲಕರಣೆ. O.-dog, -hound ನೀರುನಾಯಿಯನ್ನು ಬೇಟೆಯಾಡುವ ನಾಯಿ. O.-spear ನೀರುನಾಯಿಯ ಬೇಟೆಯ(ಲ್ಲಿ ಉಪಯೋಗಿಸುವ) ಈಟಿ.

Ótto ಆಟೊ (ನಾ.) Otto of roses =(ಗುಲಾಬಿ) ಅತ್ತರು.

Óttoman[1] ಆಟೊಮನ್ (ಗು., ನಾ.) (ತುರ್ಕಿಯ) ಮೊದಲನೆಯ ಆತ್‌ಮನ್ (ಆಸ್‌ಮನ್) ರಾಜವಂಶದ; ತುರ್ಕಿಯವರಲ್ಲಿ ಆತನ ಶಾಖೆಯ; ಆತನ ವಂಶೀಯರು ಆಳಿದ ಸಾಮ್ರಾಜ್ಯದ; ತುರ್ಕಿಯ. (ನಾ.) ತುರ್ಕಿಯವನು.

Óttoman[2] ಆಟೊಮನ್ (ನಾ.) (ಸೋಫಾ ಅಥವಾ ಕುರ್ಚಿಯಂಥ, ಆದರೆ ಬೆನ್ನು ಮತ್ತು ಕೈಗಳು ಇಲ್ಲದ) ಮೆತ್ತೆಯ ನಾಗಾಲಿ; ಮೆತ್ತೆಯಿರುವ ಮೇಲ್ಭಾಗವುಳ್ಳ ಪೆಟ್ಟಿಗೆ.

Oúbit ಊಬಿಟ್ (ನಾ.) = Woobut.

Ought[1] ಆಟ್ (ನಾ.) (ಅಸಂ.) ಸೊನ್ನೆ(ಯ ಗುರುತು, ಅಂಕ)

Ought[2] ಆಟ್ (ಸಹಾಯಕ ಕ್ರಿ.) (ಕರ್ತವ್ಯ, ನ್ಯಾಯ, ಕೊರತೆ, ಯುಕ್ತತೆ, ಹೆಚ್ಚು ಸಂಭಾವ್ಯತೆ—ಈ ಅರ್ಥಗಳನ್ನು ಸೂಚಿಸುವಲ್ಲಿ ಪ್ರ.) —ಬೇಕು; —ತಕ್ಕದ್ದು (*To* ಉಪ. ದೊಡನೆ). We o. to love our neighbours. It o. not to be allowed. You o. to know better. It o. to have been done long ago.

Ought[3] ಆಟ್ (ನಾ., ಕ್ರಿ. ವಿ.) = Aught (ಪದದ ಮತ್ತೊಂದು ರೂಪ)

Ounce[1] ಔನ್ಸ್ (ನಾ.; ಸಂಕ್ಷಿಪ್ತ: oz.) ತೂಕದ ಒಂದು ಮಾನ (ಚಿನ್ನ ಬೆಳ್ಳಿ ತೂಕದ ಪದ್ಧತಿಯಲ್ಲಿ ಒಂದು ಪೌಂಡಿನ $\frac{1}{12}$ ಭಾಗ; ಸಾಮಾನ್ಯ ತೂಕದ ಪದ್ಧತಿಯಲ್ಲಿ ಒಂದು ಪೌಂಡಿನ $\frac{1}{16}$ ಭಾಗ): ಔನ್ಸು. (ರೂಪ.) An o. of practice is worth a pound of theory ಒಂದು ಮಣ ತತ್ತ್ವಕ್ಕಿಂತ ಒಂದು ತೊಲ ಆಚರಣೆ ಮೇಲು.

Ounce[2] ಔನ್ಸ್ (ನಾ.) (ಕಾವ್ಯ, ಮೊ. ಗಳಲ್ಲಿ) ಬೆಕ್ಕಿನ ಜಾತಿಯ 'ಲಿಂಕ್ಸ್' ಎಂಬ, ಅಥವಾ ಅದೇ ಜಾತಿಯ ಬೇರೆ ತೆರದ ಮಧ್ಯಮ ಗಾತ್ರದ, ಪ್ರಾಣಿ. (ಪ್ರಾ. ವಿ.) (ಚಿರತೆಗಿಂತ ಚಿಕ್ಕದಾದ ಆದರೆ ಅದರಂತೆ ಚುಕ್ಕೆಗಳುಳ್ಳ) ಒಂದು ತೆರದ (ಸಣ್ಣ) ಚಿರತೆ.

Our ಔ(ಅ)ರ್ (ಗು.) ನಮ್ಮ [O. Father ನಮ್ಮ ತಂದೆ (ದೇವರು). O. Saviour ನಮ್ಮ ರಕ್ಷಕ (ಯೇಸು ಕ್ರಿಸ್ತ). O. Lady ನಮ್ಮ ಮಾತೆ (ಮೇರಿ ಕನ್ಯೆ). In o. midst. Given under O. seal ನಮ್ಮ ರಾಜಮುದ್ರೆ (ಚಕ್ರವರ್ತಿ ಮುದ್ರೆ) ಒತ್ತಿ ಕೊಟ್ಟಿದೆ. A worthless book in o. opinion (ವೃತ್ತಪತ್ರಿಕೆ, ಮೊ. ಗಳಿಗೆ ಸಂಬಂಧಿಸಿದ ವಿಮರ್ಶಕಾರ, ಮೊ. ರು ಹೇಳುವ ಮಾತು)]. **Ours** ಔ(ಅ)ರ್ಸ್ (ಸ. ನಾ., ಗು.) ನಮ್ಮದು; ನಮ್ಮ(ದಾದ) (O. is a large family. Look at this garden of ours. Became o. by purchase). ನಮ್ಮ ದಳ, ಸೈನ್ಯ (Jones of o. ನಮ್ಮ ದಳದ ಜೋನ್ಸ್). **Oursélf** (ಸ. ನಾ.) (ರಾಜರು ಸಾರ್ವಜನಿಕ ಸಂದರ್ಭಗಳಲ್ಲಿ ಅಧಿಕಾರ ರೀತಿಯಲ್ಲಿ ಸ್ವವಿಷಯವನ್ನು ಪ್ರಸ್ತಾವಿಸುವಾಗ ಮಾತ್ರ ಪ್ರ.); (ಬ. ವ. -selves —ಸ್ಲ್: ನಾವು; ನಾವೇ; ನಮ್ಮನ್ನು; ಸ್ವಯಂ); (ಒತ್ತಿ ಹೇಳುವಲ್ಲಿ ಸಾ., ಬ. ವ. ದಲ್ಲಿ. We ourselves will see to it. We will see to it ourselves. Ourselves are first to be thought of. We were not ourselves for some time ಕೊಂಚ ಹೊತ್ತು ನಮ್ಮನ್ನು ನಾವು ಮರೆತುಬಿಟ್ಟಿದ್ದೆವು; —ನಾವು ಭ್ರಾಂತರಾಗಿದ್ದೆವು). Can we imagine a world in which o. does not exist? We cannot persuade o. or ourselves that the Government is in earnest.

Oust ಔಸ್ಟ್ (ಕ್ರಿ. ಸಕ.) ಇರುವ ಸ್ಥಳದಿಂದ ಹೊರಡಿಸು; ಸ್ಥಾನಭ್ರಷ್ಟ ಮಾಡು; ಹೊರ ದೂಡು; ಉಚ್ಚಾಟನೆ ಮಾಡು; ಅನುಭೋಗವಿಲ್ಲದಂತೆ ಮಾಡು; ಪದಚ್ಯುತಿ ಮಾಡು (*Of, from* ಉಪ. ದೊಡನೆ); ಓಡಿಸಿಬಿಡು; ಇರುವುದನ್ನು ಕಿತ್ತುಕೊ (ಒಬ್ಬನಿರುವ ಸ್ಥಳವನ್ನು ಬಲಾತ್ಕಾರದಿಂದ) ಆಕ್ರಮಿಸಿಕೊ. **Oúster** (ನಾ.) (ನ್ಯಾ. ಶಾ.) ಮಾನ್ಯ, ಮೊ. ಗಳಿಂದ ಅಟ್ಟಿಬಿಡುವುದು; —ಮೊ. ಗಳನ್ನು ಕಿತ್ತುಕೊಂಡು ಓಡಿಸಿಬಿಡುವುದು (ಈಗ ಇದು ನ್ಯಾಯಸಮ್ಮತವಲ್ಲವೆಂದು ಅಂಗೀಕರಿಸಿದೆ)

Out ಔಟ್ (ಕ್ರಿ. ವಿ., ಉಪ., ನಾ., ಗು.) ಹೊರಗೆ; ಹೊರಕ್ಕೆ; ಹೊರಗಡೆ(ಗೆ); ಈಚೆ(ಗೆ); ಆಚೆ(ಗೆ); (ಸಹಜ ಸ್ಥಿತಿಯಿಂದ) ದೂರಕ್ಕೆ; ಬಯಲಿಗೆ; ಬಹಿರಂಗವಾಗಿ; ಪ್ರಕಾಶವಾಗಿ; ಪ್ರಕಟವಾಗಿ; ಪೂರ್ತಿಯಾಗಿ; ತೀರ; ಮೀರಿ. Is o. ಹೊರಗೆ ಹೋಗಿದ್ದಾನೆ; ಮನೆಯಲ್ಲಿಲ್ಲ. Keep him o. ಅವನನ್ನು ದೂರವಿಡು; —ಹತ್ತಿರ ಸೇರಿಸಬೇಡ. Go o. for a walk. Has her Sundays o. ಭಾನುವಾರಗಳನ್ನು ಆಕೆ ಹೊರಗೆ ಕಳೆಯುತ್ತಾಳೆ. Arm is o. ತೋಳಿನ ಕೀಲು ತಪ್ಪಿದೆ. Tories are o. ಟೋರಿ ಪಕ್ಷದವರು ಈಗ ಅಧಿಕಾರದಲ್ಲಿಲ್ಲ. Her son is o. in England. Anchored some way o. On the voyage o. Batsman is o. ದಾಂಡುಗಾರನ ಆಟ ಹೋಯಿತು. All o.[1] (ಕ್ರಿಕೆಟ್) ಪಕ್ಷದವರ ಆಟವೆಲ್ಲ ಮುಗಿದುಹೋಯಿತು. O., Not o. (ಪ್ರತಿ ಪಕ್ಷದವರ ಕೇಳಿಕೆಗೆ ಮಧ್ಯಸ್ಥಗಾರನ ನಿರ್ಣಾಯಕ ಉತ್ತರ) ಆಟ ಹೋಯಿತು, ಆಟ ಹೋಗಲಿಲ್ಲ. Miners are o. ಗಣಿ ಕೆಲಸದವರು ಕೆಲಸ ಮಾಡುತ್ತಿಲ್ಲ, ಮುಷ್ಕರ ಹಿಡಿದಿದ್ದಾರೆ. Candle, fire, is o. ಮೋಂಬತ್ತಿ, ಬೆಂಕಿ, ಆರಿಹೋಗಿದೆ. Crinolines are o. ಉಬ್ಬು ರವಿಕೆಗಳು ಈಗ ರೂಢಿಯಲ್ಲಿಲ್ಲ. Was o. in my calculations ನನ್ನ ಲೆಕ್ಕಾಚಾರ ತಪ್ಪಾಗಿತ್ತು. O. with (—ಒಂದಿಗೆ) ಸ್ನೇಹ ತೊರೆದು. (ಭಾವ. ಅವ್ಯ.) O. with him ಅವನನ್ನು ಹೊರಕ್ಕೆ ದಬ್ಬು. Book is o. ಪುಸ್ತಕ ಪ್ರಕಟವಾಗಿದೆ. Rose is o. ಗುಲಾಬಿ ಅರಳಿದೆ. Chicken is o. ಕೋಳಿಮೊಟ್ಟೆಯೊಡೆದು ಮರಿಯಾಗಿದೆ. Secret is o. ಗುಟ್ಟು ರಟ್ಟಾಯಿತು. Girl is o. ಹುಡುಗಿ ಗಣ್ಯ ಸಮಾಜಕ್ಕೆ ಪ್ರವೇಶ ಪಡೆದಿದ್ದಾಳೆ. Tell him right o. ಅವನಿಗೆ ಸ್ಪಷ್ಟವಾಗಿ ಹೇಳಿಬಿಡು. The eruption is o. all over him ಅವನ ಮೈಮೇಲೆಲ್ಲ ಗುಳ್ಳೆಗಳು ಎದ್ದಿವೆ. Is o. to capture the market ಗಿರಾಕಿ(ಯನ್ನೆಲ್ಲ) ಹಿಡಿಯುವುದಕ್ಕೆ ಹೊರಟಿದ್ದಾನೆ. All o.[2] (ಅಸಂ.) ಸರ್ವ ಪ್ರಯತ್ನದಿಂದ. O. at elbows (Elbow ನೋಡಿ). O. & about (About ನೋಡಿ). Murder will o. (Murder ನೋಡಿ). She had her cry o. ಅವಳು ಪೂರ್ತಿ ಅತ್ತುಬಿಟ್ಟಳು. Tired out ತೀರ ಬಳಲಿ. Before the week is o. ಈ ವಾರ ಮುಗಿಯುವುದರೊಳಗೆ. O. & away (Away ನೋಡಿ). O. & o. ಸಂಪೂರ್ಣ(ವಾಗಿ); ತೀರ [**O.-&-oúter** (ನಾ.) (ಅಸಂ.) ಅತ್ಯುತ್ತಮ ಮಾದರಿ (ವ್ಯಕ್ತಿ, ವಸ್ತು)]. O. of doors ಮನೆಯ ಹೊರಗೆ; ಬಯಲಿನಲ್ಲಿ. O.-of-door (ಗು.). Is o. of sight ಕಣ್ಮರೆಯಾಗಿದೆ. Was swindled o. of his money. Is o. of breath (Breath ನೋಡಿ). Is o. of his mind ಅವನಿಗೆ ಬುದ್ಧಿ ವಿಕಲ್ಪವಾಗಿದೆ. Is o. of work ಕೆಲಸವಿಲ್ಲದೆ ಇದ್ದಾನೆ. Is seven miles o. of Liverpool. O. of wedlock ಮದುವೆಯಿಲ್ಲದೆ. Times o. of number ಲೆಕ್ಕವಿಲ್ಲದಷ್ಟು ಸಲ. O. of doubt ನಿಸ್ಸಂದೇಹವಾಗಿ. Is o. of drawing ತಪ್ಪಾಗಿ ರೇಖಿಸಿ. O. of it ಸೇರಿಸಿಲ್ಲದೆ; ತೊರೆಯಲ್ಪಟ್ಟು; ದಿಕ್ಕು ತೋರದೆ; ತಪ್ಪು ತಿಳಿದುಕೊಂಡು; ತಪ್ಪು ತಿಳಿವಳಿಕೆ ಬಂದು. O. of date, character, temper, sorts. (From o. the dungeon came a groan). (ನಾ.; ಬ. ವ. ದಲ್ಲಿ) ಅಧಿಕಾರದಲ್ಲಿಲ್ಲದ ರಾಜಕೀಯ ಪಕ್ಷ. The ins & outs [In (ನಾ.) ನೋಡಿ]. (ಗು.) O. match (ಸ್ವಂತ ಮೈದಾನದಲ್ಲಿಲ್ಲದೆ) ಬೇರೆಯ ಮೈದಾನದಲ್ಲಿ ಆಡಿದ ಪಂದ್ಯ. O. size ಅಸಾಧಾರಣ ಗಾತ್ರ. **Oúter** (ಗು., ನಾ.) ಹೊರಗಡೆಯ; ಹೊರ; ಬಾಹ್ಯ. ಮಾನಸಿಕ ಅಥವಾ ಆಧ್ಯಾತ್ಮಿಕ, ಅಲ್ಲದ; ವಾಸ್ತವಿಕ; ಭೌತ [The o. man ಮನುಷ್ಯನ ಹೊರರೂಪು, ಉಡುಪು. The o. world (ತನ್ನ ಗುಂಪಿಗೆ ಸೇರಿಲ್ಲದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೊರಗಿನವರು ; ಅಪರಿಚಿತ, ಬಾಹ್ಯ ಪ್ರಪಂಚ]. (ನಾ.) ಬಂದೂಕಿನ ಗುರಿಹಲಗೆಯಲ್ಲಿ ಗುರಿಗಣ್ಣಿನ ಸುತ್ತಲೂ ಇರುವ ವೃತ್ತಗಳ ಹೊರ ಪ್ರದೇಶ. **Oútermost** (ಗು.) ; **Oútmost** ಔಟ್‌ಮೋಸ್ಟ್ (ಗು.) =Outermost. **Oútness** (ನಾ.) ಬಾಹ್ಯತೆ ; (ಜ್ಞಾತೃವಿಗೆ ಹೊರಗಿರುವ) ಹೊರತನ ; ಬಾಹ್ಯ ವಸ್ತುತ್ವ.

Out- (ಪೂ. ಪ್ರ.) ಕ್ರಿ. ವಿ. ಆಗಿ ಅಥವಾ ಉಪಸರ್ಗವಾಗಿ ಕ್ರಿಯಾಪದಗಳಿಗೆ, ಗುಣವಾಚಿಯಾಗಿ ನಾಮಪದಗಳಿಗೆ, —ಹತ್ತುತ್ತದೆ.

(1) ಕ್ರಿಯಾಪದಕ್ಕೆ ಹತ್ತಿ ಆ ಕ್ರಿಯಾಪದದ ಮುಂದೆ Out ಪದ ಬರುವ ಅರ್ಥವನ್ನೇ ಕೊಡುತ್ತದೆ (ಮು., ಕಾವ್ಯ, ಅಲಂಕಾರ,—ಪ್ರ. ಗಳಲ್ಲಿ: ಉದಾ., Outspread=Spread out)

(2) Out ಪದ ಮುಂದೆ ಬರುವ ಕ್ರಿಯಾಪದಗಳು, ಅನೇಕ ವೇಳೆ, ಈ ಪ್ರತ್ಯಯ ಹತ್ತಿ ಕೃದ್ವಾಚಿಗಳಾಗಲಿ ಕೃನ್ನಾಮಗಳಾಗಲಿ ಆಗುತ್ತವೆ (ಈ ಸಂದರ್ಭದಲ್ಲಿ, ಪದಕ್ಕೆ ಅನೇಕ ವೇಳೆ ವಿಶೇಷಾರ್ಥ ಉಂಟು)

(3) ಕ್ರಿಯಾಪದಗಳಿಗೆ ಹತ್ತಿ ನಾಮವಾಚಕಗಳಾಗುತ್ತವೆ (ಈ ಸಂದರ್ಭದಲ್ಲಿ, ಪದಕ್ಕೆ ಅನೇಕ ವೇಳೆ ವಿಶೇಷಾರ್ಥ ಉಂಟು)

(4) ಗುಣವಾಚಕಾರ್ಥದಲ್ಲಿ ನಾಮಪದಗಳಿಗೆ ಹತ್ತುತ್ತದೆ.

(5) ನಾಮಪದಗಳಿಗೆ ಹತ್ತಿ Out of ಎಂಬ ಅರ್ಥ ಕೊಟ್ಟು ಗುಣವಾಚಿ ಅಥವಾ ಕ್ರಿ. ವಿ. ಗಳಾಗಿ, ಇವುಗಳಿಂದ ಕ್ರಿಯಾವಾಚಕ ಅಥವಾ ನಾಮವಾಚಕಗಳಾಗುತ್ತವೆ.

(6) 'ಹೆಚ್ಚು, ಮೀರು' ಎಂಬ ಸಾಮಾನ್ಯಾರ್ಥ ಕೊಡುತ್ತದೆ.

Outáct (6) ಅಭಿನಯದಲ್ಲಿ ಮೀರಿಸು ; ಮೇಲಾಗು ; ಅತಿಶಯಿಸು. **Outargúe** (6) (—ನ್ನು) ವಾದದಲ್ಲಿ ಮೀರಿ ಸೋಲಿಸು. **Out-bálance** (6) ತೂಕದಲ್ಲಿ (ಮತ್ತೊಂದನ್ನು) ಮೀರು ; ಹೆಚ್ಚು ಪರಿಣಾಮ ಮಾಡು, ಆಗು. **Out-béllow** (6). **Outbíd** (6) ಹರಾಜಿನಲ್ಲಿ (ಒಬ್ಬನಿಗಿಂತ) ಹೆಚ್ಚಾಗಿ ಸವಾಲು ಮಾಡು ; ಧಡ ಸವಾಲು ಮಾಡು. (ಇಂತ) ಹೆಚ್ಚಾಗಿ ವಾಗ್ದಾನ ಮಾಡು ; (ಅತಿಶಯೋಕ್ತಿಯಲ್ಲಿ, ದಂತ ಕಥೆಯಲ್ಲಿ) ತಲೆ ಮೆಟ್ಟು. **Out-bláze** (1, 6). **Oútboard** (5) (ಗು., ಕ್ರಿ. ವಿ.) (ನಾವೆ) ಹಡಗಿನ ಹೊರಗಡೆ(ಯ)ಗೆ ; —ಕಡೆ(ಯ)ಗೆ ; ಹಡಗಿಗೆ ಮತ್ತೊಂದಕ್ಕಿಂತ ಹತ್ತಿರದ(ಲ್ಲಿ). **Out-brág** (6). **Outbránch** (1). **Outbráve** (6) ಎದುರಿಸು ; ಧಿಕ್ಕರಿಸು. **Oútbreak** (3) (ಆವೇಶ, ಕೋಪ, ಯುದ್ಧ, ರೋಗ, ಜ್ವಾಲಾಮುಖಿ ಶಕ್ತಿ, ಮೊ. ವು) ತಲೆದೋರುವುದು. **Oútbuilding** (4) (ಮುಖ್ಯ ಕಟ್ಟಡದಿಂದ ಪ್ರತ್ಯೇಕವಾದ) ಹೊರ ಕಟ್ಟಡ ; ಹೊರ ಮನೆ. **Oútburst** (3) (ಮು., ಆವೇಶದ ಮಾತುಗಳಿಂದ ವ್ಯಕ್ತವಾಗುವ) ಭಾವ ಸ್ಫೋಟನೆ ; ಕೋಪದ ಕೆರಳು ; ಉದ್ರೇಕ ; ಜ್ವಾಲಾಮುಖಿಯ ಓಕರಿ, ಕಾರು. **Oútcast** (2) (ಗು., ನಾ.) ಮನೆಯಿಂದಲೂ ಸ್ನೇಹಿತರಿಂದಲೂ ಹೊರಹಾಕಲ್ಪಟ್ಟ, ಬಹಿಷ್ಕೃತ (ವ್ಯಕ್ತಿ) ; ಸಮಾಜ ತೊರೆದ (ವ್ಯಕ್ತಿ) ; ಮನೆ, ಮಠ, ಸ್ನೇಹಿತರು,—ಇಲ್ಲದ (ಅಲೆಮಾರಿ). **Oútcaste** (ಗು., ನಾ.) ಜಾತಿಗೆಟ್ಟ(ವನು) ; ಜಾತಿಯಿಲ್ಲದ(ವನು) ; ಜಾತಿಭ್ರಷ್ಟ. **Outcáste** (ಕ್ರಿ. ಸಕ.) ಜಾತಿಯಿಂದ ಹೊರಹಾಕು ; ಜಾತಿಭ್ರಷ್ಟ ಮಾಡು ; ಬಹಿಷ್ಕರಿಸು. **Outcláss** (6) (ಇಂತ) ಮೇಲಿನ ತರಗತಿಗೆ ಸೇರು ; ಪ್ರತಿಸ್ಪರ್ಧಿಯನ್ನು ತಲೆಯೆತ್ತದಂತೆ ಸೋಲಿಸಿ ಬಿಡು. **Oút-clearing** (2) ಹುಂಡಿ, ಚೆಕ್ಕು, ಮೊ. ನ್ನು, ಲೆಕ್ಕಾಚಾರ ಬಗೆಹರಿಸುವುದಕ್ಕಾಗಿ, ತೀರುವೆಯ ಮನೆಗೆ (ಕಚೇರಿಗೆ) ಕಳುಹಿಸುವುದು. **Oút-college** (5) (ಗು.) ಪ್ರೌಢ ವಿದ್ಯಾಶಾಲೆಯಲ್ಲಿ ವಾಸವಾಗಿರದ ; —ಗೆ ಸೇರಿರದ. **Oútcome** (3) ಫಲ ; ಪರಿಣಾಮ. **Oútcrop** (3) (ಸ್ತರ, ಬಂಡೆ) ಗರ್ಭದಿಂದ ಮೇಲೆದ್ದು ಕಾಣಿಸಿಕೊಳ್ಳುವುದು; ಹೀಗೆ ಕಾಣಿಸಿಕೊಂಡ ಸ್ತರ. **Oútcry** (3) (ನಾ., ಕ್ರಿ.) ದೊಡ್ಡ [ಹಾಕು(ವುದು)] ; ಹುಯಿಲು ; ಕೂಗಾಟ. ಗಟ್ಟಿಯಾಗಿ ಕೂಗು, ಕೂಗಿಕೊ. **Out-dánce** (6). **Out-dáre** (6) ಸಾಹಸದಿಂದ ಗೆಲ್ಲು ; ಧಿಕ್ಕರಿಸು ; ಎದುರು ಬೀಳು. **Out-dístance** (6) (ಒಬ್ಬನಿಗಿಂತ) ಬಹಳ ಮುಂದಕ್ಕೆ ಹೋಗು. **Outdó** (6) ಮೀರು ; ಕೈ ಮೇಲಾಗು. **Oútdoor** (5) (ಗು.) ಮನೆಯ ಹೊರಗಡೆ ಮಾಡಿದ, ಇರುವ, ಉಪಯೋಗಿಸುವ [O. d. relief (ಅನಾಥಾಲಯ, ಮೊ. ದ ಸಂಸ್ಥೆಯ ನಿವಾಸಿಯಾಗಿರದ) ಹೊರಗಿನವನಿಗೆ ಕೊಡುವ ಸಹಾಯ. O. d. agitation ಪಾರ್ಲಿಮೆಂಟಿನ ಹೊರಗೆ ನಡಸುವ ಚಳವಳಿ]. **Out-doórs** (5) (ಕ್ರಿ. ವಿ.) ಮನೆಯ ಹೊರಗಡೆ ; ಬಯಲಿನಲ್ಲಿ. **Outeát** (6). **Outfáce** (6) ಮುಖ ಎದುರಿಸು, —ಕೆಡಿಸು. **Oútfall** (3) (ನದಿ, ಮೊ. ಗಳ) ಮುಖ. **Oútfield** (4) (ಜಮೀನಿನ) ಹೊರ ಹೊಲ. (ಭಾವನೆ, ಮೊ. ಗಳ) ಹೊರ ವಲಯ. (ಕ್ರಿಕೆಟ್) ಗುರಿಕೋಲಿನಿಂದ ಆಚೆಗಿರುವ (ಆಟದ) ಬಯಲು. **Oútfit** (3) (ವಾಸ್ತವಿಕ ಅಥವಾ ಮಾನಸಿಕ) ಪೂರ್ಣ ಸಾಮಗ್ರಿ, ಸಜ್ಜು. **Oútfitter** ಸಜ್ಜುಕಾರ. **Outfíght** (6) (ಇಂತ) ಮೇಲಾಗಿ ಕಾದು. **Oútfighting** (2) ತೋಳಿನಷ್ಟು ದೂರ ನಿಂತು ಮಾಡುವ ಮುಷ್ಟಿಯುದ್ಧ (ಎದುರು ಪದ : Infighting). **Out-flánk** (6) ಎದುರಿಸುವ ಶತ್ರುಸೈನ್ಯದ ಪಕ್ಕ ಮೀರಿ ವಿಸ್ತರಿಸಿ ಹಿಂಭಾಗಕ್ಕೆ ಬರು, ಸುತ್ತುಗಟ್ಟು ; (ರೂಪ.) ಅವರಿಸಿ ಸೋಲಿಸು. **Oútflow** (3) (ನಾ.) (ತುಂಬಿ) ಹೊರ ಹರಿತ ; ಪ್ರವಾಹ. **Outflý** (6) ಹಾರುವುದರಲ್ಲಿ ಮೀರು. **Outgéneral** (6) ಮೀರಿದ ಯುದ್ಧತಂತ್ರದಿಂದ ಗೆಲ್ಲು. **Oútgo** (3) (ನಾ.) ಹೊರಗೆ ಹೋಗುವುದು ; —ಹೋದದ್ದು (ಮು., ವೆಚ್ಚ; ವ್ಯಯ). **Outgó** (ಕ್ರಿ.) ಮುಂದುವರಿ ; (ಇಂತ) ಬೇಗ ಹೋಗು ; (ರೂಪ.) ಮೀರು ; ಅತಿಶಯಿಸು. **Oút-going** (3) (ನಾ., ಗು.) ಹೊರಕ್ಕೆ ಹೋಗುವುದು ; (ಬ. ವ. ದಲ್ಲಿ) (ಅದ) ವೆಚ್ಚ, ಖರ್ಚುಗಳು. (ಗು.) (ಅಧಿಕಾರವನ್ನು, ಒಂದು ಸ್ಥಾನವನ್ನು, ಅಥವಾ ಸ್ವಾಮ್ಯವನ್ನು) ಬಿಟ್ಟುಹೋಗುವ ; ನಿವೃತ್ತವಾಗಲಿರುವ. **Outgrów** (6) (ಇಂತ) ಬೇಗ, ಹೆಚ್ಚಾಗಿ, ಎತ್ತರವಾಗಿ, —ಬೆಳೆ ; ಉಡುಪು ಹಿಡಿಯದಂತೆ ಬೆಳೆ ; ಬೆಳೆಯುತ್ತ ಬೆಳೆಯುತ್ತ (ಬಾಲ್ಯದ ಅಭ್ಯಾಸ, ರೋಗ, ಅಭಿರುಚಿ, ಮೊ. ನ್ನು) ಕಳೆದುಕೊ. **Oút-growth** (3) ಹೊರ ಹೊರಡುವುದು ; ಬೆಳೆದದ್ದು ; ಶಾಖೆ. ಫಲ ; ಸ್ವಾಭಾವಿಕ ಪರಿಣಾಮ. **Out-héctor** (6) ವಿಪರೀತವಾಗಿ ಬೆದರಿಸು. **Out-hérod Herod** (6) (ಕ್ರಿ. ಪೂ. ದಲ್ಲಿ ಜೂಡಿಯಾ ದೊರೆಯಾಗಿದ್ದ) ಹೆರಡ್ಡನ್ನು ಡಂಭದಲ್ಲಿ, ಅಟ್ಟಹಾಸದಲ್ಲಿ, ಕ್ರೌರ್ಯದಲ್ಲಿ, —ಮೀರಿಸು ; (ರೂಪ.) (ಯಾವುದಾದರೂ ಗುಣ, ಮೊ. ಗಳಲ್ಲಿ) ಪ್ರಸಿದ್ಧನನ್ನೇ ಮೀರಿಸು. **Oúthouse** (4) ಮನೆಯ ಪಕ್ಕದಲ್ಲಿ ಕಟ್ಟಿದ ಸಣ್ಣ ಮನೆ, ಕಟ್ಟಡ ಅಥವಾ ಗುಡಿಸಿಲು. **Out-jóckey** (6) (ತಂತ್ರದಿಂದ, ಯುಕ್ತಿಯಿಂದ, ಒಬ್ಬನನ್ನು) ಮೀರು, ಸೋಲಿಸು. **Out-júggle** (6). **Out-júmp** (6). **Out-lábour** (6). **Out-lándish** (4) ವಿದೇಶೀಯ ತೋರ್ಕೆಯ, ತೆರದ ; ಬಳಕೆಯಿಲ್ಲದ ; ಅಪರಿಚಿತ ; ವಿಲಕ್ಷಣ ; ವಿಜಾತೀಯ ; ವಿಕಾರ. **Outlást** (6) (ಇಂತ) ಹೆಚ್ಚಾಗಿ ಬಾಳು, ಬಾಳಿಕೆ ಬರು (Will not o. l. six months). **Oútlaw** (5) (ನಾ, ಕ್ರಿ. ಸಕ.) ನ್ಯಾಯರಕ್ಷಣೆಯಿಂದ ಬಹಿಷ್ಕೃತನಾದವನು ; ಗಡೀಪಾರಾದವನು ; ದೇಶಭ್ರಷ್ಟ. (ಕ್ರಿ.) ದೇಶಭ್ರಷ್ಟ ಮಾಡು ; ಗಡೀಪಾರು ಮಾಡು ; ನ್ಯಾಯರಕ್ಷಣ ಬಹಿಷ್ಕೃತನೆಂದು ಘೋಷಿಸು. **Oútlawry** (ನಾ.) ದೇಶಭ್ರಷ್ಟತೆ ; ಗಡೀಪಾರು (ಸ್ಥಿತಿ, ಶಿಕ್ಷೆ). **Oútlay** (3) (ಒಂದರಮೇಲೆ) ಹಾಕಿದ ಹಣ ; ಖರ್ಚುಮಾಡಿದ ಹಣ ; ವೆಚ್ಚ. **Oútlet** (3) ಹೊರಕ್ಕೆ ಹೋಗುವ, ತಪ್ಪಿಸಿಕೊಂಡು ಹೋಗುವ, —ಮಾರ್ಗ ; ಹೊರಗಂಡಿ ; ಬಹಿರ್ದ್ವಾರ. **Oútlier** (3) (ಒಂದರಿಂದ) ಕಳಚಿಬಂದ ಭಾಗ. **Oútline** (ನಾ., ಕ್ರಿ. ಸಕ.) (ಏ. ವ. ಅಥವಾ ಬ. ವ. ದಲ್ಲಿ) ಕಣ್ಣಿಗೆ ಕಾಣುವ ಯಾವುದಾದರೂ ವಸ್ತುವಿನ, ಸಮತಲದ ಹೊರ ರೇಖೆ ; ಆಕಾರ ರೇಖೆ ; ರೂಪ ರೇಖೆ ; ಸುತ್ತುಗೆರೆ ; ಹೊರ ಎಲ್ಲೆ ; (ಬೆಳಕು ನೆಲಳುಗಳನ್ನು ಚಿತ್ರಿಸಿರದ) ಬರಿ ಆಕೃತಿರೇಖೆಯ ಚಿತ್ರ (In o. ಬರಿ ಆಕೃತಿರೇಖೆಯಲ್ಲಿ ಚಿತ್ರಿಸಿದ). ಕರಡು ಪ್ರತಿ ; (ಮುಖ್ಯ ವಿಷಯಗಳನ್ನು ಮಾತ್ರ ಹೇಳಿರುವ) ಸ್ಥೂಲ ವಿವರಣೆ ; ಗೋಷ್ವಾರೆ. (ಬ. ವ. ದಲ್ಲಿ) ಮುಖ್ಯಾಂಶಗಳು ; ಸಾಮಾನ್ಯ ತತ್ತ್ವಗಳು. (ಕ್ರಿ.) ಬಾಹ್ಯ ರೇಖಾರೂಪದಲ್ಲಿ ರೇಖಿಸು ; ಸ್ಥೂಲ ವಿವರಣೆ ಮಾಡು. **Outlíve** (6)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಸಾಮಾನ್ಯ ಜೀವಾವಧಿಗಿಂತ, ನೂರು ವರ್ಷಕ್ಕಿಂತ) ಹೆಚ್ಚು ಕಾಲ ಬದುಕು. (ಅಪಾಯ, ಮೊ. ಗಳಿಂದ) ಪಾರಾಗು; [ಒಂದು ಸ್ಥಿತಿ, ಅನುಭವ (ಮು., ಅಪಮಾನ, ಅಪಕೀರ್ತಿ, ಮೊ. ನ್ನು)] ಅನುಭವಿಸಿ, ಅದರ ಪರಿಣಾಮ ಕಳೆದು ಜೀವಿಸು. **Oútlook** (3) ಹೊರಗೆ ನೋಡು ವುದು; ಹೊರ ನೋಟ; ದೃಶ್ಯ; ಮುಂದು ನೋಟ; ದೃಷ್ಟಿ; ಮುಂದಿನ ಪರಿಸ್ಥಿತಿ; ಮನೋಭಾವ; ನಿರೀಕ್ಷೆ; ಭವಿಷ್ಯ; ಜೋಕೆಯ ಕಾವಲು (ರೂಪ. ಸಹ). **Oútlying** (2) (ಗು.) (ಕೇಂದ್ರದಿಂದ) ದೂರ ದಲ್ಲಿರುವ; ಹೊರ ಪ್ರಾಂತದಲ್ಲಿರುವ. **Out-manoeúvre** (6). **Out-márch** (6). **Outmátch** (6) ಮೀರು; ಮೇಲುಗೈಯಾಗು. **Out-measure** (6) ಅಳತೆ ಮೀರು. **Outnúmber** (6). **Out-páce** (6) (ಇಂತ) ವೇಗವಾಗಿ ಹೋಗು, ಹೆಜ್ಜೆ ಹಾಕು. **Out-páint** (6). **Oút-patient** (4) (ಆಸ್ಪತ್ರೆಯಲ್ಲಿರದೆ) ಹೊರಗಡೆಯೇ ಚಿಕಿತ್ಸೆ ಪಡೆದು ಹೋಗುವ ರೋಗಿ. **Oút-pensioner** (4) (ಸಂಸ್ಥೆಯ ಮಂದಿರ ದಲ್ಲಿ ವಾಸಮಾಡದೆ) ಹೊರಗಿದ್ದು ವಿಶ್ರಾಂತಿ ವೇತನ ಪಡೆಯುವವನು. **Oútpost** (4) (ಶತ್ರುಗಳಿಂದ) ಆಕಸ್ಮಿಕ ಆಕ್ರಮಣ, ಮೊ. ನ್ನು ತಡೆಯಲು ಸೈನ್ಯದಿಂದ ಸ್ವಲ್ಪ ದೂರದಲ್ಲಿ ಇಟ್ಟಿರುವ ಕಾವಲು ದಳ; ಗಡಿಕಾವಲು (ದಳ); (ಸೈನ್ಯದ) ಉಕ್ಕಡ. **Oútpour** (3) (ನಾ., ಕ್ರಿ.) ಹೊರ ಸುರಿ(ತ); ಹರಿ(ತ); ಪ್ರವಾಹ; ಪ್ರವಹಿಸು. **Oútpouring** (3) ಹೊರ ಸುರಿತ; (ಮಾತಿನ, ಸಾಹಿತ್ಯದ) ಪ್ರವಾಹ, ಹೊನಲು. **Out-preách** (6). **Oútput** (3) (ಕೈಗಾರಿಕೆ, ಗಣಿಕೆಲಸ, ದುಡಿತ, ಮೊ. ಗಳಿಂದ ಬಂದ) ಉತ್ಪನ್ನ, ಹುಟ್ಟುವಳಿ, ಆಗುವಳಿ; (ಪದಾರ್ಥದ) ಮೊತ್ತ; ತಯಾರಿಯ ಮೊತ್ತ; ಒಟ್ಟು ತಯಾರಿ. **Outránge** (6) (ಬಂದೂಕಿನ, ಬಂದೂಕು ಹೊಡೆಯುವವನ, ವಿಷಯದಲ್ಲಿ) (ಇಂತ) ಹೆಚ್ಚು ದೂರ ವ್ಯಾಪ್ತಿ ಯಿರು. **Out-reách** (6). **Out-reáson** (6). **Oút-relief** (4) = Outdoor relief. **Outríde** (6) (ಹಡಗಿನ ವಿಷಯದಲ್ಲಿ) ಬಿರು ಗಾಳಿಮಳೆಯನ್ನು ಎದುರಿಸಿ ತೇಲು(ತ್ತಿರು). **Oútrider** (4) (ಗಾಡಿಯ ಮುಂದೆ, ಹಿಂದೆ ಅಥವಾ ಜೊತೆಯಲ್ಲಿ, ಸವಾರಿಮಾಡಿಕೊಂಡು ಬರುವ) ರಾವುತ ಪರಿಚರ. ಚರ ವ್ಯಾಪಾರಿ. **Oútrigger** (ನಾ.) ಹಲವು ಉದ್ದೇಶ ಗಳಿಗಾಗಿ ಹಡಗಿನ ಪಕ್ಕದಿಂದ ಹೊರಚಾಚಿದ ದೂಲ, ಉದ್ದ ತೊಲೆ, ಚೌಕಟ್ಟು; ಹೊರ ಚಾಚು; (ಕಟ್ಟಡದಲ್ಲಿ, ಇಂಥ) ಚಾಚು ತೊಲೆ. ಬಂಡಿಯ ಈಸಿನಿಂದಾಚೆಗೆ ಹೆಚ್ಚು ಕುದುರೆಗಳನ್ನು ಕಟ್ಟಲು ಅನುಕೂಲಿಸುವಂತೆ ಚಾಚಿದ ಅಡ್ಡ ಮರ; ಇದಕ್ಕೆ ಕಟ್ಟಿದ ಕುದುರೆ. ದೋಣಿಯಲ್ಲಿ ಹುಟ್ಟುಆನಿಕೆಯನ್ನು ಹೊತ್ತಿರುವ ಕಬ್ಬಿಣದ ಚಾಚು ಬಂಕ; ಇಂಥ ಬಂಕವಿರುವ ದೋಣಿ. **Oútrigged** (ಗು.) —ಉಳ್ಳ. **Outríval** (6) ಪ್ರತಿಸ್ಪರ್ಧಿಯನ್ನು ಮೀರು. **Out-rów** (6). **Out-rún** (6) ಓಟದಲ್ಲಿ (ಒಬ್ಬನನ್ನು) ಮೀರಿ ಮುಂದೆಹೋಗು (ರೂಪ. ಸಹ) [His imagination outruns the facts. O. the constable (Constable ನೋಡಿ)]. **Oútrunner** (4) (ಗಾಡಿಯೊಡನೆ) ಓಡುವ ಪರಿಚರ; ಪಕ್ಕಪಟ್ಟಿಗಳಿಂದ ಕೂಡಿ (ಗಾಡಿಯ) ಈಚುಮರಗಳ ಹೊರಗಡೆ ಓಡುವ ಕುದುರೆ. ನೀರ್ಗಲ್ಲಮೇಲೆ ಬಂಡಿಯನ್ನೆಳೆಯುವ ನಾಯಿ ತಂಡಕ್ಕೆ ದಾರಿತೋರಿಸುವ ನಾಯಿ. **Oútrush** (3) ಹೊರನುಗ್ಗಲು; ರಭಸದ ಪ್ರವಾಹ. **Outsail** (6) (ಹಡಗು, ಮೊ. ದು ಮತ್ತೊಂದಕ್ಕಿಂತ) ಹೆಚ್ಚು ವೇಗವಾಗಿ, ಹೆಚ್ಚು ದೂರ, —ಹೋಗು; (ರೂಪ.) ಮೀರು. **Out-scóld** (6). **Oútsentry** (4) ಗಡಿಕಾವಲಿನವನು; ಉಕ್ಕಡ ದವನು. **Oútset** (3) ಮೊದಲು; ಆರಂಭ (ನಾ., *At* or *from* the o.). **Outshíne** (6) (ಇಂತ) ಅತಿಶಯಿಸಿ ಬೆಳಗು (ರೂಪ. ಸಹ). **Outshoót** (6). **Outsíde** (ನಾ., ಗು., ಕ್ರಿ. ವಿ., ಉಪ.) ಹೊರ ಮೈ; ಹೊರ ಭಾಗ; ಬಾಹ್ಯ ಪ್ರದೇಶ (Knows only the outsides of books. Ride on the o. of an omnibus). ಹೊರ ತೋರ್ಕೆ; ಹೊರ ನೋಟ; ಬಾಹ್ಯ ರೂಪ, ದೃಷ್ಟಿ, ಲಕ್ಷಣ; (ಜ್ಞಾತೃವಿನಿಂದ ಬೇರೆಯಾದ) ಬಾಹ್ಯ ಪ್ರಪಂಚ (Impressions from the o.). ಹೊರಗಡೆ (Open the door from o.); (ಗಣನೆಯಲ್ಲಿ) ಪರಮಾವಧಿ (There were a hundred at the o. It is a mile at the o.). (ಬ. ವ. ದಲ್ಲಿ) (ಕಾಗದದ ಕಟ್ಟುಗಳಲ್ಲಿ) ಹೊರ ಹಾಳೆಗಳು. (ಸವಾರಿ ಗಾಡಿ, ಮೊ. ಗಳಲ್ಲಿ) ಹೊರ ಆಸನದ(ಲ್ಲಿ ಕುಳಿತಿರುವ ಪ್ರಯಾಣಿಕ). O. in = Inside out (Inside ನೋಡಿ). (ಗು.) ಹೊರಗಡೆಯ; —ಗೆ ಹತ್ತಿರದ; —ಯಲ್ಲಿರುವ [O. seat ಕೊನೆಗೆ ಹತ್ತಿರದಲ್ಲಿರುವ ಪೀಠ. O. work (ಕಟ್ಟಡದಲ್ಲಲ್ಲದೆ) ಹೊರಗೆ ಮಾಡಿದ ಕೆಲಸ. O. porter (ನಿಲ್ದಾಣದಿಂದ) ಹೊರಗಡೆಗೆ ಸಾಮಾನು ಹೊತ್ತುಕೊಂಡುಹೋಗುವ ಕೂಲಿಯಾಳು]. ಒಂದು ಗೊತ್ತಾದ ಗುಂಪಿಗೆ, ಸಂಸ್ಥೆಗೆ, ಸೇರಿಲ್ಲದ(ವರ); ಹೊರ(ಗಿನವರ) [O. opinion ಹೊರ(ಗಿನವರ) ಅಭಿಪ್ರಾಯ (ಮು., ಪಾರ್ಲಿಮೆಂಟಿನಲ್ಲಿ ಸೇರಿರದೆ ಹೊರಗಿರುವವರ ಅಭಿಪ್ರಾಯ). O. broker ಬಂಡವಾಳ ಮಾರುವೆಯ ಸಂಸ್ಥೆಗೆ ಸೇರಿಲ್ಲದ ದಳ್ಳಾಳಿ; ಹೊರ ದಳ್ಳಾಳಿ]. ಪರಮಾವಧಿಯ (Quote the o. prices). (ಕ್ರಿ. ವಿ.) ಹೊರಕ್ಕೆ; ಹೊರಗಡೆ (ಯಲ್ಲಿ); ಬಯಲಿಗೆ; ಬಯಲಲ್ಲಿ; (ರೇವಿನಿಂದ ಆಚೆ) ವಿಶಾಲ ಸಮುದ್ರಕ್ಕೆ, —ದಲ್ಲಿ [Come o. (ಕೊಠಡಿ ಬಿಟ್ಟು, ಮನೆ ಬಿಟ್ಟು) ಹೊರಕ್ಕೆ ಬಾ (ಮು., ಜಗಳಕ್ಕೆ, ಕಾದಾಟಕ್ಕೆ, ಕರೆಯುವಾಗ). O. of = O. (ಉಪ.). O. of a horse (ಅಸಂ.) ಕುದುರೆ ಹತ್ತಿ. Get o. of (ಅಸಂ.) ತಿನ್ನು, ಕುಡಿ]. (ಉಪ.) (—ಕ್ಕೆ) ಹೊರಗೆ, ಸೇರದೆ, ಎಲ್ಲೆ ಮೀರಿ, ಬಿಟ್ಟು (Natural forces are o. morality. Cannot go o. the evidence). **Outsíder** (ನಾ.) (ಒಂದು ಗುಂಪು, ಪಕ್ಷ, ಉದ್ಯೋಗ, ಮೊ. ಗಳಿಗೆ ಸೇರಿರದ) ಹೊರಗಿ ನವನು; ಬಾಹಿರ; ದೀಕ್ಷೆ ಪಡೆದಿಲ್ಲದವನು; ಪ್ರವೇಶ ಹೊಂದಿಲ್ಲ ದವನು; ಒಳಗರಿಯದವನು; (ನಿರ್ದಿಷ್ಟ ಶಾಸ್ತ್ರ, ಮೊ. ಗಳ) ಪರಿಜ್ಞಾನ ವಿಲ್ಲದವನು; ವಿಶೇಷ ಜ್ಞಾನ, ಶಿಕ್ಷಣ, ಮೊ. ವು ಇಲ್ಲದವನು; ಸತ್ಸಮಾಜದಲ್ಲಿ ಬೆರೆಯಲು ಅರ್ಹತೆಯಿಲ್ಲದವನು. (ಜೂಜಿನಲ್ಲಿ, ಸ್ಪರ್ಧೆಯಲ್ಲಿ) ಜಯಸಂಭವವಿರುವಂತೆ ತೋರದ ಕುದುರೆ, ಮನುಷ್ಯ. **Oútsight** (3) ಹೊರ ನೋಟ; ಬಹಿರ್ದೃಷ್ಟಿ (Insight ಪದಕ್ಕೆ ವಿರುದ್ಧ ಪ್ರ. ವಾಗಿ ಮಾತ್ರ). **Outsíng** (6). **Outsít** (6) (ಇತರ ಅತಿಥಿಗಳಿಗಿಂತ) ಹೆಚ್ಚು ಹೊತ್ತು ಕುಳಿತಿರು. **Oútskirts** (4) (ಪಟ್ಟಣ, ಪ್ರಾಂತ, ಮೊ. ಗಳ, ಅಥವಾ ಒಂದು ವಿಷಯದ) ಹೊರ ಅಂಚು, ಹೊರ ವಲಯ, ಅರುಗು. **Oútspan** (ಕ್ರಿ., ನಾ.) (ದ. ಆಫ್ರಿಕ) ನೊಗ ಕಳಚು; ಸಜ್ಜು ತೆಗೆ. (ನಾ.) —ವ ಕಾರ್ಯ, ಹೊತ್ತು, ಸ್ಥಳ. **Outspárkle** (6). **Outspeák** (1) ಗಟ್ಟಿಯಾಗಿ, ಖಂಡಿತವಾಗಿ, ಮಾತನಾಡು. **Oútspoken** (2) ಮುಚ್ಚುಮರೆ ಯಿಲ್ಲದೆ ಆಡಿಬಿಡುವ; ಖಂಡಿತ ವಾದಿಯಾದ. **Outspókenly** (ಕ್ರಿ. ವಿ.); **Outspókenness** (ನಾ.). **Outspeéd** (6). **Out-spénd** (6). **Outspreád** (1). **Oútstanding** (2) (ಗು.) ಎದ್ದು ಕಾಣುವ; ಪ್ರಮುಖವಾದ. ಇನ್ನೂ ತೀರ್ಮಾನವಾಗದಿರುವ; ಉಳಿದಿರುವ; ಬಾಕಿ ನಿಂತಿರುವ. **Out-stáre** (6). **Oút-station** (4) ಮುಖ್ಯ ಕಾರ್ಯಸ್ಥಾನದಿಂದ ದೂರವಿರುವ ಸ್ಥಾನ: ಹೊರದಾಣ. **Outstaý** (6) ಹೊತ್ತುಮೀರಿ ನಿಲ್ಲು; (ಇಂತ) ಹೆಚ್ಚು ಹೊತ್ತು ನಿಲ್ಲು. **Outstép** (6) ಎಲ್ಲೆ, ಮಿತಿ, —ಮೀರು; ಅತಿ ಕ್ರಮಿಸು (Outsteps the truth). **Out-stínk** (6). **Oút-stretched** (2) ಪೂರ್ತಿ ಚಾಚಿದ. **Outstríp** (ಕ್ರಿ. ಸಕ.) (ಓಟ, ಮೊ. ಗಳಲ್ಲಿ, ಒಬ್ಬನಿಂದ) ಮುಂದುವರಿ; (ಸ್ಪರ್ಧೆ, ಅಭಿವೃದ್ಧಿ, ಕಾರ್ಯಶಕ್ತಿ, ಮೊ. ಗಳಲ್ಲಿ) ಮೀರು, ಸೋಲಿಸು. **Out-swím** (6). **Out-tálk** (6). **Out-thínk** (6). **Oút-throw** (3) (ನಾ., ಕ್ರಿ.) ಹೊರದೂಡುವುದು; —ದೂಡಿದ ಪದಾರ್ಥ, ಮೊತ್ತ; ಉತ್ಪನ್ನ. (ಕ್ರಿ.) ಒಬ್ಬನಿಗಿಂತ ಹೆಚ್ಚು ದೂರ ಎಸೆ. **Oútthrust** (3) (ವಾಸ್ತು ಶಿಲ್ಪ) (ಕಟ್ಟಡದ ಯಾವುದಾದರೂ ಒಂದು ಭಾಗದ) ಹೊರ ಒತ್ತಡ. **Out-thúnder** (6). **Out-toíl** (6). **Out-tráde** (6). **Out-trável** (6). **Out-trúmp** (6) (ಇಸ್ಪೀಟಾಟ) ಮೇಲು ತುರುಪಿನಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೆಲ್ಲು. **Oút-turn** (3) =Output. **Outválue** (6). **Out-vié** (6) ಸ್ಪರ್ಧೆಯಲ್ಲಿ ಮೀರು, ಸೋಲಿಸು. **Outvoíce** (6) (ಇಂತ) ಹೆಚ್ಚು ಗಟ್ಟಿಯಾಗಿ, ಹೆಚ್ಚು ಪರಿಣಾಮವಾಗುವಂತೆ, ಮನವೊಲಿಸುವಂತೆ, —ಮಾತನಾಡು. **Out-vóte** (6). **Oútvoter** (4) ಸ್ಥಳನಿವಾಸಿಯಲ್ಲದ (ಪಾರ್ಲಿಮೆಂಟಿನ) ಚುನಾವಣೆದಾರ. **Out-wálk** (6). **Oútward** (ಗು., ಕ್ರಿ. ವಿ., ನಾ.) ಹೊರಗಡೆಯ; ಹೊರಗಿನ; ಬಾಹ್ಯ; ಹೊರ ಮುಖವಾದ. ಶಾರೀರಕ; ದೈಹಿಕ; ಬಾಹ್ಯ ಪ್ರಪಂಚದ; ವಾಸ್ತವಿಕ; ದೃಷ್ಟ; ತೋರ್ಕೆಯ; ಮೇಲ್ನೋಟದ; ಮೇಲ್ಮೆಲಿನ [The o. eye ಹೊರ ಕಣ್ಣು; ಸ್ಥೂಲ ಚಕ್ಷುಸ್ಸು (ಎದುರು ಪದ: Mind's eye). O. form ಹೊರ ರೂಪ; ಬಾಹ್ಯ ಸ್ವರೂಪ; ತೋರ್ಕೆ. O. man (ದೇವ. ಶಾ.) ದೇಹ; ಶರೀರ (ಎದುರು ಪದ: Soul). (ಹಾಸ್ಯವಾಗಿ) ಉಡುಪು, ಮೊ. ದು. To o. seeming ಹೊರಕ್ಕೆ; ಹೊರ ನೋಟಕ್ಕೆ. O. things ನಮ್ಮ ಸುತ್ತಲಿನ ಪ್ರಪಂಚ; ಬಾಹ್ಯ ಪ್ರಪಂಚ]. (ಕ್ರಿ. ವಿ.) =Outwards [O. bound (ship, passenger) ಸ್ವದೇಶ ಬಿಟ್ಟು ಹೊರಕ್ಕೆ ಹೋಗಲಿರುವ (ಹಡಗು, ಪ್ರಯಾಣಿಕ)]. (ನಾ.) ಹೊರ ತೋರ್ಕೆ; ಬಾಹ್ಯ ರೂಪ. (ಬ. ವ. ದಲ್ಲಿ) ಹೊರಗಿನವು; ಹೊರಗಿನ ವಸ್ತುಗಳು, ವಿಷಯಗಳು; ಬಾಹ್ಯಾಂಶಗಳು. **Oútwardly** (ಕ್ರಿ. ವಿ.); **Oútwardness** (ನಾ.) ಹೊರಚ್ಚು; ಹೊರಮೆ; ಹೊರತನ; ಬಾಹ್ಯತ್ವ; ಬಾಹಿರತ್ವ; ಬಾಹ್ಯ ಪ್ರಪಂಚದಲ್ಲಿ, ಬಾಹ್ಯ ವಸ್ತುಗಳಲ್ಲಿ, ಬಾಹ್ಯ ವಿಷಯಗಳಲ್ಲಿ, —ನಂಬಿಕೆ, ಆಸಕ್ತಿ; ವಾಸ್ತವಿಕತಾ ಮನೋಭಾವ. **Oútwards** (ಕ್ರಿ. ವಿ.) ಹೊರಕ್ಕೆ; ಹೊರ ಮುಖವಾಗಿ; ಹೊರಗಡೆಗೆ. **Out-wátch** (6) (ಇಂತ) ಹೆಚ್ಚು ಹೊತ್ತು (ರಾತ್ರಿ ಮೀರಿ) ಎಚ್ಚರದಿಂದಿದ್ದು ಕಾವಲಿರು. **Outweár** (6) ತೊಟ್ಟು ತೊಟ್ಟು ಜೀರ್ಣಮಾಡಿಬಿಡು; ಸವೆಯಿಸು; ಶಕ್ತಿಯನ್ನು, ತಾಳ್ಮೆಯನ್ನು, ಪೂರ್ತಿ ಖರ್ಚುಮಾಡಿಬಿಡು; ತಾಳ್ಮೆಯಿಂದ ಸಹಿಸಿಕೊಂಡು ಕಾಲಹರಣ ಮಾಡು; (ಇಂತ) ಹೆಚ್ಚು ಬಾಳಿಕೆ ಬರು; =Outlive. **Outweép** (6). **Outweígh** (6) (ಇಂತ) ಹೆಚ್ಚು ತೂಕವುಳ್ಳದ್ದಾಗಿ, ಹೆಚ್ಚು ಪ್ರಧಾನವಾಗಿ, ಹೆಚ್ಚು ಬೆಲೆ ಬಾಳುವುದಾಗಿ, ಹೆಚ್ಚು ಪ್ರಭಾವಯುತವಾಗಿ, —ಇರು. **Outwít** (6) (ಒಬ್ಬನನ್ನು) ಬುದ್ಧಿವಂತಿಕೆಯಲ್ಲಿ ಮೀರಿಸು, ಮರುಳುಗೊಳಿಸು, ಮೋಸ ಮಾಡು. **Oútwork** (4) (ನಾ.) ಕೋಟೆಯ ಮುಂಗಟ್ಟಡ ಅಥವಾ ಬಿಡಿ ಕಟ್ಟಡ. (ಅಂಗಡಿಯ, ಮನೆಯ) ಹೊರಗಡೆ ಮಾಡಿದ ಕೆಲಸ: ಹೊರಗೆಲಸ. **Out-wórk** (ಕ್ರಿ. ಸಕ.) (ಇಂತ) ಮೀರಿ ಕೆಲಸ ಮಾಡು. **Oútworker** ಹೊರಗೆಲಸ ಮಾಡುವವನು. **Oút-worn** (2) ಜೀರ್ಣವಾಗಿಹೋದ; ನಶಿಸಿಹೋದ; ರೂಢಿಯಳಿದ. **Out-wrángle** (6); **Out-yéll** (6)

Oúting ಔಟಿಂಗ್ (ನಾ.) ಸಂತೋಷ ಸಂಚಾರ.

Oútrage ಔಟ್‌ರೇಜ್ (ನಾ., ಕ್ರಿ. ಸಕ.) (ಮತ್ತೊಬ್ಬರ ಹಕ್ಕು, ಮನೋರಾಗ, ಮೊ. ಗಳ ಮೇಲೆ) ಹೊಡೆತ; ಆಘಾತ; ಘಾತಕತನ; ಮಾನೋಲ್ಲಂಘನೆ; ದೌಷ್ಟ್ಯ; ಅತ್ಯಾಚಾರ. (An o. upon decency, justice ಸಭ್ಯತೆಗೆ, ನ್ಯಾಯಕ್ಕೆ, ಮಾಡಿದ ಅತ್ಯಾಚಾರ). (ಕ್ರಿ.) ಬಲ ಪ್ರಯೋಗದಿಂದ ಅತ್ಯಾಚಾರ ನಡಸು; ಅತ್ಯಾಚಾರಕ್ಕೆ ಗುರಿ ಮಾಡು; ಕೆಡುಕು ಮಾಡು; ಅಪಮಾನ ಮಾಡು; (ಹೆಂಗಸನ್ನು) ಮಾನಭಂಗ ಮಾಡು, ಕೆಡಿಸು. (ಕಾನೂನು, ನೀತಿ, ಮೊ. ನ್ನು) ಪ್ರತ್ಯಕ್ಷವಾಗಿ, ದುರುದ್ದೇಶದಿಂದ, ಉಲ್ಲಂಘಿಸು. **Outrágeous** ಔಟ್‌ರೇಜಸ್ (ಗು.) ಮಿತಿ ಮೀರಿದ; ಅತಿ; ವಿಪರೀತ; ಅಸಾಧಾರಣ; ಉಗ್ರ; ತೀವ್ರ; ಕೋಪಾವೇಶದ; ಹುಚ್ಚು ಹುಚ್ಚಾದ; ದೌರ್ಜನ್ಯದ; ಘೋರ; ಅತಿ ಕ್ರೂರ; ರಾಕ್ಷಸೀಯ; ಮಿತಿಮೀರಿ ನೀತಿಗೆಟ್ಟ; ಅಶ್ಲೀಲ; ಅಸಹ್ಯಕರ; ದೂಷಣೀಯ; ಬಯ್ಗುಳ. **Outrágeously** (ಕ್ರಿ. ವಿ.); **Outrágeousness** (ನಾ.)

Oútre (F) ಊಟ್ರೇ (ಗು.) ಔಚಿತ್ಯ, ಮರ್ಯಾದೆ, —ಮೀರಿದ; ವಕ್ರ; ವಿಲಕ್ಷಣ; ಸಭ್ಯಾಚರಣೆಯನ್ನು ಧಿಕ್ಕರಿಸುವ.

Outríght ಔಟ್‌ರೈಟ್ (ಕ್ರಿ. ವಿ., ಗು.) ಪೂರ್ತಿಯಾಗಿ; ಸಂಪೂರ್ಣವಾಗಿ; (ಈಗಷ್ಟು ಆಗಷ್ಟು ನಡಸದೆ) ಒಂದೇ ಏಟಿಗೆ; ಎಲ್ಲವನ್ನೂ ಒಟ್ಟಿಗೆ (Kill, buy, o.); ಕೊಂಚವೂ ಉಳಿಸಿಡದೆ; ಸ್ಪಷ್ಟವಾಗಿ; ಬಹಿರಂಗವಾಗಿ. (ಗು.) ಮುಚ್ಚುಮರೆಯಿಲ್ಲದ; ಪರಮ; ನೇರವಾದ; ಸಂಪೂರ್ಣವಾದ. **Outríghtness** (ನಾ.)

Óva. Ovum ಪದದ ಬ. ವ.

Óval ಓವಲ್ (ಗು., ನಾ.) ಮೊಟ್ಟೆಯಾಕಾರ(ದ); ಅಂಡಾಕಾರ(ದ); ದೀರ್ಘವೃತ್ತಾಕಾರ(ದ); —ವಸ್ತು; ಅಂಡರೇಖಾಕೃತಿ(ಯ). **Óvally** (ಕ್ರಿ. ವಿ.); **Óvalness** (ನಾ.)

Óvary ಓವರಿ (ನಾ.) ಹೆಣ್ಣು ಪ್ರಾಣಿಗಳಲ್ಲಿ ಅಂಡೋತ್ಪತ್ತಿಯಾಗುವ ಎರಡು ಜನನಾಂಗಗಳಲ್ಲೊಂದು: ಅಂಡಾಶಯ. (ಪುಷ್ಪಗಳಲ್ಲಿ) ಅಂಡ ಕೋಶ; ಅಂಡಾಶಯ; ಬೀಜ ಕೋಶ. **Ovariótomy** ಓವೇರಿಯಾಟೊಮಿ (ನಾ.) (ಒಳಗೆ ಬೆಳೆದಿರುವ ಗಂಟಿಯನ್ನು ತೆಗೆದು ಹಾಕುವುದಕ್ಕಾಗಿ ಮಾಡುವ) ಅಂಡಾಶಯ ಶಸ್ತ್ರಚಿಕಿತ್ಸೆ. **Ovarítis** ಓವರೈಟಿಸ್ (ನಾ.) ಅಂಡಾಶಯದ ಉರಿಯೂತ. **Ovárian** ಓವೇರಿಯನ್ (ಗು.) ಅಂಡಾಶಯದ. **Ovário-** (ಸ. ಪೂ. ಪ.)

Óvate ಓವೇಟ್ (ಗು.) (ಪ್ರಕೃತಿ ಚರಿತ್ರೆ) (ಘನಾಕೃತಿಯಲ್ಲಿ) ಅಂಡಾಕಾರದ, (ರೇಖಾಕೃತಿಯಲ್ಲಿ) ದೀರ್ಘವೃತ್ತಾಕಾರದ. **Ováto-** (ಸ. ಪೂ. ಪ.)

Ovátion ಓವೇಷನ್ (ನಾ.) ಜಯೋತ್ಸವ; ಉತ್ಸಾಹ ಪೂರ್ವಕವಾದ ಸ್ವಾಗತ; ಜಯ ಘೋಷ.

Óven ಅವನ್ (ನಾ.) ರೊಟ್ಟಿಯನ್ನು ಅಥವಾ ಇತರ ಆಹಾರ ಪದಾರ್ಥವನ್ನು ಸುಡುಗಾಳಿಯಿಂದ ಬೇಯಿಸುವ, ಅಡುವ, —ಇಟ್ಟಿಗೆಯ, ಕಲ್ಲಿನ ಅಥವಾ ಕಬ್ಬಿಣದ, (ಗೂಡು) ಒಲೆ [Dutch o. ತೆರದ ಮುಖವನ್ನು ಬೆಂಕಿಯ ಕಡೆಗೆ ತಿರುಗಿಸಿಡುವ ಲೋಹದ (ನೂಡು) ಪೆಟ್ಟಿಗೆ, ಒಲೆ]. (ರಸಾಯನ ಶಾಸ್ತ್ರೀಯ ಶೋಧನೆ, ಲೋಹ ಶೋಧನೆ, ಮೊ. ಗಳಲ್ಲಿ ಉಪಯೋಗಿಸುವ) ಸಣ್ಣ ಗೂಡು ಒಲೆ. **O.-bird** ಗುಮ್ಮಟಾಕಾರದ, ಗೂಡು ಒಲೆಯಾಕಾರದ, —ಗೂಡು ಕಟ್ಟುವ ಹಲವು ಪಕ್ಷಿಜಾತಿ.

Óver ಓವರ್, **O'er** ಓರ್ (ಕಾವ್ಯ) (ಕ್ರಿ. ವಿ., ನಾ., ಉಪ.) ಅಂಚಿನಿಂದ ಅಥವಾ ನಿಂತ ನಿಲುವಿನಿಂದ ಹೊರಗಡೆಗೆ ಮತ್ತು ಕೆಳಕ್ಕೆ (Lean, fall, jump, knock, o.); ಪೂರ್ತಿಯಾಗಿ ಮೇಲ್ಮೈ ಮುಚ್ಚುವಂತೆ ಅಥವಾ ತಾಕುವಂತೆ (Brush, paint, it o.); (ಒಂದರ) ಮೇಲೆ, ಮೇಲಕ್ಕೆ, ಮೇಲುಗಡೆ(ಗೆ) (Climb, look, boil, o.); (Bend it o. ಮಡಿಚು. Turn o. ಮಗುಚು; ತಿರುವಿಹಾಕು. Turn him o. on his face ಅವನನ್ನು ಮುಖವಡಿಯಾಗಿ ತಿರುಗಿಸು. Roll o. & o. ಮೇಲಿಂದ ಮೇಲೆ ಉರುಳು, ಉರುಳಿಸು, ಸುತ್ತು). (ಕ್ರಿಕೆಟ್) (ತೀರ್ಪುಗಾರನ ಸೂಚನೆ, ತೀರ್ಪು) ಒಂದು ಕಡೆಯ ಎಸೆತದ ಸರದಿ ಮುಗಿಯಿತು, ಎದುರುಕಡೆ ಪ್ರಾರಂಭಿಸಿರಿ! [(ನಾ.) ಒಂದು ಸರದಿಗೆ ಚೆಂಡೆಸೆತದ ಸಂಖ್ಯೆ (೪, ೫ ಅಥವಾ ೬); ಇದರಿಂದ ಫಲಿಸುವ ಆಟ; Maiden o. (Maid ನೋಡಿ)]. ಅತಿಯಾಗಿ; ಮಿತಿ ಮೀರಿ; ಜೊತೆಗೆ; ಅಲ್ಲದೆ; ಅದು ಬಿಟ್ಟು (O. anxious ಅತಿಯಾಗಿ ಕಾತರಗೊಂಡು); ಮೊದಲಿಂದ ಕಡೆಯ ವರೆಗೆ; ಮತ್ತೆ ಮತ್ತೆ; ಪೂರ್ತಿಯಾಗಿ; ಅತ್ಯಂತವಾಗಿ (Read it o.; Did it six times o.). Take this o. to the Post-office ಇದನ್ನು ಅತ್ತಲಿರುವ ಅಂಚೆಯ ಕಚೇರಿಗೆ ತೆಗೆದುಕೊಂಡು ಹೋಗು. Asked him o. ಅವನನ್ನು ಬರಬೇಕೆಂದು ಕರೆದೆನು. Is o. in America ಅವನು ಅತ್ತ ಅಮೇರಿಕದಲ್ಲಿದ್ದಾನೆ. O. against ಎದುರಾಗಿ; ಅಭಿಮುಖವಾಗಿ; ವಿರುದ್ಧ ಪರಿಸ್ಥಿತಿಯಲ್ಲಿ. Malcontents went o. to the enemy ಅಸಮಾಧಾನವುಳ್ಳವರು, ದಂಗೆಕೋರರು, ಶತ್ರುಪಕ್ಷಕ್ಕೆ ಹೋಗಿ ಸೇರಿದರು. Handed o. the seals. Made o. the balance to a charity. Give o. (Give ನೋಡಿ). Not o. well ಅಷ್ಟೇನೂ ಸರಿಯಿಲ್ಲದೆ; ಸ್ವಲ್ಪ ಮಟ್ಟಿಗೆ ಕೆಟ್ಟೇ, ಕೆಡಿಸಿಯೇ. Shall have something o. ಅದರ ಮೇಲೆ ಮತ್ತೆ ಸ್ವಲ್ಪ ಕೊಡರಾಗುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

20 lbs. & o. It can stand o. ಅದು ಸದ್ಯಕ್ಕೆ ಹಾಗೆಯೇ ನಿಂತಿರಲಿ, ಉಳಿದಿರಲಿ. O. & above ಅದರ ಮೇಲೆ ; ಅದಕ್ಕೂ ಹೆಚ್ಚಾಗಿ. That is Jones all-o. (All ನೋಡಿ). O. all ಆದ್ಯಂತವಾಗಿ. O. & o. ; O. again ; O. & o. again ಮತ್ತೆ ಮತ್ತೆ. Talk, think, the matter o. ಆ ವಿಷಯ ದಲ್ಲಿ ಚೆನ್ನಾಗಿ, ಕೂಲಂಕಷವಾಗಿ, —ಮಾತನಾಡು, ಪರ್ಯಾಲೋಚಿಸು. The struggle is o. ಕಾದಾಟ ಮುಗಿಯಿತು. An umbrella o. his head. Projects o. the street. Doubt hangs o. the question ಆ ಪ್ರಶ್ನೆಯ ವಿಷಯವಾಗಿ ಸಂಶಯ ಕವಿದಿದೆ. O. our heads ನಮ್ಮ ಬುದ್ಧಿಗೆ ಮೀರಿ ; ನಮ್ಮನ್ನು ಸಲಹೆ ಕೇಳದೆಯೇ. Hand o. hand (Hand ನೋಡಿ). Writing o. the signature X=X ಎಂದು ಸಹಿ ಮಾಡಿ ಬರೆಯುತ್ತ. O. head & ears (Ear[1] ನೋಡಿ). O. shoes over boots (Boot[1] ನೋಡಿ). A change came o. him. You may travel o. Europe or Europe o. All the world o. Went o. his notes ತನ್ನ ಟಿಪ್ಪಣಿಯನ್ನು ತಿರುವಿಹಾಕಿದನು. Sitting o. the fire ಬೆಂಕಿ ಕಾಯಿಸಿಕೊಳ್ಳುತ್ತ. Sitting o. a cheerful glass ಮದ್ಯದ ಸುಖವನ್ನನುಭವಿಸುತ್ತ. Laugh o. the absurdity of it. Go to sleep o. one's work ಮಾಡಬೇಕಾದ ಕೆಲಸ ಮಾಡದೆ ಮರೆತುಬಿಡು, ನಿರ್ಲಕ್ಷಿಸು. He is king o. twenty millions ಆತನು ಎರಡು ಕೋಟಿ ಪ್ರಜೆಗಳಿಗೆ ದೊರೆ. Set him o. the rest ಅವನನ್ನು ಉಳಿದವರ ಮೇಲೆ ಏರಿಸು. Give me the preference o. him ಅವನಿಗಿಂತ ನನಗೆ ಹೆಚ್ಚು ಪ್ರಾಶಸ್ತ್ಯ ಕೊಡು. Cost o. £ 50. Fell o. the edge ಅರುಗಿನಿಂದಾಚೆಗೆ ಬಿದ್ದನು. Stumble o. ಎಡವಿ ಬೀಳು ; (ರೂಪ.) ಉದ್ದೇಶವಿಟ್ಟು ಹುಡುಕದೆ ಕಂಡುಬರು. Jumped o. the brook. Looking o. the hedge. The house o. the way ಎದುರಿಗಿರುವ ಮನೆ. The King o. the water ದೇಶ ಭ್ರಷ್ಟನಾದ ದೊರೆ. Will not live o. today ಈ ದಿನದ ಮೇಲೆ ಬದುಕುವುದಿಲ್ಲ. Can you stay o. Wednesday? ನೀನು ಬುಧವಾರ ಪೂರ್ತ ನಿಲ್ಲಲಾಗುವುದೆ?

Óver- (ಸ. ಪೂ. ಪ.). 1. (ಗು.) 'ಮೇಲಿನ, ಹೊರಗಿನ, ಮೇಲ್ತರದ, ಮೇಲ್ದರ್ಜೆಯ, ತಲೆಕೆಳಗಿನ, ಹೆಚ್ಚುವರಿಯ' —ಎಂಬ ಅರ್ಥ ಗಳಲ್ಲಿ ಪ್ರ.

2. (ಉಪ.) ಒಟ್ಟುಪದದ ಉತ್ತರ ಭಾಗಕ್ಕೆ ವಿಶೇಷಣವಾಗಿದ್ದು ಅದರೊಡನೆ ಸೇರಿ ನಾಮವಾಚಿ, ಗುಣವಾಚಿ, ಅಥವಾ ಕ್ರಿ. ವಿ. ಆಗುವುದು.

3. (ಉಪ.) ಕ್ರಿಯಾಪದಗಳಿಗೆ ಪೂ. ಪ್ರ. ವಾಗಿ ಹತ್ತಿ ಅನೇಕ ವೇಳೆ ವಿಶೇಷಾರ್ಥ ಕೊಡುವುದು.

4. (ಕ್ರಿ. ವಿ.) 'ಮೇಲೆ, ಹೊದಿಕೆಯಾಗಿ, ಮೇಲಿಂದ ತಳಕ್ಕೆ, ನೇರದಿಂದ ತಳಕ್ಕೆ, ಕಳೆದುಹೋಗಿ, ಮೀರಿ, ಜೊತೆಗೆ'—ಎಂಬ ಅರ್ಥ ಗಳಲ್ಲಿ ಪ್ರ.

5. ಕ್ರಿ. ವಿ. ವಾಗಿ ಸಕರ್ಮಕ ಕ್ರಿಯಾಪದದೊಡನೆ ಸೇರಿ, 'ಪರಿಣಾಮಕಾರಿಯಾಗಿ, ಸಂಪೂರ್ಣವಾಗಿ, ಅಧೀನವಾಗುವಂತೆ' —ಎಂಬ ಅರ್ಥ ಕೊಡುತ್ತದೆ.

6. ಕ್ರಿ. ವಿ. ವಾಗಿ ಅಥವಾ ಗುಣವಾಚಿಯಾಗಿ ಕ್ರಿಯಾಪದಕ್ಕೆ, ಗುಣವಾಚಿಗೆ, ಕ್ರಿ. ವಿ. ಕ್ಕೆ, ಅಥವಾ ನಾಮವಾಚಿಗೆ ಹತ್ತಿ, 'ಬೇಕಾದುದಕ್ಕಿಂತ, ನಿಶ್ಚಯಾಂಶಕ್ಕಿಂತ, ಒಂದು ಗೊತ್ತಾದ ಮಿತಿ ಗಿಂತ, —ಹೆಚ್ಚು' ಎಂಬ ಅರ್ಥ ಕೊಡುತ್ತದೆ.

7. ಕ್ರಿಯಾಪದಕ್ಕೆ ಪೂ. ಪ್ರ. ವಾಗಿ ಹತ್ತಿ Self ಎಂಬುದನ್ನು ಕರ್ಮಪದವಾಗಿ ಹೊಂದಿ ಅಥವಾ ಭೂತ ಕೃದ್ವಾಚಿಯಾಗಿ, 'ಕಾರ್ಯ ವನ್ನು ಮಿತಿಮೀರಿ ಮಾಡುವುದರಿಂದ ಹಾನಿ ಪಡೆ' ಎಂಬ ಅರ್ಥ ವನ್ನು ಕೊಡುತ್ತದೆ.

8. ಕ್ರಿಯಾಪದಕ್ಕೆ ಅಥವಾ ಗುಣವಾಚಿಗೆ ಪೂ. ಪ್ರ. ವಾಗಿ ಹತ್ತಿ, '—ಇಂತ ಹೆಚ್ಚಾಗಿ' ಎಂಬ ಹೆಚ್ಚಿನ ಅರ್ಥವನ್ನು ಕೊಡುತ್ತದೆ.

9. ಪೂರ್ವ ಪ್ರತ್ಯಯವಾಗಿ ಹತ್ತಿ ಅಕರ್ಮಕ ಕ್ರಿಯಾವಾಚಿ ಯನ್ನು ಸಕರ್ಮಕ ಕ್ರಿಯಾವಾಚಿಯನ್ನಾಗಿ ಮಾಡಿ, ಸಾ., 'ಮೀರಿ, ಹೆಚ್ಚಿ' ಎಂಬ ಅರ್ಥವನ್ನು ಕೊಡುತ್ತದೆ.

Over-abóund (6) (ಕ್ರಿ. ಅಕ.) ; **Over-abúndance** (ನಾ.) ; **Over-abúndant** (ಗು.) ; **Over-abúndantly** (ಕ್ರಿ. ವಿ.). **Over-áct** (6) (ಕ್ರಿ.) (ಪಾತ್ರವನ್ನು) ಅತಿಯಾಗಿ ನಟಿಸು, ಅಭಿನಯಿಸು ; (ಭಾವೋದ್ರೇಕ, ಮೊ. ನ್ನು) ಅತಿ ಮಾಡು. **Over-áctive** (ಗು.) ; **Over-actívity** (ನಾ.). **Óver-all** (2) (ನಾ.) (ಹೆಂಗಸಿನ, ಸಡಿಲವಾದ) ಕೆಲಸದ ಮೇಲುಡುಪು, ದಗಲೆ ; (ಬ. ವ. ದಲ್ಲಿ) (ಕೊಳಕು ಕೆಲಸ ಮಾಡುವಾಗ ತೊಡುವ) ಮೇಲು ಷರಾಯಿ, ಕಾಲ್ಮುಚ್ಚು, ಅಥವಾ ಒಟ್ಟುಗೂಡಿಸಿದ ಉಡುಪು. (ಸೈನ್ಯ : ಬ. ವ. ದಲ್ಲಿ) ಅಧಿಕಾರಿಯ ಪೂರ್ತಿಯುಡುಪಿನ ಬಿಗಿ ಷರಾಯಿ. **Over-anxíety** (6) (ನಾ.) ; **Over-ánxious** (ಗು.) ; **Over-ánxiously** (ಕ್ರಿ. ವಿ.). **Overárch** (4) (ಕ್ರಿ.) ಕಮಾನಾಗಿ, ಕಮಾನಿನಂತೆ, —ಮೇಲೆ ಬಗ್ಗು, ಬಗ್ಗಿಸು. **Over-awé** (5) (ಕ್ರಿ. ಸಕ.) ಭಯ ಹುಟ್ಟಿಸಿ ತಡೆಗಟ್ಟು, ಅಧೀನ ಮಾಡಿಕೊ ; ಭೀತಿ ಹುಟ್ಟಿಸು. **Overbálance** (4) (ಕ್ರಿ.) ಪವಣು ತಪ್ಪಿ ಬೀಳು ; —ಬೀಳಿಸು. **Overbálance** (8) (ಕ್ರಿ. ಸಕ.) (—ಇಂತ) ಹೆಚ್ಚಾಗಿ ತೂಗು ; ಹೆಚ್ಚು ತೂಕವಿರು (ರೂಪ. ಸಹ). **Óverbalance** (ನಾ.) ಹೆಚ್ಚು ತೂಕದ ಮೊತ್ತ ; ಆಧಿಕ್ಯ. **Overbeár** (4) (ಕ್ರಿ. ಸಕ.) ಭಾರದಿಂದ, ಬಲ ಪ್ರಯೋಗದಿಂದ, —ಸೋಲಿಸು, ಉರುಳಿಸು ; ಬಲಾತ್ಕಾರದಿಂದ, ಅಧಿಕಾರ ಬಲದಿಂದ, —ತುಳಿ, ಅದುಮು ; ಭಾರದಲ್ಲಿ ಮೀರು ; ಪ್ರಾಬಲ್ಯ, ಮೊ. ಗಳಲ್ಲಿ ಮೀರಿರು. **Over-beáring** (ಗು.) ಪ್ರಬಲವಾಗಿರುವ ; ದರ್ಪದಿಂದ ನಡೆಯುವ ; ಉದ್ಧತ. **Overbeáringly** (ಕ್ರಿ. ವಿ.) ; **Overbeáring-ness** (ನಾ.). **Overbloẃ** (6) (ಕ್ರಿ. ಸಕ.) (ಸಂ.) (ಮೂಲ ಸ್ವರಕ್ಕೆ ಬದಲು ಗೌಣ ಸ್ವರ ಹೊರಡುವಂತೆ ಪಿಳ್ಳಂಗೋವಿ, ಕೊಳಲು, ಮೊ. ನ್ನು) ಅತಿ ಬಲವಾಗಿ ಊದು. **Overbloẃn** (4) (ಭೂ. ಕೃ.) (ಬಿರುಗಾಳಿ ಮಳೆ, ಮೊ. ವು) ಬೀಸಿ ಮುಗಿದ. **Overbloẃn** (6) (ಗು.) (ಹೂವು) ಹೆಚ್ಚು ಅರಳಿದ ; ಪ್ರಾಯ ಮೀರಿದ. **Óverboard** (2) (ಕ್ರಿ. ವಿ.) ಹಡಗಿನೊಳಗಿನಿಂದ ನೀರಿಗೆ [ಸಾ., Fall, throw, o. Throw o. (ರೂಪ.) ತೊರೆದುಬಿಡು ; ತ್ಯಜಿಸು ; ನಿರಾಕರಿಸು]. **Overbóld** (6) (ಗು.) ; **Overbrím** (3) (ಕ್ರಿ.) ತುಂಬಿ ಹರಿ ; ತುಂಬಿ ತುಳುಕು (Water overbrimmed the cup). **Overbuíld** (9) (ಕ್ರಿ. ಸಕ.) (ನಿವೇಶನದಮೇಲೆ) ಅತಿ ಒತ್ತಾಗಿ, ವಿಪರೀತವಾಗಿ, (ಕಟ್ಟಡ ಗಳನ್ನು) ಕಟ್ಟು. **Overbúrden** (6) (ಕ್ರಿ. ಸಕ., ನಾ.); **Over-búrdensome** (ಗು.). **Overbúsy** (6) (ಗು.) ಮಿತಿ ಮೀರಿ ಕೆಲಸ ಮಾಡುವ ; ಮಿತಿ ಮೀರಿದ ಕಾರ್ಯ ಚಟುವಟಿಕೆಯುಳ್ಳ ; ಅಧಿಕ ಪ್ರಸಂಗಿತನದ. **Overbuý** (6) (ಕ್ರಿ. ಅಕ.) ಬೇಕಾದುದಕ್ಕಿಂತಲೂ ಹೆಚ್ಚಾಗಿ ಕೊಳ್ಳು; ಮಿತಿ ಮೀರಿ ಕೊಂಡುಹಾಕು. **Overcápitalize** (6) (ಕ್ರಿ. ಸಕ.) (ಒಂದು ವ್ಯಾಪಾರಸಂಸ್ಥೆ, ಮೊ. ಗಳ) ಬಂಡವಾಳವನ್ನು ಅವಶ್ಯವಾದುದಕ್ಕಿಂತ ಹೆಚ್ಚಾಗಿ ಗೊತ್ತುಮಾಡು, ಸೇರಿಸು. **Over-cáre** (6) (ನಾ.) ; **Over-cáreful** (ಗು.). **Overcást** (9) (ಕ್ರಿ. ಸಕ.) (ಆಕಾಶ, ಮೊ. ನ್ನು ಮೋಡ, ಕತ್ತಲೆ, ಮೊ.) ಕವಿ, ಆವರಿಸು (ಸಾ., ಭೂ. ಕೃ. ನಲ್ಲಿ). (ಬಿಚ್ಚಿಕೊಳ್ಳದಂತೆ) ಅಂಚು ಮಡಿಸಿ (ಕಾಜಾ ಹೊಲಿಗೆಯಂತೆ) ಒತ್ತುಹೊಲಿಗೆ ಹಾಕು. **Over-caútion** (6) (ನಾ.) ; **Over-caútious** (ಗು.) ; **Over-caútiously** (ಕ್ರಿ. ವಿ.). **Overchárge** (6) (ಕ್ರಿ. ಸಕ.) ಸಿಡಿಮದ್ದು, ವಿದ್ಯುಚ್ಛಕ್ತಿ, ಮೊ. ನ್ನು ಬಹು ಹೆಚ್ಚಾಗಿ ತುಂಬು. (ವರ್ಣನೆ, ಚಿತ್ರ, ಮೊ. ಗಳಲ್ಲಿ) ಅತಿಮಾಡಿದ ಸೂಕ್ಷ್ಮಾಂಶಗಳನ್ನಾಗಲಿ ಅತಿ ವಿಶದವಾದ ವಿವರಗಳನ್ನಾಗಲಿ ತುಂಬು. (ಪದಾರ್ಥಕ್ಕೆ ಅಥವಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಿರಾಕಿಗೆ) ವಿಪರೀತ ಬೆಲೆ ಹಾಕು ; ಸರಿಯಾದ ಬೆಲೆಗಿಂತ ಹೆಚ್ಚು ಬೆಲೆ ಹಾಕು. **Óvercharge** (ನಾ.). **Overclóud** (4) (ಕ್ರಿ. ಸಕ.) ಮೇಲೆ ಮೋಡ ಕವಿ ; ಮೋಡದಂತೆ ಕವಿ ; (ರೂಪ.) ಮಬ್ಬುಗವಿ(ಸು); ಮಂಕಾಗಿ ಮಾಡು, ಆಗು ; ಕಾಣದಂತೆ ಮಾಡು, ಆಗು. **Over-clóy** (5) (ಕ್ರಿ. ಸಕ.) ಅತಿ ವೆಗಟಾಗಿಸು. **Óvercoat** (1) (ನಾ.) (ಒಳ ಅಂಗಿಯಮೇಲೆ ತೊಡುವ) ಮೇಲಂಗಿ. **Overcólour** (6) (ಕ್ರಿ. ಸಕ.) (ವರ್ಣನೆಯ ವಿವರಗಳನ್ನು) ಅತಿಮಾಡಿ ಹೇಳು, ರೂಪಿಸು ; ಹೆಚ್ಚು ಬಣ್ಣ ಕಟ್ಟಿ ರೂಪಿಸು. **Overcóme** (3) (ಕ್ರಿ.) (ತೊಡರು) ದಾಟು ; ಅಧೀನ ಮಾಡಿಕೊ ; ಜಯಿಸು ; ಗೆಲ್ಲು ; ಮೇಲುಗೈಯಾಗು. (ಭೂ. ಕೃ.) ಬಳಲಿದ ; ಸೋತುಹೋದ ; ಅಸಹಾಯನಾದ ; ಸ್ಥೈರ್ಯಗೆಟ್ಟ (*With* or *by* emotion, etc. O. with liquor ಕುಡಿದು ಅಮಲೇರಿದ). **Over-cónfidence** (6) (ನಾ.) ; **Over-cónfident** (ಗು.) ; **Over-cónfidently** (ಕ್ರಿ. ವಿ.). **Over-credúlity** (6) (ನಾ.) ; **Over-crédulous** (ಗು.). **Overcróp** (6) (ಕ್ರಿ. ಸಕ.) (ಜಮಿನನ್ನು) ಎಡೆಬಿಡದೆ ಸಂತತವಾಗಿ ಬೆಳೆಯಿಟ್ಟು ಸಾರ ಹೀರಿ ಫಲವತ್ತಿಲ್ಲದಂತೆ ಮಾಡು. **Overcrów** (3) (ಕ್ರಿ. ಸಕ.) (ಪ್ರತಿಸ್ಪರ್ಧಿಯನ್ನು) ಸೋಲಿಸಿ ಹೆಕ್ಕಳಿಸು, ಜಯಭೇರಿ ಹೊಡೆ ; ಮಿತಿಮೀರಿ ಬಡಾಯಿ ಕೊಚ್ಚಿಕೊ. **Overcrówd** (6) (ಕ್ರಿ. ಸಕ.). **Over-cúnning** (6) (ನಾ.) (ತಾನೇ ಸಿಕ್ಕಿಬೀಳುವಂಥ) ವಿಪರೀತ ತಂತ್ರ ; ಅತಿ ಕಳಿಂಗತನ. **Over-cúrious** (6) (ಗು.) (ವಿಷಯವನ್ನು ತಿಳಿದುಕೊಳ್ಳಲು) ಅತಿ ಕುತೂಹಲಪಡುವ ; ಅತಿ ಜೋಕೆಯ ; ಅತಿ ಸೂಕ್ಷ್ಮಕ್ಕೆ ಹೋಗುವ ; ಒಪ್ಪಿಸಲು ಅತಿಕಷ್ಟವಾದ. **Over-cúriously** (ಕ್ರಿ. ವಿ.) ; **Over-curiósity** (ನಾ.). **Over-délicacy** (6) (ನಾ.) ; **Over-délicate** (ಗು.). **Over-devélop** (6) (ಕ್ರಿ. ಸಕ.) (ಛಾಯಾ ಚಿತ್ರದ ವಿಷಯದಲ್ಲಿ). **Over-dó** (6) (ಕ್ರಿ. ಸಕ.) ಅತಿ ಮಾಡು ; ಮಿತಿ ಮೀರಿ ನಡೆ. ಹದ ಮೀರಿ, ಬಹಳ ಹೆಚ್ಚಾಗಿ, ಬೇಯಿಸು (ಮು., ಭೂ. ಕೃ. ನಲ್ಲಿ). ಶಕ್ತಿ ಮೀರಿ ಕಾರ್ಯಮಾಡು, ದಣಿ (ಮು., ಭೂ. ಕೃ. ನಲ್ಲಿ). **Óverdoor** (2) (ನಾ.) ಬಾಗಿಲ ಮೇಲಿನ ಅಲಂಕಾರದ ಮರಗೆಲಸ. **Overdóse** (6) (ಕ್ರಿ. ಸಕ.) ಔಷಧವನ್ನು ಗೊತ್ತಾದ ಪ್ರಮಾಣಕ್ಕೆ ಮೀರಿ ಕೊಡು. **Óverdóse** (ನಾ.). **Óverdraft** (6) (ನಾ.) ಬ್ಯಾಂಕಿನಲ್ಲಿ ತನ್ನ ಲೆಕ್ಕದಲ್ಲಿರುವುದಕ್ಕಿಂತ ಹೆಚ್ಚಾಗಿ ಹಣ ತೆಗೆಯುವುದು ; ಹೀಗೆ ತೆಗೆದ ಮೊತ್ತ. **Over-dráw** (6) (ಕ್ರಿ.) ತನ್ನ ಲೆಕ್ಕದಲ್ಲಿರುವುದಕ್ಕಿಂತ, ತನಗೆ ಅವಶ್ಯಕವಾದುದಕ್ಕಿಂತ, ಹೆಚ್ಚಿನ ಮೊತ್ತವನ್ನು ಚೆಕ್ಕಿನ ಮೂಲಕ ಬ್ಯಾಂಕಿನಿಂದ ತೆಗೆ. (ವರ್ಣನೆಯಲ್ಲಿ) ಅತಿಶಯೋಕ್ತಿ ಹೇಳು. **Over-dréss** (6) (ಕ್ರಿ.). **Over-drínk** (7) (ಕ್ರಿ.). **Over-dríve** (6) (ಕ್ರಿ. ಸಕ.) (ಕುದುರೆ, ಮೊ. ನ್ನು) ದಣಿದುಬೀಳುವಂತೆ ಓಡಿಸು ; (ಒಬ್ಬನನ್ನು) ಮಿತಿಮೀರಿ ದಣಿಸು. **Overdué** (8) (ಗು.). **Over-eáger** (6) (ಗು.) ; **Over-eágerly** (ಕ್ರಿ. ವಿ.) ; **Over-eágerness** (ನಾ.). **Over-eárnest** (6) (ಗು.). **Overeát** (7) (ಕ್ರಿ.). **Over-éstimate** (6) (—ಮೇಟ್) (ಕ್ರಿ. ಸಕ.) ಹೆಚ್ಚು ಬೆಲೆ ಕಟ್ಟು ; ಹೆಚ್ಚು ಅಂದಾಜು ಮಾಡು. (ನಾ.) (—ಮೆಟ್). **Over-excíte** (6) (ಕ್ರಿ. ಸಕ.). **Over-exértion** (6) (ನಾ.). **Over-expóse** (6) (ಕ್ರಿ. ಸಕ.); **Over-expósure** (ನಾ.) (ಛಾಯಾ ಚಿತ್ರದ ವಿಷಯದಲ್ಲಿ). **Óverfall** (4) (ನಾ.) ಸಮುದ್ರ ತಳದಲ್ಲಿಯ ದಿಬ್ಬಸಾಲಿನಮೇಲೆ ಬಲವಾದ ನೀರಿನ ಹರಿವಿನಿಂದ ಸಮುದ್ರದ ಮೇಲುಂಟಾದ ಉಲ್ಲಕಲ್ಲೋಲ ; ಸಮುದ್ರದ ಅಥವಾ ಇತರ ಜಲರಾಶಿಯ ತಳದಲ್ಲಿ ಥಟ್ಟನೆ ದೊರೆತ ಆಳದ ಆಧಿಕ್ಯ. ಕಾಲುವೆಯಲ್ಲಿ, ಮಟ್ಟ ಬದಲಾವಣೆಯ ಕಟ್ಟೆ, ಮೊ. ಗಳಲ್ಲಿ, ಹೆಚ್ಚು ನೀರು ಹರಿದುಹೋಗಲು ಮಾಡಿರುವ ಅವಕಾಶ. **Over-fatígue** (6) (ಕ್ರಿ. ಸಕ., ನಾ.). **Overfeéd** (7) (ಕ್ರಿ.) ಮಿತಿಮೀರಿ ತಿನ್ನು, ತಿನ್ನಿಸು. **Overfíll** (8) (ಕ್ರಿ. ಸಕ.). **Overfish** (6) (ಕ್ರಿ. ಸಕ.) (ಹೊಳೆ, ಮೊ. ಗಳಲ್ಲಿ) ಹೆಚ್ಚಾಗಿ ಮೀನು ಹಿಡಿದು ಮೀನಿಲ್ಲದಂತೆ ಮಾಡು. **Óverflow** (3) (ನಾ.) ತುಂಬಿ ಹೊರ ಹರಿದದ್ದು ; ಕೋಡಿ ಹರಿದದ್ದು; ಹೆಚ್ಚಾದದ್ದು (O. meeting ಕಿಕ್ಕಿರಿದ ಸಭೆಯಲ್ಲಿ ಸ್ಥಳ ದೊರೆಯದೆ ಹೋದವರು ಬೇರೆಯ ಕಡೆ ಸೇರಿ ಮಾಡುವ ಸಭೆ). **Overflów** (ಕ್ರಿ.) ತುಂಬಿ ಹರಿ ; (ಮೇರೆಡೆಯಲ್ಲಿ) ಪ್ರವಹಿಸು, ಹರಿ. (ರೂಪ.) (ಗುಂಪು, ಮೊ. ಗಳ ವಿಷಯದಲ್ಲಿ) ಸಭಾಂಗಣ, ಮೊ. ಗಳ ಮೇರೆ ಮೀರಿ ಹೊರಗೂ ಹಬ್ಬಿರು ; (ಪಾತ್ರೆ) ತುಂಬಿ ತುಳುಕು ; (ದಯೆ, ಬೆಳೆ, ಮೊ. ವು) ಸಮೃದ್ಧವಾಗಿರು. **Óverflowing** (ಗು., ನಾ.) (Full to o.); **Overflówingly** (ಕ್ರಿ. ವಿ.). **Óverfold** (1) (ಭೂ. ವಿ.) ಮಧ್ಯಭಾಗವು ಮೇಲು ಕೆಳಗಾಗುವಷ್ಟುಮಟ್ಟಿನ ಸ್ತರದ ಸಂಪೂರ್ಣ ಮಡಿಕೆ. **Overfónd** (6) (ಗು.). **Overfúll** (8) (ಗು.). **Overgíld** (4) (ಕ್ರಿ. ಸಕ.) ಮೇಲೆ ಚಿನ್ನದ ಮುಲಾಮು ಮಾಡು ; (ರೂಪ.) ಹೊಂಬಣ್ಣ ಕೊಡು. **Over-góvern** (6) (ಕ್ರಿ. ಸಕ.) ಅನಾವಶ್ಯಕವಾದ ಕಟ್ಟುಕಟ್ಟಳೆಗಳಿಗೆ ಗುರಿಪಡಿಸು ; ಅತಿ ಪ್ರಭುತ್ವ ನಡಸು. **Overgóvernment** (ನಾ.). **Óverground** (2) (ಗು.) ನೆಲದಿಂದ ಮೇಲಕ್ಕೆ ಎದ್ದಿರುವ (ನೆಲದ ಕೆಳಗಲ್ಲ). **Overgrów** (3, 7) (ಕ್ರಿ.) (ಹಂಬಿನ ವಿಷಯದಲ್ಲಿ) (ಒಂದರಮೇಲೆ) ಹಬ್ಬು , ಮಿತಿಮೀರಿ ಬೆಳೆ ; (ಭೂ. ಕೃ. ನಲ್ಲಿ) (—ನ್ನು) ಮೀರಿ ಬೆಳೆದ. **Óvergrowth** (3, 6) (ನಾ.) ಮಿತಿಮೀರಿದ ಬೆಳವಣಿಗೆ; ಯಾವುದರ ಮೇಲಾದರೂ ಬೆಳೆದಿರುವ ಸಸ್ಯಾದಿಗಳು. (ರೂಪ.) ಹೆಚ್ಚಿಗೆಯ ಬೆಳವಣಿಗೆ; ಮೇಲು ಬೆಳೆ. **Óverhand** (1) (ಗು., ಕ್ರಿ. ವಿ.) (ಹಿಡಿದಿರುವ ಪದಾರ್ಥದ) ಮೇಲೆ ಕೈಯಿಟ್ಟ(ಟ್ಟು) ; ಭುಜದ ಮೇಲೆತ್ತಿದ ಕೈಯುಳ್ಳ(ವನಾಗಿ) [O. bowling, Bowls o. (ಕ್ರಿಕೆಟ್) ಮೇಲುಗೈಯ ಚೆಂಡೆಸೆತ ; ಮೇಲುಗೈ ಮಾಡಿ ಚೆಂಡೆಸೆಯುತ್ತಾನೆ]. **Overháng** (3) (ಕ್ರಿ.; ಭೂತ., ಭೂ. ಕೃ. -hung) ಒಂದರಮೇಲ್ಗಡೆ ಚಾಚಿಕೊಂಡು ಬಿದ್ದಿರು, ಚಾಚಿಕೊಂಡಿರು. (ರೂಪ.) ಮೇಲೆ ಕವಿದುಕೊಂಡಿರು ; ಕೂಡಲೆ ಸಂಭವಿಸುವಂತಿರು ; ಆಸನ್ನವಾಗಿರು. **Óverhang** (ನಾ.) ಚಾಚಿಕೊಂಡಿರುವುದು ; —ವ ಮೊತ್ತ. **Over-háste** (6) (ನಾ.); **Over-hásty** (ಗು.); **Over-hástily** (ಕ್ರಿ. ವಿ.). **Overhaúl** (4) (ಕ್ರಿ. ಸಕ.) ಶೋಧನೆಗಾಗಿ, ದುರಸ್ತು ಮಾಡುವುದಕ್ಕಾಗಿ, (ಯಂತ್ರ, ಮೊ. ಗಳ) ಭಾಗಗಳನ್ನೆಲ್ಲ ಕಳಚಿಹಾಕು ; (ಒಂದರ) ಸ್ಥಿತಿಯನ್ನು ಕೂಲಂಕಷವಾಗಿ ಪರೀಕ್ಷಿಸು. (ಮು., ನಾವೆ) ವೇಗವಾಗಿ ಹೋಗಿ (ಮುಂದೆ ಹೋಗುತ್ತಿರುವುದನ್ನು) ಜೊತೆಗೂಡು. **Overhead** (2) (ಗು.) ನೆತ್ತಿಯ ಮೇಲ್ಗಡೆಯ ; ಭೂಮಿಯಿಂದ ಮೇಲೆ ಎತ್ತರದಲ್ಲಿ ಇರುವ, ಹಾಕಿದ [O. wires. O. charges (ವ್ಯಾಪಾರದಲ್ಲಿ) ಸಿಬ್ಬಂದಿ, ಆಡಳಿತ, ಬಂಡವಾಳದಮೇಲಿನ ಬಡ್ಡಿ ಮತ್ತು ಇತರ ಸಾಮಾನ್ಯ ಅವಶ್ಯಕತೆಗಳಿಗಾಗಿ ತಗುಲುವ ವೆಚ್ಚ : ಮೇಲಾಡಳಿತದ ವೆಚ್ಚ]. **Overhéad** (ಕ್ರಿ. ವಿ.) ನೆತ್ತಿಯ ಮೇಲ್ಗಡೆ; ಎತ್ತರದಲ್ಲಿ; ಆಕಾಶದಲ್ಲಿ; ಮೇಲು ಮಹಡಿಯಲ್ಲಿ. **Overheár** (4) (ಕ್ರಿ. ಸಕ.) ಹೊಂಚು ಕೇಳು ; ಕದ್ದು ಕೇಳು; (ಒಬ್ಬರ) ಕಣ್ಣಿಗೆ ಬೀಳದಂತೆ, ಉದ್ದೇಶವಿಲ್ಲದೆ, —ಕೇಳು. **Over-heát** (6) (ಕ್ರಿ. ಸಕ.). **Óverhouse** (2) (ಗು.) (ತಂತಿಗಳ ವಿಷಯದಲ್ಲಿ: ಕಂಬಗಳ ಮೇಲಲ್ಲದೆ) ಮನೆಯ ಮಾಳಿಗೆಗಳ ಮೇಲೆ ಆಧಾರ ಮಾಡಿರುವ. **Overhoused** (6) (—ಹೌಸ್ಡ್) (ಗು.) ವಿಪರೀತ ದೊಡ್ಡ ಮನೆಯಲ್ಲಿ ವಾಸಮಾಡುವ. **Over-indúlge** (6) (ಕ್ರಿ.) ; **Over-indúlgence** (ನಾ.). **Over-íssue** (6) (ಕ್ರಿ. ಸಕ., ನಾ.) (ಕಾಗದದ ನಾಣ್ಯ, ಬಂಡವಾಳದ ಹುಂಡಿಗೆಗಳು ಅಥವಾ ಪಾಲುಗಳು, ಮೊ. ನ್ನು) ನಿರ್ದಿಷ್ಟ ಪ್ರಮಾಣಕ್ಕಿಂತಲಾಗಲಿ, ಕೊಡಲಾಗುವ ಚೈತನ್ಯಕ್ಕಿಂತಲಾಗಲಿ, ಮಿತಿಮೀರಿ ಚಲಾವಣೆಗೆ ತರು. (ನಾ.) ಹೀಗೆ ಚಲಾವಣೆಗೆ ತಂದದ್ದು, ತಂದ ಮೊತ್ತ. **Overjoýed** (5) (ಭೂ. ಕೃ.) ಆನಂದ ಪರವಶನಾಗಿ; ಅತ್ಯಾನಂದ ಪಟ್ಟು (*At* ಉಪ. ಜೊಡನೆ). **Overjúmp** (7) (O. oneself ಮಿತಿಮೀರಿ ಹಾರಿ ಉಳುಕಿಸಿಕೊ). **Óverknee** (2) (ಗು.) ಮೊಣಕಾಲ ಮೇಲಕ್ಕೆ ಬರುವ. **Over-lábour** (6) (ಕ್ರಿ. ಸಕ.) ಮಿತಿಮೀರಿ ದುಡಿ(ಸು) ; ವಿಪರೀತವಾಗಿ ವಿಸ್ತರಿಸು, ಲಂಬಿಸು. **Overláden** (6) (ಗು.). **Overlánd** (2)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕ್ರಿ. ವಿ.) ಭೂ ಮಾರ್ಗವಾಗಿ (ಸಮುದ್ರದಮೇಲಲ್ಲ). **Óverland** (ಗು.) (ಪೂರ್ತಿಯಾಗಿ ಅಥವಾ ಸ್ವಲ್ಪ ಭಾಗ) ಭೂ ಮಾರ್ಗದ (ಮು., ಮೆಡಿಟರೇನಿಯನ್ ಸಮುದ್ರದ ಮೂಲಕ ಇಂಡಿಯಾಕ್ಕೆ ಬರುವ ಮಾರ್ಗ, ಅಥವಾ ಅಟ್ಲಾಂಟಿಕ್ ಸಾಗರದಿಂದ ಅಮೆರಿಕಾ ಖಂಡವನ್ನು ಹಾದು ಪೆಸಿಫಿಕ್ ಸಾಗರಕ್ಕೆ ಹೋಗುವ ಮಾರ್ಗ). **Overláp** (3) (ಕ್ರಿ. ಸಕ.) (ಒಂದರ) ಕೆಲ ಭಾಗ ಮುಚ್ಚು; —ಮುಚ್ಚಿ ಮುಂದಕ್ಕೂ ಹರಡು; ಕೆಲ ಭಾಗ ಏಕವಾಗಿರು; ಒಂದರ ಮೇಲೊಂದು (ಪರಸ್ಪರ) ಪ್ರಸರಿಸು, ವ್ಯಾಪಿಸು; ಮೇಲೆ ಕೂಡು; ಮೇಲುಸೇರುವೆಯಾಗು (The great difficulty in classification is the overlapping of species). **Overlárge** (6) (ಗು.). **Overláy** (4) (ಕ್ರಿ. ಸಕ.) (ಒಂದರ ಮೇಲ್ಮೈಗೆ) ಲೇಪಿಸು, ಹಚ್ಚು, ಹತ್ತಿಸು (*With* ಉಪ. ಮೊಡನೆ); (ಅಪ ಪ್ರಯೋಗ) =Overlie. **Óverlay** (4) (ನಾ.) (ಒಂದರ)ಮೇಲೆ ಇಟ್ಟದ್ದು, ಹಾಕಿದ್ದು; ಮೇಲು ಹರವು; ಸಣ್ಣ ಗವುಸು; ಸಣ್ಣ ಮೇಜಿನ ಹಾಸು ಬಟ್ಟೆ, ಮೊ. ದು. **Overléaf** (2) (ಕ್ರಿ. ವಿ.) (ಪುಸ್ತಕದ) ಹಾಳೆಯ ಮತ್ತೊಂದು ಪಕ್ಕದಲ್ಲಿ. **Overléap** (3) (ಕ್ರಿ. ಸಕ.) (—ರ) ಮೇಲೆ ಹಾರಿಬಿಡು; (—ನ್ನು) ದಾಟು; ಬಿಟ್ಟುಬಿಡು; ಪರಿಗಣಿಸದಿರು; ಕಡೆಗಣಿಸು. **Overlié** (3) (ಕ್ರಿ. ಸಕ.) ಒಂದರ ಮೇಲಿನ ಪ್ರದೇಶದಲ್ಲಿರು; ಮೇಲೆ ಬಿದ್ದಿರು; (ಮಗುವಿನ) ಮೇಲೆ ಬಿದ್ದು ಅಮುಕಿ ಉಸಿರು ಕಟ್ಟಿಸು. **Overlíve** (9) (ಕ್ರಿ. ಸಕ.) (ಮತ್ತೊಬ್ಬನಿಗಿಂತ, ಒಂದು ಗೊತ್ತಾದ ವಯಸ್ಸಿಗಿಂತ) ಹೆಚ್ಚಾಗಿ ಜೀವಿಸು. **Overloád** (6) (ಕ್ರಿ. ಸಕ., ನಾ.). **Overlóng** (6) (ಗು.) ವಿಪರೀತ ಉದ್ದವಾದ; ಅತಿ ಲಂಬಿತ. (ಕ್ರಿ. ವಿ.) ಬಹು ಹೆಚ್ಚು ಕಾಲ(ದ ವರೆಗೆ). **Overloók** (3) (ಕ್ರಿ. ಸಕ.) ಮೇಲಿನಿಂದ, ಮೇಲಿದ್ದು, —ದೃಷ್ಟಿ ಹರಿಸು, ನೋಡು; (—ಇಂತ) ಎತ್ತರದಲ್ಲಿರು, ಮೇಲಿರು. ದೃಷ್ಟಿಸದಿರು; ಲಕ್ಷಿಸದಿರು; ಉಪೇಕ್ಷೆ ಮಾಡು; ಮನ್ನಿಸು. ಮೇಲ್ವಿಚಾರಣೆ ನೋಡಿಕೊ; ಮೇಲಿದ್ದು ನೋಡಿಕೊ. ಕೆಟ್ಟ ದೃಷ್ಟಿ ಹಾಕು; ದೃಷ್ಟಿಯಿಟ್ಟು ಮರುಳುಗೊಳಿಸು. **Óverlord** (1) (ನಾ.) ಅಧಿಪತಿ; ಅಧಿರಾಜ; ಅಧೀಶ್ವರ. **Over-lórdship** (ನಾ.). **Óverman** (1) (ನಾ.) (ತ. ಶಾ.) [ನೀಟ್ಷೆ (Nietzsche) ಎಂಬ ತತ್ತ್ವಜ್ಞನ ಮತ] ಆದರ್ಶ ಪುರುಷ; ಪುಣ್ಯ ಪಾಪಗಳನ್ನೂ ನೈತಿಕ ನಿರ್ಬಂಧಗಳನ್ನೂ ಮೀರಿದ ಶ್ರೇಷ್ಠ ಪುರುಷ; ಲೋಕಾತೀತ ಪುರುಷ (=Superman). **Óvermantel** (2) (ನಾ.) ಒಲೆ ಕಟ್ಟಡದಮೇಲಿನ ಅಲಂಕಾರದ ಬಡು, ಮೊ. ದು. **Over-mány** (6) (ಗು.). **Overmásted** (6) (ಗು.) ಅತಿ ಎತ್ತರದ ಅಥವಾ ಅತಿ ಭಾರದ ಕೂವೆಗಳುಳ್ಳ. **Overmáster** (5) (ಕ್ರಿ. ಸಕ.) ಪೂರ್ತಿ ಅಧೀನ ಪಡಿಸಿಕೊ; (ಇಂತ) ಮೇಲುಗೈಯಾಗು; ಸೋಲಿಸು; ಗೆಲ್ಲು; ಆಳು. **Overmátch** (8) (ಕ್ರಿ. ಸಕ., ನಾ.) (ಸೋಲಿಸಲಾಗದಷ್ಟು) ಹೆಚ್ಚು ಬಲಿಷ್ಠನಾಗಿರು; ಸೋಲಿಸು. **Óver-meásure** (6) (ನಾ.) (ತಕ್ಕದ್ದಕ್ಕಿಂತ) ಅತ್ಯಧಿಕ ಪ್ರಮಾಣ. **Over-módest** (6) (ಗು.). **Overmúch** (6) (ಗು., ನಾ., ಕ್ರಿ. ವಿ.) ವಿಪರೀತ (Be not righteous o.). **Over-níce** (6) (ಗು.) ಅತಿ ನಾಜೂಕಿನ; ಅತಿ ಸೂಕ್ಷ್ಮದ. **Over-níceness** (ನಾ.); **Over-nícety** (ನಾ.). **Overníght** (2) (ಕ್ರಿ. ವಿ.) ಹಿಂದಿನ ರಾತ್ರಿ (ಮುಂದಿನ ದಿವಸದ ಪ್ರಸ್ತಾವ ಮಾಡುವಾಗ). **Óvernight** (ಗು.) —ಮಾಡಿದ, ನಡೆದ. **Overpáss** (3) (ಕ್ರಿ.) ಹಾದು, ದಾಟಿ, ಮೀರಿ, —ಹೋಗು; ಕೊನೆ ಮುಟ್ಟು; ದಾಟು; ಮೀರು; ಮೀರಿಸು. **Overpássed, -pást** (4) (ಗು.) ಕಳೆದುಹೋದ; ಗತ. **Overpaý** (6) (ಕ್ರಿ. ಸಕ.) (ಮನುಷ್ಯ, ಸೇವೆ, ಮೊ. ಕ್ಕೆ) ಹೆಚ್ಚಾಗಿ (ಪ್ರತಿಫಲ) ಕೊಡು. **Over-peópled** (6) (ಗು.) ಮಿತಿ ಮೀರಿದ ಜನ ಸಾಂದ್ರತೆ, ಜನ ಸಮೃದ್ಧಿ, —ಉಳ್ಳ. **Overpersuáde** (5) (ಕ್ರಿ. ಸಕ.) (ಒಬ್ಬನಿಗೆ) ಮನಸ್ಸಿಲ್ಲದಿದ್ದರೂ (ಅವನನ್ನು) ಪ್ರೋತ್ಸಾಹಿಸಿ ಒಪ್ಪುವಂತೆ ಮಾಡು, ತನ್ನ ಕಡೆಗೆ ಮಾಡಿಕೊ. **Overpítch** (6) (ಕ್ರಿ. ಸಕ.) (ಕ್ರಿಕೆಟ್) ಗುರಿಕೋಲಿಗೆ ಬಹು ಹತ್ತಿರ ಪುಟವೇಳುವಂತೆ ಚೆಂಡೆಸೆ. **Óverplus** (1) (ನಾ.) ವೆಚ್ಚ ಕಳೆದು ಉಳಿದದ್ದು; ಸಮೃದ್ಧಿ. **Overpoíse** (8) (ಕ್ರಿ. ಸಕ.) (—ಇಂತ) ಹೆಚ್ಚು ತೂಗು. **Over-pópulated** (6) (ಗು.); **Over-populátion** (ನಾ.). **Overpót** (6) (ಕ್ರಿ. ಸಕ.) (ಗಿಡವನ್ನು) ಅತಿ ದೊಡ್ಡ ಕುಂಡದಲ್ಲಿ ನೆಡು, ಬೆಳೆಸು. **Overpowér** (9) (ಕ್ರಿ.) (ಶಕ್ತಿಗುಂದಿಸಿ) ಅಧೀನ ಪಡಿಸಿಕೊ; ತಲೆಯೆತ್ತದಂತೆ ಮಾಡು; ಸೋಲಿಸು; ಅಡಗಿಸು; (ಒಂದನ್ನು ಫಲಕಾರಿಯಾಗದಂತೆ, ಗೋಚರವಾಗದಂತೆ) ಹೆಚ್ಚಿನ ಪ್ರಭಾವದಿಂದ ಕುಂದಿಸು, ನಿಷ್ಫಲ ಮಾಡು; (ಉಷ್ಣ, ಭಾವೋದ್ರೇಕ, ಮೊ.) ಸಹಿಸಲಾಗದಷ್ಟು ತೀವ್ರವಾಗಿರು; ಪೂರ್ತಿ ಕಂಗೆಡಿಸು; ತಲೆಯೆತ್ತಲಾಗದಂತೆ ಮುಳುಗಿಸಿಬಿಡು; ಪರವಶ ಮಾಡು. **Overpowéring** (ಗು.) ಅದುಮಿಬಿಡುವ; ತಡೆಯಲಾಗದ. **Overpowéringly** (ಕ್ರಿ. ವಿ.). **Overpraíse** (6) (ಕ್ರಿ. ಸಕ., ನಾ.). **Over-preách** (7) (ಕ್ರಿ. ಸಕ.) ಶ್ರೋತೃಗಳ ಗ್ರಹಣ ಶಕ್ತಿಗೆ ಮೀರಿ ಉಪದೇಶ ಹೇಳು; ಉಪದೇಶ ಮಾಡುವುದರಲ್ಲಿ ಮಿತಿ ಮೀರು. **Over-préssure** (6) (ನಾ.) ಅತಿ ಒತ್ತಡ; ವಿಪರೀತ ಕೆಲಸ. **Over-prínt** (6) (ಕ್ರಿ. ಸಕ.) (ಛಾಯಾ ಚಿತ್ರದಲ್ಲಿ) ವಿಷಮ ಪ್ರತಿಯ ಮೂಲಕ ಹೆಚ್ಚು ಬೆಳಕನ್ನು ಹರಿಸಿ ಸಮ ಪ್ರತಿಯ ಚಿತ್ರವನ್ನು ಮಂದ ಮಾಡು. **Over-prodúce** (6) (ಕ್ರಿ.) (ಬೇಕಾದುದಕ್ಕಿಂತ) ಮಿತಿ ಮೀರಿ ಬೆಳೆ, ತಯಾರಿಸು. **Over-prodúction** (ನಾ.). **Óverproof** (2) (ಗು.) (ಪ್ರಮಾಣ ಮದ್ಯಕ್ಕಿಂತ) ಹೆಚ್ಚು ಮದ್ಯಸಾರ ಸೇರಿದ, ಉಳ್ಳ. **Over-púnish** (6) (ಕ್ರಿ. ಸಕ.). **Overráte** (6) (ಕ್ರಿ. ಸಕ.) ಮಿತಿ ಮೀರಿದ ಬೆಲೆ ಕಟ್ಟು (ರೂಪ. ಸಹ). **Overreách** (9) (ಕ್ರಿ.) ಉಪಾಯದಿಂದ ಸಿಕ್ಕಿಸಿಕೊ, ಹಳ್ಳಕ್ಕೆ ಕೆಡವು; ತಂತ್ರದಿಂದ ಅಥವಾ ಉಪಾಯದಿಂದ ಮೇಲುಗೈಯಾಗು, ಸೋಲಿಸು. **Overreách** (7) (Oneself) ಅತಿಬುದ್ಧಿವಂತಿಕೆಯಿಂದ, ಅತಿತಂತ್ರದಿಂದ, ಉದ್ದೇಶ ಭಂಗ ಮಾಡಿಕೊ. (ಕುದುರೆ, ನಡಗೆಯಲ್ಲಿ) ಮುಂಗಾಲನ್ನು ಹಿಂಗಾಲಿನ ಗೊರಸಿನಿಂದ ತಾಕಿಸಿಕೊಂಡು ಗಾಯಮಾಡಿಕೊ. **Over-reád** (6) (ಕ್ರಿ. ಅಕ.). **Over-refíne** (6) (ಕ್ರಿ. ಅಕ.) (ಒಂದು ಅಂಶವನ್ನು, ದೃಷ್ಟಿಯನ್ನು) ಅತಿ ಸೂಕ್ಷ್ಮವಾಗಿ ಎಳೆ; ಅತಿ ಪರಿಷ್ಕಾರ ಮಾಡು. **Over-rént** (9) (ಕ್ರಿ.) (ಜಮೀನು, ರೈತ, ಮೊ. ಕ್ಕೆ) ಮಿತಿಮೀರಿದ ಕಂದಾಯ, ತೆರಿಗೆ, —ಹಾಕು. **Over-ríde** (3, 6) (ಕ್ರಿ. ಸಕ.) (ಕುದುರೆಯನ್ನು) ಅತಿಯಾಗಿ ಸವಾರಿ ಮಾಡಿ ಬಳಲಿಸು. (ಶಸ್ತ್ರಸಜ್ಜಿತ ಸೈನ್ಯದಿಂದ ಶತ್ರುದೇಶದಮೇಲೆ) ದಾಳಿಯಿಡು. (ಒಬ್ಬನನ್ನು) ತನ್ನ ಕುದುರೆಯ ಕಾಲಿನ ಕೆಳಗೆ ಹಾಕಿ ತುಳಿಸು; (ರೂಪ.) ಕಾಲಿನಿಂದ ತುಳಿದುಹಾಕು; ತಳ್ಳಿಹಾಕು; ತಿರಸ್ಕರಿಸು; ಮತ್ತೊಬ್ಬ ಅಧಿಕಾರಿಯ ತೀರ್ಮಾನವನ್ನು ರದ್ದುಪಡಿಸು. (ಶಸ್ತ್ರಚಿಕಿತ್ಸೆ: ಮುರಿದುಹೋದ ಮೂಳೆಯ ವಿಷಯದಲ್ಲಿ) ಒಂದರಮೇಲೊಂದು ಚಾಚಿಕೊಂಡಿರು. **Over-rípe** (6) (ಗು.). **Overrúle** (9) (ಕ್ರಿ.) (ತೀರ್ಪು, ವಾದ, ಸಲಹೆ, ಆಕ್ಷೇಪಣೆ—ಇವನ್ನು) ಮೇಲಧಿಕಾರ(ದ ಬಲ)ದಿಂದ ತಳ್ಳಿಹಾಕು; ತೀರ್ಪನ್ನು ರದ್ದು ಮಾಡು. **Overrún** (3) (ಕ್ರಿ. ಸಕ.) ಮೇಲೆ ಹಾದುಹೋಗು; (ಶತ್ರುದೇಶದಲ್ಲಿ) ದಂಡು ನುಗ್ಗಿಸು. (ಹುಳು, ಕಳೆ, ಮೊ.) ವಿಪರೀತವಾಗಿ ಹಬ್ಬು, ಹರಡಿರು, ಕವಿ(ದಿರು), (ಮಿತಿ) ಮೀರು. (ಮುದ್ರಣ) ಅಕ್ಷರಗಳನ್ನು ಪಂಕ್ತಿಯಲ್ಲಿ ಸೇರಿಸಿದ ಅಥವಾ ತೆಗೆದ ಕಾರಣದಿಂದ ಪಂಕ್ತಿಯನ್ನು ಕೂಡಿಸಿಕೊ. **Oversaíling** (3) (ಗು.) (ಕಟ್ಟಡದ ಪರಿಸೆ, ಮೊ.) ಕೆಳಗಿನದಕ್ಕಿಂತ ಮುಂದಕ್ಕೆ ಚಾಚಿಕೊಂಡಿರುವ. **Over-scrúpulous** (6) (ಗು.). **Óversea** (2) (ಗು.) ಕಡಲಮೇಲಿನ; ಸಮುದ್ರದಾಚೆಯ. **Overseá(s)** (ಕ್ರಿ. ವಿ.). **Overseé** (3) (ಕ್ರಿ. ಸಕ.) (ವಿರ. ಪ್ರ.) ಮೇಲಿನಿಂದ ನೋಡು. (ಕೆಲಸಗಾರರು, ಕೆಲಸ, ಮೊ.) ಮೇಲ್ವಿಚಾರಣೆ ನೋಡಿಕೊ. **Óverseer** (ನಾ.) ಮೇಲ್ವಿಚಾರಕ [O. of the poor ಅನಾಥರಿಗೆ ಸಹಾಯಮಾಡುವುದು, ಮೊ. ಕರ್ತವ್ಯಗಳುಳ್ಳ (ಕ್ರೈಸ್ತ) ಪ್ರಾಂತಾಧಿಕಾರಿ]. **Oversélll** (6) (ಕ್ರಿ.) ಒದಗಿಸಲು ಸಾಧ್ಯವಿರುವುದಕ್ಕಿಂತ ಹೆಚ್ಚಾಗಿ ಮಾರಲು ಒಪ್ಪಿಕೊ. **Over-sénsitive** (6) (ಗು.); **Over-sénsitiveness** (ನಾ.). **Over-shádow** (4) (ಕ್ರಿ. ಸಕ.) (ಬಿಸಿಲು ಬೀಳದಂತೆ) ಮರೆ ಮಾಡು; ನೆಳಲುಮಾಡು. (ವಿರ. ಪ್ರ.) ಆಕ್ರಮಣವಾಗದಂತೆ ರಕ್ಷಣೆ ಕೊಡು. ಮಬ್ಬುಗವಿಸು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಸ್ತೇಜ ಮಾಡು ; ಹೆಚ್ಚು ಪ್ರಕಾಶದಿಂದ ಮಂಕುಮಾಡು. **Óver-shoe** (1) (ನಾ.) (ಮತ್ತೊಂದರಮೇಲೆ ತೊಡುವ, ರಬ್ಬರಿನ ಅಥವಾ ಫ್ಲಲ್ಲನ) ಮೇಲು ಜೋಡು. **Overshoót** (3) (ಕ್ರಿ. ಸಕ.) (ಕ್ಷಿಪಣಿಯನ್ನು) ಗುರಿ ಮೀರಿ ಹೊಡೆ ; ಗುರಿ ಮೀರಿ ಹೋಗು (ರೂಪ. ಸಹ) (O. the mark, O. oneself ಮಿತಿ ಮೀರಿ, ಅತಿ ದೂರ, ಹೋಗು ; ಇರುವುದಕ್ಕಿಂತ ಹೆಚ್ಚುಮಾಡಿ ಹೇಳು ; ಅತಿ ಮಾಡು). **Óvershot wheel** (3) ಮೇಲಿನಿಂದ ಬೀಳುವ ನೀರಿನಿಂದ ತಿರುಗುವ ಚಕ್ರ. **Oversíde** (2) (ಕ್ರಿ. ವಿ.) ಹಡಗಿನ ಪಕ್ಕದಮೇಲಿನಿಂದ (ಸಮುದ್ರ, ದೋಣಿ, ಮೊ. ಕ್ಕೆ). **Óver-side** (ಗು.) (ಸಾಮಾನನ್ನು, ಹಡಗಿಗೆ ತುಂಬುವಲ್ಲಿ, ಹಡಗಿನಿಂದ ಇಳಿಸುವಲ್ಲಿ) ಹಡಗಿನ ಪಕ್ಕದಮೇಲಿಂದ ದೋಣಿಯೊಳಕ್ಕೆ, ದೋಣಿಯಿಂದ ಹಡಗಿನ ಪಕ್ಕದಮೇಲೆ, ಹಾದು ಇಳಿಸಿದ, ತುಂಬಿದ. **Óversight** (3) (ನಾ.) (ವಿರ. ಪ್ರ.) ಮೇಲ್ವಿಚಾರಣೆ. ಗಮನ ಕೊಡದಿರುವುದು ; ಅಜಾಗರೂಕತೆ(ಯ ತಪ್ಪು) ; ಪ್ರಮಾದ. **Óverslaugh** ಓವರ್‌ಸ್ಲಾ (ನಾ.) (ಸೈನ್ಯ) ಹೆಚ್ಚು ಪ್ರಮುಖತೆಯ ಮತ್ತೊಂದು ಕೆಲಸ ಮಾಡುವುದಕ್ಕಾಗಿ ದಿನಚರಿಯ ಕರ್ತವ್ಯಕ್ಕೆ ವಿನಾಯಿತಿ. **Oversleép** (7) (Oneself) (ಏಳಬೇಕಾದ) ಹೊತ್ತು ಮೀರಿ ನಿದ್ದೆಮಾಡು. **Óver-sleeve** (1) ಷರ್ಟುತೋಳಿನ ಮುಂದುಗಡೆ ಅಲಂಕಾರಕ್ಕಾಗಿ ತಗುಲಿಸಿಕೊಳ್ಳುವ ಅಲಂಕಾರ ಪಟ್ಟಿ. **Oversmóke** (7) (ಕ್ರಿ.). **Over-solícitous** (6) (ಗು.); **Over-solícitude** (ನಾ.). **Óver-soul** (1) (ನಾ.) (ವಿಶ್ವಕ್ಕೆ ಚೈತನ್ಯದಾಯಕನೂ ಎಲ್ಲ ಮನುಷ್ಯರ ಆತ್ಮಗಳನ್ನು ಒಳಕೊಂಡವನೂ ಆದ) ಪರಮಾತ್ಮ ; ವಿಶ್ವಾತ್ಮ. **Over-spénd** (7) (ಕ್ರಿ.). **Óverspill** (4) (ನಾ.) (ಹೊರ)ಚೆಲ್ಲಿದ್ದು. (ಒಂದು ಪ್ರಾಂತದ) ಹೆಚ್ಚಿಗೆಯ ಜನ, ಮೊ. ದು. **Overspreád** (3, 4) (ಕ್ರಿ. ಸಕ.) ವ್ಯಾಪಿಸು ; ಹರಡು ; ಹರಡಿಕೊ ; ಪ್ರಸರಿಸು ; (ಮೇಲೆ) ಕವಿ, ಮುಚ್ಚು ; ಆವರಿಸು ; ಮೇಲೆ ಹರವು, ಹೊದಿಸು ; ಆಚ್ಛಾದಿಸು (*With* ಉಪ. ದೊಡನೆ) (ಮು., ಕರ್ಮಣಿಯಲ್ಲಿ : Heaven was o. with clouds). **Overstáte** (6) (ಕ್ರಿ. ಸಕ.) ಅತಿ ಒತ್ತಿ ಹೇಳು ; (ಇರುವುದಕ್ಕಿಂತ) ಅತಿಯಾಗಿ ಹೇಳು. **Over-státement** (ನಾ.). **Overstaý** (9) (ಕಾಲ ಮೀರಿ) ಹೆಚ್ಚಾಗಿ ನಿಲ್ಲು. **Overstép** (3) (ಕ್ರಿ. ಸಕ.) (ಮೇರೆ) ಮೀರಿ ಹೋಗು ; ಮಿತಿ ಮೀರು (ರೂಪ. ಸಹ) ; ಅತಿಕ್ರಮಿಸು. **Overstóck** (6) (ಕ್ರಿ. ಸಕ.) ; **Óverstock** (ನಾ.). **Overstraín** (6) (ಕ್ರಿ. ಸಕ., ನಾ.). **Óverstrúng** (6, 4) (ಗು.) ವಿಪರೀತ ಬಿಗಿದ ; ಅತಿ ಬಿಗಿತದ ; (ವ್ಯಕ್ತಿ, ನರ, ಮೊ. ವು) ಮಿತಿಮೀರಿ ಉದ್ರೇಕಗೊಂಡ. (ಪಿಯಾನೊ ವಾದ್ಯ) ಒಂದನ್ನೊಂದು ಓರೆಯಾಗಿ ಅಡ್ಡಹಾಯುವ ತಂತಿ ತಂಡಗಳುಳ್ಳ. **Overstúdy** (6) (ಕ್ರಿ. ಅಕ., ನಾ.). **Oversubscríbe** (8) (ಕ್ರಿ. ಸಕ.) (ಸರ್ಕಾರ, ಮೊ. ಗಳ ಸಾಲ, ಮೊ. ಕ್ಕೆ) ಕೇಳಿದುದಕ್ಕಿಂತಲೂ ಹೆಚ್ಚಾಗಿ ಚಂದಾ ಮಾಡು, ವಂತಿಗೆ ಕೊಡು (ಸಾ., ಭೂ. ಕೃ. ನಲ್ಲಿ) (The Loan was oversubscribed). **Oversúbtle** (6) (ಗು.). **Over-supplý** (6) (ನಾ.). **Over-swóllen** (6) (ಗು.). **Overtáke** (4) (ಕ್ರಿ. ಸಕ.) (ಕೆಲಸದಲ್ಲಿ, ಪಯಣದಲ್ಲಿ, ಮುಂದಿದ್ದವನ) ಸಮಕ್ಕೆ ಬರು, ಜೊತೆಗೆ ಸೇರಿಕೊ. (ಬಿರುಗಾಳಿ ಮಳೆ, ದುರದೃಷ್ಟ, ಮೊ.) ಇದ್ದಕ್ಕಿದ್ದಹಾಗೆ ಬಂದುಬಿಡು, ಹಠಾತ್ತಾಗಿ ಸಂಘಟಿಸು ; (Overtaken in drink ಕುಡಿದು ಅಮಲೇರಿ). **Overtásk** (6) (ಕ್ರಿ. ಸಕ.) ಶಕ್ತಿ ಮೀರಿದ ಕೆಲಸ ಕೊಡು, —ವಾಗಿರು. **Over-táx** (ಕ್ರಿ. ಸಕ.) ಸಹಿಸಲಾಗದಷ್ಟು ಕಷ್ಟ ಕೊಡು, ಭಾರ ಹೊರಿಸು, ಕೆಲಸ ಮಾಡಿಸು ; ಮಿತಿ ಮೀರಿದ ತೆರಿಗೆ ಹೊರಿಸು. **Overthrów** (4) (ಕ್ರಿ. ಸಕ.) ಉರುಳಿಸಿಬಿಡು ; ಕೆಳಕ್ಕೆ ಕೆಡವು ; ಬೀಳಿಸು ; ಅಧಿಕಾರ ಚ್ಯುತನನ್ನಾಗಿಮಾಡು; ಸೋಲಿಸು ; ಪರಾಜಿತ ಮಾಡು ; (ಸಂಸ್ಥೆ, ಮೊ. ನ್ನು) ತಲೆಕೆಳಗು ಮಾಡು, ಕೊನೆಗಾಣಿಸು. **Óverthrow** (ನಾ.) ಸೋಲು ; ಅಪಜಯ ; ಪತನ ; ಕೆಡವಿಬಿಡುವುದು. (ಕ್ರಿಕೆಟ್) ಎಸೆದ ಚೆಂಡನ್ನು ಆಟ ಕಾಯುವವನು ಗುರಿಕೋಲಿನ ಹತ್ತಿರ ತಡೆದು ನಿಲ್ಲಿಸಲು ತಪ್ಪಿದ್ದರಿಂದ, ಆ ಚೆಂಡು ಇನ್ನೂ ದೂರ ಹೋಗಿ, ಆಟಗಾರರಿಗೆ ಓಟಗಳು ಇನ್ನೂ ಹೆಚ್ಚಾಗಿ ಬರುವುದು. **Óverthrust** (1) (ನಾ.) (ಭೂ. ವಿ.) ಸ್ತರ ಭಂಗವಾದ ಸ್ತರಗಳ ಒಂದು ಪಾರ್ಶ್ವ ಅಥವಾ ಶಿಲಾಶ್ರೇಣಿ ಮತ್ತೊಂದು ಪಾರ್ಶ್ವದ ಸ್ತರಗಳಮೇಲೆ ಹಾಕುವ ಒತ್ತಡ ; ಪಕ್ಕದ ಮೇಲೊತ್ತಡ. **Óvertime** (1) (ನಾ.) ನಿಯತ ಕಾಲಕ್ಕೆ ಮೀರಿ ಕೆಲಸಮಾಡಿದ ಹೆಚ್ಚಿಗೆಯ ಕಾಲ. **Overtíme** (2) (ಕ್ರಿ. ವಿ.) ಕೆಲಸದ ನಿಯತ ಕಾಲ ಮೀರಿ(ದ ಹೊತ್ತಿನಲ್ಲಿ). **Overtíre** (6) (ಕ್ರಿ. ಸಕ.). **Overtoíl** (6) (ನಾ.) ; **Overtoíled** (7) (ಭೂ. ಕೃ.). **Óvertone** (1) (ನಾ.) (ಸಂ.) ಅನು ಸ್ವರ ; ಗೌಣ ಸ್ವರ ; ಅನುರಣನ. **Overtóne** (6) (ಕ್ರಿ. ಸಕ.) (ಛಾಯಾ ಚಿತ್ರದಲ್ಲಿ). **Overtóp** (9) (ಕ್ರಿ.) (ಇಂತ) ಮೇಲಾಗು, ಮೇಲಾಗಿರು ; ಅತಿಶಯಿಸು; ಮೀರು. **Over-traín** (6) (ಕ್ರಿ.) (ಕೆಡುಕುಂಟಾಗುವಷ್ಟು) ಅತಿವ್ಯಾಯಾಮ ಶಿಕ್ಷಣ ಕೊಡು, ತೆಗೆದುಕೊ. **Overtrúmp** (9) (ಕ್ರಿ.) ಮೇಲು ತುರುಪು ಆಡು. **Over-túrn** (4) (ಕ್ರಿ.) ಉರುಳು; ಉರುಳಿಸು; ಕೆಳಕ್ಕೆ ಬೀಳು; —ಬೀಳಿಸು ; ಕೆಡವು ; ಪತನ ಮಾಡು, ಆಗು ; ತಲೆಕೆಳಗು ಮಾಡು, ಆಗು ; ಹಾಳು ಮಾಡು. **Óverturn** (ನಾ.) ತಲೆಕೆಳಗು ಆಗುವುದು, ಮಾಡುವುದು; ಹೊರಳುವುದು ; ಉರುಳಿಕೊಳ್ಳುವುದು ; ಕ್ರಾಂತಿ. **Overúse** (6) (ಕ್ರಿ. ಸಕ.) ; **Óver-úse** (ನಾ.). **Overválue** (6) (ಕ್ರಿ. ಸಕ.). **Overwálk** (7) (ಕ್ರಿ.). **Overwátched** (7) (ಭೂ. ಕೃ.) ನಿದ್ದೆ ಮಾಡದೆ ಎಚ್ಚರವಿದ್ದು ಬಳಲಿಹೋದ. **Overweéning** (6) (ಗು.) ದುರಹಂಕಾರದ ; ಅತಿ ಪ್ರತಿಷ್ಠೆಯ ; ಅತಿ ಹಮ್ಮಿನ ; ಅತಿ ಆತ್ಮವಿಶ್ವಾಸದ. **Óverweight** (1, 2) (ನಾ., ಗು.) (ಇಂತ) ಹೆಚ್ಚಿಗೆಯ ಭಾರ ; ಭಾರಾಧಿಕ್ಯ ; ಹೆಚ್ಚಿಗೆ ; ಪ್ರಾಬಲ್ಯ. (ಗು.) (ನಿರ್ಧಾರವಾದ ತೂಕಕ್ಕಿಂತ) ಹೆಚ್ಚಿನ ತೂಕವುಳ್ಳ (O. luggage). **Over-weíghted** (6) (ಗು.) ಮಿತಿಮೀರಿ ಭಾರ ಹೇರಿದ (*With* ಉಪ. ದೊಡನೆ). **Overwhélm** (4) (ಕ್ರಿ. ಸಕ.) ಮೇಲಿನ ರಾಶಿಯ ಕೆಳಗೆ ಹೂತುಬಿಡು ; ಪೂರ್ತಿ ಮುಳುಗಿಸಿಬಿಡು; ಜಜ್ಜಿಬಿಡು ; ಥಟ್ಟನೆ ನಾಶಗೊಳಿಸು. ಭಾವ ಪರವಶ ಮಾಡು. ಪ್ರಶ್ನೆ, ಮೊ. ಗಳ ಬಿರುಮಳೆ ಸುರಿಸು (*With* ಉಪ. ದೊಡನೆ). **Overwhélming** (ಗು.) (ಅಧಿಕ ಸಂಖ್ಯೆ, ಅಧಿಕ ಮೊತ್ತ, ಮೊ. ಗಳಿಂದ) ತಡೆಯಲಸಾಧ್ಯವಾದ. **Overwhélmingly** (ಕ್ರಿ. ವಿ.). **Overwínd** (6) (—ವೈಂಡ್) (ಕ್ರಿ. ಸಕ.) (ಗಡಿಯಾರ, ಮೊ. ಗಳ ವಿಷಯದಲ್ಲಿ) ಮಿತಿಮೀರಿ ಕೀಲಿ ತಿರುಗಿಸು. **Overwórk** (6) (ಕ್ರಿ., ನಾ.) ಮಿತಿ ಮೀರಿ ಕೆಲಸ ಮಾಡು, —ಮಾಡಿಸು; ದುಡಿದು ಸುಸ್ತಾಗು ; ದುಡಿಸಿ ಬಳಲಿಸು. (ನಾ.) ಮಿತಿ ಮೀರಿದ ಕೆಲಸ ; ಅತಿ ದುಡಿತ. **Overwríte** ಮೇಲೆ ಬರೆ. **Over-wríte** (7) (Oneself) ಅತಿಯಾಗಿ ಬರೆದು ಶೈಲಿ ಕೆಡಿಸಿಕೊ. **Over-wrought** (6) (ಗು.) ಮಿತಿ ಮೀರಿ ಕೆರಳಿದ ; —ಉದ್ರೇಕಗೊಂಡ ; ಅತಿ ದುಡಿತದಿಂದ ಬಳಲಿದ ; ಅತಿಶ್ರಾಂತ. ಅತಿ ವಿವರಗಳನ್ನೊಳಕೊಂಡ ; ಅತಿವಿಸ್ತರಿಸಿದ. **Over-zeál** (6) (ನಾ.) ಹದ ಮೀರಿದ ಉತ್ಸಾಹ. **Over-zeálous** (ಗು.) ; **Overzeálously** (ಕ್ರಿ. ವಿ.)

Ovért ಓವರ್ಟ್ (ಗು.) ಪ್ರಕಾಶವಾಗಿ, ಬಹಿರಂಗವಾಗಿ, —ಮಾಡಿದ, ನಡಸಿದ ; ಮುಚ್ಚುಮರೆಯಿಲ್ಲದ (—ದೆ ಮಾಡಿದ) ; ಸ್ಪಷ್ಟ ; ಪ್ರತ್ಯಕ್ಷ (Market o. ಎಲ್ಲ ಗಿರಾಕಿಗಳಿಗೂ ಕಾಣುವಂತೆ ಮಾರಾಟದ ಸರಕನ್ನು ಬಹಿರಂಗವಾಗಿ ಪ್ರದರ್ಶಿಸುವುದು). **Ovértly** (ಕ್ರಿ. ವಿ.)

Óverture ಓವರ್‌ಟ್ಯು(ಚ)ರ್ (ನಾ.) (ಮತ್ತೊಬ್ಬನೊಡನೆ) ಸಂಧಾನಕ್ಕೆ ಆರಂಭ ಮಾಡುವುದು ; ಕ್ರಮ ವಿಹಿತವಾದ ಪ್ರಸ್ತಾಪ ; (ಸಾ., ಬ. ವ. ದಲ್ಲಿ : Make overtures to ಒಬ್ಬನೊಡನೆ ಸಂಧಾನ ನಡಸು). (ಸಂ.) (ಸಂಗೀತ ನಾಟಕ, ಮೊ. ಗಳ) ಆರಂಭ ಮೇಳ ; =Oratorio ; ಕಾವ್ಯ, ಮೊ. ಗಳ ಆರಂಭ, ಉಪಕ್ರಮ.

Ovi-[1] ಓವಿ—, **Ovo-** ಓವೊ— (ನ. ಪೂ. ಪ.) ಮೊಟ್ಟೆ —; ಅಂಡ—. **Óviduct** (ನಾ.) (ಮು., ಮೊಟ್ಟೆಯಿಡುವ ಪ್ರಾಣಿಗಳಲ್ಲಿ) ಅಂಡಾಶಯದಿಂದ ಮೊಟ್ಟೆಗಳು ಹೊರಬೀಳುವ ನಾಳ : ಅಂಡಾಶಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಳ. **Óviform** (ಗು.) ಅಂಡಾಕಾರದ. **Ovíparous** (ಒವಿಪರಸ್) (ಗು.) ಮೊಟ್ಟೆಯಿಟ್ಟು ಅದರಿಂದ ಮರಿ ಮಾಡುವ (ಎದುರು ಪದ : Viviparous). **Ovipósit** (ಓವಿಪಾಸಿಟ್) (ಕ್ರಿ. ಅಕ.) ಮೊಟ್ಟೆಯಿಡು. **Ovipósitor** (ನಾ.) ಹೆಣ್ಣು ಕೀಟವು ಮೊಟ್ಟೆಯನ್ನು ಸಾಗಿಸುವ ಚೂಪು ಕೊನೆಯ ನಾಳಾಂಗ. **Ovólogy** (ಒವಾ—) (ನಾ.) ಅಂಡ (ರಚನಾ) ಶಾಸ್ತ್ರ. **Ovovivíparous** (ಗು.) ತಾಯಿಯ ದೇಹ ದೊಳಗೆಯೇ ಮೊಟ್ಟೆಯೊಡೆದು ಮರಿಯಾಗುವ ಮರಿಗಳನ್ನು ಹೆರುವ.

Ovi-[2] ಓವಿ— (ಸ. ಪೂ. ಪ.) ಕುರಿ—. **Ovibóvine** (ಗು., ನಾ.) ಕುರಿಗೂ ಎತ್ತಿಗೂ ಮಧ್ಯಸ್ಥ ಲಕ್ಷಣಗಳುಳ್ಳ (ಪ್ರಾಣಿ) ; ಕಸ್ತೂರಿ ವೃಷಭ. **Óvicide** (ನಾ.) (ಹಾಸ್ಯ ಪ್ರ.) ಕುರಿಯನ್ನು ಕೊಲ್ಲುವುದು.

Óvine ಓವೈನ್ (ಗು.) ಕುರಿಯ(ಂಥ)

Óvoid ಓವಾಯ್ಡ್ (ಗು., ನಾ.) ಘನ ರೂಪದಲ್ಲಿ ಅಥವಾ ಮೇಲ್ಮೈ ಯಲ್ಲಿ ಅಂಡಾಕಾರದ ; ಒಂದು ಕೊನೆ ಹೆಚ್ಚು ಮೊನಚಾಗಿರುವ ಅಂಡಾಕಾರದ. (ನಾ.) —ವಸ್ತು ಅಥವಾ ಮೇಲ್ಮೈ.

Óvule ಓವ್ಯೂಲ್ (ನಾ.) ಮೂಲ ಬೀಜ ; ಸ್ತ್ರೀ ಅಂಡಾಣು ; ಫಲ ಬಿದ್ದಿಲ್ಲದ ಗರ್ಭಾಣು. **Óvular** (ಗು.). **Óvum** (ನಾ.; ಬ. ವ. -va) (ರೇತಸ್ಸಿನಿಂದ ಫಲಬಿದ್ದು ಬೇರೊಂದು ಹೊಸ ಪ್ರಾಣಿಯಾಗಿ ವಿಕಸಿಸುವ ಚೈತನ್ಯವುಳ್ಳ) ಸ್ತ್ರೀ ಅಂಡಾಣು ; (ಮು., ಸಸ್ತನಿಗಳ, ಮೀನುಗಳ, ಕೀಟ ಗಳ) ಅಂಡ, ತತ್ತಿ.

Óvum. **Ovule** ನೋಡಿ.

Owe ಓ (ಕ್ರಿ.) (ಒಬ್ಬನಿಗೆ, ಹಣ) ಸಾಲ ತೀರಿಸಬೇಕಾಗಿರು (*To* person); ಸಾಲ, ಕಡ, —ಹೊತ್ತಿರು ; (ಒಬ್ಬನಿಗೆ ಗೌರವ, ಕೃತಜ್ಞತೆ) ಸಲ್ಲಿಸಬೇಕಾಗಿರು (*To* person) ; (ಒಬ್ಬನ) ಹಂಗಿನಲ್ಲಿರು, ಋಣಿ ಯಾಗಿರು ; (ಒಬ್ಬನಿಂದ) ಉಪಕೃತನಾಗಿರು [He owes not any man. I o. you for your services. I owed for all my clothes. O. one a grudge ಒಬ್ಬನಮೇಲೆ ಹಗೆಯನ್ನು, ದ್ವೇಷವನ್ನು, ಛಲವನ್ನು, —ಇಟ್ಟುಕೊಂಡಿರು. We o. to Newton the principle of gravitation ಭೂಮ್ಯಾಕರ್ಷಣ ತತ್ತ್ವಕ್ಕಾಗಿ ನಾವು ನ್ಯೂಟನ್ನಿನ ಋಣಿಗಳು. I o. him much ಅವನಿಗೆ ನಾನು ತುಂಬ ಋಣಿ]. **Ówing** (ಗು.) ಕೊಡಬೇಕಾಗಿರುವ ; ಬಾಕಿಯಿರುವ (Paid all that was o.). (ಉಪ.) O. to ಕಾರಣದಿಂದ ; ಪ್ರಯುಕ್ತ (All this was o. merely to ill luck. O. to the drought, crops are short)

Owl ಔಲ್ (ನಾ.) ಗೂಬೆ; ಗೂಗೆ (ದೊಡ್ಡ ತಲೆಯ, ಚಿಕ್ಕ ಮುಖದ, ಕೊಂಕು ಕೊಕ್ಕಿನ, ದೊಡ್ಡ ಕಣ್ಣಿನ, ಮೃದು ಗರಿಗಳ, ರಾತ್ರಿ ಸಂಚಾರದ, ಕೊಂದು ತಿನ್ನುವ, ಒಂದು ಪಕ್ಷಿಜಾತಿ : Barn O., Tawny O., Long-eared or Horned O., Church O., Screech O., Hooting O., etc. ಎಂಬವು ಜಾತಿ ಭೇದಗಳು). [Fly with the o. ರಾತ್ರಿ ಸಂಚರಿಸುವ, ಕಾರ್ಯಮಾಡುವ, —ಅಭ್ಯಾಸವುಳ್ಳವನಾಗಿರು. Owls to Athens ('ಬೆಟ್ಟಕ್ಕೆ ಕಲ್ಲು ಹೊರು' ಎಂಬ ಗಾದೆಯಂತೆ)]. ಗಂಭೀರ ಮುದ್ರೆಯ ಮನುಷ್ಯ ; ಬುದ್ಧಿವಂತನಂತೆ ಕಾಣುವ ಮುಟ್ಠಾಳ. ಖಯಾಲಿಗಾಗಿ ಸಾಕಿದ, ಕೆಲವು ವಿಶೇಷ ಗುಣಗಳುಳ್ಳ, ಒಂದು ಬಗೆಯ ಪಾರಿವಾಳ (=O. pigeon). **O.-light** ಮುಚ್ಚಂಜೆ; ಮುಂಗತ್ತಲು. **Ówlish** (ಗು.); **Ówlishly** (ಕ್ರಿ. ವಿ.); **Ówlery** (ನಾ.) ಗೂಬೆಗಳನ್ನಿಟ್ಟಿರುವ ಸ್ಥಳ ; ಗೂಬೆಗಳ ಬೀಡು, ಇಕ್ಕೆ ; ಗೂಬೆತನ. **Ówlet** (ನಾ.) (ಕಿರು) ಗೂಗೆ ; ಗೂಬೆಯ ಮರಿ.

Own ಓನ್ (ಗು.) ಸಂಪೂರ್ಣ ಸ್ವಾಮ್ಯದಲ್ಲಿರುವ ; ಸ್ವಂತ; ತನ್ನ ; ತನ್ನದೇ ಆದ ; ಸ್ವಕೀಯ ; ಆತ್ಮೀಯ (ಮತ್ತೊಬ್ಬರದಲ್ಲ) [Saw it with my o. eyes. Has a value all its o. ಅದರದೇ ಆದ ಒಂದು ಬೆಲೆ ಇದೆ. Love truth for its o. sake. ಸತ್ಯಕ್ಕಾಗಿಯೇ ಸತ್ಯವನ್ನು ಪ್ರೀತಿಸು. Be one's o. man (Man ನೋಡಿ). God's o. heaven. May I have it for my o. *or* my very o. ? My o. (ಮು., ಸಂಬೋಧನೆಯಲ್ಲಿ, ಪ್ರೇಮವನ್ನು ವ್ಯಕ್ತಪಡಿಸುವುದರಲ್ಲಿ). (ವ್ಯಕ್ತಿತ್ವವನ್ನು ಒತ್ತಿಹೇಳುವಲ್ಲಿ) Cooks her o. meals. Be one's o. master (Master ನೋಡಿ). May I not do what I will with my o. (ಸ್ವಂತ ಆಸ್ತಿ) ? And his o. (ಸಂಬಂಧಿಗಳು) received him not. Get one's o. back (ಬಳ. ಮಾ.) ಸೇಡು, ಮುಯ್ಯಿ, —ತೀರಿಸಿಕೊ. Will give you one of my o. Hold one's o. (ಸ್ಥಾನ ಬಿಟ್ಟು) ಕದಲದಿರು; ಸೋಲದಿರು. On one's o. (ಅಸಂ.) ಸ್ವತಂತ್ರವಾಗಿ ; ತನ್ನ ಜವಾಬ್ದಾರಿಯ ಮೇಲೆ ; ತನ್ನ ಸಾಧನೆ ಗಳಿಂದ. O. brother, sister (ತಂದೆ ತಾಯಿಗಳಿಬ್ಬರೂ ಒಂದೇ ಆದ ಸಂದರ್ಭದಲ್ಲಿ) ಸ್ವಂತ—. O. cousin = First cousin.

Own (ಕ್ರಿ.) (ಆಸ್ತಿಯಾಗಿ) ಉಂಟಾಗಿರು, ಪಡೆದಿರು; ಸ್ವಾಮ್ಯ ವುಳ್ಳವನಾಗಿರು ; ಒಡೆಯನಾಗಿರು. (ಕರ್ತೃತ್ವ, ಜನ್ಮ ದಾತೃತ್ವ, ಅಥವಾ ಸ್ವಾಮ್ಯ) ತನ್ನದೆಂದು ಒಪ್ಪಿಕೊ, ಅಂಗೀಕರಿಸು, ಸ್ವೀಕರಿಸು (Child, pamphlet, hat, that nobody will o). Owns his deficiencies ತನ್ನ ಕುಂದು ಕೊರತೆಗಳನ್ನು ತಾನೇ ಒಪ್ಪಿಕೊಳ್ಳುತ್ತಾನೆ. Owns himself indebted. Owns to a sense of shame. Owns to having done. Own up (ಬಳ. ಮಾ.) ಮರೆಮಾಜದೆ (ನಿಜಸ್ಥಿತಿ ತಿಳಿಸಿ) ತಪ್ಪೊಪ್ಪಿಕೊ. (ಒಬ್ಬನ ಅಧಿಕಾರ, ವೊ. ಕ್ಕೆ) ತರವಾಗು. The owner (ನಾವೆಯ ಅಸಂ.) ಹಡಗಿನ ನಾಯಕ. **Ówner** (ನಾ.) ; **Ównership** (ನಾ.) ; **Ównerless** (ಗು.)

Ox ಆಕ್ಸ್ (ನಾ.; ಬ. ವ. -en) ದನ ; ಹಸುವಿನ ಜಾತಿಯ ಪ್ರಾಣಿ ; ವೃಷಭ ; (ಮು., ಬೀಜವೊಡೆದ) ಎತ್ತು ; ಹಸು. (The black ox has trod on one's foot ಅವನಿಗೆ ದುರದೃಷ್ಟ ಅಥವಾ ಮುಪ್ಪು ಅಡಸಿದೆ). **Ox-eye** (ಮನುಷ್ಯನ) ದೊಡ್ಡ ಕಣ್ಣು ; ಗೂಳಿಗಣ್ಣು [**Óx-eyed** (ಗು.)] ; ಹಲವು ಜಾತಿಯ ಸಸ್ಯ. **Ox-fence, Óxer** (ನಾ.) [ಕಬ್ಬಿಣದ ಕಟಕಟೆ, ದಡಿ ಬೇಲಿ ಮತ್ತು (ಕೆಲವು ವೇಳೆ) ಕಡಗು—ಇವು ಹಾಕಿರುವ] ದನಗಳ ಸುತ್ತುಬೇಲಿ. **Ox-fly** ತೊಣಚಿ. **Ox-gall** ಗೋರೋಚನ. **Oxherd** ದನ ಕಾಯುವವನು; ಗೋವಳಿಗ. **Oxhide** ದನದ ಚಕ್ಕಳ. **Oxlip** ಒಂದು ಸಸ್ಯ ಜಾತಿ. **Oxtail** (ಮಾಂಸಾಹಾರಿಗಳ ಅಡಿಗೆ ಯಲ್ಲಿ ಉಪಯೋಗಿಸುವ) ದನದ ಬಾಲ.

Oxálic ಆಕ್ಸ್ಯಾಲಿಕ್ (ಗು.) (ರ. ವಿ.) ಪುಳ್ಳಂಪುರಸಿ ಸಸ್ಯಜಾತಿಯ (Wood-sorrel) ಸೊಪ್ಪಿನಿಂದ ತೆಗೆಯಲಾಗುವ [O. acid (ಬಹಳ ವಿಷವೂ ಹುಳಿಯೂ ಆದ) ಆಕ್ಸ್ಯಾಲಿಕ್ ಆಮ್ಲ]

Óxford ಆಕ್ಸ್‌ಫರ್ಡ್ (ನಾ.) ಇಂಗ್ಲೆಂಡಿನಲ್ಲಿ (ವಿಶ್ವ ವಿದ್ಯಾ ನಿಲಯವಿರುವ) ಒಂದು ಪಟ್ಟಣ. O. bags ದಗಲೆಯ ಷರಾಯಿ. O. blue ಊದಾ ಛಾಯೆಯ ಮಬ್ಬು ನೀಲ. O. clay ಇಂಗ್ಲೆಂಡಿನ ಮಧ್ಯ ಪ್ರಾಂತ ಜಿಲ್ಲೆಗಳಲ್ಲಿ ಹವಳಗಲ್ಲಿನ ಸ್ತರಗಳ ಕೆಳಗಡೆ ದೊರೆಯುವ ಒಂದು ಬಗೆಯ ಜಿಗುಟಾದ ನೀಲ ಜೇಡಿ. O. frame ಕಟ್ಟಿನ ಪಟ್ಟಿಗಳು ಮೂಲೆಗಳಲ್ಲಿ ಶಿಲುಬೆಯಂತೆ ಚಾಚಿಕೊಂಡಿರುವ (ಪಟದ) ಚೌಕಟ್ಟು. O. man ಆಕ್ಸ್‌ಫರ್ಡ್ ವಿ. ವಿ. ನಿ. ದಲ್ಲಿ ಶಿಕ್ಷಣ ಪಡೆದವನು. O. mixture ಕಪ್ಪು ನರೆ ಬಣ್ಣದ (ಉಣ್ಣೆಯ) ಬಟ್ಟೆ. O. movement = (Church of England ಎಂಬ ಕ್ರೈಸ್ತ ಮತದಲ್ಲಿ ರೋ. ಕ್ಯಾ. ತತ್ತ್ವಗಳನ್ನೂ ಆರಾಧನ ಕ್ರಮಗಳನ್ನೂ ಮರಳಿ ಆಚರಣೆಗೆ ತರಬೇಕೆಂದು ೧೮೩೩ರಲ್ಲಿ ಆರಂಭವಾದ) ರೋ. ಕ್ಯಾ. ಮತದ ಪುನರುದ್ಧಾರದ ಚಳವಳಿ. O. shirting ಒಂದು ಬಗೆಯ ಷರ್ಟುಬಟ್ಟೆ ಅಥವಾ ಉಡುಪಿನ ಬಟ್ಟೆ. O. shoes ಮೇಲಡಿಯಮೇಲೆ ಕಟ್ಟುದಾರದ ಹೊಕ್ಕು ಬರುವ ಕೀಳೆತ್ತರದ ಅರೆ ಮೋಜ. O. Tracts ಆಕ್ಸ್‌ಫರ್ಡ್ ಚಳವಳಿಯ ಕೆಲವು ಮತಧರ್ಮ ಸಂಗ್ರಹ ಪ್ರಕಟನೆಗಳು.

Óxide ಆಕ್ಸೈಡ್, ಆಕ್ಸಿಡ್ (ನಾ.) (ಒಂದು ಮೂಲ ಧಾತುವಿನ, ಅಥವಾ ಒಂದು ಸಾವಯವ ಘಟಕದ) ಆಮ್ಲಜನಕ ಸಂಯುಕ್ತ : 'ಆಕ್ಸೈಡು'. **Óxidize** ಆಕ್ಸಿ— (ಕ್ರಿ.) ಆಮ್ಲಜನಕ ಸಂಯುಕ್ತ ಮಾಡು ; (ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೋಹದ ಮೇಲ್ಮೈಗೆ, ಅದರ) ಅಮ್ಲಜನಕ ಸಂಯುಕ್ತದ ಪೊರೆ ಕಟ್ಟು; ತುಕ್ಕು ಹಿಡಿ(ಸು); ಅಮ್ಲಜನಕದೊಡನೆ ಸಂಯೋಗವಾಗು. Oxidized silver 'ಸಿಲ್ವರ್ ಸಲ್ಫೈಡ್' ಸಂಯುಕ್ತದ ಕಪ್ಪನೆಯ ಪೊರೆ ಕಟ್ಟಿದ ಬೆಳ್ಳಿ(ಗೆ ತಪ್ಪು ಹೆಸರು). **Óxidizable** (ಗು.); **Oxidizátion** (ನಾ.); **Oxidízer** (ನಾ.) —ಮಾಡುವಂಥದು.

Oxónian ಆಕ್ಸೋನಿಯನ್ (ಗು., ನಾ.) ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ (ಹಿಂದಿನ ಅಥವಾ ಇಂದಿನ ಸದಸ್ಯ)

Oxy- (ಸ. ಪೂ. ಪ.) (೧) ಹರಿತವಾದ; ಮೊನಚಾದ; ತೀಕ್ಷ್ಣವಾದ: **Oxycárpous** ಮೊನಚಾದ ಹಣ್ಣು ಬಿಡುವ. **Oxyópia** ಅಸಾಧಾರಣವಾದ ತೀಕ್ಷ್ಣ ದೃಷ್ಟಿ. **Óxygen, etc.** (೨) (ರ. ವಿ. ದ ಪದಗಳಲ್ಲಿ): **O.-hoúse-gas, O.-páraffin** (ಆಯಾ ಅನಿಲದೊಡನೆ ಅಥವಾ ಹಬೆಯೊಡನೆ ಅಮ್ಲಜನಕವನ್ನು ಬೆರಸಿ ಉರಿಸುವ ಜ್ವಾಲೆಯ ವಿಷಯದಲ್ಲಿ). **O.-calcium light** = Limelight (Lime[1] ನೋಡಿ). O.-hydrogen blowpipe, flame, light, etc. **Oxyácid** ಅಮ್ಲಜನಕವುಳ್ಳ ಆಮ್ಲ [ನೈಟ್ರಿಕಾಮ್ಲ (HNO_3) ಮೊ. ವು] [ಹೈಡ್ರೊಕ್ಲೋರಿಕ್ ಆಮ್ಲ (HCl) ಮೊ. ಅಲ್ಲ]. **Óxysalt** ಅಮ್ಲಜನಕವುಳ್ಳ ಲವಣ.

Óxygen ಆಕ್ಸಿಜೆನ್ (ನಾ.) ಅಮ್ಲಜನಕ: 'ಆಕ್ಸಿಜೆನ್' (ರುಚಿಯೂ ವಾಸನೆಯೂ ಇಲ್ಲದ, ಕಣ್ಣಿಗೆ ಕಾಣದ, ಒಂದು ಅನಿಲ. ಇದು ವಾಯುವಿನಲ್ಲಿ ಇತರ ಅನಿಲಗಳೊಡನೆ ಮಿಶ್ರವಾಗಿಯೂ, ನೀರಿನಲ್ಲಿ ಜಲಜನಕದೊಡನೆ ಸಂಯುಕ್ತವಾಗಿಯೂ ಇರುವುದಲ್ಲದೆ, ಅನೇಕ ಖನಿಜಗಳಲ್ಲಿಯೂ ಸಾವಯವ ಪದಾರ್ಥಗಳಲ್ಲಿಯೂ ಸೇರಿಕೊಂಡಿದೆ; ಪ್ರಾಣಿ ವರ್ಗಕ್ಕೂ ಸಸ್ಯ ವರ್ಗಕ್ಕೂ ಜೀವಾಧಾರವಾಗಿದೆ). **Oxýgenous** (ಗು.); **Oxýgenate** (ಕ್ರಿ. ಸಕ.) ಅಮ್ಲಜನಕ ಒದಗಿಸು; —ದಿಂದ ಸಂಸ್ಕರಿಸು, —ದೊಡನೆ ಬೆರಸು. ಅಮ್ಲಜನಕ ಸಂಯುಕ್ತ ಮಾಡು; (ಉಚ್ಛ್ವಾಸದ ಮೂಲಕ, ರಕ್ತಕ್ಕೆ) ಅಮ್ಲಜನಕ ತುಂಬು. **Oxygenátion** (ನಾ.); **Oxýgenize** (ಕ್ರಿ. ಸಕ.) = Oxygenate. **Oxýgenant** (ನಾ.) ಅಮ್ಲಜನಕ ಸಂಯುಕ್ತಕಾರಿ.

Óxymel ಆಕ್ಸಿಮೆಲ್ (ನಾ.) ಜೇನುತುಪ್ಪ ಮತ್ತು ಹುಳಿಮದ್ಯದ ಷರಬತ್ತು.

Oxymóron ಆಕ್ಸಿಮೋರ(ರಾ)ನ್ (ನಾ.) ತೋರಿಕೆಗೆ ಪರಸ್ಪರ ವಿರುದ್ಧವಾಗಿರುವ ಹಾಗೆ ಕಾಣುವಂತೆ ಪದಗಳನ್ನು ಜೋಡಿಸಿ, ಆ ವಚನಕ್ಕೆ ಅರ್ಥಸ್ವಾರಸ್ಯ ಕೊಡುವ ಅಲಂಕಾರ: ವಿರೋಧಾಭಾಸ (ಉದಾ., Faith unfaithful kept him falsely true)

Oxyrhýnchus ಆಕ್ಸಿರಿಂಕಸ್ (ನಾ.) ನೈಲ್ ನದಿಯಲ್ಲಿ ದೊರೆಯುವ, ಈಜಿಪ್ಷನರು ಪವಿತ್ರವಾದುದೆಂದೆಣಿಸುವ, ಒಂದು ಮೀನ ಜಾತಿ. ಈಜಿಪ್ಟಿನಲ್ಲಿಯ ಪುರಾತನದ ಒಂದು ಹಾಳು ಪಟ್ಟಣ. **O. papýri** —ಪಪೈರೈ (ನಾ., ಬ. ವ.) ಈ ಹಾಳು ಪಟ್ಟಣದಲ್ಲಿ ದೊರೆಯುವ ಪಪೈರೈ ಪತ್ರ ಲೇಖಗಳ ಸಮುದಾಯ (ಕ್ರಿ. ಶಕ ೧೮೯೬-೭ರಲ್ಲಿಯೂ, ೧೯೦೩-೭ರಲ್ಲಿಯೂ B. P. Grenfel ಮತ್ತು A. S. Hunt ಎಂಬುವರು ಕಂಡುಹಿಡಿದದ್ದು. ಈ ಲೇಖಗಳು ಅನೇಕ ಸಹಸ್ರವಿವೆ. ಇವುಗಳಲ್ಲಿ ಕ್ರಿ. ಪೂ. ೩ನೆಯ ಶತಮಾನದಿಂದ ಕ್ರಿ. ಶಕ ೭ನೆಯ ಶತಮಾನದ ವರೆಗಿನ ಗ್ರೀಕ್ ಮತ್ತು ಆದಿ ಕ್ರೈಸ್ತ ಪ್ರಮುಖ ಸಾಹಿತ್ಯ ಗ್ರಂಥಗಳೂ ಸಾಹಿತ್ಯವಲ್ಲದ ವಾಣಿಜ್ಯ, ಮೊ. ದ ಇತರ ಗ್ರಂಥಗಳೂ ಲೇಖಗಳೂ ಇವೆ)

Óxytone ಆಕ್ಸಿಟೋನ್ (ಗು., ನಾ.) (ಗ್ರೀಕ್ ವ್ಯಾ.) ಅಂತ್ಯ ಸ್ವರದ ಮೇಲೆ ಉದಾತ್ತ ಸ್ವರಭಾರ ಹಾಕಿದ (ಪದ)

Oýer ಆಯರ್ (ನಾ.) O. & terminer ಎಂಬ ಹೆಸರುಳ್ಳ ಅಧಿಕಾರ ಆಜ್ಞಾಪತ್ರದ ಮೇರೆಗೆ ಸಂಚಾರ ನ್ಯಾಯಸ್ಥಾನ ನಡಸುವ ತಕ್ಸೀರು ವಿಚಾರಣೆ; O. & terminer ಸಂಚಾರ ನ್ಯಾಯಾಧೀಶರಿಗೆ ವಿಚಾರಣೆ ನಡಸಲು ಕೊಟ್ಟ ನಿರೂಪ.

Oyéz! Oyés! O yés! ಓಯೆಸ್ (ಭಾವ. ಅವ್ಯ.) ಸಾರ್ವಜನಿಕರಿಗೆ ಬಹಿರಂಗವಾಗಿ ಕೂಗಿ ಹೇಳುವವನು; ಕೋರ್ಟಿನಲ್ಲಿ, 'ಸದ್ದು ಮಾಡಬೇಡಿ! ಸದ್ದು! ಗಮನ ಕೊಟ್ಟು ಕೇಳಿರಿ!' ಎಂದು ಸಾ., ಮೂರು ಬಾರಿ ಕೂಗಿ ಹೇಳುವ ಕೂಗು.

Oýster ಆಯ್‌ಸ್ಟರ್ (ನಾ.) (ಆಹಾರಯೋಗ್ಯವಾದ, ಸಾ., ಜೀವ ಸಹಿತವಾಗಿ ತಿನ್ನುವ) ಇಚ್ಚಿಪ್ಪಿನ ಮೃದ್ವಂಗಿ ಪ್ರಾಣಿ (ಜಾತಿ): ಸಿಂಪಿ. ಕೋಳಿಯ ಬೆನ್ನಿನಲ್ಲಿರುವ ಸಿಂಪಿಯಾಕಾರದ ಮಾಂಸದ ತುಂಡು. **O.-bank, -bed** ಸಿಂಪಿಸಂತಾನ ಬೆಳೆಯುವ ಅಥವಾ ಬೆಳಸುವ ಸಮುದ್ರತಳದ ಭಾಗ: ಸಿಂಪಿ ದಂಡೆ. **O.-bar** ಸಿಂಪಿಗಳನ್ನು ಊಟಕ್ಕೆ ಬಡಿಸುವ ತಿಂಡಿ ತೀರ್ಥದ ಅಂಗಡಿ. **O.-catcher** (ನೀರಿನಲ್ಲಿ ನಡೆದು ಹೋಗುವ) ಒಂದು ಕಡಲ ಹಕ್ಕಿ. **O.-farm** ಸಿಂಪಿ ಬೆಳಸುವ ಕಡಲ ತಳ. **O.-knife** ಸಿಂಪಿಯನ್ನು ತೆರೆಯಲು ತಕ್ಕ ಆಕಾರವುಳ್ಳ ಚೂರಿ. **O. patty** ಬೇಯಿಸಿದ ಸಿಂಪಿಗೊಡಿದ ಹಿಟ್ಟಿನ ಒಂದು ಭಕ್ಷ್ಯ. **O.-shell** ಮೃದ್ವಂಗಿಯ (ಮುತ್ತಿನ) ಚಿಪ್ಪು.

Ózone ಓಸೋನ್ (ನಾ.) (ಮೂರು ಅಮ್ಲಜನಕ ಪರಮಾಣುಗಳು ಕೂಡಿ ಒಂದು ಅಣುವಾದ) ಸಾಂದ್ರೀಕೃತ ಅಮ್ಲಜನಕ ರೂಪ (ಇದು ನವ ಚೈತನ್ಯ ಕೊಡುವ ಕಟು ವಾಸನೆಯ ಅನಿಲ): 'ಓಸೋನ್'. (ರೂಪ.) ಹುರಿದುಂಬಿಸುವ, ಉಲ್ಲಾಸಗೊಳಿಸುವ, —ಪ್ರಭಾವ; ಉತ್ಸಾಹ ಪೂರಕ ಪ್ರಭಾವ. **Ozónic** ಓಸೋ— (ಗು.); **Ozoníferous** ಓಸೋ— (ಗು.); **Ózonize** (ಕ್ರಿ. ಸಕ.); **Ózonizer** (ನಾ.) ಓಸೋನ್ ತಯಾರಿಕೆಯ ಸಲಕರಣೆ. **Ozonómeter** (ನಾ.) ವಾಯುವಿನಲ್ಲಿರುವ ಓಸೋನ್ ಪ್ರಮಾಣವನ್ನು ಅಳೆಯುವ ಸಲಕರಣೆ: ಓಸೋನ್ ಮಾಪಕ.

P

P ಪೀ. ಇಂಗ್ಲಿಷ್ ವರ್ಣಮಾಲೆಯ ಹದಿನಾರನೆಯ ಅಕ್ಷರ. Mind one's P's & Q's ಮರ್ಯಾದೆಯ ವಿಷಯದಲ್ಲಿ ಜೋಕೆಯುಂದಿರು.

ಸಂಕ್ಷಿಪ್ತಗಳು: **P. & O.** (Peninsular & Oriental) ಒಂದು ನೌಕಾಯಾನ ಸಂಸ್ಥೆಯ ಹೆಸರು. **P.T.O.** (Please Turn Over) ದಯವಿಟ್ಟು ತಿರುಗಿಸಿ ನೋಡಿ. **P.C.** (Police Constable) ಪೊಲೀಸು ಪ್ಯಾದೆ. **P.O.**[1] (Post-Office). **P.O.**[2] (Postal Order) ಅಂಚೆ ಪಾವತಿಯ ಹಣದ ಚೀಟಿ. **P.S.** (Post Scriptum) ಕಾಗದ ಬರೆದು ಮುಗಿಸಿದಮೇಲೆ ಅಡಿಯಲ್ಲಿ ಸೇರಿಸಿದ್ದು: ತಾಜಾ ಕಲಂ. **P.R.A.** (President of the Royal Academy). **P.M.** (Prime Minister) ಮುಖ್ಯ ಮಂತ್ರಿ. **P.C.** (Privy Council, Councillor) (ಇಂಗ್ಲೆಂಡಿನ ದೊರೆ ತಾನಾಗಿ ನೇಮಕ ಮಾಡುವ) ಆಪ್ತ ಮಂಡಲ, —ಯ ಸದಸ್ಯ. **p.** (Page of book, etc.). **p.p.** (Past participle) ಭೂ. ಕೃ. **p.m.** (Post meridiem) ಅಪರಾಹ್ನ. **per pro.**(curationem) ಪ್ರತಿನಿಧಿಯ ಮೂಲಕ. **Ph.D.** (Philosophiae Doctor) ವಿದ್ಯಾವಿಶಾರದ. **Pop.**(ulation). **pp.**(Pages). **Prof.**(essor). **Pro tem.**(pore) ತತ್ಕಾಲಕ್ಕೆ. **Prov.**(erbs). **Prox.**(imo) ಮುಂದಿನ ತಿಂಗಳ. **Ps.**(alms) ಸ್ತೋತ್ರ ಗೀತಗಳು. **Pte** [Private (soldier)] ಹುದ್ದೇದಾರನಲ್ಲದ ಸಾಮಾನ್ಯ ಸಿಪಾಯಿ.

Pa ಪಾ (ನಾ.) (ಬಳ. ಮಾ.) = Papa.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pábulum ಪ್ಯಾಬ್ಯು(ಬ)ಲಮ್ (ನಾ.) (ಮು., ಸಸ್ಯಗಳ ಮತ್ತು ಕೆಳ ದರ್ಜೆಯ ಪ್ರಾಣಿಗಳ) ಆಹಾರ; ತಿಂಡಿ; ತೀನಿ. (ರೂಪ.) Mental p. ಮನಸ್ಸಿಗೆ ಆಹಾರ.

Pace[1] ಪೇಸ್ (ನಾ., ಕ್ರಿ.) (ನಡಗೆಯಲ್ಲಿ, ಓಟದಲ್ಲಿ) ಹೆಜ್ಜೆ, ದಾಪು; (ಹೀಗೆ ಹಾಕಿದ) ಒಂದು ಹೆಜ್ಜೆಯ ದೂರ (ಸು., ೩೦ ಅಂಗುಲ); ನಡಗೆಯಲ್ಲಿ ಒಂದು ಪಾದವನ್ನು ಒಮ್ಮೆ ನೆಲಕ್ಕೂರಿ ಮತ್ತೊಮ್ಮೆ ಅದೇ ಪಾದವನ್ನು ಮರಳಿ ಊರುವಲ್ಲಿ ಸಾಗಿದ ದೂರ (ಸು., ೬೦ ಅಂಗುಲ); ನಡೆಯುವ, ಓಡುವ, —ರೀತಿ; ನಡೆ; ನಡಗೆ; ಗತಿ (ಮು., ತರಬೇತು ಮಾಡಿದ ಕುದುರೆ, ಹೇಸರಗತ್ತೆ, ಮೊ. ಗಳ ಹಲವು ತೆರದ ನಡಗೆಗಳಲ್ಲಿ ಯಾವುದಾದರೊಂದು); ಕುಲುಕು ನಡೆ (= Amble); [(ರೂಪ.) Put person through his paces (ಕಾರ್ಯ, ಮೊ. ಗಳಲ್ಲಿ) ಒಬ್ಬನ ನಡತೆಯನ್ನು, ಯೋಗ್ಯತೆಯನ್ನು, ಪರೀಕ್ಷಿಸು]; ನಡಗೆಯ, ಓಟದ, —ವೇಗ; ಮುಂದುವರಿಯುವ ಪ್ರಮಾಣ (ಅನೇಕ ವೇಳೆ ರೂಪ.); [Keep p. (ಒಬ್ಬನೊಡನೆ, ಒಂದರೊಡನೆ) ಸರಿಸಮನಾಗಿ ಮುಂದುವರಿ (*With* ಉಪ. ದೊಡನೆ). Go the p. ಹೆಚ್ಚುವೇಗದಿಂದ ಹೋಗು. (ರೂಪ.) ದುರ್ವ್ಯಯದಲ್ಲಿ ಆಸಕ್ತನಾಗು; ವಿಷಯ ಲೋಲುಪನಾಗು. P.-maker (ಓಟದ ಪಂದ್ಯ, ಮೊ. ಗಳಲ್ಲಿ) ಮತ್ತೊಬ್ಬನಿಗೆ ಹೆಜ್ಜೆಯ ವೇಗವನ್ನು ತೋರಿಸಿಕೊಡಲು, ಸವಾರಿ ಮಾಡುತ್ತ, ಓಡುತ್ತ, ಹೋಗುವವನು. P.-stick ಹೆಜ್ಜೆಯ ದೂರವನ್ನು ಅಳೆಯುವುದಕ್ಕೆ ತಕ್ಕಂತೆ ಹೊಂದಿಸಲಾಗುವ, ಕಸರತ್ತು ಶಿಕ್ಷಕನ ಒಂದು ಇಗ್ಗಾಲಿನ ಸಲಕರಣೆ. (-)paced (ಗು.)]. (ಕ್ರಿ.) ನಿಧಾನವಾಗಿ ಅಥವಾ ಒಂದೇ ಸಮನಾಗಿ ಹೆಜ್ಜೆ ಹಾಕುತ್ತ ನಡೆ, ಹೋಗು, ಪಯಣ ಮಾಡು; (ದೂರವನ್ನು) ಹೆಜ್ಜೆ ಹಾಕಿ ಅಳೆ; (ಕುದುರೆಯ ವಿಷಯದಲ್ಲಿ) ಜಗ್ಗುಹಾಕಿಕೊಂಡು ನಡೆ; (ಸವಾರ, ಓಟಗಾರ, ಮೊ. ಗೆ) ಹೆಜ್ಜೆ ಹಾಕಿ ತೋರಿಸು. **Pácer** (ನಾ.) (ಕ್ರಿಯಾರ್ಥಗಳಲ್ಲಿ); ಜಗ್ಗುಹಾಕಿಕೊಂಡು ನಡೆಯುವ ಕುದುರೆ.

Pace[2] (L) ಪೇಸಿ (ಉಪ.) (ವಿರುದ್ಧಾಭಿಪ್ರಾಯ ಸೂಚಿಸುವಲ್ಲಿ) ಗೌರವದೊಡನೆ. **P. tua** ತಮ್ಮ ಅಭಿಪ್ರಾಯಕ್ಕೆ ಗೌರವ ಕೊಟ್ಟು. **P. Smith** ಸ್ಮಿತ್ ಅವರ—.

Pácha, etc. Pasha ನೋಡಿ.

Pachísi ಪಾಚೀಸಿ (ನಾ.) ಆರು ಕವಡೆಗಳಿಂದ ನಾಲ್ಕು ಮಂದಿ ಆಡುವ ಒಂದು ಬಗೆಯ 'ಚೌಕಾಬಾರ' ಆಟ. [ಹಿಂದೀ: 'ಪಚ್ಚೀಸ್' ಪದದಿಂದ (ಎಸೆತದಲ್ಲಿ ಬೀಳುವ ಮಹತ್ತಮ ಸಂಖ್ಯೆ ೨೫)]

Páchyderm ಪ್ಯಾಕಿಡರ್ಮ್ (ನಾ.) ದಪ್ಪ ಚರ್ಮದ ಚತುಷ್ಪಾದಿ (ಮು., ಗೊರಸುಳ್ಳ, ಮೆಲುಕು ಹಾಕದ, —ಪ್ರಾಣಿಜಾತಿ: ಆನೆ, ಕುದುರೆ, ಮೊ.); ಮಂದ ಚರ್ಮಿ. (ರೂಪ.) (ಹಾಸ್ಯ, ಅಪಮಾನ, ಮೊ. ವನ್ನು) ಮನಸ್ಸಿಗೆ ನಾಟಿಸಿಕೊಳ್ಳದವನು. **Pachydérmatous** —ಡರ್ಮಟಸ್ (ಗು.)

Pacífic, etc. Pacify ನೋಡಿ.

Pácify ಪ್ಯಾಸಿಫೈ (ಕ್ರಿ. ಸಕ.) (ಮನುಷ್ಯ, ಕೋಪ, ಉದ್ರೇಕ, ಮೊ. ನ್ನು) ಸಮಾಧಾನ ಮಾಡು, ಶಾಂತಗೊಳಿಸು, ಉಪಶಮನ ಮಾಡು; (ದೇಶ, ಮೊ. ನ್ನು) ಸಮಾಧಾನ ಸ್ಥಿತಿಗೆ, ಶಾಂತ ಸ್ಥಿತಿಗೆ, —ತರು. **Pacífic** ಪಸಿಫಿಕ್ (ಗು., ನಾ.) ಶಾಂತಿಮುಖವಾದ; ಶಾಂತ (ಸ್ವಭಾವದ). The P. (Ocean) ಅಮೆರಿಕಕ್ಕೂ ಏಷ್ಯಕ್ಕೂ ಮಧ್ಯೇ ಇರುವ ಪೆಸಿಫಿಕ್ ಸಾಗರ; ಶಾಂತ ಸಾಗರ. **Pacífically** (ಕ್ರಿ. ವಿ.); **Pacificátion** ಪ್ಯಾಸಿಫಿಕೇಷನ್ (ನಾ.) ಸಮಾಧಾನ ಮಾಡುವುದು; ಶಾಂತಗೊಳಿಸುವುದು; ಉಪಶಮನ; ಶಾಂತಿಯೊಪ್ಪಂದ. **Pacífi-catory** ಪಸಿ— (ಗು.) ಶಾಂತಿ ಸೂಚಕ. **Pacíficism** ಪಸಿಫಿಸಿಸ್ಮ್, **Pácifism** ಪ್ಯಾಸಿಫಿಸ್ಮ್ (ನಾ.) ಯುದ್ಧಗಳಿಲ್ಲದಂತೆ ಮಾಡುವುದು ಅಪೇಕ್ಷಣೀಯವೂ ಸಾಧ್ಯವೂ ಆದುದು ಎಂಬ ವಾದ: ಶಾಂತಿ ವಾದ. **Pacíficist** (ನಾ.) = **Pácifist** (ನಾ.)

Pack ಪ್ಯಾಕ್ (ನಾ.) (ಹೊತ್ತುಕೊಂಡು ಹೋಗಲು ಅನುಕೂಲಸುವಂತೆ ಸುತ್ತಿದ, ಅಥವಾ ಒಟ್ಟಿಗೆ ಕಟ್ಟಿದ, ವಸ್ತುಗಳ) ಕಟ್ಟು, ಕಂತೆ, ಪಿಂಡಿ; ಕಂಟಲೆ; ಗಂಟು; ಮೂಟೆ; ಥಾಂಗಿ. (ಮು.) ತಿರುಗು ವ್ಯಾಪಾರಿಯ, ಸಿಪಾಯಿಯ, —ಮೂಟೆ. (ಹಲವು ಸರಕುಗಳ) ಒಂದು ಅಳತೆ. ತಂಡ; ಗುಂಪು; ಒಟ್ಟಲು (P. of fools ಹುಚ್ಚರ ತಂಡ. P. of lies, nonsense, etc. ಸುಳ್ಳಿನ, ಅವಿವೇಕ ಪ್ರಸಂಗದ, —ಕಂತೆ). (ಬೇಟೆಗಾಗಿ ಒಟ್ಟಾಗಿಟ್ಟಿರುವ) ಬೇಟೆನಾಯಿಗಳ ತಂಡ; (ಸ್ವಾಭಾವಿಕವಾಗಿ ಒಟ್ಟಗಿರುವ) ಮೃಗಗಳ (ಮು., ತೋಳಗಳ), ಅಥವಾ ಹಕ್ಕಿಗಳ, ಹಿಂಡು; (ರಗ್ಬಿ ಕಾಲ್ಚೆಂಡಾಟ) (ಒಂದು ಪಕ್ಷದ) ಮುಂಧಾಗದ ಆಟಗಾರರು. ಇಸ್ಪೀಟೆಲೆಗಳ ಕಟ್ಟು. ಧ್ರುವ ಸಮುದ್ರದಲ್ಲಿ ದೊಡ್ಡ ನೀರ್ಗಲ್ಲಿನ ಖಂಡಗಳು ತೇಲುತ್ತಿರುವ ವಿಸ್ತಾರ ಪ್ರದೇಶ. ಒಂದು ಋತುವಿನಲ್ಲಿ, ಗೊತ್ತಾದ ಕಾಲ, ಮೊ. ಗಳಲ್ಲಿ, ಶೇಖರಿಸಿ ಕಟ್ಟಿಟ್ಟ ಮೀನು, ಹಣ್ಣು, ಮೊ. ಗಳ ಮೊತ್ತ. P.-drill ಸಾಮಾನು ಸರಂಜಾಮುಗಳನ್ನೆಲ್ಲ ಹೊತ್ತುಕೊಂಡು ವಿಧಿಬದ್ಧವಾಗಿ ಹಿಂದಕ್ಕೂ ಮುಂದಕ್ಕೂ ನಡೆದಾಡುವಂತೆ ದಂಡನೆಯಾಗಿ ವಿಧಿಸಿದ ಕವಾಯಿತು. P.-horse ಮೂಟೆ ಹೊರುವ ಕುದುರೆ; ಹೇರುಗುದುರೆ. Packman ತಿರುಗು ವ್ಯಾಪಾರಿ. P.-saddle ಹೊರೆ ಹೇರುವುದಕ್ಕೆ ಅನುಕೂಲವಾದ ಜೀನು; ನಬರ. Packthread ಮೂಟೆ ಹೊಲಿಯುವುದಕ್ಕಾಗಲಿ ಕಟ್ಟುವುದಕ್ಕಾಗಲಿ ಉಪಯೋಗಿಸುವ ದಪ್ಪ ದಾರ; ಕಟ್ಟುದಾರ; ಸುತ್ತಲ. **Pácket** (ನಾ.) ಸಣ್ಣ ಕಟ್ಟು; ಪೊಟ್ಟಣ; ಅಂಚೆ ಕಟ್ಟು. ಅಂಚೆಯ ಹಡಗು; ಟಪಾಲು ಹಡಗು (= P.-boat). (ಅಸಂ.) ಪಂದ್ಯ ಕಟ್ಟುವುದರಲ್ಲಿ, ಸಟ್ಟಾ ವ್ಯಾಪಾರ, ಮೊ. ಗಳಲ್ಲಿ, ಗೆದ್ದ ಅಥವಾ ಕಳೆದುಕೊಂಡ ಭಾರಿ ಮೊತ್ತ.

Pack (ಕ್ರಿ.) (ಸಾಗಿಸುವುದಕ್ಕಾಗಲಿ ಕೂಡಿಡುವುದಕ್ಕಾಗಲಿ) ಸಾಮಾನನ್ನು ಮೂಟೆಯಾಗಿ ಕಟ್ಟು, ಪೆಟ್ಟಿಗೆ ಅಥವಾ ಚೀಲಕ್ಕೆ ತುಂಬು; ಕಂತೆ, ಪಿಂಡಿ, —ಕಟ್ಟು; ಗಂಟುಮೂಟೆ ಕಟ್ಟು (P. up); (ಸಾಮಾನು ಚೆನ್ನಾಗಿ, ಸುಲಭವಾಗಿ) ಮೂಟೆ ಕಟ್ಟಲಾಗು, ಮೂಟೆಗೆ ಅಡಕವಾಗು (*Well, easily* ಮೊ. ಪದದೊಡನೆ); (ಮಾಂಸ, ಹಣ್ಣು, ಮೊ. ನ್ನು, ಹೆಚ್ಚುಕಾಲ ಕೆಡದಂತಿರಲು) ತಕ್ಕಂತೆ ಸಂಸ್ಕರಿಸಿ ಡಬ್ಬಿ, ಮೊ. ಗಳಲ್ಲಿ ತುಂಬಿಡು; ಅಡಕು; ಗಿಡಿ; ತುರುಕು; ಒತ್ತಿ ತುಂಬು; (ಬೇಟೆನಾಯಿಗಳನ್ನು) ತಂಡಗೂಡಿಸು; (ಇಸ್ಪೀಟೆಲೆಗಳನ್ನು) ಕಟ್ಟುಗೂಡಿಸು; ಗುಂಪುಕೂಡು; (ಪ್ರಾಣಿಗಳು) ಹಿಂಡುಗೂಡು; (ಪದಾರ್ಥವನ್ನು, ಒಂದು ಆವರಣ ಹಾಕಿ) ಚೆನ್ನಾಗಿ ಬಿಗಿದು ಸುತ್ತು. (ವೈ. ಶಾ.) (ಅಂಗ, ಮೊ. ಕ್ಕೆ, ತೇವದ ಬಟ್ಟೆ) ಸುತ್ತು. (ಪ್ರಾಣಿಯಮೇಲೆ) ಹೊರೆ ಹೇರು; ಗಂಟು ಮೂಟೆ ಕಟ್ಟಿಕೊಂಡು ಹೊರಡು. [Send (person) packing (ಒಬ್ಬನನ್ನು) ಹಿಂದುಮುಂದು ನೋಡದೆ, ತಡಬಡವಿಲ್ಲದೆ, ಕೆಲಸದಿಂದ ತೆಗೆದುಹಾಕು, ಮನೆಗೆ ಕಳುಹಿಸಿಬಿಡು. P. (person) off (ಒಬ್ಬನನ್ನು) ಹೊರಡಿಸಿಬಿಡು]. ತನ್ನ ಪಕ್ಷಕ್ಕೆ ಅನುಕೂಲವಾಗುವಂತೆ ಪಕ್ಷಪಾತದ ತೀರ್ಮಾನ ಪಡೆಯಲು (ಅನುಕೂಲ ನ್ಯಾಯದರ್ಶಿ ಮಂಡಲ, ಮೊ. ನ್ನು) ಆಯ್ಕೆ ಮಾಡು. **Páckage** ಪ್ಯಾಕೆಜ್ (ನಾ.) ಕಟ್ಟು; ಕಂತೆ; ಪಿಂಡಿ; ಮೂಟೆ; ಗಂಟು; ಥಾಂಗಿ; ಸಾಮಾನು (ತುಂಬುವ) ಪೆಟ್ಟಿಗೆ. **Pácker** (ನಾ.) (ಕ್ರಿಯಾರ್ಥಗಳಲ್ಲಿ); (ಮಾರಾಟಕ್ಕಾಗಿ ಹಣ್ಣು, ಮಾಂಸ, ಮೊ. ನ್ನು) ಡಬ್ಬಿ, ಮೊ. ಗಳಲ್ಲಿ ತುಂಬುವವನು; ಹೀಗೆ ತುಂಬುವ, ಕಟ್ಟುವ,—ಯಂತ್ರ. **Pácking** (ನಾ.) (ಕ್ರಿಯಾರ್ಥಗಳಲ್ಲಿ); [P.-needle ಮೂಟೆ ಹೊಲಿಯುವ ದಬ್ಬಳ. P.-sheet (ಸಾಮಾನಿನ) ಸುತ್ತುಕಟ್ಟಿನ ಬಟ್ಟೆ, ಮೊ.; (ಜಲಚಿಕಿತ್ಸೆಯಲ್ಲಿ ಉಪಯೋಗಿಸುವ) ತೇವದ ಬಟ್ಟೆ]. (ಯಂತ್ರ ಶಿಲ್ಪ) (ಎರಡು ಭಾಗಗಳ) ಸೇರಿಕೆಯನ್ನು ಮುಚ್ಚುವ, ಅಥವಾ ಚಲಿಸುತ್ತಿರುವ ಅಚ್ಚು, ಮೊ. ಕ್ಕೆ ಮೃದುಚಾಲಕವನ್ನೊದಗಿಸಲು ಸಹಾಯವಾಗುವ (ಎಣ್ಣೆಹೀರಿಕೊಳ್ಳುವ) ಪದಾರ್ಥ (ಕಾಗದ, ರಬ್ಬರು, ಕಲ್ಲುನಾರು, ಮೊ. ವು). P.-box = Stuffing-box (Stuff ನೋಡಿ)

Pact ಪ್ಯಾಕ್ಟ್ (ನಾ.) ಒಪ್ಪಂದ; ಒಡಂಬಡಿಕೆ; ಕರಾರು. P. of Locarno, Peace P. (ಆಯಾ ಪದವನ್ನು ನೋಡಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pad[1] ಪ್ಯಾಡ್ (ನಾ., ಕ್ರಿ.) (ಅಸಂ.) ರಸ್ತೆ; ದಾರಿ (Gentleman, Knight, Squire, of the p. ದಾರಿಗಳ್ಳ; ಸುಲಿಗೆಕೋರ). ಮೆಲು ಹೆಜ್ಜೆಯ ಕುದುರೆ (=P.-nag). (ಕ್ರಿ.) (ದಾರಿ, ಮೊ. ಗಳಲ್ಲಿ) ಕಾಲ್ನಡಗೆಯಲ್ಲಿ ತಿರುಗಾಡು. P. it, P. the hoof (ಅಸಂ.) ಕಾಲ್ನಡಗೆಯಲ್ಲಿ ಹೋಗು.

Pad[2] ಪ್ಯಾಡ್ (ನಾ., ಕ್ರಿ. ಸಕ.) (ಮರದ ಅಟ್ಟೆಯಿಲ್ಲದ) ಮೆತ್ತೆ ಜೀನು; ತಡಿ; ಸೊಂಟಪಟ್ಟಿ ಬಿಗಿಯುವ ಜೀನಿನ ಭಾಗ. [ಕಿರುಗುಟ್ಟುವುದನ್ನು ಕಡಮೆಮಾಡುವುದಕ್ಕಾಗಲ, (ಚೀಲ, ಮೊ. ಗಳ) ಖಾಲಿ ಸ್ಥಳವನ್ನು ತುಂಬುವುದಕ್ಕಾಗಲ, ಉಪಯೋಗಿಸುವ] (ತುಂಬು) ಮೆತ್ತೆ. (ಕ್ರಿಕೆಟ್, ಮೊ. ಆಟಗಳಲ್ಲಿ, ಕಾಲು, ಮೊ. ದೇಹಭಾಗಗಳ ರಕ್ಷಣೆಗಾಗಿ ಉಪಯೋಗಿಸುವ) ಮೆತ್ತೆ ಕಾಪು; (ಏಣಿನಲ್ಲಿ ಒಂದುಗೂಡಿಸಿದ) ಒತ್ತುಕಾಗದಗಳ, ಲೇಖನ ಅಥವಾ ರೇಖನ ಕಾಗದಗಳ, —ಕಟ್ಟು, ಪಿಂಡಿ; ಒತ್ತಿಗೆ. (ಕೆಲವು ಚತುಷ್ಪಾದಿಗಳಲ್ಲಿ) ಅಂಗಾಲಿನ ಮೆತ್ತೆ; ಪಂಜಾ. (ಬೈರಿಗೆಯಲ್ಲಿ) ಅಲಗು ಕೂರುವ ಕಂಡಿ; (ಶಿಲ್ಪಿಯ ಆಯುಧದ) ಹಿಡಿಯಲ್ಲಿಯ ಕೂರುಗಂಡಿ. (ಕ್ರಿ.) ಮೆತ್ತೆಯೊದಗಿಸು; ಮೆತ್ತೆ ತುಂಬು. ಅನಾವಶ್ಯಕವಾದ ಪದಗಳಿಂದ (ವಾಕ್ಯ, ಮೊ. ನ್ನು) ಭರತಿ ಮಾಡು. Padded cell (ಹುಚ್ಚರ ಆಸ್ಪತ್ರೆಯಲ್ಲಿ) ಮೆತ್ತೆಗಟ್ಟಿದ ಗೋಡೆಗಳುಳ್ಳ ಕೋಣೆ. **Pádding** (ನಾ.)

Pad[3] ಪ್ಯಾಡ್ (ನಾ.) ಹಣ್ಣು, ಮೊ. ಕ್ಕೆ ಅಳತೆಯಾಗಿ ಉಪಯೋಗಿಸುವ ಕುಕ್ಕೆ.

Páddle ಪ್ಯಾಡ್'ಲ್ (ನಾ., ಕ್ರಿ.) (ನೇಗಿಲ ಗುಳವನ್ನು ಒರಸುವುದು, ಮೊ. ಕೆಲಸಕ್ಕೆ ಉಪಯೋಗಿಸುವ) ಉದ್ದ ಹಿಡಿಯೂ ಚಪ್ಪಟೆಯ ಅಡಿಯೂ ಉಳ್ಳ ಸನಿಕೆಯಂಥ ಒಂದು ಸಣ್ಣ ಮುಟ್ಟು; (ದೋಣಿ ನಡಸುವ) ಅಗಲ ಅಲಗಿನ ಮೋಟು ಹುಟ್ಟು (Double p. ಎರಡು ತುದಿಗಳಲ್ಲೂ ಅಲಗಿರುವ ಹುಟ್ಟು). ಹುಟ್ಟುಗಾಲಿಯ ಪರಿಧಿಯ ಸುತ್ತಲೂ ಅಳವಡಿಸಿರುವ ಹಲಗೆಗಳಲ್ಲೊಂದು; (ದ್ರವವನ್ನು ಕಲಕಲು ಉಪಯೋಗಿಸುವ) ಹುಟ್ಟಿನಾಕಾರದ ಮುಟ್ಟು, ಸಲಕರಣೆ. (ಪ್ರಾ. ವಿ.) ಈಜುರೆಕ್ಕೆ. [P.-wheel ನೀರನ್ನು ಹಿಂದಕ್ಕೆ ಒತ್ತುವಂತೆ ಪರಿಧಿಯ ಸುತ್ತಲೂ ಹಲಗೆಗಳನ್ನು ಅಳವಡಿಸಿರುವ, ಹಡಗುನಡಸುವ ಗಾಲಿ: ಹುಟ್ಟುಗಾಲಿ. P.-box ಹುಟ್ಟುಗಾಲಿಯ ಮೇರ್ಲ್ಭಾಗದ ಮುಚ್ಚಳ]. (ಕ್ರಿ.) ಹುಟ್ಟುಹಾಕಿ ದೋಣಿ ನಡಸು: ಹುಟ್ಟುಹಾಕು; ಹುಟ್ಟುಹಾಕುತ್ತ ನೀರಿನಮೇಲೆ ಸಂಚರಿಸು [P. one's own canoe (ರೂಪ.) ಸ್ವಾವಲಂಬಿಯಾಗಿರು]. (ನಯವಾಗಿ, ಮೆಲ್ಲಗೆ) ದೋಣಿ ನಡಸು. ಆಳವಿಲ್ಲದ ನೀರಿನಲ್ಲಿ ಕಾಲಾಡಿಸು, ಆಟವಾಡು. (ಒಂದು ವಸ್ತುವಿನಮೇಲೆ) ಬೆರಳಾಡಿಸು (*In, on, about* ಉಪ. ಜೊಡನೆ). (ಮಗು) ತಪ್ಪುಹೆಜ್ಜೆ ಇಡು.

Páddock[1] ಪ್ಯಾಡಕ್ (ನಾ.) (ಮು., ಕುದುರೆಸಾಕುವ ಕ್ಷೇತ್ರದ ಭಾಗವಾಗಿ, ಅದಕ್ಕೆ ಸೇರಿದಂತಿರುವ) ಸಣ್ಣ ಹುಲ್ಲುಗಾವಲು; (ಕುದುರೆಜೂಜಿನ ಮೈದಾನದ ಬಳಿ, ಜೂಜಿಗೆ ಮೊದಲು ಜೂಜುಕುದುರೆಗಳನ್ನು ತಂದು ಸೇರಿಸುವ) ತೆಂಡೆಗಟ್ಟಿದ ಆವರಣ.

Páddock[2] ಪ್ಯಾಡಕ್ (ನಾ.) (ಪ್ರಾಚೀ. ಪ್ರ., ಪ್ರಾಂ. ಪ್ರ.) ಕಪ್ಪೆ; ದೊಡ್ಡ ನೆಲಗಪ್ಪೆ.

Páddy[1] ಪ್ಯಾಡಿ (ನಾ.) ಬತ್ತ; ನೆಲ್ಲು.

Páddy[2] ಪ್ಯಾಡಿ (ನಾ.) ಐರ್ಲಂಡಿನವನು; —ನ ಅಡ್ಡಹೆಸರು.

Páddy[3] ಪ್ಯಾಡಿ, **Páddywhack** —ಹ್ವ್ಯಾಕ್ (ನಾ.) (ಬಳ. ಮಾ.) ರೇಗು; ಕೆರಳು; ಉದ್ರೇಕ.

Pádishah ಪಾಡಿಷಾ, **Pádshah** ಪಾಡ್'ಷಾ (ನಾ.) ಪರ್ಷಿಯದ ದೊರೆಯಾದ 'ಷಾ'ವಿನ ಬಿರುದು; ಯೂರೋಪಿನಲ್ಲಿ ತುರ್ಕಿಯ ಸುಲ್ತಾನನ ಬಿರುದು; ಇಂಡಿಯದಲ್ಲಿ ಬ್ರಿಟಿಷ್ ದೊರೆಯ (ಚಕ್ರವರ್ತಿಯ) ಬಿರುದು: ಪಾದಷಹ.

Pádlock ಪ್ಯಾಡ್'ಲಾಕ್ (ನಾ., ಕ್ರಿ. ಸಕ.) ಚಿಲುಕ (ಹಾಕು)

Pádre ಪಾಡ್ರೇ (ನಾ.) (ಸೈನಿಕ ಮತ್ತು ನಾವೆಯ ಅಸಂ.) ಪಾದ್ರಿ.

Paéan ಪೀಅನ್ (ನಾ.) (ಹಿಂದೆ ಅಪಾಲೋ ದೇವತೆಗೂ ಆರ್ಟಿಮಿಸ್ ದೇವತೆಗೂ ಗ್ರೀಕರು ಅರ್ಪಿಸುತ್ತಿದ್ದ) ಕಷ್ಟ ವಿಮೋಚನೆಯ, ಜಯಲಾಭದ, ಸ್ತೋತ್ರ; ಪ್ರಶಂಸಾ ಗೀತೆ; ಜಯಘೋಷ ಗೀತೆ.

Paéderasty ಪೀಡೆರ್ಯಾಸ್ಟಿ, **Péd-** ಪೀ(ಪೆ)ಡೆ— (ನಾ.) ಗುದ ಮೈಥುನ; ಪುರುಷ ಮೈಥುನ.

Paedobáptism ಪೀಡೊಬ್ಯಾಪ್ಟಿಸ್'ಮ್ (ನಾ.) ಶಿಶುಗಳಿಗೆ ಜ್ಞಾನಸ್ನಾನ ಮಾಡಿಸುವುದು; ಶಿಶು ಜ್ಞಾನಸ್ನಾನ. **Paedobáptist** (ನಾ.)

Págan ಪೇಗನ್ (ನಾ., ಗು.) ಯೆಹೂದ್ಯ, ಕ್ರೈಸ್ತ ಅಥವಾ ಮಹಮ್ಮದೀಯ, —ಅಲ್ಲದವನು; ನಿಜವಾದ ದೇವರನ್ನು ಆರಾಧಿಸದ ಜನಾಂಗದವನು. ಅಸಂಸ್ಕೃತ; ಕ್ಷುದ್ರ ಧರ್ಮಿ; ಜ್ಞಾನೋದಯವಾಗದಿರುವವನು. **Págandom** (ನಾ.) —ಪ್ರಪಂಚ. **Páganism** (ನಾ.); **Páganish** (ಗು.); **Páganize** (ಕ್ರಿ.)

Page[1] ಪೇಜ್ (ನಾ.) (ಬಾಗಿಲು ಕಾಯುವುದು, ಸಮಾಚಾರ ಒಯ್ಯುವುದು, ಮೊ. ಕೆಲಸ ಮಾಡುವ, ಸಾ., ಪೋಷಾಕು ತೊಟ್ಟಿರುವ) ಸೇವಕ [P. of honour, of the presence, etc. (ಇಂಗ್ಲೆಂಡಿನಲ್ಲಿ) ಅರಮನೆಯ ಹಲವು ಅಧಿಕಾರಿಗಳ ಹೆಸರು]. (ದೊಡ್ಡ ಪದವಿಯುಳ್ಳವನ) ಯುವಕ ಪರಿಚರ, ಬಾಲ ಸೇವಕ. (ಚರಿತ್ರೆ) 'ನೈಟ್' ಎಂಬ ವೀರ ಪುರುಷನ ಸೇವೆಯಲ್ಲಿದ್ದು, ತಾನು 'ನೈಟ್' ಆಗಲು ಅವನಿಂದ ಶಿಕ್ಷಣ ಪಡೆಯುತ್ತಿದ್ದ ಯುವಕ. **Págehood** (ನಾ.); **Págeship** (ನಾ.)

Page[2] ಪೇಜ್ (ನಾ., ಕ್ರಿ. ಸಕ.) ಪುಸ್ತಕ, ಮೊ. ಗಳ ಹಾಳೆಯ ಒಂದು ಪಕ್ಕ; ಪುಟ. (ರೂಪ.) (ಚರಿತ್ರೆ, ಮೊ. ಗಳಲ್ಲಿ ಒಂದು ಪುಟ ತುಂಬಲು ಅರ್ಹವಾದ) ಘಟನೆ, ಉಪಾಖ್ಯಾನ; ಬರೆವಣಿಗೆ; ಲೇಖನ; ಗ್ರಂಥ. (ಕ್ರಿ.) (ಪುಸ್ತಕ, ಮೊ. ಕ್ಕೆ) ಕ್ರಮವಾಗಿ ಪುಟ ಸಂಖ್ಯೆ ಹಾಕು. **Páginal** ಪ್ಯಾಜಿನಲ್ (ಗು.) ಪುಟಗಳ; ಪುಟಕ್ಕೆ ಪುಟ; (A verbal & p. reprint). **Páginary** (ಗು.); **Páginate** (ಕ್ರಿ. ಸಕ.) (ಪುಸ್ತಕ, ಮೊ. ಗಳಿಗೆ) ಪುಟ ಸಂಖ್ಯೆ ಕೊಡು. **Paginátion** (ನಾ.)

Págeant ಪ್ಯಾ(ಪೇ)ಜಂಟ್ (ನಾ.) ಉಜ್ಜ್ವಲ ದೃಶ್ಯ; ನೇತ್ರೋತ್ಸವ; (ಮು., ಅಟ್ಟಹಾಸಕ್ಕಾಗಿ ಏರ್ಪಡಿಸಿದ) ವೈಭವದ ಮೆರವಣಿಗೆ. (ರಂಗದ ಮೇಲಾಗಲ ಚಲಿಸುವ ರಥದ ಮೇಲಾಗಲ ಪ್ರದರ್ಶಿಸಿದ) ಸ್ತಬ್ಧ ದೃಶ್ಯ; ರೂಪಕ ಕಥಾ ದೃಶ್ಯ; ಸಾಂಕೇತಿಕ ದೃಶ್ಯ. (ಈಗ, ಮು.) ಒಂದು ಸ್ಥಳದ ಚರಿತ್ರೆಯನ್ನು ಪ್ರದರ್ಶಿಸುವ ವೈಭವದ ಮೆರವಣಿಗೆ ಅಥವಾ ಬಯಲಾಟ. (ರೂಪ.) ಪೊಳ್ಳು ಪ್ರದರ್ಶನ; ಆಡಂಬರ. **Págeantry** (ನಾ.) ಉಜ್ಜ್ವಲ ಪ್ರದರ್ಶನ; ಆಡಂಬರ.

Páginal, Páginate, etc. Page[2] ನೋಡಿ.

Pagóda ಪಗೋಡ (ನಾ.) (ಇಂಡಿಯ, ಚೀನ, ಮೊ. ದೇಶಗಳಲ್ಲಿ) ದೇವಸ್ಥಾನ, ಪವಿತ್ರ ಭವನ, ಮು., ಚತುರಸ್ರ ಗೋಪುರ; ಪಗೋಡ; (ಬೌದ್ಧ) ಧಾತು ಗರ್ಭ; ದಾಗಬ (Dagoba); ಅಲಂಕಾರಕ್ಕಾಗಿ ಮಾಡಿದ ಪಗೋಡದಂಥ ಕಟ್ಟಡ. ದ. ಇಂಡಿಯದಲ್ಲಿ ಹಿಂದೆ ಬಳಕೆಯಲ್ಲಿದ್ದ ಒಂದು ಚಿನ್ನದ ನಾಣ್ಯ: ಪಗೋಡ. P. tree ಚೀನದಲ್ಲಿಯೂ ಇಂಡಿಯದಲ್ಲಿಯೂ ಬೆಳೆಯುವ ಹಲವು ಜಾತಿಯ ಮರ. (ರೂಪ.) ಪಗೋಡ ನಾಣ್ಯಗಳನ್ನು ಬಿಡುವುದೆಂದು ವ್ಯಾಜಾಂತರವಾಗಿ ಹೇಳುತ್ತಿದ್ದ ಕಲ್ಪನೆಯ ಮರ (Shake the p.-tree ಇಂಡಿಯದಲ್ಲಿ ಬೇಗ ಐಶ್ವರ್ಯ ಸಂಪಾದಿಸು)

Pah ಪಹ್, ಪ್ಹಾ! (ಅಸಹ್ಯ ಸೂಚಕ ಭಾವ. ಅವ್ಯ.)

Paid. Pay ಧಾತುವಿನ ಭೂತ., ಭೂ. ಕೃ.

Pail ಪೆಯ್'ಲ್, ಪೇಲ್ (ನಾ.) ದುಂಡಾಗಿ ಬಗ್ಗಿಸಿದ ಕಂಬಿಯ ಹಿಡಿಕೆಯುಳ್ಳ, ಹಾಲು, ಮೊ. ದ ದ್ರವಗಳನ್ನು ತೆಗೆದುಕೊಂಡುಹೋಗಲು ಉಪಯೋಗಿಸುವ, ಮರದ ಅಥವಾ ಲೋಹದ ಕೊಳಗ ಪಾತ್ರೆ; ಇದರ ತುಂಬು (ಮೊತ್ತ) (Half a p. of milk). **Paílful** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pain ಪೆಯ್‌ನ್ (ನಾ., ಕ್ರಿ. ಸಕ.) (ಮೈಯ ಅಥವಾ ಮನಸ್ಸಿನ) ನೋವು; ಯಾತನೆ, ಬಾಧೆ, ಸಂಕಟ, ವೇದನೆ. (ಬ. ವ. ದಲ್ಲಿ) ಪ್ರಸವ ವೇದನೆ; ಬೇನೆ; (ಬ. ವ. ದಲ್ಲಿ) ಪಟ್ಟ ಕಷ್ಟ, ಪ್ರಯಾಸ (Take pains ಶ್ರಮ ಪಡು. Get a thrashing for one's pains). ಶಿಕ್ಷೆ; ದಂಡನೆ [ಈಗ, Pains & penalties; On or under p. of (death, etc.) ಎಂಬಲ್ಲ ಮಾತ್ರ]. [P. killer ನೋವು ನಿಲ್ಲಿಸುವ ಔಷಧ; ವೇದನ ಹಾರಿ. Painstaking (ಕೆಲಸ ಮಾಡುವುದರಲ್ಲಿ) ಶ್ರಮ ತೆಗೆದುಕೊಳ್ಳುವ, ಶ್ರದ್ಧೆಯುಳ್ಳ]. (ಕ್ರಿ.) ನೋವು ಕೊಡು; ನೋವಾಗು; ನೋಯು; ನೋಯಿಸು (It pains me to learn—. My arm is paining). **Painful** (ಗು.); **Painfully** (ಕ್ರಿ. ವಿ.); **Paínfulness** (ನಾ.); **Paínless** (ಗು.); **Paínlessly** (ಕ್ರಿ. ವಿ.); **Paínlessness** (ನಾ.)

Paint ಪೆಯ್‌ಂಟ್ (ನಾ., ಕ್ರಿ. ಸಕ.) (ಮೇಲ್ಮೈಗೆ ಬಣ್ಣ ಕೊಡಲು, ಬೆರೆಯುವ ದ್ರವದಲ್ಲಿ ಕಲಸಿ ಹಚ್ಚಬಹುದಾದ, ಗಟ್ಟಿಯ) ಬಣ್ಣ; [Luminous p. (Luminary ನೋಡಿ)]. ಮುಖ, ಮೊ. ಕ್ಕೆ ಹಚ್ಚಿಕೊಳ್ಳುವ ಬಣ್ಣ; ಕೆನ್ನೆಗಳಿಗೂ ತುಟಿಗಳಿಗೂ ಹಚ್ಚಿಕೊಳ್ಳುವ ನಯವಾದ ಕುಸುಂಬಾ ಬಣ್ಣ. (ಕ್ರಿ.) (ವಸ್ತು, ಮೊ. ನ್ನು) ಬಣ್ಣದಲ್ಲಿ ಚಿತ್ರಿಸು, ರೂಪಿಸು; (ಗೋಡೆ, ಮೊ. ನ್ನು) ವರ್ಣಚಿತ್ರಗಳಿಂದ ಅಲಂಕರಿಸು. (ರೂಪ.) [ಯಾವುದಾದರೂ ಸಂದರ್ಭ, ಮೊ. ನ್ನು (ವರ್ಣಚಿತ್ರದಲ್ಲಿ ಹೇಗೊ ಹಾಗೆ)] ಮಾತಿನಿಂದ ಚಿತ್ರಿಸು, ಬಣ್ಣಿಸು (Not so black as he is painted). (ವಸ್ತುವಿನಮೇಲೆ) ಬಣ್ಣ ಹಚ್ಚು; (ಗೊತ್ತಾದ) ಬಣ್ಣ ಬಳಿ [P. the door green. P. the town red (ಅಸಂ.) (ಕುಡಿತ ಕುಣಿತದ ಅಬ್ಬರದಿಂದ) ಊರೆಲ್ಲ ಗುಲ್ಲೆಬ್ಬಿಸು]. (ಮುಖ, ಮೊ. ಕ್ಕೆ) ನಸುಬಣ್ಣ ಹಚ್ಚಿಕೊ. P. out ಬಣ್ಣ ಹಚ್ಚಿ ತೊಡೆದುಬಿಡು. Painted Lady (Lady ನೋಡಿ). **Painting** (ನಾ.); **Painter**[1] (ನಾ.) ವರ್ಣಕರ್ಮಿ; ವರ್ಣಚಿತ್ರಕಾರ; ಬಣ್ಣಗಾರ (ಮರದ ಸಾಮಾನು, ಮೊ. ಗಳಿಗೆ ಬಣ್ಣಹಾಕುವವನು). Painter's colic ಸೀಸದ ಬಣ್ಣಗಳಿಂದ ಕೆಲಸಮಾಡುವ ಬಣ್ಣಗಾರರಿಗೆ ಬರುವ ಹೊಟ್ಟೆನೋವು. **Paintress** (ನಾ., ಸ್ತ್ರೀ.); **Painty** (ಗು.) ಬಣ್ಣದ; ವರ್ಣದ್ರವ್ಯದ; (ಚಿತ್ರದ ವಿಷಯದಲ್ಲಿ) ಅತಿ ರಂಗಾದ; ಬಣ್ಣ ಹಚ್ಚಿದ.

Painter[2] ಪೆಯ್‌ಂಟರ್ (ನಾ.) (ದೋಣಿಯನ್ನು ಹಡಗು, ಗೂಟ, ಮೊ. ಕ್ಕೆ ಬಿಗಿಯುವ) ದೋಣಿಯ ಮೂತಿಗೆ ಕಟ್ಟಿದ ಹಗ್ಗ. Cut the p. (ರೂಪ.: ಸಾ., ನೆಲಸುನಾಡಿನ ವಿಷಯದಲ್ಲಿ, ತಾಯಿನಾಡಿನ) ಸಂಬಂಧ ಹರಿ; (ತಾಯಿನಾಡಿನಿಂದ) ಬೇರೆಯಾಗು.

Pair ಪೇರ್ (ನಾ., ಕ್ರಿ.) ಜೋಡಿ; ಜೊತೆ; ಯುಗ್ಮ; ಯುಗಳ; ದ್ವಂದ್ವ; ಮಿಥುನ; ಎಣೆ (ಗ್ರಾಂ.); (ಸಾ., ಎರಡೆರಡಾಗಿ, ಜೊತೆ ಜೊತೆಯಾಗಿ, ಇರುವ ವಸ್ತುಗಳ ವಿಷಯದಲ್ಲಿ ಪ್ರ.: Gloves, shoes, eyes, etc.). [P.-royal ಒಂದೇ ಬೆಲೆಯ ಅಥವಾ ಒಂದೇ ದರ್ಜೆಯ ಮೂರು ಇಸ್ಪೀಟೆಲೆಗಳು: ಪರೇಲ; (ಮುಖಮೇಲಾಗಿ ಬಿದ್ದ) ಒಂದೇ ಗರದ ಮೂರು ದಾಳಗಳು]; ಪ್ರತ್ಯೇಕವಾಗಿ ಒಂದು ಭಾಗವನ್ನೇ ಉಪಯೋಗಿಸಲಾಗದ, ಒಂದಕ್ಕೊಂದು ಜವಾಬಾದ ಎರಡು ಭಾಗ ಗಳುಳ್ಳ, ವಸ್ತು (ಉದಾ., P. of scissors, tongs, trousers); ಮದುವೆಯಾಗಲುಳ್ಳ ಅಥವಾ ಮದುವೆಯಾದ ಗಂಡು ಹೆಣ್ಣಿನ ಜೊತೆ: ವಧೂ ವರರು; ದಂಪತಿಗಳು; ಗಂಡ ಹೆಂಡಿರು; (ಪ್ರಾಣಿ) ಮಿಥುನ; ಒಟ್ಟಿಗೆ ಹೂಡಿದ ಜೋಡು ಕುದುರೆ (=P. of horses); (ಪಾರ್ಲಮೆಂಟಿನಲ್ಲಿ) ಮೊದಲೇ ಮಾತಾಡಿಕೊಂಡು, ಅಭಿಮತ ತೆಗೆದುಕೊಳ್ಳುವಾಗ ಗೈರುಹಾಜರಾಗುವ ಪಕ್ಷ ಪ್ರತಿಪಕ್ಷಗಳ ಇಬ್ಬರು ಸದಸ್ಯರು; ಹೀಗೆ ನಡೆಯಲು ಒಪ್ಪುವ ಸದಸ್ಯ (Cannot find a p.). ಜೋಡಿಯ ಮತ್ತೊಂದು ವಸ್ತು: ಜೊತೆಯದು (Where is the p. to this sock?). Pair of stairs, of steps ಮಹಡಿಯ ಮೆಟ್ಟಲು ಸಾಲು [One, two, three, -p. front or back ಒಂದನೆಯ, ಎರಡನೆಯ, ಮೂರನೆಯ, ಅಂತಸ್ತಿನಲ್ಲ ಮುಂದಿನ ಅಥವಾ ಹಿಂದಿನ ಕೋಣೆ(ಯವನು)]. Another p. of shoes (Shoe ನೋಡಿ). [P.-horse (ಗು.) ಜೋಡುಕುದುರೆಯ. P.-oar ಜೋಡು ಹುಟ್ಟು (ಹಾಕಿ ನಡಸುವ) ದೋಣಿ]. (ಕ್ರಿ.) (ಮನುಷ್ಯರನ್ನು, ವಸ್ತುಗಳನ್ನು) ಜೋಡಿ ಜೋಡಿಯಾಗಿ ಅಳವಡಿಸು; —ಅಳವಟ್ಟಿರು. (ಪ್ರೇಮದಿಂದ, ಮದುವೆಯಿಂದ) ಒಟ್ಟುಗೂಡಿಸು, —ಗೂಡಿರು; (ಪ್ರಾಣಿಗಳ ವಿಷಯದಲ್ಲಿ) ಕೂಟ ಕೂಡು (*With* ಉಪ. ದೊಡನೆ). P. off ಜೊತೆ ಜೊತೆಯಾಗಿ ಇಡು; ಜೊತೆ ಜೊತೆಯಾಗಿ ಹೋಗು. (ಪಾರ್ಲಮೆಂಟಿನ ವಿಷಯದಲ್ಲಿ) ಗೈರುಹಾಜರಿಯ ಜೋಡಿಯವ ನಾಗು. (ಬಳ. ಮಾ.) ಮದುವೆಯಾಗು (*With* ಉಪ. ದೊಡನೆ)

Pajámas=Pyjamas.

Pal ಪ್ಯಾಲ್ (ನಾ., ಕ್ರಿ. ಅಕ.) (ಅಸಂ.) ಗೆಳೆ(ೞೆ)ಯ; ಜೊತೆಗಾರ; ಸಂಗಾತಿ; (P. up —ಒಡನೆ ಸಹವಾಸ ಮಾಡು). **Pálly** (ಗು.) (ಅಸಂ. ಅಥವಾ ಬಳ. ಮಾ.) ಸ್ನೇಹಪರನಾದ; ಸಂಗಾತಿಯಾದ.

Pálace ಪ್ಯಾಲೆ(ಲ)ಸ್ (ನಾ.) ಅರಮನೆ [ದೊರೆಯ, (ಆರ್ಚ್)ಬಿಷಪ್ಪಿನ,—ಅಧಿಕಾರ ವಾಸಸ್ಥಾನ]; ಭವನ; ಮಹಲು; ಸೌಧ; ಪ್ರಾಸಾದ; (ವಿನೋದ, ಉಪಾಹಾರ, ಮೊ. ಗಳಿಗಾಗಿರುವ) ವಿಶಾಲ ಮಂದಿರ. Gin-p. (Gin[2] ನೋಡಿ). P.-car ಸುಖಭೋಗಕ್ಕೆ ಅನುಕೂಲ ಕಲ್ಪಿಸಿರುವ ರೈಲುಬಂಡಿ. **Palátial** ಪಲೇಷಲ್ (ಗು.) ಅರಮನೆಯಂಥ; ಭವ್ಯ; ದಿವ್ಯ; ವೈಭವದ.

Páladin ಪ್ಯಾಲಡಿನ್ (ನಾ.) ಪಾಶ್ಚಾತ್ಯ ಚಕ್ರವರ್ತಿಯಾಗಿದ್ದ ಷಾರ್ಲಮೇನ್ ದೊರೆಯ ಆಸ್ಥಾನದಲ್ಲಿದ್ದ ಹನ್ನೆರಡುಮಂದಿ ಶ್ರೀಮಂತ ಸಾಮಾಜಿಕರಲ್ಲೊಬ್ಬನು (ಇವರಲ್ಲ ಕೌಂಟ್ ಪ್ಯಾಲಟಿನ್ ಎಂಬಾತನು ಪ್ರಮುಖನು). ಪ್ರಸಿದ್ಧ ವೀರನಾಯಕ; ದೀನರಕ್ಷಣ ವೀರ.

Palaeo-, Paleo- ಪ್ಯಾ(ಪೇ)ಲಿಯೊ— (ಸ್ವರಕ್ಕೆ ಹಿಂದೆ Palae-) (ಸ. ಪೂ. ಪ.) ಹಳೆಯ—; ಪುರಾತನ—; ಪ್ರಾಚೀನ—. **-árctic** ಹಳೆಯ ಭೂಪ್ರಪಂಚದ (ಪೂರ್ವಾರ್ಧಗೋಳದ) ಉತ್ತರ ಭಾಗದ. **-crýstic** ಪ್ರಾಚೀನ ಹಿಮರಾಶಿಯ; ಯುಗಾಂತರಗಳಿಂದ ಹೆಪ್ಪುಗಟ್ಟಿ ನೀರ್ಗಲ್ಲಾಗಿರುವ. **-graphy** ಪುರಾತನ ಲಿಪಿಯ ಮತ್ತು ಶಾಸನ ಗಳ (ಪರಿಶೋಧನಾ) ವಿದ್ಯೆ: ಪ್ರಾಚೀನ ಲಿಪಿ ಶಾಸ್ತ್ರ. **-grapher; -gráphic. -líthic** ಪುರಾತನ ಕಾಲದ ಶಿಲಾಯುಧಗಳ ಬಳಕೆಯ ಗುರುತುಳ್ಳ. **-ontólogy** ನಷ್ಟವಂಶ ಜೀವಿ ಶಾಸ್ತ್ರ. **-ontológical; -ontólogist. -zóic** ಪ್ರಾಚೀನ ನಷ್ಟಜೀವಿ ರೂಪಗಳ; —ಳುಳ್ಳ; ಆದಿ ಭೂಯುಗದ.

Palaéstra ಪಲೀಸ್ಟ್ರ, **Palés-** —ರೆ— (ನಾ.) ಮಲ್ಲ ಶಾಲೆ; ಗರಡಿ; ಅಖಾಡ; ತಾಲೀಂಖಾನೆ; ವ್ಯಾಯಾಮ ಶಾಲೆ.

Palankeén, -nquín ಪ್ಯಾಲಂಕೀನ್ (ನಾ.) (ಇಂಡಿಯ ಮತ್ತು ಪೂರ್ವ ದೇಶಗಳಲ್ಲಿ, ಸಾ., ನಾಲ್ಕು ಅಥವಾ ಆರು ಜನ ಹೊರುವ) ಪಲ್ಲಕ್ಕಿ, ಸಿವಿಗೆ. (ಶಿಥಿಲವಾಗಿ) (ಪೂರ್ವ ದೇಶಗಳ) ಮುಚ್ಚು ಬಂಡಿ.

Pálatable. Palate ನೋಡಿ.

Pálate ಪ್ಯಾಲೆ(ಲ)ಟ್ (ನಾ.) ಅಂಗುಳು; ತಾಲು [Bony or hard, soft, p. ಗಡುಸು (ಮುಂಭಾಗದ), ಮೆತು (ಹಿಂಭಾಗದ), ಅಂಗುಳು. Cleft p. (Cleave[1] ನೋಡಿ)]. ರಸನೇಂದ್ರಿಯ; ಮನಸ್ಸಿನ ಅಭಿರುಚಿ. **Pálatable** ಪ್ಯಾಲಟಬ್‌ಲ್ (ಗು.) (ಬಾಯಿಗೆ) ರುಚಿಯಾದ. (ರೂಪ.) ಮನಸ್ಸಿಗೆ ಹಿತವಾದ. **Pálatably** (ಕ್ರಿ. ವಿ.); **Pálatal** ಪ್ಯಾಲಟಲ್ (ಗು., ನಾ.) ಅಂಗುಳಿನ; ನಾಲಗೆಯನ್ನು (ಸಾ., ಗಡುಸು) ತಾಲುವಿಗೆ ತಗುಲಿಸಿ ಮಾಡಿದ (ಶಬ್ದ): ತಾಲವ್ಯ. **Pálatalize** (ಕ್ರಿ. ಸಕ.); **Pálatine**[1] ಪ್ಯಾಲಟೈ(ಟಿ)ನ್ (ಗು., ನಾ.) ಅಂಗುಳಿನ; ತಾಲವ್ಯ. (ನಾ., ಬ. ವ. ದಲ್ಲಿ) ಗಡುಸು ತಾಲುವಿನ ಎರಡು ಎಲುಬುಗಳು; ತಾಲ್ವಸ್ಥಿಗಳು (=P. bones)

Palátial. Palace ನೋಡಿ.

Palátinate. Palatine[2] ನೋಡಿ.

Pálatine[1]. Palate ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pálatine[2] ಪ್ಯಾಲಟೈ(ಟಿ)ನ್ (ಗು., ನಾ.) (ತನ್ನ ಪ್ರಾಂತದಲ್ಲಿ) ರಾಜಾಧಿಕಾರವುಳ್ಳ ಶ್ರೀಮಂತ(ನ) [=Count P.; (ಇಂಗ್ಲಿಷ್ ಚರಿತ್ರೆಯಲ್ಲಿ) Earl P. ಸಹ]; (County P. ಇಂಥ ಶ್ರೀಮಂತನ ಪ್ರಾಂತ). (ನಾ.) ಹೆಂಗಸಿನ ತುಪ್ಪುಳು ಭುಜವಸ್ತ್ರ. **Palátinate** ಪಲ್ಯಾಟಿನೇಟ್, **Pálatinate** ಪ್ಯಾಲಟಿನೇಟ್ (ನಾ.) ರಾಜಾಧಿಕಾರವುಳ್ಳ ಶ್ರೀಮಂತನ ಪ್ರಾಂತ. The (Rhine) P. ಹಿಂದಿನ ಜರ್ಮನ್ ಚಕ್ರಾಧಿಪತ್ಯದಲ್ಲಿ, ರೈನಿನ Count Palatine ಎಂಬಾತನ ಆಳಿಕೆಯಲ್ಲಿದ್ದ ಸಂಸ್ಥಾನ.

Paláver ಪಲಾವರ್ (ನಾ., ಕ್ರಿ.) (ಮು., ಆಫ್ರಿಕದ ಅಥವಾ ಇತರ ಅನಾಗರಿಕ ದೇಶದ ನಿವಾಸಿಗಳೊಡನೆ ವ್ಯಾಪಾರಿಗಳು, ಮೊ. ರು ನಡಸುವ) ಸಭೆ, ಚರ್ಚೆ. ಬರಿ ಹರಟೆ; ಗೊಡ್ಡುಹರಟೆ; ವ್ಯಥಾಲಾಪ; ಪುಸಲಾಯಿಕೆ; (ಅಸಂ.) ಕಾರ್ಯವ್ಯವಹಾರ. (ಕ್ರಿ.) ಗೊಡ್ಡುಹರಟೆ ಹೊಡೆ; ಪುಸಲಾಯಿಸಿ, ಹೊಗಳಿ, —ಮಾತನಾಡು; ಪುಸಲಾಯಿಸಿ ತನಗೆ ಬೇಕಾದುದನ್ನು ಕೀಳು.

Pale[1] ಪೇಲ್ (ನಾ.) (ಬೇಲಿ, ಮೊ. ಗಳಿಗೆ ಉಪಯೋಗಿಸುವ) ಮರದ ಚೂಪುಗೋಲು; ದಸಿ. ಎಲ್ಲೆ; ಹದ್ದು; ಮೇರೆ; [(ಮು., ರೂಪ.) Within, beyond, the p. ಎಲ್ಲೆಯೊಳಗೆ, ಎಲ್ಲೆ ಮೀರಿ]. [(ಚರಿತ್ರೆ) The (English) P. ಇಂಗ್ಲಿಷರ ಆಳಿಕೆಯಲ್ಲಿಯ ಐರ್ಲಂಡಿನ ಭಾಗ]. (ವಂಶ ರಾಂಛನ) ಗುರಾಣಿಯ ಮಧ್ಯದಲ್ಲಿ ಹಾಕಿರುವ ಲಂಬವಾದ ಪಟ್ಟೆ. **Paled** (ಗು.) ದಸಿಬೇಲಿ ಹಾಕಿದ. **Páling** (ನಾ.) ದಸಿಗಳು; ದಸಿಬೇಲಿ. **Palisáde** ಪ್ಯಾಲಸೇಡ್ (ನಾ., ಕ್ರಿ. ಸಕ.) ದಸಿಬೇಲಿ; ಕಬ್ಬಿಣದ ಕಟಕಟೆಯ ಬೇಲಿ. (ಸೈನ್ಯ) ಬಲವಾದ ಮರದ ದಸಿ. (ಕ್ರಿ.) —ಬೇಲಿ ಹಾಕು; —ಇಂದ ಸುತ್ತುಗಟ್ಟು, ಆವರಿಸು.

Pale[2] ಪೇಲ್ (ಗು., ಕ್ರಿ.) (ವ್ಯಕ್ತಿ, ಮುಖಚ್ಛಾಯೆ) ಬಿಳಿಚಿಕೊಂಡ, ವಿವರ್ಣವಾದ, ಬೆಳರ್ತ (ಗ್ರಾಂ.). (ಬಣ್ಣಗಳ ವಿಷಯದಲ್ಲಿ) ಮಂಕಾದ, ಮಸುಕಾದ; ನಸು ಬಣ್ಣದ; ಕಾಂತಿ ಹೀನ; ಕಳೆಗುಂದಿದ; (P.-face ಬಿಳಿಯ ಮುಖದವನು, ಬಿಳಿಯ ಜನಾಂಗದವನು). (ಕ್ರಿ.) ಬಿಳಿಚಿಕೊ; ವಿವರ್ಣವಾಗು; ಕಳೆಗುಂದು; ಮ್ಲಾನವಾಗು. (ರೂಪ.) (ಹೋಲಿಕೆಯಿಂದ) ಮಂಕಾಗು, ಮಂಕಾಗಿ ತೋರು (ಸಾ., *before*, *beside* ಪದದೊಡನೆ); ಮಂಕಾಗಿಸು; ಕಳೆಗುಂದಿಸು. **Pálely** (ಕ್ರಿ. ವಿ.); **Páleness** (ನಾ.); **Pálish** (ಗು.) ನಸು ಬಿಳಿಚಾದ; ಕೊಂಚ ಕಳೆಗುಂದಿದ. **Pály** (ಗು.) (ಕಾವ್ಯ) ಸ್ವಲ್ಪಮಟ್ಟಿಗೆ ಕಳೆಗುಂದಿರುವ.

Pálette ಪ್ಯಾಲೆ(ಲಿ)ಟ್ (ನಾ.) (ವರ್ಣಚಿತ್ರಕಾರನು) ಬಣ್ಣ ಕಲಸುವ (ಮರದ ಅಥವಾ ಪಿಂಗಾಣಿಯ) ಸಣ್ಣ ತೆಳು ಹಲಗೆ; ಒಬ್ಬ ಗೊತ್ತಾದ ಚಿತ್ರಕಾರನು ಉಪಯೋಗಿಸುವ, ಅಥವಾ ಒಂದು ಗೊತ್ತಾದ ಸಂದರ್ಭದಲ್ಲಿ ಉಪಯೋಗಿಸುವ, ಬಣ್ಣಗಳು. P.-knife (ಹಿಡಿಯುಳ್ಳ ತೆಳುವಾದ ಉಕ್ಕು ಅಲಗಿನ) ಬಣ್ಣ ಕಲಸುವ ಚೂರಿ.

Pálfrey ಪಾ(ಪ್ಯಾ)ಲ್ಫ್ರಿ (ನಾ.) (ಪ್ರಾಚೀ. ಪ್ರ., ಕಾವ್ಯ) (ಸಾಮಾನ್ಯ ಸವಾರಿಗಾಗಿ, ಮು., ಹೆಂಗಸರು, ಉಪಯೋಗಿಸುವ) ಸವಾರಿ ಕುದುರೆ.

Páli ಪಾಲಿ (ನಾ.) (ಬೌದ್ಧ ಧರ್ಮಗ್ರಂಥಗಳ ಭಾಷೆಯಾದ) ಪಾಲಿ(ಳಿ)

Pálimpsest ಪ್ಯಾಲಿಂಪ್ಸೆಸ್ಟ್ (ನಾ., ಗು.) ಒಂದು ಸಲ ಬರೆದದ್ದನ್ನು ಅಳಿಸಿ ಅದರಮೇಲೆಯೇ ಮತ್ತೆ ಬರೆದ, ಬರೆಯಲು ಉಪಯೋಗಿಸಿದ, ಚರ್ಮಕಾಗದ, ಮೊ. ದು; ಹೀಗೆ (ಮಾಡಿ) ಬರೆದ (ಹಸ್ತಪ್ರತಿ)

Pálindrome ಪ್ಯಾಲಿಂಡ್ರೋಮ್ (ನಾ., ಗು.) ಎಡದಿಂದ ಬಲಕ್ಕೂ ಬಲದಿಂದ ಎಡಕ್ಕೂ ಒಂದೇ ಆಗಿ ಓದುವ (ಪದ, ಪದ್ಯ, ಮೊ. ವು); ಗತ ಪ್ರತ್ಯಾಗತ. **Palindrómic** —ಡ್ರಾ— (ಗು.)

Páling. **Pale**[1] ನೋಡಿ.

Palingénesis ಪ್ಯಾಲಿನ್‌ಜೆನೆಸಿಸ್ (ನಾ.) ಮರು ಹುಟ್ಟು; ಪುನರುಜ್ಜೀವನ; ಪುನರ್ಜನ್ಮ (ರೂಪ. ಸಹ). (ಜೀ. ವಿ.) ಪೂರ್ವಪಿತೃ ಲಕ್ಷಣಗಳು (ಸಂತಾನದಲ್ಲಿ) ತದ್ವತ್ತಾಗಿ ಪುನಃ ಕಾಣಿಸಿಕೊಳ್ಳುವುದು: ಪಿತೃಗುಣ ಪುನರಾವೃತ್ತಿ. **Palingenétic** (ಗು.)

Pálinode ಪ್ಯಾಲಿನೋಡ್ (ನಾ.) ಕವಿ ತನ್ನ ಹಿಂದಿನ ಕವನದಲ್ಲಿ ಹೇಳಿದ ಅಭಿಪ್ರಾಯವನ್ನು ಹಿಂದೆಗೆದುಕೊಳ್ಳುವ (ಮುಂದಿನ) ಕವನ; ಹೇಳಿದುದನ್ನು ಹಿಂದಕ್ಕೆ ತೆಗೆದುಕೊಳ್ಳುವುದು; ಸ್ವಾಭಿಪ್ರಾಯ ವರ್ಜನೆ; ಪ್ರತ್ಯಾಖ್ಯಾನ.

Palisáde. **Pale**[1] ನೋಡಿ.

Pálish. **Pale**[2] ನೋಡಿ.

Pall[1] ಪಾಲ್ (ನಾ.) ಶವ ಸಂಪುಟ, ಶವ ವಾಹನ, ಸಮಾಧಿ—ಇವುಗಳ ಮೇಲೆ ಹೊದಿಸುವ (ಸಾ., ಕಪ್ಪನೆಯ, ಅಥವಾ ಊದಾ ಬಣ್ಣದ, ಅಥವಾ ಬಿಳಿಯ) ಮಖಮಲ್ ಬಟ್ಟೆ: ಶವಸಂಪುಟ ಆಚ್ಛಾದನ. [P.-bearer (ಶವಸಂಸ್ಕಾರದಲ್ಲಿ) ಶವಸಂಪುಟ ಆಚ್ಛಾದನ ವಸ್ತ್ರ(ದ ಕೊನೆಯನ್ನು) ಹಿಡಿದಿರುವವನು]. ಪೋಪ್ ಗುರುವೂ ಕೆಲವರು ಪ್ರಧಾನ ಬಿಷಪ್ಪುಗಳೂ ಧರಿಸಿಕೊಳ್ಳುವ ಉಣ್ಣೆಯ ಹೊರ ಉಡುಪು. (ರೂಪ.) ಪ್ರಾವರಣ; ಮುಸುಕು. ಕವಿದ ಮಬ್ಬು (Overhead a murky p. of smoke)

Pall[2] ಪಾಲ್ (ಕ್ರಿ.) ಸಪ್ಪೆಯಾಗು; ನೀರಸವಾಗು [ಈಗ ರೂಪ. ಮಾತ್ರ; ಮು., P. on (ವ್ಯಕ್ತಿ, ಮನಸ್ಸು, ಅಭಿರುಚಿ) ನಿಸ್ಸಾರವಾಗು, ಸಪ್ಪೆಯಾಗು]; ರುಚಿಗೆಡು; ವೆಗಟಾಗು; ಕಟ್ಟಡಚು; ಕಟ್ಟರೆಯಾಗು; (ಹಸಿವು, ಇಂದ್ರಿಯಗಳು—ಇವನ್ನು) ಅತಿ ತುಷ್ಟಿಗೊಳಿಸು; ವೆಗಟಿಸು.

Palládium[1] ಪ್ಯಲೇಡಿಯಂ (ನಾ.) (ಟ್ರಾಯ್ ಪಟ್ಟಣದ ಕ್ಷೇಮಕ್ಕೆ ಆಧಾರಭೂತವೆಂದು ಜನರು ನಂಬಿದ್ದ) ಪ್ಯಾಲಸ್ ಎಂಬ ದೇವತೆಯ ಪ್ರತಿಮೆ. (ಒಂದು ಜನಾಂಗದ, ಸಂಸ್ಥೆ, ಮೊ. ಗಳ) ಕ್ಷೇಮಕ್ಕೆ ಆಧಾರವೆಂದು ನಂಬಿರುವ ವಸ್ತು; ರಕ್ಷಣ ಸಾಧನ; ರಕ್ಷೆ

Palládium[2] ಪ್ಯಲೇಡಿಯಂ (ನಾ.) ಪ್ಲಾಟಿನಂ ಲೋಹವರ್ಗಕ್ಕೆ ಸೇರಿದ ಒಂದು ಬಿಳಿಯ ಗಟ್ಟಿ ಲೋಹಧಾತು: 'ಪಲೇಡಿಯಂ'.

Pállet[1] ಪ್ಯಾಲೆಟ್ (ನಾ.) ಹುಲ್ಲಿನ ಹಾಸಿಗೆ; ಮೆತ್ತೆ ಹಾಸಿಗೆ; ರಜಾಯಿ.

Pállet[2] ಪ್ಯಾಲೆಟ್ (ನಾ.) (ಕುಂಬಾರ, ಮೊ. ರು ಉಪಯೋಗಿಸುವ) ಹಿಡಿಯುಳ್ಳ ಮರದ ಚಪ್ಪಟೆ ಹಲಗೆ, ತಟ್ಟು ಹಲಗೆ. (ಚಿತ್ರಕಾರನ) ಬಣ್ಣ ಕಲಸುವ ಸಣ್ಣ ತೆಳು ಹಲಗೆ. ಒಂದು ಚಕ್ರದ ಚಲನ ಗತಿಯನ್ನು ಬದಲಾಯಿಸಲು ಯಂತ್ರದ ಒಂದು ಭಾಗದಲ್ಲಿ ಮಾಡಿರುವ ಗುಬುಟು, ಹಲ್ಲು. ಆರ್ಗನ್ ವಾದ್ಯದ ವಾಯುಸಂಪುಟದ ಮೇಲ್ಭಾಗದಲ್ಲಿಯ ಕವಾಟ.

Pálliate ಪ್ಯಾಲಿಯೇಟ್ (ಕ್ರಿ. ಸಕ.) ರೋಗವನ್ನು ವಾಸಿಮಾಡದೆ, (ಅದರ ವೇಗವನ್ನು) ಕಡಮೆ ಮಾಡು; ಉಪಶಮಿಸು; (ಅಪರಾಧ, ತಪ್ಪು—ಇವುಗಳ) ಅಧಿಕ್ಯವನ್ನು ಕಡಮೆ ತೋರಿಸು, ಮುಚ್ಚು, ತೇಲಿಸು. **Palliátion** (ನಾ.); **Pálliative** ಪ್ಯಾಲಿಅಟಿವ್ (ಗು., ನಾ.) ತೀವ್ರತೆಯನ್ನು ಕಡಮೆ ಮಾಡುವ (ವಸ್ತು); (ಉಪ)ಶಾಮಕ.

Pállid ಪ್ಯಾಲಿಡ್ (ಗು.) =Pale[2]. **Pállidly** (ಕ್ರಿ. ವಿ.); **Pállidness** (ನಾ.)

Pállium ಪ್ಯಾಲಿಯಮ್ (ನಾ.) (ಮು., ಗ್ರೀಕರು ಧರಿಸುತ್ತಿದ್ದ) ಗಂಡಸಿನ ಚತುರಸ್ರಾಕಾರದ ದೊಡ್ಡ ನಿಲುವಂಗಿ, ದಗಲೆ. ಪ್ರಧಾನ ಕ್ರೈಸ್ತ ಮಠಾಧಿಪತಿಯ ಅಂಗವಸ್ತ್ರ. (ಚಿಪ್ಪುಪ್ರಾಣಿಯ) ಮೇಲ್ಚರ್ಮದ ಮಡಿಕೆ. **Pállial** (ಗು.)

Páll-máll ಪೆಲ್‌ಮೆಲ್, ಪ್ಯಾಲ್‌ಮ್ಯಾಲ್ (ನಾ.) ಒಂದು ಉದ್ದ ಓಣಿಯಲ್ಲಿ ತೂಗಕಟ್ಟಿರುವ ಕಬ್ಬಿಣದ ಬಳೆಯೊಳಗೆ ಮರದ ಚೆಂಡನ್ನು ತೂರಹೊಡೆಯುವ ಒಂದು ಆಟ. P. M. ಲಂಡನ್ನಿನಲ್ಲಿ ಹಿಂದೆ ಇಂಥ ಓಣಿಯಾಗಿದ್ದು, ಈಗ ವಿಹಾರ ಮಂದಿರಗಳಿಂದ ಪ್ರಸಿದ್ಧವಾಗಿರುವ, ಒಂದು ಬೀದಿ.

Pállor ಪ್ಯಾಲರ್ (ನಾ.) =Paleness (Pale[2] ನೋಡಿ)

Pálly. **Pal** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Palm[1] ಪಾಮ್ (ನಾ.) ತಾಳೆಯ ಜಾತಿಯ ಮರ (ಮು., ಉಷ್ಣವಲಯದಲ್ಲಿ ಬೆಳೆಯುವ, ಸಾ., ಕೊಂಬೆಗಳಿಲ್ಲದ, ಎತ್ತರವಾದ ಕಾಂಡವೂ ನೆತ್ತಿಯಲ್ಲಿ ಬೀಸಣಿಗೆಯಾಕಾರದ ಎಲೆಗುಂಪಲೂ ಉಳ್ಳ, ತೆಂಗು, ಅಡಕೆ, ಖರ್ಜೂರ, ತಾಳೆ, ಈಚಲು, ವೊ. ಮರಗಳ, ಜಾತಿ).; (ಜಯಸೂಚಕವಾಗಿ ಉಪಯೋಗಿಸುತ್ತಿದ್ದ, ಈಗಲೂ ಉತ್ಸವಸೂಚಕವಾಗಿ ಉಪಯೋಗಿಸುವ) ತೆಂಗಿನ, ತಾಳೆಯ, ಗರಿ. (ರೂಪ.) ಜಯ; ಜಯ ಪ್ರದರ್ಶನ; ಪರಮೋತ್ಕೃಷ್ಟತೆ; (—ಗೆ) ಬಹುಮಾನ (ಮು., Bear, yield, the p.). ಮು., Palm Sunday ಎಂಬ ಕ್ರೈಸ್ತ ಉತ್ಸವ ದಿನಾಚರಣೆಯಲ್ಲಿ ಯೂರೋಪಿನ ಉತ್ತರ ದೇಶಗಳಲ್ಲಿ ತಾಳೆಯ ಗರಿಗೆ ಪ್ರತಿಯಾಗಿ ಉಪಯೋಗಿಸುವ ಹಲವು ಜಾತಿಯ ಮರಗಳ ಕೊಂಬೆ. P.-oil ತಾಳೆಯೆಣ್ಣೆ. ಲಂಚದ ಹಣ (Palm[2] ಪದದ ಉಚ್ಚಾರಣೆಯ ಸಾಮ್ಯದಿಂದ ಶ್ಲೇಷೋಕ್ತಿ). P. Sunday (ಜೆರೂಸಲೆಮ್ಮಿಗೆ ಕ್ರಿಸ್ತನು ಪ್ರವೇಶಿಸಿದುದರ ಜ್ಞಾಪಕಾರ್ಥವಾಗಿ ಉತ್ಸವ ಹೊರಡುವ ಸಂದರ್ಭದಲ್ಲಿ) ತಾಳೆಯ ಗರಿಗಳನ್ನು ಹಿಡಿದುಕೊಂಡು ಹೋಗುವ, ಈಸ್ಟರ್ ಹಬ್ಬದ ಹಿಂದಿನ ಭಾನುವಾರ. **Palmáceous** ಪ್ಯಾಲ್‌ಮೇಷಸ್ (ಗು.) (ಸ. ವಿ.) ತಾಳೆಯ ಜಾತಿಯ; —ಸ್ವಭಾವದ, ಹೋಲಿಕೆಯ. **Pálmary** ಪ್ಯಾಲ್‌ಮರಿ (ಗು.) ಶ್ರೇಷ್ಠತೆ ಹೊಂದಿರುವ; —ಹೊಂದಲು ಯೋಗ್ಯವಾದ; ಅತ್ಯುತ್ಕೃಷ್ಟವಾದ; ಪ್ರಮುಖವಾದ. **Pálmer** ಪಾಮರ್ (ನಾ.) ಜೆರೂಸಲೆಮ್ಮಿಗೆ ಹೋಗಿದ್ದು ಹಿಂದಿರುಗುವಲ್ಲಿ (ಗುರುತಿಗಾಗಿ) ತಾಳೆಯ ಗರಿಯನ್ನು (ಹಿಡಿದು) ತಂದ ಕ್ರೈಸ್ತ ಯಾತ್ರಿಕ. ದಾರಿದ್ರ್ಯವ್ರತ ಹಿಡಿದ (ಕ್ರೈಸ್ತ) ಸಂಚಾರಿ ಭಿಕ್ಷು. ಸಸ್ಯನಾಶಕವಾದ, ಕೂದಲುಮೈಯ, ಒಂದು ಕಂಬಳಿಹುಳು ಜಾತಿ (=P.-worm); ಕೂದಲುಮೈಯ ಕೃತಕ ನೊಣ. **Palmétto** ಪ್ಯಾಲ್ಮೆಟೊ (ನಾ.) ಹಲವು ಸಣ್ಣ ತಾಳೆಯ ಮರದ ಜಾತಿ (ಮು., ಬೀಸಣಿಗೆ ಗರಿಯ ಕುರುಚಲು ತಾಳೆ). **Pálmy** ಪಾಮಿ (ಗು.) ತಾಳೆಯ(ಂಥ); ತಾಳೆಯ ಮರ ತುಂಬಿದ. ಜಯ ಪಡೆದ; ಪ್ರವರ್ಧಮಾನವಾಗಿರುವ; ಉತ್ಕರ್ಷದ (ಮು., P. days)

Palm[2] ಪಾಮ್ (ನಾ.) (ಮಣಿಕಟ್ಟಿಗೂ ಬೆರಳುಗಳಿಗೂ ಮಧ್ಯದ) ಕೈಯ ಒಳಭಾಗ: ಅಂಗೈ; ಕೈಗವುಸಿನ ಅಂಗೈಯ ಭಾಗ. ಕೈಯಳತೆ; ಹಸ್ತ (ಅಗಲವಾದರೆ ೪ ಅಂಗುಲ, ಉದ್ದವಾದರೆ ೮ ಅಂಗುಲ). Grease person's p. (Grease ನೋಡಿ). **(-)palmed** (ಗು.); **Pálmful** (ನಾ.); **Pálmar** ಪ್ಯಾಲ್‌ಮರ್ (ಗು.) ಅಂಗೈಯ(ಲ್ಲಿಯ). **Pálmate** ಪ್ಯಾಲ್‌ಮೆಟ್, **-ated** ಪ್ಯಾಲ್ಮೇಟೆಡ್ (ಗು.) ಅಂಗೈಯಾಕಾರದ. **Pálmistry** ಪಾಮಿಸ್ಟ್ರಿ (ನಾ.) ಹಸ್ತಸಾಮುದ್ರಿಕ (ಶಾಸ್ತ್ರ). **Pálmist** (ನಾ.) ಹಸ್ತಸಾಮುದ್ರಿಕಿ.

Palm ಪಾಮ್ (ಕ್ರಿ. ಸಕ.) ಕೃತ್ರಿಮೋಪಾಯದಿಂದ ತಟಾಯಿಸು; ಏಮಾರಿಸು; ಮೋಸದಿಂದ (ಒಂದು ವಸ್ತುವನ್ನು) ಒಬ್ಬನ ತಲೆಗೆ ಕಟ್ಟು (*Off* thing *on* person). (ಇಸ್ಪೀಟೆಲೆ, ದಾಳ, ವೊ. ನ್ನು) ಕೈಯಲ್ಲಿ ಬಚ್ಚಿಟ್ಟುಕೊ. ಅಂಗೈಯಿಂದ ಮುಟ್ಟು. ಲಂಚ ಕೊಡು; ಕೈ ಬೆಚ್ಚಗೆ ಮಾಡು.

Palmáceous. Palm[1] ನೋಡಿ.

Pálma Chrísti (L) ಪ್ಯಾಲ್ಮ ಕ್ರಿಸ್ಟಿ (ನಾ.) ಹರಳು ಗಿಡ. (ಕೈಯಾಕಾರದ ಎಲೆಗಳುಳ್ಳ ಕಾರಣದಿಂದ)

Pálmar, Pálmate, Pálmist, etc. Palm[2] ನೋಡಿ.

Pálmer, Palmétto. Palm[1] ನೋಡಿ.

Pálmiped ಪ್ಯಾಲ್ಮಿಪೆಡ್, **-pede** —ಪೀಡ್ (ಗು., ನಾ.) ಜಾಲಪಾದವುಳ್ಳ (ಪಕ್ಷಿ); ಜಾಲ ಪಾದಿ.

Pálmy. Palm[1] ನೋಡಿ.

Palmýra ಪ್ಯಲ್‌ಮೈರ (ನಾ.) ಚಾಪೆ, ವೊ. ನ್ನು ಹೆಣೆಯುವ, ಬೀಸಣಿಗೆಯಾಕಾರದ ಗರಿಗಳುಳ್ಳ, ಇಂಡಿಯದಲ್ಲೂ ಸಿಂಹಳ ದ್ವೀಪದಲ್ಲೂ ಬೆಳೆಯುವ, ತಾಳೆಯ ಜಾತಿಯ ಮರ.

Palp ಪ್ಯಾಲ್ಪ್, **Pálpus** ಪ್ಯಾಲ್ಪಸ್ (ನಾ.; ಬ. ವ. -pi —ಪೈ) (ಹುಳು, ವೊ. ಗಳಲ್ಲಿ) ಸ್ಪರ್ಶಾಂಗ. **Pálpal** (ಗು.)

Pálpable ಪ್ಯಾಲ್ಪಬ್‌ಲ್ (ಗು.) ಮುಟ್ಟಬಹುದಾದ; ಮುಟ್ಟಿ ಗ್ರಹಿಸಬಹುದಾದ; ಸ್ಪರ್ಶವೇದ್ಯ; (ಮನಸ್ಸಿನಿಂದ, ಇಂದ್ರಿಯಗಳಿಂದ) ಸುಲಭವಾಗಿ ಗ್ರಹಿಸಬಹುದಾದ; ಸುಲಭ ಗ್ರಾಹ್ಯ; ಸ್ಪಷ್ಟ; ವ್ಯಕ್ತ; ಪ್ರತ್ಯಕ್ಷ. P. excuse ಹುಸಿನೆಪ. **Palpabílity** (ನಾ.); **Pálpably** (ಕ್ರಿ. ವಿ.); **Pálpate** (ಕ್ರಿ. ಸಕ.) (ಮು., ವೈದ್ಯ ಪರೀಕ್ಷೆಯಲ್ಲಿ) ಕೈಯಿಂದ ಮುಟ್ಟಿ ನೋಡು, ಪರೀಕ್ಷಿಸು. **Palpátion** (ನಾ.)

Pálpate, etc. Palpable ನೋಡಿ.

Pálpebral ಪ್ಯಾಲ್‌ಪಿಬ್ರಲ್ (ಗು.) ಕಣ್ಣು ರೆಪ್ಪೆಯ; ಎವೆಯ.

Pálpitate ಪ್ಯಾಲ್ಪಿಟೇಟ್ (ಕ್ರಿ. ಅಕ.) (ಅಂಗಸಾಧನೆ, ಅತ್ಯುದ್ವೇಗ, ಅಥವಾ ವ್ಯಾಧಿಲಕ್ಷಣ —ಇವುಗಳ ಫಲವಾಗಿ) ಬೇಗ ಬೇಗನೆ, ಬಿರುಸಾಗಿ, —ನಾಡಿ ಹೊಡೆ; ಎದೆ ಡವ ಡವಗುಟ್ಟು; (ಭಯ, ಸಂತೋಷ, ವೊ. ಗಳಿಂದ) ನಡುಗು, ಕಂಪಿಸು (*With* ಉಪ. ಜೊಡನೆ). **Palpitátion** (ನಾ.) (ಕ್ರಿಯಾರ್ಥಗಳಲ್ಲಿ); (ಆಯಾಸದ, ಚಿತ್ತಕ್ಷೋಭೆಯ, ಅಥವಾ ವ್ಯಾಧಿಯ, ಕಾರಣದಿಂದ) ಹೃದಯ ಹೆಚ್ಚುವೇಗವಾಗಿ ಬಡಿದುಕೊಳ್ಳುವುದು; ಹೃದಯಾತಿಸ್ಪಂದನ.

Pálsgrave ಪಾಲ್ಸ್‌ಗ್ರೇವ್ (ನಾ.) ರಾಜಾಧಿಕಾರವುಳ್ಳ ಶ್ರೀಮಂತ.

Pálsy ಪಾಲ್ಸಿ (ನಾ., ಕ್ರಿ. ಸಕ.) ಪಾರ್ಶ್ವವಾಯು. (ರೂಪ.) ಪೂರ್ಣ ಅಸಹಾಯಸ್ಥಿತಿ(ಯ ಕಾರಣ). (ಕ್ರಿ.) ಲಕ್ವಾ ಹೊಡೆ. (ರೂಪ.) ಅಸಹಾಯಸ್ಥಿತಿಗೆ ತರು; ನಿಶ್ಚೇತನ ಮಾಡು.

Pálter ಪಾಲ್ಟರ್ (ಕ್ರಿ. ಅಕ.) ಹೊರಳುಮಾತಾಡು; ಸಂದಿಗ್ಧವಾಗಿ ಮಾತನಾಡು. ಸತ್ಯಾಂಶವನ್ನು ಮರೆಮಾಜು; ತಾನು ಹೇಳಿದುದನ್ನು ಬದಲಾಯಿಸು (*With* person). (ಒಬ್ಬನೊಡನೆ, ಒಂದು ವಿಷಯವಾಗಿ) ಜುಗ್ಗಾಡು, ಕೊಸರಾಡು, ಚೌಕಸಿ ಮಾಡು (*With* person *about* thing). ಲಘುವಾಗಿ ಪರಿಗಣಿಸು (*With* ಉಪ. ಜೊಡನೆ)

Páltry ಪಾಲ್ಟ್ರಿ (ಗು.) ಗಣ್ಯವಲ್ಲದ; ಅಯೋಗ್ಯವಾದ; ಅಲ್ಪ; ನಿಕೃಷ್ಟ; ತುಚ್ಛ. **Páltriness** (ನಾ.)

Palúdal ಪಲ್ಯೂಡಲ್, **Pálu-** ಪ್ಯಾಲ್ಯು— (ಗು.) ಜವುಗು ಪ್ರದೇಶದ; ಮಲೇರಿಯದ.

Pam ಪ್ಯಾಮ್ (ನಾ.) (ಇಸ್ಪೀಟಾಟ) ಕಳಾವರು ಗುಲಾಮ.

Pámpa ಪ್ಯಾಂಪ [ನಾ.; ಬ. ವ. -as, —ಪಜ್(ಸ್)] ದ. ಅಮೆರಿಕದಲ್ಲಿ ಅಮೆಸಾನ್ ನದಿಯ ತೆಂಕಲಗಿರುವ, ಮರಗಿಡಗಳಿಲ್ಲದ ದೊಡ್ಡ ಮೈದಾನ (ಪ್ರದೇಶ). P.-grass (ದ. ಅಮೆರಿಕದಿಂದ ಯೂರೋಪಿಗೆ ತಂದು ರೂಢಿಸಿದ, ಬಹು ಎತ್ತರಕ್ಕೆ ಬೆಳೆಯುವ) ಒಂದು ಬಗೆಯ ರಾಕ್ಷಸ ಹುಲ್ಲು.

Pámper ಪ್ಯಾಂಪರ್ (ಕ್ರಿ. ಸಕ.) (ವ್ಯಕ್ತಿ, ಅಭಿರುಚಿ, ವೊ. ಗಳ ವಿಷಯದಲ್ಲಿ) ಅತಿ ಲಾಲನೆ ಮಾಡು, ಅತಿ ಪ್ರೀತಿ ತೋರಿಸು, ಮುದ್ದಿಸು.

Pámphlet ಪ್ಯಾಂಫ್ಲೆಟ್ (ನಾ.) (ಮು., ಪ್ರಚಲಿತ ವಿಷಯವನ್ನು ಕುರಿತ) ರಟ್ಟುಕಟ್ಟಿಲ್ಲದ ಲಘು ಪುಸ್ತಕ. **Pamphleteér** —ಟಿಯರ್ (ನಾ., ಕ್ರಿ. ಅಕ.) ಲಘು ಗ್ರಂಥ ಲೇಖಕ; —ಬರೆ.

Pan[1] ಪ್ಯಾನ್ (ನಾ., ಕ್ರಿ.) (ಮನೆಯಲ್ಲಿ ಬಳಸುವ, ಲೋಹದ ಅಥವಾ ಮಣ್ಣಿನ) ಆಳವಿಲ್ಲದ ಅಗಲವಾದ ಪಾತ್ರೆ; ಹರಿವಾಣ; ತಟ್ಟೆ; ಭಾಂಡ; ಓಡು; ತವೆ; ಬಾಣಲೆ. [Scale-p. ತಕ್ಕಡಿಯ ತಟ್ಟೆ. Stew, Warming, -p. (ಆಯಾ ಪದವನ್ನು ನೋಡಿ)]. ಹಳೆಯ ಕಾಲದ ಬಂದೂಕುಗಳಲ್ಲಿ ಮದ್ದನ್ನಿಡುತ್ತಿದ್ದ ಚಾಪಿನ ಕುಳಿ(ಯ ಭಾಗ). (ನೆಲದಲ್ಲಿಯ)ತಗ್ಗು [ಮು., Salt-p. (Salt ನೋಡಿ)]. (ವ್ಯವಸಾಯದ ನೆಲದಲ್ಲಿ, ನೀರಿಳಿಯದ) ಅಡಿಯ ಗಟ್ಟಿಪದರ (=Hard-p.). [Brain-p. ತಲೆಯೋಡು. **Páncake** (ನಾ.) (ತವೆಯಲ್ಲಿ ಹೊಯ್ದು ಮಾಡಿದ) ತೆಳು ದೋಸೆ, ಒಬ್ಬಟ್ಟು (Flat as a pancake ಪೂರ್ತಿ ಚಪ್ಪಟೆಯಾದ). (ಕ್ರಿ. ಅಕ.) (ಅಸಂ.) (ಫಲಕ ವಿಮಾನದ ವಿಷಯದಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಪಾಟ ಸ್ಥಿತಿಯಲ್ಲಿ ಲಂಬವಾಗಿ ಕೆಳಕ್ಕಿಳಿ]. (ಕ್ರಿ.) P. off, out (ಚಿನ್ನ ದೊರೆಯುವ ಗರಸನ್ನು) ಭಾಂಡದಲ್ಲಿ ತೊಳೆ. P. out ಚಿನ್ನ ದೊರೆ, ಕೊಡು. (ರೂಪ.) ಕೈಗೂಡು ; ಸಿದ್ಧಿಸು ; ನಡೆ ; ನೆರವೇರು (*Well* ಮೊ. ಪದದೊಡನೆ). **Pánful** (ನಾ.)

Pan[2] ಪ್ಯಾನ್ (ನಾ.) ಗ್ರೀಕರ ಹಳ್ಳಿಯ ದೇವತೆ: 'ಪ್ಯಾನ್' ದೇವತೆ. ಪ್ರಕೃತಿ ಚೇತನ. ಮಿಥ್ಯಾ ದೇವತೋಪಾಸನೆ. ಕ್ರೈಸ್ತ ಮತಾರಂಭಕ್ಕೆ ಹಿಂದಿನ, ಅಥವಾ ನೀತಿ ಪ್ರಸಕ್ತಿಯಿಲ್ಲದ, ಪ್ರಪಂಚ. [P.-pipe ಹಲವು ಉದ್ದಗಳ ಪಿಳ್ಳಂಗೋವಿಗಳನ್ನು ಅವುಗಳ ಬಾಯಿ ಒಂದೇ ಸಾಲಿನಲ್ಲಿರುವಂತೆ ಪಕ್ಕಪಕ್ಕದಲ್ಲಿ ಅಳವಡಿಸಿ ಮಾಡಿದ, (ಬಾಯಿಂದ ನುಡಿಸುವ) ಒಂದು ಸಂಗೀತ ವಾದ್ಯ]. **Pandéan, -aéan** ಪ್ಯಾಂಡೀಯನ್ (ಗು.) ಪ್ಯಾನ್ ದೇವತೆಯ (P.-pipe = Pan-pipe)

Pan- ಪ್ಯಾನ್— (ಸ. ಪೂ. ಪ.) ಎಲ್ಲ—, ಸರ್ವ—, ಸಕಲ—, ಅಖಿಲ—. **-African** ಎಲ್ಲಾ ಆಫ್ರಿಕನರ ; —ರಿಗಾಗಿರುವ. **-cósmism** ಭೌತವಿಶ್ವವೊಂದೇ ಸತ್ಯವೆಂಬ ವಾದ. **-génesis** ಜೀವಿಯ ಪ್ರತಿಯೊಂದು ಅಂಶವೂ ತಾನಾಗಿ ಪುನರುತ್ಪಾದನೆಯಾಗುವುದೆಂಬ ವಾದ. **-Gérman** (ರಾಜಕೀಯ ಸಂಸರ್ಗವುಳ್ಳ) ಸಕಲ ಜರ್ಮನರ. **-héllenism** ಸಮಸ್ತ ಗ್ರೀಕರ ರಾಜಕೀಯ ಸಂಘಟನೆ. **-hellénic** (ಗು.). **-íslam** ಮುಸಲ್ಮಾನ್ ಪ್ರಪಂಚ ಸಂಘಟನೆ. **-islámic** (ಗು.). **-logístic** ವಿಚಾರಗಮ್ಯವಾದುದು ಮಾತ್ರ ವಾಸ್ತವಿಕವೆಂಬ (Hegel ಎಂಬ ತತ್ತ್ವಜ್ಞಾನಿಯ) ವಾದದ. **-logism.** **-slávism** ಸಮಸ್ತ ಸ್ಲಾವ್ ಜನರ ರಾಜಕೀಯ ಸಂಘಟನವಾಗಬೇಕೆಂಬ ಚಳವಳಿ. **-spérmatism, -spérmy** ಅನುಕೂಲ ಸನ್ನಿವೇಶದಲ್ಲಿ ವಿಕಾಸವಾಗುವ ಸೂಕ್ಷ್ಮ ಜೀವಾಣುಗಳು ವಾತಾವರಣದಲ್ಲಿ ತುಂಬಿವೆಯೆಂಬ ಮತ, ವಾದ.

Panacéa ಪ್ಯಾನಸೀಯ (ನಾ.) ವಿಶ್ವೌಷಧ ; ಸರ್ವರೋಗಾಪಹಾರಿ.

Panáche ಪನಾ(ನ್ಯಾ)ಷ್ (ನಾ.) (ತಲೆಯುಡಿಗೆಯಾಗಿ ಅಥವಾ ಸೀಸಕದ ಮೇಲೆ ಧರಿಸುವ) ಪಿಂಛಾಲಂಕಾರ ; ಶೀರ್ಷಕ ; ಚೂಡಾಲಂಕಾರ. (ರೂಪ.) ಆಡಂಬರ ; ಪ್ರದರ್ಶನ ; ಡಂಭ ; ಮೆರೆತ.

Panamá ಪ್ಯಾನಮಾ (ನಾ., ಗು.) P. hat or P. ಕೇದಗೆಯ ಜಾತಿಯ ಗಿಡದ ಎಲೆಗಳಿಂದ ತೆಗೆದ, ಬಾಗುವ ನಯವಾದ ಹುಲ್ಲಿನಂಥ ಪದಾರ್ಥದಿಂದ, ಮಾಡಿದ ಟೊಪ್ಪಿಗೆ : ಪ್ಯಾನಮಾ ಟೊಪ್ಪಿಗೆ.

Pancháyat ಪಂಚೈಅಟ್, ಪಂಚಾಯಟ್ (ನಾ.) (ಇಂಡಿಯದಲ್ಲಿ) ಗ್ರಾಮ ಪಂಚಾಯಿತಿ (ಸಭೆ)

Pancrátic. **Pancratium** ನೋಡಿ.

Pancrátium ಪ್ಯಾನ್‌ಕ್ರೇಷಿಯಮ್ (ನಾ.) (ಗ್ರೀಕ್ ಪ್ರಾಚೀನ) ಕುಸ್ತಿಯೂ ಮುಷ್ಟಿಯುದ್ಧವೂ ಸೇರಿದ ಒಂದು ವ್ಯಾಯಾಮ ಸ್ಪರ್ಧೆ : ಮಲ್ಲಮುಷ್ಟಿಯುದ್ಧ. **Pancrátiast** (ನಾ.), **Páncratist** (ನಾ.) —ಸ್ಪರ್ಧಿ ; —ಸ್ಪರ್ಧೆಯಲ್ಲಿ ಜಯಶಾಲಿಯಾದವನು. **Pancrátic** ಪ್ಯಾನ್‌ಕ್ರ್ಯಾಟಿಕ್ (ಗು.) ಮಲ್ಲ ಮುಷ್ಟಿಯುದ್ಧ ಸ್ಪರ್ಧೆಯ. ಸಂಪೂರ್ಣ ಮಾನಸಿಕ ಶಿಕ್ಷಣ ಪಡೆದಿರುವ ; ಎಲ್ಲ ವಿಷಯಗಳಲ್ಲೂ ಪೂರ್ಣ ಪಾಂಡಿತ್ಯ ಕೊಡುವ(ಅಥ). (ದೃ. ವಿ.) (ಕಣ್ಣುಲೆನ್ಸ್‌ಸಂಘಟಕದ ವಿಷಯದಲ್ಲಿ) ಹಲವು ವಿಸ್ತಾರಕ ಪ್ರಮಾಣಗಳಿಗೆ ಅಳವಡಿಸಲಾಗುವ; ಬಹು ವ್ಯಾಪಕ ವಿಸ್ತರಣ ಶಕ್ತಿಯುಳ್ಳ.

Páncreas ಪ್ಯಾಂಕ್ರಿಅ್ಯ(ಅ್ಯ)ಸ್ (ನಾ.) ಮುಂಗರುಳಿನೊಳಕ್ಕೆ ಒಂದು ಜೀರಕ ರಸವನ್ನು ಹರಿಸುವ, ಜಠರದ ಸಮೀಪದಲ್ಲಿಯ, ಒಂದು ಗ್ರಂಥಿ ; ಮೇದೋಜೀರಕ (ರಸ) ಗ್ರಂಥಿ [ಆಹಾರವಾಗಿ ಉಪಯೋಗಿಸುವಲ್ಲಿ ಇದನ್ನು (ಪ್ರಾಣಿಗಳ) Sweetbread ಎಂದು ಕರೆಯುತ್ತಾರೆ]. **Pancreátic** (ಗು.); **Páncreatin** (ನಾ.) ಮೇದೋಜೀರಕ ರಸದಲ್ಲಿ ಪರಿಣಾಮಕಾರಿಯಾದ ಒಂದು ಸಾರದ್ರವ್ಯ ; ಪ್ರಾಣಿಗಳ ಮೇದೋಜೀರಕ ಗ್ರಂಥಿಯಿಂದ ತಯಾರಿಸಿದ ಒಂದು ಜೀರ್ಣಕಾರಿ ಔಷಧ.

Panchromátic ಪ್ಯಾನ್‌ಕ್ರೊಮ್ಯಾಟಿಕ್ (ಗು.) (ಛಾಯಾ ಚಿತ್ರ) ವರ್ಣ ಪಟಲದ ಎಲ್ಲ ವರ್ಣಗಳ ವಿಷಯದಲ್ಲೂ ಒಂದೇ ಸಮನಾದ ಗ್ರಾಹಕ ಶಕ್ತಿಯುಳ್ಳ ; ಸರ್ವ ವರ್ಣ ಗ್ರಾಹಿ (ಪಟಲ)

Pánda ಪ್ಯಾಂಡ (ನಾ.) ಹಿಮಾಲಯ ಪ್ರಾಂತದ ಒಂದು ಮಾಂಸಾಹಾರಿ ಪ್ರಾಣಿ : ಪಂಡಾ.

Pandéan. **Pan[2]** ನೋಡಿ.

Pándect ಪ್ಯಾಂಡೆಕ್ಟ್ (ನಾ. ; ಸಾ., ಬ. ವ. ದಲ್ಲಿ) (೬ನೆಯ ಶತಮಾನದಲ್ಲಿ ಜಸ್ಟಿನಿಯನ್ ಚಕ್ರವರ್ತಿಯ ಅಪ್ಪಣೆಯ ಮೇರೆ) ಐವತ್ತು ಸಂಪುಟಗಳಲ್ಲಿ ಅಡಕ ಮಾಡಿದ ರೋಮನ್ ವ್ಯವಹಾರ ಧರ್ಮಶಾಸ್ತ್ರ ; (ಒಂದು ದೇಶದ) ಸಂಪೂರ್ಣ (ವ್ಯವಹಾರ) ಧರ್ಮಶಾಸ್ತ್ರ ಸಂಗ್ರಹ.

Pandémic ಪ್ಯಾಂಡೆಮಿಕ್ (ಗು., ನಾ.) ಒಂದು ದೇಶದಲ್ಲೆಲ್ಲ, ಅಥವಾ ಪ್ರಪಂಚದಲ್ಲೆಲ್ಲ, ಹರಡಿರುವ (ವ್ಯಾಧಿ): ಸರ್ವವ್ಯಾಪಿ (ವ್ಯಾಧಿ). P. or Pandemian (ಗು.) ಸಾಮಾನ್ಯ ಸ್ತ್ರೀಪುರುಷ ಸಂಭೋಗ ವಿಷಯವಾದ.

Pandemónium ಪ್ಯಾಂಡಿಮೋನಿಯಮ್ (ನಾ.) ಎಲ್ಲ ಪಿಶಾಚಿಗಳ, ಪಾಪ ದೇವತೆಗಳ, —ವಸತಿ, ಬೀಡು ; ಘೋರ ನರಕ ; ಅನ್ಯಾಯ ಕ್ರೌರ್ಯದ ಅಥವಾ ಗೊಂದಲದ ಸ್ಥಳ ; ಹುಯಿಲೋ ಹುಯಿಲು ; ವಿಪರೀತ ಅವ್ಯವಸ್ಥೆ.

Pánder ಪ್ಯಾಂಡರ್ (ನಾ., ಕ್ರಿ.) (ಕಳ್ಳೊಲುಮೆಯ ವ್ಯವಹಾರದಲ್ಲಿ) ತಲೆಹಿಡುಕ(ಕಿ) ; ದುರುದ್ದೇಶ ಸಹಾಯಕ ; ದುರ್ಮಂತ್ರಿ. (ಕ್ರಿ.) (ನೀಚ ಮನೋದ್ರೇಕಗಳಿಗೆ, ದುರುದ್ದೇಶಗಳಿಗೆ) ಸಹಾಯಕನಾಗಿರು ; ಒಬ್ಬನ ಕಾಮಾಭಿಲಾಷೆ ತೀರಿಸಲು ಸಹಾಯ ಮಾಡು ; ತಲೆಹಿಡುಕತನ ಮಾಡು.

Pándit = Pundit.

Pandóra ಪ್ಯಾಂಡೋರ, **-dóre** —ರ್ (ನಾ.) ಸಿತಾರು ಮಾದರಿಯ ಒಂದು ತಂತಿ ವಾದ್ಯ.

Pandóra's box ಪ್ಯಾಂಡೋರಾಸ್ ಬಾಕ್ಸ್ (ನಾ.) (ಗ್ರೀಕ್) ಜ್ಯೂಪಿಟರ್ ದೇವನು ಪ್ಯಾಂಡೋರಳಿಗೆ ಬಹುಮಾನವಾಗಿ ಕೊಟ್ಟ ಪೆಟ್ಟಿಗೆ [ಇದರಲ್ಲಿ ಮನುಷ್ಯರಿಗೆ ಒದಗಬಹುದಾದ ಸಕಲ ಅನಿಷ್ಟಗಳೂ ವ್ಯಾಧಿಗಳೂ ಅಡಕವಾಗಿದ್ದುವೆಂದೂ, ಆಕೆಯ ಗಂಡನಾದ Epimetheus ಎಂಬಾತನು ಆ ಪೆಟ್ಟಿಗೆಯ ಮುಚ್ಚಳವನ್ನು ತೆರೆದೊಡನೆಯೇ ಅವೆಲ್ಲವೂ ಹೊರಹೊರಟು ಪ್ರಪಂಚವನ್ನೆಲ್ಲ ಆಕ್ರಮಿಸಿಕೊಂಡುವೆಂದೂ ಕಥೆ. ಮತ್ತೊಂದು ಕಥೆಯ ಮೇರೆಗೆ ಆ ಪೆಟ್ಟಿಗೆಯಲ್ಲಿ ದೇವತೆಗಳ ಸಕಲ ವರ ಪ್ರಸಾದಗಳೂ ಅಡಕವಾಗಿದ್ದುವೆಂದೂ, ಅದನ್ನು ತೆರೆದೊಡನೆಯೇ ಎಲ್ಲವೂ ಹಾರಿಹೋದುವೆಂದೂ, ತಳದಲ್ಲಿದ್ದ ನಿರೀಕ್ಷೆಯೊಂದು ಮಾತ್ರ ಉಳಿದುಕೊಂಡಿತೆಂದೂ ಹೇಳಿದೆ]. (ರೂಪ. ಸಹ)

Pane ಪೇನ್ (ನಾ., ಕ್ರಿ. ಸಕ.) (ಕಿಟಕಿಯ ಬಾಗಿಲಿನ ಒಂದು ಅಂಕಣದಲ್ಲಿಯ) ಗಾಜಿನ ಹಲಗೆ ; ಕಿಟಕಿ ಕನ್ನಡಿ. [ಚೌಕುಳಿ(ಗಳುಳ್ಳ) ನಮೂನೆಯಲ್ಲಿ] ಒಂದು ಚೌಕುಳಿ. [**Páneless** (ಗು.)]. (ಕ್ರಿ.: ಮು., ಭೂ. ಕೃ. ನಲ್ಲಿ) ಬಗೆ ಬಗೆಯ ಬಣ್ಣದ ಪಟ್ಟೆಗಳಿಂದ (ಉಡುಪು, ಮೊ. ನ್ನು) ತಯಾರಿಸು.

Panegýric ಪ್ಯಾನಿಜಿರಿಕ್ (ನಾ., ಗು.) (ಒಂದರಮೇಲಿನ) ಪ್ರಶಂಸಾ ಕೀರ್ತನ, ಲೇಖನ ; ಗುಣಗಾನ (*Upon* ಉಪ. ದೊಡನೆ). (ಗು.) ಪ್ರಶಂಸಾತ್ಮಕ. **Panegýrical** (ಗು.) ; **Pánegyrize** (ಕ್ರಿ. ಸಕ.) (ಒಂದನ್ನು) ಪ್ರಶಂಸಿಸಿ ಮಾತನಾಡು, ಬರೆ ; ಶ್ಲಾಘಿಸು. **Pánegyrist** (ನಾ.)

Pánel ಪ್ಯಾನೆಲ್ (ನಾ., ಕ್ರಿ. ಸಕ.) (ಉಜ್ಜು ಹುಣ್ಣಾಗದಂತೆ ಮೃದು ಪದಾರ್ಥ ತುಂಬಿದ) ಜೀನು ಮೆತ್ತೆ ; ಒಂದು ಬಗೆಯ ಜೀನು. ಚರ್ಮಕಾಗದದ ತುಂಡು, ಚೂರು. ನ್ಯಾಯದರ್ಶಿಗಳ ಪಟ್ಟಿ ; ನ್ಯಾಯದರ್ಶಿಗಳು. ರಾಷ್ಟ್ರೀಯ ಆರೋಗ್ಯ ವಿಮಾ ಕಾಯಿದೆಯ (Insurance-Act) ಪ್ರಕಾರ ವಿಮಾ ಮಾಡಿರುವ ರೋಗಿಗಳಿಗೆ ಚಿಕಿತ್ಸೆ ಮಾಡಲು ಒಪ್ಪಿಕೊಂಡಿರುವ (ಆ ಜಿಲ್ಲೆಯಲ್ಲಿಯ) ವೈದ್ಯರ ಪಟ್ಟಿ ; ಅಂಥ ವೈದ್ಯರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಟ್ಟುಕೊಂಡಿರುವ ರೋಗಿಗಳ ಪಟ್ಟಿ (On the p. ಹೀಗೆ ಪಟ್ಟಿಯಲ್ಲಿ ದಾಖಲಾಗಿರುವ). ಗೋಡೆಗಳಿಗೆ ಹತ್ತಿಸಿರುವ ಹಲಗೆಯ ಮೇಲ್ಮೈಯಲ್ಲಿಯ, ಮತ್ತು ಕದ, ಮೊ. ಗಳಲ್ಲಿಯ, ಸಾ., ಸುತ್ತಲ ಮಟ್ಟಕ್ಕಿಂತ ಇಳಿಸಿದ ಅಥವಾ ಎತ್ತರಿಸಿದ, ಪ್ರತ್ಯೇಕ ವಿಭಾಗ, ಅಂಕಣ : ಪುಟೀಪು. ಹೆಂಗಸರ ಉಡುಪಿನಲ್ಲಿ ಸೇರಿಸಿದ ಬೇರೆ ಬಗೆಯ ಅಥವಾ ಬೇರೆ ಬಣ್ಣದ (ಬಟ್ಟೆಯ) ಪಟ್ಟಿ. (ಅಗಲಕ್ಕಿಂತ ಎತ್ತರ ಬಹಳ ಹೆಚ್ಚಾಗಿರುವ) ದೊಡ್ಡಳತೆಯ ಛಾಯಾ ಚಿತ್ರಪಟ. (ಕ್ರಿ.) (ಕುದುರೆ, ಮೊ. ಕ್ಕೆ) ಜೀನು ಮೆತ್ತೆ ಹಾಕು. (ಗೋಡೆ, ಬಾಗಿಲು, ಮೊ. ಕ್ಕೆ) ಅಂಕಣ ಫಲಕಗಳನ್ನಿಡು. (ಉಡುಪು, ಮೊ. ನ್ನು, ಬಣ್ಣದ ಬಟ್ಟೆಯ) ಪಟ್ಟಿಗಳಿಂದ ಅಲಂಕರಿಸು. **Pánelling** (ನಾ.)

Pang ಪ್ಯಾಂಗ್ (ನಾ.) ಚಳುಕು ; ಚುಚ್ಚು ನೋವು ; ಶೂಲೆ ; ತೀವ್ರ ಯಾತನೆ ; ಥಟ್ಟನೆಯೆದ್ದ ತೀವ್ರ ಮನೋಯಾತನೆ.

Pangénesis ಪ್ಯಾನ್‌ಜೆನೆಸಿಸ್ (ನಾ.) (ಜೀ. ವಿ.) ಡಾರ್ವಿನ್ನನು ಅನುವಂಶೀಯತೆಯ ಮರ್ಮವನ್ನು ವಿವರಿಸಲು ಹೂಡಿದ ಒಂದು ತತ್ತ್ವ (ಈ ತತ್ತ್ವದ ಮೇರೆಗೆ ಒಂದು ಜೀವಿಯ ಪ್ರತಿ ಜೀವಾಣುವೂ ತನ್ನಿಂದ ಸೂಕ್ಷ್ಮಾಣುಗಳನ್ನು ಹೊರದೂಡುವುದೆಂದೂ, ಇವು ದೇಹದಲ್ಲೆಲ್ಲ ಸುತ್ತಾಡುತ್ತ ಇನ್ನೂ ಸೂಕ್ಷ್ಮವಾದ ಅಣುಗಳಾಗಿ ಒಡೆಯುತ್ತ, ಪುನರುತ್ಪಾದಕ ಉತ್ಪನ್ನಗಳಲ್ಲಿ ಸೇರಿ, ಜನ್ಮದಾತೃಗಳ ದೇಹದ ಎಲ್ಲ ಭಾಗಗಳಿಂದಲೂ ಬಂದ ಇಂತಹ ಸೂಕ್ಷ್ಮಾಣುಗಳನ್ನೊಳಕೊಂಡಿರುವ ಅಂಡಗಳಾಗಿ ಪರಿಣಮಿಸುವುವು)

Pangólin ಪ್ಯಾಂಗೋಲಿನ್ (ನಾ.) ಇರುವೆಗಳನ್ನು ತಿನ್ನುವ ಒಂದು ಶಲ್ಕಚರ್ಮ ಪ್ರಾಣಿ.

Pánic[1] ಪ್ಯಾನಿಕ್ (ನಾ.) ನವಣೆಯ ಜಾತಿಯನ್ನೊಳಕೊಂಡ ಒಂದು ಹುಲ್ಲುಜಾತಿ ; ನವಣೆ ; ಪ್ರಿಯಂಗು.

Pánic[2] ಪ್ಯಾನಿಕ್ (ಗು., ನಾ.) (ಭೀತಿಯ ವಿಷಯದಲ್ಲಿ) ವಿವೇಚನೆ ಮಾಡದ, ನಿಷ್ಕಾರಣವಾದ, ಅತಿಯಾದ. (ನಾ.) (ಒಬ್ಬರಿಂದೊಬ್ಬರಿಗೆ ಹರಡುವ) ತೀವ್ರ ಭಯ ; (ಆತುರದ ಕಾರ್ಯಾಚರಣೆಗೆ ಎಡೆಗೊಡುವ) ಥಟ್ಟನೆಯ ಗಾಬರಿ (ಉದಾ., ವ್ಯಾಪಾರದಲ್ಲಿ); ಬೆದರು. P.-monger ಅತಿ ಗಾಬರಿ, ಭಯ, —ಹರಡುವವನು, ಹುಟ್ಟಿಸುವವನು. **Pánicky** (ಗು.) (ಬಳ. ಮಾ.) ಅತಿ ಭೀತಿಯ ಸ್ವಭಾವದ ; ಅತಿ ಭೀತಿ ಹುಟ್ಟಿಸಬಹುದಾದ ; ಗಾಬರಿಯ ; ಬೆದರುವ ; ಹೆದರುವ.

Pánicle ಪ್ಯಾನಿಕ್‌ಲ್ (ನಾ.) (ಸ. ವಿ.) (ಓಟ್ಸ್ ಸಸ್ಯದಲ್ಲಿರುವಂತೆ) ಶಿಥಿಲವಾದ, ಒಂದು ಕ್ರಮವಿಲ್ಲದ, ಸಂಕೀರ್ಣ ಪುಷ್ಪಗುಚ್ಛ.

Panificátion ಪ್ಯಾನಿಫಿಕೇಷನ್ (ನಾ.) ರೊಟ್ಟಿ ಮಾಡುವುದು.

Panjándrum ಪ್ಯಾಂಜ್ಯಾಂಡ್ರಮ್ (ನಾ.) ಮಹಾಪ್ರತಿಷ್ಠೆಗಾರ ; ಜಂಬದ ಕೋಳಿ ; ಆಡಂಬರದವನಿಗಿಟ್ಟ ಅಪಹಾಸ್ಯದ ಬಿರುದು.

Pánnier[1] ಪ್ಯಾನಿಯರ್ (ನಾ.) (ಪ್ರಾಣಿಗಳ ಬೆನ್ನಿನಮೇಲೆ ಅಥವಾ ಮನುಷ್ಯನ ಹೆಗಲಿನಮೇಲೆ ಹೊತ್ತುಕೊಂಡುಹೋಗುವ, ಸಾ., ಜೋಡಿಯಾಗಿರುವ) ಬುಟ್ಟಿ, ಕುಕ್ಕೆ. (ಚರ ಚಿಕಿತ್ಸಾಲಯದಲ್ಲಿ ಚಿಕಿತ್ಸೆಯ ಶಸ್ತ್ರಗಳನ್ನೂ ಔಷಧಗಳನ್ನೂ ಇಡುವ) ಮುಚ್ಚಳವಿರುವ ಬುಟ್ಟಿ. ಸೊಂಟದ ಸುತ್ತಲೂ ತಿಮಿಂಗಿಲಾಸ್ಥಿ, ತಂತಿ, ಮೊ. ಗಳ ಚೌಕಟ್ಟಿನಿಂದ ಉಬ್ಬಿಸಿದ ಲಂಗದ ಭಾಗ.

Pánnier[2] ಪ್ಯಾನಿಯರ್ (ನಾ.) (ಬಳ. ಮಾ.) (ಇಂಗ್ಲೆಂಡಿನಲ್ಲಿ, Inner Temple ಎಂಬ ನ್ಯಾಯವಾದಿ ಸಂಸ್ಥೆಯಲ್ಲಿ) ಪೋಷಾಕು ತೊಟ್ಟಿರುವ ಜವಾನ.

Pánnikin ಪ್ಯಾನಿಕಿನ್ (ನಾ.) (ಲೋಹದ) ಸಣ್ಣ ಕುಡಿಯುವ ಪಾತ್ರೆ ; ಅದರೊಳಗಿರುವ ಪದಾರ್ಥ.

Pánoply ಪ್ಯಾನೊಪ್ಲಿ (ನಾ.) ಪೂರ್ತಿ ಸಜ್ಜಿನ ಮೈಜೋಡು; ಸಂಪೂರ್ಣ ರಕ್ಷಾ ಕವಚ (ಅನೇಕ ವೇಳೆ ರೂಪ.). **Pánoplied** —ಪ್ಲಿಡ್ (ಗು.)

Panópticon ಪ್ಯಾನಾಪ್ಟಿಕನ್ (ನಾ.) (ಸೆರಮನೆಯ ಅಧಿಕಾರಿಗೆ ಎಲ್ಲವೂ ಕಣ್ಣಿಗೆ ಬೀಳುವಂತಿರುವುದಕ್ಕಾಗಿ ಅವನ ತಗ್ಗು ಅಂಗಳದ ಸುತ್ತಲೂ ಕೈದಿಗಳ ಕೋಣೆಗಳಿರುವಂತೆ ಬೆಂತಮ್ ಎಂಬಾತನು ಸಲಹೆ ಕೊಟ್ಟ) ಮಂಡಲಾಕಾರದ ಕಾರಾಗೃಹದ ಮಾದರಿ.

Panoráma ಪ್ಯಾನೊರಾ(ರ್‍ಯಾ)ಮ (ನಾ.) ವರ್ತುಳ ನಾಳಿಯ ಒಳಮೈಯಲ್ಲಿ ಅಳವಡಿಸಿದ, ಅಥವಾ ಪ್ರೇಕ್ಷಕನ ಎದುರಿಗೆ ಒಂದಾದ ಮೇಲೊಂದು ಕಾಣುವಂತೆ ಸುರುಳಿಬಿಚ್ಚಿ ತೋರುವ ಭೂ ದೃಶ್ಯ, ಮೊ. ದು : ಸುತ್ತು ನೋಟ; ದೃಶ್ಯ ಪರಂಪರೆ ; ಸುತ್ತಲಿನ, ಸುತ್ತುಮುತ್ತಲಿನ, ಪ್ರದೇಶದ ಅವಿಚ್ಛಿನ್ನ ದೃಶ್ಯ ; ಸುತ್ತಲ ಪ್ರದೇಶದ ಅಖಂಡ ದೃಷ್ಟಿ ; ಸರ್ವತೋಮುಖ ದೃಷ್ಟಿ (ರೂಪ.). **Panorámic** (ಗು.) ; **Panorámically** (ಕ್ರಿ. ವಿ.)

Pán-pipe. **Pan**[2] ನೋಡಿ.

Pánsy ಪ್ಯಾನ್ಸಿ (ನಾ.) ಹಲವು ಬಣ್ಣದ ಹೂವು ಬಿಡುವ ಒಂದು ಕಾಡು ಸಸ್ಯ ಮತ್ತು ತೋಟದ ಸಸ್ಯ : 'ಪ್ಯಾನ್ಸಿ'.

Pant ಪ್ಯಾಂಟ್ (ಕ್ರಿ., ನಾ.) ಉಸಿರಿಗಾಗಿ ಬಾಯಿ ಬಾಯಿ ಬಿಡು ; ಮೇಲುಸಿರು ಸೆಳೆ ; ಏದು. (ರೂಪ.) ಹಂಬಲಿಸು (*For, after* thing, *to* do); ರಭಸದಿಂದ ಕಂಪಿಸು, ಸ್ಪಂದಿಸು; ಏದುತ್ತ ಹೇಳು. (ನಾ.) ಏದು(ಸಿರು) ; ಕಂಪನ ; ಸ್ಪಂದನ.

Pantagrúelism ಪ್ಯಾಂಟಗ್ರೂಎಲಿಸ್‌ಮ್ (ನಾ.) ಹಸಿಹಸಿ ಹಾಸ್ಯ. **Pantagruélian** (ಗು.); **Pantagrúelist** (ನಾ.)

Pantalét(te)s ಪ್ಯಾಂಟಲೆಟ್ಸ್ (ನಾ., ಬ. ವ.) ಹೆಂಗಸಿನ ಒಳ ಷರಾಯಿ ; ಮೊಣಕಾಲು ಕೆಳಗಿನ ವರೆಗೆ ಬಂದು ಅಲ್ಲಿ ಗುತ್ತನಾಗಿ ಮಾಡಿದ, ಬೈಸಿಕಲ್ ಸವಾರಿಗೆ ತಕ್ಕ, ದಗಲೆ ಚಲ್ಲಣ.

Pantaloón ಪ್ಯಾಂಟಲೂನ್ (ನಾ.) ಇಟ್ಯಾಲಿಯನ್ ಹರ್ಷನಾಟಕಗಳಲ್ಲಿ ಬಿಗಿಷರಾಯಿ ಹಾಕಿಕೊಂಡು ಬರುವ ಒಂದು ಪಾತ್ರ ; (ಈಗಿನ ಅರ್ಥ) ಮೂಕನಾಟಕದಲ್ಲಿ ವಿದೂಷಕನ ಹಾಸ್ಯಗಳಿಗೆ ಗುರಿಯಾಗಿ, ಅವನಿಗೆ ಸಹಾಯ ಮಾಡುವ ನಟ ; (ಚರಿತ್ರೆ, ಏ. ವ. ಅಥವಾ ಬ. ವ. ದಲ್ಲಿ) ಚಲ್ಲಣವೂ ಕಾಲುಚೀಲವೂ ಒಂದಾಗಿ ಸೇರಿರುವ ಷರಾಯಿ ; ಹರಡಿನ ವರೆಗೂ ಬರುವ ಬಿಗಿಷರಾಯಿ ; (ಬ. ವ. ದಲ್ಲಿ ; ಮು., ಅಮೆ. ಸಂ.) ಷರಾಯಿ ; ಇಜಾರು.

Pantéchnicon ಪ್ಯಾನ್‌ಟೆಕ್ನಿಕನ್ (ನಾ.) ಪೀಠೋಪಕರಣಗಳ ಗಡಂಗು (ಹಿಂದೆ, ಕುಶಲ ಕೈಗಾರಿಕೆಗಳ ಎಲ್ಲ ವಸ್ತುಗಳನ್ನೂ ಮಾರುತ್ತಿದ್ದ ಪೇಟೆ, ಅಂಗಡಿ ಬೀದಿ). P. van ಪೀಠೋಪಕರಣಗಳನ್ನು ಸಾಗಿಸುವ ಬಂಡಿ.

Pántheism ಪ್ಯಾನ್‌ತಿಇಸ್‌ಮ್ (ನಾ.) ದೇವರೇ ವಿಶ್ವವೆಂದೂ ವಿಶ್ವವೇ ದೇವರೆಂದೂ ಹೇಳುವ ವಾದ : ವಿಶ್ವದೇವೈಕ್ಯ ವಾದ ; (ಕ್ರೈಸ್ತೇತರರ) ಸರ್ವ ದೇವತಾರಾಧನೆ. **Pántheist** (ನಾ.); **Pantheístic(al)** (ಗು.)

Pántheon ಪ್ಯಾಂತಿಯನ್, **Panthéon** —ತೀ— (ನಾ.) (ಮು., ರೋಮ್ ಪಟ್ಟಣದಲ್ಲಿರುವ ವರ್ತುಲಾಕಾರದ) ಸಕಲ ದೇವತೆಗಳ ದೇವಾಲಯ. (ಸಾಮೂಹಿಕವಾಗಿ) ಒಂದು ಜನತೆಯ ದೇವತೆಗಳು. ಕೀರ್ತಿಶೇಷರಾದ ಮಹನೀಯರ ಗೋರಿಗಳೂ ಸ್ಮಾರಕಗಳೂ ಇರುವ ಕಟ್ಟಡ; ಪ್ರಸಿದ್ಧಪುರುಷ ಸ್ಮಾರಕಮಂದಿರ. ೧೮ನೆ ಶತಮಾನದ ಉತ್ತರಾರ್ಧದಲ್ಲಿ ಸಾರ್ವಜನಿಕ ವಿನೋದೋತ್ಸವಗಳಿಗಾಗಿ ಲಂಡನ್ನಿನಲ್ಲಿ ತೆರೆದ ಕಟ್ಟಡ: ಸಾರ್ವಜನಿಕ ವಿನೋದೋತ್ಸವ ಶಾಲೆ.

Pánther ಪ್ಯಾಂತರ್ (ನಾ.) ಚಿರತೆ. **Pántheress** (ನಾ., ಸ್ತ್ರೀ.)

Pantisócracy ಪ್ಯಾಂಟಿ(ಟೈ)ಸಾಕ್ರಸಿ (ನಾ.) ಎಲ್ಲರೂ ಸಮವಾದ ಹಕ್ಕುಗಳುಳ್ಳವರಾಗಿ ಎಲ್ಲರೂ ರಾಜ್ಯವಾಳುವ ಜನಾಂಗ : ಸಮಸ್ತ ಸಮಾನಾಧಿಪತ್ಯ.

Panto- (ಸ್ವರಗಳ ಹಿಂದೆ Pant-) ಪ್ಯಾಂಟೊ(ಟ)— (ಸ. ಪೂ. ಪ.) ಎಲ್ಲಾ—; ಸರ್ವ—. **-lógic, -logy** (—ಟಾ—) ವಿಶ್ವವಿಜ್ಞಾನ(ದ) ; ವಿಶ್ವವಿದ್ಯೆ(ಯ). **-mórphic** ಎಲ್ಲ ರೂಪಗಳನ್ನೂ ತಳೆಯುವ; ಸರ್ವ ರೂಪಿ. **-pragmátic** (ಗು., ನಾ.) ಎಲ್ಲದರಲ್ಲೂ ಕೈಹಾಕುವ(ವನು) ; ಕೇವಲ ಅಧಿಕಪ್ರಸಂಗಿ(ತನದ). **scópic** (—ಸ್ಕಾ—) ವಿಶಾಲ ದೃಷ್ಟಿಕ್ಷೇತ್ರವುಳ್ಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pántograph ಪ್ಯಾಂಟೊಗ್ರಾಫ್ (ನಾ.) ನಕ್ಷೆ, ಮೊ. ನ್ನು ಯಾವ ಪ್ರಮಾಣದಲ್ಲಾದರೂ ನಕಲು ಮಾಡಲಾಗುವ ಸಲಕರಣೆ: ನಕ್ಷಾ ಪ್ರಮಾಣ ವ್ಯತ್ಯಾಸಕ. **Pantográphic** (ಗು.)

Pántomime ಪ್ಯಾಂಟೊಮೈಮ್ (ನಾ., ಕ್ರಿ.) (ಚರಿತ್ರೆ) ರೋಮನ್ ಮೂಕ ನಾಟಕದಲ್ಲಿಯ ನಟ; ಒಂದು ತೆರದ ತಮಾಷೆಯ ಇಂಗ್ಲಿಷ್ ನಾಟಕ ಪ್ರದರ್ಶನ; ಮೂಕಾಭಿನಯ. (ಕ್ರಿ.) ಮೂಕಾಭಿನಯ ಮಾಡು; ಮೂಕಾಭಿನಯದಿಂದ ವ್ಯಕ್ತಗೊಳಿಸು. **Pantomímic** —ಮಿಮಿಕ್ (ಗು.); **Pántomimist** —ಮೈ— (ನಾ.)

Pántry ಪ್ಯಾಂಟ್ರಿ (ನಾ.) [ರೊಟ್ಟಿ, ಮೊ. ತಿಂಡಿಯ ಪದಾರ್ಥಗಳನ್ನು ಅಥವಾ (ಊಟದ) ತಟ್ಟೆಗಳು, ಮೇಜಿನ ಬಟ್ಟೆ, ಮೊ. ನ್ನು ಇಡುವ] ಉಗ್ರಾಣ; ಭೋಜನ ವಸ್ತುಗಳ ಕೋಣೆ. Pantryman ಭೋಜನ ವಸ್ತುಗಳ ಪಾರುಪತ್ಯಗಾರ; ಇವನ ಸಹಾಯಕ.

Pants ಪ್ಯಾಂಟ್ಸ್ (ನಾ., ಬ. ವ.) (ಗ್ರಾಮ್ಯ) (ಮು., ಅಮೆ. ಸಂ.) ಷರಾಯಿ. (ಹೇಟೆಯ ಮಾತು) ಉದ್ದವಾದ ಬಿಗಿ ಒಳಷರಾಯಿ. [Pantaloons ಪದದ ಸಂಕ್ಷಿಪ್ತ]

Pap[1] ಪ್ಯಾಪ್ (ನಾ.) (ಪ್ರಾಚೀ. ಪ್ರ.) (ಹೆಂಗಸಿನ) ಮೊಲೆತೊಟ್ಟು; ಚೂಚುಕ; ಗಂಡಸಿನ ಇದೇ ಭಾಗ. (ಬ. ವ. ದಲ್ಲಿ) ಪಕ್ಕಪಕ್ಕದಲ್ಲಿರುವ ಶಂಕುವಿನಾಕಾರದ ಪರ್ವತ ಶಿಖರಗಳು.

Pap[2] ಪ್ಯಾಪ್ (ನಾ.) ಎಳೆ ಮಕ್ಕಳಿಗೂ ರೋಗಿಗಳಿಗೂ ಅಶಕ್ತರಿಗೂ ಕೊಡುವ ಮೃದುವಾದ ಅಥವಾ ಅರ್ಧ ದ್ರವರೂಪದ ಆಹಾರ; ಗಂಜಿ; ಅಂಬಲಿ. **Páppy** (ಗು.)

Papá ಪಪಾ (ನಾ.) (ಮಕ್ಕಳ ಮಾತು) ಅಪ್ಪ.

Pápacy ಪೇಪಸಿ (ನಾ.) ಪೋಪ್ ಗುರುವಿನ ಅಧಿಕಾರ, ಅಧಿಕಾರಾವಧಿ, ಅಧಿಕಾರ ಪದ್ಧತಿ. **Pápal** (ಗು.) ಪೋಪ್ ಗುರುವಿನ (ಅಧಿಕಾರದ, ಪದವಿಯ). **Pápalism** (ನಾ.); **Pápalist** (ನಾ.); **Pápalize** (ಕ್ರಿ.); **Pápally** (ಕ್ರಿ. ವಿ.)

Papáverous ಪಪೇವರಸ್ (ಗು.) ಗಸಗಸೆಯ (ಕಸಕಸಯ) ಗಿಡದಂಥ; —ಗಿಡದ ಜಾತಿಗೆ ಸೇರಿದ, ಸಂಬಂಧವುಳ್ಳ. **Papaveráceous** —ರೇಷಸ್ (ಗು.) —ಸಸ್ಯ ವಂಶದ.

Papaw ಪಪಾ, ಪಾಪಾ (ನಾ.) ಪಪಾಯಿ (ಗಿಡ, ಹಣ್ಣು); ಪರಂಗಿ ಹಣ್ಣು, ಗಿಡ [ಅಡುವ ಮಾಂಸವನ್ನು ಮೃದುಮಾಡುವ ಗುಣವುಳ್ಳ, ಕಾಂಡದಲ್ಲೂ ಎಲೆಗಳಲ್ಲೂ ಕಾಯಿಗಳಲ್ಲೂ ಹಾಲನಂಥ ರಸವಿರುವ, ಅಮೆರಿಕದ ಒಂದು ಗಿಡ(ದ ಹಣ್ಣು)]

Páper ಪೇಪರ್ (ನಾ.) ಕಾಗದ (ಬರೆಯುವುದಕ್ಕೆ, ಮುದ್ರಣಕ್ಕೆ, ರೇಖನಕ್ಕೆ, ಪೊಟ್ಟಣ, ಥಾಂಗಿ, ಮೊ. ನ್ನು ಕಟ್ಟುವುದಕ್ಕೆ, ಉಪಯೋಗ) [Commit to p. (ಕಾಗದದಲ್ಲಿ) ಬರೆದಿಡು. Put pen to p. ಬರೆಯಲಾರಂಭಿಸು]. (ಮಾರುವೆ ಮಾಡಲಾಗುವ) (ಬಂಡವಾಳ) ಪತ್ರ, ಹುಂಡಿ, ಮೊ. ದು. (ಚಲಾವಣೆಯಲ್ಲಿ ಉಪಯೋಗಿಸುವ) (ಬ್ಯಾಂಕ್) ನೋಟು, ಮೊ. ದು (=P. money ಕಾಗದದ ಹಣ). [ನಾಣ್ಯಕ್ಕೆ ಪ್ರತಿಯಾಗಿ, P. currency (Metallic ಹೋಲಿಸಿ)]. (ಅಸಂ.) (ನಾಟಕ ಶಾಲೆ, ಮೊ. ಗಳಿಗೆ) ಬಿಟ್ಟಿ ಪ್ರವೇಶಚೀಟಿ. (ಬ. ವ. ದಲ್ಲಿ) ಒಬ್ಬ ವ್ಯಕ್ತಿಯ ಅಥವಾ ಹಡಗಿನ ಗುರುತು, ಸ್ಥಾನಮಾನ, ಮೊ. ಗಳನ್ನು ರುಜುವಾತು ಮಾಡುವ ಪತ್ರಗಳು: ಗುರುತು ಪತ್ರಗಳು [Send in one's papers (ಒಂದು ಉದ್ಯೋಗ, ಮೊ. ಕ್ಕೆ) ರಾಜಿನಾಮೆ ಕೊಡು]. (ಪರೀಕ್ಷೆಯ) ಪ್ರಶ್ನ ಪತ್ರಿಕೆ; ವೃತ್ತಪತ್ರಿಕೆ (Newspaper). (ಮು., ಪಂಡಿತ ಸಭೆಯಲ್ಲಿ ಓದಿದ, ಓದುವ) (ಪ್ರೌಢ) ಪ್ರಬಂಧ, ರೇಖ, ಉಪನ್ಯಾಸ. P. war(fare) ಗ್ರಂಥಗಳ ಮೂಲಕ ಅಥವಾ ವೃತ್ತಪತ್ರಿಕೆಗಳ ಮೂಲಕ ನಡಸುವ ವಾದ, ಯುದ್ಧ. On p. ಕಾಗದದ ಮೇಲೆ; ಬರಿ ಅಂದಾಜಿನಮೇಲೆ; ಕಲ್ಪನಾಧಾರದಿಂದ; ಅಂಕಿ ಅಂಶಗಳಿಂದ (ತೀರ್ಮಾನಿಸಿದಲ್ಲಿ) (On p. he is the better man). P. profits ನಿರೀಕ್ಷೆಯ, ಕಲ್ಪನಾಧಾರದ, ಕಾಗದದಮೇಲಿನ, —ಲಾಭಗಳು. P.-bag cookery ಅಡಬೇಕಾದ ಪದಾರ್ಥವನ್ನು ಬೆಣ್ಣೆಸವರಿದ ಕಾಗದದ ಚೀಲದಲ್ಲಿಟ್ಟು ಮಿತವಾದ ಕಾವಿನ ಒಲೆಯಲ್ಲಿ ಬೇಯಿಸುವ ಪಾಕ ವಿಧಾನ. **P.-chase** ತಮ್ಮನ್ನು ಹಿಡಿಯುವುದಕ್ಕಾಗಿ ಹೊರಡುವ ಇತರರಿಗೆ ದಾರಿ ಸೂಚನೆ ಕೊಡಲು ಮುಂದಾಗಿ ಹೊರಟ ಒಬ್ಬನಾಗಲಿ, ಹಲವರಾಗಲಿ, ಕಾಗದದ ಚೂರುಗಳನ್ನು ಅಲ್ಲಲ್ಲಿ ದಾರಿಯುದ್ದಕ್ಕೂ ಹಾಕಿಕೊಂಡು ಹೋಗುವ ಒಂದು ಆಟ: ಕಾಗದಬೇಟೆಯಾಟ. **P.-hangings, wall-p.** (ಕೊಠಡಿಯ) ಗೋಡೆಗೆ ಹಚ್ಚುವ (ಚಿತ್ರ)ಕಾಗದ. **P.-hanger** ಚಿತ್ರಕಾಗದ ಹಚ್ಚುವವನು. **P.-knife** (ಪುಸ್ತಕ, ಮೊ. ಗಳ ಕೂಡುಹಾಳೆಗಳನ್ನು ಬಿಡಿಸಿ ಕೊಯ್ಯುವ, ಮರ, ದಂತ, ಮೊ. ಗಳಿಂದ ಮಾಡಿದ) ಕಾಗದದ ಚೂರಿ. **P.-mill** ಕಾಗದ (ತಯಾರಿಸುವ) ಕಾರಖಾನೆ. **P.-stainer** ಕಾಗದಕ್ಕೆ ಬಣ್ಣ ಹಾಕುವವನು; (ಗೋಡೆಗಳ) ಚಿತ್ರಕಾಗದಕಾರ. (ಹಾಸ್ಯವಾಗಿ) ಕೀಳು ತರಗತಿಯ ಬರಹಗಾರ: ಕಾಗದಹಾಳ. **P.-weight** ಬಿಡಿ ಕಾಗದಗಳು ಹಾರಿಹೋಗದಂತೆ ಅವುಗಳ ಮೇಲಿಡುವ ಸಣ್ಣ ಭಾರ: ಕಾಗದ ಭಾರ. **Pápery** (ಗು.) ಕಾಗದದಂಥ; ಕಾಗದದಂತೆ ತೆಳ್ಳಗೂ ಜಾಳಾಗಿಯೂ ಇರುವ. **Papyráceous** ಪ್ಯಾಪಿರೇಷಸ್ (ಗು.) (ಪ್ರಕೃತಿ ಚರಿತ್ರೆ) ಕಾಗದದಂಥ; ಕಾಗದದಂತೆ ತೆಳ್ಳನೆಯ.

Páper (ಕ್ರಿ. ಸಕ.) ಕಾಗದದಲ್ಲಿ ಸುತ್ತು; (ಗೋಡೆ, ಮೊ. ನ್ನು) (ಚಿತ್ರ)ಕಾಗದದಿಂದ ಅಲಂಕರಿಸು. ಕಾಗದ ಒದಗಿಸು. (ಅಸಂ.) (ನಾಟಕ ಶಾಲೆ, ಮೊ. ನ್ನು) ಬಿಟ್ಟಿ ಚೀಟಿ ಕೊಟ್ಟು ತುಂಬಿಸು.

Papier mache (F) ಪಾಪ್ಯೆ ಮಾಷೆ, ಪ್ಯಾಪ್ಯೇ ಮಾಷೇ, ಪೇಪರ್ ಮ್ಯಾಷೇ (ನಾ.) (ಪೆಟ್ಟಿಗೆ, ತಟ್ಟೆ, ಮೊ. ವನ್ನು ಅಚ್ಚು ಹೊಯ್ದು ಮಾಡಲು ಉಪಯೋಗಿಸುವ) ಕಾಗದ ತಿಳ್ಳು, ರುಬ್ಬಿದ ಕಾಗದ.

Papílionáceous ಪಪಿಲಿಯೊನೇಷಸ್ (ಗು.) (ಸ. ವಿ.) ಚಿಟ್ಟೆಯಾಕಾರದ ಎಸಳು ಸುತ್ತುಳ್ಳ; ಪತಂಗ ದಳವಲಯವುಳ್ಳ.

Papílla ಪಪಿಲ (ನಾ.; ಬ. ವ. -ae —ಲೀ) (ದೇಹದ ಒಂದು ಭಾಗದಲ್ಲಾಗಲಿ ಅಂಗದಲ್ಲಾಗಲಿ ಇರುವ) ಮೊಲೆತೊಟ್ಟಿನಾಕಾರದ ಗಂತಿ; ನರಹುಲಿ. (ಸ. ವಿ.) ಸಸ್ಯದಮೇಲಿನ ಸಣ್ಣ ಮೆತು ಗಂಟು. **Pápillary** ಪ್ಯಾ— (ಗು.) —ಆಕಾರದ, ಸ್ವಭಾವದ, —ಇಂದ ಕೂಡಿದ. **Pápillate** (ಗು.) —ಅಂಥ, —ಇಂದ ಕೂಡಿದ; =Papillary. **Pápillose** (ಗು.) =Papillate.

Pápist ಪೇಪಿಸ್ಟ್ (ನಾ.) ಪೋಪ್ ಗುರುವಿನ ಪರಮಾಧಿಕಾರ ವಾದಿ; ರೋ. ಕ್ಯಾ. ಕ್ರೈಸ್ತ (ಸಾ., ವಿರೋಧ ಭಾವನೆಯ ಅಥವಾ ನಿಂದನೆಯ ಅರ್ಥದಲ್ಲಿ). **Pápistry** (ನಾ.) ಪೋಪ್ ಗುರುತ್ವ ವಾದಿಗಳ ತತ್ತ್ವ ಅಥವಾ ಪದ್ಧತಿ; ರೋ. ಕ್ಯಾ. ಮತ(ಶ್ರದ್ಧೆ). **Papístic(al)** ಪಪಿಸ್ಟಿ— (ಗು.); **Papístically** (ಕ್ರಿ. ವಿ.)

Papoósh, -ouche ಪಪೂಷ್ (ನಾ.) ಪಾಪೂಸು.

Páppus ಪ್ಯಾಪಸ್ (ನಾ.) (ಸ. ವಿ.) ಕೆಲವು ಬೀಜಗಳಮೇಲಿನ ತುಪ್ಪುಳು ಕೂದಲು; ಬೀಜ ತುಪ್ಪುಳು. **Pappóse** (ಗು.)

Pápula ಪ್ಯಾಪ್ಯುಲ, **-ule** ಪ್ಯಾಪ್ಯುಲ್ (ನಾ.; ಬ. ವ. -lae —ಲೀ, -les —ಲ್ಸ್) ಮೊಡವೆ. ಸಸ್ಯದಮೇಲಿನ (ಮೊಡವೆಯಂಥ) ಮೆತು ಗಂಟು, ಗಂತಿ. **Pápular** (ಗು.) ಮೊಡವೆಯ; —ಸ್ವಭಾವದ. **Papulóse** (ಗು.) —ತುಂಬಿದ. **Pápulous** (ಗು.) —ಸ್ವಭಾವದ; =Papulose.

Papyráceous. **Paper** ನೋಡಿ.

Papyro- ಪಪೈರೊ— (ಸ. ಪೂ. ಪ.) ಕಾಗದ—. **-graph** ಕಾಗದದಲ್ಲಿ ಅಕ್ಷರಗಳನ್ನು ಕೊರೆದು ಅದರಿಂದ ದಸ್ತೈವಜುಗಳ ಪ್ರತಿಗಳನ್ನೆತ್ತುವ ಸಲಕರಣೆ. **-graphy** (ಪ್ಯಾಪಿರಾಗ್ರಫಿ), **-type** (ಪಪೈರೊ—) ಚಿತ್ರ, ಮೊ. ನ್ನು ಕಾಗದದಿಂದ ಸತುತಗಡು, ಮೊ. ಗಳಿಗೆ ವರ್ಗಾಯಿಸಿ ಪ್ರತಿಯೆತ್ತುವ ವಿಧಾನ(ಗಳು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Papýrus ಪಪೈರಸ್ (ನಾ; ಬ. ವ. -ri —ರೈ) ಜೊಂಡು ಜಾತಿಯ ಒಂದು ಜಲಸಸ್ಯ; ಕಾಗದದ ಜಂಬು. ಇದರ ತಾಳಿನಿಂದ ಇಜಿಪ್ಷನರು, ಮೊ. ರು ತಯಾರಿಸಿ ಪ್ರಾಚೀನ ಕಾಲದಲ್ಲಿ ಉಪಯೋಗಿಸುತ್ತಿದ್ದ ಬರವಣಿಗೆಯ ಸಾಧನ, ಕಾಗದ; ಜಂಬು ಕಾಗದ.

Par[1] ಪಾರ್ (ನಾ.) ಸಮತೆ; ಸಮಾನತೆ [ಮು., On a p. with (—ರೊಡನೆ ಸಮತೆಯುಳ್ಳದ್ದಾಗಿ) ಎಂಬಲ್ಲಿ]. (P. of exchange ಒಂದು ದೇಶದ ನಾಣ್ಯಕ್ಕೂ ಮತ್ತೊಂದು ದೇಶದ ನಾಣ್ಯಕ್ಕೂ ಪರಸ್ಪರ ಇರುವ ನಿಗದಿಯ ಬೆಲೆ; ಸಮ ವಿನಿಮಯ; ಸರಿ ಮಾರುವೆ). [ಬಂಡವಾಳ ಪತ್ರ, ಹಸುಗೆ ಪತ್ರ, ಮೊ. ಗಳ ವಿಷಯದಲ್ಲಿ: At p. ನಮೂದು ಬೆಲೆಗೆ, Above p. (ನಮೂದು ಬೆಲೆಗಿಂತ) ಹೆಚ್ಚು ಬೆಲೆಗೆ, Below p. (ನಮೂದು ಬೆಲೆಗಿಂತ) ಕಡಮೆ ಬೆಲೆಗೆ]. ಯಥಾವತ್ತು, ಸರಾಸರಿ (ಮೊತ್ತ, ದರ್ಜೆ, ಸ್ಥಿತಿ) (On a p. ಸರಾಸರಿಯಾಗಿ. Above, below, up to, p.)

Par[2] ಪಾರ್ (ನಾ.) (ಬಳ. ಮಾ.) = Paragraph (ಪದದ ಸಂಕ್ಷಿಪ್ತ)

Para-[1] ಪ್ಯಾರ— (ಸ. ಪೂ. ಪ.) (೧) (—ರ) ಪಕ್ಕದಲ್ಲಿಯ, (—ರ) ಆಚೆಯಿರುವ, (೨) ತಪ್ಪಾದ, ವ್ಯತಿರಿಕ್ತವಾದ, (೩) ಹೋಲುವ —ಇವೇ ಮೊ. ಅರ್ಥಗಳಲ್ಲಿ ಪ್ರ. [ಉದಾ., (೧) Paracentral, (೨) Paradox, (೩) Paratyphoid]

Para-[2] ಪ್ಯಾರ— (ಸ. ಪೂ. ಪ.) ಕಾಪು, ರಕ್ಷೆ, ಮರೆ, ಆಶ್ರಯ, ಮೊ. ಅರ್ಥಗಳಲ್ಲಿ ಪ್ರ. (ಉದಾ., Parasol)

Parábasis ಪರ್ಯಾಬಸಿಸ್ (ನಾ.; ಬ. ವ. -ses —ಸೀಸ್) ಗ್ರೀಕ್ ಹರ್ಷ ನಾಟಕದಲ್ಲಿ ಮೇಳದವರು ನಾಟಕ ಕರ್ತೃವಿನ ಹೆಸರಿನಲ್ಲಿ ಪ್ರೇಕ್ಷಕರನ್ನುದ್ದೇಶಿಸಿ ಹಾಡುವ (ನಾಟಕ ಸಂಬಂಧವಿಲ್ಲದ) ಭಾಗ.

Párable ಪ್ಯಾರಬ್‌ಲ್ (ನಾ.) ನೈತಿಕ ಅಥವಾ ಆಧ್ಯಾತ್ಮಿಕ ಸಂದರ್ಭಗಳನ್ನು ದೃಷ್ಟಾಂತದಿಂದ ನಿರೂಪಿಸುವ ಕಟ್ಟುಕಥೆ; ರೂಪಕ ಕಥೆ. (ಪ್ರಾಚೀ. ಪ್ರ.) ಒಗಟು ಮಾತು; ಒಗಟೆ; ಸಮಸ್ಯೆ; ನಾಣ್ನುಡಿ; ಗಾದೆ; ಸಾಮತಿ. (ಪ್ರಾಚೀ. ಪ್ರ.) Take up one's p. ಉಪನ್ಯಾಸ ವಾರಂಭಿಸು. **Parabólic**[1]**(al)** ಪ್ಯಾರಬಾಲಿಕ್(ಕಲ್) (ಗು.) ದೃಷ್ಟಾಂತ ಕಥೆಯ(ಮೂಲಕ ನಿರ್ದೇಶಿಸಿದ). **Parabólically** (ಕ್ರಿ.ವಿ.)

Parábola ಪರ್ಯಾಬೊಲ (ನಾ.) ಶಂಕುವಿನ (ಓರೆಯ) ಪಕ್ಕಕ್ಕೆ ಸಮಾನಾಂತರವುಳ್ಳ ಯಾವುದಾದರೊಂದು ಸಮತಲ ಕ್ಷೇತ್ರದಿಂದ ಆ ಶಂಕುವನ್ನು ಕತ್ತರಿಸಿದರೆ ಆಗುವ ಸಮತಲ ವಕ್ರರೇಖೆ; ಪರವಲಯ. **Parabólic**[2]**(al)** ಪ್ಯಾರಬಾಲಿ— (ಗು.) ಪರವಲಯದ(ಂಥ). **Parábolöid** ಪರ್ಯಾಬೊಲಾಯ್ಡ್ (ನಾ.) ತನ್ನ ಕೆಲವು ಸಮತಲಚ್ಛೇದಗಳು ಪರವಲಯಗಳಾಗುವ ಘನಾಕೃತಿ; ಮು., ಪರವಲಯವು ತನ್ನ ಅಕ್ಷದ ಮೇಲೆ ಸುತ್ತುವುದರಿಂದ ಆಗುವ ಘನಾಕೃತಿ (=P. of revolution); ಘನ ಪರವಲಯ.

Paracéntric(al) ಪ್ಯಾರಸೆಂಟ್ರಿಕ್(ಕಲ್) ವೃತ್ತಾಕೃತಿಯಿಂದ ಚ್ಯುತಿ ಹೊಂದಿದ; ಪರ ಕೇಂದ್ರಕ.

Paráchronism ಪರ್ಯಾಕ್ರೊನಿಸ್‌ಮ್ (ನಾ.) ಒಂದು ಘಟನೆಯನ್ನು ಅದು ನಡೆದ ಕಾಲಕ್ಕೆ ತರುವಾಯ ನಡೆದಂತೆ ಹೇಳುವುದು; ಕಾಲಗಣನೆಯಲ್ಲಿ ತಪ್ಪು; ಕಾಲಗಣನ ಪ್ರಮಾದ.

Párachute ಪ್ಯಾರಷೂಟ್ (ನಾ.) ಯಾವುದಾದರೂ ಎತ್ತರದಿಂದ (ಮು., ವಿಮಾನದಿಂದ) ಸುರಕ್ಷಿತವಾಗಿ ಕೆಳಕ್ಕಿಳಿಯಲು ಉಪಯೋಗವಾಗುವ ಛತ್ರಿಯಂಥ ಸಲಕರಣೆ; ದುಮುಕು ಕೊಡೆ. ಈ ಕೆಲಸಕ್ಕೆ ಒದಗುವ ಯಾವುದಾದರೂ ಸ್ವಾಭಾವಿಕ ಅಥವಾ ಕೃತಕ ಸಾಧನ. **Párachutism** (ನಾ.); **Párachutist** (ನಾ.)

Páraclete ಪ್ಯಾರಕ್ಲೀಟ್ (ನಾ.) ಮತ್ತೊಬ್ಬನ ಪರವಾಗಿ ಬಿನ್ನಹ ಮಾಡುವವನು; ಮಧ್ಯಸ್ಥಗಾರ (ಕ್ರೈಸ್ತ ಪರಿಶುದ್ಧಾತ್ಮನ ಬಿರುದು)

Paráde ಪರೇಡ್ (ನಾ., ಕ್ರಿ.) ಪ್ರದರ್ಶನ; ಮೆರೆತ; ಆಡಂಬರ (Make a p. of one's virtues ತನ್ನ ಸುಗುಣಗಳನ್ನು ಮೆರಸು, ಮೆರೆ). (ಮು., ಗೊತ್ತಾದ ಕಾಲಗಳಲ್ಲಿ ಪರೀಕ್ಷೆ ಮಾಡಲು ನಡಸುವ) ಸೈನ್ಯ ಜಮಾವಣೆ; ಲಾವಣಿಗೆ (ಗ್ರಾಂ.); ಪ್ರದರ್ಶನ; ಇದರ ಸ್ಥಳ. ಮೆರವಣಿಗೆ. ಸಾರ್ವಜನಿಕ ಚೌಕ, ರಸ್ತೆ; (ಚಪ್ಪಡಿ, ಮೊ. ಹಾಸಿದ) ಗಾಳಿಸವಾರಿ ಹಾದಿ (ಅನೇಕ ವೇಳೆ ಬೀದಿಯ ಹೆಸರಾಗಿ ಪ್ರ.). (ಕ್ರಿ.) (ಪ್ರದರ್ಶನಕ್ಕಾಗಲಿ ಬೇರೆ ಉದ್ದೇಶಕ್ಕಾಗಲಿ ಸೈನ್ಯವನ್ನು) ಜಮಾಯಿಸು. ಪ್ರದರ್ಶಿಸು. ಆಡಂಬರದಿಂದ ಮೆರೆ, ಮೆರಸು. (ಬೀದಿ, ಮೊ. ಗಳಲ್ಲಿ) ಮೆರವಣಿಗೆ ಮಾಡು, ಹೋಗು.

Páradigm ಪ್ಯಾರಡೈ(ಡಿ)ಮ್ (ನಾ.) (ವಿಭಕ್ತಿಪ್ರತ್ಯಯಗಳನ್ನು ಹಚ್ಚಿ ಆಗುವ ನಾಮರೂಪ, ಆಖ್ಯಾತಪ್ರತ್ಯಯಗಳನ್ನು ಹಚ್ಚಿ ಆಗುವ ಕ್ರಿಯಾರೂಪ, ಮೊ. ಗಳ) ಉದಾಹರಣೆ, ಮಾದರಿ, ನಿದರ್ಶನ; ನಾಮ, ಕ್ರಿಯಾ, ರೂಪಾವಳಿ. **Paradigmátic** —ಡಿಗ್‌ಮ್ಯಾ— (ಗು.)

Páradise ಪ್ಯಾರಡೈಸ್ (ನಾ.) ಈಡನ್ನಿನ ತೋಟ, ನಂದನ ವನ (Earthly p.); ಸ್ವರ್ಗ; ಪರಮಾನಂದ ಸ್ಥಿತಿ. [Fool's p. (Fool[1] ನೋಡಿ)]. (ನೋಟಕ್ಕಾಗಿ) ಪ್ರಾಣಿಗಳನ್ನಿಟ್ಟಿರುವ ವನ. [Bird of p. (Bird ನೋಡಿ)]. **Paradisáic(al)** —ಡಿಸ್ಯೆಅಕ್(ಅಕಲ್), —ಡಿಸೇಇ— (ಗು.); **Paradísean** —ಡಿಸಿಅನ್ (ಗು.); **Paradísiac(al)** —ಡಿಸ್ಯೆಅ— (ಗು.); **Paradísial** —ಡಿಸಿ— (ಗು.); **Paradísian** (ಗು.); **Paradísic(al)** (ಗು.)

Párados ಪ್ಯಾರಡಾಸ್, ಪಾರಾಡೊ (ನಾ.) (ಕೋಟೆ, ಮೊ. ಗಳಿಂದ) ಭದ್ರಪಡಿಸಿದ ಸ್ಥಳವನ್ನು ಹಿಂದುಗಡೆಯಿಂದ ಆಕ್ರಮಣ ಮಾಡುವುದನ್ನಾಗಲಿ ಗುಂಡು ಹೊಡೆಯುವುದನ್ನಾಗಲಿ ತಡೆಗಟ್ಟಲು ಒಟ್ಟಿದ (ಮಣ್ಣು) ದಿಬ್ಬ (ಮು., ಕಂದಕದ ಹಿಂಭಾಗದಲ್ಲಿ ಉದ್ದಕ್ಕೂ ಹಾಕಿದ ದಿಬ್ಬ)

Páradox ಪ್ಯಾರಡಾಕ್ಸ್ (ನಾ.) ಅಂಗೀಕೃತ, ಸಾಂಪ್ರದಾಯಿಕ, —ಅಭಿಪ್ರಾಯಕ್ಕೆ ವಿರುದ್ಧವಾಗಿ ಹೇಳಿದ ವಾಕ್ಯ, ಉಕ್ತಿ, ಕಥನ, ವಚನ; ಸಂಪ್ರದಾಯ ವಿರುದ್ಧೋಕ್ತಿ; ಅಸಂಗತೋಕ್ತಿ; ಸ್ವಯಂ ವಿರೋಧೋಕ್ತಿ; (ನಿಜವಾಗಿ ಸಾಧಾರವಾಗಿದ್ದಿರಬಹುದಾದರೂ) ಅಸಂಬದ್ಧವಾಗಿ ತೋರುವ ವಾಕ್ಯ; ವಿರೋಧಾಭಾಸ; ಮೇಲ್ನೋಟಕ್ಕೆ ಅಸಮಂಜಸವಾಗಿ ತೋರುವ ಮನುಷ್ಯ, ವಸ್ತು. [Hydrostatic p. (Hydrostatic ನೋಡಿ)]. **Páradoxer** (ನಾ.), **Páradoxist** (ನಾ.) ಸ್ವಯಂವಿರೋಧೋಕ್ತಿ ಪ್ರತಿಪಾದಕ. **Paradóxical** (ಗು.); **Paradóxically** (ಕ್ರಿ. ವಿ.); **Paradoxicálity** —ಕ್ಯಾ— (ನಾ.); **Páradoxy** (ನಾ.) —ಗುಣ; —ರೀತಿ.

Páraffin ಪ್ಯಾರಫಿನ್ (ನಾ., ಕ್ರಿ. ಸಕ.) ದಾರು, ಕಲ್ಲಿದ್ದಲು, ಕಲ್ಲೆಣ್ಣೆ, ಮೊ. ಗಳಿಂದ ಬಟ್ಟಿಯಿಳಿಸಿ ತೆಗೆದ, ಬಣ್ಣವೂ ರುಚಿಯೂ ವಾಸನೆಯೂ ಇಲ್ಲದ, (ಮೇಣದಬತ್ತಿ, ಮೊ. ನ್ನು ಮಾಡಲುಪಯೋಗಿಸುವ) ಒಂದು ಮೇದಸ್ಸು: 'ಪ್ಯಾರಫಿನ್'. (ಹೀಗೆ ಪಡೆದ) ಪ್ಯಾರಫಿನ್ ಎಣ್ಣೆ (=P. oil) (ಪ್ರಕಾಶಕ ವಸ್ತುವಾಗಿ, ಘರ್ಷಣಾಪಹಾರಿಯಾಗಿ ಅಥವಾ ಭೇದಿ ಸಹಾಯಕವಾಗಿ ಉಪಯೋಗ). P. wax (ಪೆಟ್ರೋಲಿಯಮ್ಮನ್ನು ಬಟ್ಟಿಯಿಳಿಸುವುದರಿಂದ ದೊರೆಯುವ) ಪ್ಯಾರಫಿನ್ ಮೇಣ. (ಕ್ರಿ.) ಪ್ಯಾರಫಿನ್ ಎಣ್ಣೆಯಿಂದ ಸಂಸ್ಕರಿಸು.

Paragóge ಪ್ಯಾರಗೋಜಿ (ನಾ.) ಒಂದು ಪದಕ್ಕೆ ಹೆಚ್ಚಿಗೆಯ ಅಕ್ಷರವನ್ನಾಗಲಿ ಉಚ್ಚಾರಣಾಂಶವನ್ನಾಗಲಿ ಸೇರಿಸುವುದು. **Paragógic** —ಗಾ— (ಗು.)

Páragon ಪ್ಯಾರಗ(ಗಾ)ನ್ (ನಾ., ಕ್ರಿ. ಸಕ.) ಉತ್ಕೃಷ್ಟತೆಯ ಮಾದರಿ, ಆದರ್ಶ; ಅತ್ಯುತ್ತಮ ವ್ಯಕ್ತಿ, ವಸ್ತು; ಆದರ್ಶ ವಸ್ತು, ವ್ಯಕ್ತಿ; ಮಾದರಿ; ಆದರ್ಶ (*Of* ಉಪ. ದೊಡನೆ. P. of virtue, etc.). (೧೦೦ ಕ್ಯಾರಟ್ಟಿಗಿಂತ ಹೆಚ್ಚು ತೂಕವುಳ್ಳ) ಪರಿಶುದ್ಧ ವಜ್ರ. (ಕ್ರಿ.) (ಕಾವ್ಯ) (—ರೊಡನೆ ವಸ್ತುವನ್ನು) ಹೋಲಿಸು (*With* ಉಪ. ದೊಡನೆ)

Páragraph ಪ್ಯಾರಗ್ರಾ(ಗ್ರ್ಯಾ)ಫ್ (ನಾ., ಕ್ರಿ. ಸಕ.) ಗ್ರಂಥ, ಮೊ. ಗಳಲ್ಲಿ ಮೊದಲನೆಯ ಪಂಕ್ತಿಯನ್ನು ಒಳಚಾಚಿ ಗುರುತು ಮಾಡುವ ಸ್ಪಷ್ಟ ವಿಂಗಡಭಾಗ; ಪ್ರಕರಣ; 'ಪ್ಯಾರ'; ಇದರ ಗುರುತು (¶)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಹಿಂದೆ ಹೊಸ ಪ್ರಕರಣಕ್ಕೆ ಗುರುತಾಗಿ, ಈಗ ಅಡಿ ಟಿಪ್ಪಣಿ, ಮೊ. ನ್ನು ಸೂಚಿಸುವ ಗುರುತಾಗಿ, ಉಪಯೋಗ). (ವೃತ್ತಪತ್ರಿಕೆ, ಮೊ. ಗಳಲ್ಲಿ, ಬೇರೆ ಶಿರನಾಮೆಯಿಲ್ಲದ) ಬಿಡಿ ಸುದ್ದಿ. (ಕ್ರಿ.) (ವ್ಯಕ್ತಿ, ವಿಷಯ, ಮೊ. ನ್ನು ಕುರಿತು) ಒಂದು ಪರಿಚ್ಛೇದ ಬರೆ. (ಲೇಖನ, ಮೊ. ನ್ನು) ಪರಿಚ್ಛೇದ ಗಳಾಗಿ ವಿಂಗಡಿಸು. **Páragrapher** —ಗ್ರ— (ನಾ.), **Páragraphist** (ನಾ.) ವೃತ್ತಪತ್ರಿಕೆ, ಮೊ. ಗಳಲ್ಲಿ (ಸಾ., ತಮಾಷೆಯಾದ) ಪರಿಚ್ಛೇದಗಳನ್ನು ಬರೆಯುವವನು. **Páragraphy** (ನಾ.); **Paragráphic** —ಗ್ರ್ಯಾ— (ಗು.); **Paragráphically** (ಕ್ರಿ. ವಿ.)

Paraheliótropism ಪ್ಯಾರಹೀಲಿಯಾಟ್ರೊಪಿಸ್ಮ್ (ನಾ.) (ಅತಿಬೆಳಕನ್ನು ತಪ್ಪಿಸಿಕೊಳ್ಳುವುದಕ್ಕಾಗಿ) ಎಲೆಗಳು ಸೂರ್ಯರಶ್ಮಿ ಹರಿಯುವ ದಿಕ್ಕಿಗೆ ಸಮಾನಾಂತರವಾಗಿ ತಿರುಗಿಕೊಳ್ಳುವುದು: ಸೂರ್ಯಾಪಸರಣ. **Paraheliotrópic** —ಯೊಟ್ರಾ— (ಗು.)

Párakeet ಪ್ಯಾರಕೀಟ್, **-roquet** ಪ್ಯಾರೊಕೆಟ್ (ನಾ.) (ಉದ್ದ ತೋಕೆಯ) ಸಣ್ಣಗಿಳಿ(ಜಾತಿ)

Párakite ಪ್ಯಾರಕೈಟ್ (ನಾ.) ದುಮುಕು ಕೊಡೆಯಂತೆ ಉಪಯೋಗಕ್ಕೆ ಬರುವ ಗಾಳಿಪಟ. (ವೈಜ್ಞಾನಿಕ ಪ್ರಯೋಗಗಳಿಗಾಗಿ ಉಪಯೋಗಿಸುವ) ಬಾಲವಿಲ್ಲದ ಗಾಳಿಪಟ.

Paralípsis ಪ್ಯಾರಲಿಪ್ಸಿಸ್, **-leípsis** —ಲೈಪ್ಸಿಸ್ (ನಾ.) (ಒಂದು) ವಿಷಯವನ್ನು ಪ್ರಸ್ತಾವಿಸುವುದಿಲ್ಲವೆಂದು ಹೇಳಿ, ಆ ವಿಷಯಕ್ಕೆ ಪ್ರಾಧಾನ್ಯ ಬರುವಂತೆ ಮಾಡುವ ಯುಕ್ತಿ; ಲೋಪಾಭಾಸಾಲಂಕಾರ (ಉದಾ., I say nothing of his antecedents, how from youth upwards, etc.)

Párallax ಪ್ಯಾರಲ್ಯಾಕ್ಸ್ (ನಾ.) ದೃಷ್ಟಿಸ್ಥಾನ ಬದಲಾಯಿಸುವುದರಿಂದ ವಸ್ತುಸ್ಥಾನದಲ್ಲಿ ಆದಂತೆ ತೋರುವ ಬದಲಾವಣೆ(ಯ ಕೋನದ ಮೊತ್ತ); ವಸ್ತುಸ್ಥಾನಾಭಾಸ. **Paralláctic** (ಗು.)

Párallel ಪ್ಯಾರಲೆಲ್ (ಗು., ನಾ., ಕ್ರಿ. ಸಕ.) (ರೇಖೆಗಳು, ಮೊ.) (ಎಡೆಬಿಡದೆ ಪರಸ್ಪರ) ಸಮಾಂತರವಾಗಿರುವ [P. bars (ವ್ಯಾಯಾಮ ಸಾಧನೆಗಾಗಿ ಕಂಬಗಳ ಆಧಾರದಮೇಲೆ ಅಡ್ಡಲಾಗಿ ಹಾಕಿರುವ) ಸಮಾಂತರದ (ಮರದ) ಕಂಬಿಗಳು. P. ruler ಸಮಾಂತರ ರೇಖೆಗಳನ್ನೆಳೆಯಲು ಉಪಯೋಗಿಸುವ, ಕೀಲಿಟ್ಟ ಅಡ್ಡಪಟ್ಟಿಗಳಿಂದ ಜೋಡಿಸಿದ ಎರಡು ರೇಖಕ ಪಟ್ಟಿಗಳು: ಸಮಾಂತರ ರೇಖಕ]. (ರೂಪ.) ನಿಷ್ಕೃಷ್ಟವಾದ ಸಾಮ್ಯ, ಹೋಲಿಕೆ, ಸಾದೃಶ್ಯ, —ಉಳ್ಳ; ಸದೃಶ; ಸಂವಾದಿ. (ನಾ.) ಸಮಾಂತರ ರೇಖೆ. (ಭೂಪಟದಲ್ಲಿ) ಭೂಮಿಯ ಮೇಲ್ಮೈಯಲ್ಲಿ ಅಕ್ಷಾಂಶಗಳನ್ನು ಗುರುತಿಸುವ ಸಮಾಂತರ ವೃತ್ತ ರೇಖೆ(ಗಳಲ್ಲೊಂದು); ಅಕ್ಷಾಂಶ ರೇಖೆ (=P. of latitude) (ಉದಾ., 49th p.). (ಸೈನಿಕ) ದಾಳಿ ಮಾಡಿದ ರಕ್ಷಣಾಸ್ಥಳದ ಮುಖಭಾಗಕ್ಕೆ ಸಮಾಂತರವಾಗಿರುವ ಕಂದಕ. (ಮತ್ತೊಂದಕ್ಕೆ, ನಿಷ್ಕೃಷ್ಟವಾದ) ಸದೃಶ, ಸಂವಾದಿ, —ವ್ಯಕ್ತಿ, ವಸ್ತು. ಸಮಾಂತರ ಸ್ಥಾನ; ಸಾಮ್ಯ; ಹೋಲಿಕೆ; ಸಾದೃಶ್ಯ [Draw a p. between (two things) (ಎರಡು ವಸ್ತುಗಳನ್ನು) ಪರಸ್ಪರ ಹೋಲಿಸು]. ನಿರ್ದೇಶ ಚಿಹ್ನೆಯಾದ ಎರಡು ಸಮಾಂತರ ರೇಖೆಗಳು (‖). (ಕ್ರಿ.) (ವಸ್ತುಗಳು ಒಂದಕ್ಕೊಂದು) ಸದೃಶವೆಂದು ತೋರಿಸು, ನಿರೂಪಿಸು; (ಒಂದಕ್ಕೊಂದನ್ನು) ಹೋಲಿಸು; (—ಕ್ಕೆ) ಸದೃಶವಾದುದನ್ನು, ಸಂವಾದಿಯಾದದ್ದನ್ನು, —ಕಂಡುಹಿಡಿ, ಹೇಳು; ಸಮಾಂತರವಾಗಿರು; ಸದೃಶ, ಸಂವಾದಿ, —ಆಗಿರು. **Parallelépiped** ಪ್ಯಾರಲೆಲೆಪಿಪೆಡ್, —ಲೆಲಪೈ(ಪಿ)ಪೆಡ್ (ನಾ.) ಸಮಾಂತರ ಚತುರ್ಭುಜದ (ಆರು) ಮುಖಗಳುಳ್ಳ ಘನಾಕೃತಿ. **Párallelism** —ಲೆಲಿಸ್ಮ್ (ನಾ.) ಸಮಾಂತರತೆ; (ರೂಪ.) ಸಾದೃಶ್ಯ. (ಮು., ಹೀಬ್ರೂ ಸಾಹಿತ್ಯದಲ್ಲಿ) ಅನುಸರಿಸಿ ಬರುವ ವಾಕ್ಯಗಳಲ್ಲಿ ಸಾಮ್ಯ, ಹೋಲಿಕೆ; ಅನುರೂಪತೆ. **Parallélogram** —ಲೆಲೊಗ್ರ್ಯಾಮ್ (ನಾ.) ಎದುರುಬದುರು ಬಾಹುಗಳು ಸಮಾಂತರವಾಗಿರುವ (ಸರಳ ರೇಖಾ) ಚತುರ್ಭುಜ: ಸಮಾಂತರ ಚತುರ್ಭುಜ. P. of forces ಒಂದು ಬಿಂದುವಿನಲ್ಲಿ ಪ್ರಯೋಗವಾಗುವ ಎರಡು ಬಲಗಳ ಪರಿಮಾಣಗಳನ್ನೂ ದಿಕ್ಕುಗಳನ್ನೂ ಒಂದು ಸಮಾಂತರ ಚತುರ್ಭುಜದ ಪಾರ್ಶ್ವ ಬಾಹುಗಳು ನಿರ್ದೇಶಿಸುವಂತೆ ಪರಿಗಣಿಸಿದರೆ ಆ ಎರಡು ಬಲಗಳ ಒಟ್ಟು ಪರಿಣಾಮದ ಬಲವನ್ನೂ ದಿಕ್ಕನ್ನೂ ಆ ಬಿಂದುವಿನಿಂದ ಹೊರಟ ಕರ್ಣರೇಖೆ ನಿರ್ದೇಶಿಸುತ್ತದೆ—ಎಂಬ ಪ್ರತಿಜ್ಞೆ; ಬಲಗಳ ಸಮಾಂತರ ಚತುರ್ಭುಜ.

Parallelépiped, Parallélogram. **Parallel** ನೋಡಿ.

Parálogism ಪರ್ಯ್ಯಾಲೊಜಿಸ್ಮ್ (ನಾ.) (ಮು., ಕರ್ತೃವು ತನಗೇ ತಿಳಿಯದೆ ಮಾಡುತ್ತಿರುವ) ತರ್ಕವಿರುದ್ಧ ವಾದ; ಕುತರ್ಕ. **Parálogize** (ಕ್ರಿ. ಅಕ.)

Páralyse. **Paralysis** ನೋಡಿ.

Parálysis ಪರ್ಯ್ಯಾಲಿಸಿಸ್ (ನಾ.) (ನರಗಳು ಕ್ಷಯಿಸಿಹೋಗಿಯೊ ಅಥವಾ ಅವು ತಮ್ಮ ಸಂವೇದನ ಗ್ರಹಣ ಕಾರ್ಯಗಳನ್ನು ಸರಿಯಾಗಿ ನಡೆಸಲಾಗದೆಯೊ ಹೋದಲ್ಲಿ ಪ್ರಾಪ್ತವಾಗುವ) ನರಗಳ ವ್ಯಾಧಿ; ಪಾರ್ಶ್ವವಾಯು. (ರೂಪ.) ಸಂಪೂರ್ಣ ಶಕ್ತಿಹೀನ ಸ್ಥಿತಿ; ನಿಸ್ಸತ್ವತೆ. **Páralyse** ಪ್ಯಾರಲೈಸ್ (ಕ್ರಿ. ಸಕ.) ಪಾರ್ಶ್ವವಾಯು ಬರು; ಲಕ್ವಾ ಹೊಡೆ. (ರೂಪ.) ಶಕ್ತಿಹೀನ ಮಾಡು; ನಿಸ್ಸತ್ವಗೊಳಿಸು. **Paralysátion** (ನಾ.); **Paralýtic** ಪ್ಯಾರಲಿಟಿಕ್ (ಗು., ನಾ.) ಪಾರ್ಶ್ವವಾಯು ಪೀಡಿತ (ರೋಗಿ) (ರೂಪ. ಸಹ). **Paralýtically** (ಕ್ರಿ. ವಿ.)

Paralýtic, etc. **Paralysis** ನೋಡಿ.

Paramagnétic ಪ್ಯಾರಮ್ಯಾಗ್ನೆಟಿಕ್ (ಗು.) ಅಯಸ್ಕಾಂತದ ಧ್ರುವಗಳು ಆಕರ್ಷಿಸುವ; ಕಾಂತಾಕರ್ಷಣ ಕ್ಷೇತ್ರದಲ್ಲಿ ತಡೆಯಿಲ್ಲದಂತೆ ತೂಗ ಕಟ್ಟಿದಾಗ ಕಾಂತಾಕ್ಷಕ್ಕೆ ಸಮಾಂತರವಾಗಿ ನಿಲ್ಲುವ ಪ್ರವೃತ್ತಿಯುಳ್ಳ; ಅನುಕಾಂತ (Diamagnetic ಹೋಲಿಸಿ). **Paramágnetism** (ನಾ.) ಅನುಕಾಂತತೆ.

Parámeter ಪರ್ಯ್ಯಾಮಿಟರ್ (ನಾ.) (ಗಣಿತ) ಪ್ರಸಕ್ತ ಸಂದರ್ಭದಲ್ಲಿ ನಿಯತ ಪ್ರಮಾಣವುಳ್ಳದ್ದಾಗಿದ್ದು ಇತರ ಸಂದರ್ಭಗಳಲ್ಲಿ ವ್ಯತ್ಯಾಸವಾಗುವ ಪರಿಮಾಣ: ಪ್ರಸಕ್ತ ನಿಯತಾಂಕ.

Páramount ಪ್ಯಾರಮೌಂಟ್ (ಗು.) ಸಾರ್ವಭೌಮಾಧಿಕಾರವುಳ್ಳ; ಪರಮ; ಸರ್ವಶ್ರೇಷ್ಠ (Lord, lady, p. ಪರಮಾಧಿಕಾರವುಳ್ಳ ಶ್ರೀಮಂತ, ಶ್ರೀಮಂತೆ); ಸರ್ವೋತ್ಕೃಷ್ಟ; ಸರ್ವಪ್ರಧಾನ (Of p. importance ಪರಮ ಪ್ರಾಮುಖ್ಯತೆಯ). (— ಇಂತ) ಉತ್ತಮವಾದ (*To* ಉಪ. ದೊಡನೆ). **Páramountcy** (ನಾ.) ಸಾರ್ವಭೌಮತೆ; ಅಧಿರಾಜತ್ವ; ಪಾರಮ್ಯ. **Páramountly** (ಕ್ರಿ. ವಿ.)

Páramour ಪ್ಯಾರಮೂ(ಅ)ರ್ (ನಾ.) ಪ್ರಿಯ; ಪ್ರೇಯಸಿ; ಉಪಪತಿ; ಉಪಪತ್ನಿ.

Paranoía ಪ್ಯಾರನಾಯ್‌ಅ, **-noéa** —ನೀಯ (ನಾ.) ಬುದ್ಧಿವಿಕಲ್ಪ; ಮತಿಭ್ರಂಶ (ಮು., ಮಹಾವೈಭವ ಭ್ರಾಂತಿಯ ಲಕ್ಷಣವುಳ್ಳದ್ದು)

Párapet ಪ್ಯಾರಪೆ(ಪಿ)ಟ್ (ನಾ.) (ಮೊಗಸಾಲೆ, ಮಾಳಿಗೆ, ಮೊ. ಗಳ ಅಂಚಿನಲ್ಲಿಯ, ಸೇತುವೆಯ ಪಕ್ಕಗಳಲ್ಲಿಯ) ಕೈಪಿಡಿ ಗೋಡೆ; ಪಾಗಾರ. (ಸೈನ್ಯ) (ಸೇನಾ ದಳಗಳಿಗೆ ಮರೆಯನ್ನೂ ರಕ್ಷಣೆಯನ್ನೂ ಕೊಡುವ, ಮಣ್ಣಿನ ಅಥವಾ ಕಲ್ಲಿನ) ಕಾಪು, ಕಟ್ಟಡ, ಅಥವಾ ದಿಬ್ಬ (ಮು., ಕಂದಕದ ಮುಂಗಡೆಯ ಉದ್ದಕ್ಕೂ ಇರುವ ದಿಬ್ಬ) (Parados ಹೋಲಿಸಿ). **Párapeted** (ಗು.)

Páraph ಪ್ಯಾರ್ಯಾಫ್ (ನಾ.) (ಪೂರ್ವದಲ್ಲಿ, ಕಳ್ಳರುಜುವಿಗೆ ಅವಕಾಶ ಕೊಡದಂತಿರಲು) ರುಜುವಿನ ಕೊನೆಯಲ್ಲಿ ಎಳೆಯುತ್ತಿದ್ದ ವಕ್ರಾಕೃತಿಯ, ಠೋಕಿನ, —ಗೆರೆ.

Paraphernália ಪ್ಯಾರಫರ್ನೇಲಿಯ (ನಾ., ಬ. ವ.) ತನ್ನ ಸ್ವಂತದ ಸಾಮಾನು; ಸಾಮಾನು ಸರಂಜಾಮು; ಸಜ್ಜು; ಸಾಧನ ಸಾಮಗ್ರಿ; ಪರಿಕರ ಸಂಭಾರ. (ಹಿಂದೆ, ಕಾನೂನುಮೇರೆಗೆ ಸ್ತ್ರೀಧನವಾಗಿ ಪರಿಗಣಿಸುತ್ತಿದ್ದ) ವಿವಾಹಿತೆಯ ಸ್ವಂತ ಆಸ್ತಿ (ಒಡವೆ, ವಸ್ತ್ರ, ಮೊ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Páraphrase ಪ್ಯಾರಫ್ರೇಸ್ (ನಾ., ಕ್ರಿ. ಸಕ.) (ಒಂದು ವಾಕ್ಯವನು ದಾಯದ) ಸರಳಾನುವಾದ; ಭಾವಾನುವಾದ; ಅರ್ಥವಿಸ್ತರಣೆ; ಬೇರೆ ಮಾತುಗಳಲ್ಲಿ ಅಭಿಪ್ರಾಯ ನಿರೂಪಣೆ; ತಾತ್ಪರ್ಯ. (Church of Scotland ಮೊ. ಗಳಲ್ಲಿ ಉಪಯೋಗಿಸುವ) ಬೈಬಲ್ ವಚನಗಳ ಛಂದೋಬದ್ಧ ಸರಳಾನುವಾದ ಸಂಗ್ರಹ. (ಕ್ರಿ.) (—ರ) ಅರ್ಥವನ್ನು ಬೇರೆ ಮಾತುಗಳಲ್ಲಿ ಹೇಳು, ತಿಳಿಸು; ತಾತ್ಪರ್ಯ ಹೇಳು; ಸರಳಾನುವಾದ ಮಾಡು. **Paraphrástic** —ಫ್ರಾಸ್ಟಿಕ್— (ಗು.) (—ರ) ಅರ್ಥವನ್ನು ವಿಶದಗೊಳಿಸುವ; ತಾತ್ಪರ್ಯ ಕೊಡುವ ರೀತಿಯ. **Paraphrástically** (ಕ್ರಿ. ವಿ.)

Paraplégia ಪ್ಯಾರಪ್ಲೀಜಿಯ (ನಾ.) ದೇಹದ ಕೆಳ ಅಂಗಗಳ ಮತ್ತು ಮುಂಡದ ಅಥವಾ ಅದರ ಒಂದು ಭಾಗದ ಪಕ್ಷವಾತ; ಪಾರ್ಶ್ವ ವಾಯು. **Paraplégic** (ಗು.)

Paraseléne ಪ್ಯಾರಸಿ(ಸೆ)ಲೀನಿ(ೀ) (ನಾ.) ಚಂದ್ರನ ಪರಿವೇಷದಲ್ಲಿ ಕಾಣುವ ಕಾಂತಿ ಪ್ರದೇಶ; ಅನುಕರಣ ಚಂದ್ರ.

Párasite ಪ್ಯಾರಸೈಟ್ (ನಾ.) ಸ್ವಪ್ರಯೋಜನಕ್ಕಾಗಿ (ಒಬ್ಬನನ್ನು) ಮುಖಸ್ತುತಿ ಮಾಡಿ ಅನುಸರಿಸಿಕೊಂಡು ಹೋಗುವವನು; ಸ್ವಾರ್ಥಪರನಾದ ಆಶ್ರಿತ; ಪರೋಪಜೀವಿ. ಮತ್ತೊಂದು ಜೀವಿಯೊಡನೆ ಸೇರಿ ಅಥವಾ ಅದರಮೇಲೆ ಆಶ್ರಯ ಪಡೆದು ಅದರಿಂದ ನೇರವಾಗಿ ಆಹಾರ ಹೀರಿ ದೇಹಪುಷ್ಟಿ ಪಡೆಯುವ ಜೀವಿ (ಪ್ರಾಣಿ, ಸಸ್ಯ): ಪರ ಸತ್ತ್ವೋಪಜೀವಿ (Commensal ಹೋಲಿಸಿ); ಬದನಿಕೆ; ಬಂದಣಿಕೆ. (ಶಿಥಿಲವಾಗಿ) ಮತ್ತೊಂದು ಸಸ್ಯದಮೇಲೆ ಅಥವಾ ಗೋಡೆ, ಮೊ. ಗಳ ಮೇಲೆ ಅಡರುವ ಸಸ್ಯ. **Párasitism** (ನಾ.); **Parasitólogy** —ಟಾಲೊಜಿ (ನಾ.) ಪರೋಪಜೀವಿ ಶಾಸ್ತ್ರ. **Parasític(al)** —ಸಿಟಿ— (ಗು.); **Parasíticide** (ನಾ.) ಪರೋಪಜೀವಿ ನಾಶಕ. **Párasitize** —ಸಿ(ಸೈ)— (ಕ್ರಿ. ಸಕ.) ಪರೋಪಜೀವಿಯಾಗಿ ಅಡರು (ಮು., ಭೂ. ಕೃ. ನಲ್ಲಿ)

Parasól, Párasol ಪ್ಯಾರಸಾಲ್ (ನಾ.) (ಮು., ಹೆಂಗಸರು ಹಿಡಿದು ಕೊಳ್ಳುವ) ಹಗುರವಾದ (ಬಿಸಿಲು) ಛತ್ರಿ, ಕೊಡೆ; ಬಿಸಿಲು ಮರೆ. ಒಂದು ಬಗೆಯ ಫಲಕ ವಿಮಾನ.

Parasýnthesis ಪ್ಯಾರಸಿಂತಿಸಿಸ್ (ನಾ.) (ಭಾಷಾ ಶಾಸ್ತ್ರ) ಸಮಾಸ ಮಾಡಿ ಹೊಸ ಪದವನ್ನು ರಚಿಸುವುದು. **Parasynthétic** (ಗು.)

Paratáxis ಪ್ಯಾರಟ್ಯಾಕ್ಸಿಸ್ (ನಾ.) (ವ್ಯಾ.) ಪರಸ್ಪರ ಸಂಬಂಧ ಸೂಚಕ ಪದಗಳಿಲ್ಲದೆ, ವಾಕ್ಯದಲ್ಲಿ ವಾಕ್ಯಾಂಶಗಳನ್ನು ಒಂದಾದ ಮೇಲೊಂದರಂತೆ ಜೋಡಿಸುವುದು (ಉದಾ., The king is dead; long live the king). **Paratáctic** (ಗು.); **Paratáctically** (ಕ್ರಿ. ವಿ.)

Paratýphoid ಪ್ಯಾರಟೈಫಾಯ್ಡ್ (ನಾ.) ಟೈಫಾಯ್ಡ್ ಹೋಲಿಕೆಯ, ಆದರೆ ಅಷ್ಟು ಕಠಿನವಲ್ಲದ, —ಜ್ವರ: ಉಪ ವಿಷಮಶೀತ ಜ್ವರ.

Párboil ಪಾರ್‌ಬಾಯ್‌ಲ್ (ಕ್ರಿ. ಸಕ.) ಅರೆ ಕುದಿಸು; ಅರ್ಧ ಬೇಯಿಸು. (ರೂಪ.) ಅತಿಯಾಗಿ ಕಾಯಿಸು.

Párcel ಪಾರ್ಸೆಲ್, ಪಾರ್ಸ್‌ಲ್ (ನಾ., ಕ್ರಿ. ವಿ., ಕ್ರಿ. ಸಕ.) (ಪ್ರಾಚೀ. ಪ್ರ.) ಭಾಗ; ಅಂಶ; ಪಾಲು [ಮು., Part & p. (Part ನೋಡಿ)]. (ಮು., ಒಂದು ಸ್ಥಿರಾಸ್ತಿಯ) ಭಾಗವಾದ ಒಂದು ಜಮೀನು (ಹೊಲ, ಗದ್ದೆ, ಮೊ. ದು). ಒಂದು ಕಟ್ಟಾಗಿ ಕಟ್ಟಿದ ಸಾಮಾನು; ಮೂಟೆ; ಥಾಂಗಿ (P. post ಥಾಂಗಿಗಳನ್ನು ರವಾನಿಸಿ ವಿಲೆ ಮಾಡುವ ಅಂಚೆ ಇಲಾಖೆಯ ಶಾಖೆ). (ವ್ಯಾಪಾರ) ಒಂದು ಸಲಕ್ಕೆ ವ್ಯಾಪಾರವಾದ ಸರಕಿನ ಮೊತ್ತ. =Packet (ಅನಂ.). (ಕ್ರಿ. ವಿ.) (ಪ್ರಾಚೀ. ಪ್ರ.) ಸ್ವಲ್ಪ ಮಟ್ಟಿಗೆ; ಒಂದು ಭಾಗದಷ್ಟು [P. blind, drunk. P. gilt ಕೊಂಚ ಭಾಗ ಮಾತ್ರ ಗಿಲೀಟು ಮಾಡಿದ (ಮು., ಬಟ್ಟಲ ಒಳ ಭಾಗ ಮಾತ್ರ)]. (ಕ್ರಿ.) ಭಾಗಗಳಾಗಿ, ಪಾಲುಗಳಾಗಿ, —ವಿಂಗಡಿಸು; ಭಾಗ ಮಾಡು (*Out* ಉಪ. ಜೊಡನೆ). ಥಾಂಗಿ ಕಟ್ಟು, ಮಾಡು. (ನಾವೆ) (ಸಂದು ಮುಚ್ಚಿದ ಹಲಗೆಸೇರಿಕೆಯಮೇಲೆ) ಕಲ್ಲರಗು ಬಳಿದ ರಟ್ಟುಬಟ್ಟೆಯ ಚೂರುಗಳನ್ನು ಮೆತ್ತು. (ಹಗ್ಗಕ್ಕೆ) ರಟ್ಟುಬಟ್ಟೆಯ ಪಟ್ಟಿಗಳನ್ನು ಸುತ್ತು. **Párcelling** (ನಾ.) (ಕ್ರಿಯಾರ್ಥಗಳಲ್ಲಿ) (ನಾವೆ) ಹಗ್ಗಕ್ಕೆ ಸುತ್ತುವ (ಸಾ., ಟಾರು ಬಳಿದ) ರಟ್ಟುಬಟ್ಟೆಯ ಪಟ್ಟಿ.

Párcener ಪಾರ್ಸೆನರ್ (ನಾ.) ಪಾಲುದಾರ; ಕೂಡು ಹಕ್ಕುದಾರ; ಜೊತೆ ವಾರಸುದಾರ. **Párcenary** (ನಾ.)

Parch (ಕ್ರಿ.) (ಕಡಲೆ, ಬಟಾಣಿ, ಮೊ. ನ್ನು) ಹುರಿ. (ಬಿಸಿಲು, ಬಾಯಾರಿಕೆ, ಮೊ. ಗಳ ವಿಷಯದಲ್ಲಿ: ಮನುಷ್ಯ, ಮೊ. ನ್ನು) ಒಣಗುವಂತೆ ಮಾಡು, ಬತ್ತಿಸು, ಶೋಷಿಸು; ಒಣಗಿಹೋಗು; ಬತ್ತಿಹೋಗು; ಶೋಷಿಸಿ ಹೋಗು.

Párchment ಪಾರ್ಚ್‌ಮೆಂಟ್ (ನಾ.) ಬರವಣಿಗೆ, ಚಿತ್ರರಚನೆ, ಮೊ. ಕ್ಕಾಗಿ ತಯಾರಿಸಿದ (ಕುರಿ, ಆಡು, ಮೊ. ಗಳ) ಚರ್ಮ; ಚರ್ಮಕಾಗದ. ಇದರಮೇಲೆ ಬರೆದ ಲೇಖನ. ಚರ್ಮಕಾಗದದಂಥ ಸಿಪ್ಪೆ (ಮು., ಕಾಫಿ ಬೀಜದ ಹೊಟ್ಟು. P. coffee ಇಂಥ ಸಿಪ್ಪೆಯಿಂದ ಕೂಡಿದ ಕಾಫಿಬೀಜ). **Párchmenty** (ಗು.) —ಸ್ವಭಾವದ.

Pard[1] ಪಾರ್ಡ್ (ನಾ.) (ಪ್ರಾಚೀ. ಪ್ರ.) = Leopard.

Pard[2] ಪಾರ್ಡ್ (ನಾ.) (ಅನಂ., ಮು., ಅಮೆ. ಸಂ.) ಪಾಲುದಾರ; ಸಹ ಭಾಗಿ.

Párdon ಪಾರ್ಡನ್, ಪಾರ್ಡ್‌ನ್ (ನಾ., ಕ್ರಿ. ಸಕ.) ಕ್ಷಮೆ; ಕ್ಷಮಾಪಣೆ. (ಕ್ರೈಸ್ತ ಮತ) =Indulgence. (ಕ್ರೈಸ್ತ) ಪಾಪ ವಿಮೋಚನೆಯ ವರ ಕೊಡುವ ಹಬ್ಬ. (ನ್ಯಾ. ಶಾ.) ಅಪರಾಧದ ಫಲವಾದ ದಂಡನೆಯನ್ನು ಮಾಫಿ ಮಾಡುವುದು: ಅಪರಾಧ ಮನ್ನಣೆ. [General p. (ಸರ್ವ) ಸಾಮಾನ್ಯ ಕ್ಷಮಾಪಣೆ (ಸಾಮಾನ್ಯವಾಗಿ ಎಲ್ಲ ಅಪರಾಧಗಳಿಗಾಗಲಿ, ಹೆಸರು ಹಿಡಿದು ಹೇಳದೆ ಅನೇಕ ಅಪರಾಧಿಗಳಿಗಾಗಲಿ, ಕೊಟ್ಟದ್ದು). I beg your p. (ಕೈತಪ್ಪು ಬಾಯಿತಪ್ಪುಗಳಿಗಾಗಲಿ, ನಡತೆಯ ತಪ್ಪಿಗಾಗಲಿ, ಒಪ್ಪದೆ ಇರುವಲ್ಲಿಯೂ ಪ್ರತಿ ಹೇಳುವಲ್ಲಿಯೂ ಆಗಲಿ, ಕಿವಿಗೆ ಕೇಳಿಸದೆಯೊ ಅಥವಾ ಅಭಿಪ್ರಾಯ ತಿಳಿಯದೆಯೊ ಹೋಗುವ ಸಂದರ್ಭದಲ್ಲಾಗಲಿ, ಹೇಳುವ ಮಾತು): ಕ್ಷಮಿಸಬೇಕು]. (ಕ್ರಿ.) [ಒಬ್ಬನನ್ನು, (ಒಬ್ಬನ) ಅಪರಾಧವನ್ನು] ಕ್ಷಮಿಸು, ಮನ್ನಿಸು; ಅಪರಾಧವನ್ನು ಲಕ್ಷಿಸದೆ ಬಿಡು. **Párdonable** (ಗು.); **Párdonableness** (ನಾ.); **Párdonably** (ಕ್ರಿ. ವಿ.); **Párdoner** (ನಾ.) (ಚರಿತ್ರೆ) ಕ್ರೈಸ್ತ ಮತದ ಕ್ಷಮಾಪತ್ರಗಳನ್ನು, ಪಾಪವಿಮೋಚನಾ ಪತ್ರಗಳನ್ನು, ಮಾರಲು ಅಧಿಕಾರ ಪಡೆದವನು.

Pare ಪೇರ್ (ಕ್ರಿ. ಸಕ.) (ಸೊಟ್ಟನೆಯ ಭಾಗ, ಮೊ. ನ್ನು) ಕತ್ತರಿಸಿ ಹಾಕಿ (ವಸ್ತುವನ್ನು) ನೇರ ಮಾಡು; ಸಮರು. (ಹಣ್ಣು, ಮೊ. ಗಳ) ಸಿಪ್ಪೆ, ಮೊ. ನ್ನು ಸುಲಿ, ಹೆರೆದುಹಾಕು (P. nails to the quick ನೋವಾಗುವಷ್ಟು ದೂರ ಉಗುರು ಕತ್ತರಿಸು). (ರೂಪ.) ಕೊಂಚ ಕೊಂಚವಾಗಿ ಕಡಮೆ ಮಾಡು, ಸವೆಯಿಸು (*Away, down* ಉಪ. ಜೊಡನೆ). (ಏಣು, ಮೊ. ನ್ನು) ಹೆರೆದುಹಾಕು, ಕತ್ತರಿಸಿಹಾಕು (*Off, away* ಉಪ. ಜೊಡನೆ). **Párer** (ನಾ.); **Páring** (ನಾ.)

Paregóric ಪ್ಯಾರಿ(ರೆ)ಗಾರಿಕ್ (ಗು., ನಾ.) ನೋವು ಕಡಮೆ ಮಾಡುವ; ವೇದನಾಪಹಾರಿ; ಶಾಮಕ (ಔಷಧ); P. (elixir) ಸೋಪುಬೀಜ ಮತ್ತು ಸಾಂಬ್ರಾಣಿಯಾಮ್ಲ—ಇವುಗಳಿಂದ ರುಚಿಕಟ್ಟಿದ, ಕರ್ಪೂರ ಗೂಡಿದ ಅಫೀಮು ದ್ರುತಿ.

Pareíra ಪರೇರ (ನಾ.) ಬ್ರೆಸಿಲ್ ದೇಶದ ಒಂದು ಗುಲ್ಮದಿಂದ ತೆಗೆದ, ಮೂತ್ರ ವ್ಯಾಧಿಗಳಲ್ಲಿ ಉಪಯೋಗಿಸುವ, ಒಂದು ಔಷಧ (ವಸ್ತು)

Parénchyma ಪರೆಂಕಿಮ (ನಾ.) (ಅಂ. ರ. ಶಾ.) (ಒಂದು ಅಂಗ, ಗ್ರಂಥಿ, ಮೊ. ಗಳಲ್ಲಿಯ ಮಾಂಸ, ಸಂಯೋಜಕ ಅಂಗಾಂಶ, ಮೊ. ಗಳಿಂದ ಭಿನ್ನವಾದ) ಅಂಗ ಸಾರದ್ರವ್ಯ, ಸತ್ತ್ವ. (ಸ. ವಿ.) ಎಲೆಯ ಮೆತು ಭಾಗ, ಹಣ್ಣಿನ ತಿರುಳು, ಮೊ. ಗಳಲ್ಲಿರುವ, ಹೆಚ್ಚುಕಡಮೆಯಾಗಿ ಉದ್ದವೂ ಅಗಲವೂ ಒಂದೇ ಸಮನಾದ ಜೀವಾಣುಗಳು ಪಕ್ಕಪಕ್ಕದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೆಲಸಿರುವ, (ಅಂಗ)ರಚನಾ ಸಾಮಗ್ರಿ. **Parénchymal** (ಗು.); **Parenchýmatous** ಪ್ಯಾರೆಂಕಿಮಟಸ್ (ಗು.).

Párent ಪೇರೆಂಟ್ (ನಾ.) ತಂದೆ ಅಥವಾ ತಾಯಿ; ಜನ್ಮದಾತೃ; (ಬ. ವ. ದಲ್ಲಿ) ಹೆತ್ತವರು; ತಂದೆ ತಾಯಿಗಳು; ಪಿತೃಗಳು (ಮು., Our first parents ಆದಮ್ ಮತ್ತು ಈವ್). (ಇತರ ಪ್ರಾಣಿಗಳೂ ಸಸ್ಯಗಳೂ ಹುಟ್ಟಬಂದ) ಹಿಂದಿನ ಪ್ರಾಣಿ, ಹಿಂದಿನ ಸಸ್ಯ; ಹುಟ್ಟು ಕೊಟ್ಟ ಪ್ರಾಣಿ, ಸಸ್ಯ (ಹಲವು ವೇಳೆ ವಿಶೇಷಣವಾಗಿ: P. bird, tree). (ರೂಪ.) ಮೂಲ; ಆದಿ (*Of* evils, etc.). **Paréntal** ಪರೆಂಟ(ಟ್)ಲ್ (ಗು.); **Paréntally** (ಕ್ರಿ. ವಿ.); **Párentage** ಪೇರೆಂಟೆಜ್ (ನಾ.) ಜನ್ಮ; ವಂಶ; ಕುಲ; ಹುಟ್ಟು; ತಳಿ (His p. is unknown ಅವನ ಕುಲಗೋತ್ರ ತಿಳಿಯದು)

Parénthesis ಪರೆಂತಿಸಿಸ್ (ನಾ.; ಬ. ವ. -ses —ಸೀಸ್) ಒಂದು ವಾಕ್ಯದಲ್ಲಿ ಅಥವಾ ವಚನದಲ್ಲಿ ಸೇರಿಸಿದುದಾಗಿ ಆ ವಾಕ್ಯ, ಮೊ. ಗಳಿಗೆ ನೇರವಾದ ವ್ಯಾಕರಣ ಸಂಬಂಧವಿಲ್ಲದೆಯೂ ಅದರಿಂದ ಸಾ., ಆವರಣ, ಅಡ್ಡಗೆರೆ, ಅಥವಾ ಅಲ್ಪವಿರಾಮ ಚಿಹ್ನೆ—ಇವುಗಳಿಂದ ಪ್ರತ್ಯೇಕಿಸಿಯೂ ಇರುವ ಪದ, ವಾಕ್ಯಾಂಶ, ವಾಕ್ಯ; ನಡು ಸೇರಿಕೆ; ನಿಕ್ಷಿಪ್ತ; ಪ್ರಕ್ಷೇಪ (ಪದ, ವಾಕ್ಯಾಂಶ, ವಾಕ್ಯ); (ಏ. ವ. ಅಥವಾ ಬ. ವ.) ಪ್ರಕ್ಷೇಪವನ್ನು ಪ್ರತ್ಯೇಕಿಸುವ ಆವರಣ ಚಿಹ್ನೆ [( )]. (ರೂಪ.) ಬಿಡುವು; ತೆರಪು; ವಿರಾಮ. **Parénthesize** (ಕ್ರಿ. ಸಕ.) ಪ್ರಕ್ಷೇಪ ವಾಗಿ (ಪದ, ಮೊ. ನ್ನು) ಸೇರಿಸು. ಪ್ರಕ್ಷೇಪ (ಆವರಣ) ಚಿಹ್ನೆಗಳ ನಡುವೆ ಇಡು. **Parenthétic** ಪ್ಯಾರೆಂತೆಟಿಕ್ (ಗು.) ಪ್ರಕ್ಷೇಪದ; ಪ್ರಕ್ಷೇಪವಾಗಿ ಸೇರಿಸಿದ (ರೂಪ.) ಮಧ್ಯೆ ಸೇರಿಸಿದ; ನಡುವೆ ಬಂದ. **Parenthétical** (ಗು.); **Parenthétically** (ಕ್ರಿ. ವಿ.)

Páresis ಪ್ಯಾರಿಸಿಸ್ (ನಾ.) (ವೈ. ಶಾ.) [ವೇದನ ಶಕ್ತಿಯನ್ನು ಬಾಧಿಸದೆ (ಸ್ನಾಯುಗಳ) ಚಲನ ವ್ಯಾಪಾರವನ್ನು ಮಾತ್ರ ಅಳಿಸಿಬಿಡುವ] ಅರೆ ಪಾರ್ಶ್ವವಾಯು. **Parétic** (ಗು.)

Par éxcellence (F) ಪಾರ್ ಎಕ್ಸೆಲಾನ್ಸ್ (ಕ್ರಿ. ವಿ.) ವಿಶೇಷ ಉತ್ಕೃಷ್ಟತೆಯ ಕಾರಣದಿಂದ; (ಆ ಹೆಸರಿನ, ಆ ಸಂದರ್ಭದ) ಎಲ್ಲವ ಕ್ಕಿಂತ ಮೇಲಾಗಿ; ಸರ್ವೋತ್ಕೃಷ್ಟವಾಗಿ; ಉತ್ತಮೋತ್ತಮವಾಗಿ (Mayfair was the fashionable quarter p. e.)

Párget ಪಾರ್ಜೆಟ್ (ಕ್ರಿ. ಸಕ., ನಾ.) (ಗೋಡೆ, ಮೊ. ಗಳಿಗೆ, ಗಾರೆ, ಮೊ. ಗಳಿಂದ) ಗಿಲಾವು ಮಾಡು. (ನಾ.) ಗಿಲಾವು; ನಯ ಬಳಿತ.

Parhélion ಪಾರ್‌ಹೀಲಿಯನ್ (ನಾ.) ಸೂರ್ಯ ಪರಿವೇಷದಲ್ಲಿಯ ಉಜ್ಜ್ವಲ ಕಾಂತಿಪ್ರದೇಶ; ಅನುಕರಣ ಸೂರ್ಯ; ಪ್ರತಿ ಸೂರ್ಯ; ಸೂರ್ಯಾಭಾಸ. **Parhelíacal** —ಹಿಲೈಅಕಲ್ (ಗು.); **Parhélic** —ಹೀ(ಹೆ)— (ಗು.)

Páriah ಪೇ(ಪಾ, ಪ್ಯಾ)ರಿಯ (ನಾ.) (ದ. ಇಂಡಿಯದಲ್ಲಿ) ಕೀಳು ಜಾತಿಯವನು; ಪರೆಯ; ಹೊಲೆಯ; ಮಾದಿಗ; ಅಂತ್ಯಜ; ಜಾತಿ ಯಿಲ್ಲದವನು. (ರೂಪ.) ಸಮಾಜ ಬಾಹಿರ. P.-dog (ಇಂಡಿಯ, ಮೊ. ಗಳಲ್ಲಿಯ, ಕೀಳು ತಳಿಯ, ಹಳದಿ ಬಣ್ಣದ) ಗಬ್ಬುಪದಾರ್ಥ ತಿನ್ನುವ ಬೀದಿ ನಾಯಿ.

Párian ಪೇರಿಯನ್ (ಗು., ನಾ.) (ಬಿಳಿಯ ಅಮೃತಶಿಲೆಗೆ ಪ್ರಸಿದ್ಧವಾದ) ಪೇರಾಸ್ ದ್ವೀಪದ. (ನಾ.) ಸೊಗಸಾದ ಬಿಳಿಯ ನುಣುಪು ಪಿಂಗಾಣಿ.

Paríetal ಪರೈಇ(ಎ)ಟಲ್ (ಗು.) ದೇಹದ ಅಥವಾ ಅದರ ಯಾವು ದಾದರೂ ಕುಹರದ ಗೋಡೆಯ (P. bones ತಲೆಬುರುಡೆಯ ಪಕ್ಕಗಳ ಮತ್ತು ಮೇಲಿನ ಆವರಣ ಭಾಗಗಳಾಗಿರುವ ಜೋಡಿ ಎಲುಬುಗಳು). (ಸ. ವಿ.) (ಪೊಳ್ಳು ರಚನಾಂಗ, ಮೊ. ಗಳ) ಗೋಡೆಯ.

Pári mútuel (F) ಪಾ(ಪ್ಯಾ)ರಿ ಮ್ಯೂಟ್ಯು(ಚ್ಯು)ಎಲ್ (ನಾ.) ಗೆದ್ದ ಕುದುರೆಯಮೇಲೆ ಪಣವೊಡ್ಡಿದವರು ಉಳಿದ ಕುದುರೆಗಳಮೇಲೆ ಒಡ್ಡಿದ ಪಣವನ್ನೂ ಸಹ (ಕಾರ್ಯನಿರ್ವಾಹಕಕ್ಕೆ ಸ್ವಲ್ಪ ಹಣ ತೆಗೆದಿಟ್ಟು) ಹಂಚಿ ಕೊಳ್ಳುವ ಒಂದು ಬಗೆಯ ಕುದುರೆಯ ಜೂಜು.

Pári pássu (L) ಪೇರೈ(ರಿ) ಪ್ಯಾಸ್ಯೂ, ಪ್ಯಾರಿ ಪ್ಯಾಸೂ (ಕ್ರಿ. ವಿ.) (ಪಕ್ಕಪಕ್ಕದಲ್ಲಿ) ಸಮ ಗತಿಯಲ್ಲಿ; ಏಕ ಕಾಲದಲ್ಲಿ ಮತ್ತು ಸರಿಸಮವಾಗಿ.

Páris ಪ್ಯಾರಿಸ್ (ನಾ.) ಫ್ರಾನ್ಸ್ ದೇಶದ ರಾಜಧಾನಿ: ಪ್ಯಾರಿಸ್ (ಪಟ್ಟಣ) (P. blue ಒಂದು ಬಗೆಯ ನೀಲ ವರ್ಣದ್ರವ್ಯ. P. doll ಉಡುಪು ತಯಾರಿಸುವವನು ಮಾದರಿಗಾಗಿ ಉಡುಪು ತೊಡಿಸಿ ಇಟ್ಟುಕೊಂ ಡಿರುವ ಮನುಷ್ಯಾಕಾರದ ಗೊಂಬೆ. P. green ವರ್ಣದ್ರವ್ಯವಾಗಿಯೂ ಕ್ರಿಮಿ ನಾಶಕವಾಗಿಯೂ ಉಪಯೋಗಿಸುವ ಒಂದು ರಾಸಾಯನಿಕ ವಿಷ ವಸ್ತು. P. white ಮೆರುಗು ಕೊಡುವುದಕ್ಕಾಗಿ ಉಪಯೋಗಿಸುವ ನುಣ್ಣನೆಯ ಬಿಳಿಯ ಸೀಮೆಸುಣ್ಣದ ಪುಡಿ). **Parísian** ಪರಿಸಿಯನ್, —ಷ(ಷ್ಯ)ನ್ (ಗು., ನಾ.) ಪ್ಯಾರಿಸ್ ಪಟ್ಟಣದ(ವನು, ನಿವಾಸಿ)

Párish ಪ್ಯಾರಿಷ್ (ನಾ.) ಪ್ರತ್ಯೇಕವಾದ ಕ್ರೈಸ್ತ ದೇವಾಲಯವೂ ಪಾದ್ರಿಯೂ ಇರುವ ಜಿಲ್ಲೆಯ ಉಪ ವಿಭಾಗ; ಪಾದ್ರಿಯಾಡಳಿತದ ಪ್ರಾಂತ: 'ಪ್ಯಾರಿಷ್'. ನಿರ್ಗತಿಕರ ಜೀವನಾಧಾರ ಕಾನೂನು, ಮೊ. ನ್ನು ಚಲಾಯಿಸುವುದಕ್ಕಾಗಿ ಏರ್ಪಡಿಸಿರುವ ಪ್ರಾಂತ ವಿಭಾಗ (= Civil p.) (Go on the p. ಪ್ಯಾರಿಷ್ ಪ್ರಾಂತದ ಸಹಾಯ ವನ್ನು ಪಡೆ). ಒಂದು ಪ್ಯಾರಿಷ್ಷಿನ ಜನರು. P. clerk ಪ್ರಾಂತ ಕ್ರೈಸ್ತ ಮಂದಿರದಲ್ಲಿ ಬಗೆ ಬಗೆಯ ಕಾರ್ಯಗಳನ್ನು ಮಾಡುವುದಕ್ಕಾಗಿ ನಿಯಮಿತನಾದ (ಮು., ಹಿಂದೆ, ಸಂವಾದ ಗೀತೆ ಹಾಡುತ್ತಿದ್ದ) ಅಧಿಕಾರಿ. P. council ನಿರ್ಗತಿಕ ಕಾನೂನು ಚಲಾವಣೆ, ಮೊ. ದರ ಪ್ರಾಂತ ಸಭೆ, ಗ್ರಾಮ ಸಭೆ. P. lantern ಚಂದ್ರ. P. register ಪ್ಯಾರಿಷ್ ಚರ್ಚಿನಲ್ಲಿ ನಡೆಯುವ ಜ್ಞಾನಸ್ನಾನ, ನಾಮಕರಣ, ಮದುವೆ ಮತ್ತು ಶವ ಸಂಸ್ಕಾರಗಳ ದಾಖಲೆಯಿಡುವ ಪುಸ್ತಕ. **Paríshioner** ಪರಿಷನರ್ (ನಾ.) ಪ್ಯಾರಿಷ್ಷಿನವನು; —ನಿವಾಸಿ.

Parisylláhic ಪ್ಯಾರಿಸಿಲ್ಯಾಬಿಕ್ (ಗು.) (ಗ್ರೀಕ್ ಮತ್ತು ಲ್ಯಾಟಿನ್ ನಾಮಪದಗಳ ವಿಷಯದಲ್ಲಿ) ಏಕವಚನದಲ್ಲಿ ಪ್ರಥಮಾವಿಭಕ್ತಿ ರೂಪದಲ್ಲೂ ಇತರ ವಿಭಕ್ತಿ ರೂಪದಲ್ಲೂ ಒಂದೇ ಸಂಖ್ಯೆಯ ಉಚ್ಚಾರಾಂಶಗಳುಳ್ಳ.

Párity ಪ್ಯಾರಿಟಿ (ನಾ.) (ಮು., ಒಂದು ಚರ್ಚಿನ ಅಧಿಕಾರಿಗಳಲ್ಲಿ ಅಥವಾ ಸದಸ್ಯರಲ್ಲಿ) ಪರಸ್ಪರ ಸಮಾನತೆ. ಸಾದೃಶ್ಯ; ಸಾಮ್ಯ; ಅನು ರೂಪತೆ; ಎಣೆ (P. of reasoning ಊಹನ ಸಾಮ್ಯ). (ವಾಣಿಜ್ಯ) ಮತ್ತೊಂದು ಚಲಾವಣೆ(ಪದ್ಧತಿ)ಯಲ್ಲಿ ಸಮಾನ ಬೆಲೆ; ನಮೂದು ಬೆಲೆಗೆ ಸಮವಾಗಿರುವುದು.

Park ಪಾರ್ಕ್ (ನಾ., ಕ್ರಿ. ಸಕ.) (ದೊಡ್ಡಮನುಷ್ಯನ) ನಾಡುಮನೆ, ಹಳ್ಳಿಮನೆ, ನಿವಾಸ, ಮೊ. ಗಳ ಸುತ್ತಲೂ ಅದಕ್ಕೆ ಸೇರಿರುವ, ಸಾ., ತೋಪಿನಿಂದಲೂ ಹುಲ್ಲುಮೈದಾನದಿಂದಲೂ ಕೂಡಿರುವ, ಆವರಣ ಹಾಕಿದ ವಿಸ್ತಾರ ಪ್ರದೇಶ; ನಾಡುಮನೆಯ ಉದ್ಯಾನ (ವನ). ಪಟ್ಟಣ ಗಳಲ್ಲಿ ಅಲಂಕಾರಕ್ಕಾಗಿ ಗಿಡ, ಮೊ. ನ್ನು ಬೆಳಸಿ ಆವರಣ ಹಾಕಿದ ಸಾರ್ವಜನಿಕ ವಿಹಾರ ಪ್ರದೇಶ: ಪಟ್ಟಣದ ಉದ್ಯಾನ; ಆಡುಂಬೊಲ (ಗ್ರಾಂ.) [The P. (ಈಗ) ಲಂಡನ್ನಿನ Hyde P., (ಹಿಂದೆ) St James's P.]. ಸಾರ್ವಜನಿಕ ಉಪಯೋಗಕ್ಕಾಗಿ ಸ್ವಾಭಾವಿಕ ಸ್ಥಿತಿಯಲ್ಲೇ ಇಟ್ಟಿರುವ ವಿಶಾಲ ಪ್ರದೇಶ. ಪಾಳೆಯದಲ್ಲಿ ಫಿರಂಗಿ, ಗೋಲಂದಾಜು, (ಸೈನ್ಯದ) ಉಗ್ರಾಣ, ಮೊ. ವು (ಆಕ್ರಮಿಸಿಕೊಂಡಿರುವ ಸ್ಥಳ). ಮೋಟಾರುಬಂಡಿ, ಮೊ. ಗಳು ಕಾದು ನಿಂತಿರುವುದಕ್ಕೆ ಗೊತ್ತುಮಾಡಿರುವ ಸ್ಥಳ. [Oyster-p. (ಸಮುದ್ರವು ಏರು ಭರತದಲ್ಲಿ ಮುನ್ನುಗ್ಗಿ ಹರಿಯುವ ಪ್ರದೇಶದಲ್ಲಿ) ಸಿಂಪಿಮೀನನ್ನು ಬೆಳೆಸುವುದಕ್ಕಾಗಿ ಮಾಡಿರುವ ಆವರಣ: ಸಿಂಪಿ ವಾಟ]. (ಕ್ರಿ.) ವನಪ್ರದೇಶದಲ್ಲ, ವನ ಪ್ರದೇಶವಾಗಿ, (ಒಂದು ಗೊತ್ತಾದ ಭಾಗಕ್ಕೆ) ಆವರಣ ಹಾಕು; ವನಾವರಣ ಹಾಕು. (ಸೈನ್ಯ) ಫಿರಂಗಿ, ಮೊ. ನ್ನು ಗೊತ್ತಾದ ಆವರಣ ಪ್ರದೇಶದಲ್ಲಿ ಅಡಕಮಾಡಿಡು. (ಮೋಟಾರುಬಂಡಿ, ಮೊ. ನ್ನು) ನಿರ್ದಿಷ್ಟ ದಲ್ಲಿ ಬಿಡು. **Párkish** (ಗು.)

Párky ಪಾರ್ಕಿ (ಗು.) (ಅಸಂ.) (ವಾಯು, ಪ್ರಾತಃಕಾಲ, ಮೊ. ವು) ಚಳಿಯಾದ, ಶೀತಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Párlance ಪಾರ್ಲನ್ಸ್ (ನಾ.) ಮಾತಿನ ರೀತಿ; ಬಳಕೆಯ ಮಾತು (Common, legal, p.)

Párley ಪಾರ್ಲಿ (ನಾ., ಕ್ರಿ.) (ವ್ಯಾಜ್ಯಾಂಶಗಳನ್ನು) ಚರ್ಚೆಮಾಡುವುದಕ್ಕೆ ಸೇರಿಸಿದ ಸಭೆ; ಚರ್ಚಾಗೋಷ್ಠಿ; (ಮು., ಸ್ಯೆನ್ಯ) ಒಪ್ಪಂದದ ಷರತ್ತುಗಳ ಚರ್ಚೆ, ಸಂಧಾನ ಸಭೆ. (Beat, sound, a p. ಭೇರಿ ಹೊಡೆದು, ತುತ್ತೂರಿಯೂದಿ, ಸಂಧಾನಕ್ಕೆ ಕರೆ). (ಕ್ರಿ.) (ಶತ್ರು, ಮೊ. ರೊಡನೆ) ಒಪ್ಪಂದದ ಷರತ್ತುಗಳ ಚರ್ಚೆ ನಡಸು (*With* ಉಪ. ದೊಡನೆ). (ಮು.) ಪರಭಾಷೆಯನ್ನು ಮಾತನಾಡು.

Párliament ಪಾರ್ಲಿ(ರ್ಲ)ಮೆಂಟ್ (ನಾ.) ಬಿಷಪ್ಪರು, ಆರ್ಚ್‌ಬಿಷಪ್ಪರು, ಮತ್ತು ಶ್ರೀಮಂತರು—ಇವರನ್ನೊಳಕೊಂಡ ಶ್ರೀಮಂತ ಸಭೆಯೂ ಜಿಲ್ಲೆಗಳ ಮತ್ತು ಪಟ್ಟಣಗಳ ಪ್ರಜಾಪ್ರತಿನಿಧಿಗಳನ್ನೊಳಕೊಂಡ ಪ್ರಜಾ ಪ್ರತಿನಿಧಿ ಸಭೆಯೂ ಮತ್ತು ರಾಜನೂ ಸೇರಿ ಆದ, ಬ್ರಿಟಿಷ್ ರಾಜ್ಯದ ಪರಮಾಧಿಕಾರದ ಶಾಸನ ಮಂಡಲಿ: ಪಾರ್ಲಿಮೆಂಟು. [(ದೊರೆಯ ವಿಷಯದಲ್ಲಿ) Open p. ಪಾರ್ಲಿಮೆಂಟಿನ ಆರಂಭೋತ್ಸವ ನಡಸು]. (ಇತರ ದೇಶಗಳಲ್ಲಿ) ಇದರಂಥ ಶಾಸನ ಸಭೆ. [Long P. (Long[1] ನೋಡಿ) Short P. (೧೬೪೦ನೆಯ ಏಪ್ರಿಲ್ ೧೩ರಿಂದ ಅದೇ ವರ್ಷದ ಮೇ ೫ರ ವರೆಗಿದ್ದ) ಅಲ್ಪಕಾಲಿಕ, ಹ್ರಸ್ವ, ಪಾರ್ಲಿಮೆಂಟು]. ಗರಿಗರಿಯಾದ ಶುಂಠಿರೊಟ್ಟಿಯ ತೆಳುಬಿಲ್ಲೆ (=P.-cake). **Parliamentárian** —ಟೇರಿಯನ್ (ನಾ., ಗು.) (ಪಾರ್ಲಿಮೆಂಟಿನಲ್ಲಿ) ವಾದ ಚತುರ. (೧೭ನೆಯ ಶ. ಮಾ. ದಲ್ಲ ನಡೆದ ಇಂಗ್ಲೆಂಡಿನ ಒಳಯುದ್ಧದಲ್ಲಿ) ಪಾರ್ಲಿಮೆಂಟ್ ಪಕ್ಷದವನು. (ಗು.) = Parliamentary. **Parliaméntary** —ಟರಿ (ಗು.) ಪಾರ್ಲಿಮೆಂಟಿನ; ಶಾಸನ ಸಭೆಯ [Old p. hand (Hand ನೋಡಿ). P. agent ಪಾರ್ಲಿಮೆಂಟಿನಲ್ಲಿ ಖಾಸಗಿ ಕಾನೂನುಗಳನ್ನು ಮುಂದುವರಿಸಲು ನೇಮಕವಾದ ಕಾರ್ಯಭಾರಿ (ನಾ., ವಕೀಲ)]. ಪಾರ್ಲಿಮೆಂಟು ಶಾಸನ ಮಾಡಿದ, ವಿಧಿಸಿದ, ಸ್ಥಾಪಿಸಿದ; (P. train ಪಾರ್ಲಿಮೆಂಟಿನ ಕಾಯಿದೆಯಂತೆ ಮೈಲಿಯೊಂದಕ್ಕೆ ಒಂದು ಪೆನಿಗಿಂತ ಹೆಚ್ಚು ತೆಗೆದುಕೊಳ್ಳದೆ ಪ್ರಯಾಣಿಕರನ್ನು ಸಾಗಿಸಬೇಕಾದ ರೈಲುಬಂಡಿ). (ಭಾಷೆಯ ವಿಷಯದಲ್ಲಿ) ಪಾರ್ಲಿಮೆಂಟಿನಲ್ಲಿ, ಶಾಸನ ಸಭೆಯಲ್ಲಿ, —ಅಂಗೀಕೃತವಾದ, ಪ್ರಯೋಗಿಸಬಹುದಾದ; (ಬಳ. ಮಾ.) ಸಭ್ಯ; ಮರ್ಯಾದಾನುಸಾರವಾದ.

Párlour ಪಾರ್ಲರ್ (ನಾ.) (ವಾಸದ ಮನೆಯಲ್ಲಿ) ಮನೆಯವರು ಸಾಮಾನ್ಯವಾಗಿ ಸೇರುವ ಕೋಣೆ: ನಡು ಮನೆ; ದಿವಾನ ಖಾನೆ. (ನತ್ರದಲ್ಲಿ, ಮುಸಾಫರಖಾನೆಯಲ್ಲಿ) ಖಾಸಗಿ ಸಂಭಾಷಣೆಯ ಕೋಣೆ. P.-boarder (ಹಣಕ್ಕೆ ಊಟ ಹಾಕಿ ವಿದ್ಯೆ ಕಲಿಸುವ ಪಾಠಶಾಲೆಯಲ್ಲಿ) ಮುಖ್ಯೋಪಾಧ್ಯಾಯನ ಸಂಸಾರದಲ್ಲಿ ಪಾನಮಾಡಿಕೊಂಡಿರುವ ವಿದ್ಯಾರ್ಥಿ. P. car (ಅಮೆ. ಸಂ.) ಸಕಲ ಸೌಖ್ಯಾನುಕೂಲಗಳಿಂದ ಸಜ್ಜಿತವಾದ ರೈಲುಬಂಡಿ. P.-maid ಊಟದ ಮೇಜಿನ ಬಳಿಯ ಪರಿಚಾರಿಕೆ.

Párlous ಪಾರ್ಲಸ್ (ಗು., ಕ್ರಿ. ವಿ.) (ಪ್ರಾಚೀ. ಪ್ರ., ಹಾಸ್ಯ ಪ್ರ.) ಅಪಾಯಕರ. ಏಗಲು ಕಷ್ಟವಾದ; ಬೆರಗು ಮಾಡುವ ಚತುರತೆಯುಳ್ಳ; ಪ್ರಚಂಡ ಬುದ್ಧಿಯ. (ಕ್ರಿ. ವಿ.) ಅತ್ಯಂತ(ವಾಗಿ); ಪ್ರಚಂಡವಾಗಿ.

Parnássus ಪಾರ್ನ್ಯಾಸಸ್ (ನಾ.) ಪುರಾತನ ಕಾಲದಲ್ಲಿ ಕಲಾಭಿಮಾನಿ ದೇವತೆಗಳಿಗೆ ಪವಿತ್ರವಾದುದೆಂದು ಎಣಿಸಿದ್ದ ಮಧ್ಯ ಗ್ರೀಸಿನಲ್ಲಿಯ ಒಂದು ಪರ್ವತ. **Parnássian** (ಗು., ನಾ.) ೧೯ನೆಯ ಶ. ಮಾ. ದ ಫ್ರೆಂಚ್ ಕವಿಗಳ ಒಂದು ಪಂಗಡದ ಸಂಪ್ರದಾಯದ(ವನು)

Párnellism ಪಾರ್ನೆಲಿಸ್ಮ್ (ನಾ.) C. S. Parnell ಎಂಬಾತನ ಮುಂದಾಳುತನದಲ್ಲಿ ೧೮೮೦ರಿಂದ ೧೮೯೧ರ ವರೆಗೆ ನಡೆದ ಐರ್ಲಂಡಿನ ಸ್ವರಾಜ್ಯ ಪಕ್ಷದ ನೀತಿ. **Párnellite** (ನಾ.)

Paróchial ಪರೋಕಿಯಲ್ (ಗು.) ಒಂದು ಪ್ಯಾರಿಷ್ಷಿನ; (ರೂಪ.) ಸಣ್ಣ ಕ್ಷೇತ್ರಕ್ಕೆ ಅಥವಾ ಪ್ರಾಂತಕ್ಕೆ ಸೇರಿದ ಅಥವಾ ಸಂಬಂಧಪಟ್ಟ; ಕಿರಿದಾದ; ಪ್ರಾಂತೀಯ. **Paróchialism** (ನಾ.); **Parochiálity** (ನಾ.); **Paróchialize** (ಕ್ರಿ. ಸಕ.); **Paróchially** (ಕ್ರಿ. ವಿ.)

Párody ಪ್ಯಾರೊಡಿ (ನಾ., ಕ್ರಿ. ಸಕ.) ಒಬ್ಬ ಗ್ರಂಥಕರ್ತನ ವಿಶೇಷ ಲಕ್ಷಣಗಳನ್ನು ಅನುಕರಣ ಮಾಡಿ ವಿಡಂಬನ ಮಾಡುವ ಲೇಖನ, ಬರವಣಿಗೆ; ವಿಡಂಬನಾನುಕರಣ (ಕಾವ್ಯ, ಲೇಖನ); ಅಣಕ ಬರಹ; ಸತ್ತ್ವವಿಲ್ಲದ ಅನುಕರಣ. (ಕ್ರಿ.) ಅನುಕರಣದಿಂದ (ಸಾಹಿತ್ಯ ಕೃತಿ, ನಡೆವಳಿ, ಮೊ. ನ್ನು) ಹಾಸ್ಯ ಮಾಡು, ವಿಡಂಬನ ಮಾಡು. **Párodist** (ನಾ.)

Paróle ಪರೋಲ್ (ನಾ., ಕ್ರಿ. ಸಕ.) ನಂಬಿಕೆಯ ವಾಗ್ದಾನ [(ಮು., ಸೈನಿಕ) ಸೆರೆಯಾಳು ತಾನು ಸೆರೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದಿಲ್ಲ ವೆಂದಾಗಲಿ, ಕೆಲವು ಕಾಲ ತನಗೆ ಸ್ವಾತಂತ್ರ್ಯ ಕೊಟ್ಟಲ್ಲಿ ತಾನು ಮರಳಿ ಸೆರೆಮನೆಗೆ ಬರುವೆನೆಂದಾಗಲಿ, ತನ್ನನ್ನು ಸೆರೆಹಿಡಿದವರಮೇಲೆ ಒಂದು ಗೊತ್ತಾದಕಾಲದ ವರೆಗೆ ತಾನು ಕೈದು ಹಿಡಿಯುವುದಿಲ್ಲವೆಂದಾಗಲಿ ಮಾಡುವ ನಂಬಿಕೆಯ ವಾಗ್ದಾನ] [=P. of honour, (F) P. d' honneur] [On p. ಈ ವಾಗ್ದಾನದಮೇಲೆ (ಬಿಡುಗಡೆಯಾದ, —ಯಾಗಿ)]. (ಸೈನ್ಯ) ಅಧಿಕಾರಿಗಳು ಅಥವಾ ಪಹರೆಯ ಮೇಲ್ವಿಚಾರಕರು ಮಾತ್ರ ಉಪಯೋಗಿಸುವ ಸಂಕೇತ ಪದ (Countersign ಹೋಲಿಸಿ). (ಕ್ರಿ.) (ಖೈದಿಗೆ) ನಂಬಿಕೆಯ ವಾಗ್ದಾನದಮೇಲೆ ಸ್ವಾತಂತ್ರ್ಯ ಕೊಡು.

Paronomásia ಪರಾನೊಮೇಷ್ಯ(ಸಿ)ಯ (ನಾ.) ಎರಡು ಅರ್ಥಗಳುಳ್ಳ ಒಂದೇ ಉಚ್ಚಾರಣೆಯ ಪದವನ್ನು ವಿಪರೀತಾರ್ಥ ತೋರುವಂತೆ ಪ್ರಯೋಗಿಸುವುದು; ಶ್ಲೇಷೆ (ಉದಾ., ಕೊಡೆಯಂಬರಾತಪತ್ರವನು)

Páronym ಪ್ಯಾರೊನಿಮ್ (ನಾ.) ಪದಗಳಿಗೆ ಒಂದೇ ಉಚ್ಚಾರಣೆಯಿದ್ದು ಬೇರೆಬೇರೆ ಅರ್ಥವಿರುವುದು (ಉದಾ., Soul, Sole)

Pároquet = **Parakeet.**

Parótid ಪರಾಟಿಡ್ (ಗು., ನಾ.) ಕಿವಿಯ ಹತ್ತಿರವಿರುವ; ಕರ್ಣೋಪಾಂತ [P. gland ಕರ್ಣೋಪಾಂತ ಗ್ರಂಥಿ. P. duct (ಬಾಯೊಳಕ್ಕೆ ದ್ರವ ಸುರಿಸುವ) ಕರ್ಣೋಪಾಂತ ಗ್ರಂಥಿ ನಾಳ]. (ನಾ.) = P. gland.

Parotítis ಪ್ಯಾರೊಟೈಟಿಸ್ (ನಾ.) ಗದ್ದಕಟ್ಟು; ಮಂಗನ ಬಾವು.

Paróxysm ಪ್ಯಾರಕ್ಸಿಸ್ಮ್ (ನಾ.) ರೋಗದ ಕೆರಳು; (ರೇಗು, ನಗು, ಮೊ. ಗಳ) ಆವೇಶ, ಉದ್ರೇಕ, ಭರ. **Paroxýsmal** (ಗು.)

Paróxytone ಪರಾಕ್ಸಿಟೋನ್ (ಗು., ನಾ.) (ಗ್ರೀಕ್ ವ್ಯಾ.) ಉಪಾಂತ ಸ್ವರದಮೇಲೆ ಉದಾತ್ತ ಸ್ವರಭಾರ ಬೀಳುವ (ಪದ); ಉದಾತ್ತೋಪಾಂತ ಸ್ವರ.

Parquét ಪಾರ್ಕೆ(ಟ್) (ನಾ., ಕ್ರಿ. ಸಕ.) ಹಲವು ಬಗೆಯ ಮರದ ಹಲಗೆಗಳನ್ನು ಚಿತ್ರಾಕಾರವಾಗಿ ಜೋಡಿಸಿ ಮಾಡಿದ ಮರದ ನೆಲಗಟ್ಟು: ಚಿತ್ರಾಕಾರದ ಹಲಗೆ ನೆಲಗಟ್ಟು. (ಕ್ರಿ.) (ಕೊಠಡಿ, ಮೊ. ಕ್ಕೆ) —ಹಾಕು. **Párquetry** (ನಾ.)

Párricide ಪ್ಯಾರಿಸೈಡ್ (ನಾ.) ತಂದೆಯನ್ನಾಗಲಿ, ಸಮೀಪ ಬಂಧುವನ್ನಾಗಲಿ, ಪೂಜ್ಯನಾದವನನ್ನಾಗಲಿ, —ಕೊಂದವನು; ಪಿತೃಘಾತುಕ; ರಾಜ್ಯದ್ರೋಹಿ. ಪಿತೃಘಾತ; ದೇಶದ್ರೋಹ. **Parricídal** (ಗು.)

Párrot ಪ್ಯಾರಟ್ (ನಾ., ಕ್ರಿ. ಸಕ.) ಗಿಣಿ; ಗಿಳಿ; ಶುಕ (ಇದರ ಕೆಲವು ಜಾತಿಯ ಹಕ್ಕಿಗಳಿಗೆ ಮನುಷ್ಯರಾಡಿದ ಮಾತನ್ನು ಉಚ್ಚರಿಸುವಂತೆ ಕಲಿಸಬಹುದು). ಮತ್ತೊಬ್ಬನ ಮಾತುಗಳನ್ನು ಅರ್ಥಮಾಡಿಕೊಳ್ಳದೆ ಪುನರುಚ್ಚಾರಣೆ ಮಾಡುವವನು; ಮತ್ತೊಬ್ಬನ ವರ್ತನೆಗಳನ್ನು ವಿಚಕ್ಷಣೆಯಿಲ್ಲದೆ ಅನುಕರಣ ಮಾಡುವವನು; ಗಿಣಿಯಂತೆ ಪಾಠ ವೊಪ್ಪಿಸುವವನು. (ಕ್ರಿ.) ಹೇಳಿದ ಮಾತನ್ನು ಯಂತ್ರದಂತೆ ಒಪ್ಪಿಸು; ಗಿಣಿಯಂತೆ ಪಾಠವೊಪ್ಪಿಸು. (ಒಬ್ಬನನ್ನು) ಗಿಣಿಯಂತೆ ಪಾಠವೊಪ್ಪಿಸಲು ತಯಾರಿಸು. **Párrotry** (ನಾ.) ಗಿಣಿಪಾಠ; ದಾಸ್ಯಾನುಕರಣ.

Párry ಪ್ಯಾರಿ (ಕ್ರಿ. ಸಕ., ನಾ.) (ಆಯುಧ, ಏಟು, ಎದವಟ್ಟಿನ ಪ್ರಶ್ನೆ, ಮೊ. ಗಳನ್ನು) ತಪ್ಪಿಸಿಕೊ, ನಿವಾರಿಸಿಕೊ. (ನಾ.) —ವುದು; ನಿವಾರಣೆ; ಪರಿಹಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Parse ಪಾರ್ಸ್(ರ್ಸ್) (ಕ್ರಿ. ಸಕ.) (ಪದದ ಲಿಂಗ, ವಚನ, ವಿಭಕ್ತಿ, ವಾಚಕ, ಮೊ. ನ್ನು ತಿಳಿಸಿ) ವ್ಯಾಕರಣಾನ್ವಯ ಹೇಳು; ವಾಕ್ಯವನ್ನು ಪದಗಳಾಗಿ ಬಿಡಿಸಿ (ಪದಚ್ಛೇದ ಮಾಡಿ), ಪ್ರತಿ ಪದದ ಅನ್ವಯ ಹೇಳು.

Parseé ಪಾರ್ಸೀ (ನಾ.) ಜೋರೊಆಸ್ತರ ಮತಾನುಯಾಯಿ. ೭-೮ನೆಯ ಶ. ಮಾ. ಗಳಲ್ಲಿ ಮುಸಲ್ಮಾನರ ಉಪಟಳವನ್ನು ತಾಳಲಾರದೆ ಹಿಂದೂಸ್ಥಾನಕ್ಕೆ ಓಡಿಬಂದ ಪರ್ಷಿಯನ್ನರ ಸಂತತಿಯವನು; ಪಾರಸಿಕ; ಪಾರ್ಸಿ; (ಸಾಸೇನಿಯನ್ ದೊರೆಗಳ ಕಾಲದ) ಪರ್ಷಿಯದ ಭಾಷೆ. **Parseéism** (ನಾ.) ಪಾರ್ಸೀ ಮತ, ಧರ್ಮ.

Párseval ಪಾರ್ಸೆವಾಲ್ (ನಾ.) ಬಿಗುಪಿಲ್ಲದ (ಕಾಷ್ಠದೃಢತೆಯಿಲ್ಲದ) ಒಂದು ಮಾದರಿಯ ಜರ್ಮನ್ ವಾಯುನೌಕೆ. (ಕಲ್ಪಕನ ಹೆಸರಿನಿಂದ)

Pársimony ಪಾರ್ಸಿಮನಿ (ನಾ.) (ಹಣ, ಮೊ. ಗಳ ವಿನಿಯೋಗದಲ್ಲಿ) ಜಾಗರೂಕತೆ, ಎಚ್ಚರಿಕೆ, ಹಾಳಿತ; ಮಿತ ವ್ಯಯ (ಅಮೂರ್ತ ವಸ್ತುಗಳ ವಿಷಯದಲ್ಲಿ ರೂಪ.). ಜಿಪುಣತನ; ಕೃಪಣತನ; ಕಾರ್ಪಣ್ಯ [Law of p. ವಿಷಯನಿರ್ಣಯನೆಗೆ ಆವಶ್ಯಕವಾದುದಕ್ಕಿಂತ ಹೆಚ್ಚಾಗಿ ಕಾರಣಗಳನ್ನಾಗಲಿ ಬಲಗಳನ್ನಾಗಲಿ ಊಹಿಸಿಕೊಳ್ಳಬಾರದೆಂಬ ನ್ಯಾಯ: ಮಿತ (ಕಾರಣ) ನ್ಯಾಯ]. **Parsimónious** —ಮೋ— (ಗು.); **Parsimóniously** (ಕ್ರಿ. ವಿ.); **Parsimóniousness** (ನಾ.)

Pársley ಪಾರ್ಸ್ಲಿ (ನಾ.) (ಎಲೆಗಳನ್ನು ಸಣ್ಣಗೆ ಕತ್ತರಿಸಿ) ಭಕ್ಷ್ಯಗಳಿಗೆ ರುಚಿಕಟ್ಟುವುದಕ್ಕೂ ತಟ್ಟೆಯಲ್ಲಿಳವಡಿಸಿದ ಭಕ್ಷ್ಯಗಳನ್ನು ಅಲಂಕರಿಸುವುದಕ್ಕೂ ಉಪಯೋಗಿಸುವ (ಬಿಳಿಯ ಹೂವೂ ಸುವಾಸನೆಯ ಎಲೆಗಳೂ ಉಳ್ಳ, ಕೊತ್ತುಂಬರಿ ಜಾತಿಯ) ಒಂದು ಸಸ್ಯ.

Pársnip ಪಾರ್ಸ್ನಿಪ್ (ನಾ.) ಅಡಿಗೆಯಲ್ಲಿ ತರಕಾರಿಯಾಗಿ ಉಪಯೋಗಿಸುವ, ನಸುಹಳದಿ ಬಣ್ಣದ ಒಂದು ಜಾತಿಯ ಗಡ್ಡೆ; ಈ ಗಡ್ಡೆಯುಳ್ಳ, ಹಳದಿ ಹೂವು ಬಿಡುವ, ಒಂದು ಸಸ್ಯ: 'ಪಾರ್ಸ್ನಿಪ್'. Fine words butter no parsnips [Butter (ಕ್ರಿ. ಸಕ.) ನೋಡಿ]

Párson ಪಾರ್ಸ(ಸ್)ನ್ (ನಾ.) ಕ್ರೈಸ್ತ ಪ್ರಾಂತಾಧಿಕಾರಿ; ಮತವೃತ್ತಿಯುಳ್ಳ ಕ್ರೈಸ್ತ ಪುರೋಹಿತ, ಪಾದ್ರಿ; (ಬಳ. ಮಾ.) (ಯಾವನಾದರೂ) ಕ್ರೈಸ್ತ ವೈದಿಕ, ಕ್ರೈಸ್ತ ಪುರೋಹಿತ, ಪಾದ್ರಿ. **Parsónic** —ಸಾನಿಕ್ (ಗು.); **Pársonage** —ಸನೆ(ನಿ)ಜ್ (ನಾ.) ಕ್ರೈಸ್ತ ಪ್ರಾಂತಾಧಿಕಾರಿಯ, ಪಾದ್ರಿಯ, —ಮನೆ.

Part ಪಾರ್ಟ್ (ನಾ., ಕ್ರಿ. ವಿ.) ಭಾಗ; ವಿಭಾಗ; ಖಂಡ; ಅಂಶ; ಪಾಲು; ತುಂಡು; ತುಣುಕು [(A) p. of them have arrived. Most p. of them failed] (ಮು., ಒಂದು ಬಾರಿಗೆ ಪ್ರಕಟ ಮಾಡಿದ ಪುಸ್ತಕದ) ಭಾಗ. (ಪ್ರಾಣಿದೇಹದ) ಭಾಗ; ಅಂಗ [The (privy) parts ಗುಹ್ಯಾಂಗಗಳು; ಗೋಪ್ಯ ಭಾಗಗಳು]. (ವಸ್ತುವಿನ) ಸಮಭಾಗಗಳಲ್ಲೊಂದು (Three parts ಮುಕ್ಕಾಲು ಭಾಗ. 19 parts $\frac{19}{20}$ ಭಾಗ). [Have neither p. nor lot in ಅದರಲ್ಲಿ ಸಂಬಂಧವಿಲ್ಲದಿರು. Art & p. (Art[2] ನೋಡಿ). I have done my p. ನನ್ನ ಭಾಗದ ಕಾರ್ಯವನ್ನು ನಡಸಿದ್ದೇನೆ. It was not my p. to interfere —ಕರ್ತವ್ಯ—]. (ನಾಟಕದಲ್ಲಿ ನಟನಿಗೆ ವಹಿಸಿದ) ಪಾತ್ರ; ರಂಗಸ್ಥಳದಲ್ಲಿ ನಟನು ಆಡುವ ಮಾತು; ಇದರ ಪ್ರತಿ. [(ರೂಪ.) Play a noble, unworthy, p. ಘನತೆಯಿಂದ, ಅಯೋಗ್ಯತೆಯಿಂದ, —ವರ್ತಿಸು. Play a p. ಮೋಸದಿಂದ ವರ್ತಿಸು]. (ಸಂ.) ಒಟ್ಟಿಗೆ ಮಧುರ ನಾದ ಕೊಡುವ ಸ್ವರಪರಂಪರೆಯ ಒಂದು ಸ್ವರ; ರಾಗ ಸ್ವರ; ನಿರ್ದಿಷ್ಟ ಶಾರೀರಕ್ಕಾಗಲಿ ವಾದ್ಯಕ್ಕಾಗಲಿ ನಿಗದಿಯಾದ ನಾದ. (ಬ. ವ.) (ಪ್ರಾಚೀ. ಪ್ರ.) ಸಾಮರ್ಥ್ಯ; ಶಕ್ತಿ [A man of (good) parts]. (ಬ. ವ.) ಪ್ರಾಂತ; ಪ್ರದೇಶ (A stranger in these parts). (ವ್ಯಾಜ್ಯ, ವಾದ—ಇವುಗಳಲ್ಲಿ, ಒಂದು) ಪಕ್ಷ, ಕಕ್ಷಿ. [P. & parcel ಮುಖ್ಯ ಭಾಗ. P. of speech (ನಾಮ, ಗುಣ, ಕ್ರಿಯೆ, ಮೊ.) ವಾಚಕ. For the most p. (Most ನೋಡಿ). Take p. ಸಹಾಯ ಮಾಡು; ಭಾಗ ವಹಿಸು (*In* doing, *in* discussion, etc.). Take the p. of ಪಕ್ಷ ವಹಿಸು; ಬೆಂಬಲ ಕೊಡು. For my p. ನನ್ನ ಮಟ್ಟಿಗೆ; ನಾನಂತೂ. In p. ಕೊಂಚ (ಮಟ್ಟಿಗೆ); ಒಂದು ಭಾಗ(ದಲ್ಲಿ). Take in good p. (ಮಾತನ್ನು, ಕಾರ್ಯವನ್ನು) ಒಳ್ಳೆಯ ಅರ್ಥದಲ್ಲಿ ಗ್ರಹಿಸು; ಅಸಮಾಧಾನಪಡದಿರು. There was no objection on my p. ನನ್ನಿಂದ, ನನ್ನ ಕಡೆಯಿಂದ, ಏನು ಆಕ್ಷೇಪಣೆಯೂ ಇರಲಿಲ್ಲ. P.-owner ಪಾಲುದಾರ; ಸಹ ಭಾಗಿ. P.-song ಸಾ., ವಾದ್ಯಗಳಿಲ್ಲದೆ, ಸರಲ ಸ್ವರ ಮೈತ್ರಿಯಲ್ಲಿ ಮೂರು ಅಥವಾ ಹೆಚ್ಚು ದನಿಭಾಗಗಳಿಗೆ ಅಳವಡಿಸಿದ ಸಂಗೀತ]. (ಕ್ರಿ. ವಿ.) (Made p. of iron & p. of wood. A lie that is p. truth). **Pártly** ಪಾರ್ಟ್ಲಿ (ಕ್ರಿ. ವಿ.) ಒಂದು ಭಾಗದ ವಿಷಯದಲ್ಲಿ; ಸ್ವಲ್ಪ ಮಟ್ಟಿಗೆ.

Part (ಕ್ರಿ.) (ವಿ)ಭಾಗ ಮಾಡು; —ಆಗು; ಪಾಲು ಮಾಡು; —ಆಗು (The crowd parted and let him through. An islet parts the stream. The cord parted ಹುರಿ ಕಿತ್ತು ಹೋಯಿತು). (ಕತ್ತರಿಸುವುದರಿಂದ, ಒಡೆಯುವುದರಿಂದ, ಸೀಳುವುದರಿಂದ, ಮೊ. ಗಿ) ಬೇರ್ಪಡು. (ತಲೆಗೂದಲನ್ನು ಬಾಚಣಿಗೆಯಿಂದ) ಬೇರ್ಪಡಿಸು; ಬೈತಲೆ ತೆಗೆ. (ಹೋರಾಡುತ್ತಿರುವವರನ್ನು, ಸ್ನೇಹಿತರು, ಮೊ. ನ್ನು) ಪ್ರತ್ಯೇಕಿಸು, ಅಗಲಿಸು. [P. company ಜೊತೆ ಬಿಟ್ಟುಬಿಡು; ಸಂಬಂಧ ತ್ಯಜಿಸು; ಅಗಲಹೋಗು (*With* ಉಪ. ದೊಡನೆ). Let us p. friends ಸ್ನೇಹಿತರಾಗಿ ಅಗಲೋಣ. P. brass rags with (ನಾವಿಕ ಅನಂ.) (—ಒಡನೆ) ನಿಕಟ ಸಂಬಂಧವನ್ನು ತ್ಯಜಿಸು. P. with (ಆಸ್ತಿ, ಮೊ. ನ್ನು) ಬಿಟ್ಟುಕೊಡು, ಕೊಟ್ಟುಬಿಡು. (ಬಳ. ಮಾ.) If I know him, he won't p. ನನಗೆ ಅವನು ತಿಳಿದಿರುವ ಮಟ್ಟಿಗೆ ಅವನು ಹಣ ಕೊಡುವಂತಿಲ್ಲ]. (ಪ್ರಾಚೀ. ಪ್ರ.) ಪಾಲಿಡು; (ಪಾಲುಗಳಾಗಿ) ಹಂಚು. **Pártible** ಪಾರ್ಟಿಬ್‌ಲ್ (ಗು.) (ಮು., ಪಿತ್ರಾರ್ಜಿತ ಆಸ್ತಿಯ ವಿಷಯದಲ್ಲಿ) ಪಾಲುಮಾಡಲಾಗುವ, ಪಾಲು ಮಾಡ(ಲೇ) ಬೇಕಾದ; (ವಿ)ಭಾಜ್ಯ. **Párting** ಪಾರ್ಟಿಂಗ್ (ನಾ.) (ಕ್ರಿಯಾರ್ಥಗಳಲ್ಲಿ); (ಒಬ್ಬರನ್ನೊಬ್ಬರು) ಅಗಲುವುದು; ಬೀಳ್ಕೊಳ್ಳುವುದು (ಅನೇಕ ವೇಳೆ ವಿಶೇಷಣವಾಗಿ: P. injunctions ಬೀಳ್ಕೊಳ್ಳುವಾಗ ಕೊಟ್ಟ ಅಪ್ಪಣೆಗಳು, ಬುದ್ಧಿವಾದಗಳು, ಸಲಹೆಗಳು). ಬೈತಲೆ(ಯ ಗೆರೆ). P. of the ways (ಎರಡು ಅಥವಾ ಹೆಚ್ಚಾಗಿ) ದಾರಿ ಕವಲೊಡೆಯುವ ಸ್ಥಳ; (ರೂಪ.) ಇರುವ ಮಾರ್ಗಗಳಲ್ಲಿ ಒಂದನ್ನು ಆಯ್ದುಕೊಳ್ಳಬೇಕಾದ ಸಂದರ್ಭ.

Partáke ಪಾರ್ಟೇಕ್ (ಕ್ರಿ.) (ಒಂದರಲ್ಲಿ) ಭಾಗ ವಹಿಸು, ಪಾಲು ತೆಗೆದುಕೊ; (ಒಬ್ಬನೊಡನೆ, ಒಂದನ್ನು) ಹಂಚಿಕೊ, ಪಾಲು ಮಾಡಿಕೊ (*In* or *of* thing, *with* person). He partook of our lowly fare ನಮ್ಮ ಕದನ್ನವನ್ನೇ ಅವನೂ ಉಂಡನು. His manner partakes of insolence ಅವನ ನಡತೆಯಲ್ಲಿ ಸ್ವಲ್ಪ ದುರಹಂಕಾರ, ಧೃಷ್ಟತೆ, ಇದೆ.

Pártan ಪಾರ್ಟನ್ (ನಾ.) (ಸ್ಕಾ. ಪ್ರ.) ಏಡಿ; ನಳ್ಳಿ.

Parterré ಪಾರ್ಟೇರ್ (ನಾ.) ತೋಟದಲ್ಲಿ ಹೂವಿನ ಪಾತಿಗಳನ್ನುಳ್ಳ ಸಮ ನೆಲ; ಪುಷ್ಪವಾಟಿ(ಕೆ). ನಾಟಕಮಂದಿರದ ಪ್ರೇಕ್ಷಣ(ಶ್ರವಣ) ಶಾಲೆಯಲ್ಲಿ ಗಾಯಕರಿಗೆ ಹಿಂಭಾಗದಲ್ಲಿಯ ನೆಲದ ಭಾಗ; ಈ ಭಾಗದಲ್ಲಿ ಕುಳಿತಿರುವವರು.

Parthenogénesis ಪಾರ್ಥೆ(ಥಿ)ನೊಜೆನೆ(ನಿ)ಸಿಸ್ (ನಾ.) (ಜೀ. ವಿ.) ಪುಂ ಸ್ತ್ರೀ ಸಂಬಂಧವಿಲ್ಲದೆ ಆಗುವ ಜನನ: ನಿರ್ಲಿಂಗ ಜನನ, ಉತ್ಪತ್ತಿ. **Parthenogenétic** (ಗು.)

Párthian ಪಾರ್ಥಿಯನ್ (ಗು.) (ಪ. ಏಷ್ಯದ ಒಂದು ಪುರಾತನ ರಾಜ್ಯವಾದ) ಪಾರ್ಥಿಯದ. P. shaft, glance, etc. (ಓಡಿಹೋಗುತ್ತಿರುವ ಪಾರ್ಥಿಯನ್ ರಾವುತನು ತನ್ನ ಹಿಂದುಗಡೆಗೆ ಎಸೆಯುತ್ತಿದ್ದ ಬಾಣದಂತೆ, ಕ್ಷಿಪಣಿಯಂತೆ) ಬಿಟ್ಟು ಹೊರಡುವ ಸಮಯದಲ್ಲಿ ಮಾಡುವ ಟೀಕೆ, ಬೀರುವ ನೋಟ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Partí ಪಾರ್ಟಿ(೯) (ನಾ.) ತಕ್ಕ, ಯೋಗ್ಯ, ಸಂಬಂಧವೆಂದು ಪರಿಗಣಿಸಿದ ವ್ಯಕ್ತಿ ; (ವರನ ಅಥವಾ ವಧುವಿನ ಅನ್ವೇಷಣದಲ್ಲಿ) ಯೋಗ್ಯ ವರ, ವಧು (Is quite a, a desirable, an unsuitable, p.). P. pris (—ಪ್ರಿ) ಮೊದಲೇ ಯೋಚನೆ ಮಾಡಿಕೊಂಡಿರುವ ಅಭಿಪ್ರಾಯ ; ಪೂರ್ವ ಭಾವಿ ಅಭಿಪ್ರಾಯ ; ಮುನ್ನೊಲವು ; ಪಕ್ಷಪಾತ.

Pártial ಪಾರ್ಷ(ರ್ಷ್)ಲ್ (ಗು.) ಪಕ್ಷಪಾತವುಳ್ಳ ; ಸಮದೃಷ್ಟಿಯಿಲ್ಲದ ; ಭೇದ ಭಾವವುಳ್ಳ [P. to (ಒಬ್ಬ ಮನುಷ್ಯನ, ಒಂದು ವಸ್ತುವಿನ, ಮೇಲೆ) ಪಕ್ಷಪಾತವುಳ್ಳ, ಒಲವರವುಳ್ಳ]. ಒಂದು ಭಾಗ ಮಾತ್ರವಾದ ; ಅಂಶ ಮಾತ್ರದ ; ಆಂಶಿಕ ; ಖಂಡ (A p. success. P. eclipse ಖಂಡ ಗ್ರಹಣ). **Pártially** (ಕ್ರಿ. ವಿ.) ; **Partiálity** ಪಾರ್ಷಿಆ್ಯಲಿಟಿ (ನಾ.) ಒಲವು ; ಒಲವರ ; ಪಕ್ಷಪಾತ ; ವಿಶೇಷ ಪ್ರೀತಿ (*For* ಉಪ. ದೊಡನೆ)

Pártible. Part (ಕ್ರಿ.) ನೋಡಿ.

Partícipate ಪಾರ್ಟಿಸಿಪೇಟ್ (ಕ್ರಿ.) (ಒಂದರಲ್ಲಿ, ಒಬ್ಬನೊಡನೆ) ಭಾಗ ವಹಿಸು (*With* person) ; ಸಹ ಭಾಗಿಯಾಗಿರು (*In* thing *with* person). (—ನ್ನು) ಕೊಂಚ ಪಡೆದಿರು, ಉಳ್ಳದ್ದಾಗಿರು (His poems p. of the nature of satire ಅವನ ಕವಿತೆಗಳಲ್ಲಿ ಸ್ವಲ್ಪ ವಿಡಂಬನೆಯ ಲಕ್ಷಣವಿದೆ). **Partícipant** —ಪಂಟ್ (ನಾ.) ಭಾಗ ವಹಿಸುವವನು ; ಭಾಗಿ ; ಪಾಲುದಾರ. **Participátion** (ನಾ.) ; **Partícipator** (ನಾ.)

Párticiple ಪಾರ್ಟಿಸಿಪ್‌ಲ್ (ನಾ.) (ನಾಮವಾಚಕಕ್ಕೆ ವಿಶೇಷಣವಾಗುವ, ಆದರೆ ಕ್ರಿಯಾಪದ ಲಕ್ಷಣಗಳನ್ನುಳ್ಳ) ಕೃದಂತ. **Párticipled** (ಗು.) (Damned ಮೊ. ಪದಗಳಿಗೆ ಪ್ರತಿಯಾಗಿ ಅನಂ. ಪ್ರ.). **Particípial** (ಗು.) ; **Particípially** (ಕ್ರಿ. ವಿ.)

Párticle ಪಾರ್ಟಿಕ್‌ಲ್ (ನಾ.) ದ್ರವ್ಯದ (ಪದಾರ್ಥದ) ಬಹಳ ಸ್ವಲ್ಪ ಭಾಗ ; ಕಣ ; ಲವ ; ಲೇಶ (Has not a p. of sense ವಿವೇಕ ಲೇಶವೂ ಇಲ್ಲ). (ವ್ಯಾ.) ಅವ್ಯಯ ; ಸಾ., ಪೂರ್ವ ಪ್ರತ್ಯಯ, ಉತ್ತರ ಪ್ರತ್ಯಯ (ಉದಾ., un-, out-, -ness, -ship)

Párticoloured, Párty- ಪಾರ್ಟಿಕಲರ್ಡ್ (ಗು.) ಸ್ವಲ್ಪ ಭಾಗ ಒಂದು ಬಣ್ಣವಾಗಿಯೂ ಸ್ವಲ್ಪ ಭಾಗ ಮತ್ತೊಂದು ಬಣ್ಣವಾಗಿಯೂ ಇರುವ ; ಬೇರೆ ಬೇರೆ ಭಾಗಗಳು ಬೇರೆ ಬೇರೆ ಬಣ್ಣಗಳಾಗಿರುವ : ವಿವಿಧ ವರ್ಣದ ; ಬಣ್ಣ ಬಣ್ಣದ.

Partícular ಪರ್ಟಿಕ್ಯುಲರ್ (ಗು., ನಾ.) ಒಂದು ಗೊತ್ತಾದುದಕ್ಕೆ ಸಂಬಂಧಿಸಿದ ; ವಿಶಿಷ್ಟ ; ವಿಶೇಷ (P. Baptists ಮನುಷ್ಯರಲ್ಲಿ ಆರಿಸಿದ ಕೆಲವರಿಗೆ ಮಾತ್ರ ದೇವರು ಮೋಕ್ಷವನ್ನನುಗ್ರಹಿಸುವನೆಂದು ಹೇಳುವ ತತ್ತ್ವದವರು). ಪ್ರತ್ಯೇಕ ; ನಿರ್ದಿಷ್ಟ ; ವ್ಯಷ್ಟಿ ; ವೈಯಕ್ತಿಕ (This p. tax is no worse than others ಈ ನಿರ್ದಿಷ್ಟ ತೆರಿಗೆ ಉಳಿದುವಕ್ಕಿಂತ ಕೆಟ್ಟದ್ದೇನೂ ಅಲ್ಲ). (Took p. trouble ವಿಶೇಷ ತೊಂದರೆ ತೆಗೆದು ಕೊಂಡನು. Full & p. account ಸಂಪೂರ್ಣವೂ ವಿವರವೂ ಆದ ವರದಿ). ಜಾಗರೂಕತೆಯಿಂದಿರುವ ; ಅತಿ ನಾಜೂಕಿನ (He is p. as to what he eats ತಾನು ತಿನ್ನುವ ಪದಾರ್ಥಗಳ ವಿಷಯದಲ್ಲಿ ಅವನು ಬಹಳ ಜಾಗರೂಕನಾಗಿದ್ದಾನೆ). (In p. ಮುಖ್ಯವಾಗಿ ; ವಿಶೇಷವಾಗಿ). (ನಾ.) ವಿವರ ; ತಪಶೀಲು. (ಬ. ವ. ದಲ್ಲಿ) ತಪಶೀಲಾದ ಲೆಕ್ಕ, ವರದಿ ; ವಿವರಗಳು. **Particulárity** (ನಾ.) ವಿಶಿಷ್ಟತೆ ; ವೈಶಿಷ್ಟ್ಯ. **Partícularly** (ಕ್ರಿ. ವಿ.) ; **Partícularism** —ರಿಸ್ಮ್ (ನಾ.) ಮನುಷ್ಯರಲ್ಲಿ ಆರಿಸಿದ ಕೆಲವರಿಗೆ ಮಾತ್ರ ದೇವರು ಮೋಕ್ಷವನ್ನು ಅನುಗ್ರಹಿಸುವನೆಂಬ ವಾದ. (ಒಂದು ಪಕ್ಷ, ಪಂಗಡ, ಮೊ. ವಿಷಯದಲ್ಲಿ, ಒಬ್ಬನಿಗಿರುವ) ಏಕ ನಿಷ್ಠೆ. (ಸಾಮ್ರಾಜ್ಯ, ಮೊ. ಗಳಲ್ಲಿ) ಪ್ರತಿಯೊಂದು ಸಂಸ್ಥಾನಕ್ಕೂ ರಾಜಕೀಯ ಸ್ವಾತಂತ್ರ್ಯವಿರಬೇಕೆಂಬ ವಾದ, ತತ್ತ್ವ ; ಪ್ರತ್ಯೇಕತಾ ವಾದ. **Partícularist** (ನಾ.) —ವಾದಿ. **Partícularize** (ಕ್ರಿ. ಸಕ.) ಪ್ರತ್ಯೇಕಿಸಿ, ವಿಶೇಷಿಸಿ, —ಹೇಳು, ನಮೂದಿಸು, ಸೂಚಿಸು, ನಿರ್ದೇಶಿಸು ; ಒಂದೊಂದಾಗಿ, ತಪಶೀಲುವಾರಾಗಿ, —ಹೇಳು. **Particularizátion** (ನಾ.)

Párting. Part (ಕ್ರಿ.) ನೋಡಿ.

Pártisan[1], **-zan** ಪಾರ್ಟಿಸ್ಯ(ಸ)ನ್, **Partisán, -zán** —ಝ್ಯಾನ್ (ನಾ.) ಒಂದು ಪಕ್ಷದವನು ; ಒಂದು ಪಂಗಡದವನು ; ಪಕ್ಷಾವಲಂಬಿ ; (ಮು., ವಿಮರ್ಶೆ ಮಾಡದೆ ಪಕ್ಷ ವಹಿಸಿದ) ಪಕ್ಷವರ್ತಿ, ಪಕ್ಷಾಭಿಮಾನಿ (ಅನೇಕ ವೇಳೆ ವಿಶೇಷಣವಾಗಿ : In a p. spirit ಪಕ್ಷೀಯ ಭಾವನೆಯಿಂದ). (ಚರಿತ್ರೆ) ಕೆಲವು ವಿಶೇಷೋದ್ಯಮಗಳಿಗೆ ಮಾತ್ರ ನಿಯೋಜಿಸಿದ ಅನಿಯತ ಲಘು ದಳದ ಸಿಪಾಯಿ. **Partisánship** (ನಾ.)

Pártisan[2], **-zan** ಪಾರ್ಟಿಸ್ಯನ್ (ನಾ.) (ಈಟಿಗೊಡಲಿಯಂಥ) ಒಂದು ಬಗೆಯ ಉದ್ದ ಹಿಡಿಯ ಈಟಿ.

Pártite ಪಾರ್ಟೈಟ್ (ಗು.) (ಸ. ವಿ., ಕ್ರಿಮಿ ಶಾಸ್ತ್ರ) ಸರಿಸುಮಾರು ಬುಡದ ವರೆಗೂ ಭಾಗವಾಗಿರುವ ; ವಿಭಕ್ತ.

Partítion ಪಾರ್ಟಿಷನ್ (ನಾ., ಕ್ರಿ. ಸಕ.) ಭಾಗಗಳಾಗಿ ವಿಂಗಡಿಸುವುದು ; ಭಾಗ ; ಪಾಲು ; ಹಸುಗೆ ; ಭಾಗಗಳಾಗಿ, ಪಾಲುಗಳಾಗಿ, ಹಂಚಿಕೆ. ಎರಡು ಭಾಗಗಳನ್ನು ಪ್ರತ್ಯೇಕಿಸುವ ಕಟ್ಟಡ : (ಮು.) ತೆಳು ಗೋಡೆ, ತಡಕೆ [**Partítioned** (ಗು.)]. (ನ್ಯಾ. ಶಾ.) (ಒಟ್ಟು ಹಿಡುವಳಿದಾರರಲ್ಲಿ) ಸ್ಥಿರಾಸ್ತಿಯ ಹಂಚಿಕೆ. (ಕ್ರಿ.) ಭಾಗ ಮಾಡು ; ಭಾಗಗಳಾಗಿ, ಪಾಲುಗಳಾಗಿ, —ವಿಂಗಡಿಸು, ಹಂಚು. (P. off ಕೊಠಡಿ, ಮೊ. ರ ಭಾಗವನ್ನು) ತಡಕೆ, ಮೊ. ಗಳಿಂದ ಪ್ರತ್ಯೇಕಿಸು.

Pártitive ಪಾರ್ಟಿಟಿವ್ (ಗು., ನಾ.) (ಒಂದು ಒಟ್ಟಿನ) ಭಾಗ ಸೂಚಕ (ಪದ) ; ಅಂಶ ವಾಚಿ (ಉದಾ., Some, any). P. genitive ಒಂದು ಭಾಗವನ್ನು ನಿರ್ದೇಶಿಸುವ ಪದವುಳ್ಳ ಸಮಷ್ಟಿಯ ಷಷ್ಠೀ ವಿಭಕ್ತಿ (ಇಂಗ್ಲಿಷಿನಲ್ಲಿ *Of* ಪದ. ಉದಾ., The bravest of Gauls). **Pártitively** (ಕ್ರಿ. ವಿ.)

Pártlet ಪಾರ್ಟ್ಲಿಟ್ (ನಾ.) ಹೇಂಟೆ(ಗೆ ಅಂಕಿತನಾಮವಾಗಿ ಪ್ರ.) [ಮು., Dame P. = ಹೇಂಟೆ. (ಹಾಸ್ಯವಾಗಿ ಅಥವಾ ತಿರಸ್ಕಾರವಾಗಿ) ಹೆಂಗಸು]

Pártner ಪಾರ್ಟ್ನರ್ (ನಾ., ಕ್ರಿ. ಸಕ.) (ಒಬ್ಬನೊಡನೆ, ಒಂದರಲ್ಲಿ, ಒಂದರ) ಪಾಲುದಾರ (*With* person, *in* or *of* thing) ; (ಸಹ) ಭಾಗಿ. ಒಂದು ವ್ಯಾಪಾರ ಸಂಸ್ಥೆಯಲ್ಲಿ ಇತರರೊಡನೆ ಕೂಡಿ ರಾಭನಷ್ಟಗಳನ್ನು ಹಂಚಿಕೊಳ್ಳುವವನು ; ಪಾಲುದಾರ. [Sleeping p. (Sleep ನೋಡಿ). Predominant p. ಸಂಯುಕ್ತ ಬ್ರಿಟಿಷ್‌ರಾಜ್ಯದ (United Kingdom) ಪ್ರಮುಖ ಭಾಗ : ಇಂಗ್ಲೆಂಡು]. ಹೆಂಡತಿ ; ಗಂಡ. ನೃತ್ಯದಲ್ಲಿ ಜೊತೆಗಾರ, ಜೊತೆಗಾತಿ. (ವ್ಹಿಸ್ಟ್, ಟೆನಿಸ್, ಮೊ. ಆಟಗಳಲ್ಲಿ) ಜೊತೆಯಾಟಗಾರ, —ಗಾತಿ. (ಕ್ರಿ.) (ಜನರನ್ನು, ಒಬ್ಬನನ್ನು ಮತ್ತೊಬ್ಬನೊಡನೆ) ಜೊತೆಗೂಡಿಸು ; ಪಾಲುದಾರನನ್ನಾಗಿ ಮಾಡು ; (—ರ) ಪಾಲುದಾರನಾಗು. **Pártnerless** (ಗು.) ; **Pártnership** (ನಾ.)

Pártridge ಪಾರ್ಟ್‌ರಿಜ್ (ನಾ.) ಹಲವು ಬಗೆಯ ಬೇಟೆ ಹಕ್ಕಿ ಜಾತಿ : ಕವುಜುಗ ಹಕ್ಕಿ ; ತಿತ್ತಿರಿ ಪಕ್ಷಿ (= Common or Grey P.). P.-wood ಬೀರು, ಮೊ. ನ್ನು ಮಾಡುವುದಕ್ಕೆ ಉಪಯೋಗಿಸುವ ಒಂದು ಬಗೆಯ ಗಟ್ಟಿ ಕೆಮ್ಮರ ; (ದಾರುವಿನಮೇಲೆ ಕೆಲವು ಶಿಲೀಂಧ್ರಗಳು ಬೆಳೆದ ಪರಿಣಾಮವಾಗಿ) ಬಣ್ಣದ ಮಚ್ಚೆಮಚ್ಚೆಗಳಾಗಿ ಕಾಣುವ ದಾರು.

Partúrient ಪಾರ್ಟ್ಯೂರಿಯೆಂಟ್ (ಗು.) ಹೆರಲಿರುವ ; ಪ್ರಸವಿಸಲಿರುವ ; ಈಯಲಿರುವ ; (ಅನೇಕ ವೇಳೆ ಮನಸ್ಸು, ಮೊ. ಗಳ ವಿಷಯದಲ್ಲಿ ರೂಪ.) (ಭಾವ, ಮೊ. ನ್ನು) ಹೊರಗೆಡಹಲಿರುವ. **Parturítion** ಪಾರ್ಟ್ಯೂರಿಷನ್ (ನಾ.) ಹೆರುವುದು ; ಹೆರಿಗೆ ; ಪ್ರಸವ (ರೂಪ. ಸಹ)

Partúriunt móntes (, nascétur ridículus mus) (L ವಾಕ್ಯ) ಬೆಟ್ಟದ ಹೆರಿಗೆ (, ಹಡೆದದ್ದು ಹಾಸ್ಯಾಸ್ಪದವಾದ ಇಲಿ) (ನಿಷ್ಫಲ ಕಾರ್ಯಕ್ಕೆ ಪಟ್ಟ ಮಹತ್ತ್ವಯತ್ನದ ವಿಷಯದಲ್ಲಿ)

Párty[1] ಪಾರ್ಟಿ (ನಾ.) ಏಕೋದ್ದೇಶದಿಂದ, ಏಕಾಭಿಪ್ರಾಯದಿಂದ, ಮೊ. ಗಿ ಒಟ್ಟುಗೂಡಿದ ಒಂದು ಮಂಡಲಿ : ಪಂಗಡ ; ಪಕ್ಷ ; ಕಕ್ಷಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾರ್ವಜನಿಕ ವಿಚಾರಗಳಲ್ಲಿ ಪಕ್ಷಪ್ರತಿಪಕ್ಷಗಳಾಗುವ ಪದ್ಧತಿ, ಸಂಪ್ರದಾಯ (P. spirit ಪಕ್ಷ ಭಾವನೆ ; ಪಕ್ಷಾಭಿಮಾನ. P.-spirited). (ಒಟ್ಟಿಗೆ ಪ್ರಯಾಣ ಮಾಡುವ ಅಥವಾ ಕಾರ್ಯ ಮಾಡುವ) ಜನರ ಗೋಷ್ಠಿ (Fishing, reading, -p.); ಸಮಾಜ ಗೋಷ್ಠಿ (ಮು., ಮನೆಗೆ ಆಹ್ವಾನಿತರಾಗಿ ಬಂದ ಅತಿಥಿಗಳ ಸಂತೋಷ ಗೋಷ್ಠಿ : Dinner, tea, p.). (ದಾವೆ, ಕರಾರು, ಮದುವೆ, ಮೊ. ಗಳಲ್ಲಿಯ) ಒಂದು ಪಕ್ಷ ಅಥವಾ ಕಕ್ಷಿ. (ಕಾರ್ಯದಲ್ಲಿ) ಸಹಭಾಗಿ, ಜೊತೆ (*To* ಉಪ. ದೊಡನೆ). (ಈಗ ಗ್ರಾಮ್ಯ ಅಥವಾ ಹಾಸ್ಯ ಪ್ರ.) ವ್ಯಕ್ತಿ ; ಆಸಾಮಿ (A queer p. ವಿಚಿತ್ರ ವ್ಯಕ್ತಿ. An old p. with spectacles). P.-coloured (=Particoloured). P. wall (ಪ್ರತ್ಯೇಕಿಸುವ, ಎರಡು ಮನೆಗಳ ಮಾಲೀಕರಿಗೂ ಸೇರಿದ) ಮಧ್ಯದ ಗೋಡೆ.

Párty² ಪಾರ್ಟಿ (ಗು.) (ವಂಶಲಾಂಛನ) ಬೇರೆಬೇರೆ ವರ್ಣಭಾಗಗಳಾಗಿ ವಿಂಗಡಿಸಿದ.

Párvenu (F) ಪಾರ್ವೆನ್ಯೂ (ನಾ.) ಐಶ್ವರ್ಯ ಅಥವಾ ಪದವಿ ದೊರೆತ ಅಜ್ಞಾತ ಕುಲದವನು (ಸಾ., ನಿಕೃಷ್ಟಾರ್ಥದಲ್ಲಿ) ; ನಿನ್ನೆ ಮೊನ್ನೆಯ ದೊಡ್ಡ ಮನುಷ್ಯ ; ಏರಿದ ಪದವಿಗೆ ಯೋಗ್ಯತೆಯಿಲ್ಲದವನು (ಮು., ಯೋಗ್ಯತೆ ಮೀರಿ ಮೆರೆಯುವವನು). (ವಿಶೇಷಣವಾಗಿ ಸಹ ಪ್ರ.)

Párvis ಪಾರ್ವಿಸ್ (ನಾ.) (ಪ್ರಮುಖ ಅಥವಾ ಸಾಮಾನ್ಯ ಕ್ರೈಸ್ತ ಆರಾಧನ ಮಂದಿರ, ಮೊ. ಗಳ) ಮುಂದಿನ ಆವರಣ, ಮುಖ ಮಂಟಪ.

Pas (F) ಪಾ (ನಾ.) ಅಗ್ರಗಣ್ಯತೆ; ಪ್ರಾಧಾನ್ಯ (Dispute, give, take, the p.). ನರ್ತನದಲ್ಲಿ ಹೆಜ್ಜೆ, ಪದವಿನ್ಯಾಸ.

Páschal ಪಾಸ್ಕ(ಸ್ಕ್)ಲ್ (ಗು.) ಯೆಹೂದ್ಯರ ' Passover ' ಹಬ್ಬದ ; ಈಸ್ಟರ್ ಹಬ್ಬದ.

Pásha, -cha ಪಾಷ, **Pashá** ಪಷಾ (ನಾ.) ತುರ್ಕಿಯ ಉನ್ನತ ಪದವಿಯ ಅಧಿಕಾರಿ (ಉದಾ., ಸೇನಾಧಿಪತಿ, ಪ್ರಾಂತಾಧಿಪತಿ, ಮೊ. ರು); ಪಾದಷಹ ; ಬಾದಷಾ. **Páshalic, -ch-** (ನಾ.) ಪಾದಷಹನ ಆಧಿಪತ್ಯ.

Páshm ಪ್ಯಾಷಮ್ (ನಾ.) ತಿಬೆಟ್, ಮೊ. ದೇಶದ ಆಡಿನ ಜಾತಿಯ ರೋಮದ ಮೃಗಗಳ ಮೃದು ರೋಮ (ಮು., ಕಾಶ್ಮೀರದ ಶಾಲುಗಳಿಗೆ ಉಪಯೋಗಿಸುವಂಥ ಆಡಿನದು)

Pasquináde ಪ್ಯಾಸ್ಕ್ವಿನೇಡ್ (ನಾ.) (ಹಿಂದೆ, ಸಾರ್ವಜನಿಕ ಸ್ಥಳದಲ್ಲಿ ಹಚ್ಚುತ್ತಿದ್ದ) ನಿಂದಾ ಲೇಖ, ವಿಡಂಬನ ಅಥವಾ ಅಣಕ ಲೇಖ.

Pass ಪಾಸ್ (ಕ್ರಿ.) (ಭೂ. ಕೃ. passed, ವಿಶೇಷಣವಾಗಿ past) ಹಾದು ಹೋಗು; ಮುಂದಕ್ಕೆ ಹೋಗು, ನಡೆ, ಹಾಯಿ; ಮುಂದುವರಿ (*Along*, *down*, *over*, *on* ಮೊ. ಉಪ. ದೊಡನೆ). ಚಲಾವಣೆಯಾಗು ; —ಯಲ್ಲಿರು ; —ಮಾಡು (ಮು., ಕೀಳು ಲೋಹದ ನಾಣ್ಯವನ್ನು) ; ಸಲ್ಲು ; ಸಲುವಳಿಯಾಗು. [P. for (—ಎಂದು) ಅಂಗೀಕಾರವಾಗು, ಒಪ್ಪಿಗೆಯಾಗು. P. by the name of (—ಎಂಬ) ಹೆಸರಿನಿಂದ ರೂಢಿಯಾಗು, ಬಳಕೆಗೆ ಬರು]. ಎಡೆಯಿಂದೆಡೆಗೆ ಸಾಗು ; (ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ) ಬದಲಾಯಿಸು, ಬದಲಾಗು, ಮಾರ್ಪಡು (*Into* something, *from* one state *to* another). ಸಾಯಿ ; ತೀರಿಕೊ ; ಗತಿಸು (P. hence, P. from among us). ಸಾಗು ; ನಡೆ ; ಕಳೆದುಹೋಗು (Saw the procession p. Time passes rapidly. Remarks p. unnoticed) ; ಕೊನೆಗಾಣು ; ಗತಿಸಿಹೋಗು (Kingdoms & nations p.) ; ದಾರಿ ಮಾಡಿಕೊಂಡು ಹೋಗು ; ತಟಾಯಿಸಿಕೊಂಡು ಹೋಗು. ಆಕ್ಷೇಪಣೆಗೊಳಗಾಗದೆ ಹೋಗು ; ಯೋಗ್ಯವೆಂದು, ತಕ್ಕದ್ದೆಂದು, ಎಣಿಸಲ್ಪಡು. (ಶಾಸನ ಸಭೆಯಲ್ಲಿ ಮಸೂದೆ, ಸಲಹೆ, ಮೊ. ದು) ಅಂಗೀಕೃತವಾಗು, ಮಂಜೂರಾಗು, —ಆಗುವಂತೆ ಮಾಡು, —ಆಗಗೊಡು. (ವಿದ್ಯಾರ್ಥಿ, ಪರೀಕ್ಷೆಯಲ್ಲಿ) ಪರೀಕ್ಷಕನಿಂದ ಒಪ್ಪಿಗೆ ಪಡೆ ; ತೇರ್ಗಡೆಯಾಗು ; ಉತ್ತೀರ್ಣನಾಗು. ಸಂಭವಿಸು ; ಆಗು ; ನಡೆ (I saw or heard what was passing ಏನು ನಡೆಯುತ್ತಿದ್ದಿತೆಂಬುದನ್ನು ನಾನು ನೋಡಿದೆನು, ಕೇಳಿದೆನು). ತೀರ್ಪು ಕೊಡು (*Upon* ಉಪ. ದೊಡನೆ). (ವಾದಿ, ಮೊ. ರ ಪರವಾಗಿ) ತೀರ್ಪಾಗು (*For* ಉಪ. ದೊಡನೆ). (ಇಸ್ಪೀಟಾಟ : ತುರುಫು ಹೇಳುವ) ಅವಕಾಶ ಉಪಯೋಗಿಸಿಕೊಳ್ಳದಿರು ; ಆಟ ಹೇಳದೆಹೋಗು. (ಕಾಲ್ಚೆಂಡು, ಹಾಕಿ, ಮೊ. ಆಟಗಳಲ್ಲಿ) ತನ್ನ ಕಡೆಯವನಿಗೆ ಚೆಂಡನ್ನು ಒದೆದು, ಹೊಡೆದು, ಕಳುಹಿಸು (ಒಂದನ್ನು ಪಕ್ಕಕ್ಕೆ, ಹಿಂದೆ) ಬಿಟ್ಟುಹೋಗು ; ದಾಟಿ ಹೋಗು [Has passed the chair (ಹಿಂದೆ) ಅಧ್ಯಕ್ಷತನ ವಹಿಸಿದ್ದನು]. (ಕಡಲು, ಗಡಿ, ಪರ್ವತದ ಸಾಲು) ದಾಟು, ದಾಟಿ ಹೋಗು. (—ಎಂದು) ಭಾಷೆ ಕೊಡು, ವಾಗ್ದಾನ ಮಾಡು, ಆಣೆಯಿಟ್ಟು ಹೇಳು. (ಒಂದರಮೇಲೆ ವಿಮರ್ಶೆ, ತೀರ್ಪು) ಹೇಳು, ಕೊಡು (*Upon* ಉಪ. ದೊಡನೆ). [P. muster (Muster ನೋಡಿ)]. ಮೀರು ; ಅತಿಕ್ರಮಿಸು ; ಮೇರೆವರಿ ; ಅತೀತವಾಗಿರು (It passes my comprehension). ಸಾಗಿಸು ; ರವಾನಿಸು (ಸಾ., ಉಪ. ಅಥವಾ ಕ್ರಿ. ವಿ. ದೊಡನೆ). [Passed his hand across his forehead ಕೈಯನ್ನು ಹಣೆಯಮೇಲೆ ಆಡಿಸಿದನು. Pass your eye over this letter —ಮೇಲೆ ಕಣ್ಣೋಡಿಸು. P. in one's checks ಸಾಯಿ. P. troops in review ಪರೀಕ್ಷೆಗಾಗಿ ಸೇನಾ ದಳಗಳನ್ನು ಮೆರವಣಿಗೆ ನಡಸು. P. the time, winter, etc. —ಕಳೆ. Read this & p. it on —ಮುಂದಕ್ಕೆ ಕಳುಹಿಸು. P. a dividend ಲಾಭಾಂಶವನ್ನು ಹಂಚದೆ, ಕೊಡದೆ, ಹೋಗು. Passed pawn (ಚದುರಂಗದಾಟ) ತನ್ನ ಸಾಲನಲ್ಲಾಗಲಿ, ಪಕ್ಕದ ಸಾಲನಲ್ಲಾಗಲಿ, ಎದುರು (ಕಾಯಿ) ಇಲ್ಲದ ಪ್ಯಾದೆ. P. the time of day (Time ನೋಡಿ). P. away ಸಾಯಿ ; ಕೊನೆಗಾಣು ; ಗತಿಸು. P. by (ಕ್ರಿ. ವಿ. ಅಥವಾ ಉಪ.) ಬಿಟ್ಟುಬಿಡು ; ಉಪೇಕ್ಷಿಸು ; (ನೋಡದೆ) ದಾಟಿಹೋಗು. P. off (ವೇದನೆ, ಮೊ. ವು) ಇಳಿದು, ಕಳೆದು, —ಹೋಗು ; ಕಂದಿಹೋಗು. ಕಾರ್ಯಕಲಾಪಗಳು (ತೊಡಕುಗಳಿಲ್ಲದೆ, ಅಡಚಣೆಗಳಿಲ್ಲದೆ) ನಡೆದು ಹೋಗು. (ಒಂದು ವಸ್ತುವನ್ನು, ಗೊತ್ತುಹೇಳಿದ ಗುಣಗಳಿಲ್ಲದೆ ಬೇರೆಯಾಗಿದ್ದರೂ, ಅದೇ ಎಂದು) ಮೋಸದಿಂದ ಒಬ್ಬನ ತಲೆಗೆ ಕಟ್ಟು. (ಎಡವಟ್ಟು ಸಂದರ್ಭ, ಹಿಂದಿನ ಪ್ರಸ್ತಾಪ) ಗಮನಕ್ಕೆ ಬಾರದಂತೆ ತಪ್ಪಿಸು, ಬೇರೆಯ ಕಡೆಗೆ ಗಮನ ಸೆಳೆ. P. over (ಕ್ರಿ. ವಿ. ಅಥವಾ ಉಪ.) ದಾಟಿ ಹೋಗು ; ಗಮನಿಸದಿರು ; ಲಕ್ಷಿಸದೆ ಹೋಗು ; ಟೀಕೆ ಮಾಡದೆ ಬಿಡು (P. it over in silence). P. through ಅನುಭವಿಸು. P. up (ಅಮೆ. ಸಂ.) (—ಒಡನೆ) ಇನ್ನು ಮುಂದೆ ವ್ಯವಹಾರ ಮಾಡೆನೆಂದು ಹೇಳು, ತ್ಯಜಿಸು]. **Pássable** (ಗು.) (ಕ್ರಿಯಾರ್ಥಗಳಲ್ಲಿ). ಪರೀಕ್ಷೆಗೆ ನಿಲ್ಲುವ ; ತಕ್ಕ ಮಟ್ಟಿನ ; ಇದ್ದಮಟ್ಟಿಗೆ ಚೆನ್ನಾಗಿರುವ. **Pássably** (ಕ್ರಿ. ವಿ.) ; **Pásser** (ನಾ.) (ಕ್ರಿಯಾರ್ಥಗಳಲ್ಲಿ). [P.-by (ಅನುದ್ದಿಷ್ಟವಾಗಿ) ಹಾದು ಹೋಗುವವನು ; ದಾರಿಹೋಕ ; ದಾರಿಗ]. **Pássing** (ನಾ., ಗು., ಕ್ರಿ. ವಿ.) (ಕ್ರಿಯಾರ್ಥಗಳಲ್ಲಿ). [P.-bell ಒಬ್ಬನ ಮರಣ ಕಾಲದಲ್ಲಿ ಬಾರಿಸುವ ಗಂಟೆ : ಸಾವು ಗಂಟೆ. P.-note ಸ್ವರಮೇಳದಲ್ಲಿ ಸೇರಿಲ್ಲದ, ಆದರೆ ನಯ ವಹನಕ್ಕಾಗಿ ಮಧ್ಯೆ ಸೇರಿಸಿದ ಸ್ವರ ; ನಯ ವಹನ ಸ್ವರ]. ಕ್ಷಣಿಕ ; ಅಸ್ಥಿರ ; ತ್ವರಿತ ; ಪ್ರಾಸಂಗಿಕ. (ಕ್ರಿ. ವಿ.) (ಪ್ರಾಚೀ. ಪ್ರ.) ಬಹಳ (ಮು., P. rich)

Pass (ನಾ.) (ಮು., ಪರೀಕ್ಷೆಯಲ್ಲಿ) ತೇರ್ಗಡೆ (ಹೊಂದುವುದು). (ವಿ. ವಿ. ನಿ.) ಘನ ಪಾಂಡಿತ್ಯ ಪದವಿಗೆ ಅರ್ಹತೆಯಿಲ್ಲದೆ, ತಕ್ಕಮಟ್ಟಿಗೆ ಯೋಗ್ಯತೆಯುಳ್ಳಂತೆ ಪರೀಕ್ಷಕರು ಪರಿಗಣಿಸುವ ಸಾಮಾನ್ಯ ಪಾಂಡಿತ್ಯ (ಪಡೆದಿರುವುದು). ಸಾಮಾನ್ಯ ತೇರ್ಗಡೆ. [Bring to p. ಆಗ ಮಾಡು ; ನೆರವೇರಿಸು ; ಸಾಧಿಸು. Come to p. ಆಗು ; ನಡೆ ; ಸಂಭವಿಸು]. ಇಕ್ಕಟ್ಟು ; ಬಿಕ್ಕಟ್ಟು ; ವಿಷಮ ಸ್ಥಿತಿ [Things have come to a (strange) p.]. (ಒಳಕ್ಕೆ ಹೋಗುವುದಕ್ಕಾಗಲಿ ಸ್ಥಳದಿಂದ ಹೊರಕ್ಕೆ ಹೋಗುವುದಕ್ಕಾಗಲಿ ಅಥವಾ ಸ್ಥಳದಿಂದ ಗೈರು ಹಾಜರಾಗುವುದಕ್ಕಾಗಲಿ ಕೊಟ್ಟ) ಅಪ್ಪಣೆ ಚೀಟಿ ; ಅನುಜ್ಞಾ ಪತ್ರ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರವಾನೆ ; ರಹದಾರಿ (On p. —ಪಡೆದು ಗೈರುಹಾಜರು). (ರೈಲ್ವೆ, ಮೊ. ಗಳಲ್ಲಿ) ತೆರ ಕೊಡದೆ ಪ್ರಯಾಣ ಮಾಡಲು ಅಧಿಕಾರ ಕೊಡುವ ಬಿಡುತಿ ಚೀಟಿ (ನಾ., Free p.). (ಕತ್ತಿವರಿಸೆಯಲ್ಲಿ) ಒಂದು ಇರಿತ(ದ ವರಿಸೆ). ಕಣ್ಕಟ್ಟು ; ಯಕ್ಷಿಣಿ. (—ಮೇಲೆ) ಕೈ ಹಾಯಿಸುವುದು, ಆಡಿಸುವುದು (ಮು., ಸುಪ್ರಾೃವಾಹನೆಯಲ್ಲಿ). [**P.-book** ಬ್ಯಾಂಕಿನವರು ಚಾಲ್ತಿ ಅಥವಾ ಇಡುಗೆಯ ಲೆಕ್ಕವಿಟ್ಟಿರುವವನು ಇಟ್ಟ, ತೆಗೆದುಕೊಂಡ, ಎಲ್ಲ ಮೊತ್ತಗಳನ್ನೂ ನಮೂದಿಸಿ ಬರೆದುಕೊಡುವ ಪುಸ್ತಕ: ಇಡುಗೆ ಲೆಕ್ಕದ ಪುಸ್ತಕ ; ಪ್ಯಾಸ್ ಬುಕ್ಕು. **P.-key** (ವಿಶೇಷ ಉಪಯೋಗಕ್ಕಾಗಿ ಇಟ್ಟುಕೊಂಡಿರುವ, ಆವರಣದ ಹೊರಬಾಗಿಲು, ಮೊ. ಗಳ) ಸ್ವಂತ ಬೀಗದಕೈ ; (ಬೇರೆ ಬೇರೆಯ ಅನೇಕ ಬೀಗಗಳನ್ನು ತೆರೆಯಲಾಗುವ) ನಾಯಕ ಬೀಗದಕೈ. **Pássman** (ವಿ. ವಿ. ನಿ. ದಲ್ಲಿ) ಸಾಮಾನ್ಯ ತೇರ್ಗಡೆ ಹೊಂದಿದವನು. **Pássword** (ಮಿತ್ರನನ್ನು ಶತ್ರುವಿನಿಂದ ಗುರುತಿಸುವುದಕ್ಕಾಗಿ ಉಪಯೋಗಿಸುವ) ಸಂಕೇತ ಪದ ; ಗುರುತು ನುಡಿ]. ಬೆಟ್ಟಗಳ ಮಧ್ಯದ ಇಕ್ಕಟ್ಟು ದಾರಿ ; ಕಣಿವೆ ; ಘಾಟಿ. (ಸೈನ್ಯ) ಒಂದು ದೇಶಕ್ಕೆ (ಒಳನುಗ್ಗಲು) ಬಾಗಿಲಾಗಿ ಪರಿಗಣಿಸಿದ ಕಣಿವೆಯ ಮಾರ್ಗ [Sell the p. (ರೂಪ.) ಸ್ವಾರ್ಥಕ್ಕಾಗಿ ತನ್ನ ಪಕ್ಷಕ್ಕೆ ದ್ರೋಹ ಮಾಡು ; ಕರ್ತವ್ಯ ನಡನಡೆ ಬಿಟ್ಟುಕೊಡು]. (ಮು., ನದಿಯ ಮುಖದ ಬಳಿ) ನೌಕಾ ಸಂಚಾರಕ್ಕೆ ಯೋಗ್ಯವಾದ ಕಾಲುವೆ.

Pássage ಪ್ಯಾಸೆ(ಸಿ)ಜ್ (ನಾ., ಕ್ರಿ.) (ಎಡೆಯಿಂದೆಡೆಗೆ) ಹೋಗುವುದು ; ಸಾಗುವುದು ; ಸಾಗಣೆ [Bird of p. (Bird ನೋಡಿ)]. ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ದಾಟುವುದು ; ಸ್ಥಿತ್ಯಂತರ ಹೊಂದುವುದು. ಹಾದುಹೋಗುವ ಸ್ವಾತಂತ್ರ್ಯ, ಹಕ್ಕು. ರೇವಿನಿಂದ ರೇವಿಗೆ ಸಮುದ್ರ ಪ್ರಯಾಣ ; —ಹಾದು ಹೋಗುವುದು. ಹಡಗು ಪ್ರಯಾಣಿಕನಾಗಿ, ಸಮುದ್ರ ಪ್ರಯಾಣಿಕನಾಗಿ, ಒಯ್ಯಲ್ಪಡುವ ಹಕ್ಕು. ಒಂದು ಮಸೂದೆಯನ್ನು ಕಾನೂನಾಗಿಸುವುದು ; ಮಸೂದೆಯ ಅಂಗೀಕಾರ. (ಒಬ್ಬನು) ಹಾದುಹೋಗುವ ಮಾರ್ಗ ; ದಾರಿ (ಒಂದು ಮನೆಯಲ್ಲಿ) ಅನೇಕ ಕೋಣೆಗಳಿಗೆ ಪ್ರವೇಶಕೊಡುವ ನಡುವೆ(ಯ ಓಣಿ). (ಬ. ವ. ದಲ್ಲಿ) (ಇಬ್ಬರಿಗೆ ನಡೆಯುವ) ಪರಸ್ಪರ ನಡವಳಿಕೆ, ಅಂತರ್ಯವಿನಿಮಯ, ಮೊ. ; ಹೋರಾಟ ; ಕದನ ; ಕಲಹ (=*P. of* or *at arms*) (ಅನೇಕ ವೇಳೆ ರೂಪ.). (ಭಾಷಣದ, ಸಾಹಿತ್ಯಕೃತಿಯ)(ಉದ್ಧೃತ) ಭಾಗ. (ಕ್ರಿ.) (ಕುದುರೆಯ ಅಥವಾ ಸವಾರನ ವಿಷಯದಲ್ಲಿ: ಕುದುರೆಯ ಕತ್ತಿನಮೇಲೆ ಲಗಾಮಿನ ಒತ್ತಡದಿಂದ ಮತ್ತು ಎದುರು ಪಾರ್ಶ್ವದಲ್ಲಿ ಸವಾರನ ಕಾಲೊತ್ತಡದಿಂದ) ಪಕ್ಕಕ್ಕೆ ಸರಿ, ಚಲಿಸು. (ಕುದುರೆಯನ್ನು) ಹೀಗೆ ಚಲಿಸುವಂತೆ ಮಾಡು.

Pássant ಪ್ಯಾಸಂಟ್ (ಗು.) (ವಂಶಲಾಂಛನ) ಮೂರು ಪಂಜಾಗಳನ್ನೂರಿ, ಮುಂದಿನ ಬಲ ಪಂಜಾವನ್ನೆತ್ತಿ, ಬಲಕ್ಕೆ ನೋಡುತ್ತ ನಡೆಯುವಂತಿರುವ.

Passe (F) ಪ್ಯಾಸೆ, ಪಾಸೇ (ಗು., ಸ್ತ್ರೀ. -ee —ಸೀ) ಯೌವನ ಮೀರಿದ ; ಇಳಿ ಜವ್ವನದ ; (ಮು., ಹೆಂಗಸಿನ ವಿಷಯದಲ್ಲಿ) ಅತ್ಯಂತ ಸೌಂದರ್ಯದ ವಯಸ್ಸು ದಾಟಿದ ; ಇಳಿ ಚೆಲುವಿನ. ಕಾಲಕ್ಕೆ ಹಿಂದೆ ಬಿದ್ದ.

Pássenger ಪ್ಯಾಸೆಂಜರ್ (ನಾ.) ನೆಲದಮೇಲಾಗಲಿ ನೀರಿನ ಮೇಲಾಗಲಿ ಸಾರ್ವಜನಿಕ ವಾಹನದ ಮೂಲಕ ಪ್ರಯಾಣಮಾಡುವವನು : (ವಾಹನ) ಪ್ರಯಾಣಿಕ (Foot-p. ಕಾಲ್ನಡಗೆಯ ಪ್ರಯಾಣಿಕ. P.-pigeon ಬಹು ದೂರ ಹಾರಿಹೋಗಬಲ್ಲ ಉ. ಅಮೆರಿಕದ ಒಂದು ಕಾಡು ಪಾರಿವಾಳ ಜಾತಿ). (ಬಳ. ಮಾ.) (ದೋಣಿಪಂದ್ಯಗಾರರು, ಮೊ. ರ ತಂಡದಲ್ಲಿ) ಯಾವುದೊಂದು ಪ್ರಯೋಜಕ ಕಾರ್ಯವನ್ನೂ ಮಾಡ(ಲಾರ)ದವನು.

Passe-partoút (F) ಪಾಸ್‌ಪಾರ್ಟೂ (ನಾ.) ನಾಯಕ ಬೀಗದಕೈ. ಛಾಯಾಚಿತ್ರ, ಮೊ. ನ್ನು ಹಚ್ಚುವ ಆಸರೆಯ ರಟ್ಟು.

Pásserine ಪ್ಯಾಸೆರೈನ್ (ಗು., ನಾ.) Perchers ಎಂಬ ವರ್ಗಕ್ಕೆ ಸೇರಿದ ಒಂದು ಪಕ್ಷಿಜಾತಿ(ಯ). ಗುಬ್ಬಚ್ಚಿಯ ಗಾತ್ರದ.

Pássible ಪ್ಯಾಸಿಬ್‌ಲ್ (ಗು.) (ದೇವ. ಶಾ.) ಮನೋಭಾವಗಳಿಗೆ ಈಡಾಗಬಲ್ಲ ; ವೇದನೆಯನ್ನು ಅನುಭವಿಸಬಲ್ಲ. **Passibílity** (ನಾ.)

Pássim (L) ಪ್ಯಾಸಿಮ್ (ಕ್ರಿ. ವಿ.) (ಪೂರ್ವಕಥಾ ಸೂಚನೆ, ವಾಕ್ಯಾಂಶ, ಮೊ. ಗಳ ವಿಷಯದಲ್ಲಿ : ನಿರ್ದಿಷ್ಟ ಗ್ರಂಥದಲ್ಲಿ, ಗ್ರಂಥಕರ್ತನಲ್ಲಿ, ದೊರೆಯುವುದನ್ನು ಹೇಳುವಾಗ) ಪ್ರತಿ ಭಾಗದಲ್ಲೂ ; ಉದ್ದಕ್ಕೂ ; ಅಲ್ಲಲ್ಲಿ (This occurs in Milton p.)

Pássion ಪ್ಯಾಷ(ಷ್)ನ್ (ನಾ., ಕ್ರಿ. ಅಕ.) ಬಲವಾದ ಮನೋವಿಕಾರ ; ಭಾವೋದ್ರೇಕ ; ಕೆರಳು ; ರಾಗ ; ಕೋಪೋದ್ರೇಕ ; ರೋಷ ; ಕಾಮೋದ್ರೇಕ ; ಬೆದೆ. (ಒಂದಕ್ಕೆ, ಒಂದು ಕೆಲಸ ಮಾಡುವುದಕ್ಕೆ) ಬಲವಾದ ಉತ್ಸಾಹ (*For* thing, *for* doing). ಶಿಲುಬೆಯ ಮೇಲೆ ಯೇಸು ಕ್ರಿಸ್ತನ ಯಾತನೆ (The P.) ; ಬೈಬಲ್ಲಿನಿಂದ ತೆಗೆದ ಇದರ ಕಥನ(ದ ಗಾನ) [P.-play ಕ್ರಿಸ್ತನ ಈ ಯಾತನೆಯನ್ನು ಕುರಿತ ನಾಟಕ. P.-flower ಕ್ರಿಸ್ತನ ಯಾತನೆಯನ್ನು ಸೂಚಿಸುವುದೆಂದು ಭಾವಿಸಿರುವ (ಒಂದು ಬಳ್ಳಿಯ) ಹೂವು. P. Sunday (ಕ್ರೈಸ್ತ) 'ಲೆಂಟ್' ಉಪವಾಸ ವ್ರತದ ಐದನೆಯ ಭಾನುವಾರ. P. week, Holy week (ಕ್ರೈಸ್ತ) ಈಸ್ಟರ್ ಹಬ್ಬದ ಹಿಂದಿನ ವಾರ]. (ಕ್ರಿ.) (ಕಾವ್ಯ : ಮನೋಭಾವವನ್ನು) ಹೊರಗೆಡವು, ವ್ಯಕ್ತಪಡಿಸು, ಅನುಭವ ಮಾಡು. **Pássionless** (ಗು.) ; **Pássionlessly** (ಕ್ರಿ. ವಿ.) ; **Pássionlessness** (ನಾ.) ; **Pássional**[1] (ನಾ.) ಸಾಧು ಸಂತರ ಮತ್ತು ಧರ್ಮಬಲಿಗಳ (ಆಹುತಾತ್ಮರ) ಯಾತನೆಗಳ(ನ್ನು ವರ್ಣಿಸುವ) ಪುಸ್ತಕ. **Pássional**[2] (ಗು.) ಮನೋವಿಕಾರದ ; ಕೆರಳಿನ ; ಉದ್ರೇಕದ ; —ಲಕ್ಷಣವುಳ್ಳ. **Pássionate** —ನೆಟ್ (ಗು.) ಸುಲಭವಾಗಿ ಕೋಪಗೊಳ್ಳುವ, ಕೆರಳುವ ; ಕೋಪ ಸ್ವಭಾವದ ; ರೋಷಾವಿಷ್ಟ ; ಭಾವೋದ್ರಿಕ್ತ ; ಗಾಢಾನುರಕ್ತ ; ರಾಗೋಜ್ಜ್ವಲ ; ಭಾವೋದ್ದೀಪ್ತ. (ಭಾಷೆ, ಮೊ. ಗಳ ವಿಷಯದಲ್ಲಿ) —ನ್ನು ತೋರಿಸುವ, ವ್ಯಕ್ತಗೊಳಿಸುವ ; ಆವೇಶದ ; ಉದ್ರೇಕದ. **Pássionately** (ಕ್ರಿ. ವಿ.) ; **Pássionateness** (ನಾ.) ; **Pássionist** (ನಾ.) ಯೇಸು ಕ್ರಿಸ್ತನ ಶಿಲುಬೆಯಮೇಲಿನ ಯಾತನೆಯ ನೆನಪು ಅಳಿಯದಂತೆ ಸರ್ವ ಪ್ರಯತ್ನ ಮಾಡುವ ಪ್ರತಿಜ್ಞೆ ತೊಟ್ಟ ಒಂದು ಸಂಸ್ಥೆಯವನು.

Pássional, Pássionate, Pássionist. **Passion** ನೋಡಿ.

Pássive ಪ್ಯಾಸಿವ್ (ಗು., ನಾ.) (ಒಂದು ಕ್ರಿಯೆಯನ್ನು) ಸಹಿಸುವ ; (—ಗೆ) ಈಡಾಗುವ ; (ತಾನು ಕಾರ್ಯ ಮಾಡದೆ) ನಿವೃತ್ತಿ ಭಾವದಿಂದ ಇರುವ ; ನಿಷ್ಕ್ರಿಯ ; ನಿರ್ವ್ಯಾಪಾರ ; ನಿಷ್ಪ್ರಯತ್ನ ; ಅನಾಸಕ್ತ. [(ವ್ಯಾ.) P. voice ಕರ್ಮಣಿ ಪ್ರಯೋಗ (Active ಹೋಲಿಸಿ)]. ಎದುರಿಸದ ; ಪ್ರತಿಭಟಿಸದ ; ಸಹಿಸಿಕೊಂಡುಹೋಗುವ. [P. resistance (Resistance ನೋಡಿ)]. ಚಟುವಟಿಕೆಯಿಲ್ಲದ ; ಅಪ್ರವರ್ತಕ ; ನಿಶ್ಚೇಷ್ಟ ; ಜಡ ; (P. debt ಬಡ್ಡಿ ಕೊಡದ ಸಾಲ). (ನಾ.) ಕರ್ಮಣಿ ಪ್ರಯೋಗ ; ಕರ್ಮಣಿ ಕ್ರಿಯಾರೂಪ. **Pássively** (ಕ್ರಿ. ವಿ.) ; **Pássiveness** (ನಾ.) ; **Passívity** (ನಾ.) —ಗುಣ, ಸ್ಥಿತಿ, ರೀತಿ.

Pássover ಪಾಸೋವರ್ (ನಾ.) ದೇವರು ಈಜಿಪ್ಟಿನವರ ಹಿರಿಯ ಮಕ್ಕಳನ್ನು ವಧೆಗೀಡುಮಾಡಿದಾಗ ಅಲ್ಲಿದ್ದ ಯೆಹೂದ್ಯರ ಮನೆಗಳ ಗೊಡವೆಗೆ ಹೋಗದೆ ಅವರನ್ನು ಸಂರಕ್ಷಿಸಿದುದರ ಸ್ಮಾರಕವಾಗಿ ಆಚರಿಸುವ ಯೆಹೂದ್ಯರ ಒಂದು ಹಬ್ಬ. ಈ ಹಬ್ಬದಲ್ಲಿ ಬಲಿ ಕೊಡುವ ಕುರಿಮರಿ ; (ರೂಪ.) ಯೇಸು ಕ್ರಿಸ್ತ.

Pássport ಪಾಸ್‌ಪೋರ್ಟ್ (ನಾ.) (ಒಬ್ಬನು ಒಂದು ದೇಶದಲ್ಲಿ ಪ್ರಯಾಣ ಮಾಡುವುದಕ್ಕೂ, ಹಾಗೆ ಮಾಡುವಾಗ ತಕ್ಕ ಸಂರಕ್ಷಣೆ ಪಡೆಯುವ ಹಕ್ಕಿರುವುದಕ್ಕೂ, ಆ ದೇಶದ ನಿಯುಕ್ತಾಧಿಕಾರಿ ಕೊಡುವ) ಪ್ರವಾಸಾಧಿಕಾರ ಪತ್ರ, ರಹದಾರಿ. (ರೂಪ.) ಪ್ರವೇಶಕ್ಕೆ, ಅಂಗೀಕಾರಕ್ಕೆ, ಮಾರ್ಗ (Flattery is the sole p. to his favour)

Past ಪಾಸ್ಟ್ (ಗು., ನಾ., ಉಪ., ಕ್ರಿ. ವಿ.) (ಭೂ. ಕೃ. ಅಥವಾ ಗು. : Pass ಪದದ ಕ್ರಿಯಾರ್ಥಗಳಲ್ಲಿ) ; (ಕಾಲ) (ಆಗಿ)ಹೋದ ; ಕಳೆದ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಳೆದುಹೋದ; ಸಂದ; ಗತ (His prime is p. Our p. years). ಈಗ ತಾನೆ ಮುಗಿದ, ಕಳೆದ (The p. month. For some time p.). (ವ್ಯಾ.) ಭೂತ (ಕಾಲದ) (P. tense. P. participle ಭೂತ ಕೃದಂತ). [P. master (ವೃತ್ತಿಸಂಘ, ಫ್ರೀಮೇಸನ್ ಸಂಸ್ಥೆ, ಮೊ. ಗಳಲ್ಲಿ) ಯಜಮಾನ, ಅಧ್ಯಕ್ಷ, —ಆಗಿದ್ದವನು. (ಯಾವುದಾದರೂ ವಿಷಯದಲ್ಲಿ, ಶಾಸ್ತ್ರದಲ್ಲಿ) ಪ್ರವೀಣ, ಪಾರಂಗತ (*In*, *of*, a subject)]. (ನಾ.) ಕಳೆದುಹೋದ ಕಾಲ; ಗತ ಕಾಲ (The p.); ಗತ ಕಾಲದಲ್ಲಾದದ್ದು; ಹಿಂದೆ ಆಗಿಹೋದದ್ದು (Cannot undo the p.). ಒಬ್ಬನ ಹಿಂದಿನ ಜೀವಿತ (ಮು., ವಿಚಾರಕ್ಕೆ ಅವಕಾಶವಿಲ್ಲದ್ದು, ವಿಚಾರ ಮಾಡಬಾರದ್ದು; ವಿಚಾರಾರ್ಹವಲ್ಲದ್ದು) (A woman who has had a. p.). (ಉಪ.) (ಕಾಲ, ಸ್ಥಳ) ಮೀರಿ, ದಾಟಿ (Stayed till p. two o'clock. Half p. three. Old man p. seventy. Ran p. the house). ಮಿತಿ ಮೀರಿ; ಮೇರೆವರಿದು (P. endurance ಸಹನಾತೀತ). (ಕ್ರಿ. ವಿ.) ಹಾದು (Hastens p.)

Paste ಪೇಸ್ಟ್ (ನಾ., ಕ್ರಿ. ಸಕ.) (ಭಕ್ಷ್ಯ ಮಾಡಲು ನೀರುಹಾಕಿ ಕಲಸಿ, ಬೆಣ್ಣೆ, ಮೊ. ನ್ನು ಬೆರಸಿ) ನಾದಿದ ಹಿಟ್ಟು: ಕಣಕ; ಜಲ ಪಿಷ್ಟ; ಅಂಟು ಹಿಟ್ಟು. ಹಲವು ಬಗೆಯ ಮಿಠಾಯಿ. ಮೀನಪಿಷ್ಟದ ವ್ಯಂಜನ (Anchovy p.). (ಹಿಟ್ಟಿನ) ಸರಿ. (ಯಾವುದಾದರೂ) ಮೃದು ನಮ್ಯಕ (plastic) (ಮಿಶ್ರಣ). ಕೃತಕ ರತ್ನಗಳನ್ನು ರಚಿಸಲು ಉಪಯೋಗಿಸುವ ಒಂದು ಗಡುಸು ಕಾಚಸಂಯೋಜನೆ. [Pasteboard (ಕಾಗದದ ಹಾಳೆಗಳನ್ನು ಒಂದರಮೇಲೊಂದು ಅಂಟಿಸಿ ಮುದುಡದಂತೆ ಮಾಡಿದ) ರಟ್ಟು ಹಾಳೆ. (ವಿಶೇಷಣವಾಗಿ, ರೂಪ.) ಹುರುಳಿಲ್ಲದ; ಅದೃಢ; ಜಾಳಾದ. (ಅಸಂ.) ಭೇಟಿಯ ಚೀಟಿ; ರೈಲ್ವೆ ಟಿಕೆಟ್ಟು]. (ಕ್ರಿ.) (ಸರಿ ಹಾಕಿ) ಅಂಟಿಸು; ಗೋಡೆಗೆ (ನಾಟಕದ ಪ್ರಕಟನೆಯ ಹಾಳೆ, ಮೊ. ನ್ನು) ಅಂಟಿಸು, ಹಚ್ಚು. ಒಂದನ್ನು (ಕಾಗದ, ಮೊ. ರಿಂದ) ಅಂಟಿಸಿ ಮುಚ್ಚು. (ಅಸಂ.) ಹೊಡೆ; ಸದೆ ಬಡಿ. **Pásty** (ಗು., ನಾ.) ಜಲಪೇಷದ(ಂಥ); ಸರಿಯ(ಂಥ). ಬಿಳಿಚು ಮುಖಚ್ಛಾಯೆಯುಳ್ಳ (=P.-faced). ಜಿಂಕೆಯ ಮಾಂಸದ ಹೂರಣದ ಹಿಟ್ಟುಗಡುಬು.

Pástel ಪ್ಯಾಸ್ಟೆಲ್ (ನಾ.) ಒಂದು ಬಗೆಯ ನೀಲ ವರ್ಣದ್ರವ್ಯವನ್ನು ಪಡೆಯಲಾಗುವ ('ವೋಡ್' ಎಂಬ) ಒಂದು ಸಸ್ಯ. (ಇದರಿಂದ ದೊರೆಯುವ) ನೀಲಿ ಬಣ್ಣ. ಬಣ್ಣದ ಬಳಪಗಳನ್ನು ಮಾಡಲು (ವರ್ಣದ್ರವ್ಯಗಳ ಪುಡಿಯನ್ನು ಗೋಂದುನೀರಿನೊಡನೆ ಕಲಸಿ ಮಾಡಿದ) ಒಣ ಕಣಕ. ಬಣ್ಣ ಬಳಪದಿಂದ ಬರೆದ ರೇಖಾಚಿತ್ರ. **Pástel(l)ist** (ನಾ.)

Pástern ಪ್ಯಾಸ್ಟರ್ನ್ (ನಾ.) ಕುದುರೆಯ ಚುಂಚುಕಾಲಿಗೂ ಗೊರಸಿಗೂ ಮಧ್ಯೇ ಇರುವ ಭಾಗ.

Pásteurism ಪಾ(ಪ್ಯಾ)ಸ್ಟರಿಸ್ಮ್ (ನಾ.) ರೋಗಗಳನ್ನು (ಮು., ಹುಚ್ಚುನಾಯಿ ಕಡಿತದಿಂದ ಬರುವ ರೋಗವನ್ನು) ಸೂಜಿಮದ್ದಿನ ಅನುಕ್ರಮ ಪ್ರಯೋಗದಿಂದ ವಾಸಿಮಾಡುವ, ನಿರೋಧಿಸುವ, —ಚಿಕಿತ್ಸೆ; ಪಾಸ್ಟರ್ ಚಿಕಿತ್ಸೆ. **Pásteurize** ಪಾಸ್ಟರೈಸ್, ಪ್ಯಾಸ್ಚ್ಯು(ಸ್ಟ)ರೈಸ್ (ಕ್ರಿ. ಸಕ.) ತಕ್ಕಮಟ್ಟಿಗೆ ವಿಷ ಜೀವಾಣುಗಳ ಶಕ್ತಿಗುಂದಿಸಲು (ಹಾಲು, ಮೊ. ನ್ನು) ಪಾಸ್ಟರ್ ಸಂಸ್ಕಾರಕ್ಕೆ ಒಳಪಡಿಸು; ಪಾಸ್ಟರ್ ಚಿಕಿತ್ಸೆ ಮಾಡು. **Pasteurizátion** (ನಾ.). [Pasteur (1822-1895) ಎಂಬ ಫ್ರೆಂಚ್ ವೈಜ್ಞಾನಿಕನ ಹೆಸರಿನಿಂದ]

Pastíccio ಪಾಸ್ಟಿಟ್‌ಷೊ(ೕ), ಪಾಸ್ಟೀಟ್‌ಚೊ, **Pastíche** ಪಾಸ್ಟೀಷ್ (ನಾ.) ಕಲಬೆರಕೆ; ಸಂಮಿಶ್ರಣ; ಸಂಕರ; (ಮು., ಹಲವು ಆಕರಗಳಿಂದ, ಕೃತಿಗಳಿಂದ, ಎತ್ತಿ ತೆಗೆದ) ಸಂಕೀರ್ಣ ಗೀತ, —ಚಿತ್ರ. (-iche) ಒಬ್ಬ ಪ್ರಸಿದ್ಧ ಕರ್ತೃವಿನ ಶೈಲಿಯಲ್ಲಿ ರಚಿಸಿದ ಸಾಹಿತ್ಯ ಕೃತಿ, ಕಲಾ ಕೃತಿ: ಅನುಕರಣ ಕೃತಿ.

Pástil ಪ್ಯಾಸ್ಟಿಲ್, **Pastílle** —ಸ್ಟೀಲ್ (ನಾ.) (ಸುವಾಸನೆಯ, ನಿರ್ಗಂಧಕರಣದ, ವಿಷಾಣು ನಾಶಕದ) ಧೂಪವಾಗಿ ಉರಿಸುವ ಸುವಾಸನಾ ಪೇಷದ ಕಡ್ಡಿ, ಸುರುಳಿ; ಊದುಬತ್ತಿ. (ಮಿಠಾಯಿ, ಔಷಧ, ಮೊ. ಗಳ) ಬತ್ತಾಸು, ಬಿಲ್ಲೆ.

Pástime ಪಾಸ್ಟೈಮ್ (ನಾ.) (ಮನೋರಂಜನೆಯ, ವಿಶ್ರಾಂತಿಗಾಗಿ ಏರ್ಪಡಿಸಿದ) ಆಟ; ಕ್ರೀಡೆ; ಕೇಳಿ; ವಿನೋದ; ಕಾಲಕ್ಷೇಪ.

Pástor ಪಾಸ್ಟರ್ (ನಾ.) ಕ್ರೈಸ್ತ ದೇವಾಲಯದ, ಶಿಷ್ಯಮಂಡಲಿಯ, ಧರ್ಮಾಧಿಕಾರಿ [**Pástorship** (ನಾ.)]. ಧರ್ಮ ಮಾರ್ಗ ದರ್ಶಕ. ಕಾಗೆಯ ಜಾತಿಯ ಒಂದು ಹಕ್ಕಿ. **Pástoral** ಪಾಸ್ಟೊರಲ್ (ಗು., ನಾ.) ಕ್ರೈಸ್ತ ಧರ್ಮಾಧಿಕಾರಿಯ (P. epistles 'ಪಾಸ್ಟರಿ'ನ ಕರ್ತವ್ಯಗಳನ್ನು ಕುರಿತ ಪತ್ರಗಳು). ಕುರುಬರ; (ಭೂಮಿ) ಹುಲ್ಲುಗಾವಲಾಗಿ ಉಪಯೋಗಿಸುವ. (ಕವಿತೆ, ಮೊ. ವು) ಹಳ್ಳಿಗಾಡಿನ ಜೀವನವನ್ನು ಚಿತ್ರಿಸುವ; ಗ್ರಾಮಕ [**Pástoralism** (ನಾ.)]. (ನಾ.) ಹಳ್ಳಿಯ ಜೀವನದ, ಗ್ರಾಮಕ, —ನಾಟಕ, ಕಾವ್ಯ, ಕವಿತೆ, ಚಿತ್ರ. (ಕ್ರೈಸ್ತ ಪುರೋಹಿತರಿಗೆ ಅಥವಾ ಶಿಷ್ಯರಿಗೆ) ಕ್ರೈಸ್ತ ಧರ್ಮಾಧಿಕಾರಿಯು (ಮು., ಬಿಷಪ್ಪಿನ) ಪತ್ರ. **Pastorálity** (ನಾ.); **Pástorally** (ಕ್ರಿ. ವಿ.); **Pastorále** ಪಾಸ್ಟೊರಾಲೆ(ಲಿ) (ನಾ.; ಬ. ವ. -ali —ಲೀ, -ales) ಹಳ್ಳಿಯ ಜೀವನದ ವಿಷಯವನ್ನು ಕುರಿತ ಸಂಗೀತ ಕೃತಿ. **Pástorate** ಪಾಸ್ಟೊರೆಟ್ (ನಾ.) ಪಾಸ್ಟರಿನ ಅಧಿಕಾರ, ಅಧಿಕಾರಾವಧಿ; ಕ್ರೈಸ್ತ ಧರ್ಮಾಧಿಕಾರಿ ಮಂಡಲಿ.

Pástoral, Pastorále, Pástorate. **Pastor** ನೋಡಿ.

Pástry ಪೇಸ್ಟ್ರಿ (ನಾ.) ಅಟ್ಟ ಕಣಕ; ಪೂರ್ತಿಯಾಗಿ ಅಥವಾ ಸ್ವಲ್ಪ ಮಟ್ಟಿಗೆ ಇದರಿಂದ ಮಾಡಿದ ಭಕ್ಷ್ಯ; ಪಿಷ್ಟ ಭಕ್ಷ್ಯ. P.-cook (ಸಾ., ಮಾರಾಟಕ್ಕಾಗಿ) ಪಿಷ್ಟ ಭಕ್ಷ್ಯಗಳನ್ನು ಮಾಡುವವನು.

Pásture ಪಾಸ್ಚ್ಯು(ಸ್ಟ)ರ್ (ನಾ., ಕ್ರಿ.) ದನಗಳ ಮೇವು; ಹಸಿ ಹುಲ್ಲು; ಹುಲ್ಲುಗಾವಲು; ಗೋಮಾಳ. (ಕ್ರಿ.) ಮೇಯಿಸಲು, ಮೇಯಲು, (ದನಗಳನ್ನು) ಹುಲ್ಲುಗಾವಲಿಗೆ ಬಿಡು, ತೆಗೆದುಕೊಂಡು ಹೋಗು; (ಕುರಿ, ಮೊ. ವು, ಹುಲ್ಲುಗಾವಲನಲ್ಲಿ) ಮೇಯಿ. **Pásturable** (ಗು.); **Pásturage** ಪಾಸ್ಚ್ಯು(ಸ್ಟ)ರೆ(ರಿ)ಜ್ (ನಾ.) ಹುಲ್ಲುಗಾವಲಿನಲ್ಲಿ ಮೇಯಿಸುವುದು. ದನಗಳಿಗೆ ಹುಲ್ಲು, ಸೊಪ್ಪು—ಇವುಗಳ ಮೇವು; ಹುಲ್ಲುಗಾವಲು; ಗೋಮಾಳ.

Pat[1] ಪ್ಯಾಟ್ (ನಾ., ಕ್ರಿ.) (ಮು., ಮುದ್ದಿಗಾಗಿ, ಪ್ರೀತಿ ಸೂಚಕವಾಗಿ, ಮಾಡಿದ) ಕೈ ತಟ್ಟು; ಬೆನ್ನು ತಟ್ಟು. ತಟ್ಟಿ ಆಕಾರ ಕೊಟ್ಟ (ಮು., ಬೆಣ್ಣೆಯ) ಸಣ್ಣ ಮುದ್ದೆ, ಬಿಲ್ಲೆ. ಚಪ್ಪಟೆಯ ವಸ್ತುವಿನಿಂದ ತಟ್ಟಿದರೆ ಆಗುವ ಸದ್ದು: ತಟ್ಟು ಸದ್ದು. (ಕ್ರಿ.) ಮೆಲ್ಲಗೆ ತಟ್ಟು. [P.-ball (ತಿರಸ್ಕಾರವಾಗಿ) ಟೆನಿಸ್ ಆಟ]. ತಟ್ಟಿ ಚಪ್ಪಟೆ ಮಾಡು. [P.-a-cake ಮಕ್ಕಳ ಒಂದು ಹಾಡಿನ ಮೊದಲನೆಯ ಮಾತುಗಳು; (ಇದಕ್ಕೆ ಸಂಬಂಧಿಸಿದ) ಒಂದು ಮಕ್ಕಳಾಟ]. (ಮು., ಸಹಾನುಭೂತಿ, ಮೆಚ್ಚಿಕೆ, ಮೊ. ನ್ನು ಸೂಚಿಸುವುದಕ್ಕಾಗಿ ಕೈಬೆರಳುಗಳಿಂದ) ಮೆಲ್ಲಗೆ ತಟ್ಟು. (ರೂಪ.) P. (person, oneself) on the back ಬೆನ್ನು ತಟ್ಟು; ಮೆಚ್ಚಿಕೆ ತೋರು. (—ಮೇಲೆ) ಮೆಲ್ಲಗೆ ತಟ್ಟು (*Upon* ಉಪ. ದೊಡನೆ)

Pat[2] ಪ್ಯಾಟ್ (ಕ್ರಿ. ವಿ., ಗು.) ತಕ್ಕ(ಂತೆ); ಸಮಯೋಚಿತ(ವಾಗಿ) (The story came p. to his purpose)

Pat[3] ಪ್ಯಾಟ್ (ನಾ.) ಐರ್ಲಂಡಿನವನು; —ನ ಅಡ್ಡ ಹೆಸರು.

Patagíum (L) ಪ್ಯಾಟಜೈಅಮ್, **Patágium** ಪಟೇಜಿಯಂ (ನಾ.) (ಪ್ರಾ. ವಿ.; ಬ. ವ. -ia) ಬಾವಲಿಯ(ಂಥ ಹಕ್ಕಿಯ) ಪೊರೆ.

Patch ಪ್ಯಾಚ್ (ನಾ., ಕ್ರಿ. ಸಕ.) ತೂತನ್ನು ಅಥವಾ ಹರಕನ್ನು ಮುಚ್ಚಲು ತೇಪೆಹಾಕಿದ ಬಟ್ಟೆಯ, ಲೋಹದ—ಚೂರು; ತೇಪೆ; ಗಾಯದಮೇಲೆ ಹಚ್ಚುವ ಮುಲಾಮು ಪಟ್ಟಿ, ಮೊ. ದು; ಪಲಾಸ್ತ್ರಿ; ಗಾಯವಾದ ಕಣ್ಣಿಗೆ ಅಪಾಯವಾಗದಂತೆ ರಕ್ಷಕವಾಗಿ ಕಟ್ಟುವ ಮೆತ್ತೆ ಪಟ್ಟಿ. [Not a p. on ಸ್ವಲ್ಪವೂ ಹೋಲಿಕೆಯಿಲ್ಲ; (ಅದಕ್ಕೂ ಇದಕ್ಕೂ) ಸಂಬಂಧವೇ ಇಲ್ಲ; ಅಜ ಗಜಾಂತರ]. ಮುಖಾಲಂಕಾರಕ್ಕಾಗಿ ೧೭-೧೮ನೆಯ ಶತಮಾನಗಳಲ್ಲಿ ಮುಖಕ್ಕೆ ಹಚ್ಚಿಕೊಳ್ಳುತ್ತಿದ್ದ ಕಪ್ಪು ರೇಷ್ಮೆಯ ಬಟ್ಟುಗಳು. ಮೇಲ್ಮೈಯಲ್ಲಿ ದೊಡ್ಡ ಅಥವಾ ಸೊಟ್ಟ ಮಚ್ಚೆ, ಕಲೆ. ಒಂದು ಮಡಿ ನೆಲ; ಇದರಲ್ಲಿ ಬೆಳೆದ ಸಸಿ (A p. of beans). ಚೂರು ಪಾರು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಅವ)ಶೇಷ ; ಉಳಿಕೆ. [**Patchwork** (ಬೇರೆ ಬೇರೆ ಬಗೆಯ ಮತ್ತು ಬೇರೆ ಬೇರೆ ಬಣ್ಣದ ತುಂಡುಗಳನ್ನು ಸೇರಿಸಿ ಮಾಡಿದ) ತೇಪೆ ಕೆಲಸ (ವಿಶೇಷಣವಾಗಿಯೂ ರೂಪಕವಾಗಿಯೂ ಸಹ ಪ್ರ.)]. (ಕ್ರಿ.) ತೇಪೆ (ಗಳನ್ನು) ಹಾಕು (P. up ತೇಪೆ ಹಾಕಿ ನೇರ್ಪಡಿಸು). (ಪದಾರ್ಥದ ವಿಷಯದಲ್ಲಿ) (—ಕ್ಕೆ) ತೇಪೆಯಾಗು. (ರೂಪ., ಸಾ., P. up) (ವಿಷಯ, ತೊಂದರೆ, ಜಗಳ, ಮೊ. ನ್ನು) ಸರಿಪಡಿಸು, ನೇರ್ಪಡಿಸು, ಸಮಂಜಸ ಮಾಡು. ಅವಸರವಸರವಾಗಿ ಜೋಡಿಸು, ಒಂದುಗೂಡಿಸು (ಸಾ., P. up); (ವಸ್ತುಗಳನ್ನು, ವಿಷಯಗಳನ್ನು) ಸೇರಿಸಿ ಒಂದು ಮಾಡು (ರೂಪ. ಸಹ). (ಮೇಲ್ಮೈಯಲ್ಲಿ) ಮಚ್ಚೆ ಮಚ್ಚೆಗಳಾಗಿ ಕಾಣು. **Pátchery** (ನಾ.); **Pátchily** (ಕ್ರಿ. ವಿ.); **Pátchiness** (ನಾ.); **Pátchy** (ಗು.)

Pátchouli ಪ್ಯಾಚುಲಿ, **Patchoúli** ಪಚೂಲಿ (ನಾ.) ಇಂಡಿಯದ ಒಂದು ಸುವಾಸನಾ ಸಸ್ಯ: ಪಚ್ಚೆತೆನೆ; ಇದರಿಂದ ತಯಾರಿಸಿದ ಸುವಾಸನಾ ದ್ರವ್ಯ.

Pate ಪೇಟ್ (ನಾ.) (ಈಗ ಬಳ. ಮಾ.) ತಲೆ (ಬುದ್ಧಿಯ ನೆಲೆಯೆಂದು ಪರಿಗಣಿಸುವ ಅಂಗ). **-pated** (ಗು.)

Patélla (L) ಪಟೆಲ (ನಾ.) ಮಂಡಿಚಿಪ್ಪು. [**Patéllar** (ಗು.) ಮಂಡಿ ಚಿಪ್ಪಿನ. **Pátellate** (ಗು.) ಮಂಡಿಚಿಪ್ಪುಳ್ಳ; ಮಂಡಿಚಿಪ್ಪಿನಂತೆ, ಮಂಡಿಚಿಪ್ಪಾಗಿ, —ರಚಿಸಿದ]. (ರೋ. ಪ್ರಾ.) ಸಣ್ಣ ತವೆ; ಗುಂಡು ಕಾವಲಿ.

Páten ಪ್ಯಾಟೆನ್ (ನಾ.) ಪ್ರಭುಭೋಜನ ಸಂಸ್ಕಾರದಲ್ಲಿ ರೊಟ್ಟಿಯಿಡುವ (ಸಾ., ಬೆಳ್ಳಿಯ, ದುಂಡಗಿರುವ, ಆಳವಿಲ್ಲದ) ತಟ್ಟೆ; ಲೋಹದ ದುಂಡ ನೆಯ ತೆಳು ಬಿಲ್ಲೆ.

Pátency. **Patent** ನೋಡಿ.

Pátent ಪೇ(ಪ್ಯಾ)ಟೆಂಟ್ (ಗು., ನಾ., ಕ್ರಿ. ಸಕ.) [Letters p. ಹಕ್ಕು, ಸ್ವಾಮ್ಯ, ಅಧಿಕಾರ, ಮೊ. ನ್ನು ದೊರೆ, ಮೊ. ರು ಅನುಗ್ರಹಿಸಿ ಕೊಟ್ಟ ಬಹಿರಂಗ ಪತ್ರ: ಸ್ವಾಮ್ಯದ ಸನ್ನದು (ಮು., ಯಾವುದಾದರೂ ಹೊಸ ಕಲ್ಪನೆಯನ್ನು ತಯಾರಿಸಲು, ಉಪಯೋಗಿಸಲು, ಅಥವಾ ಮಾರಲು ಒಂದು ಗೊತ್ತಾದ ಕಾಲಾವಧಿಗೆ ಏಕ ಸ್ವಾಮ್ಯವಾಗಿ ಕೊಟ್ಟ ಹಕ್ಕುಪತ್ರ)]. ಈ ಹಕ್ಕುಪತ್ರ ಕೊಡಲ್ಪಟ್ಟ; —ದಿಂದ ರಕ್ಷಣೆ ಪಡೆದ. P. leather (Leather ನೋಡಿ). (ರೂಪ.) ಸಂಪೂರ್ಣ ಸ್ವಾಮ್ಯದ (ಹಕ್ಕುಳ್ಳ). (ಬಳ. ಮಾ.) ಸಂಪೂರ್ಣ ಸ್ವಾಮ್ಯ ಪಡೆಯಲು ತಕ್ಕಂಥ. ಚತುರ ರಚನೆಯ; ಉತ್ತಮ ಯೋಜನೆಯ. (ಬಾಗಿಲು, ಮೊ.) ತೆರೆದಿರುವ, ಪ್ರವೇಶವಿರುವ. (ರೂಪ.) ಸ್ಪಷ್ಟ; ವ್ಯಕ್ತ. (ನಾ.) = Letters p.; ಸ್ವಾಮ್ಯ ಪಡೆದ ತಯಾರಿಕೆ, ವಿಧಾನ. (ರೂಪ.) ಯಾವುದಾದರೂ ಒಂದಕ್ಕೆ ಹಕ್ಕಿರುವುದೆಂದಾಗಲಿ, ಒಂದು ಗುಣ, ಮೊ. ನ್ನು ಪಡೆದಿರುವು ದೆಂದಾಗಲಿ, ನಿರೂಪಿಸುವ ಗುರುತು, ಚಿಹ್ನೆ (A p. of gentility). [P. office ಸ್ವಾಮ್ಯದ ಸನ್ನದು ಕೊಡುವ ಕಚೇರಿ. P.-roll (ಗ್ರೇಟ್ ಬ್ರಿಟನ್ನಿನಲ್ಲಿ ಒಂದು ವರ್ಷದಲ್ಲಿ ಕೊಟ್ಟ) ಸ್ವಾಮ್ಯದ ಸನ್ನದುಗಳ(ನ್ನು ತೋರಿಸುವ) ಪಟ್ಟಿ]. (ಕ್ರಿ.) (ಹೊಸ ಕಲ್ಪನೆಗೆ) ಸ್ವಾಮ್ಯದ ಸನ್ನದು ಪಡೆ, ಕೊಡು. **Pátency** (ನಾ.) ನೋಡಲು ತೆರೆದಿಟ್ಟಿರುವ, ಸ್ಪಷ್ಟ ವಾಗಿರುವ, ಗೋಪ್ಯವಿಲ್ಲದ, —ಸ್ಥಿತಿ; ತೆರೆದು ಬಿಟ್ಟಿರುವ, ವಿಸ್ತರಿ ಸಿರುವ, ಅಡಚಣೆಯಿಲ್ಲದಿರುವ, —ಸ್ಥಿತಿ. **Pátently** (ಕ್ರಿ. ವಿ.); **Patenteé** (ನಾ.) ಸನ್ನದು ತೆಗೆದುಕೊಂಡಿರುವವನು, ಅನುಭವ ದಲ್ಲುಳ್ಳವನು; ಸನ್ನದುದಾರ.

Páter (L) ಪೇ(ಪಾ)ಟರ್ (ನಾ.) (ಶಾಲಾ ಬಾಲಕನ ಅನಂ.) ತಂದೆ; ಅಪ್ಪ.

Páterfamílias (L) ಪೇ(ಪ್ಯಾ)ಟರ್‌ಫಮಿಲ್ಯಸ್ (ನಾ.) (ರೋಮನ್ ನ್ಯಾ. ಶಾ., ಹಾಸ್ಯ ಪ್ರ.) ಕುಟುಂಬದ ಒಡೆಯ, ಯಜಮಾನ; ಗೃಹ ಪತಿ.

Patérnal ಪಟರ್ನಲ್ (ಗು.) ತಂದೆಯ; ಪಿತೃವಿನ; ತಂದೆಯಂಥ; ತಂದೆಯ ಕಡೆಯ ಸಂಬಂಧದ [P. grandmother ತಂದೆಯ ತಾಯಿ; ಪಿತಾಮಹಿ. P. government, legislation ಪ್ರಜೆಗಳ ಅಭಿಪ್ರಾಯಕ್ಕೆ ಗಮನ ಕೊಡದೆ ತಂದೆ ಮಕ್ಕಳ ವಿಷಯದಲ್ಲಿ ಹೇಗೊ ಹಾಗೆ ನಡೆದುಕೊಳ್ಳುವ ಪಿತೃಪ್ರಾಯದ ಸರ್ಕಾರ, ಶಾಸನ ರಚನೆ]. **Patérnalism** (ನಾ.) ಪಿತೃಪ್ರಾಯತೆ. **Patérnally** (ಕ್ರಿ. ವಿ.); **Patérnity** (ನಾ.) ತಂದೆತನ; ಪಿತೃತ್ವ; ಪಿತೃ ಸಂಬಂಧ; (ಒಬ್ಬನ) ಪಿತೃ ವಂಶ, ಮೂಲ; (ರೂಪ.) ಕರ್ತೃತ್ವ; ಜನಕತ್ವ; ಮೂಲ (P. of a book ಗ್ರಂಥ ಕರ್ತೃತ್ವ)

Páternóster ಪ್ಯಾಟರ್‌ನಾಸ್ಟರ್ (ನಾ.) (ಮು., ಲ್ಯಾಟಿನಿನಲ್ಲಿರುವ) ಭಗವತ್‌ಪ್ರಾರ್ಥನೆ; (Black, white, p. ರಕ್ಷೆಗಾಗಿ ಉಚ್ಚರಿಸುವ ಗೊತ್ತಾದ ಕೆಲವು ಮಂತ್ರ, ಮೊ. ಗಳು. Devil's p. ಗೊಣಗುಟ್ಟಿ ಇಟ್ಟ ಶಾಪ). ದೈವ ಪ್ರಾರ್ಥನೆ ಹೇಳಬೇಕೆಂದು ಸೂಚಿಸುವ ಜಪಸರದ ಮಣಿ. P. line ದಾರದ ಉದ್ದಕ್ಕೂ ಅಲ್ಲಲ್ಲಿ ಕೊಕ್ಕೆಗಳನ್ನು ಹಾಕಿ ಭಾರ ಕಟ್ಟಿರುವ ಗಾಳದ ದಾರ.

Path ಪಾತ್ (ನಾ.; ಬ. ವ. -s, —ದ್ಸ್) ಕಾಲುದಾರಿ, ಕಾಲು ಹಾದಿ (ಮು., ನಡೆದು ನಡೆದು ಆದದ್ದು, ಮಾಡಿದ್ದಲ್ಲ; = Pathway). ಕಾಲು ನಡಗೆಯ ಅಥವಾ ಬೈಸಿಕಲ್ಲಿನ ಜೂಜೋಟಕ್ಕಾಗಿ ಮಾಡಿದ ಹಾದಿ [= ಮು., cinder-p. (Cinder ನೋಡಿ)]. (ವ್ಯಕ್ತಿ, ವಸ್ತು) ಚಲಿಸುವ ಪಥ, ಹಾದಿ; ಮಾರ್ಗ ರೇಖೆ. **Páthless** (ಗು.)

Pathán ಪಠಾನ್, ಪಠಾನ್ (ನಾ.) ಇಂಡಿಯದಲ್ಲಿ ಅಥವಾ ಅದರ ವಾಯವ್ಯ ಪ್ರಾಂತದ ಗಡಿಯಲ್ಲಿ ನೆಲಸಿರುವ ಆಫ್‌ಗನ್ ಬುಡಕಟ್ಟಿನವನು: ಪಠಾನ.

Pathétic ಪಥೆಟಿಕ್ (ಗು., ನಾ.) ಮರುಕ, ಕನಿಕರ, ಕರುಣೆ, ವ್ಯಥೆ,—ಹುಟ್ಟಿಸುವ; ವ್ಯಸನಕರ; ಮನಸ್ಸು ಕರಗಿಸುವ; ಹೃದಯ ದ್ರಾವಕ. ಮನೋಭಾವಗಳ; (ಮನೋ)ರಾಗಗಳ (P. fallacy ಪ್ರಕೃತಿಗೆ ಮಾನವ ಮನೋಭಾವಗಳನ್ನು ಆರೋಪಿಸುವ ಅಲಂಕಾರ). (ನಾ., ಬ. ವ. ದಲ್ಲಿ) ಈ ಭಾವಗಳ ವಿಚಾರ, ಅನುಭವ, ಪ್ರದರ್ಶನ; ಮರುಕ ಹುಟ್ಟಿಸುವ (ಉದ್ದೇಶವುಳ್ಳ) ಮಾತುಗಳು, ಅಭಿಪ್ರಾಯಗಳು, ಕ್ರಿಯೆಗಳು, ಮೊ. **Pathétically** (ಕ್ರಿ. ವಿ.); **Páthos** ಪೇ(ಪ್ಯಾ)ತಾಸ್ (ನಾ.) (ಮಾತು, ಬರವಣಿಗೆ, ಘಟನೆ, ಮೊ. ಗಳಲ್ಲಿ) ಮರುಕ ಅಥವಾ ಶೋಕ ಹುಟ್ಟಿಸುವ ಗುಣ; ಕರುಣ ರಸ; ಕಾರುಣ್ಯ.

Páthic ಪ್ಯಾತಿಕ್ (ನಾ.) = Catamite.

Patho- ಪ್ಯಾತೊ—, ಪತಾ— (ಸ. ಪೂ. ಪ.) ರೋಗ—; ವ್ಯಾಧಿ—; ಮನೋ ವಿಕಾರ—; ರಾಗ—. **-génesis** (ಪ್ಯಾತೊ—), **-geny** (ಪತಾ—) ರೋಗೋತ್ಪತ್ತಿ. **-genétic, -génic** (ಪ್ಯಾತೊ—). **-genous** (ಪತಾ—) (ಗು.) ರೋಗೋತ್ಪಾದಕ; ರೋಗಕಾರಕ; ರೋಗೋತ್ಪತ್ತಿ ಸಂಬಂಧವಾದ. **-gnomónic** (ಪತಾಗ್ನೊಮಾನಿಕ್) (ಒಂದು ನಿರ್ದಿಷ್ಟ) ವ್ಯಾಧಿಯ ವಿಶೇಷ ಲಕ್ಷಣದ. **-gnomy** (ಪತಾಗ್ನೊಮಿ) ಮನೋಭಾವ ಶಾಸ್ತ್ರ. **-gnómic**(ಪ್ಯಾತಾಗ್ನಾಮಿಕ್) (ಗು.); **-logy** (ಪತಾ—) (ಶಾರೀರಕ) ರೋಗ(ಲಕ್ಷಣ) ಶಾಸ್ತ್ರ; ರೋಗ ನಿದಾನ. **-lógical** (ಪ್ಯಾತೊರಾ—) (ಗು.); **-lógically** (ಕ್ರಿ. ವಿ.); **-logist** (ಪತಾಲೊಜಿಸ್ಟ್) (ನಾ.)

Páthos. **Pathetic** ನೋಡಿ.

Pátience ಪೇಷೆನ್ಸ್, ಪೇಷ್‌ನ್ಸ್ (ನಾ.) ನೋವನ್ನಾಗಲಿ ರೇಗನ್ನಾಗಲಿ ಶಾಂತಿಯಿಂದ, ಶಮೆಯಿಂದ, ಸಹಿಸುವುದು; ಸಹನೆ; ಸೈರಣೆ; ತಾಳ್ಮೆ; ತಾಳಿಕೆ; ಸ್ಥಿರ ಪ್ರಯತ್ನ [Have no p. with (person) (ಒಬ್ಬನ ವಿಷಯದಲ್ಲಿ) ಸೈರಣೆಯಿಲ್ಲದಿರು, ತಾಳ್ಮೆಗೆಡು, ರೇಗು. Out of p. with (ಒಬ್ಬನ ವಿಷಯದಲ್ಲಿ) ಸೈರಣೆಯ ಮಿತಿ ಮೀರಿ. The p. of Job (Job[3] ನೋಡಿ)]. (ಸಾ., ಒಬ್ಬನೇ ಆಡುವ) ಒಂದು ಬಗೆಯ ಇಸ್ಪೀಟಾಟ. **Pátient** ಪೇಷೆಂಟ್, —ಷ್‌ಂಟ್ (ಗು., ನಾ.) ತಾಳ್ಮೆ, ಸೈರಣೆ, —ಉಳ್ಳ, ತೋರುವ; ತಾಳ್ಮೆಯ. [P. of ತಾಳ್ಮೆಯಿಂದ ಸಹಿಸಿಕೊಂಡಿರುವ; ಅವಕಾಶವಿರುವ; ಹೊಂದಾವಣೆಯುಳ್ಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(The facts are p. of two interpretations ಸಂಗತಿಗಳು ಎರಡು ಬಗೆ ಅರ್ಥಮಾಡುವುದಕ್ಕೂ ಎಡೆಗೊಡುತ್ತವೆ)]. (ನಾ.) ವೈದ್ಯ ಚಿಕಿತ್ಸೆ ಪಡೆಯುತ್ತಿರುವವನು; ರೋಗಿ. **Pátiently** (ಕ್ರಿ. ವಿ.)

Pátina ಪ್ಯಾಟಿನ (ನಾ.) ಹಳೆಯ ಕಂದು ಕಂಚಿನಮೇಲೆ ಕಟ್ಟುವ, ಸಾ., ಹಸುರು ಬಣ್ಣದ, (ಅಲಂಕಾರವೆಂದು ಭಾವಿಸುವ) ಕಿಲುಬು. ಮರ ಗೆಲಸದಮೇಲೆ ಕಾಲಗತಿಯಿಂದುಂಟಾದ ಹೊಳಪು. **Pátinated** (ಗು.); **Patinátion** (ನಾ.); **Pátinous** (ಗು.)

Pátois (F) ಪ್ಯಾಟ್ವಾ (ನಾ.) (ಸಾಹಿತ್ಯ ಭಾಷೆಯಿಂದ ಬಹುಮಟ್ಟಿಗೆ ಬೇರೆಯಾದ) ಒಂದು ಪ್ರಾಂತದ ಸಾಮಾನ್ಯ ಜನ ಭಾಷೆ; ಗ್ರಾಮ್ಯ.

Pátriarch ಪೇಟ್ರಿಅರ್ಕ್ (ನಾ.) ಒಂದು ಕುಟುಂಬದ ಅಥವಾ ಕುಲದ ಪಾಲಕ ಮತ್ತು ಅಧಿಪತಿ: ಕುಲಪತಿ; ಹಿರಿಯ. (ಬ. ವ. ದಲ್ಲಿ) (ಬೈಬಲ್) ಜೇಕಬ್ಬಿನ ಹನ್ನೆರಡು ಮಂದಿ ಮಕ್ಕಳು; ಏಬ್ರಹಾಮ್, ಇಸಾಕ್, ಜೇಕಬ್ ಮತ್ತು ಅವರ ಪೂರ್ವಜರು. (ಹಿಂದೆ ಪೂರ್ವ ದೇಶದ ಕ್ರೈಸ್ತ ಮತಗಳಲ್ಲಿ) ಬಿಷಪ್ಪು; (ರೋ. ಕ್ಯಾ. ಕ್ರೈಸ್ತ ಮತಗಳಲ್ಲಿ) ಮೇಲು ದರ್ಜೆಯ ಬಿಷಪ್ಪು. ಒಂದು ಪಂಥದ ಸ್ಥಾಪಕ; ಒಂದು ಶಾಸ್ತ್ರ, ಮೊ. ಗಳ (ಮೂಲ) ಪ್ರವರ್ತಕ. ಪೂಜ್ಯ ವಯೋವೃದ್ಧ, ಕುಲ ವೃದ್ಧ [The p. (ಒಂದು ವರ್ಗ, ಮೊ. ಗಳ) ಅತ್ಯಂತ ಹಳೆಯ ಜೀವಂತ ಪ್ರತಿನಿಧಿ (The monarch oak, the p. of trees)]. **Patriárchal** (ಗು.); **Pátriarchate** ಪೇಟ್ರಿಅರ್ಕೆಟ್ (ನಾ.) (ಕ್ರೈಸ್ತ ಮತದ) ಬಿಷಪ್ಪಿನ, —ಅಧಿಕಾರ, ಅಧಿಕಾರ ಪ್ರಾಂತ, ವಾಸಸ್ಥಾನ. (ಬಣದ) ಕುಲಪತಿಯ ಸ್ಥಾನ ಮಾನ. **Pátriarchy** (ನಾ.) ಕುಲಪತಿ ಯಾಡಳಿತ ಪದ್ಧತಿಯ ಸಮಾಜ, ಸರ್ಕಾರ, ಮೊ. ದು. **Pátriarchism** (ನಾ.) —ಪದ್ಧತಿ.

Patrícian ಪಟ್ರಿಷ(ಷ್)ನ್ (ನಾ., ಗು.) ಪ್ರಾಚೀನ ರೋಮನ್ ಶ್ರೀಮಂತ, ಉತ್ತಮ ಕುಲಸ್ಥ (Plebeian ಹೋಲಿಸಿ). (ಉತ್ತರ ಕಾಲೀನ ರೋಮನ್ ಚಕ್ರಾಧಿಪತ್ಯದಲ್ಲಿ) ಒಂದು ಶ್ರೀಮಂತ ವರ್ಗದವನು. ಇಟಲಿ ಮತ್ತು ಆಫ್ರಿಕ ಪ್ರಾಂತಗಳಲ್ಲಿ ರೋಮನ್ ಚಕ್ರವರ್ತಿಯ ಪ್ರತಿನಿಧಿ. ಶ್ರೀಮಂತ (ವರ್ಗದವನು) (ಮು., ಚರಿತ್ರೆ: ಇಟಲಿಯ ಕೆಲವು ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ). (ಗು.) ಶ್ರೀಮಂತ ಘನತೆಯ, ಕುಲದ (ಮು., ಪ್ರಾಚೀನ ರೋಮನ್ ಶ್ರೀಮಂತ ವರ್ಗದ ವಿಷಯದಲ್ಲಿ). **Patrícianship** (ನಾ.); **Patríciate** ಪಟ್ರಿಷಿಯಟ್, —ಷ್ಯಟ್ (ನಾ.) ಶ್ರೀಮಂತ ವರ್ಗ; ಶ್ರೀಮಂತ ಪದವಿ.

Pátricide ಪ್ಯಾಟ್ರಿಸೈಡ್ (ನಾ.) =Parricide [ಪದದಷ್ಟು ಸಾಧು ವಲ್ಲ, ಬಳಕೆಯೂ ಇಲ್ಲ. ಅದರ ಪಿತೃಘಾತ(ಕ) ಎಂಬ ಸಂಕುಚಿತಾರ್ಥದಲ್ಲಿ Patricide ಪದವು ಹೆಚ್ಚು ಬಳಕೆ]. **Patricídal** (ಗು.)

Pátrimony ಪ್ಯಾಟ್ರಿಮನಿ (ನಾ.) ತಂದೆಯಿಂದ ಅಥವಾ ತನ್ನ ಪೂರ್ವಜರಿಂದ ಒಬ್ಬನಿಗೆ ಬಂದ ಆಸ್ತಿ: ಪಿತ್ರಾರ್ಜಿತ (ಅನೇಕ ವೇಳೆ ರೂಪ.). (ಕ್ರೈಸ್ತ ಮತ, ಮೊ. ಗಳ) ದತ್ತಿ, ಕೊಡುಗೆ. **Patrimónial** —ಮೋ— (ಗು.)

Pátriot ಪೇ(ಪ್ಯಾ)ಟ್ರಿಅಟ್ (ನಾ.) ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ, ಹಕ್ಕುಗಳಿಗಾಗಿ, —ಪಟ್ಟಾಡುವವನು, ಶ್ರದ್ಧಾಸಕ್ತಿಯುಳ್ಳವನು, ಬದ್ಧಾದರನಾದವನು: ದೇಶಭಕ್ತ; (ಸ್ವ)ದೇಶಾಭಿಮಾನಿ. **Patriótic** —ಅ— (ಗು.); **Patriótically** (ಕ್ರಿ. ವಿ.); **Pátriotism** —ಅಟಿಸ್‌ಮ್ (ನಾ.)

Patról ಪಟ್ರೋಲ್ (ನಾ., ಕ್ರಿ.) (ರಕ್ಷಣ ಸೈನ್ಯ, ಪಾಳೆಯ, ಮೊ. ಗಳ ಕಾವಲಿಗಾಗಿ) ಸುತ್ತಲೂ ಗಸ್ತು ತಿರುಗುವುದು; ಪಟ್ಟಣ, ಮೊ. ಗಳಲ್ಲಿ ಪೊಲೀಸಿನವರ ಗಸ್ತು(ತಿರುಗುವುದು); ಗಸ್ತು ತಿರುಗುವುದಕ್ಕಾಗಿ ನಿಯಮಿತವಾದ ಕಾವಲು ದಳ, ಪೊಲೀಸು ಸಿಬ್ಬಂದಿ, ಪೊಲೀಸಿನವನು. ಶತ್ರುಸಮಾಚಾರವನ್ನು ಹೊಂಚಿ ತಿಳಿಯುವವನು. (ಕ್ರಿ.) ಗಸ್ತು ಕೆಲಸ ಮಾಡು; (ಪಾಳೆಯ, ಪಟ್ಟಣ, ಮೊ. ಗಳ ಸುತ್ತ) ಗಸ್ತು ತಿರುಗು.

Pátron ಪೇಟ್ರನ್ (ನಾ.) (ವ್ಯಕ್ತಿ, ಉದ್ದೇಶ, ಕಲೆ, ಮೊ. ಗಳಿಗೆ) ಪ್ರೋತ್ಸಾಹ, ರಕ್ಷಣೆ, ಪ್ರಭಾವಯುತವಾದ ಆಶ್ರಯ, —ಕೊಡುವವನು; ಆಶ್ರಯ ದಾತ; ಪೋಷಕ. (ಒಂದು ಅಂಗಡಿಯ) ಕಾಯಂ ಗಿರಾಕಿ. ರಕ್ಷಕ ಸಂತ (=P. Saint). (ರೋ. ಪ್ರಾ.) ಬಿಡುಗಡೆ ಪಡೆದಿರುವ ಗುಲಾಮನ ಪೂರ್ವದ ಒಡೆಯ; ತನ್ನ ಆಶ್ರಯ ಪಡೆದಿರುವ ಸಾಮಾನ್ಯ ಪ್ರಜೆಯ ಪೋಷಕ ಶ್ರೀಮಂತ. ಮತಮಾನ್ಯವನ್ನು ಕೊಡುವ ಹಕ್ಕುಳ್ಳವನು. **Pátroness** ಪೇ(ಪ್ಯಾ)— (ನಾ., ಸ್ತ್ರೀ.); **Pátronage** ಪ್ಯಾ(ಪೇ)ಟ್ರೊನೆ(ನಿ)ಜ್ (ನಾ.) ಆಶ್ರಯ; ಪೋಷಣೆ; ಸಹಾಯ. ಮತಮಾನ್ಯ, ಉದ್ಯೋಗ, ಮೊ. ನ್ನು ಕೊಡುವ ಹಕ್ಕು, ಅಧಿಕಾರ (Has a great deal of p. in his hands). [(ವಿಶೇಷಣವಾಗಿ) P. Secretary (of the Treasury) (ಖಜಾನೆ ಖಾತೆಯ ಉದ್ಯೋಗಗಳಿಗೆ) ನಿಯಾಮಕ ಮಾಡುವ ಅಧಿಕಾರವುಳ್ಳವನು]; ಆಶ್ರಯದಾತನೆಂಬ ಅಹಂಭಾವ. ಗಿರಾಕಿಯ ಬೆಂಬಲ. **Pátronal** ಪೇ(ಪ್ಯಾ)ಟ್ರನಲ್ (ಗು.) ರಕ್ಷಕ ಸಂತನ (The p. festival). **Pátronize** ಪ್ಯಾಟ್ರೊನೈಸ್ (ಕ್ರಿ. ಸಕ.) (—ಕ್ಕೆ) ಆಶ್ರಯದಾತನಾಗಿರು; (ವ್ಯಕ್ತಿ, ಅಭ್ಯಾಸ, ಮೊ. ನ್ನು) ಪ್ರೋತ್ಸಾಹಿಸು, ಪೋಷಿಸು. (ಒಬ್ಬನ ವಿಷಯದಲ್ಲಿ) ಅನುಗ್ರಹ ತೋರುವಂತೆ ನಡೆ, ವರ್ತಿಸು. **Pátronizingly** (ಕ್ರಿ. ವಿ.)

Patronýmic ಪ್ಯಾಟ್ರೊನಿಮಿಕ್ (ಗು., ನಾ.) ತಂದೆಯ ಅಥವಾ ಪೂರ್ವಜನ ಹೆಸರಿನಿಂದ ಉತ್ಪನ್ನವಾದ, ಬಂದ (ಹೆಸರು); ಕುಟುಂಬದ ಹೆಸರು.

Pátten ಪ್ಯಾಟನ್ (ನಾ.) ಕೆಸರು, ಮೊ. ಗಳಲ್ಲಿ ಹೂಳಿಹೋಗದಂತೆ ಪಾದರಕ್ಷೆಯನ್ನು ಎತ್ತರಿಸಲು ಅದಕ್ಕೆ ತೊಡಿಸಿದ ಕಬ್ಬಿಣದ ಬಳೆ, ಮೊ. ಗಳ ಆಧಾರವುಳ್ಳ ಮರದ ಅಟ್ಟೆಯ ಮೇಲ್ಜೋಡು; ಪಾವು ಕೊರಡಿನ ತಳದ ಪಾದರಕ್ಷೆ.

Pátter[1] ಪ್ಯಾಟರ್ (ನಾ., ಕ್ರಿ.) ಒಂದು ಕಸಬಿನವರ, ಪಂಗಡದವರ, —ಬಳಕೆಯ ಮಾತು, ಪರಿಭಾಷೆ. ಭಾಷಣ ಮಾಡುವುದು. ಹಾಡಿನೊಳಗೆ ತಂದು ಸೇರಿಸಿದ ಶೀಘ್ರ ಭಾಷಣ; ಹಾಡಿನ, ಹರ್ಷ ನಾಟಕ, ಮೊ. ಗಳಲ್ಲಿಯ, —ಮಾತುಗಳು. (ಕ್ರಿ.) (ದೇವರ ಪ್ರಾರ್ಥನೆ, ಮೊ. ನ್ನು) ಯಂತ್ರದಂತೆ, ಬಡ ಬಡನೆ ಹೇಳುತ್ತ ಹೋಗು; ತಡೆಬಡೆಯಿಲ್ಲದೆ ಗಳಹು; ಬಡ ಬಡಿಸು.

Pátter[2] ಪ್ಯಾಟರ್ (ಕ್ರಿ., ನಾ.) (ಕಿಟಕಿಗಾಜಿನಮೇಲೆ ಮಳೆಹನಿ ಬೀಳುವಾಗ ಆಗುವಂತೆ) ಪಟ ಪಟನೆ ಶಬ್ದ ಮಾಡು; ಟಪ ಟಪನೆ ತಟ್ಟು. ಹತ್ತಿರ ಹತ್ತಿರ ವೇಗವಾಗಿ ಹಾಕುವ ಹೆಜ್ಜೆಗಳಿಂದ ಓಡು. (ನೀರು, ಮೊ.) ಪಟ ಪಟನೆ ಬೀಳುವಂತೆ ಮಾಡು. (ನಾ.) ಪಟ ಪಟ(ಗುಟ್ಟುವುದು)

Páttern ಪ್ಯಾಟರ್ನ್ (ನಾ., ಕ್ರಿ. ಸಕ.) ಅತ್ಯುತ್ತಮವಾದ ಉದಾಹರಣೆ, ಆದರ್ಶ, ಮಾದರಿ (She is a p. of domestic virtues ಆಕೆ ಆದರ್ಶ ಗೃಹಿಣಿ). (ವಿಶೇಷಣವಾಗಿ) ಮಾದರಿಯ; ಆದರ್ಶದ (P. wife, father). (ಒಂದರ ರಚನೆಗಾಗಿ, ತಯಾರಿಕೆಗಾಗಿ, ಇಟ್ಟು ಕೊಂಡಿರುವ) ಮಾದರಿ; ಆದರ್ಶ ರೂಪ; ರೂಪಿಕೆ. (ದರ್ಜಿಯ ಕೆಲಸದ ಬಟ್ಟೆ, ಮೊ. ಗಳ ಮೇಲಿನ) ಚಿತ್ರ ನಮೂನೆ, ಚಿತ್ರಾಲಂಕಾರ, ಚಿತ್ರಾಕೃತಿ. ಬಂದೂಕಿನ ಗುಂಡುಗಳು ಗುರಿ ಹಲಗೆಯಮೇಲೆ ಮಾಡಿದ ಗುರುತುಗಳು. (P.-room, -shop ಎರಕದ ಅಚ್ಚುಗಳನ್ನು ತಯಾರಿಸುವ ಎರಕದ ಕಾರಖಾನೆ, ಮೊ. ಗಳ ಭಾಗ). (ಕ್ರಿ.) ಮಾದರಿಯಂತೆ, ಮಾದರಿಯಚ್ಚಿನಮೇಲೆ, (ವಸ್ತುವನ್ನು) ರೂಪಿಸು, ತಯಾರಿಸು (*After*, *upon* ಉಪ. ದೊಡನೆ); ನಮೂನೆಗಳನ್ನು ಹಾಕಿ ಅಲಂಕರಿಸು; ಚಿತ್ರಾಕೃತಿ ಹಾಕು.

Pátty ಪ್ಯಾಟಿ (ನಾ.) ಒಬ್ಬಟ್ಟು, ಕಡುಬು, ಕರಜಿಕಾಯಿ, ಕಜ್ಜಾಯ, ಮೊ. ವು. Pattypan ಒಬ್ಬಟ್ಟು, ಕಜ್ಜಾಯ, ಮೊ. ನ್ನು ಸುಡುವ, ಕರಿಯುವ, —ತವೆ, ಕಾವಲಿ, ಬಾಣಲಿ.

Pátulous ಪ್ಯಾಟ್ಯುಲಸ್ (ಗು.) ತೆರೆದಿರುವ; ಹರಡಿದ; ವಿಸ್ತರಿಸಿದ. (ಕೊಂಬೆ, ಮೊ. ವು) ಹರಡಿಕೊಂಡಿರುವ; ಪಸರಿಸಿದ. **Pátulously** (ಕ್ರಿ. ವಿ.); **Pátulousness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Paúcity ಪಾಸಿಟಿ (ನಾ.) (ಸಂಖ್ಯೆಯ, ಮೊತ್ತದ) ಸ್ವಲ್ಪತೆ ; ಕೊರತೆ.

Paul ಪಾಲ್ (ನಾ.) ಪಾಲ್ ಎಂಬ ಸಂತ. Rob Peter to pay P. (Peter[1] ನೋಡಿ). P. Pry ಇತರರ ಗುಟ್ಟು ತಿಳಿಯಲು ತಲೆಹಾಕುವ ಅಧಿಕಪ್ರಸಂಗಿ (J. Poole ಎಂಬಾತನ ಹರ್ಷನಾಟಕದಲ್ಲಿಯ ಒಂದು ಪಾತ್ರದ ಹೆಸರಿನಿಂದ). **Paúline** ಪಾಲೈನ್ (ಗು., ನಾ.) 'ಸೇಯ್ಂಟ್ ಪಾಲ್' ಎಂಬ ಸಂತನ (The P. epistles). (ನಾ.) ಲಂಡನ್ನಿನ St Paul's School ಎಂಬ ವಿದ್ಯಾಶಾಲೆಯ ಸದಸ್ಯ.

Paunch ಪಾನ್ಷ್(ಚ್) (ನಾ., ಕ್ರಿ. ಸಕ.) ಹೊಟ್ಟೆ ; ಉದರ ; ಬೊಜ್ಜು. (ಮೆಲುಕು ಹಾಕುವ ಪ್ರಾಣಿಯ) ಮೊದಲನೆಯ ಹೊಟ್ಟೆ. [ನಾವೆ (ಬಹುಶಃ ಬೇರೆ ಮಾತಿರಬಹುದು)] ಉಜ್ಜಾಟವನ್ನು ತಪ್ಪಿಸಲು ಹಡಗಿನಲ್ಲಿ ಉಪಯೋಗಿಸುವುದಕ್ಕಾಗಿ ಹೊಸೆದ ದಾರಗಳನ್ನಾಗಲಿ ಹಗ್ಗದ ಹುರಿಗಳನ್ನಾಗಲಿ ಹೆಣೆದು ಮಾಡಿದ, ಬಲವಾದ ದಪ್ಪ ಚಾಪೆ ; ಕೂವೆಯ ಮರದ ಮುಂಭಾಗದಲ್ಲಿ ತೊಡಿಸುವ ಮರದ ತೊಡಪು ಅಥವಾ ಕಾಪು (Rubbing p.). (ಕ್ರಿ.) ಹೊಟ್ಟೆಯನ್ನು ಬಗಿದು ಕರುಳು ತೆಗೆ.

Paúper ಪಾಪರ್ (ನಾ.) ಜೀವನಕ್ಕಿಲ್ಲದವನು ; ದರಿದ್ರ ; ಭಿಕ್ಷುಕ ; ಭಿಕಾರಿ ; ತಿರುಕ. ಬಡವರ ಕಾನೂನು ಮೇರೆಗೆ ಸಹಾಯ ಪಡೆಯುವವನು ; ಕೋರ್ಟುಖರ್ಚು ಕೊಡಬೇಕಾಗಿಲ್ಲದೆ ದಾವ ಹಾಕಲೂ ತನ್ನ ಪಕ್ಷವಾಗಿ ವಾದಿಸುವ ಸಹಾಯ ಪಡೆಯಲೂ ಅನುಕೂಲವುಳ್ಳವನು. **Paúperdom** (ನಾ.) —ಸ್ಥಿತಿ ; ನಿರ್ಗತಿ ; ನಿರ್ಗತಿಕರು. **Paúperism** (ನಾ.) ; **Pauperizátion** (ನಾ.) ; **Paúperize** (ಕ್ರಿ. ಸಕ.)

Pause ಪಾಸ್ (ನಾ., ಕ್ರಿ. ಅಕ.) (ಮು., ಅನಿಶ್ಚಯದಿಂದ) ಕಾರ್ಯ ಮಾಡದೆ ಸುಮ್ಮನಿರುವ ಅಂತರ, ಅವಕಾಶ, ವಿರಾಮ, ನಿಲುಕಡೆ [Give p. to (ಒಬ್ಬನನ್ನು) ಸಂದೇಹಪಟ್ಟು ಮುಂದುವರಿಯದಂತೆ, ನಿಲ್ಲುವಂತೆ, ಮಾಡು] . (ಮಾತನಾಡುವಾಗ, ಓದುವಾಗ, ಅಲ್ಲಲ್ಲಿ) ನಿಲ್ಲಿಸುವುದು ; ಯತಿ. (ಸಂ.) ಅನಿರ್ದಿಷ್ಟವಾಗಿ ಯತಿಯನ್ನು, ವಿರಾಮವನ್ನು, ಲಂಬಿಸಬೇಕೆಂಬುದಕ್ಕೆ ಸ್ವರ ಚಿಹ್ನೆಯ ಕೆಳಗೆ ಅಥವಾ ಮೇಲೆ ಹಾಕುವ ಗುರುತು. (ಕ್ರಿ.) ನಿಲ್ಲಿಸು ; ನಿಲ್ಲು ; ತಡೆ ; ವಿರಾಮ ಕೊಡು ; (ಮಾತು, ಮೊ. ನ್ನು) ಲಂಬಿಸುತ್ತ ನಿಲ್ಲು (*Upon* ಉಪ. ದೊಡನೆ)

Pávage. Pave ನೋಡಿ.

Pávan ಪ್ಯಾವನ್ (ನಾ.) ನರ್ತಕರು ಕೇವಲ ಆಡಂಬರವಾಗಿ ತೊಡಿಗೆ ತೊಟ್ಟು ಮಾಡುವ, ಗಾಂಭೀರ್ಯದಿಂದಲೂ ವೈಥವದಿಂದಲೂ ಕೂಡಿದ, ನೃತ್ಯ.

Pave ಪೇವ್ (ಕ್ರಿ. ಸಕ.) (ಬೀದಿ, ನೆಲ, ಮೊ. ಕ್ಕೆ) (ಕಲ್ಲು, ಇಟ್ಟಿಗೆ, ಹೆಂಚು, ವಜ್ರಗಾರೆ, ಕಲ್ಲರಗು, ಮೊ. ನ್ನು) ಹಾಸು, ಹದಿಸು ; ಇವುಗಳಿಂದ ಹೇಗೋ ಹಾಗೆ ಹದಿಸಿ ನೆಲಗಟ್ಟು ಮಾಡು ; (ಅನೇಕ ವೇಳೆ ರೂಪ.: ಉದಾ.: Paved with flowers. Paved with good intentions ಸದುದ್ದೇಶಗಳಿಂದ ಹಾಸಿದ). (ರೂಪ.) P. the way (*for, to,* reform, etc.) (ಸುಧಾರಣೆ, ಮೊ. ಗಳಿಗೆ) ಮಾರ್ಗ ಸರಿಮಾಡು. **Pávage** ಪೇವೆಜ್ (ನಾ.) ನೆಲಗಟ್ಟು ಮಾಡುವುದು; (ಕಲ್ಲು, ಮೊ. ನ್ನು) ನೆಲಕ್ಕೆ ಹಾಸುವುದು, ಹದಿಸುವುದು. (ರಸ್ತೆ, ಮೊ. ಗಳ) ನೆಲಗಟ್ಟಿಗಾಗಿ ಹಾಕುವ ತೆರಿಗೆ, ಸುಂಕ. **Pávement** (ನಾ.) (ಕಲ್ಲು, ಇಟ್ಟಿಗೆ, ಹೆಂಚು, ಮರದ ಮೊದ್ದು, ಕಲ್ಲರಗು, ಮೊ. ಗಳಿಂದ ನೆಲ, ಮೊ. ಕ್ಕೆ) ನೆಲಗಟ್ಟು (ಮಾಡುವುದು). ಮು., ರಸ್ತೆಯ ಪಕ್ಕದಲ್ಲಿಯ ನೆಲಗಟ್ಟಿನ ಕಾಲು ದಾರಿ. (Crazy p. ಅಡ್ಡಾದಿಡ್ಡಿಯ ಚಪ್ಪಡಿಗಳನ್ನು ಹಾಸಿ ಮಾಡಿದ ತೋಟದ ಕಾಲುದಾರಿ. P.-artist ದಾರಿಹೋಕರಿಂದ ದುಡ್ಡು ಪಡೆಯಲು, ಎತ್ತಲು, ರಸ್ತೆಯ ನೆಲಗಟ್ಟಿನಮೇಲೆ ಬಣ್ಣದ ಚಿತ್ರಗಳನ್ನು ಬರೆಯುವ ಚಿತ್ರಗಾರ: ನೆಲಗಟ್ಟು ಚಿತ್ರಗಾರ). (ಪ್ರಾ. ವಿ.) ಒತ್ತಾಗಿರುವ ಹಲ್ಲು ಸಾಲು, ಮೊ. ಗಳ ನೆಲಗಟ್ಟಿನಂಥ ರಚನೆ. **Páver** (ನಾ.) ; **Páviour** (ನಾ.) = Paver.

Páve (F) ಪಾ(ಪ್ಯಾ)ವೇ (ನಾ.) ನೆಲಗಟ್ಟು ; ನೆಲಗಟ್ಟು ಹದಿಸಿದ ರಸ್ತೆ, ಬೀದಿ, ಹಾದಿ. ಒತ್ತಾಗಿ ಕಟ್ಟಿದ ರತ್ನಗಳ ಕೆತ್ತನೆ ; (ಆಭರಣದ) ಒತ್ತುಕಟ್ಟಡ.

Pávement. Pave ನೋಡಿ.

Pavílion ಪವಿಲ್ಯನ್ (ನಾ., ಕ್ರಿ. ಸಕ.) (ಮು., ಕೋಡುಗಲ್ಲಿನಾಕಾರದ, ದೊಡ್ಡ) ಗುಡಾರ, ಡೇರೆ ; (ಕ್ರಿಕೆಟ್ ಮೈದಾನ, ಮೊ. ಗಳಲ್ಲಿ, ಪ್ರೇಕ್ಷಕರ ಮತ್ತು ಆಟಗಾರರ ಅನುಕೂಲಕ್ಕಾಗಿ ಕಟ್ಟಿರುವ) ಹಗುರವಾದ ಮಂಟಪ; ಹಗುರವಾದ ಅಲಂಕಾರ ಮಂಟಪ, ಕ್ರೀಡಾ ಮಂಟಪ ; ಒಂದು ಕಟ್ಟಡದಲ್ಲಿಯ (ಸಾ., ಹೆಚ್ಚು ಅಲಂಕಾರ ಮಾಡಿರುವ) ಚಾಚು ಭಾಗ. ಪಟ್ಟೆಹಾಕಿದ ರತ್ನದ ನಡುವಿನ ತಳಗಡೆಯ ಭಾಗ. (ಕ್ರಿ.) ಅಲಂಕಾರ ಮಂಟಪ, ಮೊ. ನ್ನು ಒದಗಿಸು, ಹವಣಿಸು. ಪಟ್ಟೆಹಾಕಿದ ರತ್ನದ ನಡುವಿನ ತಳಗಡೆಯ ಭಾಗಕ್ಕೆ ಆವರಣ ಕೊಡು.

Pavonázzo (It.) ಪಾವೊನ್ಯಾಟ್ಸೋ, —ನಾಟ್ಸೊ (ಗು., ನಾ.) ನವಿಲುಬಣ್ಣದ ಎಳೆಗಳುಳ್ಳ (ಅಮೃತಶಿಲೆ)

Pávonine ಪ್ಯಾವೊನೈನ್ (ಗು.) ನವಿಲಿನ(ಂಥ) ; ನವಿಲಿನ ಗರಿಯಂತೆ ಅಥವಾ ಕೊರಳಿನಂತೆ ಬಣ್ಣಗಳ ಸೊಬಗುಳ್ಳ, ವರ್ಣವಿನ್ಯಾಸವುಳ್ಳ.

Paw ಪಾ (ನಾ., ಕ್ರಿ.) (ಪ್ರಾಣಿಯ, ಮೃಗದ) ಪಂಜಾ (Hoof ಎಂಬುದರಿಂದ ಬೇರೆಯಾದದ್ದು). (ಬಳ. ಮಾ.) ಕೈ (ಹಾಸ್ಯ ಪ್ರ.) ; (ಒಬ್ಬನ) ಕೈಬರಹ. (ಕ್ರಿ.) ಪಂಜಾದಿಂದ ಹೊಡೆ, ಅಪ್ಪಳಿಸು ; ಮುಂಗಾಲಿನಿಂದ, ಪಂಜಾದಿಂದ,—ಕೆದಕು, ಹೊಡೆ; (ಕುದುರೆ) ಗೊರಸಿನಿಂದ (ನೆಲವನ್ನು) ಹೊಡೆ, ಕೆರೆ. (ಬಳ. ಮಾ.) ಒಡ್ಡೊಡ್ಡಾಗಿ, ಒರಟೊರಟಾಗಿ, —ಹಿಡಿ ದಾಡು, ಕೈಯಾಡಿಸು.

Paẃky ಪಾಕಿ (ಗು.) (ಸ್ಕಾಟ್ಲೆಂಡಿನ ಪ್ರಾಂ. ಪ್ರ.) ತಂತ್ರ ಪರ ; ಕಳಿಂಗತನದ ; ಕುಯುಕ್ತಿಯ. **Paẃkily** (ಕ್ರಿ. ವಿ.) ; **Paẃkiness** (ನಾ.)

Pawl ಪಾಲ್ (ನಾ., ಕ್ರಿ. ಸಕ.) ಒಂದು ಚಕ್ರದಲ್ಲಿಯ, ಸರಳಿನಲ್ಲಿಯ, ಹಲ್ಲಿಗೆ ತೊಡರಿಕೊಂಡು ಆ ಚಕ್ರದ, ಸರಳಿನ, ಚಲನೆಯನ್ನು ತಡೆದು ಅದನ್ನು ಒಂದು ಗೊತ್ತಾದ ಸ್ಥಾನದಲ್ಲಿ ನಿಲ್ಲಿಸುವಂತೆ ಒಂದು ಕೊನೆಯಲ್ಲಿ ಕೀಲಿಟ್ಟು ಅಳವಡಿಸಿರುವ ಸನ್ನೆಕೋಲು. (ನಾವೆ) ನಿಲು ರಾಟೆ, ಸುತ್ತುರಾಟೆ, ಮೊ. ವು ಹಿಮ್ಮರಳಿ ಸುತ್ತುಕಳಚದಂತೆ ತಡೆಯಾಗಿ ಹಾಕಿರುವ ಸಣ್ಣ ಸರಳು. (ಕ್ರಿ.) ಹೀಗೆ (ಹಾಯಿರಾಟೆ, ಮೊ. ನ್ನು) ತಡೆಸರಳಿನಿಂದ ತಡೆಗಟ್ಟು.

Pawn[1] ಪಾನ್ (ನಾ.) (ಚದುರಂಗದ ಆಟದಲ್ಲಿ, ಕೇವಲ ಚಿಕ್ಕದೂ ಅಲ್ಪಬೆಲೆಯುಳ್ಳದ್ದೂ ಆದ) ಪ್ಯಾದೆ (ಅನೇಕ ವೇಳೆ ವ್ಯಕ್ತಿಗಳ ವಿಷಯದಲ್ಲಿ ರೂಪ.) ; ಬಲಿಷ್ಠನು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುವ ಸಾಮಾನ್ಯ ಮನುಷ್ಯ.

Pawn[2] ಪಾನ್ (ನಾ., ಕ್ರಿ. ಸಕ.) ಮತ್ತೊಬ್ಬನ ಬಳಿ ಒತ್ತೆಯಾಗಿ, ನ್ಯಾಸವಾಗಿ, ಇಟ್ಟ ವಸ್ತು, ವ್ಯಕ್ತಿ ; ಒತ್ತೆ ; ಅಡವು ; ಗಿರವಿ ; ನ್ಯಾಸ (ಈಗ ಮು., ರೂಪ.) : ಒತ್ತೆಯಾಗಿರುವ ಸ್ಥಿತಿ (ಮು., *In, at,* p.). (Pawnbroker ಸಾಮಾನನ್ನು ಒತ್ತೆಯಿಟ್ಟುಕೊಂಡು ಬಡ್ಡಿಗೆ ಹಣವನ್ನು ಸಾಲ ಕೊಡುವವನು : ಗಿರವಿಗಾರ ; ಒತ್ತೆಯ ವ್ಯಾಪಾರಿ. Pawnbroking ಗಿರವಿ ವ್ಯಾಪಾರ. Pawnshop ಗಿರವಿಯಂಗಡಿ). (ಕ್ರಿ.) (ಹಣ ತೀರಿಸುವ, ಕಾರ್ಯ ಮಾಡುವ, —ಭರವಸೆಗಾಗಿ, ಸಾಮಾನನ್ನು) ಒತ್ತೆಯಿಡು, ನ್ಯಾಸವಿಡು. (ರೂಪ.) (ತನ್ನ ಪ್ರಾಣ, ಗೌರವ, ಮಾತು —ಇವನ್ನು) ಹೊಣೆ ಕೊಡು, ಈಡು ಮಾಡು. **Pawneé** (ನಾ.) ಒತ್ತೆಯಿಟ್ಟುಕೊಂಡವನು ; ನ್ಯಾಸ ಧಾರಿ.

Pax ಪ್ಯಾಕ್ಸ್ (ನಾ.) ಶಾಂತಿ. ಪ್ರಭುಭೋಜನಕ್ಕೆ ಸಂಬಂಧಿಸಿದ ಆರಾಧನೆಯಲ್ಲಿ ಕ್ರೈಸ್ತ ಪುರೋಹಿತರೂ ಶಿಷ್ಯ ಮಂಡಲಿಯವರೂ ಭಕ್ತಿಯಿಂದ ಮುತ್ತಿಟ್ಟುಕೊಳ್ಳುವ ಯೇಸು ಕ್ರಿಸ್ತನ ಶಿಲುಬೆಯ ಚಿತ್ರ, ಮೊ. ನ್ನುಳ್ಳ ಸಣ್ಣ ಫಲಕ ; (ಕ್ರೈಸ್ತ) ದೊಡ್ಡ ಆರಾಧನೆಯಲ್ಲಿ ಪೂಜಾವಿಧಿಯಾಗಿ ನಡಸುವ ಶಾಂತಿ ಚುಂಬನ. [P. Romana, P. Britannica ರೋಮನ್, ಬ್ರಿಟಿಷ್, ಚಕ್ರಾಧಿಪತ್ಯಗಳು ತಮಗೆ ಅಧೀನವಾದ ಸಂಸ್ಥಾನಗಳಮೇಲೆ ಒತ್ತಾಯದಿಂದ ಹೊರಿಸಿದ ಯುದ್ಧತ್ಯಾಗ. ಒಂದು ಸಾಮ್ರಾಜ್ಯದಲ್ಲಿ ನೆಲೆಗೊಳಿಸಿರುವ ಶಾಂತಿ ಸ್ಥಿತಿ. P. vobis ನಿನಗೆ ಶಾಂತಿಯುಂಟಾಗಲಿ ! ಶಾಂತಿರಸ್ತು !] . (ಪಾಠಶಾಲೆಯ ಅಸಂ. ; ಭಾವ. ಅವ್ಯ.) ಶಾಂತಿ ! ಸಮಾಧಾನ !

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Páxwax ಪ್ಯಾಕ್ಸ್‌ವ್ಯಾಕ್ಸ್ (ನಾ.) (ಪ್ರಾಂ. ಪ್ರ., ಬಳ. ಮಾ.) ಮನುಷ್ಯನಲ್ಲಿಯೂ ಇತರ ಸಸ್ತನಿಗಳಲ್ಲಿಯೂ ಬೆನ್ನೆಲುಬುಗಳಿಂದ ತಲೆಯ ಹಿಂಭಾಗದ ವರೆಗೂ ಚಾಚಿಕೊಂಡಿರುವ ಬಲವಾದ ಸ್ನಾಯುರಜ್ಜು.

Pay[1] ಪೇ (ನಾ., ಕ್ರಿ.) ಸಂಬಳ; ತಲಬು; ಪಗಾರ; ವೇತನ [In the p. of (—ರ) ಕೈಕೆಳಗಿನ ಚಾಕರಿಯಲ್ಲಿ]; ಕೂಲಿ ; ಜೀತ [P.-day ಬಟವಾಡೆಯ ದಿನ. (ಬಂಡವಾಳ ಪಾಲುಪತ್ರ ವ್ಯಾಪಾರಸ್ಥಾನದಲ್ಲಿ) ಪತ್ರಗಳ ವರ್ಗಾವಣೆಗೆ ಹಣ ಸಲ್ಲಿಸಬೇಕಾದ ದಿನ. Paymaster (ಸಿಪಾಯಿಗಳು, ಕೆಲಸಗಾರರು, ಮೊ. ರಿಗೆ) ಸಂಬಳ ಪಾವತಿ ಮಾಡುವ ಅಧಿಕಾರಿ : ವೇತನಾಧಿಕಾರಿ (ರೂಪ. ಸಹ). Paymaster-general ಖಜಾನೆಯ ಒಂದು ಖಾತೆಯ ಮುಖ್ಯಾಧಿಕಾರಿ : ಪ್ರಧಾನ ವೇತನಾಧಿಕಾರಿ]. (ಕ್ರಿ. ; ಭೂತ., ಭೂ. ಕೃ. Paid) (ಸಾಲ, ಸಂಬಳ, ಸರಕಿನ ಬೆಲೆ, ಮೊ. ನ್ನು) ತೀರಿಸು, ಪಾವತಿ ಮಾಡು, ಬಟವಾಡೆಮಾಡು, ಸಲ್ಲಿಸು, ಕೊಡು [P. off ಪೂರ್ತಿ ಪಾವತಿ ಮಾಡಿಬಿಡು; ಕೊಟ್ಟು ತೀರಿಸಿಬಿಡು]. (ರೂಪ.) (ಮಾಡಿದ ಕೆಲಸಕ್ಕೆ) ಪ್ರತಿಫಲವಾಗಿ ಕೊಡು. [P. (person) out (ಒಬ್ಬನನ್ನು) ದಂಡಿಸು, ಶಿಕ್ಷಿಸು. P. him in his own coin (Coin ನೋಡಿ). P. in ತನ್ನ ಅಥವಾ ಮತ್ತೊಬ್ಬನ ಬ್ಯಾಂಕುಲೆಕ್ಕಕ್ಕೆ (ಹಣ) ಸಲ್ಲಿಸು. P. one's way ಸಾಲಕ್ಕೆ ಬೀಳದಿರು ; ಖರ್ಚು ಏಳು, ಹುಟ್ಟಿಸು. P. through the nose (Nose ನೋಡಿ). P. the piper (Piper ನೋಡಿ). P. up (ಬಾಕಿ, ಮೊ. ನ್ನು) ಪೂರ್ತಿಯಾಗಿ, ಬಾಕಿಯಿಲ್ಲದಂತೆ, ಕೊಟ್ಟುಬಿಡು ; ತೀರಿಸಿಬಿಡು]. (ಗಮನ, ಗೌರವ, ಉಪಚಾರ, ಮೊ. ನ್ನು) ಕೊಡು, ಸಲ್ಲಿಸು (*To* ಉಪ. ದೊಡನೆ). (ವ್ಯಾಪಾರ, ಮೊ. ಗಳ ವಿಷಯದಲ್ಲಿ) ತಕ್ಕಷ್ಟು ಲಾಭ ತರು, ಪ್ರತಿಫಲ ಕೊಡು ; ಲಾಭಕರವಾಗಿರು. [P. for (—ಕ್ಕೆ) ಬೆಲೆ ಕೊಡು ; (—ರ) ವೆಚ್ಚ ವಹಿಸು (P. for one's whistle : Whistle ನೋಡಿ); (ರೂಪ.) (ಮಾಡಿದ ತಪ್ಪಿತ, ಮೊ. ಗಳಿಗಾಗಿ) ದಂಡ ತೆರು, ಶಿಕ್ಷೆ ಅನುಭವಿಸು. P. off (ಹಡಗಿನ ವಿಷಯದಲ್ಲಿ) ಚುಕ್ಕಾಣಿಯನ್ನು ಹಾಕಿದಾಗ ಗಾಳಿಮರೆಯ ಕಡೆಗೆ ಹಿಂಜರಿ ; (ನಾವೆ) P. out, away (ಹಗ್ಗವನ್ನು) ಸಡಿಲಿಸಿ ಬಿಡು]. **Paý-able** (ಗು.) ಕೊಡಬೇಕಾದ ; ಸಂದಾಯವಾಗಬೇಕಾದ ; ಕೊಡಬಹುದಾದ. (ಗಣಿ, ಮೊ.) ಲಾಭಕರವಾದ. **Payeé** (ನಾ.) (ಹಣ) ಸಲಿಕೆ ಪಡೆಯುವವನು. **Paýer** (ನಾ.) (ಹಣ) ಸಲಿಕೆ ಮಾಡುವವನು. **Paýment** (ನಾ.) ಕೊಡುವುದು ; ಸಲ್ಲಿಸುವುದು ; ಸಲಿಕೆ ; ಬಟವಾಡೆ; ಸಲುವಳಿ ; ಸಂದಾಯ ; ಸಲ್ಲಿಸಿದ ಹಣ. (ರೂಪ.) ಪ್ರತಿ ಫಲ.

Pay[2] ಪೇ (ಕ್ರಿ. ಸಕ.) (ನಾವೆ) ತೇವ ಹಿಡಿಯದಂತೆ ಕಲ್ಲರಗು, ಟಾರೆಣ್ಣೆ, ಮೊ. ನ್ನು ಬಳಿ.

Paýnim ಪೇನಿಮ್ (ನಾ.) (ಪ್ರಾಚೀ. ಪ್ರ.) ಕ್ರೈಸ್ತೇತರ (ಮು., ಮುಸಲ್ಮಾನ) ; (ವಿಶೇಷಣವಾಗಿ ಸಹ ಪ್ರ.)

Paýnize ಪೇನೈಸ್ (ಕ್ರಿ. ಸಕ.) (ಮರದ) ದಾರುವನ್ನು ಕೆಲವು ರಕ್ಷಕ ಪದಾರ್ಥಗಳಿಂದ ವ್ಯಾಪಿತ ಮಾಡು.

Payságe (F) ಪೇಯಿಸಾಝ್ (ನಾ.) ಹಳ್ಳಿಗಾಡಿನ ದೃಶ್ಯ ; ಭೂ ದೃಶ್ಯ ; ಇವುಗಳ (ವರ್ಣ)ಚಿತ್ರ. **Paýsagist** ಪೇಸಜಿಸ್ಟ್ (ನಾ.)

Pea ಪೀ (ನಾ.) ಬಟಾಣಿ (ಬೀಜ, ಗಿಡ) [Green peas (ತಿನ್ನುವ) ಹಸಿಯ ಹಸುರು ಬಟಾಣಿ ಕಾಳು. Sweet p. (Sweet ನೋಡಿ). As like as two peas ಒಂದಕ್ಕೊಂದಕ್ಕೆ ಪರಸ್ಪರ ವ್ಯತ್ಯಾಸ ಕಾಣದಂತಿರುವ ; ಸಮ ಹೋಲಿಕೆಯ]. **Peanut** ನೆಲಗಡಲೆ (ಕಾಯಿ, ಸಸ್ಯ) (ಬೀಜ ತಿನ್ನುವುದಕ್ಕೂ ಎಣ್ಣೆ ತೆಗೆಯುವುದಕ್ಕೂ ಉಪಯೋಗ). **P.-shooter** (ಒಣ ಬಟಾಣಿಕಾಳನ್ನಿಟ್ಟು ಹೊಡೆಯುವ) ಪೆಟ್ಲುಂಗೋವಿ. **P. soup** ಒಣ ಬಟಾಣಿಕಾಳು ಬೇಯಿಸಿ ಮಾಡಿದ ಕಟ್ಟು. **P.-souper** (ಬಳ. ಮಾ.) ದಟ್ಟವಾದ ಹಳದಿಯ ಕಾವಳ. **P.-soupy** (ಕಾವಳದ ವಿಷಯದಲ್ಲಿ) ದಟ್ಟವೂ ಹಳದಿಯ ಬಣ್ಣದ್ದೂ ಆದ. **Pease** ಪೀಸ್ (ನಾ.) =Peas (ಮು., P.-pudding ಎಂಬಲ್ಲಿ)

Peáberry ಪೀಬೆರಿ (ನಾ.) ಕಾಫಿ ಗಿಡದ ಕೊಂಬೆಗಳ ಕೊನೆಯಲ್ಲಿ ಬಿಡುವ, ಬಟಾಣಿ ಕಾಳಿನಂತೆ ದುಂಡಗಿರುವ, ಒಂದೇ ಬೀಜದ ಕಾಯಿ; ಗುಂಡು ಕಾಫಿ (ಬೀಜ)

Peace ಪೀಸ್ (ನಾ.) ಯುದ್ಧವಿಲ್ಲದಿರುವುದು ; ಯುದ್ಧ ನಿಂತಿರುವುದು ; ಯುದ್ಧ ವಿರಾಮ ; ಶಾಂತಿ (P. with honour. P. at any price. Make p. ರಾಜಿಯಾಗಿ ಸಂಧಿ ಮಾಡಿಸು, ಮಾಡಿಕೊ). (ಪರಸ್ಪರ ಯುದ್ಧಮಾಡುತ್ತಿರುವ ಎರಡು ರಾಷ್ಟ್ರಗಳಿಗೆ) ಯುದ್ಧ ಶಾಂತಿಯ ಕೌಲು ; ಸಂಧಿ. (ಪ್ರಜಾ ಕ್ಷೋಭೆಯಿಲ್ಲದ) ಶಾಂತಿ, ಸಮಾಧಾನ (ಸ್ಥಿತಿ) [Commission of the p.; Justice of the P. (ಆಯಾ ಪದವನ್ನು ನೋಡಿ). Be sworn of the p. ದಂಡಾಧಿಕಾರಿಯಾಗಿ ನಿಯಮಿತನಾಗು]. ನೆಮ್ಮದಿ ; ಸಮಾಧಾನ ಸ್ಥಿತಿ ; ಶಾಂತಿ [(ಬೈಬಲ್ ಪ್ರ.) P. be with you ಶಾಂತಿರಸ್ತು ! P. be to his ashes ಅವನ ಆತ್ಮಕ್ಕೆ ಶಾಂತಿಯಿರಲಿ !]. ಮನಶ್ಶಾಂತಿ (P. of mind, conscience). At p. (ಒಬ್ಬನೊಡನೆ) ಸ್ನೇಹವಾಗಿ, ವೈರವಿಲ್ಲದೆ (*With* ಉಪ. ದೊಡನೆ). Hold one's p. ಬಾಯಿಮುಚ್ಚಿಕೊಂಡಿರು ; ಮೌನವಾಗಿರು. Keep the p. ಜಗಳ ಕಾಯದಿರು ; ಹೋರಾಟ, ಗಲಾಟೆ, ಮೊ. ವು ನಡೆಯದಂತೆ ನೋಡಿಕೊಂಡಿರು ; ಶಾಂತವಾಗಿಟ್ಟಿರು. Make (person's, one's) p. with (ಒಬ್ಬನೊಡನೆ) ಮತ್ತೆ ಸ್ನೇಹ ಮಾಡಿಸು, ಮತ್ತೆ ಸ್ನೇಹ ಬೆಳಸು. Peacemaker ಶಾಂತಿ, ಸಂಧಿ, ಮಾಡಿಸುವವನು ; ರಾಜಿ ಮಾಡಿಸುವವನು ; ಶಾಂತಿ ಕರ್ತ. (ಹಾಸ್ಯವಾಗಿ) ಸುತ್ತು ನಳಿಕೆಗಳ ಪಿಸ್ತೂಲು (ರಿವಾಲ್ವರ್), ಯುದ್ಧದ ಹಡಗು, ಮೊ. ವು. P.-offering ಶಾಂತಿ ಬಲಿ ; —ಕಾಣಿಕೆ. (ಬೈಬಲ್) ದೇವರಿಗೆ ಸಮರ್ಪಿಸಿದ ಕೃತಜ್ಞತೆಯ ಕಾಣಿಕೆ. P. Pact ಅಮೆರಿಕದ ಸಂಯುಕ್ತ ಸಂಸ್ಥಾನಗಳು ತಯಾರಿಸಿದ, (೧೯೨೮ರಲ್ಲಿ ೧೫ ರಾಷ್ಟ್ರಗಳು ಪ್ಯಾರಿಸ್ಸಿನಲ್ಲಿ ರುಜು ಮಾಡಿದ) ಯುದ್ಧತ್ಯಾಗದ ಒಪ್ಪಂದ. P.-pipe (ಉ. ಅಮೆರಿಕದ ಇಂಡಿಯನರು ಶಾಂತಿ ಸೂಚನೆಯಾಗಿ ಸೇದುವ) ಶಾಂತಿ ಚುಂಗಾಣಿ. **Peáceable** ಪೀಸಬ್‌ಲ್ (ಗು.) ಶಾಂತಿ ಶೀಲ ; ಶಾಂತಿಪ್ರವೃತ್ತಿಯುಳ್ಳ; ಶಾಂತಿ ಪ್ರಕೃತಿಯ ; ಗದ್ದಲ ಗಲಾಟೆಗಳಿಲ್ಲದ ; ಶಾಂತ ; ಸಮಾಧಾನವಾದ. **Peáceableness** (ನಾ.); **Peáceably** (ಕ್ರಿ. ವಿ.); **Peáce-ful** (ಗು.) ಶಾಂತ (ಸ್ಥಿತಿಯ); ನೆಮ್ಮದಿಯ. **Peácefully** (ಕ್ರಿ. ವಿ.) ; **Peácefulness** (ನಾ.)

Peach[1] ಪೀಚ್ (ನಾ.) ಪೀಚ್ ಹಣ್ಣು (ಒರಟು ಓಟೆಯೂ, ರುಚಿಯಾದ ಸಿಹಿ ತಿರುಳೂ, ಮೃದು ಲೋಮದಿಂದ ಕೂಡಿ ಕೆಂಪುಸೂಸುವ ಹಸುರೂ ಹಳದಿಯೂ ಸೇರಿದ ಬಣ್ಣದ ಸಿಪ್ಪೆಯೂ ಉಳ್ಳ, ಸಾ., ದುಂಡಗಿರುವ, ಒಂದು ದೊಡ್ಡ ಹಣ್ಣು) ; ಪೀಚ್ ಮರ (=P.-tree). (ಅಸಂ., ಅಮೆ. ಸಂ.) ಅಸಾಮಾನ್ಯ ಯೋಗ್ಯತೆಯುಳ್ಳ ವ್ಯಕ್ತಿ, ವಸ್ತು; ವಿಶೇಷ ಆಕರ್ಷಣೆಯುಳ್ಳ ಹುಡುಗಿ. P.-blow ನಸು ನೇರಿಳೆಯ, ಪಾಟಲ, ವರ್ಣ(ದ ಗಾಜುಲೇಪ). P. brandy ಪೀಚ್(ಹಣ್ಣಿನ ರಸದ) ಮದ್ಯ. P. colour(ed) ನಸು ಮಾಸಲುಗೆಂಪು ಬಣ್ಣ(ದ). **Peáchy** (ಗು.) ಪೀಚ್ ಹಣ್ಣಿನಂಥ (ಮು., ಕೆನ್ನೆಗಳ ಬಣ್ಣವನ್ನೂ ಮೃದುತೆಯನ್ನೂ ಹೇಳುವಲ್ಲಿ). **Peáchiness** (ನಾ.)

Peach[2] ಪೀಚ್ (ಕ್ರಿ. ಅಕ.) (ಈಗ ಅಸಂ.) ಒಬ್ಬನ ಅಪರಾಧವನ್ನು ಅಧಿಕಾರ ಸ್ಥಾನದಲ್ಲಿ ತಿಳಿಸು ; ದೋಷಾಪಾದಕನಾಗು ; (ಸಹಾಪರಾಧಿಯಮೇಲಿನ) ಅಪರಾಧ ತಿಳಿಸು (*Against*, *upon* ಉಪ. ದೊಡನೆ)

Peá-chick. **Peacock** ನೋಡಿ.

Peácock ಪೀಕಾಕ್ (ನಾ., ಕ್ರಿ.) ನವಿಲು; ಮಯೂರ (ಬೀಸಣಿಗೆಯಂತೆ ನೆಟ್ಟಗೆ ನಿಲ್ಲಿಸಿ ಹರಡಲಾಗುವ ಶೋಭಾಯಮಾನವಾದ ಗರಿಗಳೂ ತೋಕೆಯೂ ಉಳ್ಳ ಪಕ್ಷಿ). [Proud as a p. (ನವಿಲನಂತೆ) ಆಟೋಪವುಳ್ಳ, ಬಿಂಕದ ಬೆಡಗಿನ ; ಆಡಂಬರದ. P. blue ನವಿಲಿನ ಕತ್ತಿನಲ್ಲಿರುವಂಥ ಹೊಳಪಿನ ನೀಲ ವರ್ಣ : ನವಿಲು ನೀಲ. P. butterfly ನವಿಲುಗಣ್ಣುಳ್ಳ ರೆಕ್ಕೆಗಳಿರುವ ಒಂದು ತೆರದ ಪತಂಗ. P. coal ಬಣ್ಣ ಮಿನುಗಿನ ಕಲ್ಲಿದ್ದಲು]. (ಕ್ರಿ.) ಮೆರೆ ; ಆಟೋಪ ತೋರು (Oneself ಪದ ದೊಡನೆ) ; ಅಟ್ಟಹಾಸದಿಂದ ನಡೆದಾಡು. **Peácockery** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಟಾಟೋಪ. **Peácockish** (ಗು.); **Peácocklike** (ಗು.); **Peá-chick** (ನಾ.) ನವಿಲಿನ ಮರಿ. **Peáfowl** (ನಾ.) (ಗಂಡು ಅಥವಾ ಹೆಣ್ಣು) ನವಿಲು. **Peáhen** (ನಾ.) ಹೆಣ್ಣು ನವಿಲು.

Peak[1] ಪೀಕ್' (ನಾ.) ಟೋಪಿಯ ಅಂಚಿನ ಚಾಚುಭಾಗ. (ನಾವೆ) ಹಡಗಿನ ಒಡಲಿನ ಕಿರಿಯಗಲದ ಭಾಗ (ಮು., ಮೂತಿಯ ಬಳಿಯದು =Forepeak); (ಮು., ಪರ್ವತದ) ಕೋಡು, ಶೃಂಗ, ಶಿಖರ; ಮೊನೆ, ಚೂಪು ಕೊನೆ (ಉದಾ., ಗಡ್ಡದ್ದು). (ಚಲಪರಿಣಾಮವುಳ್ಳದ್ದರ ಏಳು ಬೀಳುಗಳ ವಿವರವನ್ನು ಚಿತ್ರಿಸುವ ವಕ್ರರೇಖೆಯು ಅಥವಾ ದಾಖಲೆಯಿಟ್ಟಿರುವ ಮೊತ್ತಗಳ) ಉಚ್ಚ ಬಿಂದು, ಪರಮಾಂಕ (P.-load ವಿದ್ಯುಚ್ಛಕ್ತಿಯ ಸಾಮರ್ಥ್ಯ, ಜನ ವಾಹನಗಳ ಸಂಚಾರ, ಮೊ. ಗಳ ಪರಮಾವಧಿ). **Peaked** (ಗು.); **Peáky**[1] (ಗು.) ಶೃಂಗ(ಗಳು) ಉಳ್ಳ; ಶೃಂಗ ಲಕ್ಷಿತವಾದ; ಶೃಂಗದಂಥ; ಮೊನೆಗೂಡಿದ.

Peak[2] ಪೀಕ್' (ಕ್ರಿ. ಅಕ.) ಕ್ಷಯಹಿಡಿದುಹೋಗು; ಕ್ಷಯಿಸು; ಕೃಶವಾಗಿ ಹೋಗು (Shakespeare ಕವಿಯ ಪ್ರ.: P. & pine). (ಭೂ. ಕೃ.) ಕೃಶವಾದ, ತುಂಬಿಲ್ಲದ, —ಮುಖದ; ಮೂಳೆ ಬಿಟ್ಟುಕೊಂಡಿರುವ. **Peáky**[2] (ಗು.)

Peak[3] ಪೀಕ್' (ಕ್ರಿ.) (ನಾವೆ) (ಪಟದ ನಾಟವನ್ನು, ಜಂತೆಯನ್ನು) ಲಂಬದಲ್ಲಿ ಓಲಿಸು. (ಹುಟ್ಟುಗಳನ್ನು) ಲಂಬವಾಗಿಡು. (ತಿಮಿಂಗಿಲವು ನೇರವಾಗಿ ಮುಳುಗುವಾಗ) ಬಾಲ, ಮೊ. ನ್ನು ನೆಟ್ಟಗೆ ಮೇಲೆತ್ತು.

Peal ಪೀಲ್' (ನಾ., ಕ್ರಿ.) (ಉಚ್ಚ) ಘಂಟಾ ನಾದ (ಮು., ಘಂಟಾ ತರಂಗ); ಘಂಟಾ ಮಾಲೆ. (ಮು., ಗುಡುಗಿನ, ನಗುವಿನ) ಮೊಳಗು, ಆರ್ಭಟ, ತರಂಗ. (ಕ್ರಿ.) ಪರಂಪರೆಯಾಗಿ, ತರಂಗ ತರಂಗವಾಗಿ, ನಾದ ಹೊರಡಿಸು; ತುಂಬು ದನಿಯಲ್ಲಿ ನುಡಿ. P. bells ಘಂಟಾ ಮಾಲೆಯನ್ನು ಬಾರಿಸು.

Pear ಪೇರ್' (ನಾ.) ಪೇರು ಹಣ್ಣು (ತೊಟ್ಟಿನ ಕಡೆಗೆ ಕ್ರಮೇಣ ಮೊನಚಾಗುತ್ತ ಹೋಗುವ, ರುಚಿಯಾದ ತಿರುಳುಳ್ಳ, ಒಂದು ಹಣ್ಣು). P.-shaped. P.-tree. Prickly p. ಪಾಪಾಸುಕಳ್ಳಿ.

Pearl ಪರ್'ಲ್' (ನಾ., ಕ್ರಿ.) ಮುತ್ತು; ಮುಕ್ತಾಫಲ; ಮೌಕ್ತಿಕ (ಮುತ್ತಿನ ಚಿಪ್ಪಿನ ಪ್ರಾಣಿಯ ಮತ್ತು ಇತರ ಇಚ್ಚಿಪ್ಪು ಪ್ರಾಣಿಯ ಚಿಪ್ಪಿನ ಒಳಮೈಮೇಲೆ ಕಣಗಳು ಕ್ರಮೇಣ ಸೇರುವುದರಿಂದ ಆದ ಬಿಳಿಯ ಅಥವಾ ನೀಲಿಯ ಛಾಯೆಯ ಬೂದು ಬಣ್ಣದ ಮಣಿ; ಸೊಗಸಾದ ದೀಪ್ತಿಯುಳ್ಳದ್ದು ಮತ್ತು ಬಹಳ ಬೆಲೆಯುಳ್ಳದ್ದು). [P.-oyster ಮುತ್ತಿನ ಚಿಪ್ಪಿನ ಮೃದ್ವಂಗಿ ಪ್ರಾಣಿ; ಮುತ್ತಿನ ಸಿಂಪಿ. Mother-of-p. (Mother ನೋಡಿ). Seed p. ಸೀರು ಮುತ್ತು]. ಪ್ರಶಸ್ತ ವಸ್ತು; (ಆ ಬಗೆಯವುಗಳಲ್ಲಿ) ಅತ್ಯುತ್ತಮವಾದದ್ದು; ಮಾದರಿ; ಆದರ್ಶ; ಮುತ್ತಿನಂಥದು [Cast pearls before swine ಮೆಚ್ಚಿ ಅನುಭವಿಸಲು ಯೋಗ್ಯತೆಯಿಲ್ಲದವನಿಗೆ ಉತ್ತಮ ವಸ್ತುವೊಂದನ್ನು ಕೊಡು (ಕೋತಿಯ ಕೈಗೆ ಮಾಣಿಕ್ಯ ಕೊಟ್ಟಂತೆ)]. ಮುತ್ತಿನಂಥ ವಸ್ತು (ಹಿಮಬಿಂದು, ಕಣ್ಣೀರು, ಹಲ್ಲು, ಮೊ. ವು). ಒಂದು ಗೊತ್ತಾದ ಅಳತೆಯ ಅಚ್ಚಿನಮೊಳೆ. (ಹಲವು ವಸ್ತುಗಳ) ಸಣ್ಣ ಚೂರು, ಕಣ. [P.-ash ಪೊಟಾಸಿಯಂ ಕಾರ್ಬೊನೇಟ್. P.-barley, -sago (ಉಜ್ಜಿಯುಜ್ಜಿ ಸಣ್ಣ ಗುಂಡು ಕಾಳಾಗಿ ಮಾಡಿದ) ಮುತ್ತು ಬಾರ್ಲಿ, —ಸಬ್ಬಕ್ಕಿ. P.-diver ಮುತ್ತಿನ ಸಿಂಪಿಗಳಿಗಾಗಿ (ಸಮುದ್ರದಲ್ಲಿ) ಮುಳುಗುವವನು. P.-fisher ಮುತ್ತಿನ ಸಿಂಪಿಗಳನ್ನು (ಸಮುದ್ರ ತಲದಲ್ಲಿ) ಹುಡುಕಿ ತರುವವನು; ಮುತ್ತಿನ ಸಿಂಪಿ ತೆಗೆಯುವವನು. P.-fishery ಮುತ್ತಿನ ಸಿಂಪಿ ತೆಗೆಯುವ ಕಾರ್ಯ, ಸ್ಥಳ. P.-powder, P.-white ಚರ್ಮವನ್ನು ಬೆಳ್ಳಗೆ (ಕಾಣುವಂತೆ) ಮಾಡಲು ಉಪಯೋಗಿಸುವ ಅಂಗರಾಗ. P.-shell (ಸ್ವಾಭಾವಿಕವಾಗಿ ದೊರೆಯುವ) ಮುತ್ತಿನ ಚಿಪ್ಪು]. (ಕ್ರಿ.) ಮುತ್ತಿನಂಥ ಹನಿಗಳನ್ನು ಚಿಮುಕಿಸು; ಮುತ್ತು ಹನಿಸು. (ಬಣ್ಣ, ಮೊ. ಗಳ ವಿಷಯದಲ್ಲಿ) ಮುತ್ತಿನಂತೆ ಬಣ್ಣ, ಹೊಳಪು, —ಕೊಡು. (ಬಾರ್ಲಿ, ಮೊ. ನ್ನು) ಸಣ್ಣ ಮುತ್ತಿನ ಕಾಳಾಗಿ ಮಾಡು; ಮುತ್ತಿನಂಥ ಹನಿಯಾಗು; (ಮುತ್ತಿಗಾಗಿ) ಸಿಂಪಿ ಸಂಗ್ರಹಣ ಮಾಡು.

Pearled (ಗು.) ಮುತ್ತನ್ನು ಅಥವಾ ಮುತ್ತಿನ ಚಿಪ್ಪನ್ನು ಹವಣಿಸಿದ, ಕೆತ್ತಿದ, ಅಲಂಕಾರಕ್ಕಾಗಿ ಹಾಕಿದ; ಮುತ್ತಿನ ಹನಿಗಳಾಗಿ ಮಾಡಿದ, ಆದ; ಮಂಜಿನ ಹನಿ ತಳಿದ. **Peárly** (ಗು.); **Peárliness** (ನಾ.)

Peármain ಪೇರ್'ಮೆಯ್'ನ್' (ನಾ.) ಒಂದು ಜಾತಿಯ ಸೇಬು.

Peásant ಪೆಸಂಟ್' (ನಾ.) ಹಳ್ಳಿಗ; ಒಕ್ಕಲಿಗ; ರೈತ; ದೇಸಾಯಗಾರ. **Peásantry** (ನಾ.) ರೈತರು; ರೈತರ ತಂಡ; ರೈತಾಪಿ ಜನ.

Peat[1] ಪೀಟ್' (ನಾ.) ನೆಲದಲ್ಲಿ ನೀರಿನಿಂದ ಕೊಳೆತು ಸ್ವಲ್ಪ ಮಟ್ಟಿಗೆ ಇಂಗಾಲವಾಗಿ ಮಾರ್ಪಟ್ಟು ಉರುವಲಾಗಿ ಉಪಯೋಗವಾಗುವ (ಪಾಚಿ, ಫೊ. ದ) ಸಸ್ಯಪದಾರ್ಥ: ಸಸ್ಯಾಂಗಾರ; ನೆಲದಿಂದ ಕತ್ತರಿಸಿ ತೆಗೆದ 'ಪೀಟ್' ಹೆಂಟೆ. P.-bog ಸಸ್ಯಾಂಗಾರವಿರುವ ನೆಲ. P.-moss ಸಸ್ಯಾಂಗಾರವಾಗುವ ಪಾಚಿ ಜಾತಿ. P.-reek ಸಸ್ಯಾಂಗಾರ ಸುಡುವುದರಿಂದ ಹೊರಟ ಹೊಗೆ. ಸಸ್ಯಾಂಗಾರದ ಬೆಂಕಿಯಲ್ಲಿ ಬಟ್ಟಿಯಿಳಿಸಿ ತೆಗೆದ ವಿಸ್ಕಿ ಮದ್ಯ. **Peátery** (ನಾ.) ಸಸ್ಯಾಂಗಾರ ದೊರೆಯುವ ಬದಿ ನೆಲ. **Peáty** (ಗು.) ಸಸ್ಯಾಂಗಾರದ(ಂಥ); ಸಸ್ಯಾಂಗಾರ ತುಂಬಿದ.

Peat[2] ಪೀಟ್' (ನಾ.) (ಪ್ರಾಚೀ. ಪ್ರ.) ಹುಡುಗಿ; ಚೆಲುವೆ (ಮು., Proud p.)

Pébble ಪೆಬ್'ಲ್' (ನಾ.) (ನೀರಿನ ಹರಿವಿನಿಂದ ಸವೆದು ದುಂಡಗಾದ) ಸಣ್ಣ ಉರುಟು ಕಲ್ಲು; ಕನ್ನಡಕಗಳಿಗೆ ಉಪಯೋಗಿಸುವ, ವರ್ಣ ರಹಿತವೂ ಪಾರದರ್ಶಕವೂ ಆದ, ಒಂದು ಬಗೆಯ ಶಿಲಾಸ್ಫಟಿಕ; ಕಲ್ಲು ಹರಳು; ಇದರ ಲೆನ್ಸು; ಅಗೇಟ್ ಅಥವಾ ಇತರ ಪ್ರಶಸ್ತ ಮಣಿ. **Pébbly** (ಗು.)

Pebríne (F) ಪೆಬ್ರಿ(ೀ)ನ್' (ನಾ.) ರೇಷ್ಮೆ(ರೇಶಿಮೆ) ಹುಳುಗಳಿಗೆ ತಗುಲುವ, ಕಪ್ಪು ಚುಕ್ಕೆಗೂಡಿದ ಒಂದು ಬಗೆಯ ಅಂಟುರೋಗ.

Péccable ಪೆಕಬ್'ಲ್' (ಗು.) ಪಾಪ ಮಾಡಲುಳ್ಳ; —ಮಾಡುವ ಸಂಭವವುಳ್ಳ. **Peccabílity** (ನಾ.); **Peccadíllo** ಪೆಕಡಿಲೊ (ನಾ.) ಸಣ್ಣ, ಕ್ಷಮಾರ್ಹವಾದ, —ತಪ್ಪು, ಪಾಪ; ಅಲ್ಪ ದೋಷ. **Péccant** ಪೆಕಂಟ್' (ಗು.) ಪಾಪ, ಅಪರಾಧ, —ಮಾಡುವ. (ವೈದ್ಯ) ರೋಗದ; ರೋಗ ಕಾರಕ. **Péccancy** (ನಾ.)

Peccadíllo, Péccant, etc. **Peccable** ನೋಡಿ.

Peccávi (L) ಪೆಕೇವೈ (ವಾಕ್ಯ; ನಾ.) ನಾನು ಪಾಪ ಮಾಡಿದ್ದೇನೆ; ನಾನು ಪಾಪಿ (Cry p. 'ನಾನು ಪಾಪಿ, ಪಾಪೋಹಂ' ಎನ್ನು). (ನಾ.) ಪಾಪದ ಒಪ್ಪಿಗೆ.

Peck[1] ಪೆಕ್' (ನಾ.) ಒಣ ಸರಕಿನ ಒಂದು ಅಳತೆ: ಎರಡು ಗ್ಯಾಲನ್ನು; ಈ ಅಳತೆಯ ಪಾತ್ರೆ. A p. of dirt ವಿಪರೀತ ಕೊಳೆ, ಕಸ. A p. of troubles ಅನೇಕ, ಬಹಳ, ತೊಂದರೆಗಳು; ಬಳ್ಳಗಟ್ಟಲೆಯ—.

Peck[2] ಪೆಕ್' (ಕ್ರಿ., ನಾ.) ಕೊಕ್ಕಿನಿಂದ (ಒಂದು ವಸ್ತುವನ್ನು) ಕುಕ್ಕು (P. out ಕುಕ್ಕಿ ಹೊರದೆಗೆ, ಕೀಳು); ಕೊಕ್ಕಿನಿಂದ ತೂತು, ಮೊ. ನ್ನು ಮಾಡು; (ಒಂದು ವಸ್ತುವಿಗೆ) ಕೊಕ್ಕಿನಿಂದ ಗುರಿಯಿಟ್ಟು ಕುಕ್ಕು (*At* ಉಪ. ದೊಡನೆ). (ಬಳ. ಮಾ.) (ತಿಂಡಿ) ತಿನ್ನು (ಮು., ಸ್ವಲ್ಪ ಸ್ವಲ್ಪವಾಗಿ ಕಚ್ಚಿ ತಿನ್ನು). (ನೆಲ, ಗೋಡೆ, ಮೊ. ನ್ನು) ಮೊನೆಯಾಯುಧದಿಂದ ಅಗೆ, ಒಡೆ, ಇಡಿ (*Up*, *down*, ಮೊ. ಉಪ. ದೊಡನೆ). (ನಾ.) ಕುಕ್ಕುವುದು; ಕೊಕ್ಕಿನ ಹೊಡೆತ; ಕೊಕ್ಕಿನಿಂದ ಕುಕ್ಕಿದ ಗುರುತು. (ಅಸಂ.) ತಿಂಡಿ; ಆಹಾರ ಪದಾರ್ಥ. **Pécker** ಪೆಕರ್' (ನಾ.) ಕುಟುಕು ಹಕ್ಕಿ; ಕುಟಿಗ [ಮು., ಸಮಾಸ ಪದಗಳಲ್ಲಿ: Woodpecker ಮರಕುಟಿಗ (ಹಕ್ಕಿ)]. ಕಳೆಗುದ್ದಲಿ. (ಅಸಂ.) Keep your p. up ಉತ್ಸಾಹ ಬಿಡದಿರು; ಗೆಲವಿನಿಂದಿರು. **Péckish** (ಗು.) (ಬಳ. ಮಾ.) ಹಸಿದ.

Peck[3] ಪೆಕ್' (ಕ್ರಿ.) (ಅಸಂ.) (ಕಲ್ಲು) ಬೀರು, ಎಸೆ; (—ಕಡೆಗೆ) ಕಲ್ಲೆಸೆ (*At* ಉಪ. ದೊಡನೆ)

Pécksniff ಪೆಕ್'ಸ್ನಿಫ್' (ನಾ.) 'ದಯೆ', 'ಧರ್ಮ' ಎಂದು ಮೊದಲಾಗಿ ಹರಟುವ, ಬೆಣ್ಣೆಯಂಥ ಮಾತಿನ, ವಂಚಕ; ಆಷಾಢಭೂತಿ. (Martin Chuzzlewit ಎಂಬ ಕಾದಂಬರಿಯಲ್ಲಿಯ ಒಂದು ಪಾತ್ರದ ಹೆಸರಿನಿಂದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pécten ಪೆಕ್ಟನ್ (ನಾ.) (ಪ್ರಾ. ವಿ.) (ಪ್ರಾಣಿದೇಹಗಳಲ್ಲಿ ಹಲವು ಬಗೆಯ) ಬಾಚಣಿಗೆಯಂಥ ರಚನೆ. [**Péctinate** (ಗು.); **Péctinated** (ಗು.); **Pectinátion** (ನಾ.)]. ಒಂದು ತೆರದ ಇಚ್ಚಿಪ್ಪಿನ ಪ್ರಾಣಿ (ವರ್ಗ)

Péctin. **Pectose** ನೋಡಿ.

Péctinate, etc. **Pecten** ನೋಡಿ.

Péctoral ಪೆಕ್ಟೊರಲ್ (ನಾ., ಗು.) (ಮು., ಯೆಹೂದ್ಯ ಮಹಾ ಪುರೋಹಿತನ) ಅಲಂಕಾರದ ಎದೆಪಟ್ಟಿಕೆ. (ಗು.) ಎದೆಯ ; ಎದೆಗಾಗಿ ಇರುವ ; ಎದೆಯ ರೋಗಗಳಿಗೆ ಅನುಕೂಲವಾದ ; ಎದೆಯಮೇಲೆ ತೊಡುವ, ಧರಿಸುವ [P. cross ಬಿಷಪ್ಪರು ಎದೆಯಮೇಲೆ ಧರಿಸುವ ಶಿಲುಬೆ]

Péctose ಪೆಕ್ಟೋಸ್ (ನಾ.) (ರ. ವಿ.) ಮಾಗಿರದ ಹಣ್ಣು, ಮೊ. ಗಳಲ್ಲಿ ಸೆಲ್ಯುಲೋಸಿನೊಡನಿದ್ದು ಅದಕ್ಕೆ ಸಂಬಂಧಿಯಾದ, ನೀರಿನಲ್ಲಿ ಲೀನವಾಗದ, ಒಂದು ರಾಸಾಯನಿಕ ಪದಾರ್ಥ: 'ಪೆಕ್ಟೋಸ್'. **Péctin** ಪೆಕ್ಟೋಸ್ ಪದಾರ್ಥವು ಹಣ್ಣು ಮಾಗುವಲ್ಲಿ ಅಥವಾ ಆಮ್ಲ ಸಂಸರ್ಗ ಕ್ರಿಯೆಯಿಂದ ಮಾರ್ಪಟ್ಟು ಆದ, ನೀರಿನಲ್ಲಿ ಲೀನವಾಗುವ, ನಿಷ್ಕ್ರಿಯೆಯ (Neutral) ಒಂದು ಬಿಳಿಯ ಲವಣ. **Péctic** (ಗು.)

Péculate ಪೆಕ್ಯುಲೇಟ್ (ಕ್ರಿ.) (ಸರ್ಕಾರ, ಮೊ. ಸಂಸ್ಥೆಯ ಹಣವನ್ನು) ಅಕ್ರಮವಾಗಿ ಸ್ವಂತಕ್ಕೆ ಬಳಸಿಕೊ, ತಿಂದುಹಾಕು, ದಸ್ತು ಮಾಡು. **Peculátion** (ನಾ.) ; **Péculator** (ನಾ.)

Pecúliar ಪಿಕ್ಯೂಲಿಯರ್, —ಲ್ಯರ್ (ಗು.,ನಾ.) (—ಕ್ಕೆ) ಮಾತ್ರ ಸೇರಿದ, ಸಂಬಂಧಪಟ್ಟ ; ತನ್ನದೇ, ಅದರದೇ, —ಆದ (*To* ಉಪ. ದೊಡನೆ). ವ್ಯಕ್ತಿಯ ; ವ್ಯಕ್ತಿಗೆ ಸೇರಿದ ; ವೈಯಕ್ತಿಕ (One's own p. character, etc.). ವಿಶೇಷವಾದ ; ವಿಶಿಷ್ಟತೆಯ (A point of p. interest). ಅಸಾಮಾನ್ಯದ ; ವಿಚಿತ್ರವಾದ ; ಚೋದ್ಯವಾದ ; ವಿಲಕ್ಷಣವಾದ (A p. flavour. He has always been a little p. ಅವನು ಯಾವಾಗಲೂ ಸ್ವಲ್ಪ ವಿಚಿತ್ರವಾಗಿಯೇ ಇದ್ದಾನೆ). [P. people ಯೆಹೂದ್ಯರು; (ವಿಸ್ತಾರಾರ್ಥದಲ್ಲಿ) (ಮೋಕ್ಷಕ್ಕೆ, ಉದ್ಧರಣಕ್ಕೆ) ದೇವರು ಆರಿಸಿಟ್ಟ ಜನ. P. People (ಕ್ರೈಸ್ತ) ಮಠೀಯ ಸಂಸ್ಥೆ ಯಾವುದೂ ಇಲ್ಲದ, ರೋಗಪರಿಹಾರಕ್ಕೆ ದೈವ ಪ್ರಾರ್ಥನೆಯನ್ನೇ ಔಷಧ ವಾಗಿ ಅಂಗೀಕರಿಸುವ, ಒಂದು ಆಧುನಿಕ (ಮತ)ಧರ್ಮ ಪಂಥ]. (ನಾ.) ವಿಶಿಷ್ಟ ಲಕ್ಷಣ, ಹಕ್ಕು, ಮೊ. ದು. (ಚರಿತ್ರೆ) ಬಿಷಪ್ಪಿನ ಆಡಳಿತ ಪ್ರಾಂತ ದಲ್ಲಿ ಮಠಾಧಿಕಾರಕ್ಕೆ ಒಳಪಡದ ಮಠ, ಮಠೀಯ ಪ್ರಾಂತ. **Peculiárity** (ನಾ.) ಪಿಕ್ಯೂಲಿಯ್ಯಾರಿಟಿ, —ರ್‍ಯಾ— (ನಾ.) ವಿಶಿಷ್ಟತೆ ; ವೈಶಿಷ್ಟ್ಯ ; ವಿಶೇಷತೆ ; ವಿಚಿತ್ರತೆ ; ವೈಲಕ್ಷಣ್ಯ. **Pecúliarly** (ಕ್ರಿ. ವಿ.) ತನ್ನ ಮಟ್ಟಿಗೆ; ವೈಯಕ್ತಿಕವಾಗಿ (Does not affect him p.). ವಿಶೇಷವಾಗಿ; ಅಸಾಧಾರಣವಾಗಿ ; ಸಾಮಾನ್ಯತೆ ಮೀರಿ (P. annoying). ವಿಚಿತ್ರವಾಗಿ ; ವಿಲಕ್ಷಣ ವಾಗಿ (They dress p.).

Pecúniary ಪಿಕ್ಯೂನಿಯರಿ, —ನ್ಯರಿ (ಗು.) ಹಣದ ; ದ್ರವ್ಯ ರೂಪದ. (P. aid, considerations). (ಅಪರಾಧದ ವಿಷಯದಲ್ಲಿ) ದ್ರವ್ಯ ದಂಡ ತೆರಬೇಕಾದ ; ಜುರ್ಮಾನೆಯ. **Pecúniarily** (ಕ್ರಿ. ವಿ.)

Pédagogue ಪೆಡಗಾಗ್ (ನಾ.) ಶಾಲೆಯ ಅಯ್ಯ ; ಉಪಾಧ್ಯಾಯ ; ಪಾಠಶಾಲಾ ಶಿಕ್ಷಕ, ಬೋಧಕ (ಸಾ., ತಿರಸ್ಕಾರ ಸೂಚಕವಾಗಿ : 'ಅತಿ ಪಾಂಡಿತ್ಯ ಪ್ರದರ್ಶಕ' ಎಂಬ ಅರ್ಥದಲ್ಲಿ). **Pedagógic(al)** —ಜಿ(ಗಿ)— (ಗು.) ; **Pedagógically** (ಕ್ರಿ. ವಿ.); **Pédagog-(u)ism** (ನಾ.) ; **Pédagogy** ಪೆಡಗಾಗಿ(ಜಿ), —ಗೋಜಿ (ನಾ.) ಶಿಕ್ಷಣ ಶಾಸ್ತ್ರ. =**Pedagógics** (ನಾ.)

Pédal ಪೆಡಲ್ (ನಾ., ಕ್ರಿ., ಗು.) (ಆರ್ಗನ್ ವಾದ್ಯದಲ್ಲಿ) ಕಾಲಿನಿಂದ ಒತ್ತುವ, ಮರದ ಕೀಲಕ್ಕೆ(ಗಳಲ್ಲೊಂದು) ; ಕಾಲುಮೆಟ್ಟು. ಹಲವು ಪಿಳ್ಳಂಗೋವಿಗಳನ್ನು ಒಂದೇ ಬಾರಿ ತೆರೆದು ನುಡಿಸುವುದಕ್ಕಾಗಲಿ ಇತರ ಉದ್ದೇಶಕ್ಕಾಗಲಿ ಅಳವಡಿಸಿರುವ ಕಾಲೊತ್ತುಸನ್ನೆ ; ಮೆಟ್ಟುಸನ್ನೆ. (ಪಿಯಾನೊ ವಾದ್ಯದಲ್ಲಿ) ನಾದವನ್ನು ಹೆಚ್ಚಿಸುವ (Loud p.), ನಾದವನ್ನು ಮೃದು ಮಾಡುವ (Soft p.), ಮೆಟ್ಟುಸನ್ನೆ. ಹಲವು ಯಂತ್ರಗಳಲ್ಲಿ (ಮು., ಬೈಸಿಕಲ್ಲಿನಲ್ಲಿ, ಟ್ರೈಸಿಕಲ್ಲಿನಲ್ಲಿ) ಮೆಟ್ಟುಸನ್ನೆ. (ಕ್ರಿ.) ಆರ್ಗನ್ನಿನ ಪಿಳ್ಳಂಗೋವಿಗಳನ್ನು ನುಡಿಸು ; (ಬೈಸಿಕಲ್ಲಿನ) ಮೆಟ್ಟುಸನ್ನೆಯನ್ನು ತುಳಿ; ಮೆಟ್ಟುಸನ್ನೆ ತುಳಿದು (ಬೈಸಿಕಲ್ಲನ್ನು) ನಡಸು. (ಗು.) (ಪ್ರಾ. ವಿ.) (ಮೃದ್ವಂಗಿಗಳ ವಿಷಯದಲ್ಲಿ) ಅಡಿಯ ; ಪಾದದ(ಗಳ)

Pédant ಪೆಡಂಟ್ (ನಾ.) ಪುಸ್ತಕ ಪಾಂಡಿತ್ಯವನ್ನು ಅಥವಾ ಶಾಸ್ತ್ರ ಜ್ಞಾನವನ್ನು ಅತಿಯಾಗಿ ಭಾವಿಸುವವನು, ಪ್ರದರ್ಶನ ಮಾಡುವವನು ; ಪಾಂಡಿತ್ಯ ಪ್ರದರ್ಶಕ ; ಶುಷ್ಕ ಪಂಡಿತ ; ವಿಧಿ ನಿಯಮಗಳನ್ನು ಕಟ್ಟು ನಿಟ್ಟಾಗಿ ಅನುಸರಿಸಬೇಕೆಂದು ಒತ್ತಾಯ ಮಾಡುವವನು ; ಒಂದು ತತ್ತ್ವಕ್ಕೆ ಕಟ್ಟುಬಿದ್ದವನು ; ಶುಷ್ಕ ತಾತ್ತ್ವಿಕ. **Pedántic** (ಗು.) ; **Pedántically** (ಕ್ರಿ. ವಿ.) ; **Pédantize** (ಕ್ರಿ.) ಶುಷ್ಕ ಪಂಡಿತ ನಾಗಿ ವರ್ತಿಸು ; ಪಾಂಡಿತ್ಯ ಪ್ರದರ್ಶನ ಮಾಡಿ ಮಾತನಾಡು, ಬರೆ ; ಶುಷ್ಕ ಪಂಡಿತನಾಗು ; —ರನ್ನು ಮಾಡು. **Pedantócracy** —ಟಾಕ್ರಸಿ (ನಾ.) ಶುಷ್ಕ ಪಂಡಿತ ಪ್ರಭುತ್ವ; —ಆಡಳಿತ ಮಂಡಲ. **Pédantry** (ನಾ.)

Pédate ಪೆಡೇಟ್ (ಗು.) (ಪ್ರಾ. ವಿ.) ಪಾದವುಳ್ಳ ; ಪಾದಿ. (ಸ. ವಿ., ಎಲೆಯ ವಿಷಯದಲ್ಲಿ) ಕಾಲುಬೆರಳುಗಳಂತೆ, ಹಕ್ಕಿಯ ನಖರಗಳಂತೆ, ವಿಂಗಡ ವಾಗಿರುವ.

Péddle ಪೆಡ್‌ಲ್ (ಕ್ರಿ.) ತಿರುಗುವ್ಯಾಪಾರ ಮಾಡು. ಅಲ್ಪ, ಕ್ಷುಲ್ಲಕ, ವಿಷಯಗಳಲ್ಲಿ ತೊಡಗಿರು. ಕೊಂಚ ಕೊಂಚವಾಗಿ ತೆಗೆದುಕೊಂಡು ಮಾರು ; ಚಿಲ್ಲರೆ ಚಿಲ್ಲರೆಯಾಗಿ ಮಾರು (ರೂಪ. ಸಹ)

Pédestal ಪೆಡೆಸ್ಟಲ್ (ನಾ., ಕ್ರಿ. ಸಕ.) (ಕಟ್ಟಡದಲ್ಲಿಯ) ಕಂಬದ ಪೀಠ ; ಸುಣ್ಣಪಾದ. ಪ್ರತಿಮೆ, ಮೊ. ಗಳ ಆಧಾರ ಪೀಠ. ಅಸ್ತಿಭಾರ ; ತಳಪಾಯ ; (ರೂಪ.) ಉಚ್ಚ ಸ್ಥಾನ. ಮೂತ್ರಪಾತ್ರೆಗಳನ್ನಿಡುವ ಚರ ಕಪಾಟ. (ಕ್ರಿ.) ಆಧಾರಪೀಠದ ಮೇಲಿಡು.

Pedéstrian ಪಿಡೆಸ್ಟ್ರಿಯನ್ (ಗು., ನಾ.) ಕಾಲ್ನಡೆಯಲ್ಲಿ ಹೋದ ; —ಹೋಗುವ ; ನಡಗೆಯ. (ರೂಪ.) ನಿಧಾನವಾದ ; ಮಂದವಾದ ; ಸರ್ವ ಸಾಮಾನ್ಯವಾದ; ಸ್ಫೂರ್ತಿಯಿಲ್ಲದ; ನೀರಸವಾದ (P. mind, verse). (ನಾ.) ಕಾಲ್ನಡೆ ನಡೆಯುವವನು ; ಪಾದಚಾರಿ (ಮು., ಅಂಗಸಾಧನೆಯ ಪ್ರದರ್ಶನಕ್ಕಾಗಿ). **Pedéstrianism** (ನಾ.) ; **Pedéstrianize** (ಕ್ರಿ. ಅಕ.)

Pédicel ಪೆಡಿಸೆಲ್, **Pédicle** ಪೆಡಿಕ್‌ಲ್ (ನಾ.) (ಸ. ವಿ., ಪ್ರಾ. ವಿ.) (ಸಸ್ಯದಲ್ಲಿ, ಪ್ರಾಣಿಯಲ್ಲಿ) ಸಣ್ಣ ತೊಟ್ಟಿನಂಥ ರಚನೆ ; ವೃಂತ (ರಚನೆ) (Peduncle ಹೋಲಿಸಿ). **Pédicellate** (ಗು.) —ಉಳ್ಳ ; (ಪ್ರಾ. ವಿ.) ಕಂಟಕಚರ್ಮಿ ವರ್ಗದ ಒಂದು ತರಗತಿಗೆ ಸೇರಿದ. =**Pedículate** (ಗು.)

Pedícular, -lous ಪಿಡಿಕ್ಯುಲರ್, —ಲಸ್ (ಗು.) ಹೇನಿನ ; ಹೇನು ತುಂಬಿದ. **Pediculósis** (ನಾ.) ಹೇನು ತುಂಬಿದ ರೋಗ.

Pédigree ಪೆಡಿಗ್ರೀ (ನಾ.) ವಂಶ ವೃಕ್ಷ ; (ಮನುಷ್ಯನ ಅಥವಾ ಪ್ರಾಣಿಯ) ವಂಶಾವಳಿ, ಪೀಳಿಗೆ, ತಳಿ. (ಪದದ) ವ್ಯುತ್ಪತ್ತಿ. ಪುರಾತನ ವಂಶಾನು ಕ್ರಮ ; (ವಿಶೇಷಣವಾಗಿ) ಗೊತ್ತಾದ ವಂಶದ, ಪೀಳಿಗೆಯ, ತಳಿಯ (P. cattle). **Pédigreed** (ಗು.) (ದನ, ಮೊ. ಗಳಿಗಿಟ್ಟಿರುವಂಥ) ತಳಿಯ ದಾಖಲೆಯಿರುವ.

Pédiment ಪೆಡಿಮೆಂಟ್ (ನಾ.) (ಗ್ರೀಕ್ ಶೈಲಿಯಲ್ಲಿ ಕಟ್ಟಿದ) ಕಟ್ಟಡದ ಮುಂಭಾಗದ ಮೇಲ್ಗಡೆಯ (ಮು., ಮುಖಮಂಟಪದ ಮೇಲಿನ) ತ್ರಿಕೋನಾಕೃತಿಯ ರಚನೆ. ರೋಮನ್ ಮತ್ತು 'ರಿನೇಸನ್ಸ್' ಶೈಲಿ ಗಳಲ್ಲಿ ಈ ತೆರದ ಅಥವಾ ಬೇರೆ ಆಕೃತಿಯ ರಚನಾ ಭಾಗ. **Pedi-méntal** (ಗು.) ; **Pédimented** (ಗು.)

Pédlar ಪೆಡ್ಲರ್ (ನಾ.) (ಸಾ., ಹಸಿಬೆ ಚೀಲದಲ್ಲಿ ತುಂಬಿದ ಚಿಲ್ಲರೆ ಸಾಮಾನಿನ ವ್ಯಾಪಾರ ಮಾಡುವ) ತಿರುಗು ವ್ಯಾಪಾರಿ. (ರೂಪ.) ಗಾಳಿ ಮಾತು ಹರಡುವವನು ; ಸುದ್ದಿಕೋರ (*Of* ಉಪ. ದೊಡನೆ) ; (P.'s French ಕಳ್ಳರ ಸಂಕೇತ ಭಾಷೆ). **Pédlary** (ನಾ.) —ವ್ಯಾಪಾರ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(—ದ) ಸರಕು. (ರೂಪ.) ಕ್ಷುಲ್ಲಕ ವ್ಯವಹಾರಗಳು, ವಿಷಯಗಳು; ಕೆಲಸಕ್ಕೆ ಬಾರದ್ದು.

Pedómeter ಪಿಡಾಮಿಟರ್ (ನಾ.) ಹೆಜ್ಜೆಹಾಕಿದ ಸಂಖ್ಯೆಯನ್ನು ಗುರುತು ಮಾಡಿಕೊಂಡು, ಅದರಿಂದ ಕಾಲ್ನಡಗೆಯಲ್ಲಿ ನಡೆದ ದೂರ ವನ್ನು ಅಂದಾಜು ಮಾಡುವ ಒಂದು ಸಲಕರಣೆ.

Pedúncle ಪಿಡಂಕ್‌ಲ್ (ನಾ.) (ಸ. ವಿ.) (ಹೂವು, ಕಾಯಿ, ಗೊಂಚಲು, ಮೊ. ಗಳ) ಕಾವು, ವೃಂತ, ತೊಟ್ಟು; ಮು., ಒಂದೇ ಹೂವನ್ನು ಬಿಡುವ ಮುಖ್ಯ ವೃಂತ, ಅಥವಾ ಉಪ ವೃಂತಗಳು (Pedicels). (ಪ್ರಾ. ವಿ.) ಪ್ರಾಣಿ ದೇಹದಲ್ಲಿ ವೃಂತದಂಥ ಚಾಚು. **Pedúncular** (ಗು.) (ಪ್ರಕೃತಿ ಚರಿತ್ರೆ) ಕಾವಿನ, ವೃಂತದ, ಅಥವಾ ಇದರ ಸ್ವಭಾವದ. **Pedúnculate** (ಗು.) —ಉಳ್ಳ.

Peek ಪೀಕ್ (ಕ್ರಿ. ಅಕ.) ಇಣಿಕಿ ನೋಡು (*In*, *out* ಉಪ. ದೊಡನೆ). P.-a-boo (ಈಗ ಅಮೆ. ಸಂ.) = Bo-peep.

Peel[1] ಪೀಲ್ (ನಾ.) (ಮು., ರೊಟ್ಟಿ, ಮೊ. ನ್ನು ಒಲೆಗೂಡಿನೊಳಕ್ಕೆ ತಳ್ಳುವುದಕ್ಕೂ ತೆಗೆಯುವುದಕ್ಕೂ ಉಪಯೋಗಿಸುವ) ಉದ್ದ ಹಿಡಿಯ ಮೊರ.

Peel[2] ಪೀಲ್ (ಕ್ರಿ., ನಾ.) (ಕಿತ್ತಿಳೆ ಹಣ್ಣು, ಉರುಳುಗಡ್ಡೆ, ಮರ, ಮೊ. ಗಳ) ಸಿಪ್ಪೆ, ತೊಗಟೆ, —ಸುಲಿ, ಎಡೆ; ಚರ್ಮ ಸುಲಿ (*Off* ಉಪ. ದೊಡನೆ). [(ಪ್ರಾಚೀ. ಪ್ರ.) Scattered and peeled ಸೂರೆಯಾಗಿ, ಕೊಳ್ಳೆ ಹೋಗಿ]. (ಮರ, ಪ್ರಾಣಿದೇಹ, ಮೊ. ಗಳ) ಚರ್ಮ, ತೊಗಟೆ, —ಸುಲಿದು ಹೋಗು, ಸುಲಿದು ಬರು (*Off* ಉಪ. ದೊಡನೆ). (ಅಸಂ.) (ವ್ಯಕ್ತಿಯ ವಿಷಯದಲ್ಲಿ) ಅಂಗಸಾಧನೆ, ಮೊ. ಗಳಿಗಾಗಿ ಉಡಿಗೆ ತೆಗೆದುಹಾಕು. (ನಾ.) ಹಣ್ಣಿನ ತೊವಲು; ಸಿಪ್ಪೆ [Candied p. ಸಕ್ಕರೆ ಪಾಕದಲ್ಲಿ ಹಾಕಿಟ್ಟ (ಸಾ., ಮಾದಳದ) ಸಿಪ್ಪೆ]. **Peéler**[1] (ನಾ.) —ಸುಲಿಯು ವವನು, —ವದು. ನೆಲದಲ್ಲಿಯ ಸಾರವನ್ನು ಹೀರಿಹಾಕುವ ಒಂದು ಸಸ್ಯ. **Peéling** (ನಾ.) (Potato peelings ಉರುಳುಗಡ್ಡೆಯ ಸಿಪ್ಪೆ)

Peéler[2] ಪೀಲರ್ (ನಾ.) (ಬಳ. ಮಾ.) ಪೊಲೀಸಿನವನು; (ಚರಿತ್ರೆ) ಪೀಲ್ ಎಂಬಾತನ ಕಾರ್ಯದರ್ಶಿತ್ವದಲ್ಲಿ ಸ್ಥಾಪಿಸಿದ, ಐರ್ಲಂಡಿನ ಪೊಲೀಸ್ ಪ್ಯಾದೆ ದಳದವನು.

Peélite ಪೀಲೈಟ್ (ನಾ.) ೧೮೪೬ರಲ್ಲಿ ಧಾನ್ಯದ ಕಾನೂನನ್ನು (Corn Laws) ರದ್ದುಗೊಳಿಸಲು Sir R. Peel ಎಂಬಾತನು ಮಸೂದೆ ತಂದಾಗ ಅವನ ಕಡೆಯಲ್ಲಿದ್ದ ಸಂಪ್ರದಾಯ ಪಕ್ಷದವರಲ್ಲಿ ಒಬ್ಬನು.

Peep[1] ಪೀಪ್ (ಕ್ರಿ. ಅಕ., ನಾ.) (ಹಕ್ಕಿಯ ಮರಿ, ಇಲಿ, ಮೊ. ಗಳ ವಿಷಯದಲ್ಲಿ) ಕೀಚು(ಗುಟ್ಟು); ಚಿಲಿಪಿಲಿ(ಗುಟ್ಟು)

Peep[2] ಪೀಪ್ (ಕ್ರಿ. ಅಕ., ನಾ.) ಸಣ್ಣ ಕಂಡಿಯ ಮೂಲಕ ನೋಡು (*At*, *into*, ಮೊ. ಉಪ. ದೊಡನೆ); ಹೊಂಚು ನೋಡು; ಇಣಿಕಿ, ಹಣಿಕಿ, ಕದ್ದು, —ನೋಡು [Peeping Tom ಕಾಮುಕ ಕುತೂಹಲ ವುಳ್ಳವನ ಆದರ್ಶ (Godiva ಎಂಬ ಕಥೆಯಲ್ಲಿಯ ಒಂದು ಪಾತ್ರ)]. (ಹಗಲ ಬೆಳಕು, ಹೂವು, ದೂರದ ವಸ್ತು, ಮೊ. ವು) ಸಾವಧಾನವಾಗಿ, ಕ್ರಮೇಣ, ಸ್ವಲ್ಪ ಮಟ್ಟಿಗೆ, —ದೃಷ್ಟಿಗೋಚರವಾಗು, ಕಾಣಬರು, ಹೊರ ಹರಿ (ಅನೇಕ ವೇಳೆ *out* ಪದದೊಡನೆ). (ರೂಪ.) (ಗುಣ, ಮೊ. ವು) ಅಯತ್ನವಾಗಿ ಕಾಣಿಸಿಕೊ, ಗೋಚರವಾಗು, ತೋರು. (ನಾ.) ಕಳ್ಳ ನೋಟ; ಇಣಿಕು, ಹಣಿಕು (ನೋಟ); ಪ್ರಥಮ ದರ್ಶನ; ಉದಯ [ಮು., P. of dawn, of day ಅರುಣೋದಯ, ಸೂರ್ಯೋದಯ; ಪ್ರಭಾತ. P.-of-day boys ಐರ್ಲಂಡಿನಲ್ಲ (೧೭೮೪-೯೫) ತಮ್ಮ ವಿರೋಧಿಗಳ ಮನೆಗಳಿಗೆ ಬೆಳಗಿನ ಜಾವದಲ್ಲ ನುಗ್ಗಿ ಯುದ್ಧಾಯುಧಗಳಿ ಗಾಗಿ ಹುಡುಕುತ್ತಿದ್ದ ಒಂದು ಪ್ರಾಟೆಸ್ಟಂಟ್ ಕ್ರೈಸ್ತ ಸಂಸ್ಥೆ. P.-hole ಇಣಿಕುಗಂಡಿ. P.-show ಸಣ್ಣ ರಂಧ್ರದಲ್ಲಿಯ ಲೆನ್ಸಿನ ಮೂಲಕ ನೋಡುವ ಸಣ್ಣ ಚಿತ್ರ ಪ್ರದರ್ಶನ (ರೂಪ. ಸಹ). P. sight (ಕೆಲವು 'ರೈಫಲ್' ಬಂದೂಕುಗಳಲ್ಲಿ) ಗುರಿ ಕಂಡಿ]. **Peéper** (ನಾ.) ಇಣಿಕಿ ನೋಡುವವನು; (ಅಸಂ.) ಕಣ್ಣು.

Peépul, Pípal ಪೀಪಲ್ (ನಾ.) ಅರಳಿಯ ಮರ; ಅಶ್ವತ್ಥ ವೃಕ್ಷ (= Bo-tree)

Peer[1] ಪಿಯರ್ (ನಾ., ಕ್ರಿ.) (ಸಾಮಾಜಿಕ ಅಂತಸ್ತಿನಲ್ಲ ಅಥವಾ ಪದವಿಯಲ್ಲಿ) ಸಮಾನಸ್ಥ, ಸಮಾನಸ್ಕಂಧ; (ಯಾವ ವಿಷಯದಲ್ಲಾಗಲಿ) ಎಣೆ (You will not easily find his p.) [**Peérless** (ಗು.); **Peérlessly** (ಕ್ರಿ. ವಿ.); **Peérlessness** (ನಾ.)]. (ಬ್ರಿಟನ್ನಿನಲ್ಲಿ) ಶ್ರೀಮಂತ ವರ್ಗದವನು (Duke, marquis, earl, viscount, baron ಎಂಬ ಅಂತಸ್ತುಗಳಲ್ಲ ಯಾವುದಕ್ಕಾದರೂ ಸೇರಿದವನು) [**Peéress** (ನಾ., ಸ್ತ್ರೀ.) ಶ್ರೀಮಂತಿನಿ]. [Peers of the realm or United Kingdom ಶ್ರೀಮಂತ ಸಭೆಯಲ್ಲ (House of Lords) ಸದಸ್ಯರಾಗಿ ಕುಳಿತುಕೊಳ್ಳ ಬಹುದಾದ ಎಲ್ಲ ಶ್ರೀಮಂತರು: ಶ್ರೀಮಂತ ಸಭಾಸದರು. Peers of Scotland ಈ ಶ್ರೀಮಂತ ಸಭೆಗೆ ಸ್ಕಾಟ್ಲೆಂಡಿನ ಶ್ರೀಮಂತ ವರ್ಗದಿಂದ ಪ್ರತಿ ಪಾರ್ಲಿಮೆಂಟಿಗೂ ಚುನಾಯಿತರಾದ ೧೬ ಮಂದಿ ಪ್ರತಿನಿಧಿಗಳು. Peers of Ireland ಐರ್ಲಂಡಿನ ಶ್ರೀಮಂತ ವರ್ಗದಿಂದ ಚುನಾಯಿತರಾದ ೨೮ ಮಂದಿ ಆಜೀವ ಸದಸ್ಯರು]. (ಯಾವುದಾದರೂ ದೇಶದ) ಶ್ರೀಮಂತ, ಕುಲೀನ, ಮನ್ನೆಯ. (ಕ್ರಿ.) (ಒಬ್ಬನ) ಸಮಾನ(ಸ್ಕಂಧ)ನಾಗಿರು, ಸಮಾನ ದರ್ಜೆಯವನಾಗಿರು (*With* ಉಪ. ದೊಡನೆ). (ಒಬ್ಬನಿಗೆ) ಶ್ರೀಮಂತ ಪದವಿ ಕೊಡು. **Peérage** ಪಿಯರೆ(ರಿ)ಜ್ (ನಾ.) ಶ್ರೀಮಂತ ವರ್ಗ; ಕುಲೀನ ವರ್ಗ; ಶ್ರೀಮಂತ ಪದವಿ; ಶ್ರೀಮಂತರ ಹೆಸರು, ವಂಶ ವೃಕ್ಷ, ಮೊ. ಗಳನ್ನುಳ್ಳ ಪುಸ್ತಕ; ಶ್ರೀಮಂತರ ವಂಶಾವಳಿಯ ಕೈಪಿಡಿ.

Peer[2] ಪಿಯರ್ (ಕ್ರಿ. ಅಕ.) ಇಣಿಕಿ ನೋಡು (*Into*, *at*, ಮೊ. ಉಪ. ದೊಡನೆ). ತಲೆದೋರು; ಗೋಚರಕ್ಕೆ ಬರು; ಉದಯವಾಗು; ದೃಷ್ಟಿಗೋಚರವಾಗು.

Peeved. Peevish ನೋಡಿ.

Peévish ಪೀವಿಷ್ (ಗು.) ರೇಗಾಡುವ; ಸಿಡುಕಿನ; ಮುಂಗೋಪದ. **Peévishly** (ಕ್ರಿ. ವಿ.); **Peévishness** (ನಾ.); **Peeved** ಪೀವ್ಡ್ (ಗು.) (ಅಸಂ.) ರೇಗಿದ; ಕೆರಳಿದ.

Peéwit = Pewit.

Peg ಪೆಗ್ (ನಾ., ಕ್ರಿ.) (ಮರ, ಲೋಹ, ಮೊ. ಗಳ) ಗೂಟ, ಬೆಣೆ, ದಸಿ (ಸಾ., ದುಂಡಗೂ ಸ್ವಲ್ಪ ಮೊನಚು ಹರಿವಿನದಾಗಿಯೂ ಇದ್ದು ಚೌಕಟ್ಟು, ಮೊ. ಗಳ ಭಾಗಗಳನ್ನು ಒಟ್ಟಿಗೆ ಹಿಡಿದುಕೊಳ್ಳುವ, ಪೀಪಾಯಿಯಲ್ಲಿಯ ಕಂಡಿಯನ್ನು ಮುಚ್ಚುವ, ರುಮಾಲು, ಟೋಪಿ, ಅಂಗಿ, ಮೊ. ನ್ನು ತಗುಲಹಾಕಲಾಗುವ, ಗುಡಾರದ ಹಗ್ಗಗಳನ್ನು ಬಿಗಿಯಲಾಗುವ, Cribbage ಎಂಬ ಇಸ್ಪೀಟಾಟದ ಗೆಲ್ಲಂಕಗಳನ್ನು ಗುರುತುಮಾಡಲರುವ— ಇವೇ ಮೊದಲಾದ ಉಪಯೋಗಗಳುಳ್ಳದ್ದು). [Round p. in square hole (Hole ನೋಡಿ). Clothes-p. (Clothes ನೋಡಿ). (ರೂಪ.) A p. to hang on (ಭಾಷಣ, ಅಭಿಪ್ರಾಯ, ಮೊ. ಕ್ಕೆ) ಒಂದು ಸಂದರ್ಭ, ನೆಪ, ವಿಷಯ]. (ಮು., ಬ್ರಾಂದಿ ಮತ್ತು ಸೋಡಾ ನೀರಿನ ಮಿಶ್ರಣದ) ಪಾನೀಯ. [Take (person) down a p. or two (ಒಬ್ಬನ) ಅಹಂಕಾರವಿಳಿಸು, ಸೊಕ್ಕು ಮುರಿ; ದೈನ್ಯಾವಸ್ಥೆಗೆ ತರು. P.-top ಮೊಳೆ ಮೂತಿಯ ಆಟದ ಬುಗುರಿ. P.-top trousers ಕಟಿ ಭಾಗದಲ್ಲಿ ದಗಲೆಯಾಗಿಯೂ ಹರಡಿನಲ್ಲಿ ಬಿಗಿಯಾಗಿಯೂ ಇರುವ ಷರಾಯಿ]. (ಕ್ರಿ.) ಮೊಳೆ, ಗೂಟ, ಬೆಣೆ, —ಹೊಡೆ(ದು ಭದ್ರಪಡಿಸು, ಬಿಗಿಪಡಿಸು) (*Down*, *in*, *out*, ಮೊ. ಉಪ. ದೊಡನೆ). [P. down (ನಿಯಮ, ಮೊ. ಗಳಿಗೆ) ಬಂಧಿಸು, ನಿರ್ಬಂಧಪಡಿಸು]. (ಸಂಸ್ಥಾ ಋಣಪತ್ರ ಮಾರುವೆ) ಇಂಥ ಪತ್ರ, ಮೊ. ನ್ನು ಒಂದು ನಿರ್ದಿಷ್ಟ ಬೆಲೆಗೆ ಧಾರಾಳವಾಗಿ ಕೊಳ್ಳುವುದರ (ಅಥವಾ ಮಾರುವುದರ) ಮೂಲಕ, ಬೆಲೆ ಇಳಿಯುವುದನ್ನು (ಅಥವಾ ಏರುವುದನ್ನು) ತಡೆಗಟ್ಟು. ಗೂಟ ವನ್ನು ಎಸೆ; ಗೂಟದಿಂದ ಹೊಡೆ, ತಿವಿ, ಚುಚ್ಚು; (ಅಸಂ.) (ಒಬ್ಬನ ಕಡೆಗೆ, ಕಲ್ಲು) ಎಸೆ, ಬೀರು; ಕಲ್ಲೆಸೆ (*At* ಉಪ. ದೊಡನೆ). (Cribbage ಆಟದ ಹಲಗೆಯಮೇಲೆ) ಗೂಟಗಳಿಂದ ಗೆಲ್ಲಂಕಗಳನ್ನು ಗುರುತು ಮಾಡು. (ಗಣಿಯ ಹಕ್ಕು, ಮೊ. ಗಳ) ಎಲ್ಲೆ, ಹದ್ದು,— ಗುರುತುಮಾಡು (*Out* ಪದದೊಡನೆ). (ಒಂದು ಕೆಲಸವನ್ನು) ಪಟ್ಟು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿಡಿದು ಮಾಡು (=P. away, P. at). P. out (ಕ್ರೋಕೆ ಆಟದಲ್ಲಿ) ಆಟದ ತೀರ್ಮಾನದ ಹೊಡೆತವಾಗಿ ಚೆಂಡಿನಿಂದ ಗೂಟವನ್ನು ಹೊಡೆ. (ಅಸಂ.) ನತ್ತುಹೋಗು; ಹಾಳಾಗಿ ಹೋಗು.

Pégasus ಪೆಗಸಸ್ (ನಾ.) ಗೊರಸಿನ ಹೊಡೆತದಿಂದ ಹಿಪೊಕ್ರೀನ್ ಚಲುಮೆಯನ್ನು ಹೀಲಿಕಾನ್ ಗುಡ್ಡದಿಂದ ಉಕ್ಕಿ ಹರಿಯುವಂತೆ ಮಾಡಿದ, ರೆಕ್ಕೆಗಳುಳ್ಳ ಕುದುರೆ. (ರೂಪ.) ಕಾವ್ಯ ಸ್ಫೂರ್ತಿ; ಕವಿತಾ ಪ್ರತಿಭೆ.

Péjorative ಪೀಜೊರೇಟಿವ್, **Pejórative** ಪಿಜಾರಟಿವ್ (ಗು., ನಾ.) ಅಲ್ಪಾರ್ಥಕ (ಪದ); ನಿಕೃಷ್ಟಾರ್ಥಕ (ಪದ). P. suffix ನಿಕೃಷ್ಟಾರ್ಥಕ ಪ್ರತ್ಯಯ (ಉದಾ., -aster : Poetaster ಕುಕವಿ; ಕ್ಷುಲ್ಲಕ ಕವಿ)

Pékín, Péking ಪೀಕಿನ್, —ಕಿಂಗ್ (ನಾ.) ಒಂದು ತೆರದ ರೇಶಿಮೆ ಬಟ್ಟೆ. (ಅಸಂ.) ಸಿವಿಲ್ ಅಧಿಕಾರಿ.

Pekinése ಪೀಕಿನೀಸ್ (ನಾ., ಗು.) ಪೀಕಿನ್ನಿನ (ನಿವಾಸಿ). ರೇಶಿಮೆ ಯಂಥ ನೀಲಗೂದಲುಳ್ಳ ಚೀನಾ ದೇಶದ ಒಂದು ನಾಯಿ ಜಾತಿ.

Pékoe ಪೆ(ಪೀ)ಕೊ(ೀ) (ನಾ.) ಮೇಲ್ತರದ ಕಪ್ಪು ತೇಯೆಲೆ.

Pélage ಪೆಲೆ(ಲ)ಜ್ (ನಾ.) (ಚತುಷ್ಪಾದಿಯ) ತುಪ್ಪುಳು, ಕೂದಲು, ಉಣ್ಣೆ, ಮೊ. ದು.

Pelágian[1] ಪಿಲೇಜಿಯನ್ (ಗು., ನಾ.) (ಮನುಷ್ಯನ ಪಾಪವು ಸೃಷ್ಟ್ಯಾದಿ ಯಿಂದ ಬಂದದ್ದು ಎಂಬ ರೋ. ಕ್ಯಾ. ತತ್ತ್ವವನ್ನು ನಿರಾಕರಿಸಿದ, ೪-೫ನೆಯ ಶ. ಮಾ. ದವನಾದ) ಪಿಲೇಜಿಯಸ್ ಎಂಬ ಬ್ರಿಟಿಷ್ ಸಂನ್ಯಾಸಿಯ (ಅನುಯಾಯಿ). **Pelágianism** (ನಾ.)

Pelágian[2] ಪಿಲೇಜಿಯನ್ (ಗು., ನಾ.) ವಿಸ್ತಾರ ಸಮುದ್ರದ; ವಿಸ್ತಾರ ಸಮುದ್ರ ವಾಸಿ(ಯಾದ). **Pelágic** ಪಿಲ್ಯಾಜಿಕ್ (ಗು.) ವಿಸ್ತಾರ ಸಮುದ್ರದ(ಮೇಲಿನ); —ಮೇಲೆ ನಡಸಿದ (P. sealing ನಡುಗಡಲ ನಲ್ಲಿ ಮಾಡುವ ಸೀಲ್ ಪ್ರಾಣಿಯ ಬೇಟೆ)

Pelf ಪೆಲ್ಫ್ (ನಾ.) ಹಣ; ಐಶ್ವರ್ಯ (ಸಾ., ತಿರಸ್ಕಾರ ಪ್ರ.)

Pélican ಪೆಲಿಕನ್ (ನಾ.) (ತನ್ನ ರಕ್ತವನ್ನೇ ಊಡಿ ಮರಿಗಳನ್ನು ಸಾಕುತ್ತ ದೆಂದು ಕಥೆ ಹೇಳುವ, ಮೀನನ್ನು ಶೇಖರಿಸಿಟ್ಟುಕೊಳ್ಳುವ ಹೊಟ್ಟೆ ಚೀಲವುಳ್ಳ) ಒಂದು ಜಾತಿಯ ದೊಡ್ಡ ನೀರುಕೋಳಿ.

Pelísse ಪೆಲೀಸ್ (ನಾ.) ಕಾಲ ಹರಡಿನ ವರೆಗೂ ಬರುವ, ತೋಳು ಗಂಡಿಗಳು ಅಥವಾ ತೋಳುಗಳು ಉಳ್ಳ, ಹೆಂಗಸಿನ ದಗಲೆ. (ಮನೆಯ ಹೊರಗೆ ಹೋಗುವಾಗ ಅಂಗಿಯಮೇಲೆ ತೊಡಿಸುವ) ಮಗುವಿನ ಮೇಲಂಗಿ. ಅಶ್ವಸೈನಿಕನ ಸಾದಾ ಉಡುಪಾದ ತುಪ್ಪುಳಂಚಿನ ಜುಬ್ಬ.

Pellágra ಪೆಲೇ(ಲ್ಯಾ)ಗ್ರ (ನಾ.) ಚರ್ಮ ಬಿರಿಯುವ, ಹಲವು ವೇಳೆ ಹುಚ್ಚಿನಲ್ಲಿ ಪರಿಣಾಮಗೊಳ್ಳುವ ಲಕ್ಷಣಗಳುಳ್ಳ, ಲಾಂಬರ್ಡಿಯಲ್ಲಿ ವಿಶೇಷವಾಗಿರುವ, ಒಂದು ವ್ಯಾಧಿ. **Pellágrous** (ಗು.)

Péllet ಪೆಲೆಟ್ (ನಾ., ಕ್ರಿ. ಸಕ.) (ಕಾಗದ, ರೊಟ್ಟಿ, ಮೊ. ಗಳ) ಸಣ್ಣ ಉಂಡೆ, ಚೆಂಡು, ಗೋಲಿ; (ಔಷಧದ) ಮಾತ್ರೆ, ಗುಳಿಗೆ; ಸಣ್ಣ (ಬಂದೂಕು) ಗುಂಡು; (ನಾಣ್ಯ, ಮೊ. ಗಳಲ್ಲಿ) ಗುಂಡು ಗುಬುಟು. (ಕ್ರಿ.) (ಮು., ಕಾಗದದ) ಸಣ್ಣ ಉಂಡೆಗಳಿಂದ ಹೊಡೆ.

Péllicle ಪೆಲಿಕ್‍ಲ್ (ನಾ.) ತೆಳು ಚರ್ಮ; ಪೊರೆ; ಪಟಲ. **Pellícular** (ಗು.)

Péll-méll ಪೆಲ್‍ಮೆಲ್ (ಕ್ರಿ. ವಿ., ಗು., ನಾ.) ಅಡ್ಡಾದಿಡ್ಡಿ(ಯಾಗಿ); ಯದ್ವಾತದ್ವ(ವಾಗಿ); ಅಸ್ತವ್ಯಸ್ತ(ವಾಗಿ); ದಿಕ್ಕಾಪಾಲಾಗಿ; ಚೆಲ್ಲಾ ಪಿಲ್ಲಿ(ಯಾಗಿ); ಲಕ್ಷ್ಯವಿಲ್ಲದೆ; ಸ್ವಲ್ಪವೂ ವಿಚಾರ ಮಾಡದೆ; ಜೋಕೆ ತೋರದೆ. ದಿಕ್ಕುತೋರದ; ಭ್ರಾಂತಿ(ಗೊಂಡ); ಗೊಂದಲ(ದ); ಗಲಿಬಿಲಿ(ಯ)

Pellúcid ಪೆಲ್ಯೂಸಿಡ್ (ಗು.) ಪಾರದರ್ಶಕವಾದ; ತಿಳಿಯಾದ; ಸ್ವಚ್ಛ ವಾದ. (ಶೈಲಿ, ನಿರೂಪಣೆ, ಭಾವನೆ, ಮೊ.) ತಿಳಿಯಾದ, ವಿಶದವಾದ, ಸ್ಪಷ್ಟವಾದ. **Pellucídity** (ನಾ.); **Pellúcidly** (ಕ್ರಿ. ವಿ.)

Pélmanism ಪೆಲ್ಮನಿಸ್‍ಮ್ (ನಾ.) ೨೦ನೆಯ ಶತಮಾನದ ಒಂದು ಸ್ಮೃತಿ ಶಿಕ್ಷಣ ಪದ್ಧತಿ; ಜ್ಞಾಪಕವರ್ಧನ ಶಿಕ್ಷಣ (ಪದ್ಧತಿ)

Pelt[1] ಪೆಲ್ಟ್ (ನಾ.) (ಕುರಿಯ ಅಥವಾ ಮೇಕೆಯ) ಕುರುಚುಗೂದಲಿನ ಚರ್ಮ; (ಉಣ್ಣೆ ತೆಗೆದುಹಾಕಿದ, ಕುರಿ, ಮೊ. ಗಳ) ಹದಮಾಡಿರದ ಚರ್ಮ, ಹಸಿ ಚಕ್ಕಳ. **Péltry** (ನಾ.) ಹದಮಾಡಿರದ ಚಕ್ಕಳಗಳು.

Pelt[2] ಪೆಲ್ಟ್ (ಕ್ರಿ., ನಾ.) ಕ್ಷಿಪಣಿಗಳಿಂದ ಎದುರಿಸು, ಮೇಲೆ ಬೀಳು; (ಕಲ್ಲು, ಮೊ. ಕ್ಷಿಪಣಿಗಳಿಂದ) ಸಂತತವಾಗಿ ಹೊಡೆ; (—ಕಡೆಗೆ) ಗುಂಡುಹಾರಿಸುತ್ತ ಹೋಗು (*At* ಉಪ. ದೊಡನೆ). (ಮಳೆ, ಮೊ.) ರಭಸ ದಿಂದ ಬಡಿ; ಪಟಪಟನೆ ಹೊಡೆ. (ನಾ.) —ವುದು. (At) full p. ಪೂರ್ಣ ವೇಗ(ದಿಂದ)

Pélvis ಪೆಲ್ವಿಸ್ (ನಾ., ಬ. ವ. -ves —ವೀಸ್) (ಅಂ. ರ. ಶಾ.) (ಹಲವು ಕಶೇರುಕ ಪ್ರಾಣಿಗಳಲ್ಲಿ) ಕಿಬ್ಬೊಟ್ಟೆಯಲ್ಲಿ ಕಟ್ಟಸ್ಥಿಗಳೂ ಬೆನ್ನುಹುರಿಯ ಕೆಲವು ಎಲುಬುಗಳೂ ಸುತ್ತುವರಿದು ಆದ ಬೋಗುಣಿಯಾಕಾರದ ಕುಳಿ; ವಸ್ತಿ ಕುಹರ; ಮೂತ್ರಪಿಂಡದ ಇಂತಹ ಕುಳಿ. **Pélvic** (ಗು.)

Pémphigus ಪೆಂಫಿಗಸ್ (ನಾ.) (ರೋಗ ನಿದಾನ) ಮೈಚರ್ಮದಮೇಲೆ ನೀರುಗುಳ್ಳೆಗಳೇಳುವ ಒಂದು ರೋಗ. **Pémphigoid** (ಗು.); **Pémphigous** (ಗು.)

Pen[1] ಪೆನ್ (ನಾ., ಕ್ರಿ. ಸಕ.) ದನ, ಕುರಿ, ಕೋಳಿ, ಮೊ. ಗಳನ್ನು ಕೂಡುವುದಕ್ಕಾಗಿ ಅಥವಾ ಇತರ ಕೆಲಸಗಳಿಗಾಗಿ ಮಾಡಿರುವ ಸಣ್ಣ ಆವರಣ: ರೊಪ್ಪ; ದೊಡ್ಡಿ; (ವೆಸ್ಟ್ ಇಂಡೀಸಿನಲ್ಲಿ) ಒಬ್ಬನ ಬೇಸಾ ಯದ ಜಮೀನುಗಳು; ಒಕ್ಕಲ ಜಮೀನು; ಬೆಳಸಿದ ಮರಗಳ ಪ್ರದೇಶ; ನೆಟ್ಟ ತೋಪು. (ಕ್ರಿ.) ಆವರಣದಲ್ಲಿ ಕೂಡು; ಒಳಗೆ ಸೇರಿಸು, ಕೂಡು (*Up, in* ಉಪ. ದೊಡನೆ); (ದನ, ಮೊ. ನ್ನು) ರೊಪ್ಪದಲ್ಲಿ ಕೂಡು.

Pen[2] (ನಾ., ಕ್ರಿ. ಸಕ.) (ಮಸಿಯಲ್ಲಿ ಅದ್ದಿ ಬರೆಯುವುದಕ್ಕಾಗಿ ಒಂದು ತುದಿ ಮೊನಚಾಗಿಯೂ ಎರಡಾಗ ಸೀಳಿಯೂ ಇರುವ) ಗರಿಲೇಖನಿ; ಪೇನ; ಬರೆಯುವ ಕಡ್ಡಿ; (ಉಕ್ಕು, ಚಿನ್ನ, ಮೊ. ಗಳಿಂದ ಮಾಡಿದ ಮುಳ್ಳನ್ನು ಮರದ ಕಡ್ಡಿಗೆ ತೊಡಿಸಿದ) ಲೇಖನಿ. ಬರಹ; ಬರವಣಿಗೆ(ಯ ಶೈಲಿ) [Makes a living with his p. ಅವನು ತನ್ನ ಲೇಖನಿಯಿಂದ (ಬರವಣಿಗೆಯಿಂದ) ಜೀವನ ನಡಸುತ್ತಾನೆ. Wields a formidable p. ಬಲವಾದ, ಜೋರಾದ, ಭಯಂಕರವಾದ, ಬರವಣಿಗೆ ಬರೆಯುತ್ತಾನೆ]. [Fountain-p. (Fountain ನೋಡಿ)]. [P. & ink ಲೇಖನ ಸಾಮಗ್ರಿ; ಬರವಣಿಗೆ. P.-&-ink (ಗು.) ಲೇಖನ ಸಾಮಗ್ರಿಯಿಂದ ಬರೆದ, ಲೇಖಿಸಿದ]. **P.-feather** ಲೇಖನಿಯ (ಹಕ್ಕಿ)ಗರಿ. **Penholder** ಲೇಖನಿಯ ಕಡ್ಡಿ. **Penknife** (ಸಾ., ಜೇಬಿನಲ್ಲಿಟ್ಟುಕೊಳ್ಳುವ) ಸಣ್ಣ ಚೂರಿ; ಚಾಕು. **Pénman** (—ಮ್ಯನ್) ಬರಹಗಾರ, ಲೇಖನ ಕಾರ, ಲಿಪಿಕಾರ (A good, bad, p.); ಗ್ರಂಥಕರ್ತ; ಲೇಖಕ. **Penmanship** ಲೇಖನ ಕೌಶಲ; ಕೈಬರಹದ ಶೈಲಿ; ಸಾಹಿತ್ಯ ಕೃತಿಯ ರಚನೆ, ಶೈಲಿ. **P.-name** (ಗ್ರಂಥಕರ್ತನ) ಕೃತಕ ನಾಮ. **Penwiper** (ಉಪಯೋಗಿಸಿದಮೇಲೆ) ಲೇಖನಿಯನ್ನು ಒರಸುವ (ಸಾ., ಚಿಂದಿ ಬಟ್ಟೆ ಚೂರಿನ) ಸಲಕರಣೆ: ಲೇಖನಿಯೊರಸು. (ಕ್ರಿ.) ಬರೆ; ರಚಿಸಿ ಬರೆ. **Pénful** (ಗು.)

Pen[3] ಪೆನ್ (ನಾ.) ಹೆಣ್ಣು ಹಂಸ; ಹಂಸಿ.

Pénal ಪೀನಲ್ (ಗು.) ದಂಡನೆಯ; ಶಿಕ್ಷೆಯ; ದಂಡನೆ ವಿಧಿಸುವುದರ (P. laws ದಂಡನೆಯ ಕಾನೂನು). (ಅಪರಾಧ) (ಮು., ಕಾನೂನಿನ ಪ್ರಕಾರ) ದಂಡಿಸಬಹುದಾದ; ಶಿಕ್ಷಾರ್ಹ; ದಂಡನೀಯ; ದಂಡನೆ ಯಾಗಿ ವಿಧಿಸಿದ (P. servitude ಕಠಿನ ಸಜ). ದಂಡನೆಯ ಸ್ಥಾನ ವಾಗಿ ಉಪಯೋಗಿಸಿದ(ಸುವ) (A p. colony). **Pénally** (ಕ್ರಿ. ವಿ.); **Pénalize** (ಕ್ರಿ. ಸಕ.) (ಕಾರ್ಯವನ್ನು) ದಂಡನಾರ್ಹವಾಗಿ ಮಾಡು, ದಂಡನಾರ್ಹವೆಂದು ನಿರ್ಧರಿಸಿ ಹೇಳು; (ವ್ಯಾಯಾಮ ಕ್ರೀಡೆ ಮತ್ತು ರೂಪ.) ಸ್ಪರ್ಧಿಯನ್ನು ದಂಡನೆಗೆ ಗುರಿಮಾಡು. **Pénalty** ಪೆನಲ್ಟಿ (ನಾ.) (ಕಾನೂನು, ನಿಯಮ, ಕರಾರು—ಇವುಗಳ ಉಲ್ಲಂಘನೆಗಾಗಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಭವಿಸಬೇಕಾದ ದಂಡನೆ (ಮು., ತೆರಬೇಕಾದ ದಂಡ, ಜುರ್ಮಾನೆ). (ವ್ಯಾಯಾಮ ಕ್ರೀಡೆ) ನಿಯಮವನ್ನು ಮುರಿದದ್ದಕ್ಕಾಗಿ ಅಥವಾ ಹಿಂದಿನ ಸ್ಪರ್ಧೆಯಲ್ಲಿ ಗೆದ್ದ ಕಾರಣವಾಗಿ ಸ್ಪರ್ಧಿಗೆ ವಿಧಿಸಿದ ಶಿಕ್ಷೆ, ಪ್ರತಿಬಂಧಕ.

Pénance ಪೆನನ್ಸ್ (ನಾ., ಕ್ರಿ. ಸಕ.) (ರೋಮನ್ ಮತ್ತು ಗ್ರೀಕ್ ಕ್ರೈಸ್ತ ಮತಗಳಲ್ಲಿ) ಪಶ್ಚಾತ್ತಾಪ, ಪಾಪ ನಿವೇದನ, ಪರಿಹಾರಕಾಣಿಕೆ ಮತ್ತು ವಿಮೋಚನ—ಇವುಗಳಿಂದ ಕೂಡಿದ ಒಂದು ಸಂಸ್ಕಾರ: ಪ್ರಾಯಶ್ಚಿತ್ತ; (ಮು., ಪ್ರಾಯಶ್ಚಿತ್ತ ರೂಪವಾಗಿ ಪುರೋಹಿತನಿಂದ ವಿಧಿಸಲ್ಪಟ್ಟ) ದೇಹದಂಡನೆ (Do p. ದೇಹವನ್ನು ದಂಡಿಸು). (ಕ್ರಿ.) —ವಿಧಿಸು.

Penátes ಪಿನೇಟೀಸ್ (ನಾ., ಬ. ವ.) (ರೋಮನ್ ಪುರಾಣ) ಮನೆ ದೇವರುಗಳು; ಕುಲ ದೇವತೆಗಳು.

Pence. Penny ಪದದ ಬ. ವ.

Penchant (F) ಪಾನ್‌ಷಾನ್ (ನಾ.) ಒಲವು; ಪ್ರವೃತ್ತಿ.

Péncil ಪೆನ್ಸಿಲ್, ಪೆನ್‌ಸ್‌ಲ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) (ಚಿತ್ರಗಾರನ) ವರ್ಣಕೂರ್ಚ, ಕುಂಚ (ಈಗಲೂ ಸಹ ಸಣ್ಣ ಕುಂಚಗಳ ವಿಷಯದಲ್ಲಿ: ಮು., ಸಮಾಸಗಳಲ್ಲಿ ಪ್ರ.; ಉದಾ., Sable-p., camelhair p.). (ರೂಪ.) ಚಿತ್ರ(ಗಾರನ) ಕಲೆ, ಶೈಲಿ. ಸೀಸದ ಕಡ್ಡಿ. (ದೃ. ವಿ.) ಒಂದು ಬಿಂದುವಿನಲ್ಲಿ ಒಟ್ಟುಗೂಡುವ (ಅಥವಾ ಒಂದು ಬಿಂದುವಿನಿಂದ ಹೊರಟು ಚೆದರುವ) ಕಿರಣ ಗುಚ್ಛ. (ಜ್ಯಾ.) ಒಂದು ಬಿಂದುವಿನಲ್ಲಿ ಕೂಡುವ (ಅಥವಾ ಒಂದು ಬಿಂದುವಿನಿಂದ ಹೊರಟು ಚೆದರುವ) ರೇಖೆಗಳಿಂದಾದ ಆಕೃತಿ: ರೇಖಾ ಗುಚ್ಛ. ಕಿರಣ ಗುಚ್ಛದಾಕಾರದ ವಸ್ತು. [P.-case ಸೀಸದ ಕಡ್ಡಿಯ ಅಥವಾ ಬರೆಯುವ ಸೀಸದ (ಸಾ., ಲೋಹದ) ನಳಿಕೆ, ಹಿಡಿಗೊಳವೆ]. (ಕ್ರಿ.) ಸೀಸದ ಕಡ್ಡಿಯಿಂದ (ಹೇಗೊ ಹಾಗೆ) ಬಣ್ಣ ಕೊಡು, ಗುರುತು ಮಾಡು; ಸೀಸದ ಕಡ್ಡಿಯಿಂದ ಬರೆ ಅಥವಾ ಗುರುತು ಹಾಕಿಕೊ. (ಕುದುರೆಯ ಹೆಸರನ್ನು) ಜೂಜಿನ ಪುಸ್ತಕದಲ್ಲಿ ಬರೆ [**Péinciller** (ನಾ.) (ಜೂಜಿನ ಅಸಂ.) ಕುದುರೆಯ ಜೂಜಿನ ವ್ಯಾಪಾರ ನಡಸುವವನು; ಇವನ ಗುಮಾಸ್ತೆ]. ಬಣ್ಣದ ಅಥವಾ ಛಾಯೆಯ ಸೂಕ್ಷ್ಮ ಸಮಾನ ಕೇಂದ್ರೀಯ ವರ್ತುಲ ರೇಖೆಗಳಿಂದ ಗುರುತು ಮಾಡು (ಮು., ಭೂ. ಕೃ. ನಲ್ಲ)

Péndant ಪೆಂಡಂಟ್, **-ent** —ಡೆಂಟ್ (ನಾ., ಗು.) [ಮು., ಕೊರಳ ಸರ (ಕಂಠ ಹಾರ), ತೋಳ್ಬಂದಿ, ಮೊ. ಕ್ಕೆ] ತೂಗಹಾಕಿರುವ ಪದಕ, ಲೋಲಕ; (ನಾವೆ) ಕೂವೆಮರದ ತುದಿಯಿಂದ ಹೊರಟು ಕೆಳ ಕೊನೆಯಲ್ಲಿ ಕಪ್ಪಿ, ಮೊ. ಗಳ ಕೊಕ್ಕೆಯನ್ನು ತೂಗಹಾಕಲು ಅನುಕೂಲಿಸುವ ಕುಣಿಕೆಯುಳ್ಳ ಸಣ್ಣ ಹಗ್ಗ (=Pennant); ಯುದ್ಧಸಜ್ಜಿತ ನೌಕೆಯ ಕೂವೆಯ ತುದಿಯಲ್ಲಿ ಹಾರಾಡುವ ಚೂಪು ಬಾವುಟ (=Pennant); ಕಿಸೆಯ ಗಡಿಯಾರವನ್ನು ತಗುಲಹಾಕುವುದಕ್ಕಾಗಿ ಅದರಲ್ಲಿ ಮಾಡಿರುವ ಕಾಂಡ ಮತ್ತು ಉಂಗುರ. (ಒಬ್ಬನ, ಒಂದರ) ಸಂವಾದಿ, ಜೋಡಿ, ಈಡು, ಜೊತೆ, ಸಮಾನ. (ಗು.) ತೊಂಗುವ; ನೇಲುವ; ಜೋಲುವ; ಮೇಲೆ ತೂಗುತ್ತಿರುವ; ಚಾಚಿರುವ; ಲಂಬಕ. (ರೂಪ.) ಅನಿಶ್ಚಿತ; ತೀರ್ಮಾನವಾಗಿಲ್ಲದ. (ವ್ಯಾ.) ಅನ್ವಯ ಪೂರ್ತಿಯಿಲ್ಲದ; ನ್ಯೂನಾನ್ವಯದ. **Péndency** (ನಾ.); **Pénding** (ಗು., ಉಪ.) (ಇನ್ನೂ) ತೀರ್ಮಾನವಾಗಿಲ್ಲದ; ಇತ್ಯರ್ಥವಾಗಿಲ್ಲದ; ತೀರ್ಮಾನಕ್ಕೆ ಕಾದಿರುವ; ಇತ್ಯರ್ಥವಾಗಲಿರುವ (A suit was then p.). (ಉಪ.) —ಆಗ, —ಆ ಕಾಲದಲ್ಲಿ (P. these negotiations ಈ ಸಂಧಾನಗಳು ನಡೆಯುತ್ತಿದ್ದಾಗ); —ವರೆಗೂ (P. his return ಅವನು ಮರಳಿ ಬರುವವರೆಗೂ)

Pendénte líte (L) ಪೆಂಡೆಂಟೀ ಲೈಟೀ (ಕ್ರಿ. ವಿ.) ದಾವ ನಡೆಯುತ್ತಿರುವಲ್ಲಿ.

Pénding. **Pendant** ನೋಡಿ.

Péndulate, Pénduline, Péndulous, etc. **Pendulum** ನೋಡಿ.

Péndulum ಪೆಂಡ್ಯುಲಮ್ (ನಾ.) ಲೋಲಕ; ಅನಿರ್ಬಂಧವಾಗಿ ತೂಗಾಡುವಂತೆ ತೂಗಹಾಕಿರುವ ವಸ್ತು: ಮು., ಗಡಿಯಾರದ (ಕಾರ್ಯಚಾಲಕಗಳನ್ನು ನಿಯಂತ್ರಿಸುವ, ಕೊನೆಯಲ್ಲಿ ತೂಕ ಕಟ್ಟಿರುವ) ಲೋಲಕ ದಂಡ. [Swing of the p. (ರೂಪ.) ರಾಜಕೀಯ ಪಕ್ಷಗಳಲ್ಲಿ ಒಂದು ಪಕ್ಷದಿಂದ ಮತ್ತೊಂದಕ್ಕೆ ಅಧಿಕಾರ ಬದಲಾಯಿಸುತ್ತಿರುವುದು. Compensation p. (Compensate ನೋಡಿ)]. ತೂಗಾಡುವ ಮನುಷ್ಯ, ವಸ್ತು (ರೂಪ. ಸಹ). (ಬಿಲ್ಯರ್ಡ್ಸ್ ಆಟ) P. cannon or stroke ಮೇಜಿನ ಕಿಸೆಯ ಬಾಯೆಡೆಯಲ್ಲಿ ಎರಡು ಚೆಂಡುಗಳು ಅಡಚಿಕೊಂಡಿರುವ ಸಂದರ್ಭದಲ್ಲಿ, ಅವನ್ನು ಒಂದಾದಮೇಲೊಂದರಂತೆ ಹೊಡೆಯುವ (ಆಟಗಾರನ) ಚೆಂಡಿನ ಹೊಡೆತಗಳು. **Péndulate** —ಲೇಟ್ (ಕ್ರಿ. ಅಕ.) (ಲೋಲಕದಂತೆ) ತೂಗಾಡು; (ರೂಪ.) ನಿಶ್ಚಯಕ್ಕೆ ಬರದಿರು; ಡೋಲಾಯಮಾನನಾಗಿರು. **Pénduline** —ಲೈನ್ (ಗು.) (ಹಕ್ಕಿಯ ಗೂಡು) ತೂಗಬಿದ್ದಿರುವ; (ಹಕ್ಕಿಯ ವಿಷಯದಲ್ಲಿ) ತೊಂಗು ಗೂಡು ಕಟ್ಟುವ. **Péndulous** —ಲಸ್ (ಗು.) (ಮು., ಹಕ್ಕಿಯ ಗೂಡು, ಹೂವು, ಮೊ. ವು) ತೂಗಬಿದ್ದಿರುವ, ತೊಂಗುತ್ತಿರುವ; (ಲೋಲಕದಂತೆ) ತೂಗಾಡುತ್ತಿರುವ. **Péndulously** (ಕ್ರಿ. ವಿ.)

Penélope ಪಿನೆಲೊಪಿ (ನಾ.) ಪತಿವ್ರತೆ (ಗ್ರೀಕ್ ಪುರಾಣದಲ್ಲಿ ಬರುವ Odysseus ಎಂಬಾತನ ಹೆಂಡತಿಯ ಹೆಸರಿನಿಂದ)

Penetrália ಪೆನಿ(ನೆ)ಟ್ರೇಲಿಯ (ನಾ., ಬ. ವ.) ಯಾವುದಾದರೊಂದರ, ಒಂದು ಸ್ಥಳದ, ಅತ್ಯಂತ ಒಳಗಿನ ಅಥವಾ ಅತ್ಯಂತ ಗೂಢವಾದ ಭಾಗಗಳು (ಮು., ಅರಮನೆಯ ಗುಪ್ತ ಭಾಗಗಳು, ದೇವಾಲಯದ ಗರ್ಭಗುಡಿ)

Pénetrate ಪೆನಿ(ನೆ)ಟ್ರೇಟ್ (ಕ್ರಿ.) ಒಳಹೊಗು; —ಮೂಲಕ ಪ್ರವೇಶ ಮಾಡು; ಭೇದಿಸಿಕೊಂಡುಹೋಗು; ಹಾದು ಹೋಗು; ನುಗ್ಗಿಹೋಗು; ನಾಟು. (ದೃಷ್ಟಿಯ ವಿಷಯದಲ್ಲಿ: ಕತ್ತಲನ್ನು, ಪೊದೆ, ಮೊ. ನ್ನು) ತೂರಿಕೊಂಡು ಹೋಗು; ವ್ಯಾಪಿಸು(ವಂತೆ ಮಾಡು) (Person, thing, *with*). (ರೂಪ.) (ಒಬ್ಬನ ಮನಸ್ಸನ್ನು, ಆಶಯವನ್ನು, ಯೋಜನೆಯನ್ನು, ನಿಶ್ಚಯಾಂಶವನ್ನು) ಒಳಹೊಕ್ಕು ನೋಡು, ಭೇದಿಸಿ ತಿಳಿ; ಗ್ರಹಿಸು. ದಾರಿ ಮಾಡಿಕೊಂಡು ಹೋಗು (*Into, through, to* ಉಪ. ದೊಡನೆ) (ವರ್ತಮಾನ ಕೃ.) ತೀಕ್ಷ್ಣ ದೃಷ್ಟಿಯ; ಮರ್ಮಭೇದಿಯಾದ; ಸೂಕ್ಷ್ಮಗ್ರಾಹಿಯಾದ; (ದನಿ, ಮೊ. ಗಳ ವಿಷಯದಲ್ಲಿ) ಇತರ ಶಬ್ದಗಳಿದ್ದರೂ ಅವುಗಳನ್ನು ಮೀರಿ ಸುಲಭವಾಗಿ ಕೇಳಿಸುವ. **Pénetratingly** (ಕ್ರಿ. ವಿ.); **Penetrátion** (ನಾ.); **Pénetrative** (ಗು.); **Pénetratively** (ಕ್ರಿ. ವಿ.); **Pénetrator** (ನಾ.); **Penetrabílity** (ನಾ.); **Pénetrable** (ಗು.)

Pénguin ಪೆಂಗ್ವಿನ್, ಪೆನ್‌ಗ್ವಿನ್ (ನಾ.) (ನೀರಿನೊಳಗೆ ಈಜಾಡಲು ಉಪಯೋಗವಾಗುವ ಹುಟ್ಟುಗಳಂಥ ರೆಕ್ಕೆಗಳುಳ್ಳ, ದಕ್ಷಿಣಾರ್ಧಗೋಳ ವಾಸಿಯಾದ) ಒಂದು ಜಾತಿಯ ಕಡಲ ಕೋಳಿ.

Pénial. **Penis** ನೋಡಿ.

Pénicillate ಪೆನಿಸಿಲೆಟ್ (ಗು.) (ಪ್ರಕೃತಿ ಚರಿತ್ರೆ) ಸಣ್ಣ ಜುಟ್ಟು(ಗಳು) ಉಳ್ಳ; —ಆಗಿರುವ; ಸೀಸದ ಕಡ್ಡಿಯಿಂದ ಅಥವಾ ಕುಂಚದಿಂದ ಮಾಡಿದಂತಿರುವ ಗೆರೆಗಳುಳ್ಳ.

Península ಪೆ(ಪಿ)ನಿನ್‌ಸ್ಯುಲ (ನಾ.) ಬಹುಮಟ್ಟಿಗೆ ನೀರಿನಿಂದ ಆವೃತವಾದ ಅಥವಾ ಸಮುದ್ರದೊಳಕ್ಕೆ ಚಾಚಿಕೊಂಡಿರುವ ಭೂಭಾಗ: ಪರ್ಯಾಯ ದ್ವೀಪ; ದ್ವೀಪ ಕಲ್ಪ. [The P. (ಸ್ಪೆಯ್ನ್ ಮತ್ತು ಪೋರ್ಚುಗಲ್ ಸೇರಿದ) ಐಬೀರಿಯನ್ ಪರ್ಯಾಯ ದ್ವೀಪ]. **Penínsular** (ಗು., ನಾ.) ಪರ್ಯಾಯ ದ್ವೀಪದ (ಸ್ವಭಾವದ); ಐಬೀರಿಯನ್ ಪರ್ಯಾಯ ದ್ವೀಪದ; ಇದರಲ್ಲಿ ಫ್ರೆಂಚರಿಗೂ ಇಂಗ್ಲಿಷರು, ಮೊ. ದವರಿಗೂ ೧೮೦೮-೧೮೧೪ರಲ್ಲಿ ನಡೆದ ಯುದ್ಧದ. (ನಾ.) ಪರ್ಯಾಯ ದ್ವೀಪ ವಾಸಿ. ಐಬೀರಿಯನ್ ಯುದ್ಧದ ಸಿಪಾಯಿ. **Penínsulate** (ಕ್ರಿ. ಸಕ.) (ಭೂಮಿಯನ್ನು) ಪರ್ಯಾಯ ದ್ವೀಪವನ್ನಾಗಿ ಮಾಡು.

Pénis ಪೀನಿಸ್ [ನಾ.; ಬ. ವ. -nes —ನೀಸ್(ಸ್)] ಹೆಣ್ಣಿನೊಡನೆ ಸಂಭೋಗ ಮಾಡುವುದಕ್ಕಾಗಿರುವ ಗಂಡು ಪ್ರಾಣಿಯ ಅಂಗ; ಗಂಡಿನ ಜನನಾಂಗ; ಲಂಗ; ಶಿಶ್ನ. **Pénial** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pénitent ಪೆನಿಟೆಂಟ್ (ಗು., ನಾ.) (ಮಾಡಿದ ತಪ್ಪನ್ನು, ಪಾಪವನ್ನು, ತಿದ್ದಿಕೊಳ್ಳುವ ಉದ್ದೇಶದಿಂದ) ಪಶ್ಚಾತ್ತಾಪ, ಎದೆಗುದಿ, —ಪಡುವವನು; (ಪಾಪ ನಿವೇದನೆ ಕೇಳುವ ಪುರೋಹಿತನು ವಿಧಿಸುವ) ಪ್ರಾಯಶ್ಚಿತ್ತ ಮಾಡಿಕೊಳ್ಳುವವನು, ದೇಹದಂಡನೆಯ ವ್ರತ ಕೈಕೊಳ್ಳುವವನು. (ಬ. ವ. ದಲ್ಲಿ) ಒಬ್ಬರಿಗೊಬ್ಬರು ಶಿಷ್ಟಿಪಾಲನೆ, ಮೊ. ನಿಯಮಗಳನ್ನು ವಿಧಿಸುವಂತೆ ಏರ್ಪಡಿಸಿಕೊಂಡಿರುವ ರೋ. ಕ್ಯಾ. ಪಂಥಗಳು. **Pénitently** (ಕ್ರಿ. ವಿ.); **Pénitence** (ನಾ.); **Peniténtial** —ಟೆನ್ಷ‌ರ್ (ಗು.) ಪಶ್ಚಾತ್ತಾಪದ; ಪ್ರಾಯಶ್ಚಿತ್ತದ; ದೇಹದಂಡನೆಯ; [The p. psalms (ಬೈಬಲ್ಲಿನಲ್ಲಿ) ಈ ವಿಷಯವಾದ ಕೆಲವು ಸ್ತೋತ್ರ ಗೀತಗಳು]. **Peniténtially** (ಕ್ರಿ. ವಿ.); **Peniténtiary** —ಟೆನ್ಷರಿ (ನಾ., ಗು.) ಪೋಪ್ ಗುರುವಿನ ಆಸ್ಥಾನದಲ್ಲಿ ಪ್ರಾಯಶ್ಚಿತ್ತ, ದಂಡ ವಿಮೋಚನೆ, ಮೊ. ವಿಷಯಗಳನ್ನು ತೀರ್ಮಾನಿಸುವ ಕಚೇರಿ: ಪ್ರಾಯಶ್ಚಿತ್ತ ಕಚೇರಿ (Grand P. ಈ ಕಚೇರಿಯ ಅಧ್ಯಕ್ಷತೆಯುಳ್ಳ ಪ್ರಧಾನ ಗುರು). ಪಶ್ಚಾತ್ತಾಪಪಟ್ಟು ಸನ್ಮಾರ್ಗಕ್ಕೆ ಬರಬೇಕೆನ್ನುವ ಗುಡಿಸೆಟ್ಟಿಗೆ ಆಶ್ರಯಸ್ಥಾನ. (ಅಪರಾಧಿಗಳನ್ನು) ತಿದ್ದುವ ಉದ್ದೇಶದಿಂದ ಶಿಕ್ಷಣ ಕೊಡುವ ಕಾರಾಗೃಹ. (ಗು.) ಪ್ರಾಯಶ್ಚಿತ್ತದ; (ಅಪರಾಧಿಗಳನ್ನು) ತಿದ್ದುವ ಉದ್ದೇಶದಿಂದ ಶಿಕ್ಷಣ ಕೊಡುವ.

Pénnant ಪೆನಂಟ್ (ನಾ.) =Pendant (ನಾವೆ); =Pennon.

Pénniform ಪೆನಿಫಾರ್ಮ್ (ಗು.) (ಪ್ರಕೃತಿ ಚರಿತ್ರೆ) ಗರಿಯ ಆಕಾರದಂತೆ ಅಥವಾ ರೂಪಿನಂತೆ ಇರುವ. **Penníferous** (ಗು.) ಗರಿಗಳುಳ್ಳ; ಗರಿಗಳು ಬೆಳೆಯುವ.

Pénniless. **Penny** ನೋಡಿ.

Pénnon ಪೆನನ್ (ನಾ.) (ಈಟಿ ರಾವುತ ದಳದ ಧ್ವಜವಾಗಿ ಉಪಯೋಗಿಸುವ) ತ್ರಿಕೋನಾಕಾರದ, ಅಥವಾ ಕವಲೊಡೆದ ಮುಖದ, ಸಣ್ಣಗಲದ ಉದ್ದ ಬಾವುಟ; (ಹಡಗಿನ) ಉದ್ದ ಚೂಪು ಹರಿವು ಬಾವುಟ; (ಯಾವುದಾದರೂ) ಬಾವುಟ. **Pénnoned** (ಗು.)

Pénny ಪೆನಿ [ನಾ.; ಬ. ವ. Pence ಪೆನ್ಸ್, (ಪೆನಿ ನಾಣ್ಯಗಳು ಎಂಬಲ್ಲಿ) Pennies ಪೆನಿಸ್] ಷಿಲಿಂಗಿನ $\frac{1}{12}$ ಬೆಲೆಯ, ಕಂದು ಕಂಚಿನ ಒಂದು ಇಂಗ್ಲಿಷ್ ನಾಣ್ಯ: ಪೆನಿ (ಸಂಕ್ಷಿಪ್ತ: d. =Denarius; ಉದಾ., 6d.). Gave me my change in pennies ಚಿಲ್ಲರೆಯನ್ನು ನನಗೆ ಪೆನಿ ನಾಣ್ಯಗಳಲ್ಲಿ ಕೊಟ್ಟನು. Doled it out in single pennies. A pretty p. ತಕ್ಕಮಟ್ಟಿನ ಹಣ; ಸುಮಾರು ಹಣ. Peter's p. (Peter ನೋಡಿ). A p. for your thoughts (ಅಧ್ಯಾನದಲ್ಲಿರುವವನನ್ನು ಹಾಸ್ಯಮಾಡುವ ಮಾತು). In for a p., in for a pound ಆರಂಭಿಸಿದ್ದನ್ನು ಏನೇ ಆಗಲ (ಎಷ್ಟೇ ಖರ್ಚಾಗಲಿ) ಕೊನೆಮುಟ್ಟಿಸಲೇಬೇಕು. Take care of the pence ಪುಡಿಕಾಸು ವೆಚ್ಚಮಾಡುವುದರಲ್ಲೂ ಜಾಗರೂಕನಾಗಿರು. Turn an honest p. ಯಾವುದಾದರೂ ಚಿಲ್ಲರೆ ಕೆಲಸ ಮಾಡಿ ಎರಡು ಕಾಸನ್ನು ನ್ಯಾಯವಾಗಿ ಸಂಪಾದಿಸು. A p. plain & two pence coloured ಚಿನ್ನದ ಬಣ್ಣ ಹಾಕಿದ ಕಾಸು; ಥಳಕು ಪಳಕು (ಅಗ್ಗದ ಆಡಂಬರವನ್ನು ಜರೆಯುವ ಮಾತು). P. wise & pound foolish ಸಣ್ಣ ವಿಷಯಗಳಲ್ಲಿ ಜೋಕೆ, ಭಾರಿ ವಿಷಯಗಳಲ್ಲಿ ಅಲಕ್ಷ್ಯ. ಕಾಸಿಗೆ ಜಾಣ, ಕೋಟಿಗೆ ಕೋಣ. **P.-a-line** (ಬರವಣಿಗೆಯ ವಿಷಯದಲ್ಲಿ) ಕಾಸಿಗೊಂದು ಪಂಕ್ತಿಯ; ಅಗ್ಗದ; ತಿರುಳಿಲ್ಲದ. **P.-a-liner** ಕೂಲಿ ಬರಹಕಾರ. **P.-in-the-slot** (Slot ನೋಡಿ). **P. post** ಸಮಾಚಾರ ಕಾಗದವೊಂದಕ್ಕೆ ಸಾಮಾನ್ಯ ರುಸುಮು ಒಂದು ಪೆನಿಯಂತೆ ಒಯ್ಯುವ ಅಂಚೆಯ ಏರ್ಪಾಡು: ಪೆನಿ ಅಂಚೆರವಾನೆ. **P. postage** ಪೆನಿ ಅಂಚೆಹಾಸಲು. **Pénnyweight** (ಸಂಕ್ಷಿಪ್ತ: dwt) ಒಂದು ತೂಕದ ಅಳತೆ [24 ಗ್ರೇಯ್ನ್‌ಗಳು, (ಚಿನ್ನ ಬೆಳ್ಳಿ ತೂಕದ) ಟ್ರಾಯ್ $\frac{1}{20}$ ಔನ್ಸು]. **Pénnyworth, Pénn'orth** (ಪೆನರ್ಥ್) ಒಂದು ಪೆನಿಯ ಬೆಲೆಯಷ್ಟು (Not a p.-w. ಕಾಸಿನಷ್ಟೂ ಇಲ್ಲ; ಕೊಂಚವೂ ಇಲ್ಲ. A good, bad, p.-w. ಒಳ್ಳೆಯ, ನಷ್ಟದ, ವ್ಯಾಪಾರ). **Pénniless** (ಗು.) ಕಾಸಿಲ್ಲದ; ದರಿದ್ರ; ನಿರ್ಗತಿಕನಾದ.

Penólogy ಪಿ(ೀ)ನಾಲೊಜಿ (ನಾ.) ದಂಡನೆಯ ವಿಧಿಯನ್ನೂ ಸೆರೆಮನೆಯ ಆಡಳಿತವನ್ನೂ ಕುರಿತ ಶಾಸ್ತ್ರ: ದಂಡನ ಶಾಸ್ತ್ರ. **Penólogist** (ನಾ.); **Penológical** ಪೀನೊಲಾ— (ಗು.)

Pénsile ಪೆನ್ಸೈ(ಸಿ)ಲ್ (ಗು.) ಇಳಿಯಬಿದ್ದಿರುವ; ತೊಂಗುತ್ತಿರುವ; (ಹಕ್ಕಿ, ಮೊ. ವು) ತೊಂಗುಗೂಡು ಕಟ್ಟುವ.

Pénsion ಪೆನ್ಷ(ಷ್)ನ್ (ನಾ., ಕ್ರಿ. ಸಕ.) (ಸರ್ಕಾರ, ಕಂಪೆನಿ, ಅಥವಾ ಉದ್ಯೋಗಕ್ಕಿಟ್ಟುಕೊಂಡ ಯಜಮಾನ—ಇವರು) ನೌಕರನು ಹಿಂದೆ ಸಲ್ಲಿಸಿದ ಸೇವೆಗಾಗಿ, ಅಥವಾ ಹಕ್ಕು, ಮೊ. ನ್ನು ಬಿಟ್ಟುಕೊಟ್ಟದ್ದಕ್ಕಾಗಿ, ಕೊಡುವ ನಿಯತ ಕಾಲಿಕ ವಿಶ್ರಾಂತಿ ವೇತನ; ಪಿಂಛನು (Ministry of Pensions ಕಳೆದ ಮಹಾಯುದ್ಧದ ದೆಸೆಯಿಂದ ಏರ್ಪಟ್ಟ ವಿಶ್ರಾಂತಿ ವೇತನ ಖಾತೆ). (ಸಾಕ್ಷಾತ್ತಾಗಿ ನೌಕರನಾಗಿಲ್ಲದಿದ್ದರೂ ಅಂಥವನ ಅಭಿಮಾನ ಸಂಪಾದನೆಗೊ ಗುಪ್ತ ಸೇವೆಗೊ, ಅಥವಾ ಕಲೆಗಾರ, ವೈಜ್ಞಾನಿಕ, ಮೊ. ರು ಸಾರ್ವಜನಿಕ ಉಪಯೋಗದ ಕಾರ್ಯಗಳನ್ನು ನಿರಾತಂಕವಾಗಿ ನಡಸಿಕೊಂಡುಹೋಗಲು ಅನುಕೂಲಿಸುವುದಕ್ಕೊ ಕೊಡುವ) ಗೌರವ ವೇತನ. [Old-age p. (ಒಂದು ಗೊತ್ತಾದ ವಯಸ್ಸು ವಿೂರಿದ ಕೆಲಸಗಾರರಿಗೂ ಗತಿಯಿಲ್ಲದವರಿಗೂ ಅಥವಾ ಪ್ರತಿಯೊಬ್ಬರಿಗೂ ಸರ್ಕಾರದವರು ವಾರಗಟ್ಟಲೆಯೊ ತಿಂಗಳುಗಟ್ಟಲೆಯೊ ಕೊಡುವ) ಮುಪ್ಪಿನ ಸಂಬಳ]. Gray's Inn ಎಂಬ ನ್ಯಾಯವಾದಿ ಸಂಸ್ಥೆಯ ಸದಸ್ಯರ ಸಲಹಾ ಸಭೆ. (ಉಚ್ಚಾರಣೆ: ಪಾನ್‌ಸ್ಯಾನ್) ಒಂದು ಗೊತ್ತಾದ ರುಸುಮಿಗೆ ಊಟ ಹಾಕುವ ಭೋಜನ ಶಾಲೆ [Live en p. (ರುಸುಮಿನ) ಭೋಜನ ಶಾಲೆಯ ಗಿರಾಕಿಯಾಗಿರು]. (ಕ್ರಿ.) ವಿಶ್ರಾಂತಿ ವೇತನ ಕೊಡು; ಗೌರವ ವೇತನ ಕೊಟ್ಟು ಒಲಿಸಿಕೊ. P. off ವಿಶ್ರಾಂತಿ ವೇತನ ಕೊಟ್ಟು ಕಳುಹಿಸಿಬಿಡು. **Pénsionless** (ಗು.); **Pénsionable** (ಗು.) (ಸೇವೆ, ನೌಕರಿ, ಮೊ. ಗಳ ವಿಷಯದಲ್ಲಿ) ವಿಶ್ರಾಂತಿ ವೇತನಕ್ಕೆ ಹಕ್ಕುಳ್ಳ; —ವೇತನ ಪಡೆಯಬಹುದಾದ, ಪಡೆಯಲುಳ್ಳ. **Pénsionary** (ಗು., ನಾ.) ವಿಶ್ರಾಂತಿ ವೇತನದ; ವಿಶ್ರಾಂತಿ ವೇತನಿ. ಉಪಜೀವಿ; ಅಡಿಯಾಳು; ದುಡ್ಡಿಗೆ ಕೆಲಸ ಮಾಡುವವನು. **Pénsioner** (ನಾ.) ಆರಾಮ ಸಂಬಳ ಪಡೆಯುತ್ತಿರುವವನು; ವಿಶ್ರಾಂತಿ ವೇತನಿ. (ಕೇಂಬ್ರಿಡ್ಜ್ ವಿ. ವಿ. ನಿ.) ಯಾವ ವೇತನವನ್ನೂ ರಿಯಾಯಿತಿಯನ್ನೂ ಪಡೆಯದೆ ತನ್ನ ಊಟ, ಮೊ. ಖರ್ಚುಗಳನ್ನೆಲ್ಲ ತಾನೇ ವಹಿಸುವ ವಿದ್ಯಾರ್ಥಿ.

Pénsive ಪೆನ್ಸಿವ್ (ಗು.) ಯೋಚನೆಯಲ್ಲಿ ಮುಳುಗಿದ; ಚಿಂತಾಕ್ರಾಂತ. **Pénsively** (ಕ್ರಿ. ವಿ.); **Pénsiveness** (ನಾ.)

Pénstock ಪೆನ್‌ಸ್ಟಾಕ್ (ನಾ.) ತೂಬು; ತೂಬು ಬಾಗಿಲು.

Pent ಪೆಂಟ್ (ಗು.) (ಹೊರ ಹೋಗದಂತೆ) ಬಂಧಿಸಿಟ್ಟ; ಸೆರೆಯಿಟ್ಟ; ತಡೆಹಾಕಿಟ್ಟ; ಅದುಮಿಟ್ಟ (*In* ಅಥವಾ *up* ಉಪ. ದೊಡನೆ)

Penta- ಪೆಂಟ— [ಸ. ಪೂ. ಪ.; (ಸ್ವರದ ಹಿಂದೆ Pent-)] ಪಂಚ—; ಐದು—. **Péntachord** ಐದು ತಂತಿಯ (ಸಂಗೀತ) ವಾದ್ಯ; ಪಂಚ ಸ್ವರಶ್ರೇಣಿ. **Pentadáctyl** (ಗು., ನಾ.) (ಕೈ ಅಥವಾ ಕಾಲಿನಲ್ಲಿ) ಐದು ಬೆರಳುಳ್ಳ (ಮನುಷ್ಯ, ಪ್ರಾಣಿ): ಪಂಚಾಂಗುಲಿ. **Pentadactýlic** (ಗು.); **Pentadáctylism** (ನಾ.). **Pentágynous** (ಪೆಂಟ್ಯಾಜಿನಸ್) ಐದು ಶಲಾಕೆಗಳುಳ್ಳ. **Pentahédron** [ಪೆಂಟಹೀ(ಹೆ)ಡ್ರನ್] ಐದು ಮುಖದ ಘನಾಕೃತಿ: ಪಂಚ ಮುಖಿ. **Pentahédral** (ಗು.). **Pentámerous** (ಪೆಂಟ್ಯಾಮೆರಸ್) (ಸ. ವಿ.) (5-merous ಎಂದು ಸಹ ಬರೆಯುವುದುಂಟು) ಹೂವಿನ ಪ್ರತಿ ಸುತ್ತಿನಲ್ಲೂ ಐದು ಭಾಗಗಳುಳ್ಳ; (ಪ್ರಾ. ವಿ.) ಐದು ಸಂಧಿ(ಕೀಲು)ಗಳುಳ್ಳ. **Pentándrous** ಐದು ಬಿಡಿ ಕೇಸರಗಳುಳ್ಳ. **Pentapétalous** (ಪೆಂಟ—) ಐದು ದಳಗಳುಳ್ಳ. **Pentápody** (ಪೆಂಟ್ಯಾ—) ಐದು ಗಣಗಳ ಪಾದ, ಪದ್ಯ. **Péntastich** (ಪೆಂಟಸ್ಟಿಕ್) ಐದು ಸಾಲಿನ ಪದ್ಯ: ಪಂಚ ಪದಿ. **Pentatómic** (ಒಂದು ರಾಸಾಯನಿಕ ಅಣುವಿನಲ್ಲಿ) ಐದು ಪರಮಾಣುಗಳುಳ್ಳ. **Pentatónic** ಪಂಚ ಸ್ವರಗಳ. **Pentávalent** (—ಟ್ಯಾವ—) ಜಲ ಜನಕದ ಐದು ಪರಮಾಣುಗಳ ಸಂಯೋಜನ ಶಕ್ತಿಯುಳ್ಳ; ಪಂಚಯೋಗ ಶಕ್ತ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Péntacle ಪೆಂಟಕ್‌ಲ್ (ನಾ.) (ಮು., ಮಾಟದಲ್ಲಿ, ಇಂದ್ರಜಾಲದಲ್ಲಿ) ಸಂಕೇತವಾಗಿ ಉಪಯೋಗಿಸುವ ಐದು ಮೂಲೆಯ ಆಕೃತಿ ; = Pentagram.

Péntad ಪೆಂಟ್ಯಾಡ್ (ನಾ.) ಐದರ ಸಂಖ್ಯೆ (ಐದು); ಐದರ ತಂಡ ; ಪಂಚಕ. (ರ. ವಿ.) ಸಂಯೋಗ ಶಕ್ತಿ ಐದಾಗುಳ್ಳ ಮೂಲಧಾತು ಅಥವಾ ಘಟಕ : ಪಂಚ ಯೋಗಿ.

Péntagon ಪೆಂಟಗನ್ (ನಾ.) ಐದು ಭುಜಗಳ ಸರಳ (ಸಮತಲ) ರೇಖಾಕೃತಿ; ಪಂಚ ಕೋನ (ಆಕೃತಿ). **Pentágonal** —ಟ್ಯಾಗೊ— (ಗು.)

Péntagram ಪೆಂಟಗ್ರ್ಯಾಮ್ (ನಾ.) (ಪಂಚಭುಜಾಕೃತಿಯ ಭುಜಗಳನ್ನು ಎರಡು ಕಡೆಗಳಲ್ಲೂ ಪರಸ್ಪರ ಸಂಧಿಸುವ ವರೆಗೂ ಲಂಬಿಸುವುದರಿಂದ ಆಗುವ) ಐದು ಕೋಡುಗಳ ನಕ್ಷತ್ರಾಕೃತಿ (ಹಿಂದೆ ಯಂತ್ರ, ಮಾಟ, ಮೊ. ಗಳಲ್ಲಿ ಸಂಕೇತವಾಗಿ ಉಪಯೋಗ)

Pentámeter ಪೆಂಟ್ಯಾಮಿಟರ್ (ನಾ.) (ಗ್ರೀಕ್ ಮತ್ತು ಲ್ಯಾಟಿನ್ ಛಂದಸ್ಸಿನಲ್ಲಿ) ಎರಡು ಪಾದಗಳ ಒಂದು ತೆರದ ಪದ್ಯ. (ಇಂಗ್ಲಿಷ್ ಛಂದಸ್ಸಿನಲ್ಲಿ) ಒಂದು ತೆರದ ಐದು ಗಣದ ಪದ್ಯಪಂಕ್ತಿ.

Péntane ಪೆಂಟೇನ್ (ನಾ.) (ರ. ವಿ.) ಪೆಟ್ರೋಲಿಯಂ, ಮೊ. ಗಳಲ್ಲಿ ನಿರ್ವರ್ಣ ಪ್ರವಾಹೀ ರೂಪದಲ್ಲಿ ದೊರೆಯುವ 'ಪ್ಯಾರಫಿನ್ ಹೈಡ್ರೊಕಾರ್ಬನ್'.

Péntateuch ಪೆಂಟಟ್ಯೂಕ್ (ನಾ.) (ಮೋಸೆಸ್ ರಚಿಸಿದುದೆಂದು ಪ್ರತೀತಿಯುಳ್ಳ) ಬೈಬಲ್ಲಿನ ಹಳೆಯ ಒಡಂಬಡಿಕೆಯ ಮೊದಲ ಐದು ಪ್ರಕರಣಗಳು. **Pentateúchal** (ಗು.)

Péntecost ಪೆಂಟಿ(ಟೆ)ಕಾಸ್ಟ್ (ನಾ.) ಯೆಹೂದ್ಯರ ಸುಗ್ಗಿಯ ಹಬ್ಬ ; ಸಿನ್ಯೆ ಧರ್ಮೋಪದೇಶದ ವಾರ್ಷಿಕೋತ್ಸವ. (ಪ್ರಾಚೀ. ಪ್ರ.) = Whit Sunday. **Pentecóstal** (ಗು.)

Pénthouse ಪೆಂಟ್‌ಹೌಸ್ (ಪ್ರಾಚೀ. ಪ್ರ. : **Péntice** ಪೆಂಟಿಸ್) (ನಾ.) ಇಳಿಜಾರು ಚಾವಣಿ; ಒಪ್ಪಾರು (ಮು., ಮುಖ್ಯ ಕಟ್ಟಡದ ಗೋಡೆಗೆ ನೇರಿದಂತೆ ಹಾಕಿದ್ದು) ; ಒಪ್ಪಾರು ಗುಡಿಸಿಲು. ಮೇಲ್ಕಟ್ಟು.

Péntonville ಪೆಂಟನ್‌ವಿಲ್ (ನಾ.) (ಬಂದಿಗಳನ್ನು ಪ್ರತ್ಯೇಕ ಪ್ರತ್ಯೇಕವಾದ ಕೋಣೆಗಳಲ್ಲಿ ಬಂಧಿಸುವ ತತ್ತ್ವದಮೇಲೆ ಕಟ್ಟಿದ ಮಾದರಿಯ) ಲಂಡನ್ನಿನ ಒಂದು ಸೆರೆಮನೆ.

Penúlt(imate) ಪಿನಲ್ಟ್(ಲ್ಟಿಮೆಟ್) (ಗು., ನಾ.) ಒಂದು ಬಿಟ್ಟು ಕೊನೆಯ(ದು) ; ಕಡೆಯದರ ಹಿಂದಿನ(ದು) ; ಉಪಾಂತ. ಉಪಾಂತ ಉಚ್ಚಾರಾಂಶ ; ಉಪಾಂತಾಕ್ಷರ.

Penúmbra ಪಿನಂಬ್ರ (ನಾ.) (ಅಪಾರದರ್ಶಕ ಕಾಯದಿಂದಾದ ನೆರಳಿನ ಸುತ್ತಲೂ ಕಾಣುವ) ಅರ್ಧಚ್ಛಾಯಾ ಪ್ರದೇಶ (ಮು., ಗ್ರಹಣದಲ್ಲಿ ಚಂದ್ರನ ಅಥವಾ ಭೂಮಿಯ ಪೂರ್ಣಚ್ಛಾಯೆಯ ಸುತ್ತಣದು) ; ಅರೆ ನೆರಳು. ಸೂರ್ಯಕಳಂಕದ ಸುತ್ತಣ ನಸುಬೆಳಕಿನ ಹೊರಭಾಗ. **Penúmbral** (ಗು.)

Pénury ಪೆನ್ಯುರಿ (ನಾ.) ಜೀವನೋಪಾಯವಿಲ್ಲದಿರುವುದು ; ಕೇವಲ ಬಡತನ ; ದಟ್ಟ ದಾರಿದ್ರ್ಯ ; ನಿರ್ಗತಿ ; ಇಲ್ಲದಿರುವುದು ; ಕೊರತೆ (*Of* ಉಪ. ಜೊತೆನೆ). **Penúrious** ಪಿನ್ಯೂರಿಯಸ್ (ಗು.) ಬಡತನದ ; ದಾರಿದ್ರ್ಯದ ; ಕೊರತೆಯ. ಜಿಪುಣತನದ ; ಹಿಡಿತದ ; ಕಾರ್ಪಣ್ಯ ಪಡುವ. **Penúriously** (ಕ್ರಿ. ವಿ.) ; **Penúriousness** (ನಾ.)

Péon ಪೀಅನ್, ಪ್ಯೂನ್ (ನಾ.) ಕಚೇರಿಯ ಜವಾನ ; ಸೇವಕ ; ಆಳು. **Péonage** —ನಿಜ್ (ನಾ.) ಜವಾನ ಚಾಕರಿ.

Péople ಪೀಪ್‌ಲ್ (ನಾ., ಕ್ರಿ. ಸಕ.) (ಜನಾಂಗ, ಬುಡಕಟ್ಟು ಅಥವಾ ಕೋಮು—ಇವಕ್ಕೆ ಸೇರಿದ) ಜನ(ಗಳು) ; ಜನರು ; ಜನತೆ [The English p., English-speaking peoples, A warlike p. (ಏ. ವ. ಪ್ರ.)]. (ರಾಜ, ಮೊ. ರ) ಪ್ರಜೆಗಳು ; (ಪಾದ್ರಿ, ಮೊ. ರ) ಶಿಷ್ಯಮಂಡಲ (ಬ. ವ. ಪ್ರ.). ಶಸ್ತ್ರಸಜ್ಜಿತ ಅನುಚರರು ; ಪರಿವಾರ ; ಕರ್ಮಕಾರರು (ಬ. ವ. ಪ್ರ.). ಒಬ್ಬನ ತಂದೆತಾಯಿಗಳು, ಬಂಧುಬಳಗ. ಸಾಮಾನ್ಯ ಜನರು ; ಮಂದಿ ; ಲೋಗರು (ಗ್ರಾಂ.) (The p.). ಚುನಾಯಿಸುವ, ಚುನಾವಣೆಗೆ ನಿಲ್ಲುವ, ಹಕ್ಕುಳ್ಳ ಅಥವಾ ತಕ್ಕ ಯೋಗ್ಯತಾ ಪಕ್ಷವುಳ್ಳ ಪೌರ ಜನ (ಏ. ವ. ಅಥವಾ ಬ. ವ. ಪ್ರ.). ಜನಸಾಮಾನ್ಯರು (P. don't like to be kept waiting). (ಕ್ರಿ.) ಜನರಿಂದ ತುಂಬು ; ಜನಭರಿತ ಮಾಡು ; (ಒಂದು ಸ್ಥಳವನ್ನು ಪ್ರಾಣಿ, ಮೊ. ಗಳಿಂದ) ಭರ್ತಿ ಮಾಡು (*With* ಉಪ. ಜೊತೆನೆ). (ಒಂದು ಪ್ರದೇಶದಲ್ಲಿ ಜನ, ಪ್ರಾಣಿಗಳು) ವಾಸವಾಗಿರು, ತುಂಬು, ನೆಲಸು, ನೆಲಸಿರು (ಮು., ಭೂ. ಕೃ. ನಲ್ಲಿ) (A thickly peopled country ಜನ ನಿಬಿಡ ದೇಶ)

Pep ಪೆಪ್ (ನಾ.) [Pepper ಪದದ ಸಂಕ್ಷಿಪ್ತ (ಅಮೆ. ನಂ. ಅಸಂ.)] ಹುಮ್ಮಸ್ಸು ; ಖಾರ. **Péppy** (ಗು.) —ತುಂಬಿದ.

Peperíno ಪೆಪೆರೀನೊ (ನಾ.) ಮರಳು, ಕಿಟ್ಟ, ಮೊ. ಪು ಸೇರಿ ಆದ, ಹಗುರವೂ ರಂಧ್ರಮಯವೂ ಆದ ಜ್ವಾಲಾಮುಖಿ ಶಿಲೆ.

Pépper ಪೆಪರ್ (ನಾ., ಕ್ರಿ. ಸಕ.) ಮೆಣಸು [ಒಣಗಿದ ಕಾಯನ್ನು ಅಥವಾ ಕಾಳನ್ನು ಹಾಗೆಯೇ ಅಥವಾ ಪುಡಿಮಾಡಿಯೊ ಉಪಯೋಗಿಸುವ ಒಂದು ಜಾತಿಯ ಗಿಡಗಳ ಖಾರವಾದ ಒಂದು ಸುವಾಸನಾ ಸಂಬಾರ ವಸ್ತು = (Peppercorns)] ; ಮೆಣಸಿನ ಪುಡಿ. [Black P. ಮೆಣಸಿನ ಬಳ್ಳಿ. Black p. ಎಳೆಯ ಮೆಣಸನ್ನು ಒಣಗಿಸಿ ಮಾಡಿದ ಕಾಳು : ಕರಿ ಮೆಣಸು. White p. ಬಲಿತ ಮೆಣಸನ್ನು ಒಣಗಿಸಿ ಅಥವಾ ಕರಿಯ ಮೆಣಸಿನ ಸಿಪ್ಪೆ ತೆಗೆದು ಮಾಡಿದ್ದು : ಬಿಳಿ ಮೆಣಸು. Cayenne p. ಮೆಣಸಿನ ಕಾಯಿ ; ಇದರ ಪುಡಿ]. (ರೂಪ.) ಖಾರವಾದದ್ದು (ಎಂದರೆ, ರೇಗಿಸುವಂಥದು, ಮನಸ್ಸನ್ನು ಚುಚ್ಚುವಂಥದು). [P.-&-salt ಕಪ್ಪು ಮತ್ತು ಬಿಳುಪು ಚುಕ್ಕೆಗಳು ಕಾಣುವಂತೆ ಕರಿಯ ಮತ್ತು ಬಿಳಿಯ ಉಣ್ಣೆಗಳನ್ನು ಸೇರಿಸಿ ನೆಯ್ದ ಬಟ್ಟೆ. P.-box ಮೆಣಸಿನ ಪುಡಿಯನ್ನು ಉದುರಿಸುವುದಕ್ಕಾಗಿ ರಂಧ್ರಗಳಿರುವ ಮುಚ್ಚಳವುಳ್ಳ, ಸಾ., ದುಂಡನೆಯ, ಸಣ್ಣ ಡಬ್ಬಿ. P.-castor, -er = P.-box. Peppercorn ಮೆಣಸಿನ ಕಾಳು (ಹೆಸರು ಮಾತ್ರದ ಕಂದಾಯವಾಗಿ ಕೊಟ್ಟದ್ದು). P.-pot = P.-castor. ಜಮೇಕದವ(ನ ಅಡ್ಡ ಹೆಸರು). **Peppermint** (ಅದರ ಚಂಚಲ ತೈಲಕ್ಕಾಗಿ ಬೆಳಸುವ) ಒಂದು ತೆರದ ಪುದೀನ ; ಪುದೀನ ತೈಲ; ಪುದೀನ ತೈಲ ಹಾಕಿ ರುಚಿಕಟ್ಟಿದ ಸಕ್ಕರೆ ಬತ್ತಾಸು]. (ಕ್ರಿ.) ಮೆಣಸಿನ ಪುಡಿ ಉದುರಿಸು, ಬೆರಸು; ಮೆಣಸಿನ ಪುಡಿಯುದುರಿಸುವಂತೆ ಉದುರಿಸು. ಕ್ಷಿಪಣಿಗಳನ್ನು ಎಸೆ, ಬೀರು (ರೂಪ. ಸಹ); ಕಠಿನ ಶಿಕ್ಷೆ ಕೊಡು. **Péppery** (ಗು.) ಮೆಣಸಿನ(ಂಥ) ; ಮೆಣಸು ತುಂಬಿದ. (ರೂಪ.) ಖಾರವಾದ ; ಕುಟುಕುವ ; ತೀಕ್ಷ್ಣವಾದ ; ಸಿಡುಕಿನ ; ರೇಗು ಸ್ವಭಾವದ.

Pépsin ಪೆಪ್ಸಿನ್ (ನಾ.) ಅಲ್ಪ ಸತ್ತ್ವದ ಆಮ್ಲದ ಸಾನ್ನಿಧ್ಯದಲ್ಲಿ ಸಸಾರಜನಕ ಪದಾರ್ಥಗಳನ್ನು 'ಪೆಪ್ಟೋನ್' ಎಂಬ ಸುಲಭವಾಗಿ ಜೀರ್ಣಿಸುವ ಪದಾರ್ಥವನ್ನಾಗಿ ಮಾರ್ಪಡಿಸುವ, ಜಠರ ರಸದ ಒಂದು ಕಿಣ್ವ : 'ಪೆಪ್ಸಿನ್'. **Péptic** (ಗು., ನಾ.) ಜೀರ್ಣಕಾರಿ(ಯಾದ) (P. glands ಜಠರ ರಸ ಗ್ರಂಥಿಗಳು). (ನಾ., ಬ. ವ. ದಲ್ಲಿ) (ಹಾಸ್ಯ ಪ್ರ.) ಆಹಾರ ಜೀರ್ಣಾಂಗಗಳು. **Péptone** (ನಾ.) ಜಠರ ರಸ ಕಿಣ್ವ, ಮೊ. ಗಳ ಕಾರ್ಯದಿಂದ ಸಸಾರಜನಕ ಪದಾರ್ಥಗಳು ಪರಿವರ್ತನೆ ಹೊಂದಿ ಆದ ಕಿಣ್ವಕೃತ ಸಸಾರಜನಕ(ವರ್ಗ). **Péptonize** (ಕ್ರಿ. ಸಕ.)

Péptic, Péptone, etc. Pepsin ನೋಡಿ.

Per (L) ಪರ್ (ಉಪ.) ಮೂಲಕ ; ದ್ವಾರ ; ಇಂದ. P. annum, mensem, diem ವರ್ಷ, ತಿಂಗಳು, ದಿನ, —ಒಂದಕ್ಕೆ. P. contra (ಕ್ರಿ. ವಿ., ನಾ.) (ಒಂದು ಲೆಕ್ಕ, ಮೊ. ಗಳ) ಎದುರು ಕಡೆ(ಯಲ್ಲಿ), ಎದುರು ಪಕ್ಕ(ದಲ್ಲಿ). P. mille ಸಾವಿರಕ್ಕೆ; ಸಾವಿರದಲ್ಲಿ. Per procurationem [ಸಂಕ್ಷಿಪ್ತ : per pro(c)., p.p.] ಪ್ರತಿನಿಧಿಯ ಮೂಲಕ ; ಮಧ್ಯಸ್ಥನ, ಕಾರ್ಯಭಾರಿಯ, ಮೂಲಕ ; (ಪತ್ರಕ್ಕೆ ರುಜು ಹಾಕಿದವನ) ಕರ್ತೃತ್ವದ ಮೂಲಕ. P. saltum ಮಧ್ಯದ ಅಂತಸ್ತುಗಳಲ್ಲದೆ ; ಒಟ್ಟಿಗೆ ; ಒಮ್ಮೆಲೇ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದೇ ಸಲಕ್ಕೆ. P. se (ಮತ್ತೆ ಯಾವುದರ ಸಂಬಂಧವೂ ಇಲ್ಲದೆ) ಅದರಿಂದಲೇ, ಅದರಲ್ಲಿಯೇ ; ವಾಸ್ತವಿಕವಾಗಿಯೇ ; ವಸ್ತುತಃ. P. post, rail, steamer ಅಂಚೆಯ, ರೈಲಿನ, ಜಹಜಿನ, —ಮೂಲಕ. P. bearer (ಕಾಗದ) ತರುವವನ ಮೂಲಕ ; ಮುದ್ದಾಂ. (ಹಾಸ್ಯ ಪ್ರ.) As p. usual ಯಥಾ ಪ್ರಕಾರ. A rupee p. man ತಲೆಗೊಂದು ರೂಪಾಯಿಯಂತೆ. At 5 p. cent ಸೇಕಡ ೫ರ ಮೇರೆಗೆ.

Per- ಪರ್— (ಸ. ಪೂ. ಪ.) (೧) ಪೂರ್ತಿಯಾಗಿ ; ಸಂಪೂರ್ಣವಾಗಿ (Perforate, pervade). (೨) ಹೆಚ್ಚಾಗಿ (Perturb). (೩) ನಾಶಕರವಾಗಿ, ಕೇಡಾಗಿ (Pervert, perdition). (೪) (ರ. ವಿ.) (ಸಂಯುಕ್ತದಲ್ಲಿ ಒಂದು ಧಾತು ಪರಮಾವಧಿಯ ಪ್ರಮಾಣದಲ್ಲಿದೆಯೆಂದು ತೋರಿಸುವುದು): Perchloride, Peroxide, etc.; Perchloric, Permanganic, etc. ; Perchlorate, Persulphate, etc.

Peradvénture ಪ(ಪೆ)ರ್‌ಅ್ಯಡ್ವೆಂಚ್ಯುರ್, —ಚರ್ (ಕ್ರಿ. ವಿ., ನಾ.) (ಪ್ರಾಚೀ. ಪ್ರ.) ಒಂದು ವೇಳೆ; ಪ್ರಾಯಶಃ; ಬಹುಶಃ ; (If p. ಒಂದು ವೇಳೆ ಹಾಗೆ ಆಗುವುದಾದರೆ. Lest p. ಒಂದು ವೇಳೆ ಹಾಗೆ ಆದೀತೆಂಬ ಭಯದಿಂದ). (ನಾ.) ಅನಿಶ್ಚಯ ; ಸಂಭವ ; ಸಂದೇಹ; ಅಕಸ್ಮಾತ್ ಘಟನೆ ; ಊಹೆ [Beyond, without, (all) p. (ಸ್ವಲ್ಪವೂ) ಸಂಶಯವಿಲ್ಲದೆ; ನಿಸ್ಸಂದೇಹವಾಗಿ]

Perámbulate ಪೆ(ಪ)ರ್‍ಯಾಂಬ್ಯುಲೇಟ್ (ಕ್ರಿ. ಸಕ.) ನಡೆದಾಡು ; ತಿರುಗಾಡು ; ಸುತ್ತಾಡು ; ಪರ್ಯಟನ ಮಾಡು ; ಸಂಚರಿಸು ; ಪ್ರಾಂತದಲ್ಲೆಲ್ಲ ಸುತ್ತಿ (ದೇಶವನ್ನು) ಪರೀಕ್ಷಿಸು. (ಪಾದ್ರಿಯಾಡಳಿತ ಪ್ರಾಂತ, ಮೊ. ಗಳ) ಗಡಿಯನ್ನು ಸುತ್ತುನಡೆದು ಗೊತ್ತುಮಾಡು. **Perambulátion** (ನಾ.); **Perámbulatory** —ಲಟರಿ (ಗು.) ಪರ್ಯಟನದ ; ಪರ್ಯಟನ ಮಾಡುವ. **Perámbulator** (ನಾ.) (ಮು., ಗಡಿಯ ನಿರ್ಣಯಕ್ಕಾಗಿ) ಸುತ್ತಾಡುವವನು. (ಮೂರು ಅಥವಾ ನಾಲ್ಕು ಚಕ್ರಗಳಿದ್ದು, ಹಿಂದಿನಿಂದ ತಳ್ಳಿ ನಡಸುವ) ಮಕ್ಕಳ ತಳ್ಳುಬಂಡಿ (ಬಳ. ಮಾ. ನಲ್ಲಿ ಸಂಕ್ಷಿಪ್ತ : Pram). ರಸ್ತೆಗಳಲ್ಲಿ ದೂರವನ್ನಳೆಯುವ ಸಲಕರಣೆ.

Perceíve ಪರ್ಸೀವ್ (ಕ್ರಿ. ಸಕ.) (ಮನಸ್ಸಿನಿಂದ) ಗ್ರಹಿಸು ; ನೋಡು ; ಕಾಣು ; ಅರಿ; ಯಾವುದಾದರೂ ಇಂದ್ರಿಯದಿಂದ (ಮು., ದೃಷ್ಟಿಯಿಂದ) ಗ್ರಹಿಸು. **Pércept** ಪರ್ಸೆಪ್ಟ್ (ನಾ.) (ತತ್ತ್ವ ಶಾಸ್ತ್ರ) (ಇಂದ್ರಿಯ) ಗ್ರಾಹ್ಯ ವಿಷಯ; (ಇಂದ್ರಿಯ ಗ್ರಹಣ ಕಾರ್ಯಕ್ಕೆ ಭಿನ್ನವಾಗಿ, ಇಂದ್ರಿಯ ಗ್ರಹಣದಿಂದ ಫಲಿಸುವ) ವಸ್ತುಜ್ಞಾನ. (Concept ಹೋಲಿಸಿ). **Percéptible** (ಗು.) ಇಂದ್ರಿಯಗಳಿಂದ ಅಥವಾ ಬುದ್ಧಿಯಿಂದ ಗ್ರಹಿಸಲಾಗುವ ; (ಇಂದ್ರಿಯ, ಬುದ್ಧಿ) ಗ್ರಾಹ್ಯ(ವಾದ) ; ಕಾಣುವ ; ತಿಳಿಯಬಹುದಾದ. **Perceptibílity** (ನಾ.); **Percéptibly** (ಕ್ರಿ. ವಿ.) ; **Percéption** (ನಾ.) ಗ್ರಹಿಕೆ ; ಗ್ರಹಣ ಶಕ್ತಿ ; ಅನುಭವ ; ಅರಿವು ; (ಅಂತರ್ದೃಷ್ಟಿಯಿಂದ ಸತ್ಯ, ಕಲಾ ಸುಂದರತೆ, ಮೊ. ಗಳ) ಕಾಣ್ಕೆ (*Of* ಉಪ. ದೊಡನೆ). (ತತ್ತ್ವ ಶಾಸ್ತ್ರ) ತನ್ನ ಅನುಭವಗಳಿಗೆ ಹೊರ ವಸ್ತುಗಳು ಕಾರಣವೆಂದು ತಿಳಿಯುವ ಮನಸ್ಸಿನ ಕಾರ್ಯ. (ನ್ಯಾ. ಶಾ.) (ಕಂದಾಯ, ಮೊ. ಗಳ) ವಸೂಲಿ. **Percéptional** (ಗು.) ; **Percéptive** (ಗು.) ಗ್ರಹಣದಿಂದ ವಿಶೇಷಿತವಾದ ; ಗ್ರಹಿಸಲಾಗುವ; ಗ್ರಾಹ್ಯ ಕಾರಣವಾದ; ಥಟ್ಟನೆ ಗ್ರಹಿಸುವ. **Percéptively** (ಕ್ರಿ. ವಿ.) ; **Percéptiveness** (ನಾ.). **Perceptívity** (ನಾ.) —ಗುಣ. **Percípient** ಪರ್ಸಿಪಿಯೆಂಟ್ (ಗು., ನಾ.) ಗ್ರಹಿಸುವ ; ನೋಡುವ ; ಅರಿವುಳ್ಳ. (ನಾ.) ಗ್ರಹಿಸುವವನು ; ಗ್ರಾಹಿ ; ಅನುಭಾವಿ [ಮು., ದೂರ ಸಂವೇದನದಲ್ಲಿ (Telepathy)] ; ಇಂದ್ರಿಯಗಳ ಸಹಾಯವಿಲ್ಲದೆ ಪರ ಮನಃಪ್ರವೇಶ ಮಾಡಬಲ್ಲವನು. **Percípience** (ನಾ.)

Percéntage ಪರ್‌ಸೆಂಟೇಜ್ (ನಾ.) ನೂರಕ್ಕೆ ದರ ; ಸೇಕಡ ; (ಶಿಥಿಲವಾಗಿ) ಪ್ರಮಾಣ (Only a small p. of books are worth reading)

Pércept, Percéption, etc. **Perceive** ನೋಡಿ.

Perch ಪರ್ಚ್ (ನಾ., ಕ್ರಿ.) ಹಕ್ಕಿ ಕುಳಿತುಕೊಳ್ಳಲು ಹಾಕಿರುವ ಅಡ್ಡ ಕಂಬಿ; ಈ ಅನುಕೂಲಕ್ಕೆ ಯಾವುದಾದರೂ ಸಾಧನ (Bird takes its p. ಹಕ್ಕಿ ಹಾರಿಬಂದು ಕುಳಿತುಕೊಳ್ಳುತ್ತದೆ). (ರೂಪ.) ಉನ್ನತ ಸ್ಥಾನ ; ಸುರಕ್ಷಿತ ಸ್ಥಾನ. [Hop the p. ನೆಗೆದುಬೀಳು, ಸಾಯಿ. Knock (person) off his p. (ಒಬ್ಬನನ್ನು ನೆಲಕ್ಕೆ) ಉರುಳಿಸು ; ಸೋಲಿಸು; ಧ್ವಂಸ ಮಾಡು] . ಕೆಲವು ನಾಲ್ಕು ಚಕ್ರದ ಬಂಡಿಗಳಲ್ಲಿ ನಡು ಈಸು. (ಮು., ಜಮೀನು ಅಳೆಯುವ) ಒಂದು ಉದ್ದ ಅಳತೆ = $5\frac{1}{2}$ ಗಜ (=Pole, rod) (Square p. = $30\frac{1}{4}$ ಚ. ಗಜ). (ಕ್ರಿ.) ಹಕ್ಕಿಯಂತೆ (ಕೊಂಬೆ, ಮೊ. ಗಳ ಮೇಲೆ) ಹಾರಿಬಂದು ಕುಳಿತುಕೊ (*Upon* ಉಪ. ದೊಡನೆ). (ಮನುಷ್ಯ, ಮೊ. ರ ವಿಷಯದಲ್ಲಿ) ನೆಲಸು, ಬಂದು ಇಳಿ, ತಂಗು (*Upon* ಉಪ. ದೊಡನೆ). ಉನ್ನತ ಸ್ಥಾನದಲ್ಲಿ (ಹೇಗೊ ಹಾಗೆ) ಇರಿಸು ; ಎತ್ತರದಲ್ಲಿಡು [(ಮು., ಭೂ. ಕೃ. ನಲ್ಲಿ) Town perched on a hill ಗುಡ್ಡದಮೇಲೆ ನೆಲಸಿರುವ ಪಟ್ಟಣ]

Percháṅce ಪರ್‌ಚಾನ್ಸ್ (ಕ್ರಿ. ವಿ.) (ಪ್ರಾಚೀ. ಪ್ರ.) ಅಕಸ್ಮಾತ್ತಾಗಿ; ಒಂದು ವೇಳೆ ; ಬಹುಶಃ ; ಪ್ರಾಯಶಃ ; ಇದ್ದರೂ ಇರಬಹುದು.

Percípient. **Perceive** ನೋಡಿ.

Pércolate ಪರ್ಕೊಲೇಟ್ (ಕ್ರಿ.) (ದ್ರವದ ವಿಷಯದಲ್ಲಿ) —ಮೂಲಕ ಸೋಸಿ ಬರು, ಊರು, ಒರೆ, ಒಸರು, ಜಿನುಗು, ಸ್ರವಿಸು (ರೂಪ. ಸಹ); ವ್ಯಾಪಿಸು. (ವಿರ. ಪ್ರ. : ವ್ಯಕ್ತಿ ಅಥವಾ ಸೋಸು ಯಂತ್ರ) ಸೂಕ್ಷ್ಮ ರಂಧ್ರಗಳ ಮೂಲಕ (ದ್ರವವನ್ನು, ಪುಡಿಯನ್ನು) ಸೋಸು; ಒಡಿಗಟ್ಟು; ಬಸಿ. **Percolátion** (ನಾ.) ; **Pércolator** (ನಾ.) —ವವನು ; —ವದು.

Percúss ಪರ್ಕಸ್ (ಕ್ರಿ. ಸಕ.) (ವೈ. ಶಾ.) (ವ್ಯಾಧಿ ಪರೀಕ್ಷೆ, ಮೊ. ಗಳಿಗಾಗಿ) ಬೆರಳಿನಿಂದ ಅಥವಾ ಸಾಧನದಿಂದ ಮೆಲ್ಲಗೆ ತಟ್ಟು. **Percússion** ಪರ್‌ಕಷನ್ (ನಾ.) (ವೈ. ಶಾ.) — ತಟ್ಟುವುದು. (ಸಾ., ಘನ)ಪದಾರ್ಥಗಳ ಪರಸ್ಪರ ಸಂಘಟ್ಟನ. (ಸಂ.) Instrument of p. ತಟ್ಟಿ ಬಾಜಿಸುವ ವಾದ್ಯ. P. cap ಬಂದೂಕಿನಲ್ಲಿ ಸುತ್ತಿಗೆಯ ಪೆಟ್ಟಿನಿಂದ ಸಿಡಿಯುವ ಮದ್ದನ್ನುಳ್ಳ, ಸಣ್ಣ ತಾಮ್ರದ ಟೊಪ್ಪಿ, ಕೋಶ ಅಥವಾ ನಳಿಕೆ : (ಬಂದೂಕಿನ) ಕೇಪು. **Percússive** (ಗು.)

Percússion. **Percuss** ನೋಡಿ.

Percutáneous ಪರ್‌ಕ್ಯುಟೇನಿಯಸ್ (ಗು.) ಚರ್ಮದ ಮೂಲಕ ಮಾಡಿದ.

Perdítion ಪರ್ಡಿಷನ್ (ನಾ.) ಆತ್ಮ ನಾಶ ; ಅಧಃಪತನ ; ಅಧೋಗತಿ ; ವಿನಾಶ ; ವಿನಿಪಾತ.

Perdú ಪರ್ಡ್ಯು, **-due** ಪರ್ಡ್ಯೂ (ಗು.) (ಸೇನೆ) ಗಡಿ ಕಾವಲಿಗಾಗಿ ಗುಪ್ತವಾಗಿ ಇಟ್ಟ, ನಿಲ್ಲಿಸಿದ (ಮು., Lie p.) ; (Perdue) ಗುಪ್ತವಾಗಿಟ್ಟಿರುವ ; ಅವಿತುಕೊಂಡಿರುವ.

Perdúrable ಪರ್‌ಡ್ಯೂರಬ್‌ಲ್, **Pérdurable** ಪರ್‌ಡ್ಯು— (ಗು.) ಶಾಶ್ವತ ; ಸ್ಥಿರ ; ಚಿರ ; ಬಹುಕಾಲವಿರುವ ; ತಡೆದುಬರುವ ; ಹೆಚ್ಚು ಬಾಳಿಕೆ ಬರುವ. **Perdurabílity** (ನಾ.); **Perdúrably** (ಕ್ರಿ. ವಿ.)

Pere (F) ಪೇರ್ (ನಾ.) ತಂದೆ (ತಂದೆ ಮಕ್ಕಳ ಹೆಸರು ಒಂದೇ ಆಗಿರುವ ಸಂದರ್ಭದಲ್ಲಿ ವ್ಯತ್ಯಾಸ ತೋರಿಸುವುದಕ್ಕಾಗಿ ತಂದೆಯ ಹೆಸರಿನ ಕುಲನಾಮ ಭಾಗಕ್ಕೆ ಸೇರಿಸುವ ಪದ)

Péregrinate ಪೆರೆಗ್ರಿನೇಟ್ (ಕ್ರಿ. ಸಕ.) (ಈಗ ಹಾಸ್ಯ ಪ್ರ.) ಸಂಚಾರ, ಪ್ರಯಾಣ, —ಮಾಡು ; ಪ್ರವಾಸ ಮಾಡು; ದೇಶ ತಿರುಗು; ಊರೂರು ತಿರುಗು ; ಸುತ್ತಾಡು. **Peregrinátion** (ನಾ.) ; **Péregrinator** (ನಾ.). **Péregrin(e)** ಪೆರೆ(ರಿ)ಗ್ರಿ(ಗ್ರೈ)ನ್ (ಗು., ನಾ.) (ಪ್ರಾಚೀ. ಪ್ರ.) ಪರದೇಶದ ; ವಿದೇಶೀಯ ; ಹೊರನಾಡಿನಿಂದ ಬಂದ, ತಂದ, ಆಮದಾದ ; ವಿಜಾತೀಯ ; ವಿಲಕ್ಷಣವಾದ. (ಬೇಟೆಗೆ ಅತ್ಯುತ್ತಮವಾದುದೆಂದೆಣಿಸುವ) ಒಂದು ಬಗೆಯ ಡೇಗೆ (=P. falcon)

Péregrin(e). **Peregrinate** ನೋಡಿ.

CC-0. In Public Domain. Gurukul Kangri Collection, Haridwar

Péremptory ಪೆರೆಂಪ್ಟ(ಪ್ಟೋ)ರಿ, ಪರೆಂಪ್ಟೋರಿ (ಗು.) ನಿರ್ಣಾಯಕ; ನಿರ್ಧಾರಕ; ತೀರ್ಮಾನದ; ಆಖೈರಿನ; ಕಟ್ಟಕಡೆಯ. [(ಮು., ನ್ಯಾ. ಶಾ.) P. mandamus ಅಂತಿಮ ತೀರ್ಮಾನ; ಬದಲಾಯಿಸಲಾಗದ ಆಜ್ಞೆ. P. writ (ಇಚ್ಛೆಗೆ ಅವಕಾಶ ಕೊಡದೆ ಪ್ರತಿವಾದಿ ಹಾಜರಾಗಲೇ ಬೇಕೆಂದು ಕೊಡುವ) ನಿರ್ಬಂಧದ ಆಜ್ಞೆ]. (ಹೇಳಿಕೆ, ಆಜ್ಞೆ) ಬೇಡವೆನ್ನಲಾಗದ; ಬದಲಾಯಿಸಲಾಗದ; ನಿರಾಕರಿಸಲಾಗದ. ಅತ್ಯಾವಶ್ಯಕವಾದ. (ಮನುಷ್ಯ, ಮೊ. ರವಿಷಯದಲ್ಲಿ) ದರ್ಪ, ಅಹಂಕಾರ, —ಸಾಧನೆಯ; ಉದ್ಧತ; ಅಧಿಕಾರ ಗರ್ವದ; ದಬ್ಬಾಳಿಕೆಯ; ನಿರಂಕುಶಾಧಿಕಾರದ. **Péremptorily** (ಕ್ರಿ. ವಿ.); **Péremptoriness** (ನಾ.)

Perénnial ಪೆರೆನಿಯಲ್ (ಗು., ನಾ.) ಎಲ್ಲ ಋತುಗಳಲ್ಲೂ ಒಂದೇ ಸಮನಾಗಿರುವ; (ನದಿ, ಮೊ.) ಹೋಗದೆ) ಎಲ್ಲ ಕಾಲದಲ್ಲೂ ಹರಿಯುವ; (ಸಸ್ಯ) ಅನೇಕ ವರ್ಷ ಕಾಲ, —ಇರುವ (Annual ಹೋಲಿಸಿ); [(ನಾ.) —ಸಸ್ಯ]. ಾರ್ವಕಾಲಿಕ; ಚಿರಸ್ಥಾಯಿ. **Perenniálity** (ನಾ.); **Perénnially** (ಕ್ರಿ. ವಿ.)

Pérfect ಪರ್‌ಫೆಕ್ಟ್ [ಗು., ನಾ.; ಕ್ರಿ. ಸಕ. (Perféct ಸಹ)] ಪರಿಪೂರ್ಣ; ಸಂಪೂರ್ಣ; ಸಮಗ್ರ; ಅಖಂಡ: ಅನ್ಯೂನ; ಕುಂದು ಕೊರತೆಗಳು, ಲೋಪದೋಷಗಳು, —ಇಲ್ಲದ; ನೆರತೆಯುಳ್ಳ; ತುಂಬಿದ; ನಿರ್ದುಷ್ಟ; (ಪಾಠ) (ಕುಂದಿಲ್ಲದಂತೆ) ಸಂಪೂರ್ತಿಯಾಗಿ ಗಟ್ಟಿಮಾಡಿದ; (ಕರ್ತವ್ಯ, ಮೊ. ಗಳಲ್ಲಿ) ಸಂಪೂರ್ತಿ ಶಿಕ್ಷಣ ಪಡೆದ, ಪ್ರವೀಣತೆ ಹೊಂದಿದ, ನುರಿತ, ಪರಿಣತ, ಪಾರಂಗತ (*In* ಉಪ. ದೊಡನೆ). ಕರಾರುವಾಕಾದ; ನಿಷ್ಕೃಷ್ಟವಾದ; ಯಥಾರ್ಥವಾದ (A p. square, circle). ಶುದ್ಧ; ಪೂರ್ತ (A p. stranger, p. nonsense). (ವ್ಯಾ., ಕಾಲವಾಚಕ) ವರ್ತಮಾನ ಕಾಲದ ದೃಷ್ಟಿಯಿಂದ ಪೂರ್ತಿಗೊಂಡ ಘಟನೆಯನ್ನು ಅಥವಾ ಕಾರ್ಯವನ್ನು ಸೂಚಿಸುವ [Future p. ಸಂಪೂರ್ಣ ಭವಿಷ್ಯತ್ತು (ಉದಾ., Will have done ಮಾಡಿಬಿಟ್ಟಿರುವೆನು)]. (ಸ. ವಿ.) ಹೂವಿನ ಎಲ್ಲ ನಾಲ್ಕು ಸುತ್ತುಗಳೂ ಉಳ್ಳ. [(ಸಂ.) P. concord or consonance ಸಂಪೂರ್ಣ ಸ್ವರಮೇಳ (ಸ್ವರಾಷ್ಟಕದ ಐದನೆಯ ಮತ್ತು ಎಂಟನೆಯ, ಕೆಲವು ವೇಳೆ ನಾಲ್ಕನೆಯ, ಸ್ವರಗಳ ಮೇಳನ)]. (ನಾ.) ಸಂಪೂರ್ಣವಾಚಿ ಕಾಲ (= P. tense). (ಕ್ರಿ.) ಮುಗಿಸಿಬಿಡು; ಪೂರಯಿಸು; ಸಮಗ್ರ ಮಾಡು; ಸಾಂಗವಾಗಿ ನೆರವೇರಿಸು; ಉತ್ತಮಗೊಳಿಸು. **Perfectibílity** (ನಾ.); **Perféctible** (ಗು.); **Perféction** (ನಾ.) ಪರಿಪೂರ್ಣತೆ; ಸಂಪೂರ್ಣತೆ; ಸಮಗ್ರತೆ; ಸಾಂಗತೆ; ಸಂಪೂರ್ಣ, ಸಮಗ್ರ, —ಮಾಡುವುದು; ಪೂರ್ಣ ವಿಕಸನ; ನಿರ್ದುಷ್ಟತೆ; ಅನ್ಯೂನತೆ; ನೆರತೆ; ತುಂಬಿಕೆ. (ಶಿಥಿಲವಾಗಿ) (ಮತ್ತೊಂದರೊಡನೆ ಹೋಲಿಸಿ) ತಾರತಮ್ಯದಿಂದ ಉತ್ಕೃಷ್ಟತೆ; ಕುಂದಿಲ್ಲದ, ಪರಮೋತ್ತಮ, —ವ್ಯಕ್ತಿ, ವಸ್ತು; ಪರಾಕಾಷ್ಠ(ತೆ); ತುತ್ತತುದಿ; (ಗುಣ, ಮೊ. ಗಳ) ಪರಮಾದರ್ಶ (*Of* ಉಪ. ದೊಡನೆ). (ಬ. ವ. ದಲ್ಲಿ) (ಕಲಾ) ಕೌಶಲ; ಪ್ರವೀಣತೆ; ಪರಿಣತಿ. **Perféctionist** (ನಾ.) (ಮತ ಧರ್ಮದ ಅಥವಾ ನೀತಿ ಪಾಲನೆಯ) ಉತ್ಕೃಷ್ಟ ಪರಿಪೂರ್ಣತೆಯನ್ನು ಸಾಧಿಸಬಹುದೆಂಬ ಅಭಿಪ್ರಾಯವುಳ್ಳವನು; ಪರಿಪೂರ್ಣತಾ ಸಿದ್ಧಿ ವಾದಿ. **Perféctionism** (ನಾ.); **Pérfectly** (ಕ್ರಿ. ವಿ.); **Pérfectness** (ನಾ.)

Perférvid ಪರ್‌ಫರ್‌ವಿಡ್ (ಗು.) ಬಲು ಬಿಸಿಯಾದ; ಹೆಚ್ಚು ಕಾವಿನ; ಉದ್ರಿಕ್ತ; ತೀವ್ರೋತ್ಸಾಹದ.

Pérfidy ಪರ್‌ಫಿಡಿ (ನಾ.) ವಿಶ್ವಾಸಘಾತುಕತೆ; ನಂಬಿಕೆಯ ದ್ರೋಹ. **Perfídious** (ಗು.); **Perfídiously** (ಕ್ರಿ. ವಿ.); **Perfídiousness** (ನಾ.)

Perfóliate ಪರ್‌ಫೋಲಿಯೆಟ್ (ಗು.) (ಸ. ವಿ.) ಎಲೆಯ ಮೂಲಕ ಹಾಯ್ದಂತೆ ತೋರುವ ಕಾಂಡವುಳ್ಳ.

Pérforate ಪರ್‌ಫೊರೇಟ್ (ಕ್ರಿ.) (ಪೂರ್ತಿ ಹಾದುಹೋಗುವ) ರಂಧ್ರ(ಗಳನ್ನು) ಮಾಡು; ಚುಚ್ಚುರಂಧ್ರ ಮಾಡು; ತೂತು ಕೊರೆ; (ಮು., ತರೆ ಚೀಟಿ, ರಸೀತಿ ಚೀಟಿ, ಮೊ. ವನ್ನುಳ್ಳ ಹಾಳೆಯಲ್ಲಿ ಒಂದರಿಂದೊಂದನ್ನು ಪ್ರತ್ಯೇಕಿಸಲು) ಸಾಲುರಂಧ್ರ ಮಾಡು. ಒಂದರೊಳಕ್ಕೆ ಪ್ರವೇಶ ಮಾರ್ಗ ಮಾಡು. ಪೂರ್ತಿ ಹಾಯಿ, ವ್ಯಾಪಿಸು. ಒಳನುಗ್ಗು (*Into*, *through*, ಮೊ. ಉಪ. ದೊಡನೆ). **Perforátion** (ನಾ.); **Pérforator** (ನಾ.); **Pérforative** —ರೆಟಿವ್ (ಗು.) —ಲಕ್ಷಣ, ಪ್ರವೃತ್ತಿ, ಉಳ್ಳ.

Perfórce ಪರ್ಫೋರ್ಸ್ (ಕ್ರಿ. ವಿ., ನಾ.) ಆವಶ್ಯಕವಾಗಿ; ಬಲವಂತದಿಂದ; ಗತ್ಯಂತರವಿಲ್ಲದೆ. (ನಾ., ವಿರ. ಪ್ರ.) ಆವಶ್ಯಕತೆ; ನಿರ್ಬಂಧ (ಮು., *of*, *by*, p.)

Perfórm ಪರ್‌ಫಾರ್‌ಮ್ (ಕ್ರಿ.) (ಆಜ್ಞೆ, ವಾಗ್ದಾನ, ಕೆಲಸ, ಕ್ರಿಯೆ, ಮೊ. ನ್ನು) ನಡಸು, ನೆರವೇರಿಸು, ನಿರ್ವಹಿಸು, (ಆಗ)ಮಾಡು; (ನಾಟಕ, ಮೊ. ನ್ನು) ಆಡು, ಪ್ರದರ್ಶಿಸು; (ಸಂಗೀತ) ಹಾಡು, ಬಾಜಿಸು. (ತರಬೇತು ಮಾಡಿದ ಪ್ರಾಣಿಗಳ ವಿಷಯದಲ್ಲಿ) ಸಾರ್ವಜನಿಕ ಪ್ರದರ್ಶನ, ಮೊ. ಗಳಲ್ಲಿ ಚಮತ್ಕಾರದ ಆಟ ಚೂಟಿಗಳನ್ನು ಮಾಡು, ತೋರಿಸು. **Perfórming** (ಗು.); **Perfórmable** (ಗು.); **Perfórmer** (ನಾ.); **Perfórmance** —ಮನ್ಸ್ (ನಾ.) (ಆಜ್ಞೆ, ಮೊ. ನ್ನು) ನಿರ್ವಹಿಸುವುದು, ನಡಸುವುದು; ಮಾಡುವುದು; ಆಚರಣೆ; ನಿರ್ವಾಹ; ನೆರವೇರಿಕೆ; ಗಣ್ಯವಾದ ಸಾಹಸ ಕಾರ್ಯ; ಆಟ, ಸಾರ್ವಜನಿಕ ಪ್ರದರ್ಶನ (ನಡಸುವುದು) (There are two performances a day. The afternoon p.)

Pérfume ಪರ್‌ಫ್ಯೂಮ್ (ನಾ.), **Perfúme** (ಕ್ರಿ. ಸಕ.) ಸುಡುತ್ತಿರುವ ಪರಿಮಳ ದ್ರವ್ಯದಿಂದ ಹೊರಟ ಸುವಾಸನೆಯ ಹೊಗೆ; (ಸು)ವಾಸನೆ; (ಸು)ಗಂಧ; ಪರಿಮಳ; ಸೌರಭ; ಕಂಪು (ಗ್ರಾಂ.); ಸುಗಂಧ ತೈಲ; (ಹೂವು, ಮೊ. ಗಳ) ಅತ್ತರು, ಪನ್ನೀರು. (ಕ್ರಿ.) (—ಕ್ಕೆ) ಪರಿಮಳ ಕಟ್ಟು, ಕೊಡು; ಪರಿಮಳ ಸೇರಿಸು (ಮು., ಭೂ. ಕೃ. ನಲ್ಲಿ). **Pérfumeless** (ಗು.); **Perfúmer** (ನಾ.) ಸುಗಂಧ ದ್ರವ್ಯಗಳನ್ನು ಮಾಡುವವನು, ಮಾರುವವನು; ಸುಗಂಧಕಾರ; ಗಂದವಡಿಗ. **Perfúmery** (ನಾ.) ಪರಿಮಳ ದ್ರವ್ಯಗಳ, —ವ್ಯಾಪಾರ, ಕಾರ್ಯಾಲಯ; ಪರಿಮಳ ದ್ರವ್ಯಗಳು.

Perfúnctory ಪರ್‌ಫಂಕ್ಟರಿ (ಗು.) ಕೆಲಸ ಮುಗಿದರೆ ಸಾಕೆಂದು, ಕಾಟಕ್ಕಾಗಿ, ಮನಸ್ಸಿಲ್ಲದೆ, —ಮಾಡಿದ; ಹೀಗೆ ನಡೆಯುವ; ಮೇಲುಮೇಲಿನ; ಉದಾಸೀನದ; ಕಾಟಾಚಾರದ; ಯಂತ್ರಪ್ರಾಯವಾದ (A p. inspection). **Perfúnctorily** (ಕ್ರಿ. ವಿ.); **Perfúnctoriness** (ನಾ.)

Perfúse ಪರ್‌ಫ್ಯೂಸ್ (ಕ್ರಿ. ಸಕ.) (ನೀರು, ಮೊ. ನ್ನು) ಚಿಮುಕಿಸು, ತಳಿ. (ಪ್ರಥೆ, ಮೊ. ಗಳಿಂದ) ಆವರಿಸು, ವ್ಯಾಪಿಸು (*With* ಉಪ. ದೊಡನೆ). (ನೀರು, ಮೊ. ಗಳಿಂದ) ನೆನೆಯಿಸು; (ನೀರು, ಮೊ. ನ್ನು) ಮೇಲೆ ಸುರಿ. **Perfúsion** —ಷ(ಷ್)ನ್ (ನಾ.); **Perfúsive** —ಸಿವ್ (ಗು.)

Pergaméneous ಪರ್ಗಮೀನಿಯಸ್ (ಗು.) ಚರ್ಮಕಾಗದದ(ಂಥ)

Pérgola ಪರ್ಗೊಲ (ನಾ.) ಸಸ್ಯಗಳನ್ನು ಜಾಲರದ ಚೌಕಟ್ಟಿನಮೇಲೆ ಹಬ್ಬಿಸಿ ಮಾಡಿದ ಲತಾಗೃಹ, ಚಪ್ಪರದ ಹಾದಿ.

Pergúnnah, -gána ಪರ್ಗನ (ನಾ.) (ಇಂಡಿಯದಲ್ಲಿ) ಪ್ರಾಂತ ವಿಭಾಗ; ಪರ್ಗಣ; ಹಳ್ಳಿಗಳ ಗುಂಪು. (ಪರ್ಷಿಯನ್ ಮತ್ತು ಹಿಂದುಸ್ಥಾನಿ: ಪರ್ಗಣ)

Perháps ಪರ್‌ಹ್ಯಾಪ್ಸ್, (ಬಳ. ಮಾ.) **P'raps** ಪ್ರ್ಯಾಪ್ಸ್ (ಕ್ರಿ. ವಿ.) ಇದ್ದರೂ ಇರಬಹುದು; ಒಂದು ವೇಳೆ; ಪ್ರಾಯಶಃ; ಬಹುಶಃ (He has p. lost it. P. you would like to see it ?)

Péri ಪಿಯರಿ (ನಾ.) (ಪರ್ಷಿಯನ್ ಪುರಾಣ) ಯಕ್ಷ; ಯಕ್ಷಿಣಿ; ಸುದೇವತೆ (ಮೊದಲನಲ್ಲಿ ದುರ್ದೇವತೆ); ಸುಂದರ ವ್ಯಕ್ತಿ (ಮು., ಸುಂದರಿ, ಮೋಹಿನಿ, ಪ್ಯಾರಿ)

Digitized by Arya Samaj Foundation Chennai and eGangotri

Peri- ಪೆರಿ— (ಸ. ಪೂ. ಪ್ರ.) ಸುತ್ತ—; ಪರಿ—. **-anth** ಪುಷ್ಪಾವರಣ. **-cárdium** ಹೃದಯವನ್ನು ಆವರಿಸಿರುವ ಪೊರೆಯ ಚೀಲ ; ಹೃದಯಾವರಣ. **-cárdiac** (ಗು) ; **-cárdial** (ಗು.) ; **-cardítis** —ಕಾರ್ಡೈಟಿಸ್ (ನಾ.) (ವೈ. ಶಾ.) ಹೃದಯಾವರಣದ ಉರಿಯೂತ. **-carp** ಬೀಜ ಕೋಶ ; (ಸಸ್ಯದ) ಪಕ್ವವಾದ ಅಂಡಾಶಯದ ಆವರಣ, ಗೋಡೆ. **-chóndrium** (—ಕಾನ್‌ಡ್ರಿಯಮ್) (ಕೀಲುಗಳಲ್ಲ ಬಿಟ್ಟು) ಮೃದ್ವಸ್ಥಿಯ ಆವರಣ(ವಾಗಿರುವ ಪೊರೆ). **-clínal** (—ಕ್ಲೈನಲ್) (ಭೂ. ವಿ.) ಮಧ್ಯಬಿಂದುವಿನಿಂದ ಎಲ್ಲ ಕಡೆಗೂ ಇಳಿಜಾರಾಗುತ್ತ ಹೋಗುವ ; ಪರಿಪ್ರವಣ. **-gynous** (—ಜಿನಸ್) (ಕೇಸರದ ವಿಷಯದಲ್ಲಿ) ಶಲಾಕೆಯ, ಅಂಡಾಶಯದ, —ಸುತ್ತಲಿರುವ. **-ósteum** ಅಸ್ಥಿಯ ಆವರಣ(ವಾದ ಪೊರೆ). **-ósteal** (ಗು.) ; **-ostítis** —ಆಸ್ಟೈಟಿಸ್ (ನಾ.) ಅಸ್ಥಿಯ ಆವರಣದ ಉರಿಯೂತ. **-pteral** (ಗುಡಿಯ ವಿಷಯದಲ್ಲಿ) ಒಂದು ಕಂಬಸಾಲಿನಿಂದ ಸುತ್ತುವರಿದ ; ಸುತ್ತುಗಂಬದ. **-scope** (ಛಾಯಾ ಚಿತ್ರಕದಲ್ಲಿಯ) ವಸ್ತುರೆನ್ಸು ; (ಜಲಾಂತರ್ಗತ ನೌಕೆಯಲ್ಲಿರುವವನು ನೀರಿನ ಮೇಲ್ಗಡೆ ಇರುವುದನ್ನಾಗಲಿ, ಕಂದಕದಲ್ಲಿರುವವನು ಕೈಪಿಡಿಯ ಮೇಲ್ಭಾಗದಲ್ಲಿರುವುದನ್ನಾಗಲಿ ನೋಡಲು ಅನುಕೂಲಿಸುವಂತೆ ಅಳವಡಿಸಿದ) ಕನ್ನಡಿಗೂಡಿದ ಕೊಳವೆಯ ಒಂದು ಸಲಕರಣೆ ; ಪರಿದರ್ಶಕ. **-scópic** (—ಸ್ಕಾ—) ದೃಷ್ಟಿಯ ಅಕ್ಷದ ಸುತ್ತಲೂ ಕೊಂಚ ದೂರ ಸ್ಪಷ್ಟವಾಗಿ ನೋಡಲು ಅನುಕೂಲಿಸುವ. **-sperm** ಕೆಲವು ಬೀಜಗಳಲ್ಲಿ ಭ್ರೂಣಕೋಶದ ಹೊರಗಿರುವ ಸಸಾರಜನಕ ಪದಾರ್ಥದ ಮುದ್ದೆ. **-stome** (ಸ. ವಿ.) ಶೈವಲಗಳಲ್ಲಿ ಕೋಶದ ಬಾಯ ಸುತ್ತಲೂ ಇರುವ ಸಣ್ಣ ಹಲ್ಲು ಸಾಲು ; (ಪ್ರಾ. ವಿ.) (ಹಲವು ಅಕಶೇರುಕಗಳಲ್ಲಿ) ಬಾಯ ಸುತ್ತಲಿನ ಭಾಗಗಳು. **-typhlítis** (—ಟಿಫ್ಲೈ—) ದೊಡ್ಡ ಕರುಳಿನ ಕುರುಡು ಭಾಗದ (ಅಂಧಾಂತ್ರದ) ಸುತ್ತಲಿನ ಯಾವುದಾದರೂ ಒಂದು ಭಾಗದ ಉರಿಯೂತ (ಉದಾ., ಅಂತ್ರಪುಚ್ಛ ರೋಗ)

Périapt ಪೆರಿಆ್ಯಪ್ಟ್ (ನಾ.) ಮೈಮೇಲೆ ಧರಿಸಿಕೊಳ್ಳುವ ತಾಯಿತಿ, ಕಾಪು, ರಕ್ಷೆ, ಯಂತ್ರ.

Périclase ಪೆರಿಕ್ಲೇಸ್ (ನಾ.) (ಮು., ವೆಸೂವಿಯಸ್ಸಿನಲ್ಲಿ ದೊರೆಯುವ ಮ್ಯಾಗ್ನೀಷಿಯ ಮತ್ತು ಐರನ್ ಪ್ರೊಟಾಕ್ಸೈಡುಗಳ ಮಿಶ್ರಣವಾದ) ಒಂದು ಖನಿಜ : ' ಪೆರಿಕ್ಲೇಸ್ '.

Perícope ಪೆರಿಕೊಪಿ(ೀ) ಸಣ್ಣ ವಾಕ್ಯವೃಂದ ; ಸಣ್ಣ ಪ್ರಕರಣ. ಸಾರ್ವಜನಿಕ ಆರಾಧನೆಯಲ್ಲಿ ಓದುವ ಕ್ರೈಸ್ತವೇದ ಭಾಗ.

Pericránium ಪೆರಿಕ್ರೇನಿಯಮ್ (ನಾ.) ತಲೆಬುರುಡೆಯ ಆವರಣವಾಗಿರುವ ಪೊರೆ : ಕಪಾಲಾವರಣ. (ಹಾಸ್ಯ ಪ್ರ.) ತಲೆಬುರುಡೆ ; ಮಿದುಳು ; ಬುದ್ಧಿ ; ಪ್ರಜ್ಞೆ.

Péridot ಪೆರಿಡಾಟ್ (ನಾ.) ಆಲಿವೈನ್ ಎಂಬ ಮಣಿ(ಗೆ ಒಡವೆ ವ್ಯಾಪಾರಿಗಳ ಹೆಸರು) ; ಒಂದು ಬಗೆಯ ಪಚ್ಚೆಮಣಿ.

Périgee ಪೆರಿಜೀ (ನಾ.) ಒಂದು ಗ್ರಹಪಥದಲ್ಲಿ (ಮು., ಚಂದ್ರಪಥದಲ್ಲಿ) ಭೂಮಿಗೆ ಅತ್ಯಂತ ಹತ್ತಿರದ ಬಿಂದು : ಚಂದ್ರ ನೀಚ (Apogee ಹೋಲಿಸಿ). **Perigéan** —ಜೀಅನ್.

Perihélion ಪೆರಿಹೀಲಿಯನ್ (ನಾ.) ಗ್ರಹಪಥದಲ್ಲಿ ಸೂರ್ಯನಿಗೆ ಅತ್ಯಂತ ಹತ್ತಿರವಿರುವ ಬಿಂದು : (ಸೂರ್ಯ) ನೀಚ.

Péril ಪೆರಿಲ್ (ನಾ., ಕ್ರಿ. ಸಕ.) ಅಪಾಯ ; ಗಂಡಾಂತರ ; ಆಪತ್ತು (In p. of one's life ಪ್ರಾಣಾಪಾಯದಲ್ಲಿ. You do it at your p. ಅದನ್ನು ನೀನು ಮಾಡಿದರೆ ಅಪಾಯ ಖಂಡಿತ. Keep off at your p. ನಿನಗೆ ಅಪಾಯವಿಲ್ಲದಿರಬೇಕಾದರೆ ಅದನ್ನು ಮಾಡದಿರು). (ಕ್ರಿ.) ಅಪಾಯಕ್ಕೀಡು ಮಾಡು ; ಗಂಡಾಂತರಕ್ಕೊಳಗಾಗಿಸು. **Périlous** (ಗು.) ; **Périlously** (ಕ್ರಿ. ವಿ.) ; **Périlousness** (ನಾ.)

Perímeter ಪೆರಿಮಿಟರ್ (ನಾ.) (ಸುತ್ತುಗೂಡಿದ ಆಕೃತಿಯ) ಸುತ್ತುಗೆರೆ, ಸುತ್ತಳತೆ ; ಪರಿಧಿ. ದೃಷ್ಟಿಕ್ಷೇತ್ರ ಮಾಪಕ.

Perinéum ಪೆರಿನೀಯಮ್ (ನಾ.) (ಅಂ. ರ. ಶಾ.) ಗುದಕ್ಕೂ ವೃಷಣಕ್ಕೂ ಅಥವಾ ಗುದಕ್ಕೂ ಉಪಸ್ಥಕ್ಕೂ ಮಧ್ಯೇ ಇರುವ ದೇಹ ಭಾಗ. **Perinéal** (ಗು.)

Périod ಪಿಯರಿಅಡ್, ಪೀರಿ— (ನಾ.) ಖಗೋಳೀಯ ಸಹಘಟನೆಗಳು ಪುನರಾವರ್ತವಾಗಲು ಹಿಡಿಯುವ ಕಾಲ ; ಗ್ರಹವು (ತನ್ನ ಅಕ್ಷದಮೇಲೆ) ಒಂದು ಸುತ್ತು ಸುತ್ತುವುದಕ್ಕೆ ಹಿಡಿಯುವ ಕಾಲ : ಆವರ್ತಕಾಲ ; ಕಾಲಾವಧಿ ; ಕಾಲಮಾನ. ವ್ಯಾಧಿಯ ಗಡು, ಅವಧಿ ; ಅಳವು (ಗ್ರಾಂ.). (ಬ. ವ. ದಲ್ಲಿ) (ಹೆಂಗಸಿನ) ಋತು ಕಾಲ ; ರಜಸ್ಸು ; ಮುಟ್ಟು. (ಚರಿತ್ರೆ, ಜೀವನ, ಮೊ. ಗಳ) ಒಂದು ಅನಿರ್ದಿಷ್ಟ ಕಾಲ. [The p. ಇಂದಿನ ಕಾಲ ; ವರ್ತಮಾನ ಕಾಲ (The girl, costume, etc., of the p.)]. (ಮು., ಹಲವು ವಾಕ್ಯಭಾಗಗಳನ್ನುಳ್ಳ) ಸಂಪೂರ್ಣ ವಾಕ್ಯ. (ಬ. ವ. ದಲ್ಲಿ) ತರಂಗಾಕಾರದ ಗಂಭೀರ ವಾಕ್ಯ ಸರಣಿ ; ದಂಡಕ ಶೈಲಿ ; ಚೂರ್ಣಿಕಾ ಶೈಲಿ. (ವಾಕ್ಯದ ಕೊನೆಯಲ್ಲಿ) ಪೂರ್ಣ ವಿರಾಮ (ಚಿಹ್ನೆ) (.) (Put a p. to ಮುಕ್ತಾಯ ಮಾಡು ; ಕೊನೆ ಮುಟ್ಟಿಸು ; ಮುಗಿಸು). (ಸಂಖ್ಯಾ ಗಣನೆ, ಆವರ್ತ ದಶಮಾಂಶ, ಮೊ. ಗಳಲ್ಲಿ) ಅಲ್ಪ ವಿರಾಮ, ಮೊ. ಗಳಿಂದ ಪ್ರತ್ಯೇಕಿಸಿದ ಅಂಕಿಗಳ ತಂಡ. **Periódic** ಪಿಯರಿಯಾಡಿಕ್ (ಗು.) ಆಕಾಶಸ್ಥ ಕಾಯದ ಭ್ರಮಣದ, ಆವರ್ತದ (P. motion ಭ್ರಮಣ). ನಿರ್ದಿಷ್ಟ ಸಮಾಂತರಗಳಲ್ಲಿ ಪುನರಾವರ್ತವಾಗುವ ; ನಿಯತ ಕಾಲಿಕ. ಬಿಟ್ಟು ಬಿಟ್ಟು ಬರುವ. ಉದ್ದಂಡ ಶೈಲಿಯಲ್ಲಿ ಹೇಳಿದ. **Periódical** (ಗು., ನಾ.) = Periodic (ಭಾಷೆಯ ವಿಷಯ ಬಿಟ್ಟು ಮಿಕ್ಕ ಅರ್ಥಗಳಲ್ಲಿ) ; ನಿಯತ ಕಾಲದಲ್ಲಿ ಪ್ರಕಟಿಸಿದ (ಪತ್ರಿಕೆ, ಲೇಖನ ಸಂಗ್ರಹ) ; ನಿಯತ ಕಾಲಿಕ (ಪತ್ರಿಕೆ) (ಉದಾ., ಮಾಸ ಪತ್ರಿಕೆ). **Periódically** (ಕ್ರಿ. ವಿ.) ; **Periodícity** —ಯೊಡಿಸಿಟಿ (ನಾ.) ನಿಯತ ಕಾಲಿಕತೆ.

Peripatétic ಪೆರಿಪಟೆಟಿಕ್ (ಗು., ನಾ.) ಅರಿಸ್ಟಾಟಲಿನ (ತತ್ತ್ವಾನುಯಾಯಿ) (ಆಥೆನ್ಸಿನ ಒಂದು ಉದ್ಯಾನದಲ್ಲಿ ಅರಿಸ್ಟಾಟಲನು ಬೋಧನೆ ಮಾಡುವಾಗ ತಿರುಗಾಡುತ್ತಿದ್ದ ಪದ್ಧತಿಯಿಂದ). ಸ್ಥಳದಿಂದ ಸ್ಥಳಕ್ಕೆ ಕೆಲಸದಮೇಲೆ ತಿರುಗಾಡು(ತ್ತಿರು)ವ ; ತಿರುಗಾಡುವ ; ಸಂಚರಿಸುವ (ಪರಿವ್ರಾಜಕ ಶಬ್ದದಲ್ಲಿ ಅಂತರ್ಗತವಾಗಿರುವಂತೆ). (ನಾ. ; ಮು., ಹಾಸ್ಯ ಪ್ರ.) ತಿರುಗು ವ್ಯಾಪಾರಿ. **Peripatétically** (ಕ್ರಿ. ವಿ.) ; **Peripatéticism** (ನಾ.)

Peripeteía ಪೆರಿಪೆಟೈಯ, **-tía** ಪೆರಿಪಿಟೀಯ (ನಾ.) (ನಾಟಕದಲ್ಲಾಗಲಿ ಜೀವನದಲ್ಲಾಗಲಿ) ಥಟ್ಟನೆಯ ಅದೃಷ್ಟಬದಲಾವಣೆ, ಸ್ಥಿತಿ ವ್ಯತ್ಯಾಸ.

Períphery ಪೆರಿಫೆರಿ (ನಾ.) (ಮು., ದುಂಡು ಮೇಲ್ಮೈಯ) ಸುತ್ತುಗೆರೆ, ಪರಿಧಿ ; ಹೊರ ಎಲ್ಲೆ ; ಹೊರ ಮೈ. **Perípheral** (ಗು.) ; **Perípherally** (ಕ್ರಿ. ವಿ.)

Períphrasis ಪೆರಿಫ್ರಸಿಸ್ (ನಾ. ; ಬ. ವ. -ases —ಸೀಸ್) ಸುತ್ತು ಬಳಸಿ ಮಾತಾಡುವುದು ; ಬಳಸು ಮಾತು ; ಲಂಬೋಕ್ತಿ ; ವಾಗ್ವಿಸ್ತಾರ. **Periphrástic** —ಫ್ರಾಸ್ಟಿ— (ಗು.) [(ವ್ಯಾ.) Periphrastic conjugation ಆಖ್ಯಾತ ಪ್ರತ್ಯಯ ಹಚ್ಚದೆ ಸಹಾಯಕ ಕ್ರಿಯೆಯನ್ನುಪಯೋಗಿಸಿ ಹೇಳುವುದು (ಉದಾ., Did go = went). Periphrastic genitive ಷಷ್ಠೀ ವಿಭಕ್ತಿ ಪ್ರತ್ಯಯವನ್ನು ಹಚ್ಚದೆ ಉಪ ಪದದ ಸಹಾಯದಿಂದ ಹೇಳುವುದು (ಉದಾ., Of Caesar = Caesar's)]. **Periphrástically** (ಕ್ರಿ. ವಿ.)

Pérish ಪೆರಿಷ್ (ಕ್ರಿ.) ಅಳಿ(ದು ಹೋಗು) ; ಸತ್ತುಹೋಗು ; ನಾಶವಾಗು ; ಹಾಳಾಗು ; (ಅಕಾಲ) ಮರಣ ಹೊಂದು (ಮು., ಕತ್ತಿ, ಮೊ. ಗಳಿಂದ). (ಚಳಿ, ಗಾಳಿಗೆ ಮೈಯೊಡ್ಡುವುದು, ಮೊ. ವಿಷಯದಲ್ಲಿ) ಯಾತನೆ ಕೊಡು, ಸತ್ತ್ವಗುಂದಿಸು (ಸಾ., ಕರ್ಮಣಿಯಲ್ಲಿ : We were perished with cold. In perishing cold. The heat had perished all vegetation). **Périshingly** (ಕ್ರಿ. ವಿ.) ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Périshable (ಗು., ನಾ.) ಕೆಟ್ಟುಹೋಗಲುಳ್ಳ ; —ಗುವ ಸಂಭವವುಳ್ಳ ; ನಶ್ವರ ; ಬೇಗನೆ ಕ್ಷಯಿಸಿಹೋಗುವ, ಕೊಳೆತುಹೋಗುವ, —ಸಂಭವವುಳ್ಳ. (ಬ. ವ. ದಲ್ಲಿ) (ಬೇಗ) ಕೆಟ್ಟುಹೋಗುವ, ಕೊಳೆತುಹೋಗುವ,—ಪದಾರ್ಥಗಳು (ಮು., ಸಾಗಣೆಯ ಆಹಾರ ಪದಾರ್ಥಗಳು: ಉದಾ., ಹಣ್ಣು, ತರಕಾರಿ, ಮೊ. ವು). **Périshableness** (ನಾ.)

Perístalith ಪಿರಿಸ್ಟಲಿತ್ (ನಾ.) (ಪ್ರಾಚೀ. ಶಾ.) ಗೋರಿ ದಿಬ್ಬ, ಮೊ. ಗಳ ಸುತ್ತಲೂ ನಿಲ್ಲಿಸಿದ ಕಲ್ಲುಕಂಬಗಳ ಸುತ್ತು : ಶಿಲಾ ವೃತ್ತ.

Peristálsis ಪೆರಿಸ್ಟ್ಯಾಲ್ಸಿಸ್ (ನಾ.) (ಶ.ವಿ.) ಅನ್ನನಾಳ, ಮೊ. ಗಳಲ್ಲಿಯ ಪದಾರ್ಥವು ಕ್ರಮೇಣ ಮುಂದಕ್ಕೆ ಸಾಗಿಹೋಗಲು ಸಹಾಯಕವಾಗುವಂತೆ, ವೃತ್ತಪರಂಪರೆಯಲ್ಲಿ ತರಂಗಗಳೋಪಾದಿ ತಾನಾಗಿ ನಡೆಯುವ ಸ್ನಾಯುಸಂಕೋಚನ : ಪರಿಕ್ರಮ ಸ್ನಾಯುಸಂಕೋಚನ. **Peristáltic** (ಗು.) ; **Peristáltically** (ಕ್ರಿ. ವಿ.)

Peristerónic ಪೆರಿಸ್ಟೆರಾನಿಕ್ (ಗು.) ಪಾರಿವಾಳಗಳ.

Péristyle ಪೆರಿಸ್ಟೈಲ್ (ನಾ.) (ಗುಡಿ, ಅಂಗಳ, ಸಂನ್ಯಾಸಿಮಠ, ಮೊ. ಗಳ ಸುತ್ತಣ) ಕಂಬಸಾಲು ; ಪರಿಸ್ತಂಭಾವಳಿ ; ಹೀಗೆ ಸುತ್ತುವರಿದ ಪ್ರದೇಶ.

Peritonéum, -naéum ಪೆರಿಟೊನೀಯಮ್ (ನಾ.) (ಅಂ. ರ. ಶಾ.) ಹೊಟ್ಟೆಯ ಕುಹರದ ಗೋಡೆಯ ಸುತ್ತಲೂ ಮತ್ತು ಅದರಲ್ಲಿಯ ಅಂಗಗಳ ಮೇಲೂ ಹತ್ತಿಕೊಂಡಿರುವ, ವಸಾದ್ರವದಿಂದ ಕೂಡಿದ, ಇಮ್ಮಡಿಕೆಯ ಸೂಕ್ಷ್ಮಚರ್ಮ : ಉದರ ಪರಿವೇಷ್ಟನ ಪಟಲ. **Peritonéal** (ಗು.) ; **Peritonítis** —ನೈಟಿಸ್ (ನಾ.) —ದ ಉರಿಯೂತ.

Périwig ಪೆರಿವಿಗ್ (ನಾ.) = Wig. **Périwigged** (ಗು.)

Périwinkle[1] ಪೆರಿವಿಂಕ್‌ಲ್ (ನಾ.) ನಸುನೀಲಿಯ ಹೂವು ಬಿಡುವ, ಒಂದು ನಿತ್ಯಹಸುರು ಅದರು ಗುಲ್ಮಜಾತಿ. ಇದರ ಬಣ್ಣದ ವರ್ಣದ್ರವ್ಯ (= P. blue)

Périwinkle[2] ಪೆರಿವಿಂಕ್‌ಲ್ (ನಾ.) (ಆಹಾರವಾಗಿ ಉಪಯೋಗಿಸುವ) ಒಂದು ಬಗೆಯ ಉದರಪಾದಿ ಸಿಂಪಿ.

Pérjure ಪರ್ಜ(ರ್ಜ್ಯ)ರ್ (ಕ್ರಿ.) (ಆತ್ಮಾರ್ಥಕ) ಸುಳ್ಳುಪ್ರಮಾಣ ಮಾಡು (= P. oneself). (ಭೂ. ಕೃ.) ಸುಳ್ಳುಪ್ರಮಾಣದ ಅಪರಾಧದ. **Pérjurer** (ನಾ.); **Pérjury** (ನಾ.) ಸುಳ್ಳುಪ್ರಮಾಣ (ಮಾಡುವುದು); ಪ್ರಮಾಣ ಮಾಡಿ ಸುಳ್ಳುಸಾಕ್ಷ್ಯವನ್ನು ಮನಃಪೂರ್ವಕ ಹೇಳುವುದು. ಭಾಷೆಗೆ ತಪ್ಪುವುದು ; ಪ್ರಮಾಣ ಭಂಗ. **Perjúrious** —ಜೂ— (ಗು.) ; **Perjúriously** (ಕ್ರಿ. ವಿ.)

Perk ಪರ್ಕ್ (ಕ್ರಿ., ಗು.) (ಬಿರುಸಿನಿಂದ ಅಥವಾ ಧಾರ್ಷ್ಟ್ಯದಿಂದ) ತಲೆಯೆತ್ತು, ಮುನ್ನುಗ್ಗು (= P. up) ; ಚಾಕಚಕ್ಯಗೊಳ್ಳು ; ಚುರುಕಾಗು ; ಚಟುವಟಿಕೆಗೊಡು. ಸ್ವಪ್ರತಿಷ್ಠೆಯಿಂದ (ತಲೆ, ಬಾಲ) ನಿಮಿರಿಸು. (ಗು., ವಿರ. ಪ್ರ.) = Perky. **Pérky** (ಗು.) ಅಹಂಭಾವನೆಯ ; ಸ್ವಪ್ರತಿಷ್ಠೆಯ ; ಧಾರ್ಷ್ಟ್ಯದ ; ಉದ್ಧತ. **Pérkily** (ಕ್ರಿ. ವಿ.) ; **Pérkiness** (ನಾ.)

Pérlite ಪರ್ಲೈಟ್ (ನಾ.) ಗಾಜು ಲೇಪದಂಥ ಸಣ್ಣ ಗುಂಡುಗಳ ರೂಪಿನ ಒಂದು ಬಗೆಯ ಕಾಚ ಶಿಲೆ.

Pérmanent ಪರ್ಮನೆಂಟ್ (ಗು.) ಶಾಶ್ವತವಾದ ; ಚಿರಕಾಲವಿರುವ ; ಚಿರಸ್ಥಾಯಿ ; ಸ್ಥಿರ ; ನಿತ್ಯ ; ಕಾಯಂ (Temporary ಹೋಲಿಸಿ). P. set ಲೋಹವನ್ನು ಉಪಯೋಗಿಸಿ ಉಪಯೋಗಿಸಿ ಆದ ಪಟುತ್ವನಷ್ಟ. P. way (ರೈಲುಹಾದಿಯ ಕಂಬಿಯ ಕೆಳಗಣ ಭೂಮಿಯನ್ನು ತಕ್ಕಂತೆ ಭದ್ರಪಡಿಸಿದ) ಸ್ಥಾಯಿ ಮಾರ್ಗ. **Pérmanently** (ಕ್ರಿ. ವಿ.) ; **Pérmanence** (ನಾ.) ; **Pérmanency** (ನಾ.) (ಮು.) ಶಾಶ್ವತ ವಸ್ತು ಅಥವಾ ವ್ಯವಸ್ಥೆ ; ಶಾಶ್ವತತೆ.

Pérmeate ಪರ್ಮಿಯೇಟ್ (ಕ್ರಿ.) ಒಳ ಭಾಗವನ್ನೆಲ್ಲ ತೂರಿ ಹರಡಿಕೊ, ವ್ಯಾಪಿಸು(ವಂತೆ ಮಾಡು) ; ಒಳ ಹರಡು ; ಒಳಹೊಕ್ಕು ಹರಡಿಕೊಳ್ಳುವಂತೆ ಮಾಡು ; ವ್ಯಾಪನೆ ಮಾಡು (*Through*, *among*, ಮೊ. ಉಪ. ದೊಡನೆ). **Permeabílity** (ನಾ.) ವ್ಯಾಪ್ಯತೆ. **Pérmeable** (ಗು.) ವ್ಯಾಪ್ಯ. **Pérmeance** (ನಾ.) ವ್ಯಾಪನೆ. **Pérmeant** (ಗು.) ವ್ಯಾಪಿಸುವ. **Permeátion** (ನಾ.) ವ್ಯಾಪ್ತಿ ; ವ್ಯಾಪನೆ.

Pérmian ಪರ್ಮಿಯನ್ (ಗು.) ಕೆಂಪು ಮರಳುಗಲ್ಲೂ ಮ್ಯಾಗ್ನೀಷನ್ ಸುಣ್ಣಕಲ್ಲೂ ಮುಖ್ಯ ಪದಾರ್ಥಗಳಾಗುಳ್ಳ ಅತ್ಯಂತ ತಳದ ಶಿಲಾಸ್ತರ ಶ್ರೇಣಿಗಳಲ್ಲಿ ಅತ್ಯಂತ ಮೇಲ್ಭಾಗದ. (Perm ಎಂಬುದು ಪೂ. ರಷ್ಯದ ಒಂದು ಪಟ್ಟಣ)

Permíssible, etc. **Permission** ನೋಡಿ.

Permíssion ಪರ್ಮಿಷನ್ (ನಾ.) (ಮಾಡಲು) ಅಪ್ಪಣೆ, ಅನುಮತಿ, ಅನುಜ್ಞೆ; ಪರವಾನಗಿ ; ಪರವಾನೆ. **Permíssible** (ಗು.) —ಕೊಡಬಹುದಾದ ; ಅಂಗೀಕಾರಾರ್ಹ ; ಗ್ರಾಹ್ಯ. **Permíssibly** (ಕ್ರಿ.ವಿ.) ; **Permíssive** (ಗು.) —ಕೊಡುವ. P. legislation ಅಧಿಕಾರ, ಅವಕಾಶ, ಕೊಡುವ, ಆದರೆ ಬಳಸಲೇಬೇಕೆಂಬ ನಿರ್ಬಂಧವಿಲ್ಲದ, ಶಾಸನ : ಅನುಮತಿ ಶಾಸನ. **Pérmissively** (ಕ್ರಿ. ವಿ.) ; **Permíssiveness** (ನಾ.); **Pérmit** (ನಾ.), **Permít** (ಕ್ರಿ.) ಅನುಮತಿ, ಅಪ್ಪಣೆ, ಅನುಜ್ಞೆ, ಅವಕಾಶ(ಕೊಡು) (P. me to remark. Appeals are permitted. Weather permitting). (ಮಾರ್ಪಾಟು, ಮೊ. ಕೈ) ಅವಕಾಶವಿರು. (ಸುಂಕದ ಸರಕು, ಮೊ. ನ್ನು ಹಡಗಿನಿಂದ ಇಳಿಸಬಹುದೆಂದಾಗಲಿ ತೆಗೆದುಕೊಂಡುಹೋಗಬಹುದೆಂದಾಗಲಿ ಕೊಡುವ) ಅಪ್ಪಣೆ ಚೀಟಿ, ಪರವಾನಗಿ.

Pérmit. **Permission** ನೋಡಿ.

Permutátion ಪರ್ಮ್ಯುಟೇಷನ್ (ನಾ.) (ಗಣಿತ) ಒಂದು ಕ್ರಮದಲ್ಲಿ ಸಾಲಾಗಿಟ್ಟ (ವಸ್ತು) ಶ್ರೇಣಿಯಲ್ಲಿ ಆಯಾ ವಸ್ತುಗಳ ಸ್ಥಾನ ವ್ಯತ್ಯಾಸ ಮಾಡುವುದು ; ಇಂಥ ಯಾವುದಾದರೊಂದು (ಸ್ಥಾನ) ಕ್ರಮ ವ್ಯತ್ಯಾಸ. (ವಿರ. ಪ್ರ.) ಬದಲಾವಣೆ ; ಪರಿವರ್ತನ. **Permúte** ಪರ್ಮ್ಯೂಟ್ (ಕ್ರಿ. ಸಕ.) ಕ್ರಮ ಬದಲಾಯಿಸು ; ಕ್ರಮ ವ್ಯತ್ಯಯಮಾಡು.

Permúte. **Permutation** ನೋಡಿ.

Pern ಪರ್ನ್ (ನಾ.) = Honey-buzzard.

PerNícious ಪರ್ನಿಷಸ್ (ಗು.) (ವಿ)ನಾಶಕರ ; ಹಾನಿಕರ ; ಹಾಳುಮಾಡುವ ; ಕೆಡುಕು ಮಾಡುವ ; ಕೇಡುಂಟುಮಾಡುವ ; ಕೊಲ್ಲುವ ; ಮಾರಕ ; ದುಷ್ಟ. **Perníciously** (ಕ್ರಿ. ವಿ.) ; **Perníciousness** (ನಾ.)

Perníckety ಪರ್ನಿಕೆಟಿ (ಗು.) (ಬಳ. ಮಾ.) (ವ್ಯಕ್ತಿಗಳ ವಿಷಯದಲ್ಲಿ) ಚಿಲ್ಲರೆಗಳಿಗೆ ಹೆಚ್ಚು ಗಮನ ಕೊಡುವ ; ಅತ್ಯಂತ ಸೂಕ್ಷ್ಮವರ್ತನೆಯ; ಕುಶಪಿಷ್ಟೆಯ ; ಬಹಳ ಎಚ್ಚರಿಕೆಯಿಂದ ಕೈಯಾಡವೇಕಾದ.

Pernoctátion ಪರ್ನಾಕ್ಟೇಷನ್ (ನಾ.) ರಾತ್ರಿ ಕಳೆಯುವುದು. (ಕ್ರೈಸ್ತ ಧರ್ಮ) ರಾತ್ರಿಪೂರ್ತ ಜಾಗರಣೆ.

Pérorate ಪೆರೊರೇಟ್ (ಕ್ರಿ. ಅಕ.) ಸಾರಾಂಶ ಹೇಳಿ ಭಾಷಣ ಮುಕ್ತಾಯ ಮಾಡು ; (ಭಾಷಣದ) ಉಪಸಂಹಾರ ಮಾಡು. ದೀರ್ಘ ಭಾಷಣ ಮಾಡು. **Perorátion** (ನಾ.)

Peróxide ಪರಾಕ್ಸೈಡ್ (ನಾ.) (ರ. ವಿ.) ಮತ್ತೊಂದು ಮೂಲ ಧಾತುವಿನೊಡನೆ ಆಮ್ಲಜನಕವು ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಸಂಯೋಗವಾಗಿರುವ ಆಮ್ಲ ಜನಕ ಸಂಯುಕ್ತ : ಪರಾಕ್ಸೈಡ್. P. of hydrogen ವಿಷಕ್ರಿಮಿ ಹಾರಿಯಾಗಿಯೂ ಕೂದಲುಬಣ್ಣ ಕಳೆಯಲೂ ಉಪಯೋಗಿಸುವ ಒಂದು ಮಂದ ನಿರ್ವರ್ಣ ದ್ರವ.

Perpénd ಪರ್‌ಪೆಂಡ್ (ಕ್ರಿ. ಸಕ.) (ಪ್ರಾಚೀ. ಪ್ರ.) ಚೆನ್ನಾಗಿ ಆಲೋಚಿಸು ; ಆರಯ್ಯು (ಗ್ರಾಂ.) ; ನಿಧಾನವಾಗಿ ವಿಚಾರ ಮಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Perpendícular ಪರ್ಪೆಂಡಿಕ್ಯುಲರ್ (ಗು., ನಾ.) ಕ್ಷಿತಿಜ ತಲಕ್ಕೆ ಸಮಕೋನದಲ್ಲಿರುವ; ಲಂಬ. (ಅಥಿಲ ಪ್ರ.) (ಏರಿಕೆ, ಮೊ. ವಿಷಯದಲ್ಲಿ) ಬಲು ಕಡಿದಾದ; ನೆಟ್ಟಗೆ ನಿಂತಿರುವ; ಓಲದೆ ನಿಂತ. (ಹಾಸ್ಯ ಪ್ರ.) ನಿಂತುಕೊಂಡಿರುವ. (ಜ್ಯಾ.) (ನಿರ್ದಿಷ್ಟ ರೇಖೆಗೆ, ಸಮತಲಕ್ಕೆ ಅಥವಾ ಮೇಲ್ಮೈಗೆ) ಸಮಕೋನದಲ್ಲಿರುವ; ಲಂಬ [P. style (Style ನೋಡಿ)]. (ನಾ.) (ಲಂಬರೇಖೆಯನ್ನು ತೋರಿಸುವ) ತೂಗು ಗುಂಡು, ಲಂಬ ಸೂತ್ರ ಫಲಕ, ಮೊ. ಸಲಕರಣೆ. (ಬ. ವ. ದಲ್ಲಿ) (ಹಡಗಿನ ರಚನೆಯಲ್ಲಿ ಅದರ ಅಂದಾಜು ಲಾಂಬಿಯನ್ನು ನಿಷ್ಕರ್ಷಿಸುವುದಕ್ಕಾಗಿ ಉಪಯೋಗಿಸುವ ಎರಡು) ಆಧಾರ ರೇಖೆಗಳು (Between perpendiculars). ಲಂಬರೇಖೆ. [The p. ಲಂಬರೇಖೆ; ಲಂಬ ದಿಕ್ಕು (Is out of p. or the p. ನೆಟ್ಟಗಿಲ್ಲ; ಓಲದೆ)]. (ಅನಂ.) ಅತಿಥಿಗಳು ನಿಂತುಕೊಂಡು ತೆಗೆದುಕೊಳ್ಳುವ ಊಟ, ಮೊ. ವು. **Perpendiculárity** (ನಾ.); **Perpendícularly** (ಕ್ರಿ. ವಿ.)

Pérpetrate ಪರ್ಪೆಟ್ರೇಟ್ (ಕ್ರಿ. ಸಕ.) (ಅಪರಾಧ, ತಪ್ಪು, ಶಬ್ದಶ್ಲೇಷೆ, ಪ್ರಮಾದ ಕಾರ್ಯ, ಮೊ. ನ್ನು) ಮಾಡು, ನಡಸು, ಆಚರಿಸು. **Perpetrátion** (ನಾ.); **Pérpetrator** (ನಾ.)

Perpétual ಪರ್ಪೆಟ್ಯುಅಲ್ (ಗು.) ನಿರಂತರ; ಸಾರ್ವಕಾಲಿಕ; ಆಜೀವ; ಎಂದೆಂದಿಗೂ ಅಥವಾ ಒಂದು ಅನಿರ್ದಿಷ್ಟ ಕಾಲದಲ್ಲಿ ಅನ್ವಯಿಸುವ, ಊರ್ಜಿತವಾಗುವ, ಸಪ್ರಮಾಣವಾಗಿರುವ; ಅಧಿಕಾರ ವತ್ತಾದ; ಸಾರೋದ್ಧಾರ [P. motion (ಬಾಹ್ಯ ಬಲಪ್ರಯೋಗದಿಂದಾಗಲಿ ಅಥವಾ ಭಾಗಗಳು ಸವೆದುಹೋಗುವುದರಿಂದಾಗಲಿ ನಿಂತು ಹೋಗದ ಪಕ್ಷದಲ್ಲಿ ಶಾಶ್ವತವಾಗಿ ನಡೆಯುತ್ತಿರಬೇಕಾದ ಯಂತ್ರದ) ನಿರಂತರ ಚಲನೆ]. ಸತತ; ಸಂತತ; ಅವಿಚ್ಛಿನ್ನ; ನಿರಂತರ; ಎಡೆಬಿಡದ. (ಬಳ. ಮಾ.) ಅಡಿಗಡಿಗೆ ಸಂಭವಿಸುವ; ಬಾರಿ ಬಾರಿಯ; ಮತ್ತೆ ಮತ್ತೆ ಬರುವ, ಆಗುವ (This p. nagging). **Perpétually** (ಕ್ರಿ. ವಿ.); **Perpétuance** (ನಾ.) =Perpetuation, Perpetuity. **Perpétuate** (ಕ್ರಿ. ಸಕ.) —ಮಾಡು. ಮರೆಯದಂತೆ, ವಿಸ್ಮೃತಿಯಾಗದಂತೆ, ಎಂದಿಗೂ ನೆನಪಿನಲ್ಲಿರುವಂತೆ, —ಮಾಡು; ಸ್ಮಾರಕವಾಗಿಸು; ಚಿರಸ್ಮರಣೀಯ ಮಾಡು. **Perpetuátion** (ನಾ.); **Perpétuator** (ನಾ.); **Perpetúity** —ಟ್ಯೂಇಟಿ (ನಾ.) ನಿತ್ಯತೆ; ಶಾಶ್ವತತೆ; ನಿರಂತರತೆ (In, to, for, p. ಎಂದೆಂದಿಗೂ; ಶಾಶ್ವತವಾಗಿ; ಸಾರೋದ್ಧಾರವಾಗಿ); ಶಾಶ್ವತ, ಸ್ಥಿರ, —ಅನುಭೋಗ, ಸ್ಥಾನ; ಶಾಶ್ವತ ವರ್ಷಾಶನ.

Perpléx ಪರ್ಪ್ಲೆಕ್ಸ್ (ಕ್ರಿ. ಸಕ.) ದಿಕ್ಕು ತೋರದಂತೆ ಮಾಡು; ಬೆಗಡುಗೊಳಿಸು; ಕಂಗೆಡಿಸು; ಭ್ರಮೆ ಹಿಡಿಸು. (ವಿಷಯವನ್ನು) ತೊಡಕು, ಜಟಿಲ, ಗಲಿಬಿಲಿ, —ಮಾಡು; ತೊಡರಿಕೊಳ್ಳುವಂತೆ, ಸಿಕ್ಕಾಗಿ, —ಮಾಡು (ಮು., ಭೂ. ಕೃ. ನಲ್ಲಿ). **Perpléxedly** —ಕ್ಸೆಡ್ಲಿ (ಕ್ರಿ. ವಿ.); **Perpléxingly** (ಕ್ರಿ. ವಿ.); **Perpléxity** (ನಾ.) ತಬ್ಬಿಬ್ಬು; ದಿಗ್ಭ್ರಮೆ; —ಗೆ ಕಾರಣವಾದದ್ದು; ಜಟಿಲಸ್ಥಿತಿ.

Pérquisite ಪರ್ಕ್ವಿಸಿಟ್ (ನಾ.) ಅನುಷಂಗಿಕ ಲಾಭ [(ಮು., ನ್ಯಾ. ಶಾ.) ಜಮೀನುದಾರನಿಗೆ ಮಾಮೂಲು ಕಂದಾಯದಮೇಲೆ ಆದಾಯವಾಗಿ ಬಂದದ್ದು]; ಮೇಲು ಸಂಪಾದನೆ. ಸಾಂಪ್ರದಾಯಿಕ ಹಕ್ಕಿನ ಪದಾರ್ಥ (Remains of the daily commons are among the perquisites of college scouts ನಿತ್ಯದೂಟವಾದಮೇಲೆ ಮಿಕ್ಕದ್ದು ಕಾಲೇಜಿನ ಸ್ಕೌಟುಗಳಿಗೆ ಸೇರಿದ್ದು); ಪದ್ಧತಿಯ, ಮಾಮೂಲಿನ, —ಇನಾಮು, ಬಕ್ಷೀಸು. ಒಬ್ಬನು ತನಗೆ ಮಾತ್ರ ಹಕ್ಕುಳ್ಳದ್ದೆಂದು ಅನುಭವಿಸುತ್ತಿರುವ ಅಥವಾ ಹಕ್ಕು ಹೂಡುವ ಪದಾರ್ಥ.

Pérron ಪೆರನ್, ಪೆರಾನ್ (ನಾ.) (ಕ್ರೈಸ್ತ ದೇವಾಲಯದ ಅಥವಾ ಇತರ ದೊಡ್ಡ ಕಟ್ಟಡದ ಬಾಗಿಲಿನ ಮುಂದುಗಡೆ) ಹತ್ತಲು ಮೆಟ್ಟಲು ಹಾಕಿರುವ ಜಗುಲಿ.

Pérry ಪೆರಿ (ನಾ.) ಪೇರುಹಣ್ಣಿನ ರಸ ಹುಳಿಸಿದ ಪಾನೀಯ.

Perse ಪರ್ಸ್ (ಗು., ನಾ.) (ಪ್ರಾಚೀ. ಪ್ರ.) ನೀಲಿ ಛಾಯೆಯ ಬೂದು ಬಣ್ಣ(ದ)

Pérsecute ಪರ್ಸಿಕ್ಯೂಟ್ (ಕ್ರಿ. ಸಕ.) (ಮು., ಮತ ಸಂಪ್ರದಾಯಕ್ಕೆ ವಿರುದ್ಧವಾದ ಅಭಿಪ್ರಾಯ ಮತ್ತು ಆಚರಣೆಯುಳ್ಳವನನ್ನು) ದ್ವೇಷದಿಂದಲೂ ಉಪದ್ರವ ಕೊಡುತ್ತಲೂ ಬೆನ್ನುಹತ್ತು; ಕಿರುಕುಳ ಕೊಡು; ಹಿಂಸಿಸು; ಪೀಡಿಸು. (ಪ್ರಶ್ನೆ, ಮೊ. ಗಳನ್ನು ಹಾಕಿ) ಗೋಳುಹೊಯ್ದುಕೊ, ಕಾಡು (*With* ಉಪ. ಜೊಡನೆ). **Persecútion** (ನಾ.) [Persecution mania (ತನಗೆ) ಕಿರುಕುಳ ಕೊಡುತ್ತಿರುವರೆಂಬ ಹುಚ್ಚು, ಭ್ರಾಂತಿ]. **Pérsecutor** (ನಾ.)

Perseverance. Persevere ನೋಡಿ.

Persevére ಪರ್ಸಿವಿಯರ್ (ಕ್ರಿ. ಅಕ.) ಒಂದು ಗುರಿಯನ್ನು ಹಿಡಿದು ಸಾಧಿಸು, ಬಿಡದೆ ಮುಂದುವರಿ; ಸತತ ಪ್ರಯತ್ನ ಮಾಡು; ಪಟ್ಟುಹಿಡಿ(ದು, —ನಡಸು, ಮಾಡು); ಸಾಧಿಸು; ಅಧ್ಯವಸಾಯ ಮಾಡು (*In* course, *in* do*ing*, *with* task). **Persevéringly** (ಕ್ರಿ. ವಿ.); **Persevérance** —ರನ್ಸ್ (ನಾ.) (ಕ್ರಿಯಾರ್ಥಗಳಲ್ಲಿ); (ದೇವ. ಶಾ.) ದೈವಾನುಗ್ರಹ ಸ್ಥಿತಿಯಲ್ಲಿ ಸಂತತವಾಗಿರುವುದು. **Persevérant** (ಗು.) (ವಿರ. ಪ್ರ.)

Pérsian ಪರ್ಷ(ರ್ಷ್)ನ್ (ಗು., ನಾ.) ಪರ್ಷಿಯದ(ವನು); ಪಾರಸೀಕ; ಪರ್ಷಿಯನ್ ಭಾಷೆ(ಯ). P. carpet. P. cat ಉದ್ದವಾದ ರೇಷ್ಮೆಯಂಥ ಕೂದಲೂ ದಪ್ಪ ಬಾಲವೂ ಉಳ್ಳ ಒಂದು ಜಾತಿಯ ಬೆಕ್ಕು. P. wheel ಒಂದು ಹೊಳೆಯಿಂದಾಗಲಿ ಬಾವಿಯಿಂದಾಗಲಿ ನೀರನ್ನು ಮೇಲಕ್ಕೆತ್ತಲು ಉಪಯೋಗಿಸುವ ಒಂದು ತೆರದ ದೊಡ್ಡ ಲಂಬ ಚಕ್ರ. (ಈ ಚಕ್ರದ ಪರಿಧಿಯಲ್ಲಿ ಜೋಡಿಸಿರುವ ದೊಡ್ಡ ಬಟ್ಟಲನಂಥ ಮೊಗೆಪಾತ್ರೆಗಳು ಚಕ್ರವನ್ನು ತಿರುಗಿಸುವುದರಿಂದ ನೀರನ್ನು ತಳಭಾಗದಲ್ಲಿ ತುಂಬಿಕೊಂಡು ಪರಿಧಿಯ ಮೇಲ್ಭಾಗದಲ್ಲಿ ಸುರಿಯುತ್ತವೆ)

Persiénnes ಪರ್ಷಿಯೆನ್ಸ್, ಪರ್ಸಿಯೆನ್ (ನಾ., ಬ. ವ.) ಕಿಟಕಿಯ ಹೊರಭಾಗದ ಹಗುರ ಅಡ್ಡಪಟ್ಟಿಗಳ ತೆರೆ.

Pérsiflage ಪ(ಪೆ)ರ್ಸಿಫ್ಲಾಷ್ (ನಾ.) ಲಘು ಪರಿಹಾಸ; ಕುಚೋದ್ಯ; ಗೇಲಿ.

Persíst ಪರ್ಸಿಸ್ಟ್ (ಕ್ರಿ. ಅಕ.) (ಮು., ಸರಿಯಲ್ಲವೆಂದು ತೋರಿಸಿ ಹೇಳಿದರೂ ಬಿಡದೆ) ಪಟ್ಟುಹಿಡಿ(ದು ನಡೆ) (*In* opinion, course, do*ing*); ದೃಢವಾಗಿ ನಿಲ್ಲು; ಜೀವದಿಂದ ಉಳಿದುಕೊಂಡಿರು. **Persístence** (ನಾ.); **Persístency** (ನಾ.); **Persístent** (ಗು.) (ಪ್ರಾ. ವಿ. ಮತ್ತು ಸ. ವಿ. ದಲ್ಲಿ: ಕೊಂಬು, ಕೂದಲು, ಎಲೆ, ಮೊ. ಗಳ ವಿಷಯದಲ್ಲಿ) ಶಾಶ್ವತವಾದ, ನಿತ್ಯವಾಗಿರುವ (ಎದುರು ಪದ: Deciduous). **Persístently** (ಕ್ರಿ. ವಿ.)

Pérson ಪರ್ಸ(ರ್ಸ್)ನ್ (ನಾ.) ಮನುಷ್ಯವ್ಯಕ್ತಿ; ಪುರುಷ; ಮನುಷ್ಯ; ಆಳು; ಆಸಾಮಿ; [(ತಿರಸ್ಕಾರವಾಗಿ) Who is this p.? ಇವನು ಯಾರು? Young p. ತರುಣ (ಅಥವಾ, ಸಾ., ತರುಣಿ)]. ಮನುಷ್ಯ ವ್ಯಕ್ತಿಯ ಜೀವಂತ ದೇಹ, ಮೈ, ರೂಪ, ಮೂರ್ತಿ [He had a fine p. ಅವನ ರೂಪ ಅಂದವಾಗಿದ್ದಿತು. Attracted by her fortune not her p. ಅವಳ ಸಂಪತ್ತಿನಿಂದ ಆಕರ್ಷಿತನಾಗಿ, ರೂಪದಿಂದಲ್ಲ. Acting, appearing, in his own (proper) p. *or* in p. ತಾನೇ ಸ್ವಂತವಾಗಿ, ಖುದ್ದಾಗಿ—. Found a friend in (the p. of) his landlord ಅವನಿಗೆ ಜಮೀನ್ದಾರನ ರೂಪದಲ್ಲಿ ಒಬ್ಬ ಸ್ನೇಹಿತ ದೊರೆತನು]. (ನ್ಯಾ. ಶಾ.) ಶಾಸನ ಸಿದ್ಧವಾದ ಹಕ್ಕುಬಾಧ್ಯತೆಗಳುಳ್ಳ ಮನುಷ್ಯ(Natural p. ಸಹಜ ವ್ಯಕ್ತಿ), ಅಥವಾ ಸಂಸ್ಥೆ(Artificial p.). (ನಾಟಕದಲ್ಲಿ ಅಥವಾ ಕಥೆಯಲ್ಲಿ) ಪಾತ್ರ. (The three persons of the Godhead ಕ್ರೈಸ್ತ ತ್ರಿಮೂರ್ತಿಗಳು: Father, Son, Holy Spirit) (ವ್ಯಾ.) ಪುರುಷ [First, second, third, p. ಉತ್ತಮ (ಮಾತನಾಡುವವನು), ಮಧ್ಯಮ (ಯಾರೊಡನೆ ಮಾತು ನಡೆಯುವುದೊ ಅವನು),

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಥಮ (ಯಾರ ವಿಷಯವಾಗಿ ಮಾತು ನಡೆಯುವುದೊ ಅವನು),—ಪುರುಷ]. (ಪ್ರಾ. ವಿ.) ಸಂಯುಕ್ತ ಅಥವಾ ಸಮೂಹ ಜೀವಿಗಳ ಗುಂಪಿನ ಒಂದು ವ್ಯಕ್ತಿ. **Pérsonable** (ಗು.) (ರೂಪು) ಚೆಲುವಾದ, ಸುಂದರವಾದ. **Pérsonage** ಪರ್ಸನೆ(ನಿ)ಜ್ (ನಾ.) ಗಣ್ಯ ಪುರುಷ; ದೊಡ್ಡಮನುಷ್ಯ; ವ್ಯಕ್ತಿ. (ನಾಟಕ, ಮೊ. ಗಳಲ್ಲಿಯ) ಪಾತ್ರ. **Pérsonal** ಪರ್ಸನಲ್ (ಗು.) (ತನ್ನ) ಸ್ವಂತ; ವೈಯಕ್ತಿಕ; ಆತ್ಮೀಯ (To suit his p. convenience ತನ್ನ ಸ್ವಂತ ಅನುಕೂಲಕ್ಕೆ ತಕ್ಕಂತೆ. This is p. to myself ಇದು ನನ್ನ ಸ್ವಂತಕ್ಕೆ ಸೇರಿದ್ದು). (ತಾನು) ಸ್ವಂತವಾಗಿ, ಖುದ್ದಾಗಿ, —ಮಾಡಿದ, ರಚಿಸಿದ (P. service, acquaintance, interview). (ಒಬ್ಬನ) ದೇಹದ, ದೇಹಕ್ಕೆ ಸಂಬಂಧಿಸಿದ; ಶಾರೀರಕ (P. injury); (ಮು., ದ್ವೇಷದಿಂದ) ಒಬ್ಬ ವ್ಯಕ್ತಿಯನ್ನುದ್ದೇಶಿಸಿದ, ವ್ಯಕ್ತಿವಿಷಯಕವಾದ (P. abuse, remarks). ವೈಯಕ್ತಿಕ ಟೀಕೆಗಳನ್ನು ಮಾಡುವ (ರೂಢಿಯುಳ್ಳ) (Do not let us become p. ವೈಯಕ್ತಿಕ ಟೀಕೆಗಳಿಗೆ ಹೋಗದಿರೋಣ). [(ನ್ಯಾ. ಶಾ.) P. property, estate (ಇಂಗ್ಲಿಷ್ ಕಾನೂನಿನ ಪ್ರಕಾರ ಉತ್ತರಾಧಿಕಾರಿಗೆ ಹೋಗದದ್ದೂ ಜಮೀನು, ಮೊ. ಸ್ಥಿರಾಸ್ತಿಯಲ್ಲದ್ದೂ ಆದ) ಚರ ಆಸ್ತಿ, ಜಿಂದಿಗಿ (Real ಹೋಲಿಸಿ)]. (ವ್ಯಾ.) ಸರ್ವನಾಮದ ಮೂರು ಪುರುಷಗಳಲ್ಲಿ ಯಾವುದಾದರೂ ಒಂದರ, ಒಂದನ್ನು ಸೂಚಿಸುವ: ಪುರುಷ ಸೂಚಕ, ಪುರುಷ ವಾಚಕ (ಮು., P. pronouns). (P. column ವೈಯಕ್ತಿಕ ಅಥವಾ ಅರ್ಧ ವೈಯಕ್ತಿಕ ತೆರದ ಪ್ರಕಟನೆಗಳಿಗಾಗಿ ಇಟ್ಟಿರುವ ವೃತ್ತಪತ್ರಿಕೆಯ ಭಾಗ). **Personálity** ಪರ್ಸನ್ಯಾಲಿಟಿ (ನಾ.) ವ್ಯಕ್ತಿತ್ವ; ವೈಯಕ್ತಿಕ ಅಸ್ತಿತ್ವ; ವ್ಯಕ್ತಿ ಪ್ರಭಾವ; ಮಹಿಮಾತಿಶಯ; ಆಳ್ಮೆ; ವ್ಯಕ್ತಿ. (ಟೀಕೆ) ಒಬ್ಬನನ್ನುದ್ದೇಶಿಸಿ ಮಾಡಿದ್ದು; ವೈಯಕ್ತಿಕ; (ಸಾ., ಬ. ವ. ದಲ್ಲಿ) ವೈಯಕ್ತಿಕ ಟೀಕೆಗಳು; (ವಿರ. ಪ್ರ.) =Personalty. [Multiple p. (ಮ. ಶಾ.) ಒಂದೇ ವ್ಯಕ್ತಿಯಲ್ಲಿ ವೈಶಿಷ್ಟ್ಯವುಳ್ಳಂತೆ, ಮತ್ತು ಪರ್ಯಾಯವಾಗಿ ಕಾಣಿಸಿಕೊಳ್ಳುವಂತೆ, ತೋರುವ, ಎರಡು ಅಥವಾ ಹೆಚ್ಚಿನ ವ್ಯಕ್ತಿತ್ವಗಳು: ಬಹುವ್ಯಕ್ತಿತ್ವ]. **Pérsonalize** (ಕ್ರಿ. ಸಕ.) =Personify. **Personalizátion** (ನಾ.); **Pérsonally** (ಕ್ರಿ. ವಿ.) ತಾನೇ; ಖುದ್ದಾಗಿ; ಸ್ವತಃ; ಸ್ವಂತವಾಗಿ (A p. conducted tour. Writ was served on them p.). ವೈಯಕ್ತಿಕವಾಗಿ (A God existing p. ವ್ಯಕ್ತಿ ಸ್ವರೂಪದಲ್ಲಿರುವ ದೇವರು). ತನ್ನ ಮಟ್ಟಿಗೆ (P. I see no objection). **Pérsonalty** ಪರ್ಸೊನಲ್ಟಿ (ನಾ.) ಸ್ವಂತ ಚರ ಆಸ್ತಿ, ಜಿಂದಿಗಿ. **Pérsonate**[1] —ನೇಟ್ (ಕ್ರಿ. ಸಕ.) (ನಾಟಕದಲ್ಲಿ) (—ರ) ಪಾತ್ರ ವಹಿಸು; ವೇಷ ಹಾಕು (ರೂಪ. ಸಹ). (ಮು., ಮೋಸ ಮಾಡುವ ಉದ್ದೇಶದಿಂದ) ಮತ್ತೊಬ್ಬ ವ್ಯಕ್ತಿಯಂತೆ ನಟಿಸು, ವ್ಯವಹರಿಸು; ಅನುಕರಿಸು. **Personátion** (ನಾ.); **Pérsonator** (ನಾ.); **Pérsonate**[2] —ನೆಟ್ (ಗು.) (ಸ. ವಿ.: ಹೂವಿನ ಇರ್ತುಟಿಯ ದಳವಲಯದ ವಿಷಯದಲ್ಲಿ) ಕೆಳ ತುಟಿಯ ಮೇಲು ಚಾಚಿನಿಂದ ಬಾಯಿ ಮುಚ್ಚಿರುವ. **Personificátion** ಪರ್ಸಾ— (ನಾ.) ವ್ಯಕ್ತೀಕರಣ; ಮನುಷ್ಯತ್ವಾರೋಪಣ; (ಒಂದು ಗುಣ, ಮೊ. ಗಳ) ಮೂರ್ತಿಮತ್ತಾದ ಉದಾಹರಣೆಯಾಗಿ ಅಥವಾ ಆದರ್ಶವಾಗಿ ಕಾಣುವ, ನೋಡುವ,—ವ್ಯಕ್ತಿ, ವಸ್ತು; ಮೂರ್ತೀಕೃತ ವ್ಯಕ್ತಿ, ವಸ್ತು. **Persónify** (ಕ್ರಿ. ಸಕ.) (ಅಮೂರ್ತವಾದುದಕ್ಕೆ) ವ್ಯಕ್ತಿತ್ವಾರೋಪಣೆ ಮಾಡು; ವ್ಯಕ್ತೀಕರಿಸು. (ಒಂದು ಗುಣವನ್ನು) ಮನುಷ್ಯನಂತೆ ಮೂರ್ತೀಕರಿಸು. (ಒಂದು ಗುಣ ಒಬ್ಬನಲ್ಲಿ) ಮೂರ್ತಿಮತ್ತಾಗಿರು; ಮೈವೆತ್ತಿರು; ಆದರ್ಶವಾಗಿರು; ಮಾದರಿಯಾಗಿರು (ಮು., ಭೂ. ಕೃ. ನಲ್ಲಿ). **Personnél** ಪರ್ಸೊನೆಲ್ (ನಾ.) (ಮು., ಒಂದು ಸಾರ್ವಜನಿಕ ಸಂಸ್ಥೆಯಲ್ಲಿ) ಉದ್ಯೋಗದಲ್ಲಿರುವ ಜನರು; ಉದ್ಯೋಗಿಗಳು; ಸಿಬ್ಬಂದಿ; ಉದ್ಯೋಗಿ ಮಂಡಲಿ.

Persóna (L) ಪರ್ಸೋನ (ನಾ.) ವ್ಯಕ್ತಿ; ಮನುಷ್ಯ. P. grata (—ಗ್ರೇಟ) ಮೆಚ್ಚಿಕೆಗೆ ಯೋಗ್ಯನಾದವನು; ಮನಸ್ಸಿಗೆ ಒಪ್ಪಿಕೆಯಾದ ವ್ಯಕ್ತಿ; ಇಷ್ಟ(ನಾದವನು). In propria persona ತನ್ನಲ್ಲಿಯೇ, ತಾನೇ ಸ್ವಂತವಾಗಿ, ಖುದ್ದಾಗಿ. Dramatis personae ನಾಟಕದಲ್ಲಿಯ ಅಥವಾ ಕಥೆಯಲ್ಲಿಯ ಪಾತ್ರಗಳು; ಪಾತ್ರವರ್ಗ.

Pérsonable, Pérsonalty, Personnél, etc. Person ನೋಡಿ.

Perspéctive ಪರ್ಸ್ಪೆಕ್ಟಿವ್ (ನಾ., ಗು.) (ಚಿತ್ರಕರೆಯಲ್ಲಿ) ಒಂದು ಗೊತ್ತಾದ ಸ್ಥಾನದಿಂದ ಒಂದು ಘನ ವಸ್ತುವನ್ನು ನೋಡಿದರೆ ಹೇಗೆ ಅದು ಕಾಣುವುದೊ, ಅದೇ ಪರಸ್ಪರ ಸಂಬಂಧವುಳ್ಳ ಸ್ಥಾನ, ಪ್ರಮಾಣ, ಮೊ. ಗಳಲ್ಲಿ ಕಾಣುವಂತೆ, ಆ ವಸ್ತುವನ್ನು ಸಮತಲದಮೇಲೆ ನಿರೂಪಿಸುವ ಕಲೆ: ಯಥಾದೃಷ್ಟ ರೂಪಣ. ಸ್ಥಾನ, ದೂರ, ಮೊ. ಗಳಲ್ಲಿ ದೃಶ್ಯ ವಸ್ತುಗಳಿಗಿರುವಂತೆ ತೋರುವ ಪರಸ್ಪರ ಸಂಬಂಧ; ಕಣ್ನೆರೆ [Linear p. (ವಸ್ತುಗಳ ತೋರ್ಕೆಯ ರೂಪ, ಪ್ರಮಾಣ ಮತ್ತು ಸ್ಥಾನ—ಇವಕ್ಕೆ ಸಂಬಂಧಿಸಿದಂತೆ) ರೇಖಾ ದೃಷ್ಟಿ]. (ರೂಪ.) ಒಂದು ವಿಷಯದ ಅಂಶಗಳನ್ನು ಮನಸ್ಸು ಗ್ರಹಿಸುವಲ್ಲಿ ಆ ಅಂಶಗಳಿಗೆ ಕೊಡುವ ಪರಸ್ಪರ ಸಂಬಂಧ; ತೋರ್ಕೆ; ನೋಟ; ದೃಶ್ಯ ಸಮೀಚೀನ ದೃಷ್ಟಿ (ರೂಪ. ಸಹ). (In p. ಯಥಾದೃಷ್ಟ ರೂಪಣದ ಚಿತ್ರನಿಯಮಗಳಿಗೆ ಅನುಸಾರವಾಗಿ ರೇಖಿಸಿದ). (ಗು.) ಯಥಾದೃಷ್ಟ ರೂಪಣದ(ಲ್ಲಿಯ); ಯಥಾದೃಷ್ಟಿಯ. **Perspéctively** (ಕ್ರಿ. ವಿ.)

Perspicácious ಪರ್ಸ್ಪಿಕೇಷಸ್ (ಗು.) ಸ್ಪಷ್ಟ ಮತ್ತು ಸೂಕ್ಷ್ಮ ದೃಷ್ಟಿಯ; ಸೂಕ್ಷ್ಮಗ್ರಾಹಿತ್ವದ; ಚುರುಕು ಬುದ್ಧಿಯ; ತೀಕ್ಷ್ಣ ವಿವೇಚನೆಯ. **Perspicáciously** (ಕ್ರಿ. ವಿ.); **Perspicácity** —ಕ್ಯಾ— (ನಾ.); **Perspícuous** —ಕ್ಯುಅಸ್ (ಗು.) ಸುಲಭವಾಗಿ ತಿಳಿಯುವ; ಸ್ಪಷ್ಟ; ವಿಶದ; ಸುವ್ಯಕ್ತ; (ವ್ಯಕ್ತಿ) ಸ್ಫುಟವಾಗಿ ಹೇಳುವ; ಪ್ರಸನ್ನ. **Perspícuously** (ಕ್ರಿ. ವಿ.); **Perspícuousness** (ನಾ.); **Perspicúity** —ಕ್ಯೂಯಿಟಿ (ನಾ.)

Perspícuous, etc. Perspicacious ನೋಡಿ.

Perspiré ಪರ್ಸ್ಪೈರ್ (ಕ್ರಿ.) ಬೆವರು ಹರಿ, —ಸುರಿಸು (ಚರ್ಮ ರಂಧ್ರಗಳ ಮೂಲಕ ಬೆವರನ್ನು ದ್ರವವಾಗಿ ಅಥವಾ ಆವಿಯಾಗಿ ಹೊರ ಸೂಸು). **Perspírable** (ಗು.) ಬೆವರಿಗೆ ಅವಕಾಶ ಕೊಡುವ; ಬೆವರು ಹರಿಸುವ; ಬೆವರಾಗಿ ಹೊರ ಸೂಸಲಾಗುವ; ಸ್ವೇದಕರ. **Perspirátion** ಪರ್ಸ್ಪಿ— (ನಾ.) ಬೆವರು(ವುದು); —ಹರಿಯುವುದು; ಸ್ವೇದ(ನ). **Perspíratory** ಪರ್ಸ್ಪೈರಟರಿ (ಗು.)

Persuáde ಪರ್ಸ್ವೇಡ್ (ಕ್ರಿ. ಸಕ.) (ಒಬ್ಬನನ್ನು, ತನ್ನನ್ನು, ಒಂದು ವಿಷಯವನ್ನು, ವಸ್ತುಸ್ಥಿತಿಯನ್ನು) ಮನವೊಪ್ಪಿಸು, ಮನಗಾಣಿಸು; (ಮಾಡಲು, ಕಾರ್ಯ ಕೈಕೊಳ್ಳಲು) ಪ್ರೇರಿಸು, ಒಡಂಬಡಿಸು, ಒಲಿಸು. (ಭೂ. ಕೃ.) (—ಎಂದು) ಮನದಟ್ಟಾದ, ಮನಗಂಡ. **Persuádable** (ಗು.) =**Persuásible** (ಗು.); **Persuasibílity** (ನಾ.); **Persuáder** (ನಾ.) ಪ್ರೇರಕ; ಚೋದಕ; (ಮು., ಅಸಂ.; ಬ. ವ. ದಲ್ಲಿ) ಕುದುರೆಯನ್ನು ಚುರುಕುಗೊಳಿಸುವ, ಸವಾರನ ಪಾದರಕ್ಷೆಯಲ್ಲಿಯ ಮುಳ್ಳು; ಅಶ್ವ ಚೋದಕ (Clap in the persuaders ಕುದುರೆಯನ್ನು ಚೋದಕಗಳಿಂದ ತಿವಿ). **Persuásion** —ಷನ್ (ನಾ.) ಮನವೊಪ್ಪಿಸುವುದು; ಮನಗಾಣಿಕೆ; ಪ್ರೇರಿಸುವುದು; ದೃಢ ನಂಬಿಕೆ; ಮತ (It is my private p. that he is mad). ಮತ ಧರ್ಮದ ನಂಬಿಕೆ; (ಒಂದು ಮತ ಧರ್ಮದಲ್ಲ ನಂಬಿಕೆಯುಳ್ಳ) ಪಂಥ (He is of the Roman Catholic p.). (ಹಾಸ್ಯ ಪ್ರ.) ಕುಲ; ಬಗೆ; ವಿಧ (A man of the Jewish p. ಯೆಹೂದ್ಯ. No one of the male p. was there ಗಂಡಸರು ಯಾರೂ ಅಲ್ಲಿರಲಿಲ್ಲ). **Persuásive** —ಸಿ(ಸ್ಸಿ)ವ್ (ಗು., ನಾ.) ಪ್ರೇರಿಸುವ; ಒಲಿಸುವ; ಒಡಂಬಡಿಸುವಂಥ. (ನಾ.) ಉದ್ದೇಶ; ಪ್ರೇರಕ. **Persuásively** (ಕ್ರಿ. ವಿ.); **Persuásiveness** (ನಾ.)

Pert ಪರ್ಟ್ (ಗು.) (ಮಾತಿನಲ್ಲಾಗಲಿ ನಡವಳಿಯಲ್ಲಾಗಲಿ) ಮುಂದೆಬಿದ್ದು ಹೋಗುವ; ಉದ್ಧತ; ದಿಟ್ಟ. **Pértly** (ಕ್ರಿ. ವಿ.); **Pértness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pertaín ಪರ್ಟೇಯ್‌ನ್, ಪರ್ಟೇನ್ (ಕ್ರಿ. ಅಕ.) (ಭಾಗವಾಗಿ, ಅನುಬಂಧ ವಾಗಿ, ಸೇರಿಕೆಯಾಗಿ, ಒಂದಕ್ಕೆ) ಸೇರು, ಸೇರಿರು, ಸಂಬದ್ಧವಾಗಿರು (*To* ಉಪ. ದೊಡನೆ) ; ಅನ್ವಯಿಸು; (—ಕ್ಕೆ) ಉಚಿತವಾಗಿರು (*To* ಉಪ. ದೊಡನೆ) ; (—ಕ್ಕೆ) ಸಂಬಂಧಿಸಿರು (*To* ಉಪ. ದೊಡನೆ)

Pertinácious ಪರ್ಟಿನೇಷಸ್ (ಗು.) ಮೊಂಡುತನದ ; ಹಠದ ; ಪಟ್ಟಿನ; ಛಲದ; ಬಿಡದೆ ಸಾಧಿಸುವ. **Pertináciously** (ಕ್ರಿ. ವಿ.) ; **Pertináciousness** (ನಾ.) ; **Pertinácity** —ನ್ಯಾ— (ನಾ.)

Pértinent ಪರ್ಟಿನೆಂಟ್ (ಗು., ನಾ.) (ಪ್ರಸ್ತುತ ವಿಷಯ, ಮೊ. ಕ್ಕೆ) ಸಂಬಂಧಪಟ್ಟ, ಸಂಗತ(ವಾದ) ; ಉಚಿತ ; ಸಮಂಜಸ ; ಯುಕ್ತ ; ತಕ್ಕ (*To* ಉಪ. ದೊಡನೆ) ; ಎಷ್ಟು ಬೇಕೊ ಅಷ್ಟು ಮಾತ್ರದ. (ನಾ. ; ಸಾ., ಬ. ವ. ದಲ್ಲಿ) ಸಲಕರಣೆ; ಉಪಕರಣ. **Pértinently** (ಕ್ರಿ. ವಿ.); **Pértinence** (ನಾ.) ; **Pértinency** (ನಾ.)

Pertúrb ಪರ್ಟರ್ಬ್ (ಕ್ರಿ. ಸಕ.) ಗಲಿಬಿಲಿ ಮಾಡು ; ಕದಡು ; ಕಲಕು ; ಗೊಂದಲವೆಬ್ಬಿಸು ; ಮನಃಕ್ಷೋಭೆ ಮಾಡು ; ಕೆರಳಿಸು. **Perturbátion** (ನಾ.) (ಕ್ರಿಯಾರ್ಥಗಳಲ್ಲಿ). (ಖ. ವಿ.) ಪ್ರಮುಖ ಕಾಯದ ಆಕರ್ಷಣದಿಂದ ಅದರ ಸುತ್ತಲೂ ಚಲಿಸುತ್ತಿರುವ ಒಂದು ಆಕಾಶಕಾಯದ ಚಲನೆಯಲ್ಲಿ ಬೇರೊಂದು ಕಾಯದ ಆಕರ್ಷಣದಿಂದ ಉಂಟಾದ ದಿಕ್ಚ್ಯುತಿ : ಪಥ ವೈಕಲ್ಯ. **Pertúrbative, Pért-** (ಗು.)

Perúke ಪೆರೂಕ್ (ನಾ.) = Wig.

Perúse ಪೆರೂಸ್ (ಕ್ರಿ. ಸಕ.) (ಸಾಂಗವಾಗಿ, ಎಚ್ಚರಿಕೆಯಿಂದ) ಓದು. (ರೂಪ.) (ವ್ಯಕ್ತಿಯ ಮುಖ, ಮೊ. ನ್ನು) ಜೋಕೆಯಿಂದ, ಸೂಕ್ಷ್ಮವಾಗಿ, —ಪರೀಕ್ಷಿಸು. **Perúsal** (ನಾ.)

Perúvian ಪೆರೂವಿಯನ್ (ಗು.) ಪೆರೂ ದೇಶದ. P. bark ಸಿಂಕೋನ ಮರದ ತೊಗಟೆ (Cinchona ನೋಡಿ)

Perváde ಪರ್ವೇಡ್ (ಕ್ರಿ. ಸಕ.) ಪೂರ್ತಿ ಹರಡು, ವ್ಯಾಪಿಸು ; ಎಡೆ ಬಿಡದಂತೆ ಆಕ್ರಮಿಸು (ಪ್ರಭಾವ, ಮೊ. ಗಳ ವಿಷಯದಲ್ಲಿ ರೂಪ. ಸಹ). **Pervásion** (ನಾ.); **Pervásive** (ಗು.); **Pervásively** (ಕ್ರಿ. ವಿ.); **Pervásiveness** (ನಾ.)

Pervérse ಪರ್ವರ್ಸ್ (ಗು.) ತಪ್ಪನ್ನು ಸಾಧಿಸುವ; ನ್ಯಾಯವಾದುದಕ್ಕೆ, ಅವಶ್ಯಕವಾದುದಕ್ಕೆ, ವ್ಯತಿರಿಕ್ತವಾದ; ವಕ್ರ ; ಅಡ್ಡ ಮಾರ್ಗ ಹಿಡಿಯುವ ; ಮೂರ್ಖ ; ಸಿಡುಕಿನ ; ಕೆಟ್ಟ ; ದುಷ್ಟ. (ತೀರ್ಪು) ತೂಕವಾದ ರುಜುವಾತಿಗೆ, ನ್ಯಾಯಾಧಿಪತಿಯ ಮಾರ್ಗದರ್ಶನಕ್ಕೆ, —ವಿರುದ್ಧವಾದ; ಪ್ರತೀಪ. **Pervérsely** (ಕ್ರಿ. ವಿ.); **Pervérseness** (ನಾ.) ; **Pervérsion** (ನಾ.); **Pervérsity** (ನಾ.) ; **Pervérsive** (ಗು.) ; **Pervért** (ಕ್ರಿ. ಸಕ.) ಋಜು ಮಾರ್ಗ ತಪ್ಪಿಸು; ತಕ್ಕ ಉಪಯೋಗದಿಂದ ಬೇರೆ ಕಡೆಗೆ ತಿರುಗಿಸು ; ತಪ್ಪಾಗಿ ಬಳಸು ; (ಶಬ್ದ, ಮೊ. ನ್ನು) ಅಪಾರ್ಥ ಮಾಡು, ಅಪ ಪ್ರಯೋಗ ಮಾಡು ; (ಒಬ್ಬನನ್ನು, ಮನಸ್ಸನ್ನು) ನ್ಯಾಯವಾದ ಅಭಿಪ್ರಾಯದಿಂದ ಅಥವಾ ನಡತೆಯಿಂದ ತಪ್ಪುದಾರಿಗೆ ಸೆಳೆ ; (ಮತದಲ್ಲಿ) ನಂಬಿಕೆ ತಪ್ಪಿಸು. **Pérvert** (ನಾ.) ವಕ್ರಬುದ್ಧಿ (ಯವನು) ; ಮಾರ್ಗ ಬಿಟ್ಟುಹೋದವನು ; ಸ್ವಧರ್ಮ ಬಿಟ್ಟವನು ; ಪತಿತ ; ಮತ ಭ್ರಷ್ಟ.

Pervert. **Perverse** ನೋಡಿ.

Pérvious ಪರ್ವಿಯಸ್ (ಗು.) (—ಕ್ಕೆ) ಪ್ರವೇಶ ಕೊಡುವ ; ಪ್ರವೇಶ್ಯ; ಭೇದ್ಯ ; ವ್ಯಾಪ್ಯ. (ರೂಪ.) (ವಿವೇಕ, ನ್ಯಾಯ, ಮೊ. ಗಳಿಗೆ) ಒಳಪಡುವ, ಸಾಧ್ಯವಾದ (*To* ಉಪ. ದೊಡನೆ). **Pérviousness** (ನಾ.)

Peséta ಪೆಸೇಟ (ನಾ.) ಸುಮಾರು ೧೦ ಪೆನಿ ಬೆಲೆಯ, ಸ್ಪೇಯ್ನ್ ದೇಶದ ಒಂದು ಬೆಳ್ಳಿಯ ನಾಣ್ಯ.

Péshwa ಪೇಷ್ವಾ (ನಾ.) ಪೇಷ್ವೆ [ಚರಿತ್ರೆ : ಮಹಾರಾಷ್ಟ್ರ ದೇಶದ ಪಾರಂಪರ್ಯಾಧಿಪತಿ (ಆದಿಯಲ್ಲಿ ಮುಖ್ಯಮಂತ್ರಿ)]

Pésky ಪೆಸ್ಕಿ (ಗು.) (ಅಮೆ. ಸಂ. ಅಸಂ.) ತೊಂದರೆ, ಕಿರುಕುಳ, ಉಪದ್ರವ, —ಕೊಡುವ ; ಕಾಡುವ ; ದಿಗ್ಭ್ರಮೆ ಹಿಡಿಸುವ ; ಅಸಹ್ಯವಾದ.

Péso ಪೇಸೋ (ನಾ.) ದ. ಅಮೆರಿಕದ ಕೆಲವು ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಬಳಕೆಯಲ್ಲಿರುವ, ಸುಮಾರು ೪ ಷಿಲಿಂಗು ಬೆಲೆಯ, ಒಂದು ಬೆಳ್ಳಿಯ ನಾಣ್ಯ.

Péssary ಪೆಸರಿ (ನಾ.) (ವೈ. ಶಾ.) ಗರ್ಭಾಶಯವು ಸ್ಥಾನಪಲ್ಲಟವಾಗದಂತೆ ಉಪಸ್ಥ ನಾಳದಲ್ಲಿ ಧರಿಸುವ ಒಂದು ಸಲಕರಣೆ : ಗರ್ಭಾಶಯ ಸ್ಥಾಪಕ.

Péssimism ಪೆಸಿಮಿಸ್ಮ್ (ನಾ.) ವಸ್ತುವಿಷಯಗಳ ನಿಕೃಷ್ಟಾಂಶಗಳಿಗೇ ಗಮನಕೊಡುವ ಮನೋಭಾವ: ಅಶುಭ ಪ್ರತೀಕ್ಷೆ ; ಕೇಡುನೋಟ (Optimism ಹೋಲಿಸಿ). ಈ ಪ್ರಪಂಚವು ಅತ್ಯಂತ ದುಷ್ಟವಾದುದೆಂದು ಪರಿಗಣಿಸುವ, ಅಥವಾ ಎಲ್ಲ ಸಂದರ್ಭಗಳೂ ಕೇಡಿಗೇ ಒಯ್ಯುವುವೆಂಬ, ವಾದ: ದುಃಖ ಪ್ರಪಂಚ ವಾದ. **Péssimist** (ನಾ.) ; **Pessimístic** (ಗು.) ; **Pessimístically** (ಕ್ರಿ. ವಿ.)

Pest ಪೆಸ್ಟ್ (ನಾ.) ತೊಂದರೆ ಕೊಡುವ, ಕೇಡು ಮಾಡುವ, ನಾಶಗೊಳಿಸುವ, —ಮನುಷ್ಯ, ಪ್ರಾಣಿ, ವಸ್ತು ; ಉಪದ್ರವಕಾರಿ ; ಪೀಡೆ ; ಈತಿ (ಬಾಧೆ). (ಈಗ ವಿರ. ಪ್ರ.) ವಿನಾಶಕ ಅಂಟುಜಾಡ್ಯ (= Pestilence). P.-house ಪ್ಲೇಗು, ಮೊ. ಜಾಡ್ಯಗಳ ಆಸ್ಪತ್ರೆ. **Péster** ಪೆಸ್ಟರ್ (ಕ್ರಿ. ಸಕ.) ತೊಂದರೆ, ಉಪದ್ರವ, —ಕೊಡು, ಮಾಡು ; ಕಾಡು ; ಪೀಡಿಸು. **Pestíferous** (ಗು.) ಕೇಡುಂಟು ಮಾಡುವ ; ಜಾಡ್ಯ ತರುವ ; ಮಾರಕ. (ರೂಪ.) ದುರ್ನೀತಿ ಹರಡುವ ; ವಿನಾಶಕ. **Péstilence** (ನಾ.) ಸಾವು ತರುವ (ಯಾವುದಾದರೂ) ಅಂಟು ರೋಗ (ಮು., ಪ್ಲೇಗು ಜಾಡ್ಯ ; ಮಹಾಮಾರಿಕಾ ಉಪದ್ರವ). **Pestiléntial** (ಗು.) ; **Péstilent** (ಗು.) ಪ್ರಾಣಹಾನಿ ಮಾಡುವ ; ಮಾರಕ. (ರೂಪ.) (ನೀತಿ, ಮೊ. ಗಳಿಗೆ) ಹಾನಿಕರವಾದ. (ಬಳ. ಮಾ.) ತೊಂದರೆ, ಉಪದ್ರವ, ಕಿರುಕುಳ, —ಕೊಡುವ. **Péstilently** (ಕ್ರಿ. ವಿ.) ; **Pestólogy** ಪೆಸ್ಟಾಲೊಜಿ (ನಾ.) ಮು., ವಿನಾಶಕಾರಿ ಕೀಟಗಳನ್ನೂ ಅವುಗಳ ನಿವಾರಣೋಪಾಯಗಳನ್ನೂ ಕುರಿತ ಶಾಸ್ತ್ರ: ವಿನಾಶಕ ಕೀಟ ಶಾಸ್ತ್ರ.

Péster, Péstilence, etc. **Pest** ನೋಡಿ.

Péstle ಪೆಸ್‌ಲ್, ಪೆಸ್ಟ್‌ಲ್ (ನಾ., ಕ್ರಿ.) ಕುಟ್ಟಣಿ (ಒರಳಿನಲ್ಲಿ ಅಥವಾ ಕಲಬತ್ತಿನಲ್ಲಿ ಕುಟ್ಟಲು ಉಪಯೋಗಿಸುವ ಮೋಟುಹಾರೆಯಂಥ ಸಲಕರಣೆ) ; ಒನಕೆ. (ಕ್ರಿ.) ಕುಟ್ಟಣಿಯಿಂದ (ಹೇಗೊ ಹಾಗೆ) ಕುಟ್ಟು ; ಕುಟ್ಟಣಿ, ಒನಕೆ, ಮೊ. ನ್ನು ಉಪಯೋಗಿಸು.

Pestólogy. **Pest** ನೋಡಿ.

Pet[1] ಪೆಟ್ (ನಾ., ಕ್ರಿ. ಸಕ.) ಮುದ್ದಿಗಾಗಿ ಪಳಗಿಸಿ ಸಾಕುವ ಅಥವಾ ಲಲ್ಲೆ ಮಾಡುವ, ಮುದ್ದಿಸುವ, ಪ್ರಾಣಿ : ಮುದ್ದಿನ ಪ್ರಾಣಿ. ಪ್ರೀತಿ ಪಾತ್ರ ; ಮೆಚ್ಚಿನವನು; ಅಚ್ಚುಮೆಚ್ಚು (ಹಲವು ವೇಳೆ ವಿಶೇಷಣವಾಗಿ). [One's p. aversion ಒಬ್ಬನಿಗೆ ಕೇವಲ ಅಸಹ್ಯವಾದದ್ದು, ಬದ್ಧ ದ್ವೇಷವಿರುವಂಥದು. P.-cock (ದ್ರವ, ಆವಿ, ಮೊ. ನ್ನು ಹೊರಸೂಸುವುದಕ್ಕಾಗಿ ಹಾಕಿರುವ) ಸಣ್ಣ ತಡೆತಿರುಪು. P. name ಮುದ್ದಿನ, ನಲಗೆಯ, —ಹೆಸರು]. (ಕ್ರಿ.) ಮುದ್ದು ಮಾಡು ; ಲಲ್ಲೆ ಮಾಡು.

Pet[2] ಪೆಟ್ (ನಾ.) ತಿರಸ್ಕಾರ ಮಾಡಿದುದಕ್ಕೆ ಸಿಟ್ಟುಗೊಳ್ಳುವುದು ; ಸಿಡಿಮಿಡಿ ; ರೇಗು [ಮು., Take (ಸಾ., the) p., Be in a p.]. **Péttish** (ಗು.) ಮುಂಗೋಪದ ; ಸಿಡುಕಿನ ; ಸಿಡಿಮಿಡಿಗೊಳ್ಳುವ; ರೇಗುವ (ಸ್ವಭಾವದ). **Péttishly** (ಕ್ರಿ. ವಿ.) ; **Péttishness** (ನಾ.)

Pétal ಪೆಟಲ್ (ನಾ.) ಹೂವಿನ ಎಸಳು, ರೇಕು, ದಳ. **Pétaline** (ಗು.) ದಳಕ್ಕೆ ಸೇರಿದ ; ದಳದಮೇಲಿನ ; ದಳಗಳಿಂದ ಕೂಡಿದ ; ದಳಕಲ್ಪ. **(-)pétal(l)ed** (ಗು.) ; **Pétaloid** (ಗು.) ಎಸಳಿನಾಕಾರದ ; ದಳಕಲ್ಪ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Petárd ಪಿಟಾರ್(ಡ್) (ನಾ.) ಹಿಂದೆ (ಕೋಟೆಯ) ಬಾಗಿಲು, ಮೊ. ನ್ನು ಸಿಡಿಸಿ ಉರುಳಿಸಲು ಉಪಯೋಗಿಸುತ್ತಿದ್ದ ಒಂದು ಸಣ್ಣ ಯುದ್ಧ ಯಂತ್ರ. ಒಂದು ಬಗೆಯ ಬಾಣಬಿರುಸು, ಪಟಾಕಿ. Hoist with his own p. (Hoist ನೋಡಿ)

Péter[1] ಪೀಟರ್ (ನಾ.) ಕ್ರೈಸ್ತರಲ್ಲಿ ಗಂಡಸಿನ ಹೆಸರು. St P. ಯೇಸು ಕ್ರಿಸ್ತನ ಶಿಷ್ಯರಲ್ಲೊಬ್ಬನು. Rob P. to pay Paul ಒಬ್ಬನಿಂದ ಕಿತ್ತುಕೊಂಡು ಮತ್ತೊಬ್ಬನಿಗೆ ಕೊಡು ("ಅಗಸರ ಕತ್ತೆ ದೊಂಬರಿಗೆ ತ್ಯಾಗ" ಎಂಬಂತೆ); ಹೊಸ ಸಾಲವೆತ್ತಿ ಹಳೆಯ ಸಾಲ ತೀರಿಸು. Blue p. (Blue ನೋಡಿ). P.-penny, P.'s penny or pence (ಚರಿತ್ರೆ) ಪೋಪ್‌ಗುರುವಿನ ಮಠಕ್ಕೆ ಹಿಂದೆ ಸಲ್ಲಿಸುತ್ತಿದ್ದ ವಾರ್ಷಿಕ ತೆರಿಗೆ(ಯ ಪೆನಿ); (೧೮೭೦ರಿಂದ ಈಚೆಗೆ) ಪೋಪ್‌ಗುರುವಿನ ಬೊಕ್ಕಸಕ್ಕೆ ಆತ್ಮ ಸಂತೋಷದಿಂದ ಕೊಡುವ ಕಾಣಿಕೆ.

Péter[2] ಪೀಟರ್ (ಕ್ರಿ. ಅಕ.) (ಅಸಂ.) (ಹೊಳೆ, ಅದುರಿನ ರೇಖೆ, ಮೊ. ಗಳ ವಿಷಯದಲ್ಲಿ, ಮತ್ತು ರೂಪ.) P. out ಹರಿದು ಬತ್ತಿಹೋಗು; ಕಾಣ ದಂತಾಗು; ಕೊನೆಮುಟ್ಟು; ಕೊನೆಗಾಣು; ಅಳಿಸಿಹೋಗು.

Pétiole ಪೆಟಿಯೋಲ್ (ನಾ.) (ಸ. ವಿ.) ಎಲೆಯ ತೊಟ್ಟು, ಕಾವು. **Pétiolar** (ಗು.) ಎಲೆಯ ಕಾವಿನ, ಕಾವಿನ ಸ್ವಭಾವದ. **Pétiolate** ಪೀಟಿಯೊಲೇಟ್ (ಗು.) (ಎಲೆ) ಕಾವುಳ್ಳ, ಕಾವು ಹೊತ್ತಿರುವ.

Petít (F) ಪೆ(ಪ)ಟೀ (ಗು.). **Petits-chevaux** (F) ಪೆಟೀಷ್ವೊ (ನಾ.) ಒಂದು ತೆರದ ಜೂಜಾಟ. **P.-maitre** (—ಮೇಟ್ರ್) ಜಂಬದ ಕೋಳಿ; ಸೊಗಸುಗಾರ (ಪುಟ್ಟಸಾಮಿ). **P. mal** (—ಮಾಲ್) (ಉಗ್ರವಲ್ಲದ) ಮೂರ್ಛೆರೋಗ, ಅಪಸ್ಮಾರ. **P. souper** (—ಸೂಪೇ) ಕೆಲವು ಮಂದಿ ಆಪ್ತಮಿತ್ರರಿಗಾಗಿ ಏರ್ಪಡಿಸಿದ, ಊಟದ ನಿಯಮಗಳಿಗೆ ಅಷ್ಟು ಗಮನಕೊಡದ, ರಾತ್ರಿಯೂಟ. **Petits soins** (—ಸ್ವ್ಯಾನ್) ಸಣ್ಣಪುಟ್ಟ ಆದರೋಪಚಾರಗಳು. **P. verre** (—ವೇರ್) ಒಂದು ಬಟ್ಟಲು ಮದ್ಯ. **Petíte** (F) (ಗು.) ಪಟೀ(ೕ)ಟ್, ಪೆಟೀಟ್ (ಗು.) (ಹೆಂಗಸಿನ ವಿಷಯದಲ್ಲಿ) ಸಣ್ಣ ಆಕಾರದ ಮತ್ತು ಕೋಮಲ ರಚನೆಯ.

Petítio ಪಿಟಿಷಿಯೋ, ಪಿಟೈಟಿಯೋ (ನಾ.) P. principii (—ಪ್ರಿನ್ಸಿಪಿಐ) ಸಾಧಿಸಬೇಕಾದ ವಿಷಯವನ್ನೇ ಸಿದ್ಧವೆಂದಿಟ್ಟುಕೊಳ್ಳುವುದು.

Petítion ಪಿಟಿಷನ್ (ನಾ., ಕ್ರಿ.) ಕೇಳಿಕೆ; ಬೇಡಿಕೆ; ಮನವೆ(ವಿ); ಪ್ರಾರ್ಥನೆ. (ದೊರೆ, ಮೊ. ರಲ್ಲಿ ಒಬ್ಬನು ಅಥವಾ ಹೆಚ್ಚು ಮಂದಿ ಮಾಡಿಕೊಂಡ) ವಿಧಿಬದ್ಧವಾದ ಲಿಖಿತಮೂಲಕದ ಅರಿಕೆ, ಮನವೆ, ಬಿನ್ನಹ; ಅರ್ಜಿ. (ನ್ಯಾಯಸ್ಥಾನಕ್ಕೆ ಹಾಕಿದ) ವಿಧಿಬದ್ಧವಾಗಿ ಬರೆದ ಅರ್ಜಿ. [P. of Right (೧೬೨೮ರಲ್ಲಿ ಪಾರ್ಲಿಮೆಂಟು ರಚಿಸಿ ಅದಕ್ಕೆ ಮೊದಲನೆಯ ಚಾರ್ಲ್ಸ್ ದೊರೆ ಒಪ್ಪಿಗೆ ಕೊಟ್ಟ) ಪ್ರಜೆಗಳ ಹಕ್ಕುಬಾಧ್ಯತೆಯ ಮತ್ತು ಸ್ವಾತಂತ್ರ್ಯದ ಘೋಷಣೆ]. (ಕ್ರಿ.) (ದೊರೆ, ಮೊ. ರಿಗೆ) ಅರಿಕೆ, ಮನವೆ, —ಮಾಡಿಕೊ; ಬಿನ್ನೈಸು, ಅರ್ಜಿ ಹಾಕು (*For* thing, *to* do). ದೈನ್ಯದಿಂದ ಕೇಳು, ಬೇಡಿಕೊ (*For* thing, *to* be allowed to do, etc.). **Petítionary** (ಗು.) ಅರ್ಜಿಯ(ಂಥ); —ಸ್ವಭಾವದ; ಅರ್ಜಿಯುಳ್ಳ. **Petítioner** (ನಾ.) (ಕ್ರಿಯಾರ್ಥಗಳಲ್ಲಿ); (ಮು., ವಿವಾಹ ವಿಚ್ಛೇದನ ಮೊಕದ್ದಮೆಯಲ್ಲಿ) ವಾದಿ, ಅರ್ಜಿದಾರ.

Pétrel ಪೆ(ಪೀ)ಟ್ರೆಲ್ (ನಾ.) ಕರಿಯ ಮತ್ತು ಬಿಳಿಯ ಪುಕ್ಕವೂ ನೀಳ ವಾದ ರೆಕ್ಕೆಗಳೂ ಉಳ್ಳ ಒಂದು ಸಣ್ಣ ಕಡಲ ಹಕ್ಕಿ (=Storm-p., Stormy p. ಬಿರುಗಾಳಿಮಳೆಯಲ್ಲಿ ಸಮುದ್ರದಮೇಲೆ ನಡೆಯುತ್ತ ಹೋಗು ವುದೆಂದು ಪ್ರತೀತಿಯಿರುವ ಒಂದು ಕಡಲ ಹಕ್ಕಿ); (ರೂಪ.) ಗಲಾಟೆ ಯೆಬ್ಬಿಸುವ ಮನುಷ್ಯ, ಗೊಂದಲಗಾರ.

Pétrify ಪೆಟ್ರಿಫೈ (ಕ್ರಿ.) ಕಲ್ಲಾಗಿಸು; ಕಲ್ಲಾಗಿ ಮಾಡು. (ರೂಪ.) (ಆಶ್ಚರ್ಯ, ಭಯ, ಮೊ. ಗಳಿಂದ) ಸ್ತಂಭೀಭೂತ ಮಾಡು, ಸ್ತಬ್ಧ ಮಾಡು, ನಿಶ್ಚೇಷ್ಟ ಮಾಡು (Petrified with fear, etc.). (ಮನಸ್ಸು, ತತ್ತ್ವ, ಮೊ. ನ್ನು) ನಿಸ್ಸತ್ತ್ವ ಮಾಡು. ಕಲ್ಲಾಗು; ಕಠಿನವಾಗು (ರೂಪ. ಸಹ). **Petrifáction** (ನಾ.) ಕಲ್ಲಾಗುವುದು; ಕಲ್ಲಾಗಿ ಮಾಡುವುದು; ಕಲ್ಲಾದ ವಸ್ತು, ಮುದ್ದೆ.

Petro- ಪೆಟ್ರೊ— (ಸ.ಪೂ.ಪ.) ಕಲ್ಲು—; ಶಿಲೆ—. **-glyph** (—ಗ್ಲಿಫ್) ಕಲ್ಲುಕೊರೆತ. **-graph** ಕಲ್ಲಿನಮೇಲೆ ಕೊರೆದ ರೇಖನ, ಅಕ್ಷರ; ಶಿಲಾ ಶಾಸನ; ಶಿಲಾ ಲಿಪಿ; ಶಿಲಾ ರೇಖ. **-graphy** (ಪಿಟ್ರಾಗ್ರಫಿ) ಶಿಲೆ ಗಳ ಉತ್ಪತ್ತಿಕ್ರಮ, ರಚನೆ—ಇವುಗಳ ಶಾಸ್ತ್ರೀಯ ವರ್ಣನೆ: ಶಿಲಾ ರಚನ ಶಾಸ್ತ್ರ. **-grapher** (ನಾ.); **-gráphic(al)** (ಪೆಟ್ರೊ ಗ್ರ್ಯಾಫಿ—) (ಗು.) **-logy** (ಪಿಟ್ರಾಲೊಜಿ) ಶಿಲೆಗಳ ಮೂಲ, ರಚನೆ, ಮೊ. ನ್ನು ಕುರಿತ ಶಾಸ್ತ್ರ: ಶಿಲಾ ಶಾಸ್ತ್ರ. **-lógic(al)** (ಪಿಟ್ರೊಲಾ—) (ಗು.); **-lógically** (ಕ್ರಿ. ವಿ.); **-logist** (ಪಿಟ್ರಾಲೊ—) (ನಾ.)

Pétrol ಪೆಟ್ರ(ಟ್ರಾ)ಲ್ (ನಾ., ಕ್ರಿ. ಸಕ.) (ಮೋಟಾರುಬಂಡಿ, ಮೊ. ಗಳಲ್ಲಿ ಉಪಯೋಗಿಸುವ) ಶುದ್ಧಿಮಾಡಿದ ಕಲ್ಲೆಣ್ಣೆ (ಪಿಟ್ರೋಲಿಯಂ); 'ಪೆಟ್ರಾಲ್'. (ಕ್ರಿ.) (ಮೋಟಾರುಬಂಡಿಗೆ) ಪೆಟ್ರಾಲ್ ಹಾಕು, ಒದಗಿಸು. **Petróleum** ಪಿಟ್ರೋಲಿಯಂ (ನಾ.) ಬೆಳಕಿಗಾಗಿಯೂ ಯಾಂತ್ರಿಕ ಶಕ್ತಿಗಾಗಿಯೂ ಉಪಯೋಗಿಸುವ, ಕಲ್ಲುಬಂಡೆಗಳಲ್ಲೂ ನೀರಿನಮೇಲೂ ದೊರೆಯುವ, ಒಂದು ಬಗೆಯ ಖನಿಜತೈಲ; ಕಲ್ಲೆಣ್ಣೆ; 'ಪಿಟ್ರೋಲಿಯಂ'. **Petrólic** ಪಿಟ್ರಾಲಿಕ್ (ಗು.) ಪೆಟ್ರಾಲಿನ; ಪಿಟ್ರೋಲಿಯಮ್ಮಿನ. **Pétrolin** ಪೆಟ್ರೊಲಿನ್ (ನಾ.) ಪಿಟ್ರೋಲಿ ಯಮ್ಮಿನಿಂದ ತೆಗೆದ ಒಂದು ಎಣ್ಣೆ; ರಂಗೂನ್ ಪಿಟ್ರೋಲಿಯಮ್ಮಿ ನಿಂದ ತೆಗೆದ ಒಂದು ಪದಾರ್ಥ.

Petróleum. **Petrol** ನೋಡಿ.

Petroleúr (F) ಪೆಟ್ರೊ(ಲ)ಲರ್ (ನಾ.; ಸ್ತ್ರೀ. -euse —ಲರ್ಸ್) ಪಿಟ್ರೋಲಿಯಂ ಹಾಕಿ ಮನೆಗಳಿಗೆ ಬೆಂಕಿ ಹಚ್ಚುವವನು.

Pétrolin. **Petrol** ನೋಡಿ.

Pétronel ಪೆಟ್ರೊನೆಲ್ (ನಾ.) (ಚರಿತ್ರೆ) ೧೬-೧೭ನೆಯ ಶ. ಮಾ. ಗಳಲ್ಲಿ ಕುದುರೆಸಿಪಾಯಿಗಳು (ರಾವುತರು) ಉಪಯೋಗಿಸುತ್ತಿದ್ದ ಒಂದು ದೊಡ್ಡ ಪಿಸ್ತೂಲು.

Pétrous ಪೆಟ್ರಸ್ (ಗು.) ಕಲ್ಲಿನ(ಂಥ); ಶಿಲೆಯ(ಂಥ); [ಮು., (ಅಂ. ರ. ಶಾ.)] ಕಪಾಲಾಸ್ಥಿಯ ಗಟ್ಟಿ ಭಾಗದ.

Pétticoat ಪೆಟಿಕೋಟ್ (ನಾ.) ಹೆಂಗಸರೂ ಹುಡುಗಿಯರೂ ಸಣ್ಣ ಮಕ್ಕಳೂ ತೊಡುವ ಒಂದು ಬಗೆಯ ಉಡುಪು; (ಸಾ., ಲಂಗದ ಒಳಗಡೆ, ನಡುವಿನ ಸುತ್ತಲೂ ಕಟ್ಟಿ ಇಳಿಯಬಿಟ್ಟಿರುವ) (ಹೆಂಗಸರ) ಒಳ ಪಾವಡೆ (Have known him since he was in petticoats ಅವನನ್ನು ಮಗುವಿನಿಂದಲೂ ಬಲ್ಲೆ). ಹೆಂಗಸು; ಸ್ತ್ರೀ; ಹುಡುಗಿ; (ಬ. ವ. ದಲ್ಲಿ) ಸ್ತ್ರೀ ಜಾತಿ. (ವಿಶೇಷಣವಾಗಿ) ಸ್ತ್ರೀ(ಯರ); ಹೆಣ್ಣಿನ [ಮು., P. Government (ಗೃಹಕೃತ್ಯದಲ್ಲಾಗಲಿ ರಾಜಕೀಯದಲ್ಲಾಗಲಿ) ಹೆಂಗಸಿನ ಆಳಿಕೆ; ಸ್ತ್ರೀ ಪ್ರಭುತ್ವ]. **Pétticoated** (ಗು.); **Pétticoatless** (ಗು.)

Péttifog ಪೆಟಿಫಾಗ್ (ಕ್ರಿ. ಅಕ.) ಕಾನೂನಿನ ವಿಚಾರದಲ್ಲಿ ಕುಯುಕ್ತಿ, ಕುವಾದ, ಮಿಥ್ಯಾ ವಿವಾದ, —ನಡಸು. ಸರಿಯಾಗಿ ಅರ್ಥವಾಗ ದಂತೆ ಮಾತು ಜೋಡಿಸು; ಸಣ್ಣಪುಟ್ಟ ವಿಷಯಗಳಲ್ಲಿ ಕಚ್ಚಾಡು. **Péttifogger** (ನಾ.) ಅಲ್ಪ ವಿವಾದಿ; ಕೀಟಲೆ, ತರಲೆ, ಗಂಟು, —ರಾಯರು. (ಯಾವುದಾದರೂ ಕಾರ್ಯ ಶಾಖೆಯಲ್ಲಿ) ಅಲ್ಪ ಕಾರ್ಯ ಕರ್ತ. **Péttifoggery** (ನಾ.); **Péttifogging** (ನಾ.)

Péttish, etc. **Pet**[2] ನೋಡಿ.

Pétto (It.) ಪೆಟ್ಟೊ (ನಾ.) ಎದೆ [ಮು., In p. ತನ್ನ ಎದೆಯಲ್ಲಿ; ಗುಟ್ಟಿನಲ್ಲಿ; ಅಂತರಂಗದಲ್ಲಿ; ಚಿಂತನೆಯಲ್ಲಿ; ಮನಸ್ಸಿನಲ್ಲಿ (ಉದಾ., I have a good subject for a work of fiction in petto)]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pétty ಪೆಟಿ (ಗು.) ಗುರುತ್ವವಿಲ್ಲದ; ವಿಶೇಷತೆಯಿಲ್ಲದ; ಅಮುಖ್ಯ; ಸಣ್ಣ; ಕ್ಷುದ್ರ; ಕ್ಷುಲ್ಲಕ; ಅಲ್ಪ; ಹುಲು; ಪುಟ್ಟ; ಚಿಲ್ಲರೆ; ಕೀಳ್ತರದ; ಅಲ್ಪ ಮನಸ್ಸಿನ; ಸಣ್ಣತನದ; ಹಲ್ಕ; ತುಚ್ಛ; ಕೆಳದರ್ಜೆಯ [P. princes, farmers ಸಣ್ಣಪುಟ್ಟ ದೊರೆಗಳು, ರೈತರು. P. cash (ಆಯದ ಅಥವಾ ವ್ಯಯದ) ಚಿಲ್ಲರೆ ಪಲ್ಲರೆ (ಹಣದ) ಬಾಬುಗಳು; ಕೈಗಾವಲು ಚಿಲ್ಲರೆ. P. jury, larceny, session (ಆಯಾ ಪದ ವನ್ನು ನೋಡಿ)]. **Péttily** (ಕ್ರಿ. ವಿ.); **Péttiness** (ನಾ.)

Pétulant ಪೆಟ್ಯುಲಂಟ್ (ಗು.) ಮುಂಗೋಪದಿಂದ ತಾಳ್ಮೆಯಿಲ್ಲದ, ಕೆರಳುವ; ರೇಗುವ (ಸ್ವಭಾವದ); ಸಿಡುಕಿನ. **Pétulantly** (ಕ್ರಿ. ವಿ.); **Pétulance** (ನಾ.)

Petúnia ಪಿಟ್ಯೂನಿಯ (ನಾ.) ಪನ್ನಾಲೆಯಾಕಾರದ ಬಿಳಿಯ, ನೇರಿಳೆಯ ಅಥವಾ ಧೂಮ್ರ ವರ್ಣದ ಹೂವು ಬಿಡುವ ಒಂದು ಸಸ್ಯ. ದಟ್ಟ ನೇರಿಳೆ ಬಣ್ಣ; ಧೂಮ್ರ ವರ್ಣ (ಸಾ., ವಿಶೇಷಣವಾಗಿ)

Petúntse ಪೆಟುಂಟ್ಸೆ, ಪಿಟುಂಟ್ಸೆ (ನಾ.) (ಚೀಣಾದಲ್ಲಿ ಪಿಂಗಾಣಿ ಸಾಮಾನು ಮಾಡಲು ಉಪಯೋಗಿಸುವ) ಒಂದು ತೆರದ ಬಿಳಿ ಮಣ್ಣು.

Pew ಪ್ಯೂ (ನಾ., ಕ್ರಿ. ಸಕ.) ಒಂದು ಕುಟುಂಬದವರಿಗಾಗಲಿ ಇತರರಿ ಗಾಗಲಿ ಕ್ರೈಸ್ತ ದೇವಾಲಯದಲ್ಲಿ ಪ್ರತ್ಯೇಕವಾಗಿಟ್ಟಿರುವ (ಸಾ., ಎತ್ತರಿಸಿ ಸುತ್ತುಗಟ್ಟು ಹಾಕಿ ಮಾಡಿರುವ) ಸ್ಥಳ (=Family p.); ಪ್ರತ್ಯೇಕ ಪೀಠಾವರಣ. (ಕ್ರೈಸ್ತ ದೇವಾಲಯದಲ್ಲಿ) ಒರಗುಬೆನ್ನಿನ ನೆಟ್ಟ ಬೆಂಚು. [P.-rent (ಕ್ರೈಸ್ತ ದೇವಾಲಯದಲ್ಲಿ) ಪ್ರತ್ಯೇಕ ಪೀಠಾವರಣಕ್ಕೆ ಅಥವಾ ಪೀಠಗಳಿಗೆ ಕೊಡಬೇಕಾದ ಬಾಡಿಗೆ]. (ಕ್ರಿ.) ಪೀಠಾವರಣಗಳನ್ನು ಏರ್ಪಡಿಸು, ಒದಗಿಸು; ಪೀಠಾವರಣದಲ್ಲಿ ಸೇರಿಸು. **Pewage** (ನಾ.) ಪ್ರತ್ಯೇಕ ಪೀಠ ವ್ಯವಸ್ಥೆ; ಪ್ರತ್ಯೇಕ ಪೀಠದ ಬಾಡಿಗೆ. **Pewless** (ಗು.)

Péwit, Peéwit ಪೀವಿಟ್, ಪ್ಯೂಇಟ್ (ನಾ.) ಟಿಟ್ಟಿಭ (ಪಕ್ಷಿ); ಕೋಯಪ್ಪಿಕ; ಇದರ ಕೂಗು.

Pewter ಪ್ಯೂಟರ್ (ನಾ.) (ತವರ ಮತ್ತು ಸೀಸ ಅಥವಾ ಇತರ ಲೋಹ ಮಿಶ್ರಣದ) ಬೂದು ಬಣ್ಣದ ಮಿಶ್ರ ಲೋಹ: 'ಪ್ಯೂಟರ್'; ಇದರಿಂದ ಮಾಡಿದ ಪಾತ್ರೆ ಪದಾರ್ಥಗಳು; ಪ್ಯೂಟರಿನ ಕೊಳಗಪಾತ್ರೆ. (ಅಸಂ.) ಬಹುಮಾನದ ಬಟ್ಟಲು, ಹಣ.

Pfénnig, -ing ಫ್ಛೆನಿಗ್, —ನಿಂಗ್ (ನಾ.) $\frac{1}{8}$ ಪೆನಿ ಬೆಲೆಯ ಜರ್ಮನಿಯ ಒಂದು ತಾಮ್ರದ ನಾಣ್ಯ.

Phaéton ಫೇಟನ್, ಫೇಯ್‌ಟನ್ (ನಾ.) ಸಾ., ಜೋಡು ಕುದುರೆ ಕಟ್ಟುವ, ಮೇಲ್ಮುಚ್ಚಿಲ್ಲದ, ಹಗುರವಾದ, ನಾಲ್ಕು ಚಕ್ರದ ಸವಾರಿ ಬಂಡಿ.

Phaged(a)éna ಫ್ಯಾಜಿ(ಗಿ)ಡೀನ (ನಾ.) ಹರಡುವ ವ್ರಣ. **Phagedaénic, -dénic** (ಗು.)

Phágocyte ಫ್ಯಾಗೊಸೈಟ್ (ನಾ.) (ರಕ್ತಗತವಾಗುವ ವಿಷಾಣುಗಳನ್ನು ನುಂಗಿ ಜೀರ್ಣಮಾಡಿ ರೋಗ ಸೋಕದಂತೆ ಮನುಷ್ಯನ ದೇಹಸ್ಥಿತಿಯನ್ನು ಕಾಪಾಡುವ ಶಕ್ತಿಯುಳ್ಳ) ಶ್ವೇತ ರಕ್ತಕಣ.

-phagous (ಸಮಾಸದಲ್ಲಿ) —ತಿನ್ನುವ; —ಭಕ್ಷಕ (ಉದಾ., Anthropophagous)

Phálange ಫ್ಯಾಲ್ಯಂಜ್ (ನಾ.). **Phalanx** ನೋಡಿ.

Phalángeal ಫಲ್ಯಾಂಜಿಯರ್ (ಗು.) (ಅಂ. ರ. ಶಾ.) (ಕೈಯ ಅಥವಾ ಕಾಲಿನ) ಬೆರಳೆಲುಬಿನ.

Phalánger ಫಲ್ಯಾಂಜರ್ (ನಾ.) ವೃಕ್ಷವಾಸಿಯಾದ ಹೊಟ್ಟೆಚೀಲವುಳ್ಳ ಆಸ್ಟ್ರೇಲಿಯದ ಹಲವು ಬಗೆಯ ಪ್ರಾಣಿಜಾತಿ (ಉದಾ., Flying Squirrel or Opossum)

Phálanstery ಫ್ಯಾಲ್ಯನ್‌ಸ್ಟೆರಿ (ನಾ.) ಫ್ರಾನ್ಸಿನ ಫೂರ್ಯೇ (Fourier) ಎಂಬಾತನ ತತ್ತ್ವದಮೇಲೆ ಸ್ಥಾಪಿಸಿದ ಒಂದು ಸಮತಾವಾದಿ ಸಂಸ್ಥೆ; ಇದರ ಕಟ್ಟಡಗಳು. **Phalanstérian** —ಸ್ಟೀರಿಯನ್ (ಗು., ನಾ.)

Phálanx ಫ್ಯಾಲ್ಯಂಕ್ಸ್ (ನಾ.; ಬ. ವ. -nxes, phalánges —ಜೀಸ್) (ಗ್ರೀಕ್ ಪ್ರಾಚೀನ) (ಯುದ್ಧ) ಪಂಕ್ತಿ ವ್ಯೂಹ (ಮು., ಒತ್ತಾಗಿ ವ್ಯೂಹಗೂಡಿಸಿದ ಮ್ಯಾಸಿಡೋನಿಯದ ಕಾಲ್ಬಲದ ತಂಡ). ಯಾವುದಾದರೂ ಸಮಾನೋದ್ದೇಶಕ್ಕಾಗಿ ಒಟ್ಟುಗೂಡಿದ ಜನ ತಂಡ. (ಫ್ರಾನ್ಸಿನ ಫೂರ್ಯೇ ಎಂಬಾತನ ಸಲಹೆಯಂತೆ ಸ್ಥಾಪಿಸಿದ, ಸು. ೧೮೦೦ ಮಂದಿಯುಳ್ಳ) ಒಂದು ಸಮತಾವಾದಿ ಪಂಗಡ. (ಅಂ. ರ. ಶಾ.) (ಕೈಯ ಅಥವಾ ಕಾಲಿನ) ಬೆರಳೆಲುಬು (=Phálange). (ಸ. ವಿ.) (ಕೇಸರ ತಂತುಗಳಿಂದ ಒಟ್ಟುಸೇರಿಸಿದ) ಕೇಸರ ಗುಚ್ಛ.

Phállus ಫ್ಯಾಲಸ್ (ನಾ.; ಬ. ವ. -li —ಲೈ) (ಸೃಷ್ಟಿಶಕ್ತಿಯ ಚಿಹ್ನೆಯಾಗಿ ಕೆಲವು ಮತ ಪದ್ಧತಿಗಳಲ್ಲಿ ಆರಾಧಿಸುವ) ಶಿಶ್ನ. **Phállic** (ಗು.); **Pháll(ic)ism** (ನಾ.) ಶಿಶ್ನ ಪೂಜೆ.

Phánerogam ಫ್ಯಾನೆರೊಗ್ಯಾಮ್ (ನಾ.) (ಸ. ವಿ.) ಕೇಸರಗಳೂ ಶಲಾಕೆಗಳೂ ಉಳ್ಳ ಸಸ್ಯ; ಹೂವು ಬಿಡುವ ಸಸ್ಯ; ಸ್ಫುಟ ಪುಷ್ಪಿ (Cryptogam ಹೋಲಿಸಿ). **Phanerogámic** (ಗು.); **Phanerógamous** —ರಾಗಮಸ್ (ಗು.)

Phánsigar ಫಾ(ಪಾ)ನ್ಸಿಗಾರ್ (ನಾ.) ದಗಾಖೋರ (=Thug); ಠಕ್ಕ ಎಂಬ ಕಳ್ಳರ ಪಂಗಡದವನು. (ಹಿಂದುಸ್ಥಾನಿಯಲ್ಲಿ 'ಫಾನ್ಸಿ' =ಉರುಲು)

Phántasm ಫ್ಯಾಂಟ್ಯಾಸ್ಮ್ (ನಾ.) ಭ್ರಮೆ; ಭ್ರಾಂತಿ; ಮಾಯೆ. ದೆವ್ವ; ಪ್ರೇತ. (ಒಂದರ) ಮಾಯದ ತೋರ್ಕೆ (*Of* ಉಪ. ದೊಡನೆ); ಮಾಯಾ ರೂಪ. (ಮ. ಶಾ.) (ಬದುಕಿಯೊ ಸತ್ತೊ) ಕಣ್ಣೆದುರಿಗಿಲ್ಲದವನ ತೋರ್ಕೆ; ಛಾಯೆ; ಬಿಂಬ; ಭೂತ. **Phantásmal** (ಗು.); **Phantásmally** (ಕ್ರಿ. ವಿ.); **Phantásmic** (ಗು.); **Phantasmagória** —ಗೋರಿಯ (ನಾ.) (ಲಂಡನ್ನಿನಲ್ಲಿ ೧೮೦೨ರಲ್ಲಿ ಏರ್ಪಡಿಸಿದ್ದ) ಚಿತ್ರ ವಿಚಿತ್ರ ಮಾಯಾದೀಪ ಪ್ರದರ್ಶನ. ವಾಸ್ತವಿಕ ಅಥವಾ ಕಾಲ್ಪನಿಕ ಆಕೃತಿಗಳ ದೃಶ್ಯ ಪರಂಪರೆ. **Phantasmagóric** —ಗಾರಿಕ್ (ಗು.)

Phantasmagória, etc. **Phantasm** ನೋಡಿ.

Phántasy ಫ್ಯಾಂಟಸಿ(ಸಿ). **Fantasy** ನೋಡಿ (Ph- ರೂಪ. ಮು., ಅಲ್ಲಿಯ ಮೊದಲನೆಯ ಅರ್ಥದಲ್ಲಿ)

Phántom ಫ್ಯಾಂಟಮ್ (ನಾ.) (ಅತಿಮಾನುಷ ವ್ಯಕ್ತಿಯ) ತೋರ್ಕೆ; ಭೂತ; ಪ್ರೇತ; ಪಿಶಾಚ; ಬರಿಯ ತೋರ್ಕೆ, ಛಾಯೆ; ವಾಸ್ತವಿಕ ವಲ್ಲದ ರೂಪ, ಆಕಾರ; ಹುಸಿ ತೋರ್ಕೆ; ಚಿತ್ತಭ್ರಾಂತಿ; ಮನಃ ಕಲ್ಪನೆ. (ವಿಶೇಷಣವಾಗಿ) ತೋರ್ಕೆಯ; ಭ್ರಾಂತಿಯ (P. tumour ಅಲ್ಪಕಾಲಿಕವಾದ ಊತ)

Pháraoh ಫೇರೊ(ಅ) (ನಾ.) ಪ್ರಾಚೀನ ಈಜಿಪ್ಟ್ ರಾಜವರ್ಗದ ಹೆಸರು; ಈಜಿಪ್ಟಿನ ದೊರೆ. P.'s serpent ಅದಕ್ಕೆ ಬೆಂಕಿ ಹೊತ್ತಿಸಿದಲ್ಲಿ ಸುಟ್ಟು ಹಾವಿನಾಕಾರದಲ್ಲಿ ಹೊರಟು ಬೂದಿಯಾಗುವ, ಆಟದ ಒಂದು ರಾಸಾಯನಿಕ ಪದಾರ್ಥ: ಹಾವುಮತಾಪು.

Phárisee ಫ್ಯಾರಿಸೀ (ನಾ.) ಸಾಂಪ್ರದಾಯಿಕವಾದ ಮತ್ತು ಲಿಖಿತವಾದ ಧರ್ಮ ಶಾಸ್ತ್ರವನ್ನು ಕಟ್ಟುನಿಟ್ಟಾಗಿ ಅನುಸರಿಸುವ ಮತ್ತು ಪವಿತ್ರತೆಯ ಅಹಂಭಾವವುಳ್ಳ ಒಂದು ಪುರಾತನ ಯೆಹೂದ್ಯ ಪಂಗಡದವನು; ಆಚಾರ ಶೀಲನೆಂಬ ಅಹಂಭಾವವುಳ್ಳವನು; ಧರ್ಮ ಪ್ರತಿಷ್ಠೆಗಾರ; ಆಚಾರ ಬದ್ಧ; ಸಂಪ್ರದಾಯ ಶರಣ; ಕರ್ಮಠ; ನೇಮಿಷ್ಠ; ಆಷಾಢಭೂತಿ; ಡಾಂಭಿಕ; ಠಕ್ಕ. **Pharisáic(al)** —ಸೇ— (ಗು.); **Pharisáically** (ಕ್ರಿ. ವಿ.); **Phárisaism** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pharmaceútical ಫಾರ್ಮಸ್ಯೂ(ಕ್ಯೂ)ಟಿಕಲ್ (ಗು.) ಔಷಧವಸ್ತುಗಳ (ತಯಾರಿಕೆಯಲ್ಲಿ ಮತ್ತು ಹಾಗೆ ತಯಾರಿಸಿದ ಔಷಧಗಳ ವಿನಿಯೋಗ ಕಾರ್ಯದಲ್ಲಿ ಪ್ರವೃತ್ತನಾದ); ಔಷಧವಸ್ತುಗಳ ಉಪಯೋಗದ ಅಥವಾ ಮಾರಾಟದ. = Of Pharmacy. **Pharmaceútically** (ಕ್ರಿ. ವಿ.); **Pharmaceútics** (ನಾ.) ಔಷಧ (ತಯಾರಿಕೆಯ ಮತ್ತು ವಿನಿಯೋಗದ) ಶಾಸ್ತ್ರ. **Pharmacólogy** —ಕಾಲೊಜಿ (ನಾ.) ಔಷಧ (ವಸ್ತು) ಶಾಸ್ತ್ರ. **Pharmacólogist** (ನಾ.); **Pharmacopoéia** —ಕೊಪೀಯ (ನಾ.) ಪ್ರಯೋಗ ಕ್ರಮ ಸಹಿತವಾದ ಔಷಧವಸ್ತುಗಳ ಪಟ್ಟಿಯುಳ್ಳ (ಮು., ಅಧಿಕಾರಯುಕ್ತ ಪ್ರಕಟನೆಯ) ಪುಸ್ತಕ; ಪ್ರಮಾಣ ಔಷಧ ಪಟ್ಟಿಕೆ; ಔಷಧಪ್ರಯೋಗ ಪದ್ಧತಿ. **Pharmacopoéial** (ಗು.); **Phármacy** ಫಾರ್ಮಸಿ (ನಾ.) ಔಷಧವಸ್ತುಗಳ ತಯಾರಿಕೆ ಮತ್ತು ವಿನಿಯೋಗ; ಔಷಧ ಸಂಗ್ರಹಾಲಯ; (ರೋಗಕ್ಕೆ) ಮದ್ದು (ಮಾಡಿ) ಕೊಡುವ ಸ್ಥಳ; ಔಷಧ (ವಿನಿಯೋಗ) ಶಾಲೆ; ಔಷಧದಂಗಡಿ.

Pharmacólogy, Pharmacopoéia, Phármacy, etc. Pharmaceutical ನೋಡಿ.

Pháros ಫೇರಾಸ್ (ನಾ.) (ನಾವಿಕರಿಗೆ ಮಾರ್ಗ ತೋರಿಸುವ) ಬೆಳಕುಮನೆ, ಗುರುತಿನ ಬೆಳಕು, ಸಂಜ್ಞಾ ಜ್ಯೋತಿ.

Pharyngítis. **Pharynx** ನೋಡಿ.

Phárynx ಫ್ಯಾರಿಂಕ್ಸ್ (ನಾ.) ಬಾಯಿಯ ಹಿಂಭಾಗದಲ್ಲಿ ನೆಲಸಿ ಮೂಗು, ಬಾಯಿ ಮತ್ತು ದನಿಪೆಟ್ಟಿಗೆ—ಇವುಗಳೊಡನೆ ದ್ವಾರ ಸಂಬಂಧವುಳ್ಳದ್ದಾಗಿಯೂ ಅನ್ನನಾಳದ ಮೇಲ್ಭಾಗವಾಗಿಯೂ ಇದ್ದು ಸ್ನಾಯುಗಳ ಆವರಣವೂ ದ್ರವಗೂಡಿದ ನಯ ಚರ್ಮವೂ ಉಳ್ಳ ಕುಹರ; ಗಂಟಲ ಕುಹರ: 'ಫ್ಯಾರಿಂಕ್ಸ್'. **Pharýngal** —ಗಲ್ (ಗು.); **Pharýngeal** —ಜಿಯಲ್ (ಗು.) ಗಂಟಲ ಕುಹರದ; —ಕ್ಕೆ ಸಂಬಂಧಪಟ್ಟ. **Pharyngítis** —ಜೈ— (ನಾ.) ಗಂಟಲ ಕುಹರದ ಉರಿಯೂತ.

Phase ಫೇಸ್ (ನಾ.) ಪ್ರಕಾಶದ ಪ್ರಮಾಣಕ್ಕನುಸಾರವಾಗಿ ಚಂದ್ರನ ಅಥವಾ ಯಾವುದಾದರೂ ಗ್ರಹದ ದೃಶ್ಯ ಭಾಗ; ಕಲೆ (ಮು., ಅಮಾವಾಸ್ಯೆ, ಹುಣ್ಣಿಮೆ, ಅಷ್ಟಮಿ—ಈ ತೇದಿಗಳ ಚಂದ್ರನ ವಿಷಯದಲ್ಲಿ). (ವ್ಯತ್ಯಾಸದ ಅಥವಾ ಬೆಳವಣಿಗೆಯ) ಮಜಲು, ಮೆಟ್ಟಲು, ಸ್ಥಿತಿ, ಅವಸ್ಥೆ, ಅವತಾರ, ಪಾಡು. (ಭೌ. ವಿ.) ಚಲನೆಯ ಅಥವಾ ವ್ಯತ್ಯಾಸದ ಪುನರಾವರ್ತ ಸರಣಿಯಲ್ಲಿ ಒಂದು ನಿರ್ದಿಷ್ಟ ನೆಲೆ (ಮು., ಪರ್ಯಾಯ ಕ್ರಮದ ವಿದ್ಯುತ್ಪ್ರವಾಹದ ವಿಷಯದಲ್ಲಿ). **Phásic** (ಗು.)

Pheásant ಫೆಸೆಂಟ್ (ನಾ.) ಒಂದು ಬಗೆಯ ಬೇಟೆಯ ಹಕ್ಕಿ; ಬಣ್ಣದ ಹಕ್ಕಿ; ಜೀವಂಜೀವ. P.-eyed (ಹೂವುಗಳ ವಿಷಯದಲ್ಲಿ) ಬಣ್ಣದ ಹಕ್ಕಿಯ ಕಣ್ಣಿನಂಥ ಕಲೆಗಳುಳ್ಳ.

Phenácetin ಫಿನ್ಯಾಸಿಟಿನ್ (ನಾ.) ಔಷಧದಲ್ಲಿ; ಮು., ಜ್ವರ ನಿವಾರಕವಾಗಿ, ಉಪಯೋಗಿಸುವ ಸ್ಫಟಿಕಾಕೃತಿಯ ಒಂದು ಬಿಳಿಯ ಪದಾರ್ಥ.

Phénol ಫೀನಾಲ್ (ನಾ.) ಕಾರ್ಬಾಲಿಕ್ ಆಮ್ಲ. **Phényl** ಫೀ(ಫೆ)ನಿಲ್ (ನಾ.) ಬೆನ್‌ಸೀನ್, ಫೀನಾಲ್, ಮೊ. ಅನೇಕ ಸಾವಯವ ದ್ರವಗಳಲ್ಲಿ ದೊರೆಯುವ ಒಂದು ಘಟಕ.

Phenólogy ಫಿನಾಲೊಜಿ (ನಾ.) ಮು., ವಾಯುಗುಣಕ್ಕೆ ಸಂಬಂಧಿಸಿದಂತೆ ಪ್ರಕೃತಿ ದೃಶ್ಯಗಳು ಅಥವಾ ಘಟನೆಗಳು ಆವರ್ತವಾಗುವ ಕಾಲಗಳನ್ನು ಕುರಿತ ಶಾಸ್ತ್ರ: ಋತುಧರ್ಮ ಶಾಸ್ತ್ರ. **Phenológical** ಫೀನೊಲಾ— (ಗು.)

Phenómenon ಫಿನಾಮೆನನ್ (ನಾ.; ಬ. ವ. -mena —ಮೆನ) ಇಂದ್ರಿಯಗೋಚರ ವಿಷಯ (ಮು., ವಿಚಾರಣೀಯ ವಿಷಯ); ಪ್ರಕೃತಿ ಘಟನೆ, ಸಂಗತಿ. (ತತ್ತ್ವ ಶಾಸ್ತ್ರ) ಇಂದ್ರಿಯ ಅಥವಾ ಮನಸ್ಸು ನೇರವಾಗಿ ಗ್ರಹಿಸುವಂಥದು; ಸಾಕ್ಷಾತ್ ಇಂದ್ರಿಯಗೋಚರ ವಿಷಯ. (ಶಿಥಿಲವಾಗಿ) ಲೋಕೋತ್ತರ, ಅಸಾಧಾರಣ, —ವ್ಯಕ್ತಿ, ವಸ್ತು, ಘಟನೆ. **Phenómenal** (ಗು.) ಇಂದ್ರಿಯಗೋಚರ ಸ್ವಭಾವದ; ಕೇವಲ ಇಂದ್ರಿಯಗೋಚರ ವಿಷಯದ; ಪ್ರಕೃತಿಯ ಗೋಚರ ವಿಷಯವಾದ. ಲೋಕೋತ್ತರವಾದ; ಅತಿಶಯ; ಅದ್ಭುತ. **Phenómenally** (ಕ್ರಿ. ವಿ.); **Phenómenalize** (ಕ್ರಿ. ಸಕ.) ಪ್ರಕೃತಿಯ ಗೋಚರ ವಿಷಯವಾಗಿ ಮಾಡು, ನಿರೂಪಿಸು. **Phenómen(al)ism** (ನಾ.) ಪ್ರಕೃತಿಯ ಗೋಚರ ವಿಷಯಗಳು ಮಾತ್ರವೇ ಜ್ಞಾನ ವಿಷಯಗಳೆಂಬ ವಾದ: ಪ್ರಕೃತಿಯ ಗೋಚರಾನುಭವ ವಾದ. **Phenómen(al)ist** (ನಾ.); **Phenomen(al)ístic** (ಗು.)

Phényl. **Phenol** ನೋಡಿ.

Phew ಫ್ಯೂ (ಭಾವ. ಅವ್ಯ.) (ಅಸಹನೆ, ಅಸಹ್ಯ, —ಸೂಚಿಸುವ ಪದ) ಫ್ಯೂ! ಥೂ!

Phi ಫೈ (ನಾ.) ಗ್ರೀಕ್ ಅಕ್ಷರ (Φ, φ): ಫ್.

Phíal ಫೈಅಲ್ (ನಾ.) (ಮು., ದ್ರವ ಔಷಧಕ್ಕಾಗಿರುವ) ಸಣ್ಣ ಗಾಜು ಸೀಸೆ.

-phil —ಫಿಲ್, **-phile** —ಫೈಲ್ (ಉ. ಪ್ರ.) —ಪ್ರೇಮಿ, —ಪ್ರಿಯ. **Bibliophil(e)** ಗ್ರಂಥ ಪ್ರೇಮಿ. **Russophil(e)** ರಷ್ಯನ್ ಪ್ರೇಮಿ. **Gastrophil(e)** ಭೋಜನ ಪ್ರಿಯ. (ಗ್ರೀಕಿನ ಅಂಕಿತನಾಮಗಳಲ್ಲಿ: Diphilos ಸ್ಯೂಸ್ ದೇವತೆಗೆ ಪ್ರಿಯ)

Philánder ಫಿಲ್ಯಾಂಡರ್ (ಕ್ರಿ. ಅಕ.) ಪ್ರಣಯ ಮಾಡು (ಮು., ಕೇವಲ ವಿಲಾಸಕ್ಕಾಗಿ, ಹುಡುಗಾಟಿಕೆಯ ರೀತಿಯಲ್ಲಿ). ಹೆಂಗಸಿನ ಹಿಂದೆ ಅಲೆದಾಡು, ಒಲೆದಾಡು. **Philánderer** (ನಾ.) ಸ್ತ್ರೀ ವಿಲಾಸಿ.

Philánthropy ಫಿಲ್ಯಾಂತ್ರೊಪಿ (ನಾ.) ಮಾನವ ಪ್ರೇಮ; ಲೋಕ ಪ್ರೀತಿ; ಜನೋಪಕಾರ (ಶೀಲತೆ); ದಾನ ಧರ್ಮ. **Phílanthrope** ಫಿಲ್ಯಂತ್ರೋಪ್ (ನಾ.) = Philanthropist. **Philanthrópic** ಫಿಲ್ಯಂತ್ರಾಪಿಕ್ (ಗು.) ಜನ ಪ್ರೀತಿಯುಳ್ಳ; ಉಪಕಾರ ಬುದ್ಧಿಯುಳ್ಳ; ದಾನ ಶೀಲನಾದ; ದಯಾಪರನಾದ. **Philanthrópically** (ಕ್ರಿ. ವಿ.); **Philánthropist** ಫಿಲ್ಯಾಂತ್ರೊಪಿಸ್ಟ್ (ನಾ.) ಮಾನವ ಪ್ರೇಮಿ; ಲೋಕೋಪಕಾರಿ; ಮಾನವ ಹಿತಾಕಾಂಕ್ಷಿ; ಲೋಕ ಹಿತೈಷಿ. **Philánthropism** (ನಾ.); **Philánthropize** (ಕ್ರಿ.) ಲೋಕೋಪಕಾರ ಮಾಡು; ಮಾನವ ಪ್ರೇಮ ತೋರು; (ಜನರನ್ನು) ಉಪಕೃತರನ್ನಾಗಿ ಮಾಡು; ಮಾನವ ಪ್ರೇಮಿಯನ್ನಾಗಿ, ದಯಾಪರನನ್ನಾಗಿ, ಪರೋಪಕಾರಿಯನ್ನಾಗಿ, —ಮಾಡು.

Philátely ಫಿಲ್ಯಾಟಿಲಿ (ನಾ.) ಅಂಚೆಯ ತರಚೀಟಿಗಳ ಸಂಗ್ರಹಣ; ಸ್ಟ್ಯಾಂಪು ಕೂಡಹಾಕುವುದು. **Philatélic** ಫಿಲಟೆಲಿಕ್ (ಗು.); **Philátelist** ಫಿಲ್ಯಾಟೆಲಿಸ್ಟ್ (ನಾ.)

Philharmónic ಫಿಲ್‌ಹಾರ್ಮಾನಿಕ್ (ಗು., ನಾ.) ಸಂಗೀತ ಪ್ರೇಮವುಳ್ಳ (ವನು); —ಪ್ರೇಮಿ; ಗಾನ ಲೋಲ.

Phílhellene ಫಿಲ್‌ಹೆಲೀನ್ (ಗು., ನಾ.) ಗ್ರೀಕರನ್ನು ಪ್ರೀತಿಸುವ(ವನು) ಅಥವಾ ಗ್ರೀಕರಿಗೆ ಸ್ನೇಹಪರನಾದ(ವನು) ಅಥವಾ ಗ್ರೀಕ್ ಸ್ವಾತಂತ್ರ್ಯದ ಧ್ಯೇಯಕ್ಕೆ ಬೆಂಬಲಕೊಡುವ(ವನು). **Philhellénic** —ಹೆಲೀ(ಲೆ)ನಿಕ್ (ಗು.); **Philhéllenism** —ಹೆಲನಿಸ್‌ಮ್ (ನಾ.); **Philhéllenist** (ನಾ.)

Philíppi ಫಿಲಿಪ್ಪೈ(ಪಿ) (ನಾ.) ಕ್ರಿ. ಪೂ. ೪೨ರಲ್ಲಿ ಯುದ್ಧ ನಡೆದ ಒಂದು ಗ್ರೀಕ್ ರಣರಂಗ. Thou shalt see me at P. Meet at P. (ಮುಯ್ಯಿ ತೀರಿಸಿಕೊಳ್ಳುವ ಬೆದರಿಕೆಯ ಮಾತು). (ಷೇಕ್ಸ್‌ಪಿಯರ್ ಕವಿಯ 'ಜೂಲಿಯಸ್ ಸೀಸರ್' ಎಂಬ ನಾಟಕದಲ್ಲಿಯ ಪ್ರಸಂಗದಿಂದ)

Phillípic ಫಿಲಿಪಿಕ್ (ನಾ.) (ಬ. ವ. ದಲ್ಲಿ) (ಗ್ರೀಕ್) ಡಿಮಾಸ್ತೆನೀಸ್ ಎಂಬ ಪ್ರಸಿದ್ಧ ಗ್ರೀಕ್ ವಕ್ತಾರನು ಮ್ಯಾಸಿಡಾನ್ ದೊರೆಯಾದ ಫಿಲಿಪ್ಪನ್ನು ಖಂಡಿಸಿ ಬರೆದ, ಹೇಳಿದ, ವಾಕ್ಪ್ರಬಂಧಗಳು, ಮಹಾಭಾಷಣಗಳು; ಪ್ರಸಿದ್ಧ ರೋಮನ್ ವಕ್ತಾರನೂ ರಾಜತಂತ್ರಜ್ಞನೂ ಆದ ಸಿಸಿರೋ ರೋಮನ್ ಸೇನಾನಾಯಕನಾದ ಆ್ಯಂಟೊನಿಯನ್ನು ಖಂಡಿಸಿ ಬರೆದ ವಾಕ್ಪ್ರಬಂಧಗಳು. ಕಟು ನಿಂದೆಯ, ತೀಕ್ಷ್ಣ ಖಂಡನೆಯ, ದ್ವೇಷ ಕಾರುವ, —ಭಾಷಣ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Phílistine ಫಿಲಿಸ್‌ಟೈ(ಟಿ)ನ್ (ನಾ., ಗು.) ದ. ಪ್ಯಾಲೆಸ್ಟೈನಿನಲ್ಲಿ ಯೆಹೂದ್ಯರನ್ನು ಕಾಡಿದ ಯುದ್ಧಪ್ರಿಯರಾದ ಒಂದು ಅನ್ಯ ಜನಾಂಗದ (ಪ್ರಜೆ). (ಹಾಸ್ಯ ಪ್ರ.) ತನ್ನನ್ನು ಸಿಕ್ಕಿಸಿಕೊಳ್ಳಬಹುದಾದ ಶತ್ರು (ಉದಾ., ದಂಡಾಧಿಕಾರಿ, ಕೋರ್ಟಿನ ಅಮೀನ, ವಿಮರ್ಶಕ, ಮೊ. ರು). (ಜರ್ಮನ್ ವಿ. ವಿ. ನಿ. ಗಳ ಪ್ರ.) ವಿದ್ಯಾರ್ಥಿಯಲ್ಲದವನು, ಹೊರಗಿನವನು. ಸಂಸ್ಕೃತಿ ವೈರಿ; ಶುಷ್ಕ ಹೃದಯ; ಕೇವಲ ಪ್ರಾಪಂಚಿಕ. (ಗು.) ಅರಸಿಕ; ಸಾಮಾನ್ಯ; ನೀರಸ. **Phílistinism** (ನಾ.)

Philo- ಫಿಲೊ— (ಸ. ಪೂ. ಪ.) (ಸ್ವರ ಅಥವಾ 'h' ಪರವಾದಾಗ Phil-) —ಪ್ರೇಮಿ; —ಸ್ನೇಹಿ. **-bíblic** ಪುಸ್ತಕ ಪ್ರೇಮಿ, ಸಾಹಿತ್ಯ ಪ್ರೇಮಿ. **-gynist** (—ಲಾಜಿ—) ಸ್ತ್ರೀ ಪ್ರೇಮಿ. **-math** ವಿದ್ಯಾ ಪ್ರೇಮಿ (ಮು., ಗಣಿತಶಾಸ್ತ್ರ ಪ್ರೇಮಿ). **-progénitive** ಬಹು ಸಂತಾನಿ; (ಮಸ್ತಿಷ್ಕ ಶಾಸ್ತ್ರ) ತನ್ನ ಮಕ್ಕಳನ್ನು ಪ್ರೀತಿಸುವ; ಸಂತಾನ ಪ್ರೇಮವುಳ್ಳ. **-progénitiveness** (ನಾ.). **-téchnic** (ಮು., ಕೈಗಾರಿಕೆಯ) ಕಲಾಪ್ರೇಮವುಳ್ಳ.

Philólogy ಫಿಲಾಲೊಜಿ (ನಾ.) ಭಾಷಾ ಶಾಸ್ತ್ರ; (ಈಗ ವಿರ. ಪ್ರ.) ವಿದ್ಯಾ ಪ್ರೇಮ, ಸಾಹಿತ್ಯ ಪ್ರೇಮ. **Philóloger** (ನಾ.) = **Philológian** (ನಾ.) = **Philólogist** (ನಾ.) (ವಿರ. ಪ್ರ.) ಭಾಷಾ ಶಾಸ್ತ್ರಜ್ಞ. ಸಾಹಿತ್ಯ ವ್ಯವಸಾಯಿ; (ಸಾ., ಪುರಾತನ ಸಂಸ್ಕೃತಿಯ) ವಿದ್ವಾಂಸ, ಪಂಡಿತ. **Philológical** (ಗು.); **Philólogically** (ಕ್ರಿ. ವಿ.); **Philólogize** (ಕ್ರಿ. ಅಕ.) ಭಾಷಾ ಪರಿಶೋಧನೆ ಮಾಡಿ ಪ್ರತಿಪಾದಿಸು; ಭಾಷಾ ಶಾಸ್ತ್ರ ವ್ಯಾಸಂಗ ಮಾಡು; —ದಲ್ಲಿ ಪರಿಶೋಧನೆ ಮಾಡು.

Phílomel ಫಿಲೊಮೆಲ್, **-méla** —ಮಿಾಲ (ನಾ.) (ಕಾವ್ಯ) ಬುಲ್‌ಬುಲ್ ಹಕ್ಕಿ.

Philósophy ಫಿಲಾಸೊಫಿ (ನಾ.) ಜ್ಞಾನ ಪ್ರೇಮ (ಮು., ಮೂಲ ತತ್ತ್ವಾಂಶವನ್ನು ಕುರಿತದ್ದು, ಅಥವಾ ವಸ್ತು ವಿಷಯಗಳ ಅತ್ಯಂತ ವ್ಯಾಪನೆಯುಳ್ಳ ಕಾರಣಗಳನ್ನೂ ತತ್ತ್ವಗಳನ್ನೂ ಕುರಿತದ್ದು); ತತ್ತ್ವ ಜಿಜ್ಞಾಸೆ; ತತ್ತ್ವ ಪರಿಶೀಲನೆ; ತತ್ತ್ವ ಶಾಸ್ತ್ರ; ದರ್ಶನ (Natural p. ಪ್ರಕೃತಿ ವಸ್ತುಗಳ ಮತ್ತು ದೃಶ್ಯಗಳ ಸಂಬಂಧವಾದ ಜ್ಞಾನ: ಪ್ರಕೃತಿ ಶಾಸ್ತ್ರ. Moral p. ಮಾನವ ವ್ಯಾಪಾರದ ಅಥವಾ ನಡತೆಯ ತತ್ತ್ವಗಳನ್ನು ಕುರಿತ ಜ್ಞಾನ: ನೀತಿ ಶಾಸ್ತ್ರ). (ಬ. ವ. ಜೊತೆ) ದರ್ಶನ ಪದ್ಧತಿ. ಜೀವನ ಪದ್ಧತಿ; ಧರ್ಮ ಶಾಸ್ತ್ರ. ಶಾಂತತೆ; ವೈರಾಗ್ಯ. **Philósopher** —ಸೊಫರ್ (ನಾ.) ಜ್ಞಾನ ಪ್ರೇಮಿ; ತತ್ತ್ವ ಜ್ಞಾನಿ; ಜಿಜ್ಞಾಸು; ತಾತ್ತ್ವಿಕ (Natural p. ಪ್ರಕೃತಿ ತತ್ತ್ವ ಶಾಸ್ತ್ರಜ್ಞ. Moral p. ನೀತಿ ತತ್ತ್ವ ಶಾಸ್ತ್ರಜ್ಞ, ಧರ್ಮ ಶಾಸ್ತ್ರಜ್ಞ). ತತ್ತ್ವಶಾಸ್ತ್ರಕ್ಕನುಸಾರವಾಗಿ ಜೀವನ ನಡಸುವವನು; ತತ್ತ್ವಾನುಸಾರಿ; ಪಾರಮಾರ್ಥಿಕ; ದಾರ್ಶನಿಕ; ಬಿಕ್ಕಟ್ಟಿನ ಸನ್ನಿವೇಶಗಳಲ್ಲಿ ಶಾಂತ ಮನಸ್ಸಿನಿಂದಿರುವವನು. [Philosophers' (-er's ಅಲ್ಲ) stone (ರಸ ವಾದದ ಪರಮೋದ್ದೇಶ: ಇತರ ಲೋಹಗಳನ್ನು ಚಿನ್ನ ಅಥವಾ ಬೆಳ್ಳಿಯನ್ನಾಗಿ ಮಾಡುವುದೆಂದು ನಂಬುತ್ತಿದ್ದ) ಸ್ಪರ್ಶ ಮಣಿ, ಸ್ಪರ್ಶ ವೇದಿ]. **Philosóphic(al)** ಫಿಲೊಸಾ— (ಗು.) ತತ್ತ್ವಶಾಸ್ತ್ರದ. ವಿವೇಕಿಯಾದ; ಜ್ಞಾನಿಯಾದ; ಶಾಂತನಾದ; ರಾಗ ದ್ವೇಷಗಳಿಲ್ಲದ; ಸಮಚಿತ್ತನಾದ; ಸಮದರ್ಶಿಯಾದ. **Philosóphically** (ಕ್ರಿ. ವಿ.); **Philósophism** (ನಾ.) ಫಿಲಾಸೊ— (ನಾ.) ತಾತ್ತ್ವಿಕತೆ (ಸಾ., ತಿರಸ್ಕಾರ ಪ್ರ.; ಮು., ಫ್ರೆಂಚ್ ವಿಶ್ವಜ್ಞಾನಿಗಳ ವಿಷಯದಲ್ಲಿ). **Philósophist** (ನಾ.) ತಾತ್ತ್ವಿಕಾಭಾಸಿ; ಮಿಥ್ಯಾ ತಾತ್ತ್ವಿಕ; ತತ್ತ್ವಜ್ಞನಂತೆ ತೋರಿಸಿಕೊಳ್ಳುವವನು; ತತ್ತ್ವ ವಿಚಾರಗಳಲ್ಲಿ ಹುರುಳಿಲ್ಲದವನು. **Philósophize** (ಕ್ರಿ.) ತತ್ತ್ವಶಾಸ್ತ್ರಜ್ಞನಂತೆ, ತಾತ್ತ್ವಿಕನಂತೆ, ದಾರ್ಶನಿಕನಂತೆ, —ವರ್ತಿಸು; ತಾತ್ತ್ವಿಕ ದೃಷ್ಟಿಯಿಂದ ನೋಡು; ತತ್ತ್ವವಿಚಾರ ಮಾಡು; ತತ್ತ್ವಕ್ಕೆ ಇಳಿಸು; ನೀತಿ ದೃಷ್ಟಿಯಿಂದ ನೋಡು; ತಾತ್ತ್ವಿಕ, ದಾರ್ಶನಿಕ, —ಮಾಡು; ತತ್ತ್ವಚಿಂತನೆ ಮಾಡು.

Phíltre, -ter ಫಿಲ್ಟರ್ (ನಾ.) ಸಾ., ಒಬ್ಬ ವ್ಯಕ್ತಿಯಮೇಲೆ ಕಾಮೋದ್ರೇಕವುಂಟುಮಾಡುವ ಅಥವಾ ಒಬ್ಬ ವ್ಯಕ್ತಿಯ ವಶೀಕರಣಕ್ಕಾಗಿ ಉಪಯೋಗಿಸುವ ಮದ್ದು ಅಥವಾ ಯಂತ್ರ; ವಶೀಕರಣದ ಮದ್ದು.

Phiz ಫಿಸ್ (ನಾ.) (ಬಳ. ಮಾ.) ಮುಖ (ಭಾವ) (Physiognomy ಎಂಬುದರ ಸಂಕ್ಷಿಪ್ತ)

Phlebítis ಫ್ಲಿಬೈಟಿಸ್ (ನಾ.) ಅಭಿಧಮನಿಯ ಗೋಡೆಗಳ ಉರಿಯೂತ. **Phlebític** (ಗು.); **Phlebótomy** ಫ್ಲಿಬಾಟೊಮಿ (ನಾ.) (ವೈದ್ಯ ಚಿಕಿತ್ಸೆಯಾಗಿ) (ಅಭಿಧಮನಿಯನ್ನು ಕೊಯ್ದು) ರಕ್ತ ಹೊರ ಹರಿಸುವುದು; ರಕ್ತ ಸ್ರಾವಣ. **Phlebótomize** (ಕ್ರಿ.) (ವೈದ್ಯ ಚಿಕಿತ್ಸೆಯಾಗಿ) ರಕ್ತ ಹೊರ ಹರಿಸು; (ಮನುಷ್ಯನಿಂದ, ದೇಹ ಭಾಗದಿಂದ) ರಕ್ತ ಹೊರ ಹರಿಸು. **Phlebótomist** (ನಾ.)

Phlegm ಫ್ಲೆಮ್ (ನಾ.) ದೇಹದೊಳಗಿನ ತೇವಗೂಡಿದ ಸೂಕ್ಷ್ಮ ಚರ್ಮದಲ್ಲಿ ತಯಾರಾಗಿ ಒಸರುವ, ಮಂದವೂ ಜಿಗುಟೂ ಆದ ಲೋಳೆ (ರೋಗ ಸಂದರ್ಭದಲ್ಲಿ ಅಥವಾ ಸ್ರಾವ ಹೆಚ್ಚಿದಾಗ ಕೆಮ್ಮು, ಮೊ. ಗಳ ಮೂಲಕ ಹೊರದೂಡಲಾಗುವುದು): ಶ್ಲೇಷ್ಮ, ಕಫ (ಹಿಂದೆ ನಾಲ್ಕು ಶರೀರ ರಸ ಧಾತುಗಳಲ್ಲೊಂದೆಂದು ಎಣಿಸಲಾಗಿತ್ತು) [**Phlégmy** (ಗು.)]. ಶಾಂತತೆ; ಅಲಸತೆ, ಉದಾಸೀನತೆ; ತಾತ್ಸಾರ; ಜಡತೆ (ದೇಹ ಪ್ರಕೃತಿಯಲ್ಲಿ ಶ್ಲೇಷ್ಮ ಹೆಚ್ಚಾಗಿರುವುದರ ಫಲವೆಂದು ಊಹೆ). **Phlegmátic** ಫ್ಲೆಗ್‌ಮ್ಯಾಟಿಕ್ (ಗು.); **Phlegmátically** (ಕ್ರಿ. ವಿ.)

Phlégmon ಫ್ಲೆಗ್‌ಮನ್ (ನಾ.) ಉರಿಯೂತದ ಗಡ್ಡೆ, ಕುರು. **Phlegmónic** —ಮಾ— (ಗು.) = **Phlégmonous** (ಗು.)

Phlóem ಫ್ಲೋಎಮ್ (ನಾ.) (ಸ. ವಿ.) (ಮೇಲುಜಾತಿಯ ಮರಗಳ ತೊಗಟೆಯಲ್ಲಿ ರಸನಾಳಗಳುಳ್ಳ ನಾರಿನಿಂದ ಕೂಡಿದ) ಮೆತುವಾದ ಒಳ ತೊಗಟೆ (ಗಟ್ಟಿ ಹೊರ ತೊಗಟೆಯಲ್ಲ)

Phlogíston ಫ್ಲೊಜಿ(ಗಿ)ಸ್ಟನ್ (ನಾ.) (ದಾಹ್ಯ ಪದಾರ್ಥಗಳಲ್ಲಿರುವುದೆಂದು ಹಿಂದೆ ಊಹಿಸಿದ್ದ) ದಹನ ತತ್ತ್ವ, ಜ್ವಲನ ಧಾತು. **Phlogístic** (ಗು.) ದಹನ ತತ್ತ್ವದ. (ವೈ. ಶಾ.) ಉರಿಯೂತದ.

Phlox ಫ್ಲಾಕ್ಸ್ (ನಾ.) ತಟ್ಟೆಯಾಕಾರದ ಹಲವು ಬಣ್ಣದ ಹೂಗೊಂಚಲು ಬಿಡುವ ಒಂದು ಸಸ್ಯಜಾತಿ: 'ಫ್ಲಾಕ್ಸ್'.

-phobe —ಫೋಬ್ (ಉ. ಪ್ರ.) —ಹೆದರುವ(ವನು); —ಭೀತ; (ಉದಾ., Hydrophobe, Anglophobe, Russophobe). **-phobia** —ಫೋಬಿಯ (ಉ. ಪ್ರ.) —ಭಯ; —ಭೀತಿ; —ಹೆದರಿಕೆ (ಉದಾ., Hydrophobia, Anglophobia)

Phoébus ಫೀಬಸ್ (ನಾ.) ಗ್ರೀಕರ ಸೂರ್ಯ ದೇವತೆ. (ಕಾವ್ಯ) ಸೂರ್ಯ.

Phoenícian ಫಿನಿಷ್ಯ(ಷ್, ಷ)ನ್ (ಗು., ನಾ.) ಫಿನಿಷಿಯದ(ವನು); ಫಿನಿಷಿಯದ ನೆಲಸು ನಾಡಿನ(ವನು). ಕಾರ್ತೇಜಿನ(ವನು) (ಸಿರಿಯಾ ದೇಶದ ಸಮುದ್ರ ತೀರದ ಒಂದು ಭಾಗಕ್ಕೆ ಪುರಾತನ ಹೆಸರಾದ Phoenicia ಎಂಬುದರಿಂದ)

Phoénix, Phé- ಫೀನಿಕ್ಸ್ (ನಾ.) (ಪುರಾಣ) ಐದಾರು ಶತಮಾನಗಳ ಕಾಲ ಅರೇಬಿಯದ ಮರಳುಗಾಡಿನಲ್ಲಿ ಜೀವಿಸಿದ್ದು, ಚಿತಿಮಾಡಿ ಅದರಲ್ಲಿ ಸುಟ್ಟುಹೋಗಿ, ಆ ಬೂದಿಯಿಂದ ಮತ್ತೆ ಹೊಸ ಪ್ರಾಯ ತಾಳಿ ಮತ್ತೊಂದು ಕಾಲಚಕ್ರ ಜೀವಿಸಿರಲು ಹುಟ್ಟುತ್ತಿದ್ದಿತೆಂದು ಹೇಳುವ ಏಕಮಾತ್ರದ ಪಕ್ಷಿ: 'ಫೀನಿಕ್ಸ್' ಪಕ್ಷಿ. (ರೂಪ.) ಆದರ್ಶ, ಪರಮೋತ್ಕೃಷ್ಟ, —ವ್ಯಕ್ತಿ, ವಸ್ತು.

Phónate ಫೋನೇಟ್ (ಕ್ರಿ. ಅಕ.) (ಶ್ವಾಸನಾಳ ದ್ವಾರದಲ್ಲಿ) (ಬರಿಯ) ಧ್ವನಿ ಮಾಡು (ಸಾ., Articulate ಎಂಬುದಕ್ಕೆ ಎದುರು ಪದವಾಗಿ). **Phonátion** (ನಾ.); **Phónatory** (ಗು.)

Phonaútograph ಫೋನಾಟೊಗ್ರಾಫ್ (ನಾ.) ಧ್ವನಿ ಕಂಪನಗಳನ್ನು ತಾನಾಗಿ ರೇಖಿಸಿಡುವ ಒಂದು ಸಲಕರಣೆ: ಧ್ವನಿ ಸ್ವಯಂಲೇಖಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Phone[1] ಫೋನ್ (ನಾ., ಕ್ರಿ.) (ಬಳ. ಮಾ.) =Telephone (ಎಂಬುದರ ಸಂಕ್ಷಿಪ್ತ)

Phone[2] ಫೋನ್ (ನಾ.) ಸರಳ—ಸ್ವರ ಧ್ವನಿ, ವ್ಯಂಜನ ಧ್ವನಿ.

Phonéndoscope ಫೊನೆಂಡೊಸ್ಕೋಪ್ (ನಾ.) (ಮು., ಮನುಷ್ಯ ದೇಹ ದೊಳಗಿನ) ಸಣ್ಣಧ್ವನಿಗಳು ಸ್ಪಷ್ಟವಾಗಿ ಕೇಳಿಸುವಂತೆ ಅವನ್ನು ವರ್ಧಿಸುವ ಒಂದು ಸಲಕರಣೆ : ಅಂತರ್ಧ್ವನಿ ವರ್ಧಕ.

Phonétic ಫೊನೆಟಿಕ್ (ಗು., ನಾ.) ಒಂದೇ ಧ್ವನಿಗೆ ಒಂದೇ ಸಂಕೇತ ವನ್ನು ಯಾವಾಗಲೂ ಉಪಯೋಗಿಸುತ್ತ (ಮು., ಅಕ್ಷರ ಸಂಯೋಜನೆಯ ಪದ್ಧತಿಗಳಲ್ಲಿ) ಭಾಷಾ ಧ್ವನಿಗಳನ್ನು ನಿರೂಪಿಸುವ: ಭಾಷಾ ಧ್ವನಿ ನಿರೂಪಕ. ಧ್ವನಿಯ. (ನಾ. ; ಬ. ವ. ದಲ್ಲಿ) ಒಂದು ಭಾಷೆಯ ಧ್ವನಿ ಲಕ್ಷಣಗಳು. ಭಾಷಾ ಧ್ವನಿ ಶಾಸ್ತ್ರ : ಶಿಕ್ಷಾ (ಶಾಸ್ತ್ರ). **Phonéticism** (ನಾ.) ಬರಹದ ಅಥವಾ ಅಕ್ಷರ ಸಂಯೋಜನೆಯ ಧ್ವನಿಗಳ ಸ್ವರೂಪ, ಪದ್ಧತಿ. **Phonéticist** (ನಾ.) ಧ್ವನಿಗಳನ್ನನುಸರಿಸಿ ಅಕ್ಷರ ಸಂಯೋಜನೆ ಮಾಡಬೇಕೆಂಬ ಅಭಿಪ್ರಾಯವುಳ್ಳವನು ; ಧ್ವನಿ ಸಂಕೇತ ವಾದಿ. **Phonéticize** (ಕ್ರಿ. ಸಕ.) (ಅಕ್ಷರ ಸಂಯೋಜನವನ್ನು ಪದ್ಧತಿಗೆ ಅನುಸಾರವಾಗಿ) ಧ್ವನಿ ನಿರೂಪಕವನ್ನಾಗಿಮಾಡು. **Phonétical** (ಗು.) (ವಿರ. ಪ್ರ.) =Phonetic. **Phonétically** (ಕ್ರಿ. ವಿ.) ; **Phonetícian** ಫೊನಿಟಿಷನ್ (ನಾ.). **Phónetist** (ನಾ.) ಭಾಷಾ ಧ್ವನಿ ಶಾಸ್ತ್ರಜ್ಞ ; =Phoneticist.

Phónic ಫೋ(ಫಾ)ನಿಕ್ (ಗು.) ಧ್ವನಿಯ.

Phono- ಫೋನೊ— (ಸ. ಪೂ. ಪ.) ಧ್ವನಿ—. **lite** ಹೊಡೆದರೆ ನಾದ ಕೊಡುವ ಒಂದು ಬಗೆಯ ಜ್ವಾಲಾಮುಖಿಯ ಕಲ್ಲು: ಧ್ವನಿ ಶಿಲೆ. **-logy** (ಫೊನಾಲೊಜಿ) ಧ್ವನಿ ಶಾಸ್ತ್ರ ; ಶಿಕ್ಷಾ (ಶಾಸ್ತ್ರ). (ಒಂದು ಭಾಷೆಯ) ಧ್ವನಿ ಪದ್ಧತಿ. **-lógic(al)** (ಗು.) ; **-lógically** (ಕ್ರಿ. ವಿ.) ; **-logist** ಫೊನಾಲೊಜಿಸ್ಟ್ (ನಾ.). **-meter** ಧ್ವನಿ ತರಂಗ (ಸಂಖ್ಯಾ, ಬಲ) ಮಾಪಕ. **-pore** (ಫೋನೊಪೋರ್) ದೂರ ಲೇಖಕದ ತಂತಿಯ ಮೂಲಕವಾಗಿಯೇ ಅದರಲ್ಲಿ ಸಾಗುವ ವಿದ್ಯುತ್ಪ್ರವಾಹಕ್ಕೆ ಅಡಚಣೆ ಯಾಗದಂತೆ, ದೂರ ವಾಣಿಯ ಸಮಾಚಾರವನ್ನೂ ಕಳುಹಿಸಲು ಅನುಕೂಲಿಸುವ ಸಲಕರಣೆ. **-póric** (ಗು.). **-scope** (ವಾದ್ಯಗಳ) ತಂತಿ ಪರೀಕ್ಷಕ (ಸಲಕರಣೆ) ; ಧ್ವನಿ ಕಂಪನಗಳನ್ನು ಕಣ್ಣಿಗೆ ಕಾಣು ವಂತೆ ನಿರೂಪಿಸುವ ಸಲಕರಣೆ : ಧ್ವನಿ (ಕಂಪನ) ದರ್ಶಕ. **-type** (—ಟೈ—) ಧ್ವನ್ಯಕ್ಷರ (ಮುದ್ರಣ). **-týpic(al)** (—ಟಿ—) (ಗು.); **-typist** (ನಾ.) ; **-typy** (ನಾ.) ಧ್ವನ್ಯಕ್ಷರ ಮುದ್ರಣ ಪದ್ಧತಿ.

Phónogram ಫೊನೊಗ್ರ್ಯಾಮ್ (ನಾ.) (ಮು., Pitman ಎಂಬಾತನ ಶೀಘ್ರಲಿಪಿ ಪದ್ಧತಿಯಲ್ಲಿ) ಧ್ವನಿಸಂಕೇತ. (ಧ್ವನಿಲೇಖನ ಯಂತ್ರವು ರಚಿಸಿದ) ಧ್ವನಿ ಲೇಖನ. **Phónograph** (ನಾ., ಕ್ರಿ. ಸಕ.) =Gramophone ; 'ಫೋನೊಗ್ರಾಫ್'. (ಕ್ರಿ.) ಫೋನೊಗ್ರಾಫಿನ ಮೂಲಕ ಬರೆ, ಸಂಗ್ರಹಿಸು, ಪುನರಾವೃತ್ತಿ ಮಾಡು. **Phonógraphy** ಫೊನಾಗ್ರಫಿ (ನಾ.) ಫೋನೊಗ್ರಾಫಿನಂತೆ ಧ್ವನಿಗಳ ಸ್ವಯಂಲೇಖನ. ಪಿಟ್‌ಮನ್ನಿನ ಧ್ವನಿ ಲಿಪಿ. **Phonógrapher** —ಗ್ರ— (ನಾ.) =**Phonógraphist** (ನಾ.); **Phonográphic** ಫೊನೊಗ್ರ್ಯಾಫಿಕ್ (ಗು.) ; **Phonográphically** (ಕ್ರಿ. ವಿ.)

Phósgene ಫಾಸ್‌ಜೀನ್ (ನಾ.) ಹಿಂದಿನ ಮಹಾ ಯುದ್ಧದಲ್ಲಿ ಉಪ ಯೋಗಿಸಿದ. 'ಕಾರ್ಬನ್ ಆಕ್ಸಿಕ್ಲೋರೈಡ್'' ಎಂಬ ಒಂದು ವಿಷಾನಿಲ : 'ಫಾಸ್‌ಜೀನ್'.

Phósphate, etc. Phosphorus ನೋಡಿ.

Phósphene ಫಾಸ್‌ಫೀನ್ (ನಾ.) ಅಕ್ಷಿ ಪಟಲವು ಕೆರಳಿ ಕಣ್ಣುಗುಡ್ಡೆಯ ಮೇಲೆ ಒತ್ತುವುದರಿಂದ ಉಂಗುರುಂಗುರಗಳಾಗಿ ಕಾಣಿಸಿಕೊಳ್ಳುವ ಬೆಳಕಿನ ತೋರ್ಕೆ : ಕಾಂತಿ ಭಾಸ.

Phósphide, Phósphite, Phósphorate, Phosphorésce, etc. Phosphorus ನೋಡಿ.

Phosphoro- ಫಾಸ್‌ಫೊರೊ— (ಸ. ಪೂ. ಪ.) ಭಾಸ್ವರ—. **-génic** (ಒಂದು ವಸ್ತುವಿನಲ್ಲಿ) ಬೆಳಗಿಸುವ ಪದಾರ್ಥವನ್ನು ತೆಗೆದಮೇಲೆಯೂ ಸ್ಫುರಿಸುವ ಗುಣವುಳ್ಳಂತೆ ಮಾಡುವ : ಭಾಸ್ವರತಾ ಕಾರಕ. **-graph** ಭಾಸ್ವರ ಸ್ಫುರಣದ ಮೇಲ್ಮೈಯಲ್ಲಿ ಕಾಣುವ ಕ್ಷಣಿಕ ದೃಶ್ಯ. **-gráphic** —ಗ್ರ್ಯಾ— (ಗು.) ; **-graphy** —ರಾಗ್ರಫಿ (ನಾ.) ; **-scope** ಭಾಸ್ವರ ಸ್ಫುರಣದ ಕಾಲವನ್ನು ಅಳೆಯುವ ಸಲಕರಣೆ : ಭಾಸ್ವರ ಸ್ಫುರಣ ದರ್ಶಕ. ಹಲವು ಬಗೆಯ ಬಣ್ಣದ ಬೆಳಕುಗಳಿಂದ ಬೆಳಗುವ ಭಾಸ್ವರ ಸ್ಫುರಣ ಪದಾರ್ಥಗಳನ್ನುಳ್ಳ ಒಂದು ಆಟದ ಸಾಮಾನು : ಭಾಸ್ವರ ಸ್ಫುರಣ ಚಿತ್ರ ದರ್ಶಕ.

Phósphorus ಫಾಸ್‌ಫೊರಸ್ (ನಾ.) ಸಾಮಾನ್ಯ ಶಾಖದ ವಾತಾವರಣ ದಲ್ಲಿ ಆಮ್ಲ ಜನಕದೊಡನೆ ಸಂಯೋಗ ಹೊಂದಿ ನಿಧಾನವಾಗಿ ಸುಡುತ್ತ, ಈ ಕಾರಣದಿಂದ ಕತ್ತಲೆಯಲ್ಲಿ ಹೊಳೆಯುವ, ಹಳದಿ ಛಾಯೆಯ, ಮೇಣದಂಥ, ಒಂದು ಅಲೋಹ ಮೂಲಧಾತು : ರಂಜಕ ; ಭಾಸ್ವರ. P. necrosis (ಬಳ. ಮಾ. Phossy jaw) (ಮು., ಬೆಂಕಿಕಡ್ಡಿಯ ತಯಾರಿಕೆಯಲ್ಲಿ) ರಂಜಕ ಧೂಮದಿಂದುಂಟಾಗುವ ದವಡೆಮೂಳೆಯ ಕೊಳೆ ರೋಗ. **Phosphóric** (ಗು.) ; **Phósphorous** (ಗು.) ; **Phósphorism** (ನಾ.) (ರೋಗ ನಿದಾನ) ರಂಜಕವಿಷ ವ್ಯಾಧಿ. **Phósphate** —ಫೇಟ್ (ನಾ.) ಫಾಸ್‌ಫಾರಿಕ್ ಆಮ್ಲದ ಲವಣ ; (ಮು., ಬ.ವ. ದಲ್ಲಿ) ಧಾನ್ಯಗಳು, ಮೊ. ಗಳಲ್ಲಿ ಘಟಕಗಳಾಗಿರುವ ಸುಣ್ಣದ ಅಥವಾ ಕಬ್ಬಿಣ ಮತ್ತು ಅಲ್ಯುಮಿನದ ಫಾಸ್ಫೇಟುಗಳು. **Phosphátic** (ಗು.) ; **Phósphide** (ನಾ.) (ರ. ವಿ.) (ಮತ್ತೊಂದು ಮೂಲಧಾತುವಿನೊಡನೆ ಅಥವಾ ಘಟಕದೊಡನೆ ಆದ) ರಂಜಕದ ಸಂಯುಕ್ತ : 'ಫಾಸ್‌ಫೈಡು'. **Phósphite** (ನಾ.) (ರ. ವಿ.) ಫಾಸ್‌ಫೊರಸ್ ಆಮ್ಲದ ಲವಣ : 'ಫಾಸ್‌ಫೈಟು'. **Phósphorate** —ರೇಟ್ (ಕ್ರಿ. ಸಕ.) ರಂಜಕ ಸಂಯೋಜನೆಮಾಡು ; —ಪೂರಣ ಮಾಡು. **Phosphorésce** —ರೆಸ್ (ಕ್ರಿ. ಅಕ.) ಸುಡದೆ ಅಥವಾ ನಸು ಕಾವಿನಿಂದ ಬೆಳಗು ; (ಕತ್ತಲೆಯಲ್ಲಿ) ಮಿನುಗು, ಬೆಳಗು. **Phosphoréscence** (ನಾ.) ; **Phosphoréscent** (ಗು.). Phòsphor-bronze (ನಾ.) ಮು., ಘರ್ಷಣೆಯಾಗುವ ಯಂತ್ರ ಭಾಗಗಳಿಗೆ ಉಪಯೋಗಿಸುವ, ದೃಢವೂ ಗಡುಸೂ ಆದ, ಸ್ವಲ್ಪ ರಂಜಕಗೂಡಿದ, ಒಂದು ಗಟ್ಟಿ ಮಿಶ್ರ ಲೋಹ : ಭಾಸ್ವರ ಕಂದು ಕಂಚು. **Phósphorite** (ನಾ.) 'ಫಾಸ್ಫೇಟ್ ಆಫ್ ಲೈಮ್' ಎಂಬ ಲವಣದ ಒಂದು ಅಸ್ಫಟಿಕ ಪ್ರಭೇದ. **Phósphuret(t)ed** —ಫ್ಯುರೆಟ್(ಟೆಡ್) (ಗು.) ರಂಜಕದೊಡನೆ ರಾಸಾಯನಿಕ ಸಂಯೋಗ ಹೊಂದಿದ ; ರಂಜಕ ಸಂಯುಕ್ತವಾದ.

Phóssy ಫಾಸಿ (ಗು.). Phossy jaw (Phosphorus ನೋಡಿ)

Phótism ಫೋಟಿಸ್‌ಮ್ (ನಾ.) ಭ್ರಾಂತಿಯಿಂದುಂಟಾದ ಕಾಂತಿಯ ಅನುಭವ : ಕಾಂತಿ ಭ್ರಾಂತಿ.

Phóto ಫೋಟೊ (ನಾ., ಬ. ವ. -os ; ಕ್ರಿ. ಸಕ.) =Photograph (ಎಂಬುದಕ್ಕೆ ಬಳ. ಮಾ. ಸಂಕ್ಷಿಪ್ತ)

Photo- ಫೋಟೊ— (ಸ. ಪೂ. ಪ.) (i) ಬೆಳಕು— ; ಪ್ರಕಾಶ—. (ii) ಛಾಯಾಚಿತ್ರ—. **-chromy** (—ಕ್ರೋಮಿ) ಛಾಯಾ ವರ್ಣ ಚಿತ್ರ (ಕಲೆ). **-gen** ಒಂದು ಬಗೆಯ ಪ್ಯಾರಫಿನ್ ಎಣ್ಣೆ. **-génic** ಕಾಂತಿ ಜನಕ ; ಬೆಳಕು ಕೊಡುವ. **-glyph** ಕಾಂತಿ ಕ್ರಿಯೆಯಿಂದ ರಚಿಸಿದ ನಕಾಸೆಯ ಫಲಕ. **-glyphy** ಇಂತಹ ನಕಾಸೆಯ ಕಲೆ. **-meter** (ಫೊಟಾಮಿಟರ್) ಪ್ರಕಾಶ ಮಾಪಕ. **-metry.** **-métric** ಫೊಟೊ—. **-micrograph** ಸೂಕ್ಷ್ಮದರ್ಶಕದಲ್ಲಿ ವಿಸ್ತರಿಸಲಾದ ಛಾಯಾಚಿತ್ರ. **-phóbia** (ರೋಗ ನಿದಾನ) ಬೆಳಕಿನ ಭಯ. **-phone** ಬೆಳಕಿನ ಮೂಲಕ ಧ್ವನಿಯನ್ನು ಕಳುಹಿಸುವ ಸಲಕರಣೆ : ತೇಜೋ ಧ್ವನಿ ವಾಹಕ. **-sphere** (ಬೆಳಕೂ ಶಾಖವೂ ಹರಡುವ ಸೂರ್ಯನ ಅಥವಾ ನಕ್ಷತ್ರದ) ಪ್ರಕಾಶಾವರಣ ; ತೇಜೋಮಂಡಲ. **-sphéric** (ಗು.) ; **-stat** (—ಸ್ಟ್ಯಾಟ್) ದಸ್ತೈವಜು, ಲೇಖನ, ಮೊ. ಗಳನ್ನು ಛಾಯಾ ಗ್ರಾಹಕದ ಮೂಲಕ ನೇರವಾಗಿ ಪ್ರತಿ ತೆಗೆಯುವ ಸಲಕರಣೆ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದರಿಂದ ತೆಗೆದ ಪ್ರತಿ (ವ್ಯಾಪಾರದ ಹೆಸರು). **-telégraphy** ದೂರದಲ್ಲಿಯ ಚಿತ್ರ, ಬರಹ, ಮೊ. ನ್ನು ವಿದ್ಯುಚ್ಛಕ್ತಿಯ ಮೂಲಕ ಪ್ರತ್ಯಕ್ಷಗೊಳಿಸುವುದು : ದೂರವಸ್ತು ತೇಜೋ ಲೇಖನ (Telephotography ಹೋಲಿಸಿ). **-type** ಛಾಯಾಚಿತ್ರ ಕ್ರಿಯೆಯಿಂದ ತಯಾರಿಸಿ ಅದರಿಂದ ಪ್ರತಿಗಳನ್ನು ಮುದ್ರಿಸಲಾಗುವ ಫಲಕ ; ಕಾಂತಿ ಮುದ್ರಣ ಫಲಕ ; ಇದರಿಂದ ಮುದ್ರಿಸಿದ ಚಿತ್ರ, ಮೊ. ದು. **-zincógraphy** (—ಸಿಂಕಾಗ್ರಫಿ) ಸತು ಫಲಕದಮೇಲೆ ಚಿತ್ರವನ್ನು ಛಾಯಾಚಿತ್ರ ಕ್ರಿಯೆಯಿಂದ ರಚಿಸುವುದು.

Phótograph ಫೋಟೊಗ್ರಾಫ್ (ನಾ., ಕ್ರಿ. ಸಕ.) ಗಾಜು, ಕಾಗದ, ಲೋಹ, ಮೊ. ಗಳ ಆಧಾರವುಳ್ಳ ಸೂಕ್ಷ್ಮಗ್ರಾಹಿ ಪಟಲದಮೇಲೆ ಬೆಳಕಿನ ರಾಸಾಯನಿಕಕ್ರಿಯೆಯಿಂದ ತೆಗೆದ ಚಿತ್ರ, ಆಕೃತಿ, ಅನುರೂಪ; ಛಾಯಾಚಿತ್ರ ; ಛಾಯಾಪ್ರತೀಕ. (ಕ್ರಿ.) (ವ್ಯಕ್ತಿ, ಮೊ. ರ) —ತೆಗೆ. (I always p. badly ನಾನು ಯಾವಾಗಲೂ ಛಾಯಾಚಿತ್ರದಲ್ಲಿ ಚೆನ್ನಾಗಿ ಬೀಳುವುದಿಲ್ಲ). **Photográphic** (ಗು.) ; **Photográphically** (ಕ್ರಿ. ವಿ.) ; **Photógrapher** ಫೊಟಾಗ್ರಫರ್ (ನಾ.) ; **Photógraphy** (ನಾ.)

Photogravuré ಫೋಟೊಗ್ರವ್ಯೂರ್ (ನಾ., ಕ್ರಿ. ಸಕ.) ಛಾಯಾಚಿತ್ರದ ವಿಷಮ ಪ್ರತಿಯಿಂದ ಚಿತ್ರವನ್ನು ಲೋಹ ಫಲಕದಮೇಲೆ ಬೀಳಿಸಿ ಅದನ್ನು ಒಳ ಕೆತ್ತನೆ ಮಾಡಿ ರಚಿಸಿದ ಚಿತ್ರ ; ಪ್ರಕಾಶ ಕೆತ್ತನೆಯ ಚಿತ್ರ ; ಈ ಮುದ್ರಣ ವಿಧಾನ. (ಕ್ರಿ.) ಈ ತೆರದ ಚಿತ್ರ ತೆಗೆ.

Phrase ಫ್ರೇಸ್ (ನಾ., ಕ್ರಿ. ಸಕ.) ಹೇಳುವ ರೀತಿ ; ಮಾತಿನ ಜೋಡಣೆ ; ವಾಕ್ಸರಣಿ ; ನುಡಿಯ ನಡೆ (In simple p. ಸರಳ ವಾಕ್ಸರಣಿಯಲ್ಲಿ. Felicity of p. ಪದ ಪ್ರಯೋಗದ ಸೊಬಗು). ಭಾಷಾ ಮರ್ಯಾದೆ ಗೂಡಿದ ವಚನ. [ಗುಣವಾಚಕ, ಕ್ರಿಯಾವಿಶೇಷಣ ಅಥವಾ ನಾಮಪದದಂತೆ ಉಪಯೋಗಿಸುವ, ಸಾ., ಕ್ರಿಯಾಪದವಿಲ್ಲದ, ಮು., ಉಪಸರ್ಗವೂ ಅದರೊಡನೆ ಅನ್ವಯವಾಗುವ ಪದವೂ(ಗಳೂ) ಉಳ್ಳ] ವಾಕ್ಯಾಂಗ ಭಾಗ (ಉದಾ., The house *on the hill*. I refuse *to do* it). ಸಾರವತ್ತಾದ ಸಣ್ಣ ನುಡಿ ; ಚಾಣ್ನುಡಿ ; ಅಡಕ ನುಡಿ. (ಬ. ವ. ದಲ್ಲಿ) ಬರಿಯ ಮಾತುಗಳು (We have had enough of phrases). (ಸಂ.) (ದೊಡ್ಡ ಅಥವಾ ಚಿಟ್ಟು ಹಾಡಿನ ಭಾಗವಾದ, ಹೆಚ್ಚೂ ಕಡಮೆ ಸ್ವತಂತ್ರವಾದ) ಗೀತಾಂಗ ಭಾಗ. (P.-monger ಆಡಂಬರ ಪದ ಪ್ರಯೋಗಿ ; ರಂಜನ ಪದ ಪ್ರಯೋಗಿ). (ಕ್ರಿ.) ಮಾತುಗಳಲ್ಲಿ ಹೇಳು (Thus he phrased it). **Phráseogram** ಫ್ರೇಸಿಯೊಗ್ರ್ಯಾಮ್ (ನಾ.) (ಮು., ಶೀಘ್ರಲಿಪಿಯಲ್ಲಿ) ಒಂದು ಪದಪುಂಜದ ರೇಖನ ಸಂಕೇತ. **Phráseograph** —ಗ್ರ್ಯಾಫ್ (ನಾ.) ರೇಖನ ಸಂಕೇತವಿರುವ ಪದ ಪುಂಜ. **Phraseólogy** ಫ್ರೇಸಿಯಾಲೊಜಿ (ನಾ.) ಪದ ವಿನ್ಯಾಸ ; ಪದ ಬಂಧ ; ಪದ ಪದ್ಧತಿ; ಪದಗಳ ಪೊಂದಾವಣೆ; ವಾಕ್ಸರಣಿ. **Phraseológical** —ಯೊಲಾ— (ಗು.) ; **Phraseológically** (ಕ್ರಿ. ವಿ.)

Phrátry ಫ್ರೇಟ್ರಿ (ನಾ.) (ಗ್ರೀಕ್ ಚರಿತ್ರೆ) ರಕ್ತಸಂಬಂಧದ ಏಕತೆ (ಮು., ಅಥೆನ್ಸಿನಲ್ಲಿ ಒಂದು ಬುಡಕಟ್ಟಿನ ಮೂರು ಉಪಭಾಗಗಳಲ್ಲೊಂದು). ಅಭಿವೃದ್ಧಿಯಾಗದ ಜನಾಂಗಗಳಲ್ಲಿ ಬುಡಕಟ್ಟಿನ ವಿಭಾಗ.

Phrenétic ಫ್ರಿನೆಟಿಕ್ (ಗು.) ರೋಷೋನ್ಮತ್ತ ; ಹುಚ್ಚು ಹುಚ್ಚಾದ ; (ಮು., ಮತಧರ್ಮ ವಿಚಾರದಲ್ಲಿ) ಉನ್ಮತ್ತಾಭಿಮಾನಿ ; ಧರ್ಮಾಂಧ.

Phrénic ಫ್ರೆನಿಕ್ (ಗು.) (ಅಂ. ರ. ಶಾ.) ಮುಂಡದೊಳಗಿನ ಮಧ್ಯ ಭಾಜಕಾಂಗದ ; ವಪೆಯ.

Phrenólogy ಫ್ರಿನಾಲೊಜಿ (ನಾ.) ಬುದ್ಧಿಯ ವಿವಿಧ ಸಾಮರ್ಥ್ಯಗಳ ನೆರೆಯೆಂದು ಊಹಿಸುವ ಮಿದುಳಿನ ಭಾಗಗಳ ಸ್ಥಾನ ಮತ್ತು ಅಭಿವೃದ್ಧಿ ಸ್ಥಿತಿ—ಇವಕ್ಕೆ ಸಂಜ್ಞೆಯಾಗಿರುವ ತಲೆಬುರುಡೆಯ ಹೊರ ರೂಪ ವಿನ್ಯಾಸವನ್ನು ಪರೀಕ್ಷಿಸುವ ವಿದ್ಯೆ ; ಕಪಾಲಸಾಮುದ್ರಿಕ (ಶಾಸ್ತ್ರ). **Phrenólogist** (ನಾ.) ; **Phrenológical** ಫ್ರೆನೊ— (ಗು.) ; **Phrenológically** (ಕ್ರಿ. ವಿ.)

Phróntistery ಫ್ರಾಂಟಿಸ್ಟರಿ (ನಾ.) (ಹಾಸ್ಯ ಪ್ರ.) ಆಲೋಚನೆ ಮಾಡುವ ಸ್ಥಳ ; ಆಲೋಚನೆಯ ಕಾರಖಾನೆ (ಈಗಿನ ಪಾಠಶಾಲೆಗಳ ವಿಷಯವಾಗಿ ಅಪಹಾಸ್ಯವಾಗಿ)

Phrýgian ಫ್ರಿಜಿಯನ್ (ಗು.) (ಏಷ್ಯಾಮೈನರಿನ ಪುರಾತನ ದೇಶವಾಗಿದ್ದ) ಫ್ರಿಜಿಯದ. (ಸಂ.) P. mode ರಣಗೀತ ಸ್ವಭಾವದ ಪುರಾತನ ಗ್ರೀಕ್ ಥಾಟ. P. cap [ಸ್ವಾತಂತ್ರ್ಯದ ಚೋಪಿಯಂತಹದೆಂದು ಎಣಿಸುವ (Cap ನೋಡಿ)] ಪುರಾತನ, ಶಂಕುವಿನಾಕಾರದ, ಕೋಡಿನ ಟೋಪಿ.

Phthísis ಥೈ(ಥಿ)ಸಿಸ್, ತೈ(ಟೈ)ಸಿಸ್ (ನಾ.) ದೇಹವು ಕ್ರಮ ಕ್ರಮವಾಗಿ ಕ್ಷಯಿಸಿ ಹೋಗುವ ರೋಗ : ಕ್ಷಯರೋಗ ; ಮು., ಶ್ವಾಸಕೋಶ ಕ್ಷಯರೋಗ. **Phthísical** ಟಿಸಿ— (ಗು.) ಕ್ಷಯದ ; ಕ್ಷಯ(ರೋಗ)ವುಳ್ಳ.

Phut ಫಟ್ (ನಾ., ಕ್ರಿ. ವಿ.) (ಗಾಳಿ ತುಂಬಿದ ಚೀಲ ಥಟ್ಟನೆ ಮುದುಡಿಕೊಳ್ಳುವುದು, ಬಂದೂಕಿನ ಗುಂಡು ಹಾಯ್ದು ಹೋಗುವುದು, ಮೊ. ರಲ್ಲಿ ಆಗುವ) ಫಟ್ ಎಂಬ ಶಬ್ದ. (ಕ್ರಿ. ವಿ.) Go p. (ಥಟ್ಟನೆ) ಮುದುಡಿಕೊಳ್ಳು ; ಕುಸಿದು ಬೀಳು ; ಮುರಿದು ಬೀಳು (ಯೋಜನೆ, ಮೊ. ಗಳ ವಿಷಯದಲ್ಲಿ ರೂಪ. ಸಹ)

Phyláctery ಫಿಲ್ಯಾಕ್ಟರಿ (ನಾ.) ಯೆಹೂದ್ಯರು ತಾವು ಧರ್ಮಾನುಸಾರ ನಡೆಯುವಂತೆ ತಮಗೆ ಜ್ಞಾಪಕ ಕೊಡುವುದಕ್ಕಾಗಿ ಧರಿಸುತ್ತಿದ್ದ, ನಯವಾದ ಚರ್ಮಕಾಗದದಮೇಲೆ ಬರೆದ ಹೀಬ್ರೂ ಮಂತ್ರಗಳನ್ನೊಳಕೊಂಡ, ಸಣ್ಣ ಚರ್ಮದ ಪೆಟ್ಟಿಗೆ. (Make broad one's p. or phylacteries ಧರ್ಮನಿಷ್ಠೆಯನ್ನು ಪ್ರದರ್ಶನ ಮಾಡು. ದೊಡ್ಡ ಕರ್ಮಠನೆಂದು ತೋರಿಸಿಕೊ). (ಸಾ., ಆಡಂಬರದ) ಮತ ಕರ್ಮಾನುಷ್ಠಾನ ; ಆಚಾರ ನಿಷ್ಠೆಯ ಪ್ರದರ್ಶನ. ಯಂತ್ರ ; ತಾಯಿತಿ ; ರಕ್ಷೆ.

Phylétic. **Phylum** ನೋಡಿ.

Phylo- ಫೈಲೊ— (ಸ. ಪೂ. ಪ.) ಕುಲ— ; ಗೋತ್ರ— ; ವಂಶ— ; ಬಣ—. **-génesis** (ಪ್ರಾಣಿಯ ಅಥವಾ ಸಸ್ಯದ ವ್ಯಕ್ತಿತ್ವದ) ಕುಲ ವಿಕಾಸ. **-geny** ಇದರ ಚರಿತ್ರೆ. **-genétic** (ಗು.) ; **-génic** (ಗು.) ; **-genétically** (ಕ್ರಿ. ವಿ.)

Phýlum ಫೈಲಮ್ (ನಾ. ; ಬ. ವ. -la —ಲ) (ಜೀ. ವಿ.) (ಒಂದೇ ಪುರಾತನ ರೂಪದಿಂದ ಪಾರಂಪರ್ಯವಾಗಿ ಹುಟ್ಟಿಬಂದ ಜೀವಿಗಳ) ಕುಲ. **Phylétic** (ಗು.) (ಜೀ. ವಿ.) ಕುಲದ.

Phýsic ಫಿಸಿಕ್ (ನಾ., ಕ್ರಿ. ಸಕ.) ರೋಗ ವಾಸಿಮಾಡುವ ಕಲೆ ; ರೋಗ ಚಿಕಿತ್ಸೆ ; ವೈದ್ಯ (ವೃತ್ತಿ). (ಬಳ. ಮಾ.) ಔಷಧ [A dose of p. ಒಂದು ಬಾರಿ ತೆಗೆದುಕೊಳ್ಳುವ (ಭೇದಿಯ) ಔಷಧ]. (ನಾ.; ಬ. ವ. ದಲ್ಲಿ) ದ್ರವ್ಯದ ಮತ್ತು ಶಕ್ತಿಯ ಲಕ್ಷಣಗಳನ್ನೂ ಅಥವಾ ಶಕ್ತಿಯ ನಾನಾ ರೂಪಗಳು ದ್ರವ್ಯದಮೇಲೆ ಉಂಟುಮಾಡುವ ಪರಿಣಾಮವನ್ನೂ ಕುರಿತ ಶಾಸ್ತ್ರ (ರಸಾಯನ ವಿಜ್ಞಾನ ಮತ್ತು ಜೀವ ವಿಜ್ಞಾನಗಳನ್ನು ಬಿಟ್ಟು) : ಭೌತ ವಿಜ್ಞಾನ. (ಕ್ರಿ.) ಔಷಧವನ್ನು (ಮು., ಭೇದಿಯ ಔಷಧವನ್ನು) ಸೇವನೆ ಮಾಡಿಸು (ರೂಪ. ಸಹ). **Phýsical** (ಗು.) ದ್ರವ್ಯದ ; ಭೌತ [P. force ದೇಹ ಬಲ (Moral force ಎಂಬುದಕ್ಕೆ ವಿರುದ್ಧವಾಗಿ)]. ಪ್ರಕೃತಿ (ತತ್ತ್ವ) ಶಾಸ್ತ್ರದ, ಭೌತ ಶಾಸ್ತ್ರದ (ನಿಯಮಾನುಸಾರವಾದ) (P. explanations of miracles. A p. impossibility). ಭೌತ ವಿಜ್ಞಾನಕ್ಕೆ ಸಂಬಂಧಿಸಿದ; ಭೌತ ವಿಜ್ಞಾನದ. ದೇಹದ [P. exercise ಅಂಗಸಾಧನೆ ; ಶಾರೀರಿಕ ವ್ಯಾಯಾಮ. P. strength ದೇಹ ಬಲ ; ಕಾಯ ಶಕ್ತಿ. P. beauty ದೇಹ ಸೌಂದರ್ಯ. P. drill ಕಾಯಿಕ ಕವಾಯಿತು (ಅನಂ. =P. jerks). P. geography ಪ್ರಾಕೃತಿಕ ಭೂಗೋಳ (ಶಾಸ್ತ್ರ)]. **Phýsically** (ಕ್ರಿ. ವಿ.) ; **Phýsico-** (ಸ. ಪೂ. ಪ.). **Physícian** —ಷ(ಷ್)ನ್ (ನಾ.) (ಔಷಧ ಕೊಟ್ಟು ಮತ್ತು ಶಸ್ತ್ರಚಿಕಿತ್ಸೆ ಮಾಡಿ) ರೋಗ ವಾಸಿ ಮಾಡುವ ಕಲೆಯನ್ನು ವೃತ್ತಿಯಾಗಿಟ್ಟುಕೊಂಡಿರುವವನು ; ವೈದ್ಯದಲ್ಲಿ (ಎಂದರೆ, ಔಷಧ ಕೊಡುವುದರಲ್ಲಿಯೂ ಶಸ್ತ್ರಚಿಕಿತ್ಸೆಯಲ್ಲಿಯೂ) ಯೋಗ್ಯತೆ ಪಡೆದವನೆಂದು ಕಾನೂನಿನ ಮೇರೆಗೆ ಪರಿಗಣಿಸಲ್ಪಟ್ಟಿರುವವನು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೈದ್ಯ. (ರೂಪ.) ಗುಣ ಮಾಡುವವನು, ವಾಸಿ ಮಾಡುವವನು ; ಶಮನ ಮಾಡುವವನು. **Phýsicist** —ಸಿಸ್ಟ್ (ನಾ.) (ಸಾ.) ಭೌತವಿಜ್ಞಾನಿ ; ಪ್ರಕೃತಿ ವೈಜ್ಞಾನಿಕ. ಜೈವ ವ್ಯಾಪಾರಗಳೆಲ್ಲವೂ ಭೌತ (ಮೂಲ) ವಾದುವೆಂದು ನಂಬುವವನು ; ಭೌತ (ಮೂಲ) ವಾದಿ (Vitalist ಹೋಲಿಸಿ). **Phýsicism** (ನಾ.) ವಿಶ್ವದ ವಿಷಯದಲ್ಲಿ ಭೌತ ದೃಷ್ಟಿ ಅಥವಾ ವಿವರಣೆ. **Phýsicky** (ಗು.) (ಛೇದಿಯ) ಔಷಧದ ಸೂಚನೆ ಯುಳ್ಳ ; (ಛೇದಿಯ) ಔಷಧದ ರುಚಿ, ವಾಸನೆ ಅಥವಾ ಇತರ ಗುಣಗಳುಳ್ಳ.

Phýsics, etc., Phýsicism, Phýsicky. Physic ನೋಡಿ.

Physio- ಫಿಸಿಯೊ— (ಸ. ಪೂ. ಪ.) ಪ್ರಕೃತಿ—. **-cracy** (—ಯಾಕ್ರಸಿ) ಪ್ರಕೃತಿ ಸಂಪತ್ತೇ (ಉದಾ., ಕೃಷಿ ಮತ್ತು ಖನಿಜ) ಸಮಾಜ(ದ ಆರ್ಥಿಕ) ವ್ಯವಸ್ಥೆಗೆ ಮೂಲಾಧಾರವಾಗಿರಬೇಕೆಂಬ ವಾದ. **-crat** ಇಂತಹ ವಾದಿ. **-geny** ಜೀವ ಕ್ರಿಯಾ ವಿಕಾಸದ ಚರಿತ್ರೆ. **-latry** ಪ್ರಕೃತ್ಯಾ ರಾಧನೆ.

Physiógnomy ಫಿಸಿಯಾ(ಗ್)ನೊಮಿ (ನಾ.) ಮುಖ ಲಕ್ಷಣಗಳಿಂದ ಅಥವಾ ದೇಹದ ಆಕೃತಿಯಿಂದ ಒಬ್ಬನ ಶೀಲ ಸ್ವಭಾವಗಳನ್ನು ನಿರ್ಣಯಿಸುವ ಕಲೆ; ಮುಖ ಸಾಮುದ್ರಿಕ [**Physiógnomist** (ನಾ.)] ; ಮುಖ ಮುದ್ರೆ ; ಮುಖದ ಮಾಟ ; (ಗ್ರಾಮ್ಯ) ಮುಖ. ದೇಶ, ಮೊ. ಗಳ ಬಾಹ್ಯ ಲಕ್ಷಣಗಳು. (ನೈತಿಕ ಅಥವಾ ಇತರ ದೃಷ್ಟಿಯ) ವೈಲಕ್ಷಣ್ಯ, ವಿಶಿಷ್ಟತೆ. **Physiognómic(al)** (ಗು.) ; **Physiognómically** (ಕ್ರಿ. ವಿ.)

Physiógraphy ಫಿಸಿಯಾಗ್ರಫಿ (ನಾ.) ಪ್ರಕೃತಿಯ, ಪ್ರಕೃತಿ ಗೋಚರ ವಿಷಯಗಳ, ಅಥವಾ ಒಂದು ವರ್ಗದ ವಸ್ತುಗಳ, —ವಿವರಣೆ ; ಪ್ರಕೃತಿ ಭೂಗೋಳ. **Physiógrapher** (ನಾ.) ; **Physiográphic(al)** —ಯೊಗ್ರಾಫಿಕ— (ಗು.)

Physiólogy ಫಿಸಿಯಾಲೊಜಿ (ನಾ.) ಜೀವಿಗಳ (ಪ್ರಾಣಿಗಳ ಮತ್ತು ಸಸ್ಯಗಳ) ಲಕ್ಷಣಗಳನ್ನೂ ವ್ಯಾಪಾರಗಳನ್ನೂ ವಿವರಿಸುವ ಶಾಸ್ತ್ರ : ಶರೀರ ವಿಜ್ಞಾನ (Animal, vegetable, p. ಪ್ರಾಣಿ, ಸಸ್ಯ, —ಶರೀರ ವಿಜ್ಞಾನ). **Physiólogist** (ನಾ.) ; **Physiológic(al)** (ಗು.) ; **Physiológically** (ಕ್ರಿ. ವಿ.)

Physíque ಫಿಸೀಕ್ (ನಾ.) ಮೈಕಟ್ಟು ; ದೇಹರಚನೆ ; ದೇಹ ಪುಷ್ಟಿ.

-phyte —ಫೈಟ್ (ಉ. ಪ್ರ.) (ಸಸ್ಯ ಸೂಚಕ ಪ್ರತ್ಯಯ) [Protophyte ಆದಿ ಸಸ್ಯ ವರ್ಗದ (ಪಾಚಿ, ಬೂಷ್ಟು, ಕಲ್ಲುಹೂವು, ಮೊ. ಸಸ್ಯ ವರ್ಗದ) ಯಾವುದಾದರೂ ಸಸ್ಯ. Saprophyte, Zoophyte (Sapro-, Zoo- ನೋಡಿ)]

Phyto- ಫೈಟೊ— (ಸ. ಪೂ. ಪ.) ಸಸ್ಯ—. **-génesis, -geny** ಸಸ್ಯ ಜನನ, ಸಸ್ಯ ವಿಕಸನ. **-graphy** (—ಟಾ—) ವಿವರಣಾತ್ಮಕ ಸಸ್ಯ ವಿಜ್ಞಾನ. **-mer** (—ಟೋ—) ಸಸ್ಯದ ರಚನಾತ್ಮಕ ಅಂಗ ಭಾಗ ; ಹೊಸ ಸಸಿಯಾಗಬಲ್ಲ (ಸಸ್ಯದ ಗೆಣ್ಣಿನ) ಕಣ್ಣು. **-phagous** (ಫೈಟಾಫಗಸ್) ಸಸ್ಯ ಭಕ್ಷಕ. **-tomy** ಸಸ್ಯ ವಿಚ್ಛೇದನ. **-zóon** (ಬ. ವ. -zoa) ಸಸ್ಯದಂಥ ಪ್ರಾಣಿ ; ಸಸ್ಯಕಲ್ಪ ಪ್ರಾಣಿ.

Pi[1] ಪೈ (ನಾ.) ಗ್ರೀಕ್ ವರ್ಣಮಾಲೆಯ (ಇಂಗ್ಲಿಷಿನ P ಗೆ ಜವಾಬಾದ) ಅಕ್ಷರ (II, π) ; (ಮು., ಗಣಿತದಲ್ಲಿಯ π) ವೃತ್ತದ ಪರಿಧಿಗೂ ವ್ಯಾಸಕ್ಕೂ ಇರುವ ಪ್ರಮಾಣ ಸೂಚಕ ಸಂಕೇತ ($=3{\cdot}14159$)

Pi[2] ಪೈ (ಗು.) (ಪಾಠಶಾಲೆಯ ಅಸಂ.) = Pious. Pi jaw ಮತಧರ್ಮ ಪ್ರವಚನ (ಮಾಡುವುದು) ; ನೀತಿ ಬೋಧೆ.

Piácular ಪೈಆ್ಯಕ್ಯುಲರ್ (ಗು.) (ತಪ್ಪಿತ, ಪಾಪ) ಪರಿಹಾರ ಮಾಡುವ ; ಪರಿಹಾರ, ದಂಡ, —ಕೊಡಬೇಕಾದ ; ಪ್ರಾಯಶ್ಚಿತ್ತದ ; ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾದ.

Piáffe ಪಿಆ್ಯಫ್ (ಕ್ರಿ. ಅಕ.) (ಕುದುರೆ, ಮೊ. ವು) ಕುಲುಕೋಟ (ಕುಕ್ಕೋಟ) ದಲ್ಲಿ (ಆದರೆ ನಿಧಾನವಾಗಿ) ನಡೆ. **Piáffer** (ನಾ.) ಇಂತಹ ನಡಗೆ.

Pía máter ಪೈಅ ಮೇಟರ್ (ನಾ.) (ಅಂ. ರ. ಶಾ.) ಮಿದುಳಿನ ಮತ್ತು ಮಿದುಳು ಬಳ್ಳಿಯಮೇಲೆ ಹರಡಿರುವ, ರಕ್ತನಾಳಗಳು ತುಂಬಿದ, ಬಹು ಸೂಕ್ಷ್ಮವಾದ ಅತ್ಯಂತ ಒಳ ಪೊರೆ.

Pianétte, Pianíno. Piano[2] ನೋಡಿ.

Pianíssimo (It.) ಪೀಅನಿಸಿಮೊ (ಕ್ರಿ. ವಿ., ನಾ.) (ಸಂ.) ಬಹು ಮೆಲು ಪಾಗಿ (ಬಾರಿಸಬೇಕಾದ, ನುಡಿಸಬೇಕಾದ, ಗೀತ)

Píanist. Piano[2] ನೋಡಿ.

Piáno[1] (It.) ಪಿಆ್ಯ(ಅ)ನೊ, ಪ್ಯಾನೊ (ಕ್ರಿ. ವಿ., ನಾ.) (ಸಂ.) ಮೆಲುಪಾಗಿ (ಬಾರಿಸಬೇಕಾದ, ನುಡಿಸಬೇಕಾದ, ಗೀತ)

Piáno[2], **Piánoforte** ಪಿಆ್ಯನೊ, —ಫೋರ್ಟೆ, —ಫೋರ್ಟ್F (ನಾ.) ಹಲಗೆಯಮೇಲೆ ಅಳವಡಿಸಿರುವ ಕೀಲಿಕೈಗಳನ್ನು ಒತ್ತುವುದರಿಂದ ಆಯಾ ಸನ್ನೆಗಳು ಮಿಾಟಲ್ಪಟ್ಟು ಅವಕ್ಕೆ ಹೊಂದಿಸಿರುವ ಸುತ್ತಿಗೆಗಳು ತಂತಿಗಳನ್ನು ಬಡಿದು ನಾದವುಂಟುಮಾಡುವ, (ಮತ್ತು ತಂತಿಗಳ ಸ್ಪಂದನವನ್ನು ನಿಲ್ಲಿಸಲು ತಕ್ಕ ತಡೆಗಳನ್ನು ಅಳವಡಿಸಿರುವ) ಮತ್ತು ಸಾ., ಧ್ವನಿ ಗುಂಫನವನ್ನು ತಕ್ಕಂತೆ ಅನುಗೊಳಿಸಲು ಕಾಲೊತ್ತುಗಳಿರುವ, ಒಂದು ವಾದ್ಯ : ಪಿಯಾನೊ (ವಾದ್ಯ). Grand p. ಉದ್ದುದ್ದವಾಗಿ ಬಿಗಿದಿರುವ ತಂತಿಗಳುಳ್ಳ, Harp ವಾದ್ಯದ ಮಾದರಿಯ ಪಿಯಾನೊ. Upright p. ನಿಲು ತಂತಿ ಪಿಯಾನೊ. Cottage p. ತಂತಿಗಳು ಓರೆಯಾಗಿ ಏರುತ್ತ ಹೋಗುವ, ಗಿಡ್ಡ ನಿಲು(ತಂತಿ) ಪಿಯಾನೊ. P.-player ಪಿಯಾನೊ ಬಾಜಕ (ಯಂತ್ರ, ಸಲಕರಣೆ). **Pianétte** ಪೀಅನೆಟ್ (ನಾ.) ಸಣ್ಣ ಗಿಡ್ಡ ನಿಲು ಪಿಯಾನೊ. **Pianíno** ಪೀಅನೀನೊ (ನಾ.) ಸಣ್ಣ ನಿಲು ಪಿಯಾನೊ. **Píanist** ಪೀಅನಿಸ್ಟ್ (ನಾ.) ಪಿಯಾನೊ ನುಡಿಸುವವನು ; ಪಿಯಾನೊ ವಾದ್ಯಗಾರ. **Pianóla** ಪೀಅನೋಲ (ನಾ.) ಒಂದು ಬಗೆಯ ಪಿಯಾನೊ ಬಾಜಕ (ಯಂತ್ರ, ಸಲಕರಣೆ)

Piástre, -ter ಪಿಆ್ಯಸ್ಟರ್ (ನಾ.) ಸು., ೪ ಷಿ., ೨ ಪೆ. ಬೆಲೆಯ ಸ್ಪೇಯಿನ್ನ ಒಂದು ಬೆಳ್ಳಿಯ ನಾಣ್ಯ. ಸು., ೨ ಪೆನಿಯಿಂದ ೬ ಪೆನಿಯ ಬೆಲೆಯ, ತುರ್ಕಿಯ ಸಣ್ಣ ನಾಣ್ಯ.

Piázza ಪಿಆ್ಯಟ್ಸ (ನಾ.) (ಮು., ಇಟಲಿಯ ಪಟ್ಟಣಗಳಲ್ಲಿ) ಸಾರ್ವಜನಿಕ ಚೌಕ ಅಥವಾ ಅಂಗಡಿಯ ಚೌಕ. (ಅಮೆ. ಸಂ.) ಮನೆಯ ಕೈಸಾಲೆ.

Píbroch ಪೀಬ್ರಾಕ್(ಖ್) (ನಾ.) ತಿದಿಗೊಳಲಿನಲ್ಲಿ ಬಾಜಿಸುವುದಕ್ಕಾಗಿ (ರಚಿಸಿದ) (ಮು., ವೀರ ಧಾಟಿಯ) ರಾಗಮಾಲಿಕೆ.

Píca ಪೈಕ (ನಾ.) ಒಂದು ಅಳತೆಯ ಅಚ್ಚಿನ ಮೊಳೆ.

Picadór ಪಿಕಡಾರ್ (ನಾ.) (ಗೂಳಿ ಕಾಳಗದಲ್ಲಿ) ಈಟಿಸವಾರ (ಈಟಿಯಿಂದ ಗೂಳಿಯನ್ನು ಚುಚ್ಚಿ, ಅದನ್ನು ಕೆರಳಿಸಿ, ಕಾಳಗದ ಪ್ರಾರಂಭ ಮಾಡುವವನು)

Pícamar ಪಿಕಮಾರ್ (ನಾ.) ಮರದ ಟಾರಿನಿಂದ ಪಡೆದ ಒಂದು ಕಹಿ ಎಣ್ಣೆ.

Picarésque ಪಿಕರೆಸ್ಕ್ (ಗು.) (ಕಾದಂಬರಿ) ತುಂಟರ ಸಾಹಸ ಕೃತ್ಯಗಳನ್ನು ಕುರಿತ.

Picaroón ಪಿಕರೂನ್ (ನಾ., ಕ್ರಿ. ಅಕ.) ತುಂಟ ಕಳ್ಳ ; ಪುಂಡ ; ಕಡಲುಗಳ್ಳ ; ಕಡಲುಗಳ್ಳರ ಹಡಗು. (ಕ್ರಿ.) ಕಡಲುಗಳ್ಳತನ ಅಥವಾ ದರೋಡೆ ಮಾಡು.

Píccaninny, Píck- ಪಿಕನಿನಿ (ನಾ., ಗು.) (ಮು., ನೀಗ್ರೋ ಜನರ, ದ. ಆಫ್ರಿಕದ ಅಥವಾ ಆಸ್ಟ್ರೇಲಿಯದ ದೇಶೀಯರ) ಮಗು. (ಗು.) ಪುಟ್ಟ ; ಮರಿ.

Píccolo ಪಿಕೊಲೊ (ನಾ.) ಒಂದು ತೆರದ ಸಣ್ಣ ಕೊಳಲು (ಸಾಮಾನ್ಯ ಕೊಳಲಿಗಿಂತ ಒಂದು ಅಷ್ಟಮ ಸ್ವರ ಹೆಚ್ಚಾಗಿರುವಂಥದು)

Pice ಪೈಸ್ (ನಾ.) (ಇಂಡಿಯದ) ಕಾಲಾಣೆ(ಯ ತಾಮ್ರದ ನಾಣ್ಯ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pick[1] ಪಿಕ್ (ನಾ., ಕ್ರಿ.) (ಗಟ್ಟಿ ನೆಲವನ್ನು ಅಗೆಯಲು ಉಪಯೋಗಿಸುವ) ಪಿಕಾಸಿ. ಚುಚ್ಚುವ, ಕೆದಕುವ, ಮೊನೆಯ ಅಥವಾ ಚೂಪು ಕವಲು ಗೋಲುಳ್ಳ ಆಯುಧ. Toothp. (Tooth ನೋಡಿ). (ಕ್ರಿ.) ಪಿಕಾಸಿಯಿಂದ (ಹೇಗೊಹಾಗೆ) (ನೆಲವನ್ನು) ಅಗೆ; (ತೂತು, ರಂಧ್ರ, ಮೊ. ನ್ನು) ಈ ರೀತಿ ಮಾಡು. [(ರೂಪ.) P. holes in (Hole ನೋಡಿ)]. (ಹಲ್ಲುಸಂದಿ, ಮೊ. ಗಳಲ್ಲಿ ಸಿಕ್ಕಿಕೊಂಡಿರುವ ಪದಾರ್ಥವನ್ನು ಹೊರದೂಡಲು) ಮೊನೆಯುಳ್ಳ ಸಾಧನದಿಂದ ಚುಚ್ಚು; (ಎಲುಬು, ಪ್ರಾಣಿಯ ಅಟ್ಟೆ, ಮೊ. ಗಳಲ್ಲಿ) ಅಂಟಿಕೊಂಡಿರುವ ಮಾಂಸವನ್ನು ಕಿತ್ತುಹಾಕು; (ಹೂವು, ಹಣ್ಣು, ಮೊ. ನ್ನು ಕಾಂಡದಿಂದ) ಬಿಡಿಸು, ಕೊಯ್ಯಿ; (ಅಲ್ಲಲ್ಲಿ ಆಯ್ದು) ಕೂಡಹಾಕು. (ಹಕ್ಕಿಗಳ ವಿಷಯದಲ್ಲಿ, ಕಾಳು, ಮೊ. ನ್ನು) ಕೊಕ್ಕಿನಿಂದ ಕುಕ್ಕಿ ಎತ್ತಿಕೊ; (ವ್ಯಕ್ತಿಗಳ ವಿಷಯದಲ್ಲಿ, ಆಹಾರ, ಮೊ. ನ್ನು) ಕೊಂಚ ಕೊಂಚವಾಗಿ ಎತ್ತಿಕೊಂಡು ತಿನ್ನು; (ಬಳ. ಮಾ.) ತಿನ್ನು. (ಎಚ್ಚರಿಕೆಯಿಂದ, ಜೋಕೆಯಿಂದ) ಆರಿಸಿಕೊ, ಆಯಿ (P. one's words, way, steps. P. & choose ಅತಿ ಜೋಕೆಯಿಂದ ಆಯಿ). (ಹತ್ತಿ, ಮೊ. ನ್ನು) ಬಿಡಿಸು, ಹಿಂಜು; ಎಳೆದು ಪ್ರತ್ಯೇಕಿಸು [ಮು., P. oakum (Oakum ನೋಡಿ)]. [P. a quarrel with ಜಗಳ ಹೂಡು, ತಗೆ. P. (person's) pocket ಒಬ್ಬನ ಜೇಬಿನಲ್ಲಿರುವುದನ್ನು ಕಳ್ಳತನದಿಂದ ಎತ್ತಿಬಿಡು. P. & steal ಸ್ವಲ್ಪಸ್ವಲ್ಪವಾಗಿ ಕದಿ. P. a lock (ಕಳ್ಳತನದ ಉದ್ದೇಶದಿಂದ) ಮೊಳೆ, ಕಂಬಿ, ಕಳ್ಳ ಬೀಗದ ಕೈ, ಮೊ. ಗಳಿಂದ ಬೀಗ ತೆಗೆ. P. to pieces ಚೂರು ಚೂರಾಗಿ ಕಿತ್ತುಹಾಕು; (ರೂಪ.) (ಒಬ್ಬನಮೇಲೆ) ದ್ವೇಷ ಭಾವದಿಂದ ಟೀಕೆ ಮಾಡು, ವಿಮರ್ಶಿಸು; ತೀವ್ರವಾಗಿ ಖಂಡಿಸು]. P. off ಕಿತ್ತುಹಾಕು; (ಮನುಷ್ಯರು, ಮೊ. ನ್ನು ಉದ್ದೇಶ ಪೂರ್ವಕವಾಗಿ) ಒಬ್ಬರಾದ ಮೇಲೊಬ್ಬರಂತೆ ಗುಂಡು ಹೊಡೆದು ಕೊಲ್ಲು. P. out ಆಯಿ; ಆರಿಸು; (ಒಂದು ವಸ್ತುವಿನ ವಿಷಯದಲ್ಲಿ) ಸುತ್ತಮುತ್ತಲ ವಸ್ತುಗಳಿಂದ ವ್ಯತ್ಯಾಸ ಗ್ರಹಿಸು; (ಹಿನ್ನೆಲೆಯ ಬಣ್ಣವನ್ನು ಬೇರೆ ಬಣ್ಣ ಹಾಕಿದುದರಿಂದ) ಸ್ಪಷ್ಟಪಡಿಸು, ಎದ್ದುಕಾಣುವಂತೆ ಮಾಡು (*With* ಉಪ. ಮೊದನೆ). (ಒಂದು ವಾಕ್ಯ, ಮೊ. ಗಳ) ಅರ್ಥ ಗ್ರಹಿಸು. (ರಾಗವನ್ನು) ಕಿವಿಯಿಂದ ಕೇಳಿ ಅದರಂತೆ (ಪಿಯಾನೊ ವಾದ್ಯದಲ್ಲಿ) ನುಡಿಸು. P. up ಪಿಕಾಸಿಯಿಂದ (ನೆಲ, ಮೊ. ನ್ನು) ಅಗೆ. ಕೈಯಿಂದ ಹಿಡಿದು ಎತ್ತಿಕೊ. (ಬಿದ್ದವನು) ಮೇಲಕ್ಕೇಳು. (ಜೀವನೋಪಾಯ, ಲಾಭ, ಉಪಾಯ, ಸುದ್ದಿ—ಇವನ್ನು) ಪಡೆ, ಗಳಿಸು, ಸಂಪಾದಿಸು. ತಾನು ಹೋಗುತ್ತಿರುವಾಗ (ಒಬ್ಬನನ್ನು, ಪದಾರ್ಥವನ್ನು) ತನ್ನೊಡನೆ ಕರೆದುಕೊಂಡು, ಕುಳ್ಳಿರಿಸಿಕೊಂಡು, ತೆಗೆದುಕೊಂಡು, ಹೋಗು (The train stops to p. up passengers). (ತಪ್ಪಿದ ದಾರಿ, ದೇಹ ಪುಷ್ಟಿ, ಉತ್ಸಾಹ, ಮೊ. ನ್ನು) ಮತ್ತೆ ಪಡೆ, ಕೂಡಿಕೊ; ಮತ್ತೆ ಆರೋಗ್ಯ ಪಡೆ; ಚೇತರಿಸಿಕೊ. (—ಒಡನೆ) ಪರಿಚಯ ಪಡೆ (*With* ಉಪ. ಮೊದನೆ). (ವ್ಯಾಯಾಮದ ಆಟದಲ್ಲಿ ಪರ್ಯಾಯವಾಗಿ) ಪಕ್ಷ ಆಯಿ [**P.-up**[1] (ನಾ.) ಹೀಗೆ ಆಯ್ದ ಪಕ್ಷಗಳ ಆಟ]. (ಅನ್ವೇಷಣ ದೀಪ, ನಿಸ್ತಂತು ವಾರ್ತಾ ಸಲಕರಣೆ, ಮೊ. ಗಳಿಂದ) ಉದ್ದೇಶ ಪೂರ್ವಕವಾಗಿ, ನೋಡಿ, ಕೇಳಿ, ಗ್ರಹಿಸು (I picked up Moscow last night). **Picklock** (ಕಳ್ಳ ಬೀಗದ ಕೈ, ಮೊ. ಗಳಿಂದ) ಬೀಗ ತೆಗೆಯುವವನು; ಕಳ್ಳತನದಿಂದ ಬೀಗ ತೆಗೆಯಲು ಉಪಯೋಗಿಸುವ ಸಾಧನ. **P.-me-up** ಉತ್ತೇಜಕ, ಶಕ್ತಿ ವರ್ಧಕ,—ಪಾನೀಯ (ರೂಪ. ಸಹ). **Pickpocket** ಜೇಬುಗಳ್ಳ; ಕಿಸೆಗಳ್ಳ. **Pick-thank** (ಪ್ರಾಚೀ. ಪ್ರ.) ಹೊಗಳು ಭಟ್ಟ. **P.-up**[2] (ಮು., ಕ್ರಿಕೆಟ್ ಆಟದಲ್ಲಿ) ಚೆಂಡನ್ನು ಎತ್ತಿಕೊಳ್ಳುವುದು. **Pícker** (ನಾ.) ಆಯ್ಕೆಗಾರ; ಸಂಗ್ರಹಕಾರ; ಕೂಡಹಾಕುವವನು (Hop, rag, -p.). ಅಗೆಯುವ, ಬಿಡಿಸುವ, ಹಿಂಜುವ, ಚುಚ್ಚುವ, ಎತ್ತಿಕೊಳ್ಳುವ,—ಸಾಧನ. **Pícking** (ನಾ.) (ಕ್ರಿಯಾರ್ಥಗಳಲ್ಲಿ); [ಮು., P. & stealing (Pick & Steal ನೋಡಿ)]. (ಬ. ವ. ದಲ್ಲಿ) ಆಯ್ದದ್ದು; ಆರಿಸಿದ ಚೂರುಪಾರು; ಕಳೆದುಳಿದ ಚೂರುಪಾರು. (ಬ. ವ. ದಲ್ಲಿ) ಸಣ್ಣ ಕಳವುಗಳು, ಚೋರಿಗಳು.

Pick[2] ಪಿಕ್ (ನಾ.) ಆಯ್ದು ತೆಗೆದದ್ದು; ಆಯ್ಕೆ; ಆಯ್ದದ್ದು; (ಒಂದರ) ಅತ್ಯುತ್ತಮ ಭಾಗ, ಆಯಪಾಣಿ (*Of* ಉಪ. ಮೊದನೆ)

Píck-a-back ಪಿಕ್-ಅ-ಬ್ಯಾಕ್ (ಕ್ರಿ. ವಿ.) (ಒಬ್ಬನನ್ನು, ಒಂದನ್ನು, ಮೈಮೇಲೆ ಹೊತ್ತುಕೊಂಡು ಹೋಗುವ ರೀತಿ) (ಮೂಟೆಯಂತೆ, ಕೂಸು ಮರಿಯಂತೆ) ಬೆನ್ನಮೇಲೆ, ಹೆಗಲಮೇಲೆ (ಹೊತ್ತು)

Píckax(e) ಪಿಕ್‌ಆ್ಯಕ್ಸ್ (ನಾ., ಕ್ರಿ.) ಪಿಕಾಸಿ. (ಕ್ರಿ.) ಪಿಕಾಸಿಯಿಂದ (ನೆಲ, ಮೊ. ನ್ನು) ಅಗೆ; ಪಿಕಾಸಿಯಿಂದ ಕೆಲಸ ಮಾಡು.

Píckerel ಪಿಕೆರೆಲ್ (ನಾ.) 'ಪೈಕ್' ಮೀನಿನ ಮರಿ.

Pícket ಪಿಕೆಟ್ (ನಾ., ಕ್ರಿ.) (ಬೇಲಿ ಹಾಕಲು, ಕುದುರೆ, ಮೊ. ನ್ನು ಕಟ್ಟಲು, ನೆಲದಲ್ಲಿ ಹೊಡೆದ) ಮೊನೆಯ ದಸಿ, ಗೂಟ. (ಚರಿತ್ರೆ) ಒಂದು ತೆರದ ಸೈನಿಕ ಶಿಕ್ಷೆ(ಯಾಗಿ ಸಿಪಾಯಿಯನ್ನು ಅದರಮೇಲೆ ನಿಲ್ಲಿಸುತ್ತಿದ್ದ ಮೊನಚು ದಸಿ). (ಸೈನಿಕ: piquet, picquet ಎಂದು ಸಹ) ಶತ್ರುಗಳ ಬರುವಿಕೆಯನ್ನು ಹೊಂಚು ನೋಡುವುದಕ್ಕಾಗಿ (ಗಡಿಯ ಹೊರಗೆ ಕಳುಹಿಸಿದ) (Outlying p.), ಅಥವಾ ಪಾಳೆಯದಲ್ಲಿ ಸಿದ್ಧವಾಗಿಟ್ಟಿರುವ (Inlying p.) ಸಣ್ಣ ಸೈನ್ಯ ದಳ; ಕಾವಲು ದಳ; ಉಕ್ಕಡ ಕಾವಲು; ಗಡಿ ಕಾವಲು. (ಆಧುನಿಕ ಪ್ರ., ಮು.) ರಕ್ಷಕ ಸೈನ್ಯವಿರುವ ಪಟ್ಟಣದಲ್ಲಿ ಪೋಲೀಸು ಕೆಲಸ ಮಾಡುವ ಬೀಡು ಪಹರೆಯವನು. (ಸಾ., ಬ. ವ. ದಲ್ಲಿ) (ಮುಷ್ಕರ ಕಾಲ, ಮೊ. ಗಳಲ್ಲಿ ತಮ್ಮವರು ಕೆಲಸಕ್ಕೆ ಹೋಗದಂತೆ ತಡೆಯುವುದಕ್ಕಾಗಿ, ಪ್ರೇರಿಸುವುದಕ್ಕಾಗಿ, ಕೆಲಸಗಾರ ಸಂಸ್ಥೆಯವರು ಒಟ್ಟಿಗೆ ಅಥವಾ ಬಿಡಿಯಾಗಿ ನಿಲ್ಲಿಸಿದ) ತಡೆ ಕಾವಲುಗಾರರು; ಮುಷ್ಕರ ಕಾವಲುಗಾರರು. (ಕ್ರಿ.) ದಸಿ ನೆಟ್ಟು (ಸ್ಥಳವನ್ನು) ಭದ್ರಪಡಿಸು, (ಸ್ಥಳಕ್ಕೆ) ಬೇಲಿ ಹಾಕು. ಗೂಟಕ್ಕೆ ಕಟ್ಟಿಹಾಕು. (ಜನರನ್ನು) ಕಾವಲು ಹಾಕು; (ಕೆಲಸಗಾರರನ್ನು) (ಮುಷ್ಕರದ) ತಡೆಕಾವಲಿನಿಂದ ಮುತ್ತು; (ಮುಷ್ಕರದ) ತಡೆಕಾವಲಾಗಿರು.

Píckle ಪಿಕ್‌ಲ್ (ನಾ., ಕ್ರಿ. ಸಕ.) ಮಾಂಸ, ತರಕಾರಿ, ಮೊ. ನ್ನು ಊರಿಡುವ ಉಪ್ಪುಕರಗಿಸಿದ ನೀರು, ಹುಳಿ ರಸ ಅಥವಾ ಸಿರ್ಕಾ, ಮೊ. ದ್ರವ. [Rod in p. (Rod ನೋಡಿ)]. (ಮು., ಬ. ವ. ದಲ್ಲಿ) ಈ ದ್ರವದಲ್ಲಿ ಊರಹಾಕಿದ ತರಕಾರಿ, ಮೊ. ಆಹಾರಪದಾರ್ಥ; ಊರುಗಾಯಿ; ಉಪ್ಪಿನಕಾಯಿ. ತೊಳೆಯುವುದು, ಮೊ. ಕ್ಕಾಗಿ ಉಪಯೋಗಿಸುವ ಆಮ್ಲ ದ್ರಾವಣ. (Sad, sorry, nice, p.—ಸ್ಥಿತಿ, ಅವಸ್ಥೆ). ತುಂಟ ಮಗು. (ಕ್ರಿ.) ಉಪ್ಪಿನ ಅಥವಾ ಹುಳಿಯ ದ್ರವದಲ್ಲಿ ಊರಹಾಕು; ಊರಿಕ್ಕು (ಮು., ಭೂ. ಕೃ. ನಲ್ಲಿ); ಆಮ್ಲ ದ್ರಾವಣದಿಂದ ಸಂಸ್ಕರಿಸು, ತೊಳೆ. (ನಾವೆ) (ಬೆನ್ನಮೇಲೆ ಚಡಿಯೇಟು ಹೊಡೆದಮೇಲೆ) ಬೆನ್ನಿಗೆ ಉಪ್ಪನ್ನು ಅಥವಾ ಹುಳಿ ರಸವನ್ನು ಉಜ್ಜು.

Pícksome ಪಿಕ್‌ಸಮ್ (ಗು.) ಮೆಚ್ಚಿಸಲು ಕಷ್ಟವಾದ; ಅತಿ ಸೂಕ್ಷ್ಮ ರುಚಿಯ.

Píckwick ಪಿಕ್‌ವಿಕ್ (ನಾ.) ಒಂದು ಬಗೆಯ ಅಗ್ಗದ ಹೊಗೆಸುತ್ತು, ಚುಟ್ಟಾ. **Pickwíckian** ಪಿಕ್‌ವಿಕಿಯನ್ (ಗು.) (ಹಾಸ್ಯ ಪ್ರ.) (ಮಾತುಗಳ ವಿಷಯದಲ್ಲಿ) ಪಿಕ್‌ವಿಕಿನ (ಪರಿಭಾಷೆಯ, ರಚನಾತ್ಮಕ, ರಹಸ್ಯ) ಅರ್ಥದಲ್ಲಿ ಪ್ರಯೋಗಿಸಿದ (Dickens ಎಂಬ ಇಂಗ್ಲಿಷ್ ಕಾದಂಬರಿಕಾರನ Pickwick Papers ಎಂಬ ಕಾದಂಬರಿಯ ಕಥಾ ನಾಯಕನ ಹೆಸರಿನಿಂದ)

Pícnic ಪಿಕ್‌ನಿಕ್ (ನಾ., ಕ್ರಿ. ಅಕ.) ವನ ಭೋಜನ (ಕೂಡಿದ ಬಯಲ ಸಂತೋಷ) ಗೋಷ್ಠಿ; ಬಯಲೂಟ. (ಬಳ. ಮಾ.) ವಿಶೇಷ ಹಿತವಾದದ್ದು ಅಥವಾ ಸುಲಭ ಸಾಧ್ಯವಾದದ್ದು (No p. ಅಷ್ಟು ಸುಲಭ ಕಾರ್ಯವಲ್ಲ). (ಕ್ರಿ.) ವನ ಭೋಜನ ಗೋಷ್ಠಿಯಲ್ಲಿ ಸೇರಿರು. **Pícnicker** (ನಾ.); **Pícnicky** (ಗು.) (ಬಳ. ಮಾ.) —ಗೆ ಸಂಬಂಧಪಟ್ಟ; —ಯ ವೈಲಕ್ಷಣ್ಯದ.

Picót ಪಿಕೊ(ಟ್) (ಅಲಂಕಾರ ಪಟ್ಟಿ, ಮೊ. ಗಳ) ಅಂಚು ಕಟ್ಟಿನಲ್ಲಿಯ ಹುರಿ, ಕುಣಿಕೆ, ವಂಕಿ.

Picquet. **Picket** ನೋಡಿ.

Pícric ಪಿಕ್‌ರಿಕ್ (ಗು.) P. acid (ಬಣ್ಣ ಕಟ್ಟುವುದು, ಶಸ್ತ್ರಚಿಕಿತ್ಸೆ ಮತ್ತು ಸಿಡಿಮದ್ದು—ಇವುಗಳಲ್ಲಿ ಉಪಯೋಗಿಸುವ) ಹಳದಿಯ ಬಣ್ಣದ ಬಹು ಕಹಿಯಾದ ಒಂದು ಆಮ್ಲ ಪದಾರ್ಥ: ಪಿಕ್‌ರಿಕ್ ಆಮ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pict ಪಿಕ್ಟ್ (ನಾ.) ಉ. ಬ್ರಿಟನ್ನಿನಲ್ಲಿಯ ಒಂದು ಪುರಾತನ ಜನಾಂಗದವನು. **Píctish** (ಗು.)

Píctograph, Pictórial. Picture ನೋಡಿ.

Pícture ಪಿಕ್‌ಚ್ಯುರ್, —ಚರ್ (ನಾ., ಕ್ರಿ. ಸಕ.) (ಮು., ಕಲಾ ಕೃತಿಯಾಗಿ ಮಾಡಿದ) ವರ್ಣಚಿತ್ರ, ರೇಖಾಚಿತ್ರ; ಚಿತ್ರ; ಭಾವಚಿತ್ರ; ಪ್ರತಿರೂಪ; ಪಟ; ತಸಬೀರು. ಸುಂದರ ವಸ್ತು (Her hat is a p.). ದೃಶ್ಯ; ಮನಸ್ಸಿನಮೇಲೆ ಮುದ್ರಿತವಾದ ಒಟ್ಟು ದೃಶ್ಯ. (ರೂಪ.) ಸಂದರ್ಭ, ಸನ್ನಿವೇಶ, ವಿಷಯ (Out of the p. ವಿಷಯಕ್ಕೆ ಹೊರಗಾದ, ಅಸಂಗತವಾದ. Come into the p. ದೃಷ್ಟಿಗೆ ಬರು; ಸ್ವಾರಸ್ಯವಾಗು; ಸಂಬಂಧಪಡು). (She looks the very p. of health ಆಕೆ ಆರೋಗ್ಯವೇ ಮೂರ್ತಿವೆತ್ತಂತೆ ಕಾಣುತ್ತಾಳೆ). [P.-book (ಮಕ್ಕಳಿಗಾಗಿ) ಬಹುಮಟ್ಟಿಗೆ ಅಥವಾ ಪೂರ್ತಿಯಾಗಿ ಚಿತ್ರಗಳಿಂದ ಕೂಡಿದ ಪುಸ್ತಕ: (ಮಕ್ಕಳ) ಚಿತ್ರ ಪುಸ್ತಕ. P.-card ಚಿತ್ರದ ಇಸ್ಪೀಟೆಲೆ (ರಾಜ, ರಾಣಿ, ಗುಲಾಮು). P.-gallery ಚಿತ್ರ ಪ್ರದರ್ಶನ ಮಂದಿರ; ಚಿತ್ರಶಾಲೆ; ಚಿತ್ರ ಸಂಗ್ರಹ. P. postcard (ಹಿಂಬದಿಯಲ್ಲಿ) ಚಿತ್ರವಿರುವ ಅಂಚೆಯ ಕಾರ್ಡು. P.-writing (ಆದಿ ಕಾಲದ ಚಿತ್ರ ಲಿಪಿಯಂತೆ, ಘಟನೆಗಳು, ಮೊ. ನ್ನು ಚಿತ್ರಗಳ ಮೂಲಕ ಬರೆದಿಡುವ) ಒಂದು ಬಗೆಯ ಚಿತ್ರ ಲಿಪಿ, ಚಿತ್ರ ಲೇಖನ. Moving Pictures (ಸಂಕ್ಷಿಪ್ತ: The Pictures) ಚಲನ ಚಿತ್ರಗಳು. P.-palace, -theatre, -drome ಚಲನ ಚಿತ್ರ ಪ್ರದರ್ಶನ ಶಾಲೆ, ಮಂದಿರ]. (ಕ್ರಿ.) ಚಿತ್ರಿಸು; ಚಿತ್ರಿಸಿಕೊ; ಚಿತ್ರದಂತೆ, ಕಣ್ಣಿಗೆ ಕಟ್ಟುವಂತೆ, —ವರ್ಣಿಸು; (ತನ್ನಲ್ಲಿ) ಭಾವಿಸಿಕೊ, ಕಲ್ಪಿಸಿಕೊ. **Pícturize** (ಕ್ರಿ. ಸಕ.) ಚಲನ ಚಿತ್ರ ತಯಾರಿಸು. **Píctograph** (ನಾ.) ಚಿತ್ರ ಸಂಕೇತ; ಆದಿ ಕಾಲದ ಚಿತ್ರ ಸಂಕೇತಗಳ ಬರವಣಿಗೆ; ಚಿತ್ರಲಿಪಿ. **Pictográphic** (ಗು.); **Pictógraphy** ಪಿಕ್ಟಾಗ್ರಫಿ (ನಾ.); **Pictórial** ಪಿಕ್ಟೋರಿಯಲ್ (ಗು., ನಾ.) ಚಿತ್ರದ(ಗಳ) (ಮೂಲಕ ನಿರೂಪಿಸಿದ); ಚಿತ್ರಾತ್ಮಕ; ಸಚಿತ್ರ; ಚಿತ್ರದಂತೆ ಸ್ಪಷ್ಟವಾದ. (ನಾ.) ಚಿತ್ರಗಳು ಮುಖ್ಯ ಲಕ್ಷಣವಾಗಿರುವ (ವೃತ್ತ) ಪತ್ರಿಕೆ: ಚಿತ್ರ(ಮಯ) ಪತ್ರಿಕೆ. **Pictórially** (ಕ್ರಿ. ವಿ.); **Picturésque** ಪಿಕ್ಚ್ಯುರೆಸ್ಕ್, ಪಿಕ್ಚರೆಸ್ಕ್ (ಗು.) ಆಕರ್ಷಕ ಚಿತ್ರದಂಥ; —ಚಿತ್ರಕ್ಕೆ ವಸ್ತುವಾಗಲು ತಕ್ಕ; ಚಿತ್ರ ಯೋಗ್ಯ; (ಭಾಷೆ, ಮೊ. ವು) ಕಣ್ಣಿಗೆ ಕಟ್ಟಿದಂತೆ ಸುಸ್ಪಷ್ಟವಾದ. **Picturésquely** (ಕ್ರಿ. ವಿ.); **Picturésqueness** (ನಾ.)

Píddle ಪಿಡ್‌ಲ್ (ಕ್ರಿ. ಅಕ.) (ಪ್ರಾಚೀ. ಪ್ರ.) ಹುಡುಗಾಟಿಕೆಯಾಗಿ, ಲಾಘವದಿಂದ, —ಕೆಲಸಮಾಡು, ವರ್ತಿಸು. (ಬಳ. ಮಾ., ಮಕ್ಕಳ ಮಾತು) ಉಚ್ಚೆ ಹೊಯ್ಯಿ.

Píddock ಪಿಡಕ್ (ನಾ.) ಎರೆಯಾಗಿ ಉಪಯೋಗಿಸುವ ಒಂದು ಬಗೆಯ ಇಚ್ಚಿಪ್ಪಿನ ಪ್ರಾಣಿ.

Pídgin ಪಿಡ್‌ಜಿನ್, **Pígeon** ಪಿಜನ್ (ಗು.) [P. English ಚೀಣರೂ ಯೂರೋಪಿಯನ್ನರೂ ಪರಸ್ಪರ ಬಳಸುವ (ಅಶುದ್ಧ ಉಚ್ಚಾರಣೆಯ) ಮು., ಇಂಗ್ಲಿಷ್ ಪದಗಳ ವಿಕಾರ ಭಾಷೆ]. (ಬಳ. ಮಾ.) ಒಬ್ಬನ ಕೆಲಸ, ವೃತ್ತಿ.

Pie[1] ಪೈ (ನಾ.) =Magpie.

Pie[2] ಪೈ (ನಾ.) (ಹಣ್ಣು, ಮಾಂಸ, ಮೊ. ನ್ನು ಹುದುಗಿ ಬೇಯಿಸಿದ) ತುಂಬು ಕಡುಬು [Apple p. ಸೇಬಿನ ಕಡುಬು. Have a finger in the p. (Finger ನೋಡಿ)]. Bran p. (ಕ್ರಿಸ್‌ಮಸ್ ಹಬ್ಬ, ಮೊ. ಗಳಲ್ಲಿ) (ಅದೃಷ್ಟವಿದ್ದಂತೆ ಕೈಗೆ ಸಿಕ್ಕಿದ ಪದಾರ್ಥವನ್ನು ತೆಗೆದುಕೊಳ್ಳಲು) ಆಟದ ಸಾಮಾನು, ಮೊ. ಗಳನ್ನು ಹೂತಿಟ್ಟಿರುವ ಹೊಟ್ಟು ತುಂಬಿದ ತೊಟ್ಟಿ. Mud p. (Mud ನೋಡಿ). Piecrust ಬೇಯಿಸಿದ ಕಡುಬಿನ ಗಟ್ಟಿ ಮೇಲ್ಪದರ. Pieman ಕಡುಬು ಮಾರುವವನು.

Pie[3] ಪೈ (ನಾ., ಕ್ರಿ. ಸಕ.) (ಮುದ್ರಣ) ಅವ್ಯವಸ್ಥೆಯಾಗಿ ಬೆರೆತುಹೋದ ಅಚ್ಚಿನ ಮೊಳೆಗಳು (=Printers' p.). (ರೂಪ.) ಅವ್ಯವಸ್ಥೆ; ಗೊಂದಲ. (ಕ್ರಿ.) (ಅಚ್ಚಿನ ಮೊಳೆಗಳನ್ನು) ಅವ್ಯವಸ್ಥೆಯಾಗಿ ಬೆರಸಿಬಿಡು.

Pie[4] ಪೈ (ನಾ.) (ಆಂ. ಇಂ.) (ಬಿಡಿ)ಕಾಸು, (ತಾಮ್ರದ ನಾಣ್ಯ); ಒಂದಾಣೆಯ $\frac{1}{12}$ ಭಾಗ.

Píebald ಪೈಬಾಲ್ಡ್ (ಗು.) (ಸಾ., ಪ್ರಾಣಿಯ, ಮು., ಕುದುರೆಯ, ವಿಷಯದಲ್ಲಿ) ಒಂದು ಕ್ರಮವಿಲ್ಲದೆ ಅಳವಟ್ಟ ಎರಡು ಬಣ್ಣಗಳ (ಮು., ಕಪ್ಪು ಬಿಳುಪಿನ). (ರೂಪ.) ಹಲವು ಬಣ್ಣದ; ಬಣ್ಣ ಬಣ್ಣದ; (ಕಲ) ಬೆರಕೆಯ.

Piece ಪೀಸ್ (ನಾ., ಕ್ರಿ. ಸಕ.) (ಒಂದು ವಸ್ತುವಿನ) ಚೂರು, ತುಂಡು, ತುಣುಕು, ಮುರುಕು, ಅಂಶ, ಖಂಡ (In pieces ಚೂರು ಚೂರಾಗಿ, ಛಿನ್ನ ಭಿನ್ನವಾಗಿ). ಆವರಣ ಹಾಕಿದ ಜಮೀನು ಭಾಗ (Of ಉಪ. ದೊಡನೆ). (ಒಂದರಿಂದ) ಪ್ರತ್ಯೇಕಿಸಿದ ಭಾಗ. [(Give) a piece of one's mind (Give ನೋಡಿ)]. ಸುತ್ತಿ ಇಟ್ಟಿರುವ, ಒಂದು ಗೊತ್ತಾದ ವೊತ್ತ: ಥಾನು, ಮೊ. ದು (ಗೋಡೆಗೆ ಅಂಟಿಸುವ ಚಿತ್ರ ಕಾಗದದ ವಿಷಯದಲ್ಲಿ ೧೨ ಗಜದ ಥಾನು, ಮಸ್ಲಿನ್ ಬಟ್ಟೆಯ ವಿಷಯದಲ್ಲಿ ೧೦ ಗಜದ್ದು, ಇತ್ಯಾದಿ). (ದ್ರಾಕ್ಷಾ ಮದ್ಯ, ಮೊ. ನ್ನು ಹಾಕಿಟ್ಟ) ಹಲವು ಅಳತೆಗಳ ಪೀಪಾಯಿ. (P. of work ಒಂದು ಕೆಲಸ). ಉದಾಹರಣೆ, ಮಾದರಿ (A p. of impudence. A fine p. of painting, cricket, etc.). [P. of goods (Good ನಾ., ನೋಡಿ)]. ಫಿರಂಗಿ, ಬಂದೂಕು, ಪಿಸ್ತೂಲು. (ಚದುರಂಗ, ಡ್ರಾಫ್ಟ್ಸ್, ಮೊ. ಗಳ) ಆಟದ ಕಾಯಿ. ನಾಣ್ಯ (Crown, Penny, p. P. of eight ಸ್ಪೆಯ್ನಿನ ಡಾಲರ್ ನಾಣ್ಯ). ಚಿತ್ರ. ಸಣ್ಣ ಸಾಹಿತ್ಯ, ಸಂಗೀತ, —ಕೃತಿ. ನಾಟಕ. [Paid by the p. ಮಾಡಿದಷ್ಟು ಕೆಲಸಕ್ಕೆ ಕೂಲಿಕೊಡುವ. Of a p. (—ಕ್ಕೆ) ಸಮನಾಗಿ, ಹೊಂದಿಕೆಯಾಗಿ (*With* ಉಪ. ದೊಡನೆ). P.-goods (ಗೊತ್ತಾದ ಉದ್ದಗಳಲ್ಲಿ ನೆಯ್ದ) ಗಿರಣಿ ಬಟ್ಟೆಗಳು (ಮು., ಲ್ಯಾಂಕಷಯರಿನ ಹತ್ತಿ ಬಟ್ಟೆಗಳು). P.-work (ಮಾಡಿದಷ್ಟು ಕೆಲಸಕ್ಕೆ ಕೂಲಿ ಕೊಡುವ) ಚಿಲ್ಲರೆ ಕೆಲಸ, ತುಂಡು ಕೆಲಸ]. (ಕ್ರಿ.) ಒಟ್ಟಿಗೆ ಸೇರಿಸು; ಒಂದುಗೂಡಿಸು; ನೂಲುವುದರಲ್ಲಿ ಎಳೆಗೂಡಿಸು [**Piécer** (ನಾ.)]. (ಒಂದನ್ನು ಮತ್ತೊಂದಕ್ಕೆ) ಹೊಂದಿಸು, ಹದ್ದಿಸು (*On, to* another). (ಸಾಲದುದಕ್ಕೆ) ಪೂರಣ ಮಾಡು, ಭರ್ತಿ ಮಾಡು (*Out*); (ಕಥೆ, ತತ್ತ್ವ, ಸಾಕ್ಷ್ಯ ಸರಣಿ—ಇವುಗಳ) ಭಾಗಗಳನ್ನು ಜೋಡಿಸಿ ಸರಿಹೊಂದಿಸು; ಒಟ್ಟುಗೂಡಿಸು (*Together*); ತೇಪೆ ಹಾಕು (*Up* ಉಪ. ದೊಡನೆ). **Piécemeal** ಪೀಸ್‌ಮೀಲ್ (ಕ್ರಿ. ವಿ., ಗು., ನಾ.) ತುಂಡು ತುಂಡಾಗಿ; ಭಾಗ ಭಾಗವಾಗಿ; ಸ್ವಲ್ಪ ಸ್ವಲ್ಪವಾಗಿ (=By p.). (ಗು.) —ಮಾಡಿದ. (ನಾ.) ಸಣ್ಣ ಚೂರು, ಭಾಗ.

Piece de resistance (F) ಪ್ಯೇಸ್ ಡ ರೆಸಿಸ್ಟಾನ್ಸ್ (ನಾ.) ಊಟದಲ್ಲಿ ಸಾರವತ್ತಾದ ಭಕ್ಷ್ಯ (ರೂಪ. ಸಹ)

Piécemeal. Piece ನೋಡಿ.

Pied ಪೈಡ್ (ಗು.) ಬೇರೆ ಬೇರೆ ಭಾಗಗಳು ಬೇರೆ ಬೇರೆ ಬಣ್ಣವಾಗಿರುವ; ಬಣ್ಣ ಬಣ್ಣದ.

Pied a terre ಪ್ಯೇಡಾ ಟೇರ್ (ನಾ.) (ಒಬ್ಬನಿಗೆ) ಹೆಜ್ಜೆ ಇಡಲು ಸ್ಥಳ; ಕಾಲೆಡೆ; (ತಾತ್ಕಾಲಿಕವಾಗಿ) ನಿಲ್ಲೆಡೆ.

Pier ಪಿಯರ್ (ನಾ.) (ಸಮುದ್ರದ) ಅಲೆತಡೆ; ಹಡಗಿನ ಇಳಿದಾಣ: ಹಡಗು ಕಟ್ಟೆ. ಗಾಳಿಸವಾರಿಗಾಗಿ ತಿರುಗಾಡಲು ಅಥವಾ ಹಡಗಿನಿಂದ ಇಳಿಯಲು ಮಾಡಿರುವ, ಕೆಳಗಡೆ ತೆರಪಾಗಿರುವ, ಸಮುದ್ರದೊಳಕ್ಕೆ ಚಾಚಿಕೊಂಡಿರುವ, ಕಬ್ಬಿಣದ ಅಥವಾ ಮರದ ಕಟ್ಟಡ. ಪಕ್ಕ ಪಕ್ಕದ ಎರಡು ಸೇತುವೆ ಕಮಾನುಗಳ ಮಧ್ಯದ ಆಸರೆ. ಕಂಬ; ಕಿಟಕಿಗಳು, ಮೊ. ಗಳ ನಡುವಣ ಗಟ್ಟಿ ಕಟ್ಟಡ. P.-glass (ಹಿಂದೆ) ಕಿಟಕಿಗಳ ನಡುವಣ ಗೋಡೆಯ ಭಾಗವನ್ನು ಮುಚ್ಚಲು ಉಪಯೋಗಿಸುತ್ತಿದ್ದ ದೊಡ್ಡ ಕನ್ನಡಿ. **Píerage** (ನಾ.) ಹಡಗು ಕಟ್ಟೆಯ ಬಾಡಿಗೆ.

Pierce ಪಿಯರ್ಸ್ (ಕ್ರಿ.) (ಮೊನಚಾದ ಆಯುಧ, ಮೊ. ಗಳ ವಿಷಯದಲ್ಲಿ; ಚಳಿ, ನೋವು, ದುಃಖ, ನೋಟ, ಸೂಕ್ಷ್ಮ ಗ್ರಹಣ, ವಿವೇಚನಾಪರ, ಕಿರಿಚು, ಮೊ. ಗಳ ವಿಷಯದಲ್ಲಿ ರೂಪಕ) ಚುಚ್ಚು; ಚುಚ್ಚಿ ಒಳಹೊಗು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿವಿ; ಇರಿ; ಭೇದಿಸು. (ವಸ್ತುವನ್ನು, ಸೂಜಿ, ಮೊ. ಗಳಿಂದ) ಚುಚ್ಚು (*With* ಉಪ. ದೊಡನೆ). (ಪೀಪಾಯಿ, ಮೊ. ಗಳಲ್ಲಿ) ತೂತು ಕೆಡವು, ರಂಧ್ರ ಮಾಡು. ಬಲವಂತದಿಂದ (ಒಂದರೊಳಕ್ಕೆ, ಒಂದರ ಒಳಹಾದು) ದಾರಿ ಮಾಡಿಕೊಂಡು, ನುಗ್ಗಿಕೊಂಡು, ಹೋಗು (*Through, into*, ಮೊ. ಉಪ. ದೊಡನೆ). **Piércingly** (ಕ್ರಿ. ವಿ.)

Piérian ಪೈಇಯರಿಯನ್, —ಎರಿ— (ಗು.) (ಕಾವ್ಯ, ಮೊ.) (ಕಲಾಭಿಮಾನಿ ದೇವತೆಗಳ ನೆಲೆವೀಡೆಂದು ಪ್ರಸಿದ್ಧವಾಗಿದ್ದ, ಗ್ರೀಸಿನ ಉ. ಥೆಸಲಯ ಪ್ರಾಂತದಲ್ಲಿಯ) ಪೈಯೆರಿಯದ.

Piérrot ಪ್ಯೈರೋ(ೞ), ಪೀಯೆರೋ (ನಾ., ಸ್ತ್ರೀ. Pierrette) ಫ್ರೆಂಚ್ ಮೂಕ ನಾಟಕದ ಪಾತ್ರ. ಮುಖ ಬಿಳುಪು ಮಾಡಿಕೊಂಡು ಬಿಳಿಯ ದಗಲೆ ತೊಟ್ಟು ತಿರುಗುವ ಗಾಯಕ.

Piéta (It.) ಪ್ಯೇಟಾ (ನಾ.) ತೊಡೆಯಮೇಲೆ ಕ್ರಿಸ್ತನ ಶವವನ್ನಿಟ್ಟು ಕೊಂಡಿರುವ ಮೇರಿಯ ಚಿತ್ರ, ವಿಗ್ರಹ.

Píety ಪೈಎಟಿ (ನಾ.) ಧರ್ಮಶ್ರದ್ಧೆ, ನಿಷ್ಠೆ; ದೈವ ಭಕ್ತಿ; ಶ್ರದ್ಧಾ ಭಕ್ತಿ; (ಮಾತಾಪಿತೃಗಳಲ್ಲಿ, ಗುರುಹಿರಿಯರಲ್ಲಿ) ಭಕ್ತಿ. **Píetism** —ಇಸಮ್ (ನಾ.) ೧೭ನೆಯ ಶ. ಮಾ. ದಲ್ಲಿ, ಕ್ರೈಸ್ತ ಮತದ ಲ್ಯೂಥರ್ ಸಂಪ್ರದಾಯದಲ್ಲಿ ಶ್ರದ್ಧೆಯ ಪುನರುಜ್ಜೀವನಕ್ಕಾಗಿ Spener ಎಂಬಾತನು ನಡಸಿದ ಚಳವಳಿ. ಭಕ್ತಿ ಭಾವ; ಭಕ್ತಿಭಾವೋದ್ರೇಕ; ಭಕ್ತಿಯ ಆಡಂಬರ. **Píetist** (ನಾ.) (ಹಾಸ್ಯವಾಗಿ ಕೊಟ್ಟ ಹೆಸರು) ಸ್ಪೆನರನ ಅನುಯಾಯಿ; ಗಾಢ ಭಕ್ತಿಯುಳ್ಳವನು. **Pietístic(al)** (ಗು.)

Piezómeter ಪೈಎಜಾಮಿಟರ್ (ನಾ.) (ದ್ರವ ವಸ್ತುಗಳ) ಒತ್ತಡದ, ಪೀಡನದ, ಪರಿಮಾಣವನ್ನು ಅಳೆಯುವ ಸಲಕರಣೆ: ಪೀಡನ ಮಾಪಕ.

Piffle ಪಿಫ಼ಲ್ (ಕ್ರಿ. ಅಕ., ನಾ.) (ಅಸಂ.) ಲಾಘವವಾಗಿ, ಕ್ಷುಲ್ಲಕವಾಗಿ, ಅಲಕ್ಷ್ಯವಾಗಿ,—ಮಾತನಾಡು, ವರ್ತಿಸು. (ನಾ.) ಅವಿವೇಕದ ಮಾತು; ಅಸಂಬದ್ಧ ಪ್ರಲಾಪ. ಪೊಳ್ಳು, ಟೊಳ್ಳು; ರೊಡ್ಡು. **Piffler** (ನಾ.); **Piffling** (ಗು.) ಅಲ್ಪ; ಕ್ಷುಲ್ಲಕ; ತುಚ್ಛ; ವ್ಯರ್ಥ; ಕೆಲಸಕ್ಕೆ ಬಾರದ.

Pig ಪಿಗ್ (ನಾ.) ಹಂದಿ; (ಆಹಾರವಾಗಿ ಉಪಯೋಗಿಸುವ) ಹಂದಿಯ ಮಾಂಸ (ಸಾ., ಎಳೆಯ ಮರಿಯದು) (Roast p. ಸುಟ್ಟ ಹಂದಿಯ ಮಾಂಸ) [Guinea-p. (Guinea ನೋಡಿ)]. (ಬಳ. ಮಾ.) ದುರಾಶೆಯ, ಕೊಳಕಾದ, ವಕ್ರ ಸ್ವಭಾವದ, ಸಿಡುಕಿನ, ಮೊಂಡು ತನದ, ಕಿರುಕುಳ ಕೊಡುವ, —ಮನುಷ್ಯ [**Píggish** (ಗು.); **Píggishly** (ಕ್ರಿ. ವಿ.); **Píggishness** (ನಾ.)]. ಅದುರನ್ನು ಕುಲುಮೆಯಲ್ಲಿ ಕರಗಿಸಿ, ಬಂದ ಲೋಹ ದ್ರವವನ್ನು (ಸಾ., ಕಬ್ಬಿಣವನ್ನು) ಇಟ್ಟಿಗೆಯಾಕಾರದಲ್ಲಿ ಎರಕ ಹೊಯ್ದ ದೊಡ್ಡ ಪಾಳ; ಅಶುದ್ಧ ಲೋಹದ ಪಾಳ (ಮು., P.-iron ಬೀಡು ಕಬ್ಬಿಣ). ಕಿತ್ತಿಳೆಯ ಹಣ್ಣಿನ ತೊಳೆ. [Buy a p. in a poke (ವಸ್ತುವನ್ನು ನೋಡದೆ ಅಥವಾ ಅದರ ಬೆಲೆಯರಿಯದೆ) ಕಣ್ಣುಮುಚ್ಚಿಕೊಂಡು ಕೊಂಡುಕೊ. Bring one's pigs to a fine, a pretty, the wrong, market ಕೈಕೊಂಡ ಕಾರ್ಯ, ಉದ್ಯಮ, ಫಲಸದೆ ಹೋಗು. Pigs might fly ಅದ್ಭುತಗಳು ನಡೆಯಬಹುದು. Please the pigs=(ಹಾಸ್ಯವಾಗಿ) Please God]. **Píggery** ಪಿಗರಿ (ನಾ.) ಹಂದಿ ಸಾಕುವ, ತಳಿಯೆಬ್ಬಿಸುವ, ಸ್ಥಳ. ಹಂದಿಯ ರೊಪ್ಪ; ಕೊಳಕು ಸ್ಥಳ; ರೋತೆ; ಹಂದಿತನ. **Píggy** ಪಿಗಿ (ನಾ.) ಸಣ್ಣ ಹಂದಿ. [(ಮಕ್ಕಳ ಮಾತು) P.-wiggy ಪುಟ್ಟ ಹಂದಿ. ಕೊಳಕು ಮಗು]. ಚಿಣ್ಣಿಕೋಲು ಆಟ. **Pígheaded** ಮೊಂಡ, ಮೊರಟ; ಮೂರ್ಖ; ದಡ್ಡ. **Pígheadedly** (ಕ್ರಿ. ವಿ.); **Pígheadedness** (ನಾ.). [P.-jump (ಕುದುರೆ: ಆಟಕ್ಕಾಗಿ) ನಾಲ್ಕು ಕಾಲನ್ನೂ ಒಟ್ಟುಗೂಡಿಸದೆ ಒಟ್ಟಿಗೆ ಎತ್ತಿ ನೆಗೆ. Pigskin ಹಂದಿಯ ಚರ್ಮ(ದಿಂದ ಮಾಡಿದ ತೊಗಲು); (ಅಸಂ.) ಜೀನು; ತಡಿ]. **Píg-sticking** (ಈಟಿಯಿಂದ) ಕಾಡುಹಂದಿಯ ಬೇಟೆ; ಹಂದಿಯ ಕೊಲೆ. **Pígsticker** (ನಾ.) —ಗಾರ. ಉದ್ದಲಗಿನ (ಕಿಸೆಯ) ಚಾಕು. [Pigsty ಹಂದಿಯ ರೊಪ್ಪ; (ರೂಪ.) ಕೊಳಕು ಜೋಪಡಿ. Pig's wash, Pigwash ಹಂದಿಗಳಿಗೆ ಕುಡಿಸುವ (ಸಾರಾಯಿ ಮನೆಯ, ಅಡಿಗೆ ಮನೆಯ) ಕಲಗಚ್ಚು. Pigweed ಹಂದಿಗಳು ತಿನ್ನುವ ಸೊಪ್ಪುಸದೆ]. **Píglet** (ನಾ.), **Pígling** (ನಾ.) ಸಣ್ಣ ಹಂದಿ; ಹಂದಿಯ ಮರಿ. **Píglike** (ಗು.)

Pig (ಕ್ರಿ.) (ಹಂದಿ) ಮರಿ ಹಾಕು; ಈಯಿ; ಈನು; ಹಂದಿಗಳಂತೆ ಮಂದೆಗೂಡು (=P. it)

Pígeon ಪಿಜಿ(ಜ)ನ್, ಪಿಜ್‌ನ್ (ನಾ.) ಪಾರಿವಾಳ; ಕಪೋತ; ಹೊರಸು (ಗ್ರಾಂ.) (ಸಮಾಚಾರದ ಚೀಟಿ, ಮೊ. ವನ್ನು ಸಾಗಿಸುವುದು, ಮೊ. ಕೆಲಸಗಳಿಗೆ ಪಳಗಿಸಿರುವ ಹಕ್ಕಿ; ಅನೇಕ ತೆರದವು: ಕಾಡು, ಪಳಗಿಸಿದವು, ಕೆಲವು ಗುಣಗಳಿಗಾಗಿ ತಳಿ ಬೆಳಸಿದವು, ಮೊ. ವು) [Carrier-p. (Carrier ನೋಡಿ). Homing p. (ಕೊರಳಿಗೆ ಕಟ್ಟಿದ ಸುದ್ದಿಯ ಕಾಗದವನ್ನು ತೆಗೆದುಕೊಂಡು) ಮನೆಗೆ (ಹಿಂದಿರುಗಿ) ಹಾರಿಬರುವಂತೆ ಪಳಗಿಸಿರುವ ಪಾರಿವಾಳ]. ಸುಲಭವಾಗಿ ಮೋಸಹೋಗುವವನು; ಗುಗ್ಗು; ಬೆಪ್ಪ [Pluck a p. (Pluck ನೋಡಿ)]. Clay p. ಗುಂಡು ಹೊಡೆಯುವುದಕ್ಕೆ ಗುರಿಯಾಗಿ, ಕವಣೆಯಿಂದ ಮೇಲಕ್ಕೆಸೆದ ಮಣ್ಣಿನ ತಟ್ಟೆ. P.-breast ಪಕ್ಕಗಳು ಕುಗ್ಗಿ ಎದೆಮೂಳೆ ಮುಂಚಾಚಿ ವಿಕಾರವಾಗಿರುವ (ಮನುಷ್ಯನ) ಎದೆ; P.-breasted (ಗು.). Pigeon-gram ಪಾರಿವಾಳ ಒಯ್ದ ಸುದ್ದಿ (ಪತ್ರ). P.-English (Pidgin ನೋಡಿ). P.-hearted ಪುಕ್ಕಲೆದೆಯ; ಅಂಜುಕುಳಿಯಾದ. [**P.-hole** ಪಾರಿವಾಳದ ಗೂಡು. (ಅಲಮಾರು, ನಿಲು ಪೆಟ್ಟಿಗೆ, ಮೊ. ಗಳಲ್ಲಿ) ಕಾಗದ, ಮೊ. ನ್ನಿಡುವ ಗೂಡು(ಗಳಲ್ಲೊಂದು). (ಕ್ರಿ. ಸಕ.) (ದಸ್ತಾವೇಜನ್ನು) (ನಿಲು ಪೆಟ್ಟಿಗೆಯ) ಗೂಡಿನಲ್ಲಿಡು; (ವಸ್ತು ವಿಷಯಗಳನ್ನು) ಮುಂದಿನ ಪರ್ಯಾಲೋಚನೆಗಾಗಿ ಬದಿಗಿಟ್ಟುಬಿಡು. (ಒಂದು ವಿಷಯವನ್ನು) ನೆನಪಿನ ಗೂಡಿನಲ್ಲಿಡು]. P. pair ಗಂಡು ಹೆಣ್ಣು ಮಕ್ಕಳ ಅವಳಿ. ಮಕ್ಕಳೆಲ್ಲ ಒಂದು ಗಂಡು ಒಂದು ಹೆಣ್ಣು ಮಾತ್ರ. P.'s milk (ಪಾರಿವಾಳಗಳು ತಮ್ಮ ಮರಿಗಳಿಗೆ ಊಡುವ) ಅರ್ಧ ಜೀರ್ಣವಾದ ಆಹಾರ: ಹಾಲು ಗುಟುಕು. ಹುಡುಕಿ ತರಲು ಮಕ್ಕಳನ್ನು (ವಿನೋದಕ್ಕಾಗಿ) ಕಳುಹಿಸುವ ಇಲ್ಲದ ವಸ್ತು. **Pígeonry** (ನಾ.) ಪಾರಿವಾಳಗಳ ಮನೆ.

Pígeon (ಕ್ರಿ. ಸಕ.) (ಒಬ್ಬನನ್ನು ಒಂದು ವಸ್ತುವಿಗಾಗಿ) ಮೋಸ ಪಡಿಸು, ವಂಚಿಸು.

Pígment ಪಿಗ್‌ಮೆಂಟ್ (ನಾ.) ವರ್ಣದ್ರವ್ಯ. (ಒಂದು) ಅಂಗಾಂಶದ ಸ್ವಾಭಾವಿಕ ವರ್ಣದ್ರವ್ಯ. **Pigméntal** (ಗು.); **Pígmentary** (ಗು.)

Pigmy = Pygmy.

Pígtail ಪಿಗ್‌ಟೆಯ್ಲ್ (ನಾ.) ತೆಳು ಸುರುಳಿಯಾಗಿ ಸುತ್ತಿದ ಹೊಗೆ ಸೊಪ್ಪು. ಜಡೆ, ಹೆರಳು (ಮು., ಚೀಣೆಯರೂ ಬ್ರಿಟಿಷ್ ಸಿಪಾಯಿಗಳೂ ನಾವಿಕರೂ ಹಾಕಿಕೊಳ್ಳುತ್ತಿದ್ದಂತೆ). **Pígtailed** (ಗು.)

Pike[1] ಪೈಕ್ (ನಾ., ಕ್ರಿ. ಸಕ.) ಉಕ್ಕಿನ ಅಥವಾ ಕಬ್ಬಿಣದ ಮೊನಚು ತಲೆಯುಳ್ಳ ಉದ್ದವಾದ ಮರದ ಕೋಲು: ಭಲ್ಲೆಯ. (ಪ್ರಾಂ. ಪ್ರ.) ಪಿಕಾಸಿ; ದಸಿ. (ಬೆಟ್ಟದ) ಕೋಡು (ಇಂಗ್ಲೆಂಡಿನ ಸರೋವರ ಪ್ರಾಂತದ ಜಿಲ್ಲೆಗಳಲ್ಲಿ ಬೆಟ್ಟಗಳ ಹೆಸರುಗಳಲ್ಲಿ ಪ್ರ.). (ಮೊನಚು ಮೂತಿಯ) ಒಂದು ದೊಡ್ಡ, ಹೊಟ್ಟೆಬಾಕ, ಸೀನೀರಿನ ಮೀನು (P.-fish ಎಂಬುದರ ಸಂಕ್ಷಿಪ್ತವಿರಬಹುದು). [**Pikeman**[1] ಪಿಕಾಸಿ ಉಪಯೋಗಿಸುವ ಗಣಿಕೆಲಸದವನು. **Pikestaff** (ನಾ.) ಭಲ್ಲೆಯದ ಮರದ ಕಾವು (Plain as a p. ಸುಸ್ಪಷ್ಟವಾದ)]. (ಕ್ರಿ.) ಭಲ್ಲೆಯದಿಂದ ತಿವಿ, ಕೊಲ್ಲು.

Pike[2] ಪೈಕ್ (ನಾ.) ಸುಂಕದ ಕಟ್ಟೆ(ಯವರು ರಸ್ತೆಗೆ ಅಡ್ಡವಾಗಿ ಹಾಕುವ) ಅಡ್ಡ ಮರ, ಅಡ್ಡ ಕಂಬಿ; ಸರಾಗವಾಗಿ ಹೋಗಲಾಗದಂತೆ ರಸ್ತೆಗೆ ಅಡ್ಡವಾಗಿ ಹಾಕಿರುವ ತಿರುಗು ತಡೆ (=Turn p.); ಇದು ಹಾಕಿರುವ ರಸ್ತೆ. ಸುಂಕ. **Pikeman**[2] (ಸುಂಕದ) ಉಕ್ಕಡದವನು.

Piláster ಪಿಲ್ಯಾಸ್ಟರ್ (ನಾ.) (ಮು., ಗೋಡೆಯಿಂದ ಚಾಚಿಕೊಂಡಿರುವ) ಲಂಬ ಚತುರಸ್ರದ ಕಂಬ, ಗೋಡೆಗಂಬ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pilaú, -aw ಪಿಲಾ, ಪಿಲಾ, ಪಿಲೋ, **Piláff** ಪಿಲಾಫ್ (ನಾ.) (ಅಕ್ಕಿ, ಮಾಂಸ, ಮೀನು, ಮೊ. ನ್ನು ಬೇಯಿಸಿ, ದ್ರಾಕ್ಷಿ, ಸುವಾಸನಾ ದ್ರವ್ಯಗಳು, ಮೊ. ನ್ನು ಬೆರಸಿ ಮಾಡಿದ) 'ಪಲಾವು'.

Pile[1] ಪೈಲ್ (ನಾ., ಕ್ರಿ. ಸಕ.) ಚೂಪು ದಸಿ ; ಮೊನಚುಗಂಬ. (ಸೇತುವೆ, ಮೊ. ಗಳಿಗೆ ಆಸರೆಯಾಗಿ) ನದಿ, ಮೊ. ಗಳ ತಳದಲ್ಲಿ ನೆಟ್ಟಗೆ ಬಲವಾಗಿ ಬಡಿದು ಹೂತ ಭಾರವಾದ ದೂಲ : ಆಸರೆ ದಿಮ್ಮಿ. (P.-driver ದಸಿ ದೂಲಗಳನ್ನು ಬಡಿದು ನೆಡುವ ಯಂತ್ರ). (ಕ್ರಿ.) ದಸಿ ದೂಲಗಳನ್ನು ಹವಣಿಸು ; —ಬಡಿದು ನೆಡು.

Pile[2] ಪೈಲ್ (ನಾ., ಕ್ರಿ. ಸಕ.) ಹೆಚ್ಚು ಕಡಮೆ ಓರಣವಾಗಿ ಒಂದರ ಮೇಲೊಂದರಂತೆ ಇಟ್ಟ ವಸ್ತು ರಾಶಿ : ಗುಡ್ಡೆ ; ಒಟ್ಟಿಲು ; ಒಡ್ಡು ; ಪೇರಿಕೆ. (ಹೆಣ ಸುಡುವ) ಚಿತಿ (=Funeral p.). (ಬಳ. ಮಾ.) ಹಣದ ರಾಶಿ ; ಐಶ್ವರ್ಯ (Make a p., make one's p. ರಾಶಿ ಗಟ್ಟಳೆ ಹಣ ಮಾಡು). ಎತ್ತರವಾದ ಭಾರಿ ಕಟ್ಟಡದ ಒಡ್ಡು ; ಹರ್ಮ್ಯ ಸ್ತೋಮ. ವಿದ್ಯುತ್ಪ್ರವಾಹವನ್ನು ಉತ್ಪತ್ತಿ ಮಾಡಲು ಎರಡು ಲೋಹಗಳ (ಸಾ., ತಾಮ್ರದ ಮತ್ತು ಸತುವಿನ) ತಗಡುಗಳನ್ನು ಒಂದರ ಮೇಲೊಂದರಂತೆ ಪರ್ಯಾಯವಾಗಿಟ್ಟು, ಪ್ರತಿ ಜೊತೆಯ ತಗಡುಗಳ ಮಧ್ಯೆ ಆಮ್ಲದಿಂದ ನೆನಸಿದ ಬಟ್ಟೆಯನ್ನೊ ಕಾಗದವನ್ನೊ ಸೇರಿಸಿ ಅಳವಡಿಸಿದ, ಒಂದು ಸಲಕರಣೆ : ವಿದ್ಯುಲ್ಲೋಹ ಫಲಕ ಶ್ರೇಣಿ. (ಕ್ರಿ.) ಪೇರಿಸು, ಒಟ್ಟು ; ರಾಶಿ, ಗುಡ್ಡೆ, —ಹಾಕು (*Up, on* ಉಪ. ದೊಡನೆ). P. arms (ಸಾ., ನಾಲ್ಕು) ಬಂದೂಕುಗಳನ್ನು (ಬೊಡ್ಡೆಗಳು ನೆಲದಮೇಲೆ ನಿಂತು, ಕೋವಿಗಳು ಮೇಲ್ಭಾಗದಲ್ಲಿ ಒಂದರ ಲ್ಲೊಂದು ಸೇರಿಕೊಂಡಿರುವಂತೆ) ಗೋಪುರಾಕಾರದಲ್ಲಿ ನಿಲ್ಲಿಸು. P. up (ನಾವೆ) (ಹಡಗನ್ನು) ಬಂಡೆಗಳಮೇಲಕ್ಕೆ ಅಥವಾ ನೆಲ ಕಚ್ಚುವಂತೆ ನಡಸು. P. up (or *on*) the agony ಮನೋವೇಧಕವಾದ ವರ್ಣನೆ, ಮೊ. ನ್ನು ಅತಿಯಾಗಿ ಮಾಡು. P. it on ಉತ್ಪ್ರೇಕ್ಷೆ ಮಾಡು ; ಅತ್ಯುಕ್ತಿಯಾಗಿ ಹೇಳು. P. with (ಮೇಜು, ಮೊ. ಗಳ ಮೇಲೆ) ಹೇರು, ಒಟ್ಟು.

Pile[3] ಪೈಲ್ (ನಾ.) (ಪ್ರಾಚೀ. ಪ್ರ.) ನಾಣ್ಯದ ಹಿಂಭಾಗ. Cross or p. (ನಾಣ್ಯದ) ತಲೆಯೋ ತಳವೋ.

Pile[4] ಪೈಲ್ (ನಾ.) ಮೃದುವಾದ ಕೂದಲು ; ಹಕ್ಕಿಯ ತುಪ್ಪುಳು ; (ಕುರಿಯ) ತುಪ್ಪಟ. ಬಟ್ಟೆಯ ಮೇಲಿನ (ಮು., ಮಖಮಲ್ಲು, ಜಮಖಾನೆ, ಮೊ. ಗಳ ಮೇಲಿನ) ಜುಂಗು (Two, three, -p. carpet). **Píly** (ಗು.)

Pile[5] ಪೈಲ್ (ನಾ.) (ಬ. ವ. ದಲ್ಲಿ) ಗುದಭಾಗದ ಅಭಿಧಮನಿಗಳು ಬಾತುಕೊಳ್ಳುವುದರಿಂದಾದ ಒಂದು ರೋಗ : ಮೂಲವ್ಯಾಧಿ ; ಮೊಳೆ ರೋಗ. (ಏ. ವ.) ಮೂಲವ್ಯಾಧಿಯ ಊತ, ಗಡ್ಡೆ. Pilewort (ಮೂಲವ್ಯಾಧಿಗೆ ಮದ್ದೆಂದು ನಂಬುವ) ಒಂದು ಸಸ್ಯ.

Pílfer ಪಿಲ್ಫರ್ (ಕ್ರಿ.) (ಕೊಂಚ ಕೊಂಚವಾಗಿ) ಕದಿ ; ಎಗುರಿಸು. **Pílferage** (ನಾ.) ; **Pílferer** (ನಾ.)

Pilgárlic ಪಿಲ್‌ಗಾರ್ಲಿಕ್ (ನಾ.) (ಪ್ರಾಚೀ. ಪ್ರ.) ಪಟ್ಟ ತಲೆ(ಯವನು). ಬಡ ಪ್ರಾಣಿ ; ಬಡಪಾಯಿ.

Pílgrim ಪಿಲ್‌ಗ್ರಿಮ್ (ನಾ., ಕ್ರಿ. ಅಕ.) ಭಕ್ತಿ ಶ್ರದ್ಧೆಗಳಿಂದ, ಪುಣ್ಯಗಳಿಸುವುದಕ್ಕಾಗಿ, ಯಾತ್ರೆ ಮಾಡುವವನು : ಯಾತ್ರಿಕ ; ಯಾತ್ರಾರ್ಥಿ. ಮುಂದಿನ ಜನ್ಮಕ್ಕೆ (ಲೋಕಕ್ಕೆ) ಪ್ರಯಾಣ ಮಾಡುತ್ತಿರುವನೆಂದು ಪರಿಗಣಿಸಲ್ಪಟ್ಟವನು [The P.'s Progress ಬನ್ಯನ್ (Bunyan) ಎಂಬ ಇಂಗ್ಲಿಷ್ ಲೇಖಕನು ಬರೆದ ಗ್ರಂಥದ ಹೆಸರು]. ಪ್ರಯಾಣಿಕ ; ಪ್ರವಾಸಿ [The Pilgrims of Great Britain, of the U.S. ಪರಸ್ಪರ ಆತಿಥ್ಯ, ಮೊ. ಗಳಿಂದ ಬ್ರಿಟಿಷರಿಗೂ ಅಮೆರಿಕನ್ನರಿಗೂ ಸ್ನೇಹಾಭಿವೃದ್ಧಿ ಮಾಡಲು ಏರ್ಪಟ್ಟಿರುವ ಸಂಘಗಳು. P. Fathers ೧೬೨೦ರಲ್ಲಿ ಇಂಗ್ಲೆಂಡಿನಿಂದ ಅಮೆರಿಕಕ್ಕೆ ಹೋಗಿ ಅಲ್ಲಿ ಪ್ಲಿಮತ್ ಎಂಬ ನೆಲಸು ನಾಡನ್ನು ಸ್ಥಾಪಿಸಿದ ಇಂಗ್ಲಿಷ್ ಪ್ಯೂರಿಟನ್ ಮತದವರು]. (ಕ್ರಿ.) ಯಾತ್ರಿಕನಂತೆ ಸಂಚರಿಸು ; ಯಾತ್ರೆಮಾಡು. **Pílgrimize** (ಕ್ರಿ. ಅಕ.) ; **Pílgrimage** ಪಿಲ್‌ಗ್ರಿಮೆ(ಮಿ)ಜ್ (ನಾ., ಕ್ರಿ. ಅಕ.) (ತೀರ್ಥ)ಯಾತ್ರೆ [Go on (a) p.]. (ರೂಪ.) ಜೀವನ ಯಾತ್ರೆ. (ಕ್ರಿ.) ಯಾತ್ರೆ ಮಾಡು, ಹೊರಡು.

Pilíferous ಪೈಲಿಫರಸ್ (ಗು.) ಕೂದಲುಳ್ಳ (ಮು., ಸ. ವಿ. ದಲ್ಲಿ). **Píliform** (ಗು.) ಕೂದಲಿನಾಕಾರದ ; ಕೂದಲಿನಂಥ.

Pill[1] ಪಿಲ್ (ನಾ., ಕ್ರಿ. ಸಕ.) (ನುಂಗುವುದಕ್ಕೆ ತಕ್ಕ ಗಾತ್ರದ) ಔಷಧದ ಗುಳಿಗೆ, ಮಾತ್ರೆ (A p. to cure an earthquake ಅಲ್ಪ ಪರಿಮಾಣದ, ಅರೆಬರೆ, ಪರಿಹಾರೋಪಾಯಗಳು). (ರೂಪ.) ಮಾಡಲೇಬೇಕಾದದ್ದು ; ಅನುಭವಿಸಲೇ ಬೇಕಾದದ್ದು. ದೈನ್ಯಸ್ಥಿತಿ, ಅಪಮಾನ, ಮೊ. ದು (Swallow the p., a bitter p. ಅಪಮಾನ, ತಿರಸ್ಕಾರ, ನುಂಗಿಕೊ, ತಾಳಿಕೊ). [P.-box ಗುಳಿಗೆಗಳನ್ನು ಹಾಕುವ ಡಬ್ಬಿ. (ಹಾಸ್ಯ ಪ್ರ.) ಸಣ್ಣ ಬಂಡಿ ; ಸಣ್ಣ ಮನೆ. (ಸೈನಿಕ) (ಮು., ನೆಲದೊಳಗೆ) ಗಟ್ಟಿನಿಂದ ಕಟ್ಟಿದ ಪ್ರತ್ಯೇಕವಾದ ಸಣ್ಣ ಕೋಟೆ. Gild the p. (Gild[1] ನೋಡಿ)]. (ಹಾಸ್ಯ ಪ್ರ.) ಚೆಂಡು, ಗುಂಡು, ಗೋಲಿ (ಉದಾ., ಫಿರಂಗಿ ಗುಂಡು, ಟೆನಿಸ್ ಚೆಂಡು) ; (ಬ. ವ. ದಲ್ಲಿ) 'ಬಿಲ್ಯರ್ಡ್ಸ್'. (ಕ್ರಿ.) (ಅಸಂ.) (ಗುಪ್ತವಾಗಿ) ವಿರುದ್ಧ ಮತ ಕೊಡು ; ಸೋಲಿಸು. **Pílule, Píll-** ಪಿಲ್ಯೂಲ್ (ನಾ.) (ಸಣ್ಣ) ಗುಳಿಗೆ, ಮಾತ್ರೆ. **Pílular** (ಗು.) ಮಾತ್ರೆಗಳ ; ಮಾತ್ರೆಯ(ಗಳ) ತೆರದ. **Pílulous** (ಗು.) ಮಾತ್ರೆಯಂಥ ; (ಮಾತ್ರೆಯಂತೆ) ಸಣ್ಣಗಿರುವ.

Pill[2] ಪಿಲ್ (ಕ್ರಿ. ಸಕ.) (ಪ್ರಾಚೀ. ಪ್ರ.) ಕೊಳ್ಳೆ ಹೊಡೆ ; ಲೂಟಿ, ಸೂರೆ, ಸುಲಿಗೆ,—ಮಾಡು. (ಪ್ರಾಂ. ಪ್ರ.) (ಸಿಪ್ಪೆ, ಮೊ. ನ್ನು) ಸುಲಿ(ದುಹಾಕು). **Píllage** ಪಿಲೆ(ಲಿ)ಜ್ (ನಾ., ಕ್ರಿ. ಸಕ.) ಕೊಳ್ಳೆ, ಲೂಟಿ (—ಹೊಡೆ). **Píllager** (ನಾ.)

Píllage. Pill[2] ನೋಡಿ.

Píllar ಪಿಲರ್ (ನಾ., ಕ್ರಿ. ಸಕ.) (ಕಲ್ಲು, ಮರ, ಲೋಹ, ಮೊ. ಗಳ) ಕಂಬ ; ಸ್ತಂಭ (ಅಲಂಕಾರಕ್ಕಾಗಿ ಅಥವಾ ಆಧಾರಕ್ಕಾಗಿ). (ಮಂಚ, ಮೇಜು, ಮೊ. ಗಳ) ಕಾಲು, ಕಂಬ. (ರೂಪ.) ಮುಖ್ಯಾಧಾರವಾಗಿರುವವನು ; ಆಧಾರ (ಸ್ತಂಭ) (A p. of the faith). ಗಾಳಿ, ನೀರು, ಮೊ. ಗಳ ಸ್ತಂಭಾಕೃತಿ. (ಗಣಿ ಕೆಲಸ) ತೋಡಿದ ಗಣಿಯ ಚಾವಣಿಗೆ ಆಸರೆಯಾಗಿ ಬಿಟ್ಟ (ಕಲ್ಲಿದ್ದಲು, ಮೊ. ಗಳ) ಕಂಬ. [Driven from p. to post ಎಡೆಯಿಂದೆಡೆಗೆ ಅಟ್ಟಲ್ಪಟ್ಟು. ಆಶ್ರಯದಿಂದ ಆಶ್ರಯಕ್ಕೆ ಅಲೆದು. P.-box ಅಂಚೆಯ ಕಾಗದಗಳನ್ನು ಹಾಕುವ ಅಂಚೆಪೆಟ್ಟಿಗೆ ಕಂಬ : ಕಂಬ ಪೆಟ್ಟಿಗೆ (ಸು., ೫ ಅಡಿ ಎತ್ತರದ್ದು)]. (ಕ್ರಿ.) ಕಂಬಗಳಿಂದ (ಹೇಗೊ ಹಾಗೆ) ಆಸರೆ ಕೊಡು. **Píllaret** (ನಾ.) ಪುಟ್ಟ ಕಂಬ.

Píllion ಪಿಲ್ಯನ್ (ನಾ.) (ಚರಿತ್ರೆ) ಹೆಂಗಸು ಕುದುರೆ ಸವಾರಿ ಮಾಡಲು ಹಾಕುವ ಹಗುರವಾದ ಜೀನು, ತಡಿ. ಜೀನಿನ ಹಿಂಭಾಗದಲ್ಲಿ (ಮತ್ತೊಬ್ಬ ಸವಾರನಿಗಾಗಿ, ಸಾ., ಹೆಂಗಸಿಗಾಗಿ) ಹಾಕಿರುವ ಮೆತ್ತೆ : ಜೀನಿನ ಹಿಮ್ಮೆತ್ತೆ. (ಆಧುನಿಕ ಪ್ರ.) ಮೋಟಾರು ಸೈಕಲ್, ಮೊ. ಗಳಲ್ಲಿ ಸವಾರನ ಹಿಂಭಾಗದಲ್ಲಿ ಮತ್ತೊಬ್ಬನಿಗಾಗಿ ಹಾಕಿರುವ ಆಸನ.

Pílliwinks ಪಿಲಿವಿಂಕ್ಸ್ (ನಾ.) (ಚರಿತ್ರೆ) ಚಿತ್ರಹಿಂಸೆ ಕೊಡುವುದಕ್ಕಾಗಿ ಬೆರಳು ಹಿಂಡುವ ಸಲಕರಣೆ.

Píllory ಪಿಲೊರಿ (ನಾ., ಕ್ರಿ. ಸಕ.) ತಪ್ಪಿತಸ್ಥನಿಗೆ ಬಹಿರಂಗವಾಗಿ ಅಪಮಾನದ ದಂಡನೆ ಮಾಡಲು, ಅವನ ತಲೆಯನ್ನೂ ಕೈಗಳನ್ನೂ ತೂರಿಸುವುದಕ್ಕಾಗಿ ತೂತು ಮಾಡಿರುವ ಮರದ ಚೌಕಟ್ಟು. (ಕ್ರಿ.) ಇಂತಹ ಚೌಕಟ್ಟಿನಲ್ಲಿಡು ; (ರೂಪ.) ಅಪಮಾನಕ್ಕೀಡುಮಾಡು ; ನಗುಪಾಡಿಗೆ ಗುರಿಮಾಡು.

Píllow ಪಿಲೊ (ನಾ., ಕ್ರಿ.) (ಒರಗಿಕೊಳ್ಳುವುದಕ್ಕೆ, ಮು., ಹಾಸಿಗೆಯಲ್ಲಿ ತಲೆಗೆ ಆಸರೆಯಾಗಿ, ಹತ್ತಿ, ಮೊ. ಪದಾರ್ಥಗಳನ್ನು ತುಂಬಿ ಮಾಡಿದ) ದಿಂಬು (Take counsel of one's p. ರಾತ್ರಿಯೆಲ್ಲ ಯೋಚನೆ ಮಾಡು).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಯಂತ್ರ) ದಿಂಬಿನಾಕಾರದ ಆಸರೆ, ಒತ್ತು. [P.-slip (ಒಗೆಯುವುದಕ್ಕೆ ಅನುಕೂಲಿಸುವ) ದಿಂಬಿನ ಚೀಲ. P.-fight ದಿಂಬುಗಳಿಂದ ಹೊಡೆದಾಟ]. (ಕ್ರಿ.) ದಿಂಬಿನಮೇಲೆ ಒರಗು, ಒರಗಿಸು. **Píllowy** (ಗು.) ದಿಂಬಿನ ಗುಣ ಅಥವಾ ಆಕಾರ ಉಳ್ಳ ; ಮೆತ್ತಗಿರುವ.

Pílose ಪೈಲೋಸ್, **-ous** —ಲಸ್ (ಗು.) ಕೂದಲು ಬೆಳೆದಿರುವ ; ರೋಮಶ. **Pilósity** (ನಾ.) ರೋಮಶತೆ.

Pilot ಪೈಲಟ್ (ನಾ., ಕ್ರಿ. ಸಕ.) ಹಡಗು ನಡಸುವವನು (ಮು., ಬಂದರಿನ ಒಳಕ್ಕಾಗಲ ಹೊರಕ್ಕಾಗಲ, ಅಥವಾ ಸ್ಥಳೀಯ ವಿಚಾರಗಳನ್ನು ತಿಳಿದವನಾಗಿ, ಹಡಗು ನಡಸಲು ಸಮರ್ಥನಾದವನು) (Drop the p. ನಂಬಿಕೆಯುಳ್ಳ ಸಲಹೆಗಾರನನ್ನು ತೊರೆದುಬಿಡು, ತ್ಯಜಿಸು). (ಪ್ರಾಚೀ. ಪ್ರ.) =Steersman. (ವಾಯು ಯಾನದ ವಿದ್ಯೆ) ವಿಮಾನ ನಡಸುವವನು ; —ನಡಸಲು ಸಮರ್ಥನಾದವನು. (ರೂಪ.) ಮಾರ್ಗ ದರ್ಶಕ ; ಸಲಹೆಗಾರ (ಮು., ಬೇಟೆಯ ಪ್ರದೇಶದಲ್ಲಿ). [P.-cloth (ಮೇಲಂಗಿ, ನಿಲುವಂಗಿ, ಮೊ. ಗಳಿಗೆ ಉಪಯೋಗಿಸುವ) ನೀಲ ಬಣ್ಣದ ಉಣ್ಣೆಯ ಬಟ್ಟೆ. P. engine (ಮತ್ತೊಂದು ಎಂಜಿನ್ನಿಗೆ) ಅಡಚಣೆಯಿಲ್ಲದಂತೆ ದಾರಿ ಸಲೀಸು ಮಾಡಿಕೊಡಲು ಮುಂದೆ ಹೋಗುವ ರೈಲ್ವೆ ಎಂಜಿನು]. (ಕ್ರಿ.) (ಹಡಗು, ವಿಮಾನ) ನಡಸು (ರೂಪ. ಸಹ). (ನೆಲದಮೇಲೆ, ನೀರಿನ ಮೇಲೆ) ದಾರಿ ತೋರಿಸಿಕೊಡು. (P. a bill ಒಂದು ಮಸೂದೆಯನ್ನು ಶಾಸನ ಸಭೆಯಲ್ಲಿ ಅಂಗೀಕೃತವಾಗುವ ರೀತಿಯಲ್ಲಿ ನಡಸು). **Pílotage** (ನಾ.) —ವುದು ; ಇದಕ್ಕಾಗಿ ಕೊಡಬೇಕಾದ ರುಸುಮು. **Pílotless** (ಗು.)

Pílule, Píll-. **Pill** ನೋಡಿ.

Piménto ಪಿಮೆಂಟೊ (ನಾ.) ಒಂದು ಜಾತಿಯ ಗಿಡದ ಒಣಗಿಸಿದ ಸುವಾಸನೆಯ ಕಾಯಿಗಳು ; ಜಮೇಕಾ ಮೆಣಸು ; ಇದರ ಗಿಡ.

Pimp ಪಿಂಪ್ (ನಾ., ಕ್ರಿ. ಅಕ.) ತಲೆಹಿಡುಕ(ಕಿ) ; ಕುಂಟಣಿ ; ಕುಟ್ಟಣಿ. (ಕ್ರಿ.) ಕುಟ್ಟಣಿಕೆ ಮಾಡು.

Pímping ಪಿಂಪಿಂಗ್ (ಗು.) ಸಣ್ಣ ; ಅಲ್ಪ ; ತುಚ್ಛ. ರೋಗದ.

Pímple ಪಿಂಪ್‌ಲ್ (ನಾ.) (ಚರ್ಮದ ಮೇಲೇಳುವ, ಸಾ., ಉರಿಯೂತದ) ಸಣ್ಣ ಗುಳ್ಳೆ ; ಮೊಡವೆ. **Pímpled** (ಗು.) ; **Pímply** (ಗು.)

Pin ಪಿನ್ (ನಾ., ಕ್ರಿ. ಸಕ.) (ಸಾ., ತವರದ ಮುಲಾಮು ಮಾಡಿದ ಹಿತ್ತಾಳೆಯ ಅಥವಾ ಕಬ್ಬಿಣದ) ಗುಂಡುಸೂಜಿ (ಉಡುಪಿನ ಭಾಗಗಳು, ಕಾಗದಗಳು, ಮೊ. ನ್ನು ಒಟ್ಟಿಗೆ ಬಂಧಿಸಿಡಲು ಉಪಯೋಗ) ; (ಹಲವು ಕೆಲಸಗಳಿಗೆ ಉಪಯೋಗಿಸುವ) ಮರದ ಗೂಟ ಅಥವಾ (ಲೋಹದ) ಮೊಳೆ, ಆಣಿ ; [Split p. (ಕಂಡಿಯಲ್ಲಿಟ್ಟು ಹೊಡೆದನಂತರ ಸೀಳಿಕೆ ಅರಳಿಕೊಂಡು ಮೊಳೆ ಬಿಗಿಯಾಗಿ ನಿಲ್ಲುವ) ಸೀಳು ಮೊಳೆ]. (ವಾದ್ಯದ ತಂತಿಗಳನ್ನು ಬಿಗಿ ಮಾಡುವ) ಕಿವಿ(ಗಳಲ್ಲೊಂದು). [Drawing-p., Hairp. (ಆಯಾ ಪದವನ್ನು ನೋಡಿ). Ninepins (Nine ನೋಡಿ). Don't care a p. ಸ್ವಲ್ಪವೂ ಲಕ್ಷ್ಯ ಮಾಡದಿರು]. (ಬ.ವ. ದಲ್ಲಿ; ಬಳ.ಮಾ.) ಕಾಲುಗಳು (Quick on his pins). [Pins and needles (ಜೋವು ಬಿಟ್ಟು ಕಾಲು ಸರಿಹೋಗುತ್ತಿರುವಲ್ಲಿ ಆಗುವ) ಚುಚ್ಚು ನೋವು]. ($4\frac{1}{2}$ ಗ್ಯಾಲನ್ ಹಿಡಿಸುವ) ಸಣ್ಣ ಪೀಪಾಯಿ. [Píncushion (ಬೇಕಾದಾಗ ದೊರೆಯುವಂತೆ) ಗುಂಡುಸೂಜಿಗಳನ್ನು ಚುಚ್ಚಿಟ್ಟಿರುವ ಪುಟ್ಟ ಮೆತ್ತೆ. P.-feather (ಹಕ್ಕಿಯ) ಬೆಳೆದಿಲ್ಲದ ಗರಿ. P.-fire cartridge (ಚಾಪಿನ ಸುತ್ತಿಗೆಯ ಹೊಡೆತದಿಂದ) ಮೊಳೆಯು ಸಿಡಿಮದ್ದಿನೊಳಕ್ಕೆ ನುಗ್ಗಿ ಅದನ್ನು ಹಾರಿಸುವ ತೋಟಾ. P.-head (ರೂಪ.) ಬಹಳ ಸಣ್ಣದು ; ಅಣುಪ್ರಾಯವಾದದ್ದು. P.-hole ಸೂಜಿಯಿಂದ ಮಾಡಿದ ರಂಧ್ರ ; ಮೊಳೆ ಹೊಂದಿಕೆಯಾಗುವ ರಂಧ್ರ. P.-money ಹೆಂಗಸರಿಗೆ ಅವರ ಉಡುಪು, ಮೊ. ಗಳ ವೆಚ್ಚಕ್ಕಾಗಿ (ವರ್ಷಕ್ಕೊಮ್ಮೆ) ಕೊಡುವ ಹಣ ; ಹೆಂಡತಿಯ ಸ್ವಂತ ವೆಚ್ಚಕ್ಕಾಗಿ ಒಪ್ಪಂದದ ಮೇರೆಗೆ ಆಕೆಯ ಹೆಸರಿನಲ್ಲಿಟ್ಟ ಹಣ : ಹೆಂಗಸರ ಕೈವೆಚ್ಚದ ಹಣ. P.-prick (ರೂಪ.) ಸಣ್ಣಪುಟ್ಟ ಕಿರುಕುಳ, ತೊಂದರೆ. Pintail ಚೂಪು ಬಾಲವುಳ್ಳ ಹಲವು ಬಗೆಯ ಬಾತುಕೋಳಿ. Pin-wheel = Catherine-wheel (ನೋಡು)]. (ಕ್ರಿ.) (ಒಂದು ವಸ್ತುವನ್ನು ಮತ್ತೊಂದಕ್ಕೆ, ಹಲವು ವಸ್ತುಗಳನ್ನು ಒಟ್ಟಿಗೆ) ಗುಂಡುಸೂಜಿಯಿಂದ(ಗಳಿಂದ) ಬಂಧಿಸು. [P. up (ವಾ. ಶಾ.) = Underpin]. ಬೆಣೆ, ಆಣಿ, ಈಟಿ, ಮೊ. ಗಳಿಂದ ಬಂಧಿಸು, ಕಟ್ಟಿಸು. [P. one's faith on— (ಒಬ್ಬನ ಮೇಲೆ, ಒಂದರಲ್ಲಿ) ಪೂರ್ಣ ನಂಬಿಕೆಯಿಟ್ಟಿರು]. (ಗೋಡೆ, ಮೊ. ಗಳಿಗೆ) ಕಟ್ಟಿಕೊಳ್ಳುವಂತೆ ಮಾಡು (*Against* ಉಪ. ದೊಡನೆ). (ಒಬ್ಬನನ್ನು ವಾಗ್ದಾನ, ಒಪ್ಪಂದ, ಕಟ್ಟುಪಾಡು, ಮೊ. ಕ್ಕೆ) ಬಂಧಿಸು, ಕಟ್ಟಿಹಾಕು (*To, down to* ಉಪ. ದೊಡನೆ). ಕಂಬಿ, ದಬ್ಬೆ, ಮೊ. ಗಳಿಂದ ಸುತ್ತುಗಟ್ಟು. **Pínner** ಪಿನರ್ (ನಾ.) (ಕ್ರಿಯಾರ್ಥಗಳಲ್ಲಿ) ; ಎರಡು ಪಕ್ಕದ ಉದ್ದ ಮಡಿಕೆಗಳನ್ನು ಸೂಜಿಯಿಂದ ಸಿಕ್ಕಿಸಿರುವ ಕುಲಾವಿ.

Pínafore ಪಿನಫೋರ್ (ನಾ.) (ಮಗುವಿನ ಲಂಗ ಕೊಳೆಯಾಗದಂತೆ ಅದರಮೇಲೆ ತೊಡಿಸುವ) ಒಗೆಯಲಾಗುವ ಮೇಲುಹೊದಿಕೆ. **Pínafored** (ಗು.)

Pince-nez (F) ಪೇನ್ಸ್‌ನೆ, ಪ್ಯಾನ್ಸ್‌ನೇ (ನಾ.) ಮೂಗಿಗೆ ಕಚ್ಚಿಕೊಳ್ಳುವ ತೋಳಿಲ್ಲದ ಕನ್ನಡಕ : ಕಚ್ಚುಕನ್ನಡಕ.

Píncers ಪಿನ್ಸರ್ಸ್ (ನಾ., ಬ. ವ.) ಯಾವುದಾದರೂ ಪದಾರ್ಥವನ್ನು ಬಿಗಿಯಾಗಿ ಹಿಡಿದುಕೊಳ್ಳುವ ಸಾಧನ ; ಶ್ರವಣ ; ಚಿಮುಟ ; ಪಟಕಾರ (=A pair of pincers). ವಲ್ಕವಂತ ಪ್ರಾಣಿಯ ಚಿಮುಟಾಂಗ.

Pincette (F) ಪ್ಯಾನ್ಸೆಟ್ (ನಾ.) ಸಣ್ಣ ಚಿಮುಟ.

Pinch ಪಿಂಚ್ (ನಾ., ಕ್ರಿ.) ಚಿವುಟು ; ಜಿಗುಟು. (ರೂಪ.) (ಬಡತನ, ಮೊ. ಗಳ) ಒತ್ತರ, ಹಿಂಸೆ ; (At a p. ಇಕ್ಕಟ್ಟಿನಲ್ಲಿ ; ಸಂದುಕಟ್ಟಿನಲ್ಲಿ ; ಬಿಕ್ಕಟ್ಟಿನಲ್ಲಿ). ಒಂದು ಚಿಟಿಕೆ (A p. of snuff, salt). (ಕ್ರಿ.) ಚಿವುಟು ; ಜಿಗುಟು ; ಕಿವಿಚು ; ಹಿಸುಕು. (ಚಳಿ, ಹಸಿವು, ಮೊ. ಗಳ ವಿಷಯದಲ್ಲಿ ರೂಪ. ಸಹ) ಬಾಧಿಸು, ಸಂಕಟಪಡಿಸು (Pinched with cold ಚಳಿಯಿಂದ ಕ್ಲೇಶಹೊಂದಿ, ಬಾಧೆಪಟ್ಟು, ಕೊರೆತವುಂಟಾಗಿ. That is where the shoe pinches ಅಲ್ಲೇ ಇರುವುದು ಕಷ್ಟ). (ಒಬ್ಬನಿಂದ ಹಣ, ಮೊ. ನ್ನು) ಕೀಳು, ಸುಲಿ (*From, out of* ಉಪ. ದೊಡನೆ). (ಒಬ್ಬನಿಗೆ ಆಹಾರ, ಮೊ. ನ್ನು) ತಕ್ಕಷ್ಟು ಕೊಡದೆ ಬಿಗಿಹಿಡಿ (*In, of, for* ಉಪ. ದೊಡನೆ). ಜಿಪುಣನಾಗಿರು. (ಮು., ಜೂಜಿನಲ್ಲಿ, ಕುದುರೆಯನ್ನು ಚುಚ್ಚಿ, ತಿವಿದು) ಜೋದಿಸು. ಹಡಗನ್ನು (ಉದ್ದೇಶಪೂರ್ವಕವಾಗಿ ಅಥವಾ ಅಲ್ಲದೆ) ಗಾಳಿಯ ಬಹಳ ಒತ್ತಿನಲ್ಲೇ ನಡಸು. (ವಸ್ತುವನ್ನು) ಕದಿ, ಎಗುರಿಸು ; (ಒಬ್ಬನನ್ನು) ಸುಲಿಗೆ ಮಾಡು. (ಒಬ್ಬನನ್ನು) ದಸ್ತಗಿರಿ ಮಾಡು, ಸೆರೆ ಹಿಡಿ, ಬಂಧಿಸು.

Pínchbeck ಪಿನ್ಚ್(ಪಿಂಚ್)ಬೆಕ್-(ನಾ., ಗು.) ಅಗ್ಗದ ಒಡವೆ, ಮೊ. ನ್ನು ಮಾಡಲು ಉಪಯೋಗಿಸುವ, ತಾಮ್ರ ಮತ್ತು ಸತು ಮಿಶ್ರಣದ, ಚಿನ್ನದಂತೆ ಕಾಣುವ ಒಂದು ಮಿಶ್ರಲೋಹ. ಖೋಟಾ ; ಕೃತಕ. (ಗಡಿಯಾರಗಳನ್ನು ತಯಾರಿಸುತ್ತಿದ್ದ Christopher Pinchbeck ಎಂಬ ಕಲ್ಪಕನ ಹೆಸರಿನಿಂದ)

Pindári ಪಿಂಡಾರಿ (ನಾ.) ಇಂಡಿಯದಲ್ಲಿ ೧೭-೧೮ನೆಯ ಶತಮಾನಗಳಲ್ಲಿದ್ದ ಸವಾರ ದರೋಡೆಕೋರ(ರಲ್ಲೊಬ್ಬನು): ಪಿಂಡಾರಿ(ಯವನು)

Pindáric ಪಿಂಡ್ಯಾರಿಕ್ (ಗು., ನಾ.) ಗ್ರೀಕ್ ಕವಿ ಪಿಂಡಾರನ(ಂಥ). (ನಾ., ಸಾ., ಬ. ವ. ದಲ್ಲಿ) ಪಿಂಡಾರನ ಪ್ರಗಾಥ(ಗಳು), ಛಂದಸ್ಸು, ಪದ್ಯ(ಗಳು)

Pine[1] ಪೈನ್ (ನಾ.) ಎರಡು ಅಥವಾ ಹೆಚ್ಚು ಕೋಶ ಗುಚ್ಛಗಳಲ್ಲಿ ಬೆಳೆಯುವ ನಿತ್ಯ ಹಸುರಿನ ಸೂಜ್ಯಾಕಾರದ ಎಲೆಗಳುಳ್ಳ ಒಂದು ಜಾತಿಯ ಮರ : ಪೈನ್ ಮರ ; ಪೀತದಾರು (ಚೌಬೀನೆ, ಟಾರೆಣ್ಣೆ ಮತ್ತು ಟರ್ಪೆಂಟೈನ್ ಎಣ್ಣೆ ದೊರೆಯುವ ಹಲವು ಗೋತ್ರದವು). P.-apple ಅನಾನಾಸ್ ಹಣ್ಣು ; ಪರಂಗಿ ಹಲಸು (ಪೈನ್ ಶಂಕುಕಾಯಿಯ ಹೋಲಿಕೆಯಿಂದ). P.-beauty, P.-carpet ಪೈನ್ ಮರವನ್ನು ತಿಂದು ಬೆಳೆಯುವ ಹುಳುಮರಿಗಳ ಪೊಟ್ಟೆಯಿಡುವ ಚಿಟ್ಟೆಜಾತಿಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

P.-cone ಪೈನ್ (ಮರದ) ಕಾಯಿ ; ಪೈನ್ ಶಂಕು. **Píneal** ಪೈ(ಪಿ)ನಿಯಲ್ (ಗು.) (ಅಂ. ರ. ಶಾ.) ಪೈನ್ ಶಂಕುವಿನಾಕಾರದ. P. gland ಮಿದುಳಿನ ಮೂರನೆಯ ಕುಕ್ಷಿಯ ಹಿಂದುಗಡೆಯಿರುವ ಒಂದು ರಸ ಗ್ರಂಥಿ (ಇದರ ಕಾರ್ಯವೇನೆಂಬುದು ತಿಳಿಯದು). **Pínery** ಪೈನರಿ (ನಾ.) ಅನಾನಾಸ್ ಹಣ್ಣನ್ನು ಬೆಳೆಸುವ ಪ್ರದೇಶ ; ಪೈನ್ ಮರಗಳ ನೆಡು ತೋಪು. **Píny** (ಗು.) ಪೈನಿನ(ಂಥ) ; ಪೈನ್ ಭರಿತ.

Pine[2] ಪೈನ್ (ಕ್ರಿ. ಅಕ.) (ದುಃಖ, ರೋಗ, ಮೊ. ಗಳಿಂದ) ನವೆದು ಹೋಗು, ನಶಿಸು, ಕ್ಷಯಿಸು, ಕೃಶ ಹೊಂದು, ಬಡವಾಗು. ಹಂಬಲಿಸು ; ಕೊರಗು (*For*, *after*, *to* do, ಮೊ. ಪದದೊಡನೆ)

Píneal, Pínery. **Pine[1]** ನೋಡಿ.

Pinfold ಪಿನ್‌ಫೋಲ್ಡ್ (ನಾ., ಕ್ರಿ. ಸಕ.) ತೊಂಡು ದನ, ಮೊ. ಕ್ಕಾಗಿ ದೊಡ್ಡಿ. (ಕ್ರಿ.) ಇದರಲ್ಲಿ ಕೂಡು.

Ping ಪಿಂಗ್ (ನಾ., ಕ್ರಿ. ಅಕ.) (ಬಂದೂಕಿನ ಗುಂಡು ಗಾಳಿಯಲ್ಲಿ ಹಾರಿ ಹೋಗುವಾಗ ಆಗುವಂಥ) ಘುಂಯ್ ಎಂಬ ಶಬ್ದ. (ಕ್ರಿ.) —ಮಾಡು ; —ಮಾಡುತ್ತ ಹಾರು.

Píng-póng ಪಿಂಗ್‌ಪಾಂಗ್ (ನಾ.) ಸೆಲ್ಯುಲಾಯ್ಡಿನ ಚೆಂಡುಗಳಿಂದಲೂ, ಸಾ., ಚರ್ಮಕಾಗದದ ದಾಂಡುಗಳಿಂದಲೂ ಮೇಜಿನಮೇಲೆ ಆಡುವ ಟೆನಿಸ್ಸಿನಂಥ ಆಟ : ಮೇಜಿನ ಟೆನಿಸ್ ; ' ಪಿಂಗ್‌ಪಾಂಗ್ '.

Pínguid ಪಿಂಗ್ವಿಡ್ (ಗು.) (ಸಾ., ಹಾಸ್ಯ ಪ್ರ.) ಕೊಬ್ಬಿನ ; ಜಿಡ್ಡಿನ. (ರೂಪ.) ವೆಗಟು ಹೊಗಳಿಕೆಯ ; ಭಾವಾತಿರೇಕದ (ಉದಾ., P. book). (ನೆಲ) ಫಲವತ್ತಾದ.

Pínion[1] ಪಿನ್ಯನ್ (ನಾ., ಕ್ರಿ.) ಹಕ್ಕಿಯ ರೆಕ್ಕೆಯ ಕೊನೆಯ ಭಾಗ. (ಕಾವ್ಯ) ರೆಕ್ಕೆ ; ರೆಕ್ಕೆಯ (ಹಾರು) ಗರಿ. (ಕೆತ್ತನೆಯಲ್ಲಿ) ಮುಂದೋಳಿಗೆ ಜವಾಬಾದ ರೆಕ್ಕೆಯ ಭಾಗ. (ಕ್ರಿ.) ಹಾರಲಾಗದಂತೆ (ರೆಕ್ಕೆಯ, ಹಕ್ಕಿಯ) ಹಾರು ಗರಿಯನ್ನು ಕತ್ತರಿಸಿಹಾಕು. (ಒಬ್ಬನ) ತೋಳು ಗಳನ್ನು ಕಟ್ಟಿಹಾಕು, ಬಂಧಿಸು ; ಹೆಡಮುರಿ(ಗೆ) ಕಟ್ಟು ; (ತೋಳು ಗಳನ್ನು) ಬಂಧಿಸು, ಕಟ್ಟಿಹಾಕು ; (ಮನುಷ್ಯ, ಮೊ. ನ್ನು ಯಾವುದ ಕ್ಕಾದರೂ) ಭದ್ರವಾಗಿ ಕಟ್ಟಿಹಾಕು, ಬಿಗಿ (*To* ಉಪ. ದೊಡನೆ)

Pínion[2] ಪಿನ್ಯನ್ (ನಾ.) (ದೊಡ್ಡ ಹಲ್ಲುಚಕ್ರದೊಡನೆ ಹಲ್ಲುಗೂಡಿರುವ) ಸಣ್ಣ ಹಲ್ಲುಚಕ್ರ ; (ಹಲ್ಲುಚಕ್ರದೊಡನೆ ಹಲ್ಲುಗೂಡಿರುವ) ಹಲ್ಲು ಕದಿರು.

Pink[1] ಪಿಂಕ್ (ನಾ., ಗು.) ಬಿಳಿಯ, ಪಾಟಲ, ಕಡುಗೆಂಪು ಅಥವಾ ಬಗೆ ಬಗೆಯ ಬಣ್ಣದ ಸುವಾಸನೆಯ ಹೂವು ಬಿಡುವ ಒಂದು ತೋಟದ ಸಸ್ಯ [The p. of elegance, etc. ನಾಜೂಕು, ನೀಟುಗಾರಿಕೆ, ಮೊ. ಗಳ ಆದರ್ಶ ಮೂರ್ತಿ. The p. of health, etc. (ಆರೋಗ್ಯ, ಮೊ. ಗಳ) ಅತ್ಯುತ್ತಮ ಆದರ್ಶ ಸ್ಥಿತಿ. In the p. (ಅನಂ.) ಅತ್ಯುತ್ತಮ (ಆರೋಗ್ಯ) ಸ್ಥಿತಿಯಲ್ಲಿ]. (ಧೂಮ್ರ ವರ್ಣಕ್ಕೆ ಸ್ವಲ್ಪ ಹತ್ತಿರದ) ಎಳೆಗೆಂಪು ; (—ಗೆಂಪಿನ) ಪಾಟಲ ವರ್ಣ(ದ) ; ನರಿ ಬೇಟೆಗಾರ [ನ ಕೆಂಪಂಗಿ(ಯ ಬಟ್ಟೆ)]. (ಗು.) —ಅಂಥ ನಸುಗೆಂಪಿನ (Rose-p., Salmon-p.). P.-eye ಕುದುರೆಗಳಿಗೆ ಬರುವ ಒಂದು ಅಂಟು ಜ್ವರ ; ಮನುಷ್ಯರಿಗೆ ಬರುವ ಸಾಂಕ್ರಾಮಿಕವಾದ ಕಣ್ಣಿನ ಉರಿಯೂತ. **Pínkish** (ಗು.) ; **Pínkness** (ನಾ.) ; **Pínky** (ಗು.)

Pink[2] ಪಿಂಕ್ (ನಾ.) (ವನ್ಯಗಳ ವರ್ಣದ್ರವ್ಯವನ್ನು ಒಂದು ಬಿಳಿಯ ಕ್ಷಾರ ದೊಂದಿಗೆ ಸೇರಿಸಿ ತಯಾರಿಸಿದ) ಒಂದು ಬಗೆಯ ಹಳದಿ ಛಾಯೆಯ ವರ್ಣದ್ರವ್ಯ (Brown, French, Dutch, etc., p.)

Pink[3] ಪಿಂಕ್ (ನಾ.) (ಚರಿತ್ರೆ) ಮು., ಕಿಷ್ಕಿಂಧವಾದ, ಹೆಚ್ಚಗಲವಿಲ್ಲದ, ಹಿಂಭಾಗವುಳ್ಳ ದೋಣಿ, ಹಡಗು, ನಾವೆ (ಹಿಂದೆ, ಸಣ್ಣ ಚಪ್ಪಟೆ ತಳದ್ದು)

Pink[4] ಪಿಂಕ್ (ಕ್ರಿ. ಸಕ.) (ಕತ್ತಿ, ಮೊ. ಗಳಿಂದ) ಇರಿ, ತಿವಿ, ಚುಚ್ಚು. (ತೊಗಲು, ಮೊ. ನ್ನು) ಸಣ್ಣಸಣ್ಣ ತೂತು ಕೊರೆದು ಅಲಂಕಾರ ಮಾಡು (=P. out). ಅಲಂಕಾರ ಮಾಡು ; ಸಿಂಗರಿಸು.

Pink[5] ಪಿಂಕ್ (ನಾ.) ಸಣ್ಣ ಸಾಮನ್ ಮೀನು ; (ಪ್ರಾಂ. ಪ್ರ.) ಸಣ್ಣ ಜಾತಿಯ ಸೀನೀರಿನ ಮೀನು.

Pínna (L) ಪಿನ (ನಾ. ; ಬ. ವ. -ae —ನೀ) ಹೊರಗಿವಿಯ, ಹಾಲೆಯ, ಅಗಲವಾದ ಮೇಲ್ಭಾಗ. ಸಂಯುಕ್ತ ಪರ್ಣದ ಪ್ರಥಮ ವಿಭಾಗ ; ಉಪ ಪರ್ಣ. ಈಜುರೆಕ್ಕೆ(ಯಂಥ ರಚನೆ)

Pínnace ಪಿನೇ(ನ)ಸ್ (ನಾ.) ಯುದ್ಧದ ಹಡಗಿನ, ಹುಟ್ಟುಗಳ ಜೋಡು ಸಾಲುಳ್ಳ (ಸಾ., ಎಂಟು ಹುಟ್ಟುಗಳ) ದೋಣಿ. (ಚರಿತ್ರೆ) (ಸಾ., ಎರಡು ಕೂವೆಯ) ಸಣ್ಣ ಹಡಗು.

Pínnacle ಪಿನಕಲ್ (ನಾ., ಕ್ರಿ. ಸಕ.) ಒತ್ತುಗೋಡೆ, ಛಾವಣಿ, ಮೊ. ಗಳ ಮೇಲೆ ಕಟ್ಟಿರುವ ಸೂಕ್ತಾಕಾರದ ಅಥವಾ ಶಂಕುವಿನಾಕಾರದ ತುದಿಯುಳ್ಳ ಅಲಂಕಾರದ ಸಣ್ಣ ಗೋಪುರ. (ಸ್ವಾಭಾವಿಕ) ಶಿಖರ. (ರೂಪ.) ತುತ್ತತುದಿ ; ಪರಾಕಾಷ್ಠೆ. (ಕ್ರಿ.) ಗೋಪುರ, ಶಿಖರ, (—ದಂತೆ) ಇಡು, ಹವಣಿಸು, ಆಗು.

Pínnate ಪಿನೆಟ್ (ಗು.) (ಸ. ವಿ. : ಸಂಯುಕ್ತ ಪರ್ಣದ ವಿಷಯದಲ್ಲಿ) ಒಂದೇ ಪತ್ರ ಕಾಂಡದಮೇಲೆ ಎರಡು ಕಡೆಯೂ (ಸಾರಾಗಿ) ಉಪ ಪರ್ಣಗಳಿರುವ. (ಪ್ರಾ. ವಿ.) ಒಂದು ಅಕ್ಷದ ಎರಡು ಕಡೆಯೂ ಶಾಖೆಗಳು, ಲತಾ ತಂತುಗಳು, ಮೊ. ದ ಅಂಗಭಾಗಗಳುಳ್ಳ. **Pínnated** (ಗು.) ; **Pínnately** (ಕ್ರಿ. ವಿ.)

Pínner. **Pin** ನೋಡಿ.

Pínnule ಪಿನ್ಯೂಲ್ (ನಾ.) (ಸ. ವಿ.) ಸಂಯುಕ್ತ ಪರ್ಣದಲ್ಲಿಯ ಉಪೋಪ ಪರ್ಣ. (ಪ್ರಾ. ವಿ.) ಸಣ್ಣ ರೆಕ್ಕೆಯಂಥ ಅಥವಾ ಈಜುರೆಕ್ಕೆಯಂಥ ಅಂಗ, ಭಾಗ. (ಗ್ರಹೋನ್ನತಿ ಮಾಪಕ, ಮೊ. ಗಳ) ಸೂಚೀ ಕಾಂಡದ ತುದಿಯಲ್ಲಿ ಅಳವಡಿಸಿರುವ ದರ್ಶಿನಿ. **Pínnular** (ಗು.)

Pínny ಪಿನಿ (ನಾ.) (ಮಕ್ಕಳ ಮಾತು) = Pinafore (ಎಂಬುದರ ಸಂಕ್ಷಿಪ್ತ)

Pinóle ಪಿನೋಲೆ (ನಾ.) (ಅಮೆ. ಸಂ.) (ಸಿಹಿ ಹಿಟ್ಟು, ಸಕ್ಕರೆ, ಮೊ. ನ್ನು ಬೆರಸಿದ) ಹುರಿ ಹಿಟ್ಟು, ಅರಳು ಹಿಟ್ಟು.

Pint ಪೈಂಟ್ (ನಾ.) ದ್ರವ, ಮೊ. ಗಳ ಒಂದು ಅಳತೆ (⅛ ಗ್ಯಾಲನ್)

Píntle ಪಿಂಟ್‌ಲ್ (ನಾ.) ಆಣಿ, ಗೂಟ, ಅಗುಳಿ (ಮು., ಮತ್ತೊಂದು ಭಾಗ ಅದರಮೇಲೆ ತಿರುಗುವುದಕ್ಕೆ ಆಧಾರವಾಗಿರುವಂಥದು) ; ತಿರುಗು ಸಲಕರಣೆಯ ಗೂಟ.

Pínxit (L) ಪಿಂಕ್ಸಿಟ್, **Pinxérunt** ಪಿಂಕ್ಸಿಯರಂಟ್ (ಕ್ರಿ. ಸಕ.) (ಚಿತ್ರ, ಮೊ. ಗಳಲ್ಲಿ, ಅದನ್ನು ರಚಿಸಿದವನು ತನ್ನ ಹೆಸರು ಹಾಕುವಾಗ) : (ಇಂಥವನು) ಚಿತ್ರಿಸಿದನು (Fecit ನೋಡಿ)

Píny. **Pine[1]** ನೋಡಿ.

Pioneér ಪೈಓನಿಯರ್ (ನಾ., ಕ್ರಿ.) (ಸೈನ್ಯ) ಹಿಂದೆ ಬರುವ ಸೈನ್ಯಕ್ಕೆ ದಾರಿ ಮಾಡುವುದಕ್ಕಾಗಿ ಗುದ್ದಲಿ, ಮೊ. ದ ಆಯುಧಗಳನ್ನು ತೆಗೆದು ಕೊಂಡು ಮುಂದಾಗಿ ಹೋಗುವ ಪದಾತಿ ದಳದ ಸೈನಿಕ ; ಮಾರ್ಗ ಕಲ್ಪನೆಯ ಸೈನಿಕ ; (ಯಾವುದಾದರೂ ಉದ್ಯಮದ) ಮೂಲಕರ್ತ, ಮೊದಲಿಗ ; ಆದಿ ಪರಿಶೋಧಕ. (ಕ್ರಿ.) ಮೂಲಕರ್ತ, ಆದಿ ಪರಿ ಶೋಧಕ, —ಆಗು ; ಪದಾತಿ ದಳದ ಮಾರ್ಗಕಲ್ಪಕನಂತೆ ದಾರಿ ಮಾಡು, ದಾರಿ ತೋರಿಸು ; (—ಗೆ) ಮಾರ್ಗದರ್ಶಕನಾಗಿರು.

Píous ಪೈಅಸ್ (ಗು.) (ಗುರುಹಿರಿಯರಲ್ಲಿ, ದೇವರಲ್ಲಿ) ಭಕ್ತಿಯುಳ್ಳ ; ಶ್ರದ್ಧಾ ಭಕ್ತಿಗಳುಳ್ಳ ; ಧರ್ಮ ಶ್ರದ್ಧೆಯುಳ್ಳ [P. founder (ದೇವರ ಮಹಿಮೆಗಾಗಿಯೂ ಮಾನವ ಹಿತಕ್ಕಾಗಿಯೂ) ಪ್ರೌಢ ವಿದ್ಯಾಶಾಲೆ, ಮೊ. ನ್ನು ಧರ್ಮ ಶ್ರದ್ಧೆಯಿಂದ ಸ್ಥಾಪಿಸುವವನು]. (ಪ್ರಾಚೀ. ಪ್ರ.) ಕರ್ತವ್ಯ ನಿಷ್ಠ. P. fraud (Fraud ನೋಡಿ)

Pip[1] ಪಿಪ್ (ನಾ.) ಕೋಳಿ, ಡೇಗೆ, ಮೊ. ಗಳಿಗೆ ಬರುವ, ಗಂಟಲಲ್ಲಿ ಕಫವೂ ನಾಲಗೆಯ ತುದಿಯಲ್ಲಿ ಬಿಳಿಯ ಹಕ್ಕು ಕಟ್ಟುವ, ಒಂದು ರೋಗ (ಹಾಸ್ಯವಾಗಿ, ಮನುಷ್ಯರ ಹಲವು ರೋಗಗಳಿಗೆ ಸಹ ಪ್ರ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pip[2] ಪಿಪ್ (ನಾ.) (ಇಸ್ಪೀಟೆಲೆ, ದಾಳ, ಮೊ. ಗಳ ಮೇಲಿನ) ಚುಕ್ಕೆ, ಬಿಂದು, ಗುರುತು. (ಸೈನಿಕ ಅಸಂ.) [ಸೈನ್ಯಾಧಿಕಾರಿಯ (ಉಡುಪಿನ) ತೋಳಿನ ಮೇಲಿನ] ನಕ್ಷತ್ರದ ಸಂಕೇತ. (ಸಂಕೀರ್ಣ) ಗುಚ್ಛ ಪುಷ್ಪದಲ್ಲಿಯ ಒಂದು ಬಿಡಿ ಹೂವು. ಅನಾನಾಸ್ ಹಣ್ಣಿನ ಸಿಪ್ಪೆಯಮೇಲಿನ ಸೊಟ್ಟ ಚೌಕ (ಗಳಲ್ಲೊಂದು)

Pip[3] ಪಿಪ್ (ಕ್ರಿ. ಸಕ.) (ಬಳ. ಮಾ.) (ಗುಪ್ತವಾಗಿ) ವಿರುದ್ಧ ಮತ ಕೊಡು ; ಸೋಲಿಸು. ಗುಂಡಿನಿಂದ ಹೊಡೆ.

Pip[4] ಪಿಪ್ (ನಾ.) (ಸೇಬು, ಮರಸೇಬು, ಕಿತ್ತಿಳೆ, ದಾಳಿಂಬೆ, ಮೊ. ಗಳ) ಬೀಜ. **Pípless** (ಗು.)

Pipe ಪೈಪ್ (ನಾ.) (ಮು., ನೀರು, ಅನಿಲ, ಮೊ. ನ್ನು ಒಯ್ಯುವುದಕ್ಕಾಗಿರುವ ಮರದ ಅಥವಾ ಲೋಹದ) ಕೊಳವೆ ; ನಾಳ ; ನಾಳಿ ; ನಳಿಕೆ. ಒಂದೇ ಕೊಳವೆಯ ಗಾಳಿವಾದ್ಯ (ಓಲಗ, ಪಿಳ್ಳಂಗೋವಿ, ಕೊಳಲು) ; ಆರ್ಗನ್ ವಾದ್ಯದ ನಾದ ನಾಳಿ(ಗಳಲ್ಲೊಂದು). (ಬ. ವ. ದಲ್ಲಿ) =Bagpipes. ಹಡಗು ಮೇಸ್ತ್ರಿಯ ಶಿಳ್ಳು, ಪೀಪಿ (ಹಾಕುವುದು, ಧ್ವನಿ ಮಾಡುವುದು). (ಮು., ಹಾಡುವುದರಲ್ಲಿ) ಧ್ವನಿ, ಕಂಠ, ಶಾರೀರ ; ಹಕ್ಕಿಯ ಉಲಿ, ಸ್ವರ, ಹಾಡು. (ಪ್ರಾಣಿ ದೇಹದಲ್ಲಿಯ) ನಾಳಿ (ಯಾಕಾರದ ಅಂಗ). ಅದುರಿನ ಉರುಳೆಯಾಕಾರದ ಎಳೆಸಾಲು. ಕಾಡುಬಾತಿಗೆ ಆಸೆ ತೋರಿಸಿ ಮೋಸದಿಂದ ಸಿಕ್ಕಿ ಬೀಳಿಸಲು ಮಾಡಿದ ಕಾಲುವೆ. (ಮಣ್ಣು, ಮರ, ಮೊ. ಗಳಿಂದ ಮಾಡಿದ) ಚುಂಗಾಣಿ (=Tobacco-p.) ; ಚುಂಗಾಣಿ ತುಂಬಿನ ಹೊಗೆಸೊಪ್ಪು [Light, smoke, a p. ; Peace-p. (Peace ನೋಡಿ). King's or Queen's p. ವ್ಯಾಪಾರ ನಿಷಿದ್ಧಗೊಳಿಸಿದ ಹೊಗೆಸೊಪ್ಪನ್ನು ಸುಟ್ಟು ಹಾಕುವುದಕ್ಕಾಗಿ ಹಿಂದೆ ಉಪಯೋಗಿಸುತ್ತಿದ್ದ ಲಂಡನ್ನಿನ ಹಡಗು ಕಟ್ಟೆ ಗಳಲ್ಲಿಯ ಕುಲುಮೆ. Put that in your p. and smoke it ನಿನ್ನ ಕೈಯಲ್ಲಾದರೆ ಆ ವಿಷಯವನ್ನು ಜೀರ್ಣಿಸಿಕೊ]. (ಮು., ಒಂದು ಅಳತೆಯಾಗಿ) ದ್ರಾಕ್ಷಾ ಮದ್ಯದ ಪೀಪಾಯಿ (ಸಾ., ೧೦೫ ಗ್ಯಾಲನ್ನು ಅಳತೆಯದು). P.-clay [ಚುಂಗಾಣಿ ಮಾಡುವುದಕ್ಕೂ, (ಮು., ಸಿಪಾಯಿ ಗಳು ತಮ್ಮ) ಬಿಳಿಯ ಷರಾಯಿ, ನಡುಪಟ್ಟಿ, ಮೊ. ನ್ನು ಬೆಳಗುವುದಕ್ಕೂ ಉಪಯೋಗಿಸುವ] ನಯವಾದ ಬಿಳಿಯ ಜೇಡಿ: ಚುಂಗಾಣಿ ಜೇಡಿ [(ಕ್ರಿ. ಸಕ.) —ಇಂದ ಬೆಳಗು]. (ರೂಪ.) (ದಳದಲ್ಲಿ, ಉಡುಪು, ಮೊ. ಗಳ) ಅಲ್ಪ ವಿವರಗಳಿಗೆ ಅತಿ ಗಮನ. P.-light ಚುಂಗಾಣಿ ಹೊತ್ತಿಸುವ ಪುಳ್ಳೆ, ಕಾಗದದ ಸುರುಳಿ. P. major ನಾಸನ್ನದುದಾರನಾದ ದಳದ ವಾದ್ಯಗಾರರ ಮೇಲಧಿಕಾರಿ. P.-rack ಚುಂಗಾಣಿ(ಗಳಿಗಾಗಿ ಮಾಡಿರುವ) ಅಡ್ಡ ನಿರೆ. P.-line (ಮು., ಪೆಟ್ರೋಲಿಯಂ ಎಣ್ಣೆಯನ್ನು ದೂರ ಪ್ರಾಂತಕ್ಕೆ ಸಾಗಿಸುವ) ಕೊಳವೆ ಸಾಲು, ನಾಳ ಮಾರ್ಗ. P.-stone (ಅಮೆರಿಕದ ರೆಡ್ ಇಂಡಿಯನರು ಚುಂಗಾಣಿ ಮಾಡಲು ಉಪಯೋಗಿಸುವ) ಗಟ್ಟಿ ಕೆಂಪು ಜೇಡಿ. **Pípeful** (ನಾ.) ; **Pípeless** (ಗು.) ; **Pípy** (ಗು.) ನಾಳವುಳ್ಳ ; ನಾಳಿಗಳುಳ್ಳ ; ನಾಳಾಕಾರದ ; ಉರುಳೆಯಾಕಾರದ. **Pipétte** ಪಿಪೆಟ್ (ನಾ.) (ಮು., ರಾಸಾಯನಿಕ ಕಾರ್ಯಗಳಲ್ಲಿ) ಸ್ವಲ್ಪ ಮೊತ್ತದ ದ್ರವವನ್ನು ಹೀರಿ ತೆಗೆದುಕೊಳ್ಳುವುದು, ಅದನ್ನು ಮತ್ತೊಂದು ಪಾತ್ರೆಗೆ ಸಾಗಿಸುವುದು, ಮೊ. ಕ್ಕಾಗಿ ಉಪಯೋಗಿಸುವ (ಕೆಲವು ಸಂದರ್ಭಗಳಲ್ಲಿ ಅಳತೆಯ ಗುರುತುಗಳುಳ್ಳ, ಕೆಲವು ಸಂದರ್ಭಗಳಲ್ಲಿ ಕಾಂಡದ ಮಧ್ಯೆ ದುಂಡನೆಯ ಪೊಳ್ಳು ಭಾಗವಿರುವ) ಕೊಳವೆ ; ಪಿಪೆಟ್ಟು.

Pipe (ಕ್ರಿ.) ಓಲಗ, ಕೊಳಲು, —ಊದು, ನುಡಿಸು ; ಓಲಗ ಮಾಡಿಕೊಂಡು ಜನ, ಮೊ. ನ್ನು ಕರೆದುಕೊಂಡುಹೋಗು, ಕರೆತರು. (ಹಡಗುಚಾಕರರನ್ನು ಊಟ, ಕೆಲಸ, ಮೊ. ಕ್ಕೆ) ಶಿಳ್ಳೆ ಊದಿ ಕರೆ (*Up* ಉಪ. ದೊಡನೆ) (P. away ಹೊರಡಲು ದೋಣಿಗೆ ಶಿಳ್ಳೆ ಹಾಕಿ ಆಜ್ಞೆ ಕೊಡು). ಶಿಳ್ಳೆ ಊದು ; ಸೀಟಿ ಹಾಕು ; ಕೀರಲು ದನಿಯಲ್ಲಿ ಹೇಳು, ಕೂಗು. [P. up ಹಾಡುವುದಕ್ಕೆ, ನುಡಿಸುವುದಕ್ಕೆ, ಪ್ರಾರಂಭಿಸು. P. one's eye(s) ಅಳು ; ಕಣ್ಣೀರು ಸುರಿಸು]. (ಕೆಲವು ಹೂವಿನ, ಮೊ. ದ ಗಿಡಗಳನ್ನು) ಕಾಂಡದ ಗೆಣ್ಣಿನ ಎಡೆಯಲ್ಲಿ ಕತ್ತರಿಸಿ, ರೆಂಬೆ ನೆಟ್ಟು, ಗಿಡ ಬೆಳಸು. ಉಡುಪಿಗೆ ಅಲಂಕಾರದ ಹುರಿ ಕಟ್ಟು. ರೊಟ್ಟಿ, ಮೊ. ಕ್ಕೆ ಸಕ್ಕರೆ ಪಾಕದ ಕೊಳವೆಯಲಂಕಾರ ಮಾಡು ; ಕೊಳವೆ, ನಳಿಕೆ, —ಒದಗಿಸು, ಹವಣಿಸು. **Píper** (ನಾ.) ಓಲಗದವನು ; ಕೊಳಲೂದುವವನು (ಮು., ತಿರುಗು ಸಂಗೀತಗಾರ) ; ತಿದಿಗೊಳಲು ಊದುವವನು [He who pays the p. calls the tune ಹಣ ಕೊಟ್ಟ ದಣಿ (ತನಗೆ ಬೇಕಾದ) ರಾಗ ಹಾಡಿಸುತ್ತಾನೆ]. ಹಲವು ಬಗೆಯ ಮೀನು. ಸುಸ್ತುಬಿದ್ದುಹೋದ ಕುದುರೆ. ದೀಪದ ನಾಯಿ. **Píping** (ನಾ., ಗು.) (ಕ್ರಿಯಾರ್ಥಗಳಲ್ಲಿ). ಅಲಂಕಾರದ ಹುರಿಹಾಕಿ ಮಾಡಿದ ಉಡುಪಿನ ಅಲಂಕಾರ. ರೊಟ್ಟಿ, ಮೊ. ಕ್ಕೆ ಮಾಡಿದ ಸಕ್ಕರೆ ಪಾಕದ ಕೊಳವೆಯಲಂಕಾರ. The p. time(s) of peace ಯುದ್ಧ ವಾದ್ಯಕ್ಕೆ ಬದಲಾಗಿ ಕೊಳಲೂದುವ ಶಾಂತಿವಾದ್ಯದ ಕಾಲ. P. hot (ನೀರು ಹಾಕಿದರೆ) ಚೊಂಯ್‌ಗುಟ್ಟುವ ಬಿಸಿ.

Pip emma ಪಿಪ್ ಎಮ (ಕ್ರಿ. ವಿ.) (ಅಸಂ.) = Post meridiem (P.M. ಎಂಬ ಅಕ್ಷರಗಳಿಗೆ ಸಂಕೇತಗಾರರ ಹೆಸರು)

Pipétte. **Pipe** (ನಾ.) ನೋಡಿ.

Píppin ಪಿಪಿನ್ (ನಾ.) ಹಲವು ಬಗೆಯ ಸೇಬು.

Pip-squeak ಪಿಪ್‌ಸ್ಕ್ವೀಕ್ (ನಾ.) (ಸೈನಿಕ ಅಸಂ.) ಒಂದು ತೆರದ ಕೀಚು ಶಬ್ದಮಾಡುವ ಸಿಡಿಗುಂಡು.

Píquant ಪೀಕಂಟ್ (ಗು.) ಹಿತವಾದ ಖಾರದ ; ಚುರುಕಾದ ; ಹಸಿವನ್ನುಂಟುಮಾಡುವ. (ರೂಪ.) ಮನಸ್ಸಿಗೆ ಹಿತವಾಗುವಂತೆ ಉತ್ತೇಜಿಸುವ, ಉದ್ರೇಕಿಸುವ. **Píquantly** (ಕ್ರಿ. ವಿ.) ; **Píquancy** (ನಾ.)

Pique[1] ಪೀಕ್ (ಕ್ರಿ. ಸಕ., ನಾ.) ರೇಗಿಸು; ಕೆರಳಿಸು; (ಒಬ್ಬನ) ಪ್ರತಿಷ್ಠೆಗೆ ಕುಂದು ತರು. ಕುತೂಹಲ, ಆಸಕ್ತಿ, —ಹುಟ್ಟಿಸು, ಕೆರಳಿಸು. (ಒಂದರ ವಿಷಯವಾಗಿ) ಅಹಂಕಾರ ಪಡು. (ನಾ.) ಮನಸ್ತಾಪ ; ಪ್ರತಿಷ್ಠಾ ಹಾನಿ ; ಮುನಿಸು ; ಸಿಟ್ಟು (In a fit of p. Took a p. against me)

Pique[2] ಪೀಕ್ (ನಾ., ಕ್ರಿ.) 'ಪಿಕೆಟ್' ಎಂಬ ಇಸ್ಪೀಟಾಟದಲ್ಲಿ ಎದುರಾಳಿಯು ಎಣಿಕೆ ಮಾಡಲು ಆರಂಭಿಸುವುದಕ್ಕೆ ಮೊದಲೇ ಮೂವತ್ತು ಅಂಕಗಳನ್ನು ಗೆಲ್ಲುವುದು. (ಕ್ರಿ.) (ಎದುರಾಳಿಯಮೇಲೆ) ಹೀಗೆ ಮೂವತ್ತು ಅಂಕಗಳನ್ನು ಗೆಲ್ಲು.

Piquét[1] ಪಿಕೆಟ್ (ನಾ.) ಇಬ್ಬರಾಡುವ ೩೨ ಎಲೆಗಳ ಒಂದು ಇಸ್ಪೀಟಾಟ.

Píquet.[2] **Picket** ನೋಡಿ.

Pírate ಪೈ(ಅ)ರೆಟ್ (ನಾ., ಕ್ರಿ.) ಕಡಲುಗಳ್ಳ(ನ ಹಡಗು) ; ದರೋಡೆಕೋರ. ಮತ್ತೊಬ್ಬನ ಗ್ರಂಥ ಸ್ವಾಮ್ಯವನ್ನು ಅತಿಕ್ರಮಣ ಮಾಡುವವನು ; ಗ್ರಂಥ (ಸ್ವಾಮ್ಯ) ಚೋರ. ಇತರ ಬಸ್ಸುಗಳಿಗೆ ಹೋಗಲು ಹಕ್ಕುಳ್ಳ ಮಾರ್ಗಗಳಲ್ಲಿ ತನಗೆ ಅಪ್ಪಣೆಯಿಲ್ಲದಿದ್ದರೂ ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು ಹೋಗುವ, ಅಥವಾ ತನಗೆ ಹಕ್ಕುಳ್ಳ ಮಾರ್ಗಗಳಲ್ಲಿ ಪ್ರಯಾಣಿಕರಮೇಲೆ ಹೆಚ್ಚು ಬಾಡಿಗೆ ಹಾಕಿ ಸುಲಿಗೆ ಮಾಡುವ, ಬಸ್ಸು. (ಕ್ರಿ.) ಕೊಳ್ಳೆ, ಲೂಟಿ, —ಹೊಡೆ ; ದರೋಡೆ ಮಾಡು. (ಅನುಮತಿಯಿಲ್ಲದೆ ಸ್ವಪ್ರಯೋಜನಕ್ಕಾಗಿ) ಇತರರ ಗ್ರಂಥ, ಮೊ. ನ್ನು ಕಳ್ಳತನದಿಂದ ಮುದ್ರಿಸಿ ಪ್ರಕಟಿಸು; ಗ್ರಂಥಚೌರ್ಯ ಮಾಡು. ಕಡಲುಗಳ್ಳ, ದರೋಡೆಕೋರ, —ಆಗು. **Píracy** (ನಾ.) ; **Pirátic(al)** (ಗು.) ; **Pirátically** (ಕ್ರಿ. ವಿ.)

Pis aller (F) ಪಿ(ೀ)ಸ್ ಆಲೆ (ನಾ.) ಅದಕ್ಕಿಂತ ಉತ್ತಮವಾದುದಿಲ್ಲದ್ದರಿಂದ ಅನುಸರಿಸಿದ, ಕೈಕೊಂಡ, ಮಾರ್ಗ, ಮೊ. ದು ; ಕೆಟ್ಟದ್ದರಲ್ಲಿ ಮಧ್ಯಸ್ಥ ; ಬೇರೆ ಗತಿಯಿಲ್ಲದ ಮಾರ್ಗ.

Píscary ಪಿಸ್ಕರಿ (ನಾ.) Common of p. ಮತ್ತೊಬ್ಬನಿಗೆ ಸೇರಿದ ಕೊಳ, ಮೊ. ಗಳಲ್ಲಿ ಅದರ ಯಜಮಾನ, ಮೊ. ರಿಗಿರುವಂತೆ ತನಗೂ ಮೀನು ಹಿಡಿಯುವುದಕ್ಕೆ ಹಕ್ಕು. **Píscatory** ಪಿಸ್ಕಟರಿ (ಗು.) ಮೀನು ಹಿಡಿಯುವವರ; ಮೀನು ಹಿಡಿಯುವ; ಮೀನು ಹಿಡಿಯುವುದರಲ್ಲಿ ವಿಶೇಷಾಸಕ್ತ. **Piscatórial** —ಟೋ— (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Píscatory. **Piscary** ನೋಡಿ.

Písces (L) ಪಿಸೀಸ್ (ನಾ., ಬ. ವ.) (ಖ. ವಿ.) ಮೀನ (ರಾಶಿ). (ಜೀ. ವಿ.) ಮೀನ ವರ್ಗ.

Písciculture ಪಿಸಿಕಲ್ಚ್ಯುರ್, —ಚರ್ (ನಾ.) (ಕೃತಕವಾಗಿ) ಮೀನು ಬೆಳೆ; ಮತ್ಸ್ಯ ಕೃಷಿ. **Piscicúltural** (ಗು.); **Piscicúlturist** (ನಾ.); **Piscína** ಪಿಸೀ(ಸ್ಸೈ)ನ (ನಾ.; ಬ. ವ. -ae, -as) ಮೀನು ಕೊಳ. (ಪುರಾತನ ರೋಮಿನ) ಸ್ನಾನದ ಕೊಳ. (ಕ್ರೈಸ್ತ ಮತ) ಮಧು ಕಲಶ, ಮೊ. ನ್ನು ತೊಳೆದ ನೀರನ್ನು ಸಾಗಿಸುವ, ಕಂಡಿಗಳುಳ್ಳ ಕಲ್ಲಿನ ತೊಟ್ಟಿ. **Píscine**[1] ಪಿಸಿ(ೕ)ನ್ (ನಾ.) ಸ್ನಾನದ ಹೊಂಡ. **Píscine**[2] ಪಿಸ್ಸೈನ್ (ಗು.) ಮೀನಿನ. **Piscívorous** ಪಿಸಿವೊರಸ್ (ಗು.) ಮೀನು ತಿನ್ನುವ.

Piscína, Píscine, Piscívorous. **Pisciculture** ನೋಡಿ.

Pise (F) ಪೀಸ್ಸೆ(ೕ) (ನಾ.) (ಕಟ್ಟಡಕ್ಕೆ ಉಪಯೋಗಿಸಲು) (ಗರಸು ಬೆರಸಿ) ಗಟ್ಟಿಸಿದ ಮಣ್ಣು ಅಥವಾ ಜೇಡಿ (ಇದನ್ನು ಗೋಡೆ ಹಾಕಬೇಕಾದ ಸ್ಥಳದಲ್ಲಿ ಹಲಗೆಗಳ ಮಧ್ಯೆ ತುಂಬಿ ಚೆನ್ನಾಗಿ ಗಟ್ಟಿಸಿ ಗಡುಸಾದಮೇಲೆ ಹಲಗೆಗಳನ್ನು ತೆಗೆದುಹಾಕುವರು)

Písgah ಪಿಸ್ಗಾ (ನಾ.) ಮೋಸೆಸ್ ಅದರ ಮೇಲಿನಿಂದ ಕೇನನ್ ದೇಶವನ್ನು ನಿರೀಕ್ಷಿಸಿದ ಬೆಟ್ಟ. (ರೂಪ.) P. glance, prospect ನಿರೀಕ್ಷಣೆಯ ಮುನ್ನೋಟ.

Pish ಪಿಷ್ (ಭಾವ. ಅವ್ಯ.) (ತಿರಸ್ಕಾರ, ಅಸಹನೆ ಅಥವಾ ಬೇಸರ ಸೂಚಿಸುವ ಪದ): ಪಿಷ್. (ಕ್ರಿ. ಅಕ.) —ಎನ್ನು.

Pishógue ಪಿಷೋಗ್ (ನಾ.) (ಐರಿಷ್) ಮೋಡಿ; ಮಾಟ.

Písiform ಪೈಸಿಫಾರ್ಮ್, ಪಿಸಿ— (ಗು.) ಬಟಾಣಿಯಾಕಾರದ. P. bone ಮಣಿಕಟ್ಟಿನ ಮೇಲುಸಾಲಿನ ಸಣ್ಣ ಎಲುಬು.

Písmire ಪಿಸ್‌ಮೈ(ಅ)ರ್ (ನಾ.) ಇರುವೆ.

Piss ಪಿಸ್ (ಕ್ರಿ., ನಾ.) (ಈಗ ಶಿಷ್ಟ ಪ್ರಯೋಗವಲ್ಲ) ಉಚ್ಚೆ (ಹೊಯ್ಯಿ); ಮೂತ್ರ (ವಿಸರ್ಜನೆ ಮಾಡು); ಮೂತ್ರದೊಡನೆ (ರಕ್ತ, ಮೊ. ನ್ನು) ವಿಸರ್ಜಿಸು. ಉಚ್ಚೆ ಹೊಯ್ದು ನೆನಸು. (ಭೂ. ಕೃ., ಅಸಂ.) ಕುಡಿದು ಅಮಲೇರಿದ.

Pistáchio ಪಿಸ್ಟೇಷಿಯೊ, ಪಿಸ್ಟ್ಯಾಷೊ(ಚೊ) (ನಾ.) ಪಿಸ್ತಾ ಬೀಜ.

Pístil ಪಿಸ್ಟಿಲ್ (ನಾ.) (ಅಂಡಾಶಯ, ಶಲಾಕೆ, ಶಲಾಕಾಗ್ರ—ಇವನ್ನೊಳಕೊಂಡಿರುವ) ಹೂವಿನ ಹೆಣ್ಣಂಗ; ಪುಷ್ಪ ಸ್ತ್ರೈಣಾಂಗ. **Pístillary** (ಗು.); **Pístillate** (ಗು.) —ಉಳ್ಳ. **Pistillíferous** (ಗು.) =Pistillate. **Pístilline** (ಗು.) =Pistillary, Pistillate.

Pístol ಪಿಸ್ಟ(ಸ್ಟ್)ಲ್ (ನಾ., ಕ್ರಿ. ಸಕ.) ಒಂದೇ ಕೈಯಲ್ಲಿ ಹಿಡಿದುಕೊಂಡು ಹೊಡೆಯಬಹುದಾದ ಸಣ್ಣ ಬಂದೂಕು: ಪಿಸ್ತೂಲು; ಕೈಕೋವಿ (Within, beyond, p.-shot ಪಿಸ್ತೂಲು ಹೊಡೆತದ ಮೇರೆಯೊಳಗೆ, ಮೇರೆಯಾಚೆ). (ಕ್ರಿ.) ಪಿಸ್ತೂಲಿನಿಂದ ಹೊಡೆ.

Pistóle ಪಿಸ್ಟೋಲ್ (ನಾ.) (ಚರಿತ್ರೆ) ಇಂಗ್ಲೆಂಡೇತರ ದೇಶಗಳ, ಮು., ಸ್ಪೈನಿನ, ಸು., ೧೮ ಷಿಲಿಂಗು ಬೆಲೆಯ, ಒಂದು ಚಿನ್ನದ ನಾಣ್ಯ.

Pístolgraph ಪಿಸ್ಟಲ್‌ಗ್ರಾಫ್ (ನಾ.) ಒಡ್ಡಿದ ತತ್‌ಕ್ಷಣವೇ ಬೀಳುವ ಛಾಯಾಚಿತ್ರ; ಈ ಚಿತ್ರವನ್ನು ತೆಗೆಯುವ ಸಲಕರಣೆ.

Píston ಪಿಸ್ಟನ್ (ನಾ.) ಆವಿಯ ಎಂಜಿನು, ನೀರೆತ್ತುವ ಪಂಪು, ಮೊ. ಗಳಲ್ಲಿಯ ನಾಳಿಯಲ್ಲಿ ಸಂದು ಬಿಡದೆ ಹೊಂದಿಕೊಂಡು, ತನಗೆ ಹಿಡಿಯಾಗಿರುವ ಸರಳಿನ ಮೂಲಕ ಚಲನ ಪಡೆಯಲು ಅಥವಾ ಕೊಡಲು ಘರ್ಷಣವಿಲ್ಲದಂತೆ ಮೇಲಕ್ಕೂ ಕೆಳಕ್ಕೂ ಆಡುವ, ಮರ, ಲೋಹ, ಮೊ. ದರ ದುಂಡು ಬಿಲ್ಲೆ ಅಥವಾ ಕಡಮೆಯುದ್ದದ ಉರುಳೆ: ಆಡುಬೆಣೆ. (P.-rod ಆಡುಬೆಣೆಯ ದಂಡ, ಸರಳು). 'ಕಾರ್ನೆಟ್' ವಾದ್ಯ, ಮೊ. ಗಳಲ್ಲಿಯ ಚಲ ಕವಾಟ.

Pit ಪಿಟ್ (ನಾ.) (ನೆಲದಲ್ಲಿ ಸ್ವಭಾವಸಿದ್ಧವಾಗಿರುವ) ಹಳ್ಳ, ಗುಂಡಿ. (ಖನಿಜ, ಮೊ. ಗಳಿಗಾಗಿ ಅಥವಾ ಕೈಗಾರಿಕೋದ್ದೇಶಗಳಿಗಾಗಿ ತೋಡಿದ) ಕುಳಿ, ಗುಣಿ, ಗುಂಡಿ (ಉದಾ., Chalk, clay, gravel, coal, saw, tan, -p.). ಗೋರಿ. ಕಾಡುಮೃಗಗಳನ್ನು ಅಥವಾ (ಮು., ಬೈಬಲ್ ಪ್ರ.) ಶತ್ರುಗಳನ್ನು ಕೆಡವಲು, ಕಣ್ಣಿಗೆ ಕಾಣದಂತೆ ಮೇರೆ ಮುಚ್ಚಿರುವ ಗುಂಡಿ; ಇರಿಸಿಲು; ಇರುಬು; ಕೆಡ್ಡ; ಕಪ್ಪು(ಗುಳಿ) [Dig a p. for (ರೂಪ.) ಗುಂಡಿಗೆ ಕೆಡವಲು, ಬಲೆಗೆ ಸಿಕ್ಕಿಸಿಕೊಳ್ಳಲು, ಪ್ರಯತ್ನಿಸು. The p. (of hell) ನರಕ (ಕೂಪ)]. =Cockpit. (ಪ್ರಾಣಿಯ ಅಥವಾ ಸಸ್ಯದ ಮೈಯಲ್ಲಾಗಲ ಅಥವಾ ಇತರ ಯಾವುದಾದರೂ ಮೇಲ್ಮೈಯಲ್ಲಾಗಲಿ ಇರುವ) ಕುಳಿ. [P. of the stomach (ಎದೆಮೂಳೆಗೆ ಸೇರಿರದ) ಇಕ್ಕೆಲದ ಹುಸಿ ಪಕ್ಕೆಲುಬುಗಳ, ಮೃದ್ವಸ್ಥಿಯ ನಡುವಣ ತಗ್ಗು ಭಾಗ: ಹೊಟ್ಟೆಯ ಕುಳಿ]. (ಸಿಡುಬು, ಮೊ. ರ) ಮಚ್ಚೆ, ಕಲೆ. (ನಾಟಕ ಶಾಲೆಯಲ್ಲಿ) ರಂಗಸ್ಥಳದ ಕೆಳ ಮಟ್ಟದಲ್ಲಿಯ ಹಳ್ಳದ ಪ್ರದೇಶ; ಈ ಜಾಗದಲ್ಲಿ ಕುಳಿತುಕೊಳ್ಳುವ ಪ್ರೇಕ್ಷಕರು [**Píttite** ಪಿಟೈಟ್ (ನಾ.) ಕುಳಿ ಪ್ರದೇಶದ ಆಸನದಲ್ಲಿರುವ ಪ್ರೇಕ್ಷಕ]. [Pitfall (ಪ್ರಾಣಿಗಳನ್ನು ಕೆಡಹುವುದಕ್ಕಾಗಿ ಮಾಡಿರುವ) ಮುಚ್ಚಿದ ಗುಂಡಿ; ಕಪ್ಪು. (ರೂಪ.) ಸಂಶಯ ತೋರದ ಮೋಸ, ಅಪಾಯ. Pitman ಕಲ್ಲಿದ್ದಲ ಗಣಿಯ ಕೆಲಸಗಾರ. (ಅಮೆ. ಸಂ.) ಯಂತ್ರ ಭಾಗವಾದ ಸಂಯೋಜಕ ದಂಡ. P. pony ಕಲ್ಲಿದ್ದಲ ಗಣಿಯೊಳಗೆ ಕೆಲಸಕ್ಕಾಗಿಟ್ಟಿರುವ (ಕುದುರೆ) ತಟ್ಟು]

Pit (ಕ್ರಿ.) (ಮು., ಕಾಯಿಪಲ್ಯ, ಮೊ. ನ್ನು ಸಂಗ್ರಹಣಕ್ಕಾಗಿ) ಗುಂಡಿಯಲ್ಲಿಡು. (ಹುಂಜ, ನಾಯಿ, ಮೊ. ನ್ನು ಮತ್ತೊಂದರಮೇಲೆ ಕಾಳಗಕ್ಕಾಗಿ) ಹಳ್ಳದಲ್ಲಿ, ಕಳದಲ್ಲಿ, ಬಿಡು (*Against* another). (ರೂಪ.) (ಮತ್ತೊಬ್ಬನಿಗೆ) ಪ್ರತಿ ಸ್ಪರ್ಧಿಯಾಗಿ ನಿಲ್ಲಿಸು (*Against* ಉಪ. ದೊಡನೆ). (—ಲ್ಲಿ) ಕುಳಿಗಳನ್ನು (ಮು., ಮಚ್ಚೆಗಳನ್ನು) ಬೀಳಿಸು (ಮು., ಭೂ. ಕೃ. ನಲ್ಲಿ). (ರೋಗ ನಿದಾನ: ಮಾಂಸ ಪ್ರದೇಶ, ಮೊ. ರಲ್ಲಿ) ಒತ್ತಿದಾಗ ಬೆರಳು, ಮೊ. ರ ಗುರುತು ನಿಲ್ಲು.

Pít-(a-)pat ಪಿಟ್(ಅ)ಪ್ಯಾಟ್ (ಕ್ರಿ. ವಿ., ನಾ.) ಡವ ಡವನೆ (ಬಡಿದುಕೊಳ್ಳುತ್ತ); ತತ್ತರಿಸುತ್ತ (His heart went p. ಅವನ ಎದೆ ಡವ ಡವನೆ ಬಡಿದುಕೊಂಡಿತು. His feet went p. ಅವನ ಕಾಲು ತತ್ತರಿಸಿತು). (ನಾ.) ಡವ ಡವ (ಎಂಬ ಶಬ್ದ)

Pitch[1] ಪಿಚ್ (ನಾ., ಕ್ರಿ. ಸಕ.) ಟಾರೆಣ್ಣೆಯನ್ನಾಗಲಿ ಟರ್ಪೆಂಟೈನ್ ಎಣ್ಣೆಯನ್ನಾಗಲಿ ಬಟ್ಟಿಯಿಳಿಸುವುದರಿಂದ ಬರುವ, ಶಾಖವಾಗಿರುವಾಗ ಜಿಗುಟಾದ ಅರ್ಧ ದ್ರವವಾಗಿಯೂ ತಣ್ಣಗಿರುವಾಗ ಗಟ್ಟಿಯಾಗಿಯೂ ಇರುವ, ಹಡಗು, ಮೊ. ಗಳಲ್ಲಿಯ ಸಂದುಗಳನ್ನು ಮುಚ್ಚುವುದಕ್ಕೆ ಉಪಯೋಗಿಸುವ, ಕರಿಯ ಅಥವಾ ಕಗ್ಗಂದು ಬಣ್ಣದ ಒಂದು ರಾಳ (ಪದಾರ್ಥ): ಕಪ್ಪು ರಾಳ (P. black ಕಗ್ಗಪ್ಪು. P. darkness ಕಗ್ಗತ್ತಲೆ; ಗಾಢಾಂಧಕಾರ). [P.-blende ಕಪ್ಪು ರಾಳದ ತುಂಡುಗಳ ರೂಪದಲ್ಲಿ ಸ್ವಾಭಾವಿಕವಾಗಿ ದೊರೆಯುವ ಯುರೇನಿಯಂ ಮತ್ತು ಆಮ್ಲಜನಕ ಸಂಯುಕ್ತ. P.-cap ಹಿಂಸೆ ಮಾಡುವುದಕ್ಕೆ ಉಪಯೋಗಿಸುವ, ಒಳಗೆ ಕಪ್ಪು ರಾಳ ಬಳಿದ, ಟೋಪಿ. P.-pine ರಾಳ ಹೆಚ್ಚಾಗಿರುವ ಪೈನ್ ಮರ. Pitchstone ಕಪ್ಪು ರಾಳದಂತೆ ಕಾಣುವ ಹಳೆಯ ಜ್ವಾಲಾಮುಖಿ ಶಿಲೆ]. (ಕ್ರಿ.) ಕಪ್ಪು ರಾಳದ ಆವರಣ ಕೊಡು; —ನ್ನು ಬಳಿ, ಸವರು. **Pítchy** (ಗು.) ಕಪ್ಪು ರಾಳದ(ಂಥ); —ದಂತೆ ಕಪ್ಪಗಿರುವ.

Pitch[2] ಪಿಚ್ (ಕ್ರಿ.) (ಗುಡಾರ, ಡೇರೆ) ಹಾಕು, ಹೊಡೆ; ಪಾಳೆಯ ಮಾಡು; ಬೀಡು ಬಿಡು. [(ಕ್ರಿಕೆಟ್) P. wickets ನೆಲದಲ್ಲಿ ಗುರಿ ಕೋಲುಗಳನ್ನು ನೆಟ್ಟು ಅವುಗಳಮೇಲೆ ಅಡ್ಡಪಟ್ಟಿಯಿಡು]. (ಒಂದು ಗೊತ್ತಾದ ಸ್ಥಾನದಲ್ಲಿ, ವಸ್ತುವನ್ನು) ನೆಡು. (ಪೇಟೆ, ಮೊ. ಗಳಲ್ಲಿ, ವಸ್ತುಗಳನ್ನು) ಮಾರಾಟಕ್ಕಿಡು. (ರಸ್ತೆಗೆ) ದಿಂಡು ಕಲ್ಲುಗಳನ್ನು ಹದಿ, ಹದ್ದಿಸು. [Pitched battle (Battle ನೋಡಿ)]. (ಸಂ.) ಒಂದು ಗೊತ್ತಾದ ಶ್ರುತಿಗೆ ಅಳವಡಿಸು. (ರೂಪ.) ಒಂದು ಗೊತ್ತಾದ ಶೈಲಿಯಲ್ಲಿ ಹೇಳು. ಎಸೆ; ಒಗೆ; ಬೀರು. (ಆಟಗಳಲ್ಲಿ) (ಚಪ್ಪಟೆಯ ವಸ್ತುವನ್ನು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗುರಿಗೆ ಎಸೆ. (ಅನಂ.) (ಕಟ್ಟುಕಥೆ) ಹೇಳು. (ಒಬ್ಬನ ತಲೆಯಮೇಲೆ, ಒಂದರೊಳಕ್ಕೆ) ಧೊಪ್ಪನೆ ಬೀಳು, ಬಲವಾಗಿ ಬೀಳು. (ಹಡಗು) ಉದ್ದಮುಖನಾಗಿ ಮುಳುಗು, ಏಳು ಬೀಳು (Roll ಪದದೊಡನೆ ಹೋಲಿಸಿ). P. in (ಬಳ. ಮಾ.) ಸತ್ತ್ವಗೂಡಿ, ಪೌರುಷದಿಂದ, ಕೆಲಸಕ್ಕೆ ತೊಡಗು. P. into (ಬಳ. ಮಾ.) (ಏಟು, ಮಾತು, ಮೊ. ಗಳಿಂದ) ಬಲವಾಗಿ ಎದುರಿಸು, ಮೇಲೆಬೀಳು, ದಂಡಿಸು. (ಒಬ್ಬನಮೇಲೆ) ಬಲವಾಗಿ ಬೀಳು; (ತಿಂಡಿ, ಮೊ. ನ್ನು) ಚೆನ್ನಾಗಿ ಹೊಡೆ. P. upon (ಒಬ್ಬನನ್ನು, ಒಂದನ್ನು) ಚುನಾಯಿಸು, ಹಿಡಿ. P.-&-toss ನಾಣ್ಯವನ್ನು ಗುರಿಗೆಸೆದು ಆಡುವ ಜೂಜಾಟದ ಒಂದು ಅದೃಷ್ಟದ ಆಟ. P.-farthing = P.-&-toss. **Pítcher**[1] (ನಾ.) (ಕ್ರಿಯಾರ್ಥಗಳಲ್ಲಿ); (ಮು., ಬೇಸ್‌ಬಾಲ್ ಆಟದಲ್ಲಿ) ಚೆಂಡೆಸೆಯುವವನು. ಒಂದು ಗೊತ್ತಾದ ಸ್ಥಳದಲ್ಲಿ ಮಳಿಗೆಯಿಡುವ ಬೀದಿ ವ್ಯಾಪಾರಿ. ನೆಲಕ್ಕೆ ಹಾಸುವ, ಹದ್ದಿಸುವ, ಕಲ್ಲು.

Pitch[2] (ನಾ.) (ಕ್ರಿಯಾರ್ಥಗಳಲ್ಲಿ). (ಕ್ರಿಕೆಟ್ ಆಟದಲ್ಲಿ) ಗುರಿಕೋಲುಗಳ ಮಧ್ಯದ ಮತ್ತು ಅವುಗಳ ಸುತ್ತಮುತ್ತಲಿನ ಸ್ಥಳ; ಚೆಂಡೆಸೆತದ ರೀತಿ. (ಪೇಟೆಯಲ್ಲಿ, ಸಂತೆಯಲ್ಲಿ) ಮಾರಾಟಕ್ಕಿಟ್ಟ ಸರಕಿನ ಮೊತ್ತ. (ಬೀದಿ ಆಟಗಾರ, ಜೂಜಾಟಗಳ ವ್ಯಾಪಾರಿ, ಮೊ. ರ) ನಿರ್ದಿಷ್ಟ ಸ್ಥಾನ. [ಎರೆಯ (ಆಹಾರ ಪ್ರಾಣಿಯ) ಮೇಲೆ ಎರಗುವುದಕ್ಕೆ ಮೊದಲು, ಡೇಗೆ, ಮೊ. ವು] ಹಾರುವ ಎತ್ತರ [Fly a high p. ಬಹು ಎತ್ತರ ಹಾರು (ರೂಪ. ಸಹ)]. (ಗುಣ, ಮೊ. ಗಳ) ಮಟ್ಟ, ಔನ್ನತ್ಯ, ಆಧಿಕ್ಯ. (ಸಂ.) ಸ್ವರದ (ತೀವ್ರತೆಯ) ಮಟ್ಟ; ಸ್ಥಾಯಿ. ಚಾವಣಿಯ ಇಳುಕಲಿನ ಇಳಿಜಾರು ಮಟ್ಟ. (ಯಂತ್ರಶಿಲ್ಪ) ಅನುಗತವಾಗಿ ಬರುವ ಎರಡು ಬಿಂದುಗಳ ಅಥವಾ ರೇಖೆಗಳ ನಡುವಣ ದೂರ: ಅಂತರ (ಉದಾ., ಹಲ್ಲು ಚಕ್ರದ ಪಕ್ಕ ಪಕ್ಕದ ಎರಡು ಹಲ್ಲುಗಳ ಅಂತರ). P.-pipe (ಹಾಡುವುದಕ್ಕೆ ಅಥವಾ ಶ್ರುತಿ ಸಾಂಗತ್ಯಕ್ಕೆ ಸ್ವರ ಕಟ್ಟುವುದಕ್ಕಾಗಿ, ಬಾಯಿಂದ ಊದುವ) ಸಣ್ಣ ಶ್ರುತಿ ಕೊಳವೆ. P.-wheel (ಮತ್ತೊಂದರೊಡನೆ ಹಲ್ಲುಗೂಡುವ, ತೊಡರುವ) ಹಲ್ಲುಚಕ್ರ.

Pítcher[1]. **Pitch**[2] (ಕ್ರಿ.) ನೋಡಿ.

Pítcher[2] ಪಿಚರ್ (ನಾ.) (ಹಿಡಿ ಅಥವಾ ಎರಡು ಕಿವಿಗಳಿಂದ ಕೂಡಿದ ಸಾ., ಮೂತಿಯುಳ್ಳ, ನೀರು, ಮೊ. ದ್ರವಗಳಿಗಾಗಿ ಬಳಸುವ) ದೊಡ್ಡ ಮಣ್ಣಿನ (ಕಿವಿ) ಹೂಜಿ, ಮರಿಗೆ. (Little pitchers have long ears ಸಣ್ಣ ಮಕ್ಕಳು ಹೊಂಚು ಕೇಳುವ ಪ್ರವೃತ್ತಿಯುಳ್ಳವರು). (ಸ. ವಿ.) ಮೂತಿಯ ಸಣ್ಣ ಹೂಜಿಯಂತೆ ರೂಪುಗೊಂಡ ಎಲೆ. P.-plant ಇಂಥ ಎಲೆಯುಳ್ಳ ಸಸ್ಯ. **Pítcherful** (ನಾ.)

Pìtchfork ಪಿಚ್‌ಫೋರ್ಕ್ (ನಾ., ಕ್ರಿ. ಸಕ.) ಹುಲ್ಲು, ಮೊ. ನ್ನು ಎತ್ತಿ ಹಾಕುವುದಕ್ಕಾಗಿ ಮೊನಚು ಕವಲುಗಳುಳ್ಳ ಉದ್ದ ಹಿಡಿಯ ಕವೆ: ಕವಲುಗೋಲು. (ಕ್ರಿ.) ಕವೆಯಿಂದ (ಹೇಗೊ ಹಾಗೆ) ಎತ್ತಿ ಹಾಕು, ಎತ್ತಿ ಎಸೆ; (ರೂಪ.) (ಒಬ್ಬನನ್ನು, ಒಂದು ಸ್ಥಾನಕ್ಕೆ, ಹುದ್ದೆಗೆ) ಮಧ್ಯೆ ನುಗ್ಗಿಸು.

Pítchy. **Pitch**[1] ನೋಡಿ.

Píteous, etc. **Pity** ನೋಡಿ.

Pith ಪಿತ್ (ನಾ., ಕ್ರಿ. ಸಕ.) ದ್ವಿ ಬೀಜದಳ ಸಸ್ಯಗಳ ತಾಳು ಮತ್ತು ರೆಂಬೆಗಳಲ್ಲಿಯ ಮತ್ತು ಕಿತ್ತಿಳೆ, ಮೊ. ಹಣ್ಣುಗಳ ಸಿಪ್ಪೆಯಲ್ಲಿಯ, ಸ್ಪಂಜಿನಂಥ ರಂಧ್ರಗೂಡಿದ ಅಂಗಾಂಶ; ಬೆಂಡು. ಬೆನ್ನುಹುರಿ; ಮಿದುಳು ಬಳ್ಳಿ. (ರೂಪ.) ತಿರುಳು; ಕೆಚ್ಚು; ಸಾರ; ಸತ್ತ್ವ (ಹಲವು ವೇಳೆ P. & marrow of). ದೇಹ ಬಲ; ಹುರಿಪು; ಸಾಮರ್ಥ್ಯ; ಚೈತನ್ಯ; ಬಲ; ಶಕ್ತಿ (Of P. & moment ಪ್ರಮುಖವಾದ; ಪ್ರಬಲವಾದ). (ಕ್ರಿ.) ಬೆನ್ನುಹುರಿ ಕತ್ತರಿಸಿ (ಪ್ರಾಣಿಯನ್ನು) ಕೊಲ್ಲು. **Píthless** (ಗು.); **Píthy** (ಗು.) ಬೆಂಡಿನ(ಂಥ); ಬೆಂಡು ತುಂಬಿದ. ತಿರುಳಿನ; ತಿರುಳುಳ್ಳ; ಸಾರವುಳ್ಳದ್ದೂ ಅಡಕವೂ ಆದ; ಸೂತ್ರಪ್ರಾಯವಾದ; ಬಿಗುವಾದ. **Píthily** (ಕ್ರಿ. ವಿ.); **Píthiness** (ನಾ.)

Pithecánthrope ಪಿಥಿಕ್ಯಾಂತ್ರೋಪ್ (ನಾ.) (ವಾನರಕ್ಕೂ ಮನುಷ್ಯನಿಗೂ ಮಧ್ಯವರ್ತಿಯಾಗಿದ್ದಿರಬಹುದೆಂದು ಶಾಸ್ತ್ರಜ್ಞರು ಊಹಿಸುವ) ವಾನರ ನರ; ಕಪಿ ಮನುಷ್ಯ.

Pithécoid ಪಿಥೀಕಾಯ್ಡ್ (ಗು.) ಕಪಿಯಂಥ.

Píttance ಪಿಟನ್ಸ್ (ನಾ.) (ಚರಿತ್ರೆ) (ವಿಶೇಷ ದಿನಗಳಲ್ಲಿ ಹೆಚ್ಚುಗಟ್ಟಳೆಯ ಭಕ್ಷ್ಯಾದಿಗಳನ್ನು ಮಾಡಲು) ಧಾರ್ಮಿಕ ಸಂಸ್ಥೆ, ಸಂನ್ಯಾಸಿ ಮಠ—ಇವಕ್ಕೆ ಕೊಟ್ಟ, ಬಿಟ್ಟ, ಧಾರ್ಮಿಕ ದತ್ತಿ. ಮು., ಕ್ಷಾಮ ಭತ್ಯ; ಅತ್ಯಲ್ಪ ವೇತನ; ಹಿಡಿಗೂಳು (A mere p.). ಅಲ್ಪ ಸಂಖ್ಯೆ; —ಮೊತ್ತ.

Píttite. **Pit** (ನಾ.) ನೋಡಿ.

Pitúitary ಪಿಟ್ಯೂಇಟರಿ (ಗು.) ಕಫದ; ಕಫ ಸ್ರಾವಕ; ಶ್ಲೇಷ್ಮದ (P. gland, body ಶರೀರದ ಬೆಳವಣಿಗೆಯಮೇಲೆ ಮುಖ್ಯ ಪ್ರಭಾವವುಳ್ಳದ್ದೆಂದು ನಂಬಿಕೆಯುಳ್ಳ, ಮಿದುಳಿನ ಬುಡದಲ್ಲಿಯ, ಒಂದು ಸಣ್ಣ ನಿರ್ನಾಳ ಗ್ರಂಥಿ). **Pitúitous** (ಗು.)

Píty ಪಿಟಿ (ನಾ., ಕ್ರಿ. ಸಕೆ.) (ಒಬ್ಬನ ವ್ಯಥೆ ಅಥವಾ ನರಳಿಕೆಯಿಂದ ಹುಟ್ಟಿದ) ಮರುಕ, ಕನಿಕರ, ಕರುಣೆ, ದಯೆ [Cannot help feeling p. for him. Take p. on —ಮೇಲೆ ಮರುಕಗೊಳ್ಳು, ದಯೆ ತೋರು. (ಬೇಡಿಕೆಯಾಗಿ) For p.'s sake ಕನಿಕರಕ್ಕಾಗಿ; ದಯಾ ದೃಷ್ಟಿಯಿಂದ]. ಶೋಚನೀಯ ವಿಷಯ; ವಿಷಾದ ಸಂಗತಿ; ವ್ಯಸನ ಕಾರಣ [What a p.! ಅಯ್ಯೋ ಪಾಪ! ಎಂಥ ವ್ಯಥೆ! More's the p. ಹೆಚ್ಚು ಶೋಚನೀಯ. It is a thousand pities you did not mention it. (ಪ್ರಾಚೀ. ಪ್ರ.) It is or was p. of them ಅವರಿಗಾಗಿ ಮರುಗಬೇಕಾಗಿದೆ]. (ಕ್ರಿ.) ಮರುಗು; ಕನಿಕರಪಡು. (ಕೆಲವು ವೇಳೆ ತಿರಸ್ಕಾರ ಸೂಚಕವಾಗಿ ಪ್ರ.: He is much to be pitied). **Pítyingly** (ಕ್ರಿ. ವಿ.); **Píteous** ಪಿಟಿಯಸ್ (ಗು.) ಮನ ಕರಗಿಸುವಂಥ; ಮರುಗಬೇಕಾದ; ಕರುಣೆ ಹುಟ್ಟಿಸುವ; ಶೋಚನೀಯ. **Píteously** (ಕ್ರಿ. ವಿ.); **Píteousness** (ನಾ.); **Pítiable** (ಗು.) ಮರುಕ ಅಥವಾ ತಿರಸ್ಕಾರ ಭಾವ ಹುಟ್ಟಿಸುವ; ಶೋಚನೀಯ. **Pítiableness** (ನಾ.); **Pítiably** (ಕ್ರಿ. ವಿ.); **Pítiful** (ಗು.) ಮರುಕಗೂಡಿದ; ಕನಿಕರವುಳ್ಳ; ಕರುಣೆ ತೋರುವ; (ವಸ್ತುಗಳ ವಿಷಯದಲ್ಲಿ) = Pitiable; ತುಚ್ಛವಾದ; ತಿರಸ್ಕಾರಾರ್ಹವಾದ. **Pítifully** (ಕ್ರಿ. ವಿ.); **Pítifulness** (ನಾ.); **Pítiless** (ಗು.) ಮರುಕ, ಕನಿಕರ, —ಇಲ್ಲದ, ತೋರದ; ನಿರ್ದಯ. **Pítilessly** (ಕ್ರಿ. ವಿ.); **Pítilessness** (ನಾ.)

Pívot ಪಿವಟ್ (ನಾ., ಕ್ರಿ.) ಸುತ್ತು ತಿರುಗಲು ಅಥವಾ ತೂಗಾಡಲು ಆಧಾರವಾದ ಗೂಟ ಅಥವಾ ಮೊಳೆ: ತಿರುಗು ಗೂಟ. ಅಚ್ಚು (ಗೂಟ); ತಿರುಗಾಣಿ. (ಸೈನ್ಯ) ದಳವೆಲ್ಲವೂ ಸುತ್ತು ತಿರುಗಲು (ಕೇಂದ್ರದಲ್ಲಿ) ನಿಂತ ಮನುಷ್ಯ. (ರೂಪ.) ಪ್ರಧಾನ, ಕೇಂದ್ರ, —ವಿಷಯ. (ಕ್ರಿ.) ಅಚ್ಚುಗೂಟ ಹಾಕು; —ದಿಂದ ಸೇರಿಸು; —ದ ಮೇಲೆ (ಹೇಗೊ ಹಾಗೆ) ತಿರುಗು (*Upon* ಉಪ. ದೊಡನೆ, ರೂಪ. ಸಹ). **Pívotal** (ಗು.) ಅಚ್ಚುಗೂಟದ; —ದ ತೆರದ; —ವಾಗಿರುವ. ಕೇಂದ್ರದ; ಪ್ರಮುಖವಾದ.

Píxy, -xie ಪಿಕ್ಸಿ (ನಾ.) (ಯಕ್ಷನಂಥ) ಒಂದು ಅತಿಮಾನುಷ ವ್ಯಕ್ತಿ.

Pizzicáto (It.) ಪಿಟ್ಸಿಕಾಟೋ(ೞ) (ಕ್ರಿ. ವಿ., ಗು., ನಾ.) (ಸಂ.) (ತಂತಿಯನ್ನು ಕಮಾನಿನಿಂದ ನುಡಿಸುವುದಕ್ಕೆ ಬದಲಾಗಿ) ಬೆರಳಿನಿಂದ ಮಿಟಿ (ನುಡಿಸಿದ). (ನಾ.) ಹೀಗೆ ನುಡಿಸಿದ ಕೃತಿ, ರಾಗ.

Plácable ಪ್ಲ್ಯಾ(ಪ್ಲೇ)ಕಬ್‌ಲ್ (ಗು.) ಸುಲಭವಾಗಿ ಸಮಾಧಾನ ಮಾಡಲಾಗುವ, ಶಮನ ಹೊಂದುವ; ಮೃದು ಸ್ವಭಾವದ; ಸೌಮ್ಯ; ಕ್ಷಮಾ ಶೀಲ. **Placabílity** (ನಾ.); **Plácably** (ಕ್ರಿ. ವಿ.); **Placáte** ಪ್ಲ(ಪ್ಲೇ)ಕೇಟ್ (ಕ್ರಿ. ಸಕ.) ಸಂತೈಸು; ಸಮಾಧಾನಪಡಿಸು; ಒಪ್ಪಿಸು; (ಈಗ ಮು., ಅಮೆ. ಸಂ.) ಪ್ರತಿಕಕ್ಷಿಗಳ ಪರೋಕ್ಷ ಸಮ್ಮತಿಯನ್ನು ಹಣದ ಮೂಲಕ ಪಡೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Plácard ಪ್ಲ್ಯಾಕಾರ್ಡ್ (ನಾ., ಕ್ರಿ. ಸಕ.) (ಹಾಳೆಯ ಒಂದು ಕಡೆ ಮಾತ್ರ ಮುದ್ರಿಸಿದ, ಗೋಡೆ, ಮೊ. ಗಳಿಗೆ ಅಂಟಿಸುವ ಅಥವಾ ತೂಗಕಟ್ಟುವ) ಪ್ರಕಟನ ಪತ್ರ; ಜಾಹಿರಾತು. (ಕ್ರಿ.) (ಗೋಡೆ, ಮೊ. ಗಳ ಮೇಲೆ) ಜಾಹಿರಾತು ಹಾಕು. (ಸಾಮಾನು, ಮೊ. ನ್ನು) ಜಾಹಿರಾತು ಹಾಕಿ ಪ್ರಕಟಿಸು; ಪ್ರಕಟನ ಪತ್ರವಾಗಿ ಪ್ರದರ್ಶಿಸು.

Placáte. **Placable** ನೋಡಿ.

Place ಪ್ಲೇಸ್ (ನಾ.) (ಒಂದು ಗೊತ್ತಾದ) ಎಡೆ; ಕಡೆ; ಜಾಗ; ಸ್ಥಳ; ಸ್ಥಾನ; ತಾವು; ಠಾವು (It has changed its p.). ಪಟ್ಟಣ, ಊರು, ಹಳ್ಳಿ, ಮೊ. ಡು. (ಗುಂಪು ಕಟ್ಟಡಗಳ ಹೆಸರುಗಳಲ್ಲಿ: Ely P.). ವಾಸಸ್ಥಾನ; ಮನೆ; ವಸತಿ. (ಸುತ್ತಮುತ್ತಲನ ಕಟ್ಟಡ, ಹೊಲ, ಮೊ. ವು ಸೇರಿದ) ಹಳ್ಳಿಮನೆ. ನಿರ್ದಿಷ್ಟ ಉದ್ದೇಶಕ್ಕಾಗಿಟ್ಟಿರುವ ಮಂದಿರ, ಸ್ಥಾನ [P. of amusement, worship; Bath-ing-p.; (ಪಾರ್ಲಿಮೆಂಟಿನ ಪ್ರಜಾಸಾಮಾನ್ಯ ಸಭೆಯ ಪ್ರ.) Another p. ಶ್ರೀಮಂತ ಸಭೆ]. ಮೇಲ್ಮೈಯಲ್ಲಿ ಒಂದು ಗೊತ್ತಾದ ಪ್ರದೇಶ (A sore p. on his wrist). ಹುಣ್ಣು; ಗಾಯ. ಪುಸ್ತಕದ ಪ್ರಕರಣ. ಸ್ಥಾನ; ದರ್ಜೆ; ಅಂತಸ್ತು (Servants must know their p.). (ಪಂದ್ಯ) ನಿಂತ ಸ್ಪರ್ಧಿಗಳಲ್ಲಿ (ಒಬ್ಬನ, ಒಂದರ) ಸ್ಥಾನ. ಒಂದು ಸಂಖ್ಯಾ ಶ್ರೇಣಿಯಲ್ಲಿ ದಶಮಾಂಶದ ಅಥವಾ ಅಂಥ ಇತರ ಸಂಖ್ಯಾ ಗಣನೆಯಲ್ಲಿ ಒಂದು ಅಂಕದ ಬೆಲೆಯನ್ನು ಸೂಚಿಸುವ ಆ ಅಂಕದ ಸ್ಥಾನ (Calculated to 50 decimal places). ವಾದ, ನಿರೂಪಣೆ, ಮೊ. ಗಳ ಗತಿಯಲ್ಲಿ ಒಂದು ಮೆಟ್ಟಲು (In the first, second, p.). ತಕ್ಕ, ನಿಯತ, ಸ್ವಾಭಾವಿಕ, —ಸ್ಥಾನ, ಸ್ಥಳ [Take your places. There is no p. for doubt. Is in or out of (its, his) p.]. (ಊಟದ ಮೇಜು, ಬಂಡಿ, ಮೊ. ಗಳಲ್ಲಿ ಒಬ್ಬನಿಗೆ, ಒಂದಕ್ಕೆ) ಸ್ಥಳ, ಸ್ಥಾನ, ಅವಕಾಶ (Take two places in the coach. Always a p. for you at our table. In p. of ಒಂದರ ಬದಲು, ಸ್ಥಾನದಲ್ಲಿ). ಅಧಿಕಾರ, ಉದ್ಯೋಗ, ಹುದ್ದೆ, ಚಾಕರಿ, ನೌಕರಿ (ಮು., ಸರ್ಕಾರದ ನೌಕರಿ); ಅಧಿಕಾರ ಕರ್ತವ್ಯ (It is not my p. to inquire into that). In, out of, p. ಉಚಿತ, ಅನುಚಿತ; ತಕ್ಕ, ತಕ್ಕದ್ದಲ್ಲದ. Give p. to (ಒಬ್ಬನಿಗೆ, ಒಂದಕ್ಕೆ) ಎಡೆಗೊಡು; ಸ್ಥಳ ಬಿಟ್ಟುಕೊಡು; (—ಇಂದ) ಸ್ಥಾನಚ್ಯುತಿ ಪಡೆ. Take p. ಉಂಟಾಗು; ಸಂಭವಿಸು. P. brick (ಇಟ್ಟಿಗೆಗೂಡಿನಲ್ಲ ಗಾಳಿಯ ಕಡೆಯಿದ್ದುದ್ದರಿಂದ) ಅರ್ಧ ಸುಟ್ಟ ಇಟ್ಟಿಗೆ; ಅರೆಗಾವಿಟ್ಟಿಗೆ. P.-holder. P.-hunter (Hunt ನೋಡಿ). P.(-kick) (ಕಾಲ್ಚೆಂಡಾಟ) (ಒದೆತಕ್ಕಾಗಿ) ಮತ್ತೊಬ್ಬನು ನೆಲದ ಮೇಲಿಟ್ಟ ಚೆಂಡಿನ ಒದೆತ; ಎಡೆಯೊದೆತ. Placeman (ಮು., ಯೋಗ್ಯತೆಗೆ ಗಮನ ಕೊಡದೆ ಸ್ವಾರ್ಥೋದ್ದೇಶದಿಂದ ನಿಯಮಿತನಾದ) ಉದ್ಯೋಗಿ.

Place (ಕ್ರಿ. ಸಕ.) (ವಸ್ತು, ಮೊ. ನ್ನು, ಒಂದು ಗೊತ್ತಾದ ಸ್ಥಳದಲ್ಲಿ) ಇಡು, ಇರಿಸು, ಮಡಗು, ಇಕ್ಕು; (ವಸ್ತುಗಳನ್ನು) ಅವವುಗಳ ಯೋಗ್ಯ ಸ್ಥಾನಗಳಲ್ಲಿ ಅನುಗೊಳಿಸು. (ಒಬ್ಬನನ್ನು, ಮು., ಪಾದ್ರಿಯನ್ನು) ಅಧಿಕಾರಕ್ಕೆ ನಿಯಮಿಸು; (ಒಬ್ಬನಿಗೆ) ಉದ್ಯೋಗ, ಜೀವನ, —ಕಲ್ಪಿಸು. (ಹಣವನ್ನು) ಬಡ್ಡಿಗಾಗಿ ಅಥವಾ ಯಾವುದಾದರೂ ಉದ್ಯಮದಲ್ಲಿ (ಉದಾ., ಸರ್ಕಾರದ ಸಾಲಪತ್ರಗಳಲ್ಲಿ, ಋಣ ಸಂಚಯದಲ್ಲಿ) ಹಾಕು, ವಿನಿಯೋಗಿಸು. (ಸರಕನ್ನು) ಗಿರಾಕಿಗೆ ವಿಲೆ ಮಾಡು; (ಸರಕಿಗಾಗಿ, ವ್ಯಾಪಾರ ಸಂಸ್ಥೆ, ಮೊ. ಕ್ಕೆ) ಕೋರಿಕೆ ಕಳುಹಿಸು. (ಒಬ್ಬನಲ್ಲಿ, ಒಂದರಲ್ಲಿ, ನಂಬಿಕೆ, ಭರವಸೆ) ಇಡು (*In*, *on* ಉಪ. ದೊಡನೆ). (—ಕ್ಕೆ) ಸ್ಥಾನ, ಅಂತಸ್ತು, ಗೊತ್ತುಮಾಡು; ಸ್ಥಳ ಗೊತ್ತುಮಾಡು. (ಪಂದ್ಯದಲ್ಲಿ, ಒಬ್ಬನ, ಒಂದರ) ಸ್ಥಾನವನ್ನು ಹೇಳು (ಸಾ., ಮೊದಲನ ಮೂರು ಕುದುರೆಗಳಲ್ಲಿ ಅಥವಾ ಓಟಗಾರರಲ್ಲಿ) (Be placed ಮೊದಲನ ಮೂರು ಸ್ಥಾನಗಳಲ್ಲೊಂದನ್ನು ಪಡೆ). (ಕಾಲ್ಚೆಂಡಾಟ) ಎಡೆಯೊದೆತದಿಂದ ಗುರಿಯೆಡೆಯನ್ನು ಗೆಲ್ಲು. ಪೂರ್ತಿ ಗುರುತು ಹಚ್ಚು; (ಒಬ್ಬನೊಡನೆ) ಹಿಂದೆ ಸಂಧಿಸಿದ ಸಂದರ್ಭಗಳನ್ನು ಜ್ಞಾಪಕಕ್ಕೆ ತಂದುಕೊ. (ಒಂದು ವರ್ಗಕ್ಕೆ) ನಿಯತ ಮಾಡು, ಗೊತ್ತುಮಾಡು (I know that man's face but I can't p. him)

Placénta ಪ್ಲಸೆಂಟ (ನಾ.) (ಮೇಲುದರ್ಜೆಯ ಸಸ್ತನಿ ಪ್ರಾಣಿಗಳಲ್ಲಿ) ಅದಕ್ಕೆ ಸೇರಿಕೆಯಾಗಿರುವ ಹೊಕ್ಕುಳುಬಳ್ಳಿಯ ಮೂಲಕ ಭ್ರೂಣದ ಪೋಷಣ ಕಾರ್ಯ ಮುಗಿದಮೇಲೆ ಹೆರಿಗೆಯಲ್ಲಿ ಹೊರಕ್ಕೆ ದೂಡಲ್ಪಡುವ, ರಕ್ತನಾಳಗಳು ತುಂಬಿದ, ಚಪ್ಪಟೆಯಾದ, ದುಂಡನೆಯ, ಸ್ಪಂಜಿನಂಥ ಅಂಗ: ಮಾಸು (ಚೀಲ); (ಹೆರಿಗೆಯ) ಸೆತ್ತೆ, ಕಸ. ಜರಾಯು; ಗರ್ಭವೇಷ್ಟನ. (ಸ. ವಿ.) ಅಂಡಾಣುಗಳು ಹತ್ತಿಕೊಂಡಿರುವ ಶಲಾಕಾಕೋಶ ಭಾಗ. **Placéntal** (ಗು.)

Plácer ಪ್ಲೇಸರ್ (ನಾ.) ಹೊಳೆ, ಮೊ. ಗಳ ಪಾತ್ರದಲ್ಲಿ, ಪ್ರಶಸ್ತ ಖನಿಜಗಳು ಕಣರೂಪದಲ್ಲಿ ದೊರೆಯುವ ಮರಳು, ಗರಸು, ಮೊ. ಗಳ ಸಂಗ್ರಹ, ಒಂಡು.

Plácet (L) ಪ್ಲೇಸೆಟ್ (ವಾಕ್ಯ; ನಾ.) (ವಿ. ವಿ. ನಿ.) P., non p. ನನಗೆ ಸಮ್ಮತಿ, ಅಸಮ್ಮತಿ (ಒಂದು ಚರ್ಚಾ ಪ್ರತಿಜ್ಞೆಯ ಪರವಾಗಿ ಅಥವಾ ಪ್ರತಿಕೂಲವಾಗಿ ಅಭಿಮತ ಕೊಡುವಾಗ ಪ್ರ.). (ನಾ.) ಅಂಥ ಅಭಿಮತ (ವೋಟು)

Plácid ಪ್ಲ್ಯಾಸಿಡ್ (ಗು.) ಸೌಮ್ಯ; ಪ್ರಶಾಂತ; ಪ್ರಸನ್ನ. **Plácid-ly** (ಕ್ರಿ. ವಿ.); **Placídity** ಪ್ಲ— (ನಾ.)

Plácket ಪ್ಲ್ಯಾಕೆಟ್ (ನಾ.) (ಮು., ಹೆಂಗಸಿನ ಪಾವಡೆಯ) ಜೇಬು, ಕಿಸೆ. (ಪ್ರಾಚೀ. ಪ್ರ.) ಪಾವಡೆ, ಹೆಂಗಸು.

Plácoid ಪ್ಲ್ಯಾಕಾಯ್‌ಡ್ (ಗು.) (ಶಲ್ಕಗಳು) ತಗಡುಪಟ್ಟಿಯಾಕಾರದ. (ಮೀನು) —ಯಾಕಾರದ ಶಲ್ಕಗಳುಳ್ಳ.

Plafond (F) ಪ್ಲ್ಯಾಫಾನ್ (ನಾ.) ಮಾಳಿಗೆಯ ಒಳಮೈ (ಮು., ವರ್ಣಚಿತ್ರಗಳಿಂದ ಅಲಂಕರಿಸಿದ್ದು); ಇಂಥ ವರ್ಣಚಿತ್ರ.

Plágiarize ಪ್ಲೇಜಿಯರೈಸ್ (ಕ್ರಿ. ಸಕ.) ಮತ್ತೊಬ್ಬನ ಭಾವ, ಬರಹ, ಕಲ್ಪನೆ, ಮೊ. ನ್ನು ತನ್ನದನ್ನಾಗಿ ಉಪಯೋಗಿಸಿಕೊ; ಕದ್ದು ಬಳಸು; ಕೃತಿಚೌರ್ಯ ಮಾಡು. **Plágiarism** (ನಾ.); **Plágiarist** (ನಾ.); **Plágiary** (ನಾ.) =Plagiarism; =Plagiarist.

Plágio- ಪ್ಲೇಜಿಯೊ—, ಪ್ಲ್ಯಾಗಿಯೊ— (ಸ. ಪೂ. ಪ.) ಓರೆಯಾದ—; ಇಳುಕಲಾದ— [ಉದಾ., -cephálic ತಲೆಬುರುಡೆಯ ಹಿಂಭಾಗ ಒಂದು ಕಡೆಯೂ, ಮುಂಭಾಗ ಮತ್ತೊಂದು ಕಡೆಯೂ ಹೆಚ್ಚಾಗಿ ಬೆಳೆದ. -clástic (ಖನಿಜ) ಓರೆಯಾದ ಸೀಳಿಕೆಯುಳ್ಳ]

Plague ಪ್ಲೇಗ್ (ನಾ., ಕ್ರಿ. ಸಕ.) (ಮು., ದೇವರ ಶಿಕ್ಷೆಯಾಗಿ ಬಂದ) ಉಪದ್ರವ, ದುಃಖ, ಸಂಕಟ. (ಬಳ. ಮಾ.) ಕಿರುಕುಳ; ಕೇಡು; ಪೀಡೆ. ಮಾರಕ ವ್ಯಾಧಿ [ಮು., the p. (ಪೌರಸ್ತ್ಯ, ಅಥವಾ ಗಡ್ಡೆ ಏಳುವ) ಪ್ಲೇಗು ರೋಗ. (ಶಾಪ ಹಾಕುವಲ್ಲಿ) P. on it ಅದಕ್ಕೆ ದೊಡ್ಡ ರೋಗ ಬರಲಿ! P.-spot ಪ್ಲೇಗು ರೋಗಕ್ಕೆ ಲಕ್ಷಣವಾದ ಚರ್ಮದ ಮೇಲಿನ ಗುರುತು; ಪ್ಲೇಗು ಹರಡಿರುವ ಪ್ರಾಂತ. (ರೂಪ.) ನೀತಿಭ್ರಷ್ಟತೆಯ ಮೂಲ ಅಥವಾ ಚಿಹ್ನೆ]. (ಕ್ರಿ.) (ದೇವರ ಶಿಕ್ಷೆಯಾಗಿ) ಸಂಕಟ, ಉಪದ್ರವ, —ಕೊಡು. (ಬಳ. ಮಾ.) ಕಿರುಕುಳ ಕೊಡು; ಕಾಡು; ಪೀಡಿಸು. **Pláguesome** (ಗು.) ಮಾರಕ ವ್ಯಾಧಿ ಇರುವ; ಪೀಡಾಕರವಾದ (ಬಳ. ಮಾ.). **Pláguy** ಪ್ಲೇಗಿ (ಗು., ಕ್ರಿ. ವಿ.) (ಬಳ. ಮಾ.) ಕಿರುಕುಳ ಕೊಡುವ (—ಕೊಡುತ್ತ); ವಿಪರೀತವಾದ (—ವಾಗಿ) (Was p. glad to get back again). **Pláguily** (ಕ್ರಿ. ವಿ.) —ರೀತಿಯಲ್ಲಿ.

Plaice ಪ್ಲೇಸ್ (ನಾ.) ಆಹಾರಕ್ಕೆ ಉಪಯೋಗವಾದ, ಯೂರೋಪಿನ ಒಂದು ಜಾತಿಯ ಚಪ್ಪಟೆ ಮೀನು.

Plaid ಪ್ಲ್ಯಾ(ಪ್ಲೇ)ಡ್ (ನಾ.) ಉಬ್ಬುಮೂಲೆ ನೆಯ್ಗೆಯ, ಸಾ., ಚೌಕುಳಿ ಅಥವಾ ಪಪ್ಪಳಿ ಮಾದರಿಯ, ಉಣ್ಣೆಯ ಬಟ್ಟೆ(ಯ ದೊಡ್ಡ ಥಾನು); ಹೈಲೆಂಡಿನವರ ಉಡುಪಿನ ಹೊರಭಾಗದ ಉಡಿಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Plaided (ಗು.) —ಯಿಂದ ಮಾಡಿದ; —ನ್ನು ತೊಟ್ಟಿರುವ; ಈ ಬಟ್ಟೆಯ ಮಾದರಿಯ.

Plain[1] ಪ್ಲೇನ್ (ಗು., ಕ್ರಿ. ವಿ., ನಾ.) ಸ್ಪಷ್ಟ; ವ್ಯಕ್ತ; ವಿಶದ; ಸರಳ; ಸುಲಭವಾಗಿ ಅರ್ಥವಾಗುವ, ತಿಳಿಯಾದ (P. words, English); ತೊಡಕಿಲ್ಲದ (P. sewing); ಅಲಂಕಾರ ರಹಿತ. (ರೇಖನ ಚಿತ್ರ, ಮೊ.) ಬಣ್ಣ ಹಾಕಿಲ್ಲದ. (ಆಹಾರ) ಹೆಚ್ಚು ರುಚಿ ಪದಾರ್ಥಗಳು ಸೇರಿಲ್ಲದ; ರುಚಿ ಸಮೃದ್ಧವಲ್ಲದ; ಸಾಮಾನ್ಯ ರುಚಿಯ; ಮಸಾಲೆ ಹೆಚ್ಚು ಹಾಕಿರದ. ಭೋಗ (ಜೀವನ)ದ್ದಲ್ಲದ (P. living ಸರಳ ಜೀವನ). ಮುಚ್ಚಿಡದೆ ಎಲ್ಲವನ್ನೂ ಹೇಳಿಬಿಡುವ; ಬಿಚ್ಚಿಮಾತನಾಡುವ; ನೇರವಾದ; ಋಜು; ನಿಷ್ಕಪಟ; ನಿರ್ವಂಚನೆಯ (ಮು., Be p. with ಮುಚ್ಚುಮರೆಯಿಲ್ಲದೆ, ಸ್ಪಷ್ಟವಾಗಿ, —ಹೇಳಿಬಿಡು). ಸರಳ ಸ್ವಭಾವದ; ಕೃತ್ರಿಮವಿಲ್ಲದ (I am a p. man). ಆಡಂಬರವಿಲ್ಲದೆ ಸಹಜವಾದ ನಡತೆ, ಉಡುಪು, ಮುಖಭಾವ, —ಉಳ್ಳ; ಸಾದಾ. ವಿಕಾರವಾದ; ಕುರೂಪಿನ [A pity, the poor girl is so p.! P. as a pikestaff (Pikestaff ನೋಡಿ)]. [P. cards (ಇಸ್ಪೀಟು) ಸಾದಾ ಎಲೆ (ರಾಜ, ರಾಣಿ, ಗುಲಾಮ, ಅಲ್ಲದ್ದು); P.-chant = P.-song. P. clothes ಸಾದಾ ಉಡುಪು (ಅಧಿಕಾರದ ಉಡುಪಲ್ಲ). P. dealing ಋಜು ವ್ಯವಹಾರ; ನೇರವಾದ ನಡೆವಳಿ; ನಿಷ್ಕಾಪಟ್ಯ. P. sailing ಸರಳ (ಮಾರ್ಗದ) ಕಡಲ ಪ್ರಯಾಣ; (ರೂಪ.) ಸುಲಭ ಸಾಧ್ಯ. Plaín-song ಮಧ್ಯಯುಗದ ಧಾಟಿಯಲ್ಲಿ ರಚಿಸಿದ, ಅನಿರ್ಬಂಧ ತಾಳದ, ಶ್ರುತಿಗೂಡಿ ಹಾಡುವ, —ಕೃತಿ, ಗೀತ: ಸರಳ ಗೀತ. P.-spoken ಮರೆಮಾಜದ ಸ್ಪಷ್ಟ ಮಾತಿನ. P. suit (ಇಸ್ಪೀಟು) (ತುರುಫಲ್ಲದ) ಸಾದಾ ರಂಗಿನ ಎಲೆಗಳ ಸರಣಿ. P. tile (ಚಾವಣಿಗೆ ಹಾಕುವ) ಚಪ್ಪಟೆ ಹೆಂಚು]. (ಕ್ರಿ.ವಿ.) ಸ್ಪಷ್ಟವಾಗಿ; ಸ್ಫುಟವಾಗಿ (Learn to speak p.). (ನಾ.) ಸಮತಲದ ಭೂಮಿ; ಮೈದಾನ; ಬಯಲು. Plains-man ಮೈದಾನದ ಕಡೆಯವನು; ಬಯಲು ಸೀಮೆಯವನು. **Plaínly** (ಕ್ರಿ. ವಿ.); **Plaínness** (ನಾ.)

Plain[2] ಪ್ಲೇನ್ (ಕ್ರಿ. ಅಕ.) ಅಳು; ಗೋಳಾಡು; ನರಳು; ಮುಲುಕು.

Plaint ಪ್ಲೇಂಟ್ (ನಾ.) (ನ್ಯಾ. ಶಾ.) ಆಪಾದನೆ; ಫಿರ್ಯಾದು; ದೋಷಾರೋಪ. (ಕಾವ್ಯ) ಗೋಳಾಟ; ಪ್ರಲಾಪ; ಮೊರೆ; ಅಳಲು (ಗ್ರಾಂ.). **Plaíntiff** (ನಾ.) ನ್ಯಾಯಸ್ಥಾನದಲ್ಲಿ ದಾವಾ ಹಾಕುವವನು; ವಾದಿ; ಆಪಾದಕ; ಫಿರ್ಯಾದಿ. **Plaíntive** (ಗು.) ದುಃಖ ಸೂಚಕ; ಗೋಳಾಟದ; ಗೋಳುಕರೆಯ. **Plaínt-ively** (ಕ್ರಿ. ವಿ.); **Plaíntiveness** (ನಾ.)

Plaíntiff, Plaíntive. Plaint ನೋಡಿ.

Plait ಪ್ಲ್ಯಾಟ್ (ನಾ., ಕ್ರಿ. ಸಕ.) (ಈಗ ಸಾ., Pleat) (ಮು., ಬಟ್ಟೆಯನ್ನು ಅದರಮೇಲೆಯೇ ಮಡಿಸಿ) ಮಡಿಕೆ (ಮಾಡು). (ತಲೆಗೂದಲು, ಕಿರುಪಟ್ಟಿ, ಹುಲ್ಲು, ಮೊ. ರ) ಜಡೆ, ಹೆಣಿಗೆ (ಹಾಕು)

Plan ಪ್ಲ್ಯಾನ್ (ನಾ., ಕ್ರಿ. ಸಕ.) ಕಟ್ಟಡದ ಭೂಮಿಕೆಯ ಬೇರೆ ಬೇರೆ ಭಾಗಗಳ ಸ್ಥಾನ, ಅಳತೆ, ಮೊ. ನ್ನು ತೋರಿಸಲು ಚಪ್ಪಟೆಯ ಮೇಲ್ಮೈಮೇಲೆ ರೇಖಿಸಿದ ನಕ್ಷೆ (Elevation ಹೋಲಿಸಿ); ನಕಾಸೆ. (ಪಟ್ಟಣ, ಪ್ರಾಂತ, ಮೊ. ಗಳ) ವಿವರಗಳನ್ನೊಳಕೊಂಡ ದೊಡ್ಡ ಆಕಾರದ ನಕಾಸೆ. ಉದ್ದೇಶಿಸಿದ ಕಾರ್ಯಕ್ರಮ, ಮೊ. ವು ನಡೆಯುವ ಕಾಲ, ಸ್ಥಳ, ಮೊ. ನ್ನು ಸೂಚಿಸುವ ವಿವರಣ ಪಟ್ಟಿ; ರಚನಾ ಕ್ರಮ; ಯೋಜನೆ; ಏರ್ಪಾಟಿನ ಹಂಚಿಕೆ, ಹೂಟ; ಕಟ್ಟಡ(ಕ); ಕಾರ್ಯದ ಹವಣು; ನಿರೂಪಣೆ. ಕಾರ್ಯ (ನಡಸುವ) ಮಾರ್ಗ (The better p. is to peel them after boiling). (ಘನರೂಪ ದರ್ಶಕ ರೇಖನ) ಚಿತ್ರದಲ್ಲಿ ತೋರಿಸಿರುವ ವಸ್ತುವಿನ ಮೂಲಕ ಹಾದುಹೋಗುವ ದೃಷ್ಟಿರೇಖೆಗೆ ಲಂಬವಾಗಿರುವ, ಯಾವುದಾದರೊಂದು ಕಾಲ್ಪನಿಕ ಸಮತಲ. (ಕ್ರಿ.) (ನೆಲದ, ಕಟ್ಟಡದ) ನಕಾಸೆ ಮಾಡು; (ಕಾರ್ಯಕ್ರಮ, ಮೊ. ರ) ಯೋಜನೆಯನ್ನು ಮೊದಲೇ ಹಂಚಿಕೆ ಮಾಡು, ವ್ಯವಸ್ಥೆ ಮಾಡು, ಏರ್ಪಾಟು ಮಾಡು. **Plánless** (ಗು.)

Planch ಪ್ಲಾನ್ಷ್ (ನಾ.) (ಲೋಹ, ಕಲ್ಲು, ಸುಟ್ಟಜೇಡಿ, ಮೊ. ಗಳ) ಹಲಗೆ, ಚಪ್ಪಡಿ. ಗಾಜುಲೇಪ ಕೊಡಬೇಕಾದ ವಸ್ತುವನ್ನು ಶಾಖಕ್ಕೆ ಒಡ್ಡುವಾಗ ಅದಕ್ಕೆ ಆಧಾರವಾಗಿ ಉಪಯೋಗಿಸುವ ಸುಟ್ಟ ಜೇಡಿಯ ಹಲಗೆ.

Plánchet ಪ್ಲಾನ್ಷಿಟ್ (ನಾ.) ನಾಣ್ಯವಾಗಿ ಮಾಡುವ ಲೋಹದ ಬಿಲ್ಲೆ.

Planchétte ಪ್ಲಾನ್ಷೆಟ್ (ನಾ.) ಎರಡು ಸಣ್ಣ ಸುತ್ತುಗಾಲಿಗಳೂ, ಒಂದು ಸೀಸದ ಕಡ್ಡಿಯೂ ಅಳವಡಿಸಿರುವ ಹೃದಯಾಕಾರದ ಒಂದು ಸಣ್ಣ ಹಲಗೆ (ಇದರಮೇಲೆ ಕೈಬೆರಳುಗಳನ್ನು ಮೆತುವಾಗಿಟ್ಟರೆ, ಹಾಗಿಟ್ಟವನ ಪ್ರಯತ್ನವಿಲ್ಲದೆಯೇ ಅವನ ಮನಶ್ಚಿಂತನೆಯ ಪ್ರಶ್ನೆಗಳಿಗೆ ಉತ್ತರ ರೂಪವಾದ ಅಕ್ಷರಗಳನ್ನು ಬರೆಯುವುದೆಂದು ಹೇಳುವ ಸಲಕರಣೆ): 'ಪ್ಲಾನ್ಷೆಟ್'.

Plane[1] ಪ್ಲೇನ್ (ನಾ.) ಎತ್ತರವಾಗಿ ಬೆಳೆದು ಸುತ್ತ ಹರಡಿಕೊಳ್ಳುವ, ತಾಳೆಗರಿಯಾಕಾರದ ಅಗಲವಾದ ಎಲೆಗಳುಳ್ಳ ಒಂದು ಮರದ ಜಾತಿ. P.-tree.

Plane[2] ಪ್ಲೇನ್ (ನಾ., ಕ್ರಿ. ಸಕ.) (ಮರದ ಸಾಮಾನಿನ ಮೇಲ್ಮೈಯನ್ನು ಹೆರೆದು ನಯಮಾಡುವ) ತೋಪಡ, ಹತ್ತರಿ; ಲೋಹ(ವನ್ನು) ನಯಮಾಡುವ ಈ ತೆರದ ಹತ್ತರಿ. [Smoothing-p. ನಯಗೆಲಸದ ಹತ್ತರಿ; ನುಣ್ತೋಪಡ (Jack-p., Trying-p. ಹೋಲಿಸಿ) (Jack[1], Try ನೋಡಿ). Moulding-p. ಗೋಲು ಹತ್ತರಿ]. (ಕ್ರಿ.) ತೋಪಡ ಅಥವಾ ಹತ್ತರಿ ಹಿಡಿ; ನಯ ಮಾಡು; (ಏರುಪಾರುಗಳಿಲ್ಲದಂತೆ ತೋಪಡ ಹಿಡಿದು) ಸಮ ಮಾಡು (*Away*, *down* ಉಪ. ದೊಡನೆ). (ಪ್ರಾಚೀ. ಪ್ರ.) ಮಟ್ಟ ಮಾಡು (P. the way)

Plane[3] ಪ್ಲೇನ್ (ನಾ., ಕ್ರಿ. ಅಕ., ಗು.) ಅದರಮೇಲಿನ ಯಾವ ಎರಡು ಬಿಂದುಗಳನ್ನಾಗಲಿ ಸೇರಿಸುವ ಸರಳ ರೇಖೆಯು ಪೂರ್ತ ಅದರ ಮೈಮೇಲೆಯೇ ಇರುವ ಮೇಲ್ಮೈ: ಸಮತಲ; ಸಮ ಕ್ಷೇತ್ರ; ಸಪಾಟ. ಚಪ್ಪಟೆಯೂ ತೆಳುವೂ ಆಗಿರುವ ವಸ್ತು (ಮೇಜಿನ ಮೇಲ್ಮೈಯಂಥದು). ವಿಮಾನಕ್ಕೆ ಆಸರೆಯಾಗಿರುವ ಭಾಗ; ವಿಮಾನದ ಆಧಾರ ಭಾಗ; (ಮು., ಬ. ವ. ದಲ್ಲಿ) ಫಲಕ ವಿಮಾನ(ಗಳು). [Inclined p. (Incline ನೋಡಿ)]. ಸ್ಫಟಿಕಾಕೃತಿಯ ಸ್ವಾಭಾವಿಕ ಮುಖ (ಗಳಲ್ಲೊಂದು). (ಗಣಿಯಲ್ಲಿ) ಮುಖ್ಯ ಮಾರ್ಗ. (ರೂಪ.) (ಭಾವ, ಜ್ಞಾನ, ಮೊ. ಗಳ) ಮಟ್ಟ, ಅಂತಸ್ತು (His superstition places him on the same p. as the savage). [P. sailing ಹಡಗು ಸಮತಲದ ಮೇಲೆ ನಡೆಯುತ್ತಿರುವುದೆಂಬ ತತ್ತ್ವವನ್ನು ಹಿಡಿದು ಅದರ ಸ್ಥಾನವನ್ನು ಗೊತ್ತುಮಾಡುವ ವಿದ್ಯೆ, ವಿಧಾನ. (ರೂಪ. ಈಗ ಸಾ., Plain sailing) ಸುಲಭ, ಸರಳ, —ಮಾರ್ಗ]. (ಕ್ರಿ.) ಫಲಕ ವಿಮಾನದಲ್ಲಿ ಸಂಚಾರ ಮಾಡು, (ಕೆಳಕ್ಕೆ) ಜಾರಿ ಬರು (*Down*, ಮೊ. ಉಪ. ದೊಡನೆ). (ಗು.) ಸರ್ವಸಮವಾದ ಮಟ್ಟವುಳ್ಳ; ಸಪಾಟಾದ; ಒಮ್ಮಟ್ಟವಾದ; (ಕೋನ, ಆಕೃತಿ, ಮೊ. ವು) ಒಂದು ಸಮತಲದಲ್ಲಿರುವ. P.-chart ಮಧ್ಯಾಹ್ನ ರೇಖೆಗಳನ್ನೂ ಅಕ್ಷಾಂಶ ರೇಖೆಗಳನ್ನೂ ಸಮದೂರದ ಸಮಾನಾಂತರ ಋಜು ರೇಖೆಗಳಿಂದ ತೋರಿಸುವ ನಕ್ಷೆ: ಸಮತಲ ನಕ್ಷೆ; ಸಪಾಟ ನಕ್ಷೆ (P. sailing ವಿಧಾನದಲ್ಲಿ ಉಪಯೋಗ). P.-table ನಕ್ಷೆಯ ತಯಾರಿಕೆಯಲ್ಲಿ ಕೋನಗಳನ್ನು ಅಳೆಯಲುಪಯೋಗಿಸುವ ಒಂದು ಮೋಜಿನಿ ಸಲಕರಣೆ. (ಕ್ರಿ. ಸಕ.) ಈ ಸಲಕರಣೆಯಿಂದ ಕ್ಷೇತ್ರಫಲವನ್ನು ಕಂಡುಹಿಡಿ.

Plánet[1] ಪ್ಲ್ಯಾನೆಟ್ (ನಾ.) (ಚರಿತ್ರೆ) ಗ್ರಹ [ಸ್ಥಾಯಿ ನಕ್ಷತ್ರಗಳಂತಲ್ಲದೆ ಕಾಣುವ ಚಲನೆಯುಳ್ಳ ಆಕಾಶಕಾಯ (ಚಂದ್ರ, ಬುಧ, ಶುಕ್ರ, ಸೂರ್ಯ, ಅಂಗಾರಕ, ಗುರು, ಶನಿ); ಮು., ಜ್ಯೋತಿಷದ ಮೇರೆಗೆ ಮನುಷ್ಯರ ಮೇಲೂ ಘಟನೆಗಳ ಮೇಲೂ ಪ್ರಭಾವ ಬೀರುವುದೆಂಬ ನಂಬಿಕೆಯಿರುವಂಥದು]. (ಖ. ವಿ.) Primary planets (ಸೂರ್ಯನ ಸುತ್ತಲೂ ಸರಿ ಸುಮಾರಿನ ವರ್ತುಲಾಕಾರ ಪಥದಲ್ಲಿ ಸುತ್ತುವ) ಮೂಲ ಗ್ರಹಗಳು. Major planets ಪ್ರಧಾನ ಗ್ರಹಗಳು (ಬುಧ, ಶುಕ್ರ, ಭೂಮಿ, ಅಂಗಾರಕ, ಗುರು, ಶನಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯೂರನಸ್, ನೆಪ್ಚ್ಯೂನ್). Minor planets (ಅಂಗಾರಕ ಮತ್ತು ಗುರು ಗ್ರಹ ಪಥಗಳ ನಡುವೆ, ಸೂರ್ಯನ ಸುತ್ತಲೂ ಸುತ್ತುವ ಪಥಗಳುಳ್ಳ) ಕ್ಷುದ್ರ ಗ್ರಹಗಳು. Secondary planets (ಮೂಲಗ್ರಹಗಳ ಸುತ್ತಲೂ ತಿರುಗುವ) ಉಪ ಗ್ರಹಗಳು, ಚಂದ್ರರು (=Satellites). P.-struck, -stricken ಗ್ರಹ ಹೊಡೆದ; ಗರ ಬಡಿದ; ದಿಗ್ಭ್ರಾಂತ; ಭಯಭ್ರಾಂತ; ವಿಪರೀತ ಭೀತಿಗೊಂಡ. **Planetárium** (ನಾ.) ಗ್ರಹವ್ಯೂಹದ (ಸೌರ ವ್ಯೂಹದ) ಮಾದರಿ; =Orrery. **Plánetary** (ಗು.) ಗ್ರಹಗಳ (P. influence, motions). (P. hour ಸ್ವಾಭಾವಿಕ ಹಗಲಿನ ಅಥವಾ ರಾತ್ರಿಯ $\frac{1}{12}$ ಭಾಗ. P. system ಸೌರವ್ಯೂಹ). ಭೂಮಿಯ; ಐಹಿಕ. (ರೂಪ.) ಅಲೆಯುವ; ಒಂದು ಗೊತ್ತಿಲ್ಲದೆ ಸುತ್ತುವ. **Plánetoid** ಪ್ಲ್ಯಾನೆಟಾಯ್ಡ್ (ನಾ.) ಕ್ಷುದ್ರ ಗ್ರಹ; ಗ್ರಹ ಕಲ್ಪ.

Plánet[2] ಪ್ಲ್ಯಾನೆಟ್ (ನಾ.) ಪ್ರಭು ಭೋಜನ ಸಂಸ್ಕಾರದಲ್ಲಿ ಪುರೋಹಿತನು ತೊಡುವ ತೋಳಿಲ್ಲದ ಉಡುಪು.

Planetárium, Plánetoid. Planet[1] ನೋಡಿ.

Plángent ಪ್ಲ್ಯಾಂಜೆಂಟ್ (ಗು.) (ಧ್ವನಿ) ರೋಮಾಂಚ ಮಾಡುವ, ದೇಹಕಂಪನ ಮಾಡುವ; ಅದುರಿಸುವ; ಮೊರೆಯುವ; ಮತ್ತೆ ಮತ್ತೆ ಬರುವ. **Plángency** (ನಾ.)

Plani- ಪ್ಲೇ(ಪ್ಲ್ಯಾ)ನಿ— (ಸ. ಪೂ. ಪ.) ಸಮತಲ—; ಮಟ್ಟ—; ಸಪಾಟ—. **-meter** (ಪ್ಲನಿಮಿಟರ್) ವಕ್ರಾಕಾರದ ಸಮತಲ ರೇಖಾಕೃತಿಯ ಕ್ಷೇತ್ರಫಲವನ್ನು ಅಳೆಯುವ ಸಲಕರಣೆ: ಕ್ಷೇತ್ರಫಲ ಮಾಪಕ. **-metry** —ಮಾಪನ. **-métric(al)** ಪ್ಲೇ(ಪ್ಲ್ಯಾ)— (ಗು.). **-pétalous** ಚಪ್ಪಟೆಯ ದಳಗಳುಳ್ಳ. **-sphere** (ಪ್ಲ್ಯಾ—) ಸಮತಲದಮೇಲೆ ಗೋಳ(ಭಾಗ)ದ ಪ್ರಲಂಬನ (Projection) ಮಾಡಿದ ನಕ್ಷೆ (Revolving p.s. ಒಂದು ಗೊತ್ತಾದ ಸ್ಥಳದಲ್ಲಿ, ಗೊತ್ತಾದ ಕಾಲದಲ್ಲಿ, ಕಾಣಿಸುವ ಆಕಾಶಭಾಗವನ್ನು ತೋರಿಸುವಂಥ ಸಲಕರಣೆ). **-sphéric** (ಗು.)

Plánish ಪ್ಲ್ಯಾನಿಷ್ (ಕ್ರಿ. ಸಕ.) (ಲೋಹದ ತಗಡನ್ನು, ಸಮಕ್ಷೇತ್ರದ ಮುಖವುಳ್ಳ ಸುತ್ತಿಗೆಯಿಂದ ಬಡಿದು ಅಥವಾ ಇತರ ರೀತಿಯಿಂದ) ಚಪ್ಪಟೆ ಮಾಡು. (ನಾಣ್ಯಮಾಡುವ ತಗಡನ್ನು) ಉರುಳೆಗಳ ಮಧ್ಯೆ ಒತ್ತಡಕ್ಕೆ ಕೊಟ್ಟು ಚಪ್ಪಟೆ ಮಾಡು. (ಛಾಯಾಚಿತ್ರ, ಮೊ. ಕ್ಕೆ) ಉರುಳೆ, ಮೊ. ರಿಂದ ಮೆರುಗು ಕೊಡು. **Plánisher** (ನಾ.)

Plank ಪ್ಲ್ಯಾಂಕ್ (ನಾ.) (೨ ರಿಂದ ೬ ಅಂಗುಲ ದಪ್ಪವಾಗಿಯೂ, ೯ ಅಂಗುಲ ಅಥವಾ ಅದಕ್ಕಿಂತ ಹೆಚ್ಚು ಅಗಲವಾಗಿಯೂ ಇರುವ, ಉದ್ದವಾದ ನಯ ಮಾಡಿದ) ಮರದ ಹಲಗೆ. ರಾಜಕೀಯ ಅಥವಾ ಇತರ ಕಾರ್ಯಾಂಶ, ಗುರಿ (Platform ಹೋಲಿಸಿ). [Walk the p. (ಕಡಲಗಳ್ಳನ ಸೆರೆಯಾಳು, ಮೊ. ರ ವಿಷಯದಲ್ಲಿ, ಕಣ್ಣು ಕಟ್ಟಿ) ಹಡಗಿನ ಪಕ್ಕೆಯಮೇಲೆ ಹಾಕಿರುವ ಹಲಗೆಯಮೇಲೆ ನಡೆದುಹೋಗಿ ಸಮುದ್ರದಲ್ಲಿ ಬೀಳು. P. bed (ಮೆತ್ತೆಯಿಲ್ಲದ) ಹಲಗೆಯ ಹಾಸಿಗೆ (ಸೆರೆಮನೆಯ ಶಿಕ್ಷೆಯಾಗಿ)]. (ಕ್ರಿ.) ನೆಲಕ್ಕೆ ಹಲಗೆ ಹಾಸು, ಹವಣಿಸು. (ಅಸಂ.) (ಮು., ಹಣವನ್ನು) ಇಟ್ಟುಬಿಡು, ಕೈಮೇಲೆ ಹಾಕು (*Down* ಉಪ. ದೊಡನೆ). **Plánking** (ನಾ.) ಹಲಗೆ ಹಾಸು(ಕು)ವುದು; ಹಲಗೆ ಸೇರುವೆ; ಹಲಗೆಗಳು.

Plánkton ಪ್ಲ್ಯಾಂಕ್ಟನ್ (ನಾ.) (ಜೀ. ವಿ.) ಸಾಗರದ ಹಲವು ಆಳಗಳಲ್ಲಿ ತೇಲುತ್ತ ಅಥವಾ ಸಾಗಿಹೋಗುತ್ತ ಇರುವ ಜೀವರಾಶಿ.

Plano- ಪ್ಲೇನೊ— (ಸ. ಪೂ. ಪ.) ಸಮ(ತಲ)—; ಸಪಾಟ—; ಚಪ್ಪಟೆ—. **-cóncave** (ಲೆನ್ಸು, ಮೊ. ವು) ಒಂದು ಮುಖ ಚಪ್ಪಟೆಯಾಗಿಯೂ, ಮತ್ತೊಂದು ಮುಖ ಒಳಬಾಗುಳ್ಳದ್ದಾಗಿಯೂ ಇರುವ: ಸಪಾಟ ನಿಮ್ನ ಮಧ್ಯ. **-cónvex** ಒಂದು ಮುಖ ಚಪ್ಪಟೆಯಾಗಿಯೂ ಮತ್ತೊಂದು ಮುಖ ಉಬ್ಬುಳ್ಳದ್ದಾಗಿಯೂ ಇರುವ: ಸಪಾಟ ಪೀನಮಧ್ಯ. **-meter** (ಪ್ಲನಾಮಿಟರ್) ಮೇಲ್ಮೈಯ ಸಪಾಟನ್ನು ಪರೀಕ್ಷಿಸುವ, ಸಾ., ತಾಂಡವಾಳದ, ಚಪ್ಪಟೆ ತಗಡು: ಸಪಾಟ ಮಾಪಕ.

Plant ಪ್ಲಾಂಟ್ (ನಾ., ಕ್ರಿ. ಸಕ.) ಸಸ್ಯ; ಸಸಿ; ಗಿಡ (ಸಾ., ಮರ, ಪೊದರು, —ಇವುಗಳನ್ನು ಬಿಟ್ಟು ಉಳಿದವು). [**Plántlet** (ನಾ.) (ಬೀಜಗರ್ಭದಲ್ಲಿರುವ) ಸಣ್ಣ ಸಸಿ. **Plántlike** (ಗು.)]. ಬೆಳೆ; ಪಯಿರು; ಬೆಳವಣಿಗೆ. [In p. ಬೆಳೆಯುತ್ತ(ತ್ತಿ)ರುವ). Lose p. (ಬೆಳೆ) ಸತ್ತು ಹೋಗು. Miss p. (ಬೀಜ) ಮೊಳೆಯದೆಹೋಗು]. ಒಬ್ಬನು ನಿಲ್ಲುವ ಧಂಗಿ; ಒಬ್ಬನ ನಿಲವು. (ಕೈಗಾರಿಕೆಗಳ ತಯಾರಿಕೆಯಲ್ಲಿ, ರಚನಾ ಕ್ರಮದಲ್ಲಿ, —ಉಪಯೋಗಿಸುವ) ನೆಟ್ಟ, ಸ್ಥಾವರ, —ಸಾಮಗ್ರಿ, ಆಯುಧಗಳು, ಯಂತ್ರೋಪಕರಣ, ಮೊ. ವು. (ರೂಪ.) (ಬುದ್ಧಿಕ್ರಿಯೆ, ಮೊ. ಗಳ) ಸಾಧನಸಾಮಗ್ರಿ. (ಅಸಂ.) ಮೊದಲೇ ಹಂಚಿಕೆಹಾಕಿ ಮಾಡಿದ ಮೋಸ ಕಾರ್ಯ, ಕನ್ನಗಳ್ಳತನ. (ಅಸಂ.) ಮೋಸ ಕೃತ್ಯಗಳ ಪತ್ತೇದಾರ. (P.-louse ಗಿಡಹೇನು). (ಕ್ರಿ.) (ಗಿಡ, ಮೊಳಕೆ, ಗಡ್ಡೆ, ಬೀಜ, ಮೊ. ನ್ನು ಬೇರುಬಿಟ್ಟು ಬೆಳೆಯಬೇಕೆಂದು) (ನೆಲದಲ್ಲಿ) ನೆಡು, ನಾಟು; ಬೆಳೆಯಿಡು. (ಮರಿಮೀನು, ಮೀನುಮೊಟ್ಟೆ, ಸಿಂಪಿ, ಮೊ. ನ್ನು ನದಿ, ಮೊ. ಗಳಲ್ಲಿ) ಬೆಳೆಗಾಗಿ ತಂದುಬಿಡು; [P. out ಕುಂಡದಿಂದ ಅಥವಾ ಚೌಕಟ್ಟಿನಿಂದ ತೆಗೆದು (ಸಸಿಯನ್ನು) ಬಯಲು ನೆಲದಲ್ಲಿ ನೆಡು; —ಇಂದ ತೆಗೆದು ನೆಲಕ್ಕೆ ಹಾಕು; (ಒಟ್ಟಿಲು ಸಸಿಯನ್ನು) ಸಸಿ ಸಸಿಗೆ ಅಂತರ ಬಿಟ್ಟು ನೆಡು; ನಾಟಿಹಾಕು]. (ನೆಲದಲ್ಲಿ, ನೆಲದಮೇಲೆ) ಭದ್ರವಾಗಿ ನೆಡು, ನಿಲ್ಲಿಸು, ಊರು (*In, on* ಉಪ. ದೊಡನೆ). (ಒಬ್ಬನನ್ನು, ಮು., ಗೂಢ ಚಾರನನ್ನಾಗಿ) ನಿಲ್ಲಿಸು; (P. oneself ಒಂದು ಗೊತ್ತಾದ ಸ್ಥಾನದಲ್ಲಿ ನಿಲ್ಲು). (ಸಮಾಜ, ಪಟ್ಟಣ, ಮತಸಂಸ್ಥೆ—ಇವನ್ನು) ಸ್ಥಾಪಿಸು, ಕಟ್ಟು. ಒಂದು ಸ್ಥಳದಲ್ಲಿ ನೆಲಸುನಾಡಿಗನಾಗು; (ಒಬ್ಬನನ್ನು) ಒಂದು ಸ್ಥಳದಲ್ಲಿ ನೆಲಸುನಾಡಿಗನನ್ನಾಗಿ ಮಾಡು. (ಭಾವ, ಮೊ. ನ್ನು ಮನಸ್ಸಿನಲ್ಲಿ) ನೆಡು (*In* ಉಪ. ದೊಡನೆ). (ಒಂದು ನೆಲದಲ್ಲಿ) ಗಿಡಗಳನ್ನು ನೆಟ್ಟು ಬೆಳಸು, (ಒಂದು ಪ್ರಾಂತದಲ್ಲಿ) ನೆಲಸಲು ಜನರನ್ನು ತಂದಿಡು (*With* ಉಪ. ದೊಡನೆ). (ಏಟು, ಇರಿತ—ಇವನ್ನು) ಸರಿಯಾದ ಗುರಿಯಿಟ್ಟು ಕೊಡು. (ಅಸಂ.) (ಕಳವು ಮಾಲನ್ನು) ಬಚ್ಚಿಡು. (ಅಸಂ.) ಹೂಳು; ಹುಗಿ. (ಅಸಂ.) (ಮುಂದೆ ಬರಬಹುದಾದ ಗಿರಾಕಿಗೆ ಆಸೆ ತೋರಿಸುವುದಕ್ಕಾಗಿ) ಗಣಿಯಲ್ಲಿ ಚಿನ್ನದ ರಜವನ್ನೂ ಅದುರನ್ನೂ ಹುದುಗಿಡು [Salt (ಕ್ರಿ.) ಹೋಲಿಸಿ]. (ಅಸಂ.) (ಮೋಸದ ಯೋಜನೆಯನ್ನು) ಹೂಡು. ತೊರೆ(ದುಬಿಡು); ಕೈಬಿಡು; ತ್ಯಜಿಸು (There I was, fairly planted). **Plántable** (ಗು.); **Plantátion** (ನಾ.) ನೆಟ್ಟ, ಬೆಳೆಯುವ, ಮರಗಳ ದೊಡ್ಡ ತೋಪು; ನೆಡುತೋಪು, ಕಾನು (Coffee plantation ಕಾಫಿತೋಟ); ಹತ್ತಿ, ಹೊಗೆಸೊಪ್ಪು, ಮೊ. ಗಳ ವ್ಯವಸಾಯಮಾಡುವ ಒಬ್ಬನ ಭೂಸ್ವಾಸ್ಥ್ಯ (ಹಿಂದೆ ದಾಸ್ಯ ಶ್ರಮಜೀವಿಗಳಿಂದ ಮಾಡಿಸುತ್ತಿದ್ದದ್ದು). (ಚರಿತ್ರೆ) ವಸಾಹತು ಮಾಡುವುದು; ನೆಲಸುನಾಡಿಗರಾಗಿ ನೆಲಸುವುದು; ನೆಲಸುನಾಡು. **Plánter** (ನಾ.) ಬೇಸಾಯಗಾರ; ಕೃಷಿಕ; ವಿಸ್ತಾರವಾದ ತೋಟದ ಧಣಿ (Coffee-p., cotton-p., sugar-p., etc.). ಬಿತ್ತುವ, ನಾಟುವ, —ಯಂತ್ರ, ಮುಟ್ಟು (Corn, potato, -p.). **Plántership** (ನಾ.). **Plantócracy** ಪ್ಲ್ಯಾಂಟಾಕ್ರಸಿ (ನಾ.) (ವೆಸ್ಟ್ಇಂಡೀಸ್, ಮೊ. ಕಡೆಗಳಲ್ಲಿ) ಪ್ರಬಲರಾದ ಭಾರಿ ತೋಟಗಾರರು; ಅಂಥ ಶ್ರೀಮಂತ ವರ್ಗ.

Plantágenet ಪ್ಲ್ಯಾಂಟ್ಯಾಜಿನೆ(ನಿ)ಟ್ (ನಾ., ಗು.) Geoffrey of Anjou ಎಂಬಾತನು ಸ್ಥಾಪಿಸಿದ ಇಂಗ್ಲಿಷ್ ರಾಜವಂಶದ(ವನು) (ಮು., Henry II ದೊರೆಯಿಂದ Richard III ದೊರೆಯವರೆಗಿನ ಇಂಗ್ಲಿಷ್ ದೊರೆಗಳಲ್ಲಿ ಯಾರಾದರೊಬ್ಬರು)

Plántain[1] ಪ್ಲ್ಯಾಂಟೆ(ೀ)ನ್, —ಟಿನ್ (ನಾ.) ಒಂದು ಸಸ್ಯಜಾತಿ (ಮು., Greater P. ನೆಲಕ್ಕೆ ಹತ್ತಿರದಲ್ಲೇ ಮೇಲೆ ಹರಡಿಕೊಳ್ಳುವ ಅಗಲವಾದ ಚಪ್ಪಟೆಯೆಲೆಗಳೂ ಪಂಜರದ ಹಕ್ಕಿಗಳಿಗೆ ಆಹಾರವಾಗುವ ಬೀಜಗಳೂ ಬಿಡುವ ಒಂದು ಸಸ್ಯಜಾತಿ)

Plántain[2] ಪ್ಲ್ಯಾಂಟೆ(ೀ)ನ್, —ಟಿನ್ (ನಾ.) ಬಾಳೆಯ ಗಿಡ; —ಹಣ್ಣು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Plántar ಪ್ಲ್ಯಾಂಟರ್ (ಗು.) (ಅಂ. ರ. ಶಾ.) ಅಂಗಾಲಿನ.

Plantátion, Plánter, etc. **Plant** ನೋಡಿ.

Plántigrade ಪ್ಲ್ಯಾಂಟಿಗ್ರೇಡ್ (ಗು., ನಾ.) ಅಂಗಾಲಮೇಲೆ ನಡೆಯುವ (ಪ್ರಾಣಿ) (Digitigrade ಹೋಲಿಸಿ). (ಮನುಷ್ಯರ ವಿಷಯದಲ್ಲಿ: ನಡೆಯುವಾಗ) ಅಂಗಾಲನ್ನೆಲ್ಲ ಒಂದೇ ಸಲ ಪೂರ್ತಿ ಊರುವ; ಊರುಗಾಲಿ.

Plantócracy. **Plant** ನೋಡಿ.

Plaque ಪ್ಲಾಕ್ (ನಾ.) (ಲೋಹದಿಂದಾಗಲಿ ಪಿಂಗಾಣಿಯಿಂದಾಗಲಿ ಮಾಡಿದ, ಸಾದಾ ಅಥವಾ ಚಿತ್ರ ಕೆತ್ತಿದ) ಅಲಂಕಾರ ಫಲಕ; (ಗೌರವ ವರ್ಗದಲ್ಲಿ ದರ್ಜೆಯ ಸೂಚನೆಯಾಗಿ ಧರಿಸುವ) ಬಿರುದು ಬಿಲ್ಲೆ, —ಪಟ್ಟಿ. [**Plaquétte** (ನಾ.) ಸಣ್ಣ—]. (ರೋಗ ನಿದಾನ) ಗುಳ್ಳೆ, ಮೊ. ಗಳು ದಟ್ಟವಾಗಿರುವ ಪ್ರದೇಶ.

Plash[1] ಪ್ಲ್ಯಾಷ್ (ನಾ.) ಜೌಗು ಕುಂಟೆ; ಕೆಸರು ಹಳ್ಳ. **Pláshy**[1] (ಗು.)

Plash[2] ಪ್ಲ್ಯಾಷ್ (ಕ್ರಿ., ನಾ.) ಚೆದರಿ ಸಿಡಿಯುವಂತೆ (ನೀರಿನ)ಮೇಲೆ ಅಪ್ಪಳಿಸು; ಸಿಡಿ(ಸು). (ನಾ.) ಎರಚಲು; ಸಿಡಿತ; ಮುಳುಗು. **Pláshy**[2] (ಗು.)

Plash[3] ಪ್ಲ್ಯಾಷ್ (ಕ್ರಿ. ಸಕ.) (ರೆಂಬೆ, ಕಡ್ಡಿ, ಮೊ. ನ್ನು) ಬಗ್ಗಿಸಿ ಹೆಣೆ(ದು ಬೇಲಿ ಕಟ್ಟು)

Plasm ಪ್ಲ್ಯಾಸ್ಮ್ (ನಾ.) ಜೀವಕಣದಲ್ಲಿಯ ಜೀವದ್ರವ್ಯ (ಮು., ಆಧಾರಬಿಂದುವನ್ನು ಬಿಟ್ಟು)

Plásma ಪ್ಲ್ಯಾಸ್ಮ (ನಾ.) ಬೆಣಚು ಕಲ್ಲಿನಲ್ಲಿ ಹಸುರು ಬಣ್ಣದ ಪ್ರಭೇದ. ರಕ್ತದ ಹೆತ್ತುಕೊಳ್ಳುವ ನಿರ್ವರ್ಣ ದ್ರವಭಾಗ; ಮೇದಸ್ಸಿನ ಕಣಗಳು ಅಥವಾ ಬಿಂದುಗಳು ಆದ್ಯಂತವಾಗಿ ತೇಲಾಡುವ ಕ್ಷೀರ ಅಥವಾ ದುಗ್ಧರಸ; ರಕ್ತರಸ. **Plasmátic** (ಗು.); **Plásmic** (ಗು.); **Plásmin** (ನಾ.) ರಕ್ತರಸದಿಂದ ತೆಗೆದ ಒಂದು ಸಸಾರಜನಕ (ಪದಾರ್ಥ)

Plásmin. **Plasma** ನೋಡಿ.

Plasmódium ಪ್ಲ್ಯಾಸ್ಮೋಡಿಯಮ್ (ನಾ.) (ಜೀ. ವಿ.; ಬ. ವ. -ia) (ಚಲ ರೂಪಿ ಜೀವಾಣುಗಳು ಒಟ್ಟುಗೂಡುವುದರಿಂದ ಅಥವಾ ಒಂದುಗೂಡುವುದರಿಂದ ಆಗುವ, ಚಲ ರೂಪಿಯ ಮಂದ ಗತಿಯುಳ್ಳ) ಜೀವದ್ರವ್ಯದ ರಾಶಿ ಅಥವಾ ವಿಸ್ತಾರ. ಮಲೇರಿಯಾ ಜ್ವರದಿಂದ ಪೀಡಿತರಾದವರ ರಕ್ತದಲ್ಲಿ, ಜ್ವರ ಬಂದ ಹೊಸತಿನಲ್ಲಿ ದೊರೆಯುವ, ಅಣು ರೂಪದ ಒಂದು ಪರಸತ್ತ್ವೋಪಜೀವಿ.

Pláster ಪ್ಲಾಸ್ಟರ್ (ನಾ., ಕ್ರಿ. ಸಕ.) ಬಟ್ಟೆಯಮೇಲೆ ಬಳಿದಿರುವ, ಶರೀರಶಾಖದಲ್ಲಿ ಚರ್ಮಕ್ಕೆ ಅಂಟಿಕೊಳ್ಳುವ ಮುಲಾಮು, ಔಷಧಲೇಪ: ಪಳಾಸ್ತ್ರಿ; ಪಟ್ಟು [Court, Mustard, -p. (ಆಯಾ ಪದವನ್ನು ನೋಡಿ). Sticking-p. ಅಂಟುಲೇಪ; ಅಂಟುಪಳಾಸ್ತ್ರಿ]. (ನುಣುಪು ಮೇಲ್ಮೈ ಮಾಡುವುದಕ್ಕಾಗಿ ಗೋಡೆ, ಮೊ. ಗಳಿಗೆ ಮೆತ್ತುವ) ಸುಣ್ಣ, ಮರಳು ಮತ್ತು ಕೂದಲ ಮಿಶ್ರಣದ ಮೆತುಗಾರೆ. [P. of Paris ಅಚ್ಚು ಹೊಯ್ದು ಪ್ರತಿಮೆ, ಮೊ. ನ್ನು ಮಾಡುವುದಕ್ಕಾಗಿಯೂ ಬಂಧನ ಕಾರ್ಯಕ್ಕಾಗಿಯೂ ಉಪಯೋಗಿಸುವ (ಸುಟ್ಟ) ಜಿಪ್ಸಮ್ಮಿನ ನುಣ್ಣನೆಯ ಬಿಳಿಯ ಪುಡಿ: 'ಪ್ಲಾಸ್ಟರ್ ಆಫ್ ಪ್ಯಾರಿಸ್' (Paris ಪಟ್ಟಣದ Montmartre ಬಳಿ ದೊರೆಯುವ ಜಿಪ್ಸಮ್ಮುಗಳಿಂದ ತಯಾರಿಸುವ ಕಾರಣದಿಂದ)]. (ಕ್ರಿ.) (ಗೋಡೆ, ಮೊ. ಗಳಿಗೆ) ಗಿಲಾವು(ಗಾರೆ) ಮಾಡು, ತೊಡೆ, ಬಳಿ, ಹಚ್ಚು [**Plásterer** (ನಾ.)]. (ರೂಪ.) (ಹೊಗಳಿಕೆ, ಮೊ. ನ್ನು) ವಿಪರೀತವಾಗಿ ಹೇರು, ಹೊರಿಸು (*With* ಉಪ. ದೊಡನೆ). ಗಟ್ಟಿಮುಲಾಮು, ಪಳಾಸ್ತ್ರಿ, ಪಟ್ಟು, —ಹಾಕು. (ಹಾಸ್ಯ ಪ್ರ.) (ಏಟು ಕೊಟ್ಟದ್ದಕ್ಕಾಗಿ, ಗಾಯ, ಮೊ. ಮಾಡಿದುದಕ್ಕಾಗಿ) ಪರಿಹಾರ ಕೊಡು. ಮೇಲ್ಮೈಗೆ ಲೇಪ ಹಚ್ಚಿದಂತೆ ಯಾವುದಾದರೊಂದನ್ನು ಅಂಟಿಸು, ಕಚ್ಚಿಸು. (ಆಮ್ಲತೆ ಹೋಗಲಾಡಿಸುವುದಕ್ಕಾಗಿ ಮದ್ಯವನ್ನು) ಜಿಪ್ಸಂ, ಮೊ. ರಿಂದ ಸಂಸ್ಕರಿಸು.

Plástery (ಗು.) ಪ್ಲಾಸ್ಟರಿನಂಥ; ಜಿಗುಟಾದ; ಅಂಟಿಕೊಳ್ಳುವ ಸ್ವಭಾವದ.

Plástic ಪ್ಲ್ಯಾಸ್ಟಿಕ್ (ಗು.) ಲೇಪ್ಪ ಕೆಲಸದ; ಜೇಡಿ, ಮೇಣ, ಮೊ. ಗಳಂಥ ಮೆತು ಪದಾರ್ಥಗಳ ಮುದ್ದೆಗೆ ರೂಪ ಕೊಡುವ [P. arts ಆಕೃತಿ ಶಿಲ್ಪಕಲೆ (ಉದಾ., ಕುಂಭ ಕಲೆ, ಶಿಲ್ಪ). P. surgery (ದೇಹಭಾಗದ ರೂಪ ಲೋಪವನ್ನು ಸರಿಪಡಿಸುವ) ಅಂಗಭಿನ್ನ ಚಿಕಿತ್ಸೆ]. ಸ್ವಾಭಾವಿಕ ರೂಪಗಳನ್ನು ಬೆಳಸುವ; (ಅಮೂರ್ತ) ರೂಪ ನಿರ್ಮಾಪಕ. ಅಚ್ಚೊತ್ತಿ ಮಾಡಿದ. (ಸುಲಭವಾಗಿ) ಆಕಾರ ಕೊಡಲಾಗುವ [P. clay (ಭೂ. ವಿ.) ತೃತೀಯ ಯುಗದ ಭೂ ಪದರಗಳ ನಡು ಪದರ]. (ರೂಪ.) ರೂಪು ಬದಲಾಯಿಸಲಾಗುವ; ಹೇಗೆಂದರೆ ಹಾಗೆ ಬಗ್ಗಿ ನಿಲ್ಲುವ; (ಸು)ನಮ್ಯ. (ಜೀ. ವಿ.) ಜೀವಂತ ಅಂಗಾಂಶವನ್ನು ರಚಿಸಬಲ್ಲ. **Plástically** (ಕ್ರಿ. ವಿ.); **Plastícity** (ನಾ.)

Plásticine ಪ್ಲ್ಯಾಸ್ಟಿಸೀನ್ (ನಾ.) (ಪಾಠಶಾಲೆಗಳಲ್ಲಿ ಆಕೃತಿಗಳ ಮಾದರಿಗಳನ್ನು ಮಾಡುವುದಕ್ಕೆ ಜೇಡಿಮಣ್ಣಿಗೆ ಬದಲು ಉಪಯೋಗಿಸುವ) ಮೇಣದಂಥ ಒಂದು ಪದಾರ್ಥ: 'ಪ್ಲಾಸ್ಟಿಸೀನ್' (ವ್ಯಾಪಾರ ಸ್ವಾಮ್ಯದ ಹೆಸರು)

Plástron ಪ್ಲ್ಯಾಸ್ಟ್ರನ್ (ನಾ.) (ಕತ್ತಿವರಿಸೆಗಾರನ) ತೊಗಲ ಮೇಲ್ಭಾಗವುಳ್ಳ ಎದೆಗಾಪು. ಈಟಿ ಸಿಪಾಯಿಗಳು ಧರಿಸುವ ಎದೆಮುಚ್ಚು. ಹೆಂಗಸಿನ ರವಿಕೆಯ ಅಲಂಕಾರದ ಮುಂಭಾಗ. ಗಂಜಿ ಹಾಕಿ ರಟ್ಟು ಗಟ್ಟಿಸಿ ಹೊಳಪು ಕೊಟ್ಟ, (ಗಂಡಸಿನ) ಜುಬ್ಬದ ಎದೆಭಾಗ. ಆಮೆಯ ಚಿಪ್ಪಿನ ಹೊಟ್ಟೆಯ ಭಾಗ; ಇತರ ಪ್ರಾಣಿಗಳಲ್ಲಿ ಇದಕ್ಕೆ ಜವಾಬಾದ ಭಾಗ. (ಚರಿತ್ರೆ) ಉಕ್ಕಿನ ಉರಸ್ತ್ರಾಣ, ಎದೆಗಾಪು.

Plat[1] ಪ್ಲ್ಯಾಟ್ (ನಾ.) ಭೂಪ್ರದೇಶ; ಒಂದು ತುಂಡುನೆಲ (Grass-p. ಹುಲ್ಲುನೆಲ; ಹುಲ್ಲುತಾಕು)

Plat[2] ಪ್ಲ್ಯಾಟ್ (ನಾ., ಕ್ರಿ. ಸಕ.) =Plait (ಎರಡನೆಯ ಅರ್ಥ)

Plat[3] (F) ಪ್ಲಾ (ನಾ.) (ಅಡಿಗೆಯ) ಒಂದು ತಿಂಡಿಪದಾರ್ಥ.

Plate ಪ್ಲೇಟ್ (ನಾ.) ತಗಡು; ಫಲಕ; ಹಲಗೆ. (ಚಿತ್ರ, ಮೊ. ನ್ನು) ಕೆತ್ತುವುದಕ್ಕೆ ಉಪಯೋಗಿಸುವ ನುಣುಪು ಮೇಲ್ಮೈಯ ಲೋಹದ ತಗಡು; ಕೆತ್ತನೆಯ ಫಲಕ; ಇದರಿಂದ ತೆಗೆದ ಮುದ್ರಣ. =Book-p. (Book ನೋಡಿ). ಯಾವುದಕ್ಕಾದರೂ ಹದ್ದಿಸುವುದಕ್ಕಾಗಿ ಹೆಸರು ಅಥವಾ ಲಿಖಿತ ಕೆತ್ತಿರುವ ತಗಡು: ಹೆಸರು ಹಲಗೆ; ಲಿಖಿತ ಫಲಕ (Coffin, door, name, -p.). ಛಾಯಾಚಿತ್ರ ಫಲಕ [Whole-p. ($8\frac{1}{2} \times 6\frac{1}{2}$ ಅಂಗುಲದಳತೆಯ) ಪೂರ್ಣ ಫಲಕ. Half-p. ($6\frac{1}{2} \times 4\frac{3}{4}$ ಅಂಗುಲದಳತೆಯ) ಅರ್ಧ ಫಲಕ. Quarter-p. ($4\frac{1}{4} \times 3\frac{1}{4}$ ಅಂಗುಲದಳತೆಯ) ಪಾದ ಫಲಕ]. ಬಿಡಿ ಅಚ್ಚುಮೊಳೆಗಳನ್ನು ಜೋಡಿಸಿ ಮಾಡಿದ ಮುದ್ರಣ ಪುಟದಿಂದ ಅಚ್ಚೊತ್ತಿ, ಎರಕಹೊಯ್ದು ತೆಗೆದ ಅಥವಾ ವಿದ್ಯುತ್ಪ್ರತಿಮಾಡಿ ತೆಗೆದ ಮುದ್ರಣ ಫಲಕ (ಇದರಿಂದ ಪ್ರತಿಗಳನ್ನು ಮುದ್ರಿಸಿ ತೆಗೆಯುತ್ತಾರೆ). (ತೀರುಗಳನ್ನು ಕೂರಿಸಲು ಗೋಡೆಯಮೇಲ್ಭಾಗದಲ್ಲಿ ಅದರ ಉದ್ದಕ್ಕೂ ಹಾಕುವ) ಪಟ್ಟಡಿ ಮರ (=Wall p.). (ಒಂದು ಚೌಕಟ್ಟಿನ ಮೇಲಾಗಲಿ ಕೆಳಗಾಗಲಿ ಹಾಕುವ) ಹಾಸುಮರ (Ground p., Window p.). (ಸಮೂಹವಾಚಕ: ಏ. ವ.) (ಚಿನ್ನ, ಬೆಳ್ಳಿ, ಅಥವಾ ಇತರ ಲೋಹದಿಂದ ಮಾಡಿದ) ಊಟದ ಮತ್ತು ಮನೆಯ ಬಳಕೆಯ ಪಾತ್ರೆಗಳು (ತಟ್ಟೆ, ಬಟ್ಟಲು, ಮೊ.: Pewter p., Electro-p.). (ಆದಿಯಲ್ಲಿ ಕುದುರೆಯ) ಜೂಜಿನಲ್ಲಿ ಗೆದ್ದವರಿಗೆ ಕೊಡುತ್ತಿದ್ದ ಬೆಳ್ಳಿಯ ಅಥವಾ ಚಿನ್ನದ ಬಟ್ಟಲು; ಇಂಥ ಬಹುಮಾನ ಕೊಡುವ ಜೂಜು, ಪಂದ್ಯ. (ಈಗ ಸಾ., ಮಣ್ಣಿನ ಅಥವಾ ಪಿಂಗಾಣಿಯ) ಊಟದ ತಟ್ಟೆ, ತಾಟು, ಗಂಗಳ, ತಳಿಗೆ (Dessert, dinner, soup, -p.). (ಒಂದು ಗೊತ್ತಾದ ಅಳತೆಯ) ತಟ್ಟೆಯೊಳಗಿನ ತಿಂಡಿಯ ಪದಾರ್ಥ (A plate of strawberries). (ಕ್ರೈಸ್ತ ಆರಾಧನ ಮಂದಿರ, ಮೊ. ಕಡೆಯಲ್ಲಿ) ಧರ್ಮದ (ದುಡ್ಡೆತ್ತುವ) ತಟ್ಟೆ (Put a shilling in the p.). P.-basket ಚಮಚ, ಮುಳ್ಳು ಚಮಚ, ಮೊ. ಗಳನ್ನಿಡುವ ಬುಟ್ಟಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

P. glass (ಅಂಗಡಿಯ ಕಿಟಕಿ, ಮೊ. ಗಳಿಗೆ ಹಾಕುವ) ಉತ್ತಮ ತೆರದ ದಪ್ಪ ಗಾಜು ಹಲಗೆ. P.-layer ರೈಲುಮಾರ್ಗದ ಕಂಬಿ, ಮೊ. ನ್ನು ಹಾಕುವವನು ; ಅದನ್ನು ದುರಸ್ತು ಮಾಡಿ ಸರಿಯಾದ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವವನು. P.-mark = Hall-mark (Hall ನೋಡಿ). P.-powder (ಬೆಳ್ಳಿಯಮೇಲಿನ ಮಷ್ಟು ತೆಗೆಯಲು ಉಪಯೋಗಿಸುವ) ಬೆಳ್ಳಿ ಮೆರುಗು ಪುಡಿ. P.-rack (ತಟ್ಟೆ, ಮೊ. ಗಳಿಂದ ನೀರು ಬಸಿದುಹೋಗಲು) ತಟ್ಟೆ, ಮೊ. ಗಳನ್ನಿಡುವ ಬಡು. **Pláteful** (ನಾ.) ; **Pláteless** (ಗು.) ; **Plát(t)en** ಪ್ಲ್ಯಾಟೆ(ಟ್)ನ್ (ನಾ.) (ಮುದ್ರಣಯಂತ್ರದಲ್ಲಿ) ಅಚ್ಚಿನ ಮೊಳೆಗಳಮೇಲೆ ಕಾಗದವನ್ನು ಒತ್ತುವ ಫಲಕ ; (ಟೈಪ್ ರೈಟರ್, ಮೊ. ಗಳಲ್ಲಿ) ಇದರಂಥ ಭಾಗ.

Plate (ಕ್ರಿ. ಸಕ.) (ಹಡಗಿಗೆ ರಕ್ಷಣೆಗಾಗಿ, ಅಲಂಕಾರ, ಮೊ. ಕ್ಕಾಗಿ) ಲೋಹದ ತಗಡು ಹದ್ದಿಸು. (ಮತ್ತೊಂದು ಲೋಹದ ವಸ್ತುವಿಗೆ, ಚಿನ್ನ, ಬೆಳ್ಳಿ ಅಥವಾ ತವರದ) ಲೇಪ ಕೊಡು, ಮುಲಾಮು ಮಾಡು. (ಅಚ್ಚು ಮೊಳೆಗಳ) ಮುದ್ರಣ ಫಲಕವನ್ನು ತಯಾರಿಸು. **Pláter** ಪ್ಲೇಟರ್ (ನಾ.) ಪಾತ್ರೆ, ಮೊ. ಕ್ಕೆ ಬೆಳ್ಳಿ, ಮೊ. ದ ಲೋಹ ಲೇಪ ಕೊಡುವವನು, ಮುಲಾಮು ಮಾಡುವವನು. (ಹಡಗು ಕಟ್ಟುವಲ್ಲಿ : ಅದಕ್ಕೆ ಬೇಕಾದ) ತಗಡು ಮಾಡುವವನು, ಹದ್ದಿಸುವವನು. (ಮು., ಬಹುಮಾನದ ಬಟ್ಟಲು ಗಳಿಗಾಗಿ ಸ್ಪರ್ಧಿಸುವ) ಕೀಳು ತೆರದ ಜೂಜುಕುದುರೆ. **Pláting** (ನಾ.) (ಕ್ರಿಯಾರ್ಥಗಳಲ್ಲಿ). (ಪಾತ್ರೆ, ಮೊ. ಕ್ಕೆ ಚಿನ್ನ, ಬೆಳ್ಳಿ, ಮೊ. ಗಳ) ಲೇಪನ, ಮುಲಾಮು. ಬಹುಮಾನದ ಬಟ್ಟಲಗಾಗಿ ನಡಸಿದ ಕುದುರೆಯ ಜೂಜು.

Plateaú ಪ್ಲ್ಯಾ(ಪ್ಲ್ಯಾ)ಟೋ (ನಾ. ; ಬ. ವ. -x, -s -ಸ್) ಎತ್ತರದಲ್ಲಿರುವ ವಿಸ್ತಾರವಾದ ಚಪ್ಪಟೆಭೂಮಿ ; ಪ್ರಸ್ಥಭೂಮಿ. ಅಲಂಕಾರ ಮಾಡಿದ ಹರಿವಾಣ, ತಟ್ಟೆ. ಅಲಂಕಾರ ಫಲಕ. ಚಪ್ಪಟೆಯ ಮೇಲ್ಭಾಗವುಳ್ಳ (ಹೆಂಗಸಿನ) ಟೊಪ್ಪಿಗೆ.

Plát(t)en, Pláter. Plate ನೋಡಿ.

Plátform ಪ್ಲ್ಯಾಟ್‌ಫಾರ್ಮ್ (ನಾ., ಕ್ರಿ.) (ಸ್ವಾಭಾವಿಕವಾದ ಅಥವಾ ಕೃತಕವಾದ) ಎತ್ತರದ ಚಪ್ಪಟೆ ನೆಲ ; ದಿಬ್ಬ ; ಜಗಲಿ. (ಹಲಗೆ, ಮೊ. ಗಳಿಂದ ಮಾಡಿದ) ವೇದಿಕೆ; ರೈಲುನಿಲ್ದಾಣದಲ್ಲಿ ಉದ್ದಕ್ಕೂ ಮಾಡಿರುವ ರೈಲಿನ ಪಕ್ಕದಲ್ಲಿಯ ಜಗಲಿ. (ಸಭಾ ಮಂದಿರದಲ್ಲಾಗಲಿ ಬಯಲಿನಲ್ಲಾಗಲಿ) ಭಾಷಣಕಾರನು ನಿಂತು ಮಾತನಾಡುವ ವೇದಿಕೆ. [(ರೂಪ.) The p. ವೇದಿಕೆಯ ವಾಗ್ಮಿತೆ]. (ರೂಪ.) (ಒಂದು ರಾಜಕೀಯ ಪಕ್ಷ, ಮೊ. ರ) ಉದ್ದೇಶ ನಿರೂಪಣೆ, ಕಾರ್ಯ ಯೋಜನೆ, ಆಧಾರ ತತ್ತ್ವ. (ಕ್ರಿ.) ವೇದಿಕೆಯಮೇಲೆ (ಹೇಗೊ ಹಾಗೆ) ಇಡು. ವೇದಿಕೆಯಮೇಲಿಂದ ಭಾಷಣ ಮಾಡು.

Plátinize, Plátinode, Plátinoid, Plátinotype. Platinum ನೋಡಿ.

Plátinum ಪ್ಲ್ಯಾಟಿನಮ್ (ನಾ.) ಅಸಂಮಿಶ್ರಿತ ಆಮ್ಲಗಳಿಂದ ಕ್ಷಯಿಸದ, ಬಹಳ ತೀವ್ರ ಶಾಖದಲ್ಲಿ ಮಾತ್ರ ಕರಗುವ, ತಗಡಾಗಿ ಬಡಿಯಲೂ ತಂತಿಯೆಳೆಯಲೂ ಆಗುವ, ಭಾರವಾದ, ಒಂದು ಬಿಳಿಯ ಲೋಹ : ಪ್ಲ್ಯಾಟಿನಂ (ಲೋಹ). P. black (ಕಗ್ಗಪ್ಪಿನ ಪುಡಿಯ ರೂಪದಲ್ಲಿರುವ) ಕಪ್ಪು ಪ್ಲ್ಯಾಟಿನಂ (ಪುಡಿ). P. metals = Platinoids. **Platínic** (ಗು.) ; **Plátinous** (ಗು.) ; **Platiníferous** (ಗು.) ; **Plátinize** (ಕ್ರಿ. ಸಕ.) ಪ್ಲ್ಯಾಟಿನಮ್ ಲೇಪ ಕೊಡು. **Plátinode** ಪ್ಲ್ಯಾಟಿನೋಡ್ (ನಾ.) (ವೋಲ್ಟ) ವಿದ್ಯುತ್ಕೋಶದಲ್ಲಿ (ಸಾ., ಪ್ಲ್ಯಾಟಿನಮ್ ಲೋಹದ) ಋಣ ಧ್ರುವ, ಋಣ ಫಲಕ (Zincode ಹೋಲಿಸಿ). **Plátinoid** —ನಾಯ್ಡ್ (ನಾ.) (ನಿಕಲ್, ಸತು, ತಾಮ್ರ, ಮೊ. ವು ಕೂಡಿದ) ಪ್ಲ್ಯಾಟಿನಮ್ಮಿನ ಕೆಲವು ಗುಣಗಳಿರುವ ಒಂದು ಮಿಶ್ರ ಲೋಹ ; ಪ್ಲ್ಯಾಟಿನಂ ಕಲ್ಪ ; ಪ್ಲ್ಯಾಟಿನಮ್ಮಿನ ಜೊತೆಯಲ್ಲಿ ಸ್ವಾಭಾವಿಕವಾಗಿ ದೊರೆಯುವ ಲೋಹವರ್ಗ ; ಪ್ಲ್ಯಾಟಿನಮ್ಮಿನ ಜಾತಿಗೆ ಸೇರಿದ ಲೋಹವರ್ಗ. **Plátinotype** (ನಾ.) ಪ್ಲ್ಯಾಟಿನಮ್ ಕಪ್ಪಿನಲ್ಲಿ ಛಾಯಾಚಿತ್ರ ಮುದ್ರಣ ಮಾಡುವ ವಿಧಾನ.

Plátitude ಪ್ಲ್ಯಾಟಿಟ್ಯೂಡ್ (ನಾ.) ಸರ್ವಸಾಧಾರಣತೆ ; (ಮು., ಆಡಂಬರವಾಗಿ ಆಡಿದ) ಕೇವಲ ಸಾಮಾನ್ಯ ಮಾತು ; ಹಳಸಲು ಮಾತು. **Platitudinárian** (ನಾ., ಗು.) ಕೇವಲ ಸಾಮಾನ್ಯ ಮಾತುಗಳನ್ನು ಆಡುವವನು ; ನಾಡಾಡಿ (ಗ್ರಾಂ.) (ಗು.) ಸರ್ವಸಾಧಾರಣವಾದ. **Platitúdinize** (ಕ್ರಿ. ಅಕ.) ; **Platitúdinous** (ಗು.) ; **Platitúdinously** (ಕ್ರಿ. ವಿ.)

Platónic ಪ್ಲ(ಪ್ಲೆ)ಟಾನಿಕ್ (ಗು.) (ಕ್ರಿ. ಪೂ. ೩೫೦ ರ ಸುಮಾರಿನಲ್ಲಿದ್ದ ಗ್ರೀಕ್ ತತ್ತ್ವಜ್ಞನಾದ) ಪ್ಲೇಟೋವಿನ ; —ತತ್ತ್ವಗಳ. [P. love (ಸ್ತ್ರೀ ಪುರುಷರ) ಕೇವಲ ಆಧ್ಯಾತ್ಮಿಕ ಪ್ರೇಮ, ನಿಷ್ಕಾಮ ಪ್ರೇಮ. **Platónics** (ನಾ.) ಇಂಥ ಪ್ರಣಯಿಗಳ ಸಂಭಾಷಣೆ ಅಥವಾ ಸಂಬಂಧ]. (ಬಳ. ಮಾ.) ಕೇವಲ ಶಬ್ದ ಮಾತ್ರದ, ವಾದ ಮಾತ್ರದ ; ಕೇವಲ ದಾರ್ಶನಿಕ, ತಾತ್ತ್ವಿಕ ; ಕಾರ್ಯಪರಿಣಾಮವಿಲ್ಲದ ; ತೊಂದರೆ, ಬಾಧೆ, —ಇಲ್ಲದ. P. year ಆಕಾಶಸ್ಥಕಾಯಗಳು ತಮ್ಮ ಚಲನಚಕ್ರದಲ್ಲಿ ಸಾಧ್ಯಚಲನೆಗಳೆಲ್ಲವನ್ನೂ ಪೂರಯಿಸಿ ಪೂರ್ವ ಸ್ಥಿತಿಗೆ ಬರಲು ಬೇಕಾಗುವುದೆಂದು ಊಹಿಸಿದ್ದ ಕಾಲಚಕ್ರ. **Platónically** (ಕ್ರಿ. ವಿ.) ; **Plátonism** ಪ್ಲೇಟೊನಿಸ್ಮ್ (ನಾ.) ; **Plátonist** (ನಾ.) ; **Plátonize** (ಕ್ರಿ.)

Platoón ಪ್ಲಟೂನ್ (ನಾ.) (ಚರಿತ್ರೆ) (ಮು., ಒಟ್ಟಿಗೆ ಗುಂಡು ಹಾರಿಸಲು ಏಕಮಾನವಾಗಿ ಇಟ್ಟುಕೊಂಡ) ಸಣ್ಣ ಪದಾತಿ (ದಳದ) ತುಕಡಿ; ಈ ತುಕಡಿ ಒಟ್ಟಿಗೆ ಹಾರಿಸಿದ ಗುಂಡಿನ ತಂಡ. (ಆಧುನಿಕ ಪ್ರ.) ಅರ್ಧ ದಳ (ಲೆಫ್ಟಿನಂಟನ ನಾಯಕತ್ವದಲ್ಲಿರುವ ಯುದ್ಧತಂತ್ರದ ಏಕಮಾನ)

Plátter ಪ್ಲ್ಯಾಟರ್ (ನಾ.) (ಮು., ಪ್ರಾಚೀ. ಪ್ರ.) ತಟ್ಟೆ, ಪರಾತ (ಸಾ., ಮರದ್ದು)

Plátypus ಪ್ಲ್ಯಾಟಿಪಸ್ (ನಾ.) ಬಾತಿನ ಕೊಕ್ಕಿನಂತೆ ಮೂತಿಯಿರುವ ಆಸ್ಟ್ರೇಲಿಯದ ಒಂದು ವಿಚಿತ್ರ ಪ್ರಾಣಿ.

Plaúdit ಪ್ಲಾಡಿಟ್ (ನಾ. ; ಸಾ., ಬ. ವ. ದಲ್ಲಿ) ಪ್ರಶಂಸೆ; ಜಯ ಘೋಷ; ಮೆಚ್ಚಿಕೆಯ ಉತ್ಸಾಹ ಪ್ರದರ್ಶನ.

Plaúsible ಪ್ಲಾಸಿಬ್'ರ್ (ಗು.) (ವಾದ, ಹೇಳಿಕೆ, ಮೊ. ವು) ಹೊರಕ್ಕೆ ಮಾತ್ರ ಸರಿ ಇರಬಹುದು, ನ್ಯಾಯಸಮ್ಮತ, ಸಂಭವನೀಯ, —ಎಂದು ತೋರುವ ; ಒಪ್ಪುವಂತೆ ಕಾಣುವ ; ಅವಿಚಾರರಮಣೀಯ ; ಆಪಾತೋಚಿತ ; ಮೇಲೆ ಮೇಲೆ ಶ್ಲಾಘ್ಯ. (ವ್ಯಕ್ತಿಯ ವಿಷಯದಲ್ಲಿ : ಸಾ., ವಂಚನೆ ಸೂಚಿಸಿ) ಬೆಣ್ಣೆಯಂಥ ಮಾತಾಡುವ, ತಲೆ ಸವರುವ. **Plausibílity** (ನಾ.) ; **Plaúsibly** (ಕ್ರಿ. ವಿ.)

Play ಪ್ಲೇ (ಕ್ರಿ.) ಚಟುವಟಿಕೆಯಿಂದ, ಮನಬಂದಂತೆ, —ಓಡಾಡು ; ಆಡು ; ಆಟವಾಡು ; ಕುಣಿದಾಡು ; ಹಾರಾಡು ; ನಲಿದಾಡು ; ಮೆಲ್ಲಗೆ ಸುಳಿದಾಡು (*Around*, *about*, ಮೊ. ಉಪ. ಜೊಡನೆ); ಹಗುರವಾಗಿ ಹೊಡೆ (*Upon*, ಮೊ. ಉಪ. ಜೊಡನೆ) ; ವೇಗ ವೇಗನೆ ಇಲ್ಲಿಂದಲ್ಲಿಗೆ ಓಡಾಡು, ಹಾರಾಡು (Bees p. about flowers. Tresses p. on her neck. Smile played on his lips. Wind plays on water. His fancy played round the idea). (ಯಂತ್ರ, ಮೊ. ಗಳ ಭಾಗಗಳು) ಸಲೀಸಾಗಿ ಚಲಿಸು, ಸರಾಗವಾಗಿ ಆಡು ; ಸುಲಭವಾಗಿ, ಚಳಕದಿಂದ, ಉಪಯೋಗಿಸು [P. a good knife & fork (Knife ನೋಡಿ). P. a good stick ಕತ್ತಿವರಸೆ ಚೆನ್ನಾಗಿ ಮಾಡು]. ಗಾಳವನ್ನು ಎಳೆದೆಳೆದು ಸುಸ್ತು ಬೀಳುವಂತೆ (ಮೀನಿಗೆ) ಅವಕಾಶ ಕೊಡು. ಬಂದೂಕು, ಮೊ. ನ್ನು ಹೊಡೆ (*On* ಉಪ. ಜೊಡನೆ). (ಬಂದೂಕುಗಳ ವಿಷಯದಲ್ಲಿ) ಹೊಡೆಯಲ್ಪಡು (*On* ಉಪ. ಜೊಡನೆ). (ಬೆಳಕನ್ನು ಒಂದರಮೇಲೆ) ಬೀಳಿಸು, ಆಡಿಸು (*On*, *over*, *along*, ಮೊ. ಉಪ. ಜೊಡನೆ). (ತಂತ್ರ, ಕುಚೋದ್ಯ, ಹಾಸ್ಯ, ಮೊ. ನ್ನು) (ಒಬ್ಬನಮೇಲೆ) ನಡಸು, ಮಾಡು. ಕ್ರೀಡಿಸು ; ವಿಹರಿಸು ; ವಿನೋದವಾಡು [P. with (—ಒಡನೆ) ವಿನೋದವಾಡು ; (—ಅನ್ನು) ಗೇಲಿ ಮಾಡು, ಕಡೆಗಣಿಸು. P. upon words ಹದಿರುನುಡಿಯಾಡು ; ಶ್ಲೇಷೆಯಿಂದ ಮಾತನಾಡು].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಪ್ರಾಂ. ಪ್ರ.; ಮು., ಮುಷ್ಕರ ಹಿಡಿದಿರುವ ಕೆಲಸಗಾರರ ವಿಷಯದಲ್ಲಿ) ಕೆಲಸಕ್ಕೆ ಹೋಗದೆ ನಿಂತುಬಿಡು. (ಕ್ರಿಕೆಟ್, ಇಸ್ಪೀಟು, ಮೊ. ಆಟ) ಆಡು. [Played out ಆಟ ಮುಗಿದ; ಶಕ್ತಿಯೆಲ್ಲ ಕುಗ್ಗಿ, ಸತ್ತ್ವಗುಂದಿ, ಉಪಯೋಗ ಮುಗಿದು,—ಹೋದ; ಈಗ ಉಪಯೋಗವಿಲ್ಲದ (Our horses were, I felt, p. o. Free Trade is p. o.). P. up (ಆಟ, ಮೊ. ಗಳಲ್ಲಿ) ಶಕ್ತಿಯನ್ನೆಲ್ಲ ಉಪಯೋಗಿಸು. P. ducks & drakes (Duck[1] ನೋಡಿ). P. fast & loose (Fast[2] ನೋಡಿ)]. (ಕ್ರಿಕೆಟ್, ಟೆನಿಸ್, ಮೊ. ಆಟಗಳಲ್ಲಿ ಚೆಂಡೆಸೆತಗಾರ ಆಟಗಾರನಿಗೆ ಕೊಡುವ ಎಚ್ಚರಿಕೆಯ ಮಾತು) ಆಡು! ತಮಾಷೆಗಾಗಿ ನಟಿಸು, ಸೋಗುಹಾಕು (P. that we are gipsies). [(ಕ್ರಿಕೆಟ್: ಮೈದಾನದ ವಿಷಯದಲ್ಲಿ) P. well ಆಟಕ್ಕೆ ಚೆನ್ನಾಗಿರು, ಹದವಾಗಿರು. P.-or-pay bet ಜೂಜಿನಲ್ಲಿ ಕುದುರೆ ಓಡಲಿ ಓಡದೆ ಬಿಡಲಿ ಚಾಲತಿಯಲ್ಲಿರುವ ಪೈಜೆ, ಪಂದ್ಯ]. ಜೂಜಾಡು; [P. fair, foul ನ್ಯಾಯವಾಗಿ, ಅನ್ಯಾಯವಾಗಿ, —ಆಡು, ವರ್ತಿಸು. P. the game (Game[1] ನೋಡಿ). P. into the hands of (opponent or partner) (ಎದುರಾಳಿಗೆ, ಜೊತೆಯಾಟಗಾರನಿಗೆ) ಅನುಕೂಲವಾಗುವಂತೆ ಆಡು, ವರ್ತಿಸು; —ಕೈಯಲ್ಲಿ ಸಿಕ್ಕಿಬೀಳು(ವಂತೆ ವರ್ತಿಸು). (ಅನಂ.) P. it on, P. it low on, P. (low) down on ಒಬ್ಬನ ಅಶ್ರದ್ಧೆಯನ್ನು ತುಚ್ಛ ರೀತಿಯಲ್ಲಿ ಉಪಯೋಗಿಸಿಕೊಂಡು ಸ್ವಪ್ರಯೋಜನ ಪಡೆ. P. upon the square (Square ನೋಡಿ). P. at (—) (—) ಆಟವಾಡು; (ರೂಪ.) ಅಶ್ರದ್ಧೆಯಿಂದ, ಅರೆ ಮನಸ್ಸಿನಿಂದ, (ಯುದ್ಧ, ಮೊ. ನ್ನು) ಮಾಡು]. (ಆಟದಲ್ಲಿ) ಒಬ್ಬನಮೇಲೆ ಹೋರಾಡು. (ಒಬ್ಬನನ್ನು) ಆಟವಾಡಲು ನೇಮಿಸು, ಆಟಗಾರರ ತಂಡದಲ್ಲಿ ಸೇರಿಸು. [P. booty (Booty ನೋಡಿ)]. (ಚದುರಂಗ, ಮೊ. ಆಟಗಳಲ್ಲಿ) ಕಾಯಿ ನಡೆಸು; (ಇಸ್ಪೀಟಿನಲ್ಲಿ ತನ್ನ ಸರದಿ ಬಂದಾಗ) ಎಲೆ ಹಾಕು [(ರೂಪ.) P. one's cards well (Card[2] ನೋಡಿ)]. (ಕ್ರಿಕೆಟ್) (ಮು., ಗುರಿಕೋಲನ್ನು ರಕ್ಷಿಸಿಕೊಂಡು) ಚೆಂಡು ಹೊಡೆ. [(ಕ್ರಿಕೆಟ್) P. on ತನ್ನ ಗುರಿಕೋಲಿಗೆ ತಾನೇ ಹೊಡೆದುಕೊಂಡು ಆಟ ಕಳೆದುಕೊ]. [P. off (ಸ್ವಪ್ರಯೋಜನಕ್ಕಾಗಿ ಒಬ್ಬನನ್ನು ಮತ್ತೊಬ್ಬನಮೇಲೆ) ಎತ್ತಿಕಟ್ಟು (*Against* ಉಪ. ದೊಡನೆ); (ಒಬ್ಬನು) ತನಗೇ ವಿರುದ್ಧವಾಗಿ ತೋರಿಸಿಕೊಳ್ಳುವಂತೆ ಮಾಡು. (ಒಂದು ವಸ್ತುವನ್ನು ಮತ್ತೊಂದು ವಸ್ತುವಾಗಿ ತೋರಿಸಿ) ಮೋಸ ಮಾಡು]. (ಸಂಗೀತ ವಾದ್ಯವನ್ನು) ನುಡಿಸು, ಬಾಜಿಸು (*On* ಉಪ. ದೊಡನೆ). [P. in, out (ಕ್ರೈಸ್ತ ಮತದ ಸಭಿಕರು, ಮೊ. ರು) ಒಳಕ್ಕೆ ಬರುವಾಗ ಅಥವಾ ಹೊರಕ್ಕೆ ಹೊರಡುವಾಗ ಆರ್ಗನ್ ವಾದ್ಯವನ್ನು ಬಾಜಿಸು. P. (up)on (ಒಬ್ಬನ ಭಯ, ವಿಚಾರ ಮಾಡದ ನಂಬಿಕೆ, ಮೊ. ನ್ನು) ದುರುಪಯೋಗ ಪಡಿಸಿಕೊ. P. first, second, fiddle (Fiddle ನೋಡಿ)]. ರಂಗಸ್ಥಳದ ಮೇಲೆ (ನಾಟಕ) ಆಡು, ಅಭಿನಯಿಸು; (ನಾಟಕದಲ್ಲಿ) ಪಾತ್ರ ವಹಿಸು, ಅಭಿನಯಿಸು (P. Shylock); (ರೂಪ.) ವಾಸ್ತವ ಜೀವನದಲ್ಲಿ (ದೆವ್ವ, ಹುಚ್ಚ, ಗಂಡಸು, ಅರೆಮಾರಿ, ಮೊ. ರಂತೆ) ನಡೆ, ವರ್ತಿಸು [P. the deuce (Deuce ನೋಡಿ). P. one's part well ತನ್ನ ಪಾತ್ರದಲ್ಲಿ ಸರಿಯಾಗಿ ವರ್ತಿಸು (ರೂಪ. ಸಹ). P. up to (ನಾಟಕದಲ್ಲಿ) ಮತ್ತೊಬ್ಬ ನಟನಿಗೆ ಬೆಂಬಲವಾಗಿ ಅಭಿನಯಿಸು. (ರೂಪ.) ಬೆಂಬಲ ಕೊಡು; ಬೆನ್ನು ತಟ್ಟು; ಮುಖಸ್ತುತಿ ಮಾಡು]. **Playable** (ಗು.); **Player** (ನಾ.) (ಕ್ರಿಯಾರ್ಥಗಳಲ್ಲಿ); ಆಟದಲ್ಲಿ ಸದ್ಯಕ್ಕೆ ಪಾತ್ರ ವಹಿಸಲು ನಿಯಮಿತನಾದ ಆಟಗಾರ. (ಕ್ರಿಕೆಟ್, ನಾಟಕ, ಮೊ. ರಲ್ಲಿ) ಅದನ್ನೇ ವೃತ್ತಿಯಾಗುಳ್ಳ ಆಟಗಾರ, ನಟ. **Playing** (ನಾ.) (ಕ್ರಿಯಾರ್ಥಗಳಲ್ಲಿ). P.-cards ಇಸ್ಪೀಟೆಲೆಗಳು; —ಗಳ ಕಟ್ಟು.

Play (ನಾ.) ಆಟ; ಚಟುವಟಿಕೆ(ಯ ಓಡಾಟ); ಸುಳಿದಾಟ; ನಲಿದಾಟ; ಅಲೆದಾಟ. ಕಾರ್ಯ, ಕಾರ್ಯಾಚರಣೆ [Lively p. of fancy. Other forces come into p. Make p. ಪರಿಣಾಮವಾಗುವಂತೆ ವರ್ತಿಸು, ನಡೆ. (ಮು., ಜೂಜಿನಲ್ಲಿ, ಬೇಟೆಯಲ್ಲಿ) ಬೆನ್ನಟ್ಟಿ ಬರುವವರನ್ನು ದಣಿಸಿಬಿಡು]. ಚಲನೆಗೆ ನಿರಾತಂಕ, ಅವಕಾಶ, ಎಡೆ (Bolts should have half an inch of p. Allow full p. to curiosity ಕುತೂಹಲಕ್ಕೆ ಸಂಪೂರ್ಣ ಅವಕಾಶ ಕೊಡು). ವಿನೋದ; ತಮಾಷೆ; ಕ್ರೀಡೆ; ಆಟ [At p. ಆಟವಾಡುತ್ತ. Said it only in p. ಅದನ್ನು ಕೇವಲ ವಿನೋದಕ್ಕಾಗಿ ಹೇಳಿದೆನು. P. of words ಮಾತಿನ ಬೆಡಗು, ಬಿನ್ನಾಣ. P. on words ಹದಿರುನುಡಿ; ಶ್ಲೇಷೆ]. [(ಕ್ರಿಕೆಟ್, ಕಾಲ್ಚೆಂಡಾಟ, ಮೊ. ಗಳಲ್ಲಿ) Ball is in p. ಚೆಂಡು ಆಟದ(ಎಲ್ಲೆಯ)ಲ್ಲಿದೆ. Ball is out of p. ಚೆಂಡು (ನಿಯಮಾನುಸಾರ) ತಾತ್ಕಾಲಿಕವಾಗಿ ಆಟದ(ಎಲ್ಲೆಯ)ಲ್ಲಿಲ್ಲ. Child's-p., Fair, Foul, p. (ಆಯಾ ಪದವನ್ನು ನೋಡಿ). Going to p. (ಮುಷ್ಕರ ಹಿಡಿದಿರುವ ಕೆಲಸಗಾರರು ಕೆಲಸಕ್ಕೆ ಹೋಗದೆ ನಿಂತುಬಿಡುವಾಗ ಹೇಳುವ ಮಾತು)]. ನಾಟಕ. ಜೂಜಾಟ. **P.-actor** (ಸಾ., ತಿರಸ್ಕಾರ ಪ್ರ.) ನಾಟಕವಾಡುಹವನು. **P.-bill** ನಾಟಕದ ಜಾಹೀರಾತು, ಪ್ರಕಟನೆಯ ಚೀಟಿ. **P.-club** (ಗಾಲ್ಫ್) ಆಟದ ದಾಂಡು. **P.-day** ಪಾಠಶಾಲೆಯ ರಜಾ ದಿನ; (ಗಣಿಯ ಕೆಲಸಗಾರರು, ಮೊ. ರು) ಕೆಲಸ ಮಾಡದ (ಭಾನುವಾರವಲ್ಲದ) ವಾರದಿನ. **P.-debt** ಜೂಜಿನ ಸಾಲ. **Playfellow** ಒಡನಾಡಿ; (ಸಾ., ಮಕ್ಕಳ) ಆಟದ ಸಂಗಾತಿ, ಗೆಳೆಯ. **Playgame** (ಮತ್ತೊಂದು ಅನುಭವದೊಡನೆ ಅಥವಾ ತೀವ್ರ ವಾಸ್ತವಿಕತೆಯೊಡನೆ ಹೋಲಿಸಿದರೆ ಈ ಅನುಭವವು) ಕೇವಲ ಆಟಗಾರಿಕೆ. **Playgoer** ರೂಢಿಯಾಗಿ ನಾಟಕಕ್ಕೆ ಹೋಗುವವನು. **Playground** (ಮು., ಪಾಠಶಾಲೆಯ) ಆಟದ ಬಯಲು (The p.-g. of Europe = Switzerland). **Playhouse** ನಾಟಕ ಶಾಲೆ. **Playmate** = Playfellow. **Plaything** ಆಟದ ಸಾಮಾನು. (ರೂಪ.) ಕೇವಲ ಆಟವಾಡಲು ತಕ್ಕದ್ದೆಂದು ಪರಿಗಣಿಸಲ್ಪಟ್ಟ ವಸ್ತು, ಮನುಷ್ಯ. **Playtime** ಆಟದ ಹೊತ್ತು. **Playwright** ನಾಟಕಕಾರ. **Playful** (ಗು.) ಆಟವಾಡುವ; ಲೀಲೆಯ; ವಿನೋದದ; ತಮಾಷೆಯ; ಲೇವಡಿಯ. **Playfully** (ಕ್ರಿ. ವಿ.); **Playfulness** (ನಾ.)

Pláza ಪ್ಲಾಸ(ಸ) (ಮು., ಸ್ಪ್ಯಾನಿಷ್ ಪಟ್ಟಣಗಳಲ್ಲಿ) ಪೇಟೆ, ಅಂಗಡಿ ಬೀದಿ, ತೆರಪಾಗಿರುವ ಚೌಕ.

Plea ಪ್ಲೀ (ನಾ.) ಒಂದು ಉದ್ದೇಶ ಹಿಡಿದು ಮಾತನಾಡುವುದು, ವಾದಿಸುವುದು; ವ್ಯಾಜ; ನೆಪ. (ನ್ಯಾ. ಶಾ.) ಪ್ರತಿವಾದಿಯ ಅಥವಾ ಪ್ರತಿವಾದಿಯ ಪರವಾದ ವಿಹಿತ ಕ್ರಮದ ಹೇಳಿಕೆ [Special p. (ನ್ಯಾ. ಶಾ.) ನಡೆಯುತ್ತಿರುವ ಮೊಕದ್ದಮೆಯಲ್ಲಿ ಹೊಸ ಸಂಗತಿಯನ್ನು ಆಪಾದಿಸುವುದರಿಂದ ವಿಚಾರಣೆಯ ಮುನ್ನಡೆಯನ್ನು ತಡಮಾಡಲು ಅಥವಾ ರದ್ದು ಮಾಡಲು ಹೂಡುವ ವಿಶೇಷ ಕಾರಣ. Court of common pleas (ಇಂಗ್ಲೆಂಡಿನಲ್ಲಿ ಹಿಂದೆ ಇದ್ದ) ಸಿವಿಲ್ ವ್ಯಾಜ್ಯಗಳ ನ್ಯಾಯಸ್ಥಾನ]. (ಚರಿತ್ರೆ) (ನ್ಯಾಯಸ್ಥಾನದಲ್ಲಿ) ವ್ಯಾಜ್ಯ, ದಾವ, ವ್ಯವಹಾರ.

Pleach ಪ್ಲೀಚ್ (ಕ್ರಿ. ಸಕ.) ಒಂದಕ್ಕೊಂದು ಹೆಣೆ, ತೊಡರಿಸು; = Plash[3].

Plead ಪ್ಲೀಡ್ (ಕ್ರಿ.) (ನ್ಯಾಯಸ್ಥಾನದ ಮುಂದೆ ಒಂದು ಪಕ್ಷದ ಪರ) ನ್ಯಾಯವಾದಿಯಾಗಿ ವಾದಿಸು [**Pleáder** (ನಾ.) ನ್ಯಾಯವಾದಿ; ವಕೀಲ]. ನ್ಯಾಯಸ್ಥಾನದಲ್ಲಿ (ಮೊಕದ್ದಮೆ, ದಾವ) ನಡಸು, ಸಮರ್ಥಿಸು, ವಾದಿಸು. (ರೂಪ.) ನೆಪವಾಗಿ, ಸಮಾಧಾನವಾಗಿ, ವಾದವಾಗಿ, —ಹೇಳು, ಹೇಳಿಕೊ [I can only p. inexperience ಅನುಭವವಿಲ್ಲವೆಂದು ಮಾತ್ರ ಸಮಾಧಾನ ಹೇಳಬಲ್ಲೆ. P. (not) guilty ಅಪರಾಧ ಒಪ್ಪಿಕೊ, ನಿರಾಕರಿಸು. P. with (ಒಬ್ಬನಲ್ಲಿ, ಒಬ್ಬನಿಗಾಗಿ, ಒಂದಕ್ಕಾಗಿ, ಒಂದಕ್ಕೆ ವಿರುದ್ಧವಾಗಿ, ಒಂದು ತೀರ್ಪಿನ ವಿಷಯದಲ್ಲಿ) ಶ್ರದ್ಧಾಪೂರ್ವಕ ಬೇಡಿಕೊ]. **Pleádable** (ಗು.); **Pleádingly** (ಕ್ರಿ. ವಿ.); **Pleáding** (ನಾ.) (ಕ್ರಿಯಾರ್ಥಗಳಲ್ಲಿ). (ಈಗ ಸಾ., ನಿಯಮಾನುಸಾರ ಲಿಖಿತದಲ್ಲಿ ಕೊಟ್ಟ) ವ್ಯಾಜ್ಯಕಾರಣ ಅಥವಾ ಪ್ರತಿವಾದ. Special p. (Special ನೋಡಿ)

Pléasance, Pleásant, etc. **Please** ನೋಡಿ.

Please ಪ್ಲೀಸ್ (ಕ್ರಿ. ಸಕ.) ಹಿತವಾಗು; ಹಿತವಾಗಿರು; ಸಂತೋಷಪಡಿಸು, ಪಡು; ತಣಿಸು; ತೃಪ್ತಿಪಡಿಸು; ಇಷ್ಟಾರ್ಥ ಸಲ್ಲಿಸು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮಾಧಾನ ಮಾಡು ; ಮೆಚ್ಚಿಸು ; ಮೆಚ್ಚು ; ರುಚಿಸು ; ಮನಸ್ಸಿರು ; ಅಭಿಲಾಷೆಯಿರು ; ಇಷ್ಟ ಬರು ; ಉಚಿತವೆಂದೆಣಿಸು ; ದಯೆಯಿಡು ; ದಯಮಾಡು. Meant only to p. the eye ಕಣ್ಣಿಗೆ ಆನಂದ ಕೊಡಲು ಮಾತ್ರ ಉದ್ದೇಶಿಸಿದ್ದು. P. yourself ನಿನ್ನ ಮನಸ್ಸು ಬಂದಂತೆ ಮಾಡು, ನಡೆ. Be pleased with (—ಇಂದ) ಸಂತೋಷ ಪಡು. I shall (ಗ್ರಾಮ್ಯ ಪ್ರ. will) be pleased to— (ಮು., ಮಾಡಲು ಒಪ್ಪಿಗೆ ಕೊಡುವಾಗ ಹೇಳುವ ಗೌರವದ ಮಾತು) (—ನ್ನು) ಸಂತೋಷವಾಗಿ ಮಾಡುತ್ತೇನೆ. (ನಿಯಮಾನುಸರಣೆಯ ಗೌರವದ ಒಕ್ಕಣೆ) His Majesty has been graciously pleased to confer, etc. (ವ್ಯಂಗ್ಯಾರ್ಥದಲ್ಲಿ) Your lordship was pleased to doubt my veracity. It has never pleased him to explain. (ವಿಶೇಷ ಗೌರವ ಸೂಚಕವಾಗಿ) (May it) p. your honour, there was no moon that night. P. God (ಅಥವಾ ಹಾಸ್ಯವಾಗಿ: P. the pigs). (ಮು., ಅಲ್ಪಸೇವೆಗಾಗಿ ಅಥವಾ ಸಹಾಯಕ್ಕಾಗಿ ಅಥವಾ ಕೋರಿಕೆಗಾಗಿ ವಿನಯಪೂರ್ವಕವಾದ ಒಕ್ಕಣೆ) If you p. ತಮ್ಮ ಅಪ್ಪಣೆಯಾದರೆ (I will take another cup, if you p.). (ವ್ಯಂಗ್ಯ ಸೂಚಕವಾಗಿ) And now, if you p., he expects me to pay for it! (ಆಜ್ಞಾರ್ಥಕ) Ring the bell, p.; P. don't forget the key; Coffee for two, p. **Pleased** (ಗು.); **Pleásing** (ಗು.); **Pleásingly** (ಕ್ರಿ. ವಿ.); **Pleásance** ಪ್ಲೆಸನ್ಸ್ (ನಾ.) (ಪ್ರಾಚೀ. ಪ್ರ.) ಸಂತೋಷ; ಸುಖಾನುಭವ; ಆನಂದ. (ಮು., ಒಂದು ಮಹಲಿಗೆ ಸೇರಿದಂತಿರುವ) ವಿಹಾರ ಭೂಮಿ (ಈಗ ಅಂಕಿತ ನಾಮಗಳಲ್ಲಿ ಮಾತ್ರ). **Pleásant** ಪ್ಲೆಸಂಟ್ (ಗು.) (ಮನಸ್ಸು, ಭಾವ, ಇಂದ್ರಿಯ—ಇವಕ್ಕೆ) ಹಿತವಾದ; ಮನೋಹರವಾದ; ಆಪ್ಯಾಯನವಾದ; ಆಹ್ಲಾದಕರವಾದ; ಸಂತೋಷಕರವಾದ (A p. breeze, flavour, discovery, companion. Has a p. manner). (ಪ್ರಾಚೀ. ಪ್ರ.) ಹಾಸ್ಯಕರ; ತಮಾಷೆಯ. **Pleásantly** (ಕ್ರಿ. ವಿ.); **Pleásantness** (ನಾ.); **Pleásantry** (ನಾ.) ತಮಾಷೆ; ವಿನೋದ; ಹಾಸ್ಯ; ಸರಸ; ಚಕ್ಕಂದ; ಪರಿಹಾಸ ಭಾಷಣ. **Pleásure** ಪ್ಲೆಷ(ಝ್ಯು)ರ್ (ನಾ.) ಸಂತೋಷ; ಆನಂದ; ಆಹ್ಲಾದ; ಸುಖಾನುಭವ; (ಜೀವನದ ಮುಖ್ಯೋದ್ದೇಶವಾಗೆಣಿಸುವ) ಇಂದ್ರಿಯ ಭೋಗ [A life given up to p. (ಐಹಿಕ) ಸುಖಾನುಭವದಲ್ಲಿ ಮುಳುಗಿದ ಜೀವನ. Man of p. ವಿಷಯ ಲಂಪಟ]. ಇಷ್ಟ; ಇಚ್ಛೆ; ಮನಸ್ಸು (Shall not consult his p.; Can be altered at p. ಇಷ್ಟಬಂದಾಗ, ಇಷ್ಟಬಂದಂತೆ, ಬದಲಾಯಿಸಬಹುದು. (ರಾಜ ಶಾಸನಗಳ ಒಕ್ಕಣೆಯಲ್ಲಿ) It is our p. to— ನಾವು ನಮ್ಮ ಮನಸ್ಸಂತೋಷದಿಂದ—. (ಗ್ರಾಮ್ಯ) It is our p. to submit balance sheet ಆದಾಯ ವೆಚ್ಚಗಳ ಪಟ್ಟಿಯನ್ನು ತಮ್ಮ ಮುಂದಿಡುವುದು ನಮಗೆ ಸಂತೋಷ. To converse with him is a p. ಅವನೊಡನೆ ಸಂಭಾಷಿಸುವುದು ಒಂದು ಆನಂದ. Do me the p. of dining with me ನನಗೆ ತಮ್ಮ ಪಂಕ್ತಿಲಾಭವನ್ನು ಅನುಗ್ರಹಿಸಿ ಸಂತೋಷಪಡಿಸಿರಿ. (ಪ್ರಾಚೀ. ಪ್ರ.) They are now taking their p. at Bath ಅವರು ಈಗ ಬ್ಯಾತ್ ಪಟ್ಟಣದಲ್ಲಿ ಸುಖಾನುಭವದಲ್ಲಿದ್ದಾರೆ]. **P.-boat** ವಿಹಾರದ ದೋಣಿ (ಕೆಲಸಕ್ಕಾಗಿ ಕಟ್ಟದ್ದಲ್ಲ). **P.-ground** ವಿಹಾರ ಭೂಮಿ; ಕ್ರೀಡಾ ಕ್ಷೇತ್ರ. **Pleásurable** ಪ್ಲೆಝ್ಯು(ಷ)ರಬ್‌ಲ್ (ಗು.) ಸಂತೋಷಕರ; ಆನಂದಕರ. **Pleásurableness** (ನಾ.); **Pleásurably** (ಕ್ರಿ. ವಿ.)

Pleásure (ಕ್ರಿ.) ಸಂತೋಷಪಡಿಸು; ಆನಂದಗೊಳಿಸು. ಸಂತೋಷಪಡು (*In* thing, *in* doing)

Pleásure. Please ನೋಡಿ.

Pleat ಪ್ಲೀಟ್ (ನಾ., ಕ್ರಿ. ಸಕ.) =Plait (ಮೊದಲನೆಯ ಅರ್ಥ)

Pleb ಪ್ಲೆಬ್ (ನಾ.) (ಅಸಂ.) =Plebeian (ಎಂಬುದರ ಸಂಕ್ಷಿಪ್ತ)

Plebeían ಪ್ಲಿಬೀಯನ್ (ನಾ., ಗು.) (ಪುರಾತನ ರೋಮಿನ) ಸಾಮಾನ್ಯ ಪ್ರಜೆ, ಜನ (Patrician ಹೋಲಿಸಿ). ಸಾಮಾನ್ಯ ಜನರಲ್ಲೊಬ್ಬನು. (ಗು.) ಬಡ ಹುಟ್ಟಿನ; ಕೆಳ ದರ್ಜೆಯ; ಸಾಮಾನ್ಯ ಜನರ; ಪಾಮರ; ಅನಾಗರಿಕ; ಅಸಂಸ್ಕೃತ; ನಿಕೃಷ್ಟ; ಅಕುಲೀನ. **Plebeíanness** (ನಾ.); **Plebeíanize** (ಕ್ರಿ. ಸಕ.)

Plébiscite ಪ್ಲೆಬಿಸೈ(ಸಿ)ಟ್ (ನಾ.) (ರೋ. ಚರಿತ್ರೆ) ಪ್ರಜಾ ವರ್ಗವು ಸಭೆ ಸೇರಿ ವಿಧಿಸಿದ ಕಟ್ಟಳೆ, ಶಾಸನ: ಪ್ರಜಾ ಶಾಸನ. (ಆಧುನಿಕ ಪ್ರ.) ಮುಖ್ಯ ಸಾರ್ವಜನಿಕ ವಿಷಯಗಳಮೇಲೆ ರಾಜ್ಯದ ಮತದಾರರೆಲ್ಲರೂ ನೇರವಾಗಿ ಕೊಟ್ಟ (ಅಭಿ)ಮತ: ಸರ್ವ ಪ್ರಜಾ ನಿರ್ಣಯ, —ತೀರ್ಮಾನ; (ಜಾರಿಗೆ ತರಲೇಬೇಕೆಂಬ ನಿರ್ಬಂಧವಿರಬಹುದಾದ ಅಥವಾ ಇಲ್ಲದ) ಜನಾಭಿಪ್ರಾಯದ ಬಹಿರಂಗ ಪ್ರಕಾಶನ. **Plebíscitary** (ಗು.)

Pléctrum ಪ್ಲೆಕ್ಟ್ರಮ್ (ನಾ.) Zither ಮೊ. ದ ವಾದ್ಯಗಳ ತಂತಿಗಳನ್ನು ಮಿಟುವ ದಂತ, ಗರಿ, ಮೊ. ಪದಾರ್ಥಗಳಿಂದ ಮಾಡಿದ ಸಾಧನ.

Pledge ಪ್ಲೆಜ್ (ನಾ., ಕ್ರಿ. ಸಕ.) ಕರಾರು ನೆರವೇರಿಸಲು, ಸಾಲ ತೀರಿಸಲು, ವೊ. ಕ್ಕೆ ಹೊಣೆಯಾಗಿ ಒಬ್ಬನಲ್ಲಿಟ್ಟ, ಕರಾರು ತಪ್ಪಿದರೆ ದಂಡವಾಗಿ ಕಳೆದುಕೊಳ್ಳಬೇಕಾದ, —ವಸ್ತು; ಅಡವು; ಒತ್ತೆ; ಈಡು; ಗಿರವಿ; ನ್ಯಾಸ; ಓಲು. ಅಡವಿಟ್ಟ ವಸ್ತು. (ರೂಪ.) ಒಬ್ಬನ ಮಗು. ಪ್ರೀತಿ ಸೂಚಕವಾಗಿ ಅಥವಾ ಮುಂದೆ ಬರಲಿರುವುದಕ್ಕೆ ಪ್ರತಿರೂಪವಾಗಿ ಕೊಟ್ಟ ವಸ್ತು. (ಒಬ್ಬನ ಆರೋಗ್ಯವನ್ನು ಬಯಸಿ ಮಾಡಿದ) ಸ್ವಸ್ತಿಪಾನ. ವಾಗ್ದಾನ; ಭಾಷೆ (Under p. of secrecy ಗುಟ್ಟಾಗಿಡಲು ಮಾತು ಕೊಟ್ಟು). ಮಾದಕ ದ್ರವ್ಯಗಳನ್ನು ಸೇವಿಸುವುದಿಲ್ಲವೆಂದು ಕೈಕೊಂಡ ವಿಧಿವತ್ತಾದ ಪ್ರತಿಜ್ಞೆ (Take, sign, keep, the p.). (ರಾಜ್ಯ ನೀತಿ) ಒಂದು ನಿರ್ದಿಷ್ಟ ಮಾರ್ಗವನ್ನು ಕಾರ್ಯಾಚರಣೆಯಲ್ಲಿ ಕೈಕೊಳ್ಳುವೆನೆಂದು ಅಥವಾ ಕೈಕೊಳ್ಳುವುದಿಲ್ಲವೆಂದು ಒಂದು ಪಕ್ಷದ ನಾಯಕನು ಕೊಟ್ಟ ಬಹಿರಂಗ ವಾಗ್ದಾನ; ಸಾರ್ವಜನಿಕ ವಾಗ್ದಾನ. ಒತ್ತೆಯಲ್ಲಿರುವ ಸ್ಥಿತಿ (Goods lying in p., taken out of p.). (ಕ್ರಿ.) ಅಡವು, ಒತ್ತೆ, ಗಿರವಿ, ನ್ಯಾಸ, —ಇಡು. (ರೂಪ.) (ತನ್ನ ಗೌರವವನ್ನು, ಮಾತನ್ನು) ಹೊಣೆ ಕೊಡು. (ಒಬ್ಬನ ಆರೋಗ್ಯ ಬಯಸಿ) ಸ್ವಸ್ತಿಪಾನ ಮಾಡು. **Plédgeable** (ಗು.); **Pledgeé** (ನಾ.) ಒತ್ತೆಯಿಟ್ಟುಕೊಂಡವನು; ನ್ಯಾಸಧಾರಿ. **Plédger** (ನಾ.) ಒತ್ತೆಯಿಟ್ಟವನು.

Plédget ಪ್ಲೆಜೆಟ್ (ನಾ.) ಗಾಯಕ್ಕೆ ಹಾಕಿದ ಮದ್ದನ್ನು ಅಲ್ಲೇ ತಡೆದಿಡುವುದಕ್ಕೂ, ಗಾಯದಿಂದ ಬರುವ ಕೀವು, ಮೊ. ನ್ನು ಹೀರಿಕೊಳ್ಳುವುದಕ್ಕೂ, ಗಾಳಿ ಹೊಗಲು ಅವಕಾಶ ಕೊಡದಿರುವುದಕ್ಕೂ, ಗಾಯದ ಮೇಲಿಟ್ಟು ಕಟ್ಟುವ ಮೆತು ಬಟ್ಟೆಯ ಅಥವಾ ಹೀರುಹತ್ತಿಯ ಬಿಲ್ಲೆ.

Pleíad ಪ್ಲೈಅಡ್ (ನಾ.; ಬ. ವ. -ads, -ades —ಅಡೀಸ್) (ಬ. ವ. ದಲ್ಲಿ) ವೃಷಭ ರಾಶಿಯಲ್ಲಿಯ ಸಣ್ಣ ನಕ್ಷತ್ರಪುಂಜ: ಕೃತ್ತಿಕೆ (ಏಳು ನಕ್ಷತ್ರಗಳಿವೆಯೆಂದು ಹೇಳಿಕೆ). (ರೂಪ.; ಏ. ವ.) ಪ್ರತಿಭಾಶಾಲಿಗಳಾದ (ಸಾ., ಏಳು) ಜನರ (ಅಥವಾ ವಸ್ತುಗಳ) ತಂಡ, ಮಂಡಲ; ಪ್ರಭಾವಂತ ಗಣ.

Pleístocene ಪ್ಲೈಸ್ಟೊಸೀನ್ (ಗು., ನಾ.) (ಭೂ. ವಿ.) ಮೂರನೆಯ ಭೂಯುಗದ ಸ್ತರದಮೇಲಿನ, ಮತ್ತು ಅತ್ಯಂತ ನೂತನ ಸ್ತರದ ಕೆಳಗಿನ, ಸ್ತರ(ದ)

Plénary ಪ್ಲೀನರಿ (ಗು.) ಸಮಗ್ರ; ಸಂಪೂರ್ಣ; ಪರಮ; ನಿರುಪಾಧಿಕ. (ಸಭೆ) ಎಲ್ಲ ಸದಸ್ಯರೂ ನೆರೆದಿರುವ, ಸಕಲ ಸದಸ್ಯರಿಂದ ಕೂಡಿದ. P. inspiration ಸರ್ವ ವಿಷಯ ಪ್ರೇರಣೆ; ಸರ್ವ ಸ್ಫೂರ್ತಿ. **Plénarily** (ಕ್ರಿ. ವಿ.)

Plénipoténtiary ಪ್ಲೆನಿಪೊಟೆನ್ಷರಿ (ಗು., ನಾ.) ಸಂಪೂರ್ಣಾಧಿಕಾರ ಕೊಡಲ್ಪಟ್ಟವನು; (ಮು., ಯುಕ್ತ ತೋರಿದಂತೆ ನಡೆಯಲು) ಸ್ವಾತಂತ್ರ್ಯವುಳ್ಳ ರಾಯಭಾರಿ; ಸಂಪೂರ್ಣ ರಾಯಭಾರಿ. (ಅಧಿಕಾರದ ವಿಷಯದಲ್ಲಿ) ಪೂರ್ಣ, ನಿರುಪಾಧಿಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Plénitude ಪ್ಲೆನಿಟ್ಯೂಡ್ (ನಾ.) ಸಂಪೂರ್ಣತೆ; ಸಮಗ್ರತೆ; ಸಮೃದ್ಧಿ; ಹೇರಳ.

Plénteous, Pléntiful. **Plenty** ನೋಡಿ.

Plénty ಪ್ಲೆಂಟಿ (ನಾ., ಕ್ರಿ. ವಿ.) ಸಮೃದ್ಧಿ; ಹೇರಳ; (ತನಗೆ) ಬೇಕಾದಷ್ಟು (Here is cake in p. We are in p. of time. Horn of p. = Cornucopia). (ಕ್ರಿ. ವಿ., ಬಳ. ಮಾ.) P. large enough ಬೇಕಾದಷ್ಟು ವಿಸ್ತಾರವಾಗಿ. **Plénteous** ಪ್ಲೆಂಟಿಅಸ್ (ಗು.) (ಮು., ಕಾವ್ಯ) = Plentiful. **Plénteously** (ಕ್ರಿ. ವಿ.); **Plénteousness** (ನಾ.); **Pléntiful** (ಗು.) ಹೇರಳ(ವಾದ); ಸಮೃದ್ಧ; ಯಥೇಷ್ಟ; ತುಂಬಿ ತುಳುಕುವ. **Pléntifully** (ಕ್ರಿ. ವಿ.); **Pléntifulness** (ನಾ.)

Plénum ಪ್ಲೀನಮ್ (ನಾ.) ದ್ರವ್ಯ (ವಸ್ತು) ತುಂಬಿರುವ ಸ್ಥಳಾವಕಾಶ (P. system ಕಟ್ಟಡದ ಒಳಗಡೆಗೆ ಶುದ್ಧ ವಾಯುವನ್ನು ನುಗ್ಗಿಸುವುದರಿಂದ ಒಳಗೆ ಸರಿಯಾಗಿ ಗಾಳಿಯಾಡುವಂತೆ ಏರ್ಪಡಿಸುವ ಉಪಾಯ). ತುಂಬುಸಭೆ; ಎಲ್ಲ ಸದಸ್ಯರೂ ನೆರೆದಿರುವ ಸಭೆ.

Pléonasm ಪ್ಲೀಯೊನ್ಯಾಸ್ಮ್ (ನಾ.) (ವ್ಯಾ.) ಅನಾವಶ್ಯಕವಾದ ಅಧಿಕ ಪದ ಪ್ರಯೋಗ (ದೋಷ) [ಉದಾ., Hear with one's ears. A false lie (ಕಿವಿಯಿಂದ ಕೇಳು, ಕಣ್ಣಿನಿಂದ ನೋಡು—ಎಂಬಂತೆ)]. **Pleonástic** (ಗು.); **Pleonástically** (ಕ್ರಿ. ವಿ.)

Plésiosaúrus ಪ್ಲೀಸಿಯೊಸಾರಸ್ (ನಾ.) ಉದ್ದ ಕತ್ತಿನ, ಮೋಟು ಬಾಲದ, ದೊಡ್ಡ ಹುಟ್ಟಿನಂಥ ನಾಲ್ಕು ಅಂಗಗಳುಳ್ಳ, ನಷ್ಟವಂಶದ ಒಂದು ಸಮುದ್ರ ಸರೀಸೃಪ.

Pléthora ಪ್ಲೆತೊರ, **Plethóra** ಪ್ಲಿತೋರ (ನಾ.) ರಕ್ತದಲ್ಲಿ ಕೆಂಪು ರಕ್ತಕಣಗಳು ಹೆಚ್ಚಾಗಿರುವ ಸ್ಥಿತಿಯ ರೋಗಾವಸ್ಥೆ; ಪಿತ್ತರಕ್ತ. (ರೂಪ.) ಅಹಿತವಾಗುವಷ್ಟು, ವೆಗಟಾಗುವಷ್ಟು, ಅತಿ ಸಮೃದ್ಧಿ. **Plethóric** ಪ್ಲಿತಾರಿಕ್, **Pléthoric** ಪ್ಲೆತೊರಿಕ್ (ಗು.); **Plethórically** (ಕ್ರಿ. ವಿ.)

Pleúra ಪ್ಲೂರ (ನಾ.) ಸಸ್ತನಿ ಪ್ರಾಣಿಗಳಲ್ಲಿ ಮುಂಡದ ಗೋಡೆಯ ಒಳ ಭಾಗಕ್ಕೆ ಹತ್ತಿಕೊಂಡು ಶ್ವಾಸಕೋಶಗಳಮೇಲೆಯೂ ಆವರಿಸಿರುವ ದ್ರವಸಿಕ್ತವಾದ ಪೊರೆ(ಯ ಒಂದು ಪದರ); ಶ್ವಾಸಕೋಶಾವರಣ (ಪದರ). ಅಕಶೇರುಕಗಳಲ್ಲಿ ದೇಹದ ಗೋಡೆಯ ಒಂದು ಭಾಗ. **Pleúral** (ಗು.); **Pleúrisy** —ರಿಸಿ (ನಾ.) (ಎದೆಯ ಅಥವಾ ಪಕ್ಕೆಗಳ ನೋವೂ ಜ್ವರವೂ ಬರುವ, ಸಾ., ಶೀತದಿಂದುಂಟಾಗುವ) ಶ್ವಾಸಕೋಶಾವರಣದ ಉರಿಯೂತ. **Pleurític** (ಗು.)

Pleúrisy. **Pleura** ನೋಡಿ.

Plexímeter ಪ್ಲೆಕ್ಸಿಮಿಟರ್ (ನಾ.) (ವೈ. ಶಾ.) ವೈದ್ಯಪರೀಕ್ಷೆಯಲ್ಲಿ ತಟ್ಟಿ ನೋಡುವುದಕ್ಕಾಗಿ ದೇಹಭಾಗದ ಮೇಲಿಟ್ಟು ಸಣ್ಣ ಸುತ್ತಿಗೆಯಿಂದ ತಟ್ಟುವ, ದಂತ, ಮೊ. ಗಳಿಂದ ಮಾಡಿದ, (ಸಣ್ಣ) ತೆಳು ಫಲಕ; ತಟ್ಟು ಫಲಕ. **Pléxor** ಪ್ಲೆಕ್ಸರ್ (ನಾ.) ಈ ಫಲಕವನ್ನು ತಟ್ಟಲು ಉಪಯೋಗಿಸುವ ಸಣ್ಣ ಸುತ್ತಿಗೆ; ತಟ್ಟು ಸುತ್ತಿಗೆ.

Pléxor. **Plexímeter** ನೋಡಿ.

Pléxus ಪ್ಲೆಕ್ಸಸ್ (ನಾ.) (ಅಂ. ರ. ಶಾ.) ಪ್ರಾಣಿದೇಹದಲ್ಲಿಯ ತಂತುಗಳ ಅಥವಾ ನಾಳಗಳ ಜಾಲ (Gastric, pulmonary, p.). ಬಲೆ ಹೆಣಿಗೆ; ಜಟಿಲತೆ; ಸಿಕ್ಕು; ತೊಡಕು. **Pléxiform** (ಗು.)

Plíable ಪ್ಲೈಅಬ್‌ಲ್ (ಗು.) = Pliant. **Pliabílity** (ನಾ.); **Plíably** (ಕ್ರಿ. ವಿ.); **Plíant** (ಗು.) ಬಗ್ಗುವ; (ಬೇಕಾದಂತೆ) ಮಣಿಯುವ; ನಮ್ಯ. (ರೂಪ.) ಬಗ್ಗಿಸಲಾಗುವ; ಹೇಳಿದಂತೆ ಕೇಳುವ; ಅನುವರ್ತನಶೀಲ; ನಮ್ರ; ವಿನೇಯ. **Plíantly** (ಕ್ರಿ. ವಿ.); **Plíancy** (ನಾ.)

Plíant, etc. **Pliable** ನೋಡಿ.

Plíca (L) ಪ್ಲಿ(ಪ್ಲೈ)ಕ (ನಾ.; ಬ. ವ. -ae) (ಚರ್ಮ, ಪೊರೆ, ಮೊ. ರದಂಥ) ಮಡಿಕೆ, ಪದರ. P. (Polonica) ರೋಗದಿಂದ ಕೂದಲು ಬೊಂತೆಗಟ್ಟಿ ಹೊಲಸಾಗಿರುವುದು. **Plícate** ಪ್ಲೈಕೆಟ್ (ಗು.) (ಸ. ವಿ., ಪ್ರಾ. ವಿ., ಭೂ. ವಿ.) ಮಡಿಕೆಗೊಂಡ; ಮಡಿಸಿಹೋದ. **Plicáted** (ಗು.); **Plicátion** (ನಾ.) ಮಡಿಸಿಕೊಳ್ಳುವುದು; ಮಡಿಕೆಗೊಳ್ಳುವುದು; ಮಡಿಕೆ; ಮಡಿಕೆಗೊಂಡಿರುವ ಸ್ಥಿತಿ.

Plíers ಪ್ಲೈಅರ್ಸ್ (ನಾ., ಬ. ವ.) (ತಂತಿ, ಮೊ. ನ್ನು ಬಗ್ಗಿಸಲು ಉಪಯೋಗಿಸುವ, ಉದ್ದ ದವಡೆಗಳೂ ಸಮಾಂತರ ಮುಖಗಳೂ ಉಳ್ಳ) ಇಕ್ಕುಳ; ಪಟಕಾರು(ರೆ)

Plight[1] ಪ್ಲೈಟ್ (ಕ್ರಿ. ಸಕ., ನಾ.) (ಭರವಸೆಯಾಗಿ) ಮಾತು ಕೊಡು, ಹೊಣೆ ಕೊಡು (ಮು., ಭೂ. ಕೃ. ನಲ್ಲಿ). ಒಬ್ಬನೊ(ಳೊ)ಡನೆ ಮದುವೆಯಾಗಲು ಭಾಷೆ ಕೊಡು, ಬದ್ಧವಾಗು (*To* ಉಪ. ದೊಡನೆ; ಮು., ಭೂ. ಕೃ. ನಲ್ಲಿ: Plighted lovers ವಿವಾಹ ನಿಶ್ಚಿತವಾದ ಪ್ರಣಯಿಗಳು). (ನಾ.) ಒಬ್ಬನೊ(ಳೊ)ಡನೆ ಮದುವೆಯ ನಿಶ್ಚಿತ, ಗೊತ್ತುಪಾಡು; ವಾಗ್ದಾನ.

Plight[2] ಪ್ಲೈಟ್ (ನಾ.) ಅವಸ್ಥೆ; ಪಾಡು; ಇರವು; ಸ್ಥಿತಿ; ಗತಿ; ದಶೆ (ಸಾ., ಅನಿಷ್ಟಾರ್ಥದಲ್ಲಿ: A sorry, evil, hopeless, etc. p.)

Plim ಪ್ಲಿಮ್ (ಕ್ರಿ.) (ಪ್ರಾಂ. ಪ್ರ.) ಮೈ ತುಂಬಿಕೊ; ಮೈ ಬರು; ಉಬ್ಬು; ಊದಿಕೊ (*Out* ಉಪ. ದೊಡನೆ); ಮೈ ತುಂಬುವಂತೆ, ಉಬ್ಬಿಕೊಳ್ಳುವಂತೆ, ದುಂಡು ದುಂಡಾಗಿ, —ಮಾಡು.

Plímsoll ಪ್ಲಿಮ್‌ಸಾಲ್ (ಗು., ನಾ.) P. line, P.'s mark [Mark[1] (ನಾ.) ನೋಡಿ]. (ನಾ., ಬ. ವ. ದಲ್ಲಿ) ರಬ್ಬರಿನ ಅಟ್ಟೆಯುಳ್ಳ ನಾರುಬಟ್ಟೆಯ ಅಗ್ಗದ ಮೋಜ; ಪರಂಗಿ ಪಾದರಕ್ಷೆ.

Plinth ಪ್ಲಿಂತ್ (ನಾ.) ಕಂಬದ ಸುಣ್ಣಪಾದದ ಚಚ್ಚೌಕ ಅಡಿ ಭಾಗ; ಪೀಠ; ನೆಲಮಟ್ಟದಮೇಲೆ ಎದ್ದಿರುವ ಗೋಡೆಯ ಚಾಚು ಭಾಗ: ಮೇಲು ಪಾಯ; ಪಿಂಜಿ; ನೂಕು.

Plínthite ಪ್ಲಿಂತೈಟ್ (ನಾ.) ಒಂದು ತೆರದ ಕೆಂಪು ಜೇಡಿ.

Plíocene ಪ್ಲೈಒಸೀನ್ (ಗು., ನಾ.) (ಭೂ. ವಿ.) ಮೂರನೆಯ ಭೂಯುಗದ ಅತ್ಯಂತ ಹೊಸ ಸ್ತರ ರಚನೆ(ಯ)

Plod ಪ್ಲಾಡ್ (ಕ್ರಿ., ನಾ.) ಕಷ್ಟಪಟ್ಟುಕೊಂಡು ಕಾಲು ಹಾಕು, ನಡೆ (*On*, *along*, ಮೊ. ಉಪ. ದೊಡನೆ); (ವಿರಾಮವಿಲ್ಲದೆ) ದುಡಿ; ಕತ್ತೆಚಾಕರಿಮಾಡು (*At* ಉಪ. ದೊಡನೆ); ಕಷ್ಟಪಟ್ಟುಕೊಂಡು ಮುಂದುವರಿ. (ನಾ.) ಕಷ್ಟ ನಡಗೆ; ಬಳಲು ನಡೆ; ಪ್ರಯಾಸದ ಚಾಕರಿ. **Plódder** (ನಾ.); **Plóddingly** (ಕ್ರಿ. ವಿ.)

Plómbe (F) ಪ್ಲಾಂಬೇ (ಗು.) ಅಧಿಕಾರಯುತವಾಗಿ ಸೀಸ ಮುದ್ರೆ ಹಾಕಿದ.

Plop ಪ್ಲಾಪ್ (ನಾ., ಕ್ರಿ. ವಿ., ಕ್ರಿ.) (ಒಂದು ನುಣುಪು ವಸ್ತು ನೀರಿನಲ್ಲಿ ಬಿದ್ದಾಗ ನೀರು ಚೆದರದೆ ಅಲ್ಲಿ ಹುಟ್ಟುವ) 'ಪ್ಲಾಪ್' ಶಬ್ದ. (ಕ್ರಿ. ವಿ., ಕ್ರಿ.) ಪಳಪ್ಪನೆ (ನೀರಿನೊಳಕ್ಕೆ ಬೀಳು, ಬೀಳಿಸು)

Plot ಪ್ಲಾಟ್ (ನಾ., ಕ್ರಿ. ಸಕ.) (ಸಾ., ಸಣ್ಣ) ತುಂಡು ನೆಲ; ನೆಲದ ತುಕಡ, ಭಾಗ. (ನಾಟಕ, ಕಾವ್ಯ, ಕಾದಂಬರಿ, ಮೊ. ಗಳ) ಕಥಾ ವಸ್ತು [**Plótless** (ಗು.)]. ಪಿತೂರಿ; (ಒಳ) ಸಂಚು; ಹೂಟ. (ಕ್ರಿ.) [(ಕಟ್ಟಡ, ಮೊ.) ನಿಂತಿರುವ ವಸ್ತು, ಅನುಗೊಳಿಸಬೇಕಾದ, ಕಟ್ಟಬೇಕಾದ, ಸ್ಥಳ ಅಥವಾ ವಸ್ತು, —ಮೊ. ರ] ನಕಾಸೆ, ನಕ್ಷೆ, —ಮಾಡು; ನಕ್ಷಾ ಕಾಗದದಮೇಲೆ ಸ್ಥಾನನಿರೂಪಕ ಬಿಂದುಗಳನ್ನು ತಕ್ಕಂತೆ ಗುರುತು ಮಾಡು; ಹೀಗೆ ಗುರುತುಮಾಡಿದ ಬಿಂದುಗಳನ್ನೆಲ್ಲ ತಕ್ಕಂತೆ ಸೇರಿಸುವ ವಕ್ರರೇಖೆಯ ರಚನೆ ಮಾಡು (ಯಾವುದಾದರೂ ವಿಷಯ ಕಣ್ಣಿಗೆ ಕಂಡು ಥಟ್ಟನೆ ಮನಸ್ಸಿಗೆ ಹೊಳೆಯುವಂತೆ). ಒಳಸಂಚು ಮಾಡು; ಪಿತೂರಿ ನಡಸು. **Plótter** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Plough ಪ್ಲೌ (ನಾ., ಕ್ರಿ.) ನೇಗಿಲು (Put one's hand to the p. ಕೆಲಸಕ್ಕೆ ಕೈ ಹಚ್ಚು); ನೇಗಿಲಿನಂಥ, ನೇಗಿಲನ್ನು ಹೋಲುವ, —ಸಲಕರಣೆ [Ice-p. (Ice ನೋಡಿ). Snow-p. (Snow ನೋಡಿ)]. ಉತ್ತ ನೆಲ. ಸಪ್ತರ್ಷಿ (ನಕ್ಷತ್ರ) ಮಂಡಲ (=The P.). ಪರೀಕ್ಷೆಯಲ್ಲಿ (ವಿದ್ಯಾರ್ಥಿ) ತೇರ್ಗಡೆಯಾಗದಿರುವುದು. [P.-beam ನೇಗಿಲ ಈಚು (ಮರ). P.-boy ನೇಗಿಲು (ಎತ್ತು, ಕುದುರೆ, ಮೊ. ನ್ನು) ಹೊಡೆಯುವ ಹುಡುಗ. P.-land (ಚರಿತ್ರೆ: ಇಂಗ್ಲೆಂಡಿನ ಉ. ಮತ್ತು ಪೂ. ಜಿಲ್ಲೆಗಳಲ್ಲಿ, ಕಂದಾಯ ಹಾಕುವುದಕ್ಕೆ ಏಕಮಾನವಾಗಿ ಗೊತ್ತುಮಾಡಿದ) ಎಂಟು ಎತ್ತು ಒಂದು ವರ್ಷದಲ್ಲಿ ಉಳಬಹುದಾದಷ್ಟು ನೆಲ: ನಾಲ್ಕು ಆರಿನ (ಎತ್ತಿನ ಜೊತೆಯ) ಜಮೀನು (Hide³ ಹೋಲಿಸಿ). **Ploughman** ನೇಗಿಲು ಹೊಡೆಯುವವನು; ಉಳುವವನು; ಆರಂಬಗಾರ. **Ploughshare** ಗುಳ. **P.-shoe** ಗುಳಕ್ಕೆ ರಕ್ಷಣೆಯಾಗಿರುವ ಒಂದು ಸಲಕರಣೆ: ಗುಳಕಾಪು. **P.-tail** ನೇಗಿಲ ಹಿಂಭಾಗ; (ರೂಪ.) ಜಮೀನಿನ ದುಡಿಮೆ (At the p.-tail)]. (ಕ್ರಿ.) (ಬಿತ್ತನೆಗೆ ಮೊದಲು) ನೇಗಿಲು ಹೊಡೆ; ಉಳು (P. the sand or sands ಉಪಯೋಗಕ್ಕೆ ಬಾರದ ಕೆಲಸಮಾಡು); ಉತ್ತು (ಕಳೆಯನ್ನೂ ಬೇರುಗಳನ್ನೂ) ನಿರ್ಮೂಲ ಮಾಡು (*Out* ಉಪ. ದೊಡನೆ), ಮೇಲಕ್ಕೆತ್ತಿಹಾಕು (*Up* ಉಪ. ದೊಡನೆ), ಕೆಳಕ್ಕೆ ತುಳಿ (*Down* ಉಪ. ದೊಡನೆ); ನೇಗಿಲು ಹೊಡೆದಂತೆ ಸಾಲು ಮಾಡು, ನೆಲ ಕೆರೆ; (ಹೀಗೆ ಉತ್ತು) ನೇಗಿಲ ಸಾಲು, ಗೆರೆ, —ಮಾಡು. (ಹುಬ್ಬು, ಮೊ. ಗಳ ಮೇಲೆ) ಸುಕ್ಕು ಬರಿಸು. (ಘನಹಿಮದಲ್ಲಿ, ಪುಸ್ತಕ ಓದುವುದರಲ್ಲಿ, ಮೊ. ಗಿ) ಕಷ್ಟಪಟ್ಟುಕೊಂಡು ಸಾಗು (*Through* ಉಪ. ದೊಡನೆ). (ಹಡಗು, ಮೊ. ದರ ವಿಷಯದಲ್ಲಿ) ನೀರನ್ನು ಭೇದಿಸಿಕೊಂಡು ಸಾಗು. (ಅಸಂ.) ಪರೀಕ್ಷೆಯಲ್ಲಿ (ವಿದ್ಯಾರ್ಥಿಯನ್ನು) ಉರುಳಿಸಿಬಿಡು, ತೇರ್ಗಡೆ ಮಾಡದೆಹೋಗು.

Plóver ಪ್ಲವರ್ (ನಾ.) ಉದ್ದ ಕಾಲುಗಳೂ ನೀಳ ಕುತ್ತಿಗೆಯೂ ಉದ್ದ ಕೊಕ್ಕೂ ಉಳ್ಳ, ಸಮೂಹವಾಸಿಯಾದ ಒಂದು ಪಕ್ಷಿಜಾತಿ (Golden, Grey, P.)

Ploy ಪ್ಲಾಯ್ (ನಾ.) (ಉತ್ತರ ಇಂಗ್ಲೆಂಡು ಮತ್ತು ಸ್ಕಾ. ಪ್ರ.) ದಂಡಯಾತ್ರೆ. ಉದ್ಯೋಗ; ಚಿಲ್ಲರೆ ಕೆಲಸ; ತಾನಾಗಿ ಮಾಡುವ ಕೆಲಸ; ಮನಸ್ ತೃಪ್ತಿಗಾಗಿ ಇಟ್ಟುಕೊಂಡಿರುವ ಉದ್ಯೋಗ.

Pluck ಪ್ಲಕ್ (ನಾ., ಕ್ರಿ.) ಕೀಳುವುದು; (ಹೂವು, ಮೊ. ನ್ನು) ಬಿಡಿಸುವುದು; ಥಟ್ಟನೆ ಎಳೆಯುವುದು; ಜಗ್ಗುವುದು. ಪರೀಕ್ಷೆಯಲ್ಲಿ ಸೋಲು, ಉರುಳು. (ಆಹಾರವಾಗಿ ಉಪಯೋಗಿಸುವ) ಪ್ರಾಣಿಯ ರಕ್ತಕೋಶ, ಯಕೃತ್ತು ಮತ್ತು ಶ್ವಾಸಕೋಶಗಳು. ಕೆಚ್ಚು; ಉತ್ಸಾಹ; ಧೈರ್ಯ. (ಛಾಯಾಚಿತ್ರದ ಅಸಂ.) (ಚಿತ್ರದ) ಹೊಂದಿಕೆ ಎದ್ದು ಕಾಣುವುದು. (ಕ್ರಿ.) (ಹೂವು, ಗರಿ, ಕೂದಲು, ಮೊ. ನ್ನು) ಬಿಡಿಸು, ಕೀಳು. (ಪ್ರಾಚೀ. ಪ್ರ.) ಎಳೆ; ಸೆಳೆ; ತುಯ್ಯು; ಕಸಿದುಕೊ (*Away*, *off*, ಮೊ. ಉಪ. ದೊಡನೆ). (ಹಕ್ಕಿಯ) ಗರಿ ತರಿದುಹಾಕು. [Crow to p. (Crow¹ ನೋಡಿ)]. ಕೊಳ್ಳೆ ಹೊಡೆ; ಲೂಟಿ ಮಾಡು; (ಹಣ, ಮೊ. ನ್ನು) ಮೋಸದಿಂದ ಪಡೆ, ಸುಲಿ (P. a pigeon ತಿಳಿಗೇಡಿಯಿಂದ ಹಣ ಸೆಳೆ). ಪರೀಕ್ಷೆಯಲ್ಲಿ ವಿದ್ಯಾರ್ಥಿಯನ್ನು) ಉರುಳಿಸು, ತಳ್ಳಿಹಾಕು. P. up one's heart, spirits, courage ಧೈರ್ಯ ತಂದುಕೊ; ಎದೆಗೊಳ್ಳು. **(-)plucked** (ಗು.); **Plúckless** (ಗು.); **Plúcky** (ಗು.); **Plúckily** (ಕ್ರಿ. ವಿ.); **Plúckiness** (ನಾ.)

Plug ಪ್ಲಗ್ (ನಾ., ಕ್ರಿ.) (ಕಂಡಿಯಲ್ಲಿ ಸಂದುಬಿಡದೆ ಬಿಗಿಯಾಗಿ ಹೊಂದಿಕೊಳ್ಳುವ) ಮರದ ಗೂಟ, ಮೊ. ದು (ಅನೇಕ ಯಂತ್ರಕಾರ್ಯಗಳಲ್ಲಿ ಕಂಡಿ ಮುಚ್ಚುವುದಕ್ಕೂ ಬೆಣೆಯಾಗಿರುವುದಕ್ಕೂ ಉಪಯೋಗ); ಬಿರಡೆ; ಬೆಣೆ; ಗಿಡಿ. (ವೈ. ಶಾ.) (ದೇಹನಾಳ, ಮೊ. ಗಳಲ್ಲಿ ಸ್ವಾಭಾವಿಕವಾಗಿ ಅಥವಾ ರೋಗಕಾರಣದಿಂದ) ಅಡಚಿಕೊಂಡಿರುವ ಪದಾರ್ಥ: ಅಡಚು. ಪಾತ್ರೆಯ ಅಥವಾ ಕೊಳಾಯಿಯ ಬಿರಡೆ [Fire-p. Fire (ನಾ.) ನೋಡಿ]. ಬಿಲ್ಲೆಯಾಗಿ ಅಥವಾ ಕೋಲಾಗಿ ಒತ್ತಿ ಮಾಡಿದ ಹೊಗೆಸೊಪ್ಪು; ಅಗಿಯುವುದಕ್ಕಾಗಿ ಕತ್ತರಿಸಿ ತೆಗೆದ ಇದರ ಒಂದು ತುಂಡು. (ಕ್ರಿ.) (ಕಂಡಿ, ಮೊ. ನ್ನು) ಬಿರಡೆಯಿಂದ ಮುಚ್ಚಿಬಿಡು (*Up* ಉಪ. ದೊಡನೆ). (ಅಸಂ.) (ಬಂದೂಕು) ಗುಂಡು ಹೊಡೆ. (ಅಸಂ.) ಮುಷ್ಟಿಯಿಂದ ಹೊಡೆ, ಗುದ್ದು. (ಬಳ. ಮಾ.) ಪ್ರಯಾಸದಿಂದ (ಕೆಲಸ, ಮೊ. ನ್ನು) ಮಾಡು (*Away*, *at* work)

Plum ಪ್ಲಮ್ (ನಾ.) ಸಿಹಿ ತಿರುಳೂ ಸ್ವಲ್ಪ ಚಪ್ಪಟೆಯಾಗಿ ಮೊನಚಾದ ಓಟೆಯೂ ಇರುವ ಒಂದು ಬಗೆಯ ದುಂಡು ಹಣ್ಣು: 'ಪ್ಲಮ್' ಹಣ್ಣು; ಪ್ಲಮ್ ಮರ (=P.-tree). (ಪಿಷ್ಟಕ, ಮೊ. ಗಳಿಗೆ ಉಪಯೋಗಿಸುವ) ದ್ವೀಪ ದ್ರಾಕ್ಷಿ. [Sugar-p. (Sugar ನೋಡಿ). French p. ಉತ್ತಮ ಜಾತಿಯ ಒಣಗಿಸಿದ 'ಪ್ಲಮ್' ಹಣ್ಣು]. (ರೂಪ.) ಉತ್ತಮ ಪದಾರ್ಥ; ಸಂಗ್ರಹಣ ಮಾಡಿದುದರಲ್ಲಿ ಉತ್ತಮವಾದದ್ದು; (ಜೀವನ, ಮೊ. ಗಳಲ್ಲಿ) ಬಹುಮಾನವೆಂದು ಎಣಿಕೆಯಾದದ್ದು. (ಅಸಂ.) ಒಂದು ಲಕ್ಷ ಪೌಂಡು (ಹಣ). P. cake ದ್ವೀಪ ದ್ರಾಕ್ಷಿ, ಮೊ. ನ್ನು ಹಾಕಿ ಮಾಡಿದ ಕಡುಬು. P. pudding ರೊಟ್ಟಿ ಚೂರು, ಕೊಬ್ಬು, ದ್ರಾಕ್ಷಿ, ಕೋಳಿ ಮೊಟ್ಟೆ, ಸಂಬಾರ, ಮೊ. ಗಳನ್ನು ಹಾಕಿ, ಕ್ರಿಸ್ಮಸ್ ಹಬ್ಬದಲ್ಲಿ ಮಾಡುವ ಒಂದು ಪಿಷ್ಟ ಭಕ್ಷ್ಯ. P.-pudding stone (ಭೂ. ವಿ.) (ಬೆಣಚುಕಲ್ಲು ಅಥವಾ ಇತರ ಶಿಲಾ ಸ್ಫಟಿಕಗಳು ಮತ್ತೊಂದು ವಸ್ತುವಿನೊಳಗೆ ಹುದುಗಿಕೊಂಡು ಆದ) ಕಡುಬುಗಲ್ಲು; ಚೂರುಗಲ್ಲುಂಡೆ. **Plúmmy** ಪ್ಲಮಿ (ಗು.) ಪ್ಲಮ್ ಹಣ್ಣು ಹೇರಳವಾಗಿರುವ; ಪ್ಲಮ್ ಹಣ್ಣಿನ. (ಬಳ. ಮಾ.) ಸಾರವತ್ತಾದ; ಉತ್ತಮವಾದ; ಬೇಕೆನಿಸುವ; ಅಪೇಕ್ಷಣೀಯ.

Plúmage, etc., Plumassiér. Plume ನೋಡಿ.

Plumb ಪ್ಲಮ್ (ನಾ., ಗು., ಕ್ರಿ. ವಿ., ಕ್ರಿ.) (ಮು., ಕಾರೇಗಾರನ ತೂಗುದಾರದ) ಸೀಸದ ಗುಂಡು; ತೂಗು ಗುಂಡು [P.-line (ಗೋಡೆ, ಮೊ. ಗಳ ಲಂಬಮಾನವನ್ನು ಪರೀಕ್ಷಿಸಲು ಉಪಯೋಗಿಸುವ) ತೂಗುಗುಂಡು ದಾರ; ಲಂಬ ಸೂತ್ರ. (ರೂಪ.) ಬುದ್ಧಿಯನ್ನೂ ನಡತೆಯನ್ನೂ ಅಳೆಯುವ ಒಂದು ಪ್ರಮಾಣ; ಪರೀಕ್ಷಕ]. (Out of p. ಲಂಬ ತಪ್ಪಿ; ಓರೆಯಾಗಿ). (ಕಡಲಿನ ಆಳ ಕಂಡುಹಿಡಿಯಲು ಉಪಯೋಗಿಸುವ) ಆಳದ ಗುಂಡು. (P.-rule ಕಿರಿದಾದ ಉದ್ದಹಲಗೆಯಮೇಲೆ ಅಥವಾ ಚೌಕಟ್ಟಿನಮೇಲೆ ಅಳವಡಿಸಿದ ಮತ್ತು ಅದರಮೇಲೆ ಮಾಡಿರುವ ಗೆರೆಯ ಮುಂದೆ ದಾರವು ಸಮಾಂತರವಾಗಿ ನಿಂತಲ್ಲಿ ಲಂಬತೆ ಸಿದ್ಧಿಸುವ, ಕಟ್ಟಡದ ಕಾರೇಗಾರನ ತೂಗು ಗುಂಡು: ಮಟ್ಟ ಹಲಗೆ; ಮೂಲೆ ಮಟ್ಟ). (ಗು.) ಲಂಬವಾದ. (ರೂಪ.) ಪಕ್ಕಾ; ಶುದ್ಧ; ಸಂಪೂರ್ಣ (P. nonsense); (ಕ್ರಿಕೆಟ್: ಆಟದ ಪ್ರದೇಶದ ವಿಷಯದಲ್ಲಿ) ಸಮತಲವಾಗಿರುವ; ನೇರವಾದ. (ಕ್ರಿ. ವಿ.) ಲಂಬವಾಗಿ; ನೆಟ್ಟಗೆ; (ರೂಪ.) ಕರಾರುವಾಕಾಗಿ, ಖಚಿತವಾಗಿ, ಸರ್ವಸಮವಾಗಿ (Points p. in the same direction). (ಅಮೆ. ನಂ. ಅಸಂ.) ಪೂರ್ತಿಯಾಗಿ; ಶುದ್ಧ (P. crazy). (ಕ್ರಿ.) ಆಳದ ಗುಂಡಿನಿಂದ (ಸಮುದ್ರದ) ಆಳ ಕಂಡುಹಿಡಿ [**Plúmbless** (ಗು.) ಆಳ ತಿಳಿಯದ; ಬಹಳ ಆಳವಾದ; ಅಗಾಧ]. ಲಂಬ ಮಾಡು. ಕೊಳಾಯಿ, ಪೀಪಾಯಿ, ಮೊ. ನ್ನು ಜೋಡಿಸುವ, ನೇರ್ಪಡಿಸುವ, —ಕೆಲಸ ಮಾಡು. **Plúmbeous** ಪ್ಲಂಬಿಯಸ್ (ಗು.) ಸೀಸದ(ಂಥ); ಸೀಸದ ಹೊಳಪು ಕೊಟ್ಟಿರುವ. **Plúmber** ಪ್ಲಮರ್ (ನಾ.) ಕೊಳಾಯಿ, ಪೀಪಾಯಿ, ಮೊ. ನ್ನು ಸೀಸ, ಸತು ಅಥವಾ ತವರದ ಬೆಸುಗೆಯಿಂದ ಜೋಡಿಸುವವನು, ದುರಸ್ತು ಮಾಡುವವನು; —ವ ಕಸಬಿನವನು; ಕೊಳಾಯಿಗಾರ; (ಸೀಸ)ಬೆಸುಗೆಕಾರ. **Plúmbery** (ನಾ.) —ಕಾರ್ಯಸ್ಥಾನ; —ಕಾರ್ಯ **Plúmbic** ಪ್ಲಂಬಿಕ್ (ಗು.) (ರ. ವಿ.) ಸೀಸ ಸಂಯುಕ್ತ. (ರೋಗ ನಿದಾನ) ಸೀಸ(ವಿಷ)ವಿರುವ ಕಾರಣದಿಂದಾದ; ಸೀಸ ವಿಷದ. **Plumbíferous** (ಗು.) ಸೀಸವಿರುವ; —ಸೇರಿರುವ. **Plúmbism** (ನಾ.) ಸೀಸವು ದೇಹಕ್ಕೆ ಸೇರಿದುದರಿಂದಾದ ವಿಷ ವ್ಯಾಧಿ.

Plumbáginous. Plumbago ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Plumbágo ಪ್ಲಂಬೇಗೊ (ನಾ.) (ಬರೆಯುವ ಸೀಸದಕಡ್ಡಿಗಳನ್ನು ಮಾಡಲು ಉಪಯೋಗಿಸುವ, ಜೇಡಿಯೊಡನೆ ಬೆರಸಿ ಮೂಸೆಗಳನ್ನು ಮಾಡುವ) ಕಪ್ಪು ಸೀಸ ; ಗ್ರಾಫೈಟು (ಇದು ಒಂದು ರೂಪದ ಇಂಗಾಲ) ; 'ಪ್ಲಂಬೇಗೊ'. [**Plumbáginous** ಪ್ಲಂಬ್ಯಾಜಿನಸ್ (ಗು.) ಕರಿಯ, ಕಪ್ಪು, —ಸೀಸದ(ಂಥ)]. ಈ ಬಣ್ಣದ ಹೂವು ಬಿಡುವ ಒಂದು ಸಸ್ಯಜಾತಿ ; ಚಿತ್ರಮೂಲ.

Plume ಪ್ಲೂಮ್ (ನಾ., ಕ್ರಿ. ಸಕ.) (ಮು., ಅಲಂಕಾರಕ್ಕಾಗಿ ಉಪಯೋಗಿಸುವ, ದೊಡ್ಡ) (ಹಕ್ಕಿಯ) ಗರಿ, ಪುಕ್ಕ [Borrowed plumes (Borrow ನೋಡಿ)]. (ಸೀಸಕಕ್ಕೆ, ಟೋಪಿಗೆ ಅಥವಾ ತಲೆಗೂದಲಿಗೆ) ಅಲಂಕಾರವಾಗಿ ಅಳವಡಿಸುವ (ಹಕ್ಕಿಯ) ಗರಿ(ಗಳ ತುರಾಯಿ, ಕುಚ್ಚು) ಅಥವಾ ಕುದುರೆಯ ಜವಿ [(Court p. (ರಾಜಾಸ್ಥಾನಕ್ಕೆ ಪ್ರವೇಶ ಪಡೆಯುವ ಮಹಿಳೆಯರು ಧರಿಸುವ) ಉಷ್ಟ್ರಪಕ್ಷಿಯ ಪುಕ್ಕಗಳ ತಲೆಯುಡಿಗೆ]. (ಪ್ರಾ. ವಿ.) ಪುಕ್ಕದಂಥ ಭಾಗ, ರಚನೆ. (ಕ್ರಿ.) ಗರಿ, ಪುಕ್ಕ, —ಹವಣಿಸು, ಅಳವಡಿಸು, ಅಲಂಕರಿಸು. ಎರವಲು ಉಡಿಗೆ ತೊಡಿಗೆಗಳನ್ನು ಅಲಂಕರಿಸಿಕೊಂಡು ಮೆರೆ. (ಮು., ಯಾವುದಾದರೂ ಅಲ್ಪ ವಿಷಯದಲ್ಲಿ ಅಥವಾ ತನಗೆ ಹಕ್ಕಿಲ್ಲದ ವಿಷಯದಲ್ಲಿ) ಗರ್ವ ಪಡು, ಜಂಬ ಹೊಡೆ (*On* ಉಪ. ದೊಡನೆ). (ಹಕ್ಕಿಯ ವಿಷಯದಲ್ಲಿ) ಗರಿಗಳನ್ನು ಸರಿಪಡಿಸಿಕೊ, ಅಂದಮಾಡಿಕೊ. **Plúmeless** (ಗು.) ; **Plúmelike** (ಗು.); **Plúmelet** (ನಾ.) ಕಿರುಗರಿ. **Plúmage** ಪ್ಲೂಮೆ(ಮಿ)ಜ್ (ನಾ.) ಹಕ್ಕಿಯ ಗರಿ, ಪುಕ್ಕ. (-)**plumaged** (ಗು.). **Plumassiér** ಪ್ಲೂಮಸಿಯರ್ (ನಾ.) ಅಂದವಾದ (ಹಕ್ಕಿಯ) ಗರಿಗಳಲ್ಲಿ ಕೆಲಸ ಮಾಡುವವನು, ವ್ಯಾಪಾರ ಮಾಡುವವನು ; ಗರಿಭೂಷಣಕಾರ. **Plumóse** (ಗು.) ಗರಿಗಳುಳ್ಳ ; ಗರಿಯಂಥ. **Plúmule** ಪ್ಲೂಮ್ಯುಲ್ (ನಾ.) ಬೀಜಗರ್ಭ ಸಸ್ಯದ ಮೂಲಾಂಕುರ [**Plúmular** (ಗು.)]. (ಸಣ್ಣ) ತುಪ್ಪುಳುಗರಿ. **Plumuláceous** (ಗು.) ತುಪ್ಪುಳುಗರಿಯ(ಂಥ). **Plúmy** (ಗು.) (ಹಕ್ಕಿಯ) ಗರಿಯಂಥ ; ಪುಕ್ಕದಂತಿರುವ ; (ಹಕ್ಕಿಯ) ಗರಿಗಳಿಂದ ಅಲಂಕರಿಸಿದ.

Plúmmer-block ಪ್ಲಮರ್‌ಬ್ಲಾಕ್ (ನಾ.) (ಯಂತ್ರ ಶಿಲ್ಪ) ತಿರುಗುವ ಅಚ್ಚಿಗೆ ಆಧಾರವಾಗಿ ಅದರ ಕೊನೆಗಳಲ್ಲಿರುವ ಮತ್ತು ಅಚ್ಚಿನ ಆಧಾರ ಭಾಗಕ್ಕೆ ತೆರಪು ಕೊಡಲು ತೆಗೆಯಬಹುದಾದ ಮುಚ್ಚಳವುಳ್ಳ, ಲೋಹ ಕೋಶ.

Plúmmet ಪ್ಲಮೆಟ್ (ನಾ.) ತೂಗು(ದಾರದ ಕೊನೆಯಲ್ಲಿರುವ) ಗುಂಡು; ಆಳದ ಗುಂಡು. (ರೂಪ.) ಅವುಕುತ್ತಿರುವ ಅಥವಾ ಅಡಚಣೆಯಾಗಿರುವ ಹೊರೆ ; ಪೀಡಿಸುವ ಹೊರೆ, ಭಾರ. ಗಾಳದ ತೇಲುವೆಯನ್ನು ನೇರವಾಗಿಟ್ಟಿರಲು ಅದಕ್ಕೆ ಕಟ್ಟಿದ ಭಾರ.

Plumóse. **Plume** ನೋಡಿ.

Plump[1] ಪ್ಲಂಪ್ (ಗು., ಕ್ರಿ.) (ಮನುಷ್ಯ, ದೇಹ) ತುಂಬಿಕೊಂಡಿರುವ ; ದುಂಡು ದುಂಡಾಗಿರುವ ; ಮಾಂಸಲ ; ಪುಷ್ಟ. (ಕ್ರಿ.) ತುಂಬಿಕೊಳ್ಳುವಂತೆ ಮಾಡು ; ದುಂಡು ದುಂಡಾಗುವಂತೆ ಮಾಡು ; ಕೊಬ್ಬಿಸು ; (ಮೈ ಕೈ) ತುಂಬಿಕೊ ; ಊದು, ಉಬ್ಬು (*Out* or *up* ಉಪ. ದೊಡನೆ). **Plúmper**[1] (ನಾ.) ಗುಂಡಿಬಿದ್ದ ಗಲ್ಲಗಳು ತುಂಬಿರುವಂತೆ ಕಾಣಲು ಬಾಯಲ್ಲಿಟ್ಟುಕೊಳ್ಳುವ ಚೆಂಡು, ಬಿಲ್ಲೆ : ಗಲ್ಲತುಂಬು. **Plúmply** (ಕ್ರಿ. ವಿ.) ; **Plúmpness** (ನಾ.) ; **Plúmpy** (ಗು.)

Plump[2] ಪ್ಲಂಪ್ (ಕ್ರಿ., ನಾ., ಕ್ರಿ. ವಿ., ಗು.) ನೇರವಾಗಿ ಥಟ್ಟನೆ, ದೊಪ್ಪನೆ, ಧಡಕ್ಕನೆ, ತಡಬಡಿಸದೆ, —ಬೀಳು, ಬೀಳಿಸು, ಮುಳುಗು, ಮುಳುಗಿಸು, ಒಪ್ಪಿಕೊ (*Down upon*, ಮೊ. ಪದದೊಡನೆ). (ಇಬ್ಬರಿಗೆ ಅಥವಾ ಹೆಚ್ಚು ಜನಕ್ಕೆ ಅಭಿಮತ ಕೊಡುವ ಅವಕಾಶವಿದ್ದರೂ) ಒಬ್ಬನಿಗೇ ಅಭಿಮತ ಕೊಡು (*For* ಉಪ. ದೊಡನೆ). (ನಾ.) ಥಟ್ಟನೆಯ ಮುಳುಗು ; ಬಲವಾದ ಕೆಡೆ, ಬೀಳು. (ಕ್ರಿ. ವಿ.) ಥಟ್ಟನೆ; ಧುಡುಮ್ಮನೆ (Came p. into the river); ನಿರ್ದಾಕ್ಷಿಣ್ಯವಾಗಿ, ನೇರವಾಗಿ (I told him p., I lied p.). (ಗು.) ನೇರವಾದ ; ಖಂಡಿತವಾದ (Answer with a p. No). **Plúmper**[2] (ನಾ.) (ಕ್ರಿಯಾರ್ಥಗಳಲ್ಲಿ). ಒಬ್ಬನಿಗೇ ಕೊಟ್ಟ ಅಭಿಮತ ; ಹೀಗೆ ಕೊಡುವವನು. ಶುದ್ಧ, ಪಕ್ಕಾ, —ಸುಳ್ಳು.

Plump[3] ಪ್ಲಂಪ್ (ನಾ.) (ಪ್ರಾಚೀ. ಪ್ರ.) (ಸೇನೆಯ) ದಳ, ತುಕ್ಕಡಿ. (P. of spears ಈಟಿದಳದವರು). ಗುಂಪು ; ಹಿಂಡು.

Plúmule, Plúmy, etc. **Plume** ನೋಡಿ.

Plúnder ಪ್ಲಂಡರ್ (ಕ್ರಿ. ಸಕ., ನಾ.) (ಮು., ಯುದ್ಧದಲ್ಲಿಯಂತೆ) ಕೊಳ್ಳೆ, ಲೂಟಿ, ಸುಲಿಗೆ (ಮಾಡು, ಹೊಡೆ) ; ಸೂರೆ (ಮಾಡು) ; ಸುಲಿ. ಕದಿ ; ಅಪಹರಿಸು. (ಅಸಂ.) ಲಾಭ ; ಆದಾಯ ; ನಫೆ. **Plúnderage** —ರೆ(ರಿ)ಜ್ (ನಾ.) ಕೊಳ್ಳೆ, ಲೂಟಿ, —ಮಾಡುವುದು, ಮಾಡಿದ್ದು (ಮು., ಹಡಗಿನ ಸರಕಿನ ಅಪಹರಣ). **Plúnderer** (ನಾ.)

Plunge ಪ್ಲಂಜ್ (ಕ್ರಿ., ನಾ.) (ದ್ರವ, ಬಿಲ, ಮೊ. ರೊಳಕ್ಕೆ) ರಭಸದಿಂದ ತಳ್ಳು, ನೂಕು, ಒಳಹೊಗಿಸು (*Into* ಉಪ. ದೊಡನೆ) ; (ರೂಪ.) (ಒಬ್ಬನನ್ನು ಒಂದು ಸ್ಥಿತಿಗೆ, ಒಂದು ಕಾರ್ಯಕ್ಕೆ) ಮುನ್ನೂಕು, ದಬ್ಬು (*Into*, *in* ಉಪ. ದೊಡನೆ) ; (ಸಸಿಯ ಕುಂಡವನ್ನು) ನೆಲದಲ್ಲಿ ಹೂಳು, ಇಳಿಸು. (ನೀರು, ತೊಂದರೆ, ಚರ್ಚೆ, ಮೊ. ಗಳಲ್ಲಿ) ದುಮುಕು, ಮುಳುಗು, ಮಗ್ನನಾಗು (*Into* ಉಪ. ದೊಡನೆ) ; [ಕೊಠಡಿಯೊಳಕ್ಕೆ (*Into* ಉಪ. ದೊಡನೆ), ಮೆಟ್ಟಲು ಹತ್ತಲು, ಇಳಿಯಲು (*Up*, *down* ಉಪ. ದೊಡನೆ)] ರಭಸದಿಂದ ನುಗ್ಗು. (ಕುದುರೆ) ರಭಸದಿಂದ ಮುನ್ನುಗ್ಗು ; (ಹಡಗು) ಉದ್ದುದ್ದವಾಗಿ ಅಲೆಗಳಲ್ಲಿ ಬೀಳು, ಏಳು. (ಅಸಂ.) ಜೂಜಾಡುವುದರಲ್ಲಿ, ಸಾಲದಲ್ಲಿ, —ಮುಳುಗಿಹೋಗು. [Plunging fire ಎತ್ತರದ(ಲ್ಲಿರಿಸಿದ) ಫಿರಂಗಿಗಳಿಂದ ಶತ್ರುಗಳಮೇಲೆ ನೇರವಾದ ಗುಂಡಿನ ಹೊಡೆತ]. (ನಾ.) ಮುಳುಗು(ವುದು) ; (ತಲೆ ಮುಂದಾಗಿ ಹಾಕುವ) ಮುಳುಕು (P.-bath ಮುಳುಗಲು ಸಾಕಾಗುವಷ್ಟು ದೊಡ್ಡದಾಗಿರುವ ತೊಟ್ಟಿ : ಮುಳುಗುತೊಟ್ಟಿ). (ರೂಪ.) ಮುಂದಾಲೋಚನೆ ಮಾಡದೆ, ಲಕ್ಷ್ಯವಿಲ್ಲದೆ, ರಭಸದಿಂದ ನುಗ್ಗುವುದು ; ಧುಡುಂ ಪ್ರವೇಶ ; (ಕಷ್ಟ, ತೊಂದರೆ, ಅಪಾಯ, ಮೊ. ರಲ್ಲಿ) ಮುಳುಗಿಹೋಗುವ ಸ್ಥಿತಿ ; ಉತ್ಕಟ ಕಾರ್ಯ(ಕ್ರಮ) (Take the p.) ವಿಷಮಾವಸ್ಥೆ ; ಸಂಕಟಾವಸ್ಥೆ. **Plúnger** (ನಾ.) (ಕ್ರಿಯಾರ್ಥಗಳಲ್ಲಿ). (ಯಂತ್ರಗಳಲ್ಲಿ) ದ್ರವ, ಮೊ. ಗಳನ್ನುಳ್ಳ ನಳಿಕೆಯಂಥ ಯಂತ್ರಭಾಗದಲ್ಲಿ ಮುಳುಗಿ ಏಳುವ ಚಲನೆಯುಳ್ಳ ಅಡುಬೆಣೆಯಂಥ ಭಾಗ. (ಅಸಂ.) ರಾವುತ. (ಅಸಂ.) ಜೂಜುಕೋರ; ಅತಿ ಲಾಭದಾಸೆಯ, ನಿರ್ಲಕ್ಷ್ಯದ, ವ್ಯಾಪಾರಿ ; ಸಟ್ಟಾ ವ್ಯಾಪಾರಿ.

Plúperfect, Plupérfect ಪ್ಲೂಪರ್‌ಫೆಕ್ಟ್ (ಗು., ನಾ.) (ವ್ಯಾ.) ಹಿಂದಿನ ಒಂದು ಗೊತ್ತಾದ ಕಾಲಕ್ಕೆ ಮುಂಚೆಯೇ ನಡೆದುಹೋದ ಕ್ರಿಯೆಯನ್ನು ಹೇಳುವ (ಕ್ರಿಯಾ ಕಾಲ) ; ಗತ ಭೂತಕಾಲ (He had called ಅವನು ಭೇಟಿಗಾಗಿ ಬಂದಿದ್ದನು)

Plúral ಪ್ಲೂರಲ್ (ಗು., ನಾ.) ಒಂದಕ್ಕಿಂತ (ದ್ವಿವಚನವಿರುವ ಭಾಷೆಗಳಲ್ಲಿ ಎರಡಕ್ಕಿಂತ) ಹೆಚ್ಚಾದುದನ್ನು ಸೂಚಿಸುವ (ವಾಚಕ ರೂಪ) : ಬಹುವಚನ (ಸೂಚಕ) ; ಒಂದಕ್ಕಿಂತ ಹೆಚ್ಚಾದ ಸಂಖ್ಯೆಯ ; ಅನೇಕ. [P. vote ಒಂದಕ್ಕಿಂತ ಹೆಚ್ಚಾಗಿ ಅಥವಾ ಒಂದಕ್ಕಿಂತ ಹೆಚ್ಚಾದ ಚುನಾವಣಾ ಕ್ಷೇತ್ರಗಳಲ್ಲಿ ಅಭಿಮತ ಕೊಡುವ ಅಧಿಕಾರ, ಹಕ್ಕು : ಅನೇಕಾಭಿಮತ (ಕೊಡುವ ಅಧಿಕಾರ). P. voter, voting]. **Plúrally** (ಕ್ರಿ. ವಿ.) ; **Plúralism** (ನಾ.) ಒಂದೇ ಕಾಲದಲ್ಲಿ ಅನೇಕ ಹುದ್ದೆಗಳನ್ನು (ಮು., ಕ್ರೈಸ್ತ ಮಠವೃತ್ತಿಗಳನ್ನು) ಪಡೆದಿರುವುದು. (ತ. ಶಾ.) ಒಂದಕ್ಕಿಂತ ಹೆಚ್ಚಾದ ಅಂತಿಮ ಮೂಲತತ್ತ್ವವನ್ನು ಅಂಗೀಕರಿಸುವ ವಾದ: ಅನೇಕ ತತ್ತ್ವ ವಾದ (Monism ಹೋಲಿಸಿ). **Plúralist** (ನಾ.) ; **Pluralístic** (ಗು.) ; **Plurálity** ಪ್ಲುರ್ಯಾಲಿಟಿ (ನಾ.) ಅನೇಕತ್ವ ; ಬಹುತ್ವ ; ದೊಡ್ಡ ಸಂಖ್ಯೆ ; ಸಮೂಹ. ಎರಡು ಅಥವಾ ಹೆಚ್ಚಿನ ಮಠವೃತ್ತಿಗಳನ್ನು ಅಥವಾ ಅಧಿಕಾರಗಳನ್ನು ಒಬ್ಬನೇ ಪಡೆದಿರುವುದು; ಮತ್ತೊಂದರ ಜೊತೆಗೆ ಪಡೆದಿರುವ ಮಠವೃತ್ತಿ, ಅಧಿಕಾರ. (ಅಭಿಮತ, ಮೊ. ಗಳ) ಬಹು ಸಂಖ್ಯೆ, ಅಧಿಕ ಭಾಗ. **Plúralize** ಪ್ಲೂರಲೈಸ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕ್ರಿ.) ಬಹುವಚನ ಮಾಡು ; ಬಹುವಚನದಲ್ಲಿ ಹೇಳು . ಒಂದಕ್ಕಿಂತ ಹೆಚ್ಚಾದ ಮತವೃತ್ತಿ ಪಡೆದಿರು.

Plus ಪ್ಲಸ್ (ಉಪ., ಗು., ನಾ.) ಕೂಡಿದರೆ (3 p. 4 ಮೂರಕ್ಕೆ ನಾಲ್ಕು ಕೂಡಿದರೆ). [Plus-fours ಉದ್ದವೂ ದಗಲೆಯೂ ಆದ ಷರಾಯಿ (ಜೋಲುಬೀಳುವುದಕ್ಕಾಗಿ ೪ ಅಂಗುಲ ಹೆಚ್ಚು ಉದ್ದವನ್ನು ಇಡುತ್ತಿದ್ದ ಕಾರಣದಿಂದ)] . (ಗು.) ಜೊತೆಗೆ ಸೇರಿ(ಸಿ)ದ ; ಹೆಚ್ಚಿನ ; ಅಧಿಕ. (ಗಣಿತ) ಧನ (ಸೂಚಕ) ; (ವಿದ್ಯುತ್) ಧನ ; ಧನ ವಿದ್ಯುತ್ತಿನ. (ನಾ.) + ಗುರುತು, ಚಿಹ್ನೆ : ಸಂಕಲನ ಚಿಹ್ನೆ ; ಹೆಚ್ಚಿಗೆಯ ಮೊತ್ತ ; ಧನ ಸೂಚಕ ಮೊತ್ತ.

Plush ಪ್ಲಷ್ (ನಾ.) ಮಖಮಲ್ಲಿಗಿಂತ ಜುಂಗು ಉದ್ದವಾಗಿಯೂ ಮೃದುವಾಗಿಯೂ ಇರುವ, ರೇಷ್ಮೆ, ಹತ್ತಿ, ಮೊ. ಗಳಿಂದ ಮಾಡಿದ ಬಟ್ಟೆ. (ಬ. ವ. ದಲ್ಲಿ) ಇದರಿಂದ ಮಾಡಿದ ಪದಾತಿಯ ಚಲ್ಲಣ. **Plúshy** (ಗು.)

Plútarchy ಪ್ಲೂಟಾ(ಟ)ರ್ಕಿ (ನಾ.) = Plutocracy.

Plúto ಪ್ಲೂಟೋ (ನಾ.) ನೆಪ್ಚ್ಯೂನ್ ಗ್ರಹಕ್ಕಿಂತ ದೂರದಲ್ಲಿರುವ, (೧೯೩೦ ರಲ್ಲಿ ಕಂಡುಹಿಡಿದ) ಒಂದು ಗ್ರಹ : ಪ್ಲೂಟೋ ಗ್ರಹ. (ರೋಮನ್ ಪುರಾಣ) ಅಧೋಲೋಕದ ಅಧಿಪತಿ : ಪ್ಲೂಟೋ ದೇವತೆ.

Plutócracy ಪ್ಲುಟಾಕ್ರಸಿ (ನಾ.) ಧನಿಕರ ಪ್ರಭುತ್ವ, ಆಡಳಿತ ; ಪ್ರಭುತ್ವ ನಡಸುವ ಧನಿಕವರ್ಗ. **Plútocrat** ಪ್ಲೂಟೊಕ್ರ್ಯಾಟ್ (ನಾ.) ; **Plutocrátic** (ಗು.)

Plutólatry ಪ್ಲುಟಾಲಟ್ರಿ (ನಾ.) ಧನೋಪಾಸನೆ; ಐಶ್ವರ್ಯಾರಾಧನೆ.

Plutónic ಪ್ಲುಟಾನಿಕ್ (ಗು., ನಾ.) (ಅಧೋಲೋಕಾಧಿಪತಿಯಾದ) ಪ್ಲೂಟೋವಿನ; ಅಧೋಲೋಕದ ; ನರಕದ. (ಭೂ. ವಿ.) ಭೂಮಿಯ ಬಹಳ ತಳಗಡೆಯ ವಿಪರೀತ ಶಾಖದಿಂದಾದ [P. rocks ಅಗ್ನಿಶಿಲೆಗಳು. P. theory ಅನೇಕ ಭೂಗರ್ಭ ವ್ಯಾಪಾರಗಳು ಭೂಮಿಯೊಳಗಿನ (ವಿಪರೀತ) ಶಾಖದಿಂದ ನಡೆಯುತ್ತವೆಂಬ ವಾದ : ಅಗ್ನಿ, ತಪನ, —ಕ್ರಿಯಾ ವಾದ] . (ನಾ.) ಅಗ್ನಿಶಿಲೆ. **Plútonism** ಪ್ಲೂಟೊನಿಸ್ಮ್ (ನಾ.) ; **Plútonist** (ನಾ.); **Plutónian** ಪ್ಲುಟೋನಿಯನ್ (ಗು.) = Plutonic (ಗು.), (ನಾ.) = Plutonist.

Plutónomy ಪ್ಲು(ಪ್ಲೂ)ಟಾನೊಮಿ (ನಾ.) ಅರ್ಥ ಶಾಸ್ತ್ರ ; ವಾರ್ತಾ. **Plutonómic** ಪ್ಲೂಟೊನಾಮಿಕ್ (ಗು.) ; **Plutónomist** ಪ್ಲೂಟಾನೊಮಿಸ್ಟ್ (ನಾ.)

Plúvial ಪ್ಲೂವಿಯಲ್ (ಗು., ನಾ.) ಮಳೆಯ ; ಮಳೆ ಬೀಳುವ ; ಹೆಚ್ಚಾಗಿ ಮಳೆಯಾಗುವ [= **Plúvious** (ಗು.)] . (ಭೂ. ವಿ.) ಮಳೆಯಿಂದಾದ. (ನಾ.) (ಕ್ರೈಸ್ತ ಮತ ಚರಿತ್ರೆ) ಉತ್ಸವ ಸಂದರ್ಭಗಳಲ್ಲಿ ಪಾದ್ರಿಗಳು (ವಿಧ್ಯುಕ್ತವಾಗಿ) ತೊಡುವ ಉದ್ದವಾದ ನಿಲುವಂಗಿ. **Pluviómeter** ಪ್ಲೂವಿಯಾಮಿಟರ್ (ನಾ.) ವೃಷ್ಟಿ ಮಾಪಕ (ಸಲಕರಣೆ). **Pluviométric(al)** (ಗು.)

Pluviómeter. **Pluvial** ನೋಡಿ.

Ply[1] ಪ್ಲೈ (ನಾ.) (ಬಟ್ಟೆ, ಮೊ. ಗಳ) ಮಡಿಕೆ, ನಿರಿ, ಪದರ ; (ಹಗ್ಗ, ಮೊ. ಗಳ) ಹುರಿ, ತಿರಿ, ಎಳೆ ; [2-p. (or two-p.) ಎರಡು ಪದರಗಳ, ಎರಡೆಳೆಯ] . (ರೂಪ.) ಒಲವು ; (ಮನಸ್ಸಿನ) ಪ್ರವೃತ್ತಿ ; ಗತಿ ; ಮಾರ್ಗ (The Czar's mind had taken a strange p.). **P.-wood** ಎಳೆಗಳು ಅಡ್ಡಹಾಯುವಂತೆ (ಮರದ) ಬಹಳ ತೆಳುವಾದ ಪದರಗಳನ್ನು ಅಂಟಿಸಿ ಮಾಡಿದ, ತೆಳುವೂ ದೃಢವೂ ಆದ ಹಲಗೆ : ಪದರ(ಂಟು) ಹಲಗೆ.

Ply[2] ಪ್ಲೈ (ಕ್ರಿ.) (ಮುಟ್ಟು, ಹತ್ಯಾರು, ಆಯುಧ, ಮೊ. ನ್ನು) ಚುರುಕಾಗಿ, ಬಲವಾಗಿ, ಉಪಯೋಗಿಸು ; (ತನ್ನ ಕೆಲಸವನ್ನು) ವಿಚಕ್ಷಣೆಯಿಂದ, ಚುರುಕಾಗಿ, —ಮಾಡು. (ಒಬ್ಬನಿಗೆ, ಆಹಾರ, ಮೊ. ನ್ನು) ಎಡೆಬಿಡದೆ ಒದಗಿಸು (*With* ಉಪ. ದೊಡನೆ). (ಪ್ರಶ್ನೆ, ವಾದ, ಮೊ. ಗಳಿಂದ, ಒಬ್ಬನನ್ನು) ಬಲವಾಗಿ ಮುತ್ತು, ಪೀಡಿಸು (*With* ಉಪ. ದೊಡನೆ). (ನಾವೆ) ಗಾಳಿ ದಿಕ್ಕಿಗೆ ನಡಸು. (ಹಡಗು, ಅದರ ಯಜಮಾನ, ಸವಾರಿ ಬಂಡಿ, ಮೊ. ವು) (ಗೊತ್ತಾದ ಎರಡು ಸ್ಥಳಗಳ) ಮಧ್ಯೆ ಓಡಾಡು, ಸಂಚರಿಸು (*Between* ಉಪ. ದೊಡನೆ). (ಅಂಬಿಗ, ಹೊರೆಕೂಲಿಯಾಳು, ಬಾಡಿಗೆ ಸವಾರಿಬಂಡಿಯವನು, ಮೊ. ರು) (ಒಂದು ಗೊತ್ತಾದ ಸ್ಥಳದಲ್ಲಿ) ಗಿರಾಕಿಗಾಗಿ ತಪ್ಪದೆ ಹಾಜರಿರು (*At* ಉಪ. ದೊಡನೆ)

Pneumátic ನ್ಯುಮ್ಯಾಟಿಕ್ (ಗು., ನಾ.) ಗಾಳಿಯ ; ವಾಯುವಿನ ; ಗಾಳಿಯಿಂದ, ವಾಯುವಿನಿಂದ, —ನಡೆಯುವ, ಕೆಲಸ ಮಾಡುವ ; ವಾಯವಿಕ [P. tire ಗಾಳಿ ತುಂಬಿದ ಗಾಡಿ ಚಕ್ರದ ಪಟ್ಟಿ. P. dispatch ಗಾಳಿಯ ಒತ್ತಡದಿಂದ ಅಥವಾ ಶೋಷಣದಿಂದ ಒಂದು ನಾಳಿಯಲ್ಲಿ ಸಾಮಾನುಸುತ್ತುಗಳನ್ನು ಸಾಗಿಸುವುದು : ಗಾಳಿ ಸಾಗಣೆ. P. trough ದ್ರವದ ಮೇಲ್ಮೈಯ ಕೆಳಗೆ ಬಾಯಿಯನ್ನು ತಲೆಕೆಳಗಾಗಿ ಹಿಡಿದ ದ್ರವ ತುಂಬಿದ ಸೀಸೆಗಳಲ್ಲಿ, ಬೇರೊಂದು ಪಾತ್ರೆಯಿಂದ ಬರುವ ಅನಿಲವನ್ನು ತುಂಬುವುದಕ್ಕಾಗಿ ಅನುಕೂಲಿಸುವ ನೀರು ಅಥವಾ ಪಾದರಸ ತುಂಬಿದ ತೊಟ್ಟಿ] . ವಾಯುರಂಧ್ರಗಳುಳ್ಳ, ವಾಯುರಂಧ್ರಗಳಿಗೆ ಸಂಬಂಧಿಸಿದ (ಮು., ಹಕ್ಕಿಗಳ ಎಲುಬುಗಳಲ್ಲಿ). ಅಧ್ಯಾತ್ಮಿಕ. (ನಾ.) ಬಂಡಿಚಕ್ರದ ಅಥವಾ ಇಗ್ಗಾಲಿ ವಾಹನದ ಗಾಳಿ ಪಟ್ಟೆ ; ಗಾಳಿ ಪಟ್ಟೆಗಳುಳ್ಳ ಬೈಸಿಕಲ್ಲು. (ನಾ. ; ಬ. ವ. ದಲ್ಲಿ) ವಾಯುವಿನ, (ಇತರ ಪ್ರವಾಹಿಗಳ) ಅಥವಾ ಅನಿಲಗಳ ಭೌತ ಗುಣಗಳನ್ನು ಕುರಿತ ಶಾಸ್ತ್ರ : ವಾಯವಿಕ ಭೌತ ಶಾಸ್ತ್ರ. **Pneumátically** (ಕ್ರಿ. ವಿ.) ; **Pneumatícity** (ನಾ.) ವಾಯವಿಕತೆ.

Pneumatólogy ನ್ಯೂ(ಪ್ನ್ಯೂ)ಮಟಾಲೊಜಿ (ನಾ.) ಅತಿಮಾನುಷ ವ್ಯಕ್ತಿ ತತ್ತ್ವ ; ಅಶರೀರಾತ್ಮಗಳ ವಿಚಾರ ವಾದ ; ಕ್ರೈಸ್ತ ಪವಿತ್ರಾತ್ಮ ವಾದ. ಮನಶ್ಶಾಸ್ತ್ರ. **Pneumatológical** —ಟೊ— (ಗು.)

Pneumatómeter ನ್ಯೂ(ಪ್ನ್ಯೂ)ಮಟಾಮಿಟರ್ (ನಾ.) ಉಸಿರಾಡುವಾಗ ಒಂದುಸಲ ಒಳಕ್ಕೆ ತೆಗೆದುಕೊಂಡ ಅಥವಾ ಹೊರಕ್ಕೆ ಬಿಟ್ಟ ವಾಯುವಿನ ಮೊತ್ತವನ್ನು ಅಥವಾ ಉಚ್ಛ್ವಾಸ ನಿಶ್ವಾಸಗಳ ಬಲವನ್ನು ಅಳೆಯುವ ಸಲಕರಣೆ : ಶ್ವಾಸ ಮಾಪಕ.

Pneumogástric ನ್ಯೂ(ಪ್ನ್ಯೂ)ಮೊಗ್ಯಾಸ್ಟ್ರಿಕ್ (ಗು.) ಶ್ವಾಸಕೋಶಗಳ ಮತ್ತು ಹೊಟ್ಟೆಯ (P. nerves ಮಿದುಳಿನಿಂದ ಹೊರಡುವ ಹತ್ತನೆಯ ನರಯುಗ್ಮ)

Pneumónia ನ್ಯುಮೋನಿಯ (ನಾ.) ಶ್ವಾಸಕೋಶ(ದ್ರವ್ಯ)ದ ಉರಿಯೂತ [Single, double, p. ಒಂದು ಶ್ವಾಸಕೋಶದ, ಎರಡೂ ಶ್ವಾಸಕೋಶಗಳ, (ದ್ರವ್ಯದ) ಉರಿಯೂತ] . **Pneumónic** —ಮಾ— (ಗು.) ; **Pneumonítis** ನ್ಯೂ(ಪ್ನ್ಯೂ)ಮೊನೈಟಿಸ್ (ನಾ.) = Pneumonia.

Poach[1] ಪೋಚ್ (ಕ್ರಿ. ಸಕ.) ಮೊಟ್ಟೆಯ ಚಿಪ್ಪನ್ನು ಒಡೆದು ಕುದಿನೀರಿನಲ್ಲಿ ಸುರಿಸಿ ಬೇಯಿಸು. **Poácher[1]** (ನಾ.)

Poach[2] ಪೋಚ್ (ಕ್ರಿ.) (ಕಡ್ಡಿ, ಬೆರಳು, ಮೊ. ನ್ನು, ಕಂಡಿ, ಮೊ. ಗಳ) ಒಳಕ್ಕೆ ತೂರಿಸು, ನುಗ್ಗಿಸು (*Into* ಉಪ. ದೊಡನೆ). (ಹುಲ್ಲುತೆಂಡೆ, ಮೊ. ನ್ನು) ಗೊರಸಿನಿಂದ ತುಳಿದುಹಾಕು, ಕೆತ್ತಿಹಾಕು (*Up* ಉಪ. ದೊಡನೆ) ; (ನೆಲ) ತುಳಿದು ತುಳಿದು ಬದಿಯಾಗು, ಕೆಸರಾಗು. [ಒಬ್ಬನ ಸ್ವಾಮ್ಯವನ್ನು (ನೆಲ, ಮೊ. ನ್ನು)] ಆಕ್ರಮಿಸು, ಅತಿಕ್ರಮಿಸು, ದುರಾಕ್ರಮಣ ಮಾಡು (*On* ಉಪ. ದೊಡನೆ) ; (ಬೇಟೆಯನ್ನು, ಮೀನನ್ನು) ಕಳ್ಳತನದಿಂದ, ಮರ್ಯಾದೆ ಮೀರಿ, —ಹಿಡಿ [**Poácher[2]** (ನಾ.)] . (ಜೂಜಿನಲ್ಲಿ,—ಅನುಕೂಲವನ್ನು, ಮುಂದುವರಿಕೆಯನ್ನು) ಅನುಚಿತ ರೀತಿಯಿಂದ ಪಡೆ. (ಟೆನಿಸ್ ಆಟದಲ್ಲಿ) ತನ್ನ ಸಂಗಾತಿ ಹೊಡೆಯಬೇಕಾದ ಚೆಂಡನ್ನು ತಾನು ಹೊಡೆ.

Pock ಪಾಕ್ (ನಾ.) (ಮು., ಸಿಡುಬುರೋಗದಲ್ಲಿ) ಗುಳ್ಳೆ, ಬೊಕ್ಕೆ.

Pócket ಪಾಕೆಟ್ (ನಾ.) [ಮು., ಹಾಪ್ಸ್ ಕಾಯಿಗಳ ಅಳತೆಯಾಗಿ (೧೬೮ ಪೌಂಡು) ಅಥವಾ ಉಣ್ಣೆಯ ಅಳತೆಯಾಗಿ (= Half sack) ಉಪಯೋಗಿಸುವ] ಚೀಲ, ಸಂಚಿ. (ದುಡ್ಡಿನ ಚೀಲ, ಮೊ. ನ್ನು ಇಟ್ಟುಕೊಳ್ಳಲು, ಉಡುಪಿನಲ್ಲಿ ಮಾಡಿರುವ) ಜೇಬು, ಕಿಸೆ (Coat, waistcoat, trouser, -p. ; Watch-p., Ticket-p.). (ರೂಪ.) ಹಣಕಾಸಿನ ಅನುಕೂಲ; ದ್ರವ್ಯಾನುಕೂಲ [He will suffer in his p.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Empty p. ಹಣವಿಲ್ಲದವನು. Be prepared to put your hand in your p. ಜೇಬಿನಲ್ಲ ಕೈಯಿಡಲು (ಸ್ವಲ್ಪ ಖರ್ಚು ಮಾಡಲು) ಸಿದ್ಧನಾಗಿರು. Put one's pride in one's p. ಗೌರವ ನುಂಗಿಕೊ; ತನ್ನ ದೊಡ್ಡಸ್ತಿಕೆಗೆ ಕಡಮೆಯೆಂದು ತೋರುವಂಥ ಕೆಲಸವನ್ನು ಮಾಡಲು ಸಿದ್ಧನಾಗಿರು. Out-of-p. expenses ಸ್ವಂತ ಜೇಬಿನ ಖರ್ಚುಗಳು; ಖಿನ್ ವೆಚ್ಚಗಳು. Am 5 rupees in p., out of p., by the transaction ಈ ವ್ಯಾಪಾರದಿಂದ ನನ್ನ ಜೇಬಿಗೆ ೫ ರೂಪಾಯಿ ಬಿದ್ದಿದೆ (ಲಾಭ ಬಂದಿದೆ), ನನ್ನ ಜೇಬಿನಿಂದ ೫ ರೂಪಾಯಿ ಹೋಗಿದೆ (ನಷ್ಟ ವಾಗಿದೆ). Has him in her p. ಅವನನ್ನು ತನ್ನ ಸಂಪೂರ್ಣ ಅಧೀನದಲ್ಲಿಟ್ಟುಕೊಂಡಿದ್ದಾಳೆ]. ಬಿಲ್ಯರ್ಡ್ಸ್ ಮೇಜಿನ (ಮೂಲೆಗಳಲ್ಲಿಯೂ ಪಕ್ಕಗಳಲ್ಲಿಯೂ ಇರುವ, ಅವಕ್ಕೆ ಚೆಂಡು ಬಂದು ಬೀಳುವ) ಚೀಲ. ಚಿನ್ನದ ಅಥವಾ ಇತರ ಅದುರು ಸೇರಿರುವ ಸಣ್ಣ ಕುಳಿ [**Pócketу** (ಗು.) (ಗಣಿಯಲ್ಲಿ) ಅದುರುಕುಳಿಗಳುಳ್ಳ]. (ಭೂ. ವಿ.) ಬಂಡೆಯಲ್ಲಿ ಬೇರೆ ಪದಾರ್ಥ ತುಂಬಿರುವ ಕುಹರ. ವಿಮಾನವನ್ನು ಕೊಂಚ ದೂರ ಬೀಳು ವಂತೆ ಮಾಡುವ ವಾಯು ರಹಿತ(ವೆಂದು ತೋರುವ) ಆಕಾಶ ಸ್ಥಳ (=Air-p.). (ವಿಶೇಷಣವಾಗಿ) ಜೇಬಿನಲ್ಲಿಟ್ಟುಕೊಳ್ಳಲು ತಕ್ಕ ಗಾತ್ರದ: **P.-book** ಜೇಬಿನಲ್ಲಿಟ್ಟುಕೊಳ್ಳುವ ವಿಷಯ ಸೂಚೀ ಪುಸ್ತಕ; (ಕಾಗದ ಪತ್ರಗಳನ್ನಿಡುವ) (ಜೇಬಿನ) ಪುಸ್ತಕದಾಕಾರದ ಕೋಶ; ಜೇಬಿನ ಪುಸ್ತಕ. **P. battleship** ಬಹು ಶಕ್ತವೂ ಸುಸಜ್ಜಿತವೂ ಆದ ಸಣ್ಣ ಯುದ್ಧನೌಕೆ. **P. borough** (Borough ನೋಡಿ). **P. expenses** ಸ್ವಂತ ಚಿಲ್ಲರೆ ವೆಚ್ಚಗಳು. **P. handkerchief** ಜೇಬಿನ ಕರವಸ್ತ್ರ. **P.-money** (ಮು., ಮಕ್ಕಳಿಗೆ) ಸ್ವಂತ ಚಿಲ್ಲರೆ ಖರ್ಚುಗಳಿಗಾಗಿ ಕೊಡುವ ಸ್ವಲ್ಪ ಹಣ; ಕೈವೆಚ್ಚದ ಹಣ. **P.-piece** ರಕ್ಷೆಯಾಗಿ ಜೇಬಿನಲ್ಲಿಟ್ಟು ಕೊಂಡಿರುವ ಅದೃಷ್ಟದ ನಾಣ್ಯ. **P.-pistol** (ಹಾಸ್ಯ ಪ್ರ.) ಜೇಬಿನಲ್ಲಿಟ್ಟುಕೊಂಡಿರುವ ಮದ್ಯದ ಸೀಸೆ. **Pócketful** (ನಾ.); **Pócketless** (ಗು.)

Pócket (ಕ್ರಿ. ಸಕ.) ಜೇಬಿನಲ್ಲಿಡು; ಜೇಬಿಗೆ ಹಾಕು, ಸೇರಿಸು; ಜೇಬಿನಲ್ಲಿಯಂತೆ ಒಳಗಿಟ್ಟುಕೊ, ಅಡಗಿಸಿಟ್ಟುಕೊ. ಜೂಜಿನಲ್ಲಿ (ಸ್ಪರ್ಧಿ ಯನ್ನು) ಮುಂದೆ ಬಿಡದಂತೆ ಆವರಿಸು. (ಹಣ, ಮೊ. ನ್ನು ನ್ಯಾಯ ವಲ್ಲದೆ) ಬಳಸಿಕೊ; ದುರುಪಯೋಗ ಮಾಡಿಕೊ. (ಅಪಮಾನ, ಕೇಡು, ಮೊ. ನ್ನು) ಸಹಿಸಿಕೊ, ನುಂಗಿಕೊ; (ಮನೋಭಾವನೆಗಳನ್ನು) ಮುಚ್ಚಿಡು, ಮರಸಿಕೊ, ಅದುಮಿಡು. (ಬಿಲ್ಯರ್ಡ್ಸ್) ಚೆಂಡನ್ನು ಚೀಲದೊಳಕ್ಕೆ ಹೋಗುವಂತೆ ಹೊಡೆ. **Pócketable** (ಗು.)

Pock-pudding. **Poke**[1] ನೋಡಿ.

Pococuránte ಪೋಕೊಕು(ಕೂ)ರಾಂಟಿ, —ಕ್ಯು(ಕ್ಯೂ)ರ್‍ಯಾಂಟಿ (ಗು., ನಾ.) (ಯಾವುದರಲ್ಲೂ) ಶ್ರದ್ಧೆಯಿಲ್ಲದ(ವನು); ಉದಾಸೀನದ, ನಿರ್ಲಕ್ಷ್ಯದ, —ಮನುಷ್ಯ. **Pococuránt(e)ism** (ನಾ.)

Pod[1] ಪಾಡ್ (ನಾ.) ದೈರಿಗೆಯಲ್ಲಿ ಅಲಗನ್ನು ಸಿಕ್ಕಿಸಲು ಮಾಡಿರುವ ಕಂಡಿ: ದೈರಿಗೆಯ ಅಲುಗುಗಂಡಿ.

Pod[2] ಪಾಡ್ (ನಾ., ಕ್ರಿ.) (ಮು., ದ್ವಿದಳ ಧಾನ್ಯದ, ಸಾ., ಒಣಗಿ ಬಾಯಿ ಬಿಟ್ಟಿರುವ) (ಉದ್ದವಾದ) ಬೀಜಕೋಶ. ರೇಷ್ಮೆ(ಹುಳುವಿನ) ಗೂಡು; ಮಿಡಿತೆಯ ಮೊಟ್ಟೆಗಳ ಕೋಶ. ಹಾವುಮೀನಿನ ಕಿರಿಗತ್ತಿನ ಬಲೆ. (ಕ್ರಿ.) ಬೀಜಕೋಶದ ಕಾಯಿ ಬಿಡು. (ಬಟಾಣಿ, ಮೊ. ಗಳ) ಕಾಳು ಬಿಡಿಸು, ಕಾಯಿ ಸುಲಿ. **Pódded** (ಗು.) ಬೀಜಕೋಶದ ಕಾಯಿ ಬಿಡುವ; (ದ್ವಿದಳ ಧಾನ್ಯದ ಬೀಜದಂತೆ) ಬೀಜಕೋಶಗಳಲ್ಲಿ ಬೆಳೆಯುವ. (ರೂಪ.) ಹಾಯಾಗಿರುವ; ಅಚ್ಚುಕಟ್ಟಾಗಿರುವ.

Pod[3] ಪಾಡ್ (ನಾ., ಕ್ರಿ. ಸಕ.) (ಸೀಲುಗಳ ಅಥವಾ ತಿಮಿಂಗಿಲಗಳ) ಸಣ್ಣ ಹಿಂಡು, ತಂಡ. (ಕ್ರಿ.) (—ಗಳನ್ನು) ಗುಂಪುಕೂಡುವಂತೆ ಅಟ್ಟು; ಹಿಂಡುಗೂಡಿಸು.

Pódagra ಪಾಡಗ್ರ, **Podág-** ಪೊಡ್ಯಾಗ್ರ (ನಾ.) (ವೈ. ಶಾ.) (ಮು., ಪಾದದ) ಸಂಧಿವಾತ. **Pódagral** (ಗು.) =**Podágric** (ಗು.) =**Pódagrous** (ಗು.)

Podestá (It.) ಪೋ(ೆ)ಡೆಸ್ಟಾ(ಸ್ಟ) (ನಾ.) ಇಟಲಿಯ ಪೌರ ಸಂಸ್ಥೆ ಗಳಲ್ಲಿ ದಂಡಾಧಿಕಾರಿ. (ಚರಿತ್ರೆ) ಮಧ್ಯಕಾಲದ ಇಟಲಿಯ ಪಟ್ಟಣ ಗಳಲ್ಲಿ ಪ್ರಧಾನ ದಂಡಾಧಿಕಾರಿ.

Podge ಪಾಡ್ಜ್ (ನಾ.) ಗಿಡ್ಡ; ಕೋಣೆಯ. **Pódgy** (ಗು.)

Pódium ಪೋಡಿಯಮ್ (ನಾ.; ಬ. ವ. -ia) ಸುತ್ತಲೂ ಮುನ್ ಚಾಚಿ ಕೊಂಡಿರುವ, (ಪ್ರತಿಮೆಯ) ಅಖಂಡ ಪೀಠ ಅಥವಾ ಸ್ತಂಭಾಧಾರ. ವರ್ತುಲ ನಾಟಕಶಾಲೆಯ ರಂಗದ ಸುತ್ತಲಿನ ಎತ್ತರದ ಜಗಲಿ, ವೇದಿಕೆ; ಕೊಠಡಿಯ ಸುತ್ತಲೂ ಬರುವ ಕಾಲುಮಣೆ.

Podophýllin ಪಾಡೊಫಿಲಿನ್ (ನಾ.) (ರ. ವಿ.) 'ಮ್ಯಾನ್‌ಡ್ರೇಕ್' ಎಂಬ ಕಾಡುಸಸ್ಯದ ಬೇರಿನಿಂದ ತೆಗೆದ, ವಿರೇಚಕ ಗುಣವುಳ್ಳ, ಹಳದಿಯ ಬಣ್ಣದ, ಒಂದು ಕಹಿ ರಾಳಪದಾರ್ಥ.

Póem ಪೋಎಮ್(ಇ)ಮ್ (ನಾ.) (ಮು., ಉದಾತ್ತ ಭಾವದ) ಛಂದೋಬದ್ಧ ವಾದ ಕೃತಿ; ಕವಿತೆ; ಕಾವ್ಯ; ಕವನ. ಪದ್ಯ ಕಾವ್ಯ; ಗದ್ಯ ಕವಿತೆ (Prose p.). (ರೂಪ.) (ಪದ ರಚನೆಯಿಂದಲ್ಲದೆ) ಕಾವ್ಯದಂಥ—ವಸ್ತು, ವಿಷಯ (Their lives are a p.). **Póesy** ಪೋಎಸಿ (ನಾ.) (ಪ್ರಾಚೀ. ಪ್ರ.) ಕಾವ್ಯ (ಕಲೆ, ರಚನೆ); ಕಾವ್ಯ ಸಮುದಾಯ. **Póet** ಕಾವ್ಯ ರಚನೆ ಮಾಡುವವನು; ಕಾವ್ಯ ಕರ್ತೃ; ಕವಿ (ಮು., ಉತ್ತಮ ಕಲ್ಪನಾ ಸಾಮರ್ಥ್ಯ, ವಾಕ್‌ಸಂಪತ್ತು, ಮೊ. ಗುಣಗಳುಳ್ಳವನು) [Poets' Corner ಲಂಡನ್ನಿನಲ್ಲಿಯ Westminster Abbey ಎಂಬ ಕ್ರೈಸ್ತ ಮಠದ ಶ್ಮಶಾನದಲ್ಲಿ ಹಲವು ಕವಿಗಳ ಸಮಾಧಿಗಳೂ ಸ್ಮಾರಕಗಳೂ ಇರುವ ಸ್ಥಳ: ಕವಿ ಸ್ಥಳ. (ಹಾಸ್ಯ ಪ್ರ.) ವೃತ್ತಪತ್ರಿಕೆಗಳಲ್ಲಿ ಕವಿತೆ ಗಳಿಗೆ ಮೀಸಲಾಗಿಟ್ಟಿರುವ ಸ್ಥಳ, ಭಾಗ]. **Póetess** (ನಾ., ಸ್ತ್ರೀ.); **Poetáster** ಪೋಎಟ್ಯಾಸ್ಟರ್ (ನಾ.) ಕ್ಷುಲ್ಲ ಕವಿ; ಕುಕವಿ [=**Poéticule** (ನಾ.)]. **Poétic(al)** ಪೊ(ೆ)ಎಟಿಕ್(ಕಲ್) (ಗು.) ಕವಿಗಳ; ಕವಿಗಳಿಗೆ ತಕ್ಕ; ಕವಿತೆಯ; ಕವಿತಾ ಯೋಗ್ಯ; ಕವಿತಾ ಗುಣವುಳ್ಳ; (ಸಾ., -ic) ಒಳ್ಳೆಯ ಕಾವ್ಯ ಲಕ್ಷಣಗಳುಳ್ಳ; (ಸಾ., -ical) ಪದ್ಯ(ರೂಪ)ದಲ್ಲಿ ಬರೆದ; ಪದ್ಯಾತ್ಮಕ (P. works). [P. justice, licence (ಆಯಾ ಪದವನ್ನು ನೋಡಿ)]. **Poétically** (ಕ್ರಿ. ವಿ.); **Poétics** (ನಾ.) ಕಾವ್ಯ ಮೀಮಾಂಸೆ; ಕಾವ್ಯ ಲಕ್ಷಣ ಗ್ರಂಥ; ಸಾಹಿತ್ಯ ಶಾಸ್ತ್ರ. **Poéticize** —ಸೈಸ್ (ಕ್ರಿ. ಸಕ.) (ಕಥಾ ವಸ್ತುವನ್ನು) ಕಾವ್ಯಾತ್ಮಕ ಮಾಡು. **Poétize** (ಕ್ರಿ.) ಕವಿಯಾಗು; ಕವಿತ್ವ ಮಾಡು; ಕವಿತಾ ರೂಪದಲ್ಲಿ ರಚಿಸು, ಪ್ರಶಂಸಿಸು, ಕೀರ್ತಿಸು. **Póetry** ಪೋಎಟ್ರಿ (ನಾ.) ಕವಿಯ ಕಲೆ, ರಚನೆ. ಛಂದೋರೂಪ ದಲ್ಲಿ, ಉದಾತ್ತ ಶೈಲಿಯಲ್ಲಿ, ಉದಾತ್ತ ಭಾವಗಳ ನಿರೂಪಣೆ; ಕಾವ್ಯ; ಕಾವ್ಯ ಗುಣ (Prose p. ಛಂದಸ್ಸು ಮಾತ್ರವಿಲ್ಲದೆ ಉಳಿದ ಎಲ್ಲ ಕಾವ್ಯ ಗುಣಗಳನ್ನು ಉಳ್ಳ ಗದ್ಯ: ಗದ್ಯ ಕವಿತೆ)

Póesy, Póet(ry), Poetáster, Poéticule, etc. Poem ನೋಡಿ.

Pogróm (ರಷ್ಯನ್ ಭಾಷೆ) ಪೊಗ್ರಾಮ್ (ನಾ.) (ರಷ್ಯದಲ್ಲಿ) ಅಸಹಾಯ ರಾದ ಒಂದು ಪಂಗಡದವರನ್ನಾಗಲಿ, ವರ್ಗದವರನ್ನಾಗಲಿ, ಒಂದು ಗೊತ್ತಾದ ವ್ಯವಸ್ಥೆ ಮಾಡಿ ಕೊಲೆಮಾಡುತ್ತ ಹೋಗುವುದು (ಮು., ಯಹೂದ್ಯರ ಕೊಲೆ)

Poígnant ಪಾಯ್‌ನ್ಯಂ(ನಂ)ಟ್ (ಗು.) (ರುಚಿಯಲ್ಲಿ, ವಾಸನೆಯಲ್ಲಿ, ಮಾತಿನಲ್ಲಿ) ಚುರುಕಾದ, ತೀಕ್ಷ್ಣವಾದ, ಖಾರವಾದ, ಕಟುವಾದ; (ದೇಹಕ್ಕೆ ಅಥವಾ ಮನಸ್ಸಿಗೆ) ನೋವು ಮಾಡಿ ಚುಚ್ಚುವಂಥ; ಇರಿಯುವಂಥ; ವೇಧಕ (P. hunger, regret, sarcasm). ಹೃದಯ ಸ್ಪರ್ಶಿ; ಮನೋವೇಧಕ. **Poígnantly** (ಕ್ರಿ. ವಿ.); **Poígnancy** (ನಾ.)

Poilú (F) ಪ್ವಾಲೂ (ನಾ.) ಫ್ರೆಂಚ್ ಸಿಪಾಯಿ(ಗೆ ಅಡ್ಡ ಹೆಸರು) (Tommy ಹೋಲಿಸಿ)

Point ಪಾಯ್‌ಂಟ್ (ನಾ.) (ಮೇಲ್ಮೈಯಲ್ಲಿ) (ಸಣ್ಣ) ಚುಕ್ಕೆ; ಬಿಂದು. (ಪೂರ್ಣ) ವಿರಾಮ ಚಿಹ್ನೆ (ಮು., ಈಗ Full p. ಪೂರ್ಣ ವಿರಾಮ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೆಮಿಟಿಕ್ ಭಾಷೆಗಳಲ್ಲಿ ಸ್ವರವನ್ನು ಸೂಚಿಸುವುದಕ್ಕಾಗಲಿ ಅಥವಾ ವ್ಯಂಜನಗಳಲ್ಲಿ ವ್ಯತ್ಯಾಸ ತೋರಿಸುವುದಕ್ಕಾಗಲಿ ಹಾಕುವ ಚುಕ್ಕೆ, ಸಣ್ಣ ಗೆರೆ. ದಶಮಾಂಶ ಸಂಖ್ಯೆಯಲ್ಲಿ ಪೂರ್ಣ ಸಂಖ್ಯೆಯನ್ನು ಅಂಶ ಸಂಖ್ಯೆಯಿಂದ ಪ್ರತ್ಯೇಕಿಸುವ ಗುರುತು : ದಶಮಾಂಶ ಬಿಂದು (Four p. six 4·6). ಒಂದು ಅಂಶ, ವಿವರ, ಬಾಬು [We differ on these points. It is a p. of conscience ಅದು ಆತ್ಮ ಸಾಕ್ಷಿಗೆ ಸಂಬಂಧಪಟ್ಟ ವಿಷಯ. Stretch a p. (Stretch ನೋಡಿ)]. [(ಪ್ರಾಚೀ. ಪ್ರ.) P. of war ಸಂಕೇತವಾಗಿ ವಾದ್ಯದಲ್ಲಿ ಬಾರಿಸಿದ ಒಂದು ಸಣ್ಣ ನುಡಿ]. [Possession is nine points of the law (ಒಂದು ವಸ್ತುವಿನ) ಸ್ವಾಧೀನಾನುಭವವಿದ್ದರೆ ಅದರಮೇಲೆ ಹತ್ತರಲ್ಲಿ ಒಂಬತ್ತು ಪಾಲು ನ್ಯಾಯಾನುಕೂಲವಾದ ಹಕ್ಕು ಇದ್ದಂತೆಯೇ. Give points to (opponent in game) ಆಟದಲ್ಲಿ ಎದುರಾಳಿಗೆ ರಿಯಾಯಿತಿ ಕೊಡು ; ಹೀಗೆ ಕೊಟ್ಟೂ ಗೆಲ್ಲು ; (ರೂಪ.) (—ಇಂತ ಮೇಲ್ರಾಗಿರು)]. (ಪ್ರದರ್ಶನದಲ್ಲಿ ಒಂದು ವಸ್ತುವಿನ ಯೋಗ್ಯತೆಯನ್ನು ನಿರ್ಧರಿಸುವಾಗ ಏಕಮಾನವಾಗಿಟ್ಟುಕೊಳ್ಳುವ) ಒಂದು ಅಂಕ. ಬಂಡವಾಳ ಪತ್ರಗಳು, ಸಾಲಪತ್ರಗಳು, ಅಥವಾ ಇತರ ಸರಕು, ಮೊ. ಗಳ ಬೆಲೆ ನಿರೂಪಿಸುವಲ್ಲಿ ಏಕಮಾನ (ಇದರ ಬೆಲೆ ಪದಾರ್ಥವನ್ನನುಸರಿಸಿ ವ್ಯತ್ಯಾಸವಾಗುತ್ತದೆ : ಉದಾ., ಅಮೆ. ಸಂ. ಬಂಡವಾಳ ಪತ್ರ, ಮೊ. ಗಳಲ್ಲಿ ಸಾ., One p. = ಒಂದು ಡಾಲರು). (ಮುದ್ರಣ) ಅಚ್ಚಿನ ಮೊಳೆಗಳ (ಒಡಲಿನ) ಅಳತೆಯ ಏಕಮಾನ (ಬ್ರಿಟಿಷ್ ಮತ್ತು ಅಮೆ. ಸಂ. ಗಳದ್ದು 0.0138 ಅಂಗುಲ). (ಜ್ಯಾ.) ಸ್ಥಾನ ಮಾತ್ರವಿದ್ದು ಪರಿಮಾಣ ವಿಲ್ಲದ್ದು : ಬಿಂದು (P. of intersection of two lines). ಒಂದು ಗೊತ್ತಾದ, ಕರಾರುವಾಕಾದ, —ಸ್ಥಾನ, ಸ್ಥಳ, ಬಿಂದು (P. of contact). (ಬೇಟೆ) ನೇರವಾಗಿ ಓಡಿ ಮುಟ್ಟುವ ಸ್ಥಾನ, ನೆಲೆ, ಗುರಿ ; ಇಂಥ ಓಟ (P.-to-p. race ಕೆಲವು ಹೆಗ್ಗುರುತುಗಳಿಂದ ಮಾತ್ರ ನಿರ್ದೇಶಿಸಿದ ಪಥದಲ್ಲಿ ನಡಸುವ ಓಟದ ಪಂದ್ಯ). (ವಂಶ ಲಾಂಛನ) ಗುರಾಣಿಗಳಮೇಲೆ ಸ್ಥಾನ ನಿರ್ಧಾರಕ್ಕಾಗಿರುವ ಒಂಬತ್ತು ನಿರ್ದಿಷ್ಟ ಚುಕ್ಕಿಗಳಲ್ಲೊಂದು. (ಮುಂದುವರಿಯುತ್ತಿರುವ, ಏರುತ್ತಿರುವ ಅಥವಾ ಬೀಳುತ್ತಿರುವ ಸಂದರ್ಭಗಳಲ್ಲಿ) ಒಂದು ಹಂತ, ಮಟ್ಟ (ಮು., ಶಾಖದ ವಿಷಯದಲ್ಲಿ) [Boiling, freezing, -p. (Boil², Freeze ನೋಡಿ)]. (ಕಾರ್ಯ, ಮೊ. ನ್ನು ಮಾಡಲು) ಕ್ಲುಪ್ತ ಕಾಲ, ನಿರ್ದಿಷ್ಟ ಕಾಲ, ಸಮಯ (When it came to the p. he declined. At the p. of death). ಪ್ರಕೃತ; ವೈಶಿಷ್ಟ್ಯ; ವಿಶೇಷ ಗುಣ (Singing is not his strong p.). ಉದ್ದೇಶ ; ಮುಖ್ಯಾರ್ಥ ; ತತ್ತ್ವ (That is just the p. ಪ್ರಮೇಯವೇ, ವಾದಾಂಶವೇ, ಅದು. Come to the p. ಪ್ರಸ್ತುತ ವಿಷಯಕ್ಕೆ ಬರು. To the p. ಪ್ರಸಕ್ತ ವಿಷಯಕ್ಕೆ ಎಷ್ಟೋ ಅಷ್ಟು. Point of order ಕ್ರಮವಿಚಾರ. Make a p. of ಮುಖ್ಯ ವಿಷಯವೆಂದು ಪರಿಗಣಿಸು. Carry one's p. ತನ್ನ ಉದ್ದೇಶವನ್ನು ಸಾಧಿಸಿಕೊ. Make a p. ಹೇಳಿಕೆಯನ್ನು, ವಾದವನ್ನು, ಸಮರ್ಥಿಸು, ರುಜುವಾತು ಮಾಡು). (ಪೂರ್ತಿಯಾಗಿ ಸೂಜಿಯಿಂದ ಹೊಲಿದು ಮಾಡಿದ) ದಾರದ ಕಸೂತಿಯ ಹೆಣಿಗೆ (=P. lace). (ಆಯುಧ, ಸೂಜಿ, ಲೇಖಿನಿಮುಳ್ಳು, ಮೊ. ಗಳ) ಮೊನೆ ; ಮೊನಚು ಕೊನೆ [Not to put too fine a p. upon it (ರೂಪ.) ನಿರ್ದಾಕ್ಷಿಣ್ಯವಾಗಿ ಹೇಳುವುದಾದರೆ]. ತುದಿ ; ಬೆಟ್ಟದ ಕೋಡು ; ಪರ್ವತ ಶೃಂಗ. ನೆಲದ ಚಾಚು ; ಭೂಶಿರ. (ಸೈನ್ಯ) ಮುಂಗಾಪು ಸೈನ್ಯದ ಅಗ್ರದಳ. ಮೊನೆಯ ಆಯುಧ (ಉದಾ., ಕೆತ್ತು ಉಳಿ, ಕೊರೆ ಸೂಜಿ). (ರೈಲುಬಂಡಿ) ಒಂದು ಕಂಬಿಜೋಡಿಯಿಂದ ಮತ್ತೊಂದು ಕಂಬಿಜೋಡಿಗೆ ಹೋಗಲನುಕೂಲಿಸುವಂತೆ ಹಾಕಿರುವ, ಚಲನೆಯುಳ್ಳ ಮೊನಚುಗಂಬಿ ; ಹೊರಳುಗಂಬಿ. [Points of the compass (ಚಲನುವ) ದಿಕ್ಸೂಚಿಯ ದುಂಡು ಪೀಠದ ಏಣಿನಲ್ಲಿ ಸಮಾಂತರವಾಗಿ (11°15′ ಅಂತರವಿರುವಂತೆ) ಗುರುತಿಸಿರುವ ೩೨ ದಿಕ್ಕುಗಳು (N., N. by E., NNE., ಮೊ. ವು)]. (ಕಥೆ, ಹಾಸ್ಯ, ಮೊ. ಗಳ) ಸ್ವಾರಸ್ಯ ಭಾಗ (Don't see the p.). ಮೊನೆ ; ತೀಕ್ಷ್ಣತೆ ; ಸಾರ್ಥಕತೆ ; ಗುರಿ (His remarks lack p.). (ಬೇಟೆನಾಯಿಯ ವಿಷಯದಲ್ಲಿ) ಬೇಟೆಯನ್ನು ಕಂಡುಹಿಡಿದಾಗ ಬೇಟೆನಾಯಿ ನಿಲ್ಲುವ ರೀತಿ (ಮು., Make, come to, a p.). At all points ಪ್ರತಿ ಭಾಗದಲ್ಲೂ. At the p. of death ಮರಣಾವಸ್ಥೆಯಲ್ಲಿ ; ಕಂಠಗತ ಪ್ರಾಣನಾಗಿ. In p. ಸಂಗತ ; ಪ್ರಸ್ತುತ (The case you take is not in p.). In p. of fact ವಾಸ್ತವವಾಗಿ. (Up)on the p. of doing —ಮಾಡಿಬಿಡುವುದರಲ್ಲಿ ; ಇನ್ನೇನು ಮಾಡುವುದರಲ್ಲಿ. P. of honour ಮಾನ ಮರ್ಯಾದೆಯ ವಿಚಾರ. The p. of honour ಮಾನಿಷ್ಠನ ಕರ್ತವ್ಯ (ಮು., ದ್ವಂದ್ವ ಯುದ್ಧ). P. of view ನೋಟದ ನಿಟ್ಟು ; ದೃಷ್ಟಿಕೋನ. **P.-duty** ವಾಹನಸಂಚಾರ, ಮೊ. ನ್ನು ಒಂದು ಕ್ರಮದಲ್ಲಿ ನಡಸಲು ಗೊತ್ತಾದ ಒಂದು ಸ್ಥಳದಲ್ಲಿ ನಿಲ್ಲಿಸಿದ ಪೊಲೀಸ್ ಪ್ಯಾದೆಯ ಕೆಲಸ. **Póintsman** ರೈಲ್ವೆಗಳ ಹೊರಳುಗಂಬಿಗಳ ಜವಾಬ್ದಾರಿಯುಳ್ಳವನು ; ಸ್ಥಳದಲ್ಲಿ ನಿಂತು ಕಾರ್ಯ ನಡಸುವ ಪೊಲೀಸು ಪ್ಯಾದೆ. **Póintless** (ಗು.) ಮೊನೆಯಿಲ್ಲದ ; ಮೊಂಡಾದ ; ಗುರಿಯಿಲ್ಲದ ; ಆಶಯವಿಲ್ಲದ ; ಅರ್ಥವಿಲ್ಲದ. (ಆಟ, ಮೊ. ಗಳಲ್ಲಿ) ಒಂದಂಕವನ್ನೂ ಪಡೆದಿಲ್ಲದ. **Póintlessly** (ಕ್ರಿ. ವಿ.) ; **Póintlessness** (ನಾ.)

Point (ಕ್ರಿ.) (ಸೀಸದಕಡ್ಡಿ, ಮೊ. ನ್ನು) ಚೂಪು ಮಾಡು. ವಿರಾಮ ಚಿಹ್ನೆಹಾಕು (ಈಗ ವಿರ. ಪ್ರ.). (ಗೀತೆ, ಮೊ. ನ್ನು) ಹಾಡುವುದಕ್ಕೆ ಅನುಕೂಲಿಸುವಂತೆ ಚಿಹ್ನೆಗಳನ್ನು ಹಾಕು. (ಮಾತಿಗೆ, ಕೆಲಸಕ್ಕೆ) ಪುಷ್ಟಿ ಕೊಡು (Pointing his remarks with apt illustrations. To p. a moral). ಗಾರೆಯಿಂದಾಗಲಿ ಸಿಮೆಂಟಿನಿಂದಾಗಲಿ (ಇಟ್ಟಿಗೆ ಕಟ್ಟಡ, ಮೊ. ರ) ಸಂದು ಮುಚ್ಚಿ ಕರಣೆಯಿಂದ ನಯ ಮಾಡು ; ಸಂದುಗಾರೆ ಮಾಡು ; ನೆಲ ಕೊತ್ತಿ (ಗೊಬ್ಬರವನ್ನು) ಒಳಕ್ಕೆ ಸೇರಿಸು (*In* ಉಪ. ದೊಡನೆ) ; ಗುದ್ದಲಿಯಿಂದ (ಮಣ್ಣನ್ನು) ಮಗುಚಿಹಾಕು (*Over* ಉಪ. ದೊಡನೆ). (—ಗೆ, ಕಡೆಗೆ) ಗಮನ ಸೆಳೆ, ಕೊಡು ; ತೋರಿಸು, ಸೂಚಿಸು (*To, at* ಉಪ. ದೊಡನೆ; ರೂಪ. ಸಹ) [P. out (ವಸ್ತು, ವಿಷಯ, ಮೊ. ನ್ನು) ನಿರ್ದೇಶಿಸು]. (ಬೇಟೆನಾಯಿ, ಬೇಟೆಯ ಇಕ್ಕೆಯನ್ನು) ಅದೇ ಕಡೆ ದೃಷ್ಟಿ ನೆಟ್ಟು ನಿಂತು ತೋರಿಸು. (ಬೆರಳು, ಆಯುಧ, ಮೊ. ನ್ನು) ಸುತ್ತಿ ತೋರು (ಗ್ರಾಂ.) (*At* ಉಪ. ದೊಡನೆ). (—ಕಡೆಗೆ) ಗುರಿಯಿಡು (*At* ಉಪ. ದೊಡನೆ) ; (—ಕಡೆಗೆ) ಓಲು (*Towards* ಉಪ. ದೊಡನೆ). **Póinted** (ಗು.) ಮೊನೆಯುಳ್ಳ ; ಮೊನಚಾದ ; ಚೂಪು ಮಾಡಿದ. (ಟೀಕೆ, ಮೊ. ವು) ಖಾರವಾದ, ಚುಚ್ಚುವ, ನಾಟುವ, (ಮನಸ್ಸಿಗೆ) ಅಂಟುವ ; ಒತ್ತಿಹೇಳಿದ ; ಸ್ಪಷ್ಟ ಮಾಡಿದ. **Póintedly** (ಕ್ರಿ. ವಿ.) ; **Póintedness** (ನಾ.) ; **Póinter** (ನಾ.) (ಕ್ರಿಯಾರ್ಥಗಳಲ್ಲಿ). (ಗಡಿಯಾರ, ತ್ರಾಸು, ಮೊ. ಗಳಲ್ಲಿ) ತೋರುಮುಳ್ಳು, ಸೂಚಿ ; (ಕಪ್ಪುಹಲಗೆ, ಭೂಪಟ, ಮೊ. ಗಳ ಮೇಲೆ ಪದ, ಸ್ಥಾನ, ಮೊ. ನ್ನು ತೋರಿಸಲು ಉಪಯೋಗಿಸುವ) ತೋರುಗೋಲು. (ಬೇಟೆಯನ್ನು ವಾಸನೆಯಿಂದ ಕಂಡುಹಿಡಿದ ಕೂಡಲೆ, ಅದರ ಕಡೆಗೆ ಮುಸುಡಿಯನ್ನು ಚಾಚಿಕೊಂಡು, ಸಾ., ಒಂದು ಕಾಲನ್ನೆತ್ತಿ) ಬೇಟೆಯನ್ನು ತೋರಿಸುತ್ತ ಕದಲದೆ ನಿಂತಿರುವ ಬೇಟೆನಾಯಿ. (ಬ. ವ. ದಲ್ಲಿ) ಸಪ್ತರ್ಷಿ ಮಂಡಲದಲ್ಲಿ ಯಾವ ಎರಡು ನಕ್ಷತ್ರಗಳನ್ನು ಸೇರಿಸಿ ಎಳೆದ ರೇಖೆ ಧ್ರುವ ನಕ್ಷತ್ರದ ದಿಕ್ಕನ್ನು ಸರಿಸುಮಾರಾಗಿ ತೋರಿಸುತ್ತದೊ ಆ ನಕ್ಷತ್ರಗಳು. **Póinting** (ನಾ.) (ಕ್ರಿಯಾರ್ಥಗಳಲ್ಲಿ). ವಿರಾಮ ಚಿಹ್ನೆ ಹಾಕುವುದು. ಸಂದುಗಾರೆ (ಮಾಡುವುದು)

Póint-blánk ಪಾಯ್ಂಟ್‌ಬ್ಲ್ಯಾಂಕ್ (ಗು., ಕ್ರಿ. ವಿ.) (ಬಂದೂಕು ಗುಂಡು) ಮಟ್ಟವಾಗಿ, ಸಮತಲ ರೇಖೆಯಲ್ಲಿ, —ಹಾರಿಸಿದ ; ಗುರಿಗೆ ನೇರವಾಗಿ ಹೊಡೆದ (P. distance ಮಟ್ಟವಾಗಿ ಗುಂಡು ಹಾರಿಸಿದಾಗ ಗುರಿ ಮುಟ್ಟುವ ದೂರ)... (ಕ್ರಿ. ವಿ.) ಗುರಿ ನೇರವಾಗಿ ; ಮಟ್ಟವಾಗಿ ; ಸಮತಲವಾಗಿ. (ರೂಪ.) ಎದುರೆದುರಿಗೆ ; ನಿರ್ದಾಕ್ಷಿಣ್ಯವಾಗಿ ; (ಮುಚ್ಚುಮರೆಯಿಲ್ಲದೆ) ಸ್ಪಷ್ಟವಾಗಿ (Told him p. it would not do) ; ಹಿಂದು ಮುಂದು ನೋಡದೆ ; ಒಡನೆಯೇ ; ಥಟ್ಟನೆ (Refused it p.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Point-devíce ಪಾಯ್‌ಂಟ್‌ಡಿವೈಸ್ (ಗು.; ಕ್ರಿ. ವಿ.). (ಪ್ರಾಚೀ. ಪ್ರ.) ಪೂರ್ತಿ ದೋಷರಹಿತ; ಯಥಾರ್ಥವಾದ; ಶುದ್ಧವಾದ; ಸ್ವಲ್ಪವೂ ತಪ್ಪಿಲ್ಲದ. ಅತ್ಯಂತ ಅಚ್ಚುಕಟ್ಟಾದ, ಕರಾರುವಾಕಾದ. (ಕ್ರಿ. ವಿ.) —ರೀತಿಯಲ್ಲಿ.

Poise ಪಾಯ್ಸ್ (ಕ್ರಿ., ನಾ.) ತೂಕ ಸಮಮಾಡು, (—ಒಡನೆ) ಸಮ ತೂಕವಾಗಿಸು. ನೇಲುವಂತೆ ಅಥವಾ ಆಧಾರ ಕೊಟ್ಟು ಹಿಡಿದುಕೊ; ತೂಗಹಿಡಿ. (ತನ್ನ ತಲೆ, ಮೊ. ನ್ನು ಒಂದು ಗೊತ್ತಾದ ಭಂಗಿಯಲ್ಲಿ) ಅಳವಡಿಸಿಕೊ. (ಒಂದರೊಡನೆ) ಸಮತೂಗು. (ಗಾಳಿ, ಮೊ. ರಲ್ಲಿ) ಸಮತೂಕದಲ್ಲಿರು; ತೇಲಾಡು; ಹಾರಾಡು. (ನಾ.) ಸಮ ಸ್ಥಾಯಿತ್ವ; ಸಮ ಚಿತ್ತ; ಸಮಾಧಾನ ಚಿತ್ತ. (ತಲೆ, ಮೊ. ಗಳ) ಭಂಗಿ (*Of* head, etc.); ಅನಿಶ್ಚಿತ, ಸಂದಿಗ್ಧ, —ಸ್ಥಿತಿ.

Poíson ಪಾಯ್ಸನ್ (ನಾ., ಕ್ರಿ. ಸಕ.) ವಿಷ, ನಂಜು, ಗರ(ಳ) [ಮು., (ಬಳಕೆಯಲ್ಲ) ದೇಹಕ್ಕೆ ಸ್ವಲ್ಪ ಸೇರಿದರೂ ಥಟ್ಟನೆ ಕಾರ್ಯಮಾಡಿ ಪ್ರಾಣ ತೆಗೆಯುವ ಪದಾರ್ಥ]. [Slow p. (ಥಟ್ಟನೆ ಕೇಡು ಮಾಡದಿದ್ದರೂ, ಮೇಲಿಂದಮೇಲೆ ಸೇವಿಸುವುದರಿಂದ ಪರಿಣಾಮದಲ್ಲಿ ಕೆಡುಕು ಮಾಡುವ) ಮಂದ ವಿಷ. Hate each other like p.]. (ರೂಪ.) ಹಾನಿಕರ ವಾದ ತತ್ತ್ವ, ಸಿದ್ಧಾಂತ, ಮೊ. ದು. [P. gas (Gas ನೋಡಿ). P.-tree, -wood ವಿಷವೃಕ್ಷ, ವಿಷಸಸ್ಯ, ನಂಜಿನ ಕೊರಡು]. (ಕ್ರಿ.) (ಮನುಷ್ಯನಿಗೆ, ಪ್ರಾಣಿಗೆ) ವಿಷ ಹಾಕು, ನಂಜಿಡು, ವಿಷಪ್ರಯೋಗ ಮಾಡು; ವಿಷ ಹಾಕಿ ಕೊಲ್ಲು; ಹಾನಿ ಮಾಡು. (ರಕ್ತ, ಮೊ. ಗಳಲ್ಲಿ) ವಿಷಪರಿಣಾಮವುಂಟುಮಾಡು; (ಗಾಳಿ, ನೀರು, ಮೊ. ಗಳಲ್ಲಿ) ವಿಷ ಹರಡು; (ಯುದ್ಧಾಯುಧಕ್ಕೆ) ವಿಷ ಬಳಿ (ಮು., ಭೂ. ಕೃ. ನಲ್ಲಿ). (ಒಬ್ಬನ ಸಂತೋಷ, ಮೊ. ನ್ನು) ಹಾಳುಮಾಡು, ಕೆಡಿಸು. (ಭೂಮಿ, ಕಲುಮೆ, ಮೊ. ನ್ನು) ದುಷ್ಪ್ರಯೋಗದಿಂದ ಕೆಡಿಸಿ, ಕೆಲಸಕ್ಕೆ ಬಾರದಂತೆ ಮಾಡು. **Poísoner** (ನಾ.); **(-)poísoning** (ನಾ.); **Poísonous** (ಗು.); **Poísonously** (ಕ್ರಿ. ವಿ.)

Poke[1] ಪೋಕ್ (ನಾ.) ಚೀಲ; ಸಂಚಿ [(ಈಗ ಪ್ರಾಂ. ಪ್ರ.) Buy a pig in a p. ಎಂಬಲ್ಲಿ ಮಾತ್ರ (Pig ನೋಡಿ)]. (ಸ್ಕಾ. ಪ್ರ.) P.-pudding, Pock- ಬೊಜ್ಜ, ಥಾಂಡಿಗ; ಹೊಟ್ಟೆಬಾಕ; ಇಂಗ್ಲಿಷಿನವನು.

Poke[2] ಪೋಕ್ (ಕ್ರಿ., ನಾ.) (ಕೈ, ತೋಳು, ಕೋಲಿನ ತುದಿ, ಮೊ. ರಿಂದ ಯಾವುದನ್ನಾದರೂ) ಒಳಕ್ಕೆ, ಮೇಲಕ್ಕೆ, ತಳಕ್ಕೆ, —ನೂಕು, ತಿವಿ, ಚುಚ್ಚು, ತುರುಕು (*In, up, down, at,* ಮೊ. ಉಪ. ದೊಡನೆ). (ಸರಾಕಿಯಿಂದ) ಬೆಂಕಿಯನ್ನು ಕೆದಕು. (ಬಳ. ಮಾ.) ಇಕ್ಕಟ್ಟಿನಲ್ಲಿ, ಸಂದಿನಲ್ಲಿ, ಮೂಲೆಯಲ್ಲಿ, —ಅಡಗಿಕೊ (*Up* ಉಪ. ದೊಡನೆ). ತಿವಿದು, ಇರಿದು, (ಒಂದರಲ್ಲಿ) ತೂತು, ಮೊ. ನ್ನು ಮಾಡು. ತಾನಾಗಿ ಮುಂದೆ ಬಿದ್ದು ಹೋಗು [(ರೂಪ.) Don't p. your nose into my affairs ನನ್ನ ವ್ಯವಹಾರದಲ್ಲಿ ತಲೆಹಾಕಬೇಡ]. (P. about, P. & pry ಅಂತರ್ಯಾಪರಿಯಲು ಭೇದಿಸಿಕೊಂಡು ಹೋಗು. P. one in the ribs ಬೆರಳಿನಿಂದ, ಮೊಣಕೈಯಿಂದ ಒಬ್ಬನ ಪಕ್ಕೆ ತಿವಿ. P. fun at ತಮಾಷೆ ಮಾಡು; ಗೇಲಿಯೆಬ್ಬಿಸು). (ಇತರರಿಗೆ ಸಂಬಂಧ ಪಟ್ಟ ವಿಷಯದಲ್ಲಿ) ತಲೆಹಾಕು (*Into* ಉಪ. ದೊಡನೆ). (P. one's head ತಲೆಯನ್ನು ಮುಂದಕ್ಕೆ ಚಾಚಿಟ್ಟುಕೊ; ಬಗ್ಗು). (ನಾ.) ನೂಕುವುದು; ತಿವಿತ; ಚುಚ್ಚು. ಬೇಲಿ ತೂರಲಾಗದಂತೆ, ಹಾರ ಲಾಗದಂತೆ, ದನ ಕರುಗಳಿಗೆ ಕಟ್ಟುವ ಒಂದು ಬಗೆಯ (ನೊಗದಂಥ) ಸಲಕರಣೆ. ಹೆಂಗಸಿನ ಟೊಪ್ಪಿಗೆಯ ಚಾಚು ಅಂಚು ಅಥವಾ ಮುಮ್ಮುಖ; (ಹೆಂಗಸಿನ) ಚಾಚು ಅಂಚುಳ್ಳ ಟೊಪ್ಪಿಗೆ (=P.-bonnet) (Salvation Army ಯ ಹೆಂಗಸರು ಧರಿಸುವಂಥದು). **Póker**[1] (ನಾ., ಕ್ರಿ. ಸಕ.) ಬೆಂಕಿ ಕೆದಕುವುದಕ್ಕೆ, ಹಿಡಿಯುಳ್ಳ ಲೋಹದ ಸರಾಕಿ; ಕೆದಕು ಸರಾಕಿ [As stiff as a p. (ಮನುಷ್ಯನ ಭಂಗಿಯು, ನಡತೆಯು, —ವಿಷಯದಲ್ಲಿ) ಕಂಬಿಯಂತೆ ಬಿಗುವಾಗಿರುವ]. (ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್) ವಿ. ವಿ. ನಿ. ದ ಉಪಾಧ್ಯಕ್ಷನ ಮುಂದೆ ಅಧಿಕಾರ ದಂಡವನ್ನು ಹಿಡಿದುಕೊಂಡು ಹೋಗುವ ಅಧಿಕಾರಿ. ಸುಡುಚಿತ್ರದ ಕೆಲಸದಲ್ಲಿ ಉಪಯೋಗಿಸುವ ಸಲಕರಣೆಗಳಲ್ಲೊಂದು: ಸಣ್ಣ ಮೊನಚು ಕಂಬಿ [By the holy p. (ಹಾಸ್ಯವಾಗಿ ಆಣೆಯಿಟ್ಟು ಕೊಳ್ಳುವಲ್ಲಿ). P.-work ಕಾಯಿಸಿದ ಮೊನೆಗಂಬಿಯಿಂದ ಬಿಳಿಯ ಮರದ ಮೇಲೆ ಕೆತ್ತುವ ಚಿತ್ರಕೆಲಸ: ಸುಡುಚಿತ್ರ ಕೆಲಸ]. (ಕ್ರಿ.) ಸುಡುಚಿತ್ರ ಕೆತ್ತು. **Póky** (ಗು.) (ಸ್ಥಳ, ಕೊಠಡಿ, ಮೊ. ದು) ಇಕ್ಕಟ್ಟಾದ; ಅಚ್ಚುಕಟ್ಟಿಲ್ಲದ; ಅಂದಗೆಟ್ಟ; ಕೊಳಕಾದ. (ಒಬ್ಬನು, ಅವನ ಕೆಲಸ, ಮೊ. ವಿಷಯದಲ್ಲಿ) ಉದಾಸೀನದ; ಅಲ್ಪ; ಕ್ಷುದ್ರ.

Póker[2] ಪೋಕರ್ (ನಾ.) (ಇಬ್ಬರು ಅಥವಾ ಹೆಚ್ಚು ಮಂದಿ ಆಡುವ) ಅಮೆರಿಕನರ ಒಂದು ಬಗೆಯ ಇಸ್ಪೀಟಾಟ.

Pólar, Poláriscope, etc. Pole[2] ನೋಡಿ.

Pole[1] ಪೋಲ್ (ನಾ., ಕ್ರಿ. ಸಕ.) ಮರದ ಗಣೆ, ಕಂಬ, (ಅಪೂರ್ವವಾಗಿ) ಲೋಹದ ಕಂಬ (ಉದ್ದವಾಗಿಯೂ, ತೆಳ್ಳಗೂ, ದುಂಡಗೂ, ಮೊನಚಾಗಿಯೂ ಇರುವಂಥದು. ಗುಡಾರಕ್ಕೆ ನಿಲುಗಂಬವಾಗಿಯೂ ದೂರವಾರ್ತಾ ವಾಹಕದ ತಂತಿಗಳಿಗೆ ಆಧಾರವಾಗಿಯೂ, ಮೊ. ಗಿ ಉಪಯೋಗಿಸು ವಂಥದು); ಬಂಡಿಯ ಈಚು, ಮೂಕಿ ಮರ. [Under bare poles (ನಾವೆ) ಪಟ ಬಿಚ್ಚಿ ಹಾರಿಸದೆ. Up the p. (ಅನಂ.) ಇಕ್ಕಟ್ಟಿನಲ್ಲಿ; ದಿಕ್ಕುತೋರದ ಸ್ಥಿತಿಯಲ್ಲಿ]. (ಉದ್ದದ) ಒಂದು ಅಳತೆ ($=5\frac{1}{2}$ ಗಜ). (P.-jumping ಕೋಲನ್ನು ಕೈಗಳಲ್ಲಿ ಹಿಡಿದು, ಊರಿ, ಅದರ ಬಲದಿಂದ ಮೇಲಕ್ಕೆಗುರುವುದು; ಕೋಲುನೆಗೆತ). (ಕ್ರಿ.) ಕಂಬ, ಗಣೆ, ಕೋಲು, —ಒದಗಿಸು, ಅಳವಡಿಸು. ಗಣೆಯಿಂದ ತಿವಿ, ನೂಕಿಬಿಡು (*Off* ಉಪ. ದೊಡನೆ)

Pole[2] ಪೋಲ್ (ನಾ.) ನಕ್ಷತ್ರಗಳು ಅವುಗಳ ಸುತ್ತಲೂ ಸುತ್ತುವಂತೆ ತೋರುವ, ಭೂಮಿಯ ಅಕ್ಷದ ಎರಡು ಕೊನೆಗಳನ್ನು ಲಂಬಿಸಿದಲ್ಲಿ ಆ ಗೆರೆಯು ಖಗೋಳವನ್ನು ಸಂಧಿಸುವ, ಖಗೋಳದ ಎರಡು ಬಿಂದುಗಳಲ್ಲೊಂದು; ಭೂಮ್ಯಕ್ಷದ ಉ. ಮತ್ತು ದ. ಕೊನೆಗಳು: ಧ್ರುವ; ಮೇರು (North, South, p. ಉತ್ತರ, ದಕ್ಷಿಣ,—). [(ಜ್ಯಾ.) Poles of a circle of a sphere ಗೋಳದಮೇಲಿನ ವೃತ್ತರೇಖೆಯ ಅಕ್ಷವು ಗೋಳದ ಮೇಲ್ಮೈಯನ್ನು ಭೇದಿಸುವ ಎರಡು ಬಿಂದುಗಳು]. (ಜ್ಯಾ.) ಇತರ ಬಿಂದುಗಳ, ರೇಖೆಗಳ, ಸ್ಥಾನನಿರ್ದೇಶ ಮಾಡಲು ಇಟ್ಟುಕೊಳ್ಳುವ ಒಂದು ನಿರ್ದಿಷ್ಟ ಬಿಂದು: ನಿರ್ದೇಶಕ ಬಿಂದು. ಶಕ್ತಿ ಕೇಂದ್ರೀಕರಿಸಿರುವಂತೆ ತೋರ್ಪಡುವ ಒಂದು ಅಯಸ್ಕಾಂತದ ಪ್ರತಿ ತುದಿಯಲ್ಲೂ ಇರುವ ಒಂದು ಪ್ರದೇಶ: (ಅಯಸ್ಕಾಂತ) ಧ್ರುವ. [ವಿದ್ಯುತ್‌ಕೋಶ (ಮಾಲೆ), ಮೊ. ಗಳಲ್ಲಿ] ಎರಡು ವಿದ್ಯುದಗ್ರಗಳಲ್ಲೊಂದು: (ವಿದ್ಯುತ್) ಧ್ರುವ (Positive, negative, p. ಧನ, ಋಣ, ಧ್ರುವ). (ಜೀ. ವಿ.) ಗೋಳಾಕಾರ ಅಥವಾ ಅಂಡಾಕಾರವುಳ್ಳ ಅಂಗದ ಪ್ರಧಾನಾಕ್ಷದ ಅಗ್ರ. (ರೂಪ.) ಎರಡು ಪರಸ್ಪರ ವಿರುದ್ಧ ತತ್ತ್ವ, ಮೊ. ಗಳಲ್ಲಿ ಒಂದು (Poles apart or asunder ತೀರ ವಿರುದ್ಧ). **P.-star** ಧ್ರುವ ನಕ್ಷತ್ರ. (ರೂಪ.) ಮಾರ್ಗದರ್ಶಕ; ಆಕರ್ಷಣ ಕೇಂದ್ರ. **Póleward** (ಗು.); **Póleward(s)** (ಕ್ರಿ. ವಿ.). **Pólar** ಪೋಲರ್ (ಗು., ನಾ.) (ಭೂಗೋಳದ ಅಥವಾ ಖಗೋಳದ, ಉತ್ತರ ಅಥವಾ ದಕ್ಷಿಣ) ಧ್ರುವದ (ಹತ್ತಿರವಿರುವ) [P. bear, hare ಭೂಮಿಯ ಧ್ರುವ ಪ್ರದೇಶದ ಬಿಳಿಯ ಕರಡಿ, ಮೊಲ. P. circles (ವಿಷುವದ್ವೃತ್ತಕ್ಕೆ ಸಮಾನಾಂತರವಾಗಿ ಧ್ರುವಗಳಿಂದ ೨೩°೨೮′ ಗಳ ಅಂತರದಲ್ಲಿ ಎಳೆದ) ಧ್ರುವ ವೃತ್ತಗಳು. P. distance ಗೋಳದಮೇಲಿನ ಯಾವುದಾದರೂ ಬಿಂದುವಿನಿಂದ ಅದರ ಹತ್ತಿರವಿರುವ ಧ್ರುವಕ್ಕೆ ಇರುವ ಕೋನ ದೂರ]. ಧ್ರುವಗಳುಳ್ಳ; ಕಾಂತಶಕ್ತಿಯುಳ್ಳ; ಧನ, ಋಣ, —ವಿದ್ಯುತ್ತುಳ್ಳ; (ಅಣುಗಳು) ಒಂದು ಗೊತ್ತಾದ ದಿಕ್ಕಿನಲ್ಲಿ ಸರ್ವಸಮ ರಚನಾಕೃತಿಯಲ್ಲಿ ಅಳವಟ್ಟಿರುವ, ವ್ಯವಸ್ಥಿತ ವಾದ. (ಜ್ಯಾ.) ಧ್ರುವದ; ಧ್ರುವ ಸಂಬಂಧವಾದ (P. curve ಒಂದು ನಿರ್ದಿಷ್ಟ ವಕ್ರ ರೇಖೆಗೂ, ಒಂದು ನಿರ್ದಿಷ್ಟ ಧ್ರುವ ಬಿಂದುವಿಗೂ ಗೊತ್ತಾದ ರೀತಿಯಲ್ಲಿ ಸಂಬಂಧ ಪಡೆದಿರುವ ವಕ್ರರೇಖೆ: ಧ್ರುವ ವಕ್ರರೇಖೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಘೂ ಧ್ರುವದಂತೆ, ಧ್ರುವ ನಕ್ಷತ್ರದಂತೆ, ಇರುವ; (ರೂಪ.) ಸ್ವಭಾವ ದಲ್ಲಿ ನೇರ ವಿರುದ್ಧವಾದ. (ನಾ.) =P. curve. **Pólarly** (ಕ್ರಿ. ವಿ.); **Polárity** ಪೊಲ್ಯಾ— (ನಾ.) ಸೂಜಿಗಲ್ಲು, ಅಯಸ್ಕಾಂತ (ದ ಸರಳು), ಮೊ. ವು ಭೂಮಿಯ ಕಾಂತಧ್ರುವಗಳ ಕಡೆಗೆ ತಮ್ಮ ಅಗ್ರಗಳನ್ನು ತಿರುಗಿಸಿ ನಿಲ್ಲುವ ಪ್ರವೃತ್ತಿ: ಧ್ರುವತೆ. ಒಂದು ವಸ್ತು ತನ್ನ ಗಣಿತ ನಿರ್ದಿಷ್ಟ ಅಕ್ಷವನ್ನು ಒಂದು ಗೊತ್ತಾದ ದಿಕ್ಕಿನಲ್ಲಿಟ್ಟುಕೊಳ್ಳುವ ಪ್ರವೃತ್ತಿ. ಪರಸ್ಪರ ವಿರುದ್ಧ ಗುಣಗಳುಳ್ಳ ಎರಡು ಧ್ರುವಗಳನ್ನು ಪಡೆದಿರುವುದು. (ರೂಪ.) (ಆಲೋಚನೆಯ, ಭಾವದ) ಪ್ರವೃತ್ತಿಯು ಒಂದೇ ವಿಷಯದಮೇಲೆ ತಿರುಗಿರುವುದು; ಒಂದು ಗೊತ್ತಾದ ದಿಕ್ಕಿನಲ್ಲಿ ಹೋಗುವ ಪ್ರವೃತ್ತಿ, ಪ್ರವಣತೆ; (ತತ್ತ್ವವಾಗಿ, ಗುಣವಾಗಿ, ಸ್ಥಿತಿಯಾಗಿ—ಇವುಗಳಲ್ಲಿ) ನೇರ ವಿರುದ್ಧ ವಾಗಿರುವುದು. (ಒಂದು ವಸ್ತುವಿನ) ಧನ, ಋಣ, ವಿದ್ಯುತ್ ಸ್ಥಿತಿ. (ರೂಪ.) (ಒಂದು ವಸ್ತುವಿನ ಕಡೆಗೆ) (ಕಾಂತಾಕರ್ಷಣದಂಥ) ಆಕರ್ಷಣ.

Pólarize ಪೋಲರೈಸ್ (ಕ್ರಿ.) (ಬೆಳಕು, ವಿಕಿರಣ ಶಾಖ, ಮೊ. ಗಳ) ಯಾವುದಾದರೂ ಕಿರಣವು ಬೇರೆ ಬೇರೆ ಪಾರ್ಶ್ವಗಳಲ್ಲಿ ಬೇರೆ ಬೇರೆ ಗುಣಗಳನ್ನು ಪ್ರದರ್ಶಿಸುವಂತೆ (ಎಂದರೆ, ನೇರಿದಿರು ಪಾರ್ಶ್ವಸ್ಥಿತಿ ಒಂದೇ ರೀತಿಯಲ್ಲೂ, ಅದಕ್ಕೆ ಲಂಬ ಪಾರ್ಶ್ವದಲ್ಲಿರುವುದರ ಸ್ಥಿತಿ ಪೂರ್ತಿ ವಿಪರೀತವಾಗಿಯೂ ಇರುವಂತೆ) ಅದರ ತರಂಗ ಕಂಪನ ರೀತಿಯನ್ನು ಬದಲಾಯಿಸು; ಒಂದು ಗೊತ್ತಾದ ಮಾದರಿಯಲ್ಲಿ ಕಂಪಿಸುವಂತೆ ಮಾಡು; ಧ್ರುವೀಕರಿಸು. (ಕಾಂತತೆ, ವಿದ್ಯುತ್ತು) (ಸರಳಿಗೆ, ಸುರುಳಿಗೆ) ಧ್ರುವತ್ವ ಕೊಡು; (ಬೆಳಕು, ಮೊ. ಕ್ಕೆ) ನಿರ್ದಿಷ್ಟ ಸ್ಫುರಣ ಮುಖಗಳನ್ನು ಕೊಡು; (ರೂಪ.) (ಪದ, ಮೊ. ಗಳಿಗೆ) ವಿಶೇಷಾರ್ಥ ಕೊಡು. (—ಕ್ಕೆ) ಏಕಮುಖತೆ ಕೊಡು. **Pólarizable** (ಗು.); **Polarizátion** (ನಾ.) (ದೃ. ವಿ.) ಬೆಳಕಿನ ಅಥವಾ ಇತರ ವಿಕಿರಣಗಳ ತರಂಗ ಕಂಪನಗಳು ಒಂದು ನಿರ್ದಿಷ್ಟ ರೂಪ ಪಡೆಯುವಂತೆ ಮಾಡುವ ಕಾರ್ಯ, ಕಾರ್ಯ ರೀತಿ; ಈ ರೀತಿಯಲ್ಲಿ ರೂಪುಗೊಂಡ ಬೆಳಕಿನ ಸ್ಥಿತಿ (ನಮಗೆ ಕಾಣುವ ಸಾಮಾನ್ಯ ಬೆಳಕಿನಲ್ಲಿ ತರಂಗ ಕಂಪನಗಳು, ಬೆಳಕಿನ ಕಿರಣಕ್ಕೆ ಲಂಬಮಾನ ವಾಗಿ, ಎಲ್ಲ ದಿಕ್ಕುಗಳಲ್ಲಿಯೂ ಕಂಪಿಸುವಂತೆ ಊಹಿಸಲಾಗಿದೆ. ನಿರ್ದಿಷ್ಟ ಮುಖತೆಗೊಂಡ ಬೆಳಕಿನಲ್ಲಿ ಕಂಪನ ಪಥಗಳು ಋಜು ರೇಖೆಗಳಾಗಿಯೊ, ವೃತ್ತ ರೇಖೆಗಳಾಗಿಯೊ ಅಥವಾ ದೀರ್ಘವೃತ್ತ ರೇಖೆಗಳಾಗಿಯೊ ಇರ ಬಹುದು; ಆದರೆ ಇವೆಲ್ಲವೂ ಕಿರಣಕ್ಕೆ ಲಂಬವಾಗಿರುವ ಸಮತಲದಲ್ಲಿಯೇ ಇರಬೇಕು). **Pólarizer** (ನಾ.) ಸಾಮಾನ್ಯ ಬೆಳಕನ್ನು ವಿಶಿಷ್ಟ ರೂಪಿನ ಬೆಳಕನ್ನಾಗಿ ಮಾರ್ಪಡಿಸುವ ಸಲಕರಣೆ. **Polarímeter** (ನಾ.) ಬೆಳಕಿನ ನಿರ್ದಿಷ್ಟರೂಪತೆಯ ಮೊತ್ತವನ್ನು ಅಳೆಯುವ ಸಲಕರಣೆ. **Polarímetry** (ನಾ.); **Polarimétric** ಪೊಲ್ಯಾ— (ಗು.); **Poláriscope** (ನಾ.) ನಿರ್ದಿಷ್ಟ (ತರಂಗ) ರೂಪುಗೊಳಿಸಿದ ಬೆಳಕಿನಲ್ಲಿ ಪದಾರ್ಥಗಳ ಗುಣಗಳನ್ನು ಪರೀಕ್ಷಿಸುವ ಸಲಕರಣೆ. **Polariscópic** (ಗು.); **Polaríscopy** (ನಾ.)

Pole[3] ಪೋಲ್ (ನಾ.) ಪೋಲೆಂಡು ದೇಶೀಯ.

Póle-ax(e) ಪೋಲ್‌ಆ್ಯಕ್ಸ್ (ನಾ., ಕ್ರಿ. ಸಕ.) (ಹಿಂದೆ ನೌಕಾ ಯುದ್ಧದಲ್ಲಿ ಆಯುಧವಾಗಿಯೂ, ನೌಕೆಯ ಹಗ್ಗ, ಮೊ. ನ್ನು ಕತ್ತರಿಸುವುದ ಕ್ಕಾಗಿಯೂ ಉಪಯೋಗಿಸುತ್ತಿದ್ದ) ಗಂಡುಗೊಡಲಿ; ಈಟಿಗೊಡಲಿ. ಚಮ್ಮಟಿಗೆಯ ಬೆನ್ನುಳ್ಳ ಕಟುಕನ ಕೊಡಲಿ. (ಕ್ರಿ.) (ಪ್ರಾಣಿಯನ್ನು) ಚಮ್ಮಟಿಗೆಕೊಡಲಿಯಿಂದ ಕತ್ತರಿಸಿ ಕೊಲ್ಲು.

Pólecat ಪೋಲ್‌ಕ್ಯಾಟ್ (ನಾ.) ಸಣ್ಣ, ಕಗ್ಗಂದು ಬಣ್ಣದ, ಗಬ್ಬು (ಹೊಲಸು) ನಾತದ, ಮಾಂಸಾಹಾರಿಯಾದ, ತೆಳು ಒಡಲಿನ, ಯೂರೋಪಿನ ಒಂದು ಚತುಷ್ಪಾದಿ.

Polémic ಪೊಲೆಮಿಕ್ (ಗು., ನಾ.) ಚರ್ಚಾಸ್ಪದ; ವಿವಾದಾತ್ಮಕ. (ನಾ.) ವಾದ ಪ್ರತಿವಾದಗಳುಳ್ಳ ಚರ್ಚೆ: ವಾದಕಥೆ. (ಬ. ವ. ದಲ್ಲಿ) (ಮು., ದೇವ. ಶಾ. ದಲ್ಲಿ) ವಾದವಿವಾದಗಳು. ಚರ್ಚೆ ಮಾಡುವವನು; ವಾದ ಚತುರ. **Polémical** (ಗು.); **Polémically** (ಕ್ರಿ. ವಿ.); **Pólemize** (ಕ್ರಿ. ಅಕ.)

Políce ಪೋಲೀಸ್ (ನಾ., ಕ್ರಿ. ಸಕ.) ಪ್ರಜೆಗಳ ನೆಮ್ಮದಿಯ ರಕ್ಷಣೆ; ಸಾರ್ವಜನಿಕ ಶಾಂತಿಪಾಲನೆ; ಇದರ ಆಡಳಿತದ ಸರ್ಕಾರದ ಇಲಾಖೆ; ಪೋಲೀಸು ದಳ; ಕಾವಲು ದಳ; ತಳವಾರಿಕೆ. (ಬ. ವ. ವಾಗಿ ಪ್ರ.) ಪೋಲೀಸಿನವರು (The p. are on his track ಪೋಲೀಸಿನವರು ಅವನ ಬೆನ್ನುಹಿಡಿದು ಹೋಗುತ್ತಿದ್ದಾರೆ). [**P.-court** (ಪೋಲೀಸಿನವರು ಹೂಡಿದ ಆಪಾದನೆಗಳನ್ನು ಸ್ಥೂಲವಾಗಿ ಪರಿಶೀಲಿಸಿ ಬೇಗನೆ ತೀರ್ಪು ಕೊಡುವ) ಪೋಲೀಸು ನ್ಯಾಯಸ್ಥಾನ. **P.-magistrate** ಪೋಲೀಸು ದಂಡಾಧಿಕಾರಿ. **Políceman** —ಮ್ಯನ್ (ನಾ.) ಪೋಲೀಸು ದಳದವನು. **P.-office** (ಪಟ್ಟಣದ, ಊರಿನ) ಪ್ರಧಾನ ಪೋಲೀಸು ಕಚೇರಿ. **P.-officer** ಪೋಲೀಸು ಅಧಿಕಾರಿ. **P.-station** ಪೋಲೀಸು ದಳದ ಸ್ಥಳೀಯ ಕಚೇರಿ; ಪೋಲೀಸು ಠಾಣೆ, ಚಾವಡಿ]. (ಕ್ರಿ.) (ದೇಶ, ಮೊ. ನ್ನು) ಪೋಲೀಸು ದಳದ ಮೂಲಕ ಅಧೀನದಲ್ಲಿಟ್ಟುಕೊ; ಪೋಲೀಸು ಬಂದೋಬಸ್ತು ಇಡು; ತಳವಾರಿಕೆ ನಡಸು, ಏರ್ಪಡಿಸು. (ರೂಪ.) ಆಡಳಿತ ನಡಸು; ಅಧೀನದಲ್ಲಿಟ್ಟುಕೊ.

Policlínic ಪಾಲಿಕ್ಲಿನಿಕ್ (ಗು.) ಸ್ವಂತ ಮನೆಗಳಲ್ಲಿಯ ವೈದ್ಯಪ್ರಯೋಗ ಶಿಕ್ಷಣ (ಆಸ್ಪತ್ರೆಯದಲ್ಲ). (ಆಸ್ಪತ್ರೆಯಲ್ಲಿ) ಹೊರ ರೋಗಿಗಳ(ನ್ನು ವಿಚಾರಿಸಿ ಔಷಧ ಕೊಡುವ) ಶಾಖೆ.

Pólicy[1] ಪಾಲಿಸಿ (ನಾ.) ರಾಜಕೀಯ ನೈಪುಣ್ಯ, ಚತುರತೆ; ರಾಜ್ಯ ನೀತಿ; ವಿವೇಕದ ಆಡಳಿತ; ರಾಜ್ಯಧಾರ ಕೌಶಲ. ವ್ಯವಹಾರ ಚಾತುರ್ಯ; ತಂತ್ರ; ಯುಕ್ತಿ; (ಸರ್ಕಾರ, ಪಕ್ಷ, ಮೊ. ರು ಅನು ಸರಿಸುವ) ಕಾರ್ಯನೀತಿ. (ಸ್ಕಾ. ಪ್ರ.) ದೊಡ್ಡ ಮನುಷ್ಯನ ಹಳ್ಳಿ ಮನೆ, ಮೊ. ಗಳ ಸುತ್ತಲ ಉಪವನ.

Pólicy[2] ಪಾಲಿಸಿ (ನಾ.) ವಿಮೆಯ ಕರಾರು ಪತ್ರ (=P. of assurance; Insurance p.)

Póligar ಪಾಲಿಗಾರ್ (ನಾ.) (ದ. ಇಂಡಿಯದಲ್ಲಿ) ಪಾಳೆಯಗಾರ; ಇಂಥ ನಾಯಕನ ಅನುಯಾಯಿಯಾದ ಕೊಳ್ಳೆಹೊಡೆಯುವ ಪಂಗಡ ದವನು.

Pólish[1] ಪಾಲಿಷ್ (ಕ್ರಿ., ನಾ.) (ಉಜ್ಜುವುದರಿಂದ) ನಯ, ಮೆರುಗು, ಹೊಳಪು—ಕೊಡು, ಪಡೆ. (ಉಜ್ಜುವುದರಿಂದಾದ) ನಯ, ಮೆರುಗು, ಹೊಳಪು; ಇಂಥ ಉಜ್ಜುಗಾರಿಕೆ; (ಮೇಲ್ಮೈಗೆ ನಯ, ಹೊಳಪು, ಕೊಡಲು ಉಪಯೋಗಿಸುವ) ಮೆರುಗು (ಪದಾರ್ಥ) [French p. (French ನೋಡಿ). Brass-p. ಹಿತ್ತಾಳೆಗೆ ಹಾಕುವ ಮೆರುಗು]. (ರೂಪ.) ನಯ, ನಾಜೂಕು, ಸಂಸ್ಕೃತಿ [ಬರುವಂತೆ ಮಾಡು (ಸಾ., ಭೂ. ಕೃ. ನಲ್ಲಿ)]. P. off ಬೇಗನೆ ಮುಗಿಸಿಬಿಡು. **Pólishable** (ಗು.); **Pólisher** (ನಾ.)

Pólish[2] ಪೋಲಿಷ್ (ಗು.) ಪೋಲೆಂಡಿನ(ವರ)

Políte ಪೊಲೈಟ್ (ಗು.) ವಿನಯವಾದ ನಡೆನುಡಿಯ; ಮರ್ಯಾದಾಪರ; ಸುಸಂಸ್ಕೃತ; ನಯನಾಜೂಕಿನ; ಸಭ್ಯ. (ಸಾಹಿತ್ಯ, ಮೊ.) ಲಲಿತ; ಗಂಭೀರ; ಪ್ರೌಢ (P. letters ಪ್ರೌಢಸಾಹಿತ್ಯ). **Polítely** (ಕ್ರಿ. ವಿ.); **Políteness** (ನಾ.)

Pólitic ಪಾಲಿಟಿಕ್ (ಗು., ನಾ.) (ವ್ಯಕ್ತಿ) ವಿವೇಕವುಳ್ಳ, ಸೂಕ್ಷ್ಮ ಗ್ರಾಹಿಯಾದ; ಚಾತುರ್ಯವುಳ್ಳ; ವ್ಯವಹಾರ ಕುಶಲ; ಉಪಾಯ ಗಾರನಾದ; ತಂತ್ರ ನಡಸುವ. (ಕಾರ್ಯ, ಮೊ. ವು) ವಿವೇಚನೆಯುಳ್ಳ. ಕೇವಲ ಅನುಕೂಲಕ್ಕೆ ಗಮನ ಕೊಡುವ; ಸಂದರ್ಭಾನುಸಾರ ನಡೆಯುವ. [Body p. (Body ನೋಡಿ)]. (ನಾ.; ಬ. ವ. ದಲ್ಲಿ) ರಾಜ್ಯ ಶಾಸ್ತ್ರ; ರಾಜ್ಯನೀತಿ; ರಾಜಕೀಯ (ವ್ಯವಹಾರ); —ಜೀವನ; —ತತ್ತ್ವ (What are his politics? Talk politics. Is not practical politics ವ್ಯವಹಾರಸಾಧ್ಯವಲ್ಲ (ಆದುದರಿಂದ ಚರ್ಚೆಗೆ ತಕ್ಕದ್ದಲ್ಲ). **Politicly** (ಕ್ರಿ. ವಿ.); **Polítical** ಪೊಲಿಟಿಕಲ್ (ಗು., ನಾ.) ರಾಷ್ಟ್ರದ; ರಾಜ್ಯಾಡಳಿತದ; ಸರ್ಕಾರದ; ರಾಜಕೀಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಜಾ ಶಾಂತಿಯ ಆಡಳಿತದಲ್ಲಿ ನಿರತನಾದ [P. agent, resident (ಇಂಡಿಯದಲ್ಲಿ) ದೇಶೀಯ ರಾಜರಿಗೆ ಸಲಹೆ ಕೊಡಲು ನಿಯಮಿತನಾದ ಬ್ರಿಟಿಷ್ ಸರ್ಕಾರದ ಅಧಿಕಾರಿ; ಬ್ರಿಟಿಷ್ ರಾಜಕೀಯ ನಿಯೋಗಿ]. ಸುವ್ಯವಸ್ಥಿತ ಸರ್ಕಾರದ ಆಡಳಿತವುಳ್ಳ; ರಾಜಕೀಯ ಸಂಬಂಧದ; ರಾಜಕೀಯದಲ್ಲಿ ಒಂದು ಪಕ್ಷವನ್ನು ವಹಿಸಿದ. [P. economy (Economic ನೋಡಿ). P. geography (ರಾಜ್ಯಗಳ ಮೇರೆಗಳನ್ನೂ ಸ್ವಾಸ್ಥ್ಯಗಳನ್ನೂ ಕುರಿತ) ರಾಜಕೀಯ ಭೂವಿವರಣೆ. P. verse ಗುರು ಲಘುಗಳ ಗಣನೆಯಿಲ್ಲದೆ ಸ್ವರಭಾರ ಕ್ರಮದಲ್ಲಿ ಕಟ್ಟಿದ, ಉಪಾಂತ ಸ್ವರದ ಮೇಲೆ ಸ್ವರಭಾರ ಹಾಕಿದ, ಆಧುನಿಕ ಗ್ರೀಕ್ ಪದ್ಯ]. (ನಾ.) ರಾಜಕೀಯ ನಿಯೋಗಿ. **Polítically** (ಕ್ರಿ. ವಿ.); **Politícian** ಪಾಲಿಟಿಷನ್ (ನಾ.) ರಾಜ್ಯವ್ಯವಹಾರ ಚತುರ; ರಾಜ್ಯನೀತಿಜ್ಞ; ರಾಜಕೀಯಸ್ಥ; (ಅದೇ ವೃತ್ತಿಯಾಗಿ) ರಾಜಕೀಯದಲ್ಲಿ ಆಸಕ್ತಿ ವಹಿಸಿ ತೊಡಗಿರುವವನು; ರಾಜ್ಯ ತಂತ್ರಿ; ರಾಜಕೀಯ ಕಸಬುದಾರ. **Políticize** ಪೊಲಿಟಿಸೈಸ್ (ಕ್ರಿ.) ರಾಜ್ಯನೀತಿಜ್ಞನಾಗಿ ವರ್ತಿಸು; ರಾಜಕೀಯ ವ್ಯವಹಾರ ಮಾಡು; ರಾಜಕೀಯ ವಿಷಯಗಳನ್ನು ಮಾತನಾಡು; ರಾಜಕೀಯ ಮಾಡು; (—ಕ್ಕೆ) ರಾಜಕೀಯ ಸ್ವರೂಪ ಕೊಡು. **Pólity** ಪಾಲಿಟಿ (ನಾ.) (ಪ್ರಜಾ ಶಾಂತಿಯ) ರಾಜ್ಯಾಡಳಿತ ಕ್ರಮ, ವ್ಯವಸ್ಥೆ; ಸಮಾಜ ವ್ಯವಸ್ಥೆ; ವ್ಯವಸ್ಥಿತ ಸಮಾಜ; ರಾಷ್ಟ್ರ; ಸರ್ಕಾರ. **Político-** ಪೊಲಿಟಿಕೊ— (ಸ. ಪೂ. ಪ.) =Politically, Political & — (ಉದಾ., P.-economical; P.-religious)

Pólk. **Polka** ನೋಡಿ.

Pólka ಪೋಲ್ಕ, ಪಾಲ್ಕ (ನಾ.) ಬೊಹೀಮಿಯಾ ದೇಶದ, ದ್ವಿತಾಲದಲ್ಲಿ ಕುಣಿಯುವ, ಒಂದು ಉತ್ಸಾಹದ ಕುಣಿತ [Polk (ಕ್ರಿ. ಅಕ.) ಪೋರ್ಕ್ ಕುಣಿತ ಕುಣಿ]; ಈ ಕುಣಿತಕ್ಕೆ ಹೊಂದಿಸಿದ ಸಂಗೀತ. (ಹೆಂಗಸಿನ) ಗುತ್ತನಾದ (ಸಾ., ಹೆಣಿಗೆಯ) ನಡುವಂಗಿ.

Poll[1] ಪೋಲ್ (ನಾ., ಕ್ರಿ.) (ಈಗ ಪ್ರಾಂ. ಪ್ರ. ಅಥವಾ ಹಾಸ್ಯ ಪ್ರ.) ಮನುಷ್ಯನ ತಲೆ; ಕೂದಲು ಬೆಳೆಯುವ ತಲೆಯ ಭಾಗ; ಮಂಡೆ (Grey p., Flaxen p.). (ಶಾಸನ ಸಭೆ, ಮೊ. ಗಳಿಗೆ ಚುನಾವಣೆಯಲ್ಲಿ) ಮತದಾರರ ಎಣಿಕೆ; (ಚುನಾವಣೆಯಲ್ಲಿ) ಮತ ಕೊಡುವುದು (Exclusion of women from the p.); ಚುನಾವಣೆಯಲ್ಲಿ ದಾಖಲಾದ ಮತಸಂಖ್ಯೆ (Heavy, light, p.); ಚುನಾವಣೆಯ ಸ್ಥಳ; (P.-tax ಪ್ರತಿಯೊಬ್ಬನ ಮೇಲೂ ಹೊರಿಸಿದ ಕಂದಾಯ: ತಲೆಗಂದಾಯ). (ಕ್ರಿ.) (ಪ್ರಾಚೀ. ಪ್ರ.) (—ರ) ತಲೆ ಗೂದಲನ್ನು ಮಟ್ಟಸವಾಗಿ ಕತ್ತರಿಸು; (ಮರದ, ಸಸ್ಯದ) ತಲೆ ಕತ್ತರಿಸು, ಸಮರು; (ದನ, ಮೊ. ಗಳ) ಕೊಂಬು ಕತ್ತರಿಸು (ಸಾ., ಭೂ. ಕೃ. ನಲ್ಲಿ); (ಚುನಾವಣೆಯಲ್ಲಿ) (—ರ) ಮತಗಳನ್ನು ತೆಗೆದುಕೊ; ಒಬ್ಬನ ಹೆಸರನ್ನು ದಾಖಲೆಪುಸ್ತಕದಲ್ಲಿ ಸೇರಿಸು; ಮತ ಕೊಡುವುದಕ್ಕಾಗಿ ಚುನಾವಣೆಯ ಸ್ಥಳಕ್ಕೆ ತರು; (ಉಮೇದುವಾರನ ವಿಷಯದಲ್ಲಿ) (—ರ) ಮತಗಳನ್ನು ಪಡೆ; (ತನ್ನ) ಮತ ಕೊಡು. Polling booth ಜನರು ತಮ್ಮ ಮತಗಳನ್ನು ಕೊಡುವ ಸ್ಥಳ: ಚುನಾವಣಾ ಚಪ್ಪರ. **Póll-able** (ಗು.)

Poll[2] ಪೋಲ್ (ಗು., ನಾ.) ಕೊಂಬಿಲ್ಲದ (ಸಮಾಸದಲ್ಲಿ: P.-beast, -ox). ಕೊಂಬಿಲ್ಲದ ಪ್ರಾಣಿ (ಮು., ಕೊಂಬಿಲ್ಲದ ತಳಿಯ ದನ)

Poll[3] ಪಾಲ್ (ನಾ.) ಗಿಳಿ(ಯ ರೂಢಿಯ ಅಂಕಿತ ನಾಮ: P.-). P. parrot ಗಿಳಿ; ರೂಢಿಯಲ್ಲಿರುವ ವಾಕ್ಯಾಂಶಗಳನ್ನೂ ವಾದಗಳನ್ನೂ ಪ್ರಯೋಗಿಸುವವನು. **Pólly** (ನಾ.) ಪಳಗಿಸಿದ ಗಿಳಿ; ಹೆಂಗಸಿನ ಅಂಕಿತ ನಾಮ.

Poll[4] ಪಾಲ್ (ನಾ.) (ಕೇಂಬ್ರಿಡ್ಜ್ ವಿ. ವಿ. ನಿ. ಅಸಂ.) The P. ಸಾಮಾನ್ಯ ತರಗತಿಯಲ್ಲಿ ತೇರ್ಗಡೆಯಾದವರು. Go out in the P. ಸಾಮಾನ್ಯ ತರಗತಿಯಲ್ಲಿ ತೇರ್ಗಡೆಯಾಗು; ಸಾಮಾನ್ಯ ಪಾಂಡಿತ್ಯಪದವಿ ಪಡೆ. (ವಿಶೇಷಣವಾಗಿ) P. degree, man.

Póllam ಪಾಲಂ (ನಾ.) ಪಾಳೆಯ(ಗಾರನ ಆಡಳಿತದ ಪ್ರಾಂತ) [ತಮಿಳು: ಪಾಳೈಯಂ]

Póllard ಪಾಲರ್ಡ್ (ನಾ., ಕ್ರಿ. ಸಕ.) ಕೊಂಬು ಉದುರಿಹಾಕಿದ ಅಥವಾ ಕಳೆದುಕೊಂಡ ಪ್ರಾಣಿ; ಕೊಂಬಿಲ್ಲದ ಜಾತಿಯ ಎತ್ತು, ಕುರಿ, ಮೇಕೆ. ಕೊಂಬೆಗಳನ್ನು ಸಮರಿ ತಲೆಯನ್ನು ಗುಂಡಗೆ ಮಾಡಿರುವ ಮರ. ಹಿಟ್ಟಿನಿಂದ ಬೇರ್ಪಡಿಸಿದ ಹೊಟ್ಟು; ಸ್ವಲ್ಪ ಹಿಟ್ಟು ಸೇರಿದ ನುಣ್ಣನೆಯ ಹೊಟ್ಟು: ತವುಡು. (ಕ್ರಿ.) ಕೊಂಬೆಗಳನ್ನು ಸಮರಿ ಮರದ ತಲೆಯನ್ನು ಗುಂಡಗೆ ಮಾಡು.

Póllen ಪಾಲೆನ್ (ನಾ., ಕ್ರಿ. ಸಕ.) (ಹೂವಿನ ಅಂಡಗಳನ್ನು ಫಲವತ್ತಾಗಿ ಮಾಡುವ) ಪರಾಗ; ಪುಷ್ಪಧೂಳಿ. (ಕ್ರಿ.) (—ಗೆ) ಪರಾಗ ಸಾಗಿಸು; ಪರಾಗ ಕವಿಸು. **Póllenless** (ಗು.); **Pollínic** (ಗು.); **Pollíniferous** (ಗು.) ಪರಾಗವುಳ್ಳ. **Póllinate** (ಕ್ರಿ. ಸಕ.) (ಗರ್ಭೋತ್ಪತ್ತಿಗಾಗಿ ಮೇರೆ) ಪರಾಗ ಉದುರಿಸು; ಪರಾಗಾಧಾನ ಮಾಡು. **Pollinátion** (ನಾ.)

Pollicitátion ಪಾಲಿಸಿಟೇಷನ್ (ನಾ.) (ವ್ಯವಹಾರ ನ್ಯಾ. ಶಾ.) ಇನ್ನೂ ವಿಧಿವತ್ತಾಗಿ ಸ್ವೀಕೃತವಾಗಿಲ್ಲದ (ಆದುದರಿಂದ ಹಿಂದಕ್ಕೆ ತೆಗೆದುಕೊಳ್ಳಬಹುದಾದ) ವಾಗ್ದಾನ.

Pólloi ಪಲಾಯ್ (ನಾ., ಬ. ವ.) Hoi p. ಹೆಚ್ಚು ಭಾಗದ ಜನ; ಹೆಚ್ಚು ಮಂದಿ; ಮಂದಿ ಜನ.

Pollúte ಪಲ್ಯೂಟ್ (ಕ್ರಿ. ಸಕ.) ಅಪವಿತ್ರ ಮಾಡು; ಅಪರಿಶುದ್ಧ ಮಾಡು; ಹೊಲೆಗೆಡಿಸು; ಕುಲಗೆಡಿಸು; (ನೀರು, ಮೊ. ನ್ನು) ಕೆಡಿಸು, ಕೊಳೆ ಮಾಡು, ಮಲಿನ ಮಾಡು. **Pollútion** (ನಾ.)

Póllux. **Castor**[3] ನೋಡಿ.

Pólly. **Poll**[3] ನೋಡಿ.

Pólo ಪೋಲೋ(ಲ) (ನಾ.) (ಪೂರ್ವ ದೇಶಗಳಲ್ಲಿ ಮೊದಲು ಬಳಕೆಗೆ ಬಂದ) ಕುದುರೆಯ ಮೇಲೆ ಸವಾರಿ ಮಾಡುತ್ತ ಆಡುವ, 'ಹಾಕಿ' ಆಟದಂಥ, ಒಂದು ಚೆಂಡಿನ ಆಟ: 'ಪೋಲೋ' ಆಟ. P.-stick ಪೋಲೋ ದಾಂಡು. Water-p. (Water ನೋಡಿ)

Polónium ಪೊಲೋನಿಯಂ (ನಾ.) ಬಹುವಾಗಿ ವಿದ್ಯುತ್ ವಿಕಿರಣ ಮಾಡುವ (ಸ್ವಪ್ರಕಾಶದ) ಒಂದು ಮೂಲಧಾತು: 'ಪೊಲೋನಿಯಂ'.

Poltroón ಪಾಲ್ಟ್ರೂನ್ (ನಾ.) (ಕೆಚ್ಚಿಲ್ಲದ) ಹೇಡಿ; ಹಂದೆ; ಅಂಜುಕುಳಿ. **Poltroónery** (ನಾ.)

Poly- ಪಾಲಿ— (ಸ. ಪೂ. ಪ.) ಬಹು—; ಅನೇಕ—. **-adélphous** ಮೂರು ಅಥವಾ ಹೆಚ್ಚಾದ ಗುಚ್ಛಗಳಾಗಿ ಅಳವಟ್ಟಿರುವ ಕೇಸರಗಳುಳ್ಳ; ಬಹುಕೇಸರ ಗುಚ್ಛಿ. **-ándrist** ಬಹು ಮಂದಿ ಗಂಡಂದಿರನ್ನುಳ್ಳವಳು: ಬಹು ಪತಿವತಿ. **-ándrous** (ಗು.) —ಉಳ್ಳ; ಈ ಪದ್ಧತಿಯ(ನ್ನು ಅನುಸರಿಸುವ). (ಸ. ವಿ.) ಬಹು ಕೇಸರಗಳುಳ್ಳ. **-andry** ಬಹು ಪತಿ ಪದ್ಧತಿ; ಬಹು ಪತಿತ್ವ. **-archy** ಹಲವರ ಆಧಿಪತ್ಯ; ಬಹುಜನ ಪ್ರಭುತ್ವ. **-atómic** ಅನೇಕ ಪರಮಾಣುಗಳಿಂದ ಕೂಡಿದ (ಮು., ಇತರ ಪರಮಾಣುಗಳಿಗೆ ಸ್ಥಳ ಬಿಡುವ ಜಲಜನಕ ಪರಮಾಣುಗಳುಳ್ಳ). **-autógraphy** ಕಲ್ಲಚ್ಚು (ಸಲಕರಣೆ). **-básic** (ರ. ವಿ.) ಎರಡಕ್ಕಿಂತ ಹೆಚ್ಚಾದ ಕ್ಷಾರಾಂಶಗಳನ್ನು ಅಥವಾ ಕ್ಷಾರಾಂಶ ಪರಮಾಣುಗಳನ್ನುಳ್ಳ (ಸಾ., ಆಮ್ಲಗಳ ವಿಷಯದಲ್ಲಿ): ಬಹುಕ್ಷಾರಿ. **-cárpellary, -cárpous** (ಸ. ವಿ.) ಬಹು ಶಲಾಕಾ ಕೋಶಗಳುಳ್ಳ. **-dáctyl** (ಡ್ಯಾಕ್ಟಿಲ್) (ಗು., ನಾ.) ಸಹಜವಾಗಿರುವುದಕ್ಕಿಂತಲೂ ಹೆಚ್ಚು (ಕೈ, ಕಾಲಿನ) ಬೆರಳುಗಳುಳ್ಳ (ಪ್ರಾಣಿ): ಬಹ್ವಂಗುಲಿ. **-daémonism** (—ಡೀಮೊನಿಸ್ಮ್) ಹಲವು ಅತಿಮಾನುಷ ಶಕ್ತಿಗಳಲ್ಲಿ, ಭೂತ ಪ್ರೇತಗಳಲ್ಲಿ, ನಂಬಿಕೆ. **-gástric** ಹಲವು ಹೊಟ್ಟೆಗಳುಳ್ಳ. **-génesis** ಹಲವು ಪ್ರತ್ಯೇಕ ಸ್ವತಂತ್ರ ಮೂಲ ವ್ಯಕ್ತಿಗಳಿಂದ ಅಥವಾ ಬೀಜಗಳಿಂದ ಕುಲ ಅಥವಾ ವಂಶ ಆರಂಭವಾಗುವುದು. **-genésic** (ಗು.); **-genétic** (ಗು.); **-génic** (ಗು.) (ರ. ವಿ.) (ಜಲಜನಕ, ಮೊ. ಗಳೊಡನೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನೇಕ ಸಂಯುಕ್ತಗಳಾಗುವ : ಬಹು ಸಂಯುಕ್ತ. (ಭೂ. ವಿ.) = -genous. **-genism** ಬಹು ಮೂಲವಾದ. **-genist** (ನಾ.); **-genístic** (ಗು.). **-genous** (ಭೂ. ವಿ.) ನಾನಾ ವಿಧ ಶಿರಾಯುಕ್ತ. (ರ. ವಿ.) = -genic. **-geny** ಹಲವು ಪ್ರತ್ಯೇಕವಾದ ಮೂಲ ದಂಪತಿಗಳಿಂದ ಮಾನವ ಕುಲದ ಉತ್ಪತ್ತಿ. **-gram** (—ಗ್ರ್ಯಾಮ್) ಬಹು ರೇಖಾಕೃತಿ. **-graph** ಪ್ರತಿಗಳನ್ನೆತ್ತುವ (ಹಲವು ಬಗೆಯ) ಸಲಕರಣೆ. ಬಹು ಗ್ರಂಥ ಕರ್ತೃ; ನಾನಾ ಗ್ರಂಥ ಕರ್ತೃ. **-gráphic** (ಗು.); **-graphy** (ನಾ.). **-gynous** (—ಜಿನಸ್) ಬಹು ಪತ್ನೀ ಪದ್ಧತಿಯ ; ಅನೇಕ ಹೆಂಡಿರನ್ನುಳ್ಳ ; (ಸ. ವಿ.) ಬಹು ಶಲಾಕಿ. **-gyny** ಬಹು ಪತ್ನೀತ್ವ. **-hédron** ಬಹುಮುಖ ಘನಾಕೃತಿ (ಆರು ಮುಖಗಳಿಗಿಂತ ಹೆಚ್ಚಾದ ಮುಖಗಳುಳ್ಳದ್ದು) ; ಬಹು ಮುಖಿ. **-hédral** (ಗು.); **-hédric** (ಗು.). **-méric** (ಸಂಯುಕ್ತಗಳ ವಿಷಯದಲ್ಲಿ) ಸಂಘಟಿತ ಮೂಲಧಾತುಗಳೂ ಅವುಗಳ ಪ್ರಮಾಣಗಳೂ ಒಂದೇ ಆಗಿದ್ದು, ಅಣು ಭಾರ ಮಾತ್ರ ವ್ಯತ್ಯಾಸವಾಗಿರುವ. **-merism** —ಸ್ಥಿತಿ. **-merous** (ಪ್ರಕೃತಿ ಚರಿತ್ರೆ) ಹಲವು ಭಾಗಗಳುಳ್ಳ. **-mórphic, -mórphous** ಬಹು ರೂಪಿ ; (ಮು., ಪ್ರಕೃತಿ ಚರಿತ್ರೆ, ಸ. ವಿ.) ವ್ಯಕ್ತಿ ವ್ಯಕ್ತಿಗೂ ವ್ಯತ್ಯಾಸವಾಗುವ; ವ್ಯತ್ಯಾಸ ಪರಂಪರೆ ಹೊಂದುವ. **-mórphism** (ನಾ.). **-nómial** —ನೋ— (ಗು., ನಾ.) (ಬೀ. ಗ.) = Multinomial. **-ónymous** (—ಆನಿಮಸ್) ಪ್ರತ್ಯೇಕವಾದ ಅನೇಕ ಹೆಸರುಗಳಿಂದ ಕರೆಯಲ್ಪಡುವ. **-ónymy** ಒಂದೇ ವಸ್ತುವಿಗೆ ಹಲವು ಹೆಸರುಗಳನ್ನು ಬಳಸುವುದು : ಬಹು ನಾಮ ಪ್ರಯೋಗ. **-ópia** (—ಯೋಪಿಯ) ಒಂದೇ ವಸ್ತು ಎರಡಾಗಿ ಅಥವಾ ಹಲವಾಗಿ ಕಣ್ಣಿಗೆ ಕಾಣುವ ಒಂದು ದೃಷ್ಟಿರೋಗ. **-pétalous** (ಹೂವು) ಬಿಡಿ ಬಿಡಿಯಾದ ಅನೇಕ ದಳಗಳುಳ್ಳ. **-phagous** (—ಫಗಸ್) ಹೊಟ್ಟೆಬಾಕತನದ ; (ಪ್ರಾ. ವಿ.) ಅನೇಕ ತೆರದ ಆಹಾರ ತಿನ್ನುವ. **-phone** ಹಲವು ಧ್ವನಿಗಳನ್ನು ಸೂಚಿಸುವ ಸಂಕೇತ, ಅಕ್ಷರ. **-phónic** [—ಫಾ(ಫೋ)ನಿಕ್], **-phonous** (—ಫೊನಸ್) ಹಲವು ಧ್ವನಿಗಳುಳ್ಳ; (ಭಾಷಾ ಶಾಸ್ತ್ರ) ಹಲವು ಧ್ವನಿಗಳಿಗೆ ಸಂಕೇತವಾದ. (ಸಂ.) ಸ್ವರ ಸಂಪಾದಕ್ಕೆ ಸಂಬಂಧಪಟ್ಟ. **-phony** (ನಾ.); **-phylétic** = -genetic. **-phýllous, -sépalous** ಬಿಡಿ ಬಿಡಿಯಾದ ಅನೇಕ ಪುಷ್ಪ ಪತ್ರಗಳುಳ್ಳ. **-stome** (ಗು., ನಾ.) ಹಲವು ಬಾಯಿಗಳು ಅಥವಾ ಹೀರು ಅಂಗಗಳು ಉಳ್ಳ (ಪ್ರಾಣಿ). **-stomous** (ಗು.). **-synthétic** (ಭಾಷೆಗಳ ವಿಷಯದಲ್ಲಿ) ಒಂದು ವಾಕ್ಯದಲ್ಲಿಯೇ ಹಲವು ಪದಗಳನ್ನು (ಉದಾ., ಕ್ರಿಯಾಪದವನ್ನೂ ಕರ್ಮಪದವನ್ನೂ) ಒಟ್ಟಿಗೆ ಸಮಾಸಮಾಡುವ. **-thálamous** (ಪ್ರಕೃತಿ ಚರಿತ್ರೆ) ಹಲವು ಕೋಶಗಳುಳ್ಳ. **-zóa** (—ಝೋಅ) ಒಂದೇ ತೆರದ ಹಲವು ಪ್ರಾಣಿಗಳು ಒಂದುಗೂಡಿರುವ ಅಕಶೇರುಕ ವರ್ಗ. **-zóic** (ಗು.). **-zónal** (ಕಡಲ ಬೆಳಕುಮನೆಯ ಲೆನ್ಸಿನ ವಿಷಯದಲ್ಲಿ) ಹಲವು ವಲಯ ಭಾಗಗಳುಳ್ಳ : ಬಹು ವಲಯಿ.

Polychromátic ಪಾಲಿಕ್ರೊಮ್ಯಾಟಿಕ್ (ಗು.) ಹಲವು ಬಣ್ಣದ; ಬಹು ವರ್ಣಿಕ. **Pólychrome** (ಗು., ನಾ.) ಹಲವು ಬಣ್ಣಗಳಲ್ಲಿ ಚಿತ್ರಿಸಿದ, ಮುದ್ರಿಸಿದ, ಅಲಂಕರಿಸಿದ. (ನಾ.) ಹಲವು ಬಣ್ಣದ ಕಲಾಕೃತಿ (ಮು., ವರ್ಣ ಪ್ರತಿಮೆ) ; ವಿವಿಧ ವರ್ಣತೆ. **Polychrómic** —ಕ್ರೋ— (ಗು.); **Pólychromous** (ಗು.); **Pólychromy** (ನಾ.) ಹಲವು ಬಣ್ಣಗಳಲ್ಲಿ ಚಿತ್ರಿಸುವ ಕಲೆ : ಬಹುವರ್ಣ ಚಿತ್ರಕಲೆ (ಮು., ಪುರಾತನದ ಕುಂಬಾರ ಕಲಸ, ಮೊ. ದರ ವಿಷಯದಲ್ಲಿ)

Polyclínic ಪಾಲಿಕ್ಲಿನಿಕ್ (ನಾ.) ಹಲವು ರೋಗಗಳ ಚಿಕಿತ್ಸಾ ಪ್ರಯೋಗ ಶಾಲೆ ; ವಿವಿಧ ರೋಗ ವೈದ್ಯಶಾಲೆ.

Polýgamous ಪಲಿಗಮಸ್ (ಗು.) ಒಂದೇ ಕಾಲದಲ್ಲಿ ಹಲವರು ಹೆಂಡಿರನ್ನು (ಅಪೂರ್ವವಾಗಿ, ಗಂಡಂದಿರನ್ನು) ಉಳ್ಳ ; ಬಹು ಪತ್ನೀಕ. (ಪ್ರಾ. ವಿ.) ಒಂದಕ್ಕಿಂತ ಹೆಚ್ಚಾದ ಕೂಟ ಸಂಗಾತಿಯುಳ್ಳ. (ಸ. ವಿ.) ಒಂದೇ ಸಸ್ಯದಲ್ಲಿ ಅಥವಾ ಬೇರೆ ಬೇರೆ ಸಸ್ಯಗಳಲ್ಲಿ, ಕೇಸರಗಳು ಮಾತ್ರವೇ ಆಗಲಿ ಶಲಾಕೆಗಳು ಮಾತ್ರವೇ ಆಗಲಿ ಅಥವಾ ಎರಡೂ ಆಗಲಿ ಇರುವ ಹೂವನ್ನು ಬಿಡುವ : ಸಂಕೀರ್ಣ ಲಿಂಗಿ. **Polygámic** ಪಾಲಿಗ್ಯಾ— (ಗು.) ಬಹು ಪತ್ನೀ ಪದ್ಧತಿಯ. **Polýgamist** ಪಲಿಗ— (ನಾ.) ಬಹು ಪತ್ನೀಕ. **Polýgamy** (ನಾ.) ಬಹು ಪತ್ನೀತ್ವ.

Polýgamy, etc. **Polygamous** ನೋಡಿ.

Pólyglot ಪಾಲಿಗ್ಲಾಟ್ (ಗು., ನಾ.) ಬಹು ಭಾಷೆಗಳ ; ಹಲವು ಭಾಷೆಗಳನ್ನು (ಆಡಲೂ ಬರೆಯಲೂ) ಬಲ್ಲ(ವನು) : ಅನೇಕ ಭಾಷಿ ; ಅನೇಕ ಭಾಷೆಗಳಲ್ಲಿ ಇರುವ, ಬರೆದ (ಗ್ರಂಥ ; ಮು., ಬೈಬಲ್). **Polyglóttal** (ಗು.) ; **Polyglóttic** (ಗು.) ; **Pólyglottism** (ನಾ.)

Pólygon ಪಾಲಿಗನ್ (ನಾ.) ಅನೇಕ (ಸಾ., ನಾಲ್ಕಕ್ಕಿಂತ ಹೆಚ್ಚಾದ) ಕೋನಗಳು ಅಥವಾ ಭುಜಗಳು ಉಳ್ಳ (ಸಾ., ಸಮತಲದ ಸರಳ ರೇಖೆಯ) ಆಕೃತಿ : ಬಹು ಭುಜಿ. [P. of forces (ಒಂದು ಬಿಂದುವಿನಲ್ಲಿ ಪ್ರಯೋಗವಾದ ಹಲವು ಬಲಗಳನ್ನು ಕುರಿತ ಪ್ರಮೇಯವನ್ನು ಉದಾಹರಿಸುವ) ಬಲಪ್ರಯೋಗ ನಿರ್ದೇಶಕ ಬಹುಭುಜಿ]. **Polýgonal** —ಗೊ— (ಗು.) ; **Polýgonally** (ಕ್ರಿ. ವಿ.)

Polyhístor ಪಾಲಿಹಿಸ್ಟರ್ (ನಾ.) ಅನೇಕ ವಿಷಯಗಳನ್ನು ಅರಿತವನು ; ಬಹು ವಿದ್ಯಾ ಪಂಡಿತ ; ಬಹು ಶ್ರುತ.

Pólymath ಪಾಲಿಮ್ಯಾತ್ (ನಾ.) = Polyhistor. **Polýmathy** (ನಾ.)

Polynésia ಪಾಲಿನೀಷಿ(ಸಿ)ಯ (ನಾ.) ಪೆಸಿಫಿಕ್ ಸಾಗರದಲ್ಲಿ ಆಸ್ಟ್ರೇಲಿಯಕ್ಕೆ ಪೂರ್ವ ದಿಕ್ಕಿನಲ್ಲಿರುವ ಸಣ್ಣ ಸಣ್ಣ ದ್ವೀಪಗಳ ಮಹಾ ಸ್ತೋಮ : ಪಾಲಿನೀಷಿಯ. **Polynésian** (ಗು.)

Polýnia ಪೊಲಿನಿಯ (ನಾ.) (ಮು., ಉತ್ತರ ಧ್ರುವ ಸಾಗರದಲ್ಲಿ) ನೀರ್ಗಲ್ಲ ಹರವಿನ ಮಧ್ಯೆ ಇರುವ ನೀರ ತೆರಪು.

Pólyp(e) ಪಾಲಿಪ್ (ನಾ.) ಬಹಳ ಕೀಳ್ಮಟ್ಟದ ರಚನೆಯುಳ್ಳ ಹಲವು ಜಾತಿಯ ಪ್ರಾಣಿ (ಉದಾ., ಹವಳದ ಹುಳು); ಸಂಯುಕ್ತ ಜೀವಿಗಳ (ಒಂದು) ವ್ಯಕ್ತಿ (ಹವಳದ ಹುಳು, ಮೊ. ದು) ; ಕೆಲವು ಜಾತಿಯ ಸಂಯುಕ್ತ ಪ್ರಾಣಿ ಸಂಕುಲದ ಏಕಮಾತ್ರ ಪ್ರಾಣಿ. **Pólypary** (ನಾ.) ಸಂಯುಕ್ತ ಜೀವಿಗಳ ನೆಲಸಿನ ಏಕಾಧಾರ ಅಥವಾ ಏಕಾವಲಂಬನೆ. **Polýpidom** ಪಾ(ಪ)ಲಿಪಿಡಮ್ (ನಾ.) = Polypary. **Pólypite** (ನಾ.) ಸಂಯುಕ್ತ ಪ್ರಾಣಿ ಸಂಕುಲದ ಒಂದು ಬಿಡಿ ಪ್ರಾಣಿ. **Pólypoid** (ಗು.) ಸಂಯುಕ್ತ ಪ್ರಾಣಿ ಸಂಕುಲದ ಒಂದು ಬಿಡಿ ಪ್ರಾಣಿಯ(ಂಥ). ಒಂದು ಬಗೆಯ ರೋಗದ ಗಡ್ಡೆಯ(ಂಥ). **Pólypous** (ಗು.)

Pólypary, Polýpidom, etc. **Polyp(e)** ನೋಡಿ.

Pólypod ಪಾಲಿಪಾಡ್ (ಗು., ನಾ.) ಬಹು ಪಾದಿ (ಪ್ರಾಣಿ)

Pólypus ಪಾಲಿಪಸ್ (ನಾ., ಬ. ವ. -pi -ಪೈ) ಸ್ಪರ್ಶಾಂಗಗಳಂತೆ ಶಾಖೋಪಶಾಖೆಗಳುಳ್ಳ ಹಲವು ಬಗೆಯ ರೋಗದ ಗಡ್ಡೆ ; ಅರ್ಬುದ.

Polysýllable ಪಾಲಿಸಿಲಬ್‌ಲ್ (ನಾ.) ಅನೇಕ ಉಚ್ಚಾರಾಂಶಗಳುಳ್ಳ ಪದ. **Polysyllábic** —ಸಿಲ್ಯಾಬಿಕ್ (ಗು.) (ಪದದ ವಿಷಯದಲ್ಲಿ) ಅನೇಕ ಉಚ್ಚಾರಾಂಶಗಳುಳ್ಳ. **Polysyllábically** (ಕ್ರಿ. ವಿ.)

Polytéchnic ಪಾಲಿಟೆಕ್ನಿಕ್ (ಗು., ನಾ.) ಹಲವು ಕಲೆಗಳ ವ್ಯವಹಾರವುಳ್ಳ ; —ಗಳಿಗೆ ಗಮನಕೊಡುವ (ವಿವಿಧ ಕಲಾ ಶಾಲೆ) (= P. School, Institution)

Pólytheism ಪಾಲಿತಿಯಿಸ್‌ಮ್ (ನಾ.) ಒಂದಕ್ಕಿಂತ ಹೆಚ್ಚಾದ, ಅಥವಾ ಹಲವು, ದೇವರುಗಳಲ್ಲಿ ನಂಬಿಕೆ ; ಬಹು ದೇವತಾರಾಧನೆ. **Pólytheist** (ನಾ.) ; **Polytheístic** (ಗು.)

Pom ಪಾಮ್ (ನಾ.) = Pomeranian dog (ಎಂಬುದರ ಸಂಕ್ಷಿಪ್ತ)

Pomace ಪಮೆ(ಮಿ)ಸ್ (ನಾ.) ಸೇಬಿನ ಮದ್ಯ ಮಾಡುವಲ್ಲಿ, ರಸ ಹಿಂಡುವುದಕ್ಕೆ ಮೊದಲಿನ ಅಥವಾ ರಸ ಹಿಂಡಿದಮೇಲಿನ, ಜಜ್ಜು ತಿರುಳು, ಹಿಪ್ಪೆ ; (ಯಾವುದಾದರೂ) ಜಜ್ಜಿಮಾಡಿದ ತಿರುಳು ; ತಿಪ್ಪ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಎಣ್ಣೆ ತೆಗೆದಮೇಲೆ ಉಳಿಯುವ, ಗೊಬ್ಬರವಾಗಿ ಉಪಯೋಗಿಸುವ) (ಮೀನು, ಮೊ. ಗಳ) ಹಿಂಡಿ.

Pomáde ಪೊಮಾ(ಮೇ)ಡ್ (ನಾ., ಕ್ರಿ. ಸಕ.) ಕೂದಲಿಗೂ ತಲೆಗೂ ಸವರಿಕೊಳ್ಳುವ ಸುಗಂಧಾಂಜನ; ಕೇಶಾಂಜನ. (ಕ್ರಿ.) ಸುಗಂಧಾಂಜನ ಹಚ್ಚು, ಸವರು.

Pómander ಪೋ(ಪಾ)ಮಂಡರ್, **Pománder** ಪೊಮಾಂ(ಮ್ಯಾಂ)ಡರ್ (ನಾ.) (ಚರಿತ್ರೆ) ಸೋಂಕು (ಸೋಂಕಿನ) ನಿವಾರಕವಾಗಿ ಧರಣಿ, ಕೈ ಸಂಚಿ, ಮೊ. ಗಳಲ್ಲಿಟ್ಟುಕೊಂಡಿರುವ ಕೆಲವು ಸುವಾಸನಾ ದ್ರವ್ಯಗಳ ಮಿಶ್ರಣದ ಉಂಡೆ; (ಈ ಉಂಡೆಯನ್ನಿಡುವ) ಚಿನ್ನದ ಅಥವಾ ಬೆಳ್ಳಿಯ ಧರಣಿ.

Pomátum ಪೊಮೇಟಂ (ನಾ., ಕ್ರಿ. ಸಕ.) =Pomade.

Pome ಪೋಮ್ (ನಾ.) (ಸ. ವಿ.) ಕೇಂದ್ರ ಭಾಗವಾಗಿರುವ ಅಂಡ ಕೋಶವನ್ನು ಸುತ್ತುವರಿದ ಗಟ್ಟಿ ತಿರುಳುಳ್ಳ ಸೇಬು, ಮರಸೇಬು, ಮೊ. ಜಾತಿಯ ಹಣ್ಣು. (ಕಾವ್ಯ) ಸೇಬು. ಲೋಹದ ಗುಂಡು. **Pomíferous** (ಗು.)

Pomegránate, Póm- ಪಾ(ಪ)ಮ್‌'ಗ್ರ್ಯಾನೆಟ್ (ನಾ.) ದಾಳಿಂಬೆ (ಹಣ್ಣು, ಗಿಡ)

Pómelo ಪಾ(ಪ)ಮೆಲೊ (ನಾ.) ಚಕ್ಕೋತ್ತನೆಯ ಹಣ್ಣು; ಇದೇ ಜಾತಿಗೆ ಸೇರಿದ, ದೊಡ್ಡ ಕಿತ್ತಿಳೆಯ ಹಣ್ಣಿನ ಗಾತ್ರದ ಹಣ್ಣು (=Grape-fruit)

Pomeránian ಪಾಮೆರೇನಿಯನ್ (ಗು., ನಾ.) ಬಾಲ್ಟಿಕ್ ಸಮುದ್ರದ ದಕ್ಷಿಣ ತೀರದ(ಲ್ಲಿರುವ) ಪಾಮೆರೇನಿಯದ. ರೇಷ್ಮೆಯಂಥ ಉದ್ದ ಕೂದಲೂ ಮೊನೆ ಮುಸುಡಿಯೂ ನಿಮಿರು ಕಿವಿಗಳೂ ಉಳ್ಳ ಒಂದು ಜಾತಿಯ ಸಣ್ಣ ನಾಯಿ (=P. dog)

Pómiculture ಪೋಮಿಕಲ್ಚರ್ (ನಾ.) ಹಣ್ಣಿನ ವ್ಯವಸಾಯ; ಫಲ ಕೃಷಿ.

Pómmel ಪಮೆಲ್ (ನಾ., ಕ್ರಿ. ಸಕ.) ಮು., ಕತ್ತಿಯ ಹಿಡಿಯ (ಕೊನೆಯಲ್ಲಿಯ) ಗುಂಡು ಗುಬುಟು. ಜೀನಿನ ಮುಂಭಾಗದಲ್ಲಿ ಮೇಲಕ್ಕೆತ್ತಿಕೊಂಡಿರುವ ಭಾಗ. (ಕ್ರಿ.) ಗುಂಡು ಗುಬುಟಿನಿಂದ (ಹೇಗೊ ಹಾಗೆ) ಹೊಡೆ, ಬಡಿ; ಮುಷ್ಟಿಯಿಂದ ಹೊಡೆ; ಗುದ್ದು.

Pomólogy ಪೊಮಾಲೊಜಿ (ನಾ.) ಹಣ್ಣಿನ ವ್ಯವಸಾಯ ಶಾಸ್ತ್ರ; ಫಲಕೃಷಿ ಶಾಸ್ತ್ರ. **Pomológical** ಪೋಮೊಲಾ— (ಗು.) **Pomólogist** ಪೊಮಾಲೊಜಿಸ್ಟ್ (ನಾ.)

Pomóna ಪೊಮೋನ (ನಾ.) (ರೋಮನ್ ಪುರಾಣ) ಹಣ್ಣುಗಳ ದೇವತೆ; ಫಲಾಭಿಮಾನಿ ದೇವತೆ. P. green ಹಳದಿಯ ಬಣ್ಣ ಪ್ರಧಾನವಾಗಿರುವ ಹಸುರು ಬಣ್ಣ.

Pomp ಪಾಂಪ್ (ನಾ.) ಉಜ್ಜ್ವಲ ಪ್ರದರ್ಶನ; ಶೋಭಾಯಮಾನತೆ; ವೈಭವ; ಆಡಂಬರ; ಅಟ್ಟಹಾಸ; ನಿಬ್ಬುಬ್ಬು. (ಬ. ವ. ದಲ್ಲಿ) The pomps & vanity of this wicked world ಈ ದುಷ್ಟ ಪ್ರಪಂಚದ ಆಡಂಬರಗಳೂ ವ್ಯರ್ಥಾಭಿಮಾನಗಳೂ. **Pómpous** ಪಾಂಪಸ್ (ಗು.); **Pómpously** (ಕ್ರಿ. ವಿ.); **Pómpousness** (ನಾ.); **Pompósity** (ನಾ.)

Pómpier ಪಾಂಪಿಯರ್ (ಗು.) P. ladder ಬೆಂಕಿಯಾರಿಸುವವನ ಏಣಿ.

Póm-pom ಪಾಂಪಾಂ (ನಾ.) (ಬೇಗ ಬೇಗನೆ ಮತ್ತು ಬಹು ದೂರ ಗುಂಡು ಹಾರಿಸಲು ಅನುಕೂಲಿಸುವ) ಒಂದು ಸ್ವಯಂಚಲ (Maxim ರಚನೆಯ) ಯಂತ್ರ ಫಿರಂಗಿ.

Pómpon ಪಾಂಪಾನ್, ಪಾನ್‌ಪಾನ್ (ನಾ.) [(ಪಾಶ್ಚಾತ್ಯ) ಹೆಂಗಸರ ಮತ್ತು ಮಕ್ಕಳ ಟೊಪ್ಪಿಗೆಯ ಮತ್ತು ಪಾದರಕ್ಷೆಗಳ ಮೇಲೆ ಅಲಂಕಾರಕ್ಕಾಗಿ ಹಾಕುವ] (ಅಲಂಕಾರ ಪಟ್ಟಿ, ಹೂವು, ಮೊ. ಗಳ) ಗೊಂಡೆ, ಗುತ್ತಿ.

Ponceau (F) ಪಾನ್‌ಸೊ (ನಾ.) ಗಸಗಸೆಯ ಹೂವಿನ ಬಣ್ಣ; ಹೊಳಪುಗೆಂಪು.

Pond ಪಾಂಡ್ (ನಾ., ಕ್ರಿ.) (ಹಳ್ಳ ತೋಡಿ ಅಥವಾ ಅಡ್ಡ ಕಟ್ಟೆ ಹಾಕಿ ಮಾಡಿದ) ಕುಂಟೆ, ಕಟ್ಟೆ, ಕೊಳ, ಹೊಂಡ, ಕಲ್ಯಾಣಿ. (ಹಾಸ್ಯ ಪ್ರ.) ಸಮುದ್ರ [Herring-p. (Herring ನೋಡಿ)]. [P.-life ಕೊಳದಲ್ಲಿ ಜೀವಿಸುವ (ಮು., ಅಕಶೇರುಕ) ಪ್ರಾಣಿಗಳು. Póndweed ಕೊಳ, ಕಟ್ಟೆ, ಮೊ. ಗಳಲ್ಲಿ (ನಿಂತ ನೀರಿನಲ್ಲಿ) ಬೆಳೆಯುವ ಸಸ್ಯಜಾತಿ]. (ಕ್ರಿ.) (ಹರಿಯುವ ನೀರನ್ನು) ತಡೆಗಟ್ಟು (*Back* ಪದದೊಡನೆ); (ಹರಿಯುವ ನೀರಿಗೆ) ಒಡ್ಡುಹಾಕು, ಕಟ್ಟೆಕಟ್ಟು (*Up* ಉಪ. ದೊಡನೆ); (ನೀರಿನ ವಿಷಯದಲ್ಲಿ) ಹೊಂಡ, ಕುಂಟೆ, —ಆಗು. **Póndage** —ಡೆ(ಡಿ)ಜ್ (ನಾ.) ಕೊಳದ (ನೀರು ಹಿಡಿಯುವ) ಪ್ರಮಾಣ; ನೀರು ಶೇಖರಿಸುವುದು.

Póndage. **Pond** ನೋಡಿ.

Pónder ಪಾಂಡರ್ (ಕ್ರಿ.) (ವಿಷಯವನ್ನು) ಮನಸ್ಸಿನಲ್ಲಿ ತೂಕಮಾಡು, ವಿಮರ್ಶಿಸು; ಪರ್ಯಾಲೋಚಿಸು; ಆರಯ್ಯಿ (ಗ್ರಾಂ.). ಮನನ ಮಾಡು; ಚಿಂತನೆ ಮಾಡು; ವಿಚಾರ ಮಾಡು (*On, over* ಉಪ. ದೊಡನೆ). **Pónderingly** (ಕ್ರಿ. ವಿ.); **Pónderable** ಪಾಂಡರಬ್‌ಲ್ (ಗು.) ತಕ್ಕಷ್ಟು ತೂಕವುಳ್ಳ (ರೂಪ. ಸಹ); ತೂಕ ಮಾಡಲಾಗುವ. **Ponderabílity** (ನಾ.); **Ponderátion** (ನಾ.) ತೂಗುವುದು (ರೂಪ. ಸಹ). **Pónderous** (ಗು.) ಭಾರವಾದ; ಸುಲಭವಾಗಿ ಹಿಡಿದಾಡಿಸಲಾಗದ; ವಿಪರೀತ ದೊಡ್ಡ. (ಕೆಲಸ) ಬಹು ಪ್ರಯಾಸದ; (ಶೈಲಿ) ಮಂದವಾದ, ಭಾರವಾದ, ಬೇಸರ ಹಿಡಿಸುವ. **Pónderously** (ಕ್ರಿ. ವಿ.); **Pónderousness** (ನಾ.); **Ponderósity** —ರಾಸಿಟಿ (ನಾ.)

Pongeé ಪಾ(ಪ)ಂಜೀ (ನಾ.) ಚೆಲುವೆ (ಮಡಿ) ಮಾಡಿರದ ಮೃದುವಾದ ಒಂದು ಚೀನಾ ರೇಷ್ಮೆ (ಬಟ್ಟೆ)

Póniard ಪಾನ್ಯರ್ಡ್ (ನಾ., ಕ್ರಿ. ಸಕ.) ಕಠಾರಿ; ಢರ್ಜಿ; ಬಾಕು (—ಇಂದ ತಿವಿ, ಇರಿ)

Pons (L) ಪಾನ್ಜ್ (ನಾ.) (ಲ್ಯಾಟಿನ್ ಪದದ ಅರ್ಥ=ಸೇತುವೆ) [P. asinorum (ಕತ್ತೆಯ ಸೇತುವೆ): ಯೂಕ್ಲಿಡ್ಡಿನ ಜ್ಯಾಮಿತಿಯ ಮೊದಲನೆಯ ಪುಸ್ತಕದ ಐದನೆಯ ಪ್ರತಿಜ್ಞೆ (ದಡ್ಡರಿಗೆ ಕಷ್ಟವಾದದ್ದು); (ಆದುದರಿಂದ) ಆರಂಭಕಾರರಿಗೆ ಕಠಿನವಾದದ್ದು]. ಮಿದುಳಿನಲ್ಲಿಯ ನರತಂತುಗಳ ಒಂದು ಕಟ್ಟು (=P. varolii)

Póntifex. **Pontiff** ನೋಡಿ.

Póntiff ಪಾಂಟಿಫ್ (ನಾ.) (ಕ್ರೈಸ್ತರ) ಪೋಪ್ ಗುರು (=Sovereign p.); ಬಿಷಪ್; ಮುಖ್ಯ (ಕ್ರೈಸ್ತ) ಪುರೋಹಿತ. **Póntifex** (ನಾ.; ಬ. ವ. -fices —ಫಿಸೀಜ್) (ರೋ. ಪ್ರಾ.) ರೋಮಿನಲ್ಲಿಯ ಪ್ರಧಾನ ಪುರೋಹಿತ ಸಂಸ್ಥೆಯ ಸದಸ್ಯ (P. maximus ಈ ಸಂಸ್ಥೆಯ ಅಧ್ಯಕ್ಷ); =Pontiff. **Pontífical** —ಫಿಕಲ್ (ಗು., ನಾ.) ಆಚಾರ್ಯ ಧೋರಣೆಯ. ಪಾಂಟಿಫ್ಫ್‌ನ; —ಗೆ ತಕ್ಕ. (ನಾ.) (Western Church ಎಂಬ ಸಂಸ್ಥೆಯಲ್ಲಿ) ಬಿಷಪ್ ಗುರುಗಳು ಮಾಡಬೇಕಾದ ವಿಧಿ ವಿಹಿತ ಕರ್ಮಗಳನ್ನು ಬರೆದಿಟ್ಟಿರುವ ಪುಸ್ತಕ. (ಬ. ವ. ದಲ್ಲಿ) ಬಿಷಪ್ಪಿನ ಪಟ್ಟ ವಸ್ತ್ರ, ಅಧಿಕಾರ ಲಾಂಛನ, ಮೊ. ಪು. **Pontífically** (ಕ್ರಿ. ವಿ.); **Pontificália** (L) —ಕೇಲಿಯ (ನಾ., ಬ. ವ.)=Pontificals. **Pontíficate** —ಕೆಟ್ (ನಾ.) ಪಾಂಟಿಫ್ಫ್‌ನ ಅಧಿಕಾರ, ಅಧಿಕಾರಾವಧಿ. **Póntify** (ಕ್ರಿ. ಅಕ.) —ಅಂತೆ ಆಚರಿಸು, ವರ್ತಿಸು; ತಪ್ಪಿಗೆ ಎಡೆಯೇ ಇಲ್ಲದ ಗುಣವುಳ್ಳವನಂತೆ ಮೆರೆ, ಪ್ರತಿಷ್ಠೆ ತೋರು.

Pont-lévis (F) ಪಾಂಟ್‌ಲೆವಿಸ್, ಪಾನ್‌ಲವೀ (ನಾ.) ಸೆಳೆ ಸೇತುವೆ.

Pontoneér, -iér. **Pontoon** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pontoón ಪಾಂಟೂನ್ (ನಾ., ಕ್ರಿ. ಸಕ.) ದಾಟು ದೋಣಿ, ಮೊ. ಗಿ ಉಪಯೋಗಿಸುವ ಚಪ್ಪಟೆ ತಳದ ದೋಣಿ. ತಾತ್ಕಾಲಿಕವಾದ ಸೇತುವೆಗೆ ಆಧಾರವಾಗಿ ಉಪಯೋಗಿಸುವ ಅನೇಕ ದೋಣಿಗಳಲ್ಲಿ ಅಥವಾ ಲೋಹದ ಪೊಳ್ಳು ಉರುಳೆಗಳಲ್ಲಿ ಒಂದು; =Caisson (ಕೊನೆಯ ಎರಡು ಅರ್ಥಗಳಲ್ಲಿ ಮಾತ್ರ). (ಕ್ರಿ.) (ನದಿಯನ್ನು) ದೋಣಿ ಸೇತುವೆಯ ಮೂಲಕ ದಾಟು. **Pontoneér, -iér** (ನಾ.) ಸೇತುವೆ ದೋಣಿಗಳ ಉಸ್ತುವಾರಿ ನೋಡಿಕೊಳ್ಳುವವನು; ದೋಣಿ ಸೇತುವೆ ಕಟ್ಟುವ ಕೆಲಸವನ್ನು ಮಾಡಿಸಲು ನಿಯಮಿತನಾದವನು.

Póny ಪೋನಿ (ನಾ.) ಸಣ್ಣ ತಳಿಯ ಕುದುರೆ [ಮು., ೧೩ ಅಥವಾ ೧೪ ಹಸ್ತ (ಹಸ್ತ=೪ ಅಂಗುಲ) ಎತ್ತರ ಮೀರದ್ದು]; ತಟ್ಟು; ಟಾಕಣ. (ಅಸಂ.) ೨೫ ಪೌಂಡು ಹಣ.

Poódle ಪೂಡ್‌ಲ್ (ನಾ., ಕ್ರಿ. ಸಕ.) ಅನೇಕ ವೇಳೆ ಚಿತ್ರ ವಿಚಿತ್ರವಾಗಿ ಕೂದಲು ಕತ್ತರಿಸಿದ ಅಥವಾ ಬೋಳಿಸಿದ, ಉದ್ದವಾದ ಗುಂಗುರು ಕೂದಲಿನ, ಮುದ್ದಿಗಾಗಿ ಸಾಕುವ, ನಾಯಿ (ಜಾತಿ). (ಕ್ರಿ.) (ನಾಯಿಗೆ) ಹೀಗೆ ಕೂದಲು ಕತ್ತರಿಸಿ ಬೋಳಿಸು.

Pooh ಪೂ, ಪುಹ್ (ಭಾವ. ಅವ್ಯ.) (ಅಸಹನೆ, ತಿರಸ್ಕಾರ—ಇವನ್ನು ಸೂಚಿಸುವ ಪದ). **Pooh-poóh** ಪೂಪೂ (ಕ್ರಿ. ಸಕ.) (ಒಂದು ವಿಚಾರದಲ್ಲಿ) ತಿರಸ್ಕಾರ ಸೂಚಿಸು; ಲಾಘವವಾಗಿ ಕಾಣು (He pooh-poohed the idea)

Pool[1] ಪೂಲ್ (ನಾ., ಕ್ರಿ. ಸಕ.) (ಸಾ., ಸಹಜ ರೀತಿಯಲ್ಲಿ ಸೇರಿದ) ನಿಲು ನೀರಿನ ಸಣ್ಣ ಪ್ರದೇಶ; ನಿಂತ ನೀರು; ಯಾವುದಾದರೂ ದ್ರವದ ಸಣ್ಣ ಒಟ್ಟಿಲು (ಉದಾ., A pool of blood). ನದಿಯಲ್ಲಿ ಆಳವಾದ ಹರಿವಿಲ್ಲದ ನೀರಿನ ಪ್ರದೇಶ: ಮಡು; ಕೊಳ್ಳ. (ಕ್ರಿ.) (ಕಲ್ಲೆಬ್ಬಿಸು ವುದರಲ್ಲಿ ಆಪು ಹೊಡೆಯಲು) ಕುಳಿ ಮಾಡು; (ಕಲ್ಲಿದ್ದಲು ತೆಗೆಯುವಲ್ಲಿ ದಿಮ್ಮಿ ದಿಮ್ಮಿಯಾಗಿ ಉರುಳಿಸಲು) ತಳ ಕತ್ತರಿಸು.

Pool[2] ಪೂಲ್ (ನಾ., ಕ್ರಿ. ಸಕ.) (ಇಸ್ಪೀಟಾಟ) ಆಟಗಾರರೆಲ್ಲರೂ ಒಡ್ಡಿದ ಹಣದ ಮತ್ತು ದಂಡದ ಮೊತ್ತ; ಇದನ್ನು ಹಾಕುವ ಪಾತ್ರೆ. (ಜೂಜು, ಮೊ. ಗಳಲ್ಲಿ) ಒಟ್ಟು ಪಣ. ಪೈಪೋಟಿ ತಪ್ಪಿಸುವುದಕ್ಕಾಗಿ ಪೈಪೋಟಿಗಾರರೆಲ್ಲರೂ ಸೇರಿ ಬೆಲೆಗಳನ್ನು ನಿಗದಿ ಮಾಡಿ, ವ್ಯಾಪಾರ ವನ್ನು ಎಲ್ಲರೂ ಹಂಚಿಕೊಳ್ಳುವ ಏರ್ಪಾಟು; ಹಂಚಿಕೆ ವ್ಯಾಪಾರದ ಏರ್ಪಾಟು. ಸಾಮಾನ್ಯಾನುಭವದ ನಿಧಿ, ಕೂಡುಹಣ (ಉದಾ., ಪ್ರತ್ಯೇಕ ವ್ಯಾಪಾರ ಸಂಸ್ಥೆಗಳಿಂದ ಬಂದ ಲಾಭದ ಹಣದ್ದು). (ಕ್ರಿ.) ಕೂಡುನಿಧಿಗೆ ಹಾಕು; (ಬಂಡವಾಳ, ಮೊ. ನ್ನು) ಒಗ್ಗೂಡಿಸು; (ಸ್ಪರ್ಧಿಸುವ ರೈಲ್ವೆ ಸಂಸ್ಥೆಗಳು, ಮೊ. ಗಳ ವಿಷಯದಲ್ಲಿ: ಸರಕಿನ ಮತ್ತು ಪ್ರಯಾಣಿಕರ ಸಾಗಣೆಯನ್ನೂ ಒಟ್ಟು ಲಾಭವನ್ನೂ) ಹಂಚಿಕೊ.

Poop[1] ಪೂಪ್ (ನಾ., ಕ್ರಿ. ಸಕ.) ಹಡಗಿನ ಹಿಂಭಾಗ; ಹಡಗಿನ (ಹಿಂಭಾಗದ) ಅತ್ಯಂತ ಮೇಲಿನ ಅಟ್ಟ. (ಕ್ರಿ.) (ಅಲೆಗಳ ವಿಷಯದಲ್ಲಿ) ಹಡಗಿನ ಹಿಂಭಾಗಕ್ಕೆ ಹೊಡೆ; (ಹಡಗಿನ ವಿಷಯದಲ್ಲಿ) ಹಿಂಭಾಗ ಅಲೆಯ ಹೊಡೆತಕ್ಕೆ ಸಿಕ್ಕು. **(-)poóped** (ಗು.)

Poop[2]. **Pope**[3] ನೋಡಿ.

Poop[3] ಪೂಪ್ (ನಾ.) (ಅಸಂ.) ಲೆಕ್ಕಕ್ಕೆ ಬಾರದ ಅವಿವೇಕಿ.

Poor ಪೂ(ಅ)ರ್ (ಗು.) ಸುಖಜೀವನಕ್ಕಾಗಲಿ ಸಾಮಾನ್ಯಜೀವನಕ್ಕಾಗಲಿ ಅನುಕೂಲಗಳಿಲ್ಲದ; ಬಡವನಾದ; ಬಡತನದ; ದರಿದ್ರ; ರಿಕ್ತ. (ಆಸ್ತಿ, ಗುಣ, ಮೊ. ವು) ಸಾಕಷ್ಟಿಲ್ಲದ, ನ್ಯೂನ (*In* ಉಪ. ದೊಡನೆ). (ಭೂಮಿ, ಮಣ್ಣು) ಫಲವತ್ತಲ್ಲದ. ಬಹು ಸ್ವಲ್ಪವಾದ; ಬೇಕಾದಷ್ಟಿಲ್ಲದ; ಸಾಕಾಗದ; ನಿರೀಕ್ಷಿಸಿದ್ದಕ್ಕಿಂತ ಕಡಮೆಯಾದ (The crop was p. A p. three weeks' holiday). ಅಲ್ಪ; ಸ್ವಲ್ಪ; ಲೆಕ್ಕಕ್ಕೆ ಬರದ (That is a p. consolation). ಹುಮ್ಮಸ್ಸಿಲ್ಲದ; ಉತ್ಸಾಹ ಶೂನ್ಯ; ನಿಸ್ಸತ್ವ; ತುಚ್ಛ (He is a p. creature). ದೀನ; ಅಲ್ಪ; ನಿಕೃಷ್ಟ (ಅನೇಕ ವೇಳೆ ವ್ಯಂಗ್ಯ ಪ್ರ. ಅಥವಾ ಹಾಸ್ಯ ಪ್ರ.: In my p. opinion). (ಕನಿಕರ, ಅನುತಾಪ, —ಸೂಚಕ ಪ್ರ.) ದುರದೃಷ್ಟ(ಶಾಲಿಯಾ)ದ; ದುರ್ದೈವದ (P. fellow! The p. child is inconsolable). The p. (ದಾನ ಧರ್ಮ, ಊರಿನ ಸಹಾಯ—ಇವನ್ನೇ ನಂಬಿಕೊಂಡಿರುವ) ಬಡಬಗ್ಗರು. **P.-box** (ಮು., ಕ್ರೈಸ್ತ ಆರಾಧನ ಮಂದಿರಗಳಲ್ಲಿ ಬಡವರ ಸಹಾಯಕ್ಕಾಗಿ ಸಾಮಾಜಿಕರು ದುಡ್ಡು ಹಾಕಲು ಇಟ್ಟಿರುವ) ಧರ್ಮದ ಡಬ್ಬಿ. **P.-house** = Work-house. **P.-law** ನಿರ್ಗತಿಕರ (ಪೋಷಣೆಗೆ ಸಂಬಂಧಿಸಿದ) ಕಾನೂನು. **P.-rate** ಬಡವರ ಸಹಾಯಕ್ಕಾಗಿ ಅಥವಾ ಪೋಷಣೆಗಾಗಿ ಎತ್ತುವ ತೆರಿಗೆ, ಹಾಕುವ ಕಂದಾಯ; ಬಡವರ ತೆರಿಗೆ. **P.-spirited** ಕೆಚ್ಚಿಲ್ಲದ; ಧೈರ್ಯವಿಲ್ಲದ; ಪುಕ್ಕಲೆದೆಯ; ಹೊಳ್ಳೆದೆಯ. **Poórly** (ಕ್ರಿ. ವಿ., ಗು.) ಅಲ್ಪವಾಗಿ; ಕೊರತೆಯಾಗಿ; ಅಷ್ಟು ಉಪಯೋಗ ಕಾಣದೆ; ಹೀನ ವಾಗಿ; ತುಚ್ಛವಾಗಿ. (ಗು.) ಅಸ್ವಸ್ಥವಾದ; ಮೈ ಸರಿಯಿಲ್ಲದ; ಇಳಿದುಹೋದ [He is (looking) very p.]. **Poórness** (ನಾ.) ಕೊರತೆ; ನ್ಯೂನತೆ; (ಒಂದು ಒಳ್ಳೆಯ ಗುಣದ ಅಥವಾ ಅಂಶದ) ಅಭಾವ.

Pop[1] ಪಾಪ್ (ಕ್ರಿ., ನಾ., ಕ್ರಿ. ವಿ., ಭಾವ. ಅವ್ಯ.) (ಸೀಸೆಯಿಂದ ಬಿರಡೆ ತೆಗೆದಾಗ ಆಗುವಂತೆ) 'ಪಾಪ್' ಎಂದು ಶಬ್ದ ಮಾಡು. (ಬಂದೂಕು, ಮೊ. ನ್ನು) ಹಾರಿಸು, ಉಡಾಯಿಸು. (ಹಕ್ಕಿ, ಮೊ. ಕ್ಕೆ) ಗುಂಡು ಹೊಡೆ. ಬೇಗನೆ, ಥಟ್ಟನೆ, —ಹಾಕು, ಇಡು (*In*, *out*, *down*, ಮೊ. ಉಪ. ದೊಡನೆ). ಥಟ್ಟನೆ, ಬೇಗನೆ, —ಚಲಿಸು, ಹೋಗು, ಬಾ (*In*, ಮೊ. ಉಪ. ದೊಡನೆ). ಇದ್ದಕ್ಕಿದ್ದಹಾಗೆ, ಥಟ್ಟನೆ, (ಪ್ರಶ್ನೆ) ಹಾಕು [(ಬಳ. ಮಾ.) P. the question ಮದುವೆಯ ಪ್ರಸ್ತಾಪ ಮಾಡು]. (ಅಸಂ.) ಒತ್ತೆ, ಅಡವು, —ಇಡು. [(ಅಸಂ.) P. off (the hooks) ಸಾಯಿ; ಗೋತಾಹೊಡಿ]. (ಅಮೆ. ಸಂ.) (ಮುಸುಕಿನ ಜೋಳವನ್ನು) ಅರಳಾಗುವಂತೆ ಹುರಿ (P.-corn ಮುಸುಕಿನ ಜೋಳದ ಅರಳು). [P.-gun ಕೊಳವಿಯಲ್ಲಿಯ ಗಾಳಿಯನ್ನು ಗಜದಿಂದ (ಆಡುಬೆಣೆಯಿಂದ) ಅಮುಕಿ ಬಿರುಸು ಮಾಡಿ ಕೊನೆಯಲ್ಲಿರುವ ಸಣ್ಣ ಉಂಡೆಗಳನ್ನು ಹಾರಿಸುವ ಮಕ್ಕಳ ಆಟದ ಬಂದೂಕು: ಪೆಟ್ಟಲು (ಕೋವಿ); (ತುಚ್ಛವಾಗಿ) ಕೆಲಸಕ್ಕೆ ಬಾರದ ಬಂದೂಕು. P.-shop ಗಿರವಿ(ಯವನ), ಒತ್ತೆಗಾರನ, ಅಂಗಡಿ]. (ನಾ.) ಥಟ್ಟನೆಯ ಸಿಡಿತದ ಶಬ್ದ; 'ಪಾಪ್' ಎಂಬ ಶಬ್ದ. (ಮು., ಕುರಿ, ಮೊ. ಗಳ ಮೈಮೇಲೆ ಗುರುತು ಮಾಡುವ) ಚುಕ್ಕೆ, ಕಲೆ. (ಬಳ. ಮಾ.) ನೊರೆಗರೆಯುವ ಪಾನೀಯ (ಮು., ಶುಂಠಿಯ ಬಿಯರ್ ಮದ್ಯ ಅಥವಾ ಷ್ಯಾಂಪೇಯ್ನ್ ಮದ್ಯ). (ಅಸಂ.) ಒತ್ತೆಯಿಡು ವುದು (ಮು., In p. ಒತ್ತೆಯಲ್ಲಿ). (ಭಾವ. ಅವ್ಯ. ಅಥವಾ ಕ್ರಿ. ವಿ.) Heard it go p.! 'ಪಾಪ್' ಎಂದು (ಶಬ್ದಮಾಡಿ) ಸಿಡಿದದ್ದು ಕೇಳಿಸಿತು. **Pópping** (ನಾ.) (ಕ್ರಿಯಾರ್ಥಗಳಲ್ಲಿ); (ಕ್ರಿಕೆಟ್) P.-crease ದಾಂಡು ಗಾರನು ಅದರೊಳಗೆಯೇ ನಿಂತುಕೊಳ್ಳಬೇಕೆಂದು, ಗುರಿಕೋಲಿನ ಮುಂದೆ ೪ ಅಡಿಯ ದೂರದಲ್ಲಿ ಸಮಾನಾಂತರವಾಗಿ ಎಳೆದ ಗೆರೆ.

Pop[2] ಪಾಪ್ (ನಾ.) (ಬಳ. ಮಾ.) ಜನಪ್ರಿಯವಾದ ಒಂದು ಮೇಳ, ಗಾನ ಗೋಷ್ಠಿ (Saturday pops)

Pop[3] ಪಾಪ್ (ನಾ.) ಈಟನ್ ಪ್ರೌಢ ಕಲಾಶಾಲೆಯಲ್ಲಿರುವ ಸಲ್ಲಾಪ ಗೋಷ್ಠಿ, ಚರ್ಚಾ ಗೋಷ್ಠಿ.

Pop[4]. **Poppa** ನೋಡಿ.

Pope[1] ಪೋಪ್ (ನಾ.) ರೋ. ಕ್ಯಾ. ಕ್ರೈಸ್ತ ಮತದ ಅಧ್ಯಕ್ಷನಾದ ರೋಮಿನ ಬಿಷಪ್: 'ಪೋಪ್' ಗುರು. (ರೂಪ.) ತಾನು ದೋಷಾ ತೀತನೆಂಬ ಭಾವನೆ ಹೊಂದಿರುವವನು; ದೋಷಾತೀತನೆಂದು ಇತರರಿಂದ ಭಾವಿಸಲ್ಪಟ್ಟಿರುವವನು. P. Joan ಕಾಲ್ಪನಿಕ ಸ್ತ್ರೀಪೋಪು. ಒಂದು ತೆರದ ಇಸ್ಪೀಟಾಟ. P.'s head (ಒಳ ಮಾಳಿಗೆ, ಮೊ. ವನ್ನು ಗುಡಿಸಲು ಉಪಯೋಗಿಸುವ) ಉದ್ದ ಹಿಡಿಯ ದುಂಡು ಪೊರಕೆ. **Pópedom** (ನಾ.) ಪೋಪಿನ ಸ್ಥಾನ ಮಾನ, ಮೊ. ವು; (ಹಾಸ್ಯವಾಗಿ) ಸರ್ವ ತಂತ್ರ ಸ್ವತಂತ್ರಾಧಿಕಾರ. **Pópeless** (ಗು.); **Pópery** (ನಾ.) ಪೋಪಿಗೆ ಸಂಬಂಧಿಸಿದ ಮತ ತತ್ತ್ವಗಳು, ಆಚರಣೆಗಳು ಮತ್ತು ನಿತ್ಯ ನೈಮಿತ್ತಿಕ ಕರ್ಮಗಳು; ರೋ. ಕ್ಯಾ. ಪದ್ಧತಿ; ರೋ. ಕ್ಯಾ. ಮತ; ಪೋಪ್ ಮತ (ವಿಧರ್ಮಿಗಳ ಪ್ರ.) **Pópish** (ಗು.) ರೋ. ಕ್ಯಾ. ಮತದ (ವಿಧರ್ಮಿಗಳ ಪ್ರ.). **Pópishly** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pope[2] ಪೋಪ್ (ನಾ.) ರಷ್ಯ, ಮೊ. ದೇಶಗಳಲ್ಲಿ ಗ್ರೀಕ್ ಚರ್ಚಿನ (ಹಳ್ಳಿಯ) ಪ್ರಾಂತ ಪುರೋಹಿತ; ಹಳ್ಳಿಯ ಪಾದ್ರಿ.

Pope[3] ಪೋಪ್, **Poop** ಪೂಪ್ (ನಾ., ಕ್ರಿ. ಸಕ.) ತೊಡೆಯಮೇಲೆ ಏಟು ಬಿದ್ದರೆ ಬಲು ನೋವಾಗುವ ಅಥವಾ ಚಲನಶಕ್ತಿ ತಪ್ಪಿಹೋಗುವ ಸ್ಥಳ; (ತೊಡೆಯ) ನೆರ, ಮರ್ಮಸ್ಥಾನ. Take person's p. (ಒಬ್ಬನ) ತೊಡೆಯ ಮರ್ಮಸ್ಥಾನದಲ್ಲಿ ಹೊಡೆ [=Pope (ಕ್ರಿ.)]

Pópinjay ಪಾಪಿಂಜೇ (ನಾ.) (ಪ್ರಾಚೀ. ಪ್ರ.) ಗಿಳಿ; ಗಿಣಿ. (ಚರಿತ್ರೆ) ಕೋಲಿನ ಮೇಲೇರಿಸಿ ಗುರಿಯಾಗಿಟ್ಟ ಗಿಳಿಯಾಕೃತಿ; ಗುರಿ ಗಿಳಿ. ಅಹಂಕಾರಿ; ಜಂಬಗಾರ; ಪ್ರತಿಷ್ಠೆಯವನು. (ಪ್ರಾಂ. ಪ್ರ.) ಹಸುರು ಮರಕುಟಿಗನ ಹಕ್ಕಿ.

Póplar ಪಾಪ್ಲರ್ (ನಾ.) ಬಹು ಬೇಗ ಬೆಳೆಯುವ ನೇರವಾದ ಒಂದು ದೊಡ್ಡ ಮರ(ದ ಜಾತಿ) (ಅನೇಕ ವೇಳೆ, ನೇರವಾಗಿರುವ ಇದರ ಕಾಂಡದ ವಿಷಯ ಹಿಡಿದು ಪ್ರ.)

Póplin ಪಾಪ್ಲಿನ್ (ನಾ.) ರೇಷ್ಮೆಯ ಹಾಸೂ ಉಣ್ಣೆಯ ಹೊಕ್ಕೂ ಸೇರಿಸಿ ಹುರಿಮೈ ಬರುವಂತೆ ನೆಯ್ದ ಬಟ್ಟೆ (ಈಗ ಮು., ಐರ್ಲಂಡಿನಲ್ಲಿ ತಯಾರಾಗುತ್ತದೆ)

Poplíteal ಪಾಪ್ಲಿಟಿಯಲ್ (ಗು.) ಮಂಡಿಯ ಹಿಂಭಾಗದಲ್ಲಿಯ ಕುಳಿಯ.

Pop(pa) ಪಾಪ್(ಪ) (ನಾ.) (ಅಮೆ. ಸಂ.) ಅಪ್ಪ; ತಂದೆ.

Póppet ಪಾಪೆಟ್ (ಈಗ ಪ್ರಾಂ. ಪ್ರ.) (ಮು., ಪ್ರೀತಿಯ ಮಾತಾಗಿ) ಪುಟ್ಟ ಮನುಷ್ಯ; ಪುಟ್ಟು; ಮರಿ. ಕಡೆತದ ಯಂತ್ರದಲ್ಲಿ ತಳಗಡೆ ಮಾತ್ರ ಬಂಧಿಸಿರುವ ನಿಲು ಆಧಾರ ಅಥವಾ ನಿಯಂತ್ರಕ (=P.-head). (ನಾವೆ) (ಹಲವು ಕೆಲಸಗಳಿಗೆ ಉಪಯೋಗಿಸುವ) ಮರದ ಸಣ್ಣ ತುಂಡು. (ಗಣಿ ಕೆಲಸದಲ್ಲಿ) ಸುರಂಗದ ಮೇಲ್ಭಾಗದಲ್ಲಿ ಎತ್ತಿಗೆಯ ಹಗ್ಗಗಳನ್ನು ಹಾಯಿಸಿರುವ ಕಪ್ಪಿಗಳಿಗೆ ಆಧಾರವಾದ ಚೌಕಟ್ಟು.

Pópple ಪಾಪ್ಲ್ (ಕ್ರಿ. ಅಕ., ನಾ.) (ನೀರಿನ ವಿಷಯದಲ್ಲಿ) ಉರುಳು; ಹೊರಳು; (ಹಿಂದಕ್ಕೂ ಮುಂದಕ್ಕೂ) ಹೊಯ್ದಾಡು. (ನಾ.) ಉರುಳಾಟ; ಹೊರಳಾಟ; ಸಣ್ಣ ಅಲೆ. **Pópply** (ಗು.)

Póppy ಪಾಪಿ (ನಾ.) ಹೊಳಪುಗೆಂಪು ಬಣ್ಣದ ಅಥವಾ ಇತರ ಬಣ್ಣದ ಹೂವು ಬಿಡುವ, ಮತ್ತು ಬರಿಸುವ ಗುಣದ ಹಾಲುಳ್ಳ, ಒಂದು ಸಸ್ಯ ಜಾತಿ: ಗಸಗಸೆ ಗಿಡ [Opium p. ಅಫೀಮು ಗಸಗಸ ಗಿಡ. Flanders poppies ಕಳೆದ ಮಹಾ ಯುದ್ಧದಲ್ಲಿ ಮಡಿದವರಿಗಾಗಿ ಪವಿತ್ರವಾಗಿಟ್ಟಿರುವ ಗಸಗಸೆ ಹೂವುಗಳು; Poppy Day ಎಂಬ ಹೆಸರಿನ ಸ್ಮಾರಕ ದಿನದಲ್ಲಿ (ನವೆಂಬರು ೧೧) ಜನರಿಗೆ ಮಾರುವುದಕ್ಕಾಗಿ ತಯಾರಿಸಿದ ಗಸಗಸ ಹೂವುಗಳು. P.-head ಗಸಗಸ ಕಾಯಿ; (ವಾ.ಶಾ.) ಕ್ರೈಸ್ತ ದೇವಾಲಯದ ಪೀಠದ ಅಗ್ರದಲ್ಲಿಯ ಶಿಖರಾಲಂಕಾರ]. **Póppied** (ಗು.)

Pópsy(-wopsy) ಪಾಪ್ಸಿ(ವಾಪ್ಸಿ) (ನಾ.) ಹುಡುಗಿ(ಗೆ ಮುದ್ದಿನ ಹೆಸರು)

Pópulace ಪಾಪ್ಯುಲೆ(ಲ)ಸ್ (ನಾ.) ಸಾಮಾನ್ಯ ಜನ; ಪಾಮರರು; ಮಂದಿ; ನೆರವಿ; ದೊಂಬಿ.

Pópular ಪಾಪ್ಯುಲರ್ (ಗು.) ಜನತೆಯ; ಜನಸಾಮಾನ್ಯದ; ಜನರು ನಡಸುವ (P. election, meetings, tumult). ಜನಸಾಮಾನ್ಯದ ತಿಳಿವಳಿಕೆಗೆ, ಅಭಿರುಚಿಗೆ ಅಥವಾ ಅನುಕೂಲ್ಯಗಳಿಗೆ ತಕ್ಕ [In p. language. P. science. At p. prices (ಸಾಮಾನ್ಯರೂ ಕೊಂಡುಕೊಳ್ಳಬಹುದಾದ) ಕಡಮೆ ಬೆಲೆಗೆ]. ಜನಪ್ರಿಯವಾದ; ಜನಾದರಣೀಯವಾದ (*With* ಉಪ. ದೊಡನೆ) (P. teachers. The p. hero. Is p. with his men). ಜನರಲ್ಲಿ ಹಬ್ಬಿರುವ (P. fallacies). **Populárity** —ರ್ಯಾ— (ನಾ.); **Pópularly** —ಲ— (ಕ್ರಿ. ವಿ.); **Pópularize** (ಕ್ರಿ. ಸಕ.) ಜನಾದರಣೀಯ ಮಾಡು; (ಒಬ್ಬನನ್ನು, ಒಂದು ತತ್ತ್ವ, ಮೊ. ನ್ನು) ಎಲ್ಲರಿಗೂ ತಿಳಿಯುವಂತೆ ಅಥವಾ ಮೆಚ್ಚುವಂತೆ ಮಾಡು; ಜನರಲ್ಲಿ ಹರಡು. (ಚುನಾವಣೆ ಹಕ್ಕು, ಮೊ. ನ್ನು) ಜನಸಾಮಾನ್ಯಕ್ಕೂ ವಿಸ್ತರಿಸು. (ಪಾರಿಭಾಷಿಕ ಶಾಸ್ತ್ರ ವಿಷಯ, ಮೊ. ನ್ನು) ಜನಸಾಮಾನ್ಯಕ್ಕೂ ತಿಳಿಯುವಂತೆ ಹೇಳು. **Popularizátion** (ನಾ.)

Pópulate ಪಾಪ್ಯುಲೇಟ್ (ಕ್ರಿ. ಸಕ.) (ಒಂದು ದೇಶ, ಪಟ್ಟಣ, ಮೊ. ಗಳಲ್ಲಿ) ವಾಸಿಸು; (—ಮೊ. ರ) ಜನವಾಗಿರು; ಜನವಿಶಿಷ್ಟ ಮಾಡು; ಜನರನ್ನು ತಂದು ಸೇರಿಸು (A densely populated district ಜನ ಸಾಂದ್ರತೆ ಹೆಚ್ಚಾಗಿರುವ ಪ್ರಾಂತ). **Populátion** (ನಾ.) ಜನ; ಜನ ಸಂಖ್ಯೆ. ಜನನಿಬಿಡತೆ; —ಸಾಂದ್ರತೆ (Density of p.). (ಒಂದು ದೇಶದ) ಜನರು, ಪ್ರಜೆ [An A1, a C3, p. (ಸೈನಿಕ ವರ್ಗೀಕರಣದಲ್ಲಿ ಜನರ ದಕ್ಷತೆಯನ್ನನುಸರಿಸಿ ಮಾಡುವ A1 ಇಂದ C3 ವರೆಗಿನ ತರಗತಿಗಳು) ಅತ್ಯುತ್ತಮ, ಅತಿ ಕೀಳು, —ದಕ್ಷತೆಯ ಪ್ರಜೆಗಳು]. ಒಂದು ಸ್ಥಳದ, ಊರಿನ, —ನಿವಾಸಿಗಳು, ಜನರು (The p. turned out to welcome him). **Pópulous** (ಗು.) ಜನಭರಿತವಾದ; ಹೆಚ್ಚು ಸಾಂದ್ರತೆಯುಳ್ಳ. **Pópulousness** (ನಾ.)

Pópulist ಪಾಪ್ಯುಲಿಸ್ಟ್ (ನಾ.) ರೈಲ್ವೆ ಆಡಳಿತ ಸಾರ್ವಜನಿಕವಾಗಿರಬೇಕೆಂಬ, ವರಮಾನದ ತೆರಿಗೆ ತರಗತಿವಾರಾಗಿರಬೇಕೆಂಬ, ಮೊ. ಗುರಿಯಿಟ್ಟುಕೊಂಡು ಅಮೆ. ಸಂ. ದಲ್ಲಿ ೧೮೯೧ರಲ್ಲಿ ಸ್ಥಾಪಿಸಿದ ಒಂದು ರಾಜಕೀಯ ಪಕ್ಷದ ಅನುಯಾಯಿ; ಸಮಷ್ಟಿವಾದವನ್ನು ಸಮರ್ಥಿಸುವ ರಷ್ಯದ ಒಂದು ರಾಜಕೀಯ ಪಕ್ಷದವನು. **Pópulism** (ನಾ.); **Populístic** (ಗು.)

Pópulous. **Populate** ನೋಡಿ.

Pórcelain ಪಾ(ಪೋ)ರ್ಸ್‌ಲೆನ್, ಪೋರ್ಸ್(ಸೆ)ಲಿನ್, ಪೋರ್ಸಿಲೇನ್ (ನಾ.) ಅರೆ ಪಾರದರ್ಶಕದ ಒಡಲೂ, ಪಾರದರ್ಶಕವಾದ ಹೊಳಪು ಮೈಯೂ ಉಳ್ಳ, ನಯವಾದ ಒಂದು ಬಗೆಯ ಮಣ್ಣು; ಇದರಿಂದ ಮಾಡಿದ ಪಾತ್ರೆಗಳು: ಪಿಂಗಾಣಿ (ಸಾಮಾನು). (ರೂಪ. ವಿಶೇಷಣವಾಗಿ) ಬಹಳ ಸೂಕ್ಷ್ಮತೆರದ; ಸುಲಭವಾಗಿ ಒಡೆದು ಹೋಗುವ; ಛಿದುರ. P.-shell ಕವಡೆ. P. clay ಪಿಂಗಾಣಿ ಜೇಡಿಮಣ್ಣು. **Pórcelainous** (ಗು.); **Porcelláneous** (ಗು.); **Porcellánic** (ಗು.); **Porcéllanous** (ಗು.); **Pórcelainize** (ಕ್ರಿ. ಸಕ.) (ಜೇಡಿ, 'ಷೇಲ್' ಕಲ್ಲು, ಮೊ. ನ್ನು) ಪಿಂಗಾಣಿಯಾಗಿ ಮಾಡು.

Porch ಪೋರ್ಚ್ (ನಾ.) (ಕಟ್ಟಡದ) ದ್ವಾರ ಮಂಟಪ, ಮುಖ ಮಂಟಪ. The P. (ಗ್ರೀಕ್ ತತ್ತ್ವಶಾಸ್ತ್ರಜ್ಞನಾದ) ಜೀನೊ ಎಂಬಾತನು ಅವನ ಶಿಷ್ಯರಿಗೆ ಪಾಠ ಹೇಳುತ್ತಿದ್ದ ಅಥೆನ್ಸಿನಲ್ಲಿಯ ಕಂಬಸಾಲಿನ ಕೈಸಾಲೆ; (ಇದರಿಂದ) 'ಸ್ಟೋಯಿಕ್' (Stoic) ಪಂಥದ ತತ್ತ್ವ, ದರ್ಶನ. **Porched** (ಗು.); **Pórchless** (ಗು.)

Pórcine ಪಾರ್ಸೈನ್ (ಗು.) ಹಂದಿಯ(ಂಥ)

Pórcupine ಪಾರ್ಕ್ಯುಪೈನ್ (ನಾ.) ಮುಳ್ಳುಹಂದಿ (ನಿಗುರಿಸಲಾಗುವ ಮುಳ್ಳುಗರಿಗಳಿಂದ ಕೂಡಿದ ಒಡಲೂ ಬಾಲವೂ ಉಳ್ಳ ಒಂದು ದಂಶಕ ಚತುಷ್ಪಾದಿ). ಹಲವು ಮುಳ್ಳುಗಳು, ಹಲ್ಲುಗಳು, —ಉಳ್ಳ ಯಂತ್ರ (ಉದಾ., ನಣಬು ಹಿಕ್ಕುವ ಯಂತ್ರ, ಮೊ. ದು). (ವಿಶೇಷಣವಾಗಿ: P. ant-eater, P. crab, P. fish, P. grass). **Pórcupinish** (ಗು.); **Pórcupiny** (ಗು.)

Pore[1] ಪೋ(ಅ)ರ್ (ನಾ.) (ದ್ರವ ಜಿನುಗಲು ಅವಕಾಶ ಕೊಡುವ, ಸಾ., ಬರಿಯ ಕಣ್ಣಿಗೆ ಕಾಣಿಸದ) (ಮು., ಪ್ರಾಣಿಯ ದೇಹದ ಚರ್ಮದಲ್ಲಿಯ) ಸಣ್ಣ ರಂಧ್ರ; ರೋಮ ಕೂಪ.

Pore[2] ಪೋರ್ (ಕ್ರಿ.) [P. over (ಗ್ರಂಥ, ಮೊ. ಗಳ) ವ್ಯಾಸಂಗದಲ್ಲಿ ಮಗ್ನನಾಗಿರು. (ರೂಪ.) (ವಿಷಯವನ್ನು) ಗಾಢವಾಗಿ ಯೋಚನೆ ಮಾಡು; ಮನನ ಮಾಡು; ಚಿಂತನೆ ಮಾಡು; ಧ್ಯಾನಮಗ್ನನಾಗಿರು]. (ಪ್ರಾಚೀ. ಪ್ರ.) (—ಕಡೆಗೆ) ನೆಟ್ಟ ಕಣ್ಣಿನಿಂದ, ಶ್ರದ್ಧಾಪೂರ್ವಕವಾಗಿ, ನೋಡು (*At*, *on*, *over* ಉಪ. ದೊಡನೆ). P. one's eyes out ಕಣ್ಣಿಟ್ಟು ಓದಿ ಓದಿ ಕಣ್ಣನ್ನು ಬಳಲಿಸು, ದಣಿಸು, ಆಯಾಸಗೊಳಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Porge ಪೋರ್ಜ್ (ಕ್ರಿ. ಸಕ.) (ಯೆಹೂದ್ಯ ಮತವಿಧಿ) (ಬಲಿಕೊಟ್ಟ ಪಶುವಿನ ದೇಹದಿಂದ ಗಟ್ಟಿ ಸ್ನಾಯು, ಮೊ. ನ್ನು ತೆಗೆದುಹಾಕಿ) ಪಶುವನ್ನು ಪವಿತ್ರ ಮಾಡು. **Pórger** (ನಾ.)

Pórism ಪೋರಿಸ್ಮ್, ಪಾರಿ— (ನಾ.) (ಗಣಿತ, ಜ್ಯಾಮಿತಿ) ಬಹುವಿಧ ಪರಿಹಾರಗಳು ಸಾಧ್ಯವಾದಂಥ ಗಣಿತ ಪ್ರಮೇಯ; ಅನುಸಿದ್ಧಾಂತ. **Porismátic** (ಗು.); **Porístic** (ಗು.)

Pork ಪೋರ್ಕ್ (ನಾ.) (ಆಹಾರಕ್ಕಾಗಿ ಉಪಯೋಗಿಸುವ) ಹಂದಿಯ ಮಾಂಸ (ಮು., ಹೊಸದು). P.-butcher ಮಾರಾಟಕ್ಕಾಗಿ ಹಂದಿಗಳನ್ನು ಕಡಿಯುವವನು: ಹಂದಿ ಕಟುಕ. P.-pie ಹಂದಿ ಮಾಂಸದ ಚೂರುಗಳ ಕಡುಬು. P.-pie hat (ಚಪ್ಪಟೆ ನೆತ್ತಿಯೂ ಸುತ್ತಲೂ ಮೇಲಕ್ಕೆ ತಿರುಗಿಸಿದ ಅಂಚೂ ಉಳ್ಳ) ಒಂದು ಬಗೆಯ ಟೊಪ್ಪಿಗೆ. **Pórker** (ನಾ.) ಆಹಾರಕ್ಕಾಗಿ ಬೆಳಸಿದ ಹಂದಿ; ಕೊಬ್ಬಿಸಿದ ಎಳೆ ಹಂದಿ. **Pórket** (ನಾ.) =Porker. **Pórkling** (ನಾ.) ಸಣ್ಣ ಹಂದಿ; ಹಂದಿಯ ಮರಿ. **Pórky** (ಗು.) ಹಂದಿಯ ಮಾಂಸದ(ಂಥ); (ಬಳ. ಮಾ.) ಮಾಂಸ ತುಂಬಿದ; ಕೊಬ್ಬುಗೊಡಿದ.

Pornógraphy ಪಾರ್ನಾಗ್ರಫಿ (ನಾ.) ಸೂಳೆಯರ ವರ್ತನೆ, ಮೊ. ಗಳ ವರ್ಣನೆ; (ಸಾಹಿತ್ಯದಲ್ಲಿ) ಅಶ್ಲೀಲ ವಿಷಯ ವರ್ಣನೆ; ಲಂಪಟ ಸಾಹಿತ್ಯ. **-grapher** (ನಾ.) —ಕಾರ. **-gráphic** (ಗು.)

Póroplastic, Poroplástic ಪಾ(ಪೋ)ರೊಪ್ಲ್ಯಾಸ್ಟಿಕ್ (ಗು.) (ಶಸ್ತ್ರಚಿಕಿತ್ಸೆ)(ಫೆಲ್ಟ್ ಬಟ್ಟೆಯ ವಿಷಯದಲ್ಲಿ) ಸುಲಭ ನಮ್ಯವೂ ಸರಂಧ್ರವೂ ಆದ.

Pórous ಪೋರಸ್ (ಗು.) ಸಣ್ಣ ರಂಧ್ರಗಳಿಂದ ತುಂಬಿದ; ಸರಂಧ್ರ; ಸಚ್ಛಿದ್ರ (ರೂಪ. ಸಹ). **Pórousness** (ನಾ.); **Porósity** ಪೊರಾಸಿಟಿ (ನಾ.) ಸಚ್ಛಿದ್ರತೆ.

Pórphyry ಪಾರ್ಫಿರಿ (ನಾ.) (ಹಿಂದೆ, ಈಜಿಪ್ಟಿನಲ್ಲಿ ಬಂಡೆಯಿಂದ ಕಡಿದು ತೆಗೆಯುತ್ತಿದ್ದ) ಅಂದವಾದ ಒಂದು ಗಟ್ಟಿ ಶಿಲೆ (ಇದರ ಕೆಂಪು ಒಡಲು ಬಿಳಿಯ ಅಥವಾ ಕೆಂಪು ಫೆಲ್ಡ್ ಸ್ಪಾರಿನ ಹರಳುಗಳಿಂದ ಕೂಡಿರುತ್ತದೆ). (ಭೂ. ವಿ.) ಒಂದೇ ಸಮರೂಪಿನ ಒಡಲನಲ್ಲೆಲ್ಲ ಇತರ ಖನಿಜದ ಅಥವಾ ವಿವಿಧ ಖನಿಜಗಳ ಸ್ಫಟಿಕಗಳು ಸೇರಿಕೊಂಡಿರುವ ಸ್ತರಾತ್ಮಕವಲ್ಲದ (ಪದರು ಕಟ್ಟರದ) ಶಿಲೆ ಅಥವಾ ಅಗ್ನಿಶಿಲೆ.

Pórpoise ಪಾರ್ಪಸ್ (ನಾ.) ದುಂಡು ತಿರುಗಿದ ಮೊಂಡು ಮುಸುಡಿಯ, ಐದಡಿಯುದ್ದದ, ತಿಮಿ ವರ್ಗದ ಒಂದು ಸಸ್ತನಿ ಪ್ರಾಣಿ: ಕಡಲ ಹಂದಿ.

Porréct ಪರೆಕ್ಟ್ (ಕ್ರಿ. ಸಕ.) (ಪ್ರಕೃತಿ ಚರಿತ್ರೆ) (ದೇಹಭಾಗವನ್ನು) ನೀಡು, ಚಾಚು. (ಕ್ರೈಸ್ತ ವೈದಿಕ ನ್ಯಾಯ) (ದಸ್ತೈವಜನ್ನು) ಒಪ್ಪಿಸು, ಸಲ್ಲಿಸು.

Pórridge ಪಾರಿಜ್ (ನಾ.) ಅಂಬಲಿ; ಗಂಜಿ (ಕುದಿಯುವ ನೀರಿನಲ್ಲಾಗಲಿ, ಹಾಲಿನಲ್ಲಾಗಲಿ ಗೋಧಿ, ಮೊ. ದ ಧಾನ್ಯದ ಹಿಟ್ಟನ್ನೊ ಕಾಳನ್ನೊ ಹಾಕಿ ಮಾಡಿದ್ದು). Keep one's breath to cool one's p. ತನ್ನ ಬುದ್ಧಿವಾದವನ್ನು ತನ್ನ ಉಪಯೋಗಕ್ಕಾಗಿ ಇಟ್ಟುಕೊ.

Pórringer ಪಾರಿಂಜರ್ (ನಾ.) (ಮು., ಮಕ್ಕಳ ಊಟಕ್ಕೆ) ಅಂಬಲಿ, ಗಂಜಿ, ಮೊ. ನ್ನು ಹಾಕುವ ಸಣ್ಣ ಗಂಗಳ.

Port[1] ಪೋರ್ಟ್ (ನಾ.) ಬಂದರು; ರೇವು; ಬಂದರು ಸ್ಥಳ; ರೇವು ಪಟ್ಟಣ (ಮು., ಸುಂಕದ ಕಚೇರಿಯುಳ್ಳದ್ದು). (ಹಲವು ಸ್ಥಳಗಳ ಅಂಕಿತ ನಾಮದಲ್ಲಿ: P. Arthur, P. Said, etc.). (ರೂಪ.) ಮರೆ; ಆಶ್ರಯ; ಗುರಿ; ಉದ್ದೇಶ; ಧ್ಯೇಯ. Free p. (Free ನೋಡಿ). Close p. ನದಿಯ ಮೇಲ್ಭಾಗದಲ್ಲಿರುವ ರೇವು. Cinque Ports (ಆ ಪದವನ್ನು ನೋಡಿ). P. admiral ನೌಕಾ ಸೈನ್ಯದ ಬಂದರಿನ ಅಧಿಪತಿ, ಆಜ್ಞಾಪಕ, ಅಧಿಕಾರಿ.

Port[2] ಪೋರ್ಟ್ (ನಾ.) (ಮು., ಸುತ್ತಲೂ ಕೋಟೆ ಕಟ್ಟಿರುವ ಪಟ್ಟಣದ) ಹೆಬ್ಬಾಗಿಲು, ಮಹಾ ದ್ವಾರ (ಮು., ಸ್ಕಾ. ಪ್ರ.). (ನಾವೆ) (ಒಳ ಹೊಗುವುದಕ್ಕೂ ಸಾಮಾನನ್ನು ಒಳಕ್ಕೂ ಹೊರಕ್ಕೂ ಸಾಗಿಸುವುದಕ್ಕೂ ಮಾಡಿರುವ) ಹಡಗಿನ ಪಕ್ಕದಲ್ಲಿಯ ತೆರಪು, ದ್ವಾರ (=P.-hole). (ಯಂತ್ರಶಿಲ್ಪ) (ಆವಿ, ನೀರು, ಮೊ. ಗಳಿಗೆ ಮಾಡಿರುವ) ತೆರಪುಗಂಡಿ. (ಕುದುರೆಯ) ಕೆಲವು ಕಡಿವಾಣಗಳಲ್ಲಿ ಬಾಗಿರುವ ಬಾಯಿ ಭಾಗ. [ಗಾಳಿ ಬೆಳಕುಗಳಿಗಾಗಿ ಅಥವಾ (ಹಿಂದೆ) ಫಿರಂಗಿಯಿಟ್ಟು ಹೊಡೆಯುವುದಕ್ಕಾಗಿ] ಹಡಗಿನ ಪಕ್ಕದಲ್ಲಿ ಮಾಡಿದ ತೆರಪುಗಂಡಿ; ಹಡಗಿನ ಜೇರುಗಂಡಿ (=P.-hole). **Pórtal**[1] (ನಾ.) ಬಾಗಿಲು; ದ್ವಾರ (ಮು., ಪರಿಷ್ಕಾರವಾಗಿ ಮಾಡಿದ ಮಹಾ ದ್ವಾರ). **Pórter**[1] (ನಾ.) ದ್ವಾರಪಾಲಕ; ಬಾಗಿಲು ಕಾಯುವವನು; ಪ್ರತೀಹಾರ. **Pórtress** (ನಾ., ಸ್ತ್ರೀ.)

Port[3] ಪೋರ್ಟ್ (ನಾ.) ಭಂಗಿ; ನಿಲವು; ಹೊರ—ನಡತೆ, ನಡವಳಿ; ಬಾಹ್ಯ ವರ್ತನೆ. **Pórtly** (ಗು.) ಬಹಳ ಗಾತ್ರದ; ಸ್ಥೂಲ ದೇಹದ. ಗಂಭೀರಾಕೃತಿಯ; ಭವ್ಯ ರೂಪಿನ. **Pórtliness** (ನಾ.)

Port[4] ಪೋರ್ಟ್ (ಕ್ರಿ. ಸಕ.) (ಸೈನ್ಯ) ಎಡ ಭುಜದ ಮಧ್ಯಕ್ಕೆ ಕೋವಿ, ಅಲಗು, ತಾಕುತ್ತಿರುವಂತೆ (ಬಂದೂಕನ್ನು, ಕತ್ತಿಯನ್ನು) ಮೂಲೆಯ ಮೇಲೆ, ಮೈ ಮುಟ್ಟುವಂತೆ, ಹೊತ್ತುಕೊ (P. arms !). **Pórtable** (ಗು.) ಚಲಿಸಲಾಗುವ; ಒಯ್ಯಲಾಗುವ; ಒಯ್ಯಲು, ಸಾಗಿಸಲು, —ಅನುಕೂಲವಾದ, ಸಾಧ್ಯವಾದ; ಸುಲಭವಾಗಿ ಸಾಗಿಸಲಾಗುವ (P. furnace, railway). **Portabílity** (ನಾ.); **Pórtage** ಪೋರ್ಟೆ(ರ್ಟಿ)ಜ್ (ನಾ., ಕ್ರಿ. ಸಕ.) ಹೊತ್ತುಕೊಂಡು ಹೋಗುವುದು; ಒಯ್ಯುವುದು; ಸಾಗಣೆ; ಸಾಗು ವೆಚ್ಚ (Mariner's p. ಸಂಬಳಕ್ಕೆ ಬದಲಾಗಿ ಸ್ವಂತ ಸರಕಿಗಾಗಲಿ, ಇತರರಿಗೆ ಬಾಡಿಗೆಗೆ ಕೊಡುವುದಕ್ಕಾಗಲಿ, ನಾವಿಕನಿಗೆ ಹಡಗಿನಲ್ಲಿ ಬಿಟ್ಟುಕೊಡುವ ಸ್ಥಳ). ಒಂದು ಜಲ ಮಾರ್ಗದಿಂದ ಮತ್ತೊಂದು ಜಲಮಾರ್ಗಕ್ಕೆ (ಸರೋವರದಿಂದ ಸರೋವರಕ್ಕೆ ಅಥವಾ ನದಿಯಿಂದ ನದಿಗೆ) ಭೂಮಾರ್ಗವಾಗಿ ದೋಣಿಗಳನ್ನಾಗಲಿ ಸರಕನ್ನಾಗಲಿ ಒಯ್ಯುವುದು; ಹೀಗೆ ಒಯ್ಯುವ ಆವಶ್ಯಕತೆಯುಳ್ಳ ಸ್ಥಳ. (ಕ್ರಿ.) ಹೀಗೆ ಭೂಮಾರ್ಗವಾಗಿ (ದೋಣಿಯನ್ನು, ಸರಕನ್ನು) ಒಯ್ಯಿ, ಸಾಗಿಸು. **Pórtative** (ಗು.) ಹೊರುವ; ಹೊರಲುಳ್ಳ; ಧರಿಸುವ. **Pórter**[2] (ನಾ.) (ಮು., ರೈಲ್ವೆ ನಿಲ್ದಾಣಗಳಲ್ಲಿ) ಪ್ರಯಾಣಿಕರ ಮೂಟೆ, ಸಾಮಾನು, ಹೊರಲು ನಿಯಮಿತನಾದ ಹೊರೆಯಾಳು; ರೈಲ್ವೆ ಆಡಳಿತದ ಆಳು, ಕೂಲಿ: ರೈಲ್ವೆ ಕೂಲಿ [**Pórterage** (ನಾ.) ಸಾಮಾನು ಹೊರುವುದು, ಸಾಗಿಸುವುದು; —ಹೊರುವ ಕೂಲಿ]. ಸೀದುಹೋಗುವಂತೆ ಅಥವಾ ಕರಿದಾಗುವಂತೆ ಹುರಿದ ಮೊಳೆ ಧಾನ್ಯದಿಂದ ತಯಾರಿಸಿದ ಕಗ್ಗಂದು ಬಣ್ಣದ ಕಹಿ ಬಿಯರ್ ಮದ್ಯ: ಪೋರ್ಟರ್ ಮದ್ಯ (ಹಿಂದೆ, ಮು., ಪೋರ್ಟರುಗಳಿಗಾಗಿ ತಯಾರಿಸುತ್ತಿದ್ದದ್ದಿರಬಹುದು). (ಅಮೆ. ಸಂ.) P.-house ಪೋರ್ಟರ್ ಮದ್ಯ, ಮೊ. ನ್ನೂ, ಅಟ್ಟ ಮಾಂಸ ಶಕಲ, ಮೊ. ನ್ನೂ ಮಾರುವ ಚಿಲ್ಲರೆಯಂಗಡಿ; (ಇವನ್ನು ಊಟಕ್ಕಿಡುವ) ಭೋಜನದಂಗಡಿ. P.'s knot (Knot ನೋಡಿ)

Port[5] ಪೋರ್ಟ್ (ನಾ., ಕ್ರಿ.) (ನಾವೆ) (ಮುನ್ನೋಟದ) ಹಡಗಿನ ಎಡ ಪಕ್ಕ (=Larboard) (Starboard ಹೋಲಿಸಿ) (Put the helm to p. *or* a-p. ಚುಕ್ಕಾಣಿಯನ್ನು ಎಡಕ್ಕೆ ತಿರುಗಿಸು). [(ವಿಶೇಷಣವಾಗಿ) On your p. bow ನಿನ್ನ ದೋಣಿಯ ಎಡ ಮೂತಿಯ ಬಳಿ]. (ಕ್ರಿ.) (ಚುಕ್ಕಾಣಿಯನ್ನು, ಹಡಗಿನ) ಎಡ ಪಕ್ಕಕ್ಕೆ ತಿರುಗಿಸು; (ಹಡಗು) ತನ್ನ ಎಡ ಪಕ್ಕಕ್ಕೆ ತಿರುಗು.

Port[6] ಪೋರ್ಟ್ (ನಾ.) ಪೋರ್ಚುಗಲ್ಲಿನ, ಸಿಹಿಯೂ ತೀವ್ರವೂ ಆದ, ಕಗ್ಗೆಂಪು ಬಣ್ಣದ ಒಂದು ದ್ರಾಕ್ಷಾ ಮದ್ಯ. (Oporto ಎಂಬ ಪಟ್ಟಣದ ಹೆಸರಿನಿಂದ)

Port[7] ಪೋರ್ಟ್ (ನಾ.) ಉತ್ಸಾಹ ಗಾನ.

Pórtable, Pórtage. **Port**[4] ನೋಡಿ.

Pórtal[1]. **Port**[2] ನೋಡಿ.

Pórtal[2] ಪೋರ್ಟಲ್ (ಗು.) (ಅಂ. ರ. ಶಾ.) ಯಕೃತ್ತಿನ ಅಡ್ಡ ಬಿರುಕಿನ (P. vein ಯಕೃತ್ತಿಗೆ ರಕ್ತವೊಯ್ಯುವ ಅಭಿಧಮನಿ)

Portaménto (It.) ಪೋರ್ಟಮೆಂಟೋ (ನಾ.) (ಸಂ.) ಒಂದು ಶ್ರುತಿಯಿಂದ ಮತ್ತೊಂದು ಶ್ರುತಿಗೆ ಅವಿಚ್ಛಿನ್ನವಾಗಿ ಜಾರಿಕೊಳ್ಳುವುದು: ಸ್ವರ ಸ್ರವಣ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pórtative. **Port**[1] ನೋಡಿ.

Portcúllis ಪೋರ್ಟ್‌ಕಲಿಸ್ (ನಾ.) ದುರ್ಗ, ಕೋಟೆ, ಮೊ. ಗಳ ದ್ವಾರದ ಎರಡು ಕಡೆಗಳಲ್ಲೂ ಕೆಳಗಿನಿಂದ ಮೇಲಿನ ವರೆಗೂ ಮಾಡಿರುವ ಗಾಡಿಗಳಲ್ಲಿ ಮೇಲಕ್ಕೆ, ಕೆಳಕ್ಕೆ, ಚಲಿಸಲಾಗುವಂತೆ ಅಳವಡಿಸಿರುವ, ಬಲವಾಗಿಯೂ ಭಾರವಾಗಿಯೂ ಇರುವ, ಜಾಲಂದರದ ಚೌಕಟ್ಟು (ಇದನ್ನು ಕೆಳಕ್ಕಿಳಿಸಿದಾಗ ದ್ವಾರವು ಮುಚ್ಚಿಹೋಗಿ ಒಳ ಹೊಗಲು ತಡೆಯಾಗುವುದು). **Portcúllised** (ಗು.)

Porte ಪೋರ್ಟ್ (ನಾ.) The (Sublime *or* Ottoman) P. (ಚರಿತ್ರೆ) ತುರ್ಕಿ ಸುಲ್ತಾನನ ಕಾನ್‌ಸ್ಟಾಂಟಿನೋಪಲಿನಲ್ಲಿಯ ರಾಜಾಸ್ಥಾನ; (೧೯೨೩ ರ ವರೆಗಿನ) ತುರ್ಕಿ ಸರ್ಕಾರ.

Porténd ಪೋ(ಪಾ)ರ್ಟೆಂಡ್ (ಕ್ರಿ. ಸಕ.) (ಶಕುನದಂತೆ) ಮುಂದೋರು, ಮುನ್ ಸೂಚನೆ ಕೊಡು; ಮುನ್ನೆಚ್ಚರಿಕೆ ಕೊಡು (This portends a renewal of the conflict). **Pórtent** ಪೋರ್ಟೆಂಟ್ (ನಾ.) ಶಕುನ (ಮು., ದುಶ್ಶಕುನ); ಅರ್ಥವತ್ತಾದ ಸೂಚನೆ. ಅದ್ಭುತ; ಅರಿಷ್ಟ; ಉತ್ಪಾತ. **Porténtous** (ಗು.); **Porténtously** (ಕ್ರಿ. ವಿ.)

Pórtent, etc. **Portend** ನೋಡಿ.

Pórter[1]. **Port**[2] ನೋಡಿ.

Pórter[2]. **Port**[1] ನೋಡಿ.

Pórtfire ಪೋರ್ಟ್‌ಫೈಅರ್ (ನಾ.) [ಸುಡುಮದ್ದಿನ ಬಾಣವನ್ನೂ (ಗಣಿ, ಮೊ. ಗಳಲ್ಲಿ) ಸಿಡಿಮದ್ದನ್ನೂ ಹೊತ್ತಿಸಲು ಉಪಯೋಗಿಸುವ] ಒಂದು ಬಗೆಯ ಜಾವಿಗೆ ಬತ್ತಿ.

Portfólio ಪೋರ್ಟ್‌ಫೋಲಿಯೊ(ೕ), —ಫೋಲ್ಯೋ (ನಾ.) ಕಾಗದದ ಬಿಡಿ ಹಾಳೆಗಳು, ನಕಾಸೆಗಳು, ಮೊ. ನ್ನಿಡಲು ಉಪಯೋಗಿಸುವ (ಸಾ., ಒಂದು ದೊಡ್ಡ ಪುಸ್ತಕದ ರಕ್ಷಾವರಣದಂತಿರುವ) ಕೋಶ, ಸಂಪುಟ: ಕರ ಸಂಪುಟ. (ರೂಪ.) ರಾಜ್ಯಾಡಳಿತದ ಮಂತ್ರಿಯ ಅಧಿಕಾರ ಕ್ಷೇತ್ರ, ಇಲಾಖೆ.

Pórtico ಪೋರ್ಟಿಕೊ (ನಾ.) ಕಂಬಸಾಲು; ಸಮಾನಾಂತರಗಳಲ್ಲಿರುವ ಕಂಬಸಾಲಿನ ಆಧಾರದಮೇಲೆ ಹಾಕಿರುವ ಮಾಳಿಗೆ; (ಸಾ., ಕಟ್ಟಡದ) ಮುಖ ಮಂಟಪ.

Portiére (F) ಪೋರ್ಟ್ಯೇರ್, ಪೋರ್ಟಿಯೇರ್ (ನಾ.) ಬಾಗಿಲ (ಮುಂದಿನ) ಪರದೆ; ದ್ವಾರ ಯವನಿಕೆ.

Pórtion ಪೋರ್ಷನ್ (ನಾ., ಕ್ರಿ. ಸಕ.) ಪಾಲು; ಭಾಗ; ಹಿಸ್ಸೆ; ಹನುಗೆ; ಬಳಿವಳಿ [**Pórtionless** (ಗು.)]. ಒಬ್ಬನ ಅದೃಷ್ಟ, ಹಣೆಯ ಬರಹ; ಪಡಪು (ಗ್ರಾಂ.). [A p. (ಒಂದರ) ಕೊಂಚ (ಭಾಗ) (*Of* ಉಪ. ದೊಡನೆ)]. (ಕ್ರಿ.) ಪಾಲು, ಭಾಗ, —ಮಾಡು; ಹಂಚು, ಹಂಚಿಕೊಡು (*Out* ಉಪ. ದೊಡನೆ); (ಒಂದನ್ನು, ಒಬ್ಬನ) ಹಿಸ್ಸೆಯಾಗಿ ಕೊಡು (*To* ಉಪ. ದೊಡನೆ). ಬಳಿವಳಿ ಕೊಡು.

Pórtland ಪೋರ್ಟ್‌ಲ್ಯಾಂಡ್ (ನಾ.) ಪೋರ್ಟ್‌ಲ್ಯಾಂಡ್ ಪಟ್ಟಣದ ಸೆರೆಮನೆ (=P. prison). P. cement ಸೀಮೆಸುಣ್ಣ ಮತ್ತು ಜೇಡಿ ಮಣ್ಣು ಬೆರಸಿ ತಯಾರಿಸಿದ (ಪೋರ್ಟ್‌ಲ್ಯಾಂಡ್ ಕಲ್ಲಿನ ಬಣ್ಣವುಳ್ಳ) ಸಿಮೆಂಟು. P. stone ಪೋರ್ಟ್‌ಲ್ಯಾಂಡ್ ದ್ವೀಪದಲ್ಲಿ ದೊರೆಯುವ, ಉತ್ಕೃಷ್ಟವಾದ ಕಟ್ಟಡದ (ಸುಣ್ಣ)ಕಲ್ಲು.

Pórtly. **Port**[3] ನೋಡಿ.

Portmánteau ಪೋರ್ಟ್‌ಮ್ಯಾಂಟೊ(ೕ) (ನಾ.; ಬ. ವ. -s, -x —ಸ್) (ಹಿಂಭಾಗದ ಮಧ್ಯೆ ಕೀಲುಗಳಿದ್ದು ಪುಸ್ತಕದಂತೆ ಎರಡು ಹೋಳಾಗಿ ತೆರೆಯಲಾಗುವ, ಪ್ರಯಾಣಕ್ಕೆ ಬಟ್ಟೆಬರೆ, ಮೊ. ಸಾಮಾನು ನ್ನಿಡುವ) ತೊಗಲು ಕೈಪೆಟ್ಟಿಗೆ. (ರೂಪ.) ಎರಡು ಪದಗಳ ಧ್ವನಿಗಳನ್ನೂ ಅರ್ಥಗಳನ್ನೂ ಸೇರಿಸಿ ಮಾಡಿದ ಕಲ್ಪಿತ ಪದ (ಉದಾ., Slithy = lithe & slimy)

Portoláno (It.) ಪೋರ್ಟೊಲಾನೊ (ನಾ.) (ಚರಿತ್ರೆ) (ಬಂದರುಗಳು, ಮೊ. ಗಳ ವಿವರಣೆಗಳನ್ನೊಳಕೊಂಡ) ನೌಕಾ ಸಂಚಾರದ ಕೈಪಿಡಿ.

Pórtrait ಪೋರ್ಟ್ರೆ(ಟ್ರಿ)ಟ್ (ನಾ.) (ಮನುಷ್ಯನ ಅಥವಾ ಪ್ರಾಣಿಯ) (ರೇಖನ ಚಿತ್ರ, ವರ್ಣ ಚಿತ್ರ, ಛಾಯಾ ಚಿತ್ರ, ಮೊ.) ಭಾವ ಚಿತ್ರ; ತಸ್ವೀರು. (ರೂಪ.) ಪ್ರತಿ ಕೃತಿ; ಮಾದರಿ; ಸದೃಶ; ಅನುರೂಪ. ಶಬ್ದ ಚಿತ್ರ; ಕಣ್ಣಿಗೆ ಕಟ್ಟಿದಂತಿರುವ, ಸುಚಿತ್ರಿತ, —ವರ್ಣನೆ. **Pórtraitist** (ನಾ.) ಭಾವಚಿತ್ರಕಾರ. **Pórtraiture** —ಟ್ಯುರ್, —ಚರ್ (ನಾ.) ಭಾವ ಚಿತ್ರ (ರಚನೆ); ಸುಚಿತ್ರಿತ ವರ್ಣನೆ. **Portraý** —ಟ್ರೇ (ಕ್ರಿ. ಸಕ.) ಭಾವ ಚಿತ್ರ ರಚಿಸು; ಕಣ್ಣಿಗೆ ಕಟ್ಟುವಂತೆ ವರ್ಣಿಸು; ಚಿತ್ರಿಸು. **Portraýal** (ನಾ.)

Pórtreeve ಪೋರ್ಟ್‌ರೀವ್ (ನಾ.) (ಚರಿತ್ರೆ) (ಪೌರ ಸಂಸ್ಥೆಯುಳ್ಳ) ಪಟ್ಟಣದ ಮುಖ್ಯಾಧಿಕಾರಿ; (ಈಗ) (ಕೆಲವು ಪಟ್ಟಣಗಳಲ್ಲಿ) ಪೌರ ಸಭಾಧ್ಯಕ್ಷನ ಕೆಳ ದರ್ಜೆಯ ಅಧಿಕಾರಿ.

Pórtress. **Port**[2] ನೋಡಿ.

Portuguése ಪೋರ್ಟ್ಯುಗೀಸ್ (ಗು., ನಾ.) ಪೋರ್ಚುಗಲ್ಲಿನ(ವನು, ಭಾಷೆ)

Pose ಪೋಸ್ (ಕ್ರಿ., ನಾ.) (ಪ್ರತಿಪಾದನೆ, ಹಕ್ಕು, ಮೊ. ನ್ನು) ಒಡ್ಡು, ಮುಂದಿಡು, ಹೂಡು; (ಒಂದು ವಿಚಾರವನ್ನು, ಸಮಸ್ಯೆಯನ್ನು) ವಾದ ಧಂಗಿಯಲ್ಲಿ ಇಡು. (ಚಿತ್ರಕಾರನ ಮಾದರಿ, ಮೊ. ನ್ನು) ಒಂದು ಗೊತ್ತಾದ ಧಂಗಿಯಲ್ಲಿ ಇಡು, ಅಳವಡಿಸು; (ಚಿತ್ರರಚನಾ ಕಾರ್ಯಕ್ಕಾಗಿ) ಒಂದು ಗೊತ್ತಾದ ದೇಹವಿನ್ಯಾಸವನ್ನು ಧರಿಸು; (—ಅಂತೆ) ತೋರಿಸಿಕೊ, ಹೇಳಿಕೊ. (ಡಾಮಿನೋಸ್ ಆಟದಲ್ಲಿ) ಮೊದಲನೆಯ ಕಾಯನ್ನು ಆಟದ ಮೇಜಿನಮೇಲೆ ಇಡು. (ನಾ.) (ದೇಹದ, ಮನಸ್ಸಿನ) ಭಾವ, ಧಂಗಿ, ನಿಲವು; ಸೋಗು (His philanthropy is a mere p.)

Pose[2] ಪೋಸ್ (ಕ್ರಿ. ಸಕ.) (ಒಬ್ಬನನ್ನು) ಪ್ರಶ್ನೆ, ಸಮಸ್ಯೆ, ಹಾಕಿ ಗಾಬರಿಪಡಿಸು, ಭ್ರಮೆಗೊಳಿಸು, ದಿಕ್ಕುತೋಚದಂತೆ ಮಾಡು; ವಾದ ಭ್ರಾಂತಿಯುಂಟುಮಾಡು. **Póser** (ನಾ.) (ಕ್ರಿಯಾರ್ಥಗಳಲ್ಲಿ); ಭ್ರಮೆಗೊಳಿಸುವ —ಪ್ರಶ್ನೆ, ಸಮಸ್ಯೆ.

Poseúr (F) ಪೋಜ಼ರ್ (ನಾ.) ಕೃತಕ (ಮನೋ)ಭಾವ ತಾಳಿದವನು.

Posh ಪಾಷ್ (ಗು.) (ಅನಂ.) ಠೀಕಾದ, ನೀಟಾದ.

Pósit ಪಾಸಿಟ್ (ಕ್ರಿ. ಸಕ.) ವಾಸ್ತವಾಂಶವೆಂದು ಇಟ್ಟುಕೊ; ಪ್ರತಿಜ್ಞೆಯಾಗಿ ಇಟ್ಟುಕೊ. ಸ್ಥಾನದಲ್ಲಿಡು; ಇಡು; ಸ್ಥಾಪಿಸು (Posited by natural agency)

Posítion ಪೊಸಿಷ(ಷ್)ನ್ (ನಾ., ಕ್ರಿ. ಸಕ.) ಪ್ರತಿಜ್ಞೆ (ಪ್ರತಿಪಾದಿಸುವುದು); ಪ್ರತಿಪಾದನೆ(ಮಾಡುವುದು); ಮತ; ಅಭಿಪ್ರಾಯ; ನಿಲುಗಡೆ; ಹೇಳಿಕೆ. ದೇಹ ವಿನ್ಯಾಸ; ಶರೀರ ಧಂಗಿ. [Eastward p. (ಪ್ರಭು ಭೋಜನ ಸಂಸ್ಕಾರದಲ್ಲಿ ಪುರೋಹಿತನು) ಬಲಿ ಪೀಠದ ಮುಂದೆ ಪೂರ್ವಾಭಿಮುಖವಾಗಿ ನಿಂತಿರುವುದು]. ಪ್ರವೃತ್ತಿ; ಮನೋಭಾವ; (ವಿಷಯವನ್ನು ವಿಚಾರಮಾಡುವ) ದೃಷ್ಟಿ. (ಒಂದು ವಸ್ತು ನೆಲಸಿರುವ) ಸ್ಥಾನ (In, out of, p. ತಕ್ಕ ಸ್ಥಾನದಲ್ಲಿ, ಸ್ಥಾನ ಬಿಟ್ಟು). (ಸೈನ್ಯ) (ಯುದ್ಧ ತಂತ್ರಕ್ಕಾಗಿ) ಸೇನೆ ನಿಲ್ಲಿಸಿರುವ ಸ್ಥಳ (The p. was stormed). (Manoeuvring for p. ಅನುಕೂಲ ಸ್ಥಾನಕ್ಕಾಗಿ ಯೋಜನೆ ಮಾಡುತ್ತ). [In a p. to do, state (ಸಂದರ್ಭಗಳಿಂದ, ಸಾಧನಗಳಿಂದ, ಅಥವಾ ಸಮಾಚಾರಗಳಿಂದ) ಮಾಡುವಂಥ, ಹೇಳುವಂಥ, —ಸ್ಥಿತಿಯಲ್ಲಿ]. ಒಂದು ಉಚ್ಚಾರಾಂಶದಲ್ಲಿ ಸ್ವರ ವರ್ಣದ ಸ್ಥಾನ (ಮು., ಗ್ರೀಕ್ ಮತ್ತು ಲ್ಯಾಟಿನ್ ಛಂದಸ್ಸು: ಗುರುವಾಗಿ ಪರಿಣಮಿಸುವ ಎರಡು ವ್ಯಂಜನಗಳ ಹಿಂದಿನ, ಹ್ರಸ್ವ ಸ್ವರದ ಸ್ಥಾನ). (ರೂಪ.) (ಇತರರಿಗೆ, ಇತರ ವಸ್ತುಗಳಿಗೆ, ಸಂಬಂಧಿಸಿದಂತೆ) ಸ್ಥಾನ, ಸ್ಥಿತಿ, ಇರವು (Difficult for a person in my p.). ದರ್ಜೆ; ಅಂತಸ್ತು; ಪದವಿ [People of p. ಸ್ಥಾನ ಮಾನವುಳ್ಳವರು: ಮು., ಮೇಲಂತಸ್ತಿನವರು ಮತ್ತು ಮಧ್ಯಮ ಶ್ರೇಣಿಯಲ್ಲಿ ಮೇಲ್ದರ್ಜೆಯವರು]. ಸರ್ಕಾರಿ ಉದ್ಯೋಗ, ಅಧಿಕಾರ. (ಕ್ರಿ.) ಸ್ಥಾನದಲ್ಲಿಡು; (ಒಂದರ) ಸ್ಥಾನ ನಿರ್ಧರಿಸು. **Posítional** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pósitive ಪಾಸಿಟಿವ್ (ಗು., ನಾ.) ವಿಧಿ ವಿಹಿತವಾಗಿ ನಿಯಮಿಸಿದ (P. laws ಮನುಷ್ಯ ನಿರ್ಮಿತ ನಿಯಮಗಳು. Natural laws ಪ್ರಕೃತಿ ನಿಯಮಗಳು) ; ಸ್ಪಷ್ಟವಾಗಿ ವಿಧಿಸಿರುವ ; ಸ್ಪಷ್ಟವಾದ ; ಸಂದೇಹಕ್ಕೆಡೆ ಗೊಡದ ; ಖಂಡಿತವಾದ (P. assertion. Have no p. proof. Here is proof p.). (ಮನುಷ್ಯ) ಆತ್ಮವಿಶ್ವಾಸವುಳ್ಳ, ದೃಢಾಭಿಪ್ರಾಯ ವುಳ್ಳ, ತಾನೇ ಸರಿಯೆಂಬ ದುರಭಿಮಾನವುಳ್ಳ. [(ವ್ಯಾ.) P. (degree of) adjective (ತರ ತಮಗಳಲ್ಲದೆ ಶುದ್ಧ ಗುಣ ಸೂಚಕವಾದ) ನೈಜ ರೂಪದ ಗುಣವಾಚಕ (Comparative, Superlative ಪದಗಳೊಡನೆ ಹೋಲಿಸಿ)]. ಕೇವಲ, ಪರಮ, ಸಾಪೇಕ್ಷವಲ್ಲದ. (ಬಳ. ಮಾ.) ಶುದ್ಧ ; ಪಕ್ಕಾ (He is a p. nuisance). ವಾಸ್ತವಾಂಶಗಳನ್ನು ಮಾತ್ರ ಕುರಿತ ; ವಾಸ್ತವಿಕ ; ಕಾರ್ಯಸಾಧ್ಯವಾದ (P. philosophy = Positivism). ಗುಣಗಳ ಅಸ್ತಿತ್ವವುಳ್ಳ ; ಅಭಾವವಲ್ಲದ (Negative ಹೋಲಿಸಿ). (ಬೀ. ಗ.) (ಮೊತ್ತ) ಸೊನ್ನೆಗಿಂತ ಹೆಚ್ಚಾದ; ಧನ ; ಧನಾತ್ಮಕ (Negative ಹೋಲಿಸಿ) [P. sign ಧನಚಿಹ್ನೆ ; ಸಂಕಲನ ಚಿಹ್ನೆ (+). Clockwise rotation is p. ಪ್ರದಕ್ಷಿಣವಾಗಿ ಸುತ್ತು ತಿರುಗುವುದು ಧನಾತ್ಮಕ. P. electricity ಧನ ವಿದ್ಯುತ್ತು (ಗಾಜನ್ನು ರೇಷ್ಮೆಯಿಂದ ಉಜ್ಜಿ ಪಡೆಯುವ ಬಗೆಯದು). P. pole (ಅಯಸ್ಕಾಂತದ) ಉತ್ತರ ಧ್ರುವ ; (ಭೂಮಿಯ) ದಕ್ಷಿಣ ಧ್ರುವ]. (ಛಾಯಾಚಿತ್ರ) ಸ್ವಾಭಾವಿಕವಾಗಿ ಕಾಣುವಂತೆ ಬೆಳಕು ನೆರಳು ಗಳನ್ನು ತೋರಿಸುವ ; ವಾಸ್ತವ ; ಸಹಜ. (ನಾ.) ಗುಣವಾಚಕದ ನೈಜ ಭಾವ, ನೈಜ ರೂಪದ ಗುಣವಾಚಕ, ಧನ ಸಂಖ್ಯೆ, ಧನ ಮೊತ್ತ, ಮೊ. ವು. **Pósitively** (ಕ್ರಿ. ವಿ.) ; **Pósitiveness** (ನಾ.) ; **Positívity** (ನಾ.) —ಗುಣ, ರೀತಿ, ಅಥವಾ ವಿಷಯ. = Positiveness.

Pósitivism ಪಾಸಿಟಿವಿಸ್ಮ್ (ನಾ.) [ವಾಸ್ತವಾಂಶಗಳನ್ನೂ ಗೋಚರ ಸಾಧ್ಯವಿಷಯಗಳನ್ನೂ ಮಾತ್ರ ಅಂಗೀಕರಿಸುವ ಅಗಸ್ಟ ಕಾಂಟ್ (Auguste Comte) ಎಂಬ ತತ್ತ್ವಜ್ಞನ] ಲೋಕಸಿದ್ಧ ವಾದ ; ದೃಷ್ಟ (ಪ್ರತ್ಯಕ್ಷ) ಪ್ರಮಾಣ ವಾದ ; ಇದನ್ನನುಸರಿಸಿ ಸ್ಥಾಪಿಸಿದ ಮತಧರ್ಮ ಪದ್ಧತಿ ; ಮಾನವೋತ್ತಮತಾ ಮತ. **Pósitivist** (ನಾ.) ; **Positivístic** (ಗು.)

Posólogy ಪೊಸಾಲೊಜಿ (ನಾ.) ಔಷಧ(ವಸ್ತು)ಗಳ ಪ್ರಯೋಗ ಪರಿ ಮಾಣಗಳನ್ನು ಕುರಿತ ವೈದ್ಯಶಾಸ್ತ್ರ ಭಾಗ. ಗಣಿತ ಶಾಸ್ತ್ರ (ಎಂಬುದಕ್ಕೆ Bentham ಎಂಬಾತನ ಪದ). **Posológical** ಪಾಸೊಲಾಜಿಕಲ್ (ಗು.)

Pósse ಪಾಸಿ(ಸೆ) (ನಾ.) (ಪೋಲೀಸು ಪ್ಯಾದೆಗಳ) ದಳ (*Of* constables) ; (ಜನರ, ಪ್ರಾಣಿಗಳ, ವಸ್ತುಗಳ) ಬಲವಾದ ಗುಂಪು, ತಂಡ. P. comitatus ದಂಗೆ, ದೊಂಬಿ, ಮೊ. ನ್ನು ಅಡಗಿಸುವುದಕ್ಕಾಗಿ ನಗರಾಧಿಕಾರಿ ನಿಯೋಜಿಸಬಹುದಾದ, ಒಂದು ಪ್ರಾಂತದ, ೧೫ ವರ್ಷ ವಯಸ್ಸಿಗೆ ಮೇಲ್ಪಟ್ಟ ಗಂಡಸರು.

Posséss ಪೊಸೆಸ್ (ಕ್ರಿ. ಸಕ.) (ಆಸ್ತಿಯಾಗಿ) ಪಡೆದಿರು ; ಉಳ್ಳವನಾಗಿರು ; ಸ್ವಾಮ್ಯ ಪಡೆದಿರು ; ಒಡೆತನ ಪಡೆ ; ಒಡೆಯನಾಗಿರು. (ಶಕ್ತಿ, ಗುಣ, ಮೊ. ನ್ನು) ಪಡೆದಿರು (They p. a special value for us). (ತನ್ನನ್ನು, ತನ್ನ ಮನಸ್ಸನ್ನು, ಆತ್ಮವನ್ನು, ಸಮಾಧಾನ ಸ್ಥಿತಿಯಲ್ಲಿ, ಅಕ್ಷುಬ್ಧ ವಾಗಿ) ಇಟ್ಟುಕೊ (P. one's mind *in* patience). (ಒಬ್ಬನನ್ನು ಭೂತ, ಪಿಶಾಚಿ) ಹಿಡಿ, ಅಧೀನ ಪಡಿಸಿಕೊ [Possessed by a devil ದೆವ್ವ ಹಿಡಿದು (You are surely possessed). (ರೂಪ.) He is possessed by or with this idea ಅವನಿಗೆ ಈ ಭಾವನೆಯ ಹುಚ್ಚು ಹಿಡಿದಿದೆ. What possesses you to think of such a thing? P. oneself of ಸ್ವಂತಕ್ಕಾಗಿ ತೆಗೆದುಕೊ, ಪಡೆ. Be possessed of ಪಡೆದಿರು ; ಉಳ್ಳವನಾಗಿರು]. **Posséssor** (ನಾ.) ; **Posséssory** (ಗು.) ಉಳ್ಳವನಿಗೆ ಸಂಬಂಧಿಸಿದ ; ಸ್ವಾಮ್ಯಕ್ಕೆ ಸಂಬಂಧ ಪಟ್ಟ ; ಸ್ವಾಮ್ಯದ ತೆರನಾದ. (ನ್ಯಾ. ಶಾ.) ಸ್ವಾಮ್ಯದಿಂದ ಹೊರಟ ; ಸ್ವಾಮ್ಯವನ್ನು ಬಾಧಿಸುವ, ಸ್ಥಿರೀಕರಿಸುವ (P. interest, judgement). **Posséssion** (ನಾ.) ಪಡೆದಿರುವುದು ; ಪಡಪು (ಗ್ರಾಂ.) ; ಉಂಟಾಗಿರುವುದು; ಒಡೆತನ; ಸ್ವಾಧೀನ; ಅನುಭೋಗ. (ನ್ಯಾ. ಶಾ.) ನ್ಯಾಯಾನುಸಾರವಾದ ಸ್ವಾಮ್ಯಕ್ಕೆ ಸೇರಿದ, ಕಾರ್ಯತಃ ಚಲಾಯಿಸ ಬಹುದಾದ, ಪ್ರತ್ಯಕ್ಷಾಧಿಕಾರ [In p. (ವಸ್ತು) ಸ್ವಾಧೀನದಲ್ಲಿರುವ ; (ವ್ಯಕ್ತಿ) ಸ್ವಾಧೀನ ಪಡೆದಿರುವ. P. is nine points of the law (Point ನೋಡಿ). I am in p. of a fine specimen. The specimen is *in the p.* of the present writer. Rejoice in the p. of ಪಡೆಯುವಷ್ಟು ಅದೃಷ್ಟವಿರು]. (ಪಡೆದಿರುವ) ಸ್ವತ್ತು ; (ಬ. ವ. ದಲ್ಲಿ) ಆಸ್ತಿ, ಐಶ್ವರ್ಯ, ಸಂಪತ್ತು. ಅಧೀನ ರಾಜ್ಯ (ಮು., ಅನ್ಯದೇಶಗಳದು). Self-p. (Self ನೋಡಿ). **Posséssive** (ಗು., ನಾ.) ಒಡೆತನದ ; ಸ್ವಾಧೀನಾನುಭವದ ; ಗಳಿಕೆಯ ಸ್ವಭಾವದ. (ವ್ಯಾ.) ಸ್ವಾಮ್ಯ ಸೂಚಕ; —ವಾಚಕ [P. pronoun. P. case ಷಷ್ಠೀ ವಿಭಕ್ತಿ]. (ನಾ.) ಷಷ್ಠೀ ವಿಭಕ್ತಿ(ಯ ಪದ) ; ಸಂಬಂಧ ಸೂಚಕ— ವಿಭಕ್ತಿ, ಪದ. **Posséssively** (ಕ್ರಿ. ವಿ.) ಸ್ವಾಮ್ಯಾರ್ಥದಲ್ಲಿ, ಸ್ವಾಮ್ಯ ಸಂಬಂಧದಲ್ಲಿ. **Posséssiveness** (ನಾ.)

Pósset ಪಾಸೆಟ್ (ನಾ.) ದ್ರಾಕ್ಷಾಮದ್ಯ, ಮೊ. ನ್ನು ಸೇರಿಸಿ ಬಿಸಿಹಾಲನ್ನು ಒಡೆಯುವಂತೆ ಮಾಡಿ, (ಅನೇಕ ವೇಳೆ) ಸುವಾಸನಾ ದ್ರವ್ಯಗಳಿಂದ ರುಚಿಕಟ್ಟಿದ (ಹಿಂದೆ ನೆಗಡಿ, ಮೊ. ಕ್ಕೆ ಔಷಧವಾಗಿ ಉಪಯೋಗಿಸುತ್ತಿದ್ದ) ಒಂದು ಪಾನೀಯ.

Possíbilist, Possibílity. **Possible** ನೋಡಿ.

Póssible ಪಾಸಿಬ್‌ಲ್ (ಗು., ನಾ.) ಆಗಬಲ್ಲ ; ಇರಬಲ್ಲ ; ಮಾಡ ಲಾಗುವ ; ಸಂಭವಿಸಬಹುದಾದ ; ಸಾಧ್ಯ ; ಶಕ್ಯ [That is quite p. It is p. (that) he knows or may know. Provide against a p. loss of men ಸಂಭವಿಸಬಹುದಾದ ಜನ ನಷ್ಟಕ್ಕೆ ಒದಗಿಸಿಟ್ಟುಕೊ. Get all the assistance p. Come as early as p. ಸಾಧ್ಯವಾದಷ್ಟು ಮುಂಚೆ ಬಾ]. ವ್ಯವಹರಿಸಲು, ಏಗಲು, ಗ್ರಹಿಸಲು, —ಸಾಧ್ಯವಾದ (Only one p. man among them). (ನಾ.) (ಮು., ಬಂದೂಕು ಹಾರಿಸುವ ಅಭ್ಯಾಸದಲ್ಲಿ) ಸಾಧ್ಯವಾದ ಪರಮಾವಧಿಯ ಅಂಕ (Scored a p. at 800 yards). Do one's p. ತನಗೆ ಸಾಧ್ಯವಾದದ್ದನ್ನೆಲ್ಲ ಮಾಡು. **Possíbilist** (ನಾ.) ಕೂಡಲೆ ಕಾರ್ಯರೂಪಕ್ಕೆ ತಿರುಗಿಸಲಾಗುವ ಸುಧಾರಣೆಗಳನ್ನು ಮಾತ್ರ ಸಾಧಿಸಲು ಪ್ರಯತ್ನಿಸುವ (ಮು., ಸ್ಪೈನಿನ ಪ್ರಜಾಧಿಪತ್ಯದ ಅಥವಾ ಫ್ರೆಂಚ್ ಸಮತಾವಾದದ) ರಾಜಕೀಯ ಪಕ್ಷದವನು ; ಸಾಧ್ಯ ಸುಧಾರಣಾ ಪಕ್ಷೀಯ. **Possibílity** (ನಾ.) ಸಾಧ್ಯತೆ (The p. of miracles. It is within the range of p. ಅದು ಸಾಧ್ಯತೆಯ ಎಲ್ಲೆಯೊಳಗಿದೆ). ಇರಬಹುದಾದದ್ದು ; ಆಗಬಹುದಾದದ್ದು ; ಸಂಭವ. (There are three possibilities). **Póssibly** ಪಾಸಿಬ್ಲಿ (ಕ್ರಿ. ವಿ.) ಇರಬಹುದು ; ಸಾಧ್ಯ ; ಒಂದು ವೇಳೆ (Cannot p. do it ಮಾಡಲು ಸಾಧ್ಯವಾಗಲಾರದು. How can I p.?)

Póssum ಪಾಸಮ್ (ನಾ.) (ಬಳ. ಮಾ.) = Opossum. [Play p. ಕಾಯಿಲೆ(ಯೆಂದು) ನಟಿಸು (Possum ಎಂಬ ಪ್ರಾಣಿಯನ್ನು ಎದುರಿಸಿದರೆ ಸತ್ತಂತೆ ನಟಿಸುವ ಅದರ ಚಾಳಿಯಿಂದ)]

Post[1] ಪೋಸ್ಟ್ (ನಾ., ಕ್ರಿ. ಸಕ.) (ಕಟ್ಟಡಕ್ಕೆ ಆಧಾರವಾಗಿ ನಿಲ್ಲಿಸುವ ದಪ್ಪವಾದ, ದುಂಡನೆಯ ಅಥವಾ ಚದರದ, ಉದ್ದವಾದ) ಮರದ ಕಂಬ ; (ಹಲವು ಕೆಲಸಗಳಿಗೆ ಉಪಯೋಗಿಸುವ) ದಸಿ, ದಪ್ಪ ಗಣೆ [Bed, Door, King, Lamp, Sign, -p. (ಆಯಾ ಪದವನ್ನು ನೋಡಿ). Starting, Winning, -p. (ಪಂದ್ಯದಲ್ಲಿ) ಓಟದ ಆರಂಭದ, ಮುಕ್ತಾಯದ, —ಕಂಬ]. ಮರಳುಗಲ್ಲು, ಮೊ. ಗಳ ದಪ್ಪವಾದ ಸಾಂದ್ರ ಸ್ತರ. (ಕಲ್ಲಿದ್ದಲ ಗಣಿಯಲ್ಲಿ) ಮೇಲಿನ ಚಾವಣಿಗೆ ಆಸರೆಯಾಗಿ ಬಿಟ್ಟ ಕಲ್ಲಿದ್ದಲ ಕಂಬ. (ಕ್ರಿ.) ಕಂಬಕ್ಕಾಗಲಿ (ಎಲ್ಲರ ಕಣ್ಣಿಗೂ ಬೀಳುವಂಥ) ಸುವ್ಯಕ್ತ ಸ್ಥಳದಲ್ಲಾಗಲಿ (ಪ್ರಕಟನೆ, ಮೊ. ನ್ನು) ಅಂಟಿಸು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಚ್ಚು (*Up* ಉಪ. ದೊಡನೆ) ; ಜಾಹಿರಾತು ಮೂಲಕ (ಒಂದು ಸಂಗತಿಯನ್ನು, ವಸ್ತುವನ್ನು, ವ್ಯಕ್ತಿಯನ್ನು) ಪ್ರಕಟಪಡಿಸು, ಪ್ರಚಾರಮಾಡು [**Póster** ಪೋಸ್ಟರ್ (ನಾ.) (ಗೋಡೆ, ಮೊ. ಗಳಿಗೆ) ಪ್ರಕಟನೆಯ ಚೀಟಿ ಅಂಟಿಸುವವನು (=Bill-p.) ; (ಬಹಿರಂಗ ಪ್ರದೇಶದಲ್ಲಿ ಪ್ರಕಟನೆಯ ಚೀಟಿ ಹಚ್ಚಿಟ್ಟ) ಪ್ರಕಟನೆಯ ಹಲಗೆ]. (ಪ್ರೌಢ ವಿದ್ಯಾಶಾಲೆಗಳಲ್ಲಿ : ತೇರ್ಗಡೆಯಾಗದಿರುವ ವಿದ್ಯಾರ್ಥಿಗಳ ಹೆಸರುಗಳನ್ನು) ಪ್ರಕಟನೆಯ ಪಟ್ಟಿಯಲ್ಲಿ ಸೇರಿಸು, ದಾಖಲ್ಮಾಡು. (ಹಡಗು) ಬರುವ ಕಾಲ ಮೀರಿ ಹೋಗಿದೆಯೆಂದಾಗಲಿ ಪತ್ತೆಯಿಲ್ಲವೆಂದಾಗಲಿ ಅದರ ಹೆಸರನ್ನು ಪ್ರಕಟಿಸು. (ಗೋಡೆ, ಮೊ. ಗಳಿಗೆ) ಪ್ರಕಟನೆಯ ಚೀಟಿಗಳನ್ನು ಅಂಟಿಸು.

Post[2] ಪೋಸ್ಟ್ (ನಾ., ಕ್ರಿ. ವಿ.) (ಚರಿತ್ರೆ) ಕಾಗದ ಪತ್ರಗಳನ್ನು ಮುಂದಿನ ಮಜಲಿಗೆ ಒಯ್ಯುವುದಕ್ಕಾಗಿ ದಾರಿಯುದ್ದಕ್ಕೂ (ಹಲವು) ಮಜಲುಗಳಲ್ಲಿ ಕುದುರೆಯ ಸಮೇತ ನಿಲ್ಲಿಸಿರುವ ಸವಾರರಲ್ಲೊಬ್ಬನು : (ಅಂಚೆಯ) ಟಪ್ಪೆಯ ಸವಾರ. (ಚರಿತ್ರೆ) ಹರಿಕಾರ ; ಓಲೆಕಾರ ; ಅಂಚೆಯ ಬಂಡಿ. ಕಾಗದ ಪತ್ರಗಳ ಒಂದು ರವಾನೆ ; ಹೀಗೆ ರವಾನಿಸಿದ ಕಾಗದ ಪತ್ರಗಳು ; ಟಪಾಲು ; ಅಂಚೆ ; ಅಂಚೆಯ ಕಚೇರಿಯಿಂದಾಗಲಿ ಅಂಚೆಯ ಕಾಗದಗಳ ಕಂಬಪೆಟ್ಟಿಗೆಯಿಂದಾಗಲಿ ಒಂದು ಸರತಿಗೆ ತೆಗೆದ ಕಾಗದಗಳು [I missed the morning p. ಬೆಳಗ್ಗೆಯ ಟಪಾಲಿಗೆ (ಕಾಗದ) ಹಾಕಲು ಹೊತ್ತು ಮೀರಿಹೋಗಿತ್ತು]. ಒಂದು ಮನೆಗೆ ಒಂದು ಸರತಿ ತಲಪಿಸಿದ ಕಾಗದಗಳು (The p. has come. Had a heavy p. today). (ಕಾಗದಗಳು, ಭಾಂಗಿಗಳು, ಮೊ. ಗಳ) ಅಂಚೆಯ ರವಾನೆ (Send it by p. ಅಂಚೆಯ ಮೂಲಕ ಕಳುಹಿಸು). [General, Parcel, Penny, -p. (ಆಯಾ ಪದವನ್ನು ನೋಡಿ)]. ಅಂಚೆಯ ಕಚೇರಿ, ಅಂಚೆಯ ಕಾಗದ ಹಾಕುವ ಪೆಟ್ಟಿಗೆ (Take it to the p.). [By return of p. (ಚರಿತ್ರೆ) ಕಾಗದ ತಂದ ಟಪ್ಪೆಯ ಸವಾರನ ಕೈಯಲ್ಲೇ ಹಿಂದಕ್ಕೆ ; (ಈಗಿನ ಪ್ರ.) (ಹಿಂದಕ್ಕೆ ಬರುವ) ಮರು ಟಪಾಲಿಗೆ]. (ವೃತ್ತಪತ್ರಿಕೆಯ ಹೆಸರುಗಳಲ್ಲಿ: Morning P., etc.). ಬರೆಯುವ ಕಾಗದದ ಒಂದು ಅಳತೆ (ಸು., ೨೦ × ೧೬ ಅಂಗುಲ) ; ಇಂಥ ಅಳತೆಯ ಹಲವು ತೆರದ ಬರೆಯುವ ಕಾಗದಗಳು (ಹಿಂದೆ ಆ ಕಾಗದದ ರಚನೆಯಲ್ಲಿ ಅಂಚೆಯವನ ತುತೂರಿ ಗುರುತು ಇದ್ದ ಕಾರಣದಿಂದ). (ಕ್ರಿ. ವಿ.) ಟಪ್ಪಾ ಕುದುರೆಗಳ ಮೂಲಕ ; ವೇಗವಾಗಿ ; ತ್ವರಿತವಾಗಿ (Ride p.). **P.-bag** ಅಂಚೆಯ ಚೀಲ. **P.-boat** ಅಂಚೆಯ ದೋಣಿ, ಹಡಗು ; (ಕೆಲವು ಸ್ಥಳಗಳ ಮಧ್ಯೆ ಮಾತ್ರ ಪ್ರಯಾಣಿಕರನ್ನು ಒಯ್ಯುವ) ಪ್ರಯಾಣಿಕರ ದೋಣಿ, ಹಡಗು. **P.-boy** ಓಲೆಕಾರ ; =Postilion. **Póstcard** (ಗೊತ್ತಾದ ಅಳತೆಯ) ಅಂಚೆಯ (ಮೂಲಕ ರವಾನಿಸುವ) ರಟ್ಟು ಕಾಗದ, ರಟ್ಟು ಚೀಟಿ. **P.-chaise** (—ಷೇಸ್) ಮಜಲಿನಿಂದ ಮಜಲಿಗೆ, ಬಾಡಿಗೆ ಗೊತ್ತುಮಾಡಿದ ಅಥವಾ ಬಾಡಿಗೆಯ ಟಪ್ಪಾ ಕುದುರೆಯಿಂದ ನಡಸುವ, ಟಪ್ಪಾ ಬಂಡಿ. **P.-free** ಅಂಚೆಯ ಹಾಸಲಿಲ್ಲದೆ (ಅಥವಾ ಹಾಸಲನ್ನು ಮೊದಲೇ ಕೊಟ್ಟಿರುವುದರಿಂದ) ಪುಕ್ಕಟೆ ಒಯ್ಯುವ ; ಅಂಚೆಯುಚಿತವಾದ ; ಅಂಚೆ ಮಾಫಿ. **P.-haste** (ನಾ., ಪ್ರಾಚೀ. ಪ್ರ. ; ಕ್ರಿ. ವಿ.) ಅತ್ಯಂತ ವೇಗ(ವಾಗಿ). **P.-horse** ಟಪ್ಪಾ ಕುದುರೆ. **Póstman** ಅಂಚೆಯ ಪತ್ರ, ಮೊ. ನ್ನು ಬಟವಾಡೆ ಮಾಡುವವನು, ಕೂಡಹಾಕಿಕೊಂಡು ಹೋಗುವವನು ; ಅಂಚೆಯವನು. **Póstmark** (ನಾ., ಕ್ರಿ. ಸಕ.) (ಅಂಚೆಯ ಕಾಗದ, ಮೊ. ವು ರವಾನೆಯಾದ ಅಥವಾ ತಲಪಿದ ಊರು, ತಾರೀಖು, ಹೊತ್ತು— ಇವನ್ನು ತಿಳಿಸುವ, ಮತ್ತು ತಲೆಚೀಟಿಯ ರೂಪುಗೆಡಿಸಲು ಉಪಯೋಗವಾದ) ಅಂಚೆಯ ಮುದ್ರೆ. (ಕ್ರಿ.) —ಹಾಕು, ಒತ್ತು. **Póstmaster**[1] ಅಂಚೆಯ ಕಚೇರಿಯ ಯಜಮಾನ. **P.-m. general** ಅಂಚೆಯ ಇಲಾಖೆಯ ಆಡಳಿತದ ಮುಖ್ಯಾಧಿಕಾರಿ. **Póstmastership**[1] ಅಂಚೆಯ ಕಚೇರಿಯ ಯಜಮಾನಿಕೆ. **Póstmistress** ಅಂಚೆಯ ಕಚೇರಿಯ ಯಜಮಾನಿ. **P.-office** ಅಂಚೆಯ ಇಲಾಖೆ ; ಅಂಚೆಯ ಮನೆ, ಕಚೇರಿ [General P.-O., P.-o. order (General, order ನೋಡಿ). P. O. Savings-bank (Save[1] ನೋಡಿ)]. **P.-paid** ಅಂಚೆಯ ಹಾಸಲು ಕೊಟ್ಟಿರುವ. **P.-town** (ಮತ್ತೊಂದರ ಅಧೀನವಲ್ಲದ) ಅಂಚೆಯ ಕಚೇರಿ ಇರುವ ಪಟ್ಟಣ. **Póstage** —ಸ್ಟೆ(ಸ್ಟಿ)ಜ್ (ನಾ.) ಅಂಚೆಯ ಹಾಸಲು [P. stamp (ಗೊತ್ತಾದ ಬೆಲೆಯ) ಅಂಚೆಯ ತಲೆಚೀಟಿ]. **Póstal** (ಗು.) ಅಂಚೆಯ. P. Order (Order ನೋಡಿ). P. union ಅಂತರ ರಾಷ್ಟ್ರೀಯ ಅಂಚೆಯ ಹಾಸಲಿನ ವ್ಯವಸ್ಥೆಗಾಗಿ ಏರ್ಪಟ್ಟಿರುವ ಹಲವು ಸರ್ಕಾರಗಳ ಒಕ್ಕೂಟ : ಸರ್ಕಾರಗಳ ಅಂಚೆಯ ಒಕ್ಕೂಟ. **Poste restante** (F) ಪೋಸ್ಟ್ ರೆಸ್ಟಾಂಟ್ (ನಾ.) ವಿಳಾಸದಾರರು ಕೇಳುವವರೆಗೂ ಅವರಿಗೆ ಬಂದ ಕಾಗದಗಳನ್ನಿಟ್ಟುಕೊಂಡಿರುವ ಅಂಚೆಯ ಕಚೇರಿಯ ಶಾಖೆ.

Post (ಕ್ರಿ.) ಟಪ್ಪಾ ಕುದುರೆಗಳ ಮೂಲಕ ಪ್ರಯಾಣ ಮಾಡು ; ತ್ವರೆಯಾಗಿ, ಅವಸರವಸರವಾಗಿ, ಪ್ರಯಾಣ ಮಾಡು. (ಕಾಗದ, ಮೊ. ನ್ನು ರವಾನೆಗಾಗಿ) ಅಂಚೆಗೆ ಕೊಡು, ಟಪಾಲು ಪೆಟ್ಟಿಗೆಗೆ ಹಾಕು. (ಜಮಾ ಖರ್ಚು ಲೆಕ್ಕ : ಲಖನಗಳನ್ನು) ಕಚ್ಚಾ ಲೆಕ್ಕ(ಪುಸ್ತಕ)ದಿಂದ ಪಕ್ಕಾ ಲೆಕ್ಕ(ಪುಸ್ತಕ)ಕ್ಕೆ ವರ್ಗಾಯಿಸು (ಮು., ರೋಜಿನಿಂದ ವರ್ಗಕ್ಕೆ) ; ಹೀಗೆ ದಾಖಲ್ಮಾಡಿ ವರ್ಗ ಮುಗಿಸು (=P. up). (ರೂಪ.) (ಒಬ್ಬನಿಗೆ) ಸಂಪೂರ್ಣ ಸಮಾಚಾರವನ್ನು ತಿಳಿಯಪಡಿಸು, ಒದಗಿಸು (=P. up)

Post[3] ಪೋಸ್ಟ್ (ನಾ., ಕ್ರಿ. ಸಕ.) ಸಿಪಾಯಿಯನ್ನು ನಿಲ್ಲಿಸಿರುವ ಸ್ಥಾನ ; (ರೂಪ.) ಕರ್ತವ್ಯದ ಸ್ಥಾನ. ಸಿಪಾಯಿ ದಳದ ನಿಲೆ, ನಿಲವು ; ಹೀಗೆ ನೆಲಸಿರುವ ಸಿಪಾಯಿ ದಳ ; ಠಾಣ್ಯ, ಪಾಳೆಯ. ಕೋಟೆ. (ಮು., ಅನಾಗರಿಕ ದೇಶದಲ್ಲಿ) ವ್ಯಾಪಾರಕ್ಕಾಗಿ ಆಕ್ರಮಿಸಿಕೊಂಡ ಸ್ಥಳ : ವ್ಯಾಪಾರ ಕೋಠಿ (=Trading-post). ಉದ್ಯೋಗ ; ಕೆಲಸ ; ಅಧಿಕಾರ ಸ್ಥಾನ. [(ಸೈನಿಕ) First, last, p. (ರಾತ್ರಿ ವಿಶ್ರಾಂತಿ ಪಡೆಯುವ ಹೊತ್ತನ್ನು ಸೂಚಿಸುವ) ಮೊದಲ, ಕೊನೆಯ, ಕಹಳೆ. Last p. ಸೈನಿಕ ಶವಸಂಸ್ಕಾರದಲ್ಲಿ ಊದುವ ಕಹಳೆ]. (ಕ್ರಿ.) (ಸೈನಿಕರು, ಮೊ. ನ್ನು ಒಂದು ಸ್ಥಾನದಲ್ಲಿ) ನಿಲ್ಲಿಸು. (ಒಂದು ಉದ್ಯೋಗಕ್ಕೆ, ಸ್ಥಾನಕ್ಕೆ) ನೇಮಿಸು ; (ಸೈನಿಕ ಮತ್ತು ನಾವೆ) ದಳವಾಯಿಯಾಗಿ, ಯುದ್ಧ ನೌಕಾಧಿಪತಿಯಾಗಿ (ಒಬ್ಬನಿಗೆ) ಸನ್ನದು ಕೊಡು.

Post- ಪೋಸ್ಟ್— (ಸ. ಪೂ. ಪ.) ತರುವಾಯದ— ; ಆಮೇಲಿನ— ; ಹಿಂದಿನ— ; ಪಶ್ಚಾತ್—. **-clássical** (ಮು., ಗ್ರೀಕ್ ಮತ್ತು ರೋಮನ್ ಭಾಷಾಸಾಹಿತ್ಯಗಳ, ಕಲೆಗಳ) ಪ್ರಾಚೀನ ಪ್ರೌಢತೆಯ ಕಾಲದ ತರುವಾಯದ. **-commúnion** (ಕ್ರೈಸ್ತ) ಪ್ರಭುಭೋಜನ ಸಂಸ್ಕಾರದ ತರುವಾಯದ ಕ್ರಿಯೆ, ಕರ್ಮ. **-cóstal** ಪಕ್ಕೆಲುಬಿನ ಹಿಂದಿನ. **-dáte** (ಕ್ರಿ. ಸಕ.), **Póst-date** (ನಾ.) (ದಸ್ತೈವಜು, ಘಟನೆ, ಮೊ. ಗಳಿಗೆ ಬರೆದ, ನಡೆದ, ತಾರೀಖಿಗೆ ಬದಲು) ಮುಂದಿನ ತೇದಿ(ಹಾಕು). **-dilúvian** (ಗು., ನಾ.) ಮಹಾ ಪ್ರಳಯಕ್ಕೆ ತರುವಾಯದ(ವನು). **-éntry** (ಪಂದ್ಯ, ಇಟ್ಟ ರೆಕ್ಕ, ಮೊ. ಗಳಲ್ಲಿ) ತಡವಾದ, ತರುವಾಯದ, —ದಾಖಲೆ, ನಮೂದು. **-fíx** (ಕ್ರಿ. ಸಕ.), **Póstfix** (ನಾ.) (ಪ್ರತ್ಯಯವನ್ನು) ಪದದ ಅಂತ್ಯದಲ್ಲಿ ಹಚ್ಚು ; ಉತ್ತರ ಪ್ರತ್ಯಯ (ಹಚ್ಚು). **-glácial** ಹಿಮಾನೀ ಯುಗದ ತರುವಾಯದ. **-gráduate** (ವ್ಯಾಸಂಗದ ವಿಷಯದಲ್ಲಿ) ಪಂಡಿತ ಪಟ್ಟ ಪಡೆದ ತರುವಾಯ ನಡಸುವ. **-impréssionism** ನಿರೂಪಿಸಿದ (ವಸ್ತು) ಚಿತ್ರದ ವಿಷಯದಲ್ಲಿ ಸಾಮಾನ್ಯ ಪ್ರೇಕ್ಷಕನು ಹೊಂದುವನೆಂದು ಊಹಿಸಬಹುದಾದ ಭಾವನೆಗಿಂತ ಕಲೆಗಾರನ ವೈಯಕ್ತಿಕ ಭಾವನೆಗೆ ಹೆಚ್ಚು ಗಮನ ಕೊಡುವ ಕಲೆಯ ಗುರಿ ಮತ್ತು ರೀತಿ (Impressionism ಎಂಬ ರೀತಿಗೆ ಪ್ರತಿ ಕ್ರಿಯೆಯಾಗಿ ಈ ಹೆಸರು ಕೊಟ್ಟಿದೆ): ವೈಯಕ್ತಿಕ ಭಾವ ವ್ಯಂಜಕ ಕಲಾ ಪದ್ಧತಿ. **-millénnial** (ಕ್ರೈಸ್ತ) ಧರ್ಮಯುಗಾನಂತರದ. **-millénnialism** ಧರ್ಮಯುಗಾನಂತರ ಎರಡನೆಯ ಬಾರಿ ಯೇಸು ಕ್ರಿಸ್ತನ ಪುನರಾಗಮನವಾಗುವುದೆಂಬ ವಾದ. **-millénnialist** (ನಾ.). **-nátal** ಮಗು ಹುಟ್ಟಿದ ತರುವಾಯದ ; ಶಿಶು ಜನನಾನಂತರದ. **-núptial** ವಿವಾಹೋತ್ತರದ. **-óral** ಬಾಯ ಹಿಂದುಗಡೆಯಿರುವ.

Póster. **Post**[1] ನೋಡಿ.

Poste restante. **Post**[2] ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Postérior ಪಾಸ್ಟೀರಿಯರ್ (ಗು., ನಾ.) (ಶ್ರೇಣಿಯಲ್ಲಿ, ಕ್ರಮದಲ್ಲಿ, ಕಾಲದಲ್ಲಿ) ತರುವಾಯದ ; ಹಿಂದಿನಿಂದ ಬರುವ ; ಉತ್ತರ ಕಾಲೀನ [**Posteriórity** (ನಾ.)]. ಹಿಂದುಗಡೆಯ ; ಹಿಂಭಾಗದ. (ನಾ., ಏ. ವ. ಅಥವಾ ಬ. ವ.) ಪಿರ್ರೆ(ಗಳು) ; ಅಂಡು ; ಪೊರಮಾರು, ಹೊರವಾರು (ಗ್ರಾಂ.) ; ನಿತಂಬ. **Postériorly** (ಕ್ರಿ. ವಿ.) ಹಿಂದಿನಿಂದ ಕಾಣುವಂತೆ.

Postérity ಪಾಸ್ಟೆರಿಟಿ (ನಾ.) (ಒಬ್ಬನ) ಸಂತತಿ ; ಮುಂದಿನ ತಲೆಮೊರೆಯುವರು ; ತಲೆಮಾರಿನವರು ; ಭವಿಷ್ಯ ಪ್ರಜಾ ಸಂತತಿ (Deserves the gratitude of p.)

Póstern ಪೋ(ಪಾ)ಸ್ಟರ್ನ್ (ನಾ.) ಹಿಂಬಾಗಿಲು ; ಹಿತ್ತಿಲ ಬಾಗಿಲು ; ಪಕ್ಕದ ಹಾದಿ, ದ್ವಾರ (ವಿಶೇಷಣವಾಗಿ : P. door, gate). ಕಂದಕಕ್ಕೂ ಹೊರ ರಕ್ಷಣಾ ಕಾರ್ಯಪ್ರದೇಶಕ್ಕೂ ಕೋಟೆಯೊಳಗಿನಿಂದ ಇರುವ ಸುರಂಗ ಮಾರ್ಗ ; (ಕೋಟೆಯ) ದಿಡ್ಡೀ ಬಾಗಿಲು ; (ರೂಪ.) ತಪ್ಪಿಸಿಕೊಳ್ಳಲು ಅಥವಾ ಅಡಗಿಕೊಳ್ಳಲು ಇರುವ ಮಾರ್ಗ.

Post hoc érgo própter hoc (L) ಪೋಸ್ಟ್ ಹಾಕ್ ಅರ್ಗೋ ಪ್ರಾಪ್ಟರ್ ಹಾಕ್ (ವಾಕ್ಯ ಭಾಗ) (ತರ್ಕ ಶಾಸ್ತ್ರ) ಇದಾದ ತರುವಾಯ, ಆದುದರಿಂದ, ಇದರ ದೆಸೆಯಿಂದ (ಕಾಲದ ಆನುಪೂರ್ವಿಯನ್ನು ಕಾರ್ಯ ಕಾರಣ ಸಂಬಂಧವೆಂದು ವಾದಿಸುವುದನ್ನು ಹಾಸ್ಯ ಮಾಡುವಲ್ಲಿ)

Pósthumous ಪಾಸ್ಚ್ಯುಮಸ್ (ಗು.) (ಮಗು) ತಂದೆ ಸತ್ತಮೇಲೆ ಹುಟ್ಟಿದ ; (ಗ್ರಂಥ, ಮೊ. ವು) ಕರ್ತೃ ಸತ್ತಮೇಲೆ ಪ್ರಕಟವಾದ. ಸತ್ತಮೇಲೆ ಸಂಭವಿಸುವ ; ಮರಣಾನಂತರದ. **Pósthumously** (ಕ್ರಿ. ವಿ.)

Postícous ಪಾಸ್ಟೈಕಸ್ (ಗು.) (ಸ.ವಿ.) ಹಿಂಭಾಗದ ; ಹಿಂದುಗಡೆಯ.

Póstil ಪಾಸ್ಟಿಲ್ (ನಾ.) (ಚರಿತ್ರೆ) (ಮು., ಬೈಬಲ್ಲಿನ ಗ್ರಂಥ ಪಾಠದಮೇಲೆ) ಪಕ್ಕ ಟಿಪ್ಪಣಿ ; ಟೀಕೆ ; ವ್ಯಾಖ್ಯಾನ.

Postíl(l)ion ಪೊ(ಲ)ಸ್ಟಿಲ್ಯನ್ (ನಾ.) (ನಾಲ್ಕು ಅಥವಾ ಹೆಚ್ಚು ಕುದುರೆಗಳನ್ನು ಕಟ್ಟಿದಾಗ) ಮುಂದಿನ ಜೊತೆಯ ಎಡ ಕುದುರೆಯ ಮೇಲಿನ, (ಒಂದು ಜೋಡಿ ಮಾತ್ರ ಕಟ್ಟಿದಾಗ) ಎಡ ಕುದುರೆಯ ಮೇಲಿನ, —ಸವಾರ (ಮು., ಸಾರಥಿಯಿಲ್ಲದ ಬಂಡಿಯಲ್ಲಿ)

Postlíminy ಪೋಸ್ಟ್ಲಿಮಿನಿ (ನಾ.) (ರೋಮನ್ ನ್ಯಾ. ಶಾ.) ದೇಶಭ್ರಷ್ಟನಾದವನು ಅಥವಾ ಸೆರೆಬಿದ್ದವನು ಹಿಂದಕ್ಕೆ ಬಂದಮೇಲೆ ಮತ್ತೆ ಪ್ರಜಾಧಿಕಾರಗಳನ್ನು ಪಡೆಯಲು ಅವನಿಗಿರುವ ಹಕ್ಕು ; (ಅಂತರ ರಾಷ್ಟ್ರೀಯ ನ್ಯಾ. ಶಾ.) ಯುದ್ಧದಲ್ಲಿ ಹಿಡಿದ ಜನರೂ ವಸ್ತುಗಳೂ ಹಿಂದೆ ಸೇರಿದ್ದ ದೇಶದ ಅಧಿಕಾರಕ್ಕೆ ಮರಳಿ ಒಳಪಟ್ಟಮೇಲೆ ತಮ್ಮ ಪೂರ್ವ ಸ್ಥಿತಿಯನ್ನು ಪಡೆಯುವುದು.

Póstmaster[1], **Póstmastership**[1]. **Post**[2] ನೋಡಿ.

Póstmaster[2] ಪೋಸ್ಟ್ಮಾಸ್ಟರ್ (ನಾ.) ಆಕ್ಸ್‌ಫರ್ಡಿನ ಮರ್ಟನ್ ಪಾಠಶಾಲೆಯಲ್ಲಿ ವಿದ್ಯಾರ್ಥಿ ವೇತನಿ. **Póstmastership**[2] (ನಾ.)

Post merídiem (L) ಪೋಸ್ಟ್ ಮೆರಿಡಿಯೆಮ್ (ಕ್ರಿ. ವಿ. ; ಸಂಕ್ಷಿಪ್ತ : P.M. ಪೀ ಎಮ್) ಮಧ್ಯಾಹ್ನಾನ್ತರ ; ಅಪರಾಹ್ಣ(ದಲ್ಲಿ) (ಉದಾ., 3-20 P.M.)

Post mórtem (L) ಪೋಸ್ಟ್ ಮಾರ್ಟೆಮ್ (ಕ್ರಿ. ವಿ.) ಸತ್ತಮೇಲೆ **Post-mórtem** (ಗು., ನಾ.) ಸತ್ತಮೇಲೆ ಮಾಡುವ (ದೇಹ ಪರೀಕ್ಷೆ) ; ಶವ ಪರೀಕ್ಷೆ.

Post-óbit ಪೋಸ್ಟ್ಆ(ಓ)ಬಿಟ್ (ಗು., ನಾ.) (ಒಬ್ಬನು) ಸತ್ತಮೇಲೆ ಜಾರಿಗೆ ಬರುವ, ಊರ್ಜಿತವಾಗುವ. (ನಾ.) ನಿರ್ದಿಷ್ಟ ವ್ಯಕ್ತಿಯ ಮರಣಾನಂತರ, ಅವನ ಆಸ್ತಿಯಿಂದ ತನಗೆ ಬರುವುದೆಂಬ ನಿರೀಕ್ಷಣೆಯ ವರಮಾನದಿಂದ, ಸಾಲ ತೀರಿಸುವೆನೆಂದು ಭರವಸೆ ಕೊಟ್ಟು, (ಸಾಲಗನಿಗೆ) ಬರೆದುಕೊಟ್ಟ ಸಾಲ ಪತ್ರ.

Postpóne ಪೋಸ್ಟ್‌ಪೋನ್ (ಕ್ರಿ.) (ಕಾಲ) ಮುಂದೆಹಾಕು, ಮುಂದಕ್ಕಿಡು, ತಳ್ಳಿಡು ; ಕಾಲವಿಲಂಬ ಮಾಡು. (ಒಂದನ್ನು) ಮತ್ತೊಂದಕ್ಕಿಂತ ಪ್ರಾಧಾನ್ಯದಲ್ಲಿ ಕೀಳೆಂದು ಪರಿಗಣಿಸು. (ವೈ. ಶಾ. ; ಗಡು ಜ್ವರ, ಮೊ. ವು) ಗಡುವಿಗಿಂತ ತಡವಾಗಿ ಬರು. **Postpónement** (ನಾ.)

Postposítion ಪೋಸ್ಟ್‌ಪೊಸಿಷನ್ (ನಾ.) ಮತ್ತೊಂದು ಪದದ ಮುಂದೆ ಸೇರಿಸಿದ ಪ್ರತ್ಯಯ, ಪದ : ಉತ್ತರ ಪ್ರತ್ಯಯ, ಪದ (ಸಾ., ಹಿಂದಿನ ಪದದ ಭಾಗವಾಗಿ ಉಚ್ಚರಿಸುವಂಥದು : ಉದಾ., -wards). **Postposítional** (ಗು.) ; **Postpósitive** —ಪಾಸಿಟಿವ್ (ಗು.)

Postprándial ಪೋಸ್ಟ್‌ಪ್ರ್ಯಾಂಡಿಯಲ್ (ಗು.) (ನಾ., ಹಾಸ್ಯ ಪ್ರ.) ಭೋಜನದ ತರುವಾಯದ (P. oratory, eloquence)

Póstscript ಪೋಸ್(ಟ್)ಸ್ಕ್ರಿಪ್ಟ್ (ನಾ. ; ಸಂಕ್ಷಿಪ್ತ : P.S.) ಬರೆದವನು ಸಹಿ ಹಾಕಿದಮೇಲೆ ಕಾಗದ ಪತ್ರದ ಕೊನೆಯಲ್ಲಿ ಮತ್ತೆ ಸೇರಿಸಿದ ಪ್ರಕರಣ ; ತಾಜಾ ಕಲಮು.

Póstulant ಪಾಸ್ಟ್ಯು(ಸ್ಚ್ಯೂ)ಲಂಟ್ (ನಾ.) ಒಂದು (ಮತ) ಧರ್ಮ ಸಂಸ್ಥೆಗೆ ಪ್ರವೇಶಪಡೆಯಲಿರುವ, ದೀಕ್ಷೆಪಡೆಯಲಿರುವ, —ಉಮೇದುವಾರ, ಅಭ್ಯರ್ಥಿ.

Póstulate ಪಾಸ್ಟ್ಯುಲೆಟ್ (ನಾ.), —ಲೇಟ್ (ಕ್ರಿ.) ತರ್ಕಿಸಲು, ಚರ್ಚೆ ಮಾಡಲು ಅಥವಾ ನಂಬಲು ಆಧಾರವಾಗಿ ಇಟ್ಟುಕೊಂಡದ್ದು ; ಆಧಾರ ಪ್ರತಿಜ್ಞೆ. (ಜ್ಯಾ.) ಸಾಮಾನ್ಯ ಕ್ರಿಯೆಗಳ ಸಾಧ್ಯತೆಯ ಅಂಗೀಕಾರ (ಉದಾ., ಯಾವುದಾದರೂ ಎರಡು ಬಿಂದುಗಳನ್ನು ಸೇರಿಸಿ ಸರಳ ರೇಖೆಯೆಳೆಯಬಹುದೆಂಬುದು). (ಕ್ರಿ.) (ಬೇಕೆಂದು) ಕೇಳು, ಕೋರು ; (ಆಧಾರವಾಗಿ) ಇಟ್ಟುಕೊ ; ಒಪ್ಪತಕ್ಕದ್ದೆಂದು, ಸಹಜವೆಂದು, —ಇಟ್ಟುಕೊ, ಭಾವಿಸಿಕೊ ; (—ಕ್ಕೆ) ಆವಶ್ಯಕವೆಂದು ಇಟ್ಟುಕೊ (*For* ಉಪ. ಜೊಡನೆ). (ಕ್ರೈಸ್ತ ಮತ ನ್ಯಾಯ) ಮೇಲಧಿಕಾರಿಯ ಒಪ್ಪಿಗೆಗೆ ಒಳಪಟ್ಟು, —ನಾಮಕರಣ ಮಾಡು, ಚುನಾಯಿಸು. **Postulátion** (ನಾ.) ; **Póstulator** (ನಾ.)

Pósture ಪಾಸ್‌ಚ್ಯುರ್, —ಚರ್ (ನಾ., ಕ್ರಿ.) (ದೇಹದ, ಮನಸ್ಸಿನ) ಭಾವ, ಭಂಗಿ, ವಿನ್ಯಾಸ. (ವ್ಯವಹಾರ, ಮೊ. ರ) ಸ್ಥಿತಿ, ಪರಿಸ್ಥಿತಿ, ವಿದ್ಯಮಾನ (*Of* ಉಪ. ಜೊಡನೆ). (P.-maker ಡೊಂಬರವನು ; ಮೈತಿರಿಚುಗ. P.-master ಅಂಗವಿನ್ಯಾಸ ಶಿಕ್ಷಕ). (ಕ್ರಿ.) (ದೇಹದ ಚಲನಾಂಗಗಳನ್ನು) ಒಂದು ಭಂಗಿಯಲ್ಲಿ, ನಿಲವಿನಲ್ಲಿ, —ಇಡು, ಇಟ್ಟುಕೊ (ರೂಪ. ಸಹ). **Póstural** (ಗು.) ; **Pósturer** (ನಾ.)

Pósy ಪೋಸಿ (ನಾ.) (ಪ್ರಾಚೀ. ಪ್ರ.) ಉಂಗುರ, ಮೊ. ರಲ್ಲಿ ಕೆತ್ತಿದ ಸಂಕೇತ ವಾಕ್ಯ, ಆದರ್ಶ ಸೂಕ್ತಿ, ಪದ್ಯ ಚರಣ, ಮೊ. ದು (P.-ring ಇಂಥ ಉಂಗುರ). ಪುಷ್ಪ ಗುಚ್ಛ.

Pot ಪಾಟ್ (ನಾ.) (ಮಣ್ಣಿನ, ಲೋಹದ ಅಥವಾ ಗಾಜಿನ) ದುಂಡನೆಯ ಪಾತ್ರೆ ; ಕೊಡ ; ಬಿಂದಿಗೆ ; ಮಡಕೆ ; ಮೊಗೆ ; ಕುಡಿಕೆ [Glue-p., Watering-p. (ಆಯಾ ಪದವನ್ನು ನೋಡಿ). Ink-p. ಮಸಿ ಕುಡಿಕೆ. Jam-p. ಮುರಬ್ಬದ ಮೊಗೆ]. ಸ್ಥಾಲಿ ; ಕಲಶ ; ಕುಂಭ. ಅಡಿಗೆಗೆ ಉಪಯೋಗಿಸುವ ತಪ್ಪಲೆ, ದುಂಡು ಪಾತ್ರೆ. (ಪ್ಯೂಟರ್ ಮಿಶ್ರ ಲೋಹ, ಮೊ. ಗಳ) ಕುಡಿಯುವ ಪಾತ್ರೆ. ಪಾತ್ರೆಯಲ್ಲಿ ತುಂಬಿಟ್ಟಿರುವ ಪದಾರ್ಥ ; (ಅಳತೆಯಾಗಿ) ಪಾತ್ರೆ ತುಂಬು [A p. of porter, honey. Coffee-p., Tea-p. (ಆಯಾ ಪದವನ್ನು ನೋಡಿ)]. ಮೂತ್ರ ಪಾತ್ರೆ (ಮಗುವಿನ ಮಾತು: po). ಹೂವಿನ ಕುಂಡ. (ವ್ಯಾಯಾಮ ಪಂದ್ಯಗಳಲ್ಲಿ ಕೊಡುವ, ಸಾ., ಬೆಳ್ಳಿಯ) ಬಹುಮಾನ ಪಾತ್ರೆ ; ರಜತ ಕಲಶ, ಕುಂಭ ; (ಅಸಂ.) (ವ್ಯಾಯಾಮದ ಪಂದ್ಯದ ಯಾವುದಾದರೂ) ಬಹುಮಾನ, ಇನಾಮು. (ಬರೆಯುವ ಅಥವಾ ಮುದ್ರಣದ) ಕಾಗದ (15½ ಅಂಗುಲ × 12½ ಅಂಗುಲ ಅಳತೆಯದು) (= P. paper, Pott) (ಅದರ ರಚನೆಯಲ್ಲಿ ಚಿತ್ರಿಸುತ್ತಿದ್ದ ಪಾತ್ರೆಯಾಕಾರದ ಗುರುತಿನಿಂದ). [Chimney-p., Lobster-p. (ಆಯಾ ಪದವನ್ನು ನೋಡಿ)]. (ಹಣ) ದೊಡ್ಡ ಮೊತ್ತ (Made a p. or pots of money ಕೊಡಗಟ್ಟಲೆ, ಕೊಪ್ಪರಿಗೆಗಟ್ಟಲೆ, ಹಣ ಮಾಡಿದನು). (ಜೂಜಿನ ಅಸಂ.) ಒಡ್ಡಿದ ಹೆಚ್ಚು (ಮೊತ್ತದ) ಪಣ (Put the p. on) ; ಜೂಜಿನಲ್ಲಿ ಗೆಲ್ಲುವುದೆಂಬ ನಿರೀಕ್ಷಣೆಯಿರುವ ಮೆಚ್ಚಿನ, ಹೆಚ್ಚು ಪಣ ಕಟ್ಟಿದ, ಕುದುರೆ. [Big p. ದೊಡ್ಡಮನುಷ್ಯ ; ಪ್ರಮುಖ. The p. calls the kettle black ತನ್ನಲ್ಲಿಯೇ ದೋಷವಿದ್ದರೂ ಮತ್ತೊಬ್ಬನನ್ನು ಅದಕ್ಕಾಗಿ ದೂಷಿಸು (ಕಾಗೆ ಕೋಗಿಲೆಯನ್ನು ಕಪ್ಪೆಂದು ಹೀಯಾಳಿಸುವಂತೆ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Go to p. (ಗ್ರಾಮ್ಯ) ನಾಶವಾಗಿಹೋಗು ; ಹಾಳಾಗಿಹೋಗು. Make the p. boil ಹೊಟ್ಟೆ ಹೊರೆ ; ಜೀವನ ನಡಸು. Keep the p. boiling (Boil² ನೋಡಿ). Watched p. never boils ಆತುರ ಪಟ್ಟರೆ ಕೆಲಸ ಬೇಗ ಆಗಲಾರದು]. **P.-belly** ಡೊಳ್ಳು ಹೊಟ್ಟೆ(ಯವನು). **P.-boiler** ಕೇವಲ ಹೊಟ್ಟೆಪಾಡಿಗಾಗಿ ರಚಿಸಿದ ಸಾಹಿತ್ಯ ಕೃತಿ, ಕಲಾ ಕೃತಿ; ಉದರಂಭರಣ ಕೃತಿ ; ಹೀಗೆ ರಚಿಸುವ ಕಲೆಗಾರ, ಸಾಹಿತಿ. **P.-bound** (ಸಸ್ಯದ) ಬೇರುಗಳು ಕುಂಡದ ತುಂಬ ಹರಡಿಕೊಂಡು ಮುಂದೆ ಬೆಳೆಯಲು ಅವಕಾಶವಿಲ್ಲದಿರುವ (ರೂಪ. ಸಹ). **P.-herb** ಹಿತ್ತಿಲಲ್ಲಿ ಬೆಳೆದ ಅಡಿಗೆಯ ಸೊಪ್ಪು. **P.-hole** (ಭೂ. ವಿ.) ನದಿಯ ತಳದ ಬಂಡೆಯಲ್ಲಿ (ಕೆಲವು ಕಡೆ ನೀರಸುಳಿಯಲ್ಲಿ ಸುತ್ತುವ ಕಲ್ಲು ಚೂರುಗಳ ಕಾರ್ಯದಿಂದ ಸವೆದು ಆಗುವ) ಕೊಳವೆಯಾಕಾರದ ಆಳವಾದ ಕುಳಿ ; (ಗಾಡಿಗಳ, ಜನಗಳ, ಓಡಾಟದಿಂದ) ರಸ್ತೆಯ (ಹಾಸಿನ) ಮೇಲ್ಮೈ ಯಲ್ಲಾದ ಮಡಕೆಯಾಕಾರದ ಕುಳಿ. **P.-house** (ಏಲ್)ಮದ್ಯ ದಂಗಡಿ. **P.-hunter** ದಾರಿಯಲ್ಲಿ ಏನು ಸಿಕ್ಕಿದರೆ ಅದಕ್ಕೆ ಗುಂಡು ಹಾರಿಸುವ ಬೇಟೆಗಾರ. ಸ್ಪರ್ಧೆಗಳಲ್ಲಿ ಕೇವಲ ಬಹುಮಾನ ಪಡೆಯು ವುದಕ್ಕಾಗಿ ಭಾಗ ವಹಿಸುವವನು. **P.-hunting** (ನಾ., ಗು.). **P.lead** (ಮು., ಪಂದ್ಯದ ದೋಣಿಯ ಒಡಲಿಗೆ ಉಪಯೋಗಿಸುವಂಥ) ಕಪ್ಪುಸೀಸ (ಪ್ಲಂಬೇಗೊ). **P. luck** ಇದ್ದ ಅಡಿಗೆ; ಸಿದ್ಧಾನ್ನ (Come & take p. luck with us). **P.-metal** ಕುಂಥ, ವೊ. ಚೊಳ್ಳು ಸಾಮಾನನ್ನು ಮಾಡಲು ಉಪಯೋಗಿಸುವ ಒಂದು ತೆರದ ತಾಂಡವಾಳ ; ದೊಡ್ಡ ಪಾತ್ರೆಗಳನ್ನು ಮಾಡಲು ಹಿಂದೆ ಉಪಯೋಗಿಸುತ್ತಿದ್ದ ತಾಮ್ರ ಮತ್ತು ಹೆಚ್ಚು ಸೀಸದ ಮಿಶ್ರ ಲೋಹ. (ಬಣ್ಣ ಒಡಲೆಲ್ಲಕ್ಕೂ ವ್ಯಾಪಿಸುವಂತೆ) ಗಾಜುಪದಾರ್ಥವನ್ನು ಕರಗಿಸುವ ಪಾತ್ರೆಯಲ್ಲೇ ಬಣ್ಣ ಕೊಟ್ಟ ಗಾಜು. **P.-shot** ಕೇವಲ (ಅಂದಿನ) ಊಟಕ್ಕಾಗಿ ಬೇಟೆಯನ್ನು ಕೊಲ್ಲಲು ಹೊಡೆದ ಗುಂಡು ; ಕೇವಲ ಹತ್ತಿರದಲ್ಲಿಯೇ ಇರುವ ಪ್ರಾಣಿ, ವೊ. ಗಳಿಗೆ ಹೊಡೆದ ಗುಂಡು. **P.-still** (ಪಾತ್ರೆಯ ಆವರಣದಲ್ಲಿಯ ಆವಿಯಿಂದ ಕಾಯಿಸದೆ) ಪಾತ್ರೆಯನ್ನೇ (ಜ್ವಾಲೆಯಿಂದ) ನೇರವಾಗಿ ಕಾಯಿಸುವ ಒಂದು ಬಟ್ಟಿಯಂತ್ರ. **P.-valiant** ಕುಡಿತದಿಂದ ಹುಟ್ಟಿದ ಶೌರ್ಯವುಳ್ಳ. **P. valour.** **Potstone** ಮೇಲ್ಮೈ ಕಣಕಣವಾಗಿರುವ ಒಂದು ಬಗೆಯ ಬಳಪದ ಕಲ್ಲು; ಮರಿಗೆ ಕಲ್ಲು. **Pótful** (ನಾ.) ; **Pótter**¹ (ನಾ.) ಮಣ್ಣಿನ ಪಾತ್ರೆಗಳನ್ನು ಮಾಡುವವನು ; ಕುಂಬಾರ [P.'s wheel ಕುಂಬಾರನ ಚಕ್ರ, ತಿಗುರಿ. P.'s lathe ಮಣ್ಣಿಗೆ ರೂಪುಕೊಡುವ ಕುಂಬಾರನ ಚರಕ (ಯಂತ್ರ). P.'s asthma, bronchitis ಕುಂಬಾರಗೆಲಸ ದಲ್ಲಿ ದೂಳು ಕುಡಿದು ಬರುವ) ಗೂರಲು, ಶ್ವಾಸನಾಳಗಳ ಉರಿಯೂತ]. **Póttery** (ನಾ.) ಮಣ್ಣಿನ ಪಾತ್ರೆಗಳು ; ಕುಂಬಾರ ಸಾಮಾನು ; ಕುಂಬಾರಗೆಲಸ(ದ ಮನೆ)

Pot (ಕ್ರಿ.) (ಉಪ್ಪೂರಿಸಿದ ಅಥವಾ ತಕ್ಕಂತೆ ರುಚಿಕಟ್ಟಿದ ಬೆಣ್ಣೆ, ಮೀನು, ಮಾಂಸ ಶಕಲ, ವೊ. ದ ಆಹಾರ ಪದಾರ್ಥಗಳು ಕೆಡದಂತಿರಲು, ಅವನ್ನು) ಮಡಕೆಯಲ್ಲಿ ಅಥವಾ ಜಾಡಿ, ವೊ. ಗಳಲ್ಲಿ ಹಾಕಿಡು (ಮು., ಭೂ. ಕೃ. ನಲ್ಲಿ : ಉದಾ., Potted ham). (ಸಸಿಯನ್ನು) ಕುಂಡದಲ್ಲಿ ನೆಡು, ಹಾಕು. (ಬಿಲ್ಯರ್ಡ್ಸ್‌ನ) (ಚೆಂಡನ್ನು) ಚೀಲ ತುಂಬಿಸು. (ಬೇಟೆಯನ್ನು) ಕೆಡವು ; (ಪ್ರಾಣಿಯನ್ನು) ಗುಂಡು ಹೊಡೆದು ಕೊಲ್ಲು ; (—ಕಡೆಗೆ) ಗುಂಡು ಹಾರಿಸು (*At* ಉಪ. ದೊಡನೆ ಸಹ). ಹಿಡಿ ; ಪಡೆ ; ಗೆಲ್ಲು ; ಸಂಪಾದಿಸು.

Pótable ಪೋಟಬ್‌ಲ್ (ಗು., ನಾ.) (ಸಾ., ಹಾಸ್ಯ ಪ್ರ.) ಕುಡಿಯ ಬಹುದಾದ. (ನಾ., ಬ. ವ. ದಲ್ಲಿ) ಪಾನೀಯಗಳು ; ಕುಡಿತಗಳು. **Potátion** ಪೊಟೇಷನ್ (ನಾ.) ಕುಡಿಯುವುದು ; ಕುಡಿತ ; ಪಾನೀಯ ; ಮದ್ಯ. (ಸಾ., ಬ. ವ. ದಲ್ಲಿ) (ಮದ್ಯವನ್ನು) ಸದಾ ಕುಡಿಯುತ್ತಿರುವುದು ; ಕುಡಿತದ ಚಟ. **Pótatory** ಪೋಟಟರಿ (ಗು.)

Potámic ಪೊಟ್ಯಾಮಿಕ್ (ಗು.) ನದಿಗಳ. **Potamólogy** ಪಾಟಮಾಲೊಜಿ (ನಾ.)

Pótash ಪಾಟ್ಯಾಷ್, (ಪ್ರಾಚೀ. ಪ್ರ.) **Potáss** ಪೊಟ್ಯಾಸ್ (*or* Pòtass ಪಾ—) (ನಾ.) ಶುದ್ಧಿಗೊಳಿಸಿಲ್ಲದ ಪೊಟ್ಯಾಸಿಯಂ ಕಾರ್ಬೊನೇಟ್ ಲವಣ (ಹಿಂದೆ ಸಸ್ಯಪದಾರ್ಥಗಳ ಬೂದಿಯನ್ನು ನೀರಿನಲ್ಲಿ ಕದಡಿ, ಬಂದ ತಿಳಿಯಾದ ದ್ರಾವಣವನ್ನು ಕಬ್ಬಿಣದ ಕಡಾಯಿಗಳಲ್ಲಿ ಕಾಯಿಸಿ, ಇಂಗಿಸಿ, ಪಡೆಯುತ್ತಿದ್ದರು) ; ಸಸ್ಯಕ್ಷಾರ ; ಮರದ ಉಪ್ಪು ; ಯವಕ್ಷಾರ. Caustic p. ಪೊಟ್ಯಾಸಿಯಂ ಹೈಡ್ರಾಕ್ಸೈಡು ಅಥವಾ ಹೈಡ್ರೇಟು. Permanganate of p. (ಸೋಂಕು ನಿವಾರಕವಾಗಿ ಉಪಯೋಗಿಸುವ) ಪೊಟ್ಯಾಸಿಯಂ ಪರ್‌ಮ್ಯಾಂಗನೇಟು. P.-water ಇಂಗಾಲಾಮ್ಲ ವಾಯುವನ್ನು ಹುದುಗಿಸಿದ ಪಾನೀಯ.

Potássium ಪೊಟ್ಯಾಸಿಯಂ (ನಾ.) ಪಾಟ್ಯಾಷಿನ ಆಧಾರ ವಸ್ತುವಾದ, ನಸುಪಾಟಲ ಛಾಯೆಯ ಹೊಳಪಿನ ಬಿಳಿಯ ಬಣ್ಣದ ಒಂದು ಲೋಹ ಧಾತು : ಪೊಟ್ಯಾಸಿಯಂ. **Potássic** (ಗು.)

Potáto ಪೊಟೇಟೊ (ನಾ. ; ಬ. ವ. -oes —ಟೋಸ್) ಆಲೂಗಡ್ಡೆ ; ಉರುಳುಗಡ್ಡೆ ; ಬಟಾಟೆ ; ಇದರ ಗಿಡ. Sweet, Spanish, p. ಗೆಣಸು. (ಅಸಂ.) Quite the p. ಸರಿಯಾದದ್ದು; ತಕ್ಕದ್ದು. (ಅಸಂ.) P.-box, -trap ಬಾಯಿ.

Pótent ಪೋಟೆಂಟ್ (ಗು.) (ಮು., ಕಾವ್ಯ ಅಥವಾ ಅಲಂ.) ವೀರ್ಯವತ್ತಾದ ; ಸಮರ್ಥ ; ಶಕ್ತ ; (ಕಾರಣ, ವೊ. ವು) ಸಮಂಜಸವಾದ, ಸಂಬದ್ಧವಾದ ; (ಔಷಧವಸ್ತು, ವೊ. ವು) ತೀಕ್ಷ್ಣವಾದ, ತೀವ್ರವಾದ. **Pótently** (ಕ್ರಿ. ವಿ.) ; **Pótence** (ನಾ.) ; **Pótency** (ನಾ.) ; **Pótentate** (ನಾ.) ಪ್ರಬಲ ಸ್ವತಂತ್ರಾಧಿಕಾರಿ ; ಪ್ರಭು ; ದೊರೆ. **Poténtial** ಪೊಟೆನ್‌ಷ(ಷ್)ಲ್ (ಗು., ನಾ.) ಅಸ್ತಿತ್ವಕ್ಕೆ, ಕಾರ್ಯರೂಪಕ್ಕೆ, —ಬರಲುಳ್ಳ, ಬರುವ ಸಾಮರ್ಥ್ಯವುಳ್ಳ ; ಅಂತಸ್ಥ ; ನಿಗೂಢ ; ಗುಪ್ತ [(ವೈ. ಶಾ.) P. cautery, corrosive ಚರ್ಮದ ಮೇಲೆ ನಿಜವಾದ ಚುಟಿಕೆಯಂತೆ, ಕ್ಷಯಕಾರಿಯಂತೆ, ಪರಿಣಾಮವುಂಟು ಮಾಡುವ ಪದಾರ್ಥ. (ವ್ಯಾ.) P. mood (ಸಾಧ್ಯತೆಯನ್ನು ಸೂಚಿಸುವ) ಸಂಭಾವನಾ ರೂಪ. (ಭೌ. ವಿ.) P. energy (ಚಲನಾತ್ಮಕವಲ್ಲದ) ಸ್ಥಿತಿ (ರೂಪ) ಶಕ್ತಿ]. (ವಿರ. ಪ್ರ.) ಶಕ್ತಿ ತುಂಬಿರುವ. (ನಾ.) ಸಾಧ್ಯತೆ (Reached its highest p. ಅದರ ಪರಮಾವಧಿಯ ಸಾಧ್ಯತೆಯನ್ನು ಮುಟ್ಟಿಬಿಟ್ಟಿತು). (ವ್ಯಾ.) = P. mood. (ಭೌ. ವಿ.) (ವಿದ್ಯುತ್ತಿನ) ಸ್ಥಾನ ಶಕ್ತಿ. **Potentiálity** —ಷಿಯ್ಯಾಲಿಟಿ (ನಾ.) ; **Poténtially** (ಕ್ರಿ. ವಿ.) ; **Poténtialize** (ಕ್ರಿ. ಸಕ.) (ಶಕ್ತಿಯನ್ನು) ಸ್ಥಿತಿ ರೂಪ, ಗುಪ್ತ, ಗೂಢ, —ಮಾಡು. **Poténtiate** —ನ್ಷಿಯೇಟ್ (ಕ್ರಿ. ಸಕ.) ಸಾಮರ್ಥ್ಯ ಕೊಡು ; ಸಾಧ್ಯ ಮಾಡು.

Pótentate, Poténtial, etc. **Potent** ನೋಡಿ.

Potentiómeter ಪೊಟೆನ್ಷಿಯಾಮಿಟರ್ (ನಾ.) ಸ್ಥಿತಿರೂಪದ ವಿದ್ಯುಚ್ಛಕ್ತಿಗಳೆರಡರ ವ್ಯತ್ಯಾಸವನ್ನು ಅಳೆಯುವ ಸಲಕರಣೆ : ವಿದ್ಯುತ್ ಸ್ಥಿತಿ (ರೂಪ) ಶಕ್ತಿ ಮಾಪಕ.

Póther ಪಾ(ಪ)ದರ್ (ನಾ., ಕ್ರಿ.) ಉಸಿರುಕಟ್ಟಿಸುವ ಹೊಗೆ, ದೂಳೊಡ್ಡು. ಗದ್ದಲ ; ಗಲಭೆ ; ಗಲಾಟೆ. ಮಾತಿನ ಕಲಕಲ ; ಕೋಲಾಹಲ (Made a p. about it). ದುಃಖ ಪ್ರದರ್ಶನ. (ಕ್ರಿ.) ಗಡಿಬಿಡಿ ಮಾಡು, ಮಾಡಿಕೊ ; ಪೀಡಿಸು ; ಕ್ಲೇಶ ಪಟ್ಟುಕೊ.

Pótion ಪೋಷ(ಷ್)ನ್ (ನಾ.) [ಒಂದು (ಸಲದ) ಕುಡಿತಕ್ಕಾಗುವಷ್ಟು ದ್ರವ ಔಷಧದ ಅಥವಾ ವಿಷದ] ಒಂದು ಗುಟುಕು.

Pot-pourrí (F) ಪೋಪುರಿ (ನಾ.) ಸುವಾಸನೆಗಾಗಿ ಜಾಡಿಯಲ್ಲಿ ಹಾಕಿಟ್ಟ ಒಣ ಹೂವೆಸಳುಗಳ ಮತ್ತು ಸಂಬಾರ ಸರಕಿನ ಮಿಶ್ರಣ. (ಸಂಗೀತದ ಅಥವಾ ಸಾಹಿತ್ಯದ) ಸಂಕಲನ, ಪಂಚಕಜ್ಜಾಯ, ಚೌ ಚೌ.

Pótsherd ಪಾಟ್‌ಷರ್ಡ್ (ನಾ.) (ಪ್ರಾಚೀ. ಪ್ರ.) ಮಡಕೆಯ ಚೂರು ; ಹೆಂಚಿನ ಬೋಕಿ ; ಬಕ್ಕರೆ.

Pott ಪಾಟ್ (ನಾ.) ಕಾಗದದ ಒಂದು ಅಳತೆ [Pot (ನಾ.) ನೋಡಿ]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Póttage ಪಾಟೆ(ಟಿ)ಜ್ (ನಾ.) (ಪ್ರಾಚೀ. ಪ್ರ.) ತರಕಾರಿಯನ್ನೂ ಮಾಂಸವನ್ನೂ ಒಟ್ಟಿಗೆ ಬೇಯಿಸಿ ಒಗ್ಗರಣೆ ಹಾಕಿದ ಪಲ್ಯ; ತರಕಾರಿಯ ಮತ್ತು ಮಾಂಸದ ಹುಳಿ. (ರೂಪ.) Mess of p. (Mess ನೋಡಿ)

Pótter[1]. **Pot** ನೋಡಿ.

Pótter[2] ಪಾಟರ್ (ಕ್ರಿ.) ಮನಸ್ಸಿಡದೆ, ಅಶ್ರದ್ಧೆಯಿಂದ, ಒಂದು ಕ್ರಮವಿಲ್ಲದೆ, —ಕೆಲಸ ಮಾಡು (*At*, *in*, subject or occupation). (ಸೋಮಾರಿಯಾಗಿ) ಹೊತ್ತು ಕಳೆ, ಕಾಲಹರಣ ಮಾಡು, ಅಲೆದಾಡು (*About*, ಮೊ. ಉಪ. ದೊಡನೆ). Potter away one's time ಕಾಲವನ್ನು ವ್ಯರ್ಥವಾಗಿ ಕಳೆದುಬಿಡು.

Póttery. **Pot** ನೋಡಿ.

Póttle ಪಾಟ್‌ಲ್ (ನಾ.) (ಪ್ರಾಚೀ. ಪ್ರ.) ದ್ರವಗಳ ಒಂದು ಅಳತೆ: ಅರ್ಧ ಗ್ಯಾಲನ್ನು. (ಸರಿಸುಮಾರು) ಈ ಅಳತೆಯ ಪಾತ್ರೆ, ಜಾಡಿ; ಈ ಅಳತೆಯ ಮದ್ಯ, ಮೊ. ವು; ಮದ್ಯ. (ಹಣ್ಣು ಹಾಕುವ) ಹೆಣಿಗೆಯ ಸಣ್ಣ ಕಡ್ಡಿಬುಟ್ಟಿ.

Pótty ಪಾಟಿ (ಗು.) (ಅಸಂ.) ಲಕ್ಷ್ಯಕ್ಕೆ ಬಾರದ; ಕ್ಷುಲ್ಲಕ; ಗಣನಾರ್ಹವಲ್ಲದ; ನಿಕೃಷ್ಟ; ಚುಟಕ. P. little. P. little State, details. P. questions (ಪರೀಕ್ಷಾ ಪತ್ರದಲ್ಲಿ) ಸುಲಭ(ವಾಗಿ ಉತ್ತರ ಕೊಡಬಹುದಾದ) ಪ್ರಶ್ನೆಗಳು.

Pouch ಪೌಚ್ (ನಾ., ಕ್ರಿ.) ಸಣ್ಣ ಚೀಲ; (ಸಾಮಾನ್ಯ ಅಳತೆಯ) ಸಂಚಿ; ಬೇರ್ಪಡಿಸಲಾಗುವ ಹೊರ ಜೇಬು; ಚೀಲ ಜೇಬು. (ಪ್ರಾಚೀ. ಪ್ರ.) ದುಡ್ಡಿನ (ಕೈ)ಚೀಲ. ಸೈನಿಕನ ಮದ್ದುಗುಂಡಿನ ತೊಗಲು ಚೀಲ; (ನಂಚಿಪ್ರಾಣಿ, ಮೊ. ಗಳ) ಹೊರ ಹೊಟ್ಟೆಯಚೀಲ. ಚೀಲದಂಥ ಕುಹರ (ಮು., ಸಸ್ಯದ ಬೀಜಕೋಶ). (ಕ್ರಿ.) ಚೀಲಕ್ಕೆ ಹಾಕು; ಜೇಬಿಗೆ ಸೇರಿಸು; ಸ್ವಾಧೀನ ಪಡಿಸಿಕೊ. (ಅಸಂ.) (ಒಬ್ಬನಿಗೆ) ಹಣ ಕೊಡು; ಲಂಚ, ಇನಾಮು, ಕೊಡು; ಕೈ ಬೆಚ್ಚಗೆ ಮಾಡು. (ಉಡುಪಿನ ಒಂದು ಭಾಗ) ಚೀಲದಹಾಗೆ ಇಳಿಯಬೀಳು(ವಂತೆ ಮಾಡು). **Pouched** ಪೌಚ್ಟ್ (ಗು.); **Poúchy** (ಗು.)

Poudrétte ಪು(ಪೂ)ಡ್ರೆಟ್ (ನಾ.) ಮನುಷ್ಯನ ಮಲ, ಇದ್ದಲು, ಮೊ. ಪದಾರ್ಥಗಳನ್ನು ಬೆರಸಿ ತಯಾರಿಸಿದ ಗೊಬ್ಬರ.

Poult ಪೋಲ್ಟ್ (ನಾ.) ಸಾಕು ಕೋಳಿ, ಟರ್ಕಿ ಕೋಳಿ, ಮೊ. ಗಳ ಮರಿ.

Poúlterer. **Poultry** ನೋಡಿ.

Poúltice ಪೋಲ್ಟಿಸ್ (ನಾ., ಕ್ರಿ. ಸಕ.) ಕುದಿಹಿಟ್ಟು ಕಟ್ಟು; 'ಪೋಲ್ಟೀಸು' (ಮೆತು ರೊಟ್ಟಿ, ಸೀಮೆಯಗಸೆ, ಹಿಟ್ಟು, ಮೊ. ನ್ನು ಸಾ., ಕುದಿಯುವ ನೀರಿನಲ್ಲಿ ಹಾಕಿ ಮೆತು ಮಾಡಿ ಮಸ್ಲಿನ್ ಬಟ್ಟೆ, ಮೊ. ಗಳಮೇಲೆ ಹರಡಿ ಹುಣ್ಣು ಅಥವಾ ಉರಿಯೂತದ ಮೇಲಿಟ್ಟು ಕಟ್ಟುವಂಥದು). (ಕ್ರಿ.) ಪೋಲ್ಟೀಸು ಕಟ್ಟು.

Poúltry ಪೋಲ್ಟ್ರಿ (ನಾ.) ಸಾಕಿದ ಕುಕ್ಕುಟ (ವರ್ಗದ) ಪಕ್ಷಿಗಳು (ಕೋಳಿ, ಬಾತು, ಟರ್ಕಿ, ಮೊ. ವು). **Poúlterer** (ನಾ.) ಕುಕ್ಕುಟ ಪಕ್ಷಿಗಳ ವ್ಯಾಪಾರಿ.

Pounce[1] ಪೌನ್ಸ್ (ನಾ., ಕ್ರಿ.) ಹಿಂಸ್ರ ಪಕ್ಷಿಯ ಮೊನೆಯುಗುರು. ಎರಗುವುದು; ಮೇಲೆಬೀಳುವುದು; ಥಟ್ಟನೆಯ ಮೇಲೆರಗು (Make a p.). (ಕ್ರಿ.) ಥಟ್ಟನೆ ಮೇಲೆರಗಿ ಹಿಡಿದುಕೊ; (ಒಬ್ಬನ, ಒಂದರ, ಮೇಲೆ) ಥಟ್ಟನೆ ಬೀಳು, ದಾಳಿಯಿಡು (*Upon* ಉಪ. ದೊಡನೆ); (ರೂಪ.) (ತಪ್ಪು, ಮೊ. ನ್ನು) ಫಕ್ಕನೆ, ಆತುರ ಪಟ್ಟು, ತವಕದಿಂದ, —ಹಿಡಿ (*Upon* ಉಪ. ದೊಡನೆ)

Pounce[2] ಪೌನ್ಸ್ (ನಾ., ಕ್ರಿ. ಸಕ.) ಕಾಗದ, ಮೊ. ಗಳಮೇಲೆ ಮಸಿ ಹರಡಿಕೊಳ್ಳದಂತೆ ಹಾಕುವ ನಯವಾದ ಪುಡಿ; ರೇಜು. ತಳದಲ್ಲಿಯ ವಸ್ತುವಿನಮೇಲೆ ನಕಾಸೆಚಿತ್ರ ಬೀಳುವಂತೆ ಮಾಡಲು ರಂಧ್ರಚಿತ್ರದ ಮಾದರಿಯಮೇಲೆ ಉದುರಿಸುವ ಇದ್ದಲು ಪುಡಿ, ಮೊ. ದು. (ಕ್ರಿ.) (ಕಾಗದ, ಟೊಪ್ಪಿಗೆಯ ಮೇಲ್ಮೈ, ಮೊ. ಗಳನ್ನು ನರಂಧ್ರದ 'ಪಮಿಸ್' ಕಲ್ಲಿನಿಂದ ಅಥವಾ ರೇಜಿನಿಂದ ಉಜ್ಜಿ) ನುಣುಪು, ನಯ, —ಮಾಡು. ರಂಧ್ರಚಿತ್ರದ ಮಾದರಿಯಮೇಲೆ ಪುಡಿಯುದುರಿಸಿ (ನಕಾಸೆಯನ್ನು) ವರ್ಗಾಯಿಸು; (ಮಾದರಿಯಮೇಲೆ) ಪುಡಿಯುದುರಿಸು.

Poúncet-box ಪೌನ್ಸೆಟ್‌ಬಾಕ್ಸ್ (ನಾ.) (ಪ್ರಾಚೀ. ಪ್ರ.) ಸುಗಂಧ ದ್ರವ್ಯಗಳಿಗಾಗಿ ಉಪಯೋಗಿಸುವ, ತೂತುಕೊರೆದ ಮುಚ್ಚಳವುಳ್ಳ ಡಬ್ಬಿ, ಭರಣಿ.

Pound[1] ಪೌಂಡ್ (ನಾ., ಕ್ರಿ. ಅಕ.) (ಸಂಕ್ಷಿಪ್ತ: lb = libra) ತೂಕದ ಒಂದು ಮಾನ: ಪೌಂಡು (ಆ್ಯವರ್ಡಪಾಯ್ಸ್ ಪದ್ಧತಿಯಲ್ಲಿ ೧೬ ಔನ್ಸು ತೂಕ, ಟ್ರಾಯ್ ಪದ್ಧತಿಯಲ್ಲಿ ೧೨ ಔನ್ಸು ತೂಕ). [P. of flesh ಅಕ್ಷರಶಃ ನಡಸಬೇಕಾದ ಒಪ್ಪಂದ; ಚಾಚೂ ತಪ್ಪದ ಒಪ್ಪಂದ (Shakespeare ಕವಿಯ Merchant of Venice ಎಂಬ ನಾಟಕದಿಂದ)]. ೨೦ ಷಿಲಿಂಗ್ ಬೆಲೆಯ ನಾಣ್ಯ: ಪೌಂಡು [= P. sterling; ಈಗ ಚಿನ್ನದ ಸವರನ್ ನಾಣ್ಯ: ಉದಾ., Five pounds (ಬರವಣಿಗೆಯಲ್ಲಿ £ 5 ಅಥವಾ 5 l.). Five p. ten (shillings) ಐದು ಪೌಂಡು ಹತ್ತು ಷಿಲಿಂಗು. Pay 5s. in the p. ಕೊಡಬೇಕಾದ ಪ್ರತಿ ಪೌಂಡಿಗೂ ೫ ಷಿ. ನಂತೆ ಕೊಡು. Penny wise & p. foolish (Penny ನೋಡಿ). P., five-p., note ೧ ಪೌಂಡಿನ, ೫ ಪೌಂಡುಗಳ, ಬ್ಯಾಂಕು ನೋಟು. P.-cake ಮುಖ್ಯ ಪರಿಕರಗಳಲ್ಲಿ ಪ್ರತಿಯೊಂದೂ ಒಂದೊಂದು ಪೌಂಡಿನಂತೆ (ಅಥವಾ ಸಮತೂಕವಾಗಿ) ಸೇರಿರುವ ಸಾರವತ್ತಾದ ರೊಟ್ಟಿ. P.-day ಒಂದು ಧರ್ಮಸಂಸ್ಥೆ, ಮೊ. ದು ಅಲ್ಲಿಗೆ ಬಂದವರಿಂದೆಲ್ಲ ಒಂದು ಪೌಂಡಿನಷ್ಟು (ಒಂದು ಪೌಂಡು ಹಣ, ಒಂದು ಪೌಂಡು ತೂಕದ ತೇಯೆಲೆ, ಮೊ.) ಧರ್ಮವನ್ನು ಪಡೆಯುವ ದಿನ]. (ಕ್ರಿ.) ಒಂದು ಪೌಂಡು ತೂಗಬೇಕಾದಷ್ಟು ಸಂಖ್ಯೆಯ ನಾಣ್ಯಗಳನ್ನು ತೂಗಿ ನಾಣ್ಯಗಳ ತೂಕಪರೀಕ್ಷೆ ಮಾಡು. **Poúndage** ಪೌಂಡೆ(ಡಿ)ಜ್ (ನಾ.) ಪ್ರತಿ ಪೌಂಡು ಹಣಕ್ಕೆ ಕೊಡಬೇಕಾದ ದಳ್ಳಾಳಿ, ತೆರ, ರುಸುಮು, ವರಿ. ಒಂದು ವ್ಯಾಪಾರ ಸಂಸ್ಥೆ ಕೂಲಿಗಾಗಿ ಕೊಟ್ಟ ಆದರ ಒಟ್ಟು ಆದಾಯದ ಶತಾಂಶ ಭಾಗ, ಸೇಕಡದ ಭಾಗ. ಪ್ರತಿಯೊಂದು ಪೌಂಡು ತೂಕಕ್ಕೆ ಕೊಡಬೇಕಾದ ರುಸುಮು. [Tonnage & p. (Tonnage ನೋಡಿ)]. **Poúndal** (ನಾ.) ಬಲದ ಒಂದು ಮಾನ (ಒಂದು ಪೌಂಡು ದ್ರವ್ಯದಮೇಲೆ ಒಂದು ಸೆಕೆಂಡು ಕಾಲ ಕಾರ್ಯ ಮಾಡಿ ಅದರಲ್ಲಿ ಸೆಕೆಂಡಿಗೆ ಒಂದು ಅಡಿಯಂತೆ ವೇಗವೃದ್ಧಿ ಮಾಡುವ ಬಲ): ಪೌಂಡರ್(ಬಲ). **Poúnder**[1] (ನಾ.) ಒಂದು ಪೌಂಡು ತೂಕದ ವಸ್ತು; ಒಂದು ಪೌಂಡು ತೂಕದ ಗುಂಡಿನ (ಗುಂಡು ಹಾರಿಸುವ) ಫಿರಂಗಿ (ಹಾಗೆಯೇ Three-p.): (—) ಪೌಂಡು ಬೆಲೆಯ ವಸ್ತು. (—) ಪೌಂಡುಗಳ ಹಣವುಳ್ಳವನು.

Pound[2] ಪೌಂಡ್ (ನಾ., ಕ್ರಿ. ಸಕ.) ತೊಂಡು (ನಾಡಾಡಿ ಅಥವಾ ಕಳ್ಳ) ದನವನ್ನಾಗಲಿ ಜಪ್ತಿಮಾಡಿದ ದನ ಅಥವಾ ಸಾಮಾನನ್ನಾಗಲಿ ಬಿಡಿಸಿಕೊಂಡುಹೋಗುವವರೆಗೂ ಕೂಡಿರುವ ಆವರಣ: (ತೊಂಡು) ದೊಡ್ಡಿ; ದನಗಳ ದೊಡ್ಡಿ. (ರೂಪ.) ಸೆರೆ; ಬಂಧನಸ್ಥಾನ. (ಬೇಟೆ) ಇರುಕು, ಇಕ್ಕಟ್ಟು. [P.-lock ನದಿಯ ಪಾತ್ರದಲ್ಲಿ ನೀರನ್ನು ಕೂಡಿಡಲು ಮಾಡಿರುವ, ಎರಡು ಬಾಗಿಲುಗಳುಳ್ಳ ಮಟ್ಟಬದಲಾವಣೆಯ ಕಟ್ಟೆ (ಎದುರು ಪದ: flash-lock ಒಂದೇ ಬಾಗಿಲುಳ್ಳದ್ದು)]. (ಕ್ರಿ.) (ದನ, ಮೊ. ನ್ನು) ದೊಡ್ಡಿಯಲ್ಲಿ ಕೂಡು (*Up* ಉಪ. ದೊಡನೆ). (ನವಾರನ ವಿಷಯದಲ್ಲಿ) ಇತರರಿಗೆ ಅಸಾಧ್ಯವಾದ ಬೇಲಿಯನ್ನು ದಾಟು, ಹಾರು.

Pound[3] ಪೌಂಡ್ (ಕ್ರಿ.) (ಒನಕೆಯಿಂದ ಹೇಗೊ ಹಾಗೆ) ಮಿದಿ, (ಕೊಟ್ಟಣ) ಕುಟ್ಟು; ಜಜ್ಜು; ಇಡಿ; (ಮುಷ್ಟಿ, ಮೊ. ರಿಂದ) ಗುದ್ದು, ಮೊದ್ದು, ತಾಟಿಸು. ಕುಟ್ಟಿ ಪುಡಿ ಮಾಡು, ಪಾಕದ ರೂಪಕ್ಕೆ ತರು. ಬಲವಾದ ಏಟು ಕೊಡು, ಭಾರಿ ಗುಂಡು ಹೊಡೆ (*At*, *on*, *away at* ಉಪ. ದೊಡನೆ). ಪ್ರಯಾಸದಿಂದ ನಡೆ, ಓಡು, ಸವಾರಿ ಮಾಡು, ದಾರಿ ಮಾಡಿಕೊಂಡು ಹೋಗು (*Along*, ಮೊ. ಉಪ. ದೊಡನೆ) (Horses pounding through mud). **Poúnder**[2] (ನಾ.) (ಕ್ರಿಯಾರ್ಥಗಳಲ್ಲಿ); ಕುಟ್ಟುವ, ಮಿದಿಯುವ, ಸಲಕರಣೆ; ಒನಕೆ; ಇಡಿ ಹಾರೆ; ಕುಟ್ಟಣಿಗೆ; ಒರಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Poúndage, Poúnder[1]. **Pound**[1] ನೋಡಿ.

Poúnder[2]. **Pound**[3] ನೋಡಿ.

Pour ಪೋರ್ (ಕ್ರಿ., ನಾ.) (ದ್ರವ, ಕಣರೂಪದ ಪದಾರ್ಥ, ಬೆಳಕು, ಮೊ. ನ್ನು) ಸುರಿ(ಸು), ಹರಿ(ಸು), ಎರೆ, ಹೊಯ್ಯಿ [P. out the tea. River pours itself into the sea. P. oil upon troubled waters (ರೂಪ.) ಸಮಾಧಾನದ ಮಾತಿನಿಂದ ಅಥವಾ ಇತರ ಮಾರ್ಗದಿಂದ ಗಲಾಟೆಯನ್ನು ಶಾಂತಗೊಳಿಸು. P. cold water on (ರೂಪ.) ಉತ್ಸಾಹ ಭಂಗ ಮಾಡು, (—ಮೇಲೆ) ತಣ್ಣೀರು ಹಾಕು; ಯೋಜನೆ, ಮೊ. ನ್ನು ತಣ್ಣಗೆ ಮಾಡು]. (ಕ್ಷಿಪಣಿಯನ್ನು) ಎಡೆಬಿಡದೆ ಸುರಿಸು, ವರ್ಷಿಸು ; (ಕಟ್ಟಡ, ಮೊ. ರಿಂದ, ಜನಸಂದಣಿ) ವಿಪರೀತವಾಗಿ ಅಥವಾ ಎಡೆಬಿಡದೆ ಹೊರ ಹರಿ, ಹೊರಡಿಸು (*Forth*, *out* ಉಪ. ದೊಡನೆ) ; (ಮಾತು, ಸಂಗೀತ, ಮೊ. ನ್ನು) ಹೊರ ಹರಿಸು (*Forth*, *out* ಉಪ. ದೊಡನೆ) ; (ದ್ರವ, ಮೊ. ವು) ಹರಿ, ಪ್ರವಹಿಸು (*Forth*, *out*, *down* ಉಪ. ದೊಡನೆ) ; (ಮಳೆ) ಬಿರುಸಾಗಿ ಬೀಳು, ಸುರಿ, ಕರೆ [**Poúring** (ಗು.)]. [It never rains but it pours (ರೂಪ.) ಘಟನೆಗಳು, ಮು., ದುರ ದೃಷ್ಟಗಳು ಯಾವಾಗಲೂ ಒಟ್ಟೊಟ್ಟಾಗಿ ಬರುತ್ತವೆ]. (ರೂಪ.) ಹೇರಳವಾಗಿ, ಒಟ್ಟೊಟ್ಟಾಗಿ, ಬರು (*In*, *out*, ಮೊ. ಉಪ. ದೊಡನೆ : Letters p. in from all quarters). (ನಾ.) ಭಾರಿ, ಬಿರುಸಾದ, ಮಳೆ ; ಸುರಿಮಳೆ (ರೂಪ. ಸಹ). (ಎರಕದ ಕೆಲಸ) ಒಂದು ಸಲಕ್ಕೆ ಎರಕಹೊಯ್ದ ದ್ರವ(ದ ಮೊತ್ತ)

Pourparlér (F) ಪು(ಪೂ)ರ್‌ಪಾರ್ಲೆ(ೀ) (ನಾ. ; ಸಾ., ಬ. ವ. ದಲ್ಲಿ) ಸಂಧಾನಕ್ಕೆ ಪೂರ್ವಭಾವಿಯಾಗಿ ಮಾಡುವ ಅನಿರ್ಬಂಧ ರೀತಿಯ ಚರ್ಚೆ, ಮಾತುಕತೆ: ಪೀಠಿಕಾ ಸಂಭಾಷಣೆ; ಪೂರ್ವಭಾವಿ ಮಾತುಕತೆ.

Pou sto (Gk) ಪೌ(ಪೂ) ಸ್ಟೋ (ನಾ.) ನಿಲ್ಲೆಡೆ ; ನಿಲ್ಲಲು ಒಂದು ಸ್ಥಳ ; ನೆರೆ ; ಬೀಡು ; (ರೂಪ.) ಕಾರ್ಯಾಚರಣೆಯ ನೆಲೆ.

Pout ಪೌಟ್ (ಕ್ರಿ., ನಾ.) ತುಟಿ ಚಾಚು ; ತುಟಿಯುಬ್ಬರಿಸು (ಮು., ಅಸಮಾಧಾನ ಸೂಚಕವಾಗಿ). (ನಾ.) ಇಂಥ ಚಾಚು ; ಹೀಗೆ ಚಾಚು ವುದು (In the pouts ಸಿಡಿಮಿಡಿಗುಟ್ಟುತ್ತ). **Poútingly** (ಕ್ರಿ. ವಿ.) ; **Poúter** (ನಾ.) (ಕ್ರಿಯಾರ್ಥಗಳಲ್ಲಿ). ತನ್ನ ಎರೆಚೀಲವನ್ನು ಉಬ್ಬಿಸುವ ಹೆಚ್ಚು ಶಕ್ತಿಯುಳ್ಳ ಒಂದು ಜಾತಿಯ ಪಾರಿವಾಳ. ಒಂದು ಬಗೆಯ ಮೀನು (=Whiting-pout)

Póverty ಪಾವರ್ಟಿ (ನಾ.) ಬಡತನ ; ದಾರಿದ್ರ್ಯ ; ಕೊರತೆ, ಅಭಾವ, ಬರಿದು ; ಇಲ್ಲಮೆ, ಬರುಮೆ (ಗ್ರಾಂ.) (*Of*, *in* ಉಪ. ದೊಡನೆ). ಕೀಳು ದಸೆ ; ಹೀನಸ್ಥಿತಿ ; ಅಲ್ಪತೆ. P.-stricken ಬಡತನವಡಸಿದ ; ಹೊಟ್ಟೆಗಿಲ್ಲದ [(ರೂಪ.) P.-stricken language ದರಿದ್ರಾವಸ್ಥೆಯ, ಶಬ್ದಸಂಪತ್ತಿಲ್ಲದ, ಭಾಷೆ]

Pówder ಪೌಡರ್ (ನಾ., ಕ್ರಿ. ಸಕ.) ಪುಡಿ ; ಹುಡಿ ; ಚೂರ್ಣ ; ಪುಡಿ ಯೌಷಧ ; (ಮುಖ, ಚರ್ಮ ಅಥವಾ ಕೂದಲಿಗೆ ಹಾಕುವ) ಕಾಂತಿ (ವರ್ಧಕ) ಚೂರ್ಣ ; ಪಟವಾಸ. (ಬಂದೂಕು)ಮದ್ದು [Smell of p. ಯುದ್ಧದ ವಾಸನೆ ; ಯುದ್ಧಾನುಭವ. Food for p. (Food ನೋಡಿ). Not worth p. and shot ಗುಂಡು ಹೊಡೆಯಲು, ಯುದ್ಧ ಮಾಡಲು, ಪ್ರಯತ್ನ ನಡಸಲು, —ಅರ್ಹವಲ್ಲದ]. (ವ್ಯಾಯಾಮದ ಆಟ, ಮೊ. ಗಳಲ್ಲಿ) ಒಂದು ಏಟಿನಲ್ಲಿ ಅಥವಾ ಹೊಡೆತದಲ್ಲಿ ಇಟ್ಟ ಶಕ್ತಿ (No p. behind the ball. Put more p. into it). (ಕ್ರಿ.) (—ಮೇಲೆ) ಪುಡಿ ಉದುರಿಸು, ಹರಡು ; ಮುಚ್ಚುವಂತೆ ಪುಡಿ ಸೂಸು (*With* ಉಪ. ದೊಡನೆ). (ಕೂದಲು, ಮೊ. ಕ್ಕೆ) ಕಾಂತಿಚೂರ್ಣ ಹಾಕು ; (ಮೇಲ್ಮೈ ಯನ್ನು) ಬಟ್ಟುಗಳಿಂದ, ಸಣ್ಣ ಚಿತ್ರಗಳಿಂದ, —ಅಲಂಕರಿಸು ; ಪುಡಿ ಮಾಡು (ಮು., ಭೂ. ಕೃ. ನಲ್ಲಿ: Powdered sugar). **P. blue** ಚೆಲವೆ(ಮಡಿ) ಮಾಡುವುದರಲ್ಲಿ ಉಪಯೋಗಿಸುವ, ಒಂದು ತೆರದ ನೀಲಿಯ ಪುಡಿ ; ಗಾಢ ನೀಲ ವರ್ಣ (ವಿಶೇಷಣವಾಗಿ ಸಹ ಪ್ರ.). **P.-down** ಕೆಲವು ಹಕ್ಕಿಗಳಲ್ಲಿ ಪಟ್ಟೆ ಪಟ್ಟೆಗಳಾಗಿ ಕಾಣಬರುವ ತುಪ್ಪುಳು ಗರಿಗಳು. **P.-flask** ಬಂದೂಕುಮದ್ದಿನ ಕೋಶ (ಆದಿಯಲ್ಲಿ ಕೊಂಬಿನದು, ಈಚೆಗೆ ತೊಗಲಿನದು ಅಥವಾ ಲೋಹದ್ದು). **P.-horn** ಬಂದೂಕುಮದ್ದಿನ ಕೊಂಬು. **P.-magazine** ಬಂದೂಕು ಮದ್ದಿನ ಉಗ್ರಾಣ ; ಮದ್ದಿನ ಮನೆ. **P.-monkey** ಹಡಗಿನಲ್ಲಿ ಫಿರಂಗಿ ಗಳಿಗೆ ಮದ್ದನ್ನು ಹೊತ್ತು ತರುವ ಹುಡುಗ. **P.-puff** ಚರ್ಮಕ್ಕೆ ಕಾಂತಿ ಚೂರ್ಣವನ್ನುದುರಿಸುವ ತುಪ್ಪುಳು ಕುಂಚ ; ಪುಡಿ ಕುಂಚ. **Pówderiness** (ನಾ.) ; **Pówdery** (ಗು.)

Pówer ಪೌಅರ್ (ನಾ.) (ಮಾಡಲು, ನಡೆಯಲು) ಶಕ್ತಿ, ಸಾಮರ್ಥ್ಯ, ಅಳವು (ಗ್ರಾಂ.), ಅರ್ಪು (ಗ್ರಾಂ.) (Will do all in my p. Has the p. of changing its colour). (ದೇಹದ ಅಥವಾ ಮನಸ್ಸಿನ) ನಿರ್ದಿಷ್ಟ ಶಕ್ತಿ (Taxes his powers to the utmost. Man of varied powers). ಸತ್ತ್ವ ; ವೀರ್ಯ ; ಬಲ [More p. to your elbow ! (ಪ್ರೋತ್ಸಾಹ, ಪ್ರಶಂಸಾ, —ಸೂಚಕ). Has a high heating p.]. ಪ್ರಭುತ್ವ, ಆಧಿಪತ್ಯ, ಪ್ರಭಾವ, ಅಧಿಕಾರ, ಅಳಿಕೆ (*Over* ಉಪ. ದೊಡನೆ) (In one's p. ಒಬ್ಬನ ಅಧೀನದಲ್ಲಿ. The party now in p. ಈಗ ಅಧಿಕಾರದಲ್ಲಿರುವ ರಾಜಕೀಯ ಪಕ್ಷ). ವಹಿಸಿದ ಅಧಿಕಾರ [A bill to extend & define their powers. P. of attorney (Attorney ನೋಡಿ)]. ಪ್ರಭಾವಯುತ ವ್ಯಕ್ತಿ, ಸಂಸ್ಥೆ, ವಸ್ತು (The press had not become a p. in the State. The powers that be ಈಗಿನ ಮೇಲಧಿಕಾರಿಗಳು). ಅಂತರ ರಾಷ್ಟ್ರೀಯ ಪ್ರಭಾವವುಳ್ಳ ರಾಜ್ಯ : ಪ್ರಬಲ ರಾಷ್ಟ್ರ. ದೇವತೆ (Merciful powers ! ಕರುಣಾಳು ದೇವತೆಗಳೇ !) ; ದೇವದೂತರ ಆರನೆಯ ವರ್ಗ. (ಗ್ರಾಮ್ಯ) ಹೆಚ್ಚು ಸಂಖ್ಯೆ ಅಥವಾ ಮೊತ್ತ (Saw a p. of people. Did a p. of work). (ಗಣಿತ) ಘಾತ (The third, tenth, etc. p. of a number ಒಂದು ಸಂಖ್ಯೆಯನ್ನು ಅದರಿಂದಲೇ ಮೂರಾವರ್ತಿ, ಹತ್ತಾವರ್ತಿ, ಮೊ. ಗಿ ಗುಣಿಸಿ ಬಂದ ಲಬ್ಧ : The third p. of 2 is 8 ; $2^3=8$). ಶಕ್ತಿಯನ್ನು ಯಾಂತ್ರಿಕೋದ್ದೇಶಗಳಿಗಾಗಿ ಅನುಗೊಳಿಸುವ ಸಾಧನ [The mechanical powers ಸರಳ ಯಂತ್ರಗಳು (Mechanic ನೋಡಿ)] ; ಯಂತ್ರಶಕ್ತಿ (ಕೈದುಡಿತದ್ದಲ್ಲ) [ವಿಶೇಷಣ ವಾಗಿ : P.-lathe, -loom, -mill. P.-station ಬೇರೆ ಬೇರೆ ನೆಲೆ ಗಳಿಗೆ ಹಂಚುವುದಕ್ಕಾಗಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಅಧಿಸ್ಥಾನ ; ಶಕ್ತ್ಯುತ್ಪತ್ತಿ ಸ್ಥಾನ]. ಯಾಂತ್ರಿಕ ಸಾಮರ್ಥ್ಯ [Horse-p. (Horse ನೋಡಿ)] ; ಲೆನ್ಸಿನ ವರ್ಧಕ ಸಾಮರ್ಥ್ಯ. **(-)powered** (ಗು.). **Pówerful** (ಗು.) ಅಧಿಕ ಬಲ, ಶಕ್ತಿ, ಸಾಮರ್ಥ್ಯ, ಪ್ರಭಾವ, —ಉಳ್ಳ ; ಪ್ರಬಲ ; ಬಲಿಷ್ಠ (P. grasp, horse, mind, ally, book, speech, odour). **Pówerfully** (ಕ್ರಿ. ವಿ.); **Pówerless** (ಗು.) ಶಕ್ತಿಹೀನ ; ನಿಶ್ಶಕ್ತ ; (ಸಹಾಯ, ಮೊ. ನ್ನು ಮಾಡಲು) ಅಸಮರ್ಥ. **Pówerlessly** (ಕ್ರಿ. ವಿ.) ; **Pówerlessness** (ನಾ.)

Pówwow, Powwów ಪೌವೌ, **Pawáw** ಪಾವಾ (ನಾ., ಕ್ರಿ.) (ಉ. ಅಮೆರಿಕದ ಇಂಡಿಯನರ) ವೈದ್ಯ, ಮಂತ್ರವಾದಿ, ಮಾಟಗಾರ ; ಮಾಂತ್ರಿಕ ಕರ್ಮ ; ಸಂಮೇಳನ. (ಅಮೆ. ಸಂ.) (ರಾಜಕೀಯ ಅಥವಾ ಇತರ) ಸಭೆ. (ಕ್ರಿ.) ವೈದ್ಯ ಮಾಡು ; ಮಂತ್ರ ಹಾಕು. (ಉ. ಅಮೆರಿಕದ ಇಂಡಿಯನರ ವಿಷಯದಲ್ಲಿ) ಸಂಮೇಳನ ನಡಸು, ಸಭೆ ಮಾಡು. (ಅಮೆ. ಸಂ.) (ಒಂದರ ವಿಷಯವಾಗಿ) ಸಹಾಲೋಚನೆ, ಚರ್ಚೆ, —ನಡಸು (*About*, ಮೊ. ಉಪ. ದೊಡನೆ)

Pox ಪಾಕ್ಸ್ (ನಾ.) ಒಂದು ಬಗೆಯ ಅಂಟು ಮೇಹರೋಗ ; ಉಪ ದಂಶ, ಸೀತಾಳೆ ಸಿಡುಬು ; ದನದ ಸಿಡುಬು ; ಸಿಡುಬು.

Praam=Pram[1].

Prácticable ಪ್ರ್ಯಾಕ್ಟಿಕಬ್‌ಲ್ (ಗು.) ಮಾಡಲಾಗುವ ; (ಕಾರ್ಯ) ಸಾಧ್ಯ ; ವ್ಯವಹಾರ್ಯ. (ರಸ್ತೆ, ದಾರಿ, ಆಹಾರ) ಉಪಯೋಗಿಸ ಲಾಗುವ, ಅನುಕೂಲವಾದ ; (ನಾಟಕ ಶಾಲೆಯ ಕಿಟಕಿ, ಬಾಗಿಲು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೊ. ವು) ನಿಜವಾದ (ನೋಟ ಮಾತ್ರದವಲ್ಲದ), ಕಾರ್ಯತಃ ತೆರೆದು ಉಪಯೋಗಿಸಲಾಗುವ. **Practicability** (ನಾ.) ; **Prácticableness** (ನಾ.); **Prácticably** (ಕ್ರಿ. ವಿ.); **Práctical** (ಗು.) ಕಾರ್ಯರೂಪದ ; ಕಾರ್ಯತಃ ನಿರ್ದೆಶಿಸಲಾಗುವ ; ಪ್ರಾಯೋಗಿಕ (Theoretical ಹೋಲಿಸಿ) [P. agriculture. P. philosophy. P. joke (Joke ನೋಡಿ)]. ಕಾರ್ಯರೂಪದಲ್ಲಿ ಕಂಡುಬರುವ, ನಡೆಯುವ ; ಉಪಯೋಗಕರವಾದ ; ಕಾರ್ಯ ನಿರತ ; ಕಾರ್ಯೋದ್ಯುಕ್ತ. (ಬರಿಯ ಕಲ್ಪನೆಯಲ್ಲದೆ) ಕಾರ್ಯ ಪ್ರವೃತ್ತಿಯುಳ್ಳ, ಕಾರ್ಯಶೀಲ (Does not appeal to p. minds ಕಾರ್ಯ ದೃಷ್ಟಿಯುಳ್ಳವರಿಗೆ ರುಚಿಸುವುದಿಲ್ಲ) (A p. atheist ಹೆಸರಿಗಲ್ಲದಿದ್ದರೂ ಕಾರ್ಯತಃ ನಾಸ್ತಿಕ. Has p. control ವಾಸ್ತವಿಕವಾದ ಹತೋಟಿ ಪಡೆದಿದ್ದಾನೆ). **Practicálity** (ನಾ.) ; **Prácticalness** (ನಾ.) ; **Práctically** (ಕ್ರಿ. ವಿ.) ಕಾರ್ಯ ರೀತಿಯಲ್ಲಿ ; ಕಾರ್ಯತಃ ; ಬಹು ಮಟ್ಟಿಗೆ ; ಪ್ರಾಯೇಣ (P. nothing)

Práctical, etc. **Practicable** ನೋಡಿ.

Práctice ಪ್ರ್ಯಾಕ್ಟಿಸ್ (ನಾ.) ರೂಢಿಯ ಕಾರ್ಯ, ಆಚರಣೆ; ಪರಿಪಾಠ; ನಡವಳಿ(ಕೆ); ಚಾಳಿ (Naval p. The p. of advertising. Makes a p. of cheating ಮೋಸ ಮಾಡುವ ಪರಿಪಾಠ, ಚಾಳಿ, ಮಾಡಿಕೊಂಡಿದ್ದಾನೆ). ಕಾನೂನಿನ, ನ್ಯಾಯಾಚರಣೆಯ, ನಡವಳಿಯ, ಪದ್ಧತಿ. ಅಭ್ಯಾಸ; ಪದ್ಧತಿ; ಸಂಪ್ರದಾಯ; ರೂಢಿ; ಬಳಕೆ; ವಾಡಿಕೆ; ಅನುಷ್ಠಾನ (Has been the regular p. P. makes perfect ಅಭ್ಯಾಸಮಾಡುತ್ತ ಹೋದಲ್ಲ ಪೂರ್ಣತೆ, ಪ್ರವೀಣತೆ, ಸಿದ್ಧಿಸುತ್ತದೆ. In, out of, p. ಬಳಕೆಯಲ್ಲಿ, ಬಳಕೆ ತಪ್ಪಿ. Is good p. ಕುಶಲತೆಯನ್ನು ಅಭಿವೃದ್ಧಿಮಾಡುತ್ತದೆ. Ball, target, p. ಚೆಂಡು, ಗುರಿ, ಹೊಡೆಯುವ ಅಭ್ಯಾಸ). ವಕೀಲನ, ವೈದ್ಯನ, —ವೃತ್ತಿ, ಉದ್ಯೋಗ, ವ್ಯವಹಾರ, ಸಂಬಂಧ (Has a large p. ಅವನ ವೃತ್ತಿ ಚೆನ್ನಾಗಿ ನಡೆಯುತ್ತಿದೆ. Sold his p.). (ಪ್ರಾಚೀ. ಪ್ರ.) ಹೂಟ; ತಂತ್ರ; (ಸಾ., ಮೋಸದ) ಯೋಜನೆ, (ಕು)ಯುಕ್ತಿ [(ಮು., ಬ. ವ. ದಲ್ಲಿ) Sharp p. (Sharp ನೋಡಿ)]. (ಗಣಿತ) ಒಂದು ಗೊತ್ತಾದ ದರದ ಮೇರೆಗೆ ನಿರ್ದಿಷ್ಟ ಸಂಖ್ಯೆಯ ವಸ್ತುಗಳ ಅಥವಾ ಸರಕಿನ ಮೊತ್ತದ ಬೆಲೆಯನ್ನು, ಆ ಮೊತ್ತ ಅಥವಾ ಬೆಲೆ ಒಂದೇ ಮಾನದಲ್ಲಿರದೆ ಅನೇಕ ಮಾನಗಳಲ್ಲಿರುವಾಗ ಕಂಡುಹಿಡಿಯುವ ಸುಲಭ ಮಾರ್ಗ: ರೂಢಿ ಗಣಿತ (ಉದಾ., ೪ ಖಂಡಿ, ೫ ಕೊಳಗ, ೧೨ ಸೇರು ರಾಗಿಯ ಬೆಲೆಯನ್ನು ಖಂಡಿ ೧೯ಕ್ಕೆ ೧೫ ರೂಪಾಯಿ, ೧೧ ಆಣೆ, ೮ ಪೈ ದರದ ಮೇರೆಗೆ ಕಂಡುಹಿಡಿಯುವ ಒಂದು ವಿಧಾನ). In p. ಆಚರಣೆಯಲ್ಲಿ ; ವ್ಯವಹಾರದಲ್ಲಿ (Quite useless, would never work, in p.). Put in(to) p. (ಯೋಜನೆಯನ್ನು, ವಿಧಾನವನ್ನು) ಕಾರ್ಯ ರೂಪಕ್ಕೆ, ಪ್ರಯೋಗಕ್ಕೆ, ತರು. **Practícian** —ಷ(ಷ್)ನ್ (ನಾ.) ಕೆಲಸಗಾರ ; ಉದ್ಯೋಗಿ ; ಕಸಬುದಾರ ; ವೃತ್ತಿಗಾರ. **Práctise** (ಕ್ರಿ.) ಪದ್ಧತಿಯಾಗಿ, ಬಳಕೆಯಾಗಿ, —ಮಾಡು, ನಡಸು ; ಆಚರಣೆಯಲ್ಲಿ ತರು, ಇಟ್ಟುಕೊ; ಆಚರಿಸು (P. what you preach ನೀನು ಉಪದೇಶ ಮಾಡುವುದನ್ನು ನಿನ್ನ ಅನುಷ್ಠಾನದಲ್ಲಿ ತೋರು ; ನುಡಿಯುವಂತೆ ನಡೆ). ತನ್ನ ವೃತ್ತಿಯನ್ನು ನಡಸು, ಮಾಡು [Practising doctor, barrister, etc. (ವಿಶ್ರಾಂತಿ ಪಡೆದವನಾಗಲಿ, ಯೋಗ್ಯತೆಯಿದ್ದು ಸುಮ್ಮನೆ ಕುಳಿತಿರುವವನಾಗಲಿ ಅಲ್ಲ) ವೃತ್ತಿ ನಡಸುತ್ತಿರುವ—]. (ಕಲೆ, ವಾದ್ಯ, ಮೊ. ನ್ನು) ಅಭ್ಯಾಸ ಮಾಡು, ಮಾಡುತ್ತಿರು; ಅಭ್ಯಾಸದಲ್ಲಿಟ್ಟುಕೊ (P. the flute, the piano, music, running). (ಒಬ್ಬನಿಗೆ, ತನಗೆ, —ಒಂದು ವಿಷಯದಲ್ಲಿ, ಕಾರ್ಯದಲ್ಲಿ) ಅಭ್ಯಾಸ ಕೊಡು [**Práctised** ಪ್ರ್ಯಾಕ್ಟಿಸ್ಟ್ (ಗು.)]. (ಪ್ರಾಚೀ. ಪ್ರ.) ಹೂಟ ಹೂಡು ; ಹರುವು ಮಾಡು (When first we p. to deceive). P. (up)on ವಂಚಿಸು ; ಮೋಸ ಮಾಡು ; (ಒಬ್ಬನನ್ನು, ಒಬ್ಬನ ಅವಿಚಾರತೆಯನ್ನು) ಸ್ವಪ್ರಯೋಜನಕ್ಕಾಗಿ ಉಪಯೋಗಪಡಿಸಿಕೊ. **Practítioner** —ಷನರ್ (ನಾ.) (ಮು., ವೈದ್ಯ, ವಕೀಲ) ವೃತ್ತಿ ಮಾಡುವವನು ; ವೃತ್ತಿಗಾರ. General p. (ಸಂಕ್ಷಿಪ್ತ: G.P.) (ಔಷಧ ಚಿಕಿತ್ಸೆಯನ್ನೂ ಶಸ್ತ್ರ ಚಿಕಿತ್ಸೆಯನ್ನೂ ಸಹ ನಡಸುವ) ಸರ್ವಾಂಶ ವೈದ್ಯ (General ನೋಡಿ)

Praecócial ಪ್ರೀಕೋಷಲ್ (ಗು.) (ಹಕ್ಕಿಗಳ ವಿಷಯದಲ್ಲಿ) ಮೊಟ್ಟೆಯೊಡದೊಡನೆಯೇ ಮರಿಗಳು (ಗೂಡುಬಿಟ್ಟು ಹೊರಟು) ತಮ್ಮ ಆಹಾರವನ್ನು ತಾವೇ ಸಂಪಾದಿಸಿಕೊಳ್ಳುವ (ಜಾತಿಯ)

Praenómen (L) ಪ್ರೀನೋಮೆನ್ (ನಾ.) (ರೋ. ಪ್ರಾ.) ವ್ಯಕ್ತಿಯ ಮೊದಲನೆಯ ಅಥವಾ ಸ್ವಂತ ಹೆಸರು: ಸ್ವನಾಮ (ಉದಾ., *Marcus* Tullius Cicero. ರಾಮಕೃಷ್ಣ ಗೋಪಾಲ ಭಂಡಾರಕರ್)

Praepóstor, Pre- ಪ್ರಿಪಾಸ್ಟರ್ (ನಾ.) (ಇಂಗ್ಲೆಂಡಿನ ಕೆಲವು ವಿದ್ಯಾಶಾಲೆಗಳಲ್ಲಿ) ಹಿರೇಮಣಿ.

Praétor ಪ್ರೀಟರ್ (ನಾ.) (ರೋಮನ್ ಚರಿತ್ರೆ) (ಆದಿಯಲ್ಲಿ) ಸೇನಾನಾಯಕತ್ವವೂ ಇದ್ದ ರೋಮನ್ ಪ್ರಧಾನ ದಂಡಾಧಿಕಾರಿ ; (ಈಚಿನ ಅರ್ಥ) (ಈ ಅಧಿಕಾರಿಯ ಕೆಲವು ಕರ್ತವ್ಯಗಳನ್ನು ನಿರ್ವಹಿಸುವ) ವರ್ಷೇವರ್ಷೇ ಚುನಾವಣೆಯಾಗುವ ದಂಡಾಧಿಕಾರಿ: ಪ್ರೀಟರ್ [**Praetórial** ಪ್ರಿಟೋರಿಯಲ್ (ಗು.) ; **Praétorship** (ನಾ.)]. **Praetórian, Pre-** (ಗು., ನಾ.) ಪ್ರೀಟರಿನ ; ರೋಮನ್ ಸೇನಾಧಿಪತಿಯ ಅಥವಾ ಚಕ್ರವರ್ತಿಯ ಅಂಗರಕ್ಷಕನ. (ನಾ.) ಪ್ರೀಟರ್ ದರ್ಜೆಯವನು ; ಪ್ರೀಟರ್ ಅಂಗರಕ್ಷಕ ಸಿಪಾಯಿ.

Pragmátic(al) ಪ್ರ್ಯಾಗ್‌ಮ್ಯಾಟಿಕ್(ಕಲ್) (ಗು.) ತನಗೆ ಸಂಬಂಧವಿಲ್ಲದ ವಿಚಾರದಲ್ಲಿ ತಲೆಹಾಕುವ ; ಸ್ವಾಭಿಪ್ರಾಯ ನಿಷ್ಠ; ವ್ಯಾವಹಾರಿಕ. (-ic) ಚರಿತ್ರಾಂಶಗಳನ್ನು ವ್ಯಾವಹಾರಿಕ ಪ್ರಯೋಜನದ ದೃಷ್ಟಿಯಿಂದ ಭಾವಿಸುವ. (-ic) ರಾಷ್ಟ್ರ ವ್ಯವಹಾರದ [P. sanction (ಚರಿತ್ರೆ) ರಾಜ್ಯದ ಮೂಲಾಧಾರ ಶಾಸನ (ಮು., ಸಿಂಹಾಸನಕ್ಕೆ ಉತ್ತರಾಧಿಕಾರವನ್ನು ನಿರ್ಣಯಿಸತಕ್ಕದ್ದು ; ಅದರಲ್ಲಿಯೂ, ೧೭೨೪ರಲ್ಲಿ ಆಸ್ಟ್ರಿಯದ VIನೆಯ ಚಾರ್ಲೆಸ್ ಚಕ್ರವರ್ತಿ ತನಗೆ ತನ್ನ ಮಗಳೇ ಉತ್ತರಾಧಿಕಾರಿಣಿಯಾಗತಕ್ಕದ್ದೆಂದು ನಿರ್ಣಯ ಮಾಡಿ ಹೊರಡಿಸಿದ ಶಾಸನ)]. **Pragmaticálity** (ನಾ.) ; **Pragmátically** (ಕ್ರಿ. ವಿ.) ; **Prágmatism** —ಮಟಿಸ್ಮ್ (ನಾ.) ಕೇವಲ ಶಾಸ್ತ್ರೀ ವಾದ, ಸೂತ್ರಬದ್ಧತೆ. (ತ. ಶಾ.) ಕೇವಲ ವ್ಯಾವಹಾರಿಕ ಮಾನವ ಹಿತ ದೃಷ್ಟಿಯಿಂದ ಯಾವ ಪ್ರತಿಪಾದನೆಯನ್ನಾಗಲಿ ಸಮರ್ಥಿಸುವ ವಾದ: ಪ್ರಯೋಜನ ಪ್ರಮಾಣ ವಾದ ; ಫಲ ಪ್ರಮಾಣ ವಾದ. **Prágmatist** (ನಾ.) ; **Pragmatístic** (ಗು.) ; **Prágmatize** (ಕ್ರಿ. ಸಕ.) ವಾಸ್ತವವೆಂದು ನಿರೂಪಿಸು ; (ಪುರಾಣ ಕಥೆಯನ್ನು) ನಿಜವೆನ್ನುವಂತೆ ಸಮರ್ಥನೆ ಮಾಡು ; ಬುದ್ಧಿಗೆ ಒಪ್ಪುವಂತೆ ಅರ್ಥ ಮಾಡು.

Praírie ಪ್ರೇರಿ (ನಾ.) ಮರಗಳಿಲ್ಲದ ವಿಸ್ತಾರವಾದ (ಸಮತಲದ ಅಥವಾ ಏರಿಳಿತಗಳುಳ್ಳ) ಹುಲ್ಲುಗಾವಲು ; ಹುಲ್ಲುಗಾಡು. P.-chicken, -hen ಉ. ಅಮೆರಿಕದ (ಕುಕ್ಕುಟ ಜಾತಿಯ) ಒಂದು ಹಕ್ಕಿ. P.-dog ನಾಯಿಯಂತೆ ಬಗುಳುವ, ಉ. ಅಮೆರಿಕದ, ಒಂದು ದಂಶಕ ಪ್ರಾಣಿ. P. oyster ಉಂಡೆಯಂತೆ ನುಂಗಿಬಿಡುವ ಹಸಿಯ ಮೊಟ್ಟೆ.

Praise ಪ್ರೇಯ್ಸ್ (ಕ್ರಿ. ಸಕ., ನಾ.) ಹೊಗಳು; ಕೊಂಡಾಡು; ಶ್ಲಾಘಿಸು; ಪ್ರಶಂಸಿಸು ; (ದೇವರು, ಮೊ. ನ್ನು) ಸ್ತುತಿಸು, ಸ್ತೋತ್ರ ಮಾಡು. (ನಾ.) ಹೊಗಳಿಕೆ ; ಶ್ಲಾಘನೆ ; ಪ್ರಶಂಸೆ ; ಸ್ತೋತ್ರ ; ಕೀರ್ತನೆ (Won high p. Was loud in his praises). **Praíseful** (ಗು.) ; **Praísefulness** (ನಾ.) ; **Praíseworthy** (ಗು.) ಹೊಗಳಿಕೆಗೆ ತಕ್ಕ ; ಪ್ರಶಂಸನೀಯ ; ಸ್ತುತ್ಯ ; ಸ್ತೋತ್ರಾರ್ಹ (ಅನೇಕ ವೇಳೆ, ಅನುಗ್ರಹ ಸೂಚಕವಾಗಿ). **Praíseworthily** (ಕ್ರಿ. ವಿ.) ; **Praíseworthiness** (ನಾ.)

Prákrit ಪ್ರಾಕ್ರಿಟ್ (ನಾ.) ಪ್ರಾಕೃತ ಭಾಷೆ (ಹಿಂದೆ ಸಂಸ್ಕೃತದೊಡನೆ ಬಳಕೆಯಲ್ಲಿದ್ದ ಅಥವಾ ಸಂಸ್ಕೃತದಿಂದ ಹುಟ್ಟಿದ, ಉತ್ತರ ಮತ್ತು ಮಧ್ಯ ಇಂಡಿಯದ ಪ್ರಾಂತ ಭಾಷೆಗಳಲ್ಲೊಂದು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pram[1], **Praam** ಪ್ರಾಮ್ (ನಾ.) (ಬಾಲ್ಟಿಕ್ ಸಮುದ್ರ, ಮೊ. ಎಡೆಗಳಲ್ಲಿ ಹಡಗಿಗೆ ಸಾಮಾನು ತುಂಬುವುದು, ಮೊ. ಕೆಲಸಗಳಿಗೆ ಉಪಯೋಗಿಸುವ) ಚಪ್ಪಟೆ ತಳದ ದೋಣಿ; ಫಿರಂಗಿಗಳನ್ನಿಳವಡಿಸಿರುವ ಚಪ್ಪಟೆ ತಳದ ದೋಣಿ; ಸ್ಕಾಂಡಿನೇವಿಯದ ಹಡಗಿನ ದೋಣಿ.

Pram[2] ಪ್ರ್ಯಾಮ್ (ನಾ.) (ಬಳ. ಮಾ.) ಮಕ್ಕಳ ತಳ್ಳು ಬಂಡಿ; ಹಾಲು ಮಾರುವವನ ಕೈಬಂಡಿ (Perambulator ಪದದ ಸಂಕ್ಷಿಪ್ತ)

Prance ಪ್ರಾನ್ಸ್ (ಕ್ರಿ., ನಾ.) (ಕುದುರೆ) ಹಿಂಗಾಲುಗಳಿಂದ ಕುಪ್ಪಳಿಸಿ ಮೇಲೇಳು; (ಕುದುರೆಯನ್ನು) ಹೀಗೆ ಮೇಲೇಳುವಂತೆ ಮಾಡು. (ರೂಪ.) ಸಡಗರದಿಂದ ಅಥವಾ ಜಂಬದಿಂದ ನಡೆ, ವರ್ತಿಸು (Prancing proconsuls). (ನಾ.) (ಹಿಂಗಾಲಮೇಲೆ) ಕುಪ್ಪಳಿಕೆ. ಇಂಥ ಚಲನೆ ಅಥವಾ ನಡಗೆ.

Prándial ಪ್ರ್ಯಾಂಡಿಯಲ್ (ಗು.) (ಹಾಸ್ಯ ಪ್ರ.) ಊಟದ; ಭೋಜನದ.

Prank[1] ಪ್ರ್ಯಾಂಕ್ (ನಾ.) ಹುಚ್ಚು ಕುಣಿದಾಟ; ಲೀಲೆ; ಹಾಸ್ಯದ ಕೀಟಲೆ; ಕುಚೇಷ್ಟೆ. (ರೂಪ.) (ಯಂತ್ರ, ಮೊ. ಗಳ ವಿಷಯದಲ್ಲಿ) ಒಂದು ಗೊತ್ತಿಲ್ಲದ ಚಲನೆ, ಕಾರ್ಯಾಚರಣೆ. **Plánkful** (ಗು.); **Plánkish** (ಗು.); **Plánkishness** (ನಾ.)

Prank[2] ಪ್ರ್ಯಾಂಕ್ (ಕ್ರಿ.) (ಒಬ್ಬನಿಗೆ, ಒಂದಕ್ಕೆ) (ಆಡಂಬರದ) ಉಡುಪು ತೊಡಿಸು, (ತಾನು) ಆಡಂಬರದ ಉಡುಪು ತೊಟ್ಟುಕೊ (*Out* ಉಪ. ದೊಡನೆ); ಅಲಂಕರಿಸು; ಥಳಥಳಿಸುವ ಅಲಂಕಾರ ಮಾಡು. ಬೆಡಗಿನಿಂದ ಮೆರೆ.

Prate ಪ್ರೇಟ್ (ಕ್ರಿ., ನಾ.) ಹರಟು; ಗಳಹು; ಬಡಬಡಿಸು; ವಿಪರೀತವಾಗಿ ಮಾತನಾಡು; ಅವಿವೇಕವಾಗಿ, ಔಚಿತ್ಯವಿಲ್ಲದೆ, ಮಾತನಾಡು. (ವಿಷಯವನ್ನು) ಹರಟೆಯ ರೀತಿಯಲ್ಲಿ ಹೇಳು. (ನಾ.) ಹರಟೆ; ವೃಥಾಲಾಪ. **Práter** (ನಾ.); **Práting** (ನಾ.); **Práttle** ಪ್ರ್ಯಾಟ್ಲ್ (ಕ್ರಿ., ನಾ.) ಮಗುವಿನಂತೆ, ನಿಷ್ಕಪಟವಾಗಿ, ಮಾತನಾಡು; ಬಾಲಭಾಷೆಯಾಡು. (ವಿಷಯವನ್ನು) ಈ ರೀತಿಯಲ್ಲಿ ಹೇಳು. (ನಾ.) ಬಾಲಭಾಷೆ; ಗೊಡ್ಡುಹರಟೆ. **Práttler** (ನಾ.); **Práttling** (ನಾ.)

Práties ಪ್ರೇಟಿಸ್ (ನಾ.) (ಆ್ಯಂಗ್ಲೊ ಐರಿಷ್, ಬಳ. ಮಾ.) ಉರುಳುಗಡ್ಡೆ.

Prátique (F) ಪ್ರ್ಯಾಟಿಕ್, **Pratíque** ಪ್ರಾಟೀಕ್ (ನಾ.) ಬಂದರಿಗೆ ಬಂದ ಒಂದು ಹಡಗನ್ನು ಅಂಟುರೋಗದ ಭಯದಿಂದ ಕೆಲವು ಕಾಲ ಸಂಪರ್ಕವಿಲ್ಲದಂತೆ ದೂರದಲ್ಲಿಟ್ಟಿದ್ದು ಆ ಗಡು ಮುಗಿದಮೇಲೆಯೊ ಅಥವಾ ಅಂಥ ಹಡಗು ನೀರೋಗ ಪತ್ರ ತೋರಿಸಿದ ಮೇಲೆಯೊ ಬಂದರಿನೊಡನೆ ಸಂಪರ್ಕ ಮಾಡಲು ಹಡಗಿಗೆ ಕೊಡುವ ಅನುಮತಿ ಪತ್ರ, ಪರವಾನೆ: ಸಂಸರ್ಗಾನುಮತಿ ಪತ್ರ.

Práttle. **Prate** ನೋಡಿ.

Právity ಪ್ರ್ಯಾವಿಟಿ (ನಾ.) (ವಿರ. ಪ್ರ.) =Depravity. (ಆಹಾರ, ಮೊ. ಗಳು) ಕೆಟ್ಟುಹೋಗಿರುವುದು; ಕೊಳೆತ.

Prawn ಪ್ರಾನ್ (ನಾ., ಕ್ರಿ. ಸಕ.) (ಆಹಾರಯೋಗ್ಯವಾದ) ಒಂದು ವಲ್ಕವಂತ ಸಮುದ್ರಪ್ರಾಣಿ; ಪ್ರಾನ್. (ಕ್ರಿ.) —ಗಳನ್ನು ಹಿಡಿ. **Prawning** (ನಾ.)

Práxis ಪ್ರ್ಯಾಕ್ಸಿಸ್ (ನಾ.) ಅಂಗೀಕೃತವಾದ ಪದ್ಧತಿ, ಸಂಪ್ರದಾಯ. (ವ್ಯಾ.) ಅಭ್ಯಾಸಕ್ಕಾಗಿ ಕೊಟ್ಟಿರುವ ಉದಾಹರಣೆಗಳು: ಅಭ್ಯಾಸಪಾಠ.

Pray ಪ್ರೇ (ಕ್ರಿ.) (ದೇವರಿಗೆ, ಪೂಜ್ಯ ವಸ್ತುವಿಗೆ) ಪ್ರಾರ್ಥನೆ ಮಾಡು; (ದೇವರನ್ನು, ಒಬ್ಬನನ್ನು) ಶ್ರದ್ಧೆಯಿಂದ, ಭಕ್ತಿಯಿಂದ, ಬೇಡಿಕೊ (*For* thing, *to* do); (ಅನುಮತಿ, ಮೊ. ಕ್ಕಾಗಿ) ಶ್ರದ್ಧಾಪೂರ್ವಕವಾಗಿ ಕೇಳಿಕೊ, ವಿನಂತಿ ಮಾಡಿಕೊ (*To* God, *to* person, *for* thing, *for* or *on behalf of* person, *to* do, *that*). P. consider ದಯಮಾಡಿ ಪರ್ಯಾಲೋಚಿಸಿರಿ. What is the use of that, p.? ಅದರಿಂದೇನು ಪ್ರಯೋಜನ? ಅಪ್ಪಣೆ ಕೊಡಿಸೋಣವಾಗಲಿ. P. in aid of (ಪ್ರಾಚೀ. ಪ್ರ.; *in* ಎಂಬ ಪದ ಉಪ. ಅಲ್ಲ, ಅದು ಕ್ರಿ. ವಿ.) ಒಬ್ಬನ ಸಹಾಯಕ್ಕೆ, ನೆರವಿಗೆ, —ಕರೆ ಕೊಡು. **Prayer**[1] ಪ್ರೇ(ಅ)ರ್ (ನಾ.) ದೇವತಾ ಪ್ರಾರ್ಥನೆ; (ದೇವರ) ಸ್ತೋತ್ರ ಪಾಠ (ಉದಾ., Lord's p.). ಕೇವಲ (ದೇವತಾ) ಸ್ತೋತ್ರಗಳುಳ್ಳ ದೇವತಾರಾಧನೆ (Morning p., Evening p., Family prayers). ಪ್ರಾರ್ಥನಾ ಕಾರ್ಯ; —ಪದ್ಧತಿ. (ಒಬ್ಬನಿಗೆ ಮಾಡಿದ) ಬೇಡಿಕೆ, ಅರಿಕೆ, ಮನವಿ; ಬೇಡಿದ್ದು; ಪ್ರಾರ್ಥಿಸಿದ್ದು. P.-book ಸ್ತೋತ್ರಪಾಠಗಳ ಪುಸ್ತಕ (ಮು., Book of Common P. ಎಂಬ ಕ್ರೈಸ್ತ ಸಾಮಾನ್ಯ ಪ್ರಾರ್ಥನಾ ಗ್ರಂಥ). P.-meeting ಹಲವರು ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುವ ಸಭೆ: ಪ್ರಾರ್ಥನಾ ಸಭೆ. P.-wheel (ತಿಬೆಟ್ಟಿನ ಬೌದ್ಧರಲ್ಲಿ) ಸ್ತೋತ್ರ ಪಾಠಗಳನ್ನು ಮೇಲೆ ಬರೆದಿರುವ ಅಥವಾ ಒಳಕೊಂಡಿರುವ, ಉರುಳೆಯಾಕಾರದ, ಸುತ್ತು ತಿರುಗುವ ಪೆಟ್ಟಿಗೆ. **Prayérful** (ಗು.); **Prayérfully** (ಕ್ರಿ. ವಿ.); **Prayérfulness** (ನಾ.); **Prayérless** (ಗು.); **Prayérlessly** (ಕ್ರಿ. ವಿ.); **Prayérlessness** (ನಾ.); **Praýer**[2] ಪ್ರೇಅರ್ (ನಾ.) ಪ್ರಾರ್ಥನೆ ಮಾಡುವವನು; ಪ್ರಾರ್ಥನಕಾರ.

Pre- ಪ್ರಿ(ೕ)— (ಪೂ. ಪ್ರ.) ಮುಂದೆ ಹೇಳುವ ಅರ್ಥಗಳುಳ್ಳ ಪದಗಳ ರಚನೆಯಲ್ಲಿ ಪ್ರ.: 1. 'ಮೊದಲೇ, ಹಿಂದೆಯೇ—ಮಾಡು, ಮಾಡುವುದು, ಮಾಡಿದ್ದು' ಎಂಬ ಅರ್ಥಗಳ ಕ್ರಿಯಾಪದಗಳು ಮತ್ತು ಕ್ರಿಯಾನಾಮಪದಗಳು.

2. (ವ್ಯಕ್ತಿ, ಮೊ.) 'ಒಂದು ಕಾಲದ ಹಿಂದಿನಿಂದ ಇರುವುದು' ಎಂಬ ಅರ್ಥದ ಗುಣವಾಚಕಗಳು ಮತ್ತು ನಾಮಪದಗಳು.

3. 'ಮುಂಭಾಗದಲ್ಲಿ ನೆಲಸಿರುವ' ಎಂಬ ಅರ್ಥದ, ಅಂ. ರ. ಶಾ. ದ ಮತ್ತು ಜೀ. ವಿ. ದ ಪದಗಳು.

-acquaínt (1); **-adámic** (2) (ಗು.), **-ádamite** (ನಾ., ಗು.) ಆದಮನಿಗೆ ಪೂರ್ವದ (ಒಂದು ಜನಾಂಗದ ವ್ಯಕ್ತಿ). **-admíssion** (1); **-admónish** (1); **-admonítion** (1); **-advíse** (1); **-annoúnce(ment)** (1); **-appoínt(ment)** (1); **-arránge(ment)** (1); **-aúdience** (1) ಮತ್ತೊಬ್ಬನ ವಿಚಾರಣೆ ನಡಸುವುದಕ್ಕೆ ಮೊದಲೇ ತನ್ನ ಹೇಳಿಕೆಯನ್ನು ತೆಗೆದುಕೊಳ್ಳಬೇಕೆಂಬ (ನ್ಯಾಯಸ್ಥಾನದಲ್ಲಿ ಹಾಜರಿರುವ ನ್ಯಾಯವಾದಿಯ) ಹಕ್ಕು. **-aúdit** (1) ಹಣ ಸಂದಾಯಕ್ಕೆ ಮೊದಲೇ ಮಾಡುವ ಲೆಕ್ಕದ ಪರಿಶೋಧನೆ. **-cálculable** (1); **-cálculate** (1); **-calculátion** (1); **-Chrístian** (2) ಕ್ರಿಸ್ತನಿಗೆ, ಕ್ರೈಸ್ತ ಮತಕ್ಕೆ, —ಹಿಂದಿನ. **-clássical** (2) (ಸಾ., ಗ್ರೀಕ್ ಮತ್ತು ರೋಮನ್ ಸಾಹಿತ್ಯಗಳ) ಉತ್ಕರ್ಷಸ್ಥಿತಿಯ ಯುಗಕ್ಕೆ ಹಿಂದಿನ. **-compóse** (1); **-concért** (1); **-condémn** (1); **-condítion** (1) ಮೊದಲೇ ನೆರವೇರಿಸಬೇಕಾದ ಷರತ್ತು; ಪೂರ್ವಭಾವಿಯಾದ—. **-consíder** (1); **-considerátion** (1); **-contráct** (ಕ್ರಿ. ಅಕ.) (1); **-cóntract** (ನಾ.) (1); **-córdial** (3) ಹೃದಯದ ಮುಂಭಾಗದಲ್ಲಿ ಅಥವಾ ಪರಿಸರದಲ್ಲಿ ಇರುವ. **-cóstal** (3) ಪಕ್ಕೆಲುಬುಗಳ ಮುಂಭಾಗದಲ್ಲಿರುವ. **-deceáse** (ಕ್ರಿ. ಸಕ.) (1) (ಒಬ್ಬನಿಗಿಂತ) ಮೊದಲು ಸಾಯಿ. (ನಾ.) ಇಂಥ ಸಾವು. **-defíne** (1); **-digést** (1) ಹೊಟ್ಟೆಗೆ ಹಾಕುವುದಕ್ಕೆ ಮೊದಲೇ ಆಹಾರವು ಸುಲಭವಾಗಿ ಜೀರ್ಣವಾಗುವಂತೆ ಮಾಡು. **-digéstion** (1) ಈ ಜೀರ್ಣಕಾರ್ಯ. **-doóm** (ಕ್ರಿ. ಸಕ.) (1); **-dórsal** (3) ಬೆನ್ನಿನ ಪ್ರಾಂತದ ಮುಂಭಾಗದಲ್ಲಿರುವ. **-eléct** (1); **-eléction** (ನಾ.) (1) ಮುಂಚಿನ ಆಯ್ಕೆ; ನಿರೀಕ್ಷಿಸಿ (ಮೊದಲೇ) ಮಾಡಿದ ಚುನಾವಣೆ. (ಗು.) (2) ಚುನಾವಣೆಗೆ ಮೊದಲೇ ಮಾಡಿದ, ಕೊಟ್ಟ (ಉದಾ., p. promises). **-engáge(ment)** (1); **-estáblish** (1); **-éstimate** (—ಮೇಟ್) (ಕ್ರಿ. ಸಕ.) (1); **-éstimate** (—ಮೆಟ್) (ನಾ.) (1); **-exílian** (2); **-exílic** (2) (ಸಾ., ಬ್ಯಾಬಿಲೋನಿಯಕ್ಕೆ ಯೆಹೂದ್ಯರಿಗಾದ) ದೇಶಭ್ರಷ್ಟತೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿಂದಿನ. **-exíst** (ಕ್ರಿ. ಅಕ.) (1) ; **-exístence** (ನಾ.) (1) ; **-exístent** (ಗು.) (1) ; **-fróntal** (3) ತಲೆಬುರುಡೆಯ ಹಣೆಯ ಎಲುಬಿನ ಮುಂದುಗಡೆಯಿರುವ. ಮಿದುಳಿನ ಮುನ್‌ಹಾಲೆಯ ಮುಂಭಾಗದಲ್ಲಿರುವ. **-glácial** (2) ; **-húman** (2) ಮನುಷ್ಯ ಜಾತಿಗೆ ಹಿಂದೆಯೇ ನೆಲಸಿದ್ದ. **-índicate** (1) ; **-íntimate** (—ಮೇಟ್) (ಕ್ರಿ. ಸಕ.) (1) ; **-límit** (ಕ್ರಿ. ಸಕ.) (1) ; **-maxíllary** (3) ಮೇಲ್ದವಡೆಯ ಮುಂದುಗಡೆಯಿರುವ. **-millénnial(ism)** (2) ಯೇಸು ಕ್ರಿಸ್ತನ ಸಾಕ್ಷಾತ್ ರಾಜ್ಯಭಾರದ ಧರ್ಮಯುಗಕ್ಕೆ ಮೊದಲಿನ(ಲ್ಲೇ ಆತನ ಎರಡನೆಯ ಅವತಾರವಾಗುವುದೆಂಬ ನಂಬಿಕೆ). **-millenárian** (2) ; **-millénnialist** (2) ; **-mótion** (1) ಮೊದಲೇ ಕೊಟ್ಟ ಚಲನೆ, ಪ್ರೇರಣೆ (ಮು., ಪ್ರಾಣಿಯ ಸಂಕಲ್ಪವನ್ನು ನಿರ್ಧರಿಸುವ ದೈವ ಕ್ರಿಯೆ). **-nátal** (2) ಜನನಕ್ಕೆ ಮೊದಲೇ ಇರುವ ಅಥವಾ ದೊರೆಯುವ. **-ócular** (3) ಕಣ್ಣ ಮುಂದುಗಡೆಯಿರುವ. **-ordaín** (1) ಮೊದಲೇ ನಿಯಮಿಸು ; ಮೊದಲೇ ವಿಧಿಸಿರು. **-percéption** (1) ; **-prándial** (2) (ಮುಖ್ಯ) ಭೋಜನಕ್ಕೆ ಮೊದಲಿನ. **-wár** (ಗು.) (2) (ಉದಾ., P.-w. prices). (ಗ್ರಾಮ್ಯವಾಗಿ ಕ್ರಿ. ವಿ.) (That happened p.-w. ಮಹಾ ಯುದ್ಧಕ್ಕೆ ಹಿಂದೆ ಸಂಭವಿಸಿದ)

Preach ಪ್ರೀಚ್ (ಕ್ರಿ., ನಾ.) ಧರ್ಮೋಪದೇಶ, ಧರ್ಮ ಪ್ರವಚನ, ಮತೋಪದೇಶ, —ಮಾಡು ; (ಧರ್ಮ ವಿಷಯವಾಗಿ) ಉಪನ್ಯಾಸ ಕೊಡು, ಬೋಧನೆ ಮಾಡು, ಭಾಷಣ ಮಾಡು ; (ಬೇಡದಿದ್ದರೂ, ಬೇಸರವಾಗುವಂತೆ) ನೀತ್ಯುಪದೇಶ ಮಾಡು. (ಸುವಾರ್ತೆ, ಯೇಸು ಕ್ರಿಸ್ತ, ಮೊ. ನ್ನು) ಸಾರ್ವಜನಿಕ ಭಾಷಣದಲ್ಲಿ ಪ್ರತಿಪಾದಿಸು, ಘೋಷಿಸು. (ಒಂದು ಗುಣ, ನಡತೆ, ತತ್ತ್ವ, ಮೊ. ನ್ನು) ಪಕ್ಷ ವಹಿಸಿ, ಅಭಿಮಾನದಿಂದ, ಜನರಲ್ಲಿ ಪ್ರಚಾರ ಮಾಡು, ಮನಸ್ಸಿಗೆ ನಾಟುವಂತೆ ಬೋಧಿಸು. [P. up, P. down (ಬೋಧನೆಯಿಂದ ಅಥವಾ ಭಾಷಣದಿಂದ) ಹೊಗಳು, ಕೊಂಡಾಡು ; ಅಲ್ಲಗಳೆ, ತಲೆಯೆತ್ತದಂತೆ ಮಾಡು]. (ನಾ., ಬಳ. ಮಾ.) ಉಪದೇಶ ಮಾಡುವುದು ; ಬೋಧನೆ ; ಧರ್ಮೋಪದೇಶ ; ಉಪನ್ಯಾಸ. **Preáchable** (ಗು.) ; **Preácher** (ನಾ.); **Preáchership** (ನಾ.) ; **Preáchment** (ನಾ.) (ಸಾ., ತಿರಸ್ಕಾರ ಪ್ರ.) ; **Preáchify** (ಕ್ರಿ. ಅಕ.) ಬೇಸರವಾಗುವಂತೆ ಧರ್ಮೋಪದೇಶ, ನೀತಿಬೋಧೆ, —ಮಾಡು. **Preáchy** (ಗು.) (ಬಳ. ಮಾ.) ಬೋಧೆ ಮಾಡುವ ಚಾಳಿಯುಳ್ಳ. **Preáchiness** (ನಾ.)

Preámble ಪ್ರಿ(ೀ)ಆ್ಯಂಬ್‌ಲ್ (ನಾ., ಕ್ರಿ. ಅಕ.) (ಭಾಷಣದಲ್ಲ ಅಥವಾ ಬರವಣಿಗೆಯಲ್ಲಿ) ಪ್ರಸ್ತಾವನೆ, ಅವತರಣಿಕೆ. (ಕಾನೂನು, ಶಾಸನ, ದಸ್ತೈವಜು, ಮೊ. ಗಳ) ಪೀಠಿಕಾ ಭಾಗ. (ಕ್ರಿ.) ಪೀಠಿಕೆಯಾಗಿ ಹೇಳು ; (ಒಂದಕ್ಕೆ) ಪೀಠಿಕೆ ಕೊಡು.

Prébend ಪ್ರೆಬೆಂಡ್ (ನಾ.) ಕ್ರೈಸ್ತ ಪ್ರಧಾನ ಆರಾಧನ ಮಂದಿರದ ಅಥವಾ ಮಠಮಂಡಲಿಯ ಮಂದಿರದ ಆದಾಯದಲ್ಲಿ, ಮಠಮಂಡಲಿಯ ಸದಸ್ಯನಿಗೆ ವೇತನವಾಗಿ ಕೊಡುವ ಭಾಗ. ಈ ಮಠ ವೇತನವನ್ನು ಸಲ್ಲಿಸುವುದಕ್ಕಾಗಿರುವ ಜಮೀನಿನ ವರಮಾನ ಅಥವಾ ದಶಾಂಶ ; =Prebendary. **Prébendal** ಪ್ರಿ— (ಗು.) ; **Prébendary** ಪ್ರೆ—(ನಾ.) ಮಠ ವೇತನಪಡೆಯುವವನು. **Prébendaryship** (ನಾ.)

Precárious ಪ್ರಿಕೇರಿಯಸ್ (ಗು.) ಮತ್ತೊಬ್ಬನ ಇಚ್ಛಾನುಸಾರವಾದ, ಮತ್ತೊಬ್ಬನ ಅನುಗ್ರಹಕ್ಕೆ ಒಳಪಟ್ಟ, ಪರಾಧೀನವಾಗಿ ಅನುಭವಿಸುವ (P. tenure). ಸಾಧಿಸಬೇಕಾದುದನ್ನೇ ಸಿದ್ಧವಾಗಿಟ್ಟುಕೊಂಡ ; ಹಾಗೆಂದು ಭಾವಿಸಿಕೊಂಡ (A p. assumption). ಅದೃಷ್ಟಾಧೀನವಾದ ; ಅನಿಶ್ಚಿತ ; ಅತಂತ್ರದ (Makes a p. living). ಅಪಾಯಕ್ಕೀಡಾದ ; ಅಪಾಯ ಸಂಭವವುಳ್ಳ (The p. life of a fisherman). **Precáriously** (ಕ್ರಿ. ವಿ.) ; **Precáriousness** (ನಾ.)

Précatory ಪ್ರೆಕಟರಿ (ಗು.) (ವ್ಯಾ. ; ಪದ ಅಥವಾ ರೂಪ) ಬೇಡಿಕೆಯ, ಪ್ರಾರ್ಥನಾತ್ಮಕ. (ಅಂತಿಮ ಇಷ್ಟಪತ್ರಗಳಲ್ಲಿ) P. words (ಗೊತ್ತಾದ ಯಾವುದನ್ನಾದರೂ ನಡಸಬೇಕೆಂಬ) ಬೇಡಿಕೆಯ ಮಾತುಗಳು. P. trust ಬಂಧಕವೆಂದು ಪರಿಗಣಿಸುವ ಬೇಡಿಕೆಯ ಮಾತುಗಳು. **Précative** (ಗು.)

Precaútion ಪ್ರಿಕಾಷನ್ (ನಾ.) ವಿವೇಕದ ಮುನ್‌ಜಾಗ್ರತೆ, ಮುನ್ನೆಚ್ಚರಿಕೆ. ದುಷ್ಪರಿಣಾಮವನ್ನು ನಿವಾರಿಸಲು ಅಥವಾ ಒಳ್ಳೆಯ ಪರಿಣಾಮವನ್ನು ಪಡೆಯಲು ಮುಂದಾಗಿ ಕೈಕೊಂಡ ಉಪಾಯ, ಕಾರ್ಯಾಚರಣೆ ; ಮುನ್‌ಜಾಗ್ರತೆಯ ಕಾರ್ಯ. **Precaútionary** (ಗು.)

Precéde ಪ್ರಿಸೀಡ್ (ಕ್ರಿ.) (ವ್ಯಕ್ತಿ, ವಸ್ತು) (ಅಂತಸ್ತಿನಲ್ಲಿ, ಪ್ರಾಮುಖ್ಯತೆಯಲ್ಲಿ) ಮೊದಲಿಗನಾಗಿ, ಮೊದಲನೆಯದಾಗಿ, —ಇರು ; ಮುಂದಾಗಿ ಬರು ; ಅಗ್ರ, ಪೂರ್ವ, —ಗಾಮಿಯಾಗಿರು (Such duties p. all others. Sons of barons p. baronets). ಕ್ರಮದಲ್ಲಿ (ಮತ್ತೊಂದಕ್ಕಿಂತ) ಮೊದಲು ಬರು (The words that p. this paragraph) ; ಮುಂದುಗಡೆಯಲ್ಲಿ ನಡೆ (Preceded by our guide) ; (ಕಾಲದಲ್ಲಿ) ಮುಂಚೆ ಬರು (In the years preceding his accession) ; (—ನ್ನು) ಮುಂಚೆ ಬರುವಂತೆ ಮಾಡು (Must p. this measure by milder ones). **Précedence** ಪ್ರೆಸಿಡೆನ್ಸ್, **Precédence** ಪ್ರಿಸೀಡೆನ್ಸ್, (ವಿರ. ಪ್ರ.) **-cy** (ನಾ.) (ಕಾಲದಲ್ಲಿ ಅಥವಾ ಪರಂಪರೆಯಲ್ಲಿ) ಮೊದಲು ಬರುವುದು ; ಆದ್ಯತೆ ; ಅಗ್ರ ಸ್ಥಾನ (Takes p. of all others ಎಲ್ಲಕ್ಕೂ ಅಗ್ರ ಸ್ಥಾನವಾಗಿ ಪರಿಗಣಿಸಲ್ಪಟ್ಟಿದೆ). (ಸಮಾರಂಭ, ಸಮಾಜ ಸಂಪ್ರದಾಯ, ಮರ್ಯಾದೆ —ಇವುಗಳಲ್ಲಿ) ಅಗ್ರ ಪೀಠದ, ಅಗ್ರ ಪೂಜೆಯ, —ಹಕ್ಕು. **Précedent**[1] ಪ್ರೆಸಿಡೆಂಟ್ (ನಾ.) ಮುಂದಿನ ವ್ಯವಹಾರಗಳಿಗೆ ದೃಷ್ಟಾಂತವಾಗಿ ಅಥವಾ ಸಮರ್ಥನೆಯಾಗಿ ತೆಗೆದುಕೊಳ್ಳುವ ಹಿಂದಿನ ವಿಚಾರ, ವಿಮರ್ಶೆ : ಪೂರ್ವ ನಿದರ್ಶನ (There is no p. for this). (ನ್ಯಾ. ಶಾ.) ನಿಯಮವಾಗಿ ಅಥವಾ ಮಾದರಿಯಾಗಿ ಒದಗುವ (ಹಿಂದಿನ) ತೀರ್ಮಾನ, ನಡೆವಳಿ ; ರೂಢಿ, ಮಾಮೂಲು. **Precédent**[2] ಪ್ರಿ(ಪ್ರೆ)ಸೀಡೆಂಟ್ (ಗು.) (ಈಗ ವಿರ. ಪ್ರ.) (ಕಾಲ, ಕ್ರಮ, ಅಂತಸ್ತು, ಮೊ. ಗಳಲ್ಲಿ) ಮುಂದಾಗಿ ಬರುವ ; ಪೂರ್ವ(ಭಾವಿಯಾದ) (Condition p. ಪೂರ್ವಭಾವಿಯಾದ ಷರತ್ತು, ಗೊತ್ತುಪಾಡು). **Precédently** (ಕ್ರಿ. ವಿ.). **Précedented** ಪ್ರೆಸಿಡೆಂಟೆಡ್ (ಗು.) ಹಿಂದಿನ ನಿದರ್ಶನವುಳ್ಳ ; ಪೂರ್ವ ನಿದರ್ಶನದ ಆಧಾರವಿರುವ.

Precént ಪ್ರಿಸೆಂಟ್ (ಕ್ರಿ.) (ಕ್ರೈಸ್ತ ದೇವಾಲಯದಲ್ಲಿ) ಗಾಯಕ ವೃಂದದ ಅಥವಾ ಕೀರ್ತನೆ ಮಾಡುವ ಭಕ್ತ ವೃಂದದ ಅಗ್ರಗಾಮಿಯಾಗಿರು. ಸ್ತೋತ್ರ ಗೀತ ಹಾಡುವುದರಲ್ಲಿ ನಾಯಕನಾಗಿರು. **Precéntor** (ನಾ.) ಅಂಥ ನಾಯಕ. (ಮು., ಪೂರ್ವದಲ್ಲಿ ಸ್ಥಾಪಿತವಾದ ಪ್ರಧಾನ ಕ್ರೈಸ್ತ ಆರಾಧನ ಮಂದಿರಗಳಲ್ಲಿ) ' ಡೀನ್ ' ಎಂಬ ಅಧಿಕಾರಿಗೆ ಎರಡನೆಯವನು ; (ಹೊಸ ಸ್ಥಾಪನೆಯ ಕ್ರೈಸ್ತ ಮಠಗಳಲ್ಲಿ) ಕೆಳ ದರ್ಜೆಯ ಪುರೋಹಿತ, ಪಾದ್ರಿ. **Precéntorship** (ನಾ.) ; **Precéntrix** (ನಾ., ಸ್ತ್ರೀ.)

Précept ಪ್ರೀಸೆಪ್ಟ್ (ನಾ.) ಆಜ್ಞೆ ; ಅಣತಿ (ಗ್ರಾಂ.) ; (ನಡೆವಳಿಯ) ವಿಧಿ ; ನೀತಿ ಬೋಧೆ (Example is better than p. ಉಪದೇಶಕ್ಕಿಂತ ಆಚರಣೆ ಮೇಲು. ನುಡಿಗಿಂತ ನಡೆ ಮೇಲು). ದೈವಾಜ್ಞೆ. ಆಜ್ಞಾ ಪತ್ರ ; ಅಧಿಕಾರ ಪತ್ರ. ಚುನಾವಣೆಗೆ ಏರ್ಪಾಡು ಮಾಡಿ ಚುನಾವಣೆ ನಡಸುವುದಕ್ಕೆ ಲಿಖಿತ ಮೂಲಕ ಕೊಟ್ಟ ಆಜ್ಞೆ : ಚುನಾವಣೆ ನಡಸಲು ಆಜ್ಞಾ ಪತ್ರ. (ಯಾವುದಾದರೂ ತೆರಿಗೆಯ) ಹಣದ ವಸೂಲಿಗೆ ಅಥವಾ ತಗಾದೆಗೆ ಕೊಟ್ಟ ಆಜ್ಞೆ. **Precéptive** ಪ್ರಿಸೆಪ್ಟಿವ್ (ಗು.) ಆಜ್ಞಾ ರೂಪದ ; ವಿಧಾಯಕ ; ಉಪದೇಶಾತ್ಮಕ ; ಸೂಕ್ತಿ ರೂಪದ. **Precéptor** (ನಾ.) ಬೋಧಕ ; ಉಪದೇಶಕ ; ಶಿಕ್ಷಕ. **Preceptórial** (ಗು.); **Precéptorship** (ನಾ.); **Precéptress** (ನಾ., ಸ್ತ್ರೀ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Precéptory ಪ್ರಿಸೆಪ್ಟರಿ (ನಾ.) (ಚರಿತ್ರೆ) Knights Templars ಎಂಬ ವರ್ಗದ ಕೆಳಗಿನ ವರ್ಗ; ಇದರ ಆಸ್ತಿ, ಕಟ್ಟಡಗಳು.

Precéssion ಪ್ರಿಸೆಷನ್ (ನಾ.) P. of the equinoxes (ಖ. ವಿ.) ಭೂಮಿಯ ವಿಷುವದ್ವೃತ್ತದ ಸುತ್ತಮುತ್ತಲಿನ ಉಬ್ಬು ಭಾಗದ ದ್ರವ್ಯದ ಮೇಲೆ, ಭೂಮಿಯ ದೈನಂದಿನ ಚಲನೆಯ ಸಂಬಂಧವಾಗಿ, ಸೂರ್ಯ ಚಂದ್ರರ ಪ್ರಭಾವದಿಂದ ಕ್ರಾಂತಿ ವೃತ್ತದಲ್ಲಿ ವಿಷುವದ್ಬಿಂದುಗಳ ಪಶ್ಚಿಮ ಮುಖದ ಮಂದ ಚಲನೆ: ಅಯನಾಂಶ. **Precéssional** (ಗು.)

Précinct ಪ್ರೀಸಿಂಕ್ಟ್ (ನಾ.) (ಒಂದು ಸ್ಥಳದ, ಕಟ್ಟಡದ, ಮು., ಪೂಜಾ ಸ್ಥಳದ) ಆವರಣ; ಪ್ರಾಕಾರ (ಗೋಡೆಗಳಿಂದ ಅಥವಾ ಇತರ ಎಲ್ಲೆಕಟ್ಟು ಗಳಿಂದ ಸುತ್ತುವರಿದದ್ದು). (ಬ. ವ. ದಲ್ಲಿ) (ಒಂದರ) ಪರಿಸರ, ಸುತ್ತು; ಎಲ್ಲೆಕಟ್ಟು.

Précious ಪ್ರೆಷಸ್ (ಗು., ಕ್ರಿ. ವಿ.) ಬಹಳ ಬೆಲೆಯುಳ್ಳ; ಅಮೂಲ್ಯವಾದ; ಪ್ರಶಸ್ತ (P. metals ಪ್ರಶಸ್ತ ಲೋಹಗಳು: ಚಿನ್ನ, ಬೆಳ್ಳಿ, ಪ್ಲಾಟಿನಂ. P. stone ಪ್ರಶಸ್ತ ಶಿಲೆ; ಮಣಿ; ರತ್ನ); ಅಮೂಲ್ಯ (P. words, privilege, knowledge, blood of Christ). (ಭಾಷೆ, ಕೆಲಸಗಾರಿಕೆ, ಮೊ. ಗಳಲ್ಲಿ) ಕೃತಕವಾದ ನಾಜೂಕಿನ [**Preciósity** ಪ್ರೆಷಿಯಾಸಿಟಿ (ನಾ.) ಕೃತಕ ನಯಗಾರಿಕೆ]. (ಬಳ. ಮಾ.; ಅಧಿಕ್ಯಾರ್ಥದಲ್ಲಿ) [Made a p. mess of it. (ಅಧ್ಯಾಹಾರವಾಗಿ) My p. ನನ್ನ ರತ್ನ (ಮುದ್ದು)]. (ಕ್ರಿ. ವಿ., ಬಳ. ಮಾ.; ಆಧಿಕ್ಯಾರ್ಥ ದಲ್ಲಿ) (Took p. good care of that. P. little of it). **Préciously** (ಕ್ರಿ. ವಿ.); **Préciousness** (ನಾ.)

Preciósity. **Precious** ನೋಡಿ.

Précipice ಪ್ರೆಸಿಪಿಸ್ (ನಾ.) (ಬಂಡೆಯ, ಬೆಟ್ಟದ) ಕಡಿದಾದ ಮುಖ; ಪ್ರಪಾತ; ಸರಿ. **Precípitous** ಪ್ರಿಸಿಪಿಟಸ್ (ಗು.) ಪ್ರಪಾತದ(ಂಥ); ಕಡಿದಾದ. (ವಿರ. ಪ್ರ.) =Precipitate (ಗು.). **Precípitously** (ಕ್ರಿ. ವಿ.); **Precípitousness** (ನಾ.)

Precípitate ಪ್ರಿಸಿಪಿಟೆಟ್ (ನಾ., ಗು.), —ಟೇಟ್ (ಕ್ರಿ. ಸಕ.) (ರ. ವಿ.) ದ್ರಾವಣದಿಂದ ಘನ ರೂಪದಲ್ಲಿ ಹೊರಟು ಇಳಿಯುವ ಪದಾರ್ಥ; ಪ್ರಕ್ಷೇಪ; ಅವಪಾತ. (ಭೌ. ವಿ.) ಹಬೆಯನ್ನು ತಣ್ಣಗಿಸುವುದರಿಂದ ಅದು ದ್ರವೀಭವಿಸಿ ಇಳಿದು ಆದ ತೇವ: ಅವಪಾತ ದ್ರವ (ಉದಾ., ಮಳೆ, ಇಬ್ಬನಿ) [**Precípitabílity** (ನಾ.); **Precípitable** (ಗು.); **Precípitant** (ನಾ.) ದ್ರಾವಣದಿಂದ ಪ್ರಕ್ಷೇಪಿಸುವಂತೆ ಮಾಡುವ ಪದಾರ್ಥ: ಪ್ರಕ್ಷೇಪ ಕಾರಕ]. (ಗು.) ತಲೆಮುಂದಾಗಿ ನುಗ್ಗುವ; ರಭಸದ; ವಿಪರೀತ ತ್ವರಿತದ; ತರಾತುರಿಯ (P. flight). (ವ್ಯಕ್ತಿ, ಕಾರ್ಯ) ಆತುರದ, ದುಡುಕಿನ, ಅವಿಚಾರದ [**Precípitance** (ನಾ.); **Precípitancy** (ನಾ.); **Precípitately** (ಕ್ರಿ. ವಿ.); **Precípitateness** (ನಾ.)]. (ಕ್ರಿ.) ರಭಸದಿಂದ ಕೆಡವಿಬಿಡು. (ರೂಪ.) (ವ್ಯಕ್ತಿ, ಮೊ. ನ್ನು ಒಂದು ಸ್ಥಿತಿ, ಮೊ. ಕ್ಕೆ) ತಳ್ಳಿಬಿಡು, ಒಗೆದುಬಿಡು (*Into* ಉಪ. ದೊಡನೆ); ದುಡುಕು; (ಘಟನೆ, ಮೊ. ಗಳ ಗತಿಯನ್ನು) ತ್ವರೆಗೊಳಿಸು, ಒತ್ತರ ಮಾಡು (Served to p. his ruin). (ರ. ವಿ.) (ದ್ರಾವಣದಲ್ಲಿಯ ವಸ್ತುವನ್ನು ಘನ ರೂಪದಲ್ಲಿ) ಪ್ರಕ್ಷೇಪವಾಗು ವಂತೆ ಮಾಡು; (ಹಬೆಯನ್ನು ಶೈತ್ಯದಿಂದ) ಹನಿಗೂಡಿಸಿ ಕೆಳಗಿಳಿಯು ವಂತೆ ಮಾಡು (ಉದಾ., ಮಳೆ, ಇಬ್ಬನಿ). **Precipitátion** (ನಾ.) (ಮು., ಪ. ಶಾ.) ಮಳೆ, ಆಲಿಕಲ್ಲುಗೂಡಿದ ಮಳೆ, ಘನ ಹಿಮ, ಆಲಿ ಕಲ್ಲು—ಇವುಗಳ ಪತನ, ಬೀಳುವಿಕೆ. **Precípitator** (ನಾ.) (ಮು., ಒಂದು ಕಾರ್ಯವನ್ನು ಅಥವಾ ಘಟನೆಯನ್ನು) ತ್ವರೆಗೊಳಿಸು ವವನು, —ವುದು. (ರ. ವಿ.) ಪ್ರಕ್ಷೇಪ ಕಾರಕ.

Precípitous, etc. **Precipice** ನೋಡಿ.

Précis (F) ಪ್ರೆಸೀ, ಪ್ರೇಸಿ (ನಾ., ಕ್ರಿ. ಸಕ.) ಸಂಗ್ರಹ; ಸಾರಾಂಶ; ಗೋಪ್ಪಾರೆ. (ಕ್ರಿ.) —ಮಾಡು.

Precíse ಪ್ರಿಸೈಸ್ (ಗು.) ಕರಾರುವಾಕಾದ; ಒಂದು ಗೊತ್ತಾದ; ಸರಿಯಾದ; ನಿಷ್ಕೃಷ್ಟವಾದ; ನಿಕರವಾದ; ಖಚಿತವಾದ; ಹೆಚ್ಚು ಕಡಮೆಯಿಲ್ಲದೆ, ಯಥಾರ್ಥವಾಗಿ, —ನಿರೂಪಿಸಿದ; (ನಿಯಮಾದಿಗಳ ಪಾಲನೆಯಲ್ಲಿ) ಚಾಚೂ ತಪ್ಪದ, ಅತಿ ಕಟ್ಟುನಿಟ್ಟಿನ; ನಿಯಮ ನಿಷ್ಠ. The p. moment (ಹಿಂಚು ಮುಂಚಾಗದೆ) ಗೊತ್ತಾದ ಕ್ಷಣ; ಅದೇ ಕ್ಷಣ. **Precísely** (ಕ್ರಿ. ವಿ.) (ಗುಣವಾಚಕಾರ್ಥಗಳಲ್ಲಿ). (ಒತ್ತಿ ಹೇಳುವ ಅಥವಾ ಸಾಂಪ್ರದಾಯಿಕ ಒಪ್ಪಿಗೆಯಲ್ಲಿ) ಸರಿಯೆ; ಹಾಗೆಯೇ; ಅದೇ. **Precíseness** (ನಾ.); **Precísian** ಪ್ರಿಸಿಷನ್ (ನಾ.) (ಮು., ಮತಾಚರಣೆಯಲ್ಲಿ) ಅತಿ ಕಟ್ಟುನಿಟ್ಟಿನವನು; ಅತಿ ನಿಷ್ಠ. **Precísianism** (ನಾ.); **Precísion** ಪ್ರಿಸಿಷನ್ (ನಾ.) ನಿಷ್ಕೃಷ್ಟತೆ; ಕರಾರುವಾಕು; ನಿರಕು. Arm of p. ಗುರಿ ತಪ್ಪದ(ಂತೆ ದೃಷ್ಟಿ ಸಹಾಯ ಸಲಕರಣೆಯನ್ನೂ ಇತರ ಯಾಂತ್ರಿಕ ಸಾಧನವನ್ನೂ ಅಳವಡಿ ಸಿರುವ) ಬಂದೂಕು, ಫಿರಂಗಿ. **Precísionist** (ನಾ.) ಭಾಷೆಯಲ್ಲಾಗಲಿ ಮತ ಸಂಸ್ಕಾರದಲ್ಲಾಗಲಿ ಸ್ವಲ್ಪವೂ ತಪ್ಪದೆ ಖಚಿತವಾಗಿರಬೇಕೆಂಬ ಅಭಿಪ್ರಾಯ, ಆಚರಣೆ, —ಉಳ್ಳವನು; ನಿಷ್ಕೃಷ್ಟತಾ ವಾದಿ.

Preclúde ಪ್ರಿಕ್ಲೂಡ್ (ಕ್ರಿ. ಸಕ.) ಹೊರಹಾಕು; ಹೊರಚ್ಚು ಮಾಡು; ಸೇರಿಸದಿರು; ಪ್ರತಿಬಂಧಿಸು; ಅಸಾಧ್ಯ ಮಾಡು (So as to p. all doubt ಯಾವ ಸಂಶಯಕ್ಕೂ ಅವಕಾಶವೇ ಇಲ್ಲದಂತೆ). **Preclúsive** (ಗು.)

Precócious ಪ್ರಿಕೋಷಸ್ (ಗು.) (ಗಿಡ) ಕಾಲಕ್ಕೆ ಮೊದಲೇ ಹೂವು, ಫಲ, —ಬಿಡುವ; (ವ್ಯಕ್ತಿಯ ವಿಷಯದಲ್ಲಿ: ಯಾವುದಾದರೂ ಬುದ್ಧಿಶಕ್ತಿ) ವಯಸ್ಸಿಗೆ ಮೊದಲೇ ಪೂರ್ಣ ವಿಕಸನ ಹೊಂದಿದ: ಬಾಲ ಪ್ರೌಢ; ಅಕಾಲ ಪ್ರೌಢ; (ಕಾರ್ಯ, ಮೊ. ವು) ಅಕಾಲ ಪ್ರೌಢಿಮೆಯನ್ನು ತೋರ್ಪಡಿಸುವ. **Precóciously** (ಕ್ರಿ. ವಿ.); **Precóciousness** (ನಾ.); **Precócity** ಪ್ರಿಕಾ— (ನಾ.)

Precognítion ಪ್ರೀಕಾಗ್ನಿಷನ್ (ನಾ.) ಮುನ್ನರಿವು; ಪೂರ್ವ(ಭಾವಿ) ಜ್ಞಾನ. (ಸ್ಕಾ. ನ್ಯಾ. ಶಾ.: ವಿಚಾರಣೆಗೆ ತಕ್ಕ ಆಧಾರವಿದೆಯೋ ಎಂಬುದನ್ನು ನೋಡಲು ಮಾಡುವ, ಸಾಕ್ಷಿ, ಮೊ. ರ) ಪೂರ್ವ ವಿಚಾರಣೆ.

Preconceíve ಪ್ರೀಕನ್ಸೀವ್ (ಕ್ರಿ. ಸಕ.) ಮೊದಲೇ ಗ್ರಹಿಸು, ಭಾವಿಸು, ಯೋಚಿಸು; ಮುನ್‌ಭಾವಿಸು; ಮುಂಬಗೆ. **Preconcéption** (ನಾ.) ಪೂರ್ವ ಭಾವನೆ.

Préconize ಪ್ರೀಕೊನೈಸ್ (ಕ್ರಿ. ಸಕ.) ಬಹಿರಂಗವಾಗಿ ಘೋಷಿಸು, ಸಾರು, ಪ್ರಶಂಸಿಸು. ಹೆಸರು ಹಿಡಿದು ಕರೆ. (ರೋ. ಕ್ಯಾ.: ಪೋಪಿನ ವಿಷಯದಲ್ಲಿ) (ಬಿಷಪ್ಪಿನ) ನೇಮಕಕ್ಕೆ ಬಹಿರಂಗವಾಗಿ ಅನುಮತಿ, ಒಪ್ಪಿಗೆ, ಕೊಡು. **Preconizátion** (ನಾ.)

Precúrsor ಪ್ರಿಕರ್ಸರ್ (ನಾ.) ಪೂರ್ವ ಗಾಮಿ; ಮುನ್‌ಸೂಚಕ; ಪೂರ್ವ ಸೂಚಕ (ಮು., John the Baptist). (ಅಧಿಕಾರ, ಮೊ. ಗಳಲ್ಲಿ ಒಬ್ಬನಿಗೆ) ಹಿಂದೆ ಇದ್ದವನು. **Precúrsory** (ಗು.) ಮೊದಲಿನ; ಪ್ರಸ್ತಾವನಾ ರೂಪದ; (—ರ) ಮುನ್‌ಸೂಚಕ ಪ್ರಾಯವಾದ (*Of* ಉಪ. ದೊಡನೆ). **Precúrsive** (ಗು.) =Precursory.

Predácious ಪ್ರಿಡೇಷಸ್ (ಗು.) (ಪ್ರಾಣಿಗಳ ವಿಷಯದಲ್ಲಿ) ಸ್ವಾಭಾವಿಕ ವಾಗಿ ಇತರ ಪ್ರಾಣಿಗಳನ್ನು ಕೊಂದು ತಿನ್ನುವ; ಮಾಂಸಾಹಾರಿ ಯಾದ; ಕೊಂದು ತಿನ್ನುವ ಪ್ರಾಣಿಗಳ ಸ್ವಭಾವದ (P. instincts). **Predácity** ಪ್ರಿಡ್ಯಾಸಿಟಿ (ನಾ.); **Prédatory** ಪ್ರೆಡಟರಿ (ಗು.) =Predacious; ಕೊಳ್ಳೆಯ ಅಥವಾ ದರೋಡೆಯ; ಕೊಳ್ಳೆ ಅಥವಾ ದರೋಡೆ ಮಾಡುವ ಸ್ವಭಾವದ.

Predáte ಪ್ರೀಡೇಟ್ (ಕ್ರಿ. ಸಕ.) ಹಿಂದಿನ ತೇದಿ ಹಾಕು.

Prédatory. **Predacious** ನೋಡಿ.

Prédecessor ಪ್ರೀಡಿಸೆಸರ್ (ನಾ.) ಅಧಿಕಾರದಲ್ಲಿ, ಸ್ಥಾನದಲ್ಲಿ, ಹಿಂದೆ ಇದ್ದವನು: ಪೂರ್ವಾಧಿಕಾರಿ (His immediate p.). (ಒಂದರ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿಂದೆ ಇದ್ದದ್ದು (Will share the fate of its p. ಅದರ ಹಿಂದಿನ ದಕ್ಕಾದ ಗತಿಯೇ ಇದಕ್ಕೂ ಆಗುತ್ತದೆ). (ಒಬ್ಬನ) ಪೂರ್ವಿಕ, ಪೂರ್ವಜ.

Predestinárian. **Predestinate** ನೋಡಿ.

Predéstinate ಪ್ರಿಡೆಸ್ಟಿನೇಟ್ (ಕ್ರಿ. ಸಕ.), —ನೆಟ್ (ಗು.) (ದೇವರ ವಿಷಯದಲ್ಲಿ, ವ್ಯಕ್ತಿಯನ್ನು) ಉದ್ಧರಣಕ್ಕೆ (ಮೋಕ್ಷಕ್ಕೆ) ಅಥವಾ ಯಾವುದಾದರೂ ಗತಿಗೆ, ಮೊದಲೇ ನಿಯತ ಮಾಡು, (ಕಾರ್ಯವನ್ನು, ಮುಂದೆ ಆಗುವುದನ್ನು) ಮೊದಲೇ ಗೊತ್ತುಮಾಡು, ಸಂಕಲ್ಪಿಸಿರು; (ವ್ಯಕ್ತಿಯ) ಹಣೆಯಲ್ಲಿ ಬರೆದಿರು; ಪೂರ್ವ ನಿಶ್ಚಯ ಮಾಡು. (ಗು.) ಪೂರ್ವ ನಿರ್ಧಾರವಾದ. **Predestinárian** (ನಾ., ಗು.) ನಿಯತಿವಾದಿ; ದೈವಸಂಕಲ್ಪವಾದಿ. (ಗು.) —ವಾದದ. **Predestinátion** (ನಾ.) ದೇವರು ಅನಾದಿ ಕಾಲದಲ್ಲೇ ಮನುಷ್ಯ ವರ್ಗದಲ್ಲಿ ಕೆಲವರನ್ನು ಮೋಕ್ಷಕ್ಕೂ ಶಾಶ್ವತ ಜೀವನಕ್ಕೂ ಗೊತ್ತು ಮಾಡಿರುವುದು; ಮುಂದೆ ನಡೆಯಹೋಗುವುದನ್ನೆಲ್ಲ ದೇವರು ಮೊದಲೇ ಸಂಕಲ್ಪಿಸಿರುವುದು; ಹಣೆಯ ಬರಹ; ವಿಧಿ; ಅದೃಷ್ಟ; ನಿಯತಿ; ಆದಿ ನಿರ್ಧಾರ. **Predéstine** (ಕ್ರಿ. ಸಕ.) ಮೊದಲೇ ಗೊತ್ತುಮಾಡಿರು; ಪೂರ್ವ ನಿರ್ಣಯ ಮಾಡಿರು; ಹಣೆಯಲ್ಲಿ ಬರೆದಿರು. (ದೇವ. ಶಾ.) =Predestinate.

Predéstine. **Predestinate** ನೋಡಿ.

Predetérmine ಪ್ರಿಡಿಟರ್‌ಮಿನ್ (ಕ್ರಿ. ಸಕ.) ಮೊದಲೇ ನಿರ್ಣಯ ಮಾಡು, ಮಾಡಿರು; =Predestine. (ಉದ್ದೇಶ, ಮೊ. ಗಳ ವಿಷಯದಲ್ಲಿ, ವ್ಯಕ್ತಿಯನ್ನು ಒಂದರ ಕಡೆಗೆ, ಒಂದು ಕಾರ್ಯ ಮಾಡಲು) ಮೊದಲೇ ಪ್ರೇರಿಸು. **Predetérminate** —ನೆಟ್ (ಗು.); **Predeterminátion** (ನಾ.)

Prédial ಪ್ರೀಡಿಯಲ್ (ಗು., ನಾ.) ಜಮೀನಿನ; ಹೊಲಗದ್ದೆಗಳ; ಭೂ ಸ್ವತ್ತಿನ; ಹಳ್ಳಿಗಾಡಿನ. (ಗುಲಾಮರ ವಿಷಯದಲ್ಲಿ) ಜಮೀನಿಗೆ ಹತ್ತಿಕೊಂಡಿರುವ; ಜಮೀನಿನೊಡನೆ ಬರುವ. (ನಾ.) ಇಂಥ ಗುಲಾಮ.

Prédicable ಪ್ರೆಡಿಕಬ್‌ಲ್ (ಗು., ನಾ.) ದೃಢವಾಗಿ ಹೇಳಲಾಗುವ(ಂಥದು) [**Predicabílity** (ನಾ.)]. (ನಾ.; ಬ. ವ. ದಲ್ಲಿ) (ಅರಿಸ್ಟಾಟಲ್ ತತ್ತ್ವಜ್ಞನ ಮತದ ಮೇರೆಗೆ) ತರ್ಕ ರೀತಿಯ ವರ್ಗೀಕರಣದಲ್ಲಿಯೂ ವಿಷಯ ದೃಢೀಕರಣದಲ್ಲಿಯೂ ಸಮಾವೇಶವಾದ ವಿಶೇಷಣಗಳ ನಾಲ್ಕು ಸರ್ವ ಸಾಮಾನ್ಯ ಅನ್ವಯಗಳಲ್ಲಿ (Genus, definition, property, accident ಎಂಬವುಗಳಲ್ಲಿ) ಒಂದು. **Predícament** ಪ್ರಿ— (ನಾ.) ದೃಢೀಕರಿಸಿ ಹೇಳಿದ್ದು; ವಾಚ್ಯ. (ಬ. ವ. ದಲ್ಲಿ) ಅರಿಸ್ಟಾಟಲನ ಹತ್ತು ವರ್ಗಗಳು [**Predicaméntal** (ಗು.)]. ಅಹಿತವಾದ, ಸಂಕಟಕರವಾದ ಅಥವಾ ಅಪಾಯಕರವಾದ —ಸ್ಥಿತಿ, ಸಂದರ್ಭ; ಬಿಕ್ಕಟ್ಟು; ಇಕ್ಕಟ್ಟು. **Prédicate** ಪ್ರೆ(ಪ್ರಿ)ಡಿಕೆಟ್ (ನಾ.), ಪ್ರೆಡಿಕೇಟ್ (ಕ್ರಿ. ಸಕ.) (ತರ್ಕ) ಸಂಯೋಜಕ ಪದದ ಮೂಲಕ ಪ್ರತಿಜ್ಞೆಯ ವಿಷಯವಾಗಿ ಸಮರ್ಥಿಸಿದ್ದು ಅಥವಾ ನಿರಾಕರಿಸಿದ್ದು (ಉದಾ., He is a fool ಎಂಬುದರಲ್ಲಿ a fool ಎಂಬುದು). (ವ್ಯಾ.) ಕರ್ತೃ ಪದದ ವಿಷಯದಲ್ಲಿ ಹೇಳಿದ್ದು; ಆಖ್ಯಾತ; ಹೇಳಿಕೆ (ಉದಾ., ಹಿಂದಿನ ಉದಾಹರಣೆಯ ವಾಕ್ಯದಲ್ಲಿ is a fool ಎಂಬುದು). ಲಕ್ಷಣ, ವಿಶೇಷಣ. (ಕ್ರಿ.) ವಾಸ್ತವಾಂಶವೆಂದು ಸ್ಥಾಪಿಸು, ದೃಢೀಕರಿಸು (Many truths may be predicated about humanity. We p. goodness or badness of a motive. P. of a motive that is good or bad). (ತರ್ಕ) ಪ್ರತಿಜ್ಞೆಯ ವಿಷಯವಾಗಿ (ಒಂದನ್ನು) ದೃಢೀಕರಿಸಿ ಹೇಳು. **Predicátion** (ನಾ.); **Predícative** (ಗು.) ದೃಢೀಕರಿಸಿ ಹೇಳುವ; ಆಖ್ಯಾತಕ. (ವ್ಯಾ., ಗುಣವಾಚಕದ ಅಥವಾ ನಾಮವಾಚಕದ ವಿಷಯದಲ್ಲಿ) ಸಂಪೂರ್ಣ ಆಖ್ಯಾತವಾಗಲಿ ಅದರ ಭಾಗವಾಗಲಿ ಆಗಿರುವ [(ಎದುರು ಪದ: Attributive); ಉದಾ., 'This is *absurd*'. ಇದರೊಡನೆ 'An *absurd* motion' ಎಂಬುದನ್ನು ಹೋಲಿಸಿ]. **Predícatively** (ಕ್ರಿ. ವಿ.)

Prédicant ಪ್ರೆಡಿಕಂಟ್ (ಗು., ನಾ.) (ಧಾರ್ಮಿಕ ಪಂಥದ, ಮು., ಡಾಮಿನಿಕನ್ನರ, ವಿಷಯವಾಗಿ) ಉಪದೇಶದಲ್ಲಿ ತೊಡಗಿರುವ. (ನಾ.) =Predikant. **Prédicatory** —ಕೆಟರಿ (ಗು.) ಉಪದೇಶದ; ಉಪದೇಶ ಮಾಡುವ; ಉಪದೇಶದಿಂದ ಲಕ್ಷಿತವಾದ.

Prédicate, etc. **Predicable** ನೋಡಿ.

Predíct ಪ್ರಿಡಿಕ್ಟ್ (ಕ್ರಿ. ಸಕ.) ಭವಿಷ್ಯ ನುಡಿ; ಕಾಲಜ್ಞಾನ ಹೇಳು. **Predictabílity** (ನಾ.); **Predíctable** (ಗು.); **Predíction** (ನಾ.); **Predíctive** (ಗು.); **Predíctively** (ಕ್ರಿ. ವಿ.); **Predíctor** (ನಾ.)

Predikánt (ಡಚ್) ಪ್ರೆಡಿಕಾಂಟ್ (ನಾ.) (ಮು., ದ. ಆಫ್ರಿಕದಲ್ಲಿ, ಡಚ್ ಪ್ರಾಟೆಸ್ಟಂಟ್ ಮತದ) ಪಾದ್ರಿ.

Predilección ಪ್ರೀಡಿಲೆಕ್‌ಷನ್ (ನಾ.) (ಮನಸ್ಸಿನ) ಒಲವು; ಪಕ್ಷಪಾತ (*For* ಉಪ. ದೊಡನೆ)

Predispóse ಪ್ರೀಡಿಸ್‌ಪೋಸ್ (ಕ್ರಿ. ಸಕ.) (ಮನೋಭಾವ, ವ್ಯಾಧಿ, ಕಾರ್ಯಾಚರಣೆ, ಮೊ. ಕ್ಕೆ) ಒಳಗಾಗಿಸು, ಗುರಿ ಮಾಡು, ಒಲವನ್ನುಂಟುಮಾಡು. **Predisposítion** (ನಾ.) (ದಯೆ, ಮೊ. ನ್ನು ತೋರಲು, ಮಲೇರಿಯಾ, ಮೊ. ದ ವ್ಯಾಧಿಗೆ ಈಡಾಗಲು) ಅನುಕೂಲವಾದ ಮನೋಭಾವ, ದೇಹಸ್ಥಿತಿ.

Predóminate ಪ್ರಿಡಾಮಿನೇಟ್ (ಕ್ರಿ. ಅಕ.) (ಒಬ್ಬನ, ಒಂದರ, —ಮೇಲೆ) ಹತೋಟಿಯುಳ್ಳವನಾಗಿರು, ಅಧಿಕಾರ ನಡಸು (*Over* ಉಪ. ದೊಡನೆ); (—ಕ್ಕೆ) ಮೇಲಾಗಿರು, ಮೇಲುಗೈಯಾಗಿರು, ಹೆಚ್ಚಿಗೆಯಾಗಿರು; ಪ್ರಬಲವಾದ ಅಥವಾ ಪ್ರಧಾನವಾದ ಅಂಶವಾಗಿರು; ಮಿಕ್ಕವಕ್ಕಿಂತ ಅಧಿಕವಾಗಿರು (Garden in which roses predominate). **Predóminance** (ನಾ.); **Predóminant** (ಗು.); **Predóminantly** (ಕ್ರಿ. ವಿ.); **Predóminatingly** (ಕ್ರಿ. ವಿ.)

Pre-éminent ಪ್ರಿ(ೀ)ಎಮಿನೆಂಟ್ (ಗು.) ಇತರವನ್ನೆಲ್ಲ, ಇತರರನ್ನೆಲ್ಲ, —ಮೀರಿಸಿರುವ; ಎಲ್ಲಕ್ಕೂ ಮೇಲಾದ; ಸರ್ವೋತ್ಕೃಷ್ಟ; ಉತ್ತಮೋತ್ತಮ; ಯಾವುದಾದರೂ ಗುಣದಲ್ಲಿ ಇತರ ವ್ಯಕ್ತಿಗಿಂತ ಅಥವಾ ವಸ್ತುವಿಗಿಂತ ಮೀರಿರುವ. **Pre-éminently** (ಕ್ರಿ. ವಿ.); **Pre-éminence** (ನಾ.)

Pre-émpt. **Pre-emption** ನೋಡಿ.

Pre-émption ಪ್ರೀಎಮ್(ಪ್)ಷ(ಷ್)ನ್ (ನಾ.) ಇತರರಿಗೆ ಅವಕಾಶ ಕೊಡುವುದಕ್ಕೆ ಮೊದಲೇ ತಾನು ಕೊಂಡುಕೊಳ್ಳುವುದು; ಹೀಗೆ ಕೊಂಡುಕೊಳ್ಳುವ ಹಕ್ಕು. **Pre-émptive** (ಗು.); **Pre-émpt** (ಕ್ರಿ. ಸಕ.) ಮುನ್‌ಕೊಳ್ಳು; (ಅಮೆ. ಸಂ.) ಮೊದಲು ಕೊಳ್ಳುವ ಹಕ್ಕು (ತನಗೆ) ಏರ್ಪಡುವಂತೆ ಸರ್ಕಾರಿ ಜಮೀನನ್ನು ಆಕ್ರಮಿಸಿಕೊ. (ರೂಪ.) ಮೊದಲೇ ಆಕ್ರಮಿಸಿಕೊ.

Preen ಪ್ರೀನ್ (ಕ್ರಿ. ಸಕ.) (ಹಕ್ಕಿಯ ವಿಷಯದಲ್ಲಿ: ಗರಿಗಳನ್ನು) ಕೊಕ್ಕಿನಿಂದ ಒಪ್ಪಮಾಡಿಕೊ; (ವ್ಯಕ್ತಿಯ ವಿಷಯದಲ್ಲಿ) ದೇಹವನ್ನು ಶುಭ್ರವಾಗಿಯೂ ಅಂದವಾಗಿಯೂ ಸವರಿಸಿಕೊ; ಠೀಕು ಮಾಡಿಕೊ.

Préface ಪ್ರೆಫೆಸ್ (ನಾ., ಕ್ರಿ.) (ಪುಸ್ತಕದ ವಿಷಯ ವ್ಯಾಪ್ತಿ, ಮೊ. ನ್ನು ತಿಳಿಸುವ) ಪೀಠಿಕೆ; ಮುನ್ನುಡಿ; ಉಪೋದ್ಘಾತ. ಭಾಷಣದ ಆರಂಭ ಭಾಗ; ಪ್ರಸ್ತಾವನೆ. (ಕ್ರಿ.) (ಪುಸ್ತಕ, ಮೊ. ಕ್ಕೆ) ಪೀಠಿಕೆ ಕೊಡು; (ಕಾರ್ಯ, ಭಾಷಣ, ಮೊ. ನ್ನು) (—ಇಂದ) ಆರಂಭ ಮಾಡು (*With* ಉಪ. ದೊಡನೆ: Prefaced his remarks with a snort). (ಘಟನೆ, ಮೊ. ಗಳ ವಿಷಯದಲ್ಲಿ) ಮತ್ತೊಂದಕ್ಕೆ ತಂದು ಬಿಡು. ಮೊದಲ ಮಾತು ಹೇಳು. **Prefatórial** (ಗು.); **Préfatory** ಪ್ರೆಫಟರಿ (ಗು.)

Préfect ಪ್ರೀಫೆಕ್ಟ್ (ನಾ.) (ರೋ. ಪ್ರಾ.) ಹಲವು ಆಯೋಧ ಮತ್ತು ಸೈನಿಕ ಅಧಿಕಾರಿಗಳ ಹುದ್ದೆಯ ಹೆಸರು. (ಫ್ರೆಂಚ್ ಸರಕಾರದಲ್ಲಿ) ಒಂದು ಖಾತೆಯ ಆಡಳಿತದ ಮುಖ್ಯಾಧಿಕಾರಿ (P. of Police ಪ್ಯಾರಿಸ್ ಪಟ್ಟಣದ ಪೋಲೀಸು ಮುಖ್ಯಾಧಿಕಾರಿ). (ಕೆಲವು ಸಾರ್ವಜನಿಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾಠಶಾಲೆಗಳಲ್ಲಿ, ಶಿಷ್ಟಿ ಪಾಲನೆಗಾಗಿ ನೇಮಿಸಿದ) ಹಿರೇ ಮಣಿ. **Preféctoral** ಪ್ರಿಫೆಕ್ಟೊರಲ್ (ಗು.); **Prefectórial** ಪ್ರೀ— (ಗು.); **Préfecture** (ನಾ.) (ಫ್ರೆಂಚ್ ಸರ್ಕಾರದಲ್ಲಿ) ಪ್ರೀಫೆಕ್ಟಿನ ಅಧಿಕಾರ, ಅಧಿಕಾರಾವಧಿ, ಅಧಿಕಾರ ನಿವಾಸ, ಅಧಿಕಾರ ಪ್ರಾಂತ. **Preféctural** (ಗು.)

Prefér ಪ್ರಿಫರ್ (ಕ್ರಿ. ಸಕ.) (ಒಬ್ಬನನ್ನು ಒಂದು ಉದ್ಯೋಗಕ್ಕೆ) ಏರಿಸು; ಮೇಲಧಿಕಾರ ಸ್ಥಾನಕ್ಕೆ ಹಾಕು; ಬಡತಿ ಮಾಡು [**Preférment** (ನಾ.)]. (ಹೇಳಿಕೆ, ಸಮಾಚಾರ, ಮೊ. ನ್ನು ಮಂಜೂರಾತಿಗಾಗಿ, ವಿಚಾರ ಮಾಡುವುದಕ್ಕಾಗಿ) ಮೇಲಧಿಕಾರಿಯ ಮುಂದಿಡು, —ಗೆ ಒಪ್ಪಿಸು (*To* ಉಪ. ದೊಡನೆ); (ಅಪರಾಧಿ, ಮೊ. ರ ಮೇಲೆ, ತಪ್ಪಿತ) ತರು, ಹೊರಿಸು (*Against* ಉಪ. ದೊಡನೆ). ಹೆಚ್ಚು ಇಷ್ಟಪಟ್ಟು ಆಯ್ದುಕೊ; (ಹೆಚ್ಚಾಗಿ, ಮೇಲಾಗಿ) ಒಪ್ಪು, ಇಷ್ಟ ಪಡು [P. water to wine ಮದ್ಯಕ್ಕಿಂತ ನೀರಿಗೆ ಹೆಚ್ಚು ಇಷ್ಟ ತೋರು. P. to leave it alone ಅದರಷ್ಟಕ್ಕೆ ಅದನ್ನು ಬಿಡಲು ಹೆಚ್ಚು ಇಷ್ಟಪಡು. P. that it should be left (*Than* ಎಂಬ ಪದವನ್ನು *prefer* ಪದದ ಮುಂದೆ ಸೇರಿಸುವುದು ಭಾಷಾ ಮರ್ಯಾದೆಯಲ್ಲ. ಆದರೆ *rather* ಪದವನ್ನು ಹಾಕಿದಾಗ *than* ಪದ ಬರಬಹುದು; ಉದಾ., Preferred to die rather than pay)]. **Préferable** ಪ್ರೆಫರಬ್‌ಲ್ (ಗು.); **Préferably** (ಕ್ರಿ. ವಿ.); **Préference** ಪ್ರೆಫ(ಫ)ರೆನ್ಸ್ (ನಾ.) ಒಂದಕ್ಕಿಂತ ಮತ್ತೊಂದಕ್ಕೆ ಹೆಚ್ಚಾಗಿ ಇಷ್ಟಪಡುವುದು, ಮೆಚ್ಚಿಕೆ ತೋರುವುದು; ಹೆಚ್ಚು ಅಭಿಮಾನ, ವಿಶ್ವಾಸ (*Of* A *to* or *over* B). ಹೆಚ್ಚು ಅಭಿಲಾಷೆ ಪಟ್ಟದ್ದು, —ಮೆಚ್ಚಿಕೆ ತೋರಿದ್ದು; (ಮೊದಲ) ಆಯ್ಕೆ, ಒಲವು, ಇಷ್ಟ, ಇಚ್ಛೆ. (ಮು., ತೀರಿಸಬೇಕಾದ ಸಾಲಗಳ ವಿಷಯದಲ್ಲಿ) ಮೊದಲ ಹಕ್ಕು (ಮು., ಕಾನೂನಿಗನುಸಾರವಾಗಿ, ಒಂದು ಋಣದ ತೀರುವೆಯಲ್ಲಿ ತಗಾದೆ ಕೊಟ್ಟು ಫಲ ಪಡೆಯಲುಳ್ಳ ಮೊದಲ ಹಕ್ಕು) [P. bond, share, stock (ಸಾಮಾನ್ಯ ಸಾಲಪತ್ರಗಳಿಗೆ ಕೊಡುವುದಕ್ಕಿಂತ ಮೊದಲೇ ಲಾಭಾಂಶ ಕೊಡುವ) ಮೊದಲ ಹಕ್ಕಿನ ಸಾಲ ಪತ್ರ, (ಒಂದು ಸಂಸ್ಥೆಯ ಬಂಡವಾಳದ) ಪಾಲು, ಬಂಡವಾಳ ಪತ್ರ]. (ವ್ಯಾಪಾರ ಸಂಬಂಧದಲ್ಲಿ, ಒಬ್ಬ ವ್ಯಕ್ತಿಗಾಗಲಿ, ಒಂದು ದೇಶಕ್ಕಾಗಲಿ ತೋರಿಸುವ) ರಿಯಾಯಿತಿ, ಪಕ್ಷಪಾತ (ಮು., ಒಂದು ದೇಶದ ಸಾಮಾನುಗಳನ್ನು ಆಮದು ಮಾಡಿಕೊಳ್ಳುವುದರಲ್ಲಿ ಅವಕ್ಕೆ ಇತರ ದೇಶದವಕ್ಕಿಂತ ಕಡಮೆ ಸುಂಕ ಹಾಕಿ ತೋರಿಸುವ ಪಕ್ಷಪಾತ). **Preferéntial** —ರೆನ್ಷಲ್ (ಗು.) ಹೆಚ್ಚು ಅಭಿಮಾನದ; ಹೆಚ್ಚು ಅಭಿಮಾನ ತೋರಿಸುವ, ಪಡೆಯುವ. (ಸುಂಕ, ಮೊ. ಗಳ ವಿಷಯದಲ್ಲಿ, ಉದ್ದಿಷ್ಟ ದೇಶಗಳಿಗೆ) ವಿಶೇಷ ಸೌಕರ್ಯ ಅಥವಾ ರಿಯಾಯಿತಿ ತೋರಿಸುವ (ಮು., ಗ್ರೇಟ್‌ಬ್ರಿಟನ್ನಿಗೂ ಅದರ ವಸಾಹತು ನಾಡುಗಳಿಗೂ ವ್ಯಾಪಾರ ಸೌಕರ್ಯವನ್ನುಂಟುಮಾಡುವ). **Preferéntialism** (ನಾ.); **Preferéntialist** (ನಾ.); **Preferéntially** (ಕ್ರಿ. ವಿ.); **Preférred** ಪ್ರಿ— (ಗು.) (ಕ್ರಿಯಾರ್ಥಗಳಲ್ಲಿ). P. shares, stock, etc. = Preference shares, etc.

Prefígure ಪ್ರಿಫಿಗ(ಗ್ಯು)ರ್ (ಕ್ರಿ. ಸಕ.) ಆಕೃತಿಯಿಂದ ಅಥವಾ ಮಾದರಿಯಿಂದ ಮೊದಲೇ ನಿರೂಪಿಸು, ವ್ಯಕ್ತಗೊಳಿಸು; ಮುನ್‌ಚಿತ್ರಿಸು. ಮೊದಲೇ (ಮನಸ್ಸಿನಲ್ಲಿ) ಚಿತ್ರಿಸಿಕೊ, ಕಲ್ಪಿಸಿಕೊ. **Prefigurátion** —ಗ್ಯು— (ನಾ.); **Prefígurative** (ಗು.); **Prefígurement** —ಗರ್— (ನಾ.)

Préfix ಪ್ರೀಫಿಕ್ಸ್ (ನಾ.), **Prefíx** ಪ್ರಿ— (ಕ್ರಿ. ಸಕ.) ಒಂದು ಪದದ ಅರ್ಥವನ್ನು ಪರಿಮಿತಿಗೊಳಿಸುವುದಕ್ಕಾಗಲಿ ವಿಶೇಷಿಸುವುದಕ್ಕಾಗಲಿ, (ಕೆಲವು ಭಾಷೆಗಳಲ್ಲಿ) ವಿಭಕ್ತಿಗೂಡಿಸುವುದಕ್ಕಾಗಲಿ, ಮೂಲ ಪದದ ಹಿಂದೆ ಸೇರಿಸುವ ಪ್ರತ್ಯಯ; ಪೂರ್ವ ಪ್ರತ್ಯಯ. ಹೆಸರಿನ ಹಿಂದೆ ಸೇರಿಸುವ ಒಕ್ಕಣೆಯ ಮಾತು (Mr, Mrs, Sir, Dr). (ಕ್ರಿ.) (ಪುಸ್ತಕ, ಮೊ. ಗಳಿಗೆ ಒಂದು ಅಧ್ಯಾಯ, ಪ್ರಕರಣ, ಮೊ. ನ್ನು) ಪೀಠಿಕೆಯಾಗಿ ಸೇರಿಸು (*To* ಉಪ. ದೊಡನೆ); (ಪದಕ್ಕೆ) ಪೂರ್ವ ಪ್ರತ್ಯಯ, ಪೂರ್ವ ಪದ, —ಸೇರಿಸು, ಹಚ್ಚು (*To* ಉಪ. ದೊಡನೆ). **Prefíxion** (ನಾ.); **Prefíxture** (ನಾ.)

Prefórm ಪ್ರೀ(ಪ್ರಿ)ಫಾರ್ಮ್ (ಕ್ರಿ. ಸಕ.) ಮೊದಲೇ ರಚಿಸು, ರೂಪಿಸು. **Preformátion** (ನಾ.) ಪೂರ್ವ ರಚನೆ, —ರೂಪಣ. (ಜೀ. ವಿ.) Theory of p. ಪರಿಪೂರ್ಣ ಜೀವಿಯ ಅವಯವಗಳೆಲ್ಲವೂ ಗರ್ಭಾಣುವಿನಲ್ಲಿಯೇ ಇರುತ್ತವೆಂದೂ ಅವು ಕಾಲಕ್ರಮದಲ್ಲಿ ಕೇವಲ ವಿಕಸನ ಮಾತ್ರ ಹೊಂದುತ್ತವೆಂದೂ ಹೇಳುವ ವಾದ: ಪೂರ್ವ ರೂಪಣ ವಾದ. **Prefórmative** (ಗು., ನಾ.) ಮೊದಲೇ ರೂಪುಗೊಳ್ಳುವ; ಪೂರ್ವ ರೂಪಣ ಲಕ್ಷಣವುಳ್ಳ, —ಶಕ್ತಿಯುಳ್ಳ. ಪೂರ್ವ ಪ್ರತ್ಯಯವಾಗಿ ಸೇರಿಸಿದ (ಉಚ್ಚಾರಾಂಶ, ಅಕ್ಷರ, ಮೊ. ವು); ಪೂರ್ವ ಪ್ರತ್ಯಯ.

Prégnable ಪ್ರೆಗ್ನಬ್‌ಲ್ (ಗು.) (ದುರ್ಗದ ವಿಷಯದಲ್ಲಿ) ಭೇದಿಸಲಾಗುವ; ಭೇದ್ಯ; ದಾಳಿ ಮಾಡಿ ತೆಗೆದುಕೊಳ್ಳಲಾಗುವ.

Prégnant ಪ್ರೆಗ್ನಂಟ್ (ಗು.) (ಹೆಂಗಸು) ಬಸಿರಾದ; ಗರ್ಭ ಧರಿಸಿದ; ಗರ್ಭಿಣಿಯಾದ; (ದನ, ಮೊ. ವು) ಗಬ್ಬವಾದ, ತೆನೆಯಾದ. ಭಾವ ಗರ್ಭಿತವಾದ; ಕಲ್ಪನಾ ಶಕ್ತಿಯುಳ್ಳ; ಫಲ ಪರಿಣಾಮವುಳ್ಳ; ಪರಿಣಾಮ ಗರ್ಭಿತ (*With* ಉಪ. ದೊಡನೆ). (ಮಾತು, ಕಾರ್ಯ) ಗೂಢಾರ್ಥವುಳ್ಳ, ಅರ್ಥ ಗರ್ಭಿತವಾದ [**Prégnantly** (ಕ್ರಿ. ವಿ.)]. (ವ್ಯಾ.) P. construction ವಾಚ್ಯಾರ್ಥ ಸೂಚಿಸುವುದಕ್ಕಿಂತಲೂ ಹೆಚ್ಚು ಭಾವಗರ್ಭಿತವಾದ ವಾಕ್ಯರಚನೆ; ಭಾವಗರ್ಭಿತ ವಾಕ್ಯರಚನೆ. **Prégnancy** (ನಾ.)

Prehénsile ಪ್ರಿಹೆನ್‌ಸೈ(ಸಿ)ಲ್ (ಗು.) (ಪ್ರಾ. ವಿ.) (ಬಾಲದ ಅಥವಾ ಇತರ ಸಂಧಿಗೂಡಿದ ಅವಯವದ ವಿಷಯದಲ್ಲಿ) ಹಿಡಿದುಕೊಳ್ಳುವ ಶಕ್ತಿಯುಳ್ಳ; ಗ್ರಾಹಕ ಶಕ್ತಿಯುಳ್ಳ. **Prehensílity** (ನಾ.); **Prehénsion** (ನಾ.) (ಭದ್ರವಾಗಿ) ಹಿಡಿದುಕೊಳ್ಳುವುದು, ಹಿಡಿತ; ಬುದ್ಧಿ ಗ್ರಹಣ.

Prehístory ಪ್ರೀಹಿಸ್ಟೊರಿ (ನಾ.) ಚರಿತ್ರಪೂರ್ವ ಕಾಲದ ಸಂಗತಿಗಳು; ಚರಿತ್ರಪೂರ್ವ ಕಾಲ. **Prehistóric** —ಹಿಸ್ಟಾರಿಕ್ (ಗು.)—ಕಾಲದ. **Prehistórically** (ಕ್ರಿ. ವಿ.)

Pre-ignítion ಪ್ರೀಇಗ್ನಿಷನ್ (ನಾ.) (ಅಂತರ್ದಹನ ಎಂಜಿನಿನಲ್ಲಿ) ಸಿಡಿತದ ಅನಿಲ ಮಿಶ್ರಣವು ಅಪೂರ್ಣ ಕಾಲದಲ್ಲಿಯೇ ಹೊತ್ತಿಕೊಳ್ಳುವುದು.

Prejúdge ಪ್ರೀಜಜ್ (ಕ್ರಿ. ಸಕ.) ವಿಚಾರಣೆಗೆ ಅಥವಾ ಸರಿಯಾದ ತನಿಖೆಗೆ ಮೊದಲೇ (ಒಬ್ಬನಮೇಲೆ) ತೀರ್ಪುಕೊಡು, ಅಭಿಪ್ರಾಯಪಡು; (ವ್ಯಕ್ತಿ, ಕಾರಣ, ಕಾರ್ಯ, ಮೊ. ಗಳ ವಿಷಯದಲ್ಲಿ) ಅವಸರದ ತೀರ್ಮಾನ ಕೊಡು, ವಿಚಾರಮಾಡದೆ ನಿರ್ಣಯಿಸು. **Prejúdgement** (ನಾ.); **Prejudicátion** (ನಾ.) ಅವಸರದ ತೀರ್ಪು; ಹಿಂದೆ ಮಾಡಿದ ತೀರ್ಪು ಅಥವಾ ಕೊಟ್ಟ ಅಭಿಪ್ರಾಯ.

Préjudice ಪ್ರೆಜುಡಿಸ್ (ನಾ., ಕ್ರಿ. ಸಕ.) (ಒಂದು ವ್ಯಕ್ತಿಯ ಅಥವಾ ವಸ್ತುವಿನ ವಿಷಯದಲ್ಲಿ, ಪ್ರತಿಕೂಲವಾಗಿಯೊ ಅನುಕೂಲವಾಗಿಯೊ) ಮೊದಲೇ ಭಾವಿಸಿಕೊಂಡ, ರೂಪಿಸಿಕೊಂಡ, ಅಭಿಪ್ರಾಯ; ಪೂರ್ವ ಕಲ್ಪಿತ ಅಭಿಪ್ರಾಯ; ಅವಿಚಾರಾಭಿಪ್ರಾಯ; ಪೂರ್ವ ವಿಶ್ವಾಸ; ಪೂರ್ವಾಗ್ರಹ; ಮುನ್ನೊಲವು; ಓಲು (*Against*, *in favour of*) (Divest your mind of p. Has a p. against foreigners ಅವನಿಗೆ ವಿದೇಶೀಯರ ವಿಷಯದಲ್ಲಿ ದುರಭಿಪ್ರಾಯವಿದೆ. Has a p. in our favour. This is mere p. ಬರಿಯ ಅವಿಚಾರ ಭಾವನೆ). (ಒಂದು ಕಾರ್ಯದಿಂದ, ಒಂದು ನಿರ್ಣಯದಿಂದ ಆಗುವ ಅಥವಾ ಆಗಬಹುದಾದ) ಹಾನಿ, ಕೆಡುಕು [To the p. of —ಕ್ಕೆ ಹಾನಿಯಾಗುವಂತೆ. Without p. (ಇರುವ ಹಕ್ಕಿಗೆ, ವಾರಸಿಗೆ) ಹಾನಿ ತಟ್ಟದಂತೆ]. (ಕ್ರಿ.) (ಹಕ್ಕು, ವಾರಸು, ಹೇಳಿಕೆ, ಮೊ. ದು) ಸಿದ್ಧಿಸುವುದಕ್ಕೆ ಹಾನಿ ತರು, ಕುಂದು ಮಾಡು. (ಅನುಕೂಲವಾಗಿ, ಪ್ರತಿಕೂಲವಾಗಿ) (ಒಬ್ಬನಲ್ಲಿ) ಪೂರ್ವ ಕಲ್ಪಿತ ಅಭಿಪ್ರಾಯವಿರುವಂತೆ ಮಾಡು; ಮನಸ್ಸು ಕೆಡಿಸು (ಮು., ಭೂ. ಕೃ. ನಲ್ಲಿ). **Prejudícial** —ಷ(ಷ್)ಲ್ (ಗು.) ಅವಿಚಾರಾಭಿಪ್ರಾಯ ಹುಟ್ಟಿಸುವ, ಉಂಟುಮಾಡುವ; ವಿರೋಧ, ಬಾಧೆ, —ಮಾಡುವ; (ಹಕ್ಕು, ಬಾಧ್ಯತೆ, ಹಿತ, ಮೊ. ಕ್ಕೆ) ಹಾನಿಕರವಾದ, ಧಕ್ಕೆ ತರುವ. **Prejudícially** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Prélacy. **Prelate** ನೋಡಿ.

Prélate ಪ್ರೆಲೆಟ್ (ನಾ.) (ಕ್ರೈಸ್ತ) ಉನ್ನತ ಪದವಿಯ (ಮತ) ಧರ್ಮಾಧ್ಯಕ್ಷ, ಮಠಾಧಿಪತಿ (ಆರ್ಚ್‌ಬಿಷಪ್, ಬಿಷಪ್, ಪ್ರಧಾನ ಬಿಷಪ್, ಮೊ. ರು): 'ಪ್ರೆಲೆಟ್'. **Prelátic(al)** (ಗು.); **Prelátically** (ಕ್ರಿ. ವಿ.); **Prélacy** ಪ್ರೆಲಸಿ (ನಾ.) ಪ್ರೆಲೆಟ್ಟಿನ ಹುದ್ದೆ, ದರ್ಜೆ, ಅಧಿಕಾರ ಪ್ರಾಂತ; ಪ್ರೆಲೆಟ್‌ಗಳು (The p.). ಪ್ರೆಲೆಟ್ಟುಗಳಿಂದ (ಕ್ರೈಸ್ತ) ಮತದ ಆಡಳಿತ (ಸಾ., Episcopacy ಎಂಬುದಕ್ಕೆ ವಿರುದ್ಧವಾದದ್ದು). **Prélatess** (ನಾ., ಸ್ತ್ರೀ.) = Abbess; prioress; (ಹಾಸ್ಯ ಪ್ರ.) ಪ್ರೆಲೆಟ್ಟಿನ ಹೆಂಡತಿ. **Prélatize** (ಕ್ರಿ. ಸಕ.) (ಕ್ರೈಸ್ತ ಮತವನ್ನು) ಪ್ರೆಲೆಟ್ ಆಧಿಪತ್ಯಕ್ಕೆ ಒಳಗಾಗಿಸು. **Prélature** ಪ್ರೆಲಟ್ಯೂರ್ (ನಾ.) ಪ್ರೆಲೆಟ್ಟಿನ ಅಧಿಕಾರ (ಸ್ಥಾನ); ಪ್ರೆಲೆಟ್ಟುಗಳು (The p.)

Prélature. **Prelate** ನೋಡಿ.

Preléct ಪ್ರಿಲೆಕ್ಟ್ (ಕ್ರಿ. ಅಕ.) (ಮು., ವಿ. ವಿ. ನಿ. ದಲ್ಲಿ) (ಸಭಾಸದರಿಗೆ, ಯಾವುದಾದರೂ ವಿಷಯದ ಮೇಲೆ) ಉಪನ್ಯಾಸ, ಪ್ರವಚನ, —ಮಾಡು (*To* audience, *on* subject). **Preléction** (ನಾ.); **Preléctor** (ನಾ.)

Prelibátion ಪ್ರೀಲೈಬೇಷನ್ (ನಾ.) ಪೂರ್ವ ರುಚಿ; ಮುನ್‌ಸವಿ (ಸಾ., ರೂಪ.)

Prelím ಪ್ರಿಲಿಮ್ (ನಾ.) (ಬಳ. ಮಾ.) ಆರಂಭ, ಪ್ರಾಥಮಿಕ, —ಪರೀಕ್ಷೆ; ಪೂರ್ವಭಾವಿ ಪರೀಕ್ಷೆ (Preliminary examination ಎಂಬುದರ ಸಂಕ್ಷಿಪ್ತ)

Prelíminary ಪ್ರಿಲಿಮಿನರಿ (ಗು., ನಾ.) ಪೀಠಿಕಾ ರೂಪದ; ಆರಂಭದ; ಪೂರ್ವಭಾವಿಯಾದ; ಸನ್ನಾಹದ; (ನಾ., ಸಾ., ಬ. ವ. ದಲ್ಲಿ) ಪೂರ್ವಸಿದ್ಧತೆ; ಪೂರ್ವಭಾವಿ ಕಾರ್ಯಕ್ರಮ; ಮೊದಲ ಏರ್ಪಾಡು. **Prelíminarily** (ಕ್ರಿ. ವಿ.)

Prélude ಪ್ರೆಲ್ಯೂಡ್ (ನಾ.), ಪ್ರೆ(ಪ್ರಿ)— (ಕ್ರಿ.) (ಮತ್ತೊಂದಕ್ಕೆ) ಪೀಠಿಕಾರೂಪವಾದ ಕಾರ್ಯ, ಘಟನೆ, ಸ್ಥಿತಿ; ಪೂರ್ವ ರಂಗ; ಉಪಕ್ರಮ (*To* ಉಪ. ದೊಡನೆ); ಮುನ್ನುಡಿ. (ಸಂ.) ಉಪಕ್ರಮ ರಾಗಾಲಾಪನೆ. (ಕ್ರಿ.) (—ಕ್ಕೆ) ಪೀಠಿಕೆಯಾಗಿ, ಪ್ರಸ್ತಾವನೆಯಾಗಿ, ಇರು; ಪ್ರವೇಶ ಮಾಡಿಸು; ಮುನ್ ಸೂಚನೆ ಕೊಡು, ಆಗಿರು. ಪೀಠಿಕೆ ಹಾಕಿ ಆರಂಭಿಸು. (—ಕ್ಕೆ) ಪೀಠಿಕೆಯಾಗಿರು, ಪೀಠಿಕೆ ಹಾಕು (*To* ಉಪ. ದೊಡನೆ). (ಸಂ.) ಆಲಾಪನೆ ಮಾಡು. **Prelúdial** (ಗು.); **Préludize** (ಕ್ರಿ. ಸಕ.); **Prelúsion** (ನಾ.); **Prelúsive** (ಗು.)

Prémature ಪ್ರೆ(ಪ್ರಿ)ಮಟ್ಯು(ಚ)ರ್, **Prematúre** ಪ್ರೀಮಟ್ಯೂ(ಚ್ಯೂ)ರ್ (ಗು.) ರೂಢಿಯ ಅಥವಾ ತಕ್ಕ ಕಾಲಕ್ಕೆ ಮೊದಲೇ ಬಂದ, ಘಟಿಸಿದ, ಸಂಭವಿಸಿದ, ಪ್ರಾಪ್ತವಾದ, ಮಾಡಿದ; ತಕ್ಕ ಕಾಲಕ್ಕಿಂತ ಬಹಳ ಮುಂಚಿನ; ಅಪಕ್ವ; ಹದಕ್ಕೆ ಮುನ್ನ; ನೆರೆಯದ; ಆತುರದ (P. decision, P. decay). **Prematúrely** (ಕ್ರಿ. ವಿ.); **Prematúreness** (ನಾ.); **Prematúrity** (ನಾ.)

Preméditate ಪ್ರಿಮೆಡಿಟೇಟ್ (ಕ್ರಿ. ಸಕ.) (ಕಾರ್ಯ, ಮೊ. ನ್ನು) ಮುಂದಾಗಿಯೇ ಪರ್ಯಾಲೋಚಿಸು, ಉದ್ದೇಶಿಸು, ಸಂಕಲ್ಪಿಸು (ಮು., ಭೂ. ಕೃ. ನಲ್ಲಿ). **Preméditatedly** (ಕ್ರಿ. ವಿ.); **Premeditátion** (ನಾ.)

Prémier ಪ್ರೆ(ಪ್ರೀ)ಮಿಯರ್ (ಗು., ನಾ.) (ಈಗ ಮು., ಅಸಂ.) (ಸ್ಥಾನ, ಪ್ರಮುಖತೆ, ಕ್ರಮ, ಕಾಲ—ಇವುಗಳಲ್ಲಿ) ಪ್ರಥಮ, ಪ್ರಧಾನ [Secured p. place (in race)]. (ನಾ.) (ಗ್ರೇಟ್‌ಬ್ರಿಟನ್ನಿನ ಅಥವಾ ಅದರ ನೆಲಸು ನಾಡಿನ) ಮುಖ್ಯಮಂತ್ರಿ, ಪ್ರಧಾನಿ. **Prémiership** (ನಾ.)

Premieré (F) ಪ್ರೆಮ್ಯೇರ್ (ನಾ.) ಒಂದು ನಾಟಕದ ಪ್ರಥಮ ಪ್ರದರ್ಶನ.

Prémise, -ss ಪ್ರೆಮಿಸ್ (ನಾ.), **Premíse** ಪ್ರಿಮೈಸ್ (ಕ್ರಿ. ಸಕ.) (ತರ್ಕ: ಅನೇಕ ವೇಳೆ -ss) ಮತ್ತೊಂದನ್ನು ಅನುಮಾನಿಸುವುದಕ್ಕೆ ಹಿಂದಿನ ಆಧಾರ ವಚನ; (ಪೂರ್ವ) ಪಕ್ಷ; ಪ್ರತಿಜ್ಞೆ [Major, minor, p. (ಆಯಾ ಪದವನ್ನು ನೋಡಿ)]. (ಬ. ವ. ದಲ್ಲಿ) ಮೊದಲು, ಮೇಲೆ, ಹಿಂದೆ, —ಹೇಳಿದ್ದು; ಪೂರ್ವೋಕ್ತ (ಮು., ನ್ಯಾ. ಶಾ.: ಮೇಲೆ ಹೇಳಿದ ಮನೆಗಳು, ಜಮೀನುಗಳು ಅಥವಾ ಸ್ಥಿರಾಸ್ತಿಗಳು). (ಬ. ವ. ದಲ್ಲಿ) (ಸುತ್ತಲಿನ ಆವರಣವೂ ಇತರ ಸೇರಿಕೆಗಳೂ ಕೂಡಿದ) ಮನೆ, ಕಟ್ಟಡ (To be drunk on the premises). (ಕ್ರಿ.) (—ನ್ನು) ಪೀಠಿಕಾ ರೂಪವಾಗಿ ಹೇಳು, ಬರೆ.

Prémium ಪ್ರೀಮಿಯಂ [ನಾ., ಬ. ವ. -ums, (ಹಿಂದೆ) -ia] ಬಹುಮಾನ; ಸಂಭಾವನೆ; ಪಾರಿತೋಷಿಕ [Put a p. on ಉತ್ತೇಜನವಾಗಿ ಇಡು, —ಪರಿಣಮಿಸು; ಪ್ರೇರಕವಾಗಿರು (This will put a p. on fraud)]. ವಿಮೆಯ ಕಂತು. (ಬಡ್ಡಿ, ಸಂಬಳ, ಮೊ. ಗಳ ಜೊತೆಗೆ ಕೊಡುವ) ಹೆಚ್ಚಿಗೆಯ ಹಣ, ಉಚಿತಾರ್ಥ; ಲಾಭಾಂಶ; (ಕಸಬು, ಮೊ. ನ್ನು ಕಲಿಸುವುದಕ್ಕೆ ಕೊಡಬೇಕಾದ) ಶಿಕ್ಷಣ ಶುಲ್ಕ, ವೇತನ. (ಒಂದು ಚಲಾವಣೆಯ ಪದ್ಧತಿಯ ನಾಣ್ಯವನ್ನು ಮತ್ತೊಂದು ಪದ್ಧತಿಯ ಹೆಚ್ಚು ಬೆಲೆಯ ನಾಣ್ಯಕ್ಕೆ ಅಥವಾ ಕಾಗದದ ಹಣವನ್ನು ನಾಣ್ಯಕ್ಕೆ, ಅಥವಾ ಒಂದು ಬಗೆಯ ನಾಣ್ಯವನ್ನು ಹೆಚ್ಚು ಬೆಲೆಯ ಮತ್ತೊಂದು ನಾಣ್ಯಕ್ಕೆ ಪರಿವರ್ತಿಸಲು ಕೊಡಬೇಕಾದ) ನಾಣ್ಯ ಪರಿವರ್ತನೆಯ ವಟ್ಟ [At a p. ನಮೂದು ಬೆಲೆಗಿಂತ ಹೆಚ್ಚಾಗಿ (At a discount ಹೋಲಿಸಿ) (Discount ನೋಡಿ); (ರೂಪ.) ಬಹಳ ಗೌರವದಿಂದ; ಹೆಚ್ಚು ಪ್ರಶಸ್ತಿಯಿಂದ; ಗುರುತರ ಭಾವನೆಯಿಂದ]

Premonítion ಪ್ರಿಮೊನಿಷ(ಷ್)ನ್ (ನಾ.) ಪೂರ್ವ ಸೂಚನೆ; ಶಂಕೆ; ಮುನ್ನಳುಕು. **Premónitor** —ಮಾ— (ನಾ.); **Premónitorily** (ಕ್ರಿ. ವಿ.); **Premónitory** (ಗು.)

Premórse ಪ್ರಿಮಾರ್ಸ್ (ಗು.) (ಸ. ವಿ., ಕೀಟ ಶಾಸ್ತ್ರ) (ಕಡಿದುಹಾಕಿದಂತೆ ಅಥವಾ ಮುರಿದುಹಾಕಿದಂತೆ) ತುಂಡು ಬಿದ್ದಿರುವ, ಥಟ್ಟನೆ ಮೊಂಡಾಗಿ ತೋರುವ, —ಕೊನೆಯುಳ್ಳ; ಮೊಂಡು ಕೊನೆಯ.

Préntice ಪ್ರೆಂಟಿಸ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) = Apprentice; ಶಿಕ್ಷಣ, ತರಪೇತು, —ಪಡೆಯುತ್ತಿರುವವನು (ಮು., P. hand ಅನನುಭವಿಯ, ಪಳಗಿಲ್ಲದ, —ಕೈ). **Prénticeship** (ನಾ.) (ಪ್ರಾಚೀ. ಪ್ರ.)

Preoccupátion ಪ್ರಿಆಕ್ಯುಪೇಷನ್ (ನಾ.) ಮುನ್ನೊಲವು; ಅವಿಚಾರಾಭಿಪ್ರಾಯ. (ಒಂದು ಸ್ಥಳವನ್ನು) ಮೊದಲೇ ಆಕ್ರಮಿಸಿಕೊಂಡಿರುವುದು; ಪೂರ್ವಾಕ್ರಮಣ. (ಉಳಿದವಕ್ಕಿಂತ) ಹೆಚ್ಚು ಪ್ರಾಧಾನ್ಯವುಳ್ಳ ಉದ್ಯೋಗ, ಕೆಲಸ, ಕಾರ್ಯ. ಮನಸ್ಸು (ಒಂದು ವಿಚಾರದಲ್ಲಿ) ಮಗ್ನವಾಗಿರುವುದು; ಗಮನ ಬೇರೆಯ ಕಡೆ ಇರುವುದು. **Preóccupy** ಪ್ರಿಆಕ್ಯುಪೈ (ಕ್ರಿ. ಸಕ.) (ಮನಸ್ಸು, ಮೊ. ನ್ನು) ಮೊದಲೇ ಆಕ್ರಮಿಸಿರು. (ಭೂ. ಕೃ. ನಲ್ಲಿ) ಅನ್ಯ ಮನಸ್ಕನಾದ; ಬೇರೆ ಆಲೋಚನೆ ಮಾಡುತ್ತಿರುವ [**Preóccupiedly** (ಕ್ರಿ. ವಿ.)]. ಮೊದಲೇ ಸ್ವಾಧೀನ ಪಡಿಸಿಕೊ, ಆಕ್ರಮಿಸಿಕೊ; ಪೂರ್ವಾಕ್ರಮಣ ಮಾಡು.

Prep ಪ್ರೆಪ್ (ನಾ.) (ಶಾಲಾ ಅಸಂ.) = Preparation (ಪದದ ಸಂಕ್ಷಿಪ್ತ)

Preparátion ಪ್ರೆಪರೇಷನ್ (ನಾ.) ಸಿದ್ಧಗೊಳಿಸುವುದು; ತಯಾರು ಮಾಡುವುದು; ಅಣಿಮಾಡುವುದು; ಸಜ್ಜೀಕರಣ. (ಸಾ., ಬ. ವ. ದಲ್ಲಿ) (ಪೂರ್ವ) ಸಿದ್ಧತೆ(ಗಳು); ನವರಣೆ, ಸಜ್ಜು; ಸನ್ನಾಹ (*For* ಉಪ. ದೊಡನೆ); [Make preparations for (—ಕ್ಕೆ) ಅಣಿಮಾಡು, ಸಜ್ಜುಗೊಳಿಸು]. (ಸಂಕ್ಷಿಪ್ತ: Prep.) (ಪಾಠಶಾಲೆಯ ದಿನಚರಿಯಾಗಿ) ಪಾಠ ಗಟ್ಟಿಮಾಡುವುದು. (ವಿಶೇಷ ಸಂದರ್ಭದಲ್ಲಿ) ತಯಾರಿಸಿದ ಪದಾರ್ಥ (ಔಷಧ, ಭಕ್ಷ್ಯ, ಮೊ. ದು). **Prepáre** ಪ್ರಿಪೇರ್ (ಕ್ರಿ.) (ಒಬ್ಬನನ್ನು, ಒಂದು ವಸ್ತುವನ್ನು) (—ಕ್ಕೆ) ಸಿದ್ಧಗೊಳಿಸು (*For* ಉಪ. ದೊಡನೆ); (ಆಹಾರ, ಅಡಿಗೆ) ಊಟಕ್ಕೆ ಸಿದ್ಧ ಮಾಡು, ತಯಾರಿಸು;

पुस्तकालय गुरुकुल कांगड़ी

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಒಂದು ಸುದ್ದಿ ಕೇಳಲು ಒಬ್ಬನ ಮನಸ್ಸನ್ನು) ಸಿದ್ಧಗೊಳಿಸು, ಹದ ಮಾಡು (*For* news, *to* hear); (ಪಾಠ) ಗಟ್ಟಿಮಾಡು ; (ಭಾಷಣವನ್ನು, ಉಪದೇಶ ವಿಷಯವನ್ನು) ಸಿದ್ಧ ಮಾಡಿಕೊ ; ಒಬ್ಬನಿಗೆ ಶಿಕ್ಷಣ ಕೊಟ್ಟು (ಪ್ರೌಢ ವಿದ್ಯಾಶಾಲೆಗೆ, ಒಂದು ಪರೀಕ್ಷೆಗೆ, ಸೈನ್ಯ, ಮೊ. ಕ್ಕೆ) ಸಿದ್ಧನನ್ನಾಗಿ ಮಾಡು, ತರಪೇತು ಮಾಡು ; (—ಕ್ಕೆ) ಸಿದ್ಧ ಮಾಡಿಕೊ, ಸಜ್ಜು ಗೊಳಿಸು (*For*, *to* do, etc.) [Be prepared (to do) (ಮಾಡುವುದಕ್ಕೆ) ಸಿದ್ಧನಾಗಿರು, ಮನಸ್ಸುಳ್ಳವನಾಗಿರು]. ತಕ್ಕ ವಿಧಾನದಿಂದ, ಕ್ರಮವನುಸರಿಸಿ (ರಾಸಾಯನಿಕ ಉತ್ಪನ್ನ, ಮೊ. ನ್ನು) ತಯಾರಿಸು. **Prepáredness** (ನಾ.) [ಮು., ಸಂಭವಿಸಬಹುದಾದ ಯುದ್ಧ ಕಾರ್ಯಾಚರಣೆಗಾಗಿ (ನಾವಿಕ ಮತ್ತು ಸೈನಿಕ ಸಜ್ಜನ್ನು) ಸಿದ್ಧಗೊಳಿಸಿಟ್ಟು ಕೊಂಡಿರುವುದು]. **Prepárative** ಪ್ರಿಪ್ಯಾರಟಿವ್ (ಗು., ನಾ.) =Preparatory; (ನಾ.) ಪೂರ್ವಭಾವಿಯಾದ ಕಾರ್ಯ. (ಸೈನ್ಯ, ನಾವೆ) (ಭೇರಿ, ಕಹಳೆ, ಮೊ. ಗಳ ಮೂಲಕ ಕೊಟ್ಟ) ಸಿದ್ಧವಾಗಬೇಕೆಂಬ ಆಜ್ಞೆಯ ಸಂಕೇತ : ಸನ್ನಾಹ ಸಂಕೇತ ; ಸನ್ನಾಹ ಭೇರಿ. **Prepáratively** (ಕ್ರಿ. ವಿ.); **Prepáratory** ಪ್ರಿಪ್ಯಾರಟರಿ (ಗು., ನಾ.) ಸಿದ್ಧ ಮಾಡುವ ; ಅಣಿಗೊಳಿಸುವ ; ಪೂರ್ವಭಾವಿಯಾದ ; ಪೀಠಿಕಾ ರೂಪದ (*To* ಉಪ. ದೊಡನೆ). ಮೇಲಿನ ಶಾಲೆಗೆ ವಿದ್ಯಾರ್ಥಿಗಳನ್ನು ತರಪೇತು ಮಾಡುವ ಪ್ರಾಥಮಿಕ ಶಿಕ್ಷಣಶಾಲೆ (=P. school). (ಕ್ರಿ. ವಿ. ದಂತೆ ಪ್ರ.) Am packing it up p. to sending it by post. **Prepáratorily** (ಕ್ರಿ. ವಿ.)

Prepaý ಪ್ರೀಪೇ (ಕ್ರಿ. ಸಕ.) (ಬೆಲೆ, ವೆಚ್ಚ, ಕೂಲಿ, ಮೊ. ನ್ನು) ಮೊದಲೇ, ಮುಂಗಡವಾಗಿ, —ಕೊಡು ; (ತರಬೇಟಿ ಹಚ್ಚುವುದರ ಮೂಲಕ ಥಾಂಗಿ, ಮೊ. ಗಳ) ಅಂಚೆ ಹಾಸಲನ್ನು ಮುಂದಾಗಿ ಸಲ್ಲಿಸು. **Prepaýable** (ಗು.) ; **Prepaýment** (ನಾ.)

Prepénse ಪ್ರಿಪೆನ್ಸ್ (ಗು.) ಉದ್ದೇಶ ಪೂರ್ವಕವಾದ ; ಬೇಕೆಂದು ಮಾಡಿದ ; ಪೂರ್ವೋದ್ದಿಷ್ಟ [Malice p. (ಕೇಡು ಮಾಡುವ ಉದ್ದೇಶ) ಎಂಬಲ್ಲಿ ಪ್ರ. Of malice p. —ಉದ್ದೇಶದಿಂದ]. **Prepénsely** (ಕ್ರಿ. ವಿ.)

Prepónderate ಪ್ರಿಪಾಂಡರೇಟ್ (ಕ್ರಿ. ಅಕ.) (—ಕ್ಕಿಂತ) ಹೆಚ್ಚು ತೂಗು, ಹೆಚ್ಚು ಭಾರವಾಗಿರು, ಗುರುತ್ವವುಳ್ಳದ್ದಾಗಿರು [P. over (ಸಂಖ್ಯೆ, ಮೊತ್ತ, ಮೊ. ಗಳಲ್ಲಿ) (—ಕ್ಕಿಂತ) ಹೆಚ್ಚಾಗಿರು]. (ರೂಪ.) (ನೀತಿ ಗುಣದಲ್ಲ, ಬುದ್ಧಿ ಗುಣದಲ್ಲಿ) (—ಕ್ಕಿಂತ) ಹೆಚ್ಚು ತೂಕವಾಗಿರು. ಮುಖ್ಯಾಂಶವಾಗಿರು ; ಪ್ರಧಾನವಾಗಿರು. (ತಕ್ಕಡಿಯ ತಟ್ಟೆ) ಕೆಳಗಿಳಿ. **Prepónderance** (ನಾ.); **Prepónderant** (ಗು.); **Prepónderantly** (ಕ್ರಿ. ವಿ.)

Preposítion ಪ್ರೆಪೊಸಿಷ(ಷ್)ನ್ (ವ್ಯಾ.) ಉಪಸರ್ಗ (ನಾಮವಾಚಕ ಅಥವಾ ಸರ್ವನಾಮಗಳ ಹಿಂದೆ ಇದ್ದು ಆ ಪದಗಳ ದೇಶ, ಕಾಲ, ಕ್ರಮ, ಮೊ. ದ ಪರಸ್ಪರ ಸಂಬಂಧವನ್ನು ತೋರಿಸುವ ಉಪಸರ್ಗ ಪದ) (Found him *at* home, Wait *in* the hall, The bed that he slept *on*, What did you do it *for?* Won *by* waiting, What were you thinking *of?* Came *through* the roof ಮೊ. ಉದಾಹರಣೆಗಳಲ್ಲಿ *at*, *in*, *on*, *for*, *by*, *of*, *through* ಮೊ. ವು). **Prepositional** (ಗು.); **Prepositionally** (ಕ್ರಿ. ವಿ.); **Prepósitive** ಪ್ರಿಪಾಸಿಟಿವ್ (ಗು.) (ವ್ಯಾ.) (ಪದ, ಮೊ. ಗಳ ವಿಷಯದಲ್ಲಿ : ಮತ್ತೊಂದು ಪದದ) ಮೊದಲು ಇಡಲು ಅಥವಾ ಹಚ್ಚಲು ತಕ್ಕ; ಪೂರ್ವ ಪದವಾದ.

Prepósitive. Preposition ನೋಡಿ.

Prepósitor =Praepostor.

Prepossés ಪ್ರೀಪೊಸೆಸ್ (ಕ್ರಿ. ಸಕ.) (ಭಾವನೆ, ಮನೋರಾಗ, ಮೊ. ಗಳನ್ನು ಒಬ್ಬನಲ್ಲಿ) ವ್ಯಾಪನೆ ಮಾಡು, ಸ್ಫೂರ್ತಿಗೊಳಿಸು (*With* ಉಪ. ದೊಡನೆ). (ಭಾವ, ಮೊ. ವು) (ಒಬ್ಬನನ್ನು) ವ್ಯಾಪಿಸು, ವಶಪಡಿಸಿಕೊ (ಸಾ., ಕರ್ಮಣಿಯಲ್ಲಿ). (ಸಾ., ಹಿತ ಭಾವದಲ್ಲಿ) ಒಲವುಂಟು ಮಾಡು, ಒಲಿಸಿಕೊ, ಪೂರ್ವಾಗ್ರಹ ಹೊಂದಿರು. **Prepossésing** (ಗು.); **Prepossésingly** (ಕ್ರಿ. ವಿ.); **Prepossésingness** (ನಾ.); **Prepossésion** (ನಾ.)

Prepósterous ಪ್ರಿಪಾಸ್ಟರಸ್ (ಗು.) ಸ್ವಭಾವ ವಿರುದ್ಧವಾದ ; ವಿವೇಕಕ್ಕೆ, ವ್ಯವಹಾರ ಜ್ಞಾನಕ್ಕೆ, —ವಿಪರೀತವಾದ; ಅತಿ ವಕ್ರವಾದ ; ಅಸಂಬದ್ಧವಾದ. **Prepósterously** (ಕ್ರಿ. ವಿ.); **Prepósterousness** (ನಾ.)

Prepótent ಪ್ರಿಪೋಟೆಂಟ್ (ಗು.) ಬಹಳ ಬಲಶಾಲಿಯಾದ ; ಇತರರಿಗಿಂತ ಬಲಿಷ್ಠನಾದ, ಪ್ರಬಲನಾದ. (ಜೀ. ವಿ.) ಹೆಚ್ಚು ಫಲವಂತ ಮಾಡುವ ಪ್ರಭಾವವುಳ್ಳ ; ಅನುವಂಶ ಲಕ್ಷಣಗಳನ್ನು ಹೆಚ್ಚಾಗಿ ವರ್ಗಾಯಿಸುವ ಶಕ್ತಿಯುಳ್ಳ. **Prepótence** (ನಾ.); **Prepótency** (ನಾ.)

Pre-préference ಪ್ರೀಪ್ರೆಫರೆನ್ಸ್ (ಗು.) (ಬಂಡವಾಳದ ಪಾಲುಗಳು, ಪಾರನುಗಳು, ಮೊ. ಗಳ ವಿಷಯದಲ್ಲಿ) ಮೊದಲ ಪಾವತಿಯ ಹಕ್ಕಿನ ಪಾಲುಗಳು, ಮೊ. ಕ್ಕಿಂತ ಮೊದಲೇ ಪಾವತಿಯಾಗಬೇಕಾದ.

Prépuce ಪ್ರೀಪ್ಯೂಸ್ (ನಾ.) ಶಿಶ್ನಾಗ್ರದ (ಹೊದಿಕೆಯಾದ) ಮುಂದೊವಲು, ಸಡಿಲ ಚರ್ಮ. **Prepútial** ಪ್ರಿಪ್ಯೂಷ(ಷ್)ಲ್ (ಗು.)

Pre-Ráphaelite ಪ್ರೀರ್ಯಾಫಎಲೈಟ್ (ನಾ.) (ಇಟಲಿಯ ವರ್ಣಚಿತ್ರಕಾರ) ರ್ಯಾಫೆಯೆಲನ ಕಾಲಕ್ಕೆ ಮೊದಲು ಪ್ರಚಲಿತವಾಗಿದ್ದ ಭಾವನೆಯ ಪದ್ಧತಿಯಲ್ಲಿ ಕೃತಿ ರಚನೆ ಮಾಡುವ ಗುರಿಯುಳ್ಳ (ಚಿತ್ರ) ಕಲೆಗಾರ. [P. Brotherhood (ಸಂಕ್ಷಿಪ್ತ: P.R.B.) Holman-Hunt, Millais, D. G. Rossetti—ಇವರನ್ನೊಳಕೊಂಡ ಇಂಗ್ಲಿಷ್ ಕಲೆಗಾರರ ಒಂದು ತಂಡ (ಸ್ವಭಾವಾನುಸಾರವಾಗಿಯೂ ಸೂಕ್ಷ್ಮ ವಿವರದ್ಯೋತಕವಾಗಿಯೂ ವರ್ಣಕಾಂತಿ ವಿಶಿಷ್ಟವಾಗಿಯೂ ಇರುವ ಚಿತ್ರ ಲೇಖನ, ಕಾವ್ಯ ಲೇಖನ, ಮೊ. ವು ಇದರ ಗುರಿಗಳು)]. **Pre-Ráphael** (ಗು.); **Pre-Ráphael(it)ism** (ನಾ.)

Preréquisite ಪ್ರೀರೆಕ್ವಿಸಿಟ್ (ಗು., ನಾ.) ಮೊದಲನೆಯ ಗೊತ್ತುಪಾಡಾಗಿ ಆಗಬೇಕಾದ(ದ್ದು) : ಪೂರ್ವಾಪೇಕ್ಷಿತ ; ಮುನ್ನಣಿ.

Prerógative ಪ್ರಿರಾಗಟಿವ್ (ನಾ., ಗು.) (ತತ್ತ್ವತಃ ಮೂಲ ಸಿದ್ಧವಾದ, ಅಬಾಧಿತವಾದ) ರಾಜನ ಅಧಿಕಾರ, ಹಕ್ಕು ; ಪ್ರಭು ಹಕ್ಕು, ರಾಜ ಹಕ್ಕು (=Royal p.); ವಿಶೇಷಾಧಿಕಾರ ; ವಿಶೇಷ ಹಕ್ಕು [It is our p. to (do). We have the p. of (doing). The p. of mercy ಕರುಣೆ ತೋರಿಸಬಹುದಾದ ರಾಜ ಹಕ್ಕು]. ಪ್ರಕೃತಿದತ್ತವಾದ, ದೈವ ದತ್ತವಾದ, —ಅನುಕೂಲ್ಯ, ಸೌಕರ್ಯ, ಸಾಮರ್ಥ್ಯ [It is the p. (ಸಾಮರ್ಥ್ಯ) of man to drink without thirst]. (ಪಾಂಡಿತ್ಯ ಪ್ರ.) ಮೊದಲ ಅಭಿಮತ ಕೊಡುವ, ಆ ಮೂಲಕ ತರುವಾಯದ ಅಭಿಮತಗಳ ಮೇಲೆ ಪ್ರಭಾವ ಬೀರುವ, ಹಕ್ಕು. [(ಚರಿತ್ರೆ) P. court (ಅಂತಿಮ ಇಷ್ಟಪತ್ರದ ಸ್ಥಿರೀಕರಣ, ಮೊ. ಕ್ಕೆ ಏರ್ಪಟ್ಟ) ಆರ್ಚ್‌ಬಿಷಪ್ಪಿನ ನ್ಯಾಯಸ್ಥಾನ]. (ಗು.) ವಿಶೇಷಾಧಿಕಾರದ ; —ದಿಂದ ಅನುಭೋಗಿಸು(ತ್ತಿರು)ವ. (ರೋಮನ್ ಚರಿತ್ರೆ) ಮೊದಲ ಅಭಿಮತ ಕೊಡುವ ಹಕ್ಕುಳ್ಳ.

Présage ಪ್ರೆಸೆ(ಸಿ)ಜ್ (ನಾ.); **Présage** ಪ್ರೆಸೆಜ್, **Preságe** ಪ್ರಿಸೇಜ್ (ಕ್ರಿ. ಸಕ.) ಶಕುನ ; ಮುನ್ ಸೂಚನೆ ; ಅಶುಭ ಲಕ್ಷಣ ; ಉತ್ಪಾತ. (ಕ್ರಿ.) (ನಾಮಪದದ ಅರ್ಥಗಳಲ್ಲಿ) ; ಸ್ವಾಭಾವಿಕ ಮಾರ್ಗಗಳಿಂದ (ಘಟನೆ, ಮೊ. ಗಳಿಗೆ) ಮುನ್ನೆಚ್ಚರಿಕೆ ಕೊಡು (Such ideas are held to p. insanity ಅಂಥ ಭಾವನೆಗಳು ಬುದ್ಧಿ ಭ್ರಾಂತಿಯ ಪೂರ್ವ ಸೂಚನೆಗಳೆಂದು ನಂಬಿಕೆ). (ಮನುಷ್ಯನ ವಿಷಯದಲ್ಲಿ) ಭವಿಷ್ಯ ಹೇಳು ; (—ರ) ಭವಿಷ್ಯ ಜ್ಞಾನವಿರು.

Presbyópia ಪ್ರೆಸ್(ಸ್)ಬಿಯೋಪಿಯ (ನಾ.) (ಮುಪ್ಪಿಗೆ ಸಹಜವಾದ) ಒಂದು ಬಗೆಯ ದೂರ ದೃಷ್ಟಿ ; ಚಾಳೀಸು. **Presbyópic** —ಯಾಪಿಕ್ (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Présbyter ಪ್ರೆಸ್(ಸ್)ಬಿಟರ್ (ನಾ.) (ಆದಿ ಕಾಲದ ಕ್ರೈಸ್ತ ಮತಗಳಲ್ಲ) ಸ್ಥಳೀಯ ಮತದ, ಆರಾಧನ ಮಂದಿರದ, ಆಡಳಿತ ನಡಸುತ್ತಿದ್ದ ಅಧಿಕಾರಿ(ಗಳಲ್ಲೊಬ್ಬನು); (ಬಿಷಪ್ಪಿನ ಆಡಳಿತದ ಮತದಲ್ಲಿ) ಎರಡನೆಯ ದರ್ಜೆಯ ಪುರೋಹಿತ, ಪಾದ್ರಿ; (ಪ್ರೆಸ್‌ಬಿಟೇರಿಯನ್ ಮತದಲ್ಲಿ) ಮತದ ಹಿರಿಯ. **Presbýteral** (ಗು.); **Presbytérial** (ಗು.); **Presbýterate** —ರೆಟ್ (ನಾ.); **Présbytership** (ನಾ.); **Presbytérian** ಪ್ರೆಸ್‌ಬಿಟಿಯರಿಯನ್, —ಟೀರಿ— (ಗು., ನಾ.) [P. church (ಪುರೋಹಿತರೂ ಸೇರಿ) ಸಮಾನ ಪದವಿಯ ಮತದ ಹಿರಿಯರು ಆಡಳಿತ ನಡಸುವ ಒಂದು ಕ್ರೈಸ್ತ ಮತ]. (ನಾ.) ಪ್ರೆಸ್‌ಬಿಟೇರಿಯನ್ ಪದ್ಧತಿಯ ಅನುಯಾಯಿ; —ಮತದ ಶಿಷ್ಯ. **Presbytérianism** (ನಾ.); **Presbytérianize** (ಕ್ರಿ. ಸಕ.); **Présbytery** —ಟರಿ (ನಾ.) ಕ್ರೈಸ್ತ ಆರಾಧನ ಮಂದಿರದಲ್ಲಿ ಗಾಯಕರ ಸ್ಥಳದಿಂದ ಆಚೆಗೆ ಪುರೋಹಿತರು ಕೂಡುವ ಸ್ಥಳದ ಪೂರ್ವ ದಿಕ್ಕಿನ ಭಾಗ; ಪವಿತ್ರ ಸ್ಥಳ. ಮತದ ಹಿರಿಯರ ಸಂಸ್ಥೆ; ಈ ಸಂಸ್ಥೆ ಪ್ರತಿನಿಧಿಯಾಗಿರುವ ಪ್ರಾಂತ. (ರೋ. ಕ್ಯಾ. ಮತ) ಪುರೋಹಿತನ ಮನೆ.

Préscient ಪ್ರೆ(ಪ್ರೀ)ಷಿ(ಸಿ)ಯೆಂಟ್ (ಗು.) ಮುನ್ನರಿವುಳ್ಳ; ಮುನ್‌ದೃಷ್ಟಿ, ದೂರದೃಷ್ಟಿ, —ಉಳ್ಳ; ಭವಿಷ್ಯತ್ ಜ್ಞಾನವುಳ್ಳ. **Présciently** (ಕ್ರಿ. ವಿ.); **Préscience** (ನಾ.)

Prescientífic ಪ್ರೀಸೈಯೆಂಟಿಫಿಕ್ (ಗು.) ಶಾಸ್ತ್ರೀಯ ಜ್ಞಾನ ಪಡೆಯುವುದಕ್ಕೆ ಅಥವಾ ವಿಕಸನವಾಗುವುದಕ್ಕೆ ಮೊದಲಿನ; ಆಧುನಿಕ ವಿಜ್ಞಾನ ಹುಟ್ಟುವುದಕ್ಕೆ ಅಥವಾ ವೈಜ್ಞಾನಿಕ ಪದ್ಧತಿಯ ಪ್ರಯೋಗಕ್ಕೆ ಮೊದಲಿನ; ವಿಜ್ಞಾನ ಪೂರ್ವ ಕಾಲದ.

Prescínd ಪ್ರಿಸಿಂಡ್ (ಕ್ರಿ.) (ಒಟ್ಟಿನಿಂದ ಒಂದು ಭಾಗವನ್ನು, ಮು.) ಕಾಲಕ್ಕೆ ಮೊದಲೇ, ಅಥವಾ ಥಟ್ಟನೆ, ಕತ್ತರಿಸಿ ಹಾಕು. P. from ಗಣನೆಗೆ ತೆಗೆದುಕೊಳ್ಳದೆ ಬಿಟ್ಟುಬಿಡು; ಪರಿಗಣಿಸದಿರು.

Prescríbe ಪ್ರಿಸ್‌ಕ್ರೈಬ್ (ಕ್ರಿ.) ಅಧಿಕಾರದಿಂದ ನಿಯಮಿಸು, ವಿಧಿಸು, ಕಟ್ಟಳೆ ಮಾಡು, ಚೆಸಸು (Do not p. to me what I am to do. The statutes p. the practice ಶಾಸನಗಳು ನಡೆವಳಿಯನ್ನು ವಿಧಿಸುತ್ತವೆ). (ವೈ. ಶಾ.) (ರೋಗಿಗೆ, ರೋಗಕ್ಕೆ) (ಔಷಧ) ಗೊತ್ತು ಮಾಡು, ವಿಧಿಸು (*To* or *for* patient, *for* complaint) (ರೂಪ. ನಹ). (—ಕ್ಕೆ) ವಿಧಿಸುವ ಅಧಿಕಾರ, ಹಕ್ಕು, —ಹೂಡು (*To*, *for*, thing). **Préscript** ಪ್ರೀಸ್ಕ್ರಿಪ್ಟ್ (ನಾ.) ಶಾಸನ; ವಿಧಿ; ಕಟ್ಟಳೆ; ಆಜ್ಞೆ. **Prescríption** ಪ್ರಿ— (ನಾ.) ವಿಧಿಸುವುದು; ವಿಧಿಸಿದ್ದು; ನಿಯಮನ; (ಸೇರಿಸಬೇಕಾದ ಔಷಧ ವಸ್ತುಗಳನ್ನೂ ಅವುಗಳ ಪ್ರಮಾಣವನ್ನೂ ಔಷಧದ ಪ್ರಯೋಗ ಕ್ರಮವನ್ನೂ ತಿಳಿಸುವ ಸಾ., ಬರಹದಲ್ಲಿರುವ) ವೈದ್ಯನ ಔಷಧ ಸೂಚಿ, ಚೀಟಿ. (ನ್ಯಾ. ಶಾ.) ಅನಾದಿ ಕಾಲದಿಂದ ಅಥವಾ ಕಾನೂನು ಬದ್ಧವಾದ ನಿರ್ದಿಷ್ಟ ಕಾಲದಿಂದ ನಡೆದು ಬಂದಿರುವ ಕಾರಣ ಹಕ್ಕುಬಾಧ್ಯತೆಯನ್ನು ಅಥವಾ ಅಧಿಕಾರವನ್ನು ಕೊಡುವ ಸ್ವಾಧೀನಾನುಭವ; ಇಂಥ ಹಕ್ಕುಬಾಧ್ಯತೆ ಅಥವಾ ಅಧಿಕಾರ: ದೀರ್ಘಾನುಭವಾಧಿಕಾರ (=Positive p.); ವ್ಯಾಜ್ಯ ಹಾಕಲು, ಹಕ್ಕು ಹೂಡಲು, ಗೊತ್ತುಳ್ಳ ಕಾಲಾವಧಿ (Negative p.). **Prescríptive** (ಗು.) ನೇಮಿಸುವ; ವಿಧಾಯಕವಾದ. ಸ್ವಾಧೀನಾನುಭವದ (=P. right). ರೂಢಮೂಲವಾದ; ಮಾಮೂಲಾದ. **Prescríptively** (ಕ್ರಿ. ವಿ.)

Présence ಪ್ರೆಸೆನ್ಸ್ (ನಾ.) ಇರವು; ಎದುರು; ಮುನ್ನೆಲೆ; ಎದುರಿಗಿರುವುದು; ಹಾಜರಿ(ರುವುದು); ಸಮ್ಮುಖ; ಸನ್ನಿಧಿ; ಸಾನ್ನಿಧ್ಯ; ಸಮಕ್ಷ(ಮ) [Your p. is requested ತಾವು ದಯಮಾಡಿಸಬೇಕಾಗಿ ಪ್ರಾರ್ಥನೆ. In the p. of a large company ದೊಡ್ಡ ನೆರವಿಯ ಮುಂದೆ. Real p. (Real² ನೋಡಿ). Admitted to his p. In this august p. ಈ ಮಹಾ ಸನ್ನಿಧಾನದಲ್ಲಿ. The p. ದೊಡ್ಡ ಪದವಿಯುಳ್ಳವರ (ಮು., ರಾಜರ) ಬಳಿಯ ಮಹಾ ಸಾನ್ನಿಧ್ಯ (Remained in, retired from, the p.)]. ಮುಖ ಭಾವ; ಭಂಗಿ; ವರ್ತನೆ [A man of (a) noble p. ಗಂಭೀರಾಕೃತಿಯ ಮನುಷ್ಯ]. P. of mind (ಥಟ್ಟನೆಯ ಪರಿಸ್ಥಿತಿಯಲ್ಲಿ) ಶಾಂತಿ ಮತ್ತು ಚಿತ್ತಸ್ಥೈರ್ಯ. P.-chamber (ದೊಡ್ಡ ಪದವಿಯಲ್ಲಿರುವವರು) ಅತಿಥಿ, ಮೊ. ರನ್ನು ಸ್ವಾಗತಿಸುವ ಸಭಾಂಗಣ, ತೊಟ್ಟಿ; ದಿವಾನ್‌ಖಾನೆ.

Présent[1] (ಗು., ನಾ.) (ಎದುರಿಗೆ, ಸ್ಥಳದಲ್ಲಿ, ಸಭೆಯಲ್ಲಿ) ಇರುವ; ಪ್ರತ್ಯಕ್ಷ; ಸಮಕ್ಷ; ಹಾಜರಿರುವ [No one else was p. (*in* place, *at* proceedings, etc.)]. ವಿಚಾರ ನಡಸುತ್ತಿರುವ; ಚರ್ಚೆ ಮಾಡುತ್ತಿರುವ; ಸದ್ಯದ; ಈಗಿನ; ಎದುರಿಗಿರುವ; ಪ್ರಸಕ್ತ; ಪ್ರಸ್ತುತ (No excuse in the p. case. The p. volume ಪ್ರಸಕ್ತ ಗ್ರಂಥ. The p. writer could not verify this. P. to the mind, the imagination ಮನಸ್ಸಿಗೆ, ಭಾವನೆಗೆ,—ಹೊಳೆದು, ನೆನಪಾಗಿ). (ಪ್ರಾಚೀ. ಪ್ರ.) ಹತ್ತಿರವಿರುವ; ಹತ್ತಿರ ಸಿದ್ಧವಾಗಿರುವ; ನೆರವಾಗಿ ಬಂದಿರುವ; ಅನುಕೂಲವಾದ (A very p. help in trouble). ಈಗ, —ಇರುವ, ರೂಢಿಯಲ್ಲಿರುವ, ನಡೆಯುತ್ತಿರುವ; ಈಗಿನ [The p. Duke of York. In the p. fashion. P. worth ತಾತ್ಕಾಲಿಕ ಮೌಲ್ಯ. P. tense (ವ್ಯಾ.) ವರ್ತಮಾನ ಕಾಲ]. (ನಾ.) (೧) ನಡೆಯುತ್ತಿರುವ, ವರ್ತಮಾನ, —ಕಾಲ (The p.). [At p. ಈಗ; ಸದ್ಯಕ್ಕೆ; ಪ್ರಕೃತದಲ್ಲಿ (Do not want any more at p. Is at p. in Egypt). For the p. ಈಗ್ಗೆ; ಸದ್ಯಕ್ಕೆ; ತಾತ್ಕಾಲಿಕವಾಗಿ (That will do for the p.)]. =P. tense. [(Know all men) by these presents (ನ್ಯಾ. ಶಾ. ಅಥವಾ ಹಾಸ್ಯ ಪ್ರ.) ಈ ದಸ್ತೈವಜಿನಿಂದ (ಎಲ್ಲರೂ ತಿಳಿದುಕೊಳ್ಳಿರಿ)]. (೨) ಬಹುಮಾನ; ಇನಾಮು; ಪಾರಿತೋಷಿಕ [Make a p. of (—ಗೆ) ಬಹುಮಾನವಾಗಿ ಕೊಡು (*To* person)]. **Presént**[2] ಪ್ರಿ— (ಕ್ರಿ., ನಾ.) (ಒಬ್ಬನನ್ನು ಮತ್ತೊಬ್ಬನಿಗೆ, ಮು., ಆಸ್ಥಾನದಲ್ಲಿ, ಒಬ್ಬನನ್ನು) ದೊರೆಗೆ ಭೇಟಿ, ಪರಿಚಯ, ಮಾಡಿಸು; ದೊರೆ, ಮೊ. ರ ಸಂದರ್ಶನ ಮಾಡಿಸು. [P. oneself. (ಮು., ಪರೀಕ್ಷೆ, ಮೊ. ಕ್ಕೆ ಅಭ್ಯರ್ಥಿಯಾಗಿ) ಹಾಜರಾಗು, ಬಂದು ಕಾಣಿಸಿಕೊ]. (ನಾಟಕ ಶಾಲೆಯ ಯಜಮಾನ, ನಟನನ್ನು) ನಾಟಕದಲ್ಲಿ ಭಾಗ ವಹಿಸುವಂತೆ ಮಾಡು; (ನಾಟಕ) ಪ್ರದರ್ಶಿಸು, ಆಡು. ದತ್ತಿಗೆ ಯೋಗ್ಯನೆಂದು (ಪಾದ್ರಿಯನ್ನು) ಬಿಷಪ್ಪಿಗೆ ಶಿಫಾರಸು ಮಾಡು (*To* benefice). (—ನ್ನು) ತೋರಿಸು, ಕಾಣಿಸು (P. a ragged appearance. Cases that p. some difficulty). (ಸ್ವಾನ್ಯ) (ಬಂದೂಕನ್ನು) ಗುರಿಯಿಟ್ಟು ಹಿಡಿದುಕೊ; ವಂದನಾರ್ಪಣೆಗಾಗಿ ಬಂದೂಕು, ಮೊ. ನ್ನು ಮರ್ಯಾದೆಯ ನಿಲವಿನಲ್ಲಿ ಹಿಡಿದುಕೊ (=P. arms). (ಭಾವ, ಮೊ. ದು ತಾನಾಗಿ) ಹೊಳೆ, ತೋರು, ತರೆದೋರು. (ನ್ಯಾ. ಶಾ.) (ಅಪಾದನೆಯನ್ನು, ಅಪರಾಧವನ್ನು) ವಿಧಾಯಕ ಕ್ರಮದಲ್ಲಿ ಅಧಿಕಾರಿಯ ಗಮನಕ್ಕೆ ತರು, ಒಪ್ಪಿಸು; (ಅರ್ಜಿ, ಮೊ. ನ್ನು) ಒಪ್ಪಿಸು, ಹಾಜರು ಮಾಡು (*To* ಉಪ. ದೊಡನೆ). (ಒಂದನ್ನು, ಒಬ್ಬನಿಗೆ) ಬಹುಮಾನವಾಗಿ ನೀಡು, ಕೊಡು. (ಒಬ್ಬನಿಗೆ ಅಭಿನಂದನೆ, ಗೌರವ) ಒಪ್ಪಿಸು. (ಹುಂಡಿ, ಮೊ. ನ್ನು) ಒಬ್ಬನಿಗೆ ಒಪ್ಪಿಕೆಗಾಗಿ ಕೊಡು; (ದಸ್ತೈವಜು, ಅರ್ಜಿ, ಮೊ. ನ್ನು) ತಕ್ಕ ಕಾರ್ಯಾಚರಣೆಗಾಗಿ ಒಪ್ಪಿಸು. (*P.* person *with* thing ಒಂದು ವಸ್ತುವನ್ನು ಒಬ್ಬನಿಗೆ ಬಹುಮಾನವಾಗಿ ಕೊಡು). (ನಾ.) (ಮು., ಬಂದೂಕನ್ನು) ಗುರಿಯಿಟ್ಟು ಹಿಡಿದುಕೊಳ್ಳುವುದು; ಗುರಿಯಿಟ್ಟು ಹಿಡಿದ ಬಂದೂಕಿನ ನಿಲವು; P. arms ಎಂಬ ವಂದನಾರ್ಪಣೆಯ ನಿಲವು. **Preséntable** (ಗು.) ನೋಟಕ್ಕೆ ಚೆನ್ನಾಗಿರುವ, ಅಂದವಾದ. ಗೋಷ್ಠಿಗೆ ಪ್ರವೇಶ ಪಡೆಯಲು ಅಥವಾ ಸೇರಲು ಯೋಗ್ಯತೆಯುಳ್ಳ. ಬಹುಮಾನವಾಗಿ ಕೊಡಲು ತಕ್ಕ. **Preséntably** (ಕ್ರಿ. ವಿ.); **Presentabílity** (ನಾ.); **Presentátion** ಪ್ರೆ— (ನಾ.) ಒಪ್ಪಿಸುವುದು; ಅರ್ಪಣೆ (P. copy of book ಗೌರವಾರ್ಥವಾಗಿ ಒಪ್ಪಿಸಿದ ಪುಸ್ತಕದ ಪ್ರತಿ; ಉಚಿತ ಪ್ರತಿ). (ನಾಟಕ, ಮೊ. ಗಳ) ಪ್ರದರ್ಶನ. (ಮು., ಆಸ್ಥಾನದಲ್ಲಿ) ವಿಧಿ ವಿಹಿತವಾಗಿ ರಾಜಭೇಟಿ ಮಾಡಿಸುವುದು. ಪ್ರತಿಪಾದನೆ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿರೂಪಣೆ (P. of a subject, etc.). **Presentátional** (ಗು.) ; **Presentátionism** (ನಾ.) (ತ. ಶಾ.) ವಿಷಯ ಗ್ರಹಣದಲ್ಲಿ ಮನಸ್ಸಿಗೆ ಪದಾರ್ಥದ ನೇರವಾದ ಜ್ಞಾನವಾಗುತ್ತದೆ ಎಂಬ ವಾದ ; ವಸ್ತು ಪ್ರತ್ಯಕ್ಷತಾ ವಾದ. **Presentátion(al)ist** (ನಾ.) ; **Preséntative** ಪ್ರಿ— (ಗು.) (ಕ್ರೈಸ್ತ ಮತದ ದತ್ತಿಯ ವಿಷಯವಾಗಿ) ದಾತೃವಿಗೆ (ಅದನ್ನು) ದಾನಮಾಡುವ ಹಕ್ಕಿರುವ. **Presenteé** ಪ್ರೆಸೆಂಟೀ (ನಾ.) ದತ್ತಿಗೆ ಶಿಫಾರಸಾದ, ದತ್ತಿಯನ್ನು ಪಡೆಯಲುಳ್ಳ, —ಪಾದ್ರಿ. ಒಂದು ಅಧಿಕಾರಕ್ಕೆ, ಹುದ್ದೆಗೆ, ಶಿಫಾರಸಾದವನು. ಆಸ್ಥಾನದಲ್ಲಿ ದೊರೆಗೆ ಭೇಟಿಯಾದವನು. ಬಹುಮಾನ ಪಡೆದವನು. **Preséntive** ಪ್ರಿ— (ಗು.) (ಪದ) ಮನಸ್ಸಿಗೆ ನೇರವಾಗಿ ವಸ್ತು ಸಾಕ್ಷಾತ್ಕಾರ ಮಾಡುವ (Symbolic ಎಂಬುದಕ್ಕೆ ಎದುರು ಪದ). **Présently** ಪ್ರೆ— (ಕ್ರಿ. ವಿ.) ಒಡನೆಯೆ ; ಇಷ್ಟರಲ್ಲೆ ; ಕೂಡಲೆ ; ಬೇಗನೆ. (ಪ್ರಾಚೀ. ಪ್ರ.) ನೇರವಾದ ಫಲವಾಗಿ ; ಅವಶ್ಯಕವಾಗಿ (It does not p. follow that he knew). **Preséntment** ಪ್ರಿ— (ನಾ.) (ನ್ಯಾ. ಶಾ.) ತಮಗೆ ತಿಳಿದಿರುವ ಸಂಗತಿಗಳನ್ನು ಕುರಿತು ನ್ಯಾಯದರ್ಶಿಗಳು (Jury) ಪ್ರಮಾಣ ಪೂರ್ವಕವಾಗಿ ಕೊಟ್ಟ ಹೇಳಿಕೆ. ಬಿಷಪ್ಪಾಗಲಿ ಆರ್ಚ್‌ಡೀಕನ್ನಾಗಲಿ ಒಂದು ಕ್ರೈಸ್ತ ಪ್ರಾಂತಕ್ಕೆ ಭೇಟಿಕೊಟ್ಟಾಗ, ಆ ಪ್ರಾಂತಾಧಿಕಾರಿಗಳು ಆತನಲ್ಲಿ ಸಲ್ಲಿಸಿದ ನಿಯಮಾನುಸಾರವಾದ ಫಿರ್ಯಾದು. ನಾಟಕ ಪ್ರದರ್ಶನ. ನಿರೂಪಣ ; ರೇಖನ ; ಚಿತ್ರಣ ; ತಸ್ವೀರು ; ಪ್ರತಿ ಕೃತಿ ; ಪ್ರತಿಮೆ. ಹೇಳಿಕೆ, ವರ್ಣನೆ (*Of* ಉಪ. ದೊಡನೆ). ಮನಸ್ಸಿಗೆ ಪ್ರತ್ಯಕ್ಷ ಮಾಡುವ ಕಾರ್ಯ, ವಿಧಾನ.

Présent, Presentátion, Presentátionism, etc. **Presence** ನೋಡಿ.

Preséntient ಪ್ರಿಸೆನ್‌ಷಿಯೆಂಟ್, ಪ್ರಿಸೆನ್‌ಷೆಂಟ್ (ಗು.) ಸಂಭವಿಸುವುದಕ್ಕೆ ಮೊದಲೇ ಭಾವಿಸಿಕೊಳ್ಳುವ, ಸುಳಿವು ಹಿಡಿಯುವ, ಭಯಪಡುವ ; ಮುಂದೆ ಸಂಭವಿಸಬಹುದೆಂಬ ಭಯ ತೋರುವ ; ಮುನ್‌ಶಂಕೆಯುಳ್ಳ (*Of* ಉಪ. ದೊಡನೆ)

Preséntiment ಪ್ರಿಸ್ಸ(ಸೆ)ಂಟಿಮೆಂಟ್ (ನಾ.) (ಮುಂದೆ ಬರುವ ಘಟನೆ, ಮೊ. ಗಳ, ಮು., ಕೇಡಿನ) ಅನಿಶ್ಚಿತ ನಿರೀಕ್ಷೆ ; ಪೂರ್ವ ಶಂಕೆ ; ಮುನ್ನಳುಕು (*Of* ಉಪ. ದೊಡನೆ)

Preséntment. **Presence** ನೋಡಿ.

Preservátion, Presérvative. **Preserve²** ನೋಡಿ.

Presérve¹ ಪ್ರಿಸರ್ವ್ (ನಾ.) ಮುರಬ್ಬ. ಬೇಟೆಯ ಮೃಗಗಳ ರಕ್ಷಣ ಪ್ರದೇಶ (ಅನೇಕ ವೇಳೆ ರೂಪ.). ಮೀನು ಸಾಕುವ ನೀರು (ಪಾತ್ರೆ, ಕೊಳ, ಮೊ. ದು). (ಬ. ವ. ದಲ್ಲಿ) ದೂಳು ಕನ್ನಡಕ.

Presérve² (ಕ್ರಿ. ಸಕ.) ಪ್ರಿಸರ್ವ್ (ಹಾನಿ, ಮೊ. ತಟ್ಟದಂತೆ) ಸುರಕ್ಷಿತವಾಗಿಡು ; ಕಾಪಾಡು ; ರಕ್ಷಿಸು ; ಜೋಪಾನಮಾಡು (*From* ಉಪ. ದೊಡನೆ). (ಹೆಸರು, ನೆನಪು, ಮೊ. ನ್ನು) ಅಳಿಯದಂತೆ, ಜೀವಂತವಾಗಿ, —ಇಡು ; ಉಳಿಸು. (ಒಂದರ ಸ್ಥಿತಿಗತಿಯನ್ನು) ಕುಂದದಂತೆ ರಕ್ಷಿಸು, ಪಾಲಿಸು. (ಗುಣ, ಸ್ಥಿತಿ) ಉಳಿಸು, ಉಳಿಸಿಕೊ. ಸಕ್ಕರೆಯ ಪಾಕದಲ್ಲಿ ಕುದಿಸಿ, ಅಥವಾ ಉಪ್ಪೂರಿಸಿ, ಮೊ. ಗಿ (ಹಣ್ಣು, ಮಾಂಸ, ಮೊ. ನ್ನು) ಕೊಳೆಯದಂತೆ, ಕೆಡದಂತೆ, ಇಡು ; ಊರಿಡು ; ಮುರಬ್ಬ ಮಾಡಿಡು ; ಉಪ್ಪಿನಕಾಯಿ ಹಾಕಿಡು ; ರಾಸಾಯನಿಕ ಪ್ರಕ್ರಿಯೆ, ಮೊ. ಗಳಿಂದ (ಪದಾರ್ಥ) ಕೊಳೆಯದಂತೆ, ಕೆಡದಂತೆ, ಇಡು. (ಬೇಟೆ, ಬೇಟೆಯ ವನ, ನದಿ, ಮೊ. ನ್ನು ಮತ್ತೊಬ್ಬರು ಕೈಹಾಕದಂತೆ) ಸ್ವಂತ ಉಪಯೋಗಕ್ಕಾಗಿ ಕಾದಿಡು. [Well preserved (ಮುದುಕರ ವಿಷಯದಲ್ಲಿ) ಮುಪ್ಪಿನ ಲಕ್ಷಣಗಳನ್ನು ಸ್ವಲ್ಪವೂ ತೋರದ, ಗಟ್ಟಿಮುಟ್ಟಾಗಿರುವ]. **Presérvable** (ಗು.) ; **Preserver** (ನಾ.); **Preservátion** ಪ್ರೆಸರ್ವೇಷನ್ (ನಾ.) (ಕ್ರಿಯಾರ್ಥಗಳಲ್ಲಿ). ಒಳ್ಳೆಯ (ಅಥವಾ ನೆಟ್ಟಗಿಲ್ಲದ) ಬಾಳಿಕೆಯ ಸ್ಥಿತಿ [In an excellent state of p. ಉತ್ತಮವಾದ ಸುರಕ್ಷಿತ ಸ್ಥಿತಿಯಲ್ಲಿ. In (a state of) fair p. ಸಾಮಾನ್ಯ ರಕ್ಷಿತ—]. **Presérvative** ಪ್ರಿಸರ್ವಟಿವ್ (ಗು., ನಾ.) ಕೆಡದಂತೆ ಇಡಲು ಉಪಯೋಗಿಸುವ (ಗಂಧಿಗೆ ವಸ್ತು, ಪ್ರಕ್ರಿಯೆ, ಮೊ. ದು) ; ರಕ್ಷಕ ; ಕೊಳೆಯುವ ಅಥವಾ ಮುಗ್ಗಿ ಹೋಗುವ ಆಹಾರ ಪದಾರ್ಥಗಳನ್ನು ಕೆಡದಂತಿಡಲು ಉಪಯೋಗಿಸುವ ರಾಸಾಯನಿಕ ಪದಾರ್ಥ. **Presérvatize** (ಕ್ರಿ. ಸಕ.) (ಆಹಾರ ಪದಾರ್ಥ ಕೆಡದಂತೆ) ರಕ್ಷಕ ವಸ್ತುವಿನಿಂದ ಸಂಸ್ಕರಿಸು.

Preside ಪ್ರಿಸೈಡ್ (ಕ್ರಿ. ಅಕ.) (ಸಭೆ, ಗೋಷ್ಠಿ, ಮೊ. ಗಳಲ್ಲಿ) ಅಧ್ಯಕ್ಷತೆ, ಅಗ್ರಾಸನ, —ವಹಿಸು ; ಸಭಾಪತಿಯಾಗಿರು (*Over* ಉಪ. ದೊಡನೆ) ; (ಭೋಜನ ಕೂಟದಲ್ಲಿ) ಅಗ್ರ ಪೀಠದಲ್ಲಿ ಕುಳಿತುಕೊ. ಅಧೀನದಲ್ಲಿಟ್ಟುಕೊ ; ಆಧಿಪತ್ಯ ನಡಸು (ಅನೇಕ ವೇಳೆ ರೂಪ.). P. at the organ, piano —ಬಾಜಿಸುವ ಕಾರ್ಯ ವಹಿಸು. **Présidency** ಪ್ರೆಸಿಡೆನ್ಸಿ (ನಾ.) ಅಧ್ಯಕ್ಷನ ಅಧಿಕಾರ, ಅಧಿಕಾರಾವಧಿ ; ಅಧ್ಯಕ್ಷನ ಆಡಳಿತ, ಆಧಿಪತ್ಯ ; ಅಧ್ಯಕ್ಷತೆ ; ಪ್ರಾಂತ. **Président** (ನಾ.) (ಸಭೆ, ಸಂಘ, ಮೊ. ಗಳ) ಅಧ್ಯಕ್ಷ, ಅಗ್ರಾಸನಾಧಿಪತಿ ; (ಕೆಲವು ಪ್ರೌಢ ವಿದ್ಯಾಶಾಲೆಗಳಲ್ಲಿ) ಮುಖ್ಯಾಧಿಕಾರಿ, ಅಧ್ಯಕ್ಷ ; ಮಂತ್ರಾಲೋಚನಾ ಸಭೆಯ, ಆಡಳಿತ ಮಂಡಲಿಯ, (ಅಮೆ. ಸಂ.) ಬ್ಯಾಂಕಿನ ಅಥವಾ ವ್ಯಾಪಾರ ಸಂಸ್ಥೆಯ, —ಕಾರ್ಯಾಧ್ಯಕ್ಷ, ಸಭಾಧ್ಯಕ್ಷ [P. of the Board of Agriculture, Trade, etc. ; Lord P. of the Council (ಇಂಗ್ಲೆಂಡಿನಲ್ಲಿ) ರಾಜನ ಆಪ್ತ ಮಂಡಲಿಯ ಅಧ್ಯಕ್ಷ]. (ಅಮೆ. ಸಂ., ಮೊ. ಆಧುನಿಕ ಪ್ರಜಾಪ್ರಭುತ್ವಗಳಲ್ಲಿ) ಚುನಾಯಿತ, ನಿಯೋಜಿತ, —ರಾಷ್ಟ್ರಾಧ್ಯಕ್ಷ. (ಚರಿತ್ರೆ) ಪ್ರಾಂತಾಧಿಕಾರಿ ; ಮಾಂಡಳಿಕ ; ನೆಲಸು ನಾಡಿನ ಮುಖ್ಯಾಧಿಕಾರಿ. **Presidéntial** (ಗು.) ; **Presidéntially** (ಕ್ರಿ. ವಿ.) ; **Présidentship** (ನಾ.) ; **Présidentess** (ನಾ., ಸ್ತ್ರೀ.) ಅಧ್ಯಕ್ಷಿಣಿ ; ಅಧ್ಯಕ್ಷನ ಹೆಂಡತಿ.

Presídiary ಪ್ರಿಸಿಡಿಯರಿ (ಗು.) (ದುರ್ಗ)ರಕ್ಷಕ ಸೈನ್ಯದ ; —ವುಳ್ಳ ; —ವಾಗಿ ವರ್ತಿಸುವ.

Presídio (Spanish) ಪ್ರಿಸಿಡಿಯೊ (ನಾ.) (ಸ್ಪೇಯ್ನ್ ಮತ್ತು ಸ್ಪ್ಯಾನಿಷ್ ಅಮೇರಿಕದಲ್ಲಿ) ಕೋಟೆ ; ದುರ್ಗ ; (ದುರ್ಗ)ರಕ್ಷಕ ಸೈನ್ಯವಿರುವ ಪಟ್ಟಣ.

Press¹ ಪ್ರೆಸ್ (ನಾ.). ಗುಂಪುಕೂಡುವುದು ; ದಟ್ಟಣೆ ; ಕಿಕ್ಕಿರಿತ ; (ಜನ, ಮೊ.) ಸಂದಣಿ, ಜಂಗುಳಿ ; ಕಾಳಗದಲ್ಲಿ ನೂಕುನುಗ್ಗಲು ; ನಜ್ಜುಗುಜ್ಜು. (ಕಾರ್ಯಕಲಾಪಗಳ) ಒತ್ತಡ, ಅವಸರ, ಆತುರ (The p. of modern life) ; ಒತ್ತುವುದು (Give it a slight p.). [(ನಾವೆ) P. of sail, canvas ಗಾಳಿ, ಮೊ. ಗಳ ಪರಿಸ್ಥಿತಿಯಲ್ಲಿ ಹರಡಬಹುದಾದಷ್ಟು ಪಟ, ಪಟದ ಬಟ್ಟೆ]. (ಬಟ್ಟೆ, ಪುಸ್ತಕ, ಮೊ. ನ್ನಿಡುವ, ಸಾ., ಗೋಡೆಯಲ್ಲಿ ಮಾಡಿದ) ಖಾನೆಗಳುಳ್ಳ ದೊಡ್ಡ ಮಾಡ, ಅಲಮಾರು. ಒತ್ತಿ ಅಡಕ ಮಾಡುವ, ಚಪ್ಪಟೆ ಮಾಡುವ, ಒಂದು ಆಕಾರ ಕೊಡುವ, ಯಂತ್ರ ಸಲಕರಣೆ : ಒತ್ತು ಯಂತ್ರ ; ರಸ ಹಿಂಡುವ ಯಂತ್ರ ; ಗಾಣ. ಮುದ್ರಣ ಯಂತ್ರ ; ಅಚ್ಚು (=Printing-p.) ; ಮುದ್ರಣಾಲಯ ; ಮುದ್ರಣ ಇಲಾಖೆಯ ಸಿಬ್ಬಂದಿ ; ಮುದ್ರಣ ಕಲೆ, —ವೃತ್ತಿ (The p.) ; [In the p. ಅಚ್ಚಿನಲ್ಲಿ, ಮುದ್ರಣದಲ್ಲಿ. Send, go, come, to (the) p. ಮುದ್ರಣ ಕಾರ್ಯಕ್ಕಾಗಿ—. Correct the p. ಅಚ್ಚಿನ ತಪ್ಪುಗಳನ್ನು ತಿದ್ದು. Freedom of the p. ಅಚ್ಚಿನ ಸ್ವಾತಂತ್ರ್ಯ ; ಪ್ರಕಟನ ಸ್ವಾತಂತ್ರ್ಯ ; ಪತ್ರಿಕಾ ಸ್ವಾತಂತ್ರ್ಯ]. ವೃತ್ತಪತ್ರಿಕಾ ಲೋಕ (The p.) [Favourably noticed by the p. ವೃತ್ತಪತ್ರಿಕೆಗಳು ಅನುಕೂಲವಾಗಿ ಟೀಕೆ ಮಾಡಿವೆ. Have a good p. ವೃತ್ತಪತ್ರಿಕೆಗಳಲ್ಲಿ ಒಳ್ಳೆಯ ಅಭಿಪ್ರಾಯ ಪಡೆ. The gutter, yellow, p. (ಆಯಾ ಪದವನ್ನು ನೋಡಿ). **P. campaign** (ವೃತ್ತಪತ್ರಿಕೆಗಳಲ್ಲಿ ಪತ್ರಗಳನ್ನು, ಲೇಖನಗಳನ್ನು, ಪ್ರಕಟಿಸುವುದರ ಮೂಲಕ ರಾಜಕೀಯ ಅಥವಾ ಇತರ ಗುರಿಗಳ ಬಗ್ಗೆ) ಪತ್ರಿಕಾ ಚಳವಳಿ]. (ವೃತ್ತಪತ್ರಿಕೆಯ ಹೆಸರಾಗಿ : Liverpool P.). **P.-box** (ಕ್ರಿಕೆಟ್, ಮೊ. ಆಟಗಳಲ್ಲಿ) ವೃತ್ತಪತ್ರಿಕೆಯ ವರದಿಗಾರರಿಗಾಗಿ ಮಾಡಿರುವ ಸ್ಥಳ. **P. cutting** [Cut (ಕ್ರಿ.) ನೋಡಿ].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

P.-gallery (ಮು., House of Commons ಶಾಸನಸಭೆಯಲ್ಲಿ) ವೃತ್ತ ಪತ್ರಿಕೆಗಳ ವರದಿಗಾರರ ಪೀಠಪಂಕ್ತಿ. **Préssman** ಪತ್ರಿಕೋದ್ಯೋಗಿ; ಮುದ್ರಣಯಂತ್ರ ಚಾಲಕ. **P.-mark** ಪುಸ್ತಕ ಭಂಡಾರದಲ್ಲಿ ಒಂದು ಪುಸ್ತಕದಸ್ಥಾನವನ್ನು ತೋರಿಸುವ ಪುಸ್ತಕದಮೇಲಿನ ಗುರುತು, ಅಂಕಿ.

Press (ಕ್ರಿ.) (ಸಂಪರ್ಕದಲ್ಲಿರುವ ವಸ್ತುವನ್ನು) ಒತ್ತು, ಅದುಮು, ಅಮುಕು [Let a heavy weight p. it. P. it under *or* with a stone. P. the button ಗುಂಡಿ ಅದುಮಿ ವಿದ್ಯುದ್ಯಂತ್ರ ವನ್ನು ನಡಸು; (ರೂಪ.) ಕಾರ್ಯಾರಂಭ ಮಾಡು]. (ಪ್ರೀತಿ, ಮೊ. ಗಳ ಸೂಚನೆಯಾಗಿ) ಒತ್ತು, ಅವಚಿಕೊ, ಅಪ್ಪು (He pressed my hand. He pressed her to his side). (ಮೇಲಕ್ಕೆ, ಕೆಳಕ್ಕೆ, ಮೇರೆ) ಒತ್ತು, ನೂಕು (*Up, down, against,* ಮೊ. ಉಪ. ಮೊಡನೆ). ಒತ್ತಡ ಹಾಕು; ಭಾರ ಹೇರು; ಬಲವಾಗಿ ಒತ್ತು (*On, against,* ಮೊ. ಉಪ. ಮೊಡನೆ). (ರಸ, ಮೊ. ನ್ನು) ಹಿಂಡು (*Out of, from,* ಮೊ. ಉಪ. ಮೊಡನೆ). (ಚಪ್ಪಟೆ ಮಾಡಲು, ಆಕಾರ ಕೊಡಲು, ಸುಕ್ಕು ಕಳೆದು ಸಮಮಾಡಲು, ಮೊ. ಗಿ) ಬಲವಾಗಿ ಒತ್ತಿಕ್ಕು, ಅದುಮು (Pressed beef). (ಶತ್ರು, ದಾಳಿಯಿಡುವ ಸೈನ್ಯ, ಮೊ. ರ ವಿಷಯದಲ್ಲಿ) ಬಲವಾಗಿ ಒತ್ತರಿಸಿಕೊಂಡು ಬರು, ಮೇಲೊತ್ತಿ ಬರು (ಮು., ಭೂ. ಕೃ. ನಲ್ಲಿ: Hard pressed). (ಭಾವ, ಮನಸ್ಸು, ಉತ್ಸಾಹ, ಮೊ. ನ್ನು) ಕುಗ್ಗಿಸು, ಪೀಡಿಸು; [(ಕರ್ಮಣಿ) Am pressed for space, time, funds (ಸಾಕಷ್ಟು) ಸ್ಥಳ, ಕಾಲ, ಹಣ, —ಇಲ್ಲದೆ ಒದ್ದಾಡುತ್ತಿದ್ದೇನೆ]. (ಮನಸ್ಸಿನಮೇಲೆ, ವ್ಯಕ್ತಿಯಮೇಲೆ) ಬಲವಾಗಿ ಅಚ್ಚೊತ್ತು. ಜರೂರಾಗಿರು; ತುರ್ತಾಗಿರು; ಕೂಡಲೆ ಕಾರ್ಯ ಕೈಕೊಳ್ಳಬೇಕಾಗಿರು (Time presses). ಬಲವಂತ ಮಾಡು; ಒತ್ತಾಯ ಪಡಿಸು; ಬೇಡಿಕೊ (Person *to* do, *for* answer, etc.). (ಮಾತುಗಳಿಗೆ, ರೂಪಕಕ್ಕೆ) ನಿಷ್ಕೃಷ್ಟ ವಾಚ್ಯಾರ್ಥ ಕೊಡುವಂತೆ ನಿರ್ಬಂಧಿಸು. (ಒಂದು ಮಾರ್ಗವನ್ನು, ಅಭಿಪ್ರಾಯವನ್ನು, ಒಬ್ಬನಮೇಲೆ) ಒತ್ತಾಯ ಮಾಡು (*Upon* ಉಪ. ಮೊಡನೆ). (ಕೊಡುಗೆ, ದಾನ, ಮೊ. ವನ್ನು, ಒಬ್ಬನಿಗೆ) ಬಲವಂತಮಾಡಿ ಕೊಡು (*Upon* ಉಪ. ಮೊಡನೆ). ಗುಂಪುಕೂಡು; ಸಂದಣಿಸು; ಕಿಕ್ಕಿರಿ (*Up, round,* ಮೊ. ಉಪ. ಮೊಡನೆ). ಅವಸರಪಟ್ಟು, ಒತ್ತರಿಸಿಕೊಂಡು, ಹೋಗು (*On, forward,* ಮೊ. ಉಪ. ಮೊಡನೆ). **Préssing** (ಗು.) (ಕ್ರಿಯಾರ್ಥಗಳಲ್ಲಿ). ಜರೂರಾದ, ತುರ್ತಾದ, ಅವಸರದ, ಕೂಡಲೆ ಗಮನಿಸಬೇಕಾದ (P. need, danger). ಬಲವಂತದ; ನಿರ್ಬಂಧದ; ಒತ್ತಾಯದ (A p. invitation. Since you are so p.). **Préssingly** (ಕ್ರಿ. ವಿ.); **Préssure** ಪ್ರೆಷರ್[6] (ನಾ.) ಅವಿಚ್ಛಿನ್ನವಾದ ಬಲ ಪ್ರಯೋಗ; (ಎಡೆಬಿಡದ) ಒತ್ತರ; ಒತ್ತಡದ ಬಲ. (ಒಂದು ಏಕ ಮಾನದ ಚದರ ಕ್ಷೇತ್ರದಮೇಲಿನ) ಒತ್ತಡದ— ಮೊತ್ತ, ಪರಿಮಾಣ [ಉದಾ., Atmospheres (Atmosphere ನೋಡಿ). High, low, p. (ವಾಯುಭಾರ ಮಾಪಕದಲ್ಲಿ ಪಾದರಸವನ್ನು ಮೇಲಕ್ಕೇರಿಸುವ, ಕೆಳಕ್ಕಿಳಿಸುವ, ಸ್ಥಳೀಯ ವಾಯುಭಾರ ಸ್ಥಿತಿ): ಹೆಚ್ಚು, ಕಡಮೆಯ, ವಾಯುಭಾರ (ಸ್ಥಿತಿ)]. [Blood-p. (ರೋಗ ಸ್ಥಿತಿಯ ನಿರ್ಣಯಕ್ಕೆ ಸಹಾಯವಾಗಿ ಅಳತೆ ಮಾಡುವ ರಕ್ತನಾಳದಲ್ಲಿಯ) ರಕ್ತದ ಒತ್ತಡ]. ಮನೋವ್ಯಥೆ; ಮನೋಭಾರ; ಪೇಚಾಟ; ಕಿರಿಕಿರಿ (Financial p.). ಜರೂರಾತಿ, ತುರ್ತು (Wrote hastily & under p.). ಒತ್ತಾಯ; ಬಲಾತ್ಕಾರ; ಒತ್ತರ (P. must be brought to bear upon him). [High p. (ಹಿಂದೆ) ವಾಯು ಮಂಡಲದ ಒತ್ತಡಕ್ಕಿಂತ ಹೆಚ್ಚಾದ ಒತ್ತಡ; (ಈಗ ಅನಿರ್ದಿಷ್ಟ ಪ್ರ.; ಮು., ಸಂಯುಕ್ತ ಎಂಜಿನುಗಳ ಬೇರೆ ಬೇರೆ ನಾಳಿಕೆಗಳಲ್ಲಿ ನೀರಿನ ಹಬೆಯನ್ನು ಬೇರೆ ಬೇರೆ ಒತ್ತಡದ ಪ್ರಮಾಣಗಳಲ್ಲಿ ಉಪಯೋಗಿಸುವ ಪದ್ಧತಿಯ ಸಂಬಂಧದಲ್ಲಿ). (ಹೀಗೆಯೇ Low p.)]. (ರೂಪ.) (ಕಾರ್ಯದ ಚಟುವಟಿಕೆ, ಚಲನ ಗತಿ, ಮೊ. ರ) ಭರ (Working at high p., High-p. work)

Press[2] (ನಾ., ಕ್ರಿ. ಸಕ.) (ಚರಿತ್ರೆ) ನೌಕಾ ಸೈನ್ಯಕ್ಕೆ (ಅಥವಾ ಕೆಲವು ಸಂದರ್ಭಗಳಲ್ಲಿ ಮಾತ್ರ ಭೂ ಸೈನ್ಯಕ್ಕೆ) ಬಲಾತ್ಕಾರದಿಂದ ಸೇರಿಸಿಕೊಳ್ಳುವುದು. (ಒಬ್ಬನನ್ನು) ಸೈನ್ಯದಲ್ಲಿ ಅಥವಾ ನೌಕೆಯಲ್ಲಿ ಕೆಲಸಕ್ಕೆ ಸೇರುವಂತೆ ಬಲಾತ್ಕರಿಸು. [(ರೂಪ.) P. thing into service of (—ರ) ಕೆಲಸಕ್ಕೆ ಬಲವಂತದಿಂದ ಉಪಯೋಗಿಸಿಕೊ]. (ಕುದುರೆ, ದೋಣಿ, ಮೊ. ನ್ನು) ರಾಜನ ಅಥವಾ ಸಾರ್ವಜನಿಕ ಉಪಯೋಗಕ್ಕಾಗಿ ಬಿಟ್ಟಿಹಿಡಿ. **P.-gang** ಸೈನ್ಯಕ್ಕೆ ಬಿಟ್ಟಿ ಹಿಡಿಯಲು ನೇಮಿಸಿದ ಜನ ತಂಡ.

Prestidígitator ಪ್ರೆಸ್ಟಿಡಿಜಿಟೇಟರ್ (ನಾ.) ಆಟಮಟಿಗ; ಗಾರುಡಿಗ; ಇಂದ್ರಜಾಲಿಗ; ಕಣ್ಕಟ್ಟು ಮಾಡುವವನು. **Prestidigitátion** (ನಾ.)

Prestíge ಪ್ರೆಸ್ಟೀಜ಼್, **Préstige** ಪ್ರೆಸ್ಟಿಜ್ (ನಾ.) (ಹಿಂದಿನ ಕಾರ್ಯ ಸಾಧನೆ, ಪ್ರವೃತ್ತಿ, ಮೊ. ಗಳಿಂದ ಗಳಿಸಿದ) ಘನತೆ, ಪ್ರತಿಷ್ಠೆ.

Prestíssimo (It.) ಪ್ರೆಸ್ಟಿಸ್ಸಿಮೊ (ಗು., ಕ್ರಿ. ವಿ., ನಾ.) (ಸಂ.) ಬಹು ದ್ರುತ [ಗತಿ(ಯ ಕೃತಿ)]

Présto[1] (It.) ಪ್ರೆಸ್ಟೊ (ಗು., ಕ್ರಿ. ವಿ., ನಾ.) (ಸಂ.) ದ್ರುತ [ಗತಿ(ಯ ಕೃತಿ)]

Présto[2] ಪ್ರೆಸ್ಟೊ (ಕ್ರಿ. ವಿ., ಗು.) (ಐಂದ್ರಜಾಲಿಕನ ಆಜ್ಞಾ ಸೂಚಕ ಪದ) ಬೇಗ! (Hey p., pass! ಹೇ! ಬೇಗ ಬಾ! ಬೇಗ ನಡೆ!). (ಗು.) ಕ್ಷಣ ಮಾತ್ರದ; ಬೇಗನೆಯ; ಕಣ್ಕಟ್ಟಿನ (ವೇಗದ)

Presúme ಪ್ರಿಸ್ಯೂಮ್ (ಕ್ರಿ.) (—ಮಾಡುವುದಕ್ಕೆ) ಸ್ವಾತಂತ್ರ್ಯ ವಹಿಸು, ಧೈರ್ಯ ಮಾಡು (*To* do). ಅಂಗೀಕೃತವೆಂದು, ಸಿದ್ಧವೆಂದು, ಪ್ರಮಾಣವೆಂದು, —ಇಟ್ಟುಕೊ, ಎಣಿಸಿಕೊ (I p. this decision to be final). P. (up)on (ಒಬ್ಬನ ಒಳ್ಳೆಯತನ, ಅವನೊಡನಿರುವ ಪರಿಚಯ, ಸ್ನೇಹ, ಮೊ. ನ್ನು) ದುರುಪಯೋಗ ಪಡಿಸಿಕೊ, (ಯುಕ್ತಾಯುಕ್ತ ವಿವೇಚನ ಮಾಡದೆ) ಸ್ವಪ್ರಯೋಜನಕ್ಕೆ ಉಪಯೋಗಿಸಿಕೊ. **Presúmable** (ಗು.); **Presúmably** (ಕ್ರಿ. ವಿ.); **Presúmedly** (ಕ್ರಿ. ವಿ.); **Presúmingly** (ಕ್ರಿ. ವಿ.); **Presúmption** ಪ್ರಿಸಂ(ಪ್)ಷನ್ (ನಾ.) ದುರಹಂಕಾರ; ಸೊಕ್ಕು; ಹಮ್ಮು; ಆತ್ಮ ವಿಶ್ವಾಸ; ಧಾರ್ಷ್ಟ್ಯ. (ಒಪ್ಪಿಗೆಯಾದಂತೆಯೇ ಭಾವಿಸಿ) ಇಟ್ಟುಕೊಳ್ಳುವುದು; ಇಂತಹ ಪೂರ್ವ ಭಾವನೆ (This was a mere p. ಇದು ಬರಿಯ ಪೂರ್ವ ಭಾವನೆ. The p. is that he had lost it ಅವನು ಅದನ್ನು ಕಳೆದುಕೊಂಡಿದ್ದ ನೆಂದೇ ಎಣಿಸಿಕೊಳ್ಳಬೇಕು). ಎಣಿಕೆಗೆ ಆಧಾರ (There is a strong p. against its truth). (ನ್ಯಾ. ಶಾ.) P. of fact ವಸ್ತು ಸಂಗತಿಯ ಪೂರ್ವ ಭಾವನೆ: ತಿಳಿದ ಸಂಗತಿಗಳಿಂದ (ಮತ್ತೊಂದು) ವಸ್ತು ಸ್ಥಿತಿಯನ್ನು ಅನುಮಿತಿ ಮಾಡುವುದು. P. of law ನ್ಯಾಯ ಸಂಗತಿಯ ಪೂರ್ವ ಭಾವನೆ: (೧) ಒಂದರ ವಾಸ್ತವಾಂಶವನ್ನು, ಅದಕ್ಕೆ ವಿರುದ್ಧವಾದ ನಿದರ್ಶನ ದೊರೆಯುವವರೆಗೂ ಅಂಗೀಕರಿಸುವುದು. (೨) ಕೆಲವು ಪರಿಸ್ಥಿತಿಗಳಿಗೆ ಸಾರ್ವತ್ರಿಕವಾಗಿ ಅನ್ವಯಿಸುವಂತೆ ನ್ಯಾಯ(ಶಾಸ್ತ್ರ) ಸ್ಥಾಪಿತವಾದ ಅನುಮಿತಿ. **Presúmptive** ಪ್ರಿಸಮ್(ಪ್)ಟಿವ್ (ಗು.) ಅನುಮಿತಿಗೆ, ಭಾವನೆಗೆ, —ಆಧಾರ ಕೊಡುವ (P. evidence). Heir p. (ಮೇಲು ಹಕ್ಕಿನ ಉತ್ತರಾಧಿಕಾರಿ ಹುಟ್ಟಿದಲ್ಲಿ ತನ್ನ ಹಕ್ಕು ಕಳೆದುಹೋಗುವ) ಸಂಭಾವ್ಯ ಉತ್ತರಾಧಿಕಾರಿ (Heir apparent ಹೋಲಿಸಿ). **Presúmptively** (ಕ್ರಿ. ವಿ.); **Presúmptuous** (ಗು.) ಮಿತಿಮೀರಿದ ಭರವಸೆಯುಳ್ಳ; ದುರಹಂಕಾರದ; ಧಾರ್ಷ್ಟ್ಯದ; ಮುಂದೆಬಿದ್ದು ಹೋಗುವ. **Presúmptuously** (ಕ್ರಿ. ವಿ.); **Presúmptuousness** (ನಾ.)

Presuppóse ಪ್ರೀಸಪೋಸ್ (ಕ್ರಿ. ಸಕ.) (—ಎಂದು) ಮುಂದೆಯೇ ಭಾವಿಸಿಕೊ; ಮೊದಲೇ (ಭಾವನೆ) ಇಟ್ಟುಕೊ (*That* ಪದದೊಡನೆ). ಪೂರ್ವ ಸೂಚಿತವಾಗು; ಒಳಗೊಳ್ಳು (Effects p. causes ಕಾರ್ಯವೆಂದಮೇಲೆ ಕಾರಣವುಂಟೆಂಬುದು ಪೂರ್ವ ಸಿದ್ಧವಾಗಿಯೇ ಇರುತ್ತದೆ). **Presupposítion** (ನಾ.) ಮುಂಭಾವನೆ; (ವಾದಕ್ಕೆ ಆಧಾರವಾಗಿ ಇಟ್ಟುಕೊಂಡ) ಊಹಾ ಪ್ರತಿಜ್ಞೆ.

Preténce. **Pretend** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Preténd ಪ್ರಿಟೆಂಡ್ (ಕ್ರಿ.) (ಇಲ್ಲದ್ದನ್ನು) ತೋರ್ಪಡಿಸಿಕೊ ; ನಟನೆ ಮಾಡು ; ಸೋಗು ಹಾಕಿಕೊ ; ವೇಷ ತಾಳು (*To* be or do). (Does not p. to be a scholar ವಿದ್ವಾಂಸನೆಂದು ಸೋಗು ಹಾಕಿಕೊಳ್ಳುವುದಿಲ್ಲ. You should p. illness). ಆಟದಲ್ಲಿ ನಟನೆ ಮಾಡು (*To* do, *that*) ; ಸುಳ್ಳಾಗಿ ನಟಿಸು (*That* ಪದದೊಡನೆ) ; (—ಮಾಡಲು) ಮುಂದುವರಿ, ಆಶಿಸು, ಪ್ರಯತ್ನಪಡು, ಪ್ರವೇಶಿಸು (*To* do) ; (ಹಕ್ಕು, ಬಾಧ್ಯತೆ, ಮೊ. ಕ್ಕೆ) ಹಕ್ಕು ಹೂಡು. [P. to (person, person's hand) (ಒಬ್ಬನನ್ನು, ಒಬ್ಬಳನ್ನು) ಮದುವೆಯಾಗಲು, ಒಲಿಸಿಕೊಳ್ಳಲು, ಪ್ರಯತ್ನಪಡು. P. to quality, etc. (ಗುಣ, ಮೊ. ನ್ನು) ಉಳ್ಳಂತೆ ತೋರ್ಪಡಿಸಿಕೊ, ಹೇಳಿಕೊ] . **Preténdedly** (ಕ್ರಿ. ವಿ.) ; **Preténder** (ನಾ.) (ಕ್ರಿಯಾರ್ಥಗಳಲ್ಲಿ) ; ನಿರಾಧಾರವಾದ ಹಕ್ಕು ಹೂಡುವವನು ; ಸುಳ್ಳು ಹಕ್ಕುದಾರ (*To* ಉಪ. ದೊಡನೆ). Old, Young, P. ಬ್ರಿಟಿಷ್ ಸಿಂಹಾಸನಕ್ಕೆ ಹಕ್ಕು ಹೂಡಿದ ಎರಡನೆಯ ಜೇಮ್ಸಿನ ಮಗ, ಮೊಮ್ಮಗ. **Preténdership** (ನಾ.) ; **Preténsion** (ನಾ.) ಹಕ್ಕು ಹೂಡುವುದು (*To* ಉಪ. ದೊಡನೆ ಸಹ) ; ನ್ಯಾಯವಾದ ಹಕ್ಕು, ಯೋಗ್ಯತೆ (*To* thing, *to* be or do) (He has no pretensions to the name. What p. has he ? ಅವನಿಗೆ ಏನು ಯೋಗ್ಯತೆಯಿದೆ ?). ಆಡಂಬರ ; ಡಬಡ್ಡಾಳಿಕೆ. **Preténtious** (ಗು.) (ಮನುಷ್ಯ, ಗ್ರಂಥ, ಭಾಷಣ, ಮೊ. ವು) ಅಧಿಕ ಗುಣವಿದೆಯೆಂದು, ವಿಶೇಷ ಯೋಗ್ಯತೆಯಿರುವುದೆಂದು, ಪ್ರಧಾನವಾದದ್ದೆಂದು, —ಹೇಳಿಕೊಳ್ಳುವ ; ಆಡಂಬರದ. **Preténtiously** (ಕ್ರಿ. ವಿ.) ; **Preténtiousness** (ನಾ.) ; **Preténce** ಪ್ರಿಟೆನ್ಸ್ (ನಾ.) (ಯೋಗ್ಯತೆ, ಗುಣ, ಮೊ. ಕ್ಕೆ ಹೂಡುವ) ಹಕ್ಕು (*To* ಉಪ. ದೊಡನೆ). ಆಡಂಬರ ; ಪ್ರದರ್ಶನ (Devoid of all p.) ; ಉದ್ದೇಶದ ನಟನೆ ; ನೆಪ ; ವ್ಯಾಜ (Under the p. of helping. On the slightest p.). ನೆವನ ; ನಟನೆ.

Preter- ಪ್ರೀಟರ್— (ಸ. ಪೂ. ಪ.) ಮೀರಿದ, ಅತೀತ, ಎಲ್ಲೆ ಮೀರಿದ —ಎಂಬ ಅರ್ಥಗಳಲ್ಲಿ. **-húman** ಅತಿ ಮಾನುಷ. **-nátural** ಪ್ರಕೃತ್ಯತೀತ. **-náturally** (ಕ್ರಿ. ವಿ.); **-sénsual** ಇಂದ್ರಿಯಾತೀತ; ಅತೀಂದ್ರಿಯ.

Préterite, -it ಪ್ರೆಟೆರಿಟ್ (ಗು., ನಾ.) (ವ್ಯಾ.) ಭೂತ ಕಾಲ (=P. tense). [P. present (tense) ಹಿಂದೆ ಭೂತ ಕಾಲಾರ್ಥವಾಗಿದ್ದು ಈಗ ವರ್ತಮಾನಾರ್ಥದಲ್ಲಿ ಪ್ರಯೋಗಿಸುವ ಪದ] . (ಹಾಸ್ಯ ಪ್ರ.) ಹಿಂದಿನ ; ಗತ. **Préteriteness** (ನಾ.)

Preterítion ಪ್ರೀಟರಿಷ(ಷ್)ನ್ (ನಾ.) ಬಿಟ್ಟುಹೋಗುವುದು ; ಗಣನೆಗೆ ತೆಗೆದುಕೊಳ್ಳದಿರುವುದು ; ಅವಗಣನೆ ; ಉಪೇಕ್ಷೆ (*Of* ಉಪ. ದೊಡನೆ). (ದೇವ. ಶಾ.) ದೇವರು ತಾನು ಮೋಕ್ಷಕ್ಕೆ ಆರಿಸಿಕೊಳ್ಳದವರನ್ನು ಕೈಬಿಡುವುದು, ಶಾಶ್ವತ ಮೃತ್ಯುವಿಗೆ (ವಿನಾಶಕ್ಕೆ) ಪಕ್ಕಾಗಿಸುವುದು.

Pretermít ಪ್ರೀಟರ್‌ಮಿಟ್ (ಕ್ರಿ. ಸಕ.) (ಸಂಗತಿ, ಮೊ. ನ್ನು) ಹೇಳದೆ ಬಿಡು ; (ಕೆಲಸವನ್ನು) ಮಾಡದೆ, ನೆರವೇರಿಸದೆ, —ಬಿಡು ; ನಿರ್ಲಕ್ಷಿಸು; (ಸಂಪ್ರದಾಯ, ನಿರಂತರ ಕಾರ್ಯ—ಇವನ್ನು) ಕೊಂಚ ಕಾಲ ಬಿಟ್ಟು ಬಿಡು. (ಅಪ. ಪ್ರ.) ಬಿಟ್ಟುಬಿಡು. **Pretermíssion** (ನಾ.)

Prétext ಪ್ರೀಟೆಕ್ಸ್ಟ್ (ನಾ.), **Pretéxt** ಪ್ರಿ— (ಕ್ರಿ. ಸಕ.) ಇರಬಹುದೆಂದು ತೋರುವ ಕಾರಣ ; ನೆಪ ; ವ್ಯಾಜ ; ಸಬೂಬು (*On* or *under*, or *upon*, *the p. of* or *that*). (ಕ್ರಿ.) ನೆಪ(ವಾಗಿ) ಹೇಳು.

Prétone ಪ್ರೀಟೋನ್ (ನಾ.) ಸ್ವರ ಭಾರವಿರುವ ಉಚ್ಚಾರಾಂಶದ ಹಿಂದಿನ ಉಚ್ಚಾರಾಂಶ, ಸ್ವರ. **Pretónic** —ಟಾ — (ಗು.)

Préttify, etc. **Pretty** ನೋಡಿ.

Prétty ಪ್ರಿಟಿ (ಗು., ಕ್ರಿ. ವಿ.) (ಹೆಂಗಸು, ಮಗು) ಅಂದವಾದ; ಮುದ್ದಾದ. (ಕಣ್ಣು, ಕಿವಿ, ರಸ ಗ್ರಹಣ ಶಕ್ತಿ—ಇವಕ್ಕೆ) ಆಕರ್ಷಕವಾದ ; ಮನೋಹರವಾದ (P. cottage, song, scene, story). (ಆ ಜಾತಿಯದರಲ್ಲಿ) ಅಂದವಾದ, ಉತ್ತಮವಾದ [Has a p. wit. (ವ್ಯಂಗ್ಯವಾಗಿ) A p. mess you have made ಒಳ್ಳೆಯ ಅವ್ಯವಸ್ಥೆ ಮಾಡಿಟ್ಟಿದ್ದೀಯೆ] . (ಪ್ರಾಚೀ. ಪ್ರ.) ಮೊತ್ತದಲ್ಲಿ, ವಿಸ್ತಾರದಲ್ಲಿ, —ಸ್ವಲ್ಪವಲ್ಲದ (Earned a p. sum). [(ಅಧ್ಯಾಹಾರ ಪ್ರ.) My p. ನನ್ನ ಮುದ್ದುಕಂದ] . (ಕ್ರಿ. ವಿ.) ತಕ್ಕಮಟ್ಟಿಗೆ ; ಸುಮಾರಾಗಿ [Am p. well. Find it p. difficult. That is p. much the same thing ಅದು ಬಹುಮಟ್ಟಿಗೆ ಅದೇ ವಸ್ತುವೇ. Pretty-pretty ಮಿತಿಮೀರಿದ ಸೊಗಸು ಮಾಡುವುದು ; ಅತಿ ಅಂದ ಮಾಡಲು ಪ್ರಯತ್ನ (ಪಡುವುದು). (ನಾ., ಬ. ವ.) Pretty-pretties ಚಿಲ್ಲರೆ ಒಡವೆಗಳು ; ಥಳುಕು ಪಳುಕುಗಳು] . **Préttyish** (ಗು.) ; **Préttify** (ಕ್ರಿ. ಸಕ.) ಅಂದ(ವಾಗಿ) ಮಾಡು ; ಅತಿ ನಾಜೂಕಿನ ಅಂದ ಮಾಡಿ ತೋರಿಸು. **Préttily** ಪ್ರಿಟಿಲಿ (ಕ್ರಿ. ವಿ.) (ಕಣ್ಣು, ಕಿವಿ, ಸೌಂದರ್ಯಾಭಿರುಚಿ, ಮೊ. ಗಳಿಗೆ) ಅಂದವಾಗಿ, ಮುದ್ದಾಗಿ ; ಮನೋಹರವಾಗಿ (P. dressed). [(ಮಕ್ಕಳ ಮಾತು) Eat, ask, behave, p.] . **Préttiness** (ನಾ.) ಅಂದ ; ಲಲಿತ ಸೌಂದರ್ಯ ; ಮಕ್ಕಳ ತೆರದ ಮುದ್ದು. ಅಂದವಾದದ್ದು ; ಅಂದವಾದ ಒಡವೆ. (ಸಾಹಿತ್ಯ, ಕಲೆ—ಇವುಗಳಲ್ಲಿ) ಕೃತಕ ಅಥವಾ ಅಲ್ಪ ಸೌಂದರ್ಯ(ದ ಶೈಲಿ). **Préttyism** (ನಾ.)

Prevaíl ಪ್ರಿವೇಯ್‌ಲ್ (ಕ್ರಿ. ಅಕ.) ಮೇಲುಗೈಯಾಗು ; ಜಯಶಾಲಿಯಾಗು ; ಗೆಲ್ಲು (*Against*, *over* ಉಪ. ದೊಡನೆ). [P. (up)on (ಮಾಡಲು) ಪ್ರೇರಿಸು, ಒಡಂಬಡಿಸು (*To* do)] . ಹೆಚ್ಚು ಬಳಕೆಯದಾಗಿ, ಹೆಚ್ಚು ಪ್ರಾಧಾನ್ಯವುಳ್ಳದ್ದಾಗಿ, —ಇರು. ಸಾಮಾನ್ಯ ಬಳಕೆಯಲ್ಲಿ, ಅನುಭವದಲ್ಲಿ, —ಇರು, ದೊರೆ ; ಸಲುವಳಿಯಲ್ಲಿರು ; ಚಾಲ್ತಿಯಲ್ಲಿರು. **Prevaílingly** (ಕ್ರಿ. ವಿ.) ; **Prévalence** ಪ್ರೆ— (ನಾ.) ; **Prévalent** (ಗು.) ; **Prévalently** (ಕ್ರಿ. ವಿ.)

Preváricate ಪ್ರಿವ್ಯಾರಿಕೇಟ್ (ಕ್ರಿ. ಅಕ.) ಸಿಕ್ಕಿಕೊಳ್ಳದಂತೆ, ನುಣುಚಿಕೊಳ್ಳುವಂತೆ, —ಮಾತಾಡು, ವರ್ತಿಸು ; ಹೊರಳು ಮಾತಾಡು ; ಸಂದಿಗ್ಧವಾಗಿ ಮಾತಾಡು. **Prevaricátion** (ನಾ.) ; **Prevàricator** (ನಾ.)

Prevénient ಪ್ರಿವೀನಿಯೆಂಟ್ (ಗು.) ಹಿಂದಿನ ; ಪೂರ್ವಗಾಮಿಯಾದ ; (—ರ) ನಿವಾರಣೋದ್ದೇಶವುಳ್ಳ, ನಿವಾರಕ (*Of* ಉಪ. ದೊಡನೆ). (ದೇವ. ಶಾ.) P. grace ಪಶ್ಚಾತ್ತಾಪಕ್ಕೂ ಪರಿವರ್ತನೆಗೂ ಪೂರ್ವಭಾವಿಯಾಗಿ, ದೇವರನ್ನು ಹೊಂದಬೇಕೆಂಬ ಮನಸ್ಸುಂಟುಮಾಡುವ ದೈವಾನುಗ್ರಹ.

Prevént ಪ್ರಿವೆಂಟ್ (ಕ್ರಿ. ಸಕ.) ತಡೆ ; ಅಡ್ಡಿ ಮಾಡು ; ನಿವಾರಿಸು ; ತಪ್ಪಿಸು (This may p. him from writing). (ಪ್ರಾಚೀ. ಪ್ರ.) (ಬಯಕೆ, ಪ್ರಶ್ನೆ, ಮೊ. ನ್ನು) ಸೂಚಿಸುವುದಕ್ಕೆ ಮೊದಲೇ ಅರಿತು ಪೂರಯಿಸು, ಬಗೆಹರಿಸು. (ದೇವ. ಶಾ.) God prevents us with His grace ದೇವರು ಕೃಪೆಯಿಂದ ನಮ್ಮ ಮುಂದಿದ್ದು ನಮಗೆ ದಾರಿ ತೋರಿಸುತ್ತಾನೆ. **Preventable** (ಗು.) ; **Prevéntible** (ಗು.) ; **Prevéntion** (ನಾ.) ; **Prevénter** (ನಾ.) (ಕ್ರಿಯಾರ್ಥಗಳಲ್ಲಿ). (ನಾವೆ) ಮತ್ತೊಂದರ ಜೊತೆಗೆ ಸೇರಿಸಿ ಉಪಯೋಗಿಸುವ ಹಗ್ಗ, ಸರಪಣಿ, ಗುಬ್ಬಿ ಮೊಳೆ, ಮೊ. ವು. **Prevéntive** (ಗು., ನಾ.) ತಡೆಗಟ್ಟುವ ; (ವ್ಯಾಧಿ) ನಿವಾರಕ (ಸಾಧನೆ, ಔಷಧ, ಯೋಜನೆ) ; ಪ್ರತಿಬಂಧಕ. P. service ಕಡಲ ಕರೆಯ ಕಾವಲು ಖಾತೆ (ಸುಂಕದ ಇಲಾಖೆಯವರದು). **Prevéntative** (ಗು., ನಾ.) = Preventive. **Prevéntively** (ಕ್ರಿ. ವಿ.)

Prévious ಪ್ರೀವಿಯಸ್ (ಗು., ಕ್ರಿ. ವಿ.) (ಕಾಲದಲ್ಲಾಗಲಿ ಕ್ರಮದಲ್ಲಾಗಲಿ) ಮೊದಲು ಬರುವ ; ಮುಂಚಿನ, ಹಿಂದಿನ, ಪೂರ್ವದ (*To* ಉಪ. ದೊಡನೆ). (ಅಸಂ.) ಆತುರಪಟ್ಟು ಮಾಡಿದ, ವರ್ತಿಸುವ (You have been a little too p.). [P. question (ಪಾರ್ಲಮೆಂಟಿನಲ್ಲಿ, ಮುಂದಿರುವ ಪ್ರಶ್ನೆಯನ್ನು ತಳ್ಳಿಹಾಕುವ ಉದ್ದೇಶದಿಂದ ಕೇಳುವ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಈ ಪ್ರಶ್ನೆಯ ಮೇಲೆ ಅಭಿಮತ ತೆಗೆದುಕೊಳ್ಳುವುದುಂಟೊ ?" ಎಂಬ ಪೂರ್ವ ಪ್ರಶ್ನೆ. P. Examination = Littlego (Little ನೋಡಿ)]. (ಕ್ರಿ. ವಿ.) Had called p. to writing ಬರೆಯುವುದಕ್ಕೆ ಮೊದಲು ಭೇಟಿಗಾಗಿ ಬಂದಿದ್ದನು. **Préviously** (ಕ್ರಿ. ವಿ.) ; **Préviousness** (ನಾ.)

Prevíse ಪ್ರಿವೈಸ್ (ಕ್ರಿ. ಸಕ.) (ಘಟನೆ, ಮೊ. ನ್ನು) ಮುಂಗಾಣು, ಮುನ್ನರಿ, ಮುನ್ನೂಹೆ ಮಾಡು ; ಮೊದಲೇ ತಿಳಿಯಪಡಿಸು, ಎಚ್ಚರಿಕೆ ಕೊಡು. **Prevísion** ಪ್ರಿವಿಷನ್ (ನಾ.) ; **Prevísional** (ಗು.) ; **Prevísionally** (ಕ್ರಿ. ವಿ.)

Prey ಪ್ರೇ (ನಾ., ಕ್ರಿ. ಅಕ.) ಹಿಂಸ್ರ ಪ್ರಾಣಿ ಬೇಟೆಯಾಡುವ ಆಹಾರ ಪ್ರಾಣಿ ; ಎರೆ (ರೂಪ. ಸಹ) [Beast, bird, fish, of p. (ಇತರ ಪ್ರಾಣಿಗಳನ್ನು ಕೊಂದು ತಿನ್ನುವ) ಹಿಂಸ್ರ ಪಶು, ಪಕ್ಷಿ, ಮೀನು]. (ಬೈಬಲ್) ಹೋರಾಟ, ಮೊ. ನ್ನು ಮಾಡಿ ರಕ್ಷಿಸಿ ತಂದದ್ದು, ಗೆದ್ದು ತಂದದ್ದು ; ಲೂಟಿ. (ಶತ್ರು, ರೋಗ, ಭಯ, ಮೊ. ಗಳಿಗೆ) ತುತ್ತಾದವನು, ಬಲಿ ಬಿದ್ದವನು, —ಬಿದ್ದದ್ದು. (ಕ್ರಿ.) [P. upon (ಪ್ರಾಣಿ, ಮೊ. ನ್ನು) ಬೇಟೆಯಾಗಿ, ಬಲಿಯಾಗಿ, —ಅರಸಿಕೊಂಡು ಹೋಗು, ಹಿಡಿ, ಕೊಂದು ತಿನ್ನು. (ಮನುಷ್ಯರನ್ನು) ಸುಲಿಗೆ ಮಾಡು, ಕೊಳ್ಳೆಹೊಡೆ]. (ರೋಗ, ಉದ್ರೇಕ, ಮೊ. ಗಳ ವಿಷಯದಲ್ಲಿ ; ವ್ಯಕ್ತಿಯನ್ನು) ಕಿತ್ತು ತಿನ್ನು, ಕೃಶವಾಗಿಸು, ಕೊರಗಿಸು (*Upon* ಉಪ. ದೊಡನೆ)

Príapism ಪ್ರೈಅಪಿಸ್ಮ್ (ನಾ.) ವಿಷಯ ಲಂಪಟತೆ. ಉದ್ದೇಶ ಪೂರ್ವಕವಾದ ಅಶ್ಲೀಲತೆ. (ವೈ. ಶಾ.) ಶಿಶ್ನ ಯಾವಾಗಲೂ ನಿಗುರಿ ಕೊಂಡಿರುವುದು (ಮು., ರೋಗ ಕಾರಣದಿಂದ ಮತ್ತು ಸಂಭೋಗಾಭಿಲಾಷೆ ಯಿಲ್ಲದೆ)

Price ಪ್ರೈಸ್ (ನಾ., ಕ್ರಿ. ಸಕ.) ಬೆಲೆ ; ಕ್ರಯ ; ಮೌಲ್ಯ ; ಖರೀದಿ [What is the p. of this ? Try our superb sandal soap, p. 8 as. a cake, offered at reduced prices. P current, P.-list ಚಾಲ್ತಿ ಬೆಲೆಪಟ್ಟಿ, ಧಾರಣೆವಾಸಿಗಳ ಪಟ್ಟಿ. Long p. ಭಾರಿ ಬೆಲೆ. Cost p. ಅಸಲು ಬೆಲೆ. Above, beyond, without, p. ಬೆಲೆಕಟ್ಟಲಾಗದ ; ಅಮೂಲ್ಯ ; ಅನರ್ಘ್ಯ. Set p. on person's head (—ನ್ನು) ಹಿಡಿದುಕೊಟ್ಟರೆ, ಅಥವಾ ಅವನ ತಲೆ ಕಡಿದುಹಾಕಿದರೆ ಗೊತ್ತುಮಾಡಿದ ಹಣ ಕೊಡುವುದಾಗಿ ಸಾರು: ತಲೆಗೆ ಬೆಲೆಯಿಡು]. (ಪಂದ್ಯ ಕಟ್ಟುವುದರಲ್ಲಿ) ಇತರರೊಡನೆ ಸರಿದೂಗಿಸಲು ಕಡಮೆಯ ಶಕ್ತಿಯ ಸ್ಪರ್ಧಿಗೆ ಕೊಡುವ ರಿಯಾಯಿತಿ (The starting p. of a horse). (ರೂಪ.) ಒಂದನ್ನು ಪಡೆಯಲು, ಸಾಧಿಸಲು, —ಕೊಡ ಬೇಕಾದದ್ದು, ಮಾಡಬೇಕಾದದ್ದು, ಬಲಿ ಕೊಡಬೇಕಾದದ್ದು [Must be done at any p. Every man has his p. ತಕ್ಕ ಆಸೆ ತೋರಿಸಿದರೆ ಎಂಥವನನ್ನಾದರೂ ವಶಪಡಿಸಿಕೊಳ್ಳಬಹುದು. Would not have it, do it, at any p. ಏನು ಕೊಟ್ಟರೂ ಅದನ್ನು ಒಲ್ಲೆ, ಮಾಡುವುದಿಲ್ಲ. What p. the Concert of Europe ? (ಅಸಂ.) (ಯಾವ ವಿಷಯದಲ್ಲಾದರೂ ಬಡಾಯಿ ಕೊಚ್ಚಿಕೊಂಡದ್ದು ನಿಷ್ಫಲವಾದು ದಕ್ಕೆ ಹೀಯಾಳಿಸುವ ಪ್ರ.)]. (ಪ್ರಾಚೀ. ಪ್ರ.) ಬಹು ಮೂಲ್ಯತೆ ; ಅನರ್ಘ್ಯತೆ. (ಕ್ರಿ.) (ಒಂದರ) ಬೆಲೆ ಅಂದಾಜು ಮಾಡು ; —ಗೊತ್ತು ಮಾಡು ; (ಮಾರಾಟಕ್ಕಾಗಿ) ಬೆಲೆ ಕಟ್ಟು ; ಬೆಲೆ ವಿಚಾರಿಸು ; ಬೆಲೆ ಮಾಡು. **Priced** ಪ್ರೈಸ್ಟ್ (ಗು.) ಬೆಲೆ ಕಟ್ಟಿದ (High, low, -p.). P. catalogue ಬೆಲೆ ನಮೂದಿಸಿರುವ ಸರಕು ಪಟ್ಟಿ. **Priceless** (ಗು.) ಅಮೂಲ್ಯವಾದ ; ಬೆಲೆ ಕಟ್ಟಲಾಗದ. (ಅಸಂ.) ಅತ್ಯಂತ ವಿನೋದ ವಾದ ; ನಂಬಲಾಗದಷ್ಟು ಅಸಂಬದ್ಧವಾದ. **Pricelessness** (ನಾ.)

Prick ಪ್ರಿಕ್ (ನಾ., ಕ್ರಿ.) (ಸೂಜಿ, ಮುಳ್ಳು, ಮೊ. ರ ಮೊನೆಯಿಂದ) ಚುಚ್ಚುವುದು ; ಸಣ್ಣ ರಂಧ್ರ ಮಾಡುವುದು, ಆಗುವುದು ; [(ರೂಪ.) Pricks of conscience ಮನಸ್ಸಾಕ್ಷಿಯ ಚುಚ್ಚು, ಕೊರೆ]. ಚುಚ್ಚಿದ, ಚುಚ್ಚಿ ಮಾಡಿದ, —ಗುರುತು. (ಪ್ರಾಚೀ. ಪ್ರ.) (ಎತ್ತು, ಮೊ. ನ್ನು ಚುಚ್ಚಿ ನಡಸುವ) ಚುಚ್ಚುಗೋಲು [(ರೂಪ.) Kick against the pricks (ಮುಳ್ಳನ್ನು ಒದೆದಂತೆ, ಗೋಡೆಗೆ ತಲೆ ಚಚ್ಚುವಂತೆ) ಪ್ರಯೋಜನ ವಿಲ್ಲದೆ ಎದುರುಬಿದ್ದು ಗಾಸಿ ಪಡು]. [P.-ears (ಕೆಲವು ನಾಯಿಗಳಿಗಿರುವ) ಚೂಪಾದ ನಿಮಿರು ಕಿವಿಗಳು ; ಕೆಲವರ ಎದ್ದುಕಾಣುವ ಕಿವಿಗಳು (ಮು., ೧೭ನೆಯ ಶ. ಮಾ. ದ Roundheads ಎಂಬ ಪಾರ್ಲಿಮೆಂಟ್ ಪಕ್ಷದವರು ತಮ್ಮ ತಲೆಗೂದಲನ್ನು ಬಹಳ ಮೋಟಕಾಗಿ ಕತ್ತರಿಸಿಕೊಳ್ಳುತ್ತಿದ್ದ ಕಾರಣ ಸ್ಪಷ್ಟವಾಗಿ ಕಾಣಬರುತ್ತಿದ್ದ ಕಿವಿಗಳು). P.-eared ಇಂಥ ಕಿವಿಗಳುಳ್ಳ]. (ಕ್ರಿ.) ಕೊಂಚ ಚುಚ್ಚು ; ಸಣ್ಣ ರಂಧ್ರಮಾಡು [P. a *or* the bladder *or* the bubble (Bubble ನೋಡಿ)]. ಚುಚ್ಚು, ತಿವಿ, ಇರಿ (*At*, *into*, ಮೊ. ಉಪ. ದೊಡನೆ). (ಪ್ರಾಚೀ. ಪ್ರ.) (ಕುದುರೆಯನ್ನು) ಚುಚ್ಚಿ ಓಡಿಸು ; ಕುದುರೆ ಸವಾರಿ ಮಾಡುತ್ತ ಮುಂದುವರಿ. (ಪಟ್ಟಿಯಲ್ಲಿ, ಹೆಸರು, ಮೊ. ನ್ನು) ಚುಚ್ಚಿ ಗುರುತು ಮಾಡು ; ಹೀಗೆ ಗುರುತು ಮಾಡಿ (ದಂಡಾಧಿಕಾರಿಯನ್ನು) ಚುನಾಯಿಸು. ಚುಕ್ಕೆಗಳಿಂದ (ಮಾದರಿಯನ್ನು) ರೂಪಿಸು (*Off*, *out* ಉಪ. ದೊಡನೆ). [P. in, out, off ನೆಲದಲ್ಲಿ ಮಾಡಿದ ಸಣ್ಣ ಕುಳಿಗಳಲ್ಲಿ (ಸಸಿಗಳನ್ನು) ನೆಡು. P. up one's ears (ನಾಯಿ : ಗಮನಕೊಟ್ಟು ಕೇಳುವಲ್ಲಿ, ಹುಷಾರಾಗಿರುವಲ್ಲಿ) ಕಿವಿ ನಿಮಿರಿಸು ; (ರೂಪ., ಮನುಷ್ಯನ ವಿಷಯದಲ್ಲಿ) ಕಿವಿ ನೆಟ್ಟಗೆ ಮಾಡಿಕೊ ; ಥಟ್ಟನೆ ಗಮನ ಕೊಡು]. **Prícker** (ನಾ.) (ಕ್ರಿಯಾರ್ಥಗಳಲ್ಲಿ). ಚುಚ್ಚುವ ಸಲಕರಣೆ (ಉದಾ., ಮೋಚಿಯ ದಬ್ಬಳ). **Príckle** ಪ್ರಿಕ್‌ಲ್ (ನಾ., ಕ್ರಿ.) ಸಸ್ಯದ (ಹೊರ ಚರ್ಮದಮೇಲೆ ಬೆಳೆಯುವ ಮತ್ತು ಅದರೊಡನೆ ಕಿತ್ತುಹಾಕಲಾಗುವ) ಸಣ್ಣ ಮುಳ್ಳು. (ಬಳ. ಮಾ.) ಸಣ್ಣ ಮುಳ್ಳು ; (ಮುಳ್ಳುಹಂದಿ, ಮೊ. ಗಳ) ಗಟ್ಟಿ ಮೊನೆಯ ಮುಳ್ಳು (ಕಡ್ಡಿ). (ಕ್ರಿ.) ಮುಳ್ಳು ಚುಚ್ಚಿದಂತೆ ಆಗು ; (ಮುಳ್ಳಿನಂತೆ) ಚುಚ್ಚು. **Príckling** (ನಾ., ಗು.) ; **Príckly** (ಗು.) (ಮು., ಸಸ್ಯಗಳ ಮತ್ತು ಪ್ರಾಣಿಗಳ ಹೆಸರಿನಲ್ಲಿ) ಮುಳ್ಳಿರುವ (ಉದಾ., P. pear ಪಾಪಾಸುಕಳ್ಳಿ. P. rat ದ. ಅಮೆರಿಕದ ಒಂದು ಜಾತಿಯ ಮುಳ್ಳಿಲಿ) ; ಚುಚ್ಚಿದಂತಾಗುವ. P. heat [Heat (ನಾ.) ನೋಡಿ]. **Prícklinesss** (ನಾ.)

Prícket ಪ್ರಿಕೆಟ್ (ನಾ.) ಕವಲಿಲ್ಲದ ನೇರವಾದ ಕೊಂಬುಗಳುಳ್ಳ, ಎರಡು ವರ್ಷದ ಗಂಡು ಜಿಂಕೆ (P.'s sister ಇಂಥ ಎರಡು ವರ್ಷದ ಹೆಣ್ಣು ಜಿಂಕೆ). ಮೋಂಬತ್ತಿ ಸಿಕ್ಕಿಸುವ ಮೊನೆಗಂಬಿ, ಸಲಾಕಿ.

Príckle, Príckly, etc. Prick ನೋಡಿ.

Pride ಪ್ರೈಡ್ [ನಾ., ಕ್ರಿ. (ಸ್ವಾರ್ಥಕ)] (ತನ್ನ ಗುಣಗಳು, ಯೋಗ್ಯತೆ, ಮೊ. ಗಳ ವಿಷಯದಲ್ಲಿ) ಮಿತಿಮೀರಿದ ಸ್ವಾಭಿಮಾನ ; ದುರಭಿಮಾನ ; ಅಹಂಕಾರ ; ಸೊಕ್ಕು ; ಹೆಮ್ಮೆ ; ಜಂಬ ; ಪ್ರತಿಷ್ಠೆ ; ಹಮ್ಮು ; ಗರ್ವ [ಒಂದು ಮಹಾ ಪಾತಕ (ಹಲವು ವೇಳೆ ಮೂರ್ತೀಕರಿಸಿದುದಾಗಿ ಪ್ರ.) P. will have a fall ಗರ್ವಕ್ಕೆ ಪತನ ಸಿದ್ಧ]. ದುರಭಿಮಾನದ ಚರ್ಯೆ, ನಡತೆ [P. of place ಉನ್ನತ ಪದವಿ(ಯಲ್ಲಿರುವೆನೆಂಬ ಅರಿವು, ಭಾವ) ; ಅಹಂಭಾವ ; ಪ್ರತಿಷ್ಠೆ]. (ಅಯೋಗ್ಯತನವನ್ನು ತಡೆಯುವ, ತನ್ನ ಸ್ಥಾನಕ್ಕೆ ತಕ್ಕಂತೆ ನಡೆಯಲು ಪರಿಜ್ಞಾನ ಕೊಡುವ) ಸ್ವಾಭಿಮಾನ ; ಸದಭಿಮಾನ (= Proper p.); (False p. ದುರಭಿಮಾನ). ಉತ್ಸಾಹದ, ಸಂತೋಷದ, ಭಾವನೆ [Take a p. in (person, thing, do*ing*). He is his mother's p.]. (ಸಸ್ಯಗಳ ಹೆಸರುಗಳಲ್ಲಿ : Pride of India ಮರುವಾಡಲ ಮರ. London p.). [(ವಂಶ ಲಾಂಛನ) Peacock in his p. ಪುಕ್ಕ ಅರಳಿಸಿಕೊಂಡು ರೆಕ್ಕೆ ಜೋಲಬಿಟ್ಟಿರುವ ನವಿಲು]. ಅತ್ಯುತ್ತಮ ಸ್ಥಿತಿ [P. of Grease (Grease ನೋಡಿ)]. (P. of the morning ಸೂರ್ಯೋದಯ ಕಾಲ ದಲ್ಲಿಯ ಮಂಜು, ಮಳೆ ತುಂತುರು). (ಕ್ರಿ.) P. oneself (up)on (—ವಿಷಯದಲ್ಲಿ) ಹೆಮ್ಮೆ ಪಡು, ಅಭಿಮಾನ ತಾಳು. **Prídeful** (ಮು., ಸ್ಕಾ. ಪ್ರ.) (ಗು.) ; **Prídefully** (ಕ್ರಿ. ವಿ.) ; **Prídeless** (ಗು.)

Priest ಪ್ರೀಸ್ಟ್ (ನಾ., ಕ್ರಿ. ಸಕ.) [(ಕ್ರೈಸ್ತ) ಡೀಕನ್ನಿಗೆ ಮೇಲನವನೂ ಬಿಷಪ್ಪಿಗೆ ಕೆಳಗಿನವನೂ ಆದ, (ಮತ ಸಂಸ್ಕಾರಗಳನ್ನು ಮಾಡಿಸುವುದಕ್ಕೂ ಪಾಪ ವಿಮೋಚನೆ ಕೊಡುವುದಕ್ಕೂ ಅಧಿಕಾರವುಳ್ಳ, ಮಧ್ಯಮ ದರ್ಜೆಯ)]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರೈಸ್ತ ಪುರೋಹಿತ ; ಪಾದ್ರಿ (ಈಗ Clergyman ಎಂಬುದೇ ಸಾ., ರೂಢಿ). (ಕ್ರೈಸ್ತೇತರ ಮತಗಳಲ್ಲಿ) ಪುರೋಹಿತ; ಆರಾಧಕ. [(ರೂಪ.) P. of nature, science ಪ್ರಕೃತ್ಯಾರಾಧಕ, ವಿಜ್ಞಾನೋಪಾಸಕ]. (ಕ್ರೈಸ್ತ) ಬಲಿಪೀಠದ ಪುರೋಹಿತ (ಮು., ಪ್ರಭುಭೋಜನ ಸಂಸ್ಕಾರದಲ್ಲ ಪುರೋಹಿತ). [High p. (High ನೋಡಿ). Priestcraft ಪುರೋಹಿತ ತಂತ್ರ; ಪುರೋಹಿತರ ಪ್ರಾಪಂಚಿಕ ದೃಷ್ಟಿಯ ಅಥವಾ ಸ್ವಾರ್ಥಪರವಾದ ವ್ಯವಹಾರ ನೀತಿ. P.'s hood, P.-in-the-pulpit (ಕೆಸವಿನ ದಂಟಿನ ಜಾತಿಯ) ಒಂದು ಸಸ್ಯ. P.-ridden ಪುರೋಹಿತರ ಅಧಿಕಾರಕ್ಕೆ ಒಳಪಟ್ಟಿರುವ ; ಪುರೋಹಿತಾಧೀನ : ಪುರೋಹಿತರ ಪ್ರಾಬಲ್ಯದ] . (ಕ್ರಿ.) (ಒಬ್ಬನನ್ನು) ಪುರೋಹಿತನನ್ನಾಗಿ ಮಾಡು. **Priéstess** (ನಾ., ಸ್ತ್ರೀ.) ; **Priésthood** (ನಾ.) ; **Priéstless** (ಗು.) ; **Priéstlike** (ಗು.) ; **Priéstling** (ನಾ.) ; **Priéstly** (ಗು.) ಪುರೋಹಿತನ(ಥ) ; —ನಿಗೆ ತಕ್ಕ, ಯೋಗ್ಯವಾದ. **Priéstliness** (ನಾ.)

Prig ಪ್ರಿಗ್ (ನಾ., ಕ್ರಿ. ಸಕ.) (ಮಾತಿನಲ್ಲಿ, ನಡತೆಯಲ್ಲಿ) ಅತಿ ಸಂಪ್ರದಾಯ ಬದ್ಧನಾದವನು ; ತೀರ ಕಟ್ಟುನಿಟ್ಟಿನಿಂದ ಇತರರನ್ನು ಬೇಸರ ಪಡಿಸುವವನು ; ಅತಿ ನಿಷ್ಠ. ಸ್ವಪ್ರತಿಷ್ಠೆಯವನು ; ಇತರರಿಗೆ ನೀತಿ ಬೋಧೆ ಮಾಡುವ ಸ್ವಭಾವದವನು. (ಅಸಂ.) ಕಳ್ಳ. (ಕ್ರಿ.) (ಅಸಂ.) ಕಳ್ಳತನ ಮಾಡು. **Príggery** (ನಾ.); **Príggish** (ಗು.) ; **Príggishly** (ಕ್ರಿ. ವಿ.) ; **Príggishness** (ನಾ.) ; **Príggism** (ನಾ.)

Prim ಪ್ರಿಮ್ (ಗು., ಕ್ರಿ.) (ವ್ಯಕ್ತಿ, ನಡತೆ, ಮಾತು, ಮೊ. ವು) ಉಪಚಾರದ, ಬಿಗುಮಾನದ, ಬಿಂಕದ, ವಿನಯಾಡಂಬರದ. (ಕ್ರಿ.) ಬಿಗುಮಾನ, ಬಿಂಕ, —ತೋರು ; ಶ್ರೀಮದ್ಗಾಂಭೀರ್ಯ ತೋರಿಸು ; (ಮುಖ, ತುಟಿ, ಮೊ. ನ್ನು) ಬಿಂಕ ತೋರುವಂತೆ ಇಟ್ಟುಕೊ. **Prímly** (ಕ್ರಿ. ವಿ.); **Prímness** (ನಾ.)

Príma (It.) ಪ್ರೀಮ (ಗು.) ಪ್ರಥಮ; ಪ್ರಮುಖ; ಪ್ರಧಾನ [P. buffa (ಬುಫ಼) ಪ್ರಧಾನ ಹಾಸ್ಯ ನಟ, ಗಾಯಕ. P. donna —ಡಾನ (ಬ. ವ., -ma -nas, -me -ne ಪ್ರೀಮೇಡಾನೆ) ಸಂಗೀತ ನಾಟಕದಲ್ಲಿ ಮುಖ್ಯ ಗಾಯಕಿ]

Prímacy. **Primate** ನೋಡಿ.

Príma fácie (L) ಪ್ರೈಮ ಫೇಷಿಯಾ (ಕ್ರಿ. ವಿ., ಗು.) ಮೊದಲ ನೋಟದಲ್ಲಿ (ಹುಟ್ಟುವ, ಉಂಟಾಗುವ) ; ಪ್ರಥಮ ಭಾವನೆಯ ಆಧಾರದ ಮೇರೆ ; —ಮೇಲಿನ ; ಆಪಾತತಃ. Has p. f. a good case ನೋಡುತ್ತಲೇ ಅವನ ವಾದ ನ್ಯಾಯ ಸಮ್ಮತವಾದುದೆಂದು ತೋರುತ್ತದೆ.

Prímage[1] ಪ್ರೈಮೆಜ್ (ನಾ.) (ಸರಕನ್ನು ಎಚ್ಚರಿಕೆಯಿಂದ ತುಂಬಲು, ಇಳಿಸಲು, ನೋಡಿಕೊಳ್ಳಲು, ಮೊ. ಕ್ಕಾಗಿ) ಹಡಗಿನ ಮಾಲೀಕರಿಗೆ ಅಥವಾ ಹೇರು ಬಾಡಿಗೆದಾರರಿಗೆ, ಸರಕು ಸಾಗಣೆಯ ಬಾಡಿಗೆಯ ಜೊತೆಗೆ ಕೊಡುವ ಸೇಕಡದ ಹೆಚ್ಚು ಮೊತ್ತ : ಎಚ್ಚರಿಕೆಯ (ಹೆಚ್ಚು) ಬಾಡಿಗೆ.

Prímage[2] ಪ್ರೈಮೆಜ್ (ನಾ.) ಆವಿಯಲ್ಲಿ ಸೇರಿಕೊಂಡು ಕುದಿ ಪಾತ್ರೆಯಿಂದ ಹೊರಬಿದ್ದ ನೀರಿನ ಮೊತ್ತ.

Prímal ಪ್ರೈಮಲ್ (ಗು.) ಆದಿ—ಯುಗದ, ಕಾಲದ ; ಆದ್ಯ ; ಮೊದಲನ ; ಪುರಾತನ. ಮುಖ್ಯ ; ಪ್ರಧಾನ. **Prímally** (ಕ್ರಿ. ವಿ.)

Prímary ಪ್ರೈಮರಿ (ಗು., ನಾ.) ಮೊತ್ತ ಮೊದಲನ ; ಆದಿಯ ; (ಒಂದು ಶ್ರೇಣಿಯಲ್ಲಿ) ಮೊದಲನೆಯ ಸ್ಥಾನದ. ಜನ್ಯವಾದದ್ದಲ್ಲದ ; ಮೂಲ (The p. vowel sounds. P. meaning of a word). ಅತ್ಯಂತ ಮಹತ್ತ್ವದ; ಮುಖ್ಯವಾದ ; ಪ್ರಧಾನ. (ಭೂ. ವಿ.) ಭೂಸ್ತರ ಶ್ರೇಣಿಯಲ್ಲಿ ಅತ್ಯಂತ ಕೆಳಗಣ. (ಜೀ. ವಿ.) ವಿಕಸನದಲ್ಲಿ ಮೊದಲನೆಯ ಹಂತದ. [P. amputation ಉರಿಯೂತ ಆರಂಭವಾಗುವುದಕ್ಕೆ ಮೊದಲೇ ಮಾಡಿದ ಅಂಗ ವಿಚ್ಛೇದನ. P. education (ಮೂಲ ಪಾಠಗಳಿಂದ ಆರಂಭವಾಗುವ) ಪ್ರಾಥಮಿಕ ಶಿಕ್ಷಣ (ಮು., ಕಡ್ಡಾಯವಾಗಿ ಪಾಠಶಾಲೆಗೆ ಹೋಗಬೇಕಾದ ಹುಡುಗರಿಗಾಗಿ ಸವರಿಸಿದ್ದು). P. school, scholar ಪ್ರಾಥಮಿಕ ಪಾಠಶಾಲೆ, —ಯ ವಿದ್ಯಾರ್ಥಿ (Secondary ಹೋಲಿಸಿ). (ವ್ಯಾ.) P. tenses ವರ್ತಮಾನ, ಭವಿಷ್ಯತ್, ಸಂಪೂರ್ಣ, ಸಂಪೂರ್ಣ ಭವಿಷ್ಯತ್ ಕಾಲಗಳು. P. assembly, meeting (ಚುನಾವಣೆಗೆ ನಿಲ್ಲಬೇಕಾದ ಉಮೇದುವಾರರನ್ನು ಆಯ್ಕೆ ಮಾಡುವ) ಪೂರ್ವಭಾವಿ ಸಭೆ. P. colour, P. planets (ಆಯಾ ಪದವನ್ನು ನೋಡಿ). P. battery ವಿದ್ಯುದುತ್ಪಾದಕ ಕೋಶ ಶ್ರೇಣಿ] . (ನಾ.) = P. planet, meeting, etc. **Prímarily** (ಕ್ರಿ. ವಿ.)

Prímate ಪ್ರೈಮೆಟ್ (ನಾ.) (ಕ್ರೈಸ್ತ) ಆರ್ಚ್‌ಬಿಷಪ್ (P. of England = Archbishop of York. P. of all England = Archbishop of Canterbury). (ಪ್ರಾ. ವಿ.) = Primates ಪದದ ಏ. ವ. **Prímacy** ಪ್ರೈಮಸಿ (ನಾ.) ಆರ್ಚ್‌ಬಿಷಪ್ಪಿನ ಅಧಿಕಾರ, ಪದವಿ. ಸರ್ವೋತ್ಕೃಷ್ಟತೆ ; ಅಗ್ರಗಣ್ಯತೆ. **Primátial** —ಮೇಷ(ಷ್)ಲ್ (ಗು.) ಆರ್ಚ್‌ಬಿಷಪ್ಪಿನ ; —ಗೆ ಸಂಬಂಧಿಸಿದ ; (ಕ್ರೈಸ್ತ) ಧರ್ಮದ ಅಗ್ರಗಣ್ಯತೆಯುಳ್ಳ, ಧರ್ಮ ಪ್ರಾಧಾನ್ಯದ. (ಪ್ರಾ. ವಿ.) ಪ್ರಧಾನ ಸಸ್ತನಿ ಪ್ರಾಣಿವರ್ಗದ.

Primátes ಪ್ರೈಮೇಟೀಸ್, —ಮೇಟ್ಸ್ (ನಾ., ಬ. ವ.) (ಪ್ರಾ. ವಿ.) [ಮನುಷ್ಯ, ವಾನರಗಳು, ಕಾಡುಪಾಪ, ಮೊ. ವನ್ನೂ ಮತ್ತು (ಲನೀಯನ್ ಪದ್ಧತಿಯಲ್ಲಿ) ಬಾವಲಿಗಳನ್ನೂ ಒಳಕೊಂಡ] ಅತ್ಯುನ್ನತ ಶ್ರೇಣಿಯ ಸಸ್ತನಿ ಪ್ರಾಣಿವರ್ಗ : ಪ್ರಧಾನ (ಸಸ್ತನಿ) ಪ್ರಾಣಿವರ್ಗ.

Prime[1] ಪ್ರೈಮ್ (ನಾ., ಗು.) ಉತ್ತಮ ದಸೆ (In the p. of life ಜೀವನದ ಪ್ರಾಯದಲ್ಲಿ). (ಒಂದರ) ಅತ್ಯುತ್ತಮ ಭಾಗ (*Of* ಉಪ. ಜೊಡನೆ). (ಒಂದರ) ಆರಂಭ, ಮೂಲ(ಸ್ಥಿತಿ); ಪ್ರಥಮಾವಸ್ಥೆ ; ಆದ್ಯ ಸ್ಥಿತಿ. ದೇವರ ಪ್ರಾರ್ಥನೆಗಾಗಿ ಗೊತ್ತುಮಾಡಿರುವ ಬೆಳಗಿನ ಮೊದಲನೆಯ ಗಂಟೆ (= ಬೆಳಗಿನ ೬ ಗಂಟೆ ಅಥವಾ ಸೂರ್ಯೋದಯ ಕಾಲ). (ಪ್ರಾಚೀ. ಪ್ರ.) ಸೂರ್ಯೋದಯ ಕಾಲ. (ಪ್ರಾಚೀ. ಪ್ರ.) = Golden number (Golden ನೋಡಿ). ಅಪವರ್ತನವಿಲ್ಲದ ಸಂಖ್ಯೆ ; ಮೂಲ ಸಂಖ್ಯೆ (ಉದಾ., ೨, ೩, ೫, ೭, ೧೧ ಮೊ. ದು). (ರ. ವಿ.) (ಸಂಯೋಜನೆಯಲ್ಲಿ ಏಕ ಮಾನವಾಗಿ ಪರಿಗಣಿಸುವ) ಏಕ ಪರಮಾಣು. ಖಡ್ಗವಿದ್ಯೆಯಲ್ಲಿ ಒಂದು ವರಿಸೆ. (ಗು.) ಮುಖ್ಯ; ಮಹತ್ತಮ (P. agent, motive) ; (ದನ ಕರುಗಳು, ದಿನಸಿ, ಮೊ. ವು) ಉತ್ತಮ —ದರ್ಜೆಯ, ರಖಮಿನ [**Prímely** (ಕ್ರಿ. ವಿ.); **Prímeness** (ನಾ.)]. ಪ್ರಾಥಮಿಕ; ಮೂಲ (ಭೂತ). (ಗಣಿತ, ಒಂದು ಸಂಖ್ಯೆಯ ವಿಷಯದಲ್ಲಿ) ಅಪವರ್ತನವಿಲ್ಲದ, ಅವಿಭಾಜ್ಯ, ಮೂಲ (ಉದಾ., ೨, ೩, ೫, ೭, ೧೧) ; (ಸಂಖ್ಯೆಗಳ ವಿಷಯದಲ್ಲಿ) ಸಾಮಾನ್ಯಾಪವರ್ತನವಿಲ್ಲದ. [P. cost, mover (Cost, move ನೋಡಿ). P. vertical (circle) ಕ್ಷಿತಿಜದ ಪೂರ್ವ ಪಶ್ಚಿಮ ಬಿಂದುಗಳನ್ನೂ ಖಮಧ್ಯ ಬಿಂದುವನ್ನೂ ಹಾಯ್ದುಹೋಗುವ ಮತ್ತು ಮಧ್ಯಾಹ್ನ ರೇಖೆಯನ್ನು ಸಮ ಕೋನದಲ್ಲಿ ಕತ್ತರಿಸುವ ಖಗೋಳ ಬೃಹದ್ವೃತ್ತ ರೇಖೆ. P. Minister ಮುಖ್ಯ ಮಂತ್ರಿ; ಪ್ರಧಾನಿ (ಈಗ ಗ್ರೇಟ್ ಬ್ರಿಟನ್ನಿನ ಮೊದಲ ಮಂತ್ರಿಯ ಅಧಿಕಾರ ನಾಮ)].

Prímer[1] ಪ್ರಿ(ಪ್ರೈ)ಮರ್ (ನಾ.) ಮಕ್ಕಳಿಗೆ ಓದು ಕಲಿಸುವ ಮೂಲ ಪಾಠ ಪುಸ್ತಕ : ಬಾಲ ಬೋಧೆ ; ಪ್ರಾಥಮಿಕ ಪುಸ್ತಕ (ಪ್ರೈ—) ; ಪೀಠಿಕಾ ರೂಪದ ಸಣ್ಣ ಪುಸ್ತಕ : ಪ್ರವೇಶಕ (ಪ್ರೈ—) (P. of Evolution. Latin P.). (ಚರಿತ್ರೆ) [ಮು., ಪ್ರಾಟೆಸ್ಟಂಟ್ ಮತ ಸ್ಥಾಪನೆಗೆ ಪೂರ್ವದಲ್ಲಿ (ಸಾಮಾನ್ಯ ಜನರ ಉಪಯೋಗಕ್ಕಾಗಿ ರಚಿಸಿದ)] ಪ್ರಾರ್ಥನಾ ಪುಸ್ತಕ (ಪ್ರಿ—). Great, long, p. ಕೆಲವು ಅಳತೆಯ ಅಚ್ಚುಮೊಳೆ, ಮುದ್ರಣಾಕ್ಷರ (ಪ್ರಿ—)

Prime[2] ಪ್ರೈಮ್ (ಕ್ರಿ.) (ಚರಿತ್ರೆ) (ಹಿಂದಿನ ಕಾಲದ ಬಂದೂಕಿನ ವಿಷಯದಲ್ಲಿ : ಬಾರು ಮಾಡಿದ ಬಂದೂಕಿನಲ್ಲಿಯ ಸಿಡಿಮದ್ದನ್ನು ಹೊತ್ತಿಸುವುದಕ್ಕಾಗಿ) ಚಾಪಿನ ಕುಳಿಯಲ್ಲಿ ಕೋವಿಯ ಮದ್ದನ್ನು ಹಾಕು. (ನೀರೆತ್ತುವ ಯಂತ್ರ) ಕೆಲಸ ಮಾಡಲು ಸಿದ್ಧಪಡಿಸುವುದಕ್ಕಾಗಿ ನಳಿಕೆಗೆ ನೀರು ಹೊಯ್ಯು (ಅಡುಬೆಣೆ, ಮೊ. ನ್ನು) ನೆನಸು. (ಒಬ್ಬನಿಗೆ ಸುದ್ದಿ, ಮೊ. ನ್ನು ಹವಣಿಸಿ) ತಯಾರು ಮಾಡು (*With* ಉಪ. ಜೊಡನೆ) (P. a witness).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಒಬ್ಬನಿಗೆ) ತುಂಬ ಮದ್ಯ ಕುಡಿಸು (*With* ಉಪ. ದೊಡನೆ). (ಬಣ್ಣ ಹೀರದಂತೆ ಮಾಡುವುದಕ್ಕಾಗಿ, ಮರ, ಮೊ. ಕ್ಕೆ) ಎಣ್ಣೆಯನ್ನಾಗಲಿ ಬಣ್ಣದ ಮೊದಲ ಲೇಪವನ್ನಾಗಲಿ ಬಳಿ, ತೊಡೆ. (ಎಂಜಿನಿನ ಕುದಿ ಪಾತ್ರೆ) ನೀರನ್ನು ತುಂತುರಿನ ರೂಪದಲ್ಲಿ ಆವಿಯೊಡನೆ ನಾಳಿಯೊಳಕ್ಕೆ ಬಿಡು. **Prímer**² ಪ್ರೈಮರ್ (ನಾ.) (ಕ್ರಿಯಾರ್ಥಗಳಲ್ಲಿ). ತೋಟಾ ದೊಳಗಿನ ಮದ್ದು ಹೊತ್ತಿಸುವ ಕೇಪು, ಕೊಳವೆ, ಮೊ. ದು. **Príming**¹ (ನಾ.) (ಕ್ರಿಯಾರ್ಥಗಳಲ್ಲಿ). ಬಂದೂಕಿನ ಚಾಪಿನಲ್ಲಿ ಹಾಕಿಟ್ಟ ಮದ್ದು. (ಬಂಡೆ ಒಡೆಯುವುದು, ಮೊ. ಗಳಲ್ಲಿ) ಸಿಡಿಮದ್ದಿಗೂ ಜಾವಿಗೆ ಬತ್ತಿಗೂ ಸಂಬಂಧ ಕಲ್ಪಿಸುವ ಮದ್ದಿನ ಸರಣಿ. ಮೊದಲ ಬಳಿತಕ್ಕೆ (ಬಣ್ಣ ಬಳಿಯುವವರು) ಉಪಯೋಗಿಸುವ ಮಿಶ್ರಣ. ಆತುರಾ ತುರವಾಗಿ ಪಾಠ ಗಟ್ಟಿಮಾಡಿಸುವುದು ; ವಿಷಯಗಳನ್ನು ತಲೆಗೆ ಗಿಡುಗುವುದು.

Primeúr (F) ಪ್ರೀಮರ್ (ನಾ.) ಮೊದಲ ಫಲ(ಗಳು). ಕಾಲಕ್ಕೆ ಮೊದಲೇ ಬಿಟ್ಟ ಹಣ್ಣು, ಮೊ. ದು : ಅಕಾಲ ಫಲ. ಮೊದಲ ವರ್ತಮಾನ.

Priméval, -aeval ಪ್ರೈಮೀವಲ್ (ಗು.) (ಜಗತ್ತಿನ) ಅನಾದಿ ಕಾಲದ ; ಸೃಷ್ಟ್ಯಾದಿಯ ; ಆದಿ ಯುಗದ ; ಪ್ರಾಚೀನ ; ಪುರಾತನ ; ಆದ್ಯ. **Primévally** (ಕ್ರಿ. ವಿ.)

Priming¹. **Prime**² ನೋಡಿ.

Príming² ಪ್ರೈಮಿಂಗ್ (ನಾ.) ಇಳಿತದಿಂದ ಉಬ್ಬರಕ್ಕೆ ಏರುವ ಭರದಲ್ಲಿ ಭರತದ ವೇಗ ವೃದ್ಧಿ.

Primíparous ಪ್ರೈಮಿಪರಸ್ (ಗು.) ಮೊದಲ ಹೆರಿಗೆಯ ; ಪ್ರಥಮ ಪ್ರಸವದ.

Prímitive ಪ್ರಿಮಿಟಿವ್ (ಗು., ನಾ.) ಆದಿ ಕಾಲದ ; ಪ್ರಾಚೀನ ; ಪುರಾತನ ; ಆದ್ಯ (P. Church ಆದಿ ಕಾಲದ ಕ್ರೈಸ್ತ ಮಂಡಲ). ಹಳೆಯ ತರಹದ ; —ಸಂಪ್ರದಾಯದ. ಸರಳ. ಒಡ್ಡೊಡ್ಡಾದ ; ಅಸಂಸ್ಕೃತ. ಮೂಲ ; ಮೊದಲಿನ ; ಪ್ರಾಥಮಿಕ. (ವ್ಯಾ. : ಪದಗಳ ವಿಷಯದಲ್ಲಿ) ಮೂಲ ರೂಪದ ; ವ್ಯುತ್ಪನ್ನವಾದದ್ದಲ್ಲದ. (ಗಣಿತ : ರೇಖೆ, ಆಕೃತಿ, ಮೊ. ವು) ಅದರಿಂದ ಯಾವುದಾದರೂ ರಚನೆ ಆರಂಭವಾಗುವ ; ಮತ್ತೊಂದಕ್ಕೆ ಮೂಲವಾದ. (ಬಣ್ಣಗಳ ವಿಷಯದಲ್ಲಿ) ಮೂಲ ; (ಭೂ. ವಿ.) ಕೇವಲ ಆದಿ ಯುಗದ ; (ಜೀ. ವಿ.) ಬೆಳವಣಿಗೆಯ ಅತ್ಯಂತ ಆದ್ಯವಸ್ಥೆಯಲ್ಲಿ, ಕೇವಲ ಪ್ರಥಮಾವಸ್ಥೆಯಲ್ಲಿ, —ಕಾಣಿಸಿಕೊಳ್ಳುವ, ಮೂಡುವ. (ನಾ.) (ಯೂರೋಪಿನಲ್ಲಿ) ಕಲಾ ಸಾಹಿತ್ಯಗಳ ಪುನರುಜ್ಜೀವನ ಕಾಲಕ್ಕೆ ಹಿಂದಿನ ವರ್ಣಚಿತ್ರಕಾರ ; ಇಂಥವನಿಂದ ರಚಿತವಾದ ವರ್ಣಚಿತ್ರ. ಮೂಲ —ಶಬ್ದ, ರೇಖೆ, ಮೊ. ದು. **Prímitively** (ಕ್ರಿ. ವಿ.) ; **Prímitiveness** (ನಾ.)

Prímo (L) ಪ್ರೈಮೊ (ಕ್ರಿ. ವಿ.) Primo, secundo, tertio ಮೊದಲನೆಯದಾಗಿ, ಎರಡನೆಯದಾಗಿ, ಮೂರನೆಯದಾಗಿ (ಸಂಜ್ಞೆ : 1°, 2°, 3°)

Primogénitor. Primogeniture ನೋಡಿ.

Primogéniture ಪ್ರೈಮೊಜೆನಿಟ್ಯುರ್, —ಚರ್ (ನಾ.) ಒಂದೇ ತಾಯಿ ತಂದೆಗೆ ಹುಟ್ಟಿದ ಮಕ್ಕಳಲ್ಲಿ ಮೊದಲ ಹುಟ್ಟು ; ಅಗ್ರಜತ್ವ ; ಜ್ಯೇಷ್ಠತ್ವ ; ಜ್ಯೇಷ್ಠಲುತನ. ಎಲ್ಲ ಸ್ಥಿರಾಸ್ತಿಗೂ ಹಿರಿಯ ಮಗನ ಹಕ್ಕು ; ಹಿರಿಯ ಮಗನ ಪಟ್ಟಾಧಿಕಾರ ; ಜ್ಯೇಷ್ಠಾಧಿಕಾರ (=Right of p.). **Primogénital** (ಗು.) ; **Primogénitary** (ಗು.) ; **Primogénitor** (ನಾ.) ಮೂಲ ಪುರುಷ ; ಮೊದಲಿಗ. (ಶಿಥಿಲವಾಗಿ) ಪೂರ್ವಿಕ ; ಪೂರ್ವಜ.

Primórdial ಪ್ರೈಮಾರ್ಡಿಯಲ್ (ಗು.) ಆದಿ ಕಾಲದಲ್ಲಿದ್ದ ; ಆದಿ ಕಾಲದಿಂದಿರುವ ; ಪ್ರಥಮ ಸೃಷ್ಟಿಯ ; ಆದಿ ರೂಪದಲ್ಲಿ, ಆದಿ ಸ್ಥಿತಿಯಲ್ಲಿ, —ಇರುವ ; ಆದ್ಯ ; ಮೂಲ. **Primordiálity** (ನಾ.) ; **Primórdially** (ಕ್ರಿ. ವಿ.)

Prímrose ಪ್ರಿಂರೋಸ್ (ನಾ.) (ವಸಂತ ಋತುವಿನ ಆದಿ ಭಾಗದಲ್ಲಿ) ಮಾಸಲು ಹಳದಿ ಹೂವು ಬಿಡುವ ಒಂದು ಜಾತಿಯ ಗಿಡ ; ಇದರ ಹೂವು. (ವಿಶೇಷಣವಾಗಿ) ಪ್ರಿಂರೋಸ್ ಹೂವಿನ ಬಣ್ಣದ. The p. path ಭೋಗಾಸಕ್ತಿ. **Prímrosy** (ಗು.)

Prímula ಪ್ರಿಮ್ಯುಲ (ನಾ.) ಹಳದಿಯ, ಬಿಳಿಯ, ಪಾಟಲ ಅಥವಾ ಊದಾ ಬಣ್ಣದ ಹೂವು ಬಿಡುವ ಚಿರಕಾಲವಿರುವ ಒಂದು ಸಸ್ಯ.

Prímum móbile (L) ಪ್ರೈಮಮ್ ಮೋಬಿಲಿ(ಲೆ) (ನಾ.) ಮಧ್ಯಕಾಲದಲ್ಲಿ ಟಾಲೆಮಿಯ ಸಿದ್ಧಾಂತದ ಖಗೋಳ ವಿಜ್ಞಾನಕ್ಕೆ ಸೇರಿಸಿದ, ತನ್ನ ಒಳಗಣ ಗೋಳಗಳನ್ನೂ ಹೊತ್ತುಕೊಂಡು ಭೂಮಿಯ ಸುತ್ತ ೨೪ ಗಂಟೆಗಳಲ್ಲಿ ಸುತ್ತು ತಿರುಗುವುದೆಂದು ಊಹಿಸಿದ್ದ, ಅತ್ಯಂತ ಹೊರಗಣ ಗೋಳ. (ರೂಪ.) ಚಲನೆಯ ಅಥವಾ ಕಾರ್ಯದ ಮುಖ್ಯ ಮೂಲ(ಸ್ಥಾನ)

Prímus¹ ಪ್ರೈಮಸ್ (ಗು.) (ಹುಡುಗರ ಪಾಠಶಾಲೆಯಲ್ಲಿ) ಆ ಹೆಸರಿನ(ವರಲ್ಲಿ) ಹಿರಿಯ, ಹಳಬ [ಉದಾ., Jones p. ಮೊದಲನೆಯ, ಹಿರಿಯ, —ಜೋನ್ಸ್ (ಸಾ., ಬರವಣಿಗೆಯಲ್ಲಿ Jones i.). ಹೀಗೆಯೆ Secundus (ii), tertius (iii), ಇತ್ಯಾದಿ]. [P. inter pares (L) (—ಪೇರೀಸ್) ಸರೀಕರಲ್ಲಿ (ಸರಿಸಮಾನರಲ್ಲಿ) ಹಿರಿಯ ; ಸಹೋದ್ಯೋಗಿ ಮಂಡಲಿಯ ಪರವಾಗಿ ಮಾತನಾಡುವವನು, ಹಿರಿಯ]

Prímus² ಪ್ರೈಮಸ್ (ನಾ.) ಎಣ್ಣೆಯನ್ನು ಹಬೆಯಾಗಿಸಿ ಉರಿಸಿ ಅಡಿಗೆ, ಮೊ. ನ್ನು ಮಾಡಲು ಒದಗಿಸಿದ ಒಂದು ತೆರದ ಅಗ್ಗಿಷ್ಟಿಕೆ : ಎಣ್ಣೆಯಗ್ಗಿಷ್ಟಿಕೆ (ವ್ಯಾಪಾರದ ಹೆಸರು)

Prince ಪ್ರಿನ್ಸ್ (ನಾ.) (ಈಗ ಅಲಂ.) ಆಳುವ ಪ್ರಭು ; ದೊರೆ ; ರಾಜ (P. of Peace ಯೇಸು ಕ್ರಿಸ್ತ. P. of darkness, the air, the world, etc. ಸೈತಾನ). ಸಣ್ಣ ಸಂಸ್ಥಾನದ, ಆಶ್ರಿತ ಸಂಸ್ಥಾನದ, —ಅರಸು ; ಸಾಮಂತ ರಾಜ ; ರಾಜಕುಮಾರ, ರಾಜ ಕುಟುಂಬದವನು. (ಮು., ಗ್ರೇಟ್ ಬ್ರಿಟನ್ನಿನಲ್ಲಿ) ರಾಜನ (ಅಥವಾ ರಾಣಿಯ) ಮಗ, ಮೊಮ್ಮಗ (=P. of the blood). [P. of Wales ಬ್ರಿಟಿಷ್ ಸಿಂಹಾಸನಕ್ಕೆ ಉತ್ತರಾಧಿಕಾರಿ ; ಬ್ರಿಟಿಷರ ಯುವರಾಜ, ಎಳೆಯರಸ (P. o. W.'s feathers ಉಷ್ಟ್ರಪಕ್ಷಿಯ ಮೂರು ಗರಿಗಳ ತುರಾಯಿ). P. Consort ಆಳುತ್ತಿರುವ ರಾಣಿಯ ಗಂಡ (ಒಬ್ಬ ರಾಜ ಕುಮಾರನಾಗಿರಬೇಕು). P. of Denmark ಡೆನ್‌ಮಾರ್ಕಿನ ರಾಜ ಕುಮಾರ [Hamlet without the P. of D. ಜೀವಾಳ ಕಳೆದುಹೋದ ವಸ್ತು (' ರಾಮನಿಲ್ಲದ ರಾಮಾಯಣ' ಎಂಬಂತೆ)]. (ಪರದೇಶಗಳ) ಡ್ಯೂಕಿಗೆ ಕೆಳಗಿನ ದರ್ಜೆಯ ಶ್ರೀಮಂತ(ನಿಗೆ ಇಂಗ್ಲಿಷರ ಪ್ರ.). ಡ್ಯೂಕ್, ಮಾರ್ಕ್ವಿಸ್, ಅರ್ಲ್ (ದರ್ಜೆಯ ಶ್ರೀಮಂತರಿಗೆ ಕೆಲವು ಸಂದರ್ಭಗಳಲ್ಲಿ ಮರ್ಯಾದೆಯ ಪದವಾಗಿ ಪ್ರ.). (ಕ್ರೈಸ್ತ) ಕಾರ್ಡಿನಲ್ ಅಧಿಕಾರಿಯ ಬಿರುದು [P. of the (Holy Roman) Church]. (ರೂಪ.) ಪ್ರಮುಖ, ಅಗ್ರಗಣ್ಯ (P. of poets ಕವಿ ಚಕ್ರವರ್ತಿ. P. of liars ಸುಳ್ಳಾಡಿಗರ ದೊರೆ. Merchant prince ವಣಿಕ ರಾಜ). P. bishop ರಾಜಕುಮಾರ(ನಾದ) ಬಿಷಪ್. P. Regent ರಾಜ ಪ್ರತಿನಿಧಿಯಾಗಿ ರಾಜ್ಯಭಾರ ಮಾಡುವ ರಾಜಕುಮಾರ [ಉದಾ., (ಇಂಗ್ಲೆಂಡಿನಲ್ಲಿ) ತರುವಾಯ George IV ಎಂಬ ದೊರೆಯಾದ ಜಾರ್ಜ್ ರಾಜಕುಮಾರ] ; ಪ್ರತಿನಿಧಿ ರಾಜ್ಯಾಧಿಪತಿ. P. royal ಆಳುವ ದೊರೆಯ ಹಿರಿಯ ಮಗ : ಯುವರಾಜ. P. Rupert's drops ಬಾಲದಂತಿರುವ ಕೊನೆಯನ್ನು ಮುರಿದುಹಾಕಿದರೆ ಚೂರು ಚೂರಾಗಿ ಸಿಡಿದುಹೋಗುವ ಮೊರೆತೊಟ್ಟಿನಾಕಾರದ ಬಾಲವುಳ್ಳ ಗಾಜು ಗುಂಡುಗಳು. P.'s feather ಹಲವು ಬಗೆಯ ಸಸ್ಯ. P.'s metal ಮೂರು ಭಾಗ ತಾಮ್ರವೂ ಒಂದು ಭಾಗ ಸತುವೂ ಸೇರಿ ಆದ ಚಿನ್ನದ ಬಣ್ಣದ ಒಂದು ಮಿಶ್ರ ಲೋಹ. **Príncedom** (ನಾ.) ; **Príncekin** (ನಾ.) (ಹಾಸ್ಯ ಪ್ರ.) ಸಣ್ಣ, ಗಿಡ್ಡ, ಪುಟ್ಟ, —ದೊರೆಮಗ. **Príncelet** (ನಾ.) ; **Prínceling** (ನಾ.) ಪುಟ್ಟ ಅಥವಾ ಅಂದವಾದ ದೊರೆಮಗ ; ಸಣ್ಣ ಸಂಸ್ಥಾನದ ದೊರೆ ; ಪಾಳೆಯಗಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Príncelike (ಗು.); **Prínceship** (ನಾ.); **Príncely** (ಗು.) ದೊರೆಯ, ದೊರೆಗೆ ತಕ್ಕ; ರಾಜ ಯೋಗ್ಯ; ಸಮೃದ್ಧವಾದ; ವೈಭವದಿಂದ ಕೂಡಿದ. **Prínceliness** (ನಾ.); **Príncess, Princéss** (ನಾ.) (ಪ್ರಾಚೀ. ಪ್ರ.) ಅರಸಿ, ರಾಣಿ. ದೊರೆಯ, ರಾಜಕುಮಾರನ, —ಹೆಂಡತಿ. ರಾಜನ ಅಥವಾ ರಾಣಿಯ ಮಗಳು, ಮೊಮ್ಮಗಳು; ರಾಜಕುಮಾರಿ (=P. of the blood). P royal ದೊರೆಯ ಹಿರಿಯ ಮಗಳು. P. Regent (ರಾಜ)ಪ್ರತಿನಿಧಿಯಾಗಿ ಆಳುವ ರಾಜಕುಮಾರಿ; —ಆಳುವ ರಾಜಕುಮಾರನ ಹೆಂಡತಿ. **Príncessship** (ನಾ.)

Príncipal ಪ್ರಿನ್ಸಿಪಲ್ (ಗು., ನಾ.) (ಪದವಿಯಲ್ಲಿ, ಗುರುತ್ವದಲ್ಲಿ) ಮೊದಲನೆಯ, ಅಗ್ರಗಣ್ಯ; ಮುಖ್ಯ, ಪ್ರಮುಖ, ಪ್ರಧಾನ (Their p. food is potatoes. The p. town of the district. The p. persons concerned. A p. cause of his failure). (ಸಾಲ ಕೊಟ್ಟ ಅಥವಾ ಒಂದು ಉದ್ಯಮದಲ್ಲಿ ಹಾಕಿದ ಹಣದ ವಿಷಯದಲ್ಲಿ) ಅಸಲಿನ, ಬಂಡವಾಳದ. [(ವ್ಯಾ.) P. sentence, clause ಪ್ರಧಾನ ವಾಕ್ಯ, ವಾಕ್ಯಾಂಶ. P. parts (of a verb) (ಕ್ರಿಯಾಪದದ) ಪ್ರಧಾನ ರೂಪಗಳು (ಇಂಗ್ಲಿಷ್ ವ್ಯಾಕರಣದಲ್ಲಿ: ವರ್ತಮಾನ, ಭೂತ, ಭೂ. ಕೃ. ಕಾಲ ರೂಪಗಳು; ಉದಾ., Sing, Sang, Sung)]. (ನಾ.) ಮುಖಂಡ; ನಾಯಕ; ಆಡಳಿತಗಾರ; ಹಿರಿಯ; ಅಧ್ಯಕ್ಷ. ಪ್ರೌಢ ವಿದ್ಯಾಶಾಲಾಧ್ಯಕ್ಷ (Lady p. —ಅಧ್ಯಕ್ಷಿಣಿ) [**Príncipalship** (ನಾ.)]. (ತಾನು ಯಾವನ ಕಾರ್ಯಭಾರಿಯಾಗಿರುವನೋ ಅ) ಯಜಮಾನ, ಮುಖ್ಯಸ್ಥ (I must consult my p.). [ತಾನೇ ಅಪರಾಧಿಯಾಗಿಯೊ (P. in the first degree), ಅಪರಾಧಕ್ಕೆ ಸಹಾಯಕನಾಗಿಯೊ (P. in the second degree)] ತಕ್ಸೀರಿಗೆ ನೇರವಾಗಿ ಜವಾಬ್ದಾರನಾದವನು; ಮುಖ್ಯಾಪರಾಧಿ. (ತಾನು ಯಾರಿಗೆ ಜಾಮೀನಾಗಿರುವನೋ ಅ) ಮುಖ್ಯಸ್ಥ, ಮೂಲಕರ್ತ. (ದ್ವಂದ್ವ ಯುದ್ಧದಲ್ಲಿ) ಹೋರಾಟಕ್ಕೆ ನಿಂತವನು; ಹೋರಾಳು. ಚಾವಣಿಯ ಮುಖ್ಯ ತೊಲೆ(ಗಳಲ್ಲೊಂದು). ಅಸಲು; ಮೂಲ ಧನ. ಆರ್ಗನ್ ವಾದ್ಯದಲ್ಲಿ ಒಂದೇ ನಾದ ಗುಣದ ಪಿಳ್ಳಂಗೋವಿಗಳಲ್ಲೊಂದು. **Principálity** —ಪ್ಯಾಲಿಟಿ (ನಾ.) ಸಣ್ಣ ದೊರೆಯ, ಪಾಳೆಯಗಾರನ, —ಆಳಿಕೆ, ಪ್ರಭುತ್ವ; (ಸಣ್ಣ) ಸಂಸ್ಥಾನ; ಪಾಳೆಯಪಟ್ಟು (The p. ವೇಲ್ಸ್ ಪ್ರಾಂತ). (ಬ. ವ. ದಲ್ಲಿ) ದೇವದೂತರಲ್ಲಿ ಒಂದು ವರ್ಗ. **Príncipally** (ಕ್ರಿ. ವಿ.) ಬಹುಮಟ್ಟಿಗೆ; ಮುಖ್ಯವಾಗಿ.

Principálity. Principal ನೋಡಿ.

Príncipate ಪ್ರಿನ್ಸಿಪೆಟ್ (ನಾ.) (ರೋಮನ್ ಚರಿತ್ರೆ) ಕೆಲವು ಪ್ರಜಾಪ್ರಭುತ್ವ ಪದ್ಧತಿಗಳನ್ನು ಉಳಿಸಿಕೊಂಡಿದ್ದ ಆದ್ಯ ಚಕ್ರವರ್ತಿಗಳ ಆಳಿಕೆ. (ಸಣ್ಣ) ದೊರೆಯ ಸಂಸ್ಥಾನ (=Principality)

Príncíple ಪ್ರಿನ್ಸಿಪ್‌ಲ್ (ನಾ.) ಮೂಲ; ಮೂಲ ತತ್ತ್ವ, ಧಾತು (Held water to be the first p. of all things ಎಲ್ಲ ಪದಾರ್ಥಗಳಿಗೂ ಮೂಲ ತತ್ತ್ವ ನೀರು ಎಂದು ಗಣನೆಯಿತ್ತು). (ತರ್ಕ, ಕಾರ್ಯ, ಮೊ. ಗಳಿಗೆ) ಆಧಾರವಾಗಿರುವ ಮೂಲ ತತ್ತ್ವ. [(First) principles of economics ಅರ್ಥ ಶಾಸ್ತ್ರದ (ಮೂಲ) ತತ್ತ್ವಗಳು]. (ಭೌ. ವಿ.) ಸಾಮಾನ್ಯ ನಿಯಮ (ಅನೇಕ ವೇಳೆ ಕಂಡುಹಿಡಿದವನ ಹೆಸರಿನೊಂದಿಗೆ ಪ್ರ.: Pascal's p.). (ಪ್ರಯೋಗಕ್ಕೆ ಮಾರ್ಗದರ್ಶಕವಾದ) ಸರ್ವಸಾಮಾನ್ಯ, —ವಿಧಿ, ತತ್ತ್ವ, ಸೂತ್ರ (Moral principles ನೀತಿ ತತ್ತ್ವಗಳು. Conservative principles. A dangerous p. ಅಪಾಯಕರವಾದ ತತ್ತ್ವ). [**-principled** (ಗು.)]. (ಬ. ವ., ಜಾತ್ಯೇಕವಚನ) ವ್ಯಕ್ತಿ ಸ್ವಂತ ನಡೆವಳಿಕೆಗಾಗಿ ಇಟ್ಟುಕೊಂಡಿರುವ ನಿಯಮ: ಸ್ವಂತ ನಿಯಮ [A man of high p. ಉದಾತ್ತ ನೀತಿನಿಷ್ಠೆಯ ಮನುಷ್ಯ. Has ability but no principles ಸಾಮರ್ಥ್ಯವಿದೆ (ಆದರೆ) ನೀತಿನಿಷ್ಠೆಯಿಲ್ಲ. On p. ನೀತಿ ದೃಷ್ಟಿಯಿಂದ, ತತ್ತ್ವ ದೃಷ್ಟಿಯಿಂದ. I refuse on p. ತತ್ತ್ವ ದೃಷ್ಟಿಯಿಂದ ನಿರಾಕರಿಸುತ್ತೇನೆ (ಸ್ವಾರ್ಥ ದೃಷ್ಟಿಯಿಂದಲ್ಲ)]. ಯಂತ್ರ, ಮೊ. ಗಳ ಕಾರ್ಯದಲ್ಲಿ ಕಂಡುಬರುವ ಪ್ರಕೃತಿ ನಿಯಮ, ಕಾರ್ಯತತ್ತ್ವ (In all these instruments the p. is the same). (ರ. ವಿ.) ಒಂದು ಪದಾರ್ಥದ (ಮು., ಅದರ ಯಾವುದಾದರೂ ಗುಣಕ್ಕೆ ಕಾರಣವಾದ) ಘಟಕ (ದ್ರವ್ಯ) (ಉದಾ., Bitter, colouring, p.)

Prink ಪ್ರಿಂಕ್ (ಕ್ರಿ.) ಠೀಕು —ಮಾಡು, ಮಾಡಿಕೊ; (ತೊಡಿಗೆ, ಮೊ. ಗಳಿಂದ) ಸಿಂಗರಿಸು, ಸಿಂಗರಿಸಿಕೊ (*Up* ಉಪ. ದೊಡನೆ). (ಹಕ್ಕಿ) ಪುಕ್ಕ ಸವರಿಸಿಕೊ, ನೀಟು ಮಾಡಿಕೊ.

Print ಪ್ರಿಂಟ್ (ನಾ., ಕ್ರಿ. ಸಕ.) ಮೇಲೊತ್ತಿದ ವಸ್ತುವಿನ ತಲದ ಆಕೃತಿಯನ್ನು ತೋರಿಸುವ ಉಬ್ಬು ತಗ್ಗುಗಳು: ಒತ್ತು ಗುರುತು: ಮುದ್ರೆ [Finger-p. (Finger ನೋಡಿ). Footp. ಹೆಜ್ಜೆ ಗುರುತು] [**Príntless** (ಗು.)]. ಚಿತ್ರ ಒತ್ತಿದ ಹತ್ತಿಯ ಬಟ್ಟೆ; ಚೀಟಿ ಬಟ್ಟೆ [(ವಿಶೇಷಣವಾಗಿ) P. dress]. ಅಚ್ಚು; ಮುದ್ರಣ; ಅಚ್ಚಿನ ಮೊಳೆ, —ಅಕ್ಷರ [Large, small, clear, p. ದೊಡ್ಡ, ಸಣ್ಣ, ಸ್ಫುಟವಾದ, ಮುದ್ರಣ (ಅಕ್ಷರ)]. ಮುದ್ರಿತ ರೂಪದಲ್ಲಿಯ ಭಾಷೆ; ಮುದ್ರಿತವಾಗಿರುವುದು. [Book is in p. ಪುಸ್ತಕ— (೧) ಅಚ್ಚಾಗಿದೆ, (೨) ಮಾರಾಟಕ್ಕಿದೆ. Out of p. (ಪುಸ್ತಕ) ಪ್ರತಿಗಳೆಲ್ಲ ಖರ್ಚಾಗಿ ಹೋಗಿವೆ. (ಬರಹಗಾರನ ವಿಷಯದಲ್ಲಿ) Rush into p. ಬರೆದದ್ದನ್ನು ಸರಿ ನೋಡದೆ ಆತುರದಿಂದ (ಗ್ರಂಥವನ್ನು) ಮುದ್ರಣ ಮಾಡಿ ಪ್ರಕಟಿಸು, (ಲೇಖನವನ್ನು) ಪತ್ರಿಕೆಗೆ ಕಳಿಸು; ಆತುರವಾಗಿ ಅಚ್ಚುಹಾಕಿಸು]. (ಮು., ಅಮೆ. ಸಂ.) ಮುದ್ರಿತ ಪ್ರಕಟನೆ (ಮು., ವೃತ್ತಪತ್ರಿಕೆ); (ಪಡಿಯಚ್ಚಿನಿಂದ ಅಥವಾ ಚಿತ್ರಫಲಕದಿಂದ) ಮುದ್ರಿಸಿದ ಚಿತ್ರ, ನಕ್ಷೆ. (ಛಾಯಾಚಿತ್ರ) ವಿಷಮ ಫಲಕದಿಂದ ಎತ್ತಿದ (ಸಮ) ಚಿತ್ರ; ಛಾಯಾಚಿತ್ರ ಮುದ್ರಿತ ಪ್ರತಿ. (P. hand, letters ಅಚ್ಚಿನಕ್ಷರದ ಬರವಣಿಗೆ, —ಅಂಥ ಅಕ್ಷರಗಳು. P.-seller ಕೆತ್ತನೆಯ, ನಕಾಸೆಯ, ಚಿತ್ರ ಪ್ರತಿಗಳನ್ನು ಮಾರುವವನು. P.-shop ಅವನ ಅಂಗಡಿ. P.-works ಹತ್ತಿಯ ಬಟ್ಟೆಗಳಿಗೆ ಅಚ್ಚೊತ್ತುವ ಕಾರಖಾನೆ). (ಕ್ರಿ.) ಮುದ್ರೆಯೊತ್ತು; ಅಚ್ಚೊತ್ತು; ಠಸ್ಸೆ ಹಾಕು (*With, on, in* ಉಪ. ದೊಡನೆ); (ರೂಪ.) (ಭಾವ, ದೃಶ್ಯ, ಮೊ. ನ್ನು) ಮನಸ್ಸಿನಮೇಲೆ, ಜ್ಞಾಪಕದಲ್ಲಿರುವಂತೆ, —ಅಚ್ಚೊತ್ತು, ನಾಟು; (ಪುಸ್ತಕ, ಚಿತ್ರ, ಮೊ. ನ್ನು ಕಾಗದ, ಮೊ. ಗಳ ಮೇಲೆ) ಅಚ್ಚು ಹಾಕು, ಮುದ್ರಣ ಮಾಡು; (ಗ್ರಂಥಕರ್ತ, ಸಂಪಾದಕ—ಇವರ ವಿಷಯದಲ್ಲಿ) (—ನ್ನು) ಮುದ್ರಣ ಮಾಡಿಸು, ಅಚ್ಚು ಹಾಕಿಸು; ಮುದ್ರಿಸಿ ಪ್ರಕಟಿಸು (Not bound to p. every opinion you hold). ಮುದ್ರಣಾಕ್ಷರದಂತೆ ಬರೆ. (ಬಟ್ಟೆಯ ಮೇಲೆ) ಬಣ್ಣ ಬಣ್ಣದ ಚಿತ್ರಾಲಂಕಾರಗಳನ್ನು ಮುದ್ರಣ ಮಾಡು; ಕಾಗದ, ಮೊ. ಗಳ ಮೇಲಿನ ವರ್ಣಚಿತ್ರಗಳನ್ನು ನುಣುಪು ಕೊಟ್ಟಿಲ್ಲದ ಮಣ್ಣಿನ ಪಾತ್ರೆಯ ಮೇಲ್ಮೈಗೆ ವರ್ಗಾಯಿಸು. (ಛಾಯಾಚಿತ್ರ) ವಿಷಮ ಫಲಕದ ಮೂಲಕ ಬೆಳಕು ಹರಿಸಿ (ಸಮ ಚಿತ್ರವನ್ನು) ತಯಾರಿಸು (P. out, off). **Príntable** (ಗು.); **Prínter** (ನಾ.) (ಕ್ರಿಯಾರ್ಥಗಳಲ್ಲಿ). (ಗ್ರಂಥ) ಮುದ್ರಣಕಾರ; ಮುದ್ರಣಾಲಯವಿಟ್ಟಿರುವವನು; ಮುದ್ರಣ ಯಂತ್ರ. P.'s devil (Devil ನೋಡಿ). P.'s mark ಮುದ್ರಣಕಾರನ ಗುರುತು, ಸಂಜ್ಞೆ. P.'s pie = Pie³. **Prínting** (ನಾ.) (ಕ್ರಿಯಾರ್ಥಗಳಲ್ಲಿ). P.-ink ಮುದ್ರಣದ ಮಸಿ. P.-press ಮುದ್ರಣ ಯಂತ್ರ; ಅಚ್ಚುಕೂಟ; ಮುದ್ರಣಾಲಯ.

Príor¹ ಪ್ರೈಅರ್ (ನಾ.) (ಕ್ರೈಸ್ತ) ಮಠದ ಅಥವಾ ಯಾವುದಾದರೂ ಪಂಥದ ಕ್ರೈಸ್ತ ಸಂನ್ಯಾಸಿಗಳ ಮೇಲು ದರ್ಜೆಯ ಅಧಿಕಾರಿ; ಮಠಾಧಿಪತಿ; (ಕ್ರೈಸ್ತ ಸಂನ್ಯಾಸಿ ಮಠದಲ್ಲಿ) ಮಠಾಧಿಪತಿಯ ಕೆಳಗಿನ ಅಧಿಕಾರಿ. [**Príoress** ಪ್ರೈಒರೆಸ್ (ನಾ., ಸ್ತ್ರೀ.)]. (ಚರಿತ್ರೆ) ಕೆಲವು ಇಟ್ಯಾಲಿಯನ್ ಪ್ರಜಾಪ್ರಭುತ್ವಗಳಲ್ಲಿ ಪ್ರಧಾನ ದಂಡಾಧಿಕಾರಿ. **Príorship** (ನಾ.); **Príorate** (ನಾ.) —ಯ ಅಧಿಕಾರ (ಕಾಲ), ಪದವಿ. **Príory** ಪ್ರೈಒರಿ (ನಾ.) Prior ಅಥವಾ Prioress ಎಂಬ ಕ್ರೈಸ್ತ ಸಂನ್ಯಾಸಿಗಳ ಅಥವಾ ಸಂನ್ಯಾಸಿನಿಯರ ಮಠ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Prior[2] ಪ್ರೈಅರ್ (ಗು., ಕ್ರಿ. ವಿ.) (ಕಾಲದಲ್ಲಿ) ಮುಂಚಿನ, ಹಿಂದಣ; (ಕಾಲದಲ್ಲಾಗಲಿ, ಕ್ರಮದಲ್ಲಾಗಲಿ, ಪ್ರಾಮುಖ್ಯತೆಯಲ್ಲಾಗಲಿ) ಮೊದಲಿನ, ಪೂರ್ವದ, ಅಗ್ರ (*To* ಉಪ. ಜೊಡನೆ). (ಕ್ರಿ. ವಿ.) ಮುಂಚೆ, ಹಿಂದೆ (Existing p. to his appointment ಅವನ ನೇಮಕಕ್ಕೆ ಮೊದಲೇ ಇದ್ದ). **Priórity** —ಅ— (ನಾ.)

Prise =**Prize**[2].

Prísm ಪ್ರಿಸ್ಮ್ (ನಾ.) ಮುಪ್ಪಟ್ಟೆಯ ರೂಪದ ಒಂದು ಘನಾಕೃತಿ (ಇದರ ಎರಡು ಕೊನೆಗಳೂ ಸದೃಶವೂ ಸಮವೂ ಸಮಾಂತರವೂ ಆದ ಋಜು ರೇಖಾಕೃತಿಗಳು; ಪಕ್ಕಗಳು ಸಮಾಂತರ ಚತುರ್ಭುಜಗಳು); 'ಪ್ರಿಸ್ಮ್'; (ಸಾ., ಮೂರು ಪಕ್ಕಗಳುಳ್ಳದ್ದಾಗಿ, ಎರಡು ಪಕ್ಕಗಳು ಲಘು ಕೋನದಲ್ಲಿ ಅಳವಟ್ಟು ಕಿರಣಗಳನ್ನು ವಕ್ರೀಕರಿಸುವ ಗುಣವುಳ್ಳದ್ದಾಗಿ) ಪಾರದರ್ಶಕದ ಒಡಲುಳ್ಳ ಇಂಥ ಘನಾಕೃತಿ: ಮುಪ್ಪಟ್ಟೆಯ ಗಾಜು; 'ಲಸ್ತರು'; ಪ್ರಿಸ್ಮ್. (ಶಿಥಿಲ ಪ್ರ.) ಪ್ರಿಸ್ಮಮಿನ ಮೂಲಕ ಬೆಳಕು ಹರಿದು ವಕ್ರೀಭವನವಾಗಿ ಏರ್ಪಟ್ಟ ವರ್ಣ ಪಟಲ. (ಬ. ವ. ದಲ್ಲಿ) ಹೀಗೆ ದೊರೆತ ವಿವಿಧ ವರ್ಣಗಳು (ಕಾಮನಬಿಲ್ಲಿನ ಏಳು ಬಣ್ಣಗಳು). [Prunes & P. (Prune[1] ನೋಡಿ)]. **Prísmal** (ಗು.); **Prismátic** —ಮ್ಯಾಟಿಕ್ (ಗು.) ಪ್ರಿಸ್ಮಮಿನ(ಂಥ). (P. powder ರವೆಗಳು ಷಟ್ಕೋನ ಪ್ರಿಸ್ಮಮಿನಾಕಾರದಲ್ಲಿರುವ ಬಂದೂಕು ಮದ್ದು). (ಬಣ್ಣಗಳ ವಿಷಯದಲ್ಲಿ) ಪಾರದರ್ಶಕದ ಪ್ರಿಸ್ಮಮಿನ ಮೂಲಕ ಬೆಳಕು ಹೊರಹೊರಟುದರಿಂದ ಚೆದರಿ ಹುಟ್ಟಿದ; ಉಜ್ಜ್ವಲ [The p. colours ಪ್ರಿಸ್ಮಮಿನ ಮೂಲಕ ಬಿಳಿಯ ಕಿರಣ ಹಾಯ್ದುದರಿಂದ ಒಡೆದು ಆದ ಏಳು ಬಣ್ಣಗಳು; ಕಾಮನಬಿಲ್ಲಿನ ಏಳು ಬಣ್ಣಗಳು. P. compass ಮೋಜಣಿಯಲ್ಲಿ, ಒಂದು ವಸ್ತುವಿನ ಕೋನ ಸ್ಥಾನವನ್ನು ನೇರವಾಗಿ ಅಳೆಯಲಾಗುವ ಒಂದು ಸಲಕರಣೆ (ಇದರಲ್ಲಿ, ವಸ್ತುವು ದೃಷ್ಟಿ ಪಥದಲ್ಲಿರುವಾಗಲೇ ಅದರ ಕೋನಾಂಶದ ಅಳತೆಯ ಗುರುತನ್ನು ಓದಲು ಸಾಧ್ಯವಾಗುವಂತೆ ಮುಪ್ಪಟ್ಟೆಯ ಗಾಜೊಂದನ್ನು ಅಳವಡಿಸಿದೆ)]. **Prismátically** (ಕ್ರಿ. ವಿ.); **Prísmy** (ಗು.) =Prismatic; ಪ್ರಿಸ್ಮ್ ಉಳ್ಳ. **Prísmoid** (ನಾ.) ಪ್ರಿಸ್ಮ್ ಕಲ್ಪ (ಇದರಲ್ಲಿ ತುದಿಗಳು ಸದೃಶವೂ ಸಮಾಂತರವೂ ಆಗಿದ್ದರೂ ಅಸಮವಾದ ಬಹುಭುಜಾಕೃತಿಗಳಿರುತ್ತವೆ). **Prismoídal** (ಗು.)

Príson ಪ್ರಿಸ್ನ್ (ನಾ., ಕ್ರಿ. ಸಕ.) ಸೆರೆಮನೆ; ಬಂದೀಖಾನೆ; ಜೈಲು; ತುರಂಗ; ಕಾರಾಗೃಹ; ಸೆರೆ; ಬಂಧನ [Put (person) in p. ಸೆರೆಯಲ್ಲಿಡು; ಬಂಧನದಲ್ಲಿಡು]. [P.-bird =Gaol-bird (Gaol ನೋಡಿ). P.-breaking ಕಾನೂನು ಮೇರೆಗೆ ಬಂದಿಯಾಗಿರುವವನು ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗುವುದು. P.-breaker (ನಾ.). P. editor ತನ್ನ ಪತ್ರಿಕೆಯಲ್ಲಿ ಬರುವ ಲೇಖನಗಳಿಗೆಲ್ಲ ಜವಾಬ್ದಾರಿ ವಹಿಸಿ, ಲೇಖನ ವಿಷಯದ ಅಪರಾಧಕ್ಕಾಗಿ ವಿಧಿಸಿದ ಕಾರಾಗೃಹ ವಾಸವನ್ನು ಅನುಭವಿಸುವ ವೃತ್ತಪತ್ರಿಕೆಯ ಸಂಪಾದಕ. P.-house (ಸಾ., ಅಲಂ.) ಸೆರೆಮನೆ]. (ಕ್ರಿ.) (ಕಾವ್ಯ, ಅಲಂ.) ಸೆರೆ ಹಾಕು, ಬಂಧನದಲ್ಲಿಡು. **Prísoner** ಪ್ರಿಸ್ನರ್ (ನಾ.) ಬಂದಿ; ಕೈದಿ; ಸೆರೆ(ಯಾಳು) (P. at the bar ಆಪಾದಿತನಾಗಿ ವಿಚಾರಣೆ ಪಡೆಯುತ್ತಿರುವ ಬಂದಿ. P. of State, State p. ರಾಜಕೀಯ ಕಾರಣಗಳಿಗಾಗಿ ಬಂಧಿತನಾದವನು: ರಾಜಕೀಯ ಕೈದಿ). ಯುದ್ಧದಲ್ಲಿ ಸೆರೆ ಸಿಕ್ಕಿದವನು; ಯುದ್ಧ ಬಂದಿ (=P. of war). Take (person) p. (ಒಬ್ಬನನ್ನು) ಸೆರೆ ಹಿಡಿ, ಕೈದು ಮಾಡು. (ರೂಪ.) Am a p. to my room *or* chair (ಕಾಯಿಲೆ, ಮೊ. ಗಳಿಂದ) ನನ್ನ ಕೋಣೆಯಲ್ಲಿ ಅಥವಾ ಕುರ್ಚಿಯ ಮೇಲೆ ಬಂಧಿತನಾಗಿದ್ದೇನೆ. Made her hand a p. ಅವಳ ಕೈಯನ್ನು ಬಂಧಿಸಿದನು.

Prístine ಪ್ರಿಸ್‌ಟ್ಟೈ(ಟಿ)ನ್ (ಗು.) ಆದಿ ಸ್ಥಿತಿಯ; ಹಿಂದಿನ ನಿರ್ಮಲ ಸ್ಥಿತಿಯ.

Príthee ಪ್ರಿದಿ (ಭಾವ. ಅವ್ಯ.) (ಪ್ರಾಚೀ. ಪ್ರ.) ಬೇಡಿಕೊಳ್ಳುತ್ತೇನೆ; ದಯವಿಟ್ಟು, ಕೃಪೆಮಾಡಿ (Tell me, p.) [(I) pray thee ಎಂಬುದರ ವಿಕೃತ ರೂಪ]

Prívacy. **Private** ನೋಡಿ.

Prívate ಪ್ರೈವೆ(ವಿ)ಟ್ (ಗು., ನಾ.) ಸಾರ್ವಜನಿಕ ಅಥವಾ ಸರ್ಕಾರಿ ಅಧಿಕಾರದಲ್ಲಿಲ್ಲದ; ಸ್ವಕೀಯ; ಖಾಸಗಿ; ಆಪ್ತ; ವ್ಯಕ್ತಿಗತ. (ದರ್ಜೆಯಾಗಲಿ ಗೌರವದ ಅಂಕಿತವಾಗಲಿ ಇಲ್ಲದ) ಸಾಮಾನ್ಯ ಸೈನಿಕ (=P. soldier). [P. member (of House of Commons) ಮಂತ್ರಿ ಮಂಡಲದಲ್ಲಿ ಸೇರಿಲ್ಲದ ಶಾಸನ ಸಭೆಯ ಸದಸ್ಯ]. ಜನರಿಗೆ ತಿಳಿಯದಂತೆ, ಬಹಿರಂಗ ಪಡಿಸದೆ, ಗುಟ್ಟಾಗಿ, —ಇಟ್ಟಿರುವ (The matter was kept p. Had p. reasons). ಸರ್ವರಿಗೂ ತೆರೆದಿಲ್ಲದ; ಸ್ವಂತ [P. door, news. Came through p. channels. P. boarding-house, hotel, theatricals. P. view (ಸಾರ್ವಜನಿಕ ಪ್ರದರ್ಶನ ಮಾಡುವ ಮೊದಲು ತೋರಿಸುವ, ಚಿತ್ರಗಳ) ಖಾಸಗಿ ಪ್ರದರ್ಶನ. P. house ಖಾಸಗಿ (ಮನುಷ್ಯನ) ವಾಸದ ಮನೆ (ಅಂಗಡಿ, ಕಚೇರಿ, ಸಾರ್ವಜನಿಕ ಕಟ್ಟಡ, ಮೊ. ಅಲ್ಲ). P. parts ಗೋಪ್ಯಾಂಗಗಳು; ಜನನೇಂದ್ರಿಯಗಳು. P.-protector (ಕ್ರಿಕೆಟ್, ಮೊ. ಆಟಗಳಲ್ಲಿ ಹಾಕಿಕೊಳ್ಳುವ) ಗೋಪ್ಯಾಂಗ ರಕ್ಷಕ. P. school (ಸ್ವಂತ ಲಾಭಕ್ಕಾಗಿ ಇಟ್ಟಿರುವ) ಖಾಸಗಿ ಪಾಠಶಾಲೆ (P. schoolmaster). P. goods, property ಸ್ವಂತ—]. ವೈಯಕ್ತಿಕ (Motives of p. malice ವ್ಯಕ್ತಿ ಸಂಬಂಧದ—). P. bill, act ವ್ಯಕ್ತಿಗೆ, ಒಂದು ಸಂಸ್ಥೆಗೆ, ಮಾತ್ರ ಅನ್ವಯಿಸುವ ಮಸೂದೆ, ಕಾಯಿದೆ. This is for your p. ear ಇದು ನಿಮ್ಮಲ್ಲಿ ಗುಟ್ಟಾಗಿರಬೇಕಾದದ್ದು. P. place ವಿಜನವಾದ, ಏಕಾಂತ, —ಸ್ಥಳ. In p. ಒಳ ಗೋಷ್ಠಿಯಲ್ಲಿ, —ಜೀವನದಲ್ಲಿ. [(ನಾ.) (ಬ. ವ. ದಲ್ಲಿ) =P. parts]. **Prívately** (ಕ್ರಿ. ವಿ.); **Prívacy** ಪ್ರೈ(ಪ್ರಿ)ವಸಿ (ನಾ.) ಸಮಾಜದಿಂದ, ಸಾರ್ವಜನಿಕ ಕಾರ್ಯಕಲಾಪಗಳಿಂದ, ಹೊರಚ್ಚಾಗಿರುವುದು; ಏಕಾಂತ; ವಿವಿಕ್ತತೆ; ಗೋಪ್ಯವಾಗಿರುವುದು (Lived in absolute p. Must disturb your p. In such matters p. is impossible). **Privateér** ಪ್ರೈವಟಿಯರ್ (ನಾ.) [ಶತ್ರು ಜನಾಂಗದಮೇಲೆ ಕಾರ್ಯಾಚರಣೆ ನಡಸುವುದಕ್ಕಾಗಿ (ಮು., ಅವರ ವ್ಯಾಪಾರದ ಹಡಗುಗಳನ್ನು ಹಿಡಿಯುವುದಕ್ಕಾಗಿ) ಸರ್ಕಾರದಿಂದ ಸನ್ನದು ಪಡೆದ] ಶಸ್ತ್ರ ಸಜ್ಜಿತವಾದ ಖಾಸಗಿ ಹಡಗು; ಈ ಹಡಗಿನ ನಾಯಕ. (ಬ. ವ. ದಲ್ಲಿ) ಇದರ ನಾವಿಕರು, ಕಲಾಸಿ ತಂಡ. **Privateéring** (ನಾ.)

Privátion ಪ್ರೈವೇಷನ್ (ನಾ.) ಇಲ್ಲದಂತೆ ಮಾಡುವುದು; ಇಲ್ಲದಿರುವುದು; ಅಗಲಿಕೆ; ಕಳೆತ; ಅಭಾವ, ಕೊರತೆ, ರಾಹಿತ್ಯ (Cold is the p. of heat ಉಷ್ಣದ ಅಭಾವವೇ ಶೀತ). ಜೀವನಕ್ಕೆ ಬೇಕಾದ ಸೌಕರ್ಯಗಳ ಅಭಾವ; ದಾರಿದ್ರ್ಯ; ರಿಕ್ತತೆ (Died of p. Suffered many privations). **Prívative** ಪ್ರಿವಟಿವ್ (ಗು.) ಗುಣಾಭಾವವುಳ್ಳ; ಕೊರತೆಯುಳ್ಳ [Cold is merely p. ಶೀತವೆಂದರೆ, (ಉಷ್ಣ) ರಾಹಿತ್ಯ]. (ಪದಗಳು) ಗುಣಾಭಾವ ಸೂಚಕ. (ವ್ಯಾ.; ಪ್ರತ್ಯಯಗಳ ವಿಷಯದಲ್ಲಿ) ಅಭಾವ ವಾಚಕ [ಉದಾ., (ಗ್ರೀಕ್) a=not: Agnostic]. **Prívatively** (ಕ್ರಿ. ವಿ.)

Privateér. **Private** ನೋಡಿ.

Prívative. **Privation** ನೋಡಿ.

Prívilege ಪ್ರಿವಿಲೆ(ಲಿ)ಜ್ (ನಾ., ಕ್ರಿ. ಸಕ.) (ವ್ಯಕ್ತಿ, ಪಂಗಡ, ಅಧಿಕಾರ, ಮೊ. ಕ್ಕೆ ಸೇರಿದ) ಹಕ್ಕು, ಸೌಕರ್ಯ, ವಿಶೇಷಾಧಿಕಾರ; ಸುಯೋಗ, ಭಾಗ್ಯ, ಗೌರವ; ರಕ್ಷಣೆ; ವಿನಾಯಿತಿ; ಬಿಡುತಿ; [P. of Parliament ಪಾರ್ಲಿಮೆಂಟಿನ (ಎರಡು ಸಭೆಗಳ ಸದಸ್ಯರ) ಹಕ್ಕುಬಾಧ್ಯತೆ, ಸ್ವಾತಂತ್ರ್ಯಗಳು. Breach of p. ಈ ಹಕ್ಕುಬಾಧ್ಯತೆಗಳ ಅತಿಕ್ರಮಣ]. ವಿಶೇಷ ಪ್ರಯೋಜನ; ವಿಶೇಷ ಗೌರವ (To converse with him was a p.). [Bill of p. ತಮ್ಮ ವರ್ಗಕ್ಕೆ ಸೇರಿದವರಿಂದಲೇ (ತಮ್ಮ ಅಪರಾಧ, ಮೊ. ಗಳ) ವಿಚಾರಣೆ ನಡೆಯಬೇಕೆಂಬ ಶ್ರೀಮಂತರ ಹಕ್ಕು, ಬೇಡಿಕೆ. Writ of p. ನಾಗರಿಕ ವ್ಯವಹಾರದ ದಾವೆಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಸ್ತ್ರಗಿರಿಯಾಗಿ, ಬಂಧನದಲ್ಲಿರುವ ವಿಶೇಷ ಗೌರವಸ್ಥನನ್ನು, ಬಿಡುಗಡೆ ಮಾಡ ಬೇಕೆಂದು ಕೊಟ್ಟ ಲಿಖಿತ ರೂಪದ ಆಜ್ಞೆ]. (ವ್ಯಕ್ತಿ, ಸಂಸ್ಥೆ, ಮೊ. ಗಳಿಗೆ ಕೊಟ್ಟ) ಏಕಸ್ವಾಮ್ಯ, ಏಕಾನುಭೋಗದ ಸನ್ನದು [P. cab ಖಾಸಗಿ ಸ್ಥಳಗಳಲ್ಲಿ (ಮು., ರೈಲು ನಿಲ್ದಾಣಗಳಲ್ಲಿ) ಬಾಡಿಗೆಗಾಗಿ ನಿಂತುಕೊಳ್ಳಲು ಅನುಮತಿಯಿರುವ ಸವಾರಿ ಬಂಡಿ]. (ಕ್ರಿ.) ವಿಶೇಷಾಧಿಕಾರ, ಹಕ್ಕು ಬಾಧ್ಯತೆ, —ಕೊಡು; (ಒಬ್ಬನಿಗೆ, ತೆರಿಗೆ, ಮೊ. ದ ಹೊರೆಯಿಂದ) ವಿನಾಯಿತಿ ಕೊಡು (*From* ಉಪ. ದೊಡನೆ). **Prívileged** (ಗು.)

Prívity ಪ್ರಿವಿಟಿ (ನಾ.) ಕಾನೂನು ಅಂಗೀಕರಿಸುವ (ಎರಡು) ಕಕ್ಷಿಗಳ ಯಾವುದಾದರೂ ಸಂಬಂಧ (ಉದಾ., ರಕ್ತ ಸಂಬಂಧ, ಗುತ್ತಿಗೆಯ ಸಂಬಂಧ, ಸೇವಾ ಸಂಬಂಧ). (ಸಂಚು, ಮೊ. ಗಳಿಗೆ) ಗುಟ್ಟಾಗಿ ಸೇರಿರುವುದು, ಷರೀಕಾಗಿರುವುದು.

Prívy ಪ್ರಿವಿ [ಗು., (ಕಾನೂನಿನಲ್ಲಿ ವಿನಾ ಪ್ರಾಚೀ. ಪ್ರ.) ನಾ.] (ವಸ್ತುಗಳು, ಸ್ಥಳಗಳು, ಮೊ. ವು) ಮರೆಯಲ್ಲಿರುವ; ವಿವಿಕ್ತವಾಗಿರುವ; ಗೂಢವಾಗಿರುವ (P. parts ಬಾಹ್ಯ ಜನನೇಂದ್ರಿಯಗಳು). (ಕಾರ್ಯ) ಗುಟ್ಟಾದ, ರಹಸ್ಯವಾದ [**Prívily** (ಕ್ರಿ. ವಿ.)]. [P. to (ಸಂಚು, ಮೊ. ಗಳ) ಗುಟ್ಟು ತಿಳಿದಿದ್ದು, ಅಂತರಂಗಕ್ಕೆ ಸೇರಿದ್ದು]. [P. Council (Council ನೋಡಿ). P. counsellor, -cillor ಆಪ್ತ ಮಂತ್ರಿ; ಆಪ್ತ ಸಲಹೆಗಾರ; ಮು., ಆಪ್ತ ಮಂತ್ರಿ ಮಂಡಲಿಯ ಸದಸ್ಯ (ಸಂಕ್ಷಿಪ್ತ: P.C.). P. purse ದೊರೆಯ ಸ್ವಂತ ವೆಚ್ಚಕ್ಕೆ ಸರ್ಕಾರದ ಹುಟ್ಟುವಳಿಯಿಂದ ಕೊಡುವ ಹಣ; ರಾಜ ಭಾಗ; ಈ ಹಣದ ಆಡಳಿತ ನಡಸುವ ಅಧಿಕಾರಿ: ರಾಜ ಕೋಶಾಧ್ಯಕ್ಷ. P. seal ಮಂತ್ರಿ ಮಂಡಲ ಮುದ್ರೆ. Lord P. Seal ಈ ಮುದ್ರೆಯ ಅಧಿಕಾರಿ]. (ನಾ.) ಮಲಬಾಧೆ ತೀರಿಸಿಕೊಳ್ಳುವ ಏಕಾಂತ ಸ್ಥಳ; ಪಾಯಿಖಾನೆ; ಕಕ್ಕಸು. (ನ್ಯಾ. ಶಾ.) (ಒಂದು ವ್ಯವಹಾರ, ವಿಷಯ, ವಸ್ತು—ಇವುಗಳಲ್ಲಿ) ಪಾಲು, ಬಾಧ್ಯತೆ —ಇರುವವನು; ಪಾಲುದಾರ; ಬಾಧ್ಯ.

Prize[1] ಪ್ರೈಸ್ (ನಾ., ಕ್ರಿ. ಸಕ.) ಬಹುಮಾನ, ಪಾರಿತೋಷಿಕ, ಇನಾಮು, ಮೆಚ್ಚು (ಪಾಠಶಾಲೆಯಲ್ಲಿ, ಪ್ರೌಢ ವಿದ್ಯಾಶಾಲೆಯಲ್ಲಿ, ಇತರರಿಗಿಂತ ಅಧಿಕ ಪಾಂಡಿತ್ಯವುಳ್ಳ ವಿದ್ಯಾರ್ಥಿಗಳಿಗಾಗಲಿ, ವ್ಯಾಯಾಮ ಸ್ಪರ್ಧೆಗಳಲ್ಲಿ ಜಯ ಪಡೆದ ಸ್ಪರ್ಧಿಗಳಿಗಾಗಲಿ, ಅಥವಾ ಪ್ರದರ್ಶನದಲ್ಲಿ ಅತ್ಯುತ್ತಮ ಕಲಾಕೃತಿಯ ಅಥವಾ ಕೈಗಾರಿಕೆಯ ವಸ್ತುವಿನ ಪ್ರದರ್ಶಕರಿಗಾಗಲಿ ಕೊಡುವ ವಿಜಯ ಸೂಚಕವಾದ ಅಥವಾ ಮೆಚ್ಚುಗೆಯ ಬಹುಮಾನ). (ರೂಪ.) ಸಾಧಿಸಲು —ಪ್ರಯತ್ನಪಡುವಂಥದು, ಯೋಗ್ಯವಾದದ್ದು (Missed all the great prizes of life). ಅದೃಷ್ಟದ ಆಟ, ಲಾಟರಿ, ಮೊ. ಗಳಲ್ಲಿ ಜಯಶೀಲರಾದವರಿಗೆ ಕೊಡುವುದಾಗಿ ಗೊತ್ತು ಮಾಡುವ ಹಣ ಅಥವಾ ಹಣಕ್ಕೆ ತಕ್ಕ ವಸ್ತು. [(ವಿಶೇಷಣವಾಗಿ) **P. ox, poem** (ಪ್ರದರ್ಶನ, ಸ್ಪರ್ಧೆ, ಮೊ. ಗಳಲ್ಲಿ) ಬಹುಮಾನ ಪಡೆದ ಎತ್ತು, ಕವನ. **P. fellowship** (ಪರೀಕ್ಷೆಯಲ್ಲಿ ಉತ್ತಮವಾಗಿ ತೇರ್ಗಡೆಯಾದುದಕ್ಕೆ ಕೊಡುವ) ಬಹುಮಾನ ವೇತನ. **P. fellow** ಬಹುಮಾನ ವೇತನಿ. **P.-fight** ಬಹುಮಾನದ ಹಣಕ್ಕಾಗಿ ಮಾಡುವ ಮುಷ್ಟಿಕಾಳಗ; ಪಂದ್ಯದ ಮುಷ್ಟಿಕಾಳಗ. **P.-fighter** (ನಾ.); **-fighting** (ನಾ.). **Prízeman** (ಒಂದು ಗೊತ್ತಾದ) ಬಹುಮಾನ ಪಡೆದವನು (ಉದಾ., Smith's prizeman). **P.-ring** ಬಹುಮಾನದ ಹಣಕ್ಕಾಗಿ ಮಾಡುವ ಮುಷ್ಟಿಕಾಳಗದ ಅಥವಾ ಇದರ ಅಥ್ಲಾಸದ (ಈಗ ಸಾ., ಚದರವಾಗಿರುವ) ಕಣ, ರಂಗ]. (ಕ್ರಿ.) ಹೆಚ್ಚು ಬೆಲೆಯದೆಂದು ಪರಿಗಣಿಸು, ಬಹುಮಾನಿಸು (We p. liberty more than life ನಾವು ಸ್ವಾತಂತ್ರ್ಯವನ್ನು ಜೀವಕ್ಕಿಂತ ಹೆಚ್ಚು ಬೆಲೆಯದೆಂದು ಭಾವಿಸುತ್ತೇವೆ). **Prizeless** (ಗು.)

Prize[2] ಪ್ರೈಸ್ (ನಾ., ಕ್ರಿ. ಸಕ.) ಯುದ್ಧದ ಹಕ್ಕುಗಳ ನಿಯಮಾನುಸಾರವಾಗಿ ಕೊಳ್ಳೆ ಹಿಡಿದ, ಸಮುದ್ರದ ಮೇಲಿನ ಹಡಗು, ಸಾಮಾನು; ಯುದ್ಧದ ಸೂರೆ; ಯುದ್ಧ ಬಹುಮಾನ [P.-court ಯುದ್ಧದ ಸೂರೆಯ ವಿಷಯವಾಗಿ ತೀರ್ಮಾನ ಕೊಡುವ ನೌಕಾ ಖಾತೆಯ ನ್ಯಾಯಸ್ಥಾನ. P.-money ಇವನ್ನು ಮಾರಿ ಬಂದ ಹಣ. Make p. of (cargo, ship) (ಹಡಗಿನ ಸರಕನ್ನು, ಹಡಗನ್ನು) ಯುದ್ಧ ಜಿತವೆಂದು ವಶಪಡಿಸಿಕೊ. Become (lawful) p. (ನ್ಯಾಯ ಸಮ್ಮತವಾದ) ಯುದ್ಧ ಸೂರೆಯಾಗು]. (ರೂಪ.) ಅನಿರೀಕ್ಷಿತ ನಿಧಿ, —ಲಾಭ (See what a p. I have found!). (ಕ್ರಿ.) ಯುದ್ಧದ ಕೊಳ್ಳೆಯಾಗಿ ವಶಪಡಿಸಿಕೊ.

Prize[3], -se ಪ್ರೈಸ್ (ಕ್ರಿ. ಸಕ., ನಾ.) (ಪೆಟ್ಟಿಗೆಯನ್ನು, ಮುಚ್ಚಳ, ಮೊ. ನ್ನು) ಸನ್ನೆಯಿಂದ ಮೀಟಿ ತೆಗೆ (*Up, out* ಉಪ. ದೊಡನೆ). (ನಾ.) ಸನ್ನೆಯ ಕಾರ್ಯಫಲ.

Pro[1] ಪ್ರೋ (ಉಪ.) **P. forma** (ಕ್ರಿ. ವಿ., ಗು.) ಗುರುತಿಗಾಗಿ (ಕೊಟ್ಟ). **P. rata** (ಕ್ರಿ. ವಿ., ಗು.) ದಾಮಾಷಾ ಮೇರೆಗೆ (ಮಾಡಿದ). **P. tanto** ಎಷ್ಟೋ ಅಷ್ಟು. **P. témpore** (ಕ್ರಿ. ವಿ., ಗು.) (ಸಂಕ್ಷಿಪ್ತ: Pro tem.) ತಾತ್ಕಾಲಿಕ(ವಾಗಿ); ಸದ್ಯಕ್ಕೆ; ತತ್ಕಾಲದ (Made secretary pro tem. The pro tem. secretary)

Pro[2] ಪ್ರೋ (ನಾ.; ಬ. ವ. Pros) (ಬಳ. ಮಾ., ಸಂಕ್ಷಿಪ್ತ) = Professional.

Pro-[1] (L) ಪ್ರೋ— (ಪೂ. ಪ್ರ.) ಮುಂದುಗಡೆ, ಓಸ್ಕರ, ಪರವಾಗಿ, ಪ್ರತಿಯಾಗಿ (ಬದಲಾಗಿ), ಸಲುವಾಗಿ—ಎಂಬ ಅರ್ಥಗಳಲ್ಲಿ. **-cathédral** (ಗು., ನಾ.) (ಬಿಷಪ್ಪಿನ) ಮುಖ್ಯ ಆರಾಧನ ಮಂದಿರಕ್ಕೆ ಬದಲಾಗಿ ಬಳಸುವ (ಆರಾಧನ ಮಂದಿರ). **-próctor** (ವಿ. ವಿ. ನಿ. ದಲ್ಲಿ) ಸಹಾಯಕ, ಉಪ, —ಶಿಷ್ಟಿಪಾಲನಾಧಿಕಾರಿ. **-leg** ಕಂಬಳಿ ಹುಳು, ಮೊ. ಗಳ ಮರಿಹುಳುಗಳ ಹೊಟ್ಟೆಯ ಮೇಲಿನ ಮಾಂಸಲವಾದ ಕಾಲು. **-Boer** (ಗು., ನಾ.) ಬೋಅರ್ ಪರ(ನಾದವನು). **-British; -educational; -negro** (ಗು., ನಾ.); **-papist** (ಗು., ನಾ.); **-slavery.**

Pro-[2] (Gk) ಪ್ರೋ— (ಪೂ. ಪ್ರ.) (ಕಾಲ, ಸ್ಥಳ, ಕ್ರಮ, ಮೊ. ಗಳಲ್ಲಿ 'ಮೊದಲ' ಎಂಬರ್ಥದಲ್ಲಿ) (ಗ್ರೀಕಿನಿಂದ ಬಂದ ಪದಗಳಲ್ಲೂ ಆಧುನಿಕ ವೈಜ್ಞಾನಿಕ ಪದಗಳಲ್ಲೂ ಪ್ರ.: ಉದಾ., Pro-ode, Procephalic)

Pro & con (ಕ್ರಿ. ವಿ., ನಾ.) = Pros & cons (Contra ನೋಡಿ)

Próbabilism, etc., Probabílity. Probable ನೋಡಿ.

Próbable ಪ್ರಾಬಬ್‌ಲ್ (ಗು.) ಸಂಭವಿಸುವುದೆಂದು, ನಿಜವಾಗುವುದೆಂದು, —ನಿರೀಕ್ಷಿಸಬಹುದಾದ; ಸಂಭವನೀಯ; ಬಹುಶಃ, ಪ್ರಾಯಶಃ, —ಆಗುವ; ಆಗಬಹುದಾದ; ಆಗುವಂತಿರುವ (Reckon the p. cost. It is p. that he forgot. Gives a p. account of the matter). **Próbably** (ಕ್ರಿ. ವಿ.); **Probabílity** (ನಾ.) ಸಂಭವ(ನೀಯತೆ) [In all p. ಬಹುಶಃ; ಬಹುಮಟ್ಟಿಗೆ. There is no p. of his coming. What are the probabilities? ಸಂಭವ(ನೀಯ) ಸಂದರ್ಭಗಳೇನು? The p. is that he will come]. (ಗಣಿತ) ಅನುಕೂಲ ಪರಿಣಾಮದ ಸಂಖ್ಯೆಗೂ ಒಟ್ಟು ಸಾಧ್ಯ ಸಂಖ್ಯೆಗೂ ಇರುವ ಪ್ರಮಾಣದಿಂದ ಅಳೆದ ಒಂದು ಘಟನೆಯ ಸಂಭವ [ಮೂರು ಕೆಂಪು ಚೆಂಡುಗಳೂ ಏಳು ಬಿಳಿಯ ಚೆಂಡುಗಳೂ ಇರುವ ಒಂದು ಚೀಲದಿಂದ ಕೈಹಾಕಿ ಒಂದು ಕೆಂಪು ಚೆಂಡನ್ನು ಮೊದಲು ತೆಗೆಯಬಹುದಾದ ಸಂಭವವು ಹತ್ತರಲ್ಲಿ ಮೂರು ಭಾಗ $\frac{3}{10}$]. **Próbabilism** ಪ್ರಾಬಬಿಲಿಸ್‌ಮ್ (ನಾ.) ಪ್ರಮಾಣಗಳಲ್ಲಿ ವ್ಯತ್ಯಾಸ ತೋರಿದಾಗ ಯಾವನಾದರೂ ಒಬ್ಬ ಪ್ರಮಾಣಕಾರನನ್ನು ಅನುಸರಿಸಬಹುದೆಂಬ ತತ್ತ್ವ, ವಾದ: ಸೂಕ್ತ ಪ್ರಮಾಣಾನುಸರಣ ವಾದ. ನಿಶ್ಚಯ ಜ್ಞಾನವಿಲ್ಲವಾದರೂ ವ್ಯವಹಾರಕ್ಕೆ ಅವಶ್ಯಕವಿರುವಷ್ಟು ನಂಬಿಕೆಗೆ ಕಾರಣಗಳು ಇರಬಹುದೆಂಬ, ಸಂಭವನೀಯವೆಂಬ ವಾದ: ಸಂಭವ ವಾದ. **Próbabilist** (ನಾ.)

Próbang ಪ್ರೋಬ್ಯಾಂಗ್ (ನಾ.) ಗಂಟಲಿನೊಳಕ್ಕೆ ಹೊಗಿಸುವುದಕ್ಕಾಗಿ ಸ್ಪಂಜು, ಗುಂಡಿ, ಮೊದಲಾದುವನ್ನು ತುದಿಯಲ್ಲುಳ್ಳ ತಿಮಿಂಗಿಲದ ಎಲುಬು ತುಂಡಿನ ಸಲಕರಣೆ (ಶಸ್ತ್ರವೈದ್ಯದ್ದು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Próbate ಪ್ರೋಬೆಟ್ (ನಾ.) ಅಂತಿಮ ಇಷ್ಟಪತ್ರವನ್ನು ಅಧಿಕಾರಿಕ ವಾಗಿ ರುಜುವಾತು ಪಡಿಸುವುದು ; ಅಂತಿಮ ಇಷ್ಟಪತ್ರದ ಪ್ರಾಮಾಣ್ಯ ಸ್ಥಾಪನೆ. ಯಥಾರ್ಥ ಪ್ರತಿಯೊಂಬ ದೃಢೀಕರಣ ಪತ್ರದೊಡನೆ ಕೊಟ್ಟ ಅಂತಿಮ ಇಷ್ಟಪತ್ರದ ನಕಲು. P. duty ತನ್ನ ಅಂತಿಮ ಇಷ್ಟಪತ್ರ ಬರೆದು ಸತ್ತವನ ಸ್ವಂತ ಆಸ್ತಿಯಮೇಲೆ ಹಾಕುವ ತೆರಿಗೆ; ಅಂತಿಮ ಇಷ್ಟಪತ್ರಕ್ಕೆ ನ್ಯಾಯಸ್ಥಾನದ ರುಜುವಾತು ತೆರಿಗೆ.

Probátion ಪ್ರೊಬೇಷನ್ (ನಾ.) (ಮು., ಮತಧರ್ಮ ಸಂಸ್ಥೆ, ಮೊ. ಗಳ ಸದಸ್ಯತ್ವಕ್ಕೆ) ಉಮೇದುವಾರನ ನಡತೆಯನ್ನೂ ಶೀಲವನ್ನೂ ಪರೀಕ್ಷಿಸುವುದು ; ಉಮೇದುವಾರಿಕೆ (ಕಾಲ) (On p. ಪೂರ್ತಿ ಪ್ರವೇಶನಕ್ಕೆ ಮೊದಲು ಪರೀಕ್ಷೆಗೆ ಒಳಗಾಗಿ ; ಪರೀಕ್ಷಾರ್ಥವಾಗಿ). ನೀತಿ ಪರೀಕ್ಷೆ. ತರುಣ ಅಪರಾಧಿಗೆ (ಮು., ಮೊದಲ ಸಲ ತಪ್ಪು ಮಾಡಿದವನಿಗೆ) ವಿಧಿಸಿದ ಶಿಕ್ಷೆಯನ್ನು ಅವನ ಒಳ್ಳೆಯ ನಡತೆಗಾಗಿ ಜಾರಿಮಾಡದೆ ತಡೆದಿಟ್ಟು, ಅವನ ಹಿತಾಭಿಲಾಷಿಯಾಗಿಯೂ ಬುದ್ಧಿಹೇಳುವವನಾಗಿಯೂ ಇರುವವನ ಮೇಲ್ವಿಚಾರಣೆಯಲ್ಲಿಟ್ಟು ಬಿಡುಗಡೆ ಮಾಡುವ ಪದ್ಧತಿ : ಪರೀಕ್ಷಾರ್ಥ ಬಂಧವಿಮೋಚನೆ(ಯ ಪದ್ಧತಿ). P. officer ಹೀಗೆ ಬಿಡುಗಡೆಯಾದ (ತರುಣ) ಅಪರಾಧಿಯ ಮೇಲ್ವಿಚಾರಣೆ ನೋಡಿಕೊಳ್ಳುವ ಅಧಿಕಾರಿ. **Probátionary** (ಗು.) ಪರೀಕ್ಷಾರ್ಥಕ; ಪರೀಕ್ಷಾರ್ಥವಾಗಿ ಮಾಡಿದ ; ಪರೀಕ್ಷೆಯಲ್ಲಿರುವ. **Probátional** (ಗು.) ; **Probátioner** (ನಾ.) ಪರೀಕ್ಷೆಯಲ್ಲಿರುವವನು. ಉಮೇದುವಾರ (ಉದಾ., ಮತ ಸಂಸ್ಥೆಯಲ್ಲ ನೂತನ ಶಿಷ್ಯ). ಪರೀಕ್ಷಾರ್ಥವಾಗಿ ಬಿಡುಗಡೆಯಾದ ಅಪರಾಧಿ. **Probátionership** (ನಾ.) ; **Próbative** ಪ್ರೋಬೆಟಿವ್ (ಗು.) ರುಜುವಾತು ಕೊಡುವ ; ಸಾಕ್ಷ್ಯಾತ್ಮಕ ; ಪ್ರಮಾಣಾತ್ಮಕ.

Probe ಪ್ರೋಬ್ (ನಾ., ಕ್ರಿ. ಸಕ.) ಗಾಯ, ಮೊ. ಗಳ ಸ್ಥಿತಿಯನ್ನು ಪರೀಕ್ಷಿಸಲು ಉಪಯೋಗಿಸುವ ಮೊಂಡು ತುದಿಯ, ಸಾ., ಬೆಳ್ಳಿಯಿಂದ ಮಾಡಿದ, ಶಸ್ತ್ರಚಿಕಿತ್ಸಕನ ಸಲಕರಣೆ : ವ್ರಣಾನ್ವೇಷಕ. (ಕ್ರಿ.) ಅನ್ವೇಷಕದಿಂದ (ಗಾಯ, ದೇಹ ಭಾಗ, ಮೊ. ನ್ನು) ಪರೀಕ್ಷಿಸು; ಬೆದಕು ಮೊನೆಯಾಯುಧದಿಂದ ಚುಚ್ಚು, ಭೇದಿಸು. (ರೂಪ.) (ವ್ಯಕ್ತಿ, ಉದ್ದೇಶ, ವರದಿ, ಮೊ. ನ್ನು) ವಿವರವಾಗಿ ಪರೀಕ್ಷಿಸು ; ಒಳಹೊಕ್ಕು ಶೋಧಿಸು.

Próbity ಪ್ರಾ(ಪ್ರೋ)ಬಿಟಿ (ನಾ.) ಋಜುತೆ ; ಪ್ರಾಮಾಣಿಕತೆ ; ನ್ಯಾಯ ನಿಷ್ಠೆ ; ನಿಷ್ಕಾಪಟ್ಯ ; ಸಾಚಾ ಗುಣ.

Próblem ಪ್ರಾಬ್ಲೆ(ಬ್ಲ)ಂ (ನಾ.) (ಕಷ್ಟ ಅಥವಾ ಸಂದಿಗ್ಧ) ಪ್ರಶ್ನೆ ; ಸಮಸ್ಯೆ ; ತೊಡಕು (How to prevent it is a p. The p. of ventilation); (ವಿಶೇಷಣವಾಗಿ: P. play, novel ಸಾಮಾಜಿಕ ಅಥವಾ ಇತರ ಸಮಸ್ಯೆಯನ್ನು ಕುರಿತ ನಾಟಕ, ಕಾದಂಬರಿ ; ಸಮಸ್ಯಾತ್ಮಕ—). ಗ್ರಹಿಸಲು ಕಷ್ಟವಾದದ್ದು (His whole conduct is a p. to me ಅವನ ನಡತೆಯೇ ನನಗೆ ಅರ್ಥವಾಗುವುದಿಲ್ಲ, ಸಮಸ್ಯೆಯಾಗಿದೆ). ಒಗಟು ; ಯೋಚನೆ. (ಜ್ಯಾ.) ಕರಣ, ಕ್ರಿಯಾತ್ಮಕ, —ಪ್ರಶ್ನೆ (ಉದಾ., ದತ್ತ ಕೋನವನ್ನು ಅರ್ಧಿಸುವುದು) (Theorem ಹೋಲಿಸಿ). (ತರ್ಕ) ಒಂದು ಪ್ರತಿಜ್ಞೆಯಲ್ಲಿ (ಸಾ., ಕೇವಲ ಧ್ವನಿತವಾಗುವ) ವಾದ ವಿಷಯ, ಪ್ರಶ್ನೆ. (ಭೌ. ವಿ., ಗಣಿತ) ತಿಳಿದಿರುವ ಅಥವಾ ದತ್ತ ಸಂದರ್ಭಗಳಿಂದ ಹೊರಟು ವಾಸ್ತವಾಂಶವನ್ನು, ಫಲವನ್ನು, ಅಥವಾ ಒಂದು ನಿಯಮವನ್ನು ಕಂಡುಹಿಡಿಯಲು ಮಾಡುವ ವಿಚಾರ (Kepler's p.); (ವೈಜ್ಞಾನಿಕ) ವಿಷಯ ಶೋಧನೆ. (ಚದುರಂಗದ ಆಟ : ಅನೇಕ ವೇಳೆ ಗೊತ್ತಾದ ಕೆಲವು ಷರತ್ತುಗಳನ್ನು ಹಾಕಿ) ಹೇಳಿದ ಗುರಿಯನ್ನು ಸಾಧಿಸಬೇಕೆಂದು ಆಟಗಾರನಿಗೆ ಅಭಿಯೋಜನೆ ಕೊಟ್ಟು, ಸ್ಪರ್ಧೆ ಹೂಡಿ, ಆಟದ ಕಾಯಿಗಳನ್ನು ಒಂದು ವ್ಯೂಹವಾಗಿಡುವುದು. **Problemátic(al)** (ಗು.) ಸಂದೇಹಾಸ್ಪದವಾದ ; ಸಮಸ್ಯೆಯಾದ ; ಸಂದಿಗ್ಧ ; ಅನಿಶ್ಚಿತ (Its success is p. The whole question is p.). (ತರ್ಕ) (ನಿಜವಾಗಿರಬೇಕೆಂಬ ಆವಶ್ಯಕತೆಯನ್ನು ಲಕ್ಷಿಸದೆ) ಸಾಧ್ಯವಾಗಿರಬಹುದಾದುದನ್ನು ಸ್ಪಷ್ಟವಾಗಿ ನಿರೂಪಿಸುವ ಅಥವಾ ಪ್ರತಿಪಾದಿಸುವ. **Problemátically** (ಕ್ರಿ. ವಿ.) ; **Próblem(at)ist** —ಮಟಿಸ್ಟ್, —ಮಿಸ್ಟ್ (ನಾ.) (ಮು., ಚದುರಂಗದಲ್ಲಿ) ಸಮಸ್ಯೆಗಳನ್ನು ವಿಚಾರ ಮಾಡುವವನು, —ಹೂಡುವವನು ; ಸಮಸ್ಯೆಗಾರ.

Proboscídean, etc. **Proboscis** ನೋಡಿ.

Probóscis ಪ್ರೊಬಾಸಿಸ್ (ನಾ.) ಆನೆಯ ಸೊಂಡಿಲು ; (ಕೆಲವು ಮೃಗಗಳಲ್ಲಿ) ಉದ್ದವಾದ ಮೆತು ಮೂಗು, ಉದ್ದ ಮೂತಿ, ಉದ್ದ ಮುಸುಡಿ; (ಕೆಲವು ಕೀಟಗಳಲ್ಲಿ) ನೀಳವಾದ ಬಾಯಿಯ ಭಾಗ; (ಸೊಳ್ಳೆ, ಮೊ. ಕೆಲವು ಹುಳುಗಳ) ಹೀರು ಕೊಳವಿ. (ಹಾಸ್ಯ ಪ್ರ.) ಮನುಷ್ಯನ ಮೂಗು. P.-monkey (ಮೂಗು ಬಾಯಿಂದ ಬಹಳ ಕೆಳಕ್ಕೆ ಚಾಚಿರುವ) ನಿಡು ಮೂಗಿನ ಕೋತಿ. **Proboscídean, -ian** ಪ್ರಾಬಾಸಿಡಿಯನ್ (ಗು., ನಾ.) ಸೊಂಡಿಲುಳ್ಳ ; ನಿಡು ಮೂಗುಳ್ಳ ; ಸೊಂಡಿಲನ(ಅಥ). ಸೊಂಡಿಲುಳ್ಳ ಪ್ರಾಣಿ ವರ್ಗದ (ಆನೆ ಮತ್ತು ಕೆಲವು ನಷ್ಟ ವಂಶದ ಮೃಗಗಳ ವರ್ಗದ). **Proboscidíferous** (ಗು.) ; **Proboscídiform** (ಗು.)

Procédure. **Proceed** ನೋಡಿ.

Proceéd ಪ್ರೊಸೀಡ್ (ಕ್ರಿ. ಅಕ.) (ಒಂದು ಸ್ಥಳಕ್ಕೆ) ನಡೆ, ಹೊರಡು, ಮುಂದುವರಿ, ಸಾಗು (*To* ಉಪ. ದೊಡನೆ); (ಕಾರ್ಯದಲ್ಲಿ, ಶೋಧನೆಯಲ್ಲಿ, ಟೀಕೆ, ಮೊ. ಗಳಲ್ಲಿ, ಮತ್ತೊಂದು ವಿಷಯಕ್ಕೆ, ಮೊ. ಗಿ) ಪ್ರವರ್ತಿಸು, ಮುಂಬರಿ (*With*, *in*, action, etc., *to* another subject, *to* do) ; (ಕಾರ್ಯ)ಕ್ರಮವನ್ನನುಸರಿಸು ; ಒಂದು ಗೊತ್ತಾದ ಮಾರ್ಗ ಹಿಡಿ (How shall we p.?). (ಒಬ್ಬನಮೇಲೆ) ನ್ಯಾಯಸ್ಥಾನದಲ್ಲಿ ವ್ಯವಹಾರ ಹೂಡು, ಕ್ರಮ ನಡಸು, ದಾವಾ ಹಾಕು, ವ್ಯಾಜ್ಯ ಹೂಡು (*Against* ಉಪ. ದೊಡನೆ). ಮುಂದುವರಿದು ಹೇಳು [('In either case', he proceeded, 'our course is clear'). P. (to the degree of) M.A. ಎಂ.ಎ. ಪದವಿ ಪಡೆ]. (ಕೆಲಸ, ಕಾರ್ಯ) ಮುಂದೆ ಸಾಗು, ನಡೆ, ಜರುಗು (The case, the play, will now p.). (ಹೊರ) ಹೊರಡು, ಹುಟ್ಟು, ಉತ್ಪತ್ತಿಯಾಗು (Sobs heard to p. from next room). **Procédure** —ಡ್ಯ(ಡ್ಯು)ರ್, —ಜರ್ (ನಾ.) ಸಾಗುವುದು ; ಮುಂದುವರಿಯುವುದು. (ಮು., ಪಾರ್ಲಿಮೆಂಟಿನಲ್ಲಿ) ಕಾರ್ಯ ನಡಸುವ ರೀತಿ, ಕಾರ್ಯ ವಿಧಾನ; ಕಾರ್ಯಕ್ರಮ. ಮೊಕದ್ದಮೆ ನಡಸುವ ರೀತಿ. **Proceéding** (ನಾ.) (ಕ್ರಿಯಾರ್ಥಗಳಲ್ಲಿ). ಕಾರ್ಯ ; ವರ್ತನೆ; ನಡೆವಳಿ (A high-handed p. Legal proceedings ಕಾನೂನು ಕ್ರಮ. Proceedings of Royal Society ರಾಯಲ್ ಸೊಸೈಟಿಯ ನಡೆವಳಿಕೆಗಳು). **Próceeds** ಪ್ರೋಸೀಡ್ಸ್ (ನಾ., ಬ. ವ.) ಹುಟ್ಟುವಳಿ ; ಉತ್ಪತ್ತಿ ; ವರಮಾನ ; ಲಾಭ (The proceeds will be devoted to charity)

Prócess[1] ಪ್ರೋ(ಪ್ರಾ)ಸೆಸ್ (ನಾ., ಕ್ರಿ. ಸಕ.) ಸಾಗಣೆ ; ಮುಂದುವರಿಯು(ತ್ತಿರು)ವುದು ; ಗತಿ (In p. of construction ರಚನೆಯ ಕಾರ್ಯಗತಿಯಲ್ಲಿ. In p. of time ಕಾಲ ಕಳೆದಂತೆ ; ಕಾಲಕ್ರಮದಲ್ಲಿ). ಪ್ರಕ್ರಿಯೆ ; ಕಾರ್ಯಗತಿ ; ಸಲವು ; (ಮು., ಕೈಗಾರಿಕೆ, ಮುದ್ರಣ, ಛಾಯಾಚಿತ್ರ ತೆಗೆಯುವುದು, ಮೊ. ರಲ್ಲಿ) ಕಾರ್ಯ ವಿಧಾನ. ಸ್ವಾಭಾವಿಕ ಅಥವಾ ಅನೈಚ್ಛಿಕ ಕಾರ್ಯಗತಿ ; ಪರಿವರ್ತನೆಯ ಪರಂಪರೆ. ಕೈಯಿಂದ ಸರಳವಾಗಿ ಕೊರೆದು ತಯಾರಿಸುವುದಲ್ಲದ ಬೇರೆ ವಿಧಾನ(ದಿಂದ ತಯಾರಿಸಿದ ಪಡಿಯಚ್ಚಿನಿಂದ ಮುದ್ರಿಸಿದ ಚಿತ್ರ). ಕಾನೂನು ಕ್ರಮ ; ವಿಧಿವಿಹಿತವಾಗಿ ವ್ಯವಹಾರ (ಹೂಡುವುದು) ; ಕೋರ್ಟಿನ ಕರೆ (P.-server ಸಮನ್ ಜಾರಿಮಾಡುವವನು). (ಅಂ. ರ. ಶಾ., ಪ್ರಾ. ವಿ., ಸ. ವಿ.) ಹೆಚ್ಚು ಬೆಳೆದದ್ದು ; ವಾಳ ; ದುರ್ಮಾಂಸ (ಗಂತಿ, ಗಂಟು, ಮೊ. ದು). (ಕ್ರಿ.) (ಒಬ್ಬನಮೇಲೆ) ದಾವಾ ಹಾಕು, ಕಾನೂನು ಕ್ರಮ ಜರುಗಿಸು. (ತಕ್ಕ ವಿಧಾನದಿಂದ, ಒಂದು ಪದಾರ್ಥವನ್ನು) ಸಂಸ್ಕರಿಸು ; (ಆಹಾರವನ್ನು) ಕೆಡದಂತಿಡು. ತಕ್ಕ ವಿಧಾನದಿಂದ (ರೇಖನ ಚಿತ್ರದ) ಪ್ರತಿ ತೆಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Procéss[2] ಪ್ರೊಸೆಸ್ (ಕ್ರಿ. ಅಕ.) (ಬಳ. ಮಾ.) ಮೆರೆವಣಿಗೆ(ಯಲ್ಲಿ) ಹೋಗು. **Procéssion** ಪ್ರೊಸೆಷನ್ (ನಾ., ಕ್ರಿ.) ಒಂದರ ಹಿಂದೆ ಒಂದರಂತೆ ವ್ಯವಸ್ಥಿತವಾದ ಸಾಲಿನಲ್ಲಿ ಜನರ (ಅಥವಾ ದೋಣಿ, ಮೊ. ಗಳ) ತಂಡ ಮುಂದುವರಿಯು(ತ್ತಿರು)ವುದು (ಮು., ಮತಕರ್ಮಾಚರಣೆಯಲ್ಲಿ ಅಥವಾ ಉತ್ಸವದಲ್ಲಿ) ; ಮೆರೆವಣಿಗೆ (Go, walk, in p.). ಮೆರೆವಣಿಗೆಯಲ್ಲಿ ಹೋಗುವವರು. (ರೂಪ.) ಸರಿಯಾದ ಸ್ಪರ್ಧೆಯಿಲ್ಲದ ಪಂದ್ಯ. (ದೇವ. ಶಾ.) ಪವಿತ್ರಾತ್ಮದ ಉದ್ಗಮ. (P. caterpillars ಮೆರೆವಣಿಗೆ ಹೋಗುವ ರೀತಿಯಲ್ಲಿ ಹರಿಯುವ ಕೆಲವು ಕಂಬಳಿಹುಳು ಜಾತಿ). (ಕ್ರಿ.) (ಬೀದಿಯಲ್ಲಿ) ಮೆರೆವಣಿಗೆ ಹೋಗು, ಮೆರೆವಣಿಗೆಯಲ್ಲಿ ನಡೆ. **Procéssional** (ಗು., ನಾ.) ಮೆರೆವಣಿಗೆಯ (ತೆರದ) ; ಮೆರೆವಣಿಗೆಯಲ್ಲಿ—ಉಪಯೋಗಿಸುವ, ಹೊತ್ತುಕೊಂಡುಹೋಗುವ, ಹಾಡುವ. (ನಾ.) (ದೇವರ) ಮೆರೆವಣಿಗೆ ಗೀತ(ಗಳ ಪುಸ್ತಕ). **Procéssionary** (ಗು.) ; **Procéssionist** (ನಾ.) ಮೆರೆವಣಿಗೆ(ಯಲ್ಲಿ) ಹೋಗುವವನು ; ಮೆರೆವಣಿಗ. **Procéssionize** (ಕ್ರಿ. ಅಕ.)

Procéssion, etc. Process[2] ನೋಡಿ.

Proces-verbál (F) ಪ್ರೊಸೇ ವೆರ್ಬಾಲ್ (ನಾ. ; ಬ. ವ. -baux —ಬೋ) ಕಾರ್ಯಕಲಾಪಗಳ, ಕಾರ್ಯ ವಿವರಗಳ, —ಬರೆದ ವರದಿ. (ಫ್ರೆಂಚ್ ನ್ಯಾ. ಶಾ.) ಆರೋಪಣೆಯನ್ನು ಸಮರ್ಥಿಸುವ ವಿಷಯಗಳ ಲಿಖಿತ ವಾಙ್ಮೂಲ, ಬರೆಹದ ಹೇಳಿಕೆ ; ಕೈಫೀಯತ್ತು.

Próchronism ಪ್ರೋಕ್ರೊನಿಸ್ಮ್ (ನಾ.) ಒಂದು ಘಟನೆ, ಮೊ. ನ್ನು ನಿಜವಾಗಿ ನಡೆದ ತೇದಿಗಿಂತ ಹಿಂದಿನ ತೇದಿಗೆ ಅನ್ವಯಿಸುವುದು ; (Races held in June & called by a p. the Mays ಜೂನ್ ತಿಂಗಳಲ್ಲಿ ನಡೆದ ಪಂದ್ಯಗಳನ್ನು ಹಿಂತೇದಿಯ ಪದ್ಧತಿಯಿಂದ ಮೇ ಪಂದ್ಯಗಳೆಂದು ಕರೆಯುವುದು)

Proclaím ಪ್ರೊಕ್ಲೇಯ್ಮ್ (ಕ್ರಿ. ಸಕ.) (ಯುದ್ಧ, ಶಾಂತಿ, ದೊರೆ ಪಟ್ಟಕ್ಕೇರಿದುದು, ಮೊ. ರ ವಿಷಯದಲ್ಲಿ) ಬಹಿರಂಗವಾಗಿಯೂ ಅಧಿಕಾರಯುತವಾಗಿಯೂ ತಿಳಿಯಪಡಿಸು, ಪ್ರಕಟಿಸು, ಘೋಷಿಸು, ಪ್ರಸಿದ್ಧಪಡಿಸು, ಸಾರು ; (ಒಂದು ಪ್ರಾಂತ, ಮೊ. ನ್ನು) ಕಾನೂನಿನ ನಿರ್ಬಂಧಕ್ಕೆ ಸಾರಿ ಒಳಪಡಿಸು; ಸಭೆ, ಮೊ. ದು ನಡೆಯಕೂಡದೆಂದು ಘೋಷಿಸು (The whole country is proclaimed). **Proclamátion** ಪ್ರಾಕ್ಲಮೇಷನ್ (ನಾ.); **Proclámatory** ಪ್ರೊಕ್ಲ್ಯಾಮಟ(ಟೋ)ರಿ (ಗು.)

Proclític ಪ್ರೊಕ್ಲಿಟಿಕ್ (ಗು., ನಾ.) (ಗ್ರೀಕ್ ವ್ಯಾ.) ಉಚ್ಚಾರಣೆಯಲ್ಲಿ ಮುಂದಿನ ಪದಕ್ಕೆ ನಿಕಟವಾಗಿ ಸೇರಿಕೊಂಡು ಸ್ವಂತ ಸ್ವರಭಾರವಿಲ್ಲದ (ಏಕೋಚ್ಚಾರಾಂಶ)

Proclívity ಪ್ರೊಕ್ಲಿವಿಟಿ (ನಾ.) (ಒಂದರ ಕಡೆಗೆ, ಮು., ದುರಭ್ಯಾಸದ ಕಡೆಗೆ) ಒಲವು, ಪ್ರವಣತೆ (*To, towards* ಉಪ. ದೊಡನೆ, *to* do)

Procónsul ಪ್ರೋಕಾನ್ಸಲ್ (ನಾ.) (ರೋಮನ್ ಚರಿತ್ರೆ) ರೋಮನ್ ಪ್ರಾಂತಾಧಿಪತಿ (ತರುವಾಯದ ಪ್ರಜಾಪ್ರಭುತ್ವದಲ್ಲಿ ex-consul), (ಚಕ್ರಾಧಿಪತ್ಯಕಾಲದಲ್ಲಿ) Senate ಎಂಬ ಶಾಸನಸಭೆಯ ಆಡಳಿತಕ್ಕೊಳಪಟ್ಟ ಪ್ರಾಂತದ ಅಧಿಪತಿ. (ಅಲಂ.) ಆಧುನಿಕ ನೆಲಸು ನಾಡು, ಮೊ. ರ ಅಧಿಪತಿ, ಆಡಳಿತಾಧಿಕಾರಿ. ಪರ ರಾಜ್ಯದ ಉಪ ಪ್ರತಿನಿಧಿ (=Pro-consul). **Procónsular** (ಗು.) ; **Procónsulate** (ನಾ.) ; **Procónsulship** (ನಾ.)

Procrástinate ಪ್ರೊಕ್ರ್ಯಾಸ್ಟಿನೇಟ್ (ಕ್ರಿ.) (ಕಾರ್ಯವನ್ನು) ತಾಮಸಮಾಡು, ತಡ ಮಾಡು, ಆಲಸ್ಯ ಮಾಡು ; (—ಮಾಡದೆ) ಕಾಲ ತಳ್ಳು ; ತಳುವು ; ಕಾಲವಿಳಂಬ ಮಾಡು ; ಕಾಲಹರಣ ಮಾಡು. **Procrástinatingly** (ಕ್ರಿ. ವಿ.) ; **Procrastinátion** (ನಾ.) ; **Procrástinative** (ಗು.) ; **Procrástinator** (ನಾ.) ದೀರ್ಘಸೂತ್ರಿ. **Procrástinatory** (ಗು.)

Prócreate ಪ್ರೋಕ್ರಿಯೇಟ್ (ಕ್ರಿ. ಸಕ.) (ಮಗುವನ್ನು) ಹುಟ್ಟಿಸು, ಪಡೆ ; ಜನ್ಮಕೊಡು. **Prócreant** (ಗು.) ಹುಟ್ಟಿಸುವ ; ಉತ್ಪಾದಕ. **Procreátion** (ನಾ.) ; **Prócreative** (ಗು.)

Procrústean ಪ್ರೊಕ್ರಸ್ಟಿಯನ್ (ಗು.) ಬಲಾತ್ಕಾರ ಕಾರ್ಯಕ್ರಮಗಳಿಂದ ಏಕರೂಪತೆ ಸಾಧಿಸುವ (ಪ್ರವೃತ್ತಿಯುಳ್ಳ). P. bed ಇಂಥ ಸಾಧನ. (ಗ್ರೀಕರ ಕಟ್ಟುಕಥೆಗಳಲ್ಲಿ ಬರುವ ಪ್ರೊಕ್ರಸ್ಟೀಸ್ ಎಂಬ ಸುಲಿಗೆಗಾರನ ಹೆಸರಿನಿಂದ. ಇವನು ತನಗೆ ಬಲಿಬಿದ್ದವರನ್ನು ತನ್ನ ಹಾಸಿಗೆಗೆ ಸರಿಯಾಗಿ ಹೊಂದುವಂತೆ ಹಿಗ್ಗಿಸಿಯೊ ಕತ್ತರಿಸಿಯೊ ಸರಿಪಡಿಸುತ್ತಿದ್ದನಂತೆ)

Próctor ಪ್ರಾಕ್ಟರ್ (ನಾ.) (ವಿ. ವಿ. ನಿ.) ಮು., ವಿದ್ಯಾರ್ಥಿ ದಶೆಯಲ್ಲಿರುವವರೆಲ್ಲರ ಶಿಷ್ಟಿಪಾಲನೆಯನ್ನು ನೋಡಿಕೊಳ್ಳುವುದು, ಮೊ. ಹಲವು ಕರ್ತವ್ಯಗಳುಳ್ಳ, ಪ್ರತಿ ವರ್ಷವೂ ನೇಮಕವಾಗುವ ಅಧಿಕಾರಿ(ಗಳಿಬ್ಬರಲ್ಲೊಬ್ಬನು) ; ಶಿಷ್ಟಿಪಾಲನಾಧಿಕಾರಿ (Senior, junior, p.) [**Próctorize** (ಕ್ರಿ. ಸಕ.) (ಪದವೀಧರರಲ್ಲದ ಕೆಳ ತರಗತಿಯ ವಿದ್ಯಾರ್ಥಿಗಳ ಮೇಲೆ) ಶಿಷ್ಟ್ಯಧಿಕಾರ ನಡಸು. **Proctorizátion** (ನಾ.)]. (ನ್ಯಾ. ಶಾ.) ವ್ಯವಹಾರ ನ್ಯಾಯವನ್ನೊ ಮತಧರ್ಮ ನ್ಯಾಯವನ್ನೊ ನಿರ್ವಹಿಸುವ ನ್ಯಾಯಸ್ಥಾನದಲ್ಲಿ (ಈಗ ಮು., ಮತಧರ್ಮದ ನ್ಯಾಯಸ್ಥಾನದಲ್ಲಿ) ಮೊಕದ್ದಮೆಗಳನ್ನು ನಡಸುವವನು ; ಮತಧರ್ಮದ ನ್ಯಾಯ ವಾದಿ (King's, Queen's, p. ಅಂತಿಮ ಇಷ್ಟಪತ್ರ ಪ್ರಮಾಣ, ವಿವಾಹ ವಿಚ್ಛೇದನ, ಮತ್ತು ರದ್ದು ದಾವೆ—ಇವುಗಳ ವಿಷಯದಲ್ಲಿ ಒಳಸಂಚು ನಡೆದಿದೆಯೆಂದಾಗಲಿ ಸಂಗತಿಗಳನ್ನು ಮುಚ್ಚಿಟ್ಟಿರುವರೆಂದಾಗಲಿ ಆರೋಪಬಂದಾಗ ಆ ವ್ಯವಹಾರದಲ್ಲಿ ಪ್ರವೇಶಿಸುವ ಹಕ್ಕುಳ್ಳ ನ್ಯಾಯಾಧಿಕಾರಿ). **Proctórial** (ಗು.) ; **Próctorship** (ನಾ.)

Procúmbent ಪ್ರೊಕಂಬೆಂಟ್ (ಗು.) ಮುಖವಡಿಯಾಗಿ ಮಲಗಿರುವ ; ಬೋರಲು ಬಿದ್ದಿರುವ ; ಬಗ್ಗಿ ನಮಸ್ಕಾರ ಮಾಡುತ್ತಿರುವ. (ಸ. ವಿ.) ನೆಲದಮೇಲೆ ಉದ್ದಕ್ಕೆ ಹಬ್ಬಿಕೊಂಡು ಹೋಗುವ.

Procurátion. Procure ನೋಡಿ.

Prócurator ಪ್ರಾಕ್ಯುರೇಟರ್ (ನಾ.) (ರೋಮನ್ ಚರಿತ್ರೆ; ಸಾಮ್ರಾಜ್ಯ ಪ್ರಾಂತದಲ್ಲಿ) ಖಜಾನೆಯ ಆಡಳಿತಾಧಿಕಾರಿ ; ಖಜಾಂಚಿ ; ಭಂಡಾರಿ. (ಮು., ವಕಾಲತ್ತು ಪಡೆದಿರುವ) ಕಾರ್ಯಭಾರಿ, ನಿಯೋಗಿ. (ಇಟಲಿಯ ಕೆಲವು ಪಟ್ಟಣಗಳಲ್ಲಿ) ದಂಡಾಧಿಕಾರಿ. **Procuratórial** —ರಟೋರಿಯಲ್ (ಗು.) ; **Prócuratorship** (ನಾ.); **Prócuratory** —ರೆಟರಿ (ನಾ.) ಒಬ್ಬನಿಗೆ ಪ್ರತಿನಿಧಿಯಾಗಿ ವರ್ತಿಸಲು ವಕಾಲತ್ತು (ಕೊಡುವುದು); ಪ್ರಾತಿನಿಧ್ಯಾಧಿಕಾರ (Letters of p. ವಕಾಲತ್ತು ನಾಮೆ). **Prócuratrix** —ರೇಟ್ರಿಕ್ಸ್ (ನಾ.) ಸಂನ್ಯಾಸಿನಿ ಮಠದ ಲೌಕಿಕ ವ್ಯವಹಾರ ನೋಡಿಕೊಳ್ಳುವ ಸದಸ್ಯೆ.

Procuré ಪ್ರೊಕ್ಯೂರ್ (ಕ್ರಿ.) (ಜೋಕೆಯಿಂದ ಅಥವಾ ಪ್ರಯತ್ನಪಟ್ಟು) ಪಡೆ ; ಗಳಿಸು, ಸಂಪಾದಿಸು, ದೊರಕಿಸು (Cannot p. employment). (ಪ್ರಾಚೀ. ಪ್ರ.) ಆಗಿಸು ; ಉಂಟುಮಾಡು (Procured his death by poison). ತಲೆಹಿಡುಕತನ ಮಾಡು ; ಕುಂಟಣಿ(ಗಿತ್ತಿ)ಯಾಗಿ ವರ್ತಿಸು. **Procúrable** (ಗು.) ; **Procurément** (ನಾ.); **Procúrer** (ನಾ.) (ಕ್ರಿಯಾರ್ಥಗಳಲ್ಲಿ) ; ಕುಂಟಣಿ(ಗಿತ್ತಿ) ; ತಲೆಹಿಡುಕ(ಕಿ). **Procúress** (ನಾ., ಸ್ತ್ರೀ.) ; **Procurátion** ಪ್ರಾಕ್ಯುರೇಷನ್ (ನಾ.) ದೊರಕಿಸುವುದು ; ಒದಗಿಸುವುದು; ಹವಣಿಸುವುದು; ಪಡೆಯುವುದು ; ಸಂಪಾದಿಸುವುದು ; ಏರ್ಪಾಟು ಮಾಡುವುದು [**Procúral** ಪ್ರೊಕ್ಯೂರಲ್ (ನಾ.) =Procurement (ವಿರ. ಪ್ರ.); **Procúrance** (ನಾ.) ಹವಣಿಕೆ ; ಯಾವುದನ್ನಾದರೂ ಆಗಿಸುವ ಅಥವಾ ದೊರಕಿಸುವ ಕಾರ್ಯ ; ಕರ್ತೃತ್ವ ; ಕಾರಕ]. ವ್ಯವಹಾರ ಪ್ರತಿನಿಧಿಯ ಕರ್ತವ್ಯ, ಅಧಿಕೃತ ಕಾರ್ಯ ; ವಕಾಲತ್ತು. (ಕ್ರೈಸ್ತ ಮತ ಪದ್ಧತಿ) ಬಿಷಪ್ ಅಥವಾ ಇತರ ಮಠಾಧಿಕಾರಿ ಸಂಚಾರ ಬಂದಲ್ಲಿ ಆತನಿಗೆ ಅಲ್ಲಿಯ ವೃತ್ತಿಭೋಗಿಯು ಮಾಡಬೇಕಾದ ಸತ್ಕಾರ (ಈಗ ಹಣದ ರೂಪದಲ್ಲಿ ಕೊಡುವ ಕಾಣಿಕೆ) ; ಗುರು ಕಾಣಿಕೆ. ಸಾಲ ಕೊಡಿಸುವ ಏರ್ಪಾಟು ; ಇದಕ್ಕಾಗಿ ಕೊಡಬೇಕಾದ ರುಸುಮು. ತಲೆಹಿಡುಕತನ ; ಈ ಅಪರಾಧ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Prod ಪ್ರಾಡ್ (ಕ್ರಿ. ಸಕ., ನಾ.) (ಮೊನೆಯಾಯುಧ, ಕೋಲಿನ ತುದಿ, ಮೊ. ಗಳಿಂದ) ಚುಚ್ಚು, ತಿವಿ. (ರೂಪ.) ಉದ್ರೇಕಗೊಳಿಸು ; ರೇಗಿಸು ; ಕೆರಳಿಸು. (ನಾ.) ಚುಚ್ಚಾಟ ; ತಿವಿತ. ಮೊನೆಗೋಲು.

Prodelísion ಪ್ರೊಡಿಲಿಷನ್ (ನಾ.) (ಧ್ವಂ.) ಮೊದಲ ಸ್ವರವನ್ನು ಉಚ್ಚಾರಣೆಯಲ್ಲಿ (ತೇಲಿಸಿ)ಬಿಡುವುದು; ಆದಿಸ್ವರ ಲೋಪ (ಉದಾ., I'm = I am)

Pródigal ಪ್ರಾಡಿಗ(ಗ್)ಲ್ (ಗು., ನಾ.) ದುಂದು ವ್ಯಯ ಮಾಡುವ (ವನು) ; ಲಕ್ಷ್ಯವಿಲ್ಲದೆ ಹಣ ಪೋಲು ಮಾಡುವ(ವನು) ; ಬಹಳ ದುಂದುಗಾರ ; ದಂದರಹಾಳಿ. (ವಸ್ತುಗಳ ಅಥವಾ ಕಾರ್ಯಗಳ ವಿಷಯದಲ್ಲಿ) ಅತಿ ಧಾರಾಳ (*Of* ಉಪ. ದೊಡನೆ). [P. son (ಬೈಬಲ್ಲಿನ ಒಂದು ದೃಷ್ಟಾಂತ ಕಥೆ)]. **Prodigálity** (ನಾ.); **Pródigally** (ಕ್ರಿ. ವಿ.); **Pródigalize** (ಕ್ರಿ. ಸಕ.) ದುಂದು(ವೆಚ್ಚ) ಮಾಡು.

Prodígious ಪ್ರೊಡಿಜಸ್ (ಗು.) ಅದ್ಭುತ ; ಆಶ್ಚರ್ಯಕರ ; ಅಗಾಧ ; ಅತ್ಯಂತ ; ವಿಪರೀತ ; ಅಸಾಧಾರಣ. **Prodigiously** (ಕ್ರಿ. ವಿ.) ; **Prodígiousness** (ನಾ.) ; **Pródigy** ಪ್ರಾಡಿಜಿ (ನಾ.) ಅದ್ಭುತ (ವಾದದ್ದು) (ಮು., ಪ್ರಕೃತಿ ಧರ್ಮಕ್ಕೆ ವಿಲಕ್ಷಣವಾದದ್ದು). (ಯಾವುದಾದರೂ ಗುಣದ) ಅದ್ಭುತ ನಿದರ್ಶನ ; ಅದ್ಭುತ ಗುಣಗಳುಳ್ಳವನು (ಮು., ಪ್ರಚಂಡ ಬುದ್ಧಿಯ ಮಗು). (ವಿಶೇಷಣವಾಗಿ) A p. violinist ಅದ್ಭುತ ಪಿಟೀಲುಗಾರ.

Pródrome ಪ್ರಾಡ್ರಂ, ಪ್ರೊಡ್ರೋಂ (ನಾ.) (ಮತ್ತೊಂದಕ್ಕೆ) ಪೀಠಿಕಾ ಪುಸ್ತಕ, —ಗ್ರಂಥ (*To* another). (ವೈ. ಶಾ.) (—ರ) ಪೂರ್ವಭಾವಿ ಚಿಹ್ನೆ (*Of* ಉಪ. ದೊಡನೆ). **Pródromal** (ಗು.) ; **Prodrómic** (ಗು.)

Próduce ಪ್ರಾಡ್ಯೂಸ್ (ನಾ.), **Prodúce** ಪ್ರೊಡ್ಯೂಸ್ (ಕ್ರಿ. ಸಕ.) ದೊರೆತ ಮೊತ್ತ ; ಉತ್ಪನ್ನ (ಮು., ಒಂದು ಖನಿಜದಲ್ಲಿಯ ಲೋಹ ಪ್ರಮಾಣದ ಪರೀಕ್ಷೆಯಲ್ಲಿ). (ಜಮೀನು, ಮೊ. ಗಳ) ಉತ್ಪತ್ತಿ, ಬೆಳೆ, ಫಸಲು (= Raw p.). (ದುಡಿತ, ಪ್ರಯತ್ನ, ಮೊ. ಗಳ) ಫಲ, ಪರಿಣಾಮ. [(ಸೈನಿಕ, ನಾವಿಕ, —ಯುದ್ಧ ಸಾಮಗ್ರಿಯ ವಿಷಯದಲ್ಲಿ) Brought to p. (ವಿನಿಯೋಗ ಮಾಡಲು, ಮಾರಿಬಿಡಲು) ಕಳಚಿ, ಬಿಚ್ಚಿ, ಕತ್ತರಿಸಿ, ಬೇರೆ ಬೇರೆ ತರಗತಿಗಳಾಗಿ ವಿಂಗಡಿಸಿದ]. (ಕ್ರಿ.) (ಪರೀಕ್ಷೆಗಾಗಿ, ಪರ್ಯಾಲೋಚನೆಗಾಗಿ) ತರು, ಮುಂದಿಡು (Will p. evidence, witnesses, reasons. P. your tickets ಟಿಕೆಟ್ಟು ತೋರಿಸಿ). (ನಾಟಕ, ನಟ, ಪುಸ್ತಕ, ಮೊ. ನ್ನು) ಪ್ರದರ್ಶಿಸು, ಪ್ರಕಟಿಸು, ಪ್ರಸಿದ್ಧ ಮಾಡು. (ಜ್ಯಾ.) (ರೇಖೆಯನ್ನು ನಿರ್ದಿಷ್ಟ ಬಿಂದುವಿನ ವರೆಗೆ) ಲಂಬಿಸು (*To* ಉಪ. ದೊಡನೆ). (ಕಚ್ಚಾ ಪದಾರ್ಥಗಳಿಂದ) ಉತ್ಪತ್ತಿ ಮಾಡು, ತಯಾರಿಸು. ಆಗಿಸು ; ಉಂಟುಮಾಡು (P. a sensation, etc.). (ಭೂಮಿ, ಮೊ. ವು ಬೆಳೆ, ಫಸಲು) ಕೊಡು. (ಪ್ರಾಣಿಯ ವಿಷಯದಲ್ಲಿ) ಮರಿ ಹಾಕು, ಈಯಿ, ಹುಟ್ಟಿಸು; (ನನ್ಯ) ಫಲ—ಬಿಡು, ಕೊಡು. **Producibílity** (ನಾ.) ; **Prodúcible** (ಗು.) ; **Prodúcer** (ನಾ.) (ಕ್ರಿಯಾರ್ಥಗಳಲ್ಲಿ). (ಅರ್ಥಶಾಸ್ತ್ರ ಪ್ರ.) (ಜನರು ಬಳಸುವ ಪದಾರ್ಥದ, ಸರಕಿನ) ಉತ್ಪನ್ನಕಾರ ; ಬೆಳೆಯುವವನು, ತಯಾರಿಸುವವನು. [P. gas ಕೆಂಪಗೆ ಕಾದ ಇದ್ದಲಿನ ಮೇಲೆ ವಾಯುವನ್ನು ಹಾಯಿಸಿ ತಯಾರಿಸಿದ ಅಗ್ಗದ ಜ್ವಲನಾನಿಲ (ಇದರಲ್ಲಿ ಮು., ಕಾರ್ಬನ್ ಮಾನಾಕ್ಸೈಡೂ ಸಾರಜನಕವೂ ಇವೆ. ಇದು ಅನಿಲಚಾಲಕ ಎಂಜಿನ್ನು, ಮೊ. ಗಳನ್ನು ನಡಸಲು ಉಪಯೋಗವಾಗುತ್ತದೆ)]. **Próduct** ಪ್ರಾಡಕ್ಟ್ (ನಾ.) (ಸ್ವಾಭಾವಿಕವಾದ ಅಥವಾ ಕೈಗಾರಿಕೆಯ) ಉತ್ಪನ್ನ; ಫಲ ; ಪರಿಣಾಮ (The p. of his labours). (ಗಣಿತ) ಗುಣಲಬ್ಧ. (ರ. ವಿ.) ಮೊದಲು ಆ ಪದಾರ್ಥದಲ್ಲಿಲ್ಲದ, ಆದರೆ ಅದರ ಪೃಥಕ್ಕರಣ ಕಾರ್ಯದಿಂದ ಹುಟ್ಟಿದ (ಹೊಸ) ಸಂಯುಕ್ತ. **Prodúction** ಪ್ರೊಡಕ್‌ಷನ್ (ನಾ.) (ಕ್ರಿಯಾರ್ಥಗಳಲ್ಲಿ). ಉತ್ಪತ್ತಿ (ಮಾಡುವುದು) ; ಉತ್ಪನ್ನ (ಮು., ಸಾಹಿತ್ಯ ಕೃತಿ ಅಥವಾ ಕಲಾ ಕೃತಿ).

Prodúctive ಪ್ರೊಡಕ್ಟಿವ್ (ಗು.) ಉತ್ಪತ್ತಿ ಮಾಡುವ; —ಯಾಗುವ; ಉತ್ಪನ್ನಕಾರಕ (P. of figs. P. of great annoyance). (ಅರ್ಥಶಾಸ್ತ್ರ) ಬೆಲೆಯಾಗುವ ವಸ್ತುಗಳನ್ನು ತಯಾರಿಸುವ [P. labour(er)]. ಯಥೇಚ್ಛವಾಗಿ ಉತ್ಪತ್ತಿ ಮಾಡುವ, —ಯಾಗುವ (A p. soil, mine. A p. writer). **Prodúctively** (ಕ್ರಿ. ವಿ.) ; **Prodúctiveness** (ನಾ.) ; **Productívity** (ನಾ.)

Próem ಪ್ರೋಎಮ್ (ಇ)ಮ್ (ನಾ.) (ಗ್ರಂಥಕ್ಕೆ, ಭಾಷಣಕ್ಕೆ) ಪೀಠಿಕೆ, ಪ್ರಸ್ತಾವನೆ, ಉಪೋದ್ಘಾತ ; ಭೂಮಿಕೆ ; ಆರಂಭ. **Proémial** ಪ್ರೊಈಮಿಯಲ್ (ಗು.)

Profáne ಪ್ರೊಫೇನ್ (ಕ್ರಿ. ಸಕ., ಗು.) (ಪವಿತ್ರವಾದುದನ್ನು) ಅಗೌರವದಿಂದ, ಅಲಕ್ಷ್ಯದಿಂದ, ಕಾಣು. (ಗೌರವಕ್ಕೆ ಪಾತ್ರವಾದುದನ್ನು) ಅಪವಿತ್ರಗೊಳಿಸು, ಕೆಡಿಸು. (ಗು.) ಪವಿತ್ರವಾದುದಕ್ಕೆ, ಪವಿತ್ರ ಗ್ರಂಥಕ್ಕೆ(ಬೈಬಲ್ಲಿಗೆ)—ಸೇರಿ(ದ್ದ)ಲ್ಲದ ; ಮತಧರ್ಮಾದ್ದಲ್ಲದ ; ಲೌಕಿಕ, ಪ್ರಾಪಂಚಿಕ (P. history, literature, writer). (ಮತ) ದೀಕ್ಷೆ ಪಡೆದಿಲ್ಲದ ; ರಹಸ್ಯ ಜ್ಞಾನದ ಉಪದೇಶ ಪಡೆದಿಲ್ಲದ. (ಮತಾಚರಣೆ, ಮೊ. ವು) ಅಕ್ರೈಸ್ತ ; ನಿಜ ದೈವಜ್ಞಾನ ರಹಿತ. ಭಕ್ತಿ, ಗೌರವ, —ಇಲ್ಲದ ; ಪಾಷಂಡ ; ಅಪವಿತ್ರ. **Profánely** (ಕ್ರಿ. ವಿ.) ; **Profáneness** (ನಾ.) ; **Profánity** —ಫ್ಯಾ— (ನಾ.) ; **Profanátion** ಪ್ರಾಫನೇಷನ್ (ನಾ.)

Profess ಪ್ರೊಫೆಸ್ (ಕ್ರಿ.) (ಗುಣ, ಭಾವ) ತನಗಿದೆಯೆಂದು ಹೇಳಿಕೊ, ತೋರಿಸಿಕೊ ; (—ಇರುವುದಾಗಿ, ಮಾಡುವುದಾಗಿ) ತೋರ್ಪಡಿಸಿಕೊ, ನಟಿಸು (*To* be or do) (They p. extreme regret. Does not p. to be a scholar). ಮುಚ್ಚುಮರೆಯಿಲ್ಲದೆ, ಬಹಿರಂಗವಾಗಿ, —ಹೇಳು, ತಿಳಿಸು [They p. themselves quite content. I p. (that) this is news to me]. (ಮತ, ದೇವರು, ಯೇಸು ಕ್ರಿಸ್ತ—ಇವರಲ್ಲಿ) ತನಗೆ ನಂಬಿಕೆ, ನಿಷ್ಠೆ, —ಉಂಟೆಂದು ಒತ್ತಿ ಹೇಳು. (ವಕೀಲ, ವೈದ್ಯ, ಕೊಳಲೂದುವುದು, ಮೊ. ನ್ನು) ಕಸಬಾಗಿ, ವೃತ್ತಿಯಾಗಿ, ಅವಲಂಬಿಸು. ಮಹೋಪಾಧ್ಯಾಯನಾಗಿ ಬೋಧಿಸು, ಪಾಠ ಹೇಳು, ಕಾರ್ಯನಿರ್ವಾಹ ಮಾಡು. **Proféssed** —ಫೆಸ್ಟ್, —ಫೆಸೆಡ್ (ಗು.) ಹೇಳಿಕೊಳ್ಳುವ ; ಒಪ್ಪಿಕೊಳ್ಳುವ (A p. Christian). ಆಪಾದಿತ ; ಹೊರ ತೋರ್ಕೆಯ [**Proféssedly** —ಫೆಸೆಡ್ಲಿ (ಕ್ರಿ. ವಿ.)]. ತಕ್ಕ ಯೋಗ್ಯತೆಯುಳ್ಳವನೆಂದು ಹೇಳಿಕೊಳ್ಳುವ [A p. anatomist. P. monk, nun ದೀಕ್ಷೆ ಪಡೆದ ಸಂನ್ಯಾಸಿ(ನಿ)]. **Proféssion** (ನಾ.) ಹೇಳಿಕೊಳ್ಳುವುದು ; ಕಂಠೋಕ್ತವಾಗಿ ಹೇಳುವುದು ; ಹೇಳಿಕೆ ; ಆಡಿಕೆ (In practice if not in p. Accept my sincere professions of regard. Spare me these professions). ಒಂದು ಮತ(ಧರ್ಮ)ದಲ್ಲಿ ನಂಬಿಕೆಯುಂಟೆಂದು ಕಂಠೋಕ್ತವಾಗಿ ಹೇಳುವುದು. ಒಂದು ಮತ ಸಂಸ್ಥೆಯಲ್ಲಿ ಸೇರುವಾಗ ಕೈಕೊಂಡ ಪ್ರತಿಜ್ಞೆ ; ಒಂದು ಮತ ಸಂಸ್ಥೆಯಲ್ಲಿ ಸೇರಿರುವುದು. ಉದ್ಯೋಗ, ವೃತ್ತಿ, ಕಸಬು (ಮು., ಪಾಂಡಿತ್ಯದ ಅಥವಾ ಶಾಸ್ತ್ರದ ಸಂಬಂಧವಿರುವಂಥದು) [The learned professions ಪಾಂಡಿತ್ಯೋದ್ಯೋಗಗಳು (ದೇವತಾ ಶಾಸ್ತ್ರ, ನ್ಯಾಯ ಶಾಸ್ತ್ರ, ವೈದ್ಯ ಶಾಸ್ತ್ರ). The military p. ಸೈನಿಕ ವೃತ್ತಿ. A carpenter by p.]. [**Proféssionless** (ಗು.)]. ಕಸಬುದಾರರು, ಉದ್ಯೋಗಿಗಳು, ವೃತ್ತಿಗಾರರು (The p.). (ಮು., ನಾಟಕಶಾಲೆಯ ಅಸಂ.) ನಟರು (Lets apartments to the p.). **Proféssional** (ಗು., ನಾ.) ಕಸಬಿನ, ವೃತ್ತಿಯ, ಉದ್ಯೋಗದ ; —ಕ್ಕೆ ಸೇರಿದ, ಸಂಬಂಧಪಟ್ಟ [P. men, P. etiquette, jealousy. P. politician ರಾಜಕೀಯ ಕಸಬಿನವನು. P. agitator. P. cricketer (ಹಣಕ್ಕಾಗಿ ಆಡುವ) 'ಕ್ರಿಕೆಟ್' ಕಸಬಿನವನು (Amateur ಹೋಲಿಸಿ)]. (ನಾ.) (ಸಂಕ್ಷಿಪ್ತ : Pro.) ಕಸಬುದಾರ (ಮು., ಕ್ರಿಕೆಟ್ ಕಸಬುದಾರ, ಮೊ. ರು). **Proféssionally** (ಕ್ರಿ. ವಿ.) ; **Proféssionalism** (ನಾ.) ಕಸಬಿನ —ಲಕ್ಷಣಗಳು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುದ್ರೆ ; ಕಸಬುದಾರಿಕೆ. ಕಸಬುದಾರರನ್ನು ನೇಮಿಸುವ, ನೇಮಿಸಿಕೊಳ್ಳುವ, ಪದ್ಧತಿ. **Proféssionalize** (ಕ್ರಿ. ಸಕ.) ಕಸಬುದಾರಿಯಾಗಿ ಮಾಡು ; ಕಸಬುದಾರನಾಗು. **Proféssor** (ನಾ.) (ಒಂದು ಮತದ) ಅನುಯಾಯಿ, ಅನುಸಾರಿ. ಉನ್ನತ ದರ್ಜೆಯ ಅಧ್ಯಾಪಕ ; (ಮು., ವಿ. ವಿ. ನಿ. ದಲ್ಲಿ) ವಿದ್ವತ್ ಪೀಠಾಧಿಕಾರಿ, ಮಹೋಪಾಧ್ಯಾಯ (ಬಿರುದಾಗಿ ಹೆಸರಿನ ಹಿಂದೆ ಪ್ರ. ; ಸಂಕ್ಷಿಪ್ತ : Prof.) (ನಾಟ್ಯದವರು, ಮುಷ್ಟಿಕಾಳಗದವರು, ಮೊ. ರ ಆಡಂಬರದ ಬಿರುದಾಗಿ ಸಹ). (ಅಸಂ.) = Professional (ನಾ.). **Proféssorate** (ನಾ.) ವಿದ್ವತ್‌ಪೀಠಾಧಿಕಾರ ; —ಪೀಠಾಧಿಕಾರಿಗಳು. **Proféssoress** (ನಾ., ಸ್ತ್ರೀ.) ; **Professóriate** ಪ್ರಾಫಸೋರಿಯೆಟ್ (ನಾ.) ಮಹೋಪಾಧ್ಯಾಯರ ತಂಡ ; ವಿ. ವಿ. ನಿ. ದ ಮಹೋಪಾಧ್ಯಾಯ ವರ್ಗ ; —ಅಧಿಕಾರ. **Proféssorship** ಪ್ರೊ— (ನಾ.) ; **Professórial** (ಗು.) ; **Professórially** (ಕ್ರಿ. ವಿ.)

Próffer ಪ್ರಾಫರ್ (ಕ್ರಿ. ಸಕ., ನಾ.) (ಸಾಹಿತ್ಯ ಪ್ರ.) (ಕೊಡುಗೆ, ಸೇವೆ, ಮೊ. ಗಳ) ನಿವೇದನೆ (ಮಾಡು) ; ನೀಡು. (ಪ್ರಾಚೀ. ಪ್ರ.) ಮಾಡಲು ಇಷ್ಟವಿದೆಯೆಂದು ಮುಂದೆಬರು (ಮು., ಭೂ. ಕೃ. ನಲ್ಲಿ)

Profícient ಪ್ರೊಫಿಷೆ(ಷ್)ಂಟ್ (ಗು., ನಾ.) ನಿಪುಣ, ಪ್ರವೀಣ, ನುರಿತ (ವನು) ; ಸಮರ್ಥ ; ಜಾಣ (*In*, *at*, an art, etc., *in* doing). **Profíciently** (ಕ್ರಿ. ವಿ.) ; **Profíciency** (ನಾ.)

Prófile ಪ್ರೋಫೈಲ್, —ಫಿ(ೕ)ಲ್ (ನಾ., ಕ್ರಿ. ಸಕ.) (ಮು., ಮನುಷ್ಯನ ಮುಖದ) ಪಾರ್ಶ್ವ (ದೃಶ್ಯ) ಚಿತ್ರ (ರೇಖಾ ಚಿತ್ರ ಅಥವಾ ನೆಳಲು ಚಿತ್ರ, ಮೊ. ರೂಪದ್ದು) ; ಪಾರ್ಶ್ವ ದೃಶ್ಯ (Drawn up in p. ಒಂದು ಪಕ್ಕದಿಂದ ಕಾಣುವಂತೆ ರೇಖಿಸಿದ). (ಮು., ಮನುಷ್ಯನ ಮುಖದ) ಪಾರ್ಶ್ವ ಸೀಮಾರೇಖೆ, ಪಕ್ಕದ ಹೊರ ರೇಖಾಕೃತಿ. ಕೋಟೆ ಕೊತ್ತಲಗಳ ಲಂಬ ಕೊಯ್ತದ ಮುಖಚಿತ್ರ. (ರಂಗ ಸ್ಥಳದಲ್ಲಿ) ಯಾವುದಾದರೂ ದೃಶ್ಯದ ಹೊರ ರೇಖಾಕೃತಿ ಚಿತ್ರ. (ಕ್ರಿ.) ಪಾರ್ಶ್ವ ದೃಶ್ಯದ ಆಕೃತಿಯನ್ನು ರೇಖಿಸು, ಚಿತ್ರಿಸು. (ಒಂದಕ್ಕೆ) ಪಕ್ಕ ನೋಟದ ಆಕೃತಿ ರಚಿಸು. **Prófilist** (ನಾ.) ಪಾರ್ಶ್ವ (ದೃಶ್ಯದ) ಚಿತ್ರಕಾರ.

Prófit ಪ್ರಾಫಿಟ್ (ನಾ., ಕ್ರಿ.) ಲಾಭ ; ಪ್ರಯೋಜನ ; ಫಾಯಿದೆ (Have studied it to my p. No p. in such pursuits). (ಹಣದ) ಲಾಭ, ನಫೆ ; ಖರ್ಚು ಕಳೆದಮೇಲೆ ಉಳಿದ ಆದಾಯ (ಸಾ., ಬ. ವ. ದಲ್ಲಿ). [(ಲೆಕ್ಕವಿಡುವ ಪದ್ಧತಿ) P. & loss account ಲಾಭಾಂಶಗಳನ್ನೆಲ್ಲ ಜಮೆಯ ಕಡೆಗೂ ನಷ್ಟಾಂಶಗಳನ್ನೆಲ್ಲ ವೆಚ್ಚದ ಕಡೆಗೂ ಕ್ರಮವಾಗಿ ಲೆಕ್ಕ ಬರೆದು ಯಾವ ಕ್ಷಣದಲ್ಲಾಗಲಿ ನಿವ್ವಳ ಲಾಭವನ್ನೋ ನಷ್ಟವನ್ನೋ ತೋರಿಸುವಂತೆ ಇಡುವ ಲೆಕ್ಕ ಪದ್ಧತಿ : ಲಾಭ ನಷ್ಟದ ಲೆಕ್ಕ. P.-sharing (ಮು., ಯಜಮಾನನೂ ಕೆಲಸಗಾರರೂ) ಬಂದ ಲಾಭವನ್ನು ಹಂಚಿಕೊಳ್ಳುವ]. (ಕ್ರಿ.) (ಒಂದರ ವಿಷಯದಲ್ಲಿ, ಒಬ್ಬನಿಗೆ) ಲಾಭಕರವಾಗಿರು ; ಪ್ರಯೋಜನಕರವಾಗಿರು (It will not p. him). (ವ್ಯಕ್ತಿಯು ವಿಷಯದಲ್ಲಿ) ಅನುಕೂಲ ಪಡೆ, ಪ್ರಯೋಜನ ಹೊಂದು (Hope to p. by your advice. Profited by his confusion to make my escape). **Prófitable** (ಗು.) ಲಾಭಕರ ; ಆದಾಯ ಕೊಡುವ ; ಫಲಪ್ರದ ; ಪ್ರಯೋಜನಕರ (A p. speculation. P. conservation). **Prófitableness** (ನಾ.) ; **Prófitably** (ಕ್ರಿ. ವಿ.) ; **Prófitless** (ಗು.) ; **Prófitlessly** (ಕ್ರಿ. ವಿ.) ; **Prófitlessness** (ನಾ.) ; **Profiteér** ಪ್ರಾಫಿಟಿಯರ್ (ಕ್ರಿ. ಅಕ., ನಾ.) (ಮು., ಯುದ್ಧಕಾಲದಲ್ಲಿ, ಕಂಟ್ರಾಕ್ಟುದಾರರ ಮತ್ತು ವ್ಯಾಪಾರಿಗಳ ವಿಷಯದಲ್ಲಿ) ರಾಜ್ಯದ ಅಥವಾ ಗಿರಾಕಿಗಳ ಇಕ್ಕಟ್ಟನ್ನು ದುರುಪಯೋಗ ಪಡಿಸಿಕೊಂಡು ವಿಪರೀತ ಲಾಭ ಸಂಪಾದಿಸು(ವವನು) ; ಲಾಭದ ಕೊಳ್ಳೆ ಹೊಡೆ(ಯುವವನು). **Profiteéring** (ನಾ.)

Prófligate ಪ್ರಾಫ್ಲಿಗೆಟ್ (ಗು., ನಾ.) ಸ್ವೇಚ್ಛಾಚಾರಿ(ಯಾದ) ; ವಿಷಯ ಲಂಪಟ(ನಾದ). ಲಕ್ಷ್ಯವಿಲ್ಲದೆ, ನಾಚಿಕೆಯಿಲ್ಲದೆ, ವ್ಯಭಿಚಾರ ಮಾಡುವ(ವನು) ; ನೀತಿಗೆಟ್ಟ(ವನು) ; ಲಕ್ಷ್ಯವಿಲ್ಲದೆ ದುಂದುವೆಚ್ಚ ಮಾಡುವ(ವನು). **Prófligately** (ಕ್ರಿ. ವಿ.) ; **Prófligacy** (ನಾ.)

Profoúnd ಪ್ರೊಫೌಂಡ್ (ಗು., ನಾ.) ಗಾಢವಾದ ಪ್ರಜ್ಞೆಯನ್ನು, ಅಗಾಧ ಪರಿಜ್ಞಾನವನ್ನು, —ಹೊಂದಿರುವ, ತೋರುವ (P. Statesman, inquiry, treatise). ಆಳವಾದ ವ್ಯಾಸಂಗವೂ ಚಿಂತನೆಯೂ ಆವಶ್ಯಕವಾದ (P. doctrines). (ಸ್ಥಿತಿ, ಗುಣ—ಇವುಗಳ ವಿಷಯದಲ್ಲಿ) ಗಾಢ, ಘನ, ತೀವ್ರ, ಪರಮ (Fell into a p. sleep. Simulated a p. indifference). (ಬಹಳ) ಆಳವಾದ ; ಅಗಾಧವಾದ ; ಬಹಳ ಆಳದಿಂದ ಬರುವ ; —ಆಳದ ವರೆಗೆ ವ್ಯಾಪಿಸಿರುವ (P. crevasses. A p. sigh ಆಳವಾದ ನಿಟ್ಟುಸಿರು. P. gangrene ಆಳದಲ್ಲಿ ನೆಲಸಿರುವ ಅಂಗ ಕ್ಷಯ). (ನಾ.) (ಕಾವ್ಯ) (ಸಾಗರ, ಭವಿಷ್ಯ, ಆತ್ಮ, ಮೊ. ರ) ಅಗಾಧತೆ, ಗಾಢತೆ. **Profoúndly** (ಕ್ರಿ. ವಿ.) ; **Profoúndness** (ನಾ.) ; **Profúndity** (ನಾ.)

Profúse ಪ್ರೊಫ್ಯೂಸ್ (ಗು.) (ದಾನ, ವಾಗ್ದಾನ, ವ್ಯಯ, ಮೊ. ಗಳಲ್ಲಿ) ಅತಿ ಧಾರಾಳವಾದ, ಅಮಿತ, ಯಥೇಷ್ಟ (*In*, *of* ಉಪ. ದೊಡನೆ). (ವಸ್ತು ವಿಷಯಗಳಲ್ಲಿ) ತುಂಬಿತುಳುಕುವ ; ಅತ್ಯಂತ ಸಮೃದ್ಧ ; ವಿಪುಲ ; ಪುಷ್ಕಳ. **Profúsely** (ಕ್ರಿ. ವಿ.) ; **Profúseness** (ನಾ.) ; **Profúsion** —ಫ್ಯೂ(ಷ್)ನ್ (ನಾ.)

Prog[1] ಪ್ರಾಗ್ (ನಾ.) (ಅಸಂ.) ಬುತ್ತಿ, ತಿಂಡಿ.

Prog[2] ಪ್ರಾಗ್, **Próggins** ಪ್ರಾಗಿನ್ಸ್ (ನಾ., ಕ್ರಿ. ಸಕ.) (ಅಸಂ.) (ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿ. ವಿ. ನಿ. ಗಳಲ್ಲಿ) ಶಿಷ್ಟಿಪಾಲನಾಧಿಕಾರಿ. (ಕ್ರಿ.) ಶಿಷ್ಟಿಪಾಲನಾಧಿಕಾರ ಮಾಡು.

Progénitive, etc. **Progeny** ನೋಡಿ.

Prógeny ಪ್ರಾಜಿನಿ (ನಾ.) (ಮನುಷ್ಯನ, ಪ್ರಾಣಿಯ, ಸಸ್ಯದ) ಸಂತಾನ, ಸಂತತಿ ; (ರೂಪ.) ಫಲ ; ಪರಿಣಾಮ. **Progénitive** ಪ್ರೊಜೆನಿಟಿವ್ (ಗು.) ಸಂತಾನಾಭಿವೃದ್ಧಿ ಮಾಡಬಲ್ಲ ; ಸಂತಾನೋತ್ಪತ್ತಿಯ ; —ಸಂಬಂಧದ. **Progénitor** ಪ್ರೊಜೆ— (ನಾ.) ಮೂಲ ಪುರುಷ ; (ಪ್ರಾಣಿಯ, ಸಸ್ಯದ) ಮೂಲ ಜನಕ ; ಪ್ರಜನಕ. (ರೂಪ.) (ರಾಜಕೀಯ, ಬೌದ್ಧಿಕ, ವಿಷಯಗಳಲ್ಲಿ) ಆದಿ ಪ್ರವರ್ತಕ. ಮೂಲ ಪ್ರತಿ. **Progenitórial** (ಗು.) ; **Progénitorship** (ನಾ.) ; **Progénitress** (ನಾ., ಸ್ತ್ರೀ.) ; **Progéniture** —ಟ್ಯುರ್, —ಚರ್ (ನಾ.) ಸಂತಾನ (ಪಡೆಯುವುದು) ; ಸಂತಾನೋತ್ಪತ್ತಿ.

Próggins. **Prog**[2] ನೋಡಿ.

Proglóttis ಪ್ರೊಗ್ಲಾಟಿಸ್ (ನಾ., ಬ. ವ. -ides, —ಡೀಸ್) ಲಾಡಿಹುಳುವಿನಲ್ಲಿ ಲೈಂಗಿಕ ಪರಿಪಕ್ವತೆ ಹೊಂದಿರುವ ಖಂಡ (ಭಾಗ)

Prógnathous ಪ್ರಾಗ್ನತಸ್ (ಗು.) ಚಾಚು ದವಡೆಗಳುಳ್ಳ ; (ದವಡೆಗಳು) ಚಾಚಿಕೊಂಡಿರುವ. **Prognáthic** —ಗ್ನಾಥಿ— (ಗು.) ; **Prógnathism** —ಗ್ನ— (ನಾ.)

Prognósis ಪ್ರಾಗ್ನೋಸಿಸ್ (ನಾ. ; ಬ. ವ. -oses —ಸೀಸ್) (ಮುಂದೆ ಬರುವುದನ್ನು) ಮೊದಲೇ (ತಿಳಿದು) ಹೇಳುವುದು ; ಮುನ್‌ಸೂಚಿಸುವುದು. (ಮು., ವೈ. ಶಾ. : ಒಂದು ವ್ಯಾಧಿಯ ಗತಿಯ, ನಡೆಯ, ಹರಿವಿನ) ಮುಂಗಾಣಿಕೆ ; ಮುನ್ನರಿವು.

Prognóstic ಪ್ರಾಗ್ನಾಸ್ಟಿಕ್ (ನಾ., ಗು.) ಮುನ್‌ಸೂಚನೆ ; ನಿಮಿತ್ತ ; ಶಕುನ (*Of* ಉಪ. ದೊಡನೆ) ; ಭವಿಷ್ಯ (ಹೇಳುವುದು) ; ಮುನ್ ಅಂದಾಜು. (ಗು.) ಮುನ್‌ಸೂಚಿಸುವ ; ಭವಿಷ್ಯ ಹೇಳುವ (*Of* ಉಪ. ದೊಡನೆ). **Prognósticate** —ಕೇಟ್ (ಕ್ರಿ. ಸಕ.) ಮುನ್‌ಸೂಚನೆ ಕೊಡು ; ಭವಿಷ್ಯ ನುಡಿ ; ಕಣಿ ಹೇಳು ; (ಒಂದರ ವಿಷಯದಲ್ಲಿ) ಮುನ್ ಸೂಚನೆಯಾಗು. **Prognósticable** (ಗು.) ; **Prognosticátion** (ನಾ.) ; **Prognósticative** (ಗು.) ; **Prognósticator** (ನಾ.) ; **Prognósticatory** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Prógram(me) ಪ್ರೋಗ್ರ್ಯಾಮ್ (ನಾ., ಕ್ರಿ. ಸಕ.) ಕಾರ್ಯ ಸರಣಿಯ ವಿವರಣೆಯ ಸೂಚೀ ಪತ್ರ (ಉದಾ., ವ್ಯಾಸಂಗ ಕ್ರಮ, ಸಂಗೀತ ಗೋಷ್ಠಿ, ಉತ್ಸವ, ಮೊ. ಗಳಲ್ಲಿ) ; ಉದ್ದಿಷ್ಟ ಕಾರ್ಯಕ್ರಮದ ನಿಷ್ಕೃಷ್ಟ ಯೋಜನೆ ; ಕಾರ್ಯ ಸೂಚಿ ; ಕಾರ್ಯಕ್ರಮ (ಪಟ್ಟಿ). [(ಬಳ. ಮಾ.) What is the p. for today ಈ ದಿನ ಏನು ಮಾಡೋಣ ? P.-music ದೃಶ್ಯ ಪರಂಪರೆಯನ್ನು, ಘಟನಾ ಪರಂಪರೆಯನ್ನು, —ಸೂಚಿಸಲು ಉದ್ದೇಶಿಸಿದ ಸಂಗೀತ]. (ಕ್ರಿ.) ಕಾರ್ಯಕ್ರಮ ಗೊತ್ತುಮಾಡು, ನಿರ್ಧರಿಸು ; ಖಚಿತವಾದ ಯೋಜನೆ ಏರ್ಪಡಿಸು.

Prógress ಪ್ರೋ(ಪ್ರಾ)ಗ್ರೆಸ್ (ನಾ.), **Progréss** ಪ್ರೊಗ್ರೆಸ್ (ಕ್ರಿ. ಅಕ.) (ಇರುವ ಸ್ಥಳದಿಂದ) ಮುಂದುವರಿಯುವುದು ; ಮುಂಬರಿವು (Made slow p. An inquiry is now in p. ವಿಚಾರಣೆ ನಡೆಯುತ್ತಿದೆ). ಮುನ್ನಡೆ; ಏಳಿಗೆ; ಪ್ರಗತಿ; ಪುರೋವೃದ್ಧಿ; (Made no p. in his studies. The p. of civilization. Disease made rapid p.). (ಪ್ರಾಚೀ. ಪ್ರ.) (ರಾಜ, ಶ್ರೀಮಂತ, ಮಠಾಧಿಪತಿ, ಮೊ. ರ) ದೇಶಾಟನ, ಪ್ರಸ್ಥಾನ, ಪ್ರಯಾಣ, ಸವಾರಿ (Royal p.). (ಕ್ರಿ.) ಮುಂದಕ್ಕೆ ನಡೆ; ಮುನ್ನಡೆ; ಮುಂದುವರಿ; ಸಾಗು; ನಡೆಯುತ್ತಿರು (The controversy still progresses). ಅಭಿವೃದ್ಧಿ, ಪ್ರಗತಿ, —ಹೊಂದು; ಮುಂದುವರಿ; ಮುಂಬರಿ (We p. in knowledge. Science progresses). **Progréssion** ಪ್ರೊಗ್ರೆಷ(ಷ್)ನ್ (ನಾ.) = Progress (Mode of P.); [(ಗಣಿತ) Arithmetical, Geometrical, Harmonic, p. (ಆಯಾ ಪದವನ್ನು ನೋಡಿ)]. (ಸಂ.) (ಒಂದು) ಸ್ವರದಿಂದ (ಮತ್ತೊಂದು) ಸ್ವರಕ್ಕೆ ಸಾಗಣೆ. **Progréssional** (ಗು.) ; **Progréssionist** (ನಾ.) (ರಾಜಕೀಯ, ಸಾಮಾಜಿಕ, ಮೊ. ವಿಷಯಗಳಲ್ಲಿ) ಪ್ರಗತಿ ವಾದಿ [= **Prógressist** ಪ್ರೋ(ಪ್ರಾ)ಗ್ರೆಸಿಸ್ಟ್ (ನಾ.)]. ಪ್ರಪಂಚದಲ್ಲಿ ಜೀವಗತಿ ಕ್ರಮ ಕ್ರಮವಾಗಿ ಮೇಲು ಮೇಲಿನ ಹಂತದ ರೂಪಗಳಿಗೆ ಮುಂದುವರಿಯುತ್ತಿದೆಯೆಂದು ನಂಬುವವನು : ಜೀವಪ್ರಗತಿ ವಾದಿ ; ಉತ್ಕರ್ಷ ವಾದಿ. **Progréssive** (ಗು., ನಾ.) ಮುಂದಕ್ಕೆ ಚಲಿಸುವ; ಮುಂದುವರಿಯುವ (P. motion). ಮೆಟ್ಟಿಲಿನಿಂದ ಮೆಟ್ಟಿಲಿಗೆ ಹೋಗುವ ; ಅನುಕ್ರಮಿಕ. (ಸಾಮಾಜಿಕ ಸ್ಥಿತಿ, ಶೀಲ, ದಕ್ಷತೆ, ಮೊ. ಗಳಲ್ಲಿ) ಮುನ್ನಡೆಯುತ್ತಿರುವ, ಪ್ರಗತಿ ಹೊಂದುತ್ತಿರುವ (A p. nation). (ವ್ಯಾಧಿ) ಎಡೆಬಿಡದೆ ಕ್ರಮವಾಗಿ ಹೆಚ್ಚುತ್ತಿರುವ. ಪ್ರಗತಿಯನ್ನು ಅಥವಾ ಸುಧಾರಣೆಯನ್ನು ಬಯಸುವ; ಪ್ರಗತಿ ಪರ (P. principles, party). (ನಾ.) ಪ್ರಗತಿ(ನೀತಿ) ವಾದಿ. **Progréssively** (ಕ್ರಿ. ವಿ.) ; **Progréssiveness** (ನಾ.) ; **Progréssivism** (ನಾ.) ಪ್ರಗತಿ ವಾದ, —ತತ್ತ್ವ. **Progréssivist** (ನಾ., ಗು.) ಪ್ರಗತಿ ತತ್ಪರ.

Prohíbit ಪ್ರೊಹಿಬಿಟ್ (ಕ್ರಿ. ಸಕ.) (ಕಾರ್ಯ, ವಸ್ತು, ವ್ಯಕ್ತಿ, ಮೊ. ನ್ನು) ಪ್ರತಿಬಂಧಿಸು, ಅಡ್ಡಿ ಮಾಡು, ನಿರೋಧಿಸು, ನಿಷೇಧಿಸು, ಪ್ರತಿಷೇಧಿಸು, ತಡೆ(ಗಟ್ಟು), ಆಗಗೊಡದಿರು, ಮಾಡಗೊಡದಿರು (*From doing*). **Prohíbiter** (ನಾ.) = **Prohíbitor** (ನಾ.) ; **Prohibítion** ಪ್ರೋಹಿ(ಇ)ಬಿಷನ್ (ನಾ.) ನಿರೋಧ, ನಿಷೇಧ, ತಡೆ ; ನಿಷೇಧಾಜ್ಞೆ ; ಪ್ರತಿಬಂಧಕಾಜ್ಞೆ ; ಜನರ ಸಾಮಾನ್ಯ ಉಪಯೋಗಕ್ಕಾಗಿ ಮಾದಕ ವಸ್ತುಗಳ ತಯಾರಿಕೆಯ ಮತ್ತು ಮಾರಾಟದ ನಿಷೇಧ; ಮದ್ಯಪಾನ ನಿರೋಧ [**Prohibítionist** (ನಾ.) —ವಾದಿ]. (ನ್ಯಾ. ಶಾ.) ಕೆಳ ಕೋರ್ಟಿಗೆ ಆ ವಿಷಯದಲ್ಲಿ ಅಧಿಕಾರ ವ್ಯಾಪ್ತಿಯಿಲ್ಲದ್ದರಿಂದ (ಒಂದು) ದಾವೆಯನ್ನು ವಿಚಾರಣೆ ಮಾಡಕೂಡದೆಂದು ಅದಕ್ಕೆ ಶ್ರೇಷ್ಠ ನ್ಯಾಯಸ್ಥಾನ ಕೊಟ್ಟ ಲಿಖಿತ ರೂಪದ ನಿಷೇಧಾಜ್ಞೆ. **Prohíbitive** (ಗು.) ನಿಷೇಧಕ ; ನಿರೋಧಕ ; (ದುರ್)ಉಪಯೋಗ ಮಾಡದಂತೆ ನಿರ್ಬಂಧಿಸುವ ; ನಿರೋಧಾರ್ಥಕ (P. tax ನಿರೋಧಾರ್ಥಕ ತೆರಿಗೆ. Published at a p. price ಕೊಂಡುಕೊಳ್ಳಲಾಗದಷ್ಟು ಹೆಚ್ಚು ಬೆಲೆಗೆ ಪ್ರಕಟಿಸಿದ). **Prohíbitively** (ಕ್ರಿ. ವಿ.) ; **Prohíbitiveness** (ನಾ.) ; **Prohíbitory** (ಗು.)

Projéct ಪ್ರೊಜೆಕ್ಟ್ (ಕ್ರಿ.), **Próject** ಪ್ರಾ(ಪ್ರೋ)ಜೆಕ್ಟ್ (ನಾ.) (ಯೋಜನೆ, ಕಾರ್ಯಗತಿ, ಮೊ. ನ್ನು) ಹೂಡು ; ಕಲ್ಪನೆ ಮಾಡು ; ಯೋಜಿಸು. (ವಸ್ತುವನ್ನು, ಹೊರಗೆ) ಎಸೆ, ಚಿಮ್ಮು, ಒಗೆ (*Into* ಉಪ. ದೊಡನೆ); [P. oneself (*into* another's feelings) ಮತ್ತೊಬ್ಬನ ಮನೋವೃತ್ತಿಯನ್ನು ತನ್ನಲ್ಲಿ ಕಲ್ಪಿಸಿಕೊ, ಅನುಭವಕ್ಕೆ ತಂದುಕೊ; ಪರಾನುಭವಕ್ಕೆ ಮನಸ್ಸನ್ನೊಡ್ಡು. P. oneself into the future ಭವಿಷ್ಯವನ್ನು ಮನಸ್ಸಿನಲ್ಲಿ ಕಲ್ಪನೆ ಮಾಡಿಕೊ]. (ಪ್ರೇತ ವಿದ್ಯೆ) ಪರಸ್ಥಳದಲ್ಲಿರುವವನಿಗೆ ಕಾಣುವಂತೆ ಪ್ರೇತ ರೂಪ ತಾಳು. (ರ. ವಿ.) (ಒಂದು ಪದಾರ್ಥವನ್ನು, ಒಂದರಲ್ಲಿ, ಒಂದರೊಳಗೆ, ಒಂದರಮೇಲೆ) ಎಸೆ, ಹಾಕು. (ಬೆಳಕನ್ನು, ನೆರಳನ್ನು) (ಒಂದರಮೇಲೆ) ಬೀಳಿಸು, ಹರಿಸು. (ರೂಪ.) (ಭಾವ, ಮೊ. ಗಳಿಗೆ) ರೂಪ, ಆಕಾರ, —ಕೊಡು. (ಜ್ಯಾ.) ಒಂದು ಕೇಂದ್ರದಿಂದ ದತ್ತ ಆಕೃತಿಯ ಎಲ್ಲ ಬಿಂದುಗಳ ಮೂಲಕವೂ ಆ ರೇಖೆಗಳು ಒಂದು ತಲದಮೇಲೆ ಸಂಧಿಸಿ ಅದರಮೇಲೆ ಆ ಆಕೃತಿಯ ರಚನೆಯಾಗುವಂತೆ ಸರಳ ರೇಖೆಗಳನ್ನೆಳೆ; ಪ್ರಲಂಬ ರೇಖಾಚಿತ್ರ ರಚಿಸು. (ಭೂಮಿ, ಆಕಾಶ, ಮೊ. ಗಳ) ಪ್ರಲಂಬ ರೇಖಾಚಿತ್ರ ರಚಿಸು. ಮುನ್‌ಚಾಚಿಕೊಂಡಿರು. (ನಾ.) ಯೋಜನೆ; (ಪರಿ)ಕಲ್ಪನೆ; ಹಂಚಿಕೆ; ಹೂಟ. **Projéctile** ಪ್ರೊಜೆಕ್‌ಟೈ(ಟಿ)ಲ್ (ಗು., ನಾ.) ಮುಂದಕ್ಕೆ ಚಿಮ್ಮುವ, ಎಸೆಯುವ; ಕ್ಷೇಪಕ (P. force). (ಮು., ಫಿರಂಗಿಯಿಂದ) ಬಲವಾಗಿ ಚಿಮ್ಮಲಾಗುವ, ಹಾರಿಸಲಾಗುವ. (ನಾ. ; Prój- ಸಹ) ಕ್ಷಿಪಣಿ ; ಮುಕ್ತಕ ; ಎಸುಗೆ. **Projéction** (ನಾ.) ಎಸೆಯುವುದು ; ಎಸೆತ ; ಒಗೆತ ; ಪ್ರಕ್ಷೇಪಣ. ಲೋಹ ಪರಿವರ್ತನೆ (Powder of p. ರಸವಾದಿಗಳ ಸ್ಪರ್ಶಮಣಿಯ ಪುಡಿ). ಯೋಜನೆ, ಕಲ್ಪನೆ (—ಮಾಡುವುದು). ಮುನ್‌ಚಾಚಿಕೊಂಡಿರುವುದು; —ವದು ; ಮುನ್ನುಗ್ಗಿಸುವುದು. (ಜ್ಯಾ.) ಪ್ರಲಂಬ ರೇಖಾಕೃತಿ ರಚನೆ (P. of a point ಮೂಲ ಆಕೃತಿಯ ಒಂದು ಬಿಂದುವನ್ನೂ ಬಿಂಬಾಕೃತಿಯಲ್ಲಿ ಅದಕ್ಕೆ ಜವಾಬಾದ (ಸಮವಾದ) ಬಿಂದುವನ್ನೂ ಸೇರಿಸುವ ರೇಖೆ : ಬಿಂದು ಪ್ರಲಂಬನ ರೇಖೆ). [ಭೂಮಿಯ ಅಥವಾ ಖಗೋಳದ (ಯಾವುದಾದರೂ ಭಾಗದ)] ಸಮತಲ ಪ್ರಲಂಬ ರೇಖಾಕೃತಿ (ರಚನೆ) [Mercator's p. (ಮಧ್ಯಾಹ್ನ ರೇಖೆಗಳು ಅಥವಾ ರೇಖಾಂಶಗಳು ಸಮಾಂತರ ಸರಳ ರೇಖೆಗಳಾಗಿರುವಂತೆ ಆಯದಾಕಾರದ ಸಮತಲದ ಮೇಲೆ ರಚಿಸಿದ, ಆದುದರಿಂದ ಹಡಗು ನೇರವಾಗಿ ಹೋಗುತ್ತಿದ್ದರೆ ಆ ನೇರ ರೇಖೆಯು) ರೇಖಾಂಶಗಳನ್ನು ಒಂದೇ ಕೋನದಲ್ಲಿ ಕತ್ತರಿಸುವಂತೆ ತೋರುವ ಭೂಪಟ. ರೇಖಾಂಶಗಳು ಸಮಾಂತರ ಸರಳ ರೇಖೆಗಳಾಗಿಯೂ, ಅಕ್ಷಾಂಶಗಳೂ ಸಮಾಂತರ ಸರಳ ರೇಖೆಗಳಾಗಿ ರೇಖಾಂಶಗಳನ್ನು ಸಮಕೋನದಲ್ಲಿ ಕತ್ತರಿಸುವಂತೆಯೂ ರಚಿಸಿದ ಸಮತಲ ಪ್ರಲಂಬಾಕೃತಿಯ ಭೂಪಟ]. ಬಾಹ್ಯದಲ್ಲಿ ವಾಸ್ತವಿಕ ಅಸ್ತಿತ್ವವುಳ್ಳಂತೆ ಭಾವಿಸುವ ಮನಃಕಲ್ಪನೆ ; ಬಾಹ್ಯರೂಪಣ ಬಿಂಬ. **Projéctive** (ಗು.) ಪ್ರಲಂಬ ರೇಖಾಕೃತಿಯ; —ರೇಖಾ ರಚನೆಯ [P. property (of a figure) ಪ್ರಲಂಬ ರೇಖಾಕೃತಿಯಲ್ಲಿ ಲಕ್ಷಣ ಬದಲಾಯಿಸದ (ಆಕೃತಿಯ) ಗುಣ]. ಮನೋಬಿಂಬವನ್ನು ರಚಿಸಿಕೊಳ್ಳುವ (ಶಕ್ತಿಯುಳ್ಳ) ; ಮನೋಬಿಂಬ ರೂಪಣದ ಗುಣವುಳ್ಳ (P. imagination). **Projéctively** (ಕ್ರಿ. ವಿ.) ; **Projéctor** (ನಾ.) ಒಂದು ಯೋಜನೆಯನ್ನು ಹೂಡುವವನು : ಯೋಜಕ. ಬುದ್ಬುದ (ಅಲ್ಪಾಯುಸ್ಸಿನ) ವ್ಯಾಪಾರ ಸಂಘಗಳ ಪ್ರವರ್ತಕ. ಬೆಳಕಿನ ಕಿರಣಗಳನ್ನು ಬೀರುವ ಸಲಕರಣೆ : ಪ್ರಕ್ಷೇಪಕ.

Prolápse ಪ್ರೊಲ್ಯಾಪ್ಸ್ (ಕ್ರಿ. ಅಕ., ನಾ.) (ವೈ. ಶಾ.) (ಒಂದು ಅಂಗ) ಸ್ಥಳ ಬಿಟ್ಟು ಮುಂದಕ್ಕೆ ಅಥವಾ ಕೆಳಕ್ಕೆ ಜಾರಿಬೀಳು(ವುದು). (ನಾ.) = **Prolápsus** (L) ಅಂಗ ಭಾಗದ ಕೆಳ ಜಾರು (ಮು., ಗರ್ಭ ಕೋಶದ್ದು ಅಥವಾ ಗುದ ನಾಳದ್ದು)

Prólate ಪ್ರೋಲೇಟ್ (ಗು.) (ಜ್ಯಾ., ಗೋಳ ಕಲ್ಪದ ವಿಷಯದಲ್ಲಿ) ಧ್ರುವ ವ್ಯಾಸರೇಖೆಯ ದಿಕ್ಕಿನಲ್ಲಿ ಹೆಚ್ಚು ಲಂಬವಾಗಿರುವ (Oblate[2] ಹೋಲಿಸಿ). ಅಗಲದಲ್ಲಿ ಬೆಳೆಯುತ್ತ, ವಿಸ್ತರಿಸುತ್ತ, ಹೋಗುವ. (ರೂಪ.) ವಿಸ್ತಾರವಾಗಿ ಪ್ರಸರಿಸಿದ, ಹರಡಿದ. (ವ್ಯಾ.) = Prolative. **Prólately** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Prolátive ಪ್ರೊಲೇಟಿವ್ (ಗು.) (ವ್ಯಾ.) ಆಖ್ಯಾತ —ವಿಸ್ತಾರಕ, ಪೂರಕ (ಉದಾ., You can go ಎಂಬಲ್ಲಿ 'go' ಪದ ಕ್ರಿಯಾಪೂರಕ)

Prolegómenon ಪ್ರೊಲೆಗಾಮೆನಾನ್ (ನಾ.) (ಸಾ., ಬ. ವ. ದಲ್ಲಿ: -mena —ಮೆನ) (ಗ್ರಂಥ, ಮೊ. ಗಳ ಆರಂಭದಲ್ಲಿ ಕೊಡುವ) ಪೀಠಿಕಾ ವಿಷಯ; —ಪ್ರಬಂಧ; ಉಪೋದ್ಘಾತ. **Prolegómenary** (ಗು.) =**Prolegómenous** (ಗು.)

Prolépsis ಪ್ರೊಲೆ(ಲ್ಲೇ)ಪ್ಸಿಸ್ (ನಾ.) ಮುಂದೆ ಆಗಲಿರುವುದನ್ನು ಆಗಲೇ ಆದಂತೆ, ಇದ್ದಂತೆ, ಭಾವಿಸುವುದು; ಮುಂಭಾವನೆ. ಮುನ್ನಿರೀಕ್ಷೆ. (So those two brothers and their *murdered* man Rode past fair Florence). **Proléptic** (ಗು.); **Proléptically** (ಕ್ರಿ. ವಿ.)

Proletaíre (F) ಪ್ರೊಲೆ(ಲ)ಟೇರ್ (ಗು., ನಾ.) =Proletarian (ನಾ.); **Proletaírism** (ನಾ.)

Proletárian (L) ಪ್ರೊಲಿಟೇರಿಯನ್ (ಗು., ನಾ.) (ಸಮಾಜದಲ್ಲಿ) ಅತ್ಯಂತ ಕೆಳ ದರ್ಜೆಯ (ಪ್ರಜೆ); ಕೂಲಿಕಾರ ಪಂಗಡದ(ವನು); ಶ್ರಮ ಜೀವಿ; ಕಾರ್ಮಿಕ [P. dictatorship (ಸೋವಿಯೆಟ್ ರಷ್ಯಾ ದಲ್ಲಿರುವಂತೆ) ಕೂಲಿಕಾರ ವರ್ಗದ ಸರ್ವಾಧಿಕಾರ]. **Proletárianism** (ನಾ.); **Próletary** ಪ್ರೋ(ಪ್ರಾ)— (ಗು.) =Proletarian. **Proletáriat(e)** ಪ್ರೊಲಿಟೇರಿಯ(ಯ)ಟ್ (ನಾ.) (ರೋಮನ್ ಚರಿತ್ರ ಮತ್ತು ಆಧುನಿಕ ತಿರಸ್ಕಾರ ಪ್ರ.) ಸಮಾಜದ ಅತ್ಯಂತ ಕೆಳ ದರ್ಜೆ(ಯ ಪಂಗಡ). (ಅರ್ಥ ಶಾಸ್ತ್ರ) ದರಿದ್ರ ಕೂಲಿಕಾರರು; ಶ್ರಮ ಜೀವಿಗಳು; ಜೀತಗಾರರು.

Prólicide ಪ್ರೋಲಿಸೈಡ್ (ನಾ.) (ಮು., ಹುಟ್ಟುವುದಕ್ಕೆ ಮೊದಲೇ ಅಥವಾ ಹುಟ್ಟಿದ ಕೂಡಲೇ ಮಾಡುವ) ಸಂತಾನ ಹತ್ಯ, ಶಿಶು ಹತ್ಯ. **Prolicídal** (ಗು.)

Prolíferate ಪ್ರೊಲಿಫರೇಟ್ (ಕ್ರಿ.) ಮೂಲ ಜೀವಾಂಶಗಳು ಸಂಖ್ಯಾಭಿವೃದ್ಧಿಯಾಗುವುದರಿಂದ ಪುನಸ್ಸಂತಾನವಾಗು, ಸಂತಾನ ಬೆಳೆ, —ಬೆಳಸು; ಹೀಗೆ (ಜೀವ ಕಣ, ಮೊ. ನ್ನು) ಉತ್ಪತ್ತಿ ಮಾಡು. **Proliferátion** (ನಾ.) ಮೊಳಕೆಗಳಿಂದ ಮೊಳಕೆಗಳು ಹುಟ್ಟಿ ಅಥವಾ ಜೀವ ಕಣಗಳು ಬೇರೆ ಬೇರೆ ಭಾಗಗಳಾಗಿ ಒಡೆದು ಸ್ವತಂತ್ರ ಕಣಗಳಾಗೇರ್ಪಟ್ಟು ಸಂತಾನ ಬೆಳೆಯುವುದು; ಚಿಲಕ ಒಡೆಯುವುದು. **Prolíferative** (ಗು.); **Prolíferous** (ಗು.) (ಸ. ವಿ.) ಸಹಜ ಸ್ಥಿತಿಯಲ್ಲಿ ಕೊನೆಯದಾದ ಅಂಗದಿಂದ (ಉದಾ., ಹಣ್ಣು, ಹೂವು) ಎಲೆಯ ಹೊಡೆ ಹೊರಡುವ; ಮೊಗ್ಗುಗಳಿಂದ ಹೊಸ ಜೀವಿಗಳನ್ನು ಉತ್ಪತ್ತಿ ಮಾಡುವ. (ಪ್ರಾ. ವಿ.) ಹೊಸ ಮೊಳಕೆಗಳು ಹುಟ್ಟಿ ಸಂತಾನ ವೃದ್ಧಿಯಾಗುವ. (ವೈ. ಶಾ.) ವಿಭಜನ ಕ್ರಮದಲ್ಲಿ ಬೇಗ ಸಂಖ್ಯಾಭಿವೃದ್ಧಿಯಾಗಿ ಹರಡಿಕೊಳ್ಳುವ. **Prolífic** (ಗು.) (ಬಹು) ಸಂತಾನೋತ್ಪಾದಕ; ಸಮೃದ್ಧಿಯಾಗಿ ಉತ್ಪತ್ತಿ ಮಾಡುವ (*Of* ಉಪ. ದೊಡನೆ); (ಫಲ) ತುಂಬಿರುವ, ಸಮೃದ್ಧ (*In* ಉಪ. ದೊಡನೆ). **Prolíficacy** (ನಾ.; ಅಕ್ರಮ ಪ್ರ.); **Prolificity** (ನಾ.); **Prolíficness** (ನಾ.)

Prolífic, etc. **Proliferate** ನೋಡಿ.

Prolígerous ಪ್ರೊಲಿಜೆರಸ್ (ಗು.) ಸಂತಾನೋತ್ಪಾದಕ; ಉತ್ಪಾದಕ (ಶಕ್ತಿಯುಳ್ಳ); ಜನನ ಶಕ್ತಿಯುಳ್ಳ.

Prolíx ಪ್ರೊಲಿಕ್ಸ್, **Prólix** ಪ್ರೋ— (ಗು.) ಲಂಬಿಸಿದ; ಪದ ಬಾಹುಳ್ಯದ; ಬೇಸರ ಹಿಡಿಸುವ (P. speech, writer). **Prolíxity** (ನಾ.); **Prolíxly** (ಕ್ರಿ. ವಿ.)

Prólogize ಪ್ರಾ(ಪ್ರೋ)ಲೊಜೈಸ್, **-guize** —ಗೈಸ್ (ಕ್ರಿ. ಅಕ.) ಪ್ರಸ್ತಾವನೆ ಬರೆ; ಪ್ರಸ್ತಾವನಾ ಭಾಷಣ ಮಾಡು. **Prólogue** ಪ್ರೋಲಾಗ್ (ನಾ., ಕ್ರಿ. ಸಕ.) (ಮು., ನಾಟಕಾರಂಭಕ್ಕೆ ಮುಂಚೆ ಕವಿ, ನಾಟಕ, ಕಥಾ ವಸ್ತು, ಅಥವಾ ಕಥಾ ಸಂದರ್ಭ—ಇವುಗಳನ್ನು ಪರಿಚಯ ಮಾಡಿಕೊಡುವ) ಪೀಠಿಕಾ ಭಾಷಣ, ಪ್ರಸ್ತಾವನಾ ರೂಪದ ಕಥನ. ಮೊ. ದು (Epilogue ಹೋಲಿಸಿ); (ರೂಪ.) ಪೀಠಿಕಾ ಪ್ರಕರಣ (*To* ಉಪ. ದೊಡನೆ). (ಕ್ರಿ.) ಪೀಠಿಕೆ ಬರೆ, ಹೇಳು; ಪೀಠಿಕೆ ಹೇಳಿ ಪರಿಚಯ ಮಾಡಿಸು.

Prólogue. **Prologize** ನೋಡಿ.

Prolóng ಪ್ರೊಲಾಂಗ್ (ಕ್ರಿ. ಸಕ.) (ಕಾರ್ಯ, ಸ್ಥಿತಿ, ಮೊ. ರ ಅವಧಿಯನ್ನು) ಲಂಬಿಸು, ವಿಸ್ತರಿಸು, ಬೆಳಸು, ನೀಳಿಸು; ಉದ್ದ ಬೆಳಸು; (ಉಚ್ಚಾರಾಂಶ, ಮೊ. ರ) ಉಚ್ಚಾರವನ್ನು ಲಂಬಿಸು. **Prolóngable** (ಗು.); **Prolongátion** ಪ್ರೋ— (ನಾ.)

Prolúsion ಪ್ರೊಲ್ಯೂಷ(ಷ್)ನ್ (ನಾ.) ಪೀಠಿಕಾ —ಪ್ರಬಂಧ, ಲೇಖನ; ಪ್ರವೇಶಿಕೆ; ಪೂರ್ವಭಾವಿ —ಪ್ರಯತ್ನ, ಪ್ರಯೋಗ, ಪ್ರದರ್ಶನ. **Prolúsory** —ಸೊರಿ (ಗು.)

Promenáde ಪ್ರಾಮೆ(ಮ, ಮಿ)ನಾ(ನೇ)ಡ್ (ನಾ., ಕ್ರಿ.) (ವ್ಯಾಯಾಮ, ವಿನೋದ, ಪ್ರದರ್ಶನ, ಸಾಮಾಜಿಕ ಸಂದರ್ಭಗಳು, ಮೊ. ಉದ್ದೇಶದಿಂದ) ಸಂಚಾರ, ತಿರುಗಾಟ, ಕುದುರೆ ಸವಾರಿ, ಗಾಡಿ ಸವಾರಿ; ವಿಹಾರ; ಇದಕ್ಕಾಗಿ ಮಾಡಿರುವ (ಮು., ನೆಲಗಟ್ಟಿನ) ಸಾರ್ವಜನಿಕ ಪಾದಚಾರಿ ಮಾರ್ಗ; ವಿಹಾರ ಪಥ (P. concert ಶ್ರೋತೃಗಳು ತಿರುಗಾಡುತ್ತ ಕೇಳಬಹುದಾದ ಮೇಳ, ಗಾನ ಗೋಷ್ಠಿ). (ಕ್ರಿ.) ವಿಹಾರ ಮಾಡು. (ಮು., ಪ್ರದರ್ಶನಕ್ಕಾಗಿ ಒಬ್ಬನನ್ನು) ಮೆರಸಿಕೊಂಡು ಹೋಗು. **Promenáder** (ನಾ.)

Prométhean ಪ್ರೊಮಿಥಿಯನ್ (ಗು.) (ಜಾಣ್ಮೆಯುಳ್ಳಾಗಲ ಅನುಭವಿಸಿದ ದಂಡನೆಯುಳ್ಳಾಗಲ) ಪ್ರೊಮಿಥಿಯೂಸಿನ(ಂಥ). (ಇವನು ಮಣ್ಣಿನಿಂದ ಮನುಷ್ಯನನ್ನು ಕಲ್ಪಿಸಿ, ದೇವಲೋಕದಿಂದ ಬೆಂಕಿಯನ್ನು ಕದ್ದು ತಂದು ಮನುಷ್ಯರಿಗೆ ಅದರ ಉಪಯೋಗವನ್ನೂ ಹಲವು ಕಲೆಗಳನ್ನೂ ಹೇಳಿಕೊಟ್ಟು, ಈ ಅಪರಾಧಗಳಿಗಾಗಿ ಜ್ಯೂಸ್ ದೇವನಿಂದ ದಂಡನಾರ್ಥವಾಗಿ ಕಾಕ್ಸಸ್ ಪರ್ವತದ ಒಂದು ದೊಡ್ಡ ಬಂಡೆಗೆ ಬಂಧಿಸಲ್ಪಟ್ಟವನು)

Próminent ಪ್ರಾಮಿನೆಂಟ್ (ಗು.) ಚಾಚಿಕೊಂಡಿರುವ; ಎದ್ದು ಕಾಣುವ; ಪ್ರಧಾನ; ಪ್ರಖ್ಯಾತ; ಪ್ರಮುಖ. **Próminently** (ಕ್ರಿ. ವಿ.); **Próminence** (ನಾ.); **Próminency** (ನಾ.)

Promíscuous ಪ್ರೊಮಿಸ್‌ಕ್ಯುಅಸ್ (ಗು.) ಒಂದು ಕ್ರಮವಿಲ್ಲದ; ಕಲಬೆರಕೆಯ; ಅವ್ಯವಸ್ಥೆಯ (A p. mass). ನಾನಾ ಬಗೆಯವು ಮಿಶ್ರವಾದ; ಸಂಕೀರ್ಣ; ವಿವೇಚನೆಯಿಲ್ಲದ [P. massacre, hospitality. P. bathing ಗಂಡಸರೂ ಹೆಂಗಸರೂ ಒಟ್ಟಿಗೆ, ಭೇದವಿಲ್ಲದೆ, ಒಂದೆಡೆಯಲ್ಲೇ ಸ್ನಾನ ಮಾಡುವುದು. P. sexual relations (ಮದುವೆ, ಕೂಡು ಬಾಳಿಕೆ, ಮೊ. ದ ಯಾವ ಸಂಬಂಧವೂ ಇಲ್ಲದ ಗಂಡೂ ಹೆಣ್ಣುಗಳ) ಸ್ವೇಚ್ಛಾ ಸಂಪರ್ಕ]. (ಬಳ. ಮಾ.) ಅನುದ್ದಿಷ್ಟ; ಅನಿಯತ (Took a p. stroll). (ಗ್ರಾಮ್ಯ, ಹಾಸ್ಯ, —ಪ್ರ.) P.-like ಅನುದ್ದಿಷ್ಟವಾಗಿ; ಅನಿಯತವಾಗಿ. **Promíscuously** (ಕ್ರಿ. ವಿ.); **Promiscúity** ಪ್ರಾಮಿಸ್‌ಕ್ಯೂಇಟಿ (ನಾ.)

Prómise ಪ್ರಾಮಿಸ್ (ನಾ., ಕ್ರಿ.) ವಾಗ್ದಾನ; ಕೊಟ್ಟ ಮಾತು; ಭಾಷೆ; ವಚನ; ಭರವಸೆ; ಕೊಡುವುದಾಗಿ ಮಾತು ಕೊಟ್ಟ ವಸ್ತು (I claim your p.). [Breach of p. ಮಾತಿಗೆ ತಪ್ಪುವುದು; ವಚನ ಭಂಗ. Land of p. =Canaan; ಸ್ವರ್ಗ; ಸುಖ ನಿರೀಕ್ಷಣೆಯ ಸ್ಥಾನ; ಭೋಗ ಪ್ರಪಂಚ (=Promised land)]. (ರೂಪ.) ಭಾವೀ ಸಾಧನೆಯ ಅಥವಾ ಸುಪರಿಣಾಮದ ನಿರೀಕ್ಷಣೆಗೆ ಆಧಾರ; ಭರವಸೆ (Writer of great p. ಒಳ್ಳೆಯ ಬರಹಗಾರನಾದಾನೆಂಬ ಭರವಸೆ ತೋರುವವನು). (ಕ್ರಿ.) ಮಾತು, ವಚನ, —ಕೊಡು; ವಾಗ್ದಾನ ಮಾಡು [I p. you a fair hearing. Cannot positively p. P. oneself (a pleasant time ಸುಖ ಸಂತೋಷಗಳ ಕಾಲವನ್ನು) ನೆಚ್ಚಿಕೊಂಡಿರು, ನಿರೀಕ್ಷಿಸುತ್ತಿರು. (ಬಳ. ಮಾ.) I p. you, it will not be so easy ಅದು ಅಷ್ಟು ಸುಲಭವಾಗಿ ಆಗುವುದಿಲ್ಲವೆಂದು ನಾನು ನಿನಗೆ ಭರವಸೆಯಿಂದ ಹೇಳುತ್ತೇನೆ]. (ರೂಪ.) ಸಂಭವ ತೋರು; ನಿರೀಕ್ಷಣೆಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವಕಾಶ ಕೊಡು [These discussions p. future storms ಈ ಚರ್ಚೆಗಳಿಂದ ಮುಂದೆ ಬಹಳ ಗಲಭೆಯೆದ್ದೀತೆಂಬ ನಿರೀಕ್ಷಣೆಯುಂಟು. P. well ಒಳ್ಳೆಯ ಪರಿಣಾಮದ ಭರವಸೆ ತೋರು. Promised land (ಮೇಲೆ ನೋಡಿ)]. **Prómiser** = Promisor. **Promiseé** (ನಾ.) (ನ್ಯಾ. ಶಾ.) ವಾಗ್ದಾನ ಪಡೆದವನು. **Prómisor** (ನಾ.) ವಾಗ್ದಾನ ಕೊಟ್ಟವನು. **Prómising** (ಗು.) ಚೆನ್ನಾಗಿ ಪರಿಣಮಿಸುವ ಸಂಭವವುಳ್ಳ; ಭರವಸೆ ಕೊಡುವ; ಆಶಾ ಜನಕ (A p. boy). **Prómisingly** (ಕ್ರಿ. ವಿ.)

Prómissory ಪ್ರಾಮಿಸರಿ (ಗು.) ವಾಗ್ದಾನ ಕೊಡುವ; ವಾಗ್ದಾನ ಸೂಚಕ. P. note ಒಂದು ಗೊತ್ತಾದ ಮೊಬಲಗನ್ನು ಒಬ್ಬ ಗೊತ್ತಾದ ವ್ಯಕ್ತಿಗೆ ಅಥವಾ ಆ ಪತ್ರ ತಂದವನಿಗೆ, ಒಂದು ಗೊತ್ತಾದ ದಿನ ಅಥವಾ ಯಾವಾಗ ಕೇಳಿದರೆ ಅವಾಗ, ಪಾವತಿ ಮಾಡುವುದಾಗಿ ವಾಗ್ದಾನ ಮಾಡಿ ರುಜುಹಾಕಿ ಬರೆದುಕೊಟ್ಟ (ಸಾಲ)ಪತ್ರ: ವಾಗ್ದಾನ (ಸಾಲ)ಪತ್ರ.

Prómontory ಪ್ರಾಮಂಟರಿ (ನಾ.) (ಸಮುದ್ರ, ಮೊ. ಗಳಲ್ಲಿ ಚಾಚಿ ಕೊಂಡಿರುವ) ಎತ್ತರದ ಚಾಚು ನೆಲದ ಅಗ್ರ; ಭೂಶಿರ. (ಅಂ. ರ. ಶಾ.) ದೇಹದಲ್ಲಿಯ ಹಲವು ಬಗೆಯ ಗಂತಿ(ಗಳು); ವಾಳ. **Prómontoried** —ಟರಿಡ್ (ಗು.)

Promóte ಪ್ರೊಮೋಟ್ (ಕ್ರಿ. ಸಕ.) (ಒಬ್ಬನನ್ನು ಮೇಲಿನ ದರ್ಜೆಗೆ, ಹುದ್ದೆಗೆ) ಬಡತಿಮಾಡು (*To* ಉಪ. ದೊಡನೆ) [Was promoted archbishop, to be archbishop, to the archbishopric (*To* archbishop ಅಸಾಧು ಪ್ರ.)]. (ಕ್ರಿಯೆ ಮುಂದುವರಿಯಲು, ಫಲ ದೊರೆಯಲು) ಸಹಾಯ, ಉತ್ತೇಜನ, —ಕೊಡು. (ಒಂದು ಕಾನೂನು, ಶಾಸನ, ಅಂಗೀಕೃತವಾಗುವಂತೆ) ಚುರುಕಾಗಿ ಒತ್ತಾಸೆ ಕೊಡು, ಆವಶ್ಯಕ ಕಾರ್ಯಕ್ರಮ ನಡಸು. (ಚದುರಂಗ) ಪ್ಯಾದೆಯನ್ನು ರಾಣಿ, ಮೊ. ದರ್ಜೆಗೆ ಏರಿಸು. **Promóter** (ನಾ.) (ಕ್ರಿಯಾರ್ಥಗಳಲ್ಲಿ). (ಕೂಡು ಬಂಡವಾಳ ಸಂಸ್ಥೆಯ) ಪ್ರವರ್ತಕ (=Company-p.) (ಮು., ನಿಂದಾರ್ಥದಲ್ಲಿ). **Promóterism** (ನಾ.); **Promótion** (ನಾ.); **Promótive** (ಗು.)

Prompt[1] ಪ್ರಾಂಪ್ಟ್, ಪ್ರಾಮ್ಟ್ (ಗು., ನಾ.) (ಕಾರ್ಯದಲ್ಲಿ) ಸಿದ್ಧನಾಗಿರುವ, ಚುರುಕಾಗಿ ನಡೆಯುವ; ಚುರುಕಾದ (A p. assistant). ಒಡನೆಯೇ, ತಡವಿಲ್ಲದೆ, —ಮಾಡುವ, ಮಾಡಿದ, ನಿರ್ವಹಿಸುವ, ನಿರ್ವಹಿಸಿದ (P. reply ಒಡನೆಯೇ ಕೊಟ್ಟ ಉತ್ತರ. P. decision. P. payment. For p. cash ಕೈಮೇಲೆ ಹಾಕುವ ಹಣಕ್ಕೆ; ನಗದು ಹಣಕ್ಕೆ). (ವ್ಯಾಪಾರದಲ್ಲಿ, ಸರಕು) ಒಡನೆಯೇ ಸ್ವಾಧೀನಕ್ಕೆ ಕೊಟ್ಟು ಹಣ ಪಡೆಯಬೇಕಾದ (P. iron). (ನಾ.) ಲೆಕ್ಕ ಫೈಸಲು ಮಾಡಲು ವ್ಯಾಪಾರಿಯು ಸರಕು ಪಡೆದವನಿಗೆ [ವಾಯಿದೆ ಪತ್ರದ (=P.-note) ಮೂಲಕ] ಕೊಟ್ಟ ವಾಯಿದೆ (What is the p.?). **Prómptitude** (ನಾ.); **Prómptly** (ಕ್ರಿ. ವಿ.); **Prómptness** (ನಾ.)

Prompt[2] ಪ್ರಾಂಪ್ಟ್, ಪ್ರಾಮ್ಟ್ (ಕ್ರಿ. ಸಕ., ನಾ.) (ಒಬ್ಬನನ್ನು ಕಾರ್ಯ, ಮೊ. ನ್ನು ಮಾಡಲು) ಪ್ರೇರಿಸು, ಚೋದಿಸು, ಚಿಮ್ಮು (*To* action, *to* do); (ನಟ, ಬಾಯಿಪಾಠ ಹೇಳುವವನು, ಮೊ. ರಿಗೆ) ಮುಂದಿನ ಮಾತನ್ನು ಎತ್ತಿಕೊಡು; (ಮಾತನಾಡಲು ತೋರದೆ ಹಿಂದುಮುಂದು ನೋಡುತ್ತಿರುವ ಭಾಷಣಕಾರನಿಗೆ) ಸಲಹೆ ಹೇಳು; (ಭಾವ, ಆಲೋಚನೆ, ಕಾರ್ಯ —ಇವನ್ನು) ಪ್ರೇರಿಸು, ಮಾಡಿಸು. (ನಾ.) (ಮು., ನಟನಿಗೆ ನೆನಪು ಮಾಡಲು ಎತ್ತಿಕೊಡುವ) ಸುಳಿವು ನುಡಿ. P.-book ನೆನಪು ಕೊಡುವವನ ನಾಟಕದ ಪ್ರತಿ. P.-box (ರಂಗದಲ್ಲಿ) ನೆನಪು ಕೊಡುವವನ ಪೀಠ. P. side ನಟನ ಎಡ ಪಾರ್ಶ್ವ(ದ ರಂಗಸ್ಥಳ) (ಸಂಕ್ಷಿಪ್ತ: P.S.). **Prómpter** (ನಾ.) ನೆನಪುಗಾರ (ಮು., ರಂಗದಲ್ಲಿ ಮರೆಯಾಗಿದ್ದು ಕೊಂಡು ನಟನಿಗೆ ನೆನಪು ಕೊಡುವವನು). **Prómpting** (ನಾ.) (ಕ್ರಿಯಾರ್ಥಗಳಲ್ಲಿ). The promptings of conscience ಅಂತರಂಗ ಪ್ರೇರಣೆ.

Prómulgate ಪ್ರಾ(ಪ್ರೋ)ಮಲ್‌ಗೇಟ್ (ಕ್ರಿ. ಸಕ.) (ಶಾಸನ, ಸುದ್ದಿ, ಮೊ. ನ್ನು) ತಿಳಿಯಪಡಿಸು, ಘೋಷಿಸು, ಸಾರು; (ಶಾಸನವನ್ನು) ಜಾರಿಗೆ ತರು. (ಮತ, ಅಭಿಪ್ರಾಯ, ಮೊ. ನ್ನು ಜನರಲ್ಲಿ) ಹರಡು, ಪ್ರಸಾರಮಾಡು. **Promulgátion** (ನಾ.); **Prómulgator** (ನಾ.); **Promúlge** ಪ್ರೊಮಲ್ಜ್ (ಕ್ರಿ. ಸಕ.) (ಪ್ರಾಚೀ. ಪ್ರ.) = Promulgate.

Promúlge. **Promulgate** ನೋಡಿ.

Prónate ಪ್ರೋನೇಟ್ (ಕ್ರಿ. ಸಕ.) (ಶ. ವಿ.) ಉದ್ದೆಲುಬುಗಳು ತಾರುಮಾರಾಗಿ (ಮುಂಗೈ, ಚತುಷ್ಪಾದಿಯ ಮುಂಗಾಲು) ತಳಮುಖವಾಗುವಂತೆ ಇಡು (Supinate ಹೋಲಿಸಿ). **Pronátion** (ನಾ.) (ಅಂ. ರ. ಶಾ., ಶ. ವಿ.) ಮುಂಗೈಯಲ್ಲಿರುವ ಎರಡು ಉದ್ದೆಲುಬುಗಳು ತಾರುಮಾರಾಗಿ, ಅಂಗೈ ತಳಮುಖವಾಗಿರುವಂಥ ಸ್ಥಿತಿ. **Pronátor** (ನಾ.) (ಅಂ. ರ. ಶಾ.) ಈ ಸ್ಥಿತಿಯನ್ನುಂಟುಮಾಡಲು ಸಹಾಯವಾಗುವ ಸ್ನಾಯು.

Prone ಪ್ರೋನ್ (ಗು.) ಮುಂಭಾಗ (ಅಥವಾ ಹೊಟ್ಟೆಯ ಭಾಗ) ಕೆಳ ಮುಖವಾಗಿರುವ; ಮುಖವಡಿಯಾಗಿ ಉದ್ದಕ್ಕೆ ಮಲಗಿರುವ. (ಶಿಥಿಲ ಪ್ರ.) ನೆಲದಮೇಲೆ ಸಪಾಟವಾಗಿ ಕೆಡೆದಿರುವ; ಪ್ರಣತ (Fell p.) [**Prónely** (ಕ್ರಿ. ವಿ.)]. (ನೆಲ) ಇಳಿಮುಖವಾಗಿರುವ, ಇಳುಕಲಾಗಿರುವ. (ಶಿಥಿಲ ಪ್ರ.) ಕಡಿದಾದ. (ಗುಣ, ಕಾರ್ಯ, ಸ್ಥಿತಿ, ಮೊ. ಕ್ಕೆ) ಒಲವುಳ್ಳ, ಪ್ರವೃತ್ತಿಯುಳ್ಳ (*To*, *to* do). **Próneness** (ನಾ.)

Proneúr (F) ಪ್ರೊನರ್ (ನಾ.) ಆಶ್ರಯದಾತನನ್ನು ಅಥವಾ ಸಹೋದ್ಯೋಗಿಯನ್ನು ಸದಾ ಹೊಗಳುತ್ತಿರುವವನು; ಹೊಗಳುಭಟ್ಟ; ಸ್ತುತಿಪಾಠಕ.

Prong ಪ್ರಾಂಗ್ (ನಾ., ಕ್ರಿ. ಸಕ.) ಕವಲಾಗಿರುವ ಒಂದು ಸಲಕರಣೆ; ಕವಲುಗೋಲು (ಮು., ಹುಲ್ಲು ಕವೆ); ಕವಲುಗೋಲಿನ ಮೊನಚಾದ ಭಾಗ(ಗಳಲ್ಲೊಂದು); ಕವಲು, ಕೋಡು. (ಕ್ರಿ.) ಕವಲು ಶೂಲದಿಂದ ತಿವಿ, ಇರಿ; (ಮಣ್ಣು, ಮೊ. ನ್ನು) ಕವಲುಗೋಲಿನಿಂದ ತಿರುವಿಹಾಕು. P.-buck, -horn, -horned antelope ಉ. ಅಮೆರಿಕದ ಕವಲು ಗೊಂಬಿನ ಒಂದು ಜಾತಿಯ ಸಾರಂಗ. **(-)pronged** (ಗು.)

Pronóminal, etc. **Pronoun** ನೋಡಿ.

Prónoun ಪ್ರೋನೌನ್ (ನಾ.) ಸರ್ವನಾಮ. Personal p. ಪುರುಷಾರ್ಥಕ ಸ. ನಾ. (I, we, thou, you, he, she, it, they); Interrogative p. ಪ್ರಶ್ನಾರ್ಥಕ ಸ. ನಾ. (Who, what, which); Relative p. ಸಂಬಂಧಾರ್ಥಕ ಸ. ನಾ. (Who, what, which); Possessive p. ಷಷ್ಠೀ ವಿಭಕ್ತಿಯ ಸ. ನಾ. (My, her, ours, etc.); Demonstrative p. ನಿರ್ದೇಶಕ ಸ. ನಾ. (This, that); Distributive p. ವ್ಯಕ್ತಿ ವಾಚಕ ಸ. ನಾ. (Each, every, either, etc.); Indefinite p. ಅನಿರ್ದೇಶಕ ಸ. ನಾ. (Any, some, etc.). **Pronóminal** ಪ್ರೊನಾಮಿನಲ್ (ಗು.) ಸರ್ವನಾಮದ(ಂಥ, ತೆರದ). **Pronóminally** (ಕ್ರಿ. ವಿ.)

Pronoúnce ಪ್ರೊನೌನ್ಸ್ (ಕ್ರಿ.) (ತೀರ್ಪು, ವಿಧಿಸಿದ ದಂಡನೆ, ಶಾಪ, ಮೊ. ನ್ನು) ವಿಧ್ಯುಕ್ತವಾಗಿ ಹೇಳು, ಕೊಡು, ಉಚ್ಚರಿಸು. ತನ್ನ ಅಭಿಪ್ರಾಯವೆಂದು ಔಪಚಾರಿಕವಾಗಿ ಅಥವಾ ಗಂಭೀರ ಭಾವದಿಂದ ಹೇಳು; ಅಭಿಪ್ರಾಯ ಕೊಡು [I p. the plantains unripe. Cannot p. him out of danger]. (ಒಬ್ಬನಮೇಲೆ, ಒಬ್ಬನಿಗಾಗಿ, ಒಬ್ಬನ ಪರವಾಗಿ, ಒಬ್ಬನಿಗೆ ವಿರುದ್ಧವಾಗಿ) ಅಭಿಪ್ರಾಯ ಹೇಳು. (ಮಾತನ್ನು) ಉಚ್ಚರಿಸು, ನುಡಿ [P. more distinctly. (ಮು., ಉಚ್ಚಾರಣೆಯ ವಿವಿಧ ರೀತಿಗಳ ಸಂಬಂಧದಲ್ಲಿ) How do you p. 'fulsome'? Cannot p. French]. **Pronoúnceable** (ಗು.); **Pronoúncement** (ನಾ.); **Pronoúnced** (ಗು.) (ಕ್ರಿಯಾರ್ಥಗಳಲ್ಲಿ). ಬಲವಾದ; ಸ್ಪಷ್ಟವಾದ; ಎದ್ದು ಕಾಣುವ; ಒಡೆದುಕಾಣುವ; ಒಂದು ಗೊತ್ತಾದ; ನಿರ್ಧಾರವಾದ (P. flavour). **Pronoúncedly** (ಕ್ರಿ. ವಿ.); **Pronoúncing** (ಗು.) (ಕ್ರಿಯಾರ್ಥಗಳಲ್ಲಿ). (ವಿಶೇಷಣವಾಗಿ: P. dictionary ಪದಗಳ ಉಚ್ಚಾರಣೆ ತೋರಿಸುವ ನಿಘಂಟು).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pronunciaménto ಪ್ರೊನನ್ಸಿಯಮೆಂಟೊ (ನಾ.) ಒಂದು ಪಕ್ಷದ ಘೋಷಣ; ಪ್ರತಿಜ್ಞಾ ಘೋಷಣ. **Pronunciátion** ಪ್ರೊನನ್ಸಿಯೇಷನ್ (ನಾ.) ಉಚ್ಚಾರಣೆ; ಒಂದು ಪದದ, ಒಬ್ಬನ, —ಉಚ್ಚಾರಣಾ ರೀತಿ (His p. is often faulty)

Proof ಪ್ರೂಫ್ (ನಾ.) (ಒಂದು ಸಂಗತಿಯನ್ನು ಸ್ಥಾಪಿಸುವುದಕ್ಕೆ ಸಾಕಾದ ಅಥವಾ ಸಹಾಯಕವಾದ) ಪ್ರಮಾಣ, ಸಾಕ್ಷ್ಯ, ಸಾಕ್ಷಿ, ರುಜುವಾತು (This requires no p. P. positive of his intention) [**Proófless** (ಗು.)]. (ಹೇಳಿಕೆಯ ಅಥವಾ ಬರಹದ) ಕಾನೂನಿಗನುಸಾರವಾದ ಸಾಕ್ಷ್ಯ. ರುಜುವಾತು ಮಾಡುವುದು (Not capable of p. In p. of my assertion). ಪರೀಕ್ಷೆ (Must be brought to the p. ಪರೀಕ್ಷೆಗೊಳಪಡಿಸಲೇಬೇಕು. Will stand a severe p. ಕಠಿನ ಪರೀಕ್ಷೆಗೆ ನಿಲ್ಲುತ್ತದೆ. The p. of the pudding is in the eating ಕಡುಬಿನ ರುಚಿಗೆ ತಿಂದದ್ದೇ ಪ್ರಮಾಣ). ಅಗ್ನಿಶಸ್ತ್ರಗಳ ಅಥವಾ ಸಿಡಿಮದ್ದುಗಳ ಪರೀಕ್ಷೆ(ಯ ಸ್ಥಳ). (ಪ್ರಾಚೀ. ಪ್ರ.) ಪರೀಕ್ಷೆಯಿಂದ ನಿರ್ಧರವಾದ ಅಭೇದ್ಯತೆ (Armour of p.). ಬಟ್ಟಿಯಿಳಿಸಿದ ಮದ್ಯಸಾರದ ಪಾನೀಯಗಳ ತೀಕ್ಷ್ಣತೆ(ಯ ಅಥವಾ ಸಾರದ ಪ್ರಮಾಣ). (ತಪ್ಪು ತಿದ್ದುವುದು, ಮೊ. ಕ್ಕಾಗಿ: ಜೋಡಿಸಿದ ಅಚ್ಚು ಮೊಳೆಗಳಿಂದ ತೆಗೆದ) ಕರಡಚ್ಚು (=First p.) (Revise ಹೋಲಿಸಿ) [P.-reader ಕರಡಚ್ಚು (ಓದಿ ತಪ್ಪುಗಳನ್ನು) ತಿದ್ದುವವನು. -reading —ತಿದ್ದುವುದು. P.-sheet ಕರಡಚ್ಚಿನ ಹಾಳೆ]. ಕೆತ್ತಿದ ಮುದ್ರಣ ಫಲಕದಿಂದ ಸಾಮಾನ್ಯ ಮುದ್ರಣ ಪ್ರತಿಗಳನ್ನು ತೆಗೆಯುವುದಕ್ಕೆ ಪೂರ್ವಭಾವಿಯಾಗಿ (ಸಾ., ಅಂಕಿತ, ಮೊ. ನ್ನು ಹಾಕುವುದಕ್ಕೆ ಮೊದಲು) ಜೋಕೆಯಿಂದ ತೆಗೆದ ಸ್ವಲ್ಪ ಸಂಖ್ಯೆಯ ಮುನ್‌ಪ್ರತಿ(ಗಳಲ್ಲೊಂದು) [P. before letters ಹೆಸರು, ಮೊ. ನ್ನು ಹಾಕಿಲ್ಲದ ಮುನ್‌ಪ್ರತಿ. Artist's, engraver's, p. (ಪರೀಕ್ಷೆಗಾಗಿ ಅಥವಾ ಬದಲಾವಣೆಗಾಗಿ ತೆಗೆದ) ಕಲೆಗಾರನ ಅಥವಾ ನಕಾಸೆಕಾರನ ಕರಡಚ್ಚು. Signed p. ಕಲೆಗಾರನು ರುಜುಹಾಕಿದ ಮುನ್‌ಕರಡಚ್ಚು]. (ರ. ವಿ.) ಪರೀಕ್ಷಾ ನಳಿಕೆ. (ಪುಸ್ತಕದ ಅಂಚು ಹೆಚ್ಚಾಗಿ ಕೊಯ್ದಿಲ್ಲವೆಂದು ತೋರಿಸುವುದಕ್ಕಾಗಿ ಅದರಲ್ಲಿ ಕೊಯ್ಯದೆ ಬಿಟ್ಟಿರುವ ಕೆಲವು ಹಾಳೆಗಳ) ಒರಟಂಚು. P.-plane ಒಂದು ಕಾಯದಮೇಲಿನ ವಿದ್ಯುತ್ತನ್ನು ಪರೀಕ್ಷಿಸುವುದಕ್ಕಾಗಿ, ಅವಾಹಕ ಪದಾರ್ಥದ ಹಿಡಿ ಹಾಕಿರುವ ವಿದ್ಯುದ್ವಾಹಕ: ವಿದ್ಯುತ್ ಪರೀಕ್ಷಕ.

Proof (ಗು., ಕ್ರಿ. ಸಕ.) (ಯುದ್ಧ ಕವಚದ ವಿಷಯದಲ್ಲಿ) ಪರೀಕ್ಷೆ ಮಾಡಿ ನಿರ್ಧರಿಸಿದ ಬಲವುಳ್ಳ. ಅಭೇದ್ಯ; ಸಗ್ಗದ (P. against the severest weather ಅತ್ಯಂತ ಕಠಿನ ವಾಯುಸ್ಥಿತಿಗೂ —ಸಗ್ಗದ, ಅಭೇದ್ಯವಾದ. P. against the pricks of conscience). [ಸಮಾಸಗಳಲ್ಲಿ: Bomb, bullet, burglar, fire, rain, sound, thief, weather, -p. Fool-p. (Fool[1] ನೋಡಿ). Water-p. (Water ನೋಡಿ)]. (ಕ್ರಿ.) (ಪದಾರ್ಥವನ್ನು) ಅಭೇದ್ಯ ಮಾಡು; (ಯಾವುದಾದರೂ ಕ್ರಿಯೆಗೆ) ಸಗ್ಗದಂತೆ ಮಾಡು (ಮು., ಬಟ್ಟೆಯನ್ನು ನೀರಿಳಿಯದಂತೆ ಸಂಸ್ಕರಿಸು)

Prop[1] ಪ್ರಾಪ್ (ನಾ., ಕ್ರಿ.) (ಮು., ಕಟ್ಟಡದ ರಚನೆಯಲ್ಲ ಸೇರಿರದೆ ಅದಕ್ಕೆ ಆಧಾರವಾಗಿ ಕೊಟ್ಟ) ಊರೆ, ಆಸರೆ, ಆನಿಕೆ (ಉದಾ., ಊರೆಗಂಬ). [Clothes-p. (Clothes ನೋಡಿ)]. (ರೂಪ.) ಸಂಸ್ಥೆ, ಮೊ. ಗಳಿಗೆ ಆಧಾರ(ಭೂತನಾದವನು). (ಕ್ರಿ.) ಊರೆಯಿಂದ (ಹೇಗೊ ಹಾಗೆ) ಆಸರೆ ಕೊಡು (ರೂಪ. ಸಹ); ಊರೆ ಕೊಟ್ಟು ನಿಲ್ಲಿಸು (*Up* ಉಪ. ದೊಡನೆ). (ಕುದುರೆ, ಮೊ. ಗಳ ವಿಷಯದಲ್ಲಿ) ಮುಂಗಾಲುಗಳು ಸೆಡೆತುಕೊಂಡು, ಮುಂದುವರಿಯಲಾಗದೆ ಥಟ್ಟನೆ ನಿಂತುಬಿಡು.

Prop[2]. **Proposition** ನೋಡಿ.

Propaedeútic ಪ್ರೊಪಿಡ್ಯೂಟಿಕ್ (ಗು., ನಾ.) ಪ್ರೌಢ ವ್ಯಾಸಂಗಕ್ಕೆ ಪೀಠಿಕಾ ರೂಪವಾದ (ವ್ಯಾಸಂಗ, ವ್ಯಾಸಂಗದ ವಿಷಯ). (ನಾ.; ಬ. ವ. ದಲ್ಲಿ) (ಕಲೆ, ವಿಜ್ಞಾನ, ಮೊ. ರ) ಮೂಲ ಪಾಠಗಳು, ಪೀಠಿಕಾ ರೂಪದ ವ್ಯಾಸಂಗ. **Propaedeútical** (ಗು.)

Propagánda ಪ್ರಾಪಗ್ಯಾಂಡ (ನಾ.) ಒಂದು ತತ್ತ್ವದ ಅಥವಾ ಆಚರಣೆಯ ಪ್ರಚಾರಕ್ಕಾಗಿ ಏರ್ಪಟ್ಟ—ಸಂಘ; ಸಂಸ್ಥೆ, ವ್ಯವಸ್ಥಿತ ಯೋಜನೆ; ಪ್ರಚಾರ(ಕಾರ್ಯ). (ಬ. ವ. ವಾಗಿ ಅಪ ಪ್ರ.) ಪ್ರಚಾರದ —ಪ್ರಯತ್ನಗಳು, ಯೋಜನೆಗಳು, ತತ್ತ್ವಗಳು. **Propagándist** (ನಾ.) ಪ್ರಚಾರ ಸಂಸ್ಥೆಯ ಸದಸ್ಯ, ಕಾರ್ಯಭಾರಿ; ಪ್ರಚಾರಕ; (ಆಚರಿಸುವ ಮತವನ್ನು ತಪ್ಪಿಸಿ) ತನ್ನ ಮತಕ್ಕೆ ತಿರುಗಿಸಿಕೊಳ್ಳುವವನು; ಮತಾಂತರ ಮಾಡುವವನು. (ಕ್ರೈಸ್ತ) ಮತ ಪ್ರಚಾರಕ; ಮತಾಂತರ ಹೊಂದಿದವನು. **Propagándism** (ನಾ.) ಪ್ರಚಾರಣ. **Propagandístic** (ಗು.); **Propagándize** (ಕ್ರಿ.)

Própagate ಪ್ರಾಪಗೇಟ್ (ಕ್ರಿ. ಸಕ.) (ಸಸ್ಯ, ಪ್ರಾಣಿ, ವ್ಯಾಧಿ, ಮೊ. ಗಳ ಮಾದರಿ ರೂಪಗಳನ್ನು ಉತ್ಪಾದಕ ಮೂಲಾಂಶದಿಂದ ಸ್ವಾಭಾವಿಕ ಕ್ರಮದಲ್ಲಿ) ಹುಟ್ಟಿಸು, ಹೆಚ್ಚಿಸು; ಸಂತಾನವೃದ್ಧಿ ಮಾಡು. (ಸಸ್ಯದ ವಿಷಯದಲ್ಲಿ) (ತನ್ನಂಥ) ಹೊಸ ಸಸಿ ಹುಟ್ಟಿಸು, ಸಂತಾನವೃದ್ಧಿ ಮಾಡು. (ಗುಣ, ಮೊ. ನ್ನು) ವಂಶಪಾರಂಪರ್ಯವಾಗಿ, ಆನುವಂಶಿಕವಾಗಿ, —ಸಾಗಿಸು, ವರ್ಗಾಯಿಸು. (ಹೇಳಿಕೆ, ನಂಬಿಕೆ, ಅಭ್ಯಾಸ, ಆಚಾರ, ಮೊ. ನ್ನು) ಹರಡು, ಪ್ರಸಾರಮಾಡು. (ಕಂಪನ, ಭೂಕಂಪ, ಮೊ. ನ್ನು) ಮುಂದಕ್ಕೆ ಸಾಗಿಸು, ವ್ಯಾಪಕ ಮಾಡು. **Propagátion** (ನಾ.); **Própagative** (ಗು.); **Própagator** (ನಾ.)

Propél ಪ್ರೊಪೆಲ್ (ಕ್ರಿ.) ಮುನ್ನೂಕು; ಮುಂದೂಡು; ತಳ್ಳು; ಚಿಮ್ಮು; (ರೂಪ.) ಪ್ರಚೋದಿಸು. **Propéllent** —ಲೆಂಟ್ (ಗು., ನಾ.) ಮುಂದೂಡುವ, ಮುನ್ನೂಕುವ(ಸಲಕರಣೆ). ಬಂದೂಕಿನಿಂದ ಗುಂಡನ್ನು ಹಾರಿಸುವ ಸಿಡಿಮದ್ದು. **Propéller** (ನಾ.) (ಕ್ರಿಯಾರ್ಥಗಳಲ್ಲಿ). ಹಡಗನ್ನಾಗಲಿ ವಿಮಾನವನ್ನಾಗಲಿ ಮುಂದೆ ಹೋಗುವಂತೆ ಮಾಡುವುದಕ್ಕಾಗಿ (ಕೆಳ ಕೊನೆಯಲ್ಲಿ) ಒಂದು ನಿರ್ದಿಷ್ಟ ಕೋನದಲ್ಲಿ ಅಳವಡಿಸಿದ ಮತ್ತು ತಿರುಪಿನ ಸುತ್ತುಗಳಂತೆ ತಿರಿಚಿದ ಅಲಗುಗಳುಳ್ಳ, ಸುತ್ತು ತಿರುಗುವ ಚಾಲಕ ದಂಡ: (ಹಡಗಿನ ಅಥವಾ ವಿಮಾನದ) ಚಾಲಕ. **Propúlsion** ಪ್ರೊಪಲ್ಷನ್ (ನಾ.) (ಕ್ರಿಯಾರ್ಥಗಳಲ್ಲಿ). (ರೂಪ.) ಮುನ್ನೂಕುವ —ಶಕ್ತಿ, ಪ್ರಭಾವ; ಪ್ರೇರಕ. **Propúlsive** (ಗು.)

Propénsity ಪ್ರೊಪೆನ್ಸಿಟಿ (ನಾ.) (ಒಂದು ಸ್ಥಿತಿ, ಗುಣ, ಮೊ. ರ ಕಡೆಗೆ, ಒಂದು ಕಾರ್ಯಮಾಡುವುದಕ್ಕೆ) ಒಲವು, ಓಲು, ಪ್ರವೃತ್ತಿ (*To* do, *for* doing)

Próper ಪ್ರಾಪರ್ (ಗು.) [(ಪ್ರಾಚೀ. ಪ್ರ.) ಷಷ್ಠೀ ವಿಭಕ್ತ್ಯಂತ ಸರ್ವನಾಮದೊಡನೆ ಮತ್ತು ಕೆಲವು ವೇಳೆ *own* ಪದದೊಡನೆ ಪ್ರ.] ಸ್ವಂತ (With my own p. eyes). [(ಖ. ವಿ.) P. motion ಖಗೋಳ ದೃಷ್ಟಿಯಿಂದ ನಡೆಯುವ ಸ್ಥಿರನಕ್ಷತ್ರದ ಚಲನೆ (ಕಣ್ಣಿಗೆ ಕಾಣುವ ಯಾವುದಾದರೂ ಸ್ಥಿರನಕ್ಷತ್ರದ ಸ್ವಂತ ಚಲನೆಯಲ್ಲಿ ಎರಡು ಭಾಗಗಳಿರುವುವು: ಮೊದಲನೆಯದು, ಖಗೋಳದಲ್ಲಿ ನಿಜವಾಗಿಯೂ ಆ ನಕ್ಷತ್ರ ಮಾಡುವ ಚಲನೆ; ಎರಡನೆಯದು, ಸೌರ ಗ್ರಹ ಮಾಲೆಯ ಪರಿಚಲನೆಯಿಂದಾದ ಆ ನಕ್ಷತ್ರದ ತೋರ್ಕೆಯ ಚಲನೆ)]. (—ಕ್ಕೆ) ಮಾತ್ರ, ವಿಶೇಷತಃ, —ಸಂಬಂಧಪಟ್ಟ, ಸೇರಿದ (*To* ಉಪ. ದೊಡನೆ ಸಹ) (P. psalms, lessons ಆ ದಿನಕ್ಕೆ ಮಾತ್ರ ಸಂಬಂಧಪಟ್ಟ—). [(ವ್ಯಾ.) P. noun, name ಅಂಕಿತನಾಮ (ಉದಾ., ರವೀಂದ್ರ, ವಿಶಾಲಾಕ್ಷಿ, ಮೈಸೂರು, ಪ್ರಯಾಗ)]. ಯಥಾರ್ಥವಾದ, ನಿಷ್ಕೃಷ್ಟವಾದ, ಸರಿಯಾದ (In the p. sense of the word). ಹಾಗೆಂದು ನಿಜವಾಗಿ ಕರೆಯುವ (ಸಾ., ಅದರ ನಾಮಪದದ ತರುವಾಯ ಪ್ರ.): ಶುದ್ಧ; ಅಚ್ಚ; ನಿಜವಾದ (Within the sphere of architecture p.) [P. fraction (ಒಂದಕ್ಕಿಂತ ಕಡಮೆ ಬೆಲೆಯ) ಶುದ್ಧ ಭಿನ್ನರಾಶಿ; ಅಪೂರ್ಣಾಂಕ]. (ಬಳ. ಮಾ.) ತೀರ; ಪೂರ್ತಿ; ಸಾದ್ಯಂತವಾದ (Will be a p. row about this ಈ ವಿಷಯವಾಗಿ ಸಂಪೂರ್ಣ ಗಲಭೆಯಾಗುತ್ತದೆ). (ಪ್ರಾಚೀ. ಪ್ರ.) ಅಂದವಾದ; ಸುಂದರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(A p. man). ತಕ್ಕ ; ಯೋಗ್ಯ ; ಉಚಿತ ; ಸರಿಯಾದ (Choose the p. time. Do it the p. way). ಸಮಯೋಚಿತ ; ಶಿಷ್ಟ ; ಸಭ್ಯ (She is so distressingly p. ಆಕೆ ವಿಪರೀತ ಶಿಷ್ಟಾಚಾರ ನಡಸುತ್ತಾಳೆ. Would it be quite p.?). (ವಂಶ ಲಾಂಛನ) ಸಾಂಕೇತಿಕ ವರ್ಣದ್ದಲ್ಲದ ; ಸಹಜ ವರ್ಣಗಳ (A peacock p. ಸಹಜ ವರ್ಣದ ನವಿಲು). **Próperly** (ಕ್ರಿ. ವಿ.) ತಕ್ಕಂತೆ ; ಯುಕ್ತವಾಗಿ ; ಸರಿಯಾಗಿ (Do it p. or not at all. He very p. refused). ಒಳ್ಳೆಯ ನಡೆವಳಿಯಲ್ಲಿ, ರೀತಿಯಲ್ಲಿ (Behave p.). (ಬಳ. ಮಾ.) ಸಂಪೂರ್ಣವಾಗಿ (Puzzled him p.)

Próperty ಪ್ರಾಪರ್ಟಿ (ನಾ.) ಸ್ವಾಮಿತ್ವ(ಪಡೆದಿರುವುದು) ; ಒಡೆತನ (P. has its duties). ಸ್ವತ್ತು ; ಆಸ್ತಿ ; ಒಡವೆ ; ಮಾಲು [The book is his p. Regards him as her exclusive p. A man of (great) p. Personal, Real, p. (ಆಯಾ ಪದವನ್ನು ನೋಡಿ)]. (P. qualification ಆಸ್ತಿಯ ಸ್ವಾಮಿತ್ವದಿಂದ ಬಂದ, ಚುನಾವಣೆಗೆ ನಿಲ್ಲುವ ಅಥವಾ ಚುನಾವಣೆ ಮಾಡುವ, ಯೋಗ್ಯತೆ. P. tax ಆಸ್ತಿಯಮೇಲೆ ಹಾಕಿದ ತೆರಿಗೆ). (ನಾಟಕದಲ್ಲಿ) ರಂಗದಮೇಲೆ ಉಪಯೋಗಿಸುವ ಉಡುಪು, ಪೀಠೋಪಕರಣ, ಮೊ. ದು: ರಂಗಸಜ್ಜು [P.-man, -master ರಂಗಸಜ್ಜಿನ (ಜವಾಬ್ದಾರಿಯುಳ್ಳ) ಅಧಿಕಾರಿ]. ಗುಣ, ಲಕ್ಷಣ (The properties of soda. Has the p. of dissolving grease). (ತರ್ಕ) ಒಂದು ಪದಾರ್ಥ ವರ್ಗಕ್ಕೆ ಸಾಮಾನ್ಯವಾಗಿರುವ ಗುಣ: ವರ್ಗ ಗುಣ.

Próphecy ಪ್ರಾಫೆಸಿ (ನಾ.) ಪ್ರವಾದಿಯ, ಭವಿಷ್ಯ ವಾದಿಯ, —(ಭವಿಷ್ಯ ಹೇಳುವ) ಸಾಮರ್ಥ್ಯ, ಯೋಗ್ಯತೆ (The gift of p.). ಭವಿಷ್ಯ (ನುಡಿಯುವುದು) ; ಭವಿಷ್ಯ ವಾದ; ಕಾಲಜ್ಞಾನ. **Próphesy** —ಸೈ (ಕ್ರಿ.) ಪ್ರವಾದಿಯಾಗಿ, ಭವಿಷ್ಯ ವಾದಿಯಾಗಿ, —ನುಡಿ ; ಭವಿಷ್ಯ, ಕಾಲಜ್ಞಾನ, —ಹೇಳು; ಮುನ್ನೋಟ ನುಡಿ. (ಪ್ರಾಚೀ. ಪ್ರ.) ಪವಿತ್ರ ಗ್ರಂಥಗಳಿಗೆ ವ್ಯಾಖ್ಯಾನ ಮಾಡು. **Próphet** —ಫೆಟ್ (ನಾ.) ದೈವ ಪ್ರೇರಿತ ಧರ್ಮೋಪದೇಶಕ; ದೈವೇಚ್ಛಾ ಪ್ರಕಾಶಕ; ದೈವಜ್ಞ; ಪ್ರವಾದಿ (The prophets ಬೈಬಲ್ಲಿನ ಹಳೆಯ ಒಡಂಬಡಿಕೆಯ ಪ್ರವಾದಿ ಲೇಖಕರು. Major prophets = Isaiah, Jeremiah, Ezekiel ಮತ್ತು Daniel. The 12 minor prophets = Hosea ಯಿಂದ Malachi ವರೆಗಿನ ೧೨ ಮಂದಿ ಪ್ರವಾದಿಗಳು. The p. ಮಹಮದ್ ಪೈಗಂಬರ್. ಮಾರ್ಮನ್ ಪಂಥದ ಸ್ಥಾಪಕನಾದ Joseph Smith. Saul among the prophets ಅನಿರೀಕ್ಷಿತವಾಗಿ ಪ್ರವಾದಿಯ ಸಾಮರ್ಥ್ಯವನ್ನು, ಗುಣಗಳನ್ನು, ಪ್ರಕಾಶಪಡಿಸುವವನು). (ಒಂದು ತತ್ತ್ವ, ಮೊ. ಗಳ) ಪ್ರವರ್ತಕ, ವಾದಿ (*Of* ಉಪ. ದೊಡನೆ). ಮುಂದೆ ಸಂಭವಿಸುವುದನ್ನು ಹೇಳುವವನು ; ಭವಿಷ್ಯ ವಾದಿ (Am no weather-p.). (ಅನಂ.) ಕುದುರೆ ಜೂಜು, ಮೊ. ಗಳಲ್ಲಿ ಒಳ ವಿಷಯಗಳನ್ನು (ಹಣಕ್ಕಾಗಿ) ತಿಳಿಸುವವನು. **Próphetess** (ನಾ., ಸ್ತ್ರೀ.) ; **Próphethood** (ನಾ.) ; **Próphetship** (ನಾ.) ; **Prophétic** ಪ್ರೊ— (ಗು.) ಪ್ರವಾದಿಯ ; ಭವಿಷ್ಯ ಹೇಳುವ ; (ಒಂದು ಘಟನೆ, ಮೊ. ರ) ಭವಿಷ್ಯ ಜ್ಞಾನವುಳ್ಳ. **Prophétical** (ಗು.) ; **Prophétically** (ಕ್ರಿ. ವಿ.)

Prophyláctic ಪ್ರಾಫಿಲ್ಯಾಕ್ಟಿಕ್ (ಗು., ನಾ.) ರೋಗ ಬರದಂತೆ ತಡೆಯುವ ಅಥವಾ ರಕ್ಷಿಸುವ (ಔಷಧ, ಮಾರ್ಗ): ರೋಗ ನಿರೋಧಕ. **Prophyláxis** (ನಾ.) —ಚಿಕಿತ್ಸೆ.

Propínquity ಪ್ರೊಪಿಂಕ್ವಿಟಿ (ನಾ.) (ಸ್ಥಳದಲ್ಲಿ) ಹತ್ತಿರವಾಗಿರುವುದು ; ಸಾಮೀಪ್ಯ ; ಹತ್ತಿರದ (ರಕ್ತ) ಸಂಬಂಧ. ಹೋಲಿಕೆ ; ಸಾದೃಶ್ಯ.

Propítiate ಪ್ರೊಪಿಷಿಯೇಟ್ (ಕ್ರಿ. ಸಕ.) ಸಮಾಧಾನ ಪಡಿಸು; ಪ್ರಸನ್ನಗೊಳಿಸು ; ಮುನಿಸು ತಿಳಿಸು ; ಒಲಿಸಿಕೊಳ್ಳು. **Propitiátion** (ನಾ.) —ವುದು ; ಪರಿಹಾರ ಕೊಡುವುದು ; ಪ್ರಾಯಶ್ಚಿತ್ತ ಮಾಡಿಕೊಳ್ಳುವುದು. (ಪ್ರಾಚೀ. ಪ್ರ.) ಶಾಂತಿಗಾಗಿ ಕೊಟ್ಟ ದಾನ, ಮೊ. ದು ; ಮುಡಿಪು, ಕಾಣಿಕೆ ; ಪರಿಹಾರ. (He is the p. for our sins ನಮ್ಮ ಪಾಪಗಳ ಪರಿಹಾರಕ್ಕೆ ಅವನು ಶಾಂತಿ ಬಲಿ). **Propítiatory** ಪ್ರೊಪಿಷಿಅಟರಿ, —ಷಟರಿ (ಗು., ನಾ.) ಪ್ರಾಯಶ್ಚಿತ್ತಾರ್ಥಕ ; ಪ್ರಸಾದನಾರ್ಥಕ (A p. smile). (ನಾ.) = Mercy-seat (Mercy ನೋಡಿ) ; (ಮು., ರೂಪ.: ಯೇಸು ಕ್ರಿಸ್ತನ ವಿಷಯದಲ್ಲಿ) ಕರುಣಾ ನಿಧಿ. **Propítiatorily** (ಕ್ರಿ. ವಿ.) ; **Propítious** —ಷಸ್ (ಗು.) ಸುಮುಖವಾದ ; ಅನುಕೂಲವಾದ ; ಪ್ರಸನ್ನ (The fates were p.). (ಶಕುನ, ಮೊ.) ಅನುಕೂಲವಾದ ; ಶುಭ ಸೂಚಕ. (ಹವಾ, ಸಂದರ್ಭ, ಮೊ.) (ಉದ್ದೇಶಕ್ಕೆ) ತಕ್ಕ, ಅನುಕೂಲವಾದ, ಹಿತವಾದ (*For, to* ಉಪ. ದೊಡನೆ). **Propítiously** (ಕ್ರಿ. ವಿ.)

Própolis ಪ್ರಾಪೊಲಿಸ್ (ನಾ.) = Bee-glue (Bee ನೋಡಿ)

Propónent ಪ್ರೊಪೋನೆಂಟ್ (ಗು., ನಾ.) ತತ್ತ್ವ, ವಾದ, ಅಥವಾ ಸೂಚನೆಯನ್ನು ಮುಂದಿಡುವ(ವನು) ; ಪ್ರತಿಪಾದಕ.

Propórtion ಪ್ರೊಪೋರ್ಷನ್ (ನಾ., ಕ್ರಿ. ಸಕ.) (ಒಟ್ಟು ಮೊತ್ತದೊಡನೆ ಹೋಲಿಕೆ ಮಾಡುವ ದೃಷ್ಟಿಯಿಂದ) ಪಾಲು, ಭಾಗ, ಅಳವು (A large p. of the earth's surface ; —of the profits). (ಹೋಲಿಕೆ ಮಾಡುವುದರಿಂದಾದ) ಪ್ರಮಾಣ ; ಅನುಪಾತ ; ದಾಮಾಷಾ [The p. of births to the population. Price will be raised in p. (to the labour, etc.). Windows are in admirable p. His success bore no p. to his abilities. Was out of (all) p. to (—ಇಂತ) ಪ್ರಮಾಣದಲ್ಲ ಮಿತಿಮೀರಿತ್ತು ; ಅಜಗಜಾಂತರವಿತ್ತು]. (ಬ. ವ. ದಲ್ಲಿ) ಹೊಂದಿಕೆಯಾದ ಅಳತೆ, ಪ್ರಮಾಣ (Athlete, building, of magnificent proportions). (ಗಣಿತ) ಎರಡು ಸಂಖ್ಯಾ ಪರಿಮಾಣಗಳಿಗಿರುವ ಸಮತೆ: ಅನುಪಾತ (೩ : ೫ :: ೯ : ೧೫) ; ಅನುಪಾತ ಶ್ರೇಣಿ ; (ಅಂಕಗಣಿತ) ತ್ರೈರಾಶಿ. (ಕ್ರಿ. ಸಕ.) (ಒಂದನ್ನು, ಒಂದಕ್ಕೆ) ಅನುಗುಣ ಪರಿಮಾಣವುಳ್ಳದ್ದಾಗಿ ಮಾಡು (Must p. the punishment to the crime). **(-)propórtioned** (ಗು.) ; **Propórtionless** (ಗು.) ; **Propórtionment** (ನಾ.) ; **Propórtional** (ಗು., ನಾ.) (ತಕ್ಕ) ಪ್ರಮಾಣಾನುಗುಣವಾದ ; ದಾಮಾಷಾ ಪ್ರಕಾರದ [A p. increase in the expense. Resentment p. to his injuries. P. representation (Representation ನೋಡಿ)]. (ನಾ.) ಅನುಪಾತದಲ್ಲಿಯ ಒಂದು ಪದ (5, 3, 10, 6 are proportionals. 6 is a mean p. between 3 & 12). **Propórtionable** (ಗು.) ; **Propórtionably** (ಕ್ರಿ. ವಿ.) ; **Proportionálity** (ನಾ.) ; **Propórtionally** (ಕ್ರಿ. ವಿ.) ; **Propórtionate** (ಗು.) ; **Propórtionately** (ಕ್ರಿ. ವಿ.) ; **Propórtionalism** (ನಾ.) (ರ. ವಿ.) ಮೂಲ ಧಾತುಗಳು ನಿರ್ದಿಷ್ಟ ಪರಿಮಾಣಗಳಲ್ಲಿ ಸಂಯೋಗ ಹೊಂದುವುವೆಂಬ ಪದ್ಧತಿ, ತತ್ತ್ವ, ವಾದ, ಅಂಶ. ನಿರ್ದಿಷ್ಟ ಪ್ರಮಾಣಾನುಸಾರವಾಗಿ ಪ್ರಾತಿನಿಧ್ಯ ನಡಸುವ ತತ್ತ್ವ ಅಥವಾ ಕಾರ್ಯಾಚರಣೆ. **Propórtionalist** (ನಾ.) (ಕಟ್ಟಡ, ಮೊ. ರ) ಪರಸ್ಪರ ಪ್ರಮಾಣಗಳ ಯೋಜಕ. ದಾಮಾಷಾ ಪ್ರಾತಿನಿಧ್ಯ ವಾದಿ.

Propóse ಪ್ರೊಪೋಸ್ (ಕ್ರಿ.) ಪರ್ಯಾಲೋಚನೆಗಾಗಿ ಮುಂದಿಡು, ಸೂಚಿಸು ; ಪ್ರಸ್ತಾಪಿಸು ; ಗುರಿಯಾಗಿ ಮುಂದಿಟ್ಟುಕೊ (The object I p. to myself). (ಸಂಘ, ಮೊ. ಗಳಿಗೆ ಸದಸ್ಯನನ್ನಾಗಿ) (ಒಬ್ಬನ) ಹೆಸರು ಸೂಚಿಸು ; (ಸಭೆಯಲ್ಲಿ ಒಬ್ಬನ) ಆರೋಗ್ಯ, ಬಯಸು, ಶುಭವನ್ನು ಕೋರು. [ಒಬ್ಬಳೊ(ನೊ)ಡನೆ] ಮದುವೆಯ ಪ್ರಸ್ತಾಪ ಮಾಡು (*To* ಉಪ. ದೊಡನೆ). ಯೋಜನೆಯಾಗಿ ಮುಂದಿಡು ; ಸಲಹೆ ಕೊಡು [We p. (to make) a change, that a change should be made]. ಉದ್ದೇಶಪಡು (*To do, doing*) [Man proposes, God disposes (Dispose ನೋಡಿ)]. **Propósal** (ನಾ.) ಪ್ರಸ್ತಾಪಿಸುವುದು ; ಪ್ರಸ್ತಾಪ ; ಮದುವೆಯ ಪ್ರಸ್ತಾಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(Have had a p.). (ಒಂದು ಕಾರ್ಯ, ಮೊ. ರ) ಯೋಜನೆ, ಸೂಚನೆ (The p. was never carried out). **Proposítion** ಪ್ರಾಪೊಸಿಷನ್ (ನಾ.) ಪ್ರಸ್ತಾಪ; ಸೂಚನೆ; ಯೋಜನೆ. (ಕಂಠೋಕ್ತ ವಾದ) ಹೇಳಿಕೆ (A p. too plain to need argument). (ತರ್ಕ) ಪ್ರಮೇಯ; ಪ್ರತಿಜ್ಞೆ. (ಗಣಿತ; ಸಂಕ್ಷಿಪ್ತ: Prop.) (ಅನೇಕ ವೇಳೆ ನಿರ್ದೇಶವನ್ನು ಒಳಕೊಂಡ) ಪ್ರತಿಜ್ಞೆ (ಉದಾ., Euclid, Book I, p. 5). (ಅಮೆ. ಸಂ., ವ್ಯಾಪಾರ ಪ್ರ. ಮತ್ತು ಅಸಂ.) ಕೆಲಸ, ಉದ್ಯೋಗ, ಸಮಸ್ಯೆ, ಪ್ರಶ್ನೆ, ಗುರಿ, ಕಸುಬು, ವೃತ್ತಿ, ವ್ಯಾಪಾರ, ಎದುರಾಳಿ, ಭವಿಷ್ಯ, ಮೊ. ವು. **Propositional** (ಗು.)

Propositíon. Propose ನೋಡಿ.

Propoúnd ಪ್ರೊಪೌಂಡ್ (ಕ್ರಿ. ಸಕ.) (ಪ್ರಶ್ನೆ, ಯೋಜನೆ, ಮೊ. ನ್ನು) ಪರ್ಯಾಲೋಚನೆಗಾಗಿ ಮುಂದಿಡು, ಸೂಚಿಸು (*To* person); (ಕಾನೂನು ಸಮ್ಮತಿಯನ್ನು ಸ್ಥಾಪಿಸುವುದಕ್ಕಾಗಿ ಅಂತಿಮ ಇಷ್ಟಪತ್ರವನ್ನು) ತಕ್ಕ ಅಧಿಕಾರಿಯ ಮುಂದೆ ಹಾಜರು ಪಡಿಸು. **Propoúnder** (ನಾ.)

Propraétor ಪ್ರೊಪ್ರೀಟರ್ (ನಾ.) (ರೋಮನ್ ಚರಿತ್ರೆ) ಸೈನಿಕಾಡಳಿತ ದಲ್ಲಿಲ್ಲದ ಪ್ರಾಂತದಲ್ಲಿ ಪ್ರೀಟರಿನ ಅಧಿಕಾರವುಳ್ಳ ಮಾಜಿ "ಪ್ರೀಟರ್".

Propríetary ಪ್ರೊಪ್ರೈಎಟರಿ (ಗು., ನಾ.) ಒಡೆಯನ; ಸ್ವಾಮಿಯ; ಧಣಿಯ; ಒಡೆತನದ; ಸ್ವಾಮ್ಯದ (P. rights ಒಡೆಯನ, ಒಡೆತನದ, —ಹಕ್ಕುಗಳು). ಆಸ್ತಿಯುಳ್ಳ (The p. classes ಆಸ್ತಿವಂತರು; —ವಂತರ ವರ್ಗ, ಪಂಗಡ). ಸ್ವಂತ ಸ್ವಾಮ್ಯದ; ಖಾಸಗಿ ಒಡೆತನ ಪಡೆದ (P. medicines ಮಾರಾಟದ ಸ್ವಾಮ್ಯ ಪಡೆದ ಔಷಧಗಳು; ಸ್ವಂತ ಮಾರಿಕೆಯ ಸನ್ನದು ಪಡೆದ ಔಷಧಗಳು). (ನಾ.) ಒಡೆತನ; ಸ್ವಾಮ್ಯ (An exclusive p.). ಒಡೆಯರು; ಸ್ವಾಮಿ ವರ್ಗ; ಧಣಿಗಳು (The landed p. ಜಮೀನುದಾರರು). **Propríetor** (ನಾ.) ಒಡೆಯ; ಧಣಿ; ಸ್ವಾಮಿ; ಯಜಮಾನ; ಮಾಲೀಕ. **Proprietórial** (ಗು.); **Proprietórially** (ಕ್ರಿ. ವಿ.); **Propríetorship** (ನಾ.); **Propríetress** (ನಾ., ಸ್ತ್ರೀ.)

Propríety ಪ್ರೊಪ್ರೈಎಟಿ (ನಾ.) ಯುಕ್ತತೆ; ಔಚಿತ್ಯ (Doubt the p. of the term. Doubt the p. of refusing him). (ನಡೆವಳಿಯ ಅಥವಾ ನೀತಿಯ) ಋಜುತೆ, ನೇರ್ಪು (ಗ್ರಾಂ.); ತಕ್ಕುಮೆ (ಗ್ರಾಂ.); ಸರಿಯಾದ ನಡೆವಳಿಕೆ (A breach of p.). (ಬ. ವ. ದಲ್ಲಿ) ಋಜು ವರ್ತನೆಯ ವಿವರಗಳು; ಉಚಿತ ಮರ್ಯಾದೆ ಗಳು (Must observe the proprieties)

Props ಪ್ರಾಪ್ಸ್ (ನಾ.; ಬ. ವ.) (ಅಸಂ.) ನಾಟಕ ರಂಗದ ಸಾಮಾನು ಗಳು; ರಂಗಸಜ್ಜು (Properties ಎಂಬುದರ ಸಂಕ್ಷಿಪ್ತ)

Proptósis ಪ್ರಾಪ್ಟೋಸಿಸ್ (ನಾ.) (ರೋಗ ನಿದಾನ) (ಸ್ಥಾನ ಚ್ಯುತಿ ಹೊಂದಿ ಆದ) ದೇಹ ಭಾಗದ ಕೆಳ ಜಾರಿಕೆ; ಉಬ್ಬು, ಪ್ರಲಂಬನ (ಮು., ಕಣ್ಣಿನದು). **Proptósed** (ಗು.)

Propúlsion. Propel ನೋಡಿ.

Propylaéum ಪ್ರಾಪಿಲೀಯಂ (ನಾ.; ಬ. ವ. -aea) ದೇವಸ್ಥಾನದ ಹೆಬ್ಬಾಗಿಲು, ಮಹಾದ್ವಾರ. The propylaea ಅಥೆನ್ಸಿನ ದುರ್ಗದ ಮಹಾದ್ವಾರ.

Própylite ಪ್ರಾಪಿಲೈಟ್ (ನಾ.) ಕೆಲವು ಬೆಳ್ಳಿಯ ಗಣಿ ಪ್ರದೇಶಗಳಲ್ಲಿ ದೊರೆಯುವ ಒಂದು ಬಗೆಯ ಜ್ವಾಲಾಮುಖಿ ಶಿಲೆ. **Propylític** —ಲಿಟಿಕ್ (ಗು.)

Própylon ಪ್ರಾಪಿಲಾನ್ (ನಾ.; ಬ. ವ. -ons, -a) = Propylaeum.

Prorógue ಪ್ರೊರೋಗ್ (ಕ್ರಿ.) (ಶಾಸನ ಸಭೆ, ಮೊ. ಗಳನ್ನು ವಿಸರ್ಜಿಸದೆ) ಅಧಿವೇಶನಗಳನ್ನು ಮುಂದಕ್ಕೆ ಹಾಕು, ತಳ್ಳಿದು; ಅಧಿವೇಶನವನ್ನು ಮುಕ್ತಾಯ ಮಾಡು. (ಶಾಸನ ಸಭೆ) ಮುಂದಕ್ಕೆ ಹಾಕಲ್ಪಡು. **Prorogátion** ಪ್ರೊರೊ— (ನಾ.)

Pros- ಪ್ರಾಸ್ (ಸ. ಪೂ. ಪ.) —ಗೆ, —ಕ್ಕೆ, —ಕಡೆಗೆ, —ಜೊತೆಗೆ.

Prosáic, Prósaist, etc. Prose ನೋಡಿ.

Proscénium ಪ್ರೊಸೀನಿಯಂ (ನಾ.; ಬ. ವ. -ia) (ಪ್ರಾಚೀನ ನಾಟಕ ಶಾಲೆಯಲ್ಲಿ) ರಂಗಸ್ಥಳ; (ಆಧುನಿಕ ನಾಟಕ ಶಾಲೆಯಲ್ಲಿ) ಬೀಳು ತೆರೆಗೂ ವಾದ್ಯಗಾರರ ಸ್ಥಾನಕ್ಕೂ ಮಧ್ಯದ ಪ್ರದೇಶ (ಮು., ಆವರಣದ ಕಮಾನನ್ನು ಒಳಕೊಂಡದ್ದು); ಮುನ್‌ರಂಗ.

Proscríbe ಪ್ರೊಸ್ಕ್ರೈಬ್ (ಕ್ರಿ. ಸಕ.) (ನ್ಯಾಯ ರಕ್ಷಣೆ ದೊರೆಯದಂತೆ, ಒಬ್ಬನನ್ನು) ಬಹಿಷ್ಕರಿಸು; ದೇಶಭ್ರಷ್ಟ ಮಾಡು; ಗಡೀಪಾರು ಮಾಡು (ಮು., ರೂಪ.). (ಅಪಾಯಕರವೆಂದು, ಮೊ. ಗಿ ಆಚರಣೆ, ಮೊ. ನ್ನು) ನಿಷೇಧಿಸು, ಪ್ರತಿಷೇಧಿಸು, ವರ್ಜಿಸು. **Proscríption** (ನಾ.); **Proscríptive** (ಗು.)

Prose ಪ್ರೋಸ್ (ನಾ., ಕ್ರಿ.) ಗದ್ಯ; ವಚನ (ಬರೆಯುವ ಅಥವಾ ಆಡುವ ಭಾಷೆಯ ಛಂದೋ ರಹಿತವಾದ ಸಾಮಾನ್ಯ ರೂಪ) (Milton's p. works). (ಕ್ರೈಸ್ತ ಮತದಲ್ಲಿ) = Sequence. (P. poem ಕಾವ್ಯ ಗುಣವುಳ್ಳ ಗದ್ಯ; ಕಾವ್ಯ ಗದ್ಯ; ಗದ್ಯ ಕವಿತೆ). ಶುದ್ಧ ವಾಸ್ತವಿಕ ಗುಣ; ನೀರಸತೆ (The p. of existence). ಬೇಸರ ಹಿಡಿಸುವ ಭಾಷಣ. (ಕ್ರಿ.) (ಒಂದರ ವಿಷಯವಾಗಿ) ನೀರಸವಾಗಿ, ಬೇಸರ ಹಿಡಿಸುವಂತೆ, ಮಾತನಾಡು (*About*, ಮೊ. ಉಪ. ದೊಡನೆ) [**Próser** (ನಾ.)]. (ಪದ್ಯವನ್ನು) ಗದ್ಯ ರೂಪಕ್ಕೆ ತಿರುಗಿಸು. **Prosáic** ಪ್ರೊಸೇಯಿಕ್ (ಗು.) ರುಚಿಯಿಲ್ಲದ; ಕಳೆಯಿಲ್ಲದ; ಕಾವ್ಯ ಸೌಂದರ್ಯವಿಲ್ಲದ; ಭಾವನಾ ರಮ್ಯತೆಯಿಲ್ಲದ; ನೀರಸ; ಅತ್ಯಂತ ಸಾಧಾರಣ; ಬೇಸರ ಹಿಡಿಸುವ (A p. life, person, view of things). **Prosáically** (ಕ್ರಿ. ವಿ.); **Prosáicness** (ನಾ.); **Prósaist** ಪ್ರೋಸೇಯಿಸ್ಟ್ (ನಾ.) ಗದ್ಯ ಕರ್ತ. ಸಪ್ಪೆ ಮನುಷ್ಯ; ಅರಸಿಕ. **Prósaism** (ನಾ.); **Prósify** (ಕ್ರಿ.) ಗದ್ಯಕ್ಕೆ ತಿರುಗಿಸು; ಗದ್ಯ ಬರೆ. ನೀರಸ ಮಾಡು. **Prósy** ಪ್ರೋಸಿ (ಗು.) [P. talk(er)]. **Prósily** (ಕ್ರಿ. ವಿ.); **Prósiness** (ನಾ.)

Proséctor ಪ್ರೊಸೆಕ್ಟರ್ (ನಾ.) (ಅಂ. ರ. ಶಾ. ದ ಪಾಠ, ಮೊ. ನ್ನು ಹೇಳುವುದಕ್ಕೆ ಪೂರ್ವಭಾವಿಯಾಗಿ) ಹೆಣವನ್ನು ಕೊಯ್ದು ಸಿದ್ಧ ಮಾಡಿಡು ವವನು; ಶವ ವಿಚ್ಛೇದಕ.

Prósecute ಪ್ರಾಸಿಕ್ಯೂಟ್ (ಕ್ರಿ. ಸಕ.) (ಶೋಧನೆ, ವ್ಯಾಸಂಗ—ಇವನ್ನು) ಮುಂದುವರಿಸು; ಮುನ್ನಡಸು; (ವ್ಯಾಪಾರ, ಉದ್ಯಮ—ಇವನ್ನು) ನಡಸು, ನಿರ್ವಹಿಸು. (ಒಬ್ಬನಮೇಲೆ) ಕಾನೂನು ಕ್ರಮ ಜರುಗಿಸು (Trespassers will be prosecuted). **Prosecútion** (ನಾ.) (ವ್ಯಾಸಂಗ, ಮೊ. ನ್ನು) ಮುಂದುವರಿಸುವುದು, ನಡಸುವುದು. (ನ್ಯಾ. ಶಾ.) ನ್ಯಾಯಸ್ಥಾನದ ಮುಂದೆ ತಕ್ರಾರಿನ, ಅಪಾದನೆಯ, ನಿರ್ದೇಶ; (ಒಬ್ಬನಮೇಲೆ) ಕಾನೂನು ಕ್ರಮ ಜರುಗಿಸುವುದು; ಕಟ್ಟಳೆ ನಡಸುವುದು. ಅಪಾದನೆ ಮಾಡಿದ ಪಕ್ಷ; ಫಿರ್ಯಾದಿ (ಪಕ್ಷ) (The p. denied this. Director of public prosecutions ಇಂಗ್ಲೆಂಡಿನಲ್ಲಿ ಸಾರ್ವಜನಿಕ ತಕ್ರಾರು ಅಪಾದನೆಗಳನ್ನು ಸರ್ಕಾರದ ಪರವಾಗಿ ನಡಸುವವನು). **Prósecutor** (ನಾ.) (ಮು., ತಕ್ರಾರು ವಿಚಾರಣೆಯ ನ್ಯಾಯಸ್ಥಾನದಲ್ಲಿ) ಕ್ರಮ ಜರುಗಿಸುವವನು; ಅಭಿಯೋಕ್ತ; ಫಿರ್ಯಾದಿ. Public p. ಸಾರ್ವಜನಿಕ ಹಿತದಲ್ಲಿ ಅಪರಾಧಿಗಳಮೇಲೆ ಕ್ರಮ ಜರುಗಿಸುವ ನ್ಯಾಯ ಖಾತೆಯ ಅಧಿಕಾರಿ; ಸಾರ್ವಜನಿಕ ಫಿರ್ಯಾದಿ. **Prosecútrix** (ನಾ., ಸ್ತ್ರೀ.)

Próselyte ಪ್ರಾಸಿಲೈಟ್ (ನಾ., ಕ್ರಿ. ಸಕ.) ಒಂದು ಅಭಿಪ್ರಾಯ, ಮತ ಧರ್ಮ ಅಥವಾ ಪಕ್ಷ—ಇವುಗಳಿಂದ ಮತ್ತೊಂದಕ್ಕೆ ಪರಿವರ್ತನೆ ಹೊಂದಿದವನು; ಮತಾಂತರ ಹೊಂದಿದವನು (Made many proselytes). (ಯೆಹೂದ್ಯೇತರನಾಗಿದ್ದು) ಯೆಹೂದ್ಯ ಮತಧರ್ಮಕ್ಕೆ ಪರಿವರ್ತಿತನಾದವನು (P. of the gate ಸುನತಿ, ಮೊ. ಸಂಸ್ಕಾರ ಗಳಿಗೆ ಒಳಪಡದವನು). (ಕ್ರಿ.) (ಈಗ ವಿರ. ಪ್ರ.) (ಒಬ್ಬನನ್ನು) ಮತಾಂತರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೊಂದುವಂತೆ ಮಾಡು. **Próselytism** —ಲೈ(ಲ)ಟಿಸ್ಮ್ (ನಾ.) **Próselytize** —ಲಟೈಸ್ (ಕ್ರಿ. ಸಕ.) ; **Próselytizer** (ನಾ.)

Prosénchyma ಪ್ರಾಸೆಂಕಿಮ (ನಾ.) (ಸ. ವಿ.) ಕೊನೆಗಳು ಒಂದರೊಳಕ್ಕೊಂದು ಹಾಯ್ದಿರುವ ಲಂಬ ಜೀವಾಣುಗಳ ಅಂಗಾಂಶ (Parenchyma ಹೋಲಿಸಿ); (ಮು., ರಕ್ತನಾಳಗೂಡಿದ) ತಂತುಮಯ ಅಂಗಾಂಶ. **Prosenchýmatous** (ಗು.)

Prósit (L) ಪ್ರೋಸಿಟ್ (ಭಾವ. ಅವ್ಯ.) (ಸ್ವಸ್ತಿಪಾನ, ಮೊ. ಗಳಲ್ಲಿ ಉಪಯೋಗಿಸುವ ಪದ) ಸ್ವಸ್ತಿ; ನಿನಗೆ ಶುಭವಾಗಲಿ, ಒಳ್ಳೆಯದಾಗಲಿ, ಜಯವಾಗಲಿ.

Prósody ಪ್ರಾಸೊಡಿ (ನಾ.) ಛಂದಶ್ಶಾಸ್ತ್ರ. **Prósodist** (ನಾ.); **Prosodíacal** —ಡೈಅಕಲ್ (ಗು.) =**Prosódial** ಪ್ರೊಸೋಡಿಯಲ್ (ಗು.) =**Prosódic** ಪ್ರೊಸಾಡಿಕ್ (ಗು.) —ದ; —ಕ್ಕೆ ಸಂಬಂಧಪಟ್ಟ.

Prosopopoéia ಪ್ರಾಸೊಪೊಪೀಯ, ಪ್ರೊಸೋ— (ನಾ.) (ಅಲಂ.) ಎದುರಿಗಿಲ್ಲದ ವ್ಯಕ್ತಿ ಅಥವಾ ಕಾಲ್ಪನಿಕ ವ್ಯಕ್ತಿ ಮಾತನಾಡಿದಂತೆ ಅಥವಾ ನಟನೆ ಮಾಡಿದಂತೆ ನಿರೂಪಿಸುವ ಅಲಂಕಾರ; (ಅಮೂರ್ತವಾದುದಕ್ಕೆ) ಮನುಷ್ಯತ್ವಾರೋಪಣೆ.

Próspect ಪ್ರಾಸ್ಪೆಕ್ಟ್ (ನಾ., ಕ್ರಿ.) (ಭೂ ದೃಶ್ಯ, ಮೊ. ರ) ವಿಶಾಲವಾದ ದರ್ಶನ, ನೋಟ (A fine, striking, p.). ಮಾನಸಿಕ ದೃಶ್ಯ (Opened a new p. to his mind). ನಿರೀಕ್ಷೆ; ಪ್ರತೀಕ್ಷೆ (Offers a gloomy p. His prospects were brilliant. No p. of success. Have nothing in p. at present) [**Próspectless** (ಗು.)]. (ಗಣಿ ಕೆಲಸ) ಖನಿಜ ದೊರೆಯುವ ನಿರೀಕ್ಷೆಯುಳ್ಳ ಪ್ರದೇಶ; ಪರೀಕ್ಷೆ ಮಾಡುವುದಕ್ಕಾಗಿ ಆಯ್ದ ಅದುರಿನ ಭಾಗ; ಇಂಥ ಪರೀಕ್ಷೆಯಿಂದ ದೊರೆತ ಉತ್ಪನ್ನ. ಗಿರಾಕಿಯಾದಾನೆಂದು, ಚಂದಾದಾರನಾದಾನೆಂದು, ಮೊ. ಗಿ ನಿರೀಕ್ಷಿಸಬಹುದಾದವನು. (ಕ್ರಿ.) (ಚಿನ್ನ, ಮೊ. ಕ್ಕಾಗಿ) ಒಂದು ಪ್ರದೇಶವನ್ನು ಶೋಧಿಸು, ಅನ್ವೇಷಿಸು (*For* ಉಪ. ದೊಡನೆ) [**Prospéctor, Próspector** (ನಾ.)]. (ರೂಪ.) (—ಕ್ಕಾಗಿ) ಎದುರುನೋಡು, ನಿರೀಕ್ಷಿಸು (*For* ಉಪ. ದೊಡನೆ). (ಗಣಿಯ ವಿಷಯದಲ್ಲಿ) ಫಲಪ್ರದವಾಗಿ ತೋರು, ಭರವಸೆ ತೋರು (P. well, ill); (ಗಣಿಯ ವಿಷಯದಲ್ಲಿ) ಪರೀಕ್ಷಾರ್ಥವಾಗಿ ಕೆಲಸ ನಡಸು; (ನಿರ್ದಿಷ್ಟ ಫಲದ) ಭರವಸೆ ಕೊಡು. **Prospéctive** (ಗು.) ಭಾವಿ; ಭವಿಷ್ಯದ; ಭವಿಷ್ಯಕ್ಕೆ—ಸಂಬಂಧಿಸಿದ, ಅನ್ವಯಿಸುವ (Retrospective ಹೋಲಿಸಿ) (The law was held to be exclusively p. Implies a p. obligation). ನಿರೀಕ್ಷಿತ; ಭಾವಿ; ಮುಂದೆ ಒಂದು ದಿನ ಆಗುವ, ಬರುವ (P. peer, bridegroom, profit). **Prospéctively** (ಕ್ರಿ. ವಿ.); **Prospéctiveness** (ನಾ.)

Prospéctus ಪ್ರೊಸ್ಪೆಕ್ಟಸ್ (ನಾ.; ಬ. ವ. -tuses) (ಒಂದು ಪಾಠಶಾಲೆ, ವ್ಯಾಪಾರೋದ್ಯಮ, ಪ್ರಕಟವಾಗಲಿರುವ ಗ್ರಂಥ, ಮೊ. ಗಳ ಮುಖ್ಯ ಸ್ವರೂಪ ಲಕ್ಷಣಗಳನ್ನು ವಿವರಿಸುವ) ಪರಿಚಯ ಪತ್ರಿಕೆ; —ಪ್ರಕಟನೆ; ವಿವರಣಪತ್ರ.

Prósper ಪ್ರಾಸ್ಪರ್ (ಕ್ರಿ.) ಏಳಿಗೆ ಹೊಂದು; ಜಯಶಾಲಿಯಾಗು (Cheats never p. Nothing will ever p. in his hands). ಸಫಲವಾಗಿಸು; ಜಯಪ್ರದ ಮಾಡು (Heaven p. our attempt). **Prósperous** (ಗು.) ಉಚ್ಛ್ರಾಯ ಸ್ಥಿತಿಯಲ್ಲಿರುವ; ಜಯ ಪಡೆಯುತ್ತಿರುವ; ಅಭಿವೃದ್ಧಿಯಾಗುತ್ತಿರುವ; ಏಳಿಗೆ ಹೊಂದುತ್ತಿರುವ (A p. merchant, enterprise). ಶುಭ ಸೂಚಕ; ಸುಯೋಗದ; ಅನುಕೂಲವಾದ (A p. gale ಅನುಕೂಲವಾದ ಗಾಳಿ. In a p. hour ಶುಭ ಮುಹೂರ್ತದಲ್ಲಿ). **Prósperously** (ಕ್ರಿ. ವಿ.); **Prospérity** —ಸ್ಪೆ— (ನಾ.)

Próstate ಪ್ರಾಸ್ಪೇಟ್ (ನಾ.) (ಮನುಷ್ಯನಲ್ಲಿಯೂ ಇತರ ಸಸ್ತನಿಗಳಲ್ಲಿಯೂ) ಗಂಡಸಿನ ಜನನೇಂದ್ರಿಯಗಳಿಗೆ ಸಂಬಂಧಿಸಿರುವ, ಮೂತ್ರಕೋಶದ ಕಂಠವನ್ನು ಬಳಸಿಕೊಂಡಿರುವ, ಒಂದು ದೊಡ್ಡ ಗ್ರಂಥಿ ಅಥವಾ ಹಲವು ಸಣ್ಣ ಗ್ರಂಥಿಗಳಲ್ಲೊಂದು. **Prostátic** ಪ್ರೊಸ್ಟ್ಯಾ— (ಗು.)

Prósthesis ಪ್ರಾಸ್ಥಿಸಿಸ್ (ನಾ.) (ವ್ಯಾ.) ಪದಾದಿಯಲ್ಲಿ ಒಂದು ಅಕ್ಷರದ ಅಥವಾ ಉಚ್ಚಾರಾಂಶದ ಸೇರಿಕೆ (ಉದಾ., 'be': becalm, beloved). (ಶಸ್ತ್ರ ಚಿಕಿತ್ಸೆಯಲ್ಲಿ) ಅಂಗ ನ್ಯೂನತೆಗಳನ್ನು (ಕೃತಕೋಪಾಯಗಳಿಂದ, ಉದಾ., ಕೃತಕವಾದ ಹಲ್ಲುಗಳು, ಮರದ ಕಾಲು, ಮೊ. ಗಳಿಂದ) ಸರಿಪಡಿಸುವುದು; ನ್ಯೂನತಾ ಪೂರಣ ಚಿಕಿತ್ಸೆ. **Prosthétic** —ಸ್ಥೆಟಿಕ್ (ಗು.)

Próstitute ಪ್ರಾಸ್ಟಿಟ್ಯೂಟ್ (ನಾ., ಕ್ರಿ. ಸಕ.) ವಿವೇಚನೆಯಿಲ್ಲದೆ, ಇತರರ ಸಂಭೋಗಕ್ಕಾಗಿ ದೇಹವಿಕ್ರಯ ಮಾಡಿಕೊಳ್ಳುವವಳು; ಗುಡಿಸೆಟ್ಟಿ; ಬೆರೆವೆಣ್ಣು; ಪಣ್ಯಾಂಗನೆ. (ಕ್ರಿ.) —ಆಗು. (ರೂಪ.) ವ್ಯಭಿಚರಿಸು; (ತನ್ನ ಗೌರವ, ಮೊ. ನ್ನು) ತುಚ್ಛ ಲಾಭಕ್ಕಾಗಿ ಮಾರಿಕೊ; (ಶಕ್ತಿ, ಬುದ್ಧಿ, ಮೊ. ನ್ನು) ನೀಚ ಕೆಲಸಕ್ಕೆ ಉಪಯೋಗಿಸು, ದುರುಪಯೋಗಪಡಿಸು. **Prostitútion** (ನಾ.)

Próstrate ಪ್ರಾಸ್ಟ್ರೇಟ್ (ಗು.), **Prostráte, Prós-** ಪ್ರಾಸ್ಟ್ರೇಟ್ (ಕ್ರಿ. ಸಕ.) (ಮು., ಶರಣಾಗತಿಯ ಅಥವಾ ನಮ್ರತೆಯ ಸೂಚನೆಯಾಗಿ) ಮುಖವಡಿಯಾಗಿ ಮಲಗಿದ; ಅಡ್ಡಬಿದ್ದ; ಸಾಷ್ಟಾಂಗ ಪ್ರಣತ; ಪೊಡಮಟ್ಟ (ಗ್ರಾಂ.). ನೆಲಸಮನಾಗಿ ಬಿದ್ದಿರುವ; ಸೋತುಹೋದ; ಪರಾಜಿತ (Had laid the Whig party p.) ಪೂರ್ತಿ ಸುಸ್ತುಬಿದ್ದ; ಸಂಪೂರ್ಣವಾಗಿ ತ್ರಾಣಗುಂದಿದ. (ಸ. ವಿ.) ನೆಲದಮೇಲೆ ಹಬ್ಬಿದ. (ಕ್ರಿ.) (ಗುಣವಾಚಕಾರ್ಥಗಳಲ್ಲಿ). (ರೂಪ.) ಸೋಲಿಸು; ಶರಣಾಗತನನ್ನಾಗಿ ಮಾಡು; ಪೂರ್ತಿ ಸುಸ್ತುಬೀಳಿಸು; ಅತ್ಯಂತ ನಿತ್ರಾಣ ಮಾಡು. **Prostrátion** (ನಾ.)

Próstyle ಪ್ರೋಸ್ಟೈಲ್ (ನಾ., ಗು.) (ಗ್ರೀಕ್ ದೇವಸ್ಥಾನದ ಮುಂಭಾಗದಲ್ಲಿ) (ನಾಲ್ಕಕ್ಕೆ ಮೀರದ ಕಂಬಗಳುಳ್ಳ) ಮುಖ ಮಂಟಪ(ವುಳ್ಳ)

Prósy. **Prose** ನೋಡಿ.

Protágonist ಪ್ರೊಟ್ಯಾಗೊನಿಸ್ಟ್, **Protagónist** ಪ್ರೊಟಗೋನಿಸ್ಟ್ (ನಾ.) (ನಾಟಕದಲ್ಲಿ ಅಥವಾ ಕಥಾವಸ್ತುವಿನಲ್ಲಿ) ಮುಖ್ಯ ಪಾತ್ರ; ನಾಯಕ. (ಒಂದು ಚಳವಳಿ, ಧ್ಯೇಯ, ಮೊ. ರ) ಹೋರಾಳು, ಅಗ್ರೇಸರ, ಮುಂದಾಳು, ಮಲ್ಲ; ವೀರನಾಯಕ; ಅಂಕಕಾರ.

Prótasis ಪ್ರಾಟಸಿಸ್ (ನಾ.; ಬ. ವ. -ases —ಸೀಸ್) ಪೀಠಿಕಾ ವಾಕ್ಯ, —ಭಾಗ; (ನಾಟಕದಲ್ಲಿ) ಸಂದರ್ಭಸೂಚಕ ಭಾಗ. **Protátic** ಪ್ರೊಟ್ಯಾಟಿಕ್ (ಗು.)

Prótean. **Proteus** ನೋಡಿ.

Protéct ಪ್ರೊಟೆಕ್ಟ್ (ಕ್ರಿ. ಸಕ.) (ಅಪಾಯ, ಕೇಡು, ಮೊ. ಗಳಾಗದಂತೆ) ರಕ್ಷಿಸು, ಕಾಪಾಡು, ಕಾಪಿಡು, ಕಾಯಿ, ಸಲಹು (*From, against* ಉಪ. ದೊಡನೆ). (ರಾಜ್ಯ ನೀತಿ) (ಪರದೇಶದವರ ಪೈಪೋಟಿಯಿಂದ ಕೆಡುಕಾಗದಂತೆ ಅವರ ಸರಕಿನಮೇಲೆ ತೆರಿಗೆ ಹಾಕಿ) ಸ್ವದೇಶದ ಕೈಗಾರಿಕೆಗೆ ರಕ್ಷಣೆ ಕೊಡು. (ವಾಣಿಜ್ಯ) (ಹುಂಡಿ, ಮೊ. ಗಳಿಗೆ ಹಣ ಕೊಡಲು) ಹಣ ಒದಗಿಸು. (ಬಳಸುವವರಿಗೆ, ಕೆಲಸಗಾರರು, ಮೊ. ರಿಗೆ ಅಪಾಯ ತಟ್ಟದಂತೆ, ಯಂತ್ರ, ಮೊ. ಕ್ಕೆ) ರಕ್ಷಕ ಸಲಕರಣೆಯನ್ನು ಒದಗಿಸು, ಕಾಪು ಹಾಕು (Protected rifles). **Protéctive** (ಗು.); **Protéctively** (ಕ್ರಿ. ವಿ.); **Protéctiveness** (ನಾ.); **Protéction** (ನಾ.) ಕಾಪು; (ಸಂ)ರಕ್ಷಣೆ; ಮರೆ; ರಕ್ಷೆ, ರಕ್ಷಕ (Is safe under your p. Affords p. against weather. The dog is a great p. against burglars). ಆಶ್ರಯ, ಪೋಷಣೆ (Book was indebted to your kind p.) [ಹೆಂಗಸಿನ ವಿಷಯದಲ್ಲಿ: Live under x's p. —ಎಂಬವನಿಗೆ ಸೂಳೆಯಾಗಿರು, ರಖಾವಾಗಿರು].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

=Safe-conduct [Safe (ಗು.) ನೋಡಿ]. ತಮ್ಮ ನಾವಿಕರಿಗೆ ಅಮೆ. ಸಂ. ಸರ್ಕಾರದವರು ಕೊಡುವ ಅಮೆರಿಕಾ ಪ್ರಜೆತನದ ಸನ್ನದು. (ರಾಜ್ಯನೀತಿ) ಸ್ವದೇಶೀ ಕೈಗಾರಿಕೆಯ ರಕ್ಷಣಾ ಪದ್ಧತಿ. **Protéctionism** (ನಾ.) ಸ್ವದೇಶೀ ಕೈಗಾರಿಕೆಗಳ ರಕ್ಷಣ —ತತ್ತ್ವ, ನೀತಿ, ಪದ್ಧತಿ. **Protéctionist** (ನಾ.); **Protéctor** (ನಾ.) ಕಾಪಾಡುವವನು; (ಸಂ)ರಕ್ಷಕ. (ರಾಜನು ಅಪ್ರಾಪ್ತ ವಯಸ್ಕನಾಗಿರುವಾಗ, ದೇಶದಲ್ಲಿಲ್ಲದಿರುವಾಗ—ಇವೇ ಮೊದಲಾದ ಸಂದರ್ಭಗಳಲ್ಲಿ, ರಾಜ್ಯದಾಡಳಿತ ನೋಡುವ) ರಾಜಪ್ರತಿನಿಧಿ, ರಾಜ್ಯಪಾಲಕ [Lord P. of the Commonwealth (೧೬೫೩ರಿಂದ ೧೬೫೮ರ ವರೆಗೆ ರಾಜ್ಯಾಡಳಿತ ನಡಸಿದ) Oliver Cromwell ನ ಮತ್ತು (೧೬೫೮ರಿಂದ ೧೬೫೯ರ ವರೆಗೆ ರಾಜ್ಯಾಡಳಿತ ನಡಸಿದ) Richard Cromwell ನ ಅಧಿಕಾರ ನಾಮ] [**Protéctoral** (ಗು.) (ಮು., ಒಂದು ರಾಜ್ಯದ ಅಥವಾ ಪ್ರಜಾ ಪ್ರಭುತ್ವದ) ಪಾಲಕನ. **Protéctorship** (ನಾ.)]. ರಕ್ಷಣೋಪಾಯ; ರಕ್ಷಕ (ಸಲಕರಣೆ); ಕಾಪು; ರಕ್ಷೆ [Chest-p. (Chest ನೋಡಿ). Point-p. (ಬರೆಯುವ ಸೀಸದಕಡ್ಡಿಯ) ಮೊನೆಯ ಕಾಪು]. **Protéctress** (ನಾ., ಸ್ತ್ರೀ.); **Protéctorate** —ರೆಟ್ (ನಾ.) ರಾಜಪ್ರತಿನಿಧಿಯ, ರಾಜ್ಯಪಾಲಕನ —ಅಧಿಕಾರ, ಸರ್ಕಾರ; ಇದರ ಅವಧಿ, ಕಾಲ (ಮು., Oliver & Richard Cromwell ಎಂಬ ರಾಜ್ಯಪಾಲಕರದು). ಬಲಿಷ್ಠ ರಾಜ್ಯವು ದುರ್ಬಲ ರಾಜ್ಯದಮೇಲೆ ನಡಸುವ ರಕ್ಷಣಾಧಿಕಾರ; ಇಂಥ ರಕ್ಷಿತ, ಆಶ್ರಿತ, —ಸಂಸ್ಥಾನ, ರಾಜ್ಯ. **Protéctory** (ನಾ.) (ರೋ. ಕ್ಯಾ.) ಅನಾಥರಾದ ಅಥವಾ ದುರ್ಮಾರ್ಗಿಗಳಾದ ಮಕ್ಕಳ (ಸಂರಕ್ಷಣೆಯ) ಆಶ್ರಮ.

Prótege ಪ್ರಾ(ಪ್ರೋ)ಟೆಷೇ [ನಾ.; ಸ್ತ್ರೀ. -gee —ಷೇ] (ಸಾ., ಸ್ಥಿರವಾಗಿ) ಮತ್ತೊಬ್ಬನ ಆಶ್ರಯದಲ್ಲಿ, ರಕ್ಷಣೆಯಲ್ಲಿ, —ಇರುವವನು; ಆಶ್ರಿತ; ಪಾಲಿತ.

Próteid ಪ್ರೋಟಿಇಡ್ (ನಾ.) =Protein (ಮೊದಲನೆಯ ಅರ್ಥ)

Próteiform ಪ್ರೋಟಿಇಫಾರ್ಮ್, ಪ್ರೊಟೀ— (ಗು.) ಬಹುವಾಗಿ ರೂಪ ಬದಲಾಯಿಸುವ; ರೂಪ ಪರಾವರ್ತಿಯಾದ; ಅನೇಕ ರೂಪಾಂತರಗಳನ್ನು ಹೊಂದುವ; ಚಂಚಲ ರೂಪಿ.

Prótein ಪ್ರೋಟಿಇನ್, ಪ್ರೋಟೀನ್ (ನಾ.) (ರ. ವಿ.: ವಿಜ್ಞಾನದ ಪರಿಭಾಷೆಯಲ್ಲಿ Proteid ಪದಕ್ಕೆ ಬದಲು ಹೆಚ್ಚು ಬಳಕೆ) ಸಸಾರಜನಕ (ಪದಾರ್ಥ); (ಹಿಂದೆ) ಸಸಾರಜನಕಗಳ ಊಹಿತ ಆಧಾರ ದ್ರವ್ಯ. **Proteináceous** (ಗು.) —ದ, ಸಂಬಂಧದ, ಸ್ವಭಾವದ. **Proteínic** (ಗು.) =**Protéinous** (ಗು.)

Proter(o)- ಪ್ರಾಟೆರ್(ಒ)- (ಸ. ಪೂ. ಪ.) ಮೊದಲು—; ಪೂರ್ವ—. **Proterándrous** (ಗು.) (ಸ. ವಿ.) ಶಲಾಕೆಗಳಿಗಿಂತ ಕೇಸರ ಮೊದಲು ಬಲಿಯುವ. **Proterógynous** (ಗು.) (ಸ. ವಿ.) ಕೇಸರಗಳಿಗಿಂತ ಶಲಾಕೆ ಮೊದಲು ಬಲಿಯುವ.

Prótest ಪ್ರೋಟೆಸ್ಟ್ (ನಾ.), **Protést** ಪ್ರೊ— (ಕ್ರಿ.) ಅನಂಗೀಕಾರದ, ಅಸಮ್ಮತಿಯ, —ಕ್ರಮವಿಹಿತವಾದ ಹೇಳಿಕೆ; ಪ್ರತಿಭಟನೆ; ಆಕ್ಷೇಪಣೆ; ತಪ್ಪು ತೋರಿಸಿ ವಾದಿಸುವುದು; ವಿರೋಧ ಸೂಚನೆ (Made a p. Paid it under p.). ಪಾರ್ಲಿಮೆಂಟಿನ ಶ್ರೀಮಂತ ಸಭೆಯಲ್ಲಿ ಬಹುಮತದಿಂದ ತೀರ್ಮಾನವಾದ ನಿರ್ಣಯಕ್ಕೆ ವಿರೋಧ ಸೂಚಿಸಿ ನ್ಯೂನ ಪಕ್ಷದ ಶ್ರೀಮಂತನೊಬ್ಬನು ರುಜುಹಾಕಿ ಕೊಟ್ಟ ಲಿಖಿತ ರೂಪದ ಪ್ರತಿಭಟನೆ. ಹುಂಡಿಯನ್ನು ಕ್ರಮಾನುಸಾರ ಒಪ್ಪಿಸರಾಯಿತೆಂದೂ ಆದರೆ ಹಣವನ್ನು ಸಲ್ಲಿಸಲು ಅಥವಾ ಹುಂಡಿಯನ್ನು ಅಂಗೀಕರಿಸಲು ತಿರಸ್ಕರಿಸಲಾಯಿತೆಂದೂ (ಸಾ., Notary public ಎಂಬ ಅಧಿಕಾರಿ) ಬರೆದುಕೊಟ್ಟ ಹೇಳಿಕೆ; ಹುಂಡಿ ತಿರಸ್ಕಾರದ ಪ್ರಮಾಣ ಪತ್ರ. ದೃಢವಾದ ಹೇಳಿಕೆ, —ವಚನ. (ಕ್ರಿ.) (ತನ್ನ ನಿಷ್ಕಳಂಕತೆಯನ್ನು) ದೃಢವಾಗಿ, ಪ್ರಮಾಣಪೂರ್ವಕವಾಗಿ, —ಹೇಳು (*That*). (ಹುಂಡಿಯ ಬಗ್ಗೆ) ತಿರಸ್ಕಾರದ ಷರಾ ಬರೆ. (ಒಂದು ಕಾರ್ಯಕ್ಕೆ ಅಥವಾ ಸೂಚನೆಗೆ ವಿರೋಧವಾಗಿ, ಹಲವು ವೇಳೆ ಲಿಖಿತದ ಮೂಲಕ) ಆಕ್ಷೇಪಣೆಮಾಡು, ಅಸಮ್ಮತಿ ತಿಳಿಸು, ವಿರೋಧ ಸೂಚಿಸು, ಪ್ರತಿಭಟಿಸು (*Against* ಉಪ. ದೊಡನೆ). **Protéster, Protéstor** (ನಾ.); **Protéstingly** (ಕ್ರಿ. ವಿ.); **Protestátion** ಪ್ರಾಟೆಸ್ಟೇಷನ್ (ನಾ.) ದೃಢವಾಗಿ, ಪ್ರಮಾಣಪೂರ್ವಕವಾಗಿ, —ಹೇಳುವುದು (*Of, that*). ಪ್ರತಿಭಟನೆ (*Against* ಉಪ. ದೊಡನೆ)

Prótestant ಪ್ರಾಟೆಸ್ಟಂಟ್ (ನಾ., ಗು.) ರೋ. ಕ್ಯಾ. ಮತವನ್ನು ಪ್ರತಿಭಟಿಸಿ ೧೬ನೆಯ ಶ. ಮಾ. ದಲ್ಲಿ ಆದ ಕ್ರೈಸ್ತ ಮತ ಸುಧಾರಣೆಯಲ್ಲಿ ರೋಮಿನ ಕ್ರೈಸ್ತ ಮಂಡಲಿಯಿಂದ ಸುಧಾರಣೆಗಾಗಿ ಬೇರೆಯಾದ, ಯಾವುದಾದರೂ ಕ್ರೈಸ್ತ ಪಂಗಡದ ಅಥವಾ ಅದರ ಶಾಖೆಯ(ವನು): ಪ್ರಾಟೆಸ್ಟಂಟ್ ಮತದ(ವನು) [**Prótestantism** (ನಾ.); **Prótestantize** (ಕ್ರಿ.)]. (Protés- ಎಂದು ಸಹ) ಪ್ರತಿಭಟಿಸುವ(ವನು); ಪ್ರತಿವಾದಿಸುವ(ವನು)

Próteus ಪ್ರೋಟ್ಯೂಸ್, —ಟಿಯಸ್ (ನಾ.) (ಗ್ರೀಕ್ ಮತ್ತು ರೋಮನ್ ಪುರಾಣ) ನಾನಾ ರೂಪಗಳನ್ನು ಧರಿಸುವ ಶಕ್ತಿಯಿದ್ದ, ಕಾಮರೂಪಿಯಾದ, —ಒಬ್ಬ ಸಮುದ್ರ ದೇವತೆ. ಬದಲಾಯಿಸುತ್ತಿರುವ, ಸ್ಥಿರ ಸ್ಥಿತಿಯಲ್ಲಿಲ್ಲದೆ ವ್ಯತ್ಯಾಸ ಹೊಂದುತ್ತಿರುವ, —ಮನುಷ್ಯ, ವಸ್ತು; ಕಾಮ ರೂಪಿ. =Amoeba (ಕ್ಕೆ ಹಿಂದಿನ ಹೆಸರು). (ಹಲವು ಬಗೆಯ) ಏಕಾಣು ಜೀವಿ. ಹಾವುಮೀನಿನಂಥ ಒಡಲೂ ನಾಲ್ಕು ಮೋಟು ಕಾಲುಗಳೂ ಉಳ್ಳ (ಹಲವು ಬಗೆಯ) ಸಪುಚ್ಛ ಉಭಯಜೀವಿ. **Prótean** ಪ್ರೊಟಿಯನ್, ಪ್ರೊಟೀ— (ಗು.) (ರೂಪ)ಬದಲಾಯಿಸುತ್ತಿರುವ; ನಾನಾ ಮುಖವಾದ; ಒಂದರಿಂದೊಂದಕ್ಕೆ ಸುಲಭವಾಗಿ ತಿರುಗುವ; ಪ್ರೋಟಿಯಸ್ಸಿನ(ಂಥ)

Prothalámium ಪ್ರೋತಲೇಮಿಯಂ, **-on** —ಯನ್ (ನಾ.) ಮದುವೆಗೆ ಮೊದಲು ಹಾಡುವ ಗೀತ; ವಿವಾಹ ಪೂರ್ವ ಗೀತ.

Próthesis ಪ್ರಾತಿಸಿಸ್ (ನಾ.) ಪ್ರಭು ಭೋಜನ ಸಂಸ್ಕಾರದಲ್ಲಿ ಉಪಯೋಗಿಸುವ ಮೇಜು; ಇದರಮೇಲೆ ಆ ಸಂಸ್ಕಾರದ ವಸ್ತುಗಳನ್ನಿಡುವುದು; ಆ ಮೇಜಿಟ್ಟಿರುವ ಕ್ರೈಸ್ತ ದೇವಸ್ಥಾನ ಭಾಗ. (ವ್ಯಾ.) =Prosthesis. **Prothétic** ಪ್ರೊ— (ಗು.)

Protísta ಪ್ರೊಟಿಸ್ಟ (ನಾ., ಬ. ವ.) ಪ್ರಾಣಿಗಳೆಂದಾಗಲಿ, ಸಸ್ಯಗಳೆಂದಾಗಲಿ ವ್ಯತ್ಯಾಸ ತೋರದ ಜೀವಿ ಪ್ರಪಂಚ, ಸಂಘಟಿತ ಜೀವಿ ಕೋಟಿ.

Proto- ಪ್ರೋಟೊ- (ಸ. ಪೂ. ಪ್ರ.) (1) ಆದ್ಯ—, ಪ್ರಥಮ—, ಮೂಲ—, ಮುಖ್ಯ—. **-A'rabic, -Céltic** ಆದ್ಯ ಅರಬ್ಬೀಯರ, —ಕೆಲ್ಟರ. **-genétic, -génic** (—ಜೆನಿಕ್) ಬೆಳವಣಿಗೆಯ ಪ್ರಥಮ ದಶೆಯ. **-gine** (—ಜಿನ್) (ಅತ್ಯಂತ ಪ್ರಾಚೀನವಾದದ್ದೆಂದು ಊಹಿಸುವ, ಆಲ್ಪ್ಸ್ ಪರ್ವತದಲ್ಲಿ ದೊರೆಯುವ) ಒಂದು ತೆರದ ಗ್ರಾನೈಟ್ ಕಲ್ಲು. **-híppus** ವಂಶ ನಷ್ಟವಾಗಿಹೋದ ಕುದುರೆ ಜಾತಿಯ ಒಂದು ಚತುಷ್ಪಾದಿ. **-martyr** ಮೊದಲ ಧರ್ಮಬಲಿ (ಮು., ಕ್ರೈಸ್ತರಲ್ಲಿ St Stephen). **-phyta** ಪ್ರೊಟಾಫಿಟ (ನಾ., ಬ. ವ.) (ಅತ್ಯಂತ ಸರಳ ರಚನೆಯ) ಏಕಾಣು ಸಸ್ಯಗಳು. **-phyte** (ಪ್ರೋಟೊಫೈಟ್) ಏಕಾಣು ಸಸ್ಯ. **-théria** —ತೀ(ಅ)ರಿಯ (ನಾ., ಬ. ವ.) ಅತ್ಯಂತ ಕೆಳ ದರ್ಜೆಯ (ಉಪ ವರ್ಗದ) ಸಸ್ತನಿ ಪ್ರಾಣಿಗಳು; ಇವುಗಳ ಊಹಿತ ಜನಕ ಪ್ರಾಣಿಗಳು, ಮೂಲ ಪ್ರಾಣಿಗಳು. **-zóa** (ನಾ., ಬ. ವ.) (ಅತ್ಯಂತ ಸರಳ ರಚನೆಯ ಮತ್ತು ಸಾ., ಸೂಕ್ಷ್ಮದರ್ಶಕೀಯ) ಏಕಾಣು ಪ್ರಾಣಿ ವರ್ಗ. **-zóon** (—ಝೋಅನ್) ಇಂಥ ಏಕಾಣು ಪ್ರಾಣಿ. **-zóal** (ಗು.); **-zóan** (ಗು., ನಾ.) ಏಕಾಣು ಪ್ರಾಣಿ (ವರ್ಗದ); (ರೋಗದ ವಿಷಯದಲ್ಲಿ) ಪರಸತ್ತ್ವೋಪಜೀವಿಗಳಾದ ಏಕಾಣು ಜೀವಿಗಳಿಂದ ಹುಟ್ಟಿದ. **-zóic** (ಭೂ. ವಿ., ಸ್ತರಗಳು) ಜೀವಿಗಳ ಅಸ್ತಿತ್ವದ ಅತ್ಯಂತ ಪ್ರಾಚೀನ ಕುರುಹುಗಳುಳ್ಳ (=-zoal). **-zoólogy** (—ಝೊಆಲೊಜಿ) ಏಕಾಣು ಪ್ರಾಣಿ ವಿಜ್ಞಾನ. (2) (ರ. ವಿ.) ಒಂದು ಮೂಲ ಧಾತು ಅಥವಾ ಘಟಕವು ಮತ್ತೊಂದು ಮೂಲಧಾತುವಿನೊಡನೆ ಅತ್ಯಲ್ಪ ಪ್ರಮಾಣದಲ್ಲಿ ಸೇರಿ ಆದ ಸಂಯುಕ್ತ [ದ ಹೆಸರು(ಗಳಲ್ಲಿ ಪ್ರ.) (ಉದಾ., Protochloride, -sulphide, protoxide)]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Prótocol ಪ್ರೋಟೊಕಾಲ್ (ನಾ., ಕ್ರಿ.) ರಾಯಭಾರದ ದಸ್ತೈವಜಿನ ಮೊದಲ ಕರಡು ಪ್ರತಿ (ಮು., ಎಲ್ಲರೂ ಒಂದುಗೂಡಿ ಒಪ್ಪಂದಮಾಡಿಕೊಂಡ ಕರಾರಿನ ಷರತ್ತುಗಳನ್ನು ನಮೂದಿಸಿ ಆಯಾ ಪಕ್ಷದವರು ರುಜುಮಾಡಿರುವಂಥದು). (ಯಾವುದಾದರೂ ವ್ಯವಹಾರದ) ಕ್ರಮ ವಿಹಿತವಾದ ವರದಿ, —ಹೇಳಿಕೆ. (ಫ್ರಾನ್ಸಿನಲ್ಲಿ) ಪರರಾಷ್ಟ್ರೀಯ ವಿಚಾರ ಮಂತ್ರಿ ಖಾತೆಯ ಸಮಯಾಚಾರದ ಶಾಖೆ. (ರಾಜ ಸನ್ನದು, ಪೋಪ್ ಗುರುವಿನ ಆಜ್ಞೆ, ಮೊ. ಗಳಲ್ಲಿ) ಆರಂಭದ ಮತ್ತು ಮುಕ್ತಾಯದ ಅಧಿಕೃತ ಸೂತ್ರ (ರೂಪ)ಗಳು. (ಕ್ರಿ.) ರಾಯಭಾರದ ದಸ್ತೈವಜಿನ ಕರಡು ಪ್ರತಿ ತಯಾರಿಸು ; —ಪ್ರತಿಯಲ್ಲಿ ನಮೂದಿಸು, ದಾಖಲು ಮಾಡು.

Próton ಪ್ರೋಟಾನ್ (ನಾ.) (ಭೌ. ವಿ.) (ಒಂದು ಮೂಲಧಾತುವಿನ) ಪರಮಾಣುವಿನ ಆಧಾರ ಬಿಂದುವಿನ ಭಾಗವಾದ (ಅಥವಾ ಜಲಜನಕ ಪರಮಾಣುವಿನಲ್ಲಿ ಪೂರ್ತಿ ಆಧಾರ ಬಿಂದುವಾಗಿರುವ) ಧನ ವಿದ್ಯುತ್ತಿನ ಏಕಮಾನ : 'ಪ್ರೋಟಾನ್' (Electron ಹೋಲಿಸಿ)

Protonótary, Protho- ಪ್ರೋಟೊ(ತೊ)ನೋಟರಿ, **Protón-, Prothón-** ಪ್ರೊಟಾ(ತಾ)ನೊಟರಿ (ನಾ.) ಕೆಲವು ನ್ಯಾಯಸ್ಥಾನಗಳಲ್ಲಿ (Chancery, Common Pleas, and King's Bench—ಇವುಗಳಲ್ಲಿಯೂ, ಹಿಂದೆ ಪೂರ್ವ ರೋಮನ್ ಚಕ್ರಾಧಿಪತ್ಯದ ನ್ಯಾಯಸ್ಥಾನದಲ್ಲಯೂ) ಪ್ರಧಾನ ಗುಮಾಸ್ತೆ, ಕಾರಕೂನ, ಕರಣಿಕ.

Prótoplasm ಪ್ರೋಟೊಪ್ಲಾ್ಯಸ್ಮ್ (ನಾ.) ಅಮ್ಲಜನಕ, ಜಲಜನಕ, ಇಂಗಾಲ ಮತ್ತು ಸಾರಜನಕಗಳನ್ನೊಳಕೊಂಡ, ಸಸ್ಯಗಳ ಮತ್ತು ಪ್ರಾಣಿಗಳ ಜೀವನಕ್ಕೆ ಆಧಾರವಾದ, ಅರ್ಧ ದ್ರವವೂ ಅರ್ಧ ಪಾರದರ್ಶಕವೂ ನಿರ್ವರ್ಣವೂ ಆದ ವಸ್ತು : ಜೀವ ದ್ರವ್ಯ. **Protoplasmátic** (ಗು.) =**Protoplásmic** (ಗು.)

Prótoplast ಪ್ರೋಟೊಪ್ಲಾ್ಯಸ್ಟ್ (ನಾ.) ಮೊದಲು ರೂಪಿತವಾದದ್ದು, —ಸೃಷ್ಟಿಯಾದದ್ದು ; ಒಂದು ವರ್ಗದ ಆದಿ ಸೃಷ್ಟಿಯ ವಸ್ತು ಅಥವಾ ಜೀವಿ: ಮೂಲ—ವಸ್ತು, ಜೀವಿ, ರೂಪ. ಸೃಷ್ಟಿಯಾದ ಮೊದಲ ಮನುಷ್ಯ; ಆದ್ಯ ಮನುಷ್ಯ. ಜೀವ ದ್ರವ್ಯದ—ಏಕಮಾನ, ಮೊತ್ತ. **Protoplástic** (ಗು.)

Prótotype ಪ್ರೋಟೊಟೈಪ್ (ನಾ.) (ಯಾವುದಾದರೂ ನಕಲು, ಅನುಕರಣ, ರಚನೆ, ಈಚಿನ ಮಾದರಿ, ಸುಧಾರಿಸಿದ ರೂಪ, ಮೊ. ರ) ಮೂಲ (ವಸ್ತು, ವ್ಯಕ್ತಿ); ಪ್ರಥಮ ರೂಪ; ಮಾತೃಕೆ. **Prótotypal** (ಗು.); **Prototýpic(al)** —ಟಿಪಿ— (ಗು.)

Protráct ಪ್ರೊಟ್ರಾ್ಯಕ್ಟ್ (ಕ್ರಿ. ಸಕ.) ಲಂಬಿಸು ; (ಉದ್ದ) ಬೆಳಸು ; ನೀಳ ಮಾಡು (Protracted their stay for some weeks) [**Protráctedly** (ಕ್ರಿ. ವಿ.)]. ಅಳತೆಗೆ ಸರಿಯಾಗಿ (ನಕ್ಷೆ, ನಕಾಸ, ಮೊ. ನ್ನು) ಬರೆ, ರೇಖಿಸು. **Protráctile** —ಕ್‌ಟ(ಟೈ)ಲ್ (ಗು.) (ಪ್ರಾ. ವಿ.) (ಅಂಗ, ಮೊ. ದು) ನೀಡಲಾಗುವ, ಲಂಬಿಸಲಾಗುವ. **Protráction** (ನಾ.) ಲಂಬಿಸುವುದು ; ಲಂಬನ. ವಿಸ್ತಾರಕ ಸ್ನಾಯುವಿನ ಕ್ರಿಯೆ. ಅಳತೆಯ ಪರಿಮಾಣಕ್ಕೆ (ಸರಿಯಾಗಿ) ರೇಖಿಸುವುದು. **Protráctor** (ನಾ.) (ಸಾ., ಅರ್ಧ ವೃತ್ತಾಕೃತಿಯಲ್ಲಿರುವ, ಮಾಪಕ ರೇಖೆಗಳುಳ್ಳ) ಕೋನ ಮಾಪಕ. ಅಂಗ, ಮೊ. ನ್ನು ನೀಡಲು ಸಹಾಯಕವಾದ ಸ್ನಾಯು : ವಿಸ್ತಾರಕ ಸ್ನಾಯು.

Protráctile, Protráctor. Protract ನೋಡಿ.

Protrúde ಪ್ರೊಟ್ರೂಡ್ (ಕ್ರಿ.) (ಮುಂದಕ್ಕೆ) ಚಾಚು, ಚಾಚಿಕೊ, ಚಾಚಿಸು; ಹೊರಕ್ಕೆ ಹೊರಟುಕೊಂಡಿರು. (ರೂಪ.) ನುಗ್ಗು ; ತಲೆಹಾಕಿಕೊಂಡು ಬರು ; ಮೇಲೆಬಿದ್ದು ಬರು. **Protrúdent** (ಗು.) ; **Protrúsible** (ಗು.); **Protrúsile** —ಸಿ(ಸೈ)ಲ್ (ಗು.) (ಕೈಕಾಲು, ಮೊ. ದು) ಚಾಚಲಾಗುವ. **Protrúsion** —ಷನ್ (ನಾ.); **Protrúsive** (ಗು.)

Protrúsile. Protrude ನೋಡಿ.

Protúberant ಪ್ರೊಟ್ಯೂಬೆರಂಟ್ (ಗು.) ಉಬ್ಬಿಕೊಂಡಿರುವ; ಊದಿಕೊಂಡಿರುವ; ಎದ್ದುಕಾಣುವ (ರೂಪ. ಸಹ). **Protúberance** (ನಾ.) ಉಬ್ಬಿಕೊಂಡಿರುವುದು ; —ರುವ ಗುಣ, ಸ್ಥಿತಿ ; ಉಬ್ಬು ; ಗಂತಿ ; ಗಂಟು.

Prótyle ಪ್ರೋಟೈಲ್ (ನಾ.) (ರ. ವಿ.) (ರಾಸಾಯನಿಕ ಮೂಲಧಾತುಗಳು ಅದರಿಂದ ಏರ್ಪಟ್ಟಿರಬಹುದೆಂದು ಊಹಿಸುವ) ಆದ್ಯ ವ್ಯತ್ಯಾಸ ರಹಿತ ದ್ರವ್ಯ : ಅವ್ಯಾಕೃತ ದ್ರವ್ಯ.

Proud ಪ್ರೌಡ್ (ಗು., ಕ್ರಿ. ವಿ.) (ಗುಣ, ಪದವಿ, ಆಸ್ತಿ, ಮೊ. ಕಾರಣಗಳಿಂದ) ಹೆಮ್ಮೆ, ಅಭಿಮಾನ, ಆತ್ಮಗೌರವ, —ಉಳ್ಳ ; ದುರಭಿಮಾನ, ಗರ್ವ, ದುರಹಂಕಾರ, ಸೊಕ್ಕು, ಹಮ್ಮು, —ಉಳ್ಳ (*Of* ಉಪ. ಜೊಡನೆ); (ಅತಿ) ಪ್ರತಿಷ್ಠೆಯ, ಜಂಬದ (=P.-hearted). ಹೆಮ್ಮೆಯ ; ಬಹಳ ಗೌರವಿತನಾದೆನೆಂಬ ಭಾವನೆಯುಳ್ಳ (Am p. of his acquaintance). ಆತ್ಮಗೌರವವುಳ್ಳ (Too p. to complain). (ಕ್ರಿಯೆ, ವರ್ತನೆ, ಮೊ. ದು) ಅಹಂಕಾರ ತೋರುವ. ನ್ಯಾಯವಾಗಿ ಹೆಮ್ಮೆಪಡುವ, —ಪಡಬಹುದಾದ (A p. day for us). (ವಸ್ತುಗಳು) ವೈಭವದ, ಠೀವಿಯ, ಜರ್ಬಿನ. (ನದಿ, ಸಮುದ್ರ, ಮೊ. ದು) ಉಬ್ಬಿದ, ಉಕ್ಕಿದ, ಪ್ರವಾಹ ಹರಿಯುವ. [P. flesh (Flesh) ನೋಡಿ]. (ಕ್ರಿ. ವಿ.) (ಬಳ. ಮಾ.) You do me p. ತಾವು ನನಗೆ ಬಹಳ ಗೌರವ ಮಾಡುತ್ತಿದ್ದೀರಿ. **Proúdly** (ಕ್ರಿ. ವಿ.)

Prove ಪ್ರೂವ್ [(ಕ್ರಿ.) (ಪ್ರಾಚೀ. ಪ್ರ., ಭೂ. ಕೃ. Proven)] (—ರ) ಸತ್ಯ, ಗುಣ, ಯೋಗ್ಯತೆ, —ಪರೀಕ್ಷಿಸು ; ಸಿದ್ಧಪಡಿಸು ; ಸಿದ್ಧಾಂತ ಮಾಡು. (ಫಿರಂಗಿ, ಮೊ. ನ್ನು) ಪರೀಕ್ಷೆಗೊಳಪಡಿಸು. (ಅಂಕಗಣಿತ) ಗಣಿಸಿದುದನ್ನು ಸರಿನೋಡು. (ಸ್ಥಿರ ಮುದ್ರಣ ಫಲಕದಿಂದ) ಕರಡಚ್ಚು ತೆಗೆ. (ಸಂಗತಿ, ಒಂದರ ಸತ್ಯತೆ, ಮೊ. ನ್ನು) ದೃಢಪಡಿಸು, ರುಜುವಾತು ಮಾಡು, ನಿದರ್ಶನಮಾಡಿಕೊಡು [(ಸ್ಕಾಟ್ಲೆಂಡ್ ನ್ಯಾ. ಶಾ.) (ತಕ್ಸೀರು ಮೊಕದ್ದಮೆಯ ತೀರ್ಪು ಹೇಳುವಲ್ಲಿ) Not proven ರುಜುವಾತಾಗಲಿಲ್ಲ]. (ಅಂತಿಮ ಇಚ್ಛಾಪತ್ರ) ಸತ್ಯವಾದುದೆಂದು, ಸಾಚಾ ಎಂದು,—ಸ್ಥಾಪಿಸು, ಸಮರ್ಥಿಸು. (—ಆಗಿ) ಕಂಡುಬರು, ಪರಿಣಮಿಸು (*To* be, *to* do) [Will p. (to be) the heir ಉತ್ತರಾಧಿಕಾರಿಯಾಗಿ ಪರಿಣಮಿಸುವನು. Will p. to know nothing about it]. **Próvable** (ಗು.) ; **Próvableness** (ನಾ.); **Próvably** (ಕ್ರಿ. ವಿ.)

Provéditor ಪ್ರೊವೆಡಿಟರ್, **Provedóre** ಪ್ರಾವಿಡೋರ್ (ನಾ.) ವೆನಿಸ್ ಪ್ರಜಾ ಪ್ರಭುತ್ವದಲ್ಲಿ ಒಬ್ಬ ಅಧಿಕಾರಿ. (ಆಹಾರ ಪದಾರ್ಥ, ಮೊ. ನ್ನು) ಒದಗಿಸುವವನು, ಸರಬರಾಯಿ ಮಾಡುವವನು.

Prόvenance ಪ್ರಾವೆನನ್ಸ್ (ನಾ.) ಮೂಲ, ಉಗಮ (—ಸ್ಥಾನ) (Vases of doubtful p.)

Provencál (F) ಪ್ರೊ(ಪ್ರ)ವಾನ್ಸಾರ್ (ಗು., ನಾ.) (ಫ್ರಾನ್ಸಿನ 'ಪ್ರಾವೆನ್ಸ್' ಪ್ರಾಂತದ (ನಿವಾಸಿ, ಭಾಷೆ)

Próvender ಪ್ರಾವೆ(ವಿ)ಂಡರ್ (ನಾ.) (ದನಕರುಗಳಿಗೆ) ಮೇವು (ಸಾ., ಒಣಹುಲ್ಲು, ಕಾಳು, ಮೊ. ದು). (ಹಾಸ್ಯ ಪ್ರ.) ಮನುಷ್ಯನ ಆಹಾರ.

Provénience ಪ್ರೊವೀನಿಯೆನ್ಸ್ (ನಾ.) =Provenance.

Próverb ಪ್ರಾವರ್ಬ್ (ನಾ.) ಸಾಮಾನ್ಯ ಬಳಕೆಯಲ್ಲಿರುವ ಸಣ್ಣ ಸಾರವತ್ತಾದ ನುಡಿ ; ನಾಣ್ಣುಡಿ ; ಗಾದೆ ; ಸಾಮತಿ (Ignorant to a p. ಅವನ ದಡ್ಡತನ —ಎಲ್ಲರಿಗೂ ತಿಳಿದದ್ದು, ಗಾದೆಯ ಮಾತು. He is a p. for inaccuracy). ಗಾದೆಯ ಆಧಾರದಮೇಲೆ ರಚಿಸಿದ, (ಸಾ., ಫ್ರಂಚರ) ನಾಟಕ. (ಬ. ವ. ದಲ್ಲಿ) ಹಲವು ಬಗೆಯ ಸರದಿಯ ಆಟಗಳು. Book of Proverbs ಹಳೆಯ ಒಡಂಬಡಿಕೆಯ, ಗಾದೆಗಳ ಪ್ರಕರಣ. **Provérbial** ಪ್ರೊವರ್ಬಿಯಲ್ (ಗು.) ಗಾದೆಯ (ರೂಪದ) ; ಗಾದೆಯ ರೂಪದಲ್ಲಿ ಹೇಳಿದ (P. wisdom ಲೋಕ ಪ್ರಸಿದ್ಧವಾದ, ಹೆಸರುವಾಸಿಯಾದ, ಮನೆ ಮಾತಾದ, —ವಿವೇಕ). ಗಾದೆಯಾಗಿರುವ ; ನಾಣ್ಣುಡಿಯಾಗಿರುವ ; ದುಷ್ಪ್ರತೀತಿ ಪಡೆದಿರುವ. **Provérbially** (ಕ್ರಿ. ವಿ.) ; **Proverbiálity** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Próviant ಪ್ರಾವಿಯಂಟ್ (ನಾ.) (ಮು., ಸೈನ್ಯಕ್ಕೆ) ಆಹಾರ ಸರಬರಾಯಿ.

Províde ಪ್ರೊವೈಡ್ (ಕ್ರಿ.) (ಒಬ್ಬನ ರಕ್ಷಣೆ, ಆದರಾತಿಥ್ಯ, ಮೊ. ಗಳಿಗೆ) ಏರ್ಪಾಡು, ಸಿದ್ಧತೆ, —ಮಾಡು (*For* ಉಪ. ದೊಡನೆ); (ಆಕ್ರಮಣ, ಮೊ. ನ್ನು ಎದುರಿಸಲು) ತಕ್ಕ ಸನ್ನಾಹ ಮಾಡು (*Against* ಉಪ. ದೊಡನೆ), ಮುನ್ನೆಚ್ಚರಿಕೆ ತೆಗೆದುಕೊ (*For* ಉಪ. ದೊಡನೆ). (ವ್ಯಕ್ತಿ, ಕಾನೂನು, ಮೊ. ವಿಷಯದಲ್ಲಿ) ವಿಧಿಸು, ನಿಬಂಧಿಸು. ಒದಗಿಸು; ಹವಣಿಸು; ಸರಬರಾಯಿ ಮಾಡು (Person *with* thing, thing *for* or *to* person) (You must p. yourselves ನಿಮಗೆ ಬೇಕಾದುದನ್ನು ನೀವೇ ಒದಗಿಸಿಕೊಳ್ಳಬೇಕು). (ತನ್ನ, ತನ್ನ ಸಂಸಾರದ) ಜೀವನಕ್ಕೆ ಹವಣಿಸು; ಜೀವನೋಪಾಯ—ಕಲ್ಪಿಸಿಕೊ, ಕಲ್ಪಿಸು. (ಚರಿತ್ರೆ) [ಒಬ್ಬನನ್ನು (ಕ್ರೈಸ್ತ)] ದತ್ತಿ ಭೋಗಕ್ಕೆ ನೇಮಿಸು, (ಪೋಪ್ ಗುರುವಿನ ವಿಷಯದಲ್ಲಿ: ಇನ್ನೂ ಬಿಡುವಾಗಿಲ್ಲದ ದತ್ತಿಗೆ) ಉತ್ತರಾಧಿಕಾರಿಯನ್ನು ನೇಮಿಸು. **Províded** (ಗು., ಸಂ. ಅವ್ಯ.) (ಕ್ರಿಯಾರ್ಥಗಳಲ್ಲಿ). (P. school ಸ್ಥಳೀಯ ಆಡಳಿತದವರು ಒದಗಿಸಿರುವ ಸಾರ್ವಜನಿಕ ಪ್ರಾಥಮಿಕ ಪಾಠಶಾಲೆ). (ಸಂ. ಅವ್ಯ.) —ಸಂದರ್ಭದಲ್ಲಿ; —ಪಕ್ಷದಲ್ಲಿ; —ರೆ [P. (that) all is safe ಎಲ್ಲವೂ ನೆಮ್ಮದಿಯಾಗಿರುವ ಪಕ್ಷಕ್ಕೆ]. **Províder** (ನಾ.) (ಕ್ರಿಯಾರ್ಥಗಳಲ್ಲಿ). Lion's p. ನರಿ. (ರೂಪ.) (ತನ್ನ ಮೇಲ್ಪಟ್ಟವನಿಗೆ) ಕಚ್ಚಾ ಚಾಕರಿ ಮಾಡುವವನು. Universal p. ಎಲ್ಲಾ ಸರಕುಗಳ ವ್ಯಾಪಾರಿ.

Próvidence ಪ್ರಾವಿಡೆನ್ಸ್ (ನಾ.) ದೂರದೃಷ್ಟಿ; ಮುನ್ನೋಟ; ಮುನ್ನೆಚ್ಚರಿಕೆ; ಮುಂಜಾಗ್ರತೆ. ಮಿತವ್ಯಯ. ದೇವರ ಅಥವಾ ಪ್ರಕೃತಿಯ ನಿಯಾಮಕ; ದೈವಾನುಗ್ರಹ. (Special p. ದೇವರ ವಿಶೇಷ ಕ್ರಿಯೆ, ವಿಶೇಷಾನುಗ್ರಹ). (P.-) =ದೇವರು; ದೈವ. **Próvident** (ಗು.) ಮುಂಜಾಗರೂಕತೆ —ಉಳ್ಳ, ತೋರುವ. ಮಿತವ್ಯಯದ. **Próvidently** (ಕ್ರಿ. ವಿ.); **Providéntial** —ಡೆನ್ಷಲ್ (ಗು.) ದೈವಾಯತ್ತ; ದೈವಿಕ; ಅದೃಷ್ಟದ. **Providéntially** (ಕ್ರಿ. ವಿ.)

Próvince ಪ್ರಾವಿನ್ಸ್ (ನಾ.) (ರೋಮನ್ ಚರಿತ್ರೆ) ರೋಮನ್ ಗವರ್ನರಿನ ಕೈಕೆಳಗಿನ, ಇಟಲಿಯ ಹೊರಗಿನ, ಪ್ರಾಂತ, ಮಂಡಲ. ರಾಜ್ಯದ ಪ್ರಧಾನ ಭಾಗ(ಗಳಲ್ಲೊಂದು); ಪ್ರಾಂತ. (ಕ್ರೈಸ್ತ) ಆರ್ಚ್‌ಬಿಷಪ್ಪಿನ ಅಧಿಕಾರ ಪ್ರಾಂತ. (The provinces ರಾಜಧಾನಿಯನ್ನು ಬಿಟ್ಟು ಉಳಿದ ಸಮಗ್ರ ದೇಶ). ಕಾರ್ಯಕ್ಷೇತ್ರ; ವ್ಯವಹಾರ ಕ್ಷೇತ್ರ; ಕರ್ತವ್ಯ [(Is not within) my p.]. (ವಿದ್ಯೆ, ಮೊ. ಗಳ) ಶಾಖೆ, ಕ್ಷೇತ್ರ (In the p. of polite letters). **Províncial** ಪ್ರೊವಿನ್ಷ(ನ್ಷ್ಯ)ಲ್ (ಗು., ನಾ.) ಪ್ರಾಂತದ; ಪ್ರಾಂತಗಳ; ಪ್ರಾಂತೀಯ ನಡೆನುಡಿಗಳು, ಸಂಕುಚಿತ ಭಾವನೆಗಳು—ಇವೇ ಮೊ. ಗಳನ್ನು ಉಳ್ಳ; ಪ್ರಾಂತ ಭಾವನೆಯ [**Provinciálity** —ಷಿಯಾಲಿಟಿ (ನಾ.); ಪ್ರಾಂತ ಭಾವನೆ(ಯಿರುವುದು)]. (ನಾ.) ಪ್ರಾಂತದವನು, ಪ್ರಾಂತವಾಸಿ (=**Províncialist**); ಅನಾಗರಿಕ; ಹಳ್ಳಿಗಾಡಿನ ರೀತಿಯವನು. (ಕ್ರೈಸ್ತ) ಪ್ರಾಂತದ ಮುಖ್ಯ ಮಠಾಧಿಕಾರಿ. **Províncially** —ಷಲಿ (ಕ್ರಿ. ವಿ.); **Províncialize** (ಕ್ರಿ. ಸಕ.); **Províncialism** (ನಾ.) ಪ್ರಾಂತದ ನಡೆನುಡಿ, ಲಕ್ಷಣ, ಭಾವನೆ, ಮನೋಭಿಪ್ರಾಯ, ಮೊ. ದು; ಪ್ರಾಂತ ದೃಷ್ಟಿ; ಏಕದೇಶೀಯ ದೃಷ್ಟಿ. ಪ್ರಾಂತ ವೈಶಿಷ್ಟ್ಯದ ಪದ, ಉಕ್ತಿ; ಪ್ರಾಂತ ಪ್ರಯೋಗ. ಸಮಗ್ರ ದೇಶಕ್ಕಿಂತ ತನ್ನ ಪ್ರಾಂತದಲ್ಲೇ ಹೆಚ್ಚು ಅಭಿಮಾನ; (ಕೇವಲ) ಪ್ರಾಂತಾಭಿಮಾನ.

Provísion ಪ್ರೊವಿಷ(ಷ್)ನ್ (ನಾ., ಕ್ರಿ. ಸಕ.) ಮುನ್ನೇರ್ಪಾಡು; ಪೂರ್ವಸಿದ್ಧತೆ; ಅವಕಾಶ; ತಜವೀಜು (*For, against* ಉಪ. ದೊಡನೆ) (Make p.). (ಒಂದರ) ಒದಗಿಸಿಟ್ಟ ಮೊತ್ತ. (ಬ. ವ. ದಲ್ಲಿ) ಆಹಾರದ, ತಿಂಡಿ ತೀರ್ಥಗಳ, —ಸರಬರಾಯಿ [**Provísionless** (ಗು.)] ಯಾವುದಕ್ಕಾದರೂ ಅವಕಾಶ ಒದಗಿಸಿರುವ ನ್ಯಾಯ ನಿಯಮ; ಕಟ್ಟುಪಾಡು; ಷರತ್ತು. (ಚರಿತ್ರೆ) (ಇನ್ನೂ ಬಿಡುವಾಗಿಲ್ಲದ ದತ್ತಿಭೋಗಕ್ಕೆ) ಮುನ್ನೇಮಕ. [(ಚರಿತ್ರೆ) Provisions of Oxford ಇಂಗ್ಲೆಂಡಿನ ದೊರೆಯ ದುರಾಡಳಿತವನ್ನು ತಡೆಗಟ್ಟುವುದಕ್ಕಾಗಿ ೧೨೫೮ರಲ್ಲಿ Simon de Montfort ಎಂಬಾತನ ನಾಯಕತ್ವದಲ್ಲಿ ಶ್ರೀಮಂತರು ಸೇರಿ ಮಾಡಿದ ನಿಬಂಧನೆಗಳು]. (ಕ್ರಿ.) ಆಹಾರ ಸಾಮಗ್ರಿ ಒದಗಿಸು, ಸರಬರಾಯಿ ಮಾಡು. **Provísionment** (ನಾ.); **Provísional** (ಗು.) ತಾತ್ಕಾಲಿಕವಾದ; ಹಂಗಾಮಿಯಾದ. **Provísionally** (ಕ್ರಿ. ವಿ.); **Provísionalness** (ನಾ.); **Provisionálity** (ನಾ.); **Províso** ಪ್ರೊವೈಸೊ(ೕ) (ನಾ., ಬ. ವ. -es) ಕಟ್ಟುಪಾಡು; ಷರತ್ತು; ದಸ್ತೈವಜಿನಲ್ಲಿಯ ವಿಧಿಯನ್ನು ಅಥವಾ ಮಿತಿಯನ್ನು ನಿರ್ದೇಶಿಸುವ ವಾಕ್ಯ. **Provísor** —ಸ಼ರ್ (ಚರಿತ್ರೆ) ದತ್ತಿ ಭೋಗಕ್ಕೆ ಮುನ್ನೇಮಕನಾದವನು (Statute of Provisors ಪೋಪ್ ಗುರು ದತ್ತಿ ಭೋಗಕ್ಕೆ ಮುನ್ನೇಮಕ ಮಾಡದಂತೆ ತಡೆಯುವ ನಿಬಂಧನೆ). (ರೋ. ಕ್ಯಾ. ಮತ) ಬಿಷಪ್ಪಿನ ಸಹಾಯಕ ಅಧಿಕಾರಿ. **Provísory** —ಸ಼ರಿ (ಗು.) ಷರತ್ತಿಗೊಳಪಟ್ಟ; ಷರತ್ತನ್ನೊಳಕೊಂಡ; ತಾತ್ಕಾಲಿಕ ಏರ್ಪಾಟಿನ (P. care). **Provísorily** (ಕ್ರಿ. ವಿ.)

Províso, etc. **Provision** ನೋಡಿ.

Provocátion, Provócative. **Provoke** ನೋಡಿ.

Provóke ಪ್ರೊವೋಕ್ (ಕ್ರಿ. ಸಕ.) ಕೆರಳಿಸು; ರೇಗಿಸು; ಉದ್ರೇಕಿಸು; ಚೋದಿಸು; ಚಿತಾಯಿಸು; (ಕೋಪ, ವಿಚಾರಣೆ, ಬಿರುಗಾಳಿ, ಮೊ. ನ್ನು) ಬರಿಸು, ಎಬ್ಬಿಸು; ಆಗಿಸು; ಉಂಟುಮಾಡು (Will p. fermentation). **Provóking** (ಗು.); **Provókingly** (ಕ್ರಿ. ವಿ.); **Provocátion** ಪ್ರಾವೊಕೇಷನ್ (ನಾ.) (ಕ್ರಿಯಾರ್ಥಗಳಲ್ಲಿ); (Did it under severe p. ತೀವ್ರವಾಗಿ ಉದ್ರೇಕಗೊಳಿಸಿದ್ದರಿಂದ ಆ ಕೆಲಸ ಮಾಡಿದೆನು). **Provócative** ಪ್ರೊವಾಕಟಿವ್ (ಗು., ನಾ.) (ಕುತೂಹಲ, ಮೊ. ನ್ನು) ಚೋದಿಸುವ, ಉದ್ರೇಕಿಸುವ (ವಸ್ತು); ಉದ್ರೇಕಕಾರಿ; ಉದ್ದೀಪಕ; ಉದ್ದೇಶಪೂರ್ವಕವಾಗಿ ಕೆರಳಿಸುವ.

Próvost ಪ್ರಾವಸ್ಟ್ (ಸೈನ್ಯಾರ್ಥಗಳಲ್ಲಿ: **Provóst** ಪ್ರೊವೋ) (ನಾ.) (ಆಕ್ಸ್‌ಫರ್ಡ್, ಕೇಂಬ್ರಿಡ್ಜ್, ಮೊ. ಸ್ಥಳಗಳಲ್ಲಿ) ಪ್ರೌಢ ವಿದ್ಯಾಶಾಲೆಯ ಅಧ್ಯಕ್ಷ. (ಚರಿತ್ರೆ) ಕ್ರೈಸ್ತ ಸಭೆಯ, ಮಂಡಲಿಯ, —ಅಧ್ಯಕ್ಷ; (ಸ್ಕಾಟ್ಲೆಂಡಿನಲ್ಲಿ) ಪೌರಸಭಾಧ್ಯಕ್ಷ (ಕೆಲವು ಪಟ್ಟಣಗಳಲ್ಲಿ Lord P.). (ಜರ್ಮನಿ, ಮೊ. ದೇಶಗಳಲ್ಲಿ) ಪಟ್ಟಣ, ಮೊ. ಗಳ ಪ್ರಧಾನ ಕ್ರೈಸ್ತ ಮಠದ ಅಧ್ಯಕ್ಷನಾದ ಪ್ರಾಟೆಸ್ಟಂಟ್ ಪಾದ್ರಿ. P.(-)marshal (ಪ್ರೊವೊ—) ಯುದ್ಧ ಪಾಳೆಯದ ಅಥವಾ ಸಾಕ್ಷಾತ್ ಯುದ್ಧೋದ್ಯೋಗದಲ್ಲಿರುವ ಸೈನಿಕ ಪೊಲೀಸಿನ ಮುಖ್ಯಸ್ಥ; ಸೇನಾ ನ್ಯಾಯಸ್ಥಾನ ನಡಸಬೇಕಾಗಿರುವ (ಯುದ್ಧದ)ಹಡಗಿನ ಪೊಲೀಸ್ ಅಧಿಕಾರಿ. (ಕೆಲವು ನೆಲಸುನಾಡುಗಳಲ್ಲಿ) ಮುಖ್ಯ ಪೊಲೀಸ್ ಅಧಿಕಾರಿ. (ಚರಿತ್ರೆ) (ಫ್ರಾನ್ಸಿನಲ್ಲಿ) ಅರೆ ಸೈನಿಕ ಪೊಲೀಸ್ ಅಧಿಕಾರಿ. P.-sergeant ಸೈನಿಕ ಪೊಲೀಸಿನ 'ಸಾರ್ಜಂಟ್' ಎಂಬ ಅಧಿಕಾರಿ. **Próvostship** (ನಾ.)

Prow[1] ಪ್ರೌ (ನಾ.) ದೋಣಿಯ ಅಥವಾ ಹಡಗಿನ ಮೂತಿ. (ಪ್ರಾ. ವಿ.) ಹಡಗಿನ ಮುಂಭಾಗದಂಥ ಮುನ್‌ಚಾಚು (=**Prora**)

Prow[2] ಪ್ರೌ (ಗು.) (ಪ್ರಾಚೀ. ಪ್ರ.) ಗಣ್ಯ; ಯೋಗ್ಯ; ಧೀರ; ವೀರ. ಅದ್ಭುತ ಪರಾಕ್ರಮದ.

Prówess ಪ್ರೌಎಸ್ (ನಾ.) ಶೌರ್ಯ; ವೀರ್ಯ; ಪರಾಕ್ರಮ; ಅದಟು, ಆರ್ಪು (ಗ್ರಾಂ.); ಕಲಿತನ.

Prowl ಪ್ರೌಲ್ (ಕ್ರಿ., ನಾ.) ಲೂಟಿ, ಕೊಳ್ಳೆ, ಬೇಟೆ, —ಹುಡುಕುತ್ತ ಸುಳಿದಾಡು, ಹೊಂಚುಹಾಕು (ರೂಪ. ಸಹ); ಹೀಗೆ (ಬೀದಿಗಳಲ್ಲಿ, ಊರಿನಲ್ಲಿ) ತಿರುಗಾಡು, ಸುಳಿದಾಡು, ಅಡ್ಡಾಡು. (ನಾ.) —ವುದು (ಮು., On the p. ಸುಳಿದಾಡುತ್ತ). **Prowler** (ನಾ.)

Próximal ಪ್ರಾಕ್ಸಿಮಲ್ (ಗು.) (ಅಂ. ರ. ಶಾ.) ದೇಹದ ಮಧ್ಯ ಭಾಗದ ಕಡೆಗೆ ನೆಲಸಿರುವ; ಅಂಗ, ಎಲುಬು, ಮೊ. ರ ಮೂಲದ ಅಥವಾ ಸೇರಿಕೆಯ ಕಡೆಗಿರುವ (Distal ಹೋಲಿಸಿ). **Próximally** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Próximate ಪ್ರಾಕ್ಸಿಮೆಟ್ (ಗು.) (ಸ್ಥಳ, ಕ್ರಮ, ಕಾಲ, ವಿಚಾರ ಸರಣಿ, ಮೊ. ರಲ್ಲಿ) ಅತ್ಯಂತ ಹತ್ತಿರದ,—ಸಮೀಪದ ; ಹಿಂದೆ ಅಥವಾ ಮುಂದೆ ಕೇವಲ ಹತ್ತಿರದಲ್ಲಿರುವ ; ಸರಿಸುಮಾರಾದ ; ಹತ್ತಿರ ಹತ್ತಿರದ. **Próximately** (ಕ್ರಿ. ವಿ.) ; **Proxímity** (ನಾ.) (ಕಾಲ, ಸ್ಥಳ, ಮೊ. ಲ್ಲ) ಸಾಮೀಪ್ಯ, ಆಸನ್ನತೆ (*To* ಉಪ. ಜೊಡನೆ). P. of blood ರಕ್ತ ಸಂಬಂಧ.

Próximo (L) ಪ್ರಾಕ್ಸಿಮೊ (ಗು.; ಸಂಕ್ಷಿಪ್ತ : Prox.) ಮುಂದಿನ ತಿಂಗಳ (The 3rd p. ಮುಂದಿನ ತಿಂಗಳ ಮೂರನೆಯ ತಾರೀಖು)

Próxy ಪ್ರಾಕ್ಸಿ (ನಾ.) ಬದಲಿ ; ಪ್ರಾತಿನಿಧ್ಯ (Married, voted, by p.) ; ಮತ್ತೊಬ್ಬನಿಗಾಗಿ ಕಾರ್ಯಭಾರ ನಡಸಲು ಅಧಿಕಾರ ಪಡೆದವನು ; ಪ್ರತಿನಿಧಿ (Made me his p.) ; ಮತ್ತೊಬ್ಬನ ಪರವಾಗಿ ಅಭಿಮತ ಕೊಡುವುದಕ್ಕೆ ಕೊಟ್ಟ ಲಿಖಿತ ರೂಪದ ಅಧಿಕಾರ : ಪ್ರತಿನಿಧಿ ಪತ್ರ ; ಹೀಗೆ ಕೊಟ್ಟ ಅಭಿಮತ ; (ವಿಶೇಷಣವಾಗಿ) ಪ್ರತಿನಿಧಿ (ಪತ್ರದ) ಮೂಲಕ ನಡಸಿದ, ಮಾಡಿದ, ಕೊಟ್ಟ.

Prude ಪ್ರೂಡ್ (ನಾ.) (ಅಶ್ಲೀಲ ವಿಷಯಗಳಲ್ಲಿ) ನಡತೆಯಲ್ಲಾಗಲಿ ಮಾತಿನಲ್ಲಾಗಲಿ ಅತಿ ಶಿಷ್ಟತನವುಳ್ಳವಳು; ಸಭ್ಯತಾ ನಟನಗಾತಿ. **Prúdery** (ನಾ.) ; **Prúdish** (ಗು.) ; **Prúdishly** (ಕ್ರಿ. ವಿ.) ; **Prúdishness** (ನಾ.)

Prúdent ಪ್ರೂಡೆಂಟ್ (ಗು.) (ವ್ಯಕ್ತಿ ಅಥವಾ ನಡತೆ) ವಿವೇಕಯುತ(ವಾದ) ಯುಕ್ತಾಯುಕ್ತ ಪರಿಜ್ಞಾನವುಳ್ಳ ; ಲೋಕವ್ಯವಹಾರ ಕುಶಲತೆಯುಳ್ಳ ; ದೂರದೃಷ್ಟಿಯುಳ್ಳ. **Prúdently** (ಕ್ರಿ. ವಿ.) ; **Prúdence** (ನಾ.) ; **Prudéntial** ಪ್ರುಡೆನ್ಷಲ್ (ಗು., ನಾ.) ವಿವೇಕದ ; ವಿವೇಕದಿಂದ ಕೂಡಿದ (P. motives, policy). (ನಾ., ಬ. ವ. ದಲ್ಲಿ) ವಿವೇಕದಿಂದ ಅಥವಾ ವಿವೇಕ ದೃಷ್ಟಿಯಿಂದ ಆಲೋಚಿಸಬೇಕಾದ ವಿಚಾರಗಳು. **Prudéntially** (ಕ್ರಿ. ವಿ.); **Prudéntialism** (ನಾ.) ಕೇವಲ ವಿವೇಕ ದೃಷ್ಟಿಯನ್ನವಲಂಬಿಸಿದ ಜೀವನ ತತ್ತ್ವ ಅಥವಾ ಪದ್ಧತಿ. **Prudéntialist** (ನಾ.)

Prud'homme (F) ಪ್ರುಡಾ(ಡ)ಮ್ (ನಾ.) ಕೆಲಸಗಾರರ, ಕರ್ಮಕಾರರ, ಶ್ರಮಜೀವಿಗಳ, —ಸಂಬಂಧವಾದ ವ್ಯಾಜ್ಯಗಳ ತೀರ್ಮಾನಕ್ಕಾಗಿ ನೇಮಕವಾದ ಫ್ರೆಂಚ್ ನ್ಯಾಯ ಮಂಡಲಿಯ ಸದಸ್ಯ.

Prune[1] ಪ್ರೂನ್ (ನಾ.) ಒಣಗಿಸಿದ 'ಪ್ಲಂ' ಹಣ್ಣು ; ಈ ಹಣ್ಣಿನ ರಸದ ಬಣ್ಣ : ಗಾಢ ರಕ್ತಚ್ಛಾಯೆಯ ಊದಾ ಬಣ್ಣ (ಮು., ವಿಶೇಷಣವಾಗಿ). Prunes & prism ಮಾತಿನಲ್ಲಿ ಬಿನ್ನಾಣದ ರೀತಿ.

Prune[2] ಪ್ರೂನ್ (ಕ್ರಿ. ಸಕ.) (ಹೆಚ್ಚು ರೆಂಬೆ, ಮೊ. ನ್ನು ಕತ್ತರಿಸಿಹಾಕುವುದರಿಂದ ಮರ, ಮೊ. ನ್ನು) ಸವರು (ಹಲವು ವೇಳೆ *down* ಉಪ. ಜೊಡನೆ) ; (ಕೊಂಬೆ, ಮೊ. ನ್ನು) ಕತ್ತರಿಸಿಹಾಕು (*Off, away* ಉಪ. ಜೊಡನೆ) (Pruning-hook ಸವರುವ ಕುಡುಗೋಲು) ; (ರೂಪ.) ಹೆಚ್ಚಿಗೆಯ ಭಾಗಗಳನ್ನು ತೆಗೆದುಹಾಕು ; (ಹೆಚ್ಚಿಗೆಯ ಭಾಗಗಳನ್ನು ತೆಗೆದುಹಾಕಿ ಪುಸ್ತಕ, ಮೊ. ನ್ನು) ಪರಿಷ್ಕರಿಸು.

Prune[3] ಪ್ರೂನ್ (ಕ್ರಿ. ಸಕ.) (ಈಗ ವಿರ. ಪ್ರ.) =Preen.

Prunélla[1] ಪ್ರೂ(ಪ್ರು)ನೆಲ (ನಾ.) ಹಿಂದೆ, ನ್ಯಾಯವಾದಿಗಳ ಮೇಲ್ವಸನು, ಮೊ. ಕ್ಕು ಈಚೆಗೆ, ಹೆಂಗಸರ ಪಾದರಕ್ಷೆಯ ಮೇಲ್ಭಾಗಕ್ಕೂ ಉಪಯೋಗಿಸುತ್ತಿದ್ದ, ರೇಷ್ಮೆಯ ಅಥವಾ ಉಣ್ಣೆಯ ಗಟ್ಟಿ ಬಟ್ಟೆ. Leather & p. (Leather ನೋಡಿ)

Prunélla[2] ಪ್ರೂ(ಪ್ರು)ನೆಲ (ನಾ.) ಹಲವು ಬಗೆಯ—ಜ್ವರ, ಗಂಟಲಬೇನೆ; [P. salt ಈ ರೋಗಕ್ಕೆ ಔಷಧವಾಗಿ ಉಪಯೋಗಿಸುವ, ದ್ರವೀಭವಿಸುವಂತೆ ಶಾಖಕೊಟ್ಟು ತಯಾರಿಸಿದ ಪೆಟ್ಲುಪ್ಪಿನ (ಸೋರುಪ್ಪು) ಸಂಯೋಜಿತ ಪದಾರ್ಥ]. ಈ ರೋಗಕ್ಕೆ ಔಷಧವಾಗಿ ಉಪಯೋಗಿಸುತ್ತಿದ್ದ ಒಂದು ಸಸ್ಯಜಾತಿ.

Prunéllo ಪ್ರೂ(ಪ್ರು)ನೆಲೋ(ಲ) (ನಾ.) ಅತ್ಯುತ್ತಮ ಜಾತಿಯ ಒಣಗಿಸಿದ 'ಪ್ಲಂ' ಹಣ್ಣು.

Prunt ಪ್ರಂಟ್ (ನಾ.) (ಗಾಜಿನ) ಅಲಂಕಾರ ಕಲಶ, ಮೊ. ಗಳಮೇಲೆ ಹದ್ದಿಸಿದ ಗಾಜಿನ ಅಲಂಕಾರ ; ಇದನ್ನು ಹದ್ದಿಸುವ ಸಲಕರಣೆ.

Prúrient ಪ್ರೂರಿಯೆಂಟ್ (ಗು.) ಅಶ್ಲೀಲ ಭಾವನೆಗಳಲ್ಲಿ ಆಸಕ್ತನಾದ. (ವಿರ. ಪ್ರ.) ವಿಕಾರವಾದ ಬಯಕೆಯುಳ್ಳ ; ವಿಕೃತ ಕುತೂಹಲವುಳ್ಳ. **Prúriently** (ಕ್ರಿ. ವಿ.) ; **Prúrience** (ನಾ.) ; **Prúriency** (ನಾ.)

Prurígo ಪ್ರೂರೈಗೊ, **Prurítus** —ರೈಟಸ್ (ನಾ.) ವಿಪರೀತ ನವೆಯಿಂದ ಕೂಡಿದ ಒಂದು ಚರ್ಮ ರೋಗ; ತೀವ್ರವಾದ ಕಜ್ಜಿ (-tus). **Prurı́ginous** —ಜಿನಸ್ (ಗು.)

Prússian ಪ್ರಷನ್ (ಗು., ನಾ.) ಪ್ರಷ್ಯ ದೇಶದ(ವನು). P. blue ಒಂದು ಗಾಢ ನೀಲ ವರ್ಣದ್ರವ್ಯ ; (ಇದರಿಂದ ತಯಾರಿಸಿದ ಅಥವಾ ಇದಕ್ಕೆ ಸಂಬಂಧಿಸಿದ) P. brown, -green. **Prússianize** (ಕ್ರಿ. ಸಕ.) ಮು., ರಾಜ್ಯ ಹಿತಕ್ಕಾಗಿ ವ್ಯಕ್ತಿ ಹಿತವನ್ನು ಬಲಿಕೊಡುವ ಪ್ರಷ್ಯನ್ ಪದ್ಧತಿಗೆ ಹೊಂದಿಸು, ಸಮೀಕರಿಸು. **Prússic** ಪ್ರಸಿಕ್ (ಗು.) ಪ್ರಷ್ಯನ್ ನೀಲಿಯ ; —ಯಿಂದ ಪಡೆದ. P.-acid = Hydrocyanic acid (Hydro- ನೋಡಿ)

Pry ಪ್ರೈ (ಕ್ರಿ. ಅಕ.) (ಗುಟ್ಟು ತಿಳಿಯುವ ಕುತೂಹಲದಿಂದ) ಇಣಿಕಿ ನೋಡು, ಹೊಂಚಿ ನೋಡು (ಹಲವು ವೇಳೆ *Into, about* ಪದದೊಡನೆ); ಅಧಿಕ ಪ್ರಸಂಗಿತನದಿಂದ (ಒಬ್ಬನ ವ್ಯವಹಾರ, ನಡೆವಳಿ, ಮೊ. ರಲ್ಲಿ) ತಲೆಹಾಕು, ವಿಚಾರಿಸಿಕೊಂಡುಹೋಗು (*Into* ಉಪ. ಜೊಡನೆ). **Prýing** (ಗು.) ; **Prýingly** (ಕ್ರಿ. ವಿ.)

Psalm ಸಾಮ್ (ನಾ.) ಪವಿತ್ರ ಗೀತ ; ಸ್ತೋತ್ರ ಗೀತ ; (ದೇವರ) ಸ್ತೋತ್ರಪಾಠ. The (Book of) Psalms = The Psalms of David ಹಳೆಯ ಒಡಂಬಡಿಕೆಯಲ್ಲಿಯ ಸ್ತೋತ್ರ ಗೀತ ಪ್ರಕರಣ. P.-book ಸ್ತೋತ್ರಪಾಠ ಪುಸ್ತಕ ; ಸಾರ್ವಜನಿಕ ಆರಾಧನೆಯಲ್ಲಿ ಉಪಯೋಗಿಸುವ ಸ್ತೋತ್ರ ಗೀತಗಳು. **Psálmist** (ನಾ.) ಸ್ತೋತ್ರ ಗೀತೆಯ ಕರ್ತೃ, ಕೀರ್ತನಕಾರ; (ಸ್ತೋತ್ರ ಸಂಗ್ರಹದ ಹೆಸರಾಗಿ ಸಹ). The p. ಡೇವಿಡ್, ಅಥವಾ ಬೈಬಲ್ಲಿನ ಯಾವುದಾದರೂ ಗೀತಗಳ ಕರ್ತೃ. **Psálmody** ಸಾಮೊಡಿ, ಸ್ಯಾಲ್ಮೊಡಿ (ನಾ.) (ಮು., ಸಾರ್ವಜನಿಕ ಆರಾಧನೆಯಲ್ಲಿ) ಸ್ತೋತ್ರ ಗೀತೆಗಳನ್ನು ಅಥವಾ ಸಂಕೀರ್ತನಗಳನ್ನು ಹಾಡುವ ಪದ್ಧತಿ, ಕಲೆ : ಸಂಕೀರ್ತನ ಪದ್ಧತಿ, —ಕಲೆ ; ಹಾಡುವುದಕ್ಕೆ ಈ ಸಂಕೀರ್ತನೆಗಳನ್ನು ಅನುಗೊಳಿಸುವುದು ; ಹೀಗೆ ಅನುಗೊಳಿಸಿದ ಸಂಕೀರ್ತನೆಗಳು. **Psálmodist** (ನಾ.) ; **Psálmodize** (ಕ್ರಿ. ಅಕ.) ; **Psalmódic** ಸ್ಯಾಲ್‌ಮಾಡಿಕ್ (ಗು.) ; **Psálter** ಸಾಲ್ಟರ್ (ನಾ.) (ಬೈಬಲ್ಲಿನಲ್ಲಿಯ) ಸ್ತೋತ್ರ ಗೀತೆಗಳ ಪ್ರಕರಣ, —ಪುಸ್ತಕ ; ಇದರ ಭಾಷಾಂತರ, ಅನುವಾದ (Latin, English, Prayer-book, Scotch Metrical, p.) ; (ಮು., ಸಾರ್ವಜನಿಕ ಆರಾಧನೆಗಳಲ್ಲಿ ಉಪಯೋಗಿಸುವ) ಸ್ತೋತ್ರ ಗೀತ ಸಂಗ್ರಹ.

Psálmist, Psálmody, Psálter. Psalm ನೋಡಿ.

Psáltery ಸಾಲ್ಟರಿ (ನಾ.) (ತಂತಿಗಳನ್ನು ಬೆರಳಿನಿಂದ ಮೀಟಿ ನುಡಿಸುವ ಪ್ರಾಚೀನ ಕಾಲದ ಮತ್ತು ಮಧ್ಯ ಯುಗದ) ಒಂದು ಬಗೆಯ ತಂತ್ರೀ ವಾದ್ಯ.

Pseudo- ಸ್ಯೂಡೊ—, ಪ್ಸ್ಯೂಡೊ— (ಸ. ಪೂ. ಪ.) ಮಿಥ್ಯ—, ಸುಳ್ಳು—, ಕಳ್ಳ—, ಕಪಟ—, ತೋರ್ಕೆಯ—, ಆಭಾಸ—. (ಕೆಲವು ವೇಳೆ ಗುಣವಾಚಕವಾಗಿ, ಮಧ್ಯೆ ಗೀಟಿಲ್ಲದೆ ಪ್ರ. : The pseudo penitent). **-archáic** (ಶೈಲಿ, ಮೊ. ಗಳಲ್ಲಿ) ಕೃತಕ ಪ್ರಾಚೀನ ; ಪ್ರಾಚೀನಾಭಾಸದ. **-árchaism, -árchaist** (ನಾ.) ; **-carp** (ಸ. ವಿ.) ಅಂಡಾಶಯೇತರ ಭಾಗಗಳಿಂದ ಹುಟ್ಟಿದ ಹಣ್ಣು. **-cátholic; -Christ ; -Chrístian ; -clássic** ಉತ್ಕೃಷ್ಟ ಪ್ರಾಚೀನ ಶೈಲಿಯ ತೋರ್ಕೆಯುಳ್ಳ; ಪ್ರಾಚೀನ ಶೈಲಿಯದೆಂದು ತಪ್ಪು ತಿಳಿದುಕೊಂಡಿರುವ. **-Góthic** ಆಭಾಸ ಗಾತಿಕ್ ರೀತಿಯ. **-mártyr ; -próphet.**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pseúdograph ಸ್ಯೂ(ಪ್ಸ್ಯೂ)ಡೊಗ್ರಾಫ್ (ನಾ.) ಖೋಟಾ ಸಾಹಿತ್ಯ ಕೃತಿ. ಮತ್ತೊಬ್ಬರಿಗೆ ಆರೋಪಿಸಿದ ಗ್ರಂಥ.

Pseudóloger ಸ್ಯೂ(ಪ್ಸ್ಯೂ)ಡಾಲೊಜರ್ (ನಾ.) (ಹಾಸ್ಯ ಪ್ರ.) ಯಾವಾಗಲೂ ಸುಳ್ಳು ಹೇಳುತ್ತಿರುವವನು ; ಶುದ್ಧ ಸುಳ್ಳ. **Pseudológical** (ಗು.) ; **Pseudólogist** (ನಾ.)

Pseúdomorph ಸ್ಯೂ(ಪ್ಸ್ಯೂ)ಡೊಮಾರ್ಫ್ (ನಾ.) ಮಿಥ್ಯಾ ರೂಪ ; ಸುಳ್ಳು ರೂಪ ; ಕೃತ್ರಿಮ ರೂಪ (ಮು., ಖನಿಜ ಶಾಸ್ತ್ರ : ಮತ್ತೊಂದು ಖನಿಜಕ್ಕೆ ಸಹಜವಾದ ಸ್ಫಟಿಕ ರೂಪವೆತ್ತ ಒಂದು ಖನಿಜ ಸ್ಫಟಿಕ, ವೊ. ದು). **Pseudomórphic** (ಗು.) ; **Pseudomórphous** (ಗು.) ; **Pseudomórphism** (ನಾ.) ; **Pseudomorphósis** (ನಾ.)

Pseúdonym ಸ್ಯೂ(ಪ್ಸ್ಯೂ)ಡೊನಿಮ್ (ನಾ.) ಕೃತಕ ನಾಮ ; ಕಟ್ಟು ಹೆಸರು ; (ಮು., ಗ್ರಂಥಕರ್ತನು ತಾಳಿದ) ಗುಪ್ತ ನಾಮ, ಲೇಖ ನಾಮ. **Pseudónymous** ಸ್ಯು(ಪ್ಸ್ಯು)ಡಾ— (ಗು.) ಕೃತಕ ನಾಮದಿಂದ ಬರೆಯುವ, ಬರೆದ. **Pseudonýmity** (ನಾ.)

Pseúdoscope ಸ್ಯೂ(ಪ್ಸ್ಯೂ)ಡೊಸ್ಕೋಪ್ (ನಾ.) ಹೊರ ಬಾಗು ಒಳ ಬಾಗಾಗಿಯೂ, ಒಳ ಬಾಗು ಹೊರ ಬಾಗಾಗಿಯೂ ತೋರಿಸುವ ದೃಷ್ಟಿ ಸಲಕರಣೆ ; ಮಿಥ್ಯಾ(ರೂಪ) ದರ್ಶಕ. **Pseudoscópic** (ಗು.)

Pshaw ಪ್ಷಾ, ಷಾ (ಭಾವ. ಅವ್ಯ., ನಾ., ಕ್ರಿ.) (ತಿರಸ್ಕಾರ, ಅಸಹನೆ, ವೊ. ನ್ನು ಸೂಚಿಸುವ ಪದ): ಥೇ ! ಥತ್ ! (ನಾ.) ಈ ಉದ್ಗಾರ. (ಕ್ರಿ.) ಥೇ ! ಎನ್ನು (*At* ಉಪ. ದೊಡನೆ); ಥೇ! ಎಂದು ತಿರಸ್ಕಾರ ಸೂಚಿಸು.

Psi ಪ್ಸೈ (ನಾ.) ಗ್ರೀಕ್ ವರ್ಣಮಾಲೆಯ ಒಂದು ಅಕ್ಷರ (Ψ, ψ) =Ps.

Psilánthropism ಪ್ಸೈಲ್ಯಾಂತ್ರೊಪಿಸ್ಮ್ (ನಾ.) ಯೇಸು ಕ್ರಿಸ್ತನು ಬರಿಯ ಮನುಷ್ಯ(ಮಾತ್ರದವ)ನೆಂಬ ವಾದ. **Psilanthrópic** (ಗು.) ; **Psilánthropist** (ನಾ.)

Psilósis ಪ್ಸೈಲೋಸಿಸ್ (ನಾ.) (ರೋಗ ನಿದಾನ) ಕೂದಲು ಉದುರಿ ಹೋಗುವುದು ; ಬಟ್ಟದಲೆಯಾಗುವುದು. =Sprue².

Psíttacine ಪ್ಸಿಟಸ್ಸೈನ್ (ಗು.) ಗಿಣಿಗಳ ; ಗಿಣಿಯಂಥ. **Psittacósis** ಪ್ಸಿಟಕೋಸಿಸ್ (ನಾ.) ಗಿಳಿಗಳಿಂದ ಮನುಷ್ಯರಿಗೆ ತಗುಲುವುದೆಂದು ಹೇಳುವ, ಟೈಫಾಯ್ಡ್ ಅಥವಾ ನ್ಯೂಮೋನಿಯಾ ರೋಗವನ್ನು ಕೊಂಚ ಮಟ್ಟಿಗೆ ಹೋಲುವ ಒಂದು ಸಾಂಕ್ರಾಮಿಕ ರೋಗ.

Psóas (Gk) ಪ್ಸೋಅ್ಯಸ್ (ನಾ.) P. magnus, -parvus (ಎಂಬ ಎರಡು) ಕಟಿ ಸ್ನಾಯುಗಳು.

Psóra ಪ್ಸೋರ (ನಾ.) ಒಂದು ಸಾಂಕ್ರಾಮಿಕ ಚರ್ಮರೋಗ ; ಕಜ್ಜಿ ; ತುರಿ. **Psoríasis** ಸೊ(ಪ್ಸೊ)ರೈಅಸಿಸ್ (ನಾ.) ಪೊರೆಗೂಡಿದ ಕೆಂಪು ಕಲೆಗಳಾಗುವ ಒಂದು ಚರ್ಮರೋಗ.

Psýche ಪ್ಸೈ(ಸೈ)ಕಿ (ನಾ.) ಆತ್ಮ ; ಜೀವ ತತ್ತ್ವ ; ಚೈತನ್ಯ; ಮನಸ್ಸು (ಗ್ರೀಕ್ ಪುರಾಣದಲ್ಲಿ Eros ದೇವತೆಯ ಪ್ರೇಯಸಿಯಂತೆ ಮೂರ್ತೀಕರಿಸಿ ಚಿಟ್ಟೆಯ ರೆಕ್ಕೆಗಳಿಂದ ಕೂಡಿರುವಂತೆ ನಿರೂಪಿಸಿದೆ). ಹಗಲುಹೊತ್ತು ಹಾರಾಡುವ ಚಿಟ್ಟೆಯ ಒಂದು ಜಾತಿ.

Psychíater ಸೈ(ಪ್ಸೈ)ಕೈಅಟರ್ (ನಾ.) ಮನೋರೋಗ ಚಿಕಿತ್ಸಕ. **Psychíatrist** (ನಾ.) ; **Psychíatry** (ನಾ.) ; **Psychiátric(al)** —ಆ್ಯಟ್ರಿಕ್(ಕಲ್) (ಗು.)

Psýchic ಸೈ(ಪ್ಸೈ)ಕಿಕ್ (ಗು., ನಾ.) =Psychical. [P. force, influence ಅಭೌತ ಶಕ್ತಿ, ಅಭೌತ ಪ್ರಭಾವ]. (ನಾ.) ಅಭೌತ ಪ್ರಭಾವಕ್ಕೆ ಒಳಗಾಗುವವನು ; (ಪ್ರೇತ ವಿಷಯ) ವಾಹಕ. (ನಾ., ಬ. ವ. ದಲ್ಲಿ) ಮನಶ್ಶಾಸ್ತ್ರ ; ಮನೋವ್ಯಾಪಾರ ಪರಿಶೋಧನೆ. **Psýchical** (ಗು.) ಆತ್ಮದ ; ಮನಸ್ಸಿನ; ಮಾನಸಿಕ ; ಭೌತಾತೀತ ವ್ಯಾಪಾರಗಳ (P. research ಭೌತಾತೀತ ವಿಷಯಗಳ ಅನ್ವೇಷಣೆ, ಸಂಶೋಧನೆ). **Psýchically** (ಕ್ರಿ. ವಿ.) ; **Psýchicism** (ನಾ.) **Psýchicist** (ನಾ.)

Psýcho- ಸೈ(ಪ್ಸೈ)ಕೊ— (ಸ. ಪೂ. ಪ.) ಆತ್ಮ— ; ಮನಸ್—. **-análysis** ಮನಸ್ಸನ್ನು ಜಾಗ್ರತ (ಅರಿವುಳ್ಳದ್ದು) ಮತ್ತು ಅಜಾಗ್ರತ (ಅರಿವಿಲ್ಲದ್ದು) ಎಂದು ಎರಡು ಭಾಗಗಳಾಗಿ ಪರಿಗಣಿಸಿ ಅವುಗಳ ಪರಸ್ಪರ ಪ್ರತಿಕ್ರಿಯೆಗಳನ್ನು ಪರೀಕ್ಷಿಸುವ, ಫ್ರಾಯ್ಡ್, ವೊ. ರು ಪ್ರತಿಪಾದಿಸಿದ ಮನಶ್ಶಾಸ್ತ್ರ; ಮನೋವಿಶ್ಲೇಷಣ(ಶಾಸ್ತ್ರ). ಮನಸ್ಸಿನ ಅಜ್ಞಾತ ಸ್ಥಿತಿಯ ವರ್ತನೆಗಳ, ನಡೆವಳಿಕೆಯ ಮೂಲಾಶಯಗಳ, ತತ್ತ್ವಾನ್ವೇಷಣ. **-ánalyse** (ಕ್ರಿ. ಸಕ.) ; **-ánalyst** (ನಾ.) ; **-analýtic** (ಗು.). **-dynámic(s)** ಮನೋಬಲ ಕ್ರಿಯಾ ಶಾಸ್ತ್ರ. **-génesis** (—ಜೆನಿ—), **-gony** (—ಕಾಗೊನಿ) ಆತ್ಮದ ಅಥವಾ ಮನಸ್ಸಿನ ಮೂಲ. **-genétic(al)** (ಗು.) ; **-gónical** (—ಗಾನಿ—) (ಗು.); **-gram** (—ಗ್ರ್ಯಾಮ್) ಭೂತ, ಪ್ರೇತ, —ಲೇಖನ. **-graph** ಪ್ರೇತ ಲೇಖನ ಸಲಕರಣೆ. **-graphy** ವಿವರಣಾತ್ಮಕ ಮನಶ್ಶಾಸ್ತ್ರ. ಪ್ರೇತ ಲೇಖನ. **-mancy** (—ಮ್ಯಾನ್ಸಿ) ಪ್ರೇತಗಳ ಸಲಹೆ ಕೇಳಿ ಭವಿಷ್ಯ, ವೊ. ನ್ನು ನುಡಿಯುವುದು. **-metry** ಭೌತ ಸಂಸರ್ಗದ ಅಥವಾ ಸಾಮೀಪ್ಯದ ಸಂಬಂಧಪಡೆದಷ್ಟರಿಂದಲೆ ಒಂದು ವಸ್ತುವಿನ ಅಥವಾ ವ್ಯಕ್ತಿಯ ಗುಣಗಳನ್ನು ಅರಿಯುವ ಶಕ್ತಿ. **-métric(al)** (ಗು.) ; **-mótor** (ಗು.) ಮಾನಸ ಕ್ರಿಯೆಯಿಂದ (ಭೌತ) ಚಲನೆಯನ್ನುಂಟುಮಾಡುವ. **-neurósis** ಸಹಜ ಪ್ರವೃತ್ತಿಗಳಿಗೂ ಅವುಗಳ ನಿಯಂತ್ರಕ ಶಕ್ತಿಗೂ ಇರಬೇಕಾದ ಸಮತೆ ತಪ್ಪಿಹೋದ ಒಂದು ಮನೋವ್ಯಾಧಿ. **-path** ಬುದ್ಧಿ ಸ್ತಿಮಿತವಿಲ್ಲದವನು ; ತಲೆಕೆಟ್ಟವನು. **-páthic** (ಗು.) ; **-pathist** (—ಪತಿಸ್ಟ್) (ನಾ.) ಮನೋವ್ಯಾಧಿ ಚಿಕಿತ್ಸಕ. **-pathólogy** (—ಪತಾ—) ; **-pathy** ಮನೋರೋಗ ನಿದಾನ. **-phýsics** ಮನಸ್ಸಿಗೂ ದೇಹಕ್ಕೂ ಇರುವ ಸಾಮಾನ್ಯ ಸಂಬಂಧಗಳನ್ನು ಕುರಿತ ಶಾಸ್ತ್ರ: ಮನೋ ಭೌತ ಶಾಸ್ತ್ರ. **-phýsical** (ಗು.); **-phýsicist** (ನಾ.); **-physiólogy** ಮನೋ ವ್ಯಾಪಾರಗಳನ್ನು ಕುರಿತ ಶರೀರ ವಿಜ್ಞಾನ ಭಾಗ; ಮನಶ್ಶರೀರ ಶಾಸ್ತ್ರ. **-physiológical** (ಗು.) ; **-physiólogist** (ನಾ.) : **-therapeútic** (—ತೆರಪ್ಯೂ—) ಸುಪ್ತಿ ಸಂಮೋಹನದಿಂದ ರೋಗ ಚಿಕಿತ್ಸೆಮಾಡುವ. **-thérapy** —ರೋಗ ಚಿಕಿತ್ಸೆ.

Psychólogy ಸೈ(ಪ್ಸೈ)ಕಾಲೊಜಿ (ನಾ.) ಮನಶ್ಶಾಸ್ತ್ರ ; —ಗ್ರಂಥ, ಪದ್ಧತಿ. **Psychólogist** (ನಾ.) ; **Psychólogize** (ಕ್ರಿ.) ಮನಶ್ಶಾಸ್ತ್ರಾಭ್ಯಾಸ ಮಾಡು ; —ವಿಷಯ ಪ್ರಸ್ತಾವಿಸು ; ಮನಶ್ಶಾಸ್ತ್ರಾನುಗುಣವಾಗಿ ತತ್ತ್ವ ನಿರೂಪಣೆ ಮಾಡು, ತರ್ಕಿಸು. ಪ್ರೇತ ಪ್ರಭಾವಕ್ಕೆ ಅಧೀನಗೊಳಿಸು. **Psychológical** (—ಕೊಲಾ—) (ಗು.). P. moment ಮನಸ್ಸಿನಮೇಲೆ ಸರಿಯಾದ ಪರಿಣಾಮವುಂಟಾಗುವ ಸಮಯ ; ಮನೋನುಕೂಲದ ಗಳಿಗೆ. (ಅಪ. ಪ್ರ., ಮು., ಹಾಸ್ಯವಾಗಿ) ಸರಿಯಾದ ಹೊತ್ತು ; ಸಕಾಲ. **Psychológically** (ಕ್ರಿ. ವಿ.)

Psychósis ಸೈ(ಪ್ಸೈ)ಕೋಸಿಸ್ (ನಾ. ; ಬ. ವ. -oses —ಸೀಸ್) ಬುದ್ಧಿ ವಿಕಲ್ಪ, ಮನೋವಿಕಾರ (ಮು., ಅಂಗ ಹಾನಿಯಿಂದಾಗಲ ನರ ವ್ಯಾಧಿಯಿಂದಾಗಲಿ ಆದುದಲ್ಲ)

Psychrómeter ಸೈ(ಪ್ಸೈ)ಕ್ರಾಮಿಟರ್ (ನಾ.) ತೇವಗೂಡಿದ ಬುರುಡೆಯದೂ ಒಣ ಬುರುಡೆಯದೂ ಒಟ್ಟಿಗಿರುವ ಶಾಖ ಮಾಪಕ (=Wet-&-dry-bulb thermometer)

Ptármigan ಟಾರ್ಮಿಗನ್ (ನಾ.) ಒಂದು ಬಗೆಯ ಹಕ್ಕಿ.

Pteridólogy ಟೆ(ಪ್ಟೆ)ರಿಡಾಲೊಜಿ (ನಾ.) ಜರೀಸಸ್ಯ ಶಾಸ್ತ್ರ. **Pteridológical** (ಗು.) ; **Pteridólogist** (ನಾ.)

Ptero- ಟೆ(ಪ್ಟೆ)ರೊ— (ಸ. ಪೂ. ಪ.) ರೆಕ್ಕೆ— ; ಪಕ್ಷ—. **-dáctyl** (—ಡ್ಯಾಕ್ಟಿಲ್) ವಂಶನಷ್ಟವಾಗಿಹೋದ, ರೆಕ್ಕೆಗೂಡಿದ ಒಂದು ಸರೀಸೃಪ. **-graphy** (—ರಾ—) ಹಕ್ಕಿಗರಿ ವಿವರಣೆ. **-gráphic(al)** (ಗು.). **-saur** (—ಸಾರ್) ವಂಶನಷ್ಟವಾಗಿಹೋದ ಒಂದು ಹಾರು ಸರೀಸೃಪ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ptéropus ಟೆ(ಪ್ಟೆ)ರೊಪಸ್ (ನಾ.; ಬ. ವ. -pi —ಪೈ) ತೊಗಲ ಬಾವಲಿ; ಚಿಕ್ಕಳದ ಹಕ್ಕಿ.

Ptísan ಟಿಸ(ಸ್)ನ್, **Ptisán** ಟಿಸ್ಯಾನ್ (ನಾ.) ಪುಷ್ಟಿ ಕೊಡುವ ಕಷಾಯ (ಮು., ಬಾರ್ಲಿ ನೀರು)

Ptolemáic ಟಾಲೆಮೇಯಿಕ್ (ಗು.) (ಅಲೆಕ್ಸಾಂಡ್ರಿಯದಲ್ಲಿ ಕ್ರಿ. ಶ. ೨ನೆಯ ಶ. ಮಾ. ದಲ್ಲಿದ್ದ ಖಗೋಳ ವಿಜ್ಞಾನಿಯಾದ) ಟಾಲೆಮಿಯ (ಮು., P. system ಭೂಗ್ರಹವು ಸ್ಥಿರವಾಗಿರುವುದೆಂದೂ ಅದರ ಸುತ್ತಲೂ ಸೂರ್ಯ ಮತ್ತು ನಕ್ಷತ್ರಾದಿಗಳು ಸುತ್ತುತ್ತಿರುವುವೆಂದೂ ಭಾವಿಸಿದ್ದ ಟಾಲೆಮಿಯ ಖಗೋಳ ಪದ್ಧತಿ). (ಅಲೆಕ್ಸಾಂಡರ್ ಮಹಾಶಯನ ಮರಣಾನಂತರ ಕ್ಲಿಯೋಪಾಟ್ರ ರಾಣಿಯವರೆಗೂ ಈಜಿಪ್ಟನ್ನು ಆಳಿದ) ಟಾಲೆಮಿ ವಂಶಿಕರ.

Ptómaine ಟೋಮೇನ್, **Ptomaíne** ಟೊ— (ನಾ.) ಕೊಳೆತು ನಾರುವ ಪ್ರಾಣಿ ಅಥವಾ ಸಸ್ಯ ಪದಾರ್ಥದಲ್ಲಿರುವ (ಸಾ., ವಿಷಪ್ರಾಯವಾದ) ಹಲವು ಬಗೆಯ ಸಸ್ಯಕ್ಷಾರ ದ್ರವ್ಯ (ಮು., P. poisoning ಎಂಬಲ್ಲಿ)

Ptósis ಟೋ(ಪ್ಟೋ)ಸಿಸ್ (ನಾ.) (ಸಂಬಂಧಪಟ್ಟ ಸ್ನಾಯುವಿನ ನಿರ್ವ್ಯಾಪಾರ ಕಾರಣದಿಂದ) ಮೇಲಿನ ಕಣ್ಣು ರೆಪ್ಪೆ ಜೋಲುಬೀಳುವುದು.

Pub ಪಬ್ (ನಾ.) (ಬಳ. ಮಾ.) =Public house (ಎಂಬುದರ ಸಂಕ್ಷಿಪ್ತ) (Public ನೋಡಿ)

Púberty ಪ್ಯೂಬರ್ಟಿ (ನಾ.) ಸಂತಾನೋತ್ಪತ್ತಿ ಮಾಡುವ ಸಾಮರ್ಥ್ಯ ಸ್ಥಿತಿ(ಗೆ ಬಂದಿರುವುದು); ಮೈ ನೆರೆದಿರುವುದು; ಪ್ರೌಢಾವಸ್ಥೆ; ಪ್ರಾಯ; ಹರಯ. Age of p. ಪ್ರೌಢಾವಸ್ಥೆಯ ಆರಂಭ ಕಾಲ (ಇಂಗ್ಲೆಂಡಿನಲ್ಲಿ ಕಾನೂನು ಮೇರೆಗೆ ಹುಡುಗನಿಗೆ ೧೪ ವರ್ಷ, ಹುಡುಗಿಗೆ ೧೨ ವರ್ಷ). **Pubéscence** ಪ್ಯೂಬೆಸೆನ್ಸ್ (ನಾ.) ಹರಯಕ್ಕೆ ಬರುವುದು, ಬಂದಿರುವುದು; ಯೌವನಾರಂಭ; =Puberty. (ಸಸ್ಯಗಳ, ಎಲೆಗಳ ಮತ್ತು ತಾಳುಗಳ ಮೇಲಿನ ಮತ್ತು ಪ್ರಾಣಿಗಳ, ಮು., ಕ್ರಿಮಿ ಕೀಟಗಳ, ಕೆಲವು ಅಂಗಗಳ ಮೇಲಿನ) ಮೃದು ತುಪ್ಪುಳು. **Pubéscent** (ಗು.)

Pubéscence. Puberty ನೋಡಿ.

Públic ಪಬ್ಲಿಕ್ (ಗು., ನಾ.) ಒಟ್ಟು ಜನತೆಯ; ಒಟ್ಟು ಜನತೆಗೆ ಸಂಬಂಧಪಟ್ಟ; ಸಾರ್ವಜನಿಕ; ಹುದುನಾಡಿನ; ಬಹಿರಂಗ(ವಾದ); ಪ್ರಕಟ(ವಾದ) [P. utility ಜನೋಪಯೋಗ. P. offence; P. holiday. (ಪಾರ್ಲಿಮೆಂಟ್) P. act, bill]. ಜನರು ಸೇರಿ ಮಾಡಿದ; ಜನರಿಗಾಗಿ ಮಾಡಿದ; ಜನರನ್ನು ಪ್ರತಿನಿಧಿಸುವ [P. prosecution, prosecutor (Prosecute ನೋಡಿ). P. assembly ಸಾರ್ವಜನಿಕ ಸಭೆ]. (ವಿ. ವಿ. ನಿ. ಗಳಲ್ಲಿ) ವಿಶ್ವವಿದ್ಯಾನಿಲಯದ; —ನಿಲಯಕ್ಕಾಗಿ ಮಾಡಿದ; —ಕ್ಕಾಗಿ ಕಾರ್ಯಮಾಡುವ (P. orator, lecture, examination). ಎಲ್ಲರಿಗೂ —ತೆರೆದಿರುವ, ಬಾಧ್ಯತೆಯಿರುವ (P. baths, library, road). [**P. house** ಊಟ ವಸತಿಗಳನ್ನೊದಗಿಸುವ ತಂಗುದಾಣ (ಮು., ಅಲ್ಲಿಯೇ ಕುಡಿಯಲು ಮದ್ಯಕೊಡುವ ಮತ್ತು ತಿಂಡಿತೀರ್ಥ ವಸತಿಗಳನ್ನೊದಗಿಸುವ ಅಂಗಡಿ). **P. education** ಸಾರ್ವಜನಿಕ (ವಿದ್ಯಾಶಾಲೆಯಲ್ಲಿ ಕೊಡುವ) ಶಿಕ್ಷಣ. **P. school** ಸಾರ್ವಜನಿಕ (ಅಡಳಿತಕ್ಕೊಳಪಟ್ಟ) ವಿದ್ಯಾಶಾಲೆ (ಮು., ವಿಶ್ವವಿದ್ಯಾನಿಲಯಕ್ಕೆ ಅಥವಾ ಸಾರ್ವಜನಿಕ ಉದ್ಯೋಗಗಳಿಗೆ ಪ್ರವೇಶಪಡೆಯಲು ತರಪೇತು ಮಾಡುವ, ಹಿರಿಯ ವಿದ್ಯಾರ್ಥಿಗಳ ಸಹಾಯದಿಂದ ಪಾಠಶಾಲೆಯ ಶಿಸ್ತನ್ನು ಕಾಪಾಡುವ ಪದ್ಧತಿಯುಳ್ಳ, ದತ್ತಿ ಭೋಗ ಪಡೆದ, ವಿದ್ಯಾಶಾಲೆ). **P. utility societies** ವಾಸದ ಮನೆಗಳು ದೊರೆಯದ ಕಷ್ಟವನ್ನು ತಪ್ಪಿಸುವುದಕ್ಕಾಗಿ ಏರ್ಪಟ್ಟ ಸಹಕಾರ ಸಂಘಗಳು ಅಥವಾ ಕಿಂಚಿತ್ ಸಹಾಯ ಮಾಡುವ ಧರ್ಮ ಸಂಸ್ಥೆಗಳು]. ಎಲ್ಲರ ಗಮನಕ್ಕೂ ಬರುವಂತೆ ತೆರೆದಿಟ್ಟ; ಬಹಿರಂಗವಾದ; ಬಹಿರಂಗವಾಗಿ ಮಾಡಿದ (Made a p. protest. Gave it p. utterance. Make, become, p. ಬಯಲಿಗೆ ತರು ಬರು) [**Públicly** (ಕ್ರಿ. ವಿ.)]. ಜನ ಸೇವೆಯಲ್ಲಿ ತೊಡಗಿರುವ); ಸಾರ್ವಜನಿಕ ಕಾರ್ಯದಲ್ಲಿ ನಿರತನಾದ) (P. life. A p. man). Notary p. (Notary ನೋಡಿ). [**P. spirit** ದೇಶಾಭಿಮಾನ; ಪ್ರಜಾತತ್ಪರತೆ. **P.-spirited** (ಗು.); **P.-spíritedly** (ಕ್ರಿ. ವಿ.); **P.-spíritedness** (ನಾ.)]. ಜನಾಂಗಗಳ; ಅಂತರ ರಾಷ್ಟ್ರೀಯ (Proscribed Napoleon as a p. enemy). (ನಾ.) ಜನ; ಮಂದಿ; ಜನತೆ; ಲೋಕ; ಸಾರ್ವಜನಿಕರು; ಸರ್ವಜನ; ಮಹಾಜನ; ಹತ್ತೂಜನ (The p. is the best judge, are the best judges. The British, American, p.). ಜನತಾ ಭಾಗ (The reading p. ವಾಚಕ ವರ್ಗ. The most gullible of publics); =Public house. (In p. ಬಹಿರಂಗವಾಗಿ; ಎಲ್ಲರ ಮುಂದೆ). **Públican** (ನಾ.) (ರೋಮನ್ ಚರಿತ್ರೆ, ಬೈಬಲ್ಲಿನ ಹೊಸ ಒಡಂಬಡಿಕೆ) ತೆರಿಗೆ ವಸೂಲಿಯ ಹಕ್ಕನ್ನು ಸರ್ಕಾರದಿಂದ ಕೊಂಡುಕೊಂಡವನು; ತೆರಿಗೆ ವಸೂಲಿಗಾರ. ತಿಂಡಿ ತೀರ್ಥದಂಗಡಿಯಿಟ್ಟಿರುವವನು. **Publicátion** (ನಾ.) ಬಹಿರಂಗ ಪಡಿಸುವುದು; (ಪುಸ್ತಕ, ನಕಾಸೆ, ಸಂಗೀತ ಕೃತಿ, ಮೊ. ದರ) ಪ್ರಕಟನೆ (ಮಾಡುವುದು); ಪ್ರಕಾಶನ; ಪ್ರಕಟಿಸಿದ ಪುಸ್ತಕ, ಮೊ. ದು. **Públicist** —ಸಿಸ್ಟ್ (ನಾ.) ಅಂತರ ರಾಷ್ಟ್ರೀಯ ನೀತಿ ವಿಮರ್ಶಕ; ರಾಷ್ಟ್ರ ವಿಚಾರ ಲೇಖಕ; (ಮು.) ವೃತ್ತಪತ್ರಿಕಾ ಲೇಖಕ. **Públicism** (ನಾ.); **Publicístic** (ಗು.); **Publícity** (ನಾ.) ಬಹಿರಂಗ ಪ್ರಕಟನೆ; (ಸರಕನ್ನಾಗಲಿ ವ್ಯಕ್ತಿಯನ್ನಾಗಲಿ) ಸರ್ವಗೋಚರವಾಗುವಂತೆ ಮಾಡಲು ಕೈಕೊಳ್ಳುವ ಪ್ರಕಟನೋದ್ಯೋಗ [P. agent ಪ್ರಸಿದ್ಧ (ಸಿನಿಮಾ) ನಟ, ನಟಿ, ಮೊ. ರ ಹೆಸರು ಸದಾ ಸಾರ್ವಜನಿಕರ ಮುಂದಿರುವಂತೆ ಮಾಡಲು ನಿಯಮಿತನಾದವನು; ಪ್ರಕಟನೋದ್ಯೋಗಿ. P. officer ಸರ್ಕಾರದ ಪ್ರಕಟನಾಧಿಕಾರಿ]. **Públish** (ಕ್ರಿ. ಸಕ.) ಸಾರ್ವತ್ರಿಕವಾಗಿ, ಎಲ್ಲರಿಗೂ, —ತಿಳಿಯುವಂತೆ ಮಾಡು; ಬಹಿರಂಗಪಡಿಸು; ಪ್ರಸಿದ್ಧಮಾಡು; (ರಾಜ ಶಾಸನ, ಮೊ. ನ್ನು) ವಿಧಿವತ್ತಾಗಿ ಘೋಷಿಸು, ಸಾರು. (ಮದುವೆಯಾಗಲಿರುವ ಗಂಡು ಹೆಣ್ಣುಗಳ) ನಿಶ್ಚಿತಾರ್ಥ ಪ್ರಕಟನೆಗೆ ಅಭ್ಯಂತರವಿದೆಯೇ ಎಂದು ಕೇಳು; ನಿಶ್ಚಿತಾರ್ಥ ಘೋಷಣೆ ಮಾಡು. (ಗ್ರಂಥಕರ್ತ, ಸಂಪಾದಕ ಅಥವಾ ಪ್ರಕಾಶಕ—ಇವರ ವಿಷಯದಲ್ಲಿ: ಪುಸ್ತಕ, ನಕಾಸೆ, ಮೊ. ನ್ನು) ಪ್ರಕಟಿಸು, ಮಾರಾಟಕ್ಕಾಗಿ ಇಡು. **Públishable** (ಗು.); **Públisher** (ನಾ.) (ಕ್ರಿಯಾರ್ಥಗಳಲ್ಲಿ); (ಪುಸ್ತಕ, ಮೊ. ರ) ಪ್ರಕಾಶಕ.

Públican, Publicátion, Públicist, Públish, etc. Public ನೋಡಿ.

Puce ಪ್ಯೂಸ್ (ಗು.) ಚಿಕ್ಕಾಡಿನ, ಚಿಗಟದ, —ಬಣ್ಣದ; ಕಂದು ಊದಾ ಬಣ್ಣದ.

Puck[1] ಪಕ್ (ನಾ.) Robin Goodfellow ಎಂಬ ಪಿಳ್ಳೆಯಕ್ಷ; ಚಿಳ್ಳೆ ಕೇತ; =Hobgoblin; (ಯಾವುದಾದರೂ) ಕೀಟಲೆಯ ಯಕ್ಷ. ಪುಟ್ಟ ಪಿಶಾಚಿ; (ರೂಪ.) ತುಂಟ ಮಗು. **Púckish** (ಗು.); **Pucklike** (ಗು.)

Puck[2] ಪಕ್ (ನಾ.) ಒಂದು ಜಾತಿಯ ಇರುಳು ಹಕ್ಕಿ; (ಇದರ ಮೂಲಕ ಬರುವುದೆಂದು ಹೇಳುವ) ದನಗಳ ಒಂದು ರೋಗ.

Púcka, Pákka ಪಕ್ಕ (ಗು.) (ಆಂ. ಇಂ.) ಪೂರ್ತಿ ತೂಕದ; ಸಾಚಾ; ಅಚ್ಚ; ಅಪ್ಪಟ. ಸ್ಥಿರವಾದ; ದೃಢವಾಗಿ (ನಿಲ್ಲುವಂತೆ) ಕಟ್ಟಿದ; ಪಕ್ಕಾ. (ಹಿಂದೀ ಭಾಷೆಯಲ್ಲಿ, ಪಾಕ್=ಬೆಂದು ಮೆತುವಾದ; ಪಕ್ವವಾದ)

Púcker ಪಕರ್ (ಕ್ರಿ., ನಾ.) (ಹಣೆ, ಹುಬ್ಬು, ಹೊಲಿಗೆ, ಬಟ್ಟೆ) ಗಂಟಿಕ್ಕು; ಸುಕ್ಕು ಮಾಡು; —ಬೀಳು; ನಿರಿಗೆ ಮಾಡು; —ಯಾಗು (ಹಲವು ವೇಳೆ *up* ಉಪ. ದೊಡನೆ). (ನಾ.) ಸುಕ್ಕು, ನಿರಿಗೆ, ಉಬ್ಬು, ಮೊ. ವು. **Púckery** (ಗು.)

Pud ಪಡ್ (ನಾ.) (ಮಕ್ಕಳ ಮಾತು) ಮಗುವಿನ ಕೈ. (ಕೆಲವು ಪ್ರಾಣಿಗಳ) ಮುನ್ ಪಾದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Púdding ಪುಡಿಂಗ್ (ನಾ.) ಕಡುಬು (ಹೊಯ್ಗಡುಬು, ಹೂರಣಗಡುಬು) (ಪ್ರಾಣಿಜನ್ಯ ಅಥವಾ ಸಸ್ಯಜನ್ಯ ಪದಾರ್ಥಗಳನ್ನು ಹಿಟ್ಟಿನಲ್ಲಿ ಬೆರಸಿ ಅಥವಾ ಕಲಸು ಹಿಟ್ಟಿನಲ್ಲಿ ಹುದುಗಿ, ನೀರಿನಲ್ಲಿ ಅಥವಾ ಹಬೆಯಲ್ಲಿ ಬೇಯಿಸುವುದರಿಂದ ಅಥವಾ ಒಣ ಶಾಖದಲ್ಲಿ ಅಡುವುದರಿಂದ ತಯಾರಿಸಿದ, ಮೆತುವಾದ ಅಥವಾ ದೃಢವಾದ ಭಕ್ಷ್ಯ). ಪ್ರಯೋಜನ [More praise than p. ಊಟಕ್ಕಿಂತ ಉಪಚಾರ ಹೆಚ್ಚು. The proof of the p. is in the eating. (Proof ನೋಡಿ)]. ಕಡುಬಿನಂತೆ ಕಾಣುವ ವಸ್ತು. (ಅಸಂ.) ಕನ್ನಗಳ್ಳರು (ಕಾವಲು) ನಾಯಿಗೆ ಕೊಡುವ (ಮಯಕದ) ಮದ್ದು ಹಾಕಿದ (ಪ್ರಾಣಿಯ) ಯಕೃತ್ತು, ಮೊ. ದು. (ನಾವೆ) ಉಜ್ಜಾಟ, ಮೊ. ನ್ನು ತಪ್ಪಿಸಲು ಹಾಕುವ ಮೆತ್ತೆ, ಕಿತ್ತಾನಾರು ಚೂರುಗಳ ಒತ್ತುಕಟ್ಟು, ಮೊ. ದು. P.-cloth ಕಡುಬುಗಳನ್ನು ಬೇಯಿಸುವುದಕ್ಕಾಗಿ ಅವನ್ನು ಕಟ್ಟಿ ಕುದಿನೀರಿನಲ್ಲಿ ಬಿಡುವ ಬಟ್ಟೆ. P. face ಕೊಬ್ಬುಗೂಡಿದ ದೊಡ್ಡ ಮೋರೆ; ಕಡುಬು ಮೋರೆ. P.-head ದಡ್ಡ; ಗುಗ್ಗು. P.-heart ಪುಕ್ಕಲ; ಹೇಡಿ; ಅಂಜುಕುಳಿ. P. pie ಹಲವು ಬಗೆಯ ಕಣಕದ ಭಕ್ಷ್ಯ. P.-stone ಬೆಣಚುಕಲ್ಲು ಪದಾರ್ಥದ ಗರ್ಭದಲ್ಲಿ ಸಣ್ಣ ಸಣ್ಣ ಗುಂಡುಕಲ್ಲುಗಳು ಸೇರಿ ಆದ ಸಂಯುಕ್ತ ಶಿಲೆ: ಕಡುಬುಗಲ್ಲು. **Púddingy** (ಗು.)

Púddle ಪಡ್‌ಲ್ (ನಾ., ಕ್ರಿ.) (ರಸ್ತೆ, ಮೊ. ಗಳಲ್ಲಿ) ಮಳೆನೀರು ನಿಂತಿರುವ ಸಣ್ಣ ಕೊಳಕು ಹಳ್ಳ, ಗುಂಡಿ; ಕೊಚ್ಚೆಗುಂಡಿ; ಕೆಸರು. (ಬಳ. ಮಾ.) ಅವ್ಯವಸ್ಥೆ; ಗಲಿಬಿಲಿ; ಗೊಂದಲ; ಕಲಸುಮೆಲಸು. (ನೀರು ಜಿನುಗದಂತೆ ಕೆರೆಯ ಕಟ್ಟೆ, ಮೊ. ಕ್ಕೆ ಮೆತ್ತುವ) ಮರಳು ಬೆರಸಿದ ಕಲಸು ಜೇಡಿ. (ಕ್ರಿ.) ಕೆಸರಿನಲ್ಲಿ, ಆಳವಿಲ್ಲದ ನೀರಿನಲ್ಲಿ, —ಆಟಕ್ಕಾಗಿ ಕುಣಿದಾಡು, ಓರಾಡು, ಹೊರಳಾಡು; (ನೀರನ್ನು) ಕಲಕಿ ಕೊಳೆಮಾಡು (ರೂಪ. ಸಹ); ಕೊಳಕು ಕೆಲಸದಲ್ಲಿ ನಿರತನಾಗು (ರೂಪ. ಸಹ); ಜೇಡಿಮಣ್ಣನ್ನೂ ಮರಳನ್ನೂ ನೀರುಹಾಕಿ ಕಲಸಿ ತುಳಿದು ಹದಮಾಡು. (ಕಾಲುವೆ, ಮೊ. ಕ್ಕೆ) ಉದ್ದಕ್ಕೂ ಕಲಸು ಜೇಡಿಯನ್ನು ಬಳಿ. (ಇಂಗಾಲವನ್ನು ಹೊರಡಿಸಿ ಕಬ್ಬಿಣವನ್ನು ಮೆತುಮಾಡುವುದಕ್ಕಾಗಿ) ಕರಗಿದ ಕಬ್ಬಿಣದ ದ್ರವವನ್ನು ಕಲಕಾಡು. **Púddler** (ನಾ.); **Púddly** (ಗು.) ಕೆಸರಾದ; ಕೊಳಕಾದ; ಕೆಸರು ಹಳ್ಳಗಳಿಂದ ಕೂಡಿದ.

Púdency ಪ್ಯೂಡೆನ್ಸಿ (ನಾ.) ಲಜ್ಜೆ; ನಾಚಿಕೆ; ಸಿಗ್ಗಾಳಿತನ.

Pudéndum (L) ಪ್ಯೂಡೆಂಡಮ್ (ನಾ.; ಸಾ., ಬ. ವ. ದಲ್ಲಿ: -da —ಡ) ಗುಹ್ಯಾಂಗ(ಗಳು); ಬಾಹ್ಯ ಜನನೇಂದ್ರಿಯ(ಗಳು). **Pudéndal** (ಗು.); **Púdic** ಪ್ಯೂ— (ಗು.) =Pudendal.

Pudge ಪಜ್ (ನಾ.) (ಬಳ. ಮಾ.) ಗಿಡ್ಡಾಗಿಯೂ ದಪ್ಪವಾಗಿಯೂ ಇರುವ ವ್ಯಕ್ತಿ, ಪ್ರಾಣಿ, ಅಥವಾ ವಸ್ತು; ಗುಜ್ಜಾರಿ ತೋಣೆಯ. **Púdgy** (ಗು.)

Púdsy ಪಡ್ಸಿ (ಗು.) ಮೈತುಂಬಿಕೊಂಡಿರುವ; ದುಂಡು ದುಂಡಾಗಿರುವ.

Púerile ಪ್ಯೂಅರೈಲ್ (ಗು.) ಹುಡುಗತನದ; ಬಾಲಕ ಯೋಗ್ಯ; ಮಕ್ಕಳಾಟಿಕೆಯ; ವಯಸ್ಕನಿಗೆ ಯೋಗ್ಯವಲ್ಲದ; ಕೀಳಾದ; ಕ್ಷುಲ್ಲಕ (P. remark, reason). P. breathing (ಕೆಲವು ಮಕ್ಕಳಲ್ಲಿ ಕಂಡು ಬರುವ) ಗಟ್ಟಿಯಾದ ಮರ್ಮರ ಧ್ವನಿಗೂಡಿದ ಉಸಿರಾಟ (ಸಾ., ದೊಡ್ಡವರಲ್ಲಿ ರೋಗಸ್ಥಿತಿಯನ್ನು ಸೂಚಿಸುವುದು). **Púerilely** (ಕ್ರಿ. ವಿ.); **Puerílity** (ನಾ.)

Puérperal ಪ್ಯೂಅರ್‌ಪೆರಲ್ (ಗು.) ಹೆರಿಗೆಯ; —ಯಿಂದಾದ; ಪ್ರಸೂತಿ ಸಂಬಂಧವಾದ.

Puff ಪಫ್ (ನಾ., ಕ್ರಿ.) ಹ್ರಸ್ವವೂ ತ್ವರಿತವೂ ಆದ ಉಸಿರಾಟ: ಒತ್ತುಸಿರು; ಉಫ್; ಒಂದು ಉಸಿರಿನಲ್ಲಿ ಹೊರಬಿಟ್ಟ ಹಬೆ, ಹೊಗೆ, ಮೊ. ಗಳ ಒಂದು ಉರುಪು, ಊದಿಕೆ. (ಉಡುಪು, ತಲೆಗೂದಲು, ಮೊ. ಗಳಲ್ಲಿ) ದುಂಡನೆಯ ಮೆತುವಾದ ಉಬ್ಬು ಪದಾರ್ಥ. ಚರ್ಮಕ್ಕೆ ಕಾಂತಿಚೂರ್ಣ ಹಾಕಲು ಉಪಯೋಗಿಸುವ ತುಪ್ಪುಳಿನ (ಅಥವಾ ಅಂತಹ ಪದಾರ್ಥದ) ಸಣ್ಣ ಮೆತ್ತೆ (=Powder-p.). ಒಂದು ಬಗೆಯ ಲಘು ಪಿಷ್ಟ ಭಕ್ಷ್ಯ. (ಮು., ವೃತ್ತಪತ್ರಿಕೆಗಳಲ್ಲಿ: ಒಂದು ಗ್ರಂಥದ) ಅತಿ ಹೊಗಳಿಕೆಯ ವಿಮರ್ಶೆ, (ವ್ಯಾಪಾರಿಯ ಸರಕಿನ) ಅತಿ ಹೊಗಳಿಕೆಯ ಜಾಹಿರಾತು. [P.-adder ಉದ್ರೇಕಗೊಂಡಾಗ ಮೈಯ ಮೇಲ್ಭಾಗವನ್ನು ಉಬ್ಬಿಸುವ ಆಫ್ರಿಕದ ಒಂದು ದೊಡ್ಡ ವಿಷಸರ್ಪ. P.-ball ಬೀಜಾಂಕುರಗಳುಳ್ಳ, ಚೆಂಡಿನಾಕಾರದ ಸಂಪುಟದಿಂದ ಕೂಡಿದ, ಒಂದು ಅಣಬೆ. P.-box ಕಾಂತಿಚೂರ್ಣವೂ ಅದನ್ನು ಉದುರಿಸುವ ಮೆತ್ತೆಯೂ ಉಳ್ಳ ಪೆಟ್ಟಿಗೆ. Puff-puff (ಮಕ್ಕಳ ಮಾತು) ರೈಲ್ವೆ ಎಂಜಿನು; ರೈಲು ಬಂಡಿ ಸಾಲು]. (ಕ್ರಿ.) 'ಉಫ್' ಎನ್ನು; 'ಉಫ್' ಎಂದು ಗಾಳಿಯೂದು; (ಗಾಳಿ, ಮೊ. ದು) ಉಫ್ ಉಫ್ ಎಂದು ಹೊರಕ್ಕೆ, ಮೇಲಕ್ಕೆ, —ಬರು (*Out*, *up* ಉಪ. ದೊಡನೆ). ಕಟ್ಟುಸಿರು ಬಿಡು; ಏದು (ಮು., P. & blow). ಉಸಿರು ಕಟ್ಟು; —ಕಟ್ಟಿಹೋಗು (Was rather puffed). (P. out ಏದುತ್ತ ಹೇಳು). (ಆವಿಯೆಂಜಿನು, ಹೊಗೆಬತ್ತಿ ಸೇದುವವನು, ಮೊ. ರ ವಿಷಯದಲ್ಲಿ) ಉಫ್ ಉಫ್ ಎಂದು ಹೊಗೆ ಬಿಡು (Puffed away at his cigar. The steam-engine puffed out of the station). (ದೂಳು, ಹೊಗೆ, ಹಗುರ ವಸ್ತು, ಮೊ. ನ್ನು) ಉಫ್ ಎಂದು ಊದಿಬಿಡು (*Out*, *up*, *away*, ಮೊ. ಉಪ. ದೊಡನೆ). (ಚುಂಗಾಣಿಯನ್ನು) ಉಫ್ ಉಫ್ ಎಂದು ಹೊಗೆ ಬಿಡುತ್ತ ಸೇದು. ಗಾಳಿಯೂದಿ ಉಬ್ಬಿಸು; (ಗಾಳಿಯಿಂದ) ಉಬ್ಬು (*Out*, *up* ಉಪ. ದೊಡನೆ). [P.-up (ಗರ್ವದಿಂದ) ಬೀಗು, ಉಬ್ಬು (ಮು., ಭೂ. ಕೃ. ನಲ್ಲಿ *with* ಉಪ. ದೊಡನೆ)] (ಸರಕನ್ನು) ಅತಿ ಹೊಗಳಿಕೆಯಿಂದ ಅಥವಾ ಸುಳ್ಳು ಹೊಗಳಿಕೆಯಿಂದ ಪ್ರಚಾರ ಮಾಡು; ಹರಾಜಿನಲ್ಲಿ ಬೆಲೆ ಹೆಚ್ಚಿಸಲು ಚಡ ಸವಾಲುಮಾಡು. **Púffer** (ನಾ.); **Púffery** (ನಾ.) ಅತಿ ಪ್ರಶಂಸೆಯ —ಪ್ರಕಟನೆ, ಜಾಹಿರಾತು; —ಯಿಂದ ಪ್ರಚಾರ ಮಾಡುವುದು. ಉಬ್ಬು ನೆರಿಗೆ, —ಅಂಚು; ಉಬ್ಬು ಅಲಂಕಾರ. **Púffy** (ಗು.) ಬಿಟ್ಟು ಬಿಟ್ಟು ಥಟ್ಟನೆ ಬಿರುಸಾಗಿ ಬೀಸುವ; ಸುಯ್‌ಗಾಳಿಯ. ಊದಿಹೋದ; ಉಬ್ಬಿದ; ಬೊಜ್ಜು ಬೆಳೆದ. **Púffiness** (ನಾ.)

Pug[1] ಪಗ್ (ನಾ.) ಗೂಳಿ ನಾಯಿಯಂಥ, ದಪ್ಪ ಮೊಂಡು ಮೂತಿಯ ಒಂದು ಜಾತಿಯ ಗಿಡ್ಡ ನಾಯಿ (=P.-dog). [**Púggish** (ಗು.); **Púggy** (ಗು.); **Pug-nose(d)** ದಪ್ಪ ಮೊಂಡು ಮೂಗು(ಳ್ಳ)]. (ಹಲವರು ಆಳುಗಳಿರುವ ದೊಡ್ಡ ಸಿಬ್ಬಂದಿಯಲ್ಲಿ) ಮೇಲು ದರ್ಜೆಯ ಆಳು. ನರಿ(ಗೆ ಒಂದು ತೆರದ ಅಂಕಿತ ನಾಮ). ರೈಲು ಗಾಡಿಗಳನ್ನು ಕಂಬಿ ಬದಲಾಯಿಸುವುದು, ಮೊ. ಕ್ಕೆ ಉಪಯೋಗಿಸುವ ನಿರ್ದಾಣದ ಸಣ್ಣ ಎಂಜಿನು (=P.-engine)

Pug[2] ಪಗ್ (ನಾ., ಕ್ರಿ. ಸಕ.) ಇಟ್ಟಿಗೆ, ಮೊ. ನ್ನು ಮಾಡಲು (ನೀರು ಹಾಕಿ) ಕಲಸಿ ಹದಗೊಳಿಸಿದ ಬಂಕೆ ಮಣ್ಣು; ಅಂಟುಮಣ್ಣು; ಶೇರು; ಶೇರನ್ನು ಹೀಗೆ ಸಿದ್ಧಗೊಳಿಸು. (ಸದ್ದು ಹರಡದಂತೆ, ನೆಲಗಟ್ಟಿನಲ್ಲಿ) ಕಲಸುಮಣ್ಣು, ಮರದ ಪುಡಿ, ಮೊ. ನ್ನು ತುಂಬು. P.-mill ಮಣ್ಣನ್ನು ಹದವಾಗಿ ಕಲಸುವ ಯಂತ್ರ. **Púgging** (ನಾ.)

Pug[3] ಪಗ್ (ನಾ., ಕ್ರಿ. ಸಕ.) (ಆಂ. ಇಂ.) ಮೃಗದ ಹೆಜ್ಜೆ ಗುರುತು. (ಕ್ರಿ.) ಹೆಜ್ಜೆ ಗುರುತಿನಿಂದ ಮೃಗದ ಜಾಡು ಹಿಡಿ.

Pug[4] ಪಗ್ (ನಾ.) (ಅಸಂ.) =Pugilist (ಪದದ ಸಂಕ್ಷಿಪ್ತ)

Púgg(a)ree ಪಗ್ರಿ, ಪಗರಿ (ನಾ.) (ಇಂಡಿಯಾ ದೇಶೀಯನ) ಒಂದು ಬಗೆಯ ಹಗುರ ರುಮಾಲು; ಪಗಡಿ. ಚೊಪ್ಪಿಗೆ, ಮೊ. ಗಳ ಸುತ್ತಲೂ ಸುತ್ತಿರುವ, ಬಿಸಿಲು ತಾಕದಂತೆ ಕೆಲವು ವೇಳೆ ಹಿಂದುಗಡೆ ಚುಂಗು ಬಿಟ್ಟಿರುವ, ತೆಳು ಮಸ್ಲಿನ್ ಬಟ್ಟೆ, ಮೊ. ರ ಚೌಕ. **Púggareed** (ಗು.)

Púgilist ಪ್ಯೂಜಿಲಿಸ್ಟ್ (ನಾ.) ಮುಷ್ಟಿ ಕಾಳಗದ ಜಟ್ಟಿ. (ರೂಪ.) ವಾದ ಮಲ್ಲ. **Pugilístic** (ಗು.); **Pugilístically** (ಕ್ರಿ. ವಿ.); **Púgilism** (ನಾ.) ಮುಷ್ಟಿ ಕಾಳಗ(ದ ವಿದ್ಯೆ)

Pugnácious ಪಗ್ನೇಷಸ್ (ಗು.) ಹೋರಾಡುವ ಪ್ರವೃತ್ತಿಯುಳ್ಳ; ಜಗಳಗಂಟಿಯಾದ. **Pugnáciously** (ಕ್ರಿ. ವಿ.); **Pugnácity** ಪಗ್ನ್ಯಾಸಿಟಿ (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Puísne ಪ್ಯೂನಿ (ಗು., ನಾ.) ವರಿಷ್ಠ ನ್ಯಾಯಸ್ಥಾನಗಳಲ್ಲಿ ಕೆಳ ದರ್ಜೆಯ ಅಥವಾ ಕಿರಿಯ ನ್ಯಾಯಾಧೀಶ (=P. judge). (ನ್ಯಾ. ಶಾ.) (—ಕ್ಕೆ) ತರುವಾಯದ, ಮುಂದಿನ (P. mortgagees, mortgagees p. to the plaintiff)

Púissant ಪ್ಯೂಇಸಂಟ್, **Puíssant** ಪ್ಯುಇಸಂಟ್, ಪ್ವಿಸಂಟ್ (ಗು.) (ಪ್ರಾಚೀ. ಪ್ರ.) ಬಹಳ ಸಾಮರ್ಥ್ಯವೂ ಅಧಿಕಾರವೂ ಅಥವಾ ಪ್ರಭಾವವೂ ಉಳ್ಳ; ಬಲಿಷ್ಠ. **Puissantly** (ಕ್ರಿ. ವಿ.); **Puissance** (ನಾ.)

Púja, Poója ಪೂಜ (ನಾ.) ಪೂಜೆ; ಅರಾಧನೆ. (ಆಂ. ಇಂ., ಅಸಂ., ಸಾ., ಬ. ವ. ದಲ್ಲಿ) (ದೇವತಾ) ಪ್ರಾರ್ಥನೆ.

Puke ಪ್ಯೂಕ್ (ಕ್ರಿ., ನಾ.) ವಾಂತಿ (ಮಾಡು); ಕಕ್ಕು.

Púkka(h) (ಗು.) =Pucka.

Pule ಪ್ಯೂಲ್ (ಕ್ರಿ. ಅಕ.) ಸಣ್ಣಗೆ ಅಳು; ಗೊಣಗುಟ್ಟಿಕೊಂಡು, ಕೊಂಯ್‌ಗುಟ್ಟಿಕೊಂಡು, ಅಳು; ಕುಗ್ಗಿದ ದನಿಯಲ್ಲಿ ಅಳು. **Púlingly** (ಕ್ರಿ. ವಿ.)

Pull ಪುಲ್ (ಕ್ರಿ.) (ತನ್ನ ಕಡೆಗೆ) ಎಳೆ, ಸೆಳೆ, ತುಯ್ಯಿ. [(ದಂಡನೆಗಾಗಿ) P. his ears or him by the ear. (ಅಪಮಾನ ಮಾಡುವುದಕ್ಕಾಗಿ) P. his nose or him by the nose. (ಗಮನ ಸೆಳೆಯುವುದಕ್ಕಾಗಿ) P. his sleeve or him by the sleeve. P. the bell (ಗಂಟೆಯ ಹಗ್ಗವನ್ನು, ಹಿಡಿಯನ್ನು, ಎಳೆದು) ಗಂಟೆ ಬಾರಿಸು. P. (one's) person's leg (Leg ನೋಡಿ). P. the long-bow (Long ಗು. ನೋಡಿ). P. the strings, wires (ಆಯಾ ಪದವನ್ನು ನೋಡಿ). P. your cap over your ears. P. off one's hat (ವಂದನೆ ಸೂಚಿಸಲು) ತಲೆಯಿಂದ ಟೊಪ್ಪಿಗೆ ತೆಗೆ. P. on one's stockings. P. (thing) to pieces ಬಲವಂತವಾಗಿ (ಒಂದು ವಸ್ತುವಿನ) ಭಾಗಗಳನ್ನು ಕಳಚಿಹಾಕು, ಕಿತ್ತುಹಾಕು. ಧ್ವಂಸಮಾಡು. (ರೂಪ.) (ವ್ಯಕ್ತಿಯನ್ನು, ವಸ್ತುವನ್ನು) ಕಟುವಾಗಿ, ನಿಷ್ಠುರವಾಗಿ, ಟೀಕಿಸು]. ಜಗ್ಗಿ ಎಳೆ [Horse pulls well. Pulled (away) at the handle. Pull up hill, etc. (ಬೆಟ್ಟ, ಮೊ. ಗಳ ಮೇಲಕ್ಕೆ) ಪ್ರಯಾಣಪಟ್ಟು ಹತ್ತು]. (ಕುದುರೆಯ ವಿಷಯದಲ್ಲಿ ಸಾ., ರೂಢಿಯಾಗಿ) ಕಡಿವಾಣ ತುಯ್ಯಿ. [P. devil, p. baker (Baker ನೋಡಿ)]. (ಚುಂಗಾಣಿಯಿಂದ) ಹೊಗೆ ಸೇದು, (ಮದ್ಯಪಾತ್ರೆಯಿಂದ) ಮದ್ಯ ಹೀರು (*At* ಉಪ. ದೊಡನೆ). (ಸಸಿಯನ್ನು) ಬೇರುಮುಟ್ಟ ಕಿತ್ತುಹಾಕು (*Up* ಉಪ. ದೊಡನೆ). [Pulled ಆರೋಗ್ಯ, ಉತ್ಸಾಹ, —ಕುಗ್ಗಿ(ದ). Pulled bread ಹೊಸ ರೊಟ್ಟಿಯ ಒಳಗಿನ ಮೆತು ಭಾಗವನ್ನು ತೆಗೆದು ಗರಿಗಾಗುವಂತೆ ಮತ್ತೆ ಸುಟ್ಟ ರೊಟ್ಟಿ ಚೂರುಗಳು. P. caps, wigs ಕಾದಾಟ; ಕೈಕೈ ಜಗಳ]. (ವಸ್ತುವನ್ನು) ಕೀಳು, ಹರಿ (*At* ಉಪ. ದೊಡನೆ). (ಹಾಳೆಯ ಮೇಲೆ) ಮುದ್ರಿಸು; ಪ್ರತಿಯೆತ್ತು; ಕರಡಚ್ಚು ತೆಗೆ (ಹಿಂದೆ, ಹಳೆಯ ಕೈಯಂತ್ರದಲ್ಲಿ ಹಿಡಿಗಂಬಿಯನ್ನು ಮುದ್ರಣಕಾರನು ತನ್ನ ಕಡೆಗೆ ಎಳೆದು ಮುದ್ರಿಸುತ್ತಿದ್ದನು). (ಹುಟ್ಟುಹಾಕಿ) ದೋಣಿ ನಡಸು; (ದೋಣಿ) ಹುಟ್ಟುಹಾಕುವುದರಿಂದ ನಡೆ (She pulls six oars ಆ ದೋಣಿ ಆರು ಹುಟ್ಟುಗಳಿಂದ ನಡೆಯುತ್ತದೆ. P. one's weight ತನ್ನ ಬಲವೆಲ್ಲ ಉಪಯೋಗಿಸಿ ಹುಟ್ಟುಹಾಕು). (ಅಸಂ.) ದಸ್ತಗಿರಿ ಮಾಡು; ಕೈಸೆರೆ ಹಿಡಿ. (ಅಸಂ.) (ಪೋಲೀಸರು: ಜೂಜಿನ ಮನೆ, ಮೊ. ಗಳಿಗೆ) ನುಗ್ಗಿ ದಾಳಿ ಮಾಡು. (ಮು., ಜೂಜಿನಲ್ಲ ಸೋತುಹೋಗುವಂತೆ ಕುದುರೆಯನ್ನು) ಲಗಾಮೆಳೆದು ತಡೆ. (ಕ್ರಿಕೆಟ್: ಚೆಂಡನ್ನು) ಬಲವಾಗಿ ಹೊಡೆ. (ಗಾಲ್ಫ್ ಚೆಂಡನ್ನು) ಎಡಕ್ಕೆ ದೂರ(ವಾಗಿ) ಹೊಡೆ. [P. a face (Face ನೋಡಿ). P. a sanctimonious face ಪವಿತ್ರಮುಖಭಾವ ತಾಳು]. P. about ಕಡೆಯಿಂದ ಕಡೆಗೆ ಎಳೆದಾಡು; ಒರಟಾಟ ತೋರಿಸು. P. down (ಕಟ್ಟಡ, ಮೊ. ನ್ನು) ಕೆಡವಿಹಾಕು, ನೆಲಸಮ ಮಾಡು. (He is very much pulled down ಅವನು ಬಹಳ ಇಳಿದು ಹೋಗಿದ್ದಾನೆ). P. off (ಬಹುಮಾನ, ಸ್ಪರ್ಧೆ) ಗೆಲ್ಲು. P. out ಹುಟ್ಟುಹಾಕಿ ದೋಣಿಯನ್ನು ಹೊರಸಾಗಿಸು. (ರೈಲು ಬಂಡಿ) ನಿಲ್ದಾಣ ಬಿಟ್ಟು ಹೊರಡು. P. out of the fire ಅಶಬಿಟ್ಟಿರುವ ಸ್ಥಿತಿಯಲ್ಲಿ (ಆಟ, ಮೊ. ನ್ನು) ಗೆಲ್ಲಿಸಿ ಕೊಡು; ಆಪತ್ತಿನಿಂದ ಪಾರುಮಾಡು. P.-over (ನಾ.) ಗುತ್ತನೆಯ ಉಣ್ಣೆಯ ಜುಬ್ಬ. P. through (ಅಪಾಯ, ಕಾಯಿಲೆ, ಮೊ. ರಿಂದ) ಸುರಕ್ಷಿತವಾಗಿ ಪಾರಾಗು, ಪಾರುಮಾಡಿಸು. P.-through (ನಾ.) ಬಂದೂಕಿನ ನಳಿಕೆಯನ್ನು ಚೊಕ್ಕಟಮಾಡುವ ಚಿಂದಿ(ಯನ್ನು ನಳಿಕೆಯ ಮೂಲಕ ಎಳೆಯಲು) ಕಟ್ಟಿದ ದಾರ. P. oneself together ಚೇತರಿಸಿಕೊ; ಮತ್ತೆ ಹಿಂದಿನ ಶಕ್ತಿ ಪಡೆ. P. together ಸಾಮರಸ್ಯದಿಂದ, ಹೊಂದಿಕೊಂಡು, —ಹೋಗು, ಕೆಲಸ ಮಾಡು. P. up (ಮನುಷ್ಯ, ಕುದುರೆ, ಬಂಡಿ, ಮೊ. ನ್ನು) ಎಳೆದು ನಿಲ್ಲಿಸು. ಆಕ್ಷೇಪಿಸು; ಖಂಡಿಸು; ತಡೆದುಕೊ. (ಜೂಜು, ಮೊ. ಗಳಲ್ಲಿ) ತನ್ನ ಸ್ಥಾನವನ್ನು ತಾರತಮ್ಯವಾಗಿ ಮುಂದುವರಿಸಿಕೊ. P.-back ಹಿಂದಕ್ಕೆಳೆತ; ತಡೆ. ಹೆಂಗಸಿನ ಒಳ ಅಂಗಿಯ ಹಿಂಭಾಗವನ್ನು ಪೂರ್ತಿಯಾಗಿ ಬೆನ್ನಮೇಲೆಳೆದು ಸರಿಮಾಡಲು ಉಪಯೋಗಿಸುವ ಸಲಕರಣೆ. **Púller** (ನಾ.) (ಕ್ರಿಯಾರ್ಥಗಳಲ್ಲಿ); ಎಳೆಯುವ ಸಲಕರಣೆ,—ಯಂತ್ರ. (ಮು., ಕಡಿವಾಣವನ್ನು) ತುಯ್ಯುವ ಕುದುರೆ.

Pull (ನಾ.) ಎಳೆತ; ಸೆಳೆತ; ತುಯ್ತ. ಎಳೆಯುವ ಬಲ. (ರೂಪ.) (ಒಬ್ಬನಿಗೆ) ಬಲಿಷ್ಠರಲ್ಲಿರುವ ಸಲಿಗೆ, ಸ್ನೇಹಭಾವ, ಪ್ರಭಾವ ಶಕ್ತಿ (He secured office through his pull with the governor). (ಮುದ್ರಣ) ಕರಡಚ್ಚು. (ಮು., ಜೂಜಿನಲ್ಲಿ, ಕುದುರೆಯನ್ನು ತಡೆಯಲು) ಲಗಾಮು ಎಳೆಯುವುದು. ಹುಟ್ಟುಹಾಕಿ ದೋಣಿ ನಡಸುವ ಒಂದು ಸರತಿ. (ಕ್ರಿಕೆಟ್, ಗಾಲ್ಫ್) ಎಡಕ್ಕೆ ತಿರುಗಿಸಿ ಹೊಡೆಯುವ ಹೊಡೆತ. (ಮದ್ಯದಂಗಡಿಯಲ್ಲಿ) ಕೇಳಿದ್ದಕ್ಕಿಂತ ಹೆಚ್ಚಾಗಿ ಒದಗಿಸಿದ ಬಿಯರ್, ಮೊ. ಮದ್ಯದ ಸರಬರಾಯಿ. [Have the p. of (person) (ಒಬ್ಬನಿಗಿಂತ) ಹೆಚ್ಚು ಅನುಕೂಲ ಪಡೆದಿರು]. ಮದ್ಯದ ತುಂಬು ಕುಡಿತ. ಎಳೆಯುವ ಹಿಡಿ [Beer, Bell, -p. (ಆಯಾ ಪದವನ್ನು ನೋಡಿ)]

Púllet ಪುಲೆಟ್ (ನಾ.) (ಒಂದು ವರ್ಷ ವಯಸ್ಸಿನೊಳಗಿನ) ಕೋಳಿಮರಿ (ಮು., ಮೊಟ್ಟೆಯಿಡಲಾರಂಭಿಸಿ ಮೊದಲನೆಯ ಸಲ ಗರಿಯುದುರುವ ವರೆಗಿನ ವಯಸ್ಸಿನ ಹೇಂಟೆ)

Púlley ಪುಲಿ (ನಾ., ಕ್ರಿ. ಸಕ.) ಹಗ್ಗ, ಮೊ: ವು ಮೇಲೆ ಹಾಯುವುದಕ್ಕೆ ಗಾಡಿ ಮಾಡಿರುವ, ಚೌಕಟ್ಟಿನಲ್ಲ ಅಳವಡಿಸಿರುವ, ಬಲ ಪ್ರಯೋಗದ ದಿಕ್ಕನ್ನು ಬದಲಾಯಿಸಲು ಅನುಕೂಲಿಸುವ, ಒಂದು ಸರಳ ಯಂತ್ರ ಸಲಕರಣೆ: ರಾಟೆ; ಕಪ್ಪಿ; ಗಡಗಡೆ. ಅಚ್ಚಿನಿಂದ ಕೂಡಿದ, ಅವಿಚ್ಛಿನ್ನವಾದ ಪಟ್ಟಿಯಿಂದ ಸುತ್ತಿಸರಾಗುವ, ವೇಗವನ್ನಾಗಲಿ ಸಾಮರ್ಥ್ಯವನ್ನಾಗಲಿ ಹೆಚ್ಚಿಸಲು ಉಪಯೋಗಿಸುವ, —ಚಕ್ರ, ಉರುಳೆ. (ಕ್ರಿ.) (ಒಂದು ಕೆಲಸಕ್ಕೆ) ಕಪ್ಪಿಯನ್ನು ಹವಣಿಸು; —ಯಿಂದ ಕೆಲಸ ಮಾಡು, ಮೇಲೆತ್ತು.

Púllicate ಪುಲಿಕೆಟ್ (ನಾ.) ಬಣ್ಣದ ಕರವಸ್ತ್ರ; ಅದನ್ನು ಮಾಡುವ ಬಟ್ಟೆ (ಹಿಂದೆ ಮದರಾಸು ಕರಾವಳಿಯಲ್ಲಿರುವ ಪುಲಿಕಾಟಿನಲ್ಲ ತಯಾರಾಗುತ್ತಿದ್ದ ಕಾರಣದಿಂದ)

Púllman ಪುಲ್ಮನ್ (ಗು., ನಾ.) ಪ್ರಯಾಣಿಕರು ಸಾ., ಮಲಗುವುದಕ್ಕೆ ಅನುಕೂಲವಾಗುವಂತೆ ಸುಖವಾಗಿ ಅಳವಡಿಸಿರುವ ರೈಲುಬಂಡಿ (=P. car)

Púllulate ಪಲ್ಯುಲೇಟ್ (ಕ್ರಿ. ಅಕ.) (ಕುಡಿ, ಮೊಗ್ಗು) ಅಂಕುರಿಸು; ಕುಡಿಯೊಡೆ; ಮೊಗ್ಗಾಗು. (ಬೀಜ) ಮೊಳೆ. (ರೂಪ.) (ತತ್ತ್ವ, ಮೊ.) ವಿಕಸಿಸು, ಅರಳು, ಪ್ರವರ್ಧಿಸು. **Púllulant** (ಗು.); **Pullulátion** (ನಾ.)

Púlly-haúly ಪುಲಿಹಾಲಿ (ಗು., ನಾ.) (ಬಳ. ಮಾ.) (ಬಲವಂತದಿಂದ) ಎಳೆಯುವುದು, ಸೆಳೆಯುವುದು; (ಗು.) —ವುದರ. **Púlly-haul** (ಕ್ರಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pulmo- ಪಲ್ಮೊ— (ನ. ಪೂ. ಪ.) ಶ್ವಾಸಕೋಶ—; ಪುಪ್ಪುಸ—. **-bránchiate** ಗಾಳಿಯಲ್ಲಿ ಉಸಿರಾಡುವುದಕ್ಕಾಗಿ ಮಾರ್ಪಟ್ಟ ಕಿವಿರುಗಳುಳ್ಳ. **-meter** ಶ್ವಾಸಕೋಶಗಳ ವಾಯು ಪ್ರಮಾಣ ವನ್ನು ಅಳೆಯುವ ಸಲಕರಣೆ. **-metry** (ನಾ.)

Púlmonary ಪಲ್ಮೊನರಿ (ಗು.) ಶ್ವಾಸಕೋಶಗಳ(ಲ್ಲಿಯ, —ಸಂಬಂಧ ವಾದ) (P. artery ಹೃದಯದಿಂದ ಶ್ವಾಸಕೋಶಕ್ಕೆ ರಕ್ತ ಒಯ್ಯುವ ಪ್ರಧಾನ ಅಪಧಮನಿ : ಶ್ವಾಸಾಪಧಮನಿ. P. disease ಶ್ವಾಸಕೋಶ ರೋಗ). ಶ್ವಾಸಕೋಶಗಳನ್ನುಳ್ಳ ; —ಗಳಂಥ ಅಂಗಗಳನ್ನುಳ್ಳ ; ಶ್ವಾಸಕೋಶ ರೋಗ ತಗುಲಿರುವ ; —ರೋಗಕ್ಕೆ ಈಡಾದ. **Púlmonate** (ಗು.) ಶ್ವಾಸಕೋಶವುಳ್ಳ. **Pulmónic** ಪಲ್ಮಾನಿಕ್ (ಗು.) = Pulmonary.

Pulp ಪಲ್ಪ್ (ನಾ., ಕ್ರಿ.) ಹಣ್ಣಿನ ತಿರುಳು (ಭಾಗ) ; (ಪ್ರಾಣಿದೇಹ ದಲ್ಲಿಯ) ಯಾವುದಾದರೂ ಮಾಂಸಲ ಭಾಗ, ಮೆತು ಭಾಗ (ಉದಾ., ಹಲ್ಲಿನ ಒಳ ಕುಹರದಲ್ಲಿರುವ ನರದ್ರವ್ಯ). ನಾರುಬಟ್ಟೆ, ದಾರು, ಮೊ. ನ್ನು ರುಬ್ಬಿ (ತಿರುಪಿ) ಮಾಡಿದ, ಕಾಗದ ತಯಾರಿಸಲು ಉಪಯೋಗಿಸುವ, ಆಕಾರವಿಲ್ಲದ ಮೆತು ಪದಾರ್ಥ ; (ಕಾಗದ ಮಾಡುವ) ರುಬ್ಬಿದ ತಿರುಳು; ಕುಸುರಿ; ತಿಳ್ಳು. ಪುಡಿಮಾಡಿ ನೀರಿನೊಡನೆ ಬೆರಸಿದ ಲೋಹದ ಅದುರು. (ಕ್ರಿ.) ರುಬ್ಬಿ ತಿಳ್ಳು ಮಾಡು. (ಕಾಫಿ ಬೀಜದ ಸುತ್ತಲಿನ) ತಿಳ್ಳನ್ನು ತೆಗೆದು ಹಾಕು. ತಿರುಳಾಗು ; ಕುಸುರಿಯಾಗು. **Púlper** (ನಾ.) ಕಾಗದದ ಕುಸುರಿ ಮಾಡುವ, ಕಾಫಿ ಬೀಜದ ತಿಳ್ಳು ತೆಗೆದುಹಾಕುವ, —ಯಂತ್ರ. **Púlpify** (ಕ್ರಿ. ಸಕ.); **Púlpiness** (ನಾ.); **Púlpless** (ಗು.); **Púlpous** (ಗು.); **Púlpy** (ಗು.)

Púlpit ಪುಲ್ಪಿಟ್ (ನಾ.) (ಕ್ರೈಸ್ತ ದೇವಾಲಯದಲ್ಲಿ) ಉಪದೇಶಕನು ನಿಂತು ಬೋಧಿಸುವ ಆವರಣವುಳ್ಳ ಎತ್ತರದ ಜಗಲಿ (ಸಾ., ಪೀಠ ಮತ್ತು ಇಳಿ ಜಾರು ಮೇಜುಗಳನ್ನುಳ್ಳದ್ದು): (ಕ್ರೈಸ್ತ) ಉಪದೇಶ ವೇದಿಕೆ. ಉಪದೇಶ ವೃತ್ತಿ (The p.). ಉಪದೇಶಕರು ; ಮತ ಬೋಧಕರು. (ಪುಸ್ತಕದ ಹೆಸರಾಗಿ) ಉಪದೇಶ ಸಂಗ್ರಹ. [(ವಿಶೇಷಣವಾಗಿ) P. eloquence, orator, style]. **Pulpiteér** —ಟಿಯರ್ (ನಾ., ಕ್ರಿ. ಅಕ.) (ಸಾ., ತಿರಸ್ಕಾರವಾಗಿ) ಉಪದೇಶ ವೃತ್ತಿಯವನು. [**Pulpitárian** (ಗು., ನಾ.)]. (ಕ್ರಿ.) ಧರ್ಮೋಪದೇಶ ಮಾಡು. **Pulpiteéring** (ನಾ.)

Pulsáte. Pulse ನೋಡಿ.

Pulse ಪಲ್ಸ್ (ನಾ., ಕ್ರಿ.) ನಾಡಿ [ಅಪಧಮನಿಗಳಲ್ಲಿ ರಕ್ತ ನುಗ್ಗಿಬರುವಾಗ ಅವುಗಳಲ್ಲಿ (ಮು., ಕೈಯ ಮಣಿಕಟ್ಟು, ಕಪೋಲ, ಮೊದಲಾದೆಡೆಗಳಲ್ಲಿ) ಕಂಡುಬರುವ, ಬೆರಳಿಗೆ ತೋರುವ ಲಯಬದ್ಧವಾದ ಸ್ಪಂದನ] [Feel person's p. (ನಾಡಿಯ ವೇಗ ಮತ್ತು ರೀತಿಯಿಂದ, ಒಬ್ಬನ ಆರೋಗ್ಯ ಸ್ಥಿತಿಯನ್ನು ತಿಳಿಯುವುದಕ್ಕಾಗಿ) ನಾಡಿ ಪರೀಕ್ಷೆ ಮಾಡು. (ರೂಪ.) ಒಬ್ಬನ ಉದ್ದೇಶ, ಮೊ. ನ್ನು ತಿಳಿದುಕೊ]. ನಾಡಿಯ ಮಿಡಿತ, ತುಡಿತ ; ಹೃದಯ ಸ್ಪಂದನ. (ರೂಪ.) ಜೀವನದ, ಭಾವೋದ್ರೇಕದ,—ಸ್ಪಂದನ, ಸ್ಫುರಣ. ಸಮಕಾಲ ಗತಿಯಲ್ಲಿ ಪುನರಾವೃತ್ತವಾಗುವ ಹೊಡೆತ (ಉದಾ., ದೋಣಿಯ ಹುಟ್ಟುಹಾಕುವುದು). (ಧ್ವನಿ, ಪ್ರಕಾಶ, ಮೊ. ಗಳ) ಒಂದು ಕಂಪನ, ಸ್ಪಂದನ. (ಕ್ರಿ.) = Pulsate (ರೂಪ. ಸಹ) ; ಸಮಕಾಲ ಗತಿಯ ತುಡಿತಗಳಿಂದ ಹೊರಕ್ಕೆ, ಒಳಕ್ಕೆ, —ಕಳುಹಿಸು (*Out*, *in* ಉಪ. ದೊಡನೆ). **Púlseless** (ಗು.); **Púlselessness** (ನಾ.); **Pulsáte, Púlsate** (ಕ್ರಿ.) ಪರ್ಯಾಯ ಕ್ರಮ ದಿಂದ ಹಿಗ್ಗು, ಕುಗ್ಗು ; ಮಿಡಿ ; ತುಡಿ (ರೂಪ. ಸಹ). ಕಂಪಿಸು ; ಅದಿರಾಡು ; ಸ್ಪಂದಿಸು ; (ವಜ್ರಗಳನ್ನು ಅವಕ್ಕೆ ಹತ್ತಿಕೊಂಡಿರುವ ಮಣ್ಣಿನಿಂದ ಬಿಡಿಸುವುದಕ್ಕಾಗಿ) ಯಂತ್ರದಿಂದ ಕುಲುಕಾಡಿಸು. **Pulsátion** (ನಾ.); **Pulsátor** (ನಾ.) (ಮಣ್ಣು ಹತ್ತಿದ ವಜ್ರಗಳನ್ನು) ಕುಲುಕಾಡಿಸುವ ಯಂತ್ರ. **Púlsatory** (ಗು.); **Púlsatile** ಪಲ್ಸಟಿ(ಟೈ)ಲ್ (ಗು.) ತುಡಿತದ ; ಮಿಡಿತದ ; ಮಿಡಿಯುವ (ಲಕ್ಷಣ ವುಳ್ಳ) ; ಸ್ಪಂದನ ಶೀಲ. (ಸಂಗೀತ ವಾದ್ಯ) ಬಡಿದು, ತಟ್ಟಿ, —ಬಾಜಿಸುವ. **Pulsímeter** (ನಾ.) ನಾಡಿಯ ವೇಗವನ್ನು ಅಥವಾ ಬಲವನ್ನು ಅಳೆಯುವ ಸಲಕರಣೆ : ನಾಡಿ ಮಾಪಕ. **Pulsómeter** ಪಲ್ಸಾಮಿಟರ್ (ನಾ.) ಆವಿಯನ್ನು ದ್ರವೀಕರಿಸುವ ಶೂನ್ಯಾವರಣದ ಸಲಕರಣೆ (ಆವಿಯ ಸ್ಪಂದನ ಕ್ರಿಯಾ ಕಾರಣದಿಂದ ಈ ಹೆಸರು ಬಂದಿದೆ)

Pulse[2] ಪಲ್ಸ್ (ನಾ.) (ಸಮೂಹ ವಾಚಕ ಏ. ವ. ; ಕೆಲವು ವೇಳೆ ಬ. ವ. ದ ಕ್ರಿಯಾಪದದೊಡನೆ ಪ್ರ.) (ಆಹಾರೋಪಯುಕ್ತವಾದ) ದ್ವಿದಳಧಾನ್ಯ (ಗಳು); ಬೇಳೆ(ಕಾಳು)ಗಳು (ಉದಾ., ತೊಗರಿ, ಅವರೆ, ಬಟಾಣಿ, ಮೊ. ವು)

Pulsímeter, Pulsómeter. Pulse[1] ನೋಡಿ.

Pultáceous ಪಲ್ಟೇಷಸ್ (ಗು.) ಅಂಬಲಿಯ(ಂಥ) ; ಬೇಯಿಸಿದ ಹಿಟ್ಟಿನ(ಂಥ) ; 'ಪೋಲ್ಟೀಸಿ'ನ(ಂಥ) ; ಮೆತುವಾದ ; ತಿಳ್ಳಿನಂಥ.

Púlverize ಪಲ್ವರೈಸ್ (ಕ್ರಿ.) (ನುಣ್ಣನೆಯ) ಪುಡಿ ಮಾಡು ; ಚೂರ್ಣ ಮಾಡು ; ದೂಳಾಗಿ ಮಾಡು ; (ದ್ರವವನ್ನು) ತುಂತುರು ತುಂತುರಾಗಿ ಮಾಡು. (ರೂಪ.) ಧೂಳೀಪಟ ಮಾಡು; ಜಜ್ಜು ಬಡಿ ; ಧ್ವಂಸಮಾಡು. ಪುಡಿ ಪುಡಿಯಾಗು ; ಧೂಳೀಪಟವಾಗು. **Púlverizable** (ಗು.) ; **Pulverizátion** (ನಾ.) ; **Púlverizator** (ನಾ.) ; **Púlverizer** (ನಾ.) ; **Pulvérulent** ಪಲ್ವೆರುಲೆಂಟ್ (ಗು.) ಪುಡಿ ಪುಡಿ ಯಾದ ; ದೂಳಿನ ; ಹುಡಿ, ದೂಳು, —ಮುಚ್ಚಿದ. (ಶಿಲೆ, ಮೊ. ವು) ಅತ್ಯಲ್ಪ ಸಂಸಕ್ತಿಯುಳ್ಳ ; ಸುಲಭವಾಗಿ ಪುಡಿಯಾಗುವ.

Púlvinate ಪಲ್ವಿನೆಟ್, **-nated** —ನೇಟೆಡ್ (ಗು.) (ವಾ. ಶಾ. -ed) ಉಬ್ಬಿಕೊಂಡಿರುವ ; (ಮು., ಕಾರ್ನೀಸಿನ ಕೆಳ ಅಲಂಕಾರ) ಉಬ್ಬು ಮುಖವುಳ್ಳ. (ಸ. ವಿ., ಕ್ರಿಮಿ ಶಾಸ್ತ್ರ) ಮೆತ್ತೆಯಂಥ ; —ಉಬ್ಬು ಇರುವ.

Púma ಪ್ಯೂಮ (ನಾ.) ಮಾರ್ಜಾಲ ವರ್ಗದ ಅಮೆರಿಕದ ಒಂದು ದೊಡ್ಡ ಹಿಂಸ್ರ ಮೃಗ ; ಕೆಂಪು ಹುಲಿ ; ಅಮೆರಿಕದ ಸಿಂಹ.

Púmice(-stone) ಪಮಿಸ್(ಸ್ಟೋನ್) (ನಾ., ಕ್ರಿ. ಸಕ.) (ಕೈ, ಮೊ. ಗಳಲ್ಲಿಯ ಕಲೆಗಳನ್ನು ತೆಗೆಯುವುದಕ್ಕೂ, ಮೇಲ್ಮೈ ನಯಮಾಡುವುದಕ್ಕೂ, ಹೊಳಪು ಕೊಡುವುದು, ಮೊ. ಕ್ಕೂ ಉಪಯೋಗಿಸುವ, ಹಗುರವಾದ, ರಂಧ್ರ ತುಂಬಿದ, ಸ್ಪಂಜಿನಂಥ) ಜ್ವಾಲಾಮುಖಿ ಜನ್ಯ ಕಾಚ ವಸ್ತು. (ಕ್ರಿ.) ಇದರಿಂದ, ಇದರ ಪುಡಿಯಿಂದ, —ತಿಕ್ಕು, ಉಜ್ಜು, ಶುಭ್ರಮಾಡು. P. hoof (ಕುದುರೆಯ ವಿಷಯದಲ್ಲಿ) ರೋಗದಿಂದ ಸ್ಪಂಜಿನಂತಾದ ಗೊರಸು, ಕೊಳಗ. **Pumíceous** ಪ್ಯುಮಿಷಸ್ (ಗು.)

Púmmel ಪಮ್ಅಲ್ (ಕ್ರಿ. ಸಕ.) (ಮು., ಮುಷ್ಟಿಯಿಂದ) ಮೇಲಿಂದಮೇಲೆ ಹೊಡೆ, ಗುದ್ದು.

Pump[1] ಪಂಪ್ (ನಾ., ಕ್ರಿ.) (ಸಾ.) ರೇಚಕ ಯಂತ್ರ ; ಪೂರಕ ಯಂತ್ರ ; 'ಪಂಪು' (ವರ್ತುಲನಾಳಿಯಲ್ಲಿ ಸಂದು ಬಿಡದಂತೆ ಹೊಂದಿಕೊಂಡಿರುವ ಆಡುಬೆಣೆಯನ್ನು ಒಂದು ಸರಳಿನಿಂದ ಮೇಲಕ್ಕೂ ಕೆಳಕ್ಕೂ ಆಡಿಸಿ ಒಂದು ಪಾತ್ರೆಯೊಳಗಿನ ವಾಯುವನ್ನು ಅಥವಾ ಅನಿಲವನ್ನು ಹೊರಹೊರಡಿಸುವುದ ಕ್ಕಾಗಲಿ, ಹೀಗೆ ವಾಯು, ಮೊ. ನ್ನು ಹೊರಹೊರಡಿಸಿ ನೀರು, ಮೊ. ದ್ರವ ಗಳನ್ನು ಮೇಲಕ್ಕೆತ್ತುವುದಕ್ಕಾಗಲಿ, ಹರಿಸುವುದಕ್ಕಾಗಲಿ, ಅಥವಾ ವಾಯು ವನ್ನಾಗಲಿ ಅನಿಲವನ್ನಾಗಲಿ ಒಂದು ಪಾತ್ರೆಯೊಳಕ್ಕೆ ನುಗ್ಗಿಸಿ ಸಂಕೋಚನ ಮಾಡುವುದಕ್ಕಾಗಲಿ ಉಪಯೋಗವಾಗುವಂತೆ ರಚಿಸಿರುವ ಯಂತ್ರಸಲಕರಣೆ) (ರೂಪಕವಾಗಿ ಹೃದಯ, ಕ್ರಿಮಿಗಳ ಹೀರು ಅಂಗಗಳು, ಮೊ. ಗಳ ವಿಷಯದಲ್ಲಿ ಸಹ). [Air, Force, Stomach, -p. (ಆಯಾ ಪದವನ್ನು ನೋಡಿ). Bicycle-p. ಬೈಸಿಕಲ್ಲಿನ ರಬ್ಬರ್ ಪಟ್ಟೆಗೆ ಗಾಳಿ ನುಗ್ಗಿಸುವ ಪಂಪು : ಬೈಸಿಕಲ್ ಪಂಪು]. ಪಂಪು ಹೊಡೆಯುವುದು ; ಪಂಪು ಹೊಡೆತ. ಇತರ ರಿಂದ ಗುಟ್ಟು ವಿಷಯಗಳನ್ನು ಹೊರಸೆಳೆಯುವ ಪ್ರಯತ್ನ ; —ಸೆಳೆ ಯುವುದರಲ್ಲಿ ನಿಪುಣ. [P.-brake ಹಡಗಿನ ಪಂಪಿನ ಹಿಡಿ (ಹಲವರು ಹಿಡಿದುಕೊಂಡು ತಿರುಗಿಸಲಾಗುವಂತೆ ಅಡ್ಡಕಂಬಿ ಹಾಕಿರುವಂಥದು). P.-handle (ಕ್ರಿ. ಸಕ.) (ಬಳ. ಮಾ.) ಒಬ್ಬನ ಕೈಯನ್ನು ಪ್ರೀತ್ಯತಿಶಯ ದಿಂದ ಮೇಲಕ್ಕೂ ಕೆಳಕ್ಕೂ ಆಡಿಸಿ ಕೈಕುಲುಕು. P.-room ಪಂಪು ಕೆಲಸ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಡುವ ಕೋಣೆ (ಮು., ಔಷಧ ಗುಣವುಳ್ಳ ನೀರನ್ನು ವಿನಿಯೋಗಿಸುವುದಕ್ಕಾಗಿ ಇಂಗ್ಲೆಂಡಿನ Spa ಎಂಬ ಊರಿನದು)]. (ಕ್ರಿ.) ಪಂಪನ್ನು ನಡಸು ; ಪಂಪಿನಿಂದ (ನೀರು, ಮೊ. ನ್ನು) ಹೊರದೆಗೆ, ಮೇಲೆತ್ತು (ಸಾ., *Out, up* ಉಪ. ದೊಡನೆ) ; ಪಂಪು ಮಾಡಿ (ಹಡಗು, ಬಾವಿ, ಮೊ. ರಿಂದ) ನೀರೆಲ್ಲ ಹೊರಡಿಸಿಬಿಡು (*Dry* ಪದದೊಡನೆ). [P. up (ಬೈಸಿಕಲ್, ಮೊ. ಗಳ ರಬ್ಬರ್ ಕೊಳವೆಯ ಪಟ್ಟೆಗೆ) ಪಂಪಿನಿಂದ ಗಾಳಿ ತುಂಬು, —ತುಂಬಿ ಉಬ್ಬಿಸು]. (ಬೈಗುಳು, ಮೊ. ನ್ನು, ಒಬ್ಬನಮೇಲೆ) ಒಂದೇ ಸಮನಾಗಿ ಸುರಿಸು (*Upon* ಉಪ. ದೊಡನೆ). ಮೇಲಿಂದ ಮೇಲೆ ಪ್ರಶ್ನೆ ಹಾಕಿ ಅಥವಾ ಉಪಾಯಾಂತರದಿಂದ ವಿಷಯಗಳನ್ನು (ಒಬ್ಬನಿಂದ) ಹೊರ ಸೆಳೆ (*Out of* person). (ದಣಿವಿನ ವಿಷಯದಲ್ಲಿ) ಪೂರ್ತಿಯಾಗಿ ಉಸಿರುಡುಗಿಸು (ಮು., ಕರ್ಮಣಿಯಲ್ಲಿ). (ವಾಯು ಭಾರ ಮಾಪಕದಲ್ಲಿ, ಪಾದರಸ) ಒಂದು ಕ್ಷಣದಲ್ಲಿ ಏರಿ ಮತ್ತೆ ಬೀಳು. **Púmpship** (ಕ್ರಿ. ಅಕ.) (ಶಿಷ್ಟ ಪ್ರಯೋಗವಲ್ಲ) ಉಚ್ಚೆ ಹೊಯ್ಯಿ, ಜಲ ಬಾಧೆ ತೀರಿಸಿಕೊ. **Púmper** (ನಾ.) (ಮು., ರೈಲ್ವೆಯ) ಟ್ರಾಲಿ ಬಂಡಿ.

Pump[2] ಪಂಪ್ (ನಾ.) (ನಂಜೆಯುಡುಪಿನ ಜೊತೆಯಲ್ಲಿ ಮತ್ತು ನೃತ್ಯದಲ್ಲಿ ಹಾಕಿಕೊಳ್ಳುವ, ವಿಶೇಷ ಪದದ ತೊಗಲಿನ, ಸಾ., ದಾರ ಕಟ್ಟದ) ಒಂದು ಬಗೆಯ ಹಗುರವಾದ ಪಾದರಕ್ಷೆ.

Púmpkin ಪಂಪ್‌ಕಿನ್ (ನಾ.) ಕುಂಬಳ (ಕಾಯಿ, ಗಿಡ)

Pun[1] ಪನ್ (ನಾ., ಕ್ರಿ. ಅಕ.) ವಿವಿಧಾರ್ಥ ಕೊಡುವ ಒಂದೇ ಪದದ ಅಥವಾ ಒಂದೇ ಧ್ವನಿಯುಳ್ಳ ಬೇರೆ ಬೇರೆ ಪದಗಳ ಚಾತುರ್ಯದ ಹಾಸ್ಯ ಪ್ರಯೋಗ ; ಹದಿರು ನುಡಿ ; ಎರಡರ್ಥದ ನುಡಿ ; ಶ್ಲೇಷೆ. (ಕ್ರಿ.) (ಪದ, ವಿಷಯ—ಇವನ್ನು) ಶ್ಲೇಷೆಯಿಟ್ಟು ಹೇಳು (*Upon* ಉಪ. ದೊಡನೆ). **Púnningly** (ಕ್ರಿ. ವಿ.) ; **Púnster** ಪನ್‌ಸ್ಟರ್ (ನಾ.) ಹದಿರು ನುಡಿ ಕಟ್ಟುವುದರಲ್ಲಿ ಸಹಜ ಶಕ್ತಿಯುಳ್ಳವನು, ಪಳಗಿದ ಕೈ ; ಹದಿರು ನುಡಿಕಾರ.

Pun[2] ಪನ್ (ಕ್ರಿ. ಸಕ.) (ರಸ್ತೆ, ಮೊ. ನ್ನು ಮಾಡುವಲ್ಲಿ : ಮಣ್ಣು, ಕಲ್ಲಿನ ಅಥವಾ ಇಟ್ಟಿಗೆಯ ಚೂರುಪಾರು, ಮೊ. ನ್ನು) ಕುಟ್ಟಿ, ಜಡಿದು, ದಮ್ಮಸು ಮಾಡು ; —ಮಾಡಿ ಗಟ್ಟಿಸು. (ದಮ್ಮಸು, ಮೊ. ದ ಸಲಕರಣೆಯಿಂದ ನೆಲ, ಮೊ. ವು) ಹದಗೂಡುವಂತೆ ಗಟ್ಟಿಸು (*Up* ಉಪ. ದೊಡನೆ). **Púnner**[2] (ನಾ.) ದಮ್ಮಸು.

Púna ಪೂನ (ನಾ.) ದ. ಅಮೆರಿಕದ ಪೆರೂ ಪ್ರಾಂತದ ಆ್ಯಂಡೀಸ್ ಪರ್ವತಪ್ರದೇಶದಲ್ಲಿಯ ಎತ್ತರವಾದ ಬೋಳು ಪ್ರಸ್ಥಭೂಮಿ. ವಾಯು ವಿರಳತೆಯಿಂದುಂಟಾಗುವ ಶ್ವಾಸ ಬಾಧೆ, ಉಸಿರಾಟದ ಕಷ್ಟ.

Punch[1] ಪಂಚ್, ಪನ್ಷ್ (ನಾ., ಕ್ರಿ. ಸಕ.) (ಚರ್ಮ, ಲೋಹ, ಕಾಗದ, ಮೊ. ಗಳಲ್ಲಿ) ತೂತು ಕೊರೆಯುವ, ತೂತು ದೊಡ್ಡದು ಮಾಡುವ— ಸಲಕರಣೆ ; ಮೊಳೆ, ಮೊ. ನ್ನು ತೂತಿನಿಂದ ಹೊರಡಿಸುವ (=Starting-p.), ಮೇಲ್ಮೈಮಟ್ಟದಿಂದ ಒಳಕ್ಕೆ ಮೊಳೆಯನ್ನು ಇಳಿಸುವ (=Driving-p.), ಸಲಕರಣೆ ; ರಂಧ್ರಕ. (ಒಂದು ವಸ್ತುವಿನಮೇಲೆ) ನಕಾಸೆಯನ್ನು, ಮುದ್ರೆಯನ್ನು, —ಅಂಕನ ಮಾಡುವ ಆಯುಧ ಅಥವಾ ಸಲಕರಣೆ. [Bell p. ಟಿಕೆಟ್ಟಿನಲ್ಲಿ ತೂತು ಕೊರೆಯುವ, ಹಾಗೆ ಕೊರೆದದ್ದನ್ನು ಘಂಟಾನಾದದಿಂದ ತಿಳಿಸುವ, (ಟ್ರ್ಯಾಂ) ಬಂಡಿ ನಿಯಂತನ ರಂಧ್ರಕ]. (ಕ್ರಿ.) ಮುಷ್ಟಿಯಿಂದ ಹೊಡೆ, ಗುದ್ದು (P. his head ಅವನ ತಲೆಯನ್ನು ಮೊಟಕು). (ಕೋಲು, ಮೊ. ರಿಂದ) ತಿವಿ, ಚುಚ್ಚು ; (ಮು., ಅಮೆ. ಸಂ. : ದನದ ಮಂದೆಯನ್ನು) ತಿವಿದು ಓಡಿಸಿಕೊಂಡುಹೋಗು. (ಲೋಹ, ಚರ್ಮ, ಟ್ರ್ಯಾಂ ಟಿಕೆಟ್ಟು, ಮೊ. ರಲ್ಲಿ) ರಂಧ್ರಕದಿಂದ (ಹೇಗೊ ಹಾಗೆ) ತೂತು ಕೊರೆ, ರಂಧ್ರ ಮಾಡು. ರಂಧ್ರಕದಿಂದ (ಮೊಳೆ, ಮೊ. ನ್ನು) ಒಳಕ್ಕೆ (*In* ಉಪ. ದೊಡನೆ) ಅಥವಾ ಹೊರಕ್ಕೆ (*Out* ಉಪ. ದೊಡನೆ) ಹೊಡೆ. **Púncher** (ನಾ.)

Punch[2] ಪಂಚ್, ಪನ್ಷ್ (ನಾ.) ದ್ರಾಕ್ಷಾ ಮದ್ಯ ಅಥವಾ ಬ್ರಾಂದಿ, ಮೊ. ಗಳೊಡನೆ ಬಿಸಿನೀರನ್ನಾಗಲಿ ಹಾಲನ್ನಾಗಲಿ ಸೇರಿಸಿ ಜೊತೆಗೆ ಸಕ್ಕರೆ, ನಿಂಬೆಹಣ್ಣಿನ ರಸ, ಸುವಾಸನಾ ದ್ರವ್ಯಗಳು, ಮೊ. ನ್ನು ಬೆರಸಿ ಮಾಡಿದ ಪಾನೀಯ (Brandy, Rum, Milk, p.) ; ಒಂದು ದೊಡ್ಡ ದುಂಡು ಬಟ್ಟಲನಷ್ಟು 'ಪಂಚ್' ಪಾನೀಯ ; 'ಪಂಚ್' ಪಾನ ಗೋಷ್ಠಿ. **P.-bowl** 'ಪಂಚ್' ಪಾನೀಯ ಮಾಡುವ ಬೋಗುಣಿ. ಬೆಟ್ಟದಲ್ಲಿಯ ಅಥವಾ ಬೆಟ್ಟಗಳ ನಡುವಣ ಆಳವಾದ ಗುಂಡು ಪೊಳ್ಳು ; ಡೊಣೆ.

Punch[3] ಪಂಚ್, ಪನ್ಷ್ (ನಾ.) ಗಿಡ್ಡ ಕಾಲಿನ, ದಪ್ಪ ಒಡಲಿನ, ಭಾರ ಎಳೆಯುವ ಕುದುರೆ (=Suffolk p.). (ಪ್ರಾಂ. ಪ್ರ.) ಗಿಡ್ಡ ಬೊಜ್ಜು ಮನುಷ್ಯ ಅಥವಾ ವಸ್ತು ; ಕೋಣೆಯು. P. & Judy ಎಂಬ ಬೊಂಬೆಯಾಟದಲ್ಲಿಯ ಗೂನುಬೆನ್ನಿನ ವಿಕಾರ ಬೊಂಬೆ [ಮು., ಲಂಡನ್ನಿನ ಒಂದು ಹಾಸ್ಯ ವಾರಪತ್ರಿಕೆ(ಯ ಹೆಸರಾಗಿ)] ; ವಿಕಟ. (As pleased, as proud, as p. ಅಧಿಕ ಸಂತೋಷಪಟ್ಟು, ಹೆಮ್ಮೆಪಟ್ಟು)

Púncheon[1] ಪನ್ಷನ್, ಪಂಚನ್ (ನಾ.) ಗಿಡ್ಡ ಕಂಬ (ಮು., ಕಲ್ಲಿದ್ದಲ ಗಣಿಯಲ್ಲಿ ಚಾವಣಿಗೆ ಊರೆಯಾಗಿರುವದು). = Punch[1] (ಈಗ ವಿರ. ಪ್ರ.)

Púncheon[2] ಪನ್ಷನ್, ಪಂಚನ್ (ನಾ.) (ಚರಿತ್ರೆ) (೭೨ರಿಂದ ೧೨೦ ಗ್ಯಾಲನ್ ವರೆಗೆ ದ್ರವ ಹಿಡಿಸುವಂಥ) ದೊಡ್ಡ ಪೀಪಾಯಿ.

Púnctate ಪಂಕ್ಟೇಟ್, ಪಂಕ್ಟೆಟ್ (ಗು.) (ಪ್ರಕೃತಿ ಚರಿತ್ರೆ, ರೋಗ ನಿದಾನ) ಬಿಂದುಗಳು, ಚುಕ್ಕೆಗಳು, ಕಲೆಗಳು, —ತುಂಬಿರುವ, ಗುರುತುಬಿದ್ದಿರುವ. **Punctátion** (ನಾ.)

Punctílio ಪಂಕ್ಟಿಲಿಯೊ (ನಾ. ; ಬ. ವ. -os) ಸಂಪ್ರದಾಯಾಚರಣೆಯಲ್ಲಿ, ಗೌರವ ಸತ್ಕಾರ ತೋರುವುದರಲ್ಲಿ, ಸೂಕ್ಷ್ಮ ಗಮನ,—ದೃಷ್ಟಿ. ಅಲ್ಪ ವಿಷಯಕ ನಿಷ್ಠೆ ; ಸೂತ್ರ ನೇಮ. **Punctílious** (ಗು.) —ಉಳ್ಳ. **Punctíliously** (ಕ್ರಿ. ವಿ.) ; **Punctíliousness** (ನಾ.)

Púnctual ಪಂಕ್ಟ್ಯು(ಕ್ಚ್ಯು)ಅಲ್ (ಗು.) ಗೊತ್ತಾದ ಹೊತ್ತನ್ನು ತಪ್ಪದೆ ಅನುಸರಿಸುವ ; ಕಾಲ ನಿಷ್ಠೆಯುಳ್ಳ ; ಸಕಾಲದಲ್ಲಿಯ ; ಹೊತ್ತು ಮೀರದ. (ಪ್ರಾಚೀ. ಪ್ರ.) = Punctilious. (ಜ್ಯಾ.) ಒಂದು ಬಿಂದು ವಿನ. **Punctuálity** (ನಾ.) ಕಾಲನಿಷ್ಠೆ. **Púnctually** (ಕ್ರಿ. ವಿ.)

Púnctuate ಪಂಕ್ಟ್ಯು(ಕ್ಚು)ಏಟ್ (ಕ್ರಿ. ಸಕ.) (ಬರವಣಿಗೆಯಲ್ಲಿ) ವಿರಾಮ ಚಿಹ್ನೆಗಳನ್ನು ಹಾಕು ; —ಹಾಕಿ ಗುರುತಿಸು, ವಿಂಗಡಿಸು. (ರೂಪ.) ಮೆಚ್ಚಿಕೆಯ ಉದ್ಗಾರ, ಮೊ. ಗಳಿಂದ (ಒಬ್ಬನ ಭಾಷಣವನ್ನು) ಮಧ್ಯೇ ಮಧ್ಯೇ ತಡೆಗಟ್ಟು (*With* ಉಪ. ದೊಡನೆ). (ಅನುಚಿತ ಪ್ರ.) ಒತ್ತಿ ಹೇಳು ; ಪ್ರಾಶಸ್ತ್ಯಕೊಡು ; ಪ್ರಾಧಾನ್ಯ ತೋರು (Flung it on the ground to p. his refusal). **Punctuátion** (ನಾ.) ವಿರಾಮ ಚಿಹ್ನೆ ಹಾಕುವುದು. ಹೀಬ್ರೂ, ಮೊ. ಭಾಷೆಗಳಲ್ಲಿ ಸ್ವರ ಚಿಹ್ನೆ, ಮೊ. ಗಳನ್ನು ಸೇರಿಸುವುದು. **Púnctuative** (ಗು.) ವಿರಾಮ ಚಿಹ್ನೆ ಹಾಕುವುದರ (ವಿಷಯವಾದ) ; —ಹಾಕುವುದನ್ನು ಸೂಚಿಸುವ. **Púnctuator** (ನಾ.)

Púnctum ಪಂಕ್ಟಮ್ (ನಾ. ; ಬ. ವ. -ta) (ಒಂದು ಮೇಲ್ಮೈಯಲ್ಲಿರುವ) ಚುಕ್ಕೆ, ಬಣ್ಣದ ಕಲೆ, ಉಬ್ಬು ತಗ್ಗುಗಳ ಮಚ್ಚೆ. **Púnctule** (ನಾ.) ಸಣ್ಣ —. **Púnctulate** —ಲೇಟ್ (ಗು.) —ಇಂದ ಗುರುತಿಸಿದ. **Punctulátion** (ನಾ.)

Púncture ಪಂಕ್ಚ್ಯುರ್, ಪಂಕ್ಚರ್ (ನಾ., ಕ್ರಿ.) ಚುಚ್ಚು(ವುದು) ; ರಂಧ್ರ, ತೂತು (ಮಾಡುವುದು) ; (ಮು., ರಬ್ಬರಿನ ಗಾಳಿ ಕೊಳವೆ ಪಟ್ಟೆಯಲ್ಲಿ ಅನಿರೀಕ್ಷಿತವಾಗಿ) ತೂತಾಗುವುದು, ತೂತು ಮಾಡುವುದು ; (ಹೀಗೆ ಆದ, ಮಾಡಿದ) ತೂತು. (ಕ್ರಿ.) ಚುಚ್ಚು ; ರಂಧ್ರ ಮಾಡು ; (ಬೈಸಿಕಲ್ಲು, ಬೈಸಿಕಲ್ ಸವಾರ, ಮೊ. ರ ವಿಷಯದಲ್ಲಿ) (ಪಟ್ಟೆ) ತೂತಾಗು ; ತೂತು ಬೀಳು, ಬೀಳಿಸು.

Púndit ಪಂಡಿಟ್ (ನಾ.) ಪಂಡಿತ, ವಿದ್ವಾಂಸ. (ಹಾಸ್ಯ ಪ್ರ.) ಪಾಂಡಿತ್ಯ ಪ್ರದರ್ಶಿ ; ಶುಷ್ಕ ಪಂಡಿತ, ಪಂಡಿತಗೊಡ್ಡು.

Púngent ಪಂಜೆಂಟ್ (ಗು.) (ಪ್ರಕೃತಿ ಚರಿತ್ರೆ) ಚೂಪು ಮೊನೆಯ ; ತೀಕ್ಷ್ಣಾಗ್ರವುಳ್ಳ. (ಬೈಗುಳು, ಎಡಂಬನೆ, ಮೊ. ವು) ಕಟುವಾದ, ಖಾರವಾದ, ಚುಚ್ಚುವ, ತೀಕ್ಷ್ಣ. ಮನಸ್ಸನ್ನು, ಬುದ್ಧಿಯನ್ನು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

—ಚುರುಕುಗೊಳಿಸುವ, ಉತ್ತೇಜಿಸುವ. (ಮೂಗು, ನಾಲಗೆ, ಚರ್ಮ, ಮೊ. ನ್ನು) ಘಾಟಿನಿಂದ, ಖಾರದಿಂದ, —ಚುಚ್ಚುವ (P. gas, smoke ಘಾಟು ಅನಿಲ, —ಹೊಗೆ. P. sauce ಖಾರವಾದ ಚಟ್ನಿ). **Púngently** (ಕ್ರಿ. ವಿ.); **Púngency** (ನಾ.)

Púnic ಪ್ಯೂನಿಕ್ (ಗು., ನಾ.) ಕಾರ್ತೇಜ್ ಪಟ್ಟಣದ(ವನು) [P. Wars ರೋಮಿಗೂ ಕಾರ್ತೇಜಿಗೂ ನಡೆದ ಯುದ್ಧಗಳು. P. faith (Faith ನೋಡಿ)]. (ನಾ.) ಪ್ಯೂನಿಕ್ ಭಾಷೆ.

Púnish ಪನಿಷ್ (ಕ್ರಿ. ಸಕ.) (ತಪ್ಪು ಮಾಡಿದವನನ್ನು) ದಂಡಿಸು, ಶಿಕ್ಷಿಸು; (ತಪ್ಪು ಮಾಡಿದವನಿಗೆ, ತಪ್ಪಿತಕ್ಕೆ) ಶಿಕ್ಷೆ, ದಂಡನೆ, —ವಿಧಿಸು. (ಬಳ. ಮಾ.) (ಮುಷ್ಟಿ ಕಾಳಗದಲ್ಲಿ ಎದುರಾಳಿಗೆ) ಬಲವಾಗಿ ಮುಷ್ಟಿ ಪ್ರಹಾರ ಮಾಡು. (ಜೂಜಿನಲ್ಲಿ ಸ್ಪರ್ಧಿಯನ್ನು) ಸುಸ್ತುಬೀಳಿಸು. (ಕ್ರಿಕೆಟ್ ಆಟದಲ್ಲಿ ಎಸೆಗಾರನು ಎಸೆದ, ಟೆನಿಸ್ ಆಟದಲ್ಲಿ ಎದುರಾಳಿಯು ಬಿರುಸಿಲ್ಲದೆ ಹೊಡೆದ, ಚೆಂಡನ್ನು) ಕುಟ್ಟಿ ಹಾರಿಸಿಬಿಡು; (ಹೀಗೆ ಚೆಂಡಿಗೂ, ಎಸೆಗಾರನಿಗೂ) ತಕ್ಕ ಶಾಸ್ತಿ ಮಾಡು. (ಆಹಾರ ಪದಾರ್ಥ, ಮೊ. ನ್ನು) ಹೆಚ್ಚಾಗಿ ಹೊಡೆದುಬಿಡು. **Punishabílity** (ನಾ.); **Púnishable** (ಗು.); **Púnishably** (ಕ್ರಿ. ವಿ.); **Púnisher** (ನಾ.); **Púnishing** (ಗು.); **Púnishment** (ನಾ.)

Púnitive ಪ್ಯೂನಿಟಿವ್ (ಗು.) ದಂಡನೆ ಮಾಡುವ; ಶಿಕ್ಷೆ —ಕೊಡುವ, ವಿಧಿಸುವ; ಶಿಕ್ಷಾ ರೂಪದ; ದಂಡನೆಗಾಗಿ ಮಾಡಿದ; ಪ್ರತೀಕಾರ ರೂಪದ (P. justice, expedition). [P. police (ಇಂಡಿಯದಲ್ಲಿ) ಒಂದು ಗೊತ್ತಾದ ಪ್ರಾಂತದವರು ಕಾನೂನಿಗೆ ವಿರುದ್ಧವಾಗಿ ದಾಂಧಲೆ ನಡಸಿದ್ದಕ್ಕೆ ದಂಡನ ರೂಪವಾಗಿ ಆ ಪ್ರದೇಶದಲ್ಲಿ ಕಾವಲಾಗಿಟ್ಟ, ಅದಕ್ಕಾಗಿ ತಗುಲುವ ವೆಚ್ಚವನ್ನು ಆ ಪ್ರದೇಶದವರೇ ಕೊಡಬೇಕಾದ, ಪೊಲೀಸು ದಳ: ಪುಂಡು ದಂಡನೆಯ ಪೊಲೀಸು. P. tax ಪುಂಡು ಗಂದಾಯ]. **Púnitory** (ಗು.)

Punk[1] ಪಂಕ್ (ನಾ.) (ಪ್ರಾಚೀ. ಪ್ರ.) ಗುಡಿಸೆಟ್ಟಿ.

Punk[2] ಪಂಕ್ (ನಾ.) (ಅಮೆ. ಸಂ.) ಕೊಳೆತ ದಾರು; ದಾರುವಿನ ಮೇಲೆ ಬೆಳೆಯುವ ಶಿಲೀಂಧ್ರ (ಒಣಗಿಸಿ ಬೆಂಕಿ ಹೊತ್ತಿಸುವುದಕ್ಕಾಗಿ ಉಪಯೋಗ)

Púnka(h) ಪಂಕ (ನಾ.) (ಈಸ್ಟ್ ಇಂಡಿಯದಲ್ಲಿ) (ಸಾ., ತಾಳೆಯ ಗರಿಯ) ಕೈ ಬೀಸಣಿಗೆ. ಮರದ ಪಟ್ಟಿಗೆ ನಿರಿಗೆಯ ಬಟ್ಟೆಯನ್ನಳವಡಿಸಿ ತೂಗ ಹಾಕಿರುವುದನ್ನು ಹಗ್ಗದಿಂದ ಎಳೆದು ಗಾಳಿ ಬೀಸುವ ದೊಡ್ಡ ಬೀಸಣಿಗೆ; ಪಂಕ.

Púnner. **Pun**[2] ನೋಡಿ.

Púnnet ಪನೆಟ್ (ನಾ.) (ಹಣ್ಣು ಹಂಪಲು, ತರಕಾರಿ, ಮೊ. ಗಳಿಗೆ ಉಪಯೋಗಿಸುವ) ಬಿದಿರು ದಬ್ಬೆಯ ಸಣ್ಣ ದುಂಡು ಕುಕ್ಕೆ; ಮಕ್ಕರಿ.

Púnster. **Pun**[1] ನೋಡಿ.

Punt[1] ಪಂಟ್ (ನಾ., ಕ್ರಿ. ಸಕ.) ಜಳವೆ ಹಾಕಿ ನಡಸುವ, ಚಪ್ಪಟೆ ತಳದ, ಅಗಲವಾದ ಚದರ ಕೊನೆಗಳ, ಆಳವಿಲ್ಲದ ದೋಣಿ: 'ಪಂಟ್' ದೋಣಿ. (ಕ್ರಿ.) —ಯನ್ನು ಜಳವೆ ಹಾಕಿ ನಡಸು. **Púnter**[1] (ನಾ.) =**Púntist** (ನಾ.)

Punt[2] ಪಂಟ್ (ಕ್ರಿ. ಸಕ., ನಾ.) (ಕಾಲ್ಚೆಂಡು) ಕೈಯಿಂದ ಬಿದ್ದು ನೆಲಕ್ಕೆ ತಾಕುವ ಮೊದಲೇ ಒದೆ. (ನಾ.) ಇಂಥ ಒದೆತ. P.-about ಅಭ್ಯಾಸಕ್ಕಾಗಿ ಕಾಲ್ಚೆಂಡನ್ನು ಒದೆದಾಡುವುದು; ಇದಕ್ಕೆ ಬಳಸುವ ಕಾಲ್ಚೆಂಡು.

Punt[3] ಪಂಟ್ (ಕ್ರಿ. ಅಕ., ನಾ.) (ಕೆಲವು ಇಸ್ಪೀಟಾಟಗಳಲ್ಲಿ) ಜೂಜಾಟದ ನಿಧಿಗೆ ಎದುರಾಗಿ ಪಣವೊಡ್ಡು. (ಬಳ. ಮಾ.) (ಕುದುರೆಯ ಜೂಜು, ಮೊ. ಗಳಲ್ಲಿ) ಕುದುರೆಯ ಮೇಲೆ ಪಣವೊಡ್ಡು. (ನಾ.) ಪಣವೊಡ್ಡಿ ಆಡುವವನು. ('Faro' ಎಂಬ ಇಸ್ಪೀಟಾಟದಲ್ಲಿ) ಒಂದು ಗೆಲ್ಲಂಕ. **Púnter**[2] (ನಾ.)

Púnty, Pó- ಪಂಟಿ (ನಾ.) ಕರಗಿದ ಕಾಚ ದ್ರವಕ್ಕೆ ರೂಪ ಕೊಡುವುದರಲ್ಲಿ ಉಪಯೋಗಿಸುವ ಕಬ್ಬಿಣದ ಸರಳು.

Púny ಪ್ಯೂನಿ (ಗು.) ತಕ್ಕಷ್ಟು ಬೆಳವಣಿಗೆ ಇಲ್ಲದ; ಕುಬ್ಜಾಕಾರದ; ಸಣ್ಣ ರೂಪಿನ. ನಿಶ್ಶಕ್ತ; ದುರ್ಬಲ; ಅಲ್ಪ. **Púniness** (ನಾ.)

Pup ಪಪ್ (ನಾ., ಕ್ರಿ.) ನಾಯಿ ಮರಿ; ಕುನ್ನಿ (In p. ಗಬ್ಬವಾಗಿ, ಬಸಿರಾಗಿ). [Conceited p. ಪ್ರತಿಷ್ಠೆಯ —ಹುಡುಗ, ಯುವಕ; ಜಂಬದ ಕೋಳಿ. Sell person a pup (ಮುಂದೆ ಅದಕ್ಕೆ ಬೆಲೆಯಾಗುವುದೆಂಬ ನಂಬಿಕೆ ಹೇಳಿ) ಒಂದು ಪದಾರ್ಥವನ್ನು ಒಬ್ಬನಿಗೆ ಮೋಸದಿಂದ ಮಾರು]. (ಕ್ರಿ.) (ನಾಯಿ) ಮರಿ ಹಾಕು. **Púppy** ಪಪಿ (ನಾ.) ನಾಯಿ ಮರಿ; ಕುನ್ನಿ (=P. dog) (ಮಕ್ಕಳ ಮಾತು). ಬುದ್ಧಿಯಿಲ್ಲದ ಜಂಬದ ಯುವಕ; ಜಂಬದ ಕೋಳಿ. **Púppydom** (ನಾ.); **Púppyhood** (ನಾ.); **Púppyish** (ಗು.); **Púppyism** (ನಾ.)

Púpa ಪ್ಯೂಪ (ನಾ.; ಬ. ವ. -ae —ಪೀ) ಪೊರೆ(ಗೂಡು)ಹುಳು. **Púpal** (ಗು.). **Púpate** —ಪೇಟ್ (ಕ್ರಿ. ಅಕ.) ಪೊರೆಹುಳುವಾಗು. **Pupátion** (ನಾ.)

Púpil ಪ್ಯೂಪಿಲ್ (ನಾ.) ಮತ್ತೊಬ್ಬನಿಂದ ಪಾಠ ಕಲಿತುಕೊಳ್ಳುವವನು(ಳು): ವಿದ್ಯಾರ್ಥಿ(ನಿ); ಶಿಷ್ಯ(ಷ್ಯೆ); ಮಾಣಿ; ಛಾತ್ರ. (ನ್ಯಾ. ಶಾ.) ಪ್ರೌಢಾವಸ್ಥೆ ಇನ್ನೂ ಪಡೆಯದೆ ಒಬ್ಬನ ಪಾಲನೆಯಲ್ಲಿರುವ ಹುಡುಗ(ಗಿ). [P.-teacher ಪ್ರಾಥಮಿಕ ಪಾಠಶಾಲೆಯ ಮುಖ್ಯೋಪಾಧ್ಯಾಯನಲ್ಲಿ (ಅಥವಾ ಇತರ ಕಡೆಯಲ್ಲಿ) ತಾನು ವಿದ್ಯೆ ಕಲಿಯುತ್ತಿದ್ದು ಆ ಮುಖ್ಯೋಪಾಧ್ಯಾಯನ ಕೈಕೆಳಗೆ ಅದೇ ಪಾಠಶಾಲೆಯಲ್ಲಿ ಇತರ ಬಾಲಕರಿಗೆ ಪಾಠ ಹೇಳಿಕೊಡುವ ಹುಡುಗ, ಹುಡುಗಿ: ಶಿಷ್ಯೋಪಾಧ್ಯಾಯ(ಯಿನಿ)]. (ಕಣ್ಣಿನ) ಪಾಪೆ; ಕನೀನಿಕೆ (ಈ ಕಂಡಿಗೆ ಸಂಕುಚಿತವಾಗುವ ಅಥವಾ ವಿಸ್ತೃತವಾಗುವ ಶಕ್ತಿಯಿರುವುದರಿಂದ ಇದರ ಮೂಲಕ ಹೊರ ಬೆಳಕು ಕಣ್ಣಿನ ಹಿಂಭಾಗದಲ್ಲಿರುವ ಅಕ್ಷಿ ಪಟಲದ ಮೇಲೆ ಎಷ್ಟು ಬೇಕೊ ಅಷ್ಟು ಮಟ್ಟಿಗೆ ಬೀಳಲು ಅನುಕೂಲವಾಗಿದೆ). **Púpil(l)ar** (ಗು.) =**Púpil(l)ary** (ಗು.) ಕನೀನಿಕೆಯ. **Púpil(l)age** —ಲೆ(ಲ)ಜ್ (ನಾ.) ಅಪ್ರಾಪ್ತ ವಯಸ್ಕತೆ; ಅಪ್ರೌಢ ದಶೆ; ಬಾಲ್ಯಾವಸ್ಥೆ (ದೇಶ, ಭಾಷೆ, ಮೊ. ಗಳ ವಿಷಯದಲ್ಲಿ ರೂಪ.) [**Pupil(l)árity** (ನಾ.) (ನ್ಯಾ. ಶಾ.)]; ವಿದ್ಯಾರ್ಥಿ ದಶೆ; ಶಿಷ್ಯತ್ವ. **Púpilship** (ನಾ.); **Púpil(l)ize** —ಲೈಸ್ (ಕ್ರಿ.) ವಿದ್ಯಾರ್ಥಿಗಳನ್ನು (ಪಾಠ ಕಲಿಯಲು) ಸೇರಿಸಿಕೊ; (ಶಿಷ್ಯರಿಗೆ) ಪಾಠ ಕಲಿಸು.

Pupíparous (ಗು.) ಪ್ಯೂಪಿಪರಸ್ (ಗು.) (ಕ್ರಿಮಿ ಶಾಸ್ತ್ರ) ಪೊರೆ ಹುಳುವಿನ ಅವಸ್ಥೆಗೆ ಆಗಲೇ ಬಂದಿರುವ ಸಂತಾನವನ್ನು ಹೆರುವ; ಪೊರೆಹುಳುಗಳನ್ನೇ ಹೆರುವ.

Púppet ಪಪೆಟ್ (ನಾ.) (ಸಾ., ಸಣ್ಣನಾಗಿರುವ, ಮನುಷ್ಯಾಕಾರದ) ಸೂತ್ರದ ಬೊಂಬೆ; ಕೀಲು ಬೊಂಬೆ. (ಮತ್ತೊಬ್ಬನ) ಕೈಗೊಂಬೆ (ಯಾಗಿರುವವನು). (P.-play, -show ಸೂತ್ರದ ಬೊಂಬೆಯಾಟ. P.-clack, -valve ಕೀಲುಗೂಡಿಸಿಲ್ಲದೆ ಪೂರ್ತಿಯಾಗಿ ಮೇಲಕ್ಕೆದ್ದು ದ್ರವ, ಮೊ. ವು ಒಳಹೊಗಲು ಅವಕಾಶ ಕೊಡುವ ಬಿಲ್ಲೆ, ಕವಾಟ). **Púppetry** (ನಾ.) ಸೂತ್ರದ ಬೊಂಬೆಯಾಟ; ಇಂಥ ಅನುಕರಣದ ಕಾರ್ಯ ಅಥವಾ ಪ್ರದರ್ಶನ; ಮೂಕ ನಾಟಕ; ನಟನೆ.

Púppy. **Pup** ನೋಡಿ.

Púrblind ಪರ್‌ಬ್ಲೈಂಡ್ (ಗು., ಕ್ರಿ. ಸಕ.) ಅರೆ ಕುರುಡಾದ; ಮಂದ ದೃಷ್ಟಿಯ. (ರೂಪ.) ಮಂದ ಬುದ್ಧಿಯ; ದಡ್ಡ. (ಕ್ರಿ.) ಅರೆ ಕುರುಡು ಮಾಡು. **Púrblindness** (ನಾ.)

Púrchase ಪರ್‌ಚೆ(ಚ)ಸ್ (ನಾ., ಕ್ರಿ. ಸಕ.) (ಕೊಂಡು)ಕೊಳ್ಳುವುದು; ಕೊಳ್ಳಿಕೆ (P.-money ಕೊಂಡ ಬೆಲೆ; ಕೊಡಬೇಕಾದ ಬೆಲೆ). ಕೊಂಡು ಕೊಂಡದ್ದು; ಕೊಂಡ ವಸ್ತು. ಜಮೀನಿನಿಂದ ಬರುವ ವರ್ಷಾದಾಯ (Sold at 20 years' p. ೨೦ ವರ್ಷಗಳ ಆದಾಯಕ್ಕೆ ಮಾರಿದನು).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಚರಿತ್ರೆ) ಸೈನ್ಯದಲ್ಲಿ ಸನ್ನದು(ಹುದ್ದೆ)ಗಳನ್ನು ಕೊಂಡುಕೊಳ್ಳುವ ಪದ್ಧತಿ. (ನ್ಯಾ. ಶಾ.) ಸ್ವತಃ ಆಸ್ತಿಯನ್ನು ಸಂಪಾದಿಸುವುದು (ಪಿತ್ರಾರ್ಜಿತವಲ್ಲ); ಸ್ವಾರ್ಜಿತ. ಯಾಂತ್ರಿಕ ಲಾಭ; ಸನ್ನೆಯ ಫಲ (ರೂಪ. ಸಹ); ಯಾಂತ್ರಿಕ ಲಾಭ ಪಡೆಯುವ ಸಲಕರಣೆ [(ಮು., ನಾವೆಯಲ್ಲಿ) ಹಗ್ಗ, ಕಪ್ಪಿ, ಮೊ. ವು (Single, double, treble, -p. ಒಂದು, ಎರಡು, ಮೂರು, ಗಾಲಿ ತಂಡಗಳುಳ್ಳ ಕಪ್ಪಿ)]. (ಕ್ರಿ.) ಕೊಂಡುಕೊ; ಕ್ರಯಕ್ಕೆ ತೆಗೆದುಕೊ; (ಜಯ, ಸ್ವಾತಂತ್ರ್ಯ, ಮೊ. ನ್ನು ಕಷ್ಟಪಟ್ಟು) ಗಳಿಸು. (ನಾವೆ) (ಲಂಗರು, ಮೊ. ನ್ನು) ಕಪ್ಪಿ, ಸನ್ನೆ, ಮೊ. ಗಳ ಮೂಲಕ ಮೇಲೆತ್ತು. **Púrchasable** (ಗು.); **Púrchaser** (ನಾ.)

Púrdah ಪರ್ಡ (ನಾ.) (ಈಸ್ಟ್ ಇಂಡಿಯದಲ್ಲಿ) ಪರದೆ; ತೆರೆ (ಮು., ಹೆಂಗಸರು ಇತರ ಗಂಡಸರಿಗೆ ಅಥವಾ ಅಪರಿಚಿತರಿಗೆ ಕಾಣದಂತೆ ಹಾಕುವದು). (ರೂಪ.) ಗೋಷಾ ಪದ್ಧತಿ (ಇಂಡಿಯದಲ್ಲಿ ದೊಡ್ಡ ಮನೆತನದ ಹೆಂಗಸರನ್ನು ಹೊರ ದೃಷ್ಟಿಗೆ ಬೀಳದಂತೆ ಪ್ರತ್ಯೇಕಿಸಿಟ್ಟಿರುವುದು). ಪರದೆ (ಮಾಡುವ ಪಟ್ಟೆ ಪಟ್ಟೆಯ) ಬಟ್ಟೆ.

Pure ಪ್ಯೂರ್ (ಗು.) ಅಪ್ಪಟ; ಅಚ್ಚ; ಚೊಕ್ಕ; ಶುದ್ಧ; ಬೆರಕೆಯದಲ್ಲದ; ಅಮಿಶ್ರ (P. white, air, alcohol, water). (ಧ್ವನಿ, ಸ್ವರ) ಸುಸಂಗತವಾದ; (ಮು., ಸಂ.) ಸಂಪೂರ್ಣವಾಗಿ ಶ್ರುತಿಗೂಡುವ; ಶುದ್ಧ. ಶುದ್ಧ—ಜಾತಿಯ, ತಳಿಯ, ವಂಶದ. [P. mathematics (ಪ್ರಯೋಗ ಭಾಗವನ್ನೊಳಕೊಂಡಿಲ್ಲದ) ಶುದ್ಧ ಗಣಿತ (Applied, mixed ಎಂಬುದಕ್ಕೆ ಎದುರು ಪದ)]. ಬರಿಯ; ಕೇವಲ; ಶುದ್ಧ ಅದೇ ಆದ (Knowledge p. & simple. P. nonsense). ಕೆಟ್ಟಿರದ; ನಿರ್ಮಲ; ನಿರ್ದುಷ್ಟ (His taste was severe & p.). ನೀತಿಗೆಟ್ಟಿಲ್ಲದ; ನಿಷ್ಕಳಂಕ; ನಿಷ್ಕಪಟ; ಪಾತಿವ್ರತ್ಯವುಳ್ಳ. **Púrely** (ಕ್ರಿ. ವಿ.) (ಶುದ್ಧಾಂಗವಾಗಿ, ಪೂರ್ತಿಯಾಗಿ—ಎಂಬ ಅರ್ಥಗಳಲ್ಲಿ ವಿನಾ ವಿರ. ಪ್ರ.). **Púreness** (ನಾ.); **Purificátion** (ನಾ.) ಶುದ್ಧೀಕರಣ; ಶುದ್ಧಿ; ಶುದ್ಧಿ ಸ್ನಾನ (ಮು., ಯೆಹೂದ್ಯರಲ್ಲಿ ಹೆರಿಗೆಯಾದಮೇಲೆ ಬಾಣಂತಿಗೆ ಮಾಡಿಸುವ ವಿಧಿವಿಹಿತವಾದ ಸ್ನಾನ). [The P. (of the Virgin Mary) ಫೆಬ್ರುವರಿ ೨ನೆಯ ತಾರೀಕು (ಮೇರಿ ಕನ್ನಿಕೆಯ ಪ್ರಸವ ಸ್ನಾನ ದಿನ)]. **Púrificatory** (ಗು.); **Púrificator** (ನಾ.) (ಕ್ರೈಸ್ತ ಮತದಲ್ಲಿ) ಪ್ರಭುಭೋಜನ ಸಂಸ್ಕಾರದಲ್ಲಿ ಮಧು ಕಲಶವನ್ನೂ ಪವಿತ್ರ ರೊಟ್ಟಿಯ ತಟ್ಟೆಯನ್ನೂ ಪುರೋಹಿತನ ಬೆರಳು ತುಟಿಗಳನ್ನೂ ಒರಸಲು ಉಪಯೋಗಿಸುವ ಬಟ್ಟೆ: ಶುದ್ಧೀಕರಣ ವಸ್ತ್ರ. **Púrify** ಪ್ಯೂರಿಫೈ (ಕ್ರಿ. ಸಕ.) (ಪರಿ)ಶುದ್ಧ ಮಾಡು; ಪುನೀತ ಮಾಡು (*Of, from,* impurities, sin, etc.); (ಸಂಸ್ಕಾರದಿಂದ) ಶುದ್ಧಿ ಮಾಡು; (ಒಂದರಲ್ಲಿ ಸೇರಿರುವ ಅನ್ಯ ಪದಾರ್ಥಗಳನ್ನು ತೆಗೆದುಹಾಕಿ) ಶುದ್ಧ ಮಾಡು. **Púrifier** (ನಾ.); **Púrism** (ನಾ.) ಮು., ಭಾಷಾ ಶೈಲಿಯಲ್ಲಿ, ಪದ ಪ್ರಯೋಗದಲ್ಲಿ, ಪರಿಶುದ್ಧತೆಯನ್ನು ಸಾಧಿಸಲೇ ಬೇಕೆಂಬ ವಾದ: ಪರಿಶುದ್ಧತಾ ವಾದ. **Púrist** (ನಾ.) —ವಾದಿ. **Purístic(al)** (ಗು.); **Púrity** ಪ್ಯೂರಿಟಿ (ನಾ.) (ಪರಿ)ಶುದ್ಧತೆ; ಶುದ್ಧಿ; ನೈರ್ಮಲ್ಯ; (ದೈಹಿಕ ಅಥವಾ ನೈತಿಕ) ನಿಷ್ಕಳಂಕತೆ, ನಿರ್ದೋಷತೆ.

Púrfle ಪರ್‌ಫ್‌ಲ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) ಅಂಚು, ಕರೆ (ಮು., ಕಸೂತಿ ಕೆಲಸಮಾಡಿದ ಉಡುಪಿನ ಅಂಚು). (ಕ್ರಿ. ಸಕ.) (ನಿಲುವಂಗಿಗೆ) ಕಸೂತಿಯಂಚಿನ ಅಲಂಕಾರ ಮಾಡು. (ಕಟ್ಟಡದ ಏಣು, ಮೊ. ಗಳಿಗೆ) (ಎಲೆ, ಮೊಗ್ಗು, ಮೊ. ದ) ಅಲಂಕಾರ ಮಾಡು (*With* ಉಪ. ದೊಡನೆ). **Púrfling** (ನಾ.) (ಕ್ರಿಯಾರ್ಥಗಳಲ್ಲಿ). ಪಿಟೀಲಿನ ಒಡಲಮೇಲೂ ಬೆನ್ನಮೇಲೂ ಅಂಚಿನಲ್ಲಿ ಮಾಡಿದ ಕೆತ್ತನೆಯ ಅಲಂಕಾರ.

Purgátion, Púrgative, Púrgatory. Purge ನೋಡಿ.

Purge ಪರ್ಜ್ (ಕ್ರಿ., ನಾ.) [ದೇಹವನ್ನೂ ಆತ್ಮವನ್ನೂ ಕಲ್ಮಷ (ಕೊಳೆ, ಪಾಪ, ಮೊ. ನ್ನು) ಕಳೆದು] (ಪರಿ)ಶುದ್ಧ ಮಾಡು (*Of, from* ಉಪ. ದೊಡನೆ). ತೊಳೆದು ಶುದ್ಧಿ ಮಾಡು (*Away, off, out* ಉಪ. ದೊಡನೆ) (ರೂಪ. ಸಹ). (ಔಷಧ)ಭೇದಿ ಮಾಡಿಸು. ಭೇದಿಯಾಗು; —ಮಾಡು. ಆಪಾದನೆ, ಸಂಶಯ, ಮೊ. ಗಳಿಂದ (ಒಬ್ಬನನ್ನು, ತನ್ನನ್ನು) ಮುಕ್ತನನ್ನಾಗಿ ಮಾಡು. (ನ್ಯಾ. ಶಾ.) ಪ್ರಾಯಶ್ಚಿತ್ತದಿಂದ, ಶರಣಾಗತಿಯಿಂದ, —ಅಪರಾಧ ಮುಕ್ತನಾಗು, ದಂಡನೆಯನ್ನು ತೊಡೆದು ಹಾಕು. (ನಾ.) = Purgation. ಭೇದಿಯೌಷಧ; ಸುಖ ವಿರೇಚಕ. **Purgátion** ಪರ್ಗೇಷನ್ (ನಾ.) ಶುದ್ಧೀಕರಣ; ಭೇದಿ(ಯಾಗುವುದು, ಮಾಡಿಸುವುದು); ವಿರೇಚನ. (ರೋ. ಕ್ಯಾ. ಮತದಲ್ಲಿ) ಆತ್ಮ ಶುದ್ಧೀಕರಣ (ಮು., ಆತ್ಮವನ್ನು ಪಾಪವಿಮೋಚಕ ದಂಡನಾ ಸ್ಥಾನದಲ್ಲಿ ಪರಿಶುದ್ಧಗೊಳಿಸುವುದು). (ಚರಿತ್ರೆ) (ಶಪಥ, ಅಗ್ನಿ ಪರೀಕ್ಷೆ, ಮೊ. ಗಳ ಮೂಲಕ) ನಿರ್ದೋಷಿಯೆಂದು ಸ್ಥಾಪಿಸಿಕೊಳ್ಳುವುದು. **Púrgative** ಪರ್ಗಟಿವ್ (ಗು., ನಾ.) ಭೇದಿಮಾಡಿಸುವ (ಔಷಧ); ವಿರೇಚಕ. ಶುದ್ಧೀಕರಿಸುವ; ಶುದ್ಧಿಕಾರಕ. **Púrgatory** ಪರ್ಗಟರಿ (ನಾ., ಗು.) ಶುದ್ಧಿ ಲೋಕ [(ಮು., ರೋ. ಕ್ಯಾ.: ದೇವರ ಕೃಪೆಗೆ ಪಾತ್ರರಾಗಿ ಸತ್ತವರ, ಆದರೆ ಕ್ಷಮಾರ್ಹವಾದ ಪಾಪಗಳಿಂದ ಮುಕ್ತರಾಗಬೇಕಾದವರ, ಆತ್ಮಗಳು) ಪಾಪ ಪರಿಹಾರ ದಂಡನೆ ಪಡೆಯುವ ಸ್ಥಳ]. ತಾತ್ಕಾಲಿಕ ಕ್ಲೇಶಾನುಭವದ ಅಥವಾ ಪ್ರಾಯಶ್ಚಿತ್ತದ ಸ್ಥಳ. (ಗು.) ಶುದ್ಧಿಕಾರಕ; ಮಾರ್ಜಕ. **Purgatórial** (ಗು.)

Purificátion, Púrism, Púrist, etc. Pure ನೋಡಿ.

Púritan ಪ್ಯೂರಿಟನ್ (ನಾ., ಗು.) (ಚರಿತ್ರೆ) ಎಲಿಸಬೆತ್ ರಾಣಿಯ ಕಾಲದಲ್ಲಿ ನಡೆದ ಕ್ರೈಸ್ತ ಮತ ಸುಧಾರಣೆಯು ಅಸಂಪೂರ್ಣವೆಂದು ಅಭಿಪ್ರಾಯಪಟ್ಟು, ಅಶಾಸ್ತ್ರೀಯವೂ ದೂಷಣೀಯವೂ ಆದ ಆಚಾರಗಳನ್ನು ತೊಡೆದುಹಾಕಲು ಪ್ರಯತ್ನಿಸಿದ ಇಂಗ್ಲಿಷ್ ಪ್ರಾಟೆಸ್ಟಂಟ್ ಮತಸ್ಥರ ಒಂದು ಪಕ್ಷಕ್ಕೆ ಸೇರಿದವನು; ಧರ್ಮಶುದ್ಧಿ ವಾದಿ; ಧರ್ಮಶೋಧನ ವಾದಿ; ಶುದ್ಧ ಸುಧಾರಕ; 'ಪ್ಯೂರಿಟನ್'. ಧರ್ಮದಲ್ಲೂ ನೀತಿ ವಿಷಯದಲ್ಲೂ ಅತಿ ಕಟ್ಟುನಿಟ್ಟಿನವನು; ಮಹಾ ನೇಮಿಷ್ಠ; —ನಂತೆ ನಟಿಸುವವನು; ವೀರ ನಿಯಮಿ; ಮನುಷ್ಯನಿಗೆ ಸ್ವಾಭಾವಿಕವಾದ ಸುಖ ಸಂತೋಷಗಳಿಗೆ ವಿರೋಧಿಯಾದವನು; ವಿನೋದ ವೈರಿ. **Puritánic(al)** (ಗು.); **Puritánically** (ಕ್ರಿ. ವಿ.); **Púritanism** (ನಾ.); **Púritanize** (ಕ್ರಿ.)

Púrity. Pure ನೋಡಿ.

Purl[1] ಪರ್ಲ್ (ನಾ., ಕ್ರಿ.) (ಅಂಚು ಕಟ್ಟಲು ಉಪಯೋಗಿಸುವ) ಬೆಳ್ಳಿಯ ಅಥವಾ ಚಿನ್ನದ ಸರಿಗೆ; ಜರಿ. (ಅಲಂಕಾರ ಪಟ್ಟಿ, ಮೊ. ಗಳ ಅಂಚಿನಲ್ಲಿ ಅಲಂಕಾರವಾಗಿ ಹಾಕಿರುವ) ಬಹು ಸಣ್ಣ ಕುಣಿಕೆ ರೂಪಗಳ ಸರಪಣಿ; ಅಲಂಕಾರದ ಕುಣಿಕೆ. (ಹೆಣಿಗೆ ಕೆಲಸದಲ್ಲಿ) ಉಬ್ಬು ಬರುವಂತೆ ಹಾಕುವ ತಲೆಕೆಳಕು ಹೊಲಿಗೆ (= Pearl[2]). (ಕ್ರಿ.) (ಬಟ್ಟೆಯ) ಅಂಚಿಗೆ ಸರಿಗೆ ಹಾಕು, ಕುಣಿಕೆಯಲಂಕಾರ ಮಾಡು. (ಕಾಲುಚೀಲ, ಮೊ. ರ) ಹೊಲಿಗೆಯನ್ನು ತಲೆಕೆಳಕಾಗಿ ಹಾಕು.

Purl[2] ಪರ್ಲ್ (ಕ್ರಿ. ಅಕ., ನಾ.) (ಸಣ್ಣ ಹೊಳೆ, ಮೊ. ರ ವಿಷಯದಲ್ಲಿ) ಸುರುಳಿ ಸುರುಳಿಯಾಗಿ ಗುಳು ಗುಳು ಶಬ್ದದಿಂದ ಹರಿ. (ನಾ.) ಇಂಥ ಹರಿತ, ಶಬ್ದ.

Purl[3] ಪರ್ಲ್ (ಕ್ರಿ., ನಾ.) (ಬಳ. ಮಾ.) ತಲೆಕೆಳಕು ಮಾಡು, ಆಗು; ಉರುಳಿಸು. (ನಾ.) ಬಲವಾದ ಬೀಳು(ವಿಕೆ), ಕೆಡೆ, ಪತನ. **Púrler** (ನಾ.) (ಒಬ್ಬನನ್ನು) ತಲೆ ಮುಂದಾಗಿ ಕೆಡಹುವ ಎಸೆತ, ಹೊಡೆತ.

Púrlieu ಪರ್ಲ್ಯೂ (ನಾ.) ಅರಣ್ಯದ ಅಂಚಿನಲ್ಲಿಯ ಪ್ರದೇಶ (ಮು., ಮೊದಲು ಅರಣ್ಯಕ್ಕೇ ಸೇರಿದ್ದು ಈಗಲೂ ಸ್ವಲ್ಪ ಮಟ್ಟಿಗೆ ಅರಣ್ಯ ನಿಯಮಗಳಿಗೆ ಒಳಪಟ್ಟಿರುವುದು). ಎಲ್ಲೆ, ಗಡಿ, ಮೇರೆ, ಮಿತಿ. (ಬ. ವ. ದಲ್ಲಿ) ಗಡಿಯ ಹೊರಭಾಗಗಳು, ಪರಿಸರ (ಪ್ರಾಂತ) (ರೂಪ. ಸಹ). ಪಟ್ಟಣದ ಕೊಳಕು ಗಲ್ಲಿ, ಗಲೀಜು ಭಾಗ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Púrlin ಪರ್ಲಿನ್ (ನಾ.) ಮುಖ್ಯ ಆಧಾರಗಳಮೇಲೆ ಕುಳಿತು ಚಾವಣಿಯ ಉದ್ದಕ್ಕೂ ಹಾಯುವ, ಮೇಲಿನ ಸಾಮಾನ್ಯ ತೊಲೆಗಳಿಗೂ ಹಲಗೆಗಳಿಗೂ ಆಶ್ರಯವಾಗಿರುವ, ಉದ್ದ ಸರ.

Purloín ಪರ್ಲಾಯ್ನ್ (ಕ್ರಿ. ಸಕ.) ಕದಿ; ಅಪಹರಿಸು; ಎಗುರಿಸು. **Purloíner** (ನಾ.)

Púrple ಪರ್ಪ್‌ಲ್ (ನಾ., ಗು., ಕ್ರಿ.) ಕೆಂಪೂ ನೀಲಿಯೂ ಸ್ವಲ್ಪ ಕಪ್ಪು ಅಥವಾ ಬಿಳುಪಿನೊಡನೆ ಅಥವಾ ಇವೆರಡರೊಡನೆ ವಿವಿಧ ಪ್ರಮಾಣಗಳಲ್ಲಿ ಮಿಶ್ರವಾದ ಬಣ್ಣ(ದ); ಊದಾ ಬಣ್ಣ(ದ); ಕೆನ್ನೀಲಿ(ಯ); (ಹಿಂದೆ) ಕಡುಗೆಂಪು ಬಣ್ಣ(ದ) (=Tyrian p.). (P.-red ಊದಾ ಬಣ್ಣಕ್ಕೆ ಹತ್ತಿರ ಬರುವ ಕೆಂಪು ಬಣ್ಣ). (ಚಕ್ರವರ್ತಿ, ದೊರೆ, ರಾಯಭಾರಿ, ಮೊ. ರ) ಊದಾ ಮೇಲುಡುಪು [Born in the p. ಶ್ರೀಮಂತಿಕೆಯಲ್ಲಿ, ರಾಜಮನೆತನದಲ್ಲಿ, ಹುಟ್ಟು. Raised to the p. ಕಾರ್ಡಿನಲ್ (ಕ್ರೈಸ್ತ ಧರ್ಮಾಧ್ಯಕ್ಷ) ಪಟ್ಟ ಕಟ್ಟಲ್ಪಟ್ಟು]. (ಬ. ವ. ದಲ್ಲಿ) ಗೋಧಿಗೆ ತಗುಲುವ ಒಂದು ರೋಗ; ಕುಂಕುಮ ರೋಗ (P. Emperor ಚಿಟ್ಟೆ. P. patch, P. passage ಸಾಧಾರಣ ಶೈಲಿಯ ಗ್ರಂಥದಲ್ಲಿ ರಂಗಿನ, ಕಳೆಯಾದ, ಭಾಗ). (ಕ್ರಿ.) ಊದಾ ಬಣ್ಣ—ಮಾಡು, ಆಗು. **Púrplish** (ಗು.); **Púrply** (ಗು.)

Púrpoint. **Pourpoint** ನೋಡಿ.

Púrport ಪರ್‌ಪೋರ್ಟ್ (ನಾ.), **Purpórt** —ಪೋ(ೕ)ರ್ಟ್ (ಕ್ರಿ. ಸಕ.) (ದಸ್ತೈವಜಿನ ಅಥವಾ ಭಾಷಣದ) ಅರ್ಥ, ಅಭಿಪ್ರಾಯ, ತಾತ್ಪರ್ಯ, ಸಾರಾಂಶ. (ವಿರ. ಪ್ರ.) ಉದ್ದೇಶ. (ಕ್ರಿ.) (ದಸ್ತೈವಜು, ಭಾಷಣ) ಅರ್ಥ, ಭಾವ, —ಕೊಡು, ಆಗಿರು; (—ಎಂದು) ತಿಳಿಸು, ಹೇಳು (*That* ಪದದೊಡನೆ); (—ಎಂಬ) ಉದ್ದೇಶವಾಗಿ ಕಾಣು.

Púrpose ಪರ್ಪಸ್ (ನಾ., ಕ್ರಿ. ಸಕ.) ಉದ್ದೇಶ, ಉದ್ದೇಶಿಸಿದ್ದು; ಸಂಕಲ್ಪ; ಗುರಿ [Could not effect my p. ನನ್ನ ಉದ್ದೇಶವನ್ನು ಸಾಧಿಸಲಾಗಲಿಲ್ಲ. This will answer (or serve) our (or the) p. What is the p. of this law? Honesty of p. Is wanting in p. Novel with a p., P.-novel ಒಂದು ತತ್ತ್ವ ಸಮರ್ಥನೆಗಾಗಿ ಬರೆದ ಕಾದಂಬರಿ. On p. ಉದ್ದೇಶಪೂರ್ವಕವಾಗಿ, ಕಾರ್ಯಾರ್ಥವಾಗಿ (*To* do, that); ಒಂದು ಗೊತ್ತಾದ ಉದ್ದೇಶದಿಂದ (ಅಕಸ್ಮಾತ್ತಾಗಲ್ಲ) (=Of set p.). To the p. ಸಂಗತವಾದ; ಪ್ರಸಕ್ತವಾದ; ಪ್ರಸ್ತುತವಾದ; ಉದ್ದೇಶ ಸಾಧಕವಾದ. To little, no, p. ನಿಷ್ಫಲವಾಗಿ; ಯಾವ ಪ್ರಯೋಜನಕ್ಕೂ ಆಗದೆ; ವೃಥಾ. To some p. ಸ್ವಲ್ಪಮಟ್ಟಿಗೆ ಪ್ರಯೋಜನಕರವಾಗಿ]. (ಕ್ರಿ.) ಉದ್ದೇಶ ಪಡು; ಸಂಕಲ್ಪಿಸು; ಬಗೆ [I p. (arranging or to arrange) an interview. I p. that an interview shall be arranged]. (ಪ್ರಾಚೀ. ಪ್ರ.) Am purposed (—ಎಂದು) ಉದ್ದೇಶಿಸಿದ್ದೇನೆ (*To* do, *doing*, *that*). **Púrposeful** (ಗು.); **Púrposefully** (ಕ್ರಿ. ವಿ.); **Púrposefulness** (ನಾ.); **Púrposeless** (ಗು.); **Púrposelessly** (ಕ್ರಿ. ವಿ.); **Púrposelessness** (ನಾ.); **Púrposely** (ಕ್ರಿ. ವಿ.) ಬೇಕೆಂದು, ಉದ್ದೇಶಪೂರ್ವಕವಾಗಿ. **Púrposive** (ಗು.) ಒಂದು ಉದ್ದೇಶವುಳ್ಳ; ಒಂದು ಉದ್ದೇಶ ಸಾಧಕವಾದ; ಉದ್ದೇಶಪೂರ್ವಕವಾದ. (ವ್ಯಕ್ತಿ, ನಡತೆ) ಉದ್ದೇಶವೂ ದೃಢ ನಿಶ್ಚಯವೂ ಉಳ್ಳ.

Púrpura ಪರ್‌ಪ್ಯುರ (ನಾ.) ಚರ್ಮದಮೇಲೆ ಊದಾ ಬಣ್ಣದ ಅಥವಾ ನೀಲಿಗಟ್ಟಿದ ಕಲೆಗಳಾಗುವ ಒಂದು ರೋಗ. (ಹಿಂದೆ ಊದಾ ಬಣ್ಣ ದೊರೆಯುತ್ತಿದ್ದ ಒಂದು ಜಾತಿಯ ಪ್ರಾಣಿಯನ್ನೊಳಕೊಂಡ) ಒಂದು ಚಿಪ್ಪಿನ ಪ್ರಾಣಿಜಾತಿ. **Purpúric** —ಪ್ಯೂರಿಕ್ (ಗು.) 'ಪರ್‌ಪ್ಯೂರ' ರೋಗದ (P. fever). P. acid (ಅದರ ಲವಣಗಳು ಊದಾ ಬಣ್ಣದವಾಗಿರುವ) ಒಂದು ಊಹಿತ ಆಮ್ಲ. **Púrpurin** —ಪ್ಯುರಿನ್ (ನಾ.) ಒಂದು ಕೆಂಪು ವರ್ಣದ್ರವ್ಯ [ಹಿಂದೆ 'ಮ್ಯಾಡರ್' (ಮಂಜಿಷ್ಠ) ಎಂಬ ಸಸ್ಯದಿಂದ ತಯಾರಿಸುತ್ತಿದ್ದದ್ದು]

Purr ಪರ್ (ಕ್ರಿ., ನಾ.) (ಬೆಕ್ಕು, ಬೆಕ್ಕಿನ ಜಾತಿಯ ಪ್ರಾಣಿಗಳು, ರೂಪಕವಾಗಿ ಮನುಷ್ಯ) ಸಂತೋಷ ಸೂಚಕವಾಗಿ ಎಡೆಬಿಡದೆ ಮಂದ್ರ ಕಂಪನ ಧ್ವನಿಮಾಡು: 'ಪರ್'ಗುಟ್ಟು; (ಮಾತನ್ನು, ಸಂತೃಪ್ತಿಯನ್ನು) ಹೀಗೆ ಸೂಚಿಸು, ತಿಳಿಸು. (ನಾ.) ಪರ್‌ಗುಟ್ಟುವ ಶಬ್ದ.

Púrree ಪರಿ (ನಾ.) (ಇಂಡಿಯದಲ್ಲಿಯೂ ಚೀನದಲ್ಲಿಯೂ ದೊರೆಯುವ ಒಂದು ಬಗೆಯ) ಹಳದಿ ಬಣ್ಣ ಪದಾರ್ಥ; ಪೀತ ವರ್ಣದ್ರವ್ಯ. **Purréic** (ಗು.)

Pur Sang (F) ಪೂರ್ ಸಾನ್ (ಗು.) ಪೂರ್ಣ ರಕ್ತಸಂಬಂಧದ; ಶುದ್ಧ ಜಾತಿಯ; ಬೆರಕೆಯಿಲ್ಲದ; ಸಂಪೂರ್ಣವಾದ; ಸಾಚಾ; ಅಪ್ಪಟ (Is Welsh *or* a Welshman, militarist, a cynic, p. The artist p. is a rarity)

Purse ಪರ್ಸ್ (ನಾ.) ಹಣ, ಮೊ. ನ್ನು ತನ್ನೊಡನೆ ತೆಗೆದುಕೊಂಡು ಹೋಗುವುದಕ್ಕಾಗಿ, ತೊಗಲು, ಮೊ. ಗಳಿಂದ ಮಾಡಿದ ಸಣ್ಣ ಚೀಲ: ಹಣದ, ದುಡ್ಡಿನ, —ಚೀಲ [(ಹಿಂದೆ) ಬಾಯಿಗೆ ಕಟ್ಟಿದ ದಾರವನ್ನು ಎಳೆಯುವುದರಿಂದ ಮುಚ್ಚಬಹುದಾದದ್ದು]; ಹಿಮ್ಮಣಿ ಚೀಲ; ಥೈಲಿ. (ರೂಪ.) ಹಣ; ನಿಧಿ; ಬಂಡವಾಳ [A common p. Heavy *or* long p. ಐಶ್ವರ್ಯ; ಸಂಪತ್ತು. Light p. ಬಡತನ. The public p. ಸರ್ಕಾರದ, ರಾಷ್ಟ್ರದ, —ಕೋಶ, ಖಜಾನೆ. Privy P. (Privy ನೋಡಿ)]. (ಸ್ಪರ್ಧೆಯಲ್ಲಿ) ಬಹುಮಾನವಾಗಿ ಕೊಟ್ಟ, ಕೊಡಲು ವಸೂಲು ಮಾಡಿದ, ಚಂದಾ ಎತ್ತಿದ, —ಹಣ; ಬಹುಮಾನದ ಹಣ (Will any gentleman give *or* put up a p.?). [(ತುರ್ಕಿ ಸಾಮ್ರಾಜ್ಯದಲ್ಲಿ) P. of silver ೫೦೦ ಪಿಯಾಸ್ಟರುಗಳು, P. of gold ೧೦,೦೦೦ ಪಿಯಾಸ್ಟರುಗಳು (ಹಣ, ನಾಣ್ಯ)]. ಸ್ವಭಾವ ಜನ್ಯವಾದ ಕೋಶ, ಚೀಲ. [**P.-bearer** (ಒಬ್ಬನ, ಒಂದು ಸಂಸ್ಥೆಯ) ಹಣಕಾಸಿನ ಜವಾಬ್ದಾರಿಯುಳ್ಳವನು; ಕೋಶಾಧಿಕಾರಿ; ಭಂಡಾರಿ. ಇಂಗ್ಲೆಂಡಿನ ಶ್ರೀಮಂತ ಸಭೆಯ ಪ್ರಧಾನ ನ್ಯಾಯಾಧೀಶನ ಮುಂದೆ ಒಂದು ಚೀಲದಲ್ಲಿ ಅಧಿಕಾರ ಮುದ್ರೆಯನ್ನು ಹಿಡಿದುಕೊಂಡುಹೋಗುವವನು. **P.-net** (ಮೊಲ, ಮೊ. ನ್ನು ಹಿಡಿಯಲು ಉಪಯೋಗಿಸುವ, ಬಾಯಲ್ಲಿಯ ಹುರಿಯೆಳೆದು ಚೀಲವನ್ನು ಮುಚ್ಚಬಹುದಾದ) ಬಲೆಚೀಲ. **P.-proud** ಧನ ಮದದ; ಐಶ್ವರ್ಯೋನ್ಮತ್ತ. **P.-seine** ಮೀನು ಹಿಡಿಯುವ ಬಲೆಚೀಲ. **P.-strings** ಹಣದ ಚೀಲದ ಬಾಯಿಮುಚ್ಚುವ ಸರಿಕುಣಿಕೆ (Hold the p.-s. ವೆಚ್ಚದ ಮೇಲೆ ಹತೋಟಿಯುಳ್ಳವನಾಗಿರು. Tighten, loosen, the p.-s. ಹಣದ ವಿಷಯದಲ್ಲಿ ಬಿಗಿಹಿಡಿ, ಧಾರಾಳವಾಗಿರು)]. **Púrseful** (ನಾ.); **Púrseless** (ಗು.); **Púrser** (ನಾ.) (ಹಡಗಿನ ಸಂಬಂಧವಾದ) ಲೆಕ್ಕಾಚಾರವನ್ನಿಡುವ ಮತ್ತು ಆಹಾರ ಸಾಮಗ್ರಿಗಳ ಜವಾಬ್ದಾರಿಯುಳ್ಳ ಹಡಗಿನ ಅಧಿಕಾರಿ. **Púrsership** (ನಾ.)

Purse (ಕ್ರಿ.) (ವಿರ. ಪ್ರ.) ತನ್ನ ಹಣದ ಚೀಲಕ್ಕೆ ಸೇರಿಸು (*Up* ಉಪ. ದೊಡನೆ). (ತುಟಿಯನ್ನು, ಹುಬ್ಬನ್ನು) ಸಂಕುಚಿಸು, ಗಂಟಿಕ್ಕು, ಸುಕ್ಕುಬೀಳಿಸು (*Up* ಉಪ. ದೊಡನೆ); ಸುಕ್ಕುಬೀಳು.

Púrser. **Purse** (ನಾ.) ನೋಡಿ.

Púrslane ಪರ್ಸ್ಲೆ(ಸ್ಲಿ)ನ್ (ನಾ.) ಪಚ್ಚಡಿ ಮಾಡುವುದಕ್ಕೂ ಉಪ್ಪೂರಿಸಿಡುವುದಕ್ಕೂ ಬರುವ, ಎತ್ತರ ಬೆಳೆಯದ, ರಸವತ್ತಾದ ಒಂದು ಸೊಪ್ಪು: ದೊಡ್ಡ ಗೋಣಿ ಸೊಪ್ಪು.

Pursúance, Pursúant, etc. **Pursue** ನೋಡಿ.

Pursué ಪಸ್ಯೂ (ಕ್ರಿ.) (ಹಿಡಿಯುವ ಅಥವಾ ಕೊಲ್ಲುವ ಉದ್ದೇಶದಿಂದ) ಬೆನ್ನಟ್ಟು, ಬೆಂಬತ್ತಿ ಹೋಗು, ಹಿಂಬಾಲಿಸು. (ರೂಪ.) (ಪರಿಣಾಮ, ದಂಡನ, ರೋಗ, ಮೊ.) ಬಿಡದೆ ಬೆನ್ನುಹತ್ತು, ಬೆನ್ನಂಟು. (ಭೋಗ, ಮೊ. ನ್ನು, ತನ್ನ ಧ್ಯೇಯವನ್ನು) ಹುಡುಕಿಕೊಂಡು, ಗುರಿಯಾಗಿಟ್ಟುಕೊಂಡು, —ಹೋಗು. (ಇಟ್ಟುಕೊಂಡ ಯೋಜನೆ, ಮೊ. ಕ್ಕೆ) ಅನುಸಾರವಾಗಿ ನಡೆ. (ರಸ್ತೆ, ವಿಚಾರಣೆ, ನಡೆವಳಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿಡಿದು ಹೋಗು, ಅನುಸರಿಸಿ ಹೋಗು, ಮುಂದುವರಿಸು. (ವ್ಯಾಸಂಗ) ನಡಸುತ್ತ ಹೋಗು, ಮುಂದುವರಿಸು; (ಒಂದು ಕಸಬನ್ನು) ಹಿಡಿ, ಅವಲಂಬಿಸು; (ಒಂದರ) ಬೆನ್ನಟ್ಟಿ ಹೋಗು (*After* ಉಪ. ದೊಡನೆ ಸಹ). **Pursúable** (ಗು.); **Pursúance** —ಅನ್ಸ್ (ನಾ.) (ಯೋಜನೆ, ಧ್ಯೇಯ, ಮನೋಗತ, ಮೊ. ನ್ನು) ನಡಸುವುದು, ನಿರ್ವಹಿಸುವುದು, ಅನುಸರಿಸಿ ಹೋಗುವುದು (*Of* ಉಪ. ದೊಡನೆ) (In p. of). **Pursúant** (ಗು., ಕ್ರಿ. ವಿ.) ಅನುಸಾರವಾದ; ಅನುಸರಿಸುವ. (ಕ್ರಿ. ವಿ.) (ಕಾನೂನು, ಮೊ. ರ) ಪ್ರಕಾರ, ಅನುಸಾರವಾಗಿ (*To* the Act, etc.). **Pursúantly** (ಕ್ರಿ. ವಿ.); **Pursúer** (ನಾ.) (ಕ್ರಿಯಾರ್ಥಗಳಲ್ಲಿ); (ವ್ಯವಹಾರ ನ್ಯಾ. ಶಾ. ಮತ್ತು ಸ್ಕಾಚ್ ನ್ಯಾ. ಶಾ.) ಕಾನೂನು ಕ್ರಮ ಜರುಗಿಸುವವನು; ಫಿರ್ಯಾದು ನಡಸುವವನು (=Prosecutor). **Pursuít** ಪರ್ಸ್ಯೂಟ್ (ನಾ.) ಹಿಂದಟ್ಟಿಕೊಂಡು, ಬೆನ್ನಟ್ಟಿಕೊಂಡು, —ಹೋಗುವುದು [(ಮು.) In p. of (animal, person, one's object)]. (ಒಬ್ಬನು ಅನುಸರಿಸುವ) ವೃತ್ತಿ, ಕಸಬು, ಉದ್ಯೋಗ, ಹವ್ಯಾಸ.

Púrsuivant ಪರ್ಸ್ವಿವ್ಯಂಟ್ (ನಾ.) ವಂಶ ಲಾಂಛನ ಸಂಸ್ಥೆಯಲ್ಲಿ ಒಂದು ಗೊತ್ತಾದ ದರ್ಜೆಯ ಅಧಿಕಾರಿ. (ಕಾವ್ಯ) ಅನುಯಾಯಿ, ಅನುಚರ, ಅನುವರ್ತಿ.

Púrsy[1] ಪರ್ಸಿ (ಗು.) ದಮ್ಮು ಬರುವ; ಏದುವ; ಉಬ್ಬಸದ. ಬೊಜ್ಜು ಮೈಯ. **Púrsiness** (ನಾ.)

Púrsy[2] ಪರ್ಸಿ (ಗು.) (ಬಟ್ಟೆ, ಚರ್ಮ, ಮೊ. ವು) ಸುಕ್ಕುಬಿದ್ದ; ನಿರಿಗೆ ಕಟ್ಟಿದ; ಮಡಿಕೆಗಳುಳ್ಳ.

Púrtenance ಪರ್ಟಿನನ್ಸ್ (ನಾ.) (ಪ್ರಾಚೀ. ಪ್ರ.) ಪ್ರಾಣಿಯ ದೇಹದ ಒಳಭಾಗಗಳು (ಕರುಳು, ಹೃದಯ, ಪಿತ್ತಜನಕಾಂಗ ಮತ್ತು ಶ್ವಾಸಕೋಶಗಳು)

Púrulent ಪ್ಯೂರುಲೆಂಟ್ (ಗು.) ಕೀವಿನ; ಕೀವುತುಂಬಿದ; ಕೀವು ಸುರಿಯುತ್ತಿರುವ. **Púrulently** (ಕ್ರಿ. ವಿ.); **Púrulence** (ನಾ.); **Púrulency** (ನಾ.)

Purveý ಪರ್ವೇ (ಕ್ರಿ.) (ಕಸಬಾಗಿ, ಉದ್ಯೋಗವಾಗಿ, —ಆಹಾರ ಪದಾರ್ಥಗಳನ್ನು) ಒದಗಿಸು, ಸರಬರಾಯಿ ಮಾಡು. (ಒಬ್ಬನಿಗೆ, ಸೈನ್ಯ, ಮೊ. ಕ್ಕೆ) ಆಹಾರ ಸಾಮಗ್ರಿಗಳನ್ನು ಒದಗಿಸು, —ಗಳ ಸರಬರಾಯಿಗಾರನಾಗಿರು (*For* ಉಪ. ದೊಡನೆ). **Purveýance** —ಅನ್ಸ್ (ನಾ.) ಆಹಾರಪದಾರ್ಥಗಳ ಸರಬರಾಯಿ (ಮಾಡುವುದು). ಒಂದು ನಿಗದಿಯ ಬೆಲೆಯ ಮೇರೆಗೆ ಆಹಾರ ಸಾಮಗ್ರಿಗಳನ್ನು ಪಡೆಯುವುದಕ್ಕೂ, ಪ್ರಯಾಣಕ್ಕೆ ಇತರರ ಕುದುರೆ, ಬಂಡಿ, ಮೊ. ನ್ನು ಉಪಯೋಗಿಸಿಕೊಳ್ಳುವುದಕ್ಕೂ ರಾಜನಿಗೆ ಇದ್ದ ಹಕ್ಕು. **Purveýor** (ನಾ.) (ಮು., ದೊಡ್ಡ ಔತಣ ಸಮಾರಂಭ, ಮೊ. ಕ್ಕೆ) ಆಹಾರಪದಾರ್ಥಗಳನ್ನು ಒದಗಿಸುವ ಉದ್ಯೋಗದವನು (P. to the Royal Household). (ಚರಿತ್ರೆ) ದೊರೆಗೆ ಆಹಾರ ಸಾಮಗ್ರಿಗಳನ್ನು ಸರಬರಾಯಿ ಮಾಡುತ್ತಿದ್ದ ಅಧಿಕಾರಿ.

Púrview ಪರ್ವ್ಯೂ (ನಾ.) ಕಾನೂನಿನ ಕಟ್ಟಳೆಯ ಕಲಮುಗಳು. (ಕಾನೂನು, ದಸ್ತಾವೇಜು, ಯೋಜನೆ, ಪುಸ್ತಕ, ವೃತ್ತಿ, ಮೊ. ಗಳ) ವ್ಯಾಪ್ತಿ, ಉದ್ದೇಶ, ಮೇರೆ (*Of* ಉಪ. ದೊಡನೆ). ದೃಷ್ಟಿ ವ್ಯಾಪ್ತಿ.

Pus ಪಸ್ (ನಾ.) ಕೀವು.

Push ಪುಷ್ (ಕ್ರಿ.) ತಳ್ಳು; ನೂಕು; ದಬ್ಬು; ದೂಡು; ಸರಿಸು; ಜರುಗಿಸು (*Up, down, away, back,* ಮೊ. ಉಪ. ದೊಡನೆ). (ಬಿಲ್ಯರ್ಡ್ಸ್ ಆಟ) ತಳ್ಳು ಹೊಡೆತ ಹೊಡೆ. [(ದೋಣಿಯಲ್ಲಿ ಮನುಷ್ಯ) P. off (ದಡದಿಂದ ನೀರಿಗೆ ದೋಣಿ ಹೋಗುವುದಕ್ಕಾಗಿ) ಹುಟ್ಟಿನಿಂದ ದಡವನ್ನು ಒತ್ತು]. (ಪ್ರೈಬರ್ ಪ್ರ.) ಕೊಂಬಿನಿಂದ ತಿವಿ, ಹಾಯಿ. ಮುಂದಕ್ಕೆ ಚಾಚಿಕೊ(ಳ್ಳುವಂತೆ ಮಾಡು); ಹೊರಕ್ಕೆ, ಮುಂದಕ್ಕೆ, —ಚಾಚು (*Out, forth,* ಮೊ. ಉಪ. ದೊಡನೆ) (Plants p. out new roots. Cape pushes out into sea). ನೂಕಿ, ತಳ್ಳಿ, —ದಾರಿ ಮಾಡಿಕೊಂಡುಹೋಗು; ನುಗ್ಗಿಕೊಂಡುಹೋಗು (P. one's way). (ಮು., ಇತರರನ್ನು ಮೀರಿಸಲು, ತನ್ನ ಕಾರ್ಯ ಸಾಧಿಸಲು, ಮೊ. ಗಿ) ಮುನ್ನುಗ್ಗು, ಶ್ರಮ ವಹಿಸು. ಚೋದಿಸು, ಒತ್ತಾಯ ಮಾಡು (*On, to* do, *to* effort, etc.) [P. (on) claim ಹಕ್ಕು ಸಾಧಿಸು, ಸಾಗಿಸು, ಮುನ್ನಡಸು. To p. one's fortune ಹಣ ಸಂಪಾದನೆಯಲ್ಲಿ ನಿರತನಾಗಿರು. To p. one's conquests ರಾಜ್ಯ ಸಂಪಾದನೆಯಲ್ಲಿ ಮುಂದುವರಿ. P. (matter) through (ವಿಷಯವನ್ನು) ಪರಿಣಾಮಕ್ಕೆ ತರು, ಕೊನೆಗಾಣಿಸು]. (ಮು., ಜಾಹಿರಾತು ಮೂಲಕ, ಸಾಮಾನು, ಮೊ. ಗಳ) ಉಪಯೋಗ, ಬಳಕೆ, ಮಾರಾಟ, ಮೊ. ನ್ನು —ಹೆಚ್ಚಿಸು, ಮುಂದುವರಿಸು. (ಒಬ್ಬನನ್ನು) ಒತ್ತಾಯಪಡಿಸು, ಬಲಾತ್ಕಾರ ಮಾಡು [Do not wish to p. him for payment. (ಮು., ಕರ್ಮಣಿಯಲ್ಲಿ) Am pushed for time, money ಹೊತ್ತು, ಹಣ, —ದೊರೆಯುವುದೇ ಕಷ್ಟವಾಗಿದೆ. P.-pin ಮಕ್ಕಳ ಒಂದು ಆಟ]. **Púsher** (ನಾ.) (ಕ್ರಿಯಾರ್ಥಗಳಲ್ಲಿ); [P. aeroplane ನಡಸುವವನ ಹಿಂದುಗಡೆ ಎಂಜಿನು ಇರುವ ವಿಮಾನ]. **Púshing** (ಗು.); **Púshingly** (ಕ್ರಿ. ವಿ.)

Push (ನಾ.) ತಳ್ಳುವುದು; ದಬ್ಬುವುದು; ನೂಕಾಟ; ನೂಕಲು. (ಬಿಲ್ಯರ್ಡ್ಸ್ ಆಟ) ಚೆಂಡನ್ನು ತಳ್ಳುವ ಹೊಡೆತ; ತಳ್ಳೇಟು. (ಒಬ್ಬನ ಪ್ರವೃದ್ಧಿಗಾಗಿ) ತನ್ನ ಗೌರವ ಪ್ರಭಾವವನ್ನು, ತನ್ನಲ್ಲಿ ಇತರರಿಗಿರುವ ಗೌರವವನ್ನು, ಉಪಯೋಗಿಸುವುದು. (ಆಯುಧದ, ಕೊಂಬಿನ) ತಿವಿತ. ತೀವ್ರ, ಪ್ರಬಲ, —ಪ್ರಯತ್ನ (Must make a p. to get it done). (ಸೈನ್ಯ) ಬಹು ಸಂಖ್ಯೆಯ ಸೈನಿಕರಿಂದ ದಾಳಿ; ಬಲವತ್ತಾದ ದಾಳಿ. (ಕಮಾನು, ಮೊ. ರ) ಸಂತತವಾದ ಒತ್ತಾಟ; ತಳ್ಳಾಟ; ತಳ್ಳಿಕೆ. ವಿಷಮಾವಸ್ಥೆ; ಬಿಕ್ಕಟ್ಟು; ಇಕ್ಕಟ್ಟಿನ ಸಂದರ್ಭ. ಸಾಹಸ; ಮುಂದಕ್ಕೆ ತಳ್ಳಿಕೊಳ್ಳುವ ಸ್ವಭಾವ; ಪ್ರತಿಷ್ಠಾಕಾಂಕ್ಷೆ [**Púshful** (ಗು.)]. (ಅಸಂ.) ಕಳ್ಳರು, ಕೈದಿಗಳು, ಮೊ. ರ ತಂಡ. P.-bike (ಅಸಂ.) ಕಾಲಿನಿಂದ ತುಳಿದು ನಡಸುವ ಬೈಸಿಕಲ್ಲು (Motor-bike ಎಂಬುದರಿಂದ ಭಿನ್ನವಾದದ್ದು)

Púshtoo, -tu ಪಷ್ಟೂ (ನಾ.) ಆಫ್ಘನ್ನರ ಭಾಷೆ.

Pusillánimous ಪ್ಯೂಸಿಲ್ಯಾನಿಮಸ್ (ಗು.) ಪುಕ್ಕಲೆದೆಯ; ಹೇಡಿತನದ; ಧೈರ್ಯವಿಲ್ಲದ; ಹೀನ ಮನಸ್ಸಿನ. **Pusillánimously** (ಕ್ರಿ. ವಿ.); **Pusillánimity** (ನಾ.)

Puss ಪುಸ್ (ನಾ.) ಬೆಕ್ಕು; ಚೀಲ (ಮು., ಕರೆಯುವ ಹೆಸರಾಗಿ). ಮೊಲ, ಹುಲಿ (ಅರ್ಧ ಅಂಕಿತನಾಮವಾಗಿ). (ಬಳ. ಮಾ.) ಹುಡುಗಿ (Sly p.). **Pússy** ಪುಸಿ (ನಾ.) (ಮಕ್ಕಳ ಮಾತು) ಬೆಕ್ಕು (=P. cat). (ಮಕ್ಕಳ ಮಾತು) ಮೃದುವಾದ ತುಪ್ಪುಳು(ವಸ್ತು). **Pussyfoot** (ಅಸಂ.) ಮದ್ಯಪಾನ ನಿರೋಧ(ಕ, —ವಾದಿ) (ಅಮೆ. ಸಂ. ದ ಮದ್ಯಪಾನ ನಿರೋಧಕನೊಬ್ಬನ ಅಡ್ಡಹೆಸರಿನಿಂದ)

Pústulate, etc. **Pustule** ನೋಡಿ.

Pústule ಪಸ್ಟ್ಯೂಲ್ (ನಾ.) ಗುಳ್ಳೆ; ಬೊಕ್ಕೆ; ಮೊಡವೆ [Malignant p. (ನೆರಡಿ ರೋಗದ ವಿಷಾಣುವಿನಿಂದಾದ) ಕೆಟ್ಟ ಕುರು]. (ಸ. ವಿ., ಪ್ರಾ. ವಿ.) ನರೂಲಿ; ಗಂಟು; ಗಂತಿ. **Pústular** (ಗು.); **Pústulate** —ಲೇಟ್ (ಕ್ರಿ.) ಗುಳ್ಳೆ, ಮೊಡವೆ, —ಏಳು, ಆಗು. **Pústulate** —ಲೆಟ್ (ಗು.); **Pustulátion** (ನಾ.)

Put[1] ಪುಟ್ (ಕ್ರಿ.; ಭೂತ., ಭೂ. ಕೃ. Put) ಇಡು; ಇಕ್ಕು; ಇರಿಸು; ಮಡಗು; ಹಾಕು; ಎಸೆ; ನೂಕು; ನುಗ್ಗಿಸು. P. the weight, stone (ವ್ಯಾಯಾಮದ ಅಭ್ಯಾಸವಾಗಿ) ಎಸಗುಂಡನ್ನು (ಕೈಯಿಂದ ಭುಜದ ಹತ್ತಿರಕ್ಕೆ ತಂದು) ಎಸ. P. a knife into ಚೂರಿಯಿಂದ ಇರಿ. Put a bullet through (ಒಂದರಲ್ಲಿ ಹಾದುಹೋಗುವಂತೆ) ಗುಂಡು ಹೊಡೆ. (ನಾವೆ) P. back, forth, in (to harbour) (ಬಂದರಿಗೆ) ಹಿಂದಿರುಗು, ಹೊರಡು, ಬರು. P. off (from shore) (ಹಡಗು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರೆಯಿಂದ) ಹೊರಡು. P. it in your pocket, on the table, up the chimney, down the well. P. a tick against his name ಅವನ ಹೆಸರಿನೆದುರಿಗೆ ಒಂದು ಗುರುತು ಗೆರೆ ಹಾಕು. P. your signature to it. P. the horse to (the cart) (ಬಂಡಿಗೆ) ಕುದುರೆ ಹೂಡು. P. bull to cow *or* cow to bull ಹಸುವಿನಮೇಲೆ ಗೂಳಿ ಹಾರಿಸು. P. him across the river ಅವನನ್ನು ನದಿ ದಾಟಿಸು. P. the children to bed. P. him in prison. Cannot p. Russian stock at present prices ಈಗಿನ ದರದಂತೆ ರಷ್ಯಾ ಬಂಡವಾಳ ಪತ್ರಗಳನ್ನು ಕೊಡುವುದಕ್ಕಾಗುವುದಿಲ್ಲ. Has p. new life into him ಅವನಿಗೆ ಹೊಸ ಜೀವ ಎರೆದಿದೆ. P. yourself in(to) my hands ನೀನು ನನ್ನನ್ನು ನಂಬು. P. the matter in(to) my hands ವಿಷಯವನ್ನು ನನಗೆ ಬಿಡು. Time he was p. to school ಅವನನ್ನು ಪಾಠಶಾಲೆಗೆ ಹಾಕಲು ಸಕಾಲ. P. it to sale, on the market ಅದನ್ನು ಮಾರಾಟಕ್ಕಿಡು. P. Othello on (the stage) (ರಂಗದಮೇಲೆ) ಒಥೆಲೋ ನಾಟಕವನ್ನು ಆಡು. Should p. it at 2/8 ಅದಕ್ಕೆ ಎರಡು ರೂಪಾಯಿ ಎಂಟಾಣೆ ಬೆಲೆ ಹಾಕಬೇಕು. Puts the circulation at 60,000 ಪ್ರಚಾರ ಸಂಖ್ಯೆ ೬೦,೦೦೦ ಎಂದು ಅಂದಾಜು ಮಾಡುತ್ತಾನೆ. P. it into Kannada ಅದನ್ನು ಕನ್ನಡ ಭಾಷೆಗೆ ಪರಿವರ್ತಿಸು. What a way you have of putting things ! ವಿಷಯ ನಿರೂಪಣೆಯಲ್ಲಿ ನಿನ್ನದು ಎಂತಹ ಮಾರ್ಗ ! P. yourself in his place ಅವನ ಸ್ಥಾನದಲ್ಲಿ ನೀನಿರುವಂತೆ ಭಾವಿಸಿಕೊ. P. the will for the deed ಕಾರ್ಯ ಮಾಡದಿದ್ದರೂ ಮಾಡುವ ಸಂಕಲ್ಪವಿರಲಿ. P. a good face on it (Face ನೋಡಿ). P. a veto on it ಅದಕ್ಕೆ ತಡೆಯೊಡ್ಡು ; ಅದನ್ನು ಪ್ರತಿಷೇಧಿಸು. P. an end to himself *or* his life ಆತ್ಮಹತ್ಯ ಮಾಡಿಕೊಂಡನು. P. the wind up one (ಅಸಂ.) ಒಬ್ಬನನ್ನು ಹೆದರಿಸು. P. money on a horse (ಜೂಜಿನಲ್ಲಿ) ಒಂದು ಕುದುರೆಯ ಮೇಲೆ ಪಣವೊಡ್ಡು. P. & take ಚಪ್ಪಟೆಮುಖಗಳ ಬುಗುರಿಯಿಂದ ಆಡುವ ಒಂದು ತೆರದ ಜೂಜಾಟ. P. the case to him ವಿಷಯವನ್ನು, ವ್ಯಾಜ್ಯವನ್ನು, ಮೊಕದ್ದಮೆಯನ್ನು, (ತೀರ್ಮಾನಕ್ಕಾಗಿ) ಅವನಿಗೆ ಒಪ್ಪಿಸು. I p. it to you ನಿನಗೆ ಹೀಗೆ ಸೂಚಿಸುತ್ತೇನೆ. Don't be p. upon by him ಅವನ ಮೋಸಕ್ಕೆ ಬಲಬೀಳಬೇಡ. P. him at his ease ಅವನನ್ನು ಹಾಯಾಗಿರುವಂತೆ, ಆತಂಕಪಡದಂತೆ, ಮಾಡು. P. him on his guard. P. him on (his) oath ಪ್ರಮಾಣಮಾಡಿ (ಆಣೆಯಿಟ್ಟು) ಹೇಳುವಂತೆ ಮಾಡು. P. his nose out of joint (Nose ನೋಡಿ). P. (thing) out of court (ಒಂದು ವಿಷಯವನ್ನು) ಚರ್ಚೆ, ಮೊ. ಕ್ಕೆ ಯೋಗ್ಯವಲ್ಲದಂತೆ ಮಾಡು. P. thing out of one's head ವಿಷಯವನ್ನು ಮರೆತುಬಿಡು(ವಂತೆ ಮಾಡು). Always manages to p. me in the wrong ಯಾವಾಗಲೂ ನನ್ನದೇ ತಪ್ಪೆಂದು ತೋರುವಂತೆ ಹವಣಿಸುತ್ತಾನೆ. P. out of countenance (Countenance ನೋಡಿ). P. wise (ಅಮೆ. ಸಂ. ಅಸಂ.) ತಪ್ಪು ತಿಳವಳಿಕೆಯನ್ನು ಹೋಗಲಾಡಿಸು. ಸರಿಯಾದ ತಿಳವಳಿಕೆ ಕೊಡು. Land was p. into *or* under sugarcane ಜಮೀನಿನಲ್ಲಿ ಕಬ್ಬಿನ ಬೆಳೆ ಇಟ್ಟಿತ್ತು, ಇಡಲಾಯಿತು. What has p. him on this wild scheme ? ಈ ಹುಚ್ಚು ಯೋಜನೆಗೆ (ಕೈಹಾಕುವಂತೆ) ಅವನನ್ನು ಯಾವುದು ಪ್ರೇರಿಸಿತು ? Must be p. through his paces (ಕುದುರೆಯ ವಿಷಯದಲ್ಲಿ ; ಮನುಷ್ಯನ ವಿಷಯದಲ್ಲಿ ರೂಪ.) ಹೆಜ್ಜೆ ಹಾಕುವಂತೆ ಮಾಡಬೇಕು. P. to flight ಓಡಿಸಿಬಿಡು. Was p. to the blush ನಾಚುವಂತೆ ಮಾಡಲಾಯಿತು. Was p. to his trumps ತನ್ನ ತುರಷ್ಟನ್ನು ಆಡಬೇಕಾಗಿ ಬಂದಿತು. Surprising what he can do when he's p. to it ನಿರ್ಬಂಧ ಬಂದಾಗ ಅವನು ಏನು ಕೆಲಸ, ಹೇಗೆ ಕೆಲಸ, ಮಾಡುವನೆಂದು ಆಶ್ಚರ್ಯವಾಗುತ್ತದೆ. Was hard p. to it to keep them off ಅವರನ್ನು ಹತ್ತಿರಕ್ಕೆ ಬರದಂತೆ ಮಾಡಲು ಬಹಳ ಕಷ್ಟವಾಯಿತು.

[ಕ್ರಿ. ವಿ. ಗಳೊಡನೆ, ವಿಶೇಷಾರ್ಥಗಳಲ್ಲಿ] P. about (ಹೋಗುತ್ತಿರುವ ಹಡಗನ್ನು) ಬೇರೆ ದಿಕ್ಕಿಗೆ ತಿರುಗಿಸು. (ಕುದುರೆ, ಮನುಷ್ಯರ ತಂಡ, ಮೊ. ನ್ನು) ಹಿಂದು ಮುಂದಾಗಿ ತಿರುಗುವಂತೆ ಮಾಡು. (ಮು., ಸ್ಕಾ. ಪ್ರ.) ತೊಂದರೆ ಮಾಡು ; ವ್ಯಥೆಗೀಡು ಮಾಡು ; ಗೋಳುಗುಟ್ಟಿಸು. P. across ಜಯಪ್ರದವಾಗಿ ನೆರವೇರಿಸು, —ಸ್ಥಾಪಿಸು [P. it across (ಆ ಕೆಲಸ ಮಾಡುವುದರಲ್ಲಿ ಜಯಶೀಲನಾಗು)]. P. away (ಪ್ರಾಚೀ. ಪ್ರ.) ದಾಂಪತ್ಯ ವಿಚ್ಛೇದ ಮಾಡು. (ಹಣ, ಮೊ. ನ್ನು ಮುಂದಿನ ಉಪಯೋಗಕ್ಕೆ) ಎತ್ತಿಡು, ಮಿಗಿಸಿಡು. (ಅಸಂ.) (ತಿಂಡಿ) ತಿನ್ನು, (ಮದ್ಯ, ಮೊ. ನ್ನು) ಕುಡಿ. (ಅಸಂ.) ಸೆರೆ ಹಾಕು. (ಅಸಂ.) ಒತ್ತೆಯಿಡು. P. back ಮುಂದುವರಿಯುವುದನ್ನು ತಡೆ ; ತಡೆಗಟ್ಟು. (ಗಡಿಯಾರದ) ಮುಳ್ಳನ್ನು ಹಿಂದಕ್ಕೆ ತಿರುಗಿಸು. ಹಿಂದಿನ ಸ್ಥಳಕ್ಕೆ ಸೇರಿಸು. P. by (ಪ್ರಶ್ನೆಗೆ, ವಾದಕ್ಕೆ) ಉತ್ತರ ಕೊಡದೆ ನುಣುಚಿಕೊ. (ನೆಪ ಹೇಳಿ, ಕೈಗೆ ಸಿಕ್ಕದೆ, ಒಬ್ಬನಿಂದ) ತಪ್ಪಿಸಿಕೊ. (ಮು., ಮುಂದಿನ ಉಪಯೋಗಕ್ಕಾಗಿ) ಎತ್ತಿಡು, ತೆಗೆದಿಡು. P. down [ಬಲ ಪ್ರಯೋಗದಿಂದ, ಅಧಿಕಾರ(ಬಲ)ದಿಂದ] ಅಡಗಿಸು, ಅದುಮಿಬಿಡು. ಸೊಕ್ಕು ಮುರಿ ; ಗದರಿಸಿ ಅಪಮಾನ ಮಾಡು ; ಬಾಯಿ ಮುಚ್ಚಿಸು. ಬರೆದುಕೊ ; ಪಟ್ಟಿಗೆ ಸೇರಿಸು. (ಹೆಚ್ಚು ವೆಚ್ಚದ ಬಾಬನ್ನು) ನಿಲ್ಲಿಸಿಬಿಡು. ಎಣಿಸು ; ಗಣಿಸು (I p. him down for a fool). ಕಾರಣ(ವಾಗಿ) ಹೇಳು (P. it down to his nervousness). P. one's foot down (Foot ನೋಡಿ). P. forth (ಬಲ, ಪ್ರಯತ್ನ, ವಾಗ್ಧೋರಣೆ) ಪ್ರಯೋಗಿಸು, ಹೊರಸೂಸು, ಹೂಡು, ಪ್ರದರ್ಶಿಸು. ಪ್ರಚಾರಕ್ಕೆ, ಚಲಾವಣೆಗೆ, —ತರು. (ಸಸ್ಯ) (ಮೊಗ್ಗು, ಎಲೆ, ಮೊ. ನ್ನು) ಬಿಡು ; ಕುಡಿಯಿಡು. P. forward ಮುನ್ನುಗ್ಗು ; ಮುಂದಕ್ಕೆ ನುಗ್ಗಿಕೊಂಡು ಬರು ; ಪ್ರಮುಖತೆಗೆ ನುಗ್ಗಿಬರು. (ತತ್ತ್ವ, ಮೊ. ನ್ನು) ಮುಂದಿಡು, ಸೂಚಿಸು, ಮಂಡಿಸು. P. in (ಅಧಿಕಾರ, ಮೊ. ಕ್ಕೆ) ನಿಯಮಿಸು ; ಅಧಿಕಾರ ಕೊಡು (P. in a caretaker, bailiff). (P. in a distress ವ್ಯಥೆಗೀಡುಮಾಡು, ತೊಂದರೆಗೆ ಒಳಪಡಿಸು ; ಜಪ್ತಿಮಾಡು. P. in execution ಜಾರಿಗೆ, ಆಚರಣೆಗೆ, —ತರು). (ದಸ್ತೈವಜು, ಸಾಕ್ಷ್ಯ, ನೆಪ, ಹಕ್ಕುಬಾಧ್ಯತೆ, ಜಾಮೀನು—ಇವನ್ನು) ನ್ಯಾಯಸ್ಥಾನದಲ್ಲಿ(ಯಂತೆ) ವಿಧಿವತ್ತಾಗಿ ಹಾಜರುಮಾಡು, ಮುಂದಿಡು. (P. in an appearance ಮುಖ ತೋರಿಸು ; ಹಾಜರಾಗು). (ಚುನಾವಣೆ, ಮೊ. ಕ್ಕೆ) ಹಕ್ಕು ಹೂಡು (*For* ಉಪ. ದೊಡನೆ). (ಏಟು, ಗುಂಡು, ಟೀಕೆ, ಉದ್ಧೃತ ಪದಗಳು, ಮೊ. ನ್ನು) ಮಧ್ಯೆ ಹಾಕು, ಸೇರಿಸು [P. in one's oar (Oar ನೋಡಿ)]. (ಹೆಚ್ಚಿನ ವಿಷಯ, ಮೊ. ನ್ನು) ಸೇರಿಸು. (ಸಂಪೂರ್ಣವಾದುದರ ಭಾಗವಾಗಿ) ಒಂದು ಕೆಲಸಮಾಡು. (ಬಳ. ಮಾ.) (ಕಾಲವನ್ನು) ವ್ಯಯ ಮಾಡು, ಕಳೆ. P. off ಮುಂದಕ್ಕೆ ಹಾಕು, ತಳ್ಳಿಡು. (ಒಬ್ಬನೊಡನೆ) ಮಾಡಿಕೊಂಡ ಗೊತ್ತುಪಾಡನ್ನು ಮುಂದಕ್ಕೆ ಹಾಕು. (ನೆಪ, ರಾಜಿ, ಮೊ. ರಿಂದ, ಒಬ್ಬನ ಕೈಗೆ, ತಗಾದೆಗೆ) ಸಿಕ್ಕದೆ ತಪ್ಪಿಸಿಕೊ. (*With* ಉಪ. ದೊಡನೆ). ಒಂದು ಕೆಲಸ, ಮೊ. ನ್ನು ಮಾಡದಂತೆ ತಡೆ, (ಮನಸ್ಸು) ತಿರುಗಿಸು. ಆರೋಪಿಸಿ (ಒಂದನ್ನು) ಒಬ್ಬನ ತಲೆಗೆ ಕಟ್ಟು (*Upon* ಉಪ. ದೊಡನೆ). (ಬಟ್ಟೆ ಬರೆಯನ್ನು) ಬಿಚ್ಚಿಹಾಕು, ಕಳಚಿ ಹಾಕು. (ದೋಣಿ, ನಾವಿಕರು) ದಡಬಿಟ್ಟು ಹೊರಡು. P.-off (ನಾ.) ತಪ್ಪಿಸಿಕೊಳ್ಳುವುದು ; ನುಣುಚಿಕೊಳ್ಳುವುದು ; ಮುಂದಕ್ಕೆ ಹಾಕುವುದು. P. on (ಉಡುಪು) ಹಾಕಿಕೊ. [(ಬಳ. ಮಾ.) P. it on ಬೆಲೆ ಹೇರು ; ಹೆಚ್ಚು ಬೆಲೆ ಹಾಕು. (ಅತಿಮಾಡಿದ ಭಾವೋದ್ರೇಕ, ಸಂಕಟ, ಮೊ. ನ್ನು) ನಟಿಸು]. (ಶೀಲ, ವೇಷ) ಕೃತಕವಾಗಿ ತಾಳು, ಧರಿಸು. (ಮೈ) ತುಂಬಿಕೊ ; (ತೂಕ) ಹೆಚ್ಚಾಗು. (ಬೆಲೆ, ಓಟದ ಸಂಖ್ಯೆ, ಮೊ. ಕ್ಕೆ) (—ಅಷ್ಟನ್ನು) ಹೆಚ್ಚಿಗೆ ಸೇರಿಸು (*To* ಉಪ. ದೊಡನೆ). (ಜೂಜಿನಲ್ಲಿ : ಕುದುರೆ, ಮೊ. ಗಳ ಮೇಲೆ) ಪಣವೊಡ್ಡು (*Upon* ಉಪ. ದೊಡನೆ). (ಗಡಿಯಾರದ ಮುಳ್ಳನ್ನು) ಮುಂದಕ್ಕಿಡು. (ಬಲವನ್ನು, ಒತ್ತಡವನ್ನು) ಕಾರ್ಯರೂಪಕ್ಕೆ ತರು, ಪ್ರಯೋಗಿಸು ; [P. on airs ಜಂಬ ಮಾಡು ; ಪ್ರತಿಷ್ಠೆ ತೋರಿಸು. P. on speed ವೇಗ ಹೆಚ್ಚಿಸು. P. on steam, the screw (ಆಯಾ ಪದವನ್ನು ನೋಡಿ)]. [(ಕ್ರಿಕೆಟ್ಟಿನಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚೆಂಡೆಸೆತ, ಮೊ. ಕ್ಕೆ ಒಬ್ಬನನ್ನು] ಗೊತ್ತುಮಾಡು, ನಿಯೋಜಿಸು; (ರೈಲುಬಂಡಿಯನ್ನು) ಪ್ರಯಾಣ ಹೊರಡಲು ವ್ಯವಸ್ಥೆ ಮಾಡು. P. out (ಭುಜ, ಮೊ. ರ) ಕೀಲು ತಪ್ಪಿಸು. (ಕ್ರಿಕೆಟ್) (ಆಟಗಾರನ) ಆಟ ಕಳೆ. (ಮೋಂಬತ್ತಿ, ಅನಿಲದ ಉರಿ, ಬೆಂಕಿ, ಮೊ. ನ್ನು) ಆರಿಸು, ನಂದಿಸು. ಗಾಬರಿ ಹಿಡಿಸು; ತಬ್ಬಿಬ್ಬು ಮಾಡು; ರೇಗಿಸು; ಸಿಟ್ಟುಗೆಬ್ಬಿಸು; ಅನನು ಕೂಲ ಪಡಿಸು. (ಶಕ್ತಿ, ಮೊ. ನ್ನು) ಹೂಡು. (ಹಣವನ್ನು) ಬಡ್ಡಿಗೆ ಸಾಲ ಕೊಡು; ಋಣ ಸಂಚಯ, ಮೊ. ರಲ್ಲಿ (ಹಣ) ಹಾಕು. (ಸ್ಥಳದ) ಹೊರಗಡೆ ಮಾಡುವುದಕ್ಕಾಗಿ (ಕೆಲಸ) ಕೊಡು; ಹೊರಗೆಲಸ ಕೊಡು. P. over (ನಾಟಕ, ಚಲಚ್ಚಿತ್ರ, ಮೊ. ಗಳಿಗಾಗಿ) ಮೆಚ್ಚಿಕೆ ಸಂಪಾದಿಸು. P. (oneself) over (ಸಭೆಯ ಮೇಲೆ) ತನ್ನ ವ್ಯಕ್ತಿತ್ವದ ಮುದ್ರೆಯೊತ್ತು, ಪ್ರಭಾವ ಬೀರು. P. through (ಕಾರ್ಯವನ್ನು) ನೆರವೇರಿಸು. (ದೂರ ವಾಣಿಯ ವಿನಿಮಯ ಸ್ಥಾನದ ಮೂಲಕ) (ಒಬ್ಬನೊಡನೆ) ಸಂಭಾಷಣ ಸಂಬಂಧ ಕಲ್ಪಿಸಿಕೊಡು (*To* ಉಪ. ದೊಡನೆ ಸಹ). P. together (ಭಾಗಗಳನ್ನು) ಒಟ್ಟುಗೂಡಿಸಿ ಪೂರ್ಣ(ವನ್ನು) ಮಾಡು. [P. two & two together (Two ನೋಡಿ). P. (your) heads together ಕಲೆತು ಆಲೋಚನೆ ಮಾಡಿರಿ]. (ಕ್ರಿಕೆಟ್) (ಓಟಗಳ) ಲೆಕ್ಕಗೂಡಿಸು. P. up (ಒಬ್ಬನನ್ನು) ಜೂಜು ಕುದುರೆಯ ಸವಾರನನ್ನಾಗಿ ನೇಮಿಸು. ರಂಗದಮೇಲೆ (ನಾಟಕವನ್ನು) ಪ್ರದರ್ಶಿಸು. (ಬೇಟೆಯನ್ನು) ಮರೆಬಿಟ್ಟು ಏಳುವಂತೆ ಮಾಡು. (ಬೆಲೆಯನ್ನು) ಏರಿಸು. (ದೇವರಿಗೆ ಪ್ರಾರ್ಥನೆ, ಮೇಲಿನವರಿಗೆ ಅರ್ಜಿ) ಸಲ್ಲಿಸು, ಒಪ್ಪಿಸು. (ಚುನಾವಣೆಗೆ ಉಮೇದು ವಾರನ) ಹೆಸರು ಸೂಚಿಸು. (ಮದುವೆಯ ನಿಶ್ಚಿತಾರ್ಥವನ್ನು) ಘೋಷಿಸು. (ಹರಾಜಿನ ಮೂಲಕ) ಮಾರಾಟಕ್ಕಿಡು; ಸ್ಪರ್ಧೆಗೆ ಇಡು. ಮೂಟೆಯಲ್ಲಿ (ಭದ್ರವಾಗಿ) ಕಟ್ಟಿಡು; ಸಂಪುಟದಲ್ಲಿ ಜೋಪಾನವಾಗಿ ಹಾಕಿಡು. (ಕತ್ತಿಯನ್ನು) ಒರೆಯಲ್ಲಿಡು. (ಮನುಷ್ಯ, ಕುದುರೆ, ಮೊ. ರಿಗೆ) ಸ್ಥಳ ವಸತಿ ಮಾಡಿಕೊಟ್ಟು ಆತಿಥ್ಯ ಮಾಡು; (ಸತ್ರ, ಮೊ. ಗಳಲ್ಲಿ) ಇಳಿದುಕೊ, ತಂಗು (*At* ಉಪ. ದೊಡನೆ). [P. person's back up ರೇಗಿಸು. P. one's hair up (Hair ನೋಡಿ). P. up a (good) fight (ಚೆನ್ನಾಗಿ) ಹೋರಾಡು, ಕಾದಾಡು. P. up with (ಪ್ರಾಚೀ. ಪ್ರ. P. up) (ಅವಮರ್ಯಾದೆ, ಕಿರುಕುಳ, ಮೊ. ನ್ನು) ಸಹಿಸಿಕೊ, ತಾಳಿಕೊ. P. (person) up to (—ಗೆ) ತಿಳಿಯಹೇಳು, ತಿಳಿಸು, ಹೇಳಿಕೊಡು; (—ಮಾಡುವುದಕ್ಕೆ) ಪ್ರೇರಣೆ ಮಾಡು (*To* do, to *doing* or action)]. (ಕಟ್ಟಡ, ಮೊ. ನ್ನು) ಕಟ್ಟು, ಎಬ್ಬಿಸು. (ಸಂಚು, ಪಿತೂರಿ) ಯೋಜನೆ ಮಾಡು [P.-up (ಗು.) ಮೋಸದಿಂದ ಯೋಜನೆ ಮಾಡಿದ; ಸಂಚು ಮಾಡಿದ]. **Pútter**[1] (ನಾ.) (ಕ್ರಿಯಾರ್ಥಗಳಲ್ಲಿ). ಭಾರವಾದ ಕಲ್ಲನ್ನಾಗಲಿ ಗುಂಡನ್ನಾಗಲಿ ಎಸೆಯುವವನು.

Put (ನಾ.) (ಎಸೆಗುಂಡಿನ, ಎಸೆಗಲ್ಲಿನ) ಎಸೆತ. ಒಂದು ನಿರ್ದಿಷ್ಟ ಕಾಲದೊಳಗೆ ಒಂದು ನಿರ್ದಿಷ್ಟ ಬೆಲೆಯ ಮೇರೆಗೆ ಒಂದು ನಿರ್ದಿಷ್ಟ ಮೊತ್ತದ ಬಂಡವಾಳ ಪತ್ರಗಳನ್ನು ಒಪ್ಪಿಸಲು (ಹಣಕೊಟ್ಟು) ಪಡೆದ ಹಕ್ಕು.

Put[2], **Putt** ಪಟ್ (ಕ್ರಿ., ಭೂತ., ಭೂ. ಕೃ., Putted; ನಾ.) [ನುಣುಪು ನೆಲದ (=Putting-green) ಮೇಲೆ ಉರುಳುತ್ತ ಹೋಗಿ ಕುಳಿ ತುಂಬು ವಂತೆ] (ಗಾಲ್ಫ್ ಚೆಂಡನ್ನು) ಡಾಂಡಿನಿಂದ (ಮೆತ್ತಗೆ) ಹೊಡೆ. ಇಂಥ ಹೊಡೆತ. **Pútter**[2] (ನಾ.) ಇಂಥ ಹೊಡೆತದ ದಾಂಡು; ಹೀಗೆ ಹೊಡೆಯುವವನು.

Put[3] ಪಟ್ (ನಾ.) (ಹಳೆಯ ಅಸಂ.) ದಡ್ಡ; ವಿಚಿತ್ರ ಮನುಷ್ಯ; ಗಾಂಪ; ಹಳ್ಳಿ ಗಮಾರ.

Pútative ಪ್ಯೂಟಟಿವ್ (ಗು.) ಹಾಗೆಂದು ಪ್ರತೀತಿಯಿರುವ (His p. father). **Pútatively** (ಕ್ರಿ. ವಿ.)

Pute ಪ್ಯೂಟ್ (ಗು.) (ಪ್ರಾಚೀ. ಪ್ರ.). Pure (&) p. ಬರಿಯ; ಕೇವಲ.

Pútlog, -lock ಪಟ್‌ಲಾಗ್, —ಲಾಕ್ (ನಾ.) ಸಾರುವೆಯ ಅಡ್ಡ ಮರ (ಒಂದು ತುದಿಯನ್ನು ಗೋಡೆಯಲ್ಲಿಯ ಕಂಡಿಯಲ್ಲಿ ದೂರಿಸಿ ಮತ್ತೊಂದು ತುದಿಯನ್ನು ಸಾರುವೆಯ ಕಂಬಕ್ಕೆ ಕಟ್ಟಿ ಆ ಅಡ್ಡಮರದಮೇಲೆ ಸಾರುವೆಯ ಹಲಗೆ, ಮೊ. ವು ಹಾಕಿರುವಂಥದು)

Pútrefy ಪ್ಯೂಟ್ರಿಫೈ (ಕ್ರಿ.) ಕೊಳೆ(ತು ಹೋಗು); ಕೊಳೆತು ನಾರು; ಕೆಟ್ಟುಹೋಗು; ಕೀವುಗಟ್ಟು; ಕೀತುಕೊ. ನೀತಿ ಭ್ರಷ್ಟನಾಗು. (ವಿರ. ಪ್ರ.) ಕೊಳೆಯಿಸು; ಕೆಟ್ಟುಹೋಗುವಂತೆ ಮಾಡು. **Putrefáction** (ನಾ.); **Pútrefactive** (ಗು.); **Putréscent** ಪ್ಯೂಟ್ರೆಸೆಂಟ್ (ಗು.) ಕೊಳೆಯುತ್ತಿರುವ; ಕೊಳೆತದ; ಕೊಳೆತದ ಫಲದ. **Putréscence** (ನಾ.); **Putréscible** (ಗು.) ಕೊಳೆಯುವಂಥ; ಕೊಳೆಯುವ ಸ್ವಭಾವದ. **Pútrid** (ಗು.) ಕೊಳೆತದ; ಕೆಟ್ಟ; ನಾರುವ. (ರೂಪ.) ನಡತೆಗೆಟ್ಟ; ನೀತಿ ಭ್ರಷ್ಟ. (ಅಸಂ.) ಕೀಳು ದರ್ಜೆಯ; ಬಹಳ ಅಸಹ್ಯಕರವಾದ [P. fever 'ಟೈಫಸ್' ಜ್ವರ; ವಿಷಮಶೀತ ಜ್ವರ. P. sore throat ಗ್ರಸನಿಕೆಯ (ಬಾಯಿಯ ಹಿಂಭಾಗದ) ಅಂಗ ಕ್ಷಯದ ಉರಿಯೂತ; ಗಳಚರ್ಮ ರೋಗ (Diphtheria)]. **Pútridly** (ಕ್ರಿ. ವಿ.); **Pútridness** (ನಾ.); **Putrídity** (ನಾ.)

Putréscent, etc., Pútrid, etc. Putrefy ನೋಡಿ.

Putt. =Put[2] ನೋಡಿ.

Púttee ಪಟಿ (ನಾ.) ಕಾಲು ಹರಡಿನಿಂದ ಮಂಡಿಯ ವರೆಗೂ ರಕ್ಷಣೆ ಯಾಗಿ ಅಥವಾ ಆಧಾರವಾಗಿ, ಸುತ್ತಿಕೊಳ್ಳುವ ಬಟ್ಟೆಯ ಪಟ್ಟಿ; ಕಣಕಾಲು ಪಟ್ಟಿ.

Pútty ಪಟಿ (ನಾ., ಕ್ರಿ. ಸಕ.) ಗಾಜಿಗೆ ಅಥವಾ ಲೋಹಕ್ಕೆ ಮೆರುಗು ಕೊಡಲು ಉಪಯೋಗಿಸುವ, ತವರದ (ಮತ್ತು ಸೀಸದ) ಭಸ್ಮ (=Jewellers' p.); (ಮರಳು ಹಾಕದೆ ಸುಣ್ಣಕ್ಕೆ ನೀರು ಹಾಕಿ ತಯಾರಿಸಿದ) ಕೆನೆ ಗಾರೆ, ನಯ ಗಾರೆ (=Plasterers' p.). (ಗಾಜು ಹಲಗೆಗಳನ್ನು ಕಿಟಕಿ, ಮೊ. ಗಳಲ್ಲಿ ಹಚ್ಚುವುದಕ್ಕೂ ಮರದ ಸಾಮಾನುಗಳಲ್ಲಿಯ ರಂಧ್ರಗಳನ್ನು ಮುಚ್ಚುವುದು, ಮೊ. ಕೆಲಸಗಳಿಗೂ ಉಪಯೋಗಿಸುವ, ಸೀಮೆಸುಣ್ಣ ಮತ್ತು ಅಗಸೆಯೆಣ್ಣೆಯ) ಲೇಪ್ಪ (=Glaziers' p.). [P. medal ಸಣ್ಣ ಸೇವೆಗೆ ತಕ್ಕ ಬಹುಮಾನ (You deserve a p. m.)]. (ಕ್ರಿ.) ನಯ ಗಾರೆ, ಲೆಪ್ಪ, ಹಾಕಿ—ಸಮ ಮಾಡು, ಅದುಕಿಸು, ಕಂಡಿ ಮುಚ್ಚು, ಸೇರಿಸು (*Up*)

Púzzle ಪಸ್ಲ್ (ನಾ., ಕ್ರಿ.) ತಬ್ಬಿಬ್ಬು; ಕಕ್ಕಾಬಿಕ್ಕಿ; ದಿಗ್ಭ್ರಮೆ; —ಗೊಳಿಸುವ ಪ್ರಶ್ನೆ; ಒಗಟು; ಗೂಢ ಪ್ರಶ್ನೆ. (ಬುದ್ಧಿ ಚಮತ್ಕಾರವನ್ನೂ ತಾಳ್ಮೆಯನ್ನೂ ಉಪಯೋಗಿಸಿ ಬಿಡಿಸಬೇಕಾದ) ಸಮಸ್ಯೆ; ಇಂಥ ಆಟದ ಸಾಮಾನು (Chinese p., Crossword p.). [P.-head(ed), P.-pate(d) ತಬ್ಬಿಬ್ಬಾದ ಭಾವನೆಗಳುಳ್ಳ(ವನು), —ಬುದ್ಧಿಯ(ವನು); ತೊಡಕು ಬುದ್ಧಿಯ(ವನು). P.-peg ನಾಯಿ ತನ್ನ ಮೂಗನ್ನು ನೆಲಕ್ಕೆ ತಾಕಿಸದಂತೆ ಮಾಡಲು ಅದರ ಕೆಳ ದವಡೆಗೆ ಕಟ್ಟುವ ಮರದ ತುಂಡು]. (ಕ್ರಿ.) ತಬ್ಬಿಬ್ಬು ಮಾಡು, —ಆಗು. ಭ್ರಾಂತಿ ಹಿಡಿ(ಸು); (ಸಮಸ್ಯೆ, ಮೊ. ನ್ನು ಕುರಿತು) ಭ್ರಾಂತಿಗೊಳ್ಳು (*About, over* ಉಪ. ದೊಡನೆ). (ಸಮಸ್ಯೆ, ಮೊ. ನ್ನು) ಬಿಡಿಸು, ಬಗೆಹರಿಸು (*Out* ಉಪ. ದೊಡನೆ). [Monkey-p. (Monkey ನೋಡಿ)]. **Púzzledom** (ನಾ.); **Púzzlement** (ನಾ.); **Púzzler** (ನಾ.); **Púzzlingly** (ಕ್ರಿ. ವಿ.)

Pyaémia ಪೈಈಮಿಯ (ನಾ.) (ಕೀವು ಕಟ್ಟಿ ರಕ್ತಕ್ಕೆ ಬೆರೆಯುವುದ ರಿಂದಾಗುವ) ನೆತ್ತರು ನಂಜು. **Pyaémic** (ಗು.)

Pýgmy, Pi- ಪಿಗ್ಮಿ (ನಾ., ಗು.) (ಹಿಂದೆ ಈತಿಯೋಪಿಯದ ಅಥವಾ ಇಂಡಿಯದ ಕೆಲವು ಭಾಗಗಳಲ್ಲಿ ವಾಸವಾಗಿದ್ದರೆಂದು ಹೇಳುವ) ಕುಳ್ಳ ಜನಾಂಗದವನು (The Pygmies ಆಫ್ರಿಕದಲ್ಲಿ ವಿಷುವದ್ವೃತ್ತ ಪ್ರದೇಶ ಗಳಲ್ಲಿರುವ ಒಂದು ಕುಳ್ಳ ಜನಾಂಗ). ಗುಜ್ಜು, ಕುಳ್ಳ, ಗಿಡ್ಡ, ಗುಜ್ಜಾರಿ, ಕುರುಚು (ಮನುಷ್ಯ, ಪ್ರಾಣಿ); (ರೂಪ.) ಬಹಳ ಕಡಮೆಯ ಬುದ್ಧಿಶಕ್ತಿ, ಮೊ. ನ್ನುಳ್ಳವನು. (ಬೇತಾಳ, ಮೊ.) ಅಮಾನುಷ ವ್ಯಕ್ತಿ. (ಗು.) ಕುಳ್ಳರ; ಕುಳ್ಳಾದ. **Pygmaéan** —ಮೀಅನ್ (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Pyjámas ಪಿಜಾಮಸ್ (ಹಿಂದೆ, ಪೈ—), **Pa-** ಪ— (ನಾ., ಬ. ವ.) (ಮುಸಲ್ಮಾನರಲ್ಲಿ ಹೆಂಗಸರೂ ಗಂಡಸರೂ ತೊಡುವ, ಯೂರೋಪಿಯನ್ನರು ರಾತ್ರಿ ಮಲಗುವಾಗ ತೊಡುವ) (ರೇಷ್ಮೆ ಬಟ್ಟೆಯ ಅಥವಾ ಹತ್ತಿ ಬಟ್ಟೆಯ) ಷರಾಯಿ. ರಾತ್ರಿ ಮಲಗಿಕೊಳ್ಳುವಾಗ ಹಾಕಿಕೊಳ್ಳುವ ದಗಲೆ ಷರಾಯಿ ಮತ್ತು ಬಗಲಬಂದು ; ಪಾಯಿಜಾಮ.

Pýlon ಪೈಲಾನ್ (ನಾ.) (ಮು., ಈಜಿಪ್ಟಿನ ದೇವಸ್ಥಾನಗಳ) ಹೆಬ್ಬಾಗಿಲು, ಮಹಾದ್ವಾರ. (ಆಸರೆಯಾಗಿ, ಎಲ್ಲೆಯಾಗಿ, ಅಲಂಕಾರಕ್ಕಾಗಿ, —ಕಟ್ಟಿದ) ಎತ್ತರವಾದ ಜೋಡಣೆಯ ಕಟ್ಟಡ.

Pylórus ಪೈಲೋರಸ್ (ನಾ.) (ಅಂ. ರ. ಶಾ.) ಜಠರದಿಂದ ಮುಂಗರುಳಿಗೆ ಹೋಗುವ ದ್ವಾರ ; ಈ ದ್ವಾರವಿರುವ ಜಠರದ ಭಾಗ. **Pylóric** —ಲಾರಿಕ್ (ಗು.)

Pyo- ಪೈಓ— (ಸ. ಪೂ. ಪ.) ಕೀವು—. [**-genesis** ಕೀವು ಹುಟ್ಟುವುದು ; ಕೀತುಕೊಳ್ಳುವುದು. **Pyorrhoéa** ಪೈಯೊರೀಯ (ಮು., ಹಲ್ಲಿನ ರೋಗವಾಗಿ, ಒಸಡಿನಿಂದ) ಕೀವು ಸುರಿತ]

Pýoid ಪೈಓಯ್ಡ್ (ಗು.) ಕೀವಿನ(ಥ) ; ಕೀವು ತುಂಬಿದ.

Pýramid ಪಿರಮಿಡ್ (ನಾ.) (ಮು., ಪುರಾತನ ಈಜಿಪ್ಟಿನಲ್ಲಿ) ಬಹುಭುಜಾಕೃತಿಯ ಅಥವಾ (ಸಾ.) ಚೌಕನೆಯ ತಳಹದಿಯ ಮೇಲೆ, ಪಕ್ಕ ಗೋಡೆಗಳು ಇಳಿಜಾರಾಗಿರುವಂತೆಯೂ ಮೇಲಕ್ಕೆ ಹೋಗುತ್ತ ಹೋಗುತ್ತ ಕೊನೆಗೆ ಸೂಚ್ಯಗ್ರವಾಗಿ ಮುಗಿಯುವಂತೆಯೂ ಕಲ್ಲು, ಮೊ. ಗಳಿಂದ ರಾಜರ ಸಮಾಧಿಗಳಾಗಿ ಕಟ್ಟಿದ ಸ್ಮಾರಕ ಕಟ್ಟಡ : ಗೋಪುರಾಕೃತಿಯ ಕಟ್ಟಡ ; ಪಿರಮಿಡ್ಡು. ಮೂರು ಅಥವಾ ಹೆಚ್ಚು ಭುಜಗಳ ತಳಹದಿಯುಳ್ಳ ಇದೇ ಆಕಾರದ ಘನಾಕೃತಿ ; ಗೋಪುರಾಕಾರದ ವಸ್ತು(ಸಮುದಾಯ) ; ಗೋಪುರಾಕಾರದ(ಲ್ಲಿ ಬೆಳಸಿದ) ಫಲ ವೃಕ್ಷ. ಪಾದಗಳ ಉದ್ದ ಕ್ರಮೇಣ ಹೆಚ್ಚಾಗುತ್ತ ಅಥವಾ ಕಡಮೆಯಾಗುತ್ತ ಹೋಗುವ ಪದ್ಯ: ಗೋಪುರ ಬಂಧ. (ಬಿಲ್ಯರ್ಡ್ಸ್ ಆಟ ; ಬ. ವ. ದಲ್ಲಿ) (ಸಾ., ಹದಿನೈದು) ಬಣ್ಣದ ಚೆಂಡುಗಳಿಂದಲೂ, ದಾಂಡಿನಿಂದ ನೂಕಿ ಹೊಡೆಯುವ ಒಂದು ಚೆಂಡಿನಿಂದಲೂ ಆಡುವ ಆಟ. **Pyrámidal** ಪಿರ್ಯಾ— (ಗು.) ; **Pyrámidally** (ಕ್ರಿ. ವಿ.) ; **Pýramidwise** ಪಿರ— (ಕ್ರಿ. ವಿ.) ; **Pýramidist** (ನಾ.) ಈಜಿಪ್ಟಿನ ಗೋಪುರಾಕೃತಿಯ ಕಟ್ಟಡಗಳ ರಚನೆ ಮತ್ತು ಅವುಗಳ ಚರಿತ್ರೆಯಲ್ಲಿ ಪಾಂಡಿತ್ಯವುಳ್ಳವನು.

Pyre ಪೈ(ಅ)ರ್ (ನಾ.) ಉರುವಲಿನ ಒಡ್ಡು ; (ಮು., ಹೆಣ ಸುಡುವ) ಚಿತಿ.

Pyréthrum ಪೈರೀ(ರೆ)ತ್ರಮ್ (ನಾ.) (ಸೇವಂತಿಗೆಯ ವರ್ಗಕ್ಕೆ ಸೇರಿದ) ಸಂಯುಕ್ತ ಪುಷ್ಪದ ಒಂದು ಸಸ್ಯಜಾತಿ.

Pyrétic ಪೈ(ಪಿ)ರೆಟಿಕ್ (ಗು.) ಜ್ವರದ ; ಜ್ವರ ನಿವಾರಣೆಗಾಗಿ ಕೊಡುವ ; ಜ್ವರವುಂಟುಮಾಡುವ. **Pyréxia** —ರೆಕ್ಸಿಯ (ನಾ.) (ರೋಗ ನಿದಾನ) ಜ್ವರ. **Pyréxial** (ಗು.) ; **Pyréxic(al)** (ಗು.)

Pyréxia, etc. **Pyretic** ನೋಡಿ.

Pyrheliómeter ಪರ್‌ಹೀಲಿಯಾಮಿಟರ್ (ನಾ.) ಸೂರ್ಯನು ಸೂಸುವ ಉಷ್ಣವನ್ನು ಅಳೆಯುವ ಸಲಕರಣೆ : ಸೂರ್ಯೋಷ್ಣ ಮಾಪಕ.

Pýridine ಪೈ(ಪಿ)ರಿಡೈನ್ (ನಾ.) (ರ. ವಿ.) (ಎಲುಬೆಣ್ಣೆಯನ್ನು ಒಣಬಟ್ಟಿಯಿಳಿಸಿ ಪಡೆದ, ಗೂರಲು ರೋಗಕ್ಕೆ ಔಷಧವಾಗಿ ಉಪಯೋಗಿಸುವ) ಚಂಚಲ ದ್ರವರೂಪದ ಒಂದು ಸಸಾರಜನಕ ಕ್ಷಾರ.

Pyrítes ಪಿರೈಟೀಸ್ (ನಾ.) ಕಬ್ಬಿಣದ ಮತ್ತು ಗಂಧಕದ ಸಂಯುಕ್ತ (ಗಳೆರಡರಲ್ಲೊಂದು) (=Iron p.); ಕಬ್ಬಿಣದ ಸಲ್ಫೈಡು ; ಸ್ವರ್ಣಮಕ್ಷಿಕಾ. Copper p. ತಾಮ್ರವೂ ಗಂಧಕವೂ ಕಬ್ಬಿಣವೂ ಸಂಯುಕ್ತವಾಗಿ ಆದ ದ್ವಯ ಸಲ್ಫೈಡು. **Pyrític** ಪಿರಿಟಿಕ್ (ಗು.); **Pyritíferous** (ಗು.) ; **Pýritous** (ಗು.) ; **Pýritize** (ಕ್ರಿ. ಸಕ.)

Pýro =Pyrogallic acid (ಎಂಬುದರ ಸಂಕ್ಷಿಪ್ತ) (Pyro- ನೋಡಿ)

Pyro- ಪೈ(ಪಿ)ರೊ— (ಸ. ಪೂ. ಪ.) ಬೆಂಕಿ— ; ಅಗ್ನಿ— ; ಉಷ್ಣ—. **-eléctric** ಬಿಸಿ ಮಾಡಿದಾಗ ವಿದ್ಯುದ್‌ಧ್ರುವಗಳು ಏರ್ಪಡುವ ಗುಣವುಳ್ಳ. **-electrícity** ಉಷ್ಣಜಾತ ವಿದ್ಯುಚ್ಛಕ್ತಿ. **-gállic acid** (ಸಂಕ್ಷಿಪ್ತ : Pyro) ಛಾಯಾಚಿತ್ರ ಪ್ರಕ್ರಿಯೆ, ಮೊ. ಗಳಲ್ಲಿ (ಏರ್ಪಟ್ಟ ಚಿತ್ರದ ಸಾಂದ್ರತೆಯನ್ನು ಕಡಮೆ ಮಾಡಲು) ಉಪಯೋಗಿಸುವ ಒಂದು ಆಮ್ಲ. **-genétic** ಉಷ್ಣ ಜನಕ (ಮು., ದೇಹದಲ್ಲಿ) ; ಜ್ವರಕಾರಕ (**-génic** ಸಹ). **-genous** (ಶಿಲೆ) ಅಗ್ನಿ ಕಾರ್ಯ ಜನಿತ. (ದ್ರವ್ಯದ ವಿಷಯದಲ್ಲಿ) ಮತ್ತೊಂದರ ದಹನದಿಂದಾದ. **-graphy** =Poker-work (Poke² ನೋಡಿ) ; **-graph** (ಪೈರೊಗ್ರಾಫ್) (ಕ್ರಿ. ಅಕ.); **-grapher** (ಪೈರಾಗ್ರಫರ್) (ನಾ.) ; **-gráphic** ಪೈರೊಗ್ರಾಫಿ— (ಗು.) ; **-graphist** ಪೈರಾಗ್ರ— (ನಾ.) ; **-gravuré** (ಪೈರೊಗ್ರವ್ಯೂರ್) ಸುಡು ಚಿತ್ರ(ಕೆಲಸ). **-latry** (ಪೈರಾಲಟ್ರಿ) ಅಗ್ನಿ ಪೂಜೆ, ಅಗ್ನ್ಯಾರಾಧನೆ. **-lígneous** (ಪೈರೊ—) ದಾರುವಿನ ಮೇಲೆ ಅಗ್ನಿ ಕ್ರಿಯೆಯಿಂದ ಅಥವಾ ಉಷ್ಣ ಕ್ರಿಯೆಯಿಂದ ಆದ (P. -acid). **-mánia** ಬೆಂಕಿಹೊತ್ತಿಸುವ ಹುಚ್ಚು. **-mániac** (ನಾ.) ; **-maníacal** (ಗು.). **-meter** (ಪೈರಾಮಿಟರ್) ಅಧಿಕ ಶಾಖ ಮಾಪಕ. **-métric(al)** ಪೈರೊಮೆ— (ಗು.) ; **-métrically** (ಕ್ರಿ. ವಿ.) ; **-metry** ಪೈರಾಮಿಟ್ರಿ (ನಾ.) ; **-phorus** ಗಾಳಿಗೊಡ್ಡಿದೊಡನೆಯೇ ತಾನಾಗಿ ಹೊತ್ತಿಕೊಳ್ಳುವ ಪದಾರ್ಥ ; ಸ್ವಯಂ ದಾಹಕ (ದ್ರವ್ಯ). **-phóric** ಪೈರೊಫಾರಿಕ್ (ಗು.); **-phorous** ಪೈರಾಫೊರಸ್ (ಗು.); **-phótograph** (ಪೈರೊ—) ಗಾಜಿನಮೇಲೆ ಅಥವಾ ಪಿಂಗಾಣಿಯ ಮೇಲೆ ಸುಟ್ಟು ರಚಿಸಿದ ಛಾಯಾ ಚಿತ್ರ ; ಸುಡು ಛಾಯಾ ಚಿತ್ರ. **-photográphic** (ಗು.) ; **-photógraphy** (ನಾ.)

Pýrope ಪೈರೋಪ್ (ನಾ.) ಗಾಢ ರಕ್ತವರ್ಣದ ಪದ್ಮರಾಗ (ಮಣಿ)

Pyrotéchnic ಪೈರೊಟೆಕ್ನಿಕ್ (ಗು., ನಾ.) ಬಾಣ ಬಿರುಸಿನ (ಸ್ವಭಾವದ) (P. display). (ಬುದ್ಧಿ ಚಮತ್ಕಾರ, ಮೊ. ಗಳ ವಿಷಯದಲ್ಲಿ ರೂಪ.) ಉಜ್ಜ್ವಲ ; ಕೌತುಕ, ಆಶ್ಚರ್ಯ, —ಜನಕ. (ನಾ.) (ಬ. ವ. ದಲ್ಲಿ) ಬಾಣ ಬಿರುಸು ತಯಾರಿಕೆಯ ಕಲೆ ; ಬಾಣ ಬಿರುಸುಗಳ ಪ್ರದರ್ಶನ ; ಸುಡುಮದ್ದಿನ ವಿನೋದ ; (ರೂಪ.) (ಬುದ್ಧಿ) ಚಮತ್ಕಾರ ಪ್ರದರ್ಶನ. **Pyrotéchnical** (ಗು.) ; **Pyrotéchnically** (ಕ್ರಿ. ವಿ.) ; **Pyrotéchnist** (ನಾ.) ; **Pýrotechny** (ನಾ.)

Pyróxylin ಪೈರಾಕ್ಸಿಲಿನ್ (ನಾ.) ಸಸ್ಯದ ನಾರನ್ನು ನೈಟ್ರಿಕ್ ಆಮ್ಲ, ಮೊ. ಗಳಿಂದ ಸಂಸ್ಕರಿಸಿ ಮಾಡಿದ, (ಸಿಡಿ ಹತ್ತಿ, ಮೊ. ವನ್ನೊಳಕೊಂಡ) ಸಿಡಿಮದ್ದು ಪದಾರ್ಥ. **Pyroxýlic** (ಗು.)

Pýrrhic¹ ಪಿರಿಕ್ (ನಾ., ಗು.) ಪುರಾತನ ಗ್ರೀಕರ ಯುದ್ಧ ನೃತ್ಯ (=P. dance). ದ್ವಿ ಲಘು ಗಣ (⏑⏑). (ಗು.) ಈ ಗಣಗಳುಳ್ಳ.

Pýrrhic² ಪಿರಿಕ್ (ಗು.) P. victory ವಿಪರೀತ ನಷ್ಟಪಟ್ಟು ಪಡೆದ ಜಯ (ಪುರಾತನ ಗ್ರೀಸಿನ ಇಪೈರಸ್ ದೊರೆಯಾದ ಪಿರಸ್ ಎಂಬಾತನು ರೋಮನರ ಮೇಲೆ ಪಡೆದಂತಹದು)

Pýrrhonism ಪಿರೊನಿಸ್ಮ್ (ನಾ.) [(ಮು., ಕ್ರಿ. ಪೂ. ೩ಂ೦ರಲ್ಲಿದ್ದ) ಪುರಾತನ ಗ್ರೀಸಿನ ಈಲಸ್ ದೇಶದ ಪಿರೋ ಎಂಬ ತತ್ತ್ವಜ್ಞಾನಿಯು ಪ್ರತಿಪಾದಿಸಿದ] ಸಂಶಯ ವಾದ ; ನಿಶ್ಚಯ ಜ್ಞಾನ ಅಸಾಧ್ಯವೆಂಬ ವಾದ. ಸಂಶಯಾತ್ಮಕತೆ ; ತಾತ್ತ್ವಿಕ ಸಂಶಯ, —ಸಂದೇಹ. **Pyrrhónian** ಪಿರೋನಿಯನ್ (ಗು., ನಾ.) ; **Pyrrhónic** ಪಿರಾನಿಕ್ (ಗು., ನಾ.) ; **Pýrrhonist** ಪಿರೊ— (ನಾ.)

Pyrús ಪೈರಸ್ (ನಾ.) ಪೇರ್ ಮತ್ತು ಸೇಬುಗಿಡಗಳನ್ನೊಳಕೊಂಡ ಸಸ್ಯಜಾತಿ. (ಮು., P. japonica ಕಡುಗೆಂಪು ಹೂವು ಬಿಡುವ ಪೈರಸ್ ಜಾತಿ)

Pythagoréan ಪೈ(ಪಿ)ತ್ಯಾಗೋರೀಯನ್ (ಗು., ನಾ.) (ಪುನರ್ಜನ್ಮದಲ್ಲಿ, ದೇಹಾಂತರ ಪ್ರಾಪ್ತಿಯಲ್ಲಿ, ನಂಬಿಕೆಯುಳ್ಳವನಾಗಿದ್ದನೆಂದು ಹೇಳುವ, ಕ್ರಿ. ಪೂ. ೬ನೆಯ ಶ. ಮಾ. ದಲ್ಲಿದ್ದ, ಗ್ರೀಸ್ ದೇಶದ) ಪೈತಾಗೊರಸ್ ಎಂಬ ತತ್ತ್ವಜ್ಞಾನಿಯ (ಅನುಯಾಯಿ). P. proposition

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯೂಕ್ಲಿಡ್ಡಿನ ಮೊದಲನೆಯ ಪುಸ್ತಕದ ೪೭ನೆಯ ಪ್ರತಿಜ್ಞೆ: ಒಂದು ಸಮ ಕೋನಿಕ ತ್ರಿಕೋನದಲ್ಲಿ ಕರ್ಣದಮೇಲಿನ ಸಮ ಚತುರಸ್ರವು ಉಳಿದೆರಡು ಬಾಹುಗಳಮೇಲಿನ ಸಮ ಚತುರಸ್ರಗಳ ಮೊತ್ತಕ್ಕೆ ಸಮ ಎಂಬ ಪ್ರತಿಜ್ಞೆ.

Pýthian ಪಿಥಿಯನ್ (ಗು., ನಾ.) (ಗ್ರೀಸಿನಲ್ಲಿರುವ) ಡೆಲ್ಫಿಯ(ಲ್ಲಿಯ ಅಪಾಲೊ ದೇವನ ವಾಣಿಯ ಮತ್ತು ಅರ್ಚಕಿಯ). (ನಾ.) (ಡೆಲ್ಫಿಯಲ್ಲಿಯ) ಅಪಾಲೊ ದೇವತೆ(ಯ ಅರ್ಚಕಿ) (The P.)

Pýthon[1] ಪೈತನ್ (ನಾ.) (ಗ್ರೀಕ್ ಪುರಾಣ) ಅಪಾಲೊ ದೇವತೆ ಡೆಲ್ಫಿಯ ಬಳಿ ಕೊಂದುಹಾಕಿದ ಒಂದು ಮಹಾ ಸರ್ಪ ಅಥವಾ ವಿಕಾರ ಭೂತ. (ತನ್ನ ಆಹಾರ ಪ್ರಾಣಿಯನ್ನು ನುಗ್ಗುನುರಿ ಮಾಡುವ) ಹೆಬ್ಬಾವು; ಅಜಗರ. **Pythónic**[1] —ತಾ— (ಗು.)

Pýthon[2] ಪೈತನ್ (ನಾ.) ತಿಳಿದ ಪಿಶಾಚಿ, ದೆವ್ವ, ಭೂತ (ಹಿಡಿದ ವ್ಯಕ್ತಿ). **Pýthoness** ಪೈತೊನೆಸ್ (ನಾ., ಸ್ತ್ರೀ.) (ಭೂತಾವೇಶ ಬಂದು) ಕಾಲಜ್ಞಾನ ಹೇಳುವವಳು; ಮಾಟಗಾತಿ. **Pythónic**[2] —ತಾ— (ಗು.)

Pyx ಪಿಕ್ಸ್ (ನಾ., ಕ್ರಿ. ಸಕ.) (ಕ್ರೈಸ್ತ) ಪವಿತ್ರ ಮಾಡಿದ ರೊಟ್ಟಿಯನ್ನು ಇಡುವ ಪಾತ್ರೆ. (ಟಂಕಸಾಲೆಯ ನಾಣ್ಯಗಳನ್ನು ಪ್ರತಿ ವರ್ಷವೂ ಹೋಲಿಸಿ ಪರೀಕ್ಷೆ ಮಾಡುವುದಕ್ಕಾಗಿ Royal Mint ಎಂಬ ಸರ್ಕಾರದ ಟಂಕಸಾಲೆಯಲ್ಲಿ) ಚಿನ್ನದ ಮತ್ತು ಬೆಳ್ಳಿಯ ಮಾದರಿ ನಾಣ್ಯಗಳನ್ನು ಇಟ್ಟಿರುವ ಪೆಟ್ಟಿಗೆ. [Trial of the P. ಸರಾಫ್ ಮಂಡಲಿಯ (Goldsmith's Company) ಪಂಚಾಯತಿಯವರು ನಡಸುವ ಈ ವಾರ್ಷಿಕ ನಾಣ್ಯ ಪರೀಕ್ಷೆ]. (ಕ್ರಿ.) (ನಾಣ್ಯವನ್ನು) ಪರೀಕ್ಷೆಯ ಪೆಟ್ಟಿಗೆಯಲ್ಲಿಡು; (ನಾಣ್ಯವನ್ನು) ತೂಕಮಾಡಿಯೂ ಒರೆಯಿಟ್ಟೂ ಪರೀಕ್ಷಿಸು.

Pyxídium ಪಿಕ್ಸಿಡಿಯಂ (ನಾ.) (ಸ. ವಿ., ಬ. ವ. -ia) ಪೆಟ್ಟಿಗೆಯ ಮುಚ್ಚಳದಂತೆ ಮೇಲ್ಭಾಗ ಎದ್ದುಬರುವ ಬೀಜ ಕೋಶ.

Pýxis ಪಿಕ್ಸಿಸ್ (ನಾ.) ಸಣ್ಣ ಪೆಟ್ಟಿಗೆ; ಸಂಪುಟ. =Pyxidium.

Q

Q ಕ್ಯೂ. ಇಂಗ್ಲಿಷ್ ವರ್ಣಮಾಲೆಯ ಹದಿನೇಳನೆಯ ಅಕ್ಷರ. Mind one's P's & Q's (P. ನೋಡಿ). **Q.-boat, Q.-ship** = Mystery-ship (Mystery[1] ನೋಡಿ). **Q department** = Q.M.G.(ನ) ಇಲಾಖೆ.

ಸಂಕ್ಷಿಪ್ತಗಳು : (1) Quarter [**Q.M.** (-master); **Q.M.G.** (-master general); **Q.M.S.** (-master sergeant)]. (2) Queen's [**Q.B., Q.C.** (-Bench, Counsel)]. (3) Quick [**Q.F.** (-firing)]. (4) Quod [**Q.E.D., Q.E.F., Q.E.I., q.v.** (Quod ನೋಡಿ)]. (5) q = quantum [**q.l., q.p., q.s.** (Quantum ನೋಡಿ)]. **q.**(uery). **qr** = quarter (ಹಂಡ್ರೆಡ್‌ವೇಟಿನ ¼ ಭಾಗ: ೨೮ ಪೌಂಡುಗಳ ತೂಕ). **q.t.** (ಅಸಂ.) quiet (On the strict q.t. ಸದ್ದಿಲ್ಲದೆ; ಗುಟ್ಟಾಗಿ; ಇತರರ ಗಮನಕ್ಕೆ ಬೀಳದೆ). **qu.**(asi); **qu.**(ery, -aere)

Qua ಕ್ವೇ (ಸಂ. ಅವ್ಯ.) ಎಂದು; ಎಂಬುದಾಗಿ; ಎಂಬ ಅಧಿಕಾರಕ್ಕಾಗಿ (We respect the King not q. man but q. head of the State ರಾಜನನ್ನು ನಾವು ಗೌರವಿಸುವುದು ಆತನ ಮನುಷ್ಯತ್ವಕ್ಕಲ್ಲ, ಆತನು ರಾಜ್ಯದ ಅಧಿಪತಿಯೆಂದು)

Quack[1] ಕ್ವ್ಯಾಕ್ (ನಾ., ಕ್ರಿ. ಅಕ.) ಬಾತು ಕೋಳಿ ಮಾಡುವ ಕರ್ಕಶ ಧ್ವನಿ: 'ಕ್ವ್ಯಾಕ್, ಕ್ವ್ಯಾಕ್'. (ಕ್ರಿ.) —ಎನ್ನು; ಗಟ್ಟಿಯಾಗಿಯೂ ಹುಚ್ಚುಹುಚ್ಚಾಗಿಯೂ ಹರಟು. Q.-q. (ಮಕ್ಕಳ ಮಾತು) ಬಾತು ಕೋಳಿ.

Quack[2] ಕ್ವ್ಯಾಕ್ (ನಾ., ಕ್ರಿ.) (ಮು., ವೈದ್ಯದಲ್ಲಿ ಅಥವಾ ಶಸ್ತ್ರ ಚಿಕಿತ್ಸೆಯಲ್ಲಿ) ಚತುರನಂತೆ ನಟಿಸುವ ಪಂಡಿತ ವೇಷಿ; ಪಾಂಡಿತ್ಯ ನಟಕ; ಅಳಲೆಕಾಯಿ ಪಂಡಿತ; ಆಶ್ಚರ್ಯಕರವಾದ ಔಷಧಗಳನ್ನಾಗಲಿ ಸಾಧನಗಳನ್ನಾಗಲಿ ಕೊಡುವೆನೆಂದು ಹೇಳುವವನು; ಅಡ್ಡಕಸಬಿ ವೈದ್ಯ; (ಹಲವು ವೇಳೆ ವಿಶೇಷಣವಾಗಿ: Q. doctor, remedies). (ಕ್ರಿ.) (ವೈದ್ಯ) ಪಂಡಿತನಂತೆ ನಟಿಸು; ಅಳಲೆಕಾಯಿ ವೈದ್ಯಮಾಡು; ಬಹಳ ತಿಳಿದವನಂತೆ ಮಾತನಾಡು; ಬಡಿವಾರ ಕೊಚ್ಚು. (ಔಷಧ, ಚಿಕಿತ್ಸೆ, ಮೊ. ನ್ನು) ಯೋಗ್ಯತೆ ಎಣಿಸದೆ ಅತಿಯಾಗಿ ಹೊಗಳು, ಪ್ರಚುರಪಡಿಸು **Quáckery** (ನಾ.) ಪಾಂಡಿತ್ಯ ನಟನೆ. **Quáckish** (ಗು.)

Quácksalver ಕ್ವ್ಯಾಕ್‌ಸ್ಯಾಲ್ವರ್ (ನಾ.) (ಈಗ ವಿರ. ಪ್ರ.) = Quack[2] (ನಾ.) (ಪದದ ಆದಿ ರೂಪ)

Quad ಕ್ವಾಡ್ (ನಾ.). **Quadrangle, Quadrat** ನೋಡಿ.

Quádrable ಕ್ವಾಡ್ರಬ್‌ಲ್ (ಗು.) (ಗಣಿತ) ಅದಕ್ಕೆ ಸರಿ ಸಮನಾದ ಸಮ ಚತುರಸ್ರದಿಂದ ಅಥವಾ ಸಂಖ್ಯಾ ವರ್ಗದಿಂದ ನಿರೂಪಿಸಬಹುದಾದ; (ಸಂಖ್ಯಾ) ವರ್ಗ ಸಾಧ್ಯ. ಬೀಜಗಣಿತದ ಪರಿಮಿತ ಪದ ಸಂಖ್ಯೆಯಿಂದ ನಿರೂಪಿಸಬಹುದಾದ.

Quadragenárian ಕ್ವ್ಯಾಡ್ರಜಿನೇರಿಯನ್ (ಗು., ನಾ.) ನಲವತ್ತು ವರ್ಷ ವಯಸ್ಸಿನ(ವನು, —ವಳು)

Quadragésima ಕ್ವ್ಯಾಡ್ರಜೆಸಿಮ (ನಾ.) 'ಲೆಂಟ್' ಉಪವಾಸ ವ್ರತ ಕಾಲದ ಮೊದಲನೆಯ ಭಾನುವಾರ (=Q. Sunday). **Quadragésimal** (ಗು.) ನಲವತ್ತು ದಿನಗಳವರೆಗಿನ (ಉಪವಾಸದ) (ಮು., 'ಲೆಂಟ್' ಉಪವಾಸ ಸಂಬಂಧದ್ದು); 'ಲೆಂಟ್' ಉಪವಾಸ ವ್ರತದ.

Quádrangle ಕ್ವಾಡ್ರ್ಯಾಂಗ್‌ಲ್ (ನಾ.) ಚತುರ್ಭುಜಾಕೃತಿ (ಮು., ಸಮ ಚತುರಸ್ರ ಅಥವಾ ಆಯತ). ನಾಲ್ಕು ಪಕ್ಕಗಳಲ್ಲಿಯೂ ಕಟ್ಟಡಗಳಿಂದ ಬಳಸಲ್ಪಟ್ಟ ಅಂಗಳ; ಚತುಶ್ಶಾಲೆ; ಚೌಕಾಂಗಳ; ಪ್ರಾಂಗಣ (=Quad); ಪ್ರಾಂಗಣವುಳ್ಳ ಕಟ್ಟಡ. **Quadrángular** (ಗು.); **Quadrángularly** (ಕ್ರಿ. ವಿ.)

Quádrant ಕ್ವಾಡ್ರಂಟ್ (ನಾ.) ವೃತ್ತ ಪರಿಧಿಯ ನಾಲ್ಕರಲ್ಲೊಂದು ಭಾಗ. ಸಮ ವೃತ್ತದಲ್ಲಿ ಸಮ ಕೋನಿಕ ತ್ರಿಜ್ಯಗಳೆರಡೂ ಅವುಗಳ ಮಧ್ಯದಲ್ಲಿಯ ಚಾಪೂ ಸೇರಿ ಆದ ಸಮತಲಾಕೃತಿ: ಕಾಲು ವೃತ್ತ; ವೃತ್ತ ಚತುರ್ಥಾಂಶ. ಗೋಳದ ಚತುರ್ಥಾಂಶ, ಕಾಲು ಗೋಳ. (ಮು., ಅಳತೆಯ ಗುರುತುಗಳನ್ನು ಹಾಕಿರುವ) ಕಾಲು ವೃತ್ತಾಕಾರದ ಲೋಹ ಫಲಕ; ಕಾಲು ವೃತ್ತಾಕಾರದ ಕೋನ ಮಾಪಕ. **Quadrántal** —ಡ್ರ್ಯಾಂ— (ಗು.)

Quádrat ಕ್ವಾಡ್ರಟ್ (ನಾ.) (ಮುದ್ರಣದಲ್ಲಿ) ಮಧ್ಯೇ ಮಧ್ಯೇ ಸ್ಥಳ ಬಿಡುವುದಕ್ಕಾಗಿ ಉಪಯೋಗಿಸುವ (ಅಚ್ಚುಮೊಳೆಗಳಿಗಿಂತ ತಗ್ಗಾದ) ಲೋಹದ ತಗ್ಗು ಮೊಳೆಗಳು (=Quad) (em q., en q. ಹೆಚ್ಚು ಗಾತ್ರದ, ಕಡಮೆ ಗಾತ್ರದ,—)

Quádrate ಕ್ವಾಡ್ರೆಟ್ (ಗು., ನಾ.), **Quadráte** —ಡ್ರೇಟ್ (ಕ್ರಿ.) ಚಚ್ಚೌಕವಾದ; ನೀಳ ಚತುರಸ್ರಾಕಾರದ [ಮು., ಅಂ. ರ. ಶಾ. ದ ಹೆಸರುಗಳಲ್ಲಿ: Q. bone (ಹಕ್ಕಿಗಳ ಮತ್ತು ಸರೀಸೃಪಗಳ ತಲೆಗಳಲ್ಲಿಯದು). Q. muscle (ರೊಂಡಿ, ತೊಡೆ, ಮುಂಗೈ, ಮೊ. ಗಳಲ್ಲಿಯದು)]. (ನಾ.) (ವಿರ. ಪ್ರ.) ನೀಳ ಚತುರಸ್ರಾಕಾರದ ತುಂಡು ಅಥವಾ ಫಲಕ. =Q. bone or muscle. (ಕ್ರಿ.) (ವಿರ. ಪ್ರ.) (ಒಂದು ವಸ್ತುವನ್ನು) ಚಚ್ಚೌಕ ಮಾಡು; (ಗಣಿತ) (ವೃತ್ತ, ಮೊ. ಕ್ಕೆ ಸಮವಾದ) ಸಮ ಚತುರಸ್ರವನ್ನು ರಚಿಸು. (—ಒಡನೆ) ಹೊಂದಿಕೆಯಾಗು, ಹೊಂದಿಕೆ ಮಾಡು (*With* ಉಪ. ದೊಡನೆ). **Quadrátic** —ಡ್ರ್ಯಾ— (ಗು., ನಾ.) (ವಿರ. ಪ್ರ.) ಸಮ ಚತುರಸ್ರದ. (ಗಣಿತ) ಅವ್ಯಕ್ತ ಪರಿಮಾಣದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥವಾ ಚಲ ಪರಿಮಾಣದ ದ್ವಿತೀಯ ಘಾತಕ್ಕೆ ಹೆಚ್ಚಿಲ್ಲದ ಪದಗಳನ್ನು ಒಳಕೊಂಡ (ಮು., Q. equation ವರ್ಗಾತ್ಮಕ ಸಮೀಕರಣ; ವರ್ಗಪದ ಶ್ರೇಣಿ ಸಮೀಕರಣ). (ನಾ.) =Q. equation. (ಬ. ವ. ದಲ್ಲಿ) (ಬೀ. ಗ.) ವರ್ಗ ಪದ ಶ್ರೇಣಿ ಸಮೀಕರಣ ಪ್ರಕರಣ. **Quádrature** ಕ್ವಾಡ್ರಟ್ಯು(ಟ್ಯೂ)ರ್, —ಚರ್ (ನಾ.) (ಗಣಿತ) ಒಂದು ವಕ್ರರೇಖಾಕೃತಿ ಫಲಕಕ್ಕೆ ಸರಿಸಮನಾದ ಕ್ಷೇತ್ರ ಫಲವುಳ್ಳ ಸಮ ಚತುರಸ್ರವನ್ನು ಕಂಡುಹಿಡಿಯುವುದು (ಮು., Q. of the circle). (ಖ. ವಿ.) ಚಂದ್ರನು ಸೂರ್ಯನಿಂದ ೯೦° ಕೋನದಲ್ಲಿರುವ, ಆಕಾಶ ದಲ್ಲಿಯ ಎರಡು ಬಿಂದುಗಳಲ್ಲಿ, ಎರಡು ಕಾಲಗಳಲ್ಲಿ, ಒಂದು. ಒಂದು ಆಕಾಶಸ್ಥ ಕಾಯಕ್ಕೆ ೯೦° ಕೋನ ದೂರದಲ್ಲಿರುವ ಮತ್ತೊಂದರ ಸ್ಥಾನ; ಸಮ ಕೋನ ದೂರಸ್ಥಾನ.

Quadrátic, Quádrature. **Quadrate** ನೋಡಿ.

Quadrénnial ಕ್ವಾಡ್ರೆನಿಯಲ್ (ಗು.) ನಾಲ್ಕು ವರ್ಷಕ್ಕೊಮ್ಮೆ ಬರುವ; ನಾಲ್ಕು ವರ್ಷ ಕಾಲ ಇರುವ; ಚತುರ್ವಾರ್ಷಿಕ.

Quadri- ಕ್ವಾಡ್ರಿ— (ಸ. ಪೂ. ಪ.) ನಾಲ್ಕು—; ನಾಲ್—; ಚತುರ್—. **-fid** (ಗು.) ನಾಲ್ಕು ಭಾಗಗಳಾಗಿ, ಹಾಲೆಗಳಾಗಿ, ಸೀಳಿದ. **-láteral** (ಗು., ನಾ.) ಚತುರ್ಭುಜ; ಚತುರ್ಭುಜಾಕೃತಿ(ಯ ಕ್ಷೇತ್ರ). **-língual** (ಗು.) ನಾಲ್ಕು ಭಾಷೆಗಳನ್ನು ಬಳಸುವ; —ಗಳಲ್ಲಿರುವ; ಚತುರ್ಭಾಷಾತ್ಮಕ. **Quadríllion** —ಲ್ಯನ್ (ನಾ.) ೧೦ ಲಕ್ಷದ ನಾಲ್ಕನೆಯ ಘಾತ (೧ರ ಮುಂದೆ ೨೪ ಸೊನ್ನೆಗಳನ್ನು ಹಾಕಿದರೆ ಆಗುವ ಸಂಖ್ಯೆ); (ಅಮೆ. ಸಂ.) $=1{,}000^5$ (Billion ಹೋಲಿಸಿ). **-nóminal** (ಗು.) ನಾಲ್ಕು ಬೀಜಾಂಕ ಪದಗಳುಳ್ಳ. **-pártite** (ಗು.) ನಾಲ್ಕು ಭಾಗ, ಪಾಲು, —ಉಳ್ಳ. ನಾಲ್ವರಿಗೆ ಅಥವಾ ನಾಲ್ಕು ಪಕ್ಷಗಳಿಗೆ ಹಂಚಿಕೆಯಾಗಿರುವ; ನಾಲ್ವರನ್ನು ಅಥವಾ ನಾಲ್ಕು ಪಕ್ಷಗಳನ್ನು ಒಳಕೊಂಡಿರುವ. **-syllábic** (ಗು.) ನಾಲ್ಕು ಉಚ್ಚಾರಾಂಶಗಳುಳ್ಳ. **-sýllable** (ನಾ.) —ಪದ. **Quadriválent** ಕ್ವಾಡ್ರಿವಲೆಂಟ್, **Quadriválent** —ವೇಲೆಂಟ್ (ಗು.) (ರ. ವಿ.) ಏಕ ಸಂಯೋಗ ಶಕ್ತಿಯ (ಉದಾ., ಜಲಜನಕದ) ನಾಲ್ಕು ಪರಮಾಣುಗಳೊಡನೆ ಸಂಯೋಗ ಹೊಂದುವ ಶಕ್ತಿಯುಳ್ಳ: ಚತುರ್ಯೋಗ ಶಕ್ತ. **Quadrívium** —ವಿಯಂ (ನಾ.) (ಚರಿತ್ರೆ) [ಮಧ್ಯ ಕಾಲದ (ಯೂರೋಪಿನ) ವಿ. ವಿ. ನಿ. ಗಳಲ್ಲಿ ಅಂಕಗಣಿತ, ಜ್ಯಾಮಿತಿ, ಖಗೋಳ ವಿಜ್ಞಾನ ಮತ್ತು ಸಂಗೀತ ಎಂಬ] ನಾಲ್ಕು ಪಠ್ಯ ವಿಷಯಗಳು; ಚತುಶ್ಶಾಸ್ತ್ರ ಪಾಠಗಳು; ಪಾಠ ಚತುಷ್ಕ (Trivium ಹೋಲಿಸಿ)

Quádric ಕ್ವಾಡ್ರಿಕ್ (ಗು., ನಾ.) (ಘನ ಜ್ಯಾ.) ದ್ವಿ ಘಾತ ಪರಿಮಾಣದ (ತಲ)

Quadríga ಕ್ವಾಡ್ರೈಗ (ನಾ.; ಬ. ವ. -ae —ಜೀ) (ಶಿಲ್ಪದಲ್ಲೂ ನಾಣ್ಯಗಳಲ್ಲೂ ನಿರೂಪಿಸುವಂಥ) ನಾಲ್ಕು ಕುದುರೆಗಳನ್ನು ಎದೆಸಮನಾಗಿ ಹೂಡಿದ ರಥ.

Quadrílle[1] ಕ್ವ(ಕ)ಡ್ರಿಲ್ (ನಾ.) (ನಾಲ್ಕು ಜನ ಆಟಗಾರರು ೪೦ ಎಲೆಗಳಿಂದ ಆಡುತ್ತಿದ್ದ, ೧೮ನೆಯ ಶ. ಮಾ. ದಲ್ಲಿ ಬಳಕೆಯಲ್ಲಿದ್ದ, ಸೀಟು ಗಾರಿಕೆಯ) ಒಂದು ತೆರದ ಇಸ್ಪೀಟಾಟ.

Quadrílle[2] ಕ(ಕ್ವ)ಡ್ರಿಲ್ (ನಾ.) ನಾಲ್ಕು ಮಿಥುನಗಳು ಭಾಗ ವಹಿಸುವ ಒಂದು ಬಗೆಯ ಚೌಕ ಕುಣಿತ (=Set of quadrilles); ಇದಕ್ಕೆ ಹೊಂದಿಸಿದ ಸಂಗೀತ.

Quadroón ಕ್ವಡ್ರೂನ್ (ನಾ.) ಬಿಳಿಯರು ಮತ್ತು ನೀಗ್ರೋ ಯೂರೋಪಿಯನ್ ಸಂಕರ ಜನ್ಯರು—ಇವರ ಕೂಟದಿಂದ ಹುಟ್ಟಿದವನು; ಕಾಲು ಭಾಗ ನೀಗ್ರೋ ರಕ್ತವುಳ್ಳವನು. ಇಂತಹ, ಇದೇ ಪ್ರಮಾಣದ ಮಿಶ್ರಣವುಳ್ಳ, —ಅರ್ಧ ತಳಿಯ ಮನುಷ್ಯ, ಪ್ರಾಣಿ, ಸಸ್ಯ (ಜಾತಿ); ಪಾದಾಂಶ ಸಂಕರ ಜಾತಿ.

Quadrúmanous ಕ್ವಾಡ್ರೂಮನಸ್ (ಗು.) ನಾಲ್ಕು ಕೈಗಳುಳ್ಳ; ನಾಲ್ಕು ಕೈಯ. ನಾಲ್ಕು ಕೈಗಳಲ್ಲೂ ಹೆಬ್ಬೆರಳಿರುವ Quadrumana (ನಾಲ್ಕು ಕೈಯ ಸಸ್ತನಿ ಪ್ರಾಣಿ) ವರ್ಗಕ್ಕೆ ಸೇರಿದ.

Quádruped ಕ್ವಾಡ್ರುಪೆಡ್ (ನಾ., ಗು.) ನಾಲ್ಕು ಕಾಲಿನ [ಪ್ರಾಣಿ (ಮು., ಸಸ್ತನಿ ಪ್ರಾಣಿ)]; ಚತುಷ್ಪಾದಿ. **Quadrúpedal** —ಡ್ರೂ— (ಗು.)

Quádruple ಕ್ವಾಡ್ರುಪ್ಲ್ (ಗು., ನಾ., ಕ್ರಿ.) ನಾಲ್ಕರಷ್ಟು; ನಾಲ್ಕು ಮಡಿ; ನಾಲ್ಕು ಭಾಗಗಳುಳ್ಳ; ನಾಲ್ಕು ಪಕ್ಷಗಳನ್ನೊಳಕೊಂಡ; ಚತುರ್ಭಾಗಾತ್ಮಕ [Q. algebra ನಾಲ್ಕು ಸ್ವತಂತ್ರ ಏಕಮಾನಗಳನ್ನು ಉಪಯೋಗಿಸುವ ಬೀಜಗಣಿತ]. (ಒಂದರ) ನಾಲ್ಕರಷ್ಟು (ಮೊತ್ತದ, ಸಂಖ್ಯೆಯ) (*Of* ಉಪ. ದೊಡನೆ); (ಒಂದರ) ನಾಲ್ಕರಷ್ಟು ಮೊತ್ತಕ್ಕೆ ಸಮನಾದ; (ಒಂದಕ್ಕೆ) ನಾಲ್ಕರಷ್ಟು ಉತ್ತಮವಾದ, ಹೆಚ್ಚಾದ; ಚತುರ್ಗುಣ (*To* ಉಪ. ದೊಡನೆ) (Has a light & heat q., q. of *or* to, that of the earth). (ನಾ.) (ಒಂದಕ್ಕಿಂತ) ನಾಲ್ಕರಷ್ಟು ಹೆಚ್ಚಾದ ಮೊತ್ತ, ಸಂಖ್ಯೆ (ಮು., the q. of). (ಕ್ರಿ.) ನಾಲ್ಕರಿಂದ ಗುಣಿಸು; ಚತುರ್ಗುಣವಾಗು, —ಮಾಡು. **Quádruply** (ಕ್ರಿ. ವಿ.)

Quádruplet ಕ್ವಾಡ್ರುಪ್ಲೆಟ್ (ನಾ., ಬ. ವ.) ಒಂದು ಹೆರಿಗೆಯಲ್ಲಿ ಒಟ್ಟಿಗೆ ಹುಟ್ಟಿದ ನಾಲ್ಕು ಮಕ್ಕಳು. ಹೊಂದಿಕೆಯಾಗಿ ಒಟ್ಟಿಗೆ ಕೆಲಸ ಮಾಡುವ ನಾಲ್ಕು ಸಾಧನಗಳು. ನಾಲ್ವರಿಗಾಗಿ (ನಾಲ್ವರು ಕುಳಿತುಕೊಳ್ಳುವುದಕ್ಕೆ) ಕಲ್ಪಿಸಿದ ಬೈಸಿಕಲ್ಲು.

Quadrúplicate ಕ್ವಾಡ್ರೂಪ್ಲಿಕೆಟ್ (ಗು., ನಾ.), —ಕೇಟ್ (ಕ್ರಿ. ಸಕ.) ನಾಲ್ಕರಷ್ಟಿನ; ನಾಲ್ಕು ಮಡಿಯ; ಚತುರ್ಗುಣ; ನಾಲ್ಕು ಸಲ ಪುನರಾವರ್ತಿಸಿದ; (ಒಂದೇ ಸಮನಾದ) ನಾಲ್ಕು ಪ್ರತಿ ಮಾಡಿದ. (ನಾ.) [In q. (ಒಂದೇ ಸಮನಾದ) ನಾಲ್ಕು ಉದಾಹರಣೆಗಳಲ್ಲಿ, ಪ್ರತಿಗಳಲ್ಲಿ]. (ಬ. ವ.) (ಒಂದೇ ಸಮನಾದ) ನಾಲ್ಕು ಪ್ರತಿಗಳು. (ಕ್ರಿ.) ನಾಲ್ಕರಿಂದ ಗುಣಿಸು. (ಒಂದೇ ಸಮನಾದ) ನಾಲ್ಕು ಪ್ರತಿ ಮಾಡು. **Quadruplicátion** (ನಾ.); **Quadruplícity** ಕ್ವಾಡ್ರುಪ್ಲಿಸಿಟಿ (ನಾ.) ನಾಲ್ಕು ಭಾಗಗಳಲ್ಲಿರುವ ಸ್ವಭಾವ, ರೀತಿ; ನಾಲ್ಕು ಮಡಿಯಾಗಿರುವುದು.

Quaere ಕ್ವಿಯರಿ, ಕ್ವೇರಿ (ಕ್ರಿ. ಸಕ. ವಿಧಿ ರೂಪ; ನಾ.; ಸಂಕ್ಷಿಪ್ತ: qu.) ವಿಚಾರಿಸು, ಕೇಳು (ವಿಧಿ ರೂಪ); ಅದೊಂದು ಪ್ರಶ್ನೆ; ತಿಳಿಯಬಯಸುತ್ತೇನೆ (Most interesting, no doubt, but q., is it true ?). (ನಾ.) ಪ್ರಶ್ನೆ; ಕೇಳಿಕೆ.

Quaff ಕ್ವಾಫ್ (ಕ್ರಿ.) (ಒಂದೇ ಬಾರಿ) ಗಟ ಗಟನೆ, ದೊಡ್ಡ ಗುಟುಕಿನಲ್ಲಿ, —ಕುಡಿದುಬಿಡು, (ಬಟ್ಟಲು, ಮೊ. ನ್ನು) ಬರಿದುಮಾಡು.

Quag ಕ್ವ್ಯಾಗ್, ಕ್ವಾಗ್ (ನಾ.) ಜವುಗು ಪ್ರದೇಶ; ಹುಲ್ಲು ಬೆಳೆದು ಮುಚ್ಚಿರುವ, ಮೇಲೆ ನಡೆದಾಗ ಅದುರಿ ಕುಸಿಯುವ, ಉಸುಬು ನೆಲ. **Quággy** (ಗು.). **Quágmire** ಕ್ವ್ಯಾ(ಕ್ವಾ)ಗ್‌ಮೈರ್ (ನಾ.) ಅದುರುವ, ಕುಸಿಯುವ, —ಜವುಗು ನೆಲ, ಬದಿಯ ನೆಲ, ಉಸುಬು ನೆಲ (ರೂಪ. ಸಹ)

Quágga ಕ್ವ್ಯಾಗ (ನಾ.) ಕತ್ತೆ ಮತ್ತು ಸೀಬ್ರ ಜಾತಿಗೆ ಸೇರಿದ, ಆದರೆ ಸೀಬ್ರಕ್ಕಿಂತ ಪಟ್ಟೆಗಳು ಕಡಮೆಯಾಗುಳ್ಳ, ದ. ಆಫ್ರಿಕದ ಒಂದು ಚತುಷ್ಪಾದಿ.

Quai d'Orsaý ಕೇ ಡಾರ್ಸೇ (ನಾ.) ಫ್ರಾನ್ಸಿನ ಪರರಾಜ್ಯ ಕಚೇರಿ (ಎಂಬುದಕ್ಕೆ ಪ್ರಯೋಗ)

Quail[1] ಕ್ವೆಯ್‌ಲ್ (ನಾ.) ಕವುಜುಗ ಹಕ್ಕಿಯ ಜಾತಿಯ, ಒಳ್ಳೆಯ ಆಹಾರ ವೆಂದೆಣಿಸುವ, ಒಂದು ಬಗೆಯ ಪ್ರವಾಸ ಪಕ್ಷಿ; ಲಾವಕ್ಕಿ; ಪುರಲ ಹಕ್ಕಿ. Q.-call, q.-pipe [ಈ ಹಕ್ಕಿಗಳನ್ನು (ಬಲೆಗೆ) ಆಕರ್ಷಿಸುವುದಕ್ಕಾಗಿ] ಅದರಂತೆ ಧ್ವನಿ ಮಾಡುವ ಸಿಳ್ಳು. **Quáilery** (ನಾ.) ಈ ಹಕ್ಕಿಗಳನ್ನು ಬೆಳೆಸುವ ಸ್ಥಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Quail[2] ಕ್ವೆಯ್‌ಲ್ (ಕ್ರಿ.) (ಮನುಷ್ಯ, ಹೃದಯ, ಧೈರ್ಯ, ಉತ್ಸಾಹ, ಕಣ್ಣು —ಇವುಗಳ ವಿಷಯದಲ್ಲಿ) ಅಳುಕು, ನಡುಗು, ಕುಗ್ಗು, ತತ್ತರಿಸು; ಹಿಮ್ಮೆಟ್ಟು, ಭಯದಿಂದ ಹಿಂಜರಿ, ಎದೆಗೆಡು (*Before* or *to* ಉಪ. ದೊಡನೆ); (ಪ್ರೇ. ಪ್ರ.) ನಡುಗಿಸು; ಹೆದರಿಸು; ಅಂಜಿಸು; ಎದೆಗುಂದಿಸು.

Quaínt ಕ್ವೆಯ್‌ಂಟ್ (ಗು.) (ಅಪರಿಚಿತ ಕಾರಣದಿಂದ, ಮು., ಹಳೆಯ ರೀತಿ, ತೋರ್ಕೆ, ಅಲಂಕಾರ, ನಡೆವಳಿ, ಮೊ.) ವಿಲಕ್ಷಣತೆಯಿಂದ ಆಕರ್ಷಣೀಯವಾದ; ವಿಚಿತ್ರ ನಮೂನೆಯ; ಹಳೆಯ ಮಾಟದ ಅಂದವುಳ್ಳ. **Quaíntly** (ಕ್ರಿ. ವಿ.); **Quaíntness** (ನಾ.)

Quake ಕ್ವೇಕ್ (ಕ್ರಿ. ಅಕ.) ಅದಿ(ದು)ರು; ನಡುಗು; ಕಂಪಿಸು; ಹಿಂದಕ್ಕೆ ಮುಂದಕ್ಕೆ ತೂಗಾಡು [ಭೂಕಂಪದಿಂದ ಭೂಮಿ, ಭಯದಿಂದ ಅಥವಾ ಚಳಿಯಿಂದ ಮನುಷ್ಯ (*For* or *with* ಉಪ. ದೊಡನೆ), ಮೇಲೆ ನಡೆದಾಗ ಉಸುಬು ನೆಲ—ಇವುಗಳ ವಿಷಯದಲ್ಲಿ]. Quaking-grass (ಗಾಳಿಯಲ್ಲಿ ಅದಿರುವ ತೆಳ್ಳನೆಯ ಕಾಂಡಗಳುಳ್ಳ ಒಂದು ಬಗೆಯ) ಅದಿರು ಹುಲ್ಲು. **Quákingly** (ಕ್ರಿ. ವಿ.); **Quáky** (ಗು.)

Quáker ಕ್ವೇಕರ್ (ನಾ.) ೧೬೪೮-೫೦ರಲ್ಲಿ ಜಾರ್ಜ್ ಫಾಕ್ಸ್ ಎಂಬಾತನಿಂದ ಸ್ಥಾಪಿತವಾದ ಒಂದು ಮಿತ್ರಮಂಡಲಿಯ (Society of Friends) ಸದಸ್ಯ [ಇವರು ಶಾಂತಿ ತತ್ತ್ವಗಳಲ್ಲಿ ದೃಢ ನಿಷ್ಠೆಯುಳ್ಳವರೂ, (ಮು., ನಸು ಕಂದು ಬಣ್ಣದ ಅಥವಾ ನರೆ ಬಣ್ಣದ) ಸಾದಾ ಉಡುಪು ಧರಿಸುವವರೂ, ಗೌರವ ಪ್ರದರ್ಶನಕ್ಕೆ ಗಮನ ಕೊಡದ ಸರಳ ನಡೆ ನುಡಿಗಳುಳ್ಳವರೂ (ಮು., ಒಬ್ಬರೊಡನೊಬ್ಬರು ಏಕವಚನದಲ್ಲಿ ಮಾತನಾಡುವ ಪದ್ಧತಿಯುಳ್ಳವರೂ), ಬಿರುದುಗಳನ್ನು ನಿರಾಕರಿಸುವವರೂ, ಕ್ರೈಸ್ತೇತರ ಮತ ಸೂಚಕಗಳಾದ (ದಿನಗಳ ಹೆಸರು, ಮೊ.) ಪದಗಳನ್ನು ಬಳಸದಿರುವವರೂ ಪುರೋಹಿತ ರಹಿತ ಧರ್ಮಸಭೆಗಳ ವೈಶಿಷ್ಟ್ಯವುಳ್ಳವರೂ ಆಗಿರುತ್ತಾರೆ] (Quaker ಎಂಬ ಹೆಸರು ಹೊರಗಿನವರು ಕೊಟ್ಟದ್ದು): ಕ್ವೇಕರ್ (ಪಂಗಡದವನು) [Q., *or* q.'s, -meeting —ರ ಮತಧರ್ಮ ಸಭೆ (ಈ ಸಭೆಯಲ್ಲಿ ಯಾರಾದರೊಬ್ಬರಿಗೆ ದೈವಾವೇಶ ಬರುವವರೆಗೂ ಎಲ್ಲರೂ ಮೌನವಾಗಿರುತ್ತಾರೆ). (ರೂಪ.) ಮೌನ ಸಭೆ; ಸಂಭಾಷಣೆ ಸಪ್ಪೆಯಾಗಿರುವ ಗೋಷ್ಠಿ]. (ಅಮೆ. ಸಂ.) [ಹಡಗಿನ(ಲ್ಲಿ) ಅಥವಾ ಕೋಟೆಯ(ಲ್ಲಿ)] ಆಕಾರ ತೋರ್ಕೆಯ ಫಿರಂಗಿ; ಸುಳ್ಳು ಫಿರಂಗಿ. ಸಾದಾ ಬಣ್ಣದ ಹಲವು ಬಗೆಯ ಹಕ್ಕಿ, ಚಿಟ್ಟೆ (=q.-bird, -moth). **Quákerdom** (ನಾ.); **Quákeress** (ನಾ., ಸ್ತ್ರೀ.); **Quákerish** (ಗು.); **Quákerism** (ನಾ.); **Quákerly** (ಗು., ಕ್ರಿ. ವಿ.)

Qualificátion, Quálificatory. Qualify ನೋಡಿ.

Quálify ಕ್ವಾಲಿಫೈ (ಕ್ರಿ.) (ಯಾವುದಾದರೊಂದು) ಗುಣವನ್ನು ಆರೋಪಿಸು; ವಿಶೇಷಿಸು; (—ಎಂದು) ವರ್ಣಿಸು, ನಿರೂಪಿಸು (*As* ಪದದೊಡನೆ) (Q. documents as heretical. Q. person as a scoundrel. Adjectives q. nouns). ಆವಶ್ಯಕವಾದ ಗುಣಗಳನ್ನು, ಯೋಗ್ಯತೆಯನ್ನು, —ಉಂಟುಮಾಡು, ಒದಗಿಸು, ಕೊಡು; ದಕ್ಷನನ್ನಾಗಿ, ಅರ್ಹನನ್ನಾಗಿ, ಕಾನೂನು ಮೇರೆಗೆ ಹಕ್ಕುಳ್ಳವನನ್ನಾಗಿ, —ಮಾಡು [Qualifying examination ಉಮೇದುವಾರರು ಒಂದು ಗೊತ್ತಾದ ಮಟ್ಟಕ್ಕಿಂತ ಕಡಮೆ ಯೋಗ್ಯತೆಯುಳ್ಳವರಾಗಿಲ್ಲವೆಂದು ನಿರ್ಧರಿಸುವುದಕ್ಕಾಗಿ ನಡಸುವ (ಅನೇಕ ವೇಳೆ ಮುಂದಕ್ಕೆ ಸ್ಪರ್ಧಾ ಪರೀಕ್ಷೆ ನಡೆಯುವ) ಪರೀಕ್ಷೆ: ಯೋಗ್ಯತಾ ಪರೀಕ್ಷೆ]. (ಅಧಿಕಾರ ಪಡೆಯಲು) ಯೋಗ್ಯತೆ ಸಂಪಾದಿಸು (*For* ಉಪ. ದೊಡನೆ ಸಹ). (ಹೇಳಿಕೆಯನ್ನು, ಅಭಿಪ್ರಾಯವನ್ನು) ಸ್ವಲ್ಪ ಮಾರ್ಪಡಿಸು, ವ್ಯಾಪ್ತಿ ತಗ್ಗಿಸು, ಪರಿಮಿತ ಮಾಡು. (ತೀವ್ರತೆ) ಕಡಮೆ ಮಾಡು; ತಗ್ಗಿಸು. ಹಿತವನ್ನು, ಅಹಿತವನ್ನು, —ಕಡಮೆಮಾಡು; ಸ್ವಲ್ಪ ಅಪೂರ್ಣವಾಗಿರುವಂತೆ ಕಡಮೆಮಾಡು. [ಮದ್ಯ, ಮೊ. ಗಳಿಗೆ ನೀರು ಬೆರಸಿ, ಅಥವಾ (ಹಾಸ್ಯ ಪ್ರ.) ನೀರಿಗೆ ಮದ್ಯ ಬೆರಸಿ] ಬಲ ಕುಗ್ಗಿಸು, ರುಚಿಗುಂದಿಸು, ಸಪ್ಪೆ ಮಾಡು. **Qualificátion** (ನಾ.) ಪರಿಮಿತಿ (ಮಾಡುವುದು); ಉಪಾಧಿಯ ಅಂಗೀಕಾರ; ಪರಿಮಿತ(ಗೊಳಿಸುವ) ಸಂದರ್ಭ; ಪೂರ್ಣತೆಯ(ಲ್ಲಿ) ಅಥವಾ ನಿರುಪಾಧಿಕತೆಯ(ಲ್ಲಿ) ಕೊರತೆ; ವಿಶೇಷಣ (Statement with many qualifications. Hedged about with qualifications. His delight had one q.). (ಒಂದು ಉದ್ಯೋಗ, ಹಕ್ಕು, ಮೊ. ಕ್ಕೆ) ಅರ್ಹತೆ, ಯೋಗ್ಯತೆ, ಯೋಗ್ಯತಾ ವಿಶೇಷ (The q. for citizenship may be a certain income). ಅಂಥ ಯೋಗ್ಯತೆಯನ್ನು ಪ್ರಮಾಣೀಕರಿಸುವ ಪತ್ರ. ಗುಣಾರೋಪಣೆ; ವಿಶೇಷಿಸುವುದು (The q. of his policy as opportunist is unfair). **Quálificatory** (ಗು.) ವಿಶೇಷಿಸುವ.

Quálitative. Quality ನೋಡಿ.

Quálity ಕ್ವಾಲಿಟಿ (ನಾ.) ಮೇಲ್ಮೆಯ ಮಟ್ಟ, ದರ್ಜೆ; (ತಾರತಮ್ಯವಾಗಿ) ಗುಣ, ಧರ್ಮ, ಯೋಗ್ಯತೆ, ತೆರ, ತರಹೆ, ಬಗೆ (ಎದುರು ಪದ: Quantity); (Of good, high, poor, q. Is made in three qualities ಮೂರು ತರಹೆಗಳಲ್ಲಿ—. Q. matters more than quantity). (ಒಟ್ಟಿನಲ್ಲಿ) ಉತ್ಕೃಷ್ಟತೆ, ಶ್ರೇಷ್ಠತೆ (Has q. ಉತ್ಕೃಷ್ಟವಾಗಿದೆ). ಸಹಜ ಶಕ್ತಿ, ಸಾಮರ್ಥ್ಯ, ಚಾತುರ್ಯ, ಸಂಪನ್ನತೆ, ವೈಶಿಷ್ಟ್ಯ, (ಬೌದ್ಧಿಕ ಅಥವಾ ನೈತಿಕ) ಗುಣ, ಯೋಗ್ಯತೆ, ಸ್ವಭಾವ (Give a taste of one's q. ಏನು ಮಾಡಬಲ್ಲೆ ಎಂಬುದನ್ನು ಮುಂದೋರಿಸು. The defects of his qualities ಸಂದರ್ಭಾನುಸಾರವಾಗಿ ಗುಣಾತಿಶಯವೇ ಅವಗುಣವಾಗಿ ಪರಿಣಮಿಸುವ ಸ್ಥಿತಿ; ಗುಣಕ್ಕೆ ಅಂಟಿಕೊಂಡಿರುವ, ಗುಣದಲ್ಲೇ ಅಡಗಿಕೊಂಡಿರುವ, —ಅವಗುಣ). (ಪ್ರಾಚೀ. ಪ್ರ. ಅಥವಾ ಗ್ರಾಮ್ಯ ಪ್ರ.) ಮೇಲ್ತರಗತಿ, ಉನ್ನತ ದರ್ಜೆ, ಸಮಾಜದಲ್ಲಿ ಗೌರವ ಸ್ಥಾನ; ಕುಲೀನತೆ. (People of q. ತೂಕದ ಮನುಷ್ಯರು; ಗೌರವಸ್ಥರು; ಗುಣ ಗೌರವವುಳ್ಳವರು). (ತರ್ಕ: ಪ್ರತಿಜ್ಞೆಯ ವಿಷಯದಲ್ಲಿ) ಅಸ್ತ್ಯರ್ಥಕವಾಗಿರುವುದು ಅಥವಾ ನಾಸ್ತ್ಯರ್ಥಕವಾಗಿರುವುದು: ಧರ್ಮ. (ಶಬ್ದ, ಧ್ವನಿ, ಮೊ. ರ ವಿಷಯದಲ್ಲಿ) (ತೀವ್ರತೆಯ ಮಟ್ಟಕ್ಕೆ ಮತ್ತು ಉಚ್ಚತೆಗೆ ಭಿನ್ನವಾದ) ವಿಶಿಷ್ಟ ಗುಣ; (ಧ್ವನಿ) ಲಕ್ಷಣ. **Quálitative** —ಟೆ(ೀ)ಟಿವ್ (ಗು.) ಗುಣಕ್ಕೆ ಸಂಬಂಧಿಸಿದ, —ವನ್ನು ಅವಲಂಬಿಸಿದ; ಗುಣ ಸಂಬಂಧಿ; ಗುಣಾವಲಂಬಿ (ಎದುರು ಪದ: Quantitative) [ಮು., Q. analysis (ರ. ವಿ.) ಒಂದು ಸಂಯುಕ್ತದ ಗುಣಗಳನ್ನು ತಿಳಿಯುವುದಕ್ಕಾಗಿ ಮಾಡುವ ವಿಶ್ಲೇಷಣೆ: ಗುಣ ವಿಶ್ಲೇಷಣ]

Qualm ಕ್ವಾಮ್ (ನಾ.) (ಕ್ಷಣ ಮಾತ್ರದ) ಬವಳಿಯ, ಅಲಸಿಕೆಯ, ಅಸ್ವಸ್ಥತೆಯ, ಪಿತ್ತೋದ್ರೇಕದ, —ಅನುಭವ; ಪಿತ್ತ ಸಂಕಟ; ಸೊಕ್ಕು. ಅಧೈರ್ಯ; ಎದೆಗುಂದು; ಮನಸ್ಸಿಗೆ ಅಳುಕು; (ಯಾವುದಾದರೊಂದು ವಿಚಾರದಲ್ಲಿ) ತನ್ನ ನಡತೆ ಋಜುವಲ್ಲವೆಂಬ ಶಂಕೆ. **Quálmish** (ಗು.)

Quándary ಕ್ವಾಂಡರಿ, **Quandáry** ಕ್ವಾಂಡೇರಿ (ನಾ.) ಹಿಂದು ಮುಂದು ತೋರದ, ದಿಕ್ಕು ತೋರದ, —ಸ್ಥಿತಿ; ಕಷ್ಟ ಸಂದರ್ಭ; ವಿಷಮ ಸ್ಥಿತಿ; ಇಕ್ಕಟ್ಟು; ಬಿಕ್ಕಟ್ಟು; ತೊಡಕು; ಸಿಕ್ಕು; ಉಭಯ ಸಂಕಟ (Am in a q.)

Quand meme (F) ಕಾನ್ ಮೇಮ್ (ಕ್ರಿ. ವಿ.) ಆದದ್ದಾಗಲೆಂದು; ಪರಿಣಾಮವನ್ನು ಲಕ್ಷಿಸದೆ; ಹಾಗಿದ್ದರೂ ಕೂಡ; ಅದು ಹೇಗೇ ಇರಲಿ.

Quántic ಕ್ವಾಂಟಿಕ್ (ನಾ.) (ಗಣಿತ) ಎರಡು ಅಥವಾ ಹೆಚ್ಚು ಚಲ ಬೀಜಾಂಕಗಳುಳ್ಳ, ಘಾತಮೂಲ ಚಿಹ್ನೆಗಳಿಲ್ಲದೆ ಪೂರ್ಣಾಂಕ ನಿರ್ದಿಷ್ಟವೂ ಸಮಾನ ಘಾತಾತ್ಮಕವೂ ಆದ ಪರಸ್ಪರ ಸಂಬಂಧಿ ರಾಶಿ: ಸಮಘಾತೀಯ ಚಲರಾಶಿ [ಉದಾ., $ax^3+3\,bx^2y+3\,cxy^2+dy^3$ ಎಂಬುದು (x, y ಎಂಬ) ಚಲ ಬೀಜಾಂಕದ್ವಯ ರಾಶಿ]

Quántify, Quántitative, etc. Quantity ನೋಡಿ.

Quántity ಕ್ವಾಂಟಿಟಿ (ನಾ.) ಯಾವುದಾದರೊಂದು ಬಗೆಯ ಅಳತೆಯಿಂದ ಅಳೆಯಲಾಗುವ (ಪದಾರ್ಥದ) ಗುಣ: ಗಾತ್ರ, ವಿಸ್ತಾರ, ತೂಕ, ಅಳವು, ಮೊತ್ತ ಅಥವಾ ಸಂಖ್ಯೆ—ಇವನ್ನುಳ್ಳದ್ದು; ಮೊತ್ತ; ಪರಿಮಾಣ [Mathematics is the science of pure q. ಗಣಿತವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶುದ್ಧ ಪರಿಮಾಣವನ್ನು ಕುರಿತ ಶಾಸ್ತ್ರ. The q. of a surface is its area]. (ಬ. ವ.) ಅಧಿಕ ಮೊತ್ತ(ಗಳು), ಸಂಖ್ಯೆ(ಗಳು); ಹೆಗ್ಗಳ; ಹೇರಳ; ಸಮೃದ್ಧಿ (Is found in quantities on the shore). (ಧ್ವಂ.) ಸ್ವರ ಧ್ವನಿಗಳ ಉಚ್ಚಾರಣೆಗೆ ಬೇಕಾಗುವ ಕಾಲ: ಮಾತ್ರೆ [Long[1] (ನಾ.) ನೋಡಿ. Q.-mark ಮಾತ್ರೆಯನ್ನು ಸೂಚಿಸುವ ಸ್ವರದ ಮೇಲಿನ ಗುರುತು: ಮಾತ್ರಾ ಚಿಹ್ನೆ (ಲಘು ᵕ, ಗುರು –). False q. (False ನೋಡಿ)]. (ತರ್ಕ) ಒಂದು ಪ್ರತಿಜ್ಞೆಯ ಕರ್ತೃವಿಗೆ ಕೊಟ್ಟ ಅರ್ಥ ವಿಸ್ತಾರ, ವ್ಯಾಪ್ತಿ; ಕರ್ತೃಪದ ವ್ಯಾಪ್ತಿ. (ಗಣಿತ) ಪರಿಮಾಣ ವುಳ್ಳದ್ದು; ಪರಿಮಾಣ ಸೂಚಕ ಅಂಕ, ಗುರುತು, ಚಿಹ್ನೆ [Unknown q. ಅಜ್ಞಾತ, ಅನಿರ್ದಿಷ್ಟ, ಪರಿಮಾಣ. (ರೂಪ.) ನಡೆವಳಿಯನ್ನು ಮೊದಲೇ ತಿಳಿಯಲಾಗದ ವ್ಯಕ್ತಿ, ವಸ್ತು: ಅಜ್ಞಾತ. Negligible q. ಗಣನೆ ಮಾಡದೆ ಬಿಟ್ಟುಬಿಡಬಹುದಾದ ಅತ್ಯಲ್ಪ ಮೊತ್ತ. (ರೂಪ.) ಗಣನೀಯವಲ್ಲದ ವ್ಯಕ್ತಿ, ಮೊ.; ಲೆಕ್ಕಕ್ಕೆ ಬಾರದ್ದು, —ಬಾರದವನು. Bill of quantities (Bill[3] ನೋಡಿ). Q. surveyor (ಉಪಯೋಗಿಸುವ ಪದಾರ್ಥಗಳ ಮೊತ್ತದ ಪಟ್ಟಿಗಳನ್ನು ತಯಾರಿಸುವುದು, ಆದ ಕೆಲಸವನ್ನು ಅಳೆದು ಅದರ ಬೆಲೆ ಗೊತ್ತುಮಾಡುವುದು, ಮೊ. ನ್ನು ನಿರ್ವಹಿಸುವ) ಕಟ್ಟಡ ಕೆಲಸದ ಅಳತೆಗಾರ; ಜರೀಬುಗಾರ]. **Quántify** (ಕ್ರಿ. ಸಕ.) (ತರ್ಕ) [All, some, ಮೊ. ವಿಶೇಷಣಗಳನ್ನು ಸೇರಿಸಿ (ಪದದ, ಪ್ರತಿಜ್ಞೆಯ)] ವ್ಯಾಪ್ತಿಯನ್ನು, ವಿನಿಯೋಗವನ್ನು, —ನಿರ್ದೇಶಿಸು. ಪರಿಮಾಣ, ಮೊತ್ತ, —ಗೊತ್ತುಮಾಡು; ಅಳತೆ ಮಾಡು; ಪರಿಮಾಣವಾಗಿ, ಮೊತ್ತವಾಗಿ, —ನಿರೂಪಿಸು; ಪರಿಮಾಣಿಸು. **Quántifiable** (ಗು.); **Quantificátion** (ನಾ.); **Quántitative** —ಟೆ(ೕ)— (ಗು.) ಮೊತ್ತದಿಂದ ಅಳತೆ ಮಾಡಿದ, ಅಳತೆ ಮಾಡ ಲಾಗುವ; ಪರಿಮಾಣ ಸಂಬಂಧದ; ಪರಿಮಾಣಾತ್ಮಕ [ಎದುರು ಪದ: Qualitative. ಮು., Q. analysis (ರ. ವಿ.) ಒಂದು ಸಂಯುಕ್ತದಲ್ಲಿರುವ ಘಟಕಗಳ ಪರಿಮಾಣಗಳನ್ನು ಕಂಡುಹಿಡಿಯುವುದು: ಪರಿಮಾಣ ವಿಶ್ಲೇಷಣ]. ಸ್ವರಗಳ ಅಳತೆಯ(ನ್ನವಲಂಬಿಸಿದ); ಮಾತ್ರೆಯ(ನ್ನವಲಂಬಿಸಿದ); (Q. accent, scansion, verse, etc.). **Quántitatively** (ಕ್ರಿ. ವಿ.); **Quántitive** (ಗು.) (ವಿರ. ಪ್ರ.) = Quantitative.

Quantívalence ಕ್ವಾಂಟಿವಲೆನ್ಸ್ (ನಾ.) ಒಂದು ಮೂಲ ವಸ್ತುವಿನ ಏಕ ಪರಮಾಣು ಇತರ ಪರಮಾಣುಗಳನ್ನು ಸಂಯೋಗದಿಂದ ಧರಿಸ ಬಲ್ಲ ಪರಿಮಾಣ: ಸಂಯೋಗ ಶಕ್ತಿ (= Valency)

Quántum ಕ್ವಾಂಟಮ್ [ನಾ.; ಬ. ವ.; -a —ಟ (ವಿರ. ಪ್ರ.)] ಮೊತ್ತ; ಪರಿಮಾಣ; ಪಾಲು; ಭಾಗ; ಬೇಕಾದ, ಅಪೇಕ್ಷಿತವಾದ, ಆಗಬಹುದಾದ, —ಮೊತ್ತ, ಪರಿಮಾಣ [(ಔಷಧ ಚೀಟಿಗಳಲ್ಲಿ) Q. libet *or* placet (ಸಂಕ್ಷಿಪ್ತ: q.l., q.p.) ಅಪೇಕ್ಷಿಸುವಷ್ಟು. Q. sufficit (ಸಂಕ್ಷಿಪ್ತ: Quant. suff, *or* q.s.) (ಔಷಧ ಚೀಟಿಗಳಲ್ಲಿ) ಸಾಕಾಗುವಷ್ಟು, ಸಾಕಷ್ಟು. (ಸಾಮಾನ್ಯಾರ್ಥ) ಸಾಕಷ್ಟು ಮೊತ್ತ; ಸಾಕಷ್ಟು ಮಟ್ಟಿಗೆ. Q. theory ಪರಮಾಣುಗಳು ಅಥವಾ ಅಣುಗಳು ಶಕ್ತಿಯನ್ನು ಹೊರಸೂಸುವ ಅಥವಾ ಹೀರಿಕೊಳ್ಳುವ ಸಂದರ್ಭದಲ್ಲಿ ಈ ಕಾರ್ಯವು ಅವಿಚ್ಛಿನ್ನವಾಗಿ ನಡೆಯದೆ ಹಂತಗಳಲ್ಲಿ ನಡೆಯುವುದೆಂದೂ, ಪ್ರತಿ ಹಂತದಲ್ಲಿಯೂ ಒಂದು 'ಕ್ವಾಂಟಂ' (ಸಂದರ್ಭಾನುಸಾರ ಒಂದು ನಿರ್ದಿಷ್ಟ ಮೊತ್ತ) ಶಕ್ತಿಯು ಕ್ರಿಯಾ ರೂಪಕ್ಕೆ ಬರುವುದೆಂದೂ ಹೇಳುವ ವಾದ; ಶಕ್ತಿ ವಿಕಿರಣದಲ್ಲಿ ಇಲೆಕ್ಟ್ರಾನುಗಳ ಶಕ್ತಿಯು ಭಿನ್ನ ಭಿನ್ನವಾದ ಮೊತ್ತಗಳಲ್ಲಿ ಅಥವಾ 'ಕ್ವಾಂಟಂ'ಗಳಲ್ಲಿ ಹೊರಸೂಸುವುದೇ ಹೊರತು ಅವಿಚ್ಛಿನ್ನವಾಗಲ್ಲವೆಂಬ ವಾದ]

Quaquavérsal ಕ್ವೇಕ್ವವರ್ಸಲ್ (ಗು.) (ಭೂ. ವಿ.) ಪ್ರತಿ ದಿಕ್ಕಿಗೂ ತಿರುಗಿರುವ ಅಥವಾ ಮುಖ ತೋರುವ; ಸರ್ವತೋಮುಖವಾದ.

Quárantine ಕ್ವಾರಂಟೀನ್ (ನಾ., ಕ್ರಿ. ಸಕ.) ಸಾಂಕ್ರಾಮಿಕ ರೋಗ ವನ್ನು ಹರಡಬಹುದಾದ ಹಡಗಿನ ಪ್ರಯಾಣಿಕರು, ಇತರ ಪ್ರಯಾಣಿ ಕರು, ರೋಗಿಗಳು ಅಥವಾ ರೋಗದ ಸೋಂಕಿರುವ ಹಡಗು—ಇವನ್ನು ಇತರ ಸಂಪರ್ಕವಿಲ್ಲದಂತೆ ಬಲಾತ್ಕಾರವಾಗಿ ಪ್ರತ್ಯೇಕಿಸಿಟ್ಟಿರುವುದು; —ಇಟ್ಟಿರುವ ಅವಧಿ, ಕಾಲ; ಸಂಪರ್ಕ ನಿಷೇಧ(ದ ಅವಧಿ). (ಕ್ರಿ.) ಹೀಗೆ ಸಂಪರ್ಕ ನಿಷೇಧಿಸು; ಸಂಪರ್ಕ ಮಾಡದಂತೆ ಪ್ರತ್ಯೇಕಿಸಿಡು.

Qúarrel ಕ್ವಾರೆಲ್[6] (ನಾ., ಕ್ರಿ. ಅಕ.) (ಒಬ್ಬನನ್ನು ಅಥವಾ ಅವನ ವರ್ತನೆಯನ್ನು ಕುರಿತು) ದೂರುವ, ಆಕ್ಷೇಪಿಸುವ, —ಸಂದರ್ಭ; ದೂರು; ವ್ಯಾಜ್ಯ [Have no q. against *or* with him. Find q. in a straw ಸಣ್ಣದನ್ನು ದೊಡ್ಡದು ಮಾಡಿಕೊಂಡು, ನಿಷ್ಕಾರಣವಾಗಿ, —ಜಗಳ ಹೂಡು ("ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು" ಎಂಬ ಗಾದೆಯಂತೆ). Pick a q. ವ್ಯಾಜ್ಯವಾಡುವುದಕ್ಕೆ, ವಿರೋಧ ತೋರುವುದಕ್ಕೆ ಕಾರಣ, ಸಂದರ್ಭ, —ಕಲ್ಪಿಸಿಕೊ; ಕಾಲು ಕೆರೆದುಕೊಂಡು ಜಗಳಕ್ಕೆ ಹೋಗು. Espouse one's q. ವ್ಯಾಜ್ಯದಲ್ಲಿ ಒಬ್ಬನ ಪಕ್ಷ ವಹಿಸು. Fight one's quarrels for him ಒಬ್ಬನನ್ನು ವಹಿಸಿ ಹೋರಾಡು; ಪರಿಹಾರ ಪಡೆಯಲು ಅವನಿಗೆ ಸಹಾಯ ಮಾಡು. In a good q. ನ್ಯಾಯವಾಗಿ ಹೂಡಿದ ವ್ಯಾಜ್ಯದಲ್ಲಿ]. (ಒಬ್ಬರೊಬ್ಬರಿಗೆ) ವಾಕ್ಕಲಹ; ಕಲಹ; ಜಗಳ; ಕಚ್ಚಾಟ; ಕದನ; ಸ್ನೇಹಭಂಗ. (ಕ್ರಿ.) ಆಕ್ಷೇಪಣೆ ಮಾಡು; ದೂರು; ತಪ್ಪು ಹಿಡಿ (*With* ಉಪ. ದೊಡನೆ) [I never q. with Providence ನಾನು ದೈವವನ್ನು ದೂರುವುದಿಲ್ಲ. Q. with one's bread & butter ತಕ್ಕಷ್ಟು ಕಾರಣವಿಲ್ಲದೆ, ದೂರುತ್ತ, ತನ್ನ ಜೀವನೋಪಾಯ ವನ್ನು ತೊರೆದುಬಿಡು]. (ಒಬ್ಬನೊಡನೆ, ಒಂದಕ್ಕಾಗಿ) ಜಗಳವಾಡು, ವ್ಯಾಜ್ಯಮಾಡು, ಕಾದಾಡು (*With* person, *about* or *for* thing); ಸ್ನೇಹ ಸಂಬಂಧ ತೊರೆ. **Quárrelsome** (ಗು.) ಜಗಳಗಂಟಿಯಾದ; ಕಲಹ ಪ್ರಿಯನಾದ. **Quárrelsomely** (ಕ್ರಿ. ವಿ.); **Quárrelsomeness** (ನಾ.)

Quárry[1] ಕ್ವಾರಿ (ನಾ.) ಮಾಂಸಾಹಾರಿ ಪಕ್ಷಿ, ಬೇಟೆ ನಾಯಿ, ಬೇಟೆ ಗಾರ, ಮೊ. ರು ಬೆನ್ನಟ್ಟಿಹೋಗುವ ಪ್ರಾಣಿ: ಬೇಟೆ; ಶಿಕಾರಿ; ಎರೆ. (ರೂಪ.) (ಉದ್ದೇಶಿಸಿದ) ಬಲಿ, ಕಬ(ವ)ಳ.

Quárry[2] ಕ್ವಾರಿ (ನಾ., ಕ್ರಿ.) ದೊಡ್ಡ ಬಂಡೆಯಿಂದ ಕಲ್ಲನ್ನು ಎಬ್ಬಿ ತೆಗೆಯುವಲ್ಲಿ ಮಾಡಿದ ತೋಡು ಹಳ್ಳ; ಬಂಡೆ ನೆಲೆ; ಕಲ್ಲು ಗಣಿ; ಕಲ್‌ಪಣೆ. (ರೂಪ.) ಸುದ್ದಿ, ಸಮಾಚಾರ, —ಪಡೆಯಲಾಗುವ ಆಕರ. (ನೆಲಕ್ಕೆ ಹಾಸುವ) ಚದರ ಚಪ್ಪಡಿ, ಹಾಸುಗಲ್ಲು, ಹೆಂಚು ಅಥವಾ ಇಟ್ಟಿಗೆ, ಬಿಲ್ಲೆ. (Quarryman ಕಲ್ಲು ಗಣಿಯ ಕೆಲಸಗಾರ; ಕಲ್ಲೊಡ್ಡ). (ಕ್ರಿ.) (ಕಲ್ಲನ್ನು) ಕಲ್ಲು ಗಣಿಯಿಂದ ಎಬ್ಬಿ ತೆಗೆ; (ಪುಸ್ತಕ, ಮೊ. ಗಳಿಂದ ವಿಷಯಗಳನ್ನು) ಕಷ್ಟಪಟ್ಟು ಎತ್ತಿ ತೆಗೆ. (ಕಾಗದ ಪತ್ರ, ದಾಖಲೆ, ಮೊ. ನ್ನು) ಹುಡುಕಿ ತೆಗೆಯಲು ಶ್ರಮ ಪಡು (Quarrying in the Harleian MSS.)

Quárry[3] ಕ್ವಾರಿ (ನಾ.) (ಜಾಲರಿ ಕಿಟಕಿಗಳಿಗೆ ಉಪಯೋಗಿಸುವ) ವಜ್ರಾಕೃತಿಯ ಗಾಜು.

Quart[1] ಕ್ವಾರ್ಟ್ (ನಾ.) ಕಾಲು ಗ್ಯಾಲನ್ ಅಥವಾ ಎರಡು ಪೈಂಟು (ಅಳತೆ) (Put q. into pint pot ಕಿರಿಯದರಲ್ಲಿ ಹಿರಿಯದನ್ನಡಗಿಸು; ಪಾವು ಪಾತ್ರೆಯಲ್ಲಿ ಸೇರಿನಷ್ಟು ಹಾಕು). ಕ್ವಾರ್ಟ್ ಅಳತೆಯ(ಷ್ಟು ಹಿಡಿಸುವ) ಪಾತ್ರೆ. ಒಂದು ಕ್ವಾರ್ಟು ಬಿಯರ್ ಮದ್ಯ (Still takes his q.). Q.-pot ಕ್ವಾರ್ಟ್ ಅಳತೆಯ ಪಾತ್ರೆ.

Quart[2] ಕ್ವಾರ್ಟ್ (ನಾ., ಕ್ರಿ.) ಖಡ್ಗ ವಿದ್ಯೆಯಲ್ಲಿ ಒಂದು ವರಿಸೆ. (= Carte) (Q. & tierce ಖಡ್ಗ ವಿದ್ಯೆಯ ಅಭ್ಯಾಸ). (Piquet, ಮೊ. ಇಸ್ಪೀಟಾಟಗಳಲ್ಲಿ) ನಾಲ್ಕು ಇಸ್ಪೀಟೆಲೆಗಳ ಅನುಕ್ರಮ ಸರಣಿ (Q. major ಹಾಸು, ರಾಜ, ರಾಣಿ ಮತ್ತು ಗುಲಾಮ). (ಕ್ರಿ.) 'ಕ್ವಾರ್ಟ್' ವರಿಸೆ ಉಪಯೋಗಿಸು; ಈ ವರಿಸೆಯಲ್ಲಿ (ತಲೆ, ಮೊ. ನ್ನು) ಹಿಂದಕ್ಕೆಳೆ, ಹಿಂದಕ್ಕೆಳೆದುಕೊ.

Quártan ಕ್ವಾರ್ಟನ್ (ಗು., ನಾ.) ಮೂರು ದಿನಕ್ಕೊಮ್ಮೆ (ಎರಡೂ ದಿನವನ್ನು ಸೇರಿಸಿ ಲೆಕ್ಕ ಮಾಡುವಾಗ ನಾಲ್ಕು ದಿನಕ್ಕೊಮ್ಮೆ) ಕೆರಳುವ (ಚಳಿ ಜ್ವರ, ಜ್ವರ); ಮೂರರ (ಅಥವಾ ನಾಲ್ಕರ) ಚಳಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Quartátion ಕ್ವಾರ್ಟೇಷನ್ (ನಾ.) (ಚಿನ್ನವನ್ನು ಶುದ್ಧಿಮಾಡುವುದಕ್ಕೆ ಪೂರ್ವಭಾವಿಯಾಗಿ) ಮೂರು ಭಾಗ ಬೆಳ್ಳಿಯನ್ನು ಒಂದು ಭಾಗ ಚಿನ್ನಕ್ಕೆ ಬೆರಸುವುದು.

Quarte ಕಾರ್ಟ್=Quart² (ಎಂಬುದರ ಮತ್ತೊಂದು ರೂಪ.) (ಮೊದಲನೆಯ ಅರ್ಥದಲ್ಲಿ)

Quárter ಕ್ವಾರ್ಟರ್ (ನಾ.) ನಾಲ್ಕನೆಯ ಒಂದು ಭಾಗ ($\frac{1}{4}$); ನಾಲ್ಕು ಸಮ ಭಾಗಗಳಲ್ಲೊಂದು; ಕಾಲು ಭಾಗ; ಹಾಗ; ಚತುರ್ಥಾಂಶ; ಪಾದ [Divide the apples into quarters. Q. of a century ೨೫ ವರ್ಷಗಳ ಕಾಲ; ಒಂದು ಕಾಲು ಶತಮಾನ. Second q. of the century ಒಂದು ಶತಮಾನದ ಎರಡನೆಯ ಪಾದ (೨೬ರಿಂದ ೫೦ ವರ್ಷ ಪೂರ್ತಿವರೆಗಿನ ಕಾಲ). Bad q. of an hour ಸ್ವಲ್ಪ ಹೊತ್ತಿನ ಹಿತವಲ್ಲದ ಅನುಭವ, ವೇಥೆ. Is not a q. as good as it should be. Q. mile, yard, etc.]. (ಅಮೆ. ನಂ.) ೨೫ ಸೆಂಟು ಅಥವಾ ಕಾಲು ಡಾಲರು. (ಬ. ವ. ದಲ್ಲಿ) ರಾಜದ್ರೋಹಿಯ ತಲೆ ಕಡಿದಮೇಲೆ ಅವನ ಅಟ್ಟೆಯನ್ನು ಒಂದು ಕಾಲು ಅಥವಾ ಒಂದು ಕೈ ಇರುವಂತೆ ತುಂಡರಿಸಿದ ನಾಲ್ಕು ಭಾಗಗಳಲ್ಲೊಂದು. (ಸಾ., ಬ. ವ. ದಲ್ಲಿ) (ಜೀವಂತ ಪ್ರಾಣಿಯ ಅಥವಾ ಮನುಷ್ಯನ) ರೊಂಡಿ, ಕಟಿಪಶ್ಚಾದ್ಭಾಗ (=Hind quarters). (ವಂಶ ಲಾಂಛನದಲ್ಲಿ) (ಮೇಲ್ಮೈಯನ್ನು ನಾಲ್ಕಾಗಿ ವಿಭಾಗಿಸಿದ ಗುರಾಣಿಯಲ್ಲಿ) ಗುರಾಣಿಯ ಚತುರ್ಥ ಭಾಗ. (ಧಾನ್ಯದ ವಿಷಯದಲ್ಲಿ) ೮ ಬುಷೆಲ್ಲುಗಳ ಒಂದು ಅಳತೆ: 'ಕ್ವಾರ್ಟರ್' (ಹೆಚ್ಚು ಮೊತ್ತದ ಅಳತೆ, ಬೆಲೆ, ಮೊ. ನ್ನು ಹೇಳುವಾಗ ಬಳಕೆ). (ತೂಕ) ಹಂಡ್ರೆಡ್ ವೇಟಿನ ಕಾಲು ಭಾಗ, ೨೮ ಪೌಂಡು ತೂಕ: 'ಕ್ವಾರ್ಟರ್' (ಸಂಕ್ಷಿಪ್ತ: qr.). ಮಾರುದ್ದದ ಕಾಲು ಭಾಗ: ಕಾಲು ಮಟ್ಟು (& a q. five $5\frac{1}{4}$ ಮಾರು. A q. less five $4\frac{3}{4}$ ಮಾರು). ವರ್ಷದ ನಾಲ್ಕನೆಯ ಭಾಗ: ವರ್ಷ ಪಾದ; ತ್ರಿಮಾಸ (Q.-day ಕಂತು, ಮೊ. ನ್ನು ಕೊಡಬೇಕಾದ, ಗೇಣಿ, ಮೊ. ವು ಆರಂಭವಾಗುವ ಅಥವಾ ಮುಕ್ತಾಯವಾಗುವ, ತ್ರೈಮಾಸಿಕ ದಿನ). (ಈಗ ಮು., ಸ್ಕಾ. ಪ್ರ.) ಪಾಠಶಾಲೆಯ ವ್ಯಾಸಂಗ ಕಾಲದ ಭಾಗ. ಚಾಂದ್ರಮಾಸದ ಒಂದು ಪಾದ, ನಾಲ್ಕನೆಯ ಒಂದು ಭಾಗ: ಕಾಲು ತಿಂಗಳು. ಸೂರ್ಯನಿಂದ ೯೦° ದೂರದಲ್ಲಿ ಚಂದ್ರನಿರುವ ಸ್ಥಾನ (ತಿಂಗಳ ಮೊದಲನೆಯ ಪಾದಕ್ಕೂ ಎರಡನೆಯ ಪಾದಕ್ಕೂ ನಡುವೆ ಅಥವಾ ಮೂರನೆಯ ಪಾದಕ್ಕೂ ನಾಲ್ಕನೆಯ ಪಾದಕ್ಕೂ ನಡುವೆ ಚಂದ್ರನಿರುವ ಸ್ಥಾನ). (ಗಡಿಯಾರದ ಯಾವುದಾದರೂ ಗಂಟೆಗೆ ಮೊದಲು ಅಥವಾ ತರುವಾಯ) ೧೫ ನಿಮಿಷ (ಗಳ ಸಮಯ); ಕಾಲು ಗಂಟೆ [At a q. to, past, six. It is not the q. yet ಇನ್ನೂ ಕಾಲು ಗಂಟೆಯಾಗಿಲ್ಲ. Strikes the hours, half-hours, & quarters. It has gone the q. (ಗಡಿಯಾರ) ಕಾಲು ಗಂಟೆ ಹೊಡೆಯಿತು]. ದಿಕ್ಕು; ದಿಕ್ಪ್ರದೇಶ. (ದಿಕ್ಕಿನ) ಕಡೆ; ಜಿಲ್ಲೆ; ಪ್ರಾಂತ; ಎಡೆ; ಪ್ರದೇಶ. ಸರಬರಾಯಿಯ, ಸಹಾಯದ, ಸುದ್ದಿಯ, —ಮೂಲ [Wind blows from all four quarters at once ಗಾಳಿ ನಾಲ್ಕು ದಿಕ್ಕುಗಳಿಂದಲೂ ಏಕ ಕಾಲದಲ್ಲಿ ಬೀಸುತ್ತದೆ. What q. is the wind in? ಗಾಳಿ ಯಾವ ದಿಕ್ಕಿನಲ್ಲಿದೆ? (ರೂಪ.) ಸಂದರ್ಭಗಳು ಹೇಗೆ ನಡೆಯುತ್ತಿವೆ? No help to be looked for in that q.]. (ಮು., ಒಂದು ವಿಶೇಷ ವರ್ಗದವರಿಗೆ ಮೀಸಲಾದ ಅಥವಾ ಅಂಥವರು ವಾಸಿಸುವ) ಪಟ್ಟಣದ ಒಂದು ಭಾಗ, ಕೇರಿ (The Jewish, manufacturing, residential, etc., q.). (ಬ. ವ. ದಲ್ಲಿ) ವಾಸಸ್ಥಾನ; ವಸತಿ; ಬೀಡು; (ಮು.) ಸೈನ್ಯಗಳ ಬೀಡು, ಬಿಡದಿ. [Headquarters (Head ನೋಡಿ). Winter quarters (ಮು., ಸೈನ್ಯಗಳ) ಚಳಿಗಾಲದ ಬಿಡದಿ. Take up one's quarters (ಒಂದು ಸ್ಥಳದಲ್ಲಿ, ಒಬ್ಬನೊಡನೆ) ವಾಸಕ್ಕೆ ನಿಲ್ಲು, ವಸತಿ ಮಾಡಿಕೊ, ತಂಗು (*In*, *with*, ಮೊ. ಉಪ. ದೊಡನೆ). Beat up quarters of (Beat ನೋಡಿ). At close quarters (Close ನೋಡಿ)]. ಶರಣಾಗತನಾದ (—ನಾಗುವ) ಶತ್ರುವಿಗೆ ನೀಡಿದ, ಕೊಟ್ಟ, —ಪ್ರಾಣ ದಾನ, ಅಭಯ (Ask for *or* cry q.). ಕಾಲು ಮೈಲಿಯ ಓಟದ ಪಂದ್ಯ, ಓಟದ ದೂರ (Has done the q. in 50″). **Q.-bell** ಕಾಲು ಗಂಟೆಗಳನ್ನು ಹೊಡೆಯುವ ಗಂಟೆ. **Q. binding** (ಪುಸ್ತಕದ ಮೂಲೆಗಳಿಗೆ ಹಾಕದೆ ಬೆನ್ನಿಗೆ ಮಾತ್ರ ಕಿರಿದಗಲದ ತೊಗಲು ಹಾಕಿ ಮಾಡುವ) ಕಾಲು ರಟ್ಟು ಕಟ್ಟು [**Q.-bound** (ಗು.)]. **Q.-day** ತ್ರೈಮಾಸಿಕ ದಿನ (ಮೇಲೆ ನೋಡಿ) (Lady Day 25 Mar., Midsummer Day 24 June, Michaelmas 29 Sep., & Christmas 25 Dec.). **Q.-deck** ಹಡಗಿನ ಮೇಲಟ್ಟದಲ್ಲಿ, ಹಡಗಿನ ಹಿಂಭಾಗಕ್ಕೂ ಹಿಂಭಾಗದ ಕೂವೆಗೂ ಮಧ್ಯೆ ಇರುವ ಭಾಗ [The q.-d. ಹಡಗಿನ ಅಥವಾ ನೌಕಾ ಸೈನ್ಯದ (ಸನ್ನದು ಪಡೆದ ಅಥವಾ ಮೇಲಿನ) ಅಧಿಕಾರಿಗಳು]. **Q.-ill** ದೇಹ ಭಾಗ ಕೊಳೆಯುವ, ದನಗಳ ಮತ್ತು ಕುರಿಗಳ ಒಂದು ರೋಗ. **Quártermaster** (ನಾವೆ) (ಚುಕ್ಕಾಣಿ ತಿರುಗಿಸುವುದು, ದಿಗ್ದರ್ಶಕದ ರಕ್ಷಾ ಪೇಟಿಕೆ ನೋಡಿಕೊಳ್ಳುವುದು, ಸಂಕೇತಗಳ ಉಸ್ತುವಾರಿ, ಸಾಮಾನು ಕುಳಿಗೆ ಸರಕು ತುಂಬುವುದು, ಮೊ. ಕೆಲಸಗಳ ಜವಾಬ್ದಾರಿಯುಳ್ಳ) ಹಡಗಿನ ಒಬ್ಬ ಸಣ್ಣ ಅಧಿಕಾರಿ; (ಸೈನ್ಯ; ಸಂಕ್ಷಿಪ್ತ: Q.M.) (ಬಿಡದಿಗಳನ್ನು ಗೊತ್ತುಮಾಡುವುದು, ಶಿಬಿರದ ಹಂಚಿಕೆ ಮಾಡುವುದು, ಆಹಾರ ಸರಬರಾಯಿ, ಬಟ್ಟೆ ಬರೆ, ಮೊ. ನ್ನು ಒದಗಿಸುವುದು—ಇವೇ ಮೊ. ಕರ್ತವ್ಯಗಳುಳ್ಳ) ಸೈನ್ಯ ದಳದ ಒಬ್ಬ ಅಧಿಕಾರಿ (Q.-m. general, ಸಂಕ್ಷಿಪ್ತ: Q.M.G. ಮೇಲೆ ಹೇಳಿದ ಕರ್ತವ್ಯಗಳ ಮುಖ್ಯಾಧಿಕಾರಿ). **Q.-miler** ಕಾಲು ಮೈಲಿ ಓಟದ ಪಂದ್ಯದಲ್ಲಿ ನಿಪುಣ. **Q.-plate** $3\frac{1}{4}'' \times 4\frac{1}{4}''$ ಅಳತೆಯ ಛಾಯಾ ಚಿತ್ರ ಫಲಕ; ಇದರಲ್ಲಿ ತೆಗೆದ ಛಾಯಾ ಚಿತ್ರ. **Q. sessions** [ಮೂರು ತಿಂಗಳಿಗೊಮ್ಮೆ (ಇಂಗ್ಲೆಂಡಿನ) ಕೌಂಟಿಗಳಲ್ಲಿ ಶಾಂತಿ ಪಾಲಕ ನ್ಯಾಯಾಧಿಪತಿಗಳೂ ಪೌರ ಸಂಸ್ಥೆಯುಳ್ಳ ಊರುಗಳಲ್ಲಿ ಪೌರ ದಂಡಾಧಿಕಾರಿಯೂ ನಡಸುವ] ತಕ್ಸೀರುಗಳ ಮತ್ತು ವ್ಯವಹಾರಗಳ ಪರಿಮಿತ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಸ್ಥಾನ. **Quárterstaff** (ರಕ್ಷಣಾಯುಧವಾಗಿ ಹಿಂದೆ ರೈತಾಪಿ ಜನಗಳು ಉಪಯೋಗಿಸುತ್ತಿದ್ದ) ೬ರಿಂದ ೮ ಅಡಿ ಉದ್ದದ ದಪ್ಪ ದೊಣ್ಣೆ. **Q.-tone** (ಸಂ.) ಅರೆ ಅರ್ಧ ಸ್ವರ. **Q.-wind** ಹಡಗಿನ ಹಿಂಭಾಗದಮೇಲೆ ಬೀಸುವ ಗಾಳಿ (ಹಡಗಿನ ಸಾಗಣೆಗೆ ಅತ್ಯಂತ ಅನುಕೂಲವಾದ ಗಾಳಿ). **Quárterage** ಕ್ವಾರ್ಟರೆ(ರಿ)ಜ್ (ನಾ.) ತ್ರೈಮಾಸಿಕ ಪಾವತಿ; ತ್ರೈಮಾಸಿಕ ಕೂಲಿ, ಸಂಬಳ, ವಿರಾಮ ವೇತನ, ಮೊ. ವು. **Quárterly** (ಗು., ನಾ., ಕ್ರಿ. ವಿ.) ಮೂರು ತಿಂಗಳಿಗೊಮ್ಮೆ ನಡೆಯುವ, ಬರುವ; ತ್ರೈಮಾಸಿಕ. (ನಾ.) ತ್ರೈಮಾಸಿಕ (ಪತ್ರಿಕೆ, ಲೇಖನ ಸಂಗ್ರಹ). (ಕ್ರಿ. ವಿ.) ಮೂರು ತಿಂಗಳಿಗೊಮ್ಮೆ; ತ್ರೈಮಾಸಿಕವಾಗಿ. (ವಂಶ ಲಾಂಛನ: ಗುರಾಣಿಯ) ನಾಲ್ಕು ಕಾಲು ಭಾಗಗಳಲ್ಲಿ; ಮೂಲೆ ಮೂಲೆಯ ಎದುರು ಬದುರಿನ ಎರಡು ಕಾಲು ಭಾಗಗಳಲ್ಲಿ. **Quártern** ಕ್ವಾರ್ಟರ್ನ್ (ನಾ.) ನಾಲ್ಕು ಪೌಂಡು ತೂಕದ ಪರಂಗಿ ರೊಟ್ಟಿ (=q.-loaf)

Quárter (ಕ್ರಿ. ಸಕ.) ನಾಲ್ಕು ಸಮ ಭಾಗಗಳಾಗಿ ಮಾಡು. (ದೇಶದ್ರೋಹಿಯ ದೇಹವನ್ನು) ಕಾಲಟ್ಟೆಗಳಾಗಿ ತುಂಡರಿಸು. (ವಂಶ ಲಾಂಛನ) (ಚಿಹ್ನೆಗಳನ್ನು ಅಥವಾ ಬಿರುದಾವಳಿಗಳ ಲಾಂಛನಗಳನ್ನು) ಮೂಲೆ ಮೂಲೆಯ ಎದುರು ಬದುರು ಭಾಗಗಳಲ್ಲಿ ಇಡು, ಅಲಂಕರಿಸು; ತನ್ನ (ವಂಶ ಪಾರಂಪರ್ಯದ) ವಂಶ ಲಾಂಛನದೊಡನೆ ಮತ್ತೊಬ್ಬನ ವಂಶ ಲಾಂಛನವನ್ನು ಸೇರಿಸು; (ಗುರಾಣಿಯನ್ನು) ನಾಲ್ಕು ಮನೆಗಳಾಗಿ ವಿಂಗಡಿಸು. (ಮು., ಸಿಪಾಯಿಗಳಿಗೆ) ಬಿಡದಿಗಳಲ್ಲಿ ಅಥವಾ ಗೊತ್ತಾದ ಸ್ಥಳದಲ್ಲಿ ವಸತಿ ಮಾಡಿಕೊಡು. (ನಾಯಿಗಳ ವಿಷಯದಲ್ಲಿ) (ಬೇಟೆಯನ್ನರಸುತ್ತ) ದಿಕ್ಕು ದಿಕ್ಕಿಗೂ ಓಡು, ಸುತ್ತಾಡು. **Quártering** (ನಾ.) (ಕ್ರಿಯಾರ್ಥಗಳಲ್ಲಿ). (ವಂಶ ಲಾಂಛನ) (ಬ. ವ. ದಲ್ಲಿ) ಇತರ ವಂಶಗಳ ಶ್ರೀಮಂತೆಯರೊಡನೆ ಮಾಡಿಕೊಂಡ ವಿವಾಹ ಸಂಬಂಧಗಳನ್ನು ಸೂಚಿಸುವುದಕ್ಕಾಗಿ ಗುರಾಣಿಯ ಮೇಲೆ ಪ್ರದರ್ಶಿಸುವ ಲಾಂಛನಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Quárterage, Quártern, etc. Quarter (ನಾ.) ನೋಡಿ.

Quartét(te) ಕ್ವಾರ್ಟೆಟ್ (ನಾ.) ನಾಲ್ಕು ದನಿಗಳಿಗೆ ಅಥವಾ ನಾಲ್ಕು ವಾದ್ಯಗಳಿಗೆ ತಕ್ಕಂತೆ ರಚಿಸಿದ ಗೀತ, ಕೃತಿ; ಇದನ್ನು ಹಾಡುವ (ನಾಲ್ವರು) ಗಾಯಕರು ಅಥವಾ ಬಾಜಿಸುವ (ನಾಲ್ವರು) ವಾದ್ಯಗಾರರು. ನಾಲ್ಕರ, ನಾಲ್ವರ, —ತಂಡ; ಚತುಷ್ಕ.

Quárto ಕ್ವಾರ್ಟೊ (ನಾ.) (ಸಂಕ್ಷಿಪ್ತ: 4to, 4°) ಕಾಗದದ ಒಂದು ಹಾಳೆಯನ್ನು ಎರಡುಸಲ ಮಡಿಚಿದರೆ ಆಗುವ ಆಕಾರ: ಚೌಪತ್ರ; ಚೌಪತ್ರಗಳ ಪುಸ್ತಕ.

Quártus ಕ್ವಾರ್ಟಸ್ (ಗು.) ನಾಲ್ಕನೆಯ (Primus ನೋಡಿ)

Quartz ಕ್ವಾರ್ಟ್ಸ್ (ನಾ.) ತೂಕವಾದ ಕಲ್ಲುಗಳಾಗಿ ಅಥವಾ ಷಡ್ಭುಜಾಕೃತಿಯ ಪ್ರಿಸಮ್ಮುಗಳ ಸ್ಫಟಿಕಾಕೃತಿಗಳಾಗಿ ದೊರೆಯುವ, ಶುದ್ಧ ಸಿಲಿಕಾ ರಚನೆಯ ಅಥವಾ ಸಿಲಿಕಾನ್ ಡಯಾಕ್ಸೈಡ್ ರಚನೆಯ ಪದಾರ್ಥವಾಗಿರುವ, ಅನೇಕ ವೇಳೆ ಚಿನ್ನವನ್ನೊಳಕೊಂಡಿರುವ ಒಂದು ಬಗೆಯ ಖನಿಜ: ಕ್ವಾರ್ಟ್ಸ್ (ಖನಿಜ); ಕಾಚ ಶಿಲೆ; ಸ್ಫಟಿಕ ಶಿಲೆ; ಬೆಣಚುಕಲ್ಲು.

Quash ಕ್ವಾಷ್ (ಕ್ರಿ. ಸಕ.) (ಮು., ಕಾನೂನು ಕ್ರಮದಿಂದ ಅಥವಾ ಅಧಿಕಾರ ಬಲದಿಂದ) ಊರ್ಜಿತವಲ್ಲವೆಂದು ರದ್ದುಮಾಡು, ನಿರರ್ಥಕ ಮಾಡು, ತಿರಸ್ಕರಿಸು.

Quási ಕ್ವೇಸೈ(ಸಿ) (ಪೂ. ಪ್ರ., ಸಂ. ಅವ್ಯ., ಗು., ಕ್ರಿ. ವಿ.) ಎಂದರೆ (Earls of Wilbraham, q. Wild boar ham); ಒಂದು ಅರ್ಥದಲ್ಲಿ; ಒಂದು ಹಂತದಲ್ಲಿ. (ಗುಣವಾಚಕಕ್ಕೆ ಅಥವಾ ನಾಮವಾಚಕಕ್ಕೆ ಕೂಡುಗೆರೆ ಹಾಕಿ ಸೇರಿಸಿದಾಗ ಆಗುವ ಅರ್ಥಗಳು): ತೋರುವ(ಂತೆ); ನಿಜವಾಗಲ್ಲದ; ಕಾರ್ಯತಃ; —ಪ್ರಾಯ; ಬಹುಮಟ್ಟಿನ; ಅರ್ಧ— (Engaged in a q.-war ಅರೆ ಯುದ್ಧದಲ್ಲಿ ತೊಡಗಿ). Q.-academic; Q.-belief, Q.-classic, Q.-honour.

Quássia ಕ್ವ್ಯಾಶಿ(ಷಿ)ಯ, ಕ್ವ್ಯಾಷ (ನಾ.) ದ. ಅಮೆರಿಕದ, ಒಂದು ಮರ(ದ ಜಾತಿ): ಕ್ವ್ಯಾಶಿಯ ಮರ. (ಇದರ ದಾರು, ತೊಗಟೆ ಅಥವಾ ಬೇರಿನಿಂದ ತಯಾರಾದ) ಒಂದು ಕಹಿಯಾದ ಔಷಧ ಕಷಾಯ (ಇದರ ಗುಣವನ್ನು ಕಂಡುಹಿಡಿದ ನೀಗ್ರೋ[ವಿ]ನ ಹೆಸರಿನಿಂದ)

Quater-centénary ಕ್ವ್ಯಾಟರ್‌ಸೆಂಟಿನರಿ (ನಾ.) ಚತುಶ್ಶತಮಾನೋತ್ಸವ.

Quatérnary ಕ್ವಾಟರ್‌ನರಿ (ಗು., ನಾ.) ನಾಲ್ಕು ಭಾಗಗಳುಳ್ಳ, (ಮು.) ನಾಲ್ಕು ರಾಸಾಯನಿಕ ಘಟಕಗಳಿಂದ ಅಥವಾ ಮೂಲಧಾತುಗಳಿಂದ ಸಂಯುಕ್ತವಾಗಿರುವ; ನಾಲ್ಕರ ಸಂಖ್ಯೆಗೆ ಸಂಬಂಧಿಸಿದ; ಚಾತುರ್ಥಿಕ. (ಭೂ. ವಿ.) (ಮೂರನೆಯ ಭೂಯುಗದ ತರುವಾಯದ) ಅತ್ಯಂತ ಈಚಿನ ಯುಗಕ್ಕೆ ಸೇರಿದ. (ನಾ.) ನಾಲ್ಕು ವಸ್ತುಗಳ ತಂಡ; ನಾಲ್ಕು, ನಾಲ್ಕರ ಸಂಖ್ಯೆ (೪). The Pythagorean q. ೧+೨+೩+೪=೧೦ (ಪೈತಾಗೊರಸ್ಸಿನ ಮತದಲ್ಲಿ ಈ ಸಂಖ್ಯೆಗಳಿಗೆ ಕೆಲವು ರಹಸ್ಯಾರ್ಥಗಳುಂಟು)

Quatérnion ಕ್ವಾಟರ್‌ನಿಯನ್ (ನಾ.) ನಾಲ್ಕರ, ನಾಲ್ವರ, —ತಂಡ; ಚತುಷ್ಕ; ಚತುಷ್ಟಯ. ನಾಲ್ಕು ಹಾಳೆಗಳಾಗುವಂತೆ ಎರಡು ಸಲ ಮಡಿಚಿದ ಒಂದು ಕಾಗದದ ಹಾಳೆ; ಹೀಗೆ ಮಡಿಚಿದ ನಾಲ್ಕು ಹಾಳೆಗಳ ದಸ್ತು; =Pythagorean quaternary (Quaternary ನೋಡಿ); ರಹಸ್ಯಾರ್ಥದ ೪ ಅಥವಾ ೧೦ರ ಸಂಖ್ಯೆ. (ಗಣಿತ) ಎರಡು ದಿಕ್ಸೂಚಕ ಪರಿಮಾಣಗಳ (Vectors) ಭಾಗಲಬ್ಧ ಅಥವಾ ಒಂದು ದಿಕ್ಸೂಚಕ ಪರಿಮಾಣವನ್ನು ಮತ್ತೊಂದನ್ನಾಗಿ ಪರಿವರ್ತಿಸುವ ಗಣಕಾವಯವ (Factor) [ನಾಲ್ಕು ಜ್ಯಾಮಿತೀಯಾಂಶಗಳ ಮೇಲೆ ಅವಲಂಬನವಾಗಿರುವುದರಿಂದಲೂ, w + xi + yj + zk ಎಂಬ ಚತುಷ್ಕದ ಬೀಜಾಂಕ ಸೂತ್ರದಿಂದ (Formula) ನಿರ್ದೇಶಿಸಲು ಸಾಧ್ಯವಾಗಿರುವುದರಿಂದಲೂ ಈ ಹೆಸರು ಬಂದಿದೆ]; (ಬ. ವ. ದಲ್ಲಿ) ಈ ಸೂತ್ರವನ್ನುಪಯೋಗಿಸುವ ದಿಕ್ಸೂಚಕ ಪರಿಮಾಣಗಳ ಕಲನ ರೂಪ (Form of the calculus of vectors)

Quatérnity ಕ್ವಾಟರ್ನಿಟಿ (ನಾ.) ನಾಲ್ಕರ, ನಾಲ್ವರ, —ತಂಡ; ಚತುಷ್ಕ; ಚತುಷ್ಟಯ; ಚತುರ್ಮೂರ್ತಿತ್ವ (ಮು., ಪಾಷಂಡ ವಾದಗಳನ್ನು ವಿವರಿಸುವಾಗ Trinity ಎಂಬುದಕ್ಕೆ ವೈಲಕ್ಷಣ್ಯವಾಗಿ ಪ್ರ.)

Quátorzain ಕ್ಯಾಟಾ(ಟ)ರ್‌ಜೇನ್ (ನಾ.) ಹದಿನಾಲ್ಕು ಚರಣಗಳ ಪದ್ಯ. ಲಕ್ಷಣಬದ್ಧವಲ್ಲದ Sonnet (ಜಾತಿಯ) ಪದ್ಯ.

Quátrain ಕ್ವಾಟ್ರೇನ್ (ನಾ.) (ಸಾ., ಪರ್ಯಾಯ ಚರಣಗಳಲ್ಲಿ ಪ್ರಾಸವಿರುವ) ನಾಲ್ಕು ಚರಣಗಳ ಪದ್ಯ.

Quátre ಕಾಟರ್, ಕೇ— (ನಾ.) =Cater[1].

Quatrefoil ಕ್ಯಾಟರ್‌ಫಾಯ್‌ಲ್, ಕೇ— (ನಾ.) (ಮು., ವಾಸ್ತ್ವಲಂಕಾರ ಚಿತ್ರದಲ್ಲಿ) ಒಂದೇ ಕೇಂದ್ರದಿಂದ ಹೊರಡುವ ನಾಲ್ಕು ಎಲೆಗಳ ಅಥವಾ ಹೂವಿನೆಸಳುಗಳ ಆಕೃತಿ.

Quáver ಕ್ವೇವರ್ (ಕ್ರಿ., ನಾ.) (ಮು., ದನಿ ಅಥವಾ ನಾದದ ವಿಷಯದಲ್ಲಿ) ಕಂಪಿಸು; ಅದಿರು; ನಡುಗು. (ಹಾಡುವುದರಲ್ಲಿ) ಸ್ವರ ಕಂಪನಮಾಡು; ನಡುಗುದನಿಯಲ್ಲಿ ಹೇಳು (ಸಾ., *Out* ಉಪ. ದೊಡನೆ). (ನಾ.) (ಹಾಡುವುದರಲ್ಲಿ) ಅದಿರು, (ಸ್ವರ) ಕಂಪನ; ಮಾತಿನ(ಲ್ಲಿ) ನಡುಕ. **Quáveringly** (ಕ್ರಿ. ವಿ.); **Quávery** (ಗು.)

Quay ಕೀ (ನಾ.) ಸಾಮಾನು ಭರತಿ ಮಾಡುವುದಕ್ಕೂ ಇಳಿಸುವುದಕ್ಕೂ ಅನುಕೂಲವಾಗುವಂತೆ ಹಡಗನ್ನು ತಂದು ನಿಲ್ಲಿಸಲು, ಕರೆಯ ಉದ್ದಕ್ಕೆ ಅಥವಾ ಬಂದರಿನ ಪಕ್ಕದಲ್ಲಿ, ಅಥವಾ ನೀರಿನೊಳಕ್ಕೆ ಚಾಚಿಕೊಂಡಿರುವಂತೆ ಸಾ., ಕಲ್ಲು ಅಥವಾ ಕಬ್ಬಿಣದಿಂದ ದೃಢವಾಗಿ ಕಟ್ಟಿದ, ಚಪ್ಪಡಿ ಹಾಸಿರುವ, ಸ್ಥಿರವಾದ ಇಳಿದಾಣ: ಹಡಗಿನ ಭರತಿಯ ಕಟ್ಟೆ. **Quáyage** ಕೀಯೆಜ್ (ನಾ.) ಹಡಗು ಕಟ್ಟೆಯ(ನ್ನುಪಯೋಗಿಸಿಕೊಂಡದ್ದ)ಕ್ಕಾಗಿ ಕೊಡಬೇಕಾದ) ರುಸುಮು.

Quean ಕ್ವೀನ್ (ನಾ.) ದಿಟ್ಟ ಅಥವಾ ಮರ್ಯಾದೆಗೆಟ್ಟ ಹುಡುಗಿ; ಬಜಾರಿ.

Queásy ಕ್ವೀಸಿ (ಗು.) (ಆಹಾರದ ವಿಷಯದಲ್ಲಿ) ಹೊಟ್ಟೆ ತೊಳಸುವ, ಓಕರಿಕೆ ಬರಿಸುವ; ಅಸಹ್ಯ ಹುಟ್ಟಿಸುವ. (ಮನುಷ್ಯನ, ಅವನ ಹೊಟ್ಟೆಯ, —ವಿಷಯದಲ್ಲಿ) ಸ್ವಲ್ಪ ಹೆಚ್ಚು ಕಡಮೆಯಾದರೆ ತಡೆಯಲಾಗದ ಸೂಕ್ಷ್ಮ ಪ್ರಕೃತಿಯ; ಸುಲಭವಾಗಿ ಸ್ತಿಮಿತತೆ ತಪ್ಪುವ; ಜೀರ್ಣಶಕ್ತಿಯಿಲ್ಲದ; (ಮನುಷ್ಯನ, ಅವನ ಕರ್ತವ್ಯಜ್ಞಾನದ, —ವಿಷಯದಲ್ಲಿ) ಸಣ್ಣ ಪುಟ್ಟ ವಿವರಗಳಲ್ಲಿಯೂ ಅತಿ ಕಟ್ಟುನಿಟ್ಟಾದ, ಅತಿ ನಿಯಮ ಪಾಲನೆಯ; ಅತಿ ನಾಜೂಕಿನ; ಬಹಳ ನಸಿನಸಿಯಾದ. **Queásiness** (ನಾ.)

Queen ಕ್ವೀನ್ (ನಾ.) ದೊರೆಯ ಹೆಂಡತಿ; ಅರಸಿ; ರಾಣಿ; ರಾಜಪತ್ನಿ (=Q.-consort) [Q. dowager ಸತ್ತುಹೋದ ಹಿಂದಿನ ದೊರೆಯ ಹೆಂಡತಿ; ಗತ ರಾಜನ ಪತ್ನಿ. Q. mother[1] ಆಳುವ ದೊರೆಯ ತಾಯಿಯಾದ ಗತ ರಾಜನ ಪತ್ನಿ; ರಾಜಮಾತೆ. (ಬಿರುದಾಗಿ, ಒಕ್ಕಣೆಯಲ್ಲಿ) Q. Alexandra]. ರಾಜ್ಯವಾಳುವ ರಾಣಿ (ಬಿರುದಾಗಿ, ಒಕ್ಕಣೆಯಲ್ಲಿ: Q. Victoria) (Q. mother[2] ಮಕ್ಕಳುಳ್ಳ ಇಂಥ ರಾಣಿ). [Q. Anne is dead (ಹಳಸಲು ಸುದ್ದಿಗೆ ಮಾರುತ್ತರ). Q. Anne's bounty ಅಲ್ಪಾದಾಯದ ಮಠಮಾನ್ಯಗಳಿಗೆ ಸಹಾಯವೊದಗಿಸುವ ನಿಧಿ. Q.-Anne (ಇಂಗ್ಲೆಂಡಿನ) ಆ್ಯನ್ ರಾಣಿಯ ಕಾಲದ ವಾಸ್ತುಶಿಲ್ಪದ ಅಥವಾ ಅಲಂಕಾರದ ಶೈಲಿಯಲ್ಲಿ. Q. of Scots=Mary Stuart]. ಪೂಜ್ಯಳು; ದೇವಿ [ಉದಾ., ಮೇರಿ ಕನ್ಯೆ (=Q. of grace, etc.)]. ಪುರಾತನ ಸ್ತ್ರೀ ದೇವತೆ (Q. of heaven ಜೂನೋ ದೇವತೆ. Q. of love ವೀನಸ್ ದೇವತೆ. Q. of night ಡೈಆ್ಯನ ದೇವತೆ). (ಒಬ್ಬನ) ನಲ್ಲೆ, ಮನೋವಲ್ಲಭೆ, ಹೆಂಡತಿ, ಪ್ರೇಯಸಿ. ಘನ ಗಾಂಭೀರ್ಯವುಳ್ಳ ಸ್ತ್ರೀ; ಪರಮ ಸುಂದರಿ; (ಕೆಲವು ಉತ್ಸವ ಸಂದರ್ಭಗಳಲ್ಲಿ ಅಧ್ಯಕ್ಷಳನ್ನಾಗಿ ಆರಿಸುವ) ಹುಸಿ ರಾಣಿ [Q. of the May (May[3] ನೋಡಿ)]. ಸ್ತ್ರೀ ಸ್ವಭಾವವದ್ದೆಂದು ಪರಿಗಣಿಸಿ ಮೂರ್ತೀಕರಿಸಿದ ಯಾವುದಾದರೊಂದರ ಅತ್ಯುತ್ತಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉದಾಹರಣೆ (The q. of watering-places, roses, nurses). ಒಂದು ಪರಿಸ್ಥಿತಿಯ ಮೇಲೆ, ಪ್ರದೇಶದ ಮೇಲೆ, ಪ್ರಭಾವವುಳ್ಳದ್ದೆಂದು ಭಾವಿಸುವ ವ್ಯಕ್ತಿ, ಪಟ್ಟಣ, ದೇಶ, ಮೊ. ವು [Q. of hearts (ಹೃದಯೇಶ್ವರಿ) : ಸುಂದರಿ. Q. of the Adriatic ವೆನಿಸ್ ಪಟ್ಟಣ. Q. of the seas ಗ್ರೇಟ್ ಬ್ರಿಟನ್]. (ಜೇನುಹುಳು, ಮೊ. ಗಳಲ್ಲಿ) ಪೂರ್ಣ ವಿಕಾಸ ಹೊಂದಿದ, ಮರಿಹಾಕುವ ಹೆಣ್ಣು ; ತಾಯಿಹುಳು (Q. bee, Q. wasp, Q. ant). (ಚದುರಂಗದ ಆಟದಲ್ಲಿ) ರಾಣಿ (ಕಾಯಿ) (ನಮ್ಮಲ್ಲಿ ಇದಕ್ಕೆ 'ಮಂತ್ರಿ' ಎನ್ನುತ್ತಾರೆ) [Q.'s bishop, knight, pawn, etc. ಆಟದ ಪ್ರಾರಂಭದಲ್ಲಿ ರಾಣಿ ಕಾಯಿಗೆ ಅತ್ಯಂತ ಸಮೀಪದಲ್ಲಿಟ್ಟ ಇತರ ಕಾಯಿಗಳು]. (ಇಸ್ಪೀಟಿನಲ್ಲಿ : ಪ್ರತಿ ರಂಗಿನ) ರಾಣಿ (ಎಲೆ). Q.-posts ತೀರುಹಾಕುವುದಕ್ಕಾಗಿ ಅಡ್ಡತೊಲೆಯ ಮೇಲೆ ನಿಲ್ಲಿಸಿದ ಎರಡು ನೇರ ಕಂಬಗಳು, ಗುಜ್ಜುಗಳು. Q.'s bounty (Bounty ನೋಡಿ). Q.'s counsel, English, evidence, head (ಆಯಾ ಪದವನ್ನು ನೋಡಿ). Q.'s omnibus (ಅಸಂ.) = Black Maria (Black ನೋಡಿ). Q.'s shilling (Shilling ನೋಡಿ). Q.-stitch ಕಸೂತಿಯಲ್ಲಿ ಒಂದು ಅಲಂಕಾರದ ಹೊಲಿಗೆ. Q.'s-ware ಕೆನೆ ಬಣ್ಣದ ಗಾಜಿನ ಹೊಳಪು ಕೊಟ್ಟ ಅರೆಗಾಜು ಮಣ್ಣಿನ ಸಾಮಾನು. Q.'s weather ಬಿಸಿಲು (ಕಾಯುತ್ತಿರುವ ವಾಯು ಸ್ಥಿತಿ). **Queéndom** (ನಾ.); **Queénhood** (ನಾ.); **Queénless** (ಗು.) ; **Queénlike** (ಗು.); **Queénly** (ಗು.) ರಾಣಿಗೆ—ತಕ್ಕ, ಯೋಗ್ಯವಾದ ; ಗಾಂಭೀರ್ಯ ಠೀವಿಗಳುಳ್ಳ ; ರಾಣಿಯಂಥ. **Queénliness** (ನಾ.) ; **Queénship** (ನಾ.)

Queen (ಕ್ರಿ.) (ಒಬ್ಬ ಸ್ತ್ರೀಯನ್ನು) ರಾಣಿಯಾಗಿ ಮಾಡು (Q. it ರಾಣಿಯಂತೆ ವರ್ತಿಸು, ಆಡು). (ಚದುರಂಗ) ಪ್ಯಾದೆಯನ್ನು ಎದುರಾಳಿಯ ಕೊನೆ ಸಾಲಿಗೆ ನಡಸಿ ರಾಣಿಯನ್ನಾಗಿ (ಅಥವಾ ಇಷ್ಟವಿರುವ ಬೇರೆ ಕಾಯಿಯನ್ನಾಗಿ) ಬದಲಾಯಿಸಿಕೊ ; (ಪ್ಯಾದೆಯ ವಿಷಯದಲ್ಲಿ) (ಹೀಗೆ) ರಾಣಿ ಕಾಯಿಯಾಗು, —ಯಾಗಿ ಮಾರ್ಪಾಡು ಹೊಂದು.

Queéning ಕ್ವೀನಿಂಗ್ (ನಾ.) ಒಂದು ಬಗೆಯ ಸೇಬು.

Queer ಕ್ವಿಯರ್ [ಗು., ಕ್ರಿ. ಅಕ. (ಅಸಂ.)] ವಿಚಿತ್ರ ; ವಿಲಕ್ಷಣ ; ವಕ್ರ. ಸಂದೇಹಾಸ್ಪದವಾದ ಶೀಲವುಳ್ಳ, ನಡತೆಯುಳ್ಳ ; ಕೆಟ್ಟ ಹೆಸರು ಪಡೆದಿರುವ ; (ಅಪ್ರಾಮಾಣಿಕತೆಯ) ಸಂಶಯ ತೋರುವ. ಅಸ್ವಸ್ಥ ; ತಲೆ ತಿರುಗುವ ; ಬವಳಿಬರುವ (ಮು., feel q.). (ಅಸಂ.) ಕುಡಿದು ಅಮಲೇರಿದ. [In Q. street (ಅಸಂ.) ಕಷ್ಟದಲ್ಲಿ, ಸಾಲದಲ್ಲಿ, ತೊಂದರೆಯಲ್ಲಿ, ಅಪಕೀರ್ತಿಯಲ್ಲಿ, —ಸಿಕ್ಕಿಕೊಂಡು ನರಳುತ್ತ]. (ಕ್ರಿ.) (ಯಂತ್ರ, ಮೊ. ನ್ನು ಕೆಲಸಮಾಡಲಾಗದಂತೆ) ಕೆಡಿಸು ; (ಮು., q. the pitch for one ಮೊದಲೇ ಒಳಸಂಚಿನಿಂದ ಒಬ್ಬನ ಹಂಚಿಕೆಯನ್ನು, ಏರ್ಪಾಡನ್ನು, ಅವಕಾಶವನ್ನು, ಹಾಳುಮಾಡು). **Queérish** (ಗು.) ; **Queérly** (ಕ್ರಿ. ವಿ.) ; **Queérness** (ನಾ.)

Quell ಕ್ವೆಲ್ (ಕ್ರಿ. ಸಕ.) (ಕಾವ್ಯ, ಅಲಂ.) (ಭಯ, ವಿರೋಧ, ದಂಗೆ, ದಂಗೆಕೋರರು, ಮೊ. ನ್ನು) ಅಡಗಿಸು, ಬಲಾತ್ಕಾರವಾಗಿ ನಿಗ್ರಹಿಸು, ನಾಶಮಾಡು, ತುಳಿದುಹಾಕು, ತಲೆಯೆತ್ತದಂತೆ ಮಾಡು, ಶರಣು ಬರುವಂತೆ ಜಯಿಸು. **(-)quéller** (ನಾ.)

Quench ಕ್ವೆನ್ಚ್(ನ್ಷ್) (ಕ್ರಿ. ಸಕ.) (ಮು., ಕಾವ್ಯ ಅಥವಾ ಅಲಂ.) (ಬೆಂಕಿ, ದೀಪ, ಬೆಳಕು, ದೃಷ್ಟಿ—ಇವನ್ನು) ಆರಿಸು, ನಂದಿಸು, ಅಳಿಸು ; [Q. smoking flax (ಬೈಬಲ್ ಪ್ರ.) ಅಭಿವೃದ್ಧಿಗೆ ಬರುವುದೆಂಬ ಭರವಸೆಯಿರುವುದನ್ನು ತಲೆಯೆತ್ತದಂತೆ ಮುರಿದುಬಿಡು]. (ಕಾವ್ಯ, ಅಲಂ. : ಶಾಖವನ್ನು, ಕಾದ ವಸ್ತುವನ್ನು) (ಮು., ನೀರಿನಿಂದ) ತಣ್ಣಗೆ ಮಾಡು (ರೂಪ. ಸಹ) ; (ಕಾವ್ಯ, ಅಲಂ. : ಅಪೇಕ್ಷೆ, ವೇಗ, ಚಲನೆ—ಇವನ್ನು) ಅಡಗಿಸು. (ನೀರಡಿಕೆಯನ್ನು) ಆರಿಸು, ಹೋಗಲಾಡಿಸು ; ದಾಹ ಶಮನ ಮಾಡು. (ಅಸಂ.) (ಎದುರಾಳಿಯನ್ನು) ಬಾಯಿ ಮುಚ್ಚಿಸು, ಉಸಿರೆತ್ತದಂತೆ ಮಾಡು. **Quénchable** (ಗು.) ; **Quénchless** (ಗು.) ; **Quéncher** (ನಾ.) (ಕ್ರಿಯಾರ್ಥಗಳಲ್ಲಿ). (ಅಸಂ.) ಕುಡಿಯುವುದಕ್ಕೆ ಏನಾದರೂ ಒಂದು ಪಾನ (ಸಾ., A modest q.)

Quérist. **Query** ನೋಡಿ.

Quern ಕ್ವರ್ನ್ (ನಾ.) (ಧಾನ್ಯ ಬೀಸುವುದಕ್ಕೆ ಮನೆಯಲ್ಲಿ ಬಳಸುವ) ಬೀಸುವ ಕಲ್ಲು. (ಮೆಣಸು, ಮೊ. ನ್ನು ಬೀಸುವ) ಸಣ್ಣ ಬೀಸುವ ಯಂತ್ರ. Q.-stone ಬೀಸುವ ಕಲ್ಲಿನ ಎರಡು ಹೋಳುಗಳಲ್ಲೊಂದು.

Quérulous ಕ್ವೆರ್ಯು(ರು)ಲಸ್ (ಗು.) ಗೊಣಗುಟ್ಟುವ (ಸ್ವಭಾವದ) ; ಸಿಡುಕಿನ ; ಜಗಳಗಂಟಿತನದ. **Quérulously** (ಕ್ರಿ. ವಿ.) ; **Quérulousness** (ನಾ.)

Quéry ಕ್ವಿಯರಿ, ಕ್ವೆರಿ (ನಾ., ಕ್ರಿ.) [ಒಂದು ಪ್ರಶ್ನೆ ಹಾಕುವಲ್ಲಿ ಅಥವಾ ವಾದ ಮಾಡಬೇಕಾದ ಪ್ರಮೇಯವನ್ನು ಸೂಚಿಸುವಲ್ಲಿ ಪ್ರಯೋಗಿಸುವ ಮಾತು ; ಸಂಕ್ಷಿಪ್ತ: qu.; ಉದಾ., Query, if this would be honourable? Query (or qu.), was the money ever paid? ಒಂದು ಪ್ರಶ್ನೆ: ಹಣ ಯಾವಾಗಲಾದರೂ ಸಂದಾಯವಾಯಿತೊ?]. (ಮು., ಆಕ್ಷೇಪಣೆಯ ರೀತಿಯ) ಪ್ರಶ್ನೆ ; ಆಕ್ಷೇಪ ; (Was prepared to suppress all queries). ಪ್ರಶ್ನಾರ್ಥಕ ಚಿಹ್ನೆ (?) ; ಒಂದು ಭಾಷಣದ ಅಥವಾ ಬರಹದ ಮಧ್ಯದಲ್ಲಿ ಅಥವಾ ಕೊನೆಯಲ್ಲಿ (ಸಂದೇಹವನ್ನು ಸೂಚಿಸಲು ಕೂಗಿದ ಅಥವಾ ಬರೆದ) Query (qu.) ಎಂಬ ಪದ. (ಕ್ರಿ.) ಕೇಳು ; ವಿಚಾರಿಸು (*Whether*, *if*, etc.). ಪ್ರಶ್ನೆ ಹಾಕು. [ಮಾತಿನಲ್ಲಿ ಅಥವಾ ಬರಹದಲ್ಲಿ (ಒಂದರ ವಿಷಯವಾಗಿ ಸಂದೇಹಪಟ್ಟು, ಆಕ್ಷೇಪಿಸಿ)] ಪ್ರಶ್ನೆ ಮಾಡು. (ಒಂದರ) ಸತ್ಯಾಂಶವನ್ನು ಪ್ರಶ್ನಿಸು, ಸಂದೇಹಿಸು. **Quérist** (ನಾ.) ಪ್ರಶ್ನೆ ಕೇಳುವವನು ; ಪ್ರಶ್ನಕಾರ.

Quest ಕ್ವೆಸ್ಟ್ (ನಾ., ಕ್ರಿ.) ಸರ್ಕಾರದ ವಿಚಾರಣೆ; ವಿಚಾರಣೆ ನಡಸುವ ನ್ಯಾಯದರ್ಶಿ ಮಂಡಲಿ, ಮೊ. ದು [ಈಗ ಗ್ರಾಮ್ಯ ಪ್ರ. ದಲ್ಲಿ ಮಾತ್ರ: Crowner's q. = Coroner's inquest (Coroner ನೋಡಿ)]. ಶೋಧನೆ ; ಅನ್ವೇಷಣೆ ; ಹುಡುಕಾಟ ; ವಿಚಾರಮಾಡಿ, ಅನ್ವೇಷಣದಿಂದ, —ಅರಸುವುದು, ಹುಡುಕುವುದು, ಹುಡುಕುವ ವಸ್ತು (ಮು., ಮಧ್ಯಯುಗದ ವೀರನ ಅನ್ವೇಷಣದ ಲಕ್ಷ್ಯ) ; [In q. of (ಒಂದನ್ನು) ಹುಡುಕುತ್ತ, ಅನ್ವೇಷಣ ಮಾಡುತ್ತ]. (ಕ್ರಿ.) (ನಾಯಿ, ಮೊ. ಗಳ ವಿಷಯದಲ್ಲಿ) ಬೇಟೆಗಾಗಿ (ಸುತ್ತಮುತ್ತ) ಹುಡುಕಾಡು (*About* ಉಪ. ದೊಡನೆ). (ಯಾವುದನ್ನಾದರೂ) ಹುಡುಕಿಕೊಂಡು ಹೋಗು (*About* ಉಪ. ದೊಡನೆ). (ಕಾವ್ಯ) (ಒಂದಕ್ಕಾಗಿ) ಅನ್ವೇಷಣಮಾಡು, ಅರಸು (*Out* ಉಪ. ದೊಡನೆ)

Quéstion ಕ್ವೆಸ್ಚ್ಯನ್, —ಸ್ಚನ್ (ನಾ., ಕ್ರಿ. ಸಕ.) ಪ್ರಶ್ನೆ ; ಪ್ರಶ್ನಾರ್ಥಕ ವಾಕ್ಯ [Put a q. to (one) (ಒಬ್ಬನನ್ನು, ಒಂದರ ವಿಷಯವಾಗಿ) ಪ್ರಶ್ನಿಸು. Q. & answer ಪರ್ಯಾಯ ಕ್ರಮದಲ್ಲಿ ಬರುವ ಪ್ರಶ್ನೋತ್ತರಗಳು ; ಪ್ರಶ್ನೋತ್ತರ (ಬೋಧನಾ) ವಿಧಾನ, ಕ್ರಮ. Leading, Rhetorical, q. (Lead², Rhetoric ನೋಡಿ). Indirect, oblique, q. ಅಧೀನ ಉಪವಾಕ್ಯ (ರೂಪದ) ಪ್ರಶ್ನೆ. Q.-mark, -stop ಪ್ರಶ್ನಾರ್ಥಕ ಚಿಹ್ನೆ (?)]. (ಒಂದರ ನಿಶ್ಚಯಾಂಶ, ವಿಶ್ವಾಸಾರ್ಹತೆ, ಔಚಿತ್ಯ, ಮೊ. ನ್ನು ಕುರಿತು) ಸಂದೇಹ, ಆಕ್ಷೇಪಣೆ (—ಸೂಚಿಸುವುದು, ಎತ್ತುವುದು) [Allowed it without q. Beyond all or beyond, out of, past, without, q. ನಿಸ್ಸಂದೇಹವಾಗಿ. Call in q. (Call ನೋಡಿ). Make no q. of fact ವಾಸ್ತವಾಂಶದ ವಿಷಯವಾಗಿ ಸಂಶಯಪಡಬೇಡ. There is no q. but that— ಎಂಬುದರಲ್ಲಿ ಸಂದೇಹವೇ ಇಲ್ಲ] [**Quéstionless** (ಕ್ರಿ. ವಿ., ಗು.)]. (ಬಿಡಿಸಬೇಕಾದ) ಸಮಸ್ಯೆ ; ಸಿದ್ಧಿಸಬೇಕಾದ ಪ್ರಶ್ನಾಂಶ; ಪರಿಹರಿಸಬೇಕಾದ ತೊಡಕು ; ಪ್ರಮೇಯ ; ತೀರ್ಮಾನಿಸಬೇಕಾದ ವಿಷಯ ; (ಒಂದರ) ಸ್ಥಿತಿಗತಿಗಳನ್ನವಲಂಬಿಸಿದ ಸಂಗತಿ, ವಿಷಯ, ವ್ಯವಹಾರ (*Of* ಉಪ. ದೊಡನೆ) [Eastern q. (East ನೋಡಿ). Beg the q. (Beg ನೋಡಿ). Success is merely a q. of time ಜಯವೇನೋ ಖಂಡಿತ, ಸ್ವಲ್ಪ ತಡವೊ ಬೇಗಲೂ ಬರುತ್ತದೆ. It is only a q. of putting enough coffee in]. ಚರ್ಚೆಯಾಗುತ್ತಿರುವ, ಚರ್ಚೆಗಿಟ್ಟಿರುವ, —ವಿಷಯ : ಚರ್ಚಾ ವಿಷಯ ; ಮತಕೊಡಬೇಕಾದ ವಿಷಯ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[The person in q. ಯಾರ ವಿಷಯ ಮಾತಾಡುತ್ತಿರುವೆವೊ ಅವನು. Come into q. ಚರ್ಚೆಗೆ ಬರು ; ಕಾರ್ಯತಃ ಪ್ರಮುಖವಾಗು. That is not the q. ವಿಷಯ ಅದಲ್ಲ ; ಅದು ಅಸಂಬದ್ಧ. The q. is (ಚರ್ಚಾ ವಿಷಯವನ್ನು ಸೂಚಿಸುವಾಗ ಅಥವಾ ನೆನಪಿಗೆ ತರುವಾಗ) ವಿಷಯವೇನೆಂದರೆ ? Q. ! (ಸಾರ್ವಜನಿಕ ಸಭೆಗಳಲ್ಲಿ ಭಾಷಣಕಾರನು ವಿಷಯಬಿಟ್ಟು ಅಪ್ರಸ್ತುತ ಪ್ರಸ್ತಾಪ ಮಾಡುವಾಗ ಕೊಡುವ ಎಚ್ಚರಿಕೆ) ವಿಷಯ ! The previous q. (Previous ನೋಡಿ). Out of the q. ಚರ್ಚೆಮಾಡಬೇಕಾಗಿಲ್ಲದಷ್ಟು ಅಸಂಭವವಾದ; ಚರ್ಚಿಸಿ ಫಲವಿಲ್ಲದ. Put the q. (ಸೂಚನೆಯನ್ನು ಅನುಮೋದಿಸುವವರೂ ವಿರೋಧಿಸುವವರೂ) ತಂತಮ್ಮ ಅಭಿಮತ ಕೊಡುವಂತೆ ಮಾಡು ; ಸೂಚನೆಯನ್ನು ವೋಟಿಗೆ ಹಾಕು. Open q. (Open ನೋಡಿ)]. (ಪ್ರಾಚೀ. ಪ್ರ.) (ಅಪರಾಧ ಒಪ್ಪಿಕೊಳ್ಳುವುದಕ್ಕಾಗಿ ಕೊಡುವ) ಚಿತ್ರಹಿಂಸೆ (Was put to the q.)

Quéstion (ಕ್ರಿ. ಸಕ.) ಕೇಳು ; ಪ್ರಶ್ನೆ ಮಾಡು ; —ಹಾಕು ; ಬೆಸಗೊಳ್ಳು. (ಒಬ್ಬನನ್ನು) ಪ್ರಶ್ನೆಹಾಕಿ ಪರೀಕ್ಷಿಸು ; (ಗೋಚರ ವಿಷಯಗಳು, ಸಂಗತಿಗಳು, ಮೊ. ಗಳಿಂದ) ವಿಷಯಾನ್ವೇಷಣ ಮಾಡು. (ಒಂದರ ತಥ್ಯಾಂಶದ ವಿಷಯದಲ್ಲಿ) ಸಂದೇಹಪಡು, ಆಕ್ಷೇಪಣೆ ಎತ್ತು (Q. the honesty, accuracy, fitness, etc. of). **Quéstionable** (ಗು.) ಸಂದೇಹಾಸ್ಪದ ; (ಪ್ರಾಮಾಣಿಕತೆ, ಗೌರವ, ವಿವೇಕ—ಇವು) ಸಂಶಯಾಸ್ಪದವಾದ; ಋಜುತನದ್ದಲ್ಲದ. **Quéstionably** (ಕ್ರಿ. ವಿ.); **Quéstioningly** (ಕ್ರಿ. ವಿ.)

Questionnairé (F) ಕೆಸ್ಚ್ಯ(ನ್ನಿ)ನೇರ್, ಕ್ವೆಸ್ಚನೇರ್, **Quéstionary** ಕ್ವೆಸ್ಚ್ಯನರಿ (ವಿರ. ಪ್ರ.) (ನಾ.) (ನಿರ್ದಿಷ್ಟ ರೂಪಕ್ಕಿಳಿಸಿದ) ಪ್ರಶ್ನಾವಳಿ.

Queue ಕ್ಯೂ (ನಾ., ಕ್ರಿ.) (ತಲೆಗೂದಲಿನ, ಕೂದಲ ಕುರಾವಿಯ) ತೊಂಗುತ್ತಿರುವ ಜಡೆ ; ತೊಂಗು ಜಡೆ. (ಮುಂದೆ ಹೋಗಲು, ತಾವು ಬಂದಿರುವ ಕಾರ್ಯದ ಸ್ಥಾನಕ್ಕೆ ಸೇರಲು, ತಮ್ಮ ಸರದಿ ಕಾಯುತ್ತ) ಒಬ್ಬರ ಹಿಂದೊಬ್ಬರಂತೆ ನಿಂತ (ಜನರ, ವಾಹನ, ಮೊ. ಗಳ) ಸಾಲು ; ತಮ್ಮ ಸರದಿ ಕಾಯುತ್ತಿರುವ ಜನರ ಸಾಲು. (ಕ್ರಿ.) (ತಲೆಗೂದಲನ್ನು) ಜಡೆ, ಹೆರಳು, —ಹಾಕು. (ಜನ, ಮೊ. ರ ವಿಷಯದಲ್ಲಿ) ಸಾಲುಗಟ್ಟಿ ನಿಲ್ಲು (*Up* ಉಪ. ದೊಡನೆ) ; ಸಾಲಿಗೆ ಸೇರಿ ನಿಲ್ಲು; ಸಾಲುಗೂಡು (*On* ಉಪ. ದೊಡನೆ)

Quíbble ಕ್ವಿಬ್‌ಲ್ (ನಾ., ಕ್ರಿ. ಅಕ.) ದ್ವಂದ್ವಾರ್ಥ ಕೊಡುವ ಮಾತು ; —ಮಾತನ್ನಾಡುವುದು ; ಶ್ಲೇಷೆ ; ಹದಿರುನುಡಿ ; ಹೊರಳುನುಡಿ ; ಮಾತು ಹೊರಳಿಸುವುದು ; ನುಣುಚಿಕೊಳ್ಳುವುದು ; ತಿರುಳಿಲ್ಲದ, ಕೇವಲ ಶಬ್ದಾಡಂಬರದ, —ವಾದ ; (ಮು., ಪದದ ದ್ವಂದ್ವಾರ್ಥವನ್ನೊ ಸಂದಿಗ್ಧಾರ್ಥವನ್ನೊ ಉಪಯೋಗಿಸುವ) ಕುತರ್ಕ. (ಕ್ರಿ.) —ನ್ನು ಬಳಸು, ಉಪಯೋಗಿಸು. **Quíbbler** (ನಾ.) ; **Quíbbling** (ನಾ.)

Quick ಕ್ವಿಕ್ (ಗು., ನಾ., ಕ್ರಿ. ವಿ.) (ಪ್ರಾಚೀ. ಪ್ರ.) ಬದುಕಿರುವ, ಜೀವಂತ ; ಸಜೀವ [ಮು., The q. & the dead. Go down q. into hell ಸಜೀವವಾಗಿ ನರಕಕ್ಕಿಳಿ. Q. with child (ಹಿಂದೆ : with q. child) ಗರ್ಭದಲ್ಲಿ ಮಗುವಿನ ಅಲುಗಾಟ ತೋರುವ ಗರ್ಭಧಾರಣೆಯ ಹಂತದಲ್ಲಿರುವ]. ಚುರುಕಾದ ; ಚಟುವಟಿಕೆಯುಳ್ಳ ; ಸಿದ್ಧವಾಗಿರುವ; ಸೂಕ್ಷ್ಮವೇದನೆಯ; ಥಟ್ಟನೆ—ಕಾರ್ಯಮಾಡಲುಳ್ಳ, ಗ್ರಹಿಸುವ, ಈಡಾಗುವ, ಕಲಿಯುವ, ಆಲೋಚಿಸುವ, ಕಲ್ಪಿಸುವ ; ಸೂಕ್ಷ್ಮ, ಚುರುಕು, —ಬುದ್ಧಿಯುಳ್ಳ, ಸ್ವಭಾವದ ; ಪ್ರತ್ಯುತ್ಪನ್ನ ಬುದ್ಧಿಯ. A q. child ಚುರುಕಾದ ಮಗು. Q. temper ಸುಲಭವಾಗಿ ಕೆರಳುವ ಸ್ವಭಾವ [**Quicktempered** (ಗು.)]. Q. sight ಚುರುಕು ನೋಟ ; ಸೂಕ್ಷ್ಮ ದೃಷ್ಟಿ ; ತೀಕ್ಷ್ಣ— [**Quicksighted** (ಗು.)]. Has a q. eye, ear, etc. [**Quick-eyed** (ಗು.); **Quick-eared** (ಗು.)]. Is q. to take offence. Q. wits ಚುರುಕು ಬುದ್ಧಿ [**Quick-witted** (ಗು.)]. ವೇಗವಾಗಿ ಚಲಿಸುವ; ಬೇಗನೆಯ ; ತ್ವರಿತದ ; ಶೀಘ್ರ ; ಕ್ಷಿಪ್ರ(ವಾಗಿ ಮಾಡಿದ) (Be q. ಜಾಗ್ರತೆ ಮಾಡು. Did a q. mile. Was followed by q. vengeance). [**Q.-change** (ನಟ, ಮೊ. ರ ವಿಷಯದಲ್ಲಿ) ಮತ್ತೊಂದು ಪಾತ್ರವನ್ನು ಅಭಿನಯಿಸಲು ಉಡುಪನ್ನು, ವೇಷವನ್ನು, ಬೇಗ ಬದಲಾಯಿಸುವ ; ಬೇಗ ವೇಷಾಂತರ ಹೊಂದುವ. **Quicklime** (Lime[1] ನೋಡಿ). **Q. march** (ಸೈನ್ಯ) ತ್ವರಿತ ಗತಿ(ಯ ನಡಗೆ) (ಮು., ಸಾಮಾನ್ಯ ನಡಗೆಯಲ್ಲಿ ಹೋಗುವಂತೆ ಕೊಡುವ ಈ ಆಜ್ಞೆ). **Quícksand** ಉಸುಬು ; ಹೂಳು ನೆಲ. **Quíckset** (ಗು., ನಾ.) (ಬೇಲಿಯ ವಿಷಯದಲ್ಲಿ) ಜೀವಂತ ಗಿಡಗಳಿಂದಾದ. (ನಾ.) (ಬೇಲಿಯಾಗಿ ಬೆಳೆಯಲು) ಭೂಮಿಯಲ್ಲಿ ನೆಟ್ಟ ಗಿಡದ ಕಡ್ಡಿಗಳು (ಲಾಂಟಾನ, ಮೊ. ಗಳವು) ; ಇವುಗಳಿಂದಾದ ಬೇಲಿ; ಬಾಳ್ವೇಲಿ. **Quícksilver** (ನಾ., ಕ್ರಿ. ಸಕ.) ಪಾದರಸ ; (ರೂಪ.) ದೇಹ ಪ್ರಕೃತಿಯ, ಚಿತ್ತವೃತ್ತಿಯ, —ಚಂಚಲತೆ ; ಪಾದರಸದಂಥ ಚಂಚಲವೃತ್ತಿ. (ಕ್ರಿ.) (ದರ್ಪಣದ ಗಾಜಿಗೆ) ರಸತವರವನ್ನು ಲೇಪಿಸು. **Q. step** ತೀವ್ರ ಗತಿಯ(ಲ್ಲಿ ಹಾಕುವ) ಹೆಜ್ಜೆ. **Q. time** (ಸೈನ್ಯ) ೩೩ ಅಂಗುಲಗಳ ಅಂತರದ ೧೨೮ ಹೆಜ್ಜೆಗಳನ್ನು ನಿಮಿಷವೊಂದಕ್ಕೆ ಹಾಕುವ ಗತಿ (ಎಂದರೆ, ಬ್ರಿಟಿಷ್ ಸೈನ್ಯದಲ್ಲಿ ಸಾಮಾನ್ಯವಾಗಿ ಗಂಟೆಗೆ ೪ ಮೈಲಿಯ ನಡಗೆ)]. (ನಾ.) ಚರ್ಮದ ತಳಗಡೆಯ (ಮು., ಉಗುರುಗಳ ತಳದ) ಸೂಕ್ಷ್ಮ ವೇದನೆಯುಳ್ಳ ಮಾಂಸ ; ಉಗುರು ಕಣ್ಣು (Bites his nails to the q.). ಮನೋಭಾವದ, ಮನೋವಿಕಾರದ —ನೆಲೆ, ಸ್ಥಾನ (Tory to the q.); ಮರ್ಮ (The insult stung him to the q. ಆ ಅಪಮಾನ ಅವನ ಮರ್ಮಭೇದನ ಮಾಡಿತು. Touch, stung, to the q. ಮರ್ಮವನ್ನು ಮುಟ್ಟು, ಇರಿ). =Quickset (ಗು., ನಾ.). (ಕ್ರಿ. ವಿ.) (ತರ ತಮ ರೂಪಗಳು : -er -est ; ಯಾವಾಗಲೂ ಕ್ರಿಯಾಪದಾನಂತರ ಪ್ರ.) ಬೇಗ ; ವೇಗವಾಗಿ ; ಕ್ಷಿಪ್ರದಲ್ಲಿ ; ಶೀಘ್ರವಾಗಿ. (ವಿಧ್ಯರ್ಥದ Go, come, be, q. ಎಂಬುದಕ್ಕೆ ಅಧ್ಯಾಹಾರವಾಗಿ) ಬೇಗ ! ಜಾಗ್ರತೆ ! Q.-fading, -forgotten, etc. Q.-firing gun ಬೇಗ ಬೇಗ ಪರಂಪರೆಯಾಗಿ ಗುಂಡು ಹಾರಿಸಲಾಗುವಂತೆ ವಿಶೇಷ ರೀತಿಯಲ್ಲಿ ಅಳವಡಿಸಿರುವ ಯಂತ್ರಫಿರಂಗಿ [=**Quick-firer** (ನಾ.)]. **Quíckly** (ಕ್ರಿ. ವಿ.); **Quícken** (ಕ್ರಿ.) (ಸ್ವಾಭಾವಿಕ ಅಥವಾ ಆಧ್ಯಾತ್ಮಿಕ) ಜೀವ, ವೀರ್ಯ, —ಕೊಡು, ತರು ; ಚೇತನಗೊಳಿಸು ; ಉತ್ತೇಜಿಸು ; ಹುರಿದುಂಬಿಸು ; ಉಸಿರೆರೆ ; ಚುರುಕುಗೊಳಿಸು ; ಕೆರಳಿಸು ; ಕನಲಿಸು ; ಪ್ರೇರಿಸು ; ಜೀವ, ಚೈತನ್ಯ,—ಪಡೆ ; ಜೀವ ಬರು ; ಚೇತನಗೊಳ್ಳು. (ಹೆಂಗಸಿನ, ಭ್ರೂಣದ, —ವಿಷಯದಲ್ಲಿ) ಭ್ರೂಣ ಚಲನಾನುಭವದ ಗರ್ಭಸ್ಥಿತಿಗೆ ಬರು. (ನಡಗೆ, ಗತಿ, ಮೊ. ಗಳ ವಿಷಯದಲ್ಲಿ) ವೇಗ ಹೆಚ್ಚಿಸು, ವೇಗ ವೃದ್ಧಿಯಾಗು, ವೇಗವಾಗು. **Quíckening** (ಗು.). **Quíckness** (ನಾ.) ಗ್ರಹಣ ಸೂಕ್ಷ್ಮತೆ, ತೀಕ್ಷ್ಣತೆ ; ಚುರುಕು. ಶೀಘ್ರತೆ ; ಕ್ಷಿಪ್ರತೆ ; ಥಟ್ಟನೆ ನಡೆಯುವುದು ; ಹಠಾತ್ತು. (ವಿರ. ಪ್ರ.) ; ಅವಸರ (Q. of temper ಬೇಗ ಕೆರಳುವ ಸ್ವಭಾವ ; ಮುಂಗೋಪ)

Quid[1] ಕ್ವಿಡ್ (ನಾ., ಬ. ವ. Quid) (ಅಸಂ.) ಒಂದು ಸವರನ್ನು ; ಒಂದು ಪೌಂಡು ಹಣ (At two q. a week)

Quid[2] ಕ್ವಿಡ್ (ನಾ.) ಬಾಯಲ್ಲಿಟ್ಟುಕೊಂಡು ಅಗಿಯುವಷ್ಟು ಹೊಗೆಯ ಸೊಪ್ಪು.

Quiddity ಕ್ವಿಡಿಟಿ (ನಾ.) (ಒಂದರ) ತತ್ತ್ವ, ಸತ್ತ್ವ, ಸಾರ, ತಿರುಳು. ಹೊರಳು ನುಡಿ ; ಕುತರ್ಕದ ಸೂಕ್ಷ್ಮ.

Quídnunc ಕ್ವಿಡ್‌ನಂಕ್ (ನಾ.) ಸಮಾಚಾರ ಸಂಗ್ರಹಿಸಿ ಹರಟುವವನು; ಸುದ್ದಿಮಲ್ಲ.

Quid pro quo (L) ಕ್ವಿಡ್ ಪ್ರೋ ಕ್ವೋ (ನಾ.) ಒಂದಕ್ಕೆ ಬದಲಾಗಿ ಮತ್ತೊಂದನ್ನು ಉಪಯೋಗಿಸಿ ಅಥವಾ ಹಾಕಿ ಮಾಡಿದ ತಪ್ಪು, ಪ್ರಮಾದ (ಈಗ ವಿರ. ಪ್ರ.). ಪರಿಹಾರ ; ಪ್ರತಿಫಲ ; ಈಡು (Must get, must find him, a q. p. q.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Quiéscent ಕ್ವೈಎಸೆ(ಸ್)ಂಟ್ (ಗು.) ನಿಶ್ಚಲ; ನಿಶ್ಚೇಷ್ಟ; ಜಡ; (ಅಕ್ಷರದ ವಿಷಯದಲ್ಲಿ) ಉಚ್ಚಾರಣೆಯಿಲ್ಲದ. (ಮನುಷ್ಯನ ವಿಷಯದಲ್ಲಿ) ಮೌನವಾಗಿರುವ; ಮೂಗುವಟ್ಟಿರುವ; ಸೊಲ್ಲೆತ್ತದಿರುವ; ಸುಪ್ತ; ಚಟುವಟಿಕೆಯಿಲ್ಲದೆ, ನಿದ್ದೆಯಲ್ಲಿರುವಂತೆ,—ಬಿದ್ದಿರುವ. **Quiéscently** (ಕ್ರಿ. ವಿ.); **Quiéscence** (ನಾ.); **Quiéscency** (ನಾ.)

Quíet ಕ್ವೈಅ(ಎ)ಟ್ (ನಾ., ಗು., ಕ್ರಿ.) ಕ್ಷೋಭೆಯಿಲ್ಲದ—ರಾಜಕೀಯ ಸ್ಥಿತಿ, ವಾತಾವರಣ; ಸಾರ್ವಜನಿಕ ಶಾಂತಿ. ಮೌನ; ನಿಶ್ಶಬ್ದತೆ. ಗಲಾಟೆ, ಈತಿಬಾಧೆ, ಮನಸ್ಸಿನ ಕಲಕು, ಜರೂರು ಕೆಲಸ, ಇಲ್ಲದೆ ನೆಮ್ಮದಿಯಾಗಿರುವುದು; ನೆಮ್ಮದಿ; ವಿಶ್ರಾಂತಿ; ನಿಶ್ಚಿಂತತೆ; ಮನಶ್ಶಾಂತಿ. ಕಲಕದ ಮನೋವೃತ್ತಿ; ಸಮಾಧಾನ; ಪ್ರಶಾಂತಿ. (ಗು.; ತರ ತಮ ರೂಪಗಳು -er, -est) ನಿಶ್ಶಬ್ದವಾದ; ನಿಶ್ಚಲವಾದ; ಅತಿ ಸೂಕ್ಷ್ಮ—ಶಬ್ದದ, ಚಲನೆಯ. ಸೌಮ್ಯ (ಪ್ರವೃತ್ತಿಯ); ಜಡ (ಸ್ವಭಾವದ). (ಬಣ್ಣ, ಉಡುಪು, ಮೊ. ಗಳ ವಿಷಯದಲ್ಲಿ) ಸಾದಾ, ಸಾಮಾನ್ಯ, ಆಡಂಬರ ತೋರದ. ಹೊರಕ್ಕೆ ವ್ಯಕ್ತಪಡಿಸದ; ಗುಪ್ತ (Q. resentment. Had a q. dig at him). ತೊಂದರೆ, ಗಲಾಟೆ, —ಇಲ್ಲದ; ನಿರ್ಬಾಧಿತವಾದ; ವಿರುದ್ಧಭಾವವಿಲ್ಲದ; ತಡೆಯಿಲ್ಲದ; ಗಲಭೆ ಗಲಾಟೆಗಳಿಲ್ಲದ; —ಗಳಿಗೆ ದೂರವಾದ: ನಿಶ್ಚಿಂತೆಯಾದ; ನೆಮ್ಮದಿಯಾದ; ತೆಪ್ಪಗಿರುವ; ಪ್ರಶಾಂತ. (ಕ್ರಿ.) ಸದ್ದಡಗಿಸು; ಶಮನ ಮಾಡು; ಶಾಂತಗೊಳಿಸು; ಸುಮ್ಮನಾಗು; ಶಾಂತವಾಗು (ವಿರ. ಪ್ರ.; ಸಾ., q. down). **Quíetly** (ಕ್ರಿ. ವಿ.); **Quíetness** (ನಾ.); **Quíetude** (ನಾ.); **Quíeten** (ಕ್ರಿ.) (ಗ್ರಾಮ್ಯ) =Quiet (ಕ್ರಿ.). **Quíetism** (ನಾ.) ಕೇವಲ ಧ್ಯಾನ ಯೋಗ; ನಿಷ್ಕ್ರಿಯೆ. **Quíetist** (ನಾ., ಗು.); **Quietístic** (ಗು.)

Quiétus ಕ್ವೈಈಟಸ್ (ನಾ.) (ಈಗ ವಿರ. ಪ್ರ.) (ಲೆಕ್ಕಕ್ಕೆ ಪಾವತಿ ಮಾಡಿದ್ದಕ್ಕಾಗಿ ಕೊಡುವ) ಹಣಸಂದ ರಸೀತಿ. ಜೀವದ ತೊರೆತ; ಸಾವು; ಮರಣ; ಅಂತ್ಯ ವಿಮೋಚನೆ (Got, gave him, his q.)

Quill ಕ್ವಿಲ್ (ನಾ., ಕ್ರಿ.) ಹಕ್ಕಿಯ ಗರಿಯ ಟೊಳ್ಳು ಕಾಂಡ; (ರೆಕ್ಕೆಯ ಅಥವಾ ತೋಕೆಯ) ಪೂರ್ಣವಾದ ದೊಡ್ಡ ಗರಿ (=Q.-feather). ಗರಿ ಲೇಖನಿ (=Q. pen). ಈ ಗರಿಯಿಂದ ಮಾಡಿದ ಸಿತಾರಿನ ತಂತಿ ಮೀಟು, ಗಾಳದ ತೇಲುವೆ, ಹಲ್ಲುಕಡ್ಡಿ. ಮುಳ್ಳುಹಂದಿಯ ಮುಳ್ಳು. (ದಾರ ಸುತ್ತುವುದಕ್ಕೆ ಉಪಯೋಗಿಸುವ) ಟೊಳ್ಳು ಉರುಳೆ. (ಟೊಳ್ಳು ಕಾಂಡದಿಂದ ಮಾಡಿದ) ಕೊಳಲು. ಸುರುಳಿ ಸುತ್ತಿಕೊಂಡಿರುವ ದಾಲ್ಚಿನ್ನಿಯ ಅಥವಾ ಸಿಂಕೋನದ ಪಟ್ಟೆ, ಚಕ್ಕೆ, ತೊಗಟೆ. [Q.-coverts ಗರಿಗಳ ಬುಡವನ್ನು ಮುಚ್ಚಿಕೊಂಡಿರುವ ಪುಕ್ಕಗಳು. Q.-driver (Drive ನೋಡಿ)]. (ಕ್ರಿ.) ಗರಿ(ಯಾಕಾರದ) ನಿರಿಗೆ ಮಾಡು, ಆಗು; =Goffer; [**Quílling** (ನಾ.)]. (ಉರುಳೆಯ ಮೇಲೆ) ದಾರ, ನೂಲು, —ಸುತ್ತು. **Quíllet** ಕ್ವಿಲೆಟ್ (ನಾ.) ಹೊರಳುನುಡಿ; ಅತಿಸೂಕ್ಷ್ಮ ಭೇದ.

Quilt ಕ್ವಿಲ್ಟ್ (ನಾ., ಕ್ರಿ. ಸಕ.) ಬಟ್ಟೆಯ ಎರಡು ಪದರಗಳ ಮಧ್ಯೆ ಹತ್ತಿ, ತುಪ್ಪಟ, ಮೊ. ಮೆತ್ತನೆಯ ಪದಾರ್ಥವನ್ನಿಟ್ಟು ಅಡ್ಡ ಹೊಲಿಗೆ ಹಾಕಿ ಮಾಡಿದ ಹಾಸಿಗೆ, ಮೆತ್ತೆ; ರಜಾಯಿ; ಹಾಸಿಗೆಯ (ಯಾವುದಾದರೂ) ಮೇಲು ಹಾಸು [Patch-work q. ತೇಪೆ(ಹಾಕಿ ಮಾಡಿದ) ಕವುದಿ]. (ಕ್ರಿ.) (ಒಂದನ್ನು) ಮೆತ್ತೆ ಪದಾರ್ಥವಿಟ್ಟು ಮುಚ್ಚು, ರಜಾಯಿ ಯಂತೆ ಮಾಡು ಅಥವಾ ಜೋಡಿಸಿ ಹೊಲಿ. (ನಾಣ್ಯ, ಕಾಗದ, ಮೊ. ನ್ನು) ಉಡುಪು, ಮೊ. ಗಳ ಎರಡು ಪದರಗಳ ಮಧ್ಯೆ ಇಟ್ಟು ಹೊಲಿ. ಉದ್ಧೃತ ಭಾಗಗಳನ್ನು ಅಥವಾ ಇತರರ ಭಾವಗಳನ್ನು ತುಂಬಿ (ಗ್ರಂಥವನ್ನು) ಸಂಕಲಿಸು. (ಅಸಂ.) ಚೆನ್ನಾಗಿ ಸದೆಬಡಿ. **Quílting** (ನಾ.)

Quínary ಕ್ವೈನರಿ (ಗು.) ಐದರ (ಸಂಖ್ಯೆಯ); ಐದು ವಸ್ತುಗಳುಳ್ಳ; ಐದರ ತಂಡವಾದ. **Quínate** ಕ್ವೈನೇಟ್ (ಗು.) (ಸ. ವಿ.) (ಎಲೆಯ ವಿಷಯದಲ್ಲಿ) ಐದು ಪತ್ರಕಗಳಿಂದ ಕೂಡಿದ; ಪಂಚ ಪತ್ರಕ. **Quínate.** **Quinary** ನೋಡಿ.

Quince ಕ್ವಿನ್ಸ್ (ನಾ.) (ಹಣ್ಣುಗಳನ್ನು ಕೆಡದಂತೆ ಇಡುವುದಕ್ಕಾಗಿ ಅಥವಾ ಅವುಗಳಿಗೆ ರುಚಿಕಟ್ಟುವುದಕ್ಕಾಗಿ ಉಪಯೋಗಿಸುವ) ಪೇರ್ ಹಣ್ಣಿನಾಕಾರದ, ನಸು ಹಳದಿಯ, ಒಂದು ಗಟ್ಟಿ ಹುಳಿ ಕಾಯಿ; ಇದರ ಮರ: ಕ್ವಿನ್ಸ್ ಕಾಯಿ (ಮರ)

Quíncunx ಕ್ವಿನ್‌ಕಂಕ್ಸ್ (ನಾ.) ಒಂದು ಚಚ್ಚೌಕದ ಅಥವಾ ನೀಳ ಚೌಕದ ನಾಲ್ಕು ಮೂಲೆಗಳಲ್ಲಿ ಒಂದೊಂದರಂತೆ ನಾಲ್ಕೂ, ಮಧ್ಯದಲ್ಲಿ ಒಂದೂ ಇರುವಂತೆ (ಉದಾ., ಐದನೆಯ ಬಂದಿನ ಇಸ್ಪೀಟೆಲೆಯಲ್ಲಿರುವಂತೆ) ಇಟ್ಟ ಐದು ವಸ್ತುಗಳು (—ಗಳ ವಿನ್ಯಾಸ); ಪಂಚಕ ವಿನ್ಯಾಸ (Plantation laid out in quincunxes ಪಂಚಕ ವಿನ್ಯಾಸದಲ್ಲಿ ಹಾಕಿದ ಮರಗಳ ವನ). **Quincúncial** —ಕನ್‌ಷಲ್ (ಗು.); **Quincúncially** (ಕ್ರಿ. ವಿ.)

Quingenténary ಕ್ವಿನ್‌ಜೆಂಟೀನರಿ (ಗು., ನಾ.) ೫೦೦ನೆಯ ವರ್ಷದ(ಲ್ಲಿ). (ನಾ.) ೫೦೦ನೆಯ ವಾರ್ಷಿಕೋತ್ಸವ; ಪಂಚ ಶತಮಾನೋತ್ಸವ.

Quínia ಕ್ವಿನಿಯ (ನಾ.) (ವೈದ್ಯ) =Quinine.

Quiníne ಕ್ವಿನೀ(ನೈ)ನ್ (ನಾ.) ಜ್ವರಶಾಮಕವಾಗಿಯೂ ಬಲವರ್ಧಕ ವಾಗಿಯೂ ಮೊರೆಜ್ವರ ನಿರೋಧಕವಾಗಿಯೂ ಉಪಯೋಗಿಸುವ, ಮು., ಸಿಂಕೋನ ಗಿಡದ ತೊಗಟೆಯಲ್ಲಿ ದೊರೆಯುವ, ಒಂದು ಸಸ್ಯ ಕ್ಷಾರ: 'ಕ್ವಿನೀನು'; ಕ್ವೈನ; (ಬಳಕೆಯಲ್ಲಿ) 'ಕ್ವಿನೀನ್ ಸಲ್ಫೇಟು'. **Quínize** ಕ್ವೈನೈಸ್ (ಕ್ರಿ. ಸಕ.); **Quínism** ಕ್ವೈನಿಸ್ಮ್ (ನಾ.)

Quinquagenárian ಕ್ವಿನ್‌ಕ್ವಜಿನೇರಿಯನ್ (ಗು., ನಾ.) ಐವತ್ತು ವರ್ಷ ವಯಸ್ಸಿನ(ವನು)

Quinquagésima ಕ್ವಿನ್‌ಕ್ವಜೆಸಿಮ (ನಾ.) 'ಲೆಂಟ್' ಹಬ್ಬದ ಹಿಂದಿನ ಭಾನುವಾರ (=Q. Sunday)

Quinqu(e) ಕ್ವಿನ್‌ಕ್ವಿ— (ಸ. ಪೂ. ಪ.) ಐದು—; ಪಂಚ—. **Quinquénniad** ಕ್ವಿನ್‌ಕ್ವೆನಿಯಡ್, **Quinquénnium** (ಬ. ವ. -a) ಐದು ವರ್ಷ(ಕಾಲ); ವರ್ಷ ಪಂಚಕ. **Quinquénnial** ಐದು ವರ್ಷ ಕಾಲದ; ಐದು ವರ್ಷಕ್ಕೊಮ್ಮೆ ಬರುವ; ಪಂಚ ವಾರ್ಷಿಕ. **Quinquénnially** (ಕ್ರಿ. ವಿ.); **Quinquívalent** (—ವಲೆಂಟ್) ಜಲ ಜನಕದ ಐದು ಪರಮಾಣುಗಳೊಡನೆ ಸಂಯೋಗ ಹೊಂದುವ ಶಕ್ತಿ ಯುಳ್ಳ: ಪಂಚ ಯೋಗ ಶಕ್ತ.

Quinquína ಕಿನ್‌ಕೀನ, ಕ್ವಿನ್‌ಕ್ವೈನ (ನಾ.) ('ಕ್ವಿನೀನ್' ಮತ್ತು ಇತರ ಜ್ವರಶಾಮಕ ಸಸ್ಯ ಕ್ಷಾರಗಳನ್ನು ಕೊಡುವ) ಸಿಂಕೋನಾ ತೊಗಟೆ; —ಮರ.

Quínsy ಕ್ವಿನ್ಸಿ (ನಾ.) ಗಂಟಲಿನ ಉರಿಯೂತ; ಗಳ ಗ್ರಂಥಿಗಳು ಕೀತುಕೊಳ್ಳುವುದು. **Quínsied** (ಗು.)

Quíntal ಕ್ವಿಂಟಲ್, **Kín-** ಕಿಂ— (ನಾ.) ೧೦೦ ಪೌಂಡು ತೂಕ; ೧೧೨ ಪೌಂಡು ತೂಕ ಅಥವಾ ಒಂದು ಹಂಡ್ರೆಡ್‌ವೈಟು; ೧೦೦ ಕಿಲೊಗ್ರ್ಯಾಂ ತೂಕ.

Quíntan ಕ್ವಿಂಟನ್ (ಗು., ನಾ.) ನಾಲ್ಕು ದಿನಕ್ಕೊಮ್ಮೆ (ಎರಡು ದಿವಸವನ್ನೂ ಎಣಿಸಿದರೆ ಐದು ದಿನಕ್ಕೊಮ್ಮೆ) ಬರುವ (ಚಳಿ ಜ್ವರ); ನಾಲ್ಕರ ಚಳಿ ಜ್ವರ.

Quintéssence ಕ್ವಿಂಟೆಸೆನ್ಸ್ (ನಾ.) (ಪ್ರಾಚೀನ ತ. ಶಾ.) ಆಕಾಶಸ್ಥ ಕಾಯಗಳಲ್ಲಿಯೂ ಮಿಕ್ಕ ಎಲ್ಲ ವಸ್ತುಗಳಲ್ಲಿಯೂ ಅಂತರ್ಗತ ವಾಗಿರುವ, (ಪೃಥ್ವಿ, ಅಪ್ಪು, ತೇಜಸ್ಸು, ವಾಯು ಎಂಬ) ಚತುರ್ಭೂತ ಗಳಿಂದ ಬೇರೆಯಾದ, ಐದನೆಯ ದ್ರವ್ಯ. (ಯಾವುದಾದರೊಂದು ವಸ್ತುವಿನ) ಶುದ್ಧ ಸಾರ; ಅತ್ಯಂತ ಸಾರವತ್ತಾದ ಭಾಗ; ಶುದ್ಧಿ ಮಾಡಿ ತೆಗೆದ ಸಾರ; ಒಂದು ಗುಣದ ಅಥವಾ ವರ್ಗದ ಸಾರಭೂತ ವಾದ ಅಂಶ ಅಥವಾ ರೂಪ. **Quintesséntial** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Quintét(te) ಕ್ವಿಂಟೆಟ್ (ನಾ.) ಐದು ದನಿಗಳಿಗೆ ಅಥವಾ ವಾದ್ಯಗಳಿಗೆ ಅಳವಡಿಸಿದ ಗೀತ, ಗಾನ; ಪಂಚ ಮೇಳ. ಇದನ್ನು ಹಾಡುವ, ಬಾಜಿಸುವ, ಐವರು ಗಾಯಕರು, ವಾದ್ಯಗಾರರು; ಐಮೇಳದವರು; ಐದರ, ಐವರ, —ತಂಡ; ಪಂಚಕ.

Quintíllion ಕ್ವಿಂಟಿಲ್ಯನ್ (ನಾ.) ೧೦ ಲಕ್ಷದ ಆರನೆಯ ಘಾತ (೧ರ ಮುಂದೆ ೩೦ ಸೊನ್ನೆಗಳನ್ನು ಹಾಕಿದರೆ ಆಗುವ ಸಂಖ್ಯೆ)

Quíntuple ಕ್ವಿಂಟ್ಯೂಪ್‌ಲ್ (ಗು., ನಾ., ಕ್ರಿ.), **Quíntuply** (ಕ್ರಿ. ವಿ.), **Quíntuplet** (ನಾ.), **Quintúplicate** —ಕೆಟ್ (ಗು., ನಾ.), —ಕೇಟ್ (ಕ್ರಿ. ಸಕ.), **Quintuplicátion** (ನಾ.),— (ಈ ಪದಗಳ ಅರ್ಥಗಳಿಗೆ Quadruple ಮೊ. ಪದಗಳ ಅರ್ಥಗಳಲ್ಲಿ 'ನಾಲ್ಕು' ಎಂಬುದಕ್ಕೆ ಬದಲಾಗಿ 'ಐದು' ಎಂದು ಹಾಕಿಕೊಳ್ಳುವುದು)

Quíntus ಕ್ವಿಂಟಸ್ (ಗು., ನಾ.) ಐದನೆಯ(ವನು) (Primus[1] ನೋಡಿ)

Quip ಕ್ವಿಪ್ (ನಾ.) ವ್ಯಂಗ್ಯ(ವಾಗಿ ಮಾಡಿದ) ಟೀಕೆ; ಚುಚ್ಚುನುಡಿ; ಚಮತ್ಕಾರದ ಮಾತಿನೇಟು.

Quire[1] ಕ್ವಯರ್, ಕ್ವೈರ್ (ನಾ.) ಬರೆಯುವ ಕಾಗದದ ೨೪ ಹಾಳೆ: ಒಂದು ದಸ್ತು (In quires ರಟ್ಟು ಕಟ್ಟಿಲ್ಲದೆ, ಹಾಳೆಗಳಲ್ಲಿ)

Quire[2] ಕ್ವಯರ್, ಕ್ವೈರ್ (ನಾ., ಕ್ರಿ.) =Choir.

Quírinal ಕ್ವಿರಿನಲ್ (ನಾ.) ಇಟಲಿಯ ಸರ್ಕಾರದ ಅಥವಾ ರಾಜಾಸ್ಥಾನ (ಕ್ಕೆ ಉಪಯೋಗಿಸುವ ಮಾತು) (ಮು., Vatican ಪದಕ್ಕೆ ಎದುರು ಪದವಾಗಿ)

Quirk[1] ಕ್ವರ್ಕ್ (ನಾ.) =Quibble, Quip. ಕ್ರಿಯೆಯ, ವರ್ತನೆಯ, —ಚಳಕ, ಚಮತ್ಕಾರ; (ರೇಖನದಲ್ಲಿ, ಬರೆವಣಿಗೆಯಲ್ಲಿ) ಅಲಂಕಾರದ ಕೊಂಕು, ವೈಖರಿ. (ವಾ. ಶಾ.) (ಕಾರ್ನೀಸಲಂಕಾರದಲ್ಲಿ) ಒಂದು ತೆರದ ಗೋಲು.

Quirk[2] ಕ್ವರ್ಕ್ (ನಾ., ಕ್ರಿ. ಸಕ.) (ಅಮೆ. ಸಂ.) (ಗಿಡ್ಡ ಹಿಡಿಯೂ ಹೆಣೆದ ತೊಗಲ ಬಾರೂ ಉಳ್ಳ) ಸವಾರಿ ಬಾರುಗೋಲು. (ಕ್ರಿ.) ಈ ಬಾರು ಗೋಲಿನಿಂದ ತೀಡು.

Quit ಕ್ವಿಟ್ (ಕ್ರಿಯಾರ್ಥಕ ಗು., ಕ್ರಿ. ಸಕ.) (ಪ್ರಾಚೀ. ಪ್ರ.) (ಅಪರಾಧ ದಿಂದ) ಬಿಡುಗಡೆ, (ಪಾಪ) ವಿಮೋಚನೆ, —ಹೊಂದಿದ; ಮುಕ್ತನಾದ (The others can go q. Was q. for a ducking ನೀರಿನಲ್ಲಿ ಒಂದು ಮುಳುಕು ಹಾಕಿ ಬಿಡುಗಡೆ ಹೊಂದಿದನು). ತೊಲಗಿಸಿ ಕೊಂಡ, ತಪ್ಪಿಸಿಕೊಂಡ, ಪರಿಹರಿಸಿಕೊಂಡ (*Of* ಉಪ. ದೊಡನೆ) (Glad to be q. of the trouble) [**Quítclaim** (ನಾ.) ಹಕ್ಕು ಬಿಟ್ಟುಬಿಡುವುದು, ಹಕ್ಕಿನ ತ್ಯಾಗ. (ಕ್ರಿ. ಸಕ.) (ಒಂದಕ್ಕೆ) ಹಕ್ಕು ಬಿಟ್ಟುಬಿಡು. (ಒಬ್ಬನಿಗೆ ಒಂದು ವಸ್ತುವನ್ನು) ಬಿಟ್ಟುಕೊಡು (*To* ಉಪ. ದೊಡನೆ). **Quit-rent** ಮಾನ್ಯಪಡೆದವನು ಅಥವಾ ಹಿಡುವಳಿದಾರನು ಊಳಿಗ ಮಾಡುವುದಕ್ಕೆ ಬದಲಾಗಿ ಕೊಡಬೇಕಾದ (ಸಾ., ಅಲ್ಪ ಮೊತ್ತದ) ಕಂದಾಯ: ಜೋಡಿ (ಜೂಡಿ) (ಕಂದಾಯ)]. (ಕ್ರಿ.) [ಭೂತ., ಭೂ. ಕೃ. Quitted, (ವಿರಳವಾಗಿ) Quit] (ಪ್ರಾಚೀ. ಪ್ರ.) ತೊಲಗಿಸಿಕೊ; ತಪ್ಪಿಸಿಕೊ. (ಸ್ವಾರ್ಥಕ ಸ. ನಾ. ದೊಡನೆ *self* ಪದ ವಿಲ್ಲದೆ) ವರ್ತಿಸು, ನಡೆದುಕೊ, ನಿಭಾಯಿಸಿ ಬರು (Q. well, etc.) [(ಪ್ರಾಚೀ. ಪ್ರ.) Q. you like men]. ತೊರೆ(ದುಬಿಡು); ಬಿಟ್ಟುಬಿಡು; ತ್ಯಜಿಸು (Q. hold of ಸಡಿಲಬಿಡು, ಹಿಡಿತಬಿಡು. Q. office). (ಒಂದು ಸ್ಥಳ, ಮೊ. ನ್ನು) ಬಿಟ್ಟು —ಹೊರಡು, ಹೋಗು (Quitted him in anger); (ಬಾಡಿಗೆದಾರನ ವಿಷಯದಲ್ಲಿ: ವಾಸವಿದ್ದ ಮನೆಯನ್ನು) ಬಿಟ್ಟುಬಿಡು (Give, have, notice to q.). (ಕಾವ್ಯ) ಪ್ರತಿಫಲವಾಗಿ ಕೊಡು; ಪ್ರತಿಯಾಗಿ ಕೊಡು; ಹಿಂದಕ್ಕೆ ಕೊಡು; ಕೊಟ್ಟು ತೀರಿಸಿ ಬಿಡು (Death quits all scores ಸಾವು ಎಲ್ಲ ಹಂಗು ಹಕ್ಕುಗಳನ್ನೂ ತೀರಿಸುತ್ತದೆ). **Quits** ಕ್ವಿಟ್ಸ್ (ಕ್ರಿಯಾರ್ಥಕ ಗು.) ಮುಯ್ಯಿಗೆ ಮುಯ್ಯಿ ತೀರಿಸಿ ಅಥವಾ ಪ್ರತೀಕಾರ ಮಾಡಿ ಅಥವಾ ಸಾಲ ತೀರಿಸಿ, ಸಮ ಲೆಕ್ಕಕ್ಕೆ ಬಂದ; ಒಬ್ಬರ ಹಂಗು ಒಬ್ಬರಿಗಿಲ್ಲದ [Will be q. with him yet ಅವನೊಡನೆ ಇನ್ನೂ ಸೇಡು ತೀರಿಸಿಕೊಳ್ಳುವುದಿದೆ. Now we are q. Cry q. ಈಗ ಸಮ ಲೆಕ್ಕಕ್ಕೆ ಬಂದೆವೆಂದು ಒಪ್ಪಿಕೊ; ವ್ಯವಹಾರ, ಮೊ. ಗಳಲ್ಲಿ ಮುಂದುವರಿಯುವುದಿಲ್ಲವೆಂದು ಒಪ್ಪಿಗೆ ಕೊಡು. Double or q. (Double ನಾ. ನೋಡಿ)]. **Quíttance** ಕ್ವಿಟನ್ಸ್ (ನಾ.) (ಪ್ರಾಚೀ. ಪ್ರ., ಕಾವ್ಯ) (ಯಾವುದಾದರೊಂದರಿಂದ) ಬಿಡುಗಡೆ, ವಿಮೋಚನೆ; (ಹಣ ಸಂದ ಬಗ್ಗೆ) ಒಪ್ಪಿಗೆಯ ಚೀಟಿ; ರಸೀತಿ (Omittance is no q. ತಗಾದೆ ಮಾಡದಿದ್ದರೆ ಸಾಲ ತೊಡೆದುಹೋಯಿತೆಂದಲ್ಲ). ಮುಯ್ಯಿಗೆ ಮುಯ್ಯಿ; ಪರಿಹಾರ. **Quítter** (ನಾ.) (ಅಮೆ. ಸಂ., ಬಳ. ಮಾ.) ತನ್ನ ಕೆಲಸವನ್ನು, ಕರ್ತವ್ಯ ಸ್ಥಾನವನ್ನು, —ತೊರೆದು ಹೋಗುವವನು; (ಕೆಲಸ ಮಾಡಲು) ಹಿಂಜರಿಯುವವನು; ಕೆಲಸಗಳ್ಳ; ಹುಮ್ಮಸ್ಸಿಲ್ಲದ ಹೇಡಿ.

Qui tam (L) ಕ್ವೈ ಟ್ಯಾಮ್ (ಲ್ಯಾಟಿನ್ ಅರ್ಥ: ತನಗಾಗಿಯೂ ತನ್ನ ದೊರೆಗಾಗಿಯೂ ವ್ಯಾಜ್ಯ ಹೂಡುವವನು) (ನಾ.) (ನ್ಯಾ. ಶಾ.) (ಒಬ್ಬನ) ಅಪರಾಧವನ್ನು ತಿಳಿಯಪಡಿಸುವವನು (ಹೂಡಿದ ಮೊಕದ್ದಮೆ)

Quite ಕ್ವೈಟ್ (ಕ್ರಿ. ವಿ.) ಪೂರ್ತಿಯಾಗಿ; ಸಂಪೂರ್ಣವಾಗಿ; ಸಮಗ್ರವಾಗಿ; ತೀರ; ಶುದ್ಧಾಂಗವಾಗಿ; ಸಂಪೂರ್ಣಾರ್ಥದಲ್ಲಿ; ಖಂಡಿತವಾಗಿ; ಸರ್ವಥಾ [Q. covers it. Was q. by myself. Q. other ಪೂರ್ತಿ ಬೇರೆ. Is q. a disappointment. I q. like him. Is q. too delightful (ಬಳ. ಮಾ.) ವರ್ಣನಾತೀತವಾಗಿದೆ. Is q. the thing ಈಗ ಜನಮೆಚ್ಚಿಕೆಯಾಗಿದೆ. Not q. proper ಸ್ವಲ್ಪ ಅನುಚಿತ(ವಾಗಿದೆ). Q. so (ಅಶುದ್ಧ ಪ್ರ. Q.) ಅಂತೆಯೇ; ನಿಜ; ಹಾಗೆಯೆ; ಸರಿ(ಯೆ)]

Quits, Quíttance. Quit ನೋಡಿ.

Quíver[1] ಕ್ವಿವರ್ (ನಾ.) ಬಾಣಗಳನ್ನಿಡುವ ಕೋಶ: ಬತ್ತಳಿಕೆ; ತೂಣೀರ; ಮೂಡಿಗೆ [Have an arrow, shaft, left in one's q. ಸಾಧನೋಪಾಯವನ್ನು ಇಟ್ಟುಕೊಂಡಿರು. Q. full of children ದೊಡ್ಡ ಕುಟುಂಬ]. **Quíverful** (ನಾ.)

Quíver[2] ಕ್ವಿವರ್ (ಕ್ರಿ., ನಾ.) (ವ್ಯಕ್ತಿ, ಎಲೆ, ರೆಕ್ಕೆ, ದನಿ, ಬೆಳಕು, ಮೊ. ಗಳ ವಿಷಯದಲ್ಲಿ) ಬೇಗ ಬೇಗನೆ, —ಅದಿರು, ಕಂಪಿಸು, ನಡುಗು (*With* emotion, *in* the wind, etc.). (ಹಕ್ಕಿಗಳ, ಮು., ಬಾನಾಡಿಯ ವಿಷಯದಲ್ಲಿ) ರೆಕ್ಕೆ ಅದಿರಿಸು, ನಡುಗಿಸು. (ನಾ.) ಅದಿರು ಚಲನೆ, —ದನಿ; ಕಂಪನ. **Quíveringly** (ಕ್ರಿ. ವಿ.)

Qui vive (F) ಕಿ(ೀ) ವೀವ್ [ಫ್ರೆಂಚ್ ಅರ್ಥ: (ಕಾವಲುಗಾರನು ಎದುರಿಸಿ ಕೇಳುವ ಪ್ರಶ್ನೆ) ನೀನು ಯಾರ ಕಡೆಯವನು?]. On the q. ಜಾಗರೂಕತೆಯಿಂದಿರುತ್ತ; ಎಚ್ಚರಿಕೆಗೂಡಿ; ಏನು ಸಂಭವಿಸುವುದೋ ಎಂಬ ನಿರೀಕ್ಷಣೆಯಿಂದ.

Quíxote ಕ್ವಿಕ್ಸ(ಕ್ಸೊ)ಟ್ (ನಾ.) ಅವ್ಯವಹಾರ್ಯ ಮನಃಕಲ್ಪನೆಗಳುಳ್ಳ ಉತ್ಸಾಹಶಾಲಿ; ಭಾವನಾ ರಾಜ್ಯದವನು; ಉದಾತ್ತವಾದರೂ ಕಾರ್ಯಸಾಧ್ಯವಲ್ಲದ ಧ್ಯೇಯಗಳನ್ನು ಹಿಡಿದು ಹೋಗುವವನು; ಭ್ರಾಂತೋತ್ಸಾಹಿ; ಗೌರವಕ್ಕಾಗಿ ಅಥವಾ ನಿಷ್ಠೆಗಾಗಿ ತನ್ನ ಐಹಿಕ ಸುಖಸಂಪತ್ತುಗಳನ್ನು ಶುದ್ಧಾಂಗವಾಗಿ ನಿರ್ಲಕ್ಷಿಸುವವನು. **Quixótic** —ಕ್ಸಾ— (ಗು.) [**Quixotics** (ನಾ., ಬ. ವ.) ಭ್ರಾಂತಿ ಕಲ್ಪನೆಗಳು, —ಮನೋಭಾವಗಳು]. **Quixótically** (ಕ್ರಿ. ವಿ.); **Quíxotism** (ನಾ.); **Quíxotize** (ಕ್ರಿ.); **Quíxotry** (ನಾ.) [ಸರ್ವಾಂಟಿಸ್ (Cervantes) ಎಂಬ ಸ್ಪ್ಯಾನಿಷ್ ಕವಿಯ 'ಡಾನ್ ಕ್ವಿಕ್ಸೊಟ್' (Don Quixote) ಎಂಬ ಕಲ್ಪಿತ ಕಥೆಯ ಕಥಾನಾಯಕನ ಹೆಸರಿನಿಂದ]

Quiz ಕ್ವಿಜ್ (ನಾ., ಕ್ರಿ. ಸಕ.) (ಈಗ ವಿರ. ಪ್ರ.) ವಿಚಿತ್ರ, ವಿಲಕ್ಷಣ, —ವ್ಯಕ್ತಿ; ಹಾಸ್ಯಾಸ್ಪದವಾದ, ಹುಚ್ಚು ಹುಚ್ಚಾದ, —ರೂಪಿನವನು. ಗೇಲಿ, ಕುಚೋದ್ಯ, ಮಾಡುವ ಸ್ವಭಾವದವನು: ಕುಚೋದ್ಯಗಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಈಗ ವಿರ. ಪ್ರ.) ಪರಿಹಾಸ್ಯ, ಕುಚೋದ್ಯ, ಲೇವಡಿ ; ಮತ್ತೊಬ್ಬನ ವೈಲಕ್ಷಣ್ಯಗಳನ್ನು ಹೊರಗೆಡಹಲು ಅಥವಾ ವಿಡಂಬನಮಾಡಲು ಕೈಕೊಂಡದ್ದು : ನಕಲಿ. (ಕ್ರಿ.) (ಒಬ್ಬನನ್ನು, ಅವನ ನಡೆನುಡಿಗಳನ್ನು) ಲೇವಡಿಮಾಡು, ಗೇಲಿಮಾಡು. ಅಣಕದ ಮುಖ ಭಾವದಿಂದ ನೋಡು ; (ಒಬ್ಬನ ಕಡೆ) ಕೌತುಕದಿಂದ ನೋಡು ; (ಒಬ್ಬನ) ವಿದ್ಯಮಾನಗಳನ್ನು, ವೈಲಕ್ಷಣ್ಯಗಳನ್ನು, —ಗಮನಿಸಿ ನೋಡು. ಭೂತಗನ್ನಡಿಯ ಮೂಲಕ ದೃಷ್ಟಿಸಿ ನೋಡು. **Quízzable** (ಗು.) ; **Quízzical** (ಗು.) ; **Quízzically** (ಕ್ರಿ. ವಿ.) ; **Quízzingly** (ಕ್ರಿ. ವಿ.)

Quóad (L) ಕ್ವೋಆ್ಯಡ್ (ಉಪ.) —ವಿಷಯದಲ್ಲಿ ; —ಸಂದರ್ಭದಲ್ಲಿ ; —ವಿಚಾರವಾಗಿ. Q. hoc ಈ ವಿಷಯದಲ್ಲಿ ; ಈ ಸಂದರ್ಭದಲ್ಲಿ ; ಇದರಷ್ಟರ ಮಟ್ಟಿಗೆ.

Quod[1] ಕ್ವಾಡ್ [ನಾ., ಕ್ರಿ. ಸಕ.; (ಅಸಂ.)] ಸೆರೆಮನೆ ; ಬಂದೀಖಾನೆ ; ಜೈಲು (In, out of, q.). (ಕ್ರಿ.) ಸೆರೆಹಾಕು.

Quod[2] (L) ಕ್ವಾಡ್. Q. erat demonstrandum (ಸಂಕ್ಷಿಪ್ತ : Q.E.D.) ಸಾಧಿಸಬೇಕಾದದ್ದು ; ಸಾಧನೀಯ ; ಪ್ರತಿಪಾದಿಸಬೇಕಾದದ್ದು. Q. erat faciendum (ಸಂಕ್ಷಿಪ್ತ: Q.E.F.) ಮಾಡಬೇಕಾದದ್ದು ; ರಚಿಸಬೇಕಾದದ್ದು. Q. erat inveniendum (ಸಂಕ್ಷಿಪ್ತ : Q.E.I.) ಕಂಡುಹಿಡಿಯಬೇಕಾದದ್ದು (ಇವುಗಳೆಲ್ಲ ಜ್ಯಾಮಿತಿಯ ಪ್ರತಿಜ್ಞಾ ಸಾಧನೆಗಳಲ್ಲಿ ಬಳಸುವ ಸೂತ್ರಗಳು). Quod vide (ಸಂಕ್ಷಿಪ್ತ : q.v.) (ಪ್ರಕರಣಾಂತರದ ಅಥವಾ ಇತರ ಸೂಚನೆ ಮಾಡುವ ಸಂದರ್ಭದಲ್ಲಿ) ಅದನ್ನು ನೋಡಿ.

Quoin ಕಾಯ್‌ನ್ (ನಾ., ಕ್ರಿ. ಸಕ.) (ಕಟ್ಟಡದ) ಹೊರ ಮೂಲೆ, ಬಾಹ್ಯ ಕೋನ. ಮೂಲೆಯ ರಚನೆಯಲ್ಲಿಯ ಕಲ್ಲು ಅಥವಾ ಇಟ್ಟಿಗೆ ; ಮೂಲೆ ಕಲ್ಲು. (ಕೊಠಡಿಯ) ಒಳ ಮೂಲೆ. (ಮುದ್ರಣದ ಅಣಿಗೆಯಲ್ಲಿ ಅಕ್ಷರದ ಮೊಳೆಗಳನ್ನು ಬಿಗಿಸಿ ಅಲುಗದಂತೆ ಮಾಡುವುದಕ್ಕಾಗಲಿ ಬಂದೂಕಿನ ಮಟ್ಟವನ್ನು ಎತ್ತರಿಸುವುದಕ್ಕಾಗಲಿ ಪೀಪಾಯಿ ಉರುಳದಂತೆ ತಡೆಯುವುದಕ್ಕಾಗಲಿ ಇಂಥ ಇತರ ಕೆಲಸಗಳಿಗಾಗಲಿ ಉಪಯೋಗಿಸುವ) ಬೆಣೆ. (ಕ್ರಿ.) ಬೆಣೆಯಿಟ್ಟು ಭದ್ರಪಡಿಸು, ಎತ್ತರಿಸು. (ಗೋಡೆಯಲ್ಲಿ) ಮೂಲೆ ಕಲ್ಲುಗಳನ್ನು ಸೇರಿಸು. **Quoíning** (ನಾ.)

Quoit ಕಾ(ಕ್ವಾ)ಯ್ಟ್ (ನಾ., ಕ್ರಿ. ಸಕ.) ('ಕ್ವಾಯ್ಟ್ಸ್' ಎಂಬ ಆಟದಲ್ಲಿ) ನೆಟ್ಟ ಕಬ್ಬಿಣದ ಗೂಟವನ್ನು ಸುತ್ತುಗಟ್ಟುವಂತೆ ಅಥವಾ ಅದರ ಹತ್ತಿರ ನೆಲಕ್ಕೆ ಕಚ್ಚಿಕೊಳ್ಳುವಂತೆ ಎಸೆಯುವ, ಚೂಪೇಣಿನ, ಭಾರವಾದ, ಚಪ್ಪಟೆಯ, ಕಬ್ಬಿಣದ ಬಳೆ : ಕಬ್ಬಿಣದ ಎಸೆಬಳೆ. (ಬ. ವ. ದಲ್ಲಿ) ಇಂಥ ಬಳೆಯೆಸೆತದ ಆಟ. (ಕ್ರಿ.) (ವಿರ. ಪ್ರ.) ಎಸೆಬಳೆಯಂತೆ ಎಸೆ.

Quóndam ಕ್ವಾಂಡ್ಯಮ್ (ಗು.) ಹಿಂದೆ ಇದ್ದ ; ಹಿಂದಿನ ; ಮಾಜಿ (ಈಗ ಇಲ್ಲದ) (A q. friend of mine)

Quórum ಕೋರಂ (ನಾ.) ಒಂದು ಸಭೆಯ, ಸಂಘದ, ಸಮಿತಿಯ, ಅಥವಾ ಮಂಡಲಿಯ ಕಾರ್ಯಕಲಾಪಗಳು ಕ್ರಮಬದ್ಧವೆಂದು, ಊರ್ಜಿತವೆಂದು, ಅಂಗೀಕಾರ ಪಡೆಯಲು ಅತ್ಯಗತ್ಯವಾಗಿ ಇರಲೇಬೇಕಾದ ಸದಸ್ಯರ ನಿರ್ದಿಷ್ಟ ಸಂಖ್ಯೆ ; ಅವಶ್ಯ ಸಂಖ್ಯೆ ; 'ಕೋರಂ'.

Quóta ಕೋಟ (ನಾ.) ಒಟ್ಟು ಮೊತ್ತದಲ್ಲಿ ಒಬ್ಬ ವ್ಯಕ್ತಿಯಾಗಲಿ ಒಂದು ಸಂಘವಾಗಲಿ ಒದಗಿಸಲೇಬೇಕಾದ ಅಥವಾ ಪಡೆಯಲು ಹಕ್ಕುಳ್ಳ ಪಾಲು, ಭಾಗ, ಹಿಸ್ಸೆ ; ದೇಯಾಂಶ ; ಪ(ಹ)ಸುಗೆ.

Quotátion, Quótative. Quote ನೋಡಿ.

Quóte ಕೋಟ್ (ಕ್ರಿ. ಸಕ., ನಾ.) (ಒಂದು ಅಭಿಪ್ರಾಯ ಸಮರ್ಥನೆಗಾಗಿ, ಒಬ್ಬ ಗ್ರಂಥಕಾರನ, ಒಂದು ಗ್ರಂಥದ) ಆಧಾರ, ಉದಾಹರಣೆ, —ಕೊಡು. (ಒಬ್ಬನಿಂದ, ಒಂದು ಗ್ರಂಥದಿಂದ, ಪ್ರಕರಣಗಳನ್ನು ಸಾ., ಅವು ಉದ್ಧೃತವೆಂಬ ಸೂಚನೆಕೊಟ್ಟು) ಎತ್ತಿ ಹೇಳು, ಎತ್ತಿ ಬರೆ ; ಅನುವಾದ ಮಾಡು ; ಉದ್ಧರಿಸು ; (ಗ್ರಂಥಕಾರನಿಂದ, ಗ್ರಂಥದಿಂದ, ಭಾಷಣ, ಮೊ. ಗಳಿಂದ) ಉದ್ಧೃತ ಭಾಗಗಳನ್ನು ಓದು, ಬರೆ. (—ಎಂದು) ಉದಾಹರಿಸು, ಆಧಾರ ಕೊಡು. (ಒಂದರ) ಬೆಲೆ ಹೇಳು (*At* ಉಪ. ಜೊತೆನೆ). (ನಾ.) (ಬಳ. ಮಾ.) ಉದ್ಧೃತ ಪ್ರಕರಣ. (ಸಾ., ಬ. ವ. ದಲ್ಲಿ) ಉದ್ಧರಣ ಚಿಹ್ನೆ(ಗಳು). **Quótable** (ಗು.) ; **Quóteworthy** (ಗು.) ; **Quótative** (ಗು.) ಉದ್ಧರಣದ ; ಉದ್ಧರಿಸುವ ಅಭ್ಯಾಸದ. **Quotátion** ಕೊಟೇಷನ್ (ನಾ.) (ಮುದ್ರಣ) (ತೆರಪುಗಳನ್ನು ಭರತಿಮಾಡಲು ಉಪಯೋಗಿಸುವ) ಸೀಸದ ಟೊಳ್ಳುಗಳು. (ಒಂದು ಗ್ರಂಥ, ಮೊ. ರಿಂದ) ಉದ್ಧರಿಸುವುದು, ಎತ್ತಿ ಹೇಳುವುದು ; ಅನುವಾದ ; ಉದ್ಧರಣ. (ಬಂಡವಾಳ ಪತ್ರಗಳಿಗೆ ಅಥವಾ ಸರಕಿಗೆ ಹೇಳುವ) ಚಾಲ್ತಿಯ ಬೆಲೆ. Q.-marks ಉದ್ಧರಣವೆಂದು ತೋರಿಸಲು ಅದರ ಮೊದಲಲ್ಲೂ ಕೊನೆಯಲ್ಲೂ ಹಾಕುವ ಸಂಕೇತ ಚಿಹ್ನೆಗಳು : ಉದ್ಧರಣ ಚಿಹ್ನೆಗಳು (" ", ' ')

Quoth ಕೋತ್ (ಕ್ರಿ. ಸಕ.; ಭೂತಕಾಲದಲ್ಲಿ ಉತ್ತಮ ಮತ್ತು ಪ್ರಥಮ ಪುರುಷದ ಸ. ನಾ. ಗಳೊಡನೆ ಪ್ರ.) (ಉದ್ಧೃತ ಪದಗಳ ಮಧ್ಯೆ, ತರುವಾಯ ಅಥವಾ ಮೊದಲಲ್ಲ) ಹೇಳಿದೆನು [—ದನು, ದಳು, ದವು (ವಿರ. ಪ್ರ.), —ದರು (ವಿರ. ಪ್ರ.)]. **Quótha** [(ಭಾವ. ಅವ್ಯ.) (ಪ್ರಾಚೀ. ಪ್ರ. ; =Quoth he (ತಿರಸ್ಕಾರಪೂರ್ವಕವಾಗಿ ಉದ್ಧರಿಸುವಲ್ಲಿ ಪ್ರ.)] ನಿಶ್ಚಯವಾಗಿ ? ಖಂಡಿತವಾಗಿ ? (The 'fickle moon' q. ! I wish my friends were half as constant)

Quotídian ಕೊಟಿಡಿಯನ್ (ಗು., ನಾ.) ದಿನ ದಿನದ ; ಪ್ರತಿ ದಿನದ ; ನಿತ್ಯದ (Q. fever, ague ದಿನಂಪ್ರತಿಯ ಜ್ವರ, —ಚಳಿ ಜ್ವರ). ಸರ್ವಸಾಮಾನ್ಯವಾದ ; ಅಲ್ಪ ; ಕ್ಷುಲ್ಲಕ ; ಗಣನೆಗೆ ಬಾರದ. (ನಾ.) ದಿನಂಪ್ರತಿ ಬರುವ—ಜ್ವರ, ಚಳಿ ಜ್ವರ.

Quótient ಕೋಷೆಂಟ್ (ನಾ.) ಒಂದು ಮೊತ್ತವನ್ನು ಮತ್ತೊಂದರಿಂದ ಭಾಗಿಸಿದರೆ ಬರುವ ಲಬ್ಧ : ಭಾಗಲಬ್ಧ.

R

R ಆರ್. ಇಂಗ್ಲಿಷ್ ವರ್ಣಮಾಲೆಯ ಹದಿನೆಂಟನೆಯ ಅಕ್ಷರ. The *r* months = Oyster ಎಂಬ ಸಿಂಪಿಯ ಬೆಳೆಗೆ ತಕ್ಕ ಕಾಲವಾದ, r ಅಕ್ಷರದಿಂದ ಕೂಡಿದ ತಿಂಗಳುಗಳು (Septemberನಿಂದ April). The three Rs = Reading, (w)riting, & (a)rithmetic (ಪ್ರಾಥಮಿಕ ವಿದ್ಯಾಭ್ಯಾಸದ ತಳಹದಿಯಾಗಿ) ಓದು, ಬರಹ ಮತ್ತು ಲೆಕ್ಕ. ಸಂಕ್ಷಿಪ್ತಗಳು : (1) **R.**(éaumur). (2) Regina (ರಾಣಿ), Rex (ದೊರೆ) [**R. et I.** (—Imperatrix, Imperator) ರಾಣಿ ಮತ್ತು ಚಕ್ರವರ್ತಿನಿ, ರಾಜ ಮತ್ತು ಚಕ್ರವರ್ತಿ]. (3) Religious [**R.T.S.** (—tract society) (ಕ್ರೈಸ್ತ) ಮತಗ್ರಂಥ (ಪ್ರಸಾರಕ) ಸಂಘ]. (4) Repondez [**R.S.V.P.** (—s'il vous plait) = Please reply ದಯವಿಟ್ಟು ಉತ್ತರಕೊಡಿ]. (5) Requiesca(n)t [**R.I.P.** (—in pace) —ಆತ್ಮಕ್ಕೆ ಶಾಂತಿಯುಂಟಾಗಲಿ]. (6) Resident [**R.M.O.** (—medical officer) ಸ್ಥಳವಾಸಿ ವೈದ್ಯಾಧಿಕಾರಿ]. (7) Revised [**R.V.**(ersion) ಪರಿಷ್ಕರಿಸಿದ ಪಾಠ, ಗ್ರಂಥ]. (8) Rifle [**R.B.**(rigade)]. (9) **R.**(iver). (10) Roman [**R.C.** (atholic)]. (11) Royal [**R.A.** (—academy *or* academician. —artillery); **R.A.F.**(—air force); **R.A.M.** (—academy of music) ; **R.A.M.C.** (—army medical corps) ; **R.E.** (—engineers); **R.G.A.** (—garrison artillery) ; **R.M.** (—marines) ; **R.M.C.** (—military college) ; **R.M.S.** (—mail steamer, service) —ಟಪ್ಪಾಲು ಜಹಜು, ಇಲಾಖೆ. **R.N.** (—navy)]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rev.(elation); **Rev.**(erend); **Rom.**(ans); **rom.**, (Roman type); **Rt Hon., Rt Rev.** (Right honourable, reverend). ℞. (Recipe) ಔಷಧಿ (ಚೀಟಿ); **Rs.** (Rupees)

Rábbet ರ್‍ಯಾಬೆಟ್ (ನಾ., ಕ್ರಿ. ಸಕ.) ಎರಡು ಮರದ ಏಣುಗಳಲ್ಲಿ ಒಂದರ ಚಾಚು ಮತ್ತೊಂದರ ಗಾಡಿಯಲ್ಲಿ ಕೂಡುವಂತೆ ಮೆಟ್ಟಿಲ ನಾಕಾರದಲ್ಲಿ ಮಾಡಿರುವ ಕೂರುಗಾಲುವೆ. (ಕ್ರಿ.) ಕೂರುಗಾಲುವೆ ಸೇರಿಕೆಯಿಂದ ಜೋಡಿಸು.

Rábbi ರ್‍ಯಾಬೈ(ಬಿ) (ನಾ.) (ಯೆಹೂದ್ಯರಲ್ಲಿ) ಧರ್ಮಶಾಸ್ತ್ರ ಪಂಡಿತ (ಒಕ್ಕಣೆಯಲ್ಲಿ, ಅಥವಾ ಹೆಸರಿನ ಹಿಂದೆ ಸೇರಿಸಿ, ಅಥವಾ ಸಾ., ನಾಮ ವಾಚಕವಾಗಿ, ಪ್ರ.); ಮು., ದೀಕ್ಷೆ ಪಡೆದು ಧರ್ಮಶಾಸ್ತ್ರ, ಮತ ಪ್ರಕ್ರಿಯೆಗಳು, ಮೊ. ಗಳಲ್ಲಿ ವ್ಯವಹರಿಸುವುದಕ್ಕೂ ಕೆಲವು ಗೊತ್ತಾದ ಸಂಸ್ಕಾರಗಳನ್ನು ನಡಸುವುದಕ್ಕೂ ಅಧಿಕಾರ ಹೊಂದಿರುವವನು; 'ರಬ್ಬಿ'. Chief R. ಗ್ರೇಟ್ ಬ್ರಿಟನ್ನಿನಲ್ಲಿರುವ United Synagogue ಎಂಬ ಸಂಯುಕ್ತ ಯೆಹೂದ್ಯ ಗೋಷ್ಠಿಯ ಪ್ರಧಾನ ಗುರು. **Rábbin** ರ್‍ಯಾಬಿನ್ (ನಾ.) = Rabbi (ಸಾ., The rabbins ಯೆಹೂದ್ಯ ಧರ್ಮಶಾಸ್ತ್ರ ಮತ್ತು ತತ್ತ್ವಶಾಸ್ತ್ರಗಳ ಬಹಳ ಹಿಂದಿನ ಪ್ರಧಾನ ಆಚಾರ್ಯರು). **Rábbinate** —ನೆಟ್ (ನಾ.) ರಬ್ಬಿಯ ಅಧಿಕಾರ, ಅಧಿಕಾರಾವಧಿ ಅಥವಾ ಪದವಿ. **Rabbínical** (ಗು.); **Rabbínically** (ಕ್ರಿ. ವಿ.); **Rábbinism** (ನಾ.); **Rábbinist** (ನಾ.)

Rábbin. **Rabbi** ನೋಡಿ.

Rábbit[1] ರ್‍ಯಾಬಿಟ್ (ನಾ., ಕ್ರಿ. ಅಕ.) ಕುಂದಿಲಿ (ಸ್ವಾಭಾವಿಕ ಸ್ಥಿತಿಯಲ್ಲಿ ಕಂದುಬೂದು ಬಣ್ಣವುಳ್ಳ, ಸಾಕಿದವುಗಳಲ್ಲಿ ಕಪ್ಪು, ಬಿಳುಪು ಅಥವಾ ಈ ಇಬ್ಬಗೆಯ ಬಣ್ಣವುಳ್ಳ, ಮೊಲದ ಜಾತಿಯ ಒಂದು ಬಿಲವಾಸಿ ಪ್ರಾಣಿ). [R.-hutch ಕುಂದಿಲಿಗಳನ್ನು ಕೂಡುವ (ಪೆಟ್ಟಿಗೆಯಂಥ) ಗೂಡು. R.-warren ಕುಂದಿಲಿಗಳನ್ನು ಬೆಳಸುವ ಆವರಣ]. (ಕ್ರಿ.) ಕುಂದಿಲಿಗಳ ಬೇಟೆಯಾಡು. **Rábbity** (ಗು.) ಕುಂದಿಲಿಯ(ಂಥ); —ನ್ನು ಹೋಲುವ; —ಗಳು ತುಂಬಿರುವ.

Rábbit[2] ರ್‍ಯಾಬಿಟ್ (ಕ್ರಿ. ಸಕ.) (ಗ್ರಾಮ್ಯ) Odd r. it, etc. (ಶಾಪದ ಮಾತು) ಹಾಳಾಗ!

Rábble[1] ರ್‍ಯಾಬ್‌ಲ್ (ನಾ.) ದೊಂಬಿ; ಜನಜಂಗುಳಿ. ಅಲ್ಪರು ಅಥವಾ ಕೀಳು ಮಂದಿ. The r. (ಜನತೆಯಲ್ಲಿ) ಕೀಳು ದರ್ಜೆಯವರು. **Rábblement** (ನಾ.) (ಈಗ ವಿರ. ಪ್ರ.) ದೊಂಬಿ(ಯವರ ಗಲಭೆ, ಗದ್ದಲ)

Rábble[2] ರ್‍ಯಾಬ್‌ಲ್ (ನಾ.) ಕಾದು ಕರಗಿದ ಲೋಹವನ್ನು ಕಲಕುವುದಕ್ಕಾಗಿ ಉಪಯೋಗಿಸುವ, ತುದಿ ಬಗ್ಗಿಸಿದ ಕಬ್ಬಿಣದ ಸರಳು.

Rábblement. **Rabble**[1] ನೋಡಿ.

Rabelaísian, -aésian ರ್‍ಯಾಬೆಲೇಸಿಯನ್ (ಗು., ನಾ.) ರ್‍ಯಾಬೆಲೆ ಎಂಬ ಫ್ರೆಂಚ್ ವಿನೋದ ಸಾಹಿತಿಯ(ಂಥ); (ಉಕ್ಕಿ ಹರಿಯುವ ಕಲ್ಪನೆ, ನಿರರ್ಗಳ ಭಾಷೆ, ಅಶ್ಲೀಲ ಹಾಸ್ಯ ಮತ್ತು ವಿಡಂಬನೆಗಳ ಲಕ್ಷಣವುಳ್ಳ) ರ್‍ಯಾಬೆಲೆಯ ಲೇಖನಗಳ(ಂಥ). (ನಾ.) ರ್‍ಯಾಬೆಲೆಯ ಅಭಿಮಾನಿ, —(ಕೃತಿಗಳ) ವ್ಯಾಸಂಗಿ.

Rábid ರ್‍ಯಾಬಿಡ್ (ಗು.) ಉಗ್ರವಾದ; ಅತಿರೇಕದ; ಉನ್ಮತ್ತ; ಮೂರ್ಛಾವೇಶದ; ವಿವೇಕ ಪರಿಜ್ಞಾನವಿಲ್ಲದ; ನಿರ್ಲಕ್ಷ್ಯದ; ಅಸಹನೆಯ (R. hate; R. democrat). (ಮು., ನಾಯಿಗಳ ವಿಷಯದಲ್ಲಿ) ಹುಚ್ಚುರೋಗದ; ನಾಯಿಹುಚ್ಚಿನ; ಹುಚ್ಚು ಹಿಡಿದ. **Rábidly** (ಕ್ರಿ. ವಿ.); **Rábidness** (ನಾ.); **Rabídity** (ನಾ.); **Rábies** ರೇಬಿಯಾಜ್, ರೇಬೀಜ್ (ನಾ.) ನಾಯಿ ಹುಚ್ಚು; ಹುಚ್ಚು ನಾಯಿಯು ಕಡಿತದಿಂದ ಮನುಷ್ಯನಲ್ಲಿ ಹುಟ್ಟುವ ತೀವ್ರ ರೋಗ.

Rábies. **Rabid** ನೋಡಿ.

Race[1] ರೇಸ್ (ನಾ., ಕ್ರಿ.) ಮುಂದೋಟ; ಮುನ್ನುಗ್ಗು; ಮುಂಬರಿತ; (ಮು., ಸಮುದ್ರದಲ್ಲ ಅಥವಾ ನದಿಯಲ್ಲಿ) ಪ್ರಬಲ ಪ್ರವಾಹ, ಸೆಳವು (Tide set with a strong r. ಜೋರಾದ ಸೆಳವಿನಿಂದ ಕೂಡಿದ ಭರತ). ಸೂರ್ಯನ, ಚಂದ್ರನ, —ಗತಿ, ಚಾರ. ಕಾಲ ಗತಿ. ಜೀವಮಾನ (Ere he had run half his r.). ಹೊಳೆಯ ಕಾಲುವೆ (ಮು., ಸಮಾಸ ಪದಗಳಲ್ಲಿ: ಉದಾ., mill-r.). ರಾಳಿ ಓಡಾಡುವ ಗಾಡಿ. (ಓಟಗಾರರು, ಹಡಗುಗಳು, ಕುದುರೆಗಳು, ಮೊ. ಗಳ) ಪಂತದ ಓಟ; ಓಟದ ಪಂದ್ಯ, ಜೂಜು; (ಯಾವುದಾದರೂ ಕೆಲಸ ಮಾಡುವವರ ವಿಷಯದಲ್ಲಿ) ಮೇಲಾಟ, ಪೈಪೋಟಿ, ಪಂದ್ಯ. (ಬ. ವ. ದಲ್ಲಿ) (ಗೊತ್ತಾದ ಕಾಲದಲ್ಲಿ ವೈಹಾಳಿಯ ಪಥದಲ್ಲಿ ನಡಸುವ) ಕುದುರೆಯ ಜೂಜು [Selling r. (Sell ನೋಡಿ)]. [R. ball ಕುದುರೆಯ ಜೂಜಿನ ಸಂಬಂಧದಲ್ಲಿ ನಡಸುವ ನರ್ತನ ಗೋಷ್ಠಿ. R.-card ಕುದುರೆಯ ಜೂಜಿನ ಕಾರ್ಯಕ್ರಮದ ಪಟ್ಟಿ. R.-meeting ಕುದುರೆಯ ಜೂಜಿನ ಗೊತ್ತುಪಾಡು. **Rácecourse** ಕುದುರೆಯ ಜೂಜಿನ ಜಾಡು; ವೈಹಾಳಿ ಪಥ. **Rácehorse** ಜೂಜಿಗಾಗಿ ಸಾಕಿದ, ಇಟ್ಟುಕೊಂಡಿರುವ, —ಕುದುರೆ: ಜೂಜಿನ ಕುದುರೆ]. (ಕ್ರಿ.) (—ಒಡನೆ) ವೇಗದಲ್ಲಿ ಸ್ಪರ್ಧಿಸು (*With* ಉಪ. ದೊಡನೆ). ಕುದುರೆಯ ಜೂಜಿನಲ್ಲಿ ಆಸಕ್ತನಾಗು [A racing man. The racing world ಕುದುರೆಯ ಜೂಜಿನ ವೃತ್ತಿ(ಯವರು)]. ಪೂರ್ಣ ವೇಗದಲ್ಲಿ ಓಡು; (ಹಡಗಿನ ಚಾಲಕ ಚಕ್ರ, ಹುಟ್ಟುಗಾಲ, ಮೊ. ಗಳ ವಿಷಯದಲ್ಲಿ: ನೀರಿನಿಂದ ಹೊರಬಿದ್ದು ನಿರೋಧ ಕಡಮೆಯಾದ ಕಾರಣ) ರಭಸದಿಂದ ಸುತ್ತು. (—ಒಡನೆ) ಪಂದ್ಯ ಓಡು; ವೇಗದಲ್ಲಿ (ಒಬ್ಬನನ್ನು) ಮೀರಿಸಲು ಪ್ರಯತ್ನಿಸು. (ಕುದುರೆ, ಮೊ. ನ್ನು) ಜೂಜೋಡಿಸು (Raced his bicycle against a motor-car). (ವ್ಯಕ್ತಿಯನ್ನು, ವಸ್ತುವನ್ನು) ಪೂರ್ಣ ವೇಗದಿಂದ ಹೋಗುವಂತೆ ಮಾಡು (Raced the Bill through the House ಮಸೂದೆಯನ್ನು ಶಾಸನ ಸಭೆಯಲ್ಲಿ ಅತಿವೇಗದಿಂದ ದಾಟಿಸಿದರು). (ಆಸ್ತಿ, ಐಶ್ವರ್ಯ, ಮೊ. ನ್ನು) ಕುದುರೆಯ ಜೂಜಿನಲ್ಲಿ ಲಕ್ಷ್ಯವಿಲ್ಲದೆ ಕಳೆದುಕೊ (*Away* ಉಪ. ದೊಡನೆ). **Rácer** (ನಾ.) (ಕ್ರಿಯಾರ್ಥಗಳಲ್ಲಿ); ಜೂಜಿನ —ಕುದುರೆ, ದೋಣಿ, ಬೈಸಿಕಲ್ಲು, ಮೊ. ವು.

Race[2] ರೇಸ್ (ನಾ.) ಕುಲ; ವಂಶ; ಬುಡಕಟ್ಟು; (ಒಬ್ಬನ) ಸಂತತಿ (*Of* ಉಪ. ದೊಡನೆ); ಗೋತ್ರ; ಮನೆತನ; ಬಣ; ಜನಾಂಗ. ಪ್ರತ್ಯೇಕವಾದ ಒಂದು ಬುಡಕಟ್ಟು; ಮಾನವ ಕುಲ (The Caucasian, Mongolian, etc., r.). ಪ್ರಾಣಿ, ಸಸ್ಯ, —ಜಾತಿ, ವರ್ಗ; ತಳಿ; (ಜೀವಿಗಳ) ದೊಡ್ಡ ವಿಭಾಗ, ವರ್ಗ (The human, feathered, four-footed, finny, etc., r.). ಸಂತತಿ; ಕುಲ; ರಕ್ತ ಸಂಬಂಧ (Of noble, Oriental, etc., r. Separate in language & r.). (ಯಾವುದಾದರೂ ಸಮಾನ ಲಕ್ಷಣಗಳುಳ್ಳ ವ್ಯಕ್ತಿಗಳು, ಮೊ. ರ) ವರ್ಗ (The r. of poets ಕವಿಕುಲ). **Rácial** ರೇಷ್ಯಲ್, ರೇಷಲ್ (ಗು.) ಕುಲದ, ವಂಶದ; —ವಿಷಯವಾದ; —ದಿಂದ ಉಂಟಾದ. ಜಾತಿಯ. **Rácially** (ಕ್ರಿ. ವಿ.)

Race[3] ರೇಸ್ (ನಾ.) (ಶುಂಠಿಯ) ಬೇರು.

Racéme ರಸೀಮ್ (ಸ. ವಿ.) (ಮಧ್ಯದ ಕಾವಿನ ಉದ್ದಕ್ಕೂ ಸಮಾನಾಂತರದಲ್ಲಿ ಒಂದೇ ಅಳತೆಯ ಸಣ್ಣ ತೊಟ್ಟುಗಳಿಂದ ಸೇರಿಕೊಂಡಿರುವ ಬಿಡಿಹೂವುಗಳುಳ್ಳ) ಹೂಗೊಂಚಲು. **Rácemose** ರ್‍ಯಾಸಿಮೋಸ್ (ಗು.) (ಸ. ವಿ., ಅಂ. ರ. ಶಾ.: ಸಂಯುಕ್ತ ಗ್ರಂಥಿಗಳ ವಿಷಯದಲ್ಲಿ)

Rácer. **Race**[1] ನೋಡಿ.

Ráchis ರೇಕಿಸ್, **Rha-** [ನಾ.; ಬ. ವ. -ides ರೇ(ರ್‍ಯಾ)ಕಿಡೀಜ್] ಹತ್ತಿರ ಹತ್ತಿರ ಹೂವಿನ ಕಾವುಗಳನ್ನುಳ್ಳ ಹುಲ್ಲು, ಮೊ. ಗಳ ಕಾಂಡ. ಸಂಯುಕ್ತ ಪತ್ರದ ನಡು ಕಾಂಡ. (ಅಂ. ರ. ಶಾ.) ಬೆನ್ನುಮೂಳೆ, ಬೆನ್ನುಹುರಿ [**Rachi(o)-** (ಸ. ಪೂ. ಪ.)]. ಗರಿಯ ಕಾಂಡ (ಮು., ಅಡ್ಡ ಪತ್ರಗಳಿರುವ ಭಾಗ)

Rachítis ರ್‍ಯಕೈಟಿಸ್ (ನಾ.) = Rickets (ಎಂಬುದರ ಪಾಂಡಿತ್ಯ ರೂಪ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rack[1] ರ್ಯಾಕ್ (ನಾ., ಕ್ರಿ. ಅಕ.) ೧. ಗಾಳಿಗೆ ಚೆಲ್ಲಾಪಿಲ್ಲಿಯಾದ ಮೋಡ(ದ ಗುಂಪು); ಚೆದರು ಮೋಡ(ಗಳು). (ಕ್ರಿ.) (ಮೋಡದ ವಿಷಯದಲ್ಲಿ) ಗಾಳಿಗೆ ಹೊಡೆದುಕೊಂಡುಹೋಗು. ೨. ನಾಶ; ಧ್ವಂಸ; ಹಾಳು (ನಾ., Go to r. & ruin)

Rack[2] ರ್ಯಾಕ್ (ನಾ., ಕ್ರಿ.) ಮೇವು ಇಡುವುದಕ್ಕೆ ಮಾಡಿರುವ ಮರದ ಅಥವಾ ಲೋಹದ ಕಂಬಿಗಳ ಚೌಕಟ್ಟು: ಮೇವು ಚೌಕಟ್ಟು; ಗೋಡೆಗೆ. ಸಾಮಾನಿಡುವ (ಅಡ್ಡಪಟ್ಟಿಗಳ, ಗೂಟಗಳ ಅಥವಾ ಗೂಡುಗಳ) ಚೌಕಟ್ಟು; ಪತ್ತಿಗೆ; ಬಡು (Plate, hat, pipe, etc., -r.). ಹಲ್ಲು ಚಕ್ರಕ್ಕೆ ಅಥವಾ ತಿರುಪು ಸುತ್ತಿಗೆ ಹೊಂದಿಕೆಯಾಗುವಂತೆ ತಕ್ಕ ಹಲ್ಲುಗಳ ನ್ನಾಗಲಿ ಕಚ್ಚುಗಳನ್ನಾಗಲಿ ಉಳ್ಳ ಸರಳು ಅಥವಾ (ರೈಲು)ಕಂಬಿ; ಹಲ್ಲುಕಂಬಿ [R.-railway (ಕಡಿದಾದ ಮಾರ್ಗದಲ್ಲಿ ಬಂಡಿಗಳು ಹಿಂದಕ್ಕೆ ಸರಿಯದಂತೆ) ರೈಲು ಹಾದಿಯ ಸಾಧಾರಣವಾದ ಎರಡು ಕಂಬಿಗಳ ನಡುವೆ ಹಲ್ಲುಕಂಬಿಯೊಂದನ್ನು ಹಾಕಿರುವ ರೈಲುಮಾರ್ಗ: ಹಲ್ಲುಕಂಬಿಯ ರೈಲು ಮಾರ್ಗ. R.-wheel = Cog-wheel]. (ಕ್ರಿ.) (ಕುದುರೆಯ ಅಥವಾ ದನಗಳ ರಾತ್ರಿಯ ಮೇವಿಗಾಗಿ) ಮೇವು ಚೌಕಟ್ಟಿಗೆ ಹುಲ್ಲು ತುಂಬು (*Up* ಉಪ. ಜೊಡನೆ) (R. up horse ಹೀಗೆ ತುಂಬಿ ಕುದುರೆಗೆ ಮೇವು ಒದಗಿಸು). (ಕುದುರೆಯನ್ನು) ತಿಂಡಿ ಚೌಕಟ್ಟಿನ ಬಳಿ ಕಟ್ಟು (*Up* ಉಪ. ಜೊಡನೆ); ತಿಂಡಿ ಚೌಕಟ್ಟಿನಲ್ಲಿ ಇಡು.

Rack[3] ರ್ಯಾಕ್ (ಕ್ರಿ. ಸಕ., ನಾ.) (ಮು., ಚಿತ್ರಹಿಂಸೆಗಾಗಿ ನಿರ್ಮಿಸಿದ ಯಂತ್ರ ಸಲಕರಣೆಗಳಿಂದ) (ಒಬ್ಬನ) ಕೀಲುಗಳನ್ನು ಹಿಗ್ಗಲಿಸು. (ರೋಗ, ಶಾರೀರಕ ಅಥವಾ ಮಾನಸಿಕ ಯಾತನೆ—ಇವುಗಳ ವಿಷಯದಲ್ಲಿ) ಚಿತ್ರ ಹಿಂಸೆ ಕೊಡು (A racking headache. Racked with pain). ವಿಪರೀತವಾಗಿ ಕುಲುಕಿಸು, ಅಳ್ಳಾಡಿಸು; ಬಲವಾಗಿ ಎಳೆದು ನೋವು ಮಾಡು; ಬಹಳ ಕಷ್ಟಕೊಡು (Cough that seemed to r. his whole body. R. one's brains for something to say, a plan). ಸಾಧ್ಯವಾದಷ್ಟು ಅತ್ಯಂತ ಹೆಚ್ಚು ಮೊತ್ತವನ್ನು (ಕಂದಾಯವನ್ನು) ಸೆಳೆ; ಬಹಳ ಹೆಚ್ಚು ಕಂದಾಯ ಹಾಕಿ (ರೈತರನ್ನು) ಹಿಂಸಿಸು; ಅತಿಯಾಗಿ ಬೆಳೆಯಿಟ್ಟು (ಜಮೀನನ್ನು) ನಿಸ್ಸಾರ ಮಾಡು. [R.-rent (ನಾ., ಕ್ರಿ. ಸಕ.) ಜಮೀನಿನ ಪೂರ್ತ ಬೆಲೆಗೆ (ಸರಿಸುಮಾರು) ಸಮನಾದ ಅತಿ ದುಬಾರಿ ಕಂದಾಯ. (ಕ್ರಿ.) (ಜಮೀನಿಗೆ) ಇಂಥ ದುಬಾರಿ ಕಂದಾಯ ಹಾಕು, —ಹಾಕಿ ಅದನ್ನು ರೈತ ನಿಂದ ಸೆಳೆ. R.-renter ಅತಿ ದುಬಾರಿ ಕಂದಾಯ ಕೊಡುವ ರೈತ, —ವಸೂಲು ಮಾಡುವ ಜಮೀನುದಾರ]. (ನಾ.) ಚಿತ್ರಹಿಂಸೆ ಕೊಡಲು ಉಪಯೋಗಿಸುವ ಒಂದು ಸಲಕರಣೆ [On the r. ಕೀಲೆಳೆತಕ್ಕೆ ಸಿಕ್ಕಿ, ಚಿತ್ರಹಿಂಸೆಗೊಳಗಾಗಿ (ವ್ಯಥೆಗೊಳಗಾದವನ ಅಥವಾ ಬಹಳ ಕ್ಲೇಶಕ್ಕೆ ಸಿಕ್ಕಿದವನ ವಿಷಯದಲ್ಲಿ ರೂಪ. ಸಹ)]

Rack[4] ರ್ಯಾಕ್ (ನಾ.) = Arrack (ಮು., R. Punch)

Rack[5] ರ್ಯಾಕ್ (ನಾ., ಕ್ರಿ. ಅಕ.) ಕುದುರೆಯ ಒಂದು ವೇಗದ ನಡಗೆ (ಈ ನಡಗೆಯಲ್ಲಿ ಕುದುರೆ ಒಂದು ಪಕ್ಕದ ತನ್ನ ಎರಡು ಕಾಲುಗಳನ್ನೂ ಬಹುಮಟ್ಟಿಗೆ ಒಂದೇ ಸಲ ಎತ್ತುತ್ತದೆ). (ಕ್ರಿ.) (ಕುದುರೆ) ಈ ಗತಿಯಲ್ಲಿ ಹೋಗು.

Rack[6] ರ್ಯಾಕ್ (ಕ್ರಿ. ಸಕ.) (ದ್ರಾಕ್ಷಾಮದ್ಯ, ಮೊ. ನ್ನು) ಗಸಿಯಿಂದ— ಪ್ರತ್ಯೇಕಿಸಿ ಬಸಿ, ಎಳೆದುಬಿಡು (*Off* ಉಪ. ಜೊಡನೆ)

Rácket[1], **Rácquet** ರ್ಯಾಕೆ(ಕಿ)ಟ್ (ನಾ.) (ಕುರಿ, ಕುದುರೆ, ಮೊ. ಪ್ರಾಣಿಗಳಿಂದ ತೆಗೆದ ಕರುಳಿನ ದಾರವನ್ನು ಬಿಗಿದುಮಾಡಿದ) ಜಾಲರಿ ದಾಂಡು (ಟೆನಿಸ್, ರ್ಯಾಕೆಟ್ಸ್, ಮೊ. ಆಟಗಳಲ್ಲಿ ಉಪಯೋಗಿಸುವುದು). (ಬ. ವ. ದಲ್ಲಿ) ನಾಲ್ಕು ಸುತ್ತು ಗೋಡೆಯ ಆವರಣದಲ್ಲಿ ಇಬ್ಬರು ಅಥವಾ ನಾಲ್ವರು ಜಾಲರಿ ದಾಂಡುಗಳಿಂದ ಆಡುವ ಒಂದು ಚೆಂಡಾಟ: ರ್ಯಾಕೆಟ್ಸ್ ಆಟ. ಘನ ಹಿಮದಲ್ಲಿ ನಡೆಯಲು ಉಪ ಯೋಗಿಸುವ 'ರ್ಯಾಕೆಟ್' ಆಕಾರದ ಒಂದು ತೆರದ ಮೋಜ, ಜೋಡು. R.-ball (ಕಾರ್ಕ್ ಚೆಂಡು ಮತ್ತು ದಾರದಿಂದ ಮಾಡಿದ, ಮೇಲೆ ಮೇಕೆಯ ಮರಿಯ ತೊಗಲನ್ನು ಹಾಕಿ ಹೊಲಿದ) ಸಣ್ಣ ಗಟ್ಟಿ ಚೆಂಡು. R.-press ಜಾಲರಿ ದಾಂಡುಗಳನ್ನು ಬಗಿಯಾಗಿಯೂ ಆಕಾರ ಕೆಡ ದಂತೆಯೂ ಒತ್ತಿಡುವ ಒತ್ತಿಗೆ: ಜಾಲರಿ ದಾಂಡು ಒತ್ತಿಗೆ. R.-tail ಈ ದಾಂಡಿನಾಕಾರದ ತೋಕೆಯುಳ್ಳ ಹಲವು ಸಣ್ಣ ಪಕ್ಷಿ ಜಾತಿ.

Racket[2] ರ್ಯಾಕೆಟ್ (ನಾ., ಕ್ರಿ. ಅಕ.) ಗದ್ದಲ; ಗಲಭೆ; ಗಲಾಟೆ; ಕೋಲಾಹಲ; ಗೋಷ್ಠಿಯ (ಕ್ರೀಡಾ) ಸಂಭ್ರಮ; ಉದ್ರೇಕ; ವಿನೋದ ಕ್ರೀಡೆ; ವಿಷಯಲೋಲುಪತೆ. (ಅಸಂ.) ಉಪಾಯ; ತಂತ್ರ; ಹೂಟ; ಮೋಸ ವಿದ್ಯೆ. ಉಗ್ರ, ವಿಷಮ, —ಪರೀಕ್ಷೆ; ಇದರ ಅನುಭವ (Stand the r. ಕಷ್ಟಪರೀಕ್ಷೆಗಳನ್ನು ದಾಟಿ ಜಯಶಾಲಿಯಾಗಿ ಬರು. ಪರಿಣಾಮಕ್ಕೆ ಎದೆಗೊಟ್ಟು ನಿಲ್ಲು). (ಅಮೆ. ಸಂ., ಬಳ. ಮಾ.) ನ್ಯಾಯ ವಿರುದ್ಧ ಮಾರ್ಗಗಳಿಂದ (ಅನೇಕ ವೇಳೆ ಬಲಾತ್ಕಾರದಿಂದಲೂ ಸಹ) ಹಣ ಪಡೆಯುವುದಕ್ಕಾಗಿ ಅಥವಾ ಇತರ ಉದ್ದೇಶ ಸಾಧನೆ ಗಾಗಿ ಹಾಕಿದ ಹಂಚಿಕೆ, ಯೋಜನೆ [**Racketeéring** (ನಾ.); **Racketeér** (ನಾ.)]. (ಕ್ರಿ.) ವಿಲಾಸ ಜೀವನ ಮಾಡು (ಅನೇಕ ವೇಳೆ *about* ಉಪ. ಜೊಡನೆ); ಗಲಾಟೆ ಮಾಡುತ್ತ ಓಡಾಡು. **Ráckety** (ಗು.)

Raconteur (F) ರ್ಯಾಕಾಂಟರ್ (ನಾ., ಬ. ವ. -euse, —ಟಸ್) (ಸ್ವಾರಸ್ಯವಾಗಿ) ಕಥೆಗಳನ್ನು ಹೇಳುವವನು; ಐತಿಹ್ಯ ಹೇಳುವವನು (ನಾ., Good, skilful, etc., r.)

Rac(c)oón ರ(ರ್ಯಾ)ಕೂನ್ (ನಾ.) ಅಮೆರಿಕದ ರಾತ್ರಿ ಸಂಚಾರದ ಒಂದು ಮಾಂಸಾಹಾರಿ ಪ್ರಾಣಿ (ನರೆಗಂದು ಬಣ್ಣ, ತುಪ್ಪುಳು ಮೈ, ಪೊದೆಬಾಲ, ಮೊನೆ ಮುಸುಡಿ—ಇವನ್ನುಳ್ಳದ್ದು)

Rácy ರೇಸಿ (ಗು.) ತನ್ನ ಜಾತಿ ಲಕ್ಷಣವನ್ನು ಹೆಚ್ಚಾಗಿ ಪಡೆದಿರುವ; (ರುಚಿ, ಮೊ. ಗಳಲ್ಲಿ) ಸ್ವಂತ ವೈಲಕ್ಷಣ್ಯವನ್ನು ತೋರಿಸುವ (ಮು., R. flavour). ನೈಜ ವೀರ್ಯವುಳ್ಳ; ಸಾಮಾನ್ಯಕ್ಕೆ ಇಳಿಯದ; ಸರ್ವ ಸಾಮಾನ್ಯವಾಗಿ ಸಪ್ಪೆಯಾಗದ; ಹುಟ್ಟುಗುಣದ ಜೋರಿನ; ಮೂಲ ಲಕ್ಷಣಗಳನ್ನುಳಿಸಿಕೊಂಡಿರುವ (ಮು., R. of the soil ಸಹಜ ಸರಳತೆಯ; ಹಮ್ಮುಳ್ಳ; ಚಾಕಚಕ್ಯದ; ಉಲ್ಲಾಸದ; ಕಾರವುಳ್ಳ). **Rácily** (ಕ್ರಿ. ವಿ.); **Ráciness** (ನಾ.)

Rad ರ್ಯಾಡ್ (ನಾ.). **Radical** (ನಾ.) ನೋಡಿ.

Ráddle ರ್ಯಾಡ್‌ಲ್ (ನಾ., ಕ್ರಿ. ಸಕ.) ಕೆಂಗಾವಿ (ಬಣ್ಣ). (ಕ್ರಿ.) —ಹಚ್ಚು, ತೊಡೆ; —ಬಣ್ಣದ ಹುಡಿಯನ್ನು ಬಳಿ(ದುಕೊ)

Rádial ರೇಡಿಯಲ್ (ಗು., ನಾ.) ಕಿರಣಗಳ(ಲ್ಲಿಯ); ಕಿರಣಗಳಂತೆ ಅಥವಾ ತ್ರಿಜ್ಯಗಳಂತೆ ರಚಿಸಿದ; ತ್ರಿಜ್ಯದ ಸ್ಥಾನ, ಮುಖ, —ಉಳ್ಳ; ತ್ರಿಜ್ಯದ ದಿಕ್ಕಿನಲ್ಲಿರುವ [R. axle (ರೈಲು ರಸ್ತೆಯ ಅಥವಾ ಟ್ರ್ಯಾಂ ರಸ್ತೆಯ ಒಂದು ಬಾಗಿನಲ್ಲಿ ಆ ಬಂಡಿ ಹೋಗುವಾಗ) ಬಾಗಿನ ವಕ್ರ ರೇಖೆಯ ತ್ರಿಜ್ಯವಾಗಿ ಆಳವಡುವ ಆ ಬಂಡಿಯ ಚಕ್ರದ ಇರಚಿ ಅಥವಾ ಅಕ್ಷ]. ಆರೆಕಾಲುಗಳು, ಕೇಂದ್ರಾಪಸರಣದ ರೇಖೆಗಳು, —ಉಳ್ಳ [**Rádialized** (ಗು.); **Radializátion** (ನಾ.)]. ಒಂದು ಕೇಂದ್ರದಿಂದ ಅಪಸರಣ ಹೊಂದಿ ದಿಕ್ಕು ದಿಕ್ಕಿಗೆ (ಹರಿಯುವ ರೇಖೆಗಳಲ್ಲಿ) ನಡೆಯುವ ಅಥವಾ ಚಲಿಸುವ; ತ್ರಿಜ್ಯ ಮಾರ್ಗಗಾಮಿಯಾದ. ರೇಡಿಯಮ್ ಧಾತು ವಿನ. ಮುಂದೋಳಿನ 'ರೇಡಿಯಸ್' ಮೂಳೆಯ (R. artery, vein, nerve). (ನಾ.) = R. nerve or artery. **Rádially** (ಕ್ರಿ. ವಿ.)

Rádian ರೇಡಿಯನ್ (ನಾ.) ತ್ರಿಜ್ಯದಷ್ಟೇ ಲಂಬವುಳ್ಳ ವೃತ್ತಪರಿಧಿಯ ಒಂದು ಚಾಪದ ಕೊನೆಗಳನ್ನು ಸೇರಿಸುವ ಎರಡು ತ್ರಿಜ್ಯಗಳು ವೃತ್ತ ಕೇಂದ್ರದಲ್ಲಿ ಮಾಡುವ ಕೋನ: ತ್ರಿಜ್ಯ ಕೋನ; 'ರೇಡಿಯನ್'.

Rádiant ರೇಡಿಯಂಟ್ (ಗು., ನಾ.) (ಬೆಳಕಿನ) ಕಿರಣಗಳನ್ನು ಹೊರ ಸೂಸುವ; ಬೆಳಗುವ; ಹೊಳೆಯುವ; ಪ್ರಜ್ವಲಿಸುವ; (ಕಣ್ಣಿನ ಅಥವಾ ದೃಷ್ಟಿಯ ವಿಷಯದಲ್ಲಿ) ಸಂತೋಷ, ಭರವಸೆ, ಪ್ರೇಮ, —ಬೀರು ತ್ತಿರುವ; (ಬೆಳಕಿನ ವಿಷಯದಲ್ಲಿ) ಕಿರಣ ರೂಪದಲ್ಲಿ—ಹೊರದುತ್ತಿರುವ, ಹರಿಯುತ್ತಿರುವ; (ಸೌಂದರ್ಯದ ವಿಷಯದಲ್ಲಿ) ಅತ್ಯುಜ್ಜ್ವಲವಾದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇದೀಪ್ಯಮಾನವಾದ [**Rádiance** (ನಾ.); **Rádiancy** (ನಾ.) (ಏರ. ಪ್ರ.); **Rádiantly** (ಕ್ರಿ. ವಿ.)]. ಕೇಂದ್ರಾಪಗಾಮಿಯಾದ, ವಿಕಿರಣದ (R. heat). (ಸ. ವಿ., ಮೊ.) ತ್ರಿಜ್ಯಗಳಂತೆ ಹರಡಿರುವ. [R. point ಕಿರಣಗಳು ಅಥವಾ ತ್ರಿಜ್ಯಗಳು ಹೊರಡುವ ಬಿಂದು, ಸ್ಥಾನ. (ಖ. ವಿ.) ಉಲ್ಕಾವರ್ಷದ ಅವಭಾಸ (ತೋರಿಕೆಯ) ನಾಭಿ]. (ನಾ.) ಬೆಳಕು ಅಥವಾ ಉಷ್ಣ ವಿಕಿರಣವಾಗುವ ಬಿಂದು ಅಥವಾ ವಸ್ತು. (ಖ. ವಿ.) = R. point. **Rádiate** —ಯೆಟ್ (ಗು.), —ಯೇಟ್ (ಕ್ರಿ.) ತ್ರಿಜ್ಯಾಕಾರದ ಕಿರಣಗಳು ಅಥವಾ ಭಾಗಗಳು ಉಳ್ಳ; ಕೇಂದ್ರದಿಂದ ನಾನಾ ದಿಕ್ಕುಗಳಿಗೆ ಹರಿಯುವ ಕಿರಣಗಳುಳ್ಳ. (ಕ್ರಿ.) (ಬೆಳಕಿನ ಅಥವಾ ಉಷ್ಣದ) ಕಿರಣಗಳನ್ನು ಹೊರಸೂಸು, ವಿಕಿರಣ ಮಾಡು; (ಕಿರಣಗಳು) ವಿಕಿರಣವಾಗು; ವಿದ್ಯುತ್ಕಾಂತ ತರಂಗಗಳನ್ನು ಸಾಗಿಸು. (ಬೆಳಕು ಅಥವಾ ಶಾಖ, ಜೀವಕಳೆ, ಪ್ರೇಮ, ಸಂತೋಷ, ಮೊ.) ಕೇಂದ್ರದಿಂದ ಹೊರಸೂಸು, ಹರಡು, ಪ್ರಸರಿಸು. **Rádiately** (ಕ್ರಿ. ವಿ.); **Radiátion** (ನಾ.); **Rádiative** (ಗು.); **Rádiator** (ನಾ.) (ಕ್ರಿಯಾರ್ಥಗಳಲ್ಲಿ). (ಕಾದ ಗಾಳಿಯಿಂದಾಗಲಿ ಇತರ ವಿಧದಿಂದಾಗಲಿ ತಾನು ಕಾಯಿಸಲ್ಪಟ್ಟು, ಒಂದು ಕೊಠಡಿ, ಮೊ. ಕ್ಕೆ) ಶಾಖ ಪ್ರಸಾರ ಮಾಡುವ ಸಣ್ಣ ಕೋಷ್ಠ; ಶಾಖ ಪ್ರಸಾರಕ. (ಮೋಟಾರು ಬಂಡಿಯಲ್ಲಿ) ಎಂಜಿನ್ನನ್ನು ತಂಪಿಸುವ ಸಲಕರಣೆ.

Rádical ರ‍್ಯಾಡಿಕಲ್ (ಗು., ನಾ.) ಬೇರಿನ; ಮೂಲದ; ಮೂಲ ಸ್ವರೂಪದ (A r. error ಮೂಲದಲ್ಲೇ ಆದ ದೋಷ). ಅಡಿಪಾಯದ; ಅವಶ್ಯವಾದ [R. humour, heat, etc. (ಮಧ್ಯಯುಗದ ತ. ಶಾ. ಮತ್ತು ಈಗಿನ ಹಾಸ್ಯ ಪ್ರ.) ಜೀವನಾಧಾರವಾದ ಮೂಲದ್ರವ, ಶಾಖ, ಮೊ. ವು]. ಆಧಾರ(ಭೂತ)ವಾದ; ಮೊತ್ತಮೊದಲಿನ (The r. idea or principles of a system); ತಳಹದಿಯನ್ನು ಮುಟ್ಟುವ; ಬುಡ(ಮಟ್ಟ)ದ ವರೆಗೂ ಹೋಗುವ; ಆಮೂಲಾಗ್ರವಾದ (R. change, cure, reform). (ರಾಜ್ಯನೀತಿಜ್ಞರ ವಿಷಯದಲ್ಲಿ) ಆಮೂಲಾಗ್ರ ಸುಧಾರಣೆಯ ಪಕ್ಷದ(ವನು); ಉದಾರ ಪಕ್ಷದಲ್ಲಿ ತೀವ್ರ ಗಾಮಿ ಪಂಗಡದ(ವನು) [= Rad (ಬಳ. ಮಾ.) (ನಾ.)]. (ಕಾಯಿದೆ, ಕಾನೂನು, ಮೊ. ಗಳ ವಿಷಯದಲ್ಲಿ) ತೀವ್ರ ಸುಧಾರಣಾ ಪಕ್ಷದವರು ಮುಂದಿಟ್ಟ; ತೀವ್ರ ಸುಧಾರಣಾ ತತ್ತ್ವಗಳಿಗೆ ಅನುಸಾರವಾದ; ತೀವ್ರ ಸುಧಾರಣೆಯ [**Rádicalism** (ನಾ.); **Rádicalize** (ಕ್ರಿ.); **Radicalizátion** (ನಾ.)]. (ಗಣಿತ) (ಒಂದು ಸಂಖ್ಯೆಯ ಅಥವಾ ಮೊತ್ತದ) ಮೂಲದ, ಮೂಲಕ್ಕೆ ಸಂಬಂಧಿಸಿದ [R. sign $\sqrt{}$, $\sqrt[3]{}$, $\sqrt[4]{}$, etc. (—ಈ ಚಿಹ್ನೆಗಳ ಮುಂದಿರುವ ಸಂಖ್ಯೆಯ) ವರ್ಗಮೂಲ, ಘನಮೂಲ, ಚತುರ್ಘಾತಮೂಲ, ಮೊ. (ನ್ನು ಕಂಡುಹಿಡಿಯಬೇಕೆಂದು ಸೂಚಿಸುವ ಚಿಹ್ನೆ)]. (ಭಾಷಾ ಶಾಸ್ತ್ರ) ಪದಗಳ ಮೂಲ ರೂಪದ [R. word ಮೂಲಪದ (ಇದು ಪ್ರಕೃತಿ, ಇದು ಪ್ರತ್ಯಯ ಎಂದು ವಿಂಗಡಿಸಲಾಗದ್ದು); ಪ್ರಕೃತಿ ರೂಪ]. (ಸಂ.) ಸ್ವರಮೇಳದ ಮೂಲಕ್ಕೆ ಸೇರಿದ. (ಸ. ವಿ.) ಬೇರಿನ; ಬೇರಿನಿಂದ ಅಥವಾ ಅದರ ಸಮೀಪದಲ್ಲಿಯ ಪ್ರಧಾನ ಕಾಂಡದಿಂದ ನೇರವಾಗಿ ಹೊರಡುವ. (ನಾ.) (ಭಾಷಾ ಶಾಸ್ತ್ರ) = R. word. ಮೂಲ ತತ್ತ್ವ. (ಗಣಿತ) ಮತ್ತೊಂದರ ಮೂಲವಾಗಿ ಇರುವ ಅಥವಾ ನಿರೂಪಿಸಿದ ಸಂಖ್ಯೆ, ಮೊತ್ತ; ಮೂಲ. (ರ. ವಿ.) ಒಂದು ಸಂಯುಕ್ತದ ಮೂಲವಾಗಿದ್ದು ಆ ಸಂಯುಕ್ತದ ಸಾಮಾನ್ಯ ರಾಸಾಯನಿಕ ವ್ಯತ್ಯಾಸಗಳಲ್ಲಿ ಬದಲಾವಣೆ ಹೊಂದದೆ ಉಳಿದಿರುವ, ಮೂಲಧಾತು ಅಥವಾ ಪರಮಾಣು ಅಥವಾ ಪರಮಾಣು ಪುಂಜ: ಮೂಲ ಘಟಕ. **Rádically** (ಕ್ರಿ. ವಿ.); **Rádicle** ರ‍್ಯಾಡಿಕ್‌ಲ್ (ನಾ.) (ಸ. ವಿ.) ಸಸ್ಯದಲ್ಲಿ ಮುಂದೆ ತಾಯಿ ಬೇರಾಗಿ ಬೆಳೆಯುವ ಭ್ರೂಣ ಭಾಗ; ಬೇರಿನ ಮೂಲ; ಜಲ್ಲಿ ಬೇರು. (ಅಂ. ರ. ಶಾ.) ನರದ ಅಥವಾ ಅಭಿಧಮನಿಯ ಬೇರಿನಂಥ ಕವಲುಗಳು. (ರ. ವಿ.) ಮೂಲ ಘಟಕ (= Radical). **Radícular** (ಗು.)

Rádicle. **Radical** ನೋಡಿ.

Rádio ರೇಡಿಯೋ (ನಾ., ಕ್ರಿ.) ಸಾಗುತಂತಿಗಳಿಲ್ಲದ—ದೂರಲೇಖಕ, ದೂರವಾಣಿ; ನಿಸ್ತಂತು ಪ್ರಸಾರಣ; ಆಕಾಶವಾಣಿ; ಬಾನುಲಿ; ರೇಡಿಯೋ. X-rays ಎಂಬ ವಿದ್ಯುತ್ಕಿರಣಗಳು, ಹರ್ಟ್ಸ್‌ನ ವಿದ್ಯುತ್ ಕಿರಣಗಳು ಮತ್ತು ಇವುಗಳ ಪ್ರಯೋಗ. (ಕ್ರಿ.) ನಿಸ್ತಂತು ಪ್ರಸಾರಣ ಮಾಡು. 'ಎಕ್ಸ್‌ರೇ' ಛಾಯಾಚಿತ್ರ ತೆಗೆ. ರೇಡಿಯಮ್ಮಿನಿಂದ ಚಿಕಿತ್ಸೆ ಮಾಡು.

Radio- ರೇಡಿಯೊ— (ಸ. ಪೂ. ಪ.) (ಮುಂಗೈಯಲ್ಲಿಯ) ರೇಡಿಯಸ್ ಮೂಳೆಯ—; ಕಿರಣಗಳ—, ವಿಕಿರಣದ—; ರೇಡಿಯಮ್ಮಿನ— **-cárpal** ರೇಡಿಯಸ್ ಮೂಳೆಯ ಮತ್ತು ಮಣಿಕಟ್ಟಿನ. **-áctive** ವಿಕಿರಣದ ಮೂಲಕ ವಿದ್ಯುನ್ಮಾಪಕ, ಮೊ. ಸಲಕರಣೆಗಳ ಮೇಲೆ ಪ್ರಭಾವ ಬೀರುವ ಶಕ್ತಿಯುಳ್ಳ; (ರೇಡಿಯಂ, ಯುರೇನಿಯಂ, ಪೊಲೋನಿಯಂ, ಮೊ. ಗಳ ವಿಷಯದಲ್ಲಿ) ಅಪಾರದರ್ಶಕ ವಸ್ತುಗಳಲ್ಲಿ ತೂರಿಕೊಂಡುಹೋಗಿ ವಿದ್ಯುತ್ ಪರಿಣಾಮವನ್ನುಂಟುಮಾಡುವ ಅದೃಶ್ಯ ಕಿರಣಗಳನ್ನು ಸೂಸುವ ಶಕ್ತಿಯುಳ್ಳ; ವಿದ್ಯುತ್ ವಿಕಿರಣ ಕ್ರಿಯಾಶಕ್ತ. **-actívity** ವಿದ್ಯುತ್ ವಿಕಿರಣ ಕ್ರಿಯಾಶಕ್ತಿ. **Radiogoniómeter** ಹಡಗುಗಳು ಮತ್ತು ಆಕಾಶ ಯಾನಗಳು ಕಳುಹಿಸುವ ನಿಸ್ತಂತು ಸಂಜ್ಞೆಗಳಿಂದ ಆ ಯಾನಗಳ ದಿಕ್ಕನ್ನು ಕಂಡುಹಿಡಿಯುವ ಸಲಕರಣೆ. **Radiogram** = Radio-telegram. **-graph** (ನಾ., ಕ್ರಿ.) ಬಿಸಿಲಿನ ತೀವ್ರತೆಯನ್ನೂ ಕಾಲಾವಧಿಯನ್ನೂ ರೇಖಿಸಿಡುವ ಸಲಕರಣೆ. 'ಎಕ್ಸ್‌ರೇ' ಛಾಯಾಬಿಂಬ. (ಕ್ರಿ.) (—ರ) 'ಎಕ್ಸ್‌ರೇ' ಛಾಯಾಬಿಂಬ ತೆಗೆ. **Radiógrapher** ರೇಡಿಯಾಗ್ರಫರ್ (ನಾ.); **Radiógraphy** (ನಾ.); **Radiográphic** (— ಯೊಗ್ರ್ಯಾಫಿ—) (ಗು.); **Radiográphically** (ಕ್ರಿ. ವಿ.); **Radiólogy** (—ಯಾಲೊಜಿ) (ನಾ.) 'ಎಕ್ಸ್‌ರೇ' ಕಿರಣಗಳು, ವಿದ್ಯುತ್ ವಿಕಿರಣ ಕ್ರಿಯಾಶಕ್ತಿ, ರೇಡಿಯೋ ಚಿಕಿತ್ಸೆ—ಇವೇ ಮೊ. ಗಳ ವಿಚಾರವನ್ನು ಕುರಿತ ಶಾಸ್ತ್ರ; ರೇಡಿಯೊ ಶಾಸ್ತ್ರ. **-logist** (ನಾ.); **logical** —ಯೊಲಾಜಿ— (ಗು.). **-meter** (—ಯಾಮಿಟರ್) ವಿಕಿರಣಶಕ್ತಿಯು ಚಲನಶಕ್ತಿಯಾಗಿ ಪರಿವರ್ತನೆ ಹೊಂದುವುದನ್ನು ನಿದರ್ಶಿಸುವ ಸಲಕರಣೆ: ವಿಕಿರಣಶಕ್ತಿ ಮಾಪಕ. **-phony** (— ಯಾ —) ವಿಕಿರಣ ಪ್ರಕಾಶದಿಂದಾಗಲಿ ಉಷ್ಣದಿಂದಾಗಲಿ ಧ್ವನ್ಯುತ್ಪಾದನೆ. **-scopy** ರಾಂಟ್ಜೆನ್ ಕಿರಣಗಳಿಂದ, ಎಕ್ಸ್‌ರೇ, —ಪರೀಕ್ಷೆ (ಮಾಡುವುದು); **-télegram** ನಿಸ್ತಂತು ದೂರಲೇಖನ, —ವಾರ್ತೆ. **R.-therapy** 'ಎಕ್ಸ್‌ರೇ' ಚಿಕಿತ್ಸೆ (ಮಾಡುವುದು); ರೇಡಿಯೋ ಚಿಕಿತ್ಸೆ. **R.-therapeútic(s)**

Rádish ರ‍್ಯಾಡಿಷ್ (ನಾ.) ಮೂಲಂಗಿ (ಗಡ್ಡೆ, ಗಿಡ)

Rádium ರೇಡಿಯಂ (ನಾ.) Pitch-blende ಎಂಬ ಖನಿಜದಲ್ಲಿ ದೊರೆಯುವ, ಬೇರಿಯಂ ಧಾತುವನ್ನು ಹೋಲುವ, ಗ್ಯೂರಿಗಳು ಕಂಡುಹಿಡಿದ ಒಂದು ಲೋಹಧಾತು: 'ರೇಡಿಯಂ' (ಅದರ ವಿಕಿರಣ ಕ್ರಿಯಾಶಕ್ತಿಯಿಂದ ಆ ಹೆಸರನ್ನು ಕೊಟ್ಟಿದೆ). R.-therapy ರೇಡಿಯಮ್ಮಿನಿಂದ ಅಥವಾ ಅದರ ಉತ್ಪನ್ನಗಳಿಂದ ಮಾಡುವ ರೋಗಚಿಕಿತ್ಸೆ: ರೇಡಿಯಂ ಚಿಕಿತ್ಸೆ.

Rádius ರೇಡಿಯಸ್ (ನಾ.; ಬ. ವ. -ii —ಯೈ) ಮನುಷ್ಯನ ಮುಂಗೈಯಲ್ಲಿ ಹೆಚ್ಚು ದಪ್ಪವಾಗಿಯೂ ಗಿಡ್ಡನಾಗಿಯೂ ಇರುವ ಒಂದು ಮೂಳೆ: 'ರೇಡಿಯಸ್' (ಮೂಳೆ). ಪ್ರಾಣಿಯ ಮುಂಗಾಲಿನಲ್ಲಿ ಅಥವಾ ಹಕ್ಕಿಯ ರೆಕ್ಕೆಯಲ್ಲಿ ಇದಕ್ಕೆ ಜವಾಬಾಗಿರುವ ಮೂಳೆ. (ಗಣಿತ) ಕೇಂದ್ರದಿಂದ ವೃತ್ತರೇಖೆಯ ಅಥವಾ ಗೋಳದ ಪರಿಧಿಗೆ ಎಳೆದ ಸರಳರೇಖೆ; ವ್ಯಾಸಾರ್ಧ; ತ್ರಿಜ್ಯ; ಒಂದು ವಕ್ರರೇಖೆಯ ನಾಭಿಯಿಂದ ಆ ರೇಖೆಯ ಯಾವ ಬಿಂದುವಿಗಾದರೂ ಎಳೆದ ರೇಖೆ: ನಾಭಿ ರೇಖೆ [R. vector ಒಂದು ಗೊತ್ತಾದ ಬಿಂದುವಿನಿಂದ ಒಂದು ವಕ್ರರೇಖೆಗೆ ಎಳೆದ ಚಲರೇಖೆ (ಮು., ಖ. ವಿ.: ಸೂರ್ಯನಿಂದ ಅಥವಾ ಒಂದು ಗ್ರಹದಿಂದ ಉಪಗ್ರಹದ ಪಥಕ್ಕೆ ಎಳೆದ ರೇಖೆ)]. ವೃತ್ತ ರೇಖೆಯ ತ್ರಿಜ್ಯಗಳಂತೆ ಒಂದು ಬಿಂದುವಿನಿಂದ ನಾನಾ ದಿಕ್ಕುಗಳಿಗೆ ಹೋಗುವ ರೇಖೆಗಳಲ್ಲೊಂದು: ತ್ರಿಜ್ಯ ರೇಖೆ; ಈ ತೆರದ ವಸ್ತು (ಉದಾ., ಆರೆಕಾಲು). ಒಂದು ಕೇಂದ್ರದಿಂದ ಗೊತ್ತಾದ ತ್ರಿಜ್ಯದ ವೃತ್ತಕ್ಷೇತ್ರ; ಸುತ್ತುಮುತ್ತು (Knows everyone within a r. of 20 miles). (ಸ. ವಿ.) (ಸೇವಂತಿಗೆಯಂಥ) ಸಂಕೀರ್ಣ ಪುಷ್ಪದ ಹೊರ ಅಂಚು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rádix ರೇಡಿಕ್ಸ್ [ನಾ., ಬ. ವ. Radices ರೇ(ರ್‍ಯಾ)ಡಿಸೀಸ್, Radixes ರೇಡಿಕ್ಸೆಸ್] ಸಂಖ್ಯಾನ ಪದ್ಧತಿಯಲ್ಲಿ ಆಧಾರವಾಗಿಟ್ಟುಕೊಳ್ಳುವ ಅನಿಯಂತ್ರಿತ ಸಂಖ್ಯೆ ಅಥವಾ ಸಂಕೇತ; ಆಧಾರ ಸಂಖ್ಯೆ (Ten is the r. of decimal numeration and of common logarithms ದಶಮಾನ ಗಣನಾ ಪದ್ಧತಿಯಲ್ಲಿಯೂ ಸಾಮಾನ್ಯ ಲಾಗರಿತಮ್ಮಿನಲ್ಲಿಯೂ ೧೦ ಆಧಾರ ಸಂಖ್ಯೆಯಾಗಿದೆ). (—ರ) ಮೂಲ, ಆದಿ (*Of* ಉಪ. ದೊಡನೆ)

Rádon ರೇಡಾನ್ (ನಾ.) ರೇಡಿಯಂ(ಧಾತು) ತಾನಾಗಿ ಶಿಥಿಲತೆ ಹೊಂದುವಲ್ಲಿ ಉತ್ಪನ್ನವಾಗುವ, ವಿದ್ಯುತ್ ವಿಕಿರಣಶಕ್ತಿಯುಳ್ಳ, ಅನಿಲ ರೂಪದ ಒಂದು ಮೂಲಧಾತು: 'ರೇಡಾನ್' [ಇದರ ಹಿಂದಿನ ಹೆಸರು Niton (ನೈಟಾನ್)]

Raff ರ್‍ಯಾಫ್ (ನಾ.) = Riff-raff.

Raffaelésque ರ್‍ಯಾಫೇಎಲೆಸ್ಕ್ (ಗು.) = Raphaelesque.

Ráffia ರ್‍ಯಾಫಿಯ (ನಾ.) ಒಂದು ಬಗೆಯ ತಾಳೆಯ ಮರ; ಇದರ ಗರಿಗಳಿಂದ ತೆಗೆದ ನಾರು (ಗಿಡಗಳನ್ನು ಕಟ್ಟುವುದಕ್ಕೂ ಟೊಪ್ಪಿಗೆ, ಬುಟ್ಟಿ, ಚಾಪೆ, ಮೊ. ನ್ನು ಮಾಡುವುದಕ್ಕೂ ಉಪಯೋಗ)

Ráffish ರ್‍ಯಾಫಿಷ್ (ಗು.) ಕೆಟ್ಟ ಹೆಸರು ಹೊತ್ತ; ಅಪಯಶಸ್ಸಿನ; ದುರ್ನಡತೆಯಿಂದ ಕುಂದಿಹೋಗುತ್ತಿರುವಂತೆ ಕಾಣುವ. **Ráffishly** (ಕ್ರಿ. ವಿ.); **Ráffishness** (ನಾ.)

Ráffle[1] ರ್‍ಯಾಫ್‌ಲ್ (ನಾ., ಕ್ರಿ.) ಒಂದು ವಸ್ತುವಿನ ಮಾರಾಟಕ್ಕಾಗಿ ಹಲವರಿಂದ ಸ್ವಲ್ಪ ಮೊತ್ತದ ಪ್ರವೇಶಧನ ಪಡೆದು, ಚೀಟಿ ಹಾಕುವುದರ (ಲಾಟರಿಯ) ಮೂಲಕ ಬರುವ ಅವರಲ್ಲೊಬ್ಬರಿಗೆ ಆ ವಸ್ತುವನ್ನು ಕೊಡುವುದು: ಅದೃಷ್ಟದ ಚೀಟಿಯ ಮಾರಾಟ; ಸೋಡ್ತಿ. (ಕ್ರಿ.) ಇಂಥ ಮಾರಾಟದಲ್ಲಿ ಒಬ್ಬನಾಗಿ ನಿಲ್ಲು; ಇಂಥ ಅದೃಷ್ಟವ್ಯಾಪಾರದ ಮೂಲಕ ಮಾರು.

Ráffle[2] ರ್‍ಯಾಫ್‌ಲ್ (ನಾ.) ಕಸ; ಬಿಸಾಟದ್ದು; ಚೂರುಪಾರು; ಉಪಯೋಗವಿಲ್ಲದ ಹರುಕು ಮುರುಕು ಸಾಮಾನು; ಮುರುಕಲುಗುಪ್ಪೆ.

Raft ರಾಫ್ಟ್ (ನಾ., ಕ್ರಿ.) ಸಾಗಣೆಗಾಗಿ ನೀರಿನಲ್ಲಿ ತೇಲಿಕೊಂಡು ಹೋಗುವಂತೆ ಒಟ್ಟಾಗಿ ಸೇರಿಸಿ ಕಟ್ಟಿದ ಮರದ ದಿಮ್ಮಿಗಳು, ಪೀಪಾಯಿಗಳು, ಮೊ. ಗಳ ಒಟ್ಟಿಲು: ತೇಲೊಟ್ಟಿಲು; (ಮು., ಅನಿರೀಕ್ಷಿತವಾದ ಅವಸರ ಸಂದರ್ಭಗಳಲ್ಲಿ, ದೋಣಿ ದೊರೆಯದಾಗ) ಜನರನ್ನಾಗಲಿ ಸಾಮಾನನ್ನಾಗಲಿ ನೀರಿನಮೇಲೆ ದಾಟಿಸಲು ಉಪಯೋಗಿಸುವ ಮರದ ದಿಮ್ಮಿಗಳ ಅಥವಾ ಇತರ ಪದಾರ್ಥಗಳ ಚಪ್ಪಟೆಯಾದ ತೇಲು ಚೌಕಟ್ಟು: ತೆಪ್ಪ; ಕಟ್ಟುಮರ (Raftsman ತೆಪ್ಪ ನಡಸುವವನು). ಒಟ್ಟುಗೂಡಿ ತೇಲುತ್ತಿರುವ ಮರಗಳ ತಂಡ, ನೀರ್ಗಲ್ಲ ರಾಶಿ, ಮೊ. ವು. (ಕ್ರಿ.) ತೆಪ್ಪದಮೇಲೆ (ಹೇಗೊ ಹಾಗೆ) ಸಾಗಿಸು; ತೆಪ್ಪವಾಗಿ ಕಟ್ಟು; ತೆಪ್ಪದಲ್ಲಿ (ನೀರನ್ನು) ದಾಟು; ತೆಪ್ಪ ನಡಸು. **Ráfter**[1] (ನಾ.) ನಾಟಾಗಳನ್ನು ನೀರಿನಲ್ಲಿ ಸಾಗಿಸುವವನು.

Ráfter[2] ರಾಫ್ಟರ್ (ನಾ., ಕ್ರಿ. ಸಕ.) ಹೆಂಚು, ಮೊ. ನ್ನು ಹೊದಿಸುವ ಇಳುಕಲು ಚಾವಣಿಯ ಚೌಕಟ್ಟಿನಲ್ಲಿ ಹಾಕಿರುವ ದೂಲ; ತೀರು. (ಕ್ರಿ.) (ನಾ., ಭೂ. ಕೃ. ನಲ್ಲಿ) ತೊಲೆ, ತೀರು, —ಹಾಕು, ಒದಗಿಸು. ನೇಗಿಲಸಾಲಿನಷ್ಟೇ ಅಗಲವುಳ್ಳ ಪಕ್ಕದ ಉಳದ ನೆಲದಮೇಲೆ, ನೇಗಿಲಸಾಲಿನ ಮಣ್ಣು ತಿರುವಿಬೀಳುವಂತೆ (ಜಮೀನನ್ನು) ಉಳು; ನೇಗಿಲಸಾಲು ಹೊಡೆ; ಅರ್ಧ ಉಳು.

Rag[1] ರ್‍ಯಾಗ್ (ನಾ.) ಚಿಂದಿಬಟ್ಟೆ (ಉಪಯೋಗದಿಂದ ಸವೆದು ಎಳೆ ಬಿಟ್ಟುಕೊಂಡದ್ದು, ಹರಿದುಹೋದದ್ದು); ಜೂಲುಬಟ್ಟೆ (In rags ಹರಿದು ಚಿಂದಿಯಾಗಿ). (ಬ. ವ. ದಲ್ಲಿ) ಚಿಂದಿ ಚಿಂದಿಯಾದ ಉಡುಪು (In rags ಜೀರ್ಣವಾದ ಹರುಕು ಉಡುಪಿನಲ್ಲಿ). (ನಾ., ನಿಷೇಧಾರ್ಥದಲ್ಲಿ) ಒಂದು ಚೂರು ಬಟ್ಟೆ ಅಥವಾ ಚೂರು ದೋಣಿಯ ಪಟ (Not a r. to cover him. Spread every r. of sail). (ಸಮೂಹವಾಚಕ) (ಕಾಗದದ ತಯಾರಿಕೆಗೂ, ಮೆತ್ತೆ ತುಂಬು, ಮೊ. ಕ್ಕೂ ಉಪಯೋಗಿಸುವ) ಚಿಂದಿಗಳು. (ಉಳಿದ) ಆಕಾರಗೆಟ್ಟ ತುಂಡು, ಚೂರು; ಹರುಕು ಮುರುಕು (Flying rags of cloud. Cooked to rags ಹಿಸಿದುಹೋಗುವಂತೆ ಬೇಯಿಸಿದ. Not a r. of evidence). (ತಿರಸ್ಕಾರವಾಗಿ) ಬಾವುಟ, ಕೈಚೌಕ, ಪರದೆ, ವೃತ್ತಪತ್ರಿಕೆ, ಮೊ. ವು. (ವಿರ. ಪ್ರ.) ಕೋಳು ಕೋಚು. **R.-baby** ಚಿಂದಿಗಳಿಂದ ಮಾಡಿದ ಬೊಂಬೆ. **R.-bag** ಚಿಂದಿಗಳನ್ನು ಹಾಕಿಟ್ಟಿರುವ ಚೀಲ. **R.-bolt** (ನಾ.) ಒಳಕ್ಕೆ ಹೊಡೆದಮೇಲೆ ಬಿಗಿಯಾಗಿರುವಂತೆ ಚಾಚು ಗಳಿಟ್ಟಿರುವ ಮೊಳೆ. (ಕ್ರಿ.) ಇಂಥ ಮೊಳೆಗಳಿಂದ ಒಟ್ಟುಗೂಡಿಸು. **R. paper** ಚಿಂದಿಗಳಿಂದ ಮಾಡಿದ ಕಾಗದ. **Ragtag, Ragtag & bobtail** ಕೀಳು ಮಟ್ಟದ ಜನ; ಕಾಕಪೋಕರು. **R.-wheel** ತನ್ನ ಮೇಲೆ ಹರಿಯುವ ಸರಪಣಿಯ ಕೊಂಡಿಗಳಲ್ಲಿ ಕಚ್ಚಿಕೊಳ್ಳುವಂಥ ಹಲ್ಲುಗಳುಳ್ಳ ಚಕ್ರ. **Ragwort** ಹಳದಿ ಹೂವು ಬಿಡುವ, ಕೋಚು ಕೋಚು ಅಂಚಿನ ಎಲೆಗಳುಳ್ಳ, ಒಂದು ಸಸ್ಯ(ಜಾತಿ). **Rágged** ರ್‍ಯಾಗೆಡ್ (ಗು.) ಒರಟಾದ; ಒರಟು ಕೂದಲಿನ; ಕುಚ್ಚು ಕುಚ್ಚಾಗಿ ತೊಂಗುತ್ತಿರುವ; ಹರುಕು ಮುರುಕಾದ, ಕೋಚು ಕೋಚಾದ,—ಅಂಚು ಅಥವಾ ಹೊರ ಮೈಯುಳ್ಳ; ಒರಟಾದ, ಕಡಿದಾದ, —ಉಬ್ಬುಗಳು ತುಂಬಿರುವ; ಒಂದು ಮಟ್ಟವಿಲ್ಲದ. ತಪ್ಪುಗೂಡಿದ; ದೋಷಯುಕ್ತ; ಊನವಾಗಿರುವ; ಅಸಮಗ್ರ; ಒಪ್ಪ ಓರಣಗಳಿಲ್ಲದ; ನಯಮಾಡಿಲ್ಲದ; ನುಣುಪಿಲ್ಲದ; ಒಡ್ಡೊಡ್ಡಾದ; ಸಮತೆಯಿಲ್ಲದ [R. time (ದೋಣಿ ನಡಸುವಲ್ಲಿ) ಅಸಮವಾಗಿ ಹುಟ್ಟುಹಾಕುವುದು]. ಜೀರ್ಣವಾಗಿ ಹರಿದು ಹೋಗಿರುವ; ಜೂಲು ಜೂಲಾದ; ಚಿಂದಿ ಚಿಂದಿಯಾದ. (ಮನುಷ್ಯರ ವಿಷಯದಲ್ಲಿ) ಹರುಕಲು ಬಟ್ಟೆಯ. **R. robin** ಕಡುಗೆಂಪು ಬಣ್ಣದ ಹೂವು ಬಿಡುವ ಒಂದು ಕಾಡುಸಸ್ಯ. **R. school** ಬಡಮಕ್ಕಳ ಧರ್ಮ ಪಾಠಶಾಲೆ. **Rággedly** (ಕ್ರಿ. ವಿ.); **Rággedness** (ನಾ.)

Rag[2] ರ್‍ಯಾಗ್ (ನಾ.) ಚಾವಣಿಗೆ ಉಪಯೋಗಿಸುವ ದೊಡ್ಡ ಒರಟು ಸ್ಲೇಟು(ಕಲ್ಲು). ದಪ್ಪ ಚಪ್ಪಡಿಗಳಾಗೇಳುವ ಕೆಲವು ಬಗೆಯ ಗಟ್ಟಿ ಚಾವಣಿ ಕಲ್ಲು [ಮು., Coral-r. (Coral ನೋಡಿ)]

Rag[3] ರ್‍ಯಾಗ್ (ಕ್ರಿ., ನಾ.) (ಅಸಂ.) ಬಯ್ಯು; ಜರೆ; ಧೀಮಾರಿಮಾಡು; ಪೀಡಿಸು; ಗೋಳುಹೊಯ್ದುಕೊ; ಒರಟೊರಟಾಗಿ ಕುಚೇಷ್ಟೆಮಾಡು; (ಒಬ್ಬನ ಕೊಠಡಿ, ಮೊ. ನ್ನು) ಕುಚೇಷ್ಟೆಗಾಗಿ ಅವ್ಯವಸ್ಥೆಮಾಡು; ಕುಚೇಷ್ಟೆಯಿಂದ, ಪುಂಡಾಟದಿಂದ, ಕಾಡು. ಗಲಭೆ ಮಾಡು, ಗೊಂದಲವೆಬ್ಬಿಸು. (ನಾ.) ಗಲಭೆ; ಗೊಂದಲ; ದೊಂಬಿ.

Rágamuffin ರ್‍ಯಾಗಮಫಿನ್ (ನಾ.) ಹರುಕು, ಚಿಂದಿ, ತೊಟ್ಟಿರುವ ಹೊಲಸು ಮನುಷ್ಯ. **Ragamúffinly** (ಗು.)

Rage ರೇಜ್ (ನಾ., ಕ್ರಿ. ಅಕ.) ವಿಪರೀತ ಕೋಪ(ದ ಕೆರಳು); ಕೋಪೋದ್ರೇಕ; ಯಾವುದಾದರೂ ಪ್ರಕೃತಿ ಶಕ್ತಿಯ ಅಥವಾ ರಸ ಭಾವದ ಉದ್ರೇಕ (The r. of the wind. The r. of faction). ತೀವ್ರಾಭಿಲಾಷೆ; ಅತ್ಯಾಸಕ್ತಿ (*For* ಉಪ. ದೊಡನೆ) (Has a r. for, *or* for collecting, old stamps). ವಿಶೇಷವಾಗಿ ಹರಡಿರುವ ತಾತ್ಕಾಲಿಕೋತ್ಸಾಹಕ್ಕೆ ಕಾರಣವಾದದ್ದು; ಜನ ಮರುಳು, ಜನ ಮೆಚ್ಚು; ಉರುಬು (The open-air cure is the r. of the day). ಕವಿಯ, ಪ್ರವಾದಿಯ, ವೀರನ, —ಆವೇಶ. (ಕ್ರಿ.) ಹುಚ್ಚು ಹುಚ್ಚಾಗಿ, ರೋಷಾವೇಶದಿಂದ,—ಕೂಗಾಡು (*At, against* ಉಪ. ದೊಡನೆ ಸಹ). ಕೋಪೋದ್ರಿಕ್ತನಾಗು; ಕಿಡಿ ಕಿಡಿಯಾಗು; (ಗಾಳಿ, ಸಮುದ್ರ, ಭಾವೋದ್ರೇಕ, ಮನೋಭಾವ, ಯುದ್ಧ, ನೋವು, ರೋಗ, ಮೊ. ಗಳ ವಿಷಯದಲ್ಲಿ) ಅತಿರಭಸವಾಗು, ಪರಮಾವಧಿಗೆ ಬರು, ಕೆರಳು, ಅತ್ಯುಗ್ರವಾಗು, ಪ್ರಬಲವಾಗಿರು. (ಸ್ವಾರ್ಥಕ; ಮು., ಬಿರುಗಾಳಿ ಮಳೆ, ಮೊ. ರ ವಿಷಯದಲ್ಲಿ) R. itself out ಉರುಬುಡುಗಿ ಶಾಂತವಾಗು; ಉದ್ರೇಕವಿಳಿ. **Rágingly** (ಕ್ರಿ. ವಿ.)

Raid ರೇಡ್ (ನಾ., ಕ್ರಿ.) (ಮು., ರಾವುತರ) ಸೈನಿಕ ದಾಳಿ; (ಶತ್ರುಗಳಿಗೆ ಮುನ್ ಸೂಚನೆ ಕೊಡದೆ) ಥಟ್ಟನೆ ವೇಗವಾಗಿ ಮಾಡುವ ಲೂಟಿಯ ದಾಳಿ; ದುರಾಕ್ರಮಣ. (ಸಂಶಯಾಸ್ಪದವಾದ ಸ್ಥಳಗಳಮೇಲೆ ಅಥವಾ ನಿಷಿದ್ಧ ವಸ್ತುಗಳ ಸಂಗ್ರಹಣದಮೇಲೆ) ಪೋಲೀಸಿನವರು, ಮೊ. ರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಡಸುವ ಥಟ್ಟನೆಯ ದಾಳಿ. (ಕ್ರಿ.) ದಾಳಿ ಮಾಡು (*Into*, ಮೊ. ಉಪ. ದೊಡನೆ); (ಮನುಷ್ಯ, ಸ್ಥಳ, ದನ—ಇವುಗಳಮೇಲೆ) ದಾಳಿ ನಡಸು, ದುರಾಕ್ರಮಣಮಾಡು. **Raider** (ನಾ.)

Rail[1] ರೇಲ್ (ನಾ., ಕ್ರಿ.) ಮರದ ಅಥವಾ ಕಬ್ಬಿಣದ ಕಂಬಿ(ಸಾಲು); ಹಳಿ (ವಸ್ತುಗಳನ್ನು ತೂಗಹಾಕುವುದು, ಕಟಕಟೆಯ ಕಂಬಗಳ ಮೇಲಿನ ಹಿಡಿಗಂಬಿಯಾಗಿರುವುದು, ಬೇಲಿಯ ಭಾಗವಾಗಿರುವುದು, ಒಂದಕ್ಕೆ ತಾಕದಂತೆ ಅಥವಾ ಯಾರಾದರೂ ಮಗುಚಿಕೊಳ್ಳದಂತೆ ರಕ್ಷಣೆಯಾಗಿರುವುದು—ಇವೇ ಮೊ. ಕ್ಕೆ ಉಪಯೋಗ). ಪುಟೀಪು ಕದದಲ್ಲಿಯ (ಯಾವುದಾದರೂ) ಅಡ್ಡಪಟ್ಟಿ (Stile[2] ನೋಡಿ). (ರೈಲು ಮಾರ್ಗದಲ್ಲಿ: ಭೂಮಿಯ ಮೇಲೆ ಉದ್ದಕ್ಕೂ ಹಾಸಿರುವ) ಒಂದು ಪಕ್ಕದ ರೈಲು ಕಂಬಿ(ಗಳ ಸಾಲು) [Off the rails (ರೂಪ.) ಮಾರ್ಗ ಬಿಟ್ಟು, ನಡೆ ತಪ್ಪಿ. By r. ರೈಲು(ಮಾರ್ಗದ) ಮೂಲಕ]. (ಬ. ವ. ದಲ್ಲಿ; ಪತ್ರವ್ಯಾಪಾರ ಸಂಸ್ಥೆಯ ಪ್ರ.) ರೈಲ್ವೆಯ ಪಾಲುಪತ್ರಗಳು. R.-chair ರೈಲುಕಂಬಿ ಭದ್ರವಾಗಿ ಕುಳಿತುಕೊಳ್ಳುವಂತೆ ಅಡಿದಿಮ್ಮಿಗೆ ಸೇರಿಸುವ ಕಬ್ಬಿಣದ ಆಧಾರ, ಹಿಡಿಕೆ; ರೈಲುಗಂಬಿಯ ಪೀಠ. R.-head ಹಾಕುತ್ತಿರುವ ರೈಲುದಾರಿ ಮುಟ್ಟಿರುವ ದೂರದ ಕೊನೆ. (ಸೈನ್ಯ) ಸರಬರಾಯಿ ಸಾಮಾನಿನ ಸಾಗಣೆ ರಸ್ತೆ ಪ್ರಾರಂಭವಾಗುವ ರೈಲುಮಾರ್ಗದ ಕೊನೆ. R.-motor ಸ್ವಯಂಚಲ ರೈಲು ಬಂಡಿ (ವಿಶೇಷಣವಾಗಿ ಸಹ ಪ್ರ.). Railroad ರೈಲುಮಾರ್ಗ; ರೈಲುರಸ್ತೆ. Railway (ಭಾರ ತುಂಬಿದ ಕುದುರೆ ಗಾಡಿಗಳ ಸಾಗಣೆಗಾಗಿ ಅಥವಾ ಪ್ರಯಾಣಿಕರನ್ನೂ ಸಾಮಾನುಗಳನ್ನೂ ಹೊತ್ತು ಸ್ವಯಂಚಲ ಎಂಜಿನು ಎಳೆಯುವ ಬಂಡಿ ಸಾಲುಗಳ ಓಡಾಟಕ್ಕಾಗಿ, ಕಬ್ಬಿಣದ ಅಥವಾ ಉಕ್ಕಿನ ಕಂಬಿಗಳನ್ನು ಹಾಸಿ ಮಾಡಿರುವ) ಜೋಡುಕಂಬಿಗಳ ರಸ್ತೆ; ರೈಲುರಸ್ತೆ; ರೈಲುಮಾರ್ಗ; ಒಂದೇ ಸಂಸ್ಥೆ ನಡಸುವ ಅಥವಾ ಒಂದೇ ಸಂಸ್ಥೆಗೆ ಸೇರಿದ ಇಂಥ ರೈಲು ಮಾರ್ಗಗಳು (Railway line); ಅವುಗಳನ್ನು ನಡಸಲು ಬೇಕಾದ ಪೂರ್ಣ ವ್ಯವಸ್ಥೆ ಮತ್ತು ಸಿಬ್ಬಂದಿ: ರೈಲ್ವೆ ಸಂಸ್ಥೆ; [(ವಿಶೇಷಣವಾಗಿ ಸಹ) Railway accident. Railway act (ರೈಲ್ವೆ ಸಂಸ್ಥೆಗಳ ಕರ್ತವ್ಯಗಳನ್ನೂ ಹಕ್ಕುಗಳನ್ನೂ ನಿಯತ ಮಾಡುವ) ರೈಲ್ವೆ ಕಾನೂನು. Railway bill ಹೊಸ ರೈಲು ದಾರಿ ಹಾಕಲು ಶಾಸನ ಸಭೆಯಲ್ಲಿ ತಂದ ಮಸೂದೆ: ರೈಲು ಹಾದಿಯ ಮಸೂದೆ. Railway bridge, carriage, company, contractor, director, engine, journey, shares. At railway speed ಬಹು ವೇಗನೆ; ರೈಲೋಟದಲ್ಲಿ. Railway rug, station, stock, system, train, travelling, tunnel. Railway (ಕ್ರಿ. ಅಕ.) ರೈಲು (ಮೂಲಕ) ಪ್ರಯಾಣ ಮಾಡು. **Railwayless** (ಗು.)]. (ಕ್ರಿ.) (ಒಂದು ಸ್ಥಳಕ್ಕೆ) ಅಡ್ಡ ಕಂಬಿ, ಅಡ್ಡಪಟ್ಟಿ, —ಹಾಕು, ಹಾಕಿ ಸುತ್ತುಗಟ್ಟು (*In*, *off* ಉಪ. ದೊಡನೆ). (ಬೆಂಡು, ಮೊ. ಕ್ಕೆ) ಅಡ್ಡಗಂಬಿ ಹಾಕು. ಕಂಬಿಗಳಿಂದ ರೈಲುದಾರಿ ಮಾಡು. ರೈಲು ಮೂಲಕ ಪ್ರಯಾಣಮಾಡು, (ಸರಕನ್ನು) ಸಾಗಿಸು. **Railless** (ಗು.); **Railing**[1] (ನಾ.) ಅಡ್ಡಕಂಬಿ, ಕಟಕಟೆ, ಕಟಾಂಜನ (ಹಾಕುವುದು)

Rail[2] ರೆಯ್ಲ್ (ನಾ.) ಹಲವು ಬಗೆಯ ಹಕ್ಕಿ (ಮು., Landr., Water-r.)

Rail[3] ರೆಯ್ಲ್ (ಕ್ರಿ. ಅಕ.) ಬಯ್ಯು, ನಿಂದಿಸು, ದೂಷಣೆ ಮಾಡು, ತೆಗಳು [ಸಾ., *at* ಅಥವಾ *against*, (ಅಥವಾ ಪ್ರಾಚೀ. ಪ್ರ.) *upon* ಉಪ. ದೊಡನೆ]. **Railer** (ನಾ.); **Railing**[2] (ನಾ., ಗು.); **Railingly** (ಕ್ರಿ. ವಿ.); **Raillery** ರೆಯ್ಲರಿ (ನಾ.) ಸ್ನೇಹದ ಪರಿಹಾಸ; ಹಿತ ಹಾಸ್ಯ. ಕುಚೋದ್ಯ, ಲೇವಡಿ, ಗೇಲಿ (ಮಾಡುವುದು)

Raiment ರೇಮೆಂಟ್ (ನಾ.) (ಕಾವ್ಯ ಮತ್ತು ಅಲಂ.) ಬಟ್ಟೆಬರೆ; ಉಡುಪು; ಉಡಿಗೆ ತೊಡಿಗೆ.

Rain ರೆಯ್ನ್ (ನಾ., ಕ್ರಿ.) ಮಳೆ (ಬೀಳುವುದು) (R. or shine ಮಳೆ ಬಂದರೂ ಬಾರದಿದ್ದರೂ; ಮಳೆಯೋ ಬಿಸಿಲೋ). [(ಬ. ವ. ದಲ್ಲಿ) ಮು., the rains (ಉಷ್ಣದೇಶಗಳಲ್ಲಿ) ಮಳೆಗಾಲ. (ನಾವೆ) the rains ಅಟ್ಲಾಂಟಿಕ್ ಸಾಗರದ ಮಳೆಯ ಪ್ರದೇಶ (೪-೧೦° ಉ. ಅಕ್ಷಾಂಶದ ಪ್ರದೇಶ)]. (ದ್ರವದ, ಕಣಗಳ ಅಥವಾ ಘನವಸ್ತುಗಳ) (ಮಳೆಯಂಥ) ಸುರಿತ; ಸುರಿಮಳೆ; ವರ್ಷ [(ರೂಪ.) A r. of congratulations]. [R.-bird ಹಲವು ಬಗೆಯ ಹಕ್ಕಿ; ಮು., ಹಸುರು ಮರಕುಟಿಗ (=Green Woodpecker). R.-box ಮಳೆಯ ಸದ್ದನ್ನು ಅನುಕರಿಸುವ ಒಂದು ರಂಗ ಸಲಕರಣೆ. R.-coat ನೀರಿಳಿಯದ ಬಟ್ಟೆಯ ಅಂಗಿ; ಮಳೆಯಂಗಿ. R.-doctor ಯಕ್ಷಿಣಿಯಿಂದ ಮಳೆ ಬರಿಸುವವನು; ಮಳೆಯ ಮಂತ್ರವಾದಿ. Raindrop ಮಳೆಯ—ಹನಿ, ತೊಟ್ಟು. Rainfall ಮಳೆ(ಯ ಸುರಿತ); (ಗೊತ್ತಾದ ಪ್ರದೇಶದಲ್ಲಿ ಗೊತ್ತಾದ ಕಾಲದಲ್ಲಿ) ಬಿದ್ದ, ಬೀಳುವ, ಮಳೆಯ ಮೊತ್ತ (ಸಾ., ವರ್ಷಕ್ಕೆ ಇಷ್ಟು ಅಂಗುಲಗಳೆಂದು ಅಳತೆ). R.-gauge ವೃಷ್ಟಿಮಾಪಕ. R.-glass ವಾಯುಭಾರಮಾಪಕ (=Barometer). R.-water ಮಳೆನೀರು (ಮಳೆಯಿಂದ ಶೇಖರಿಸಿದ್ದು; ಬಾವಿ, ಮೊ. ಗಳದಲ್ಲ). R.-worm (ಸಾಮಾನ್ಯವಾದ) ಮಣ್ಣುಹುಳು, ಎರೆಹುಳು]. (ಕ್ರಿ.) ಮಳೆ—ಸುರಿ, ಬೀಳು, ಹೊಯ್ಯಿ, ಕರೆ. It rains ಮಳೆ ಬೀಳುತ್ತದೆ, ಬರುತ್ತದೆ, ಸುರಿಯುತ್ತದೆ. It rained blood ರಕ್ತದ ಮಳೆ ಸುರಿಯಿತು. It rained frogs, invitations, tracts, etc. —ಮೊ. ಗಳ ಸುರಿಮಳೆಯಾಯಿತು. It rains cats & dogs (Cat ನೋಡಿ). It never rains but it pours (Pour ನೋಡಿ). It rains in (ಮನೆ, ಮೊ. ರ) ಒಳಕ್ಕೆ ಮಳೆ (ನೀರು) ಇಳಿಯುತ್ತದೆ; (ಮನೆ, ಮೊ.) (ಮಳೆಗೆ) ಸೋರುತ್ತದೆ. It has rained itself out (ಸುರಿದು ಸಾಕಾಗಿ) ಮಳೆ ನಿಂತಿತು, ನಿಂತಿದೆ. God, the sky, rains ದೇವರು ಮಳೆ ಸುರಿಸುತ್ತಾನೆ; ಆಕಾಶ ಮಳೆಗರೆಯುತ್ತದೆ. The clouds r.]. ವರ್ಷಿಸು; ಮಳೆಯಂತೆ ಸುರಿ(ಸು) (Flowers rained from their hands. Tears rained down her cheeks. Blows rained upon him. His eyes r. tears. R. influence. He rained benefits upon us). **Rainless** (ಗು.); **Rainproof** (ಗು.), **Raintight** (ಗು.) ನೀರಿಳಿಯದ, ಮಳೆಗೆ ತಡೆಯುವ. **Rainbow** (ನಾ.) ಬೀಳುತ್ತಿರುವ ಮಳೆಯ ಹನಿಗಳಲ್ಲಿ ಸೂರ್ಯ ಕಿರಣಗಳು ಪ್ರತಿಫಲನ, ಮೊ. ವು ಆಗಿ ಆಕಾಶದಲ್ಲಿ (ಅಥವಾ ಜಲಪಾತದಲ್ಲಿ) ರಚನೆಯಾಗುವ, ಏಳು ಬಣ್ಣಗಳ ಕಮಾನು: ಮಳೆ ಬಿಲ್ಲು; ಕಾಮನಬಿಲ್ಲು; ಇಂದ್ರಚಾಪ [Lunar r. ಚಂದ್ರಕಿರಣಗಳಿಂದ ಆಗುವ ಇಂಥ ಕಾಮನ ಬಿಲ್ಲು. Sea r. ಕಡಲ (ತುಂತುರುಗಳಲ್ಲಿ ರಚನೆಯಾಗುವ) ಕಾಮನಬಿಲ್ಲು. Secondary r. (ಮುಖ್ಯ ಕಾಮನಬಿಲ್ಲಿನ ಒಳಗಡೆ ಅಥವಾ ಹೊರಗಡೆ ವರ್ಣಕ್ರಮ ವಿಪರ್ಯಾಸವಾಗಿ ರಚನೆಯಾಗುವ) ಎರಡನೆಯ ಕಾಮನಬಿಲ್ಲು. All the colours of the r. ಹಲವು ಬಣ್ಣಗಳು; ಅನೇಕ ವರ್ಣಗಳು]. (ವಿಶೇಷಣವಾಗಿ) ಹಲವು ಬಣ್ಣದ [R. trout ಕಾಮನ ಬಿಲ್ಲಿನ ಬಣ್ಣಗಳಂತೆ ಮೈಬಣ್ಣವುಳ್ಳ, (ಕ್ಯಾಲಿಫೋರ್ನಿಯ ತೀರದ) ಒಂದು ಮೀನು(ಜಾತಿ)]. **Rainy** (ಗು.) ಮಳೆ ಹೊಯ್ಯುತ್ತಿರುವ, ಬೀಳುತ್ತಿರುವ; ಸಾ., ಹೆಚ್ಚು ಮಳೆ ಬೀಳುವ, ಹೊಯ್ಯುವ [R. weather, climate, day, month, country, etc. R. day (ರೂಪ.) (ಮು., ಹಣದ) ಬಿಕ್ಕಟ್ಟಿನ, ಕಷ್ಟದ, —ಕಾಲ; ದುರ್ದಿನ (Provide against a r. d. ಕಷ್ಟಕಾಲಕ್ಕೆ ಒದಗಿಸಿಟ್ಟುಕೊ, ಮುಂದಾಗಿ ಕೂಡಿಟ್ಟುಕೊ, ಏರ್ಪಾಟು ಮಾಡಿಕೊ). (ಮೋಡ, ಗಾಳಿ, ಮೊ. ಗಳ ವಿಷಯದಲ್ಲಿ) ಮಳೆಯ ನೀರನ್ನು ಹೊತ್ತಿರುವ, ಮಳೆ ತರುವ; ಮಳೆಯ. **Rainily** (ಕ್ರಿ. ವಿ.); **Raininess** (ನಾ.)

Raise ರೆಯ್ಸ್ (ಕ್ರಿ. ಸಕ.; ಅನೇಕ ವೇಳೆ *Up* ಉಪ. ದೊಡನೆ ಪ್ರ.) (ಮೇಲಕ್ಕೆ) ಎಬ್ಬಿಸು; ನೆಟ್ಟಗೆ ನಿಲ್ಲಿಸು; (ಅಡ್ಡರಾಗಿ, ಒಲಕೊಂಡು, —ಬಿದ್ದಿರುವುದನ್ನು) ಪುನಃ ನೆಟ್ಟಗೆ ಎತ್ತಿ ನಿಲ್ಲಿಸು. ಕೆರಳಿಸು, ಜಾಗೃತಿಗೊಳಿಸು; ಎಬ್ಬಿಸಿಡು [Raised him from his knees ಮಂಡಿಯೂರಿದ್ದವನನ್ನು ಮೇಲಕ್ಕೆಬ್ಬಿಸಿದನು, ಎಬ್ಬಿಸಿ ನಿಲ್ಲಿಸಿದನು. R. the standard of revolt ದಂಗೆ ಏಳು. Raised pastry, pie, etc.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಪಕ್ಕಗಳಲ್ಲಿ ತಚ್ಚೆಯ ಆಧಾರವಿಲ್ಲದೆ) ನೆಟ್ಟಗೆ ನಿಲ್ಲುವ ಪಿಟ್ಟಿನ ಭಕ್ಷ್ಯ, ಕಡುಬು, ಮೊ. R. one from the dead ಸತ್ತವನನ್ನು ಬದುಕಿಸು. R. the country, city (ಅವನರ ಸಂದರ್ಭದಲ್ಲಿ ಒಟ್ಟಿಗೆ ಸೇರಿ ಕಾರ್ಯ ಮಾಡುವಂತೆ, ಶತ್ರುಗಳನ್ನೆದುರಿಸುವಂತೆ) ನಾಡಿಗರನ್ನು, ಪಟ್ಟಣಿಗರನ್ನು, —ಹುರಿಗೊಳಿಸು, ಆವೇಶಗೊಳಿಸು (*Against* ಅಥವಾ *upon* ಉಪ. ದೊಡನೆ). The danger raised his spirits ಅಪಾಯ ಅವನ ಧೈರ್ಯವನ್ನು ಕೆರಳಿಸಿತು, ಹುರಿಗೊಳಿಸಿತು. R. the wind (ರೂಪ.) ಒಂದು ಉದ್ದೇಶಕ್ಕಾಗಿ ಹಣ ಹೊಂದಿಸಿಕೊ, ಒದಗಿಸಿಕೊ. R. a dust ದೂಳೆಬ್ಬಿಸು; (ರೂಪ.) ಗೊಂದಲವೆಬ್ಬಿಸು; ಸತ್ಯವನ್ನು ಮರಸು, ನಿಜಾಂಶ ಕಾಣದಂತೆ ಮಾಡು]. (ಕಟ್ಟಡ) ಕಟ್ಟು, ಎಬ್ಬಿಸು; ಸೃಷ್ಟಿಸು; ಹುಟ್ಟಿಸು; ನಿರ್ಮಿಸು; ರಚಿಸು; ಬೆಳೆ, ಬೆಳಸು; ಉತ್ಪತ್ತಿ ಮಾಡು. (ಪ್ರಾಣಿಗಳನ್ನು) ಬೆಳಸು; ಪೋಷಿಸು. (ಗಟ್ಟಿಯಾಗಿ) ಕೂಗು; ಎತ್ತು; ಕಿವಿಗೆ ಬೀಳಿಸು; ಮೊದಲು ಮಾಡು, ಪ್ರಾರಂಭಿಸು; (—ಕ್ಕೆ) ಅವಕಾಶ ಕೊಡು, ಎಡೆಗೊಡು; ಹೊರಸೆಳೆ; ಮುಂದಿಡು [R. palace ಅರಮನೆ ಕಟ್ಟು. R. large family, blister, one's own vegetables, storm, shout. R. hymn ಸ್ತೋತ್ರಗೀತ ಹಾಡು. R. controversy, prejudice, claim, demand, objection, question. A deliverer was raised up ದೇವರು ಒಬ್ಬ ರಕ್ಷಕನನ್ನು ಅವತಾರ ಮಾಡಿಸಿದನು. Raise a laugh ನಗು ಬರಿಸು; ನಗುವೆಬ್ಬಿಸು. No one raised his voice ಯಾವ ಒಬ್ಬನೂ ಮಾತನಾಡಲಿಲ್ಲ, ಉಸಿರೆತ್ತಲಿಲ್ಲ]. ಏರಿಸು; ಎತ್ತರಿಸು; ಉನ್ನತ ಸ್ಥಾನದಲ್ಲಿಡು; —ಕ್ಕೆ ತರು; ಭೂಮಿಯಿಂದ ಅಗೆದು ತೆಗೆ; ಮೇಲಕ್ಕೆತ್ತು; ಮೇಲಿನ ದರ್ಜೆಗೆ ಏರಿಸು; ಬಡತಿ ಮಾಡು; ಉನ್ನತಿ ಗೊಳಿಸು; ಹೆಚ್ಚು ಉದಾತ್ತಮಾಡು, ಘನಪಡಿಸು; ಏರುವಂತೆ ಮಾಡು; (ದನಿಯನ್ನು) ಹೆಚ್ಚಿಸು, ಎತ್ತರಿಸು; (ನಾವೆ) (ನೆಲ, ಮತ್ತೊಂದು ಹಡಗು) ಕಾಣು, ಗೋಚರವಾಗು. (—ರ ಮೊತ್ತವನ್ನು) ಹೆಚ್ಚಿಸು, ದೊಡ್ಡದು ಮಾಡು; ಮೇಲಕ್ಕೆ ತರು [R. one's hat ವಂದಿಸು. R. one's glass to (—) ಆರೋಗ್ಯವಾಗಿರಲೆಂದು ಹರಸಿ ಕುಡಿ. Thousands of tons of coal were raised ಸಾವಿರಾರು ಟನ್ನು ಕಲ್ಲಿದ್ದಲನ್ನು ಗಣಿಯಿಂದ ತೆಗೆಯಲಾಯಿತು. R. one's eyes ಮೇರೆ, ಮೇಲಕ್ಕೆ, —ನೋಡು; ದೃಷ್ಟಿ— ಎತ್ತು, ಎತ್ತರಿಸು. R. one's eyebrows ದರ್ಪದಿಂದ, ಆಶ್ಚರ್ಯದಿಂದ, —ಹುಬ್ಬೇರಿಸು, ಹುಬ್ಬೆತ್ತು. Raised him to the see of York. Trying to r. a degraded class ನಿಮ್ನ ವರ್ಗದ(ವರ) ಉದ್ಧಾರಕ್ಕಾಗಿ ಪ್ರಯತ್ನಿಸುವುದು. Undertook to r. the spirit of King Solomon ಸಾಲೊಮನ್ ದೊರೆಯ ಪ್ರೇತವನ್ನೆಬ್ಬಿಸಲು, ಪ್ರೇತವನ್ನು ತೋರಿಸಲು, ಕೈಕೊಂಡನು (Lay[3] ಹೋಲಿಸಿ). R. Cain, hell, the devil, the mischief, etc. ಗಲಾಟೆಮಾಡು; ಗೊಂದಲವೆಬ್ಬಿಸು. Their voices were raised as in anger ಕೋಪದಲ್ಲಿದ್ದಂತೆ ಅವರ ದನಿಗಳು ಏರಿದುವು, ಕೂಗಾಟ ಬಲವಾಯಿತು. R. cloth ಬಟ್ಟೆಗೆ ಜುಂಗೆಬ್ಬಿಸು. R. bread (ಉದುಗಿನಿಂದ) ರೊಟ್ಟಿ ಉಬ್ಬುವಂತೆ ಮಾಡು. R. one's reputation ಕೀರ್ತಿ ಹೆಚ್ಚಿಸು. R. colour (ಬಣ್ಣ ಹಾಕುವಲ್ಲಿ) ರಂಗು ಹೆಚ್ಚಿಸು; ಉಜ್ಜ್ವಲಮಾಡು]. (ತೆರಿಗೆ, ಬಾಡಿಗೆ, ಮೊ. ನ್ನು) ಹಾಕು, ವಿಧಿಸು, ಎತ್ತು, ವಸೂಲು ಮಾಡು, ಹೆಚ್ಚಿಸು, ಸಂಗ್ರಹಿಸು (R. tax, loan, subscription, money, army, fleet). (ಮುತ್ತಿಗೆಯನ್ನು, ತಡೆಗಟ್ಟನ್ನು) ತ್ಯಜಿಸು, ಎಬ್ಬಿಸು(ವಂತೆ ಮಾಡು), ತೆಗೆ, ತೆಗಸು. (ಭೂ. ಕೃ.; ಅಮೆ. ನಂ. ಗ್ರಾಮ್ಯ) ಶಿಕ್ಷಣ ಪಡೆದ, ವಿದ್ಯೆ ಕಲತ; ಸುಶಿಕ್ಷಿತ.

Raise (ನಾ.) (ನಂಬಳ, Poker ಎಂಬ ಇಸ್ಪೀಟಾಟದಲ್ಲಿ ಒಡ್ಡಿದ ಪಣ, Auction bridge ಎಂಬ ಇಸ್ಪೀಟಾಟದಲ್ಲಿ ಸವಾಲು, ಮೊ. ಗಳ) ಬಡತಿ, ಏರಿಕೆ, ಹೆಚ್ಚಿಗೆ.

Raisin ರೇಯ್ಸ್ಲಿನ್ (ನಾ.) ಅರೆಯೊಣಗಿಸಿದ ದ್ರಾಕ್ಷಿ; ದ್ವೀಪದ್ರಾಕ್ಷಿ.

Raison d'etre (F) ರೆಸ್ಸಾನ್ ಡೇಟ್'ರ್ (ನಾ.) ಒಂದರ ಅಸ್ತಿತ್ವಕ್ಕೆ ಮೂಲ ಕಾರಣ, ಮೂಲೋದ್ದೇಶ, ಸಮರ್ಥನ ಕಾರಣ.

Rait. **Ret** ನೋಡಿ.

Raj ರಾಜ್ (ನಾ.) (ಆಂ. ಇಂ.) ಪ್ರಭುತ್ವ, ರಾಜ್ಯ, ರಾಜ್ಯಾಧಿಕಾರ (The British r. in India)

Rája(h) (ನಾ.) (ಇಂಡಿಯದಲ್ಲಿ) ದೊರೆ, ರಾಜ. **Rajáship** (ನಾ.)

Rájpoot, -put ರಾಜ್‌ಪೂಟ್ (ನಾ.) ಕ್ಷತ್ರಿಯ ವಂಶೋತ್ಪನ್ನರೆಂದು ಹೇಳಿಕೊಳ್ಳುವವರ ಜಾತಿಗೆ ಸೇರಿದವನು: ರಜಪೂತ (ರಾಜಪುತ್ರ)

Rake[1] ರೇಕ್ (ನಾ., ಕ್ರಿ.) ಒಣಹುಲ್ಲು ಮೊ. ನ್ನು ಒಟ್ಟಿಗೆ ಎಳೆಯುವುದಕ್ಕೆ ಅಥವಾ ಉತ್ತ ನೆಲವನ್ನಾಗಲಿ ಗರಸು ಮಣ್ಣನ್ನಾಗಲಿ ಮಟ್ಟಸ ಮಾಡುವುದಕ್ಕೆ ಉಪಯೋಗಿಸುವ, ಹಲ್ಲುಗಳುಳ್ಳ ಅಡ್ಡಪಟ್ಟಿ ತುದಿಯಲ್ಲಿರುವ, ಒಂದು ಸಲಕರಣೆ: ಕುಂಟೆ, ಹಲುಬೆ; ಗೋರೆ; ಕುದುರೆಗೆಳೆಯುವ ಗಾಲಿಗಳುಳ್ಳ ಕುಂಟೆ, ಹಲುಬೆ. (ಇತರ ಹಲವು ಕೆಲಸಗಳಲ್ಲಿ ಉಪಯೋಗಿಸುವ) ಹಲುಬೆಯಾಕಾರದ ಸಲಕರಣೆ (ಉದಾ., ಜೂಜಾಟದ ಮೇಜಿನಮೇಲಿರುವ ಹಣವನ್ನು ಎಳೆದುಕೊಳ್ಳಲು ಉಪಯೋಗಿಸುವ ಸಲಕರಣೆ): ಬಾಚು ಕೋಲು. (ಕ್ರಿ.) ಹಲುಬೆಯಿಂದ (ಹೇಗೊ ಹಾಗೆ) —ಬಾಚಿ ಕೂಡಿಸು, ಒಟ್ಟುಗೂಡಿಸು (*Together, up* ಉಪ. ದೊಡನೆ), ಕೆದರು (*Out* ಉಪ. ದೊಡನೆ), ನಿರ್ಮೂಲ ಮಾಡು (*Out* ಉಪ. ದೊಡನೆ), ಬಾಚಿ ಹಾಕು, ಚೊಕ್ಕಟ ಮಾಡು (*Off* ಉಪ. ದೊಡನೆ) [R. out the fire (ಮುಚ್ಚಿರುವ ಬೂದಿ ಉದುರುವಂತೆ) ಕೆಂಡ ಕೆದಕು. R. up *or* together all possible charges ಸಾಧ್ಯವಿರುವ ಎಲ್ಲ ಅಪಾದನೆಗಳನ್ನೂ ತಂದು ಆರೋಪಿಸು. R. off the leaves]. ಕುಂಟೆ ಹೊಡೆ(ದು ಚೊಕ್ಕಟಮಾಡು, ನಯಮಾಡು); ಹರಗು; ಬಾಚುಕೋಲಿನಿಂದ (ಹೇಗೊ ಹಾಗೆ) ಕೆದಕಿ ಹುಡುಕು; ಬುಡಮುಟ್ಟ ಶೋಧಿಸು (Has raked all history for proofs). (ಕುಂಟೆಯಿಂದ) ಮಟ್ಟಸವಾಗಿ, ಚೊಕ್ಕಟವಾಗಿ, ಮೊ. ಗಿ, ಮಾಡು (Level, clean, ಮೊ. ಪದದೊಡನೆ). ಹೆರೆ, ತರಿ, ಕೆರೆ. (ಸಾಲಗೆ ಸಾಲನ್ನೇ, ಈ ಕೊನೆಯಿಂದ ಆ ಕೊನೆಯವರೆಗೆ) ಗುಂಡಿನೇಟಿನಿಂದ ಕೊಚ್ಚು, ಗುಂಡಿನ ಹೊಡೆತಕ್ಕೆ ಒಳಪಡಿಸು; ಹಡಗಿನ ಉದ್ದಕ್ಕೂ ಗುಂಡು ಹೊಡೆ. ಉದ್ದಕ್ಕೂ ಕಣ್ಣೋಡಿಸು, ದೃಷ್ಟಿ ಹರಿಸು. (ಕಿಟಕಿ, ಮೊ. ಗಳ ವಿಷಯದಲ್ಲಿ) ದೂರ ನೋಟ ಕೊಡುವಂತಿರು; ವಿಶಾಲದೃಷ್ಟಿ, ವಿಶಾಲ ಭೂದೃಶ್ಯ, —ಕೊಡುವಂತಿರು. ಕುಂಟೆ—ಹೊಡೆ, ಉಪಯೋಗಿಸು; ಬಾಚು ಕೋಲನಂತೆ (ಹೇಗೊ ಹಾಗೆ) ಶೋಧಿಸು, ಹುಡುಕು (Have been raking *among* or *in* or *into* old records)

Rake[2] ರೇಕ್ (ನಾ.) ಪುಂಡ; ಸ್ತ್ರೀಲಂಪಟ; ಪೋದಾ ಮನುಷ್ಯ. **Rákehell** (ನಾ.) (ಪ್ರಾಚೀ. ಪ್ರ.) = Rake[2]. **Rákehelly** (ಗು.) (ಪ್ರಾಚೀ. ಪ್ರ.); **Rákish**[1] (ಗು.) ಪೋದಾ ಮನುಷ್ಯನ(ಂಥ); ಪೋದಾತನದ(ಂಥ). **Rákishly** (ಗು.); **Rákishness** (ನಾ.)

Rake[3] ರೇಕ್ (ಕ್ರಿ., ನಾ.) (ಹಡಗು, ಅದರ ಮೂತಿ ಅಥವಾ ಅದರ ಹಿಂಭಾಗದ ವಿಷಯದಲ್ಲಿ) ಮೇಲ್ಭಾಗ ಆಧಾರ ದಿಮ್ಮಿಗಿಂತ ಮುಂದಕ್ಕೆ ಚಾಚಿರು. (ಕೂವೆ ಅಥವಾ ಹೊಗೆ ಕೊಳವೆಯ ವಿಷಯದಲ್ಲಿ) ಹಡಗಿನ ಹಿಂಭಾಗದ ಕಡೆಗೆ ಓಲಿರು, ಓರೆಯಾಗು. ಹಿಂಬಾಗು ಕೊಡು (Bicycle's front forks are raked). (ನಾ.) ಓಲಿದ ಕೋನ; ಓಲು; ಓಲಿರುವ —ಸ್ಥಿತಿ, ರಚನೆ. **Rákish**[2] (ಗು.) (ಹಡಗಿನ ವಿಷಯದಲ್ಲಿ) ಚುರುಕಾಗಿರುವ; ವೇಗವಾಗಿ ಹೋಗಲು ಕಟ್ಟಿದಂತೆ ತೋರುವ (ಮತ್ತು ಆ ಕಾರಣದಿಂದ ಕಡಲುಗಳ್ಳತನದ್ದೆಂದು ಅನುಮಾನಕ್ಕೆಡೆಗೊಡುವ)

Rale ರಾಲ್ (ನಾ.) (ರೋಗ ನಿದಾನ) ಅನಾರೋಗ್ಯದ ಶ್ವಾಸಕೋಶಗಳಲ್ಲಿ ಶ್ವಾಸೋಚ್ಛ್ವಾಸದ ಶಬ್ದದ ಜೊತೆಗೆ ಕೇಳಿಸುವ ಬೇರೆಯ ಸದ್ದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rallentándo (It.) ರ್ಯಾಲೆಂಟ್ಯಾಂಡೊ (ಸಂ., ಸೂಚನೆ) ಕ್ರಮೇಣ ನಿಧಾನವಾಗಿ, ಮೆಲ್ಲಗೆ.

Rállicar(t) ರ್ಯಾಲಿಕಾರ್(ಟ್) (ನಾ.) ನಾಲ್ವರಿಗೆ ಎಡೆಯಿರುವ ಒಂದು ಬಗೆಯ ಹಗುರವಾದ ಇಗ್ಗಾಲಿ ಬಂಡಿ.

Rálly[1] ರ್ಯಾಲಿ (ಕ್ರಿ., ನಾ.) (ಮು., ದಿಕ್ಕುಪಾಲಾಗಿ ಪಲಾಯನಮಾಡಿದ್ದ ಅಥವಾ ಚೆದರಿದ್ದ ಸೇನೆಯ ವಿಷಯದಲ್ಲಿ) ಪುನಃ ವ್ಯೂಹ ಕಟ್ಟು, ಒಟ್ಟುಗೂಡು; ಒಟ್ಟಿಗೆ ಸೇರು, ಸೇರಿಸು; ಮತ್ತೆ ಕಾಳಗಕ್ಕೆ ತೊಡಗು, ತೊಡಗಿಸು. (ಬೆಂಬಲವಾಗಿರಲು ಅಥವಾ ಏಕಾಗ್ರವಾಗಿ ಕೆಲಸ ಮಾಡಲು) ಒಟ್ಟು ಸೇರಿಸು, ಸೇರು; ಜಮಾಯಿಸು (Rallied his party, his party rallied, *round* or *to* him). (ಬುದ್ಧಿಶಕ್ತಿ, ಮೊ. ನ್ನು) ಇಚ್ಛಾಶಕ್ತಿಯಿಂದ ಪುನರುಜ್ಜೀವಿಸು, ಚೇತನಗೊಳಿಸು; ಚೇತರಿಸಿಕೊ; ನವಚೈತನ್ಯ—ಪಡೆ, ತೋರು; ರೋಗದಿಂದ, ಭಯದಿಂದ, —ಕುದುರಿಕೊ. (ನಾ.) (ಕ್ರಿಯಾರ್ಥಗಳಲ್ಲಿ) (ಟೆನಿಸ್, ರ್ಯಾಕೆಟ್ಸ್, ಮೊ. ಆಟಗಳಲ್ಲಿ) ಬೇಗ ಬೇಗ ಹಿಂದಿರುಗಿಸಿದ ಚೆಂಡಿನ ಹೊಡೆತಗಳು.

Rálly[2] ರ್ಯಾಲಿ (ಕ್ರಿ. ಸಕ.) ಪರಿಹಾಸ್ಯ, ಗೇಲಿ, ಕುಚೋದ್ಯ, —ಮಾಡು. **Rállyingly** (ಕ್ರಿ. ವಿ.)

Ram[1] ರ್ಯಾಮ್ (ನಾ., ಕ್ರಿ. ಸಕ.) ಬೀಜ ಒಡೆದಿಲ್ಲದ ಗಂಡು ಕುರಿ; ಟಗರು. (ಖ. ವಿ.) ಮೇಷ ರಾಶಿ. =Battering-r. (Batter[1] ನೋಡಿ); ಶತ್ರು ಹಡಗುಗಳ ಪಕ್ಕಗಳನ್ನು ತಿವಿದು ಒಡೆಯುವುದಕ್ಕಾಗಿ ಹಡಗಿನ ಮುಂಕೊನೆಯಲ್ಲಿರುವ ಚಾಚು: ತಿವಿಮೂತಿ; ತಿವಿಮೂತಿಯಿರುವ ಯುದ್ಧನೌಕೆ. ದಸಿ ನೆಡುವ ಯಂತ್ರದ ಚಮ್ಮಟಿಗೆ. ದಮ್ಮಸು. ನೀರೊತ್ತಡದ ನೀರೆತ್ತಿಗೆ (ಯಂತ್ರ); ನೀರೊತ್ತು ಯಂತ್ರದ ಚಾಲಕ ದಂಡ; ಒತ್ತಡ ಪಂಪಿನ (ಮುಳುಗಿ ಏಳುವ) ಅಡುಬೆಣೆ. (R.'s-horn ಟಗರಿನ ಕೊಂಬು; ಟಗರಿನ ತಲೆ ಮತ್ತು ಕೊಂಬುಗಳನ್ನನುಕರಿಸಿ ಮಾಡಿದ ಸುರುಳಿಯಲಂಕಾರ). (ಕ್ರಿ.) (ಮರದ ತುಂಡು, ಮೊ. ರಿಂದ ನೆಲ, ಮೊ. ನ್ನು) ಗಟ್ಟಣೆ ಮಾಡು, ದಮ್ಮಸು ಮಾಡು; ದಮ್ಮಸಿನಿಂದ ಗಟ್ಟಿಸು; ದಮ್ಮಸು ಹೊಡೆ. (ಕಂಬ, ಗಿಡ, ಮೊ. ನ್ನು) ಬುಡದ ಸುತ್ತಲೂ ಮಣ್ಣು ಜಡಿದು ಭದ್ರಮಾಡು, ಭದ್ರವಾಗಿ ನಿಲ್ಲಿಸು. (ದಸಿ, ಮೊ. ನ್ನು) ಬಲವಾಗಿ ಹೊಡೆದು ನೆಡು (*Down*, *in*, *into* ಉಪ. ದೊಡನೆ); (ಬಂದೂಕಿಗೆ, ಫಿರಂಗಿಗೆ) ಗಜದಿಂದ ಮದ್ದು ಜಡಿ, ಗಿಡಿ; —ಜಡಿದು ತುಂಬು. ಒತ್ತಿ ತುರುಕು, ಗಿಡಿ (Had the list rammed into me by repetition. R. the argument home). (ತುಂಬುವ ವಸ್ತು, ಮೊ. ರಿಂದ) ಗಿಡಿದು ತುಂಬು (*With* ಉಪ. ದೊಡನೆ). (ಹಡಗಿನ ವಿಷಯದಲ್ಲಿ) ತಿವಿಮೂತಿಯಿಂದ (ಢಿಕ್ಕಿ) ಹೊಡೆ; ಢಿಕ್ಕಿ ಹೊಡೆ, ಹೊಡಸು; ಬಿರುಸಾಗಿ ಹಾಯಿ(ಸು) (*Against*, *at*, *on* or *into* ಉಪ. ದೊಡನೆ. Rammed his head against the wall, his horse at a fence). **Rámrod** (ಕೋವಿಯ ಬಾಯಿಂದ ಮದ್ದು ತುಂಬುವ ಬಂದೂಕಿನಲ್ಲಿ) ಮದ್ದನ್ನು ಜಡಿಯುವ ಸರಾಕಿ; ಗಜ. **Rámmer** (ನಾ.) ದಮ್ಮಸು; ಗಜ.

Ram[2] ರ್ಯಾಮ್ (ನಾ.) (ನಾವೆ) ದೋಣಿಯ ಪೂರ್ತಿ ಉದ್ದ.

Ramadán ರ್ಯಾಮಡಾನ್, **Ramazán** —ಜ಼ಾನ್ (ನಾ.) ಮಹಮ್ಮದೀಯ ವರ್ಷದ ಒಂಬತ್ತನೆಯ ತಿಂಗಳು: ರಂಜ಼ಾನ್.

Rámal ರೇಮಲ್ (ಗು.) (ಸ. ವಿ.) ಕೊಂಬೆಯ; —ಯಿಂದ ಹೊರಡುವ.

Rámble ರ್ಯಾಂಬ್‌ಲ್ (ಕ್ರಿ. ಅಕ., ನಾ.) ವಿಹಾರಕ್ಕಾಗಿ (ಮತ್ತು ಒಂದು ಗೊತ್ತಾದ ದಾರಿಯನ್ನನುಸರಿಸದೆ) ಸುತ್ತಾಡು, ಸುತ್ತಾಟ; ವಿಹಾರದ ಓಡಾಟ, ಅಲೆತ. (ಭಾಷಣದಲ್ಲಿ, ಬರವಣಿಗೆಯಲ್ಲಿ) ವಿಷಯ ಬಿಟ್ಟು ಹೋಗು; ಅಸಂಬದ್ಧವಾಗಿ —ಮಾತನಾಡು, ಬರೆ. **Rámbler** (ನಾ.) (ಕ್ರಿಯಾರ್ಥಗಳಲ್ಲಿ). ಬಳ್ಳಿ ಗುಲಾಬಿ (ಮು., The Crimson R. ಎಂಬ ಜಾತಿ). **Rámbling** (ಗು.) ಸುತ್ತಾಡುವ; ಅಲೆಯುವ; ಪರೆದಾಡುವ. ಒಂದಕ್ಕೊಂದಕ್ಕೆ ಸಂಬಂಧವಿಲ್ಲದ; ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಹಾರುವ; ಅಸಂಬದ್ಧ. (ಸಸ್ಯಗಳ ವಿಷಯದಲ್ಲಿ) ಹಬ್ಬುವ, ಅಡರುವ. (ಮನೆ, ಬೀದಿ, ಮೊ. ಗಳ ವಿಷಯದಲ್ಲಿ) ಸಿಕ್ಕಾಬಟ್ಟೆಯ, ಒಂದು ಕ್ರಮವಿಲ್ಲದ. **Rámblingly** (ಕ್ರಿ. ವಿ.)

Rambúnctious ರ್ಯಾಂಬಂಕ್‌ಷಸ್ (ಗು.) (ಅಮೆ. ಸಂ., ಬಳ. ಮಾ.) =Rumbustious.

Rámie ರ್ಯಾಮಿ (ನಾ.) (ಚೀನ ಮತ್ತು ಈಸ್ಟ್ ಇಂಡಿಯದ ಒಂದು ಗಿಡದಿಂದ ದೊರೆಯುವ) ನಯವಾದ ಮತ್ತು ಗಟ್ಟಿಯಾದ ಒಂದು ಬಗೆಯ ನಾರು; ಇದನ್ನು ನೆಯ್ದು ತಯಾರಿಸಿದ ಒಂದು ಬಾಳಿಕೆಯ ಬಟ್ಟೆ, ಸನಗು.

Rámify ರ್ಯಾಮಿಫೈ (ಕ್ರಿ.) ಶಾಖೆಗಳಾಗು; ಕವಲೊಡೆ; ಶಾಖೋಪಶಾಖೆಗಳಾಗಿ ವಿಸ್ತರಿಸು, ಹರಡು. (ಸಾ., ಕರ್ಮಣಿಯಲ್ಲಿ) ಕವಲೊಡಸು, ಶಾಖೋಪಶಾಖೆಗಳಾಗಿ ಮಾಡಿಸು; ಶಾಖೋಪಶಾಖೆಗಳ ಕ್ರಮದಲ್ಲಿ ವ್ಯವಸ್ಥೆ ಮಾಡು (Railways were ramitied over the country). **Ramificátion** (ನಾ.) ಕವಲೊಡೆಯುವುದು; ಶಾಖೋಪಶಾಖೆಗಳಾಗುವುದು. ಮರದ ಕೊಂಬೆಗಳು, ಶಾಖೆಗಳು; —ಗಳ ವಿನ್ಯಾಸ; (ಮರದ ಕೊಂಬೆಗಳಿಗೆ ಹೋಲಿಸಬಹುದಾದ, ಯಾವುದಾದರೂ ಸಂಕೀರ್ಣ ರಚನೆಯ ಅಥವಾ ವ್ಯವಸ್ಥೆಯ) ಶಾಖೋಪಶಾಖೆ, ಉಪಶಾಖೆ (The ramifications of a river, society, trade, plot, inquiry, etc.)

Rámmish ರ್ಯಾಮಿಷ್ (ಗು.) ದುರ್ವಾಸನೆಯ; ಕಮಟು ನಾತದ.

Ramóse ರಮೋಸ್ (ಗು.) ಕವಲೊಡೆದ; ಕವಲೊಡೆಯುವ; ಶಾಖೆಗಳುಳ್ಳ.

Ramp[1] ರ್ಯಾಂಪ್ (ನಾ., ಕ್ರಿ.) ಇಳಿಜಾರು; (ಮು., ಕೋಟೆಯಲ್ಲಿ ಅಥವಾ ಗೋಡೆಯ ತಲೆಕಟ್ಟಡದಲ್ಲಿ) ಬೇರೆ ಬೇರೆ ಎತ್ತರದ ಎರಡು ಮಟ್ಟಗಳನ್ನು ಕೂಡಿಸುವ ವಾಟ; ಇಳಿವೋರೆ; ಇಳಿಜಾರು ದಾರಿ; (ಹೆಚ್ಚು ಕಡಮೆ ಎತ್ತರದ ಒಡೆ ಕಂಬಗಳ ಮೇಲಿನ ಕಮಾನಿನಲ್ಲಿ) ಎದುರು ಬದುರು ಒಡೆ ಕಂಬಗಳ ಮಟ್ಟದ ವ್ಯತ್ಯಾಸ. (ಮೆಟ್ಟಿಲು ಹಂತದ ಕಟಕಟೆಯಲ್ಲಿ) ಕೈಕಂಬಿಯ ಏರುವೋರೆ, ಏರುಬಾಗು. (ಕ್ರಿ.) (ಮು., ಸಿಂಹದ ವಿಷಯದಲ್ಲಿ) ಮುಂಗಾಲ ಪಂಜಗಳನ್ನು ಎತ್ತಿಕೊಂಡು ಹಿಂಗಾಲುಗಳ ಮೇಲೆ (ಎದ್ದು) ನಿಲ್ಲು; ಮೇಲೆಬೀಳುವಂತೆ, ಬೆದರಿಸುವ ಭಂಗಿಯಲ್ಲಿ, —ನಿಲ್ಲು, ಇರು. (ಈಗ ಸಾ., ಹಾಸ್ಯ ಪ್ರ.) ಹುಚ್ಚುಹುಚ್ಚಾಗಿ ರೇಗಾಡು; ಕೋಪಾವೇಶದಿಂದ ಹಾರಾಡು. (ವಾ. ಶಾ.: ಗೋಡೆಯ ವಿಷಯದಲ್ಲಿ) ಬೇರೆ ಮಟ್ಟಕ್ಕೆ ಏರು, ಇಳಿ; (ಸೈನಿಕ ವಾ. ಶಾ.) ಇಳಿವೋರೆ ಒದಗಿಸು; ವಾಟವಿಟ್ಟು ಕಟ್ಟು. **Rampáge** —ಪೇಜ್ (ಕ್ರಿ. ಅಕ., ನಾ.) ಆವೇಶದಿಂದ ವರ್ತಿಸು; ಹುಚ್ಚುಹುಚ್ಚಾಗಿ ರೇಗಾಡು; ಕೋಪಾವೇಶದಿಂದ ಅತ್ತಿತ್ತ ನುಗ್ಗು. (ನಾ.) ಕೋಪಾವೇಶದ ವರ್ತನೆ; ಹುಚ್ಚು ಹುಚ್ಚು ರೇಗಾಟ (ಮು., Be on the r. ಸಿಕ್ಕಾಬಟ್ಟೆ ರೇಗಿಬೀಳು). **Rampágeous** —ಜಸ್ (ಗು.); **Rampágeously** (ಕ್ರಿ. ವಿ.); **Rampágeousness** (ನಾ.); **Rámpant** ರ್ಯಾಂಪಂಟ್ (ಗು.) (ವಂಶ ಲಾಂಛನಗಳಲ್ಲಿ, ಮು., ಸಿಂಹದ ವಿಷಯದಲ್ಲಿ) ಮುಂಗಾಲಿನ ಪಂಜಗಳನ್ನೆತ್ತಿಕೊಂಡು ಹಿಂಗಾಲುಗಳ ಮೇಲೆ ನಿಂತಿರುವ, ಮೇಲೆ ಬೀಳುವಂತೆ ನಿಂತಿರುವ (ವಂಶ ಲಾಂಛನದಲ್ಲಿ ಮತ್ತು ಪ್ರಾಸ್ತಾವಿಕ ಅನುಕರಣಗಳಲ್ಲಿ, ನಾಮವಾಚಕಗಳ ತರುವಾಯ ಪ್ರ.: Lion r. The snob r. ಎಗರಾಡುವ ಪ್ರತಿಷ್ಠಾ ಪೂಜಕ). (ಕಾರ್ಯದಲ್ಲಾಗಲಿ ಅಭಿಪ್ರಾಯದಲ್ಲಾಗಲಿ) ಉಗ್ರ, ಅತಿರೇಕದ, ಅತಿಯಾದ; ಮೇಲೆ ಬೀಳುವ; ಆಕ್ರಮಣ ಮಾಡುವ; ತಡೆಗಡೆಯಿಲ್ಲದ. (ಬಹಳವಾಗಿ) ಹಬ್ಬಿರುವ, ಬಳಕೆಯಾಗಿರುವ (Is a r. theorist ಅವನು ಅತ್ಯುಗ್ರ ತಾತ್ತ್ವಿಕ. Popery is r. among us). (ಸಸ್ಯ) ಹುಚ್ಚಾಬಟ್ಟೆಯಾಗಿ, ಅತಿಯಾಗಿ, —ಹಬ್ಬಿರುವ, ಬೆಳೆದಿರುವ (A rich soil makes nasturtiums too r.).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕಮಾನು, ಮೊ. ರ ವಿಷಯದಲ್ಲಿ) ಒಂದು ಒದೆ ಕಂಬ ಮತ್ತೊಂದಕ್ಕಿಂತ ಎತ್ತರವಾಗಿರುವ; ಬೇರೆ ಬೇರೆ ಮಟ್ಟದ ಒದೆ ಕಂಬಗಳುಳ್ಳ; ಏರುಪೋರೆಯ. **Rámpantly** (ಕ್ರಿ. ವಿ.); **Rámpancy** (ನಾ.)

Ramp² ರ್‍ಯಾಂಪ್ (ನಾ., ಕ್ರಿ.) (ಅಸಂ.) ಜೂಜು ವ್ಯಾಪಾರಗಾರನಿಂದ ಸುಳ್ಳು(ಪಣದ) ಸಾಲ ಕೀಳುವ ಪ್ರಯತ್ನ. ದುಬಾರಿ ಬೆಲೆ ಹಾಕುವುದು (The telephone r. ದೂರವಾಣಿಯ ಮೇಲಿನ ದುಬಾರಿ ರುಸುಮು). (ಕ್ರಿ.) (ಒಬ್ಬನಿಂದ) ಸುಳ್ಳು (ಪಣದ) ಸಾಲ ಕೀಳು, ಸುಲಿ; (ಒಬ್ಬನನ್ನು) ಈ ಸುಲಿಗೆಗೆ ಈಡುಮಾಡು.

Rampáge, Rámpant, etc. **Ramp¹** ನೋಡಿ.

Rámpart ರ್‍ಯಾಂಪಾರ್ಟ್ (ನಾ., ಕ್ರಿ. ಸಕ.) ಸಾ., ಕಲ್ಲಿನ ಪಾಗಾರವಿರುವ, ಮೇಲುಗಡೆ ಅಗಲವಾದ, ರಕ್ಷಣೆಯ ಮಣ್ಣುದಿಬ್ಬ; (ಕೋಟೆಯ) ಅಳುವೇರಿ. (ರೂಪ.) ಕಾಪು; ರಕ್ಷಣೆ. (ಕ್ರಿ.) ಅಳುವೇರಿಯಿಂದ (ಹೇಗೊ ಹಾಗೆ) ಭದ್ರಪಡಿಸು, ರಕ್ಷಿಸು; (ಸುತ್ತಲೂ) ಅಳುವೇರಿ ಕಟ್ಟು.

Rámpion ರ್‍ಯಾಂಪಿಯನ್ (ನಾ.) ಬಿಳಿಯ ಗಡ್ಡೆಬೇರುಳ್ಳ ಒಂದು ಬಗೆಯ ಗಂಟೆ ಹೂವಿನ ಗಿಡ (ಇದರ ಗಡ್ಡೆಯನ್ನು ಪಚ್ಚಡಿಗೆ ಉಪಯೋಗಿಸುತ್ತಾರೆ)

Rámpire ರ್‍ಯಾಂಪೈ(ಅ)ರ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) = Rampart.

Rámshackle ರ್‍ಯಾಂಷ್ಯಾಕ್‌ಲ್ (ಗು.) (ಸಾ., ಮನೆ ಅಥವಾ ಬಂಡಿಯ ವಿಷಯದಲ್ಲಿ) ಉರುಳಿಕೊಳ್ಳುವಂತಿರುವ, ಮುರಿದುಬೀಳುವಂತಿರುವ; ಭದ್ರವಿಲ್ಲದ; ಶಿಥಿಲ (The r. Empire = Austria-Hungary)

Rámson ರ್‍ಯಾಂಸ(ಸ್)ನ್ (ನಾ.) ಅಗಲೆಲೆಯ ಬೆಳ್ಳುಳ್ಳಿ ಗಿಡ; ಇದರ ಗಡ್ಡೆ.

Ran¹ ರ್‍ಯಾನ್ (ನಾ.) ಹೊಸೆದ ದಾರದ, ಹುರಿಯ, ಒಂದು ಲಡಿ (ಗೊತ್ತಾದ ಅಳತೆಯದು)

Ran². Run ಧಾತುವಿನ ಭೂತ ರೂಪ.

Rance ರಾನ್ಸ್ (ನಾ.) ನೀಲಿ ಮತ್ತು ಬಿಳಿಯ ಎಳೆಗಳೂ ಚುಕ್ಕೆಗಳೂ ಇರುವ ಒಂದು ಬಗೆಯ ಕೆಂಪು ಅಮೃತಶಿಲೆ.

Ranch ರಾಂಚ್, ರಾನ್ಷ್ (ನಾ., ಕ್ರಿ. ಅಕ.) (ಅಮೆ. ಸಂ. ದಲ್ಲಿ) ದನಗಳನ್ನು ಬೆಳಸುವ ಸಂಸ್ಥೆ, ಕ್ಷೇತ್ರ; ಪಶುಪಾಲನ ಕ್ಷೇತ್ರ; ದೊಡ್ಡ ದನಗಾವಲು. (ಕ್ರಿ.) —ಅನ್ನು ನಡಸು.

Ráncid ರ್‍ಯಾನ್‌ಸಿಡ್ (ಗು.) ಕೊಳೆತ ಕೊಬ್ಬಿನ(ಂಥ) —ದುರ್ವಾಸನೆಯ, ಅಸಹ್ಯ ರುಚಿಯ; ಕಮಟು ನಾತದ. **Rancídity** (ನಾ.); **Ráncidness** (ನಾ.)

Ráncour ರ್‍ಯಾಂಕರ್ (ನಾ.) ಬದ್ಧ ದ್ವೇಷ; ಕಡು ಹಗೆ; ಕಟು ಮತ್ಸರ. **Ráncorous** —ಕೊ— (ಗು.); **Ráncorously** (ಕ್ರಿ. ವಿ.)

Rand ರ್‍ಯಾಂಡ್ (ನಾ.) ಮೋಜಿನ ಹಿಮ್ಮಡಿಯ ಅಟ್ಟೆ ಕಟ್ಟುವ ಮೊದಲು, ಮಟ್ಟ ಸರಿಮಾಡುವುದಕ್ಕಾಗಿ ಸೇರಿಸುವ, ತೊಗಲಿನ ತುಂಡು. (ದ. ಆಫ್ರಿಕ) ನದಿಯ ಕಣಿವೆಯ ಇಕ್ಕಡೆಗಳಲ್ಲಿರುವ ಮೇಲ್ನಾಡು, ಎತ್ತರದ ಪ್ರದೇಶ; ನದಿಯ ಮೇಲ್ನಾಡು. (The R. = Johannesburg)

Randán ರ್‍ಯಾನ್‌ಡ್ಯಾನ್ (ನಾ.) ಕುಡಿದಾಟದ ಬೊಬ್ಬೆ (ಮು., on the r.)

Rándem ರ್‍ಯಾಂಡೆಮ್ (ಕ್ರಿ. ವಿ., ನಾ.) ಒಂದರ ಹಿಂದೊಂದರಂತೆ (ಒಂಟಿ ಸಾಲನಲ್ಲಿ) ಮೂರು ಕುದುರೆ ಹೂಡಿ. (ನಾ.) ಹೀಗೆ ಹೂಡಿದ ಮೂರು ಕುದುರೆ; ಹೀಗೆ ಹೂಡಿ ನಡಸುವ ಬಂಡಿ.

Rándom ರ್‍ಯಾಂಡಮ್ (ನಾ., ಗು.) At r. ಗೊತ್ತುಗುರಿಯಿಲ್ಲದೆ, ಮನಸ್ಸಿಗೆ ತೋರಿದಂತೆ, ಸಿಕ್ಕಾಬಟ್ಟೆ; ತತ್ತ್ವ, ಆಲೋಚನೆ, ವಿಚಾರ, —ಇಲ್ಲದೆ. (ಗು.) ಗೊತ್ತುಗುರಿಯಿಲ್ಲದೆ ಮಾಡಿದ; ಸಿಕ್ಕಾಬಟ್ಟೆಯ. (ಕಲ್ಲುಕಟ್ಟಡದ ವಿಷಯದಲ್ಲಿ) ಅಸಮ ಗಾತ್ರದ ಮತ್ತು ಅಸಮ ಆಕಾರದ ಕಲ್ಲುಗಳ; ಅಡ್ಡಾದಿಡ್ಡಿ ಕಲ್ಲುಗಳಿಂದ ಕಟ್ಟಿದ. **Rándomly** (ಕ್ರಿ. ವಿ.) (ವಿರ. ಪ್ರ.)

Rándy ರ್‍ಯಾಂಡಿ (ಗು.) (ಸ್ಕಾ. ಪ್ರ.) ಗಟ್ಟಿಯಾಗಿ ಕೂಗಾಡುವ; ಅಬ್ಬರಿಸುವ; ದೊಡ್ಡ ಗಂಟಲಿನ; ಗದ್ದಲದ; (ದನಗಳು, ಮೊ. ಗಳ ವಿಷಯದಲ್ಲಿ) (ಪ್ರಾಂ. ಪ್ರ.) ಹತೋಟಿಗೆ ಬರದ, ಅಗಡಾದ. ಮದ ವೇರಿದ; ಕಾಮಾಸಕ್ತಿಯುಳ್ಳ. **Rándiness** (ನಾ.)

Ránee ರಾನೀ (ನಾ.) ರಾಣಿ.

Rang. Ring ಧಾತುವಿನ ಭೂತ ರೂಪ.

Range ರೇಂಜ್ (ಕ್ರಿ., ನಾ.) ಸಾಲಿನಲ್ಲಿ, ಸಾಲಾಗಿ, ಅಥವಾ ನಿರ್ದಿಷ್ಟ ಸ್ಥಾನದಲ್ಲಿ, ಕ್ರಮದಲ್ಲಿ, ತಂಡದಲ್ಲಿ, —ಇಡು, ಅಣಿಗೊಳಿಸು; ಓರಣವಾಗಿರಿಸು (ಸಾ., ಕರ್ಮಣಿಯಲ್ಲಿ ಅಥವಾ ಸ್ವಾರ್ಥಕ) [Ranged their troops ತಮ್ಮ ದಳಗಳನ್ನು ವ್ಯೂಹದಲ್ಲಿ ನಿಲ್ಲಿಸಿದರು. Ranged themselves on each side. Was ranged *against*, *among*, *on the side of*, *with*, etc. Trees ranged *in* an ascending scale of height. R. oneself (ಫ್ರೆಂಚ್ ಪ್ರ. ದ ಅನುಕರಣ) ಸಮಾಜದಲ್ಲಿ (ಒಂದು ಕಡೆ) ನೆರೆಯಾಗಿ, ಗೃಹಸ್ಥನಾಗಿ, ನಿಲ್ಲು]. (—ಇಂದ —ವರೆಗೆ) ಸಾಲಾಗಿರು, ಉದ್ದಕ್ಕೂ ಇರು, ಮುಟ್ಟು, ಹರಡು, ಹರಡಿರು, ವ್ಯಾಪಿಸು (*From — to*); (ಗೊತ್ತಾದ ಜಿಲ್ಲೆಯಲ್ಲಿ) ಕಂಡುಬರು, ದೊರೆ; ಎರಡು ಮಿತಿಗಳ ಮಧ್ಯೆ ವ್ಯತ್ಯಾಸವಾಗು (Ranges north & south, along the sea. ದಕ್ಷಿಣೋತ್ತರವಾಗಿ, ಸಮುದ್ರದ ದಡದಲ್ಲಿ, ಉದ್ದಕ್ಕೂ ಹಬ್ಬಿದೆ. Nightingale ranges from the Channel to Warwickshire —ಕಂಡುಬರುತ್ತದೆ, ದೊರೆಯುತ್ತದೆ). (ಸಮ) ಮಟ್ಟವಾಗು (*With* ಉಪ. ದೊಡನೆ) (A 12mo does not r. well with a folio). (—ಒಡನೆ, —ರ ಪಂಕ್ತಿಯಲ್ಲಿ) ಸಮಸ್ಥಾನ ಪಡೆ, ಸೇರು (*With*, *among* ಉಪ. ದೊಡನೆ) (Ranges with the great writers). (ಪ್ರಾಂತದಲ್ಲೆಲ್ಲ ಅಥವಾ ತೀರದದ್ದಲ್ಲೆಲ್ಲ) ಸುತ್ತಾಡು, ಅಲೆದಾಡು (ಅನೇಕ ವೇಳೆ *Over*, *along*, *through*, ಮೊ. ಉಪ. ದೊಡನೆ) (His thoughts r. over past, present & future. Ranging fancy ಚಂಚಲ ಪ್ರಣಯ). (ಫಿರಂಗಿಯ ವಿಷಯದಲ್ಲಿ) (—ದೂರ) ಕ್ಷಿಪಣಿ, ಗುಂಡು, —ಹಾರಿಸು; (ಕ್ಷಿಪಣಿಯ, ಗುಂಡಿನ, ವಿಷಯದಲ್ಲಿ) (—ದೂರ) ಹಾರು, ಹೋಗು (Ranges over a mile). (ಕರೆಯ, ಸಮುದ್ರದ) ಉದ್ದಕ್ಕೂ, ಎಲ್ಲ ಕಡೆಯೂ, —ಹಡಗು ಪ್ರಯಾಣ ಮಾಡು. (ನಾ.) (ವಸ್ತುಗಳ, ಮು., ಕಟ್ಟಡಗಳ ಅಥವಾ ಪರ್ವತಗಳ) ಶ್ರೇಣಿ, ಸಾಲು, ಪಂಕ್ತಿ. ಹಬ್ಬಿರುವ ನೆರೆ, ದಿಕ್ಕು (The r. of the strata is east & west ಸ್ತರದ ಹಬ್ಬುಗೆ ಪೂರ್ವ ಪಶ್ಚಿಮವಾಗಿದೆ. Keep the two buoys in r. with the lighthouse). ಹುಲ್ಲುಗಾವಲು, ಬೇಟೆಯ ಬಯಲು. ಬಂದೂಕು ಅಭ್ಯಾಸಕ್ಕಾಗಿ ಗುರಿ(ಹಲಗೆ)ಗಳನ್ನಿಟ್ಟಿರುವ ಬಯಲು, ಪ್ರದೇಶ; ಬಂದೂಕು ಅಭ್ಯಾಸದ ಬಯಲು. (ಸಸ್ಯ, ಮೊ. ವು) ಹರಡಿರುವ, ಬೆಳೆದಿರುವ, ದೊರೆಯುವ, —ಪ್ರದೇಶ, ಕ್ಷೇತ್ರ, ಪ್ರಾಂತ; (ಒಂದರಲ್ಲಿ ಸೇರಿದ, ಒಂದಕ್ಕೆ ಸಂಬಂಧಪಟ್ಟ) ವಿಸ್ತಾರ, ವ್ಯಾಪ್ತಿ, ಹರವು; (ಕಾರ್ಯಾಚರಣೆಯ, ಕಾರ್ಯದ) ಕ್ಷೇತ್ರ, ಅವಕಾಶ, ಪರಿಮಿತಿ; ಶಾರೀರದ, (ವಾದ್ಯ) ಧ್ವನಿಯ, —ಏರಿಳಿತಗಳ ಮಟ್ಟ, ವ್ಯಾಪ್ತಿ; ವ್ಯತ್ಯಾಸಗಳ ಅಂತರ, ಮಿತಿ, ಅವಧಿ, ಎಲ್ಲೆ. ಪರಿಮಿತ (ಸ್ವರ, ಸಂಖ್ಯಾ) ಶ್ರೇಣಿ. (ಫಿರಂಗಿ) ಗುಂಡು ಹಾರಿಸಬಹುದಾದ, ಹಾರಬಹುದಾದ, —ದೂರ; ಹಾರು ದೂರ; ವ್ಯಾಪ್ತಿ; ಫಿರಂಗಿ, ಮೊ. ಕ್ಕೂ ಅದರ ಗುರಿಗೂ ಇರುವ ದೂರ: ಗುರಿಯ ದೂರ (Gives the ranges of all species ಎಲ್ಲ ಜಾತಿಗಳ ವ್ಯಾಪ್ತಿಗಳನ್ನೂ ಕೊಡುತ್ತದೆ. The thorniest question in the whole r. of politics ರಾಜಕೀಯದ ಯಾವತ್ತೂ ಕ್ಷೇತ್ರದಲ್ಲಿ—. The r. of her voice is astonishing. His reading is of very wide r. The r. of the barometer readings is about 2 in. ವಾಯುಭಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಪಕದ ಏರಿಳಿತಗಳ ಅಂತರ ಸುಮಾರು ೨ ಅಂಗುಲವಿದೆ. Hebrew is out of my r. There is a lower r. of prices today ಇವೊತ್ತು ಬೆಲೆಗಳ ಮಟ್ಟ ಇಳಿದಿದೆ. The enemy are out of r., have found the r. of our camp). (ಸಾ., ಗೂಡು ಒಲೆಯೂ ಕುದಿಪಾತ್ರೆಯೂ ಇರುವ ಮತ್ತು ಕೊಳಗದಪ್ಪಲೆ, ಮೊ. ನ್ನಿಡಲು ಅನುಕೂಲಸುವಂತೆ ತೆರಪುಗಳುಳ್ಳ ಕಬ್ಬಿಣದ ಮೇಲಿನ ತಗಡೂ ಇರುವ) ಒಂದು ಬಗೆಯ ಅಡಿಗೆಯ ಒಲೆ. [R.-finder ಹೊಡೆಯಬೇಕಾದ ಗುರಿಯ (ವಸ್ತುವಿನ) ದೂರವನ್ನು ಅಂದಾಜುಮಾಡುವ ಸಲಕರಣೆ: ಲಕ್ಷ್ಯ ದೂರಮಾಪಕ]. **Ránger** (ಕ್ರಿಯಾರ್ಥಗಳಲ್ಲಿ). ವನಗಳ ರಕ್ಷಕ [**Rángership** (ನಾ.)]. (ಬ. ವ. ದಲ್ಲಿ) ಅಶ್ವದಳ; ರಾವುತರ ದಳ (ಮು., the Connaught Rangers ಒಂದು ಬ್ರಿಟಿಷ್ ಸೈನ್ಯದಳ)

Rank[1] ರ್‍ಯಾಂಕ್ (ನಾ., ಕ್ರಿ.) (ಈಗ ಮು., ಬಾಡಿಗೆ ಬಂಡಿಗಳ ವಿಷಯದಲ್ಲಿ: ಒಂದರ ಹಿಂದೊಂದರಂತೆ ನಿಂತು ಆದ) ಉದ್ದಸಾಲು, ಪಂಕ್ತಿ, ಓರಣ; (ಚದುರಂಗದ ಹಲಗೆಯಲ್ಲಿ) ಚೌಕಮನೆಗಳ ಅಡ್ಡಸಾಲು (ಎದುರು ಪದ: File[3]). ಎದೆಸಮನಾಗಿ ನಿಲ್ಲಿಸಿದ ಸಿಪಾಯಿಗಳ ಒಂದು ಸಾಲು; ಸೈನಿಕ ಪಂಕ್ತಿ [(ಸಾ., ಇಂಥ ಸಾಲುಗಳನ್ನು ಒಂದರ ಹಿಂದೊಂದರಂತೆ ನಿಲ್ಲಿಸುತ್ತಾರೆ). Front, rear, r. ಮುಂದಿನ, ಹಿಂದಿನ, ಸೈನಿಕ ಪಂಕ್ತಿ. The ranks were broken ಪಂಕ್ತಿ, ವ್ಯೂಹ, —ಭೇದಿಸಲ್ಪಟ್ಟಿತು. The ranks *or* the r. & file ಸಾಮಾನ್ಯ ಸಿಪಾಯಿಗಳು (ಎಂದರೆ, ಸನ್ನದಿಲ್ಲದವರು, ನಾನನ್ನದಿನ ಕೆಳ ಅಧಿಕಾರಿಗಳು); (ರೂಪ.) ಕೆಳ ದರ್ಜೆಯವರು; ಸಾಮಾನ್ಯ ಜನರು. Rise from the ranks (ಸಾಮಾನ್ಯ ಸಿಪಾಯಿ ಅಥವಾ ಸಾರ್ಜೆಂಟ್ ಆಗಿದ್ದು ಶೌರ್ಯವನ್ನು ತೋರಿ ಸನ್ನದು ಪಡೆದು ಬಡತಿಯಾದವನ ವಿಷಯದಲ್ಲಿ, ಅಥವಾ ಸ್ವಪ್ರಯತ್ನದಿಂದ ಪದವಿಗೆ ಬಂದವನ ವಿಷಯದಲ್ಲಿ): ಸಾಮಾನ್ಯ ಸ್ಥಿತಿಯಿಂದ (ಪದವಿಗೆ) ಏರು]. ಓರಣ, ಅಣಿ, ವ್ಯೂಹ (Keep r., break r. ಪಂಕ್ತಿಯಲ್ಲಿ, ವ್ಯೂಹದಲ್ಲಿ, ಇರು, ಇರಲು ತಪ್ಪು). ಸಮಾಜದ (ವಿಶಿಷ್ಟ) ಶ್ರೇಣಿ, ವರ್ಗ; ಗೌರವದ ಅಂತಸ್ತು; ಸ್ಥಾನ; ದರ್ಜೆ; ಉತ್ತಮ, ಉಚ್ಚ, —ಶ್ರೇಣಿ, ಪದವಿ; ಮೇಲ್ತರಗತಿ [People of all ranks. Persons of r. ಶ್ರೀಮಂತರು, ಮೇಲ್ತರಗತಿಯವರು. R. & fashion ಸಮಾಜದ ಮೇಲ್ತರಗತಿ(ಯವರು). The pride of r. ಸ್ಥಾನದ— ಗೌರವ, ಹೆಮ್ಮೆ]. (ಶ್ರೇಣಿಯಲ್ಲಿ) ಸ್ಥಾನ. (ಕ್ರಿ.) (ಮು., ಸಿಪಾಯಿಗಳನ್ನು) ಸಾಲಾಗಿ ನಿಲ್ಲಿಸು. ವರ್ಗೀಕರಿಸು; ಒಂದು ಗೊತ್ತಾದ ದರ್ಜೆಗೆ ಸೇರಿಸು, ದರ್ಜೆ ಕೊಡು. (—) ಸ್ಥಾನವಿರು, ಪಡೆ; (—ರ) ಪಂಕ್ತಿಗೆ ಸೇರು (Ranks among the Great Powers, next to the king, etc.). (ಸೈನ್ಯ) ಸಾಲು ಗಟ್ಟಿ (ಶಿಸ್ತಿನಿಂದ) ಹೋಗು, ನಡೆ (*Past* ಪದದೊಡನೆ ಅಥವಾ *off* ಉಪ. ದೊಡನೆ). ದಿವಾಳಿ ಆಸ್ತಿಗಿರುವ ಹಕ್ಕುಗಳಲ್ಲಿ, ಹಕ್ಕುದಾರರಲ್ಲಿ, ನ್ಯಾಯವಾಗಿ ಸ್ಥಾನ ಪಡೆದಿರು. (ಅಮೆ. ಸಂ.) ಅಧಿಕಾರದಲ್ಲಿ, ಅಂತಸ್ತಿನಲ್ಲಿ, (ಒಬ್ಬನಿಗಿಂತ) ಮೇಲಿರು, ಮೊದಲು ಬರು (The President as commander-in-chief ranks every officer in the navy or army). **Ránker** (ನಾ.) ಸಾಮಾನ್ಯ ಸಿಪಾಯಿ(ಯಾಗಿದ್ದು ಬಡತಿಯಿಂದ ಸನ್ನದು ಪಡೆದ ಅಧಿಕಾರಿ)

Rank[2] ರ್‍ಯಾಂಕ್ (ಗು.) ಒರಟೊರಟಾಗಿ, ಕಾಡು ಕಾಡಾಗಿ (ಕಳೆಗಳಂತೆ) —ಬೆಳೆದ; ಕಳೆಗಳಿಂದ ಇಡಿಕಿರಿದ; ಬರಿ ಕಳೆಗಳು ಬೆಳೆಯುವ; (Roses are growing r. ಗುಲಾಬಿ ಗಿಡಗಳು ಅತಿಯಾಗಿ ಎಲೆ ಬಿಡಲು ತೊಡಗಿವೆ. Land too r. to grow corn). ಗಬ್ಬು ನಾತದ; ದುರ್ವಾಸನೆಯ; ಕೊಳೆತು ನಾರುವ; ಅಸಹ್ಯಕರ; ಅಶ್ಲೀಲ; ನೀತಿಗೆಟ್ಟ; ಕೆಟ್ಟುಹೋದ. ಎದ್ದುಕಾಣುವ; ಕಣ್ಣಿಗೆ ಹೊಡೆಯುವ; ನಿಸ್ಸಂದೇಹವಾದ; ಅನ್ಯಥಾ ತಿಳಿಯಲವಕಾಶವಿಲ್ಲದ; ಬಹಳ ಸ್ಪಷ್ಟವಾದ. ಘೋರ; ಪರಮ; ಮಹತ್ತರವಾದ (R. treason, pedantry, poison, nonsense). **Ránkly** (ಕ್ರಿ. ವಿ.); **Ránkness** (ನಾ.)

Ránkle ರ್‍ಯಾಂಕ್'ಲ್ (ಕ್ರಿ. ಅಕ.) (ಗಾಯ, ಹುಣ್ಣು, ಮೊ. ಗಳ ವಿಷಯದಲ್ಲಿ) (ಪ್ರಾಚೀ. ಪ್ರ.) ಕೀವುಗಟ್ಟು, ಕೀತುಕೊ; ನೋಯುತ್ತಿರು. (ಹೊಟ್ಟೆಕಿಚ್ಚು, ಆಶಾ ಭಂಗ, ಮೊ. ವು ಅಥವಾ ಅವುಗಳಿಗೆ ಕಾರಣ) (ಮನಸ್ಸಿಗೆ) ಕಟುವಾಗಿರು; (ಆಗಾಗ ಅಥವಾ ಸದಾ) ಮನೋವೇಧಕವಾಗಿರು, ನೋಯಿಸುತ್ತಿರು; ದುಡಿ; ದ್ವೇಷವನ್ನು ಕೆರಳಿಸುತ್ತಿರು, ಕನಲಿಸುತ್ತಿರು; ಮನಸ್ಸನ್ನು ಕೊರೆಯುತ್ತಿರು.

Ránsack ರ್‍ಯಾನ್‌ಸ್ಯಾಕ್ (ಕ್ರಿ. ಸಕ.) (ಸ್ಥಳ, ಕೋಶ, ಒಬ್ಬನ ಜೇಬು, ತನ್ನ ಮನಸ್ಸಾಕ್ಷಿ, ಮೊ. ನ್ನು) ಸಾದ್ಯಂತವಾಗಿ, ಪೂರ್ತಿಯಾಗಿ, —ಹುಡುಕು, ಶೋಧಿಸು; ಜಾಲಿಸಿ ನೋಡಿಬಿಡು. (ಮನೆ, ದೇಶ, ಮೊ. ನ್ನು) ಲೂಟಿಮಾಡು, ಕೊಳ್ಳೆಹೊಡೆ, ಸೂರೆಮಾಡು.

Ránsom ರ್‍ಯಾನ್‌ಸಂ (ನಾ., ಕ್ರಿ. ಸಕ.) ಯುದ್ಧ ಕೈದಿಯ ಬಿಡುಗಡೆಗೆ ಕೊಟ್ಟ ಹಣದ ಮೊತ್ತ, ಮೌಲ್ಯ; ಇದಕ್ಕೆ ಪ್ರತಿಫಲವಾಗಿ (ಯುದ್ಧ ಕೈದಿಯ) ಬಿಡುಗಡೆ (ಮಾಡುವುದು); ಬಿಡುಗಡೆ(ಯ ಹಣ, ತೆರ) [Hold one to r. ಪ್ರತಿಫಲ ತೆಗೆದುಕೊಂಡು (ಒಬ್ಬನನ್ನು) ಬಿಡುಗಡೆ ಮಾಡಲು ಸಿದ್ಧನಾಗಿರು, ಇಷ್ಟವಿರು. Worth a king's r. ಅಪರಿಮಿತ ಬೆಲೆಯುಳ್ಳದ್ದು]. ಬೆದರಿಸಿ ಕೀಳುವ ಹಣ; ಸುಲಿಗೆ ಹಣ. ವಿಶೇಷವಾದ ರಿಯಾಯಿತಿಗಾಗಲಿ ವಿನಾಯಿತಿಗಾಗಲಿ ಪ್ರತಿಫಲವಾಗಿ ಕೀಳುವ ಹಣ, ಮೊ. ದು; ರಿಯಾಯಿತಿಯ, ವಿನಾಯಿತಿಯ, —ದಂಡ (Graduated income-tax & death-duties are no more than a fair r. paid by the rich). [R. -bill, -bond (ಮು., ಸೆರೆ ಸಿಕ್ಕಿದ ಹಡಗು) ತನ್ನ ಬಿಡುಗಡೆಗೆ ಪ್ರತಿಫಲ ಕೊಡುವುದಾಗಿ ಒಪ್ಪಿ, ಕೊಟ್ಟ ಕರಾರುಪತ್ರ: ಬಿಡುಗಡೆ (ಹಣದ) ಕರಾರು ಪತ್ರ]. (ಕ್ರಿ.) ದಂಡ ಕೊಟ್ಟು ಬಿಡಿಸಿಕೊ; ಹಣ ಕೊಟ್ಟು ಬಿಡುಗಡೆಯನ್ನು, (ಒಬ್ಬನನ್ನು, ಒಂದನ್ನು) ಹಿಂದಕ್ಕೆ, —ಪಡೆದುಕೊ. (ಮಾಡಿದ ತಪ್ಪಿಗೆ, ಪಾಪಕ್ಕೆ) ದಂಡ ತೆರು, ಪರಿಹಾರಕೊಟ್ಟು ವಿಮೋಚನೆ ಪಡೆ, ಪ್ರಾಯಶ್ಚಿತ್ತ ಮಾಡಿಕೊ. ದಂಡ ತೆಗೆದುಕೊಂಡು ಬಿಡುಗಡೆ ಮಾಡು(ವುದಕ್ಕೆ ಇಷ್ಟವಿರು, ಸಿದ್ಧನಾಗಿರು); (—ಇಂದ) ಬಿಡುಗಡೆಯ ಹಣ, ದಂಡ, —ಕೀಳು. **Ránsomless** (ಗು.)

Rant ರ್‍ಯಾಂಟ್ (ಕ್ರಿ., ನಾ.) ಆಡಂಬರದ ಶೈಲಿಯಲ್ಲಿ ಭಾಷಣಮಾಡು; ಆರ್ಭಟದ, ಪಟಾಟೋಪದ, —ಭಾಷಣಮಾಡು; ಅಬ್ಬರಿಸು; (ಉದ್ವೇಗದಿಂದ) ಒದರು; ನಾಟಕದ ಸೋಗಿನಿಂದ, ಠೇಂಕಾರದಿಂದ, —ಹೇಳು (Ranting Carlyle and Emerson by the volume). ಠೇಂಕಾರದಿಂದ—ಉಪದೇಶಿಸು, ಪ್ರವಚನಮಾಡು (ಮು., ಆದಿ ಮೆಥಡಿಸ್ಟರ ವಿಷಯದಲ್ಲಿ). (ನಾ.) ಆಡಂಬರ ಭಾಷಣ; ಒದರಾಟ; ದೂಷಣೆಯ ಭಾಷಣ; ಬರಿಯ, ತಿರುಳಿಲ್ಲದ, —ಪಟಾಟೋಪ, ಆರ್ಭಟ(ದ ಭಾಷಣ); ಪೊಳ್ಳಬ್ಬರ; ಹುಚ್ಚು ಕೂಗಾಟ. **Ránter** (ನಾ.)

Rap[1] ರ್‍ಯಾಪ್ (ನಾ., ಕ್ರಿ.) ಚುರುಕಿನ ಸಣ್ಣ ಪೆಟ್ಟು [A r. on the knuckles (ಮಗುವಿಗೆ, ಶಿಕ್ಷೆಯಾಗಿ) ಬೆರಳಿನ ಗೆಣ್ಣುಗಳ ಮೇಲೆ ಸಣ್ಣ ಪೆಟ್ಟು. (ರೂಪ.) ಛೀಪೆಟ್ಟು]. ಬಾಗಿಲು ತಟ್ಟುವ ಸದ್ದು, ಮೊ. ದು; 'ಟಪ ಟಪ' ಎಂಬ ತಟ್ಟು(ಸದ್ದು). (ಕ್ರಿ.) (ನಾಮವಾಚಕದ ಅರ್ಥಗಳಲ್ಲಿ). R. out (ಆಣೆ, ಹದಿರು ನುಡಿ, ಮೊ. ನ್ನು) ತಟಕ್ಕನೆ ಅಂದುಬಿಡು. ಕಠಿನವಾಗಿ, —ಆಕ್ಷೇಪಿಸು, ಟೀಕಿಸು, ಖಂಡಿಸು.

Rap[2] ರ್‍ಯಾಪ್ (ನಾ.) ೧೨೦ ಗಜದ ನೂಲಿನ ಲಡಿ.

Rap[3] ರ್‍ಯಾಪ್ (ನಾ.) (ರೂಪ.) ಲವ, ಲೇಶ (Don't care a r.) (ಐರ್ಲೆಂಡಿನಲ್ಲಿ ೧೮ನೆಯ ಶ. ಮಾ. ದಲ್ಲಿ ಚಲಾವಣೆಯಲ್ಲಿದ್ದ ½ ಫಾರ್ದಿಂಗ್ ಬೆಲೆಯ ಒಂದು ಖೋಟಾ ನಾಣ್ಯದಿಂದ)

Rapácious ರಪೇಷಸ್ (ಗು.) ಲೋಭದಿಂದ ತುಡುಕುವ; ಅತಿ ದುರಾಶೆಯ; ದೋಚಿಕೊಳ್ಳುವ; ಸುಲಿಗೆಮಾಡುವ. ಕೊಂದು ತಿನ್ನುವ; ಮಾಂಸಾಹಾರಿಯಾದ. **Rapáciously** (ಕ್ರಿ. ವಿ.); **Rapácity** —ಪ್ಯಾ— (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rape[1] ರೇಪ್ (ಕ್ರಿ. ಸಕ., ನಾ.) (ಕಾವ್ಯ) ಬಲಾತ್ಕಾರದಿಂದ, ಬಲ ಪ್ರಯೋಗದಿಂದ, —ಎತ್ತಿಕೊಂಡು ಹೋಗು(ವುದು), ತೆಗೆದುಕೊ(ಳ್ಳು ವುದು); ಅಪಹರಣ. (ಹೆಂಗಸನ್ನು) ಬಲಾತ್ಕಾರದಿಂದ ಕೆಡಿಸು(ವುದು); ಬಲಾತ್ಕಾರ ಸಂಭೋಗ (ಮಾಡು); ಅಕ್ರಮ ಸಂಭೋಗ (ಮಾಡು)

Rape[2] ರೇಪ್ (ನಾ.) ಕುರಿಗಳ ಮೇವಿಗಾಗಿ ಬೆಳಸುವ ಒಂದು ಸಸ್ಯ; ಎಣ್ಣೆಯ ಬೀಜಕ್ಕಾಗಿ ಬೆಳಸುವ ಒಂದು ಗಿಡ: 'ರೇಪ್' ಗಿಡ. Wild r. ಒಂದು ಕಾಡುಗಿಡ. R.-cake ರೇಪ್ ಹಿಂಡಿ (ಗೊಬ್ಬರಕ್ಕಾಗಿ ಉಪಯೋಗ). R.-oil (ರೇಪು ಬೀಜದಿಂದ ತೆಗೆದ, ಮೃದು ಚಾಲಕ ವಾಗಿಯೂ ಸಾಬೂನು ಮತ್ತು ಇಂಡಿಯಾ ರಬ್ಬರುಗಳ ತಯಾರಿಕೆಯಲ್ಲಿಯೂ ಉಪಯೋಗಿಸುವ) ರೇಪೆಣ್ಣೆ.

Rape[3] ರೇಪ್ (ನಾ.) (ದ್ರಾಕ್ಷಾ ಮದ್ಯವನ್ನು ತಯಾರಿಸಿದಮೇಲೆ ಉಳಿಯುವ ಮತ್ತು ದ್ರಾಕ್ಷಿ ಹುಳಿಯನ್ನು ತಯಾರಿಸಲು ಉಪಯೋಗಿಸುವ) ದ್ರಾಕ್ಷಿಯ ಚರಟ, ಹಿಂಡಿ. ದ್ರಾಕ್ಷಿಹುಳಿ ತಯಾರಿಸುವುದಕ್ಕೆ ಉಪಯೋಗಿಸುವ ಪಾತ್ರೆ.

Raphaelésque, Raffae- ರ್ಯಾಫೇಎಲೆಸ್ಕ್ (ಗು.) (ಇಟಲಿಯ ವರ್ಣ ಚಿತ್ರಕಾರನಾದ) ರ್ಯಾಫೇಎಲಿನ ರೀತಿಯ, ಶೈಲಿಯ(ಲ್ಲಿ ಮಾಡಿದ, ರಚಿಸಿದ)

Rápid ರ್ಯಾಪಿಡ್ (ಗು., ನಾ.) ವೇಗವುಳ್ಳ, ವೇಗ ಗತಿಯ, ತೀವ್ರ(ತೆ ಯುಳ್ಳ); ಅಲ್ಪ ಕಾಲದಲ್ಲಿ, ಕ್ಷಿಪ್ರದಲ್ಲಿ, —ಕಾರ್ಯ ಮಾಡುವ, ಪೂರೈಸಿದ; ಬೇಗನೆಯ. (ಇಳಿಜಾರಿನ ವಿಷಯದಲ್ಲಿ) ಕಡಿದಾದ. (ನದಿಯ ಪಾತ್ರದಲ್ಲಿ) ಸೆಳವಿನಿಂದ ಕೂಡಿದ ನೀರಿನ ಕಡಿದಿಳಿತ, ರಭಸದ ಇಳಿಜಾರು ಪ್ರವಾಹ (ಜಲಪಾತವಲ್ಲ). **Rápidly** (ಕ್ರಿ. ವಿ.); **Rapídity** (ನಾ.)

Rápier ರೇಪಿಯರ್ (ನಾ.) (ಇರಿತಕ್ಕೆ ಮಾತ್ರ ಉಪಯೋಗಿಸುವ) ಹಗುರ ವಾದ ತೆಳುವಾದ ಇಬ್ಬಾಯಿಯ ಚುಚ್ಚುಗತ್ತಿ; ಇರಿಗತ್ತಿ; ಸಣ್ಣ ಕತ್ತಿ [R.-thrust (ಅನೇಕ ವೇಳೆ ರೂಪ.) ಮರ್ಮಭೇದಕವಾದ ನುಡಿ; ಇರಿ ನುಡಿ; ಚುಚ್ಚು ನುಡಿ]

Rápine ರ್ಯಾಪೈನ್ (ನಾ.) (ಅಲಂ.) ಕೊಳ್ಳೆ(ಹೊಡೆಯುವುದು); ಸುಲಿಗೆ; ದರೋಡೆ; ಅಪಹರಣ.

Rappareé ರ್ಯಾಪರೀ (ನಾ.) (ಚರಿತ್ರೆ) ೧೭ನೆಯ ಶ. ಮಾ. ದ ಐರಿಷ್ ಅನಿಯತ ಸೈನಿಕ ಅಥವಾ ದರೋಡೆಕೋರ.

Rappeé ರ್ಯಾಪೀ (ನಾ.) ಒಂದು ಬಗೆಯ ಒರಟು ಘಾಟು ನಶ್ಯ.

Rappórt ರ್ಯಾಪೋರ್ಟ್, (F) ರಾಪಾರ್ (ನಾ.) (ಮು., ಹೊಂದಿಕೆ, ಅನುವರ್ತನೆ, ಒಮ್ಮನ, ಮೊ. ಗಳಿಂದ ಕೂಡಿದ) ಸಂಬಂಧ; ವಿಶ್ವಾಸದ ಸಂಬಂಧ [Be in, (or F) en, r. with. Come into, (or F) en, r. with]

Rapprochement (F) ರಾಪ್ರೊಷ್‌ಮಾನ್ (ನಾ.) (ಮು., ರಾಜ್ಯ ರಾಜ್ಯಗಳಿಗೆ) ಹಿತಕರವಾದ, ಸೌಹಾರ್ದದ, ಸಂಬಂಧಗಳು ಪುನಃ ಸ್ಥಾಪಿತವಾಗುವುದು; ಪುನರ್ವಿಶ್ವಾಸಾರಂಭ; ಮರು ಮೈತ್ರಿ.

Rapscállion ರ್ಯಾಪ್‌ಸ್ಕ್ಯಾಲಿಯನ್ (ನಾ.) ಅಯೋಗ್ಯ; ದಗಾ ಕೋರ; ಮೋಸಗಾರ.

Rapt ರ್ಯಾಪ್ಟ್ (ಭೂ. ಕೃ., ಗು.) ಸಶರೀರವಾಗಿ ಅಥವಾ ಭಾವನೆಯಲ್ಲಿ (ಭೂಮಿಯಿಂದ, ಜೀವಂತ ಸ್ಥಿತಿಯಿಂದ, ಸಾಮಾನ್ಯ ಆಲೋಚನೆಗಳಿಂದ, ಇಂದ್ರಿಯ ಗೋಚರ ವಿಷಯಗಳಿಂದ) ಮೇಲಕ್ಕೆ ಒಯ್ಯಲ್ಪಟ್ಟ (ಅನೇಕ ವೇಳೆ *away*, *up*, ಮೊ. ಉಪ. ದೊಡನೆ); ಪರವಶನಾದ; ಮಗ್ನ, ತಲ್ಲೀನನಾದ, ತನ್ಮಯವಾದ, ಮೈಮರೆತ; ಏಕಾಗ್ರತೆಯ (Listen with r. attention)

Raptórial ರ್ಯಾಪ್ಟೋರಿಯಲ್ (ಗು., ನಾ.) (ಪ್ರಾ. ವಿ.) ಮಾಂಸಾ ಹಾರಿಯಾದ 'ರ್ಯಾಪ್ಟೋರೀಸ್' ವರ್ಗದ (ಪಕ್ಷಿ). ಹಿಂಸ್ರ (ಪಕ್ಷಿ); ಹಿಂಸ್ರ ಪಕ್ಷಿಗಳ ಅಥವಾ ಮೃಗಗಳ(ಂತಿರುವ)

Rápture ರ್ಯಾಪ್‌ಟ್ಯುರ್, —ಚರ್ (ನಾ.) ಭಾವಾವೇಶ; (ಆನಂದ) ಪರವಶತೆ; (Be in, go into, raptures ಉತ್ಸಾಹಗೊಳ್ಳು, ಉತ್ಸಾಹದಿಂದ ಮಾತನಾಡು. Raptures ಪರಮಾನಂದ). **Ráp-turous**° (ಗು.); **Rápturously** (ಕ್ರಿ. ವಿ.); **Ráptured** (ಗು.) ಪರಮಾನಂದ ಭರಿತ; (ಆನಂದ) ಪರವಶನಾದ.

Rára ávis (L) ರೇರ ಏವಿಸ್ (ನಾ.) ಅಪೂರ್ವ —ವ್ಯಕ್ತಿ, ವಸ್ತು; ಅಪೂರ್ವವಾಗಿ, ಬಹಳ ವಿರಳವಾಗಿ, —ಸಂಧಿಸುವ ವ್ಯಕ್ತಿ, ವಸ್ತು; ಅಸಾಧಾರಣ ವ್ಯಕ್ತಿ.

Rare ರೇರ್ (ಗು.) ವಿರಳವಾದ; ಒತ್ತಾಗಿಲ್ಲದ; ತೆಳುವಾದ; ಅಸಾಂದ್ರ (The r. atmosphere of the mountain tops); ಎಲ್ಲಿಯೊ ಕೆಲವು ಮತ್ತು ಅಪೂರ್ವವಾಗಿ ಇರುವ, ದೊರೆಯುವ, ನಡೆಯುವ; ಅಪೂರ್ವವಾದ; ದುರ್ಲಭ; ಸಾಧಾರಣವಾಗಿ ಕಾಣ ಬರದ; ಬಳಕೆಯಾಗಿಲ್ಲದ; ಅರಿದಾದ; ಅಸಾಧಾರಣ; ಅಪ ರೂಪವಾದ (It is r. for person, etc. to do. It is rarely that he, etc. does). ಅನುಪಮವಾದ; ಅಸಾಧಾರಣ ಉತ್ಕೃಷ್ಟತೆಯುಳ್ಳ; ಅತ್ಯುತ್ತಮವಾದ. ಬಹು ವಿನೋದಕರ, ಆಶ್ಚರ್ಯಕರ (A miracle of r. device ಅಪೂರ್ವ ರಚನೆಯ ಆಶ್ಚರ್ಯಕರ ಮಾದರಿ. Had r. fun with him). [R. earths ಕೆಲವು ಅಪೂರ್ವ ಖನಿಜಗಳಲ್ಲಿ ದೊರೆಯುವ ಕೆಲವು ಲೋಹಗಳ (ಉದಾ., Cerium, Lanthanum, Yttrium ಗಳ) ಆಕ್ಸೈಡುಗಳು]. **Rarély** (ಕ್ರಿ. ವಿ.); **Raréness** (ನಾ.); **Rarébit** (ನಾ.) =Welsh rabbit (Welsh[1] ನೋಡಿ). **Ráree-show** (ನಾ.) ಪೆಟ್ಟಿಗೆಯಲ್ಲಿ ನೋಟದ ಚಿತ್ರಗಳನ್ನಿಟ್ಟು (ರೆನ್ಸಿರುವ ಕಂಡಿಯ ಮೂಲಕ) ತೋರಿಸುವ ಪ್ರದರ್ಶನ; =Peep-show (Peep ನೋಡಿ); ಯಾವುದಾದರೂ ಪ್ರದರ್ಶನ ಅಥವಾ ನೋಟ. **Rárefy** ರೇರಿಫೈ (ಕ್ರಿ.) (ಮು., ಗಾಳಿಯ) ಸಾಂದ್ರತೆ ಅಥವಾ ಘನತ್ವ ಕಡಮೆಮಾಡು; ವಿರಳ ಮಾಡು; ತೆಳುವು ಮಾಡು. (ಮನುಷ್ಯನ ಸ್ವಭಾವ, ಮೊ. ನ್ನು) ಪರಿಶುದ್ಧ ಮಾಡು, ಸಂಸ್ಕರಿಸು, ನಯಗೊಳಿಸು; (ಭಾವ, ಮೊ. ನ್ನು) ಸೂಕ್ಷ್ಮಮಾಡು, ಸುಲಭವಾಗಿ ತಿಳಿಯದಂತೆ ಮಾಡು. ಸಾಂದ್ರತೆ ಕಡಮೆಯಾಗು; ವಿರಳವಾಗು. **Rarefáction** (ನಾ.); **Ráre-factive** (ಗು.); **Rareficátion** (ನಾ.); **Rárity** (ನಾ.) ಅಸಾಂದ್ರತೆ; ವಿರಳತೆ; ಅಪೂರ್ವತೆ; ಅಸಾಧಾರಣ, ಅಸಾಮಾನ್ಯ, —ವಸ್ತು; ಅಪೂರ್ವವಸ್ತು(ವೆಂದು ಬೆಲೆಯುಳ್ಳದ್ದು, ಭಾವನೆಯುಳ್ಳದ್ದು)

Rarébit, Ráree-show, Rárefy, etc. **Rare** ನೋಡಿ.

Ráscal ರಾಸ್ಕಲ್ (ನಾ., ಗು.) ನೀತಿ ನಿಯಮಗಳಿಲ್ಲದವನು; ಪೋಕರಿ; ದಗಾಕೋರ; ಮೋಸಗಾರ; ಠಕ್ಕ (ಅನೇಕ ವೇಳೆ ಮಗುವನ್ನು ವಿನೋದವಾಗಿ ಸಂಬೋಧಿಸುವಲ್ಲಿ: You lucky r.!). (ಗು.) (ಪ್ರಾಚೀ. ಪ್ರ.) ಜನಜಂಗುಳಿಗೆ, ಮಂದಿಜನಕ್ಕೆ, —ಸೇರಿದ (The r. rout ಸಾಮಾನ್ಯ ಜನ; ಜನಜಂಗುಳಿ). **Ráscaldom** (ನಾ.); **Ráscalism** (ನಾ.); **Rascálity** (ನಾ.); **Ráscally** (ಗು.)

Rase. **Raze** ನೋಡಿ.

Rash[1] ರ್ಯಾಷ್ (ನಾ.) ಚರ್ಮದಮೇಲೇಳುವ (ಸಣ್ಣ ಸಣ್ಣ, ಕೆಂಪು) ಗುಳ್ಳೆ, ದದ್ದಿನ ಹರವು (ದಡಾರದಲ್ಲಿ ಕಂಡುಬರುವಂಥದು)

Rash[2] ರ್ಯಾಷ್ (ಗು.) ದುಡುಕಿನ; ಉರುಬಿನ; ಉರವಣೆಯ; ಹುಚ್ಚು ಧೈರ್ಯದ; ಅವಿಚಾರದಿಂದ ನುಗ್ಗುವ; ಆತುರದ; ತಕ್ಕಷ್ಟು ಆಲೋಚನೆಯಿಲ್ಲದೆ —ವರ್ತಿಸುವ, ಮಾಡಿದ; ಮುಂದಾಲೋಚನೆ ಯಿಲ್ಲದ. **Ráshly** (ಕ್ರಿ. ವಿ.); **Ráshness** (ನಾ.)

Rásher ರ್ಯಾಷರ್ (ನಾ.) ಉಪ್ಪೂರಿಸಿ ಹೊಗೆಯಲ್ಲಿ ಒಣಗಿಸಿದ ಹಂದಿಯ (ತೊಡೆಯ) ಮಾಂಸದ ತೆಳು ಚೂರು.

Rasp ರಾಸ್ಪ್ (ಕ್ರಿ., ನಾ.) (ಎತ್ತರಿಸಿದ ಬಿಡಿ ಹಲ್ಲುಗಳುಳ್ಳ) ಒರಟು ಅರ(ದಿಂದ ಉಜ್ಜು); ಒರಟೊರಟಾಗಿ ಉಜ್ಜು; (ಒಬ್ಬನಿಗೆ, ಅವನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನಸ್ಸಿಗೆ ಅಥವಾ ಮನೋಭಾವನೆಗೆ) ಕರ್ಕಶವಾಗು, ಕರಕರಗೊಳಿಸು, ರೇಗಿಸು. ತರಿದುಹಾಕು, ಉಜ್ಜಿಹಾಕು (*Off* ಅಥವಾ *away* ಉಪ. ಜೊಡನೆ). ಕರಕರ ಸದ್ದುಮಾಡು; ಕಿರುಕುಲು ಸದ್ದುಮಾಡು. **Ráspatory** ರಾಸ್ಪಟರಿ (ನಾ.) ಶಸ್ತ್ರ ಚಿಕಿತ್ಸೆಯ(ಲ್ಲುಪಯೋಗಿಸುವ ಒಂದು ಬಗೆಯ) ಅರ.

Ráspberry ರಾಸ್‌ಬೆರಿ (ನಾ.) (ಹಲವು ಸಣ್ಣ ಸಣ್ಣ ರಸಭರಿತ ಕಣಗಳು ಶಂಕುವಿನಾಕಾರದ ಆಧಾರದಮೇಲೆ ಜೋಡಣೆಯಾಗಿ ಆದ, ಸ್ವಲ್ಪ ಹುಳಿ ರುಚಿಯುಳ್ಳ, ಬಿಳಿಯ, ಹಳದಿಯ ಅಥವಾ ಸಾ., ಕೆಂಪು ಬಣ್ಣದ) ಒಂದು ಬಗೆಯ ಹಣ್ಣು; ಇದರ ಗಿಡ; ರಾಸ್‌ಬೆರಿ —ಹಣ್ಣು, ಗಿಡ. R.-canes ರಾಸ್‌ಬೆರಿ ಗಿಡಗಳು. R.-vinegar ಈ ಹಣ್ಣಿನ ಷರಬತ್ತು.

Rásse ರ್ಯಾಸೇ, ರ್ಯಾಸಿ, **Rasse** ರ್ಯಾಸ್ (ನಾ.) ಒಂದು ಬಗೆಯ ಪುನುಗಿನ ಬೆಕ್ಕು.

Rat[1] ರ್ಯಾಟ್ (ನಾ., ಕ್ರಿ. ಅಕ.) (ದೊಡ್ಡ) ಇಲಿ (ಜಾತಿಯ ದಂಶಕ ಪ್ರಾಣಿ); ಮೂಷಕ; ಹೆಗ್ಗಣ [Musk, water, —r. (ಆಯಾ ಪದವನ್ನು ನೋಡಿ). Black or old-English r. (ಹಿಂದೆ ಇಂಗ್ಲೆಂಡಿನಲ್ಲಿದ್ದ ಬಗೆಯವು). Grey, brown, or Norway r. ಬೂದಿಲಿ, ಕಂದಿಲಿ ಅಥವಾ ನಾರ್ವೆ ಇಲಿ (ಈಗ ಇವೆ). Smell a r. ಸಂದೇಹಪಡು; ಗುಮಾನಿ ಪಡು. Like a drowned r. (ತೀರ ನೆನೆದುಹೋದವನ ವಿಷಯದಲ್ಲಿ) ಒದ್ದೆಮುದ್ದೆಯಾದ. Rats! (ಅಸಂ.) ಶುದ್ಧ ಅವಿವೇಕ! ಅಸಂಬದ್ಧ!]. (ರಾಜಕೀಯದಲ್ಲಿ) (ನಾಶವಾದ ಮನೆಯನ್ನಾಗಲಿ ಹಡಗನ್ನಾಗಲಿ ಇಲಿಗಳು ತೊರೆಯುವಂತೆ) ಕಷ್ಟದಲ್ಲಿರುವ ತನ್ನ ಪಕ್ಷವನ್ನು ತ್ಯಜಿಸಿ ಹೋಗುವವನು; ಸ್ವಪಕ್ಷ ತ್ಯಾಗಿ. ಮುಷ್ಕರಕ್ಕೆ ಸೇರಲು ತಿರಸ್ಕರಿಸುವ, ನಿಂತುಹೋದ ಮುಷ್ಕರಕಾರನ ಸ್ಥಳದಲ್ಲಿ ಹೋಗಿ ಕೆಲಸಮಾಡುವ, (ಕೂಲಿಗಾರರ ಸಂಘ ಗೊತ್ತುಪಡಿಸಿರುವ ಕೂಲಿಗಿಂತ) ಕಡಮೆ ಕೂಲಿಗೆ ಕೆಲಸಮಾಡುವ, —ಕೆಲಸಗಾರ; ಜೊತೆಗೆಲಸಗಾರರ ದ್ರೋಹಿ. R.-catcher ಇಲಿ ಹಿಡಿಯುವ (ಕಸಬಿನ)ವನು; ಇಲಿ ಹಿಡುಕ. (ಅಸಂ.) ಸಂಪ್ರದಾಯಾನುಸಾರವಲ್ಲದ ಬೇಟೆಯ ಉಡುಪು. Ratsbane ಇಲಿ(ಗಳನ್ನು ಕೊಲ್ಲುವ) ಪಾಷಾಣ (ಈಗ ಸಾಹಿತ್ಯದಲ್ಲಿ, ರೂಪಕವಾಗಿ ಮಾತ್ರ ಪ್ರ). R.'s-tail ಇಲಿಯ ಬಾಲದ ಆಕಾರದ ವಸ್ತು (ಉದಾ., ಒಂದು ಬಗೆಯ ಅರ). R.-tail ಕುದುರೆಯ ಬೋಳು ಬಾಲ; ಬೋಳು ಬಾಲದ ಕುದುರೆ; ಬಾಲದ ಕೂದಲು ಉದುರಿ ಹೋಗುವ ಕುದುರೆಯ ಒಂದು ರೋಗ [**Rát-tailed** (ಗು.). A r.-t. spoon ಬಟ್ಟಲ ಭಾಗದ ಹಿಂಬದಿಯಲ್ಲಿ ಇಲಿಯ ಬಾಲದಂತೆ ನೀಳ ಹಿಡಿಯುಳ್ಳ ಚಮಚ]. R.-trap ಇಲಿಯ—ಬೋನು, ಕತ್ತರಿ. ಇಲಿ ಕತ್ತರಿಯಂತೆ ಹಲ್ಲುಗಳುಳ್ಳ (ಬೈಸಿಕಲ್ಲಿನ ಕಾಲೊತ್ತು). (ಕ್ರಿ.) (ಮನುಷ್ಯನ ಅಥವಾ ನಾಯಿಯ ವಿಷಯದಲ್ಲಿ) ಇಲಿ ಹಿಡಿ; ಇಲಿಗಳನ್ನು ಬೇಟೆಯಾಡು, ಕೊಲ್ಲು. (ರಾಜಕೀಯದಲ್ಲಿ) ಸ್ವಪಕ್ಷ ತ್ಯಾಗಿಯಾಗು, ಸ್ವಪಕ್ಷವನ್ನು ತ್ಯಜಿಸು. **Rátter** (ನಾ.) ಇಲಿ ಹಿಡುಕ; ಇಲಿಯನ್ನು ಬೇಟೆಯಾಡುವ ನಾಯಿ, ಪ್ರಾಣಿ. ಸ್ವಪಕ್ಷ ತ್ಯಾಗಿ; ಜೊತೆಗೆಲಸಗಾರರ ದ್ರೋಹಿ. **Rátty** (ಗು.) (ನಾಮವಾಚಕದ ಅರ್ಥಗಳಲ್ಲಿ); (ಅಸಂ.) ಸಿಡುಕಿನ; ಮುಂಗೋಪದ; ಸ್ವಲ್ಪಕ್ಕೆಲ್ಲ—ಮುನಿಸಿಕೊಳ್ಳುವ, ಅಸಮಾಧಾನಪಟ್ಟುಕೊಳ್ಳುವ.

Rat[2] ರ್ಯಾಟ್ (ಕ್ರಿ. ಸಕ.; ಪ್ರಥಮ ಪುರುಷ, ಏ. ವ., ವರ್ತಮಾನ ಕಾಲ, ಸಂಭಾವನಾ ರೂಪ) (ಗ್ರಾಮ್ಯ) =Drat.

Ráta ರೇಟ (ನಾ.) ಕಡುಗೆಂಪು ಬಣ್ಣದ ಹೂವು ಬಿಡುವ ಮತ್ತು ಗಟ್ಟಿಯಾದ ಕೆಂಪು ಬಣ್ಣದ ದಾರುವುಳ್ಳ, ನ್ಯೂಸಿಲೆಂಡಿನ, ಅಂದವಾದ ಒಂದು ದೊಡ್ಡ ಮರ.

Rátable, Rátal. Rate ನೋಡಿ.

Rataplán ರ್ಯಾಟಪ್ಲ್ಯಾನ್ (ನಾ., ಕ್ರಿ.) ಮದ್ದಳೆಯ ಸದ್ದು; ಡೋಲು ಸದ್ದು. (ಕ್ರಿ.) ಮದ್ದಳೆ(ಯಂತೆ) ಬಾರಿಸು; ಡೋಲು (ಹೊಡೆಯುವಂತೆ) ಹೊಡೆ.

Rátchet ರ್ಯಾಚೆಟ್, **Ratch** ರ್ಯಾಚ್ (ನಾ., ಕ್ರಿ. ಸಕ.) ತಡೆಕೊಕ್ಕೆಯ ಸಹಾಯದಿಂದ ಒಂದು ದಿಕ್ಕಿನಲ್ಲಿ (ಎಂದರೆ, ಹಿಂದಕ್ಕೆ ಹೋಗದಂತೆ) ಚಲನೆಯನ್ನು ತಡೆದು ಮತ್ತೊಂದು ದಿಕ್ಕಿನಲ್ಲಿ (ಎಂದರೆ, ಮುಂದಕ್ಕೆ ಹೋಗುವಂತೆ) ಚಲಿಸಬಿಡುವಂತಿರುವ, ಕಂಬಿಯ ಅಥವಾ ಚಕ್ರದ ಅಂಚಿನಲ್ಲಿ ಕೊರೆದಿರುವ, ಹಲ್ಲುಸಾಲು: ತಡೆಹಲ್ಲುಸಾಲು; ತಡೆಹಲ್ಲು (ಅಂಚಿನ) ಚಕ್ರ (=R. wheel). (ಕ್ರಿ.) ತಡೆಹಲ್ಲುಸಾಲನ್ನೊದಗಿಸು; ತಡೆಹಲ್ಲು ಚಕ್ರವಿಡು; ತಡೆಹಲ್ಲು ಚಕ್ರದ ಮೂಲಕ ಚಲಿಸು; ತಡೆಹಲ್ಲುಗಳ (ಕಂಬಿಯ, ಚಕ್ರದ) ಆಕಾರ ಕೊಡು.

Rate[1] ರೇಟ್ (ನಾ.) ಒಂದು ಅಥವಾ ಎರಡೂ ಅನಿರ್ದಿಷ್ಟವಾಗಿರುವ ಎರಡು ತಂಡಗಳ ವಸ್ತುಗಳಿಗೆ ಪರಸ್ಪರವಾಗಿರುವ ಅಥವಾ ಇರಬಹುದಾದ ಒಂದು ಸಂಖ್ಯಾ ಪ್ರಮಾಣ; ದಾಮಾಷಾ ಪ್ರಮಾಣ; ಪ್ರಮಾಣ, ದರ; ಲೆಕ್ಕಾಚಾರದ ಒಂದು ವಿಧಾನ; (ಸುಂಕದ) ದರ; (ಪದಾರ್ಥದ) ಧಾರಣೆ; ಬೆಲೆ(ಯ ಪ್ರಮಾಣ); ವೇಗ (ಪ್ರಮಾಣ) [Going at the r. of six miles an hour. Can have them at the rate of 1/- a thousand. The death-r. was 19 per mille. The rate of interest, wages, etc., is to be regulated. The high rates charged by the railways. At that r. (ಬಳ. ಮಾ.) ಈ ರೀತಿ ಇರುವುದಾದರೆ; ಹಾಗಿರುವ ಪಕ್ಷದಲ್ಲಿ; ಆ ಭಾವನೆ, ಮೊ. ದು ನಿಜವಾಗಿದ್ದರೆ. At any r. ಹೀಗಾದರೂ ಹಾಗಾದರೂ; ಹೇಗೆಯೆ ಆದರೂ; ಏನೇ ಆದರೂ; ಇನ್ನೊಂದು ಭಾವ, ಪಕ್ಷ, ನಿಜವೇ ಆದರೂ; ಅಂತೂ. The low r. at which you value it. Sell at a high r. Win success at an easy r. ಅನಾಯಾಸವಾಗಿ, ಸುಲಭವಾಗಿ, —ಗೆಲ್ಲು, ಜಯಶಾಲಿಯಾಗು. Went off at a great r. ಬಹು ವೇಗವಾಗಿ—. Pauperism increases at a fearful r. —ಭಯಂಕರ ಪ್ರಮಾಣದಲ್ಲಿ ಹೆಚ್ಚುತ್ತದೆ]. (ಸ್ಥಳೀಯ ಉದ್ದೇಶಗಳಿಗಾಗಿ, ಸ್ಥಳೀಯ ಸಂಸ್ಥೆಗಳು, ವಿಧಿಸುವ) ಕಂದಾಯ, ತೆರಿಗೆ (Rates and taxes. A one-penny r. is raised for the free library). ದರ್ಜೆ [First, third, -r. (ಆಯಾ ಪದವನ್ನು ನೋಡಿ) ಮೊ. ಗಳಲ್ಲಿ ವಿನಾ ಪ್ರಾಚೀ. ಪ್ರ.]. **Rátepayer** ಪೌರಸಭೆಗೆ ತೆರಿಗೆ ತೆರಲು ಬಾಧ್ಯನಾದವನು: ತೆರಿಗೆದಾರ. **Rátable** (ಗು.) (ಪ್ರಾಚೀ. ಪ್ರ.) ಪ್ರಮಾಣಾನುಸಾರವಾದ. ಪೌರಸಭೆಯ ತೆರಿಗೆಗಳನ್ನು ಕೊಡಬೇಕಾಗುವ, ತೆರಿಗೆಗೆ ಈಡಾಗುವ, ತೆರಿಗೆ ಹಾಕಬಹುದಾದ. **Ratabílity** (ನಾ.); **Rátably** (ಕ್ರಿ. ವಿ.); **Rátal** (ನಾ.) ತೆರಿಗೆ ಹಾಕಲು, ತೆರಿಗೆಯ ಪ್ರಮಾಣವನ್ನು ಗೊತ್ತುಮಾಡಲು, ಆಧಾರವಾಗಿಟ್ಟುಕೊಂಡ (ತೆರಿಗೆದಾರನ) ಆಸ್ತಿಯ ಬೆಲೆ.

Rate (ಕ್ರಿ.) ಯೋಗ್ಯತೆ, ಬೆಲೆ, —ಅಂದಾಜು ಮಾಡು; ಬೆಲೆ ಕಟ್ಟು [I do not r. his merits high. Each offence is rated at a fixed sum by way of penalty ಆಯಾ ಅಪರಾಧಕ್ಕೆ ದಂಡ(ದ ಮೊತ್ತ) ಇಷ್ಟೆಂದು ನಿಗದಿ ಮಾಡಲಾಗಿದೆ. Over-r., under-r. (ನ್ಯಾಯವಾದುದಕ್ಕಿಂತ) ಹೆಚ್ಚು, ಕಡಮೆ, ಬೆಲೆ ಕಟ್ಟು; ಅತಿ, ಅಲ್ಪ, ಮನ್ನಣೆ ಕೊಡು]. (ನಾಣ್ಯಕ್ಕೆ, ಲೋಹಗಳಿಗೆ, ಹಣಕಾಸಿನ ಚಲಾವಣೆಯ ಮಟ್ಟವನ್ನನುಸರಿಸಿ) ನಿಗದಿಯಾದ ಬೆಲೆ ಗೊತ್ತುಮಾಡು, ಬೆಲೆ ಕಟ್ಟು (The copper coinage is rated much above its real value). (—ಎಂದು) ಭಾವಿಸು, ಪರಿಗಣಿಸು, ತಿಳಿ (I r. him among my benefactors). (ಸಾ., ಕರ್ಮಣಿಯಲ್ಲಿ) (ಸ್ಥಳೀಯ) ತೆರಿಗೆ, ಕಂದಾಯ, ಹಾಕು; ತೆರಿಗೆಗೆ ಈಡುಮಾಡು; ತೆರಿಗೆ ಹಾಕಲು (ಆಸ್ತಿಯ) ಬೆಲೆ ಕಟ್ಟು [We are highly rated for education ವಿದ್ಯಾಭ್ಯಾಸಕ್ಕಾಗಿ ನಮಗೆ ತೆರಿಗೆ ಹೆಚ್ಚುದರದಲ್ಲಿ ಹಾಕಿದ್ದಾರೆ, ನಮಗೆ ಹಾಕಿದ ತೆರಿಗೆ ದರ ಹೆಚ್ಚು. Houses are rated at a sum smaller than the rent ಬಾಡಿಗೆಗಿಂತ ಕಡಮೆ ಮೊತ್ತದಮೇಲೆ ಮನೆಗಳಿಗೆ ಕಂದಾಯ ಹಾಕಿದ್ದಾರೆ. R. up (ವಿಶೇಷ ರೀತಿಯ ಅಪಾಯಕ್ಕೆ ಈಡಾಗಬಹುದಾದ ವ್ಯಕ್ತಿಗಳು, ಮೊ. ರ ಮೇಲೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆಚ್ಚು ವಿಮೆಯ ದರವನ್ನು ವಿಧಿಸು, ಹಾಕು]. (ನಾವೆ) ಒಂದು ಗೊತ್ತಾದ ದರ್ಜೆಗೆ ಸೇರಿಸು; (—ಎಂದು) ದರ್ಜೆ, ಸ್ಥಾನಮಾನ. ಪಡೆದಿರು (*As* ಉಪ. ದೊಡನೆ). **Ráting**[1] (ಕ್ರಿಯಾರ್ಥಗಳಲ್ಲಿ); (ಮು.) ನಿಗದಿಯಾದ (ಪೌರ ಸಭೆಯ) ತೆರಿಗೆ, ಕಂದಾಯ(ದ ಮೊತ್ತ). (ನಾವೆ) (ಹಡಗಿನ ದಾಖಲೆ ಪುಸ್ತಕಗಳಲ್ಲಿ ನಮೂದಾಗಿರುವ) ಒಬ್ಬನ ಸ್ಥಾನ, ದರ್ಜೆ. (ಸಮೂಹವಾಚಕ) ಒಂದು ಗೊತ್ತಾದ ದರ್ಜೆಯ ಎಲ್ಲ ಜನರು; ಒಂದು ದರ್ಜೆಯವರು. (ಟನ್ನುಗಳ ಪ್ರಕಾರ) ತೂಕ ವನ್ನನುಸರಿಸಿ ವಿಂಗಡಿಸಿದ ಜೂಜಿನ ವಿಹಾರ ದೋಣಿಗಳ ವರ್ಗ (ಗಳಲ್ಲೊಂದು). **-ráter** (ನಾ.) (—) ಟನ್ನುಗಳ ತೂಕದ ಜೂಜಿನ ವಿಹಾರ ದೋಣಿ (10-r., 2½-r., etc.)

Rate[2] ರೇಟ್ (ಕ್ರಿ.) ಕೋಪದಿಂದ ಬಯ್ಯು, ಗದರಿಸು; (ವಿರ. ಪ್ರ.) (—ಮೇಲೆ) ರೇಗಾಡು, ಕೋಪದಿಂದ ಹಾರಾಡು (*At* ಉಪ. ದೊಡನೆ). **Ráting**[2] (ನಾ.) ಕೋಪದ ಗದರಿಕೆ; ಛೀಪೆಟ್ಟು.

Rate[3] ರೇಟ್. **Ret** ನೋಡಿ.

Rátel ರೇಟೆಲ್ (ನಾ.) ದ. ಆಫ್ರಿಕದ ಮಾಂಸಾಹಾರಿಯಾದ ಒಂದು ಚತುಷ್ಪಾದಿ; ಜೇನುತುಪ್ಪ ತಿನ್ನುವ ಕರಡಿ ಜಾತಿಯ ('ಬ್ಯಾಡ್ಜರ್') ಪ್ರಾಣಿ.

Rathe ರೇದ್, **Rath** ರ್ಯಾತ್ (ಗು.) (ಕಾವ್ಯ) (ವರ್ಷದಲ್ಲಿ ಅಥವಾ ದಿನದಲ್ಲಿ) ಕಾಲಕ್ಕೆ ಮೊದಲೇ ತಲೆದೋರುವ, ಅರಳುವ; ಅಕಾಲದ. **R.-ripe, Rathripe** ರ್ಯಾ(ರಾ)ತ್—(ಗು., ನಾ.) ಕಾಲಕ್ಕೆ ಮೊದಲೆ ಪಕ್ವವಾಗುವ, ಅಕಾಲದ (ಬಟಾಣಿ, ಸೇಬು, ಮೊ. ವು); (ರೂಪ.) ಅಕಾಲ ಪಕ್ವ.

Ráther ರಾದರ್ (ಕ್ರಿ. ವಿ.) (—ಇಂತ) ಹೆಚ್ಚಾಗಿ; ಹೆಚ್ಚು —ನಿಜವಾಗಿ, ನಿಷ್ಕರ್ಷೆಯಾಗಿ, ಯುಕ್ತವಾಗಿ, ಖಚಿತವಾಗಿ (Is r. good than bad ಒಟ್ಟಿನಮೇಲೆ ಕೆಟ್ಟದ್ದು ಎನ್ನುವುದಕ್ಕಿಂತ ಒಳ್ಳೆಯದೆನ್ನುವುದೇ ಯುಕ್ತ. Derived r. from imagination than reason. Orderliness is not the result of law; r. it is the cause of it. Late last night, or r. early this morning. The r. that ಏಕೆಂದರೆ, ಅದಕ್ಕಿಂತ ಹೆಚ್ಚಾಗಿ). ತಕ್ಕಮಟ್ಟಿಗೆ; ಸ್ವಲ್ಪಮಟ್ಟಿಗೆ; ಕೊಂಚ; ಸ್ವಲ್ಪ (I r. think you know him. The performance was r. a failure, was r. good, fell r. flat). (—ಇಂತ) ಇಷ್ಟವೆಂದು, ಉತ್ತಮ ವೆಂದು —ಸಂತೋಷವಾಗಿ (*Than* ಪದದೊಡನೆ ಸಹ) [Would much r. not go ಹೋಗುವುದಕ್ಕೆ ಅಷ್ಟೇನೂ ಇಷ್ಟವಿಲ್ಲ. He would r. have died than refused ಇಲ್ಲವೆನ್ನುವುದಕ್ಕಿಂತ ಪ್ರಾಣವನ್ನಾದರೂ ಬಿಡುತ್ತಿದ್ದನು. Use soft water r. than hard. The desire to seem clever r. than honest. He resigned r. than stifle his conscience. (*Had* ಪದ ದೊಡನೆ): I had r. err with Plato than be right with Horace]. (ಬಳ. ಮಾ., ಉತ್ತರಗಳಲ್ಲಿ) ಓಹೋ! ಅನುಮಾನವಿಲ್ಲದೆ; ನಿಸ್ಸಂದೇಹವಾಗಿ; ಇಲ್ಲವೆ ಮತ್ತೆ (Have you been here before? —Rather!)

Rátify ರ್ಯಾಟಿಫೈ (ಕ್ರಿ. ಸಕ.) (ತನ್ನ ಪರವಾಗಿ ಮತ್ತೊಬ್ಬನು ಮಾಡಿರುವ ಕರಾರನ್ನು; ವಿಹಿತ ಕ್ರಮದ ಒಪ್ಪಿಗೆ, ರುಜು ಮಾಡುವುದು, ಮೊ. ರಿಂದ) ಕಾಯಂ ಮಾಡು, ಸ್ಥಿರೀಕರಿಸು, ಊರ್ಜಿತ ಮಾಡು. **Ratificátion** (ನಾ.)

Rátio ರೇಷಿಯೋ (ನಾ.; ಬ. ವ. -os) ಎರಡು ಮೊತ್ತಗಳಿಗಿರುವ ಪರಸ್ಪರ ಭಾಜ್ಯ ಭಾಜಕ ಸಂಬಂಧ: ಪ್ರಮಾಣ (Are in the r. of three to two *or* 3 : 2. The ratios 1 : 5 & 20 : 100 are the same)

Rátiocinate, Ratiócinate ರ್ಯಾಟಿ(ಷಿ)ಯಾಸಿನೇಟ್ (ಕ್ರಿ. ಅಕ.) ತರ್ಕ ಪ್ರಕ್ರಿಯೆಗಳನ್ನನುಸರಿಸು; ಶಾಸ್ತ್ರೀಯ ರೀತಿಯಲ್ಲಿ ತರ್ಕಿಸು; ತರ್ಕ ಸರಣಿಯಲ್ಲಿ ವಿಚಾರ ಮಾಡು. **Ratiocinátion** (ನಾ.); **Ratiócinative** (ಗು.)

Rátion ರ್ಯಾಷ(ಷ್)ನ್, ರೇ— (ನಾ., ಕ್ರಿ. ಸಕ.) (ಮು., ಸೈನ್ಯದಲ್ಲಿ ಅಥವಾ ನಾವೆಯಲ್ಲಿ ಮನುಷ್ಯನಿಗೆ ಅಥವಾ ಪ್ರಾಣಿಗೆ) ದಿನಕ್ಕಿಷ್ಟೆಂದು ನಿಗದಿಯಾಗಿ ಕೊಡುವ ಆಹಾರ (ಪ್ರಮಾಣ): ದಿನ ಭತ್ಯ; ಪಡಿ; ಪಡಿತರ. (ಆಹಾರಪದಾರ್ಥಗಳ, ಸೌದೆ, ಮೊ. ಗಳ) ನಿಗದಿಯಾದ ಒಂದು ಪಾಲು, ಒಂದು ಮೊತ್ತ (*Of* ಉಪ. ದೊಡನೆ). (ಬ. ವ. ದಲ್ಲಿ) ಆಹಾರಪದಾರ್ಥಗಳು; ದಿನಸಿ. (ಕ್ರಿ.) ಕ್ಲುಪ್ತ ಪ್ರಮಾಣದ ದಿನ ಭತ್ಯಕ್ಕೆ (ಜನರನ್ನು, ಆಹಾರವನ್ನು) ಕಟ್ಟುಪಡಿಸು; ಪಡಿವ್ಯವಸ್ಥೆ ಮಾಡು. **Rátioning** (ನಾ.)

Rátional ರ್ಯಾಷನಲ್ (ಗು., ನಾ.) ವಿಚಾರಶಕ್ತಿಯುಳ್ಳ; ವಿವೇಚನೆ ಮಾಡುವ; ವಿವೇಚನೆಯುಳ್ಳ; ಯುಕ್ತಾಯುಕ್ತ ಜ್ಞಾನವುಳ್ಳ; ವಿವೇಕದ; ನ್ಯಾಯ (ಸಮ್ಮತ)ವಾದ; ಮಿತವಾದ; ಅವಿವೇಕವಲ್ಲದ; ಅತಿಯಲ್ಲದ; ಯುಕ್ತವಾದ; ಸುವಿಚಾರದ; ತರ್ಕಸಮ್ಮತವಾದ; ಯುಕ್ತಿಯುಕ್ತ. ಮತದಲ್ಲಾಗಲಿ ಆಚಾರದಲ್ಲಾಗಲಿ ಬುದ್ಧಿಗೊಪ್ಪದ್ದನ್ನು, ಯುಕ್ತಿಸಿದ್ಧವಲ್ಲದ್ದನ್ನು, ನಿರಾಕರಿಸುವ; ವಿಚಾರವಾದದ [R. dress (ಮು., ಹೆಂಗಸರು ಬೈಸಿಕಲ್ ಸವಾರಿಯ ಕಾಲದಲ್ಲಿ, ಲಂಗಕ್ಕೆ ಬದಲಾಗಿ ತೊಡುವ 'ನಿಕರ್‌ಬಾಕರ್' ಚಲ್ಲಣದ ವಿಷಯದಲ್ಲಿ) ಸಮಂಜಸವಾದ, ಉಚಿತವಾದ, —ಉಡುಪು. Has r. leanings in religion ಶ್ರುತಿ, ಪವಾಡಗಳು, ಮೊ. ಗಳ ಪ್ರಾಮಾಣ್ಯ ವಿಷಯದಲ್ಲಿ ವಿಚಾರವಾದಿಯಾಗಿದ್ದಾನೆ, ಸಂದೇಹವುಳ್ಳವನಾಗಿದ್ದಾನೆ]. (ಗಣಿತ) (ಮೊತ್ತ ಅಥವಾ ಪ್ರಮಾಣದ ವಿಷಯದಲ್ಲಿ) ಘಾತಮೂಲ ಚಿಹ್ನೆಗಳಿಲ್ಲದೆ ನಿರೂಪಿಸಬಹುದಾದ; ಅಕರಣೀ(ಗತ) (ಎದುರು ಪದ: Surd). (ನಾ.; ಬ. ವ. ದಲ್ಲಿ) = R. dress. **Rátionally** (ಕ್ರಿ. ವಿ.); **Rationálity** (ನಾ.); **Rationále** ರ್ಯಾಷಿಯೊನೇಲಿ, —ಷನೇಲಿ (ನಾ.) (ಈಗ ವಿರ. ಪ್ರ.) (ತತ್ತ್ವ, ಮೊ. ಗಳ) ಯುಕ್ತಿಪೂರ್ವಕ ವಿವರಣೆ. ನ್ಯಾಯಾಧಾರ, ತತ್ತ್ವಾಧಾರ (*Of* ಉಪ. ದೊಡನೆ). **Rátionalism** —ಸ್ಲ್‌ಮ್ (ನಾ.) ಮತದಲ್ಲಿಯ ಅತಿಮಾನುಷ ವಿಷಯಗಳನ್ನು ಸಯುಕ್ತಿಕವಾಗಿ, ಬುದ್ಧಿಗೊಪ್ಪುವಂತೆ, ವಿವರಿಸುವ ಪದ್ಧತಿ; ಉಳಿದ ಕಡೆಯಲ್ಲಿ ಹೇಗೋ ಹಾಗೆ ಮತ ವಿಷಯದಲ್ಲೂ ಯುಕ್ತಿ ಪ್ರಮಾಣವೇ ಪರಮ ಪ್ರಮಾಣವೆಂಬ ವಾದ; ಜ್ಞಾನದ(ಲ್ಲಿ) ನಿಷ್ಕೃಷ್ಟತೆಗೆ, ನಿಶ್ಚಯ ಜ್ಞಾನಕ್ಕೆ, —ಯುಕ್ತಿ ಪ್ರಮಾಣವೇ ಆಧಾರವೆಂಬ ವಾದ; ವಿಚಾರ ವಾದ; ತರ್ಕ ಪಾರಮ್ಯ ವಾದ; ಬುದ್ಧ್ಯೇಕ ಪ್ರಾಮಾಣ್ಯ ವಾದ (ಎದುರು ಪದಗಳು: Empiricism, Sensationalism). **Rátionalist** (ನಾ., ಗು.) ವಿಚಾರ ವಾದಿ(ಯಾದ). **Rationalístic** (ಗು.); **Rationalístically** (ಕ್ರಿ. ವಿ.); **Rátionalize** (ಕ್ರಿ.) ಸಯುಕ್ತಿಕವಾಗಿ, ಬುದ್ಧಿಗೊಪ್ಪುವಂತೆ, —ವಿವರಿಸು; —ವಿವರಿಸಿ ತೇಲಿಸಿಬಿಡು (*Away* ಉಪ. ದೊಡನೆ); ತರ್ಕಸಮ್ಮತ ಮಾಡು; ವಿಚಾರ ವಾದಿಯಾಗಿರು; ವಿಚಾರ ವಾದಿಯಾಗಿ ವರ್ತಿಸು. (ಗಣಿತ) ಅಕರಣೀಯವಾಗಿ ಮಾಡು. (ಅರ್ಥಶಾಸ್ತ್ರ) ಉತ್ಪತ್ತಿ ಮತ್ತು ಅನುಭೋಗ ಸರಿದೂಗುವಂತೆಯೂ, ಉತ್ಪತ್ತಿಕಾರರು ತಂತಮ್ಮಲ್ಲಿ ಸ್ಪರ್ಧಿಸದೆ ಪರಸ್ಪರ ಸಹಕರಿಸುವಂತೆಯೂ ಮತ್ತು ಬಂಡವಾಳಿಗಳೂ ಕೂಲಿಕಾರರೂ ಪರಸ್ಪರವಾಗಿ ಹೊಂದಿಕೊಂಡು ಹೋಗುವಂತೆಯೂ ಏರ್ಪಡಿಸಿ (ಒಂದು ಕೈಗಾರಿಕೆಯನ್ನು) ಸುಧಾರಿಸು; ಸಮನ್ವಯಿಸು; ಹೊಂದಿಸಿ ತಿದ್ದು. **Rationalizátion** (ನಾ.)

Rátite ರ್ಯಾಟೈಟ್ (ಗು.) (ಪಕ್ಷಿಶಾಸ್ತ್ರ) ಉಷ್ಟ್ರಪಕ್ಷಿ, 'ಈಮ್ಯೂ' ಪಕ್ಷಿ, ಮೊ. ಗಳ(ನ್ನೊಳಕೊಂಡ, ಅಡಿಗಟ್ಟಿಲ್ಲದ ಎದೆಯೆಲುಬುಳ್ಳ, Ratitae ಎಂಬ) ವರ್ಗಕ್ಕೆ ಸೇರಿದ [ಎದುರು ಪದ: Carinate (Carina ನೋಡಿ)]

Rátlin(e) ರ್ಯಾಟ್‌ಲನ್, **-ling** —ಲಿಂಗ್ (ನಾ.) (ಸಾ., ಬ. ವ. ದಲ್ಲಿ) ಹಡಗಿನ ಕೂವೆಯ ಹಗ್ಗಗಳಿಗೆ ಮೆಟ್ಟಲುಗಳಂತೆ ಅಡ್ಡಡ್ಡವಾಗಿ ಕಟ್ಟಿರುವ ಸಣ್ಣ ಹಗ್ಗ(ಗಳಲ್ಲೊಂದು); ಕೂವೆಯ ಮೆಟ್ಟಲು ಹಗ್ಗ(ಗಳು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ratoón ರಟೂನ್ (ನಾ., ಕ್ರಿ. ಅಕ.) ಕಬ್ಬನ್ನು ಕಟಾವು ಮಾಡಿದಮೇಲೆ ಬುಡದಿಂದ ಹೊರಡುವ ಹೊಸ ಮೊಳಕೆ; ಕೂಳೆ; ಕೂಳೆಕಬ್ಬು. (ಕ್ರಿ.) ಹೊಸ ಕೂಳೆಗಳು ಹೊರಡು; —ಗಳನ್ನು ಹೊರಡಿಸು.

Rat(t)án ರಟ್ಯಾನ್ (ನಾ.) ಹಲವು ಗೆಣ್ಣುಗಳಿಂದ ಕೂಡಿದ, ಉದ್ದವೂ ತೆಳುವೂ ನಮ್ಯವೂ ಆದ ಕಾಂಡಗಳುಳ್ಳ, ಈಸ್ಟ್ ಇಂಡಿಯದ ಅಡರು ತಾಳೆ ಜಾತಿ: ಬೆತ್ತದ ಗಿಡ; (ಕೈಕೋಲಾಗಿ ಅಥವಾ ಇತರ ಕೆಲಸಗಳಿಗೆ ಉಪಯೋಗಿಸುವ) ಇದರ ಕಾಂಡದ ತುಂಡು; ಬೆತ್ತ(ದ ಕೋಲು); ಹೆಣಿಗೆಯ ಬೆತ್ತ (ಬುಟ್ಟಿ, ಕುರ್ಚಿ, ಮೊ. ನ್ನು ಮಾಡಲು ಉಪಯೋಗ)

Rat-tát ರ್‍ಯಾಟ್‌ಟ್ಯಾಟ್, **Ratatát** ರ್‍ಯಾಟ—, **Rát-tat-tát** —ಟಟ್— (ನಾ.) (ಮು., ಬಾಗಿಲು ತಟ್ಟುವಾಗ ಆಗುವ) 'ತಪತಪ' ಸದ್ದು.

Rátten ರ್‍ಯಾಟನ್ (ಕ್ರಿ. ಸಕ.) (ಕೂಲಿಗಾರರಿಗೂ ಬಂಡವಾಳಗಾರರಿಗೂ ವಿವಾದಗಳುಂಟಾದಾಗ, ಕೂಲಿಗಾರ ಸಂಘದವರು ದ್ವೇಷಕ್ಕಾಗಿ ಅಥವಾ ತಮ್ಮ ನಿಯಮಗಳಂತೆ ನಡೆಯಲು ಬಲಾತ್ಕಾರಪಡಿಸುವುದಕ್ಕಾಗಿ) ಆಯುಧ ಸಲಕರಣೆಗಳು, ಯಂತ್ರ(ಸಲಕರಣೆ)ಗಳು, ಮೊ. ನ್ನು ಕಳವು ಮಾಡುವುದರಿಂದ, ಕಿತ್ತುಹಾಕುವುದರಿಂದ ಅಥವಾ ನಷ್ಟಪಡಿಸುವುದರಿಂದ (ಕೆಲಸಗಾರನನ್ನಾಗಲಿ ಯಜಮಾನನನ್ನಾಗಲಿ) ತೊಂದರೆಪಡಿಸು.

Ráttle ರ್‍ಯಾಟ್‌ಲ್ (ಕ್ರಿ., ನಾ.) ರಟರಟ —ಸದ್ದುಮಾಡು, ಮಾಡಿಸು (ಯಾವುದನ್ನಾದರೂ ಕುಲುಕಿ ಸಹ) (He rattled at the door). ಆಲೋಚನೆಯಿಲ್ಲದೆ, ಗೊತ್ತುಗುರಿಯಿಲ್ಲದೆ, —ಉತ್ಸಾಹದಿಂದ ಬಡಬಡನೆ ಮಾತನಾಡು; ಬಡಬಡಿಸು (ಹಲವು ವೇಳೆ *on*, *away*, *along*, ಉಪ. ದೊಡನೆ). ರಟರಟನೆ (ಸದ್ದಾಗುವಂತೆ) ಚಲಿಸು, ಬೀಳು; ದಡಬಡನೆ —ಗಾಡಿ ಓಡಿಸು, ಸವಾರಿ ಮಾಡು, ಓಡು (ಸಾ., *down*, *along*, *past*, ಮೊ. ಉಪ. ದೊಡನೆ). (ವರ್ತಮಾನ ಕೃ.) ಜೋರಾದ, ಬಿರುಸಾದ, ದಡಬಡಿಸುವ (A rattling wind, pace). (*Good*, ಮೊ. ಪದಗಳ ಪೂರ್ವದಲ್ಲಿ ಬಂದಾಗ) ಭರ್ಜರಿ (Had a rattling good run, dinner, etc.). (ಸರಪಣಿ, ಕಿಟಕಿ, ಮಡಕೆ ಕುಡಿಕೆ, ಮೊ. ನ್ನು) ಗಲ್‌ಗರ್, ರಟರಟ, ಎಂದು ಸದ್ದುಮಾಡು, ಮಾಡಿಸು (R. the sabre ಯುದ್ಧ ಹೂಡುವುದಾಗಿ ಹೆದರಿಸು; ಕತ್ತಿ ಝಳಪಿಸು). (ಪದ್ಯ, ಕಥೆ, ಹೆಸರು ಪಟ್ಟಿ, ಪ್ರಮಾಣವಚನ, ಮೊ. ನ್ನು) ಬಡಬಡನೆ ಹೇಳಿಬಿಡು, ಒಪ್ಪಿಸಿಬಿಡು (ಸಾ., *off*, *out*, *over*, *away*, ಮೊ. ಉಪ. ದೊಡನೆ). ಜಡಸ್ಥಿತಿಯಿಂದ ಚುರುಕುಗೊಂಡು ಏಳು(ವಂತೆ ಮಾಡು), ಎಬ್ಬಿಸು (*Up* ಉಪ. ದೊಡನೆ). (ಅಸಂ.) ಗಡಿಬಿಡಿಯೆಬ್ಬಿಸು; ತಬ್ಬಿಬ್ಬು ಹಿಡಿಸು; ಅಧೈರ್ಯಗೊಳಿಸು; ಗಾಬರಿಗೊಳಿಸು. ವೇಗವಾಗಿ ಹೋಗುವಂತೆ, ಚಲಿಸುವಂತೆ, ಮಾಡು; ಬೇಗ ಓಡಿಸು (R. fox ನರಿಯನ್ನು ಬೆನ್ನಟ್ಟಿ ಬೇಟೆಯಾಡು. R. up the anchor ಲಂಗರನ್ನು ಬೇಗ, ರಭಸದಿಂದ, ಎತ್ತು. R. bill through the House ಶಾಸನ ಸಭೆಯಲ್ಲಿ ಮಸೂದೆಯನ್ನು ದೌಡಾಯಿಸು). (ನಾ.) 'ರಟರಟ' ಎಂದು ಸದ್ದುಮಾಡುವ ಸಲಕರಣೆ ಅಥವಾ ಆಟದ ಸಾಮಾನು (ಎಚ್ಚರಿಕೆ ಕೊಡುವುದಕ್ಕಾಗಿ ಅಥವಾ ಮಕ್ಕಳನ್ನು ವಿನೋದಗೊಳಿಸುವುದಕ್ಕಾಗಿ ಉಪಯೋಗ); ಗಿಲಕೆ. ಬುಡುಬುಡುಕೆ ಹಾವಿನ ಬಾಲದಲ್ಲಿರುವ ಕೊಂಬು ಪದಾರ್ಥದ ಉಂಗುರ ತಂಡ. (ಒಣಗಿದ ಕಾಯನ್ನು ಅಲ್ಲಾಡಿಸಿದರೆ) ಬೀಜಗಳು ಗಲಗಲ ಸದ್ದುಮಾಡುವ ಸಸ್ಯಜಾತಿ (ಮು., Yellow, Red, r.). ರಟರಟ ಸದ್ದು; ಗಲಭೆ; ಗಲಾಟೆ; ಗಡಿಬಿಡಿ; ಗಲಭೆಯ ವಿನೋದ (Death-r. ಪ್ರಾಣೋತ್ಕ್ರಮಣ ಕಾಲದಲ್ಲಾಗುವ ಗಂಟಲಿನ 'ಗೊರಗೊರ' ಸದ್ದು. The rattles =Croup[2]). ಬರಿ ಮಾತುಗಳ (ಗಲಭೆಯ) ಪ್ರವಾಹ; ಬರಿ ಲೊಡಬಡ (ಮಾತು); ಗೊಡ್ಡು ಹರಟೆ. ನಿಲುಗಡೆಯಿಲ್ಲದೆ ಲೊಡಬಡನೆ ಉತ್ಸಾಹದಿಂದ ಮಾತನಾಡುವವನು; ಬಾಯಾಳಿ; ಮಾತುಗುಳಿ. R.-bag, -bladder, -box (ಅಡಿಸಿದರೆ 'ರಟರಟ' ಸದ್ದುಮಾಡಲು ಒಳಗೆ ವಸ್ತುಗಳನ್ನಿಟ್ಟು ಮಾಡಿದ) ರಟರಟ ಚೀಲ, ಗಿಲಕೆ, ಮೊ. ದು. R.-brain, -head, -pate ಪೊಳ್ಳು ತಲೆ(ಯವನು); ಬುದ್ಧಿ ಶೂನ್ಯ; [**Ráttle brained** (ಗು.), **Ráttleheaded** (ಗು.), **Ráttle-pated** (ಗು.)]. Rattlesnake ಬಾಲದಲ್ಲಿ ರಟರಟ ಸದ್ದುಮಾಡುವ ಸಲಕರಣೆಯಿರುವ, ಅಮೆರಿಕದ ಒಂದು ವಿಷಸರ್ಪ; ಬುಡುಬುಡುಕೆಯ ಹಾವು, ಗಿಲಕೆ ಹಾವು, ಬಳೆಗಡಕ ಹಾವು. Rattletrap (ನಾ., ಗು.) ಲೊಡ್ಡು (ಗಾಡಿ, ಮೊ. ದು); (ಬ. ವ. ದಲ್ಲಿ) ಕೌತುಕದ ಸಣ್ಣ ವಸ್ತುಗಳು; ಥಳುಕುಪಳುಕು ವಸ್ತುಗಳು. **Ráttler** (ಕ್ರಿಯಾರ್ಥಗಳಲ್ಲಿ). (ಮು., ಆ ಜಾತಿಯವುಗಳಲ್ಲಿ) ಸರ್ವೋತ್ಕೃಷ್ಟವಾದದ್ದು, ಅತ್ಯುತ್ತಮ ಮಾದರಿ. =(ಅಮೆ. ಸಂ.) Rattlesnake.

Rátty. **Rat**[1] ನೋಡಿ.

Raúcous ರಾಕಸ್ (ಗು.) (ದನಿ) ಒರಟಾದ, ಒಡೆದ; ಕರ್ಕಶ (ಧ್ವನಿಯ). **Raúcously** (ಕ್ರಿ. ವಿ.)

Raughty. **Rorty** ನೋಡಿ.

Rauque ರೋಕ್ (ಗು.) (ವಿರ. ಪ್ರ.) =Raucous.

Rávage ರ್‍ಯಾವೆ(ವಿ)ಜ್ (ಕ್ರಿ., ನಾ.) ಪಾಳುಗೆಡವು; ಧ್ವಂಸ ಮಾಡು; ಸೂರೆ ಮಾಡು; ಕೊಳ್ಳೆ ಹೊಡೆ; ಹಾವಳಿ ಮಾಡು. (ನಾ.) ಹಾಳು (ಗೆಡಹುವುದು); ಧ್ವಂಸ(ನ); (ಮು., ಬ. ವ. ದಲ್ಲಿ) (—ರ) ಧ್ವಂಸ —ಫಲಗಳು, ಪರಿಣಾಮಗಳು (*Of* ಉಪ. ದೊಡನೆ)

Rave[1] ರೇವ್ (ನಾ.) ಬಂಡಿಯ ಕಂಬಿ, ಹಳಿ. (ಬ. ವ. ದಲ್ಲಿ) ಬಂಡಿಯ(ಲ್ಲಿ) ಹಿಡಿಯುವ ಪ್ರಮಾಣವನ್ನು ಹೆಚ್ಚಿಸುವುದಕ್ಕಾಗಿ ಅದರ ಬದಿಗಳಿಗೆ ಸೇರಿಸಿದ ಶಾಶ್ವತವಾದ ಅಥವಾ ಕಳಚಿ ತೆಗೆಯಲಾಗುವ ಚೌಕಟ್ಟು; ಗಾಡಿಯ ಪಕ್ಕ ಕಟಕಟೆ, ಪಕ್ಕ ತಡಿಕೆ.

Rave[2] ರೇವ್ (ಕ್ರಿ., ನಾ.) ಸನ್ನಿಯಲ್ಲಿ(ಯಂತೆ) ಹುಚ್ಚುಹುಚ್ಚಾಗಿ ಮಾತನಾಡು, ಕೂಗಾಡು (ಹಲವು ವೇಳೆ *about*, *against*, *at*, *of*, *for* ಉಪ. ದೊಡನೆ) (Raving mad ಹುಚ್ಚುಹುಚ್ಚಾಗಿ ಕೂಗಾಡುತ್ತ; ತಡೆಯಲಾಗದ, ಮಿತಿಮೀರಿದ, ಹುಚ್ಚು ಹಿಡಿದು). (ಸಮುದ್ರ, ಗಾಳಿ, ಮೊ. ರ ವಿಷಯದಲ್ಲಿ) ಭೋರ್ಗರೆ, ಮೊರೆ, ಆರ್ಭಟಿಸು. (ಒಂದರ ವಿಷಯವಾಗಿ) ಮಿತಿಮೀರಿದ ಉತ್ಸಾಹದಿಂದ ಹೊಗಳು; ಹುಚ್ಚುಹುಚ್ಚಾಗಿ —ಮೆಚ್ಚಿಕೆ ತೋರಿಸು, ಕೊಂಡಾಡು (*About* ಅಥವಾ *of* ಉಪ. ದೊಡನೆ). (ಪ್ರೇಮ, ದುಃಖ, ಮೊ. ನ್ನು) ಉನ್ಮಾದ ಕೋಲಾಹಲದಿಂದ ತೋರಿಸು. (R. oneself hoarse, to sleep, etc. Storm raves itself out ಬಿರುಗಾಳಿ ಮಳೆ ಹುಚ್ಚುಹುಚ್ಚಾಗಿ ಆರ್ಭಟಿಸಿ ತಣ್ಣಗಾಗುತ್ತದೆ). (ನಾ.) (ಗಾಳಿ, ಮೊ. ಗಳ) ಅಬ್ಬರ, ಭೋರು (*Of* ಉಪ. ದೊಡನೆ). **Ráving** (ನಾ.; ಹಲವು ವೇಳೆ ಬ. ವ. ದಲ್ಲಿ) ಉನ್ಮತ್ತ ಕೋಲಾಹಲ.

Rável ರ್‍ಯಾವ್‌ಲ್ (ಕ್ರಿ., ನಾ.) [ದಾರ, ಮೊ., (ರೂಪ.) ವಿಷಯ, ಸಮಸ್ಯೆ, ಮೊ.] ಸಿಕ್ಕಾಗು, ಸಿಕ್ಕುಮಾಡು; ತೊಡಕುಮಾಡು, ತೊಡಕಾಗು; ಜಟಿಲವಾಗು, —ಮಾಡು (ಮು., ಭೂ. ಕೃ. ನಲ್ಲಿ: The ravelled skein of life). ಎಳೆ ಎಳೆಯಾಗಿ ಕಿತ್ತುಹೋಗು, ಕಿತ್ತುಬಿಡು (*Out* ಉಪ. ದೊಡನೆ). ಸಿಕ್ಕು ಬಿಡಿಸು; ತೊಡಕು ಬಿಡಿಸು (ರೂಪ. ಸಹ) (ಹಲವು ವೇಳೆ *out* ಉಪ. ದೊಡನೆ). (ನಾ.) ತೊಡಕು; ಗಂಟು; ಸಿಕ್ಕು; ಗೋಜು. (ಅಂಚು ಜೀರ್ಣವಾಗಿ) ಕಿತ್ತುಬಂದ ಎಳೆ. **Rável-ling** (ಕ್ರಿಯಾರ್ಥಗಳಲ್ಲಿ); (ಅಂಚು ಜೀರ್ಣವಾಗಿ) ಕಿತ್ತುಬಂದ ಎಳೆ, ದಾರ.

Rávelin ರ್‍ಯಾವ್‌ಲಿನ್ (ನಾ.) (ಕೋಟೆ) ಮುಖ್ಯ ಕಂದಕದ ಹೊರಗಡೆ ತಡೆಗೋಡೆಯ ಎದುರಿಗೆ, ಚಾಚು ಕೋನವಾಗುವಂತೆ ಕಟ್ಟಿದ, ಇಮ್ಮುಖದ ಹೊರ ಕಾಪು ಕಟ್ಟಡ.

Ráven[1] ರೇವ್‌ನ್ (ನಾ., ಗು.) (ಕಪ್ಪು ಗರಿಗಳೂ ಒರಟು ಧ್ವನಿಯೂ ಉಳ್ಳ, ಮುಖ್ಯವಾಗಿ ಮಾಂಸವನ್ನು ತಿಂದು ಜೀವಿಸುವ, ಅನೇಕ ವೇಳೆ ಸಾಕಿ ಪಳಗಿಸಿದ ಮತ್ತು ಜನ ಬಳಕೆಯಲ್ಲಿ ದುಶ್ಶಕುನ ಸೂಚಕವೆಂಬ ಭಾವನೆಯುಳ್ಳ) ಕಾಗೆ ಜಾತಿಯ ಒಂದು ದೊಡ್ಡ ಹಕ್ಕಿ; ಡೊಂಬ ಕಾಗೆ. (ಗು.) ಹೊಳಪುಗಪ್ಪಿನ (ಮು., r. locks ಕಪ್ಪು ಕೂದಲು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ráven² ರೇವ್‌ನ್ (ಕ್ರಿ.) ಲೂಟಿಮಾಡು ; ಕೊಳ್ಳೆ ಹೊಡೆಯುತ್ತ ಹೋಗು (*About* ಉಪ. ದೊಡನೆ) ; ಬೇಟೆಯನ್ನು, ಕೊಳ್ಳೆಯನ್ನು, —ಹುಡುಕಿಕೊಂಡು ಹೋಗು (*After* ಉಪ. ದೊಡನೆ). ಬೇಟೆ ಹಿಡಿಯುವುದಕ್ಕಾಗಿ ಸುತ್ತಾಡು, ಅಲೆದಾಡು. ಹೊಟ್ಟೆಬಾಕತನದಿಂದ, ಗಪಗಪನೆ, —ತಿನ್ನು. ಹುಚ್ಚು ಹಸಿವಿರು, ಅತ್ಯಾಶೆಯಿರು (*For* ಉಪ. ದೊಡನೆ). **Rávenous** ರ್ಯಾವ್‌ನಸ್ (ಗು.) (ಈಗ ವಿರ. ಪ್ರ.) ಕೊಳ್ಳೆ ಹೊಡೆಯುವ. ಹೊಟ್ಟೆಬಾಕತನದ ; ಅತ್ಯಾಶೆಯ (ಮು., r. hunger, eagerness, etc.). ಬಹಳ ಹಸಿವಿನಿಂದ ತಪಿಸುತ್ತಿರುವ, ಕೃಶವಾದ ; ಬಹಳ ಹಸಿವುಳ್ಳ. **Rávenously** (ಕ್ರಿ. ವಿ.) ; **Rávenousness** (ನಾ.) (ವಿರ. ಪ್ರ.)

Rávin ರ್ಯಾವಿನ್ (ನಾ.) (ಕಾವ್ಯ ; ಅಲಂ.) ಸುಲಿಗೆ, ದರೋಡೆ ; ಬೇಟೆಯನ್ನು ಹಿಡಿದು ನುಂಗುವುದು (Beast of r. ಮಾಂಸಾಹಾರಿಯಾದ ಮೃಗ ; ಹಿಂಸ್ರಮೃಗ). ಕೊಳ್ಳೆ (ಹೊಡೆದು ತಂದದ್ದು) ; ಹಿಡಿದುತಂದ ಬೇಟೆ.

Ravíne ರವೀನ್ (ನಾ.) (ಆಳವಾದ ಇಕ್ಕಟ್ಟು) ಕಮರಿ ; ಬೆಟ್ಟದಲ್ಲಿಯ ಕೊರಕಲು ; ದರಿ. **Ravíned** (ಗು.)

Rávish ರ್ಯಾವಿಷ್ (ಕ್ರಿ ಸಕ.) (ವ್ಯಕ್ತಿ ಅಥವಾ ವಸ್ತುವನ್ನು) ಬಲಾತ್ಕಾರವಾಗಿ ಎತ್ತಿಕೊಂಡುಹೋಗು, ಅಪಹರಿಸು (ಈಗ ವಿರ. ಪ್ರ.). (ಸಾವು, ಸಂದರ್ಭ, ಮೊ. ವು ವ್ಯಕ್ತಿಯನ್ನು) (ಪರಲೋಕಕ್ಕೆ) ಅಪಹರಿಸಿಕೊಂಡು ಹೋಗು ; ಬಾಳಿನಿಂದ ಎಳೆದುಕೊಂಡು ಹೋಗು ; ಕಣ್ಮರೆಮಾಡು. (ಹೆಂಗಸನ್ನು) ಬಲಾತ್ಕಾರದಿಂದ ಕೆಡಿಸು, ಅಕ್ರಮ ಸಂಭೋಗಮಾಡು; (—ಮೇಲೆ) ಅತ್ಯಾಚಾರ ನಡಸು [**Rávisher** (ನಾ.)]. ಆನಂದ ಪರವಶಮಾಡು, ಸಮ್ಮೋಹನಗೊಳಿಸು, ಮೈಮರಸು ; ಹರ್ಷಭರಿತ ಮಾಡು. **Rávishing** (ಗು.) ; **Rávishingly** (ಕ್ರಿ. ವಿ.) ; **Rávishment** (ನಾ.)

Raw ರಾ (ಗು., ನಾ., ಕ್ರಿ. ಸಕ.) ಹಸಿಯ ; ಅಟ್ಟಿಲ್ಲದ ; ಬೇಯಿಸಿಲ್ಲದ ; ಅಪಕ್ವ [R. cream ಹಾಲನ್ನು ಚೆನ್ನಾಗಿ ಕಾಯಿಸದೆ ತೆಗೆದ ಕೆನೆ : ಹಸಿಯ (ಹಾಲಿನ) ಕೆನೆ. R. brick (ಸುಟ್ಟಿಲ್ಲದ) ಹಸಿ ಇಟ್ಟಿಗೆ]. ಮೂಲ ಸ್ಥಿತಿಯಲ್ಲಿರುವ ; ಸಂಸ್ಕಾರ ಹೊಂದದ ಸ್ಥಿತಿಯಲ್ಲಿರುವ ; (ಪೂರ್ತಿಯಾಗಿ) ತಯಾರಾದದ್ದಲ್ಲದ ; ಅಸಿದ್ಧ ; ಕಚ್ಚಾ ; ಹಸಿಯ [R. silk ಗೂಡಿನಿಂದಬಿಡಿಸಿ ಸುತ್ತಿರದ (ಸ್ಥಿತಿಯಲ್ಲಿರುವ) ರೇಷ್ಮೆ ; ಕಚ್ಚಾ ರೇಷ್ಮೆ. R. cloth ತೊಳೆದು ದಟ್ಟವಾಗಿ ಮಾಡಿಲ್ಲದ (ಹೊಸ) ಬಟ್ಟೆ. R. hide ಹದಮಾಡಿಲ್ಲದ ತೊಗಲು ; ಹಸಿದೊಗಲು ; —ಲನ ಹಗ್ಗ, ಚಾ(ವ)ಟಿ. R. spirit ನೀರು ಬೆರಸಿಲ್ಲದ ಮದ್ಯ(ಸಾರ) ; ಅಪ್ಪಟ ಮದ್ಯ (ಸಾರ). R. grain (ನೆನಸಿ) ಮೊಳಕೆ ಬರಿಸಿಲ್ಲದ ಧಾನ್ಯ. R. material ಕೈಗಾರಿಕೆಯ ವಿಧಾನದಿಂದ ತಯಾರಾದ ವಸ್ತುಗಳಿಗೆ ಮೂಲವಾದ ಪದಾರ್ಥ : ಕಚ್ಚಾ ಪದಾರ್ಥ ; ಅಸಿದ್ಧವಸ್ತು (The finished product of one industry is the r. material of another. The r. material of an army is men)]. (ಕಲಾದೃಷ್ಟಿಯಿಂದ) ಒರಟಾದ, ನಯವಿಲ್ಲದ, ಅಸಂಸ್ಕೃತ. ಅನುಭವವಿಲ್ಲದ ; ಅಶಿಕ್ಷಿತ ; ನುರಿತಿಲ್ಲದ ; ಅಕುಶಲ ; ಅಚತುರ ; ಹೊಸಬ(ನಾದ) (Is a r. lad. R. recruits). ಚರ್ಮ ಸುಲಿದ ; ಮಾಂಸ ಕಾಣುವ(ಂತಿರುವ) ; ಉಜ್ಜು ಹುಣ್ಣಾದ ; (ಹೀಗೆ ಉಜ್ಜುಹುಣ್ಣಾಗಿರುವುದರಿಂದ) ಮುಟ್ಟಿದರೆ ನೋವಾಗುವ, ಸ್ಪರ್ಶಕ್ಕೆ ಸೂಕ್ಷ್ಮವಾಗಿರುವ. [R. edge (ಬಟ್ಟೆಯ ವಿಷಯದಲ್ಲಿ) ಅಂಚಿಲ್ಲದ, ಕರ ಕಟ್ಟಿಲ್ಲದ]. (ವಾತಾವರಣ, ಗಾಳಿ, ದಿನ, ಮೊ. ಗಳ ವಿಷಯದಲ್ಲಿ) ತಂಡಿಯೂ ಚಳಿಯೂ ಆದ. [R. boned ಬಹುಮಟ್ಟಿಗೆ ಮೂಳೆ ಬಿಟ್ಟುಕೊಂಡಿರುವ, ಮೂಳೆ ಕಾಣುತ್ತಿರುವ ; ನರಪೇತ(ಲ). R. head & bloody bones (ಮಕ್ಕಳನ್ನು ಹೆದರಿಸುವುದಕ್ಕೆ ಹೇಳುವ) ಕರಡಿಗುಮ್ಮ. ಸಾವಿನ ಚಿಹ್ನೆಯಾದ ತಲೆಬುರುಡೆ ಮತ್ತು ಅದರ ಕೆಳಗೆ ಕತ್ತರಿಯಾಗಿಡುವ ಎರಡೆಲುಬುಗಳು ; (ವಿಶೇಷಣವಾಗಿ ; ಕಥಾ ಶೈಲಿ, ಮೊ. ಗಳ ವಿಷಯದಲ್ಲಿ) ಒಡ್ಡೊಡ್ಡ ಘೋರ]. (ನಾ.) (ಮನುಷ್ಯನ ಅಥವಾ ಮು., ಕುದುರೆಯ ಚರ್ಮದಲ್ಲಿ) ಉಜ್ಜುಹುಣ್ಣು (ಆಗಿರುವ ಸ್ಥಳ) ; ಹಸಿಗಾಯ [Touch one on the r. ಯಾವ ವಿಷಯದ ಬಗ್ಗೆ ಒಬ್ಬನು ಬಹಳ ಸೂಕ್ಷ್ಮವೊ (ನೊಂದುಕೊಳ್ಳುವನೊ), ಆ ವಿಷಯವನ್ನೇ ಕೆಣಕಿ ಮನಸ್ಸು ನೋಯಿಸು]. (ಕ್ರಿ.) (ಮು., ಕುದುರೆಯ ಬೆನ್ನನ್ನು) ಚರ್ಮ ಸುಲಿಯುವಂತೆ, ಉಜ್ಜುಹುಣ್ಣಾಗುವಂತೆ, —ಉಜ್ಜು. **Ráwish** (ಗು.) ; **Ráwness** (ನಾ.)

Ray¹ ರೇ (ನಾ.) (ಬೆಳಕಿನ) ಕಿರಣ, ರಶ್ಮಿ ; ಕದಿರು (ಗ್ರಾಂ.) ; (ವೈಜ್ಞಾನಿಕ ಪ್ರಯೋಗದಲ್ಲಿ) ಬೆಳಕಿನ ವೇದನೆಯನ್ನುಂಟುಮಾಡಬಲ್ಲ ವಿಕಿರಣ ಶಕ್ತಿ ನಿರ್ದಿಷ್ಟ ಬಿಂದುವಿಗೆ ಹೋಗಿ ಸೇರುವ ಸರಳ ರೇಖೆ : ಸರಳ ರೇಖಾ ರಶ್ಮಿ [Rontgen rays (ರಂಟ್ಜೆನ್ ಅಥವಾ ರಾಂಟ್ಜೆನ್ ರೇಸ್) or X-rays (ಎಕ್ಸ್‌ರೇಸ್) ಸಾಮಾನ್ಯವಾದ ಬೆಳಕು ತೂರದ ಅನೇಕ ಪದಾರ್ಥಗಳನ್ನು ತಾನು ಭೇದಿಸಿಕೊಂಡು ಹೋಗುವ ಒಂದು ಬಗೆಯ ವಿಕಿರಣ ಶಕ್ತಿ : ರಾಂಟ್ಜೆನ್ ಕಿರಣಗಳು, ಎಕ್ಸ್—. Becquerel rays (ಆ ಪದವನ್ನು ನೋಡಿ)]. ಶಾಖದ ಅಥವಾ ಇತರ ಅಪ್ರಕಾಶ ಭೌತಶಕ್ತಿಯ ರಶ್ಮಿ. (ರೂಪ.) ತಿಳಿವಳಿಕೆಯನ್ನಾಗಲಿ ಪ್ರೋತ್ಸಾಹವನ್ನಾಗಲಿ ಕೊಡುವ ಪ್ರಭಾವಗಳ ಶೇಷ, ಅಂಕುರ : ಒಂದು ಕಿರಣ, ಮಿನುಗು (A r., not a r., of hope, truth, genius, etc.). (ವಿರ. ಪ್ರ.) ವೃತ್ತದ ತ್ರಿಜ್ಯ ; ವ್ಯಾಸಾರ್ಧ. ಒಂದು ಬಿಂದುವಿನ ಮೂಲಕ ಹಾದುಹೋಗುವ ಕಿರಣ ಗುಚ್ಛದಲ್ಲಿಯ (ಯಾವುದಾದರೊಂದು) ಕಿರಣ, ರೇಖಾ ಗುಚ್ಛದಲ್ಲಿಯ (ಯಾವುದಾದರೊಂದು) ರೇಖೆ ; ಕೇಂದ್ರದಿಂದ ಹೊರಹರಿಯುವ ರೇಖೆ, ಭಾಗ ಅಥವಾ ವಸ್ತು. (ಸ. ವಿ.) (ಸೇವಂತಿಗೆ, ಮೊ. ರಂಥ) ಸಂಕೀರ್ಣ ಪುಷ್ಪದ ಹೊರ ಸುತ್ತು. ನಕ್ಷತ್ರ ಮೀನಿನ ತ್ರಿಜ್ಯ ಭಾಗ. **Rayed** (ಗು.) ; **Ráyless** (ಗು.) ; **Ráylet** (ನಾ.) ಸಣ್ಣ ರಶ್ಮಿ.

Ray (ಕ್ರಿ.) (ಬೆಳಕು, ಮೊ. ಗಳ ವಿಷಯದಲ್ಲಿ, ಅಥವಾ ಆಲೋಚನೆ, ಭರವಸೆ, ಮೊ. ಗಳ ವಿಷಯದಲ್ಲಿ ರೂಪ.) ಕಿರಣ ರೂಪದಲ್ಲಿ ಹೊರ ಹೊಮ್ಮು, ಹೊರ ಬಿಡು, ಹೊರ ಹರಿ, ಹೊರ ಹರಿಸು (*Forth* ಅಥವಾ *off* ಅಥವಾ *out* ಉಪ. ದೊಡನೆ). (ಕಾವ್ಯ) ವಿಕಿರಣವಾಗು,—ಮಾಡು.

Ray² ರೇ (ನಾ.) (ಷಾರ್ಕ್ ಜಾತಿಗೆ ಸಂಬಂಧಪಟ್ಟ, ಅಗಲವಾದ ಚಪ್ಪಟೆಯ ಒಡಲುಳ್ಳ) ದೊಡ್ಡ ಸಮುದ್ರ ಮೀನಜಾತಿ. (ಮು., 'Skate' ಎಂಬ ಮೀನು)

Ráyah ರೈಯ (ನಾ.) ತುರ್ಕಿಯ ಮುಸ್ಲಿಮೇತರ ಪ್ರಜೆ.

Ráyon (F) ರೇಯನ್ (ನಾ.) ಕೃತಕ ರೇಷ್ಮೆ.

Raze, Rase ರೇಸ್ (ಕ್ರಿ. ಸಕ.) (ವಿರ. ಪ್ರ.) ಸ್ವಲ್ಪ (ಉಜ್ಜು)ಗಾಯ ಮಾಡು. ಸ್ವಲ್ಪ ತರಿ(ದು ಗಾಯಮಾಡು). ಅಳಿಸಿಬಿಡು ; (ಅಡ್ಡಗೀಟೆಳೆದು) ತೊಡೆದುಹಾಕು, ಹೊಡೆದುಹಾಕು (ರೂಪ. ವಿನಾ ವಿರ. ಪ್ರ.) (*R.* person's name from remembrance ಒಬ್ಬನ ಹೆಸರನ್ನು ಪೂರ್ತಿ ಮರೆತುಬಿಡು). (ಊರು, ಮನೆ, ಗೋಡೆ, ಮೊ. ನ್ನು) ಪೂರ್ತಿ ಧ್ವಂಸಮಾಡು, ನೆಲಸಮ ಮಾಡು, ಮಟ್ಟಹಾಕು (ಸಾ., R. to the ground)

Razeé ರಜೀ (ನಾ., ಕ್ರಿ. ಸಕ.) ಮೇಲಟ್ಟವನ್ನು(ಗಳನ್ನು) ತೆಗೆದುಹಾಕಿ ಎತ್ತರವಿಳಿಸಿದ ಹಡಗು. (ಕ್ರಿ.) (ಹಡಗನ್ನು) ಹೀಗೆ ಎತ್ತರವಿಳಿಸು, ಪರಿವರ್ತಿಸು.

Rázor ರೇಜ಼ರ್ (ನಾ., ಕ್ರಿ. ಸಕ.) ಕೂದಲು ಬೋಳಿಸುವ ಸಲಕರಣೆ ; ಕ್ಷೌರದ ಕತ್ತಿ ; ಕ್ಷುರ [Safety r. (ಚರ್ಮ ಕತ್ತರಿಹೋಗದಂತೆ ತಕ್ಕ ರಕ್ಷಣೋಪಾಯವಿರುವ) ಗಾಯಮಾಡದ ಕ್ಷೌರಕತ್ತಿ ; ಕ್ಷೇಮಕತ್ತಿ]. [R.-back ಕ್ಷೌರಕತ್ತಿಯ ಬಾಯಿಯಂತೆ ಹರಿತವಾದ ಬೆನ್ನು (ಹಲವು ವೇಳೆ ವಿಶೇಷಣವಾಗಿ: R.-b. hill. R.-b. whale = Rorqual. **Rázor-backed** (ಗು.)]. R. bill ಕ್ಷೌರಕತ್ತಿಯಾಕಾರದ ಕೊಕ್ಕು. R.-bill —ಕೊಕ್ಕುಳ್ಳ ಪಕ್ಷಿ (ಜಾತಿ) [**Rázor-billed** (ಗು.)]. [R.-edge (ಕ್ಷೌರಕತ್ತಿಯ ಬಾಯಿಯಂಥ) ಹರಿತವಾದ ಏಣು ; ಬೆಟ್ಟದ ಮೊನಚಾದ ಬೆನ್ನು, ಏಣು ; (ರೂಪ.) (ಬಹು ಎಚ್ಚರಿಕೆಯಿಂದ ವರ್ತಿಸಬೇಕಾದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಮ—ಸನ್ನಿವೇಶ, ಸಂದರ್ಭ; ಅಸಿಧಾರಾ ವ್ರತ ಸ್ಥಿತಿ. ಅತ್ಯಂತ ಸೂಕ್ಷ್ಮ —ವ್ಯತ್ಯಾಸ, ವಿಭಾಜಕ ರೇಖೆ. Keep on the r.-e. of orthodoxy. Be on a r.-e. *or* r.'s edge (ಗ್ರೀಕ್ ನುಡಿಯ ಅನುಕರಣ) ಬಹು ಅಪಾಯ(ವೊದಗುವ) ಸ್ಥಿತಿಯಲ್ಲಿರು. R.-fish, -shell (ಸಾಮಾನ್ಯ ಕ್ಷೌರಕತ್ತಿಯ ಹಿಡಿಯಂತಿರುವ ಚಿಪ್ಪುಳ್ಳ) ಇಚ್ಚಿಪ್ಪಿನ ಪ್ರಾಣಿಜಾತಿ. R.-grinder ಕ್ಷೌರಕತ್ತಿಯ ಸಾಣೆಗಾರ ; —ಸಾಣೆ ಯಂತ್ರ, ಸಾಣೆ ಕಲ್ಲು. ಹಲವು ಬಗೆಯ ಹಕ್ಕಿ. R.-strop ಕ್ಷೌರಕತ್ತಿಯ ಮಸದೊಗಲು]. (ಕ್ರಿ.) (ವಿರ. ಪ್ರ.) ಕ್ಷೌರಕತ್ತಿ ಉಪಯೋಗಿಸು ; ಕ್ಷೌರಮಾಡು ; ಬುಡ ಮುಟ್ಟ, ನುಣ್ಣಗೆ, —ಬೋಳಿಸು, ಕತ್ತರಿಸು (*Down* ಉಪ. ದೊಡನೆ)

Rázzia ರ್‍ಯಾಸ್ಸಿಯ (ನಾ.) ಕೊಳ್ಳೆಗಾಗಿ ಅಥವಾ ಗುಲಾಮರನ್ನು ಸಂಗ್ರಹಿಸುವುದಕ್ಕಾಗಿ (ಮು., ಆಫ್ರಿಕದ ಮುಸಲ್ಮಾನರು ನಡಸುವ) ಧಟ್ಟನೆಯ ಆಕ್ರಮಣ, ದಾಳಿ.

Rázzle-dazzle ರ್‍ಯಾಸ್‌ಲ್‌ಡ್ಯಾಸ್‌ಲ್ (ನಾ.) ಗಡಿಬಿಡಿ ; ಗೊಂದಲ; ಕುಡಿದಾಟದ —ದೊಬ್ಬೆ, ಕೋಲಾಹಲ. ತರಂಗ ಚಲನೆಯುಳ್ಳ ರಂಕ ರಾಟಣ.

Re[1] ರೇ (ನಾ.) ಸ್ವರಾಷ್ಟಕದ ಎರಡನೆಯ ಸ್ವರ ; ಋಷಭ (ಸ್ವರ) ; 'ರಿ'.

Re[2] ರೀ (ನಾ., Res ಶಬ್ದದ ಪಂಚಮೀ ವಿಭಕ್ತಿ ರೂಪ ; ಉಪ. ದಂತೆ ಪ್ರ.) (—ರ) ವಿಷಯದಲ್ಲಿ, ವಿಷಯವಾಗಿ, ಸಂಬಂಧದಲ್ಲಿ [(ಮು., ನ್ಯಾಯ ಶಾಸ್ತ್ರದ ಮತ್ತು ವ್ಯವಹಾರದ ಪ್ರಯೋಗಗಳಲ್ಲಿ) ಮುಂದೆ ವಿಚಾರಮಾಡ ಬೇಕಾದ ವಿಷಯವನ್ನು ನಮೂದಿಸುವ ಶಿರನಾಮೆಯ ಮೊದಲ ಪದವಾಗಿ. (ಗ್ರಾಮ್ಯ ಪ್ರಯೋಗದಲ್ಲಿ) ಸಾಮಾನ್ಯ ಪ್ರಯೋಗದ *About*, *concerning* ಪದಗಳಿಗೆ ಬದಲಾಗಿ]. Re infécta (ತನ್ನ) ಉದ್ದೇಶವನ್ನು, ಗುರಿಯನ್ನು, ಸಾಧಿಸದೆ (ಮು., return r. i.)

Re- ರೀ—, ರಿ—, ರೆ— (ಪೂ. ಪ್ರ.) ಮುಂದೆ ಹೇಳಿರುವ ಅರ್ಥಗಳಲ್ಲಿ :

(1) ಪ್ರತಿ(ಯಾಗಿ)—; ಪರಸ್ಪರ(ವಾಗಿ)—. React, reciprocate, recrimination, rejoinder, repay, revenge.

(2) ವಿರೋಧ. Rebel, recalcitrant, remonstrate.

(3) ಹಿಂದೆ, ಹಿಂದಿನ ; ಆಮೇಲೆ, ಆಮೇಲಿನ. Relic, remain, remorse.

(4) ಏಕಾಂತ; ರಹಸ್ಯ. Recluse, Recondite, remote, reticent.

(5) ಪೂರ್ತಿಯಾಗಿ ; ದೂರಕ್ಕೆ ; ಕೆಳಕ್ಕೆ. Rebate, release, renounce, repress.

(6) ಮತ್ತೆ ಮತ್ತೆ, (ಅಥವಾ ಅಧಿಕ್ಯಾರ್ಥದಲ್ಲಿ) ಬಹಳ, ತೀರಾ, ಚೆನ್ನಾಗಿ. Redolent, redouble, refine, research.

(7) ನಿಷೇಧಾರ್ಥದಲ್ಲಿ : ಅ—, ಅನ್—. Reveal, resign.

(8) ಮತ್ತೊಂದಾವೃತ್ತಿ ; ಪುನಃ ; ಮತ್ತೆ ಹೊಸದಾಗಿ ; ಹೊಸ ರೀತಿಯಲ್ಲಿ ; ಮತ್ತೊಮ್ಮೆ—ಮಾಡಿದ, ಹೇಳಿದ (ಅನೇಕ ವೇಳೆ ಹಿಂದೆ ಮಾಡಿದ್ದು, ಮೊ. ದು ಅಪೂರ್ಣವಾಗಿ ಅಥವಾ ತಪ್ಪಾಗಿ ಇದ್ದಿತೆಂದೂ ಈಗ ಬದಲಾವಣೆ, ಮೇಲ್ಪಾಡು ಅಥವಾ ಪುನರ್ರಚನೆ ಆವಶ್ಯಕವೆಂದೂ ಅರ್ಥ ಗರ್ಭಿತವಾಗಿ ಪ್ರ.)

(9) (ಮೊದಲದ್ದುದಕ್ಕೆ ವಿರುದ್ಧ ಸ್ಥಿತಿ ಅಥವಾ ಕ್ರಿಯೆ ಉಂಟಾಗಿದ್ದು ಆ ಸ್ಥಿತಿ ಅಥವಾ ಕ್ರಿಯೆ ತಪ್ಪಿ, ನಿಂತು) ಪುನಃ ಹಿಂದಿನ ಸ್ಥಿತಿಗೆ, ಪೂರ್ವ ಸ್ಥಿತಿಗೆ.

Readdréss (8) (ಕ್ರಿ. ಸಕ.) (ಲಕ್ಕೋಟೆಯ) ವಿಳಾಸ ಬದಲಾಯಿಸು. **Re-adjúst** (8) (ಕ್ರಿ. ಸಕ.) ; **Readjústment** (ನಾ.). **Re-affírm** (8) (ಕ್ರಿ. ಸಕ.) ; **Reaffirmátion** (ನಾ.). **Reaffórest** (9) (ಕ್ರಿ. ಸಕ.) ಮತ್ತೆ ಕಾಡು ಬೆಳಸು. **Reafforestátion** (ನಾ.). **Reánimate** (9) (ಕ್ರಿ. ಸಕ.) ; **Reanimátion** (ನಾ.). **Re-appárel** (8) (ಕ್ರಿ. ಸಕ.). **Reappeár** (9) (ಕ್ರಿ. ಅಕ.) ; **Reappeárance** (ನಾ.). **Reappoínt** (9) (ಕ್ರಿ. ಸಕ.) ; **Reappoíntment** (ನಾ.). **Rearíse** (9) (ಕ್ರಿ. ಅಕ.). **Rearoúse** (9) (ಕ್ರಿ. ಸಕ.). **Reárm** (8) (ಕ್ರಿ.) (ಸೈನಿಕರಿಗೆ) ಮು., ಹೊಸ ಮಾದರಿಯ ಯುದ್ಧಶಸ್ತ್ರಗಳನ್ನು ಒದಗಿಸು. **Reármament** (8) (ನಾ.). **Rearránge** (8) (ಕ್ರಿ. ಸಕ.) ; **Rearrángement** (ನಾ.). **Reascénd** (9) (ಕ್ರಿ.). **Reassémble** (9) (ಕ್ರಿ.). **Reassért** (8) (ಕ್ರಿ. ಸಕ.) ; **Reassértion** (ನಾ.). **Reasséss** (8) (ಕ್ರಿ. ಸಕ.) ; **Reasséssment** (ನಾ.). **Reassígn** (8) (ಕ್ರಿ. ಸಕ.). **Reassúme** (9) (ಕ್ರಿ. ಸಕ.) (ಈಗ ವಿರ. ಪ್ರ. ; *Resume* ಎಂಬ ಪದ ಈಗ ಇದರ ಸ್ಥಾನವನ್ನು ಆಕ್ರಮಿಸಿಕೊಂಡಿದೆ). **Reassúmption** (ನಾ.). **Reassuré** (9) (ಕ್ರಿ. ಸಕ.) ಮತ್ತೆ ಧೈರ್ಯ ಹೇಳು, ತುಂಬು ; ಆತಂಕ, ಸಂದೇಹ, ಭಯ, —ನಿವಾರಣೆಮಾಡು ; ಮತ್ತೆ ಭರವಸೆಕೊಡು. **Reassúring** (ಗು.) (ಮಾತುಗಳು, ನಡವಳಿ, ಮೊ. ಗಳ ವಿಷಯದಲ್ಲಿ) ; **Reassúringly** (ಕ್ರಿ. ವಿ.). **Rebaptíze** (8) (ಕ್ರಿ. ಸಕ.) (—ಕ್ಕೆ) ಪುನಃ ನಾಮಕರಣಮಾಡು, ಜ್ಞಾನಸ್ನಾನ ಮಾಡಿಸು ; ಹೊಸ ಹೆಸರು ಕೊಡು (ರೂಪ. ಸಹ). **Rebáptism** (ನಾ.). **Rebárbarize** (9) (ಕ್ರಿ. ಸಕ.). **Rebínd** (9) (ಕ್ರಿ. ಸಕ.) (ಮು., ಪುಸ್ತಕಕ್ಕೆ) ಮತ್ತೆ (ಹೊಸ) ರಟ್ಟು ಕಟ್ಟು. **Rebírth** (8) (ನಾ.) (ಮು.) ಹೊಸ ಅವತಾರ, ಮರುಹುಟ್ಟು, ಪುನರವತಾರ [**Rebórn** (ಭೂ. ಕೃ.)]. **Rebíte** (8) (ಕ್ರಿ. ಸಕ.) (ಕುಂದು ಕೊರತೆಗಳುಳ್ಳ ಕೊರೆದ ಫಲಕ, ಮೊ. ನ್ನು) ಆಮ್ಲದಿಂದ ಮತ್ತೆ ತಿನ್ನಿಸು, ತಿನ್ನಿಸಿ ಸರಿಪಡಿಸು. **Rebuíld** (8) (ಕ್ರಿ. ಸಕ.). **Recapítulate** (8) (ಕ್ರಿ. ಸಕ.) ಪುನಃ ಮುಖ್ಯಾಂಶಗಳನ್ನು, ಸಾರಾಂಶವನ್ನು, ಸಂಗ್ರಹಿಸಿ ಹೇಳು ; ಜಾಗ್ರತೆಯಾಗಿ ಪುನರಾವರ್ತನೆ ಮಾಡು. **Recapitulátion** (ನಾ.) ಪುನರಾವರ್ತನೆ; (ಮು., ಜೀ. ವಿ. ದಲ್ಲಿ) ಒಂದು ಪ್ರಾಣಿವರ್ಗದ ಮುಖ್ಯ ಲಕ್ಷಣಗಳು ಆ ವರ್ಗದ ಪ್ರಾಣಿಯ ಭ್ರೂಣಗಳಲ್ಲಿ ವಿಕಾಸ ಕ್ರಮದಿಂದ ಪುನರಾವರ್ತನೆಯಾಗುವುದು : ವಿಕಾಸ ಕ್ರಮದಲ್ಲಿ (ವಂಶ ಲಕ್ಷಣಗಳ) ಪುನರಾವರ್ತನೆ. **Recapítulative** (ಗು.) ; **Recapítulatory** (ಗು.). **Recápture** (9) (ಕ್ರಿ. ಸಕ., ನಾ.). **Recást** (8) (ಕ್ರಿ. ಸಕ., ನಾ.) ಹೊಸ ರೂಪ(ದಲ್ಲಿಡು, ಕೊಡು) ; ಸುಧಾರಿಸಿದ, ಉತ್ತಮಗೊಳಿಸಿದ, —ವ್ಯವಸ್ಥೆ(ಯಲ್ಲಿಡು). **Re-céde** (9) (ಕ್ರಿ.ಸಕ.); **Re-céssion** (ನಾ.). **Rechárge** (9) (ಕ್ರಿ.ಸಕ., ನಾ.) (ಬಂದೂಕಿಗೆ) ಮತ್ತೆ ಮದ್ದುಗುಂಡು ತುಂಬು, ಮತ್ತೆ ಬಾರುಮಾಡು. (ನಾ.) ಇದಕ್ಕೆ ಉಪಯೋಗಿಸಿದ ಮದ್ದುಗುಂಡಿನ ಮೊತ್ತ. **Rechrísten** (8) (ಕ್ರಿ. ಸಕ.) = Rebaptize. **Recívilize** (9) (ಕ್ರಿ. ಸಕ.); **Recivilizátion** (ನಾ.). **Reclóthe** (8) (ಕ್ರಿ. ಸಕ.). **Recoál** (8) (ಕ್ರಿ. ಸಕ.). **Recoát** (8) (ಕ್ರಿ. ಸಕ.) ಹೊಸ ವರಿಸೆ ಬಣ್ಣ ತೊಡೆ, ಬಳಿ. **Recoín** (8) (ಕ್ರಿ. ಸಕ.) ; **Recoínage** (ನಾ.). **Recólonize** (8) (ಕ್ರಿ. ಸಕ.) ; **Recolonizátion** (ನಾ.). **Recólour** (8) (ಕ್ರಿ. ಸಕ.). **Recombíne** (8) (ಕ್ರಿ. ಸಕ.) ; **Recombinátion** (ನಾ.). **Recómfort** (9). **Recommít** (8) (ಕ್ರಿ. ಸಕ.) (ಮು., ಮಸೂದೆ, ಮೊ. ನ್ನು, ಇನ್ನಷ್ಟು ಆಲೋಚಿಸಬೇಕೆಂದು) ಸಮಿತಿಗೆ ಹಿಂದಕ್ಕೆ ಕಳುಹಿಸು. **Recommítment** (ನಾ.) ; **Recommíttal** (ನಾ.). **Recompóse** (8) (ಕ್ರಿ. ಸಕ.). **Recompoúnd** (8) (ಕ್ರಿ. ಸಕ.). **Reconstítuent** (8) (ಗು., ನಾ.) ಮತ್ತೆ ಶಕ್ತಿ ಕೊಡಿಸುವ ಅಥವಾ ಅಂಗಾಂಶವನ್ನು ಹೊಸದಾಗಿ ಬೆಳಸುವ (ಔಷಧ). **Recónstitute** (8) (ಕ್ರಿ. ಸಕ.) (ಮು., ಹಿಂದೆ ನಡೆದ ಸಂಗತಿಗಳನ್ನು; ಅರ್ಥವಾಗುವಂತೆ) ಸಮಗ್ರವಾಗಿ, ಪುನಃ, —ಜೋಡಿಸು. **Reconstitútion** (ನಾ). **Re-coúnt** (8) (ಕ್ರಿ. ಸಕ., ನಾ.) (ಮು., ಚುನಾವಣೆಗಳಲ್ಲಿ : ವೋಟುಗಳ ತಪ್ಪೆಣಿಕೆಯಾಗದಂತೆ, ಅವನ್ನು) ಪುನಃ ಎಣಿಸು(ವುದು); —ಎಣಿಕೆ (Recount ಸಹ ನೋಡಿ). **Re-cóver** (8) (ಕ್ರಿ. ಸಕ.) (ಮು., ಕೊಡೆ, ಮೊ. ಗಳಿಗೆ) ಮತ್ತೆ ಹೊದಿಕೆ ಹಾಕು (Recover ಸಹ ನೋಡಿ). **Re(-)créate** (8) (ಕ್ರಿ. ಸಕ.) ಮತ್ತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಮೊದಲಿಂದ) ಸೃಷ್ಟಿಸು, ನಿರ್ಮಿಸು (Recreate ಸಹ ನೋಡಿ). **Recreátion** (ನಾ.). **Redirèct** (8) (ಕ್ರಿ. ಸಕ.) = (ಮು.) Re-address. **Redirèction** (ನಾ.). **Redistríbute** (8) (ಕ್ರಿ. ಸಕ.) [ಮು., ಶಾಸನ ಸಭೆಯ ಸ್ಥಾನಗಳಿಗೆ ಚುನಾವಣಾ ಕ್ಷೇತ್ರಗಳನ್ನು ಅಥವಾ ಒಂದೊಂದು ಚುನಾವಣಾ ಕ್ಷೇತ್ರದ ಮತ(ದಾರರ) ಸಂಖ್ಯೆಯನ್ನು] ಹೊಸ ರೀತಿಯಲ್ಲಿ ಹಂಚು, ವರ್ಗೀಕರಿಸು. **Redistribútion** (ನಾ.); **Redistríbutive** (ಗು.). **Re-enfórce** (8) (ಕ್ರಿ. ಸಕ.) (Reinforce ಹೋಲಿಸಿ). **Re-éngine** (8) (ಕ್ರಿ. ಸಕ.) (ಹಡಗು, ಮೊ. ಗಳಿಗೆ) ಹೊಸ ಎಂಜಿನು(ಗಳನ್ನು) ಒದಗಿಸು. **Re-énter** (9) (ಕ್ರಿ.) [ಇದರ ವರ್ತಮಾನ ಕೃದಂತಕ್ಕೆ ಕೆಲವು ವೇಳೆ Re-entrant ಎಂಬ ಪದದ ಅರ್ಥವಿದೆ (Re-entrant ನೋಡಿ)]. **Re-éntrance** (ನಾ.); **Re-éntry** (ನಾ.). **Re-exámine** (8) (ಕ್ರಿ. ಸಕ.) (ಮು., ಎದುರು ಪಕ್ಷದವರು ಅಡ್ಡನವಾಲು ಹಾಕಿ ಪರೀಕ್ಷೆ ಮಾಡಿದಮೇಲೆ ಅದೇ ಸಾಕ್ಷಿಯನ್ನು ಮೊದಲ ಪಕ್ಷದವರು) ಪುನಃ ಪರೀಕ್ಷೆ ಮಾಡು, ಪುನರ್ವಿಚಾರಣೆ ಮಾಡು. **Re-examinátion** (ನಾ.). **Re-expórt** (9) (ಕ್ರಿ. ಸಕ.) ಆಮದಾದ ವಸ್ತುವನ್ನು (ತಯಾರಿಕೆಗೆ ಕೊಡದೆ) ಮತ್ತೆ (ಬೇರೆ ಕಡೆಗೆ) ರಫ್ತುಮಾಡು. **Re-éxport** (ನಾ.) ಹೀಗೆ ರಫ್ತುಮಾಡಿದ ವಸ್ತು, ಸಾಮಾನು. **Re-exportátion** (ನಾ.). **Refáce** (8) (ಕ್ರಿ. ಸಕ.) (ಕಟ್ಟಡಕ್ಕೆ) ಹೊಸ ಮುಖ ಕೊಡು; ಮುಂಗಟ್ಟಡ ಹೊಸದು ಮಾಡು. **Réfill** (9) (ಕ್ರಿ. ಸಕ., ನಾ.) = Recharge. **Refít** (8) (ಕ್ರಿ., ನಾ.) (ಹೊಸ ಭಾಗಗಳನ್ನು ಹಾಕುವುದು, ಮೊ. ರಿಂದ ಹಡಗನ್ನು) ದುರಸ್ತುಮಾಡು, ಕಾರ್ಯಕ್ಕೆ ಯೋಗ್ಯಮಾಡು; (ಹಡಗು) ಹೀಗೆ ದುರಸ್ತಾಗು, ಕಾರ್ಯಕ್ಕೆ ಯೋಗ್ಯವಾಗು. (ನಾ.) —ವುದು. **Refítment** (ನಾ.). **Refloát** (9) (ಕ್ರಿ. ಸಕ.) (ನೆಲ ಹತ್ತಿದ, ನೆಲ ಕಚ್ಚಿದ, ಹಡಗನ್ನು) ಮತ್ತೆ ತೇಲಿಸು. **Réflux** (9) (ನಾ.) ಹಿಂದಕ್ಕೆ ಹರಿವು. **Refóot** (8) (ಕ್ರಿ. ಸಕ.) (ಕಾಲುಚೀಲಕ್ಕೆ) ಹೊಸ ಪಾದ(ಭಾಗ) ರಚಿಸು. **Refórest** (9) (ಕ್ರಿ. ಸಕ.) ಮತ್ತೆ—ಕಾಡಾಗಿ ಮಾಡು, ಕಾಡು ಬೆಳಸು. **Reforestátion** (ನಾ.). **Rehabílitate** (9) (ಕ್ರಿ. ಸಕ.) (ಮೊದಲಿನ ಸ್ಥಾನ ಮಾನ, ಹಕ್ಕು, ದರ್ಜೆ, ಕೀರ್ತಿ, ಸ್ಥಿತಿ—ಇವುಗಳಲ್ಲಿ) ಪುನಃ ಸ್ಥಾಪನೆ ಮಾಡು; ಪೂರ್ವ ಸ್ಥಿತಿಯಲ್ಲಿ ಮತ್ತೆ —ಸ್ಥಾಪಿಸು, ಇಡು. **Rehabilitátion** (ನಾ.). **Rehándle** (8) (ಕ್ರಿ. ಸಕ.) = (ಮು.) recast. **Rehánɡ** (8) (ಕ್ರಿ. ಸಕ.) (ಮು., ಪಟಗಳನ್ನು) ಮತ್ತೆ ತೂಗಕಟ್ಟು, ನೇತುಹಾಕು. **Rehásh** (8) (ಕ್ರಿ. ಸಕ., ನಾ.) (ಮು., ಸಾಹಿತ್ಯದ) ಹಳಸಲು, ನೀರಸ, —ವಿಷಯ(ಗಳನ್ನು ಹೊಸದಾಗಿ ಜೋಡಿಸಿಡು, ಹೊಸ ರೂಪದಲ್ಲಿಡು); ಚರ್ವಿತ ಚರ್ವಣ. **Reheár** (8) (ಕ್ರಿ. ಸಕ.) (ನ್ಯಾಯಸ್ಥಾನದಲ್ಲಿ, ವ್ಯವಹಾರವನ್ನು) ಮತ್ತೆ ವಿಚಾರಣೆ ಮಾಡು. **Reheáring** (ನಾ.). **Rehóuse** (8) (ಕ್ರಿ. ಸಕ.) ಹೊಸ ಮನೆಯನ್ನು(ಗಳನ್ನು) ಒದಗಿಸು; —ಲ್ಲಿ ಇಡು. **Reimpórt** (9) (ಕ್ರಿ. ಸಕ.), **Reímport** (ನಾ.) ರಫ್ತುಮಾಡಿದಮೇಲೆ (ಅದೇ ಸರಕನ್ನು) ಪುನಃ ಆಮದುಮಾಡು. (ನಾ.) ಹೀಗೆ ಆಮದು ಮಾಡಿದ ವಸ್ತು, ಸರಕು. **Reinsuré** (8) (ಕ್ರಿ.) (ನೌಕಾ ವಿಮೆಯ ವ್ಯಾಪಾರಿ, ಮೊ. ರ ವಿಷಯದಲ್ಲಿ: ನಷ್ಟಕ್ಕೀಡಾಗುವ ಸಂಭವದಲ್ಲಿ ಮುನ್ನೆಚ್ಚರಿಕೆಯಾಗಿ) ಮತ್ತೆ ವಿಮೆಮಾಡು. **Reinsúrance** (ನಾ.). **Reinvést** (8, 9) (ಕ್ರಿ. ಸಕ.) (ಹಣವನ್ನು) ಒಂದು ಸಾಲಪತ್ರದಿಂದ ತೆಗೆದು ಬೇರೆ ಸಾಲಪತ್ರದಲ್ಲಿ ಹಾಕು, ಬೇರೆ ಬಂಡವಾಳ(ಪತ್ರ)ದಲ್ಲಿ ಇಡು [**Reinvéstment** (ನಾ.)]. ಮತ್ತೆ ಅಧಿಕಾರದಲ್ಲಿ— ಸ್ಥಾಪಿಸು, ಇಡು (*In* ಉಪ. ದೊಡನೆ); ಮತ್ತೆ ಹಕ್ಕು, ಅಧಿಕಾರ, —ವಹಿಸಿಕೊಡು (*With* ಉಪ. ದೊಡನೆ) [**Reinvéstiture** (ನಾ.)]. **Reíssue**[1] (8) (ಕ್ರಿ. ಸಕ.); **Reíssuable** (ಗು.) (ಮು., ಹುಂಡಿಗಳ, ಬ್ಯಾಂಕು ನೋಟುಗಳ, ವಿಷಯದಲ್ಲಿ) ಪುನಃ ಪ್ರಚಾರಕ್ಕೆ ತರಬಹುದಾದ. **Reíssue**[2] (8) (ನಾ.) (ಒಂದು ಗೊತ್ತಾದ ಮುದ್ರಣರೂಪದಲ್ಲಿ ಮೊದಲು ಪ್ರಕಟವಾಗಿರುವ ಪುಸ್ತಕದ ಪ್ರತಿಗಳಲ್ಲಿ ಕೆಲವನ್ನು) ಮುದ್ರಣರೂಪದಲ್ಲಿ ಅಥವಾ ಬೆಲೆಯಲ್ಲಿ ಮಾರ್ಪಾಟುಮಾಡಿ ಹೊರಡಿಸಿದ ಮರು ಪ್ರಕಟನೆ; ಪುನರ್ಮುದ್ರಣ.

Reíterate (8) (ಕ್ರಿ. ಸಕ.) ಅದನ್ನೇ ಮತ್ತೆ(ಮತ್ತೆ) ಹೇಳು, ಮಾಡು. **Reiterátion** (ನಾ.); **Reíterative** (ಗು.). **Rekíndle** (9) (ಕ್ರಿ.). **Relíne** (9) (ಕ್ರಿ. ಸಕ.) (ಮು., ಉಡುಪಿಗೆ) ಮತ್ತೆ ಅಸ್ತರಿ ಹಾಕು. **Remán** (8, 9) (ಕ್ರಿ. ಸಕ.) ಹೊಸ ಆಳು(ಗಳನ್ನು) ಒದಗಿಸು. ಮತ್ತೆ ಮನುಷ್ಯನನ್ನಾಗಿ, ಪೌರುಷಶಾಲಿಯನ್ನಾಗಿ, ಧೈರ್ಯಶಾಲಿಯನ್ನಾಗಿ, —ಮಾಡು. **Remárgin** (8) (ಕ್ರಿ. ಸಕ.) (ಮು., ಮಾಸಿದ ಪುಸ್ತಕಗಳ ವ್ಯಾಪಾರಿಯ ವಿಷಯದಲ್ಲಿ: ಜೀರ್ಣವಾದ ಪುಸ್ತಕವನ್ನು ನೇರ್ಪುಮಾಡುವಲ್ಲಿ) ಹೊಸದಾಗಿ ಅಂಚುಬಿಡು. **Remigráte** (9) (ಕ್ರಿ. ಅಕ.) ವಲಸೆಹೋಗಿದ್ದು ಹಿಂದಿರುಗು; ಹಿಂವಲಸೆ ಬರು. **Remigrátion** (ನಾ.). **Remoúnt**[1] (8) (ಕ್ರಿ. ಸಕ., ನಾ.) (ಅಶ್ವದಳಕ್ಕೆ) ಹೊಸ ಕುದುರೆ, ಮೊ. ನ್ನು ಒದಗಿಸು. (ನಾ.) (ಸೈನ್ಯ ದಳ, ಮೊ. ಕ್ಕೆ) ಹೊಸ ಕುದುರೆಗಳ ಸರಬರಾಜು; ಹೊಸ ಕುದುರೆ. **Renúmber** (8) (ಕ್ರಿ. ಸಕ.) [ಒಂದು ಶ್ರೇಣಿ (ಮೊ. ಗಳಲ್ಲಿರುವ ವಸ್ತುಗಳು), ಮೊ. ಕ್ಕೆ ಹಳೆಯ ಕ್ರಮ ಸಂಖ್ಯೆಗಳನ್ನು ಬದಲಾಯಿಸಿ] ಹೊಸ ಕ್ರಮ ಸಂಖ್ಯೆ(ಗಳನ್ನು) ಹಾಕು. **Repaínt** (9) (ಕ್ರಿ. ಸಕ.) ಮತ್ತೆ, ಹೊಸದಾಗಿ, ಬಣ್ಣ ತೊಡೆ(ದು ಮೊದಲಿನಂತೆ ಮಾಡು); ಮೊದಲಿನಂತೆ ಮತ್ತೆ ಬಣ್ಣ ಕೊಡು, ಬಳಿ. **Repáss** (9) (ಕ್ರಿ.) (ಹಿಂದಕ್ಕೆ ಬರುವಾಗ ಅದೇ ದಾರಿಯಲ್ಲಿ, ಅದೇ ಮನೆಯ ಮುಂದೆ) ಪುನಃ ಹಾದುಹೋಗು. **Repássage** (ನಾ.). **Repercússion** (9) (ನಾ.) ಮಾರ್ದನಿ; ಪ್ರತಿಧ್ವನಿ; ಢಿಕ್ಕಿಯನಂತರ ಹಿನ್ನೆಗೆತ; ಪ್ರತಿಘಾತ. ಘಟನೆಯ ಅಥವಾ ಕಾರ್ಯದ ಪರೋಕ್ಷ ಫಲ, ಪ್ರತಿಕ್ರಿಯೆ. **Repurcússive** (ಗು.). **Repiéce** (9) (ಕ್ರಿ. ಸಕ.) ಭಾಗಗಳನ್ನು ಮರಳಿ ಜೋಡಿಸು; —ಜೋಡಿಸಿ ಪುನಃ ರಚಿಸು, ನಿರ್ಮಿಸು. **Repoínt** (9) (ಕ್ರಿ. ಸಕ.) (ಕಲ್ಲು ಕಟ್ಟಡದ ಸಂದುಗಳಿಗೆ) ಮತ್ತೆ ಸಂದುಗಾರೆ ಮಾಡು. **Repót** (8) (ಕ್ರಿ. ಸಕ.), (ಸಸ್ಯವನ್ನು ಮು., ಸಣ್ಣ ಕುಂಡದಿಂದ ತೆಗೆದು) ದೊಡ್ಡ ಕುಂಡದಲ್ಲಿ, ಬೇರೆ ಕುಂಡದಲ್ಲಿ, —ಹಾಕು, ನೆಡು. **Reprínt** (8) (ಕ್ರಿ. ಸಕ.), **Réprint** (ನಾ.) ಪುನರ್ಮುದ್ರಣ (ಮಾಡು, ಮಾಡಿದ ಗ್ರಂಥ, ಲೇಖನ, ಮೊ. ವು). **Reprodúce** (8) (ಕ್ರಿ.) (ಮು.) (—ರ) ಯಥಾವತ್ತಾದ ನಕಲು, ನಿರೂಪಣೆ, —ಮಾಡು. ಸಂತಾನೋತ್ಪತ್ತಿಯಿಂದ—ವೃದ್ಧಿಯಾಗು, ವೃದ್ಧಿಮಾಡು, ಬೆಳೆ. **Reprodúction** (ನಾ.); **Reprodúceable, Reprodúcible, Reprodúctive** (ಗು.); **Reprodúctively** (ಕ್ರಿ. ವಿ.); **Reprodúctiveness** (ನಾ.). **Repúblish** (8) (ಕ್ರಿ. ಸಕ.) (ಮು., ಪುಸ್ತಕ, ಮೊ. ನ್ನು) ಮತ್ತೆ ಪ್ರಕಟಿಸು. **Republicátion** (ನಾ.). **Resále** (9) (ನಾ.) (ಮು., ಬೆಲೆಗೆ ಕೊಂಡ ವಸ್ತುವನ್ನು) ಮತ್ತೆ ಮಾರುವುದು; ಮರು ಮಾರಾಟ; ಪುನರ್ವಿಕ್ರಯ. **Resálable** (ಗು.). **Reseát** (8) (ಕ್ರಿ. ಸಕ.) (ಮು., ಕ್ರೈಸ್ತ ದೇವಾಲಯ, ನಾಟಕ ಮಂದಿರ, ಮೊ. ರಲ್ಲಿ: ಹಳೆಯ ಪೀಠಗಳನ್ನು ತೆಗೆದುಹಾಕಿ) ಹೊಸ ಪೀಠಗಳನ್ನು ಒದಗಿಸು. **Reséll** (9) (ಕ್ರಿ. ಸಕ.) (ಮು., ಕೊಂಡಮೇಲೆ ಅದನ್ನು) ಪುನಃ—ಮಾರು, ಮಾರಾಟಮಾಡು. **Re-sét** (8) (ಕ್ರಿ. ಸಕ.) (ಮು., ರತ್ನಗಳನ್ನು) ಮತ್ತೆ —ಕೇವಣಿಸು, ಖಚಿತ ಮಾಡು. **Reshíp** (9) (ಕ್ರಿ.) ಮತ್ತೆ ಹಡಗು ಹತ್ತು; —ಹಡಗಿಗೆ ತುಂಬು, ಹಡಗಿನಲ್ಲಿಡು. **Reshípment** (ನಾ.). **Reshúffle** (8) (ಕ್ರಿ. ಸಕ.) (ಮು., ಇಸ್ಪೀಟೆಲೆಗಳನ್ನು) ಮತ್ತೆ ಕಲಸು. **Respéll** (8) (ಕ್ರಿ. ಸಕ.) (ಮು., ಭಾಷಾ ಶಾಸ್ತ್ರಕ್ಕನುಸಾರವಾಗಿ) ಪುನಃ, ಹೊಸದಾಗಿ, —ಅಕ್ಷರ ಸಂಯೋಜನೆಮಾಡು. **Restáte** (8) (ಕ್ರಿ. ಸಕ.) (ಮು., ಇನ್ನೂ ಚೆನ್ನಾಗಿ ಅರ್ಥವಾಗುವಂತೆ, ಮನದಟ್ಟಾಗುವಂತೆ) ಮತ್ತೆ ಹೇಳು. **Restátement** (ನಾ.). **Restóck** (8) (ಕ್ರಿ.) ಮತ್ತೆ ಹೊಸದಾಗಿ ಶೇಖರಣೆ ಮಾಡಿಕೊ; —ಸಾಮಾನು ದಾಸ್ತಾನುಮಾಡು, ಕೂಡಿಟ್ಟುಕೊ, ಒದಗಿಸು. **Resúmmons** (8) (ನಾ.) ಪುನಃ ಬಂದ, ಹೊರಟ, ನ್ಯಾಯಸ್ಥಾನದ ಕರೆ. **Retoúch** (8) (ಕ್ರಿ. ಸಕ., ನಾ.) (ಮು., ಪ್ರಬಂಧ, ಚಿತ್ರ, ಮೊ. ನ್ನು) ತಿದ್ದು, ಪರಿಷ್ಕರಿಸು, ಉತ್ತಮಗೊಳಿಸು(ವುದು). **Retransláte** (9) (ಕ್ರಿ. ಸಕ.) (ಮು., ಮೊದಲ ನಲ್ಲಿದ್ದ ಭಾಷೆಗೆ) ಮತ್ತೆ ಪರಿವರ್ತಿಸು. **Retranslátion** (ನಾ.).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Retrý (8) (ಕ್ರಿ. ಸಕ.) = Rehear. **Retríal** (ನಾ.). **Reválue** (8) (ಕ್ರಿ. ಸಕ.) ಹೊಸದಾಗಿ, ಮತ್ತೆ, —ಬೆಲೆಕಟ್ಟು. **Revaluátion** (ನಾ.). **Rewórd** (8) (ಕ್ರಿ. ಸಕ.) (—ರ) ಮಾತುಗಳನ್ನು ಬದಲಾಯಿಸು ; (—ನ್ನು) ಬೇರೆ ಮಾತುಗಳಲ್ಲಿ ಹೇಳು, ನಿರೂಪಿಸು.

're (ಬಳ. ಮಾ.) = Are (ಎಂಬುದರ ಸಂಕ್ಷಿಪ್ತ. We, you ಮತ್ತು they ಪದಗಳಿಗೆ ಸೇರಿ We're, you're, they're ಎಂದಾಗುತ್ತದೆ)

Reach ರೀಚ್ (ಕ್ರಿ., ನಾ.) ನೀಡು ; ಚಾಚು ; ಹರಡು ; ಪಸರಿಸು (ಅನೇಕ ವೇಳೆ *Out*, ಮೊ. ಉಪ. ಜೊಡನೆ) (Reached out his hand, its branches. A dominion reaching from the Ebro to the Carpathians —ಹರಡಿದ, ಪ್ರಸರಿಸಿದ). ಕೈ (ಮೊ. ನ್ನು) ನೀಡು, ಚಾಚು ; ನಿಲುಕು ; ಎಟಕಿಸಿಕೊಳ್ಳುವಂತೆ ಚಾಚು, ಪ್ರಯತ್ನಿಸು (ರೂಪ. ಸಹ) (You must r. out further. Mind reaches forward to an ideal ಮನಸ್ಸು ಒಂದು ಆದರ್ಶವನ್ನು, ಧ್ಯೇಯವನ್ನು, ಸಾಧಿಸಲು ಪ್ರಯತ್ನಪಡುತ್ತದೆ, ಮುಂದೆ ಹರಿಯುತ್ತದೆ. Ship reaches ahead in race). (ಗೊತ್ತಾದ ನೆರೆಯನ್ನು, ವಸ್ತುವನ್ನು, ಗುರಿಯನ್ನು) ಹೋಗಿ ಸೇರು, ಮುಟ್ಟು, ತಲುಪು ; (ಪ್ರಭಾವ) ತಾಕು, ತಟ್ಟು, ವ್ಯಾಪಿಸು [R. bottom ತಳ ಮುಟ್ಟು ; ಬುಡಕ್ಕೆ ಹೋಗು. Reached land. Could not r. his enemy (ಮು., ಕತ್ತಿಕಾಳಗ, ಮುಷ್ಟಿಕಾಳಗ—ಇವುಗಳಲ್ಲಿ). How is her conscience to be reached? ಅವಳ ಅಂತಸ್ಸಾಕ್ಷಿಗೆ ತಟ್ಟುವಂತೆ ಹೇಗೆ ಮಾಡುವುದು? Libels that the ordinary law reaches. Your letter reached me today. Every syllable reached the audience —ಕೇಳಿಸಿತು. Has reached middle age, its eighth edition. As far as eye could r. ದೃಷ್ಟಿ ಓಡುವವರೆಗೂ. My income will not r. to it]. ಕೈ ನೀಡಿ—ಕೊಡು, ತೆಗೆದುಕೊ, ಮುಂದಕ್ಕೆ ಕೊಡು (Reached him the book. Reached down his hat). [**Reách-me-down** (ಗು., ನಾ.) (ಅನಂ.) (ಮಾರಾಟಕ್ಕಾಗಿ) ಹೊಲದಿಟ್ಟಿರುವ, ಸಿದ್ಧಮಾಡಿರುವ (ಉಡುಪು)]. (ನಾ.) ಚಾಚುವುದು, ನೀಡುವುದು ; (ಕೈ, ಮೊ. ನ್ನು) ನೀಡಬಹುದಾದ ದೂರ ; (ಪ್ರಭಾವ, ಚಲನೆ, ಬುದ್ಧಿಶಕ್ತಿ, ಮೊ. ರ) ವ್ಯಾಪ್ತಿ, ಅಳವು, ಹರವು, ನಿಲುಕು, ಪರಿಮಿತಿ (Within, above, out of, beyond, one's r. ಸಾಧ್ಯ, ಅಸಾಧ್ಯ. Has a wide r. ವಿಸ್ತಾರ ವ್ಯಾಪ್ತಿಯಿದೆ. Within easy r. of the railway ರೈಲಿಗೆ, ರೈಲುದಾರಿಗೆ, —ಸಮೀಪವಾಗಿ. No help was within r.). ಅವಿಚ್ಛಿನ್ನ ವಿಸ್ತಾರ ; ಒಂದೇ ಸಮನಾದ ಹರವು (ಮು., ನದಿಯ ಎರಡು ಮುರಿವುಗಳ ಮಧ್ಯೆ ಒಟ್ಟಿಗೆ ನೋಟಕ್ಕೆ ಕಾಣುವ ನದಿಯ ಭಾಗ). (ನಾವೆ) ಹಾಯಿಯ ಮೂಲೆಹಗ್ಗದ ಉದ್ದ. **Reáchable** (ಗು.)

Reáct ರಿಯ್ಯಾಕ್ಟ್ (ಕ್ರಿ. ಅಕ.) ಪ್ರತಿ ಕ್ರಿಯೆ ಮಾಡು, ಪ್ರತಿ ಪರಿಣಾಮ ಮಾಡು ; ಉತ್ತರವಾಗಿ ವರ್ತಿಸು ; ಕರ್ತೃವಿನಮೇಲೆ ಕಾರ್ಯ ಮಾಡು (They r. upon each other ಅವು ಪರಸ್ಪರವಾಗಿ ಪ್ರತಿ ಪರಿಣಾಮ ಮಾಡುತ್ತವೆ. Tyranny reacts upon the tyrant ದಬ್ಬಾಳಿಕೆ ನಡಸುವವನು ಅದರ ಪರಿಣಾಮಕ್ಕೆ ಒಳಪಡುತ್ತಾನೆ). (ರ. ವಿ. ; ಮತ್ತೊಂದಕ್ಕೆ ಸೇರಿಸಿದ ವಸ್ತು ಅದರಮೇಲೆ) ರಾಸಾಯನಿಕ —ಕಾರ್ಯಮಾಡು, ಕ್ರಿಯೆಯನ್ನುಂಟುಮಾಡು ; ರಾಸಾಯನಿಕ ಗುಣ, ರಾಸಾಯನಿಕ ಪದಾರ್ಥ, —ಕಾಣುವಂತೆ ಮಾಡು, ಪ್ರಕಟಿಸು (Nitrous oxide reacts upon the metal). ಪ್ರಚೋದನೆಗೆ ಪ್ರತಿಕ್ರಿಯೆ ತೋರು, ತಕ್ಕಂತೆ ವರ್ತಿಸು (*To*) ; (ಒಂದು ಪ್ರಭಾವಕ್ಕೊಳಗಾಗಿ) ಮಾರ್ಪಾಟು ಹೊಂದು ; ಮಾರ್ನಡತೆ, ಮರು ನಡತೆ, —ತೋರು ; (ಸೈನ್ಯ) ಪ್ರತಿಧಾಳಿ(ಗಳನ್ನು) ಮಾಡು ; ಪ್ರತ್ಯಾಕ್ರಮಣ ಮಾಡು. (—ಕ್ಕೆ)ವಿಕರ್ಷಣವಾಗು, ವಿರುದ್ಧವಾಗಿ ವರ್ತಿಸು(*Against* ಉಪ. ಜೊಡನೆ) ; ಮರಳು, ಹಿಮ್ಮೆಟ್ಟು. **Reáctive** (ಗು.) ; **Reactívity** (ನಾ.) ; **Reáction** (ನಾ.) ಪ್ರತಿ ಕ್ರಿಯೆ; ಪ್ರತಿ ಪರಿಣಾಮ (ಮು., Action & r. ಕ್ರಿಯೆ ಮತ್ತು ಪ್ರತಿಕ್ರಿಯೆ ; ವರ್ತನೆ ಮತ್ತು ಪ್ರತಿವರ್ತನೆ). (ರ. ವಿ.) (ಒಂದು ಪದಾರ್ಥ ಮತ್ತೊಂದು ಪದಾರ್ಥದಲ್ಲುಂಟುಮಾಡುವ) ರಾಸಾಯನಿಕ ಕಾರ್ಯ; ಉತ್ಪಾದಿತ ಕಾರ್ಯ, —ಕ್ರಿಯೆ ; (ಬಾಹ್ಯ ಪ್ರಚೋದನೆಗೆ ಅಂಗ, ಮೊ. ರಲ್ಲಿ ತಲೆದೋರುವ) ಪ್ರತಿ ವರ್ತನೆ, ಪ್ರತಿ ಕ್ರಿಯೆ. ವಿರುದ್ಧ ಸ್ಥಿತಿಯಿದ್ದು ಪೂರ್ವ ಸ್ಥಿತಿಗೆ ಮರಳುವುದು ; ವಿಮುಖ ಪರಿಣಾಮ (ಉದಾ., ತಣ್ಣೀರಿನ ಸ್ನಾನ ಮಾಡಿದಮೇಲೆ ತೋರುವ ಉತ್ಸಾಹ, ಲವಲವಿಕೆ. ಉದ್ರೇಕ ಮುಗಿದನಂತರ ಬರುವ ಮನಸ್ಸಿನ ಕುಗ್ಗು). (ಸೈನ್ಯ) ಪ್ರತಿ ಧಾಳಿ. (ಮು., ರಾಜಕೀಯದಲ್ಲಿ) ಹಿನ್ನಡೆ, ಪ್ರಗತಿ ವಿರೋಧ [**Reáctionary** (ಗು., ನಾ.) ಪ್ರಗತಿ ವಿರೋಧಿ, ಪ್ರಗತಿ ಪರಾಙ್ಮುಖಿ]. (ನಿಸ್ತಂತು ವಾರ್ತೆ) ದುರ್ಬಲ ಸಂಕೇತಗಳನ್ನು ಬಲಗೊಳಿಸುವ ವಿಧಾನ. **Reáctionist** (ನಾ., ಗು.)

Read ರೀಡ್ (ಕ್ರಿ.) (ಭೂತ., ಭೂ. ಕೃ. Read ರೆಡ್ ; ನಾ.) (ಬುದ್ಧಿಶಕ್ತಿಯನ್ನುಪಯೋಗಿಸಿ, ಮಾನಸಿಕವಾಗಿ) ಅರ್ಥಮಾಡು, —ಮಾಡಿಕೊ ; ಅರ್ಥ ಹೇಳು ; ಮುಂದಾಗುವುದನ್ನು ಹೇಳು, ತಿಳಿಸು ; ಭವಿಷ್ಯ ಹೇಳು [R. dream, riddle, omen, futurity, men's thoughts *or* faces. R. person's hand (ಹಸ್ತಸಾಮುದ್ರಿಕಿಯಂತೆ) ಕೈ ನೋಡಿ (ಭವಿಷ್ಯ) ಹೇಳು. R. the sky (ಜ್ಯೋತಿಷಿಯಂತೆ ಅಥವಾ ಪವನಶಾಸ್ತ್ರಜ್ಞನಂತೆ) ಆಕಾಶ(ಸ್ಥ ಕಾಯಗಳ) ಪರೀಕ್ಷೆ ಮಾಡು]. ಚಿತ್ರಲಿಪಿ, ಸಂಕೇತ, ಮೊ. ಗಳಿಂದ ಸೂಚಿತವಾದ ಶಬ್ದಗಳನ್ನು ಅಥವಾ ಅರ್ಥವನ್ನು (ಮಾತನಾಡುವ ಭಾಷೆಗೆ) ಪರಿವರ್ತಿಸು, ಪರಿವರ್ತಿಸಿ ಹೇಳು ; ಓದು, ಓದಿ ಹೇಳು (Reads or can r. hieroglyphs, shorthand, the clock, the Morse system, music, several languages. Does not r. or write). (ಪುಸ್ತಕ, ಕಥೆ, ಕಾಗದಪತ್ರ, ಮೊ. ನ್ನು) (ಮನಸ್ಸಿನಲ್ಲಿ) ಓದಿಕೊ, (ಗಟ್ಟಿಯಾಗಿ) ಓದು, ಪಠಿಸು, ವಾಚಿಸು (*Aloud, out, off,* etc. ; *over, through* ಕ್ರಿ. ವಿ. ಜೊಡನೆ ಸಹ) [Reads well (ಸ್ಪಷ್ಟವಾದ ಉಚ್ಚಾರಣೆಯಿಂದ, ಅರ್ಥವಾಗುವಂತೆ) ಚೆನ್ನಾಗಿ ಓದುತ್ತಾನೆ. Was reading Plato. R. me off the list ಪಟ್ಟಿಯನ್ನು ನನಗೆ ಗಟ್ಟಿಯಾಗಿ ಓದಿ ಹೇಳು. The Bible is the most r. of all books. R. one a lesson (ಒಬ್ಬನಿಗೆ) ಬುದ್ಧಿ ಹೇಳು, ಎಚ್ಚರಿಕೆ ಹೇಳು. The bill was r. for the first time ಮಸೂದೆ ಶಾಸನ ಸಭೆಯ ಅಂಗೀಕಾರಕ್ಕಾಗಿ ಮೊದಲ ಸಲ ಮಂಡಿಸಲ್ಪಟ್ಟಿತು, ತರಲ್ಪಟ್ಟಿತು. Seldom reads French ಅವನು ಫ್ರೆಂಚ್ (ಲೇಖನಗಳನ್ನು, ಗ್ರಂಥಗಳನ್ನು) ಓದುವುದು ಅಪರೂಪ]. ವ್ಯಾಸಂಗ ಮಾಡು, ಅಧ್ಯಯನ ಮಾಡು (ಹಲವು ವೇಳೆ *up* ಉಪ. ಜೊಡನೆ) [Is reading law ನ್ಯಾಯಶಾಸ್ತ್ರ, ನ್ಯಾಯವಾದಿ ಪರೀಕ್ಷೆಗೆ, —ಓದುತ್ತಿದಾನೆ. Shall not r. for honours ಆನರ್ಸ್ ಪರೀಕ್ಷೆಗೆ ವ್ಯಾಸಂಗ ಮಾಡುವುದಿಲ್ಲ, ಓದುವುದಿಲ್ಲ. Reading man ಓದಾಳಿ ; ವ್ಯಾಸಂಗಶೀಲ. Has r. much]. [(ಭೂ. ಕೃ., ಕರ್ತರಿಯರ್ಥದಲ್ಲಿ ಗುಣವಾಚಕವಾಗಿ ಪ್ರ. ; Well, deeply, slightly, little, ಮೊ. ಪದದೊಡನೆ) (ಮು., ಈಗ well-r. —ಲ್ಲಿ ಪರಿಣತ, ಪರಿಶ್ರಮವುಳ್ಳ, ಪಾಂಡಿತ್ಯವುಳ್ಳ, ಚೆನ್ನಾಗಿ ಓದಿದ). An Oxford Man, extremely r. in Greek. To hear a r. speech]. (ಗ್ರಂಥ, ಮೊ. ಗಳಲ್ಲಿ) ಹೇಳಿರು(ವುದನ್ನು ಕಂಡಿರು), ಓದಿರು (Revenge, we r., is wild justice ಸೇಡು ತೀರಿಸಿಕೊಳ್ಳುವುದು ಅನಾಗರಿಕ, ಕ್ರೂರ, ನ್ಯಾಯವೆಂದು ಹೇಳಿದೆ, ಓದಿದ್ದೇವೆ. I have r. somewhere that—. Have r. of it ಆ ವಿಚಾರ ಓದಿ ಬಲ್ಲೆ, ಓದಿದ್ದೇನೆ). (ಹೇಳಿಕೆಯನ್ನು, ವರ್ತನೆಯನ್ನು) (ಒಂದು ಗೊತ್ತಾದ ರೀತಿ) ಅರ್ಥ ಮಾಡು (May be read several ways. My silence is not to be r. as consent). ಆಶಯವೆಂದು, ಉದ್ದೇಶವೆಂದು, ಫಲಸುವುದೆಂದು, ಗರ್ಭಿತವೆಂದು, ಅರ್ಥವೆಂದು, —ಊಹಿಸು, ಅಭಿಪ್ರಾಯಪಡು, ತಿಳಿ [You r. too much into the text ಮೂಲದಲ್ಲಿರುವುದಕ್ಕೆ ಅತಿ ಹೆಚ್ಚು ಅರ್ಥ ಊಹಿಸುತ್ತೀಯೆ, ಮಾಡುತ್ತೀಯೆ. In their pleas for reform I r. Protection ಸುಧಾರಣೆಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೇಕೆಂಬ ಅವರ ಕಾರಣಗಳಿಂದ (ವ್ಯಾಪಾರದ ಅಥವಾ ಕೈಗಾರಿಕೆಯ) ರಕ್ಷಣೆ ಕೇಳುತ್ತಿದ್ದಾರೆಂದು ನನಗೆ ಅನ್ನಿಸುತ್ತದೆ, ಅಭಿಪ್ರಾಯವಾಗುತ್ತದೆ. R. between the lines (Line[2] ಇ. ನೋಡಿ)]. (ಸಂಪಾದಕನ ವಿಷಯದಲ್ಲಿ) ಗ್ರಂಥಕರ್ತ ಬಹುಶಃ ಉಪಯೋಗಿಸಿದ ಪದವೆಂದು (ಪಾಠವೆಂದು) ಕೊಡು (Bentley reads *peraeque*). (ಹೇಳಿಕೆಗಳ ತಪ್ಪು ತಿದ್ದುವಲ್ಲಿ ಹಾಸ್ಯವಾಗಿ: For *white* read *black* & the account may be accepted). ಓದಿಯೋದಿ ಒಂದು ಸ್ಥಿತಿಗೆ ಬರು; ಒಂದು ಸ್ಥಿತಿಗೆ ಬರುವವರೆಗೂ ಓದು [R. me to sleep. R. himself stupid ಓದಿ ಓದಿ ಮಂಕುಭಟ್ಟನಾದ. R. himself hoarse, etc. R. oneself *in* (ಹೊಸ ಪಾದ್ರಿಯ ವಿಷಯದಲ್ಲಿ) ಬಹಿರಂಗವಾಗಿ ೩೯ ನಿಯಮಗಳನ್ನು ಓದಿ ಅಧಿಕಾರ ವಹಿಸಿಕೊ]. (ಅಳತೆ ತೋರಿಸುವ ಯಂತ್ರಸಲಕರಣೆಗಳ ವಿಷಯದಲ್ಲಿ) (—) ಸಂಖ್ಯೆಯನ್ನು ತೋರಿಸು (Thermometer reads 33°). (ಓದಿದಾಗ) ಕೇಳುವವರಿಗೆ, ಓದುವವರಿಗೆ (—ಎಂದು) ಕಾಣಬರು, ಭಾವನೆ ಕೊಡು (Well, ill, ಮೊ. ಪದದೊಡನೆ) (Play reads better than it acts ನಾಟಕ ಆಡುವುದಕ್ಕಿಂತ ಓದುವುದಕ್ಕೆ ಚೆನ್ನಾಗಿದೆ. Reads like a threat, translation). (ನಾ.) ಓದುವುದರಲ್ಲಿ ಕಳೆದ ಹೊತ್ತು (Have a short, long, good, quiet, r.). **Reádable** (ಗು.) ಓದಬಹುದಾದ; ಸ್ವಾರಸ್ಯವಾಗಿ ಬರೆದಿರುವ; ಮನೋರಂಜಕ. (ವಿರ. ಪ್ರ.) (ಓದಲಾಗುವಂತೆ) ಸ್ಫುಟವಾದ, ಸ್ಪಷ್ಟವಾದ. **Read-ability** (ನಾ.); **Reádableness** (ನಾ.); **Reádably** (ಕ್ರಿ. ವಿ.); **Reáder** (ನಾ.) (ಕ್ರಿಯಾರ್ಥಗಳಲ್ಲಿ). ಪ್ರಕಟನೆಗಾಗಿ ಬಂದ ಹಸ್ತಪ್ರತಿಗಳನ್ನು ಓದಿ ವರದಿಮಾಡಲು, ಸಲಹೆ ಕೊಡಲು, ಪ್ರಕಾಶಕನಿಂದ ನೇಮಕನಾದವನು: ಹಸ್ತಪ್ರತಿಯ —ಸಲಹೆಗಾರ, ವಾಚಕ, ಓದುಗ. ಕರಡಚ್ಚು (ಪ್ರತಿಯನ್ನು) ತಿದ್ದುವವನು. (ಕ್ರೈಸ್ತ ಆರಾಧನ ಮಂದಿರದಲ್ಲಿ) ಆರಾಧನೆಗೆ ಸಂಬಂಧಿಸಿದ ಸ್ತೋತ್ರ ಪಾಠಗಳನ್ನೂ ಮಂತ್ರಗಳನ್ನೂ ಗಟ್ಟಿಯಾಗಿ ಓದಲು ನೇಮಕನಾದವನು: ಮಂತ್ರಪಾಠಕ, ಸ್ತೋತ್ರ ಪಾಠಕ (=Lay-r.). (ಕೆಲವು ವಿ. ವಿ. ನಿ., ಮೊ. ಗಳಲ್ಲಿ) ಅಧ್ಯಾಪಕ (R. in Roman law, etc.). (ಒಂದು ಭಾಷೆಯನ್ನು ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗಾಗಿ ಸಿದ್ಧಗೊಳಿಸಿದ) ಪಾಠ ಸಂಗ್ರಹ (ಪುಸ್ತಕ); ಪಾಠ ಪುಸ್ತಕ; ವಾಚನ ಪುಸ್ತಕ. **Reádership** (ನಾ.); **Reád-ing** (ಕ್ರಿಯಾರ್ಥಗಳಲ್ಲಿ); (ಮು.) ಸಾಹಿತ್ಯ ಜ್ಞಾನ; ಪಾಂಡಿತ್ಯ (A man of vast r. ಬಹಳ ಓದಿದವನು; ದೊಡ್ಡ ಪಂಡಿತ). [First, second, third, r. ಶಾಸನ ಸಭೆಯಲ್ಲಿ ಮಸೂದೆ ಕಾನೂನಾಗುವ ವಿಧಾನದಲ್ಲಿ ಮೂರು ಹಂತಗಳು: First r. (ಶಾಸನ ಸಭೆಯಲ್ಲಿ ತರುವುದಕ್ಕೆ ಅನುಮತಿಗಾಗಿ) ಮೊದಲನೆಯ ಪಠನ. Second r. (ಮುಖ್ಯ ತತ್ತ್ವಗಳ ಅಂಗೀಕಾರಕ್ಕಾಗಿ) ಎರಡನೆಯ ಪಠನ. Third r. (ಸಮಿತಿಯವರು ಮಾಡಿದ ತಿದ್ದುಪಾಟುಗಳ ಅಂಗೀಕಾರಕ್ಕಾಗಿ) ಮೂರನೆಯ ಪಠನ]. (ಸಭಿಕರಿಗೆ ಏನನ್ನಾದರೂ ಓದಿ ಹೇಳುವ) ವಾಚನ (ಗೋಷ್ಠಿ) (Penny r. ಹಳ್ಳಿಯ ಬಡ ಜನರಿಗಾಗಿ ಏರ್ಪಡಿಸಿದ ವಾಚನ). (ಸಂಪಾದಕನು ಕೊಡುವ ಅಥವಾ ಹಸ್ತಪ್ರತಿಯಲ್ಲಿರುವ) ಪಾಠ (ಭೇದ), ಪಾಠಾಂತರ (The right, true, best, MS., etc., r. Various readings). ಓದುವ ವಿಷಯ (ದ ನಿರ್ದಿಷ್ಟ ಗುಣ) (Is good, dull, r. There is plenty of r. in it ಅದರಲ್ಲಿ ಓದುವ ವಿಷಯ ಬೇಕಾದಷ್ಟಿದೆ). ಅಳತೆ ಗುರುತುಳ್ಳ ಯಂತ್ರ ಸಲಕರಣೆ ತೋರಿಸುವ ಸಂಖ್ಯೆ: ಅಳತೆ (ತೋರು) ಸಂಖ್ಯೆ (40° difference between day & night readings). ಅರ್ಥ (ವಿವರಣೆ); ಭಾವನೆ; ಗ್ರಹಿಕೆ; ಅಭಿಪ್ರಾಯ (What is your r. of the facts? His r. of Iago was generally condemned ಅಯಗೋವಿನ ವಿಷಯದಲ್ಲಿ ಅವನ ಗ್ರಹಿಕೆಯನ್ನು, ಅಭಿಪ್ರಾಯವನ್ನು, ಎಲ್ಲರೂ ಖಂಡಿಸಿದರು). R.-desk ಓದುವುದಕ್ಕನುಕೂಲನುವಂತೆ ಪುಸ್ತಕ, ಮೊ. ನ್ನಿಡಲು ಏರ್ಪಾಡುಳ್ಳ ಮೇಜು; ಓದುವ (ಇಳಿ) ಮೇಜು. R.-room (ಸಂಘ, ಮೊ. ಗಳಲ್ಲಿ) ಓದುವ ಕೊಟಡಿ, ವಾಚನಾಲಯ.

Reádily, Reádiness. **Ready** ನೋಡಿ.

Réady ರೆಡಿ (ಗು., ಕ್ರಿ. ವಿ., ನಾ., ಕ್ರಿ. ಸಕ.) ಸಿದ್ಧತೆಗಳು ಸಂಪೂರ್ಣವಾಗಿರುವ; ಸನ್ನದ್ಧ; ತಯಾರಿರುವ; ಸಿದ್ಧ (ಸ್ಥಿತಿಯಲ್ಲಿರುವ); (ಮಾಡಲು) ಸಿದ್ಧವಾಗಿರುವ, ಮನಸ್ಸಿರುವ (*To*); ಪೂರ್ವಭಾವಿಯಾಗಿ ಒದಗಿಸಿಕೊಂಡಿರುವ, —ಒದಗಿಸಿಕೊಂಡು ಸಿದ್ಧವಾಗಿರುವ; ಸಜ್ಜಾದ; ಅಣಿಯಾದ; ಥಟ್ಟನೆಯ; ಸುಲಭವಾಗಿ, ಒಡನೆಯೆ, ಬೇಕಾದಾಗ, —ಸಿಕ್ಕುವಂತಿರುವ, ಪಡೆಯಲಾಗುವ; ಸ್ವಲ್ಪವೂ ನಿರೋಧಿಸದ, ಅಸಮ್ಮತಿ ತೋರದ; ಸುಲಭವಾದ; ಕೂಡಲೆ ಉಪಯೋಗಿಸಲು ತಕ್ಕ [Are you r.? Go! (ಪಂದ್ಯಕ್ಕೆ ಬಿಡುವ ಒಕ್ಕಣೆ). Ready, present, fire! (ಬಂದೂಕು ಹೊಡೆಯುವಲ್ಲಿ ಅನುಕ್ರಮವಾದ ಆಜ್ಞೆಗಳು: Ready ಬಂದೂಕು ಸಿದ್ಧಮಾಡಿಕೊಳ್ಳಿ, Present ಗುರಿಗೆ ಹಿಡಿಯಿರಿ, Fire ಉಡಾಯಿಸಿರಿ, ಹಾರಿಸಿ. Dinner is r. Am r. to risk my life. Is too r. to suspect. Is r. for death. The r. ministers of vengeance ಸೇಡನ್ನು ತೀರಿಸಲು ಸಿದ್ಧರಾಗಿರುವ ಕರಣಗಳು, ಕಾರಣಿಕರು; ಮತ್ಸರ ಸಾಧಕರು. Is very r. at excuses ನೆಪ ಹೇಳುವುದಕ್ಕೆ ಬೇಗ ಸಿದ್ಧ. A r. pen ಸಿದ್ಧ ಲೇಖನಿ, ಸರಾಗವಾದ ಬರವಣಿಗೆ. A r. wit ಪ್ರತ್ಯುತ್ಪನ್ನಮತಿ [**Ready-witted** (ಗು.)]. Gave a r. consent. Its r. solubility in water. Found an instrument r. to hand ಕೈಗೆ ಒಂದು ಆಯುಧ ಸಿದ್ಧವಾಗಿ ದೊರೆಯಿತು. A r. source of revenue. The readiest way to do it. Make r. ಸಿದ್ಧಮಾಡು, ಸಿದ್ಧವಾಗು (They made r. for the attempt *or* to fight. They made everything r). R. money ನಗದು ಹಣ; ರೊಕ್ಕ; ಕೈಮೇಲೆ ಸಲಿಕೆ. R. reckoner (ಸಾಮಾನ್ಯವಾಗಿ ವ್ಯಾಪಾರಗಳಲ್ಲಿ, ಬ್ಯಾಂಕಿನ ವ್ಯವಹಾರಗಳಲ್ಲಿ, ಬೇಕಾಗುವ) ಲೆಕ್ಕಾಚಾರಗಳನ್ನು ಸಿದ್ಧಗೊಳಿಸಿಟ್ಟಿರುವ ಪುಸ್ತಕ: ಸಿದ್ಧ ಗಣಕ (ಪುಸ್ತಕ)]. (ಕ್ರಿ. ವಿ., ಮು., ಭೂ. ಕೃ. ಒಡನೆ, ಸಾ., ಕೂಡುಗೆರೆ ಹಾಕಿ; ನ್ಯಾಯವಾಗಿ ಆಖ್ಯಾತಕ ಗುಣವಾಚಕವಾಗಿ ಪ್ರ.) (ಆ ಸಮಯ ಬಂದಾಗ ಮಾಡಬೇಕಾಗಿಲ್ಲದೆ) ಮೊದಲೇ ಸಿದ್ಧವಾಗಿ [Please pack everything r. Boxes are r. packed *or* packed r. R.-built houses (ಒಂದು ನಿರ್ದಿಷ್ಟ ವಿನ್ಯಾಸಕ್ಕನುಸಾರವಾಗಿ) ಕಟ್ಟಿ ಸಿದ್ಧವಾದ ಮನೆಗಳು. R.-made clothes ಗಿರಾಕಿಯ ಸ್ವಂತ ಅಳತೆಗೆ ಹೊಲಿಯದೆ, ಕೆಲವು ನಿರ್ದಿಷ್ಟ ಆಕಾರ ಮತ್ತು ಅಳತೆಗಳಲ್ಲಿ ಮೊದಲೇ ಹೊಲಿದು ಸಿದ್ಧವಾಗಿಟ್ಟಿರುವ ಉಡುಪುಗಳು: ಸಿದ್ಧ ಉಡುಪುಗಳು. R.-made shop —ಗಳ ಅಂಗಡಿ]. (ತರ, ತಮ, ರೂಪಗಳಲ್ಲಿ ವಿನಾ, ಈಗ ವಿರ. ಪ್ರ.) ಬೇಗ; ಜಾಗ್ರತೆಯಾಗಿ; ಚುರುಕಾಗಿ (The child that answers readiest). (ನಾ.) ಗುರಿಹಿಡಿಯುವ ಮೊದಲು, ಬಂದೂಕನ್ನು ಬಾರು ಮಾಡಿ ಹಿಡಿಯುವ ನಿಲುವು; ಬಂದೂಕಿನ—ಸಿದ್ಧ ಸ್ಥಿತಿ, ಸಿದ್ಧ ನಿಲುವು (Come to the r., etc.). (ಅಸಂ.) = R. money (Planked down the r. ಹಣವನ್ನು ಇಟ್ಟುಬಿಟ್ಟನು, ಕೈಮೇಲೆ ಹಾಕಿಬಿಟ್ಟನು). (ಕ್ರಿ.) (ಜೂಜಿನ ಅಸಂ.) ಪ್ರಕೃತ ಪಂದ್ಯದಲ್ಲಿ ತನ್ನ ಕುದುರೆ ಗೆಲ್ಲದಂತೆ ಮಾಡಿ, ಮತ್ತೊಂದು ಪಂದ್ಯದಲ್ಲಿ ಮುಂದೋಟದ ಒಳ್ಳೆಯ ರಿಯಾಯಿತಿಗೆ ಅರ್ಹವನ್ನಾಗಿ ಮಾಡು. **Reádily** (ಕ್ರಿ. ವಿ.) ಆ, ಊ, ಎನ್ನದೆ; ಸ್ವಲ್ಪವೂ ಅಸಮ್ಮತಿ, ವಿರೋಧ, —ಹೇಳದೆ, ತೋರಿಸದೆ; (ಹೇಳಿದ, ಕೇಳಿದ) ಕೂಡಲೆ; ಮನಃಪೂರ್ವಕವಾಗಿ; ಕಷ್ಟವಿಲ್ಲದೆ; ಸುಲಭವಾಗಿ (The facts may r. be ascertained). **Reádiness** (ನಾ.) (ಮಾಡಲು, ನೆರವೇರಿಸಲು) ಒಡನೆಯೆ ಒಪ್ಪಿಕೆ; ಸಿದ್ಧತೆ; ಇಷ್ಟ, ಸೌಲಭ್ಯ, ಸಮಯ ಸ್ಫೂರ್ತಿ; ಸಿದ್ಧೋಪಜ್ಞತೆ. (ವಾದದಲ್ಲಾಗಲಿ ಕಾರ್ಯ ಮಾಡುವುದರಲ್ಲಾಗಲಿ) ತಕ್ಷಣ ಸಿದ್ಧತೆ, ಚುರುಕು. ಸಿದ್ಧ ಸ್ಥಿತಿ; ತಯಾರಿ (All is in r.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Reágent ರಿಏಜೆಂಟ್ (ನಾ.) (ರ. ವಿ.) ಪ್ರತಿಕ್ರಿಯೆಯಿಂದ ಮತ್ತೊಂದು ಪದಾರ್ಥದ ಇರುವಿಕೆಯನ್ನು ಪತ್ತೆಹಚ್ಚಿಕೊಡಲು ಉಪಯೋಗಿಸುವ ವಸ್ತು: ಪರೀಕ್ಷಕ ದ್ರವ್ಯ; ಪ್ರತಿಕ್ರಿಯಾಕಾರಕ; —ಶಕ್ತಿ. **Reágency** (ನಾ.) ಪ್ರತಿಕ್ರಿಯಾಕಾರಕ ಶಕ್ತಿ; ಪ್ರತಿಕ್ರಿಯಾಕಾರ್ಯ.

Réal[1] ರೀ(ರೆ)ಅಲ್ (ನಾ.) ಸ್ಪ್ಯಾನಿಷ್ ಭಾಷೆಯನ್ನಾಡುವ ಕೆಲವು ದೇಶಗಳಲ್ಲಿ ಈಗಲೂ ಪ್ರಚಾರದಲ್ಲಿರುವ (ಸು., 6¼ ಪೆನಿ ಬೆಲೆಯ) ಒಂದು ಬೆಳ್ಳಿಯ ನಾಣ್ಯ. ಈಗ ಸ್ಪೈಯ್ನಿನಲ್ಲಿ ಬಳಕೆಯಲ್ಲಿರುವ ಚಲಾವಣೆಯ (ನಾಣ್ಯದ) ಏಕಮಾನ (ಸು., 2½ ಪೆನಿ ಬೆಲೆಯುಳ್ಳದ್ದು): ಕಾಲು ಪೆಸೇಟ (ನಾಣ್ಯ)

Réal[2] ರೀಯಲ್, —ಅಲ್ (ಗು.) (ವಸ್ತುವಾಗಿ ಅಥವಾ ಸಂಗತಿಯಾಗಿ) ನಿಜವಾಗಿ ಅಸ್ತಿತ್ವದಲ್ಲಿರುವ; ವಾಸ್ತವಿಕ; ವಾಸ್ತವ(ವಾದ); ಸಾಚಾ; ಅಚ್ಚ; ನಿಜವಾದ; ಯಥಾರ್ಥವಾದ; ಸ್ವಾಭಾವಿಕವಾದ; ಸಹಜವಾದ; ನಿಷ್ಕಪಟವಾದ; ಪ್ರಾಮಾಣಿಕವಾದ; (ಕೇವಲ ತೋರಿಕೆ, ನಾಮಮಾತ್ರ, ಊಹೆ, ನಟನೆ, ಕೃತಕ ಅಥವಾ ಬೂಟಾಟಿಕೆ ಅಲ್ಲದೆ) ದಿಟದ, ಸತ್ಯವಾದ [R. money ನಾಣ್ಯ, ನಗದು. The r. presence ದೇವತಾ ಶಾಸ್ತ್ರಜ್ಞರು ವಾದಿಸುವಂತೆ ಪ್ರಭುಭೋಜನ ಸಂಸ್ಕಾರದ ಪ್ರಸಾದದಲ್ಲಿ (ರೊಟ್ಟಿ ಮತ್ತು ದ್ರಾಕ್ಷಾಮದ್ಯಗಳಲ್ಲಿ) ಕ್ರಿಸ್ತನ ಒಡಲು ಮತ್ತು ರಕ್ತಗಳ ಪ್ರತ್ಯಕ್ಷತೆ. A r. object & its image ನಿಜವಾದ ವಸ್ತು ಮತ್ತು ಅದರ (ಪ್ರತಿ)ಬಿಂಬ. R. & paper roses. Effected a r. cure. R. life ವಾಸ್ತವ ಜೀವನ (ಸಾಕ್ಷಾತ್ತಾಗಿ ಜನರು ಬಾಳುತ್ತಿರುವಂಥದು; ಕಥೆಯಲ್ಲಿ ಅಥವಾ ನಾಟಕದಲ್ಲಿ ಕಲ್ಪಿಸಿದ ಅನುಕರಣವಲ್ಲ). A r. man (ನಟನೆ, ಸೋಗು, ಇಲ್ಲದ) ಸಾಚಾ, ನೈಜ, —ಮನುಷ್ಯ; ಯಥಾರ್ಥಮನುಷ್ಯ; ಮನುಷ್ಯ ಎನ್ನುವುದಕ್ಕೆ ತಕ್ಕವನು. The r. thing ನಿಜವಾದ, ಅದೇ, —ವಸ್ತು (ತಾತ್ಕಾಲಿಕ ಬದಲಿ ಅಲ್ಲ, ಕೀಳು ತೆರದ್ದಲ್ಲ)]. (ನ್ಯಾ. ಶಾ.) (ಜಮಾನು, ಮನೆ, ಮೊ.) ಸ್ಥಿರ ಸ್ವತ್ತಿನ; ಸ್ಥಿರ (Personal ಹೋಲಿಸಿ) (ಮು., R. estate ಸ್ಥಿರಾಸ್ತಿ). (ತ. ಶಾ.) (ಕೇವಲ ಅವಲಂಬಕ ಅಸ್ತಿತ್ವವಲ್ಲದೆ) ಸರ್ವತಂತ್ರ, ಸ್ವತಂತ್ರವಾದ ಅಸ್ತಿತ್ವವುಳ್ಳ; 'ಸತ್' ಆದ. The r. ಪ್ರತ್ಯಕ್ಷದಲ್ಲಿರುವ, ನಿಜವಾದ, ವಸ್ತು (ಎದುರು ಪದ: the ideal) [(ವಿರ. ಪ್ರ.: ನಾ., ಬ. ವ. ದಲ್ಲಿ) ನಿಜವಾದ ವಸ್ತು, ವಿಷಯ (I deal only with reals)]. **Réalism** (ನಾ.) (ತ. ಶಾ.) ಸೃಷ್ಟಿಯ ವರ್ಗಸಾಮಾನ್ಯಕ್ಕೆಲ್ಲ ಅನ್ವಯಿಸುವ ಭಾವಗಳಿಗೆ ಬಾಹ್ಯ ಪ್ರಪಂಚದಲ್ಲಿ (ಮನಸ್ಸಿನಿಂದ ಹೊರಗೆ) ಅಸ್ತಿತ್ವ ಉಂಟೆಂಬ ವಾದ: ಭಾವ ಸತ್ತಾ ವಾದ; ಭಾವಾಸ್ತಿತ್ವ ವಾದ (Nominalism, Conceptualism ನೋಡಿ). ಇಂದ್ರಿಯ ಗೋಚರ ವಿಷಯವಾದ ದ್ರವ್ಯಕ್ಕೆ ನಿಜವಾದ ಅಸ್ತಿತ್ವ ಉಂಟೆಂಬ ನಂಬಿಕೆ, ವಾದ; ವಸ್ತು ಸತ್ಯತಾ ವಾದ; ವಸ್ತು ಸತ್ತಾ ವಾದ (Idealism ನೋಡಿ). ಪದಾರ್ಥಗಳ ನಿಜ ಸ್ವರೂಪವನ್ನು ಗ್ರಹಿಸಿ ಅವುಗಳ ಯಥಾರ್ಥ ಸ್ಥಿತಿಗನುಸಾರವಾಗಿ ವರ್ತಿಸುವುದು; ಪೂರ್ವ ವಿಶ್ವಾಸ ಮತ್ತು ಸಂಪ್ರದಾಯಗಳ ನಿರ್ಬಂಧಗಳಿಲ್ಲದಿರುವುದು; ವಸ್ತುಸ್ಥಿತಿ ಪರಿಜ್ಞಾನ; ಕಾರ್ಯಸಾಧ್ಯ, ವ್ಯಾವಹಾರಿಕ, —ಭಾವನೆ ಮತ್ತು ನೀತಿ (Idealism ನೋಡಿ); (ಕಲೆ ಮತ್ತು ಸಾಹಿತ್ಯಗಳಲ್ಲಿ) ಯಥಾರ್ಥ ನಿರೂಪಣೆ(ಯ ಪದ್ಧತಿ); ಪ್ರಕೃತಿಯ ಯಥಾವತ್ತಾದ ಪ್ರತಿಬಿಂಬನೆ; ನೈಸರ್ಗಿಕತೆ; ವಿವರಗಳನ್ನೆಲ್ಲ ಒತ್ತಿ ಹೇಳುವ ಶೈಲಿ, ರೀತಿ. **Réalist** (ನಾ., ಗು.); **Realístic** (ಗು.); **Realístically** (ಕ್ರಿ. ವಿ.); **Reálity** ರಿಆ್ಯಲಿಟಿ (ನಾ.) ಅಸ್ತಿತ್ವ; ಸತ್ಯ; ನಿಜ. ಮೂಲಕ್ಕೆ ಸರಿಯಾದ ಹೋಲಿಕೆ; ಯಥಾವತ್ತು (Reproduced with startling r.). ನಿಜವಾಗಿ ಅಸ್ತಿತ್ವದಲ್ಲಿರುವುದು; ವಾಸ್ತವಿಕತೆ; ನಿಜವಾದುದು; ಮಿಥ್ಯೆಯಲ್ಲಿ ಅಡಗಿರುವ ಸತ್ಯ [In r. ನಿಜವಾಗಿ, ವಾಸ್ತವವಾಗಿ (ಎದುರು ಪ್ರ. In words, in appearance)]. ಇರುವ, ವಾಸ್ತವಿಕವಾದ, —ವಸ್ತು; (—ರ) ನೈಜ ಸ್ವಭಾವ, ಗುಣ (*Of* ಉಪ. ದೊಡನೆ). **Réalize** ರಿ(ೀ)ಯಲೈಸ್ (ಕ್ರಿ. ಸಕ.) (ಮನೋರಥ, ಯೋಜನೆ, ಮೊ. ನ್ನು) ಕೈಗೂಡಿಸು, ಸಾಧಿಸು, ಸಿದ್ಧಿಸಿಕೊ (ಸಾ., ಕರ್ಮಣಿಯಲ್ಲಿ). ನಿಜವೆಂದು ಕಾಣುವಂತೆ ಮಾಡು; ವಾಸ್ತವ ರೂಪ ಕೊಡು; ವಾಸ್ತವಿಕ ಮಾಡು; ನಿಜದಂತೆ ನಿರೂಪಿಸು (These details help to r. the scene ಈ ವಿವರಗಳು ದೃಶ್ಯಕ್ಕೆ ವಾಸ್ತವತೆಯನ್ನು ಕೊಡಲು ಸಹಾಯ ಮಾಡುತ್ತವೆ). ನಿಜ ರೂಪದಲ್ಲಿ —ಗ್ರಹಿಸು, ತಿಳಿ; ಸ್ಪಷ್ಟವಾಗಿ, ವಿವರವಾಗಿ, —ಗ್ರಹಿಸು (*That*, *how*, etc.). (ಬಂಡವಾಳ ಪತ್ರವನ್ನು, ಆಸ್ತಿಯನ್ನು) ಹಣಕ್ಕೆ ಪರಿವರ್ತಿಸು, ಮಾರಿ ಹಣವಾಗಿಟ್ಟುಕೊ; (ತನ್ನ ಆಸ್ತಿಯನ್ನು) ಮಾರಿಬಿಡು. (ಐಶ್ವರ್ಯವನ್ನು, ನಿರ್ದಿಷ್ಟ ಲಾಭವನ್ನು) ಪಡೆ, ಸಂಪಾದಿಸು. ಬೆಲೆ—ತರು, ಬರು. **Réalizable** (ಗು.); **Realizátion** (ನಾ.); **Réally** ರಿ(ೀ)ಅಲಿ (ಕ್ರಿ. ವಿ.) ನಿಜವಾಗಿ, ವಾಸ್ತವವಾಗಿ, ಸತ್ಯವಾಗಿ (ಅನೇಕ ವೇಳೆ R. & truly); ಖಂಡಿತವಾಗಿ, ದಿಟವಾಗಿ, ಪ್ರಮಾಣವಾಗಿ; ಹೇಳಿದಂತೆಯೆ, ಆಣೆಯಿಟ್ಟು [R. ? ನಿಜವಾಗಿಯೂ (ಹಾಗೇನು)? ಹಾಗೆಯೆ ?]. **Réalty** ರಿ(ೀ)ಯಲ್ಟಿ (ನಾ.) ಸ್ಥಿರಾಸ್ತಿ (Personalty ನೋಡಿ).

Reálgar ರಿಆ್ಯಲ್ಗರ್ (ನಾ.) (ಆರ್ಸೆನಿಕ್ ಮತ್ತು ಗಂಧಕಗಳ ಸಂಯುಕ್ತವಾದ) 'ಆರ್ಸೆನಿಕ್ ಡೈಸಲ್ಫೈಡ್' ಎಂಬ ಖನಿಜ; ಕೆಂಪು ಹರಿದಳ; ಮಣಿಶಿಲೆ (ವರ್ಣದ್ರವ್ಯವಾಗಿಯೂ ಬಾಣ ಬಿರುಸುಗಳಲ್ಲಿಯೂ ಉಪಯೋಗ)

Réalism, Réalize, etc. **Real** ನೋಡಿ.

Realm ರೆಲ್ಮ್ (ನಾ.) ರಾಜ್ಯ (ಮು., ಅಲಂ. ಮತ್ತು ಕೆಲವು ನ್ಯಾ. ಶಾ. ದ ಪದ ಪುಂಜಗಳಲ್ಲಿ ಪ್ರ.: The laws of the r. Persons who are out of the r.); (ರೂಪ.) ಕ್ಷೇತ್ರ, ಸಾಮ್ರಾಜ್ಯ (The realms of fancy, poetry, etc.)

Réalty. **Real** ನೋಡಿ.

Ream[1] ರೀಮ್ (ನಾ.) (ಕಾಗದ) ೨೦ ದಸ್ತು ಅಥವಾ ೪೮೦ ಗಜ: ಒಂದು ಕಟ್ಟು; 'ರೀಮು' (ಅನೇಕ ವೇಳೆ ನಷ್ಟವಾಗಿಹೋದುದರ ಅಥವಾ ಕೆಟ್ಟುಹೋದುದರ ಭರ್ತಿಗಾಗಿ ೫೦೦ ಗಜ ಇರುತ್ತದೆ. Printers' r. =೫೧೬ ಗಜ). (ಅನೇಕ ವೇಳೆ ಬ. ವ. ದಲ್ಲಿ) ಬಹಳ ಕಾಗದ, ಕಟ್ಟು ಕಟ್ಟುಗಳು (Wrote reams & reams of verse)

Ream[2] ರೀಮ್ (ಕ್ರಿ. ಸಕ.) (ಲೋಹ ವಸ್ತುವಿನಲ್ಲಿಯ ತೂತನ್ನು) ಬೈರಿಗೆಯಿಂದ ದೊಡ್ಡದುಮಾಡು, ಹೆಚ್ಚು ಅಗಲಮಾಡು [**Reámer** (ನಾ.) —ವ ಸಲಕರಣೆ]. [ಬಂದೂಕು ತೋಟಾ, ಮೊ. ರ (ಕೋಶದ)] ಅಂಚನ್ನು ಹಿಮ್ಮಡಿಚು. (ನಾವೆ) (ಕೀಲೆಣ್ಣೆ, ಮೊ. ಗಳಲ್ಲಿ ಅದ್ದಿದ ಹಸಿಯ ದಾರವನ್ನು ತುರುಕಿ ತೂತು ಮುಚ್ಚುವುದಕ್ಕಾಗಿ) ಹಲಗೆ ಸೇರುವೆಯ ಸಂದುಗಳನ್ನು ದೊಡ್ಡದುಮಾಡು, ಸರಿಯಾಗಿ ಬಿಡಿಸು.

Reap ರೀಪ್ (ಕ್ರಿ.) (ಸುಗ್ಗಿಯ ಕಾಲದಲ್ಲಿ, ಹೊಲ, ಮೊ. ನ್ನು, ಪಯಿರನ್ನು) ಕಟಾವು ಮಾಡು, ಕಟಾಯಿಸು; ಕೊಯ್ಯು; ಕೊಯ್ಲುಮಾಡು; ಬೆಳೆ ಕೊಯ್ದು ಸಂಗ್ರಹಮಾಡು; (ರೂಪ.) ಫಲವನ್ನು ಅನುಭವಿಸು, ಅನುಭೋಗಿಸು, ಉಣ್ಣು [R. as one has sown ಬಿತ್ತಿದ್ದನ್ನು ಉಣ್ಣು; ಮಾಡಿದ್ದುಣ್ಣೋ ಮಹಾರಾಯ. Sow wind & r. whirlwind (Whirl ನೋಡಿ). R. the fruits of (ಮಾಡಿದ ಕಾರ್ಯಕ್ಕೆ ಅದರ) ಫಲ ಅನುಭವಿಸು. R. where one has not sown ಇತರರ ದುಡಿತದಿಂದ ತಾನು ಲಾಭ ಪಡೆ]. Reaping-hook ಪಯಿರು ಕೊಯ್ಯುವ ಕುಡುಗೋಲು; ಕೊಯ್ಲುಗತ್ತಿ. Reaping-machine (ಕೈದುಡಿಮೆಯಿಲ್ಲದೆ ಕೊಯ್ಲುಮಾಡುವ ಮತ್ತು ಅನೇಕ ವೇಳೆ ಕಂತೆಗಳಾಗಿಯೂ ಕಟ್ಟುವ) ಕೊಯ್ಲುಯಂತ್ರ. **Reáper** (ನಾ.) ಕೊಯ್ಲು ಮಾಡುವವನು; —ಮಾಡುವ ಯಂತ್ರ.

Rear[1] ರಿಯರ್ (ನಾ.) (ಸೈನ್ಯದ, ನೌಕಾ ಪಡೆಯ) ಅತ್ಯಂತ ಹಿಂದಿನ ಭಾಗ [Hang on the r. of (ಆಕ್ರಮಣದ ಉದ್ದೇಶದಿಂದ) ಹಿಂಬಾಲಿಸು]. (ಸೈನ್ಯದ, ಬೀದಿನ, ಮನುಷ್ಯನ) ಹಿಂಗಡೆ(ಯ ಸ್ಥಳ), ಹಿಂಭಾಗ(ದ ಸ್ಥಾನ) [Bring, close, up the r. ಕೊನೆಯಲ್ಲಿ ಬರು. Take enemy in r. ಶತ್ರುವನ್ನು ಹಿಂದುಗಡೆಯಿಂದ ಆಕ್ರಮಿಸು. Saw them far in the r. ಹಿಂದೆ ಬಹು ದೂರದಲ್ಲಿ ಅವರನ್ನು ಕಂಡೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Was sent to the r. for safety]. (ಒಂದರ) ಬೆನ್ನುಭಾಗ, ಹಿಂಭಾಗ (At the r. of ಬೆನ್ನು ಕಡೆ ; ಹಿಂದುಗಡೆ). (ಬಳ. ಮಾ.) ಹಿತ್ತಿಲು; ಕಕ್ಕಸು; ಮೂತ್ರಿ. **Rear-, r.** (ವಿಶೇಷಣವಾಗಿ) ಹಿಂಭಾಗದ; ಹಿನ್— [**Reár-arch, Rére-** (ನಾ.) (ಕಿಟಕಿಯ ಅಥವಾ ಬಾಗಿಲಿನ ದ್ವಾರದಲ್ಲಿ, ಹೊರ ಮುಖಕ್ಕಿಂತ ಬೇರೆ ಗಾತ್ರ, ಮೊ. ನ್ನುಳ್ಳ) ಒಳ ಕಮಾನು, ಹಿನ್ ಕಮಾನು. **Réar-vault** (ನಾ.) ಗೋಡೆಯ ಒಳ ಮುಖದಲ್ಲಿ ಕಿಟಕಿಯ ಅಥವಾ ಬಾಗಿಲಿನ ಕಮಾನು ದ್ವಾರವನ್ನು ಸೇರಿಸುವಂತೆ ಇರುವ ಗುಂಡು ಕಮಾನು ; ಹಿಂಗಡೆಯ ಗುಂಡು ಕಮಾನು]. **R.-admiral** ಉಪ ನೌಬಲಾಧಿಪತಿಗೆ ಕೆಳಗಿನ, ಪ್ರತ್ಯೇಕ ಬಾವುಟದ ಅಧಿಕಾರವುಳ್ಳ, ಒಬ್ಬ ನೌಕಾಧಿಕಾರಿ : 'ರಿಯರ್ ಅಡ್ಮಿರಲ್'. **R.-guard** (ಮು., ಹಿಮ್ಮೆಟ್ಟುವಾಗ) ಸೇನೆಯ ಹಿಂಭಾಗದ ರಕ್ಷಣೆಗಾಗಿ ಪ್ರತ್ಯೇಕಿಸಿದ ಪಡೆ : ಹಿಂಗಾಪಿನ ಪಡೆ (R.-g. action ಹಿಂಗಾಪಿನ ಪಡೆಗೂ ಶತ್ರುಗಳಿಗೂ ನಡೆಯುವ ಕದನ : ಹಿಂಗಾಪು ಕದನ). **Reár-most** (ಗು.) ಅತ್ಯಂತ ಹಿಂದಿನ. **Reár-ward** (ನಾ., ಗು., ಕ್ರಿ. ವಿ.) (ನಾ.) = Rear[1] (ಮೊದಲನೆಯ ಅರ್ಥ) (ಮು., ಉಪಸರ್ಗೀಯ ಪದ ಪುಂಜಗಳಲ್ಲಿ : ಉದಾ., *to* rearward *of*, *in* the rearward). (ಗು.) ಹಿಂಭಾಗದ. (ಕ್ರಿ. ವಿ.) ಹಿಂಭಾಗಕ್ಕೆ. **Reárwards** (ಕ್ರಿ. ವಿ.) ಹಿಂದುಗಡೆಗೆ ; ಹಿಂಭಾಗಕ್ಕೆ.

Rear[2] ರಿಯರ್[6] (ಕ್ರಿ.) (ಅಲಂ.) ಎತ್ತು, ಎತ್ತಿ ನಿಲ್ಲಿಸು ; ನೆಟ್ಟಗೆ ನಿಲ್ಲಿಸು ; ಕಟ್ಟು ; ಎಬ್ಬಿಸು ; ಮೇಲಕ್ಕೆತ್ತು (R. a pillar, cathedral ಕಂಬ ನಿಲ್ಲಿಸು, ಕ್ರೈಸ್ತ ಆರಾಧನ ಮಂದಿರವನ್ನು ಎಬ್ಬಿಸು. Reared his mighty stature ತನ್ನ ಅದ್ಭುತಾಕಾರವನ್ನು ನೆಟ್ಟಗೆ ನಿಲ್ಲಿಸಿದನು. R. one's head, one's voice, a hand ತನ್ನ ತಲೆ ಎತ್ತು, ದನಿ ಎತ್ತರಿಸು, ಕೈಯೆತ್ತು). (ದನಗಳನ್ನು, ಬೇಟೆಯನ್ನು) ಸಾಕು, ಬೆಳೆಯಿಸು ; ತಳಿ ಯೆಬ್ಬಿಸು ; ಕಾಪಾಡು ; (ಮಕ್ಕಳನ್ನು) ಪೋಷಣೆಮಾಡು, (ಮಕ್ಕಳಿಗೆ) ವಿದ್ಯೆ ಕಲಿಸು, ಶಿಕ್ಷಣ ಕೊಡು ; ನಡಪು (ಗ್ರಾಂ.). (ಪಯಿರನ್ನು) ಬೆಳೆ, ಕೃಷಿಮಾಡು. (ಕುದುರೆ, ಮೊ. ಗಳ ವಿಷಯದಲ್ಲಿ, ಕ್ರಿ. ಅಕ., ವಿರಳವಾಗಿ ಸ್ವಾರ್ಥಕ) ಎದ್ದು ನಿಲ್ಲು, ಹಿಂಗಾಲುಗಳಮೇಲೆ ಏಳು. **Reárer** (ನಾ.) (ಮು.) ಎದ್ದು ನಿಲ್ಲುವ ಕುದುರೆ.

Reár-arch, Rere-, Reár-vault. **Rear**[1] ನೋಡಿ.

Reáson ರೀಸ್ನ್ (ನಾ.) ವಾದ, ತರ್ಕ, ಉದ್ದೇಶ, ಹೇತು, ಕಾರಣ, ನಿಮಿತ್ತ, ಸಮರ್ಥನೆ (—ಇವಕ್ಕೆ ಹೇಳಿದ ಅಥವಾ ಅನುಕೂಲಿಸುವ ಸಂಗತಿ) [Give reasons for. Prove with reasons. The women's r. ಅದರ ಕಾರಣವಾಗಿ, ವಿವರಣೆಯಾಗಿ, ಆ ಸಂಗತಿಯನ್ನೇ ಪುನರಾವೃತ್ತಿಮಾಡುವುದು : ಹೆಂಗಸಿನ ಕಾರಣ (ಉದಾ., I love him because I love him). For no other r. than that I forgot. R. of State (ಮು., ಅನ್ಯಾಯದ, ಬಲೋದ್ಬಂಧದ, ಬಗ್ಗೆ ಸರ್ಕಾರ ಕೊಡುವ) ರಾಜ್ಯ ನಿಮಿತ್ತ, ರಾಜಕೀಯ ಸಮರ್ಥನೆ, ರಾಜ ಕಾರಣ. I saw r. to suspect him ಅವನಲ್ಲಿ ಸಂಶಯಪಡುವುದಕ್ಕೆ ನನಗೆ ಕಾರಣ ಕಂಡಿತು. He complains with r. ಅವನು ದೂರು ವುದಕ್ಕೆ ನ್ಯಾಯವಾದ ಕಾರಣವಿದೆ; ಅವನು ಅನ್ಯಾಯವಾಗಿ ದೂರುತ್ತಿಲ್ಲ]. (ತರ್ಕ) (ಮತ್ತೊಂದನ್ನು ಅನುಮಾನಿಸುವುದಕ್ಕಿರುವ) ಪೂರ್ವ ಪಕ್ಷ(ಗಳ ಲ್ಲೊಂದು) (ಮು., ಅನುಮಿತಿಯ ಅನಂತರ ಕೊಡುವ, ಕರ್ತೃಪದವುಳ್ಳ ಪ್ರತಿಜ್ಞಾ ವಾಕ್ಯ) ; ಹೇತು. (ಆಧಾರ ವಾಕ್ಯಗಳಿಂದ ಅನುಮಿತಿಗಳನ್ನು ಅನುಮಾನಿಸುವ, ಮು., ಮನುಷ್ಯರಿಗೆ ವಿಶಿಷ್ಟ ಲಕ್ಷಣವಾದ) ಬುದ್ಧಿಶಕ್ತಿ, ವಿವೇಚನಾ ಶಕ್ತಿ, ಆಲೋಚನಾ ಶಕ್ತಿ. ವ್ಯಕ್ತಿತ್ವವನ್ನು ಆರೋಪಿಸಿದ ಬುದ್ಧಿಶಕ್ತಿ. [Kant ಎಂಬ ಜರ್ಮನ್ ತತ್ತ್ವಶಾಸ್ತ್ರಜ್ಞನು ಉಪಯೋಗಿ ಸುವ *Vernunft* ಎಂಬ ಜರ್ಮನ್ ಪದದ ಭಾಷಾಂತರವಾಗಿ : ಸಾಧಾರಣ ಬುದ್ಧಿಗೆ (*Verstand*) ಮೀರಿದ್ದಾಗಿಯೂ ತತ್ತ್ವಗಳನ್ನು ಸಾಕ್ಷಾತ್ಕರಿಸುವುದಾಗಿಯೂ ಇರುವ] ಸಹಜ ಪ್ರಜ್ಞೆ, ಅಂತರ್ಬೋಧೆ. ಬುದ್ಧಿ (Has lost his, is restored to, r.). ವಿವೇಕ ; ವಿವೇಕ ಯುಕ್ತವಾದ—ವರ್ತನೆ, ನಡೆವಳಿ ; ನ್ಯಾಯವಾದದ್ದು ; ಕಾರ್ಯ ಸಾಧ್ಯವಾದದ್ದು, ವ್ಯವಹಾರ ಸಾಧ್ಯವಾದದ್ದು ; ಮಿತಿಯುಳ್ಳದ್ದು [Without rhyme or r. (Rhyme ನೋಡಿ). Bring to r. (ನಿಷ್ಫಲವಾದ ಹೋರಾಟವನ್ನು ನಿಲ್ಲಿಸುವಂತೆ) ಬುದ್ಧಿ ಹೇಳು, ವಿವೇಕ ಹೇಳಿ ಒಪ್ಪಿಸು. Will do anything in r. ಮಿತಿಯೊಳಗೆ ಏನನ್ನಾದರೂ ಮಾಡುತ್ತೇನೆ ; ನ್ಯಾಯವಾದುದನ್ನು—. It stands to r. ನ್ಯಾಯ ವಾಗಿ, ಸಾಮಾನ್ಯವಾಗಿ, —ಒಪ್ಪತಕ್ಕದ್ದೆ. Hear *or* listen to r. ಯುಕ್ತವಾದುದಕ್ಕೆ ಕಿವಿಗೊಡು ; ಬುದ್ಧಿವಾದವನ್ನು ಆಲಿಸು. As r. was ವಿವೇಕ ಬೆಸಸಿದಂತೆ, ಬುದ್ಧಿಗೆ ಕಂಡಂತೆ. Have r. (ಪ್ರಾಚೀ. ಪ್ರ. ಅಥವಾ ಫ್ರೆಂಚಿನ ಭಾಷಾಂತರ) ನ್ಯಾಯ(ವಾಗಿ) ಇರು. There is r. in what you say]. **Reásonless** (ಗು.) ; **Reásonable** (ಗು.) (ವಿರ. ಪ್ರ.) ಬುದ್ಧಿ(ಶಕ್ತಿ), ವಿವೇಚನಾ ಶಕ್ತಿ, ಯುಕ್ತಾಯುಕ್ತ ಪರಿಜ್ಞಾನ, ಒಳ್ಳೆಯ ವಿಮರ್ಶನಶಕ್ತಿ, ವಿವೇಚನೆ, —ಉಳ್ಳ ; ವಿವೇಕ ಯುತ ; ಮಿತಿಯಾದ ; ಅತಿ ಹೆಚ್ಚಾಗಿ ನಿರೀಕ್ಷಿಸದ ; ಬುದ್ಧಿವಾದಕ್ಕೆ, ನ್ಯಾಯಕ್ಕೆ, —ಕಿವಿಗೊಡಲು ಸಿದ್ಧವಾಗಿರುವ ; ವಿವೇಕ, ನ್ಯಾಯ, —ಸಮ್ಮತವಾದ ; ಅವಿವೇಕವಲ್ಲದ ; ಸಮಂಜಸ ; ನಿರೀಕ್ಷಣೆಗಿಂತ ಅತಿ ಕಡಮೆಯೂ ಅತಿ ಹೆಚ್ಚೂ ಅಲ್ಲದ ; ಹೆಚ್ಚು ಖರ್ಚಿ(ನದ)ಲ್ಲದ ; ಅತಿ ಬೆಲೆಯದಲ್ಲದ ; ಯುಕ್ತ ; ಒಪ್ಪಬಹುದಾದ ; ನ್ಯಾಯವಾದ (ಬೆಲೆಯು, ಮೊ.). **Reásonableness** (ನಾ.) ; **Reásonably** (ಕ್ರಿ. ವಿ.)

Reáson (ಕ್ರಿ.) [ಒಪ್ಪಿಸುವುದಕ್ಕಾಗಿ (ಒಬ್ಬನೊಡನೆ), ಏನು, ಏಕೆ, ಎಂದು ಮೊದಲಾಗಿ (ತನ್ನಲ್ಲಿ)] ವಾದಿಸು, ಚರ್ಚಿಸು, ವಿಚಾರ ಮಾಡು (*With* ಉಪ. ದೊಡನೆ ; *what, whether, why*, etc.). ಸಂಬಂಧ ವಿಚಾರಗಳಿಂದ ಮೌನವಾಗಿ ಅಥವಾ ವ್ಯಕ್ತವಾಗಿ ಅನುಮಾನಿಸಿ ಅನುಮಿತಿಗಳಿಗೆ ಬರು, —ಬರಲು ಪ್ರಯತ್ನಿಸು : ತರ್ಕಿಸು (*From* premisses ; *about, of, upon* subject) [**Reásoner** (ನಾ.)]. (— ಎಂದು) ಅನುಮಾನಿಸು, ವಾದದಲ್ಲಿ ಒಂದು ಪಕ್ಷವಾಗಿಟ್ಟುಕೊ, ವಾದಕ್ಕಾಗಿ ಹೇಳು. ತರ್ಕಬದ್ಧವಾಗಿ ನಿರೂಪಿಸು, ತರ್ಕಸರಣಿ ಯಲ್ಲಿಡು (A reasoned exposition, manifesto, article. Reasoned amendment ಚರ್ಚೆಗೆ ಮಾರ್ಗನಿರ್ದೇಶ ಮಾಡಲು ಕಾರಣಗಳನ್ನು ಜೊತೆಯಲ್ಲೇ ಕೊಟ್ಟಿರುವ ತಿದ್ದುಪಡಿ : ಕಾರಣ ಸಮೇತ ವಾದ ತಿದ್ದುಪಡಿ). ವಾದಮಾಡಿ (ಒಂದು ಅಭಿಪ್ರಾಯವನ್ನು) ಬಿಡಿಸು (*Out of* ಉಪ. ದೊಡನೆ), ಹಿಡಿಸು, ಒಪ್ಪಿಸು (*Into* ಉಪ. ದೊಡನೆ) (Tried to r. him *out of* his fears. Reasoned himself *into* perplexity). (ಪರಿಣಾಮ, ಫಲ, ಮೊ. ನ್ನು) ಪರ್ಯಾಲೋಚಿಸು (*Out* ಉಪ. ದೊಡನೆ). **Reásoning** (ನಾ.)

Réaumur (F) ರೇಒಮುರ್ (ನಾ., ಗು.) ಒಬ್ಬ ಫ್ರೆಂಚ್ ಭೌತ ವಿಜ್ಞಾನಿ(ಯ ಹೆಸರು) [ಆತನು ರೂಢಿಗೆ ತಂದ ಶಾಖಮಾಪಕದಲ್ಲಿ ನೀರು ಗಡ್ಡೆ ಕಟ್ಟುವ ಶಾಖ 0° ಎಂದೂ, ನೀರು ಕುದಿಯುವ ಶಾಖ 80° ಎಂದೂ ಇಟ್ಟುಕೊಂಡು ಅಳತೆಗೆರೆಗಳನ್ನು ಗುರುತುಮಾಡಿದೆ. ಈ ಶಾಖಮಾಪಕದ ಡಿಗ್ರಿ ಸಂಖ್ಯೆಗಳನ್ನು ಸೂಚಿಸುವಾಗ ಆತನ ಹೆಸರನ್ನು (ಸಂಕ್ಷಿಪ್ತ : R.) ಸೇರಿಸುತ್ತಾರೆ] ; ರೇಮುರಿನ ಶಾಖಮಾಪಕ. (ಗು.) ರೇಮುರಿನ ; —ಶಾಖಮಾಪಕದ (A temperature of more than 55° R. *or* Reaumur)

Reave, Reive ರೀವ್ (ಕ್ರಿ. ; ಭೂತ., ಭೂ. ಕೃ. Reft) (ಪ್ರಾಚೀ. ಪ್ರ., ಕಾವ್ಯ) ದರೋಡೆ, ಲೂಟಿ, —ಮಾಡು ; ಕೊಳ್ಳೆಹೊಡೆ (ಸಾ., Reive); (ಮು., ಭೂ. ಕೃ. ನಲ್ಲಿ) ಬಲಾತ್ಕಾರದಿಂದ ಕಿತ್ತುಕೊ, ಅಪಹರಿಸು ; ಸೂರೆಮಾಡು (*Of, away, from* ಉಪ. ದೊಡನೆ). **Reíver** (ನಾ.)

Rebáte[1] ರಿಬೇಟ್ (ಕ್ರಿ. ಸಕ., ನಾ.) (ಪ್ರಾಚೀ. ಪ್ರ.) (ಒಂದರ) ಬಲವನ್ನು, ಪರಿಣಾಮವನ್ನು, —ಕಡಮೆಮಾಡು, ತಗ್ಗಿಸು. ಮೊಂಡುಮಾಡು ; ಹರಿತಗೆಡಿಸು ; ಮಂದಮಾಡು ; ಜಡಮಾಡು. (ನಾ.) ಕೊಡಬೇಕಾದ ಹಣದಲ್ಲಿ ಕಳೆತ, ಕಳೆದ ಅಂಶ ; ಸೋಡಿ ; ವಟ್ಟ ; ಸೋಡಿ—ಸುಂಕ, ತೆರಿಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rébate[2] ರ್‍ಯಾಬಿಟ್, **Rebáte** ರಿಬೇಟ್ (ನಾ., ಕ್ರಿ. ಸಕ.) = Rabbet.

Rébel ರೆಬೆಲ್ (ನಾ.), **Rebél** ರಿಬೆಲ್ (ಕ್ರಿ. ಅಕ.) ಸ್ಥಾಪಿತ ಸರ್ಕಾರಕ್ಕೆ ಆಯುಧಪಾಣಿಯಾಗಿ ಎದುರುಬೀಳುವವನು, ವಿಧೇಯತೆಯನ್ನು ಸಲ್ಲಿಸದವನು ; ಅಧಿಕಾರವನ್ನು ವಿರೋಧಿಸುವವನು ; ದಂಗೆಕೋರ ; ಬಂಡಾಯಗಾರ ; ಮಲೆತವನು ; ಪ್ರತಿಯೋಧಿ ; ಹೋರಾಡುವವನು. (ವಿಶೇಷಣವಾಗಿ) ಎದುರುಬೀಳುವ, ದಂಗೆಯೇಳುವ ; ದಂಗೆಕೋರರ ; ದಂಗೆಯೆದ್ದ. (ಕ್ರಿ.) ದಂಗೆಯೇಳು, ಎದುರುಬೀಳು, ಮಾರ್ಮಲೆ (*Against* ಉಪ. ದೊಡನೆ). (ಯಾವುದಾದರೂ ಸಂಪ್ರದಾಯ, ಮೊ. ಕ್ಕೆ) ದ್ವೇಷ, ವಿರೋಧ, —ತೋರಿಸು ; ಪ್ರತಿಘಟಿಸು (*Against* ಉಪ. ದೊಡನೆ). **Rebéllion** ರಿಬೆಲ್ಯನ್ (ನಾ.) (ಸ್ಥಾಪಿತ ಸರ್ಕಾರಕ್ಕೆ ವಿರುದ್ಧವಾದ) ದಂಗೆ ; ಬಂಡಾಯ (The Great R. ಇಂಗ್ಲೆಂಡಿನ ಚರಿತ್ರೆಯಲ್ಲಿ ೧೬೪೨–೧೬೬೦ರ ವರೆಗಿನ ಕಾಲ : ಅಂತರ್ಯುದ್ಧ ಮತ್ತು 'ಕಾಮನ್‌ವೆಲ್ತ್' ಸರ್ಕಾರ). ಅಧಿಕಾರ ಪ್ರತಿಘಟನೆ ; ಎದುರುಬೀಳುವುದು. **Rebéllious** ರಿಬೆಲ್ಯಸ್ (ಗು.) ದಂಗೆಯೆದ್ದ ; ದಂಗೆಯೇಳುವ(ಂತಿರುವ) ; ಅವಿಧೇಯ ; ನ್ಯಾಯಸ್ಥಾಪಿತ ಅಧಿಕಾರವನ್ನು ಪ್ರತಿಘಟಿಸುವ ; ಮಲೆತ ; ಮಾರ್ಮಲೆಯುವ. (ರೋಗದ ವಿಷಯದಲ್ಲಿ) ಚಿಕಿತ್ಸೆಗೆ —ಸಗ್ಗದ, ಕಷ್ಟಸಾಧ್ಯವಾದ ; ಹತೋಟಿಗೆ ಬರದ ; ಮೊಂಡ. (ಪದಾರ್ಥಗಳ ವಿಷಯದಲ್ಲಿ) ಸುಲಭವಾಗಿ ಶಾಖದಿಂದ ಕರಗದ ; ಸುಲಭವಾಗಿ ಅದರಲ್ಲಿ ಕೆಲಸಮಾಡಲಾಗದ ; ದುಸ್ಸಾಧ್ಯ. **Rebélliously** (ಕ್ರಿ. ವಿ.) ; **Rebélliousness** (ನಾ.)

Rebéllow ರೀಬೆಲೋ (ಕ್ರಿ.) ಗಟ್ಟಿಯಾಗಿ ಮಾರ್ದನಿ ಕೊಡು, ಪ್ರತಿಧ್ವನಿಸು.

Réboant ರೆಬೋಅಂಟ್ (ಗು.) (ಕಾವ್ಯ) ಗಟ್ಟಿಯಾಗಿ ಮಾರ್ದನಿ ಕೊಡು(ತ್ತಿರು)ವ ; ಪ್ರತಿಧ್ವನಿಸು(ತ್ತಿರು)ವ.

Reboúnd ರಿಬೌಂಡ್ (ಕ್ರಿ. ಅಕ., ನಾ.) (ಡಿಕ್ಕಿ ಹೊಡೆದಮೇಲೆ) ಹಿಂದಕ್ಕೆ —ಚಿಮ್ಮು, ಹಾರು ; ಹಿನ್ನೆಗೆ ; ಹಿಂದಕ್ಕೆ ಬರು ; ಪುಟವೇಳು ; (ಕರ್ತೃವಿನ ಮೇಲೆಯೆ) ಮರಳು (Our evil example will r. upon ourselves). (ನಾ.) ಹಿನ್ನೆಗೆತ ; ಪುಟ(ವೇಳುವುದು) ; ಮರಳು(ವಿಕೆ). (ಭಾವೋದ್ರೇಕ ಇಳಿದಮೇಲೆ, ಆಶಾಭಂಗವಾದಮೇಲೆ, ಬರುವ) ಮಾನಸಿಕ ಪ್ರತಿಕ್ರಿಯೆ, ಇಳಿಭಾವ (Take one *on* or *at* the r. ಇಳಿಭಾವ ಬಂದಾಗ ಬುದ್ಧಿ ಹೇಳಿ ತಿದ್ದಲು ಅದನ್ನು ಉಪಯೋಗಿಸಿಕೊ)

Rebúff ರಿಬಫ್ (ನಾ., ಕ್ರಿ. ಸಕ.) (ಸ್ನೇಹ ಸಂಧಾನ ಮಾಡುವವನಿಗೆ, ಸಹಾಯವನ್ನಾಗಲಿ ಅನುತಾಪವನ್ನಾಗಲಿ ನೀಡುವವನಿಗೆ, ಆಸಕ್ತಿಯನ್ನಾಗಲಿ ಕುತೂಹಲವನ್ನಾಗಲಿ ತೋರುವವನಿಗೆ, ಕೋರಿಕೆಯನ್ನು ಮುಂದಿಡುವವನು, ಮೊ. ರಿಗೆ ಮಾಡಿದ) ತಡೆ, ನಿರಾಕರಣೆ, ತಿರಸ್ಕಾರ ; ಧಿಕ್ಕಾರ, ಮುಖಭಂಗ. (ಕ್ರಿ.) —ಮಾಡು ; (ಬೇಕಿಲ್ಲವೆಂದು) ಮುಖಮುರಿ.

Rebúke ರಿಬ್ಯೂಕ್ (ಕ್ರಿ. ಸಕ., ನಾ.) ಅಧಿಕಾರ ವಾಣಿಯಿಂದ ಆಕ್ಷೇಪಿಸು ; ಖಂಡನೆ (ಮಾಡು, ವ್ಯಕ್ತಗೊಳಿಸು) ; ಆಕ್ಷೇಪಣೆ (ಮಾಡು) ; (ತಪ್ಪಿಗಾಗಿ) ಜಬರಿಸು, ಗದರಿಸು, ಝುಂಕಿಸು ; ತೆಗಳು. **Rebúkingly** (ಕ್ರಿ. ವಿ.)

Rébus ರೀಬಸ್ (ನಾ.) (ಅದರ ಉಚ್ಚಾರಾಂಶಗಳನ್ನು ಸೂಚಿಸುವ ಚಿತ್ರಗಳು, ಮೊ. ಗಳ ಮೂಲಕ) ಹೆಸರು, ಪದ, ಮೊ. ಗಳ ಒಗಟೆಯ ರೂಪದ ನಿರೂಪಣೆ ; ಚಿತ್ರಶಬ್ದ(ದ ಒಗಟು)

Rebút ರಿಬಟ್ (ಕ್ರಿ. ಸಕ.) ಹಿಂದಕ್ಕೆ—ಅಟ್ಟು, ಓಡಿಸು ; ಹಿಮ್ಮೆಟ್ಟಿಸು ; ತಡೆಗಟ್ಟು ; ಅಡ್ಡಿಯೊಡ್ಡು. (ಸಾಕ್ಷ್ಯ, ಆಪಾದನೆ—ಇವನ್ನು) ಸುಳ್ಳೆಂದು, ಅಬದ್ಧವೆಂದು, ಆಧಾರ ರಹಿತವೆಂದು, — (ಪ್ರತಿಪ್ರಮಾಣದ ಮೂಲಕ) ತೋರಿಸು ; ಅಪ್ರಮಾಣೀಕರಿಸು ; ಖಂಡಿಸು. **Rebútment** (ನಾ.) ; **Rebúttal** (ನಾ.) ; **Rebútter** (ನಾ.) ಖಂಡನೆ(ಯ ಉತ್ತರ) ; (ನ್ಯಾ. ಶಾ.) ವಾದಿಯ ಮೂರನೆಯ ಸಲದ ವಾದಕ್ಕೆ ಪ್ರತಿವಾದಿಯ ಉತ್ತರ (Surrebut ನೋಡಿ)

Recálcitrate ರಿಕ್ಯಾಲ್ಸಿಟ್ರೇಟ್ (ಕ್ರಿ. ಅಕ.) (ನಿಯಮಗಳು, ಮೊ. ನ್ನು) ಒದ್ದುಬಿಡು, ತಿರಸ್ಕರಿಸು (*Against* ಅಥವಾ *at* ಉಪ. ದೊಡನೆ). ನಿಯಮದಂತೆ ನಡೆಯಲು ತಿರಸ್ಕರಿಸು ; ಮಣಿಯದಿರು ; ಪಟ್ಟು ಹಿಡಿದು ಅವಿಧೇಯತೆ ತೋರು. **Recálcitrance** (ನಾ.) ; **Recálcitrant** (ಗು., ನಾ.) ; **Recalcitrátion** (ನಾ.)

Recalésce ರೀಕಲೆಸ್ (ಕ್ರಿ. ಅಕ.) ಪುನಃ —ಕಾವೇರು, ಬಿಸಿಯಾಗು [ಮು., ಕಬ್ಬಿಣದ ವಿಷಯದಲ್ಲಿ ಪಾರಿಭಾಷಿಕ ಪ್ರ : ಬಿಳಿಗಾವಿನಿಂದ ಆರುತ್ತ ಬರುವಾಗ (೬೯೦°c ಎಂಬ) ಸಂಧಿಸ್ಥ ಶಾಖವನ್ನು ಮುಟ್ಟಿ, (ಆಗ ಇಂಗಾಲ ಪ್ರತ್ಯೇಕವಾಗುವ ಕಾರಣದಿಂದ) ಮತ್ತೆ ಸ್ವಲ್ಪ ಕಾಲ ಕಾವೇರು]. **Recaléscence** (ನಾ.)

Recáll ರಿಕಾಲ್ (ಕ್ರಿ. ಸಕ., ನಾ.) (ಸ್ಥಳಾಂತರದಲ್ಲಿರುವವನನ್ನು, ಬೇರೆ ಉದ್ಯೋಗದಲ್ಲಿರುವವನನ್ನು) ಹಿಂದಕ್ಕೆ ಕರೆ ; (ಅನವಧಾನ, ವಿಷಯ ಬಿಟ್ಟು ಹೋಗಿರುವುದು, ಮೊ. ಸಂದರ್ಭಗಳಲ್ಲಿ: ಗಮನವನ್ನು, ವಿಷಯಕ್ಕೆ) ಹಿಂದಕ್ಕೆ ಸೆಳೆ. (ದೂರ ಪ್ರಾಂತಕ್ಕೆ, ಮು., ಸಮುದ್ರದಾಚೆ, ಕಳುಹಿಸಿದ ಅಧಿಕಾರಿಯ) ನೇಮಕವನ್ನು ರದ್ದುಮಾಡು ; (—ಮಾಡಿ) ಹಿಂದಕ್ಕೆ —ಕರಸು, ಬರಹೇಳು. ಜ್ಞಾಪಕಕ್ಕೆ ತರು; ನೆನಪುಕೊಡು ; ಜ್ಞಾಪಕಮಾಡಿಕೊ, ನೆನೆ. (ಹಿಂದಿನ ಮನೋಭಾವ, ಗುಣ ಅಥವಾ ಸ್ಥಿತಿಯನ್ನು) ಮತ್ತೆ —ಬರಿಸು, ಉಂಟುಮಾಡು. (ಕಾರ್ಯ, ವ್ಯವಹಾರ, ತೀರ್ಮಾನ—ಇವನ್ನು) ರದ್ದುಮಾಡು, ವಾಪಸು ತೆಗೆದುಕೊ ; (ದಾನವನ್ನು) ಹಿಂದಕ್ಕೆ ತೆಗೆದುಕೊ. (ನಾ.) ಹಿಂದಕ್ಕೆ ಬರುವಂತೆ ಕೊಟ್ಟ ಕರೆ ; ಹಿಂಗರೆ ; ದೇಶಾಂತರ ನೇಮಕದ, ನೌಕರಿಯ, —ರದ್ದು. (ಹಡಗು, ಮೊ. ಕ್ಕೆ ಕೊಡುವ) ಹಿಂಗರೆಯ ಸೂಚನೆ, —ಸಂಕೇತ ; (ಮು., ರದ್ದುಮಾಡುವ ಅರ್ಥದಲ್ಲಿ) ವಾಪಸು ತೆಗೆದುಕೊಳ್ಳುವ ಸಾಧ್ಯತೆ (ಮು., beyond, past, r.). **Recállable** (ಗು.)

Recánt ರಿಕ್ಯಾಂಟ್ (ಕ್ರಿ.) (ಅಭಿಪ್ರಾಯ, ಹೇಳಿಕೆ, ಮೊ. ನ್ನು ತಪ್ಪೆಂದು, ಶಾಸ್ತ್ರ ವಿರೋಧವೆಂದು, ಪಾಷಂಡ ವಾದವೆಂದು) ಬಹಿರಂಗವಾಗಿ ಹಿಂದಕ್ಕೆ ತೆಗೆದುಕೊ, ತ್ಯಜಿಸು ; (ಮು., ಬಹಿರಂಗವಾಗಿ ತಪ್ಪೊಪ್ಪಿಕೊಂಡು) ಹಿಂದಿನ ಅಭಿಪ್ರಾಯವನ್ನು ತ್ಯಜಿಸಿಬಿಡು. **Recantátion** (ನಾ.)

Recéde ರಿಸೀಡ್ (ಕ್ರಿ. ಅಕ.) ಹಿಂದಕ್ಕೆ ಹೋಗು ; ಹಿಂಜರಿ. (ನೋಟಕನ ಚಲನೆಯ ಕಾರಣದಿಂದ ಕ್ರಮೇಣ ಅವನಿಗೆ) ದೂರ ದೂರವಾಗು, ಹೆಚ್ಚು ದೂರವಾಗು, ಹಿಂದುಳಿ. ಹಿಂದಕ್ಕೆ ಓಲು, ಓರೆಯಾಗು. (ಗೊತ್ತುಪಾಡು, ಅಭಿಪ್ರಾಯ, ಮೊ. ರಿಂದ) ಹಿಮ್ಮೆಟ್ಟು, ಹಿಂದೆಗೆ (*From* ಉಪ. ದೊಡನೆ). (ಯೋಗ್ಯತೆ, ಬೆಲೆ) ಕುಗ್ಗು, ಕಡಮೆಯಾಗು.

Receípt ರಿಸೀಟ್ (ನಾ., ಕ್ರಿ. ಸಕ.) = Recipe. ಸಂದ, ಸಲಿಕೆಯಾದ —ಹಣ ; ಆಯ ; ಜಮಾ ; ಕೈಗೆ ಅಥವಾ ವಶಕ್ಕೆ ತೆಗೆದುಕೊಳ್ಳುವುದು ; ಕೈಗೆ ಸೇರುವುದು ; ಸಂದಾಯ ; ಸಲಿಕೆ (On r. of a postal order for 1/- the goods will be sent. Beg to acknowledge r. of your book. Entrusted with the r. of subscriptions). (ಸಂದ ಹಣಕ್ಕೆ ಕೊಡುವ) ಸಲಿಕೆ ಚೀಟಿ ; ರಸೀತಿ ; ಪಾವತಿ (ಚೀಟಿ). (ಪ್ರಾಚೀ. ಪ್ರ.) (ಅಧಿಕಾರ ಪೂರ್ವಕವಾಗಿ) ಹಣವನ್ನು ತೆಗೆದುಕೊಳ್ಳುವ ಸ್ಥಳ [ಮು., r. of custom (ರೇವುಪಟ್ಟಣದಲ್ಲಿಯ) ಸುಂಕದ ಕಟ್ಟೆ]. (ಕ್ರಿ.) (ಹುಂಡಿಯ ಮೇಲೆ) ಸಲಿಕೆ, ಪಾವತಿ, —ಬರೆ ; ರಸೀತಿ ಬರೆ ; ಸಲಿಕೆಯ ಮುದ್ರೆ ಒತ್ತು ; ಸಂದಾಯದ ಗುರುತು ಹಾಕು.

Receíve ರಿಸೀವ್ (ಕ್ರಿ. ಸಕ.) ಪಾವತಿ ಪಡೆ ; (ಕೊಟ್ಟದ್ದನ್ನು) ಕೈಗೆ, ಸ್ವಾಧೀನಕ್ಕೆ, —ತೆಗೆದುಕೊ ; ಸ್ವೀಕರಿಸು ; ಈಸಿಕೊ ; ಒಪ್ಪಿಸಿಕೊ [Lord r. my soul (ಸಾಯುತ್ತಿರುವವನ ಪ್ರಾರ್ಥನೆ). R. stolen goods (ಕಳ್ಳನಿಗೆ ಶಾಮೀಲಾಗಿ). R. person's confession, oath (ಒಬ್ಬನ) ಪಾಪ ನಿವೇದನೆಯನ್ನು, ತಪ್ಪೊಪ್ಪಿಕೆಯನ್ನು, ಪ್ರಮಾಣವನ್ನು, —ಕೇಳು, ಕೇಳಲು ಒಪ್ಪಿಕೊ. R. a petition (ಪರ್ಯಾಲೋಚನೆಯ ಬಗ್ಗೆ) ಅರ್ಜಿ ತೆಗೆದುಕೊ. R. the sacraments

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕ್ರೈಸ್ತ) ಪ್ರಭು ಭೋಜನ ಸಂಸ್ಕಾರದ ಪ್ರಸಾದ (ರೊಟ್ಟಿ ಮತ್ತು ದ್ರಾಕ್ಷಾ ಮದ್ಯ) ಸೇವಿಸು. Attend without receiving —ಸೇವಿಸದೆ ಹಾಜರಿರು]. ಆಧಾರವಾಗಿ ವಹಿಸಿಕೊ; ಹೊರು; ಶಕ್ತಿಯನ್ನು, ಭಾರವನ್ನು, —ತಾಳು, ವಹಿಸು (Arch receives weight of roof); ಸಹಿಸು; ಅನು; ಪಡೆ(ದುಕೊ); ತಡೆ, ಎದುರಿಸು; ಪ್ರವೇಶ ಕೊಡು, ಬರಗೊಡು; ಹಿಡಿ(ಸು); ಸ್ಥಳ, ವಸತಿ, ಅವಕಾಶ, —ಕೊಡು; ಎಡೆಗೊಡು; ಈಡಾಗು; ಒಳಪಡು; ಅಂಗೀಕರಿಸು; (ಪಾತ್ರೆಯಂತೆ) ಗ್ರಹಿಸು, ಹಿಡಿಸು [Had to r. the visits, attentions, of —. R. an impression, stamp, mark, etc. (ಹೆಚ್ಚು ಕಡಮೆ ಶಾಶ್ವತವಾಗಿ) ಮುದ್ರೆ, ಗುರುತು, —ತಾಳು (ರೂಪ. ಸಹ). Sensitive paper receives the record of signals. Fitted to r. the knowledge of God. Has received our yoke ನಮ್ಮ ಒಡೆತನವನ್ನು, ಪ್ರಭುತ್ವವನ್ನು, ಅಂಗೀಕರಿಸಿದೆ; ನಮ್ಮ ಪ್ರಭುತ್ವಕ್ಕೆ ಒಳಗಾಗಿದೆ]. ಅತಿಥಿಯಾಗಿ ಬರಮಾಡಿಕೊ, ಆದರಾತಿಥ್ಯ ತೋರು; ಸ್ನೇಹಭಾವದಿಂದ ಎದುರುಗೊಳ್ಳು; ಸ್ವಾಗತಿಸು; ಆದರಿಸು; ಪುರಸ್ಕರಿಸು; ಸ್ವೀಕಾರ ಮಾಡು (How did she r. his offer? ಅವನು ಮಾಡಿದ ಮದುವೆಯ ಪ್ರಸ್ತಾಪವನ್ನು ಅವಳು ಹೇಗೆ ಪುರಸ್ಕರಿಸಿದಳು?). ಸ್ವಾಗತ ಸಮಾರಂಭ, ಸತ್ಕಾರ ಸಭೆ,—ನಡಸು. ನಂಬು; ನಿಜವೆಂದು ಅಂಗೀಕರಿಸು (An axiom universally received. They r. not our report) [**Received** (ಗು.)]. ಪಡೆ [Have not yet received my dividend. R. a letter, news. R. Christ in Baptism ಜ್ಞಾನಸ್ನಾನದಲ್ಲಿ ಕ್ರೈಸ್ತ ಲಕ್ಷಣ, ಗುಣ, —ಪಡೆ; —ಕ್ರಿಸ್ತತ್ವ ಪಡೆ. Pleasant to r. sympathy. Deserves more attention than it receives. R. orders to march]. (—ರ) ಭಾಗ ಪಡೆ, ತೆಗೆದುಕೊ (*Of* ಉಪ. ದೊಡನೆ). **Receívable** (ಗು.); **Receíver** (ನಾ.) (ಕ್ರಿಯಾರ್ಥಗಳಲ್ಲಿ); ಮು., ದಿವಾಳಿಯ ಅಥವಾ ವ್ಯಾಜ್ಯಕ್ಕೊಳಗಾಗಿರುವ ಆಸ್ತಿಯನ್ನು ನಿರ್ವಹಿಸಲು ನ್ಯಾಯಸ್ಥಾನದ ಆಜ್ಞೆಯಿಂದ (Receiving-order) ನೇಮಕನಾದವನು: ಆಸ್ತಿ ನಿರ್ವಾಹಕ [**Receívership** (ನಾ.)]. (ಕಳ್ಳನಿಗೆ ಶಾಮೀಲಾಗಿ) ಕಳವು ಮಾಲನ್ನು ತೆಗೆದುಕೊಳ್ಳುವವನು. ಯಂತ್ರದಲ್ಲಾಗಲಿ, ಯಂತ್ರ ಸಲಕರಣೆಯಲ್ಲಾಗಲಿ, ಯಾವುದನ್ನಾದರೂ ಒಳಕೊಳ್ಳುವ ಕೋಶ ಅಥವಾ ಸಂಪುಟದಂಥ ಭಾಗ: ಗ್ರಾಹಕ [ಮು., ದೂರವಾಣಿಯ (ಕರ್ಣ)ಗ್ರಾಹಕ]. ಪ್ರಸರಣಮಾಡಿದ ನಿಸ್ತಂತು ತರಂಗಗಳನ್ನು ಧ್ವನಿ ಅಥವಾ ಬೆಳಕಾಗಿ ಪರಿವರ್ತಿಸುವ ಸಲಕರಣೆ; ನಿಸ್ತಂತು ವಾರ್ತಾ ಗ್ರಾಹಕ (= Receiving-set)

Recéption ರಿಸೆಪ್‌ಷನ್ (ನಾ.) ಪಡೆಯುವುದು, ತೆಗೆದುಕೊಳ್ಳುವುದು, ಸ್ವೀಕಾರ (ಸಾಮಾನ್ಯಾರ್ಥಗಳಲ್ಲಿ ವಿರ. ಪ್ರ.). (ಮು., ವ್ಯಕ್ತಿಯನ್ನು, ಒಂದು ಸ್ಥಳಕ್ಕೆ, ಒಂದು ಗೋಷ್ಠಿಗೆ) ಬರಮಾಡಿಕೊಳ್ಳುವುದು, ಸೇರಿಸಿಕೊಳ್ಳುವುದು, ಸ್ವಾಗತಿಸುವುದು (The rooms were prepared for his r. Was honoured by r. into the Academy. R. order ಹುಚ್ಚನನ್ನು ಹುಚ್ಚಾಸ್ಪತ್ರೆಗೆ ಸೇರಿಸಿಕೊಳ್ಳಲು ಅಧಿಕಾರಕೊಡುವ ಆಜ್ಞಾ ಪತ್ರ: ಪ್ರವೇಶಾಜ್ಞೆ). (ವಿಧಿ ವಿಹಿತವಾದ ಅಥವಾ ಉಪಚಾರ ಪೂರ್ವಕವಾದ) ಸ್ವಾಗತ (The r. of the delegates is arranged for Monday next). ಅತಿಥಿಗಳನ್ನು ಬರಮಾಡಿಕೊಳ್ಳುವ ಸಮಾರಂಭ; ಸ್ವಾಗತ ಸಮಾರಂಭ; ಸತ್ಕಾರ —ಸಭೆ, ಕೂಟ [After the review there will be a r. R.-room ಗೋಷ್ಠಿಯನ್ನು ಸ್ವಾಗತಿಸುವ ಕೊಟಡಿ; ಸ್ವಾಗತದ, ಸತ್ಕಾರದ, —ಕೊಟಡಿ; ಬೈಠಕ್‌ಖಾನೆ]. (ಮನಸ್ಸಿನಲ್ಲಿ: ಭಾವನೆಗಳ ಅಥವಾ ಭಾವಗಳ) ಗ್ರಹಣ (Has a great faculty of r., but little originative power ಅಧಿಕವಾದ ಗ್ರಹಣಶಕ್ತಿಯಿದೆ, ಆದರೆ ಸ್ವತಂತ್ರ ಕಲ್ಪನಾ ಶಕ್ತಿಯಿಲ್ಲ). (ವಿರ. ಪ್ರ.) (ಮಾನಸಿಕವಾಗಿ) ಅಂಗೀಕಾರ; ನಿಜವೆಂದು, ಯುಕ್ತವೆಂದು, —ಸ್ವೀಕಾರ, ಒಪ್ಪಿಕೆ (The general r. of the Newtonian hypothesis). (ಒಂದು ನಿರ್ದಿಷ್ಟ ರೀತಿಯಲ್ಲಿ) ಬರಮಾಡಿಕೊಳ್ಳುವುದು, ಸ್ವಾಗತಿಸುವುದು; ಸ್ವಾಗತ (Warm r. ತೀವ್ರ ಪ್ರತಿಭಟನೆ, ಅಥವಾ ಉತ್ಸಾಹಪೂರ್ವಕವಾದ ಸ್ವಾಗತ. His r. was frigid, all that he could desire. Proposal, book, had a favourable r.). ನಿಸ್ತಂತು ವಾರ್ತಾ ಗ್ರಹಣ (ಸಾಮರ್ಥ್ಯ). **Recéptionist** (ನಾ.) (ಛಾಯಾ ಚಿತ್ರಗಾರ, ದಂತವೈದ್ಯ, ಮೊ. ರು) ಗಿರಾಕಿಗಳನ್ನು ಬರಮಾಡಿಕೊಳ್ಳುವುದಕ್ಕೆ ನೇಮಿಸಿಕೊಂಡಿರುವ ವ್ಯಕ್ತಿ; ಸ್ವಾಗತಕಾರ. **Recéptive** (ಗು.) (ಭಾವನೆಗಳನ್ನು ಅಥವಾ ಭಾವಗಳನ್ನು) (ಬೇಗ) ಗ್ರಹಿಸುವ (ಸಾಮರ್ಥ್ಯಪುಳ್ಳ); (ತೀವ್ರ) ಗ್ರಹಣ ಶಕ್ತಿಯುಳ್ಳ (A mind more r. than retentive or creative). (ವಿರ. ಪ್ರ.) ಗ್ರಹಿಸುವುದಕ್ಕೆ, ಸ್ವೀಕಾರಕ್ಕೆ, —ಸಂಬಂಧಿಸಿದ. **Recéptively** (ಕ್ರಿ. ವಿ.); **Recéptiveness** (ನಾ.); **Receptívity** (ನಾ.); **Recípient** ರಿಸಿಪಿಯೆಂಟ್ (ಗು., ನಾ.) ಪಡೆದುಕೊಳ್ಳುವ(ವನು); ಗ್ರಹಿಸುವ(ವನು); ಗ್ರಾಹಕ. **Recípiency** (ನಾ.)

Recénsion ರಿಸೆನ್‌ಷನ್ (ನಾ.) (ಮೂಲ— ಗ್ರಂಥದ, ಪಾಠದ) ಪರಿಷ್ಕರಣ; ಪರಿಷ್ಕೃತ ಪಾಠ, —ಗ್ರಂಥ.

Récent ರೀಸೆಂಟ್ (ಗು.) ಬಹಳ ಹಿಂದಿನದಲ್ಲದ; ಇತ್ತೀಚೆಗೆ— ನಡೆದ, ಇದ್ದ; ಈಚಿನ; ದೀರ್ಘ ಸ್ಥಾಪಿತವಲ್ಲದ; ಹೊಸದಾಗಿ, ಈಚೆಗೆ, ಆರಂಭವಾದ; ನೂತನ. **Récently** (ಕ್ರಿ. ವಿ.); **Récentness** (ನಾ.); **Récency** (ನಾ.)

Recéptacle ರಿಸೆಪ್ಟಕ್‌ಲ್ (ನಾ.) (ಯಾವುದನ್ನಾದರೂ ಒಳಕೊಳ್ಳುವ, ಹಿಡಿಸುವ) ಸಂಪುಟ, ಕೋಶ; ಪಾತ್ರೆ(ತ್ರ); ಆಶ್ರಯ(ಸ್ಥಾನ). (ಸ. ವಿ.) ಪುಷ್ಪ ಪಾತ್ರ; ಹೂಗೊಂಚಲಿನ ಅಕ್ಷ ಕಾಂಡ.

Recéption, Recéptive, etc. **Receive** ನೋಡಿ.

Recéss ರಿಸೆಸ್ (ನಾ., ಕ್ರಿ. ಸಕ.) ಕೆಲಸದಿಂದ ತಾತ್ಕಾಲಿಕ, ಸ್ವಲ್ಪ ಕಾಲದ, ವಿಶ್ರಾಂತಿ; ಬಿಡುವು; (ಮು., ಪಾರ್ಲಿಮೆಂಟಿನ) ವಿರಾಮ ಕಾಲ, ರಜಾ ಕಾಲ. (ನೀರು, ನೆಲ, ನೀರ್ಗಲ್ಲು ಪ್ರವಾಹ, ಮೊ. ವು ಮುಂಚಿನ ಎಲ್ಲೆಯಿಂದ) ಹಿಂದಕ್ಕೆ ಸರಿಯುವುದು; ಹಿಂಜರಿತ; ಹಿಂಜರಿತದ ಮೊತ್ತ. (ವಿರ. ಪ್ರ.) (ಒಂದು ಸ್ಥಾನವನ್ನು ಬಿಟ್ಟು) ಹಿಂದಕ್ಕೆ ಹೋಗುವುದು, ಮರಳುವುದು. ಏಕಾಂತ, ಗುಪ್ತ, ವಿಜನ, ವಿವಿಕ್ತ, —ಸ್ಥಾನ (In the inmost recesses of the Alps, of the heart). (ಪರ್ವತಶ್ರೇಣಿ, ಮೊ. ರ) ಹಿಂದಕ್ಕೆ ಸರಿದ ಭಾಗ; (ಗೋಡೆಯಲ್ಲಿಯ) ಗೂಡು; (ಅಂ. ರ. ಶಾ.) ಅಂಗದಲ್ಲಿಯ ಮಡಿಕೆ, ಕುಳಿ, ತಗ್ಗು. (ಕ್ರಿ.) ಗೂಡಿನಲ್ಲಿಡು; ಕಣ್ಣಿಗೆ ಮರೆಯಾಗಿಡು; ಹಿಂದಕ್ಕೆ ಸರಿಸು; ಗೂಡು(ಗಳನ್ನು) ಇಡು, ಒದಗಿಸು. **Recéssion** (ನಾ.) (ಒಂದು ಸ್ಥಳದಿಂದ ಅಥವಾ ಸ್ಥಾನದಿಂದ) ಹಿಂಜರಿಯುವುದು, ಹಿಂಜರಿತ; (ವಸ್ತುವಿನ) ಒಳ ಹೋಗಿರುವ ಭಾಗ; ಗೂಡು. **Recéssive** (ಗು.) (ನಾಮಪದದ ಅರ್ಥಗಳಲ್ಲಿ). (ಗು., ನಾ.) (ಮೆಂಡೆಲ್ ತತ್ತ್ವ) (ಸಂಕರ ಸಂತಾನಗಳಲ್ಲಿ) ಮೂಲ ತಾಯಿತಂದೆಗಳಲ್ಲೊಬ್ಬರಿಂದ ಬಂದು ಮೊದಲನೆಯ ತಲೆಮೊರೆಯಲ್ಲಿ ಕಾಣಿಸಿಕೊಳ್ಳದೆ ಅಡಗಿದ್ದು ಎರಡನೆಯ ಅಥವಾ ಮುಂದಿನ ತಲೆಮೊರೆಗಳಲ್ಲಿ ಕಾಣಿಸಿಕೊಳ್ಳುವ ಗುಣ(ದ) (Dominant ನೋಡಿ). **Recéssional** (ಗು., ನಾ.) (ಪಾರ್ಲಿಮೆಂಟಿನ) ವಿರಾಮ ಕಾಲದ, ರಜಾ ಕಾಲದ. R. hymn or r. ಆರಾಧನೆಯಾದಮೇಲೆ ಪಾದ್ರಿಗಳೂ ಗಾಯಕ ತಂಡವೂ ಹೊರಟು ಹೋಗುವಾಗ ಹಾಡುವ ಸ್ತೋತ್ರ ಗೀತ; ನಿರ್ಗಮನ ಸ್ತೋತ್ರ ಗೀತ [The R. ಕಿಪ್ಲಿಂಗ್ (Kipling) ಕವಿಯ *The Five Nations* ಎಂಬ ಗ್ರಂಥದಲ್ಲಿಯ ಒಂದು ಕವನ (ಸಾಮ್ರಾಜ್ಯ ಸಮಾರಂಭಗಳಲ್ಲಿ ಇದನ್ನು ಹಾಡುವುದು ವಾಡಿಕೆ)]

Réchabite ರೆಕಬೈಟ್ (ನಾ.) ಸ್ವಲ್ಪವೂ ಕುಡುಕನಲ್ಲದವನು; ಸಂಪೂರ್ಣ ಮದ್ಯ ತ್ಯಾಗಿ (ಬೈಬಲ್ಲಿನಲ್ಲಿನ Rechab ಎಂಬವನ ಸಂತತಿಯವರು ಮದ್ಯ ತ್ಯಾಗಿಗಳಾಗಿದ್ದುದರಿಂದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rechauffe (F) ರೆಷೋಫ್ಷೇ, ರಿ— (ನಾ.) ಮತ್ತೆ ಬಿಸಿ ಮಾಡಿದ ಅಡಿಗೆ (ತಂಗಳು). (ರೂಪ.) ಚರ್ವಿತಚರ್ವಣ.

Recherche (F) ರಷೇರ್ಷೇ (ಗು.) (ಮು., ಅಡಿಗೆಯ ಅಥವಾ ಪದಗಳ ವಿಷಯದಲ್ಲಿ) ಬಹಳ ಜೋಕೆಯಿಂದ ಅಥವಾ ಪ್ರಯಾಸದಿಂದ ಯೋಚಿಸಿದ, ಏರ್ಪಡಿಸಿದ; ತರ್ತೀಪಾದ ; ಅಚ್ಚುಕಟ್ಟಾದ; ಬಹು ದೂರ ಎಳೆದ ; ತಿಣಿಕಿದ.

Recídivist ರಿಸಿಡಿವಿಸ್ಟ್ (ನಾ.) (ದಂಡನೆಯನುಭವಿಸಿ ಬುದ್ಧಿ ತಂದು ಕೊಳ್ಳದೆ) ಮತ್ತೆ ಮತ್ತೆ ಅಪರಾಧ, ತಕ್ಸೀರು, —ಮಾಡುವವನು ; ತಿದ್ದಲಾಗದ, ಮೊಂಡ, —ಅಪರಾಧಿ. **Recídivism** (ನಾ.)

Récipe ರೆಸಿಪಿ(ಪೆ) (ನಾ.) ವೈದ್ಯನ ಔಷಧ ಚೀಟಿ(ಯನ್ನನುಸರಿಸಿ ತಯಾರಿಸಿದ, ಮಿಶ್ರಣ ಮಾಡಿಕೊಟ್ಟ, ಔಷಧ). (ಒಂದು ಭಕ್ಷ್ಯ, ಮೊ. ನ್ನು ಮಾಡುವುದಕ್ಕೆ) ಪರಿಕರಗಳ ಮತ್ತು ಮಾಡುವ ವಿಧಾನದ ವಿವರಣೆ : ಪಾಕ (ಪರಿಕರಗಳ) ಪಟ್ಟಿ ; ಪಾಕ ವಿಧಾನ. (ಯಾವುದನ್ನಾದರೂ ಸಾಧಿಸುವುದಕ್ಕೆ) ಸರ್ವೋತ್ತಮ(ವೆಂದು ಹೇಳುವ) —ಉಪಾಯ, ಯೋಜನೆ, ಹಂಚಿಕೆ.

Recípient. Receive ನೋಡಿ.

Recíprocal ರಿಸಿಪ್ರೊಕಲ್ (ಗು., ನಾ.) ಪ್ರತಿಯಾಗಿ ಪಡೆದ, ಕೊಟ್ಟ (If I helped him, I had r. help from him). ಪರಸ್ಪರ, ಅನ್ಯೋನ್ಯ, ಒಬ್ಬರೊಬ್ಬರ (R. love, protection, injuries); ಪ್ರತಿಯಾಗಿ, ವಿಪರ್ಯಯವಾಗಿ, —ಅದೇ ರೀತಿಯ ; ವಿಪರ್ಯಯ ಸಾದೃಶ್ಯವುಳ್ಳ (I took the chamois for a man, & it made the r. mistake ನಾನು ಷ್ಯಾಮಾಯನ್ನು ಮನುಷ್ಯನೆಂದು ತಿಳಿದು ಕೊಂಡೆ, ಅದು ನನ್ನನ್ನು ಷ್ಯಾಮಾಯ್ ಎಂದು ವಿಪರ್ಯಯ ಪ್ರಮಾದದಿಂದ ತಿಳಿದುಕೊಂಡಿತು). (ವ್ಯಾ.) ಅನ್ಯೋನ್ಯ —ಕ್ರಿಯಾಸೂಚಕ, ಸಂಬಂಧ ಸೂಚಕ (*Each other* is a r. pronoun); (ಹಿಂದಿನ ಪ್ರ.) ಸ್ವಾರ್ಥಕ ; ಆತ್ಮಾರ್ಥಕ. (ನಾ.) (ಗಣಿತ) ಪರಸ್ಪರ ಗುಣಲಬ್ಧವು ೧ ಆಗುವಂತೆ ಮತ್ತೊಂದಕ್ಕೆ ಸಂಬಂಧಪಡೆದಿರುವ ಒಂದು ಪರಿಮಾಣ ಅಥವಾ ಸಂಖ್ಯೆ : ವ್ಯುತ್ಕ್ರಮ ಸಂಖ್ಯೆ,—ಪರಿಮಾಣ ; ವಿಪರ್ಯಯ— ($\frac{1}{5}$ is the r. of 5). **Recíprocally** (ಕ್ರಿ. ವಿ.) ; **Recíprocate** —ಕೇಟ್ (ಕ್ರಿ.) (ಯಂತ್ರ ವಿದ್ಯೆ) ಪರ್ಯಾಯ ಕ್ರಮದಲ್ಲಿ ಹಿಂದಕ್ಕೆ ಮತ್ತು ಮುಂದಕ್ಕೆ ಹೋಗು, ಚಲಿಸು [Reciprocating engine, etc. ಹೀಗೆ ಚಲಿಸುವ ಯಂತ್ರ ಭಾಗದಿಂದ ಕೆಲಸಮಾಡುವ ಎಂಜಿನು, ಮೊ. ದು (ಎದುರು ಪದ : Rotatory) (Rotate ನೋಡಿ)] . (—ಕ್ಕೆ) ಹಿಂದಕ್ಕೂ ಮುಂದಕ್ಕೂ ಹೋಗುವ ಚಲನೆ ಕೊಡು ; (ಪ್ರಭಾವ, ಮೊ. ನ್ನು) ಪರಸ್ಪರವಾಗಿ ಕೊಟ್ಟು ತೆಗೆದುಕೊ, ವಿನಿಮಯ ಮಾಡು ; (ಪ್ರೇಮ, ಮೊ. ನ್ನು) ಹಿಂದಿರುಗಿಸು, ಪ್ರತಿಯಾಗಿ ತೋರು (ಅನೇಕ ವೇಳೆ *with* ಉಪ. ದೊಡನೆ). **Reciprocátion** (ನಾ.) ; **Reciprócity** —ಪ್ರಾಸಿಟಿ (ನಾ.) ಪರಸ್ಪರ ಸಂಬಂಧ(ದ ಸ್ಥಿತಿ) ; ಪರಸ್ಪರತೆ ; ಪಾರಸ್ಪರ್ಯ ಕ್ರಿಯೆ. ಪರಸ್ಪರವಾಗಿ ಕೊಟ್ಟು ತೆಗೆದುಕೊಳ್ಳುವ ತತ್ತ್ವ, ಪದ್ಧತಿ, ಆಚರಣೆ (ಮು., ವ್ಯಾಪಾರ ಸಂಬಂಧಗಳ ಆಧಾರವಾಗಿ ರಾಜ್ಯಗಳು ತಂತಮ್ಮಲ್ಲಿ ಮಾಡಿಕೊಳ್ಳುವ ರಿಯಾಯಿತಿಗಳ ವಿನಿಮಯ)

Recítal, Recitatíve. Recite ನೋಡಿ.

Recíte ರಿಸ್ಸೈಟ್ (ಕ್ರಿ.) (ಪದ್ಯ ಅಥವಾ ಪ್ರಕರಣವನ್ನು ಮು., ಸಭೆಯ ಎದುರಿಗೆ) ಕಂಠಪಾಠವಾಗಿ ಹೇಳು ; ಪಠಿಸು ; ಕಂಠ ಪಾಠ ಒಪ್ಪಿಸು (Reciting-note ಪಠನದಲ್ಲಿ ಹಲವು ಉಚ್ಚಾರಾಂಶಗಳವರೆಗೂ ಎಳೆದ ಒಂದೇ ಸ್ವರ). (ನ್ಯಾ. ಶಾ.) ದಸ್ತೈವಜಿನಲ್ಲಿ (ಸಂಬಂಧಪಟ್ಟ ಸಂಗತಿಗಳನ್ನು) ಮತ್ತೆ ನಮೂದಿಸು, ಒಕ್ಕಣಿಸು. ಅನುಕ್ರಮವಾಗಿ ಹೇಳು ; ಒಂದೊಂದಾಗಿ ಹೇಳು. **Recitátion** (ನಾ.); **Recítal** (ನಾ.) (ಪರಸ್ಪರ ಸಂಬಂಧವುಳ್ಳ ಹಲವು ವಿಷಯಗಳ, ಒಂದು ಘಟನೆ, ಮೊ. ರ) ವಿವರಣಾತ್ಮಕವಾದ ನಿರೂಪಣೆ, ಕಥನ (*Of* ಉಪ. ದೊಡನೆ) ; (ವೃತ್ತಾಂತ) ಕಥನ. ಸಂಗತಿಗಳನ್ನು ಒಕ್ಕಣಿಸುವ ದಸ್ತೈವಜಿನ ಭಾಗ. ಕಥಿಸುವುದು ; ಕಂಠ ಪಾಠ ಒಪ್ಪಿಸುವುದು. (ಒಬ್ಬನ ಕೃತಿಗಳನ್ನು, ಒಬ್ಬನು) ವಾದ್ಯದಲ್ಲಿ ನುಡಿಸುವುದು, ಬಾಜಿಸುವುದು ; ವಾದನ. **Recitatíve** ರೆಸಿಟಟೀ(ೀ)ವ್ (ನಾ., ಕ್ರಿ.) (ಸಂಗೀತ ನಾಟಕ ದಲ್ಲಿಯೂ ನಾಟಕಪ್ರಾಯವಾದ ಸಂಗೀತದಲ್ಲಿಯೂ ಕಥನ ಮತ್ತು ಸಂವಾದ ಭಾಗಗಳಲ್ಲಿ ರೂಢಿಯಾಗಿ ಕಾಣಬರುವ) ಸಂಗೀತ ಭಾಷಣ ; ಸಂಗೀತ ಭಾಷಣದ ಮಾತುಗಳು, ಸಾಹಿತ್ಯ ಭಾಗ. (ಕ್ರಿ.) ಸಂಗೀತ ಭಾಷಣ ಶೈಲಿಯಲ್ಲಿ ಹೇಳು ; ಸಂಗೀತ ಭಾಷಣ ಮಾಡು. **Recíter** (ನಾ.) ಕಂಠ ಪಾಠಕ ; ಕಂಠ ಪಾಠಕ್ಕೆ ತಕ್ಕ ಪ್ರಕರಣಗಳುಳ್ಳ ಪುಸ್ತಕ ; ಕಂಠ ಪಾಠ ಪುಸ್ತಕ.

Reck ರೆಕ್ (ಕ್ರಿ.) (ಅಲಂ., ಕಾವ್ಯ) ನಿಷೇಧಾರ್ಥಕ ಮತ್ತು ಪ್ರಶ್ನಾರ್ಥಕ ವಾಕ್ಯಗಳಲ್ಲಿ ಮಾತ್ರ (R. of ಲಕ್ಷ್ಯಕೊಡು, —ಮಾಡು ; ಗಣನೆಗೆ ತೆಗೆದುಕೊ). ಮನಸ್ಸಿಗೆ ಹಚ್ಚಿಕೊ ; ತೊಂದರೆಪಟ್ಟುಕೊ ; ಚಿಂತಿಸು ; ಆತಂಕಪಡು [*If, though, that, how, whether*, etc.). (ಅಕರ್ತೃಕ ಪ್ರ. ಸಹ) : What recks it him that— (—ಎಂದು) ಅವನಿಗೇನು ಯೋಚನೆ, ಚಿಂತೆ ?] . **Réckless** (ಗು.) ಎಚ್ಚರಿಕೆಯಿಲ್ಲದ; ಜಾಗರೂಕತೆಯಿಲ್ಲದ ; (ಪರಿಣಾಮ, ಫಲ —ಇವುಗಳ ಬಗ್ಗೆ) ನಿರ್ಲಕ್ಷ್ಯವಾದ ; ಎಚ್ಚರಗೇಡಿಯಾದ ; ಮುಂದಾಲೋಚನೆ ಯಿಲ್ಲದ ; (ಅಪಾಯ, ಮೊ. ರ) ಲಕ್ಷ್ಯ ಮಾಡದ (*Of* ಉಪ. ದೊಡನೆ) ; ಹುಚ್ಚು ಧೈರ್ಯದ. **Récklessly** (ಕ್ರಿ. ವಿ.); **Récklessness** (ನಾ.)

Réckon ರೆಕ್‌ನ್ (ಕ್ರಿ.) (ಎಣಿಕೆಯಿಂದ ಅಥವಾ ರೂಢಿಯಾಗಿ ಲೆಕ್ಕಾಚಾರ ದಿಂದ) (ಸಂಖ್ಯೆ ಅಥವಾ ಮೊತ್ತವನ್ನು) ಗೊತ್ತುಮಾಡು, ಕಂಡು ಹಿಡಿ ; ಲೆಕ್ಕಮಾಡು ; (—ಇಂದ, —ವರೆಗೆ) ಎಣಿಕೆ ಮಾಡು, ಗಣಿಸು (*From, to* ಉಪ. ದೊಡನೆ); (—ಎಂದು ಒಬ್ಬನ ಶೀಲ ಸ್ವಭಾವಗಳನ್ನು) ಒಟ್ಟಿನಲ್ಲಿ ಎಣಿಸು (*Up* ಉಪ. ದೊಡನೆ) ; ಲೆಕ್ಕದಲ್ಲಿ, ಲೆಕ್ಕಕ್ಕೆ, —ಸೇರಿಸು (*In* ಉಪ. ದೊಡನೆ) ; ವರ್ಗಕ್ಕೆ, ವರ್ಗದಲ್ಲಿ, ಜಾತಿಯಲ್ಲಿ, —ಸೇರಿಸು, ಪರಿಗಣಿಸು (*Among* or *with* or *in* ಉಪ. ದೊಡನೆ) ; (—ಎಂದು) ಭಾವಿಸು, ಗಣಿಸು (*For, as, to be*) (ಕರ್ಮಪದದೊಡನೆ ಮತ್ತು ಕ್ರಿಯಾರ್ಥಪೂರಕ ಪ್ರ. : R. him wise, beyond redemption). ಎಣಿಸಿ ನಿರ್ಧರಿಸು, ನಿಶ್ಚಯಿಸು. (—ಎಂದು) ದೃಢಾಭಿಪ್ರಾಯ ಪಡು, ಪಡೆದಿರು ; ಭರವಸೆ —ಇಡು, ಪಡು ; ನಂಬು [*That* ; ಮು., ಅಮ. ಸಂ. ಪ್ರ. ; ನಿಕ್ಷಿಪ್ತ ವಾಕ್ಯವಾಗಿ ಸಹ (Calculate, Guess ನೋಡಿ)] . ಲೆಕ್ಕ ಮಾಡು, ಕೂಡು, ಸಂಕಲನ ಮಾಡು [R. without one's host (Host[2] ನೋಡಿ). To be reckoned with ಅಲಕ್ಷ್ಯಮಾಡದೆ ಗಣನೆಗೆ ತೆಗೆದುಕೊಳ್ಳ ಬೇಕಾದ] . (ಒಬ್ಬನೊಡನೆ) ಲೆಕ್ಕಾಚಾರ ಬಗೆಹರಿಸಿಕೊ (*With* ಉಪ. ದೊಡನೆ). (—ಮೇಲೆ) ನಂಬಿಕೊಂಡಿರು, ನೆಚ್ಚಿಕೊಂಡಿರು, ಭರವಸೆಯಿಡು, ಯೋಜನೆಗಳನ್ನು ಆಧಾರಮಾಡು (*On* or *upon* ಉಪ. ದೊಡನೆ). **Réckoner** ರೆಕ್ನರ್ (ನಾ.) (ಕ್ರಿಯಾರ್ಥಗಳಲ್ಲಿ). Ready r. (Ready ನೋಡಿ). **Réckoning** ರೆಕ್ನಿಂಗ್ (ನಾ.) (ಕ್ರಿಯಾರ್ಥಗಳಲ್ಲಿ) ; ಮು., ಮದ್ಯದಂಗಡಿಯ ಗಿರಾಕಿ ತೆರಬೇಕಾದ ಮದ್ಯದ ಲೆಕ್ಕ. [Day of r. (ಯಾವುದಕ್ಕಾದರೂ) ಪರಿಹಾರ ಕೊಡಬೇಕಾದ, ಮುಯ್ಯಿ ತೀರಿಸುವ, ದಿನ ; ತೀರಿಕೆಯ ದಿನ. Dead r. (Dead ನೋಡಿ). Out in one's r. ಎಣಿಕೆಯಲ್ಲಿ ಅಥವಾ ನಿರೀಕ್ಷೆಯಲ್ಲಿ ತಪ್ಪಿದ]

Reclaím ರಿಕ್ಲೆಯ್ಮ್ (ಕ್ರಿ., ನಾ.) (ದುರ್ಮಾರ್ಗ, ಬೂಕ್ಷ ಸ್ಥಿತಿ—ಇವನ್ನು ತಪ್ಪಿಸಿ) ಸನ್ಮಾರ್ಗಕ್ಕೆ ತರು, ಉದ್ಧಾರಮಾಡು ; ಮೇಲಕ್ಕೆತ್ತು ; (ನಿಷ್ಪ್ರಯೋಜಕ ಸ್ಥಿತಿಯಿಂದ) ಉಪಯೋಗಕ್ಕೆ ತರು. ಸುಧಾರಿಸು ; ಸಾಧು ಮಾಡು ; ಪಳಗಿಸು ; ತಿದ್ದು ; ನಾಗರಿಕ ಮಾಡು ; (ಬಂಜರು, ಮೊ. ನ್ನು) ಸಾಗುವಳಿಗೆ ತರು, ಕೃಷಿಯೋಗ್ಯವನ್ನಾಗಿ ಮಾಡು. (ವಿರ. ಪ್ರ.) ಅಸಮ್ಮತಿ, ಪ್ರತಿಭಟನೆ, —ತೋರು ; ವಿರೋಧಿಸು ; ಆಕ್ಷೇಪಿಸು. (ನಾ.) (ವಿರ. ಪ್ರ.) (ಸರಿಯಾದ) ದಾರಿಗೆ ತರುವುದು ; ಉದ್ಧಾರ (ಮಾಡುವುದು) ; ಸುಧಾರಣೆ (ಮು., Past or beyond r. ಎಂಬಲ್ಲಿ). **Reclaímable** (ಗು.) ; **Reclamátion** ರೆಕ್ಲಮೇಷನ್ (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Réclame (F) ರೆಕ್ಲಾಮ್ (ನಾ.) ಪ್ರಸಿದ್ಧಿಯ —ಅಪೇಕ್ಷೆ, ಬೇಟೆ.

Réclinate. **Recline** ನೋಡಿ.

Reclíne ರಿಕ್ಲೈನ್ (ಕ್ರಿ.) ನೆಲದಮೇಲೆ ಚಾಚು, ಉರುಟಿಕೊ; (ನೆಲಕ್ಕೆ, ಗೋಡೆಗೆ) ಒರಗು, ಒರಗಿಕೊಂಡಿರು, ಒರಗಿಸು, ಆನಿಸು; (ಭೂ. ಕೃ.) (ಮನುಷ್ಯನ ವಿಷಯದಲ್ಲಿ) ಹೀಗೆ ಒರಗಿದ, ಒರಗಿರುವ, ಮಲಗಿದ. ಮಲಗಿರು; ಹಿಂದಕ್ಕೆ ಓಲಿ, ಬೆನ್ನು ಆನಿಸಿ, —ಒರಗಿರು. (ರೂಪ.) (—ಮೇಲೆ) ದೃಢವಾಗಿ ನೆಚ್ಚಿರು, ಆಶ್ರಯಿಸಿರು (*Upon* ಉಪ. ದೊಡನೆ). **Réclínate** ರೆಕ್ಲಿನೆಟ್ (ಗು.) (ಸ. ವಿ.) ಕೆಳಮುಖವಾಗಿ ಬಗ್ಗಿರುವ.

Reclúse ರಿಕ್ಲೂಸ್ (ಗು., ನಾ.) (ಮು., ತಪಸ್ಸು, ಮೊ. ಕ್ಕಾಗಿ) ಏಕಾಂತ ವಾಸಿ(ಯಾದ); ನಿಸ್ಸಂಗಿ; ವಿರಕ್ತ(ಕ್ತೆ)

Recognítion, Recógnizance, etc. **Recognize** ನೋಡಿ.

Récognize ರೆಕಗ್ನೈಸ್ (ಕ್ರಿ. ಸಕ.) (ಒಂದರ ಊರ್ಜಿತತ್ವ, ಚೊಕ್ಕತನ, ಗುಣ, ಲಕ್ಷಣ, ಹಕ್ಕು ಅಥವಾ ಅಸ್ತಿತ್ವವನ್ನು) ಒಪ್ಪಿಕೊ, ಅಂಗೀಕರಿಸು, ಹೌದೆನ್ನು. ಗಮನಕ್ಕೆ, ಎಣಿಕೆಗೆ, —ತಂದುಕೊ; (ಸ್ವಭಾವವನ್ನು, ಲಕ್ಷಣವನ್ನು) ಕಂಡುಕೊ, ಗ್ರಹಿಸು. (—ಎಂದು) ಭಾವಿಸು, ಎಣಿಸು (*As* ಉಪ. ದೊಡನೆ); ಒಪ್ಪು, ಮಾನ್ಯಮಾಡು (*For* ಉಪ. ದೊಡನೆ); ಗ್ರಹಿಸು, ಅಂಗೀಕರಿಸು (*That* ಪದದೊಡನೆ). ಗುರುತುಹಿಡಿ; (ಹಿಂದೆ ತಿಳಿದದ್ದೆಂದು) ಗುರುತಿಸು. **Récognizable** (ಗು.); **Recognizabílity** (ನಾ.); **Récognizably** (ಕ್ರಿ. ವಿ.); **Recognítion** ರೆಕಾಗ್ನಿಷನ್ (ನಾ.) (ಕ್ರಿಯಾರ್ಥಗಳಲ್ಲಿ). **Recógnitory** ರಿಕಾಗ್ನಿಟರಿ (ಗು.) (ವಿರ. ಪ್ರ.); **Recógnizance** ರಿಕಾ(ಗ್)ನಿಸನ್ಸ್ (ನಾ.) ಒಬ್ಬನು ಒಂದು ಷರತ್ತನ್ನು (ಉದಾ., ಜಗಳ ಕಾಯದಿರುವುದು, ದೊಂಬಿ ಮಾಡದಿರುವುದು, ಕಡ ತೀರಿಸುವುದು ಅಥವಾ ಕರೆ ಕಳುಹಿಸಿದಾಗ ಹಾಜರಾಗುವುದು —ಇವನ್ನು) ಪಾಲಿಸುವುದಕ್ಕೆ ಬದ್ಧನಾಗಿ ನ್ಯಾಯಸ್ಥಾನದ ಅಥವಾ ದಂಡಾಧಿಕಾರಿಯ ಎದುರಿಗೆ ಬರೆದುಕೊಡುವ ಬಂಧಕಪತ್ರ: ಮುಚ್ಚಳಿಕೆ; ಸ್ವಂತ ಜಾಮೀನು ಪತ್ರ. ಷರತ್ತನ್ನು ಪಾಲಿಸುವ ಬಗ್ಗೆ ಒತ್ತೆಯಾಗಿಟ್ಟ ಹಣ: ಜಾಮೀನು ಹಣ; ಕರಾರು ಖಾತರಿ ಹಣ. **Récognizant** (ಗು.) (ಅನುಗ್ರಹ, ಉಪಕಾರ, ಮೊ. ರ) ಅರಿವು, ಅಂಗೀಕಾರ, —ತೋರುವ; ಕೃತಜ್ಞತೆ ತೋರುವ (*Of* ಉಪ. ದೊಡನೆ); (ಯಾವುದಾದರೂ ವಿಷಯ, ಮೊ. ರ) ಜ್ಞಾನವುಳ್ಳ, ಅರಿವು ತೋರುವ; (—ನ್ನು) ಬಲ್ಲ, ತಿಳಿದಿರುವ.

Recoíl ರಿಕಾಯ್ಲ್ (ಕ್ರಿ. ಅಕ., ನಾ.) (ಈಗ ವಿರ. ಪ್ರ.) ಶತ್ರುಗಳೆದುರಿಗೆ ಹಿಮ್ಮೆಟ್ಟು. ಹಿನ್ನೆಗೆ; ಹಿಂದಕ್ಕೆ —ಹಾರು, ಚಿಮ್ಮು; ಹಿಂದೊದೆ. (ಭಯ, ಅತಿಘೋರ ದೃಶ್ಯ ಅಥವಾ ಜುಗುಪ್ಸೆಯಿಂದ) ಹಿನ್ನೆಗೆ, ಮನಸ್ಸು ಹಿಮ್ಮೆಟ್ಟು; ಹೇವರಿಸು; ತಿರುಗಿಬೀಳು; ಸೆಡೆ. (ಢಿಕ್ಕಿಯನಂತರ) ಹಿಂದಕ್ಕೆ ಹಾರು, ಪುಟವೇಳು; (ಬಂದೂಕು, ಮೊ. ಗಳ ವಿಷಯದಲ್ಲಿ) ಹಿಂದೊದೆ. (ನಾ.) ಹಿನ್ನೆಗೆತ, ಹಿಂದೊದೆತ(ದ ಕ್ರಿಯೆ); ಮನಸ್ಸಿನ ಹಿಮ್ಮೆಟ್ಟು(ಭಾವನೆ)

Recolléct ರಿಕಲೆಕ್ಟ್ (ಕ್ರಿ. ಸಕ.) ನೆನಪಿಗೆ ತಂದುಕೊ; ಜ್ಞಾಪಿಸಿಕೊ; ನೆನೆ; ಸ್ಮರಿಸು. **Recolléction** (ನಾ.) ಜ್ಞಾಪಿಸಿಕೊಳ್ಳುವುದು; ಜ್ಞಾಪಕಶಕ್ತಿ; ಜ್ಞಾಪಿಸಿಕೊಂಡದ್ದು; (ಹಿಂದಿನದರ) ನೆನಪು, ಜ್ಞಾಪಕ, ಸ್ಮರಣೆ (It is in my r. that— ಎಂದು ನನಗೆ ಜ್ಞಾಪಕವಿದೆ. Happened within my r.). **Recolléctive** (ಗು.)

Recomménd ರೆಕಮೆಂಡ್ (ಕ್ರಿ. ಸಕ.) (ತನ್ನನ್ನು, ತನ್ನ ಆತ್ಮವನ್ನು, ಮಗು, ಮೊ. ನ್ನು, ದೇವರಿಗೆ, ಒಬ್ಬ ವ್ಯಕ್ತಿಗೆ ಅಥವಾ ಅವನ ರಕ್ಷಣೆಗೆ) ಒಪ್ಪಿಸು, ಸಮರ್ಪಿಸು (*To* ಉಪ. ದೊಡನೆ). (ಕೆಲಸಕ್ಕೆ, ಅನುಗ್ರಹಕ್ಕೆ, ಉಮೇದುವಾರಿಕೆಗೆ) ಅರ್ಹನೆಂದು ಶಿಫಾರಸ್ಸು ಮಾಡು, ವಾಕ್ಸಹಾಯ ಮಾಡು; —ಮಾಡಿ ಹೇಳು, ಬರೆ, ಸೂಚಿಸು (*To* person; ಅಥವಾ ಗೌಣ ಕರ್ಮಪದದೊಡನೆ: ಉದಾ., Can you r. me a cook, a book?; *as* servant, etc.; *for* post). (ಗುಣ, ನಡತೆ, ಮೊ. ಗಳ ವಿಷಯದಲ್ಲಿ) ಒಪ್ಪಿಕೆಯುಂಟುಮಾಡು, ಅಂಗೀಕಾರವಾಗು; ಶಿಫಾರಸ್ಸು ಆಗಿರು, —ಮಾಡು; (—ಎಂದು, ಮಾಡಬೇಕೆಂದು) ಸಲಹೆಕೊಡು, ಶಿಫಾರಸ್ಸು ಮಾಡು (Person *to* do, *that* thing should be done). **Recommendátion** (ನಾ.); **Recomméndable** (ಗು.); **Recomméndatory** (ಗು.)

Récompense ರೆಕಂಪೆನ್ಸ್ (ಕ್ರಿ. ಸಕ., ನಾ.) (ಒಬ್ಬನಿಗೆ, ಒಂದು ಕಾರ್ಯಕ್ಕೆ) ಪ್ರತಿಫಲ, ತಕ್ಕ ಪುರಸ್ಕಾರ, ಬಹುಮಾನ (ಕೊಡು); ತಕ್ಕ ಶಾಸ್ತಿ(ಮಾಡು); ಮುಯ್ಯಿ(ತೀರಿಸು) (Person *for* action, action *to* person ಅಥವಾ ಗೌಣ ಕರ್ಮಪದದೊಡನೆ). (ಒಬ್ಬನಿಗೆ, ಆದ ನಷ್ಟ, ಹಾನಿ, ಮೊ. ಕ್ಕಾಗಿ) ಪರಿಹಾರ(ಕೊಡು), ನಷ್ಟ ಕಟ್ಟಿಕೊಡು; (ವಿರ. ಪ್ರ.) (ತನ್ನ ಲೋಪಕ್ಕಾಗಿ, ಒಬ್ಬನಿಗೆ) ಸಮಾಧಾನ(ಕೊಡು)

Réconcile ರೆಕನ್ಸೈಲ್ (ಕ್ರಿ. ಸಕ.) ಮನಸ್ತಾಪ ಪರಿಹರಿಸಿ ಸ್ನೇಹ ಭಾವದಿಂದಿರುವಂತೆ ಮಾಡು; ಸಮಾಧಾನ, ರಾಜಿ, —ಮಾಡು, ಮಾಡಿಕೊ (*To* or *with* ಉಪ. ದೊಡನೆ) (ಆತ್ಮಾರ್ಥವಾಗಿ ಸಹ). (ಪವಿತ್ರಸ್ಥಳ, ಮೊ. ನ್ನು ಅಪವಿತ್ರವಾದಮೇಲೆ) ವಿಶೇಷ ಸಂಸ್ಕಾರದಿಂದ ಪರಿಶುದ್ಧಗೊಳಿಸು. (ಅಹಿತವಾದುದಕ್ಕೆ, ಮನಸ್ಸಿಲ್ಲದುದನ್ನು ಮಾಡುವುದಕ್ಕೆ) ಸಮಾಧಾನದಿಂದ ಒಪ್ಪಿಕೊ(ಳ್ಳುವಂತೆ ಮಾಡು), ಒಪ್ಪಿಸು (*To* disagreeables, *to* doing) (ಸಾ., ಕರ್ಮಣಿಯಲ್ಲಿ). (ಮನಸ್ತಾಪ, ವ್ಯಾಜ್ಯ, ಮೊ. ನ್ನು) ಪರಿಹರಿಸು, ಬಗೆಹರಿಸು; ಸಮಾಧಾನಕ್ಕೆ —ಬರು, ತರು. (ತೋರಿಕೆಗೆ ವಿರುದ್ಧವಾಗಿ ಕಾಣುವ ಸಂಗತಿಗಳನ್ನು, ಹೇಳಿಕೆಗಳನ್ನು, ಗುಣಗಳನ್ನು, ಕ್ರಿಯೆಗಳನ್ನು ಅಥವಾ ಇಂಥವನ್ನು, ವಾದದಿಂದ ಅಥವಾ ಆಚರಣೆಯಿಂದ) ಒಂದಕ್ಕೊಂದು ಹೊಂದಿಕೆ, ಸಮನ್ವಯ, —ಮಾಡು; ಸರಿಹೊಂದಿಸು; ಸಮಂಜಸವೆಂದು ತೋರಿಸು (*With* or *and*, ವಿರಳವಾಗಿ *to* another). **Réconcilable** (ಗು.); **Reconcilabílity** (ನಾ.); **Réconcilement** (ನಾ.); **Reconciliátion** ರೆಕನ್ಸಿಲಿ— (ನಾ.)

Récondite ರೆಕಂಡೈಟ್, **Recóndite** ರಿಕಾಂ— (ಗು.) (ವಿಷಯ, ಶಾಸ್ತ್ರ—ಇವುಗಳ ವಿಷಯದಲ್ಲಿ) ತಿಳಿಯಲು ಕಷ್ಟವಾದ, ಗಹನ, ದುರ್ಬೋಧ; ಅಪರಿಚಿತ; ಅಪ್ರಸಿದ್ಧ; (ಕವಿಯ ಅಥವಾ ಶೈಲಿಯ ವಿಷಯದಲ್ಲಿ) ಗಹನ(ವಿದ್ಯೆಯ); ಗೂಢಾರ್ಥದ; ಅಸ್ಪಷ್ಟ. **Réconditely** (ಕ್ರಿ. ವಿ.); **Réconditeness** (ನಾ.)

Recondítion ರೀಕಂಡಿಷನ್ (ಕ್ರಿ. ಸಕ.) (ದುರಸ್ತಿಗಾಗಿ) ಭಾಗಗಳನ್ನೆಲ್ಲ ಕಳಚಿಹಾಕಿ ಮತ್ತೆ ಜೋಡಿಸು; ಮರುರೂಪ್ಪಮಾಡು.

Recónnaissance ರಿಕಾನೆ(ನಿ)ಸನ್ಸ್ (ನಾ.) (ಶತ್ರುಗಳಿರುವ ಸ್ಥಳವನ್ನು ಪತ್ತೆಮಾಡುವುದಕ್ಕಾಗಲಿ ಆಯಕಟ್ಟಿನ ಸ್ಥಾನಗಳನ್ನು ಕಂಡುಹಿಡಿಯುವುದಕ್ಕಾಗಲಿ ಪ್ರತ್ಯೇಕ ದಳಗಳ ಮೂಲಕ ನಡಸುವ ಸೈನಿಕ ಅಥವಾ ನಾವಿಕ) ಸ್ಥಳ ಶೋಧನೆ (R. in force ಬಲವಾದ ದಳ ನಡಸಿದ—). ಸ್ಥಳ ಶೋಧಕ ದಳ; ಸ್ಥಳ ಶೋಧಕರು. (ಯಾವುದಾದರೂ ಉದ್ದೇಶದಿಂದ ಯಾರಾದರೊಬ್ಬರು ಮಾಡಿದ, ಕೈಕೊಂಡ) ಪೂರ್ವಭಾವಿ (ಸ್ಥಳ) ಪರಿಶೀಲನೆ, ಪರೀಕ್ಷೆ. **Reconnoítre** ರೆಕನಾಯ್ಟರ್ (ಕ್ರಿ., ನಾ.) (ಶತ್ರು ಪ್ರದೇಶದ) ಸ್ಥಳ ಪರೀಕ್ಷೆಮಾಡು; ಹತ್ತಿರ ಹೋಗಿ ಸ್ಥಿತಿ ಗತಿಗಳನ್ನು ತಿಳಿ; ಬೇಹು ನೋಡು; ಸುಳಿವು ತಿಳಿದುಕೊ; ಪೂರ್ವಭಾವಿ ಪರಿಶೀಲನೆ, ಪರೀಕ್ಷೆ, —ಮಾಡು. (ನಾ.) (ವಿರ. ಪ್ರ.) = Reconnaissance. **Reconnoítrer** (ನಾ.)

Reconnoítre. **Reconnaissance** ನೋಡಿ.

Recórd ರಿಕಾರ್ಡ್ (ಕ್ರಿ. ಸಕ.), **Récord** ರೆಕಾರ್ಡ್ (ನಾ.) (ಹಕ್ಕಿಗಳ ವಿಷಯದಲ್ಲಿ) ಸಣ್ಣ ದನಿಯಲ್ಲಿ, ತಗ್ಗು ದನಿಯಲ್ಲಿ, ಹಾಡುತ್ತ (ಕೂಗನ್ನು, ಉಲಿಯನ್ನು) ಅಭ್ಯಾಸ ಮಾಡು. ದಾಖಲು ಮಾಡು; ನಮೂದಿಸು; ನೆನಪಿಗಾಗಿ ಅಥವಾ ಪರಾಮರ್ಶೆಗಾಗಿ ಬರೆದಿಡು; ಗುರುತುಮಾಡಿಡು; ಬರೆವಣಿಗೆಯಲ್ಲಿ (ಅಥವಾ ಯಾವುದಾದರೂ ಸ್ಪಷ್ಟ ರೀತಿಯಲ್ಲಿ) ಇಡು, ಕಡತ ಮಾಡಿಡು; ಯಾವುದಾದರೂ ಶಾಶ್ವತ ರೂಪದಲ್ಲಿ ಇಡು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿರೂಪಿಸು [His thoughts have been recorded for us by himself, his features by Watts, & his voice by the phonograph. Recording angel ಮನುಷ್ಯರ ಸುಕೃತ ದುಷ್ಕೃತಗಳನ್ನು ದಾಖಲೆಯಿಡುವ ದೇವದೂತ (ಚಿತ್ರಗುಪ್ತರಂಥವನು). Minimum thermometer recorded 10° below zero]. (ನಾ.) (ನ್ಯಾ. ಶಾ.) (ಮು., ಪ್ರಮಾಣಾರ್ಹವಾದ ಸಾಕ್ಷ್ಯವಾಗಿ) ದಾಖಲೆಯಾಗಿರುವುದು, ಬರೆವಣಿಗೆಯಲ್ಲಿ ರಕ್ಷಿಸಿಟ್ಟಿರುವುದು [Is on r. (ಕಾನೂನು ಸಮ್ಮತವಾಗಿ ಅಥವಾ ಇತರ ಪ್ರಕಾರವಾಗಿ) ಬರೆದಿಟ್ಟಿದೆ, ದಾಖಲೆಯಾಗಿದೆ, ದಫ್ತರದಲ್ಲಿ ಸೇರಿದೆ. Matter of r. ದಾಖಲೆಯಲ್ಲಿದ್ದು ನಿಜವೆಂದು, ನಡೆದ ಸಂಗತಿಯೆಂದು, ಸ್ಥಾಪಿತವಾದ ವಿಷಯ; ದಾಖಲೆಯಲ್ಲಿರುವ ಸಂಗತಿ. Court of r. (ನಡೆವಳಿಕೆಗಳನ್ನೆಲ್ಲ ದಾಖಲೆಯಿಟ್ಟು ಆ ದಾಖಲೆ ಪ್ರಾಮಾಣ್ಯವುಳ್ಳ ಸಾಕ್ಷ್ಯವೆಂದು ಊರ್ಜಿತವಾಗುವ) ದಾಖಲೆಗಳ ನ್ಯಾಯಸ್ಥಾನ]. ದಾಖಲೆಯ ನ್ಯಾಯಸ್ಥಾನದ ಮುಂದಿರುವ ಮೊಕದ್ದಮೆಯ ನಡೆವಳಿಕೆ ಮತ್ತು ತೀರ್ಪಿನ ಅಧಿಕಾರ ವರದಿ; ನ್ಯಾಯಸ್ಥಾನ ತೀರ್ಪು ಕೊಡಬೇಕಾದ ಮೊಕದ್ದಮೆಯ ಅಂಗಭೂತವಾದ ವಾದ ವಿವಾದಗಳು, ಮೊ. ರ ನಕಲು; ವ್ಯಾಜ್ಯದ ದಾಖಲೆಗಳು; ದಫ್ತರ; —ಗಳ ನಕಲು (Travel out of, Keep to, the r. ಅಸಂಬದ್ಧ ವಿಷಯಗಳನ್ನು ಸೇರಿಸು, ಸೇರಿಸದಿರು) [(Public) R. Office ರಾಷ್ಟ್ರ ಸಂಬಂಧವಾದ ದಾಖಲೆಗಳನ್ನೂ ಇತರ ಸಾರ್ವಜನಿಕ ದಸ್ತೈವಜುಗಳನ್ನೂ ಶೇಖರಿಸಿ ಗೋಪ್ಯವಾಗಿ ಹಾಕಿ ವಿವರಣ ಪಟ್ಟಿಯೊಡನೆ ಇಟ್ಟಿರುವ, ಲಂಡನ್ನಿನಲ್ಲಿಯ ಒಂದು ಕಚೇರಿ, ಕಟ್ಟಡ: (ಸಾರ್ವಜನಿಕ) ದಫ್ತರ, ದಾಖಲೆಗಳ, —ಕಚೇರಿ]. ದಾಖಲೆಮಾಡಿಟ್ಟಿರುವ ಸಾಕ್ಷ್ಯ, ಸಂಗತಿ, ಸುದ್ದಿ; ಸ್ಥಿರ ರೂಪದಲ್ಲಿ ಕಾದಿರಿಸಿದ ಸಂಗತಿಯ ವೃತ್ತಾಂತ; ಸಂಗತಿಯನ್ನು ಬರೆದಿಟ್ಟಿರುವ, ಕಾದಿಟ್ಟಿರುವ,—ದಸ್ತೈವಜು, ಕಾಗದಪತ್ರ; ಕಡತ; ಲಖಾವಟ್ಟು; ಲಖಿತ; ದಾಖಲೆ; ರಿಕಾರ್ಡು. (ಒಂದರ) ಸ್ಮಾರಕ(ವಾಗಿರುವ ವಸ್ತು) (ಛಾಯಾಚಿತ್ರ, ಮೊ. ವು). (ಧ್ವನಿಸಂಗ್ರಹ) ಯಂತ್ರ ಸಲಕರಣೆ ಮಾಡಿದ, ಗುರುತಿಸಿದ, ಸಂಕೇತ ಪರಂಪರೆ; ಸಂಕೇತ ಲಖಿತ; ಸಂಕೇತ ಲಖಿತವಿರುವ (ಗಟ್ಟಿ ರಬ್ಬರಿನ) ತಟ್ಟೆ, ಮೊ. ದು (Second-hand gramaphone records for sale). (ಒಬ್ಬನ ವಿಷಯದಲ್ಲಿ ಗೊತ್ತಿರುವ) ಹಿಂದಿನ ಚರಿತ್ರೆ, ಲಖಾವಟ್ಟು (Has an honourable r. of service. His r. is against him ಅವನನ್ನು ಕುರಿತ ಲಖಾವಟ್ಟು ಅವನಿಗೆ ವಿರೋಧವಾಗಿದೆ). ಹಿಂದಿನ ದಾಖಲೆಗಳನ್ನೆಲ್ಲ ಮೀರಿಸುವ, ಅತ್ಯಂತ ಉತ್ತಮವಾದ, ಅತ್ಯಂತ ಪ್ರಸಿದ್ಧವಾದ, —ನಿರ್ವಾಹ, ಘಟನೆ, ಸಂಗತಿ; ಪರಮಾವಧಿ (Break *or* cut *or* beat the r. ಹಿಂದಿನ ದಾಖಲೆಗಳನ್ನೆಲ್ಲ ಮೀರಿಸು, ಮುರಿ). (ವಿಶೇಷಣವಾಗಿ) (ದಾಖಲೆಯಿರುವುದರಲ್ಲೆಲ್ಲ) ಅತ್ಯುತ್ತಮವಾದ, ಅತಿ ಹೆಚ್ಚಿನ (At r. pace. The r height). **Recórdable** (ಗು.); **Recórder** (ನಾ.) (ಕ್ರಿಯಾರ್ಥಗಳಲ್ಲಿ). (ಇಂಗ್ಲೆಂಡಿನ ಪಟ್ಟಣಗಳಲ್ಲಿ) ಅಪರಾಧದ ಮತ್ತು ವ್ಯವಹಾರದ ನ್ಯಾಯಾಧಿಕಾರವುಳ್ಳವನಾಗಿ ಮೂರು ತಿಂಗಳಿಗೊಮ್ಮೆ ನ್ಯಾಯಸ್ಥಾನ ನಡಸುವ ಒಬ್ಬ ದಂಡಾಧಿಕಾರಿ [**Recórdership** (ನಾ.)]. (ಯಂತ್ರ ಸಲಕರಣೆಗಳಲ್ಲಿ) ಸೂಚಕ, ದರ್ಶಕ, ಲೇಖಕ(ಸಾಧನ). ಕೊಳಲಿನ ಜಾತಿಯ, ಬಳಕೆಯಲ್ಲಿಲ್ಲದ ಒಂದು ಹಳೆಯ ವಾದ್ಯ.

Recoúnt ರಿಕೌಂಟ್ (ಕ್ರಿ. ಸಕ.) ವಿವರವಾಗಿ ಕಥನಮಾಡು, ಹೇಳು; ವಿವರಿಸು; ವಿಸ್ತಾರವಾಗಿ ವರ್ಣಿಸು. [**Re-coúnt** ರೀ— (Re- ನೋಡಿ)]

Recoúp ರಿಕೂಪ್ (ಕ್ರಿ.) (ನ್ಯಾ. ಶಾ.) (ಸಲ್ಲಬೇಕಾದ ಹಣದಲ್ಲಿ ಒಂದು ಭಾಗವನ್ನು) ಹಿಡಿದುಕೊ, ವಜಾಹಾಕು, ಕೊಡದೆ ಇಟ್ಟುಕೊ, ಕಡಮೆ ಮಾಡು. ನಷ್ಟ ಕಟ್ಟಿಕೊಡು, (ನಷ್ಟಕ್ಕೆ) ಪರಿಹಾರಕೊಡು (Person loss, person *for* loss, loss). R. oneself (ತಾನು ವೆಚ್ಚ ಮಾಡಿದ್ದನ್ನು ಅಥವಾ ಕಳೆದುಕೊಂಡದ್ದನ್ನು) ಮತ್ತೆ ಪಡೆ, ಭರ್ತಿಮಾಡಿಕೊ. ಚೇತರಿಸಿಕೊ. **Recoúpment** (ನಾ.)

Recoúrse ರಿಕೋರ್ಸ್ (ನಾ.) (ಸಹಾಯಕ್ಕಾಗಿ ಒಂದು ಸ್ಥಾನದ, ವ್ಯಕ್ತಿಯ, ಸಾಧನದ, ಉಪಾಯದ) ಆಶ್ರಯ, ಅವಲಂಬನೆ (*To* ಉಪ. ದೊಡನೆ) [R. to brandy is deprecated. (ಸಾ., ವಾಕ್ಯ ಪುಂಜಗಳಲ್ಲಿ) Have r. to ಸಲಹೆಗಾರನನ್ನಾಗಿ, ಸಹಾಯಕನನ್ನಾಗಿ, ಉಪಾಯವನ್ನಾಗಿ, —ಆಶ್ರಯಿಸು, ಅವಲಂಬಿಸು, ಹಿಡಿ]. Without r. (ವಾಣಿಜ್ಯ ನ್ಯಾ. ಶಾ.) (ಹಣ ಪಾವತಿಯಾಗದುದಕ್ಕೆ ತಾನು ಹೊಣೆಯಲ್ಲವೆಂದು ಸೂಚಿಸಲು ಹುಂಡಿ, ಮೊ. ಗಳ ಮೇಲೆ ಹಿಂಬರಹ ಬರೆಯುವವನು ಉಪಯೋಗಿಸುವ ಒಕ್ಕಣೆ): ನನ್ನ ಜವಾಬ್ದಾರಿ ಇಲ್ಲ.

Recóver ರಿಕವರ್ (ಕ್ರಿ., ನಾ.) ಮತ್ತೆ ವಶಕ್ಕೆ, ಅಧೀನಕ್ಕೆ, —ಪಡೆ; ಪುನಃ ಸಂಪಾದಿಸು, ಸ್ವಾಧೀನ ಮಾಡಿಕೊ; ವಸೂಲು ಮಾಡು; ಮತ್ತೆ ಉಪಯೋಗಕ್ಕೆ ತಂದುಕೊ; ಮರಳಿ ಪಡೆ [R. oneself ಮೂರ್ಛೆಯಿಂದ ಎಚ್ಚೆತ್ತುಕೊ; ಮೂರ್ಛೆ ತಿಳಿ; ಮತ್ತೆ ಶಾಂತಿಗೆ, ಸಮಾಧಾನ ಸ್ಥಿತಿಗೆ, ಸ್ವಮಿತಕ್ಕೆ, —ಬರು; ತಿರುಗಿ ಅಂಗಾಂಗಗಳ, ಇಂದ್ರಿಯಗಳ, —ಸ್ವಾಧೀನ ಪಡೆ; ಎಚ್ಚೆತ್ತುಕೊ; ಚೇತರಿಸಿಕೊ (Horse recovers itself after stumble). R. one's legs (ಬಿದ್ದಮೇಲೆ) ಮತ್ತೆ ಎದ್ದು ನಿಲ್ಲು]. (ನ್ಯಾಯಸ್ಥಾನದ ಮೂಲಕವಾಗಿ, ಕಾನೂನಿನ ನಡೆವಳಿಕೆಯಿಂದ) ಮತ್ತೆ ಸ್ವಾಧೀನ, ಅನುಭೋಗ, —ಪಡೆ; ಪರಿಹಾರ, ಈಡು, —ಪಡೆ; ನಷ್ಟ ಪರಿಹಾರ ಪಡೆ (Plaintiff shall r. according to verdict ತೀರ್ಪಿಗನುಸಾರವಾಗಿ ವಾದಿ ಪುನಃ ಸ್ವಾಧೀನ ಪಡೆಯತಕ್ಕದ್ದು. His remedy is to r. in a court of law ನ್ಯಾಯಸ್ಥಾನದಲ್ಲಿ ವ್ಯವಹಾರ ನಡಸಿ ಪುನಃ ಪಡೆದುಕೊಳ್ಳುವುದೇ ಅವನಿಗಿರುವ ಉಪಾಯ. An action to r. damages for false imprisonment). ಪುನಃ (ಪ್ರಾಣ, ಪ್ರಜ್ಞೆ, ಆರೋಗ್ಯ, ಪೂರ್ವ ಸ್ಥಿತಿ, ಪೂರ್ವ ಸ್ಥಾನ) —ಪಡೆ, ಬರಿಸು; ಗುಣ ಹೊಂದು; ವಾಸಿಯಾಗು. [R. sword (ತಿವಿತ, ಮೊ. ರ ತರುವಾಯ) ಕತ್ತಿಯನ್ನು ಹಿಂದಕ್ಕೆ ಎಳೆದುಕೊ, ಮೊದಲನ ನೆರೆಗೆ ತರು; (ಸೈನ್ಯ) ತನ್ನ ಬಾಯಿಗೆದುರಾಗಿ ಹಿಡಿ ಬರುವಂತೆ ಕತ್ತಿಯನ್ನು ನೆಟ್ಟಗೆ ಹಿಡಿದುಕೊ]. ಕಳೆದುಹೋದದ್ದನ್ನು ಮತ್ತೆ ಕೂಡಿಸಿಕೊ, ಸಂಪಾದಿಸು, ಭರ್ತಿಮಾಡಿಕೊ; ಪರಿಣಾಮದಿಂದ ಮುಕ್ತನಾಗು, ಪಾರಾಗು. (ವಿರ. ಪ್ರ.) ಮತ್ತೆ ಹಿಂದಕ್ಕೆ ಬಂದು ಸೇರು (Recovered the shore with difficulty). (ನಾ.) (ಕತ್ತಿ ಕಾಳಗದಲ್ಲಿ ಅಥವಾ ಕವಾಯತಿನಲ್ಲಿ: ಕತ್ತಿ, ಮೊ. ನ್ನು) ವರಿಸೆಯಾದಮೇಲೆ ಹಿಂದಕ್ಕೆ ತಂದು ಹಿಡಿಯುವ ಸ್ಥಾನ, ಭಂಗಿ; ಮೊದಲ ನೆಲೆ(ಗೆ ಬರುವುದು). **Recóverable** (ಗು.); **Recóvery** (ನಾ.) (ಕ್ರಿಯಾಪದದ ಕೃದಂತ ಭಾವನಾಮದ ಅರ್ಥಗಳಲ್ಲಿ). [**Re-cover** ರೀ— (Re- ನೋಡಿ)]

Récreant ರೆಕ್ರಿಯಂಟ್ (ಗು., ನಾ.) ಸೋಲೊಪ್ಪಿಕೊಳ್ಳುವ(ವನು). (ಅಲಂ., ಕಾವ್ಯ) ಹೇಡಿ(ಯಾದ); ಹಂದೆ(ಯಾದ); ಅಂಜುಕುಳಿ(ಯಾದ); ಅಂಜುಬುರುಕ(ನಾದ); ಧರ್ಮಭ್ರಷ್ಟ(ನಾದ); ಸ್ವಧರ್ಮತ್ಯಾಗಿ(ಯಾದ); ಪತಿತ. **Récreantly** (ಕ್ರಿ. ವಿ.); **Récreancy** (ನಾ.)

Récreate ರೆಕ್ರಿಯೇಟ್ (ಕ್ರಿ.) (ಆಟ, ವಿಶ್ರಾಂತಿ, ರಜಾ ದಿನ, ಹವ್ಯಾಸ, ಉದ್ಯೋಗ, ಮೊ. ಗಳ ವಿಷಯದಲ್ಲಿ) ಉಲ್ಲಾಸಗೊಳಿಸು, ದಣಿವಾರಿಸು, ಹರ್ಷಕೊಡು, ಹಿತಕರವಾಗಿರು; (ಆಟ, ಮೊ. ಗಳಲ್ಲಿ ಆಸಕ್ತನಾದ ಮನುಷ್ಯನ ವಿಷಯದಲ್ಲಿ, ಸ್ವಾರ್ಥಕವಾಗಿ) ಉಲ್ಲಾಸ, ಹರ್ಷ, ನವ ಚೈತನ್ಯ, —ಪಡೆ. ಕ್ರೀಡಿಸು; ವಿನೋದಗೊಳ್ಳು; ಉಲ್ಲಾಸದಲ್ಲಿ ಕಾಲ ಕಳೆ; ಆಟಪಾಟಗಳಲ್ಲಿ ಆಸಕ್ತನಾಗು. **Recreátion** (ನಾ.) ಆಟಪಾಟ; ವಿನೋದ; ವಿಹಾರ; ಕ್ರೀಡೆ. **Récreative** (ಗು.). [**Re-create** ರೀ— (Re- ನೋಡಿ)]

Récrement ರೆಕ್ರಿಮೆಂಟ್ (ನಾ.) (ಈಗ ವಿರ. ಪ್ರ.) ಕೆಲಸಕ್ಕೆ ಬಾರದ, ನಿಸ್ಸಾರವಾದ, —ಉಳಿಕೆ; ವ್ಯರ್ಥ ಪದಾರ್ಥ; ಹಿಪ್ಪೆ; ಚರಟ; ಕಸ. (ಶ. ವಿ.) ರಕ್ತದಿಂದ (ಮಾರ್ಪಾಟು ಹೊಂದಿ) ಬೇರ್ಪಟ್ಟು ಮತ್ತೆ ರಕ್ತಕ್ಕೆ ಸೇರುವ ದ್ರವ (ಉದಾ., ಜೊಲ್ಲು, ಪಿತ್ತರಸ). **Recrementítious** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Recríminate ರಿಕ್ರಿಮಿನೇಟ್ (ಕ್ರಿ. ಅಕ.) ಪ್ರತಿಯಾಗಿ ಆರೋಪ ಹೊರಿಸು; ಪ್ರತ್ಯಾರೋಪ ಮಾಡು; ಪರಸ್ಪರ ದೂರು. **Re-crimination** (ನಾ.); **Recríminative** (ಗು.); **Recrímí-natory** (ಗು.)

Recrudésce ರೀ(ರೆ)ಕ್ರುಡೆಸ್ (ಕ್ರಿ. ಅಕ.) (ಹುಣ್ಣು, ರೋಗ, ಮೊ. ಗಳ ವಿಷಯದಲ್ಲಿ ಅಥವಾ ರೂಪ. ಅಸಮಾಧಾನ, ಮೊ. ಗಳ ವಿಷಯದಲ್ಲಿ) ಮತ್ತೆ—ತಲೆದೋರು, ಉದ್ಭವಿಸು, ಕೆರಳು; ಮರುಕೊಳಿಸು. **Recru-déscent** (ಗು.); **Recrudéscence** (ನಾ.)

Recruít ರಿಕ್ರೂಟ್ (ನಾ., ಕ್ರಿ.) ಹೊಸದಾಗಿ ದಾಖಲಾದ ಮತ್ತು ಇನ್ನೂ ತರಪೇತಾಗಿಲ್ಲದ ಸೈನಿಕ; ಹೊಸ ಸಿಪಾಯಿ; ಅನನುಭವಿಯಾದ ಸಿಪಾಯಿ. (ಸಂಘ, ಮೊ. ಕ್ಕೆ) ಹೊಸದಾಗಿ ಸೇರಿದವನು, ಸೇರುವವನು; ನೂತನ ಪ್ರವೇಶಿ; ಉಮೇದುವಾರ; ಹೊಸಬ; ಅನನುಭವಿ (ಹಲವು ವೇಳೆ Raw r.). (ಕ್ರಿ.) (ಸೈನ್ಯ, ದಳ, ನಾವಿಕ ಪಡೆ, ಸಂಘ, ಪಕ್ಷ—ಇವಕ್ಕೆ) ಹೊಸಬರನ್ನು—ಸೇರಿಸು, ಸೇರಿಸಿಕೊ; (ಒಬ್ಬನನ್ನು) ಉಮೇದುವಾರನನ್ನಾಗಿ, ಆರಂಭಿಗನನ್ನಾಗಿ, —ಸೇರಿಸು, ಸೇರಿಸಿಕೊ. ಉಮೇದುವಾರರನ್ನು—ಪಡೆ, ಹುಡುಕು, ಸೇರಿಸು (ಮು., Recruiting-sergeant ಹೊಸಬರನ್ನು, ಉಮೇದುವಾರರನ್ನು, ಕೆಲಸಕ್ಕೆ ಸೇರಿಸಿಕೊಡುವ, ಸೇರಿಸಿಕೊಳ್ಳುವ, ಅಧಿಕಾರಿ). ನಷ್ಟ ಭರ್ತಿ—ಮಾಡು, ಮಾಡಿಕೊ; ನಷ್ಟತುಂಬಿಕೊ(ಡು); ನ್ಯೂನತೆಗಳನ್ನು, ಕೊರತೆಗಳನ್ನು, —ಪರಿಹರಿಸು, ಪರಿಹರಿಸಿಕೊ; ಸಾಲದೆ ಬಂದದ್ದನ್ನು—ಸೇರಿಸು, ಸೇರಿಸಿಕೊ; ಸವೆತ ಕಳೆತಗಳನ್ನು—ತುಂಬಿಸು, ತುಂಬಿಸಿಕೊ, ಸರಿಮಾಡು, ಸರಿಮಾಡಿಕೊ. ಉತ್ಸಾಹ, ನವ ಚೈತನ್ಯ, —ಪಡೆ, ಕೊಡು; ಮತ್ತೆ ಆರೋಗ್ಯ ಪಡೆ(ದುಕೊಳ್ಳಲು ಯತ್ನಿಸು); ಪುನಃ—ಸ್ವಸ್ಥ ಮಾಡು, ಸ್ವಸ್ಥವಾಗು (Has gone to the country to r. ಆರೋಗ್ಯ ಸಂಪಾದನೆಗಾಗಿ ಅವನು ಹಳ್ಳಿಯ ಕಡೆ ಹೋಗಿದ್ದಾನೆ). **Recruítal** (ನಾ.); **Recruítment** (ನಾ.)

Réctal. **Rectum** ನೋಡಿ.

Réctangle ರೆಕ್ಟ್ಯಾಂಗ್‌ಲ್ (ನಾ.) ನಾಲ್ಕು ಸಮಕೋನಗಳೂ ಮು., ಅಕ್ಕಪಕ್ಕದ ಬಾಹುಗಳು ಅಸಮವಾಗಿ ನಾಲ್ಕು ಬಾಹುಗಳೂ ಉಳ್ಳ, ಸಮತಲಾಕೃತಿ; ಆಯ; ನೀಳಚೌಕ; ದೀರ್ಘ ಚತುರಸ್ರ. **Rec-tángular** —ಗ್ಯುಲರ್ (ಗು.) ಆಯಾಕಾರದ; ದೀರ್ಘ ಚತುರಸ್ರಾಕಾರದ; (ತಳ, ಪಕ್ಕಗಳು ಅಥವಾ ಅಡ್ಡಕೊಯ್ತು) ಆಯಾಕಾರವಾಗಿರುವ; ಸಮಕೋನದಲ್ಲಿರುವ (ಭಾಗಗಳುಳ್ಳ, ರೇಖೆಗಳುಳ್ಳ). **Rectángular-ly** (ಕ್ರಿ. ವಿ.); **Rectangulárity** (ನಾ.)

Réctify ರೆಕ್ಟಿಫೈ (ಕ್ರಿ. ಸಕ.) (ಕ್ರಮ, ಲೆಕ್ಕಾಚಾರ, ಹೇಳಿಕೆ, ಸ್ಥಾನ, ಯಂತ್ರಸಲಕರಣೆ, ಮೊ. ನ್ನು) ಋಜುಗೊಳಿಸು, ನೇರ್ಪಡಿಸು, ಸರಿಮಾಡು, ತಿದ್ದು, ಕ್ರಮಪಡಿಸು, ಸರಿಹೊಂದಿಸು, ಸುಧಾರಿಸು; (ಅನ್ಯಾಯ, ಅಸಂಗತಿ, ತಪ್ಪು, ನ್ಯೂನತೆ, ಲೋಪ, ಅಸಮಾಧಾನ—ಇವನ್ನು) ಪರಿಹರಿಸು, ನಿವಾರಣೆ ಮಾಡು, ತಿದ್ದಿ ಸರಿಮಾಡು. (ರ. ವಿ.) (ಮತ್ತೆ ಭಟ್ಟಿಯಿಳಿಸುವುದು ಅಥವಾ ಇತರ ವಿಧಾನಗಳಿಂದ) ಶುದ್ಧಿಗೊಳಿಸು, ಶೋಧಿಸು. (ಜ್ಯಾ.) ವಕ್ರರೇಖೆಗೆ ಸಮವಾದ (ಉದ್ದದ) ಸರಳ ರೇಖೆಯನ್ನು ಕಂಡುಹಿಡಿ; ವಕ್ರರೇಖೆಯ ಉದ್ದ ಕಂಡುಹಿಡಿ. **Réctifiable** (ಗು.); **Rectificátion** (ನಾ.); **Réctifier** (ನಾ.) (ಕ್ರಿಯಾರ್ಥಗಳಲ್ಲಿ); (ನಿಸ್ತಂತು ವಾರ್ತೆ) ಪರ್ಯಾಯ ಪ್ರವಾಹವನ್ನು ಏಕಮುಖ ಪ್ರವಾಹವನ್ನಾಗಿ ಮಾರ್ಪಡಿಸುವ ಕವಾಟ ಅಥವಾ ಇತರ ಸಲಕರಣೆ; ಸಮಕಾರಕ.

Rectilínear ರೆಕ್ಟಿಲಿನಿಯರ್, **-líneal** —ಲಿನಿಯಲ್ (ಗು.) ಸರಳ ರೇಖೆಯಲ್ಲಿರುವ; ಸರಳ ರೇಖೆಯಾಗಿರುವ; ಸರಳ ರೇಖೆಗಳ ಎಲ್ಲೆಗಳುಳ್ಳ; ಸರಳ ರೇಖೆಗಳಿಂದಾದ; ಸರಳ ರೇಖಾತ್ಮಕ. **Recti-lineárity** (ನಾ.); **Rectilínearly** (ಕ್ರಿ. ವಿ.)

Réctitude ರೆಕ್ಟಿಟ್ಯೂಡ್ (ನಾ.) ನೇರ್ಪು; ಋಜುತೆ; ಆರ್ಜವ; ನೀತಿನಿಷ್ಠೆ; ಧರ್ಮ; ಸಚ್ಚಾರಿತ್ರ; ಒಳ್ಳೆತನ; ಸೌಶೀಲ್ಯ.

Récto ರೆಕ್ಟೊ (ನಾ.) (ತೆರೆದ ಪುಸ್ತಕದ) ಬಲ ಪುಟ; ಹಾಳೆಯ ಮುಖ ಭಾಗ (ವಿರುದ್ಧ ಪದ: Verso)

Réctor ರೆಕ್ಟರ್ (ನಾ.) (ಕ್ರೈಸ್ತ) ಎತ್ತಿದ ದಶಭಾಗದ ತೆರಿಗೆ, ಮೊ. ಪು ಮಠಮಂಡಲಿಗೆ ಸೇರದೆ ಸ್ವಂತಕ್ಕೆ ಸೇರಿರುವ ಅಥವಾ ದಶಭಾಗದ ತೆರಿಗೆಗೆ ತಾನೇ ಹಕ್ಕುದಾರನಾದ ಹಳ್ಳಿಯ ಪಾದ್ರಿ: 'ರೆಕ್ಟರ್' (Vicar ನೋಡಿ). ವಿಶ್ವವಿದ್ಯಾನಿಲಯ, ಪ್ರೌಢ ವಿದ್ಯಾಶಾಲೆ, ಪಾಠಶಾಲೆ, (ಮು., ಇಂಗ್ಲೆಂಡೇತರ ದೇಶಗಳಲ್ಲಿ) ಧಾರ್ಮಿಕ ಸಂಸ್ಥೆ—ಇವುಗಳ ಅಧ್ಯಕ್ಷ (ಇಂಗ್ಲೆಂಡಿನಲ್ಲಿ: ಆಕ್ಸ್‌ಫರ್ಡಿನ ಎಕ್ಸೆಟರ್ ಮತ್ತು ಲಿಂಕನ್ ಕಾಲೇಜುಗಳ ವಿಷಯದಲ್ಲಿ ಮಾತ್ರ. ಸ್ಕಾಟ್ಲೆಂಡಿನಲ್ಲಿ: ಹೈಸ್ಕೂಲುಗಳು, ಮೊ. ರ ಅಧ್ಯಕ್ಷ). [Lord rector (Lord ನೋಡಿ)]. **Réctress, Réctoress** (ನಾ., ಸ್ತ್ರೀ.); **Réctorate** (ನಾ.); **Rectórial** (ಗು.); **Réctorship** (ನಾ.); **Réctory** (ನಾ.) ರೆಕ್ಟರಿನ —ಮಠವೃತ್ತಿ, ಮನೆ.

Réctum ರೆಕ್ಟಂ (ನಾ.) ಗುದದಲ್ಲಿ ಕೊನೆಗೊಳ್ಳುವ ದೊಡ್ಡ ಕರುಳಿನ ಕೊನೆಯ ಭಾಗ; ಗುದನಾಳ. **Réctal** (ಗು.) ಗುದನಾಳದ (ಪ್ರದೇಶದ, ಅಕ್ಕಪಕ್ಕದ)

Recúmbent ರಿಕಂಬೆಂಟ್ (ಗು.) ಮಲಗಿರುವ; ಒರಗಿದ; ಒರಗಿಕೊಂಡಿರುವ. **Recúmbently** (ಕ್ರಿ. ವಿ.); **Recúmbency** (ನಾ.)

Recúperate ರಿಕ್ಯೂಪರೇಟ್ (ಕ್ರಿ.) (ದಣಿವು, ಕಾಯಿಲೆ, ನಷ್ಟ, ಮೊ. ವು ಆದಮೇಲೆ) ಚೇತರಿಸಿಕೊ; ಮತ್ತೆ ಚೈತನ್ಯ ಪಡೆ, —ಕೊಡು; ಚೇತರಿಸಿಕೊ; ದಣಿವಾರಿಸಿಕೊ; ಮತ್ತೆ ಶಕ್ತಿ, ಆರೋಗ್ಯ, —ಪಡೆ; ನಷ್ಟ ಕೂಡಿಸಿಕೊ. **Recuperátion** (ನಾ.); **Recúperative** (ಗು.)

Recúr ರಿಕರ್ (ಕ್ರಿ. ಅಕ., ವರ್ತಮಾನ ಕೃ. -úrring) (—ಕ್ಕೆ) ಮರಳು; ಪುನಃ ಪ್ರಸ್ತಾಪಮಾಡು; ಮತ್ತೆ ನೆನೆ (*To* ಉಪ. ಜೊಡನೆ). (I know it is painful to her to r. to that terrible time. Before going on, I must r. to our former subject). (ಭಾವ, ಮೊ. ದು) ಪುನಃ ಮನಸ್ಸಿಗೆ ಬರು, ನೆನಪಿಗೆ ಬರು, ನೆನಪಾಗು (*To* mind, etc.). (ಸಮಸ್ಯೆ, ತೊಡಕು, ಮೊ. ವು ಪರ್ಯಾಲೋಚನೆಗಾಗಿ, ಪರಿಹಾರಕ್ಕಾಗಿ) ಮತ್ತೆ ಬರು. ಮರುಕೊಳಿಸು; ಪುನಃ—ತಲೆದೋರು, ಘಟಿಸು; ಆವರ್ತಿಸು [Recurring decimals ಆವರ್ತಕ ದಶಮಾಂಶ. Recurring curve ತನ್ನ ಮೇಲೆಯೆ ಮತ್ತೆ ಹಿಂದಿರುಗಿ ಬರುವ ವಕ್ರರೇಖೆ: ಆವರ್ತಕ ವಕ್ರರೇಖೆ (ಉದಾ., ವೃತ್ತ)]. **Recúrrence** (ನಾ.); **Recúrrent** —ರೆಂಟ್ (ಗು., ನಾ.) (ನರ, ಅಭಿಧಮನಿ, ಕೊಂಬೆ, ಮೊ. ಗಳ ವಿಷಯದಲ್ಲಿ) ಮೊದಲಿನದಕ್ಕೆ ವಿರುದ್ಧ ದಿಕ್ಕಾಗುವಂತೆ ಮತ್ತೆ ಹಿಂದಕ್ಕೆ ಬಗ್ಗಿದ, ತಿರುಗಿದ. ಮತ್ತೆ ಮತ್ತೆ, ಪದೇ ಪದೇ, ನಿಯತ ಕಾಲಗಳಲ್ಲಿ, —ಬರುವ, ತಲೆದೋರುವ, ನಡೆಯುವ; ಪುನರಾವರ್ತಕ. (ನಾ.) ಆವರ್ತಕ ಅಪಧಮನಿ ಅಥವಾ ನರ (ಮು., ಕಂಠದ ದನಿ ಪೆಟ್ಟಿಗೆಯ ಆವರ್ತಕ ನರಗಳಲ್ಲೊಂದು). **Recúrrently** (ಕ್ರಿ. ವಿ.)

Recúrve ರಿಕರ್ವ್ (ಕ್ರಿ.) ಹಿಂದಕ್ಕೆ ಬಾಗು, ಬಗ್ಗಿಸು. **Recúrvate** (ಗು.); **Recúrvature** (ನಾ.)

Recúsant ರಿಕ್ಯೂಸ್ಯಂಟ್, **Récu-** ರೆಕ್ಯುಸ್ಯಂಟ್ (ನಾ., ಗು.) (ಚರಿತ್ರ) Church of England ಎಂಬ ರಾಜ್ಯಸ್ಥಾಪಿತ ಕ್ರೈಸ್ತ ಮಂಡಲಿಯ ಆರಾಧನೆಗಳಿಗೆ ಹೋಗಲು ನಿರಾಕರಿಸಿದ(ವನು). ಅಧಿಕಾರಕ್ಕೆ ಒಳಪಡಲು ತಿರಸ್ಕರಿಸುವ(ವನು); ಕಾನೂನನ್ನು ಪ್ರತಿಘಟಿಸುವ(ವನು); ತಿರುಗಿಬೀಳುವ, ಆಜ್ಞಾ ಭಂಗಮಾಡುವ (*Against* ಉಪ. ಜೊಡನೆ). **Recúsance** (ನಾ.); **Recúsancy** (ನಾ.); **Recúse** ರಿಕ್ಯೂಸ್ (ಕ್ರಿ. ಸಕ.) (ಈಗ ವಿರ.ಪ್ರ.) (ಒಬ್ಬನನ್ನು, ಅವನ ಅಧಿಕಾರವನ್ನು) ತಿರಸ್ಕರಿಸು, ಪ್ರತಿಭಟಿಸು. ನ್ಯಾಯಾಧಿಪತಿ ಪೂರ್ವ ವಿಶ್ವಾಸವುಳ್ಳವನೆಂದು, ಪಕ್ಷಪಾತಿಯೆಂದು, ಆಕ್ಷೇಪಣೆಯೊಡ್ಡು.

Recúse. **Recusant** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Red ರಡ್ (ಗು.) ಕೆಂಪಾದ; ಕೆಂಪು; ಕೆಚ್ಚನೆಯ; ಕೆಂಬಣ್ಣದ [R. as a rose, etc. Blood, fiery, yellowish, deep, -r. R. with anger ಕೋಪದಿಂದ (ಮುಖ) ಕೆಂಪೇರಿ. With r. hands ರಕ್ತ ಕಲುಷಿತವಾದ ಕೈಗಳಿಂದ. All-r. route, line, cable, etc. ಬ್ರಿಟಿಷ್ ರಾಜ್ಯದಲ್ಲಿ ಹಾಯ್ದುಹೋಗುವ ಅಥವಾ ಬ್ರಿಟಿಷರ ಅಧೀನದಲ್ಲಿರುವ ಮಾರ್ಗ, ರೈಲುದಾರಿ, ಕಡಲ ತಂತಿ, ವೊ. ವು (ಬ್ರಿಟಿಷ್ ರಾಜ್ಯಗಳಿಗೆ ಭೂಪಟಗಳಲ್ಲಿ ಕೆಂಬಣ್ಣವಿರುವ ಕಾರಣದಿಂದ). R. gold ಚೊಕ್ಕ ಬಂಗಾರ; ಅಪರಂಜಿ; ಹಣ. R. cent (ಅಮೆ. ಸಂ.) ಅತಿ ಕಡಮೆ ಬೆಲೆಯ ನಾಣ್ಯ; ಸಂಟು (ಆದಿಯಿಲ್ಲ ತಾಮ್ರದ್ದು) (ಮು., Don't care a r. cent). R. eyes ಅತ್ತು ಅತ್ತು ಕೆಂಪಾದ ಕಣ್ಣುಗಳು; ಕೆರಳಿ ಕೆಂಪಾದ ಕಣ್ಣುಗಳು; (ಹಕ್ಕಿ, ವೊ. ಗಳ ವಿಷಯದಲ್ಲಿ) ಕೆಂಪು ಪಾಪೆ(ಪೊರೆ)ಯುಳ್ಳ ಕಣ್ಣುಗಳು. (ಪ್ರಾಣಿಗಳು, ಸಸ್ಯ, ಖನಿಜ, ವೊ. ಗಳ ವಿಷಯದಲ್ಲಿ ವೈಶಿಷ್ಟ್ಯ ಸೂಚಕ ವಿಶೇಷಣವಾಗಿ): R. deer, partridge, mullet, ant, currant, campion. R. arsenic (Arsenic ನೋಡಿ)]. ರಕ್ತಪಾತದ; ಕೊಲೆಯ; ಮನೆ ಮಠಗಳನ್ನು ಸುಟ್ಟು ಹಾಕುವುದರ; ಕ್ರೌರ್ಯದ; ಕ್ರಾಂತಿ ಭೀಷಣ [R. battle ಅತಿ ಘೋರ ಕಾಳಗ. R. ruin (ಸುಟ್ಟುರಿದು) ಸಂಪೂರ್ಣ ನಾಶ. See r. (See¹ ನೋಡಿ). A r. republican, radical, anarchist ಉಗ್ರ—]. **R. admiral** ಒಂದು ಬಗೆಯ ಕೆಂಪು ಪತಂಗ. **R. army** ರಷ್ಯದಲ್ಲಿ ಕ್ರಾಂತಿಕಾರ ಪಂಗಡದ ಸೈನ್ಯ. **R. bark** ಉತ್ತಮ ತೆರದ ಸಿಂಕೋನ ತೊಗಟೆ (ಕೆಂಪು ಜಾತಿಯದು). **R.-blind** ಕೆಂಬಣ್ಣಗುರುಡಾದ; ಕೆಂಬಣ್ಣವನ್ನು ಗುರುತಿಸಲಾಗದ. **R. book** (ಶ್ರೀಮಂತ ವರ್ಗದವರ ಮತ್ತು ಮಧ್ಯಮ ಶ್ರೇಣಿಯವರ ಹೆಸರು ಪಟ್ಟಿಗಳನ್ನುಳ್ಳ) ಕೆಂಪು ರಟ್ಟಿನ ಪುಸ್ತಕ. **R. box** (ಬ್ರಿಟಿಷ್ ಮಂತ್ರಿಗಳು ಸರ್ಕಾರಿ ಕಾಗದಪತ್ರಗಳನ್ನಿಟ್ಟುಕೊಳ್ಳುವ) ಕೆಂಪು ತೊಗಲು ಮುಚ್ಚಿದ ಪೆಟ್ಟಿಗೆ. **Redbreast** 'ರಾಬಿನ್' ಹಕ್ಕಿ. **R.-cap** ಸೈನ್ಯದ ಪೊಲೀಸಿನವನು. **Rédcoat** ಬ್ರಿಟಿಷ್ ಸಿಪಾಯಿ. **R. cross** ಪಟ್ಟಿಗಳು ಕೇಂದ್ರದಲ್ಲಿ ಅಡ್ಡಹಾಯುವ ಕೆಂಪು ಶಿಲುಬೆ (=St George's Cross); ಇಂಗ್ಲೆಂಡಿನ ರಾಷ್ಟ್ರೀಯ ಲಾಂಛನವಾದ ಈ ಕೆಂಪು ಶಿಲುಬೆ. (ಪ್ಯಾಲೆಸ್ಟೈನ್ ದೇಶವನ್ನು ಮಹಮ್ಮದೀಯರಿಂದ ಬಿಡಿಸಿಕೊಳ್ಳಲು ಕ್ರೈಸ್ತರು ಹೂಡಿದ) ಧರ್ಮಯುದ್ಧಗಳಲ್ಲಿ ಕ್ರೈಸ್ತ ಪಕ್ಷ. (Geneva Convention ಎಂಬ ಒಪ್ಪಂದದ ಪ್ರಕಾರ ಏರ್ಪಡಿಸಿದ) ಚಿರ ಚಿಕಿತ್ಸಾಲಯ ವ್ಯವಸ್ಥೆ, ಸಂಸ್ಥೆ, ಸೇವೆ; ಈ ಸಂಸ್ಥೆಯ ಲಾಂಛನ (ವಾದ, ಬಿಳಿಯ ಹಿನ್ನೆಲೆಯ ಕೆಂಪು ಗ್ರೀಕ್ ಶಿಲುಬೆ). **R. ensign** ಬ್ರಿಟಿಷರ ವಾಣಿಜ್ಯ ನೌಕೆಗಳ ಬಾವುಟ (Ensign ನೋಡಿ). **R.-eye** ಒಂದು ಬಗೆಯ ಮೀನು. **R.-fish** ಮೊಟ್ಟೆಯಿಡುವ ಕಾಲದ ಗಂಡು ಸಾಮನ್ ಮೀನು; (ವ್ಯಾಪಾರದ ಹೆಸರು) ಸಾಮನ್ ಮೀನು (ಎದುರು ಪದ: White fish ಇತರ ಎಲ್ಲ ಜಾತಿಯ ಮೀನುಗಳು). **R. flag** ಕೆಂಪು ಬಾವುಟ [ಕ್ರಾಂತಿ ಚಿಹ್ನೆ(ಯಾದ ಕೆಂಪು ಬಾವುಟ); (The R. F. ಒಂದು ಆಧುನಿಕ ಕ್ರಾಂತಿ ಗೀತ). ಯುದ್ಧಕ್ಕೆ—ಸೂಚನೆ, ಸಂಕೇತ. (ಬಂದೂಕು ಅಭ್ಯಾಸದ ಬಯಲು ಮತ್ತು ರೈಲುಮಾರ್ಗಗಳಲ್ಲಿ) ಅಪಾಯ ಸೂಚನೆ]. **R. gum** (ಮಕ್ಕಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಬರುವ) ಒಸಡು ಹುಣ್ಣು, ಒಸಡಿನ ಊತ. ಕೆಂಪು ರಾಳ (ಕೊಡುವ ಯೂಕಲಿಪ್ಟಸ್ ಮರದ ಜಾತಿ). **R.-handed** ತಕ್ಸೀರು ಮಾಡುತ್ತಿರುವಾಗಲೆ; ಕೃತ್ಯ ನಡಸುತ್ತಿರುವಾಗಲೆ (Take r. -h. —ಹಿಡಿದು ಬಿಡು). **R. hat** 'ಕಾರ್ಡಿನಲ್' ಎಂಬ ಧರ್ಮಾಧ್ಯಕ್ಷನ ಟೋಪಿ. ಬ್ರಿಟಿಷ್ ಸೇನಾಧಿಪತಿಯ ಸೈನ್ಯಾಧಿಕಾರಿ ಮಂಡಲಿಯ ಅಧಿಕಾರಿ(ಗೆ ಅಡ್ಡಹೆಸರು). **R. heat** ಕೆಂಗಾವು, ಕೆಂಪಗೆ ಕಾದಿರುವ ಸ್ಥಿತಿ (ರೂಪ. ಸಹ); ಕೆಂಪಗೆ ಕಾದಿರುವ ವಸ್ತುವಿನ ಶಾಖ. **R. herring** ಹೊಗೆಯಲ್ಲಿ ಒಣಗಿಸಿ ಕೆಂಬಣ್ಣ ಬಂದ ಹೆರಿಂಗ್ ಮೀನು [Neither fish, flesh, nor good r. h. (Fish¹ ನಾ. ನೋಡಿ). Draw a r. h. across the track ಅಸಂಬದ್ಧವಾದ ಆದರೆ ಕುತೂಹಲಕಾರಿಯಾದ ಪ್ರಸ್ತಾಪವನ್ನು ಮಧ್ಯೆ ತಂದು ಪ್ರಸ್ತುತ ವಿಷಯದಿಂದ ಗಮನ ತಪ್ಪಿಸು, ಗಮನ ಸೆಳೆ; ಅಡ್ಡದಾರಿಗೆ ಎಳೆ (ಬೇಟೆ ಮೃಗದ ವಾಸನೆ ತಪ್ಪಿಸಿ ಬೇಟೆ ನಾಯಿಗಳನ್ನು ಬೇರೆ ಮಾರ್ಗಕ್ಕೆ ತಿರುಗಿಸುವುದಕ್ಕಾಗಿ ಕೆಂಪು 'ಹೆರಿಂಗು'ಗಳನ್ನು ಉಪಯೋಗಿಸುವ ಕಾರಣದಿಂದ)]. **R.-hot** ಕೆಂಪಗೆ ಕಾದ, ಕಾಯಿಸಿದ. ಅತ್ಯುದ್ರೇಕದ; ಅತ್ಯುತ್ಸಾಹದ; ಅತಿ ರಭಸದ; ಅತ್ಯುಗ್ರ. R.-hot poker ಉರಿ ಬಣ್ಣದ ಹೂವಿನ ತೆನೆ ಬಿಡುವ ಒಂದು ತೋಟದ ಸಸ್ಯ. **R. lamp** ಕೆಂಪು ದೀಪ (ರಾತ್ರಿ ಕಾಲದಲ್ಲಿ ವೈದ್ಯನ ಅಥವಾ ಔಷಧವನ್ನು ವ್ಯಾಪಾರಿಯ ಸೂಚಕವಾಗಿ ಹಚ್ಚಿಡುವುದು). **R. lane** (ಮಕ್ಕಳ ಮಾತು) ಗಂಟಲು. **R. lead** ಸಿಂಧೂರ (ವರ್ಣದ್ರವ್ಯ); ಚಂದ್ರ. (ಕ್ರಿ. ಸಕ.) —ತೊಡೆ, ಬಳಿ. **R.-legged** (ಹಕ್ಕಿಗಳ ವಿಷಯದಲ್ಲಿ) ಕೆಂಪು ಕಾಲಿನ (The r. l. partridge=French partridge). **R.-legs** ಕೆಂಪು ಕಾಲಿನ ಕೆಲವು ಹಕ್ಕಿ ಜಾತಿ; ಒಂದು ಬಗೆಯ ಸಸ್ಯ. **R.-letter** (ದಿನದ ವಿಷಯದಲ್ಲಿ) (ಸಂತನ ವರ್ಧಂತಿಯೆಂದು ಅಥವಾ ಹಬ್ಬದ ದಿನವೆಂದು ಸೂಚಿಸುವುದಕ್ಕಾಗಿ, ಪಂಚಾಂಗದಲ್ಲಿ) ಕೆಂಪಕ್ಷರದಲ್ಲಿ(ಗಳಲ್ಲಿ) ಗುರುತಿಸಿರುವ; (ರೂಪ.) (ಸಂತೋಷ ಘಟನೆಯ ದಿನವೆಂದು) ಚಿರ ಸ್ಮರಣೀಯವಾದ. (ಕ್ರಿ. ಸಕ.) (—ಕಾರಣದಿಂದ) ಚಿರ ಸ್ಮರಣೀಯವೆಂದು ಬರೆದಿಡು, ನಮೂದಿಸು. **R.-light** ಕೆಂಪು ಬೆಳಕು (ರೈಲ್ವೆ, ವೊ. ಗಳಲ್ಲಿ ಅಪಾಯ ಸೂಚಕ ಸಂಕೇತ); ಅಪಾಯ ಸೂಚನೆ [See the r. l. (ರೂಪ.) ಅಪಾಯ ಸಮೀಪಗತವಾಯಿತೆಂದು ತಿಳಿದುಕೊ; ವಿಪತ್ತು ಬಂತೆಂದು ತಿಳಿ, ಕಾಣು]. **R. man** (ಉ. ಅಮೆರಿಕದ ಮೂಲನಿವಾಸಿಯಾದ) ತಾಮ್ರ ವರ್ಣದವನು. **R. meat** ಗೋಮಾಂಸ, ಕುರಿಯ ಮಾಂಸ, ವೊ. ದು (ಎದುರು ಪದಗಳು: Veal, pork, chicken). **R. mass** ಪುರೋಹಿತನು ಕೆಂಪು ಉಡುಪು ತೊಟ್ಟು ನಡಸುವ (ಪ್ರಭು ಭೋಜನ ಸಂಸ್ಕಾರದ) ಆರಾಧನೆ. **R.-poll** (-ಪೋಲ್) ಕೆಂಪು ಜುಟ್ಟಿನ ಹಕ್ಕಿಜಾತಿ (ಮು., ಗಂಡು 'ಲಿನೆಟ್' ಹಕ್ಕಿ); (ಬ. ವ. ದಲ್ಲಿ) ಕೊಂಬಿಲ್ಲದ ಕೆಂಪು ಕೂದಲಿನ ದನ(ದ ಜಾತಿ). **R. rag** (ಕೆಂಪು ಬಟ್ಟೆ ಗೂಳಿಯನ್ನು ಕೆರಳಿಸುವಂತೆ) ಒಬ್ಬನ ಕೋಪವನ್ನು ಕೆರಳಿಸುವ, ಒಬ್ಬನನ್ನು ರೇಗಿಸುವ, —ವಸ್ತು; ಪ್ರಕೋಪಕ (Is a r. r. to him). ಧಾನ್ಯಕ್ಕೆ ಹತ್ತುವ ತುಕ್ಕು ಬಣ್ಣದ ಚುಕ್ಕೆ ರೋಗ. **R. rattle** ಒಂದು ಬಗೆಯ ಸಸ್ಯ. **R. ribbon**=Order of Bath ಎಂಬ ಗೌರವ ವರ್ಗದ—(ಚಿಹ್ನೆಯಾದ) ಕೆಂಪು ಪಟ್ಟಿ, ಸದಸ್ಯತ್ವ. **R. sanders** ಬಣ್ಣ ಮಾಡುವುದರಲ್ಲಿ ಉಪಯೋಗಿಸುವ ಈಸ್ಟ್ ಇಂಡಿಯದ ಒಂದು ಮರದ ದಾರು. **Redshank** ಒಂದು ಬಗೆಯ ಹಕ್ಕಿ. **Redshirt** (ಗ್ಯಾರಿಬಾಲ್ಡಿಯ ಅನುಯಾಯಿಯಾದ) ಕ್ರಾಂತಿಕಾರಿ, ಅರಾಜಕತಾ ವಾದಿ. **R.-short** (ಕಬ್ಬಿಣದ ವಿಷಯದಲ್ಲಿ) ಕೆಂಪಗೆ ಕಾದಿರುವಾಗ ಭಿದುರವಾಗಿರುವ. **Redskin**=R. man. **R. snow** (ಉ. ಧ್ರುವ ಮತ್ತು ಆಲ್ಪ್ಸ್ ಪರ್ವತ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುವ) ಕೆಂಪು ತಿರುಗಿದ ಮಂಜು (ಒಂದು ಬಗೆಯ ಪಾಚಿಯಿಂದ ಈ ಕೆಂಪು ತೋರುತ್ತದೆ). **R. soldier** ಚರ್ಮ ಕೆಂಪಾಗುವ ಒಂದು ಬಗೆಯ ಹಂದಿಯ ಜ್ವರ; ಈ ಜ್ವರ ತಗುಲಿದ ಹಂದಿ. **R. spider** ಕಾವು ಮನೆಯ ಸಸ್ಯಗಳಿಗೆ (ಮು., ಅದರಲ್ಲಿಯ ದ್ರಾಕ್ಷಿಯ ಬಳ್ಳಿಗೆ) ಹತ್ತುವ, ಪೀಡಕವಾದ, ಒಂದು ಕೀಟ: ಕೆಂಜೇಡ. **Rédstart** ಯೂರೋಪ್ ಖಂಡದ, ಕೆಂಪು ಬಾಲದ ಒಂದು ಹಾಡುಹಕ್ಕಿ. **R.-streak** (ಸೇಬು ಮದ್ಯದ ತಯಾರಿಕೆಗೆ ಉಪಯೋಗಿಸುವ) ಕೆಂಪು ಗೀರಿನ ಒಂದು ಜಾತಿಯ ಸೇಬು. **R. tape** (ಮು., ಕಚೇರಿ ಕೆಲಸಗಳಲ್ಲಿ) ಮಿತಿಮೀರಿದ ಸಂಪ್ರದಾಯ ಶರಣತೆ; ಕಚೇರಿ ಧಾನಸ; ಕ್ರಮ ನಚ್ಚು. **Red-tápery** (ನಾ.); **Red-tápism** (ನಾ.); **Red-tápist** (ನಾ.); **R. triangle**=Y.M.C.A. (ಎಂಬ ಕ್ರೈಸ್ತ ತರುಣರ) ಸಂಸ್ಥೆ(ಯ ಚಿಹ್ನೆ). **R.-water** ದನ ಮತ್ತು ಕುರಿಗಳಿಗೆ ತಗುಲುವ, ಮೂತ್ರ ಕೆಂಪಾಗುವಂತೆ ಮಾಡುವ, ಮಲೇರಿಯಾ ಸಂಬಂಧದ ಒಂದು ರೋಗ. **R. weed** ಒಂದು ಬಗೆಯ ಗಸಗಸೆ (ಕಸಕಸ) ಗಿಡ. **R.-wing** (ಕೆಂಪು ರೆಕ್ಕೆಗಳುಳ್ಳ) ಕೆಲವು ಹಕ್ಕಿ ಜಾತಿ. **Rédwood** ಒಂದು ಮರದ ಜಾತಿ; ಮಂಜತ್ತಿ ಮರ. **R. worm** (ಮೀನಿನ ಎರೆಯಾಗಿ ಉಪಯೋಗಿಸುವ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ಕೆಂಪು ಹುಳು. **Rédden** (ಕ್ರಿ.) ಕೆಂಪುಮಾಡು ; ಕೆಂಪಾಗು ; ಕೆಂಪು ತಿರುಗು. **Réddish** (ಗು.) ; **Réddy** (ಗು.) ; **Rédly** (ಕ್ರಿ. ವಿ.) (ವಿರ. ಪ್ರ.) ; **Rédness** (ನಾ.)

Red (ನಾ.) ಕೆಂಪು (ಬಣ್ಣ) ; ಕೆಂಪಿನಲ್ಲಿ ಒಂದು ಛಾಯೆ (A r.) ; (ಕೆಲವು ಜೂಜಾಟಗಳಲ್ಲಿ) ಕೆಂಪು ಬಣ್ಣ [ದ (ಚೌಕ) ಮನೆ]. (ಬಿಲ್ಯರ್ಡ್ಸ್ ಆಟದಲ್ಲಿ) ಕೆಂಪು ಚೆಂಡು (The r.). ಕೆಂಪು ಬಟ್ಟೆ ; ಕೆಂಪು ಉಡುಪು (Dressed in r.). (ಹಿಂದೆ) ಬ್ರಿಟಿಷ್ ನೌಕಾ ಸೈನ್ಯದ ಮೂರು ವಿಭಾಗಗಳಲ್ಲೊಂದು (The r., white, blue). ಉಗ್ರ— ಸುಧಾರಣಾ ವಾದಿ, ಪ್ರಜಾಪ್ರಭುತ್ವ ವಾದಿ ; ಅರಾಜಕತಾ ವಾದಿ.

Red- (ಪೂ. ಪ್ರ.) = Re- (ಲ್ಯಾಟಿನ್ ಭಾಷೆಯಿಂದ ಬಂದ ಶಬ್ದಗಳಲ್ಲಿ ಮಾತ್ರ)

Redáct ರಿಡ್ಯಾಕ್ಟ್ (ಕ್ರಿ. ಸಕ.) ಸಾಹಿತ್ಯ ರೂಪದಲ್ಲಿಡು ; ಸಾಹಿತ್ಯ ರೂಪ ಕೊಡು ; ಪ್ರಕಟನೆಗೆ, ಮುದ್ರಣಕ್ಕೆ, —ಅಣಿಮಾಡು, ಸಿದ್ಧ ಪಡಿಸು ; ಸಂಪಾದಿಸು. **Redáctor** (ನಾ.) ; **Redáction** (ನಾ.) ಪ್ರಕಟನೆಗೆ, ಮುದ್ರಣಕ್ಕೆ, —ಸಿದ್ಧಪಡಿಸುವುದು, ಸಿದ್ಧವಾಗುವುದು, ಉಪಯುಕ್ತ ರೂಪದಲ್ಲಿಡುವುದು ; ಪರಿಷ್ಕರಣ ; ಸಂಪಾದನೆ ; ಪರಿಷ್ಕೃತ ಮುದ್ರಣ.

Redán ರಿಡ್ಯಾನ್ (ನಾ.) ಚಾಚು ಕೋನವಾಗುವಂತೆ ಎರಡು ಮುಖಗಳುಳ್ಳ ಒಂದು ಬಗೆಯ ಹಂಗಾಮಿ ಕೋಟೆ ಕೊತ್ತಲ.

Redd ರೆಡ್ (ಕ್ರಿ. ಸಕ.) (ಸ್ಕಾ. ಪ್ರ.) ಚೊಕ್ಕಟಮಾಡು ; ಓರಣಗೊಳಿಸು; ಅಣಿಯಾಗಿಡು ; ವ್ಯವಸ್ಥೆಯಲ್ಲಿಡು ; ಕ್ರಮದಲ್ಲಿಡು ; ಸರಿಯಾಗಿಡು. (ಜಗಳ) ಬಗೆಹರಿಸು, ಪರಿಹರಿಸು ; ರಾಜಿ, ಸಮಾಧಾನ, —ಮಾಡು, ಮಾಡಿಸು.

Réddle ರೆಡ್‌ಲ್ (ನಾ., ಕ್ರಿ. ಸಕ.) ಕೆಂಪು ಕಾವಿ [ಬಣ್ಣ (ಕೊಡು, ಹಚ್ಚು)]

Rede ರೀಡ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) ಆಲೋಚನೆ ; ಸಲಹೆ ; ಬುದ್ಧಿವಾದ. ದೃಢನಿಶ್ಚಯ ; ತೀರ್ಮಾನ. ಯೋಜನೆ ; ಹೂಟ. ಕಥನ. (ಕ್ರಿ.) (ಪ್ರಾಚೀ. ಪ್ರ.) ಬುದ್ಧಿ(ವಾದ) ಹೇಳು ; ಸಲಹೆಕೊಡು. (ಸಮಸ್ಯೆಯನ್ನು, ಕನಸನ್ನು) ಅರ್ಥಮಾಡಿ ಹೇಳು, ಬಿಡಿಸಿ ವಿವರಿಸು.

Redeém ರಿಡೀಮ್ (ಕ್ರಿ. ಸಕ.) ಹಿಂದಕ್ಕೆ ಕೊಂಡುಕೊ ; ಶ್ರಮಪಟ್ಟು ಅಥವಾ ಷರತ್ತಿನ ಹಣವನ್ನು ಸಲ್ಲಿಸಿ—ಬಿಡಿಸಿಕೊ, ಪುನಃ ಪಡೆದುಕೊ, ಮತ್ತೆ ಸ್ವಾಧೀನಪಡಿಸಿಕೊ ; ಒತ್ತೆ, ಭೋಗ್ಯ, —ಬಿಡಿಸಿಕೊ (R. one's rights, position, honour, mortgaged land, pledged goods). ಹಣ ಕೊಟ್ಟು (ಆಪಾದನೆಯಿಂದ ಅಥವಾ ಋಣದಿಂದ) ಮುಕ್ತನಾಗು, ಬಿಡಿಸಿಕೊ ; ದಂಡಕೊಟ್ಟು ಪರಿಹಾರಮಾಡಿಕೊ. (ವಾಗ್ದಾನ) ನಡಸು, ನೆರವೇರಿಸು. ಬಿಡುಗಡೆಯ ಹಣಕೊಟ್ಟು (ಒಬ್ಬನ, ತನ್ನ) ಸ್ವಾತಂತ್ರ್ಯ ಪಡೆ, (ಒಬ್ಬನ) ಪ್ರಾಣ ಉಳಿಸು. ರಕ್ಷಿಸು ; ಕಾಪಾಡು ; ಉದ್ಧಾರಮಾಡು. (ದೇವರ ಅಥವಾ ಕ್ರಿಸ್ತನ ವಿಷಯದಲ್ಲಿ) ಪಾಪದಿಂದ ಮತ್ತು ಅನಂತ ನರಕ ಶಿಕ್ಷೆಯಿಂದ ವಿಮೋಚನೆಮಾಡು, ಉದ್ಧರಿಸು. (ದೋಷದಲ್ಲಿ, ನ್ಯೂನತೆಯಲ್ಲಿ) ಒಂದು ಗುಣಾಂಶ, ಒಳ್ಳೆಯ ಲಕ್ಷಣ, —ಇರು; ದೋಷವನ್ನು, ನ್ಯೂನತೆಯನ್ನು, —ಹೋಗಲಾಡಿಸು, ಪರಿಹರಿಸು (*From* ಉಪ. ದೊಡನೆ) (The eyes r. the face from ugliness ಮುಖದ ವಿಕಾರವನ್ನು ಕಣ್ಣುಗಳು ಪರಿಹರಿಸುತ್ತವೆ). **Redeémable** (ಗು.) ; **Redeémer** (ಮು., ಕ್ರಿಸ್ತನ ವಿಷಯದಲ್ಲ ಪ್ರ.). **Redémption** ರಿಡೆಂ(ಪ್)ಷನ್ (ನಾ.) (ಕ್ರಿಯಾರ್ಥಗಳಲ್ಲ) ; (ಮು., ಯೇಸು ಕ್ರಿಸ್ತನು ಪಟ್ಟ ಪ್ರಾಯಶ್ಚಿತ್ತದ ಮೂಲಕ) ಪಾಪದಿಂದ ಮತ್ತು ಅನಂತ ನರಕದಿಂದ ವಿಮೋಚನೆ (Past, beyond, without, r. ವಿಮೋಚನೆಯೇ ಇಲ್ಲದೆ, ವಿಮೋಚನೆಯ ಆಸೆಯೇ ಇಲ್ಲದೆ. In the year of our r. 1900. = ಕ್ರಿ. ಶ. ೧೯೦೦ರಲ್ಲಿ). ಕೊಂಡುಕೊಳ್ಳುವುದು (Became a member of a livery company by r.). **Redémptive** (ಗು.)

Redíntegrate ರೆಡಿಂಟಿಗ್ರೇಟ್ (ಕ್ರಿ. ಸಕ.) ಪುನಃ— ಸಮಗ್ರ ಮಾಡು, ಒಂದುಮಾಡು; ಒಂದುಗೂಡಿಸಿದ ಸ್ಥಿತಿಯಲ್ಲಿ, ಸಮಗ್ರ ಸ್ಥಿತಿಯಲ್ಲಿ, —ಮತ್ತೆ ಸ್ಥಾಪಿಸು ; ಪುನಸ್ಸಂಘಟನ ಮಾಡು. **Redintegrátion** (ನಾ.)

Rédolent ರೆಡೊಲೆಂಟ್ (ಗು.) (ಈಗ ವಿರ. ಪ್ರ.) ಸುವಾಸನೆಯ(ನ್ನು ಬೀರುವ). ಬಲವಾದ, ತೀಕ್ಷ್ಣವಾದ, —ವಾಸನೆಯುಳ್ಳ. (ರೂಪ.) ಬಲವಾಗಿ ಸೂಚನೆ ಕೊಡುವ ಅಥವಾ ಜ್ಞಾಪಕ ತರುವ (*Of* ಉಪ. ದೊಡನೆ). **Rédolence** (ನಾ.)

Redoúble ರಿಡಬ್‌ಲ್ (ಕ್ರಿ.) ಹೆಚ್ಚುಮಾಡು, ಹೆಚ್ಚಾಗು ; ಇಮ್ಮಡಿಸು, ಇಮ್ಮಡಿಯಾಗು ; ಎರಡರಷ್ಟು (ಹೆಚ್ಚಾಗಿ) ಮಾಡು, ಬೆಳೆ (R. one's efforts. The clamour redoubled)

Redoúbt ರಿಡೌಟ್ (ನಾ.) (ಕೋಟೆ ಕೊತ್ತಲ) (ಸಾ., ಚಚ್ಚೌಕದ ಅಥವಾ ಬಹು ಕೋನಾಕಾರದ ಮತ್ತು ಪಕ್ಕ ರಕ್ಷೆಗಳಿಲ್ಲದಿರುವ) ಹಂಗಾಮಿ ಹೊರ ಕೋಟೆ(ಯ ಕಟ್ಟಡ)

Redoúbtable ರಿಡೌಟಬ್‌ಲ್ (ಗು.) (ಎದುರಾಳಿ, ಯೋಧ, ವಾದ ಚತುರ, ಮೊ. ರ ವಿಷಯದಲ್ಲಿ) ಎದುರಿಸಲಾಗದ, ಬಲಿಷ್ಠ ; ಎದುರಿಸಲು ಕಷ್ಟವಾದ ; ದುರ್ಜಯ. **Redoúbted** (ಗು.) (ಪ್ರಾಚೀ. ಪ್ರ.) = Redoubtable.

Redoúnd ರಿಡೌಂಡ್ (ಕ್ರಿ. ಅಕ.) (ಒಬ್ಬನ ಅನುಕೂಲ, ಗೌರವ, ಮೊ. ಕ್ಕೆ) ಕೊನೆಯಲ್ಲಿ ಕೂಡಿಬರು, ನೆರವಾಗು, ಸೇರಿಕೆಯಾಗು ; (—ಮೊ. ನ್ನು) ಹೆಚ್ಚಿಸು (*To* ಉಪ. ದೊಡನೆ) (This procedure will r. to our advantage. The tale, fact, redounds to their credit). (ಒಬ್ಬನಿಗೆ) ಕೊನೆಯ ಫಲವಾಗಿ, ಪರಿಣಾಮವಾಗಿ, —ಬರು (*To* ಉಪ. ದೊಡನೆ) (The benefits that r. to us from his self-sacrifice). (ಒಬ್ಬನಮೇಲೆ) ಪ್ರತಿಕೂಲವಾಗಿ —ತಿರುಗು, ಮರಳು (*Upon* ಉಪ. ದೊಡನೆ) (His praises r. upon himself)

Redréss ರಿಡ್ರೆಸ್ (ಕ್ರಿ. ಸಕ., ನಾ.) ಪುನಃ (ಸರಿಯಾದ ಸ್ಥಿತಿಯಲ್ಲಿ) ಜೋಡಿಸಿಡು, ಅಳವಡಿಸು ; ನೇರ್ಪಡಿಸು, ಸರಿಪಡಿಸು (ಸಾ., r. the balance ಹೆಚ್ಚು ಕಡಮೆಗಳನ್ನು—). (ಸಂಕಟವನ್ನು) ಪರಿಹರಿಸು, ನೀಗು ; (ಅನ್ಯಾಯವನ್ನು) ಸರಿಪಡಿಸು, ನೆಟ್ಟಗೆ ಮಾಡು ; (ನಷ್ಟಕ್ಕೆ) ಪ್ರತಿಫಲಕೊಡು, ಪರಿಹಾರಕೊಡು ; —ಕೊಟ್ಟು ಸರಿಪಡಿಸು ; (ಅಸಮಾಧಾನವನ್ನು) ಹೋಗಲಾಡಿಸು ; (ದುರುಪಯೋಗವನ್ನು, ದುರುಪಯೋಗದಿಂದ ಆದ ಕೆಡುಕನ್ನು) ನಿವಾರಣೆ ಮಾಡು, ನೇರ್ಪುಗೊಳಿಸು. (ನಾ.) (ಅನ್ಯಾಯಕ್ಕೆ) ಪರಿಹಾರ ; (ಅಸಮಾಧಾನ, ಮೊ. ನ್ನು) ನಿವಾರಿಸುವುದು, ಪರಿಹರಿಸುವುದು (*Of* ಉಪ. ದೊಡನೆ); (—ಮೊ. ರ) ನಿವಾರಣೆ.

Redúce ರಿಡ್ಯೂಸ್ (ಕ್ರಿ. ಸಕ.) ಕಡಮೆಮಾಡು, ಇಳಿಸು. ಮೊದಲಿನ ಸ್ಥಾನದಲ್ಲಿ ಅಥವಾ ಯುಕ್ತ ಸ್ಥಾನದಲ್ಲಿ ಮತ್ತೆ ಸ್ಥಾಪಿಸು, ನೆಲೆಗೊಳಿಸು ; ಹೀಗೆ (ನೆಲೆಗೊಳಿಸಿ) ಸರಿಮಾಡು (ಈಗ ಶಸ್ತ್ರ ಚಿಕಿತ್ಸೆಯಲ್ಲಿ ಮಾತ್ರ ಪ್ರ.: Had the shoulder, dislocation, reduced). ಮತ್ತೆ ಒಳಪಡಿಸು, ತರು (*To* ಉಪ. ದೊಡನೆ) (R. person to discipline). ಬೇರೆ ರೂಪಕ್ಕೆ ತಿರುಗಿಸು, ರೂಪಾಂತರಮಾಡು (*To* ಉಪ. ದೊಡನೆ) ; ರೂಪಾಂತರಕ್ಕೊಳಪಡಿಸು, ಮಾರ್ಪಾಟಿಗೊಳಪಡಿಸು ; (—ಕ್ಕೆ) ತಕ್ಕಂತೆ, ಹೊಂದುವಂತೆ, ಹೊಂದಿಕೆಯಾಗುವಂತೆ, —ಮಾಡು, ಇಳಿಸು (*To* ಉಪ. ದೊಡನೆ) ; ವರ್ಗೀಕರಣದಿಂದ ಅಥವಾ ವಿಭಜನೆಯಿಂದ (—ಕ್ಕೆ) ಇಳಿಸು, ತರು ; (ರ. ವಿ.) ಒಂದು ಸಂಯುಕ್ತದಿಂದ ಆಮ್ಲಜನಕವನ್ನು ತೆಗೆದುಬಿಡು. [R. rule to practice ನಿಯಮವನ್ನು ಆಚರಣೆಯಲ್ಲಿ ತರು. R. anomalies to rule ವ್ಯತಿಕ್ರಮಗಳನ್ನು ಒಂದು ಸೂತ್ರಕ್ಕಿಳಿಸು. The facts may all be reduced to three heads. R. clods (to powder),

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ore (to metal), compound (to components), surface (by harrowing)]. (ಈಗ ವಿ. ಪ್ರ.) (—ಮಾಡಲು) ಬಲಾತ್ಕಾರ ಪಡಿಸು. ಬಲಪ್ರಯೋಗದಿಂದ ಅಥವಾ ಅನಿವಾರ್ಯವಾಗಿ ಒಂದು ಸ್ಥಿತಿಗೆ, ಒಂದು ಕಾರ್ಯಮಾಡುವುದಕ್ಕೆ, ತರು; ಅಡಗಿಸು; ಸೋಲಿಸು; ಮತ್ತೆ ಅಂಕೆಗೆ, ವಿಧೇಯತೆಗೆ, ಒಳಪಡಿಸು (R. the Crown to submission ದೊರೆಯನ್ನು ಅಂಕೆಗೊಳಪಡುವ ಸ್ಥಿತಿಗೆ ತರು. Reduced to despair). ಕೆಳಕ್ಕೆ ತರು; ತಗ್ಗಿಸು; ಕೆಳ ದರ್ಜೆಗೆ ಇಳಿಸು; ದುರ್ಬಲಗೊಳಿಸು; ಶಕ್ತಿಯುಡುಗಿಸು; ಕ್ಷೀಣಿಸು; ಕಡಮೆಮಾಡು; ಸಂಕೋಚಪಡಿಸು [R. Pope to place of chief bishop. Is in a very reduced state ಬಹಳ ನಿಶ್ಶಕ್ತ ನಾಗಿದ್ದಾನೆ. Reduced prices ಖೋತಾ ಬೆಲೆ; ಇಳಿಸಿದ—. Reduced circumstances ಕಾರ್ಪಣ್ಯಸ್ಥಿತಿ]. **Redúcer** (ಮು., ಛಾಯಾಚಿತ್ರದಲ್ಲಿ) ಅಸಮ ಪ್ರತಿಗಳ ಸಾಂದ್ರತೆಯನ್ನು ಕಡಮೆಮಾಡುವ ವಸ್ತು. **Redúcible** (ಗು.); **Redúction** (ಕ್ರಿಯಾರ್ಥಗಳಲ್ಲಿ); ತಗ್ಗುವುದು, ಕಡಮೆಯಾಗುವುದು, ಮೊ. ದು; (ಚಿತ್ರ, ಭೂಪಟ, ಮೊ. ಗಳ) ಹ್ರಸ್ವ ಪ್ರತಿ. R. to absurdity ಒಂದು ವಾದ ಸರಣಿ ಯನ್ನು ಅತಿಯಾಗಿ ಬೆಳಸಿ, ಎಳೆದು, ಅದು ಅಸಂಗತವೆಂದು ತೋರುವಂತೆ ಮಾಡುವುದು; ವಾದಾತಿವ್ಯಾಪ್ತಿ; ಅತಿ ವಾದ. (ಶಿಥಿಲವಾಗಿ) ಒಂದು ತತ್ತ್ವವನ್ನು ಅವ್ಯವಹಾರ್ಯವಾಗುವಷ್ಟರ ಮಟ್ಟಿಗೆ ಲಂಬಿಸುವುದು, ಅತಿ ದೂರ ಎಳೆಯುವುದು.

Redúctio ad absúrdum (L) ರಿಡಕ್‌ಷಿಯೋ ಆ್ಯಡ್ ಆ್ಯಬ್ಸರ್ಡಂ (ನಾ.) = Reduction to absurdity (Reduce ನೋಡಿ)

Reduít ರೆಡ್ವಿ(ೕ) (ನಾ.) (ಕೋಟೆ ಕೊತ್ತಲ) ಮುಂಗಟ್ಟಡಗಳನ್ನು ಅಥವಾ ಹೊರ ಕಟ್ಟಡಗಳನ್ನು ಶತ್ರುಗಳು ಹಿಡಿದಾಗ ರಕ್ಷಕ ಸೈನ್ಯ ಹಿಂಜರಿದು ಆಶ್ರಯ ಪಡೆಯುವುದಕ್ಕೂ ಶತ್ರುಗಳನ್ನು ತಡೆಯುವುದಕ್ಕೂ ಅನುಕೂಲ ವಾದ ಮಧ್ಯಭಾಗದ ರಕ್ಷಣ ಗೃಹ: ಒಳ ಕೋಟೆ.

Redúndant ರಿಡಂಡಂಟ್ (ಗು.) ಅವಶ್ಯಕವಾದುದಕ್ಕಿಂತ ಹೆಚ್ಚಿನ; ಮಿತಿಮೀರಿದ. ಅಧಿಕ ಪದಪ್ರಯೋಗ ದೋಷದ. ಸಮೃದ್ಧ; ಹೊರ ವಾದ; ತುಂಬಿದ. **Redúndantly** (ಕ್ರಿ. ವಿ.); **Redúndance** (ನಾ.); **Redúndancy** (ನಾ.)

Redúplicate ರಿಡ್ಯೂಪ್ಲಿಕೇಟ್ (ಕ್ರಿ. ಸಕ.) ಇಮ್ಮಡಿಸು; ದ್ವಿಗುಣಿಸು; ಪುನಃ ಪ್ರತಿ ಮಾಡು. (ವ್ಯಾ.) (ಅಕ್ಷರವನ್ನು, ಉಚ್ಚಾರಾಂಶವನ್ನು) ಪುನರುಕ್ತಿಮಾಡು, ದ್ವಿರುಕ್ತಿಮಾಡು; (ಮೂಲ ಪದದ ಅಥವಾ ಅದರ ಒಂದು ಭಾಗದ) ಪುನರುಕ್ತಿಯಿಂದ (ಕಾಲ ರೂಪ) ರಚಿಸು [ಉದಾ., ದದರ್ಶ (ಧಾತು: ದೃಶ್)]. **Redúplicative** (ಗು.); **Reduplicátion** (ನಾ.) (ಕ್ರಿಯಾರ್ಥಗಳಲ್ಲಿ); (ಒಂದರ) ಇಮ್ಮಡಿ ಪ್ರತಿ, ಪಡಿ ರೂಪ. (ವ್ಯಾ.) ಪದ ರಚನೆಯಲ್ಲಿ ಉಚ್ಚಾರಾಂಶದ ಅಥವಾ ಅಕ್ಷರದ ಪುನರುಕ್ತಿ; ದ್ವಿರುಕ್ತಿ; ದ್ವಿರುಕ್ತಿ(ಯಾದ) ಭಾಗ.

Ree = Reeve[2].

Re-écho ರೀಎಕೋ (ಕ್ರಿ.) ಪ್ರತಿಧ್ವನಿ ಕೊಡು; —ಮಾಡು; ಮತ್ತೆ ಮತ್ತೆ ಪ್ರತಿಧ್ವನಿಸು; ಪ್ರತಿಧ್ವನಿಯಿಂದ ತುಂಬು.

Reed ರೀಡ್ (ನಾ., ಕ್ರಿ. ಸಕ.) ಬಳುಕದ ತಾಳುಳ್ಳ ಒಂದು ಜಲ ಸಸ್ಯ, ಜವುಗು ಸಸ್ಯ; ಇದರ ಎತ್ತರವಾದ ನೇರ ದಂಟು; ಲಾಳ, ಜೊಂಡು, ಆಪು(ಹುಲ್ಲು) (Broken r. ನೆಚ್ಚಿಕೆಗೆ ಅರ್ಹವಲ್ಲದ, ದುರ್ಬಲ, —ವ್ಯಕ್ತಿ, ವಸ್ತು. Lean on a r. ದುರ್ಬಲ ವ್ಯಕ್ತಿಯಲ್ಲಿ ಅಥವಾ ವಸ್ತುವಿನಲ್ಲಿ ನೆಚ್ಚಿಕೆಯಿಡು; ಒಂದು ಕಡ್ಡಿಯನ್ನು ನೆಮ್ಮು). (ಸಮೂಹವಾಚಕ) ಜೊಂಡು (ಒಟ್ಟಾಗಿ ಬೆಳೆಯುತ್ತಿರುವ ಸಸ್ಯ ಅಥವಾ ಚಾವಣಿಗೆ ಉಪ ಯೋಗಿಸುವ ವಸ್ತು); (ಚಾವಣಿಗೆ ಹೊದ್ದಿಸಲು ಸಿದ್ಧಗೊಳಿಸಿದ) ಗೋಧಿಯ ಹುಲ್ಲು. (ಕಾವ್ಯ) ಬಾಣ; ಅಂಬು; ಲಾಳದ ಅಥವಾ ಜೊಂಡಿನ ವಾದ್ಯ; ಕೊಳಲು; ಹಳ್ಳಿಗಾಡಿನ ಹಾಡು. ಕೆಲವು ಗಾಳಿ ವಾದ್ಯಗಳಲ್ಲಿ (ಮು., Oboe, bassoon, clarinet, bagpipe, ಮೊ. ಗಳಲ್ಲಿ ಮತ್ತು ಕೆಲವು ಆರ್ಗನ್ ವಾದ್ಯದ ನಾಳಿಕೆಗಳಲ್ಲಿ) ಧ್ವನಿಯನ್ನು ಹುಟ್ಟಿಸಲು ಸೇರಿಸಿರುವ ಕಂಪನ ಭಾಗ: ಜೀವಾಳ; ಪೀಪಿ; ಧ್ವನಿ ನಾಲಗೆ. (ಸಾ., ಬ. ವ. ದಲ್ಲಿ) ನಾಳಿಕಾ ವಾದ್ಯ(ಗಳು) (Strings, brass ನೋಡಿ). ಹಾಸನ್ನು ವಿಂಗಡಿಸಿ ಅಡ್ಡೆಳೆಗಳನ್ನು ಒತ್ತಿಕೊಳ್ಳುವು ದಕ್ಕೆ ಉಪಯೋಗಿಸುವ ನೆಯ್ಗೆಯವನ ಒಂದು ಸಲಕರಣೆ: ತಟ್ಟು; ಹಣಿಗೆ. (ಸಾ., ಬ. ವ. ದಲ್ಲಿ) (ವಾ. ಶಾ.) ಜೊಂಡುಗಳನ್ನು ಜೋಡಿಸಿ ದಂತೆ ಒಂದರ ಪಕ್ಕದಲ್ಲೊಂದು ಬರುವ ಅರೆವುರುಳೆಯಾಕಾರಗಳ ಅಲಂಕಾರ; ಜೊಂಡಲಂಕಾರ. (R.-babbler, -warbler, -wren, -bunting, -sparrow, -mace, -pheasant ಕೆಲವು ಜಾತಿಯ ಹಕ್ಕಿಗಳು. R.-pipe ಲಾಳದ ಕಡ್ಡಿಯ ಕೊಳಲು ವಾದ್ಯ; ಜೊಂಡು ಕೊಳಲು; ಜೀವಾಳವಿರುವ ಆರ್ಗನ್ ನಾಳಿಕಾ ವಾದ್ಯ. R.-stop ನಾಳಿಕೆಗಳುಳ್ಳ ಆರ್ಗನ್ ವಾದ್ಯದ ಬಿರಡೆ). (ಕ್ರಿ.) ಜೊಂಡನ್ನು ಚಾವಣಿಗೆ ಹೊದಿಸು; (ಹುಲ್ಲನ್ನು) ಚಾವಣಿಗೆ (ಉಪಯೋಗಿಸಲಾಗು ವಂತೆ) ಸಿದ್ಧಮಾಡು. ಜೊಂಡಲಂಕಾರ ಮಾಡು. (ಗಾಳಿ ವಾದ್ಯಕ್ಕೆ ಅಥವಾ ಆರ್ಗನ್ ವಾದ್ಯಕ್ಕೆ) ಜೀವಾಳ ಸೇರಿಸು, ಪೀಪಿಹಾಕು. **Reéded** (ಗು.); **Reédling** (ನಾ.) = R.-pheasant. **Reédy** (ಗು.) ತುಂಬ ಜೊಂಡು ಬೆಳೆದಿರುವ; ಆಪಿನ; ಜೊಂಡಿನಿಂದ ಮಾಡಿದ [(ಮು., ಕಾವ್ಯ) R. pipe, couch]. [ಅಶಕ್ತ, ತೆಳುವು, ಅಥವಾ (ಹುಲ್ಲಿನ ವಿಷಯದಲ್ಲಿ) ದಪ್ಪ—ಇವು] ಜೊಂಡಿನಂಥ. (ಧ್ವನಿಯ ವಿಷಯದಲ್ಲಿ) ಲಾಳ ವಾದ್ಯದಂತಿರುವ; ಕರ್ಕಶವೂ ಅಸ್ಪಷ್ಟವೂ ಆದ. **Reédiness** (ನಾ.)

Re-édify ರೀಎಡಿಫೈ (ಕ್ರಿ. ಸಕ.) (ಮನೆ, ಮೊ. ನ್ನು) ಮತ್ತೆ (ಹೊಸ ದಾಗಿ) ಕಟ್ಟು. (ಆಸೆ, ಭರವಸೆ, ಕ್ಷಯಿಸಿದ ಅಂಗಾಂಶ, ಮೊ. ನ್ನು) ಮತ್ತೆ ಬೆಳಸು.

Reédling, Reedy. Reed ನೋಡಿ.

Reef[1] ರೀಫ್ (ನಾ., ಕ್ರಿ. ಸಕ.) ಗಾಳಿಗೆ ಒಡ್ಡಿರುವ ಹಾಯಿಯ ಭಾಗ ವನ್ನು ಕಡಮೆ ಮಾಡುವುದಕ್ಕಾಗಿ ಸುತ್ತಿ ಮುದುರಲಾಗುವಂತಿರುವ ಹಾಯಿಯ (ಮೂರು ಅಥವಾ ನಾಲ್ಕು) ಅಡ್ಡಪಟ್ಟಿಗಳಲ್ಲೊಂದು: ಹಾಯಿಯ —ಮಡಿಕೆ, ಮುದುರು ಪಟ್ಟಿ [Take in a r. ಎಚ್ಚರಿಕೆ ಯಿಂದ ಮುಂದುವರಿ (ರೂಪ. ಸಹ). R.-knot ಪರಸ್ಪರವಾಗಿ ಒಂದು ಕುಣಿಕೆಯ ಸಮಾನಾಂತರ ಹಗ್ಗ ಭಾಗಗಳು ಮತ್ತೊಂದರಲ್ಲಿ ಒಳಕೊಳ್ಳುವಂತೆ ಹಾಕಿದ ಎರಡು ಕುಣಿಕೆಗಳುಳ್ಳ ಗಂಟು (ಪವಿತ್ರದ ಗಂಟಿನಂತಹದು) (ಎದುರು ಪದ: Granny ತೊಡಕು ಗಂಟು)]. (ಕ್ರಿ.) ಹಾಯಿಯ ಮುದುರು ಪಟ್ಟಿಯನ್ನು(ಗಳನ್ನು) ಒಳ ಮಡಿಚು (Single, double, treble, -reefed ೧, ೨, ೩ —ಮುದುರು ಪಟ್ಟಿಗಳನ್ನು ಮಡಿಚಿದ). (ಮೇಲ್ಕೂವೆ, ಹಡಗಿನ ಮೂಕಿಮರ, ಚಾಲಕ ಚಕ್ರದ ಹುಟ್ಟು ಹಲಗೆಗಳು—ಇವನ್ನು ಕೇಂದ್ರದ ಕಡೆಗೆ ಸರಿಸಿ) ಚಿಕ್ಕದು ಮಾಡು. **Reéfer** (ನಾ.) ಹಾಯಿಯ ಮಡಿಕೆಯನ್ನು ಮುದುರುವವನು; (ಅಸಂ.) (ಹಡಗಿನಲ್ಲಿ) Midshipman ಎಂಬ ಅಧಿಕಾರಿ. = Reef-knot. ಬಲ ಅಥವಾ ಎಡ, ಯಾವ ಪಕ್ಕದಲ್ಲಾಗಲಿ ಗುಂಡಿ ಹಾಕುವಂತಿರುವ ಗುತ್ತನಾದ ದಪ್ಪ ನಡುವಂಗಿ (= Reefing-jacket)

Reef[2] ರೀಫ್ (ನಾ.) ನೀರಿನ ಮಟ್ಟಕ್ಕೆ ಸರಿಯಾಗಿ ಅಥವಾ ಸ್ವಲ್ಪ ಮೇಲೆ ಅಥವಾ ಸ್ವಲ್ಪ ಕೆಳಗಡೆ ಇರುವ ಬಂಡೆ(ಯ ಸಾಲು), ಸಣ್ಣ ಸಣ್ಣ ಉರುಟುಕಲ್ಲುಗಳ ದಿಬ್ಬ ಅಥವಾ ಮರಳು ದಿಬ್ಬ; ನೀರೊಳಗಣ —ಬಂಡೆ, ದಿಬ್ಬ. (ಚಿನ್ನದ ಗಣಿ) ಚಿನ್ನವುಳ್ಳ ಶಿಲೆಯಲ್ಲಿ ಚಿನ್ನದ ರೇಖೆ, ಎಳೆ. ಆಧಾರ ಶಿಲೆ.

Reek ರೀಕ್ (ನಾ., ಕ್ರಿ. ಅಕ.) (ಸ್ಕಾ. ಪ್ರ., ಸಾಹಿತ್ಯ ಪ್ರ.) ಹೊಗೆ; ಹಬೆ; (ಕಣ್ಣಿಗೆ ಕಾಣುವಂತೆ ಹೊರ ಸೂಸುತ್ತಿರುವ) ಉಗಿ(ಯ ಒಡ್ಡು). ಕೆಟ್ಟ ನಾತ, ಕೊಳೆತ ವಾಸನೆ (The r. of tobacco); ಕೊಳೆತು ನಾರುವ, ದುರ್ಗಂಧದ, —ವಾತಾವರಣ (Amid r. & squalor ಹೊಲಸು ಮತ್ತು ಕೊಳಕುಗಳ ಮಧ್ಯೆ). (ಕ್ರಿ.) (ಬೆಂಕಿ ಬಿದ್ದ ಮನೆ ಅಥವಾ ಬಯಲಿನಲ್ಲಿ ಉರಿಯುತ್ತಿರುವ ವಸ್ತುವಿನ ವಿಷಯದಲ್ಲಿ) ಹೊಗೆಯನ್ನು ಸೂಸು; (ಬಿಸಿಯಾದ ಪಾನೀಯ ಅಥವಾ ಆಹಾರ, ಬೆವರುತ್ತಿರುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮನುಷ್ಯ, ಮೊ. ರು, ಚೆಲ್ಲಿದ ರಕ್ತ ಅಥವಾ ರಕ್ತಲೇಪಿತ ವಸ್ತು—ಇವುಗಳ ವಿಷಯದಲ್ಲಿ) ಹೊಗೆಯಾಡು, ಆವಿಯಾಡು. (—) ದುರ್ಗಂಧ ಬರು, ದುರ್ವಾಸನೆ ಸೂಸು (*Of* ಉಪ. ದೊಡನೆ) [Reeks of patchouli, tobacco, blood, (ಅಥವಾ ರೂಪ.) of murder, affectation, etc.]. **Reéky** (ಗು.) (ಮು., ಸ್ಕಾ. ಪ್ರ., ಮತ್ತು ಸಾಹಿತ್ಯ ಪ್ರ. : Auld Reekie = Edinburgh ಪಟ್ಟಣ)

Reel[1] ರೀಲ್ (ನಾ., ಕ್ರಿ.) ದಾರ, ರೇಷ್ಮೆ, ನೂಲು, ಕಾಗದ, ತಂತಿ, ಮೊ. ನ್ನು ಮೇಲೆ ಸುತ್ತುವುದಕ್ಕೆ ಉಪಯೋಗಿಸುವ ಸುತ್ತುಸಲಕರಣೆ: ಕಂಡಿಕೆ ; ರಾಟೆ [Off the r. (ರೂಪ.) ಸರಾಗವಾಗಿ ; ತಡೆಬಡೆ ಯಿಲ್ಲದೆ; ಶೀಘ್ರ ಪರಂಪರೆಯಲ್ಲಿ] ಅನುಕೂಲಕ್ಕಾಗಿ ಹೊಲಿಗೆಯ ದಾರ, ಮೊ. ನ್ನು ಸುತ್ತುವ, ಸುತ್ತಿಟ್ಟಿರುವ, ಸಣ್ಣ ಉರುಳೆ : ದಾರದ ಉರುಳೆ. (ಹಲವು ಯಂತ್ರಗಳಲ್ಲಿ) ರಾಟೆಯಂಥ (ಸುತ್ತು ತಿರುಗುವ)ಭಾಗ. (ಕ್ರಿ.) (ದಾರ, ಗಾಳದ ಹುರಿ, ಮೊ. ನ್ನು) ರಾಟೆಯ ಮೇಲೆ ಸುತ್ತು ; (ಗೂಡಿನ ರೇಷ್ಮೆ, ಮೊ. ನ್ನು) ರಾಟೆಗೆ ಸುತ್ತುವುದರ ಮೂಲಕ ಬಿಡಿಸಿ ತೆಗೆ) (*Off* ಉಪ. ದೊಡನೆ) ; (ಮೀನು, ಹಡಗಿನ ವೇಗ ಮಾಪಕದ ತೇಲುವೆಯ ದಾರ, ಮೊ. ನ್ನು) ರಾಟೆಯನ್ನುಪಯೋಗಿಸಿ ಎಳೆದುಕೊ (*In* or *up* ಉಪ. ದೊಡನೆ). (ಕಥೆ, ಪಟ್ಟಿ, ಪದ್ಯ—ಇವನ್ನು) ಒಡಬಡನೆ, ತಡೆಬಡೆಯಿಲ್ಲದೆ, ನೀರು ಕುಡಿದಂತೆ, —ಹೇಳು (*Off* ಉಪ. ದೊಡನೆ); (ಮಿಡಿತೆ, ಮೊ. ಗಳ ವಿಷಯದಲ್ಲಿ) (ಸುತ್ತುತ್ತಿರುವ ರಾಟೆಯಂತೆ) 'ಕ್ಲಿಕ್' ಎಂದು ಸದ್ದುಮಾಡು.

Reel[2] ರೀಲ್ (ಕ್ರಿ. ಅಕ., ನಾ.) (ಕಣ್ಣು, ಮನಸ್ಸು, ತಲೆ—ಇವುಗಳ ವಿಷಯದಲ್ಲಿ) ಗಿರ್ಕಿಹೊಡೆ, ಸುತ್ತು ; ಪಕ್ಕದಿಂದ ಪಕ್ಕಕ್ಕೆ ತೂಗಾಡು ; ತೊನೆದಾಡು; ರಭಸದಿಂದ, ಬುಡಮುಟ್ಟ,—ಅಲ್ಲಾಡು (His mind, the front rank, the ship, the tower, reeled under the shock. R. to & fro like a drunken man. The State was reeling to its foundations). ಅಲ್ಲಾಡುವಂತೆ, ತೂಗಾಡುವಂತೆ, —ಕಾಣು, ತೋರು (The mountains r. before his eyes). (ನಾ.) ಅಲ್ಲಾಟ; ತೂಗಾಟ; ತತ್ತರ; ನಡುಕ; ಕಂಪನ; ಆಂದೋಲನ (ರೂಪ. ಸಹ). **Reélingly** (ಕ್ರಿ. ವಿ.)

Reel[3] ರೀಲ್ (ನಾ., ಕ್ರಿ. ಅಕ.) (ಸಾ., ಎರಡು ಜೋಡಿಗಳು ಎದುರು ಬದುರಾಗಿ ನಿಂತು 8 ಆಕಾರದಲ್ಲಿ ನರ್ತಿಸುವ, ಮು., ಸ್ಕಾಟ್ಲೆಂಡಿನವರ) ಒಂದು ಉಲ್ಲಾಸದ ನೃತ್ಯ. (ಕ್ರಿ.) ಈ ನೃತ್ಯ—ಆಡು, ನರ್ತಿಸು.

Reen ರೀನ್ (ನಾ.) = Rhine[1].

Re-éntrant ರೀಎಂಟ್ರಂಟ್ (ಗು., ನಾ.) (ಮು., ಕೋಟೆ ಕೊತ್ತಲದಲ್ಲಿ) ಒಳಗಡೆಗೆ ಚಾಚಿರುವ, ಒಳ ಮುಖವಾದ (ಕೋನ) (ಎದುರು ಪದ : Salient)

Reevé[1] ರೀವ್ (ನಾ.) (ಚರಿತ್ರೆ) ಪಟ್ಟಣದ ಅಥವಾ ಜಿಲ್ಲೆಯ ಪ್ರಧಾನ ದಂಡಾಧಿಕಾರಿ. (ಕೆನಡ ದೇಶದಲ್ಲಿ, ಹಳ್ಳಿಗಳ ಕಡೆ) ಗ್ರಾಮ ಪಂಚಾಯತಿಯ ಅಥವಾ ಪೌರ ಸಭೆಯ ಅಧ್ಯಕ್ಷ.

Reeve[2] ರೀವ್, **Ree** ರೀ (ನಾ.) ಹೆಣ್ಣು 'ರಫ್' ಹಕ್ಕಿ.

Reeve[3] ರೀವ್ (ಕ್ರಿ. ಸಕ., ಭೂತ., ಭೂ. ಕೃ. Rove or Reeved) (ನಾವೆ) (ಹಗ್ಗ, ಕಂಬಿ, ಮೊ. ನ್ನು) ಬಳೆ ಅಥವಾ ಇತರ ಕಂಡಿಯ ಮೂಲಕ ತೂರಿಸು (*Through* ಉಪ. ದೊಡನೆ); (ರಂಧ್ರ, ಮೊ. ಗಳಲ್ಲಿ) ಹಗ್ಗ ತೂರಿಸು. (ಹಗ್ಗ, ಮರದ ತುಂಡು ಅಥವಾ ಇತರ ವಸ್ತುವನ್ನು) ಕಂಡಿಯಲ್ಲಿ ತೂರಿಸಿ, ಮೇಲೆ ಅಥವಾ ಸುತ್ತ ಹಾಯಿಸಿ,—ಮತ್ತೊಂದಕ್ಕೆ ಬಿಗಿ, ಬಂಧಿಸು (*In, on, round, to* ಉಪ. ದೊಡನೆ). (ಹಡಗಿನ ವಿಷಯದಲ್ಲಿ : ಆಳವಿಲ್ಲದ ಸ್ಥಳಗಳ ಮಧ್ಯೆ, ನೀರ್ಗಲ್ಲ ಮೊತ್ತಗಳ ನಡುವೆ) ಎಚ್ಚರಿಕೆಯಿಂದ ದಾರಿನೋಡಿಕೊಂಡು, ನುಸುಳಿಕೊಂಡು,—ಹೋಗು.

Reféction ರಿಫೆಕ್‌ಷನ್ (ನಾ.) ಉಪಾಹಾರ ; ಅಲ್ಪಾಹಾರ (Milk & eggs were offered for our r.). ಲಘು ಭೋಜನ ; ತಿಂಡಿ ತೀರ್ಥ. **Reféctory** ರಿಫೆಕ್ಟರಿ, (ಅಥವಾ ಮರೀಯ ಪ್ರ.) **Réfectory** ರೆಫಿಕ್ಟೊರಿ (ನಾ.) (ಸಂನ್ಯಾಸಿ ಮಠ, ಮೊ. ಗಳಲ್ಲಿ) ಊಟದ —ಕೊಟಡಿ, ಮನೆ.

Refér ರಿಫರ್ (ಕ್ರಿ.) (ವ್ಯಕ್ತಿಯನ್ನು ಅಥವಾ ವಸ್ತುವನ್ನು) ಮೂಲ (ಕಾರಣ) ವೆಂದು ಹೇಳು, ತಿಳಿಸು, ಆರೋಪಿಸು (*To* ಉಪ. ದೊಡನೆ) ; (ಒಂದು ಗೊತ್ತಾದ ತೇದಿಗೆ, ಸ್ಥಾನಕ್ಕೆ, ಅಥವಾ ವರ್ಗಕ್ಕೆ) ನಿರ್ದೇಶಿಸು, ಸೇರಿಸು (*To* ಉಪ. ದೊಡನೆ) [**Réferable** (ಗು.)]. (ತನ್ನನ್ನು, ಒಬ್ಬನನ್ನು, ಪರ್ಯಾಲೋಚನೆಗಾಗಿ ಒಂದು ವಿಷಯವನ್ನು) ಒಪ್ಪಿಸು, ವಹಿಸಿಕೊಡು (*To* ಉಪ. ದೊಡನೆ) [R. to drawer (ಸಂಕ್ಷಿಪ್ತ: R.D.) (ಹುಂಡಿಗೆ ಅಥವಾ ಚೆಕ್ಕಿಗೆ ಹಣಕೊಡದೆ ನಿಲ್ಲಿಸುವುದು, ಮೊ. ಸಂದರ್ಭಗಳಲ್ಲಿ ಬ್ಯಾಂಕಿನ ಅಧಿಕಾರಿ ಬರೆಯುವ ಟಿಪ್ಪಣಿ) : ಹುಂಡಿ (ಅಥವಾ ಚೆಕ್ಕು) ಬರೆದವನಿಗೆ ಹಿಂದಕ್ಕೆ ಕಳುಹಿಸು]. (ಸಂಗತಿ ತಿಳಿಯುವುದಕ್ಕಾಗಿ ಒಬ್ಬ ಅಧಿಕಾರಿ, ಪ್ರಮಾಣ ಗ್ರಂಥ, ಅಥವಾ ವಿಷಯ ದೊರೆಯುವ ಮೂಲ— ಇವುಗಳ) ಬಳಿಗೆ ಕಳುಹಿಸು, ನೆರವು ಕೋರು ; (—ನ್ನು) ನೋಡು, ನೋಡೆಂದು ಹೇಳು ; ವಿಚಾರಿಸು, ವಿಚಾರಿಸೆಂದು ತಿಳಿಸು ; ಆಧಾರ, ಪ್ರಕರಣ, —ಎತ್ತಿ ಹೇಳು, ತೋರಿಸು. (ಹೇಳಿಕೆ, ಮೊ. ವು) (—ಗೆ) ಸಂಬಂಧವಿರು, ಅನ್ವಯಿಸು (*To* ಉಪ. ದೊಡನೆ) ; (ಆಲಿಸುವವನ ವಿಷಯದಲ್ಲ ; ಹೇಳಿಕೆ, ಮೊ. ನ್ನು) (—ಎಂದು) ಅರ್ಥಮಾಡು, ಅನ್ವಯಿಸು (*To* ಉಪ. ದೊಡನೆ) (These remarks r. only to deliberate offences ಈ ಟೀಕೆಗಳು ಉದ್ದೇಶಪಟ್ಟು ಮಾಡಿದ ಅಪರಾಧ ಗಳಿಗೆ ಮಾತ್ರ ಅನ್ವಯಿಸುತ್ತವೆ). (ಮಾತನಾಡುವವನ ವಿಷಯದಲ್ಲಿ) (—ಕಡೆಗೆ) ನಿರ್ದೇಶಿಸು, ಗಮನ ಸೆಳೆ (*To* ಉಪ. ದೊಡನೆ). **Refereé** ರೆಫರೀ (ನಾ., ಕ್ರಿ. ಅಕ.) ನ್ಯಾಯ ವಿಮರ್ಶಕ ; ತೀರ್ಮಾನಕ್ಕಾಗಿ ಎರಡು ಕಕ್ಷಿಗಳಿಂದಲೂ ವ್ಯಾಜ್ಯ ವಹಿಸಲ್ಪಟ್ಟವನು; ನಿರ್ಣಯ ಕರ್ತ ; (ಮು., ಕಾಲ್ಚೆಂಡಾಟ, ಮೊ. ಗಳಲ್ಲಿ) ಆಟದ ತೀರ್ಪುಗಾರ, ತೀರ್ಮಾನ ಕಾರ, ನಿರ್ಣಯ ಕರ್ತ. (ಕ್ರಿ.) (ಮು., ಕಾಲ್ಚೆಂಡಾಟ, ಮೊ. ಗಳಲ್ಲಿ) ಆಟದ ತೀರ್ಪುಗಾರನಾಗು. **Réference** ರೆಫರೆನ್ಸ್ (ನಾ., ಕ್ರಿ. ಸಕ.) ತೀರ್ಮಾನಕ್ಕಾಗಿ ಅಥವಾ ಬಗೆಹರಿಸುವುದಕ್ಕಾಗಿ ಅಥವಾ ಪರ್ಯಾಲೋಚನೆಗಾಗಿ (ಒಂದು ವಿಷಯವನ್ನು ಒಬ್ಬನಿಗೆ) ಒಪ್ಪಿಸು ವುದು, ವಹಿಸುವುದು ; (ಒಂದು ವಿಷಯವನ್ನು ಒಬ್ಬನ) ಮುಂದಿಡು ವುದು, ಪರಾಮರ್ಶೆಗೆ ಒಪ್ಪಿಸುವುದು ; (ಪರಾಮರ್ಶಕರಿಗೆ ಕೊಟ್ಟಿರುವ) ಪರಾಮರ್ಶೆಯ, ವಿಚಾರಣೆಯ, —ವಿಷಯ ; ವಿಷಯ ವಾಕ್ಯ ; ಅದರ ವ್ಯಾಪ್ತಿ (The r. is very wide, strictly limited ಪರಾಮರ್ಶೆಯ ವ್ಯಾಪ್ತಿ ಬಹಳ ವಿಶಾಲವಾಗಿದೆ, ಮಿತವಾಗಿದೆ). ಸಂಬಂಧ; ಹೊಂದಿಕೆ [Success seems to have little r. to merit. In, with, r. to—ಸಂಬಂಧದಲ್ಲಿ, ಸಂಬಂಧವಾಗಿ ; —ಕುರಿತು. Without r. to (—ಕ್ಕೆ) ಗಮನ ಕೊಡದೆ; (—ನ್ನು) ಲಕ್ಷಿಸದೆ, ಗಣನೆಗೆ ತೆಗೆದುಕೊಳ್ಳದೆ ; (—ರ) ಲಕ್ಷ್ಯವಿಲ್ಲದೆ, ಸಂಬಂಧವಿಲ್ಲದೆ]. (—ಗೆ) ಸೂಚನೆ, ಸಂಬಂಧ ಸೂಚನೆ (*To* ಉಪ. ದೊಡನೆ). ವಿಷಯ ದೊರೆಯ ಬಹುದಾದ ಗ್ರಂಥ, ಮೊ. ಕ್ಕೆ, ಗ್ರಂಥದ ಪುಟ, ಮೊ. ಕ್ಕೆ (ಹೆಚ್ಚು ಕಡಮೆ ಕರಾರುವಾಕಾದ) ಸೂಚನೆ ; ಸಂಬಂಧ ನಿರ್ದೇಶ ; ಪರಾಮರ್ಶೆ ; ಆಕರ ಸೂಚನೆ ; ಉಲ್ಲೇಖ; ದಾಖಲೆ [Loads his pages with, does not give, references. Cross r. (Cross ಗು. ನೋಡಿ). R. bible ಪಕ್ಕದಲ್ಲಿ ಪ್ರಕರಣಾಂತರ ಸೂಚಿಗಳುಳ್ಳ ಬೈಬಲ್ಲು. Legislation by r. ಹಿಂದಿನ ಕಾನೂನುಗಳಲ್ಲಿರುವ ವಿಷಯಗಳನ್ನು ಪುನಃ ಅನುವಾದ ಮಾಡುವುದಕ್ಕೆ ಬದಲಾಗಿ ಅವುಗಳಿಗೆ ಸೂಚನೆ ಕೊಟ್ಟು (ಅಥವಾ ಅವುಗಳನ್ನು ನಿರ್ದೇಶಿಸಿ), ಮಸೂದೆಯನ್ನು ತಯಾರಿಸುವುದು]. (ಅಡಿ ಟಿಪ್ಪಣಿಗಾಗಲಿ ನಕ್ಷೆಗಾಗಲಿ ಓದುಗನ ಗಮನವನ್ನು ಸೆಳೆಯುವ) ಸೂಚೀ ಚಿಹ್ನೆ, ನಿರ್ದೇಶ ಚಿಹ್ನೆ [ಸಾಮಾನ್ಯವಾಗಿ ಬಳಕೆಯಲ್ಲಿರುವ ಸೂಚೀ ಚಿಹ್ನೆಗಳು : Asterisk ನಕ್ಷತ್ರ ಚಿಹ್ನೆ (*), Obelisk ಕಠಾರಿ ಗುರುತು (†), Double obelisk ಇಕ್ಕಠಾರಿ ಗುರುತು (‡), Section ಪರಿಚ್ಛೇದ ಚಿಹ್ನೆ (§), Parallel ಸಮಾನಾಂತರ ಚಿಹ್ನೆ (‖), Paragraph ಪ್ರಕರಣ ಚಿಹ್ನೆ (¶)]. ಉಲ್ಲೇಖವನ್ನು ನೋಡುವುದು ; (ವಿಷಯ ತಿಳಿಯಲು) ಒಬ್ಬನನ್ನು ಕೇಳುವುದು, ಒಬ್ಬನ ಬಳಿಗೆ ಕಳುಹಿಸುವುದು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಾಮರ್ಶೆ [Book of r. (Book ನೋಡಿ). R. library (Library ನೋಡಿ)]. (ಕೆಲಸಕ್ಕಾಗಿ ಅರ್ಜಿಹಾಕುವವನು, ಮಾರಾಟಕ್ಕಾಗಿ ಸಾಮಾನು ತರುವವನು, ಮೊ. ರು ತಮ್ಮ ಪ್ರಾಮಾಣಿಕತೆಯ) ಧರವಸೆಗಾಗಿ ಸೂಚಿಸುವ ಮನುಷ್ಯ ; (ಒಬ್ಬನಿಗಾಗಿ) ಭರವಸೆ ಕೊಡುವವನು (Who are your references? ನಿನ್ನ ಪರ ಭರವಸೆ ಕೊಡುವವರು ಯಾರು?). ಯೋಗ್ಯತಾ ಪತ್ರ; ಶಿಫಾರಸ್ಸು ಪತ್ರ. (ಕ್ರಿ.) (ಗ್ರಂಥದಲ್ಲಿ) ಆಧಾರಗಳ, ಆಕರಗಳ, —ನಿರ್ದೇಶಕೊಡು, ನಿರ್ದೇಶಗಳನ್ನೊದಗಿಸು. **Referéntial** (ಗು.); **Referéndary** (ನಾ.) (ವಿರ. ಪ್ರ.)=Referee. ನಿಯೋಜಿತ ಮಂಡಲಿಯ ಸಹಾಯಕ, ನ್ಯಾಯದರ್ಶಿ. (ಒಂದು ವಿಚಾರಣೆಯನ್ನು ಕುರಿತು) ವರದಿ ಮಾಡುವ ಅಥವಾ ವಿಮರ್ಶಿಸುವ ಅಧಿಕಾರಿ. **Referéndum** (ನಾ.) ಕೆಲವು ರಾಜಕೀಯ(ದಂಥ) ಪ್ರಶ್ನೆಗಳನ್ನು (ಸಾ., ಇತ್ಯರ್ಥವಾಗಬೇಕಾದ ಒಂದು ವಿಚಾರವನ್ನು) ಕೆಲವು ಗೊತ್ತಾದ ಸಂದರ್ಭಗಳಲ್ಲಿ ಎಲ್ಲಾ ಮತದಾರರ ನೇರ ತೀರ್ಮಾನಕ್ಕಾಗಿ ಅವರ ಮುಂದಿಟ್ಟು ಅಭಿಮತಗಳನ್ನು ತೆಗೆದುಕೊಳ್ಳುವುದು : ಪ್ರಜಾ ನಿರ್ಧಾರ ; ಚುನಾವಣೆದಾರರ ನೇರ ತೀರ್ಮಾನ (ಸಂಬಂಧ ಪದ : Initiative ಪ್ರಜಾ ನಿರ್ದೇಶ)

Refíne ರಿಫೈನ್ (ಕ್ರಿ.) ಕಿಟ್ಟ, ಕಶ್ಮಲ, ದೋಷ, —ಇಲ್ಲದಂತೆ ಮಾಡು, ಇಲ್ಲದಂತಾಗು ; ಶೋಧಿಸು ; ಶುದ್ಧೀಕರಿಸು ; ಪರಿಶುದ್ಧವಾಗು, —ಮಾಡು. ಸೂಕ್ಷ್ಮವಾದ ಅಭಿರುಚಿಗಳನ್ನು ತುಂಬು, ಪಡೆ ; (—ರ) ನಡತೆಯನ್ನು ಅಥವಾ ರೂಪವನ್ನು ನಯ, ನಾಜೂಕು, —ಮಾಡು ; ಸುಸಂಸ್ಕೃತ ಮಾಡು, —ಆಗು ; ಸಂಸ್ಕರಿಸು ; ನುಣುಪು ಮಾಡು ; ಸೂಕ್ಷ್ಮವಾದ ತರ್ಕ, ಭಾಷೆ, —ಉಪಯೋಗಿಸು ; ಸೂಕ್ಷ್ಮ ವ್ಯತ್ಯಾಸಗಳನ್ನು ಮಾಡು. (ಒಂದರ ವಿಷಯದಲ್ಲಿ) ಸೂಕ್ಷ್ಮವಾಗಿ, ಸೂಕ್ಷ್ಮ ತರ್ಕದೊಡನೆ, —ಭಾಷಣ ಮಾಡು, ವ್ಯಾಖ್ಯಾನ ಮಾಡು [(*Up*)*on* ಉಪ. ದೊಡನೆ]. ಸಂಸ್ಕರಣಗಳಿಂದ ಉತ್ತಮಗೊಳಿಸು [(*Up*)*on* ಉಪ. ದೊಡನೆ]. **Refínedly** (ಕ್ರಿ. ವಿ.); **Refínement** (ನಾ.) (ಕ್ರಿಯಾರ್ಥಗಳಲ್ಲಿ) ; ಭಾವದ ಅಥವಾ ಅಭಿರುಚಿಯ ಸೂಕ್ಷ್ಮತೆ, ನಯ ; ಸೂಕ್ಷ್ಮಾಭಿರುಚಿ ; ನಯ ನಾಜೂಕಿನ ನಡತೆ, ಮೊ. ವು ; ನುಣುಪು; ಸಂಸ್ಕೃತಿ. (—ರ) ನಯ, ಸೂಕ್ಷ್ಮತೆ, ಕೌಶಲ (ಪ್ರಕಾಶನ) (*Of* ಉಪ. ದೊಡನೆ); ಅತಿ ಪರಿಷ್ಕಾರ (All the refinements of luxury ಭೋಗ ಜೀವನದ ಎಲ್ಲ ನಯ ನಾಜೂಕುಗಳು. A countermine was a r. beyond their skill ಪ್ರತಿ ಸುರಂಗಹಾಕುವುದು ಅವರ ಜಾಣತನಕ್ಕೆ ಮೀರಿದ ಕೌಶಲವಾಗಿತ್ತು). ಸೂಕ್ಷ್ಮ ತರ್ಕಾಂಶ ; ಸೂಕ್ಷ್ಮ ವ್ಯತ್ಯಾಸ. **Refíner** (ನಾ.) (ಕ್ರಿಯಾರ್ಥಗಳಲ್ಲಿ). ಮು., ಲೋಹ, ಸಕ್ಕರೆ, ಮೊ. ನ್ನು ಶುದ್ಧ ಮಾಡುವವನು ; ಶುದ್ಧೀಕಾರಕ ; ಶೋಧನಕಾರ. **Refínery** (ನಾ.) ಶೋಧನಾಗಾರ ; ಶುದ್ಧ ಮಾಡುವ ಕಾರಖಾನೆ.

Refláttion ರಿಫ್ಲೇಷನ್ (ನಾ.) (ಚಲಾವಣೆಯ ಬೆಲೆಯನ್ನು ಒಮ್ಮೆ ತಗ್ಗಿಸಿದ ಮೇಲೆ, ಚಲಾವಣೆಯ ಪದ್ಧತಿಯನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ) ಪುನಃ ಚಲಾವಣೆಯ ಬೆಲೆಯನ್ನು ಹೆಚ್ಚಿಸುವುದು.

Refléct ರಿಫ್ಲೆಕ್ಟ್ (ಕ್ರಿ.) (ವಿರ. ಪ್ರ.) ಹಿಂದಕ್ಕೆ ಮಡಿಸು (R. the corner of the paper). [ಒಂದು ತಲ ಅಥವಾ ಕಾಯದ ವಿಷಯದಲ್ಲಿ: ಶಾಖ, ಬೆಳಕು, ಧ್ವನಿ, (ವಿರಳವಾಗಿ) ಚೆಂಡು, ಮೊ. ನ್ನು] ಹಿಂದಕ್ಕೆಸೆ ; ಹಿಂಪುಟಿಸು; ಪ್ರತಿಫಲನ ಮಾಡು; ಪ್ರತಿಬಿಂಬಿಸು; ಮಾರ್ಫೊಳೆ [Shine with reflected light (ಸ್ವಂತಪ್ರಕಾಶವಿಲ್ಲದೆ)ಬೇರೊಂದರ ಬೆಳಕಿನಿಂದ, ಪ್ರಭಾವದಿಂದ, ಬೆಳಗು ; ಎರವಲು ಬೆಳಕಿನಿಂದ ಪ್ರಕಾಶಿಸು]. (ಕನ್ನಡಿ, ಮೊ. ಗಳ ವಿಷಯದಲ್ಲಿ ಮತ್ತು ರೂಪ. ಸಹ) ಪ್ರತಿಬಿಂಬ ತೋರಿಸು ; (ಕಣ್ಣಿಗೆ ಅಥವಾ ಮನಸ್ಸಿಗೆ) ಪ್ರತಿಬಿಂಬಿಸು ; (ಆಕಾರದಲ್ಲಿ, ಫಲದಲ್ಲಿ) ತದ್ವತ್ತಾಗಿ ತೋರು, ಪ್ರತಿಬಿಂಬವಾಗಿರು [Laws r. the average moral attitude of a half century earlier ಕಾನೂನುಗಳು ಅರ್ಧ ಶತಮಾನದ ಹಿಂದಿನ(ವರ) ಸಾಮಾನ್ಯ ನೀತಿದೃಷ್ಟಿಯನ್ನು ಪ್ರತಿಬಿಂಬಿಸುತ್ತವೆ]. (ಕಾರ್ಯ, ಫಲ, ಮೊ. ಗಳ ವಿಷಯದಲ್ಲಿ: ಮಾಡಿದವನಿಗೆ ಕೀರ್ತಿ, ಅಪಕೀರ್ತಿ, ಮೊ. ನ್ನು) ತರು, ಬೀರು ; (ಒಂದಕ್ಕೆ ಜವಾಬ್ದಾರಿಯಾದ ವ್ಯಕ್ತಿಗೆ, ಪದ್ಧತಿಗೆ) ಟೀಕೆ, ಆಕ್ಷೇಪಣೆ, —ತರು [(*Up*)*on* ಉಪ. ದೊಡನೆ]. ಆರಯ್ಯು ; ಚಿಂತನೆ ಮಾಡು ; ತನ್ನಲ್ಲೇ ಆಲೋಚನೆ ಮಾಡು (*On, upon* ಉಪ. ದೊಡನೆ ಸಹ). ಜ್ಞಾಪಕಕ್ಕೆ ತಂದುಕೊ ; ನೆನೆ, ಬಗೆದು ನೋಡು (*That, how*, ಮೊ. ಪದದೊಡನೆ). (ಒಂದರ ವಿಷಯದಲ್ಲಿ) ಅಲ್ಲಗಳೆಯುವ, ಕೀಳ್ಮಾಡುವ, —ಟೀಕೆಮಾಡು, ಮಾತನಾಡು (*Upon* ಉಪ. ದೊಡನೆ). **Refléctingly** (ಕ್ರಿ. ವಿ.) ;

Refléction, -exion ರಿಫ್ಲೆಕ್ಷನ್ (ನಾ.) ಮರಳುವುದು ; ಪ್ರತಿಫಲಿಸುವುದು ; ಪ್ರತಿಫಲನ ; ಮಾರ್ಫೊಳಪು (Angle of r. ಆಪಾತ ಬಿಂದುವಿನಲ್ಲೆಳೆದ ಲಂಬರೇಖೆಯೊಡನೆ ಪ್ರತಿಫಲಿತ ರಶ್ಮಿ ಮಾಡುವ ಕೋನ : ಪ್ರತಿಫಲನ ಕೋನ). ಪ್ರತಿಫಲನ ಹೊಂದಿದ—ಬೆಳಕು, ಶಾಖ, ಬಣ್ಣ. ಪ್ರತಿಬಿಂಬ. ಮರು ಕ್ರಿಯೆ ; ಪ್ರತಿಕಾರ್ಯ. ಖಂಡನೆ, ಆಕ್ಷೇಪಣೆ, ಟೀಕೆ (ಸಾ., *on* or *upon* ಉಪ. ದೊಡನೆ). ಕೆಟ್ಟ ಹೆಸರು, ಟೀಕೆ, ಆಕ್ಷೇಪಣೆ, —ತರುವಂಥದು [(*Up*)*on* ಉಪ. ದೊಡನೆ]. ಪುನರಾಲೋಚನೆ (On r. I doubt whether I was right). ವೇದನೆಗಳ ಮತ್ತು ಇಂದ್ರಿಯ ಗೋಚರಗಳ ಫಲಗಳನ್ನು ಗ್ರಹಿಸಿಕೊಳ್ಳುವ ಮತ್ತು ಅವುಗಳನ್ನು ಪರಸ್ಪರ ಅನ್ವಯ ಮಾಡುವ ಒಂದು ಮಾನಸಿಕ ಶಕ್ತಿ : ಆಲೋಚನ ಶಕ್ತಿ ; ಚಿಂತನ ಶಕ್ತಿ. ಮನಸ್ಸಿನಲ್ಲಿ ಏಳುವ ಭಾವ, ಭಾವನೆ, ಆಲೋಚನೆ ; ಮನಸ್ಸಿನಲ್ಲಿ ತೋರಿದ, ಮಾತಿನಲ್ಲಿ ಹೇಳಿದ, —ಟೀಕೆ. ಸೂಕ್ತಿ ; ಸಾರವಚನ (ಅನೇಕ ವೇಳೆ *on* or *upon* ಉಪ. ದೊಡನೆ). **Refléctional** (ಗು.); **Refléctionless** (ಗು.) ; **Refléctive** (ಗು.) (ಮೇಲ್ಮೈ, ತಳ, ಮೊ. ಗಳ ವಿಷಯದಲ್ಲಿ) ಪ್ರತಿಫಲಿಸುವ, ಪ್ರತಿಬಿಂಬಿಸುವ. (ಬೆಳಕು, ಮೊ. ಗಳ ವಿಷಯದಲ್ಲಿ) (ಈಗ ವಿರ. ಪ್ರ.) ಪ್ರತಿಫಲಿಸಿದ, ಪ್ರತಿಫಲಿತ. (ವ್ಯಾ.) (ಈಗ ವಿರ. ಪ್ರ.) ಸ್ವಾರ್ಥಕ ; ಆತ್ಮಾರ್ಥಕ. (ಕ್ರಿಯೆಯ ವಿಷಯದಲ್ಲಿ) (ಈಗ ವಿರ. ಪ್ರ.) ಪ್ರತಿವರ್ತನೆಯ, ಪರಸ್ಪರಾತ್ಮಕ. (ಮಾನಸಿಕ ಶಕ್ತಿಗಳ ವಿಷಯದಲ್ಲಿ) ಆಲೋಚನೆಗೆ ಸಂಬಂಧಿಸಿದ, ಪರ್ಯಾಲೋಚಕ, ಚಿಂತನೆಯ ; (ವ್ಯಕ್ತಿ, ಮನೋವೃತ್ತಿ, ಮೊ. ಗಳ ವಿಷಯದಲ್ಲಿ) ಆಲೋಚನಾತ್ಮಕ, ಚಿಂತನಶೀಲ, ಧ್ಯಾನಪರ. **Refléctively** (ಕ್ರಿ. ವಿ.) ; **Refléctiveness** (ನಾ.) ; **Refléctor** (ನಾ.) ರಶ್ಮಿಗಳನ್ನು ಪ್ರತಿಫಲಿಸುವ ಕಾಯ ಅಥವಾ ತಲ (ಅವಶ್ಯಕವಾದ ಕಡೆಗೆ ಪ್ರತಿಫಲನ ಮಾಡುವಂತೆ ಇರುವ, ಸಾ., ಒಳ ಬಾಗುಳ್ಳ, ಮು., ಗಾಜಿನ ಅಥವಾ ಲೋಹದ ದರ್ಪಣ) : ಪ್ರತಿಫಲಕ ; ಪ್ರತಿಬಿಂಬಕ ; ಕನ್ನಡಿ. ಬಿಂಬಗಳನ್ನು ಪ್ರತಿಫಲಿಸುವ ಸಲಕರಣೆ(ಯುಳ್ಳ ದೂರದರ್ಶಕ, ಮೊ.ವು). (ಮುನ್ನೊಲವು, ಅಭ್ಯಾಸ, ಮೊ. ನ್ನು ಜ್ಞಾತವಾಗಿಯೊ ಅಜ್ಞಾತವಾಗಿಯೊ) ಪ್ರತಿಬಿಂಬಿಸುವ ವ್ಯಕ್ತಿ, ಗ್ರಂಥ, ಮೊ. ವು ; ಪ್ರತಿಬಿಂಬಕ (*Of* ಉಪ. ದೊಡನೆ)

Reflet (F) ರಫ್ಲೆ (ನಾ.) (ಮು., ಕುಂಭ ಕಲೆಯಲ್ಲಿ : ಕುಂಭಗಳ ಮೇಲೆ ಉಂಟುಮಾಡುವ) ಥಾಳಥಳ್ಯ, ಹೊಳಪು, ವಿವಿಧ ವರ್ಣ ಸ್ಫುರಣ.

Réflex ರೀಫ್ಲೆಕ್ಸ್ (ನಾ., ಗು.) ಪ್ರತಿಫಲಿಸಿದ, ಪ್ರತಿಬಿಂಬಿಸಿದ, —ಬೆಳಕು, ಬಣ್ಣ, ವೈಭವ, ಗೌರವ ಖ್ಯಾತಿ (The fame of Greece was a r. from the glory of Athens). (ವರ್ಣ ಚಿತ್ರ ಕಲೆ) ಮತ್ತೊಂದು ಭಾಗದ ಬೆಳಕಿನ ಅಥವಾ ಬಣ್ಣದ ಪ್ರಭಾವಕ್ಕೊಳಗಾಗಿರುವಂತೆ ನಿರೂಪಿಸಿರುವ ಚಿತ್ರದ ಭಾಗ. (ಕನ್ನಡಿ, ಮೊ. ಗಳಲ್ಲಿ ಕಾಣುವ) ಪ್ರತಿಬಿಂಬ ; ಪ್ರತಿರೂಪ ; ಪ್ರತಿಚ್ಛಾಯೆ; ಪ್ರತಿ ಪರಿಣಾಮ (Legislation should be a r. of public opinion ಶಾಸನ ಜನಾಭಿಪ್ರಾಯದ ಪ್ರತಿಬಿಂಬವಾಗಿರಬೇಕು). ಪ್ರತಿಕ್ರಿಯೆ, ಪ್ರತಿವರ್ತನೆ (Doctor tested patient's reflexes). (ಗು.) (ವಿರ. ಪ್ರ.) ಮತ್ತೆ ಹಿಂದಕ್ಕೆ ಬಗ್ಗಿರುವ, ಬಾಗಿದ ; ಹಿಮ್ಮುರಿಯ. (ಬೆಳಕು, ಮೊ. ಗಳ ವಿಷಯದಲ್ಲಿ) (ವಿರ. ಪ್ರ.) ಪ್ರತಿಫಲಿತ ; (ಆಲೋಚನೆ, ಮೊ. ಗಳ ವಿಷಯದಲ್ಲಿ) ಆತ್ಮಪರೀಕ್ಷೆ ಮಾಡಿಕೊಳ್ಳುವ ; ಸ್ವಂತ ಆಲೋಚನೆಗಳನ್ನೂ ಸ್ವಂತ ಕಾರ್ಯಕಲಾಪಗಳನ್ನೂ ವಿಮರ್ಶಿಸುವ ; ಅಂತರ್ಮುಖಿಯಾದ ; (ಫಲ ಅಥವಾ ಪ್ರಭಾವ) ಪ್ರತಿಕ್ರಿಯಾತ್ಮಕ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರತಿವರ್ತನೆಯ ; ಕರ್ತೃವಿನ ಅಥವಾ ಮೂಲದ ಮೇಲೆಯೇ ಮರಳುವ [(ಶ. ವಿ.) R. action (ಸಂಕಲ್ಪಾಧೀನವಲ್ಲದೆ, ನರಪ್ರಚೋದನೆಯ ಫಲವಾಗಿ ಉಂಟಾದ) ನಿಗಿಚ್ಛಾ ಪ್ರತಿಕ್ರಿಯೆ]. (ವ್ಯಾ.) (ಈಗ ವಿರ. ಪ್ರ.) ಆತ್ಮಾರ್ಥಕ, ಸ್ವಾರ್ಥಕ. **Réflexly** (ಕ್ರಿ. ವಿ.) ; **Refléxed** (ಗು.) (ಸ. ವಿ.) ಮತ್ತೆ ಹಿಂದಕ್ಕೆ ಬಾಗಿದ ; ಹಿಮ್ಮುರಿಯ. **Refléxible** (ಗು.) ಪ್ರತಿಫಲನ ಹೊಂದುವ ಸಾಮರ್ಥ್ಯವುಳ್ಳ ; ಪ್ರತಿಫಲನ ಸಾಧ್ಯ. **Reflexibílity** (ನಾ.) ; **Refléxion** (ನಾ.) = Reflection.

Refléxive (ಗು., ನಾ.) (ವ್ಯಾ.) ಕರ್ತೃ ತನ್ನ ಮೇಲೆಯೇ ಕಾರ್ಯ ನಡಸುವ ಅರ್ಥವುಳ್ಳ (ಪದ, ರೂಪ) : ಸ್ವಾರ್ಥಕ (ಪದ, ರೂಪ). ಕರ್ತೃ ಕರ್ಮಗಳ ಅನನ್ಯತೆಯನ್ನು ಸೂಚಿಸುವ (ಕ್ರಿಯಾವಾಚಕ) ; ಆತ್ಮಾರ್ಥಕ (ಕ್ರಿಯಾವಾಚಕ) ; (ಪುರುಷ ವಾಚಕ ಸರ್ವನಾಮ ಅಥವಾ ಷಷ್ಠೀ ವಿಶೇಷಣ) ಕರ್ತೃವಿಗೆ ಸಂಬಂಧಿಸಿದ, ಕರ್ತೃವನ್ನು ಸೂಚಿಸುವ; ಕರ್ತೃವಾಚಕ ; ಆತ್ಮನೇಪದ(ದ) **Refléxively** (ಕ್ರಿ. ವಿ.)

Réfluent ರೆಫ್ಲುಎಂಟ್ (ಗು.) ಹಿಂದಕ್ಕೆ ಹರಿಯುವ (R. tide, blood). **Réfluence** (ನಾ.)

Refórm ರಿಫಾರ್ಮ್ (ಕ್ರಿ., ನಾ.) ನ್ಯೂನತೆಗಳನ್ನು, ದೋಷಗಳನ್ನು ಅಥವಾ ತಪ್ಪುಗಳನ್ನು —ಹೋಗಲಾಡಿಸಿ ಉತ್ತಮಮಾಡು, ತ್ಯಜಿಸಿ ಉತ್ತಮವಾಗು; ಪರಿಷ್ಕರಿಸು; ಸುಧಾರಿಸು; ಸುಧಾರಣೆ ಮಾಡು, —ಹೊಂದು; ತಿದ್ದುಪಾಟು —ಮಾಡು, ಆಗು [Reformed Churches (Reformation ನೋಡಿ)]. (ಅನ್ಯಾಯ, ದುರುಪಯೋಗ, ದುರ್ವರ್ತನೆ—ಇವನ್ನು) ತೊಡೆದುಹಾಕು, ತಿದ್ದಿ ಸರಿಮಾಡು [**Refórmable** (ಗು.)]. (ನಾ.) (ಮು., ರಾಜಕೀಯದಲ್ಲಿ) ದೋಷವನ್ನು (ಗಳನ್ನು), ಕೆಟ್ಟ ಪದ್ಧತಿಯನ್ನು(ಗಳನ್ನು), —ತೆಗೆದುಹಾಕುವುದು ; ಸುಧಾರಣೆ [R. Bill, Act (ಪಾರ್ಲಿಮೆಂಟಿನ ಪ್ರತಿನಿಧಿತನವನ್ನು ಪರಿಷ್ಕರಿಸಲು ತಂದ) (ಮು., ೧೮೩೨-೬೭) ಸುಧಾರಣೆಗಳ ಮಸೂದೆ, ಕಾನೂನು]. (ಮಾಡಿದ ಅಥವಾ ಸೂಚಿಸಿದ) ತಿದ್ದುಪಾಟು, ಮೇಲ್ಪಾಟು. [R. Club (ಇಂಗ್ಲೆಂಡಿನಲ್ಲಿ) 'ಲಿಬರಲ್' ಪಕ್ಷದವರ ಹಿಂದಿನ ಮುಖ್ಯ ಕೇಂದ್ರಸ್ಥಾನ (Carlton, National Liberal, -club ನೋಡಿ)]. **Reformátion** ರೆಫರ್ಮೇಷನ್ (ನಾ.) ಸುಧಾರಣೆ, ಪರಿಷ್ಕರಣ (ಆಗುವುದು, ಮಾಡುವುದು) ; (ಮು., ರಾಜಕೀಯ, ಮತೀಯ ಅಥವಾ ಸಾಮಾಜಿಕ ವಿಚಾರಗಳಲ್ಲಿ) ಕೂಲಂಕಷವಾದ ಮಾರ್ಪಾಟು, ತೀವ್ರ ಬದಲಾವಣೆ ; ಸುಧಾರಣೆ [The R. ೧೬ನೆಯ ಶತಮಾನದಲ್ಲಿ ರೋ. ಕ್ಯಾ. ಮತದ (ಮತದ) ದೋಷಗಳನ್ನು ತಿದ್ದುವುದಕ್ಕಾಗಿ ಹುಟ್ಟಿ, ಸುಧಾರಿತ ಅಥವಾ ಪ್ರಾಟೆಸ್ಟಂಟ್ ಮತಗಳ (Reformed Churches) ಸ್ಥಾಪನೆಯಲ್ಲಿ ಮುಕ್ತಾಯವಾದ ಚಳವಳಿ: ರೋ. ಕ್ಯಾ. ಮತ ಸುಧಾರಣೆ ; ಪ್ರಾಟೆಸ್ಟಂಟ್ ಮತ (ಮಠ) ಸ್ಥಾಪನೆ]. **Reformátional** (ಗು.) ; **Refórmative** ರಿಫಾರ್ಮಟಿವ್ (ಗು.), **Refórmatory** ರಿಫಾರ್ಮಟರಿ (ಗು., ನಾ.) ಸುಧಾರಣೆ ಮಾಡುವ, ಸುಧಾರಿಸುವ (ಉದ್ದೇಶವುಳ್ಳ) ; ಸುಧಾರಕ. (ನಾ.) (ಎಳೆಯ ವಯಸ್ಸಿನ ಅಪರಾಧಿಗಳನ್ನು ತಿದ್ದುವುದಕ್ಕಾಗಿ ಕಳುಹಿಸುವ) ಸುಧಾರಣೆಯ ಶಾಲೆ, ತಿದ್ದುವ ಸೆರೆಮನೆ. **Refórmer** (ನಾ.) (ಕ್ರಿಯಾರ್ಥಗಳಲ್ಲಿ) ; ಮು., ಯೂರೋಪಿನ ೧೬ನೆಯ ಶ. ಮಾ. ದ ಮತೀಯ ಸುಧಾರಣೆಯ ಮುಂದಾಳು,ಮುಖಂಡ; ೧೮೩೨-೬೭ರ ಸುಧಾರಣೆಗಳ ಮಸೂದೆಯ ಬೆಂಬಲಕಾರ (Reform Bill, Act ನೋಡಿ)

Re-fórm ರೀಫಾರ್ಮ್ (ಕ್ರಿ.) ಪುನಃ —ರೂಪಿಸು, ರೂಪಿತವಾಗು ; ಪುನರ್ಯೋಜನೆಯಾಗು, —ಮಾಡು. **Re-formátion** (ನಾ.)

Refráct ರಿಫ್ರಾಕ್ಟ್ (ಕ್ರಿ. ಸಕ.) (ನೀರು, ವಾಯು, ಗಾಜು, ಮೊ. ಗಳ ವಿಷಯದಲ್ಲಿ) ಭಿನ್ನ ಸಾಂದ್ರತೆಯುಳ್ಳ ಬೇರೊಂದು ವಾಹಕದ ಮೂಲಕ ಬಂದ ಬೆಳಕು (ಕಿರಣ) ತನ್ನಲ್ಲಿ ಅಸಮ ಕೋನವಾಗುವಂತೆ ಹೊಕ್ಕಾಗ ಆ ಬೆಳಕನ್ನು (ಕಿರಣವನ್ನು) ಒಂದು ಗೊತ್ತಾದ ಕೋನದಲ್ಲಿ ಓಲಿಸು : ವಕ್ರೀಕರಿಸು. [Refracting telescope ರಶ್ಮಿಗಳನ್ನು ನಾಭಿಯಲ್ಲಿ ಸೇರುವಂತೆ ಕೇಂದ್ರೀಕರಿಸುವ ವಸ್ತು ಲೆನ್ಸುಳ್ಳ ದೂರದರ್ಶಕ : ವಕ್ರೀಕರಣ ದೂರದರ್ಶಕ]. (ರ. ವಿ.) ಅದರಲ್ಲಿರುವ ಕಲ್ಮಷಗಳ ಸೇಕಡ ಕಂಡು ಹಿಡಿಯುವುದಕ್ಕಾಗಿ (ಪೆಟ್ಲುಪ್ಪನ್ನು, ಸೋರುಪ್ಪನ್ನು) ವಿಶ್ಲೇಷಣ ಮಾಡು. **Refráction** (ನಾ.) ವಕ್ರೀಕರಣ. **Refráctional** (ಗು.) ; **Refráctive** (ಗು.) ; **Refráctor** (ನಾ.) ವಕ್ರೀಕರಣ ಮಾಡುವ—ವಾಹಕ, ಲೆನ್ಸು, ದೂರದರ್ಶಕ.

Refráctory ರಿಫ್ರಾಕ್ಟರಿ (ಗು.) ಹಟಮಾರಿಯಾದ ; ಮೊಂಡ(ತನದ) ; ಹತೋಟಿಗೆ ಬರದ ; ಅಗಡಾದ ; ಅಂಕೆಗೊಳಪಡದ ; ಎದುರು ಬೀಳುವ. (ಗಾಯ, ರೋಗ, ಮೊ. ವು) ಚಿಕಿತ್ಸೆಗೆ ಸಗ್ಗದ. (ವಸ್ತುಗಳ ವಿಷಯದಲ್ಲಿ) ಶಾಖಕೊಟ್ಟು ಕರಗಿಸಲು, ಕೆಲಸ ಮಾಡಲು,—ಕಷ್ಟವಾದ; ಕೆಲಸಕ್ಕೆ ಬಿರುಸಾದ, ಜಗ್ಗದ. **Refráctorily** (ಕ್ರಿ. ವಿ.) ; **Refráctoriness** (ನಾ.)

Refraín[1] ರಿಫ್ರೇನ್ (ನಾ.) ಮು., ಪದ್ಯಗಳ ಕೊನೆಯಲ್ಲಿ ಪುನರಾವರ್ತವಾಗುವ —ನುಡಿ, ಚರಣ ; (ಹಾಡಿನ) ಪಲ್ಲವಿ.

Refraín[2] ರಿಫ್ರೆಯ್ನ್, ರಿಫ್ರೇನ್ (ಕ್ರಿ.) (ಪ್ರಾಚೀ. ಪ್ರ.) (ತನ್ನನ್ನು, ಕಣ್ಣೀರು, ಆತ್ಮ, ಮೊ. ನ್ನು) ತಡೆ(ದುಕೊ), ಅಡಗಿಸು, ನಿಗ್ರಹಿಸು. (ಒಂದು ಕಾರ್ಯವನ್ನು) ಮಾಡದೆಬಿಡು ; ಮಾಡದಿರು ; ಮಾಣು (ಗ್ರಾಂ.) ; ಗೊಡವೆಗೆ ಹೋಗದಿರು ; (—ಇಂದ) ವಿಮುಖನಾಗಿರು (*From* act or do*ing*)

Refrángible ರಿಫ್ರ್ಯಾಂಜಿಬ್‌ಲ್ (ಗು.) ವಕ್ರೀಕರಿಸಲಾಗುವ. **Refrangibílity** (ನಾ.)

Refrésh ರಿಫ್ರೆಷ್ (ಕ್ರಿ.) (ವಿರ. ಪ್ರ.) ಪುನಃ ತಣ್ಣಗೆ ಮಾಡು, ತಂಪು ಮಾಡು. (ಆಹಾರ, ಪಾನೀಯ, ವಿಶ್ರಾಂತಿ, ವಿನೋದ, ಮೊ. ಗಳ ವಿಷಯದಲ್ಲಿ ಅಥವಾ ಅವನ್ನು ಒದಗಿಸುವವನ ವಿಷಯದಲ್ಲಿ) ದಣಿವಾರಿಸು ; ನವಚೈತನ್ಯವನ್ನುಂಟುಮಾಡು ; ಉಲ್ಲಾಸಗೊಳಿಸು [R. oneself. Refreshing innocence (ವಿಷಯಾನುಭವದಿಂದ ಬೇಸತ್ತವನಿಗೆ) ಹರ್ಷಕರವಾದ —ಸರಳತೆ, ನಿಷ್ಕಾಪಟ್ಯ]. (ಜ್ಞಾಪಕಶಕ್ತಿಯನ್ನು) ಚುರುಕಾಗಿಸು, ಕುದುರಿಸು, ಬಲಗೊಳಿಸು. ಹೊಸ ಸರಬರಾಜಿನಿಂದ (ಬೆಂಕಿಯ ಜ್ವಾಲೆಯನ್ನು) ಪ್ರಜ್ವಲಗೊಳಿಸು, (ವಿದ್ಯುತ್ಕೋಶ ಮಾಲೆಯನ್ನು) ಶಕ್ತಿಗೂಡಿಸು, ಪೂರ್ವಶಕ್ತಿಗೆ ತರು. (ಮು., ದ್ರವರೂಪದ) ಉಪಾಹಾರ ತೆಗೆದುಕೊ ; ಉತ್ತೇಜಕ ಪಾನೀಯ ತೆಗೆದುಕೊ. **Refréshingly** (ಕ್ರಿ. ವಿ.) ; **Refrésher** (ನಾ.) (ಕ್ರಿಯಾರ್ಥಗಳಲ್ಲಿ). (ಮು., ದೀರ್ಘ ಕಾಲ ಎಳೆದ ವ್ಯವಹಾರದಲ್ಲಿ, ಮೊದಲೇ ಕೊಟ್ಟಿರುವುದರ ಜೊತೆಗೆ) ವಕೀಲನಿಗೆ ಕೊಡುವ ಹೆಚ್ಚಿಗೆಯ ರುಸುಮು. (ಬಳ. ಮಾ.) ಒಂದು ಪಾನ, ಪಾನೀಯ. **Refréshment** (ನಾ.) (ಮನಸ್ಸಿಗೆ ಅಥವಾ ದೇಹಕ್ಕೆ) ದಣಿವಾರಿಕೆ; ಮತ್ತೆ ಚೈತನ್ಯ, ಉತ್ಸಾಹ, —ತುಂಬುವುದು, ಕೊಡುವುದು. (ಮು., ಬ. ವ. ದಲ್ಲಿ) ದಣಿವಾರಿಸುವ, ಚೈತನ್ಯಕೊಡುವ, —ಆಹಾರ, ಪಾನೀಯ, ವಸ್ತು ; ಅಲ್ಪಾಹಾರ ; ಉಪಾಹಾರ [The sight was a r. to him ಆ ನೋಟ ಅವನಿಗೆ ದಣಿವಾರಿಸಿತು, ಉಲ್ಲಾಸವನ್ನುಂಟುಮಾಡಿತು. Take some refreshments). R. room ರೈಲು ನಿಲ್ದಾಣದಲ್ಲಿಯ ಉಪಾಹಾರ ಮಂದಿರ. R. car ಉಪಾಹಾರದ ರೈಲು ಗಾಡಿ]. R. Sunday 'ಲೆಂಟ್' (ಹಬ್ಬ) ಕಾಲದ ನಾಲ್ಕನೆಯ ಭಾನುವಾರ (ಆ ದಿನ ಓದುವ ಸುವಾರ್ತೆಯ ಭಾಗದಲ್ಲಿ ಯೇಸುಕ್ರಿಸ್ತನು ೫,೦೦೦ ಜನರಿಗೆ ಊಟಬಡಿಸಿದ ಪವಾಡದ ವರ್ಣನೆ ಇರುವ ಕಾರಣದಿಂದ)

Refrígerate ರಿಫ್ರಿಜೆರೇಟ್ (ಕ್ರಿ.) ತಣ್ಣಗೆ ಮಾಡು; ತಂಪಾಗಿ ಮಾಡು ; ಶೀತಲ, ಶೈತ್ಯ, —ಮಾಡು ; (ವಿರ. ಪ್ರ.) ತಣ್ಣಗಾಗು, ತಂಪಾಗು. ಗಡ್ಡೆಕಟ್ಟಿಸುವುದಕ್ಕಾಗಿ ಅಥವಾ ಕೆಡದಂತೆ ಕಾಪಾಡುವುದಕ್ಕಾಗಿ (ಆಹಾರಪದಾರ್ಥಗಳನ್ನು) ಅತಿ ತಣ್ಣಗೆ ಮಾಡು, ಅತಿ ಶೈತ್ಯಕ್ಕೆ ಒಡ್ಡು. **Refrigerátion** (ನಾ.) ; **Refrígerator** (ನಾ.) ಶೀತಕ. **Refrígerant** —ರಂಟ್ (ಗು., ನಾ.) ; **Refrígeratory** ರಿಫ್ರಿಜೆರಟರಿ (ನಾ., ಗು.) ಹಬೆಯನ್ನು ದ್ರವೀಕರಿಸುವುದಕ್ಕಾಗಿ ಬಟ್ಟಿಯಿಳಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಲಕರಣೆಗೆ ಸೇರಿಸಿರುವ ತಣ್ಣೀರ ಪಾತ್ರೆ; ಶೀತಕ. (ಗು.) ತಂಪು ಮಾಡುವ; ಗಡ್ಡೆಕಟ್ಟಿಸುವ.

Reft ರೆಫ್ಟ್. Reave ಧಾತುವಿನ ಭೂತ. ಮತ್ತು ಭೂ. ಕೃ.

Réfuge ರೆಫ್ಯೂಜ್ (ನಾ., ಕ್ರಿ.) (ಬೆನ್ನಟ್ಟಿ ಬರುವವರಿಂದ, ಅಪಾಯದಿಂದ ಅಥವಾ ತೊಂದರೆಯಿಂದ ತಪ್ಪಿಸಿಕೊಳ್ಳಲು ಅಡಗಿಕೊಳ್ಳುವ) ಮರೆ(ಯ ಸ್ಥಾನ); ದಾಪು; ಆಶ್ರಯ; ರಕ್ಷಣಸ್ಥಾನ [Seek r. ಆಶ್ರಯ ಹುಡುಕು; ಆಶ್ರಯಿಸು. Has found a r. Take r. in a cave, in lying. City of r. (City ನೋಡಿ). House of r. ಅನಾಥಾಲಯ; ರಕ್ಷಣಾಲಯ]. ಕಷ್ಟಕಾಲದಲ್ಲಿ ಆಶ್ರಯ ಕೊಡುವ (ಅಥವಾ ಯಾರನ್ನು ಆಶ್ರಯಿಸುವರೋ ಆ) ವ್ಯಕ್ತಿ, ವಸ್ತು, ಮಾರ್ಗ, ಉಪಾಯ: ಆಶ್ರಯ; ಶರಣು; ಗತಿ; ಕಾಪು; ರಕ್ಷಕ (He is the r. of the distressed. Books are the r. of the destitute). (ಅಡ್ಡಹಾಯುವ ಕಾಲುನಡಗೆಯವರು ಅಪಾಯ ಕ್ಕೊಳಗಾಗದೆ ನಿಲ್ಲಲು) ವಾಹನಸಂಚಾರ ಹೆಚ್ಚಾಗಿರುವ ಬೀದಿಯ ಮಧ್ಯೆ ಮಾಡಿರುವ ಜಗುಲಿ. (ಕ್ರಿ.) ಆಶ್ರಯ ಪಡೆ; ಮರೆಹೊಗು; (ವಿರ. ಪ್ರ.) ಆಶ್ರಯ ಕೊಡು. **Refugeé** ರೆಫ್ಯುಜೀ (ನಾ.) ಮತೀಯ ಅಥವಾ ರಾಜಕೀಯ ಕಾರಣಗಳಿಂದ ಉದ್ವೇಶಪಟ್ಟು ಕೊಟ್ಟ ಹಿಂಸೆ ಯನ್ನು ತಾಳಲಾರದೆ ದೇಶಾಂತರಕ್ಕೆ ತಪ್ಪಿಸಿಕೊಂಡು ಓಡಿಹೋದ ವನು; —ಓಡಿಹೋಗಿ ಆಶ್ರಯ ಪಡೆದವನು; ಆಶ್ರಯಾರ್ಥಿ; ಶರಣಾಗತ; ಆಶ್ರಿತ.

Refúlgent ರಿಫಲ್‌ಜೆಂಟ್ (ಗು.) ಥಳಥಳಿಸುವ; ಹೊಳೆಯುವ; ಉಜ್ಜ್ವಲವಾದ; ದೇದೀಪ್ಯಮಾನವಾದ. **Refúlgently** (ಕ್ರಿ. ವಿ.); **Refúlgence** (ನಾ.)

Refúnd ರಿಫಂಡ್ (ಕ್ರಿ., ನಾ.) (ಪಡೆದ ಅಥವಾ ತೆಗೆದುಕೊಂಡ ಹಣವನ್ನು, ಮತ್ತೊಬ್ಬನು ಮಾಡಿರುವ ವೆಚ್ಚವನ್ನು) ವಾಪಸು ಮಾಡು, ಹಿಂದಕ್ಕೆ ಕೊಡು; ಮತ್ತೆ ತುಂಬು; ಹಿನ್‌ಸಲಿಕೆ ಮಾಡು. (ನಾ.) ಹಿಂದಕ್ಕೆ ಕೊಡುವುದು; ಮತ್ತೆ ಭರ್ತಿಮಾಡುವುದು [=**Refúndment** (ನಾ.)]

Refúse ರಿಫ್ಯೂಸ್ (ಕ್ರಿ.), **Réfuse** ರೆಫ್ಯೂಸ್ (ಗು., ನಾ.) ತಿರಸ್ಕರಿಸು; ನಿರಾಕರಿಸು; ಒಪ್ಪದಿರು; ಇನ್ಕಾರ ಮಾಡು; ಅಂಗೀಕರಿಸದಿರು; ಬೇಡವೆನ್ನು, ಕೊಡೆನೆನ್ನು [R. offer ಗಂಡನನ್ನಾಗಿ ಮಾಡಿಕೊಳ್ಳಲು ತಿರಸ್ಕರಿಸು. R. gift, chance, office, candidate, etc. Horse refuses (fence, etc.) (ಬೇಲಿ, ಮೊ. ನ್ನು) ಕುದುರೆ ಹಾರು ವುದಿಲ್ಲ, ಹಾರಲು ನಿರಾಕರಿಸುತ್ತದೆ. **Refúser** (ನಾ.) (ಮು.) ಹಾರಲು ನಿರಾಕರಿಸುವ ಕುದುರೆ]. [R. orders, control, etc. R. obedience, compliance. Refused me satisfaction ನನಗೆ ಸಮಾಧಾನ, ಪರಿಹಾರ, ಕೊಡಲು ತಿರಸ್ಕರಿಸಿದನು. Refused tribute to suzerain, my request. R. one (ಒಬ್ಬನ) ಕೋರಿಕೆಯನ್ನು ನಡಸದಿರು, ತಿರಸ್ಕರಿಸು. Have never been refused ಎಂದೂ ನನ್ನ ಕೋರಿಕೆ ತಿರಸ್ಕೃತವಾಗಿಲ್ಲ, ನಿಷ್ಫಲವಾಗಿಲ್ಲ. R. to (do) (—ಮಾಡಲು) ತಿರಸ್ಕರಿಸು]. (ವ್ಹಿಸ್ಟ್, ಮೊ. ಆಟಗಳಲ್ಲಿ) ರಂಗಿಗೆ ರಂಗು ಹಾಕದಿರು. (ಗು., ನಾ.) ಕೆಲಸಕ್ಕೆ ಬಾರದ್ದೆಂದು ಎಸೆದ(ದ್ದು); ಕಸ; ಹಿಪ್ಪೆ; ಕಳಪೆ; ಎಂಜಲು; ಉಚ್ಛಿಷ್ಟ. **Refúsable** (ಗು.) ತಿರಸ್ಕರಿಸಬಹುದಾದ; ತಿರಸ್ಕಾರ ಯೋಗ್ಯ. **Refúsal** (ನಾ.) (ಕ್ರಿಯಾರ್ಥಗಳಲ್ಲಿ) (Will take no r. ಕೊಡೆ ಎಂದರೆ ಬಿಡೆ); ಇತರರಿಗೆ ನೀಡುವ ಮೊದಲು ತನಗೆ ಅದನ್ನು ನೀಡಬೇಕೆಂಬ ಮತ್ತು ಹಾಗೆ ನೀಡಿದುದನ್ನು ತಾನು ತೆಗೆದುಕೊಳ್ಳುವ ಅಥವಾ ತಿರಸ್ಕರಿಸುವ ಹಕ್ಕು: ತೆಗೆದುಕೊಳ್ಳುವ, ಬಿಡುವ, —ಹಕ್ಕು (Have, stipulate for, give person, the r. of)

Re-fúse ರೀಫ್ಯೂಸ್ (ಕ್ರಿ. ಸಕ.) ಪುನಃ (ಅಧಿಕ ಶಾಖದಿಂದ) ಕರಗಿಸು; ಮತ್ತೆ ಬೆಸೆ.

Refúte ರಿಫ್ಯೂಟ್ (ಕ್ರಿ. ಸಕ.) (ಹೇಳಿಕೆಯ, ಅಭಿಪ್ರಾಯದ, ವಾದದ ಅಥವಾ ಅವನ್ನು ಮುಂದಿಡುವವನ) ಅಪ್ರಾಮಾಣ್ಯವನ್ನು, ತಪ್ಪನ್ನು, —ಸಿದ್ಧಮಾಡಿಕೊಡು; (—ಮೊ. ನ್ನು) ಅಪ್ರಮಾಣವೆಂದು, ತಪ್ಪೆಂದು, —ಸಿದ್ಧಮಾಡಿಕೊಡು, ಸ್ಥಾಪಿಸು; ವಾದದಿಂದ ಖಂಡಿಸು. **Ré-futable** (ಗು.); **Refútal** (ನಾ.); **Refutátion** ರೆ— (ನಾ.)

Regaín ರಿ(ೕ)ಗೇಯ್ನ್ (ಕ್ರಿ. ಸಕ.) ಮತ್ತೆ (ಸ್ವಾಧೀನಕ್ಕೆ) ಪಡೆ; ತಿರುಗಿ ಸಂಪಾದಿಸು (ಮು., R. consciousness ಮತ್ತೆ ಪ್ರಜ್ಞೆ ಪಡೆ; ಮೂರ್ಛೆ ತಿಳಿ). (ಬಿಟ್ಟುಹೋಗಿದ್ದ ಒಂದು ಸ್ಥಳವನ್ನು) ಮತ್ತೆ ಸೇರು; ಹಿಂದಕ್ಕೆ ಬಂದು ಸೇರು. R. one's feet *or* footing *or* legs ಮತ್ತೆ ಎದ್ದುನಿಂತುಕೊ, ಚೇತರಿಸಿಕೊ.

Régal ರೀಗಲ್ (ಗು.) ರಾಜರ; ರಾಜರು ನಡಸುವ (R. government ರಾಜಪ್ರಭುತ್ವ. R. title, office ರಾಜಾಧಿಕಾರ, ರಾಜಪದವಿ) ರಾಜ ಯೋಗ್ಯ; ರಾಜ ವೈಭವದ (Lives in r. splendour ರಾಜ ವೈಭವದಿಂದ ಜೀವನಮಾಡುತ್ತಾನೆ). **Régally** (ಕ್ರಿ. ವಿ.); **Regália**[1] ರಿಗೇಲಿಯ (ನಾ., ಬ. ವ.) (ಈಗ ವಿರ. ಪ್ರ.) ರಾಜರ ವಿಶೇಷ ಹಕ್ಕುಬಾಧ್ಯತೆಗಳು, ವಿಶೇಷಾಧಿಕಾರಗಳು. (ಪಟ್ಟಾಭಿಷೇಕ ಕಾಲದಲ್ಲಿ ಉಪಯೋಗಿಸುವ, ಧರಿಸುವ) ರಾಜ ಲಾಂಛನಗಳು. 'ಫ್ರೀಮೇಸನ್ಸ್', ಮೊ. ಭ್ರಾತೃವರ್ಗದ ಲಾಂಛನಗಳು, ವಿಶೇಷ ಚಿಹ್ನೆಗಳು. **Régalism** ರೀಗಲಿಸ್‌ಮ್ (ನಾ.) ರಾಜ ಪಾರಮ್ಯ (ಕ್ರೈಸ್ತ) ಮತ ಪ್ರಪಂಚದಲ್ಲಿಯೂ ಉಂಟೆಂಬವಾದ. **Regálity** ರಿಗ್ಯಾಲಿಟಿ (ನಾ.) ಅರಸುತನ; ರಾಜಾಧಿಕಾರ; ರಾಜತ್ವ (Things that touch his r.). (ವಿರ. ಪ್ರ.) ಅರಸೊತ್ತಿಗೆ; (ಅರಸಾಳ್ಕೆಯ) ರಾಜ್ಯ. ರಾಜನ—ವಿಶೇಷಾಧಿಕಾರ, ಹಕ್ಕು ಬಾಧ್ಯತೆ.

Regále ರಿಗೇಲ್ (ನಾ., ಕ್ರಿ.) ಮೃಷ್ಟಾನ್ನ, ರಸಕವಳ, ದೊಡ್ಡ ಔತಣ (ರೂಪ. ಸಹ); (ಯಾವುದಾದರೂ) ಭಕ್ಷ್ಯದ ಔತಣ (*Of* ಉಪ. ಜೊಡನೆ). (ವಿರ. ಪ್ರ.) ತರ್ಜೀಪಿನ ತಿಂಡಿ, ಭಕ್ಷ್ಯ; (ವಿರ. ಪ್ರ.) ಉತ್ತಮ ರುಚಿ (Viands of higher r.). (ಕ್ರಿ.) (ಮೃಷ್ಟಾನ್ನ, ಮಾತು, ಮೊ. ರಿಂದ) ಸಮೃದ್ಧಿಯಾಗಿ ಔತಣ ಮಾಡಿಸು (*With* ಉಪ. ದೊಡನೆ) (ಅನೇಕ ವೇಳೆ ವ್ಯಂಗ್ಯ ಪ್ರ.). (ಸೌಂದರ್ಯ, ಹೂವುಗಳು, ಮೊ. ವು) ಆನಂದ ಗೊಳಿಸು, ಆಹ್ಲಾದಪಡಿಸು. (—ನ್ನು) ತಣಿಯುಣ್ಣು (ಸಾ., *on* ಉಪ. ದೊಡನೆ). **Regálement** (ನಾ.)

Regália[1]. **Regal** ನೋಡಿ.

Regália[2] ರಿಗೇಲಿಯ (ನಾ.) ಉತ್ತಮ ಗುಣದ ಒಂದು ದೊಡ್ಡ ಚುಟ್ಟಾ.

Regárd ರಿಗಾರ್ಡ್ (ಕ್ರಿ., ನಾ.) ಎವೆಯಿಕ್ಕದೆ ನೋಡು; ದಿಟ್ಟಿಸಿ ನೋಡು (ಸಾ., ಕ್ರಿ. ವಿ. ದೊಡನೆ ಅಥವಾ ಕ್ರಿ. ವಿ. ಪದ ಪುಂಜದೊಡನೆ: Found him regarding me with curiosity, intently). ಲಕ್ಷ್ಯ ಕೊಡು; ಗಣನೆಗೆ ತೆಗೆದುಕೊ; ಮನಸ್ಸಿಗೆ ತಂದುಕೊ(ಂಡು ಇದ್ದಿಕೊ) [(ಮು., ನಿಷೇಧಾರ್ಥಕ ಸಂದರ್ಭದಲ್ಲಿ) Does not r. my advice]. (ಭಯ ಭಕ್ತಿ, ಗಾಬರಿ, ಮೊ. ರಿಂದ ಅಥವಾ ಒಂದು ವಿಶಿಷ್ಟ ಮನೋಭಾವ ಸೂಚಕವಾದ ಕ್ರಿ. ವಿ. ದೊಡನೆ, ಮೊ. ಗಿ) ಕಾಣು, ನೋಡು; (ಮನಸ್ಸಿನಲ್ಲಿ) ಭಾವಿಸು, ಎಣಿಸು, ಗಣಿಸು. (ವಸ್ತುಗಳ ವಿಷಯದಲ್ಲಿ) ಸಂಬಂಧವಿರು, ಸಂಬಂಧಪಡು. (ನಾ.) ನೆಟ್ಟ ನೋಟ; ಎವೆಯಿಕ್ಕದ ದೃಷ್ಟಿ; ಒಂದು ಗೊತ್ತಾದ ಅರ್ಥಗೂಡಿದ ದೃಷ್ಟಿ. ವಿಷಯ; ಸಂಬಂಧ; ಗಮನಕೊಟ್ಟ ಅಂಶ [In this r. ಈ ವಿಷಯ ದಲ್ಲಿ. (ಮು.) *In r. to* or *of*, *with r. to* (—ರ) ವಿಷಯದಲ್ಲಿ, ಸಂಬಂಧವಾಗಿ]. ಗಮನ, ಲಕ್ಷ್ಯ, ಎಚ್ಚರಿಕೆ (*To*, *for* ಉಪ. ದೊಡನೆ). ಗೌರವ, ಮರ್ಯಾದೆ, ಗಣ್ಯತೆ, ಅಭಿಮಾನ (*For* ಉಪ. ದೊಡನೆ). (ಬ. ವ. ದಲ್ಲಿ) (ಕ್ಷೇಮ ಸಮಾಚಾರದ ಕಾಗದ ಪತ್ರದಲ್ಲಿ) ವಿಶ್ವಾಸ, ನಮಸ್ಕಾರ (Give him my regards *or* best regards). **Regárdful** (ಗು.) (*Of* ಉಪ. ದೊಡನೆ); **Regárdfully** (ಕ್ರಿ. ವಿ.) (ವಿರ. ಪ್ರ.); **Regárdfulness** (ನಾ.) (ವಿರ. ಪ್ರ.); **Regárdless** (ಗು., ಕ್ರಿ. ವಿ.) (*Of* ಉಪ. ದೊಡನೆ). (ಅನಂ.) (ಅಧ್ಯಾಹಾರ ಕ್ರಿ. ವಿ. ವಾಗಿ ಪ್ರ.) ವೆಚ್ಚವನ್ನು ಲಕ್ಷಿಸದೆ (Got up r. ಅತಿಯಾದ ಬೆಲೆಯ ಉಡುಪು ತೊಟ್ಟು). **Regárdlessly** (ಕ್ರಿ. ವಿ.);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Regárdlessness (ನಾ.); **Regárdant** (ಗು.) ದೃಷ್ಟಿಸಿ ನೋಡುವ; ನೆಟ್ಟ ನೋಟದ; ಶ್ರದ್ಧಾ ದೃಷ್ಟಿಯ. (ವಂಶ ಲಾಂಛನ ವಿದ್ಯೆ) ಹಿಂದಕ್ಕೆ ನೋಡುವ; ಹಿನ್ನೋಟವುಳ್ಳ.

Regátta ರಿಗ್ಯಾಟ (ನಾ.) (ವಿಹಾರ)ದೋಣಿ ಪಂದ್ಯ(ದ ಕೂಟ)

Regeláte ರೀಜೆಲೇಟ್ (ಕ್ರಿ. ಅಕ.) (ನೀರ್ಗಲ್ಲಿನ ಚೂರುಗಳು, ರಾಶಿಯಾದ ಮಂಜು ಹುಡಿ, ಮೊ. ಗಳ ವಿಷಯದಲ್ಲಿ: ಮೇಲ್ಮೈ ತಾತ್ಕಾಲಿಕವಾಗಿ ಕರಗುವುದರಿಂದ) ಅಖಂಡವಾಗಿ, ಒಂದೇ ಮೊತ್ತವಾಗಿ, —ಗಡ್ಡೆ ಕಟ್ಟು. **Regelátion** (ನಾ.)

Regénerate ರಿಜೆನೆರೇಟ್ (ಕ್ರಿ., ನಾ.), —ರೆಟ್ (ಗು.) ಹೊಸ ಬಾಳು ತುಂಬು; ಆಧ್ಯಾತ್ಮಿಕ ಉನ್ನತಿಯನ್ನುಂಟುಮಾಡು; (ಒಂದರಲ್ಲಿ, ಒಬ್ಬ ನಲ್ಲಿ) ನವಚೈತನ್ಯವನ್ನೂ ಸುಧಾರಣೆಯನ್ನೂ ತುಂಬು; ಜೀರ್ಣೋದ್ಧಾರ ಮಾಡು; ಆತ್ಮೋದ್ಧಾರ ಮಾಡು, ಆತ್ಮೋನ್ನತಿಯನ್ನುಂಟು ಮಾಡು. (ವ್ಯಕ್ತಿ, ಸಂಸ್ಥೆ, ಮೊ. ರ) ನೈತಿಕ ಸ್ಥಿತಿಯನ್ನು ಉತ್ತಮ ಗೊಳಿಸು, ನೀತಿಯ ಮಟ್ಟವನ್ನು ಹೆಚ್ಚಿಸು. ಮತ್ತೆ ಹುಟ್ಟು, ಹುಟ್ಟಿಸು; ಪುನಃ ಅಸ್ತಿತ್ವಕ್ಕೆ —ತರು, ಬರು (Must r. his self-respect. Polypus regenerates after extraction). ಸುಧಾರಣೆ ಹೊಂದು. (ಗು.) = **Regénerative** (ಗು.); **Regenerátion** (ನಾ.); **Regénerator** (ನಾ.) (ಕ್ರಿಯಾರ್ಥಗಳಲ್ಲಿ) ಕುಲುಮೆಗಳಲ್ಲಿ ಉರುವಲನ್ನು ಮಿಗಿಸುವ ಒಂದು ಕಾವಿಟ್ಟಿಗೆಯ ಸಾಧನ (ವ್ಯರ್ಥ ಪದಾರ್ಥವಾಗಿ ಹೊರ ಹೊರಡುವ ಬಿಸಿ ಅನಿಲ, ಮೊ. ಗಳಿಂದ ತಾನು ಕಾದು ಒಳ ಹೊಗಿಸುವ ಗಾಳಿ, ಮೊ. ನ್ನು ಕಾಯಿಸುವಂಥದು)

Régent ರೀಜೆಂಟ್ (ನಾ., ಗು.) (ವಿರ. ಪ್ರ.) ಪ್ರಭು. ಪ್ರಧಾನ ತತ್ತ್ವ. ದೊರೆ ಅಪ್ರಾಪ್ತ ವಯಸ್ಕನಾಗಿರುವಾಗ, ಹಾಜರಿಲ್ಲದಾಗ ಅಥವಾ ಅಶಕ್ತನಾಗಿರುವಾಗ ರಾಜ್ಯವಾಳಲು ನಿಯಮಿತವಾದವನು(ಳು): ರಾಜ ಪ್ರತಿನಿಧಿ. (ಗು.) (ನಾಮವಾಚಕಾರ್ಥವನ್ನನುಸರಿಸಿ) ರಾಜ ಪ್ರತಿನಿಧಿಯಾಗಿ ಆಳುತ್ತಿರುವ (Queen, Prince, etc., r.). **Régency** ರೀಜೆನ್ಸಿ (ನಾ.) (ವಿರ. ಪ್ರ.) ಆಳಿಕೆ; ಪ್ರಭುತ್ವ. ರಾಜ ಪ್ರತಿನಿಧಿಯ —ಪದವಿ, ಆಳಿಕೆ, ಅಧಿಕಾರ; ರಾಜ ಪ್ರತಿನಿಧಿಯಾಗಿ ಪ್ರಭುತ್ವ ನಡಸುವ ನಿಯೋಜಿತ ಮಂಡಲಿ; ರಾಜ ಪ್ರತಿನಿಧಿಯ, ರಾಜ ಪ್ರತಿನಿಧಿ ಮಂಡಲಿಯ, —ಅಧಿಕಾರಾವಧಿ.

Régicide ರೆಜಿಸೈಡ್ (ನಾ.) ರಾಜ ಹಂತಕ; ರಾಜ ಹತ್ಯೆಕಾರಿ (The regicides ಇಂಗ್ಲೆಂಡಿನ ಮೊದಲನೆಯ ಚಾರ್ಲ್ಸ್ ದೊರೆಯ ವಿಚಾರಣೆಯಲ್ಲಿಯೂ, ಆತನ ತಲೆ ಕಡಿಯುವುದರಲ್ಲಿಯೂ ಭಾಗಿಗಳಾದವರು: ರಾಜ ಹಂತಕರು). ರಾಜ ಹನನ; ರಾಜ ಹತ್ಯೆ. **Regicídal** (ಗು.)

Regié (F) ರೆಷೀ (ನಾ.) ಹೊಗೆಸೊಪ್ಪು, ಉಪ್ಪು, ಮೊ. ಗಳ ಮೇಲೆ ರಾಜ್ಯದ (ಸರ್ಕಾರದ) ಸರ್ವಸ್ವಾಮ್ಯ, ಸರ್ವಾಧಿಕಾರ.

Regíme ರೆಷೀಮ್ (ನಾ.) ಆಳಿಕೆಯ, ಆಡಳಿತದ, —ಕ್ರಮ; ರಾಜ್ಯಭಾರ ಕ್ರಮ, —ಪದ್ಧತಿ; ಸರ್ಕಾರದ ಪದ್ಧತಿ; ದವಲತ್ತು. (ಒಂದರ, ಒಂದು ವ್ಯವಸ್ಥೆಯ) ಪ್ರಚಲಿತ ಪದ್ಧತಿ (ಉದಾ., ಸಮಾಜ ಪದ್ಧತಿ) [Ancien regime (F) (ಆ ಪದವನ್ನು ನೋಡಿ). Under the r. of purchase, privilege, protection, competition, Whig ascendancy, etc.]. **Régimen** ರೆಜಿಮೆನ್ (ನಾ.) (ಈಗ ವಿರ. ಪ್ರ.) ಆಡಳಿತ; ಸರ್ಕಾರದ, ರಾಜ್ಯಭಾರದ, —ಪದ್ಧತಿ; = Regime. (ವೈ. ಶಾ.) ಆರೋಗ್ಯಲಾಭಕ್ಕಾಗಿ ವೈದ್ಯನು ವಿಧಿಸಿದ ವ್ಯಾಯಾಮ, ಜೀವನ ಕ್ರಮ, ಆಹಾರ, ಮೊ. ವು; ಪಥ್ಯದ—ಗೊತ್ತುಪಾಡು, ಕಟ್ಟುಪಾಡು. (ವ್ಯಾ.) ಶಬ್ದಗಳ ಪರಸ್ಪರಾವಲಂಬನ ವಿವರಣೆ; ಅನ್ವಯ.

Régiment ರೆಜಿ(ಜ್)ಮೆಂಟ್ (ನಾ., ಕ್ರಿ. ಸಕ.) (ಈಗ ವಿರ. ಪ್ರ.) ಆಳಿಕೆ, ಆಡಳಿತ, ಪ್ರಭುತ್ವ. ಸಾ., (ಲೆಫ್ಟಿನೆಂಟ್) ಕರ್ನಲನ ನಾಯಕತ್ವದಲ್ಲಿರುವ, ಹಲವು ದಳಗಳು ಅಥವಾ ಪಟಾಲಮ್ಮುಗಳನ್ನೊಳಕೊಂಡಿರುವ, ಸೈನ್ಯದ ಒಂದು ಶಾಶ್ವತ ವಿಭಾಗ: ಪಡೆ; 'ರೆಜಿಮೆಂಟು'. (ಅನೇಕ ವೇಳೆ ಬ. ವ. ದಲ್ಲಿ) ದೊಡ್ಡ (ವೈಭವ)ಶ್ರೇಣಿ, ಅಧಿಕ ಸಂಖ್ಯೆ, ದೊಡ್ಡ ಗುಂಪು (ಸಾ., Of ಉಪ. ದೊಡನೆ). (ಕ್ರಿ.) (ಸಿಪಾಯಿಗಳನ್ನು) ಪಡೆಗೂಡಿಸು, ಪಡೆಗಳಾಗಿ ಮಾಡು. (ಕೆಲಸಗಾರರನ್ನು, ಕೂಲಿಯವರನ್ನು) ತಂಡಗಳಾಗಿ, ಅಥವಾ ಒಂದು ಪದ್ಧತಿಯನ್ನನುಸರಿಸಿ, ವ್ಯವಸ್ಥೆಗೊಳಿಸು. **Regimentátion** (ನಾ.); **Regiméntal** (ಗು., ನಾ.) ಪಡೆಯ. (ನಾ., ಬ. ವ. ದಲ್ಲಿ) ಪಡೆಯ ಉಡುಪು; ಸೈನಿಕ ಶಿಸ್ತಿನ ಉಡುಪು. **Regiméntally** (ಕ್ರಿ. ವಿ.)

Regína (L) ರಿಜೈನ (ನಾ.; ಸಂಕ್ಷಿಪ್ತ: R.) (ಪ್ರಸಿದ್ಧ ಪತ್ರಿಕೆ, ಘೋಷಣ ಪತ್ರಿಕೆ—ಇವುಗಳಲ್ಲಿನ ರುಜುಗಳಲ್ಲಿ ಪ್ರ.) ಆಳು(ತ್ತಿರು)ವ ರಾಣಿ (V.R. = Victoria R.). **Regínal** ರಿಜೈನಲ್ (ಗು.) (ವಿರ. ಪ್ರ.) ರಾಣಿಯ(ಂಥ); ರಾಣಿಗೆ ಯೋಗ್ಯವಾದ.

Région ರೀಜನ್, —ಜ್‌ನ್ (ನಾ.) (ಹೆಚ್ಚು ಕಡಮೆ ನಿರ್ದಿಷ್ಟ ಮೇರೆಗಳುಳ್ಳ ಅಥವಾ ಲಕ್ಷಣಗಳುಳ್ಳ) ಪ್ರಾಂತ, ಪ್ರದೇಶ, ನಿಟ್ಟು (A desert, fertile, r.); ಪ್ರಪಂಚದ ಅಥವಾ ವಿಶ್ವದ (ಒಂದು) ಪ್ರತ್ಯೇಕ ಭಾಗ [(ಹಲವು ವೇಳೆ ಬ. ವ. ದಲ್ಲಿ): Lower regions ಅಧೋ ಲೋಕ; ನರಕ; ಪ್ರೇತ ಲೋಕ. Upper regions ಊರ್ಧ್ವ ಲೋಕ; ಸ್ವರ್ಗ; ಆಕಾಶ. The r. beyond the grave ಸತ್ತಮೇಲೆ ಹೋಗುವ ಲೋಕ; ಪರಲೋಕ]. ಕ್ಷೇತ್ರ, ಲೋಕ (You are getting into the r. of metaphysics). (ಎತ್ತರವನ್ನನುಸರಿಸಿ ವಿಭಾಗಿಸಿದ ವಾಯುಮಂಡಲದ ಅಥವಾ ಆಳವನ್ನನುಸರಿಸಿ ವಿಭಾಗಿಸಿದ ಸಮುದ್ರದ) ಭಾಗ(ಗಳಲ್ಲೊಂದು) (Upper, middle, lower, r.). (ದೇಹದಲ್ಲಿ) ಯಾವುದಾದರೂ ಅಂಗ, ಮೊ. ರ ಸುತ್ತಣ ಅಥವಾ ಹತ್ತಿರದ ಭಾಗ; ಎಡೆ, ಸ್ಥಳ, ಪ್ರದೇಶ (The lumbar, abdominal, r. ಕಟಿ ಪ್ರದೇಶ, ಜಠರ ಪ್ರದೇಶ. The r. of the eyes). **Régional** (ಗು.)

Régister ರೆಜಿಸ್ಟರ್ (ನಾ., ಕ್ರಿ.) ದಾಖಲೆಗಾಗಿ ವಿವರಗಳನ್ನು ನಮೂದಿಸುವ ಪುಸ್ತಕ: ದಾಖಲೆ ಪುಸ್ತಕ; 'ರೆಜಿಸ್ಟರು'. (ಜನನ, ಮದುವೆ, ಶವ ಸಂಸ್ಕಾರ, ಮರಣ, ಹಡಗು, ಚುನಾವಣಾ ಕ್ಷೇತ್ರದಲ್ಲಿ ಅಭಿಮತ ಕೊಡುವ ಯೋಗ್ಯತೆಯುಳ್ಳ ಚುನಾವಣೆದಾರರು, ಮೊ. ರ) ಅಧಿಕೃತ ಪಟ್ಟಿ, ದಾಖಲೆ [R. office (ಅಥವಾ ಆಧುನಿಕ ಪ್ರ. R.) ದಾಖಲೆಗಳ ಕಚೇರಿ]. ಆರ್ಗನ್ ವಾದ್ಯದಲ್ಲಿ ದನಿ ನಾಳಿಕೆಗಳ ತಂಡವನ್ನು ನಿಯಂತ್ರಿಸುವ ಮರದ ಜಾರು ಸಲಕರಣೆ (ಇದರಲ್ಲಿ ನಾಳಿಕೆಗಳ ರಂಧ್ರಗಳಿಗನುಸಾರವಾದ ರಂಧ್ರಗಳಿದ್ದು ಗಾಳಿಯನ್ನು ಒಳಕ್ಕೆ ಬಿಡುತ್ತವೆ. ಇದನ್ನು ಸ್ವಲ್ಪ ತಳ್ಳಿದಾಗ ನಾಳಿಕೆಗಳ ರಂಧ್ರಗಳು ಕಿರಿದಾಗುತ್ತವೆ ಮತ್ತು ಮುಚ್ಚಿಯೂ ಹೋಗುತ್ತವೆ). ದನಿಯ ಅಥವಾ ವಾದ್ಯದ ಆರೋಹಣ ವ್ಯಾಪ್ತಿ: ಸ್ಥಾಯಿ. (ಮು., ಚಿಂಕಿಗೂಡಿನಲ್ಲಿ ಗಾಳಿಯ ಹರಿವನ್ನು ಕ್ರಮಪಡಿಸುವುದಕ್ಕಾಗಿ) ಕಂಡಿಯನ್ನು ಬೇಕಾದಂತೆ ದೊಡ್ಡದು ಅಥವಾ ಚಿಕ್ಕದು ಮಾಡಬಲ್ಲ ಲೋಹದ ತಗಡು: ಹೊಂದಾವಣೆಯ ಜಾರು ಮುಚ್ಚಳ; ಗಾಳಿಯ (ಹರಿವಿನ) ನಿಯಂತ್ರಕ. (ವೇಗ, ಶಕ್ತಿ, ಮೊ. ರ) ದಾಖಲೆಯಿಡುವ ನಿರ್ದೇಶಕ, ಸೂಚಕ, ಸೂಚಿ. (ಮುದ್ರಣ) ಅಚ್ಚಾದ ಹಾಳೆಯ ಎರಡು ಪಕ್ಕಗಳಲ್ಲೂ ಪಂಕ್ತಿಗೆ ಪಂಕ್ತಿ, ಅಂಕಣಕ್ಕೆ ಅಂಕಣ, ಸರಿಯಾಗಿ ಹೊಂದಿಕೊಂಡಿರುವುದು; ಅಚ್ಚಿನ ಹೊಂದಿಕೆ; ಮುದ್ರಣ ಸಾಮಂಜಸ್ಯ (In r. ಮುದ್ರಣ ಸಾಮಂಜಸ್ಯವುಳ್ಳ). (ಛಾಯಾ ಚಿತ್ರ) ಸರಿಯಾಗಿ ನಾಭಿ ಪಟದ ಸ್ಥಾನದಲ್ಲಿ ಫಲಕ ಅಥವಾ ಪಟಲ ಅಳವಟ್ಟಿರುವುದು; ನಾಭಿ ಪಟ ಮತ್ತು ಛಾಯಾಚಿತ್ರ ಫಲಕಗಳ ಪೂರ್ತಿ ಹೊಂದಾವಣೆ, ಹೊಂದಿಕೆ. (ಕ್ರಿ.) (ಹೆಸರು, ಸಂಗತಿ, ಮೊ. ನ್ನು) ವಿಹಿತ ಕ್ರಮದಲ್ಲಿ ಬರೆದಿಡು; ಲಿಖಾಮಟ್ಟಿನಲ್ಲಿಡು; ದಾಖಲೆ(ಯಲ್ಲಿ) ಇಡು. (ರೂಪ.) ಮನಸ್ಸಿನಲ್ಲಿ—ಗ್ರಹಿಸಿಕೊ, ಇಟ್ಟುಕೊ; ನೆನಪಿನಲ್ಲಿಟ್ಟುಕೊ. (ಗೊತ್ತಾದ ದಾಖಲೆ ಪುಸ್ತಕದಲ್ಲಿ) ದಾಖಲು ಮಾಡು, —ಮಾಡಿಸು. [R. letter ಸುರಕ್ಷಿತವಾಗಿ ತಲುಪುವ ಬಗ್ಗೆ ಕಾಗದ ಪತ್ರವನ್ನು ಅಂಚೆಯ ಕಚೇರಿಗೆ ಒಪ್ಪಿಸಿ ದಾಖಲೆ ಮಾಡಿಸು; ಕಾಗದ ಪತ್ರವನ್ನು ರೆಜಿಸ್ಟರು ಮಾಡು, —ಮಾಡಿಸು; ನೋಂದಣಿ ಮಾಡು, ಮಾಡಿಸು. R. luggage (ರೈಲ್ವೆ, ಮೊ. ಗಳಲ್ಲಿ) ಪ್ರಯಾಣಿಕರ ಸಾಮಾನನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಜಿಸ್ಟರು, ನೋಂದಣಿ, —ಮಾಡು, ಮಾಡಿಸು. R. oneself ಚುನಾವಣೆದಾರರ ಪಟ್ಟಿಯಲ್ಲಿ ಹೆಸರನ್ನು ಬರಸು, ದಾಖಲು ಮಾಡಿಸು]. (ಸಲಕರಣೆಯ ವಿಷಯದಲ್ಲಿ) ತಾನಾಗಿಯೇ ದಾಖಲು ಮಾಡು, ಬರೆದಿಡು, ನಿರ್ದೇಶಿಸು. (ಮುದ್ರಣ, ಮೊ ರಲ್ಲಿ) ಮುದ್ರಣ ಸಾಮಂಜಸ್ಯವಿರು (ವಂತೆ ಮಾಡು). **Régistrable** (ಗು.) ; **Registrátion** (ನಾ.) ;

Régistrar —ಸ್ಟ್ರಾರ್ (ನಾ.) ಅಧಿಕೃತವಾಗಿ ದಾಖಲು ಮಾಡುವವನು ; ವಿಲೇಖನಾಧಿಕಾರಿ ; ದಾಖಲೆ ಅಧಿಕಾರಿ ; ದಾಖಲೆ ಪುಸ್ತಕವನ್ನು, ರಜಿಸ್ಟರನ್ನು, —ಇಟ್ಟುಕೊಳ್ಳುವ ಜವಾಬ್ದಾರಿಯುಳ್ಳವನು ; ರೆಜಿಸ್ಟ್ರಾರ್. **Régistrarship** (ನಾ.) ; **Régistrary** —ಸ್ಟ್ರರಿ (ನಾ.) ಕೇಂಬ್ರಿಡ್ಜ್ ವಿ. ವಿ. ನಿ. ದ ರೆಜಿಸ್ಟ್ರಾರ್, ವಿಲೇಖನಾಧಿಕಾರಿ.

Régistry (ನಾ.) ದಾಖಲು ಮಾಡುವುದು ; ರೆಜಿಸ್ಟರ್ ಮಾಡುವುದು. ದಾಖಲೆ ಪುಸ್ತಕಗಳನ್ನಿಟ್ಟಿರುವ —ಸ್ಥಳ, ಕಚೇರಿ : ದಾಖಲೆಗಳ ಕಚೇರಿ [Married at a r. *or* r. office *or* register office ಮತ ಸಂಸ್ಕಾರಗಳಿಲ್ಲದೆ ಮದುವೆಯಾದನು. Servants registry (office) ಖಾಲಿ ಬಿದ್ದಿರುವ ಕೆಲಸಗಳ ಮತ್ತು ಕೆಲಸ ಹುಡುಕುತ್ತಿರುವ ಸೇವಕರ ಪಟ್ಟಿ ಇಟ್ಟಿರುವ ಅಂಗಡಿ, ಮೊ. ದು]. (ವಿರ. ಪ್ರ.) ದಾಖಲೆ ಪುಸ್ತಕ ; 'ರೆಜಿಸ್ಟರು'.

Régius (L) ರೀಜಿಅಸ್ (ಗು.) R. professor (of Greek, etc.) (ಆಕ್ಸ್‌ಫರ್ಡ್ ಅಥವಾ ಕೇಂಬ್ರಿಡ್ಜ್ ವಿ. ವಿ. ನಿ. ಗಳಲ್ಲಿ ೮ನೆಯ ಹೆನ್ರಿ ಸ್ಥಾಪಿಸಿದ ಅಥವಾ ಈಚೆಗೆ ಸ್ಥಾಪಿತವಾಗಿ ಅದೇ ಸ್ಥಾನಮಾನಗಳನ್ನುಳ್ಳ) ರಾಜ ಪೋಷಿತ (ಗ್ರೀಕ್, ಮೊ.) ವಿದ್ವತ್ ಪೀಠಾಧಿಕಾರಿ.

Régnal ರೆಗ್ನಲ್ (ಗು.) ರಾಜ್ಯದ, ರಾಜನ ; ಆಳಿಕೆಯ ; ರಾಜ್ಯಭಾರದ [R. year (ದೊರೆ ಪಟ್ಟಕ್ಕೆ ಬಂದಾಗಿನಿಂದ ಅಥವಾ ಅದರ ವಾರ್ಷಿಕೋತ್ಸವದಿಂದ ಎಣಿಸುವ) ಆಳಿಕೆಯ ವರ್ಷ. R. day ಪಟ್ಟಾಭಿಷೇಕದ ವಾರ್ಷಿಕೋತ್ಸವ]. **Régnant** (ಗು.) ಆಳುತ್ತಿರುವ ; ರಾಜ್ಯಭಾರ ಮಾಡುತ್ತಿರುವ [Queen R. ತನ್ನ ಹಕ್ಕಿನಿಂದಲೇ ರಾಜ್ಯವಾಳುತ್ತಿರುವ ರಾಣಿ (ಆಳುವ ರಾಜನ ಹೆಂಡತಿಯಾಗಿ ರಾಣಿಯೆಂದಲ್ಲ). Prince R., etc.]. (ವಸ್ತುಗಳು, ಗುಣ, ಅಭಿಪ್ರಾಯ, ಮೊ. ವು) ಪ್ರಧಾನವಾದ. ಪ್ರಚಲಿತ.

Regórge ರೀಗಾರ್ಜ್ (ಕ್ರಿ.) ಮತ್ತೆ —ಹೊರಕ್ಕೆ ತರು, ಎಸೆ ; ಕಕ್ಕು, ಕಾರು ; ವಾಂತಿಮಾಡು. (ತುಂಬಿದ ಗುಂಡಿ, ನಾಲೆ, ಮೊ. ಗಳಿಂದ) ಹಿಂದಕ್ಕೆ ಹರಿ. ಮತ್ತೆ ನುಂಗು.

Regráte ರಿಗ್ರೇಟ್ (ಕ್ರಿ. ಸಕ.) (ಚರಿತ್ರೆ) (ಸರಕನ್ನು, ಮು., ಆಹಾರ ಪದಾರ್ಥಗಳನ್ನು) ಚಿಲ್ಲರೆಯಾಗಿ ಮಾರಿ ಲಾಭ ಸಂಪಾದಿಸಲು (ಒಟ್ಟೊಟ್ಟಾಗಿ ಅಥವಾ ಹೆಚ್ಚು ಮೊತ್ತದಲ್ಲಿ) ಕೊಂಡಿಟ್ಟುಕೊ (ಹಿಂದೆ ಈ ಪದ್ಧತಿ ನಿಷಿದ್ಧವಾಗಿತ್ತು). **Regráter, Regrátor** (ನಾ.)

Régress ರೀಗ್ರೆಸ್ (ನಾ.), **Regréss** ರಿಗ್ರೆಸ್ (ಕ್ರಿ. ಅಕ.) ಹಿಮ್ಮರಳುವುದು; ಹಿಂಜರಿತ; ಇಳಿತ; ಇಳಿಗತಿ; ಹಿಂದಕ್ಕೆ ಹೋಗುವ —ಪ್ರವೃತ್ತಿ, ಒಲವು. (ಕ್ರಿ.) (ಮು., ಖ. ವಿ.) ಹಿಂದಕ್ಕೆ ಚಲಿಸು ; ವಕ್ರವಾಗು, ವಕ್ರಗತಿ ಪಡೆ. **Regréssion** ರಿಗ್ರೆಷ(ಷ್)ನ್ (ನಾ.) ಹಿಂಚಲನೆ ; ಹಿಂಜರಿವು ; (ಖ. ವಿ.) ವಕ್ರತೆ. ವಕ್ರರೇಖೆಯ ಹಿಮ್ಮುರಿ(ತ). (ಹಿಂದಿನ ಸ್ಥಿತಿಗೆ, ಕೀಳು ಸ್ಥಿತಿಗೆ) ಹಿಂದಿರುಗುವುದು ; ಅಪಸರ್ಪಣ. **Regréssive** (ಗು.) ; **Regréssively** (ಕ್ರಿ. ವಿ.) ; **Regréssiveness** (ನಾ.)

Regrét ರಿಗ್ರೆಟ್ (ನಾ., ಕ್ರಿ. ಸಕ.) (ಕಳೆದುಹೋದುದಕ್ಕಾಗಿ, ಇಚ್ಛೆ ನೆರವೇರದೆ ಇದ್ದುದಕ್ಕಾಗಿ, ಒಂದು ಕೆಲಸವನ್ನು ಮಾಡಿದ್ದಕ್ಕಾಗಿ ಅಥವಾ ಮಾಡದೆ ಬಿಟ್ಟದ್ದಕ್ಕಾಗಿ, ಒಂದು ಘಟನೆ, ಪರಿಸ್ಥಿತಿ, ಮೊ. ಕ್ಕಾಗಿ) ವಿಷಾದ, ವ್ಯಥೆ, ವ್ಯಸನ, ಪಶ್ಚಾತ್ತಾಪ(—ಪಡು); ಮರುಗು (*For* ಉಪ. ಜೊತೆ) [Has no regrets ವಿಷಾದವೇನಿಲ್ಲ. Express r. for (ತಪ್ಪೊಪ್ಪಿಕೊಂಡು) ಕ್ಷಮಾಪಣೆ ಕೇಳು ; ತಪ್ಪಾಯಿತೆಂದು ಹೇಳು. Hear with r. of *or* that. Refuse with much r. *or* many regrets. R. to say *or* that (ಮು., ಆಹ್ವಾನ, ಮೊ. ಕ್ಕೆ ಅನಂಗೀಕಾರವನ್ನು ಮರ್ಯಾದೆಯಾಗಿ ತಿಳಿಸುವಲ್ಲಿ)—ವಿಷಾದಿಸುತ್ತೇನೆ]. **Regréttable** (ಗು.) ವಿಷಾದಕರ. **Regréttably** (ಕ್ರಿ. ವಿ.) ; **Regrétful** (ಗು.) (ವ್ಯಕ್ತಿ ಅಥವಾ ಭಾವದ ವಿಷಯದಲ್ಲಿ) ವಿಷಾದಗೊಂಡ, ವಿಷಾದ ಭರಿತ. **Regrétfully** (ಕ್ರಿ. ವಿ.)

Régulable ರೆಗ್ಯುಲಬ್‌ಲ್ (ಗು.) ಕ್ರಮಕ್ಕೊಳಪಡಿಸಬಹುದಾದ ; ನಿಯಂತ್ರಣ ಸಾಧ್ಯ.

Régular ರೆಗ್ಯುಲರ್ (ಗು., ನಾ.) (ಮತವಿಷಯದಲ್ಲಿ) ಮತ ನಿಯಮಗಳಿಗೊಳಪಟ್ಟ ; ವಿಧಿಬದ್ಧವಾದ. ಮತ ಸಂಸ್ಥೆಗೆ, ಸಂನ್ಯಾಸಿ ಮಠಗಳಿಗೆ, —ಸೇರಿದ (Secular ಹೋಲಿಸಿ) [The r. clergy (ರೋ. ಕ್ಯಾ. ದೇಶಗಳಲ್ಲಿ) ಸಂನ್ಯಾಸಿಗಳು, ಭಿಕ್ಷುಗಳು (ಹಳ್ಳಿಯ ಪ್ರಾಂತದ ಪುರೋಹಿತರು, ಮೊ. ಕ್ಕೆ ವಿರುದ್ಧ ಪ್ರ.)]. (ಆಕಾರ, ರಚನೆ, ಓರಣ, ಮೊ. ವು ಅಥವಾ ಇವನ್ನುಳ್ಳ ವಸ್ತುಗಳ ವಿಷಯದಲ್ಲಿ) ಒಂದು ತತ್ತ್ವವನ್ನು ಅನುಸರಿಸಿರುವ, ಸಾಮರಸ್ಯವುಳ್ಳ, ಪರಸ್ಪರ ಹೊಂದಿಕೆಯಾದ, ಕ್ರಮ(ಬದ್ಧ)ವಾದ, ಸಮ ಪ್ರಮಾಣದ [R. nomenclature, formation, features, curve, figure, flower. The five r. solids ಐದು ಕ್ರಮ ಘನಾಕೃತಿಗಳು : Tetrahedron, Hexahedron, Octahedron, Dodecahedron, Icosahedron (ಆಯಾ ಪದವನ್ನು ನೋಡಿ)]. (ಕಾಲದಲ್ಲಾಗಲಿ ರೀತಿಯಲ್ಲಾಗಲಿ ಒಂದೇ ಸಮನಾಗಿ ಅಥವಾ ಲೆಕ್ಕಾಚಾರದಂತೆ) ಒಂದು ಗೊತ್ತಿನಮೇಲೆ, ಕ್ರಮವಾಗಿ, ತಪ್ಪದೆ, —(ಕಾರ್ಯ) ಮಾಡುವ, ಆಗುವ, ಬರುವ, ಆವರ್ತವಾಗುವ ; ನಿಯತ ಕಾಲಿಕ. ಕಟ್ಟಳೆಯ ಪ್ರಕಾರದ ; ರೂಢಿಯಾದ ; ನಿಯತ ; ಒಂದು ಗೊತ್ತಿಲ್ಲದೆ ಅಥವಾ ಅಕಸ್ಮಾತ್ತಾಗಿ ನಡೆಯುವುದಲ್ಲದ ; ಕ್ರಮ(ಬದ್ಧ)ವಾದ; ವ್ಯವಸ್ಥಿತ [R. working, steps, procedure, sequence, pulse. R. bowels ನಿತ್ಯವೂ ತಪ್ಪದೆ ಮಲವಿಸರ್ಜನೆ (ಯಾಗುವುದು). R. salary, orbit, bed-time, employ. Keep r. hours ನಿತ್ಯವೂ ಅದೇ ಹೊತ್ತಿನಲ್ಲಿ ಅದೇ ಕೆಲಸ ಮಾಡು ; ಒಂದು ಕೆಲಸಕ್ಕೆ ನಿತ್ಯವೂ ನಿಯತ ಕಾಲವಿಟ್ಟುಕೊ. A r. life ಕ್ರಮಬದ್ಧ ಜೀವನ (ಮು., ಅತಿರೇಕಗಳಿಲ್ಲದ್ದು). R. people ಕ್ರಮಬದ್ಧ ಜೀವನ ನಡಸುವವರು]. [(ಗ್ರಾಮ್ಯ, ಕ್ರಿ. ವಿ. ದಂತೆ ಪ್ರ.) Comes, happened, r. ಕ್ರಮವಾಗಿ, ನಿಯತ ಕಾಲಕ್ಕೆ, —ಬರುತ್ತದೆ, ಆಗುತ್ತದೆ]. ಮರ್ಯಾದೆ, ಮೊ. ಗಳ ಒಂದು ಮಟ್ಟವನ್ನು ಬಿಡದ ; ಶಿಷ್ಟಾಚಾರ ಸಮ್ಮತವಾದ ; ಸಂಪ್ರದಾಯವನ್ನು ಮೀರದ ; ವಿಹಿತವಾದ, ವಿಧಿವತ್ತಾದ (Had no r. introduction. The attitude of the Foreign Office has been quite r.). (ವ್ಯಾ.) (ಧಾತು, ನಾಮ ಪ್ರಕೃತಿ, ಮೊ. ಗಳ ವಿಷಯದಲ್ಲಿ) ರೂಢಿಯಾದ ಮಾದರಿಯಲ್ಲಿ ಆಖ್ಯಾತ ರೂಪ, ವಿಭಕ್ತಿ ರೂಪ, —ನಡೆಯುವ ; ಕ್ರಮವಾದ ರೂಪಸಿದ್ಧಿಯುಳ್ಳ. ಸರಿಯಾದ ವ್ಯವಸ್ಥೆಯುಳ್ಳ ; ತಕ್ಕ ಶಿಕ್ಷಣ ಹೊಂದಿದ ; ತಕ್ಕ ಯೋಗ್ಯತೆಯುಳ್ಳ ; ನ್ಯೂನತೆಯಿಲ್ಲದ ; ಅಲ್ಪ ಪರಿಶ್ರಮಿಯಲ್ಲದ ; ಅದೇ ಕಸಬಾಗಿರುವ ; ನುರಿತ [Cooks as well as a r. cook ಕಸಬುದಾರಿ ಅಡಿಗೆಯವನಷ್ಟೇ ಚೆನ್ನಾಗಿ ಅಡಿಗೆ ಮಾಡುತ್ತಾನೆ. Has no r. profession ಒಂದು ಕ್ರಮವಾದ ಉದ್ಯೋಗವಿಲ್ಲ, ವೃತ್ತಿಯಿಲ್ಲ. R. soldiers ಕಸಬುದಾರಿ ಸಿಪಾಯಿಗಳು ; ಕ್ರಮವಾದ ಸೈನಿಕರು (ಎದುರು ಪದಗಳು : Volunteers, militia or temporary levies). R. army (ಕಸಬುದಾರಿ ಸಿಪಾಯಿಗಳಿಂದ ಏರ್ಪಟ್ಟ) ಕ್ರಮವಾದ ಸೈನ್ಯ]. (ಬಳ. ಮಾ.) ಪೂರ್ತಿ, ಶುದ್ಧ, ಪಕ್ಕಾ [Is a r. rascal, brick, hero ಶುದ್ಧ ದಗಾಕೋರ, ಪರಮದಯಾಳು, ಪಕ್ಕಾ ಶೂರ. A r. royal queen. Had a r. smash, overhauling, etc. (ಗ್ರಾಮ್ಯ, ಕ್ರಿ. ವಿ. ದಂತೆ ಪ್ರ.) Is r. angry ಪೂರಾ ಕೋಪದಲ್ಲಿದ್ದಾನೆ]. (ನಾ. ; ಸಾ., ಬ. ವ. ದಲ್ಲಿ) (ರೋ. ಕ್ಯಾ.) ಕ್ರಮವಾದ ಸಂನ್ಯಾಸಿ(ಗಳಲ್ಲೊಬ್ಬ). ಕಸಬುದಾರಿ ಸಿಪಾಯಿ ; ಸೈನಿಕ ವೃತ್ತಿಯವನು. (ಬಳ. ಮಾ.) ಖಾಯಂ ನೌಕರ, —ಕೆಲಸಗಾರ **Regulárity** (ನಾ.) ; **Régularize** (ಕ್ರಿ. ಸಕ.) ; **Régularizátion** (ನಾ.) ; **Régularly** (ಕ್ರಿ. ವಿ.) ; **Régulate** ರೆಗ್ಯುಲೇಟ್ (ಕ್ರಿ. ಸಕ.) ಕಟ್ಟಿಗೊಳಪಡಿಸು ; ವಿಧಿ ಬದ್ಧ ಮಾಡು ; ನಿಯಮಗಳಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಳಪಡಿಸು ; ಮಿತಿಗೊಳಿಸು ; ಅವಶ್ಯಕತೆಗೆ ತಕ್ಕಂತೆ ಹೊಂದಿಸು ; (ಯಂತ್ರ, ಗಡಿಯಾರ, ಮೊ. ನ್ನು) ಕರಾರುವಾಕಾಗಿ ನಡೆಯುವಂತೆ ಸರಿಹೊಂದಿಸು, ಕ್ರಮಪಡಿಸು, ನಿಯಂತ್ರಿಸು. **Régulator** (ನಾ.) ; **Régulative** (ಗು.) ; **Regulátion** (ನಾ.) ಕ್ರಮಪಡಿಸುವುದು ; ನಿಯಂತ್ರಣ. ವಿಧಿ ; ನಿಯಮ ; ನಿಬಂಧನೆ ; ಅಧಿಕಾರಯುಕ್ತವಾದ ಆದೇಶ ; ಕಾನೂನು ; ಕಟ್ಟುಪಾಡು. (ವಿಶೇಷಣವಾಗಿ) ನಿಯಮಾನು ಸಾರವಾದ ; ಕಾನೂನು ಬದ್ಧವಾದ ; ಸರಿಯಾದ ಮಾದರಿಯ ; ಸಾಧಾರಣ ; ಸಾಮಾನ್ಯ ; ರೂಢಿಯ ; ವಾಡಿಕೆಯ ; ಸಂಪ್ರದಾಯದ (Of the r. size. Exceed the r. speed ನಿಬಂಧನೆಯ ವೇಗವನ್ನು ಮೀರು ; ವಿಹಿತ ವೇಗವನ್ನು ಮೀರು. A r. sword, cup. The r. mourning ಸಂಪ್ರದಾಯಾನುಸಾರವಾದ, ವಾಡಿಕೆಯ, ವಿಧಿ ವಿಹಿತವಾದ, —ದುಃಖ ಪ್ರದರ್ಶನ)

Régulus ರೆಗ್ಯುಲಸ್ (ನಾ. ; ಬ. ವ. -li —ಲೈ) ಸಿಂಹ ರಾಶಿಯಲ್ಲಿ ಒಂದು ಉಜ್ಜ್ವಲ ನಕ್ಷತ್ರ : ಮಘಾ (ನಕ್ಷತ್ರ) (R-). (ರ. ವಿ.) (ಮೂಸೆಯ ತಳಭಾಗಕ್ಕೆ ಇಳಿಯುವುದರಿಂದ ಬೇರ್ಪಡುವ) ಖನಿಜದ ಶುದ್ಧತರ ಭಾಗ ಅಥವಾ ಲೋಹ ಭಾಗ. (ತಾಮ್ರ, ಸೀಸ, ಮೊ. ಅದುರುಗಳನ್ನು ಕಾಯಿಸಿ ಕರಗಿಸುವುದರಿಂದ ದೊರೆಯುವ) ಅಶುದ್ಧ ಲೋಹ ಭಾಗ [**Réguline** (ಗು.)]. ಹೊಂಬಣ್ಣದ ಜುಟ್ಟಿನ 'ರೆನ್' ಹಕ್ಕಿ.

Regúrgitate ರಿಗರ್ಜಿಟೇಟ್ (ಕ್ರಿ.) ಉಕ್ಕಿ ಬರು, ಹಿಂದಕ್ಕೆ ಹರಿ. (ಹೊಟ್ಟೆಯ ಅಥವಾ ಪಾತ್ರೆಯ ವಿಷಯದಲ್ಲಿ) ಹೊರವುಕ್ಕಿಸು ; ಹೊರಕ್ಕೆ ಕಾರು, ಕಕ್ಕು. **Regurgitátion** (ನಾ.)

Reheárse ರಿಹರ್ಸ್ (ಕ್ರಿ. ಸಕ.) ಮೊದಲಿನಿಂದ ಕೊನೆಯವರೆಗೂ ಕಂಠಪಾಠವಾಗಿ —ಹೇಳು, ಒಪ್ಪಿಸು ; ಒಂದಾದಮೇಲೊಂದರಂತೆ, ಪಟ್ಟಿಯಾಗಿ, —ಹೇಳು ; (ನಾಟಕ, ಮೊ. ಗಳ, ಅದರಲ್ಲಿ ಪಾತ್ರ, ಮೊ. ಗಳ) ಪೂರ್ವಾಭಿನಯಮಾಡು, ಪ್ರದರ್ಶನಾಭ್ಯಾಸಮಾಡು. **Reheársal** (ನಾ.) ಕಥನ ; ಮೊದಲಿಂದ ಹೇಳುವುದು ; (ನಾಟಕದ ಅಥವಾ ಇತರ ವಿನೋದದ) ಪೂರ್ವ ಪ್ರದರ್ಶನ, ಅಭ್ಯಾಸ, ಪೂರ್ವ ಪ್ರಯೋಗ [Dress r. (Dress[2] ನೋಡಿ)]

Reich (G) ರೈಖ್ (ನಾ.) ಜರ್ಮನ್ ರಾಷ್ಟ್ರ, —ಜನತೆ. **Reichstag** (G) ರೈಖ್‌ಸ್ಟಾಕ್ (ನಾ.) ಜರ್ಮನಿಯ ಶಾಸನ ಸಭೆ.

Réify ರೀಇಫೈ (ಕ್ರಿ. ಸಕ.) (ವ್ಯಕ್ತಿಯನ್ನು, ಅಮೂರ್ತಭಾವವನ್ನು) (ಮನಸ್ಸಿನಲ್ಲಿ) ವಾಸ್ತವಿಕ ಮಾಡು, —ಮಾಡಿಕೊ ; ಮೂರ್ತೀಕರಿಸು, ಮೂರ್ತೀಕರಿಸಿಕೊ. **Reificátion** (ನಾ.)

Reign ರೆಯ್ನ್, ರೇನ್ (ನಾ., ಕ್ರಿ. ಅಕ.) ಪ್ರಭುತ್ವ ; ಆಳಿಕೆ ; ಆಧಿಪತ್ಯ ; ರಾಜ್ಯಭಾರ(ದ ಕಾಲ) [R. of Terror ರಕ್ತಪಾತದ ರೌದ್ರ ಪ್ರಭುತ್ವ (ಕ್ರಾಂತಿಕಾರರು ಅಥವಾ ಪ್ರಗತಿ ವಿರೋಧಿಗಳು ನಡಸುವಂಥದು) (Terror ನೋಡಿ). Reign of law ಶಾಸನ ಪ್ರಭುತ್ವ]. (ವಿರ. ಪ್ರ.) ಕ್ಷೇತ್ರ ; ಲೋಕ. (ಕ್ರಿ.) ದೊರೆಯಾಗಿರು ; ಪ್ರಭುತ್ವದಲ್ಲಿರು (ರೂಪ. ಸಹ) [A king who desired to rule as well as r. ದೊರೆಯಾಗಿರಲು ಮಾತ್ರವಲ್ಲದೆ ಆಳಲೂ ಬಯಸಿದ ದೊರೆ ; ಪದವಿ ಯನ್ನಲ್ಲದೆ ಅಧಿಕಾರವನ್ನೂ ಬಯಸಿದ ದೊರೆ. Better to r. in hell than serve in heaven. Reigning beauty ಪರಮ ಸುಂದರಿ(ಯೆಂದು ಅಂಗೀಕೃತಳಾದವಳು)]. ಪ್ರಬಲವಾಗಿರು, ಆಳುತ್ತಿರು (Dissension & improvidence reigned. Silence reigns ನಿಶ್ಶಬ್ದತೆ ತಾನೇ ತಾನಾಗಿತ್ತು)

Reimbúrse ರೀಇಂಬರ್ಸ್ (ಕ್ರಿ. ಸಕ.) (ಒಬ್ಬನು ಖರ್ಚು ಮಾಡಿರುವ ಹಣವನ್ನು) ಪುನಃ ಭರ್ತಿಹಾಕಿ ಕೊಡು ; ವೆಚ್ಚ ತುಂಬಿಕೊಡು. **Reimbúrsement** (ನಾ.)

Rein ರೇನ್ (ನಾ., ಕ್ರಿ. ಸಕ.) (ಕುದುರೆ, ಮೊ. ಗಳ) ಲಗಾಮು (ರೂಪ. ಸಹ) [(ಅನೇಕ ವೇಳೆ ಬ. ವ. ದಲ್ಲ ಅದೇ ಅರ್ಥದಲ್ಲ ಪ್ರ.). Draw r. ಲಗಾಮು ಎಳೆ ; ಕುದುರೆಯನ್ನು ಎಳೆದು ನಿಲ್ಲಿಸು. ಪ್ರಯತ್ನವನ್ನು ತ್ಯಜಿಸು. ಖರ್ಚು, ಮೊ. ನ್ನು ಕಡಮೆಮಾಡು, ಜೋತಾಮಾಡು. Give horse the reins or r. ಕುದುರೆಯನ್ನು ಸ್ವೇಚ್ಛೆಯಾಗಿ ಹೋಗಲು ಬಿಡು ; ಲಗಾಮು ಸಡಿಲಬಿಡು. Throw the reins to. Give r. or the reins to one's imagination ಕಲ್ಪನೆಯನ್ನು —ಸ್ವೇಚ್ಛೆ ಯಾಗಿ ಬಿಡು, ಸ್ವತಂತ್ರವಾಗಿ ಬಿಡು. Assume, drop, the reins of government ಆಡಳಿತ—ವಹಿಸು, ತ್ಯಜಿಸು]. (ಕ್ರಿ.) ಲಗಾಮು ಹಿಡಿದು ನಡಸು ; ಹತೋಟಿಯಿಟ್ಟುಕೊ (ರೂಪ. ಸಹ) ; ಲಗಾಮೆಳೆದು —ನಿಲ್ಲಿಸು, ತಡೆ (*Up* or *back* ಉಪ. ದೊಡನೆ) ; (ಲಗಾಮು ಹಿಡಿದು) ಹಿಡಿತದಲ್ಲಿಟ್ಟುಕೊ (*In* ಉಪ. ದೊಡನೆ) (ರೂಪ. ಸಹ)

Reíndeer ರೆಯ್ನ್‌ಡಿಯರ್ (ನಾ. ; ಜಾತ್ಯೇಕವಚನ, ಸಾ., ಬ. ವ. ಕ್ಕೆ ಪ್ರತಿಯಾಗಿ ಪ್ರ.) (ನೀರ್ಗಲ್ಲಿನಮೇಲೆ ಬಂಡಿಯನ್ನು ಎಳೆಯುವುದಕ್ಕೆ ಉಪ ಯೋಗಿಸುವ, ಮತ್ತು ಅದರ ಹಾಲು, ಮಾಂಸ ಮತ್ತು ತೊಗಲಿಗಾಗಿ ಮಂದೆಗಳಲ್ಲಿ ಸಾಕುವ) ಹಿಮಸಾರಂಗ.

Reinfórce ರೀಇನ್‌ಫೋರ್ಸ್ (ಕ್ರಿ. ಸಕ., ನಾ.) (ಹೆಚ್ಚು ಜನ, ವಸ್ತು, ಗಾತ್ರ, ಮೊ. ನ್ನು ಒದಗಿಸುವುದರಿಂದ) ಬಲಪಡಿಸು, ಭದ್ರಪಡಿಸು [R. fortress, army, provisions, party. R. one's health ಆರೈಕೆ, ಮೊ. ಗಳಿಂದ ಆರೋಗ್ಯವನ್ನು ಬಲಪಡಿಸು. R. one's argument (ಹೊಸ ಅಂಶಗಳಿಂದ, ಹೊಸ ಸಂಗತಿಗಳಿಂದ) ತನ್ನ ವಾದವನ್ನು ಬಲಪಡಿಸು, ಪುಷ್ಟಿಗೊಳಿಸು. Reinforced concrete ಲೋಹದ ಚೌಕಟ್ಟು ಅಥವಾ ತಂತಿಗಳನ್ನು ಒಳಗೆ ಹುದುಗಿಸಿ ಭದ್ರಪಡಿಸಿದ ಜಲ್ಲಿಯ ಗಾರೆ ; ಭದ್ರ ಗಾರೆ]. (ವಿರ. ಪ್ರ.) ಮತ್ತೆ —ಜಾರಿಗೆ ತರು, ಚಲಾಯಿಸು. (ನಾ.) (ಫಿರಂಗಿಯಲ್ಲಿ : ಗುಂಡು ತುಂಬುವ ಹಿಂಭಾಗಕ್ಕೆ ಪಕ್ಕದಲ್ಲಿ ಸೇರಿಸಿದ) ರಕ್ಷಾವರಣ. ಬಲಪಡಿಸುವುದಕ್ಕಾಗಿ (ವಸ್ತುವಿಗೆ) ಸೇರಿಸಿದ ಭಾಗ, ಪಟ್ಟಿ, ಮೊ. ವು : ಒತ್ತಾಸೆ(ಯ ಪಟ್ಟಿ) ; ಬಲವರ್ಧಕ. **Reinfórcement** (ನಾ.) (ಕ್ರಿಯಾರ್ಥಗಳಲ್ಲಿ) ; (ಅನೇಕ ವೇಳೆ ಬ. ವ. ದಲ್ಲಿ) (ಸೈನ್ಯಕ್ಕೆ ಒದಗಿಸಿದ) ಬೆಂಬಲದ, ಹೆಚ್ಚಿಗೆಯ, —ಸೈನ್ಯ (ಸಿಪಾಯಿಗಳು, ಹಡಗುಗಳು, ಮೊ. ವು)

Reins ರೇನ್ಸ್ (ನಾ., ಬ. ವ. ; ಪ್ರಾಚೀ. ಪ್ರ.) ಮೂತ್ರಜನಕಾಂಗ ಗಳು ; ಮೂತ್ರಪಿಂಡ. ಟೊಂಕ.

Reinstáte ರೀಇನ್‌ಸ್ಟೇಟ್ (ಕ್ರಿ. ಸಕ.) (ಕಳೆದುಕೊಂಡಿದ್ದ ಸ್ಥಾನ, ಪದವಿ, ಹಕ್ಕುಬಾಧ್ಯತೆ, ಮೊ. ರಲ್ಲಿ) ಪುನಃ ಸ್ಥಾಪಿಸು (*In* ಉಪ. ದೊಡನೆ) ; ಪೂರ್ವ ಸ್ಥಿತಿಯಲ್ಲಿ ಸ್ಥಾಪಿಸು ; ಆರೋಗ್ಯ ಸ್ಥಿತಿಗೆ, ವ್ಯವಸ್ಥೆಗೆ, —ಮತ್ತೆ ತರು. **Reinstátement** (ನಾ.)

Reis (ಪೋರ್ಚುಗೀಸ್) ರೆಯ್ಸ್, ರೇಸ್ (ನಾ.) ಒಂದು ಪೋರ್ಚುಗೀಸ್ ನಾಣ್ಯ (ಪೋರ್ಚುಗಲ್ಲಿನದು $\frac{1}{20}$ ಪೆನಿ, ಬ್ರೆಸಿಲಿನದು $\frac{1}{40}$ ಪೆನಿ ಬೆಲೆ)

Reíver. **Reave** ನೋಡಿ

Rejéct ರಿಜೆಕ್ಟ್ (ಕ್ರಿ. ಸಕ.), **Réject** ರೀಜೆಕ್ಟ್ (ನಾ.) ತಳ್ಳಿಹಾಕು, ನಿರಾಕರಿಸು, ತಿರಸ್ಕರಿಸು (R. doctrine, evidence). ಕಕ್ಕು ; ವಾಂತಿಮಾಡು ; ವಿಸರ್ಜಿಸು. (ನಾ.) ತಿರಸ್ಕೃತನಾದವನು ; —ವಾದದ್ದು ; ಕಳಪೆ ; (ಮು., ಸೈನಿಕ ವೃತ್ತಿಗೆ) ಅನರ್ಹ. (ಅಗ್ಗ ವಾಗಿ ಮಾರುವ) ಕೀಳು ದರ್ಜೆಯ ಚುಂಗಾಣಿ. **Rejéctable** (ಗು.) ; **Rejécter** (ನಾ.) ; **Rejéction** (ನಾ.) ; **Rejéctor** (ನಾ.)

Rejectaménta (L) ರಿಜೆಕ್ಟಮೆಂಟ (ನಾ., ಬ. ವ.) ಕಸ ; ಉಗಿತ ; ವ್ಯರ್ಥ ಪದಾರ್ಥಗಳು. ಸಮುದ್ರ ಹೊರಕ್ಕೊಗೆದ ವಸ್ತುಗಳು. ಮಲ ; ಸೆಗಣಿ ; ಲದ್ದಿ.

Rejoíce ರಿಜಾಯ್ಸ್ (ಕ್ರಿ.) ಸಂತೋಷಪಡಿಸು ; ಆನಂದಗೊಳಿಸು ; ಸಂತೋಷಪಡು ; ನಲಿ ; ಹರ್ಷಿಸು ; ಹಿಗ್ಗು ; ಆನಂದಿಸು (*That, to* do. *in* or *at*) [R. in —ಪಡೆದು ಸುಖಿಯಾಗಿರು (ಅನೇಕ ವೇಳೆ have ಎಂಬುದರ ಬದಲು ಹಾಸ್ಯ ಪ್ರ.)]. ಸಂತೋಷ ಸಂಭ್ರಮದಲ್ಲಿರು ; (—ರ) ಉತ್ಸವ ನೆರವೇರಿಸು. **Rejoícingly** (ಕ್ರಿ. ವಿ.) ; **Rejoícings** (ನಾ., ಬ. ವ.) ಸಂತೋಷ ಸಂಭ್ರಮಗಳು ; ಆನಂದೋತ್ಸವಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rejoín ರಿಜಾಯ್ನ್ (ಕ್ರಿ.) (ನ್ಯಾ. ಶಾ.) ವಾದಿಯ ಉತ್ತರಕ್ಕೆ ಮಾರುತ್ತರ ಕೊಡು ; ಪ್ರತಿವಾದ ಮಾಡು ; ಪ್ರತ್ಯುತ್ತರ ಕೊಡು. ಮಾರುತ್ತರ ಹೇಳು; ಪ್ರತಿಯಾಗಿ ಹೇಳು; ಪ್ರತಿಭಟಿಸು. (ತನ್ನ ಸಂಗಾತಿ, ದಳ, ಮೊ. ನ್ನು) ಮತ್ತೆ ಸೇರು, ಸೇರಿಕೊ. **Rejoínder** (ನಾ.) ಎರಡನೆಯ ಪ್ರತಿ ವಾದ; ಪ್ರತ್ಯುತ್ತರ ; ಪ್ರತಿಭಟನೆ.

Re-joín ರಿ(ೀ)ಜಾಯ್ನ್ (ಕ್ರಿ.) (ವಸ್ತುಗಳು, ಮೊ. ಗಳ ವಿಷಯದಲ್ಲಿ: ಒಂದಕ್ಕೊಂದಕ್ಕೆ) ಮತ್ತೆ ಒಟ್ಟಿಗೆ —ಸೇರು, ಸೇರಿಸು, ಕೂಡು, ಕೂಡಿಸು ; ಮತ್ತೆ ಒಂದಾಗು, ಒಂದಾಗಿಸು.

Rejúvenate ರಿಜೂವಿನೇಟ್, **Rejúvenize** —ನೈಸ್ (ಕ್ರಿ.) ಮತ್ತೆ ಯೌವನ—ಕೊಡು, ಪಡೆ. **Rejuvenátion** (ನಾ.); **Rejúvenator** (ನಾ.); **Rejuvenésse** —ನೆಸ್ (ಕ್ರಿ.) ಮತ್ತೆ —ಯೌವನ ಪಡೆ, ಯುವಕನಾಗು. (ಜೀ. ವಿ.: ಜೀವಕಣಗಳ ವಿಷಯದಲ್ಲಿ) ಪುನರುಜ್ಜೀವನ ಗೊಳಿಸು, —ವಾಗು. **Rejuvenéscent** (ಗು.); **Rejuvenéscence** (ನಾ.)

Relápse ರಿಲ್ಯಾಪ್ಸ್ (ಕ್ರಿ. ಅಕ., ನಾ.) (ತಪ್ಪು ದಾರಿ, ಪಾಪಕಾರ್ಯ, ಕಾಯಿಲೆ, ಮೊ. ಕ್ಕೆ) ಮತ್ತೆ—ಬೀಳು, ಇಳಿ ; ಮರುಕೊಳಿಸು (*Into* ಉಪ. ದೊಡನೆ) ; (ಸ್ಥಿತಿ, ಮೊ. ವು) ಮತ್ತೆ—ಕೆಡು, ಕೆಟ್ಟುಹೋಗು. (ನಾ.) (ಕ್ರಿಯಾರ್ಥಗಳಲ್ಲಿ) ; (ಮು., ರೋಗಿಯ ಸ್ಥಿತಿ : ಸ್ವಲ್ಪ ಗುಣ ಹೊಂದಿದಮೇಲೆ) ಮರುಕೊಳಿಸುವುದು.

Reláte ರಿಲೇಟ್ (ಕ್ರಿ.) ಹೇಳು ; ವಿವರಿಸು ; ಕಥಿಸು ; ಒಕ್ಕಣಿಸು [**Reláter** (ನಾ.)] . ಸಂಬಂಧ —ಕಲ್ಪಿಸು, ಸ್ಥಾಪಿಸು ; ಸಂಬಂಧಿಸು (*To*, *with* ಉಪ. ದೊಡನೆ ಸಹ) (Cannot r. the phenomena with *or* to anything we know *or* to each other). (ಭೂ. ಕೃ.) ಸಂಬಂಧಪಟ್ಟ ; (ರಕ್ತದ ಅಥವಾ ಮದುವೆಯ) ಸಂಬಂಧ ವುಳ್ಳ, ನಂಟುಳ್ಳ (Is related to the royal family). ಸಂಬಂಧ ವಿರು, ಸಂಬಂಧ ಪಡೆದಿರು (*To* ಉಪ. ದೊಡನೆ). **Relátedness** (ನಾ.) ; **Relátion** (ನಾ.) ಕಥನ. (ನ್ಯಾ. ಶಾ.) (ತಕ್ಕ ಕಾರ್ಯ ಕ್ರಮ ತೆಗೆದುಕೊಳ್ಳುವುದಕ್ಕಾಗಿ ಸರ್ಕಾರಿ ವಕೀಲನಿಗೆ) ವಿಷಯ, ವರ್ತ ಮಾನ, —ತಿಳಿಸುವುದು, ಮುಂದಿಡುವುದು. ಸಂಬಂಧ ; ಸಂಬಂಧ ಪಟ್ಟಿರುವ ರೀತಿ. [Relations are rather strained ಸಂಬಂಧ— ಹಳಸಿಕೊಂಡಿದೆ, ಬಿಗಡಾಯಿಸಿಕೊಂಡಿದೆ ; ಮನಸ್ತಾಪವುಂಟಾಗಿದೆ. In, (ಅಥವಾ ವಿರ. ಪ್ರ.) with, r. to —ಸಂಬಂಧದಲ್ಲ, —ವಿಷಯವಾಗಿ]. (ವಿರ. ಪ್ರ.) ರಕ್ತ ಸಂಬಂಧ ; ಬಾಂಧವ್ಯ, ನಂಟು (ರೂಪ. ಸಹ) [ಈಗ ಸಾ., **Relátionship** (ನಾ.)] . (ರಕ್ತ) ಸಂಬಂಧಿ; ಬಂಧು; ನಂಟ(ಳು). **Relátional** (ಗು.) ; **Relátionally** (ಕ್ರಿ. ವಿ.) ; **Relátionless** (ಗು.) ; **Relátive** ರಿಲಟಿವ್ (ಗು., ನಾ.) (ವ್ಯಾ.) (ವ್ಯಕ್ತವಾಗಿರುವ ಅಥವಾ ಅಧ್ಯಾಹಾರದ ಪೂರ್ವ ಗಾಮಿ ಪದಕ್ಕೆ ಅಥವಾ ವಾಕ್ಯಕ್ಕೆ) ಸಂಬಂಧ ಸೂಚಿಸಿ ಅಧೀನ ವಾಕ್ಯವನ್ನು ಸೇರಿಸುವ : ಸಂಬಂಧ ಸೂಚಕ ; ಸಂಬಂಧ ವಾಚಕ ; ಸಂಬಂಧಕ [R. pronoun ಸಂಬಂಧಾರ್ಥಕ ಸ. ನಾ. (ಉದಾ., The man *whom* you saw); R. adjective —ಗುಣವಾಚಕ (ಉದಾ., *Which* things are an allegory) ; R. adverb —ಕ್ರಿಯಾವಿಶೇಷಣ (The place *where* he died)] . (ಉಪ ವಾಕ್ಯದ ವಿಷಯದಲ್ಲಿ) ಪೂರ್ವಗಾಮಿ ಪದಕ್ಕೆ ಸಂಬಂಧಸೂಚಕ ಶಬ್ದದಿಂದ ಸೇರಿಸಿರುವ, ಸಂಬಂಧಿಸಿದ. (ವಿರ. ಪ್ರ.) ಪರಸ್ಪರ ಸಂಬಂಧವುಳ್ಳ ; ಯಾವುದಾದರೊಂದು ರೀತಿಯಲ್ಲಿ ಹೊಂದಿಕೆಯುಳ್ಳ, ಸಾಮ್ಯವುಳ್ಳ ; ಅನ್ಯೋನ್ಯ ಸಂಬಂಧವಿರುವ (Different yet r. designs). (ವಿರ. ಪ್ರ.) ಸಂಗತವಾದ, ಸಂಬದ್ಧ, ವಿಷಯಕ್ಕೆ ಸಂಬಂಧಿಸಿದ (Without some more r. proof). ತಾರತಮ್ಯದ; ತಾರತಮ್ಯವಾಗಿ—ಹೆಚ್ಚಿನ, ಕಡಮೆಯ (What are the r. merits of the two ? Made the next attempt with r. coolness). ಪರಸ್ಪರ ; ಸಾಪೇಕ್ಷ (Their r. positions are the same though they are miles apart) ; (ಮತ್ತೊಂದಕ್ಕೆ) ಅನುಸಾರ ವಾದ (Supply is r. to demand) ; ತುಲನಾತ್ಮಕ, ಸಾಪೇಕ್ಷ (*Heat*, *speed*, *strength*, are r. words) ; ಪರಸ್ಪರ ಸಂವಾದಿಯಾದ (The conceptions of husband & wife are r. to each other) ; ಉಪಾಧಿ ವಿಶಿಷ್ಟ, ಸಂಬಂಧ ವಶ, ಸಂಬಂಧಾವಲಂಬಿ (Beauty is r. to the beholder's eye) ; (—ಗೆ) ಸಂಬಂಧಪಟ್ಟ (*To* ಉಪ. ದೊಡನೆ) (Detailed the facts r. to the matter). [(ಶಿಥಿಲವಾಗಿ ಕ್ರಿ. ವಿ.) I wrote to him r. to renewal of the lease ಗುತ್ತಿಗೆ ಕರಾರನ್ನು ಹೊಸದಾಗಿ ಮಾಡಿ ಕೊಳ್ಳುವ ವಿಷಯವಾಗಿ—] . (ನಾ.) (ವ್ಯಾ.) ಸಂಬಂಧಾರ್ಥಕ ಪದ (ಮು., ಸಂಬಂಧಾರ್ಥಕ ಸರ್ವನಾಮ) (The principal relatives are *who*, *which*, *that*, *what*). (ತ. ಶಾ.) ಸಾಪೇಕ್ಷ ವಸ್ತು, —ಪದ. (ರಕ್ತ) ಸಂಬಂಧಿ ; ನಂಟ(ಳು). **Rélatively** (ಕ್ರಿ. ವಿ.); **Relatíval** —ಟೈ— (ಗು.) ; **Rélativism** —ಟಿ— (ನಾ.) ಜ್ಞಾನ ಎನ್ನುವುದು ಕೇವಲ ಸಂಬಂಧಗಳ ಅರಿವು ಎಂಬ ವಾದ ; ಸಂಬಂಧ ವಾದ. **Rélativist** (ನಾ.); **Relatívity** (ನಾ.) ಪರಸ್ಪರತೆ ; ಸಾಪೇಕ್ಷತ್ವ. (ತ. ಶಾ.) ಆಕಾಶ-ಕಾಲವೆಂಬುದನ್ನು (Space-time) ಚತುಃಪ್ರಮಾಣವನ್ನಾಗಿ ಎಣಿಸಿ, ಎಲ್ಲ ಚಲನೆಯೂ ಸಂಬಂಧಾವಲಂಬಿಯೆಂಬ ತತ್ತ್ವದ ಆಧಾರದಮೇಲೆ ಐನ್‌ಸ್ಟೈನ್ ಕಲ್ಪಿಸಿದ ವಿಶ್ವದ ಸಿದ್ಧಾಂತ : ಸಂಬಂಧ ಸಿದ್ಧಾಂತ. **Relátor** (ನಾ.) (ನ್ಯಾ. ಶಾ.) ಸರ್ಕಾರಿ ವಕೀಲನಿಗೆ ಸುದ್ದಿ, ವಿಷಯ, ತಿಳಿಸು ವವನು. (ಈಗ ವಿರ. ಪ್ರ.) ಹೇಳುವವನು ; ಕಥಕ.

Relá x ರಿಲ್ಯಾಕ್ಸ್ (ಕ್ರಿ.) ಸಡಿಲಬಿಡು ; —ಬಿಡಿಸು ; ಸಡಿಲಿಸು ; ಸಡಿಲವಾಗು ; ಬಲಗುಂದಿಸು ; ಬಿಗುಪು, ಬಿಗುಮಾನ, ಕಾಠಿನ್ಯ, ಸಂಪ್ರದಾಯಾನುಸರಣೆ, ಶಕ್ತಿ, ಶ್ರದ್ಧೆ, —ತಗ್ಗಿಸು, ತಗ್ಗು, ಕಡಮೆ ಮಾಡು, ಕಡಮೆಯಾಗು [R. the bowels ಮಲವಿಸರ್ಜನೆಮಾಡು, —ಮಾಡಿಸು. R. the muscles, discipline, a rule, one's attention, one's efforts. Relaxed throat ಒಂದು ಬಗೆಯ ಗಂಟಲ —ಹುಣ್ಣು, ಉರಿಯೂತ. Place has a relaxing climate ಸ್ಥಳ ಶಕ್ತಿಗುಂದಿಸುವ ವಾಯುಗುಣವನ್ನು ಪಡೆದಿದೆ (ಎದುರು ಪದ : Bracing). His bold, endeavours, relaxed] . (ಮನಸ್ಸು) ಮೃದುವಾಗು, ಕರಗು. **Relaxátion** (ನಾ.) (ದಂಡ, ಸುಂಕ, ಮೊ. ಗಳ) ಸ್ವಲ್ಪ —ಇಳಿತ, ವಿನಾಯಿತಿ, ರಿಯಾಯಿತಿ (*Of* ಉಪ. ದೊಡನೆ). ಕೆಲಸದಿಂದ ಬಿಡುವು ; ವಿಶ್ರಾಂತಿ ; ವಿನೋದಗಳು ಬಿಗಿತ, ಕಾಠಿನ್ಯ, ಕಟ್ಟುನಿಟ್ಟು, —ಕಡಮೆಯಾಗುವುದು ; ಸಡಿಲ

Relaý ರಿಲೇ (ನಾ., ಕ್ರಿ.) ದಣಿದ ಕುದುರೆಗಳಿಗೆ ಬದಲಾಗಿ ಹೂಡುವ ಹೊಸ ಕುದುರೆಗಳ ತಂಡ ; ಟಪ್ಪಾ ಕುದುರೆಗಳ ತಂಡ. (ಇದೇ ರೀತಿ) ಬದಲಿಗೆ ಬರುವ ಕೂಲಿ ಜನರ ತಂಡ, ಸಾಮಗ್ರಿಗಳ ಸರಬರಾಜು, ಮೊ. ವು ; ಸರದಿಯ—ಆಳುಗಳು, ಕೆಲಸಗಾರರು, ಸಾಮಗ್ರಿಗಳು (R.-race ಆಯಾ ತಂಡದಲ್ಲ ಒಬ್ಬನು ಒಂದು ಮಜಲಿನಿಂದ ಮುಂದಿನ ಮಜಲಿಗೆ ಓಡಿ ನಿಲ್ಲುವ, ಅಲ್ಲಿನವನು ಅಲ್ಲಿಂದ ಮುಂದಿನ ಮಜಲಿಗೆ ಓಡುವ, ಹೀಗೆ ಆಯಾ ತಂಡದಲ್ಲ ಪ್ರತಿಯೊಬ್ಬನೂ ಮುಂದಿನ ಮಜಲಿಗೆ ಓಡಿ, ಕೊನೆಗಿರುವವನು ಗುರಿಯನ್ನು ಮುಟ್ಟುವ ಓಟದ ಪಂದ್ಯ : ಟಪ್ಪೆ ಓಟದ ಪಂದ್ಯ ; ಮಜಲು ಓಟದ ಪಂದ್ಯ). (ದೂರಲೇಖನ) ಬಹು ದೂರದಿಂದ ಬಂದು ಕುಗ್ಗಿದ (ಬಲವುಳ್ಳ) ವಿದ್ಯುತ್ಪ್ರವಾಹವನ್ನು ಸ್ಥಳೀಯ ವಿದ್ಯುತ್ಕೋಶ ಶ್ರೇಣಿಯ ಸಹಾಯದಿಂದ ಬಲಪಡಿಸುವ ಸಲಕರಣೆ : ವಿದ್ಯುತ್ಪ್ರವಾಹ ಬಲವರ್ಧಕ. (ಕ್ರಿ.) ಟಪ್ಪೆ(ಯಾಗಿ) ವ್ಯವಸ್ಥೆಗೊಳಿಸು, ಏರ್ಪಡಿಸು ; ಟಪ್ಪೆಯನ್ನು ಒದಗಿಸು ; (ಕುದುರೆ, ಜನ, ಮೊ.) ಹೊಸ ತಂಡವನ್ನು —ಹೂಡು, ಪಡೆ. (ನಿಸ್ತಂತು ವಾರ್ತೆ) ಬೇರೊಂದು ಪ್ರಸಾರಕ ಸ್ಥಾನದಿಂದ ಬಂದ ಸಂದೇಶವನ್ನು ಅಥವಾ ಕಾರ್ಯ ಕ್ರಮವನ್ನು ತಾನು ಮತ್ತೆ ಪ್ರಸಾರಮಾಡು; ಪುನಃ ಪ್ರಸಾರಣಮಾಡು.

Re-laý ರೀಲೇ (ಕ್ರಿ. ಸಕ.) ಮತ್ತೆ—ಇಡು, ಹಾಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Releáse ರಿಲೀಸ್ (ಕ್ರಿ. ಸಕ., ನಾ.) (ನ್ಯಾ. ಶಾ.) (ಸಾಲ, ಹಕ್ಕು, ಆಸ್ತಿ —ಇವನ್ನು) ಬಿಟ್ಟುಕೊಡು, ಬಿಟ್ಟುಬಿಡು [**Releaseé** —ಸೀ (ನಾ.) (ಹಕ್ಕನ್ನಾಗಲಿ, ಆಸ್ತಿಯನ್ನಾಗಲಿ) ಬಿಡಿಸಿಕೊಂಡವನು, **Releásor** (ನಾ.) ಬಿಟ್ಟುಕೊಟ್ಟವನು]. (—ಇಂದ) ಬಿಡಿಸು, ಬಿಡುಗಡೆಮಾಡು, ವಿಮೋಚನೆಮಾಡು (*From* ಉಪ. ಪೊಡನೆ). (ಚಲನ ಚಿತ್ರ) ಚಲಚ್ಚಿತ್ರ (ಪಟಲ)ವನ್ನು ಮೊದಲ ಸಲ ಪ್ರದರ್ಶಿಸು, ಪ್ರದರ್ಶನಕ್ಕೆ ಬಿಡು. (ನಾ.) (ತೊಂದರೆ, ಮೊ. ಗಳಿಂದ) ಬಿಡುಗಡೆ, ವಿಮೋಚನೆ, ಮುಕ್ತಿ. ಬಿಡುಗಡೆಯ ಚೀಟಿ; ಸಲ್ಲಿಕೆ ಚೀಟಿ; ರಸೀತಿ. ಹಕ್ಕನ್ನಾಗಲಿ (ಸ್ಥಿರ) ಸ್ವತ್ತನ್ನಾಗಲಿ ಕಾನೂನು ಪ್ರಕಾರ ಮತ್ತೊಬ್ಬನಿಗೆ ವಹಿಸಿಕೊಡುವುದು, ಬಿಟ್ಟುಕೊಡುವುದು: ಬಿಡುಗಡೆ; ಬಿಡುಗಡೆಯ ಪತ್ರ,—ದಸ್ತೈವಜು. ಯಂತ್ರ, ಮೊ. ಗಳ ಒಂದು ಭಾಗವನ್ನು ಚಲಿಸಲು ಬಿಡುವ ಹಿಡಿ, ತಡೆ, ಕೊಂಡಿ. **Releásable** (ಗು.)

Rélegate ರೆಲಿಗೇಟ್ (ಕ್ರಿ. ಸಕ.) ಗಡೀಪಾರು ಮಾಡು (*To* ಉಪ. ಪೊಡನೆ); (ಸಾ., ಕೆಳ ದರ್ಜೆಯ ಸ್ಥಾನ, ಕ್ಷೇತ್ರ, ಅಧಿಕಾರ, ಮೊ. ಗಳಿಗೆ) ಕಳುಹಿಸಿಬಿಡು, ತಳ್ಳಿಬಿಡು (*To* ಉಪ. ಪೊಡನೆ); (ವಿಷಯವನ್ನು ತೀರ್ಮಾನಕ್ಕಾಗಿ ಅಥವಾ ನಿರ್ವಹಣಕ್ಕಾಗಿ ಒಬ್ಬನಲ್ಲಿಗೆ) ವರ್ಗಾಯಿಸು, (ಒಬ್ಬನನ್ನು ಅವನಿಗೆ ಬೇಕಾದ ಸುದ್ದಿ, ಮೊ. ಕ್ಕಾಗಿ) (—ರ) ಬಳಿಗೆ ಕಳುಹಿಸು (*To* ಉಪ. ಪೊಡನೆ). **Rélegable** (ಗು.); **Relegátion** (ನಾ.)

Relént ರಿಲೆಂಟ್ (ಕ್ರಿ. ಅಕ.) ಮರುಕ ತೋರು; ಕಾರುಣ್ಯ, ದಯೆ, —ತಾಳು; ದಯಾರ್ದ್ರನಾಗು; ಪಟ್ಟು ಸಡಿಲಿಸು; ಖಂಡಿತತನವನ್ನು ಇಳಿಸು; ಮನಸ್ಸು ಕರಗು; ಮೃದುವಾಗು; ಕಾಠಿರ್ಯ, ಕಾಠಿನ್ಯತೆ, ನಿಷ್ಠುರತೆ, —ಬಿಡು, ಕಡಮೆ ಮಾಡು, ತಗ್ಗಿಸು. **Reléntingly** (ಕ್ರಿ. ವಿ.); **Reléntless** (ಗು.); **Reléntlessly** (ಕ್ರಿ. ವಿ.); **Reléntlessness** (ನಾ.)

Rélevant ರೆಲಿವಂಟ್ (ಗು.) ಪ್ರಕೃತ, ಪ್ರಸಕ್ತ, —ವಿಷಯಕ್ಕೆ ಸಂಬಂಧಪಟ್ಟ; ಸುಸಂಬದ್ಧ; ಸಂಗತವಾದ (*To* ಉಪ. ಪೊಡನೆ). **Rélevantly** (ಕ್ರಿ. ವಿ.); **Rélevance** (ನಾ.); **Rélevancy** (ನಾ.)

Relíable, etc., Relíance, etc. Rely ನೋಡಿ.

Rélic ರೆಲಿಕ್ (ನಾ.) ಸಾಧು ಸಂತರ ಮರಣಾನಂತರ ಪೂಜ್ಯ ವಸ್ತುವಾಗಿ ಕಾದಿಟ್ಟ, ಅವರ ದೇಹದ ಅಥವಾ ಅವರಿಗೆ ಸೇರಿದ ವಸ್ತುಗಳ ಭಾಗ; (ಸಾಧು ಸಂತರ) ಸ್ಮಾರಕ(ವಸ್ತು), ಅವಶಿಷ್ಟ. (ಬ. ವ. ದಲ್ಲಿ) ಹೆಣ; ಕಳೇಬರ; ಅವಶೇಷಗಳು. (ಬ. ವ. ದಲ್ಲಿ) ನಾಶಕ್ಕೆ ಸಿಕ್ಕಿ ಉಳಿದದ್ದು. (ಒಂದು ಪ್ರಾಚೀನ ಪದ್ಧತಿ, ನಂಬಿಕೆ, ಕಾಲ, ಜನ, ಮೊ. ಗಳ) ಉಳಿಕೆ; ಪ್ರಾಚೀನಾವಶೇಷ.

Rélict ರೆಲಿಕ್ಟ್ (ನಾ.) ವಿಧವೆ (ಸಾ., His, etc. r. *or* r. of). (ವಿರ. ಪ್ರ.) = Relic.

Relíef[1] ರಿಲೀಫ್ (ನಾ.) (ನೋವು, ವ್ಯಥೆ, ಕಳವಳ, ಮೊ. ಗಳ) ಉಪಶಮನ, ಪರಿಹಾರ, ಹಗುರ, ಬಿಡುಗಡೆ. (ಏಕ ರೀತಿಯನ್ನು ತಪ್ಪಿಸಿ) ವೈವಿಧ್ಯ ತೋರಿ ಉಲ್ಲಾಸಗೊಳಿಸುವ, (ಭಾವದ ಬಿಗಿತವನ್ನು ಅಥವಾ ಭಾವೋದ್ರೇಕವನ್ನು ಸಡಿಲಿಸಿ) ಮನಸ್ಸನ್ನು ರಂಜನೆಗೊಳಿಸುವ, —ಪ್ರಕರಣ, ಅಂಶ, ವೈಶಿಷ್ಟ್ಯ; ಬೇಸರಿಂತೆಗೆ; ವೈವಿಧ್ಯಕಾರಿ; ವೆಗಟುಮುರಿ; ವಿನೋದ (A comic scene follows by way of r.). (ಮು., Poor Law ಎಂಬ ಕಾನೂನನುಸರಿಸಿ) ಬಡಬಗ್ಗರಿಗೆ ಸಹಾಯ; ಆಪತ್ತಿಗೆ ಈಡಾದವರಿಗೆ, ಆಪತ್ಕಾಲದ, —ಸಹಾಯ (A r. fund for the earthquake victims. R. works ನಿರುದ್ಯೋಗಿಗಳಿಗೆ ಕೆಲಸ ಒದಗಿಸಿ ಅವರ ಜೀವನ ನಡಸುವುದಕ್ಕಾಗಿ ಕೈಕೊಂಡ ಕಟ್ಟಡ, ಮೊ. ಗಳ ಕಾಮಗಾರಿ: ನಿರುದ್ಯೋಗ ಪರಿಹಾರದ ಕಾಮಗಾರಿಗಳು). (ಹೆಚ್ಚಿನ) ಸೇನಾ ಸಹಾಯ; (ಮು., ಶತ್ರುಗಳು ಮುತ್ತಿಗೆ ಹಾಕಿದ್ದ ಪಟ್ಟಣದ) ಮುತ್ತಿಗೆ ಬಿಡಿಸುವುದು, ತೆಗಸುವುದು (*Of* ಉಪ. ಪೊಡನೆ). (ಕೆಲಸದ) ಸರತಿಗೆ ನೇಮಕವಾದವನು(ರು) (ಸರತಿ ವಹಿಸಿಕೊಳ್ಳುವುದು). (ತೊಂದರೆಗೆ, ಕಷ್ಟನಿಷ್ಠುರಗಳಿಗೆ) ಪರಿಹಾರ.

Reliéve (ಕ್ರಿ. ಸಕ.) ಉಪಶಮನ, ನೆಮ್ಮದಿ, ಪರಿಹಾರ, ಸಹಾಯ, —ತರು, ಕೊಡು; ಹೆಚ್ಚಿನ ಸೇನಾ ಸಹಾಯ ಒದಗಿಸು; ಮುತ್ತಿಗೆ ತೆಗಸು; ಬೇಸರ ಕಳೆ; ವೈವಿಧ್ಯವುಂಟುಮಾಡು; ಸರತಿ ವಹಿಸಿಕೊ [Town was relieved. Am much relieved to hear it ಅದನ್ನು ಕೇಳಿ ಮನಸ್ಸಿಗೆ ನೆಮ್ಮದಿಯಾಯಿತು. Relieving officer ಬಡಬಗ್ಗರಿಗೆ ಸಹಾಯ ವಿನಿಯೋಗಮಾಡುವ ಜವಾಬ್ದಾರಿಯುಳ್ಳ ಒಬ್ಬ ಗ್ರಾಮಾಧಿಕಾರಿ; ದರಿದ್ರರ ಸಹಾಯಾಧಿಕಾರಿ. Relieving arch ಕೆಳ ಭಾಗದಮೇಲೆ ಭಾರ ಬೀಳದಂತೆ ಗೋಡೆಯಲ್ಲೆ (ಸಾ., ಬಾಗಿಲನ ಮೇಲ್ಭಾಗದಲ್ಲಿ) ಮಾಡಿರುವ ಆಳವಿಲ್ಲದ ಕಮಾನು: ಭಾರ ನಿವಾರಣೆಯ ಕಮಾನು. R. one's feelings (ಕೋಪವನ್ನು, ದುಃಖವನ್ನು, —ಹೊರ ಸೂಸಿ) ಮನಸ್ಸು ಹಗುರಮಾಡಿಕೊ. R. nature ದೇಹಬಾಧೆ ತೀರಿಸಿಕೊ; ಮಲಮೂತ್ರ ವಿಸರ್ಜನೆ ಮಾಡು. R. guard (Guard ನಾ. ನೋಡಿ). R. one of load ಒಬ್ಬನ ಹೊರೆ —ಇಳಿಸು, ತಾನು ತೆಗೆದುಕೊ (ಹಾಸ್ಯ ಪ್ರ.: A tramp relieved him of his purse ಒಬ್ಬ ಪೋಲಿ ಅವನ ಹಣದ ಗಂಟನ್ನು ಎತ್ತಿಹಾಕಿದನು, ಕಿತ್ತುಕೊಂಡನು)]. ಸ್ಪಷ್ಟವಾಗಿ ಕಾಣುವಂತೆ, ಎದ್ದುಕಾಣುವಂತೆ, —ಮಾಡು; (ಘನ ರೂಪದಲ್ಲಿ ಅಥವಾ ವಿವಿಕ್ತ ರೂಪದಲ್ಲಿ) ಉಬ್ಬುಚಿತ್ರವಾಗಿ ಪ್ರದರ್ಶಿಸು (ಮು., ಭೂ. ಕೃ. ನಲ್ಲಿ: ಅನೇಕ ವೇಳೆ *against* ಉಪ. ಪೊಡನೆ). **Reliévable** (ಗು.)

Relíef[2] ರಿಲೀಫ್ (ನಾ.) ಅನುಕರಿಸಿದ ವಸ್ತುವಿಗಿರುವಂತೆಯೆ ಉಬ್ಬುಗಳಿದ್ದು ಸಮತಲ ಅಥವಾ ವಕ್ರತಲ ಕ್ಷೇತ್ರದಿಂದ ಎದ್ದುಕಾಣುವಂತೆ ಮಾದರಿಯನ್ನು ಅಚ್ಚೊತ್ತುವ, ಕೊರೆಯುವ ಅಥವಾ ಢಾಪಿಸುವ ವಿಧಾನ: ಉಬ್ಬುಚಿತ್ರ ಪದ್ಧತಿ (High, low, r. ಹೆಚ್ಚುಬ್ಬು, ತುಸ ಉಬ್ಬು, ಚಿತ್ರ ಪದ್ಧತಿ). ಉಬ್ಬು ಶಿಲ್ಪ, ಉಬ್ಬುಚಿತ್ರ, ಮೊ. ವು. (ರೇಖೆ, ಬಣ್ಣ ಅಥವಾ ಛಾಯೆಯನ್ನು ಅಳವಡಿಸಿರುವ ರೀತಿಯಿಂದ) ಉಬ್ಬುಚಿತ್ರದ(ಂತೆ) ತೋರಿಕೆ. ಎದ್ದುಕಾಣುವುದು; ರೂಪ ರೇಖೆಯ ಸ್ಪಷ್ಟತೆ (ರೂಪ. ಸಹ); ಸ್ಫುಟತ್ವ (Stands out in r. Bring out the facts in full r.). R. map ಒಂದು (ಪ್ರ)ದೇಶದ ಏರು ತಗ್ಗುಗಳನ್ನು ತೋರಿಸುವ ನಕ್ಷೆ; ತಗ್ಗು ತಿಟ್ಟು (ತೋರಿಕೆಯ) ಭೂಪಟ. ಬೆಟ್ಟಗಳನ್ನೂ ಕಣಿವೆಗಳನ್ನೂ (ಆಕೃತಿ ರೇಖೆಗಳಿಂದ ಮಾತ್ರವೇ ತೋರಿಸದೆ) ಛಾಯೆ, ಬಣ್ಣ, ಮೊ. ಗಳಿಂದ ತೋರಿಸುವ ಸಾಧಾರಣ ಭೂಪಟ.

Reliéve. Relief[1] ನೋಡಿ.

Reliévo ರಿಲೀವೊ (ನಾ.) = Relief[2] (ಮು., ವಾಚ್ಯಾರ್ಥದಲ್ಲಿ) [Alto, Basso, -r. (ಆಯಾ ಪದವನ್ನು ನೋಡಿ.) Mezzo-r. = Mezzo-rilievo (Mezzo ನೋಡಿ)]

Relígion ರಿಲಿಜ್(ಜ)ನ್ (ನಾ.) ಮತ; ಧರ್ಮ; ಈಗ ಪ್ರಚಲಿತವಾಗಿರುವ ಮತಗಳಲ್ಲೊಂದು [The Christian, Mohammedan, r.; Established r. ರಾಜ್ಯಾಂಗೀಕೃತ (ಕ್ರೈಸ್ತ) ಮತ, ಧರ್ಮ. Natural, Revealed, r. (ಆಯಾ ಪದವನ್ನು ನೋಡಿ)]. ತಾನು ಒಂದು ಅತಿಮಾನುಷ ಶಕ್ತಿಯ ಅಧೀನನೆಂದೂ, ಮುಖ್ಯವಾಗಿ ತನ್ನ ಭಕ್ತಿ ವಿಧೇಯತೆಗಳು ಸಲ್ಲತಕ್ಕ ದೇವರೊಬ್ಬನು ಇದ್ದಾನೆಂದೂ ಮನುಷ್ಯನು ಇಟ್ಟುಕೊಂಡಿರುವ ತಿಳಿವಳಿಕೆ, ನಂಬಿಕೆ: ದೈವ ಭಾವನೆ; ದೈವ ನಿಷ್ಠೆ; ಆಸ್ತಿಕತೆ; ನಡತೆ ಮತ್ತು ಮನೋಭಾವಗಳ ಮೇಲೆ ದೈವ ನಿಷ್ಠೆಯ, ಆಸ್ತಿಕತೆಯ, ಪರಿಣಾಮ [Get r. (ಗ್ರಾಮ್ಯ ಅಥವಾ ಹಾಸ್ಯ ಪ್ರ.) ಆಸ್ತಿಕನಾಗು; ಮತ ಶ್ರದ್ಧೆ ಪಡೆ]. (ಒಬ್ಬನ) ಅವಶ್ಯ ಕರ್ತವ್ಯ, ಧರ್ಮ, ಕರ್ಮ (Make a r. of *doing*). (ವಿರ. ಪ್ರ.) ಮತಕರ್ಮಾಚರಣೆ. ಸಂನ್ಯಾಸ; ಸಂನ್ಯಾಸಿ(ನಿ)ಯಾಗಿರುವುದು; ಸಂನ್ಯಾಸಾಶ್ರಮ (ದಲ್ಲಿರುವುದು) (Enter into, be in, r.). (ವಿರ. ಪ್ರ.) (ಕ್ರೈಸ್ತ) ಸಂನ್ಯಾಸಿಗಳ ಭ್ರಾತೃ ವರ್ಗ; ಸಂನ್ಯಾಸಿ ಪಂಥ. **Relígionless** (ಗು.); **Relígioner** (ನಾ.) ಸಂನ್ಯಾಸಿ (ವರ್ಗದವನು); ಅತಿಯಾದ ಮತನಿಷ್ಠೆಯುಳ್ಳವನು. **Relígionism** (ನಾ.) ಮತದ, ಧರ್ಮದ, —ಶ್ರದ್ಧಾತಿರೇಕ. **Relígionist** (ನಾ.); **Relígionize** (ಕ್ರಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತಕ್ಕೆ ಪರಿವರ್ತಿಸು ; ಅಸ್ತಿಕನನ್ನಾಗಿ ಮಾಡು ; ಮತಶ್ರದ್ಧೆ —ತುಂಬು, ತೋರಿಸು. **Relígiose** —ಯೋಸ್ (ಗು.) ಧರ್ಮ ಶ್ರದ್ಧಾತಿರೇಕದ ; ಧರ್ಮಶ್ರದ್ಧೆಯ —ತೋರಿಕೆಯ, ಬಾಹ್ಯಾಚರಣೆಯ. **Religiósity** —ಯಾಸಿಟಿ (ನಾ.) ಮಿತಿಮೀರಿದ ಧರ್ಮ ಶ್ರದ್ಧೆ(ಯುಳ್ಳವನಾಗಿರುವುದು) ; ಮತಶ್ರದ್ಧಾ ವಿಕಾರ. **Relígious** —ಜಸ್ (ಗು., ನಾ.) ಆಸ್ತಿಕ್ಯದ ; ಮತಶ್ರದ್ಧೆಯುಳ್ಳ ; ಧರ್ಮನಿಷ್ಠ ; ಶ್ರದ್ಧಾಭಕ್ತಿಗಳುಳ್ಳ; ದೈವಭೀತಿಯುಳ್ಳ ; ದೈವಭಕ್ತಿಯುಳ್ಳ. ಸಂನ್ಯಾಸಿಗಳ ಭ್ರಾತೃವರ್ಗದ; —ಕ್ಕೆ ಸೇರಿದ ; ಮತದ ; ಧರ್ಮದ. ಚ, ಚು ತಪ್ಪದ (With r. care, exactitude, etc.). ಸಂನ್ಯಾಸ ವ್ರತದವನು(ಳು) ; ಸಂನ್ಯಾಸಿ(ನಿ). **Relígiously** (ಕ್ರಿ. ವಿ.) ; **Relígiousness** (ನಾ.)

Relínquish ರಿಲಿಂಕ್ವಿಷ್ (ಕ್ರಿ. ಸಕ.) (ಅಭ್ಯಾಸ, ಯೋಜನೆ, ಆಸೆ, ನಂಬಿಕೆ, ಹಕ್ಕು, ಸ್ವಾಧೀನಾನುಭವ—ಇವನ್ನು) ಬಿಟ್ಟುಬಿಡು, ಬಿಟ್ಟುಕೊಡು, ತೊರೆ, ತ್ಯಜಿಸು ; ಹಿಡಿತ(ಸಡಿಲ)ಬಿಡು. **Relínquishment** (ನಾ.)

Réliquary ರೆಲಿಕ್ವರಿ (ನಾ.) ಅವಶೇಷಗಳನ್ನಿಡುವ —ಪಾತ್ರೆ, ಸಂಪುಟ.

Relíquiae (L) ರಿಲಿಕ್ವಿಈ (ನಾ., ಬ. ವ.) ಅವಶೇಷಗಳು ; ಉಳಿಕೆಗಳು. (ಭೂ. ವಿ.) (ಪ್ರಾಣಿಗಳ ಅಥವಾ ಸಸ್ಯಗಳ) ಪಳೆಯುಳಿಕೆಗಳು ; (ಸ. ವಿ.) ಕಾಂಡದಮೇಲೆಯೆ ಕ್ಷಯಿಸುತ್ತಿರುವ ಸೊರಗಿದ ಎಲೆಗಳ ಅವಶೇಷ ; ಜೀರ್ಣ ಪರ್ಣಾವಶೇಷ.

Rélish ರೆಲಿಷ್ (ನಾ., ಕ್ರಿ.) ರುಚಿ ; ಸವಿ ; (ಒಂದರ) ವಿಶಿಷ್ಟ ರುಚಿ (*Of* ಉಪ. ದೊಡನೆ) ; (ಯಾವುದಾದರೊಂದು ಗುಣದ) ರೇಖೆ, ಛಾಯೆ (*Of* ಉಪ. ದೊಡನೆ). ಹಸಿವುಂಟುಮಾಡುವ ರುಚಿ. ಆಕರ್ಷಕ ಗುಣ (Horseplay loses its r. after childhood) ಸಾಮಾನ್ಯ ಆಹಾರದ ರುಚಿ ಹೆಚ್ಚಿಸಲು ಜೊತೆಗೆ ತಿನ್ನುವ ಪದಾರ್ಥ : ವ್ಯಂಜನ ; ನಂಜಿಕೊಳ್ಳುವ ವಸ್ತು. (ಆಹಾರ ಅಥವಾ ಇತರ ವಸ್ತುಗಳನ್ನು) ಒಳ್ಳೆಯ ಅಭಿರುಚಿಯಿಂದ, ಇಷ್ಟಪೂರ್ತಿಯಾಗಿ, —ಸೇವಿಸುವುದು ; ಕಟ್ಟಕ್ಕರೆ, ಅಭಿರುಚಿ, ಪ್ರೀತಿ (*For* ಉಪ. ದೊಡನೆ). (ಕ್ರಿ.) ರುಚಿಕೊಡು ; ರುಚಿಸುವಂತೆ ಮಾಡು. ಆನಂದ ಪಡೆ ; ಮೆಚ್ಚು ; ಪ್ರೀತಿಸು. (—ರ) ರುಚಿ, ವಾಸನೆ, ಛಾಯೆ, ಗಂಧ, ಸೂಚನೆ, —ಇರು (*Of* ಉಪ. ದೊಡನೆ). ರುಚಿಸು (ರೂಪ. ಸಹ) (R. well, badly, etc.). **Rélishable** (ಗು.)

Relúcent ರಿಲ್ಯೂ(ಲೂ)ಸೆಂಟ್ (ಗು.) (ವಿರ. ಪ್ರ.) ಹೊಳೆಯುವ ; ಥಳಥಳಿಸುವ ; ಉಜ್ಜ್ವಲ.

Relúct ರಿಲಕ್ಟ್ (ಕ್ರಿ. ಅಕ.) ವಿಮುಖನಾಗು, ಮನಸ್ಸಿಲ್ಲದಿರು, ಒಲ್ಲದಿರು (*At, against* ಉಪ. ದೊಡನೆ). **Relúctate** (ಕ್ರಿ. ಅಕ.) = Reluct. **Reluctátion** (ನಾ.) ; **Relúctant** (ಗು.) (ಮು., ಕಾವ್ಯ) ಹೆಣಗಾಡು(ತ್ತಿರು)ವ; ಪ್ರತಿಭಟಿಸುವ; ಸಗ್ಗದ ; ಪಡೆಯಲು, ನಿರ್ವಹಿಸಲು, —ಕಷ್ಟವಾದ. ಮನಸ್ಸಿಲ್ಲದ, ಒಲವಿಲ್ಲದ, ಪ್ರವೃತ್ತಿಯಿಲ್ಲದ (Am very r. to admit. Gave me r. assistance). **Relúctantly** (ಕ್ರಿ. ವಿ.) ; **Relúctance** (ನಾ.) ಅನಿಚ್ಛೆ ; ಬೇಕಿಲ್ಲದಿರುವುದು, ಒಲ್ಲದಿರುವಿಕೆ.

Relúme ರಿಲ್ಯೂ(ಲೂ)ಮ್ (ಕ್ರಿ. ಸಕ.) (ದೀಪ, ಉರಿ—ಇವನ್ನು, ಅಥವಾ ರೂಪ.) ಮತ್ತೆ ಹೊತ್ತಿಸು ; ಪುನರುದ್ದೀಪನಮಾಡು ; (ಕಣ್ಣು, ಮೊ. ನ್ನು) ಮತ್ತೆ —ಕಳೆಗೂಡಿಸು, ಕಾಂತಿಯುಕ್ತ ಮಾಡು ; (ಆಕಾಶ, ಮೊ. ನ್ನು) ಮತ್ತೆ ಬೆಳಗಿಸು, ಪುನಃ ಪ್ರಕಾಶಗೊಳಿಸು.

Relý ರಿಲೈ (ಕ್ರಿ. ಅಕ.) (ಒಬ್ಬನಮೇಲೆ, ಒಂದರ ಮೇಲೆ) ನಂಬಿಕೆ, ನೆಚ್ಚಿಕೆ, ಭರವಸೆ, —ಇಡು ; ನೆಚ್ಚು, ನೆಚ್ಚಿಕೊಂಡಿರು, ನೆಮ್ಮು, ಅವಲಂಬಿಸಿರು [(*Up*)*on* ಉಪ. ದೊಡನೆ ; Is relying upon a broken reed ನೆಚ್ಚಿಕೆಗೆ ಅರ್ಹನಲ್ಲದವನನ್ನು, ಅರ್ಹವಲ್ಲದ್ದನ್ನು, ನೆಚ್ಚಿಕೊಂಡಿದ್ದಾನೆ]. **Relíable** (ಗು.) ನೆಚ್ಚಬಹುದಾದ ; ಭರವಸೆಯಿಡಬಹುದಾದ ; ವಿಶ್ವಾಸಾರ್ಹವಾದ ; ಖಾತರಿಯಾದ (ಗುಣ, ಯೋಗ್ಯತೆ, —ಉಳ್ಳ). **Relíableness** (ನಾ.) ; **Reliabílity** (ನಾ.) (R. trials ವೇಗಕ್ಕಿಂತ ನೆಚ್ಚಿಕೆ, ತಾಳಿಕೆ, ಬಾಳಿಕೆಗಳನ್ನು ಪರೀಕ್ಷಿಸಲು ಮಾಡುವ ಮೋಟಾರು ಬಂಡಿಗಳ ಮತ್ತು ಮೋಟಾರು ಸೈಕಲ್ಲುಗಳ ದೂರ ಓಟದ ಪರೀಕ್ಷೆ). **Relíably** (ಕ್ರಿ. ವಿ.) ; **Relíance** (ನಾ.) ನಂಬಿಕೆ, ನೆಚ್ಚಿಕೆ, ಭರವಸೆ (ಸಾ., *Upon, on, in* ಉಪ. ದೊಡನೆ). ನೆಚ್ಚಿಕೆಗೆ ಪಾತ್ರವಾದದ್ದು ; ಆಧಾರ ; ಅವಲಂಬ (The well is our chief r.). **Relíant** (ಗು.)

Remaín (ಕ್ರಿ. ಅಕ., ನಾ.) ಉಳಿ(ದಿರು) ; ಮಿಗು ; ಮಿಕ್ಕಿರು. ವಾಸಿಸು ; (ಅದೇ ಸ್ಥಳದಲ್ಲಿ ಅಥವಾ ಸ್ಥಿತಿಯಲ್ಲಿ) ಇರು ; ಅಸ್ತಿತ್ವದಲ್ಲಿರು; ಬದುಕಿರು ; ಜೀವಂತವಾಗಿರು. ಹಿಂದೆ ಉಳಿ (The luggage unfortunately remained on the platform). (ಪೂರಕ ಪದಗಳೊಡನೆ) (—) ಆಗಿರು [One thing remains certain ಒಂದು ವಿಷಯವಂತೂ ಖಂಡಿತ(ವಾಗಿದೆ). I r. yours truly (ಕಾಗದ ಪತ್ರದ ಮುಕ್ತಾಯದ ಒಕ್ಕಣೆ) : ಇಂತು ತಮ್ಮ ವಿಶ್ವಾಸಿ]. (ನಾ.) (ಸಾ., ಬ. ವ. ದಲ್ಲಿ) ಉಳಿದದ್ದು ; ಉಳಿಕೆ ; ಶೇಷ ; ಉಳಿದ—ಜನ, ಭಾಗ, ಮೊತ್ತ. [(ಬ. ವ. ದಲ್ಲಿ, ಆದರೆ ಏ. ವ. ದಂತೆ ಪ್ರ. ; ಅಥವಾ ಏ. ವ. ದಲ್ಲಿಯೆ ಪ್ರ.): Here there is the remains, a r., of a temple]. (ಸಾ., ಬ. ವ. ದಲ್ಲಿ) (ರೂಢಿಯಿಳಿದ ಪದ್ಧತಿಯ ಅಥವಾ ಪುರಾತನ ಕಟ್ಟಡ, ಸ್ಮಾರಕ, ಮೊ. ಗಳ) ಅವಶೇಷಗಳು, ಅವಶಿಷ್ಟಗಳು. (ಬ. ವ. ದಲ್ಲಿ) (ಗತಿಸಿದ) ಗ್ರಂಥಕರ್ತನು (ಹಿಂದೆ) ಬಿಟ್ಟಿರುವ, ಮು., ಇನ್ನೂ ಪ್ರಕಟವಾಗಿಲ್ಲದ ಗ್ರಂಥಗಳು, ಕೃತಿಗಳು (ಏ. ವ. ದಲ್ಲಿ, ಒಂದೇ ಗ್ರಂಥವಿರುವಲ್ಲಿ ವಿರ. ಪ್ರ.). (ಬ. ವ. ದಲ್ಲಿ) ಹೆಣ ; ಕಳೇಬರ. **Remaínder** (ನಾ., ಕ್ರಿ. ಸಕ.) (ನ್ಯಾ. ಶಾ.) (ಒಂದು ಆಸ್ತಿಯನ್ನು ಮೊದಲು ಒಬ್ಬನು ಅವನ ಜೀವಮಾನ ಪರ್ಯಂತವೂ, ಅವನ ತರುವಾಯ ಮತ್ತೊಬ್ಬನೂ ಅನುಭವಿಸುವಂತೆ ಏಕಕಾಲದಲ್ಲಿ ವರ್ಗಪತ್ರದ ಮೂಲಕ ವರ್ಗಾಯಿಸಿದಾಗ, ಆ ಆಸ್ತಿಯಲ್ಲಿ ಆ ಎರಡನೆಯವನಿಗಿರುವ) ಉಳಿಕೆಯ ಹಕ್ಕು ; ಶೇಷ ಬಾಧ್ಯತೆ [ಉದಾ., ಒಬ್ಬನು ತನ್ನ ಆಸ್ತಿಯನ್ನು A ಯು ಅವನ ಜೀವಮಾನ ಪರ್ಯಂತವೂ, ಅನಂತರ B ಯೂ ಅನುಭವಿಸುವಂತೆ ವರ್ಗಪತ್ರವನ್ನು ಬರೆದಿಟ್ಟರೆ ; B ಯ ಹಕ್ಕು 'ಉಳಿಕೆಯ ಹಕ್ಕು' ಎನ್ನಿಸಿಕೊಳ್ಳುತ್ತದೆ (Reversion ನೋಡಿ). R. man ಉಳಿಕೆಯ ಹಕ್ಕುದಾರ ; ಶೇಷ ಬಾಧ್ಯತೆಯುಳ್ಳವನು]. ಒಂದು ಪದವಿ ಅಥವಾ ಅಧಿಕಾರವನ್ನು ಅನುಭವಿಸುತ್ತಿರುವವನು ಮೃತನಾದಮೇಲೆ ಅದನ್ನು ತಾನು ಪಡೆಯುವ ಹಕ್ಕು : ಉತ್ತರಾಧಿಕಾರ(ದ ಹಕ್ಕು) [**Remaíndership** (ನಾ.)]. ಉಳಿದದ್ದು ; ಉಳಿದ—ಜನರು, ವಸ್ತುಗಳು. (ಗಣಿತ) ವ್ಯವಕಲನದನಂತರ ಉಳಿದದ್ದು ; ಶೇಷ. (ಪುಸ್ತಕ ವ್ಯಾಪಾರ) ಗಿರಾಕಿ ನಿಂತು ಮಾರಾಟವಾಗದೆ ಉಳಿದ (ಮತ್ತು ಅನೇಕ ವೇಳೆ ಕಡಮೆ ಬೆಲೆಗೆ ಕೊಡುವ) ಪುಸ್ತಕ ಪ್ರತಿಗಳು ; ಉಳಿಕೆಯ ಪ್ರತಿಗಳು. (ವಿಶೇಷಣವಾಗಿ) ಉಳಿದ ; ಶೇಷರೂಪದ. (ಕ್ರಿ.) ಉಳಿಕೆಯ ಪ್ರತಿಗಳಾಗಿ ಗಣಿಸು ; —ಗಣಿಸಿ ವಿಲೇಮಾಡು.

Remánd ರಿಮಾಂಡ್ (ಕ್ರಿ. ಸಕ., ನಾ.) ಹಿಂದಕ್ಕೆ, ವಾಪಸು, —ಕಳುಹಿಸು (*To* ಉಪ. ದೊಡನೆ ; ಸಾಮಾನ್ಯಾರ್ಥದಲ್ಲಿ ಈಗ ವಿರ. ಪ್ರ.). (ನ್ಯಾಯಸ್ಥಾನ ಅಥವಾ ದಂಡಾಧಿಕಾರಿಯ ವಿಷಯದಲ್ಲಿ) (ಹೆಚ್ಚಿನ ಸಾಕ್ಷ್ಯ ಆವಶ್ಯಕವೆಂಬ ಕಾರಣದಿಂದ, ಇನ್ನೂ ವಿಚಾರಣೆಯ ಸಲುವಾಗಿ, ಕೈದಿಯನ್ನು) ಮತ್ತೆ ಸೆರೆಗೆ ಕಳುಹಿಸು. (ನಾ.) ಹೀಗೆ ಸೆರೆಗೆವಾಪಸು ಕಳುಹಿಸುವುದು.

Rémanent ರೆಮನೆಂಟ್ (ಗು.) ಉಳಿದಿರುವ [ಈಗ R. magnetism (ಕಾಂತಶಕ್ತಿ ಪ್ರೇರಕವಾದ ವಿದ್ಯುತ್ತನ್ನು ನಿಲ್ಲಿಸಿದ ಮೇಲೆಯೂ ಕಬ್ಬಿಣದಲ್ಲಿ ಉಳಿಯುವ ಕಾಂತತೆ : ಶೇಷ ಕಾಂತತೆ) ಎಂಬಲ್ಲಿ ವಿನಾ ವಿರ. ಪ್ರ.]

Rémanet ರೆಮನೆಟ್ (ನಾ.) ಉಳಿದ ಭಾಗ ; ಉಳಿಕೆ ; ಶೇಷ. (ನ್ಯಾ. ಶಾ.) ವಿಚಾರಣೆಗಾಗಿ ಮುಂದಕ್ಕೆ ತಳ್ಳಿಟ್ಟ ವ್ಯವಹಾರ ; (ಪಾರ್ಲಿಮೆಂಟಿನಲ್ಲಿ ಅಥವಾ ಶಾಸನ ಸಭೆಯಲ್ಲಿ : ಪರ್ಯಾಲೋಚನೆಗಾಗಿ) ಮುಂದಿನ ಅಧಿವೇಶನಕ್ಕೆ ತಳ್ಳಿಟ್ಟ ಮಸೂದೆ.

Remárk ರಿಮಾರ್ಕ್ (ಕ್ರಿ., ನಾ.) (ಒಬ್ಬನನ್ನು, ಒಂದು ವಸ್ತುವನ್ನು, ಸಂಗತಿಯನ್ನು) ಗಮನಿಸು(ವುದು), ಲಕ್ಷಿಸು(ವುದು) ; ಗಮನ, ಲಕ್ಷ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(Worthy of r. ಗಮನಾರ್ಹವಾದದ್ದು). ಟೀಕೆ(ಯಾಗಿ ಹೇಳು); (ಬರಹದಲ್ಲಿ ಅಥವಾ ಬಾಯಲ್ಲಿ) ಟೀಕೆಮಾಡು(ವುದು) [(*Up*)*on* ಉಪ. ದೊಡನೆ]. ಏನಾದರೂ ಹೇಳಿದ್ದು, ಹೇಳಿಕೆ (His remarks are often interesting. Make a r. ಮಾತನಾಡು). (**Remarks** ಷರಾ, ಸೂಚನೆ). **Remárkable** (ಗು.) ಗಮನಾರ್ಹವಾದ; ಅಸಾಧಾರಣವಾದ; ವಿಶೇಷ ರೀತಿಯ(ದಾದ); ಎದ್ದು ಕಾಣುವ, ಸುಸ್ಪಷ್ಟ. **Remárkably** (ಕ್ರಿ. ವಿ.); **Remárkableness** (ನಾ.)

Remarque (F) ರಿಮಾರ್ಕ್ (ನಾ.) ಗುರುತು; ಚಿಹ್ನೆ; ಸಾ., ಚಿತ್ರ ಕೆತ್ತುವ ಫಲಕದ ಬದಿಯಲ್ಲಿ, ಅದರ ಸ್ಥಿತಿಯನ್ನು ಸೂಚಿಸುವುದ ಕ್ಕಾಗಿ ಕೊರೆದ ರೇಖಾ ಚಿತ್ರ: ಗುರುತು ಚಿತ್ರ; ಸ್ಥಿತಿಸೂಚಕ ಚಿಹ್ನೆ.

Rémedy ರೆಮಿಡಿ (ನಾ., ಕ್ರಿ. ಸಕ.) ರೋಗ ಪರಿಹಾರಕ; ಚಿಕಿತ್ಸೆ, ಮದ್ದು, ಔಷಧ. (ಅಸಮಾಧಾನಕ್ಕೆ, ಅನ್ಯಾಯಕ್ಕೆ, ಕೆಡುಕಿಗೆ) ಪರಿಹಾರ(ಕ) (ನ್ಯಾಯಸ್ಥಾನದ ಮೂಲಕ ದೊರೆತದ್ದು ಸಹ). ಟಂಕಿಸಿದ ನಾಣ್ಯಗಳು ಚೊಕ್ಕತನದಲ್ಲಿಯೂ ತೂಕದಲ್ಲಿಯೂ ನಿರ್ದಿಷ್ಟ ಪ್ರಮಾಣಕ್ಕಿಂತ ವ್ಯತ್ಯಾಸ ಹೊಂದಲು ಅವಕಾಶವಿರುವ ಅಂತರ. (ಕ್ರಿ.) ಸರಿಪಡಿಸು; ನೇರ್ಪಡಿಸು; ಪರಿಹಾರಮಾಡು. (ಈಗ ವಿರ. ಪ್ರ.) (ವೈದ್ಯ) ಚಿಕಿತ್ಸೆಯಿಂದ ಗುಣಪಡಿಸು; ಚಿಕಿತ್ಸೆಮಾಡು. **Remédiable** ರಿಮಾ— (ಗು.); **Remédial** (ಗು.); **Remédially** (ಕ್ರಿ. ವಿ.); **Remédiless, Ré-** ರೆಮಿ— (ಗು.) (ಈಗ ಕಾವ್ಯ ಅಥವಾ ಅಲಂ.); **Remédilessly** (ಕ್ರಿ. ವಿ.)

Remémber ರಿಮೆಂಬರ್ (ಕ್ರಿ. ಸಕ.) ಜ್ಞಾಪಕದಲ್ಲಿಟ್ಟುಕೊ; ಮರೆಯದಿರು; ನೆನಪಿಗೆ ತಂದುಕೊ. ಕಂಠ ಪಾಠ ಮಾಡಿರು. [R. oneself ಮರೆತುಹೋಗಿದ್ದ ತನ್ನ ನಡತೆ, ಉದ್ದೇಶ, ಮೊ. ನ್ನು ಕೆಲವು ಕಾಲಾನಂತರ ಜ್ಞಾಪಿಸಿಕೊ. (ಪ್ರಾಚೀ. ಪ್ರ.) I r. me that —ಎಂದು ನನಗೆ ಜ್ಞಾಪಕವಿದೆ]. (ಜ್ಞಾಪಕದಲ್ಲಿಟ್ಟುಕೊಂಡು) ಬಹುಮಾನ ಕೊಡು, ಬಕ್ಷೀಸು ಕೊಡು (Remembered me in his will. R. the waiter). (ತಾನು ಮಾಡುವ ಪ್ರಾರ್ಥನೆಯಲ್ಲಿ) ಸ್ಮರಿಸು, ನೆನೆ. (ಒಬ್ಬನ) ವಂದನೆಗಳನ್ನು, ನಮಸ್ಕಾರಗಳನ್ನು, (ಮತ್ತೊಬ್ಬನಿಗೆ) ತಿಳಿಸು (*To* ಉಪ. ದೊಡನೆ) (R. me kindly to them). **Reméмberable** (ಗು.); **Remémbrance** (ನಾ.) ಜ್ಞಾಪಿಸುವುದು; ಜ್ಞಾಪಿಸಿಕೊಳ್ಳುವುದು; ಜ್ಞಾಪಕ; ನೆನಪು; ಸ್ಮರಣೆ (Put in r. ಜ್ಞಾಪಿಸು). (ಒಬ್ಬನ) ಪ್ರೇಮದ ಕುರುಹು, ನೆನಪಿನ ವಸ್ತು; (ಹಿಂದಿನ ಘಟನೆ, ಮೊ. ಗಳ) ಸ್ಮಾರಕ(ವಸ್ತು). (ಬ. ವ. ದಲ್ಲಿ) (ಮತ್ತೊಬ್ಬನ ಮೂಲಕ ತಿಳಿಸಿದ) ವಂದನೆಗಳು, ನಮಸ್ಕಾರಗಳು. **Remémbrancer** (ನಾ.) ನೆನಪಿನ ವಸ್ತು, ಸ್ಮಾರಕ (*Of* ಉಪ. ದೊಡನೆ). King's, Queen's, R. ರಾಜನಿಗೆ, ರಾಣಿಗೆ, ಬರಬೇಕಾದ ಸಾಲಗಳನ್ನು ವಸೂಲುಮಾಡುವ ಅಧಿಕಾರಿ. City R. ಪಾರ್ಲಿಮೆಂಟಿನ ಸಮಿತಿ, ಮೊ. ಗಳಲ್ಲಿ ಲಂಡನ್ ಪಟ್ಟಣದ ಪೌರ ಸಭೆಯ ಪ್ರತಿನಿಧಿ.

Remínd ರಿಮೈಂಡ್ (ಕ್ರಿ. ಸಕ.) (—ನ್ನು, ಒಬ್ಬನಿಗೆ) ಜ್ಞಾಪಕಕ್ಕೆ ತರು, ಜ್ಞಾಪಿಸು, ನೆನಪು ಕೊಡು (*Of, to* do, *that, how,* etc. ಸಹ). **Remínder** (ನಾ.) ಜ್ಞಾಪಿಸುವ—ವಸ್ತು, ಪತ್ರ; ತಗಾದೆ(ಯ ಪತ್ರ). **Remíndful** (ಗು.) ಜ್ಞಾಪಿಸುವ; (—ರ) ಸ್ಮಾರಕವಾದ (*Of* ಉಪ. ದೊಡನೆ)

Reminíscence ರೆಮಿನಿಸೆನ್ಸ್ (ನಾ.) (ಹಿಂದೆ ನಡೆದದ್ದನ್ನು, ಮು., ಮರೆತುಹೋದದ್ದನ್ನು) ಜ್ಞಾಪಿಸಿಕೊಳ್ಳುವುದು; (ಹಳೆಯದರ) ನೆನವರಿಕೆ, ನೆನಪು, ಸ್ಮರಣೆ, ಸ್ಮೃತಿ. (Platonic doctrine of r. ಆತ್ಮಕ್ಕೆ ಪೂರ್ವಜನ್ಮಗಳಲ್ಲಿ ತಿಳಿದಿದ್ದ ಸತ್ಯಾಂಶಗಳ ಪುನಃ ಸ್ಮರಣೆಯೇ ಜ್ಞಾನ —ಎಂಬ ಪ್ಲೇಟೋವಿನ ಸ್ಮರಣ ವಾದ; ಸ್ಮರಣ ಸಿದ್ಧಾಂತ). ಜ್ಞಾಪಿಸಿಕೊಂಡ ಸಂಗತಿ, ಘಟನೆ; ನೆನಪು. (ಬ. ವ. ದಲ್ಲಿ) ಒಬ್ಬನು ತನ್ನ ನೆನಪಿನಲ್ಲಿರುವ ಸಂಗತಿಗಳನ್ನು ಅಥವಾ ಘಟನೆಗಳನ್ನು ಸಾಹಿತ್ಯರೂಪದಲ್ಲಿ ವರ್ಣಿಸಿರುವ ಕಥನ ಸಂಗ್ರಹ: ನೆನಪುಗಳು; ಜೀವನ ಸ್ಮೃತಿ. (ಮತ್ತೊಂದರ) ಜ್ಞಾಪಕ ತರುವ, ಸೂಚನೆ ಕೊಡುವ, —ಅಂಶ, ಲಕ್ಷಣ; (—ರ) ಛಾಯೆ (There is a r. of the Greek type in her face). **Reminiscéntial** (ಗು.); **Reminíscent** —ಸೆಂಟ್ (ಗು.) ಜ್ಞಾಪಿಸುವ; ಹಳೆಯ ನೆನಪುಗಳ; ಸ್ಮರಣಶೀಲ; (—ರ) ಜ್ಞಾಪಕವುಳ್ಳ, ಜ್ಞಾಪಕ ತರುವ (*Of* ಉಪ. ದೊಡನೆ). **Reminíscently** (ಕ್ರಿ. ವಿ.)

Remíse[1] ರಿಮೀಸ್ (ನಾ., ಕ್ರಿ. ಅಕ.) (ಪ್ರಾಚೀ. ಪ್ರ.) ಗಾಡಿಖಾನೆ; (ಬಾಡಿಗೆ ಕುದುರೆಗಳ ಲಾಯದಿಂದ ಬಾಡಿಗೆಗೆ ತೆಗೆದುಕೊಂಡ) ಉತ್ತಮ ತೆರದ ಬಾಡಿಗೆ ಬಂಡಿ (ಇಂಥ ಮೇಲ್ತರದ ಬಂಡಿಗಳನ್ನು ಗಾಡಿಖಾನೆಯಲ್ಲಿಟ್ಟಿರುವ ಕಾರಣದಿಂದ). (ಕತ್ತಿ ಕಾಳಗ) ಮೊದಲೇಟು ಗುರಿ ತಪ್ಪಿದಾಗ (ಮತ್ತು ಎದುರಾಳಿ ಮಾರೇಟು ಕೊಡುವುದರೊಳಗಾಗಿ) ಕೊಡುವ ಎರಡನೆಯ ಹೊಡೆತ. (ಕ್ರಿ.) ಹೀಗೆ ಎರಡನೆಯ ಹೊಡೆತ ಕೊಡು.

Remíse[2] ರಿಮೈಸ್ (ಕ್ರಿ. ಸಕ.) (ನ್ಯಾ. ಶಾ.) (ಹಕ್ಕನ್ನು, ಆಸ್ತಿಯನ್ನು) ಬಿಟ್ಟುಕೊಡು, ವಾಪಸುಕೊಡು, ಹಿಂದಕ್ಕೆ ವಹಿಸಿಕೊಡು.

Remíss ರಿಮಿಸ್ (ಗು.) ಕರ್ತವ್ಯದಲ್ಲಿ ಎಚ್ಚರಿಕೆಯಿಲ್ಲದ; ಅಜಾಗರೂಕ(ತೆಯ); ಅಸಡ್ಡೆಯ; ಅಲಕ್ಷ್ಯದ. ಜೋರಿಲ್ಲದ. **Remíssly** (ಕ್ರಿ. ವಿ.); **Remíssness** (ನಾ.)

Remíssible, Remíssion, etc. Remit ನೋಡಿ.

Remít ರಿಮಿಟ್ (ಕ್ರಿ.) (ಸಾ., ದೇವರ ವಿಷಯದಲ್ಲಿ; ಪಾಪ, ಮೊ. ನ್ನು) ಕ್ಷಮಿಸು, ಮನ್ನಿಸು. (ಸಾಲವನ್ನು ಕೊಡಬೇಕೆಂದು ನಿರ್ಬಂಧಿಸದೆ, ಶಿಕ್ಷೆಯನ್ನು ಕೊಡದೆ, ದಂಡನೆಯ ತೀರ್ಪನ್ನು ಜಾರಿಗೆ ತರದೆ) ಬಿಟ್ಟುಬಿಡು, ಕ್ಷಮಿಸು, ಮಾಫ್‌ಮಾಡು. ಕಡಮೆಯಾಗು, ಕಡಮೆಮಾಡು; ತಗ್ಗು, ತಗ್ಗಿಸು; (ಒಂದು ಹವ್ಯಾಸವನ್ನು, ಕಸಬು, ಮೊ. ನ್ನು) ಬಿಟ್ಟುಬಿಡು, ತ್ಯಜಿಸಿಬಿಡು (R. one's anger or efforts, the siege). (ಒಂದು ವಿಚಾರವನ್ನು ತೀರ್ಮಾನ, ಮೊ. ಕ್ಕಾಗಿ) ಒಬ್ಬ ಅಧಿಕಾರಿಯ ಮುಂದಿಡು; —ಗೆ ಒಪ್ಪಿಸು (*To* ಉಪ. ದೊಡನೆ). (ಮೊಕದ್ದಮೆಯನ್ನು) ಕೆಳ ನ್ಯಾಯಸ್ಥಾನಕ್ಕೆ ವಾಪಸು ಕಳುಹಿಸು. ಪೂರ್ವ ಸ್ಥಿತಿಗೆ, ಪೂರ್ವ ಸ್ಥಾನಕ್ಕೆ, —ಕಳುಹಿಸು, ಹಾಕು [(*In*)*to* ಉಪ. ದೊಡನೆ]. (—ವರೆಗೆ) ತಳ್ಳಿಡು, ಮುಂದಕ್ಕೆ ಹಾಕು (*To* or *till*). (ಹಣ, ಮೊ. ನ್ನು) ಅಂಚೆ, ಮೊ.ಗಳ ಮೂಲಕ ರವಾನೆಮಾಡು, ಕಳುಹಿಸಿಕೊಡು; (ಖಜಾನೆಗೆ) ಇರಸಾಲುಮಾಡು. **Remítter**[1] (ನಾ.) ಹೀಗೆ ಹಣ ಕಳುಹಿಸುವವನು; ರವಾನೆದಾರ. **Remitteé** (ನಾ.) ಹಣ ಸಂದಾಯದಾರ; ಗ್ರಾಹಕ. **Remíttal** (ನಾ.); **Remíttance** (ನಾ.) (ಅಂಚೆಹುಂಡಿಯ ಮೂಲಕ, ಒಬ್ಬನಿಗೆ) ಕಳುಹಿಸಿದ ಹಣ; ರವಾನೆ; ಹಣ ಕಳುಹಿಸುವುದು; (ಖಜಾನೆಗೆ) ಇರಸಾಲು (ಹಣ). (ವಿರ. ಪ್ರ.) (ಅಂಚೆಯ ಮೂಲಕ) ಸರಕಿನ ರವಾನೆ, ರವಾನಿಸಿದ ಸರಕು. [R.-man ತವರು ನಾಡಿನಿಂದ ಕಳುಹಿಸಿಕೊಟ್ಟ ಹಣದಿಂದ ಜೀವಿಸುವ ವಲಸಿಗ (ಮು., ಪಕ್ಕಾ ಸೋಮಾರಿ)]. **Remíttent** ರಿಮಿಟೆಂಟ್ (ಗು., ನಾ.) ನಡು ನಡುವೆ ಕಡಮೆಯಾಗುವ (ಜ್ವರ) (Intermittent ನೋಡಿ). **Remíssible** (ಗು.) (Remit ಪದದ ಕ್ರಿಯಾರ್ಥಗಳಲ್ಲಿ). **Remíssion** ರಿಮಿಷ(ಷ್)ನ್ (ನಾ.) (ಪಾಪ, ಮೊ. ನ್ನು) ಕ್ಷಮಿಸುವುದು; (—ಮೊ. ರ) ಕ್ಷಮಾಪಣೆ (*Of* ಉಪ. ದೊಡನೆ); ಪಾಪಕ್ಷಮೆ. (ಸಾಲ, ದಂಡ, ಮೊ. ನ್ನು) ಬಿಟ್ಟುಬಿಡುವುದು, ಮಾಫ್ ಮಾಡುವುದು. (ಬಲ, ಪರಿಣಾಮ, ಮಟ್ಟ, ಜೋರು, ಮೊ.) ತಗ್ಗುವುದು, ತಗ್ಗಿಸುವುದು; (Remit ಪದದ ಉಳಿದ ಕ್ರಿಯಾರ್ಥಗಳಲ್ಲಿ ವಿರ. ಪ್ರ.). **Remíssive** (ಗು.)

Remítter[1]. **Remit** ನೋಡಿ.

Remítter[2] ರಿಮಿಟರ್ (ನಾ.) (ನ್ಯಾ. ಶಾ.) ದುರ್ಬಲವಾದ ಮತ್ತು ಪ್ರಬಲವಾದ ಎರಡು ಹಕ್ಕುಗಳುಳ್ಳವನು ದುರ್ಬಲವಾದ ಹಕ್ಕಿನಿಂದ ಮೊದಲು ಆಸ್ತಿಯನ್ನು ಪಡೆದಿದ್ದರೆ, ಪ್ರಬಲವಾದ ಹಕ್ಕನ್ನು ಅವನಿಗೆ ಸ್ಥಿರಪಡಿಸಿ ಆಸ್ತಿಯನ್ನು ಅವನ ಸ್ವಾಧೀನದಲ್ಲಿಯೇ ಬಿಡುವ ಒಂದು ತತ್ತ್ವ ಅಥವಾ ಕಾರ್ಯಾಚರಣೆ; ಪ್ರಬಲ ಹಕ್ಕಿನಿಂದ ಅನುಭೋಗದ ಸ್ಥಿರೀಕರಣ. ಮತ್ತೊಂದು ನ್ಯಾಯಸ್ಥಾನಕ್ಕೆ ಮೊಕದ್ದಮೆಯನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಳುಹಿಸುವುದು. (ವಿರ. ಪ್ರ.) ಹಿಂದಿನ ಹಕ್ಕು, ಹಿಂದಿನ ಸ್ಥಾನ ಮಾನ, —ಮತ್ತೆ ಕೊಡುವುದು ; ಪೂರ್ವಸ್ಥಿತಿ ಸ್ಥಾಪನೆ.

Rémnant ರೆಮ್ನಂಟ್ (ನಾ.) ಉಳಿದ ಅಲ್ಪಸ್ವಲ್ಪ (=The r.). ಉಳಿಕೆ ವಸ್ತು, —ಜನ. ಉಳಿಕೆ, ಮಿಗುತ, ಶೇಷ (*Of* ಉಪ. ದೊಡನೆ). ಉಳಿದ ತುಂಡು (ಮು., ಥಾನಿನಲ್ಲಿ ಬಹು ಭಾಗ ಮಾರಾಟ ವಾಗಿ, ಕಡಮೆ ಬೆಲೆಗೆ ಮಾರಿಬಿಡುವ ಉಳಿಕೆ)

Remónetize ರಿಮಾ(ಮ)ನಿಟೈಸ್ (ಕ್ರಿ. ಸಕ.) (ಒಂದು ಲೋಹ, ಮೊ. ನ್ನು) ಮತ್ತೆ ಚಲಾವಣೆ ಹಣವಾಗಿ ಮಾಡು. **Remonetizátion** (ನಾ.)

Remónstrance. **Remonstrate** ನೋಡಿ.

Remónstrate ರಿಮಾನ್‌ಸ್ಟ್ರೇಟ್, **ré-** ರೆಮನ್— (ಕ್ರಿ.) ಆಕ್ಷೇಪಿಸು ; ನಿಷ್ಠುರ ಮಾಡು ; (ಸ್ನೇಹಭಾವದಿಂದ) ಬುದ್ಧಿ ಹೇಳು, ಎಚ್ಚರಿಸು (*Against* course, *with* person, *on* or *upon* matter). ಪ್ರತಿಯಾಗಿ ವಾದಿಸು, ಒತ್ತಿಹೇಳು (*That*). **Remónstrant** (ಗು., ನಾ.) ; **Remónstrantly** (ಕ್ರಿ. ವಿ.) ; **Remónstratingly** (ಕ್ರಿ. ವಿ.); **Remónstrative** —ಸ್ಟ್ರ— (ಗು.) ; **Remónstrator** —ಸ್ಟ್ರೇ— (ನಾ.) ; **Remónstrance** —ಸ್ಟ್ರನ್ಸ್ (ನಾ.) ಆಕ್ಷೇಪಣೆ (ಮಾಡುವುದು) ; (ಸ್ನೇಹಭಾವದಿಂದ ಕೊಟ್ಟ) ಬುದ್ಧಿವಾದ, ಎಚ್ಚರಿಕೆ (=a r.). (ಚರಿತ್ರೆ) ಸಾರ್ವಜನಿಕ —ಅಹವಾಲು, ಅರ್ಜಿ, ಮನವಿ (The grand R. ೧೬೪೧ರಲ್ಲಿ ಇಂಗ್ಲೆಂಡಿನ House of Commons ಎಂಬ ಶಾಸನ ಸಭೆ ದೊರೆಗೆ ಒಪ್ಪಿಸಿದ ಮಹಾ ಮನವಿ)

Remóntant ರಿಮಾಂಟಂಟ್ (ಗು., ನಾ.) ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಕಾಲಗಳಲ್ಲಿ ಹೂವು ಬಿಡುವ (ಗುಲಾಬಿ)

Rémora ರೆಮೊರ (ನಾ.) (ಹಡಗಿಗೆ ಕಚ್ಚಿಕೊಂಡು ಅದರ ಗತಿಯನ್ನು ತಡೆಯುವುದೆಂದು ಹಿಂದೆ ಊಹಿಸಿದ್ದ) ಒಂದು ಹೀರು ಮೀನು. (ಈಗ ವಿರ. ಪ್ರ.) ತಡೆ, ಅಡ್ಡಿ, ಅಡಚಣೆ.

Remórse ರಿಮಾರ್ಸ್ (ನಾ.) (ಮಾಡಿದ ತಪ್ಪಿಗಾಗಿ) ತೀಕ್ಷ್ಣ ಪರಿತಾಪ ; ಪಶ್ಚಾತ್ತಾಪ ; ಮನದ ಕೊರೆತ ; ಮನದಳುಕು ; ನೋಯಿಸುವುದ ಕ್ಕಾಗಲಿ ಕ್ರೌರ್ಯ ತೋರುವುದಕ್ಕಾಗಲಿ ಅನಿಚ್ಛೆ ; ಮರುಕ (ಮು., without r. ಎಂಬಲ್ಲಿ). **Remórseful** (ಗು.) ; **Remórsefully** (ಕ್ರಿ. ವಿ.) ; **Remórseless** (ಗು.) ; **Remórselessly** (ಕ್ರಿ. ವಿ.) ; **Remórselessness** (ನಾ.)

Remóte ರಿಮೋಟ್ (ಗು., ತರ ತಮ ರೂಪಗಳು : -er, -est) (ಸ್ಥಳದಲ್ಲಿ, ಕಾಲದಲ್ಲಿ, ಸಂಬಂಧದಲ್ಲಿ, ಮೊ. ಗಿ) (ಬಹು) ದೂರದ ; ಹತ್ತಿರದ್ದಲ್ಲದ ; ದೂರಸಂಬಂಧದ (*From* ಉಪ. ದೊಡನೆ). ಮೂಲೆ ಕಾಡಿನಲ್ಲಿರುವ (A r. village. Live r.). (ಮು., ತಮ ಭಾವದಲ್ಲಿ ; ಭಾವನೆ, ಮೊ. ಗಳ ವಿಷಯದಲ್ಲಿ) ಅತ್ಯಂತ ಸ್ವಲ್ಪ ; ಲವ ; ಲೇಶ (Have not the remotest conception of what he means). **Remótely** (ಕ್ರಿ. ವಿ.) ; **Remóteness** (ನಾ.)

Remoúnt[1]. **Re-** ನೋಡಿ.

Remoúnt[2] ರಿ(ೕ)ಮೌಂಟ್ (ಕ್ರಿ.) (ಗುಡ್ಡ, ಏಣಿ, ಕುದುರೆ, ಮೊ. ನ್ನು) ಮತ್ತೆ —ಹತ್ತು, ಏರು. ನಿರ್ದಿಷ್ಟ ತಾರೀಖಿಗೆ, ಕಾಲಕ್ಕೆ, ಮೂಲಕ್ಕೆ, —ಮರಳು, ಹಿಂದಿರುಗು (*To* ಉಪ. ದೊಡನೆ)

Remóve ರಿಮೂವ್ (ಕ್ರಿ., ನಾ.) (ಇದ್ದ ಸ್ಥಳದಿಂದ, ಸ್ಥಾನದಿಂದ) ತೆಗೆದು ಬಿಡು, ತೆಗೆದುಹಾಕು; ಬೇರೆ ಸ್ಥಳಕ್ಕೆ ಒಯ್ಯಿ, ಸಾಗಿಸು, ಬದಲಾಯಿಸು; (ಉದ್ಯೋಗ, ಅಧಿಕಾರ—ಇವುಗಳಿಂದ) ವಜಾ ಮಾಡು, ತೆಗೆದುಹಾಕು; ಪರಿಹರಿಸು ; ಕಳೆ [This will remove all apprehension, the last doubts. R. mountains ಪವಾಡಮಾಡು. Cardinal was removed by poison —ವಿಷಹಾಕಿ ಕೊಂದರು. Boy is removed from school ತಂದೆ ತಾಯಿಗಳು ಹುಡುಗನನ್ನು ಪಾಠಶಾಲೆಯಿಂದ ಬಿಡಿಸಿದರು. R. furniture (ಮನೆ ಬದಲಾಯಿಸು ವವರ ಪರವಾಗಿ) ಪೀಠೋಪಸ್ಕರಗಳನ್ನು ಹೊಸ ಬಾಡಿಗೆ ಮನೆಗೆ ಒಯ್ಯಿ. [**Remóver** (ನಾ.) ಹೀಗೆ ಒಯ್ಯುವ, ಸಾಗಿಸುವ, ಕಸಬಿನವನು]. (ಕರ್ಮಣಿ ಪ್ರ. ; ಔತಣದಲ್ಲಿ, ಭಕ್ಷ್ಯ) ಮತ್ತೊಂದರ ತರುವಾಯ ಬರು, ಬಡಿಸಲ್ಪಡು (Boiled haddock removed by hashed mutton). (ತನ್ನ) ವಾಸಸ್ಥಾನವನ್ನು ಬದಲಾಯಿಸು ; ಮನೆ ಬದಲಾಯಿಸು; ಬೇರೆ ಕಡೆಗೆ (ವಾಸಕ್ಕೆ) ಹೋಗು (*From* ಉಪ. ದೊಡನೆ). (ಭೂ. ಕೃ.) ದೂರದ, ವ್ಯತ್ಯಾಸವುಳ್ಳ (*From* ಉಪ. ದೊಡನೆ) [Is not many degrees removed from the brute ಪಶು ವಿಗಿಂತೇನೂ ಹೆಚ್ಚು ವ್ಯತ್ಯಾಸವಿಲ್ಲ. (ಸೋದರ ಬಾಂಧವ್ಯದ, ರಕ್ತ ಸಂಬಂಧಿಗಳ, ವಿಷಯದಲ್ಲಿ) Once, twice, etc. removed ಒಂದು, ಎರಡು, ಮೊ. ತಲೆಬಿಟ್ಟು. My first cousin once, twice, removed]. (ನಾ.) ಮತ್ತೊಂದರ ತರುವಾಯ ಬಡಿಸಿದ ಭಕ್ಷ್ಯ. (ಪಾಠಶಾಲೆಯಲ್ಲಿ) ಮೇಲಿನ ತರಗತಿಗೆ ಬಡತಿ, ತೇರ್ಗಡೆ (Has not got his r.) ; (ಕೆಲವು ಪಾಠಶಾಲೆಗಳಲ್ಲಿ) ಒಂದು ಗೊತ್ತಾದ ತರಗತಿ, ವರ್ಗ. (ವಿರ. ಪ್ರ.) ವಾಸಸ್ಥಳದ ಬದಲಾವಣೆ ; ಬೇರೆ ಕಡೆಗೆ ಹೋಗುವುದು. (ವಿರ. ಪ್ರ.) ದೂರ (At a certain r. its shape seems to change). (ವರ್ಗೀಕರಣದಲ್ಲಿ) ಒಂದು ಮಜಲು, ಮೆಟ್ಟಿಲು, ದರ್ಜೆ (Is but one r., few removes, from). (ಮು., ರಕ್ತ ಸಂಬಂಧಗಳ ವಿಷಯದಲ್ಲಿ) ಒಂದು ತಲೆ. **Remóvable** (ಗು., ನಾ.) (ಕ್ರಿಯಾರ್ಥಗಳಲ್ಲಿ). (ಕೆಲಸದಿಂದ) ತೆಗೆದುಹಾಕಬಹುದಾದ, ವಜಾಮಾಡಲಾಗುವ; ವಿಸರ್ಜನ ಸಾಧ್ಯ; ದೊರೆಯ ಅಥವಾ ಇತರ ಮೇಲ್ಪಟ್ಟ ಅಧಿಕಾರಿಯ ಇಷ್ಟವಿರುವವರೆಗೂ ಉದ್ಯೋಗದಲ್ಲಿರ ಬಹುದಾದ. (ನಾ.) (ಐರ್ಲೆಂಡಿನಲ್ಲಿ) ಕೆಲಸದಿಂದ ತೆಗೆದುಹಾಕಲಾಗುವ ದಂಡಾಧಿಕಾರಿ. **Removabílity** (ನಾ.) ; **Remóval** (ನಾ.) (ಕ್ರಿಯಾರ್ಥಗಳಲ್ಲಿ) ; (ರಕ್ತ ಸಂಬಂಧಗಳ ವಿಷಯದಲ್ಲಿ ಪ್ರ. ಇಲ್ಲ)

Remúnerate ರಿಮ್ಯೂನರೇಟ್ (ಕ್ರಿ. ಸಕ.) ಬಹುಮಾನ, ಸಂಭಾವನೆ, —ಕೊಡು ; (ಸಲ್ಲಿಸಿದ ಸೇವೆಗೆ, ಪಟ್ಟ ಶ್ರಮಕ್ಕೆ) ಪ್ರತಿಫಲ ಕೊಡು ; —ಆಗಿರು. **Remunerátion** (ನಾ.); **Remúnerative** —ರೆಟಿವ್ (ಗು.); **Remúneratively** (ಕ್ರಿ. ವಿ.); **Remúnerativeness** (ನಾ.)

Renaíssance ರಿನೇಸನ್ಸ್, ರೆನೆಸಾನ್ಸ್ (ನಾ.) (೧೪-೧೬ನೆಯ ಶ. ಮಾ. ಗಳಲ್ಲಿ, ಹಿಂದಿನ ರೋಮನ್ ಮತ್ತು ಗ್ರೀಕ್ ಪ್ರೌಢ ಆದರ್ಶಗಳ ಪ್ರಭಾವದಿಂದ ಯೂರೋಪಿನಲ್ಲಾದ) ಸಾಹಿತ್ಯ ಮತ್ತು ಕಲೆಗಳ ಪುನರುಜ್ಜೀವನ ; ಈ ಪುನರುಜ್ಜೀವನದ ಕಾಲ ; ಅದರಿಂದ ಅಭಿವೃದ್ಧಿ ಯಾದ ಕಲಾ ಶೈಲಿ ಮತ್ತು ವಾಸ್ತುಶಿಲ್ಪ ಶೈಲಿ [(ಅನೇಕ ವೇಳೆ ವಿಶೇಷಣ ವಾಗಿ) R. painters, architecture, church] ; (ಅಂಥ ಬೇರೆ ಯಾವುದಾದರೂ) ಪುನರುಜ್ಜೀವನ ; ಹೊಸ ಹುಟ್ಟು.

Rénal ರೀನಲ್ (ಗು.) ಮೂತ್ರಜನಕಾಂಗಗಳ ; ಮೂತ್ರಪಿಂಡದ.

Renáscence ರಿನ್ಯಾಸೆನ್ಸ್ (ನಾ.) ಹೊಸ ಹುಟ್ಟು ; ಪುನರ್ಜನ್ಮ. =Renaissance. **Renáscent** (ಗು.) ಮತ್ತೆ ಹೊಸದಾಗಿ ಹುಟ್ಟುತ್ತಿರುವ ; ಪುನರ್ಜನ್ಮವಾಗುತ್ತಿರುವ.

Rencoúnter ರೆನ್‌ಕೌಂಟರ್, **Rencóntre** ರೆನ್‌ಕಾನ್‌ಟರ್, ರಾನ್‌ಕಾನ್‌ಟ್ರ್ (ನಾ.) (ಈಗ ವಿರ. ಪ್ರ.) ಹೋರಾಟ ; ಕದನ ; (ದ್ವಂದ್ವ) ಯುದ್ಧ. ಅಕಸ್ಮಾತ್ತಾಗಿ ಸಂಧಿಸುವುದು ; ಅನಿರೀಕ್ಷಿತ—ಭೇಟಿ, ಸಮಾಗಮ.

Rend ರೆಂಡ್ (ಕ್ರಿ., ಭೂತ., ಭೂ. ಕೃ. Rent[1]) ಹರಿ(ದು ಹಾಕು), (ತಿರುಚಿ) ಕಿತ್ತುಹಾಕು ; ಬಲವಂತವಾಗಿ ಕಿತ್ತುಹಾಕು (*Off*, *away*, *out of*, *from*, *asunder*, *apart*, ಮೊ. ಉಪ. ದೊಡನೆ ಸಹ) [(ಪ್ರಾಚೀ. ಪ್ರ. ಅಥವಾ ಅಲಂ.) A province rent from the empire. R. one's garments, hair (ದುಃಖಾತಿ ರೇಕದಿಂದ). Turn and r. one (ರೂಪ.) ಇದ್ದಕ್ಕಿದ್ದಂತೆ, ಅನಿರೀಕ್ಷಿತವಾಗಿ, (ಒಬ್ಬನನ್ನು) —ಬಯ್ಯಿ, ಬಯ್ಯತೊಡಗು]. ಎರ ಡಾಗಿ ಅಥವಾ ಚೂರುಗಳಾಗಿ ಅಥವಾ (ಸಾ.) ಕಕ್ಷಿಗಳಾಗಿ ಒಡೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಭಾಗವಾಗು, ವಿಭಾಗ ಮಾಡು ; ಸೀಳು, ಸೀಳಿಹೋಗು (R. laths ದಾರುವನ್ನು ಸೀಳಿ ದಬ್ಬೆಮಾಡು ; ದಬ್ಬೆ ಸೀಳು. Europe was rent in two by the question. Shouts rent the air ಕೂಗಾಟ, ಕೋಲಾಹಲ, ಆಕಾಶವನ್ನು ಭೇದಿಸಿತು. Heart is rent by contending emotions)

Rénder ರೆಂಡರ್ (ಕ್ರಿ. ಸಕ., ನಾ.) ಪ್ರತಿಯಾಗಿ ಕೊಡು (R. thanks, good for evil). (ಪ್ರಾಚೀ. ಪ್ರ.) ಹಿಂದಕ್ಕೆ ಕೊಡು ; ವಶಕ್ಕೆ ಕೊಡು ; ಕೊಟ್ಟುಬಿಡು, ಒಪ್ಪಿಸಿಬಿಡು (*Up*) [(ಮು., ಪ್ರಾಚೀ. ಪ್ರ.) R. to Caesar the things that are Caesar's. Fortress was rendered on terms]. (ಪೊಗದಿ, ಗೌರವ, ಮೊ. ನ್ನು) ಸಮರ್ಪಿಸು; (ವಿಧೇಯತೆ, ಮೊ. ನ್ನು) ತೋರಿಸು ; (ಸೇವೆ, ಮೊ. ನ್ನು) ಸಲ್ಲಿಸು (ನಾ., *to* ಉಪ. ದೊಡನೆ ಅಥವಾ ಗೌಣ ಕರ್ಮಪದದೊಡನೆ). (ಲೆಕ್ಕಗಳು, ಕಾರಣ, ಮೊ. ನ್ನು) ವಿಮರ್ಶೆಗಾಗಿ, ತನಿಖೆಗಾಗಿ, —ಮುಂದಿಡು, ಒಪ್ಪಿಸು, ಕಳುಹಿಸಿಕೊಡು [Will have to r. an account of (—ರ) ಲೆಕ್ಕ ಒಪ್ಪಿಸಬೇಕಾಗುತ್ತದೆ. Account rendered ಸಲ್ಲಿಸಿದ ಸಾಮಾನುಗಳ ಬೆಲೆ ಪಟ್ಟಿಯನ್ನು ಹಿಂದೆಯೇ ಕಳುಹಿಸಲಾಗಿದೆ ಮತ್ತು ಹಣ ಪಾವತಿಯಾಗಿಲ್ಲ: ಲೆಕ್ಕ ಹಿಂದೆಯೇ ಕೊಟ್ಟಿದೆ (ಸಾಮಾನುಗಳ ಮತ್ತು ಬೆಲೆಗಳ ವಿವರಗಳನ್ನು ಮತ್ತೆ ಬರೆಯುವುದಕ್ಕೆ ಬದಲಾಗಿ ಪ್ರಯೋಗಿಸುವ ಒಕ್ಕಣೆ, ಮಾತು)]. ಚಿತ್ರಿಸು, ನಿರೂಪಿಸು ; (ಹಾಡಿ ಅಥವಾ ಅಭಿನಯಮಾಡಿ) ಪ್ರದರ್ಶಿಸು; ನಿರ್ವಹಿಸು; ಭಾಷಾಂತರಮಾಡು (Painter has hardly rendered the expression. Poetry can never be adequately rendered in another language). (ಕರ್ಮಪದ ದೊಡನೆ ಮತ್ತು ಪೂರಕ ಪದದೊಡನೆ ಪ್ರ.) ಮಾಡು, ಮಾಡಿಸು, ಆಗಿಸು, ಮಾರ್ಪಡಿಸು (Age had rendered him peevish. The tone rendered it an insult). (ಕೊಬ್ಬು) ಕರಗಿಸು, ಕರಗು ; ಕರಗಿಸುವುದರಿಂದ ಪ್ರತ್ಯೇಕಿಸಿ ತೆಗೆ ; ಕರಗಿಸಿ ತೆಗೆ ; (ಕಶ್ಮಲ ವಿಂಗಡವಾಗುವಂತೆ) ಸೋಸು. (ಗೋಡೆ, ಮೊ. ಕ್ಕೆ ; ಗಾರೆಯ, ಗಿಲಾವಿನ) ಮೊದಲ ತೊಡೆತ—ಹಾಕು, ಕೊಡು [R.-set (ಕ್ರಿ. ಸಕ.) (ಗೋಡೆ, ಮೊ. ಗಳಿಗೆ) ಎರಡು ತೊಡೆತ(ದ) ಗಾರೆ ಮಾಡು. (ನಾ., ಗು.) ಎರಡು ತೊಡೆತದ (ಗಾರೆ, ಗಿಲಾವು)]. (ನಾ.) (ನ್ಯಾ. ಶಾ.) ಗೇಣಿದಾರನು ಧಣಿಗೆ (ಅಥವಾ ಜಮೀನುದಾರನಿಗೆ) ಹಣ, ಧಾನ್ಯ ಅಥವಾ ಸೇವಾ ರೂಪದಲ್ಲಿ ಸಲ್ಲಿಸುವ ಪ್ರತಿಫಲ ; ಗುತ್ತಿಗೆ—ಹಣ, ಧಾನ್ಯ, ಸೇವೆ. **Réndering** (ನಾ.)

Réndezvous ರೆಂ(ರಾಂ)ಡೆವೂ, ರಾಂಡಿವೂ [ನಾ., ಬ. ವ. ಅದೇ; ಉಚ್ಚಾರಣೆ : —ವೂಸ್ ; ಕ್ರಿ. ಅಕ., -ouses, -oused, -ousing ಉಚ್ಚಾರಣೆ : —ವೂಸ್, —ವೂಡ್, —ವೂಇಂಗ್] ಸಿಪಾಯಿಗಳು ಅಥವಾ ಹಡಗುಗಳು ಒಟ್ಟು ಸೇರುವುದಕ್ಕೆ ಗೊತ್ತುಪಡಿಸಿದ ಸ್ಥಳ ; ಸೈನ್ಯಗಳ, ಹಡಗುಗಳ, —ಮೇಳ ಸ್ಥಾನ, ಕೂಡುವೆಡೆ. ಜನರು ಸಾಮಾನ್ಯವಾಗಿ ಸೇರುವ, ನೆರೆಯುವ, ಸ್ಥಳ. ಸೇರಬೇಕೆಂದು ಮೊದಲೇ ಗೊತ್ತುಮಾಡಿಕೊಂಡ ಸ್ಥಳ ; ಸಂಕೇತ ಸ್ಥಳ (=Place of r.) ; (ಸಂಕೇತ ಸ್ಥಳದಲ್ಲಿ) ಗೊತ್ತುಮಾಡಿಕೊಂಡು, ಗೊತ್ತುಪಾಡಿನಂತೆ, ಸಂಕೇತದಂತೆ, —ಸೇರುವುದು. (ಕ್ರಿ.) (—ದಲ್ಲಿ) ಸೇರು, ಸಂಧಿಸು, ನೆರೆ.

Rendítion ರೆಂಡಿಷನ್ (ನಾ.) (ಈಗ ವಿರ. ಪ್ರ.) (ಸ್ಥಳವನ್ನು, ಪ್ರದೇಶವನ್ನು, ಅಧಿಕಾರವನ್ನು, ವ್ಯಕ್ತಿಯನ್ನು) ಮತ್ತೊಬ್ಬರ ಸ್ವಾಧೀನಕ್ಕೆ ಬಿಟ್ಟುಕೊಡುವುದು, ಒಪ್ಪಿಸುವುದು. ಭಾಷಾಂತರ. (ನಾಟಕದ ಪಾತ್ರ, ಒಂದು ಸಂಗೀತ ಕೃತಿ, ಮೊ. ಗಳ) ಅಭಿಪ್ರಾಯವನ್ನು, ಅರ್ಥವನ್ನು (ತಕ್ಕ ಪ್ರದರ್ಶನದ ಮೂಲಕ) ನಿರೂಪಿಸುವುದು ; (ಅಭಿನಯದ, ಪ್ರದರ್ಶನದ, —ಮೂಲಕ) ಭಾವ ವ್ಯಂಜನ (ಮಾಡುವುದು)

Rénegade ರೆನಿಗೇಡ್ (ನಾ., ಕ್ರಿ. ಅಕ.), (ಪ್ರಾಚೀ. ಪ್ರ.) **Renegádo** —ಗೇಡೊ (ನಾ.) (ಮು., ಕ್ರೈಸ್ತ ಮತವನ್ನು ಬಿಟ್ಟು ಮಹಮ್ಮದೀಯ ಮತಕ್ಕೆ ಸೇರಿಕೊಂಡ) ಸ್ವಧರ್ಮ ಪರಿತ್ಯಾಗಿ, ಸ್ವಮತ ಭ್ರಷ್ಟ. ಪಕ್ಷ ಬಿಟ್ಟುಹೋದವನು ; ಸ್ವಪಕ್ಷ ದ್ರೋಹಿ. ಹಿಡಿದ ತತ್ತ್ವವನ್ನು ಬಿಟ್ಟು ಬೇರೊಂದು ತತ್ತ್ವವನ್ನು ಕೈಹಿಡಿದವನು ; ಪತಿತ. (ಕ್ರಿ.) —ಆಗು. **Renegátion** (ನಾ.)

Renéw ರಿನ್ಯೂ (ಕ್ರಿ.) ಮೊದಲನ ಸ್ಥಿತಿಗೆ ತರು ; ಹೊಸದು (ಹೇಗೊ ಹಾಗೆ ಕಾಣುವಂತೆ) ಮಾಡು ; ನವೀಕರಿಸು ; ಜೀರ್ಣೋದ್ಧಾರ ಮಾಡು ; ಪುನಶ್ಚೈತನ್ಯ ಕೊಡು ; ಪುನರುಜ್ಜೀವನಗೊಳಿಸು (Nature dies and is renewed). ತೇಪೆಹಾಕು ; —ಹಾಕಿ ಸರಿಪಡಿಸು ; ಮತ್ತೆ ತುಂಬು ; ಪುನಃ ಹೆಚ್ಚಿಗೆ ಒದಗಿಸು ; ಬಲಪಡಿಸು ; ಹೊಸದು ಹಾಕು (Coat renewed in places. R. the water in the bowl. R. garrison, tires, etc.). ಮತ್ತೆ ಹೊಸದಾಗಿ—ಪಡೆ, ಪ್ರಾರಂಭಿಸು, ಮಾಡು, ಹೇಳು, ಕೊಡು ; (ಒಂದರ ಅವಧಿ ಮುಗಿದ ಮೇಲೆ, ನಡುವೆ ಸ್ವಲ್ಪಕಾಲ ತಡೆದಿದ್ದು) ಮತ್ತೆ ಮುಂದುವರಿಸು [R. one's youth, strength ಮತ್ತೆ ಯೌವನ, ಶಕ್ತಿ, ಪಡೆ. R. attack, correspondence, speech, game, efforts. R. lease, bill ಗುತ್ತಿಗೆಯ ಕರಾರನ್ನು, ಹುಂಡಿಯನ್ನು, ಮುಂದುವರಿಸು(ಸಿಕೊ), ಪುನಃ ಹೊಸದಾಗಿ ಮಾಡಿಸು(ಸಿಕೊ)]. ಗುತ್ತಿಗೆಯ ಕರಾರನ್ನು, ಹುಂಡಿಯನ್ನು, —ನವೀಕರಿಸು, ಮುಂದುವರಿಸು. (ವಿರ. ಪ್ರ.) ಮತ್ತೆ ಹೊಸದಾಗಿ—ಬರು, ತಲೆದೋರು ; ಮರಳಿ ಬರು (The clamour renewed. Feel my youth renewing). **Renewable** (ಗು.) ; **Renewal** (ನಾ.)

Réniform ರೀನಿಫಾರ್ಮ್ (ಗು.) ಮೂತ್ರಪಿಂಡಾಕಾರದ.

Rénnet[1] ರೆನೆಟ್ (ನಾ.) ಹಾಲನ್ನು ಮೊಸರಾಗಿ ಒಡೆಯಿಸಲು ಉಪಯೋಗಿಸುವ (ಸಸ್ಯಜನ್ಯ ಅಥವಾ ಪ್ರಾಣಿಜನ್ಯ) ಹುಳಿ.

Rénnet[2] ರೆನೆಟ್ (ನಾ.) ಊಟವಾದಮೇಲೆ ತಿನ್ನುವ ಕೆಲವು ಜಾತಿಯ ಸೇಬು.

Renoúnce ರಿನೌನ್ಸ್ (ಕ್ರಿ., ನಾ.) (ಹಕ್ಕು, ಅಧಿಕಾರ, ಸ್ವಾಧೀನಾನುಭೋಗ—ಇವನ್ನು) ಕ್ರಮ ವಿಹಿತವಾಗಿ—ತ್ಯಜಿಸು, ಬಿಟ್ಟುಕೊಡು, ಬಿಟ್ಟುಬಿಡು. ನಿರಾಕರಿಸು; ತಿರಸ್ಕರಿಸು; ಸಂಬಂಧ—ತ್ಯಜಿಸು, ಕಡಿದುಹಾಕು; ಬಾಧ್ಯತೆಯಿಲ್ಲವೆನ್ನು ; (—ಇಂದ) ಹಿಂತೆಗೆ ; (—ನ್ನು) ತೊರೆ(ದು ಬಿಡು) ; ವರ್ಜಿಸು ; ಪರಿತ್ಯಜಿಸು (R. the world ಪ್ರಪಂಚವನ್ನು ತೊರೆ, ವೈರಾಗ್ಯವನ್ನು ತಾಳು, ಪ್ರಾಪಂಚಿಕ ವ್ಯವಹಾರವನ್ನು ತ್ಯಜಿಸು). (ನ್ಯಾ. ಶಾ.) [ಒಂದು ಹಕ್ಕನ್ನು ಅಥವಾ ಅಧಿಕಾರ ಸ್ಥಾನವನ್ನು (ಮು., ಉತ್ತರಾಧಿಕಾರದ ಹಕ್ಕನ್ನು ಅಥವಾ ಧರ್ಮದರ್ಶಿಯ ಸ್ಥಾನವನ್ನು)] ಬೇಡವೆಂದು ಬಿಟ್ಟುಬಿಡು, ರಾಜೀನಾಮೆ ಕೊಡು. (ಇಸ್ಪೀಟು) ಸರಿಯಾದ ರಂಗಿನ ಎಲೆ ಇಲ್ಲದಿರುವಾಗ ಬೇರೆ ರಂಗಿನ ಎಲೆಯನ್ನು ಇಳಿ (Revoke ನೋಡಿ). (ನಾ.) ಹೀಗೆ ಬೇರೆ ರಂಗಿನ ಎಲೆಯನ್ನು ಇಳಿಯುವುದು ; —ಇಳಿಯುವ ಅವಕಾಶ (Has a r. in hearts). **Renoúncement** (ನಾ.) ; **Renunciátion** ರಿನನ್ಸಿಯೇಷನ್ (ನಾ.) (ಹಕ್ಕು, ಮೊ. ನ್ನು) ಬಿಟ್ಟುಬಿಡುವುದು ; ಪರಿತ್ಯಾಗ; ಹಕ್ಕು ತೊರೆಹದ ದಸ್ತೈವಜು. ಸ್ವಾರ್ಥತ್ಯಾಗ ; (ಭೋಗಭಾಗ್ಯಗಳ, ಐಹಿಕ ಸುಖದ) ತ್ಯಾಗ ; ವೈರಾಗ್ಯ. **Renúnciant** —ಷಿಯಂಟ್ (ನಾ., ಗು.) ; **Renúnciative** —ಷಿಎಟಿವ್, —ಷಟಿವ್ (ಗು.) ; **Renúnciatory** —ಷಿಯಟರಿ, —ಷಟ್ರಿ (ಗು.)

Rénovate ರೆನೊವೇಟ್ (ಕ್ರಿ. ಸಕ.) ಮತ್ತೆ ಹೊಸದು ಮಾಡು ; ನವೀಕರಿಸು ; ನೇರ್ಪಡಿಸು ; ರಿಪೇರಿ ಮಾಡು ; ಮತ್ತೆ ಒಳ್ಳೆಯ ಸ್ಥಿತಿಗೆ ತರು, ಶಕ್ತಿಯುತವಾಗಿ ಮಾಡು ; ಜೀರ್ಣೋದ್ಧಾರ ಮಾಡು. **Renovátion** (ನಾ.) ; **Rénovator** (ನಾ.)

Renówn ರಿನೌನ್ (ನಾ.) ಹೆಸರುವಾಸಿ ; ಪ್ರಖ್ಯಾತಿ ; ಪ್ರಸಿದ್ಧಿ (Man, town, etc. of r. *or* great, etc. r.). **Renówned** (ಗು.) ಹೆಸರುವಾಸಿಯಾದ ; ಪ್ರಖ್ಯಾತ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rent[1] ರೆಂಟ್ (ಕ್ರಿ., ನಾ.) (ಕ್ರಿಯಾರ್ಥಕ್ಕೆ Rend ನೋಡಿ). (ನಾ.) (ಉಡುಪು, ಮೊ. ಗಳಲ್ಲಿ) ಹರುಕು ; (ಮೋಡ, ಮೊ. ಗಳಲ್ಲಿ ; ಹರುಕನ್ನು ಹೋಲುವ) ಬಿರುಕು, ಕಂಡಿ, ಛಿದ್ರ. ಸೀಳು ; ಬಿರುಕು ; ಕಮರಿ.

Rent[2] ರೆಂಟ್ (ನಾ., ಕ್ರಿ.) (ಮನೆ, ಕೊಠಡಿ, ಯಂತ್ರ—ಇವುಗಳ ವಿಷಯದಲ್ಲಿ) ಬಾಡಿಗೆ ; (ಜಮೀನಿನ ವಿಷಯದಲ್ಲಿ) ಕಂದಾಯ, ಗೇಣಿ [R.-charge ಜಮೀನಿನ ಒಡೆಯನಲ್ಲದ ಒಬ್ಬನಿಗೆ ಕೊಡಬೇಕೆಂದು ದಸ್ತಾವೇಜಿನ ಮೂಲಕ ಮಿಸಲಾಗಿರಿಸಿದ (ಮತ್ತು ಬಾಕಿಗಾಗಿ ಜಮೀನನ್ನು ಜಪ್ತಿಮಾಡಬಹುದಾದ) ಜಮೀನು ಕಂದಾಯ, ಮೊ. ವು. R.-free (ಗು., ಕ್ರಿ. ವಿ.) ಕಂದಾಯವಿಲ್ಲದ(ದೆ) ; ಬಾಡಿಗೆಯಿಲ್ಲದ(ದೆ). R.-roll ಒಬ್ಬನಿಗೆ ಸೇರಿದ ಜಮೀನುಗಳು, ಮೊ. ವು ಮತ್ತು ಅವುಗಳಿಂದ ಬರಬೇಕಾದ ಕಂದಾಯಗಳು (ಗೇಣಿಗಳು) —ಇವುಗಳ ವಿವರಗಳನ್ನು ತಿಳಿಸುವ ದಾಖಲೆ ಪುಸ್ತಕ : ಜಮೀನು ಕಂದಾಯಗಳ—ಲೆಕ್ಕ, ದಾಖಲೆ. (ಒಬ್ಬನಿಗೆ) ಕಂದಾಯದಿಂದ (ಅಥವಾ ಬಾಡಿಗೆಯಿಂದ) ಬರುವ ವರಮಾನ. R.-service ಕಂದಾಯಕ್ಕೆ ಬದಲಾಗಿ ಅಥವಾ ಕಂದಾಯದ ಜೊತೆಗೆ ಸಲ್ಲಿಸುವ ಸ್ವಂತಸೇವೆ(ಯ ಷರತ್ತುಳ್ಳ ಹಿಡುವಳಿ) ; ಕಂದಾಯ ಸೇವೆ(ಯ ಗೇಣಿ) ; ಗೇಣಿ ದುಡಿಮೆ. (ಜಮೀನು, ಮೊ. ಗಳ ವಿಷಯದಲ್ಲಿ) **Low, high, -rénted** (ಗು.)]. (ಕ್ರಿ.) ಬಾಡಿಗೆಗೆ, ಗೇಣಿಗೆ, —ಕೊಡು, ತೆಗೆದುಕೊ. (ಬಾಡಿಗೆದಾರ, ಮೊ. ರಿಗೆ) ಬಾಡಿಗೆ, ಕಂದಾಯ, —ಹಾಕು (Rents his tenants low). **Réntable** (ಗು.) ; **Réntal** (ನಾ.) ಬಾಡಿಗೆಗಳಿಂದ, ಕಂದಾಯಗಳಿಂದ, ಬರುವ ವರಮಾನ, ಆದಾಯ. ಕಂದಾಯ ; ಬಾಡಿಗೆ(ಯಾಗಿ ಕೊಟ್ಟ, ಪಡೆದ) ಮೊತ್ತ.

Rente (F) ರಾಂಟ್ (ನಾ.) (ಮು., ವರ್ಷಾಶನದ ಅಥವಾ ಲಾಭಾಂಶದ) ವರಮಾನ, ಆದಾಯ. **Rentier** (F) ರಾಂಟ್ಯೇ (ನಾ.) ಇದರಿಂದ ಜೀವಿಸುವವನು ; ವರ್ಷಾಶನ ಜೀವಿ, ಲಾಭಾಂಶ ಜೀವಿ ; ಜೀವನೋಪಾಯಕ್ಕಾಗಿ ದುಡಿಯಬೇಕಾಗಿಲ್ಲದವನು.

Reo-. **Rheo-** ನೋಡಿ.

Rep[1], **Repp** ರೆಪ್, **Reps** ರೆಪ್ಸ್ (ನಾ.) (ಪೀಠೋಪಸ್ಕರಗಳಿಗೆ ಮೆತ್ತನೆಯ ಸಜ್ಜನ್ನು ಕೊಡುವುದರಲ್ಲಿ ಉಪಯೋಗಿಸುವ, ಹುರಿಯ ಮೇಲ್ಮೈಯುಳ್ಳ) ಒಂದು ಬಗೆಯ ಹತ್ತಿ ಬಟ್ಟೆ. **Repped** (ಗು.) ಈ ಬಟ್ಟೆಯಂಥ ಉಬ್ಬು ಮೇಲ್ಮೈಯುಳ್ಳ.

Rep[2] ರೆಪ್ (ನಾ.) (ಪಾಠಶಾಲೆಯ ಅಸಂ.) ಕಂಠ ಪಾಠಮಾಡಿದ ಪದ್ಯ, ಮೊ. ವು (Repetition ಎಂಬುದರ ಸಂಕ್ಷಿಪ್ತ)

Rep[3] ರೆಪ್ (ನಾ.) (ಅಸಂ.) ಸಡಿಲ ನಡತೆಯ ವ್ಯಕ್ತಿ ; ನೀತಿಗೆಟ್ಟವನು(ಳು) ; ಪೋದಾ.

Repaír[1] ರಿಪೇರ್ (ಕ್ರಿ. ಅಕ., ನಾ.) ಹೋಗು ; ಆಶ್ರಯಿಸು ; ಪದೇ ಪದೇ ಅಥವಾ ಹೆಚ್ಚು ಸಂಖ್ಯೆಯಲ್ಲಿ ಹೋಗು(ತ್ತಿರು) (*To* ಉಪ. ದೊಡನೆ). (ನಾ.) (ಪ್ರಾಚೀ. ಪ್ರ.) ಹೋಗುವ, ಹೋಗಿ ಬರುವ, —ಸ್ಥಳ ; ಆಶ್ರಯ(ಸ್ಥಾನ) (Have r. to). ಜನರು ಹೆಚ್ಚಾಗಿ, ರೂಢಿಯಾಗಿ, —ಹೋಗಿ ಬರುವ ಸ್ಥಳ ; —ಹೋಗಿ ಬರುವುದು, ಸೇರುವುದು (A place of great, little, r. ಹೆಚ್ಚು ಜನ, ಕಡಮೆ ಜನ, ಹೋಗುವ ಸ್ಥಳ)

Repaír[2] ರಿಪೇರ್ (ಕ್ರಿ. ಸಕ., ನಾ.) (ಕಟ್ಟಡ, ಯಂತ್ರ, ಉಡುಪು, ಅಂಗಾಂಶ, ಬಲ, ಮೊ. ನ್ನು) ಮತ್ತೆ ಒಳ್ಳೆಯ ಸ್ಥಿತಿಗೆ ತರು; ನೇರ್ಪಡಿಸು, ದುರಸ್ತು ಮಾಡು ; ಜೀರ್ಣೋದ್ಧಾರ ಮಾಡು ; 'ರಿಪೇರಿ' ಮಾಡು ; ಸರಿಪಡಿಸು. (ನಷ್ಟ, ಅನ್ಯಾಯ, ತಪ್ಪು—ಇವನ್ನು) ಪರಿಹರಿಸು, ಪರಿಹಾರಕೊಟ್ಟು ನೇರ್ಪಡಿಸು. (ನಾ.) (ಕ್ರಿಯಾರ್ಥಗಳಲ್ಲಿ) ; ನೇರ್ಪಾಟು ; ದುರಸ್ತು (Bicycle, house, needs r.). (ಬಳಸುವುದಕ್ಕೆ ಅನುಕೂಲವಾದ) ಸುಸ್ಥಿತಿ (Is in, out of, r. Is in bad r.). **Repaírable** (ಗು.); **Réparable** ರೆಪರಬ್ಲ್ (ಗು.) ನೇರ್ಪಡಿಸಲಾಗುವ ; ಪರಿಹಾರ್ಯ. **Reparátion** (ನಾ.) (ಕ್ರಿಯಾರ್ಥಗಳಲ್ಲಿ). (ಬ. ವ. ದಲ್ಲಿ) ನೇರ್ಪಾಟುಗಳು ; 'ರಿಪೇರಿ'ಗಳು (ಈಗ ಸಾ., Repair, repairs ರೂಪಗಳು ಬಳಕೆ). (ಮು., ಬ. ವ. ದಲ್ಲಿ : ಯುದ್ಧದಿಂದಾದ ನಷ್ಟಗಳಿಗಾಗಿ) ಪರಿಹಾರ(ಕೊಡುವುದು) ; ನಷ್ಟಭರ್ತಿ (ಮಾಡುವುದು). **Réparative, Repá-** ರಿಪ್ಯಾರಟಿವ್ (ಗು.)

Repánd ರಿಪ್ಯಾಂಡ್ (ಗು.) (ಸ. ವಿ., ಪ್ರಾ. ವಿ.) ತರಂಗಾಕಾರದ (ಅಂಚುಳ್ಳ). **Repándo-** (ಸ. ಪೂ. ಪ.)

Réparable, Reparátion, etc. **Repair**[2] ನೋಡಿ.

Reparteé ರೆಪರ್ಟೀ (ನಾ., ಕ್ರಿ. ಅಕ.) (ಬಾಯಿ ಮುಚ್ಚಿಸುವ) ಸಿದ್ಧ ಚತುರ ಪ್ರತ್ಯುತ್ತರ, —ಪ್ರತ್ಯುಕ್ತಿ ; ಸರಸ, ವ್ಯಂಗ್ಯ, —ಪ್ರತ್ಯುಕ್ತಿ (ಗಳನ್ನು ನುಡಿಯುವುದು) (A great power, a storehouse, of r.). (ಕ್ರಿ.) (ಈಗ ವಿರ. ಪ್ರ.) —ಗಳನ್ನು ನುಡಿ, ಆಡು.

Repást ರಿಪಾಸ್ಟ್ (ನಾ.) ಭೋಜನ, ಊಟ(ಕ್ಕೆ ಬಡಿಸಿದ್ದು, —ದಲ್ಲಿ ತಿಂದದ್ದು) (Rich, plentiful, slight, delicate, luxurious, etc., r.)

Repátriate ರಿಪ್ಯಾ(ಪೇ)ಟ್ರಿಯೇಟ್ (ಕ್ರಿ.) ತಾಯ್ನಾಡಿಗೆ, ಸ್ವದೇಶಕ್ಕೆ, —ಹಿಂದಿರುಗು, ಹಿಂದಿರುಗಿಸು, ಮರಳು, ಮರಳಿಸು. **Repatriátion** (ನಾ.)

Repaý ರಿಪೇ (ಕ್ರಿ.) (ಭೂತ., ಭೂ. ಕೃ. -paid) (ಹಣವನ್ನು) ಹಿಂದಕ್ಕೆ ಕೊಡು, ವಾಪಸು ಮಾಡು. (ಏಟನ್ನು) ತಿರುಗಿಸಿ ಕೊಡು ; (ಭೇಟಿ, ಉಪಕಾರ, ಮೊ. ನ್ನು) ಪ್ರತಿಯಾಗಿ—ಕೊಡು, ಮಾಡು ; ಪರಿಹಾರವಾಗಿ, ಪ್ರತಿಫಲವಾಗಿ, —ಕೊಡು (*For* ಉಪ. ದೊಡನೆ). (ಕೊಟ್ಟದ್ದನ್ನು) ಹಿಂದಕ್ಕೆಕೊಡು ; ಸಾಲ ತೀರಿಸು. ಋಣ ತೀರಿಸು. **Repaýable** (ಗು.) ; **Repaýment** (ನಾ.)

Repeál ರಿಪೀಲ್ (ಕ್ರಿ. ಸಕ., ನಾ.) (ಕಾಯಿದೆ, ಮೊ. ನ್ನು) ಹಿಂದಕ್ಕೆ, ವಾಪಸು, —ತೆಗೆದುಕೊ ; ತೆಗೆದುಹಾಕು, ತೊಡೆದುಹಾಕು ; ರದ್ದು ಮಾಡು. (ನಾ.) (ಕ್ರಿಯಾರ್ಥಗಳಲ್ಲಿ). **Repeálable** (ಗು.) ; **Repeáler** (ನಾ.)

Repeát ರಿಪೀಟ್ (ಕ್ರಿ., ನಾ.) ಮತ್ತೆ, ಮತ್ತೊಮ್ಮೆ, ಪುನಃ, —ಹೇಳು, ಮಾಡು ; ಪುನರಾವೃತ್ತಿಮಾಡು ; ಬಾಯಿಪಾಠ ಒಪ್ಪಿಸು ; ವರದಿ ಮಾಡು. ಅನುಕರಿಸು, ಅನುಕರಣಮಾಡು. (ಗಡಿಯಾರ, ಮೊ. ಗಳ ವಿಷಯದಲ್ಲಿ) ಹಿಂದೆ ಹೊಡೆದ (ಕಾಲು)ಗಂಟೆ, ಮೊ. ನ್ನು ಆವಶ್ಯಕವಾದಾಗ, ಮತ್ತೆ ಹೊಡೆ (Repeating watch, etc.) [**Repeáter** (ನಾ.)]. (ಬಂದೂಕು, ಮೊ. ಗಳ ವಿಷಯದಲ್ಲಿ) (ಮತ್ತೆ ಮತ್ತೆ ಬಾರುಮಾಡದೆ) ಹಲವು (ಸಲ) ಗುಂಡು ಹೊಡೆ (Repeating rifle, etc.). ಮರಳಿ (ಮರಳಿ)—ಬರು, ಕಾಣಿಸಿಕೊ ; ಆವೃತ್ತಿಯಾಗು (The last three figures r. Food repeats ತಿಂದ ಆಹಾರ ಮತ್ತೆ ಮತ್ತೆ ಗಂಟಲಿನಿಂದ ಬಾಯಿಗೆ ಏರುತ್ತದೆ). (ಸ್ವಾರ್ಥಕ) ಅದೇ ರೂಪದಲ್ಲಿ ಪುನರಾವೃತ್ತಿಯಾಗು ; ಪುನರಾವೃತ್ತಿ ಮಾಡು (History repeats itself). (ನಾ.) (ಸಭಿಕರ ಕೋರಿಕೆಯ ಮೇರೆ, ಕಾರ್ಯಕ್ರಮದ ಒಂದಂಶವನ್ನು, ಮು., ಹಾಡು, ಮೊ. ನ್ನು) ಮತ್ತೊಮ್ಮೆ ಹೇಳುವುದು ; ಪುನರಾವೃತ್ತಿ (ಮಾಡುವುದು). (ಸಂ.) ಆವೃತ್ತಿ ಮಾಡಬೇಕಾದ ಭಾಗ ; ಇದನ್ನು ಸೂಚಿಸುವ ಚಿಹ್ನೆ. (ಗೋಡೆಕಾಗದ, ಮೊ. ಗಳಲ್ಲಿ) ಆವೃತ್ತಿಯಾಗಿರುವ ಮಾದರಿ. (ವಾಣಿಜ್ಯ) ಹಿಂದೆ ರವಾನಿಸಿದ ಸರಕಿನಂಥದನ್ನು ಮರಳಿ ರವಾನಿಸುವುದು ; ಇದಕ್ಕೆ ಕೋರಿಕೆ. **Repeátable** (ಗು.) ; **Repeátedly** (ಕ್ರಿ. ವಿ.); **Repetítion** ರೆಪಿಟಿಷನ್ (ನಾ.) (ಕ್ರಿಯಾರ್ಥಗಳಲ್ಲಿ) ; ಪುನರಾವೃತ್ತಿ. ಕಂಠ ಪಾಠಕ್ಕೆ ಗೊತ್ತಾದ ಭಾಗ. ಯಥಾಪ್ರತಿ ; ನಕಲು. (ಸಂ.) ಅದೇ ಸ್ವರವನ್ನು ಬೇಗ ಮರುನುಡಿಸುವ ವಾದ್ಯದ ಪುನರಾವರ್ತನ ಶಕ್ತಿ. **Repetítional** (ಗು.); **Repetítionary** (ಗು.) ; **Repetítious** (ಗು.) ; **Repétitive** ರಿಪೆಟಿಟಿವ್ (ಗು.) (ವಿರ. ಪ್ರ.)

Repél ರಿಪೆಲ್ (ಕ್ರಿ. ಸಕ.) ಹಿಂದಕ್ಕೆ ಅಟ್ಟು ; ಹಿಮ್ಮೆಟ್ಟಿಸು ; ಹಿಂದಕ್ಕೆ ಓಡಿಸು ; ನಿವಾರಿಸು ; ಪ್ರವೇಶ ಕೊಡದಿರು ; ಅಂಗೀಕರಿಸದಿರು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹತ್ತಿರ ಬರಗೊಡದಿರು ; ವಿಕರ್ಷಿಸು (R. assailant, attack, temptation, weapon, blow, suggestion, plea, offer, person's advances. First attracts and then repels the magnet). ಅಸಹ್ಯವಾಗಿರು ; ಜುಗುಪ್ಸೆ ಹುಟ್ಟಿಸು. **Repéllent** (ಗು.); **Repéllently** (ಕ್ರಿ. ವಿ.)

Répent[1] ರಿಪೆಂಟ್ (ಗು.) (ಮು., ಸ. ವಿ.) ಹಬ್ಬುವ ; ಮು., ಭೂಮಿಯ (ಹೊರ ಅಥವಾ ಒಳ) ಮೇಲ್ಮೈಗೆ ಹದ್ದಿಕೊಂಡೇ ಹಬ್ಬುವ.

Repént[2] ರಿಪೆಂಟ್ (ಕ್ರಿ.) (ಸ್ವಾರ್ಥಕ, ಪ್ರಾಚೀ. ಪ್ರ. ಸ್ವಾರ್ಥಕ ಸರ್ವನಾಮದೊಡನೆ) ವ್ಯಸನಪಡು, ಪಶ್ಚಾತ್ತಾಪ ಪಡು, ಮರುಗು (*Of* ಉಪ. ದೊಡನೆ) (ಪ್ರಾಚೀ. ಪ್ರ. I now r. me. He repenteth him of the evil). (ಭಾವವಾಚಕ ಪ್ರ.) ಪಶ್ಚಾತ್ತಾಪವುಂಟುಮಾಡು, ವಿಷಾದಕ್ಕೀಡು ಮಾಡು (ಪ್ರಾಚೀ. ಪ್ರ.: It repents me that I did it). ಅನುತಾಪದಿಂದ ಚಿಂತಿಸು (*Of* ಉಪ. ದೊಡನೆ); (ಮಾಡದೆ ಇದ್ದಿದ್ದರೆ ಚೆನ್ನಾಗಿತ್ತೆಂದು) ಪಶ್ಚಾತ್ತಾಪ, ಅನುತಾಪ, ವಿಷಾದ, ಎದೆಗುದಿ, —ಪಡು. **Repéntance** (ನಾ.); **Repéntant** (ಗು.) ; **Repéntantly** (ಕ್ರಿ. ವಿ.)

Repercússion, etc. Re- ನೋಡಿ.

Répertoire ರೆಪಟ್ವಾರ್ (ನಾ.) (ಒಂದು ನಾಟಕ ಸಂಘ ಅಥವಾ ಒಬ್ಬ ಸಂಗೀತಗಾರ ಚೆನ್ನಾಗಿ ಕಲಿತಿರುವ ಅಥವಾ ವಾಡಿಕೆಯಾಗಿ ಪ್ರದರ್ಶಿಸುವ ಅಥವಾ ಪ್ರದರ್ಶಿಸಲು ಸಿದ್ಧವಾಗಿರುವ) ನಾಟಕಗಳ ಅಥವಾ ಸಂಗೀತ ಕೃತಿಗಳ ಬಂಡವಾಳ, ಸರಕು (R. company or system ಜನ ಪ್ರಿಯವಾದ ಒಂದೇ ನಾಟಕವನ್ನು ತಿಂಗಳುಗಟ್ಟಳೆ ಪ್ರದರ್ಶಿಸುವುದಕ್ಕೆ ಬದಲು ದಿನಕ್ಕೊಂದರಂತೆ ವಾಡಿಕೆ ನಾಟಕಗಳನ್ನಾಡಿ ಹಣ ಸಂಪಾದಿಸುವ ಸಂಘ, ಪದ್ಧತಿ)

Répertory ರೆಪರ್ಟರಿ (ನಾ.) ಬೇಕಾದ ವಸ್ತು, ವಿಷಯ, —(ಸುಲಭವಾಗಿ) ದೊರೆಯುವ ಸ್ಥಳ; (ಮು., ಸಮಾಚಾರ, ಉದಾಹರಣೆಗಳು, ಸಂಗತಿಗಳು, ವೊ. ಗಳ) ಭಂಡಾರ, ನಿಧಿ. = Repertoire [R. theatre, company, system (Repertoire theatre, ವೊ. ಕ್ಕಿಂತ ಈಗ ಹೆಚ್ಚು ರೂಢಿಯ ಪ್ರ.)]

Repetítion, etc. **Repeat** ನೋಡಿ.

Repeténd ರೆಪಿಟೆಂಡ್. (ನಾ.) ದಶಮಾಂಶದ ಆವರ್ತಕಾಂಕ(ಗಳು). ಆವರ್ತಕ —ಪದ, ವಾಕ್ಯಾಂಶ ; ಪಲ್ಲವಿ.

Repíne ರಿಪೈನ್ (ಕ್ರಿ. ಅಕ.) ಸಿಡಿಮಿಡಿಗೊಳ್ಳು; ಜಿಗಿಲು; ಅಸಮಾಧಾನ, ಅತೃಪ್ತಿ, —ಪಡು ; ಕೊರಗು (*At, against* ಉಪ. ದೊಡನೆ ಸಹ). **Repíningly** (ಕ್ರಿ. ವಿ.)

Replíce ರಿಪ್ಲೇಸ್ (ಕ್ರಿ. ಸಕ.) ಮುಂಚಿನ ಸ್ಥಳದಲ್ಲಿಡು ; ಮತ್ತೆ ಅದರ ಸ್ಥಾನದಲ್ಲಿಡು ; ಪುನಃ ಸ್ಥಾಪನೆಮಾಡು. (ಒಬ್ಬನ, ಒಂದರ, ಸ್ಥಾನಕ್ಕೆ) ಬದಲಾಗಿ—ಬರು, ತರು ; (ಕರ್ಮಣಿ ಪ್ರ.) (ಒಬ್ಬನಿಂದ, ಒಂದರಿಂದ) ಸ್ಥಾನ ಪಲ್ಲಟ ಪಡೆ (*By* ಉಪ. ದೊಡನೆ) ; (ಒಬ್ಬನ, ಒಂದರ) ಸ್ಥಾನಕ್ಕೆ —ಭರ್ತಿಮಾಡು, ತರು (*With, by* ಉಪ. ದೊಡನೆ). **Replíceable** (ಗು.) ; **Replácement** (ನಾ.)

Replaý ರೀಪ್ಲೇ (ಕ್ರಿ. ಸಕ.), **Réplay** (ನಾ.) (ಪಂದ್ಯದಾಟವನ್ನು) ಮತ್ತೊಮ್ಮೆ ಆಡು. (ನಾ.) ಮತ್ತೊಮ್ಮೆ ಆಡಿದ ಪಂದ್ಯದಾಟ.

Replénish ರಿಪ್ಲೆನಿಷ್ (ಕ್ರಿ. ಸಕ.) ಮತ್ತೆ ಭರ್ತಿಮಾಡು, ಮತ್ತೆ ತುಂಬು (*With* ಉಪ. ದೊಡನೆ ಸಹ). (ಭೂ. ಕೃ.) (ಮತ್ತೆ) ತುಂಬಿದ, ಭರ್ತಿಯಾದ (*With* ಉಪ. ದೊಡನೆ ಸಹ). **Replénishment** (ನಾ.)

Replére ರಿಪ್ಲೀಟ್ (ಗು.) (—ಇಂದ) (ಗಿಡಿದು) ತುಂಬಿದ, ವ್ಯಾಪ್ತ, ಭರಿತ, ಸಂಪೂರಿತ, ಚೆನ್ನಾಗಿ ತುಂಬಿಟ್ಟಿರುವ (*With* ಉಪ. ದೊಡನೆ). ಕಂಠ ಪೂರ್ತಿಯಾದ, ಕಟ್ಟಿರೆಯಾದ (*With* ಉಪ. ದೊಡನೆ). **Replétion** (ನಾ.) (ಮು., full to repletion)

Replévin ರಿಪ್ಲೆವಿನ್ (ನಾ.) (ವ್ಯವಹಾರವನ್ನು ನ್ಯಾಯಸ್ಥಾನಕ್ಕೊಪ್ಪಿಸಲು ಜಾಮೀನುಕೊಟ್ಟಮೇಲೆ) ಜಪ್ತಿ ಸ್ವತ್ತನ್ನು ಮಾಲೀಕನಿಗೆ ಹಿಂದಕ್ಕೆ ಕೊಡುವುದು, —ಮಾಲೀಕನು ಹಿಂದಕ್ಕೆ ಪಡೆಯುವುದು. ಇದಕ್ಕಾಗಿ ಕೊಡುವ ಲಿಖಿತ ರೂಪದ ಆಜ್ಞೆ ; ಇದರಿಂದ ಹುಟ್ಟುವ ವ್ಯವಹಾರ. **Replévy** ರಿಪ್ಲೆವಿ (ಕ್ರಿ. ಸಕ.) (ತಕ್ಕ ಜಾಮೀನು ಕೊಟ್ಟು) ಜಪ್ತಿಯಾದ ಚರ ಸ್ವತ್ತನ್ನು ಹಿಂದಕ್ಕೆ ಪಡೆ.

Réplica ರೆಪ್ಲಿಕ (ನಾ.) (ಮೂಲ ಕಲೆಗಾರನೇ ಮಾಡಿದ) ಮೂಲ ಚಿತ್ರ, ವೊ. ರ ದ್ವಿಪ್ರತಿ, ನಕಲು, ಪ್ರತಿ ಕೃತಿ. ಯಥಾ ಪ್ರತಿ ; ಪಡಿಯಚ್ಚು. **Réplicate**[1] —ಕೆಟ್ (ಗು.) (ಸ. ವಿ.) (ತನ್ನಮೇಲೆಯೆ) ಹಿಂದಕ್ಕೆ ಮಡಿಚಿಕೊಂಡಿರುವ, ಹಿಮ್ಮಡಿಚಿದ. **Réplicate**[2] —ಕೇಟ್ (ಕ್ರಿ. ಸಕ.) (ವಿರ. ಪ್ರ.) ಪುನರಾವೃತ್ತಿ ಮಾಡು. (—ರ) ಯಥಾ ಪ್ರತಿ ಮಾಡು. ಹಿಮ್ಮಡಿಚು. **Replicátion** (ನಾ.) (ವಿರ. ಪ್ರ.) ಹಿಮ್ಮಡಿಚುವುದು ; ಮಡಿಕೆ. ಉತ್ತರ (ಕೊಡುವುದು), ಪ್ರತಿವಾದ. ಪ್ರತ್ಯುತ್ತರ (ಮು., ಉತ್ತರಕ್ಕೆ ಪ್ರತ್ಯುತ್ತರ). (ನ್ಯಾ. ಶಾ.) ಪ್ರತಿವಾದಿ ಮಾಡಿದ ನಿರಾಕರಣೆಗೆ ವಾದಿಯ ಉತ್ತರ, ಖಂಡನೆ. ಪ್ರತಿಧ್ವನಿ. ನಕಲು (ಮಾಡುವುದು)

Réplicate[1, 2]. **Replica** ನೋಡಿ.

Réplicate[3] ರೆಪ್ಲಿಕೆಟ್ (ನಾ.) (ಸಂ.) ನಿರ್ದಿಷ್ಟ ಸ್ವರಕ್ಕೆ ಒಂದು ಅಥವಾ ಹೆಚ್ಚಿನ ಅಷ್ಟಮದಷ್ಟು ಮೇಲಿನ ಅಥವಾ ಕೆಳಗಿನ ಸ್ವರ.

Replý ರಿಪ್ಲೈ (ಕ್ರಿ., ನಾ.) (ಮಾತಿನಲ್ಲಿ ಅಥವಾ ಕಾರ್ಯರೂಪದಲ್ಲಿ) ಉತ್ತರ, ಜವಾಬು, —ಕೊಡು ; ಮಾರ್ನುಡಿ ; ಪ್ರತಿವರ್ತಿಸು [(*To* ಉಪ. ದೊಡನೆ ; *that*, ವೊ. ಪದದೊಡನೆ ಅಥವಾ ಅವರಣ ವಾಕ್ಯದೊಡನೆ). R. to a toast ಶುಭಪಾನಕ್ಕೆ ವಂದನೆಗಳನ್ನು ಸಲ್ಲಿಸು. The batteries replied to our fire]. (ನಾ.) ಮಾರ್ನುಡಿ, ಉತ್ತರ (ಕೊಡುವುದು, ಹೇಳುವುದು). ಪ್ರತಿವರ್ತನೆ, ಪ್ರತಿಕ್ರಿಯೆ. R. paid (ತಂತಿವರ್ತಮಾನದ ವಿಷಯದಲ್ಲಿ : ತಂತಿವರ್ತಮಾನ ಕಳುಹಿಸಿದವನು) ಜವಾಬಿಗೆ ಮುಂಗಡವಾಗಿ ಹಣ ಕಟ್ಟಿದ.

Repondez s'il vous plait (F) ರೆಪಾಂಡೇ ಸೀಲ್ ವೂ ಪ್ಲೆ (ಸಂಕ್ಷಿಪ್ತ: R.S.V.P.) (ಆಹ್ವಾನ ಪತ್ರ ಅಥವಾ ಇತರ ಪತ್ರದ ಕೊನೆಯಲ್ಲಿ ಸೇರಿಸುವ ಒಕ್ಕಣೆ) : ದಯವಿಟ್ಟು ಉತ್ತರ ಕೊಡಿ.

Repórt ರಿಪೋರ್ಟ್ (ಕ್ರಿ., ನಾ.) ವರ್ತಮಾನ ತಂದು ಹೇಳು ; ಸುದ್ದಿ ತಿಳಿಸು ; (ನಡೆದ ಸಂಗತಿ, ಒಬ್ಬನು ಹೇಳಿದ್ದು, ವೊ. ನ್ನು) ವಿವರಿಸು, ವರದಿಮಾಡು, ಬರೆ, ಕಳುಹಿಸು. (ಒಂದು ವಿಷಯವಾಗಿ) ಅಧಿಕಾರಯುಕ್ತವಾದ ಅಥವಾ ಕ್ರಮವಿಹಿತವಾದ ವರದಿ ಹೊರಡಿಸು. ತಾನು (ವಾಪಸು) ಬಂದಿರುವುದಾಗಿ ವರದಿಮಾಡು, ಶ್ರುತಪಡಿಸು ; (ಕೆಲಸದ ಮೇಲೆ) ಹಾಜರಾಗು. [It is reported (—ಎಂದು) ಸಾಮಾನ್ಯವಾಗಿ ಹೇಳುತ್ತಾರೆ, ವದಂತಿ ಇದೆ. Reported speech ಪರೋಕ್ತ ಕಥನ. Chairman of Committee reports bill to House (ಮಸೂದೆಯ ದ್ವಿತೀಯ ಪಠನಕ್ಕೂ ತೃತೀಯ ಪಠನಕ್ಕೂ ನಡುವೆ) ಮಸೂದೆಯ ವಿಷಯದಲ್ಲಿ ಸಮಿತಿಯ ತೀರ್ಮಾನಗಳನ್ನು ಸಮಿತಿಯ ಅಧ್ಯಕ್ಷನು ಶಾಸನ ಸಭೆಗೆ ವರದಿ ಮಾಡುತ್ತಾನೆ. R. progress ಆಗಿರುವ ಅಭಿವೃದ್ಧಿಯನ್ನು, ಅದುವರೆಗೂ ಆಗಿರುವುದನ್ನು, —ಶ್ರುತಪಡಿಸು, ವರದಿಮಾಡು. Move to r. progress (House of Commons ಎಂಬ ಶಾಸನ ಸಭೆಯಲ್ಲಿ; ಅನೇಕ ವೇಳೆ ಅಡಚಣೆಯೊಡ್ಡುವ ಉದ್ದೇಶದಿಂದ) ಚರ್ಚೆ ನಿಲ್ಲಬೇಕೆಂದು ಸೂಚನೆ ತರು]. (ಪ್ರಕಟನೆಗಾಗಿ) ಪದಶಃ ಬರೆ(ದುಕೊ), ಅಡಕವಾಗಿ ಸಂಗ್ರಹಿಸು, ವರ್ಣನೆ ಬರೆ, ವರದಿ ಬರೆ [R. law case, proceedings, meeting (ಕರ್ಮಪದವಿಲ್ಲದೆ ಸಹ): Reports for the *Times*]. (ಒಂದರ ವಿಚಾರದಲ್ಲಿ, ಅನುಕೂಲವಾಗಿ ಅಥವಾ ಪ್ರತಿಕೂಲವಾಗಿ) ಅಭಿಪ್ರಾಯ ತಿಳಿಸು (R. well or badly. Reports well of the prospects. Is badly reported of ಪ್ರತಿಕೂಲಾಭಿಪ್ರಾಯವಿದೆ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ನಾ.) ಬೀದಿ ಮಾತು; ಗಾಳಿ ವರ್ತಮಾನ; ಹಾರು ಸುದ್ದಿ; ಸುದ್ದಿ [Mere r. is not enough to go upon. The r. goes (—ಎಂದು) ಸುದ್ದಿ, ವದಂತಿ, ಇದೆ]. (ಒಬ್ಬನ ಅಥವಾ ಒಂದರ ವಿಷಯವಾಗಿ) ಜನರು ಆಡಿಕೊಳ್ಳುವದು; ಖ್ಯಾತಿ; ಹೆಸರು (Things of good r. Through good & evil r. ಕೀರ್ತಿ ಬರಲಿ, ಅಪಕೀರ್ತಿ ಬರಲಿ). (ತನಿಖೆ ಮಾಡಿದಮೇಲೆ ಅಥವಾ ಪರ್ಯಾಲೋಚಿಸಿದಮೇಲೆ ಕೊಟ್ಟ) ವರದಿ. (ಮು., ವೃತ್ತಪತ್ರಿಕೆಗಳಲ್ಲಿ ಪ್ರಕಟನೆಗಾಗಿ ಕೊಡುವ) ಒಂದು ದೃಶ್ಯದ ಅಥವಾ ಭಾಷಣದ ಅಥವಾ ನ್ಯಾಯ ವ್ಯವಹಾರದ ಕಥನ; ಅದರ ಸಂಗ್ರಹ; ವರದಿ [R. stage (ಶಾಸನ ಸಭೆಯಲ್ಲಿ ಮಸೂದೆಯ ಬಗ್ಗೆ ಪ್ರಸಕ್ತ ಸಮಿತಿ ವರದಿಯನ್ನು ಒಪ್ಪಿಸಿದಮೇಲೆ) ಮಸೂದೆ ಕೊನೆಯ ಚರ್ಚೆಗೆ ಸಿದ್ಧವಾಗಿರುವ ಸ್ಥಿತಿ, ಹಂತ]. ಸಿಡಿತದ ಸದ್ದು; ಆಸ್ಫೋಟನೆಯ ಶಬ್ದ (Went off with a loud r.). **Repórtable** (ಗು.); **Repórter** (ನಾ.) ವರದಿಗಾರ.

Repóse[1] ರಿಪೋಸ್ (ಕ್ರಿ. ಸಕ.) (ಒಬ್ಬನಲ್ಲಿ, ಒಂದರಲ್ಲಿ, ನೆಚ್ಚಿಕೆ, ಮೊ. ನ್ನು) ಇಡು (*In* ಉಪ. ದೊಡನೆ). **Repósal** (ನಾ.)

Repóse[2] ರಿಪೋಸ್ (ಕ್ರಿ., ನಾ.) ವಿಶ್ರಾಂತಿ —ಕೊಡು, ತೆಗೆದುಕೊ. (ತನ್ನ ತಲೆ, ಮೊ. ನ್ನು ದಿಂಬು, ಮೊ. ಗಳ ಮೇಲೆ) ವಿಶ್ರಾಂತಿಗಾಗಿ ಇಡು (*On* ಉಪ. ದೊಡನೆ); ವಿಶ್ರಾಂತಿಯಿಂದ ಆಯಾಸ ಪರಿಹಾರ ಮಾಡು, ಮಾಡಿಕೊ. (ಮು., ನಿದ್ದೆಯಲ್ಲಿ ಅಥವಾ ಮರಣಹೊಂದಿ) ಮಲಗು, ಮಲಗಿರು, ಮಲಗಿಸಲ್ಪಟ್ಟಿರು (*In*, *on* ಉಪ. ದೊಡನೆ ಸಹ). (—ಮೇಲೆ) ಅವಲಂಬಿಸಿರು, ಆಧಾರ ಹೊಂದಿರು (*On* ಉಪ. ದೊಡನೆ) (The whole system reposes on fear); (ನೆನಪು, ಮೊ. ಗಳ ವಿಷಯದಲ್ಲಿ) ನೆಟ್ಟಿರು, ನೆಲಸಿರು (*On* ಉಪ. ದೊಡನೆ). (ನಾ.) ವಿಶ್ರಾಂತಿ; ವಿರಾಮ; ದುಡಿತದಿಂದ ಬಿಡುವು; ಆರಾಮ; ನಿದ್ದೆ; ಶಾಂತ, ಅಕ್ಷುಬ್ಧ, ಸ್ತಿಮಿತ, —ಸ್ಥಿತಿ; ಶಾಂತತೆ. (ಕಲೆಯಲ್ಲಿ) ಪ್ರಶಾಂತ ಮುದ್ರೆ, —ಪ್ರಭಾವ; ಸಮರಸವಾದ (ಚಿತ್ರಗಳ ಅಥವಾ ವರ್ಣಗಳ) ಮೇಳನ, ಹೊಂದಿಕೆ; ಶಾಂತಿ, ನಿರಾತಂಕಭಾವ [ಮು., Lacks r. (ಶಾಂತಿಯಿಲ್ಲ) ಎಂಬಲ್ಲಿ]. **Repóseful** (ಗು.); **Repósefully** (ಕ್ರಿ. ವಿ.)

Repósitory ರಿಪಾಸಿಟರಿ (ನಾ.) (ಪದಾರ್ಥಗಳನ್ನು ಹಾಕಿಡಬಹುದಾದ) ಪಾತ್ರೆ, ಸಂಪುಟ, ಕೋಷ್ಠ. ಪದಾರ್ಥಗಳನ್ನು ಶೇಖರಿಸಿಡುವ ಅಥವಾ ಪದಾರ್ಥಗಳು ದೊರೆಯಬಹುದಾದ ಸ್ಥಳ; ಉಗ್ರಾಣ; ವಿವಿಧ ವಸ್ತು ಸಂಗ್ರಹಶಾಲೆ; ಮಳಿಗೆ; ಕೋಠಿ; ಭಂಡಾರ (Book, person, etc. is a r. of curious information). ಮಸಣ; ಶ್ಮಶಾನ. ಒಬ್ಬನ ಅಂತರಂಗಗಳನ್ನು ಅಥವಾ ಗುಟ್ಟುಗಳನ್ನು ಇಟ್ಟುಕೊಂಡಿರುವವನು: ಅಂತರಂಗದ—ಮನುಷ್ಯ, ಮಿತ್ರ; ಆಪ್ತ.

Repost. =Riposte.

Repoussé ರಪೂಸೇ (ಗು., ನಾ.) ಹಿಂಬದಿಯಿಂದ ಹೊಡೆದು ಉಬ್ಬು ಚಿತ್ರವೆಬ್ಬಿಸಿದ (ಲೋಹದ ಅಲಂಕಾರ ಕೆಲಸ)

Repp = Rep[1].

Reprehénd ರೆಪ್ರಿಹೆಂಡ್ (ಕ್ರಿ. ಸಕ.) ಝಂಕಿಸು; ತೆಗಳು; ಆಕ್ಷೇಪಿಸು; ತಪ್ಪು ಕಂಡುಹಿಡಿ. **Reprehénsible** (ಗು.); **Reprehénsibly** (ಕ್ರಿ. ವಿ.); **Reprehénsion** (ನಾ.)

Represént ರೆಪ್ರಿಸೆಂಟ್ (ಕ್ರಿ. ಸಕ.) ರೂಪಿಸು; ಚಿತ್ರಿಸು; ನಿರೂಪಿಸು, ತೋರಿಸು; ಬಿಂಬಿಸು; (—ರ) ಪಡಿಯಚ್ಚಾಗಿರು, ಪ್ರತಿಬಿಂಬವೆನಿಸು (Can you r. infinity to yourself? Can only r. it to you by metaphors ರೂಪಕಗಳಿಂದ ಮಾತ್ರ ಅದನ್ನು ನಿನಗೆ ನಿರೂಪಿಸಬಲ್ಲೆ). [ನಡೆವಳಿ ತಿದ್ದಿಕೊಳ್ಳುವುದಕ್ಕಾಗಿ, ಮೊ. ಗಿ (ಒಬ್ಬನಿಗೆ) ಸಂಗತಿಗಳನ್ನು] ತಿಳಿಯಹೇಳು, ಮನದಟ್ಟು ಮಾಡಿಸು (*To* ಉಪ. ದೊಡನೆ). ಅರಿಕೆಮಾಡು, ವಿಜ್ಞಾಪಿಸು. (—ಎಂದು) ಆರೋಪಿಸು (*That* ಪದ ದೊಡನೆ); (—ಎಂದು) ವರ್ಣಿಸು (*As* ಪದದೊಡನೆ) (Am not what you r. me to be *or* as). (ನಾಟಕ, ಮೊ. ನ್ನು) ಆಡು, ಪ್ರದರ್ಶಿಸು; (ರಂಗಸ್ಥಳದಲ್ಲಿ, ಪಾತ್ರ) ಅಭಿನಯಿಸು. (—ರ) ಸಂಕೇತವಾಗಿರು; ಮೂರ್ತೀಕರಿಸಿರು(ವಂತೆ ವರ್ತಿಸು); (—ರ) ಪ್ರತಿನಿಧಿಯಾಗಿರು ಸಂವಾದಿಯಾಗಿರು, ಮಾದರಿಯಾಗಿರು (Sovereign represents majesty of State ರಾಷ್ಟ್ರದ ಘನತೆ ಗಾಂಭೀರ್ಯಗಳನ್ನು ಪ್ರಭು ನಿದರ್ಶಿಸುತ್ತಾನೆ. Inch of rain represents 100 tons to acre. Globe represents totality. Camels are represented in the New World by llamas ಅಮೆರಿಕದಲ್ಲಿ ಒಂಟೆಗಳಿಗೆ ಸಂವಾದಿಯಾಗಿ ಲಾಮ ಪ್ರಾಣಿಗಳಿವೆ. Welsh football is represented in the team by Morgan). (ಒಬ್ಬರ, ಒಂದರ) ಪರವಾಗಿ ಮಾತನಾಡುವ ಅಧಿಕಾರ ಪಡೆದಿರು; ಪ್ರತಿನಿಧಿಯಾಗಿರು, ಪ್ರತಿನಿಧಿಸು (ಶಾಸನ ಸಭೆಗೆ, ಒಂದು ಚುನಾವಣೆಯ ಕ್ಷೇತ್ರದಿಂದ ಸಹ) (King was represented by the Duke of Norfolk. Members representing urban constituencies). **Represéntable** (ಗು.); **Representátion** (ನಾ.) [Proportional representation ರಾಜಕೀಯ ಪಂಗಡಗಳಿಗೆ ದೇಶದಲ್ಲಿರುವ ಪ್ರಜಾ ಬೆಂಬಲಕ್ಕನುಗುಣವಾಗಿ ಪ್ರತಿನಿಧಿ ಸ್ಥಾನಗಳನ್ನು ದೊರಕಿಸುವಂತೆ ಏರ್ಪಡಿಸಿರುವ ಚುನಾವಣೆಯ ಪದ್ಧತಿ: ದಾಮಾಷಾ ಪ್ರಾತಿನಿಧ್ಯ (ಪದ್ಧತಿ)]. **Representátional** (ಗು.); **Represéntative** (ಗು., ನಾ.) ನಿರೂಪಿಸುವ, ಚಿತ್ರಿಸುವ, ಲಕ್ಷಣ ಪ್ರದರ್ಶಕವಾದ, ಲಕ್ಷ್ಯ [(*Of* ಉಪ. ದೊಡನೆ). A group r. of the theological virtues]. ಮನಸ್ಸಿನಲ್ಲಿ ಭಾವನೆಗಳನ್ನು ಕಲ್ಪಿಸುವ, ಕಲ್ಪಿಸಬಲ್ಲ (Imagination is a r. faculty). (ಒಂದು ವರ್ಗದ ಅಥವಾ ವರ್ಗಗಳ) ಆದರ್ಶ ಉದಾಹರಣೆಯಾದ, ಮಾದರಿಯಾದ; ದೃಷ್ಟಾಂತ ರೂಪವಾದ; (ಎಲ್ಲ ವರ್ಗಗಳ ಅಥವಾ ಅನೇಕ ವರ್ಗಗಳ) ಆದರ್ಶ ಮಾದರಿಗಳನ್ನೊಳಕೊಂಡ; ಪ್ರತಿನಿಧಿ ಸ್ವರೂಪವಾದ (The truth of an allegory is r., not literal. Call a meeting of r. men. A very r. selection, collection). [ಪ್ರಕೃತಿ ಚರಿತ್ರೆ, ಮೊ. ಗಳಲ್ಲಿ: ವಂಶದ (ಮಾದರಿಗಳ) ವಿಷಯದಲ್ಲಿ] ಬೇರೊಂದು ಸ್ಥಳದವಕ್ಕೆ ಸಂವಾದಿಯಾದ, ಸದೃಶವಾದ. ಚುನಾಯಿತ ನಿಯೋಗಿಗಳನ್ನುಳ್ಳ ಅಥವಾ ಪ್ರತಿನಿಧಿಗಳನ್ನೊಳಕೊಂಡ (R. chamber, house, etc.). ಇಂಥ ಪ್ರಾತಿನಿಧ್ಯದ ಆಧಾರವುಳ್ಳ; ಪ್ರತಿನಿಧಿಗಳು ನಿರ್ವಹಿಸುವ; ಪ್ರಾತಿನಿಧಿಕ (R. Government, institutions). (ನಾ.) ಮಾದರಿ; (—ರ) ಮೂರ್ತಿವತ್ತಾದದ್ದು, ಸದೃಶ ವಸ್ತು (*Of* ಉಪ. ದೊಡನೆ). (ಒಬ್ಬನ) ಕಾರ್ಯಭಾರಿ, ಪ್ರತಿನಿಧಿ, ಉತ್ತರಾಧಿಕಾರಿ; (ಶಾಸನ ಸಭೆಗಳಲ್ಲಿ) ಪ್ರತಿನಿಧಿ, ನಿಯೋಗಿ (House of Representatives ಅಮೆ. ಸಂ. ಗಳ ಕಾಂಗ್ರೆಸ್ಸಿನ ಕೆಳ ಸಭೆ; ಪ್ರಜಾಪ್ರತಿನಿಧಿ ಸಭೆ). **Represéntatively** (ಕ್ರಿ. ವಿ.); **Represéntativeness** (ನಾ.)

Représs ರಿಪ್ರೆಸ್ (ಕ್ರಿ. ಸಕ.) ತಡೆಗಟ್ಟು; ನಿರೋಧಿಸು; ದಮನ ಮಾಡು; ಅಂಕೆಯಲ್ಲಿಡು; ದಬ್ಬಾಳಿಕೆ ಮಾಡು; ಅದುಮು, ತಲೆಯೆತ್ತದಂತೆ ತುಳಿ(ದಿಡು); ನಿಗ್ರಹಿಸು; (ಧ್ವನಿಯಾಗದಂತೆ, ಸಿಡಿದರೆ ಒಡೆದು ಹೋಗದಂತೆ ಅಥವಾ ದೊಂಬಿಯಾಗದಂತೆ) ಅಡಗಿಸು. **Represśion** —ಷ(ಷ್)ನ್ (ನಾ.) (ಮು., ಮ. ಶಾ.) ಸ್ವಾಭಾವಿಕ ಪ್ರವೃತ್ತಿಗಳ ದಮನ. **Représsive** (ಗು.)

Repriéve ರಿಪ್ರೀವ್ (ಕ್ರಿ. ಸಕ., ನಾ.) (ಮರಣ ದಂಡನೆಗೀಡಾದವನ) ವಧೆಯನ್ನು, ಗಲ್ಲಿಗೇರಿಸುವುದನ್ನು, —ತಾತ್ಕಾಲಿಕವಾಗಿ ನಿಲ್ಲಿಸು, ತಡಮಾಡು. (ರೂಪ.) ತಾತ್ಕಾಲಿಕವಾಗಿ ಕಾಲಾವಕಾಶ, ಬಿಡುವು, ವಿರಾಮ, —ಕೊಡು. (ನಾ.) (ಕ್ರಿಯಾರ್ಥಗಳಲ್ಲಿ); ಮರಣ ದಂಡನೆಯನ್ನು ತಾತ್ಕಾಲಿಕವಾಗಿ ನಿಲ್ಲಿಸುವುದು ಅಥವಾ ಬೇರೆ ಶಿಕ್ಷೆಗೆ ಪರಿವರ್ತಿಸುವುದು; ಇದಕ್ಕೆ ನ್ಯಾಯಸ್ಥಾನದ ಆಜ್ಞಾ ಪತ್ರ. (ತಾತ್ಕಾಲಿಕವಾದ) ಕಾಲಾವಕಾಶ, ಬಿಡುವು, ವಿಶ್ರಾಂತಿ, ವಿರಾಮ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Réprimand ರೆಪ್ರಿಮಾಂಡ್ (ನಾ., ಕ್ರಿ. ಸಕ.) (ತಪ್ಪಿಗೋಸ್ಕರ, ಅಧಿಕಾರಿಕವಾಗಿ) ಖಂಡನೆ, ಆಕ್ಷೇಪಣೆ (ಮಾಡು); ಛೀಮಾರಿ ಮಾಡು; ಝುಂಕಿಸು (*For* ಉಪ. ದೊಡನೆ)

Reprísal ರಿಪ್ರೈಸ(ಸ್)ಲ್ (ನಾ.) (ಚರಿತ್ರೆ) ಪ್ರತೀಕಾರ ಮಾಡುವುದಕ್ಕಾಗಿ ಪರದೇಶೀಯ ಪ್ರಜೆಗಳನ್ನು ಅಥವಾ ಅವರ ಆಸ್ತಿಗಳನ್ನು ಬಲಾತ್ಕಾರವಾಗಿ ಹಿಡಿದುಹಾಕುವುದು; ಪರದೇಶೀಯ ಪ್ರಜೆಗಳಮೇಲೆ ಪ್ರತೀಕಾರ (Letters of r. ಇದಕ್ಕೆ ಅಧಿಕಾರ ಕೊಡುವ ಸರಕಾರದ ಆಜ್ಞಾಪತ್ರ). ಪ್ರತೀಕಾರ; ಮುಯ್ಯಿಗೆ ಮುಯ್ಯಿ [Make reprisal(s)]

Reprise ರಿಪ್ರೈಸ್ (ನಾ.) (ನ್ಯಾ. ಶಾ.) ಪ್ರತಿ ವರ್ಷವೂ ಸ್ಥಿರಾಸ್ತಿಯಿಂದ ಅಥವಾ ಜಹಗೀರಿಯಿಂದ ಕೊಡಬೇಕಾದ ಕಂದಾಯ ಅಥವಾ ಇತರ ಬಗೆಯ ವೆಚ್ಚಗಳು (Beyond, besides, above, reprises ಕಂದಾಯ, ಮೊ. ವೆಚ್ಚಗಳನ್ನೆಲ್ಲ ಕೊಟ್ಟು ಉಳಿದ). (ವಿರ. ಪ್ರ.) (ನಿಲ್ಲಿಸಿದ್ದ ಕೆಲಸವನ್ನು) ಮತ್ತೆ ಪ್ರಾರಂಭಿಸುವುದು; ಪುನರಾರಂಭ. (ಒಟ್ಟಿಗೆ ಮಾಡದೆ ಕೆಲವು ಮಜಲುಗಳಲ್ಲಿ ಮಾಡುವ ಕೆಲಸದ ವಿಷಯದಲ್ಲಿ) ಒಂದು ಮಜಲು, ಪಟ್ಟು, ಸರದಿ, ಸೂಳು.

Reproách ರಿಪ್ರೋಚ್ (ಕ್ರಿ. ಸಕ., ನಾ.) ತೆಗಳು, ಬಯ್ಯು, ನಿಂದಿಸು (*With* offence); ಆಕ್ಷೇಪಿಸು, ಖಂಡಿಸು; ವಾಗ್ದಂಡನೆ ಮಾಡು. (ದೃಷ್ಟಿ, ಮೊ. ಗಳ ವಿಷಯದಲ್ಲಿ) ಆಕ್ಷೇಪ, ಖಂಡನೆ, —ಸೂಚಿಸು, ತೋರು (His eyes r. me) [**Reproáchingly** (ಕ್ರಿ. ವಿ.) = Reproachfully (ಎಂಬುದಕ್ಕೆ ವಿರ. ಪ್ರ.)]. (ನಾ.) ಅಪಮಾನ, ಅಪಯಶಸ್ಸು (ತರುವಂಥದು) (*To* ಉಪ. ದೊಡನೆ) (The state of the roads is a r. to civilization) [**Reproách-less** (ಗು.) = Irreproachable (ಎಂಬುದಕ್ಕೆ ವಿರ. ಪ್ರ.)]. ಕಳಂಕ; ದುಷ್ಕೀರ್ತಿ; ಅಪಮಾನ (Live in r. & ignominy ನಿಂದೆ, ಅಪಮಾನ, ಹೊತ್ತು—ಬದುಕು, ಜೀವಿಸುತ್ತಿರು. Has taken away my r. ನನ್ನಮೇಲಣ ನಿಂದೆಯನ್ನು, ಅಪಮಾನವನ್ನು, ಹೋಗಲಾಡಿಸಿದೆ). ತೆಗಳಿಕೆ, ಬೈಗುಳು, ಆಕ್ಷೇಪಣೆ, ಖಂಡನೆ (The mute r. in his eyes. Term of r. ಖಂಡನಾತ್ಮಕ ಪದ). (ಬ. ವ. ದಲ್ಲಿ) (ಮು., ರೋ. ಕ್ಯಾ. ಆರಾಧನ ಮಂದಿರಗಳಲ್ಲಿ) Good Friday ದಿನ ಹಾಡುವ, ಕ್ರಿಸ್ತನು ಜನರಮೇಲೆ ಪ್ರಯೋಗಿಸಿದ ಖಂಡನೆಗಳನ್ನು ಸೂಚಿಸುವುದೆಂದು ಭಾವಿಸುವ, ಉತ್ತರ ಪ್ರತ್ಯುತ್ತರ ಗೀತಗಳು. **Reproáchful** (ಗು.); **Reproáchfully** (ಕ್ರಿ. ವಿ.); **Re-proáchfulness** (ನಾ.)

Réprobate ರೆಪ್ರೊಬೇಟ್ (ಕ್ರಿ. ಸಕ.), —ಬೆಟ್ (ಗು., ನಾ.) ಅಸಮ್ಮತಿ ತೋರು, —ಪಡು; ಖಂಡಿಸು; ತಿರಸ್ಕರಿಸು. (ದೇವರ ವಿಷಯದಲ್ಲಿ) (ಒಬ್ಬನನ್ನು) ತೊರೆದುಬಿಡು, ತ್ಯಜಿಸು; ಮುಕ್ತಿ ಕೊಡದಿರು. (ಗು., ನಾ.) ದೇವರಿಂದ ತೊರೆಯಲ್ಪಟ್ಟ(ವನು); ಪರಮ ಪಾಪಿ; ಭ್ರಷ್ಟ. **Reprobátion** (ನಾ.)

Reproóf[1] ರಿಪ್ರೂಫ್ (ನಾ.) ದೂಷಣೆ; ಆಕ್ಷೇಪಣೆ; ಗದರಿಕೆ. **Re-próve** ರಿಪ್ರೂವ್ (ಕ್ರಿ. ಸಕ.) [ಒಬ್ಬನನ್ನು, (ವಿರ. ಪ್ರ.) ಪಾಪ, ಮೊ. ನ್ನು] ಆಕ್ಷೇಪಿಸು, ದೂಷಿಸು, ಝುಂಕಿಸು, ತೆಗಳು. **Re-próvingly** (ಕ್ರಿ. ವಿ.)

Réproof[2] ರೀಪ್ರೂಫ್ (ಕ್ರಿ. ಸಕ.) (ಅಂಗಿ, ಮೊ. ನ್ನು) ನೀರಿಳಿಯದಂತೆ, ನೀರಿನಲ್ಲಿ ನೆನೆಯದಂತೆ, —ಮತ್ತೆ ಸಂಸ್ಕರಿಸು.

Repróve. **Reproof**[1] ನೋಡಿ.

Reps. **Rep**[1] ನೋಡಿ.

Réptant ರೆಪ್ಟಂಟ್ (ಗು.) (ಪ್ರಕೃತಿ ಚರಿತ್ರೆ) (ನೆಲದಮೇಲೆ) ಹರಿದಾಡುವ; (ಸ. ವಿ.) ಹಬ್ಬುವ.

Réptile ರೆಪ್ಟೈಲ್ (ನಾ., ಗು.) ಹರಿದಾಡುವ ಜಂತು; (ಹಾವು, ಹಲ್ಲಿ, ಮೊಸಳೆ, ಆಮೆ, ಮೊ. ಪ್ರಾಣಿಗಳನ್ನೊಳಗೊಂಡ) ಉರಗ ವರ್ಗದ ಪ್ರಾಣಿ; ಉರಗ; ಸರೀಸೃಪ [**Reptílian** (ಗು., ನಾ.); **Reptilíferous** (ಗು.); **Reptíliform** (ಗು.)]. ಶುದ್ಧ ನೀಚ, ತುಚ್ಛ, —ಮನುಷ್ಯ. (ಗು.) (ಪ್ರಾಣಿ) ಹರಿದಾಡುವ. ಅತಿ ನೈಚ್ಯ ತೋರುವ.

Repúblic ರಿಪಬ್ಲಿಕ್ (ನಾ.) ಜನಗಳು ಅಥವಾ ಅವರು ಚುನಾಯಿಸಿ ಕಳುಹಿಸಿದ ಪ್ರತಿನಿಧಿಗಳು ನಡಸುವ ಸರಕಾರ(ವುಳ್ಳ ರಾಷ್ಟ್ರ): ಪ್ರಜಾ (ಪ್ರತಿನಿಧಿ) ಪ್ರಭುತ್ವ(ದ ರಾಷ್ಟ್ರ); ಪ್ರಜಾಧಿಪತ್ಯ. (ರೂಪ.) ಪರಸ್ಪರ ಸಮಾನತಾ ಭಾವನೆಯುಳ್ಳ, ಸಮಾನ ಹಕ್ಕುಬಾಧ್ಯತೆಗಳುಳ್ಳ ಸದಸ್ಯರ, —ಸಂಘ, ಸಮಾಜ (The r. of letters ಸಾಹಿತಿ ಸಮುದಾಯ; ಸಾಹಿತ್ಯ). **Repúblican** (ಗು., ನಾ.) ಪ್ರಜಾ ಪ್ರಭುತ್ವದ; —ರಚನೆಯುಳ್ಳ, ಲಕ್ಷಣವುಳ್ಳ. ಪ್ರಜಾಪ್ರಭುತ್ವ (ಸರ್ಕಾರದ) ವಾದಿ. (ಅಮೆ. ಸಂ.) ರಾಜ್ಯ ವ್ಯವಸ್ಥೆಯನ್ನು ಉದಾರವಾಗಿ ಅರ್ಥಮಾಡಬೇಕೆಂದೂ ಕೇಂದ್ರ ಸರ್ಕಾರದ ಅಧಿಕಾರ ಹೆಚ್ಚಬೇಕೆಂದೂ ಸ್ವದೇಶೀ ಕೈಗಾರಿಕೆಗಳ ಏಳಿಗೆಗೆ ಸುಂಕದ ರಕ್ಷಣೆಯಿರಬೇಕೆಂದೂ ವಾದಿಸುವ ಒಂದು ರಾಜಕೀಯ ಪಕ್ಷದ(ವನು): 'ರಿಪಬ್ಲಿಕನ್' ಪಕ್ಷದ(ವನು) (ಈ ಪಕ್ಷದ ಹೆಸರಾಗಿ ಸಹ ಪ್ರ.). (ಹಕ್ಕಿಗಳ ವಿಷಯದಲ್ಲಿ) ಸಂಘಜೀವಿಯಾದ, ಗುಂಪಾಗಿ ವಾಸಮಾಡುವ. **Repúblicanism** (ನಾ.); **Repúbli-canize** (ಕ್ರಿ. ಸಕ.)

Repúdiate ರಿಪ್ಯೂಡಿಯೇಟ್ (ಕ್ರಿ.) (ಮು., ಪುರಾತನ ಕಾಲದ ನಾಗರಿಕ ಜನಾಂಗಗಳ ವಿಷಯದಲ್ಲಿ ಅಥವಾ ಕ್ರೈಸ್ತೇತರರ ವಿಷಯದಲ್ಲಿ: ಹೆಂಡತಿಯನ್ನು) (ದಾಂಪತ್ಯ ವಿಚ್ಛೇದದಿಂದ) ಬಿಟ್ಟುಬಿಡು, ಪರಿತ್ಯಾಗಮಾಡು. ಅಂಗೀಕರಿಸದಿರು, ನಿರಾಕರಿಸು, ತೊರೆ; (ಸಂಬಂಧಗಳನ್ನು) ತ್ಯಜಿಸು; ಬಾಧ್ಯತೆ ಇಲ್ಲವೆನ್ನು. (ಅಧಿಕಾರಕ್ಕೆ) ಮನ್ನಣೆ ಕೊಡದಿರು, ವಿಧೇಯತೆ ತೋರದಿರು. (ಆಭಾರ, ಋಣ—ಇವನ್ನು; ಮು., ರಾಜ್ಯದ ವಿಷಯದಲ್ಲಿ: ಸಾರ್ವಜನಿಕ ಸಾಲವನ್ನು) ಒಪ್ಪಿಕೊಳ್ಳದಿರು, ತೀರಿಸಲು ನಿರಾಕರಿಸು. **Repudiátion** (ನಾ.); **Repúdiator** (ನಾ.)

Repúgn ರಿಪ್ಯೂನ್ (ಕ್ರಿ.) (ವಿರ. ಪ್ರ.) ಎದುರಿಸು; ವಿರೋಧಿಸು; ಪ್ರತಿಭಟಿಸು. (ಎದುರಿಸಿ) ಹೋರಾಡು (*Against* ಉಪ. ದೊಡನೆ); ವಿರೋಧವಾಗಿ ಹೆಣಗು. ಅಸಹ್ಯವಾಗಿರು.

Repúgnance ರಿಪಗ್ನನ್ಸ್ (ನಾ.) (ಭಾವಗಳು, ಹೇಳಿಕೆಗಳು, ಚಿತ್ತವೃತ್ತಿಗಳು, ಮೊ. ಗಳ) ಹೊಂದಿಕೆಯಿಲ್ಲದಿರುವುದು, ಅಸಾಂಗತ್ಯ, ಅಸಾಮಂಜಸ್ಯ, ವಿರೋಧ (*Of, between, to, with* ಉಪ. ದೊಡನೆ). ದ್ವೇಷ, ಹೇವರಿಕೆ, ಜುಗುಪ್ಸೆ, ಅಸಹ್ಯ (*To, against* ಉಪ. ದೊಡನೆ). **Repúgnant** (ಗು.) (—ಕ್ಕೆ, ಒಡನೆ) ಹೊಂದಿಕೆಯಿಲ್ಲದ, ಹೊಂದದ, ಸಂಗತವಲ್ಲದ (*With* ಉಪ. ದೊಡನೆ). (ಕಾವ್ಯ) ಸಗ್ಗದ; ಪ್ರತಿಭಟಿಸುವ; ಎದುರುಬೀಳುವ. (—ಕ್ಕೆ) ರುಚಿಸದ, ಅಸಹ್ಯವಾದ (*To* ಉಪ. ದೊಡನೆ)

Repúllulate ರಿಪುಲ್ಯುಲೇಟ್ (ಕ್ರಿ. ಅಕ.) ಮತ್ತೆ ಮೊಳಕೆಯಾಗು; ಪುನಃ ಅಂಕುರಿಸು. (ವ್ಯಾಧಿಗಳ ವಿಷಯದಲ್ಲಿ) ಮರುಕೊಳಿಸು, ಮತ್ತೆ ತಲೆದೋರು. **Repullulátion** (ನಾ.)

Repúlse ರಿಪಲ್ಸ್ (ಕ್ರಿ. ಸಕ., ನಾ.) (ಆಕ್ರಮಣವನ್ನು, ಶತ್ರುವನ್ನು) (ಆಯುಧಗಳ ಬಲದಿಂದ) ಹಿಮ್ಮೆಟ್ಟಿಸು, ಹಿಂದಕ್ಕೋಡಿಸು, ಹಿಂದೂಡು. (ರೂಪ.; ವಾದದಲ್ಲಿ) ಸೋಲಿಸು. (ಸ್ನೇಹಸಂಧಾನಗಳನ್ನು, ಸಂಧಾನ ಮಾಡುವವರನ್ನು) ನಿರಾಕರಿಸು; ಮುಖಭಂಗಮಾಡು. (ಕೋರಿಕೆ, ಕೊಡುಗೆ—ಇವನ್ನು ಅಥವಾ ಇವನ್ನು ಮುಂದಿಡುವವರನ್ನು) ತಿರಸ್ಕರಿಸು, ಒಲ್ಲದಿರು. (ನಾ.) ಹಿಮ್ಮೆಟ್ಟಿಸುವುದು; ಹಿಮ್ಮೆಟ್ಟಿಸಲ್ಪಡುವುದು; ಹಿಮ್ಮೆಟ್ಟು; ನಿರಾಕರಣೆ; ತಿರಸ್ಕಾರ [Inflict, meet with, suffer, etc. r. (ಅಥವಾ ಸಾ.) a r.]. **Repúlsion** (ನಾ.) (ವಿರ. ಪ್ರ.) ಹಿಮ್ಮೆಟ್ಟಿಸುವುದು. (ಭೌ. ವಿ.) ಪರಸ್ಪರವಾಗಿ ದೂಡುವ ಅಥವಾ ಪರಸ್ಪರ ದೂರವನ್ನು ಹೆಚ್ಚಿಸಿಕೊಳ್ಳುವ, ಪದಾರ್ಥಗಳ ಒಂದು ಧರ್ಮ: ವಿಕರ್ಷಣೆ (ಎದುರು ಪದ: Attraction) (ರೂಪ. ಸಹ). [Capillary r. ಕೂದಲನಂತೆ ಸೂಕ್ಷ್ಮವಾಗಿರುವ ಗಾಜಿನ ನಾಳದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೆಲವು ದ್ರವಗಳು (ಉದಾ., ಪಾದರಸ) ಮೇಲನ ಮಟ್ಟ ಹೊರ ಬಾಗುಳ್ಳದ್ದಾಗಿರುವಂತೆ ಕುಸಿಯುವ ಒಂದು ಪ್ರವೃತ್ತಿ, ಧರ್ಮ: ರೋಮುನಾಳ ವಿಕರ್ಷಣ]. ದ್ವೇಷ; ಅಸಹ್ಯತೆ; ವಿಮುಖತೆ; ವಿರೋಧ. **Repúlsive** (ಗು.) (ಕಾವ್ಯ) ಪ್ರತಿಘಟಿಸುವ; ವಿರೋಧಿಸುವ. (ಭೌ. ವಿ.) ವಿಕರ್ಷಕ. (ಪ್ರಾಚೀ. ಪ್ರ.) (ನಡೆವಳಿಕೆ, ಮೊ. ಗಳ ವಿಷಯದಲ್ಲಿ) ಹತ್ತಿರ ಬರಗೊಡಿಸದ, ದೂರ ಹೋಗುವಂತೆ ಮಾಡುವ, ಅನಾದರದ, ಸಹಾನುಭೂತಿಯಿಲ್ಲದ. ಅಸಹ್ಯಕರ; ಹೇಸಿಕೆಯ; ಜುಗುಪ್ಸೆ ಹುಟ್ಟಿಸುವ. **Repúlsively** (ಕ್ರಿ. ವಿ.); **Repúlsiveness** (ನಾ.)

Repúte ರೆಪ್ಯೂಟ್ (ಕ್ರಿ. ಸಕ., ನಾ.) (ಕರ್ತರಿಯಲ್ಲಿ ವಿರ. ಪ್ರ.) ಭಾವಿಸು, ಎಣಿಸು, ಗಣಿಸು; (ಕರ್ಮಣಿ) (—ಎಂದು) ಸಾಮಾನ್ಯವಾಗಿ ಭಾವಿಸಲ್ಪಡು, ಎಣಿಸಲ್ಪಡು, ಭಾವನೆಯಿರು, ಪ್ರತೀತಿಯಿರು (*To* be, *as*) [Is reputed the best doctor *or* to be *or* (ವಿರ. ಪ್ರ.) as the best]. (ಕರ್ಮಣಿ) ಸಾಮಾನ್ಯವಾಗಿ (*Well, Ill* ಮೊ. ಗಿ) ಎಣಿಸಲ್ಪಟ್ಟಿರು, ಹೆಸರು ಪಡೆದಿರು, ಜನರು ಆಡಿಕೊಳ್ಳುವಂತಿರು (*Of*). (ಭೂ. ಕೃ.) ಜನರು ಹಾಗೆಂದು ಬಳಕೆಯಾಗಿ ತಿಳಿದಿರುವ (ಆದರೆ ಬಹುಶಃ ಅಲ್ಲದ); ಹಾಗೆ ಹೆಸರು ಬಂದಿರುವ (His reputed father, clemency, etc.). (ನಾ.) = Reputation. **Repútedly** (ಕ್ರಿ. ವಿ.); **Réputable** ರೆಪ್ಯುಟಬ್‌ಲ್ (ಗು.) ಒಳ್ಳೆಯ ಹೆಸರು(ವಾಸಿ) ಪಡೆದ; ಯಶೋವಂತ; ಗೌರವಾರ್ಹ; ಗಣ್ಯ. **Réputably** (ಕ್ರಿ. ವಿ.); **Reputátion** ರೆಪ್ಯುಟೇಷನ್ (ನಾ.) ಹೆಸರು(ವಾಸಿ); ಪ್ರಸಿದ್ಧಿ; ಪ್ರಖ್ಯಾತಿ; ಸತ್ಕೀರ್ತಿ; ಯಶಸ್ಸು; ನೆಗಳ್ತೆ (ಗ್ರಾಂ.) (Has not justified his r. Persons of r. Has a r. for integrity); (ಅಪ)ಖ್ಯಾತಿ (Has the r. of racking his tenants)

Requést ರಿಕ್ವೆಸ್ಟ್ (ನಾ., ಕ್ರಿ. ಸಕ.) ದಯಮಾಡಿ ಕೊಡಿರೆಂದು ಕೇಳಿಕೆ; ಕೋರಿಕೆ; ಪ್ರಾರ್ಥನೆ; ಬೇಡಿಕೆ; ಬಿನ್ನಹ; ವಿನಂತಿ; ಕೋರಿದ್ದು; ಎರವಿ (ಗ್ರಾಂ.) (By r. ಕೋರಿಕೆಯ ಪ್ರಕಾರ). ಬೇಕಾಗಿರುವ, ಕೋರಲ್ಪಡು(ತ್ತಿರು)ವ, —ಸ್ಥಿತಿ; ಗಿರಾಕಿ (Is now in great, came into, r.). (ಕ್ರಿ.) (—ಮಾಡಲು) ಅಪ್ಪಣೆ—ಬೇಡು, ಕೇಳು (*To* do); (ಕೊಡಬೇಕೆಂದು, ಮಾಡಬೇಕೆಂದು, ಅನುಗ್ರಹಿಸಬೇಕೆಂದು) ಕೋರು, ಪ್ರಾರ್ಥಿಸು, ಬೇಡು, ಎರೆ (ಗ್ರಾಂ.) (*That, to* do)

Réquiem ರೆಕ್ವಿಎಂ (ನಾ.) (ಕ್ರೈಸ್ತ) ಮೃತರ ಆತ್ಮಶಾಂತಿಗಾಗಿ ನಡಸುವ, (ಪ್ರಥು ಭೋಜನ ಸಂಸ್ಕಾರಾದಿ) ವಿಶೇಷ ಆರಾಧನೆ; ಇದಕ್ಕೆ ಹೊಂದಿಸಿದ ಸಂಗೀತ; ಶೋಕ ಗೀತ; ಸಾವು ಹಾಡು; ಚರಮ ಶ್ಲೋಕ.

Requiéscat (L) ರೆಕ್ವಿಎಸ್ಕ್ಯಾಟ್ (ನಾ.) ಮೃತನ ಆತ್ಮಕ್ಕೆ ಶಾಂತಿ ಪ್ರಾರ್ಥನೆ. R., requiescant, in pace (ಸಂಕ್ಷಿಪ್ತ: R.I.P.) (ಮು., ರೋ. ಕ್ಯಾ. ಮತದವರ ಸಮಾಧಿ ಕಲ್ಲುಗಳ ಮೇಲನ ಶಾಸನ) ಅವನ ಆತ್ಮಕ್ಕೆ, ಅವರ ಆತ್ಮಗಳಿಗೆ, ಶಾಂತಿಯಿರಲಿ; ಶಾಂತಿರಸ್ತು.

Requíre ರಿಕ್ವೈ(ಅ)ರ್ (ಕ್ರಿ.) (—ಮಾಡಬೇಕೆಂದು, ಒಬ್ಬನನ್ನು) ಅಪ್ಪಣೆ ಮಾಡು (*Of* person; *to* do) (They r. me *or* of me to appear); ಕಡ್ಡಾಯಮಾಡಿ ಕೇಳು, (ಹಕ್ಕಿನಿಂದ) ಕೋರು, ಅಪೇಕ್ಷಿಸು (They r. a gift at my hands); ವಿಧಾಯಕಮಾಡು; ಅಗತ್ಯವೆಂದು, ಅವಶ್ಯಕವೆಂದು, —ವಿಧಿಸು (Had done all that was required by the Act). ಬೇಕಾಗಿರು, ಅವಶ್ಯಕವಾಗಿರು (Irony requires care in its use ವ್ಯಂಗ್ಯವನ್ನು ಉಪಯೋಗಿಸುವುದರಲ್ಲಿ ಎಚ್ಚರಿಕೆ ಅವಶ್ಯಕ). (ವಿರ. ಪ್ರ.) ಅಗತ್ಯವಾಗಿರು (Do not tie it more tightly than it requires ಅಗತ್ಯವಾಗಿರುವುದಕ್ಕಿಂತ—). **Requírement** (ನಾ.) ಬೇಕಾದದ್ದು; ಅವಶ್ಯಕತೆ; ಅಗತ್ಯ, ಕರ್ತವ್ಯ. **Réquisite** ರೆಕ್ವಿಸಿಟ್ (ಗು., ನಾ.) ಬೇಕಾಗಿರುವ, ಅವಶ್ಯಕವಾಗಿರುವ, ಅಗತ್ಯವಾಗಿರುವ. (ನಾ.) ಅವಶ್ಯಕತೆ; ಅವಶ್ಯಕವಾದದ್ದು, ಬೇಕಾದದ್ದು (*For* ಉಪ. ದೊಡನೆ). **Réquisiteness** (ನಾ.); **Requisítion** —ಸಿ— (ನಾ., ಕ್ರಿ. ಸಕ.) ಅಪ್ಪಣೆ (ಮಾಡುವುದು), ಕಡ್ಡಾಯದ ಕೋರಿಕೆ (ಮು., ಒಂದು ಕರ್ತವ್ಯವನ್ನು ನೆರವೇರಿಸಲೇಬೇಕೆಂದು ಕೊಟ್ಟ ಕ್ರಮ ವಿಹಿತವಾದ ಮತ್ತು ಸಾ., ಲಿಖಿತ ರೂಪದ ಅಪ್ಪಣೆ, ಕೋರಿಕೆ); (ಪಟ್ಟಣ, ಮೊ. ಕ್ಕೆ ಕೊಟ್ಟ) ಸೈನಿಕ ವಸ್ತು ಸರಬರಾಯಿಯ ಆಜ್ಞೆ. ಕೋರು(ತ್ತಿರು)ವುದು; ಕೋರಿದ್ದು; ಸೇವೆಗೆ, ಉಪಯೋಗಕ್ಕೆ, —ಬಳಸಿರುವುದು [Is under or in r. (—ನ್ನು) ಉಪಯೋಗಿಸಿಕೊಳ್ಳುತ್ತಿದೆ, ಬಳಸಿಕೊಳ್ಳುತ್ತಿದೆ. Put in, call into, r. ಉಪಯೋಗಿಸಿಕೊ, ತರಿಸಿಕೊ]. (ಕ್ರಿ.) (ಸೈನಿಕೋದ್ದೇಶಗಳಿಗಾಗಿ) ಸರಬರಾಯಿ ಬೇಕೆಂದು, ಉಪಯೋಗಕ್ಕೆ ಬೇಕೆಂದು, —ಅಪ್ಪಣೆ ಮಾಡು. ಉಪಯೋಗಿಸಿಕೊ, (ಒಂದು ಉದ್ದೇಶಕ್ಕಾಗಿ) ಬಳಸಿಕೊ, (ಬೇಕೆಂದು) ತರಿಸಿಕೊ.

Requíte ರಿಕ್ವೈಟ್ (ಕ್ರಿ. ಸಕ.) ಪ್ರತಿಫಲವಾಗಿ ಕೊಡು; ಪ್ರತಿಕರಿಸು (ಅನೇಕ ವೇಳೆ *with* ಉಪ. ದೊಡನೆ). ಪ್ರತ್ಯಪಕಾರ, ಪ್ರತ್ಯುಪಕಾರ, —ಮಾಡು; (ಒಬ್ಬನಿಗೆ, ಒಳ್ಳೆಯದಕ್ಕೆ ಒಳ್ಳೆಯದನ್ನು, ಕೆಟ್ಟದ್ದಕ್ಕೆ ಕೆಟ್ಟದ್ದನ್ನು, ಮಾಡಿ) ಮುಯ್ಯಿಗೆ ಮುಯ್ಯಿ ತೀರಿಸು; ಮರಳಿಸು, ಪ್ರತೀಕಾರ ಮಾಡು (ಅನೇಕ ವೇಳೆ *for* treatment received, *with* treatment given). ಹಿಂದಿರುಗಿಸು, ಪ್ರತಿಯಾಗಿ ಕೊಡು (R. like for like). **Requítal** (ನಾ.)

Réredos ರಿಯರ್‌ಡಾಸ್ (ನಾ.) (ಕ್ರೈಸ್ತ ದೇವಾಲಯದಲ್ಲಿ) ಬಲಿಪೀಠದ ಹಿಂಭಾಗದಲ್ಲಿ ಗೋಡೆಯನ್ನು ಮುಚ್ಚುವಂತೆ ಮಾಡಿರುವ ಅಲಂಕಾರದ (ಶಿಲೆಯ, ಮರದ) ತೆರೆ ಅಥವಾ ತೆಳು ಗೋಡೆ.

Res (L) ರೀಸ್ (ನಾ.) ವಸ್ತು; ವಿಷಯ [R. judicata ಆಗಲೇ ತೀರ್ಮಾನವಾಗಿರುವ, ಆದ್ದರಿಂದ ಚರ್ಚೆ ಅನಾವಶ್ಯಕವಾಗಿರುವ, (ನ್ಯಾಯ) ವಿಷಯ, ವ್ಯವಹಾರ; ನಿರ್ಣೀತ ವಿಷಯ]. ಒಡವೆ (R. angusta domi ಬಡತನ; ದಾರಿದ್ರ್ಯ)

Rescínd ರಿಸಿಂಡ್ (ಕ್ರಿ. ಸಕ.) ವಜಾ ಮಾಡು; ರದ್ದು ಮಾಡು; ವಾಪಸು ತೆಗೆದುಕೊ; ತೊಡೆದು ಹಾಕು; ಹೊಡೆದು ಹಾಕು. **Rescíssion** —ಷನ್ (ನಾ.)

Réscript ರೀಸ್ಕ್ರಿಪ್ಟ್ (ನಾ.) (ಮು., ದಂಡಾಧಿಕಾರಿ ನ್ಯಾಯ ವಿಷಯದ ಮೇಲೆ ಮಾರ್ಗದರ್ಶನ ಕೋರಿ ಮಾಡಿದ ಮನವಿಗೆ) ರೋಮನ್ ಚಕ್ರವರ್ತಿಯ ಲಿಖಿತ ರೂಪದ —ಉತ್ತರ, ತೀರ್ಪು. (ಒಂದು ಪ್ರಶ್ನೆಗೆ ಉತ್ತರವಾಗಿ, ಒಂದು ಸಮಸ್ಯೆಯ ಪರಿಹಾರವಾಗಿ) ಪೋಪ್ ಗುರುವಿನ ಶಾಸನ ಪತ್ರ, ನಿರ್ಣಯ ಪತ್ರ; ಪೋಪ್ ಗುರುವಿನ (ಯಾವುದಾದರೂ) ನಿರ್ಣಯ. (ರಾಜನ, ಸರ್ಕಾರದ ಅಥವಾ ತಕ್ಕ ಅಧಿಕಾರಿ ಹೊರಡಿಸಿದ) ಶಾಸನ, ಘೋಷಣೆ, ಪ್ರಕಟನೆ. ಮತ್ತೆ—ಬರೆದದ್ದು, ಬರೆಯುವುದು; ಪುನರ್ಲೇಖನ. (ಅದೇ ಕಾಗದದ ಮೇಲೆ) ಅಳಿಸಿ ಮತ್ತೆ ಬರೆದ ಪ್ರತಿ.

Réscue ರೆಸ್ಕ್ಯು (ಕ್ರಿ. ಸಕ., ನಾ.) (ಆಕ್ರಮಣ, ಸೆರೆ, ಅಪಾಯ, ಕೇಡು, ಮೊ. ಗಳಿಂದ) ಬಿಡಿಸು, ರಕ್ಷಿಸು, ಕಾಪಾಡು, ತಪ್ಪಿಸು (*From* ಉಪ. ದೊಡನೆ ಸಹ). (ನ್ಯಾ. ಶಾ.) ಕಾನೂನಿಗೆ ವಿರೋಧವಾಗಿ (ಒಬ್ಬನನ್ನು) ಸೆರೆಯಿಂದ, ಬಂಧನದಿಂದ, ಬಿಡಿಸು; (ಆಸ್ತಿಯನ್ನು) ಬಲಾತ್ಕಾರದಿಂದ ಮತ್ತೆ ವಶಕ್ಕೆ ತೆಗೆದುಕೊ. (ನಾ.) (ಕ್ರಿಯಾರ್ಥಗಳಲ್ಲ); ಬಿಡುಗಡೆ; ರಕ್ಷಣೆ. **Réscuer** (ನಾ.)

Reseárch ರಿಸರ್ಚ್ (ನಾ., ಕ್ರಿ. ಅಕ.) (ಬಹು ಎಚ್ಚರಿಕೆಯ) ಅನ್ವೇಷಣೆ, ಶೋಧನೆ (*After* or *for* ಉಪ. ದೊಡನೆ). (ಸಾ., ಬ. ವ. ದಲ್ಲಿ) ವೈಜ್ಞಾನಿಕ ಸಂಶೋಧನೆ; (ವಿಮರ್ಶಾತ್ಮಕ) ಸಂಶೋಧನೆ, ಪರೀಕ್ಷೆ (His researches have been fruitful. Is engaged in r.). (ಕ್ರಿ.) —ಮಾಡು, ನಡಸು. **Reseárcher** (ನಾ.) ಸಂಶೋಧಕ.

Resect ರಿಸೆಕ್ಟ್ (ಕ್ರಿ. ಸಕ.) (ಶಸ್ತ್ರ ಚಿಕಿತ್ಸೆ) (ಮೂಳೆ, ಮೃದ್ವಸ್ಥಿ, ಮೊ ನ್ನು) ಹೆರೆದುಹಾಕು; (ಸೂಟ್ಸನೆಯ ಭಾಗಗಳನ್ನು) ಕತ್ತರಿಸಿಹಾಕಿ, ಸಮರಿ, ನೇರ್ಪಡಿಸು. **Reséction** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Reséda ರಿಸೀಡ (ನಾ.) ('ಮಿನ್ಯನೆಟ್', ಮೊ. ಸಸ್ಯಗಳನ್ನೊಳಗೊಂಡ) ಒಂದು ಸಸ್ಯಜಾತಿ. (ಮಿನ್ಯನೆಟ್ ಹೂವಿನದರಂಥ) ನಸುಹಸುರು ಬಣ್ಣ.

Resémble ರಿಸೆಂಬ್‌ಲ್ (ಕ್ರಿ. ಸಕ.) (—) ಅಂತೆ ಇರು ; ಹೋಲು ; ಅನುರೂಪವಾಗಿರು ; ಸದೃಶವಾಗಿರು. (ಪ್ರಾಚೀ. ಪ್ರ.) ಹೋಲಿಸು (*To* ಉಪ. ದೊಡನೆ). **Resémblance** (ನಾ.) ಹೋಲಿಕೆ ; ಸಾದೃಶ್ಯ (*To, between, of* ಉಪ. ದೊಡನೆ). **Resémblant** (ವಿಶೇ. ಪ್ರ.) (ಗು.) ಹೋಲುವ, ಹೋಲಿಕೆಯುಳ್ಳ (*To* ಉಪ. ದೊಡನೆ)

Resént ರಿಸೆಂಟ್ (ಕ್ರಿ. ಸಕ.) (ಅಪಮಾನ, ಅನ್ಯಾಯ ಅಥವಾ ನಷ್ಟದ ಬಗ್ಗೆ) ತೀವ್ರ ಅಸಮಾಧಾನ ತೋರು, —ಪಡು ; ಕೋಪವನ್ನು ತೋರು ; ಕೋಪಿಸಿಕೊ ; ಅಸಮಾಧಾನವನ್ನು ಮನಸ್ಸಿನಲ್ಲಿಟ್ಟಿರು ; ಮುನಿ. **Reséntful** (ಗು.) ; **Reséntfully** (ಕ್ರಿ. ವಿ.) ; **Reséntment** (ನಾ.)

Reserve ರಿಸರ್ವ್ (ಕ್ರಿ. ಸಕ., ನಾ.) ಬಳಸದೆ ಹಾಗೆಯೇ ಇಟ್ಟಿರು ; ಕಾಯ್ದಿಡು ; ಮೀಸಲಾಗಿಡು ; ಮುಂದಿನ ಸಂದರ್ಭಕ್ಕಾಗಿ ಪ್ರತ್ಯೇಕವಾಗಿಡು [R. one*self for* (—ವರೆಗೂ) ತನ್ನ ಶಕ್ತಿ ವ್ಯಯಮಾಡದಿರು ; (—ಕ್ಕಾಗಿ) ತನ್ನ ಶಕ್ತಿ ಇಟ್ಟುಕೊಂಡಿರು]. (ಮು., ಕಾನೂನಿನ ಅಥವಾ ಕ್ರಮವಿಹಿತವಾದ ಗೊತ್ತುಪಾಡಿನ ಪ್ರಕಾರ) ಕಾಯ್ದಿಡಿಸಿರು (*For* or *to* ಉಪ. ದೊಡನೆ) [Reserved seats (ಮೊದಲೇ ಹಣಕೊಟ್ಟು) ಕಾಯ್ದಿಟ್ಟ, ಮೀಸಲು,—ಪೀಠಗಳು. Reserved list (ನಾವಿಕೋದ್ಯೋಗದಿಂದ ವಿಶ್ರಾಂತಿ ಪಡೆದ ಆದರೆ ಯುದ್ಧವೊದಗಿದಾಗ ಕರೆಯಿಸಿಕೊಳ್ಳಬಹುದಾದ) ನೌಕಾ ಪಡೆಯ ಮೀಸಲು ಅಧಿಕಾರಿಗಳ ಪಟ್ಟಿ]. (ಕರ್ಮಣಿ) (—ಕ್ಕೆ) ಕಾದಿರು, ಗುರಿಯಾಗಿರು (*For, to* ಉಪ. ದೊಡನೆ). (ಒಂದು ಉಪಯೋಗಕ್ಕಾಗಿ, ಗತಿಗಾಗಿ) ತೆಗೆದಿಡು (*For* ಉಪ. ದೊಡನೆ). (ಭೂ. ಕೃ., ಗುಣವಾಚಕವಾಗಿ ಪ್ರ.) ಹೆಚ್ಚಾಗಿ ಮಾತನಾಡದ, ಬೆರೆಯದ ; ಸಂಕೋಚದ ; ಸಲಿಗೆಕೊಡದ ; ಮನೋಭಾವವನ್ನಾಗಲಿ ಅಭಿಪ್ರಾಯಗಳನ್ನಾಗಲಿ ಬೇಗ ತಿಳಿಸದ ; ಗುಟ್ಟು, ಸಮಾಚಾರ, ಮೊ. ನ್ನು ಬಿಟ್ಟುಕೊಡದ [**Resérvedly** (ಕ್ರಿ. ವಿ.)]. (ನಾ.) (ಮುಂದಿನ ಉಪಯೋಗಕ್ಕಾಗಿ) ಕಾಯ್ದಿಟ್ಟದ್ದು, ತೆಗೆದಿಟ್ಟದ್ದು ; ಮೀಸಲು. ಅನಿರೀಕ್ಷಿತ ಸಂದರ್ಭಗಳಿಗಾಗಿ ಇಟ್ಟುಕೊಂಡಿರುವ ಹೆಚ್ಚಿಗೆಯ ಮೊತ್ತ ; ಆಪದ್ಧನ [Banker's r. (ಅಕಸ್ಮಾತ್ತಾಗಿ ಬರಬಹುದಾದ ತಗಾದೆಗಳಿಗೆ ಅಥವಾ ಕೋರಿಕೆಗಳಿಗೆ ಹಣ ಪಾವತಿಮಾಡುವುದಕ್ಕಾಗಿರುವ) ಬ್ಯಾಂಕಿನ ಧಣಿಯ ಕೈಗಾವಲು ಹಣ. (ಅನೇಕ ವೇಳೆ ವಿಶೇಷಣವಾಗಿ ಪ್ರ.) His r. strength]. (ಸೈನ್ಯ ; ಏ. ವ. ಅಥವಾ ಬ. ವ. ದಲ್ಲಿ) ಯುದ್ಧಕಾರ್ಯದಲ್ಲಿ ಆಗಲೇ ತೊಡಗಗೊಡದೆ, ಬೆಂಬಲಕ್ಕಾಗಿ ಅಥವಾ ಹಿಮ್ಮೆಟ್ಟುವ ತಮ್ಮ ಸೈನ್ಯದ ರಕ್ಷಣೆಗಾಗಿ ಕಾಯ್ದಿಟ್ಟಿರುವ ಸೈನ್ಯ ; ಆಪತ್ತಿನ ಅಥವಾ ಜರೂರಿನ ಸಂದರ್ಭಗಳಲ್ಲಿ ಕರಸಬಹುದಾದ, ಕ್ರಮವಾದ ಭೂ ಮತ್ತು ನಾವಿಕ ಸೈನ್ಯಗಳಿಂದ ಬೇರೆಯಾದ, ಸೈನ್ಯ(ಗಳು) ; ಕೈಗಾವಲು ಸೈನ್ಯ ; ಈ ಸೈನ್ಯಕ್ಕೆ ಸೇರಿದ ಸಿಪಾಯಿ [=**Resérvist** (ನಾ.)]. (ಪಂದ್ಯದಾಟಗಳಲ್ಲಿ) ಬದಲಿ ಬೇಕಾದಾಗ ಆಟಕ್ಕೆ ತೆಗೆದುಕೊಳ್ಳಲು ಆರಿಸಿಟ್ಟುಕೊಂಡಿರುವ ಹೆಚ್ಚಿಗೆಯ ಆಟಗಾರ : ಕೈಗಾವಲು ಆಟಗಾರ. ಉಪಯೋಗಿಸಿಕೊಳ್ಳದೆ ಇಟ್ಟಿರುವ ಆದರೆ ಬೇಕಾದಾಗ ಉಪಯೋಗಕ್ಕೆ ಒದಗುವ ವಸ್ತು, ಮೊತ್ತ : ಕೈಗಾವಲು ವಸ್ತು, —ಮೊತ್ತ ; ಕೈಗಾವಲು, ದಾಸ್ತಾನು (Has it in r.). (ಒಂದು ವಿಶೇಷೋಪಯೋಗಕ್ಕಾಗಿ) ಕಾಯ್ದಿಟ್ಟಿರುವ ಸ್ಥಳ. (ಪ್ರದರ್ಶನಗಳಲ್ಲಿ) ಮತ್ತೊಂದು ವಸ್ತು ಅನರ್ಹವೆಂದಾದರೆ ತನಗೆ ಬಹ ಮಾನ ದೊರೆಯುವುದೆಂಬ ನಿರೀಕ್ಷೆಯ ಗುರುತು. (ಯಾವುದಾದರೂ ಒಂದು ಹೇಳಿಕೆಗೆ ಅಥವಾ ಪ್ರತಿಜ್ಞೆಗೆ ಲಗತ್ತಾಗಿರುವ) ಪರಿಮಿತಿ, ಪ್ರತಿಷೇಧ, ತಡೆ, ಅಭ್ಯಂತರ [I accept your statement without r. ನಿನ್ನ ಹೇಳಿಕೆಯನ್ನು ಪೂರ್ತಿಯಾಗಿ ಒಪ್ಪಿಕೊಳ್ಳುತ್ತೇನೆ. Sale or auction without r. (ಒಂದು ಗೊತ್ತಾದ ಬೆಲೆ ದೊರೆಯಲೇಬೇಕೆಂಬ ನಿರ್ಬಂಧವಿಲ್ಲದ) ಅನಿರ್ಬಂಧ —ಮಾರಾಟ, ಹರಾಜು. R. price ಅದಕ್ಕಿಂತ ಕಡಮೆಯದನ್ನು ಅಂಗೀಕರಿಸುವುದಿಲ್ಲವೆಂದು ಹಾಕಿದ ಬೆಲೆ : ಅಲ್ಪಾವಧಿ, ಕನಿಷ್ಠತಮ, —ಬೆಲೆ. We publish this with all r., all proper reserves ಇದರ (ಸತ್ಯಾಂಶದ) ಬಗ್ಗೆ ಯಾವ ಹೊಣೆಯೂ ಇಲ್ಲದೆ, ಜವಾಬ್ದಾರಿ ಹೊರದೆ, ಇದನ್ನು ಪ್ರಕಟಿಸುತ್ತೇವೆ]. (ಕಲಾಭಿವ್ಯಕ್ತಿಯಲ್ಲಿ ಅಥವಾ ಸಾಹಿತ್ಯಾಭಿವ್ಯಕ್ತಿಯಲ್ಲಿ) ಹಿಡಿತ, ಸಂಯಮ. ಹೆಚ್ಚು ಮಾತನಾಡದಿರುವುದು ; ಅಲ್ಪ ಭಾಷಣ ; ಸಲಿಗೆಕೊಡದಿರುವುದು ; ಗಾಂಭೀರ್ಯ ; (ಮನಸ್ಸಿನಲ್ಲಿರುವುದನ್ನು) ಸ್ಪಷ್ಟವಾಗಿ ಆಡದಿರುವುದು ; ಅಸಂಭ್ರಮ, ರಸಹೀನ ರೀತಿ ; ಅನಾದರ ; ಉದ್ದೇಶಪೂರ್ವಕವಾಗಿ ನಿಜವನ್ನು ಮರೆಮಾಜುವುದು. **Reservátion** (ನಾ.) (ಕ್ರಿಯಾರ್ಥಗಳಲ್ಲಿ). (ಮು., ಖಾಲಿಬಿದ್ದ ಮಠವೃತ್ತಿಗೆ) ಪುರೋಹಿತನನ್ನು ನೇಮಿಸುವ ಪೋಪ್ ಗುರುವಿನ ಕಾಯ್ದಿಟ್ಟ ಹಕ್ಕು ; ಮಠಾಧ್ಯಕ್ಷನಿಗೆ ಮೀಸಲಾದ ಪಾಪವಿಮೋಚನೆ ಕೊಡುವ ಹಕ್ಕು. ಪ್ರಭು ಭೋಜನ ಸಂಸ್ಕಾರವಾದ ಮೇಲೆ ಆ ಪ್ರಭು ಭೋಜನದ ವಸ್ತುಗಳಲ್ಲಿ ಸ್ವಲ್ಪ ಭಾಗವನ್ನು (ಮು., ರೊಟ್ಟಿಯನ್ನು) ಮುಂದಿನ ಒಂದು ಉದ್ದೇಶಕ್ಕಾಗಿ ಉಳಿಸಿಡುವ ಪದ್ಧತಿ. (ನ್ಯಾ. ಶಾ.) (ದಸ್ತೈವಜಿನ ಮೂಲಕ ಮತ್ತೊಬ್ಬರಿಗೆ ಸ್ವಾಧೀನಾನುಭವ ಕೊಡುವ ಆಸ್ತಿಯಲ್ಲಿ) ತಾನು ಉಳಿಸಿಕೊಂಡಿರುವ— ಹಕ್ಕು, ಬಾಧ್ಯತೆ ; ಹಕ್ಕುಳಿಸಿಕೊಂಡಿರುವ —ಷರತ್ತು, ಕಲಂ. (ಅಮೆ. ಸಂ.) (ಮು., ದೇಶೀಯ ಬಣಗಳಿಗಾಗಿಯೇ) ಕಾಯ್ದಿಟ್ಟಿರುವ ಭೂಪ್ರದೇಶ, ಪ್ರಾಂತ. (ಯಾವುದಾದರೊಂದು ವಿಷಯದಲ್ಲಿ, ಪ್ರಕಟವಾಗಿ ಅಥವಾ ಅಪ್ರಕಟವಾಗಿ ಇಟ್ಟುಕೊಂಡ) ಮಿತಿ ; ಪರಿಮಿತಿ ; ವಿನಾಯಿತಿ ; ಉಪಾಧಿ [Mental r. (ಹೇಳಿಕೆ, ಪ್ರಮಾಣ, ಮೊ. ಗಳಲ್ಲಿ) ಸ್ಪಷ್ಟವಾಗಿ ಹೇಳದೆ ಗರ್ಭಿತಮಾಡಿರುವ, ಮನಸ್ಸಿನಲ್ಲಿಟ್ಟುಕೊಂಡಿರುವ, —ಅಭ್ಯಂತರ, ಷರತ್ತು, ಪರಿಮಿತಿ]

Réservoir ರಿಸ್ವ್ವಾರ್ (ನಾ., ಕ್ರಿ. ಸಕ.) (ಸಾ., ಮಟ್ಟಿ ಕಾಮಗಾರಿಯ ಅಥವಾ ಕಲ್ಲು ಇಟ್ಟಿಗೆಗಳಿಂದ ಕಟ್ಟಿದ) ಜಲಾಶಯ ; ಕೆರೆ ; ಕಟ್ಟೆ, ಕೊಳ, ಕಲ್ಯಾಣಿ ; ಸ್ವಾಭಾವಿಕವಾಗಿ ಏರ್ಪಟ್ಟ ಜಲಾಶಯ. ದ್ರವ, ಮೊ. ವು ಶೇಖರಿಸುವ ಸ್ಥಳ ; ದ್ರವವನ್ನು ಒಳಕೊಂಡಿರುವ ಯಂತ್ರದ ಭಾಗ, ಶರೀರದ ಅಂಗ (ಭಾಗ) ; ದ್ರವಾಶಯ ; ದ್ರವ ಕೋಶ (R. pen ತನಗೆ ಬೇಕಾದ ಮಸಿಯ ಸರಬರಾಯಿಗೆ ತನ್ನಲ್ಲೆ ಕೋಶವನ್ನೊಳಕೊಂಡ ಲೇಖನಿ : ಮಸಿ ಕೋಶದ ಲೇಖನಿ). (ರೂಪ.) (ಜ್ಞಾನ, ಮೊ. ರ) ಭಂಡಾರ, ನಿಧಿ (*Of* ಉಪ. ದೊಡನೆ). (ಕ್ರಿ.) (ಜಲಾಶಯದಲ್ಲಿ, ಕೋಶದಲ್ಲಿ) ಕೂಡಿಡು, ಸಂಗ್ರಹಿಸು, ಶೇಖರಿಸು.

Resét[1] ರಿಸೆಟ್ (ಕ್ರಿ.) (ಪ್ರಾಚೀ. ಪ್ರ.) (ಕಳವು ಮಾಲನ್ನು) ತೆಗೆದುಕೊ, ತೆಗೆದಿಟ್ಟುಕೊ. **Resétter** (ನಾ.)

Resét[2]. **Re-** ನೋಡಿ.

Resíde ರಿಸೈಡ್ (ಕ್ರಿ. ಅಕ.) (ವ್ಯಕ್ತಿಗಳ ವಿಷಯದಲ್ಲಿ) (ಕಾಯಮ್ಮಾಗಿ) ವಾಸಮಾಡು, ವಾಸಿಸು, ವಾಸಮಾಡಿಕೊಂಡಿರು (*At, in, abroad*, ಮೊ. ಉಪ. ದೊಡನೆ). (ಅಧಿಕಾರಿಗಳ ವಿಷಯದಲ್ಲಿ) ಸ್ಥಳದಲ್ಲಿ, ಕರ್ತವ್ಯ ಸ್ಥಾನದಲ್ಲಿ, —ಇರು, ವಾಸಮಾಡು. (ಅಧಿಕಾರ, ಹಕ್ಕು, ಗುಣ, ಮೊ. ವು ವ್ಯಕ್ತಿ, ಮೊ. ರಲ್ಲಿ) ನೆಲಸಿರು, ಇರು (*In* ಉಪ. ದೊಡನೆ). **Résidence** ರೆಸಿ— (ನಾ.) ವಾಸ(ವಾಗಿರುವುದು) [Have, take up, one's r. ವಾಸಮಾಡು ; —ಮಾಡಲು ಪ್ರಾರಂಭಿಸು. R. is required (ಅಧಿಕಾರಿ, ಮೊ. ರ ವಿಷಯದಲ್ಲಿ) ಸ್ಥಳದಲ್ಲಿ ವಾಸಮಾಡಬೇಕು ; ಸ್ಥಳದ ವಾಸ ಅಗತ್ಯ. In r. ಸ್ಥಳದಲ್ಲಿ (ವಾಸಮಾಡುತ್ತ)]. ವಾಸಸ್ಥಾನ, ನಿವಾಸ, ವಸತಿ (*Of* ಉಪ. ದೊಡನೆ). ಮನೆ ; (ಮು.) ಮಹಲು, ಭವನ. **Résident** (ಗು., ನಾ.) ವಾಸಮಾಡು(ತ್ತಿರು)ವ ; ವಾಸಿಸುವ (The r. population). (ಪಕ್ಷಿಗಳು, ಮೊ. ಗಳ ವಿಷಯದಲ್ಲಿ) ದೇಶಾಂತರಗಾಮಿಯಲ್ಲದ. ವಾಸಸ್ಥಾನಕ್ಕೆ, ಸ್ಥಳಕ್ಕೆ, —ಬದ್ಧವಾಗಿರುವ ; ಸ್ಥಳದಲ್ಲೇ ವಾಸಿಸುವ (R. Surgeon). ಸಹಜವಾಗಿ ನೆಲಸಿರುವ ; ಅಂತರ್ಗತವಾಗಿರುವ (*In* ಉಪ. ದೊಡನೆ) (A right r. in the nation. Powers of sensation r. in the nerves). (ನಾ.) (ಒಂದು ಪಟ್ಟಣದಲ್ಲಿ ಅಥವಾ ನೆರೆಹೊರೆಯಲ್ಲಿ) ಸ್ಥಿರವಾಗಿ ವಾಸಮಾಡು(ತ್ತಿರು)ವವನು ; ನಿವಾಸಿ ; ಸ್ಥಳವಂದಿಗ (ಎದುರು ಪದ : Visitor). ಇಂಡಿಯದ ದೇಶೀಯ ರಾಜರ ಆಸ್ಥಾನದಲ್ಲಿರುವ ಗವರ್ನರ್ ಜನರಲ್ಲಿನ ಪ್ರತಿನಿಧಿ ; ಮಿಕ್ಕ ಅರೆ ಅಧೀನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಜ್ಯದಲ್ಲಿರುವ ಬ್ರಿಟಿಷ್ ಸರ್ಕಾರದ ಪ್ರತಿನಿಧಿ; 'ರೆಸಿಡೆಂಟ್' [**Résidentship** (ನಾ.); **Résidency** (ನಾ.) ರೆಸಿಡೆಂಟಿನ ಅಧಿಕಾರ—ವಾಸಸ್ಥಾನ, ಭವನ]. **Residéntial** —ಡೆನ್‌ಷ(ಷ್)ಲ್ (ಗು.) ವಾಸದ ಮನೆಗಳಿಗೆ ತಕ್ಕ; ವಾಸ ಯೋಗ್ಯ; ವಾಸದ ಮನೆಗಳಿರುವ (R. estate, street, quarter). ವಿದ್ಯಾರ್ಥಿಗಳು ಸ್ಥಳದಲ್ಲೇ ವಾಸಮಾಡಬೇಕಾದ (R. University). ವಾಸಕ್ಕೆ ಸಂಬಂಧಿಸಿದ; ನಿವಾಸ ಸಂಬಂಧವಾದ (The r. qualification for voters). **Residéntiary** —ಡೆನ್‌ಷರಿ (ನಾ., ಗು.) ಸ್ಥಳಕ್ಕೆ ಸೇರಿದ ಪುರೋಹಿತ; ಸ್ಥಳ ಪುರೋಹಿತ. (ಗು.) ಸ್ಥಳಬದ್ಧನಾದ; ಸ್ಥಳದಲ್ಲೇ ವಾಸಮಾಡಬೇಕಾದ; ಸ್ಥಳನಿವಾಸದ (ನಾ., ನಾಮ ಪದದ ಮುಂದೆ ಪ್ರ.: ಉದಾ., Canon, Canonry, r.)

Resídual, Resíduary. **Residue** ನೋಡಿ.

Résidue ರೆಸ್ಸಿಡ್ಯು (ನಾ.) ಉಳಿದದ್ದು; ಉಳಿಕೆ; ಸಿಲ್ಕು; ಶೇಷ. (ನ್ಯಾ. ಶಾ.) (ಎಲ್ಲ ವೆಚ್ಚಗಳು, ಸಾಲ, ಅಂತಿಮ ಇಷ್ಟಪತ್ರದ ಪ್ರಕಾರ ಸಲ್ಲಸಿದ್ದು, ಮೊ. ಗಳನ್ನೆಲ್ಲ ಕೊಟ್ಟಮೇಲೆ ನಿಂತ) ಉಳಿಕೆ ಆಸ್ತಿ, ನಿವ್ವಳ ಆಸ್ತಿ. (ರ. ವಿ.) = Residuum (ರಾಸಾಯನಿಕ ಅರ್ಥದಲ್ಲಿ). **Resídual** ರಿಸಿಡ್ಯುಅಲ್ (ಗು., ನಾ.) (ಗಣಿತ) ಕಳೆದುಳಿದ (ಮೊತ್ತ); ವ್ಯವಕಲನ ಫಲ; ಶೇಷ. (ರ. ವಿ.) ಉಳಿಕೆ ವಸ್ತು(ವಾದ). (ಗಣನ ದೋಷಗಳ ವಿಷಯದಲ್ಲಿ) ಇನ್ನೂ ಪರಿಹಾರವಾಗಿಲ್ಲದ, ಲೆಕ್ಕ ಸಿಕ್ಕದೆ ಉಳಿದಿರುವ. **Resíduary** ರಿಸಿ— (ಗು.) (ನ್ಯಾ. ಶಾ.) ಆಸ್ತಿಯುಳಿಕೆಯ; ಉಳಿಕೆ ಆಸ್ತಿಯ (R. bequest, clause, legatee, etc.). (ರ. ವಿ.) ಉಳಿಕೆ ವಸ್ತುವಿನ; —ವಸ್ತುವಾಗಿರುವ. ಉಳಿದಿರುವ; ಶೇಷ; ಮಿಕ್ಕ. **Resíduum** ರಿಸಿಡ್ಯುಅಂ (ನಾ.; ಬ. ವ. -dua) ಉಳಿದದ್ದು; ಶೇಷ; (ರ. ವಿ.) ದಹನವಾದಮೇಲೆ ಅಥವಾ ಇಂಗಿಸಿದ ಮೇಲೆ ಉಳಿದ ವಸ್ತು. (ಗಣನೆಯಲ್ಲಿ) ಲೆಕ್ಕ ಸಿಕ್ಕಿಲ್ಲದ ಮೊತ್ತ; ಉಳಿದಿರುವ ತಪ್ಪು. ಅತ್ಯಂತ ಕೆಳದರ್ಜೆಯ ಜನ.

Resígn ರಿಸ್ಸೈನ್ (ಕ್ರಿ.) (ಅಧಿಕಾರ, ಹಕ್ಕು, ಆಸ್ತಿ, ಮೊ. ನ್ನು) ಬಿಟ್ಟುಬಿಡು, ಬಿಟ್ಟುಕೊಡು; (ಆಸ, ಮೊ. ನ್ನು) ತ್ಯಜಿಸು; (ಪ್ರಾಣವನ್ನು ಒಬ್ಬರ ಕೈಗೆ) ಒಪ್ಪಿಸು, ವಹಿಸು, ಅಧೀನಪಡಿಸು (ಅನೇಕ ವೇಳೆ *to* person, *into* person's hands, etc. R. oneself to sleep, rest). (ದೇವರಿಗೆ) ಆತ್ಮಾರ್ಪಣಮಾಡು. (ತನ್ನ ಹಣೆಯಬರಹ, ಮೊ. ಕ್ಕೆ, ಒಂದು ಕೆಲಸ, ಮೊ. ನ್ನು ಮಾಡುವುದಕ್ಕೆ) ಅನಿವಾರ್ಯವೆಂದು —ಸಮಾಧಾನ ಪಟ್ಟುಕೊ, ಒಪ್ಪಿಕೊ, ಮನಸ್ಸು ಗಟ್ಟಿಮಾಡಿಕೊ (R. oneself, one's mind, *to* —). (ಅಧಿಕಾರ) ಬಿಟ್ಟುಬಿಡು, (—ಕ್ಕೆ) ರಾಜೀನಾಮೆಕೊಡು. **Resignátion** ರೆಸಿಗ್ನೇಷನ್ (ನಾ.) (ಕ್ರಿಯಾರ್ಥಗಳಲ್ಲಿ). (ಮು., ಅಧಿಕಾರ, ಮೊ. ಕ್ಕೆ) ರಾಜೀನಾಮೆ(ಯ ಪತ್ರ) (Give, send in, one's r.). ಅನಿವಾರ್ಯವೆಂದು —ಸಮಾಧಾನಪಟ್ಟುಕೊಂಡಿರುವುದು, ಒಪ್ಪಿಕೊಂಡಿರುವುದು; (ದುಃಖವನ್ನಾಗಲಿ ಕೇಡನ್ನಾಗಲಿ) ದೂರದೆ ಸಹಿಸಿಕೊಳ್ಳುವುದು. (ದೇವರಿಗೆ) ಆತ್ಮಾರ್ಪಣ. **Resígned** (ಗು.); **Resígnedly** (ಕ್ರಿ. ವಿ.)

Re-sígn ರೀಸ್ಸೈನ್ (ಕ್ರಿ.) ಮತ್ತೆ ರುಜುಮಾಡು.

Resíle ರಿಸ್ಸೈಲ್ (ಕ್ರಿ. ಅಕ.) (ಸ್ಥಿತಿಸ್ಥಾಪಕ ಗುಣವುಳ್ಳ ವಸ್ತುಗಳ ವಿಷಯದಲ್ಲಿ) ಹಿನ್ನೆಗೆ, ಹಿಂದಕ್ಕೆ ಹಾರು, ಪುಟಿದೇಳು; (ವಿಸ್ತರಣ ಅಥವಾ ಸಂಕೋಚನ ಮಾಡಿ ಬಿಟ್ಟಮೇಲೆ) ಪುನಃ ಮೊದಲಿನ ಆಕಾರ ಮತ್ತು ಗಾತ್ರ ಪಡೆ; ಪೂರ್ವಸ್ಥಿತಿ ಹೊಂದು; ಸ್ಥಿತಿಸ್ಥಾಪಕ ಶಕ್ತಿ, ಚೇತರಿಸಿಕೊಳ್ಳುವ ಶಕ್ತಿ, —ಪಡೆದಿರು, ತೋರು. **Resílience** (ನಾ.); **Resíliency** (ನಾ.); **Resílient** (ಗು.)

Résin ರೆಸ್ಸಿನ್ (ನಾ., ಕ್ರಿ. ಸಕ.) ಹಲವು ಸಸ್ಯಗಳು ಸ್ರವಿಸುವ, ಮು., ಫರ್ ಮತ್ತು ಪೈನ್ ಮರಗಳಿಂದ ಸ್ವಾಭಾವಿಕವಾಗಿಯೊ ತೂತು ಕೊರೆದಮೇಲೊ ಹೊರಸೂಸುವ, ನೀರಿನಲ್ಲಿ ಕರಗದ, ಒಂದು ಅಂಟು ಪದಾರ್ಥ: ರಾಳ (Gum ನೋಡಿ). ರಾಸಾಯನಿಕ ಪ್ರಕ್ರಿಯೆಯಿಂದ ಪಡೆದ ಇಂತಹ ಪದಾರ್ಥ; ರಾಸಾಯನಿಕ, ಕೃತಕ, —ರಾಳ. (ಕ್ರಿ.) ರಾಳದಿಂದ —ಉಜ್ಜು, ಸಂಸ್ಕರಿಸು. **Resináceous** (ಗು.); **Résinate** —ನೇಟ್ (ನಾ.); **Resiníferous** (ಗು.); **Resinificátion** (ನಾ.); **Résiniform** (ಗು.); **Résinify** (ಕ್ರಿ.) **Résinoid** (ಗು., ನಾ.) ರಾಳದಂಥ, ರಾಳವನ್ನು ಹೋಲುವ (ವಸ್ತು). **Résinous** (ಗು.); **Résino-** (ಸ. ಪೂ. ಪ.)

Resipíscence ರೆಸಿಪಿಸೆನ್ಸ್ (ನಾ.) ತನ್ನ ತಪ್ಪಿನ ಅರಿವು; ವಿವೇಕ ತಂದುಕೊಳ್ಳುವುದು. **Resipíscent** (ಗು.)

Resíst ರಿ(ರೆ)ಸ್ಸಿಸ್ಟ್ (ಕ್ರಿ., ನಾ.) ತಡೆ(ಗಟ್ಟು); ಅಡ್ಡಿಮಾಡು; ತಡೆದು ನಿಲ್ಲಿಸು; ತಡೆದುಕೊ; ನಿರೋಧಿಸು; ಒಳಗಿಳಿಯದಂತೆ, ಒಳನುಗ್ಗದಂತೆ, —ತಡೆ; ಪ್ರವೇಶಕೊಡದಿರು; ನಿಗ್ರಹಿಸು (Who can r. God's will? ದೈವ ಸಂಕಲ್ಪವನ್ನು ಯಾರು ತಡೆಯಬಲ್ಲರು? Cannot r. a joke ತೋಚಿದ ಹಾಸ್ಯವನ್ನು ಮಾಡದೆ ಬಿಡಲಾರ, ಪರಿಹಾಸ್ಯವನ್ನು ಕಂಡು ನಗದೆ ಇರಲಾರ). ಎದುರಿಸು, ಹೋರಾಡು; ತಡೆಗಟ್ಟಲು ಪ್ರಯತ್ನಿಸು; ಪ್ರತಿಭಟಿಸು. (ನಾ.) [ನಷ್ಟಕಾರಕದಿಂದ ಹಾನಿಯಾಗದಂತೆ ರಕ್ಷಣೆ ಪಡೆಯುವುದಕ್ಕಾಗಿ ಒಂದರ ಮೇಲ್ಮೈಗೆ (ಮು., ಕ್ಯಾಲಕೊ ಬಟ್ಟೆಯ ಬಣ್ಣ ಹತ್ತದಿರಬೇಕಾದ ಭಾಗಗಳಿಗೆ) ಬಳಿಯುವ] ವರ್ಣ ನಿರೋಧಕ. **Resístance** (ನಾ.) ತಡೆಯುವುದು; ತಡೆತ; ಪ್ರತಿಭಟನೆ (Passive r. ಕೊಡಲು, ನಡಸಲು, —ನಿರಾಕರಣೆ; ನಿಶ್ಶಸ್ತ್ರ, ಸಾತ್ತ್ವಿಕ, —ಪ್ರತಿಭಟನೆ; ಸತ್ಯಾಗ್ರಹ). (ಒಂದು ವಸ್ತು ಮತ್ತೊಂದರ ಚಲನೆಗೆ ಒಡ್ಡುವ) ಅಡಚಣೆ; ನಿರೋಧ(ಶಕ್ತಿ) [Overcome the r. of air. Line of r. ನಿರೋಧದ ದಿಕ್ಕು. Take line of least r. (ರೂಪ.) ತೀರ ಕಡಮೆ ಕಷ್ಟದ ಮಾರ್ಗ ಹಿಡಿ]. (ವಿದ್ಯುತ್ತು, ಕಾಂತ ಶಕ್ತಿ, ಶಾಖ—ಇವುಗಳ ವಿಷಯದಲ್ಲಿ) ಅವಾಹಕತ್ವ; ನಿರೋಧ. (ವಿದ್ಯುತ್ತು) ವಿದ್ಯುತ್ಪ್ರವಾಹಕ್ಕೆ ಒಂದು ಗೊತ್ತಾದ ಪ್ರಮಾಣದ ನಿರೋಧವನ್ನು ಒಡ್ಡುವ ಒಂದು ಸಲಕರಣೆ: ನಿರೋಧಕ. **Resístant** (ಗು.); **Resístent** (ಗು.); **Resíster** (ನಾ.) (Passive r. ವಿದ್ಯಾಭ್ಯಾಸದ ತೆರಿಗೆ ನ್ಯಾಯವಲ್ಲವೆಂಬ ಕಾರಣದಿಂದ ಅದನ್ನು ಕೊಡಲು ನಿರಾಕರಿಸುವವನು. ಸತ್ಯಾಗ್ರಹಿ; ಸಾತ್ತ್ವಿಕ, ನಿಶ್ಶಸ್ತ್ರ, —ಪ್ರತಿಭಟಕ). **Resístible** (ಗು.); **Resistibílity** (ನಾ.) ನಿರೋಧ ಗುಣ(ವಿರುವುದು); ನಿರೋಧಕತ್ವ; ನಿರೋಧಿಸುವ ಶಕ್ತಿ; ನಿರೋಧ ಶಕ್ತಿ. **Resístive** (ಗು.); **Resístless** (ಗು.) (ಕಾವ್ಯ); **Resístlessly** (ಕ್ರಿ. ವಿ.)

Résoluble. **Resolve** ನೋಡಿ.

Résolute ರೆಸ್ಸೊಲ್ಯು(ಲ್ಯೂ, ಲೂ)ಟ್ (ಗು.) (ವ್ಯಕ್ತಿ, ಮನೋಭಾವ, ವರ್ತನೆ, ಮೊ. ಗಳ ವಿಷಯದಲ್ಲಿ) ದೃಢ ನಿಶ್ಚಯದ, ಸ್ಥಿರ, ನಿರ್ಧಾರದ, ಹಿಂಜರಿಯದ, ದೃಢ ಸಂಕಲ್ಪದ. **Résolutely** (ಕ್ರಿ. ವಿ.); **Resolútion** —ಲ್ಯೂ(ಲೂ)— (ನಾ.) (ಘಟಕಗಳಾಗಿ) ಪೃಥಕ್ಕರಣ; ವಿಘಟನೆ; ಬೇರ್ಪಡಿಕೆ; ವಿಶ್ಲೇಷಣ; ವಿಭಜನೆ; ರೂಪಾಂತರಕ್ಕೆ ಪರಿವರ್ತಿಸುವುದು (*Into* ಉಪ. ಜೊಡನೆ). (ವೈ. ಶಾ.; ಊತ, ಕುರು) ಕೀವುಗಟ್ಟದೆ ಹಾಗೆಯೇ ಇಳಿದುಹೋಗುವುದು, ಮಾಯವಾಗುವುದು. (ಛಂ.) ಒಂದು ಗುರುವಿಗೆ ಬದಲಾಗಿ ಎರಡು ಲಘುಗಳ ಪ್ರಯೋಗ. (ಸಂ.) ಅಪಸ್ವರವನ್ನು ಸ್ವರ ಮೈತ್ರಿಗೆ (ಕ್ರಮೇಣ) ಕೂಡಿಸುವುದು; ವಿಶ್ರುತಿಯನ್ನು ಸುಶ್ರುತಿಯಾಗಿ ಮಾಡುವುದು. (ಯಂತ್ರ ಶಾಸ್ತ್ರ) ಒಂದು ಬಲಕ್ಕೆ ಬದಲಾಗಿ, ಅದೇ ಪರಿಣಾಮ ಫಲ ಕೊಡುವಂತೆ ಎರಡು ಅಥವಾ ಹೆಚ್ಚು ಬಲಗಳ ಒಟ್ಟುಗೂಡಿದ ಪ್ರಯೋಗ: ಬಲ —ವಿಘಟನೆ, ವಿಶ್ಲೇಷಣ. (ಸಂದೇಹ, ಸಮಸ್ಯೆ, ಪ್ರಶ್ನೆ, ಮೊ. ನ್ನು) ಬಿಡಿಸುವುದು; (—ಮೊ. ರ) ಪರಿಹಾರ(ಮಾಡುವುದು) (*Of* ಉಪ. ಜೊಡನೆ). (ಶಾಸನ ಸಭೆಯ ಅಥವಾ ಸಾರ್ವಜನಿಕ ಸಭೆಯ) ತೀರ್ಮಾನ, ನಿರ್ಣಯ, ಗೊತ್ತುವಳಿ, ಠರಾವು (Motion ನೋಡಿ). ಸಂಕಲ್ಪ(ಮಾಡುವುದು); ಉದ್ದೇಶ (Good resolutions ಒಳ್ಳೆಯ ಮನಸ್ಸಂಕಲ್ಪಗಳು). ದೃಢ —ಮನೋಭಾವ, ಸ್ವಭಾವ, ನಿಶ್ಚಯ; ಧೈರ್ಯ ಸ್ಥೈರ್ಯ. **Résolutive** (ಗು., ನಾ.) (ಮು., ವೈ. ಶಾ. ಪ್ರ.) (ಕೀವುಗಟ್ಟನದೆ) ಕರಗಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಕ್ತಿಯುಳ್ಳ (R. cataplasm ಇಂಥ ಪೋಲ್ಟೀಸು). (ನಾ.) —ಲೇಪ, ಔಷಧ. (ನ್ಯಾ. ಶಾ.) R. condition ಯಾವುದನ್ನು ನೆರವೇರಿಸುವುದರಿಂದ ಒಪ್ಪಂದ ಕೊನೆಗೊಳ್ಳುವುದೊ ಆ ಷರತ್ತು.

Resolútion. Resolute ನೋಡಿ.

Resólve ರಿಸಾಲ್ವ್ (ಕ್ರಿ., ನಾ.) ಕರಗು, ಕರಗಿಸು ; ವಿಲೀನವಾಗು, —ಮಾಡು (*Into* ಉಪ. ದೊಡನೆ). ಘಟಕಗಳಾಗಿ ಒಡೆ ; ವಿಘಟಿಸು ; ಪೃಥಕ್ಕರಿಸು ; ವಿಶ್ಲೇಷಿಸು, ವಿಶ್ಲೇಷಣ ಹೊಂದು ; ಭಾಗಗಳಾಗಿ ಒಡೆ ; ವಿಭಜಿಸು ; ರೂಪಾಂತರಪಡೆ, —ಮಾಡು (*Into* ಉಪ. ದೊಡನೆ); ಮಾನಸಿಕವಾಗಿ ವಿಶ್ಲೇಷಿಸುವುದರಿಂದ (ಒಂದರ) ರೂಪಕ್ಕೆ ಇಳಿಸು (*Into* ಉಪ. ದೊಡನೆ) [Blood first coagulates & then resolves. Telescope resolves nebula into stars —ವಿಂಗಡಿಸುತ್ತದೆ. Inflammation, tumour, is resolved *or* resolves ಊತ, ಕುರು, ಕೀವುಗಟ್ಟದೆ ಇಳಿದುಹೋಗುತ್ತದೆ, ಕರಗಿಹೋಗುತ್ತದೆ. House resolves itself into a committee (ಶಾಸನ) ಸಭೆ ಸಮಿತಿಯಾಗಿ ಪರಿಣಮಿಸುತ್ತದೆ. Might r. Christianity into a system of morality ಕ್ರಿಸ್ತ ಮತವನ್ನು ಒಂದು ನೀತಿ ಪದ್ಧತಿಯಾಗಿ, ನೀತಿ ದರ್ಶನವಾಗಿ, ಇಳಿಸಬಹುದು]. (ಸಂ.) (ಅಪಸ್ವರ) ಸುಸ್ವರವಾಗು, —ವಾಗಿಸು ; ಸ್ವರಮೈತ್ರಿ ಪಡೆ(ಯುವಂತೆ ಮಾಡು). ಪರಿಹರಿಸು ; ಬಗೆಹರಿಸು ; ಬಿಡಿಸು [R. me this (ಪ್ರಾಚೀ. ಪ್ರ.) ಈ ಪ್ರಶ್ನೆಗೆ ಉತ್ತರಕೊಡು ; ಈ ಪ್ರಶ್ನೆ ಬಿಡಿಸು]. ನಿರ್ಧರಿಸು, ಮನಸ್ಸುಮಾಡು ; ಸಂಕಲ್ಪಿಸು (*Upon* action, or do*ing*, or *to* do). (ಶಾಸನ ಸಭೆಯಲ್ಲಿ, ಸಾರ್ವಜನಿಕ ಸಭೆಯಲ್ಲಿ) ಬಹುಮತದಿಂದ ನಿರ್ಣಯಿಸು ; ಗೊತ್ತುವಳಿ, ಠರಾವು, —ಮಾಡು (*That* ಪದದೊಡನೆ). (ಸಂದರ್ಭ, ಮೊ. ವು) ನಿರ್ಧರಿಸುವಂತೆ ಮಾಡು, ನಿರ್ಧಾರಕ್ಕೆ ತರು (*To* do, or *upon* action or do*ing*). (ಭೂ. ಕೃ.) (ಸಭೆಯ ವರದಿಗಳಲ್ಲಿ) (—ಎಂದು) ತೀರ್ಮಾನಿಸಲಾಯಿತು, ನಿರ್ಣಯವಾಯಿತು (*That* —). (ಭೂ. ಕೃ. ಗುಣವಾಚಕವಾಗಿ ಪ್ರ.) ದೃಢ ಮನಸ್ಸಿನ ; ದೃಢ ಸಂಕಲ್ಪದ [**Resólvedly** (ಕ್ರಿ. ವಿ.)]. (ನಾ.) (ಮನಸ್ಸಿನ) ನಿರ್ಧಾರ (& she kept her r.) ; (ಕಾವ್ಯ) ಸ್ಥಿರ ಸಂಕಲ್ಪ ; ದೃಢ ನಿಶ್ಚಯ (A mind, deeds, of high r.). **Resólvable** (ಗು.) ; **Resólvent** (ಗು., ನಾ.) (ಮು., ವೈ. ಶಾ. ಮತ್ತು ರ. ವಿ.) (ಊತ, ಕುರು, ಮೊ. ನ್ನು ಕೀವುಗಟ್ಟಿಸದೆ) ಇವುರಿಸುವ, ಇಂಗಿಸುವ, ಕರಗಿಸುವ (ಔಷಧ, ಲೇಪ). ಪೃಥಕ್ಕಾರಕ, ವಿಶ್ಲೇಷಕ, ವಿಘಟಕ (ವಸ್ತು, ದ್ರವ್ಯ). **Résoluble** ರೆಸೊ(ಸ)ಲ್ಯು(ಲು)ಬ್ಲ್ (ಗು.) ಪೃಥಕ್ಕರಿಸಲಾಗುವ ; (—ಆಗಿ) ವಿಶ್ಲೇಷಿಸಲಾಗುವ (*Into* ಉಪ. ದೊಡನೆ)

Résonant ರೆಸೊನಂಟ್ (ಗು.) (ಧ್ವನಿಯ ವಿಷಯದಲ್ಲಿ) ಪ್ರತಿಧ್ವನಿತವಾಗು(ತ್ತಿರು)ವ ; ಮಾರ್ದನಿ ಬರುತ್ತಲಿರುವ ; ಅನುರಣಿಸು(ತ್ತಿರು)ವ ; (ವಸ್ತುಗಳು, ಕೊಠಡಿ, ಮೊ. ಗಳ ವಿಷಯದಲ್ಲಿ: ಮು., ಕಂಪನದಿಂದ) ಧ್ವನಿಯನ್ನು ಬಲಪಡಿಸುವ ಅಥವಾ ಲಂಬಿಸುವ (ಗುಣವುಳ್ಳ) ; ಅನುರಣಿಸುವ (ಗುಣವುಳ್ಳ) ; ಅನುರಣನ ಕಾರಕ. (ಸ್ಥಳದ ವಿಷಯದಲ್ಲಿ) ಪ್ರತಿಧ್ವನಿತವಾಗುತ್ತಿರುವ ; ಹೊಳಲು ಕೊಡುತ್ತಿರುವ (*With* ಉಪ. ದೊಡನೆ). **Résonantly** (ಕ್ರಿ. ವಿ.) ; **Résonance** (ನಾ.) ; **Résonator** —ನೇಟರ್ (ನಾ.) ಒಂದು ನಾದಕ್ಕೆ ಮಾತ್ರ ಪ್ರತಿಕಂಪಿಸುವ (ಅನುರಣಿಸುವ), ಆದುದರಿಂದ ಸ್ವರಮೇಳದಲ್ಲಿ ಸೇರಿದ ಆ ನಾದವನ್ನು ಪತ್ತೆ ಹಚ್ಚಲು ಉಪಯೋಗಿಸುವ, ಒಂದು ಸಲಕರಣೆ: ಅನುರಣಕ ; ಅನುನಾದಕ. ಧ್ವನಿಗಳಿಗೆ ಅನುರಣನ ಕೊಡುವ ಸಲಕರಣೆ ; ಅನುರಣನ ಕಾರಕ.

Resórb ರಿಸಾರ್ಬ್ (ಕ್ರಿ. ಸಕ.) ಮತ್ತೆ —ಹೀರು, ಹೀರಿಬಿಡು, ಲೀನ ಮಾಡಿಕೊ. **Resórbence** (ನಾ.) ; **Resórbent** (ಗು.) ; **Resórption** (ನಾ.) ಮರು ಹೀರಿಕೆ.

Resórcin ರೆಸಾರ್ಸಿನ್ (ನಾ.) ರಾಳದಮೇಲೆ ಪೊಟ್ಯಾಷಿನ ಪ್ರತಿಕ್ರಿಯೆಯಿಂದ ದೊರೆಯುವ, ಮು., ವರ್ಣದ್ರವ್ಯ ಕೊಡುವ ಪದಾರ್ಥವಾಗಿ ಉಪಯೋಗಿಸುವ, ಒಂದು ಸಂಯುಕ್ತ.

Resórt ರಿಸಾರ್ಟ್ (ಕ್ರಿ. ಅಕ., ನಾ.) ಆಶ್ರಯಿಸು, ಅವಲಂಬಿಸು (*To* ಉಪ. ದೊಡನೆ). (ಹೆಚ್ಚು ಸಂಖ್ಯೆಯಲ್ಲಿ, ಪದೇ ಪದೇ ಅಥವಾ ಬಳಕೆಯಾಗಿ) ಹೋಗು(ತ್ತಿರು) (*To* ಉಪ. ದೊಡನೆ). (ನಾ.) ಆಶ್ರಯ ; ಅವಲಂಬನ; ಉಪಾಯ ; ಮಾರ್ಗ ; ಗತಿ (In the last r. ಕೊನೆಯ —ಪ್ರಯತ್ನವಾಗಿ, ಉಪಾಯವಾಗಿ). ಆಗಾಗ್ಗೆ, ಬಳಕೆಯಾಗಿ, —ಹೋಗಿಬರು(ತ್ತಿರು)ವುದು (Encouraged the r. of scholars). (ಸಾ., ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಅಥವಾ ಆ ಸ್ಥಳದ ಗುಣಕ್ಕಾಗಿ) ಜನರು ಹೋಗಿಬರುವ ಸ್ಥಳ ; ಪ್ರವಾಸ ಸ್ಥಳ (Health, holiday, r. ಆರೋಗ್ಯ ಪ್ರವಾಸ ಸ್ಥಳ, ವಿರಾಮ—. Mountain, seaside, r.)

Re-sórt ರೀಸಾರ್ಟ್ (ಕ್ರಿ. ಸಕ.) ಮತ್ತೆ ವಿಂಗಡಿಸು ; ಪುನಃ ವರ್ಗೀಕರಿಸು.

Resoúnd ರಿಸೌಂಡ್ (ಕ್ರಿ.) (ಸ್ಥಳವೆಲ್ಲ) ಪ್ರತಿಧ್ವನಿತವಾಗು (*With* ಉಪ. ದೊಡನೆ). (ಕಂಠ, ವಾದ್ಯ, ಧ್ವನಿ, ಮೊ. ಗಳ ವಿಷಯದಲ್ಲಿ) ಹೊಳಲು ಕೊಡು, ಪ್ರತಿಧ್ವನಿ ಕೊಡು(ತ್ತಿರು), ಅನುರಣಿಸು, ಸ್ಥಳವನ್ನೆಲ್ಲ ತುಂಬು, ತುಂಬುನಾದ ಕೊಡು. (ಖ್ಯಾತಿ, ಘಟನೆ, ಮೊ. ವು) ಜನಜನಿತವಾಗಿರು, ವಿಶ್ರುತವಾಗಿರು, ಕೋಲಾಹಲಕರವಾಗಿರು (ಅನೇಕ ವೇಳೆ *through* ಉಪ. ದೊಡನೆ. R. through Europe, etc.). ಗಟ್ಟಿಯಾಗಿ ಘೋಷಿಸು ; ಉಗ್ಗಡಿಸು (ಸಾ., R. the praises, etc. of). (ಸ್ಥಳದ ವಿಷಯದಲ್ಲಿ) ಪ್ರತಿಧ್ವನಿ ಕೊಡು, ಧ್ವನಿಯನ್ನು ಮರಳಿಸು. **Resoúndingly** (ಕ್ರಿ. ವಿ.)

Resoúrce ರಿಸೋರ್ಸ್ (ನಾ.) (ಸಾ., ಬ. ವ. ದಲ್ಲಿ) ಬೇಕಾದುದನ್ನು ಒದಗಿಸುವ ಸಾಧನ ; ಬೇಕಾದಾಗ ಅದರಿಂದ ತೆಗೆದುಕೊಳ್ಳಬಹುದಾದ, ಬಳಸಿಕೊಳ್ಳಬಹುದಾದ, ಶೇಖರಣೆ ; ದಾಸ್ತಾನು ; ಆಧಾರ; ಆಶ್ರಯ ; ನಿಧಿ. (ಬ. ವ. ದಲ್ಲಿ) (ಪೋಷಣೆಗೂ ರಕ್ಷಣೆಗೂ ಒಂದು ದೇಶಕ್ಕಿರುವ) ಸಾಧನ ಸಂಪತ್ತು ; ಮೂಲ ಸಂಪತ್ತು. (ಫ್ರೆಂಚ್ ಪ್ರಯೋಗಾನುಕರಣದಿಂದ ; ಈಗ ವಿರ. ಪ್ರ.) ಸಹಾಯ ಸಾಧ್ಯತೆ (Lost without r.). ಉಪಾಯ ; ಗತಿ ; ಸಾಧನೋಪಾಯ (Flight was his only r. Am at the end of my resources). ವಿರಾಮದ ಹವ್ಯಾಸ ; ವಿಶ್ರಾಂತಿ ಸಾಧನ ; ವಿರಾಮೋಪಾಯ (Reading is a great r. A man of no resources). ಉಪಾಯ ಕೌಶಲ ; ವ್ಯಾವಹಾರಿಕ ಜಾಣತನ ; ಬುದ್ಧಿ ಚುರುಕು, ಬಂಡವಾಳ (Is full of r.). **Resoúrceful** (ಗು.) ; **Resoúrcefully** (ಕ್ರಿ. ವಿ.) ; **Resoúrcefulness** (ನಾ.) ; **Resoúrceless** (ಗು.) ; **Resoúrcelessness** (ನಾ.)

Respéct ರಿಸ್ಪೆಕ್ಟ್ (ನಾ., ಕ್ರಿ. ಸಕ.) ಸಂಬಂಧ (*To* ಉಪ. ದೊಡನೆ) (The terms have r. to position alone. Is true with r. to the French). ಗಮನ ; ಲಕ್ಷ್ಯ [*To* or *of* ಉಪ. ದೊಡನೆ. Did it quite without r. to the results. R. of persons ಮು., ಪ್ರಬಲರಿಗೆ, ಬಲಿಷ್ಠರಿಗೆ, ತೋರಿಸುವ — ಪಕ್ಷಪಾತ, ಅನುಗ್ರಹ, ಗೌರವ ; ಮುಖದಾಕ್ಷಿಣ್ಯ (R. persons ಹೀಗೆ ಮುಖದಾಕ್ಷಿಣ್ಯ ತೋರು)]. ವಿಷಯ, ಅಂಶ (*Of* ಉಪ. ದೊಡನೆ. In r. of style ಶೈಲಿಯ ವಿಷಯದಲ್ಲಿ. In all, some, respects ಎಲ್ಲ, ಕೆಲವು, ಅಂಶಗಳಲ್ಲಿ. In one, this, r.). (ಪ್ರಾಚೀ. ಪ್ರ.) (—ಎಂಬ) ಕಾರಣ (*That* ಪದದೊಡನೆ. In r. that it stultifies the whole plan). ಗೌರವ ; ಮರ್ಯಾದೆ ; ಮನ್ನಣೆ (Is held in r. ಗೌರವಿಸುತ್ತಾರೆ, ಮನ್ನಣೆ ಮಾಡುತ್ತಾರೆ. Self-r. ಆತ್ಮಗೌರವ). (ಬ. ವ. ದಲ್ಲಿ) ನಮಸ್ಕಾರ(ಗಳು), ವಂದನೆ(ಗಳು) (Give him my, sends his, respects). (ಕ್ರಿ.) (ಪ್ರಾಚೀ. ಪ್ರ.) ಗಮನ, ಲಕ್ಷ್ಯ, —ಕೊಡು ; ಲಕ್ಷ್ಯಮಾಡು. [**Respécter** (ನಾ.). Respecter of persons ಮುಖದಾಕ್ಷಿಣ್ಯ ತೋರುವವನು]. ಸಂಬಂಧಪಡು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಬಂಧಿಸಿರು ; ಕುರಿತದ್ದಾಗಿರು [(ಈಗ ವರ್ತಮಾನ ಕೃ. ವಿನಾ ವಿರ. ಪ್ರ.) Legislation respecting property. (ಉಪ. ವಾಗಿ ಸಹ ಪ್ರ.) Am at a loss respecting his whereabouts]. ಗಣ್ಯತೆಯಿಂದ, ಮರ್ಯಾದೆಯಿಂದ, —ಕಾಣು; ಮನ್ನಣೆ—ತೋರು, ಮಾಡು ; ಗೌರವಿಸು ; ಮಾನ್ಯಮಾಡು ; ದಯಾ ದಾಕ್ಷಿಣ್ಯತೋರು (R. oneself ಆತ್ಮಗೌರವವಿಟ್ಟುಕೊ. R. innocence or the innocent ಕೃತ್ರಿಮವರಿಯದವರನ್ನು, ಸರಳ ಸ್ವಭಾವದವರನ್ನು, —ನೋಯಿಸದಿರು, ಕೆಡಿಸದಿರು, ದುರ್ಮಾರ್ಗಕ್ಕೆಳೆಯದಿರು. Respected my silence ನನ್ನನ್ನು ಮೌನವಾಗಿರಗೊಟ್ಟನು). **Respectability** (ನಾ.) (ಸಮಾಜದಲ್ಲಿ) ಗಣ್ಯತೆ, ಗೌರವಾರ್ಹತೆ, ಮಾನ್ಯತೆ, ಗೌರವ ; ಗೌರವಾರ್ಹರು ; ಗೌರವಸ್ಥರು (A r. ಗೌರವಸ್ಥ). **Respéctable** (ಗು., ನಾ.) ಗಣ್ಯ ; ಗೌರವಾರ್ಹ (Did it from r. motives). ತಕ್ಕಮಟ್ಟಿನ, ಅಲ್ಪವಲ್ಲದ ; ತಕ್ಕಷ್ಟು ಯೋಗ್ಯತೆ, ಪ್ರಾಮುಖ್ಯತೆ, —ಉಳ್ಳ. ಸುಮಾರಾಗಿ ಒಪ್ಪಬಹುದಾದ ; ಇದ್ದ ಮಟ್ಟಿಗೆ —ಚೆನ್ನಾಗಿರುವ, ದೊಡ್ಡದಾಗಿರುವ (A r. hill, antiquity, painter, minority. R. talents). (ಸಮಾಜದಲ್ಲಿ) ತಕ್ಕಮಟ್ಟಿಗೆ—ಉನ್ನತಸ್ಥಾನದ, ಗೌರವಸ್ಥನಾದ; (ನಡೆವಳಿ) ಸಭ್ಯ(ತೆಯುಳ್ಳ) ; (ಉದ್ಯೋಗ, ಉಡುಪು, ಮೊ. ಗಳ ವಿಷಯದಲ್ಲಿ) ಗೌರವಸ್ಥರಿಗೆ ತಕ್ಕ. (ನಾ.) ಗೌರವಸ್ಥ (ಸಾ., ಬ. ವ. ದಲ್ಲಿ). **Respéctably** (ಕ್ರಿ. ವಿ.) ; **Respéctful** (ಗು.) ಗೌರವವುಳ್ಳ ; ಗೌರವದ ; ಗೌರವ ತೋರಿಸುವ (R. behaviour. Stood at a r. distance). **Respéctfully** (ಕ್ರಿ. ವಿ.) ; **Respéctfulness** (ನಾ.) ; **Respéctive** (ಗು.) ಆದರದರ, ಅವರವರ, ನಮ್ಮ ನಮ್ಮ, ನಿಮ್ಮ ನಿಮ್ಮ ; ವೈಯಕ್ತಿಕ ; ಅನುಕ್ರಮವಾದ ; ತಾರತಮ್ಯದ (Go to your r. places. The election depends on the r. popularity of the candidates). **Respéctively** (ಕ್ರಿ. ವಿ.)

Réspirable, Respirátion, Réspirator. Respire ನೋಡಿ.

Respíré ರೆಸ್ಪಯ್‌ರ್' (ಕ್ರಿ.) ಉಸಿರಾಡು ; (ನಿ)ಶ್ವಾಸೋಚ್ಛ್ವಾಸ ಮಾಡು. (ಗಾಳಿ, ಮೊ. ನ್ನು) ಶ್ವಾಸಿಸು. (ವಿರ. ಪ್ರ.) (ಪರಿಮಳ, ಸೌಹಾರ್ದ, ಮೊ. ನ್ನು) ಹೊರ ಸೂಸು. (ರೂಪ.) (ಸಂಕಟ, ತೊಂದರೆ, ಮೊ. ನ್ನು ನೀಗಿಕೊಂಡು) ಮತ್ತೆ —ಉಸಿರಾಡು, ಜೀವ ಪಡೆ. ಉಸಿರು ತೆಗೆದುಕೊ ; ಮತ್ತೆ ಆಸೆ, ಧೈರ್ಯ, ಉತ್ಸಾಹ, —ಪಡೆ ; (ಶ್ರಮಪಟ್ಟ ತರುವಾಯ) ವಿಶ್ರಾಂತಿ, ವಿರಾಮ, —ಪಡೆ. **Respírable** ರೆಸ್ಪೈ—, **Ré**- ರೆಸ್ಪಿ— (ಗು.) (ಗಾಳಿ, ಅನಿಲ, ಮೊ. ಗಳ ವಿಷಯದಲ್ಲಿ) ಉಸಿರಾಡಲಾಗುವ; ಉಸಿರಾಡಲು ತಕ್ಕ ; ಶ್ವಾಸಾರ್ಹ. **Respirátion** —ಸ್ಪಿ— (ನಾ.) ಉಸಿರಾಟ ; (ಒಂದು ಬಾರಿಯ) ನಿಶ್ವಾಸೋಚ್ಛ್ವಾಸ ; (ಸಸ್ಯಗಳು) ಆಮ್ಲಜನಕವನ್ನು ಹೀರಿಕೊಂಡು ಇಂಗಾರಾಮ್ಲವನ್ನು ಹೊರಬಿಡುವುದು: ಸಸ್ಯಗಳ ನಿಶ್ವಾಸೋಚ್ಛ್ವಾಸ. **Réspirator** (ನಾ.) ಒಳಕ್ಕೆಳೆದುಕೊಳ್ಳುವ ಗಾಳಿಯನ್ನು ಬೆಚ್ಚಗೆ ಮಾಡುವುದಕ್ಕಾಗಲಿ ಸೋಸುವುದಕ್ಕಾಗಲಿ ಬಾಯಿಯ (ಮತ್ತು ಮೂಗಿನ) ಮೇಲೆ ಹಾಕಿಕೊಳ್ಳುವ ನವಿರು ಜಾಲರಿಯ ಒಂದು ಮುಸುಕು : ಶ್ವಾಸ ಶೋಧಕ ; ಉಸಿರು ರಕ್ಷೆ. (ಸೈನ್ಯ) (ವಿಷವಾಯುವಿನಿಂದ ರಕ್ಷಣೆ ಪಡೆಯುವುದಕ್ಕಾಗಿ ಧರಿಸುವ, ರಾಸಾಯನಿಕ) ಶ್ವಾಸ ಶೋಧಕ (ಸಲಕರಣೆ) (Box r. ಬ್ರಿಟಿಷ್ ಮಾದರಿಯದು). **Réspiratory** (ಗು.) ಉಸಿರಾಟದ ; ನಿಶ್ವಾಸೋಚ್ಛ್ವಾಸ (ಸಂಬಂಧ)ದ.

Réspite ರೆಸ್ಪಿಟ್, —ಸ್ಪೈಟ್ (ನಾ., ಕ್ರಿ. ಸಕ.) (ಕಡ ತೀರಿಸುವುದು, ಕರ್ತವ್ಯ ನಿರ್ವಹಣ, ಮರಣದಂಡನೆ, ಮೊ. ನ್ನು ಮುಂದಕ್ಕೆ ಹಾಕಿ, ಕೊಟ್ಟ) ವ್ಯವಧಾನ, ಕಾರಾವಕಾಶ, ಕಾಲ ವಿಲಂಬನ, ಬಿಡುವು. ವಿಶ್ರಾಂತಿ, ವಿರಾಮ. (ಕ್ರಿ.) (ಅಪರಾಧಿಗೆ) ಗಲ್ಲು ಶಿಕ್ಷೆಯನ್ನು ಮುಂದಕ್ಕೆ ಹಾಕಿ ಕಾರಾವಕಾಶ ಕೊಡು ; (ಶಿಕ್ಷೆ, ಸಾಲದ ತೀರಿಕೆ, ಮೊ. ನ್ನು) ತಳ್ಳಿಡು, ಮುಂದಕ್ಕೆ ಹಾಕು ; (ನೋವು, ಆತಂಕ, ಮೊ. ರಿಂದ) ತಾತ್ಕಾಲಿಕವಾಗಿ ಉಪಶಮನ ಪರಿಹಾರ, ವಿಶ್ರಾಂತಿ, —ಕೊಡು. (ಸೈನ್ಯ : ಸಂಬಳವನ್ನು) ಕೊಡದೆ ತಡೆದಿಡು.

Respléndent ರಿ(ರೆ)ಸ್‌ಪ್ಲೆಂಡೆಂಟ್ (ಗು.) ಬಹಳ ಪ್ರಕಾಶಮಾನವಾದ ; ದೇದೀಪ್ಯಮಾನ ; ಉಜ್ಜ್ವಲ ; ಕಣ್ಣುಕೋರೈಸುವ. **Resplendently** (ಕ್ರಿ. ವಿ.) ; **Respléndence** (ನಾ.) ; **Respléndency** (ನಾ.)

Respónd ರೆ(ರಿ)ಸ್ಪಾಂಡ್ (ಕ್ರಿ. ಅಕ., ನಾ.) (ಮು., ಪುರೋಹಿತ, ಮೊ. ರಿಗೆ ಒಂದು ಗೊತ್ತಿನ ಉತ್ತರಗಳನ್ನು ಹೇಳುವ ಭಕ್ತಮಂಡಲಿಯ ವಿಷಯದಲ್ಲಿ: ಸಂವಾದ ಗೀತೆಯ) ಉತ್ತರ, ಪ್ರತ್ಯುತ್ತರ, —ಕೊಡು, ಹೇಳು. ಜವಾಬಾದ ಕ್ರಿಯೆ, ಕಾರ್ಯ, —ನಡಸು ; ಜವಾಬುಕೊಡು (Responded with a drop-kick). ಪ್ರತಿವರ್ತನೆ, ಪ್ರತಿಕ್ರಿಯೆ, —ತೋರು; ಪ್ರತಿಯಾಗಿ ಮಿಡಿ (*To* ಉಪ. ದೊಡನೆ) (Does not r. to kindness. Nerve responds to stimulus). (ವಿರ. ಪ್ರ.) ಸಂವಾದಿಯಾಗು, —ಯಾಗಿರು ; ಹೊಂದಿಕೆಯಾಗು, —ಯಾಗಿರು. (ನಾ.) (ಕ್ರೈಸ್ತ) = Responsory. (ಸಾರ್ವಜನಿಕ ಪ್ರಾರ್ಥನೆಯ ಸಂವಾದ ಗೀತೆಯಲ್ಲಿ) ಪ್ರತ್ಯುತ್ತರ ಗೀತೆ, —ಶ್ಲೋಕ. (ವಾ. ಶಾ.) ಕಮಾನಿಗೆ ಆಧಾರವಾಗಿ ಗೋಡೆಗೆ ಸೇರಿಸಿ ಕಟ್ಟಿರುವ ಅರೆಗಂಬ. **Respóndence** (ನಾ.) ; **Respóndency** (ನಾ.) ; **Respóndent** (ಗು., ನಾ.) ಉತ್ತರ, ಪ್ರತ್ಯುತ್ತರ, —ಕೊಡುವ. ಪ್ರತಿಕ್ರಿಯೆ ತೋರುವ, ಪ್ರತಿವರ್ತಿಸುವ (*To* ಉಪ. ದೊಡನೆ). ಪ್ರತಿವಾದಿಯ ಸ್ಥಾನದಲ್ಲಿರುವ. (ನಾ.) ಉತ್ತರಕೊಡುವವನು ; ಪ್ರತಿವಾದಿ (ಮು., ವಿವಾಹ ವಿಚ್ಛೇದನದ ವ್ಯವಹಾರದಲ್ಲಿ). **Respónse** (ನಾ.) ಉತ್ತರ, ಜವಾಬು (In r. to. His r. was the proclamation of martial law). ಪ್ರತಿವಾದ ; ಪ್ರತ್ಯುತ್ತರ. (ಒಂದು ಪ್ರಚೋದನೆಗೆ ಅಥವಾ ಪ್ರಭಾವಕ್ಕೆ ಜವಾಬಾಗಿ ಬಂದ) ಪ್ರತಿ ಮನೋಭಾವ, ಪ್ರತಿವರ್ತನೆ, ಪ್ರತಿಕ್ರಿಯೆ (Called forth no r. in his breast). (ಕ್ರೈಸ್ತ) = Responsory. ಸಾರ್ವಜನಿಕ ಪ್ರಾರ್ಥನೆಯಲ್ಲಿ ಪುರೋಹಿತನಿಗೆ ಉತ್ತರವಾಗಿ ಹೇಳುವ ಯಾವುದಾದರೂ ಪ್ರಾರ್ಥನಾ (ಪುಸ್ತಕದ) ಭಾಗ ; ಪ್ರತ್ಯುತ್ತರ ಗೀತೆ. **Responsibílity** (ನಾ.) ಜವಾಬ್ದಾರಿ (ಹೊತ್ತಿರುವುದು, ವಿಷಯ) ; ಹೊಣೆ(ಗಾರಿಕೆ) ; ಭಾರ (Did it on his own r. ಸ್ವಂತ ಜವಾಬ್ದಾರಿಯಮೇಲೆ ಮಾಡಿದನು. Is not afraid of r. ಜವಾಬ್ದಾರಿ ವಹಿಸುವುದಕ್ಕೆ ಹೆದರುವುದಿಲ್ಲ). **Respónsible** (ಗು.) ಜವಾಬು ಕೊಡಬೇಕಾದ, ಜವಾಬ್ದಾರನಾದ, ಜವಾಬ್ದಾರಿ ಹೊತ್ತಿರುವ, ಉತ್ತರವಾದಿಯಾದ, ಹೊಣೆಯುಳ್ಳ (*To* person, *for* thing) (R. ruler, government ಸಾಂಕುಶ, ಜವಾಬ್ದಾರಿಯ—). ತನ್ನ ಜವಾಬ್ದಾರಿಯನ್ನರಿತ; ಜವಾಬ್ದಾರಿಯಿಂದ, ವಿವೇಚನೆಯಿಂದ, —ವರ್ತಿಸಬಲ್ಲ, ವರ್ತಿಸುವ ; ಗೌರವಾರ್ಹ ; ನಂಬಿಗಸ್ಥ (The great God has treated us as r. beings. Very r. tenants). ಜವಾಬ್ದಾರಿಯುಳ್ಳ, ಹೊಣೆಗಾರಿಕೆಯುಳ್ಳ (A r. office). **Respónsibly** (ಕ್ರಿ. ವಿ.) ; **Respónsive** (ಗು.) ಉತ್ತರಕೊಡುವ ; —ರೂಪವಾದ ; (ಸಾರ್ವಜನಿಕ ಆರಾಧನೆ, ಪೂಜಾ ವಿಧಾನಗಳಲ್ಲಿ) ಪ್ರತ್ಯುತ್ತರ ಗೀತಗಳನ್ನುಪಯೋಗಿಸುವ. (ಒಂದು ಮನೋಭಾವಕ್ಕೆ, ಪ್ರಭಾವಕ್ಕೆ) ಸುಲಭವಾಗಿ ಹೊಂದಿಕೊಂಡು ಬರುವ, ಸಂವಾದಿಯಾದ, ಉತ್ತರವಾದಿಯಾದ (*To* ಉಪ. ದೊಡನೆ) ; ಸುಲಭವಾಗಿ ಪ್ರೇರಿಸಲಾಗುವ, —ಪ್ರಭಾವಕ್ಕೊಳಗಾಗುವ ; ಸಹಾನುಭೂತಿಯುಳ್ಳ. **Respónsively** (ಕ್ರಿ.ವಿ.); **Respónsiveness** (ನಾ.); **Respónsory** (ನಾ.) (ಬೈಬಲ್ಲಿನ ಪಠನವಾದಮೇಲೆ ಒಬ್ಬನಾಗಲಿ ಗಾಯಕ ವೃಂದವಾಗಲಿ ಹೇಳುವ ಅಥವಾ ಹಾಡುವ) ಸಂವಾದ ಗೀತೆ.

Respónse, Responsibílity, Respónsory. Respond ನೋಡಿ.

Respónsions ರಿಸ್ಪಾನ್‌ಷನ್ಸ್ (ನಾ., ಬ. ವ.) ಆಕ್ಸ್‌ಫರ್ಡಿನ ಬಿ.ಎ. ಪಂಡಿತ ಪದವಿಗೆ (ನಡಸುವ ಮೂರು ಪರೀಕ್ಷೆಗಳಲ್ಲಿ) ಪ್ರಥಮ ಪರೀಕ್ಷೆ [=(ಬಳ. ಮಾ.) Smalls. (Great ನಾ. ಕೆಳಗೆ Greats ನೋಡಿ)]

Ressaldár ರೆಸಲ್ದಾರ್ (ನಾ.) (ಇಂಡಿಯದಲ್ಲಿ) ರಾವುತ ದಳದ ದೇಶೀಯ ನಾಯಕ ; ದೇಶೀಯ ರಾವುತ ದಳಪತಿ ; ರಿಸಾಲ್ದಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rest[1] ರೆಸ್ಟ್ (ಕ್ರಿ., ನಾ.) ನಿಶ್ಚಲವಾಗಿರು ; ಸುಮ್ಮನಿರು ; (ಶ್ರಮ, ಕ್ರಿಯೆ, ಚಲನೆ ಅಥವಾ ಉದ್ಯೋಗ—ಇವುಗಳಿಂದ) ವಿಶ್ರಾಂತಿ, ಬಿಡುವು, —ಪಡೆ(ದಿರು) ; ವಿಶ್ರಮಿಸಿಕೊ ; ನಿದ್ರೆಮಾಡು(ತ್ತಿರು) ; ನಿಲ್ಲು ; ಸತ್ತು ಮಲಗಿರು ; ದೀರ್ಘನಿದ್ರೆ ಮಾಡು ; ಶಾಂತವಾಗಿರು ; ತನ್ನಷ್ಟಕ್ಕೆ ತಾನಿರು [Waves that never r. R. upon one's oars (Oar ನೋಡಿ). Let us r. here (ನಡೆಯುವುದನ್ನು ನಿಲ್ಲಿಸಿ) ಇಲ್ಲಿ ವಿಶ್ರಮಿಸಿಕೊಳ್ಳೋಣ. Land was allowed to r. ಜಮೀನನ್ನು ಬಂಜರು, ಬೀಳು, —ಬಿಡಲಾಯಿತು]. ವಿಶ್ರಾಂತಿಕೊಡು ; ದಣಿವಾರಿಸಿಕೊ(ಳ್ಳಲು ಬಿಡು) ; ಸುದಾರಿಸಿಕೊ (R. your men for an hour. R. *or* God r. his soul ದೇವರು ಅವನ ಆತ್ಮಕ್ಕೆ ಶಾಂತಿಕೊಡಲಿ). (ಭೂ. ಕೃ.) ದಣಿವಾರಿಸಿಕೊಂಡು ಪುನಶ್ಚೈತನ್ಯ ಪಡೆದ, ಮತ್ತೆ ಉತ್ಸಾಹತುಂಬಿದ ; ಚೇತರಿಸಿಕೊಂಡ (Are you quite rested ?). ಇರು, ಬಿದ್ದಿರು ; ಹರಡಿರು ; ಆಧಾರವಾಡಿ ಕೊಂಡಿರು ; ಆಧಾರದಮೇಲೆ ನಿಂತಿರು ; ಅವಲಂಬಿಸಿರು ; ನೆಚ್ಚಿರು ; (ಕಣ್ಣು, ದೃಷ್ಟಿ, ಮೊ. ವು) ಬೀಳು, ನೆಟ್ಟಿರು [(*Up*)*on*, *against*, *in* ಉಪ. ಜೊತೆನ. Shadow, light, rests on his face. Hand resting on the table. I r. upon your promise —ನೆಚ್ಚಿ ಕೊಂಡಿದ್ದೇನೆ. His gaze rested on a strange object. Be content to r. in God. Resting-place ವಿಶ್ರಾಂತಿ ಸ್ಥಳ (Last r.-p. ಗೋರಿ, ಸಮಾಧಿ)]. (ನಾ.) ಮಲಗಿರುವುದು, ನಿದ್ರೆ(ಮಾಡು ವುದು) (Go, retire, to r.). (ದುಡಿತ, ಚಲನೆ, ತೊಂದರೆ, ಮೊ. ಗಳಿಂದ) ಬಿಡುವು ; ವಿಶ್ರಾಂತಿ ; ವಿರಾಮ ; ಆರಾಮ [Day of r. ಭಾನುವಾರ. At r. ನಿಶ್ಚಲವಾಗಿ ; ಅಕ್ಷುಬ್ಧವಾಗಿ ; ನಿಶ್ಚಿಂತೆಯಾಗಿ (ಅನೇಕ ವೇಳೆ ಮೃತರ ವಿಷಯದಲ್ಲಿ). Set question, person's mind, at r. ಪ್ರಶ್ನೆಯನ್ನು (ಸಮಸ್ಯೆಯನ್ನು) ಬಗೆಹರಿಸು, ಮನಸ್ಸನ್ನು ಸಮಾಧಾನಗೊಳಿಸು. Lay to r. ಹೂಳು ; ಗೋರಿಮಾಡು]. (ನಾವಿಕರು, ಮೊ. ರ) ವಿಶ್ರಾಂತಿ —ಮಂದಿರ, ಸ್ಥಾನ. (ಮು., ಅಲ್ಲಾಡದಿರುವಂತೆ ಕೊಟ್ಟ) ಊರೆ, ಆಧಾರ, ಆನಿಕೆ. (ಸಂ.) (ಹಾಡದೆ, ಬಾಜಿಸದೆ, ನಿಲ್ಲಿಸಿದ) ವಿರಾಮಕಾಲ ; ಇದನ್ನು ಸೂಚಿಸುವ ಚಿಹ್ನೆ. (ಭಾಷಣದಲ್ಲಿ) ವಿರಾಮ, ಬಿಡುವು ; (ಪದ್ಯದಲ್ಲಿ) ಯತಿ, ವಿರಾಮ. R.-balk ನೇಗಿಲ ಸಾಲುಗಳ ಮಧ್ಯೆ ಇರುವ (ಉಳದೆ ಬಿಟ್ಟಿರುವ) ದಿಂಡು. R.-cure (ವೈದ್ಯಚಿಕಿತ್ಸೆಯಾಗಿ) ಸಾ., ಕೆಲವು ವಾರಗಳ ವರೆಗೆ ಹಾಸಿಗೆ ಯಲ್ಲೇ ವಿಶ್ರಾಂತಿ ತೆಗೆದುಕೊಳ್ಳುವುದು ; ವಿಶ್ರಾಂತಿ ಚಿಕಿತ್ಸೆ. R.-day ವಿಶ್ರಾಂತಿಯ(ಲ್ಲಿ ಕಳೆದ) ದಿನ ; (ವಿರ. ಪ್ರ.) ಭಾನುವಾರ. R.-house ಪ್ರಯಾಣಿಕರ—ಬಂಗಲೆ, ಬಿಡದಿ ಮನೆ ; ಮುಸಾಫರಖಾನೆ. **Réstful** (ಗು.) ವಿಶ್ರಾಂತಿಗೆ ಅನುಕೂಲವಾದ ; ಸದ್ದುಗದ್ದಲಗಳಿಲ್ಲದ ; ನಿರುಪ ದ್ರವವಾದ ; ಶಾಂತಿಕರ ; ಶಾಂತವಾದ. **Réstfully** (ಕ್ರಿ. ವಿ.); **Réstfulness** (ನಾ.) ; **Réstless** (ಗು.) ವಿಶ್ರಾಂತಿ—ದೊರೆಯದ, ಇಲ್ಲದ, ಕೊಡದ ; ಕಳವಳಗೊಂಡ ; ಕ್ಷುಬ್ಧ ; ತಳಮಳಿಸುವ ; ಸ್ವಲ್ಪವೂ ಶಾಂತಿಯಿಲ್ಲದ ; ಸದಾ ಚಲಿಸುತ್ತಿರುವ ; ಅಸ್ತಿಮಿತ ; ಸ್ವಸ್ಥವಾಗಿ, ಒಂದು ಕಡೆ ನಿಲ್ಲದ ; ಚಡಪಡಿಸುತ್ತಿರುವ ; ನಿಶ್ಚಿಂತೆ ಯಾಗಿಲ್ಲದ. **Réstlessly** (ಕ್ರಿ. ವಿ.) ; **Réstlessness** (ನಾ.)

Rest[2] ರೆಸ್ಟ್ (ಕ್ರಿ. ಅಕ., ನಾ.) (ಪ್ರಾಚೀ. ಪ್ರ.) ಉಳಿ(ದಿರು) ; ಮಿಕ್ಕಿರು (Whatever rests of hope). [R. with (—ರ) ಕೈಯಲ್ಲಿರು, ವಶದಲ್ಲಿರು (The management of affairs rested with Wolsey]. ಇರು [R. assured, satisfied. (ಪ್ರಾಚೀ. ಪ್ರ.) (ಒಕ್ಕಣೆಯಲ್ಲಿ) I r. your devoted friend]. (ನಾ.) ಉಳಿದದ್ದು, ಉಳಿದವು, ಉಳಿದವರು ; ಮಿಕ್ಕದ್ದು, ಮಿಕ್ಕವು, ಮಿಕ್ಕವರು ; ಉಳಿಕೆ, ಶೇಷ (The r.) (*Of* ಉಪ. ಜೊತೆನ) [And the r. *or* all the r. of it ಇನ್ನು ಉಳಿದದ್ದೆಲ್ಲ. For the r. (ನಿರ್ದಿಷ್ಟವಾಗಿ ಹೇಳದೆ ಬಿಟ್ಟಿರುವ) ಇನ್ನು ಉಳಿದ(ವರ) ವಿಷಯದಲ್ಲಿ, ಉಳಿದವ(ರ)ನ್ನು]. (ಬ್ಯಾಂಕು) ಲಾಭಾಂಶಗಳನ್ನು ಹಂಚಿದಮೇಲೆ ಉಳಿದ ಹಣ; ಎತ್ತಿಟ್ಟ ಹಣ ; ನಿಕ್ಷೇಪ ನಿಧಿ ; ಕಾದಿಟ್ಟ ನಿಧಿ (ಮು., Bank of England ಎಂಬುದರಲ್ಲಿ). (ವಾಣಿಜ್ಯ) ಆಯವ್ಯಯಗಳ, ಲೇಣಿದೇಣಿಗಳ, —ಲೆಕ್ಕ. (ಟೆನಿಸ್ ಆಟ) ಎಡೆಬಿಡದೆ ಹಿಂದಿರುಗಿಸಿದ ಚೆಂಡಿನ ಹೊಡೆತಗಳು.

Rest[3] ರೆಸ್ಟ್ (ನಾ.) (ಚರಿತ್ರೆ) ಮಧ್ಯಯುಗದ ಈಟಿ ಯೋಧನು ತಗ್ಗಿಸಿ ಹಿಡಿದ ಭರ್ಜಿಯ ಬುಡ ಕೂರುವುದಕ್ಕೂ, ತಿವಿದಾಗ ಸಂಘಟ್ಟನೆಯಲ್ಲಿ ಅದು ಹಿಂದಕ್ಕೆ ಸರಿಯದಂತೆ ತಡೆಯುವುದಕ್ಕೂ (ಮೈಜೋಡಿನ ಬಲಭಾಗದಲ್ಲಿ) ಮಾಡಿದ್ದ ಒಂದು ಸಾಧನ, ತಡೆ ; ಈಟಿಯ—ಪೀಠ, ಆಧಾರ (With, lay *or* set one's, lance in r.)

Réstaurant ರೆಸ್ಟ(ಸ್ಟೊ)ರಂಟ್, (F) ರೆಸ್ಟೊ(ೕ)ರಾನ್ (ನಾ.) ಭೋಜನ ಮಂದಿರ, ಫಲಾಹಾರ ಮಂದಿರ ; ಊಟತಿಂಡಿ ಅಂಗಡಿ ; ಹೋಟಲು.

Restaurateúr (F) ರೆಸ್ಟೋರಟರ್ (ನಾ.) ಹೋಟಲು ಯಜಮಾನ.

Réstiff. **Restive** ನೋಡಿ.

Réstitute ರೆಸ್ಟಿಟ್ಯೂಟ್ (ಕ್ರಿ.) (ವಿರ. ಪ್ರ.) ಮತ್ತೆ ಪೂರ್ವಸ್ಥಿತಿಗೆ, ಯಥಾ ಸ್ಥಾನಕ್ಕೆ, —ತರು ; ಹಿಂದಕ್ಕೆ ಕೊಡು. **Restitútion** (ನಾ.) (ನ್ಯಾಯವಾದ ಮಾಲೀಕನಿಗೆ, ವಸ್ತುವನ್ನು) ಹಿಂದಕ್ಕೆ ಕೊಡುವುದು, ಪುನರ್ವಶ (ಮಾಡುವುದು). ನಷ್ಟಪರಿಹಾರ (ಕೊಡುವುದು), ನಷ್ಟ ಭರ್ತಿ (ಮಾಡುವುದು) [Make r. (ನಷ್ಟ)ಪರಿಹಾರ ಕೊಡು. R. of conjugal rights ದಾಂಪತ್ಯ ಹಕ್ಕಿನ ಪುನಸ್ಸ್ವಾಧೀನ (ವ್ಯವಹಾರದ ಹೆಸರು)]. (ಒಂದು ವಸ್ತುವನ್ನು, ಅದರ) ಪೂರ್ವಸ್ಥಿತಿಗೆ ತರುವುದು ; ಜೀರ್ಣೋದ್ಧಾರ ಮಾಡುವುದು [(ಮು., ದೇವ. ಶಾ.) The r. of all Things to their first State of Perfection]. (ಸ್ಥಿತಿ ಸ್ಥಾಪಕ ಗುಣದಿಂದ) ಮೊದಲಿನ ಆಕಾರ ಅಥವಾ ಪೂರ್ವಸ್ಥಿತಿ ಪಡೆಯುವುದು, ಬರುವುದು ; ಪೂರ್ವಸ್ಥಿತಿ ಪ್ರಾಪ್ತಿ.

Réstive ರೆಸ್ಟಿವ್, (ಪ್ರಾಚೀ. ಪ್ರ.) **Réstiff** ರೆಸ್ಟಿಫ್ (ಗು.) (ಕುದುರೆಯ ವಿಷಯದಲ್ಲಿ) ಮುಂದಕ್ಕೆ ಹೋಗಲು ನಿರಾಕರಿಸುವ ; ಮೊಂಡಾಟ ಮಾಡಿ— ನಿಂತುಬಿಟ್ಟಿರುವ, ಹಿಂದು ಹಿಂದಕ್ಕೊ ಪಕ್ಕ ಪಕ್ಕಕ್ಕೊ ಹೋಗುವ ; ತಕರಾರು ಮಾಡುವ ; ತುಂಟಾಟದ ; ತಂಟೆಮಾಡುವ. (ವ್ಯಕ್ತಿಯ ವಿಷಯದಲ್ಲಿ) ಹತೋಟಿಗೆ ಬರದ ; ಅಂಕೆಮೀರುವ ; ಮೊಂಡ ; ಜಗ್ಗದ. ಚಡಪಡಿಸುತ್ತಿರುವ. **Réstively** (ಕ್ರಿ. ವಿ.) ; **Réstiveness** (ನಾ.)

Restóre ರೆಸ್ಟೋರ್ (ಕ್ರಿ. ಸಕ.) ಹಿಂದಕ್ಕೆ ಕೊಡು ; ಪುನಸ್ಸ್ವಾಧೀನ ಪಡಿಸು. (ಪುನಃ ಕಟ್ಟುವುದು, ದುರಸ್ತುಮಾಡುವುದು, ಬಣ್ಣ ಹಚ್ಚುವುದು, ಪರಿಷ್ಕರಿಸುವುದು, ಮೊ. ರಿಂದ) ಪೂರ್ವಸ್ಥಿತಿಗೆ ಮತ್ತೆ ತರು ; ಜೀರ್ಣೋದ್ಧಾರಮಾಡು (Church, picture, text, has been restored. Restored out of all recognition). (ವಂಶ ನಷ್ಟವಾದ ಪ್ರಾಣಿ, ನಷ್ಟಗೊಂಡ ವಸ್ತು, ಮೊ. ರ) ಊಹಿತ ಮೂಲ ಸ್ವರೂಪ(ದ ಮಾದರಿ) ರಚಿಸು. ಮೊದಲಿನ ಗೌರವ, ಪದವಿ ಅಥವಾ ಹಕ್ಕನ್ನು ಮತ್ತೆ ಕೊಡು ; ಪೂರ್ವಸ್ಥಾನದಲ್ಲಿ ಅಥವಾ ಪೂರ್ವ ಸ್ಥಿತಿಯಲ್ಲಿ ಮತ್ತೆ ಸ್ಥಾಪಿಸು (*To* ಉಪ. ಜೊತೆನ) ; ಮೊದಲಿನ ಆರೋಗ್ಯಸ್ಥಿತಿಗೆ ತರು (*To* ಉಪ. ಜೊತೆನ) ; (ವ್ಯಕ್ತಿಯನ್ನು) ವಾಸಿ ಮಾಡು, ಗುಣಪಡಿಸು. ಪುನಃ ಸ್ಥಾಪಿಸು ; ಮತ್ತೆ ಹೊಸದಾಗಿ— ಬಳಕೆಗೆ ತರು, ಪ್ರಚಾರಕ್ಕೆ ತರು. (ಗ್ರಂಥದಲ್ಲಿ ಬಿಟ್ಟುಹೋಗಿರುವ ಪದಗಳು, ವಂಶನಷ್ಟ ಪ್ರಾಣಿಯ ಭಾಗಗಳು, ಮೊ. ನ್ನು) ಊಹಿಸಿ ಮತ್ತೆ ಸೇರಿಸು, ಜೋಡಿಸು. ಮತ್ತೆ ಅದರ ಸ್ಥಾನದಲ್ಲಿಡು ; ಪೂರ್ವಸ್ಥಳದಲ್ಲಿಡು. **Restórable** (ಗು.) ; **Restórer** (ನಾ.) ; **Restorátion** (ನಾ.) (ಕ್ರಿಯಾರ್ಥಗಳಲ್ಲಿ). (ಇಂಗ್ಲೆಂಡಿನ ಚರಿತ್ರೆ : ೧೬೬೦ರಲ್ಲಿ ಆದ) ರಾಜಪ್ರಭುತ್ವದ ಪುನಸ್ಸ್ಥಾಪನೆ(ಯ ಕಾಲ). **Restorátionism** (ನಾ.) ಭವಿಷ್ಯಜ್ಜೀವನದಲ್ಲಿ ಕಟ್ಟಕಡೆಗೆ ಎಲ್ಲ ಮನುಷ್ಯರೂ ಉದ್ಧಾರವಾಗುವರೆಂಬ ವಾದ: ಸರ್ವೋದ್ಧಾರ ವಾದ. **Restorátionist** (ನಾ.) ; **Restórative** ರಿಸ್ಟೋ(ಸ್ಟಾ)ರಟಿವ್ (ಗು., ನಾ.) ಮತ್ತೆ ಮೊದಲಿನ ಆರೋಗ್ಯವನ್ನು, ಶಕ್ತಿಯನ್ನು, —ದೊರಕಿಸುವ (ಆಹಾರ, ಔಷಧ) ; ಪುನರಾರೋಗ್ಯದಾಯಕ ; ಪುನಶ್ಚೈತನ್ಯ ಕಾರಕ ; ರಸಾಯನ. **Restóratively** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Restraín ರಿಸ್ಟ್ರೆಯ್‌ನ್ (ಕ್ರಿ. ಸಕ.) ತಡೆ, ಬಿಗಿಹಿಡಿ, ನಿರೋಧಿಸು (*From* ಉಪ. ದೊಡನೆ); ಅಂಕೆಯಲ್ಲಿಡು; ಹತೋಟಿಯಲ್ಲಿಟ್ಟುಕೊ; ಹದ್ದಿನಲ್ಲಿಡು; ನಿಗ್ರಹಿಸು; ದಮನಮಾಡು; ಅಡಗಿಸು. ನಿರ್ಬಂಧ ದಲ್ಲಿಡು; ಸೆರೆಯಲ್ಲಿಡು. **Restraínable** (ಗು.); **Restraínedly** (ಕ್ರಿ. ವಿ.) (ಮು.) ಆತ್ಮನಿಗ್ರಹದಿಂದ. **Restraínt** (ನಾ.) ತಡೆ (ಮಾಡುವುದು); ತಡೆಯಲ್ಲಿರುವುದು; ಹತೋಟಿ; ಅಡ್ಡಿ; ಅಂಕೆ; ಪ್ರತಿಬಂಧ(ಕ); ನಿರ್ಬಂಧ; ನಿಗ್ರಹ (Without r. ಸ್ವೇಚ್ಛೆಯಾಗಿ, ನಿರಾತಂಕವಾಗಿ, ಸಮೃದ್ಧಿಯಾಗಿ) [ಮು., (ಹುಚ್ಚರ) ರಕ್ಷಣಾಲಯದಲ್ಲಿ] ನಿರ್ಬಂಧದಲ್ಲಿಡುವುದು [Is under r. (ಮು., ಹುಚ್ಚನೆಂದು) ನಿರ್ಬಂಧ ದಲ್ಲಿ ಇಡಲಾಗಿದೆ]. (ರೀತಿ ನೀತಿಗಳಲ್ಲಿ) ಗಾಂಭೀರ್ಯ, ಬಿಗಿ, ಅಡಕ, ಹಿಡಿತ. ಆತ್ಮಸಂಯಮ; ಅತಿಗೆ ಹೋಗದಿರುವುದು; ಮಿತಿಯಲ್ಲಿರು ವುದು; ಉತ್ಪ್ರೇಕ್ಷೆಮಾಡದಿರುವುದು. (ಸಾಹಿತ್ಯದಲ್ಲಿ) ಅಡಕದ, ಬಿಗಿ, —ಶೈಲಿ. R. of princes (ವಾಣಿಜ್ಯ; ಪರದೇಶದ ಹಡಗುಗಳಿಗೆ) ಬಂದರು ಬಂದು(ಮಾಡುವುದು)

Re-strain ರೀಸ್ಟ್ರೆಯ್ನ್ (ಕ್ರಿ. ಸಕ.) ಪುನಃ ಬಿಗಿಯಾಗಿ ಎಳೆ; ಪುನಃ (ಅತಿಯಾಗಿ) ಶ್ರಮಿಸು.

Restríct ರಿಸ್ಟ್ರಿಕ್ಟ್ (ಕ್ರಿ. ಸಕ.) ಮಿತಿಗೊಳಿಸು, ಪರಿಮಿತಮಾಡು, ಕಟ್ಟುಪಡಿಸು, ನಿರ್ಬಂಧಿಸು (*To, within* ಉಪ. ದೊಡನೆ). **Restríctedly** (ಕ್ರಿ. ವಿ.); **Restríction** (ನಾ.); **Restríctive** (ಗು.); **Restríctively** (ಕ್ರಿ. ವಿ.)

Resúlt ರಿಸಲ್ಟ್ (ಕ್ರಿ. ಅಕ., ನಾ.) ಆಗು, ಉಂಟಾಗು, ಫಲಿಸು, ಸಿದ್ಧಿಸು, ಪರಿಣಮಿಸು, ಉದ್ಭವಿಸು (*From* ಉಪ. ದೊಡನೆ); ಕೊನೆಗೊಳ್ಳು, ಪರಿಣಾಮವಾಗು, ಪರ್ಯವಸಾನವಾಗು (*In* ಉಪ. ದೊಡನೆ) (Resulted badly. Resulted in a large profit). (ನಾ.) ಫಲ; ಪರಿಣಾಮ; ಪರ್ಯವಸಾನ (Without r. ವ್ಯರ್ಥವಾಗಿ; ನಿಷ್ಫಲವಾಗಿ). (ರೆಕ್ಕಾಚಾರದಿಂದ ದೊರೆತ) ಫಲಿತಾಂಶ, ಉತ್ತರ. **Resúltful** (ಗು.); **Resúltless** (ಗು.); **Resúltant** (ಗು., ನಾ.) (ಮು., ಹೆಚ್ಚು ಕಡಮೆ ಪರಸ್ಪರ ಪ್ರತಿರೋಧ ಬಲಗಳ) ಸಂಘಟಿತ ಫಲವಾದ, ಒಟ್ಟು ಪರಿಣಾಮ ರೂಪವಾದ. (ನಾ.) (ಒಂದೇ ಬಿಂದುವಿನಲ್ಲಿ ಬೇರೆ ಬೇರೆ ದಿಕ್ಕುಗಳಲ್ಲಿ ಪ್ರಯೋಗವಾದ ಎರಡು ಅಥವಾ ಹೆಚ್ಚು ಬಲಗಳ) ಸಂಘಟಿತ ಫಲ, ಲಬ್ಧ (ಮು., ಯಂತ್ರಶಾಸ್ತ್ರ ಮತ್ತು ಪ್ರಯೋಗ ಚಲನ ಶಾಸ್ತ್ರಗಳಲ್ಲಿ; ರೂಪ. ಸಹ)

Resúme[1] ರಿಸ್ಯೂಮ್ (ಕ್ರಿ.) ಮತ್ತೆ ಪಡೆ, ತೆಗೆದುಕೊ; ಹಿಂದಕ್ಕೆ ಪಡೆ; ಪುನಃ ವಶಕ್ಕೆ ಪಡೆ, ವಹಿಸಿಕೊ (R. one's spirits, sway, liberty, seat. R. gift ಕೊಟ್ಟ ದಾನವನ್ನು ಹಿಂದಕ್ಕೆ ತೆಗೆದುಕೊ). (ಮಧ್ಯೆ ಬಿಟ್ಟದ್ದನ್ನು, ಬಿಟ್ಟ ಭಾಗದಿಂದ) ಮತ್ತೆ ಆರಂಭಿಸು, ಮುಂದುವರಿಸು [R. thread of one's discourse. R. pipe ಮತ್ತೆ ಧೂಮ ಪಾನಕ್ಕೆ ತೊಡಗು; ಮತ್ತೆ ಚುಂಗಾಣಿ (ಚಿಲುಮೆ) ಸೇದತೊಡಗು]. (—ರ) ಸಂಗ್ರಹಮಾಡು, ಸಂಗ್ರಹ ಮಾಡಿ ಹೇಳು; ಸಾರಾಂಶ ಹೇಳು. **Resúmption** ರಿಸಂ(ಪ್)ಷನ್ (ನಾ.); **Resúmptive** (ಗು.); **Resúmptively** (ಕ್ರಿ. ವಿ.)

Résume[2] ರೆಸ್ಯುಮೇ (ನಾ.) ಸಾರಾಂಶ; ಸಂಗ್ರಹ; ಸಂಕ್ಷೇಪ; ಗೋಷ್ವಾರೆ.

Resúmption, Resúmptive, etc. **Resume** ನೋಡಿ.

Resúpinate ರಿಸ್ಯೂಪಿನೇಟ್ (ಗು.) (ಸ. ವಿ.) (ಎಲೆ, ಮೊ. ಗಳ ವಿಷಯದಲ್ಲಿ) ಬುಡಮೇಲಾದ; ಬುಡಮೇಲಾಗಿ ತಿರುಗಿದ, ತಿರುಚಿ ಕೊಂಡಿರುವ; ವ್ಯತ್ಯಸ್ತ. **Resupinátion** (ನಾ.)

Resúrge ರಿಸರ್ಜ್ (ಕ್ರಿ. ಅಕ.) (ಹಾಸ್ಯವಾಗಿ ಹೊರತು ವಿರ. ಪ್ರ.) ಪುನರುತ್ಥಾನವಾಗು; ಪುನರುಜ್ಜೀವಿಸು; ಮತ್ತೆ ಏಳು, ತಲೆಯೆತ್ತು. **Resúrgent** (ನಾ., ಗು.) ಮತ್ತೆ ತಲೆಯೆತ್ತಿದ(ವನು), ಪುನರುಜ್ಜೀವಿತ(ನಾದವನು). **Resúrgence** (ನಾ.)

Resurréct ರೆ(ರಿ)ಸರೆಕ್ಟ್ (ಕ್ರಿ. ಸಕ.) (ಬಳ. ಮಾ.) (ಸತ್ತವನನ್ನು) ಮತ್ತೆ ಬದುಕಿಸು, ಪುನರುಜ್ಜೀವನಗೊಳಿಸು (ವಿರ. ಪ್ರ.). (ಪದ್ಧತಿಯನ್ನು) ಮತ್ತೆ ಬಳಕೆಗೆ, ರೂಢಿಗೆ, —ತರು. ಮತ್ತೆ ಜ್ಞಾಪಕಕ್ಕೆ ತರು, ದೃಷ್ಟಿಗೆ ತರು. (ಶವ, ಮೊ. ನ್ನು) ಗೋರಿಯಿಂದ—ಹೊರದೆಗೆ, ಅಗೆದು ತೆಗೆ. **Resurréction** (ನಾ.) ಗೋರಿಯಿಂದ ಯೇಸು ಕ್ರಿಸ್ತನ ಪುನರುತ್ಥಾನ(ವಾದುದರ ಸ್ಮಾರಕೋತ್ಸವ). (ಅಂತಿಮ ಮಹಾ ವಿಚಾರಣೆಯ ದಿನದಲ್ಲಿ) ಎಲ್ಲ ಮನುಷ್ಯರೂ ಮತ್ತೆ ಎದ್ದುಬರುವುದು, ಬದುಕಿ ಬರುವುದು; ಪುನರುಜ್ಜೀವನ. (ಗೋರಿಯಿಂದ) ಅಗೆದು ತೆಗೆಯುವುದು, ಹೊರತೆಗೆಯುವುದು (ರೂಪ. ಸಹ) [R. man = Body-snatcher (Body ನೋಡಿ)]. ಮತ್ತೆ ಬಳಕೆಗೆ, ರೂಢಿಗೆ, ಪ್ರಚಾರಕ್ಕೆ, ಜ್ಞಾಪಕಕ್ಕೆ, —ತರುವುದು, ಬರುವುದು; ಜೀರ್ಣೋದ್ಧಾರ (ಮಾಡುವುದು, ಆಗುವುದು). (R. pie ಉಳಿದಿದ್ದ ಪಿಟ್ಟುಗಳನ್ನೆಲ್ಲ ಸೇರಿಸಿ ಮಾಡಿದ ಕಡುಬು). **Resurréctional** (ಗು.); **Resurréctionist** (ನಾ.) (ಗೋರಿಯಿಂದ) ಅಗೆದು ಹೊರ ತೆಗೆಯುವವನು.

Resúscitate ರಿಸಸಿಟೇಟ್ (ಕ್ರಿ.) ಪುನರುಜ್ಜೀವಿಸು, ಪುನರುಜ್ಜೀವಿತ ಮಾಡು; ಮತ್ತೆ ಬದುಕು, ಬದುಕಿಸು; ಮತ್ತೆ ಪ್ರಜ್ಞೆಗೆ—ಬರು, ತರು; ಮೂರ್ಛೆ(ತಿಳಿ(ಸು); ರೂಢಿಗೆ, ಆಚರಣೆಗೆ, —ಮತ್ತೆ ತರು; ಚೇತರಿಸಿಕೊ(ಳ್ಳುವಂತೆ ಮಾಡು); ಪುನಃ ಸ್ಥಾಪನೆಮಾಡು; ಜೀರ್ಣೋದ್ಧಾರಮಾಡು. **Resuscitátion** (ನಾ.); **Resúscitative** (ಗು.); **Resúscitator** (ನಾ.)

Ret ರೆಟ್, **Rate, Rait** ರೇಟ್ (ಕ್ರಿ.) (ಅಗಸ ನಾರನ್ನು) ನೆನೆಯ ಹಾಕಿ ಅಥವಾ ತೇವಕ್ಕೀಡುಮಾಡಿ ಮೃದುಮಾಡು, ಮೆತುಮಾಡು. (ಒಣಹುಲ್ಲು, ಮೊ. ಗಳ ವಿಷಯದಲ್ಲಿ. ಕರ್ಮಣಿ ಅಥವಾ ಅಕ.) ತೇವದಿಂದ ಕೆಟ್ಟುಹೋಗು, ಕೊಳೆ(ತುಹೋಗು)

Retáble ರೀಟೇಬ್'ಲ್ (ನಾ.) ಬಲಿಪೀಠದ ಹಿಂದುಗಡೆ ಮೇಲ್ಭಾಗದಲ್ಲಿ (ಶಿಲುಬೆ, ದೀಪಗಳು, ಮೊ.) ಅಲಂಕಾರ ವಸ್ತುಗಳನ್ನಿಡುವ ಬಡು, ಅಥವಾ ಅಲಂಕಾರ ಫಲಕಗಳನ್ನೊಳಕೊಂಡ ಚೌಕಟ್ಟು.

Rétail ರೀಟೇಲ್ (ನಾ.), **Retáil** ರಿಟೇಲ್ (ಕ್ರಿ.) ಚಿಲ್ಲರೆ ವ್ಯಾಪಾರ, —ಮಾರಾಟ (ಮು., By r. ಚಿಲ್ಲರೆಯಾಗಿ). [(ವಿಶೇಷಣವಾಗಿ) R. trading, dealer. (ಕ್ರಿ. ವಿ. ಸಹ, ಮು., wholesale ಪದದೊಡನೆ ಪ್ರ.) Do you buy wholesale or r.?]. (ಕ್ರಿ.) (ಸರಕು) ಚಿಲ್ಲರೆಯಾಗಿ —ಮಾರು, ಮಾರಾಟವಾಗು (ಮು., *at* or *for* ಉಪ. ದೊಡನೆ, ಬೆಲೆಯನ್ನು ನಮೂದಿಸಿ). ವಿಶದವಾಗಿ, ವಿವರವಾಗಿ, ಸವಿಸ್ತಾರವಾಗಿ, —ಹೇಳು, ವರ್ಣಿಸು. **Retáiler** (ನಾ.)

Retaín ರಿಟೆಯ್ನ್ (ಕ್ರಿ. ಸಕ.) ಅದರ ಸ್ಥಾನದಲ್ಲಿ, ಸ್ಥಳದಲ್ಲಿ, —ಇಡು; ಭದ್ರವಾಗಿ —ಹಿಡಿದುಕೊ, ನಿಲ್ಲಿಸಿಕೊ [Retaining wall (ಮಣ್ಣಿನ ಅಥವಾ ನೀರಿನ ಮೊತ್ತವನ್ನು) ಹಿಡಿದಿಟ್ಟರುವ, ತಡೆದಿಟ್ಟಿರುವ, —ಗೋಡೆ; ಆಸರೆ ಗೋಡೆ. Retaining force (ಸೈನ್ಯ) ಶತ್ರುಗಳ ಒಂದು ತಂಡವನ್ನು (ಯುದ್ಧಕಾರ್ಯ ನಡನಡಂತೆ) ತಡೆಯಲು ನಿಲ್ಲಿಸಿದ ದಂಡು: ತಡೆ ದಂಡು]. (ಮು., ನ್ಯಾಯವಾದಿಯನ್ನು; ಮೊದಲೇ ಹಣ ಕೊಟ್ಟು) ಮುಂಗೊತ್ತು ಮಾಡಿಕೊಂಡಿರು [Retaining fee (ನ್ಯಾಯವಾದಿಗೆ ಕೊಟ್ಟ) ಮುಂಗೊತ್ತಿನ—ತೆರ, ರುಸುಮು]. (ಸ್ವಾಧೀನದಲ್ಲಿ, ಆಚರಣೆಯಲ್ಲಿ) ಇಟ್ಟುಕೊಂಡಿರು; ರದ್ದುಗೊಳಿಸದೆ, ತ್ಯಜಿಸದೆ, ಬದಲಾಯಿಸದೆ, —ಇಟ್ಟಿರು. ಜ್ಞಾಪಕದಲ್ಲಿಟ್ಟುಕೊಂಡಿರು; ಮರೆಯದಿರು. **Retaínable** (ಗು.); **Retaíner** (ನಾ.) (೧) (ನ್ಯಾ. ಶಾ.) ಸ್ವಂತದ್ದಾಗಿ ವಿಹಿತಕ್ರಮದಿಂದ ಇಟ್ಟುಕೊಂಡಿರುವುದು; ಹೀಗೆ ಇಟ್ಟುಕೊಳ್ಳುವುದಕ್ಕೆ ಅಧಿಕಾರ. (ಯಾವುದಾದರೂ ಸೇವೆ ಮಾಡಲು) ಇರಿಸಿಕೊಂಡಿರುವುದು. (ನ್ಯಾಯವಾದಿ, ಮೊ. ರಿಗೆ ಕೊಡುವ) ಮುಂಗೊತ್ತಿನ ತೆರ. (೨) (ಕ್ರಿಯಾರ್ಥಗಳಲ್ಲಿ). (ಮು., ಚರಿತ್ರೆ) (ಶ್ರೀಮಂತನ ಅಥವಾ ದೊಡ್ಡ ಪದವಿಯವನ) ಆಶ್ರಯಿ, ಅನುಚರ, ಭೃತ್ಯ.

Retáliate ರಿಟ್ಯಾಲಿಯೇಟ್ (ಕ್ರಿ.) (ಕೇಡು, ಅಪಮಾನ, ಮೊ. ಕ್ಕೆ ಅ ರೂಪದಲ್ಲಿಯೇ) ಪ್ರತೀಕಾರಮಾಡು; ಸೇಡು, ಮತ್ಸರ, —ತೀರಿಸು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಮುಯ್ಯಿಗೆ) ಮುಯ್ಯಿ ತೀರಿಸು ; ಪ್ರತ್ಯಪಕಾರ ಮಾಡು ; (ವಿರ. ಪ್ರ.) ಪ್ರತ್ಯುಪಕಾರಮಾಡು. (ಅಪಾದಕನಮೇಲೆ) ಪ್ರತ್ಯಾಪಾದನೆ ಹೊರಿಸು (*Upon* ಉಪ. ಜೊಡನೆ). (ಅರ್ಥಶಾಸ್ತ್ರ) ತಮ್ಮ ದೇಶದ ಸಾಮಾನುಗಳ ಮೇಲೆ ಪರದೇಶದವರು ಹಾಕುವ ಆಮದು ಸುಂಕಕ್ಕೆ ಪ್ರತೀಕಾರ ವಾಗಿ ಆ ಪರದೇಶಗಳ ಸಾಮಾನುಗಳಿಗೆ ಆಮದು ಸುಂಕ ಹಾಕು: ಪ್ರತೀಕಾರದ (ಆಮದು)ಸುಂಕ ಹಾಕು. **Retaliátion** (ನಾ.); **Retáliative** (ಗು.); **Retáliatory** (ಗು.)

Retárd ರಿಟಾರ್ಡ್ (ಕ್ರಿ., ನಾ.) ನಿಧಾನ, ತಡ, ಸಾವಕಾಶ—ಮಾಡು, ಮಾಡಿಸು ; ವಿಲಂಬ ಮಾಡು. (ಮು., ಭೌತ ಗೋಚರ ವಿಷಯಗಳು, ಉದಾ., ಭರತಗಳು, ಆಕಾಶಸ್ಥ ಕಾಯಗಳ ಚಲನೆ, ಮೊ. ವು) ಗೊತ್ತಾದ ಅಥವಾ ಲೆಕ್ಕ ಹಾಕಿದ ಕಾಲಕ್ಕಿಂತ ಹಿಂಬೀಳು, ಹಿಂಬೀಳಿಸು; ತಡೆದು, ಹಿಂದಾಗಿ, ಹೊತ್ತು ಮೀರಿ, —ಬರು, ಆಗು. (ನಾ.) ತಡೆದು ಬರುವುದು ; ತಡ ; ಸಾವಕಾಶ (R. of tide *or* high water ಪೂರ್ಣಚಂದ್ರೋದಯಕ್ಕೂ ಅದರ ಫಲವಾಗಿ ಬರಬೇಕಾದ ಪೂರ್ಣ ಭರತಕ್ಕೂ ಇರುವ ಅಂತರ, ವಿರಾಮ ; ಉಬ್ಬರದ ವಿಲಂಬ). **Retardátion** ರೀ— (ನಾ.) ; **Retárdative** ರಿ— (ಗು.) ; **Retárdatory** (ಗು.) ; **Retárdment** (ನಾ.)

Retch ರೆಚ್, ರೀಚ್ (ಕ್ರಿ. ಅಕ., ನಾ.) (ವಾಂತಿ ಬರದಿದ್ದರೂ) ವಾಂತಿ ಮಾಡಲು ಯತ್ನಿಸು; ಓಕರಿಸು. (ನಾ.) ಓಕರಿಕೆ(ಯ ಸದ್ದು)

Reténtion ರಿಟೆನ್‌ಷನ್ (ನಾ.) (Retain ಎಂಬುದರ ಕ್ರಿಯಾರ್ಥಗಳಲ್ಲಿ): ಧಾರಣ. (ಮು., ವೈ. ಶಾ.) ಮೂತ್ರ (ಅಥವಾ ಇತರ ಸ್ರಾವ) ಕಟ್ಟಿಹೋಗುವುದು ; ಮೂತ್ರ(ನಿ)ರೋಧ, ಮೊ. ವು. **Reténtive** (ಗು.) (ಜ್ಞಾಪಕಶಕ್ತಿಯ ವಿಷಯದಲ್ಲಿ) ಸ್ಥಿರವಾದ, ದೃಢವಾದ; [(ವಿರ. ಪ್ರ.) ಜ್ಞಾಪಕಶಕ್ತಿಯಿರುವ ವ್ಯಕ್ತಿಯ ವಿಷಯದಲ್ಲಿ] ಮರೆಯದ, ಧಾರಣಶಕ್ತಿಯುಳ್ಳ. (ವಸ್ತುಗಳ ವಿಷಯದಲ್ಲಿ ; ತೇವ, ಮೊ. ನ್ನು) ಹಿಡಿದಿಟ್ಟುಕೊಳ್ಳುವ, ಧಾರಣಮಾಡುವ ; ಧಾರಕ. (ಶಸ್ತ್ರವೈದ್ಯ ; ಕಟ್ಟು, ಪಟ್ಟಿ, ಮೊ. ಗಳ ವಿಷಯದಲ್ಲಿ) (ಯಾವುದನ್ನಾದರೂ ಅದರ ಸ್ಥಾನದಲ್ಲಿರುವಂತೆ) ತಡೆದಿಡುವ, ಹಿಡಿದಿಡುವ ; ಬಂಧಕ. **Reténtively** (ಕ್ರಿ. ವಿ.) ; **Reténtiveness** (ನಾ.)

Retenue (F) ರಟ(ಟ್)ನೂ (ನಾ.) ಸಂಕೋಚ ; ತಾಳ್ಮೆ ; ಹಿಡಿತ; ಸಂಯಮ.

Rétiary ರೀಷಿಯರಿ, ರೀಷರಿ (ನಾ.) (ಜ್ಯಾಮಿತೀಯ ರೇಖಾಕೃತಿಯಂತೆ) ಬಲೆ ನೇಯುವ ಜೇಡ(ರ ಹುಳು)

Réticence ರೆಟಿಸೆನ್ಸ್ (ನಾ.) ಮಾತಿನಲ್ಲಿ ಸಂಕೋಚ ; ಮಿತಭಾಷಿತ್ವ. ತನ್ನ ತಿಳಿವಳಿಕೆಯಲ್ಲಿರುವುದನ್ನೆಲ್ಲ, ತನ್ನ ಮನೋಭಾವವನ್ನೆಲ್ಲ,— ಹೇಳದಿರುವುದು, ಆಡದಿರುವುದು. (ಕಲೆಯಲ್ಲಿ) ಅತಿಗೆ ಹೋಗದಿರು ವುದು ; ಉತ್ಪ್ರೇಕ್ಷೆಮಾಡದೆ ಮಿತ ಸೂಚನೆ ಮಾಡುವುದು ; ಸೂಕ್ಷ್ಮ ; ಹಿಡಿತ ; ಸಂಯಮ. (ವಿಷಯವನ್ನು, ಸಂಗತಿಯನ್ನು) ಹೇಳದೆ ಇಟ್ಟು ಕೊಂಡಿರುವುದು ; ಮನಸ್ಸು ಬಿಚ್ಚದಿರುವುದು ; ಮೌನ(ದ ಬಗೆ, —ಪ್ರವೃತ್ತಿ). **Réticent** (ಗು.) (*On, upon, about* ಉಪ. ಜೊಡನೆ). **Réticently** (ಕ್ರಿ. ವಿ.)

Réticle ರೆಟಿಕ್‌ಲ್ (ನಾ.) ನಿಷ್ಕೃಷ್ಟ ವೀಕ್ಷಣಕ್ಕೆ ಸಹಾಯವಾಗುವಂತೆ ದೂರದರ್ಶಕದ ವಸ್ತು ಲೆನ್ಸಿನಲ್ಲಿ ಸೇರಿಸಿರುವ ಸೂಕ್ಷ್ಮ ದಾರಗಳ ಅಥವಾ ಗೆರೆಗಳ ಬಲೆ : (ವಸ್ತು ಲೆನ್ಸಿನ) ವೀಕ್ಷಣ ಜಾಲ.

Retículate ರಿಟಿಕ್ಯುಲೇಟ್ (ಕ್ರಿ.), —ಲೆಟ್ (ಗು.) ಜಾಲಬಂಧವಾಗಿ— ಭಾಗಮಾಡು, ಭಾಗವಾಗು, ಅಣಿಮಾಡು, ಅಣಿಯಾಗು ; ಬಲೆ ಬಲೆ ಯಾಗಿ —ಮಾಡು, ಆಗು. (ಗು.) ಜಾಲ ರಚನೆಯ(ನ್ನು ಹೋಲುವ). **Retículately** (ಕ್ರಿ. ವಿ.) ; **Reticulátion** (ನಾ.) ; **Retículato-** (ಸ. ಪೂ. ಪ.). **Réticule** ರೆಟಿ— (ನಾ.) = Reticle. (ಸಾಮಾನು, ಮೊ. ನ್ನಿಟ್ಟುಕೊಳ್ಳಲು ಅನುಕೂಲನುವ) ಹೆಂಗಸರ ಬಲೆಯ ಕೈಚೀಲ. (ಬ. ವಿ.) ದಕ್ಷಿಣ ದಿಕ್ಕಿನಲ್ಲಿಯ ಒಂದು ನಕ್ಷತ್ರ ಪುಂಜ. **Retículum** ರಿಟಿ— (ನಾ. ; ಬ. ವ. -la —ಲ) ಮೆಲುಕು ಹಾಕುವ ಪ್ರಾಣಿಯ ಎರಡನೆಯ ಹೊಟ್ಟೆ ಅಥವಾ ಜಾಲ ಜಠರ. ಜಾಲ ರಚನೆ ; ಜಾಲ ರಚನೆಯ ಪೊರೆ, ಮೊ. ವು. **Retícular** (ಗು.); **Retículose** (ಗು.); **Retículo-** (ಸ. ಪೂ. ಪ.) ; **Rétiform** ರೀಟಿಫಾರ್ಮ್ (ನಾ.) ಬಲೆಯಂಥ ; ಬಲೆಯಾಕಾರದ.

Rétina ರೆಟಿನ (ನಾ. ; ಬ. ವ. -as —ನಸ್, -ae —ನೀ) ಕಣ್ಣು ಗುಡ್ಡೆಯ ಹಿಂಭಾಗದಲ್ಲಿರುವ ಪ್ರಕಾಶ ಗ್ರಾಹಿಯಾದ ಪೊರೆ: ಅಕ್ಷಿಪಟ. **Rétinal** (ಗು.) ; **Retinítis** —ನೈಟಿಸ್ (ನಾ.) (ರೋಗ ನಿದಾನ) ಅಕ್ಷಿಪಟದ ಉರಿಯೂತ.

Rétinue ರೆಟಿನ್ಯೂ (ನಾ.) ಒಬ್ಬ ವ್ಯಕ್ತಿಯೊಡನೆ ಸೇವೆಗಾಗಿ ಇರುವ ಜನ; ಪರಿವಾರ.

Retíre ರಿಟೈ(ಅ)ರ್ (ಕ್ರಿ., ನಾ.) ಹಿಂದಕ್ಕೆ ಹೋಗು ; ಹೊರಟುಹೋಗು ; ಹಿಂಜರಿ ; ಹಿಮ್ಮೆಟ್ಟು ; ಏಕಾಂತವಾಸಕ್ಕೆ, ವಿವಿಕ್ತ ಸ್ಥಳಕ್ಕೆ, ಮರೆಯ ಸ್ಥಳಕ್ಕೆ, ದೂರ ದೂರಕ್ಕೆ, ಮಲಗುವುದಕ್ಕೆ, ವಿಶ್ರಾಂತಿ ತೆಗೆದುಕೊಳ್ಳಲು, —ಹೋಗು [R. from the world ವಿರಕ್ತನಾಗು ; ಸಂಸಾರವನ್ನು ತ್ಯಜಿಸು. R. into oneself ಮೌನವಾಗಿರು, ನಿಸ್ಸಂಗಿಯಾಗಿರು ; ತನ್ನಷ್ಟಕ್ಕೆ ತಾನಿರು. Retired in good order (*From* position, *to* place, *before* enemy). Retiring-room ವಿಶ್ರಾಂತಿಯ ಕೋಣೆ (ಮು., ಕೈಕಾಲು, ಮುಖ, ಮೊ. ನ್ನು ತೊಳೆದುಕೊಳ್ಳುವ ಕೊಠಡಿಯುಳ್ಳದ್ದು)]. (ಭೂ. ಕೃ.) ಸಮಾಜದಿಂದ ಅಥವಾ ಜನರ ದೃಷ್ಟಿಯಿಂದ ಮರೆಯಾದ ; ವಿವಿಕ್ತವಾದ ; ಏಕಾಂತವಾದ (A retired life. In a retired valley) [**Retíredness** (ನಾ.)]. (ಅಧಿಕಾರ, ಉದ್ಯೋಗ, ಕೆಲಸ, ಉಮೇದುವಾರಿಕೆ—ಇವುಗಳಿಂದ) ನಿವೃತ್ತಿ ಹೊಂದು, ವಿರಮಿಸು ; ವಿರಾಮ, ವಿಶ್ರಾಂತಿ, —ಪಡೆ (*From* ಉಪ. ಜೊಡನೆ) ; (ಅಧಿಕಾರಿ ಯನ್ನು, ಕೆಲಸಗಾರನನ್ನು) ನಿವೃತ್ತಿ(ಯಾಗುವಂತೆ) ಮಾಡು ; ನಿವೃತ್ತಿ ಗೊಳಿಸು. (ಕ್ರಿಕೆಟ್) ತಾನಾಗಿ ಸರದಿ ಆಟವನ್ನು ಮುಕ್ತಾಯಮಾಡು, ತ್ಯಜಿಸು (Batsman retired hurt. Was compulsorily retired as incompetent. Retiring pension ವಿಶ್ರಾಂತಿ ವೇತನ). (ಭೂ. ಕೃ.) (ಕೆಲಸದಿಂದ) ವಿಶ್ರಾಂತಿಪಡೆದ, ನಿವೃತ್ತನಾದ (Retired pay ವಿಶ್ರಾಂತಿ ವೇತನ. Retired list ನಿವೃತ್ತಾಧಿಕಾರಿಗಳ ಪಟ್ಟಿ). (ಸೈನ್ಯ) ಹಿಂದಕ್ಕೆ ಬರುವಂತೆ, ಹಿಮ್ಮೆಟ್ಟುವಂತೆ, —(ಸೇನೆಗೆ) ಆಜ್ಞೆಮಾಡು. (ಆಯವ್ಯಯ ಶಾಸ್ತ್ರ) (ಹುಂಡಿ, ಹಣ ವಾಗ್ದಾನಪತ್ರ— ಇವನ್ನು) ಚಲಾವಣೆಯಿಂದ ಹಿಂತೆಗೆದುಕೊ. (ನಾ.) (ಸೈನ್ಯ) ಹಿಮ್ಮೆಟ್ಟ ಬೇಕೆಂಬ —ಸಂಕೇತ, ಸೂಚನೆ (ಸಾ., Sound the r. ಹಿಮ್ಮೆಟ್ಟು ಸೂಚನೆ ಧ್ವನಿಮಾಡು). **Retírement** (ನಾ.) (ಕ್ರಿಯಾರ್ಥಗಳಲ್ಲಿ). ಏಕಾಂತ ವಾಸ ; —ಸ್ಥಳ ; ವಿವಿಕ್ತತೆ. **Retíring** (ಗು.); **Retíringly** (ಕ್ರಿ. ವಿ.) ; **Retíringness** (ನಾ.)

Retórt[1] ರಿಟಾರ್ಟ್ (ಕ್ರಿ., ನಾ.) (ತೇಜೋವಧೆ, ಅಪಮಾನ, ಆಕ್ರಮಣ— ಇವಕ್ಕೆ ಆ ರೂಪದಲ್ಲಿಯೇ) ಪ್ರತೀಕಾರ ಮಾಡು ; ಮಾತು—ಮರಳಿಸು, ಹಿಮ್ಮಗುಚು ; (ಮುಯ್ಯಿಗೆ) ಮುಯ್ಯಿ ತೀರಿಸು. (ಚೇಷ್ಟೆ, ಆಪಾದನೆ, ವ್ಯಂಗ್ಯ, ಅಪಹಾಸ್ಯ, ಮೊ. ನ್ನು) ಮಾಡಿದವನ ಮೇಲೆಯೇ ಹಿಂದಿರು ಗಿಸು ; ಪ್ರತಿಕರಿಸು ; ಮುಯ್ಯಾಡು (*On* or *upon* ಉಪ. ಜೊಡನೆ). (ಒಬ್ಬನ ವಾದವನ್ನು ಅವನಿಗೇ) ಪ್ರತಿಕೂಲವಾಗಿ ಹಿಂದಿರುಗಿಸು (*Against* ಉಪ. ಜೊಡನೆ ಸಹ). ಚಮತ್ಕಾರದ ಮಾರ್ನುಡಿ ಯಾಗಿ, ಪ್ರತ್ಯಾಪಾದನೆಯಾಗಿ ಅಥವಾ ಪ್ರತಿವಾದವಾಗಿ ಹೇಳು. (ಭೂ. ಕೃ.) ಹಿಮ್ಮಡಿಚಿದ, ಹಿಂತಿರುವಿನ, ಹಿಂತಿರಿಚಿನ. (ನಾ.) ಚುಚ್ಚು ಉತ್ತರ ; ಮುಯ್ಯಿನುಡಿ ; ಎದುರುತ್ತರ. (ಆಪಾದನೆಯನ್ನು, ವಾದವನ್ನು) ತಂದವನ ಮೇಲೆಯೇ ತಿರುಗಿಸುವುದು ; (ಮುಯ್ಯಿಗೆ) ಮುಯ್ಯಿ. **Retórtion** (ನಾ.) ಹಿಂದಕ್ಕೆ ಬಗ್ಗುವುದು, ಹಿಮ್ಮುರಿತ (ರೂಪ. ಸಹ). (ಅಂತರರಾಷ್ಟ್ರೀಯ ನ್ಯಾ. ಶಾ.) ಒಂದು ರಾಜ್ಯ ಬೇರೊಂದು ರಾಜ್ಯದ ಪ್ರಜೆಗಳ ಮೇಲೆ ತೆಗೆದುಕೊಳ್ಳುವ ಮುಯ್ಯಿ ; ರಾಷ್ಟ್ರ ಪ್ರತೀಕಾರ.

Retórt[2] ರಿಟಾರ್ಟ್ (ನಾ., ಕ್ರಿ. ಸಕ.) ದ್ರವಗಳನ್ನು ಬಟ್ಟಿಯಿಳಿಸುವ, ಕೆಳಬಾಗಿನ ಉದ್ದನೆಯ ಕತ್ತುಳ್ಳ (ಸಾ., ಗಾಜಿನ) ಪಾತ್ರೆ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಟ್ಟಿ ಪಾತ್ರೆ ; ಪಾದರಸವನ್ನು ಶುದ್ಧಿ ಮಾಡುವುದಕ್ಕೂ ಅನಿಲದ ಮತ್ತು ಉಕ್ಕಿನ ತಯಾರಿಕೆಯಲ್ಲೂ ಉಪಯೋಗಿಸುವ, ಹಲವು ಪದಾರ್ಥಗಳ, ಹಲವು ಆಕಾರಗಳ ಪಾತ್ರೆ. (ಕ್ರಿ.) (ಪಾದರಸವನ್ನು) ಬಟ್ಟಿ ಪಾತ್ರೆಯಲ್ಲಿ ಕಾಸಿ ಶುದ್ಧಿಮಾಡು.

Retráce ರಿಟ್ರೇಸ್ (ಕ್ರಿ. ಸಕ.) ಮೂಲಸ್ಥಾನಕ್ಕೆ, ಪ್ರಾರಂಭಸ್ಥಾನಕ್ಕೆ, —ಹಿಂದಿರುಗಿಸು, ಹಿಂದಿರುಗು (R. one's steps *or* way. To r. one's family line). ಮತ್ತೆ ಮೊದಲಿಂದ, ಮೂಲದವರೆಗೆ, —ಪರೀಕ್ಷಿಸು, ಪರಾಮರ್ಶಿಸು. ಮೊದಲಿಂದ ಮತ್ತೆ ನೆನಸಿಕೊ, ಜ್ಞಾಪಿಸಿಕೊ. (ಅನೇಕ ವೇಳೆ ರೂಪ. ; ಕಾರ್ಯಗಳ, ಪ್ರಯತ್ನಗಳ, —ವಿಷಯದಲ್ಲಿ) ಹಿಂದಕ್ಕೆ ತೆಗೆದುಕೊ, ಬಿಟ್ಟುಬಿಡು.

Retráct ರಿಟ್ರ್ಯಾಕ್ಟ್ (ಕ್ರಿ.) ೧. (ಮು., ತನ್ನ ಶರೀರ ಭಾಗವನ್ನು) ಹಿಂದಕ್ಕೆಳೆದುಕೊ, ಒಳಕ್ಕೆಳೆದುಕೊ, ಮುದುರಿಕೊ ; (ಅಂಥ ಭಾಗ, ಮೊ. ಗಳ ವಿಷಯದಲ್ಲಿ) ಸಂಕೋಚವಾಗು, ಮುದುರಿಕೊ ; ಒಳ ಸೆಳೆದುಕೊ(ಳ್ಳಲು ಸಾಧ್ಯವಾಗಿರು) (Cat's claws r. *or* can be retracted) [**Retráctable**[1] (ಗು.) ; **Retráctile** (ಗು.) ; **Retractílity** (ನಾ.) ; **Retráctive** (ಗು.) ; **Retráction**[1] (ನಾ.) ; **Retráctor** (ನಾ.) ಪ್ರತಿಕರ್ಷಕ ಸ್ನಾಯು]. ೨. (ಹೇಳಿಕೆ, ವಾಗ್ದಾನ, ಅಭಿಪ್ರಾಯ, ಮೊ. ನ್ನು) ಹಿಂದೆಗೆದುಕೊ, ವಾಪಸು ತೆಗೆದುಕೊ ; (—ದಂತೆ ನಡೆಯಲು) ನಿರಾಕರಿಸು ; ಸುಳ್ಳೆಂದು, ತಪ್ಪೆಂದು, —ಒಪ್ಪಿಕೊ ; ಸ್ಪಷ್ಟವಾಗಿ ತ್ಯಜಿಸು ; ಬಿಟ್ಟುಬಿಡು ; ಹಿಂಕಾರಮಾಡು. **Retráctable**[2] (ಗು.); **Retractátion** ರೀ— (ನಾ.) ; **Retráction**[2] ರಿ— (ನಾ.)

Rétral ರೀಟ್ರಲ್ (ಗು.) (ಪ್ರಕೃತಿ ಚರಿತ್ರೆ, ಮೊ.) ಬಾಲದ ಕಡೆಯ ; ಹಿಂಭಾಗದ(ಲ್ಲಿರುವ) ; ಹಿಂದುಗಡೆಯ(ಲ್ಲಿರುವ)

Re-treád ರೀಟ್ರೆಡ್ (ಕ್ರಿ. ಸಕ.) ಚಕ್ರಕ್ಕೆ ಹೊಸ ಹೊರಪಟ್ಟೆ ಹಾಕು.

Retreát ರಿಟ್ರೀಟ್ (ಕ್ರಿ., ನಾ.) (ಮು., ಸೈನ್ಯ, ಮೊ. ಗಳ ವಿಷಯದಲ್ಲಿ) ಹಿಂದಕ್ಕೆ ಹೋಗು ; ಹಿಮ್ಮೆಟ್ಟು ; ಇದ್ದ ಸ್ಥಾನವನ್ನು ಬಿಟ್ಟುಬಿಡು ; ಹಿಂಜರಿ. (ಮು., ಚದುರಂಗದಲ್ಲಿ) (ಮುಂದಿನ ಸ್ಥಾನದಿಂದ ಅಥವಾ ಅಪಾಯದ ಸ್ಥಾನದಿಂದ, ಕಾಯನ್ನು) ಹಿಂದಕ್ಕಿಡು, ಹಿಂದಕ್ಕೆ ಸರಿಸು. ಒಳ ಸರಿ (A retreating chin, forehead). (ನಾ.) (ಸೈನ್ಯ) ಹಿಮ್ಮೆಟ್ಟುವುದು ; —ವುದಕ್ಕೆ ಸಂಕೇತ, ಸೂಚನೆ [Sound the *or* a r. —ಧ್ವನಿಮಾಡು. Beat a r. ಉದ್ಯಮವನ್ನು ಕೈಬಿಡು, ತ್ಯಜಿಸು (Beat ಸಹ ನೋಡಿ). Make good one's r. ಸುರಕ್ಷಿತವಾಗಿ ಹಿಂದಕ್ಕೆ ಹೊರಟುಹೋಗು. Intercept r. of ಹಿಮ್ಮೆಟ್ಟದಂತೆ ತಡೆಗಟ್ಟು. Are in full r.]. (ಸೈನ್ಯ) ಸೂರ್ಯಾಸ್ತದ ತುತೂರಿ ಕರೆ. ಏಕಾಂತ ಸ್ಥಾನಕ್ಕೆ, ಸುರಕ್ಷಿತ ಸ್ಥಾನಕ್ಕೆ, —ಹೋಗಿ ಸೇರಿಕೊಳ್ಳುವುದು. ಏಕಾಂತ(ಸ್ಥಳ) ; ಮೂಲೆಗಾಡು ; ವಿವಿಕ್ತತೆ ; ನಿಸ್ಸಂಗತ್ವ. (ಮತ) ತಪಸ್ಸಾಧನೆಗಾಗಿ ತಾತ್ಕಾಲಿಕವಾದ ಏಕಾಂತವಾಸ (ಮಾಡುವುದು). (ಹಿಂಡ ಕುಡುಕರು, ಹುಚ್ಚರು ಅಥವಾ ವಿಶ್ರಾಂತಿ ವೇತನದಾರರು —ಇವರ) ಆಶ್ರಯಸ್ಥಾನ, ರಕ್ಷಣಾಲಯ ; ದೇವಡಿ. ಅವಿತುಕೊಳ್ಳಲು ಸ್ಥಳ ; ರಕ್ಷಣಸ್ಥಾನ ; ಗೂಡು.

Retrénch ರಿಟ್ರೆನ್ಸ್, ರಿಟ್ರೆಂಚ್ (ಕ್ರಿ.) (ವೆಚ್ಚಗಳನ್ನು, ವೆಚ್ಚದ ಬಾಬುಗಳನ್ನು) ಕಡಮೆಮಾಡು, ಖೋತಾಮಾಡು, ತಗ್ಗಿಸು; ಮಿತಮಾಡು. ತೆಗೆದುಹಾಕು, ಕಳೆದುಹಾಕು (Retrenched a year from the established period). (ಸಾಹಿತ್ಯ ಕೃತಿಯನ್ನು ಅಥವಾ ಅದರಲ್ಲಿಯ ಪ್ರಕರಣಗಳನ್ನು) ಅಲ್ಲಲ್ಲೆ ತೆಗೆದುಹಾಕಿ ಕಡಮೆಮಾಡು, ಅಡಕಮಾಡು ; ಕತ್ತರಿಸು. (ಕೋಟೆ ಕೊತ್ತಳ ; ಸಾ., ಒಳ ಕಂದಕದ ಸಾಲುಗಳನ್ನೊಳಕೊಂಡ) ಒಳ ರಕ್ಷಣೆಯ ಸಾಲನ್ನು ಒದಗಿಸು. **Retrénchment** (ನಾ.)

Retribútion ರಿಟ್ರಿಬ್ಯೂಷನ್ (ನಾ.) [ಕೇಡಿಗೆ, (ವಿರ. ಪ್ರ.) ಉಪಕಾರಕ್ಕೆ] ಪ್ರತಿಫಲ ; ಪ್ರತೀಕಾರ ; ಮುಯ್ಯಿಗೆ ಮುಯ್ಯಿ ; ಮರುಮುಯ್ಯಿ ; ಸೇಡು ತೀರ್ಪು. ಪಾಪ ಫಲ ; ಶಿಕ್ಷೆ (Day of r. ದೇವರು ಶಿಕ್ಷೆಯನ್ನು ವಿಧಿಸುವ ಅಂತಿಮ ಮಹಾ ವಿಚಾರಣೆಯ ದಿನ). **Retríbutive** ರಿಟ್ರಿಬ್ಯುಟಿವ್ (ಗು.) ; **Retríbutively** (ಕ್ರಿ. ವಿ.)

Retriéve ರಿಟ್ರೀವ್ (ಕ್ರಿ., ನಾ.) (ನಾಯಿಗಳ, ಮು., ವಿಶೇಷ ತಳಿಯವುಗಳ ವಿಷಯದಲ್ಲಿ : ಕೊಂದ ಅಥವಾ ಗಾಯಗೊಂಡ ಹಕ್ಕಿ, ಮೊ. ನ್ನು) ಹುಡುಕಿ ತೆಗೆದುಕೊಂಡು ಬರು [**Retriéver** (ನಾ.) —ಬರುವ ನಾಯಿ]. ಶೋಧನೆಯಿಂದ ಅಥವಾ ಜ್ಞಾಪಕದ ಪ್ರಯತ್ನದಿಂದ ಮತ್ತೆ ಪಡೆ ; ಅರಿವಿಗೆ ತಂದುಕೊ ; ತಿರುಗಿ ಜ್ಞಾಪಕಮಾಡಿಕೊ ; ಪುನಃ ಸ್ವಾಧೀನ ಪಡೆ ; ದುಃಸ್ಥಿತಿ, ಮೊ. ರಿಂದ ಉದ್ಧರಿಸು, ರಕ್ಷಿಸು (*From* ಉಪ. ದೊಡನೆ) ; (ಮು., ಆಸ್ತಿ, ಸಂಪತ್ತು, ಮೊ. ನ್ನು) ಪುನಸ್ಸಂಪಾದನೆ ಮಾಡು, ಪುನಃ ಉಚ್ಛ್ರಾಯ ಸ್ಥಿತಿಗೆ ತರು, ಉದ್ಧಾರಮಾಡು ; (ನಷ್ಟ, ಅನರ್ಥ, ತಪ್ಪು—ಇವನ್ನು) ಪರಿಹರಿಸು, ಸರಿಪಡಿಸು, ನೇರ್ಪು ಮಾಡು. (ನಾ.) ಪುನಸ್ಸಂಪಾದನೆ(ಯ ಸಂಭವ) (Beyond, past, r.). **Retriévable** (ಗು.) ; **Retriéval** (ನಾ.)

Retro- ರೀಟ್ರೊ—, ರೆಟ್ರೊ— (ಪೂ. ಪ್ರ.) (1) 'ಹಿಂದಕ್ಕೆ, ಮತ್ತೆ, ತಿರುಗಿ, ಪ್ರತಿಯಾಗಿ' ಎಂಬ ಅರ್ಥಗಳಲ್ಲಿ (Retroflex, Retroject). (2) ಮು., ವೈಜ್ಞಾನಿಕ ಪದಗಳಲ್ಲಿ, ಅದರಲ್ಲಿಯೂ ವಿಶೇಷವಾಗಿ ಅಂ. ರ. ಶಾ. ದ ಪದಗಳಲ್ಲಿ : 'ಹಿಂದಣ, ಹಿಂಭಾಗದ' ಎಂಬ ಅರ್ಥಗಳಲ್ಲಿ [**Retrosternal** (ಗು.) ಎದೆಯೆಲುಬಿನ —ಹಿಂದಣ, ಹಿಂಭಾಗದ]

Retroáct ರೀಟ್ರೋಆ್ಯಕ್ಟ್ (ಕ್ರಿ. ಅಕ.) ಪ್ರತಿವರ್ತಿಸು ; ಹಿಂದಿಕ್ಕಿನಲ್ಲಿ, ಹಿಮ್ಮೊಗವಾಗಿ, —ಕಾರ್ಯನಡಸು ; ಹಿಂಚಲಿಸು ; ಹಿಂದಣಿಂದ ಅನ್ವಯಿಸು. **Retroáction** (ನಾ.) ; **Retroáctive** (ಗು.) ; **Retroáctively** (ಕ್ರಿ. ವಿ.) ; **Retroactívity** (ನಾ.)

Rétrocede[1] ರೀಟ್ರೊಸೀಡ್ (ಕ್ರಿ. ಅಕ.) ಹಿಂದಕ್ಕೆ —ಹೋಗು, ಚಲಿಸು ; ಹಿಂಜರಿ. (ಸಂಧಿವಾತದ ವಿಷಯದಲ್ಲಿ) ಒಳಕ್ಕೆ ವ್ಯಾಪಿಸು. **Retrocédence** (ನಾ.) ; **Retrocédent** (ಗು.) ; **Retrocéssion**[1] (ನಾ.), **Retrocéssive**[1] (ಗು.) (ಕ್ರಿಯಾರ್ಥಗಳಲ್ಲಿ)

Rétrocede[2] ರೀಟ್ರೊಸೀಡ್ (ಕ್ರಿ. ಸಕ.) (ಪ್ರಾಂತವನ್ನು, ಪ್ರದೇಶವನ್ನು, ಅದು ಮೊದಲು ಸೇರಿದ್ದ ರಾಜ್ಯಕ್ಕೆ) ಮತ್ತೆ ವಹಿಸಿಬಿಡು, ಮತ್ತೆ ಸ್ವಾಧೀನ ಪಡಿಸು. **Retrocéssion**[2] (ನಾ.), **Retrocéssive**[2] (ಗು.) (ಕ್ರಿಯಾರ್ಥಗಳಲ್ಲಿ)

Rétrochoir ರೀಟ್ರೊಕ್ವೈ(ಅ)ರ್ (ನಾ.) (ಕ್ರೈಸ್ತ ಆರಾಧನ ಮಂದಿರದಲ್ಲಿ) ಪ್ರಧಾನ ಬಲಿಪೀಠದ ಹಿಂದಿರುವ ಭಾಗ.

Rétroflected ರೀ(ರೆ)ಟ್ರೊಫ್ಲೆಕ್ಟೆಡ್, **-flex** —ಫ್ಲೆಕ್ಸ್, **-flexed** —ಫ್ಲೆಕ್‌ಸ್ಟ್ (ಗು.)(ಅಂ. ರ. ಶಾ., ರೋಗ ನಿದಾನ, ನ. ವಿ., ಮೊ.) ಹಿಂದಕ್ಕೆ ತಿರುಗಿದ ; ಹಿಮ್ಮಡಿಚಿದ. **Retrofléxion** —ಫ್ಲೆಕ್‌ಷನ್ (ನಾ.)

Rétrograde ರೆಟ್ರೊಗ್ರೇಡ್ (ಕ್ರಿ. ಅಕ., ಗು., ನಾ.) (ಕ್ರಿ.) (ಖ. ವಿ.) ವಕ್ರಗತಿ, ಹಿಂಚಲನೆ, —ತೋರು ; ವಕ್ರವಾಗು ; ವಕ್ರಿಸು. ಹಿಂಜರಿ ; ಹಿಮ್ಮೆಟ್ಟು ; ಹಿಂದಕ್ಕೆ ಬರು ; ಇಳಿಮುಖವಾಗು ; ತಿರೋಗತಿ ಹೊಂದು ; ಪೂರ್ವಸ್ಥಿತಿಗೆ, ಕೀಳುಗತಿಗೆ, —ಹಿಂದಿರುಗು ; ತಲೆಕೆಳಗಾಗು ; ವ್ಯತ್ಯಸ್ತವಾಗು. (ಗು.) (ಕ್ರಿಯಾರ್ಥಗಳಲ್ಲಿ) (R. motion. In r. order). (ನಾ.) (ವಿರ. ಪ್ರ.) ಕುಲಗೆಟ್ಟವನು ; ಭ್ರಷ್ಟ. ಹಿಂದಕ್ಕೆ ಹೋಗುವ, ವಕ್ರಗತಿಯ, —ಪ್ರವೃತ್ತಿ. **Rétrogradely** (ಕ್ರಿ. ವಿ.) ; **Retrogradátion** ರೀ(ರೆ)ಟ್ರೊಗ್ರಡೇಷನ್ (ನಾ.) [(ಕ್ರಿಯಾರ್ಥಗಳಲ್ಲಿ) ; =(ಈಗ ಸಾ.) Retrogression]. (ಖ. ವಿ.) ರಾಶಿ ಚಕ್ರದಲ್ಲಿ ಗ್ರಹ ಹಿಂದು ಹಿಂದಕ್ಕೆ ಹೋಗುತ್ತಿರುವಂತೆ ಕಾಣುವ ಚಲನೆ; ವಕ್ರಗತಿ(ಯಲ್ಲಿ ಹೋಗುವಂತೆ ಕಾಣುವುದು) ; ಆಕಾಶಸ್ಥ ಕಾಯ ಪೂರ್ವದಿಂದ ಪಶ್ಚಿಮಕ್ಕೆ ಹೋಗುವ ಚಲನೆ ; ಕ್ರಾಂತಿ ವೃತ್ತದಲ್ಲಿ ಚಂದ್ರ ಪಥದ ಸಂಪಾತಗಳ ಹಿಂಚಲನೆ.

Rétrogress ರೀ(ರೆ)ಟ್ರೊಗ್ರೆಸ್ (ಕ್ರಿ. ಅಕ.) ಹಿಂದಕ್ಕೆ ಚಲಿಸು ; ಅಪಕರ್ಷ ಹೊಂದು ; ತಿರೋಗತಿ ಹೊಂದು ; ಕೀಳು ಗತಿಗೆ ಇಳಿ ; ಇಳಿಗುಂದು ; ಇಳಿಮುಖವಾಗು. **Retrogréssive** (ಗು.) ; **Retrogréssively** (ಕ್ರಿ. ವಿ.) ; **Retrogréssion** —ಗ್ರೆಷನ್ (ನಾ.) (ಕ್ರಿಯಾರ್ಥಗಳಲ್ಲಿ); (ಖ. ವಿ.) =Retrogradation.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rétroject ರೆ(ರೀ)ಟ್ರೊಜೆಕ್ಟ್ (ಕ್ರಿ. ಸಕ.) ಹಿಂದಕ್ಕೆಸೆ, ಹಿಂದಕ್ಕೆ ಚಿಮ್ಮು (ಮು., ವಾಚ್ಯಾರ್ಥಗಳಲ್ಲಿ Project ಪದಕ್ಕೆ ವಿರುದ್ಧ ಪ್ರ.)

Retropúlsion ರೀ(ರೆ)ಟ್ರೊಪಲ್ಷನ್ (ನಾ.) (ರೋಗ ನಿದಾನ) ಬಾಹ್ಯ ರೋಗವು ಒಳ ಭಾಗಕ್ಕೆ ವ್ಯಾಪಿಸುವುದು.

Retrórse ರಿಟ್ರಾರ್ಸ್ (ಗು.) (ಪ್ರಕೃತಿ ಚರಿತ್ರೆ) ಹಿಂದಕ್ಕೆ ಬಾಗಿದ. **Retrórsely** (ಕ್ರಿ. ವಿ.)

Rétrospect ರೆ(ರಿ)ಟ್ರೊಸ್‌ಪೆಕ್ಟ್ (ನಾ.) ಪೂರ್ವ ನಿದರ್ಶನ, ಅಧಿಕಾರ, ಆಧಾರ ಅಥವಾ ಪೂರ್ವಸ್ಥಿತಿ—ಇವುಗಳನ್ನು ಕುರಿತ ದೃಷ್ಟಿ, ಗಮನ; ಪೂರ್ವ ದೃಷ್ಟಿ (*To* ಉಪ. ದೊಡನೆ). (ವಿರ. ಪ್ರ.) ಹಿಂದಕ್ಕೆ ಅನ್ವಯಿಸುವ ಶಕ್ತಿ; ಹಿಂದಕ್ಕೆ ಅನ್ವಯ(ವಾಗುವುದು); ಪೂರ್ವಾನ್ವಯ. (ವಿರ. ಪ್ರ.) ಹಿನ್ನೋಟ; ಸಿಂಹಾವಲೋಕನ; ಹಿನ್ನೆನಪು. **Retrospéction** (ನಾ.); **Retrospéctive** (ಗು.) ಹಿನ್ನೆನಪುಗಳ; ಗತ ಕಾಲದ ದೃಷ್ಟಿಯುಳ್ಳ. (ಶಾಸನ, ಕಾನೂನು, ಮೊ. ಗಳ ವಿಷಯದಲ್ಲಿ) ಅದು ಜಾರಿಗೆ ಬಂದುದರ ಹಿಂದಿನ ಕಾಲಕ್ಕೂ ಅನ್ವಯಿಸುವ; ಹಿಂದೆಮಾಡಿದ ಕಾರ್ಯಗಳಿಗೆ (ಸಹ) ಅನುಮತಿ, ಶಿಕ್ಷೆ, ಮೊ. ನ್ನು ಕೊಡುವ; ಪೂರ್ವಾನ್ವಯವುಳ್ಳ; ಪೂರ್ವವ್ಯಾಪ್ತಿಯುಳ್ಳ. (ದೃಶ್ಯದ ವಿಷಯದಲ್ಲಿ) ಹಿಂಭಾಗದಲ್ಲಿರುವ, ಹಿಂದುಗಡೆಯ. **Retrospéctively** (ಕ್ರಿ. ವಿ.)

Retroússe (F) ರಟ್ರೂಸೇ (ಗು.) (ಮೂಗಿನ ವಿಷಯದಲ್ಲಿ: ತುದಿ) ಮೇಲಕ್ಕೆ ಬಾಗಿದ.

Rétrovert, Retrovért ರೀ(ರೆ)ಟ್ರೊವರ್ಟ್ (ಕ್ರಿ. ಸಕ.) (ಮು., ರೋಗ ನಿದಾನ; ಗರ್ಭಕೋಶದ ವಿಷಯದಲ್ಲಿ) ಹಿಂದಕ್ಕೆ ತಿರುಗು; ವ್ಯತ್ಯಸ್ತವಾಗು (ಮು., ಭೂ. ಕೃ. ನಲ್ಲಿ). **Retrovérsion** (ನಾ.)

Réttery ರೆಟರಿ (ನಾ.) ಅಗಸೆ ನಾರನ್ನು ಕೊಳೆಯಹಾಕುವ, ನೆನೆಯ ಹಾಕುವ, —ಸ್ಥಳ.

Retúrn ರಿಟರ್ನ್ (ಕ್ರಿ., ನಾ.) ಹಿಂದಕ್ಕೆ ಬರು, —ಹೋಗು; ಹಿಂದಿರುಗು; ತಿರುಗಿಬರು; ಮರಳು; ಮಗುಳು (ಗ್ರಾಂ.); ಪ್ರತಿಫಲವಾಗಿ, ಪ್ರತಿಯಾಗಿ, —ತರು, ಒಯ್ಯಿ, ಕೊಡು, ಕಳುಹಿಸು, ಸಲ್ಲಿಸು; ಹಿಂದಿರುಗಿಸು [Investments r. a profit. R. sword to scabbard, *or* (ಸೈನ್ಯ) r. swords ಕತ್ತಿಯನ್ನು ಒರೆಗೆ ಹಾಕಿ. R. ball (ಟೆನಿಸ್, ಮೊ. ಆಟಗಳಲ್ಲಿ) ಬಂದ ಚೆಂಡನ್ನು ಹೊಡೆದು ಹಿಂದಿರುಗಿಸು. R. thanks (ಮು., ಊಟದ ಕಾಲದ ದೇವರ ಪ್ರಾರ್ಥನೆಯಲ್ಲಿ ಅಥವಾ ಸ್ವಸ್ತಿ ಕೋರಿಕೆಗೆ ಉತ್ತರವಾಗಿ) ವಂದನೆ ಹೇಳು. R. person's love, greeting ಪ್ರತಿಯಾಗಿ ಪ್ರೀತಿಸು, ಪ್ರತಿವಂದನೆ ಮಾಡು. Returned empties (ಒಳಗಿದ್ದ ಸಾಮಾನನ್ನು ತೆಗೆದುಕೊಂಡಾದ ಮೇಲೆ) ಹಿಂದಕ್ಕೆ ಕಳುಹಿಸಿದ ಖಾಲಿ ಪೆಟ್ಟಿಗೆ, ಮೊ. ವು. R. clubs, *or* partner's lead (ಇಸ್ಪೀಟಾಟ) ಕಳಾವರಿಗೆ ಕಳಾವರು ಹಾಕು, ರಂಗಿಗೆ ರಂಗು ಹಾಕು]. ಜವಾಬು ಕೊಡು, ಪ್ರತಿಯಾಗಿ ಹೇಳು; (ಮು., ಲಿಖಿತ ರೂಪದ ಆಜ್ಞೆಗೆ ಅಥವಾ ವಿಧಿಬದ್ಧವಾದ ಕೋರಿಕೆಗೆ ಉತ್ತರವಾಗಿ) ಅಧಿಕಾರ ಪೂರ್ವಕವಾಗಿ—ವರದಿಮಾಡು, ನಮೂದಿಸು, ನಿರೂಪಿಸು (Liabilities were returned at £ 5,000. Were all returned guilty, unfit for work). (ಚುನಾವಣೆಯ ಕ್ಷೇತ್ರದ ವಿಷಯದಲ್ಲಿ) ಪ್ರತಿನಿಧಿಯನ್ನಾಗಿ ಆಯ್ಕೆ ಮಾಡು (Returning Officer ಚುನಾವಣೆ ನಡಸಿ ಚುನಾವಣೆಯ ಫಲಿತಾಂಶವನ್ನು ತಿಳಿಸುವ ಅಧಿಕಾರಿ: ಚುನಾವಣೆಯ ಪ್ರಕಟನಾಧಿಕಾರಿ). (ನಾ.) ಹಿಂದಿರುಗುವುದು, ಪುನರಾಗಮನ [R. of post (Post² ನೋಡಿ). R. ticket or R. ಹೋಗ ಬರ ಟಿಕೀಟು (Took a first class r. to Madras). Many happy returns of the day or returns (ಹುಟ್ಟಿದ ಹಬ್ಬದ ಅಥವಾ ಉತ್ಸವ ದಿನದ ಹರಕೆ) ಇಂತಹ ಹಲವು ಹಬ್ಬಗಳು ಮರಳಿ ಬರಲಿ]. (ವಾ. ಶಾ.) ಕಟ್ಟಡದ ಮುಮ್ಮುಖದಿಂದ ಹಿಂದಕ್ಕೆ (ಸಮಕೋನವಾಗಿ) ಸರಿದಿರುವ ಭಾಗ; ಸಮಕೋನದ ನೂಕು (ಉದಾ., ಮನೆಯ ಪಕ್ಕ ಭಾಗ ಅಥವಾ ಕಿಟಕಿಯ ತೆರಪು) (R. angle, side, wall, etc.). (ಅನೇಕ ವೇಳೆ ಬ. ವ. ದಲ್ಲಿ) (ಒಂದು ಉದ್ಯಮದ) ಹುಟ್ಟುವಳಿ, ಲಾಭ [The returns were large. Small profits & quick returns (ಹೆಚ್ಚುಗಟ್ಟಳೆಯ ವ್ಯಾಪಾರದ ಭರವಸೆಯುಳ್ಳ ಅಗ್ಗದಂಗಡಿಯವರು, ಮೊ. ರ ಆದರ್ಶ ಸೂತ್ರ): ಅಲ್ಪ ಲಾಭ, ಕ್ಷಿಪ್ರ ವ್ಯಾಪಾರ]. ಹಿಂದಕ್ಕೆ —ಕೊಡುವುದು, ಕಳುಹಿಸುವುದು, ಇಡುವುದು, ಸಲ್ಲಿಸುವುದು; ವಾಪಸುಮಾಡುವುದು; —ಮಾಡಿದ್ದು; (ಮು., ಕೋರ್ಟಿನ ಆಜ್ಞೆಗೆ) ಶಾಂತಿಪಾಲನಾಧಿಕಾರಿಯ (ಷೆರೀಫಿನ) ವರದಿ (Sheriff made a r. of *nulla bona*). (ಶಾಸನ ಸಭೆ, ಮೊ. ಕ್ಕೆ) ಪ್ರತಿನಿಧಿಯಾಗಿ ಚುನಾವಣೆಯಾಗಿರುವುದು; —ಯಾಗಿರುವನೆಂದು ಚುನಾವಣೆಯ ಅಧಿಕಾರಿಯ ಪ್ರಕಟನೆ. (ಅಪ್ಪಣೆಯ ಪ್ರಕಾರ ಅಂಕಿ ಅಂಶಗಳು, ಮೊ. ಗಳೊಡನೆ ಸಂಕಲಿಸಿದ) ವಿಧಿವಿಹಿತವಾದ ವರದಿ (Election returns). [Fielder has a good r. (ಕ್ರಿಕೆಟ್) ಆಟಕಾಯುವವನಹಿಂದೆಸೆತ ಚೆನ್ನಾಗಿದೆ. R. match or game, or R. (ಅದೇ ಕಕ್ಷಿ ಪ್ರತಿ ಕಕ್ಷಿಗಳು ಆಡುವ) ಮರು ಆಟ; —ಪಂದ್ಯ]. (ಬ. ವ. ದಲ್ಲಿ) ಒಂದು ಬಗೆಯ ಘಾಟಿಲ್ಲದ ಹೊಗೆಸೊಪ್ಪು [(ಮೊದಲಿನ ಅರ್ಥ) ತಂಬಾಕಿನ ಕಳಪೆ ಚೂರುಗಳು]. **Retúrnable** (ಗು.); **Retúrnless** (ಗು.)

Retúse ರಿಟ್ಯೂಸ್ (ಗು.) (ಸ. ವಿ., ಕ್ರಿಮಿ ಶಾ.) (ಎಲೆ ಅಥವಾ ಅಂಥ ಭಾಗಗಳ ವಿಷಯದಲ್ಲಿ) ಅಗಲವಾದ ಮತ್ತು ದುಂಡನೆಯ ತುದಿಯೂ, ಮಧ್ಯದಲ್ಲಿ ತಗ್ಗೂ ಉಳ್ಳ.

Reúnion ರೀಯೂನಿಯನ್ (ನಾ.) ಮತ್ತೆ ಒಂದಾಗಿ ಸೇರುವುದು; ಪುನರ್ಮಿಲನ; (ಮು., ಆಪ್ತೇಷ್ಟರ, ಸಮಾನಹಿತಗಳುಳ್ಳವರ) ಸಂತೋಷ ಕೂಟ, ಮರು ಕೂಟ. **Reúnionist** (ನಾ.) ರೋ. ಕ್ಯಾ. ಮತಕ್ಕೂ ಇಂಗ್ಲೆಂಡಿನ ಸುಧಾರಿತ ಕ್ರೈಸ್ತ ಮತಕ್ಕೂ ಪುನಸ್ಸಂಯೋಗ ಮಾಡಿಸುವ ಇಚ್ಛೆಯುಳ್ಳವನು; ಪುನಸ್ಸಂಯೋಗ ವಾದಿ. **Reúnionism** (ನಾ.) ಹೀಗೆ ಪುನಸ್ಸಂಯೋಗ ಮಾಡಿಸುವ ಇಚ್ಛೆ; ಪುನಸ್ಸಂಯೋಗ ವಾದ.

Revalorizátion ರೀವ್ಯಾಲರೈಸ್ಸೇಷನ್ (ನಾ.) ಚಲಾವಣೆಯ ನಾಣ್ಯದ ಬೆಲೆಯನ್ನು ಮೊದಲಿನ ಸ್ಥಿತಿಗೆ ತರುವುದು.

Reveál¹ ರಿವೀಲ್ (ಕ್ರಿ. ಸಕ.) (ಮು., ದೇವರ ವಿಷಯದಲ್ಲಿ) ಅಂತಃಪ್ರೇರಣೆಯಿಂದ, ಅಪೌರುಷೇಯವಾಗಿ, —ತಿಳಿಸು, ಪ್ರಕಾಶಪಡಿಸು [Revealed religion ದೈವಪ್ರೇರಿತ ಮತ; ಶ್ರುತಿಸಿದ್ಧ ಮತ (ಎದುರು ಪದ: Natural religion ಪ್ರಕೃತಿಸಿದ್ಧ ಮತ)]. ಹೊರಗೆಡಹು; ಬಯಲುಮಾಡು; ರಟ್ಟುಮಾಡು; ಬಹಿರಂಗಪಡಿಸು; ಪ್ರದರ್ಶಿಸು; ತೆರೆದು ತೋರು; ತೋರಿಸು; ಕಾಣಿಸು (R. itself ದೃಷ್ಟಿಗೆ ಬೀಳು, ಅರಿವಿಗೆ ಬರು). **Reveálable** (ಗು.); **Revelátion** ರೆವೆಲೇಷನ್ (ನಾ.) ದೈವಿಕವಾಗಿ ಅಥವಾ ಅಪೌರುಷೇಯವಾಗಿ ಮನುಷ್ಯನಿಗೆ ವ್ಯಕ್ತವಾದ ಜ್ಞಾನ (ಪ್ರಕಾಶನ); ಶ್ರುತಿ; ಅಂತರ್ಜ್ಞಾನ; ದಿವ್ಯ ದರ್ಶನ [The R. ಅಥವಾ ರೂಢಿಯಲ್ಲಿ Revelations ಅಥವಾ The Revelations (ಸಂಕ್ಷಿಪ್ತ: Rev.) ಹೊಸ ಒಡಂಬಡಿಕೆಯ ಕೊನೆಯ ಪ್ರಕರಣ; ಬೈಬಲ್ಲಿನಲ್ಲಿರುವ ಭವಿಷ್ಯದ್ದರ್ಶನ ಅಥವಾ ಕಾಲಜ್ಞಾನ (Apocalypse)]. ಆಶ್ಚರ್ಯಕರವಾದ, ಮಹತ್ತರವಾದ, —ಹೊಸ ಅರಿವು, ಸಂಗತಿ (It was a r. to me. What a r.!). ಬಯಲಿಗೆ ಬರುವುದು, ಬಹಿರಂಗವಾಗುವುದು (*Of* ಉಪ. ದೊಡನೆ). **Revelátional** (ಗು.); **Revelátionist** (ನಾ.) (The r. ಬೈಬಲ್ಲಿನ ಭವಿಷ್ಯದ್ದರ್ಶನ ಪ್ರಕರಣದ ಕರ್ತೃ. ಶ್ರುತಿಯಲ್ಲಿ ನಂಬಿಕೆಯುಳ್ಳವನು)

Reveál² ರಿವೀಲ್ (ನಾ.) ದ್ವಾರದ ಅಥವಾ ಗೂಡಿನ (ಮು., ಬಾಗಿಲು ಅಥವಾ ಕಿಟಕಿ ಕಂಡಿಯ) ಒಳಗಡೆಯ ಪಕ್ಕ ಮೈ.

Reveílle ರಿವ್ಯಾಲಿ, ರಿವೆಲಿ, ರಿವೇಲ್ಯ (ನಾ.) (ಸೈನ್ಯ) (ತುತೂರಿ ಊದಿ ಅಥವಾ ಭೇರಿ ಹೊಡೆದು) ಬೆಳಗಿನ ಹೊತ್ತು ಸೈನಿಕರನ್ನು ಎಬ್ಬಿಸುವ ಧ್ವನಿ ಸೂಚನೆ; ಉಪ್ಪವಡದ—ಕಹಳೆ, ಭೇರಿ (ಸೂಚನೆ); ಪ್ರಭಾತ—.

Rével ರೆವೆಲ್ (ಕ್ರಿ., ನಾ.) ಸಮ್ಮೋದ ಸಂಭ್ರಮದಲ್ಲಿರು; ಉತ್ಸವದಲ್ಲಿ ಮಗ್ನನಾಗಿರು; ಕ್ರೀಡಾಲೋಲನಾಗಿರು; ಪಾನ ವಿಲಾಸಿಯಾಗಿರು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಜಾ ಮಾಡು. ನಲಿದಾಡು, ಮೆರೆದಾಡು. (ಹಣವನ್ನು, ಹೊತ್ತನ್ನು) ಆಮೋದ ಪ್ರಮೋದಗಳಲ್ಲಿ—ಹಾಳುಮಾಡು, ಕಳೆದುಬಿಡು (*Away*). (ನಾ.) (ಕ್ರಿಯಾರ್ಥಗಳಲ್ಲಿ). (R. rout ವಿಲಾಸಿಗಳ ಗೋಷ್ಠಿ). **Réveller** (ನಾ.) ; **Révelry** (ನಾ.)

Revenant (F) ರವ್‌ನಾನ್, ರೆವಿನಂಟ್ (ನಾ.) ಸತ್ತವರ ಮಧ್ಯದಿಂದ, ಮೃತ್ಯುಲೋಕದಿಂದ, —ಹಿಂದಿರುಗಿ ಬಂದವನು : ದೆವ್ವ ; ಪಿಶಾಚಿ ; ಪ್ರೇತ; ಬೇತಾಳ. ಗಡೀಪಾರು, ಮೊ. ಗಳಿಂದ ಹಿಂದಿರುಗಿಬಂದವನು.

Revendicátion ರೀವೆಂಡಿಕೇಷನ್ (ನಾ.) (ಅಂತರರಾಷ್ಟ್ರೀಯ ವ್ಯವಹಾರ ನೀತಿ) ಕಳೆದುಹೋದ ರಾಜ್ಯ, ಪ್ರಾಂತ, ಮೊ. ವು ತಮ್ಮದೆಂದು ಕ್ರಮವಿಹಿತವಾಗಿ ಹಕ್ಕು ಹೂಡುವುದು ; ಹಾಗೆ ಹಕ್ಕು ಹೂಡಿ ಪುನಃ ಸ್ವಾಧೀನಕ್ಕೆ ಪಡೆಯುವುದು.

Revénge ರಿವೆಂಜ್ (ಕ್ರಿ., ನಾ.) ದ್ವೇಷ, ಹಗೆ, ಸೇಡು,— ತೀರಿಸಿಕೊ ; ಪ್ರತೀಕಾರಮಾಡು, ಮುಯ್ಯಿತೀರಿಸು (*For* offence, *on*, *upon*, *of*, offender). (ನಾ.) ಹಗೆ, ಸೇಡು(ತೀರಿಸುವುದು) ; ಪ್ರತಿ ವೈರ (ಸಾಧನೆ). (ವ್ಯಾಯಾಮ ಸ್ಪರ್ಧೆಗಳಲ್ಲಿ) ಹಿಂದಿನ ಫಲವನ್ನು ವ್ಯತ್ಯಾಸ ಪಡಿಸಲು ಅವಕಾಶಕೊಡುವ ಆಟ ; ಪ್ರತೀಕಾರಕ್ಕೆ ಅವಕಾಶ (Give one his r.). **Revéngeful** (ಗು.) ; **Revéngefully** (ಕ್ರಿ. ವಿ.) ; **Revéngefulness** (ನಾ.) ಮತ್ಸರ ಶೀಲತೆ.

Révenue (ಪಾರ್ಲಿಮೆಂಟಿನ ರೂಢಿಯಲ್ಲಿ **Revé-**) ರೆವೆನ್ಯು (ನಾ.) ಹುಟ್ಟುವಳಿ, ಆದಾಯ, ಆಯ, ಉತ್ಪತ್ತಿ [(ಬ. ವ. ದಲ್ಲಿ) ಆದಾಯದ ಒಟ್ಟು ಬಾಬುಗಳು (His revenues)]. ರಾಜ್ಯದ ಹುಟ್ಟುವಳಿ ; ರಾಜ್ಯಾದಾಯ ; (ಭೂ) ಕಂದಾಯ [Inland r. (Inland ನೋಡಿ). R. tax ಕೇವಲ ರಾಜ್ಯಾದಾಯಕ್ಕಾಗಿ (ವ್ಯಾಪಾರದ ಹತೋಟಿಗಲ್ಲ) ಹಾಕಿದ ಕಂದಾಯ ; ಉತ್ಪನ್ನ ಕಂದಾಯ (ಎದುರು ಪದ: Protective tax). R. cutter, officer, etc. ಸುಂಕ ಕೊಡದ ಕಳ್ಳ ವ್ಯಾಪಾರವನ್ನು ತಡೆಗಟ್ಟಲು ನೇಮಿಸಿದ ಹಡಗು, ಅಧಿಕಾರಿ]. ಭೂಗಂದಾಯವನ್ನು ವಸೂಲು ಮಾಡುವ ಇಲಾಖೆ ; ರೆವೆನ್ಯು ಇಲಾಖೆ.

Revérberate ರಿವರ್ಬರೇಟ್ (ಕ್ರಿ.) (ಶಬ್ದ, ಬೆಳಕು, ಶಾಖ—ಇವುಗಳ ವಿಷಯದಲ್ಲಿ) ಮರಳು ; ಹಿಂದಕ್ಕೆ ಕಳುಹು, —ಹೊಡೆ ; ಹೊಳಲು, ಪ್ರತಿಧ್ವನಿ, —ಕೊಡು, ಆಗು ; ಪ್ರತಿಫಲಿಸು (Reverberating furnace or kiln ಶಾಖಕ್ಕೀಡುಮಾಡಿದ ವಸ್ತುವಿನಮೇಲೆ ಕಾವು ಅಥವಾ ಜ್ವಾಲೆ ಪ್ರತಿಫಲಿಸಿ ಅಥವಾ ಮರಳಿ ಬೀಳುವಂತೆ ಕಟ್ಟಿದ—ಕುಲುಮೆ, ಬೆಂಕಿ ಗೂಡು) [**Revérberatory** —ರಟರಿ (ಗು., ನಾ.) ಉರಿಯನ್ನು, ಕಾವನ್ನು,—ಮರಳಿಸುವ(ಕುಲುಮೆ)]. (ಉದ್ವೇಗ, ಮೊ. ರ ವಿಷಯದಲ್ಲಿ ; ವಿರ. ಪ್ರ.) ಪ್ರತಿಕ್ರಿಯೆ ಮಾಡು, ಪ್ರತಿ ವರ್ತಿಸು (*Upon* ಉಪ. ದೊಡನೆ). (ಚೆಂಡು, ಮೊ. ಗಳ ವಿಷಯದಲ್ಲಿ ; ವಿರ. ಪ್ರ.) ಹಿಂದಕ್ಕೆ ಹಾರು, ಪುಟವೇಳು. **Reverberátion** (ನಾ.) ; **Revérberant** —ರಂಟ್ (ಕಾವ್ಯ) (ಗು.); **Revérberative** —ರೇಟಿವ್ (ಗು.) ; **Revérberator** (ನಾ.) ಪ್ರತಿಫಲಕ ; ಪ್ರತಿಫಲನ ದೀಪ.

Revére ರಿವಿಯರ್ (ಕ್ರಿ. ಸಕ.) ಪವಿತ್ರವಾದುದೆಂದು, ಪೂಜ್ಯವಾದುದೆಂದು, —ಭಾವಿಸು, ಕಾಣು ; ಭಯಭಕ್ತಿಗಳಿಂದ ಕಾಣು ; ಪೂಜ್ಯ ಬುದ್ಧಿಯಿಂದ ಕಾಣು. **Réverence** ರೆವರೆನ್ಸ್ (ನಾ., ಕ್ರಿ. ಸಕ.) (Revere ಪದದ ಕ್ರಿಯಾರ್ಥಗಳಲ್ಲಿ) ; ಪೂಜ್ಯ ಭಾವನೆ ; ಭಯ ಭಕ್ತಿ ; (ಪ್ರಾಚೀ. ಪ್ರ.) ಪ್ರಣಾಮ, ನಮಸ್ಕಾರ [**Reveréntial** (ಗು.) ; **Reveréntially** (ಕ್ರಿ. ವಿ.)]. ಪೂಜ್ಯತೆ (ಪಡೆದಿರುವುದು) [Saving your r. (ಪ್ರಾಚೀ. ಪ್ರ. : ಟೀಕೆಮಾಡುವ ಅಥವಾ ವಿರುದ್ಧಾಭಿಪ್ರಾಯವನ್ನು ಹೇಳುವ ಸಂದರ್ಭದಲ್ಲಿ ಕ್ಷಮಾಯಾಚನೆಗೆ ಆಡುವ ಮಾತು). Your, his, r. (ಪ್ರಾಚೀ. ಪ್ರ. ಅಥವಾ ಗ್ರಾಮ್ಯ ಪ್ರ. ಅಥವಾ ಹಾಸ್ಯ ಪ್ರ.: ಕ್ರೈಸ್ತ ಪುರೋಹಿತನ ವಿಷಯದಲ್ಲಿ ಮರ್ಯಾದೆಯ ಒಕ್ಕಣೆ)]. (ಕ್ರಿ.) ಪೂಜ್ಯಭಾವನೆಯಿಂದ ಕಾಣು ; ಭಯ ಭಕ್ತಿ ತೋರು. **Réverend** ರೆವರೆಂಡ್ (ಗು., ನಾ.) ಪೂಜ್ಯ, ಮಾನ್ಯ [ಮು., ಪಾದ್ರಿಯ ಒಕ್ಕಣೆಯಲ್ಲಿ (ಸಂಕ್ಷಿಪ್ತ : Rev.) ; Very R. (ಡೀನಿನ ವಿಷಯದಲ್ಲಿ) ; Right R. (ಬಿಷಪ್ಪಿನ ವಿಷಯದಲ್ಲಿ) ; Most R. (ಆರ್ಚ್‌ಬಿಷಪ್ಪಿನ ವಿಷಯದಲ್ಲಿ). The r. gentleman ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ಪುರೋಹಿತ]. ಪುರೋಹಿತನ(ರ) ; ಮಠೀಯ (R. utterances). (ಪ್ರಾಚೀ. ಪ್ರ.) = Reverent. (ನಾ.) (ಸಾ., ಬ. ವ. ದಲ್ಲಿ) ಪುರೋಹಿತ, ಪಾದ್ರಿ (Reverends and right reverends ಪಾದ್ರಿಗಳು ಮತ್ತು ಬಿಷಪ್ಪುಗಳು). **Réverent** (ಗು.) ಪೂಜ್ಯ ಭಾವನೆಯುಳ್ಳ ; ಪೂಜ್ಯತೆ ತೋರಿಸುವ ; ಭಕ್ತಿಯುಕ್ತ. **Réverently** (ಕ್ರಿ. ವಿ.)

Réverend, Réverent, etc. **Revere** ನೋಡಿ.

Réverie ರೆವರಿ(ೀ) (ನಾ.) ಆಲೋಚನಾಮಗ್ನತೆ ; ಹಗಲುಗನಸು (ಕಾಣುವುದು) ; ಗಾಳಿಗೋಪುರ (ಕಟ್ಟುವುದು) (Was lost in r. *or* a r.). (ಪ್ರಾಚೀ. ಪ್ರ.) ವಿಲಕ್ಷಣ ಭಾವನೆ ; —ತತ್ತ್ವ ; ಭ್ರಾಂತಿ (ಕಲ್ಪನೆ) ; ಕಲ್ಪನಾ ರಾಜ್ಯ. (ಸಂ.) ಧ್ಯಾನ ಮಗ್ನವಾಗಿಸುವ, ಮೈ ಮರೆಯಿಸುವ, —ಮೃದು ವಾದನ.

Revérs (F) ರಿವಿಯರ್ಸ್, ರವೇರ್, **Révers** ರೀವರ್ಸ್ (ನಾ., ಬ. ವ. ಅದೇ) (ಅಂಗಿ, ಕುಪ್ಪಸ, ಮೊ. ಗಳಲ್ಲಿ) ಅಸ್ತರಿ ಹೊರದೋರುವಂತಿರುವ ಹಿಮ್ಮಡಿಕೆಪಟ್ಟಿ.

Revérse ರಿವರ್ಸ್ (ಗು., ಕ್ರಿ., ನಾ.) (ಸ್ವಭಾವದಲ್ಲಿ ಅಥವಾ ಕ್ರಮದಲ್ಲಿ) ವಿರುದ್ಧವಾದ, ವ್ಯತಿರಿಕ್ತವಾದ (*To* ಉಪ. ದೊಡನೆ ಸಹ) ; ತಲೆ ಕೆಳಗಾದ ; ವಿಪರ್ಯಸ್ತ ; ಪ್ರತಿಲೋಮ(ವಾದ) ; ಹಿಮ್ಮೊಗದ ; ಹಿಂಭಾಗದ ; ಮಗುಚಿ ಬಿದ್ದ ; ಮುಖವಡಿಯಾದ (In the r. direction to the time before. The r. side of a coin, picture, etc. R. fire, battery, etc. ಶತ್ರು ಸೈನ್ಯದ ಹಿಂಭಾಗದಮೇಲೆ ಅಥವಾ ಹಿಂಭಾಗದಿಂದ ಅವರ ಕಾಪು ಕಟ್ಟಡಗಳಮೇಲೆ ಹಾರಿಸುವ ಗುಂಡು, ಅಥವಾ ಗುಂಡು ಹಾರಿಸುವ ಫಿರಂಗಿಗಳ ತಂಡ. R. flank ಯಾವುದನ್ನು ಕೇಂದ್ರವಾಗಿಟ್ಟುಕೊಂಡು ದಳವೆಲ್ಲ ಸುತ್ತು ತಿರುಗುವುದೋ ಆ ಕೇಂದ್ರದ ಭಾಗಕ್ಕೆ ಎದುರು). (ಕ್ರಿ.) ಹಿಮ್ಮೊಗವಾಗಿ ತಿರುಗಿಸು ; ಅಡಿ ಮೇಲೆಮಾಡು ; ಒಳ ಹೊರಗಾಗುವಂತೆ ಮಾಡು ; ತಲೆ ಕೆಳಗುಮಾಡು; ವಿಪರ್ಯಸ್ತಮಾಡು; ಕ್ರಮ ವಿಪರ್ಯಯಮಾಡು; ಹಿಂದುಮುಂದು ಮಾಡು ; ವಿರುದ್ಧ ಲಕ್ಷಣಕ್ಕೆ ಪರಿವರ್ತಿಸು ; ವಿರುದ್ಧವಾಗಿ ತಿರುಗಿಸು [R. arms (ಮೊಂಡು ತುದಿ ಮೇಲಕ್ಕೆ ಹೋಗುವಂತೆ) ಬಂದೂಕನ್ನು ತಲೆಕೆಳಗಾಗಿ ಹಿಡಿದುಕೊ. R. motion, policy, order, etc. R. engine ಎಂಜಿನನ್ನು ಹಿಂದಕ್ಕೆ ನಡಸು]. (ನಿರ್ಣಯ, ಶಾಸನ, ಮರಣ ದಂಡನೆ, ಮೊ. ನ್ನು) ವಾಪಸ್ ತೆಗೆದುಕೊ, ರದ್ದು ಮಾಡು. (ನೃತ್ಯ : ಮು., 'ವಾಲ್ಟ್ಸ್' ನೃತ್ಯದಲ್ಲಿ) ವಿರುದ್ಧ ದಿಕ್ಕಿನಲ್ಲಿ, ಪ್ರತಿಮುಖವಾಗಿ, ಸುತ್ತು ತಿರುಗು. (ನಾ.) ವಿರುದ್ಧವಾದುದು, ವ್ಯತಿರಿಕ್ತವಾದುದು, ಪ್ರತಿಲೋಮವಾದುದು (*Of* ಉಪ. ದೊಡನೆ ಸಹ) [With others the r. of this *or* the r. happens. On the r. (ಮೋಟಾರು ಬಂಡಿ ನಡಸುವುದು) ಬಂಡಿ ಹಿಂದಕ್ಕೆ ಚಲಿಸುತ್ತ]. (ಅನೇಕ ವೇಳೆ ಗು. ದೊಡನೆ ಅದರ ವಿರುದ್ಧಾರ್ಥಕ್ಕೆ ಬಳಸು ನುಡಿಯಾಗಿ ಪ್ರ.) Made remarks the r. of complimentary. (ನಾಣ್ಯ, ಮೊ. ಗಳ) ಹಿಮ್ಮುಖ, ಬೆನ್ನು(ಮೇಲಿನ ಚಿತ್ರ, ರೇಖನ, ಮುದ್ರಿಕೆ) (ಎದುರು ಪದ : Obverse). = Verso. ಹಿಂಬದಿ ; ಹಿಂಭಾಗ (Take in r. ಹಿಂದುಗಡೆಯಿಂದ ಹಾರಿಸುವ ಗುಂಡುಗಳಿಗೆ, ಫಿರಂಗಿಗಳಿಗೆ, —ಗುರಿಪಡಿಸು). ದುರದೃಷ್ಟ ; ಕೇಡು ; (ಮು., ಯುದ್ಧದಲ್ಲಿ) ಸೋಲು, ಅಪಜಯ (The reverses of fortune. Suffered a r. ಅಪಜಯ ಹೊಂದಿದನು). **Revérsely** (ಕ್ರಿ. ವಿ.) ; **Revérsal** (ನಾ.) ; **Revérsible** (ಗು.); **Reversibílity** (ನಾ.) ; **Revérsion** (ನಾ.) ಒಂದು ಗೊತ್ತಾದ ತೇದಿಯ ವರೆಗೆ ಅಥವಾ ಘಟನೆಯ ವರೆಗೆ (ಮು., ಮೂಲದಾತನ ಮರಣದ ವರೆಗೆ) ಕೊಟ್ಟಿರುವ ದತ್ತಿ, ಆಸ್ತಿ : ಸಾವಧಿಕ ಆಸ್ತಿ, —ದತ್ತಿ ; ದಾತನಿಗೆ ಅಥವಾ ಅವನ ಉತ್ತರಾಧಿಕಾರಿಗೆ ಅಥವಾ ಶೇಷಾನುಭೋಗಿಗೆ (ಕಟ್ಟಕಡೆಯ ಬಾಧ್ಯಸ್ಥನಿಗೆ) [=**Revérsioner** (ನಾ.)] ಆಸ್ತಿ ಮರಳುವುದು ; ಆಸ್ತಿಯ ಹಿಮ್ಮರಳಿಕೆ ; ಕಟ್ಟಕಡೆಯ —ವಾರಸು ಹಕ್ಕು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉತ್ತರಾಧಿಕಾರ (In r. ಇಂಥ ಷರತ್ತುಗಳಮೇಲೆ). ಒಬ್ಬನ ಮರಣಾನಂತರ ಕೊಡುವ, (ಮು., ಜೀವವಿಮೆಯ ರೂಪದ) ಹಣ. ತನಗೆ ಹಕ್ಕಿರುವ ಅಥವಾ ಮತ್ತೊಬ್ಬನು ಬಿಟ್ಟಮೇಲೆ ತನಗೆ ಉತ್ತರಾಧಿಕಾರ ಬರುವುದೆಂದು ನಿರೀಕ್ಷಣೆಯಿರುವ ವಸ್ತು; ಶೇಷಾನುಭೋಗದ ವಸ್ತು. ಪೂರ್ವಸ್ಥಿತಿ, ಪೂರ್ವದ ಅಭ್ಯಾಸ, ಮೊ. ಕ್ಕೆ ಮರಳುವುದು; (ಮು., ಜೀ. ವಿ.) ಮೂಲ(ಸಂತತಿಯ) ಮಾದರಿಗೆ ಮರಳುವುದು. **Revérsional** (ಗು.); **Revérsionally** (ಕ್ರಿ.ವಿ.); **Revérsionary** (ಗು.); **Revért** ರಿವರ್ಟ್ (ಕ್ರಿ., ನಾ.) (ವಿರ. ಪ್ರ.) ಹಿಂದಕ್ಕೆ ಹೋಗು, ಹಿಂದಿರುಗು, ವಾಪಸುಹೋಗು. (ಆಸ್ತಿ, ಅಧಿಕಾರ, ಮೊ. ದು) ಮರಳಿಕೆಯಿಂದ ಲಭಿಸು [**Revérter** (ನಾ.) (ನ್ಯಾ. ಶಾ.) (ಆಸ್ತಿಯ ವಿಷಯದಲ್ಲಿ) = Reversion]. ಪೂರ್ವಸ್ಥಿತಿ, ಮೊ. ಕ್ಕೆ ಹಿಂದಿರುಗು, ಬರು (*To* ಉಪ. ಬೊಡನೆ). ಮತ್ತೆ ಕಾಡು ಸ್ಥಿತಿಗೆ, ಅನಾಗರಿಕ ಸ್ಥಿತಿಗೆ, —ಇಳಿ. (ಭಾಷಣದಲ್ಲಿ ಅಥವಾ ಆಲೋಚನೆಯಲ್ಲಿ) ಪ್ರಸಕ್ತ ವಿಷಯಕ್ಕೆ —ಬರು, ಮರಳು (*To* ಉಪ. ಬೊಡನೆ). [ಕಣ್ಣುಗಳನ್ನು, (ವಿರ. ಪ್ರ.) ಹೆಜ್ಜೆಗಳನ್ನು] ಹಿಂದಿರುಗಿಸು. (ನಾ.) ತನ್ನ ಮೊದಲಿನ ಮತವನ್ನೇ ಮತ್ತೆ ಅವಲಂಬಿಸಿದವನು, ಅವಲಂಬಿಸುವವನು; ಪುನಸ್ಸ್ವಮತಾವಲಂಬಿ (Convert, Pervert ಎಂಬ ಪದಗಳ ಅನುಕರಣ ಪ್ರ.). **Revértible** (ಗು.)

Revért, etc. Reverse ನೋಡಿ.

Revét ರಿವೆಟ್ (ಕ್ರಿ. ಸಕ.) (ಕೋಟೆಯ ಗೋಡೆ, ಮೊ. ಗಳಿಗೆ) ಕಲ್ಲು ಕಟ್ಟಡದ ಹೊರಮುಖ ಕೊಡು. **Revétment** (ನಾ.) ಕಲ್ಲುಗಳಿಂದ ಕಟ್ಟಿದ ಹೊರಮುಖ(ದ ಗೋಡೆ); ಕಲ್ಕಟ್ಟಣೆ(ಯುಳ್ಳ ಹೊರಮುಖ)

Review ರಿವ್ಯೂ (ನಾ., ಕ್ರಿ.) (ಮು., ನ್ಯಾ. ಶಾ.) ಪುನರ್ವಿಮರ್ಶೆ [Court of r. (ದಂಡನೆಯ ತೀರ್ಪುಗಳ) ಪುನರ್ವಿಮರ್ಶೆಯ ನ್ಯಾಯಸ್ಥಾನ]. (ಸೈನ್ಯದ ದಳಗಳು, ನೌಕಾಬಲ, ಮೊ. ಗಳ) ಪ್ರದರ್ಶನ ಮತ್ತು ಕ್ರಮಯುಕ್ತವಾದ ಪರಿಶೀಲನೆ [R. order (Order ನಾ. ೨ ನೋಡಿ). (ರೂಪ.) ಪೂರ್ಣ ಸಜ್ಜು. Pass in r. (ರೂಪ.) ಪರೀಕ್ಷಿಸು, ಪರೀಕ್ಷಿಸಲ್ಪಡು]. ಸಿಂಹಾವಲೋಕನ; ಹಿಂದೆ ನಡೆದದ್ದನ್ನು, ಹಿಂದಿನದನ್ನು, —ನೆನೆಯುವುದು, ವಿಮರ್ಶಿಸುವುದು. (ಗ್ರಂಥ, ಮೊ. ಗಳ) ವಿಮರ್ಶೆ; ಅವಲೋಕನ. (ಪ್ರಚಲಿತ ಸಂಗತಿಗಳು, ಹೊಸ ಗ್ರಂಥಗಳು, ಕಲೆ, ಮೊ. ವಿಷಯಗಳಮೇಲೆ ಲೇಖನಗಳನ್ನೊಳಗೊಂಡ) ವಿಮರ್ಶಾತ್ಮಕ ನಿಯತಕಾಲಿಕ ಪತ್ರಿಕೆ. (ಕ್ರಿ.) ಮತ್ತೆ ನೋಡು; ಪುನರವಲೋಕನ ಮಾಡು. (ಮು., ನ್ಯಾಯಸ್ಥಾನದಲ್ಲಿ) ಪುನರ್ವಿಮರ್ಶೆ ಮಾಡು. ಹಿಂದಿನದನ್ನು ಮತ್ತೆ —ನೆನೆ, ವಿಮರ್ಶಿಸು. (ಸೈನ್ಯ ದಳ, ಮೊ. ರ) ಪ್ರದರ್ಶನ, ಪರಿಶೀಲನೆ, —ನಡಸು. (ಗ್ರಂಥ, ಮೊ. ರ) ವಿಮರ್ಶೆ ಬರೆ, —ಮಾಡು. **Reviewable** (ಗು.); **Reviewal** (ನಾ.); **Reviewer** (ನಾ.)

Revíle ರಿವೈಲ್ (ಕ್ರಿ.) ಕೆಟ್ಟ ಹೆಸರುಗಳಿಂದ ಕರೆ; ಬಯ್ಯು; ದೂಷಿಸು; ಬೈಗುಳು ಸುರಿಯುತ್ತ ಮಾತನಾಡು; ಹೀನಾ ಮಾನಾ ಬಯ್ಯು. **Revíler** (ನಾ.); **Revíling** (ನಾ.); **Revílingly** (ಕ್ರಿ. ವಿ.)

Revíse ರಿವೈಸ್ (ಕ್ರಿ. ಸಕ., ನಾ.) ಮತ್ತೆ —ಓದು, ಪರಿಶೀಲಿಸು; ಹಾಗೆ ಮಾಡಿ —ತಿದ್ದು, ಸರಿಪಡಿಸು; ಪರಿಷ್ಕರಿಸು; ಸುಧಾರಿಸು; ಪುನಃ ಪರಿಶೀಲನೆಮಾಡು [Revised Version (ಸಂಕ್ಷಿಪ್ತ: R.V.) (೧೬೧೧ರಲ್ಲಿ ಪ್ರಕಟವಾದ ಬೈಬಲ್ಲಿನ ಪ್ರಮಾಣೀಕೃತ ಇಂಗ್ಲಿಷ್ ಭಾಷಾಂತರವನ್ನು ೧೮೭೦-೮೪ರಲ್ಲಿ ಪರಿಷ್ಕರಿಸಿ ಹೊರಡಿಸಿದ) ಪರಿಷ್ಕೃತ (ಬೈಬಲ್) ಪಾಠ]. (ನಾ.) (ವಿರ. ಪ್ರ.) ಪರಿಷ್ಕರಣ; ಪರಿಷ್ಕರಿಸುವುದು. (ವಿರ. ಪ್ರ.) ಪರಿಷ್ಕೃತ ರೂಪ. (ಮುದ್ರಣ) ಹಿಂದಿನ ಕರಡಚ್ಚಿನ ತಿದ್ದುಗಳನ್ನು ಸರಿಪಡಿಸಿ ಸಿದ್ಧಗೊಳಿಸಿದ ಕರಡಚ್ಚು ಹಾಳೆ: ತಿದ್ದಿದ ಕರಡಚ್ಚು (ಹಾಳೆ). **Revísable** (ಗು.); **Revísal** (ನಾ.); **Revíser** (ಮು., ಬ. ವ. ದಲ್ಲಿ) ಬೈಬಲ್ಲಿನ ಪರಿಷ್ಕೃತ ಪಾಠವನ್ನು ತಯಾರಿಸಿದವನು: ಬೈಬಲ್ಲಿನ ಪರಿಷ್ಕಾರಕ. **Revísion** ರಿವಿಷನ್ (ನಾ.); **Revísional** (ಗು.); **Revísory** ರಿವೈಸರಿ (ಗು.) ಪರಿಷ್ಕರಣಕ್ಕೆ ಸಂಬಂಧಪಟ್ಟ; ಪರಿಷ್ಕರಣದ.

Revíval, etc. Revive ನೋಡಿ.

Revíve ರಿವೈವ್ (ಕ್ರಿ.) ಮತ್ತೆ ಪ್ರಜ್ಞೆಗೆ, ಜೀವಂತ ಸ್ಥಿತಿಗೆ, ಅಸ್ತಿತ್ವಕ್ಕೆ, ಪಟುತ್ವಕ್ಕೆ, ಗಮನಕ್ಕೆ, ಚಟುವಟಿಕೆಗೆ, ಊರ್ಜಿತಕ್ಕೆ, ಬಳಕೆಗೆ, —ಬರು, ತರು; ಪುನರುಜ್ಜೀವಿಸು; ಪುನಶ್ಚೈತನ್ಯಗೊಳ್ಳು, —ಗೊಳಿಸು; ಮತ್ತೆ ಬದುಕು, ಬದುಕಿಸು. ಎಚ್ಚತ್ತುಕೊ, ತೆಪ್ಪತ್ತುಕೊ. (ರ. ವಿ.) (ಲೋಹವನ್ನು, ಮು., ಪಾದರಸವನ್ನು) ಸ್ವಾಭಾವಿಕ ರೂಪಕ್ಕೆ ಮತ್ತೆ ತರು. **Revívable** (ಗು.); **Revíval** (ನಾ.) (ಕ್ರಿಯಾರ್ಥಗಳಲ್ಲಿ) ಮರು ಹುಟ್ಟು; ಪುನರುಜ್ಜೀವನ [R. of learning, letters 'ರೆನೇಸಾನ್ಸ್' (Renaissance) ಎಂಬ ಪುನರುಜ್ಜೀವಿತ ಕಾಲದಲ್ಲಾದ ವಿದ್ಯೆಯ, ಸಾಹಿತ್ಯದ, —ಪುನರುಜ್ಜೀವನ. R. of architecture ೧೯ನೆಯ ಶ. ಮಾ. ದಲ್ಲಾದ ಗಾತಿಕ್ ಶೈಲಿಯ ಪುನರುಜ್ಜೀವನ]. ಧರ್ಮ ಜಾಗೃತಿ, ಮತ ಶ್ರದ್ಧೆಯ ಪುನರುಜ್ಜೀವನ (ಪ್ರಯತ್ನ). **Revívalism** (ನಾ.); **Revívalist** (ನಾ.); **Revíver** (ನಾ.) (ಕ್ರಿಯಾರ್ಥಗಳಲ್ಲಿ). (ಮು., ಅಸಂ.) ಉತ್ತೇಜಕ ಪಾನ, —ಪಾನೀಯ. ಮಾಸಿದ ಬಣ್ಣ, ಮೊ. ನ್ನು ಮತ್ತೆ ಹೊಸದು ಮಾಡುವ ಒಂದು ತಯಾರಿಕೆ; ವರ್ಣ ಪುನರುಜ್ಜೀವಕ. **Revívify** ರಿವಿವಿಫೈ (ಕ್ರಿ. ಸಕ.) ಮತ್ತೆ ಜೀವ ಎರೆ; ಪುನರುಜ್ಜೀವನಗೊಳಿಸು; ಪುನಶ್ಚೈತನ್ಯಗೊಳಿಸು. (ರ. ವಿ.) = Revive. **Revivificátion** (ನಾ.); **Revivíscence** (ನಾ.) ಪುನರುಜ್ಜೀವನವಾಗುವುದು. **Revivíscent** (ಗು.) ಪುನರುಜ್ಜೀವನವಾಗುವ. **Revívor** (ನಾ.) (ನ್ಯಾ. ಶಾ.) ಒಬ್ಬ ಕಕ್ಷಿಗಾರನ ಸಾವು, ಮೊ. ಕಾರಣಗಳಿಂದ ನಿಂತು ಹೋಗಿದ್ದ ವ್ಯವಹಾರವನ್ನು ಪುನರುಜ್ಜೀವನಗೊಳಿಸುವ ಕಾರ್ಯಕ್ರಮ; ವ್ಯವಹಾರ ಪುನರುಜ್ಜೀವನ.

Revívify, etc., Revivíscence, Revívor. Revive ನೋಡಿ.

Revóke ರಿವೋಕ್ (ಕ್ರಿ., ನಾ.) (ತೀರ್ಪು, ಶಾಸನ, ವಾಗ್ದಾನ, ಅನುಮತಿ —ಇವನ್ನು) ಹಿಂದಕ್ಕೆ ತೆಗೆದುಕೊ, ರದ್ದುಮಾಡು, ಹೊಡೆದುಹಾಕು; ಅಳಿಸು. (ಇಸ್ಪೀಟಾಟ) ರಂಗು ಚೋರಿ ಮಾಡು. (ನಾ.) (ಇಸ್ಪೀಟಾಟ) ರಂಗು ಚೋರಿ. (ವಿರ. ಪ್ರ.) ಹಿಂದಕ್ಕೆ ತೆಗೆದುಕೊಳ್ಳುವುದು; ರದ್ದು (ಮಾಡುವುದು) (Beyond r.). **Révocable** ರೆವೊಕಬ್‌ಲ್ (ಗು.); **Révocatory** —ಕಟರಿ (ಗು.); **Revocátion** (ನಾ.)

Revólt ರಿವೋ(ವಾ)ಲ್ಟ್ (ಕ್ರಿ., ನಾ.) ಸ್ವಾಮಿನಿಷ್ಠೆಯನ್ನು ತೊರೆದುಬಿಡು; ದಂಗೆ ಮಾಡು, —ಏಳು; ಪ್ರತಿಭಟಿಸು; ಮಾರ್ಮಲೆ; ಎದುರು ಬೀಳು; ಪ್ರಭುವನ್ನು —ಬಿಟ್ಟುಹೋಗು, ತ್ಯಜಿಸು (*From* ಉಪ. ಬೊಡನೆ); ಪ್ರಭುವಿನ ಮೇಲೆ —ಕೈಮಾಡು, ತಿರುಗಿ ಬೀಳು (*Against* ಉಪ. ಬೊಡನೆ); ಪ್ರತಿಪಕ್ಷಕ್ಕೆ, ಶತ್ರುಪಕ್ಷಕ್ಕೆ, —ಸೇರು (*To* ಉಪ. ಬೊಡನೆ) [(ಭೂ. ಕೃ.) His revolted subjects ಅವನ ದಂಗೆಯೆದ್ದ ಪ್ರಜೆಗಳು]. ಅಸಹ್ಯಪಡು, ವಿಮುಖವಾಗು (*At, against* ಉಪ. ಬೊಡನೆ); ಹೇವರಿಕೆಯಿಂದ ತಿರುಗು (*From* ಉಪ. ಬೊಡನೆ) (Common sense, nature, one's heart, revolts at *or* against *or* from it). ತೀರ ದ್ವೇಷವಾಗು, ಅಸಹ್ಯ ಬರು; ಓಕರಿಸು, ಓಕರಿಕೆ ಬರು. (ನಾ.) ದಂಗೆ, ಬಂಡಾಯ (—ಮಾಡುವುದು); ಮಲೆಪು (In r. ದಂಗೆಯೆದ್ದು); ದಂಗೆಯ, ಪ್ರತಿಭಟನೆಯ, —ಮನೋಭಾವ. ಅಸಹ್ಯ(ತೆ); ದ್ವೇಷ. **Revólting** (ಗು.); **Revóltingly** (ಕ್ರಿ. ವಿ.)

Révolute[1] ರೆವೊಲೂಟ್, —ಲ್ಯೂಟ್ (ಗು.) (ಸ. ವಿ., ಮೊ. ಗಳಲ್ಲಿ) ಹಿನ್‌ಸುರುಳಿಯ ಅಂಚುಳ್ಳ.

Revolúte[2] ರೆವೊಲೂಟ್, —ಲ್ಯೂಟ್ (ಕ್ರಿ. ಅಕ.) (ಅಸಂ.) ರಾಜಕೀಯ ಕ್ರಾಂತಿಯಲ್ಲಿ—ಸೇರು, ನಿರತನಾಗು.

Revolútion ರೆವೊಲೂ(ಲ್ಯೂ)ಷ(ಷ್)ನ್ (ನಾ.) ಸುತ್ತು ತಿರುಗುವುದು; ಒಂದು ಕಕ್ಷೆಯಲ್ಲಿ ಅಥವಾ ವೃತ್ತ ಪಥದಲ್ಲಿ ಅಥವಾ ಅಕ್ಷದ ಸುತ್ತ ಅಥವಾ ಕೇಂದ್ರದ ಸುತ್ತ ಸುತ್ತುವುದು; ಆವರ್ತ; ಪರಿಭ್ರಮಣ; ಗಿರ ಗಿರನೆ ತಿರುಗುವುದು; ಒಂದು ಸುತ್ತು (ತಿರುಗುವುದು); ಇದಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೆಗೆದುಕೊಳ್ಳುವ ಕಾಲ. ಅವರ್ತವಾಗುವುದು. ಸ್ಥಿತಿಗತಿಗಳ, ವ್ಯವಸ್ಥೆಯ, —ಸಂಪೂರ್ಣ ಬದಲಾವಣೆ, ತಲೆ ಕೆಳಕು (ಮಾಡುವುದು, ಆಗುವುದು); ಬುಡಮುಟ್ಟ ಮಾರ್ಪಾಟು; ಮೂಲತಃ ಪುನರ್‌ರಚನೆ; (ಮು.) ಪ್ರಜೆಗಳು ಹಳೆಯ ದೊರೆಯನ್ನು ಅಥವಾ ಹಳೆಯ ರಾಜ್ಯ ಪದ್ಧತಿಯನ್ನು ಬಲಾತ್ಕಾರವಾಗಿ ಕಿತ್ತೊಗೆದು ಹೊಸ ದೊರೆಯನ್ನು ಅಥವಾ ಹೊಸ ವ್ಯವಸ್ಥೆಯನ್ನು ಸ್ಥಾಪಿಸುವುದು: ಕ್ರಾಂತಿ; ವಿಪ್ಲವ [The r. (ಇಂಗ್ಲೆಂಡಿನಲ್ಲಿ) ೧೬೮೮ರಲ್ಲಿ ಸ್ಟೂವರ್ಟ್ ರಾಜಸಂತತಿಯನ್ನು (ಎರಡನೆಯ ಜೇಮ್ಸ್ ದೊರೆಯನ್ನು) ಓಡಿಸಿದ ಕ್ರಾಂತಿ. French r. (೧೭೮೯, ಮೊ. ರಲ್ಲಿ ರಾಜಪ್ರಭುತ್ವವನ್ನು ತೆಗೆದುಹಾಕಿದ) ಫ್ರಾನ್ಸಿನ ಕ್ರಾಂತಿ. American r. (೧೭೭೫, ಮೊ. ರಲ್ಲಿ ಬ್ರಿಟಿಷ್ ಪ್ರಭುತ್ವವನ್ನು ತೆಗೆದುಹಾಕಿದ) ಅಮೆರಿಕದ ಕ್ರಾಂತಿ. Russian r. (೧೯೧೭ರಲ್ಲಿ ಸಿಪಾಯಿಗಳೂ ಶ್ರಮಜೀವಿಗಳೂ ರಷ್ಯಾ ಚಕ್ರವರ್ತಿಯನ್ನು —ಜ್ಞಾರನನ್ನು —ಕೊಂದು ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ) ರಷ್ಯದ ಕ್ರಾಂತಿ]. **Revolútionism** (ನಾ.); **Revolútionist** (ನಾ.); **Revolútionize** (ಕ್ರಿ. ಸಕ.); **Revolútionary** (ಗು., ನಾ.) ಕ್ರಾಂತಿ ಕಾರಕ; ಕ್ರಾಂತಿಯ; ಮಹತ್ತರವಾದ ಮತ್ತು ಸಾ., ಕಡುತರ ವಾದ ಬದಲಾವಣೆಗಳನ್ನೊಳಗೊಂಡ. (ವಿರ. ಪ್ರ.) ಸುತ್ತುವ; ಪರಿಭ್ರಮಣದ. (ನಾ.) ಕ್ರಾಂತಿಯೆಬ್ಬಿಸುವವನು; ಕ್ರಾಂತಿಕಾರ. **Revólve** ರಿವಾಲ್ವ್ (ಕ್ರಿ.) ಸುತ್ತು —ತಿರುಗು, ತಿರುಗಿಸು; ಗಿರ ಗಿರನೆ ಸುತ್ತು, ಸುತ್ತಿಸು; ವೃತ್ತಾಕಾರದ ಕಕ್ಷೆಯಲ್ಲಿ ಹೋಗು; ಚಕ್ರಾ ಕಾರವಾಗಿ ಉರುಳು(ತ್ತ ಹೋಗು) (R. problem, fact, in the mind ಸಮಸ್ಯೆ, ಸಂಗತಿ—ಇವನ್ನು ಮನಸ್ಸಿನಲ್ಲಿ ತಿರುವಿಹಾಕು, ಪರ್ಯಾಲೋಚಿಸು, ವಿಚಾರಮಾಡು). **Revólver** (ನಾ.) ಮತ್ತೆ ಮತ್ತೆ ತೋಟಾಗಳನ್ನು ತುಂಬದೆ ಹಲವು ಸಲ ಗುಂಡು ಹಾರಿಸಲನುಕೂಲ ವಾಗುವಂತೆ ಸುತ್ತುವ ಸಲಕರಣೆಯುಳ್ಳ ಪಿಸ್ತೂಲು: ಸುತ್ತು ಪಿಸ್ತೂಲು (Policy of the big r. ಪರ ರಾಷ್ಟ್ರಗಳನ್ನು ಪ್ರತೀಕಾರ ಸುಂಕದ ಮೂಲಕ ಹೆದರಿಸುವ ನೀತಿ; ಪ್ರತೀಕಾರ ಸುಂಕದ ಬೆದರಿಕೆಯ ನೀತಿ)

Revólve, Revólver. **Revolution** ನೋಡಿ.

Revué ರಿವ್ಯೂ (ನಾ.) ಪ್ರಚಲಿತ ಘಟನೆಗಳನ್ನು ಚಿತ್ರಿಸುವ ಅಥವಾ ವಿಡಂಬಿಸುವ ಶಿಥಿಲ ಬಂಧದ ರೂಪಕ ಅಥವಾ ದೃಶ್ಯ ಪರಂಪರೆ; ಅಣಕ —ರೂಪಕ, ದೃಶ್ಯಾವಳಿ.

Revúlsion ರಿವಲ್ಷನ್ (ನಾ.) ಪ್ರತ್ಯುದ್ರೇಕ; ಒಂದು ಅಂಗದ ವ್ಯಾಧಿಗೆ ಪ್ರತಿಕ್ರಿಯೆಯಾಗಿ ಮತ್ತೊಂದು ಅಂಗಕ್ಕೆ (ದೇಹ ಭಾಗಕ್ಕೆ) ಪ್ರತ್ಯು ದ್ರೇಕದ ಮೂಲಕ ಚಿಕಿತ್ಸೆ ಮಾಡುವುದು: ಪ್ರತ್ಯುದ್ರೇಕ ಚಿಕಿತ್ಸೆ. (ವಿರ. ಪ್ರ.) ಹಿಂದಕ್ಕೆ ತೆಗೆದುಕೊಂಡುಬಿಡುವುದು; ಅಪಕರ್ಷಣ (The r. of capital from other trades). ಥಟ್ಟನೆ ಉಂಟಾದ ಭಾವ ಪರಿವರ್ತನ, ತೀವ್ರ ಪ್ರತಿ ಮನೋಭಾವ; ಜುಗುಪ್ಸೆ, ಅಸಹ್ಯ, ಹೇವರಿಕೆ. [(ಅಭಿ)ರುಚಿ, ಅದೃಷ್ಟ, ವ್ಯಾಪಾರ, ಮೊ. ರಲ್ಲಿ] ಥಟ್ಟನೆ ಆದ—ವ್ಯತ್ಯಾಸ, ಪ್ರತಿಕ್ರಿಯೆ, ವಿರುದ್ಧ ಸ್ಥಿತಿ. **Revúlsive** (ಗು., ನಾ.) (ಮು., ವೈ. ಶಾ.) ಪ್ರತ್ಯುದ್ರೇಕದ; ಪ್ರತ್ಯುದ್ರೇಕ ಕಾರಕ. (ನಾ.) ಪ್ರತ್ಯುದ್ರೇಕ(ಕಾರಿಯಾದ) ಚಿಕಿತ್ಸೆ.

Rewárd ರಿವಾರ್ಡ್ (ನಾ., ಕ್ರಿ. ಸಕ.) ಪ್ರತಿಫಲ; ಬಹುಮಾನ; ಮೆಚ್ಚು; ಇನಾಮು; ಸಂಭಾವನೆ. ಮುಯ್ಯಿ; ಪ್ರತೀಕಾರ; ಶಾಸ್ತಿ. (ಕ್ರಿ.) ಪ್ರತಿಫಲ, ಬಹುಮಾನ, ಇನಾಮು, —ಕೊಡು. (ಅಪರಾಧಿಗೆ, ಅಪರಾಧಕ್ಕೆ) ಶಾಸ್ತಿ, ಪ್ರತೀಕಾರ, —ಮಾಡು. **Rewárdless** (ಗು.)

Rex (L) ರೆಕ್ಸ್ (ನಾ., ಸಂಕ್ಷಿಪ್ತ: R.) [ಆಳು(ತ್ತಿರು)ವ] ದೊರೆ ರಾಜ (ಪ್ರ. Regina ಪದದಂತೆ)

Reýnard ರೆ(ೇ)ನರ್ಡ್ (ನಾ.) ನರಿ(ಗೆ ಅಂಕಿತ ನಾಮ)

Rhábdomancy ರ್ಯಾಬ್ಡೊಮ್ಯಾನ್ಸಿ (ನಾ.) (ಮು., ಭೂಗರ್ಭದಲ್ಲಿರುವ ನೀರನ್ನು ಅಥವಾ ಅದುರನ್ನು ಕಂಡುಹಿಡಿಯಲು) ಊಹೆಗೋಲನ್ನು ಉಪಯೋಗಿಸುವುದು.

Rhadamánthus ರ್ಯಾಡಮ್ಯಾಂತಸ್ (ನಾ.) (ಗ್ರೀಕ್ ಪುರಾಣ) ಅಧೋ ಲೋಕದ ಒಬ್ಬ ನ್ಯಾಯಾಧಿಪತಿ(ಯ ಹೆಸರು). ಲಂಚಕ್ಕೀಡಾಗದ ನಿರ್ದಾಕ್ಷಿಣ್ಯ ನ್ಯಾಯಾಧಿಪತಿ (ನಮ್ಮಲ್ಲಿ 'ಯಮಧರ್ಮರಾಯ' ಎನ್ನು ವಂತೆ). **Rhadamánthine** (ಗು.)

Rhaétian ರೀಷ(ಪ್)ನ್ (ಗು., ನಾ.) R. Alps ಎಂಗಾಡಿನ್ (Engadine) ಪ್ರಾಂತದ ಸುತ್ತ ಮುತ್ತಣ ಆಲ್ಪ್ಸ್ ಪರ್ವತ ಭಾಗ.

Rhápsode. **Rhapsody** ನೋಡಿ.

Rhápsody ರ್ಯಾಪ್ಸೊಡಿ (ನಾ.) (ಗ್ರೀಕ್ ಪ್ರಾಚೀನ) ಒಂದು ವಾಚನಕ್ಕೆ ತಕ್ಕ ಉದ್ದದ ಮಹಾಕಾವ್ಯ, ಇತಿಹಾಸ ಕಾವ್ಯ(ದ ಭಾಗ). ಉತ್ಸಾಹ ಪೂರ್ಣವೂ ಅತ್ಯುತ್ಪ್ರೇಕ್ಷೆಯುಳ್ಳದ್ದೂ ಆದ ಆಡಂಬರ ಶೈಲಿಯ ಭಾಷಣ, ಕವಿತೆ, ಲೇಖನ; ಅತಿರೇಕ —ಭಾಷಣ, ಕಾವ್ಯ. ಉದ್ವೇಗ ಪೂರ್ಣವಾದ ಅಸಮ ರೂಪದ ಸಂಗೀತ (ಕೃತಿ). **Rhapsódic** ರ್ಯಾಪ್ಸಾ— (ಗು.); **Rhapsódical** (ಗು.); **Rhapsódically** (ಕ್ರಿ. ವಿ.); **Rhápsode** ರ್ಯಾಪ್ಸೋಡ್ (ನಾ.) (ಪುರಾತನ ಗ್ರೀಸಿನಲ್ಲಿ) ಮಹಾ ಕಾವ್ಯಗಳ ಗಮಕಿ; ಚಾರಣ. **Rhápsodize** —ಪ್ಸೊ— (ಕ್ರಿ.) ಮಹಾಕಾವ್ಯಗಳ ಗಮಕಿಯಂತೆ—ವಾಚಿಸು, ಹಾಡು. (ಒಂದರ ವಿಷಯವಾಗಿ) ಅತ್ಯಾವೇಶದ ಆಡಂಬರ ಭಾಷಣ ಮಾಡು, —ಲೇಖನ ಬರೆ (*About*, *on*, ಮೊ. ಉಪ. ದೊಡನೆ). **Rhápsodist** (ನಾ.)

Rhátany ರ್ಯಾಟನಿ (ನಾ.) ದ. ಅಮೆರಿಕದ ಒಂದು ಗುಲ್ಮ; (ಔಷಧ ವಾಗಿಯೂ 'ಪೋರ್ಟ್' ಮದ್ಯಕ್ಕೆ ಬೆರಸುವುದಕ್ಕಾಗಿಯೂ ಉಪಯೋಗಿ ಸುವ) ಅದರ ಬೇರಿನ ಕಷಾಯ.

Rhéa ರೀಅ (ನಾ.) ದ. ಅಮೆರಿಕದ, ಮೂರು ಬೆರಳುಳ್ಳ ಒಂದು ಉಷ್ಟ್ರ ಪಕ್ಷಿ, ಶಹಾ ಮೃಗ (ಗ್ರೀಕ್ ದೇವತೆಯ ಹೆಸರು)

Rhémish ರೀಮಿಷ್ (ಗು.) (ಫ್ರಾನ್ಸ್ ದೇಶದಲ್ಲಿರುವ) ರೀಮ್ಸ್ ಪಟ್ಟಣದ; ರೀಮ್ಸಿನ (R. Bible, Testament, version, translation ೧೫೮೨ರಲ್ಲಿ ರೀಮ್ಸಿನ English College ನಲ್ಲಿದ್ದ ರೋಮನ್ ಕ್ಯಾತೊಲಿಕರು ಭಾಷಾಂತರ ಮಾಡಿದ ಹೊಸ ಒಡಂಬಡಿಕೆ)

Rhénish ರೆನಿಷ್ (ಗು., ನಾ.) (ಪ್ರಾಚೀ. ಪ್ರ.) ರೈನ್ ನದಿಯ ಮತ್ತು ಅದರ ದಡಗಳಲ್ಲಿರುವ ಜಿಲ್ಲೆಗಳ, ಪ್ರಾಂತಗಳ; —ಗಳಿಗೆ ಸಂಬಂಧಿ ಸಿದ; ರೈನಿನ; ರೈನ್ ಪ್ರಾಂತದ (ಈಗ ಸಾ., ಇದೇ ಅರ್ಥದಲ್ಲಿ Rhine ಗು. ವಾಗಿ ಪ್ರ.). (ನಾ.) ರೈನ್ ಪ್ರಾಂತದಲ್ಲಿ ತಯಾರಾಗುವ ದ್ರಾಕ್ಷಾ ಮದ್ಯ, (ಈಗ ಸಾ., Rhine wine *or* hock)

Rheo-, Reo- ರೀಓ—, ರಿಅ— (ಸ. ಪೂ. ಪ.) ವಿದ್ಯುತ್ಪ್ರವಾಹ—. **Rheómeter** ವಿದ್ಯುತ್ಪ್ರವಾಹ ಮಾಪಕ. **Rhéoscope** ವಿದ್ಯುತ್ ಪ್ರವಾಹ ದರ್ಶಕ. **Rhéotome** ವಿದ್ಯುತ್ಪ್ರವಾಹ— ನಿರೋಧಕ, ವಿಚ್ಛೇದಕ. **Rhéostat** ಸ್ಥಿರವಾಗಿ ಒಂದು ನಿಗದಿಯಾದ ಬಲವಿರು ವಂತೆ ವಿದ್ಯುತ್ಪ್ರವಾಹವನ್ನು ನಿಯತಿಗೊಳಿಸುವ ಸಾಧನ: ವಿದ್ಯುತ್ ಪ್ರವಾಹ ಬಲ ನಿಯಂತ್ರಕ.

Rhétor. **Rhetoric** ನೋಡಿ.

Rhétoric ರೆಟೊರಿಕ್ (ನಾ.) ವಾಗ್ಮಿ ಕಲೆ; ಭಾಷಣ ಚಾತುರ್ಯ, ಲೇಖನ ಚಾತುರ್ಯ; —ಕಲೆ; ಅಲಂಕಾರ (ಶಾಸ್ತ್ರ); ಮನೋರಂಜಕ, ಅಲಂಕಾರಿಕ, —ಭಾಷೆ (ಅನೇಕ ವೇಳೆ ಕೃತಕತೆ, ಡಾಂಭಿಕತೆ, ಉತ್ಪ್ರೇಕ್ಷೆ, ಮೊ. ಗಳ ಸೂಚನೆಯುಳ್ಳದ್ದು). (ದೃಷ್ಟಿಯ ಅಥವಾ ಅಭಿನಯದ) ಮನೋ ರಂಜಕತೆ, ಆಕರ್ಷಕತೆ (*Of* ಉಪ. ದೊಡನೆ) (The heavenly r. of thine eye). **Rhetórical** ರಿಟಾರಿಕಲ್ (ಗು.) ಮನವೊಪ್ಪಿ ಸುವುದಕ್ಕಾಗಿ ಅಥವಾ ಭಾವೋತ್ತೇಜನಕ್ಕಾಗಿ ಹೇಳಿದ; ಕೃತಕ, ಆಡಂಬರ, —ಭಾಷೆಯ(ಲ್ಲಿ ಹೇಳಿದ); ವಾಗ್ಮಿ ಕಲೆಯ; ಅಲಂಕಾರ ರೀತಿಯ; ಅಲಂಕಾರಿಕ [R. question ಭಾವೋತ್ತೇಜನಕ್ಕಾಗಿ (ವಿಷಯ ತಿಳಿಯುವುದಕ್ಕಾಗಲ್ಲ) ಕೇಳಿದ ಪ್ರಶ್ನೆ (ಉದಾ., Nobody cares ಎಂಬುದಕ್ಕೆ who cares ?)]. ಅಲಂಕಾರ(ಗಳನ್ನುಪಯೋಗಿಸುವ) ಕಲೆಯ. ಅಲಂಕಾರ(ಭಾಷಾ) ಪ್ರಿಯ. **Rhetórically** (ಕ್ರಿ. ವಿ.);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rhétor ರೀಟಾ(ಟ)ರ್ (ನಾ.) (ಪುರಾತನ ಗ್ರೀಕ್ ಮತ್ತು ರೋಮನರಲ್ಲಿ) ವಾಗ್ಮಿ ಕಲೆಯ —ಬೋಧಕ, ಪಂಡಿತ. (ವಿರ. ಪ್ರ.) ತಿರುಳಿಲ್ಲದ ವಾಗ್ಮಿ. **Rhetorícian** ರೆಟೊರಿಷನ್ (ನಾ.) = Rhetor. ಆಲಂಕಾರಿಕ—ಭಾಷಣಕಾರ, ಲೇಖಕ.

Rheum ರೂಮ್ (ನಾ.) (ಪ್ರಾಚೀ. ಪ್ರ.) ಲೋಳೆಗೂಡಿದ ನಯಚರ್ಮದಿಂದ ಸ್ರವಿಸುವ ದ್ರವರೂಪದ ಸ್ರಾವ: ಕಣ್ಣೀರು, ಜೊಲ್ಲು, ಸಿಂಬಳ, ಮೊ. ವು; ನೆಗಡಿ; ಶೀತ. (ಬ. ವ. ದಲ್ಲಿ) ಸಂಧಿವಾತ (ದ ನೋವುಗಳು). **Rheúmy** (ಗು.) (ಪ್ರಾಚೀ. ಪ್ರ.) ದ್ರವಸ್ರಾವ ರೂಪವಾದ; ದ್ರವಸ್ರಾವ ಹರಿಯು(ತ್ತಿರು)ವ. (ಗಾಳಿಯ ವಿಷಯದಲ್ಲಿ) ತಂಡಿಯಾದ; ಶೀತದಿಂದ ಕೊರೆಯುತ್ತಿರುವ.

Rheúmatism ರೂಮಟಿಸ್ಮ್, (ಗ್ರಾಮ್ಯ) **-tiz** —ಟಿಸ್ (ನಾ.) ಕೀಲುಗಳಲ್ಲಿ ಉರಿಯೂತವೂ ನೋವೂ ಇರುವ ಒಂದು ರೋಗ: ಸಂಧಿವಾತ (Acute r. ಸಂಧಿವಾತ ಜ್ವರ). **Rheumátic** ರುಮ್ಯಾಟಿಕ್ (ಗು., ನಾ.) ಸಂಧಿವಾತದ, —ದಿಂದ ನರಳುತ್ತಿರುವ, ; ಸಂಧಿವಾತದಿಂದಾದ (R. fever ಕೀಲುಗಳಲ್ಲಿ ಉರಿಯೂತವೂ ನೋವೂ ಇರುವ ಸಾಂಕ್ರಾಮಿಕವಲ್ಲದ ಒಂದು ಜ್ವರ : ಸಂಧಿವಾತ ಜ್ವರ. R. walk ಸಂಧಿವಾತದ ನಡಗೆ). (ನಾ.) ಸಂಧಿವಾತ. (ಬ. ವ. ದಲ್ಲಿ; ಬಳ. ಮಾ.) ಸಂಧಿವಾತ ರೋಗಿ. **Rheumátically** (ಕ್ರಿ. ವಿ.); **Rheumáticky** (ಗು.) (ಬಳ. ಮಾ.); **Rheúmato-** ರೂಮ— (ಸ. ಪೂ. ಪ.); **Rheúmatoid** (ಗು.) ಸಂಧಿವಾತ ಲಕ್ಷಣವುಳ್ಳ; ಸಂಧಿವಾತದಿಂದ ನರಳುತ್ತಿರುವ.

Rhínal ರೈನಲ್ (ಗು.) (ಅಂ. ರ. ಶಾ., ಮೊ.) ಮೂಗಿನ (ಹೊಳ್ಳೆಯ)

Rhine[1] ರೈನ್ (ನಾ.) (ಪ್ರಾಂ. ಪ್ರ.) ದೊಡ್ಡ ತೆರೆದ ಚರಂಡಿ; ಮೋರಿ.

Rhine[2] ರೈನ್ (ನಾ.) (ಜರ್ಮನಿಯ) ರೈನ್ ನದಿ [R.-wine ರೈನ್ ಪ್ರಾಂತದ ದ್ರಾಕ್ಷೆತೋಟಗಳಿಂದ ತಯಾರಿಸಿದ ಕೆಲವು ಬಗೆಯ, ಮು. ಬಳಿಯ, ಮದ್ಯ; ರೈನ್ ದ್ರಾಕ್ಷಾಮದ್ಯ (Rhenish ನೋಡಿ). Rhinestone ಒಂದು ಬಗೆಯ ಶಿಲಾ ಸ್ಫಟಿಕ, ಸ್ಫಟಿಕ ಶಿಲೆ; ಒಂದು ಬಗೆಯ ಕೃತಕ ವಜ್ರ; ರೈನ್ ವಜ್ರ]

Rhíno[1] ರೈನೊ (ನಾ.) (ಅಸಂ.) ಹಣ, ರೊಕ್ಕ, ದುಡ್ಡು (ಅನೇಕ ವೇಳೆ Ready r.)

Rhíno[2] ರೈನೊ (ನಾ.) (ಅಸಂ.) = Rhinoceros (ಎಂಬುದರ ಸಂಕ್ಷಿಪ್ತ)

Rhino- ರೈನೊ—, ರೈನಾ— (ಸ. ಪೂ. ಪ.) ಮೂಗು—; ಮೂಗಿನ ಹೊಳ್ಳೆ—; ನಾಸಾ—; ನಾಸಿಕ—. **-pharýngeal** (ಗು.) ಮೂಗು ಮತ್ತು ಗಂಟಲು ಕುಹರಗಳ. **-plástic** (ಗು.), **-plasty** (ನಾ.) ಮೂಗಿನ ರೂಪಲೋಪವನ್ನು ಸರಿಪಡಿಸುವ ಶಸ್ತ್ರಚಿಕಿತ್ಸೆ(ಯ). **Rhínoscope** ನಾಸಾ ಪರೀಕ್ಷಕ (ಸಲಕರಣೆ). **-scópic** —ಸ್ಕಾಪಿಕ್ (ಗು.); **Rhinóscopy** (ನಾ.) ನಾಸಾ ಪರೀಕ್ಷೆ.

Rhinóceros ರೈನಾಸೆರಸ್ (ನಾ.) ಖಡ್ಗಮೃಗ; ಘೇಂಡಾ ಮೃಗ; ಗಂಡಕ (ಮೂಗಿನಮೇಲೆ ಒಂದು ಅಥವಾ ಎರಡು ಕೊಂಬುಗಳುಳ್ಳ ಮತ್ತು ಮಡಿಕೆ ಬಿದ್ದ ದಪ್ಪ ಚರ್ಮದ ರಕ್ಷಾ ಕವಚವುಳ್ಳ, ಆಫ್ರಿಕದ ಮತ್ತು ದ. ಏಷ್ಯದ ವಾಸಿಯಾದ, ಭಾರವಾದ ಒಂದು ದೊಡ್ಡ ಚತುಷ್ಪಾದಿ). **Rhinocerótic** (ಗು.)

Rhizo- ರೈಸೊ—, ರೈಸಾ— (ಸ. ಪೂ. ಪ.) ಬೇರು—; ಮೂಲ— (ಮು., ಸ. ವಿ. ಪದಗಳಲ್ಲಿ): **-carp** ಬಹುಕಾಲ ಇರುವ ಬೇರೂ ಆಗಾಗ ಅಳಿದುಹೋಗುವ ದಂಟುಗಳೂ ಉಳ್ಳ ಗಿಡ, ಸಸ್ಯ.

Rhízome ರೈಸೋಮ್ (ನಾ.) ನೆಲದ ಮೇಲೆ ಅಥವಾ ಒಳಗಡೆ ಉದ್ದಕ್ಕೂ ಹರಿಯುತ್ತ ತಾಳಿನ ಉದ್ದಕ್ಕೂ ಬೇರು ಬಿಡುವ ಕಾಂಡ; ಬೇರು ಕಾಂಡ.

Rho ರೋ (ನಾ.) ಗ್ರೀಕ್ ಭಾಷೆಯ 'ರ' ಕಾರ (P, ρ)

Rhodes Scholar ರೋಡ್ಸ್ ಸ್ಕಾಲರ್ (ನಾ.) ೧೯೦೨ರಲ್ಲಿ Cecil Rhodes ಎಂಬಾತನು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿದ ೧೯೦ ವಿದ್ಯಾರ್ಥಿ ವೇತನಗಳಲ್ಲಿ ಒಂದನ್ನು ಪಡೆದ, ಬ್ರಿಟಿಷ್ ಸ್ವಾಸ್ಥ್ಯಗಳ ಅಥವಾ ಅಮೆ. ಸಂ. ಗಳ ಪ್ರಜೆ: ರೋಡ್ಸ್ ವಿದ್ಯಾರ್ಥಿವೇತನಿ.

Rhódian ರೋಡಿಯನ್ (ಗು., ನಾ.) ರೋಡ್ಸ್ ದ್ವೀಪದ (ನಿವಾಸಿ)

Rhódium[1] ರೋಡಿಯಂ (ನಾ.) ಕನೇರಿ ದ್ವೀಪಗಳಲ್ಲಿ ದೊರೆಯುವ ಒಂದು ಬಗೆಯ ಸುವಾಸನೆಯ ದಾರು: ರೋಡಿಯಂ ದಾರು (= R.-wood); ಬೀಟೆ (Oil of r. ಇದರಿಂದ ತೆಗೆದ ಎಣ್ಣೆ; ರೋಡಿಯಂ ಎಣ್ಣೆ)

Rhódium[2] ರೋಡಿಯಂ (ನಾ.) ಪ್ಲಾಟಿನಂ ವರ್ಗಕ್ಕೆ ಸೇರಿದ ಗಟ್ಟಿಯಾದ ಒಂದು ಬಿಳಿಯ ಲೋಹ: ರೋಡಿಯಂ ಲೋಹ [R. pen ತುದಿಗೆ ರೋಡಿಯಂ ಹಾಕಿರುವ ಉಕ್ಕಿನ (ಮುಳ್ಳಿನ) ಲೇಖನಿ]. **Rhódic** (ಗು.) (ರ. ವಿ.) ಸಂಯೋಗವಾಗಿರುವ ಆಮ್ಲಜನಕದೊಡನೆ ಹೋಲಿಸಿದರೆ ತಾರತಮ್ಯವಾಗಿ ಕಡಮೆ ಪ್ರಮಾಣದ ರೋಡಿಯಂ ಇರುವ. **Rhódous** (ಗು.) (ರ. ವಿ.) —ಹೆಚ್ಚು ಪ್ರಮಾಣದ—.

Rhododéndron ರೋಡೊಡೆಂಡ್ರನ್ (ನಾ.) ದೊಡ್ಡ ಹೂವು ಬಿಡುವ, Azalea ವರ್ಗಕ್ಕೆ ಸೇರಿದ, ನಿತ್ಯಹಸುರಿನ ಒಂದು ಗುಲ್ಮ ಜಾತಿ.

Rhomb ರಾಮ್, (ಮುಂದೆ ಸ್ವರ ಬಂದಾಗ) ರಾಂಬ್ (ನಾ.) ವಿಷಮಕೋನ ಸಮಬಾಹು ಚತುರ್ಭುಜ; ವಜ್ರಾಕೃತಿ(ಯ ವಸ್ತು ಅಥವಾ ಭಾಗ). (ಸ್ಫಟಿಕ) ಆರು ಸಮ ವಜ್ರಾಕೃತಿ ಮುಖಗಳುಳ್ಳ ಘನ: ವಜ್ರಮುಖಿ. **Rhómbic** (ಗು.); **Rhombo-** (ಸ. ಪೂ. ಪ.); **Rhombohédron** ರಾಂಬೊಹೀ(ಹೆ)ಡ್ರನ್ (ನಾ.; ಬ. ವ. -ra, -rons) ಆರು ಸಮವಜ್ರಾಕೃತಿ ಮುಖಗಳುಳ್ಳ ಘನ (ರೂಪದ ಸ್ಫಟಿಕ); ವಜ್ರಮುಖಿ (ಸ್ಫಟಿಕ). **Rhombohédral** (ಗು.); **Rhómboid** ರಾಂಬಾಯ್ಡ್ (ಗು., ನಾ.) ಸರಿಸುಮಾರು ವಜ್ರಾಕೃತಿಯ; ವಜ್ರಾಕೃತಿ ಕಲ್ಪ [R. muscle (ಭುಜಾಸ್ಥಿಯನ್ನು ಬೆನ್ನು ಹುರಿಯೊಡನೆ ಕೂಡಿಸುವ) ವಜ್ರಾಕೃತಿ ಕಲ್ಪ ಸ್ನಾಯು]. (ನಾ.) ಎದುರುಬದುರಿನ ಕೋನಗಳು ಮತ್ತು ಬಾಹುಗಳು (ಮಾತ್ರ) ಸಮವಾಗಿರುವ ಚತುರಸ್ರ; ಸಮಾನಾಂತರ ಚತುರ್ಭುಜ; ವಿಷಮಾಯತ; 'ರಾಂಬಾಯ್ಡ್'. = R. muscle. **Rhomboídal** (ಗು.) ವಜ್ರಾಕೃತಿಯಂತಿರುವ; ವಜ್ರಾಕೃತಿ ಕಲ್ಪ; = Rhomboid (ಗು.). **Rhomboídally** (ಕ್ರಿ. ವಿ.); **Rhómbus** (ನಾ.; ಬ. ವ. -i -ಬೈ, -uses -ಬಸೆಸ್) = Rhomb. ಹಲವು ಬಗೆಯ ಚಪ್ಪಟೆ ಮೀನು ಜಾತಿ.

Rhótacism ರೋಟಸಿಸ್ಮ್ (ನಾ.), **Rhótacize** —ಸೈಸ್ (ಕ್ರಿ. ಅಕ.) 'ರ' ಕಾರದ ಅತಿಯಾದ ಅಥವಾ ವಿಚಿತ್ರರೀತಿಯ ಉಚ್ಚಾರಣೆ(ಯಿಂದ ಮಾತನಾಡು); ಬೇರೆ ಧ್ವನಿಗಳನ್ನು 'ರ' ಕಾರವಾಗಿ ಮಾರ್ಪಡಿಸು(ವುದು)

Rhúbarb ರೂಬಾರ್ಬ್ (ನಾ.) ಚೀನಾ ಮತ್ತು ಟಿಬೆಟ್ಟುಗಳ ಒಂದು ಸಸ್ಯದ ಬೇರು; ಇದರಿಂದ ಮಾಡಿದ ಭೇದಿಯೌಷಧ, ವಿರೇಚಕ; ರೇವಲ್ಚಿನ್ನಿ, ರೇವಾಚಿನ್ನಿ [ಸಾ., Chinese, East Indian, Russia or Turkey r. (ಆಮದು ಸ್ಥಳಗಳ ಹೆಸರನ್ನನುಸರಿಸಿ ಭೇದಗಳು)]. ಹಲವು ಬಗೆಯ ತೋಟದ ಸಸ್ಯ(ದ ಮೆತು ತಿರುಳಿನ ಎಲೆ ದಂಟು). (ವಿಶೇಷಣವಾಗಿ, ಬಣ್ಣದ ವಿಷಯದಲ್ಲಿ; ಚೀನಾ ರೇವಲ್ಚಿನ್ನಿಯಂಥ) ಹಳದಿ ಛಾಯೆಯ ಕಂದಿನ. **Rhúbarby** (ಗು.)

Rhumb ರಂ(ಬ್) (ನಾ.) (ನಾವೆ) ಎಲ್ಲ ಮಧ್ಯಾಹ್ನ ರೇಖೆಗಳನ್ನೂ ಒಂದೇ ಕೋನದಲ್ಲಿ ಕತ್ತರಿಸುವ ರೇಖೆ; ಒಂದೇ ದಿಕ್ಕಿನಲ್ಲಿ ಪ್ರಯಾಣ ಮಾಡುವ ಹಡಗು ಅನುಸರಿಸುವ ರೇಖೆ (= R.-line). ದಿಕ್ಸೂಚಿಯಲ್ಲಿ ಗುರುತಿಸಿರುವ ಯಾವುದಾದರೂ ಎರಡು ಪಕ್ಕ ಪಕ್ಕದ ದಿಕ್ಕುಗಳಿಗೆ ಪರಸ್ಪರ ಇರುವ ಕೋನ ದೂರ (= ೧೧° ೧೫')

Rhyme, Rime ರೈಮ್ (ನಾ., ಕ್ರಿ.) (ಅಂತ್ಯ)ಪ್ರಾಸ [Give rhymes ಪ್ರಾಸಕೂಡುತ್ತವೆ. Single *or* male *or* masculine r. ಏಕ ಉಚ್ಚಾರಾಂಶ ಪ್ರಾಸ. Double *or* female *or* feminine r. (Female ನೋಡಿ). Treble *or* triple, quadruple, r. ತ್ರಿಪ್ರಾಸ, ಚತುಃಪ್ರಾಸ (ಪ್ರಾಸವಿರುವ ಉಚ್ಚಾರಾಂಶಗಳ ಸಂಖ್ಯಾನುಗುಣವಾಗಿ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Imperfect r. ಅಪೂರ್ಣ, ಊನ, —ಪ್ರಾಸ (ಉದಾ., love & move, phase & race). Without r. or reason ಕಾರಣ ಹೂರಣ ಒಂದೂ ಇಲ್ಲದ; ಶುದ್ಧ ಅವಿವೇಕವಾದ, —ವಾಗಿ]. (ಏ. ವ. ಅಥವಾ ಬ. ವ. ದಲ್ಲಿ) ಪ್ರಾಸವಿರುವ —ಪದ್ಯ, ಪಾದ, ಕವಿತೆ; ಪ್ರಾಸಪ್ರಯೋಗ [Nursery r. ಮಕ್ಕಳ ಹಾಡು; ಶಿಶುಗೀತೆ. R. royal =ababbcc ಕ್ರಮದಲ್ಲಿ ಅಂತ್ಯಪ್ರಾಸದ ಪಾದಗಳಿರುವ ಒಂದು ಪದ್ಯ (Chaucer ಕವಿಯ Clerkes Tale, ಮೊ. ಪದ್ಯಗಳಲ್ಲಿರುವಂತೆ)]. (ಮತ್ತೊಂದರೊಡನೆ) ಪ್ರಾಸವಾಗುವ, ಪ್ರಾಸಕೂಡುವ, —ಮಾತು; ಪ್ರಾಸಶಬ್ದ (*To* ಉಪ. ದೊಡನೆ). (ಕ್ರಿ.) ಪದ್ಯ ಬರೆ. (ಕಥೆ, ಮೊ. ನ್ನು) ಪ್ರಾಸವಿಟ್ಟು ಬರೆ, ಪ್ರಾಸಾತ್ಮಕವಾಗಿ ಮಾಡು [Rhymed verse ಪ್ರಾಸಪದ್ಯ (ಎದುರು ಪದ: Blank verse)]. (ಕಾಲವನ್ನು) ಪ್ರಾಸ ಕಟ್ಟುವುದರಲ್ಲಿ, ಕವನ ಕಟ್ಟುವುದರಲ್ಲಿ, —ಕಳೆದುಬಿಡು (*Away* ಉಪ. ದೊಡನೆ); ಪ್ರಾಸವಾಗು, ಪ್ರಾಸಕೂಡು (*To* ಅಥವಾ *with* ಉಪ. ದೊಡನೆ); ಪ್ರಾಸಗಳನ್ನು —ಹೊಸೆ, ಆಯಿ (ಆಯ್ದು ಸೇರಿಸು) [Rhyming dictionary (ಕವನ ರಚಿಸುವವರ ಉಪಯೋಗಕ್ಕಾಗಿ ಮಾಡಿದ) ಪ್ರಾಸ ಪದಗಳ ನಿಘಂಟು]. **Rhýmeless** (ಗು.); **Rhýmelessness** (ನಾ.); **Rhýmer** (ನಾ.); **Rhýmester** (ನಾ.) ಕವನಕಟ್ಟುವವನು; ಪ್ರಾಸಕಾರ (ಕವಿ); ಕುಕವಿ. **Rhýmist** (ನಾ.) ಕವನಕಾರ, ಪದ್ಯಕಾರ; ಪ್ರಾಸಗಳನ್ನುಪಯೋಗಿಸುವವನು; ಪ್ರಾಸಕಾರ.

Rhýthm ರಿದ್‌ಮ್, ರಿತ್‌ಮ್ (ನಾ.) ಗುರು ಲಘುಗಳ ಅಥವಾ ಸ್ವರ ಭಾರವಿರುವ ಮತ್ತು ಇಲ್ಲದ ಉಚ್ಚಾರಾಂಶಗಳ ವಿವಿಧ ಸಂಯೋಜನೆಗಳಿಂದ ಫಲಿಸುವ ಛಂದಸ್ಸಿನ ಓಟ: ಛಂದೋಗತಿ; ತರಂಗಧಾಟಿ; ಸ್ವರ ತರಂಗ. (ಪದ್ಯದ ಅಥವಾ ಗದ್ಯದ) ಓಟ, ಹರಿತ; ಛಂದೋಬದ್ಧತೆ. (ಸಂ.) ತಾಳ; ತಾಳಬದ್ಧ ರಚನೆ. (ಕಲೆಯಲ್ಲಿ) ಭಾಗಗಳ ಪರಸ್ಪರ ಸಾಮಂಜಸ್ಯ, ಸಾಮರಸ್ಯ. (ಭೌ. ವಿ., ಶ. ವಿ. ಮತ್ತು ಸಾಮಾನ್ಯ ಪ್ರ.) ತಾಳಗತಿಯ —ಚಲನೆ, ಮಿಡಿತ (ಹೃದಯ, ನಿಶ್ವಾಸೋಚ್ಛ್ವಾಸ, ಮೊ. ಗಳದು). **Rhýthmic(al)** (ಗು.); **Rhýthmically** (ಕ್ರಿ. ವಿ.); **Rhýthmless** (ನಾ.); **Rhýthmist** (ನಾ.) ತಾಳದಲ್ಲಿ ಪಂಡಿತ.

Ríant ರೈಅಂಟ್ (ಗು.) (ಮುಖ, ಕಣ್ಣು, ಮೊ. ಗಳ ವಿಷಯದಲ್ಲಿ, ಮತ್ತು ಮು., ಭೂ ದೃಶ್ಯದ ವಿಷಯದಲ್ಲಿ) ನಗೆ ಸೂಸುವ; ಪ್ರಫುಲ್ಲ; ಕಳಕಳಿಸುತ್ತಿರುವ; ಉಲ್ಲಾಸಕರ.

Rib ರಿಬ್ (ನಾ., ಕ್ರಿ. ಸಕ.) ಪಕ್ಕೆಲುಬು; ಬರಿ ಎಲುಬು [True, sternal, r. ಎದೆ ಮೂಳೆಗೂ ಸೇರಿಕೊಂಡಿರುವ ಪಕ್ಕೆಲುಬು (ಎದುರು ಪದಗಳು: False, floating, asternal, short, r. ಎದೆ ಮೂಳೆಗೆ ಸೇರಿಕೊಂಡಿಲ್ಲದ ಪಕ್ಕೆಲುಬುಗಳು). Poke one in the ribs (Poke[2] ನೋಡಿ). Smite under fifth r. ಇರಿದು ಕೊಲ್ಲು. R. or ribs of beef, etc. (ಆಹಾರಕ್ಕಾಗಿ ಉಪಯೋಗಿಸುವ) ದನ, ಮೊ. ರ ಪಕ್ಕೆಲುಬಿನ ಮಾಂಸದ ತುಂಡು. Spare-r. (Spare ನೋಡಿ)]. (ಹಾಸ್ಯ ಪ್ರ., ಬೈಬಲ್ಲಿನಲ್ಲಿ ಹೇಳಿರುವುದರ ಸಂಬಂಧದಿಂದ) ಹೆಂಡತಿ; ಹೆಂಗಸು. ಬಲಕೊಡುವುದಕ್ಕಾಗಿ ಅಥವಾ ಆಧಾರಕ್ಕಾಗಿ ಅಡ್ಡಕ್ಕೊ ಇರುವ ಉಬ್ಬುರಚನೆ ಅಥವಾ ಉದ್ದಕ್ಕೂ ಇರುವ ಉಬ್ಬು: ಅಡ್ಡಪಟ್ಟಿ; ಬೆನ್ನುಪಟ್ಟಿ [ಉದಾ., ಎಲೆಯ ದಿಂಡು; ಗರಿಯ ಕಾಂಡ; ಪರ್ವತದ ಚಾಚು; ಅದುರಿನ ನರ, ಎಳೆ; ನೇಗಿಲು ಸಾಲುಗಳ ಮಧ್ಯದ ದಿಂಡು; ಮರಳಿನ ಮೇಲಿರುವ ತೆರೆಯ ಉಬ್ಬು ಗುರುತು; ಕಸೂತಿಯಲ್ಲಿ ಉಬ್ಬುಗೆರೆ; (ಹಡಗಿನಲ್ಲಿ) ಹಲಗೆ ಜೋಡಿಸಿ ಮೊಳೆಗಳಿಂದ ಬಂಧಿಸಲು ಹಾಕಿರುವ ಪಕ್ಕ ಡೊಂಕು ತೊಲೆ(ಗಳಲ್ಲೊಂದು); ಇಂತಹ ಕಬ್ಬಿಣದ ತೊಲೆ. ಕಮಾನು ಮಾಳಿಗೆಗೆ ಆಧಾರವಾದ ಕಮಾನು; ಚಾವಣಿ ಕಮಾನುಗಳ ಕೂಡಂಚು (ಮೇಲಿನ ಅಲಂಕಾರದ ಉಬ್ಬು ಕಟ್ಟಡ); ಒಳಮಾಳಿಗೆ, ಮೊ. ರ ಅಡ್ಡ ಉಬ್ಬು ಕಟ್ಟಡ; ಸೇತುವೆಯ ಭಾರವನ್ನು ಹೊರುವ ಮರದ ಅಥವಾ ಕಬ್ಬಿಣದ ತೊಲೆ; ಕೊಡೆಯ ಕಿಲುಕಡ್ಡಿ]. (R.-grass, -wort ಕಿರಿದಗಲದ ಎಲೆಯುಳ್ಳ ಬಾಳೆ ಗಿಡ). (ಕ್ರಿ.) ಬೆನ್ನುಪಟ್ಟಿ (ಮೊ. ನ್ನು) —ಒದಗಿಸು, ಕೊಡು, ಆಗಿರು. ದಿಂಡುಗಳನ್ನು (ಗುರುತು) ಮಾಡು; ದಿಂಡು ಬಿಟ್ಟು ಉಳು; ಅರೆಯುಳುಮೆ ಮಾಡು. **(-)ribbed** (ಗು.); **Ríbless** (ಗು.); **Ríbbing** (ನಾ.)

Ríbald ರಿಬಲ್ಡ್ (ನಾ., ಗು.) ಅಶ್ಲೀಲ ಹಾಸ್ಯಗಾರ; ಭಂಡ ನಕಲಿ; ಅಸಭ್ಯಹಾಸ್ಯವನ್ನು, ಅಶ್ಲೀಲಭಾಷೆಯನ್ನು, —ಉಪಯೋಗಿಸುವವನು; ಹೊಲಸು ಮಾತಾಡುವವನು. (ಗು.) (ಭಾಷೆ ಅಥವಾ ಅದನ್ನು ಆಡುವವನ ವಿಷಯದಲ್ಲಿ) ಭಂಡ, ಪುಂಡ, ಅಸಭ್ಯ, ಅಶ್ಲೀಲ, ಹೊಲಸು. **Ríbaldry** (ನಾ.)

Ríband ರಿಬಂಡ್ (ನಾ.) =Ribbon. **Ríbanded** (ಗು.) =Ribboned.

Ríbband ರಿಬಂಡ್ (ನಾ.) (ಹಡಗನ್ನು ಕಟ್ಟುವಲ್ಲಿ ಪಕ್ಕ ಪಟ್ಟಿಗಳನ್ನು ಅವುಗಳ ಸ್ಥಾನದಲ್ಲಿ ಭದ್ರವಾಗಿ ನಿಲ್ಲಿಸುವುದಕ್ಕೂ, ಹಡಗನ್ನು ನೀರಿಗೆ ಬಿಡುವಲ್ಲಿ ಜಾರು ಹಲಗೆಯನ್ನು ಭದ್ರವಾಗಿ ಹಿಡಿದಿಡುವುದಕ್ಕೂ, ಫಿರಂಗಿಯ ಅಟ್ಟ ಕಟ್ಟುವುದಕ್ಕೂ, ದೋಣಿ ಸೇತುವೆಗೂ ಉಪಯೋಗಿಸುವ) ಮರದ ಅಡ್ಡ ದಿಮ್ಮಿ, ಹಗುರ ತೊಲೆ, ಬಿಗಿ ಪಟ್ಟಿ, ಕೊರಡು.

Ríbbon ರಿಬನ್ (ನಾ.) (ಮು., ಉಡುಪುಗಳನ್ನು ಅಂದಗೊಳಿಸುವುದಕ್ಕಾಗಿ ಉಪಯೋಗಿಸುವ) ರೇಷ್ಮೆಯ (ಅಥವಾ ಇತರ ನಯ ಪದಾರ್ಥದ) ನೆಯ್ದ ಪಟ್ಟಿ; ಅಲಂಕಾರ ಪಟ್ಟಿ; ಕಟ್ಟುವ ಪಟ್ಟಿ; ('ನೈಟ್' ಪದವೀಧರ ಶ್ರೇಣಿ, ಸಂಘ, ಪ್ರೌಢವಿದ್ಯಾಶಾಲೆ, ಮಲ್ಲರ ತಂಡ, ಮೊ. ರ ಸದಸ್ಯತ್ವವನ್ನು ಸೂಚಿಸಲು ಧರಿಸುವ) ವಿಶಿಷ್ಟವರ್ಣದ ಗುರುತು ಪಟ್ಟಿ, ಬಿರುದು ಪಟ್ಟಿ [Blue r. (Blue ನೋಡಿ)]. ಯಾವುದಾದರೂ ಪದಾರ್ಥದ ಕಿರಿದಗಲದ ಉದ್ದನೆಯ ಪಟ್ಟಿ; ಪಟ್ಟಿಯ ಹಾಗಿರುವ —ವಸ್ತು, ಗುರುತು. (ರೂಪ.) ಓಣಿ, ಸಾಲು. (ಬ. ವ. ದಲ್ಲಿ) ಚಿಂದಿ; ಲಗಾಮು [Hang in, be torn to, ribbons ಚಿಂದಿ ಚಿಂದಿಯಾಗಿ—ತೂಗಾಡು, ಹರಿದು ಹೋಗು. Handle, take, the ribbons ಲಗಾಮು ಹಿಡಿ(ದು ಬಂಡಿ, ಕುದುರೆ, ನಡಸು). R.-fish ಉದ್ದನೆಯ ತೆಳು ಚಪ್ಪಟೆ ಮೀನು ಜಾತಿ. R.-grass (ತೆಳು ಗರಿಯ) ಹುಲ್ಲು ಜಾತಿ]. **(-)ribboned** (ಗು.)

Ríbes ರೈಬೀಸ್ (ನಾ.) (ಸ. ವಿ.) ದ್ವೀಪ ದ್ರಾಕ್ಷಿಯ ಗಿಡ; 'ಗೂಸ್ ಬೆರಿ' ಗಿಡ.

Ríbston píppin ರಿಬ್‌ಸ್ಟನ್ ಪಿಪಿನ್ (ನಾ.) (ಊಟವಾದ ಮೇಲೆ ತಿನ್ನುವ) ಒಂದು ಬಗೆಯ ಸೇಬು.

Ricárdian ರಿಕಾರ್ಡಿಯನ್ (ಗು., ನಾ.) (ವ್ಯಾಪಾರದಲ್ಲಿ ಸ್ಪರ್ಧೆ ಸ್ವತಂತ್ರವಾಗಿರಬೇಕೆಂದು ವಾದಿಸಿದ) Ricardo ಎಂಬ ಅರ್ಥಶಾಸ್ತ್ರಜ್ಞನ (ಅನುಯಾಯಿ); ರಿಕಾರ್ಡೋವಿನ ಮತಾನುಸಾರವಾದ.

Rice ರೈಸ್ (ನಾ.) ನೆಲ್ಲು; ಬತ್ತ(ದ ಗಿಡ); ಶಾಲಿ; ಅಕ್ಕಿ; ತಂಡುಲ. **R.-bird** ಜಾವಾ ದ್ವೀಪದ ಗುಬ್ಬಚ್ಚಿ; ಉ. ಅಮೆರಿಕದ ಒಂದು ಹಾಡುಹಕ್ಕಿ. **R.-milk** (ಹಾಲಿನಲ್ಲಿ ಬೇಯಿಸಿ ಮಾಡಿದ) ಅಕ್ಕಿಯ —ಪಾಯಸ, ಗಂಜಿ. **R.-paper** ಫಾರ್ಮೋಸ ದ್ವೀಪದ ಒಂದು ಗಿಡದ ಒಳತಿರುಳಿನಿಂದ ತಯಾರಿಸಿದ, ಚೀನಾದೇಶದ ಚಿತ್ರಗಾರರು ವರ್ಣ ಚಿತ್ರ ಬರೆಯಲು ಉಪಯೋಗಿಸುವ, ಒಂದು ಬಗೆಯ ಕಾಗದ: ನೆಲ್ಲು ಕಾಗದ (ಇದಕ್ಕೆ ನೆಲ್ಲಿನ ಹೆಸರು ತಪ್ಪಾಗಿ ಬಂದಿದೆ)

Rich ರಿಚ್ (ಗು.) ಐಶ್ವರ್ಯ ಯುಕ್ತ, ಸಿರಿವಂತ, ಸಂಪದ್ಭರಿತ, ಧನಿಕ, ಹಣವಂತ [(ನಾ. ಆಗಿ ನಹ: ಉದಾ.) The r. ಧನಿಕರು, ಐಶ್ವರ್ಯವಂತರು. R. & poor ಧನಿಕರೂ ಬಡವರೂ]. (ದೇಶ, ಕಾಲ, ಭೂ ಗುಣ, ಮೊ. ಗಳ ವಿಷಯದಲ್ಲಿ) ಸ್ವಾಭಾವಿಕ ಸಂಪತ್ತಿನಿಂದ ತುಂಬಿದ, ಪ್ರಕೃತಿ ಸಂಪದ್ಭರಿತ; ಬೆಲೆಬಾಳುವ (ಖನಿಜ) ವಸ್ತುಗಳು, ಉತ್ಪನ್ನಗಳು, —ಹೇರಳವಾಗಿರುವ (*In* ಉಪ. ದೊಡನೆ). ಫಲಸಮೃದ್ಧವಾದ; ಫಲವತ್ತಾದ; ಸಮೃದ್ಧಿಯ; ಗುಣಾತಿಶಯವುಳ್ಳ (R. offerings. A r. harvest). (ನರಿಗೆ ಮೊ. ರಿಂದ ಉಡುಪು, ಶಿಲ್ಪಾಲಂಕಾರಗಳಿಂದ ಪೀಠೋಪಸ್ಕರ, ಕಟ್ಟಡ ಮೊ. ವು, ಭಕ್ಷ್ಯಾದಿಗಳಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಔತಣದ ಊಟ, ಮೊ. ದು) ವೈಭವಯುಕ್ತವಾದ, ಶೋಭಾಯಮಾನವಾದ, ಬಹು ಬೆಲೆಯ, ಬಹು ಪರಿಷ್ಕಾರವಾದ (*With* ಉಪ. ದೊಡನೆ): (ಆಹಾರದ ವಿಷಯದಲ್ಲಿ) ಹೆಚ್ಚು ಪ್ರಮಾಣದಲ್ಲಿ ಜಿಡ್ಡು, ಎಣ್ಣೆ, ಬೆಣ್ಣೆ, ಮೊಟ್ಟೆ, ಸಕ್ಕರೆ, ಮಸಾಲೆ, ಮೊ. ಗಳನ್ನುಳ್ಳ; ಪುಷ್ಟಿಕರ ಮತ್ತು ರುಚಿಕರ; (ಬಣ್ಣ, ನಾದ, ವಾಸನೆ —ಇವು) ಪೂರ್ಣವೂ ಸ್ವಚ್ಛವೂ ಆದ; ಸ್ನಿಗ್ಧ; ಗಾಢವಾದ, ದಟ್ಟವಾದ, ತುಂಬಿದ. ಯಥೇಷ್ಟ; ಸಮೃದ್ಧ; ಪುಷ್ಕಲ. (ಘಟನೆಗಳ ವಿಷಯದಲ್ಲಿ) ವಿಶೇಷ ಸ್ವಾರಸ್ಯದ; ಬಹು ಮನೋರಂಜಕ; ಹಾಸ್ಯ ಭರಿತ. **Rich-** =Richly (R.-clad, -bound, -glittering, etc.). **Ríchen** (ಕ್ರಿ.) (ವಿರ. ಪ್ರ.); **Ríchness** (ನಾ.); **Ríches** ರಿಚೆ(ಚಿ)ಸ್ (ನಾ., ಸಾ., ಬ. ವ.) ಐಶ್ವರ್ಯ; ಸಿರಿ(ತನ); ಸಂಪತ್ತು. **Ríchly** (ಕ್ರಿ. ವಿ.) (ಗುಣವಾಚಕಾರ್ಥದಲ್ಲಿ) ಪೂರ್ತಿಯಾಗಿ, ಚೆನ್ನಾಗಿ, ನಿಸ್ಸಂದೇಹವಾಗಿ (R. deserves)

Ríchard ರಿಚರ್ಡ್ (ನಾ.) (ಕ್ರೈಸ್ತರಲ್ಲಿ) ಗಂಡಸರ ಒಂದು ಹೆಸರು, ಅಂಕಿತನಾಮ. **R. Roe** (ಹಿಡುವಳಿಯಿಂದ ಹೊರಡಿಸುವ ನ್ಯಾಯ ವ್ಯವಹಾರದಲ್ಲಿ) ಕಾಲ್ಪನಿಕ ಪ್ರತಿವಾದಿ. R.'s himself again [ವಿಷಣ್ಣತೆ, ಭಯ, ಕಾಯಿಲೆ, ಮೊ. ಗಳಿಂದ ಚೇತರಿಸಿಕೊಂಡವನು (ಅಥವಾ ಚೇತರಿಸಿಕೊಂಡವನಿಗೆ) ಹೇಳುವ ಮಾತು]

Rick[1] ರಿಕ್ (ನಾ., ಕ್ರಿ. ಸಕ.) ಹುಲ್ಲುಮೆದೆ, ಬಣವೆ; ಧಾನ್ಯದ ಒಟ್ಟಿಲು (ಮು., ಕ್ರಮವಾಗಿ ಕಟ್ಟಿದ್ದು ಮತ್ತು ಮೇಲುಚಾವಣಿಯನ್ನುಳ್ಳ ಸ್ಥಳದಲ್ಲಿಟ್ಟದ್ದು). [R.-barton =R.-yard. R.-cloth ಮೇಲ್ಮರೆಯಿಲ್ಲದ ಬಣವೆಗೆ ಹೊದ್ದಿಸುವ (ನಾರಿನ) ರಟ್ಟು ಬಟ್ಟೆ; ಬಣವೆಯ ಹೊದಿಕೆ (ಬಟ್ಟೆ). R.-stand ಮೆದೆ ಒಟ್ಟುವ ಅಟ್ಟಣಿಗೆ ಆಧಾರವಾದ ಮರದ ಅಥವಾ ಕಲ್ಲಿನ ಗಿಡ್ಡ ಕಂಬ(ಗಳು): ಮೆದೆಗಂಬ. R.-yard ಮೆದೆಗಳಿಗಾಗಿ ಕಟ್ಟಿದ ಆವರಣ; ಮೆದೆ ಅಂಗಳ]. (ಕ್ರಿ.) ಮೆದೆ(ಯಾಗಿ) ಒಟ್ಟು; ಒಟ್ಟಿಲು ಮಾಡು.

Rick[2]. **Wrick** ನೋಡಿ.

Ríckets ರಿಕೆಟ್ಸ್ (ನಾ.) (ಏ. ವ. ಅಥವಾ ಬ. ವ. ವಾಗಿ ಪ್ರ.; ಸಮಾಸಗಳಲ್ಲ -et ರೂಪ ಪ್ರ., ಉದಾ., Ricket-producing, rickety) ಮೂಳೆಗಳು (ಮು., ಬೆನ್ನುಮೂಳೆಗಳು) ಮೆತುವಾಗುವುದು ಮತ್ತು ಬಿಚ್ಚು ಮಂಡಿಗಳಾಗುವುದು ಲಕ್ಷಣವಾಗುಳ್ಳ ಮಕ್ಕಳ ಒಂದು ರೋಗ: ಕುಟಿಲ ವಾತ; ಮೆತುಮೂಳೆರೋಗ; ಮುರುಟು, ಮುಡು, —ದೋಷ. **Ríckety** (ಗು.) —ದಿಂದ ನರಳುವ; —ರೋಗದ; —ರೋಗ ಲಕ್ಷಣದ. (ವ್ಯಕ್ತಿಗಳ ಅಥವಾ ವಸ್ತುಗಳ, ಮು., ಪೀಠೋಪಸ್ಕರಗಳ ವಿಷಯದಲ್ಲಿ) ಶಿಥಿಲ, ದಾರ್ಢ್ಯವಿಲ್ಲದ, ಭದ್ರವಿಲ್ಲದ, ಅಳ್ಳಾಡುವ, ಕೀಲುಗಳೆಲ್ಲ ಸಡಲಿಹೋದ. **Ríicketiness** (ನಾ.)

Ríckshа(w). **Jinricksha** ನೋಡಿ.

Rícochet ರಿಕೊಷೇ, —ಷೆಟ್ (ನಾ., ಕ್ರಿ.) ನೀರಿನ ಮೇಲಾಗಲಿ ನೆಲದ ಮೇಲಾಗಲಿ ಫಿರಂಗಿಯ ಅಥವಾ ಬಂದೂಕಿನ ಗುಂಡು ಕುಪ್ಪಳಿಸುತ್ತ, ಹಲವು ಪುಟಗಳೇಳುತ್ತ, ಹೋಗುವುದು; ಹಾಗೆ ಕುಪ್ಪಳಿಸುತ್ತ ಹೋಗಿ ಹೊಡೆದ ಏಟು; ಕುಪ್ಪಳೀಟು [(ಅನೇಕ ವೇಳೆ ವಿಶೇಷಣವಾಗಿ ಪ್ರ.) R. fire, shot, battery]. (ಕ್ರಿ.) (ಗುಂಡು, ಮೊ. ರ ವಿಷಯದಲ್ಲಿ; ಒಮ್ಮೆ ಅಥವಾ ಹೆಚ್ಚು ಸಲ) ತಗುಲಿ ಚಿಮ್ಮು, ಕುಪ್ಪಳಿಸು, ಪುಟವೇಳು; (ಬಂದೂಕು, ಫಿರಂಗಿ, ಗೋಲಂದಾಜಿನವನು, ಮೊ. ರ ವಿಷಯದಲ್ಲಿ) ಕುಪ್ಪಳೀಟು(ಗಳಿಂದ) ಹೊಡೆ; ಕುಪ್ಪಳೀಟು ಬೀಳುವಂತೆ ಗುರಿಯಿಡು.

Ríctus ರಿಕ್ಟಸ್ (ನಾ.) (ಮನುಷ್ಯನ ಅಥವಾ ಪ್ರಾಣಿಯ ವಿಷಯದಲ್ಲಿ) ತೆರೆದ ಬಾಯಿಯ, (ಹಕ್ಕಿಯ ವಿಷಯದಲ್ಲಿ) ತೆರೆದ ಕೊಕ್ಕಿನ, —ವಿಸ್ತಾರ; (ಎರಡು ತುಟಿಯ ಹೂವಿನ) ಎಸಳು ಸುತ್ತಿನ ವಿಸ್ತಾರ.

Rid ರಿಡ್ [(ಕ್ರಿ. ಸಕ.); ಭೂತ. Ridded, Rid; ಭೂ. ಕೃ. Rid, (ವಿರ. ಪ್ರ.) Ridded]. (—ಇಂದ) ತಪ್ಪಿಸು, ಬಿಡಿಸು, ಬಿಡುಗಡೆ ಮಾಡು; ತೊಲಗಿಸು (*Of* ಉಪ. ದೊಡನೆ). [(ಸಾ., ಭೂ. ಕೃ. ನಲ್ಲ Be ಅಥವಾ Get ಕ್ರಿ. ಒಡನೆ ಪ್ರ.) Must get r. of him ಅವನನ್ನು ತೊಲಗಿಸಬೇಕು]. (ಪ್ರಾಚೀ. ಪ್ರ.) (ಪೀಡೆಯನ್ನು) ಕಳೆ, ನಿರ್ಮೂಲ ಮಾಡು, ತೊಲಗಿಸಿಬಿಡು. **Ríddance** (ನಾ.) ಪೀಡೆಯ ನಿವೃತ್ತಿ [ಮು., A good r. (ಸಂತೋಷ ಸೂಚಕವಾದ ಉದ್ಗಾರ) ತೊಲಗಿದ್ದು ಒಳ್ಳೆಯದಾಯಿತು; (ಪೀಡೆ) ತೊಲಗಿಹೋಯಿತು. (Person) is a good r. ತೊಲಗಿಹೋದರೆ ಮೇಲು]

Ríd(d)el ರಿಡೆಲ್ (ನಾ.) (ಕ್ರೈಸ್ತ ಮಠ) ಬಲಿಪೀಠದ —ತೆರೆ, ಪರದೆ.

Ridden ರಿಡ್ನ್. Ride ಧಾತುವಿನ ಭೂ. ಕೃ.

Ríddle[1] ರಿಡ್ಲ್ (ನಾ., ಕ್ರಿ.) ಒಗಟು; ಒಡಪ; ಸಮಸ್ಯೆ. ಸಮಸ್ಯೆಯಂಥ, ತಬ್ಬಿಬ್ಬು ಹಿಡಿಸುವ, ಗೂಢ, —ವಿಷಯ, ವಸ್ತು, ವ್ಯಕ್ತಿ. (ಕ್ರಿ.) ಒಗಟುಗಳಲ್ಲಿ ಮಾತನಾಡು; (ಬಿಡಿಸುವುದಕ್ಕಾಗಿ) ಒಗಟುಗಳನ್ನು— ಮುಂದಿಡು, ಕೊಡು; ಸಮಸ್ಯೆ ಬಿಡಿಸು; ಒಗಟು ಬಿಚ್ಚು [(ಅನೇಕ ವೇಳೆ) R. me (ಬುದ್ಧಿ ಚಮತ್ಕಾರ ತೋರಿಸಲು ಕರೆ): ನನ್ನ ಸಮಸ್ಯೆ ಬಿಡಿಸು (ನೋಡೋಣ)]. (ವರ್ತಮಾನ ಕೃ.) ಸಮಸ್ಯೆಯಾಗಿರುವ, ಸಮಸ್ಯಾರೂಪದಲ್ಲಿರುವ. **Ríddlingly** (ಕ್ರಿ. ವಿ.)

Ríddle[2] ರಿಡ್ಲ್ (ನಾ., ಕ್ರಿ. ಸಕ.) (ಹೊಟ್ಟಿನಿಂದ ಧಾನ್ಯವನ್ನು, ಮರಳಿನಿಂದ ಗರಸನ್ನು, ಬೂದಿಯಿಂದ ಕಿಟ್ಟವನ್ನು ಬೇರ್ಪಡಿಸಲು ಉಪಯೋಗಿಸುವ) ಒರಟು —ಜಲ್ಲರಿ, ಜರಡಿ. ತಂತಿಯನ್ನು ನೇರಮಾಡುವುದಕ್ಕಾಗಿ ಉಪಯೋಗಿಸುವ ಆಣಿಗಳುಳ್ಳ ತಗಡು, ಮಣೆ; ಆಣಿ ಮಣೆ. (ಕ್ರಿ.) (ಧಾನ್ಯವನ್ನು) ಜಲ್ಲರಿ ಹಿಡಿ, ಜಲ್ಲರಿಯಾಡು, ಸಾಣಿಸು; ಜಲ್ಲರಿಯಾಡಿ ಪ್ರತ್ಯೇಕಿಸು. (ರೂಪ.) (ಸಾಕ್ಷ್ಯ, ಸತ್ಯ—ಇವನ್ನು) ಶೋಧಿಸಿ ನೋಡು, ಪರೀಕ್ಷಿಸು; ಸೋಸಿ ತೆಗೆ. (ಹಡಗನ್ನು, ವ್ಯಕ್ತಿಯನ್ನು ಮು., ಗುಂಡಿನೇಟಿನಿಂದ) ತಾತಾ ತೂತು ಮಾಡು, ರಂಧ್ರಮಯ ಮಾಡು; (ರೂಪ.) ಪಟ ಪಟನೆ ಪ್ರಶ್ನೆಗಳನ್ನು ಹಾಕು; ಪ್ರಶ್ನೆಗಳ ಸುರಿಮಳೆ ಕರೆ. ಒಬ್ಬನು ಹೇಳಿದ್ದನ್ನು ಪ್ರತ್ಯಂಶಗಳಿಂದ ಖಂಡಿಸು.

Ride ರೈಡ್ [ಕ್ರಿ., ಭೂತ. Rode (ಪ್ರಾಚೀ. ಪ್ರ. Rid), ಭೂ. ಕೃ. Ridden (ಪ್ರಾಚೀ. ಪ್ರ. Rid); ನಾ.] (ಕುದುರೆ, ಬೈಸಿಕಲ್, ಮೊ. ಗಳ ಮೇಲೆ) ಹತ್ತು, ಹತ್ತಿ ಕುಳಿತುಕೊ(ಂಡು ಹೋಗು), ಸವಾರಿ ಮಾಡು; (ರೈಲುಗಾಡಿಯಲ್ಲಿ ಅಥವಾ ಇತರ ಸಾರ್ವಜನಿಕ ವಾಹನದಲ್ಲಿ) ಕುಳಿತು ಪ್ರಯಾಣಮಾಡು (Drive ಹೋಲಿಸಿ). (ಹಡಗು) ಲಂಗರು ಹಾಕಿರು; ನೀರಿನ ಮೇಲೆ ತೇಲು; (ಸೂರ್ಯ, ಮೊ. ವು) ತೇಲುವಂತೆ ತೋರು; (ಸಾ., ಸಮತಲವಾದ ಅಥವಾ ಮಟ್ಟಸವಾದ ವಸ್ತುಗಳು) ಮತ್ತೊಂದರ ಮೇಲೆ ಚಾಚಿಕೊಂಡಿರು, ಹಾಯ್ದಿರು. [R. a-cock-horse (Cock-horse ನೋಡಿ); R. bodkin (Bodkin ನೋಡಿ); R. rough-shod (Rough ನೋಡಿ). R. to hounds ಬೇಟೆಯಾಡು; (ನರಿ ಬೇಟೆಯಲ್ಲಿ) ಬೇಟೆನಾಯಿಗಳ ಹಿಂದೆ ಸವಾರಿಮಾಡಿಕೊಂಡು ಹೋಗು. R. for a fall (ರೂಪ.) ಕೇಡಾಗುವಂತೆ, ಮೈಮರೆತು, ನಿರ್ಲಕ್ಷ್ಯವಾಗಿ, —ದುಡುಕು. R. 12 st. ಸವಾರಿಯುಡುಪಿನಲ್ಲ ೧೨ ಸ್ಟೋನ್ ತೂಕ ತೂಗು. R. over (ಕುದುರೆ ಜೂಜಿನಲ್ಲಿ) ಸುಲಭವಾಗಿ ಸೋಲಿಸಿಬಿಡು. ನಿರ್ಲಕ್ಷಿಸು; ತಿರಸ್ಕರಿಸು (R. over all protests). R. one down ಸವಾರಿಯಲ್ಲಿ ಸೋಲಿಸು; ವಿಪರೀತ ಸವಾರಿಯಿಂದ (ಕುದುರೆಯನ್ನು) ಸುಸ್ತು ಬೀಳಿಸು; ಸವಾರಿಮಾಡುತ್ತ —ಮತ್ತೊಬ್ಬನ ಸಮಕ್ಕೆ ಬರು, ಮತ್ತೊಬ್ಬನನ್ನು ಹಿಂದೆ ಹಾಕು; ಸವಾರಿ ಮಾಡುತ್ತಿರುವಲ್ಲಿ (ಮುಂದೆ, ಪಕ್ಕದಲ್ಲಿ, ಇರುವುದನ್ನು) ಕೆಡವು, ತುಳಿದು ಹಾಕು. R. one off (ಪೋಲೊ ಆಟದಲ್ಲಿ) ಒಬ್ಬನ ಪಕ್ಕದಲ್ಲಿಯೇ ಸವಾರಿಮಾಡುತ್ತ (ಅವನು ಚೆಂಡು ಹೊಡೆಯದಂತೆ) ಅವನನ್ನು ಆಚೆಗೆ ತಳ್ಳಿಬಿಡು, ಒತ್ತು. R. off on a side issue (ಮುಖ್ಯ ವಿಷಯದಿಂದ ಜಾರಿಕೊಳ್ಳಲು) ಗೌಣವಿಷಯವನ್ನು ಪ್ರಸ್ತಾಪಿಸುತ್ತ ಹೋಗು. R. and tie (ಇಬ್ಬರು ಅಥವಾ ಮೂವರು ಒಂದೇ ಕುದುರೆಯನ್ನು ಪ್ರಯಾಣಕ್ಕೆ ಉಪಯೋಗಿಸಬೇಕಾದ ಸಂದರ್ಭದಲ್ಲಿ, ಒಬ್ಬರಿಗೊಬ್ಬರು ಸರದಿ ಬದಲಾಯಿಸಿಕೊಳ್ಳುತ್ತ) ಕೊಂಚ ದೂರ ಸವಾರಿ ಮಾಡಿ ಕುದುರೆಯನ್ನು (ಮತ್ತೊಬ್ಬನ ಉಪಯೋಗಕ್ಕಾಗಿ) ಕಟ್ಟಿಹಾಕಿ ಮುಂದಕ್ಕೆ ಸಾಗು. (ರೂಪ.) (ದುಡಿತ ಮತ್ತು ವಿಶ್ರಾಂತಿಗಳಲ್ಲಿ) ಹೀಗೆ ಮತ್ತೊಬ್ಬನೊಡನೆ ಸರದಿ ವಹಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Riding-lessons, -school ಕುದುರೆ ಸವಾರಿ ಪಾಠ, ಪಾಠಶಾಲೆ. R. out the storm (ಹಡಗು) ಬಿರುಗಾಳಿ ಮಳೆಯಲ್ಲಿ ಸುರಕ್ಷಿತವಾಗಿ ಲಂಗರು ಹಾಕಿ ತೇಲುತ್ತಿರು ; (ರೂಪ.) ಅಪಾಯವನ್ನು ಸುರಕ್ಷಿತವಾಗಿ ದಾಟು. Bone rides (ಮೂಳೆ ಮುರಿತದಲ್ಲಿ) ಒಂದು ಮೂಳೆ ಮತ್ತೊಂದರ ಮೇಲೆ ಕುಳಿತಿದೆ. Rope rides ತಿರಿಚುಗಳು ಒಂದರ ಮೇಲೆ ಒಂದು ಕುಳಿತುಕೊಳ್ಳುತ್ತವೆ, ಅಡ್ಡಹಾಯುತ್ತವೆ. R. a ford ಹಾಯ್ಗುಡವನ್ನು ಕುದುರೆಯ ಮೇಲೆ ದಾಟು. R. on ಸವಾರಿಮಾಡು ; (ರೂಪ.) ಭಾರವಾಗಿ ಒತ್ತುತ್ತಿರು, ಪೀಡಿಸು, ಕಾಟ ಕೊಡು, ಗೋಳು ಹೊಯ್ದುಕೊ, ದವಲತ್ತು ನಡಸು, ದಬ್ಬಾಳಿಕೆ ಮಾಡು. R. one's horse at (fence *or* enemy) (ಬೇಲಿಯನ್ನು ಅಥವಾ ಶತ್ರುವನ್ನು ಕಂಡಾಗ) ಕುದುರೆಯನ್ನು ಮುಂದಕ್ಕೆ, ಆ ಕಡೆಗೆ, ಚೋದಿಸು. R. to death (ರೂಪ.) (ಹವ್ಯಾಸ, ಪದ್ಧತಿ, ಹಾಸ್ಯ, ಮೊ. ನ್ನು) ಅತಿರೇಕದಿಂದ ಹಾಳುಮಾಡು, ಸಾಯಿಸಿ ಹಾಕು. R. the whirlwind (ಸುಂಟರ ಗಾಳಿಯಂಥ) ಒಂದು ಪ್ರಚಂಡ ಸನ್ನಿವೇಶವನ್ನು ಸ್ವಾಧೀನಕ್ಕೆ, ಹತೋಟಿಗೆ, —ತೆಗೆದುಕೊ. **-ridden** —ಕ್ಕೆ ಈಡಾದ, ಅಧೀನವಾದ (Superstition-ridden)]. ಸವಾರಿ —ಮಾಡಿಸು, ಕೊಡು [R. one on rail (ಚಿತ್ರಹಿಂಸೆ ಕೊಡಲು) ಕಂಬಿಯ ಮೇಲೆ ಸವಾರಿ ಮಾಡಿಸು]. (ನೆಲ) ಸವಾರಿಗೆ ಯೋಗ್ಯವಾಗಿರು (Rides well, soft ; Rides hard ನೆಲ ಸವಾರಿಗೆ ಕಷ್ಟವಾಗಿದೆ). (ನಾ.) ಸವಾರಿ. (ಮು., ಕಾಡಿನಲ್ಲಿ ಮಾಡಿರುವ) ಸವಾರಿ ರಸ್ತೆ. (ಸೈನ್ಯ) ಉಮೇದುವಾರಿ ರಾವುತ ತಂಡ. **Rídable** (ಗು.) ಸವಾರಿಗೆ ಯೋಗ್ಯವಾದ. **Rider** (ನಾ.) ಸವಾರ. (ನಾವೆ : ಬ. ವ. ದಲ್ಲಿ) ಹಡಗಿನ ಮೈಕಟ್ಟನ್ನು ಭದ್ರಪಡಿಸುವ ಹೆಚ್ಚಿಗೆಯ ಮರದ ದಿಮ್ಮಿಗಳು ಅಥವಾ ಕಬ್ಬಿಣದ ಪಟ್ಟಿಗಳು ; ಹಡಗಿನ ಬಿಗಿ ಪಟ್ಟಿಗಳು. ಒಂದರಮೇಲೊಂದು ಕೂತಿರುವ ಹಗ್ಗ, ಹಗ್ಗದ ತಿರಿಚು. (Curling ಆಟದಲ್ಲಿ) ಮತ್ತೊಂದು ಕಲ್ಲನ್ನು ಏಟು ಕೊಟ್ಟು ಉರುಳಿಸುವ ಕಲ್ಲು. [ದಸ್ತಾವೇಜು, (ಮು., ಮೂರನೆಯ ಪಠನದಲ್ಲಿ), ಶಾಸನ ಸಭೆಯ ಮಸೂದೆ ಮೊ. ಗಳಿಗೆ ಸೇರಿಸುವ] ಹೆಚ್ಚಿಗೆಯ ಷರತ್ತು, ಉಪನಿಯಮ, ಉಪವಿಧಿ. ಉಪಸಿದ್ಧಾಂತ, ಅನುಸಿದ್ಧಾಂತ ; ತೀರ್ಪಿನ ಜತೆಗೆ ಕೊಟ್ಟ ಅಭಿಪ್ರಾಯ, ಮಾಡಿದ ಶಿಫಾರಸು. (ಗಣಿತ) ಒಂದು ಪ್ರತಿಜ್ಞೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂಬಂಧಪಟ್ಟು ಅದರ ತತ್ತ್ವಗಳ ಮೇಲೆ ಆಧಾರ ವಾದ ಪ್ರಶ್ನೆ : ಉಪ ಪ್ರತಿಜ್ಞೆ, ಅನು ಪ್ರತಿಜ್ಞೆ. (ಯಂತ್ರ, ಮೊ. ಗಳಲ್ಲಿ) ಮತ್ತೊಂದರ ಮೇಲಿರುವ, ಮತ್ತೊಂದರ ಮೇಲೆ ಕೆಲಸಮಾಡುವ, —ಭಾಗ : ರೋಹಕ. **Ríderless** (ಗು.) ; **Ríding**[1] (ನಾ.) ಸವಾರಿ (ಮಾಡುವುದು) ; (ಮು., ಕಾಡಿನ ಮಧ್ಯೆ ಅಥವಾ ಪಕ್ಕದಲ್ಲಿ ಹೋಗುವ ಹಸುರುವಾಣಿ ತುಂಬಿದ) ಸವಾರಿ ಮಾರ್ಗ. R.-breeches ಸವಾರಿ ಚಡ್ಡಿ, ಚಲ್ಲಣ. R. habit (Habit[1] ನೋಡಿ). R.-lamp, -light ಲಂಗರು ಹಾಕಿರುವ ಹಡಗಿನಲ್ಲಿಯ ದೀಪ, ಬೆಳಕು : ಲಂಗರು (ಹಡಗಿನ) ದೀಪ, ಬೆಳಕು.

Rídel. **Riddel** ನೋಡಿ.

Ridge ರಿಡ್ಜ್ (ನಾ., ಕ್ರಿ.) ಎರಡು ಇಳಿಜಾರು ಮೈಗಳು ಮೇಲುಗಡೆ ಸೇರುವ ಕೂಡುಗೆರೆ : ಏಣು (The r. of a roof ಚಾವಣಿಯ ಏಣು), ಬೆಟ್ಟದ ಬೆನ್ನೇಣು ; ಬೆಟ್ಟ ಸಾಲು ; ಪರ್ವತ ಪಂಕ್ತಿ ; ಜಲ ವಿಭಾಗ ಸ್ಥಾನ(ದ ಏಣು) ; (ವ್ಯವಸಾಯ) ಉಳುಮೆ ಸಾಲುಗಳ ನಡುವಣ ದಿಂಡು(ಗಳಲ್ಲೊಂದು) ; (ತೋಟಗಾರಿಕೆ) (ಕಲ್ಲಂಗಡಿ, ಸೌತೆ, ಮೊ. ಗಳನ್ನು ಬೆಳೆಯುವ) ಎತ್ತರಿಸಿದ ಪಾತಿ. [R.-piece ಚಾವಣಿಯೇಣಿನ ತೊಲೆ ; ಬೆನ್ನುತೊಲೆ ; ಬೆಂಗಡೆ ಮರ. R.-pole ಉದ್ದನೆಯ ಡೇರೆಯ ಅಡ್ಡತೊಲೆ ; =R.-piece. R.-tile ಬೆನ್ನು ಹೆಂಚು. R.-tree =R.-piece. Ridgeway (ಬೆಟ್ಟದ) ಏಣು (ಮೇಲಿನ) ದಾರಿ]. (ಕ್ರಿ.) (ನೆಲವನ್ನು) ದಿಂಡು ದಿಂಡುಗಳಾಗಿ ಮಾಡು, ಏಣು ಏಣಾಗಿ ಮಾಡು ; ಏಣು, ದಿಂಡು, —ಕಟ್ಟು ; ಏರಿಹಾಕು. (ಸೌತೆ, ಮೊ. ನ್ನು) ಎತ್ತರ ಪಾತಿಗಳಲ್ಲಿ ನೆಡು, ಬೆಳಸು. (ಸಮುದ್ರ) ಸಾಲುಬ್ಬಾಗಿ ಏಳು. **Rídgy** (ಗು.)

Rídicule ರಿಡಿಕ್ಯೂಲ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) ಹಾಸ್ಯಾಸ್ಪದ ವಾದುದು ; ನಗೆಗೇಡಿ ; ಹಾಸ್ಯಾಸ್ಪದತ್ವ ; ಅಸಂಬದ್ಧತೆ. ಅಣಕ, ಕುಚೋದ್ಯ, ಅಪಹಾಸ್ಯ, ಗೇಲಿ (—ಮಾಡು). **Ridículous** —ಕ್ಯ— (ಗು.) ಹಾಸ್ಯಾಸ್ಪದವಾದ, ನಗೆಗೇಡಾದ ; ಅಸಂಬದ್ಧ. **Ridículously** (ಕ್ರಿ. ವಿ.) ; **Ridículousness** (ನಾ.)

Ríding[1]. **Ride** ನೋಡಿ.

Ríding[2] ರೈಡಿಂಗ್ (ನಾ.) ಯಾರ್ಕ್‌ಷೈರಿನ ಮೂರು ಆಡಳಿತ ವಿಭಾಗ ಗಳಲ್ಲೊಂದು (East, West, North, R.) ; (ಇಂಗ್ಲೆಂಡಿನ ಅಥವಾ ನೆಲಸು ನಾಡುಗಳ) ಆಡಳಿತ ವಿಭಾಗ.

Rifaciménto (It.) ರಿಫಾಚಿಮೆಂಟೊ (ನಾ., ಬ. ವ. -ti —ಟಿ) (ಸಾಹಿತ್ಯ, ಸಂಗೀತ, ಮೊ. ಕೃತಿಯ) ಹೊಸ ಹೊಂದಾಣಿಕೆ, ಪುನರ್ ಯೋಜನೆ ; ಹೊಸ, ಸುಧಾರಿತ, —ರೂಪ.

Rife ರೈಫ್ (ಗು.) ವಾಡಿಕೆಯಾದ, ಸರ್ವಸಾಧಾರಣವಾದ, ಸಾಮಾನ್ಯ ವಾದ; ಬಹಳವಾಗಿ —ಹರಡಿರುವ, ವ್ಯಾಪಿಸಿದ ; ವಿಪುಲ ; ಅಸಂಖ್ಯಾತ; ಸಮೃದ್ಧ ; ತುಂಬಿದ ; ಹೆಗ್ಗಳವಾಗಿರುವ (*Of*, *in*, *with* ಉಪ. ದೊಡನೆ)

Ríff-raff ರಿಫ್‌ರಾಫ್ (ನಾ.) ಕೀಳು ಜನ ; ಕಾಕ ಪೋಕರು. (ವಸ್ತು) ಕೆಲಸಕ್ಕೆ ಬಾರದ್ದು, ಕಳಪೆ.

Rífle[1] ರೈಫ಼್‌ಲ್ (ಕ್ರಿ.) (ಕಿಸೆಗಳನ್ನೂ ಸಾಮಾನು ಇಟ್ಟಿರುವ ಸ್ಥಳಗಳನ್ನೂ ಶೋಧಿಸಿ) ಎಲ್ಲವನ್ನೂ ದೋಚು, ಸುಲಿಗೆ ಮಾಡು, ಸೂರೆ ಮಾಡು, ಕೊಳ್ಳೆ ಹೊಡೆ ; ಲೂಟಿ ಮಾಡು.

Rífle[2] ರೈಫ಼್‌ಲ್ (ನಾ., ಕ್ರಿ.) ಬಂದೂಕಿನ, ಫಿರಂಗಿಯ, (ನಳಿಕೆಯ ಒಳ ಮೈಯಲ್ಲಿ ಮಾಡಿರುವ) ಸುರುಳಿಯಾಕಾರದ ಗಾಡಿ; ಸುರುಳಿ ಗಾಡಿಯ —ಕೋವಿ, ತುಪಾಕಿ (ಹಿಂದೆ =R.-gun) ; ರೈಫ಼್‌ಲ್ ಬಂದೂಕು ; (ಬ. ವ.) ಬಂದೂಕು ದಳ. **R.-bird** ಆಸ್ಟ್ರೇಲಿಯದ ಒಂದು ಕಪ್ಪು ಹಸುರಿನ ಹಕ್ಕಿ. **R. brigade** (ಕೆಲವು ಬ್ರಿಟಿಷ್ ಸೈನ್ಯ ದಳಗಳ ಹೆಸರು). **R.-corps** ಬಂದೂಕು ದಳ (ಸ್ವಯಂಸೇವಕರದು). **R.(-) green** (ನಾ., ಗು.) (ಬಂದೂಕು ಸಿಪಾಯಿಯ ಉಡುಪಿನಂಥ) ದಟ್ಟ ಹಸುರು ಬಣ್ಣ(ದ). **R.-grenade** (Grenade ನೋಡಿ). **Rifleman** ಬಂದೂಕು ಸಿಪಾಯಿ ; ಬಂದೂಕು ದಳದವನು ; =R. bird. **R.-pit** ಶತ್ರುವಿನಮೇಲೆ ಗುಂಡು ಹಾರಿಸಲು ಬಂದೂಕು ಸಿಪಾಯಿಗಳು ನಿಲ್ಲುವ ರಕ್ಷಣೆಯ ಕುಳಿ : ಬಂದೂಕು ಹಾರಿಸುವ ಕುಳಿ. **R.-range** (ಬಂದೂಕು) ಗುಂಡು ಹಾರುವ ದೂರ ; ಬಂದೂಕು ಅಭ್ಯಾಸದ ಸ್ಥಳ. **R.-shot** (ಬಂದೂಕು) ಗುಂಡು ಹಾರುವ ದೂರ; ಬಂದೂಕು ಗುಂಡು ; ಬಂದೂಕು ಹಾರಿಸುವವನು (A good r.-shot)

Rífle (ಕ್ರಿ.) (ಕ್ಷಿಪಣಿಯಲ್ಲಿ ಆವರ್ತ ಚಲನೆಯುಂಟುಮಾಡುವುದಕ್ಕಾಗಿ) ಕೋವಿ(ಯ ನಳಿಕೆ)ಯಲ್ಲಿ ಸುರುಳಿಯಾಕಾರದ ಗಾಡಿ ಮಾಡು [(ಕ್ಷಿಪಣಿ ಗಳ ವಿಷಯದಲ್ಲಿ : ಭೂ. ಕೃ.) ಈ ಗಾಡಿಗಳಿಗೆ ಹೊಂದುವ ಗುಬುಟುಗಳುಳ್ಳ]. ಬಂದೂಕಿನಿಂದ ಹೊಡೆ. **Rífling** (ನಾ.)

Rift ರಿಫ್ಟ್ (ನಾ., ಕ್ರಿ. ಸಕ.) (ನೆಲ, ಬಂಡೆ, ಮೊ. ಗಳಲ್ಲಿ) ಬಿರುಕು, ಒಡಕು, ಛಿದ್ರ, ಬೀಟ, ಸೀಳು [Little r. within the lute (ಅನೇಕ ವೇಳೆ ರೂಪ.) ಕೊಂಚ ತರ ಕೆಟ್ಟಿದೆ, ಸ್ವಲ್ಪ ಅಯಿಲಾಗಿದೆ ; ಒಡಕು ಹುಟ್ಟಿದೆ. R.-valley ನೆಲ ಕುಸಿದು ಆದ ಕಮರಿ ; ನೆಲ ಬಿರುಕಿನ ಕಮರಿ]. (ಕ್ರಿ.) ಬಿರಿಸು, ಸೀಳು, ಬೀಟಮಾಡು (ಸಾ., ಭೂ. ಕೃ. ನಲ್ಲಿ). **Ríftless** (ಗು.) ; **Rífty** (ಗು.)

Rig[1] ರಿಗ್ (ಕ್ರಿ., ನಾ.) ಹಡಗಿಗೆ ಕೂವೆಮರ, ಅಡ್ಡದಿಮ್ಮಿ, ಹಗ್ಗ, ಮೊ. ನ್ನು ಹವಣಿಸು ; (ಹಡಗು) ಹಗ್ಗ, ಕೂವೆಮರ, ಮೊ. ಗಳಿಂದ ಅಣಿಯಾಗು, ಸಜ್ಜಾಗು ; ಹೀಗೆ ಪ್ರಯಾಣಕ್ಕೆ ಸಿದ್ಧವಾಗು, ಸಿದ್ಧ ಪಡಿಸು. (ಉಡುಪು, ಮೊ. ಗಳಿಂದ) ಸಜ್ಜುಮಾಡು, ಅಣಿಮಾಡು (*Out*, *up* ಉಪ. ದೊಡನೆ). ಕಟ್ಟಡವನ್ನು ಅವಸರವಾಗಿ, ಇದ್ದ ಚೂರುಪಾರುಗಳನ್ನು ಉಪಯೋಗಿಸಿ, ಹಂಗಾಮಿಯಾಗಿ, —ಎಬ್ಬಿಸು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸವರಿಸು. [Rigging-loft (ಹಡಗು ಕಟ್ಟೆಯಲ್ಲಿ) ನಜ್ಜು (ಕಟ್ಟುವ) ಅಟ್ಟಣೆ. (ದೃಶ್ಯ ಸಲಕರಣೆಗಳನ್ನು ಅಳವಡಿಸಲು ಅನುಕೂಲಿಸುವ) ರಂಗ ಸ್ಥಳದ ಮೇಲಟ್ಟ]. (ನಾ.) ಹಡಗಿನ ಹಗ್ಗಗಳು ಮತ್ತು ಕೂವೆಮರಗಳು ಅಳವಟ್ಟಿರುವ ರೀತಿ; ಸಜ್ಜು ವಿನ್ಯಾಸ [**-rigged** (ಗು.)]. ಉಡುಪು, ಮೊ. ಸಜ್ಜಿನಿಂದ ವ್ಯಕ್ತಿ ಅಥವಾ ವಸ್ತು ತೋರುವ ರೀತಿ; ಉಡುಪಿನ ರೀತಿ; ಉಡುಪು (R.-up, R.-out ಇಂಥ ಸಜ್ಜು ಸಲಕರಣೆ). **Rígger**[1] (ನಾ.) (ಕ್ರಿಯಾರ್ಥಗಳಲ್ಲಿ); ಒಂದು ನಿರ್ದಿಷ್ಟ ವಾದ ರೀತಿಯಲ್ಲಿ ಹಗ್ಗ ಮತ್ತು ಕೂವೆಮರಗಳು ಅಳವಟ್ಟಿರುವ ಹಡಗು; ದೋಣಿಯಲ್ಲಿ ಹುಟ್ಟು ಆನಿಕೆಯನ್ನು ಹೊತ್ತಿರುವ ಕಬ್ಬಿಣದ ಚಾಚುಬಂಕ; ಇಂಥ ಬಂಕಪಿರುವ ದೋಣಿ (=Outrigger). ಪಟ್ಟಿ ಚಕ್ರ (=Bandwheel). **Rígging** (ನಾ.) ಹಡಗಿನ ಹಗ್ಗ ಕೂವೆಮರಗಳು (ಮೊ. ನ್ನು ಹವಣಿಸುವುದು); ಹಡಗನ್ನು ಸಜ್ಜು ಗೊಳಿಸುವುದು.

Rig[2] ರಿಗ್ (ನಾ., ಕ್ರಿ. ಸಕ.) ತಂತ್ರ, ಮೋಸ, ಕಪಟೋಪಾಯ. (ವ್ಯಾಪಾರ) =Corner. (ಕ್ರಿ.) ಮೋಸದಿಂದ ವ್ಯವಹರಿಸು, ನಡಸು (R. the market ಬೆಲೆಯಲ್ಲಿ ಕೃತಕವಾದ ಏರಿಳಿತಗಳನ್ನು ಉಂಟು ಮಾಡು). **Rígger**[2] (ನಾ.) ಮೋಸಗಾರ. =Thimble-rigger (Thimble ನೋಡಿ)

Rigéscent ರಿಜೆಸೆಂಟ್ (ಗು.) (ಚಳಿಯ ಕೊರೆತದಿಂದ) ಸೆಡೆತ, ಬೆರೆತು ಹೋದ, ಜಡವಾದ. (ಸ. ವಿ.) ಬಿರುಸಾಗಿ, ಪೆಡಸಾಗಿ —ಆಗುವ, ಬೆಳೆಯುವ. **Rigéscence** (ನಾ.)

Right ರೈಟ್ (ಗು., ಕ್ರಿ., ನಾ., ಕ್ರಿ. ವಿ.) (ಪ್ರಾಚೀ. ಪ್ರ.) ನೇರ, ಋಜು (R. line ಋಜು ರೇಖೆ. R.-lined ನೇರ ಗೆರೆಗಳುಳ್ಳ). (ಕೋನದ ವಿಷಯದಲ್ಲಿ) ಲಘುವಾಗಲಿ ಅಧಿಕವಾಗಲಿ ಅಲ್ಲದ, ಸಮ (೯೦°) [At r. angles ಸಮಕೋನದಲ್ಲಿ, —ವಾಗಿ; ಕಾಟಕೋನದಲ್ಲಿ, —ವಾಗಿ. **Right-angled** (ಗು.) ಸಮಕೋನ ಯುಕ್ತ]; ಸಮಕೋನ ಸಂಬಂಧವುಳ್ಳ; ಓರೆಯಲ್ಲದ [R. sailing ನೇರವಾಗಿ ಪೂರ್ವ, ಪಶ್ಚಿಮ, ದಕ್ಷಿಣ ಅಥವಾ ಉತ್ತರ ದಿಕ್ಕಿನಲ್ಲಿ ಪ್ರಯಾಣ. R. ascension (Ascend ನೋಡಿ). R. cone, cylinder, prism (ತುದಿಗಳು ಅಥವಾ ತಲ ಅಕ್ಷಕ್ಕೆ ಸಮಕೋನದಲ್ಲಿರುವ) ಸಮಕೋನ, ಋಜು, —ಶಂಕು, ವರ್ತುಲಸ್ತಂಭ, ಪ್ರಿಸ್ಮ್]. (ನಡತೆ, ಮೊ. ವು) ಸರಿಯಾದ, ತಕ್ಕ, ಯೋಗ್ಯ, ಯುಕ್ತ, ಉಚಿತ, ನ್ಯಾಯವಾದ [It is only r. to tell you, that you should know. **Right-minded** (ಗು.); **Right-mindedness** (ನಾ.); Miss, Mr, R. ವಿಧಿ ಗಂಟುಹಾಕಿದ ವಧು, ವರ. The r. side (of a fabric, etc.) (ಬಟ್ಟೆ, ಮೊ. ಗಳ) ಮೇಲ್‌ಪಕ್ಕ; ಉಪಯೋಗಿಸಬೇಕಾದ, ಹೊರ ತೋರಿಸಬೇಕಾದ, —ಪಕ್ಕ (R. side up). On the r. side of 40 ಇನ್ನೂ ನಲವತ್ತು ವರ್ಷ ವಾಗಿಲ್ಲದ; ನಲವತ್ತರ ಈ ಪಕ್ಕದಲ್ಲಿರುವ]. ಸ್ವಸ್ಥ, ಸಮರ್ಪಕ, ಸಮಂಜಸ [In one's r. mind ಬುದ್ಧಿ ನೆಟ್ಟಗಿದ್ದು. Is not r. in his head ಅವನಿಗೆ ತಲೆ ಸರಿಯಾಗಿಲ್ಲ, —ಕೆಟ್ಟಿದೆ. Are you r. now? ಈಗ ಕ್ಷೇಮವಾಗಿದ್ದೀಯಾ? ನೆಟ್ಟಗಿದ್ದೀಯಾ? Is as r. as a trivet, as rain ತುಂಬ ಸರಿಯಾಗಿದೆ, ಠೀಕಾಗಿದೆ. Set *or* put r. ವ್ಯವಸ್ಥೆಗೆ, ಕ್ರಮಕ್ಕೆ, ಆರೋಗ್ಯಕ್ಕೆ, —ತರು; ತಪ್ಪನ್ನು, ಸೊಟ್ಟನ್ನು, —ಸರಿಪಡಿಸು, ತಿದ್ದು; ತಾನು ಸರಿಯೆಂದು ಸಮರ್ಥಿಸು (one*self with* person). Get r. ಸರಿಯಾಗು, ಸರಿಪಡಿಸು. R., r. you are ಸರಿ. All r., R. oh! (ಅನಂ.) (ಒಪ್ಪಿಗೆ ಕೊಡುವಲ್ಲಿ) ಓಹೋ, ಭೇಷಕ್, ಸರಿ]. (ಪ್ರಾಚೀ. ಪ್ರ.) ನಿಜವಾದ, ವಾಸ್ತವಿಕ, ಯಥಾರ್ಥವಾದ (R. whale) ಬಲ(ಗಡೆಯ), ಬಲಗಡೆಯಿರುವ, ದಕ್ಷಿಣ [R. centre (Centre ನೋಡಿ). R. and left (ಕ್ರಿ. ವಿ., ಗು., ನಾ.) ಬಲಕ್ಕೂ ಎಡಕ್ಕೂ, ಎರಡೂ ಕಡೆ (The crowd divided r. & l.); ಎಲ್ಲ ಕಡೆಯೂ (He was abused r. and left ಅವನನ್ನು ಚೆನ್ನಾಗಿ, ಎಲ್ಲ ಕಡೆಯೂ, ಬೈದರು). (ಗು.) ಎರಡೂ ಕೈಯ, ಎರಡೂ ಕಡೆಯ (A r.-and-left shot ಬಂದೂಕಿನ ಎರಡೂ ನಳಿಕೆಗಳಿಂದ ಹಾರಿಸಿದ ಗುಂಡು). R.-and-left screw ಒಂದು ತುದಿಯಲ್ಲಿ ಬಲ ಸುತ್ತುಗಳೂ ಮತ್ತೊಂದು ತುದಿಯಲ್ಲಿ ಎಡ ಸುತ್ತುಗಳೂ ಇರುವ ತಿರುಪು ಮೊಳೆ: ಬಲ ಎಡ ಸುತ್ತುಗಳ ತಿರುಪು ಮೊಳೆ. (ನಾ.) ಎರಡೂ ನಳಿಕೆ ಗಳಿಂದ ಹಾರಿಸಿದ ಗುಂಡು; (ಮುಷ್ಟಿಮಲ್ಲನು ಕೊಡುವ) ಎಡ(ಗೈ) ಬಲ(ಗೈ) ಗುದ್ದು. R. arm (ರೂಪ.) ಅತ್ಯಂತ ನಂಬಿಕೆಯ ಸಹಾಯಕ; ಬಲದೋಳು, ಬಲಗೈ (ರೂಪ.). R. hand ಬಲಗೈ (ಕೆಲಸಕ್ಕೆ ಮೇಲುಗೈಯಾದ ಕಾರಣದಿಂದ: Put one's r. hand to work. ಹಸ್ತಲಾಘವ ಕೊಡುವ ಕೈಯಾದ ಕಾರಣದಿಂದ: Give the r. hand of fellowship ಸ್ನೇಹದ ಕೈ ನೀಡು); ಬಲಗೈ ಕಡೆ, ಬಲ ಪಕ್ಕ (*At, on, to,* one's r. hand); ಬಲ ಭುಜ, ಬಲಗೈ (ರೂಪ.). R.-hand ಬಲಗೈ ಕಡೆಯ, ಬಲ ಪಕ್ಕದ. R.-hand man (ಸಾಲಿನಲ್ಲಿ) ತನ್ನ ಬಲಗಡೆಯ ಸೈನಿಕ; ಬಲಗೈಯಂಥ ಮನುಷ್ಯ. R.-hand screw ಬಲ ಸುತ್ತಿನ ತಿರುಪು ಮೊಳೆ. R.-handed (ಹೆಚ್ಚಾಗಿ) ಬಲಗೈ ಬಳಕೆಯ. R.-handed blow ಬಲಗೈಯೇಟು. R.-handed tool ಬಲಗೈ(ಯಲ್ಲುಪಯೋಗಿಸುವಂತೆ ರಚಿಸಿದ) ಆಯುಧ. R.-handed rotation ದಕ್ಷಿಣಾವರ್ತ; ಪ್ರದಕ್ಷಿಣಾಕಾರ; ಬಲ ಸುತ್ತು. R.-hander ಬಲಗೈಯೇಟು; ಬಲಗೈ ಉಪಯೋಗಿಸುವ ಮನುಷ್ಯ; ಬಲಚ. R. turn (ನಿಂತಿದ್ದ ಸ್ಥಾನದಿಂದ, ದಿಕ್ಕಿನಿಂದ) ಬಲಕ್ಕೆ ೯೦° ತಿರುಗು(ವುದು); ಬಲ ತಿರುವು. R.-about turn, R.-about face (ನಿಂತಿದ್ದ ಸ್ಥಾನದಿಂದ, ದಿಕ್ಕಿನಿಂದ) ಬಲಗಡೆ ೧೮೦ ಡಿಗ್ರಿ ಹಿಂದಕ್ಕೆ ತಿರುಗು(ವುದು); ಬಲಕ್ಕೆ ತಿರುಗಿ ಹಿಂದು ಮುಂದಾಗು(ವುದು). R.-about =R.-about turn; ಅವಸರದ ಹಿಮ್ಮೆಟ್ಟು (Send to the r.-about ಹಿಂದಕ್ಕೆ ಓಡಿಸು). (ಕ್ರಿ.) ಹಿಮ್ಮುಖ —ಮಾಡು, ಆಗು]. (ಕ್ರಿ.) ನೇರಮಾಡು, ನೆಟ್ಟಗೆಮಾಡು [R. helm ಚುಕ್ಕಾಣಿ ಯನ್ನು ಹಡಗಿನ ನಿಡುದಿಮ್ಮಿಯ ದಿಕ್ಕಿಗೆ, ಅಡಿಗಟ್ಟಿಗೆ, —ನೇರವಾಗಿ ತಿರುಗಿಸು. R. oneself ನೆಟ್ಟಗೆ ನಿಲ್ಲು, ಸ್ತಿಮಿತಕ್ಕೆ ಬರು, ಸಮತೂಕ ಪಡೆ; (ಹಡಗಿನ ವಿಷಯದಲ್ಲಿ: ಓಲಿದ್ದ ಸ್ಥಿತಿಯಿಂದ) ನೆಟ್ಟಗಾಗು]. (ಅನ್ಯಾಯಕ್ಕೆ, ಅನ್ಯಾಯವಾದವನಿಗೆ) ಪರಿಹಾರಕೊಡು; ನ್ಯಾಯಮಾಡು; ಸರಿಪಡಿಸು; ಪೂರ್ವಸ್ಥಿತಿಯಲ್ಲಿ ಸ್ಥಾಪಿಸು; —ಸ್ಥಿತಿಗೆ ತರು. (ತಪ್ಪನ್ನು) ಸರಿ ಮಾಡು, ತಿದ್ದು; ಕ್ರಮಗೊಳಿಸು. (ನಾ.) ಸರಿಯಾದುದು, ನೇರ ವಾದುದು, ನ್ಯಾಯ [Do one r. ಒಬ್ಬನೊಡನೆ ನ್ಯಾಯವಾಗಿ ವರ್ತಿಸು; ಒಬ್ಬನ ವಿಷಯದಲ್ಲಿ ನ್ಯಾಯವಾಗಿ —ಯೋಚಿಸು, ಎಣಿಸು. By r., (ಈಗ ಸಾ.) By rights ಹಕ್ಕಿನಿಂದ, ನ್ಯಾಯವಾಗಿ. The r. ನ್ಯಾಯಪಕ್ಷ (God defend the r.). Be in the r. ನ್ಯಾಯ ಪಕ್ಷದಲ್ಲಿರು, ತನ್ನದು ನ್ಯಾಯವಾಗಿರು]. ನ್ಯಾಯವಾದ —ಹಕ್ಕು, ಅಧಿಕಾರ [R. divine, Divine r. (Divine ನೋಡಿ). Woman's rights ಗಂಡಸರೊಡನೆ ಹೆಂಗಸರ ಸಮಾನಾಧಿಕಾರ, —ಸಮ ಹಕ್ಕು (**Woman's-righter** ಸ್ತ್ರೀ ಸಮಾನಾಧಿಕಾರ ವಾದಿ). R. of way (ಮತ್ತೊಬ್ಬನ ಭೂಮಿಯ ಮೇಲೆ) ಹಾದು ಹೋಗಲು ಮಾಮೂಲಿನ ಹಕ್ಕು: ದಾರಿ ಹಕ್ಕು; ಇಂಥ ಹಕ್ಕಿನ ದಾರಿ. Declaration *or* Bill of Rights (ಇಂಗ್ಲೆಂಡಿನ ಚರಿತ್ರೆ) ೧೬೮೯ರಲ್ಲಿ ನಿರ್ಧರವಾದ ಪ್ರಜಾಧಿಕಾರ ಮಸೂದೆ. Assert *or* stand on one's rights ತನ್ನ ಹಕ್ಕನ್ನು —ಒತ್ತು, ಬಿಟ್ಟುಕೊಡದಿರು; ತನ್ನ ಹಕ್ಕಿನ ಮೇಲೆ ನಿಂತುಕೊ. Peeress in her own r. ತನ್ನ ಸ್ವಂತ ಹಕ್ಕಿನಿಂದ ಶ್ರೀಮಂತೆ (ಮದುವೆಯ ಮೂಲಕವಲ್ಲ)]. (ಬ. ವ.) ನಿಜವಾದ, ಸರಿಯಾದ, —ಸ್ಥಿತಿ (Do not know the rights of the case. Set, put, to rights ಅಣಿಮಾಡಿಡು; ಸರಿಯಾದ ಸ್ಥಿತಿಗೆ ತರು). ಬಲಗಡೆ, ದಕ್ಷಿಣ ಪಾರ್ಶ್ವ. (ರಾಜ್ಯನೀತಿ: ಇಂಗ್ಲೆಂಡೇತರ ಶಾಸನ ಸಭೆಯಲ್ಲಿ) ಪ್ರಗತಿ ವಿರೋಧಿಗಳು; ಸಂಪ್ರದಾಯ ಪಕ್ಷದವರು. (ಕ್ರಿ. ವಿ.) ನೇರವಾಗಿ, ನೆಟ್ಟಗೆ [R. off, away (ಮು., ಅಮೆ. ಸಂ.) ಕೂಡಲೆ, ಒಡನೆಯೆ, ತತ್‌ಕ್ಷಣವೆ]. ಸರ್ರನೆ (*To, round, off, out,* ಮೊ. ಉಪ. ದೊಡನೆ. Sank r. to the bottom). ಸರಿಯಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(R. in the middle). ಚೆನ್ನಾಗಿ, ತುಂಬ [Know r. well. Was r. glad to hear. R.-down ಪೂರ್ತಿ(ಯಾಗಿ), ಪಕ್ಕಾ (Is a r.-d. scoundrel. Was r.-d. sorry]. ನ್ಯಾಯವಾಗಿ, ಯುಕ್ತವಾಗಿ, ತಕ್ಕಂತೆ, ಸರಿಯಾಗಿ (Serves him r. ಅವನಿಗೆ ತಕ್ಕದ್ದಾಯಿತು, ಸರಿಯಾದ್ದೇ ಆಯಿತು). ಬಲಗಡೆಗೆ [Looks neither r. nor left. Eyes r.! (ಸೈನಿಕರಿಗೆ ಆಜ್ಞೆ) ಕಣ್ಣು ಬಲಗಡೆಗೆ ತಿರುಗಿಸಿ!]. **Ríghtable** (ಗು.) ಸರಿಪಡಿಸಲಾಗುವ, ನೇರ್ಪಡಿಸ ಬಹುದಾದ. **Ríghten** (ಕ್ರಿ. ಸಕ.) (ವಿರ. ಪ್ರ.) ನೇರಮಾಡು, ಸರಿಪಡಿಸು. **Ríghtful** (ಗು.) (ನಡೆವಳಿ, ಮೊ. ವು) ಯುಕ್ತವಾದ, ನ್ಯಾಯವಾದ. (ಮನುಷ್ಯರ ವಿಷಯದಲ್ಲಿ) ನ್ಯಾಯವಾದ ಹಕ್ಕುಳ್ಳ (The r. heir). (ಅಧಿಕಾರ, ಆಸ್ತಿ, ಮೊ. ವು) ನ್ಯಾಯವಾಗಿ, ಹಕ್ಕಿನಿಂದ, —ಬರಬೇಕಾದ, ದೊರೆಯಬೇಕಾದ. **Ríghtfully** (ಕ್ರಿ. ವಿ.); **Ríghtfulness** (ನಾ.); **Ríghtless** (ಗು.) ಹಕ್ಕಿಲ್ಲದ. **Ríghtly** (ಕ್ರಿ. ವಿ.) ಯುಕ್ತವಾಗಿ, ನ್ಯಾಯವಾಗಿ, ನೇರವಾಗಿ, ಸರಿಯಾಗಿ. **Ríghtness** (ನಾ.); **Ríghtward** (ಗು., ಕ್ರಿ. ವಿ.) ಬಲಗಡೆಯ; ಬಲಗಡೆಗೆ; (ರಾಜ್ಯನೀತಿ) ಪ್ರಗತಿ ವಿರೋಧಪಕ್ಷದ ಕಡೆಯ, —ಕಡೆಗೆ. **Ríghtwards** (ಕ್ರಿ. ವಿ.) (ವಿರ. ಪ್ರ.)

Ríghteous ರೈಟ್ಯಸ್, —ಚಸ್ (ಗು.) ಸರಿಯಾದ, ಋಜು ಮಾರ್ಗದ, ಧರ್ಮಶೀಲ, ನ್ಯಾಯಬದ್ಧ, ಧರ್ಮವಾದ. **Ríghteously** (ಕ್ರಿ. ವಿ.); **Ríghteousness** (ನಾ.)

Rigíd ರಿಜಿಡ್ (ಗು.) ಬಾಗದ, ಬಳುಕದ, ಬಿರುಸಾದ, ಸೆಡೆತಿರುವ, ಗಡುಸಾದ; ಅನಮ್ಯ (A r. bar, airship). ಕಟ್ಟುನಿಟ್ಟಿನ, ನಿಷ್ಠುರ, ಕಠಿನ, ಅತಿನಿಷ್ಠೆಯ (R. principles, Catholics). **Rigídity** (ನಾ.); **Rígidly** (ಕ್ರಿ. ವಿ.)

Rígmarole ರಿಗ್‌ಮರೋಲ್ (ನಾ.) ಅಸಂಬದ್ಧ ಪ್ರಲಾಪ; ವ್ಯರ್ಥಾಲಾಪ; ಕಾಡುಪುರಾಣ; ಕಗ್ಗ. (ವಿಶೇಷಣವಾಗಿ) ಅಸಂಬದ್ಧ.

Rígor (L) ರೈ(ರಿ)ಗರ್ (ನಾ.) (ರೋಗ ನಿದಾನ) (ಜ್ವರ, ಮೊ. ಕ್ಕೆ ಪೂರ್ವಭಾವಿಯಾಗಿ ಬರುವ) ಚಳಿ, ನಡುಕ, ಶೀತಕಂಪ. R. mortis ಹೆಣ(ದ ಮೈ) ಕಟ್ಟಿಗೆಯಂತಾಗುವುದು, ಸೆಡೆಯುವುದು; ಹೆಣದ ಸೆಡಸು, —ಸೆಡೆತ.

Rígour ರಿಗರ್ (ನಾ.) ಉಗ್ರತೆ, ಪರುಷತೆ, ಕಾಠಿನ್ಯ, ಕಟುತ್ವ, ತೀವ್ರತೆ, ಕಡುಪು; (ಬ. ವ.) ಉಗ್ರ, ನಿರ್ದಯ, —ಕಾರ್ಯಕ್ರಮಗಳು, ಕಾಯಿದೆಗಳು (The intolerable rigours of religious persecution). ನಿಷ್ಠುರ ನಿಯಮ ಪಾಲನೆ; ಅತಿ ಕಟ್ಟುನಿಟ್ಟು (With the utmost r. of the law). (ಹವ, ಬರ, ಕಷ್ಟ, ಮೊ. ಗಳ) ಬಿರುಸು, ತೀವ್ರತೆ; ಕಡು ಕಷ್ಟ. (ವ್ರತ ನಿಯಮಾದಿಗಳ) ಕಡು ನಿಷ್ಠೆ. ಅತಿ ನಿಷ್ಕರ್ಷೆ (The r. of his argument). **Rígorism** ರಿಗೊ— (ನಾ.); **Rígorist** (ನಾ.); **Rígorous** (ಗು.) (R. imprisonment ಕಠಿನ ಸಜ). **Rígorously** (ಕ್ರಿ. ವಿ.)

Rígsdag (ಡೇನಿಷ್) ರಿಗ್ಸ್‌ಡಾಗ್ (ನಾ.) ಡೆನ್ಮಾರ್ಕಿನ ಶಾಸನ ಸಭೆ.

Ríksdag (ಸ್ವೀಡಿಷ್) ರಿಕ್ಸ್‌ಡಾಗ್ (ನಾ.) ಸ್ವೀಡನ್ನಿನ ಶಾಸನ ಸಭೆ.

Rile ರೈಲ್ (ಕ್ರಿ. ಸಕ.) (ಅಸಂ.) ಕೋಪ ಬರಿಸು; ರೇಗಿಸು, ಕೆರಳಿಸು.

Riliévo (It.) ರಿಲ್ಯೇವೊ (ನಾ.) = Relievo.

Rill ರಿಲ್ (ನಾ., ಕ್ರಿ. ಸಕ.) ಸಣ್ಣ ಹೊಳೆ, ತೊರೆ, ಝರಿ(ಯಾಗಿ ಹರಿ). **Ríllet** (ನಾ.) ಸಣ್ಣ ತೊರೆ.

Rille ರಿಲ್ (ನಾ.) (ಖ. ವಿ.) ಚಂದ್ರಮಂಡಲದ ಹೊರ ಮೈಯಲ್ಲಿ ಕಾಣಿಸುವ ಹಳ್ಳ, ಕಣಿವೆ.

Rim¹ ರಿಮ್ (ನಾ., ಕ್ರಿ. ಸಕ.) ಚಕ್ರದ ಹೊರ ಸುತ್ತು, ಅಂಚು, ಕಟ್ಟು (ರಬ್ಬರ್‌ಪಟ್ಟಿಯನ್ನು ಬಿಟ್ಟು); ನೇಮಿ. ಜರಡಿಯ —(ಚಾ)ಕಟ್ಟು, ಸುತ್ತುಕಟ್ಟು. (ಕಾವ್ಯ) ದುಂಡನೆಯ —ವಸ್ತು, ಆಕೃತಿ; ಬಳೆ, ಉಂಗುರ, ವಲಯ (Golden r. ಕಿರೀಟ). (ನಾವೆ) ನೀರಿನ ಮೇಲ್ಮೈ (Of ಉಪ. ದೊಡನೆ). (ಸರಿಸುಮಾರು ಗುಂಡಗಿರುವ ಪಾತ್ರೆ, ಮೊ. ಗಳ) ಅಂಚು, ಅರುಗು, ಕಂಠ. (R.-brake ಗಾಲಿಯ —ಬಿರಿ, ತಡೆ). (ಕ್ರಿ.) ನೇಮಿ, ಸುತ್ತುಕಟ್ಟು, —ಹವಣಿಸು, ಅಗಿರು. ಅಂಚು, ಅರುಗು, —ಅಗಿರು, ಕಟ್ಟು. **Rímless** (ಗು.); **-rímmed** (ಗು.)

Rim² ರಿಮ್ (ನಾ.) (ಪ್ರಾಚೀ. ಪ್ರ.) ಉದರ ಪರಿವೇಷ್ಟನ ಪಟಲ (= R. of the belly). (Peritoneum ನೋಡಿ)

Rime¹ ರೈಮ್ (ನಾ., ಕ್ರಿ. ಸಕ.) = Rhyme.

Rime² ರೈಮ್ (ನಾ., ಕ್ರಿ. ಸಕ.) (ಮು., ಕಾವ್ಯ) ಘನ ಹಿಮ, ಗಡ್ಡೆ ಯಿಬ್ಬನಿ (ಮುಸುಕಿಸು, ಕವಿಸು). **Rímy** (ಗು.)

Rímer ರೈಮರ್ (ನಾ.) = Reamer (Ream² ನೋಡಿ)

Rímose ರೈಮೋಸ್, **Rímous** —ಮಸ್ (ಗು.) (ಸ. ವಿ., ಮೊ.) ಬಿರುಕುಗಳು, ಸಂದುಗಳು, —ತುಂಬಿದ; ಛಿದ್ರಮಯ.

Rind ರೈಂಡ್ (ನಾ., ಕ್ರಿ. ಸಕ.) (ಸಸ್ಯದ, ಮರದ) ತೊಗಟೆ (ತೆಗೆ, ಕಳಚು); (ಹಣ್ಣು, ಕಾಯಿಪಲ್ಯ, ಮೊ. ಗಳ) ಸಿಪ್ಪೆ (ಸುಲಿ). ಗಡುಸು ಪದರ, ಹಕ್ಕಳೆ; (ಹಂದಿಯ ಮಾಂಸ, ಮೊ. ಗಳ) ಹೊರ ಚರ್ಮ. ಹೊರ ಮೈ, ಹೊರ ಪದರ. **-rínded** (ಗು.)

Rínderpest ರಿಂಡರ್‌ಪೆಸ್ಟ್ (ನಾ.) ಮೆಲುಕು ಪ್ರಾಣಿಗಳ (ಮು., ಎತ್ತುಗಳ) ಒಂದು ರೋಗ; ದನದ ಪ್ಲೇಗು; ಗೋಮಾರಿ ರೋಗ; ದೊಡ್ಡ ರೋಗ.

Ring¹ ರಿಂಗ್ (ನಾ., ಕ್ರಿ.) ಉಂಗುರ, ಮುದ್ರಿಕೆ (Nose-r. ಮೂಕುರ, ಮೂಗುನತ್ತು. Arm-r. ರಟ್ಟೆಬಳೆ, ತೋಳ್ಬಂದಿ); ಬಳೆ, ವಲಯ; ದುಂಡುಪಟ್ಟಿ; ಉಂಗುರ ಗುರುತು, ವರ್ತುಲಾಕೃತಿ, ಸುರುಳಿ, ಸುತ್ತು [Rings of tree (ಮರದಲ್ಲಿ ವರ್ಷಕ್ಕೊಂದು ಪಟ್ಟೆ ಆಗುವುದರಿಂದ ಮರಕ್ಕೆ ಆಗಿರುವ ವರ್ಷಗಳನ್ನು ಸೂಚಿಸುವ) ಮರದ ಸುತ್ತು ಪಟ್ಟೆಗಳು. Has livid rings round his eyes ಅವನ ಕಣ್ಣುಸುತ್ತ ನೀಲಗಟ್ಟಿದ ಉಂಗುರಗಳಿವೆ, ಬಳೆಗಳಿವೆ. Puffing out rings of smoke ಹೊಗೆಸುರುಳಿಗಳನ್ನು ಉರುಬುತ್ತ. Rings in water ಕೇಂದ್ರದಿಂದ ಬಳೆ ಬಳೆಯಾಗಿ ಹೊರಡುವ ನೀರ ಅಲೆಗಳು: ಉಂಗುರ ತೆರೆಗಳು]. (ವ್ಯಕ್ತಿಗಳು, ವಸ್ತುಗಳು, ಮೊ. ಗಳ) ವರ್ತುಲಾಕಾರದ ವಿನ್ಯಾಸ, ವೃತ್ತ. (ವ್ಯಾಪಾರದಲ್ಲಿ ಪೇಟೆಯ, ರಾಜಕೀಯದಲ್ಲಿ ನೀತಿಯ) ಹತೋಟಿಗಾಗಿ ಮಾಡಿಕೊಂಡ ಒಳ ಕೂಟ. ಅಶ್ವಸಾಧನೆಯ ಪ್ರದರ್ಶನ ರಂಗ; ಸರ್ಕಸ್ ರಂಗ; (ಪಂದ್ಯದ, ಮುಷ್ಟಿಕಾಳಗ, ಮೊ. ಗಳ) ರಂಗ, ಕಳ, ಅಖಾಡ (=prize-r.). ಜೂಜಿನಲ್ಲಿ ಪಣವೊಡ್ಡುವ ಆವರಣ (The r. ಜೂಜಾಟಗಳ ವ್ಯಾಪಾರದವರು); (ಹರಾಜಿನ ದನಕರುಗಳ) ಪ್ರದರ್ಶನ ಸ್ಥಳ. ವರ್ತುಲ ಪಥ, ದುಂಡು ದಾರಿ [Make rings round (—ಇಂತ) ವಿಪರೀತ ಬೇಗ —ಮಾಡಿಬಿಡು, ಹೋಗು]. [**R.-bark** (ಕ್ರಿ. ಸಕ.) (ಮರವನ್ನು ಸಾಯಿಸುವುದಕ್ಕಾಗಲಿ ಬೆಳವಣಿಗೆಯನ್ನು ತಡೆದು ಫಲಬಿಡುವಂತೆ ಮಾಡುವುದಕ್ಕಾಗಲಿ) ಮರದ ತೊಗಟೆಯಲ್ಲಿ ಬಳೆಯಂತೆ —ಗಾಡಿಮಾಡು, ಕೆತ್ತಿಹಾಕು. **R.-bolt** ಉಂಗುರ ತಾಪಾಳು. **R.-bone** (ಕುದುರೆ ರೋಗ) ಚುಂಚು ಕಾಲೆಡೆಯ ಎಲುಬಿನಮೇಲೆ ಬೆಳೆಯುವ ಎಲುಬು ಪದಾರ್ಥ; ಇಂಥ ಎಲುಬು ಪದಾರ್ಥ ಬೆಳೆಯುವ ಒಂದು ಕುದುರೆ ರೋಗ. **R.-cartilege** = Cricoid. **R.-dove** ಒಂದು ಬಗೆಯ ಪಾರಿವಾಳ; ಬೂದ ಬೆಳವ. **R.-fence** (ಜಮಾನು, ಮೊ. ಗಳನ್ನು ಪೂರ್ತಿಯಾಗಿ ಆವರಿಸಿರುವ) ಸುತ್ತುಬೇಲಿ. **R.-finger** ಉಂಗುರ(ವಿಡುವ) ಬೆರಳು; ಅನಾಮಿಕೆ. **R.-goal** ಗುರಿಗಂಬಕ್ಕೆ ಹಗುರ ಬಳೆಗಳನ್ನು ಕೋಲಿನಿಂದ ಎಸೆಯುವ ಒಂದು ಆಟ; ಬಳೆ ಆಟ. **R.-hunt** ಸುತ್ತ ಬೆಂಕಿ ಹಾಕಿ ಬೇಟೆ ಮೃಗಗಳನ್ನು ಒಳಭಾಗಕ್ಕೆ ಅಟ್ಟುವ ಬೇಟೆ: ಸುತ್ತು(ಬೆಂಕಿ) ಬೇಟೆ. **Ríngleader** (ದಂಗೆ, ಮೊ. ಗಳಲ್ಲಿ) ಮುಖ್ಯ ಸಂಚುಗಾರ, ಮುಖಂಡ. **R.-lock** ಹಲವು ತಿರುವು ಉಂಗುರಗಳಿದ್ದು ಎಲ್ಲವನ್ನೂ ಯಾವುದೋ ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೊತ್ತಾದ ರೀತಿಯಲ್ಲಿಟ್ಟಾಗ ಮಾತ್ರ ತೆಗೆಯಲಾಗುವ ಬೀಗ: ಉಂಗುರ ಬೀಗ. **R.-man** ಜೂಜಾಟಗಳ ವ್ಯಾಪಾರಗಾರ. **R.-master** ಸರ್ಕಸ್ ರಂಗದ ನಾಯಕ. **R.-neck** ಉಂಗುರ ಗೊರಲಿನ ಬಾತು. **R.-necked** ಕೊರಲಿನಲ್ಲಿ ಬಣ್ಣದ ಪಟ್ಟೆ(ಗಳು) ಇರುವ; ಪಟ್ಟೆ ಕೊರಲಿನ, ಉಂಗುರ ಕೊರಲಿನ. **R.-net** (ಸಾಮನ್ ಮೀನು ಹಿಡಿಯುವ ಅಥವಾ ಅಲಂಕಾರ ಪಟ್ಟಿಯ) ಉಂಗುರ ಬಲೆ. **R. ouzel** ಒಂದು ಬಗೆಯ ಹಕ್ಕಿ. **R.-snake** (ಯೂರೋಪಿನ ಒಂದು ಬಗೆಯ) ಸಿಂಬಿ ಹಾವು, ಸುರುಳಿ ಹಾವು, ಬಳೆಗಡಕ ಹಾವು. **R.-stand** ಉಂಗುರ ನಿಲವು. **R.-straked** (ಬೈಬಲ್) ಮೈಸುತ್ತ ಉಂಗುರಾಕಾರದ ಬಣ್ಣದ ಗುರುತುಗಳಿರುವ. **R.-taw** ಒಂದು ಬಗೆಯ ಗೋಲಿಯಾಟ. **R.-wall** ಸುತ್ತುಗೋಡೆ. **Ringworm** (ಮು., ಮಕ್ಕಳಿಗೆ ಬರುವ) ಹುಳುಕಡ್ಡಿ; ಗಜಕರ್ಣ]. **(-)ringed** (ಗು.); **Ríngless** (ಗು.); **Rínglet** ರಿಂಗ್‌ಲೆಟ್ (ನಾ.) ಸಣ್ಣ ಉಂಗುರ; = Fairy ring (Fairy ನೋಡಿ); ಉಂಗುರ ಗುರುತು. (ವಿರ. ಪ್ರ.) ಗುಂಗುರು ಕೂದಲು, (ಕೊಂಕು) ಕುರುಳು; ಅಲಕ, ಅಲಕಾ(ವ)ಳಿ. **Ríngleted** (ಗು.); **Rínglety** (ಕ್ರಿ. ವಿ.)

Ring (ಕ್ರಿ.) (ಡೇಗೆ, ಮೊ. ವು) ಸುರುಳಿಯಾಕಾರದಲ್ಲಿ ಮೇಲಕ್ಕೆ ಹಾರು; (ಬೇಟೆಯಲ್ಲಿ ಸಿಕ್ಕಿಕೊಂಡ ನರಿ) ಸುತ್ತುತಿರುಗು, ಸುತ್ತು ಓಡು. ಸುತ್ತುಗಟ್ಟು (*Round, about, in* ಉಪ. ದೊಡನೆ); (ಬೇಟೆ, ದನ, ಮೊ. ನ್ನು) ಸುತ್ತುಬಳಸಿ ಒಳಗಡೆಗೆ ತರುಬು; (ಕೋಳಿ, ಮೊ. ಗಳ ಕಾಲಿಗೆ, ಗುರುತು ತಿಳಿಯುವುದಕ್ಕಾಗಿ) ಉಂಗುರ —ಇಡು, ಹಾಕು; (ಗೂಳಿ, ಮೊ. ಕ್ಕೆ) ಮೂಗುಬಳೆ ಹಾಕು (R.-the-bull ಕೊಕ್ಕೆಗೆ ಬಳೆಯನ್ನು ಎಸೆಯುವ, ತೂಗಹಾಕುವ, ಒಂದು ಆಟ); (ಮರದ ತೊಗಟೆಯಲ್ಲಿ) ಬಳೆಯಂತೆ—ಗಾಡಿಮಾಡು, ಕೊರೆ. (ಹಣ್ಣು, ಮೊ. ನ್ನು) ಉಂಗುರ ಉಂಗುರವಾಗಿ ಕತ್ತರಿಸು. **Ringer**[1] (ನಾ.) (ಕ್ವಾಯ್ಟ್ಸ್ ಎಂಬ ಆಟದಲ್ಲಿ) ಗೂಟದ ಸುತ್ತ ಬಿದ್ದ ಬಳೆ; ಇಂಥ ಬಳೆಯೆಸೆತ. ಬೇಟೆಯಲ್ಲಿ ಸಿಕ್ಕಿಕೊಂಡಾಗ ಸುತ್ತ ಓಡುವ ನರಿ.

Ring[2] ರಿಂಗ್ [ಕ್ರಿ.; ಭೂತ. rang, (ಈಗ ವಿರ. ಪ್ರ.) rung; ಭೂ. ಕೃ. rung; ನಾ.] (ಕಂಪಿತ ಲೋಹದಂತೆ) ಅನುರಣನ ಧ್ವನಿಮಾಡು; ಅದಿರುಲಿ; ಘಣ ಘಣಿಸು, ಝಣ ಝಣಿಸು; ಝಣತ್ಕಾರಮಾಡು; ಮೊಳಗು; ನಾದಮಾಡು, —ಕೊಡು [Bell, trumpet, coin, sound, rings (ಅನೇಕ ವೇಳೆ *out* ಉಪ. ದೊಡನೆ). A ringing frost ಮೇಲೆ ನಡೆದರೆ ಖಣಿಲೆನ್ನುವಷ್ಟು ಗಟ್ಟಿಯಾದ ನೀರ್ಗಲ್ಲು. R. true, false (ನಾಣ್ಯ) ಸರಿಯಾದ ನಾದ ಕೊಡು, ಕೊಡದಿರು; ಶಬ್ದ ಸರಿಯಾಗಿರು, ಸರಿಯಾಗಿಲ್ಲದಿರು; (ರೂಪ.) (ಭಾವ, ಮೊ.ವು) ಸಾಚಾ, ಖೋಟಾ, ಆಗಿರು]. (ಪ್ರಾರ್ಥನೆ, ಮೊ. ಗಳಿಗೆ) ಗಂಟೆ —ಹೊಡೆ, ಶಬ್ದವಾಗು (*To* or *for* prayers, dinner, etc.); ಗಂಟೆ ಹೊಡೆದು ಕರೆ ಕೊಡು; (ಸ್ಥಳ) ಪ್ರತಿಧ್ವನಿ, ಹೊಳಲು, —ಕೊಡು; ಅನುರಣನ ಮಾಡು (*With, to, of, again* ಉಪ. ದೊಡನೆ); (ಮಾತು, ಧ್ವನಿ) ಕಿವಿಯಲ್ಲಿ ಮೊರೆಯುತ್ತಿರು, ಪ್ರತಿಧ್ವನಿತವಾಗು; ಹೃದಯದಲ್ಲಿ, ಸ್ಮರಣೆಯಲ್ಲಿ, —ತುಂಬಿರು, ನೆಲಸಿರು. (ಕಿವಿ) ಘಂಟಾ ನಾದ ತುಂಬಿರು; ಧ್ವನಿ— (Has a ringing in the ears). (ಗಂಟೆಯನ್ನು) ಬಾರಿಸು, ಹೊಡೆ [R. the bell (ಜವಾನನನ್ನು ಕರೆಯುವುದಕ್ಕಾಗಿ). R. up bell ಚರ್ಚು ಗಂಟೆಯನ್ನು ತೊರೆಯ ಮೇಲಕ್ಕೆತ್ತಿ ಬಾರಿಸು. R. at door (ಪ್ರವೇಶಪಡೆಯಲು) ಬಾಗಿಲ ಗಂಟೆಹೊಡೆ(ಯುವಂತೆ ಗುಂಡಿಯನ್ನು ಒತ್ತು). R. the knell of ಒಂದರ ಅವಸಾನ, ಮುಕ್ತಾಯ, ಮೊ. ನ್ನು ಸೂಚಿಸು, ಸಾರು. Ringing engine (ಗಂಟೆ ಬಾರಿಸುವ ಹಗ್ಗದಂತೆ ಹಗ್ಗವನ್ನು ಎಳೆಯುವುದ ರಿಂದ ಕೆಲಸಮಾಡುವ) ಒಂದು ಬಗೆಯ ದಸಿ ಹೊಡೆಯುವ ಯಂತ್ರ]. (ನಾಣ್ಯವನ್ನು) ನಾದ ಪರೀಕ್ಷೆ ಮಾಡು. ಗಂಟೆ ಬಾರಿಸಿ—ಕರೆ, ಗಮನ ಸೆಳೆ [R. up (ದೂರವಾಣಿಯಲ್ಲಿ) ಮಾತನಾಡಲು ಸಂಪರ್ಕ— ಕೇಳು, ಪಡೆ. R. off (ದೂರವಾಣಿಯ) ಸಂಪರ್ಕವನ್ನು —ತೆಗೆದುಬಿಡು, ಮುಕ್ತಾಯಮಾಡು. R. curtain up, down (ನಾಟಕರಂಗದಲ್ಲಿ) ಪರದೆಯನ್ನು ಎತ್ತುವಂತೆ, ಇಳಿಸುವಂತೆ, ಗಂಟೆ ಬಾರಿಸು. R. in ಗಂಟೆ ಹೊಡೆದು ಒಳಕ್ಕೆ ಕರಸು. R. out —ಹೊರಕ್ಕೆ ಕಳಿಸು]. (ನಾ.) (ಮು., ಚರ್ಚಿನ) ಘಂಟಾ ಪಂಕ್ತಿ, ಗಂಟೆಗಳ ತಂಡ. ಝಣತ್ಕಾರ; ಅದಿರುಲಿ; (ನಾಣ್ಯದ, ಪಾತ್ರೆಯ) ನಾದ, ಅನುರಣನ (ನಾದ). ಗಂಟೆ ಬಾರಿಕೆ; ಗಂಟೆಯ ಶಬ್ದ, ಘಂಟಾ ನಾದ (Heard a loud r. at the door). **Ringer**[2] (ನಾ.)

Ríngent ರಿಂಜೆಂಟ್ (ಗು.) ಬಾಯಿ ಬಿಚ್ಚಿಕೊಂಡಿರುವ, ತೆರೆದು ಕೊಂಡಿರುವ (ಮು., ಸ. ವಿ., ತುಟಿಯಾಕಾರದ ದಳವಲಯದ ವಿಷಯದಲ್ಲಿ)

Ringlet. **Ring**[1] ನೋಡಿ.

Rink ರಿಂಕ್ (ನಾ., ಕ್ರಿ. ಸಕ.) 'ಕರ್ಲಿಂಗ್' ಎಂಬ ಆಟವಾಡಲು ಉಪಯೋಗಿಸುವ ನೀರ್ಗಲ್ಲ ಹರವು; 'ಸ್ಕೇಟಿಂಗ್' ಆಟವಾಡುವ (ಸ್ವಾಭಾವಿಕವಾದ ಅಥವಾ ಕೃತಕವಾದ) ನೀರ್ಗಲ್ಲ ಹರವು, ನುಣುಪು ನೆಲಗಟ್ಟು. (ಕ್ರಿ.) —ಮೇಲೆ ಸ್ಕೇಟಿಂಗ್ ಆಟವಾಡು. **Rínker** (ನಾ.)

Rinse ರಿನ್ಸ್ (ಕ್ರಿ. ಸಕ., ನಾ.) (ಪಾತ್ರೆಯನ್ನು) ಜಾಲಿಸಿ ತೊಳೆ, ಗಲಬರಿಸು; (ಬಾಯಿ) ಮುಕ್ಕಳಿಸು; (ಬಟ್ಟೆಯನ್ನು ಸಾಬೂನು ಹೋಗುವಂತೆ) ನೀರಿನಲ್ಲಿ ಜಾಲಿಸು, ಜಾಲಾಡು, ಜಾಲಿಸಿ ತೊಳೆ, ಅಲುಬು (*Away, out* ಉಪ. ದೊಡನೆ). ಆಹಾರದ ಮೇಲೆ (ಮದ್ಯ) ಕುಡಿ (*Down* ಉಪ. ದೊಡನೆ). (ನಾ.) ಜಾಲಾಡುವುದು; (ಬಾಯಿ) ಮುಕ್ಕಳಿಕೆ; ಗಲಬರಿಕೆ (Give it a r.)

Ríot ರೈಅಟ್ (ನಾ., ಕ್ರಿ.) ಮುಚ್ಚು ಮರೆಯಿಲ್ಲದ ಭೋಗ ಜೀವನ; ನೀತಿಗೆಟ್ಟ ಬಾಳು; ಸ್ವೇಚ್ಛಾ ಜೀವನ; ವ್ಯಭಿಚಾರ (ಜೀವನ). ವಿಪರೀತ ಸಂಭ್ರಮ; ಪಾನವಿಲಾಸ —ಗೋಷ್ಠಿ, ಗೊಂದಲ; ಕೋಲಾಹಲ. ಅತಿ(ರೇಕ) ಭೋಗ; ಸ್ವೇಚ್ಛಾ ಭೋಗ, —ವಿಲಾಸ; ಅತಿರೇಕ (A r. of emotion, colour, sound ರಾಗಗಳ, ವರ್ಣಗಳ, ನಾದಗಳ, —ಅತಿ ವಿಜೃಂಭಣೆ, ಗೊಂದಲ). (ಬೇಟೆ) ವಿವೇಚನೆ ಯಿಲ್ಲದೆ ಸಿಕ್ಕಿದ ವಾಸನೆಯನ್ನು ಹಿಡಿದುಹೋಗುವುದು, ನುಗ್ಗುವುದು [Run r. (ಮೊದಲು ಹೀಗೆ ಮಾಡುತ್ತಿದ್ದ ಬೇಟೆ ನಾಯಿಗಳ ವಿಷಯ ದಲ್ಲಿ ಪ್ರ.); (ಈಗ ರೂಪ.) (ಮನುಷ್ಯನ ನಾಲಗೆ ಅಥವಾ ಕಲ್ಪನೆಯ ವಿಷಯದಲ್ಲಿ) ತಡೆಬಡೆಯಿಲ್ಲದೆ, ಗೊತ್ತುಗುರಿಯಿಲ್ಲದೆ, ಮನಸ್ವೀ,—ವರ್ತಿಸು; ಹುಚ್ಚಾಬಟ್ಟೆ ಹೋಗು]. ಗೊಂದಲ; ತುಮುಲ; ಅವ್ಯವಸ್ಥೆ; ಶಾಂತಿಭಂಗದ ದೊಂಬಿ [R. Act ಶಾಂತಿಭಂಗದ ದೊಂಬಿ ಕಾನೂನು (ಅದರ ಒಂದು ನಿರ್ದಿಷ್ಟ ಭಾಗವನ್ನು ಅಧಿಕಾರಿಕವಾಗಿ ಓದಿ ಹೇಳಿದ ಒಂದು ಗಂಟೆಯೊಳಗೆ ಜನ ಚೆದರದೆ ಇನ್ನೂ ಗುಂಪು ಕೂಡಿದ್ದರೆ ಅವರೆಲ್ಲರೂ ಅಪರಾಧಿಗಳೆಂದು ಗಣಿಸಲ್ಪಡುವರು). Read the R. A. —ಕಾನೂ ನನ್ನು ಘೋಷಿಸು. (ಹಾಸ್ಯ ಪ್ರ.; ತಂದೆತಾಯಿ, ಮೊ. ರು ಮಕ್ಕಳ ವಿಷಯದಲ್ಲಿ) ಗಲಾಟೆ, ಮೊ. ನ್ನು ನಿಲ್ಲಿಸಿರೆಂದು —ಕಟ್ಟುಮಾಡು, ಆಜ್ಞೆ ಕೊಡು]. (ಕ್ರಿ.) ಸ್ವೇಚ್ಛಾ ಜೀವನ ನಡಸು; ಅತಿಯಾಗಿ ವ್ಯಭಿಚಾರ ಮಾಡು; ಸಮ್ಮೋದ ಸಂಭ್ರಮ ಮಾಡು; ಕ್ರೀಡಾಲೋಲನಾಗು. (ಕಾಲ, ಹಣ, ಮೊ. ನ್ನು) ಸ್ವೇಚ್ಛಾ ವಿಹಾರಗಳಲ್ಲಿ ಹಾಳುಮಾಡು, ಪೋಲುಮಾಡು (*Away* ಉಪ. ದೊಡನೆ). (ಜೀವನವನ್ನು) ಅತಿಭೋಗ ದಿಂದ, ದುರ್ವ್ಯಸನಗಳಿಂದ, —ಕೃಶವಾಗಿಸು, ಹಾಳುಮಾಡಿಕೊ (*Out* ಉಪ. ದೊಡನೆ). ರಾಜಕೀಯ ದೊಂಬಿ, ಶಾಂತಿಭಂಗದ ದೊಂಬಿ, —ನಡಸು, ಮಾಡು. **Ríoter** (ನಾ.); **Ríotous** (ಗು.); **Ríotously** (ಕ್ರಿ. ವಿ.); **Ríotousness** (ನಾ.); **Ríotry** (ನಾ.) (ವಿರ. ಪ್ರ.)

Rip[1] ರಿಪ್ (ನಾ.) ಕೆಲಸಕ್ಕೆ ಬಾರದ, ಕಳಪೆ, ಕಚ್ಚಾ, —ಕುದುರೆ. ಪೋಕರಿ, ಪುಂಡ, ಷೋದ.

Rip[2] ರಿಪ್ (ಕ್ರಿ., ನಾ.) ತಟಕ್ಕನೆ, ಬಲಾತ್ಕಾರದಿಂದ, —ಕಿತ್ತುಹಾಕು, ಹರಿ(ದು ಹಾಕು); ಸಿಗಿ (R. out the lining. R. the boards off); ಉದ್ದಕ್ಕೆ ಕತ್ತರಿಸು, ಗೀಳಿಹಾಕು [(ನಾ.) ಇಂಥ ಉದ್ದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕತ್ತರಿಕೆ, ಗೀಳಿಕೆ]. ಬಗಿದುಹಾಕು (ಅನೇಕ ವೇಳೆ *up* ಉಪ. ದೊಡನೆ: Had his belly ripped up). (ಮರ, ಬಂಡೆ, ಮೊ. ನ್ನು) ಸೀಳು ; (ಮರವನ್ನು ಎಳೆಯನುಸರಿಸಿ) ಗರಗಸದಿಂದ ಕೊಯ್ಯು (R.-saw ಉದ್ದ ಕೊಯ್ಯುವ ಗರಗಸ) ; ಚಾವಣಿಯಿಂದ (ಹೆಂಚು, ಹಲಗೆ, ದಬ್ಬೆ, ಮೊ. ನ್ನು) ತೆಗೆದುಹಾಕು, ಕಳಚಿ ಹಾಕು. ಕತ್ತರಿಸಿ, ಗೀಳಿ, —ಬಿರುಕು ಮಾಡು, ಕಂಡಿಮಾಡು ; (ಗಾಯ, ಜಗಳ, ದುಃಖ, ಹಿಂದಿನ ಸಂಗತಿ, ಮೊ. ನ್ನು) ಮತ್ತೆ ಕೆದಕು, ಕೆರಳಿಸು (*Up*) ; ಜೋರಾಗಿ, ತಟಕ್ಕನೆ,—ಕಿತ್ತುಹೋಗು ; ಸೀಳಿಹೋಗು ; (ಹಡಗು) ಮುನ್ನುಗ್ಗು (ರೂಪ. ಸಹ) (Let her r. ಮುನ್ನುಗ್ಗಲ ತಡೆಯಬೇಡ) ; (ವರ್ತಮಾನ ಕೃ., ಅಸಂ.) ಪಕ್ಕಾ, ಸೊಗಸಾದ, ಫರ್ಜರಿ (Good ಮೊ. ಪದದೊಡನೆ, ಕ್ರಿ. ವಿ. ಪ್ರ. ಸಹ: A ripping good time). **Ripper** (ನಾ.) (ಕ್ರಿಯಾರ್ಥ ಗಳಲ್ಲಿ); ಚಾವಣಿಯಿಂದ ಹೆಂಚು, ದಬ್ಬೆ, ಮೊ. ನ್ನು ಕಳಚುವ ಆಯುಧ ; ಉದ್ದ ಕೊಯ್ಯುವ ಗರಗಸ. (ಅಸಂ.) ಫರ್ಜರಿ —ವ್ಯಕ್ತಿ, ವಸ್ತು. **Rippingly** (ಕ್ರಿ. ವಿ.)

Rip[3] ರಿಪ್ (ನಾ.) (ಕಡಲನಲ್ಲ ಅಥವಾ ಹೊಳೆಯಲ್ಲಿ) ಕಲಕಿದ ನೀರ ಹರವು ; ಹೊರಳು ನೀರು.

Ripárian ರೈಪೇರಿಯನ್ (ಗು., ನಾ.) ನದೀ ತೀರದ (ಮೇಲಿನ) (R. proprietor, rights). (ನಾ.) —ಯಜಮಾನ, ಒಡೆಯ.

Ripe ರೈಪ್ (ಗು., ಕೃ.) ಉಪಯೋಗಕ್ಕೆ, ಕೊಯ್ಲಿಗೆ, ಕಟಾವಿಗೆ, —ಸಿದ್ಧವಾದ (ಸ್ಥಿತಿಯಲ್ಲಿರುವ) ; ಬಲಿತ ; ಮಾಗಿದ ; (ಪರಿ)ಪಕ್ವ ವಾದ; ಹದವಾದ; ಕಳಿತ; ಹಣ್ಣಾದ [R. corn, fruit, cheese, wine, seed. R. lips (ಮಾಗಿದ ಹಣ್ಣಿನಂತೆ) ತುಂಬಿದ ಕೆಂದುಟಿಗಳು. R. beauty (ಬೆಳೆದ ಹೆಣ್ಣಿನ) ಪರಿಪಕ್ವ ಸೌಂದರ್ಯ, ತುಂಬು ಚೆಲುವು. R. age ಮುಪ್ಪು ; ವೃದ್ಧಾಪ್ಯ ; ಹಣ್ಣು ವಯಸ್ಸು. Persons of riper years ಪರಿಣತ ವಯಸ್ಕರು, ವಯೋವೃದ್ಧರು, ಮುದುಕರು. Soon r. soon rotten (ಗಾದೆ) ಕಳಿಯುವುದೂ ಬೇಗ ಕೊಳೆಯುವುದೂ ಬೇಗ] . (ಕ್ರಿ.) (ಮು., ಕಾವ್ಯ) =Ripen. **Rípen** (ಕ್ರಿ.) ಬಲಿ; ಪಕ್ವಮಾಡು, ಪಕ್ವವಾಗು ; ಹಣ್ಣಾಗು ; ಹದವಾಗು. **Rípely** (ಕ್ರಿ. ವಿ.) ; **Rípeness** (ನಾ.)

Ripóst(e) ರಿಪೋಸ್ಟ್ (ನಾ., ಕ್ರಿ. ಅಕ.) (ಕತ್ತಿವರಿಸೆಯಲ್ಲಿ) ಕೂಡಲೆ ತಿರುಗಿಸಿಕೊಟ್ಟ ಮರುತಿವಿತ; ಶೀಘ್ರ ಪ್ರತಿಪ್ರಹಾರ. (ರೂಪ.) ಪ್ರತಿ ಪ್ರಹಾರ, ಮಾರೇಟು ; ಮಾರುತ್ತರ. (ಕ್ರಿ.) —ಕೊಡು.

Rípper. Rip[2] ನೋಡಿ.

Rípple[1] ರಿಪ್‌ಲ್ (ನಾ., ಕ್ರಿ. ಸಕ.) ಸೆಣಬಿನಿಂದ ಬೀಜಗಳನ್ನು ತೆಗೆದು ಹಾಕುವ ಹಣಿಗೆ. (ಕ್ರಿ.) ಹಣಿಗೆಯಿಂದ ಬೀಜ ತೆಗೆ.

Rípple[2] ರಿಪ್‌ಲ್ (ನಾ., ಕ್ರಿ.) ಸಣ್ಣ —ಅಲೆ, ತೆರೆ; ಕಿರುದೆರೆ ; (ಕೂದಲು, ಅಲಂಕಾರ ಪಟ್ಟಿ, ಮೊ. ಗಳಲ್ಲಿ) ತೆರೆ ತೆರೆಯಾಗಿರುವುದು, ತರಂಗ ರಚನೆ, ತರಂಗಾಕೃತಿ. ಕಿರುದೆರೆಯಂತೆ ಏರಿಳಿಯುವ ಮೃದುನಾದ ; ಮೆಲು ಸಪ್ಪಳು; ಕಲರವ ತರಂಗ (A r. of conversation ತರಂಗ ವಿಲಸಿತ ಸಂಭಾಷಣೆ). [R.-mark (ಗಾಳಿಯಿಂದ ಅಥವಾ ನೀರಿನಿಂದ ಮರಳಿ ನಲ್ಲ, ಮಣ್ಣಿನಲ್ಲ ಅಥವಾ ಬಂಡೆಯ ಮೇಲೆ ಆದ) ತೆರೆಗಳು, —ಗಳ ಗುರುತು ; ತರಂಗಾಕೃತಿ]. (ಕ್ರಿ.) ಕಿರುದೆರೆಗಳಾಗು ; ಸಣ್ಣ ಸಣ್ಣ ಅಲೆಯೇಳು; ಕಿರುದೆರೆಗಳಾಗಿ ಹರಿ ; ಅಲೆಗಳ(ಂತೆ) ಗುರುತು —ಆಗು, ಮಾಡು ; ತರಂಗಶಬ್ದವಾಗು ; (ಧ್ವನಿ) ತರಂಗದಂತೆ ಏರಿಳಿತವಿರು, ತರಂಗ ವಿರಾಸವಿರು. **Rípplet** (ನಾ.) ಸಣ್ಣ ಕಿರುದೆರೆ. **Ripply** (ಗು.)

Rip van Winkle ರಿಪ್ ವ್ಯಾನ್ ವಿಂಕ್‌ಲ್ (ನಾ.) ತೀರ ಹಳೆಯ ಕಾಲದ ಭಾವನೆ, ತಿಳಿವಳಿಕೆ, ಉಳ್ಳವನು ; ಓಬೀರಾಯ(ನ ಕಾಲ ದವನು). (Washington Irving ಎಂಬಾತನ ಗ್ರಂಥದಲ್ಲಿ ಬರುವ, ೨೦ ವರ್ಷಗಳ ಕಾಲ ನಿದ್ರೆಯಲ್ಲಿ ಕಳೆದು ಪ್ರಪಂಚ ಬದಲಾಯಿಸಿರುವುದನ್ನು ಅರಿಯದೆಹೋದ ಕಥಾನಾಯಕನ ಹೆಸರು)

Rise ರೈಸ್ (ಕ್ರಿ., ಭೂತ. rose ರೋಸ್, ಭೂ. ಕೃ. risen ರಿಸ್‌ನ್ ; ನಾ.) (ಮಲಗಿದ್ದ, ಕುಳಿತಿದ್ದ, ಮೊ. ಸ್ಥಿತಿಯಿಂದ) ಏಳು ; ಮೇಲಕ್ಕೇಳು ; ಎದ್ದು ನಿಲ್ಲು ; (ಬೆಳಗ್ಗೆ) ಹಾಸಿಗೆ ಬಿಟ್ಟೇಳು, ನಿದ್ದೆಯಿಂದೇಳು. (ಸಭೆ, ಮೊ.) ಕೊನೆಗೊಳ್ಳು, ಮುಕ್ತಾಯವಾಗು, ವಿಸರ್ಜನೆಯಾಗು. (ಬಾಗಿದ್ದು) ನೆಟ್ಟಗಾಗು ; (ಕೆಳಕ್ಕೆ ಬಿದ್ದವನು) ಚೇತರಿಸಿಕೊಂಡು ನೆಟ್ಟಗೆ ನಿಲ್ಲು ; ನೆಲದಿಂದ ಏಳು ; (ಸತ್ತಿದ್ದು) ಮತ್ತೆ ಎದ್ದುಬರು, ಪ್ರಾಣಪಡೆ ; ಪುನರ್ ಜೀವಿಸು (R. again. R. from the dead). [R. from table ಊಟ ಮುಗಿಸಿಕೊಂಡು ಏಳು. R., Sir Thomas, etc. ('ನೈಟ್' ಪದವಿ ಕೊಡುವಾಗ ಹೇಳುವ ಒಕ್ಕಣೆ). Parliament will r. next week ಶಾಸನ ಸಭೆ ಮುಂದಿನ ವಾರ ಮುಕ್ತಾಯವಾಗುತ್ತದೆ, ವಿಸರ್ಜನೆಯಾಗುತ್ತದೆ. The hair rose on his head ಅವನ ತಲೆಗೂದಲು ನಿಮಿರಿಕೊಂಡಿತು. Horse rises to a fence ಕುದುರೆ ಬೇಲಿಯನ್ನು ಹಾರಲು ಹಿಂಗಾಲ ಮೇಲೆ ನಿಲ್ಲುತ್ತದೆ. Birds r. well today ಹಕ್ಕಿಗಳು ಇಂದು ಚೆನ್ನಾಗಿ ಹಾರುತ್ತವೆ, ಮೇಲೇರುತ್ತವೆ]. ಏಳು, ಕೆರಳು ; ದಂಗೆಯೇಳು ; ಪ್ರತಿಭಟಿಸು ; ಕ್ರಾಂತಿಯೇಳು [If a wind should r. ಗಾಳಿ ಏನಾದರೂ ಎದ್ದ ಪಕ್ಷದಲ್ಲಿ. R. in arms, rebellion ಶಸ್ತ್ರ ಪಾಣಿಗಳಾಗಿ ದಂಗೆಯೇಳು. Gorge, stomach, rises ಹೊಟ್ಟೆ ತೊಳಸುತ್ತದೆ ; ಅಸಹ್ಯ ಹುಟ್ಟುತ್ತದೆ. My whole soul rises against it ನನ್ನ ಸರ್ವಾತ್ಮವೂ ಅದನ್ನು ಪ್ರತಿಭಟಿಸುತ್ತದೆ ; ಅದನ್ನು ಕಂಡು ಮೈಯೆಲ್ಲ ಉರಿಯುತ್ತದೆ]. ಮೇಲಕ್ಕೆ —ಹೋಗು, ಬರು, ಬೆಳೆ ; ಅಡರು ; ಹತ್ತು ; ಆರೋಹಿಸು ; ಮೇಲೇರು ; ಮೇಲಕ್ಕೆ ಚಾಚಿಕೊ, ಉಬ್ಬು ; ಎತ್ತರವಾಗು ; ಉನ್ನತ ಸ್ಥಿತಿಗೆ, ಉನ್ನತ ಸ್ಥಾನಕ್ಕೆ— ಬರು ; (ಮೊತ್ತ, ಮಟ್ಟ) ಏರು, ಹೆಚ್ಚಾಗು ; ಏರು, ಓಲು, —ಇರು; ಮೇಲಕ್ಕೆ ಕಾಣಿಸಿಕೊ, ಕಾಣಬರು (*Above* ಉಪ. ದೊಡನೆ). ಹುಟ್ಟು, ಉದಯಿಸು, ಮೂಡು. ವರ್ಧಿಸು ; ಬಲವಾಗು, ಜೋರಾಗು [The rising generation ತರುಣರ ಪೀಳಿಗೆ; ವರ್ಧಿಷ್ಣು ಜನ. Tree rises 20 feet. Blisters r. ಗುಳ್ಳೆಗಳು, ಬೊಕ್ಕೆಗಳು, —ಏಳುತ್ತವೆ. Bread will not r. ರೊಟ್ಟಿ ಉಬ್ಬುವುದಿಲ್ಲ. Should r. above petty jealousies ಸಣ್ಣ ಪುಟ್ಟ ಅಸೂಯೆಗಳಿಗೆ ಈಡಾಗದೆ ಮೇಲ್ಮಟ್ಟದಲ್ಲರಬೇಕು. Picture rises before the mind ಮನಸ್ಸಿನಲ್ಲಿ ಚಿತ್ರ ಮೂಡುತ್ತದೆ. Spirits r. ಉತ್ಸಾಹವೇರುತ್ತದೆ ; ಗೆಲವು ಮುಖವಾಗುತ್ತದೆ. Sugar rises ಸಕ್ಕರೆ ಧಾರಣೆ ಏರುತ್ತದೆ. A rising lawyer ಅಭಿವೃದ್ಧಿಗೆ ಬರುವ ನ್ಯಾಯವಾದಿ. R. in the world ಸಾಮಾಜಿಕ ಉನ್ನತಿ ಪಡೆ ; ಉನ್ನತ ಸ್ಥಿತಿಗೆ —ಬರು, ಏರು. Rising ground ತಿಟ್ಟು, ಏರುನೆಲ; ಚಡಾವು. The interest rises with each act ಅಂಕ ಅಂಕಕ್ಕೂ ಆಸಕ್ತಿ, ಕುತೂಹಲ, —ಹೆಚ್ಚುತ್ತ ಹೋಗುತ್ತದೆ. Fish rises ಆಹಾರಕ್ಕಾಗಿ ಮೀನು (ನೀರಿನ) ಮೇಲಕ್ಕೆ ಬರುತ್ತದೆ. Drowning man rises three times. Her colour rose ಆಕೆಯ ಮುಖ— ಕೆಂಪೇರಿತು, ಕಳೆಯೇರಿತು. Rising fourteen ಹದಿನಾಲ್ಕರ ಪ್ರಾಯ (ಸಮೀಪಿಸುತ್ತ)]. ಸಾಕಷ್ಟು ಸಾಮರ್ಥ್ಯ ಬೆಳಸು, ಮಟ್ಟಕ್ಕೆ ಏರು (*To* ಉಪ. ದೊಡನೆ. Does not r. to the occasion ಸಂದರ್ಭಕ್ಕೆ ತಕ್ಕ ಸಾಮರ್ಥ್ಯವಿಲ್ಲ). ಉಗಮವಾಗು, ಆರಂಭವಾಗು, ಹುಟ್ಟು (*From, in, at,* ಮೊ. ಉಪ. ದೊಡನೆ. River rises from a spring. The difficulty rises from misapprehension). (ವಿರ. ಪ್ರ., ಸಾ., ಕಾವ್ಯ) ಉಂಟಾಗು, ತಲೆದೋರು, ಹುಟ್ಟು (A feud, rumour, rose). (ಪ್ರೇರಣಾರ್ಥಕವಾಗಿ ವಿಶೇಷ ಪ್ರ.) ಮೇಲಕ್ಕೆ ಬರಿಸು ; ಏಳುವುದನ್ನು ನೋಡು ; ದೊರಕಿಸು [Did not r. a fish, a bird, all day. R. ship (ಹಡಗನ್ನು ಸಮೀಪಿಸುವಾಗ) ತುದಿಯಿಂದ ಕ್ರಮೇಣ ಕೆಳ ಭಾಗ ಕಾಣು ; ಹಡಗು ಮುಂದೆ ಮೂಡು ತ್ತಿರುವುದನ್ನು ಕಾಣು]. (ನಾ.) (ವಿರ. ಪ್ರ., ಸೂರ್ಯ, ಮೊ. ಗಳ) ಉದಯ, ಮೂಡಿಕೆ [At r. of sun, day (Sunrise ಹೋಲಿಸಿ)].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏರು, ಚಡಾವು, ದಿಣ್ಣೆ, ತಿಟ್ಟು ; ಗುಡ್ಡ, ಮೊರಡಿ (Chapel stands on a r.). (ಸಮಾಜದಲ್ಲಿ) ಏಳಿಗೆ, ಉತ್ಕರ್ಷ ; ಅಭಿವೃದ್ಧಿ, ಉನ್ನತಿ, ಉಚ್ಛ್ರಾಯ ; (ಬೆಲೆ, ಮೊತ್ತ, ಎತ್ತರ, ಮೊ. ಗಳಲ್ಲಿ) ಏರಿಕೆ, ಹೆಚ್ಚಿಗೆ (Ask for a r. ಹೆಚ್ಚಿಗೆ ಕೂಲಿ, ಹೆಚ್ಚಿಗೆ ಸಂಬಳ, —ಕೇಳು. Prices are on the r. ಬೆಲೆಗಳು— ಏರುತ್ತಿವೆ, ಏರಿಕೆಯಲ್ಲಿವೆ). (ಮೀನು) ನೀರಮೇಲ್ಗಡೆ ಬರುವುದು [Not a sign of a r.; Get *or* take a r. out of one (ರೂಪ.) ಒಬ್ಬನು ತನ್ನ ಕೋಪವನ್ನು ಅಥವಾ ಇತರ ಹುಳುಕನ್ನು ತೋರಿಸಿಕೊಳ್ಳುವಂತೆ ಮಾಡು]. (ಮೆಟ್ಟಿಲು, ಕಮಾನು, ಇಳುಕಲು, ಮೊ. ಗಳ) ಎತ್ತರ. ಮೆಟ್ಟಿಲು ಸಾಲಿನ ಎರಡು ಮೆಟ್ಟಿಲು ಹಲಗೆಗಳನ್ನು ಕೂಡಿಸುವ ನಿಲುಪಟ್ಟಿ (=**Ríser** ನಾ.). ಮೂಲ, ಹುಟ್ಟು, ಆದಿ (Has, takes, its r. *in*, *from*. Give r. to ಕಾರಣವಾಗು ; ಊಹೆಗೆ ಅವಕಾಶಕೊಡು). **Rísing** (ನಾ.) (ಕ್ರಿಯಾರ್ಥ ಗಳಲ್ಲಿ) ; ಮತ್ತೆ —ಎದ್ದು ಬರುವುದು, ಬದುಕಿ ಬರುವುದು ; ಪುನರುಜ್ಜೀವನ ; ಪುನರುತ್ಥಾನ (=R.-again). ದಂಗೆ, ಕ್ರಾಂತಿ, ಬಂಡಾಯ. ಕುರು, ಗುಳ್ಳೆ, ಮೊಡವೆ.

Rísible ರಿಸಿಬ್‌ಲ್ (ಗು.) ನಗುವ(ಸ್ವಭಾವದ) ; ಹಾಸ್ಯಶೀಲ ; ನಗುವಿನ, ನಗುವಿಗೆ ಸಂಬಂಧಪಟ್ಟ (R. nerves, faculties). (ವಿರ. ಪ್ರ.) ಹಾಸ್ಯಾಸ್ಪದ, ನಗೆಗೀಡಾದ. **Risibílity** (ನಾ.)

Risk ರಿಸ್ಕ್ (ನಾ., ಕ್ರಿ. ಸಕ.) ಕೇಡಾಗುವ ಸಂಭವ, ನಷ್ಟಸಂಭವ, ಅಪಾಯ ಸಂಭವ ; ಗಂಡಾಂತರ [Run risks, a r., the r.—ಕ್ಕೆ ಈಡಾಗು, ಈಡಾಗಿರು, ತಲೆಗೊಡು (ಸಾ., *of* ಉಪ. ದೊಡನೆ). Take risks —ಕ್ಕೆ ಸಿದ್ಧವಾಗಿರು, ತಲೆಗೊಡು. At owner's r. ಮಾಲೀಕನ —ಸ್ವಂತ ಹೊಣೆಯ ಮೇಲೆ, ನಷ್ಟ ಜವಾಬ್ದಾರಿಯ ಮೇಲೆ. R.-money ಅಕಸ್ಮಾತ್ತಾಗಿ ಬೀಳುವ ಕೊರತೆಗಳನ್ನು ತುಂಬುವುದಕ್ಕಾಗಿ ಖಜಾಂಚಿಗೆ ಕೊಡುವ ಹಣ : ನಷ್ಟಭರ್ತಿ ಹಣ ; ಕಂಭರ್ತಿ—]. (ಕ್ರಿ.) —ಕ್ಕೆ ಈಡಾಗಿರು, ಈಡಾಗು, ತಲೆಗೊಡು ; ನಷ್ಟಕ್ಕೆ, ಅಪಾಯಕ್ಕೆ, —ಸಿದ್ಧವಾಗಿ ನುಗ್ಗು ; ಒಂದು ಕೈ ನೋಡು, ಸಾಹಸಮಾಡು (R. the jump, the battle). **Rískful** (ಗು.) ; **Rískless** (ಗು.) ; **Rísky** (ಗು.) ಅಪಾಯ, ನಷ್ಟ, —ಸಂಭವವುಳ್ಳ ; ಅಪಾಯಕರವಾದ ; ಗಂಡಾಂತರದ. (ಕಥೆ, ನಾಟಕ ಪ್ರಸಂಗ, ಮೊ. ವು) ಅಶ್ಲೀಲ ಸೂಚನೆಯುಳ್ಳ ; ಔಚಿತ್ಯಕ್ಕೆ, ಮರ್ಯಾದೆಗೆ, —ಭಂಗ ತರುವ [=**Risqué** (F) ರಿಸ್ಕೆ]. **Rískily** (ಕ್ರಿ. ವಿ.) ; **Rískiness** (ನಾ.)

Risqué. **Risk** ನೋಡಿ.

Ríssole ರಿಸೋಲ್ (ನಾ.) ಮಾಂಸದೊಡನೆಯೊ ಮೀನಿನೊಡನೆಯೊ ರೊಟ್ಟಿಯ ಚೂರು ಪಾರು, ಮೊ. ನ್ನು ಬೆರಸಿ ಮಾಡಿದ ದೋಸೆ, ಉಂಡೆ, ಮೊ. ವು.

Ritardándo (It.) ರೀಟಾರ್‌ಡ್ಯಾ(ಡಾ)ಂಡೋ (ಸಂ. ಸೂಚನೆ) ಇನ್ನೂ ನಿದಾನವಾಗಿ, ಮೆತ್ತಗೆ.

Rite ರೈಟ್ (ನಾ.) ಮತಾಚರಣೆ ; ಸಂಸ್ಕಾರ ; ಕರ್ಮ ; ಪ್ರಕ್ರಿಯೆ [Funeral *or* burial rites ಉತ್ತರ ಕ್ರಿಯೆ, ಅಂತ್ಯ ಸಂಸ್ಕಾರ. Conjugal *or* nuptial rites ಋತು ಶಾಂತಿ ; ನಿಷೇಕ ಪ್ರಸ್ತ. The Latin, Anglican, r. (ಆಯಾ ಕ್ರೈಸ್ತ ಮಂಡಲಿಯ ಮತ ಪ್ರಕ್ರಿಯೆಗಳು, —ಗಳ ಪದ್ಧತಿ)]. **Ríteless** (ಗು.) ; **Rítual** ರಿಟ್ಯು(ಚು)ಅಲ್ (ಗು., ನಾ.) ಮತಾಚರಣೆಯ (ಸಂಬಂಧವಾದ) ; ಸಂಸ್ಕಾರ ಸಂಬಂಧವಾದ. (ನಾ.) ಮತ ಪ್ರಕ್ರಿಯೆ ; ಮತಕ್ರಿಯಾ ವಿಧಿ ; ಸಂಸ್ಕಾರ ; ಕರ್ಮ ಪದ್ಧತಿ. **Rítualism** (ನಾ.) ಮತಾಚರಣೆಯ (ಅತಿ) ನಿಷ್ಠೆ. **Rítualist** (ನಾ.) ; **Ritualístic** (ಗು.) ; **Ritualístically** (ಕ್ರಿ. ವಿ.) ; **Rítualize** (ಕ್ರಿ.) ; **Rítually** (ಕ್ರಿ. ವಿ.)

Ritual, etc. **Rite** ನೋಡಿ.

Rívage ರೈವೆಜ್ (ನಾ.) (ಕಾವ್ಯ) ದಡ, ತೀರ, ಕರೆ.

Ríval ರೈವಲ್ (ನಾ., ಗು., ಕ್ರಿ.) (ಒಂದು ಬಹುಮಾನಕ್ಕೆ, ಹೆಂಗಸಿನ ಅಥವಾ ಗಂಡಸಿನ ಪ್ರಣಯಕ್ಕೆ, ಒಂದು ಉದ್ಯಮದಲ್ಲಿ ಅಥವಾ ಗುಣದಲ್ಲಿ) ಎದುರಾಳಿ(ಯಾದ), ಪ್ರತಿಸ್ಪರ್ಧಿ(ಯಾದ), ಪ್ರತಿದ್ವಂದ್ವಿ (Without a r. ಎದುರಿಲ್ಲದ, ಅಪ್ರತಿಮ). (ಕ್ರಿ.) (ಪ್ರತಿ)ಸ್ಪರ್ಧಿಸು ; ಮೇಲಾಡು ; ಹುರುಡಿಸು (Water rivals steam as a source of power). **Rívalry** (ನಾ.) (ಪ್ರತಿ)ಸ್ಪರ್ಧೆ ; ಹುರುಡು ; ಮೇಲಾಟ. **Rívalship** (ನಾ.)

Rive ರೈವ್ [ಕ್ರಿ., ಭೂತ. rived ; ಭೂ. ಕೃ. riven ರಿವ(ವ್)ನ್, (ವಿರ. ಪ್ರ.) rived] ಸೀಳಿ, ಹರಿದು, ಬಗಿದು, ಸಿಗಿದು, —ಹಾಕು (*Away*, *of*, *from* ಉಪ. ದೊಡನೆ). (ಕಟ್ಟಿಗೆ, ಕಲ್ಲು, ಮೊ. ನ್ನು) ಸೀಳು, ಒಡೆ. ಚಿಕ್ಕೆ, ದಬ್ಬೆ, —ಸೀಳು ; ಸೀಳಾಗು ; ಸೀಳು, ಬಿರುಕು, —ಬಿಡು ; (ಕಟ್ಟಿಗೆ) ಒಡೆಯಲು ಬರು. **Ríver¹** (ನಾ.)

Rível ರಿವ್‌ಲ್ (ಕ್ರಿ.) (ಪ್ರಾಚೀ. ಪ್ರ.) ಸುಕ್ಕು ಸುಕ್ಕು ಮಾಡು, —ಆಗು ; ಮುದುರು ; ನಲುಗು ; ನಲುಗಿಸು.

Riven. Rive ಧಾತುವಿನ ಭೂ. ಕೃ.

Ríver¹. **Rive** ನೋಡಿ.

Ríver² ರಿವರ್ (ನಾ.) ಹೊಳೆ, ನದಿ. (ಯಾವುದಾದರೂ ಪದಾರ್ಥದ) ಹೊನಲು, ಪ್ರವಾಹ (Rivers of blood ರಕ್ತ ಪ್ರವಾಹ, ನೆತ್ತರ ಹೊನಲು). (ವಿಶೇಷಣವಾಗಿ) ನದಿಯಲ್ಲಿ ವಾಸಿಸುವ, ನದಿಯ ಮೇಲಿರುವ ; ನದಿಯ ಮೇಲೆ ಉಪಯೋಗಿಸುವ ; ನದಿಯ. R.-bed ನದೀತಳ, —ಪಾತ್ರ. R.-god ನದೀ ದೇವತೆ. R.-horse =Hippopotamus. Riverside ನದಿಯ ಪಕ್ಕ, ನದೀತೀರ (ವಿಶೇಷಣವಾಗಿ : A r.-s. villa). **Rívered** (ಭೂ. ಕೃ., ಗು.) ನದಿಗಳಿರುವ, ನದಿ(ಗಳು) ಹರಿಯುವ. **(-)rivered** (ಗು.) ; **Ríverless** (ಗು.) ; **Ríverain** ರಿವರೇನ್ (ಗು., ನಾ.) ನದಿಯ (ಪಕ್ಕದ), ನದೀತೀರದ ; —ಲ್ಲಿ ವಾಸಿಸುವ(ವನು), ಇರುವ(ವನು) ; ನದೀ(ತೀರ) ವಾಸಿ. **Ríverine** ರಿವರೈನ್ (ಗು.) ನದಿಯ (ತೀರದ) ; —ಮೇಲಿನ ; ನದಿಯಂಥ. **Rívulet** ರಿವ್ಯುಲೆಟ್ (ನಾ.) ಸಣ್ಣ ಹೊಳೆ ; ತೊರೆ, ಹಳ್ಳ. ಹಲವು ಬಗೆಯ ಪತಂಗ.

Ríverain, Ríverine. **River** ನೋಡಿ.

Rívet ರಿವೆಟ್ (ನಾ., ಕ್ರಿ. ಸಕ.) ಲೋಹ ಫಲಕ, ಮೊ. ನ್ನು ಬಂಧಿಸುವುದಕ್ಕಾಗಿ ಉಪಯೋಗಿಸುವ, ತೂತೊಳಗೆ ಹಾದಮೇಲೆ ತುದಿಯನ್ನು ಮಡಿಚಿಯಾಗಲಿ, ಚಪ್ಪಟೆಯಾಗಿ ಬಡಿದಾಗಲಿ ಬಿಗಿಸುವ, ಒಂದು ತೆರನ ಮೊಳೆ : ಕಟಿ ಮೊಳೆ ; ರಿವೆಟ್ ಮೊಳೆ. (ಕ್ರಿ.) ಕಟಿ ಮೊಳೆ ಬಿಗಿಸು ; 'ರಿವೆಟ್'ಮಾಡು (*Together*, *down*, *to*, *into*, *on* ಕ್ರಿ. ವಿ. ಅಥವಾ ಉಪ. ದೊಡನೆ) ; ಭದ್ರಪಡಿಸು, ಕೀಲಿಸು (R. error) ; (ನೋಟ, ಗಮನ, ಮೊ. ನ್ನು) ನೆಡು, ನಾಟು (*Upon* ಉಪ. ದೊಡನೆ) ; ಗಮನ, ದೃಷ್ಟಿ, —ಸೆರೆಹಿಡಿ. ಸೆಳೆದು ನಿಲ್ಲಿಸು. **Ríveter** (ನಾ.)

Riviére ರಿವ್ಯೇರ್, **Ríviere** ರಿವಿಯೇರ್ (ನಾ.) (ಸಾ., ಒಂದಕ್ಕಿಂತ ಹೆಚ್ಚು ಎಳೆಯ) ರತ್ನಹಾರ.

Rívulet. **River** ನೋಡಿ.

Ríx-dollar ರಿಕ್ಸ್‌ಡಾಲರ್ (ನಾ.) (ಚರಿತ್ರೆ) ಯೂರೋಪಿನ ಕೆಲವು ದೇಶಗಳಲ್ಲಿ, ೧೬-೧೯ ಶ. ಮಾ. ಗಳಲ್ಲಿ ಬಳಕೆಯಲ್ಲಿದ್ದ ಒಂದು ಬೆಳ್ಳಿಯ ನಾಣ್ಯ (೪ ಷಿ. ೬ ಪೆ. ಯಿಂದ ೨ ಷಿ. ೩ ಪೆ. ವರೆಗೆ ಬೆಲೆಯುತ್ತು)

Roach¹ ರೋಚ್ (ನಾ.) ಒಂದು ಸಿಹಿನೀರ ಮೀನು (Sound as a r. ಪೂರ್ಣಾರೋಗ್ಯದಲ್ಲಿ). R.-backed, -bellied ಉಬ್ಬು ಬೆನ್ನುಳ್ಳ —ಹೊಟ್ಟೆಯುಳ್ಳ.

Roach² ರೋಚ್ (ನಾ.) (ನಾವೆ) ಚೌಕನೆಯ ಹಾಯಿಯ ಅಡಿ ಪಕ್ಕದಲ್ಲಿರುವ ಮೇಲ್ಕೊಂಕು ಕತ್ತರಿಕೆ.

Roach³ =Cockroach (ಪದದ ಸಂಕ್ಷಿಪ್ತ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Road[1] ರೋಡ್ (ನಾ.) (ಸಾ., ಬ. ವ. ದಲ್ಲಿ) ಕರೆಯ ಹತ್ತಿರ ಹಡಗುಗಳು ಲಂಗರು ಹಾಕಿ ಸುರಕ್ಷಿತವಾಗಿರಲು ಅನುಕೂಲಮಾಡಿರುವ ನೀರಭಾಗ: ಹಡಗು ನಿಲ್ಲೆಡೆ (=**Roádstead**). ರಸ್ತೆ, ದಾರಿ, ಹಾದಿ, ಬೀದಿ, ಪಥ, ಮಾರ್ಗ [On the r. ಪ್ರಯಾಣದಲ್ಲಿ, ಸಂಚಾರ ಮಾಡುತ್ತ. Take the r. ಪ್ರಯಾಣ ಹೊರಡು. The r. ಹೆದ್ದಾರಿ; ರಾಜಮಾರ್ಗ. Take to the r. (ಪ್ರಾಚೀ. ಪ್ರ.) ದಾರಿಗಳ್ಳನಾಗು, ದರೋಡೆಗಾರನಾಗು. Rule of the r. ರಸ್ತೆಯಲ್ಲಿ ಸಂಚರಿಸುವ ಮನುಷ್ಯರು ಮತ್ತು ವಾಹನಗಳು ಪಾಲಿಸಬೇಕಾದ ನಿಯಮ: ಮಾರ್ಗ ನಿಯಮ. Take r. to ruin ನಾಶದ ಮಾರ್ಗ ಹಿಡಿ. Royal r. ಸುಲಭವಾದ ದಾರಿ; ರಾಜಮಾರ್ಗ. In the r. (ಬಳ. ಮಾ.) ಒಬ್ಬನ ದಾರಿಯಲ್ಲಿ—ಅಡ್ಡಿಯಾಗಿ, ಅಡಚಣೆಯಾಗಿ (Get out of the, my, r.). **R. Board** (ರಸ್ತೆಗಳನ್ನು ಏರ್ಪಡಿಸುವ ಮತ್ತು ಅಭಿವೃದ್ಧಿಪಡಿಸುವ ಜವಾಬ್ದಾರಿಯುಳ್ಳ) ರಸ್ತೆ ವಿಚಾರ ಮಂಡಲಿ; ಮಾರ್ಗ ಸಮಿತಿ. **R.-book** ಒಂದು ದೇಶದ ರಸ್ತೆಗಳನ್ನು ವಿವರಿಸುವ ಪುಸ್ತಕ: ರಸ್ತೆ ಕೈಪಿಡಿ. **R.-hog** ಜನಕ್ಕೆ ಅಪಾಯವಾಗುವಂತೆ ನಿರ್ಲಕ್ಷ್ಯದಿಂದ ಸವಾರಿ ಮಾಡುವವನು, ಮೋಟಾರು ನಡಸುವವನು; ಹಿಂದೆ ಬರುತ್ತಿರುವವರು ಮುಂದೆ ಹೋಗದಂತೆ ದಾರಿ ಕಟ್ಟಿ ಸವಾರಿಮಾಡುವವನು; ನಿರ್ಲಕ್ಷ್ಯ, ಸ್ವಾರ್ಥ, —ಸವಾರ; ರಸ್ತೆಗೂಳಿ. **Roadman** ರಸ್ತೆ ಕಾಮಗಾರ. **R.-metal** (ರಸ್ತೆಗೆ ಹಾಕುವ) ಜಲ್ಲಿ ಕಲ್ಲು. **R.-side** ರಸ್ತೆಯ ಪಕ್ಕ (ಮು., ವಿಶೇಷಣವಾಗಿ: A r.-s. inn). **R. sense** ವಾಹನಗಳನ್ನು ಸುರಕ್ಷಿತವಾಗಿ ರಸ್ತೆಯಲ್ಲಿ ನಡಸುವ ಸಾಮರ್ಥ್ಯ; ರಸ್ತೆಯಲ್ಲಿ ಸುರಕ್ಷಿತವಾಗಿ ತಿರುಗಾಡುವ ತಿಳಿವಳಿಕೆ; ಸಂಚಾರ ಜ್ಞಾನ; ಮಾರ್ಗ ವಿವೇಕ. **Roadway** (ನಡು) ರಸ್ತೆ (ಎದುರು ಪದ: Side-path); ವಾಹನಗಳ ಮತ್ತು ಮನುಷ್ಯರ ತಿರುಗಾಟಕ್ಕಾಗಿ ಉಪಯೋಗಿಸುವ ಸೇತುವೆಯ ಅಥವಾ ರೈಲುಹಾದಿಯ ಭಾಗ. **Road-worthy** ರಸ್ತೆಯ ತಿರುಗಾಟಕ್ಕೆ ತಕ್ಕ; ಮಾರ್ಗಯೋಗ್ಯ; (ಮನುಷ್ಯ) ರಸ್ತೆಯ ಪ್ರಯಾಣಮಾಡುವ ಸ್ಥಿತಿಯಲ್ಲಿರುವ. **(-)roaded** (ಗು.); **Roádless** (ಗು.). **Roádster** (ನಾ.) ನಿಲ್ಲೆಡೆಯಲ್ಲಿ ಲಂಗರು ಹಾಕಿ ನಿಂತಿರುವ ಹಡಗು. ರಸ್ತೆಯ ಪ್ರಯಾಣಕ್ಕೆ ಯೋಗ್ಯವಾದ—ಕುದುರೆ, ಬೈಸಿಕಲ್, ಮೊ. ವು ಅನುಭವಸ್ಥ ಪ್ರಯಾಣಿಕ.

Road[2] ರೋಡ್ (ಕ್ರಿ. ಸಕ.) (ನಾಯಿಯ ವಿಷಯದಲ್ಲಿ) ಹೆಜ್ಜೆಯ ವಾಸನೆ ಹಿಡಿದು (ಬೇಟೆ ಹಕ್ಕಿಯ) ಹಿಂದೆ ಹೋಗು.

Roádsted, Roádster. **Road**[1] ನೋಡಿ.

Roam ರೋಮ್ (ಕ್ರಿ., ನಾ.) (ಒಂದು ಗೊತ್ತಿಲ್ಲದೆ) ಅಲೆ, ತಿರುಗಾಡು, ಸುತ್ತಾಡು, ಅಡ್ಡಾಡು; (ಒಂದು ಪ್ರಾಂತ, ಸಮುದ್ರ, ಮೊ. ಗಳ ಮೇಲೆ) ಸುಮ್ಮನೆ ಅಲೆದಾಡು, ಪರೆದಾಡು. (ನಾ., ವಿರ. ಪ್ರ.) ಸುತ್ತಾಟ, ಅಲೆದಾಟ, ತಿರುಗಾಟ (A half-hour's r.)

Roan[1] ರೋನ್ (ಗು., ನಾ.) (ಪ್ರಾಣಿಯ ವಿಷಯದಲ್ಲಿ) ಕಪಿಲ ಅಥವಾ ಕೆಂಗಂದು ಅಥವಾ ಕೆಂಪು ಬಣ್ಣದ ಒಡಲಲ್ಲಿ ಬಿಳಿಯ ಅಥವಾ ಬೂದು ಬಣ್ಣದ ಮಿಶ್ರಣವುಳ್ಳ ಮೈಯ (Black, blue, red, r.). (ನಾ.) ಇಂಥ ಕುದುರೆ, ಹಸು.

Roan[2] ರೋನ್ (ನಾ.) ಪುಸ್ತಕದ ರಟ್ಟುಕಟ್ಟಿನಲ್ಲಿ ಮೊರಾಕೊ ಚರ್ಮಕ್ಕೆ ಬದಲಾಗಿ ಉಪಯೋಗಿಸುವ ಮೃದುವಾದ ಕುರಿಯ ಚರ್ಮ.

Roar ರೋ(ಅ)ರ್ (ಕ್ರಿ., ನಾ.) ಗರ್ಜಿಸು, ಮೊಳಗು, ಮೊರೆ, ಅರಚು, ಅಬ್ಬರಿಸು, ಆರ್ಭಟಿಸು, ಭೋರ್ಗರೆ (You need not r. ನೀನು ಗಟ್ಟಿಯಾಗಿ ಕೂಗಿಕೊಳ್ಳಬೇಕಾಗಿಲ್ಲ, ಅಬ್ಬರಿಸಬೇಕಾಗಿಲ್ಲ). (ಕುದುರೆಯ ವಿಷಯದಲ್ಲಿ: ರೋಗ ಕಾರಣದಿಂದ) ಉಸಿರಾಟದಲ್ಲಿ ದೊಡ್ಡ ಸದ್ದು ಮಾಡು; ಗೊರಗುಟ್ಟು [**Roárer** (ನಾ.); **Roáring**[1] (ನಾ.)]. (ಸ್ಥಳದ ವಿಷಯದಲ್ಲಿ) ಗದ್ದಲ ಸೂಸುತ್ತಿರು, ಗದ್ದಲವಾಗಿರು; ಪ್ರತಿಧ್ವನಿಕೊಡು (ಅನೇಕ ವೇಳೆ *again* ಪದದೊಡನೆ); ಗಟ್ಟಿಯಾಗಿ—ಹೇಳು, ಹಾಡು; ಘೋಷಿಸು (ಅನೇಕ ವೇಳೆ *out* ಉಪ. ದೊಡನೆ); ಅರಚಿ ಅರಚಿ—ಕಿವುಡುಮಾಡು, ಗಂಟಲು ಒಡೆದುಕೊ; ಬಡಿದುಕೊ; ಅಬ್ಬರಿಸಿ—ಅಡಗಿಸು, ಬಾಯಿ ಮುಚ್ಚಿಸು (*Down*). (ನಾ.) ಗರ್ಜನೆ, ಮೊರೆತ, ಅಬ್ಬರ, ಆರ್ಭಟ (Set table in a r. ಗೋಷ್ಠಿಯನ್ನು ಅಟ್ಟಹಾಸದಿಂದ ನಗುವಂತೆ ಮಾಡು). **Roáring**[2] (ಗು.) ಗದ್ದಲದ, ಅಬ್ಬರದ, ಅಟ್ಟಹಾಸದ, ಕೋಲಾಹಲದ [A r. night ಬಿರುಗಾಳಿ ಮಳೆ ಭೋರ್ಗರೆವ ರಾತ್ರಿ; ಕ್ರೀಡಾ ಕೋಲಾಹಲದ ರಾತ್ರಿ. A r. blade (ಪ್ರಾಚೀ. ಪ್ರ.) ದುಂದು ಬದುಕಿನ ಸ್ವೇಚ್ಛಾ ಭೋಗಿ. The r. game 'ಕರ್ಲಿಂಗ್' ಆಟ. R. forties (Four ಪದದ ಕೆಳಗೆ Forty ನೋಡಿ). R. health ಭರ್ಜರಿ ಆರೋಗ್ಯ. R. trade ಭರಾಟೆ ವ್ಯಾಪಾರ]

Roast ರೋಸ್ಟ್ (ಕ್ರಿ., ನಾ.) (ಮು., ಮಾಂಸವನ್ನು, ಬೆಂಕಿಯಲ್ಲಿ ಅಥವಾ ಒಲೆಯಲ್ಲಿ) ಸುಡು (Prefers r. beef, his meat roasted. Roasting-jack ಮಾಂಸ ಮಗುಚುವ ಕಾವು, ಕೈ). (ಅದುರನ್ನು) ಕುಲುಮೆಯಲ್ಲಿ ಕಾಯಿಸು, ಭಸ್ಮಮಾಡು; (ಕಾಳನ್ನು) ಹುರಿ; (ಹಿಂಸೆಗಾಗಿ) ಸುಟ್ಟುಬಿಡು; (ಶಾಖಕ್ಕಾಗಿ) ಬೆಂಕಿ ಕಾಯಿಸು; (ವರ್ತಮಾನ ಕೃ.) ಸುಡುವ, ಬಹು ತಾಪದ. ಲೇವಡಿ, ಗೇಲಿ, ಕುಚೇಷ್ಟೆ, —ಮಾಡು. (ನಾ.) ಸುಟ್ಟ ಮಾಂಸ(ದ ಭಕ್ಷ್ಯ) (Rule the r. ಯಜಮಾನನಾಗಿರು; ಆಡಳಿತ ನಡಸು); ಸುಡುವುದು, ಹುರಿಯುವುದು; ಸುಡುಗೆ, ಹುರಿಗೆ. **Roáster** (ನಾ.) (ಕ್ರಿಯಾರ್ಥಗಳಲ್ಲಿ); ಸುಡು(ವ) ಒಲೆ; ಸುಡು ಕುಲುಮೆ; ಕಾಫಿ ಬೀಜ ಹುರಿಯುವ ಸಲಕರಣೆ; ಹುರಿಯೋಡು, ಹುರಿಭಾಂಡ. ಸುಡಲು ಯೋಗ್ಯವಾದ ಹಂದಿ, ಆಲೂಗಡ್ಡೆ, ಮೊ. ವು.

Rob ರಾಬ್ (ಕ್ರಿ. ಸಕ.) ಬಲಾತ್ಕಾರದಿಂದ —ಕಸಿದುಕೊ, ಕಿತ್ತುಕೊ; ಸುಲಿ(ಗೆ ಮಾಡು); ದರೋಡೆ ಮಾಡು; (ನ್ಯಾಯವಾಗಿ ಒಬ್ಬನಿಗೆ ದೊರೆಯಬೇಕಾದುದನ್ನು) ಅಪಹರಿಸು, ಕದಿ [R. Peter to pay Paul (Peter[1] ನೋಡಿ)]. **Róbber** (ನಾ.); **Róbbery** (ನಾ.)

Robe ರೋಬ್ (ನಾ., ಕ್ರಿ.) (ವಿರ. ಪ್ರ., ಕಾವ್ಯ, ರೂಪ.) ಮೊಣಕಾಲವರೆಗೆ ಅಥವಾ ಪಾದದವರೆಗೆ ಬರುವ ಉದ್ದವೂ ಸಡಿಲವೂ ಆದ ಹೊರ ಉಡುಪು; ನೀಳುಡುಪು. (ವ್ಯಾಪಾರದ ಹೆಸರಾಗಿ) ಹೆಂಗಸರ ಒಂದು ವಿಶೇಷ ತೆರನ ಉಡುಪು; ಮಗುವಿನ ಮೇಲುಜುಬ್ಬ; (ಸಾ., ಬ. ವ. ದಲ್ಲಿ) (ಪದವಿ, ಅಧಿಕಾರ, ಉದ್ಯೋಗ, ಮೊ. ಗಳ ಚಿಹ್ನೆಯಾಗಿ ತೊಡುವ) ಉದ್ದವಾದ ಮೇಲುಡುಪು, ಗೌನು; ಉಡುಪು, ವಸ್ತ್ರ (The long r. ನ್ಯಾಯವಾದಿಯ ಅಥವಾ ಪಾದ್ರಿಯ ಉಡುಪು. Gentlemen of the r. ನ್ಯಾಯವಾದಿಗಳು, ವಕೀಲರು); [**R.-de-chambre** (F) ರಾಬ್‌ಡಷಾನ್‌ಬ್ರ್ (ನಾ.) ಅಲಂಕಾರ ಮಾಡಿಕೊಳ್ಳುವಾಗ ಹಾಕಿಕೊಳ್ಳುವ ಮೇಲಂಗಿ: ಪ್ರಸಾಧನ ವಸ್ತ್ರ]. (ಕ್ರಿ.) —ತೊಡು, ತೊಡಿಸು, ಹಾಕು, ಹಾಕಿಕೊ.

Róbin ರಾಬಿನ್ (ನಾ.) ಕೆಂಪೆದೆಯ ಸಣ್ಣ ಜಾತಿಯ ಒಂದು ಹಕ್ಕಿ (=R. redbreast); ಅಮೆರಿಕದ, ಬ್ರಿಟಿಷ್ ನೆಲಸುನಾಡುಗಳ ಅಥವಾ ಇಂಡಿಯದ ಹಲವು ಬಗೆಯ ಹಕ್ಕಿ. R. Goodfellow ಒಬ್ಬ ಹಾಸ್ಯಗಾರನಾದ ಯಕ್ಷ. R. Hood (ಇಂಗ್ಲೆಂಡಿನಲ್ಲಿದ್ದನೆಂದು ಹೇಳುವ) ಮಧ್ಯ ಕಾಲದ ವನವಾಸೀ ದೇಶಭ್ರಷ್ಟ ದರೋಡೆಕೋರ. Round r. (Round[1] ನೋಡಿ)

Róborant ರೋ(ರಾ)ಬೊರಂಟ್ (ಗು., ನಾ.) ಶಕ್ತಿವರ್ಧಕ (ಔಷಧ); ಬಲಕಾರಕ (ಔಷಧ)

Róbot ರೋಬಾಟ್ (ನಾ.) ವ್ಯಕ್ತಿತ್ವವಿಲ್ಲದ ಮನುಷ್ಯ ಯಂತ್ರ. ಕೀಲುಗೊಂಬೆ; ಯಾಂತ್ರಿಕ ಮನುಷ್ಯ (ರೂಪ. ಸಹ) [Karel Capek ಎಂಬಾತನ R.U.R. (Rossum's Universal Robots) ಎಂಬ ನಾಟಕದಲ್ಲಿ ಬರುವ, ಇಚ್ಛಾಶಕ್ತಿಯಿಲ್ಲದ ಯಾಂತ್ರಿಕ ಮನುಷ್ಯರ ಕಾರಣದಿಂದ]

Róburite ರೋಬರೈಟ್ (ನಾ.) ಜ್ವಾಲೆ ಸೂಸದ ಒಂದು ಬಲವಾದ ಸಿಡಿಮದ್ದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Robúst ರೊಬಸ್ಟ್ (ಗು. ; ತರ ತಮ ರೂಪಗಳು : -er, -est) ಅರೋಗ ದೃಢಕಾಯದ ; ದೇಹದಾರ್ಢ್ಯವುಳ್ಳ ; ಗಟ್ಟಿಮುಟ್ಟಾದ ; ಕಟ್ಟುಮಸ್ತಾದ ; (ವ್ಯಾಯಾಮ, ಮೊ. ವು) ಶಕ್ತಿ ಅವಶ್ಯಕವಾದ, ದಾರ್ಢ್ಯ ಕಾರಕ, ಚೈತನ್ಯದಾಯಕ, ಹುರುಪಿನ (R. exercises) ; (ಬುದ್ಧಿ, ಮೊ. ಗಳ ವಿಷಯದಲ್ಲಿ) ಸ್ಫುಟವಾದ, ಪ್ರಗಲ್ಭ, ವೀರ್ಯವತ್ತಾದ. **Robústly** (ಕ್ರಿ. ವಿ.) ; **Robústness** (ನಾ.) ; **Robústious** ರೊಬಸ್ಟಿಅಸ್, ರೊಬಸ್ಚಸ್ (ಗು.) (ಹಿಂದಿನ ಪ್ರ.) = Robust. ಕೂಗಾಟದ ; ಒರಟಾಟದ ; ಅಬ್ಬರದ ; ಜೋರಾದ.

Roc ರಾಕ್ (ನಾ.) ಪೂರ್ವ ದೇಶಗಳ ಕಥೆಗಳಲ್ಲಿ ಬರುವ ಒಂದು ರಾಕ್ಷಸಾಕಾರದ ಹಕ್ಕಿ ; ರಾಕ್ ಹಕ್ಕಿ.

Rócambole ರಾಕಂಬೋಲ್ (ನಾ.) ಸ್ಪೇಯ್ನ್ ದೇಶದ ಬೆಳ್ಳುಳ್ಳಿ.

Róchet ರಾಚೆಟ್ (ನಾ.) ಮು., ಕ್ರೈಸ್ತ ಮಠಾಧಿಪತಿಗಳೂ ಬಿಷಪ್ಪುಗಳೂ ಉಪಯೋಗಿಸುವ ಒಂದು ಬಗೆಯ ಮೇಲಂಗಿ.

Rock[1] ರಾಕ್ (ನಾ.) (ನೆಲದೊಳಗಿನ ಅಥವಾ ನೆಲದ ಮೇಲಿನ) ಬಂಡೆ ; ಶಿಲೆ ; ಅರೆ ; (ಬೆಟ್ಟದಂತೆ ನೆಲದಿಂದ ಅಥವಾ ಸಮುದ್ರದಿಂದ ಎದ್ದಿರುವ) ಕಡಿದು ಬಂಡೆ, ಕಲ್ಲು ಬೆಟ್ಟ [The R. (೧,೪೦೦ ಅಡಿಗಳ ಎತ್ತರದ ಒಂದೇ ಬಂಡೆಯಾಗಿ ಎದ್ದಿರುವ) ಜಿಬ್ರಾಲ್ಟರ್ —ಬೆಟ್ಟ, ಬಂಡೆ. Dig down to the living r. ಕೆಳಗೆ ಕಲ್ಲು ಸಿಕ್ಕುವವರೆಗೆ ಅಗೆ. Bed-r. (Bed ನೋಡಿ). Built, founded, on the r. ಗಟ್ಟಿ ತಳಹದಿಯ ಮೇಲೆ, ಬುಡ ಭದ್ರವಾಗಿ, —ಕಟ್ಟಿದ, ಸ್ಥಾಪಿಸಿದ (ರೂಪ. ಸಹ). R. of ages ಯೇಸು ಕ್ರಿಸ್ತ. Run upon the rocks (ಹಡಗು) ಬಂಡೆಗೆ ನುಗ್ಗಿ, ಅಪಾಯಕ್ಕೆ ಸಿಕ್ಕಿ, —ನಾಶವಾಗು (ರೂಪ. ಸಹ). Rocks ahead (ಹಡಗಿಗೆ : ಬಂಡೆಗಳ) ಅಪಾಯ ಸಂಭವವಿರು (ರೂಪ. ಸಹ). On the rocks (ಅಸಂ.) (ಹಣಕಾಸಿನ) ತೊಂದರೆಯಲ್ಲಿ, ಕಷ್ಟದಲ್ಲಿ] . ಹಲವು ತೆರನ ಗಟ್ಟಿ ಮಿಠಾಯಿ (Almond r. ಬಾದಾಮಿ ಗಟ್ಟಿ ಮಿಠಾಯಿ). = R.-pigeon, (= Blue r.) [**R.-bed** ತಳ ಬಂಡೆ. **R.-bird** ಬಂಡೆಗಳಲ್ಲಿ ವಾಸಿಸುವ ಒಂದು ಬಗೆಯ ಕೋಳಿ, ಒಂದು ಬಗೆಯ ಕಡಲ ಹಕ್ಕಿ. **R.-bottom** (ಅಸಂ.) (ಬೆಲೆ, ಮೊ. ಗಳ ವಿಷಯದಲ್ಲಿ) ತಳ ಮುಟ್ಟಿದ, ಅತ್ಯಂತ ಕಡಮೆಯ, ಕನಿಷ್ಠ. **R.-cake** ಗಟ್ಟಿ (ಮೇಲ್ಪದರದ) ರೊಟ್ಟಿ. **R.-cork, -leather, -paper, -silk, -wood** ಕಲ್ನಾರಿನ ಭೇದಗಳು. **R.-crystal** (Crystal ನೋಡಿ). **R.-dove** = R.-pigeon. **R.-drill** ಬಂಡೆ ಕೊರೆಯುವ —ಸಲಕರಣೆ, ಯಂತ್ರ ; ಬಂಡೆ ಬೈರಿಗೆ. **R. English** ಜಿಬ್ರಾಲ್ಟರ್ ಪ್ರಾಂತದ (ಸ್ಪ್ಯಾನಿಷ್ ಮಿಶ್ರಿತ) ಇಂಗ್ಲಿಷ್ ಭಾಷೆ. **R.-fever** ಜಿಬ್ರಾಲ್ಟರ್ ಪ್ರಾಂತದ ಒಂದು ಕರುಳುರೋಗದ ಜ್ವರ. **R.-fish** ಹಲವು ಬಗೆಯ ಮೀನು. **R.-goat** ಒಂದು ತೆರನ ಕಾಡು ಮೇಕೆ (= Ibex). **R.-hewn** ಬಂಡೆ ಕಡಿದು ಮಾಡಿದ. **R.-oil** ಕಲ್ಲೆಣ್ಣೆ. **R.-pigeon** ಬಂಡೆಗಳಲ್ಲಿ ವಾಸಮಾಡುವ ಒಂದು ತೆರನ ಪಾರಿವಾಳ (ಇದು ಮನೆ ಪಾರಿವಾಳಕ್ಕೆ ಮೂಲವೆಂದು ಊಹಿಸುತ್ತಾರೆ). **R.-ribbed** (ನೆಲ, ಕರೆ, ಮೊ. ವು) ಕಲ್ಲುಬ್ಬು ಸಾಲುಳ್ಳ ; (ರೂಪ.) ಬಂಡೆಕಟ್ಟಿನ ಆಧಾರವುಳ್ಳ, ಬಲವಾದ. **R.-rose** ಹಲವು ಬಗೆಯ ಗಿಡ. **R.-salt** ಘನರೂಪದಲ್ಲಿ ಖನಿಜವಾಗಿ ದೊರೆಯುವ ಅಡಿಗೆ ಉಪ್ಪು ; ಕಲ್ಲುಪ್ಪು. **R.-scorpion** (ಅಡ್ಡಹೆಸರಾಗಿ) ಜಿಬ್ರಾಲ್ಟರಿನಲ್ಲಿ ಹುಟ್ಟಿದವನು. **R.-sucker** ಒಂದು ಜಾತಿಯ ಕಡಲ ಹಾವು ಮೀನು. **R.-tar** ಕಲ್ಲೆಣ್ಣೆ ; ಪೆಟ್ರೋಲಿಯಂ. **R.-whistler** ಆಲ್ಪ್ಸ್ ಪರ್ವತ ಪ್ರಾಂತದ ಅಳಿಲು ಜಾತಿಯ ಒಂದು ಪ್ರಾಣಿ. **R.-work** (ಜರೀ ಗಿಡ, ಮೊ. ನ್ನು ಬೆಳೆಸುವುದಕ್ಕಾಗಿ, ಮಧ್ಯೆ ಮಧ್ಯೆ ಮಣ್ಣು ಸೇರಿಸಿ ಒಟ್ಟಿದ ಅಥವಾ ಸ್ವಾಭಾವಿಕವಾಗಿ ಎದ್ದಿರುವ) ಒರಟುಕಲ್ಲುಗಳ ಒಡ್ಡು (= **Róckery** ನಾ.)]. **Róckless** (ನಾ.) ; **Rócklet** ಸಣ್ಣ ಬಂಡೆ, ಕಿರು ಬಂಡೆ ; ಕಿಗ್ಗಲ್ಲು. **Rócklike** (ಗು.) ; **Rócky**[1] (ಗು., ನಾ.) ಕಲ್ಲಿನ, ಬಂಡೆಯ ; ಕಲ್ಲು, ಬಂಡೆ, —ತುಂಬಿದ; ಶಿಲಾಮಯ ; ಕಲ್ಲಿನಂಥ, ಬಂಡೆಯಂಥ ; ಗಟ್ಟಿಯಾದ ; ಒರಟಾದ. (ನಾ.) (ಬ. ವ.) The Rockies = The R. Mountains (ಉ. ಅಮೇರಿಕದ ಪಶ್ಚಿಮದಲ್ಲಿ ಒಂದು ಪರ್ವತ ಪಂಕ್ತಿ). **Róckily**[1] (ಕ್ರಿ. ವಿ.); **Róckiness**[1] (ನಾ.); **Róckling** (ನಾ.) ಹಲವು ಬಗೆಯ ಮೀನು.

Rock[2] ರಾಕ್ (ನಾ.) (ಚರಿತ್ರೆ) ಹಂಜಿಗೋಲು.

Rock[3] ರಾಕ್ (ಕ್ರಿ., ನಾ.) (ತೊಟ್ಟಿಲು, ಮೊ. ನ್ನು) ಆಡಿಸು, ತೂಗು ; (ತೊಟ್ಟಿಲು, ಮೊ. ವು) ಆಡು, ತೂಗಾಡು (R. him to sleep ಅವನನ್ನು ತೊಟ್ಟಿಲಲ್ಲಿ ತೂಗಿ ನಿದ್ರೆ ಮಾಡಿಸು. Ship rocked by the waves. Rocked in security, hopes ಭರವಸೆಯಲ್ಲಿ, ಆಸೆಯಲ್ಲಿ, ಹಾಯಾಗಿ). (ಚಿನ್ನದ ಗಣಿ ಕೆಲಸ) ಜಾಲಿಸುವ ತೊಟ್ಟಿಯನ್ನು ಆಡಿಸು, ತೊಟ್ಟಿಯಲ್ಲಿ ಆಡಿಸಿ ಜಾಲಿಸು. (ಪಕ್ಕದಿಂದ ಪಕ್ಕಕ್ಕೆ) ತೂಗಾಡು, ಓಲಾಡು, ಅಳ್ಳಾಡು, (—ಇಸು) (Earthquake rocks house. A rocking gait ಓಲಾಟದ ನಡಗೆ). [Rocking-chair ತೂಗು ಕುರ್ಚಿ ; ಆಡು ಕುರ್ಚಿ. Rocking-horse (ಮಕ್ಕಳಿಗೆ) ಮರದ ತೂಗು ಕುದುರೆ. Rocking-stone ತೂಗಾಡಿಸಲಾಗುವಂತೆ ಸಮತೂಕ ಸ್ಥಿತಿಯಲ್ಲಿರುವ ಕಲ್ಲುಬಂಡೆ : ಆಡು ಬಂಡೆ. R.-shaft (ಪೂರ್ಣ ಆವರ್ತಗಳನ್ನು ಮಾಡದೆ ತನ್ನ ಅಕ್ಷದ ಮೇಲೆ ಆಂದೋಲವಾಗುವ) ತೂಗು ದಂಡ. R.-staff (ಕಮ್ಮಾರನ ತಿದಿಯನ್ನು ಒತ್ತುವ) ತೂಗು ದಂಡ] . (ನಾ.) ತೂಗು, ತೂಗಾಟ. **Rócker** (ನಾ.) (ಕ್ರಿಯಾರ್ಥಗಳಲ್ಲಿ) ; ತೊಟ್ಟಿಲು, ಕುರ್ಚಿ, ಮೊ. ವು ತೂಗಾಡುವಂತೆ ಅದರ ಬುಡದ ಎರಡು ಕೊನೆಗಳಲ್ಲಿರುವ ಬಾಗುಪಟ್ಟಿ(ಗಳಲ್ಲೊಂದು): ಆಂದೋಲಕ [Off one's r. (ಅಸಂ.) ಹುಚ್ಚು ಹಿಡಿದು] ; (ಚಿನ್ನದ ಗಣಿ ಕೆಲಸ) ಜಾಲಿಸುವ ತೊಟ್ಟಿ. **Rócky**[2] (ಗು.) (ವಿರ. ಪ್ರ.) ತೂಗಾಡುವ, ಓಲಾಡುವ. **Róckily**[2] (ಕ್ರಿ. ವಿ.) ; **Róckiness**[2] (ನಾ.)

Rócket ರಾಕೆಟ್ (ನಾ., ಕ್ರಿ.) ಬಾಣಬಿರುಸು, ಸಂಕೇತ ಸೂಚನೆ, ತೊಂದರೆಯಲ್ಲಿರುವ ಹಡಗಿಗೆ ಹಗ್ಗ ವೆಸೆಯುವುದು, ಮೊ. ಗಳಲ್ಲಿ ಉಪಯೋಗಿಸುವ, ಒಳಗಿನ ಮದ್ದನ್ನು ಹೊತ್ತಿಸುವುದರಿಂದ ಮೇಲಕ್ಕೊ ದೂರಕ್ಕೊ ಹಾರಬಲ್ಲ, ಲೋಹದ ಅಥವಾ ಕಾಗದದ ಉರುಳೆಯಾಕಾರದ ಕೋಶ : ಆಕಾಶ ಬಾಣ ; ತಾರಾ ಮಂಡಲ. (ಕ್ರಿ.) ಆಕಾಶ ಬಾಣ ಬಿಡು ; —ಗಳಿಂದ ಎಡೆಬಿಡದೆ ಹೊಡೆ. (ಕುದುರೆ ಅಥವಾ ಸವಾರ) ಥಗ್ಗನೆ ಮೇಲಕ್ಕೆ ಹಾರು, ನೆಗೆ ; ಸರಕ್ಕನೆ ಎಗರು ; (ಜೀವಂಜೀವ, ಮೊ. ಹಕ್ಕಿಗಳು) ಲಂಬವಾಗಿ ಆಕಾಶಕ್ಕೆ ಹಾರು, ವೇಗವಾಗಿ ಎತ್ತರಕ್ಕೆ ಹಾರು. **Rócketer** (ನಾ.)

Rócky. **Rock**[1, 3] ನೋಡಿ.

Rocóco ರೊಕೋಕೊ (ಗು., ನಾ.) ಹಳೆಯ ಮಾದರಿಯ ; ಓಬೀರಾಯನ ಕಾಲದ ; (ಪೀಠೋಪಸ್ಕರ, ವಾಸ್ತುಶಿಲ್ಪ, ಮೊ. ವು) ಸಾಂಪ್ರದಾಯಿಕ ರೀತಿಯ ಅಲಂಕಾರದ; (ಕಲಾ ರಹಿತವಾದ) ಅತ್ಯಲಂಕಾರದ. (ನಾ.) ಅತ್ಯಲಂಕಾರ ಶೈಲಿ.

Rod ರಾಡ್ (ನಾ.) (ಮರದಮೇಲೆ ಬೆಳೆಯುತ್ತಿರುವ ಅಥವಾ ಮರದಿಂದ ಕಡಿದುಹಾಕಿದ) ನೇರ, ದುಂಡು ಮತ್ತು ತೆಳು ರೆಂಬೆ. (ದಾರು, ಮೊ. ರ) ಕಡ್ಡಿ, ಕೋಲು, ಚೆಡಿ, ಬಡಿಗೆ, ದೊಣ್ಣೆ, ದಂಡ [Black r. (Black ನೋಡಿ). Divining, Dowsing, -r. (Dowsing ನೋಡಿ). The r. ಚೆಡಿಯೇಟು. Spare the r. & spoil the child ಶಿಕ್ಷೆಮಾಡದೆ ಮುದ್ದಿಸಿ ಮಗುವನ್ನು ಕೆಡಿಸು ; ಬೆತ್ತ ಬಿಟ್ಟಿತು ಮಗು ಕೆಟ್ಟಿತು. Make a r. for one's own back ತಾನಾಗಿ ತೊಂದರೆ, ಕೇಡು, ತಂದುಕೊ. Kiss the r. (Kiss ನೋಡಿ). Have a r. in pickle for ಸಮಯ ಬಂದರೆ ಶಿಕ್ಷಿಸುವುದಕ್ಕೆ ಸಿದ್ಧವಾಗಿರು] . ಗಾಳದ ಕೋಲು (= Fishing r.) ; ಮೀನುಗಾಳ ಹಾಕುವವನು (= **Ródman, Ródster**). ಒಂದು ಉದ್ದ ಅಳತೆ (= $5\frac{1}{2}$ ಗಜ). ಲೋಹದ ಸರಳು, ಕಂಬಿ (ಯಂತ್ರದ ಸಲಕರಣೆಯ, ಜೋಡಣೆಯ, ಭಾಗವಾದದ್ದು ಸಹ : Piston -r., etc. Curtain r. ಪರದೆ ಕಂಬಿ). (ಶ. ವಿ.) ದಂಡಾಕೃತಿಯ ರಚನೆ. **Ródless** (ಗು.) ; **Ródlet** (ನಾ.) ; **Ródlike** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rode. Ride ಧಾತುವಿನ ಭೂತ ರೂಪ.

Ródent ರೋಡೆಂಟ್ (ಗು., ನಾ.) ಕೋರೆ ಹಲ್ಲು ಇಲ್ಲದೆ ಬಾಚಿ ಹಲ್ಲು ಇರುವ ವರ್ಗದ (ಪ್ರಾಣಿ) ; ದಂಶಕ (ಪ್ರಾಣಿ). (ಮು., ಕುರುಗಳ ವಿಷಯದಲ್ಲಿ) ಬಹಳ ಯಾತನೆ ಕೊಡುವ, ಕುಟುಕು ನೋವಿನ. **Rodéntial** ರೊಡೆನ್ಷಲ್ (ಗು.) ದಂಶಕ ವರ್ಗದ.

Rodéo ರೊಡೇವೊ (ನಾ.) (ಪಶ್ಚಿಮ ಅಮೆರಿಕದ ದೊಡ್ಡ ದನಗಾವಲುಗಳಲ್ಲಿ) ಲೆಕ್ಕಮಾಡುವುದು, ಬರೆಹಾಕಿ ಗುರುತು ಮಾಡುವುದು, ಮೊ. ಕ್ಕಾಗಿ ದನಗಳನ್ನು ಮಂದೆಗೂಡಿಸುವುದು; ಹೀಗೆ ಮಂದೆಗೂಡಿಸುವ ಆವರಣ, ಸ್ಥಳ; (ಮಂದೆಗೂಡಿಸುವುದು, ಪಳಗಿಸಿಲ್ಲದ ಕುದುರೆಗಳ ಸವಾರಿಮಾಡು ವುದು, ಮೊ. ಗಳಲ್ಲಿ) ಗೋವಳರ ಚಾತುರ್ಯ ಪ್ರದರ್ಶನ ; ಗೋವಳಿಕೆ ಪ್ರದರ್ಶನ.

Rodomontáde ರಾಡೊಮಾಂಟೇಡ್ (ನಾ., ಗು., ಕ್ರಿ. ಅಕ.) ಜಂಬ, ಬಡಾಯಿ, —ಕೊಚ್ಚು(ವ). (ನಾ.) ಜಂಬದ, ಬಡಾಯಿಯ, —ಮಾತು. **Rodomontáder** (ನಾ.)

Roé[1] ರೋ (ನಾ.) (ಜಾತ್ಯೇಕವಚನ ; ಕೆಲವು ವೇಳೆ ಬ. ವ. ಕ್ಕೆ ಪ್ರತಿ ಯಾಗಿ ಪ್ರ.) ಯೂರೋಪಿನ ಮತ್ತು ಏಷ್ಯದ ಸಣ್ಣ ಜಾತಿಯ ಜಿಂಕೆ (=Roe-deer). **Roébuck** ಗಂಡು ' ರೋ ' ಜಿಂಕೆ.

Roe[2] ರೋ (ನಾ.) ಮೀನಿನ ಅಂಡಾಶಯದ ಪೊರೆಯಲ್ಲಿಯ ಹಿಂಡು ಮೊಟ್ಟೆಗಳು : ಮೀನಾಂಡಗಳು (=Hard r.). R.-corn (ಇವು ಗಳಲ್ಲಿಯ) ಒಂದು ಮೊಟ್ಟೆ, ಅಂಡ. Soft r. ಗಂಡು ಮೀನಿನ ಶುಕ್ಲ. R.-stone=Oolite. **(-)roed** (ಗು.) ಮೀನಾಂಡ ಭರಿತ ; ಮೀನು ಮೊಟ್ಟೆಗಳುಳ್ಳ.

Rogátion ರೊಗೇಷನ್ (ನಾ.) (ಬ. ವ.) ಯೇಸು ಕ್ರಿಸ್ತನ ಸ್ವರ್ಗಾ ರೋಹಣೋತ್ಸವ ದಿನದ ಹಿಂದಿನ ಮೂರು ದಿನಗಳಲ್ಲಿ ಪಠಿಸುವ ಸಂತರ ಪ್ರಾರ್ಥನಾವಳಿ (R. days ಈ ಮೂರು ದಿನಗಳು. R. week —ಗಳುಳ್ಳ ವಾರ) [**Rogátional** (ಗು.)]. (ರೋ. ಪ್ರಾ.) ಕಾನ್ಸಲ್ ಅಥವಾ ಟ್ರಿಬ್ಯೂನ್ ಪ್ರಜೆಗಳ ಒಪ್ಪಿಗೆಗಾಗಿ ಅವರ ಮುಂದಿಟ್ಟ ಕಾಯಿದೆ, ಕಾನೂನು, ಶಾಸನ (Licinian rogations ಹೀಗೆ Licinius ಎಂಬಾತನು ಇಟ್ಟ ಕಾಯಿದೆಗಳು)

Róger ರಾಜರ್ (ನಾ.) (ಕ್ರೈಸ್ತರಲ್ಲಿ) ಗಂಡಸಿನ ಒಂದು ಅಂಕಿತನಾಮ (The jolly R. ಕಡಲುಗಳ್ಳರ ಕಪ್ಪು ಬಾವುಟ). ಇಂಗ್ಲೆಂಡಿನ ಒಂದು ಹಳ್ಳಿಯ ಕುಣಿತ (ಮತ್ತು ಹಾಡು) (=Sir R. de Coverley)

Rogue ರೋಗ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) ಮೈಗಳ್ಳನಾಗಿ ಬೀದಿ ಅರೆಯುವವನು ; ಮೈಗಳ್ಳ ಅಲೆಮಾರಿ. ತಲೆಹೋಕ ; ದಗಾ ಕೋರ ; ಠಕ್ಕ ; ಪಟಿಂಗ (ತುಂಟ ಮಗು, ತುಂಟ ಮನುಷ್ಯ —ಇವರ ವಿಷಯದಲ್ಲಿ ಹಾಸ್ಯ ಪ್ರ.). (ಮೊಳೆತ ಸಸ್ಯಗಳಲ್ಲಿ, ಸರಿಯಾಗಿ ಮೊಳೆತಿಲ್ಲದ) ಕಳಪೆ ಸಸ್ಯ [(ಕ್ರಿ.) —ಕಿತ್ತುಹಾಕು]. ಪಳಗಿಲ್ಲದ ಕಾಡುಮೃಗ [R. elephant (ಹಿಂಡಿನಿಂದ ಪ್ರತ್ಯೇಕಿಸಿಟ್ಟ ಅಥವಾ ಪ್ರತ್ಯೇಕವಾಗಿರುವ) ಒಂಟಿ ಪುಂಡು ಆನೆ. R. buffalo]. ಮೈಗಳ್ಳ —ಜೂಜು ಕುದುರೆ, ಬೇಟೆ ಕುದುರೆ. **Róguery** (ನಾ.); **Róguish** (ಗು.); **Róguishly** (ಕ್ರಿ. ವಿ.); **Róguishness** (ನಾ.)

Roi (F) ರ್ವಾ (ನಾ.) ದೊರೆ, ರಾಜ. R. faineant (—ಫೇನೇಅನ್) ಅಧಿಕಾರ ನಡಸದ ರಾಜ ; ಹೆಸರಿಗೆ ಮಾತ್ರ ದೊರೆ. Le r. le veult, Le r. s'avisera (ಶಾಸನ ಸಭೆಯ ಮಸೂದೆಗೆ ಅಂಗೀಕಾರ ಕೊಡುವ, ಕೊಡದಿರುವ, ಸಂದರ್ಭದಲ್ಲಿ ಪ್ರಯೋಗಿಸುವ ಒಕ್ಕಣೆ) ರಾಜ ಇಚ್ಛಿಸುತ್ತಾನೆ, ರಾಜ ಯೋಚಿಸುತ್ತಾನೆ.

Roil ರಾಯ್‌ಲ್ (ಕ್ರಿ. ಸಕ., ನಾ.) (ನೀರು, ಮೊ. ನ್ನು) ಕದಡು, ಕಲಕು(ವುದು) ; (ಮನಸ್ಸನ್ನು) ಕೆರಳಿಸು, ಉದ್ರೇಕಗೊಳಿಸು(ವುದು)

Roíster ರಾಯ್ಸ್ಟರ್ (ಕ್ರಿ. ಅಕ., ನಾ.) ಗೊಂದಲ, ಅಬ್ಬರ, —ಮಾಡು; ಜಂಬ ಬಡಿ ; ಬಡಾಯಿ ಕೊಚ್ಚು ; ಕೋಲಾಹಲ ಮಾಡು (ಮು., ವರ್ತ ಮಾನ ಕೃದಂತವಾಗಿ ಪ್ರ.). (ನಾ.) —ವವನು (ಈಗ ಸಾ., Roisterer). **Roísterer** (ನಾ.) ; **Roístering** (ನಾ.)

Róland ರೋಲಂಡ್ (ನಾ.) ಇಂಗ್ಲಿಷ್ ಪುರಾತನ ಕಥೆಯಲ್ಲಿ ಬರುವ ಒಬ್ಬ ವೀರನ ಹೆಸರು. A R. for an Oliver ಸವಾಲಿಗೆ ಸರಿಯಾದ ಜವಾಬು ; ಮುಯ್ಯಿಗೆ ಮುಯ್ಯಿ ; ತಕ್ಕ ಪ್ರತೀಕಾರ.

Role ರೋಲ್ (ನಾ.) (ನಟನ) ಪಾತ್ರ ; (ಒಬ್ಬನ, ಕೈಕೊಂಡ) ಕಾರ್ಯ ಭಾಗ.

Roll ರೋಲ್ (ನಾ.) (ಕಾಗದ, ಬಟ್ಟೆ, ಮೊ. ಗಳ, ಸುತ್ತಿ ಸುತ್ತಿ ಮಾಡಿದ) ಉರುಳೆ, ಸುರುಳಿ (Rolls of printing-paper ಮುದ್ರಣ ಕಾಗದದ ಸುರುಳಿಗಳು). (ಗ್ರೀಕ್ ವಾಸ್ತುಶಿಲ್ಪದಲ್ಲಿ) ಸುರುಳಿಯಲಂ ಕಾರ. ಸುರುಳಿ ಸುತ್ತಿದ —ಸರ್ಕಾರದ ಪತ್ರ, ದಾಖಲೆ [Master of the Rolls ಕೆಲವು ಅಧಿಕಾರ ದಾಖಲೆಗಳ ಜವಾಬ್ದಾರಿಯುಳ್ಳ, ಮೇಲು ಮನವಿ ನ್ಯಾಯಸ್ಥಾನದ ನ್ಯಾಯಾಧೀಶ. The Rolls (ಹಿಂದೆ) ದಾಖಲೆಗಳನ್ನಿಡುತ್ತಿದ್ದ ಕಟ್ಟಡ ; (ಈಗ) ದಾಖಲೆ, ದಫ್ತರ, —ಕಚೇರಿ (=Court of the Master of the Rolls)]. ಪಟ್ಟಿ ; ದಾಖಲೆ ಪುಸ್ತಕ [A long r. of heroes. R. of honour ಯುದ್ಧದಲ್ಲಿ ಮಡಿದ ವೀರ ಶ್ರೇಣಿ ; ಗೌರವ ಪಂಕ್ತಿ. Rent-r. (Rent ನೋಡಿ)]. (ಅಧಿಕೃತವಾದ) ವಕೀಲರ, ನ್ಯಾಯ ವಾದಿಗಳ, —ಪಟ್ಟಿ [Strike off the rolls (ಅಪ್ರಾಮಾಣಿಕತೆ, ಮೊ. ಕ್ಕಾಗಿ) ಪಟ್ಟಿಯಿಂದ ಹೆಸರು ಹೊಡೆದುಹಾಕು] ; (ಗೈರುಹಾಜರಿ ಯಾದವರನ್ನು ಪತ್ತೆ ಮಾಡಲು ಅನುಕೂಲಿಸುವ, ಸಿಪಾಯಿಗಳ ಅಥವಾ ವಿದ್ಯಾರ್ಥಿಗಳ) ಹೆಸರು ಪಟ್ಟಿ, ಹಾಜರಿ ಪಟ್ಟಿ (R.-call ಹಾಜರಿ ಕೂಗು ವುದು). ಸರಿಸುಮಾರು ಸುರುಳಿಯಾಕಾರದ, ಉರುಳೆಯಾಕಾರದ, —ವಸ್ತು [A r. of butter, soap, straw, tobacco, hair. Has rolls of fat on him ಅವನ ಮೈಯಲ್ಲಿ ಕೊಬ್ಬು ತಕ್ಕೆ ತಕ್ಕೆ ಯಾಗಿ ಬೆಳೆದಿದೆ. R. (of bread) (ಬೆಳಗಿನ ಊಟಕ್ಕಾಗಿ ಮಾಡಿದ) ಉರುಳೆಯಾಕಾರದ ಸಣ್ಣ ಫರಂಗಿ ರೊಟ್ಟಿ] ; (ವಾ. ಶಾ.) ಉರುಳೆಯಾ ಕೃತಿ, ದಿಂಡು (=R.-moulding). (ಒಂದು ವಸ್ತುವಿನ) ಹಿಮ್ಮಡಿಚಿದ ಅಂಚು (ಉದಾ., ಅಂಗಿಯ ಕತ್ತುಪಟ್ಟಿ). ಪುಸ್ತಕದ ರಟ್ಟಿನಮೇಲೆ ಉರುಳಿಸಿ (ಉಬ್ಬು ರೇಖೆಗಳು, ಗಿಲೀಟು, ಮೊ. ನ್ನು) ಗುರುತು ಮಾಡಲು ಉಪಯೋಗಿಸುವ, ಗಾಲಿಯಾಕಾರದ ಸಲಕರಣೆ ; ರಟ್ಟುಕಟ್ಟಿನ ಉರುಳೆ. ಉರುಳಾಟ, ಹೊರಳಾಟ ; ಉರುಳು(ವುದು), ಹೊರಳು (ವುದು) ; ತೂಗಾಟ (The r. of the sea, ship. A r. on the grass). ತೂಗಾಡುವ ನಡಗೆ. ಸಂತತವಾದ ಭೇರಿ ಬಾಜಣೆ; (ಗುಡುಗು, ಫಿರಂಗಿ, ಮೊ. ಗಳ) ಮೊಳಗು ; (ಮಾತುಗಳ) ನಾದ ಪ್ರವಾಹ, ಧಾಟಿ, ಓಟ ; ಉರುಳುವ ಸೊಗಸು (The fine r. of the best prose *or* verse)

Roll (ಕ್ರಿ.) ಉರುಳು, ಹೊರಳು, (—ಇಸು) [R. barrel. River rolls down stones. Rolling stone gathers no moss (Gather ನೋಡಿ). Years r. on *or* by ವರ್ಷಗಳು ಸದ್ದಿಲ್ಲದೆ ಉರುಳಿಹೋಗುತ್ತವೆ. R. one over ಒಬ್ಬನನ್ನು ಉರುಳ ಬಿಡು] ; (ಉರುಳಿ) ಸುತ್ತು, ಸುತ್ತಿಕೊ (Rolled himself up in the blankets) ; (ಕಣ್ಣು) ಹೊರಳು, ಹೊರಳಿಸು (His eyes r. strangely. Rolled his eyes on us). ಉರುಳಾಡು, ಹೊರಳಾಡು [Swimmer rolls in the water. Rolling in money, luxury, ease ಹಣದಲ್ಲಿ, ಭೋಗದಲ್ಲಿ, ಸುಖದಲ್ಲಿ, —ಉರುಳಾಡುತ್ತ, ಓಲಾಡುತ್ತ. Mule tried to r. (ಸವಾರನನ್ನು ಅಥವಾ ಹೊರೆಯನ್ನು ಕೆಡವಿಬಿಡುವುದಕ್ಕಾಗಿ)]. ಓಲಾಡು(—ಡಿಸು) ; ತೂಗು, ತೂಗಾಡು ; ಹೊಯ್ದಾಡು ; ಓಲಾಡುತ್ತ ನಡೆ (Rolled himself from side to side. Ship rolls and pitches); ಅಲೆ ಅಲೆಯಾಗಿ, ತರಂಗ ತರಂಗವಾಗಿ, —ಹೋಗು, ಹರಿ, ಉರುಳು (Sea, river, rolls ಸಮುದ್ರ, ನದಿ,—ಉರುಳುತ್ತದೆ, ಹೊರಳುತ್ತದೆ. River rolls its waters to sea. Smoke rolls up ಹೊಗೆ ಸುರುಳಿ ಸುರುಳಿಯಾಗಿ ಮೇಲಕ್ಕೆ ಏರುತ್ತದೆ. The mist rolled away ಮಂಜು ಕರಗಿಹೋಯಿತು. A rolling plain). (ಶಬ್ದ) ಮೊಳಗು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊಳಗಿಸು, ಅನುರಣನವಾಗು, ಅನುರಣನಮಾಡು (R. out verses, song ಪದ್ಯಗಳನ್ನು, ಗೀತವನ್ನು, ಘೋಷದಿಂದ ಹೇಳು. Thunder, drum, voice, echo, rolls. R. one's *r*s ರಕಾರವನ್ನು—ಹೊರಳಿಸಿ ಉಚ್ಚರಿಸು, ತಿರುವಿ ಹೇಳು). (ಗಾಲಿ ಬಂಡಿಯ ಅಥವಾ ಅದರಲ್ಲಿನ ಪ್ರಯಾಣಿಕನ ವಿಷಯದಲ್ಲಿ) ಮುಂದುವರಿ, ಹೋಗು (Carriage rolled along, rolled them by. He rolled past in his carriage. Rolling-stock ರೈಲು ಬಂಡಿಗಳು). ಉರುಳೆಯಿಂದ ಒತ್ತಿ (ಅಥವಾ ಒತ್ತು ಉರುಳೆಗಳ ಮಧ್ಯೆ ಹಾಯಿಸಿ) ಚಪ್ಪಟೆ, ಸಪಾಟು, ಮಟ್ಟಸ, —ಮಾಡು ; ಒತ್ತು, ಲಟ್ಟಿಸು [R. lawn, metal, paste for pies. Rolled gold ಕೀಳು ಲೋಹಕ್ಕೆ ಲಟ್ಟಿಸಿದ ಚಿನ್ನದ ರೇಕು. Rolling-pin ಲಟ್ಟಣಿಗೆ. Rolling-press (ತಾಮ್ರಫಲಕ ಮುದ್ರಣದಲ್ಲಿ) ಉರುಳೆ (ಮುದ್ರಣ) ಯಂತ್ರ ; (ಕಾಗದ, ಬಟ್ಟೆ, ಮೊ. ನ್ನು ಮಟ್ಟಸಮಾಡುವ) ಉರುಳೆ (ಒತ್ತು)ಯಂತ್ರ, ಲಟ್ಟಣಿಗೆ ಯಂತ್ರ]. ಸುರುಳಿ ಸುತ್ತು, ಸುರುಳಿಮಾಡು, ಸುರುಳಿಯಾಗು; ಉಂಡೆ ಸುತ್ತು, ಉಂಡೆ ಮಾಡು, ಉಂಡೆಯಾಗು (R. cigarettes, a huge snow ball. R. snow, string, into a ball. The reckoning is rolling up ಲೆಕ್ಕ ಏರುತ್ತಿದೆ. Saint and philosopher rolled into one ಸಂತನೂ ದಾರ್ಶನಿಕನೂ ಒಬ್ಬನಲ್ಲೇ ಹುರಿಗೊಂಡು, ಏಕೀಭವಿಸಿ). R.-top desk ಬಾಗಿದ ಗಾಡಿಗಳಲ್ಲಿ ಮೇಲಕ್ಕೂ ಕೆಳಕ್ಕೂ ಸರಿಸಬಹುದಾದ ಮಣಿಯುವ ಮುಚ್ಚಳವುಳ್ಳ ಇಳಿಮೇಜು : ಉರುಳು ಮುಚ್ಚಳದ ಇಳಿಮೇಜು. R. up (ಸೈನಿಕ) ಕಿರಿದಾಗುವಂತೆ, ಸುತ್ತುಕಟ್ಟುವಂತೆ, (ಶತ್ರು ಸಾಲಿನ) ಪಾರ್ಶ್ವವನ್ನು ಮುದುರಿಸು, ಹೊರಳಿಸು. (ಬಳ. ಮಾ.) (ಕಾರ್ಯರಂಗದಮೇಲೆ) ಥಟ್ಟನೆ ಕಾಣಿಸಿಕೊ, ಹಾಜರಾಗು. ವೃದ್ಧಿಯಾಗು, ರಾಶಿ ಬೆಳೆ (Fortune rolls up). ಅಧಿಕಸಂಖ್ಯೆಯಲ್ಲಿ —ಸೇರು, ನೆರೆ. **Róllable** (ಗು.) ; **Róller** (ನಾ.) (ಕ್ರಿಯಾರ್ಥಗಳಲ್ಲಿ) ; (ಮರ, ಕಲ್ಲು, ಲೋಹ, ಮೊ. ಗಳಿಂದ ಮಾಡಿದ) ಉರುಳೆ ; ಲಟ್ಟಣಿಗೆ. (ಶಸ್ತ್ರ ಚಿಕಿತ್ಸೆಯಲ್ಲಿ ಉಪಯೋಗಿಸಲನುಕೂಲಸುವಂತೆ ಅಡಕವಾಗಿ ಸುತ್ತಿದ) ಗಾಯಪಟ್ಟಿಯ ಸುರುಳಿ, ಗಾಯಕಟ್ಟು ಸುರುಳಿ (=R. bandage). ಒಂದು ಬಗೆಯ ಪಾರಿವಾಳ. ನಿಡಿಯುಬ್ಬು ತೆರೆ, ಹೊರಳು ತೆರೆ. ಕಾಗೆ ಜಾತಿಯ ಹಲವು ಉಜ್ಜ್ವಲ ಪುಚ್ಛದ ಪಕ್ಷಿ ; ಜರ್ಮನ್ ತಳಿಯ 'ಕನೇರಿ' ಹಕ್ಕಿ. R. skate, skating (Skate ನೋಡಿ). R. towel ಕೊನೆಗಳೆರಡನ್ನೂ ಒಟ್ಟಿಗೆ ಸೇರಿಸಿರುವ, ಉರುಳೆಯ ಮೇಲೆ ಸುತ್ತಿಬರುವ, —ಚೌಕ.

Rólley. **Rulley** ನೋಡಿ.

Róllick ರಾಲಿಕ್ (ಕ್ರಿ. ಅಕ., ನಾ.) ನಲಿದಾಡು ; ಸಂತೋಷ ಸಂಭ್ರಮದಲ್ಲಿರು ; ಲೀಲೆಯಾಡು ; ಖುಷಿಮಾಡು. (ನಾ.) ನಲಿದಾಟ, ಸಂತೋಷ ಸಂಭ್ರಮ, ಲೀಲೆ, ಸ್ವೇಚ್ಛಾ ವಿಹಾರ, ಖುಷಿ.

Róly-póly ರೋಲಿಪೋಲಿ (ನಾ., ಗು.) ಹೂರಣಗಡುಬು (=R. pudding). (ಗು.) (ಮಕ್ಕಳ ವಿಷಯದಲ್ಲಿ) ಮೈತುಂಬಿಕೊಂಡಿರುವ, ಕಡುಬಿನಹಾಗೆ ಉಬ್ಬಿ ಬೆಳೆದ.

Rom ರಾಮ್ (ರೋಮಾನಿ ಪದ) (ನಾ., ಬ. ವ. Roma) ಜಿಪ್ಸಿ ಗಂಡಸು. (ಬ. ವ.) ಜಿಪ್ಸಿಗಳು.

Romáic ರೊಮೇಇಕ್ (ಗು., ನಾ.) ಆಧುನಿಕ ಗ್ರೀಸಿನ ಜನರಾಡುವ ಭಾಷೆ(ಯ); —ಯಲ್ಲಿರುವ (ಗ್ರೀಸಿನಲ್ಲಿ ಬರವಣಿಗೆಯ ಭಾಷೆ ಬೇರೆಯಿದೆ)

Romáika ರೊಮೇಇಕ (ಗ್ರೀಸ್ ದೇಶದ ಭಾಷೆ) (ನಾ.) ಆಧುನಿಕ ಗ್ರೀಸಿನ ಒಂದು ದೇಶೀಯ ನರ್ತನ.

Róman ರೋಮನ್ (ನಾ., ಗು.) ಪ್ರಾಚೀನ ರೋಮ್ ಪಟ್ಟಣದ, ರೋಮನ್ ರಾಷ್ಟ್ರದ, —ಪ್ರಜೆ, ಸೈನಿಕ, ನಿವಾಸಿ [King, Emperor, of the Romans ರೋಮನ್ ಚಕ್ರಾಧಿಪತಿ (ಮು., Holy Roman Empire ಎಂಬುದರ ಚಕ್ರಾಧಿಪತಿ)] ; ಮಧ್ಯಯುಗದ ಅಥವಾ ಆಧುನಿಕ ರೋಮ್ ನಗರ ನಿವಾಸಿ ; ರೋಮನನು ; (ಬ. ವ.) ಪ್ರಾಚೀನ ರೋಮಿನ ಕ್ರೈಸ್ತರು [Romans *or* Epistle to the Romans ಬೈಬಲ್ಲಿನ ಹೊಸ ಒಡಂಬಡಿಕೆಯ ಒಂದು ಪ್ರಕರಣ (ಸಂಕ್ಷಿಪ್ತ : Rom.)]. (ಮುದ್ರಣ) ಒಂದು ಮಾಟದ ಓಲಿರದ ಅಕ್ಷರದ ಅಚ್ಚಿನ ಮೊಳೆ [ಈಗ ಮುದ್ರಣದಲ್ಲಿ ಸಾಮಾನ್ಯವಾಗಿ ಉಪಯೋಗವಾಗುತ್ತಿರುವ ಇಂಗ್ಲಿಷ್ ಅಕ್ಷರಗಳ ಮೊಳೆ : (ಸಂಕ್ಷಿಪ್ತ : rom.) = R. letters *or* type (ವಿರುದ್ಧ ಪದಗಳು : Gothic *or* black letter and italic)]. ರೋಮನ್ ಕ್ಯಾತೊಲಿಕ್ ಕ್ರೈಸ್ತ. (ಗು.) ಪ್ರಾಚೀನ—ರೋಮಿನ, ರೋಮ್ ರಾಜ್ಯದ, ರೋಮ್ ಜನದ, (ವಿ. ಪ್ರ.) ರೋಮ್ ಭಾಷೆಯ (ಈಗ ಲ್ಯಾಟಿನ್ ಭಾಷೆ ಎಂಬುದು ರೂಢಿ) [R. Empire ರೋಮನ್ ಚಕ್ರಾಧಿಪತ್ಯ. Holy R. Empire (ಕ್ರಿ. ಶ. ೮೦೦ರಲ್ಲಿ Charlemagne ದೊರೆಯಿಂದ ಪುನರುಜ್ಜೀವಿತವಾಗಿ ೧೮೦೬ರ ವರೆಗೆ ನಡೆದುಬಂದ) ಪವಿತ್ರ ರೋಮನ್ ಚಕ್ರಾಧಿಪತ್ಯ. R. law (ಪುರಾತನ ರೋಮನರಿಂದ ಪ್ರಚಾರಕ್ಕೆ ಬಂದು ಹಲವು ಆಧುನಿಕ ನ್ಯಾಯಸೂತ್ರಗಳಿಗೆ ಆಧಾರವಾದ) ರೋಮನ್ ನ್ಯಾಯಶಾಸ್ತ್ರ. R. pottery, bricks, road, etc. ರೋಮನರ ಕುಂಭ ಕಲೆ, ಮೊ.ವು (ರೋಮನ್ ಆಡಳಿತದ ಕಾಲದಿಂದ ಉಳಿದು ಬಂದಂಥವು). R. cement ಒಂದು ಬಗೆಯ ಸಿಮೆಂಟು (ವ್ಯಾಪಾರದ ಹೆಸರು). R. balance, beam, steelyard = Ordinary steelyard (Steelyard ನೋಡಿ). R. simplicity, etc. (ಪ್ರಾಚೀನ ರೋಮನ್ ಪ್ರಜಾಸತ್ತೆಯ) ರೋಮನರು ತೋರಿಸುತ್ತಿದ್ದ(ಂಥ) ಸರಳತೆ, ಮೊ. ವು. R. nose ಗರುಡ ಮೂಗು. (**Roman-nosed** (ಗು.). R. alphabet ರೋಮನರ ವರ್ಣಮಾಲೆ (ಈಗಲೂ ಸುಧಾರಿತ ರೂಪದಲ್ಲಿ ಪ. ಯೂರೋಪಿನಲ್ಲಿ ಬಳಕೆಯಲ್ಲಿದೆ). R. numerals ಸಂಖ್ಯಾ ಸಂಕೇತಗಳಾಗಿ ಉಪಯೋಗಿಸುವ I (=1), V (=5), X (=10), L (=50), C (=100), D (=500), M (=1,000), ಮೊದಲಾದ ಅಕ್ಷರಗಳು : ರೋಮನ್ ಅಂಕಿಗಳು. R. architecture ರೋಮನ್ ವಾಸ್ತುಶಿಲ್ಪ (ಶೈಲಿ). R. history, historian ಪ್ರಾಚೀನ ರೋಮನ್ ಚರಿತ್ರೆ, ಚರಿತ್ರೆಕಾರ]. ರೋಮನ್ ಕ್ಯಾತೊಲಿಕನ [**Rómanish** (ಗು.) ರೋಮನ್ ಕ್ಯಾತೊಲಿಕ್ —ಮತದ, ಮತದ. **Rómanizer** (ನಾ.)]. ಮಧ್ಯ ಕಾಲದ ಅಥವಾ ಆಧುನಿಕ ರೋಮಿನ [R. school ವರ್ಣಚಿತ್ರಕಾರನಾದ Raphael ಎಂಬಾತನ ವರ್ಣಚಿತ್ರ ಪಂಥ. R. fever ರೋಮಿನಲ್ಲಿಯ ಮಲೇರಿಯಾ ಜ್ವರ. R. snail (Snail ನೋಡಿ). R. vitriol ಮೈಲತುತ್ತ. R. candle ಒಂದು ಬಗೆಯ ಬಾಣ ಬಿರುಸು]. **Roman Catholic** (ಗು., ನಾ.) ರೋಮಿನ ಕ್ರೈಸ್ತ ಮತಕ್ಕೆ ಸೇರಿದ(ವನು) ; ರೋಮನ್ ಕ್ಯಾತೊಲಿಕ್ ಕ್ರೈಸ್ತ ಪಂಗಡದ(ವನು). **Roman-Cathólically** (ಕ್ರಿ. ವಿ.) ; **Roman-Cátholicly** (ಕ್ರಿ. ವಿ.) ; **Roman-Cathólicism** (ನಾ.) ; **Rómanism** (ನಾ.) ; **Rómanist** (ನಾ.) ; **Romanístic** (ಗು.) ; **Románity** ರೊಮ್ಯಾನಿಟಿ (ನಾ.) (ವಿ. ಪ್ರ.) ರೋಮನ್ ಚಕ್ರಾಧಿಪತ್ಯದ ನಾಗರಿಕತೆ ಮತ್ತು ಪ್ರಭಾವ. **Rómanize** (ಕ್ರಿ. ಸಕ.) ; **Romanizátion** (ನಾ.); **Románo-** ರೊಮೇನೊ— (ಸ. ಪೂ. ಪ.)

Románce ರೊಮ್ಯಾನ್ಸ್ (ನಾ., ಗು., ಕ್ರಿ. ಅಕ.) ೧. (R-) ಲ್ಯಾಟಿನ್ ಭಾಷೆಯಿಂದ ಅಭಿವೃದ್ಧಿಗೊಂಡು ಅದರಿಂದ ಭಿನ್ನವಾಗಿ ಬೆಳೆದ ಪುರಾತನ ಫ್ರಾನ್ಸಿನ ಜನಪದ ಭಾಷೆ ; ರೊಮಾನ್ಸ್ ಭಾಷೆ ; ಸ್ಪೆಯ್ನ್, ಪ್ರೊವೆನ್ಸ್, ಮೊ. ಪ್ರದೇಶಗಳಲ್ಲಿಯ, ಇದಕ್ಕೆ ಸಂವಾದಿಯಾದ ಭಾಷೆ ; (ಸಾಮೂಹಿಕವಾಗಿ) ಲ್ಯಾಟಿನ್ ಜನ್ಯ ಭಾಷೆಗಳು [(ಗು.) ಲ್ಯಾಟಿನ್ ಜನ್ಯ ಭಾಷೆಗಳ]. ೨. (r-) ಮಹಿಳೆಯರಲ್ಲಿ ಗೌರವ ತೋರುವ, ಸಾ., ಪದ್ಯ ರೂಪದಲ್ಲಿಯ, ಮಧ್ಯ ಯುಗದ ವೀರ ಕಥೆ ; (ಸಾಮಾನ್ಯ ಜೀವನದಿಂದ ದೂರವಾದ ಸಂಗತಿಗಳನ್ನೂ ದೃಶ್ಯಗಳನ್ನೂ ಒಳಗೊಂಡ, ಪದ್ಯ ರೂಪದ ಅಥವಾ ಗದ್ಯ ರೂಪದ) ಅದ್ಭುತ ಕಥೆ ; ಸಾಹಸ ಕಾದಂಬರಿ ; ರಂಜನ ಕಾವ್ಯ ; ಅದ್ಭುತ, ಸಾಹಸ, —ಕಥಾ ಸಾಹಿತ್ಯ; (ಇಂಥ ಸಾಹಿತ್ಯದಲ್ಲಿರುವುದನ್ನು ಹೋಲುವ) ಅದ್ಭುತ ಘಟನೆ, ಸಾಹಸ ಪ್ರಣಯ ವ್ಯಾಪಾರ, ಮೊ. ವು; ಸಾಹಸ ಕಥಾ ವಾತಾವರಣ ; ಕಟ್ಟುಕಥೆ, ಕಲ್ಪನೆ, ಅತ್ಯುತ್ಪ್ರೇಕ್ಷೆ, ವಿಚಿತ್ರ ಸುಳ್ಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[(ಕ್ರಿ.) ಉತ್ಪ್ರೇಕ್ಷೆಮಾಡು]. ಹಗಲುಗನಸು ಕಾಣುವ ಮನೋಭಾವ; ಭಾವ ಪರವಶಶೀಲತೆ, ಕಲ್ಪನಾ ಪ್ರಪಂಚ ವಿಹಾರ [**Románceless** (ಗು.)]. (ಸಂ.) ಸರಳ ರೀತಿಯ ಲಘು ಕೃತಿ. **Románcer** (ನಾ.) —ಕಥೆಗಾರ; ವಿಚಿತ್ರ ಸುಳ್ಳುಗಳ ಸೃಷ್ಟನೆಗಾರ. **Romántic** (ಗು., ನಾ.) ಸಾಹಸ, ಅದ್ಭುತ,—ಕಥೆಯ(ನ್ನು ಹೋಲುವ); ರಂಜಕ, ಭಾವಶೀಲ, ಕಲ್ಪನಾಶೀಲ, ಭಾವನಾ ರಾಜ್ಯದ (A r. story, scene, adventure, girl). (ಸಂ.) (ರೂಪಕ್ಕಿಂತ) ಭಾವ ಪ್ರಧಾನ ವಾದ, ಭಾವನಾ ಪೂರ್ಣ; ಭಾವೋದ್ರೇಕ ಮಾಡುವ. (ಯೋಜನೆ, ಮೊ. ವು) ಕಾರ್ಯಾರ್ತ್ಮಕವಲ್ಲದ, ವಿಚಿತ್ರವಾದ, ಹಗಲುಗನಸಿನ; (ಸಾಹಿತ್ಯ ಪದ್ಧತಿ, ಕಲಾ ಪದ್ಧತಿ, ಮೊ.) ನಯಗೆಲಸ, ಸಮಂಜಸ ಪ್ರಮಾಣ, ಮೊ. ಗಳಿಗಿಂತ ವೈಭವ, ಅದ್ಭುತ ಚಿತ್ರ, ಭಾವೋದ್ರೇಕ, ವಿಷಮ ಸೌಂದರ್ಯ, ಮೊ. ಗಳಿಗೆ ಪ್ರಾಧಾನ್ಯ ಕೊಡುವ; ಭಾವನಾ ಸ್ವಾತಂತ್ರ್ಯದ; ರೂಪದ ಅಚ್ಚುಕಟ್ಟಿಗಿಂತ ವಿಷಯಕ್ಕೆ ಪ್ರಾಧಾನ್ಯ ಕೊಡುವ; ಒಟ್ಟು ಪರಿಣಾಮಕ್ಕಿಂತ ಬಿಡಿ ಭಾಗಗಳಿಗೆ ಪ್ರಾಧಾನ್ಯ ಕೊಡುವ; ರಂಜನ ಪದ್ಧತಿಯ [ವಿರುದ್ಧ ಪದ: Classic(al) ಲಕ್ಷಣ ಸಾಹಿತ್ಯ(ದ)]. (ನಾ.) (ಬ. ವ. ದಲ್ಲಿ) ಕಾಲ್ಪನಿಕ, ಭಾವನಾ ರಾಜ್ಯದ, —ಮಾತು, ವಿಷಯ; ಹಗಲುಗನಸುಗಳು. (ಸಾಹಿತ್ಯ, ಕಲೆ, ಮೊ. ಗಳಲ್ಲಿ) ಭಾವನಾ ಸ್ವಾತಂತ್ರ್ಯ ಪಂಥದವನು, ರೊಮ್ಯಾಂಟಿಕ್ ಪಂಥದವನು [=**Románticist** (ನಾ.)]. **Romántically** (ಕ್ರಿ. ವಿ.); **Románticism** (ನಾ.); **Románticize** (ಕ್ರಿ.)

Rómanes ರಾಮನೆಸ್ (ನಾ.) ಜಿಪ್ಸಿ ಭಾಷೆ.

Romanésque ರೋಮನೆಸ್ಕ್ (ಗು., ನಾ.) = Romance (ಗು., ನಾ.) (ಮೊದಲನೆಯ ಅರ್ಥ). (ವಾ. ಶಾ.) ರೋಮನ್ ಪ್ರಭಾವಕ್ಕೆ ಒಳಪಟ್ಟಿದ್ದ ಯೂರೋಪಿನ ಭಾಗಗಳಲ್ಲಿ ಪ್ರಾಚೀನ ಸಂಪ್ರದಾಯ ಕಾಲಕ್ಕೂ ಗಾತಿಕ್ ಸಂಪ್ರದಾಯ ಕಾಲಕ್ಕೂ ಮಧ್ಯೆ ಪ್ರಚಾರದಲ್ಲಿದ್ದ ಕಟ್ಟಡದ ರೀತಿ(ಯಲ್ಲಿಯ)

Románic ರೊಮ್ಯಾನಿಕ್ (ಗು., ನಾ.) ಲ್ಯಾಟಿನ್ ಜನ್ಯ; = Romance (ಗು., ನಾ.) (ಮೊದಲನೆಯ ಅರ್ಥ). ರೋಮನ್ ಜನ್ಯ; ರೋಮನ್ ನಾಗರಿಕತೆ, ಮೊ. ಗಳನ್ನು ಪಡೆದ; ರೊಮಾನ್ಸ್ ಭಾಷೆಯನ್ನಾಡುವ.

Románity. **Roman** ನೋಡಿ.

Romántic, etc. **Romance** ನೋಡಿ.

Rómany ರಾಮನಿ (ನಾ., ಗು.) ಜಿಪ್ಸಿ(ಯ); (ಬ. ವ., ಜಾತ್ಯೇಕ ವ.) ಜಿಪ್ಸಿಗಳು (=The R.); ಜಿಪ್ಸಿ ಭಾಷೆ.

Romaúnt ರೊಮಾಂಟ್ (ನಾ.) (ಪ್ರಾಚೀ. ಪ್ರ.) ಮಧ್ಯ ಯುಗದ—ವೀರ ಕಥೆ, ಅದ್ಭುತ ಕಥೆ.

Rome ರೋಮ್ (ನಾ.) ರೋಮ್ ಪಟ್ಟಣ; ಪ್ರಾಚೀನ ರೋಮನ್ ರಾಷ್ಟ್ರ [R. was not built in a day ಮಹತ್ಕಾರ್ಯ ಯಾವುದೂ ಒಂದು ದಿನದಲ್ಲಿ ಸಿದ್ಧಿಸುವುದಿಲ್ಲ; ಮಹತ್ಕಾರ್ಯದ ಸಿದ್ಧಿಗೆ ಹಲವು ವರ್ಷಗಳ ಪ್ರಯತ್ನ ಬೇಕು (ದೃಢ ಪ್ರಯತ್ನವಿಲ್ಲದವರಿಗೆ ಹೇಳುವ ಮಾತು). Do in R. as R. does, as the Romans do ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊ; ಆಯಾ ದೇಶಾಚಾರದಂತೆ ನಡೆ]. ರೋಮನ್ ಸಾಮ್ರಾಜ್ಯ. ರೋಮನ್ (ಕ್ಯಾತೊಲಿಕ್) ಕ್ರೈಸ್ತ ಮತ. **Rómeward** (ಗು., ಕ್ರಿ. ವಿ.); **Rómewards** (ಕ್ರಿ. ವಿ.); **Rómish** (ಗು.) (ತಿರಸ್ಕಾರ ಪ್ರ.) ರೋಮನ್ ಕ್ಯಾತೊಲಿಕ್—ಮತದ, ಸಂಪ್ರದಾಯದ.

Romp ರಾಂಪ್ (ಕ್ರಿ. ಅಕ., ನಾ.) (ಮಕ್ಕಳು, ಮೊ. ವಿಷಯದಲ್ಲಿ) ಒಟ್ಟಿಗೆ (ಗಲಾಟೆಯಿಂದ) ಆಟವಾಡು, ಕುಣಿದಾಡು, ಜಿಗಿದಾಡು, ಒಬ್ಬರನ್ನೊಬ್ಬರು ಬೆನ್ನಟ್ಟು, ಕುಸ್ತಿಯಾಡು, ಸಿಡಿ; ಹೀಗೆ ಗಲಾಟೆ, ಗಡಿಬಿಡಿ, —ಮಾಡು. (ಕುದುರೆ ಜೂಜಿನ ಅನಂ.) ಕಷ್ಟವಿಲ್ಲದೆ, ಅನಾಯಾಸವಾಗಿ, —ಮುಂದೋಡು (*Along, past*), ಗೆಲ್ಲು, ಗೆದ್ದು ಬರು (*in* or *home*). (ನಾ.) ಜಿಗಿದಾಡುವ, ಗಲಾಟೆಯ, —ಹುಡುಗ, ಹುಡುಗಿ; ದಿಟ್ಟ ಹುಡುಗಿ, ಬಜಾರಿ. ಜಿಗಿದಾಟ, ಕುಣಿದಾಟ, ಹಾರಾಟ; ಗಲಾಟೆಯ ಆಟ (ಅನೇಕ ವೇಳೆ Game of romps). **Rómpy** (ಗು.)

Rómper ರಾಂಪರ್ (ನಾ.) (ಏ. ವ. ಅಥವಾ ಬ. ವ.) ಮಗುವಿನ ಒಂದು ಬಗೆಯ ದಗಲೆ.

Róndeau ರಾಂಡೋ (ನಾ.) ಮೊದಲಿಂದ ಕೊನೆಯ ವರೆಗೆ ಎರಡೇ ಪ್ರಾಸ ಮೇಲಿಂದಮೇಲೆ ಬರುವ, ಮೊದಲ ಸಾಲಿನ ಮೊದಲ ಮಾತುಗಳು ನಡುವೆಯೊಮ್ಮೆ ಕಡೆಗೊಮ್ಮೆ ಪಲ್ಲವಿಯಾಗಿ ಬರುವ, ಸಾ., ಹದಿಮೂರು (ಕೆಲವು ವೇಳೆ ಹತ್ತು) ಸಾಲಿನ ಭಾವ ಗೀತೆ; ರಾಂಡೋ ಗೀತೆ. ಪಲ್ಲವಿ. (ಸಂ.) = Rondo. **Róndel** ರಾಂಡೆಲ್ (ನಾ.) ರಾಂಡೋ ಗೀತೆ(ಯ ವಿಶಿಷ್ಟ ರೂಪ)

Róndo (It.) ರಾಂಡೊ (ನಾ.) (ಸಂ.) ಪ್ರಧಾನ ಸ್ವರ ವಿನ್ಯಾಸ ಪುನರಾವರ್ತವಾಗುವ ಒಂದು ಸಂಗೀತ ಕೃತಿ.

Róndure ರಾಂಡ್ಯುರ್ (ನಾ.) (ಕಾವ್ಯ) ಗೋಳಾಕಾರ, ವೃತ್ತಾಕಾರ (ದ ವಸ್ತು); ವೃತ್ತ; ಬಟ್ಟು.

Róneo ರೋನಿಯೊ (ನಾ., ಕ್ರಿ. ಸಕ.) ಕಾಗದ ಪತ್ರ, ಮೊ. ನ್ನು ಹೆಚ್ಚು ಸಂಖ್ಯೆಯಲ್ಲಿ ಪ್ರತಿಯೆತ್ತುವ ಯಂತ್ರ; ರೋನಿಯೊ—ನಕಲು ಯಂತ್ರ, ಪಡಿ ಯಂತ್ರ. (ಕ್ರಿ.) ಇದರಿಂದ ಪ್ರತಿಯೆತ್ತು (ತಯಾರಿಕೆ ಸಂಸ್ಥೆಯ ಹೆಸರು)

Róntgenogram ರಂಟ್‌ಜೆ(ಯೆ)ನೊಗ್ರ್ಯಾಂ (ನಾ.) Rontgen ಕಿರಣಗಳ ಮೂಲಕ ತೆಗೆದ ಛಾಯಾಚಿತ್ರ: ರಾಂಟ್‌ಜೆನ್ ಛಾಯಾಚಿತ್ರ.

Rontgen rays. **Ray**[1] ನೋಡಿ.

Rood ರೂಡ್ (ನಾ.) (ಪ್ರಾಚೀ. ಪ್ರ.) ಯೇಸು ಕ್ರಿಸ್ತನ ಶಿಲುಬೆ (ಶಪಥ ಮಾಡುವಲ್ಲಿ: By the R.); ಶಿಲುಬೆಯ ಮೇಲಿನ ಕ್ರಿಸ್ತ ಪ್ರತಿಮೆ; ಕ್ರಿಸ್ತನ ಕ್ರೂಶಾರೋಹಣ ಚಿತ್ರ. [R.-arch (ಚರ್ಚಿನ ಮಧ್ಯಾಂಗಣಕ್ಕೂ ಮೇಳಾಂಗಣಕ್ಕೂ ನಡುವಣ) ಶಿಲುಬೆ ಕಮಾನು. R.-beam ಶಿಲುಬೆ ತೆರೆಯ ಮೇಲಿನ ಅಡ್ಡ ತೊಲೆ: ಶಿಲುಬೆ ತೊಲೆ. R.-cloth (ಲೆಂಟ್ ಹಬ್ಬದಲ್ಲಿ ಉಪಯೋಗಿಸುವ) ಶಿಲುಬೆ ಮುಸುಕು, —ವಸ್ತ್ರ. R.-loft ಶಿಲುಬೆ ತೆರೆಯ ಮೇಲ್ಭಾಗದಲ್ಲಿಯ ಅಟ್ಟ: ಶಿಲುಬೆ ಅಟ್ಟ. R.-screen ಚರ್ಚಿನ ಮಧ್ಯಾಂಗಣವನ್ನು ಮೇಳಾಂಗಣದಿಂದ ಬೇರ್ಪಡಿಸುವ, ಮೇಲಿನ ಅಡ್ಡತೊಲೆಯ ಮಧ್ಯದಲ್ಲಿ ಶಿಲುಬೆಯಿರುವ, ಕೊರೆದ ಅಲಂಕಾರದ, ಕಲ್ಲಿನ ಅಥವಾ ಮರದ ತೆರೆ: ಶಿಲುಬೆ ತೆರೆ]. (ಜಮೀನು ಅಳತೆಯಾಗಿ) ಕಾಲು ಎಕರೆ; ಹತ್ತು ಗುಂಟೆ; (ಶಿಥಿಲವಾಗಿ) ಒಂದು ಚೂರು ನೆಲ, ಒಂದು ಗೇಣು ನೆಲ (Not a r. remained to him ಒಂದು ಗೇಣು ನೆಲವೂ ಅವನಿಗೆ ಉಳಿಯಲಿಲ್ಲ)

Roof ರೂಫ್ (ನಾ., ಕ್ರಿ. ಸಕ.) (ಕಟ್ಟಡ, ಮನೆ, ಮೊ. ಗಳ) ಮೇಲ್ಛಾವಣಿ, ಛಾವಣಿ, ಮಾಳಿಗೆ (Under one's r. ಒಬ್ಬನ ಮನೆಯಲ್ಲಿ, ಆಶ್ರಯದಲ್ಲಿ, ಆತಿಥ್ಯದಲ್ಲಿ. The r. of heaven ಆಕಾಶ, ಬಾಂದಳ. R. of the world ಉನ್ನತ ಪರ್ವತ ಶ್ರೇಣಿ. R. of the mouth ಅಂಗುಳು, ತಾಲು. R.-tree ಛಾವಣಿಯ—ಬೆಂಗಟೆ ಮರ, ಬೆನ್ನು ತೊಲೆ). ಸವಾರಿ ಗಾಡಿಯ, ವಾಹನದ, —ಮೇಲ್ಮುಚ್ಚು (ಮು., ಪ್ರಯಾಣಿಕರಿಗೆ ಪೀಠಗಳುಳ್ಳದ್ದು). (ಕ್ರಿ.) ಛಾವಣಿ—ಹಾಕು, ಆಗಿರು (ಅನೇಕ ವೇಳೆ *in, over* ಉಪ. ದೊಡನೆ). **Roófage** (ನಾ.) ಛಾವಣಿ ಸಾಮಾನು. (-) **roofed** (ಗು.); **Roófless** (ಗು.); **Roófer** (ನಾ.) (ಬಳ. ಮಾ.) ಹೊರಟುಹೋದ ಅತಿಥಿ ಆತಿಥ್ಯ ಸ್ಮರಣೆಮಾಡಿ ಬರೆದ ವಂದನಾಪತ್ರ; ಆತಿಥ್ಯ ಸ್ಮರಣ ಪತ್ರ. **Roófing** (ನಾ.) ಛಾವಣಿ (ಹಾಕುವುದು); ಛಾವಣಿ ಸಾಮಾನು.

Rook[1] ರುಕ್ (ನಾ., ಕ್ರಿ. ಸಕ.) ಗುಂಪು ಗುಂಪಾಗಿ ಗೂಡುಕಟ್ಟುವ, ಒರಟು ದನಿಯ, ಕಾಗೆ ಜಾತಿಗೆ ಸೇರಿದ, ಒಂದು ಕರಿಯ ಹಕ್ಕಿ; ರುಕ್ ಹಕ್ಕಿ [R. pie ರುಕ್ ಹಕ್ಕಿಮರಿಗಳಿಂದ ಮಾಡಿದ ಕಡುಬು. R.-rifle ರುಕ್ ಶಿಕಾರಿಯ ಬಂದೂಕು (ಸಣ್ಣ ರಂಧ್ರವುಳ್ಳದ್ದು)]. (ಇಸ್ಪೀಟು, ಪಗಡೆ, ಮೊ. ಆಟಗಳಲ್ಲಿ) ಮೋಸದ ಆಟಗಾರ, ಠಕ್ಕ; ಜೂಜಾಟದಲ್ಲಿ ಅನನುಭವಿಗಳನ್ನು ಮೋಸಗೊಳಿಸಿ ಜೀವನ ನಡೆಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಂಚಕ (Pigeon ಪದದೊಡನೆ ಹೋಲಿಸಿ). (ಕ್ರಿ.) (ಇಸ್ಪೀಟಾಟ, ಮೊ. ಗಳಲ್ಲಿ) ಮೋಸದ ಆಟದಿಂದ ದುಡ್ಡು ಮಾಡು. ವಿಪರೀತ ಬೆಲೆ, ದುಬಾರಿ ಬೆಲೆ, —ಹಾಕು: ಹೀಗೆ (ಗಿರಾಕಿಯಿಂದ) ದುಡ್ಡು ಸುಲಿ. **Roóklet** (ನಾ.); **Roókling** (ನಾ.); **Roóky** (ಗು.) ರುಕ್ ಹಕ್ಕಿಗಳು ತುಂಬಿದ, ರುಕ್ ಹಕ್ಕಿಗಳಿರುವ. **Roókery** ರುಕರಿ (ನಾ.) ರುಕ್ ಹಕ್ಕಿಗಳ ಗುಂಪು (ಇರುವ ತೋಪು); ಪೆಂಗ್ವಿನ್ ಹಕ್ಕಿ, ಸೀಲ್ ಪ್ರಾಣಿ, ಮೊ. ಗಳ ಗುಂಪು, ಹಿಂಡು, ಸಂತಾನ ಬೆಳಸುವ ಸ್ಥಳ. ಕೀಳು ದರ್ಜೆಯ ಮನೆ, ಗುಡಿಸಿಲು, ಮೊ. ಗಳ ಕಿಕ್ಕಿರಿದ ಗುಂಪು; ಕಿಕ್ಕಿರಿದ, ತುರುಗಿದ, —ಕೊಂಪೆ.

Rook[2] ರುಕ್ (ನಾ.) (ಚದುರಂಗದ ಆಟ) = Castle.

Roókie ರುಕಿ (ನಾ.) (ಸೈನಿಕ ಅಸಂ.) ಹೊಸ ಸಿಪಾಯಿ; ಉಮೇದುವಾರ (Recruit ಪದದ ವಿಕೃತ ರೂಪ)

Room ರೂ(ರು)ಮ್ (ನಾ., ಕ್ರಿ. ಅಕ.) ಎಡೆ, ತೆರಪು(ವು), ಸ್ಥಳ, ಅವಕಾಶ, ಆಸ್ಪದ, ತಾವು, ಜಾಗ; ಇಂಬು (ಗ್ರಾಂ.) [No r. to swing a cat (Cat ನೋಡಿ). Would rather have his r. than his company ಅವನು ದೂರ ಇದ್ದರೆ ಮೇಲು, ಇಲ್ಲದಿದ್ದರೆ ಮೇಲು. No r. for idlers ಸೋಮಾರಿಗಳಿಗೆ —ಸ್ಥಳವಿಲ್ಲ, ಅವಕಾಶವಿಲ್ಲ. Make r. ಸ್ಥಳ, ಸ್ಥಾನ—ಬಿಟ್ಟುಕೊಡು; ಮತ್ತೊಬ್ಬನಿಗೆ ಅವಕಾಶ ಮಾಡಿ ಕೊಡು; (ಇತರರನ್ನು ಬೇರೆ ಕಡೆಗೆ ಕಳುಹಿಸಿ, ಮೊ. ಗಿ) ಸ್ಥಳ ಮಾಡು, ಎಡೆ—. R. for (ಪ್ರಾಚೀ. ಪ್ರ.) (ಆಜ್ಞೆ: ಒಬ್ಬನಿಗಾಗಿ) ಸ್ಥಳ, ದಾರಿ, —ಬಿಡು. In one's r., in the r. of ಒಂದರ, ಒಬ್ಬನ, —ಸ್ಥಳದಲ್ಲಿ, ಪ್ರತಿಯಾಗಿ, ಬದಲು. No r. for dispute ಜಗಳಕ್ಕೆ —ಕಾರಣವಿಲ್ಲ, ಅವಕಾಶವಿಲ್ಲ. There is r. for improvement ಇನ್ನೂ ಉತ್ತಮವಾಗಲು ಅವಕಾಶವಿದೆ; ಅಷ್ಟು ಸಮರ್ಪಕವಾಗಿಲ್ಲ]. ಕೋಣೆ, ಕೊಠಡಿ, ಕಿರುಮನೆ, ಚಿಕ್ಕಮನೆ; (ಬ. ವ. ದಲ್ಲಿ) ವಾಸದ ಕೊಠಡಿಗಳು; ಕೋಣೆಯಲ್ಲಿರುವ ಜನ (Set the r. in a roar). (ಕ್ರಿ.) (ಅಮೆ. ಸಂ.) ಕೋಣೆಯಲ್ಲಿ—ಇರು, ವಾಸಮಾಡು; ಊಟ ವಸತಿ ಮಾಡಿಕೊಂಡಿರು [**Roómer** (ನಾ.)]. **-roomed** (ಗು.) —ಕೋಣೆಯುಳ್ಳ. **Roómful** (ನಾ.) ಕೋಣೆಯ ತುಂಬು. **Roómy** (ಗು.) ಬೇಕಾದಷ್ಟು ಸ್ಥಳವಿರುವ; ವಿಶಾಲವಾದ. **Roómily** (ಕ್ರಿ. ವಿ.); **Roóminess** (ನಾ.)

Roost[1] ರೂಸ್ಟ್ (ನಾ., ಕ್ರಿ. ಸಕ.) ಹಕ್ಕಿ ಹಾರಿ ಬಂದು ಕುಳಿತುಕೊಳ್ಳುವ, ವಿಶ್ರಮಿಸಿಕೊಳ್ಳುವ, —ಸ್ಥಳ, ಅಡ್ಡಕಂಬಿ; ಕೂಡುಗಂಬಿ. (ಮು., ಕೋಳಿಗಳು ಮಲಗುವ) ಕೋಳಿ ಗೂಡು. (ರೂಪ.) ಮಲಗುವ—ಕೋಣೆ, ಸ್ಥಳ; ಹಾಸಿಗೆ; ಸೆಜ್ಜೆ [Go to r. ರಾತ್ರಿ ಮಲಗಿಕೊಳ್ಳುವುದಕ್ಕೆ ಹೋಗು. At r. (ಹಕ್ಕಿ) ಕೂಡುಗಂಬಿಯ ಮೇಲೆ ವಿಶ್ರಮಿಸಿಕೊಳ್ಳುತ್ತ; (ಮನುಷ್ಯ) ಹಾಸಿಗೆಯಲ್ಲಿ ಮಲಗಿ. Curses come home to r. (Curse ನೋಡಿ). To rule the r. = To rule the roast (Roast ನೋಡಿ)]. (ಕ್ರಿ.) (ಹಕ್ಕಿ, ಮನುಷ್ಯ) ಮಲಗಿಕೊ, ಮಲಗ ಹೋಗು; (ಹಕ್ಕಿ) ಕೂಡುಗಂಬಿಯ ಮೇಲೆ ಕುಳಿತು ನಿದ್ರಿಸು; (ಮನುಷ್ಯ) ರಾತ್ರಿ (ಮಲಗಲು) ಇಳಿದುಕೊಂಡಿರು; ಮಲಗಲು ಸ್ಥಳ ಕೊಡು. **Roóster** ರೂಸ್ಟರ್ (ನಾ.) (ಮು., ಅಮೆ. ಸಂ.) ಸಾಕಿದ ಹುಂಜ.

Roost[2] ರೂಸ್ಟ್ (ನಾ.) (ಆರ್ಕ್ನಿ ಮತ್ತು ಷೆಟ್ಲೆಂಡ್ ದ್ವೀಪಗಳ ಸುತ್ತಮುತ್ತ ತರೆದೋರುವ, ವಿರುದ್ಧ ಪ್ರವಾಹಗಳ ಸಂಗಮದಿಂದ ಉಂಟಾಗುವ) ಉಬ್ಬರ (ಪ್ರವಾಹ)

Root[1] ರೂಟ್ (ನಾ.) ಬೇರು, ಮೂಲ (ಸಾಧಾರಣವಾಗಿ ಭೂಮಿಯ ಕೆಳಗಡೆಯಿರುವ, ಸಸ್ಯವನ್ನು ಭೂಮಿಯಲ್ಲಿ ಹಿಡಿದಿರುವುದಕ್ಕೂ ಅದಕ್ಕೆ ಭೂಮಿಯಿಂದ ಪೋಷಣೆಯನ್ನು ಒಯ್ಯುವುದಕ್ಕೂ ಸಹಾಯಕವಾದ, ಸಸ್ಯದ ಭಾಗ); (ಬ. ವ.) ಬೇರುಗಳು; ಕವಲು ಬೇರು. ಆಹಾರ ಯೋಗ್ಯವಾದ ಬೇರು; ಗೆಡ್ಡೆ(ಗೆಣಸು); ಕಂದಮೂಲ [Pull up by the roots ಬೇರು ಸಮೇತ ಕಿತ್ತುಹಾಕು, ನಿರ್ಮೂಲ ಮಾಡು (ರೂಪ. ಸಹ). Take, strike, r. ಬೇರು—ಬಿಡು, ಕೊಡು; ಬೇರೂರು (ರೂಪ. ಸಹ). Lay axe to the r. ಬುಡಕ್ಕೆ ಕೊಡಲಿ ಹಾಕು; ನಾಶ ಮಾಡಲು ಯತ್ನಿಸು. R. and branch (Branch ನೋಡಿ)]. (ಬೈಬಲ್ ಪ್ರ.) ಶಾಖೆ, ಸಂತತಿಯಲ್ಲಿ ಬರುವ ಒಬ್ಬ (There shall be a r. of Jesse). (ಅವಯವ, ಕಟ್ಟಡ, ಮೊ. ಗಳ) ಬುಡ [R. of tongue. R. of a gem ರತ್ನ (ಮು., ಪಚ್ಚೆ ಮಣಿ) ಕಲ್ಲಿಗೆ ಅಂಟಿದ್ದ ಮಣ್ಣು ಭಾಗ. Roots of mountain ಬೆಟ್ಟದ ಬುಡ]. ಮೂಲ (Love of money is the r. of all evil. R. idea ಮೂಲ ಭಾವನೆ). ಆಧಾರ, ಬುಡ, ಅವಲಂಬ, ಕಾರಣ [Has its r., roots, in selfishness ಅದು ಸ್ವಾರ್ಥದಲ್ಲಿ ನೆಲೆಗೊಂಡಿದೆ, ಸ್ವಾರ್ಥ ಮೂಲವಾದುದು. Get at the roots of things ಬುಡಮುಟ್ಟ —ಶೋಧಿಸು, ಹೋಗು. Has the r. of the matter in him (ಬೈಬಲ್ ಪ್ರ.) ಅವನು ಮೂಲತಃ ಸರಿಯಾಗಿದ್ದಾನೆ]. (ಗಣಿತ) ಯಾವ ಮೂಲ ಸಂಖ್ಯೆ ಅಥವಾ ಮೊತ್ತವನ್ನು ಅದರಿಂದಲೇ ಒಂದು ಗೊತ್ತಾದಷ್ಟು ಸಲ ಗುಣಿಸಿದರೆ ಒಂದು ನಿರ್ದಿಷ್ಟ ಸಂಖ್ಯೆ ಅಥವಾ ಮೊತ್ತ ಬರುತ್ತದೆಯೋ ಆ ಮೂಲ ಸಂಖ್ಯೆ ಅಥವಾ ಮೊತ್ತ: ಮೂಲ [R., square *or* second r., of 4 is 2. ೪ರ ವರ್ಗಮೂಲ ೨ (ಸಂಕ್ಷಿಪ್ತ: $\sqrt{4}=2$). Cube *or* third r. of 27 is 3. ೨೭ರ ಘನ ಮೂಲ ೩ (ಸಂಕ್ಷಿಪ್ತ: $\sqrt[3]{27}=3$)]. (ಭಾಷಾ ಶಾಸ್ತ್ರ) ಭಾಷೆಯ ಶಬ್ದಗಳಲ್ಲಿ ತಾನೇ ಒಂದು ಶಬ್ದವಾಗಿರಲಿ ಇಲ್ಲದಿರಲಿ, ಪ್ರತ್ಯಯಗಳನ್ನೆಲ್ಲ ತೆಗೆದಮೇಲೆ ಕಡೆಯಲ್ಲಿ ವಿಭಜನೀಯವಲ್ಲದೆ ನಿಲ್ಲುವ ಮೂಲಾಂಶ: ಧಾತು, ಪ್ರಕೃತಿ (ಉದಾ., 'ಆಯಿತು' ಪದದ ಧಾತು 'ಆಗು'). (ಸಂ.) ಸ್ವರ ಮೇಳದ ಮೂಲ ಸ್ವರ, —ನಾದ. [R.-stock (ಸ. ವಿ.) ಬೇರು ಕಾಂಡ (= Rhizome). ಮೂಲ ರೂಪ (ಯಾವುದರಿಂದ ಶಾಖೆಗಳು ಹೊರಟವೆಯೊ ಅದು)]. **Roótage** (ನಾ.) ಬೇರೂರುವುದು; ದೃಢ ಸ್ಥಾಪನೆ. **Roótery** (ನಾ.) ತೋಟದ ಅಲಂಕಾರ ಸಸ್ಯಗಳನ್ನು ಬೆಳಸುವುದಕ್ಕಾಗಿ ಮಾಡಿದ, ಮಧ್ಯೇ ಮಧ್ಯೇ ಮಣ್ಣು ಮುಚ್ಚಿದ, ಬೇರುಗಳ ಒಟ್ಟಿಲು. **Roótless** (ಗು.); **Roótlet** (ನಾ.) ಸಣ್ಣ ಬೇರು; ಕುಡಿ ಬೇರು. **Rooty**[1] (ಗು.) (ತುಂಬ) ಬೇರುಳ್ಳ.

Root (ಕ್ರಿ.) ಬೇರುಬಿಡು; ಬೇರೂರು, ಬೇರೂರಿಸು; ನಾಟು, ನಾಟಿಸು; ನೆಲೆಗೊಳಿಸು, ದೃಢವಾಗಿ ಸ್ಥಾಪಿಸು [Some kinds r. freely. Fear rooted him to the ground. (ಮು., ಭೂ. ಕೃ. ನಲ್ಲಿ) Obedience rooted in fear]. ಬೇರು ಸಹಿತ —ಕಿತ್ತುಹಾಕು, ಅಗೆದುಹಾಕು (*Up*) (R. out ನಿರ್ಮೂಲ ಮಾಡು; ಮೂಲೋತ್ಪಾಟನ ಮಾಡು). (ಕಾವ್ಯ) (ಒಂದು ಸ್ಥಳದಿಂದ) ಬಲವಂತವಾಗಿ ತೆಗೆದುಹಾಕು, ಕಿತ್ತುಹಾಕು (*From* ಉಪ. ದೊಡನೆ). **Roóted** (ಗು.) ಬೇರುಬಿಟ್ಟ, ಬೇರೂರಿದ (ರೂಪ. ಸಹ); ನೆಲೆಗೊಂಡ. **Roótedly** (ಕ್ರಿ. ವಿ.); **Roótedness** (ನಾ.)

Root[2] ರೂಟ್, **Rout** ರೌಟ್ (ಕ್ರಿ.) (ಹಂದಿ, ಮೊ. ಗಳ ವಿಷಯದಲ್ಲಿ; ಆಹಾರವನ್ನು ಹುಡುಕಿಕೊಂಡು) ಮುಸುಡಿಯಿಂದ ನೆಲವನ್ನು ತಿರುವಿಹಾಕು, ಕೆದಕು, ತೋಡು; (ನೆಲವನ್ನು) ಹೀಗೆ ಕೆದಕು, ತೋಡು (*Up* ಉಪ. ದೊಡನೆ); (ರೂಪ.) ಸಾಧ್ಯಂತವಾಗಿ ಹುಡುಕು, ಶೋಧಿಸು (*Out, up*); ಜಾಲಿಸಿ ನೋಡಿಬಿಡು (*Among, in* ಉಪ. ದೊಡನೆ)

Roótery. **Root**[1] ನೋಡಿ.

Roótle ರೂಟ್ಲ್ (ಕ್ರಿ.) = Root[2].

Rooty[1]. **Root**[1] ನೋಡಿ.

Roóty[2] ರೂಟಿ (ನಾ.) (ಸೈನಿಕ ಅಸಂ., ಆಂ. ಇಂ.) ರೊಟ್ಟಿ (ಹಿಂದಿ ಪದ: ರೋಟಿ)

Rope ರೋಪ್ (ನಾ., ಕ್ರಿ.) ಹಗ್ಗ, ನೇಣು, ಮಿಣಿ, ರಜ್ಜು, ಪಾಶ (ನೂಲು, ಸಣಬು, ತೊಗಲು, ತಂತಿ, ಮೊ. ಗಳ ಎಳೆಗಳನ್ನು ಹೊಸೆದು ಮಾಡಿದ್ದು ಮತ್ತು ಒಂದಂಗುಲಕ್ಕಿಂತ ಹೆಚ್ಚಿನ ಸುತ್ತಳತೆಯುಳ್ಳದ್ದು) [The r. ನೇಣು, ಉರಲು; = Tight-r. (Tight ನೋಡಿ). On the high ropes (High ನೋಡಿ). The ropes (ಮುಷ್ಟಿ ಕಾಳಗದ ಅಥವಾ ಇತರ) ಅಖಾಡದ ಸುತ್ತಲ ಹಗ್ಗ. Know the

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ropes (ಒಂದು ವಿಷಯದ) ಮಾರ್ಗಗಳನ್ನು, ವಿವರಗಳನ್ನು, —ತಿಳಿದಿರು; ಮಾಹಿತಿ ಪಡೆದಿರು. Learn, put one up to, the ropes. Give one r., r. enough to hang himself, plenty of r. (ಮು., ಅವನೇ ಸಿಕ್ಕಿಕೊಳ್ಳುವಂತೆ, ಕೇಡು ತಂದುಕೊಳ್ಳುವಂತೆ) ಸ್ವೇಚ್ಛೆಯಾಗಿ ಬಿಡು; ಅವನ ಅವಿವೇಕಕ್ಕೆ, ಕೇಡಿಗೆ, ಅವನನ್ನು ಬಿಟ್ಟುಬಿಡು. R. of sand ನೆಚ್ಚಿಕೆಗೆ ಅನರ್ಹವಾದುದು; ಭ್ರಾಂತಿ ಭರವಸೆ, ಹುಸಿ ನೆಚ್ಚಿಕೆ. R. of onions, pearls ಈರುಳ್ಳಿಯ, ಮುತ್ತಿನ, ಸರ. On the r. (ಬೆಟ್ಟ ಹತ್ತುವವರ ವಿಷಯದಲ್ಲಿ) ಪ್ರತಿಯೊಬ್ಬರೂ ಒಂದೇ ಹಗ್ಗದಿಂದ ಬಿಗಿದುಕೊಂಡು]. ಗಟ್ಟಿಗೊಂಡ ಅಥವಾ ಲೋಳೆಗೂಡಿದ ಬಿಯರ್ ಅಥವಾ ಇತರ ದ್ರವದ ನೂಲು. [**R.-dancer** ಬಿಗಿದ ಹಗ್ಗದಮೇಲೆ ಕುಣಿಯುವವನು; ಕೊಲ್ಲಟಿಗ. **R.-dancing** (ನಾ.); **R.-drill** (ಇಬ್ಬರು ಎಳೆದು ಹಿಡಿದ ಹಗ್ಗವನ್ನು ಸೈನಿಕ ಸಾಲನ್ನಾಗಿ ಪರಿಗಣಿಸಿ ಮಾಡುವ) ಒಂದು ಬಗೆಯ ಸೈನಿಕ ಕವಾಯತು; ಹಗ್ಗ ಕವಾಯತು. **R.-ladder** ಎರಡು ಉದ್ದ ಹಗ್ಗಗಳಿಗೆ ಅಡ್ಡ ಹುರಿಗಳನ್ನು (ಅಥವಾ ಅಡ್ಡ ಪಟ್ಟಿಗಳನ್ನು) ಬಿಗಿದು ಮಾಡಿದ ಹಗ್ಗದ ಏಣಿ: ನೂಲೇಣಿ. **Ropemanship** ಹಗ್ಗದಮೇಲೆ ನಡೆಯುವ, ಹತ್ತುವ, ಕೌಶಲ; ಡೊಂಬರ ಕಲೆ. **R.-moulding** (ವಾ. ಶಾ.) ಹಗ್ಗದ ತಿರುಚೆಳೆಗಳಂತೆ ಮಾಡಿದ ಸುರುಳಿಯಲಂಕಾರ. **R.-quoit** (ಹಡಗಿನಲ್ಲಿ: ಕ್ವಾಯ್ಟ್ಸ್ ಆಟದಲ್ಲಿ ಉಪಯೋಗಿಸುವ) ಹಗ್ಗದ ಬಳೆ. **R.'s-end** (ಮು., ನಾವಿಕನನ್ನು) ಹೊಡೆಯುವ ಹಗ್ಗದ ತುಂಡು; ಗಲ್ಲಿಗೇರಿಸುವ ಉರುಲು. **R.-trick** ಇಂಡಿಯದ ಮಂತ್ರವಾದಿಗಳು ಹಗ್ಗವನ್ನು ನೆಟ್ಟಗೆ ನಿಲ್ಲಿಸುವ ಒಂದು ಕಣ್ಕಟ್ಟು: ಹಗ್ಗದ ಕಣ್ಕಟ್ಟು. **Ropeway** ಒಂದು ಕಟ್ಟಡದಿಂದ ಇನ್ನೊಂದು ಕಟ್ಟಡಕ್ಕೆ ಸಾಮಾನು ಸಾಗಿಸಲು ಉಪಯೋಗಿಸುವ, ಕಂಬಗಳ ಮೇಲೆ ಆಧಾರಗೊಂಡಿರುವ, ಬಲವಾದ ಉಕ್ಕಿನ ಹೊರಜಿ: ಹೊರಜಿಯ (ಸಾಗಣೆ) ಮಾರ್ಗ. **R.-walk** ಹಗ್ಗ ಹೊಸೆಯುವ (ಉದ್ದನೆಯ) ಸ್ಥಳ. **R.-walker** = R.-dancer. **R.-walking** = R.-dancing. **R.-yard** ಹಗ್ಗ ತಯಾರಿಕೆಯ ಸ್ಥಳ; ಹಗ್ಗದ ಕಾರಖಾನೆ. **R.-yarn** ಹಗ್ಗದ ತಿರುಚಿನ —ಒಂದು ನೂಲು, ಎಳೆ. (ರೂಪ.) ಲವ, ಲೇಶ]. (ಕ್ರಿ.) ಹಗ್ಗದಿಂದ—ಕಟ್ಟು, ಬಿಗಿ, ಬಂಧಿಸು. (ಬೆಟ್ಟ ಹತ್ತುವುದರಲ್ಲಿ: ಹತ್ತುವವರನ್ನು) ಪರಸ್ಪರ ಒಂದೇ ಹಗ್ಗದಿಂದ ಕಟ್ಟು. (ಎಳೆಯುವುದು, ಮೊ. ಕ್ಕೆ) ಹಗ್ಗ, ಹೊರಜಿ, —ಉಪಯೋಗಿಸು, ಹಾಕು; (ಸ್ಥಳವನ್ನು ಪ್ರತ್ಯೇಕಿಸುವುದಕ್ಕಾಗಿ) ಹಗ್ಗದಿಂದ ಸುತ್ತುಗಟ್ಟು (R. in ಒಳಕ್ಕೆ ಸೆಳೆದುಕೊ, ಜೊತೆಗೆ ಎಳೆದುಕೊ). (ಕುದುರೆಯ ಜೂಜಿನಲ್ಲಿ) ಸೋಲಬೇಕೆಂದು (ಕುದುರೆಯನ್ನು) ತಡೆ; (ವ್ಯಾಯಾಮ ಮಲ್ಲನ ವಿಷಯದಲ್ಲಿ) ಪೂರ್ಣ ಶಕ್ತಿ ಪ್ರಯೋಗಿಸದಿರು. (ದ್ರವ) ಲೋಳೆಗಟ್ಟು, ಬಂಕೆಯಾಗಿ ನೂಲಿನಂತೆ ಬರು. **Róping** (ನಾ.) ಹಗ್ಗ(ಗಳು); ಹಗ್ಗದ ಕೆಲಸ. **Rópy** (ಗು.) ಲೋಳೆಗಟ್ಟುವ, ಅಂಟಂಟಾದ; ನೂಲಿನಂತೆ ಎಳೆವ. ಹಗ್ಗದಂಥ. **Rópiness** (ನಾ.)

Róquefort ರಾಕ್‌ಫಾರ್ (ನಾ.) ಕುರಿ ಹಾಲಿನಿಂದ ಮಾಡಿದ ಫ್ರೆಂಚರ ಒಂದು ಬಗೆಯ ಚೀಸು (ಫ್ರಾನ್ಸಿನ Roquefort ಎಂಬ ಊರಿನ ಹೆಸರಿನಿಂದ)

Róquelaure ರಾಕೆಲೋ(ಅ)ರ್ (ನಾ.) (ಚರಿತ್ರೆ) (೧೮-೧೯ನೆಯ ಶ. ಮಾ. ದಲ್ಲಿ ಗಂಡಸರು ಧರಿಸುತ್ತಿದ್ದ) ಮೊಣಕಾಲ ವರೆಗಿನ ನಿಲುವಂಗಿ.

Róquet ರೋಕೆ (ಕ್ರಿ.; ವರ್ತಮಾನ ಕೃ. -eting —ಕೆಇಂಗ್, ಭೂತ. -eted —ಕೆಡ್; ನಾ.) (ಕ್ರೋಕೆ ಆಟದಲ್ಲಿ: ತನ್ನ ಚೆಂಡು) ಮತ್ತೊಬ್ಬನ ಚೆಂಡನ್ನು ಹೊಡೆ(ಯುವಂತೆ ಮಾಡು); ಹೀಗೆ ಹೊಡೆತ ಹೊಡೆ. (ನಾ.) ಹೀಗೆ ಹೊಡೆಯುವುದು, ಹೊಡೆತ.

Rórqual ರಾರ್‌ಕ್ವಲ್ (ನಾ.) ಬೆನ್ನೀಜು ರೆಕ್ಕೆಯ ತಿಮಿಂಗಿಲ.

Rórty ರಾರ್ಟಿ, **Raúghty** ರಾಟಿ (ಗು.) (ಅಸಂ.) ಉಲ್ಲಾಸದ, ಕೇಳಿಯ, ಲೀಲೆಯ, ವಿನೋದದ (Had a r. time). ವಿಲಾಸಶೀಲ; ಖುಷಿಯ.

Rósace, Rosáceous, Rosániline, Rosárian, Rosárium, Rósary. Rose ನೋಡಿ.

Róscian ರಾಷಿಯನ್ (ಗು.) (ಕ್ರಿ. ಪೂ. ೧ನೆಯ ಶ. ಮಾ. ದಲ್ಲಿದ್ದ) ಪ್ರಸಿದ್ಧ ರೋಮನ್ ನಟ ರಾಷಿಯಸ್(Roscius)ನಂಥ, —ಗೆ ಉಚಿತವಾದ.

Rose[1] ರೋಸ್ (ನಾ., ಗು., ಕ್ರಿ. ಸಕ.) ಗುಲಾಬಿ (ಹೂವು, ಗಿಡ) [Brier[1], Cabbage, Christmas, Damask, Moss, Musk, Rock[1], Tea, -r. (ಆಯಾ ಪದವನ್ನು ನೋಡಿ). R. of Jericho ಒಣಗಿದ್ದಾಗ ಮುದುರಿಕೊಂಡಿದ್ದು ತೇವದಲ್ಲಿ ಹಿಗ್ಗುವ (ಪರ್ಣಾಂಗಗಳ) ಒಂದು ಗಿಡ. R. of Sharon ಪೂರ್ವ ದೇಶದ ಒಂದು ಸಸ್ಯ. R. of May ಬಿಳಿಯ ನಾರ್ಸಿಸಸ್ (ಹೂವು, ಗಿಡ). Attar, otto, of roses ಗುಲಾಬಿ ಅತ್ತರು. Gather (life's) roses ಭೋಗಪಡು, ಸುಖಾನುಭವಮಾಡು. Path strewn with roses ಸುಖ ಜೀವನ; ಆನಂದ ಜೀವನ. Bed of roses ಸುಖ ಶಯ್ಯೆ, ಹೂವಿನ ಹಾಸಿಗೆ (Is no bed of roses. Is not all roses). R. without a thorn ದುಃಖ ಮಿಶ್ರವಲ್ಲದ ಆನಂದ; ಸಾಧ್ಯವಲ್ಲದ ಸುಖ. The white r. of virginity, innocence, etc. The r. of— (—) ಊರಿನ ಪರಮ ಸುಂದರಿ. Wars of the Roses ಬಿಳಿ ಗುಲಾಬಿ ಲಾಂಛನದ ಯಾರ್ಕ್ ಮನೆತನದವರಿಗೂ ಕೆಂಪು ಗುಲಾಬಿ ಲಾಂಛನದ ಲ್ಯಾಂಕಸ್ಟರ್ ಮನೆತನದವರಿಗೂ ೧೫ನೆಯ ಶ. ಮಾ. ದಲ್ಲಿ ನಡೆದ ಇಂಗ್ಲೆಂಡಿನ ಒಳಯುದ್ಧಗಳು. Under the r. ಗೋಪ್ಯವಾಗಿ, ಗುಟ್ಟಾಗಿ, ರಹಸ್ಯದಲ್ಲಿ]. (ವಂಶ ಲಾಂಛನದಲ್ಲಾಗಲಿ ಅಲಂಕಾರದಲ್ಲಾಗಲಿ) ಗುಲಾಬಿ—ಗುರುತು, ಚಿಹ್ನೆ (ಮು., ಇಂಗ್ಲೆಂಡಿನ ರಾಷ್ಟ್ರೀಯ ಚಿಹ್ನೆಯಾಗಿ); (Golden r. 'ಲೆಂಟ್' ಪರ್ವದ ೪ನೆಯ ಭಾನುವಾರ ಪೋಪ್ ಗುರು ಹರಸಿ, ರೋ. ಕ್ಯಾ. ಮತದ ದೊರೆಗೆ ಅಥವಾ ಒಂದು ಪಟ್ಟಣ, ಮೊ. ಕ್ಕೆ ಅಭಿನಂದನಾರ್ಥವಾಗಿ ಕಳುಹಿಸಿಕೊಟ್ಟ ಆಭರಣ: ಹೊಂಗುಲಾಬಿ). ಗುಲಾಬಿಯ —ಆಕೃತಿ, ಮಾದರಿ, ಮಾಟ. ಪಾದರಕ್ಷೆಯ ಮೇಲೆ, ಪಾದ್ರಿಯ ಟೊಪ್ಪಿಗೆಯ ಮೇಲೆ, ಹಾಕುವ ಗುಲಾಬಿಯಾಕೃತಿಯ ಅಲಂಕಾರ; ಪ್ರಾಣಿಯ ಕೊಂಬಿನ ಬುಡದಲ್ಲಿಯ ಅಥವಾ ಕೆಲವು ಹಕ್ಕಿಗಳ ಕಣ್ಣಿನ ಸುತ್ತಲ ಉಬ್ಬು, ಗುಬಟು. (ಸಸ್ಯಗಳಿಗೆ ನೀರು ಹೊಯ್ಯುವ) ಕೈತೊಟ್ಟಿಯ ಅಥವಾ ಮೆತುನಳಿಕೆಯ ರಂಧ್ರಗಳುಳ್ಳ ಸೇಚಕ ಭಾಗ. = R.-diamond; = R.-window. ತಿಳಿ ಕಡುಗೆಂಪು (ಬಣ್ಣ), ಪಾಟಲ (ವರ್ಣ), ಗುಲಾಬಿ ಬಣ್ಣ; (ಸಾ., ಬ. ವ. ದಲ್ಲಿ) ಕೆಂಪು ಮುಖವರ್ಣ, ಗುಲಾಬಿ ರಂಗು (Has quite lost her, spoiled her natural, roses). [The r. ಒಂದು ಬಗೆಯ ದದ್ದು ರೋಗ; ಇಸಬು. **R.-apple** ಪನ್ನೇರಳೆ (ಹಣ್ಣು, ಗಿಡ). **R.-bay** ಕಣಗಿಲು. **R.-bud** ಗುಲಾಬಿ ಮೊಗ್ಗು (R.-bud mouth ಗುಲಾಬಿ ಮೊಗ್ಗಿನಂಥ ಚಿಕ್ಕ ಕೆಂಪು ಬಾಯಿ); ಚೆಲುವು ಹುಡುಗಿ; (ಅಮೆ. ನಂ.) ಸಮಾಜಕ್ಕೆ ಹೊಸದಾಗಿ ಪ್ರವೇಶಪಡೆದ ಯುವತಿ. **R.-bush** ಗುಲಾಬಿ ಗಿಡ, —ಜಾತಿಯ ಪೊದೆ. **R.-chafer** ಗುಲಾಬಿ ಗಿಡಕ್ಕೆ ಮುತ್ತುವ ಹಸುರು ಬಣ್ಣದ ಅಥವಾ ತಾಮ್ರ ವರ್ಣದ ಜೀರುಂಡೆ; ಗುಲಾಬಿ ಜೀರುಂಡೆ; —ದೋರಂಗಿ. **R.-colour** ಗುಲಾಬಿ ಛಾಯೆಯ ಕೆಂಪು; ಪಾಟಲ; ಗುಲಾಬಿ ಬಣ್ಣ; (ರೂಪ.) ಸುಖ, ಹಿತ, —ಸ್ಥಿತಿ (Life is not all r.-c.). **R.-coloured** ಗುಲಾಬಿ ಬಣ್ಣದ; (ರೂಪ.) ಉತ್ಸಾಹಕಾರಕ, ಆಶಾಜನಕ, ಗೆಲವಿನ (Takes r.-c. views. Sees things through r.-c. spectacles). **R.-cut** (ವಜ್ರದಲ್ಲಿ) ಗುಲಾಬಿ(ಯಾಕಾರದ) ಕೆತ್ತನೆ. **R. diamond** ಸುತ್ತಲೂ ಪಕ್ಕಗಳಲ್ಲಿ ತ್ರಿಕೋಣಾಕೃತಿಯ ಮುಖಗಳುಳ್ಳ, ಅರ್ಧ ಗೋಳಾಕೃತಿಯ ವಜ್ರ; ಕಮಲ ವಜ್ರ; ಗುಲಾಬಿ—. **R.-drop** ಕೆಂಪು ಬೊಕ್ಕೆಗಳೇಳುವ ಒಂದು ಚರ್ಮ ರೋಗ. **R.-engine** ವಕ್ರಾಕೃತಿಗಳನ್ನು ಕೊರೆಯುವ ಚರಕಿ ಯಂತ್ರದ ಸಲಕರಣೆ. **R.-gall** ಕಾಡು ಗುಲಾಬಿ ಗಿಡದ(ಲ್ಲಿ ಹುಳುವಿನಿಂದಾದ) ಗಂಟು. **R.-leaf** ಗುಲಾಬಿ —ಎಲೆ, ಎಸಳು (Crumpled r.-l. ಸುಖಾವಸ್ಥೆಗೆ ಕೊಂಚ ಊನ ತರುವ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುಖ ಪರಿಸ್ಥಿತಿಯನ್ನು ಕೊಂಚ ಕಲಕುವ, —ಸಣ್ಣ ಕಿರುಕುಳ. **R.-lipped** ಗುಲಾಬಿ ತುಟಿಯುಳ್ಳ ; ಕೆಂದುಟಿಯ. **R. nail** ಗುಲಾಬಿ ವಜ್ರದಂಥ ತಲೆಯ ಮೊಳೆ ; ಗುಲಾಬಿ ಮೊಳೆ. **R. noble** ೧೪-೧೬ನೆಯ ಶ. ಮಾ. ದಲ್ಲಿ ಇಂಗ್ಲೆಂಡಿನಲ್ಲಿ ಬಳಕೆಯಲ್ಲಿದ್ದ, ಗುಲಾಬಿ ಮೊಹರಿನ ಒಂದು ಚಿನ್ನದ ನಾಣ್ಯ. **R.-pink** ಒಂದು ವರ್ಣದ್ರವ್ಯ. =R.-colour(ed). **R.-rash** =Roseola. **R.-red** (ಗು., ನಾ.) ಗುಲಾಬಿ ಕೆಂಪು, —ಕೆಂಪಿನ. **R.-root** (ಒಣಗಿದಾಗ ಅಥವಾ ಜಜ್ಜಿದಾಗ) ಗುಲಾಬಿ ವಾಸನೆ ಕೊಡುವ ಬೇರುಳ್ಳ ಹಲವು ಬಗೆಯ ಸಸ್ಯ. **R.-tree** ಗುಲಾಬಿ ಗಿಡ, —ಪೊದೆ. **R. vinegar** ದ್ರಾಕ್ಷಿಯ ಹುಳಿಯಲ್ಲಿ ಇಳಿಸಿದ ಗುಲಾಬಿ ಕಷಾಯ (ತಲೆನೋವು, ಮೊ. ಗಳಿಗೆ ಔಷಧವಾಗಿ ಉಪಯೋಗ). **R.-water** ಪನ್ನೀರು ; (ರೂಪ.) ಅನುನಯ, ಉಪಚಾರ, ನಯನಾಜೂಕುಗಳು, ನಯನಿರ್ವಹಣೆ (R.-w. surgery. Revolutions are not made with r.-w.). **R. window** (ಅರೇಕಾಲನಂಥ ತ್ರಿಜ್ಯ ಪಟ್ಟಿಗಳುಳ್ಳ) ಗುಂಡು ಕಿಟಕಿ. **Rósewood** ಪೆಟ್ಟಿಗೆ, ಮೊ. ಕ್ಕೆ ಉಪಯೋಗವಾಗುವ, ಸುವಾಸನೆಯ ದಾರುಳ್ಳ ಹಲವು ಬಗೆಯ ಮರ; ಬೀಟೆ ಜಾತಿಯ ಮರ] . (ಗು.) ಗುಲಾಬಿ ಬಣ್ಣದ. (ಕ್ರಿ.) (ಮುಖವರ್ಣ, ನೀರ್ಗಲ್ಲ ಇಳುಕಲು, ಮೊ. ನ್ನು) ಗುಲಾಬಿ ಬಣ್ಣ ಮಾಡು (ಮು., ಭೂ. ಕೃ. ನಲ್ಲಿ). ಗುಲಾಬಿ ವಾಸನೆ —ಕಟ್ಟು, ಹಾಕು, ಕೊಡು. (-)**rosed** (ಗು.) ; **Róseless** (ಗು.) ; **Róselike** (ಗು.) ; **Rósace** ರೋಸೇಸ್ (ನಾ.) = Rosewindow ; ಗುಲಾಬಿ ಹೂವಿನಾಕಾರದ —ಒಡವೆ, ಮಾದರಿ, ಅಲಂಕಾರ. **Rosáceous** ರೊಸೇಷಸ್ (ಗು.) ಗುಲಾಬಿ ವರ್ಗದ. **Rosácean** (ನಾ.) —ಸಸ್ಯ. **Rosániline** ರೋಸ್ಯಾನಿಲೈನ್ (ನಾ.) ನೀಲಿಯಿಂದ ವ್ಯುತ್ಪನ್ನವಾದ ಒಂದು ಜೈವಿಕ ಪ್ರತ್ಯಾಮ್ಲ ; ಇದರಿಂದ ಲಭಿಸುವ ಹಲವು ಬಗೆಯ ಕೆಂಪು ವರ್ಣದ್ರವ್ಯ. **Rosárian** ರೊಸೇರಿಯನ್ (ನಾ.) ಗುಲಾಬಿ ಪ್ರೇಮಿ (ಆತ್ಮಸಂತೋಷಕ್ಕಾಗಿ ಗುಲಾಬಿ ಬೆಳೆಯುವವನು) ; ಗುಲಾಬಿ ತೋಟಗಾರ. (ರೋ. ಕ್ಯಾ.) ರೋಸರಿ ಪ್ರಾರ್ಥನಾ ಗೋಷ್ಠಿಯವನು. **Rosárium** (L) ರೊಸೇರಿಯಂ (ನಾ.) ಗುಲಾಬಿ ತೋಟ. **Rósary** ರೋಸರಿ (ನಾ.) ಗುಲಾಬಿ ತೋಟ; —ಮಡಿ, ಪಾತಿ. (ರೋ. ಕ್ಯಾ.) ಒಂದು ಪ್ರಾರ್ಥನಾವಳಿ ; ಈ ಪ್ರಾರ್ಥನಾವಳಿಗೆ ಅನುಕೂಲಿಸುವಂಥ, ೧೬೫ ಮಣಿಗಳುಳ್ಳ ಮಾಲೆ : ಜಪ —ಮಾಲೆ, ಸರ (Lesser r. ೫೫ ಮಣಿಗಳುಳ್ಳ ಚಿಕ್ಕ ಜಪಸರ). ಈ ಜಪಸ್ತೋತ್ರದ ಪುಸ್ತಕ. **Róseate** ರೋಸಿಯೆಟ್ (ಗು.) = Rose-coloured (ರೂಪ. ಸಹ). **Róseately** (ಕ್ರಿ. ವಿ.); **Róseo-** (ಸ. ಪೂ. ಪ.) ಗುಲಾಬಿ ಬಣ್ಣದ —(ಕ್ಷಾರಗಳ ಮತ್ತು ಲವಣಗಳ ಹೆಸರುಗಳಲ್ಲಿ : R.-cobalt). **Roséola** ರೊಸೀಯೊಲ (ನಾ.) (ದಡಾರ, ಮೊ. ಗಳಲ್ಲಿ) ಗುಲಾಬಿ ಬಣ್ಣದ —ಬೊಕ್ಕೆ, ಬೊಬ್ಬೆ ; ಕೆಂಬೊಕ್ಕೆ ; ಕೆಂದಡಾರ. **Roséolar** (ಗು.) ; **Roséolous** (ಗು.) ; **Rósery** (ನಾ.) ತೋಟದಲ್ಲಿ ಗುಲಾಬಿ ಬೆಳೆಸುವ ಭಾಗ ; ಗುಲಾಬಿ ತೋಟ. **Rosétte** ರೊಸೆಟ್ (ನಾ.) (ಉಡುಪಿನಲ್ಲಿ, ಜೀನಿನಲ್ಲಿ ಬಟ್ಟೆಯಿಂದ ಅಥವಾ ತೊಗಲಿನ ಪಟ್ಟಿಗಳಿಂದ ಮಾಡಿದ) ಗುಲಾಬಿಯಾಕಾರದ ಅಲಂಕಾರ, ಗಂಟು, ಮೊ. ವು; ಗುಲಾಬಿಯ ಅಲಂಕಾರ. (ವಾ. ಶಾ.) (ಗೋಡೆ, ಮೊ. ಗಳಲ್ಲಿ ಬಿಡಿಸಿರುವ) ಗುಲಾಬಿ —ಚಿತ್ರ, ಕೆತ್ತನೆ, ಅಲಂಕಾರ. =Rosewindow. (ಜೀ. ವಿ.) ಗುಲಾಬಿ ಗೊಂಚಲಿನಂಥ ಅಂಗ ಪುಂಜ ; ಗುಲಾಬಿಯಾಕಾರದ —ಗುರುತು, ಮಚ್ಚೆ. =R. diamond. ಗುಲಾಬಿಯಂಥ— ವಸ್ತು, ರಚನೆ, ವಿನ್ಯಾಸ. **Rosétted** (ಗು.) ; **Rósulate** ರಾಸ್ಯುಲೆಟ್ (ಗು.) (ಸ. ವಿ.) (ಎಲೆಗಳ ವಿಷಯದಲ್ಲಿ) ಗುಲಾಬಿಯೆಸಳುಗಳಂತೆ ತುರುಗಿದ. **Rósy** ರೋಸಿ (ಗು.) ಕೆಂಪು ಗುಲಾಬಿ ಬಣ್ಣದ ; ಗುಲಾಬಿ ರಂಗಿನ (ಮು., ನಾಚಿಕೆಯಿಂದ ಕೆಂಪೇರುವುದು, ಆರೋಗ್ಯಶಾಲಿಯ ಮುಖವರ್ಣ, ದ್ರಾಕ್ಷಾರಸ, ಆಕಾಶ, ಪ್ರಕಾಶ, ಮೊ. ಗಳ ವಿಷಯದಲ್ಲಿ) ; (ರೂಪ.) =Rose-coloured ; (ಈಗ ವಿರ. ಪ್ರ.) ಗುಲಾಬಿ —ವಾಸನೆಯ, ಮುಚ್ಚಿದ, ಸೂಡಿದ ; ಗುಲಾಬಿಯಿಂದ ಮಾಡಿದ. R. cross ರೋಸಿಕ್ರೂಷನ್ ಮಂತ್ರವಾದಿಗಳ ಚಿಹ್ನೆ (Rosicrucian ನೋಡಿ). R.-fingered (ಅರುಣೋದಯ, ಮೊ. ಗಳ ವಿಶೇಷಣವಾಗಿ) ಕೆಂಬೆರಳುಗಳುಳ್ಳ. **Rósily** (ಕ್ರಿ. ವಿ.) ; **Rósiness** (ನಾ.)

Rose². Rise ಧಾತುವಿನ ಭೂತ ರೂಪ.

Róseate. Rose¹ ನೋಡಿ.

Rósemary ರೋಸ್‌ಮರಿ (ನಾ.) ಸುವಾಸನೆಯ ಒಂದು ನಿತ್ಯ ಹಸುರು ಸಸ್ಯ (ಇದರ ಎಲೆಗಳನ್ನು ಸುಗಂಧ ವಸ್ತು ತಯಾರಿಕೆಯಲ್ಲಿಯೂ ಸ್ಮಾರಕ ಚಿಹ್ನೆಯಾಗಿಯೂ ಉಪಯೋಗಿಸುವರು)

Róseo-, Roséola, Rosétte. Rose¹ ನೋಡಿ.

Rosicrúcian ರೋಸಿಕ್ರೂಷನ್ (ನಾ., ಗು.) Christian Rosenkruez ಎಂಬಾತನಿಂದ ೧೪೮೪ರಲ್ಲಿ ಸ್ಥಾಪನೆಯಾಯಿತೆಂದು ಹೇಳುವ, ಅತೀಂದ್ರಿಯ ಜ್ಞಾನ ಮತ್ತು ಮಾಂತ್ರಿಕ ವಿದ್ಯೆಗಳ ಅಭ್ಯಾಸದ ಒಂದು ಸಂಘದ(ವನು). **Rosicrúcianism** (ನಾ.)

Rósin ರಾಸಿನ್ (ನಾ., ಕ್ರಿ. ಸಕ.) =Resin (ಮು., ಕಚ್ಚಾ ಕರ್ಪೂರ ತೈಲದಿಂದ ಅಪ್ಪಟ ಕರ್ಪೂರ ತೈಲವನ್ನು ಬಟ್ಟಿಯಿಳಿಸುವಲ್ಲಿ ದೊರೆಯುವ ಘನರೂಪದ ಕರ್ಪೂರ ರಾಳ). (ಕ್ರಿ.) (ಮು., ಪಿಟೀಲಿನ ತಂತಿ, ಕಮಾನು, ಮೊ. ಕ್ಕೆ) ಕರ್ಪೂರ ರಾಳ —ಹಚ್ಚು, ತಿಕ್ಕು. **Rósiny** (ಗು.)

Rosinánte ರಾಸಿನ್ಯಾಂಟಿ, **Roz-** (ನಾ.) ಸುಸ್ತುಬಿದ್ದ ಬಡಕಲು ಕುದುರೆ ; ಕಳಪೆ ಕುದುರೆ (Don Quixote ಎಂಬ ಕಾದಂಬರೀ ನಾಯಕನ ಕುದುರೆಯ ಹೆಸರಿನಿಂದ)

Róster ರಾ(ರೋ)ಸ್ಟರ್ (ನಾ.) (ಮು., ಸೈನ್ಯದಲ್ಲಿ) ವ್ಯಕ್ತಿಗಳ ಅಥವಾ ದಳಗಳ ಕೆಲಸದ ಸರದಿಯನ್ನು ತೋರಿಸುವ ಪಟ್ಟಿ : ಸರದಿ ಪಟ್ಟಿ.

Róstral ರಾಸ್ಟ್ರಲ್ (ಗು.) (ಕಂಬ, ಮೊ. ಗಳ ವಿಷಯದಲ್ಲಿ) ಪುರಾತನ ಗ್ಯಾಲಿ ಹಡಗಿನ ಮೂತಿಯ(ಂಥ) ಅಲಂಕಾರ ಮಾಡಿದ. (ಪ್ರಾ. ವಿ., ಮೊ.) ಗಟ್ಟಿ ಮುಸುಡಿಯ(ಂಥ), ಕೊಕ್ಕಿನ(ಂಥ)

Rostráted ರಾಸ್ಟ್ರೇಟೆಡ್ (ಗು.) (ಕಂಬ, ಮೊ. ಗಳ ವಿಷಯದಲ್ಲಿ) =Rostral. (ಪ್ರಾ. ವಿ., ಮೊ.) ಮುಸುಡಿ, ಕೊಕ್ಕು, —ಉಳ್ಳ, ಕೊನೆಯಲ್ಲುಳ್ಳ.

Róstrum ರಾಸ್ಟ್ರಂ (ನಾ., ಬ. ವ. -ra, -rums. ಏ. ವ. ಅಥವಾ ಏ. ವ. ದ ಅರ್ಥದಲ್ಲಿ, ಸಾ., ಬ. ವ. ದ ಅನ್ವಯದಿಂದ, ಬ. ವ. -ra ; ಬ. ವ. ದ ಅರ್ಥದಲ್ಲಿ ಬ. ವ. -ra, -rums) ಸಾರ್ವಜನಿಕ ಭಾಷಣದ ವೇದಿಕೆ, ಉಪನ್ಯಾಸ ವೇದಿಕೆ (ಮೊದಲು ರೋಮ್ ನಗರದ ಸಾರ್ವಜನಿಕ ಸಭಾಸ್ಥಾನದಲ್ಲಿದ್ದ, ಗೆದ್ದು ತಂದ ಗ್ಯಾಲಿ ಹಡಗುಗಳ ಮೂತಿಗಳಿಂದ ಅಲಂಕರಿಸುತ್ತಿದ್ದ ವೇದಿಕೆ) ; ಉಪದೇಶ ವೇದಿಕೆ ; ಸಾರ್ವಜನಿಕರು ತನ್ನ ಮಾತಿಗೆ ಕಿವಿಗೊಡುವಂತೆ ಅನುಕೂಲಿಸುವ ಸ್ಥಾನ, ಪದವಿ, ಮೊ. ವು. (ರೋ. ಪ್ರಾ.) ಗ್ಯಾಲಿ ಹಡಗಿನ ಮೂತಿ (ಬ. ವ. -ra) ; (ಪ್ರಾ. ವಿ., ಸ. ವಿ.) ಕೊಕ್ಕು, (ಸೆಡೆ) ಮೂತಿ, ಕೊಕ್ಕಿನಂಥ ಭಾಗ. **Róstrate** (ಗು.) ; **Rostríferous** (ಗು.) ; **Róstriform** (ಗು.) ; **Róstro-** (ಸ. ಪೂ. ಪ.)

Rósulate, Róse. Rose¹ ನೋಡಿ.

Rot ರಾಟ್ (ನಾ., ಭಾವ. ಅವ್ಯ., ಕ್ರಿ.) ಕೊಳೆತ, ರೊಡ್ಡು ; ಹುಳುತು ಹೋಗುವುದು [ಮು., ಚೌಬೀನೆಯ ದಾರುವಿನ ವಿಷಯದಲ್ಲಿ. Dry-r. (Dry ನೋಡಿ)] . ಕುರಿಯ ಪಿತ್ತಕೋಶದ ಕೊಳೆರೋಗ (The r.). (ಅನಂ.) ಅಸಂಬದ್ಧದ, ಅವಿವೇಕದ, ಹುಚ್ಚು, —ಮಾತು, ವಾದ, ಯೋಜನೆ, ಮಾರ್ಗ, ವ್ಯವಸ್ಥೆ [=Tommy r. (ಅನೇಕ ವೇಳೆ ಅಪನಂಬಿಕೆಯ ಅಥವಾ ಹಾಸ್ಯದ ಸೂಚನೆಯಾಗಿ ಭಾವ. ಅವ್ಯ. ಪ್ರ.). Don't talk r. ; What tommy r. that it is not open on Sundays !] . (ಕ್ರಿಕೆಟ್ ಆಟ, ಯುದ್ಧ, ಮೊ. ಗಳಲ್ಲಿ ಒಂದು ಪಕ್ಷಕ್ಕೆ ಒದಗುವ) ಹಠಾತ್ತಾದ ನಿಷ್ಕಾರಣ ಸೋಲುಗಳು, ಅಪಜಯ ಪರಂಪರೆ (A r. set in). (ಕ್ರಿ.) ಕೊಳೆ(ತುಹೋಗು) ; ರೊಡ್ಡು —ಹಿಡಿ, ಆಗು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹುಳುತುಹೋಗು ; ನಾರು (R. off ಕೊಳೆತು —ಬಿದ್ದುಹೋಗು, ಉದುರಿಹೋಗು). (ರೂಪ.) (ಸಂಸ್ಥೆ, ಸಮಾಜ) ಸತ್ತ್ವವಿಲ್ಲದೆ ಕ್ಷೀಣಿಸು, ಉಡುಗಿಹೋಗು ; (ಸೆರೆಯಾಳು) ಸೊರಗು, ಕೊಳೆಯುತ್ತಿರು (Left to r. in gaol) ; ಕೊಳೆಯಿಸು ; (ಅಸಂ.) ಕೆಡಿಸಿಬಿಡು, ಹೊಲಸೆಬ್ಬಿಸು (Has rotted the whole plan) ; (ಅಸಂ.) ಕುಚೋದ್ಯ, ಕುಚೇಷ್ಟೆ, ಗೇಲಿ, —ಮಾಡು ; ಕಾಡು, ಗೋಳುಹೊಯ್ದುಕೊ ; ವ್ಯಂಗ್ಯವಾಗಿ ಮಾತಾಡು (He is only rotting). **R.-gut** (ಗು., ನಾ.) ಹೊಟ್ಟೆಗೆ ಅಪಾಯ ಮಾಡುವ (ಮದ್ಯ). **Rótten** ರಾಟ್‌ನ್ (ಗು.) ಕೊಳೆತ, ಕೊಳೆಯುತ್ತಿರುವ, ಕೊಳೆತುಹೋದ, ಹುಳುತುಹೋದ ; (ಬಹಳ ಹಳೆಯದಾದ ಅಥವಾ ಬಹಳವಾಗಿ ಉಪ ಯೋಗಿಸಿದ ಕಾರಣದಿಂದ) ಸುಲಭವಾಗಿ —ಮುರಿದುಬೀಳುವ, ಕಿತ್ತು ಹೋಗುವ ; ರೊಡ್ಡಾದ ; ಕುಪ್ಪುಹಿಡಿದ ; ಕೆಟ್ಟುಹೋದ. (ಕುರಿಯ ವಿಷಯದಲ್ಲಿ) ಪಿತ್ತಕೋಶದ ಕೊಳೆರೋಗ ಬಂದ, ಯಕೃತ್ತು ಕೊಳೆತ. (ನೈತಿಕ, ಸಾಮಾಜಿಕ, ಅಥವಾ ರಾಜಕೀಯವಾಗಿ) ಹೊಲಸಾದ, ನಡತೆ ಗೆಟ್ಟ, ಗಬ್ಬು ಹಿಡಿದ. [R. borough (Borough ನೋಡಿ). Something is rotten in the State of Denmark ಸ್ಥಿತಿ ಗತಿಗಳು ಹೊಲಸೆದ್ದಿವೆ]. ಕೆಲಸಕ್ಕೆ ಬಾರದ, ನಿಷ್ಪ್ರಯೋಜಕವಾದ, ನೀಚ, ನಿಕೃಷ್ಟ. (ಅಸಂ.) (ಸ್ಥಿತಿ, ಯೋಜನೆ, ಮೊ. ವು) ಅಸಹ್ಯವಾದ, ಅಸಮರ್ಪಕವಾದ, ಕುಲಗೆಟ್ಟ. R.-stone ಮೆರುಗು ಪುಡಿಯಾಗಿ ಉಪಯೋಗಿಸುವ, ಗಳಿತವಾದ, ಮರಳು ಸುಣ್ಣಕಲ್ಲು. **Róttenly** (ಕ್ರಿ. ವಿ.) ; **Róttenness** (ನಾ.) ; **Rótter** (ನಾ.) (ಅಸಂ.) ಕೆಲಸಕ್ಕೆ ಬಾರದವನು ; ಹಾಳಾದವನು ; ಶುದ್ಧ ಭಂಡ.

Róta ರೋಟ (ನಾ.) (ಕಾರ್ಯಕಾರಿಗಳ ಅಥವಾ ಕರ್ತವ್ಯಗಳ) ಸರದಿ ಪಟ್ಟಿ, ಹೆಸರು ಪಟ್ಟಿ. (ರೋ. ಕ್ಯಾ.) (ಧಾರ್ಮಿಕ ಮತ್ತು ಲೌಕಿಕ) ಶ್ರೇಷ್ಠ ನ್ಯಾಯಸ್ಥಾನ.

Rótary ರೋಟರಿ (ಗು., ನಾ.) ಸರದಿಯ (ಮೇಲೆ ಕೆಲಸ ಮಾಡುವ). ವೃತ್ತಚಲನೆಯ ; ಸುತ್ತುತಿರುಗುವ ; ಉರುಳುವ. (ನಾ.) ಸುತ್ತು ಚಲನ ಯಂತ್ರ, ಉರುಳೆ ಯಂತ್ರ ; ಆವರ್ತಕ. ಮಾನವ ಸೇವೆಯ ಉದ್ದೇಶದಿಂದ ಅಂತರ ರಾಷ್ಟ್ರೀಯ ಆಧಾರದಮೇಲೆ ಸ್ಥಾಪಿಸಿದ, ಹಲವು ಶಾಖೆಗಳುಳ್ಳ, ಒಂದು ವಿಶ್ವವ್ಯಾಪಕ ಸಂಘ ; ರೋಟರಿ ಸಂಘ (=The R.). **Rotárian** (ಗು., ನಾ.) —ದ (ಸದಸ್ಯ)

Rótate ರೋಟೇಟ್ (ಗು.), **Rotáte** ರೊಟೇಟ್ (ಕ್ರಿ.) (ಸ. ವಿ.) ಚಕ್ರಾಕಾರದ, ಗಾಲಿ ಮಾಟದ. (ಕ್ರಿ.) —ದಲ್ಲಿ ಸುತ್ತು, ಸುತ್ತಿಸು, ಉರುಳು, ಉರುಳಿಸು. ಸರದಿಯ ಮೇಲೆ (ಬೆಳೆ) ತೆಗೆ, ಇಡು. **Rotátable** (ಗು.) ; **Rótative** ರೋಟಟಿವ್ (ಗು.) ; **Rótatory** —ಟರಿ (ಗು.) ; **Rotátion** ರೊಟೇ— (ನಾ.) (ಕ್ರಿಯಾರ್ಥಗಳಲ್ಲಿ). ಆವರ್ತ ; ಪರ್ಯಾಯ ; ಸರದಿ (*In*, *by* ಉಪ. ಜೊತೆ). R. of crops ಭೂಮಿಯನ್ನು ನಿಸ್ಸಾರಗೊಳಿಸದಿರಲು ಸರದಿಯಮೇಲೆ ಬೇರೆ ಬೇರೆ ಬೆಳೆಗಳನ್ನು ಇಡುವುದು : ಬೆಳೆಗಳ ಸರದಿ). **Rotátional** (ಗು.) ; **Rotátor** (ನಾ.) ಒಂದು ಅಂಗವನ್ನು ಸುತ್ತಿಸುವ, ತಿರುಗಿಸುವ, ಸ್ನಾಯು : ಆವರ್ತಕ ಸ್ನಾಯು. ಆವರ್ತಕ (ಸಲಕರಣೆ, ಭಾಗ)

Rotch(e) ರಾಚ್ (ನಾ.) ಆಕ್ (Auk) ಎಂಬ ಒಂದು ಬಗೆಯ ಹಕ್ಕಿ.

Rote ರೋಟ್ (ನಾ.) ಬರಿಯ ಅಭ್ಯಾಸ ; ರೂಢಿ ; ಪದ್ಧತಿ. (ಅರ್ಥ ತಿಳಿದುಕೊಳ್ಳದೆ) ಉರು ಹಚ್ಚುವುದು, —ಹಚ್ಚಿದ್ದು ; ಕುರುಡು ಪಾಠ (Say, know, do, by r.)

Rótifer ರೋಟಿಫರ್ (ನಾ.) ಈಜಲು ಅನುಕೂಲಿಸುವ ಚಕ್ರಚಲನೆಯ ಅಂಗವುಳ್ಳ ಅಣು ಪ್ರಾಣಿ. **Rotífera** —ಫರ (ನಾ.) —ವರ್ಗ.

Rótograph ರೋಟೊಗ್ರಾಫ್ (ನಾ.) ಸಂಸ್ಕರಿಸಿದ ಕಾಗದದ ಸುರುಳಿಯ ಮೇಲೆ ಛಾಯಾ ಚಿತ್ರವಿಧಾನದಿಂದ ತೆಗೆದ ಹಸ್ತಪ್ರತಿ, ಮೊ. ಗಳ ಮುದ್ರಣ ; ಸುರುಳಿಯಚ್ಚು ; —ಮುದ್ರಣ.

Rótor ರೋಟರ್ (ನಾ.) (ಯಂತ್ರದ) ಆವರ್ತಕ (ಭಾಗ) ; ಪರಿ ಭ್ರಾಮಕ. ಹಡಗಿನಲ್ಲಿ ಕೂವೆ ಕಂಬ ಮತ್ತು ಹಾಯಿಗಳಿಗೆ ಬದಲಾಗಿ ಅಳವಡಿಸಿರುವ ಲಂಬ ನಿಲುವಿನ ಉರುಳೆ (R. ship ಇಂಥ ಉರುಳೆ ಯಿಂದ ನಡೆಯುವ ಹಡಗು)

Rótten. **Rot** ನೋಡಿ.

Rótten Row ರಾಟ್‌ನ್ ರೋ (ನಾ.) ಲಂಡನ್ ಪಟ್ಟಣದ ಹೈಡ್ ಪಾರ್ಕಿನ ಒಂದು ಕುದುರೆ ಸವಾರಿ ದಾರಿ (ಈಗ ಸಾ., the Row)

Rótter. **Rot** ನೋಡಿ.

Rotúnd ರೊಟಂಡ್ (ಗು.) ದುಂಡನೆಯ, ಗುಂಡಾದ, ಬಟ್ಟ, ಪೀಪಾಯಿ ಆಕಾರದ (ವಿರ. ಪ್ರ.). (ಬಾಯಿ, ಮಾತಾಡುವಾಗ) ಗುಂಡಗಾಗುವ ; (ಭಾಷಣ, ಸಾಹಿತ್ಯ ಶೈಲಿ, ಮೊ. ವು) ಬಾಯಿ ತುಂಬ ಬರುವ, ಧ್ವನಿ ಗುಂಫನದ, ತುಂಬು ನಾದದ, ದೊಡ್ಡ ದೊಡ್ಡ ಶಬ್ದಗಳ. (ವ್ಯಕ್ತಿಗಳು) ತುಂಬು ಮೈಯ, ಡೊಣೆಯ, ಸ್ಥೂಲಕಾಯದ. **Rotúnda** (ನಾ.) ವೃತ್ತಾಕಾರದ ತಳಹದಿಯ ಮೇಲೆ ಕಟ್ಟಿದ, ಮು., ಗುಮ್ಮಟವುಳ್ಳ ಕಟ್ಟಡ ; ದುಂಡು —ಹಜಾರ, ಕೋಣೆ ; ವೃತ್ತಮಂದಿರ, ವರ್ತುಲ ಶಾಲೆ. **Rotúndate** (ಗು.) (ಸ. ವಿ., ಪ್ರಾ. ವಿ.) (ಮು., ಕೊನೆಯಲ್ಲ ಅಥವಾ ಮೂಲೆಗಳಲ್ಲಿ) ಗುಂಡು ತಿರುಗಿದ, ದುಂಡನೆಯ. **Rotúndi-**, **Rotúndo-** (ಸ. ಪೂ. ಪ.) ; **Rotúndity** (ನಾ.) ; **Rotúndly** (ಕ್ರಿ. ವಿ.)

Roturiér (F) ರೊಟ್ಯುರ್ಯೇ (ನಾ.) ಸಾಮಾನ್ಯ ಪ್ರಜೆ ; ಕೆಳ ದರ್ಜೆ ಯವನು.

Roúble ರೂಬ್‌ಲ್ (ನಾ.) ರಷ್ಯಾ ದೇಶದ ಒಂದು ನಾಣ್ಯ (ಹಿಂದಿನ ಮಹಾ ಯುದ್ಧಕ್ಕೆ ಪೂರ್ವದಲ್ಲಿ ಸಾ., ೨ ಷಿ. ೧೧ತ್ತಿ ಪೆ. ಬೆಲೆಯುಳ್ಳದ್ದು)

Roucoú ರೂಕೂ (ನಾ.) ಕಿತ್ತಿಳೆ ಬಣ್ಣದ ಒಂದು ವರ್ಣದ್ರವ್ಯ (ದೊರೆ ಯುವ ಒಂದು ವೆಸ್ಟ್ ಇಂಡೀಸ್ ಮರ) ; ರೂಕೂ —ಬಣ್ಣ, ಮರ.

Roúe ರೂಯೇ (ನಾ.) ವ್ಯಭಿಚಾರಿ ; ಷೋದಾ.

Rouge[1] ರೂಷ್ (ಗು., ನಾ., ಕ್ರಿ.) ಕೆಂಪಾದ, ಕೆಂಪು [R. Croix (ರೂಷ್ ಕ್ರ್ವಾ), R. Dragon ವಂಶ ಲಾಂಛನ ಸಂಸ್ಥೆಯಲ್ಲಿ ಸೂತನ ಇಬ್ಬರು ಅನುಚರರ ಹೆಸರ ಒಕ್ಕಣೆಗಳು (ಅವರ ಬಿರುದು ಪಟ್ಟಿಗಳಿಂದ). R.-royal marble (ಬೆಲ್ಜಿಯಂ ದೇಶದ ಕೆಂಪು ಅಮೃತಶಿಲೆ) ಎಂಬಲ್ಲಿ ಮಾತ್ರ ಪ್ರ.] (ನಾ.) ಕೆನ್ನೆ ಮತ್ತು ತುಟಿಗಳಿಗೆ ರಂಗು ಹಚ್ಚಿಕೊಳ್ಳು ವುದಕ್ಕಾಗಿ ಉಪಯೋಗಿಸುವ, ಕುಸುಂಬೆ ಗಿಡದಿಂದ ಪಡೆದ, ಒಂದು ಕೆಂಪು ನಯಪುಡಿ ; ಕುಸುಂಬೆ ಬಣ್ಣ. ಬೆಳ್ಳಿ ಪಾತ್ರೆಗಳಿಗೆ ಮೆರುಗು ಕೊಡಲು ಉಪಯೋಗಿಸುವ ಕಬ್ಬಿಣದ ಆಕ್ಸೈಡು ಪುಡಿ. ಕ್ರಾಂತಿ ಕಾರಕ ರಾಜನೀತಿಜ್ಞ ; ಕ್ರಾಂತಿ ವಾದಿ. [R. et noir (ರೂಷ್ ಏನ್ ವಾರ್) ಪಣವೊಡ್ಡುವುದಕ್ಕಾಗಿ ಕೆಂಪು ಮತ್ತು ಕಪ್ಪು ವಜ್ರಾಕೃತಿಯ ಗುರುತುಗಳನ್ನು ಮಾಡಿರುವ ಮೇಜಿನಮೇಲೆ ಆಡುವ ಒಂದು ಬಗೆಯ ಇಸ್ಪೀಟಾಟ (R. ಈ ಮೇಜಿನಮೇಲಿನ ಕೆಂಪು ಗುರುತು)]. (ಕ್ರಿ.) ಕುಸುಂಬೆ ಬಣ್ಣ ಹಾಕು ; —ದಿಂದ ಅಲಂಕಾರ ಮಾಡಿಕೊ.

Rouge[2] ರೂಜ್ (ನಾ.) (ಈಟನ್ ಕಾಲ್ಚೆಂಡಾಟ) =Scrummage (Scrimmage ನೋಡಿ) ; =Touch-down (Touch ನೋಡಿ)

Rough ರಫ್ (ಗು., ಕ್ರಿ. ವಿ., ನಾ., ಕ್ರಿ. ಸಕ.) ಅಸಮವಾದ ಮೇಲ್ಮೈ ಯುಳ್ಳ ; ಒರಟಾದ, ತರಕಲಾದ, ದರಕಾದ, ನುಣುಪಿಲ್ಲದ ; ಉಬ್ಬು ತಗ್ಗುಗಳುಳ್ಳ, ಹಳ್ಳಕೊಳ್ಳಗಳುಳ್ಳ, ಹೆಂಟೆ ಕೊಂಟೆಗಳಿರುವ ; ಕಾಡು ಬೆಳೆದ ; ಕೂದಲು ತುಂಬಿದ [R. skin, paper, road, texture, country. R. edge (of book) (ಪುಸ್ತಕದ ಹಾಳೆಗಳ) ತರಕಲಂಚು. R. leaf ಮೊಳೆಯುತ್ತಿರುವ ಸಸಿಯ (ಬೀಜದೆಲೆ ಒಡೆದ ತರುವಾಯದ) ನಿಜವಾದ ಮೊದಲ ಎಲೆ (In the r. leaf ಮೊದಲೆಲೆ ಒಡೆದು). R. rice ಬತ್ತ, ನೆಲ್ಲು]. ನಯವಿಲ್ಲದ, ಮೃದುವಲ್ಲದ ; ಕೆರಳಿದ, ಕ್ಷೋಭೆಗೊಂಡ, ಬಿರುಸಾದ ; ಕಠಿನ, ಕಟು, ತೀಕ್ಷ್ಣ ; ಒರಟಾಟದ, ದೊಂಬಿಯ, ಪುಂಡಾಟದ ; ಕ್ರೂರ, ಕರ್ಕಶ, ಪರುಷ [R. manners

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒರಟು ನಡತೆ. R. sea, weather ಕೆರಳಿದ, ಬಿರುಸಾದ—. R. element of the population ಒರಟು ಜನ, ಪುಂಡು ಜನ. R. quarter of the town —ಇರುವ ಊರಿನ ಭಾಗ. R. handling. R. remedies ರಾಕ್ಷಸವೈದ್ಯ, ರಣವೈದ್ಯ. R. tongue ಒರಟಾಗಿ ಬಯ್ಯುವ, ಮಾತನಾಡುವ ಅಭ್ಯಾಸ. Gave him a lick with the r. side of my tongue ಅವನನ್ನು ಕಟುವಾಗಿ —ಅಡಿದೆನು, ಖಂಡಿಸಿದೆನು, ಟೀಕಿಸಿದೆನು. R. passage ಕ್ಷುಬ್ಧ ಸಮುದ್ರ ಪ್ರಯಾಣ. R. work ಕ್ರೂರ, ಕಠಿನ, —ಕಾರ್ಯ. ನಯನಾಜೂಕಿಲ್ಲದ, ಒರಟು, ಕಚ್ಚಾ, —ಕೆಲಸ. Have a r. time ಒರಟಾಟಕ್ಕೆ ಸಿಕ್ಕು; ತೊಂದರೆ ಪಡು. Horse has r. paces ಕುದುರೆ ಸವಾರನನ್ನು ಕುಲುಕಾಡಿ ಸುತ್ತದೆ. Is r. luck, r., on person ವ್ಯಕ್ತಿಯ ಅದೃಷ್ಟ ಪ್ರತಿಕೂಲವಾಗಿದೆ; ಗ್ರಹಚಾರ ಕಾಲ. R. music (Music ನೋಡಿ)]. ನಯನಾಜೂಕಿಲ್ಲದ, ಒಪ್ಪವಿಲ್ಲದ, ಒರಟೊರಟಾದ, ಸುಮಾರಾದ, ಸ್ಥೂಲರೂಪದ, ಅಪರಿಷ್ಕೃತ, ಅಸಂಸ್ಕೃತ, ಕಚ್ಚಾ, ಕರಡು [R. sketch ಕರಡು ಮಾದರಿ. R. copy (of picture) (ಮುಖ್ಯಾಂಶಗಳನ್ನು ಮಾತ್ರ ಒಳಗೊಂಡ) (ಚಿತ್ರದ) ಸ್ಥೂಲ ಪ್ರತಿ. R. copy ಕಚ್ಚಾ ಪ್ರತಿ. R. diamond (Diamond ನೋಡಿ). R. estimate ಸುಮಾರು ಅಂದಾಜು. R. justice ಅಡ್ಡಾದಿಡ್ಡಿ ನ್ಯಾಯ; ಸ್ಥೂಲ ನ್ಯಾಯ. R. stone (ನಯಗೆಲಸ ಮಾಡಿರದ, ಉಳಿಗೆಲಸ ಮಾಡಿರದ) ಒರಟು ಕಲ್ಲು. R. coat (ಮೊದಲ ಸಲದ) ಒರಟು ಗಾರೆ ಮೆತ್ತಡ. R. coating = R.-cast (ನಾ.). R. and ready ಥಟ್ಟನೆ ಹವಣಿಸಿದ, ಅಷ್ಟು ಪರಿಷ್ಕಾರವಾದದ್ದಲ್ಲದ, ತಕ್ಕಮಟ್ಟಿಗೆ ಸಾಕಾದ, ಕೆಲಸ ಸವರಿಸಲು ಸಾಕಾದ. R.-and-tumble (ಗು., ನಾ.) ಕಟ್ಟುನಿಟ್ಟಿಲ್ಲದ, ನಿಯಮಾನುಸರಣೆಯಿಲ್ಲದ. ನೂಕುನುಗ್ಗಲು(ಲನ); ಬಡಿದಾಟ(ದ); ಸಿಕ್ಕಾಬಟ್ಟೆಯ ಹೊಡೆದಾಟ. R.-cast (ಗು.) (ಗೋಡೆ, ಮೊ. ವು) ಒರಟು ಗಾರೆಯ ಮೆತ್ತಡದ; (ಯೋಜನೆ, ಮೊ. ವು) ಅಪರಿಷ್ಕೃತ, ಸ್ಥೂಲ ರೂಪದ. (ನಾ.) ಒರಟು ಗಾರೆ ಮೆತ್ತಡ. (ಕ್ರಿ.) —ಮಾಡು; (ಯೋಜನೆ, ಮೊ. ರ) ಸ್ಥೂಲ ರೂಪ, ಕರಡು ಪ್ರತಿ, —ಮಾಡು. R.-dry (ಬಟ್ಟೆಯನ್ನು) ಇಸ್ತ್ರಿಮಾಡದೆ ಒಣಗಿಸು. R.-footed (ಹಕ್ಕಿಗಳ ಹೆಸರಿನಲ್ಲಿ) ಗರಿಗಾಲಿನ. R.-grind (ಅಲಗು, ಆಯುಧ, ಮೊ. ಕ್ಕೆ) ಮೊದಲ, ಒರಟು, —ಸಾಣೆ ಹಿಡಿ. R.-hew ಸ್ಥೂಲ ರೂಪ ಕೊಡು, ಒರಟು ಆಕೃತಿ ಕೊಡು; (ಭೂ. ಕೃ. ನಲ್ಲಿ) ಅಪರಿಷ್ಕೃತ, ಒರಟೊರಟಾದ, ಒಡ್ಡೊಡ್ಡಾದ. R.-hound ಒಂದು ಜಾತಿಯ ಸಣ್ಣ ಮೀನು. R.-legged (ಹಕ್ಕಿ)ಗರಿಗಾಲಿನ; (ಕುದುರೆ) ಕೂದಲು ಬೆಳೆದ ಕಾಲಿನ, ಜುಂಗಾಲಿನ. R.-rider ಕುದುರೆ ಪಳಗಿಸುವವನು; ಪಳಗಿಸಿಲ್ಲದ ಕುದುರೆಯನ್ನು ಸವಾರಿ ಮಾಡಬಲ್ಲವನು; ಒರಟು (ಕುದುರೆ) ಸವಾರ. (ಸೈನಿಕ) ಅನಿಯತ ರಾವುತ. Roughshod (ಕುದುರೆಯ ವಿಷಯದಲ್ಲಿ) ಮೊಳೆಯ ತಲೆ ಹೊರ ಹೊರಟು ಕೊಂಡಿರುವಂತೆ ಲಾಳ (ನಾಲ) ಹೊಡೆದಿರುವ; ಒಡ್ಡೊಡ್ಡಾಗಿ ಹಲ್ಲೆ ಹೊಡೆದ (Ride r.-s. ಇನ್ನೊಬ್ಬರ ಭಾವನೆಯನ್ನು ಗಣಿಸದೆ ನಿರ್ಲಕ್ಷ್ಯವಾಗಿ ನಡಸು, ಚಲಾಯಿಸು, ತುಳಿದುಹಾಕು). R.-wrought ಸ್ಥೂಲ ಕೆಲಸಮಾಡಿದ, ನಯಗೆಲಸ ಮಾಡಿಲ್ಲದ]. (ಕ್ರಿ. ವಿ.) ಒರ(ಟೊರ)ಟಾಗಿ, ಒ(ಡ್ಡೊ)ಡ್ಡಾಗಿ, ಸ್ಥೂಲವಾಗಿ (Land should be ploughed r. Play r.). (ನಾ.) ಒರಟು ನೆಲ, ಹಳ್ಳತಿಟ್ಟಿನ ನೆಲ; ಅಸಮ, ಕಾಡು, —ಭೂಮಿ (Over r. and smooth). (ಗಾಲ್ಫ್ ಆಟ) ಹುಲ್ಲು ಬಯಲುಗಳ ಅಂಚಿನ ಅಥವಾ ನಡುವಣ ಒರಟು ನೆಲ (= The r.). ಕುದುರೆ ಜಾರದಂತೆ ಅದರ ಲಾಳದ ಹಿಮ್ಮಡಿಯಲ್ಲಿ ಹೊಡೆದ ದೊಡ್ಡ ಮೊಳೆ. (ಜೀವನದ) ಕಷ್ಟ ಭಾಗ, ಕಷ್ಟ ದೆಸೆ, ತೊಂದರೆ (The r. and the smooth, the roughs and the smooths ಕಷ್ಟ ಸುಖಗಳು). ಪುಂಡ, ಪೋಕರಿ; ಶಾಂತಿಭಂಗದ ದೊಂಬಿಗೆ ಸಿದ್ಧನಾಗಿರುವ ಕೀಳು ದರ್ಜೆಯವನು. ಒರಟು, ಪ್ರಾಕೃತ, ಅಪರಿಷ್ಕೃತ, —ಸ್ಥಿತಿ, ರೂಪ (Shape it from the r.). ಸ್ಥೂಲ, ಸಾಮಾನ್ಯ, —ರೀತಿ, ಮಾರ್ಗ (Is true in the r.). (ಕ್ರಿ.) (ಗರಿ, ಕೂದಲು, ಮೊ. ನ್ನು ಎಳೆಗೆ ಎದುರಾಗಿ ಉಜ್ಜಿ) ಕೆದರು, ಕೆದರಿಸು, ಬಿರುಸುಮಾಡು (R. one up the wrong way ಒಬ್ಬನನ್ನು ಕೆರಳಿಸು, ರೇಗಿಸು). (ಕುದುರೆ ಅಥವಾ ಅದರ ಲಾಳ ಜಾರದಂತೆ) ಲಾಳದ ಹಿಮ್ಮಡಿಗೆ ದೊಡ್ಡ ಮೊಳೆ ಹೊಡೆ; (ಕುದುರೆ, ಮೊ. ನ್ನು) ಪಳಗಿಸು, ಒಗ್ಗಿಸು. ಸ್ಥೂಲವಾಗಿ —ರೂಪಿಸು, ರಚನೆಮಾಡು; (ಪಿಯಾನೊ ವಾದ್ಯವನ್ನು) ಸರಿಸುಮಾರಾಗಿ, ಸ್ಥೂಲವಾಗಿ, —ಶ್ರುತಿ ಮಾಡು; (ಲೆನ್ಸು, ರತ್ನ, ಮೊ. ಗಳಿಗೆ) ಸ್ಥೂಲ ರೂಪ ಕೊಡು. R. it (ಜೀವನದ ಸಾಮಾನ್ಯ ಸೌಕರ್ಯಗಳಿಲ್ಲದೆ) ಕಷ್ಟಕ್ಕೆ ಗಟ್ಟಿಯಾಗು, ಕಷ್ಟದಲ್ಲಿ ನುಗ್ಗಿ ನುರಿ. **Roúghen** (ಕ್ರಿ.); **Roúghish** (ಗು.); **Roúghly** (ಕ್ರಿ. ವಿ.); **Roúghness** (ನಾ.); **Roúghage** ರಫೆ(ಫಿ)ಜ್ (ನಾ.) (ಆಹಾರ ಶಾಸ್ತ್ರ) ಕರುಳಿನ ಚಲನೆಗಳಿಗೆ ಉತ್ತೇಜನ ಕೊಡುವ ಧಾನ್ಯದ ತವುಡು, ಕಾಯಿಪಲ್ಯದ ನಾರು, ಮೊ. ವು; ಧಾನ್ಯದ ಅಥವಾ ಬೆಳೆಯ ಕಚ್ಚಾ ಭಾಗ, ಕಳಪೆ.

Rouleaú ರೂಲೋ (ನಾ.; ಬ. ವ. -x *or* -s —ಸ್) ಚಿನ್ನದ ನಾಣ್ಯಗಳ ತೋಟಾ; ಸುರುಳಿ, ಉರುಳೆ.

Roulétte ರೂಲೆಟ್ (ನಾ.) (ತನ್ನ ಕೇಂದ್ರದಮೇಲೆ ಸುತ್ತುತ್ತಿರುವ ಮೇಜಿನಮೇಲೆ ಎದುರು ದಿಕ್ಕಿನಲ್ಲಿ ಒಂದು ಚೆಂಡನ್ನು ತಿರುಗಿಸಿಬಿಟ್ಟು, ಅದು ಆ ಮೇಜಿನ ಯಾವ ಅಂಕಣಕ್ಕೆ ಬಂದು ನಿಲ್ಲುತ್ತದೆಯೋ ಅದರಿಂದ ಗಣಿಸಿ ಆಡುವ) ಒಂದು ಜೂಜಿನ ಆಟ. (ಗಣಿತ) ಒಂದು ಸ್ಥಾಯಿ ವಕ್ರರೇಖೆಯ ಮೇಲೆ ಮತ್ತೊಂದು ವಕ್ರರೇಖೆ ನೇರವಾಗಿ ಜಾರದೆ ಉರುಳುತ್ತ ಹೋದರೆ ಆ ಉರುಳುವ ವಕ್ರರೇಖೆಯ ಮೇಲಿನ ಒಂದು ಬಿಂದು ರಚಿಸುವ ಪಥ; ಉರುಳು ವಕ್ರರೇಖೆಯ ಬಿಂದು ಪಥ. ಕೂದಲನ್ನು ಗುಂಗುರು ಗುಂಗುರಾಗಿಡುವ ಒಂದು ಸಾಧನ. (ಕೊರೆ ಕೆಲಸದಲ್ಲಿಯೂ ಅಂಚೆ ಚೀಟಿ, ಮೊ. ಗಳಲ್ಲಿ ಸಾಲು ತೂತು ಕೊರೆಯಲೂ ಉಪಯೋಗಿಸುವ) ಉರುಳು ಹಲ್ಲು ಚಕ್ರ.

Roúman ರೂಮನ್, **Roumánian** ರುಮೇನಿಯನ್ (ನಾ., ಗು.) ರುಮೇನಿಯ ದೇಶದ(ವನು, ಭಾಷೆ)

Rouméliote ರೂಮಿಲಿಯೋಟ್ (ನಾ.) ರೂಮಿಲಿಯಾ ದೇಶದವನು.

Roúncival ರೌನ್ಸಿವಲ್ (ನಾ.) ದೊಡ್ಡ ಜಾತಿಯ ಬಟಾಣಿ, ಬಟ್ಟಗಡಲೆ (= R. pea)

Round[1] ರೌಂಡ್ (ಗು.) ದುಂಡನೆಯ, ಗುಂಡಗಿರುವ, ಬಟ್ಟ, ವರ್ತುಲಾಕಾರದ, ಗೋಳಾಕಾರದ, ಉರುಳೆಯಾಕಾರದ [The r. world. R. shot ಫಿರಂಗಿಯ (ದುಂಡು) ಗುಂಡು. R. table ದುಂಡು ಮೇಜು. The R. Table ಎಲ್ಲರಿಗೂ ಸಮಾನ ಗೌರವವಿರುವಂತೆ ಇಂಗ್ಲೆಂಡಿನ ಪೌರಾಣಿಕ ದೊರೆ ಆರ್ಥರನೂ (King Arthur) ಅವನ ವೀರರೂ ಸುತ್ತು ಕುಳಿತುಕೊಳ್ಳುತ್ತಿದ್ದ ದುಂಡು ಮೇಜು. R. table conference ಎಲ್ಲ ಸದಸ್ಯರಿಗೂ ಸಮಾನ ಗೌರವವಿರುವ ಸಮ್ಮೇಳನ; ಮಂಡಲಗೋಷ್ಠಿ; ದುಂಡು ಮೇಜಿನ ಪರಿಷತ್ತು. R. game (ಜೊತೆಗಳಿಲ್ಲದೆ ಒಂಟಿಯಾಗಿ ಎಷ್ಟು ಜನ ಬೇಕಾದರೂ ಕುಳಿತು ಆಡಲು ಅವಕಾಶವಿರುವ) ದುಂಡು ಮೇಜಾಟ. R. face ದುಂಡು ಮುಖ. R. jacket ಸೊಂಟದ ಮಟ್ಟಕ್ಕೆ ಮಟ್ಟಸವಾಗಿ ದುಂಡಗೆ ಕತ್ತರಿಸಿದ ಕವಚ, ಜಾಕೆಟ್ಟು: ದುಂಡು —ಕವಚ, ಜಾಕೆಟ್ಟು. R. hand *or* text ದುಂಡು ಬರವಣಿಗೆ; ಗುಂಡು ಅಕ್ಷರ. R. arch ಅರ್ಧವೃತ್ತಾಕಾರದ, ಅರೆ ದುಂಡು, —ಕಮಾನು. R. cheeks ತುಂಬಿದ ಕೆನ್ನೆಗಳು; ತುಂಬು, ದುಂಡು, —ಗಲ್ಲ. R. shoulders ದುಂಡು ಹೆಗಲುಗಳು; ವೃತ್ತಸ್ಕಂಧಗಳು (**Round-shouldered** ಗು.). R. vowel (ಶಿಕ್ಷಾ) ತುಟಿಗಳನ್ನು ಗುಂಡು ತಿರುಗಿಸಿ ಉಚ್ಚರಿಸುವ ಸ್ವರ; ಓಷ್ಠ್ಯ ಸ್ವರ]. ವೃತ್ತಚಲನೆಯ, ಸುತ್ತು ತಿರುಗಿನ [R. dance = Waltz. R. trip, voyage ಯಾವ ಸ್ಥಾನದಿಂದ ಹೊರಟನೋ ಆ ಸ್ಥಾನಕ್ಕೇ ಮತ್ತೆ ಬಂದು ಸೇರುವ ಪ್ರಯಾಣ, ನೌಕಾಯಾನ; ಪ್ರದಕ್ಷಿಣ ಪ್ರಯಾಣ, —ನೌಕಾಯಾನ. (ಕ್ರಿಕೆಟ್) R., r.-arm, r.-hand, bowling ಸಮತಲದಲ್ಲಿ ತೋಳನ್ನು ದುಂಡು ತಿರುಗಿಸಿ ಚೆಂಡೆಸೆಯುವುದು: ಗುಂಡುಗೈಯೆಸೆತ; ದುಂಡೆಸೆತ. R. towel ಉರುಳೆಯಮೇಲೆ ಸರಿದಾಡುವ ಕೊನೆಯಿಲ್ಲದ ವಸ್ತ್ರ, ಚೌಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

R. robin ರುಜು ಮಾಡಿದ ಅನುಕ್ರಮ ತಿಳಿಯದಂತೆ ವೃತ್ತಾಕಾರದಲ್ಲಿ ಹಲವರು ರುಜುಮಾಡಿದ ಮನವಿ; ದುಂಡು ರುಜುಗಳ ಮನವಿ; ದುಂಡರ್ಜಿ]. ಸಂಪೂರ್ಣ, ಪೂರ್ಣ, ಸಂತತ, ನಿರಂತರ, ಅಖಂಡ, ಸಮಗ್ರ, ಬಟು ವಾದ, ನೇರವಾದ, ಚೆನ್ನಾದ, ನಯವಾದ, ಪರಿಷ್ಕಾರವಾದ, ನುಣು ಪಾದ, ಸರಳ, ನಿಷ್ಕಪಟ, ಋಜು [R. dozen (ಒಂದೂ ಕಡಮೆ ಯಿಲ್ಲದೆ) ಪೂರ್ತಿಯಾಗಿ ೧೨. R. numbers (ಚಿಲ್ಲರೆ ಸಂಖ್ಯೆ ಬಿಟ್ಟು) ಬಟುವು ಸಂಖ್ಯೆಗಳು (೧೦, ೧೦೦, ಮೊ. ವು); ನರಿನುಮಾರು. A r. sum ತಕ್ಕಮಟ್ಟಿನ ಮೊತ್ತ, ದೊಡ್ಡ ಮೊತ್ತ. A r. style ನಿರರ್ಗಳ ಶೈಲಿ. At a r. trot ಬಿರುಸಾಗಿ, ಜೋರಾಗಿ. A r. voice ತುಂಬು ದನಿ. R. unvarnished tale ವಾಸ್ತವಿಕ ಸಂಗತಿ, ಯಥಾ ವತ್ತಾದ ಕಥನ, ನಿಜಸ್ಥಿತಿ. Be r. with (one) (ಪ್ರಾಚೀ. ಪ್ರ.) (ಒಬ್ಬನಿಗೆ) ನಿರ್ದಾಕ್ಷಿಣ್ಯವಾಗಿ ಸತ್ಯವನ್ನು ಹೇಳಿಬಿಡು; ಸ್ಪಷ್ಟವಾಗಿ ಹೇಳಿಬಿಡು. A r. oath ಸ್ಪಷ್ಟವಾದ— ಆಣೆ, ಶಪಥ]. Round-head (ಇಂಗ್ಲೆಂಡಿನಲ್ಲಿ) ೧೭ನೆಯ ಶ. ಮಾ. ದ ಒಳಯುದ್ಧದಲ್ಲಿ ಪಾರ್ಲಿ ಮೆಂಟ್ ಪಕ್ಷದವನು (ತಲೆ ಕೂದಲನ್ನು ಹತ್ತ ಕತ್ತರಿಸಿಕೊಳ್ಳುತ್ತಿದ್ದ ಪದ್ಧತಿ ಯಿಂದ). R.-house (ಚರಿತ್ರೆ) ತಾತ್ಕಾಲಿಕ ಸೆರೆಮನೆ; ಬಂಧನ ಗೃಹ. (ನಾವೆ) (ಮು., ಪೂರ್ವಕಾಲದ ಹಡಗುಗಳಲ್ಲಿ) ಮೇಲಟ್ಟದ ಹಿಂಭಾಗದ ಕೋಣೆ(ಗಳು). R.-top ಹಡಗಿನ ಕೂವೆಯ ನೆತ್ತಿಯ ಹತ್ತಿರದ ವೇದಿಕೆ (ಹಿಂದೆ, ದುಂಡಗೆ ಇರುತ್ತಿತ್ತು). **Róundel** —ಡೆಲ್ (ನಾ.) ಸಣ್ಣ ಹಲ್ಲೆ, ದುಂಡು ಬಿಲ್ಲೆ. =Rondeau. **Róundish** (ಗು.); **Róundly** (ಕ್ರಿ. ವಿ.) ಪರಿಷ್ಕಾರವಾಗಿ, ಪೂರ್ತಿಯಾಗಿ (Go r. to work); ಸ್ಪಷ್ಟವಾಗಿ, ಖಡಾ ಖಂಡಿತವಾಗಿ, ನಿರ್ದಾಕ್ಷಿಣ್ಯವಾಗಿ (Told him r. that he would not. Was r. abused); ದುಂಡಗೆ, ಗುಂಡಗೆ, ಬಟ್ಟನಾಗಿ (Swelled out r.). **Róundness** (ನಾ.)

Round (ನಾ.) ದುಂಡನೆಯ, ಗುಂಡನೆಯ, —ವಸ್ತು; ಗುಂಡು, ಬಳೆ, ಮಂಡಲ, ವೃತ್ತ, ಗೋಳ [This earthly r. ಈ ಭೂಗೋಳ. Rounds of ladder ಏಣಿಯ ಮೆಟ್ಟಲುಗಳು. R. of beef ಗೋಮಾಂಸದ (ರೊಂಡಿ ಭಾಗದ) ದುಂಡು ದಪ್ಪ ಹಲ್ಲೆ. R. of toast ರೊಟ್ಟಿಯ ದುಂಡು ಹಲ್ಲೆ]. (ಶಿಲ್ಪ ಶಾಸ್ತ್ರ) ಇಡಿಯ ಘನರೂಪ, ಪೂರ್ಣಾಕಾರ (Relief ಪದದೊಡನೆ ಹೋಲಿಸಿ). ಪರಿಧಿ, (ಹೊರ) ಸುತ್ತು, ವ್ಯಾಪ್ತಿ, ಎಲ್ಲೆ (In all the r. of Nature). ವೃತ್ತ ಚಲನೆ, ಪರಿಭ್ರಮಣ, ಪ್ರದಕ್ಷಿಣೆ, ಸುತ್ತು, ಸುತ್ತಾಟ, ಆವರ್ತ, ಆವೃತ್ತಿ, ಪರ್ಯಾಯ, ಪರಂಪರೆ, ವೃಂದ [The earth in its daily *or* yearly r. ಭೂಮಿ ತನ್ನ ದೈನಿಕ ಅಥವಾ ವಾರ್ಷಿಕ ಪರಿ ಭ್ರಮಣದಲ್ಲಿ. The daily r. ದಿನವಹಿ ಕಾರ್ಯ, ನಿತ್ಯಗಟ್ಟಳೆಯ ಕೆಲಸ. Go for a good r. ದೂರ ತಿರುಗಾಟಕ್ಕೆ ಹೋಗಿ ಬಾ, ಸುತ್ತಿಕೊಂಡು ಬಾ. Make, go, one's rounds ಕಟ್ಟಳೆಯ ಪ್ರಕಾರ (ತನಿಖೆಗಾಗಿ) ಸುತ್ತಾಡಿಕೊಂಡು ಬಾ. News, story, goes the r. ಸುದ್ದಿ, ಕಥೆ, ಒಬ್ಬರಿಂದೊಬ್ಬರಿಗೆ ಸುತ್ತ ಹರಡುತ್ತದೆ]. (ಸೈನಿಕ, ಬ. ವ. ದಲ್ಲಿ) ಕಾವಲುಗಾರನ ಗಸ್ತು (To go, pace, walk, the r.); ಗಸ್ತು ದಳ; ಪಹರೆ ಪರೀಕ್ಷಕ ದಳ. (ಗಾಲ್ಫ್ ಆಟ) ಎಲ್ಲ ಬದ್ದುಗಳನ್ನೂ ತುಂಬುವ ಒಂದು ಸುತ್ತು. ಸುತ್ತು, ಸರದಿ, ಪಟ್ಟು, ಬಾರಿ; ಒಂದು ಬಾರಿಗೆ ಹಂಚಿದ, ವಿತರಣಮಾಡಿದ, ಮೊತ್ತ (Serve out a r. of spirit. Twenty rounds of ball cartridge. Never fired a single r. R. after r. of cheers. A fight of ten rounds. The winners in the first r.). Rounds-man ಗಿರಾಕಿಗಳನ್ನು ಒದಗಿಸಿಕೊಂಡುಬರಲು ಸಾಮಾನುಗಳೊಡನೆ ಹೊರಗೆ ಸುತ್ತಾಡುವ, ವ್ಯಾಪಾರಿಯ ನೌಕರ: ಸುತ್ತಾಳು.

Round (ಕ್ರಿ. ವಿ., ಉಪ.) ಸುತ್ತುತ್ತ; ಸುತ್ತ(ಲೂ); ಸುತ್ತಿ (ಕೊಂಡು); ಬಟ್ಟನಾಗಿ, ಗುಂಡಗೆ, ದುಂಡಾಗಿ (Sun goes, summer comes, r. Sleep the clock r. ೧೨ ಅಥವಾ ೨೪ ಘಂಟೆಗಳ ಕಾಲ ನಿದ್ದೆಮಾಡು. All the year r. ವರ್ಷವೆಲ್ಲ, ವರ್ಷ ಪೂರ್ತ. 6 inches r. ೬ ಅಂಗುಲ ಸುತ್ತಳತೆ. Soon won him r. ಅವನನ್ನು ಬೇಗ ತನ್ನ ಕಡೆಗೆ ಒಲಿಸಿಕೊಂಡನು). ಸುತ್ತ ಎಲ್ಲರಿಗೂ, ಎಲ್ಲ ಕಡೆಯೂ; ಪೂರ್ಣವಾಗಿ, ಸರ್ವತಃ [Glasses r. ಗೋಷ್ಠಿಗೆಲ್ಲ ಮದ್ಯ. Send r. the hat (Hat ನೋಡಿ). Home Rule all r. ಎಲ್ಲ ಜನಾಂಗಗಳಿಗೂ ಸ್ವರಾಜ್ಯ. An all-r. man ಸರ್ವ ಸಮರ್ಥ. Show one r. ಒಬ್ಬನಿಗೆ ನೋಡಬೇಕಾದ ಸ್ಥಳಗಳನ್ನೆಲ್ಲಾ ತೋರಿಸು]. ಬಳಸಿ(ಕೊಂಡು) [Will you jump *or* go r.? ಹಾರುತ್ತೀಯೊ ಬಳಸಿಕೊಂಡು ಹೋಗುತ್ತೀಯೊ? Ask one r. ಒಬ್ಬನನ್ನು ತನ್ನ ಮನೆಗೆ ಬರುವಂತೆ ಆಹ್ವಾನಿಸು. Order the carriage r. ಗಾಡಿಯನ್ನು ಗಾಡಿಖಾನೆಯಿಂದ ಮನೆಯ ಬಾಗಿಲಿಗೆ ತರ ಹೇಳು. All r., Right r., R. and r. (R. ಪದದ ಅವ ಧಾರಣಾರ್ಥ ಪ್ರ.)]. [R. about ವೃತ್ತಾಕಾರದಲ್ಲಿ, ದುಂಡಗೆ; ಸುತ್ತ, ಎಲ್ಲ ಕಡೆ; ತಿರುಗ ಮುರುಗ; ವ್ಯತಿರಿಕ್ತ ದಿಕ್ಕಿಗೆ; ಬಳಸಿಕೊಂಡು, ಸುತ್ತಿಕೊಂಡು. Roundabout (ನಾ.) ಬಳಸುದಾರಿ, ಸುತ್ತುಹಾದಿ; ಸಂಚಾರದ ಗಾಡಿ, ಜನ, ಎಲ್ಲ ಸುತ್ತಿಕೊಂಡು ಹೋಗಬೇಕಾದ ಸ್ಥಳ: ಬಳಸು ದುಂಡು. ಬಳಸು ಮಾತು. ರಂಕರಾಟಣ (Lose on the swings what you make on the roundabouts ಲಾಭ ನಷ್ಟಗಳನ್ನು ಸರಿತೂಗಿಸಿ ಇದ್ದ ಸ್ಥಿತಿಯಲ್ಲೇ ಇರು. ಒಂದು ಕೈಗೆ ಬಂದದ್ದನ್ನು ಇನ್ನೊಂದು ಕೈಯಲ್ಲಿ ಕಳೆದುಕೊ). (ಗು.) ಸುತ್ತಿನ, ಬಳಸುದಾರಿಯ; ದಪ್ಪನಾದ, ತೊಣಪನಾದ]. (ಉಪ.) ಸುತ್ತು(ಗಟ್ಟು) ವಂತೆ, ಬಳಸುವಂತೆ, ಸುತ್ತಲೂ, ಸುತ್ತಮುತ್ತ [Has a wrapper r. her. Station them r. the field. Shells bursting r. me. Turns r. its centre of gravity. Argue r. and r. subject ವಿಷಯದ ತಿರುಳನ್ನು ಬಿಟ್ಟು ಹೊರಸುತ್ತಿನ ಸುತ್ತ ವಾದಿಸು. Go r. the corner ಮೂಲೆಯಲ್ಲಿ ತಿರುಗಿಕೊಂಡು ಹೋಗು. Get r. (Get ನೋಡಿ). All r., Right r., R. & r. (R. ಪದದ ಅವಧಾರಣಾರ್ಥ ಪ್ರ.)]

Round (ಕ್ರಿ.) ದುಂಡಗೆ, ಗುಂಡಗೆ, —ಆಗು, ಮಾಡು; ವೃತ್ತಾಕಾರ ಕೊಡು (Rounded eyes. Her form is rounding. R. vowel ತುಟಿಯನ್ನು ದುಂಡು ತಿರುವಿ ಸ್ವರೋಚ್ಚಾರ ಮಾಡು. R. off the angles ಮೂಲೆಗಳನ್ನು ದುಂಡುಮಾಡು. R. dog's ears ನಾಯಿಯ ಕಿವಿಗಳನ್ನು ದುಂಡಗೆ ಕತ್ತರಿಸು). ಪೂರ್ಣ, ಸಮಗ್ರ, ಮುಕ್ತಾಯ,—ಮಾಡು; ಚಿಲ್ಲರೆಯಿಲ್ಲದಂತೆ ಬಟುಮಾಡು; ನೇರ್ಪಡಿಸು, ಪರಿಷ್ಕಾರಮಾಡು, ಸಮರು (ಅನೇಕ ವೇಳೆ *off* ಉಪ. ದೊಡನೆ: R. off *or* r. a sentence, estate, career). (ಸುತ್ತ ಸವಾರಿಮಾಡಿ) ದನಗಳನ್ನು ಒಟ್ಟುಗೂಡಿಸು, ಮಂದೆಗೂಡಿಸು (*Up* ಉಪ. ದೊಡನೆ). (ಭೂಶಿರ, ಮೊ. ನ್ನು) ಸುತ್ತಿಕೊಂಡು, ಬಳಸಿ ಕೊಂಡು—ಹೋಗು; ತಿರುಗು, ತಿರುಗಿಸು (ವಿರ. ಪ್ರ.; ಮು., ನಾವೆ) (Rounded on his heel to look at me. Ship rounds to ಹಡಗು ಅಲೆಗೆದುರಾಗಿ ತಿರುಗುತ್ತದೆ). R. on (ಸ್ನೇಹಿತ, ಮೊ. ರ ಮೇಲೆ) ಅನಿರೀಕ್ಷಿತವಾಗಿ, ಹಠಾತ್ತಾಗಿ, —ಎದುರು ಬೀಳು, ತಿರುಗಿ ಬೀಳು. **Róund-up** (ನಾ.) (ಮು., ಅಮೆ. ಸಂ.) (ಒಡೆತನವನ್ನು ದಾಖಲೆ ಮಾಡಿಸುವುದಕ್ಕಾಗಿ ಅಥವಾ ಎಣಿಕೆಗಾಗಿ) ದನಕರುಗಳನ್ನು ಒಂದು ಆವರಣದಲ್ಲಿ ಒಟ್ಟುಗೂಡಿಸುವುದು, ಮಂದೆಗೂಡಿಸುವುದು. **Róunder** (ನಾ.) (ಕ್ರಿಯಾರ್ಥಗಳಲ್ಲಿ); (ಬ. ವ. ದಲ್ಲಿ) ದಾಂಡಿನಿಂದ ಚೆಂಡು ಹೊಡೆದು ಅದನ್ನು ಎದುರು ಪಕ್ಷದವರು ಒಳಗೆ ಎಸೆಯುವುದರೊಳಗಾಗಿ ಒಂದು ಸುತ್ತು ಸುತ್ತಿ ಬರುವುದು ಗೆಲ್ಲಂಕವಾಗುಳ್ಳ ಒಂದು ಆಟ.

Round[2] ರೌಂಡ್ (ಕ್ರಿ.) (ಪ್ರಾಚೀ. ಪ್ರ.) ಕಿವಿಯಲ್ಲಿ—ಉಸುರು, ಹೇಳು; ಪಿಸುಮಾತಿನಲ್ಲಿ ಹೇಳು, ಪಿಸುಗುಟ್ಟು (Rounded him in the ear that —ಎಂದು ಅವನಿಗೆ ಕಿವಿಯಲ್ಲಿ ಗುಟ್ಟಾಗಿ ಹೇಳಿದನು)

Róundel, Round (ಗು.) ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Roúndelay ರೌಂಡೆಲೇ (ನಾ.) ಪಲ್ಲವಿ ಇರುವ ಸರಳ ಲಘು ಗೀತೆ. ಹಕ್ಕಿಯ ಹಾಡು.

Roúnder. **Round** (ಕ್ರಿ.) ನೋಡಿ.

Roup[1] ರೂಪ್ (ಕ್ರಿ. ಸಕ., ನಾ.) (ಸ್ಕಾ. ಪ್ರ.) ಹರಾಜು, ಲಿಲಾವು (ಮಾಡು, ಮೂಲಕ ಮಾರು)

Roup[2] ರೂಪ್ (ನಾ.) ಕೋಳಿಗಳಿಗೆ ಬರುವ ಒಂದು ರೋಗ (ರೊಂಡಿಯ ಮೇಲೆ ಊದಿಕೊಳ್ಳುವ ಅಥವಾ ಮೂಗಿನಲ್ಲಿ ಕೀವು ಸುರಿಯುವ ಲಕ್ಷಣ ವುಳ್ಳದ್ದು). **Roúpy** (ಗು.)

Rouse[1] ರೌಸ್ (ನಾ.) (ಪ್ರಾಚೀ. ಪ್ರ.) ತುಂಬಿ ತುಳುಕುವ ಮದ್ಯ ಪಾತ್ರೆ; ಮದ್ಯಪಾನ; ಪಾನೋತ್ಸವ; ಮದ್ಯಕೇಳಿ (Take one's r. ಮಿತಿಮೀರಿ ಕುಡಿ; ಪಾನೋತ್ಸವ ನಡಸು. Give a r. ಶುಭಪಾನಮಾಡು)

Rouse[2] ರೌಸ್ (ಕ್ರಿ., ನಾ.) (ಬೇಟೆಯನ್ನು ಅದರ ಇಕ್ಕೆಯಿಂದ, ಮರಸಿನಿಂದ) ಹೊರಹೊರಡಿಸು, ಎಬ್ಬಿಸು. (ನಿದ್ರೆ, ಆಲಸ್ಯ, ಮೊ. ಗಳಿಂದ) ಎಬ್ಬಿಸು, ಎಚ್ಚರಿಸು, ಎಚ್ಚರಮಾಡು; ಉತ್ತೇಜಿಸು, ಹುರಿದುಂಬಿಸು, ಕಾವೇರಿಸು (ಅನೇಕ ವೇಳೆ *up, from, out of, to* ಉಪ. ದೊಡನೆ. R. oneself ಆಲಸ್ಯ ಬಿಟ್ಟು ಏಳು. Wants rousing ಅಲಸನಾಗಿದ್ದಾನೆ, ಎಚ್ಚರಿಸಬೇಕಾಗಿದೆ). ಕೆರಳಿಸು, ರೇಗಿಸು, ಉದ್ರೇಕಗೊಳಿಸು (Is terrible when roused); (ಭಾವನೆಗಳನ್ನು) ಎಬ್ಬಿಸು, ಬರಿಸು; (ದ್ರವವನ್ನು) ಕಲಕು, ತೊಳಸು; (ನಾವೆ) ಬಲವಾಗಿ, ಜೋರಾಗಿ, —ಎಳೆ (*In, out, up* ಉಪ. ದೊಡನೆ). (ನಿದ್ರೆ ಬಿಟ್ಟು) ಏಳು, ಎದ್ದೇಳು; ಕಾರ್ಯಪ್ರವೃತ್ತನಾಗು (*Up* ಉಪ. ದೊಡನೆ). (ನಾ.) (ಸೈನ್ಯ) ಪ್ರಭಾತ ಭೇರಿ, —ತೂರ್ಯ. **Roúser** (ನಾ.) (ಕ್ರಿಯಾರ್ಥಗಳಲ್ಲಿ); ಬಿಯರ್ ಮದ್ಯವನ್ನು ತೊಳಸುವ—ಸಲಕರಣೆ, ಸೌಟು. ಪಕ್ಕಾ ಸುಳ್ಳು, ವಿಪರೀತ ಸುಳ್ಳು, ಡೋಂಗು.

Rouse[3] ರೌಸ್, **Roose** ರೂಸ್ (ಕ್ರಿ. ಸಕ.) (ಹೆರಿಂಗ್ ಮೀನು, ಮೊ. ನ್ನು ಕೆಡದಂತೆ ಇಡಲು ಸಂಸ್ಕರಿಸುವುದರಲ್ಲಿ) ಉಪ್ಪು ಉದುರಿಸು.

Rousseaúism ರೂಸೋಇಸ್ಮ್ (ನಾ.) ಮತಧರ್ಮ, ರಾಜ್ಯನೀತಿ, ವಿದ್ಯಾಭ್ಯಾಸ, ಮೊ. ಗಳನ್ನು ಕುರಿತು, ೧೭೧೨-೭೮ರಲ್ಲಿದ್ದ Jean Jacques Rousseau ಎಂಬ ಫ್ರೆಂಚ್ ಗ್ರಂಥಕರ್ತನ ಅಭಿಪ್ರಾಯಗಳು : ರೂಸೋ ಮತ; ಈ ಅಭಿಪ್ರಾಯಗಳ, ಮತದ, —ಅಂಗೀಕಾರ. **Rousseaúan** (ಗು.); **Rousseauésque** (ಗು.) ರೂಸೋ ಮತ ರೀತಿಯ. **Rousseaúian** (ಗು.); **Rousseaúish** (ಗು.); **Rousseaúist** (ನಾ., ಗು.); **Rousseaúite** (ನಾ., ಗು.)

Roussillon (F) ರುಸಿಲ್ಯಾನ್, ರೂಸೀಯಾನ್ (ನಾ.) ಒಂದು ಕೆಂಪು ದ್ರಾಕ್ಷಾ ಮದ್ಯ.

Rout[1] ರೌಟ್ (ನಾ., ಕ್ರಿ. ಸಕ.) (ಮು., ಕುಡುಕರು, ಪುಂಡರು, ಮೊ. ರ) ಗೋಷ್ಠಿ, ಗುಂಪು, ಕೂಟ, ಜಂಗುಳಿ. (ನ್ಯಾ. ಶಾ.) (ಮೂವರು ಅಥವಾ ಹೆಚ್ಚು ಮಂದಿ ಸೇರಿದ) ಕಾನೂನು ವಿರುದ್ಧ ಕೂಟ; ದೊಂಬಿ; ಗೊಂದಲ, ಗಲಭೆ, ಕೋಲಾಹಲ, ತುಮುಲ, ಅವಾಂತರ, ಗಡಿಬಿಡಿ. (ಪ್ರಾಚೀ. ಪ್ರ.) ಸಂಜೆ ಗೋಷ್ಠಿ; ಸತ್ಕಾರ ಸಭೆ (R.-seat ಇಂಥ ಸಭೆಗಳಿಗಾಗಿ ಬಾಡಿಗೆ ಬೆಂಚು). (ಸೋತ ಸೈನ್ಯದ) ದಿಕ್ಕೆಟ್ಟ ಓಟ, ಪಲಾಯನ (Put to r. ಪೂರ್ತಿ ಸೋಲಿಸು, ಮುರಿಯಬಡಿ). (ಕ್ರಿ.) ಪೂರ್ತಿ ಸೋಲಿಸು, ಪಲಾಯನಗೊಳಿಸು, ಮುರಿಯುಬಡಿ.

Rout[2] ರೌಟ್ (ಕ್ರಿ.) = Root[2]; (ಹಾಸಿಗೆ, ಮನೆ, ಅವಿತುಕೊಂಡಿರುವ ಸ್ಥಳ, ಮೊ. ಗಳಿಂದ) ಈಚೆಗೆ ಎಳೆ, ಹೊರ ಹೊರಡಿಸು, ಎಬ್ಬಿಸು.

Route ರೂಟ್, (ಸೈನಿಕ) ರೌಟ್ (ನಾ., ಕ್ರಿ. ಸಕ.) (ಗಮ್ಯ ಸ್ಥಾನವನ್ನು ಮುಟ್ಟುವದಕ್ಕೆ ಹಿಡಿದ) ದಾರಿ, ಹಾದಿ, ಮಾರ್ಗ, ಪಥ. (ಸೈನಿಕ) ಮುನ್ನಡೆಯಲು ಅಪ್ಪಣೆ; ಯಾನಾಜ್ಞೆ [Get, give, the r. Column of r. ಸೈನ್ಯ ಪ್ರಯಾಣವ್ಯೂಹ; ನಡೆವರಿಸೆ. R.-march (ಸೈನ್ಯ ದಳಗಳ) ಅಭ್ಯಾಸನಡಗೆ, ಯಾನ ಶಿಕ್ಷಣ. En r. (F) (ಅನ್—) ದಾರಿಯಲ್ಲಿ, ಮಾರ್ಗದಲ್ಲಿ (Is, did it, en r.)]. (ಕ್ರಿ.) (ಸಾಮಾನು, ಮೊ. ನ್ನು ಮು., ರೈಲಿನ ಮೂಲಕ ಕಳುಹಿಸುವುದಕ್ಕೆ) ದಾರಿ ಗೊತ್ತು ಮಾಡು; ಮಾರ್ಗ ಯೋಜನೆಮಾಡು; (—) ದಾರಿಯಲ್ಲಿ, ಮಾರ್ಗವಾಗಿ, —ಕಳುಹಿಸು (The troops were routed to Chicago *via* Albany)

Routine ರೂ(ರು)ಟೀನ್ (ನಾ.) ನಿಯತ—ಕ್ರಮ, ಮಾರ್ಗ; ದಿನಚರಿ, ನಿತ್ಯಗಟ್ಟಳೆ. (ವಿಶೇಷಣವಾಗಿ) ನಿಯತ ಕ್ರಮದ, ನಿತ್ಯಗಟ್ಟಳೆಯ (R. duties). **Routínism** (ನಾ.); **Routínist** (ನಾ.)

Rove[1] ರೋವ್ (ಕ್ರಿ., ನಾ.) (ಗೊತ್ತುಗುರಿಯಿಲ್ಲದೆ, ನೆಲೆಯಿಲ್ಲದೆ) ತಿರುಗಾಡು, ಸುತ್ತಾಡು, ತಿರಿ, ಅಲೆ(ದಾಡು) (Roving sailor ಹಲವು ಬಗೆಯ ಬಳ್ಳಿ); (ಕಣ್ಣು) ಸುತ್ತ ನೋಡು, ಹೊರಳು. (ಮಾನು ಹಿಡಿಯುವಲ್ಲಿ) ಜೀವಂತ ಎರೆ ಇಟ್ಟು ಮಾನು ಹಿಡಿ. (ನಾ.) ಅಲೆತ, ಅಲೆದಾಟ, ಸುತ್ತಾಟ, ಭ್ರಮಣ (On the r. ಅಲೆಯುತ್ತ, ಅಲೆದಾಟದಲ್ಲಿ). Roving Commission ವಿಚಾರಣ ಕರ್ತರಿಗೆ ಆವಶ್ಯಕತೆ ತೋರಿದಂತೆ ಸಂಚಾರಮಾಡಲು ಕೊಟ್ಟ ಅಧಿಕಾರ: ವಿಚಾರಣ ಕರ್ತನ(ರ) —ಪ್ರಯಾಣಾಧಿಕಾರ, ಸಂಚಾರ ಸನ್ನದು.

Rove[2] ರೋವ್ (ನಾ., ಕ್ರಿ. ಸಕ.) (ಹತ್ತಿ, ಉಣ್ಣೆ, ಮೊ. ಗಳ) ಬತ್ತಿ, ಹಂಜಿ(ಮಾಡು, ಹೊಸೆ). **Róver**[1] (ನಾ.)

Rove[3] ರೋವ್ (ನಾ.) ರಿವೆಟ್ ಮೊಳೆಯನ್ನು ತೂರಿಸಿ ಬಿಗಿಸುವುದಕ್ಕೆ ಹಾಕುವ ಲೋಹದ ಬಿಲ್ಲೆ, ಉಂಗುರ.

Rove[4]. Reeve ಧಾತುವಿನ ಭೂತ., ಭೂ. ಕೃ.

Rover[1]. **Rove**[2] ನೋಡಿ.

Róver[2] (ನಾ.) (ಧನುರ್ವಿದ್ಯೆ) ಅನಿರ್ದಿಷ್ಟ ದೂರದಲ್ಲಿ ಮನಸ್ಸಿಗೆ ತೋರಿದಂತೆ ಗೊತ್ತುಪಡಿಸಿದ ಗುರಿ, ಲಕ್ಷ್ಯ; ದೂರದ —ಗುರಿ, ಲಕ್ಷ್ಯ (Shoot at rovers ಗೊತ್ತುಗುರಿಯಿಲ್ಲದೆ ಹೊಡೆ, ಸಿಕ್ಕಿದ ಹಾಗೆ ಹೊಡೆ). ಅಲೆಯುವವನು, ಅಲೆಮಾರಿ. (ಕ್ರೋಕೆ ಆಟ) ಎಲ್ಲ ವಲಯಗಳನ್ನೂ ತೂರಿ, ಆದರೆ ಗೂಟಕ್ಕೆ ಬಡಿದು ನಷ್ಟವಾಗದೆ, ಇನ್ನೂ ಆಟವಿರುವ ಚೆಂಡು; ಇಂಥ ಚೇಂಡುಗಾರ. ಕಡಲುಗಳ್ಳ. ಹಿರಿಯ ಸ್ಕೌಟು (೧೭ ವರ್ಷಕ್ಕೆ ಮೀರಿದವನು)

Row[1] ರೋ (ನಾ.) ಸಾಲು, ಹಂತಿ, ಪಂಕ್ತಿ, ಶ್ರೇಣಿ (In a r. In rows ಸಾಲು ಸಾಲಾಗಿ); ಮನೆಗಳ ಸಾಲು, ಕೇರಿ, ಓಣಿ [(ಅನೇಕ ವೇಳೆ ಬೀದಿಗಳ ಹೆಸರಿನಲ್ಲಿ : the Rochester r.). The R., Rotten R. (Rotten Row ನೋಡಿ)]; (ನಾಟ್ಯಶಾಲೆ, ಮೊ. ಗಳಲ್ಲಿ) ಪೀಠ ಪಂಕ್ತಿ (In the front r.); (ತೋಟದಲ್ಲಿ) ಮರಗಳ ಸಾಲು [A hard r. to hoe (ಅಮೆ. ಸಂ.) ಕಷ್ಟದ ಕೆಲಸ]

Row[2] ರೋ (ಕ್ರಿ., ನಾ.) (ದೋಣಿ) ನಡಸು, ಹುಟ್ಟುಹಾಕು (R. a fast stroke, 30 to the minute); ದೋಣಿಯಲ್ಲಿ —ಸಾಗಿಸು, ದಾಟಿಸು, ಹಾಯಿಸು [R. over (ದೋಣಿ ಪಂದ್ಯದಲ್ಲಿ) ಸುಲಭವಾಗಿ —ಸೋಲಿಸು, ಗೆಲ್ಲು]; ಪಂದ್ಯದಲ್ಲಿ ದೋಣಿ ನಡಸು, ಹುಟ್ಟುಹಾಕು [R. down (ದೋಣಿ ಪಂದ್ಯದಲ್ಲಿ) ಮುಂದಿದ್ದವನನ್ನು ಸೋಲಿಸು, ಹಿಂಬೀಳಿಸು]; ನಿರ್ದಿಷ್ಟ ಸಂಖ್ಯೆಯ ಹುಟ್ಟುಗಾರನಾಗಿರು (Rows 5 in the Oxford crew); (ದೋಣಿಯ ವಿಷಯದಲ್ಲಿ) ನಿರ್ದಿಷ್ಟ ಸಂಖ್ಯೆಯ ಹುಟ್ಟುಗಳಿರು, ಹುಟ್ಟುಗಳಿಂದ ನಡೆ; (R.-boat ಹುಟ್ಟು ದೋಣಿ). (ನಾ.) ಎಡೆಬಿಡದೆ ದೋಣಿ ನಡಸುವುದು; ದೋಣಿ ವಿಹಾರ. **Rower** (ನಾ.)

Row[3] ರೌ (ನಾ., ಕ್ರಿ. ಸಕ.) (ಬಳ. ಮಾ.) ಗಲಾಟೆ, ಗದ್ದಲ, ಗಲಭೆ, ಹುಯಿಲು, ಗೊಂದಲ, ದೊಂಬಿ, ಜಗಳ (What is the r.? ಏನು ಗದ್ದಲ, ಏನು ಗಲಾಟೆ? Make, kick up, a r. ಗಲಾಟೆ ಮಾಡು; ಪ್ರತಿಭಟಿಸು); ಕಾದಾಟ, ಬಡಿದಾಟ. ಆಕ್ಷೇಪಣೆಗೆ ಗುರಿಯಾಗುವುದು; ಬೈಗುಳ ತಿನ್ನುವುದು (Shall get into a r.). (ಕ್ರಿ.) ಆಕ್ಷೇಪಿಸು, ವಾಗ್ದಂಡನೆ ಮಾಡು, ಬಯ್ಯು. **Rowing** (ನಾ.)

Rowan ರೋ(ರೌ)ಅನ್ (ನಾ.) (ಸ್ಕಾ. ಪ್ರ.) ಬೆಟ್ಟದ, ಕಾಡು, —ಆ್ಯಪ್ ಮರ (= R. tree); ಇದರ ಕೆಂಪು ಹಣ್ಣು.

Row-de-dow ರೌಡಿಡೌ (ನಾ.) ಗದ್ದಲ, ಗಲಭೆ, ಗಲಾಟೆ, ಹುಯಿಲು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rowdy ರೌಡಿ (ನಾ., ಗು.) ತುಂಟ(ನಾದ); ಪುಂಡ(ನಾದ); ದೊಂಬಿಯ(ವನು). R.-dowdy (ಗು.). **Rowdiness** (ನಾ.); **Rowdyish** (ಗು.); **Rowdyism** (ನಾ.)

Rowel ರೌಎಲ್ (ನಾ., ಕ್ರಿ. ಸಕ.) ಕುದುರೆ ಸವಾರನ ಹಿಮ್ಮಡಿಗೆ ಹಾಕುವ ಚುಚ್ಚು ಸಲಕರಣೆಯ ಕೊನೆಯಲ್ಲಿ ತೊಡಿಸುವ ಮೊಳೆ ಮೊನೆಗಳ ತಿರುಗು ಬಿಲ್ಲೆ: ಚುಚ್ಚುಗಾಲಿ, ಚುಚ್ಚುಬಿಲ್ಲೆ [(ಕ್ರಿ.) —ಯಿಂದ ಕುದುರೆಯನ್ನು ಚುಚ್ಚು]. ರಿಕಾಬಿನ ಮುಳ್ಳು(ಗಾಲಿ), ಮರೇಂಜು. ದೇಹರಸಗಳನ್ನು ಹೊರಹೊರಡಿಸುವುದಕ್ಕಾಗಿ ಕುದುರೆಯ ಚರ್ಮಕ್ಕೂ ಮಾಂಸಕ್ಕೂ ನಡುವೆ ಇಡುವ ರಂಧ್ರ ಕೊರೆದ ಚಕ್ಕಳದ ಬಿಲ್ಲೆ [(ಕ್ರಿ.) ಹೀಗೆ ಈ ಚಕ್ಕಳದ ಬಿಲ್ಲೆ ಇಡು]

Rowlock ರಲಕ್ (ನಾ.) ಹುಟ್ಟುಹಾಕಲು ಅನುಕೂಲಿಸುವಂತೆ ದೋಣಿಯ ಪಕ್ಕದ ಅಂಚಿನಲ್ಲಿ ಅಳವಡಿಸಿರುವ ಕಡಾಣಿ ಜೋಡಿ, ಬಳೆ, ಮೊ. ವು: ಹುಟ್ಟು ತಿರುಗಣಿ.

Royal ರಾಯಲ್ (ಗು., ನಾ.) ರಾಜನ (ಅಥವಾ ರಾಣಿಯ), ದೊರೆಯ, ಅರಸನ; ರಾಜಯೋಗ್ಯ; ರಾಜವೈಭವದ; ರಾಜವಂಶದ [The blood r. ರಾಜವಂಶ. Rhyme r. (Rhyme ನೋಡಿ). Princess r. (Princess ನೋಡಿ). R. princess ರಾಜಕುಮಾರಿ, ಅರಸನ ಮಗಳು, ರಾಜವಂಶದವಳು. R. blue ಕಡು ನೀಲ. R. burgh ರಾಜ ಸನ್ನದು ಪಡೆದ ಪಟ್ಟಣ. R. Courts of Justice ಲಂಡನಿನಲ್ಲಿ ಶ್ರೇಷ್ಠ ನ್ಯಾಯಸ್ಥಾನಗಳ ಮಂದಿರ. R. Engineers ಬ್ರಿಟಿಷ್ ಸೈನಿಕ ಶಿಲ್ಪ ಶಾಖೆ. R. evil = King's evil (King ನೋಡಿ). R. exchange ಲಂಡನಿನಲ್ಲಿರುವ ವ್ಯಾಪಾರಗಾರರ ಸಂಸ್ಥೆ, ಮಾರುವೆ ಕಟ್ಟೆ. R. Institution (೧೭೯೯ರಲ್ಲಿ ಸ್ಥಾಪಿತವಾದ) ರಾಜ ವೈಜ್ಞಾನಿಕ—ಸಂಸ್ಥೆ, ಪರಿಷತ್ತು. R. Military Academy ವುಲ್‌ವಿಚಿನಲ್ಲಿರುವ ಬ್ರಿಟಿಷ್ ಸೈನ್ಯದ ಶಿಲ್ಪಿಗಳ ಮತ್ತು ಗೋಲಂದಾಜರ ಶಿಕ್ಷಣ ಶಾಲೆ. R. Military College ಸ್ಯಾಂಡ್‌ಹರ್ಸ್ಟಿನಲ್ಲಿರುವ ಬ್ರಿಟಿಷ್ ಪದಾತಿಗಳ ಮತ್ತು ರಾವುತರ ಶಿಕ್ಷಣ ಶಾಲೆ. (ಬ್ರಿಟಿಷ್ ಸೈನ್ಯದ ಹಲವು ಶಾಖೆಗಳ ಹೆಸರಿನಲ್ಲಿ ಪ್ರ.: R. Artillery, R. Air Force, R. Marine Artillery, etc.). R. oak ಎರಡನೆಯ ಚಾರ್ಲ್ಸ್ ದೊರೆ ವರ್ಸೆಸ್ಟರ್ ಯುದ್ಧಾನಂತರ ಅವಿತುಕೊಂಡಿದ್ದ ಓಕ್ ಮರ. R. road (Road ನೋಡಿ). R. Society ೧೬೬೦ರಲ್ಲಿ ಸ್ಥಾಪಿತವಾದ ಪ್ರಕೃತಿ ವಿಜ್ಞಾನ ಸಂಘ. R. standard ರಾಜ ಲಾಂಛನದ ಚೌಕ ಬಾವುಟ: ರಾಜಧ್ವಜ]. (ರಾಜ) ವೈಭವದ; ಗಂಭೀರ, ಘನ; ಮಹಾ; ದೊಡ್ಡತನದ [R. magnanimity ರಾಜೌದಾರ್ಯ. Gave us r. entertainment ನಮಗೆ ರಾಜೋಪಚಾರ ಮಾಡಿದನು. Battle r. (Battle ನೋಡಿ). R. paper ೨೪" × ೧೯" ಅಳತೆಯ ಬರೆಯುವ ಕಾಗದ; ೨೫" × ೨೦" ಅಳತೆಯ ಅಚ್ಚಿನ ಕಾಗದ. R. octavo ರಾಯಲ್ ಆಕಾರದ ಅಷ್ಟಪತ್ರ. R. stag ಹನ್ನೆರಡು ಅಥವಾ ಹೆಚ್ಚು ಕವಲುಗಳುಳ್ಳ ಕೊಂಬಿನ ಗಂಡು ಜಿಂಕೆ; ಸಾರಂಗ. R. sail, mast ತುತ್ತತುದಿಯ ಹಾಯಿ, ಕೂವೆ. R. arch ಫ್ರೀಮೇಸನ್ ಸಂಸ್ಥೆಯಲ್ಲಿ ಒಂದು ಅಂತಸ್ತು]. (ನಾ.) (ಬಳ. ಮಾ.) ರಾಜವಂಶದವನು(ಳು); = R. stag; = R. sail *or* mast; (ಬ. ವ. ದಲ್ಲಿ) ಪ್ರಥಮ ಪದಾತಿ ದಳ. **Royally** (ಕ್ರಿ. ವಿ.); **Royalist** (ನಾ.) ರಾಜ ಪಕ್ಷದವನು (ಒಳ ಯುದ್ಧಗಳಲ್ಲಿ, ರಾಜನ ಪಕ್ಷ ವಹಿಸುವವನು); ರಾಜಪ್ರಭುತ್ವ ವಾದಿ. **Royalism** (ನಾ.); **Royalistic** (ಗು.); **Royalty** (ನಾ.) ರಾಜ—ಪದವಿ, ಅಧಿಕಾರ, ಶಕ್ತಿ; ರಾಜತ್ವ; ದೊರೆತನ; ರಾಜವಂಶದವರು; ರಾಜಮನೆತನದವನು (ಸಾ., ಬ. ವ.); (ಸಾ., ಬ. ವ. ದಲ್ಲಿ) ರಾಜನ ವಿಶೇಷ ಹಕ್ಕುಗಳು, ರಾಜಾಧಿಕಾರಗಳು. ರಾಜನು ವ್ಯಕ್ತಿಗಾಗಲಿ ಸಂಘಕ್ಕಾಗಲಿ ವಹಿಸಿಕೊಟ್ಟ (ಈಗ ಸಾ., ಖನಿಜಗಳ ಮೇಲಿನ) ಅಧಿಕಾರ; ರಾಜಾಧಿಕಾರ; ಗಣಿ ಕೆಲಸದ ಗುತ್ತಿಗೆದಾರನು ಖನಿಜವಸ್ತುಗಳ ಅನುಭೋಗಕ್ಕಾಗಿ ನೆಲದ ಒಡೆಯನಿಗೆ ಕೊಡುವ ಮೊತ್ತ: ರಾಜಾದಾಯ, ರಾಜ ಪಾಲು; ವ್ಯಾಪಾರ ಸ್ವಾಮ್ಯವನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ ಆ ಸ್ವಾಮ್ಯದವನಿಗೆ ಅಥವಾ ಪುಸ್ತಕಗಳನ್ನು ಮಾರಾಟಕ್ಕಾಗಿ ತೆಗೆದುಕೊಂಡು ಗ್ರಂಥ ಕರ್ತನಿಗೆ ಕೊಡುವ ಹಣ: ಸ್ವಾಮ್ಯ ಪಾಲು; ಲಾಭಾಂಶ.

Royston crow ರಾಯ್‌ಸ್ಟನ್ ಕ್ರೋ (ನಾ.) ಒಂದು ಜಾತಿಯ ಕಾಗೆ.

Rub[1] ರಬ್ (ಕ್ರಿ., ನಾ.) ಉಜ್ಜು, ತಿಕ್ಕು, ತೀಡು, ತೇಯಿ, ಘರ್ಷಿಸು [R. one's hands (ತೃಪ್ತಿ ಸೂಚಕವಾಗಿ) ಕೈ ಉಜ್ಜಿಕೊ. R. shoulders *with* (—ಒಡನೆ) ಬೆರೆ, ಸಂಸರ್ಗಮಾಡು, ಭುಜ ತಿಕ್ಕು; ಜೊತೆಯಲ್ಲಿ ಓಡಾಡು. R. noses (ಕೆಲವು ಕಾಡುಜನರಲ್ಲಿ) ಪರಸ್ಪರ ಎದುರುಗೊಳ್ಳು, ವಂದಿಸು(ವ ಸೂಚನೆಯಾಗಿ ಮೂಗು ಮೂಗು ಉಜ್ಜು). R. the wrong way ಕೆರಳಿಸಿ ಎದುರುಹಾಕಿಕೊ]. ಉಜ್ಜಿ, ತಿಕ್ಕಿ, —ಮೆರುಗು ಕೊಡು; ಉಜ್ಜಿಹಾಕು, ಹೆರೆದುಹಾಕು, ತೇದುಹಾಕು; ಉಜ್ಜಿ—ಗಾಯಮಾಡು (R. *sore*), ಆರಿಸು, ಒಣಗಿಸು (R. *dry*), ಸವೆಸು (R. *bare*). ಲೋಹದ ಅಥವಾ ಕಲ್ಲಿನ ಫಲಕದಲ್ಲಿ ಕೆತ್ತಿದ ಅಕ್ಷರ, ಚಿತ್ರ, ಮೊ. ರ ಮೇಲೆ ಕಾಗದ ಇಟ್ಟು ಬಣ್ಣದ ಸೀಮೆಯ ಸುಣ್ಣ, ಮೊ. ನ್ನು ಉಜ್ಜಿ ಪ್ರತಿಯೆತ್ತು; ಉಜ್ಜು ಪ್ರತಿ ಮಾಡು [**Rubbing** (ನಾ.) ಉಜ್ಜು ಪ್ರತಿ]. (ಕೈ, ಮೊ. ನ್ನು ಒಂದರಮೇಲೆ) ತೀಡು (*Against, on, over* ಉಪ. ದೊಡನೆ); (ವಸ್ತುಗಳನ್ನು ಪರಸ್ಪರ) ಹೊಸೆ, ಮಸೆ (*Together* ಉಪ. ದೊಡನೆ); (ಕರೆ, ಮೊ. ನ್ನು) ಉಜ್ಜಿಹಾಕು, ಅಳಿಸು (*Out* ಉಪ. ದೊಡನೆ); (ವಸ್ತ್ರದ ಗುಂಜು, ಮೊ. ನ್ನು; ರೂಪಕವಾಗಿ ನಾಚಿಕೆ, ಮೊ. ನ್ನು) ತೊಡೆದು ಹಾಕು (*Off, away* ಉಪ. ದೊಡನೆ); (ತೈಲ, ಮೊ. ನ್ನು) ಒಳಕ್ಕೆ ಒತ್ತು, ಉಜ್ಜು (*In, into* ಉಪ. ದೊಡನೆ); [R. in (ರೂಪ.) (ಪಾಠ, ಅಪಮಾನ ಸಂಗತಿ, ಮೊ. ನ್ನು) ಒತ್ತಿ ಹೇಳು, ಅರೆದು ಹುಯ್ಯಿ, ಮನಸ್ಸಿಗೆ ತಟ್ಟುವಂತೆ ಒಳಕ್ಕೆ ತೀಡು]. ಉಜ್ಜಿ ಪುಡಿಮಾಡು (*To* ಉಪ. ದೊಡನೆ); ಒಂದರಿಯಲ್ಲಿ ತಿಕ್ಕಿ ಉದುರಿಸು (*Through* ಉಪ. ದೊಡನೆ); (ಹೆಟ್ಟಿನ ಗಾತ್ರವನ್ನು, ಹೆಟ್ಟಿನ ಮಟ್ಟವನ್ನು) ತೇದುಹಾಕು, ಉಜ್ಜಿ ಕಡಮೆಮಾಡು (*Down* ಉಪ. ದೊಡನೆ); (ಮುಲಾಮನ್ನು) ಹಚ್ಚು, ಬಳಿ, ಲೇಪಿಸು (*Over* ಉಪ. ದೊಡನೆ); (ಕುದುರೆಯನ್ನು) ಮಾಲೀಸುಮಾಡು, (ತಾನು) ಚೆನ್ನಾಗಿ ಬಾಚಿಕೊಂಡು ನೀಟುಮಾಡಿಕೊ (*Down* ಉಪ. ದೊಡನೆ); (ಮಲಿನ ವಸ್ತುವನ್ನು) ಬೆಳಗು, ಮೆರುಗು ಕೊಡು; (ಜ್ಞಾಪಕಶಕ್ತಿ, ಓದಿದ್ದ ವಿದ್ಯೆ, ಮೊ. ನ್ನು) ಜಾಗೃತಮಾಡಿಕೊ, ಕುದುರಿಸಿಕೊ, ನೆನಪಿಗೆ ತಂದುಕೊ (*Up* ಉಪ. ದೊಡನೆ); (ಬಣ್ಣ, ಮೊ. ನ್ನು) ತೇಯಿ, ಅರೆ (ರೂಪ. ಸಹ) (*Up* ಉಪ. ದೊಡನೆ). ಉಜ್ಜುತ್ತಿರು, ಘರ್ಷಣವಾಗು (*Against, on* ಉಪ. ದೊಡನೆ). (ಬೋಲ್ಸ್ ಚೆಂಡು: ನೆಲದ ಏರುಪೇರಿನಿಂದ) ಚಲನೆ ತಡೆಯಾಗು, ವಕ್ರವಾಗಿ ಹೋಗು. (ರೂಪ.) ಕಷ್ಟಪಟ್ಟುಕೊಂಡು ಮುಂದೆ ಸಾಗು (*On, along, through* ಉಪ. ದೊಡನೆ). (ಬಟ್ಟೆ, ಚರ್ಮ, ಮೊ. ವು) ಉಜ್ಜಿ, ಸವೆದು, ತರೆದು, ತೇದು, —ಹೋಗು. (R.-stone ಮಸೆಗಲ್ಲು, ಉಜ್ಜುಗಲ್ಲು). (ನಾ.) (ಕ್ರಿಯಾರ್ಥಗಳಲ್ಲಿ) (Give it a r., r.-up, r.-down). (ಬೋಲ್ಸ್ ಚೆಂಡಾಟದಲ್ಲಿ: ಚೆಂಡನ್ನು ತಡೆಯುವ ಅಥವಾ ವಕ್ರವಾಗಿ ಹೋಗುವಂತೆ ಮಾಡುವ) ನೆಲದ ಏರುಪೇರು; ಹೀಗೆ ಚೆಂಡು ವಕ್ರವಾಗಿ ಹೋಗುವುದು [Those who play at bowls must look for rubs (ಗಾದೆ)]. (ರೂಪ.) ಅಡ್ಡಿ, ಅಡಚಣೆ; ತೊಡಕು; ಕಷ್ಟ; ಘರ್ಷಣ (There's the r. ಅಲ್ಲೇ ಕಷ್ಟ ಹಿಡಿದುಕೊಳ್ಳುವುದು. The rubs & worries of life ಜೀವನದ ಕಷ್ಟಗಳು ಮತ್ತು ಜಂಜಾಟಗಳು, ಪಡುಪಾಟಲು). (ಗಾಲ್ಫ್ ಆಟ) R. of *or* on the green ಚೆಂಡಿನ ಸ್ಥಾನಕ್ಕೆ ಅಥವಾ ಗತಿಗೆ ಆಕಸ್ಮಿಕವಾಗಿ ಒದಗಿದ ಅಡಚಣೆ. **Rubber**[1] ರಬರ್ (ನಾ., ಕ್ರಿ. ಸಕ.) (ಕ್ರಿಯಾರ್ಥಗಳಲ್ಲಿ). ನೀವುವವನು(ಳು); ಸಂವಾಹಕ(ಹಿಕೆ); (ಶಾಖವಾಯು ಸ್ನಾನದಲ್ಲಿ) ನೀವುವ ಸೇವಕ. ಉಜ್ಜುವ ಸಲಕರಣೆ; ಘರ್ಷಕ [(ಯಂತ್ರ (ಭಾಗ)]. (ಇಂಡಿಯಾ) ರಬ್ಬರು [(ಕ್ರಿ.) ರಬ್ಬರಿನ ಲೇಪ ಕೊಡು]. Rubberneck (ಅಮೆ. ಸಂ. ಅಸಂ.) ಅತಿ ಕುತೂಹಲದಿಂದ ಕತ್ತೆತ್ತಿ ನೋಡುವ ನೋಟಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rub². **Rubber**² ನೋಡಿ.

Rúb-a-dub ರಬಡಬ್ (ನಾ., ಕ್ರಿ. ಅಕ.) ಡಬು ಡಬು ಸದ್ದು (ಮಾಡು)

Rubber¹. **Rub**¹ ನೋಡಿ.

Rúbber² ರಬರ್ (ನಾ.) (ವ್ಹಿಸ್ಟ್, ಮೊ. ಆಟಗಳಲ್ಲಿ) ಅದೇ ಆಟಗಾರರು ಅಥವಾ ಪಕ್ಷಗಳು ಎಡೆಬಿಡದೆ ಆಡುವ ಮೂರು ಆಟಗಳು : ಮೂರಾಟ (ಈ ಮೂರು ಆಟಗಳಲ್ಲಿ ಎರಡನ್ನು ಗೆದ್ದವರು ಗೆದ್ದ ಪಕ್ಷ ಎಂದು ಭಾವನೆ) (Have a r. of whist *or* a r.). The r. (ಸಂಕ್ಷಿಪ್ತ: the rub) ಈ ಮೂರಾಟದಲ್ಲಿ ಎರಡಾಟ ಗೆಲ್ಲುವುದು ; ಒಬ್ಬೊಬ್ಬರೂ ಒಂದೊಂದಾಟ ಗೆದ್ದಿರುವಾಗ ಆಡುವ ಮೂರನೆಯ ಆಟ.

Rúbbish ರಬಿಷ್ (ನಾ., ಭಾವ. ಅವ್ಯ.) ಕಸ, ಹೊಲಸು, ಕಳಪೆ, ಕೆಲಸಕ್ಕೆ ಬಾರದ್ದು, ಕಚಡ, ಮಣ್ಣು [A good riddance of bad r. (ತನಗೆ ಬೇಡವಾದವನು ತೊಲಗಿಹೋದಾಗ ಹೇಳುವ ಮಾತು) ಸದ್ಯ ಶನಿ ತೊಲಗಿತು ; ಅನಿಷ್ಟ ಬಿಡುಗಡೆ ಆಯಿತು]. ಅಸಂಬದ್ಧ ! ಶುದ್ಧ ಅವಿವೇಕ ! ಮಣ್ಣು ! (ಅನೇಕ ವೇಳೆ ತಿರಸ್ಕಾರದ ಉದ್ಗಾರ). **Rúbbishy** (ಗು.) ; **Rúbbishing** (ಗು.) (ಬಳ. ಮಾ.)

Rúbble ರಬ್'ಲ್ (ನಾ.) (ಹಳೆಯ ಕಟ್ಟಡಗಳನ್ನು ಕೆಡವಿದಾಗ ಸಿಕ್ಕುವ) ಕಲ್ಲು, ಇಟ್ಟಿಗೆ, ಮೊ. ಗಳ ಒಡ್ಡೊಡ್ಡ ಹೆಂಟೆಗಳು, ಗುಂಡುಗಳು, ಚೂರುಗಳು ; (ಮು., ಗೋಡೆ ಕಟ್ಟಡದಲ್ಲಿ ಭರ್ತಿಗಾಗಿ ತುಂಬುವ) ಒಡ್ಡೊಡ್ಡ ಕಲ್ಲುಗಳು, ಕಚ್ಚಾ ಕಲ್ಲು. (ಭೂ. ವಿ.) ಭೂಮಿಯ ಕೆಳಗೆ ಕೆಲವು ಬಂಡೆಗಳನ್ನು ಮುಸುಕಿಕೊಂಡಿರುವ ಏಣುಗಳುಳ್ಳ ಬಿಡಿ ಕಲ್ಲುಗಳು ; ನೀರು ಹರಿದು ಹರಿದು ಸವೆದ, ನುಣ್ಣನಾದ ಕಲ್ಲುಗಳು ; ಕಲ್ಲುರುಳಿಗಳು. **Rúbbly** (ಗು.)

Rúbefy, Rúbify ರೂಬಿಫೈ (ಕ್ರಿ. ಸಕ.) ಕೆಂಪು ಮಾಡು ; (ವೈ. ಶಾ. ; ಪ್ರತ್ಯುದ್ರೇಕಕಾರಿಗಳ ವಿಷಯದಲ್ಲಿ) (ಚರ್ಮ, ಮೊ. ನ್ನು) ಕೆಂಪಗೆ—ಕೆರಳಿಸು, ರೇಗಿಸು ; ಕೆಂಪಗೆ ಮಾಡು. **Rubefácient** —ಫೇಷೆಂಟ್ (ಗು., ನಾ.) (ಚರ್ಮದ ಮೇಲೆ ಬಳಿದರೆ ಅದನ್ನು) ಕೆಂಪಗೆ ಮಾಡುವ, ಕೆರಳಿಸುವ (ಔಷಧ) ; ಪ್ರತ್ಯುದ್ರೇಕಕಾರಿ. **Rubefáction** (ನಾ.)

Rúberoid ರೂಬಿರಾಯ್ಡ್ (ನಾ.) ಚಾವಣಿಗೆ ಉಪಯೋಗಿಸುವ, ಬಿಟ್ಯೂಮೆನ್ ವ್ಯಾಪನ ಮಾಡಿದ ಫೆಲ್ಟಿನ ಪದಾರ್ಥ (ವ್ಯಾಪಾರದ ಹೆಸರು)

Rubéscent ರೂಬೆಸೆಂಟ್ (ಗು.) ಕೆಂಪು ತಿರುಗುವ ; ಕೆಂಚಾಗುವ ; ಕೆಂಪೇರುವ. **Rubéscence** (ನಾ.)

Rúbicelle ರೂಬಿಸೆಲ್ (ನಾ.) ಕಿತ್ತಳೆಗೆಂಪಿನ ಒಂದು ಪ್ರಶಸ್ತ ಶಿಲೆ ; ಒಂದು ಬಗೆಯ ಉತ್ತಮ ಕೆಂಪು (ಹರಳು)

Rúbicon ರೂಬಿಕನ್ (ನಾ.) ಉ. ಇಟಲಿಯಲ್ಲಿ ಒಂದು ನದಿ. The R. (ರೋಮ್ ಪಟ್ಟಣದ ಆಕ್ರಮಣಕ್ಕೆ ನಿಶ್ಚಯಿಸಿ ಜೂಲಿಯಸ್ ಸೀಸರನು ತನ್ನ ಪ್ರಾಂತದ ಎಲ್ಲೆಯಾದ ರೂಬಿಕನ್ ನದಿಯನ್ನು ದಾಟಿದಂತೆ) ಯಾವ ಕೆಲಸವನ್ನು ಮಾಡಿದರೆ ಸಂಕಲ್ಪದಿಂದ ಹಿಮ್ಮೆಟ್ಟುವುದು ಸಾಧ್ಯವಿಲ್ಲವೋ ಆ ಕೆಲಸ. ಒಂದು ಕಾರ್ಯನಿರ್ವಾಹಕ್ಕೆ ಕಟ್ಟುಬೀಳುವುದು (Pass, cross, the R. ಹಿಮ್ಮೆಟ್ಟಲಾಗದಂತೆ ಮುಂದಡಿ ಇಟ್ಟುಬಿಡು). ಎಲ್ಲೆ, ಮೇರೆ, ಗಡಿ (ರೂಪ. ಸಹ)

Rúbicund ರೂಬಿಕಂಡ್ (ಗು.) (ಮುಖ, ಮುಖವರ್ಣ, ವ್ಯಕ್ತಿ) ಕೆಂಪನೆಯ, ಕೆಂಪಗಿರುವ, ಆರಕ್ತ. **Rubicúndity** (ನಾ.)

Rubídium ರೂಬಿಡಿಯಂ (ನಾ.) ಸೀಸಿಯಂ, ಲಿತಿಯಂ, ಸೋಡಿಯಂ ಮತ್ತು ಪೊಟ್ಯಾಸಿಯಂ ಲೋಹ ವರ್ಗಕ್ಕೆ ಸೇರಿದ, ಬೆಳ್ಳಿಯ ಬಣ್ಣದ ಒಂದು ಮೃದು ಲೋಹ : ರೂಬಿಡಿಯಂ.

Rubíginous ರೂಬಿಜಿನಸ್ (ಗು.) ತುಕ್ಕು—ಬಣ್ಣದ, ಹಿಡಿದ.

Rúbious. Ruby ನೋಡಿ.

Rúbric ರೂಬ್ರಿಕ್ (ನಾ.) ಕೆಂಪು ಮಸಿಯಲ್ಲಿ ಅಥವಾ ವಿಶೇಷ ತೆರದ ಅಕ್ಷರಗಳಲ್ಲಿ ಬರೆದ ಅಥವಾ ಮುದ್ರಿಸಿದ ಅಧ್ಯಾಯ, ಪ್ರಕರಣ, ಮೊ. ಗಳ ಹೆಸರು ; ಹೀಗೆ ಮುದ್ರಿಸಿದ್ದ ಸಾರ ವಾಕ್ಯ ; ವಿಶೇಷವಿಧಿ ವಾಕ್ಯ. ಚರ್ಚಿನ ಪೂಜಾ ವಿಧಾನ ಪುಸ್ತಕಗಳಲ್ಲಿ ಆರಾಧನೆಯ ಕ್ರಮದ (ಸಾ., ಕೆಂಪಕ್ಷರದಲ್ಲಿರುವ) ಸೂಚನೆ [**Rúbrical** (ಗು.) ; **Rúbrically** (ಕ್ರಿ. ವಿ.) ; **Rubrícian** —ಷ(ಷ್)ನ್ (ನಾ.) ; **Rúbricism** (ನಾ.) ; **Rúbricist** (ನಾ.)]. (ಈಗ ವಿರ. ಪ್ರ.) ಸಾಧುಸಂತರ ಪಟ್ಟಿ(ಯಲ್ಲಿ ಕೆಂಪಕ್ಷರದ ಸಂತನ ಹೆಸರು). **Rúbricate** (ಕ್ರಿ. ಸಕ.) ಕೆಂಪಿನಲ್ಲಿ ಗುರುತಿಸು, ಕೆಂಗುರುತು ಮಾಡು ; ಕೆಂಪು ಶಾಯಿಯಲ್ಲಿ, ಕೆಂಪಕ್ಷರದಲ್ಲಿ, —ಬರೆ, ಮುದ್ರಿಸು ; ಕೆಂಪಕ್ಷರದ ಶಿರೋನಾಮೆಗಳನ್ನು ಹಾಕು. **Rubricátion** (ನಾ.) ; **Rúbricator** (ನಾ.)

Rúby ರೂಬಿ (ನಾ., ಗು., ಕ್ರಿ. ಸಕ.) ಮಾಸಲು ಕೆಂಗುಲಾಬಿ ಬಣ್ಣದಿಂದ ಹಿಡಿದು ಕಡುಗೆಂಪು ಬಣ್ಣದ ವರೆಗೂ ಹಲವು ಛಾಯೆಗಳಲ್ಲಿರುವ ಕೆಂಪು ಪ್ರಶಸ್ತ ಶಿಲೆ : ಕೆಂಪು, ಪದ್ಮರಾಗ, ಮಾಣಿಕ್ಯ, (True *or* Oriental r. ಸಾಚಾ, ಅತ್ಯುತ್ತಮ, —ಕೆಂಪು. Balas, spinel, r. ಅಷ್ಟು ಪ್ರಶಸ್ತವಲ್ಲದ ಕೆಂಪಿನಂಥ ಹರಳುಗಳು. Above rubies ಅನರ್ಘವಾದ, ಅಮೂಲ್ಯವಾದ), ಊದಾ ಛಾಯೆಯ ಮಿರುಗು ಕೆಂಬಣ್ಣ(ದ) ; ಮಿರುಗೆಂಪು ಬಣ್ಣ(ದ). (ಮೂಗಿನ ಮೇಲಿನ ಅಥವಾ ಮುಖದ ಮೇಲಿನ) ಕೆಂಪು ಮೊಡವೆ. ಕೆಂಪು ದ್ರಾಕ್ಷಾ ಮದ್ಯ. (ಮುಷ್ಟಿಯುದ್ಧದಲ್ಲಿ) ರಕ್ತ. (ಮುದ್ರಣ) ಸಣ್ಣ ಅಕ್ಷರದ ಅಚ್ಚಿನ ಮೊಳೆ. (R. glass ತಾಮ್ರ, ಕಬ್ಬಿಣ, ಸೀಸ, ತವರ, ಮೊ. ಲೋಹಗಳ ಆಕ್ಸೈಡಿನಿಂದ ಬಣ್ಣಕೊಟ್ಟ ಗಾಜು : ಕೆಂಗಾಜು. R.-tail ಹೊಟ್ಟೆಯ ಊರ್ಧ್ವ ಭಾಗ ಕಡುಗೆಂಪಾಗಿದ್ದು ಮೈಯೆಲ್ಲ ದಟ್ಟ ನೀಲ ಹಸುರಾಗಿರುವ ಒಂದು ಕೀಟ). (ಕ್ರಿ.) ಕೆಂಬಣ್ಣ ಹಾಕು ; ಕೆಂಪಗೆ ಮಾಡು. **Rúbious** (ಗು.) (ಕಾವ್ಯ) ಕೆಂಪಿನ ಬಣ್ಣದ ; ಶೋಣಿತ.

Ruche (F) ರೂಷ್, ರ್ಯೂಷ್ (ನಾ.) (ಅಲಂಕಾರಕ್ಕಾಗಿ ಹಾಕಿದ) ನವಿರು ಜಾಲರಿ, ಜರತಾರಿ, ಮೊ. ಗಳ ಅಂಚು, ನಿರಿಗೆ. **Ruched** (ಗು.)

Ruck¹ ರಕ್ (ನಾ.) (ಓಟದ ಪಂದ್ಯದಲ್ಲಿ, ಸಾ., ಕುದುರೆಯ ಜೂಜಿನಲ್ಲಿ ; ಅತ್ಯಂತ ವೇಗಶಾಲಿಗಳು ಮುಂದೋಡಿದ್ದರಿಂದ) ಬಹಳ ಹಿಂಬಿದ್ದ ಉಳಿದ ಸ್ಪರ್ಧಿಗಳ ಗುಂಪು. ಸಾಮಾನ್ಯ ಗುಂಪು ; ಜಂಗುಳಿ.

Ruck² ರಕ್, **Rúckle**¹ ರಕ್'ಲ್ (ನಾ., ಕ್ರಿ.) ಸುಕ್ಕು, ತೆರೆ, ಮಡಿಕೆ, ನಿರಿ (ಆಗು, ಮಾಡು ; *Up* ಉಪ. ದೊಡನೆ)

Ruckle² ರಕ್'ಲ್ (ಕ್ರಿ. ಅಕ., ನಾ.) (ಮು., ಸಾಯುತ್ತಿರುವವನ ಗಂಟಲಿನ) ಗೊರ ಗೊರ ಶಬ್ದ (ಮಾಡು) ; ಶ್ವಾಸ ಕಡೆ(ತ)

Rúcksack (G) ರ(ರು)ಕ್'ಸ್ಯಾಕ್ (ನಾ.) ದಾರಿ ನಡೆಯುವವರೂ ಬೆಟ್ಟ ಹತ್ತುವವರೂ ತಮ್ಮ ಸಾಮಾನು ಹಾಕಿಕೊಳ್ಳುವ, ಎರಡೂ ಹೆಗಲಮೇಲಿಂದ ತೂಗಬಿಟ್ಟು ಬೆನ್ನಮೇಲೆ ಹೊತ್ತಿರುವ ಚೀಲ : ಬೆನ್ನ ಚೀಲ ; ಹಸುಬೆ.

Rúction ರಕ್ಷನ್ (ನಾ.) (ಅಸಂ.) ಗಲಭೆ, ಗಲಾಟೆ, ಗದ್ದಲ (There will be ructions ಗಲಾಟೆಗೆ ಇಟ್ಟುಕೊಳ್ಳುತ್ತದೆ ; ಸರಾಗವಾಗಿ, ಸುಗಮವಾಗಿ, —ನಡೆಯುವುದಿಲ್ಲ)

Rudd ರಡ್ (ನಾ.) ಒಂದು ಜಾತಿಯ ಸಿಹಿನೀರ ಮೀನು.

Rúdder ರಡರ್ (ನಾ.) (ಹಡಗಿನ) ಲೋಹದ ಅಥವಾ ಮರದ ಚುಕ್ಕಾಣಿ ಹಲಗೆ; (ರೂಪ.) ಮಾರ್ಗದರ್ಶಕ (ತತ್ತ್ವ, ಮೊ. ವು). (ಸಾರಾಯಿ ತಯಾರಿಕೆಯಲ್ಲಿ) ಮೊಳೆತ ಧಾನ್ಯವನ್ನು ಕಲಕುವ ಸಟ್ಟುಗ, ತೊಳಸುವ ಕೈ. R.-fish ಹಡಗನ್ನು ಹಿಂಬಾಲಿಸಿ ಹೋಗುವ ಹಲವು ಬಗೆಯ ಮೀನು : ಚುಕ್ಕಾಣಿ ಮೀನು. **Rúdderless** (ಗು.)

Rúddle ರಡ್'ಲ್ (ನಾ., ಕ್ರಿ. ಸಕ.) (ಮು., ಕುರಿಗಳಿಗೆ ಗುರುತು ಮಾಡಲು ಉಪಯೋಗಿಸುವ) ಕೆಂಪು ಕಾವಿ ಬಣ್ಣ (ಬಳಿ, —ದಿಂದ ಗುರುತು ಮಾಡು) ; ಕೆಂಗಾವಿ ಬಣ್ಣ (ಬಳಿ)

Rúddock ರಡಕ್ (ನಾ.) ರಾಬಿನ್ ಹಕ್ಕಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rúddy ರಡಿ (ಗು., ಕ್ರಿ.) (ಮುಖ, ವ್ಯಕ್ತಿ: ಗೆಲವಿನ, ಆರೋಗ್ಯದ ಲಕ್ಷಣವಾಗಿ) ಕೆಂಪು ಕಳೆಯ, ಗುಲಾಬಿ ರಂಗಿನ, ಮಿರುಗೆಂಪಿನ, ಕೆಂಗಳೆಯ (R. health, youth); (ಬೆಳಕು, ಬೆಂಕಿ, ಬಾನು, ಪ್ರಜ್ವಲಿತ ವಸ್ತು, ಮೊ. ವು) ಕೆಂಪು ಛಾಯೆಯ, ಕೆಂಚನೆಯ, ಆರಕ್ತ (ಪ್ರಾಣಿಗಳ ಹೆಸರಿನಲ್ಲಿ: R. plover, squirrel). (ಅಸಂ.) ಹಾಳಾದ; ಅನಿಷ್ಟ. (ಕ್ರಿ.) ಕೆಂಪೇರು, ಕೆಂಪೇರಿಸು; ಆರಕ್ತ —ಆಗು, ಮಾಡು. **Rúddily** (ಕ್ರಿ. ವಿ.); **Rúddiness** (ನಾ.)

Rude ರೂಡ್ (ಗು.) ವಿದ್ಯೆಯಿಲ್ಲದ, ಏನೂ ಅರಿಯದ; ಸಾದಾ; ಸರಳ; ಸ್ವಾಭಾವಿಕ ಸ್ಥಿತಿಯಲ್ಲಿಯ. ಪ್ರಾಕೃತ; ಕಚ್ಚಾ; ಒರ(ಟೊರ)ಟಾದ, ಒ(ಡ್ಡೊ)ಡ್ಡಾದ; ಅಪರಿಷ್ಕೃತ, ಅಸಂಸ್ಕೃತ, ಅನಾಗರಿಕ, ಅಶಿಕ್ಷಿತ, ಅಸಭ್ಯ, ಅವಿನೀತ, ನಯವಿಲ್ಲದ; ಸ್ಥೂಲ (R. times, men, simplicity, ignorance, chaos. R. ore, produce. R. plough, beginnings, methods. R. style, writer. R. version, classification). ತೀವ್ರ, ಕರ್ಕಶ, ಉಗ್ರ, ರಭಸದ, ಧರಾಟಿಯ, ಗಾಬರಿ ಮಾಡುವ, ಹಠಾತ್ತನೆಯ (R. passions, blast, awakening). ಹುರುಪಿನ, ಜೋರಾದ, ಗಟ್ಟಿಮುಟ್ಟಾದ (R. health); ಉದ್ಧತ, ಧಾರ್ಷ್ಟ್ಯದ; ಸೊಕ್ಕಿನ; ಅಪಮಾನಪಡಿಸುವ (Be r. to ಅಪಮಾನ ಮಾಡು). **Rúdely** (ಕ್ರಿ. ವಿ.); **Rúdeness** (ನಾ.); **Rúdish** (ಗು.)

Rúdiment ರೂಡಿಮೆಂಟ್ (ನಾ.) (ಬ. ವ. ದಲ್ಲಿ) (ಒಂದು ವಿಷಯದ) ಮೂಲ—ಪಾಠಗಳು, ತತ್ತ್ವಗಳು; ಓನಾಮ; ಆರಂಭದ, ಮೊದಲ, —ಪಾಠಗಳು (Of ಉಪ. ದೊಡನೆ ಸಹ). (ಬ. ವ. ದಲ್ಲಿ) (ಮುಂದೆ ಬೆಳೆಯುವ ಅಥವಾ ಬೇರೆ ಸನ್ನಿವೇಶದಲ್ಲಿ ಬೆಳೆಯಬಹುದಾಗಿದ್ದ) ಮೂಲ ಅಪೂರ್ಣ ರೂಪ, ಬೀಜ ರೂಪ, ಮೂರಾಂಕುರ. ಮೂರಾರಂಭ; ಆರಂಭ ಸ್ಥಿತಿ, ಪ್ರಾರಂಭಾವಸ್ಥೆ; ಅಪೂರ್ಣಾವಸ್ಥೆ, ಆದ್ಯವಸ್ಥೆ (Of ಉಪ. ದೊಡನೆ). ನಿಯತ ವ್ಯಾಪಾರವಿಲ್ಲದ, ಪೂರ್ಣಾವಸ್ಥೆಗೆ ಬೆಳೆಯದೆ ಇರುವ, ಅಂಗ (ಭಾಗ): ಅಂಕುರಾಂಗ, ಮೂರಾಂಗ (ಉದಾ., ಗಂಡಸಿನ ಮೊಲೆ). **Rudiméntal** (ಗು.) (ವಿರ. ಪ್ರ.); **Rudiméntary** (ಗು.)

Rue[1] ರೂ (ಕ್ರಿ. ಸಕ., ನಾ.) ಪಶ್ಚಾತ್ತಾಪ, ವ್ಯಥೆ, —ಪಡು; ಮರುಗು; ಕೊರಗು; ಮಾಡದೆ, ಆಗದೆ, ಇದ್ದಿದ್ದರೆ ಚೆನ್ನಾಗಿತ್ತಲ್ಲ ಎಂದು ನೊಂದುಕೊ, ಕುದಿ (You shall r. it ಅದಕ್ಕಾಗಿ ಆಮೇಲೆ ವ್ಯಥೆಪಡುತ್ತೀಯೆ). (ನಾ.) (ಪ್ರಾಚೀ. ಪ್ರ.) ಪಶ್ಚಾತ್ತಾಪ, ವಿಷಾದ, ವ್ಯಥೆ, ಕೊರಗು. **Ruéful** (ಗು.) [Knight of the r. countenance ಅಳುಮೋರೆಯ ವೀರ (Don Quixote)]. **Ruéfully** (ಕ್ರಿ. ವಿ.); **Ruéfulness** (ನಾ.) ಮರುಕ; ಕನಿಕರ.

Rue[2] ರೂ (ನಾ.) ನಾಗದಾಳಿಸೊಪ್ಪಿನ ಗಿಡ; ಹಾವುನಂಜಿನ ಗಿಡ (ಔಷಧವಾಗಿ ಉಪಯೋಗ)

Rué-raddy ರೂರ್‍ಯಾಡಿ (ನಾ.) ಭಾರವೆಳೆಯುವುದಕ್ಕಾಗಿ ಹೆಗಲ ಮೇಲೆ ಹಾಯುವಂತೆ ಹಾಕಿಕೊಳ್ಳುವ —ಹಗ್ಗ, ಪಟ್ಟಿ.

Rufléscent ರೂಫೆಸೆಂಟ್ (ಗು.) (ಪ್ರಾ. ವಿ., ಮೊ.) ನಸುಗೆಂಪಾದ, ಕೆಂಪು ಛಾಯೆಯ.

Ruff[1] ರಫ್ (ನಾ.) ಬಟ್ಟೆಗೆ ಗಂಜಿ ಹಾಕಿ ಬಿರುಸುಮಾಡಿ, ಮಡಿಕೆಗಳು ನಿರಿಯಾಗಿ ಸುತ್ತ ಚಾಚಿ ನಿಲ್ಲುವಂತೆ ಅಳವಡಿಸಿದ (೧೬ನೆಯ ಶ. ಮಾ. ದಲ್ಲಿ ಧರಿಸುತ್ತಿದ್ದ) ಒಂದು ಬಗೆಯ ಕೊರಲ ಸುತ್ತು. ಹಕ್ಕಿಯ ಕತ್ತಿನ ಸುತ್ತ ಚಾಚಿಕೊಂಡಿರುವ ಅಥವಾ ಆಳವಟ್ಟಿರುವ (ರಂಗಿನ) ಗರಿಗಳ ಸುತ್ತು, (ಅಥವಾ ಪ್ರಾಣಿಯ ವಿಷಯದಲ್ಲಿ) ಕೂದಲಿನ ಸುತ್ತು: ಕಂಠಾಭರಣ [(-)**ruffed** (ಗು.)]. ಒಂದು ಬಗೆಯ ಸಾಕಿದ ಪಾರಿವಾಳ.

Ruff[2] ರಫ್ (ನಾ., ಸ್ತ್ರೀ. Reeve ರೀವ್) (ಬೆದೆ ಕಾಲದಲ್ಲಿ ಗಂಡು ಜಾತಿಗೆ ಕಂಠಾಭರಣವೂ ಕಿವಿಜುಟ್ಟೂ ಇರುವ) ಒಂದು ಜಾತಿಯ ಹಕ್ಕಿ.

Ruff[3] ರಫ್ (ನಾ.) ಮುಳ್ಳು ಶಲ್ಕಗಳುಳ್ಳ ಒಂದು ಜಾತಿಯ ಸಿಹಿನೀರ ಮೀನು.

Ruff[4] ರಫ್ (ನಾ., ಕ್ರಿ.) (ಹ್ವಿಸ್ಟ್ ಇಸ್ಪೀಟಾಟದಲ್ಲಿ) ತುರುಫು ಆಡು(ವುದು); ತುರುಫಿನಿಂದ ಹೊಡೆ(ಯುವುದು); ಉಚಿತ ರಂಗಿನ ಎಲೆಗಳನ್ನು ಇಳಿಯುತ್ತ ಪರ್ಯಾಯ ಕ್ರಮದಲ್ಲಿ ತಾನೂ ತನ್ನ ಜೊತೆಗಾರನೂ ತುರುಫಿನಿಂದ ಹೊಡೆಯುತ್ತಿರುವುದು (= Cross *or* double r.)

Rúffian ರಫಿಯನ್ (ನಾ.) (ಕಾನೂನನ್ನು ಮೀರಿ ನಡೆಯುವ, ಯಾವುದಕ್ಕೂ ಹೇಸದ) ಘಾತುಕ; ಕಿರಾತ; ಕೊಲೆಪಾತಕ; ಕೊಲೆಗಡಕ. **Rúffianism** (ನಾ.); **Rúffianly** (ಕ್ರಿ. ವಿ.)

Rúffle ರಫ್‌ಲ್ (ಕ್ರಿ., ನಾ.) (ಗರಿ, ಕೂದಲು, ನೀರು, ಮನಸ್ಸು, ಮೊ.) ಚೆದರು, ಚೆದರಿಸು, ಕದಡು, ಕಲಕು, ಕಲಕಿಸು, ಕ್ಷೋಭೆಗೊಳಿಸು, ಕ್ಷೋಭೆಗೊಳ್ಳು, ನಲುಗಿಸು [Bird ruffles up its feathers ಹಕ್ಕಿ (ಕೋಪದಿಂದ, ಚಳಿಗಾಗಿ) ಗರಿ ಕೆದರುತ್ತದೆ. Nothing ever ruffled him ಯಾವುದೂ ಅವನ ಮನಸ್ಸನ್ನು ಎಂದಿಗೂ ಕದಡಲಿಲ್ಲ]. ಸೊಕ್ಕಿ ನಡೆ, ಜಬರ್ದಸ್ತು ತೋರು; ಅತಿಪ್ರತಿಷ್ಠೆ ಮಾಡು; ಬೆದರಿಸು, ಗೋಳುಗುಟ್ಟಿಸು; ಜಗಳವಾಡು, ಕಾದಾಡು [**Rúffler** (ನಾ.)]. (ನಾ.) ಕಲಕ, ಕ್ಷೋಭೆ, ತಲ್ಲಣ, ಕಳವಳ, ಗಡಿಬಿಡಿ (Without r. *or* excitement). ನೀರಿನಲ್ಲಿ ಸಣ್ಣ ತರಂಗವೆಬ್ಬಿಸುವ ಕಲಕ. ಉಡುಪಿನ ಕೈಪಟ್ಟಿ, ಎದೆಪಟ್ಟಿ, ಕೊರಲಪಟ್ಟಿ, ಮೊ. ಕ್ಕೆ ಅಲಂಕಾರ ಮಾಡಿದ ಜರತಾರಿ, ನಿರಿಗೆ, ಮೊ. ವು; (ಹಕ್ಕಿ, ಮೊ. ಗಳ) ಕೊರಲ ಗರಿ, ಕಂಠಾಭರಣ [**Rúffled** (ಗು.)]. (ಈಗ ವಿರ. ಪ್ರ.) ಹೋರಾಟ, ಕಾದಾಟ, ಜಗಳ. (ಸೈನಿಕ) ಭೇರಿಯ—ಸಣ್ಣ ಅದಿರುಲ, ಅನುಕಂಪನ ನಾದ.

Rúfous ರೂಫಸ್ (ಗು.) (ಮು., ಪ್ರಕೃತಿ ಚರಿತ್ರೆ) ಕೆಂಗಂದು ಬಣ್ಣದ. **Rufi-, Rufo-** (ಸ. ಪೂ. ಪ.)

Rug ರಗ್ (ನಾ.) (ದಪ್ಪ) ಕಂಬಳಿ; (ಜುಂಗು, ಮೊ. ಗಳಿಂದ ಮಾಡಿದ) ನೆಲಹಾಸು, ರತ್ನಗಂಬಳಿ (Hearth-r. ಒಲೆಯ ಮುಂದಿನ ಹಾಸು ಕಂಬಳಿ)

Rúgate. **Rugose** ನೋಡಿ.

Rugbeían. **Rugby** ನೋಡಿ.

Rúgby ರಗ್ಬಿ (ನಾ.) ಆಟಗಾರರು ಚೆಂಡನ್ನು ಕೈಯಲ್ಲಿ ತೆಗೆದುಕೊಂಡು ಹೋಗುವುದಕ್ಕೂ, ಹೀಗೆ ಮಾಡುವ ಎದುರಾಳಿಯನ್ನು ಹಿಡಿದು ತಡೆಗಟ್ಟುವುದಕ್ಕೂ ಅನುಮತಿಯಿರುವ ಒಂದು ಬಗೆಯ ಕಾಲ್ಚೆಂಡಾಟ: ರಗ್ಬಿ ಕಾಲ್ಚೆಂಡಾಟ [= R. football, Rugger (ಅಸಂ.). (ಮೊದಲು ಇಂಗ್ಲೆಂಡಿನ Rugby ಪಾಠಶಾಲೆಯಲ್ಲಿ ಈ ಆಟ ಪ್ರಾರಂಭವಾದ ಕಾರಣದಿಂದ)]. R. Union ರಗ್ಬಿ ಕಾಲ್ಚೆಂಡಾಟದ ಸಂಘಗಳ ಕೂಟ **Rugbeían** ರಗ್‌ಬೀಯನ್ (ನಾ., ಗು.) ಇಂಗ್ಲೆಂಡಿನ ರಗ್ಬಿ ಪಾಠ ಶಾಲೆಯ(ವನು)

Rúgged ರಗೆಡ್, ರಗಿಡ್ (ಗು.) ಒರ(ಟೊರ)ಟಾದ, ಒ(ಡ್ಡೊ)ಡ್ಡಾದ, ಏರುಪೇರುಗಳುಳ್ಳ, ಹಳ್ಳತಿಟ್ಟಾದ (R. bark ಒರಟು ತೊಗಟೆ. R. ground. R. country ಕಗ್ಗಾಡು, ಮೊರಡಿ, —ಪ್ರದೇಶ, ಪ್ರಾಂತ. R. features ಒಡ್ಡೊಡ್ಡು ಆಕಾರ). ನಯವಿಲ್ಲದ; ಮಾರ್ದವ ವಿಲ್ಲದ; ಅಪರಿಷ್ಕೃತ, ಅಸಂಸ್ಕೃತ; ಕರ್ಕಶ; ಕಟು; ನಿಷ್ಠುರ; ಬಿರುಸಾದ; ಜಗ್ಗದ; ಸಗ್ಗದ; ಕಷ್ಟದ; ಶ್ರಮದ (R. manners, grandeur, kindness, honesty, character, verse, times, life). **Rúggedly** (ಕ್ರಿ. ವಿ.); **Rúggedness** (ನಾ.)

Rúgger. **Rugby** ನೋಡಿ.

Rugóse ರೂಗೋಸ್ (ಗು.) (ಮು., ಪ್ರಕೃತಿ ಚರಿತ್ರೆ) ಸುಕ್ಕು ಸುಕ್ಕಾದ, ಮಡಿಕೆ ಬಿದ್ದ. **Rúgate** (ಗು.) = Rugose. **Rugósely** (ಕ್ರಿ. ವಿ.); **Rugósity** ರುಗಾಸಿಟಿ (ನಾ.); **Rúgous** ರೂಗಸ್ (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ruhmkorff coil ರ್ಯುಮ್‌ಕಾರ್ಫ್ ಕಾಯ್‌ಲ್ (ನಾ.) ಒಂದು ಬಗೆಯ ವಿದ್ಯುಚ್ಛೋದಕ ಕುಂಡಲಿ (ಕಲ್ಪಕನ ಹೆಸರಿನಿಂದ)

Rúin ರೂಯ್(ಯಿ)ನ್ (ನಾ., ಕ್ರಿ.) (ಕಟ್ಟಡದ) ಬೀಳು, ಹಾಳು, ಅಳಿವು, ನಾಶ, ಧ್ವಂಸ (ರೂಪ. ಸಹ) [Lie in ruins. Bring to r. ಆಸ್ತಿ, ಪದವಿ, ಮೊ. ಗಳನ್ನೆಲ್ಲ ಕಳೆದುಕೊಳ್ಳುವಂತೆ ಮಾಡು; ಸಂಪೂರ್ಣವಾಗಿ ಹಾಳು ಮಾಡು; ಸರ್ವನಾಶ ಮಾಡು; ಮುಳುಗಿಸಿಬಿಡು. Rack & r. (Rack[1] ನೋಡಿ)]. (ಅನೇಕ ವೇಳೆ ಬ. ವ. ದಲ್ಲಿ) (ಕಟ್ಟಡ, ಪಟ್ಟಣ, ಮೊ. ಗಳ) ಅಳಿದುಳಿದದ್ದು, ಪಾಳು, ಅವಶೇಷ (The ruins of Rome ರೋಮ್ ಪಟ್ಟಣದ, ರೋಮ್ ಸಾಮ್ರಾಜ್ಯ ಪದ್ಧತಿಯ, —ಭಗ್ನಾವಶೇಷಗಳು. Lives in an old r. ಒಂದು ಹಳೆಯ ಮುರುಕು ಕಟ್ಟಡದಲ್ಲಿ ವಾಸಿಸುತ್ತಾನೆ). ನಾಶ ಕಾರಣ, ವಿನಾಶ ಕಾರಿ (Drink will be the r. of him. Blue r. ಕೆಟ್ಟ 'ಜಿನ್' ಮದ್ಯ). (ಕ್ರಿ.) ಹಾಳುಗೆಡವು; ನಾಶ, ಧ್ವಂಸ, —ಮಾಡು, ಎಬ್ಬಿಸು (R. girl ಹುಡುಗಿಯನ್ನು —ಮಾನಭಂಗಮಾಡು, ಕೆಡಿಸು). (ಕಾವ್ಯ) ರಭಸದಿಂದ, ಧಡೀರನೆ, —ಬೀಳು. **Ruinátion** (ನಾ.); **Rúinous** (ಗು.) ಪಾಳುಬಿದ್ದ, ಹಾಳಾದ, ಭಗ್ನ; ಹಾಳುಮಾಡುವ, ನಾಶಕಾರಕ (R. folly, expense). **Rúinously** (ಕ್ರಿ. ವಿ.); **Rúinousness** (ನಾ.)

Rule ರೂಲ್ (ನಾ.) ನಿಯಮ, ವಿಧಿ, ಸೂತ್ರ, ನಿಬಂಧನೆ, ಕಟ್ಟು, ಕಟ್ಟಳೆ [R. of the road (Road[1] ನೋಡಿ). Standing r. ಒಂದು ಸಂಸ್ಥೆ ತನ್ನ ಕಾರ್ಯನಿರ್ವಹಣಕ್ಕಾಗಿ ಮಾಡಿಕೊಳ್ಳುವ ನಿಯಮ, ಸೂತ್ರ: ಕಾರ್ಯಸೂತ್ರ; ಸ್ಥಾಯೀ ನಿಯಮ. R. of thumb ಅಭ್ಯಾಸದ ನೆಪ್ಪು ('ಕೈ ತೂಕ ಬಾಯಿ ಬಣ್ಣ' ಎಂಬಂತೆ) (R.-of-t. ವಿಶೇಷಣ ಪ್ರ.). R. of three (ಗಣಿತ) ತ್ರೈರಾಶಿ (R.-of-t. ವಿಶೇಷಣ ಪ್ರ.). Golden r. (Golden ನೋಡಿ). By r. ನಿಯಮ ಪ್ರಕಾರ; ಯಂತ್ರಪ್ರಾಯವಾಗಿ. Work to r. (Work ನೋಡಿ). Hard and fast r. ಕಟ್ಟುನಿಟ್ಟಾದ, ಬಹು ಬಿಗಿಯಾದ, —ನಿಯಮ. The exception proves the r. (Except ನೋಡಿ). As a r. ವಾಡಿಕೆಯಾಗಿ, ಸಾಮಾನ್ಯವಾಗಿ]. ಆಳಿಕೆ, ಪ್ರಭುತ್ವ, ಅಧಿಕಾರ, ಆಧಿಪತ್ಯ (Bear r. ಪ್ರಭುತ್ವಮಾಡು). (ಮಠೀಯ ನ್ಯಾಯ) ಸಂನ್ಯಾಸಿ ಪಂಥದವರ—ವಿಧಿ, ಆಚಾರ. (ನ್ಯಾ. ಶಾ.) ನಿರ್ದಿಷ್ಟ ವ್ಯವಹಾರಕ್ಕೆ ಅನ್ವಯಿಸುವಂತೆ ಮಾತ್ರ ನ್ಯಾಯಾಧೀಶನಾಗಲಿ ನ್ಯಾಯಸ್ಥಾನವಾಗಲಿ ಮಾಡಿದ ಆಜ್ಞೆ, ಕಟ್ಟಳೆ [R. nisi (Nisi ನೋಡಿ). R. absolute ನಿರುಪಾಧಿಕ ಆಜ್ಞೆ]. [(ಚರಿತ್ರೆ) The rules ಸೆರೆಯಾಳುಗಳು ಕೆಲವು ಷರತ್ತುಗಳ ಮೇಲೆ ಕೆಲವು ಸೆರೆಮನೆಗಳ ಹೊರಗೆ ವಾಸಮಾಡಲು ಅವಕಾಶವಿರುತ್ತಿದ್ದ ಗೊತ್ತಿನ ಎಲ್ಲೆ]. (ಬಡಗಿಗಳು, ಮೊ. ರು ಉಪಯೋಗಿಸುವ, ಸಾ., ಕೀಲುಗೂಡಿಸಿರುವ) ಅಡಿಕಡ್ಡಿ, ಅಳತೆಕೋಲು (Foot-r.; 2 ft r.). (ಮುದ್ರಣ: ಶಿರೋನಾಮೆ, ಅಂಕಣ ವಿಭಾಗ, ಮೊ. ನ್ನು ಪ್ರತ್ಯೇಕಿಸಲು ಉಪಯೋಗಿಸುವ) ಗೆರೆ, ಗೀಟು, —ಪಟ್ಟಿ; (ವಿರಾಮ ಚಿಹ್ನೆಯಾಗಿ) ಗೆರೆ, ಗೀಟು (En r. ಸಣ್ಣ ಅಡ್ಡ ಗೀಟು. Em r. ದೊಡ್ಡ, ಉದ್ದ, —ಅಡ್ಡಗೀಟು). [R.-joint ಬಡಗಿಯ ಅಳತೆಕಡ್ಡಿಯಲ್ಲಿಯಂಥ ಕೀಲು]. **Rúleless** (ಗು.)

Rule (ಕ್ರಿ.) ಆಳು; ಆಳಿಕೆ ನಡಸು; ಪ್ರಭುತ್ವ, ಆಧಿಪತ್ಯ, ಅಧಿಕಾರ, —ಮಾಡು, ನಡಸು [R. the roast (Roast ನೋಡಿ). Kings should r. by love]; ಅಧೀನದಲ್ಲಿ, ಅಂಕೆಯಲ್ಲಿ, —ಇಡು, ಇಟ್ಟುಕೊ; ವಶದಲ್ಲಿಟ್ಟುಕೊ, ನಿಗ್ರಹಿಸು (Ruling passion ವಾಡಿಕೆಯಾಗಿ ಒಬ್ಬನ ಕಾರ್ಯಗಳನ್ನು ಪ್ರಚೋದಿಸುವ ಮುಖ್ಯ ಭಾವಾವೇಗ: ಪ್ರಬಲ ಭಾವಾವೇಗ, ಮನೋಭಾವ; ಪ್ರಧಾನ ಮನೋಧರ್ಮ). (ಕರ್ಮಣಿ) ಹೇಳಿದಂತೆ ಕೇಳು, ಅಧೀನನಾಗಿ ನಡೆ, ತಗ್ಗಿ ನಡೆ (Be ruled by). (ಬೆಲೆಗಳು, ಸರಕುಗಳು, ಮೊ. ಗಳ ವಿಷಯದಲ್ಲಿ) ಒಂದು ಮಟ್ಟದಲ್ಲಿ —ಇರು, ನಡೆ (Corn, prices, the market, ruled high. Ruling prices ಈಗಿನ, ಚಾಲ್ತಿ, —ಧಾರಣೆ, ಬೆಲೆ). ನಿರ್ಣಯ —ಕೊಡು, ಮಾಡು; ತೀರ್ಪು ಹೇಳು (*That* ಪದದೊಡನೆ) (R. person *or* thing out of order ವ್ಯಕ್ತಿಯನ್ನು, ವಿಷಯವನ್ನು, ಕ್ರಮ ಬಾಹಿರವೆಂದು ನಿರ್ಣಯಕೊಡು. Rule out ತಳ್ಳಿಹಾಕು, ವರ್ಜಿಸು; ಅಸಂಬದ್ಧ, ಅನರ್ಹ, ಅಕ್ರಮ, —ಎಂದು ನಿರ್ಣಯಿಸು). (ಕಾಗದ, ಮೊ. ಗಳ ಮೇಲೆ, ರೂಲುದೊಣ್ಣೆಯಿಂದ ಅಥವಾ ಇತರ ಯಾಂತ್ರಿಕ ಸಲಕರಣೆಯಿಂದ, ಸಮಾನಾಂತರದ) ಗೆರೆಗಳನ್ನು ಹಾಕು, ರೂಲುಹಾಕು. **Rúling** (ನಾ.) (ಕ್ರಿಯಾರ್ಥಗಳಲ್ಲಿ); (ಮು.) ತೀರ್ಪು, ನಿರ್ಣಯ. **Rúler** (ನಾ.) ಆಳುವವನು, ಪ್ರಭು, ದೊರೆ, ರಾಜ. ಗೆರೆ (ಹಾಕುವ)—ಕಡ್ಡಿ, ಉರುಳೆ; ರೂಲುದೊಣ್ಣೆ. **Rúlership** (ನಾ.)

Rúlley, Rol- ರಲಿ (ನಾ.) ನಾಲ್ಕು ಚಕ್ರಗಳ ಗಿಡ್ಡ ಚಪ್ಪಟೆ ಸಾಮಾನುಬಂಡಿ ಅಥವಾ 'ಲಾರಿ'.

Rum[1] ರಂ (ನಾ.) ಕಬ್ಬಿನಿಂದ ಭಟ್ಟಿಯಿಳಿಸಿದ ಮದ್ಯ; ಬೆಲ್ಲದ ಸಾರಾಯಿ; ರಂ ಮದ್ಯ [R.-shrub (Shrub ನೋಡಿ)]. (ಅಮೆ. ಸಂ.) ಮಾದಕ ದ್ರವ, ಮದ್ಯ. R.-runner (ಅಮೆ. ಸಂ. ಬಳ. ಮಾ.) ನಿಷಿದ್ಧ ಮಾದಕದ್ರವಗಳನ್ನು ಕಳ್ಳತನದಿಂದ ಸಾಗಿಸುವ —ಮನುಷ್ಯ, ಹಡಗು. R.-running (ನಾ.); R. row (ಅಮೆ. ಸಂ. ಬಳ. ಮಾ.) ಮಾದಕ ದ್ರವಗಳ ಕಳ್ಳ ವ್ಯಾಪಾರದ ಹಡಗು ತಂಗುವ ಸ್ಥಳ (ಇದು ನಿಷಿದ್ಧ ಪ್ರದೇಶದ ಹೊರಗಿರುತ್ತದೆ)

Rum[2] ರಂ, **Rúmmy** ರಮಿ (ಗು.) (ಅಸಂ.) ವಿಚಿತ್ರದ, ವಿಜಾತೀಯ, ವಿಲಕ್ಷಣವಾದ. R. customer ವ್ಯವಹರಿಸಲು, ನಿರ್ವಹಿಸಲು, ಅಪಾಯಕರವಾದ ಮನುಷ್ಯ, ಪ್ರಾಣಿ; ಅಸಾಧ್ಯದ ಮನುಷ್ಯ, —ಪ್ರಾಣಿ. R. start (ಅಸಂ.) ಆಶ್ಚರ್ಯಕರವಾದ ಘಟನೆ. **Rúmly** (ಕ್ರಿ. ವಿ.); **Rúmmily** (ಕ್ರಿ. ವಿ.); **Rúmness** (ನಾ.); **Rúmminess** (ನಾ.)

Rúmble ರಂಬ್‌ಲ್ (ನಾ., ಕ್ರಿ.) ಮೊಳಗು, ಗುಡುಗು(ಟ್ಟು); ಗಡ ಗಡ ಸದ್ದು (ಮಾಡು); (ಬಂಡಿ) ಗಡ ಗಡನೆ ಸದ್ದು ಮಾಡುತ್ತ, (ಮನುಷ್ಯ) ಗಡ ಗಡನೆ ಸದ್ದು ಮಾಡುವ ಬಂಡಿಯಲ್ಲಿ—ಹೋಗು (*Along, by* ಮೊ. ಉಪ. ದೊಡನೆ); ಗುಡುಗುತ್ತ, ಗಡ ಗಡನೆ, ಹೇಳು (*Out, forth* ಮೊ. ಉಪ. ದೊಡನೆ). ಸಾಮಾನು ತುಂಬುವುದಕ್ಕೆ ಅಥವಾ ಜವಾನರು, ಮೊ. ರು ಕುಳಿತುಕೊಳ್ಳುವುದಕ್ಕೆ ಉಪಯೋಗಿಸುವ, ಬಂಡಿಯ ಹಿಂಭಾಗ. **R.-tumble** ಗಡ ಗಡ ಸದ್ದಿನ —ಬಂಡಿ, ಚಲನೆ.

Rumbústious ರಂಬಸ್ಟಿಯಸ್, —ಬಸ್ಚಸ್ (ಗು.) (ಬಳ. ಮಾ.) ಗದ್ದಲದ, ಅಬ್ಬರದ; (ನಡೆವಳಿ) ಹತೋಟಿ ಮೀರಿದ, ಅಂಕೆಗೆಟ್ಟ.

Rúmen ರೂಮೆನ್ (ನಾ.) ಮೆಲುಕು ಹಾಕುವ ಪ್ರಾಣಿಯ ಮೊದಲ ಹೊಟ್ಟೆ.

Rúminant ರೂಮಿನಂಟ್ (ಗು., ನಾ.) ಮೆಲುಕು ಹಾಕುವ (ಪ್ರಾಣಿ); ರೋಮಂಥ ಪ್ರಾಣಿ [ವರ್ಗ(ದ)]. ಮನಸ್ಸಿನಲ್ಲೇ ತಿರುವಿಹಾಕುವ; ಧ್ಯಾನಮಗ್ನ, ಧ್ಯಾನಪರ; ಚಿಂತನಶೀಲ. **Rúminate** (ಕ್ರಿ.) ಮೆಲುಕು ಹಾಕು. ಮನಸ್ಸಿನಲ್ಲೇ ತಿರುವಿಹಾಕು; ಚಿಂತನ ಮಾಡು, ಮನನ ಮಾಡು (ಅನೇಕ ವೇಳೆ *over, about, of, on* ಉಪ. ದೊಡನೆ). **Rúminative** (ಗು.); **Rúminatively** (ಕ್ರಿ. ವಿ.); **Rúminator** (ನಾ.); **Rúmination** (ನಾ.)

Rúmmage ರಮೆ(ಮಿ)ಜ್ (ಕ್ರಿ., ನಾ.) (ಹಡಗು, ಮನೆ, ಜೇಬು, ದಾಖಲೆ, ಪುಸ್ತಕ, ಮೊ. ನ್ನು) ಚೆಲ್ಲಾಪಿಲ್ಲಿ ಮಾಡುತ್ತ —ಹುಡುಕು, ಶೋಧಿಸು; ಜಾಲಿಸಿ ನೋಡು; ಶೋಧಿಸಿ, ಹುಡುಕಿ, —ತೆಗೆ, ಎತ್ತು (*Out, up* ಉಪ. ದೊಡನೆ); ಹುಡುಕುವಲ್ಲಿ —ಕೆದರಾಡು, ಚೆಲ್ಲಾಪಿಲ್ಲಿ ಮಾಡು, ಎಸೆದಾಡು (*About* ಉಪ. ದೊಡನೆ). (ನಾ.) ಹುಡುಕಾಡಿ ತೆಗೆದದ್ದು; ಕಲಬೆರಕೆ ಒಟ್ಟಿಲು, ಹರುಕು ಮುರುಕು ಸಾಮಾನು. ಹುಡುಕಾಟ, ಶೋಧನೆ (ಮು., ಸುಂಕದ ಅಧಿಕಾರಿ ಮಾಡುವ ಹಡಗಿನ ಶೋಧನೆ). R.-sale (ಹಡಗುಕಟ್ಟೆ, ಮೊ. ಗಳಲ್ಲಿ) ಬೇವಾರಸು ಸರಕುಗಳ ತೀರಿಕೆಯ ಮಾರಾಟ. ಧರ್ಮ ಕೆಲಸದ ಸಹಾಯಾರ್ಥವಾಗಿ ಸಂಗ್ರಹಿಸಿದ ನಾನಾ ಬಗೆಯ ಚಿಲ್ಲರೆ ವಸ್ತುಗಳ ಮಾರಾಟ.

Rúmmer ರಮರ್ (ನಾ.) ದೊಡ್ಡ ಗಾಜು ಲೋಟ, ಬಟ್ಟಲು (ಮು., ಮದ್ಯದ ಬಟ್ಟಲು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rúmmy. **Rum**[2] ನೋಡಿ.

Rúmour ರೂಮರ್ (ನಾ., ಕ್ರಿ. ಸಕ.) ಬೀದಿ —ಮಾತು, ಸುದ್ದಿ; ಹಾರು ಸುದ್ದಿ; ವದಂತಿ; ಗಾಳಿ —ಸಮಾಚಾರ, ವರ್ತಮಾನ; ಜನರ ಆಡಿಕೆ (*A*, *the*, r.) (*That*, *of* ಪದಗಳೊಡನೆ). (ಕ್ರಿ.) (ಮು., ಕರ್ಮಣಿ) ಸುದ್ದಿ ಹರಡು, ವದಂತಿ ಇರು (It is rumoured that —ಎಂದು ವದಂತಿ ಇದೆ)

Rump ರಂಪ್ (ನಾ.) (ಪ್ರಾಣಿಯ, ಹಕ್ಕಿಯ) ಬಾಲ ಹುಟ್ಟುವ ಭಾಗ, ಹಿಂಭಾಗ; ಪೃಷ್ಠ. (ಶಾಸನ ಸಭೆ, ಮೊ. ಗಳ) ಅಲ್ಪ ಸಂಖ್ಯೆಯ ಕೊನೆಯುಳಿಕೆ ಸದಸ್ಯರು, ಶೇಷ ಭಾಗ. Rumpsteak ಎತ್ತಿನ ರೊಂಡಿಯ ಮಾಂಸದ ತುಂಡು. **Rúmpless** (ಕೋಳಿಯ ವಿಷಯದಲ್ಲಿ) ಪುಕ್ಕವಿಲ್ಲದ. **Rúmpy** ರಂಪಿ (ನಾ.) ಒಂದು ಜಾತಿಯ ಬಾಲವಿಲ್ಲದ ಬೆಕ್ಕು.

Rúmple ರಂಪ್‌ಲ್ (ಕ್ರಿ. ಸಕ.) (ಬಟ್ಟೆ, ಎಲೆ, ಉಡುಪು, ಕೂದಲು, ಮೊ. ನ್ನು) ಸುಕ್ಕುಮಾಡು, ಮಡಿಕೆ ಬೀಳಿಸು, ಕೆದರು, ಮುದುರು.

Rúmpus ರಂಪಸ್ (ನಾ.) (ಅಸಂ.) ಗದ್ದಲ, ಗಲಭೆ, ಕೋಲಾಹಲ, ರಂಪ.

Rúmpy. **Rump** ನೋಡಿ.

Rum-tum ರಮ್‌ಟಮ್ (ನಾ.) ಇಂಗ್ಲೆಂಡಿನ ತೇಮ್ಸ್ ನದಿಯಲ್ಲಿ ಸಂಚರಿಸುವ ಹಗುರವಾದ ಹುಟ್ಟು ದೋಣಿ.

Run ರನ್ (ಕ್ರಿ.; ಭೂತ. ran ರ್‍ಯಾನ್, ಭೂ. ಕೃ. run) ಓಡು, ಧಾವಿಸು (Running jump ಓಡಿ ಬಂದು ನೆಗೆಯುವ ನೆಗೆತ; ಓಡು ನೆಗೆತ). (ಕ್ರಿಕೆಟ್) (ಗುರಿಕೋಲುಗಳ ನಡುವೆ) ಗೆಲ್ಲಂಕವಾಗಿ ಓಡು, ಓಟ ಮಾಡು. ಓಟ ಕೀಳು, ಓಡಿಹೋಗು, ಪಲಾಯನಮಾಡು [Cut & r. ಪರಾಯನಮಾಡು. Running fight (ನಾವೆ) ಅಟ್ಟಿಸಿಕೊಂಡು ಬರುತ್ತಿರುವ ಹಡಗಿನೊಂದಿಗೆ (ಹಡಗು ಪಡೆಯೊಂದಿಗೆ) ಪಲಾಯನಮಾಡುತ್ತಿರುವ ಹಡಗು (ಪಡೆ) ನಡಸುವ ಕದನ: ಪಲಾಯನ ಕದನ]. ಅವಸರವಸರವಾಗಿ, ತರಾತುರಿಯಾಗಿ, —ಹೋಗು, ಪ್ರಯಾಣಮಾಡು; ದುಡುಕು [R. to meet one's troubles ಕಷ್ಟಗಳನ್ನು ನಿರೀಕ್ಷಿಸಿ ಧಾವಂತಪಡು. R. riot (Riot ನೋಡಿ). R. *over*, *down*, *up* ಒಂದು ಸ್ಥಳಕ್ಕೆ ಅವಸರದ ಭೇಟಿ ಕೊಡು; ಸ್ವಲ್ಪ ಬಂದು ಹೋಗು. He who runs may read (ವಿವರಣೆ, ಮೊ. ವು) ಸುಲಭವಾಗಿ ಅರ್ಥವಾಗುತ್ತದೆ; ಸ್ಪಷ್ಟವಾಗಿದೆ]. ಕಾಡಾಗಿ, ಹುಚ್ಚಾಬಟ್ಟೆ, —ಬೆಳೆ, ಹರಡು (Wild ಪದದೊಡನೆ). (ಪಂದ್ಯದಲ್ಲಿ) ಸ್ಪರ್ಧಿಸು (R. second ಎರಡನೆಯವನಾಗಿ ಬರು). (ಚುನಾವಣೆಯಲ್ಲಿ ಶಾಸನ ಸಭೆ, ಮೊ. ಕ್ಕೆ) ಉಮೇದುವಾರನಾಗಿ ನಿಲ್ಲು (*For* ಉಪ. ದೊಡನೆ). (ಹಡಗು, ಮೀನು, ಮೊ. ವು) ನೇರವಾಗಿ ವೇಗದಿಂದ ಹೋಗು [A running whale. Ship runs ashore —ದಡ ಹತ್ತುತ್ತದೆ. Salmon r. —ಸಮುದ್ರದಿಂದ ನದಿಯ ಮೇಲುಭಾಗಕ್ಕೆ ಮೊಟ್ಟೆಯಿಡಲು ಹೋಗುತ್ತವೆ. To r. foul of *or* aboard another (ಹಡಗು) ಮತ್ತೊಂದು ಹಡಗಿಗೆ —ಡಿಕ್ಕಿ ಹೊಡೆ, ತೊಡರಿಕೊ]. ಗಾಲಿಗಳ ಮೇಲೆ ಹೋಗು; ಉರುಳು; ಚಲಿಸು; ಅಕ್ಷದಮೇಲೆ (ಹೇಗೋ ಹಾಗೆ) ಸುತ್ತು; ಉರುಳಿಕೊಂಡು, ಜಾರಿಕೊಂಡು, —ಹೋಗು; ಸರಾಗವಾಗಿ —ನಡೆ, ಕೆಲಸಮಾಡು; ಚಲಾವಣೆಯಲ್ಲಿರು, ವ್ಯವಹಾರದಲ್ಲಿರು, ನಡೆಯುತ್ತಿರು [Ball, carriage, wheel, spindle, sledge, time, runs. His life runs smoothly. Running knot ಕುಣಿಕೆಯನ್ನು ಕುಗ್ಗಿಸುತ್ತ ಅಥವಾ ಹಿಗ್ಗಿಸುತ್ತ ಹಗ್ಗದಲ್ಲಿ ಸರಿದಾಡುವ ಗಂಟು: ಸರಿಗುಣಿಕೆಯ ಗಂಟು. Running hand (ಲೆಕ್ಕಣಿಕೆಯನ್ನು ಮೇಲೆತ್ತದೆ ಬರೆಯುವ) ಮೋಡಿ —ಅಕ್ಷರ, ಬರವಣಿಗೆ. How your tongue runs! ಏನು ಎಡೆಬಿಡದೆ ಮಾತನಾಡುತ್ತೀಯೆ! ನಿನ್ನ ನಾಲಗೆಗೆ ತಡೆಬಡೆಯೇ ಇಲ್ಲ! Verse runs ಪದ್ಯ ಸರಾಗವಾಗಿ ಓಡುತ್ತದೆ. Tune runs in the head ರಾಗ ತಲೆಯಲ್ಲಿ ಮೊರೆಯುತ್ತಿದೆ, ಪ್ರತಿಧ್ವನಿಸುತ್ತಿದೆ. Contract runs for seven years ಒಪ್ಪಂದ ಏಳು ವರ್ಷ ನಡೆಯುತ್ತದೆ. Play ran 100 nights ಆ ನಾಟಕ ೧೦೦ ರಾತ್ರಿ ನಡೆಯಿತು, ಆಡಿತು. Courage runs in the family ಆ ಮನೆತನದಲ್ಲಿ ಧೈರ್ಯ ಹರಿದುಬರುತ್ತದೆ. The works have ceased running ಕಾರಖಾನೆ ಕೆಲಸಮಾಡುತ್ತಿಲ್ಲ; ಕಾರಖಾನೆಯ ಕೆಲಸ ನಿಂತುಹೋಗಿದೆ. Place where writs do not r. ಆಜ್ಞೆಗಳು ಊರ್ಜಿತವಾಗದ, ಮನ್ನಣೆ ಪಡೆಯದ, —ಸ್ಥಳ]. (ಸಾರ್ವಜನಿಕ ಬಂಡಿ, ಮೊ. ವು) ಸ್ಥಳದಿಂದ ಸ್ಥಳಕ್ಕೆ) ಓಡಾಡು (*From*, *to*, *between* ಉಪ. ದೊಡನೆ). (ಬೆಂಕಿ, ಸುದ್ದಿ, ಮೊ. ವು) ಬೇಗನೆ ಹಬ್ಬು, ಹರಡು, ವ್ಯಾಪಿಸು, ಪ್ರಸರಿಸು (News ran like wildfire ಸುದ್ದಿ ಕಾಳ್ಕಿಚ್ಚಿನಂತೆ ಹಬ್ಬಿತು. Running fire ಬೇರೆ ಬೇರೆ ಸ್ಥಳಗಳಿಂದ ಅನುಕ್ರಮವಾಗಿ ಹಾರಿಸಿದ ಗುಂಡು ಹೊಡೆತ). (ಬಟ್ಟೆಯ ಬಣ್ಣ: ಬಣ್ಣ ಹಾಕಿರುವ ಭಾಗದಿಂದ ಬಣ್ಣಹಾಕದ ಭಾಗಕ್ಕೆ) ಹರಡಿಕೊ. (ಯೋಚನೆ, ದೃಷ್ಟಿ, ಸ್ಮೃತಿ, ಮೊ. ವು) ಓಡು, ಹರಿ (Thoughts r. through one's head. Running commentary ಅಲ್ಲೊಂದು ಇಲ್ಲೊಂದು ಅಂಶವನ್ನು ಕುರಿತು ಮಾಡುತ್ತಾ ಹೋಗುವ ವ್ಯಾಖ್ಯಾನ, ಟೀಕೆ: ಗಚ್ಛದ್‌ವ್ಯಾಖ್ಯಾನ. R. back over the past ಸಿಂಹಾವಲೋಕನ ಮಾಡು). (ದ್ರವ, ಕಾಳು, ಮರಳು, ಪಾತ್ರೆ, ಮೊ.) ಹರಿ, ಸುರಿ, ಸೋರು, ಚೆಲ್ಲು, ಉಕ್ಕು, ಸೂಸು, ತೊಟ್ಟಿಕ್ಕು, ಸ್ರವಿಸು (Till the blood ran. Fountains r. wine. Feeling ran high. One's blood runs cold ಗಾಬರಿಯಾಗುತ್ತದೆ, ಭಯವಾಗುತ್ತದೆ. The sands are running out ಕಾಲಾವಧಿ ಮುಗಿಯುತ್ತಿದೆ. Running sore ಕೀವು ಸುರಿಯುತ್ತಿರುವ ಹುಣ್ಣು. Nose runs ಮೂಗು ಸುರಿಯುತ್ತದೆ; ನೆಗಡಿಯಾಗಿದೆ. Eyes run ಕಣ್ಣೀರು ಸುರಿಯುತ್ತದೆ. R. dry ಬತ್ತಿಹೋಗು, ಮುಗಿದುಹೋಗು, ಬರಿದಾಗು. R. low, short ಕಡಮೆಯಾಗು, ಸಾಲದೆ ಬರು. Candle runs ಮೋಂಬತ್ತಿ ಕರಗಿ ಹರಿದುಹೋಗುತ್ತದೆ). ಹೋಗು, ನಡೆ, ಮುಂದುವರಿ, ಮುಂಬರಿ, ಸಾಗು, ಹಾಯಿ, ಹಾದಿರು [Fence runs round the house ಬೇಲಿ ಮನೆಯ ಸುತ್ತ ಹೋಗಿದೆ. Running head-line, head, title (ಪುನರಾವರ್ತವಾದ ಅಥವಾ ಭಿನ್ನವಾದ) ಪುಟದ —ಶಿರೋನಾಮೆ, ತಲೆಬರಹ. Whereof the memory of man runneth not to the contrary (ಪುರಾತನ ಸಂಪ್ರದಾಯ ಅಥವಾ ಪದ್ಧತಿಯ ವಿಷಯದಲ್ಲಿ ಪ್ರ.). Running account ಚಾಲ್ತಿ ಲೆಕ್ಕ (=Current account). Story runs in these words ಕಥೆ ಈ ಮಾತುಗಳಲ್ಲಿ ಸಾಗುತ್ತದೆ. Our pears r. big this year ಈ ವರ್ಷ ನಮ್ಮ ಪೇರು ಹಣ್ಣುಗಳು ತೋರವಾಗಿ ಬಿಟ್ಟಿವೆ. Prices r. high ಬೆಲೆಗಳು ಏರಿವೆ. Oats r. 44 lb. to the bushel ಒಂದು ಬುಷೆಲ್ ಓಟ್ಸ್ ಧಾನ್ಯ ೪೪ ಪೌಂಡು ತೂಗುತ್ತದೆ]. (ವರ್ತಮಾನ ಕೃ. ನಾಮವಾಚಕದ ತರುವಾಯ ಪ್ರ.) ಎಡೆಬಿಡದೆ, ಅನುಕ್ರಮವಾಗಿ, ನಿರಂತರವಾಗಿ (Happened three days, hit the bull's-eye seven times, running). ಮಾರ್ಗಹಿಡಿ, ಅನುಸರಿಸು; ಓಡು, ಓಡಿ ಮುಗಿಸು; ಅಲೆ, ಸುತ್ತು; ಈಡಾಗು, ಒಳಗಾಗು [Things must r. their course ಅವುಗಳ ಪಾಡಿಗೆ ಅವನ್ನು ಬಿಟ್ಟುಬಿಡಬೇಕು; ಸಂದರ್ಭಗಳು ತಮ್ಮ ಹಾದಿಯನ್ನು ಅವು ನಡೆದು ಮುಗಿಸಬೇಕು; ನಮ್ಮ ಪ್ರಯತ್ನದಿಂದ ಫಲವಿಲ್ಲ. R. a scent (ಬೇಟೆಯಲ್ಲಿ) ವಾಸನೆ ಹಿಡಿದು ಹೋಗು. R. the streets ಬೀದಿ ಪೋರನಾಗು: ಬಿಕಾರಿಯಾಗಿ ಅಲೆ. R. errands, messages ದೂತ ಕೆಲಸದಮೇಲೆ ಓಡಾಡು. The Derby was r. in a snow-storm ಡರ್ಬಿ ಕುದುರೆ ಜೂಜು ಹಿಮವಾತದಲ್ಲಿ ನಡೆಯಿತು. R. the gauntlet, the risk (ಆಯಾ ಪದವನ್ನು ನೋಡಿ). Runs a chance of being (—ರ) ಸಂಭವ ಉಂಟು. R. rapids ನದಿಯ ಪ್ರವಾಹದಲ್ಲಿ ನುಗ್ಗಿ ದಾಟು. R. croquet-hoop ಕ್ರೋಕೆ ಚೆಂಡನ್ನು ವಲಯದಲ್ಲಿ ನೇರವಾಗಿ ತೂರಿಸು. R. blockade (Blockade ನೋಡಿ)]. (ಬೆಟ್ಟಗೆ) ದಾಟುಹೊಲಿಗೆ ಹಾಕು. ಬೆನ್ನಟ್ಟು, ಬೇಟೆಯಾಡು, ಪಂದ್ಯವೋಡು [R. fox five miles ನರಿಯನ್ನು ಐದು ಮೈಲಿ ದೂರ ಅಟ್ಟಿಸಿಕೊಂಡುಹೋಗು. R. to

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

earth ತಪ್ಪಿಸಿಕೊಳ್ಳಲು ಬಿಡದೆ ಇಕ್ಕೆಯವರೆಗೂ ಬೆನ್ನಟ್ಟು, ಬೇಟೆಯಾಡು. (ರೂಪ.) ಬಹಳ ಹೊತ್ತು ಹುಡುಕಿ ಕಡೆಗೆ (ಕಂಡು)ಹಿಡಿ. R. one hard *or* close (ಓಟದ ಪಂದ್ಯ, ಸ್ಪರ್ಧೆ, ತಾರತಮ್ಯ ಗುಣ, ಮೊ॥ ಗಳಲ್ಲಿ) ಹಿಂದೆಯೇ ಒತ್ತಿ ಬರು, ಒತ್ತು]. (ಪ್ರೇರಣಾರ್ಥದಲ್ಲಿ) ಓಡಿಸು, ನಡಸು, ಹೋಗುವಂತೆ ಮಾಡು [R. cattle ದನಕರುಗಳನ್ನು ಮೇಯುವುದಕ್ಕೆ ಹೊಡೆ. R. brandy ಬ್ರಾಂದಿಯನ್ನು ಕಳ್ಳತನದಿಂದ ಸಾಗಿಸು. R. one's head *against*. R. one's hand, eye, *along*, *down*, *over* something —ಮೇಲೆ ಕೈಯಾಡಿಸು, ಕಣ್ಣೋಡಿಸು. R. rope through eyelet ಹಗ್ಗವನ್ನು ಕಂಡಿಯಲ್ಲಿ ಹೊಗಿಸು, ಪೋಣಿಸು. R. business —ನಡಸು, ನಿರ್ವಹಿಸು. R. the show (ಅಸಂ.) ಪ್ರಮುಖನಾಗಿ ನಿಂತು ನಡಸು. R. horse ಕುದುರೆಯನ್ನು ಜೂಜಿಗೆ ಕಳುಹಿಸು. R. candidate ಉಮೇದುವಾರನನ್ನು ನಿಲ್ಲಿಸು. R. metal into mould ಲೋಹವನ್ನು ಎರಕ ಹೊಯ್ಯಿ. R. thing fine ಹೆಚ್ಚು ಅವಕಾಶ ಕೊಡದಿರು; ಬಹಳ ಸ್ವಲ್ಪ ಅವಕಾಶ ಬಿಡು]. **Rúnabout** (ಗು., ನಾ.) ತಿರುಗಾಡುವ, ಸುತ್ತಾಡುವ, ಅಲೆದಾಡುವ. ಹಗುರ ಕುದುರೆಯ ಬಂಡಿ, ಹಗುರ ಮೋಟಾರು ಬಂಡಿ. **Rúnaway** (ನಾ., ಗು.) ಓಡಿಹೋಗುವ, ಪಲಾಯನಶೀಲ; ಹತೋಟಿ ಮೀರಿ ಓಡಿ ಹೋಗುವ (ಕುದುರೆ) [R.-a. match *or* marriage (ಬಂಧು ಬಳಗದವರನ್ನು ಬಿಟ್ಟು) ಓಡಿಹೋಗಿ ಮಾಡಿಕೊಂಡ ಮದುವೆ. R.-a. ring *or* knock (ತಮಾಷೆಗಾಗಿ) ತಟ್ಟಿ ಓಡಿಹೋಗುವವನು ಮಾಡುವ ಬಾಗಿಲ ಶಬ್ದ]

(ಉಪ. ಗಳೊಡನೆ): R. across ಅಕಸ್ಮಾತ್ತಾಗಿ—ಸಂಧಿಸು, ಭೇಟಿಯಾಗು. R. after ಆದರದಿಂದ, ಮೆಚ್ಚಿ, —ಬೆನ್ನುಹತ್ತಿಹೋಗು, ಅನುಸರಿಸು, ಹಿಂಬಾಲಿಸು; ಸಹವಾಸ ಅಪೇಕ್ಷಿಸಿ ಹೋಗು. (ಒಂದು ಹವ್ಯಾಸ, ಮೊ. ಕ್ಕೆ) ಹೆಚ್ಚು ಗಮನಕೊಡು, ಹೆಚ್ಚು ಕಾಲ ವಿನಿಯೋಗಿಸು. R. against ಅಕಸ್ಮಾತ್ತಾಗಿ —ಸಂಧಿಸು, ಭೇಟಿಯಾಗು; ಡಿಕ್ಕಿ ಹೊಡೆ. ವಿರುದ್ಧವಾಗಿ —ನಡೆ, ಕಾರ್ಯಮಾಡು. R. at ನುಗ್ಗಿ —ಮೇಲೆ ಬೀಳು, ಆಕ್ರಮಣ ಮಾಡು. R. in debt ಸಾಲಕ್ಕೆ ಬೀಳು, ಸಾಲಮಾಡು. R. into (loss, debt, practice, etc.) (ನಷ್ಟ, ಸಾಲ, ಅಭ್ಯಾಸ, ಮೊ. ಕ್ಕೆ) ಈಡಾಗು, ಬೀಳು; (ಕೋಪಕ್ಕೆ) ಗುರಿಯಾಗು. ಅವಿಚ್ಛಿನ್ನವಾಗಿ ಮುಂದುವರಿದಿರು; ಒಂದಾಗು, ಒಂದುಗೂಡು; ಪರಿಣಾಮ ಹೊಂದು; ಡಿಕ್ಕಿ ಹೊಡೆ; ಮುನ್ನುಗ್ಗು; ವ್ಯಾಪಿಸು, ಮುಟ್ಟು, ವರೆಗೆ ಹೋಗು (R. into some length, five editions). R. on ಸಂಬಂಧ ಪಟ್ಟಿರು, ಕುರಿತದ್ದಾಗಿರು; ಕುರಿತು ಹರಿಯುತ್ತಿರು, ಹೋಗುತ್ತಿರು (Talk, mind, runs on a subject). R. over ಕಣ್ಣೋಡಿಸು; ತಿರುವಿ ಹಾಕು; ಅವಸರವಸರವಾಗಿ, ಬೇಗ ಬೇಗನೆ, —ಓದು, ಪರೀಕ್ಷಿಸು; ಪರ್ಯಾಲೋಚಿಸು; ಬೇಗ ಪುನರಾವರ್ತನೆಮಾಡು, ಮತ್ತೆ ಹೇಳು; (ಪಿಯಾನೊ ವಾದ್ಯದ ಕೀಲ ಬಿರಡೆಗಳ ಮೇಲೆ) ಬೇಗ ಕೈ ಓಡಿಸು; (ಸಂಗೀತ ಸ್ವರಗಳನ್ನು) ತ್ವರಿತವಾಗಿ ನುಡಿಸು; (ಬಂಡಿ: ಕೆಳಗೆ ಬಿದ್ದ ಮನುಷ್ಯನ ಮೇಲೆ) ಹರಿದುಹೋಗು. R. through ಸ್ಥೂಲವಾಗಿ, ಅವಸರವಸರವಾಗಿ, —ಪರೀಕ್ಷಿಸು, ನೋಡು, ಮಾಡು; ಕಣ್ಣೋಡಿಸು; ಒಂದಾದಮೇಲೊಂದರಂತೆ, ಕ್ರಮವಾಗಿ, —ಮಾಡಿ ಮುಗಿಸು; (ಕಷ್ಟವನ್ನು, ಅನುಭವವನ್ನು) ಅನುಭವಿಸಿ ತೀರು, ತಟಹಾಯಿ, ನಿಭಾಯಿಸು; (ಆಸ್ತಿಯನ್ನು, ಹಣವನ್ನು) ಬೇಗನೆ, ನಿರ್ಲಕ್ಷ್ಯವಾಗಿ, —ವೆಚ್ಚಮಾಡಿಬಿಡು, ಮುಗಿಸಿಬಿಡು; (ದುಂದಿನಿಂದ) ಪೋಲುಮಾಡು. ವ್ಯಾಪಿಸು, ಹರಡು. R. to (—ಸಂಖ್ಯೆ, ಮೊತ್ತ) ಆಗು, ಮುಟ್ಟು; (ವ್ಯಯಕ್ಕೆ, ಯೋಜನೆಗೆ; ಹಣ, ಸಾಮರ್ಥ್ಯ, ಮೊ. ವು) ಸಾಕಷ್ಟಿರು, ಸಾಕಾಗು; ಸಾಮರ್ಥ್ಯವಿರು. ನಾಶವಾಗು, ಹಾಳಾಗು. (ಸಸ್ಯಗಳ ವಿಷಯದಲ್ಲಿ) ಬರಿಯ ಬೀಜಕ್ಕೆ ತಿರುಗಿಬಿಡು, ಬರಿಯ ಹುಲ್ಲು ಬೆಳೆದುಬಿಡು; (ವ್ಯಕ್ತಿಗಳ ವಿಷಯದಲ್ಲಿ) ಅತಿಗೆ ಹೋಗು. R. upon (ಆಲೋಚನೆ, ಮೊ. ವು) —ಕಡೆಗೆ ಓಡು, ಮಗ್ನವಾಗಿರು (His thoughts ran upon mechanical schemes). ಒಳಗಾಗು, ಈಡಾಗು, ಮೇಲೆ ತಂದುಕೊ. ಅಕಸ್ಮಾತ್ತಾಗಿ —ಸಂಧಿಸು, ಭೇಟಿಯಾಗು. R. with ಒಡನೆ ಹೋಗು, ಜೊತೆಯಲ್ಲಿರು. ಒಮ್ಮತವಾಗಿರು (My ideas r. with yours on the subject)

(ಕ್ರಿ. ವಿ. ಗಳೊಡನೆ): R. about (ಎಡೆಯಿಂದೆಡೆಗೆ, ಒಬ್ಬರಿಂದ ಮತ್ತೊಬ್ಬರಲ್ಲಿಗೆ) ಸಂಭ್ರಮದಿಂದ ಓಡಾಡು. (ಮು., ಮಕ್ಕಳ ವಿಷಯದಲ್ಲಿ) ನಿರಾತಂಕವಾಗಿ ಆಟ ಓಟಗಳಲ್ಲಿ ಜಿಗಿದಾಡು. R. away ಓಡಿಹೋಗು, ಕಂಬಿಕೀಳು; ತಲೆತಪ್ಪಿಸಿಕೊಂಡು, ಎತ್ತಿಕೊಂಡು, —ಓಡಿಹೋಗು; (ಕುದುರೆ) ಹತೋಟಿ ತಪ್ಪಿ ಓಡಿಹೋಗು. (ಕುದುರೆ ಅಥವಾ ಮನುಷ್ಯ) ಇತರ ಸ್ಪರ್ಧಿಗಳನ್ನು ಹಿಂದೆ ಹಾಕಿ ಬಹಳ ಮುಂದೆ ಓಡು. R. away with (ವ್ಯಕ್ತಿಯನ್ನು, ಕದ್ದ ಸಾಮಾನನ್ನು) ಎತ್ತಿಕೊಂಡು, ಹಾರಿಸಿಕೊಂಡು, —ಓಡಿಹೋಗು; (ಅಭಿಪ್ರಾಯ, ಮೊ. ನ್ನು) ಆತುರವಾಗಿ, ವಿಚಾರಮಾಡದೆ,—ನಂಬಿ(ಕೊಂಡು) ಬಿಡು, ಒಪ್ಪಿ(ಕೊಂಡು) ಬಿಡು; (ವ್ಯಯ, ಮೊ. ವು: ಹಣ, ಮೊ. ನ್ನು) ಪೂರೈಸಿಬಿಡು, ತಿಂದುಹಾಕು; (ಕುದುರೆ, ಮೊ. ಗಳ ವಿಷಯದಲ್ಲಿ) (ಸವಾರನನ್ನು, ಬಂಡಿಯನ್ನು, ಬಂಡಿಯಲ್ಲಿಯ ಪ್ರಯಾಣಿಕರನ್ನು) ಎತ್ತಿಕೊಂಡು, ಎಳೆದುಕೊಂಡು, —ಓಡಿಹೋಗು; ಹತೋಟಿ ಮೀರಿ ಓಡಿಹೋಗು. R. down (ಗಡಿಯಾರ, ಮೊ. ಗಳ ವಿಷಯದಲ್ಲಿ: ಕೊಟ್ಟ ಕೀಲಿ ಉಡುಗಿ) ನಿಂತುಹೋಗು; (ಮನುಷ್ಯ, ಆರೋಗ್ಯ, ಮೊ. ಗಳ ವಿಷಯದಲ್ಲಿ) ಇಳಿದುಹೋಗು, ಬಡವಾಗು, ಕ್ಷೀಣಿಸು [(ಭೂ. ಕೃ. ನಲ್ಲಿ ಸಹ) Is, feels, much r. d.]; (ಮನುಷ್ಯ, ಮೊ. ನ್ನು) ಕೆಡವು, ಉರುಳಿಸು, (ಹಡಗು, ಮೊ. ನ್ನು) ಡಿಕ್ಕಿ ಹೊಡೆ, —ಹೊಡೆದು ಮುಳುಗಿಸು. (ಬೇಟೆಯನ್ನು, ಮನುಷ್ಯನನ್ನು) ಬೆನ್ನಟ್ಟಿ ಹಿಡಿ(ದುಬಿಡು). ಹೀನಯಿಸು, ಅಲ್ಲಗಳೆ; ಹುಡುಕಿ (ಕಂಡು)ಹಿಡಿ; (ಪ್ರಬಲ ಶಕ್ತಿ, ವಾದ, ಮೊ. ಗಳಿಂದ ಒಬ್ಬನನ್ನು) ಪೂರ್ತಿ ಸೋಲಿಸಿಬಿಡು, ತಲೆಯೆತ್ತದಂತೆ ಮಾಡು. R. in (ಯೋಧರ ವಿಷಯದಲ್ಲಿ) ಏಟು ಹೊಡೆಯುವಷ್ಟು ಹತ್ತಿರ ನುಗ್ಗು; ಕೈಕೈ ಹತ್ತುವಂತೆ ಬರು. (ರಗ್ಬಿ ಕಾಲ್ಚೆಂಡಾಟದಲ್ಲಿ) ಎದುರಾಳಿಯ ಗುರಿಗೆರೆಯ ಹಿಂದಕ್ಕೆ ಚೆಂಡು ತೆಗೆದುಕೊಂಡುಹೋಗಿ ನೆಲಕ್ಕೆ ಸೋಕಿಸು. (ಮನೆಗೆ)' ಬಂದು ಹೋಗು; (ವ್ಯಕ್ತಿಯನ್ನು) ನೋಡಿಕೊಂಡು ಹೋಗು, ಬಂದು ಸ್ವಲ್ಪ ಭೇಟಿಮಾಡು; (ಬಳ. ಮಾ.) ದಸ್ತಗಿರಿ ಮಾಡಿ ಬಂಧನದಲ್ಲಿಡು; (ಬಳ. ಮಾ.) (ಒಬ್ಬನನ್ನು ಉಮೇದುವಾರನನ್ನಾಗಿ ನಿಲ್ಲಿಸಿ) ಚುನಾವಣೆ ಮಾಡಿಸು. R. off ಓಡಿಹೋಗು; ಹರಿದುಹೋಗು; ಕರಗಿಹೋಗು; ತಟಕ್ಕನೆ ವಿಷಯ ಬಿಟ್ಟುಹೋಗು; (ಪದ್ಯ, ಪಟ್ಟಿ, ಮೊ. ನ್ನು) ನಿರರ್ಗಳವಾಗಿ —ಹೇಳು, ಬರೆ; (ದ್ರವವನ್ನು) ಹರಿಸು, ಬಸಿದು ಹಾಕು; (ಪೂರ್ವಭಾವಿ ಪಂದ್ಯಗಳಾದಮೇಲೆ ಅಥವಾ ಸ್ಪರ್ಧಿಗಳು ಸಮಸ್ಥಿತಿಯಲ್ಲಿರುವಾಗ) ನಿರ್ಣಾಯಕ ಪಂದ್ಯ ಬಿಡು, ಕೊನೆಯ ತೀರ್ಮಾನ ಮಾಡು. R. on (ಬರವಣಿಗೆ) ಒತ್ತಾಗಿರು, ವೋಡಿಯಲ್ಲಿರು. ಮುಂದುವರಿ, ನಡೆಯುತ್ತಿರು, ಸಾಗು; (ಕಾಲದ ವಿಷಯದಲ್ಲಿ) ಕಳೆದುಹೋಗು. ನಿರರ್ಗಳವಾಗಿ, ತಡೆಬಡೆಯಿಲ್ಲದೆ, ಒಂದೇ ಸಮನೆ, —ಮಾತಾಡು. (ಮುದ್ರಣ) ಹಿಂದಿನ ಪಂಕ್ತಿಯಲ್ಲೆ —ಮುಂದುವರಿ(ಸು), ಪ್ರಾರಂಭಿಸು; (ಎರಡು ಪ್ರಕರಣಗಳು) ಒತ್ತೊಂಡವಾಗು,— ಮಾಡು. R. out (ಅವಧಿ, ದಾಸ್ತಾನು, ಮೊ. ವು) ಕೊನೆಗೊಳ್ಳು, ಮುಗಿ(ದು ಹೋಗು), ತೀರು (R. out of ದಾಸ್ತಾನು ಮುಗಿದುಹೋಗು); ಪಾತ್ರೆಯಿಂದ ಹರಿದು ಹೋಗು, ಸೋರಿಹೋಗು; (ಪಾತ್ರೆ) ಸೋರು; (ಹಗ್ಗದ ವಿಷಯದಲ್ಲಿ) ಉದ್ದಕ್ಕೆ ಹೋಗುತ್ತಿರು, ಹೊರ ಹೊರಟಿಕೊ, ಚಾಚಿಕೊ; (ಸ್ಪರ್ಧೆಯಲ್ಲಿ) ಒಂದು ಗೊತ್ತಾದ ಸ್ಥಾನದಲ್ಲ ಬರು, ಒಂದು ಗೊತ್ತಾದ ಗೆಲ್ಲಂಕ ಪೂರ್ತಿ ಮಾಡು; (ಓಟದ ಪಂದ್ಯವನ್ನು) ಓಡಿ ಮುಗಿಸು; (ಬಂದೂಕು, ಮೊ. ನ್ನು) ಮುನ್‌ಚಾಚಿಸು; (ಕ್ರಿಕೆಟ್) ಚೆಂಡು ಹೊಡೆಯಲು ನಿಲ್ಲದೆ ಬಿಟ್ಟು ಮುನ್ನುಗ್ಗು; ದಾಂಡುಗಾರನು ಓಟ ಮಾಡುತ್ತಿರುವಲ್ಲ ಗುರಿಕೋಲು ಕೆಡವಿ ಆಟ ಕಳೆ. ಓಡಿ ಓಡಿ —ದಣಿದುಹೋಗು, ಸುಸ್ತಾಗು. R. over (ಪಾತ್ರೆ, ಅದರಲ್ಲಿಯ ಪದಾರ್ಥ) ತುಂಬಿ ಹರಿ, ಹೊರಸೂಸು, ಚೆಲ್ಲು. ಪುನರಾವರ್ತನೆ ಮಾಡು; ಕಣ್ಣೋಡಿಸು; ಸ್ಥೂಲವಾಗಿ, ಅವಸರವಸರವಾಗಿ —ನೋಡು, ಓದು. R. through (ಕತ್ತಿ, ಮೊ. ಗಳಿಂದ) ಇರಿ, ತಿವಿ. (ಬರೆದ ಮಾತುಗಳ ಮೇಲೆ) ಗೆರೆಯೆಳೆ, ಗೀಟು ಹಾಕು, (—ಮಾತುಗಳನ್ನು) ಹೊಡೆದುಹಾಕು. ಅವಸರವಸರವಾಗಿ ಓದಿ ಹಾಕು. R. up ಬೇಗ ಬೆಳೆ(ದುಬಿಡು); ಏರೆಯೇರು. (—ಮೊತ್ತ, ಸಂಖ್ಯೆ) ಆಗು; (—ಕ್ಕೆ) ಏರು. (ಪೂರ್ವಭಾವಿ ಪಂದ್ಯಗಳನ್ನು ಗೆದ್ದು) ಕೊನೆಯ ಪಂದ್ಯದಲ್ಲ ಸೋತುಹೋಗು; ಉಪಾಂತ ವಿಜಯಿಯಾಗು. (ಸಂಖ್ಯೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊತ್ತ, ಸಾಲ, ಮೊ. ವು) ಬೇಗ ಬೇಗ —ಏರು, ಹೆಚ್ಚಾಗು, ಬೆಳೆ. ಹರಾಜಿನಲ್ಲಿ ಎದುರು ಸವಾಲುದಾರನು ಹೆಚ್ಚು ಬೆಲೆ ಕೊಡುವಂತೆ, ಕೂಗುವಂತೆ, ಮೊದಲು ತಾನು ಸವಾಲುಮಾಡು ; ಹೀಗೆ ಮಾಡಿ ಬೆಲೆ ಏರಿಸು. (ಗೋಡೆಯನ್ನು, ಮನೆಯನ್ನು ; ಸಾ., ಭದ್ರತೆಯಿಲ್ಲದೆ) ಅವಸರವಸರವಾಗಿ, ಆತುರದಿಂದ, ತುಂಬ ಎತ್ತರಕ್ಕೆ —ಕಟ್ಟು, ಎಬ್ಬಿಸು. (ಅಂಕಿಗಳ ಸಾಲನ್ನು) ಕೂಡು. ದಾಟು ಹೊಲಿಗೆ, ನಡಿಲ ಹೊಲಿಗೆ, —ಹಾಕು. **Rúnner** (ನಾ.) (ಕ್ರಿಯಾರ್ಥಗಳಲ್ಲಿ) ; ಓಡಾಳು ; ಓಲೆಕಾರ, ಹರಿಕಾರ. ದೂತ ; (ಬ್ಯಾಂಕು, ಮೊ. ಗಳ) ಹಣ ವಸೂಲಿಗಾರ, ದಳ್ಳಾಳಿ, ನಿಯೋಗಿ ; ಗಿರಾಕಿ—ಒದಗಿಸುವವನು, ತಂದುಕೊಡುವವನು; (ಚರಿತ್ರೆ) ಪೊಲೀಸು ಅಧಿಕಾರಿ (=Bow-street r.) ; ಒಂದು ಬಗೆಯ ಓಡು ಹಕ್ಕಿ, ನಡೆ ಹಕ್ಕಿ ; =Blockade-r. (Blockade ನೋಡಿ) ; ಬೀಸುವ ಕಲ್ಲಿನ —ಸುತ್ತುಗಲ್ಲು, ತಿರುಗುಗಲ್ಲು ; (ನಾವೆ) ಒಂದು ಕೊನೆಯನ್ನು ಒಂದು ಕಪ್ಪಿಗೆ ತಗುಲಿಸಿ ಮತ್ತೊಂದು ಕೊನೆಯಲ್ಲಿ ಕೊಕ್ಕೆ ಹಾಕಿರುವ, ಒಂದೇ ಕಪ್ಪಿಯಲ್ಲಿ ಹಾದಿರುವ, ಹಗ್ಗ : ಓಡು, ಹಾಯಿ, —ಹಗ್ಗ ; ಕೆಲವು ಸಸ್ಯಗಳ ಪ್ರಧಾನ ಕಾಂಡದಿಂದ ಹೊರಟು, ನೆಲವೂರಿ ಬೇರು ಬಿಡುವ, ಉಪಕಾಂಡ : ಹಬ್ಬು —ತಾಳು, ಕಾಂಡ ; (ಅವರೆ ಜಾತಿಯ) ಹಲವು ಬಗೆಯ ಹಬ್ಬುಗಿಡ ; ಕೋಲು, ಪಟ್ಟಿ, ಮೊ. ಗಳ ಮೇಲೆ ಸರಿದಾಡುವ ಉಂಗುರ, ಬಳೆ, ಮೊ. ವು ; ಜಾರುಬಂಡಿ (Sledge), ಮೊ. ವು ಜಾರುವುದಕ್ಕೆ ಅಳವಡಿಸಿದ ಮರದ (ಅಥವಾ ಇತರ) ಉದ್ದ ತುಂಡು(ಗಳಲ್ಲೊಂದು) : ಜಾರು ಮರ, —ತುಂಡು ; ನೀರ್ಗಲ್ಲು, ಮೊ. ಗಳ ಮೇಲೆ ಓಡಾಡಲು ಅನುಕೂಲಿಸುವ ಕಾಲ ಕೊರಡು, ಕಾಲ ಕೊರಡಿನ (ಉಕ್ಕಿನ) ಅಲಗು ; ಒಂದು ವಸ್ತು ಸರಿದಾಡಲು ಅನುಕೂಲಿಸುವ ಗಾಡಿ, ದಂಡ, ಮೊ. ವು : ಜಾರು ಗಾಡಿ, —ದಂಡ ; ಭಾರ ವಸ್ತುಗಳನ್ನು ಸಾಗಿಸಲು ಉಪಯೋಗಿಸುವ ಉರುಳೆ, ಜಾರುಗೊರಡು. R.-up ಹಿಂದಿನ ಓಟಗಳಲ್ಲಿ ಗೆದ್ದು ಕೊನೆಯ ಓಟದಲ್ಲಿ (ಪಂದ್ಯದಲ್ಲಿ) ಸೋತುಹೋದ ಸ್ಪರ್ಧಿ : ಉಪಾಂತ ವಿಜಯಿ. **Rúnning** (ನಾ.) (ಕ್ರಿಯಾರ್ಥಗಳಲ್ಲಿ). Make, take, up, the r. ಮುಂದಾಳಾಗು, ಹೆಚ್ಚೆ ತೋರಿಸು, ದಾರಿ ತೋರಿಸು (ರೂಪ. ನಹ). In, out of, the r. (ಸ್ಪರ್ಧೆಯ ವಿಷಯದಲ್ಲಿ) ಗೆಲ್ಲುವ ಸಂಭವವಿದ್ದು, ಗೆಲ್ಲುವ ಸಂಭವವಿಲ್ಲದೆ ; ಸ್ಪರ್ಧೆಗೆ ಸೇರಿ, ಸೇರಿಲ್ಲದೆ. R.-board ಮೋಟಾರುಬಂಡಿ, ಮೊ. ಗಳ ಎರಡು ಪಕ್ಕಗಳಲ್ಲೂ ಉದ್ದಕ್ಕೆ ಇರುವ ಕಾಲೂರುವ ಹಲಗೆ : ಮೆಟ್ಟು ಹಲಗೆ. R. powers ಒಂದು ರೈಲ್ವೆ ಸಂಸ್ಥೆ ತನ್ನ ಕಂಬಿಗಳಮೇಲೆ ಮತ್ತೊಂದು ರೈಲ್ವೆ ಸಂಸ್ಥೆ ರೈಲು ಗಾಡಿಗಳನ್ನು ಬಿಡಲು ಅದಕ್ಕೆ ಕೊಟ್ಟ ಅಧಿಕಾರ : (ಬೇರೆಯವರ ರೈಲು ದಾರಿಯಲ್ಲಿ) ರೈಲು ಬಂಡಿ ಓಡಿಸುವ ಅಧಿಕಾರ, ರೈಲು ಓಡಾಟದ ಹಕ್ಕು.

Run (ನಾ.) ಓಡುವುದು, ಓಟ, ದೌಡು, ಪಲಾಯನ; ಓಟದ ದೂರ, —ಕಾಲ [Have a r. for one's money ವೆಚ್ಚಕ್ಕೆ ಅಥವಾ ಶ್ರಮಕ್ಕೆ ತಕ್ಕ ಪ್ರತಿಫಲ, ತೃಪ್ತಿ, —ಪಡೆ (ಮೊದಲು, ಜೂಜಿನ ಅನಂ.). Had a good r. (ಬೇಟೆ, ಹಡಗಿನ ಅಥವಾ ರೈಲಿನ ಪ್ರಯಾಣ, ಮೊ. ಗಳ ವಿಷಯದಲ್ಲಿ) ಬೇಟೆ, ಪ್ರಯಾಣ, ಚೆನ್ನಾಗಿತ್ತು ; ಸೊಗಸಾದ ಬೇಟೆ, ಪ್ರಯಾಣ, —ಆಯಿತು. On the r. ಪಲಾಯನ ಮಾಡುತ್ತ ; ಗಡಿಬಿಡಿಯಿಂದ ಓಡಾಡುತ್ತ. At a r. ಓಡುತ್ತ. A r. to Paris ಪ್ಯಾರಿಸ್ಸಿಗೆ ಅವಸರದ, ಧಾವಂತ, —ಪ್ರಯಾಣ]. (ಕ್ರಿಕೆಟ್) ದಾಂಡುಗಾರರು (ಗುರಿಕೋಲುಗಳ ಮಧ್ಯೆ ಪರಸ್ಪರ ಓಡಿ) ಮಾಡುವ ಗೆಲ್ಲಂಕದ ಓಟ. ಧಾಟಿ, ಓಟ, ಗತಿ ; ದಿಕ್ಕು ; ವಿಧಾನ, ರೀತಿ, ಫಕ್ಕಿ, ಮರ್ಮ [Cannot get the r. of the metre ಛಂದಸ್ಸಿನ ಓಟವೇ ತಿಳಿಯುವುದಿಲ್ಲ, ಸಿಕ್ಕುವುದಿಲ್ಲ. Cannot get the r. of (process, operation) (ಪ್ರಕ್ರಿಯೆಯ, ಕಾರ್ಯಾಚರಣೆಯ) ಫಕ್ಕಿಯೇ ತಿಳಿಯುವುದಿಲ್ಲ. The r. of the market was against us ಪೇಟೆಯ ಧಾರಣೆ ನಮಗೆ ಪ್ರತಿಕೂಲವಾಗಿತ್ತು. The r. of the hills is N.W. ಬೆಟ್ಟಗಳು ವಾಯವ್ಯ ದಿಕ್ಕಿನಲ್ಲಿ ಹಬ್ಬಿವೆ]. ಥಟ್ಟನೆಯ ಬೀಳು, ರಭಸದ ಪಾತ [Come down with a r. (ಕಟ್ಟಡ, ಮನುಷ್ಯ, ವಾಯುಭಾರ ಮಾಪಕದಲ್ಲಿಯ ಪಾದರಸ, ಬೆಲೆ, ಮೊ. ವು) ಸರ್ರನೆ ಬಿದ್ದು ಹೋಗು, —ಇಳಿದುಬಿಡು]. ಸಂತತ ಸರಣಿ, ಪರಂಪರೆ, ಶ್ರೇಣಿ, ಉದ್ದ, ಲಾಂಬಿ, ವ್ಯಾಪ್ತಿ, ಹರವು, ಭರಾಟೆ. ಎಲ್ಲರಿಗೂ ಬೇಕಾಗಿರುವುದು, ಸಾರ್ವತ್ರಿಕ ಗಿರಾಕಿ [A 500 ft r. of pipe. ೫೦೦ ಅಡಿ ಉದ್ದದ ಕೊಳಾಯಿ. A long r. of power, office ದೀರ್ಘ ಕಾಲದ ಅಧಿಕಾರ. A r. of luck ಅದೃಷ್ಟದ —ಪರಂಪರೆ, ಹೊಡೆತ. In the long r. (Long[1] ನೋಡಿ). A r. on the bank ಇದ್ದಕ್ಕಿದ್ದಹಾಗೆ ಅನೇಕ ಗಿರಾಕಿಗಳು ಬಂದು ಒಮ್ಮೆಗೇ ಹಣ ಕೇಳುವುದು : (ಹಣಕ್ಕೆ) ಗಿರಾಕಿಗಳ ಏಕದಂ ತಗಾದೆ. R. on rubber, book ರಬ್ಬರ್, ಗ್ರಂಥ, ಮೊ. ಕ್ಕೆ ವಿಪರೀತ ಗಿರಾಕಿ. R. on the red (Rouge-et-noir ಎಂಬ ಇಸ್ಪೀಟಾಟದಲ್ಲಿ) ಕೆಂಪು ರಂಗಿನ ಭರಾಟೆ. Play has a r. of 50 nights, a long r. ಆಟ ಒಂದೇ ಸಮನೆ ೫೦ ರಾತ್ರಿಗಳು, ಬಹು ದಿನಗಳು (ದೀರ್ಘ ಕಾಲ) ಪ್ರದರ್ಶನವಾಯಿತು]. ಸಾಮಾನ್ಯ, ಸಾಧಾರಣ, ಸಾದಾ, —ವರ್ಗ, ತರಗತಿ, ಮಾದರಿ (The Common r. of men ಸಾಮಾನ್ಯ ಜನರು). (ಪದಾರ್ಥಗಳ) ಬಗೆ, ರೀತಿ, ತೆರ, ಜಾತಿ, ತರಗತಿ (Makers of the ordinary runs of cloth) ; ಒಟ್ಟಿಗೆ ಹುಟ್ಟಿದ ಅಥವಾ ಬೆಳೆಸಿದ ಪ್ರಾಣಿಗಳ ತಂಡ ; ಮಂದೆ ; ಸಂಚಾರದಲ್ಲಿರುವ ಮೀನುಗಳ ತಂಡ. (ಕೆಲವು ಪ್ರಾಣಿಗಳ) ಜಾಡು ; (ಕೋಳಿ, ಮೊ. ಗಳ) ಆವರಣ ; ಮೇವಿನ ಬಯಲು, ಮೇವುಗಾವಲು, ಹುಲ್ಲುಗಾವಲು (Sheep-r. ಕುರಿಗಾವಲು). (ನೀರು ಹರಿಯುವುದಕ್ಕಾಗಿ) ಕೊಳವಿ, ದೋಣಿ ; ಹಿಂಭಾಗಕ್ಕೆ ಕಿರಿದಾಗುತ್ತ ಹೋಗುವ ಹಡಗಿನ ತಳಭಾಗ. ಉಪಯೋಗ ಸ್ವಾತಂತ್ರ್ಯ, ಉಪಯೋಗಾಧಿಕಾರ (Allowed him the r. of their books, house. The r. of one's teeth ಬಿಟ್ಟಿ ಊಟ (ಸಾ., ದುಡಿತಕ್ಕೆ ಪ್ರತಿಫಲವಾಗಿ). R.-in (ರಗ್ಬಿ ಕಾಲ್ಚೆಂಡಾಟ) ಎದುರು ಪಕ್ಷದ ಗುರಿಗೆರೆಯಾಚೆ ಚೆಂಡು ತೆಗೆದುಕೊಂಡು ಹೋಗಿ ನೆಲಕ್ಕೆ ಸೋಕಿಸುವುದು. R.-off (ಪಂದ್ಯ ಸರಿಸಮವಾಗಿರುವಾಗ ಬಿಡುವ) ನಿರ್ಣಾಯಕ ಪಂದ್ಯ. R.-out (ಕ್ರಿಕೆಟ್) ದಾಂಡುಗಾರನು ಓಟಮಾಡುತ್ತಿರುವಾಗ ಆಟ ಕಳೆಯುವುದು, ಆಟ ಹೋಗುವುದು. R.-up ಮೊಲ ಮೊದಲ ಸಲ ತಿರುಗಿಬೀಳುವ ವರೆಗೆ ಅದರ ಬೆನ್ನಟ್ಟ ಬಿಟ್ಟ ಬೇಟೆನಾಯಿಗಳ ಪಂದ್ಯ.

Rúnagate ರನಗೇಟ್ (ನಾ.) (ಪ್ರಾಚೀ. ಪ್ರ.) ಅಲೆಮಾರಿ ; ಪಕ್ಷ ಬಿಟ್ಟುಹೋದವನು ; ತಲೆಮರಸಿಕೊಂಡು ಓಡಿಹೋದವನು.

Rúncinate ರನ್ಸಿನೆಟ್ (ಗು.) (ಸ. ವಿ.) ಹಾಲೆಗಳು ಅಥವಾ ಹಲ್ಲುಗಳು ಹಿಂದಕ್ಕೆ ಬಾಗಿರುವ ; ಗರಗಸದ ಹಲ್ಲಿನಂಥ ಏಣುಳ್ಳ : ಕ್ರಕಚ.

Rúndale ರನ್‌ಡೇಲ್ (ನಾ.) (ಮು., ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್‌ಗಳಲ್ಲಿ) ಹಲವು ಒಡೆಯರು ಅಥವಾ ಹಿಡುವಳಿದಾರರು ಒಂದು ಜಮೀನನ್ನು ಒಟ್ಟಾಗಿ ಅನುಭವಿಸುತ್ತ ಒಬ್ಬೊಬ್ಬರಿಗೂ ಅದರಲ್ಲಿ ಹಲವು ತುಕಡಿಗಳಿದ್ದು, ಯಾವ ಒಬ್ಬನ ತುಕಡಿಗಳೂ ಒಟ್ಟಿಗಿರದೆ ಮಿಕ್ಕವರ ತುಕಡಿಗಳ ಮಧ್ಯೆ ಮಧ್ಯೆ ಸೇರಿಕೊಂಡಿರುವ, ಕೂಡು ಹಿಡುವಳಿ, ಕೂಡು ಒಡೆತನ : ಜಮೀನಿನ —ಸಹ ಸ್ವಾಮ್ಯ, ಸಹಾನುಭೋಗ.

Rune ರೂನ್ (ನಾ.) (ರೋಮನ್ ಅಥವಾ ಗ್ರೀಕ್ ಅಕ್ಷರಗಳನ್ನು ಕೊರೆಯುವುದಕ್ಕೆ ಅನುಕೂಲಿಸುವಂತೆ ಮಾರ್ಪಡಿಸಿಕೊಂಡು ರೂಪಿಸಿದ, ಕ್ರಿ. ಶ. ೩ನೆಯ ಶ. ಮಾ. ದಷ್ಟು ಹಿಂದಿನದಾದ) ಮು., ಸ್ಕಾಂಡಿನೇವಿಯನರೂ ಆ್ಯಂಗ್ಲೊಸ್ಯಾಕ್ಸನರೂ ಬಳಸುತ್ತಿದ್ದ ಟ್ಯೂಟಾನಿಕ್ ವರ್ಣಮಾಲೆಯ ಅಕ್ಷರ : ರೂನ್ ಅಕ್ಷರ ; ರಹಸ್ಯ ಅಥವಾ ಮಾಂತ್ರಿಕ ಪ್ರಭಾವ ಉಳ್ಳದ್ದೆಂದು ನಂಬುವ ಅಂತಹ ಗುರುತು. ಫಿನಿಷ್ ಗೀತೆ(ಯ ವಿಭಾಗ). **R.-staff** ರೂನ್ ಚಿಹ್ನೆ ಕೆತ್ತಿದ ಮಾಂತ್ರಿಕ ದಂಡ ; ರೂನ್ ಪಂಚಾಂಗ. **Rúnic** (ಗು., ನಾ.) ರೂನ್ ಅಕ್ಷರದ(ಲ್ಲಿಯ) ; —ಚಿಹ್ನೆಯ(ಲ್ಲಿರುವ) ; —ಚಿಹ್ನೆ ಕೆತ್ತಿದ. (ಕಾವ್ಯ, ಮೊ. ಗಳ ವಿಷಯದಲ್ಲಿ) ಪುರಾತನ ಸ್ಕಾಂಡಿನೇವಿಯದ ಮಾದರಿಯ. (ಒಡವೆ, ಮೊ. ಗಳ ವಿಷಯದಲ್ಲಿ ; ರೂನ್ ಸ್ಮಾರಕಗಳಲ್ಲಿಯೂ ಲೋಹ ಕೆಲಸಗಳಲ್ಲಿಯೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇರುವಂತೆ) ಹೆಣಿಗೆಯಲಂಕಾರದ. (ನಾ.) ರೂನ್—ಶಾಸನ, ಶಿಲಾ ಲಿಪಿ. ಹಲವು ಬಗೆಯ ಪತಂಗ. (ಮುದ್ರಣ) ಸಂಕ್ಷಿಪ್ತಾಕಾರವೂ ದಪ್ಪ ಮುಖವೂ ಉಳ್ಳ ಒಂದು ಬಗೆಯ ಅಲಂಕಾರದ ಅಚ್ಚಿನ ಮೊಳೆ: ರೂನ್ ಅಕ್ಷರ.

Rung[1] ರಂಗ್ (ನಾ.) ಏಣಿಯ ಮೆಟ್ಟಿಲು [(ಅನೇಕ ವೇಳೆ ರೂಪ.): The lowest, topmost, r. of Fortune's ladder]. (ಕುರ್ಚಿ, ಮೊ. ಗಳಲ್ಲಿ) ಅಡ್ಡ—ಪಟ್ಟಿ, ಕಂಬಿ. **Runged** (ಗು.); **Rúngless** (ಗು.)

Rung[2]. Ring ಧಾತುವಿನ ಭೂ. ಕೃ. ಮತ್ತು ಭೂತ (ವಿರ. ಪ್ರ.)

Rúnic. **Rune** ನೋಡಿ.

Rúnlet[1] ರನ್‌ಲೆಟ್ (ನಾ.) (ಪ್ರಾಚೀ. ಪ್ರ.) (ಮದ್ಯ, ಮೊ. ಗಳಿಗಾಗಿ, ಹಲವು ಅಳತೆಗಳ) ಪೀಪಾಯಿ.

Rúnlet[2] ರನ್‌ಲೆಟ್ (ನಾ.) ಸಣ್ಣ ಹೊಳೆ; ತೊರೆ.

Rúnnel ರನ್‌ಲ್ (ನಾ.) ಹಳ್ಳ, ತೊರೆ; ಮೋರಿ, ಚರಂಡಿ.

Rúnner, Rúnning. **Run** (ಕ್ರಿ.) ನೋಡಿ.

Rúnrig ರನ್‌ರಿಗ್ (ನಾ.) (ಸ್ಕಾ. ಪ್ರ.) = Rundale.

Runt ರಂಟ್ (ನಾ.) (ಮು., ಸ್ಕಾಟ್ಲೆಂಡು ಮೇಲ್ನಾಡಿನ ಅಥವಾ ವೇಲ್ಸಿನ) ಸಣ್ಣ ತಳಿಯ—ದನ, ಹಸು, ಎತ್ತು. ದೊಡ್ಡ ತಳಿಯ ಸಾಕು ಪಾರಿವಾಳ.

Rupeé ರೂ(ರು)ಪೀ (ನಾ.; ಬ. ವ. ಸಂಕ್ಷಿಪ್ತ: Rs) ಇಂಡಿಯದ ನಾಣ್ಯ ಚಲಾವಣೆಯ ಏಕಮಾನ: ರೂಪಾಯಿ [Rx (ಗಣನೆಯಲ್ಲಿ) ರೂಪಾಯಿ ದಶಕಗಳು]

Rúpture ರಪ್ಚರ್, ರಪ್ಚ್ಯುರ್ (ನಾ., ಕ್ರಿ.) ಸ್ನೇಹ ಭಂಗ; ಹೊಂದಿಕೆ ಕೆಟ್ಟು ಅಗಲುವುದು; ಒಡಕು, ಛಿದ್ರ, ವೈಮನಸ್ಯ. (ರೋಗ ನಿದಾನ) ಯಾವುದಾದರೊಂದು ಅಂಗ ಭಾಗ ತನ್ನ ಆವರಣ ಪೊರೆಯಲ್ಲಿಯ (ಮು., ಕಿಬ್ಬೊಟ್ಟೆಯಲ್ಲಿಯ) ಬಿರುಕಿನ ಮೂಲಕ ಹೊರ ಚಾಚಿಕೊಳ್ಳುವುದರಿಂದ ಆಗುವ ಊತ; ಅಂತ್ರ ವೃದ್ಧಿ; ಅಂಡವಾಯು. ಒಡೆತ, ಒಡಕು; ಬಿರಿತ, ಬಿರುಕು. (ಕ್ರಿ.) (ಜೀವಕಣ, ದ್ರವನಾಳ, ಪೊರೆ, ಮೊ. ಗಳ ವಿಷಯದಲ್ಲಿ) ಬಿರಿ, ಒಡೆ, ಹರಿ(ದು ಹೋಗು); ಛಿದ್ರ ಮಾಡು, —ಆಗು. (ಸಂಬಂಧ, ಮದುವೆ, ಮೊ. ವು) ಕಡಿದುಹೋಗು, —ಹಾಕು; ವಿಚ್ಛೇದ ಮಾಡು, —ಆಗು. ಅಂತ್ರವೃದ್ಧಿಯಾಗು.

Rúral ರೂ(ಅ)ರಲ್ (ಗು.) ಹಳ್ಳಿಯ, ಹಳ್ಳಿಗಾಡಿನ, ಗ್ರಾಮದ (ಎದುರು ಪದ: Urban); ಬೇಸಾಯದ, ಕೃಷಿಕ; ಗ್ರಾಮಕ, ಗ್ರಾಮೀಣ (R. seclusion. R. constituency). **Rurálity** (ನಾ.); **Rúralize** (ಕ್ರಿ.); **Ruralizátion** (ನಾ.); **Rúrally** (ಕ್ರಿ. ವಿ.)

Rúsa ರೂಸ (ನಾ.) ಈಸ್ಟ್ ಇಂಡೀಸಿನ ದೊಡ್ಡ ಜಾತಿಯ ಜಿಂಕೆ.

Ruse ರೂಸ್ (ನಾ.) ತಂತ್ರ, ಕುಯುಕ್ತಿ, ಕಪಟ, ಮೋಸ, ಠಕ್ಕು, ಕಳ್ಳಾಟ. **Rúse** (F) ರ್‍ಯೂಸೇ (ನಾ.; ಸ್ತ್ರೀ. -ee) (ಮನುಷ್ಯ, ಆಚರಣೆ, ಮುಖಭಾವ, ಮೊ. ವು) ತಂತ್ರದ, ಕುಯುಕ್ತಿಯ, ಕಳ್ಳಾಟದ.

Rush[1] ರಷ್ (ನಾ., ಕ್ರಿ. ಸಕ.) (ಜವುಗಿನಲ್ಲಿಯೂ ನೀರಿನ ಅಂಚುಗಳಲ್ಲಿಯೂ ಬೆಳೆಯುವ) ಜೊಂಡು, ಆಪು; ಒಂದು ಜೊಂಡು ಕಡ್ಡಿ; (ಸಮೂಹ ವಾಚಕವಾಗಿ) ಜೊಂಡು. ಕೆಲಸಕ್ಕೆ ಬಾರದ್ದು, ಬೆಲೆಯಿಲ್ಲದ್ದು, ಹುಲ್ಲು ಕಡ್ಡಿ (Don't care a r. ತೃಣ ಸಮಾನ. Not worth a r.). [R.-bearing ಚರ್ಚಿನ ಗೋಡೆಗಳನ್ನೂ ನೆಲವನ್ನೂ ಅಲಂಕರಿಸುವುದಕ್ಕಾಗಿ ಜೊಂಡನ್ನೂ ಹಾರಗಳನ್ನೂ ತೆಗೆದುಕೊಂಡುಹೋಗುವ, ಉ. ಇಂಗ್ಲೆಂಡಿನವರು ಪ್ರತಿ ವರ್ಷವೂ ಆಚರಿಸುವ, ಒಂದು ಹಬ್ಬ. R. candle ಜೊಂಡಿನ ಬೆಂಡನ್ನು ಕೊಬ್ಬಿನಲ್ಲಿ ಅದ್ದಿ ಮಾಡಿದ ಮೋಂಬತ್ತಿ: ಜೊಂಡು ಮೋಂಬತ್ತಿ. Rushlight ಜೊಂಡು ಮೋಂಬತ್ತಿ(ಬೆಳಕು); (ಬುದ್ಧಿ, ತಿಳಿವಳಿಕೆ, ಮೊ. ಗಳ ವಿಷಯದಲ್ಲಿ ರೂಪ.) ಮಬ್ಬು ಮಿನುಗು, ಮಂದ ಪ್ರಕಾಶ. R. ring ಹಿಂದೆ (ಮು., ಆಟದ) ಮದುವೆಗಳಲ್ಲಿ ಉಪಯೋಗಿಸುತ್ತಿದ್ದ ಜೊಂಡಿನ ಉಂಗುರ].

(ಕ್ರಿ.) (ಕುರ್ಚಿಯ ತಳಕ್ಕೆ) ಜೊಂಡು ಹೆಣೆ; (ನೆಲಕ್ಕೆ) ಜೊಂಡು—ಹಾಸು, ಹರವು. **Rúshlike** (ಗು.); **Rúshy** (ಗು.)

Rush[2] ರಷ್ (ಕ್ರಿ., ನಾ.) ಜೋರಾಗಿ, ಬಿರುಸಾಗಿ, ಅವಸರವಸರವಾಗಿ, —ಒಯ್ಯಿ, ತಳ್ಳು, ದಬ್ಬು, ನೂಕು, ದೂಡು, ನುಗ್ಗಿಸು (Rushed them into danger ಅವರನ್ನು ಅಪಾಯಕ್ಕೆ ದೂಡಿದನು. Rushed them round the sights ಪ್ರೇಕ್ಷಣೀಯ ಸ್ಥಳಗಳನ್ನು ಅವರಿಗೆ ಅವಸರವಸರವಾಗಿ ನೋಡಿಸಿಬಿಟ್ಟನು. R. bill through ಮಸೂದೆಯನ್ನು ಆತುರವಾಗಿ ನುಗ್ಗಿಸು. Refuse to be rushed ಅವಸರಪಡಿಸಿಕೊಳ್ಳಲು ಒಪ್ಪದಿರು; ತನ್ನ ಹೆಜ್ಜೆಯಲ್ಲೇ, ರೀತಿಯಲ್ಲೇ, ತಾನು ಹೋಗು). (ಸೈನಿಕ) ರಭಸದಿಂದ, ಹಠಾತ್ತನೆ, —ಮುನ್ನುಗ್ಗು, ಆಕ್ರಮಣಮಾಡು, ನುಗ್ಗಿ ಹಿಡಿದುಕೊ. (ಅಡಚಣೆ, ಹೊಳೆ, ಬೇಲಿ, ಮೊ. ನ್ನು) ನುಗ್ಗಿಕೊಂಡು ದಾಟು; ಭೇದಿಸಿಕೊಂಡು ನುಗ್ಗು. (ಚಿನ್ನದ ಗಣಿ ಪ್ರದೇಶ, ಸಭೆಯಲ್ಲಿ ವೇದಿಕೆ, ಮೊ. ನ್ನು) ಮುತ್ತಿ, ನುಗ್ಗಿ, —ವಶಪಡಿಸಿಕೊ. ವಿಪರೀತ, ದುಬಾರಿ, —ಬೆಲೆ ಹಾಕು (They r. you shockingly). ರಭಸದಿಂದ, ಆತುರದಿಂದ, ಹಿಂದು ಮುಂದು ನೋಡದೆ, —ನುಗ್ಗು, ಮುನ್ನುಗ್ಗು (*In, into* ಉಪ. ಜೊಡನೆ) [R. into, out of, the room. R. at ನುಗ್ಗು, ಮೇಲೆ ಬೀಳು, ದಾಳಿ ಮಾಡು. R. into print (Print ನೋಡಿ)]. ರಭಸದಿಂದ—ಹರಿ, ಹರಡು, ಬೀಳು, ಉರುಳು (River rushes past. A rushing mighty wind. Blood rushed to his face. Avalanches r. down). (ನಾ.) ನುಗ್ಗು(ವುದು), (ನೂಕು) ನುಗ್ಗಲು, ನುಗ್ಗಾಟ, ಮೇಲೆ ಬೀಳುವುದು, ಆಕ್ರಮಣ, ದಾಳಿ (The r. of the tide. Carry the citadel with a r. A great r. of business ವ್ಯಾಪಾರದ ಭರಾಟೆ). (ಕಾಲ್ಚೆಂಡಾಟ) ಚೆಂಡಿಗೆ ಹಲವು ಆಟಗಾರರ ಒಟ್ಟು ಮುತ್ತಿಗೆ, ನುಗ್ಗಾಟ. (ಮು., ಹೊಸ ಚಿನ್ನದ ಗಣಿಗೆ) ಹೆಚ್ಚು ಸಂಖ್ಯೆಯಲ್ಲಿ ತಟ್ಟನೆ ಹೊರಡುವ ವಲಸೆ: ನುಗ್ಗು ವಲಸೆ. (ಯಾವುದಾದರೂ ಸರಕಿಗೆ) ವಿಪರೀತ ಗಿರಾಕಿ (*On, for* ಉಪ. ಜೊಡನೆ).

R.-hours ಭರಾಟೆ (ಜೋರು) ವ್ಯಾಪಾರದ, ಸಂಚಾರದ, —ಹೊತ್ತು.

Rusk ರಸ್ಕ್ (ನಾ.) ಗರುಗಾಗಿ ಮತ್ತೆ ಸುಟ್ಟ ರೊಟ್ಟಿಯ ಬಿಲ್ಲೆ; ಒಂದು ಬಗೆಯ ಬಿಸ್ಕತ್ತು.

Ruskínian ರಸ್ಕಿನಿಯನ್ (ಗು., ನಾ.) (ಇಂಗ್ಲೆಂಡಿನ ಪ್ರಸಿದ್ಧ ಗ್ರಂಥ ಕರ್ತನಾದ) ಜಾನ್ ರಸ್ಕಿನ್ ಎಂಬಾತನ (ತತ್ತ್ವದ, ಅನುಯಾಯಿ). **Ruskinése** (ಗು., ನಾ.), **Ruskinésque** (ಗು., ನಾ.) ರಸ್ಕಿನ್ ಮಾದರಿಯಂಥ(ದು); —ವೈಶಿಷ್ಟ್ಯವುಳ್ಳ(ದ್ದು). **Rúskinism** (ನಾ.); **Rúskinize** (ಕ್ರಿ.) ರಸ್ಕಿನ್ ರೀತಿಯದನ್ನಾಗಿ ಮಾಡು; —ರೀತಿಯಲ್ಲಿ ಬರೆ.

Russ ರಸ್ (ನಾ., ಗು.) ರಷ್ಯಾ ದೇಶದ(ವನು); ರಷ್ಯಾ ಭಾಷೆ. **Rússify** (ಕ್ರಿ. ಸಕ.) ರಷ್ಯೀಕರಿಸು; ರಷ್ಯಾ ಮಾದರಿ ಮಾಡು. **Russificátion** (ನಾ.); **Russo-** ರಸೊ— (ಸ. ಪೂ. ಪ.); **Rússophil** (ನಾ., ಗು.) ರಷ್ಯಾ ಪ್ರೇಮಿ(ಯಾದ). **Russóphilism** ರಸಾಫಿಲಿಸ್‌ಮ್ (ನಾ.) ರಷ್ಯಾ ಪ್ರೇಮ. **Rússophobe** ರಸೊ— (ನಾ., ಗು.) ರಷ್ಯಾ ದ್ವೇಷಿ(ಯಾದ); ರಷ್ಯಾ ಭೀತ. **Russophóbia** (ನಾ.) ರಷ್ಯಾ ದ್ವೇಷ; —ಭೀತಿ.

Rússell (cord) ರಸೆಲ್ (ಕಾರ್ಡ್) ಹತ್ತಿ ಮತ್ತು ಉಣ್ಣೆ ಮಿಶ್ರದ, ದಿಂಡು ಹುರಿಯ, ಒಂದು ಬಟ್ಟೆ; ರಸೆಲ್ ಬಟ್ಟೆ (ವಿದ್ಯಾ ಸಂಸ್ಥೆಗಳ ಸದಸ್ಯರ ಉಡುಪು, ಮೊ. ಕ್ಕಾಗಿ ಉಪಯೋಗಿಸುತ್ತಿದ್ದದ್ದು)

Rússet ರಸೆಟ್ (ನಾ., ಗು.) (ಚರಿತ್ರೆ) ರೈತರು ಬಳಸುತ್ತಿದ್ದ, ಮನೆಯಲ್ಲಿ ನೂತು ನೆಯ್ದ, ಕೆಂಗಂದು ಅಥವಾ ಬೂದು ಬಣ್ಣದ, ಒಂದು ಒರಟು ಬಟ್ಟೆ. ಒರಟು ಸಿಪ್ಪೆಯ, ಕೆಂಗಂದು ಅಥವಾ ಬೂದು ಬಣ್ಣದ, ಒಂದು ಜಾತಿಯ ಸೇಬು. (ಗು.) ಕೆಂಗಂದು ಬಣ್ಣದ [= **Rússety** (ಗು.)]. (ಪ್ರಾಚೀ. ಪ್ರ.) ಹಳ್ಳಿಗಾಡಿನ, ಸರಳ ಸ್ವಭಾವದ. ರಸೆಟ್ ಬಟ್ಟೆಯ, —ಬಟ್ಟೆ ಧರಿಸಿದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Rússia ರಷ (ನಾ.) ರಷ್ಯಾ ದೇಶ. ಪುಸ್ತಕದ ರಟ್ಟು ಕಟ್ಟುವುದರಲ್ಲಿ ಉಪಯೋಗಿಸುವ ತಾಳಿಕೆ ಬರುವ ಒಂದು ಬಗೆಯ ಚರ್ಮ : ರಷ್ಯಾ ಚರ್ಮ (=R. leather). **Rússian** ರಷನ್ (ನಾ., ಗು.) ರಷ್ಯಾ ದೇಶದ(ವನು) ; ರಷ್ಯಾ ಭಾಷೆ(ಯ, —ಯಲ್ಲಿಯ). R. boots ನಡಿಲವಾಗಿ ಮಿಾನಖಂಡವನ್ನು ಮುಚ್ಚುವ ಪಾದರಕ್ಷೆ. **Rússianize** (ಕ್ರಿ. ಸಕ.)

Rust ರಸ್ಟ್ (ನಾ., ಕ್ರಿ.) ತುಕ್ಕು, ಕಿಲುಬು [**Rústless** (ಗು.). Rustless steel ಚೂರಿ ಮತ್ತು ಕತ್ತರಿಗಳಿಗೆ ಉಪಯೋಗಿಸುವ ಕಬ್ಬಿಣ ಮತ್ತು ಕ್ರೋಮಿಯಂ ಮಿಶ್ರಲೋಹ : ತುಕ್ಕು ಹಿಡಿಯದ ಉಕ್ಕು]. (ರೂಪ.) ಉಪಯೋಗಿಸದೆ ಅಥವಾ ಕಾರ್ಯಮಾಡದೆ ಇರುವುದರಿಂದಾದ ಹೀನ ಸ್ಥಿತಿ, ಮಸುಕು, ಮಷ್ಟು, ಮಾಲಿನ್ಯ ; (ಹೀನ ಸ್ಥಿತಿಗೆ ಕಾರಣ ವಾಗುವ) ನಿಷ್ಕ್ರಿಯತ್ವ, ಜಡತೆ, ಸೋಮಾರಿತನ. ಸಸ್ಯಗಳಿಗೆ ಬರುವ, ತುಕ್ಕು ಬಣ್ಣದ ಕಲೆಗಳನ್ನುಂಟುಮಾಡುವ, ಹಲವು ಬಗೆಯ ಶಿಲೀಂಧ್ರ ರೋಗ ; ತುಕ್ಕು ಬೂಷ್ಟು. (ಕ್ರಿ.) ತುಕ್ಕು, ಮಣ್ಣು, —ಹಿಡಿ ; ಕಿಲುಬು ಗಟ್ಟು ; ಬೂಷ್ಟು ಹಿಡಿ. (ಜರೀ ಗಿಡ, ಮೊ. ವು) ತುಕ್ಕು ಬಣ್ಣಕ್ಕೆ ತಿರುಗು, ತುಕ್ಕು ಬಣ್ಣವಾಗು. (ಉಪಯೋಗ ಮಾಡದ್ದರಿಂದ, ಜಡತೆಯಿಂದ) ಸಾಮರ್ಥ್ಯ, ಗುಣ, —ಕುಂದು, ತಗ್ಗು ; ತುಕ್ಕು ಹಿಡಿದುಹೋಗು (ರೂಪ.) [Better wear out than r. out (ವಾರ್ಧಕ್ಯ, ಮೊ. ಗಳಲ್ಲ ಚಟುವಟಿಕೆಯಿಟ್ಟುಕೊಂಡಿರಬೇಕೆಂದು ಪ್ರೋತ್ಸಾಹಿಸುವ ವಾಕ್ಯ): ಕುಳಿತು ತುಕ್ಕು ಹಿಡಿಯುವುದಕ್ಕಿಂತ ದುಡಿದು ಸವೆಯುವುದು ಲೇಸು]. ತುಕ್ಕು ಹಿಡಿಸು, ಕಿಲುಬುಗಟ್ಟಿಸು, ಬೂಷ್ಟು ಹಿಡಿಸು. **Rústy**[1] (ಗು.) ತುಕ್ಕುಹಿಡಿದ ; ಕಿಲುಬುಗಟ್ಟಿದ ; ಬೂಷ್ಟು, ಮಷ್ಟು, —ಹಿಡಿದ ; ಓಬೀರಾಯನ ಕಾಲದ ತೋರಿಕೆಯ ; ಹಳಸು ಮಾಸಲಿನ. (ಧ್ವನಿ) ವಟ ಗುಟ್ಟುವ, ಕಿರುಕಲಾದ. (ವಯಸ್ಸಿನಿಂದ ಅಥವಾ ವ್ಯಾಯಾಮವಿಲ್ಲದ ಜಡತೆ ಯಿಂದ) ಜಡಗಟ್ಟಿದ, ಸೆಡೆತುಹೋದ. (ವಿದ್ಯೆ, ಪಾಂಡಿತ್ಯ) ಬಳಸದೆ ಕುಂದಿಹೋದ, ಶಿಥಿಲವಾದ, ಮಸುಕಾದ (His Greek is a little r.). (ಕಪ್ಪು ಬಟ್ಟೆಯ ವಿಷಯದಲ್ಲಿ) ಬಣ್ಣಗೆಟ್ಟ, ಮಾಸಲು ತಿರುಗಿದ. ತುಕ್ಕು ಬಣ್ಣದ, ಕೆಂಗಂದು ಬಣ್ಣದ. **Rústily** (ಕ್ರಿ. ವಿ.) ; **Rústiness** (ನಾ.)

Rústic ರಸ್ಟಿಕ್ (ನಾ., ಗು.) ಹಳ್ಳಿಯ, ಹಳ್ಳಿಗಾಡಿನ, ಗ್ರಾಮ್ಯ (ಈಗ rural ಎಂಬ ಪದಕ್ಕೆ ವಿರ. ಪ್ರ.) ; ಹಳ್ಳಿಯವರಂತಿರುವ ; ಹಳ್ಳಿ ಜನರ ನಡೆನುಡಿಯುಳ್ಳ ; ರೈತರ ಲಕ್ಷಣವುಳ್ಳ ; ಗ್ರಾಮೀಣ. ನಯ ನಾಜೂಕಿಲ್ಲದ ; ಅಸಂಸ್ಕೃತ ; ಅಪರಿಷ್ಕೃತ ; ಒ(ಡ್ಡೊ)ಡ್ಡಾದ ; ಒರ(ಚೊರ)ಟಾದ ; ಒರಟು ತಯಾರಿಕೆಯ, ಕಂತ್ರಿ [R. seat, bridge, work (ಸವರಿರದ ಕೊಂಬೆಗಳು, ಕೊರಡುಗಳು, ಮೊ. ಗಳಿಂದ ಮಾಡಿದ) ಒರಟು, ಕಂತ್ರಿ, —ಪೀಠ, ಸೇತುವೆ, ಕೆಲಸ]. (ಲಿಪಿ) ಕೋಚು ಕೋಚಾದ, ಸಮ ರೂಪವಿಲ್ಲದ ; (ವಾ. ಶಾ.) ನಯಗೆಲಸಮಾಡಿರದ, ಒಡ್ಡಕೆಲಸದ (R.-work ಒರಟು ಕಲ್ಲುಕೆಲಸ). (ನಾ.) ಹಳ್ಳಿಗ, ಹಳ್ಳಿಗಾಡಿನವನು, ಗ್ರಾಮವಾಸಿ, ರೈತ; ಗಮಾರ. **Rústically** (ಕ್ರಿ. ವಿ.) ; **Rústicly** (ಕ್ರಿ. ವಿ.) (ವಿರ. ಪ್ರ.) ; **Rustícity** (ನಾ.) ; **Rústicate** ರಸ್ಟಿಕೇಟ್ (ಕ್ರಿ.) ಹಳ್ಳಿ ಸೇರಿಕೊ(ಂಡು ಬಿಡು) ; ಹಳ್ಳಿ ಗಾಡಿನಲ್ಲಿ ನೆಲಸು ; ಗ್ರಾಮ ಜೀವನ ನಡಸು. (ವಿಶ್ವವಿದ್ಯಾನಿಲಯದ ಶಿಕ್ಷೆಯಾಗಿ) ತಾತ್ಕಾಲಿಕವಾಗಿ —ಹೊರದೂಡು, ಅಟ್ಟಿಬಿಡು. ಹಳ್ಳಿ ಗಾಡಿನದರಂತೆ ಮಾಡು. (ಕಲ್ಲು ಕಟ್ಟಡದ ವಿಷಯವಾಗಿ) ಒರಟು ಮೈ ಕೊಡು, ಸೇರುವೆಗಳು ಎದ್ದು ಕಾಣುವಂತೆ ಮಾಡು. **Rustication** (ನಾ.)

Rústicate. **Rustic** ನೋಡಿ.

Rústle ರಸ್‌ಲ್ (ಕ್ರಿ., ನಾ.) (ತರಗೆಲೆಯಂತೆ, ಮಳೆ ಹೊಯ್ಯುವಂತೆ, ರೇಷ್ಮೆ ಉಡುಪುಗಳಂತೆ) ಮರ್ಮರ ಶಬ್ದ (ಮಾಡು) ; ಉಡುಪು ಮುರ ಮುರ ಶಬ್ದಮಾಡುವಂತೆ ನಡೆ, ಹೋಗು (*Along*, ಮೊ. ಉಪ. ದೊಡನೆ. R. in silk ರೇಷ್ಮೆಉಡುಪು ಧರಿಸಿರು). (ಅಲುಗಿಸಿ, ಅಲ್ಲಾಡಿಸಿ) ಮರ್ಮರಗುಟ್ಟಿಸು. **Rústlingly** (ಕ್ರಿ. ವಿ.)

Rústy[1]. **Rust** ನೋಡಿ.

Rústy[2] ರಸ್ಟಿ (ಗು.) (ಮು., ಹಂದಿಯ ಮಾಂಸದ ವಿಷಯದಲ್ಲಿ) ಕಮಟು ನಾತದ.

Rut[1] ರಟ್ (ನಾ., ಕ್ರಿ. ಸಕ.) (ಬಂಡಿಗಾಲಿಯ) ಹಳ್ಳಬಿದ್ದ ಜಾಡು ; (ರೂಪ.) ರೂಢಿಯ ಮಾರ್ಗ, ಪದ್ಧತಿ, ಹರಿ. (ಕ್ರಿ.) ಹಳ್ಳದ ಜಾಡು —ಬೀಳಿಸು, ಮಾಡು (ಮು., ಭೂ. ಕೃ.). **Rútty** (ಗು.)

Rut[2] ರಟ್ (ನಾ., ಕ್ರಿ. ಅಕ.) (ಜಿಂಕೆ, ದನಕರು, ಮೊ. ಸಸ್ತನಿಗಳಲ್ಲಿ) ಕಾಲ ಕಾಲಕ್ಕೆ ತೋರುವ ಕಾಮೋದ್ರೇಕ ; ಮದ ; ಬೆದೆ. (ಕ್ರಿ.) —ಏರು, ಹತ್ತು. **Rúttish** (ಗು.)

Ruth ರೂತ್ (ನಾ.) (ಪ್ರಾಚೀ. ಪ್ರ.) ಮರುಕ, ಕರುಣೆ, ಕನಿಕರ, ದಯೆ. **Rúthless** (ಗು.) (ಈಗಲೂ ಬಳಕೆಯುಂಟು) ; **Rúthlessly** (ಕ್ರಿ. ವಿ.); **Rúthlessness** (ನಾ.)

Ruthénium ರುತೀನಿಯಂ (ನಾ.) ಪ್ಲಾಟಿನಂ ವರ್ಗಕ್ಕೆ ಸೇರಿದ ಒಂದು ಲೋಹ.

Rye ರೈ (ನಾ.) ಉ. ಯೂರೋಪು ಪ್ರದೇಶಗಳಲ್ಲಿ ರೊಟ್ಟಿಗೂ ಇಂಗ್ಲೆಂಡಿನಲ್ಲಿ ದನಕರುಗಳ ಮೇವಿಗೂ ಉಪಯೋಗಿಸುವ ಒಂದು ಧಾನ್ಯ ; ಚಿಕ್ಕ ಗೋಧಿ. **Rye-grass** ರೈಗ್ರಾಸ್ (ನಾ.) ಹಲವು ಬಗೆಯ ಮೇವು ಹುಲ್ಲು.

Ryépeck ರೈಪೆಕ್ (ನಾ.) (ನದಿಗಳಲ್ಲಿ) 'ಪಂಟ್' ದೋಣಿಯನ್ನು ನೆರೆ ಗೊಳಿಸಲು, ಕಟ್ಟಿಹಾಕಲು, ಉಪಯೋಗಿಸುವ ಕಬ್ಬಿಣದ ಅಣಚುಳ್ಳ ಕೋಲು, ಕಂಬ.

Rýot ರೈಅಟ್ (ನಾ.) (ಇಂಡಿಯದ) ರೈತ. **Rýotwar** (ಗು.) (ಜಮಾನು ಹಿಡುವಳಿಯ ವಿಷಯದಲ್ಲಿ) ರೈತರಿಗೂ ಸರ್ಕಾರಕ್ಕೂ ನೇರ ಸಂಬಂಧ ವುಳ್ಳ ; ರೈತವಾರಿ. **Rýotwary** (ಗು., ನಾ.) ರೈತವಾರಿ (ಪದ್ಧತಿ)

S

S ಎಸ್. ಇಂಗ್ಲಿಷ್ ವರ್ಣಮಾಲೆಯ ಹತ್ತೊಂಬತ್ತನೆಯ ಅಕ್ಷರ. S ಆಕಾರದ —ವಸ್ತು, ಗುರುತು, ಬಾಗು, ತಿರುವು (River makes a great S)

ಸಂಕ್ಷಿಪ್ತಗಳು : **S.T.P.** (Sacrosanctae theologiae professor) ಪವಿತ್ರ ದೇವತಾ ಶಾಸ್ತ್ರ ಪ್ರಾಧ್ಯಾಪಕ. **S.** (Saint) ಸಂತ (S. John). **SS.** (Saints) ಸಂತರು (SS. Peter & Paul). **S.** (Signor) ಶ್ರೀಮಾನ್. **S.A.** [Salvation Army (Salvation ನೋಡಿ)]. **S.B.** (Simultaneous broadcast) ಏಕ ಕಾಲಿಕ ವಾರ್ತಾ ಪ್ರಸರಣ. **s. caps** (Small capitals) (ಮುದ್ರಣದಲ್ಲಿ) ಕಿರು ದೊಡ್ಡಕ್ಷರ. **s.d.** (Solidus or solidi, denarii) ಷಿಲಿಂಗು, ಪೆನಿ (7s. 6d. ೭ ಷಿಲಿಂಗು ೬ ಪೆನಿ). **S.D.F.** [Social Democratic Federation (Social ನೋಡಿ)]. **s.f.** (Sub finem) ಕೊನೆಗೆ. **S.J.** (Society of Jesus) ಯೇಸು (ಕ್ರಿಸ್ತ) ಸಂಘ. **S.M.** (Sergeant-major) ಸನ್ನದು ಪಡೆದ ಒಬ್ಬ ಸೈನಿ ಕಾಧಿಕಾರಿ. **S.P.C.K.** (Society for promoting Christian knowledge) ಕ್ರೈಸ್ತ ಜ್ಞಾನ ಪ್ರಸಾರ ಸಂಘ; —ಜ್ಞಾನಾಭಿವೃದ್ಧಿ—. **S.P.G.** (Society for propagation of gospel) ಸುವಾರ್ತಾ ಪ್ರಚಾರ ಸಂಘ. **S.P.Q.R.** (1) (Senatus Populusque Romanus) ರೋಮನ್ ಸೆನೆಟ್ (ರಾಜ್ಯ ಸಭೆ) ಮತ್ತು ಪ್ರಜೆ. (2) [Small profits and quick returns (Return ನಾ. ನೋಡಿ)]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

S.A. (South Africa) ದಕ್ಷಿಣ ಆಫ್ರಿಕ. **S.E.** (South-east) ಆಗ್ನೇಯ. **S.W.** (South-west) ನೈರುತ್ಯ. **S.R.** (Southern Railway) ದಕ್ಷಿಣ ರೈಲ್ವೆ. **S.P.R.** (Society for psychical research) ಮನಶ್ಶಾಸ್ತ್ರ ಸಂಶೋಧನ ಸಂಘ. **S.S.** (Steam ship) ಆವಿ ಜಹಜು; ಉಗಿ ಹಡಗು. **s.s.** (Screw steamer) ತಿರುಪು ಜಹಜು. **s.v.** (sub voce) ಆ ಮಾತಿನ ಕೆಳಗೆ.

Sc., Scil. (scilicet) ಎಂದರೆ. **Sc., Sculps.** (sculpsit, sculpserunt) [ಇಂಥವನು(ರು)] ಕೆತ್ತಿದನು(ರು). **Sec.** (Secretary) ಕಾರ್ಯದರ್ಶಿ. **Sen.**(ior) ಹಿರಿಯ. **seq(q).** (sequentes, -tia) ಮತ್ತು ಮುಂದಿನದು(ವು). **Sergt.** (Sergeant) ಸಾರ್ಜಂಟು (ಒಬ್ಬ ಸೈನ್ಯಾಧಿಕಾರಿ ; ಒಬ್ಬ ಪೋಲೀಸು ಅಧಿಕಾರಿ). **sf.** (sforzando) (ಸಂ.) ಗಟ್ಟಿಯಾಗಿ, ಜೋರಾಗಿ. **Skt.** (Sanskrit) ಸಂಸ್ಕೃತ. **Soc.**(iety) ಸಂಘ. **SOS** (Save Our Soul) (ಕಡು ಕಷ್ಟಸ್ಥಿತಿಯಲ್ಲಿ ಸಹಾಯ ಕೋರುವ ಮಾತು). **sq**(uare) ಚದರ. **St** (Saint) ಸಂತ. **st** (street) ಬೀದಿ. **st.**(one) ೧೪ ಪೌಂಡು ತೂಕ. **st.**(umped) (ಕ್ರಿಕೆಟ್) ನಿಲ್ಲೆಡೆ ಬಿಟ್ಟಾಗ ಗುರಿ ಕೋಲು ಕೆಡವಿ ಆಟ ಕಳೆಯಿತು. **stg** (sterling) ಸಾಚಾ, ಚೊಕ್ಕ. **sup.**(ra) ಮೇಲೆ, ಮೇಲುಗಡೆ. **Supt** (Superintendent) ಮೇಲ್ವಿಚಾರಕ. **syn.**(onym) ಸಮಾನಾರ್ಥ ಪದ; ಪರ್ಯಾಯ ಪದ.

's. ೧. (ಪ್ರಾಚೀ. ಪ್ರ.) = God's (*'sblood* ಮತ್ತು ಇತರ ಆಣೆಗಳಲ್ಲಿ ಪ್ರ.). ೨. (ಬಳ. ಮಾ.) = Is (He's, It's, Smith's, etc.). ೩. (ಬಳ. ಮಾ.) = Has (He's, etc. ; ಮು., ಭೂ. ಕೃ. ದ ಹಿಂದೆ : He's done it). ೪. (ಬಳ. ಮಾ.) = Us (Let's go)

Sábaism ಸೇಬೇಇಸ್ಮ್ (ನಾ.) ನಕ್ಷತ್ರಾರಾಧನೆ.

Sábaoth ಸ್ಯಾಬೇಓತ್ (ನಾ., ಬ. ವ.) Lord of S. (ಬೈಬಲ್ಲಿನ ಹೊಸ ಒಡಂಬಡಿಕೆಯಲ್ಲಿ) ದೇವ ಸೇನಾಪತಿ.

Sabbatárian. Sabbath ನೋಡಿ.

Sábbath ಸ್ಯಾಬತ್ (ನಾ.) ಇಸ್ರೇಲ್ ಜನಕ್ಕೆ (ಯೆಹೂದ್ಯರಿಗೆ) ಧಾರ್ಮಿಕ ವಿಶ್ರಾಂತಿ ದಿನವಾಗಿ ವಿಹಿತವಾಗಿರುವ ವಾರದ ಏಳನೆಯ ದಿನ (ಶನಿವಾರ) : ಸಬ್ಬತು ; ವಿಶ್ರಾಂತಿ ದಿನ; ವಿಶ್ರಾಮ —ದಿನ, ವಾರ (= s. day) [S.-day's journey ಯೆಹೂದ್ಯನು ಸಬ್ಬತಿನ ದಿನ ನಡೆಯಬಹುದಾದ ದೂರ (ಸು. ⅔ ಮೈಲಿ) ; (ರೂಪ.) ನಿರಾಯಾಸ, ಸುಲಭ, —ಪ್ರಯಾಣ]. ಕೆಲಸದಿಂದಲೂ ಆಟದಿಂದಲೂ ಕ್ರೈಸ್ತರು ಆವಶ್ಯಕವಾಗಿ ವಿರಾಮ ಪಡೆದುಕೊಳ್ಳಬೇಕಾದ ದಿನ: ಭಾನುವಾರ (= S. day. Keep, break, the s. S.-breaker ಸ್ಯಾಬತ್ ವ್ರತ ಭಂಗಕಾರಿ). ವಿಶ್ರಾಂತಿ, ವಿರಾಮ, —ಕಾಲ; ಬಿಡುವು ಹೊತ್ತು. ವರ್ಷಕ್ಕೊಮ್ಮೆ (ಏಪ್ರಿಲ್ ತಿಂಗಳ ಕಡೆಯ ರಾತ್ರಿ) ದೆವ್ವಗಳು, ಪಿಶಾಚಿಗಳು, ಮತ್ತು ಮಂತ್ರವಾದಿಗಳು ಸೈತಾನಿನ ಅಧ್ಯಕ್ಷತೆಯಲ್ಲಿ ಸೇರಿ ನಡಸುವ ಉತ್ಸವ, ಮಜಾ (= Witches' s.). **Sábbathless** (ಗು.) ; **Sabbatárian** ಸ್ಯಾಬಟೇರಿಯನ್ (ನಾ., ಗು.) ಸಬ್ಬತು ದಿನವನ್ನು ಆಚರಿಸುವ ಯೆಹೂದ್ಯ; ಭಾನುವಾರವನ್ನು ಕಡ್ಡಾಯವಾಗಿ ವಿಶ್ರಾಂತಿ ದಿನವನ್ನಾಗಿ ಒಪ್ಪಿ ಆಚರಿಸುವ ಕ್ರೈಸ್ತ ; ಶನಿವಾರವನ್ನು ಸಬ್ಬತು ದಿನವನ್ನಾಗಿ ಆಚರಿಸುವ ಕ್ರೈಸ್ತ (ಪಂಗಡದವನು). (ಗು.) ಸಬ್ಬತು ಆಚರಣೆಯ(ವರ) ; ಸಬ್ಬತು ತತ್ತ್ವಗಳಿಗೆ ಸಂಬಂಧಿಸಿದ. **Sabbatárianism** (ನಾ.). **Sabbátic(al)** ಸ್ಯಾಬ್ಯಾಟಿಕ್(ಕಲ್) (ಗು.) ಸಬ್ಬತಿನ, ಸಬ್ಬತಿಗೆ ತಕ್ಕ [-al river (ಯೆಹೂದ್ಯ ಪುರಾಣ) ಸಬ್ಬತು ದಿನ ಹೊರತು ಮಿಕ್ಕ ದಿನಗಳಲ್ಲಿ ಹರಿಯುತ್ತಿರುವುದೆಂದು ಹೇಳುವ ಒಂದು ನದಿ. S. year ಯೆಹೂದ್ಯರು ನೆಲವನ್ನು ಉಳದೆ ಬಿಡಬೇಕಾದ, ಸಾಲಗಾರರನ್ನೂ ಯೆಹೂದ್ಯ ಗುಲಾಮರನ್ನೂ ಬಿಡುಗಡೆ ಮಾಡಬೇಕಾದ, (ಪ್ರತಿ) ಏಳನೆಯ ವರ್ಷ: ಸಬ್ಬತು ವರ್ಷ]. **Sabbátically** (ಕ್ರಿ. ವಿ.); **Sábbatize** ಸ್ಯಾಬಟೈಸ್ (ಕ್ರಿ.) ಸಬ್ಬತು ಆಚರಿಸು ; (ದಿನವನ್ನು) ಸಬ್ಬತು ದಿನವನ್ನಾಗಿ ಪಾಲಿಸು, ಆಚರಿಸು ; ವಿಶ್ರಾಂತಿ ದಿನವನ್ನಾಗಿ ಮಾಡಿಕೊ (ರೂಪ. ಸಹ)

Sabéllian ಸಬೆಲಿಯನ್ (ಗು., ನಾ.) ಕ್ರೈಸ್ತರ ತ್ರಿಮೂರ್ತಿಗಳು ಒಂದೇ ಪರವಸ್ತುವಿನ ಮೂರು ರೂಪಗಳು ಎಂದು ಪ್ರತಿಪಾದಿಸಿದ (ಖನೆಯ ಶ. ಮಾ. ದಲ್ಲಿದ್ದ) ಸಬೆಲಿಯಸ್ ಎಂಬಾತನ ತತ್ತ್ವದ (ಅನುಯಾಯಿ)

Sábian ಸೇಬಿಯನ್ (ಗು., ನಾ.) ಕೊರಾನಿನಲ್ಲಿ ಮುಸ್ಲಿಮರೊಡನೆಯೂ ಯೆಹೂದ್ಯರು ಮತ್ತು ಕ್ರೈಸ್ತರೊಡನೆಯೂ ಆಸ್ತಿಕರ ವರ್ಗದಲ್ಲಿ ಸೇರಿ ಸಿರುವ ಒಂದು ಪಂಗಡದ(ವನು) : ಸೇಬಿಯನ್ ಪಂಗಡದ(ವನು). (ತಪ್ಪಾಗಿ) ನಕ್ಷತ್ರಾರಾಧನೆಯ(ವನು) ; ನಕ್ಷತ್ರಾರಾಧಕ.

Sáble[1] ಸೇಬ್‌ಲ್ (ನಾ.) ಉತ್ತರ ಧ್ರುವ ಪ್ರದೇಶವಾಸಿಯಾದ, ಕಂದು ಬಣ್ಣದ ತುಪ್ಪುಳುಳ್ಳ, ಮಾಂಸಾಹಾರಿಯಾದ, ಸಣ್ಣ ಜಾತಿಯ, ಒಂದು ಚತುಷ್ಪಾದಿ ; ಇದರ ತೊಗಲು ಅಥವಾ ತುಪ್ಪುಳು ಚರ್ಮ. ಇದರ ಕೂದಲಿನಿಂದ ಮಾಡಿದ ನಯವಾದ ಬಣ್ಣದ ಕುಂಚಿಗೆ.

Sáble[2] ಸೇಬ್‌ಲ್ (ನಾ., ಗು.) (ವಂಶ ಲಾಂಛನದಲ್ಲಿ) ಕಪ್ಪು ಬಣ್ಣ ; (ಕಾವ್ಯ, ಅಲಂ.) ಕಪ್ಪು ಬಣ್ಣ, ಶ್ಯಾಮವರ್ಣ ; (ಕಾವ್ಯ, ಅಲಂ., ಬ. ವ. ದಲ್ಲಿ) ಕಪ್ಪು ಬಣ್ಣದ ಉಡುಪು (ದುಃಖಸೂಚಕ ಉಡುಪು) [**ɔábled** (ಗು.)]. ಯಾವುದರ ಗಂಡು ಕಪ್ಪು ಬಣ್ಣದ್ದಾಗಿರುವುದೋ ಆ ದೊಡ್ಡ ಜಾತಿಯ ಜಿಂಕೆ ; ಕೃಷ್ಣಮೃಗ (= S. antelope). (ಗು.) (ಕಾವ್ಯ, ಅಲಂ.) (ನೀಗ್ರೊ, ಆಕಾಶ, ಸಮುದ್ರ, ರಾತ್ರಿ, ವಿಧಿ, ಮೊ. ಗಳ ವಿಷಯದಲ್ಲಿ) ಕಪ್ಪಾದ, ಕಾಳ, ಕರಾಳ, ಭಯಂಕರ (His s. Majesty ಸೈತಾನ). **Sábly** (ಕ್ರಿ. ವಿ.)

Sábot ಸ್ಯಾ(ಸಾ)ಬೋ(ೕ) (ನಾ.) ಕೆಳ ವರ್ಗದ ಫ್ರೆಂಚ್ ಜನರು ಮೆಟ್ಟುವ, ಒಂದೇ ಮರದ ತುಂಡನ್ನು ಕೆತ್ತಿ ಮಾಡಿದ ಪಾದರಕ್ಷೆ ; ಮರದ ಅರೆ ಜೋಡು ; ಪಾವು ಕೊರಡು ; ತೋಡು ಹಾವುಗೆ ; ಮರದ ಅಟ್ಟೆಯ ಪಾದರಕ್ಷೆ. (ಸೈನಿಕ) ಶಂಕುವಿನಾಕಾರದ ಕ್ಷಿಪಣಿಗೆ ಲೋಹದ ಪಟ್ಟಿಗಳಿಂದ ಬಂಧಿಸಿದ ಲೋಹದ ಬಟ್ಟಲು ; ಗೋಳಾ ಕಾರದ ಕ್ಷಿಪಣಿಗೆ ತಾಮ್ರದ ರಿವೆಟ್ ಮೊಳೆಯಿಂದ ಬಂಧಿಸಿದ ಮರದ ಬಿಲ್ಲೆ. (ಯಂತ್ರ ಶಿಲ್ಪ) ದಸಿಯ ಚೂಪು ಕೊನೆಯ ಕಬ್ಬಿಣದ ಕಟ್ಟು ; ಬೈರಿಗೆ ಸರಳಿನ ಕೊರೆಯುವ ಭಾಗ. **Sáboted** ಸ್ಯಾಬೋಡ್ (ಗು.)

Sábotage ಸ್ಯಾಬೊಟಿಜ್, **Sabotáge** ಸ್ಯಾಬೊಟಾಜ್(ಷ್) (ನಾ., ಕ್ರಿ.) ತಮ್ಮ ಯಜಮಾನರ ಮೇಲೆ ಅಸಮಾಧಾನಗೊಂಡ ಕೆಲಸಗಾರರು ಅವರಿಗೆ ನಷ್ಟವುಂಟುಮಾಡುವ ದುರುದ್ದೇಶದಿಂದ ಯಂತ್ರೋಪಕರಣಗಳಿಗೆ ಹಾನಿ ಮಾಡುವುದು: ಆಸ್ತಿಯ ಹಾನಿ ; ಯಂತ್ರ ನಾಶ ; ಅತೃಪ್ತಿ ಸೂಚಕ ಹಾನಿ ; ಕೋಪ ಪ್ರತಿಕ್ರಿಯೆ. (ಕ್ರಿ.) —ಮಾಡು.

Sábre ಸೇಬರ್ (ನಾ., ಕ್ರಿ. ಸಕ.) (ರಾವುತರು ಉಪಯೋಗಿಸುವ) ಕಿರು ಬಾಗಿದ (ಅಲಗಿನ) ಕತ್ತಿ ; ಕುಡುಗತ್ತಿ ; ಬಾಗು ಕತ್ತಿ ; ಕೊಂಕು ಕತ್ತಿ (The S. ಸೈನ್ಯ ಬಲ, ಸೇನಾ ಪ್ರಭುತ್ವ). (ಬ. ವ. ದಲ್ಲಿ) ರಾವುತ ದಳ, ಅಶ್ವ ದಳ; ರಾವುತ ಮತ್ತು ಕುದುರೆ (Has 300 sabres). ಕರಗಿದ ಗಾಜಿನ ಮೇಲ್ಮೈಯಲ್ಲಿರುವ ಕಶ್ಮಲವನ್ನು (ಅನ್ಯ ಪದಾರ್ಥಗಳನ್ನು) ಬಾಚಿ ತೆಗೆಯುವ ತಾಮ್ರದ ಸಲಕರಣೆ. [S.-bill, -wing ಹಲವು ಬಗೆಯ ಹಕ್ಕಿ. S.-cut ಕೊಂಕು ಕತ್ತಿ ಏಟು ; —ಗಾಯ(ದ ಕಲೆ). S.-toothed lion *or* tiger ಕೊಂಕು ಕತ್ತಿಯಾಕಾರದ ಉದ್ದವಾದ ಮೇಲ್ಕೋರೆಹಲ್ಲುಗಳಿದ್ದ ಒಂದು ವಂಶ ನಷ್ಟ ಸಸ್ತನಿ ಪ್ರಾಣಿ]. (ಕ್ರಿ.) ಕೊಂಕು ಕತ್ತಿಯಿಂದ —ಕಡಿ, ಹೊಡೆ, ಗಾಯಮಾಡು.

Sábretache ಸ್ಯಾಬ್ರಟಾಷ್, —ಬರ್‌ಟ್ಯಾಷ್ (ನಾ.) ರಾವುತಾಧಿ ಕಾರಿಯ (ನಡುಪಟ್ಟಿಯ ಎಡಗಡೆಯಲ್ಲಿ ಉದ್ದವಾದ ಪಟ್ಟಿಗಳಿಂದ ತೂಗ ಹಾಕಿದ) ಚರ್ಮದ ಚೀಲ.

Sabreúr (F) ಸಾಬ್ರರ್ (ನಾ.) ಕೊಂಕು ಕತ್ತಿಯ ರಾವುತ ; (ಮು.) ಜಬರಿನ, ಕೆಚ್ಚಿನ, —ರಾವುತ (= Beau s.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sábulous ಸ್ಯಾಬ್ಯುಲಸ್ (ಗು.) (ಪಾಂಡಿತ್ಯದ ಮಾತು) ಮರಳಿನ, ಮರಳು ಕಣಗಳುಳ್ಳ, ಮರಳು ತುಂಬಿದ, ಸೈಕತ. (ವೈ. ಶಾ.) (ಮು., ಮೂತ್ರಾಂಗಗಳಲ್ಲಿಯ ಸ್ರಾವಗಳ ವಿಷಯದಲ್ಲಿ) ಕಣ ಕಣ ವಾಗಿರುವ.

Sabúrra ಸಬರ (ನಾ.) (ವೈ. ಶಾ.) ಹೊಟ್ಟೆಯಲ್ಲಿ ಸಂಗ್ರಹವಾದ ಕಣ ಕಣವಾದ ಒಂದು ಬಗೆಯ ಕಲ್ಮಷ ಪದಾರ್ಥ. ಬಾಯಿ—ದುರ್ನಾತ, ಹೊಲಸು.

Sac ಸ್ಯಾಕ್ (ನಾ.) (ಪ್ರಾಣಿಯ ಅಥವಾ ಸಸ್ಯದ ದೇಹದಲ್ಲಿಯ) ತೆಳು ಪೊರೆಯ ಸಂಚಿ(ಯಂಥ ಪೊಳ್ಳು); ಚೀಲ, ಕೋಶ; ಅಂತ್ರವೃದ್ಧಿ, ಪೂತಿಕೋಶ, ಗಡ್ಡೆ, ಮೊ. ಗಳ ಆವರಣ ಕೋಶ. =Sack[1] (ಉಡುಪಿನ ಅರ್ಥದಲ್ಲಿ). **Sáccate** ಸ್ಯಾಕೇಟ್ (ಗು.) (ಸ. ವಿ.) ಚೀಲವಾಗಿ ಹಿಗ್ಗಿದ, ಕೋಶವಾಗಿ ಉಬ್ಬಿಕೊಂಡ; ಕೋಶಾವೃತ; ಕೋಶದಲ್ಲಿರುವ. **Sácciform** ಸ್ಯಾಕ್ಸಿಫಾರ್ಮ್ (ಗು.) ಕೋಶಾ ಕಾರದ. **Sáccule** ಸ್ಯಾಕ್ಯುಲ್ (ನಾ.) ಸಣ್ಣ ಚೀಲ; ಕೋಶಕ. **Sáccular** (ಗು.); **Sácculate** (ಗು.); **Sacculáted** (ಗು.); **Sacculátion** (ನಾ.)

Sáccate. **Sac** ನೋಡಿ.

Sácchar- (ಕಾಂಡ ರೂಪ) ಸಕ್ಕರೆ—, ಶರ್ಕರಾ—. (ಮು., ವೈಜ್ಞಾನಿಕ ಪದಗಳಲ್ಲಿ). **Sáccharate** ಸ್ಯಾಕರೇಟ್ (ನಾ.) ಶರ್ಕರಾಮ್ಲದಿಂದ ದೊರೆತ ಲವಣ: ಶರ್ಕರಾ ಲವಣ. **Saccháric acid** ಸಕ್ಯಾರಿಕ್ ಆ್ಯಸಿಡ್ (ನಾ.) ಡೆಕ್ಸ್‌ಟ್ರೋಸ್ ಸಕ್ಕರೆಯ ಮೇಲೆ ನೈಟ್ರಿಕ್ ಆಮ್ಲದ ಪರಿಣಾಮದಿಂದ ಉತ್ಪನ್ನವಾಗುವ ಒಂದು ದ್ವಿಕ್ಷಾರಕ ಆಮ್ಲ; ಕೆಲವು ಬಗೆಯ ಗ್ಲೂಕೋಸ್ ಸಕ್ಕರೆಯ ಮೇಲೆ ಕ್ಷಾರಗಳ ಪರಿಣಾಮ ದಿಂದ ಉತ್ಪನ್ನವಾಗುವ ಒಂದು ಏಕಕ್ಷಾರಕ ಆಮ್ಲ: ಶರ್ಕರಾಮ್ಲ. **Sacchariferous** ಸ್ಯಾಕರಿಫೆರಸ್ (ಗು.) ಸಕ್ಕರೆ —ಉಳ್ಳ, ಕೊಡುವ; ಶರ್ಕರಾಗರ್ಭಿತ. **Sáccharify** ಸ್ಯಾಕರಿಫೈ, **Sacchárify** ಸಕ್ಯಾರಿಫೈ (ಕ್ರಿ. ಸಕ.) (ಪಿಷ್ಟವನ್ನು) ಸಕ್ಕರೆಯ ನ್ನಾಗಿ ಮಾರ್ಪಡಿಸು; ಶರ್ಕರೀಕರಿಸು. **Saccharímeter** ಸ್ಯಾಕರಿ ಮಿಟರ್ (ನಾ.) ವಿಶಿಷ್ಟ ರೂಪದ ಬೆಳಕಿನಿಂದ, ಸಕ್ಕರೆಗಳನ್ನು ಪರೀಕ್ಷಿ ಸುವ ಸಲಕರಣೆ: ಶರ್ಕರಾಮಾಪಕ, ಶರ್ಕರಾ ಪರೀಕ್ಷಕ. **Sáccharin** ಸ್ಯಾಕರಿನ್, **Sáccharine**[1] ಸ್ಯಾಕರಿ(ೀ)ನ್ (ನಾ.) (ಸಂಧಿ ವಾತ, ಮಧುಮೂತ್ರ, ಮೊ. ರೋಗದಿಂದ ಪೀಡಿತರಾದವರು ಆಹಾರ ವನ್ನು ಸಿಹಿಗೊಳಿಸಲು ಉಪಯೋಗಿಸುವ) ಕೋಲ್ ಟಾರಿನಿಂದ ತೆಗೆದ ಅತಿ ಸಿಹಿಯಾದ ಒಂದು ಬಗೆಯ ಸಕ್ಕರೆ: ಸ್ಯಾಕರಿನ್. **Sáccharine**[2] ಸ್ಯಾಕರೈ(ರಿ)ನ್ (ಗು.) ಸಕ್ಕರೆಯ(ಂಥ), ಸಕ್ಕರೆಯುಳ್ಳ. **Sáccharo-** ಸ್ಯಾಕರೊ— (ಸ. ಪೂ. ಪ.) ಸಕ್ಕರೆ ಮತ್ತು—; ಶರ್ಕರಾ—. **Sáccharoid** ಸ್ಯಾಕರಾಯ್ಡ್ (ಗು., ನಾ.) (ಭೂ. ವಿ.) ಸಕ್ಕರೆಯಂತೆ ಕಣ ಕಣವಾದ, ಮರಳು ಮರಳಾದ. (ನಾ.) ಸಕ್ಕರೆ ಯಂಥ ಪದಾರ್ಥ; ಶರ್ಕರಾ ಕಲ್ಪ. **Saccharómeter** ಸ್ಯಾಕರಾ ಮಿಟರ್ (ನಾ.) (ಸಾರಾಯಿ ಬಟ್ಟಿಯಿಳಿಸುವಲ್ಲಿ) ದ್ರಾವಣದಲ್ಲಿಯ ಶರ್ಕರಾಂಶವನ್ನು ವಿಶಿಷ್ಟ ಗುರುತ್ವ ಮಾಪನ ಪದ್ಧತಿಯಿಂದ ಅಳೆ ಯುವ ಒಂದು ದ್ರವ ವಿಶಿಷ್ಟ ಗುರುತ್ವ ಮಾಪಕ: ಶರ್ಕರಾಂಶ ಮಾಪಕ. **Sáccharose** ಸಾಕರೋಸ್ (ನಾ.) ದ್ರಾಕ್ಷಿಸಕ್ಕರೆಯ (ಗ್ಲೂಕೋಸ್) ವರ್ಗದಿಂದ ಭಿನ್ನವಾದ ವರ್ಗದ ಸಕ್ಕರೆ: ಸ್ಯಾಕರೋಸ್ ಸಕ್ಕರೆ.

Sácciform, Sáccule, etc. **Sac** ನೋಡಿ.

Sácerdocy, Sácerdotage. **Sacerdotal** ನೋಡಿ.

Sácerdótal ಸ್ಯಾಸರ್‌ಡೋಟಲ್ (ಗು.) ಪುರೋಹಿತನ(ರ), ಪೌರೋ ಹಿತ್ಯದ; (ತತ್ತ್ವಗಳು, ಮೊ. ವು) ದೀಕ್ಷೆ ಹೊಂದಿದ ಪುರೋಹಿತರಿಗೆ ಯಾಜ್ಞಿಕ ಕರ್ತವ್ಯಗಳೂ ಅತಿ ಮಾನುಷ ಶಕ್ತಿಗಳೂ ಉಂಟೆನ್ನುವ; ಪೌರೋಹಿತ; ಅತಿ ಪುರೋಹಿತಾಧಿಕಾರದ; ಪುರೋಹಿತ ಪ್ರಾಬಲ್ಯದ. **Sacerdótally** (ಕ್ರಿ. ವಿ.); **Sacerdótalism** (ನಾ.); **Sacerdótalist** (ನಾ.); **Sacerdótalize** (ಕ್ರಿ ಸಕ.); **Sácerdocy** —ಡೋಸಿ (ನಾ.) (ವಿರ. ಪ್ರ.) ಪುರೋಹಿತ—ಪದ್ಧತಿ, ಪ್ರಾಬಲ್ಯ; ಪೌರೋಹಿತ್ಯ. **Sacerdótage** —ಡೋಟೇಜ್ (ನಾ.) (ಹಾಸ್ಯ ಪ್ರ.) ಪುರೋಹಿತ—ಪದ್ಧತಿ, ಪ್ರಾಬಲ್ಯ; ಪುರೋಹಿತ ಪ್ರಾಬಲ್ಯದ ರಾಜ್ಯ.

Sáchet ಸ್ಯಾಷೇ, ಸ್ಯಾಚೆಟ್ (ನಾ.) ಸಣ್ಣ ಸುಗಂಧ ಚೀಲ; ಉಡುಪು, ಮೊ. ಗಳಲ್ಲಿಡಲು ಉಪಯೋಗಿಸುವ ಪರಿಮಳದ್ರವ್ಯ(ದ ಪೊಟ್ಟಣ): ಸುಗಂಧ (ಪೊಟ್ಟಣ)

Sack[1] (ನಾ.) (ಗೋಣಿಯ) ಚೀಲ (Give one the s. ಕೆಲಸದಿಂದ ವಜಾಮಾಡು, —ತೆಗೆದುಹಾಕು. Get the s. ಕೆಲಸ ಕಳೆದುಕೊ, —ದಿಂದ ವಜಾ ಆಗು). (ಅಳತೆಯಾಗಿ) ಚೀಲದ ತುಂಬು, ಮೂಟೆ (Coal at 1/6 the s. ಕಲ್ಲಿದ್ದಲು ಮೂಟೆ ಒಂದಕ್ಕೆ ೧ ಷಿ. ೬ ಪೆ.). (ಉಡುಪಿನ ವಿಷಯದಲ್ಲಿ: Sacque, Sac ಸಹ) (ಪ್ರಾಚೀ. ಪ್ರ.) ಹೆಂಗಸಿನ ಒಂದು ಬಗೆಯ ಸಡಿಲ ದಗಲೆ, ಕವುದಿ; ನೆಲದಮೇಲೆ ಹರಿಯುವಂತೆ ಭುಜದಿಂದ ನೇಲುವ, ನಿರಿಮಡಿಕೆಯ, ರೇಷ್ಮೆಯ ತೊಂಗು ವಸ್ತ್ರ; (ಗಂಡಸಿನ ಅಥವಾ ಹೆಂಗಸಿನ) ಬೆನ್ನಿಗೆ ಸರಿಯಾಗಿ ಕೂರದ, ಸಡಿಲ ವಾಗಿ ತೊಂಗುವ ಅಂಗಿ: ದಗಲೆ ಅಂಗಿ. Sackcloth ಗೋಣಿಯ —ಪಟ್ಟೆ, ತಟ್ಟು. (ರೂಪ.) ದುಃಖ (ಸೂಚಕ) ವಸ್ತ್ರ; ಪಶ್ಚಾತ್ತಾಪ ಸೂಚನೆಯ ಉಡುಪು. In s.-c. & ashes (ಬೈಬಲ್ ಪ್ರ.) (Ash[2] ನೋಡಿ). S.-race ಕುತ್ತಿಗೆಯವರೆಗೆ ಗೋಣಿಯ ಚೀಲದಲ್ಲಿ ನಿಂತು, ಚೀಲದ ಬಾಯನ್ನು ಹಿಡಿದುಕೊಂಡು ಓಡುವ ಪಂದ್ಯ: ಗೋಣಿಯ(ಚೀಲದ) ಪಂದ್ಯ. **Sácking**[1] (ನಾ.) ಗೋಣಿಯ —ಬಟ್ಟೆ, ಪಟ್ಟೆ. **Sáckful** (ನಾ.) ಗೋಣಿಯ (ಚೀಲದ) ತುಂಬು.

Sack (ಕ್ರಿ. ಸಕ.) (ಗೋಣಿ) ಚೀಲಕ್ಕೆ ಹಾಕು, ತುಂಬು. (ಬಳ.ಮಾ.) ಕೆಲಸದಿಂದ —ತೆಗೆದುಹಾಕು, ವಜಾಮಾಡು [ɔácking[2] (ನಾ.)]. (ಬಳ. ಮಾ.) (ಪಂದ್ಯದಲ್ಲಿ, ಹೋರಾಟದಲ್ಲಿ) ಸೋಲಿಸು.

Sack[2] ಸ್ಯಾಕ್ (ಕ್ರಿ. ಸಕ.) (ಗೆದ್ದ ಸೈನ್ಯದ, ಸೇನಾಪತಿಯ,—ವಿಷಯದಲ್ಲಿ; ಪಟ್ಟಣ, ಮೊ. ನ್ನು) ಕೊಳ್ಳೆ ಹೊಡೆ, ಸೂರೆ ಮಾಡು. (ಕಳ್ಳರು, ಮೊ. ರ ವಿಷಯದಲ್ಲಿ) ಇದ್ದದ್ದನ್ನೆಲ್ಲ ಹೊತ್ತುಕೊಂಡು ಹೋಗು, ಸುಲಿಗೆ ಮಾಡು, ಲೂಟಿ ಹೊಡೆ. (ನಾ.) (ಪಟ್ಟಣ, ಮೊ. ಗಳ) ಕೊಳ್ಳೆ, ಲೂಟಿ (ಹೊಡೆ ಯುವುದು)

Sack[3] ಸ್ಯಾಕ್ (ನಾ.) (ಚರಿತ್ರ) ಮೊದಲು ಸ್ಪೆಯ್ನ್ ದೇಶದಿಂದಲೂ ಕನೇರಿ ದ್ವೀಪಗಳಿಂದಲೂ ಬರುತ್ತಿದ್ದ ಹಲವು ಬಗೆಯ ಬಿಳಿಯ ದ್ರಾಕ್ಷಾ ಮದ್ಯ [Sherry, Canary, s. S. posset, whey ಈ ಮದ್ಯ ಹಾಕಿ ಮಾಡಿದ ಪಾನೀಯ. Halfpennyworth of bread to intolerable deal of s. ('ಗಜ್ಜುಗದಷ್ಟು ಅನ್ನ ಗಡಿಗೆ ತುಂಬ ಮಜ್ಜಿಗೆ' ಎಂಬಂತೆ) ಅಮುಖ್ಯವಾದುದರ ಆಧಿಕ್ಯ]

Sáckbut ಸ್ಯಾಕ್‌ಬಟ್ (ನಾ.) ಈಗ ಬಳಕೆಯಲ್ಲಿಲ್ಲದ, ಮಂದ್ರ ಸ್ವರದ, ಒಂದು ಬಗೆಯ ತುತೂರಿ.

Sáckless ಸ್ಯಾಕ್‌ಲೆಸ್ (ಗು.) (ಪ್ರಾಚೀ. ಪ್ರ., ಸ್ಕಾ. ಪ್ರ.) (ಅಪರಾಧ, ಮೊ. ವು) ಏನೂ ತಿಳಿಯದ, ಅರಿಯದ (*Of* ಉಪ. ದೊಡನೆ); ನಿರಪ ರಾಧಿಯಾದ; ಕೆಡುಕುಮಾಡದ, ನಿರಪಾಯಕರ; ಅಪ್ರಯೋಜಕ ನಾದ, ನಿಸ್ಸತ್ತ್ವದ, ನಿರುತ್ಸಾಹದ.

Sacque. **Sack**[1] ನೋಡಿ.

Sácral. **Sacrum** ನೋಡಿ.

Sácrament ಸ್ಯಾಕ್ರಮೆಂಟ್ (ನಾ., ಕ್ರಿ. ಸಕ.) (ಆಂತರಿಕ ಮತ್ತು ಪಾರಮಾರ್ಥಿಕ ಪ್ರಸಾದದ ಹೊರ ಗುರುತಾದ) ಧಾರ್ಮಿಕ ಕರ್ಮ, ಪವಿತ್ರ ಕರ್ಮ, ಮತ ಸಂಸ್ಕಾರ (ಕೆಲವು ಕ್ರೈಸ್ತ ಪಂಗಡಗಳಲ್ಲಿ baptism, confirmation, the eucharist, penance, extreme unction, orders, and matrimony ಎಂಬ ಏಳು ಸಂಸ್ಕಾರಗಳು. ಪ್ರಾಟೆಸ್ಟಂಟರಲ್ಲಿ ಅನೇಕರು baptism ಮತ್ತು the eucharist ಎಂಬ ಎರಡು ಸಂಸ್ಕಾರಗಳನ್ನು ಮಾತ್ರ ಒಪ್ಪುತ್ತಾರೆ) [The s., the s.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

of the altar, the Blessed *or* Holy S. (ಕ್ರೈಸ್ತ) ಪ್ರಭು ಭೋಜನ ಸಂಸ್ಕಾರ; ಇದರ(ಲ್ಲಿ ಪವಿತ್ರಗೊಳಿಸಿದ) ಪ್ರಸಾದ (ಮು., ರೊಟ್ಟಿ). Take, receive, the s. to do *or* upon (ಪಾಗ್ದಾನವನ್ನು, ಶಪಥವನ್ನು, ಸ್ಥಿರೀಕರಿಸುವಲ್ಲಿ) ಪ್ರಭು ಭೋಜನ ಸಂಸ್ಕಾರದಲ್ಲಿ ಭಾಗ ವಹಿಸು]. ರಹಸ್ಯಾರ್ಥದ ಪವಿತ್ರ —ವಸ್ತು, ಸಂಕೇತ. ಆಣೆ, ಶಪಥ, ಪ್ರತಿಜ್ಞೆ. (ಕ್ರಿ.) ಆಣೆಯಿಡು, ಪ್ರತಿಜ್ಞೆ ಮಾಡು (ಮು., ಭೂ. ಕೃ. ನಲ್ಲಿ). (ವಿರ. ಪ್ರ.) ಪವಿತ್ರಗೊಳಿಸು. **Sacraméntal** (ಗು., ನಾ.) ಪವಿತ್ರ ಕರ್ಮದ, ಮತ ಸಂಸ್ಕಾರದ; (ತತ್ತ್ವ, ಮೊ. ಗಳ ವಿಷಯದಲ್ಲಿ) ಮತ ಸಂಸ್ಕಾರಕ್ಕೆ ಹೆಚ್ಚು ಪ್ರಾಧಾನ್ಯ ಕೊಡುವ. (ನಾ.) ಮತ ಸಂಸ್ಕಾರದಂಥ (ಆದರೆ ಅದರಲ್ಲಿ ಸೇರಿಲ್ಲದ) ಆಚರಣೆ (ಉದಾ., ತೀರ್ಥೋದಕ, ಶಿಲುಬೆಯ ಚಿಹ್ನೆ, ಮೊ. ಗಳನ್ನು ಉಪಯೋಗಿಸುವುದು). **Sacraméntalism** (ನಾ.) ಮತ ಸಂಸ್ಕಾರ ಪ್ರಾಮುಖ್ಯತೆ. **Sacraméntalist** (ನಾ.); **Sacramentálity** (ನಾ.) ಮತ ಸಂಸ್ಕಾರತ್ವ. **Sacraméntally** (ಕ್ರಿ. ವಿ.); **Sacramentárian** (ಗು., ನಾ.) (ಚರಿತ್ರೆ) (ಕ್ರೈಸ್ತ) ಪ್ರಭು ಭೋಜನ ಸಂಸ್ಕಾರದಲ್ಲಿ ಕ್ರಿಸ್ತನ ದೇಹ ಮತ್ತು ರಕ್ತ ವಾಸ್ತವಿಕವಾಗಿರುವುದಿಲ್ಲವೆಂದೂ ಅವು ಸಂಕೇತ ಮಾತ್ರವೆಂದೂ ನಂಬುವ(ವನು) (=**Sacraméntary**). (ಆಧುನಿಕ ಪ್ರ.) ಮತ ಸಂಸ್ಕಾರಕ್ಕೆ ಅತಿ ಪ್ರಾಮುಖ್ಯತೆ ಕೊಡುವ(ವನು). **Sacramentárianism** (ನಾ.)

Sacrárium ಸಕ್ರೇರಿಯಂ (ನಾ.; ಬ. ವ. -ria —ರಿಯ) (ರೋ. ಪ್ರಾ.) (ದೇವಸ್ಥಾನದ) ಗರ್ಭಗುಡಿ, ಗರ್ಭಗೃಹ; (ಮನೆಯಲ್ಲಿ) ದೇವರ ಕೋಣೆ. ಚರ್ಚಿನ ಬಲಿಪೀಠದ ಕಟಕಟೆಯ ಒಳ ಭಾಗ (=Sanctuary). (ರೋ. ಕ್ಯಾ.) ತೀರ್ಥೋದಕ ತೊಟ್ಟಿ, —ಪಾತ್ರೆ (=Piscina)

Sácre ಸ್ಯಾಕ್ರೇ (ಕ್ರಿ. ಅಕ.; ಭೂತ., ಭೂ. ಕೃ. -red; ವರ್ತಮಾನ ಕೃ. -reing) (ಫ್ರೆಂಚ್ ಜನರ ವಿಷಯದಲ್ಲಿ) ಆಣೆಯಿಡು, ಶಪಥಮಾಡು.

Sácred ಸೇಕ್ರೆಡ್ (ಗು.; ತಮ ಭಾವ, ವಿರ. ಪ್ರ., -est) ದೇವಾರ್ಪಿತ; (ಯಾವುದಾದರೂ ವ್ಯಕ್ತಿಗಾಗಲಿ ಉದ್ದೇಶಕ್ಕಾಗಲಿ) ಅರ್ಪಣೆಯಾದ, ಮೀಸಲಾದ, ನಿವೇದಿಸಿದ; (ಮತ ಸಂಬಂಧದಿಂದ) ಪುಣ್ಯ, ಪೂಜ್ಯ, ಪವಿತ್ರ, ಪರಿಶುದ್ಧ [S.-book, writing (ಮತ)ಧರ್ಮ ಗ್ರಂಥ, ಧಾರ್ಮಿಕ ಗ್ರಂಥ. S. history ಬೈಬಲ್ಲಿನಲ್ಲಿಯ ಚರಿತ್ರೆ. S. number ಮತಧರ್ಮ ಸಂಕೇತವುಳ್ಳ ಸಂಖ್ಯೆ (ಉದಾ., 7). S. poetry, music ಧಾರ್ಮಿಕ ವಿಷಯದ ಕಾವ್ಯ, ಸಂಗೀತ: ಪವಿತ್ರ ಕಾವ್ಯ, ಸಂಗೀತ. S. concert ಪವಿತ್ರ ಸಂಗೀತ ಮೇಳ]. (ಈಗ ಅಥವಾ ಹಿಂದೆ ದೇವತಾ ಸಂಬಂಧದ ಪ್ರಾಣಿ, ಮೊ. ರ ವಿಷಯದಲ್ಲಿ ಸಹ ಪ್ರ.) ಪೂಜ್ಯ (S. ibis, monkey); ಪಾವನ, (ವ್ಯಕ್ತಿಗಳ ವಿಷಯದಲ್ಲಿ: ದೇಹಗಳು) ಗೌರವಾರ್ಹ, ಅನುಲ್ಲಂಘನೀಯ, ಅನತಿಕ್ರಮ್ಯ (His most S. Majesty the King ಪರಮ ಪೂಜ್ಯ ಮಹಾ ಪ್ರಭುಗಳು. The s. right of insurrection. Regards it as a s. duty ಅದನ್ನು ಪವಿತ್ರ ಕರ್ತವ್ಯವೆಂದು ಪರಿಗಣಿಸುತ್ತಾನೆ. Their persons will be held s. ಅವರ ದೇಹಗಳು ಗೌರವಾರ್ಹವೆಂದು ಪರಿಗಣಿಸಲಾಗುವುದು). **Sácredly** (ಕ್ರಿ. ವಿ.); **Sácredness** (ನಾ.)

Sácrifice ಸ್ಯಾಕ್ರಿಫೈಸ್ (ನಾ., ಕ್ರಿ.) ಪಶು ಯಜ್ಞ; ನರಬಲಿ; ಯಜ್ಞ, ಯಾಗ, ಮೇಧ; ಬೇಳ್ವೆ; ಹೀಗೆ ಕೊಟ್ಟದ್ದು; ಬಲಿ, ಆಹುತಿ. (ರೂಪ.) ಶಮನಾರ್ಥವಾಗಿ ಮಾಡುವ —ವಂದನಾರ್ಪಣೆ, ಪ್ರಾರ್ಥನಾ ಸಮರ್ಪಣೆ, ನಿವೇದನೆ; ಶಾಂತಿ—ಹೋಮ. (ದೇವ. ಶಾ.) ಯೇಸು ಕ್ರಿಸ್ತನ ಕ್ರೂಶಾರೋಹಣ; (ದೇವ ತೃಪ್ತ್ಯರ್ಥವಾಗಿ) ಯೇಸು ಕ್ರಿಸ್ತನ ದೇಹದ ಮತ್ತು ರಕ್ತದ ಸಮರ್ಪಣೆ ಎಂದು ಪರಿಗಣಿಸುವ ಪ್ರಭು ಭೋಜನ ಸಂಸ್ಕಾರ. ಒಂದನ್ನು ಅದಕ್ಕಿಂತ ಉತ್ತಮವಾದ ಅಥವಾ ಹೆಚ್ಚು ಆವಶ್ಯಕವಾದ ಮತ್ತೊಂದಕ್ಕಾಗಿ ಬಿಟ್ಟುಕೊಡುವುದು; ಹಾಗೆ ಬಿಟ್ಟುಕೊಟ್ಟದ್ದು, ಅದರಿಂದಾದ ನಷ್ಟ: ತ್ಯಾಗ, ನಷ್ಟ [Will gain nothing by the s. of your principles ನಿನ್ನ ತತ್ತ್ವಗಳನ್ನು ತ್ಯಜಿಸಿದ್ದರಿಂದ, ಕೈಬಿಟ್ಟದ್ದರಿಂದ, ಏನೂ ಲಾಭವಾಗುವುದಿಲ್ಲ. Surplus stock for sale at a large s. ತುಂಬ ನಷ್ಟ ವಹಿಸಿ ಕೊಂಡು ಮಾರಾಟಕ್ಕಿಟ್ಟ ಹೆಚ್ಚುವರಿ ದಾಸ್ತಾನು, ಸರಕು. The great *or* last s. ಮಹಾ ತ್ಯಾಗ, ಅಂತಿಮ ತ್ಯಾಗ (ಮು., ಯುದ್ಧದಲ್ಲಿ ಸ್ವದೇಶಕ್ಕಾಗಿ ಪ್ರಾಣತ್ಯಾಗ)]. (ಕ್ರಿ.) ಯಜ್ಞ, ಯಾಗ, —ಮಾಡು; ಹೇಳು; ಬಲಿ, ಆಹುತಿ, —ಕೊಡು; (ಒಂದನ್ನು ಮತ್ತೊಂದಕ್ಕಾಗಿ) ಬಿಟ್ಟುಕೊಡು; ತ್ಯಾಗಮಾಡು (S. accuracy for vividness). **Sacrifícial** —ಫಿಷ(ಷ್)ಲ್ (ಗು.); **Sacrifícially** (ಕ್ರಿ. ವಿ.)

Sácrilege ಸ್ಯಾಕ್ರಿಲೆ(ಲಿ)ಜ್ (ನಾ.) ಪವಿತ್ರ ಸ್ಥಳವನ್ನು —ಹೊಲೆಮಾಡುವುದು, ದರೋಡೆ ಮಾಡುವುದು; ದೇವಾಲಯದ ದರೋಡೆ. (ಪೂಜ್ಯ ವ್ಯಕ್ತಿಯಮೇಲೆ ಅಥವಾ ವಸ್ತುವಿನಮೇಲೆ) ಅತ್ಯಾಚಾರ; ದೈವದ್ರೋಹ; (ಪವಿತ್ರವಾದುದನ್ನು) ಭ್ರಷ್ಟ ಮಾಡುವುದು, ಅಪವಿತ್ರ ಮಾಡುವುದು. **Sacrilégious** —ಲಿ(ಲೆ)ಜಸ್ (ಗು.); **Sacrilégiously** (ಕ್ರಿ. ವಿ.); **Sacrilégist** —ಲೀಜಿಸ್ಟ್ (ನಾ.) (ವಿರ. ಪ್ರ.)

Sácring ಸೇಕ್ರಿಂಗ್ (ನಾ.) (ಪ್ರಾಚೀ. ಪ್ರ.) ಪ್ರಭು ಭೋಜನ ಸಂಸ್ಕಾರದಲ್ಲಿ ವಸ್ತುಗಳನ್ನು ಪವಿತ್ರಗೊಳಿಸುವುದು; ಶುದ್ಧೀಕರಣ; ಸಂಶುದ್ಧಿ. (ಬಿಷಪ್ಪು, ರಾಜ, ಮೊ. ರ) ಪಟ್ಟಾಭಿಷೇಕ. S.-bell ಪ್ರಭು ಭೋಜನ ಸಂಸ್ಕಾರದಲ್ಲಿ ರೊಟ್ಟಿಯನ್ನು ಪವಿತ್ರಗೊಳಿಸುವಾಗ ಬಾರಿಸುವ ಗಂಟೆ.

Sácrist ಸೇಕ್ರಿಸ್ಟ್ (ನಾ.) (ಕ್ರೈಸ್ತ ಮತ, ಚರ್ಚು, ಮೊ. ಗಳಲ್ಲಿ) ಪೂಜಾ ಪಾತ್ರೆಗಳು, ಸ್ಮಾರಕ ವಸ್ತುಗಳು, ಮೊ. ಗಳನ್ನು ವಶದಲ್ಲಿಟ್ಟುಕೊಂಡಿರುವ ಅಧಿಕಾರಿ; ಕ್ರೈಸ್ತ ಮತದ, ಚರ್ಚಿನ, —ಪಾರುಪತ್ಯಗಾರ, ಉಗ್ರಾಣಾಧಿಕಾರಿ. **Sácristan** ಸ್ಯಾಕ್ರಿಸ್ಟನ್ (ಪ್ರಾಚೀ. ಪ್ರ.) ಪ್ಯಾರಿಷ್ ಚರ್ಚಿನ ಪಾರುಪತ್ಯಗಾರ (=Sexton); =Sacrist. **Sácristy** ಸ್ಯಾಕ್ರಿಸ್ಟಿ (ನಾ.) ಚರ್ಚಿನ (ಪಾತ್ರೆ, ವಸ್ತ್ರ, ಮೊ. ಗಳನ್ನು ಇಡುವ) ಉಗ್ರಾಣ.

Sácrosanct ಸೇ(ಸ್ಯಾ)ಕ್ರೊಸ್ಯಾಂಕ್ಟ್ (ಗು.) (ವ್ಯಕ್ತಿ, ಸ್ಥಳ, ನ್ಯಾಯ ಸೂತ್ರ, ಮೊ. ಗಳ ವಿಷಯದಲ್ಲಿ) (ಪರಮ) ಪವಿತ್ರ(ವಾದ); ಪೂಜ್ಯ; ಅಪವಿತ್ರ ಮಾಡಕೂಡದ; ಮೈಲಿಗೆ ಮಾಡಬಾರದ; ದೇವರಿಗೆ ಮೀಸಲಾದ. **Sacrosánctity** (ನಾ.)

Sácrum ಸೇಕ್ರಂ (ನಾ.) (ಬ. ವ., Sacrums, Sacra) ವಸ್ತಿ ಕುಹರದೊಡನೆ ನೇರ ಸಂಬಂಧವುಳ್ಳ ಅಥವಾ ವಸ್ತಿಕುಹರದ ಹಿಂಭಾಗವಾದ, ಕಶೇರುಕದ ತ್ರಿಕೋನಾಕಾರದ ಎಲುಬು; ತ್ರಿಕಾಸ್ಥಿ; ಸೇಕ್ರಂ ಮೂಳೆ. **Sácral** (ಗು.) (ಅಂ. ರ. ಶಾ.) ತ್ರಿಕಾಸ್ಥಿಯ, ಸೇಕ್ರಂ ಮೂಳೆಯ. (ಮಾನವ ಶಾಸ್ತ್ರ) ಪವಿತ್ರ ಕರ್ಮಗಳ, ಪವಿತ್ರ ಕರ್ಮಗಳಿಗೆ ಸಂಬಂಧಪಟ್ಟ. **Sácro-** ಸೇಕ್ರೊ— (ಸ. ಪೂ. ಪ.)

Sad ಸ್ಯಾಡ್ (ಗು.) ದುಃಖದಿಂದ —ಸೊರಗಿದ, ಕೊರಗಿದ, ಕುಗ್ಗಿದ; ದುಃಖಿತ, ಖಿನ್ನ, ಶೋಚನೀಯ, ವಿಷಣ್ಣ, ವ್ಯಸನಾಕ್ರಾಂತ, ದುಃಖಕರ, ವಿಷಾದಕರ [A sadder and a wiser man (ಸಂಕಟವನುಭವಿಸಿದವನ ವಿಷಯದಲ್ಲಿ) ಚಿಂತಾಪರನೂ ಬುದ್ಧಿ ಬಂದವನೂ ಆಗಿ. In s. earnest ಗಾಢ ಶ್ರದ್ಧೆಯಿಂದ]. (ತಿರಸ್ಕಾರ ಅಥವಾ ಹಾಸ್ಯ ಪ್ರ.) ಅಸಹ್ಯದ, ಅತಿಕೆಟ್ಟ, ಹೊಲಸಿನ, ತಿದ್ದಲಾಗದ (A s. slut, coward ಅಸಹ್ಯದ ಹಾದರಗಿತ್ತಿ, ಪುಕ್ಕಲ. S. dog ಪೋದಾ ಮನುಷ್ಯ; ಅಂಕೆ ತಪ್ಪಿದವನು; ನಿರ್ಲಕ್ಷ್ಯದ ಪೋರ. Writes s. stuff ಅಸಹ್ಯದ, ಅಧ್ವಾನದ, ಬರಹ ಬರೆಯುತ್ತಾನೆ). (ಕಣಕ, ರೊಟ್ಟಿ, ಮೊ. ಗಳ ವಿಷಯದಲ್ಲಿ) ಗಡುಸಾದ, ಭಾರವಾದ, ಬಿರುಸಾದ, ಸರಿಯಾಗಿ ಬೆಂದಿಲ್ಲದ. (ಬಣ್ಣದ ವಿಷಯದಲ್ಲಿ) ಮಬ್ಬಾದ, ಕಾಂತಿ ಹೀನ; ಬೂದು ಬಣ್ಣದ. S.-iron ಚಪ್ಪಟೆಯ ಇಸ್ತ್ರಿಗಟ್ಟ (ಸಾಮಾನ್ಯ ಇಸ್ತ್ರಿ ಪೆಟ್ಟಿಗೆಯಂತೆ ಪೊಳ್ಳಾಗಿರದೆ ಒಂದೇ ಗಟ್ಟಿಯಾದದ್ದು). **Sádden** (—ಡ್ನ್) (ಕ್ರಿ.) (ರೂಪ. ಸಹ); **Sádly** (ಕ್ರಿ. ವಿ.); **Sádness** (ನಾ.); **Sáddish** (ಗು.)

Sáddle ಸ್ಯಾಡ್ಲ್ (ನಾ.) (ಕುದುರೆ, ಮೊ. ಗಳಿಗೆ ಹಾಕುವ) ಜೀನು, ತಡಿ, ಹಲ್ಲಣ, ಕಾಟರ [Pack-s. (Pack ನೋಡಿ). Side-s. (Side ನೋಡಿ)]. (ಬೈಸಿಕಲ್ಲು, ಬೇಸಾಯದ ಯಂತ್ರ, ಮೊ. ಗಳಿಗೆ ಅಳವಡಿಸಿರುವ) ಆಸನ, ಪೀಠ [In the s. (ಕುದುರೆ) ಏರಿ, ಹತ್ತಿ, ಆರೂಢನಾಗಿ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ರೂಪ.) ಅಧಿಕಾರಸ್ಥನಾಗಿ, ಪದವಿಯಲ್ಲಿ, ಕಾರ್ಯಸಿದ್ಧನಾಗಿ. Put s. on right, wrong, horse ತಪ್ಪಿತಸ್ಥನ ಮೇಲೆ, ತಪ್ಪಿತಸ್ಥನಲ್ಲದವನ ಮೇಲೆ, ತಪ್ಪು ಹೊರಿಸು]. ಬಂಡಿಯ ಈಸಿನ ಭಾರವನ್ನು ಹೊರುವ, ಕುದುರೆ ಸರಂಜಾಮಿನ ಭಾಗ. ತಡಿಯಾಕಾರದ ವಸ್ತು (ಉದಾ., ಎರಡು ಶಿಖರಗಳ ನಡುವಣ ಕೂಡೇಣು); (ಕಂಬ, ಮೊ. ಗಳ ಮೇಲೆ ತಂತಿ ಕೂರಲು ಆಸರೆಯಾಗಿ ಹಾಕುವ) ಗಾಡಿಯುಳ್ಳ ಕೂರಡೆ, ಪೀಠ. ಕುರಿಯ (ಅಥವಾ ಜಿಂಕೆಯ) ಕಟಿ ಮಾಂಸ(ಗಳೆರಡೂ ಸೇರಿರುವ ಅಖಂಡ ಭಾಗ). **Sáddleback** (ನಾ., ಗು.) (ವಾ. ಶಾ.) ಇಪ್ಪಾರು ಚಾವಣಿ (ಎದುರುಬದುರು ಗೇಬಲ್ ಗೋಡೆಗಳನ್ನು ಕೂಡಿಸಿಹಾಕುವ ಒಂದೇ ಕೂಡೇಣಿನ ಚಾವಣಿ); ತಡಿಯಾಕಾರದ ಏಣಿನ ಬೆಟ್ಟ. ಹಲವು ಬಗೆಯ —ಹಕ್ಕಿ, ಮೀನು. (ಗು.) =saddlebacked. **Sáddle-backed** (—ಬ್ಯಾಕ್ಟ್) ನಡು ತಗ್ಗಿನ, ಒಳ ಬಾಗಿನ, —ಆಕಾರವುಳ್ಳ; ಪುಟಾಕಾರದ; ತಡಿಯಾಕಾರದ ಬೆನ್ನುಳ್ಳ. (ವಾ. ಶಾ.) ಇಪ್ಪಾರು ಚಾವಣಿಯುಳ್ಳ. **S.-bag** ಕುದುರೆಯ ತಡಿಯ ಹಿಂಭಾಗದಲ್ಲಿ ಎರಡು ಕಡೆಯೂ ಹಾಕುವ ಜೋಡಿಚೀಲ(ಗಳಲ್ಲೊಂದು); ಹಸುಬೆ ಚೀಲ. (ಕುರ್ಚಿ, ಮೊ. ಕ್ಕೆ ಅಳವಡಿಸುವುದರಲ್ಲಿ ಉಪಯೋಗಿಸುವ, ಪೂರ್ವ ದೇಶಗಳಲ್ಲಿಯ ಒಂಟೆಯ ಹಸುಬೆ ಚೀಲವನ್ನು ಅನುಕರಿಸಿ ಮಾಡಿದ) ಒಂದು ಬಗೆಯ ಜಮಖಾನೆಯ ಬಟ್ಟೆ. **S.-boiler** ತಾಪಕ ಸಲಕರಣೆಯಲ್ಲಿ ಉಪಯೋಗಿಸುವ ಪುಟಾಕಾರದ ಕುದಿಪಾತ್ರೆ. **S.-bow** ಜೀನಿನ ಮುಂಭಾಗದ ಕಮಾನು ಭಾಗ. **S.-cloth** ಕುದುರೆಯ ಬೆನ್ನಮೇಲೆ ತಡಿಯ ಕೆಳಗೆ ಹಾಕುವ ಬಟ್ಟೆ: ತಡಿ ಬಟ್ಟೆ. **Saddlefast** ತಡಿಯ ಮೇಲೆ ಭದ್ರವಾಗಿ ಕುಳಿತ. **S.-horse** ಸವಾರಿ ಕುದುರೆ. **S.-pin** ಬೈಸಿಕಲ್ಲಿನ ಪೀಠಕ್ಕೆ ಆಸರೆಯಾದ, ಮತ್ತು ಅದರ ಲಂಬ ಭಾಗ ಬೈಸಿಕಲ್ಲಿನ ಚೌಕಟ್ಟಿನ ಹಿಂಕೊಳವೆಯೊಳಗೆ ಕೂರುವ ಆಣಿ: ಪೀಠದ ಆಣಿ. **S.-tree** ತಡಿಯ ಮೈಕಟ್ಟು, ಪೀಠಗಟ್ಟು. ತಡಿಯಾಕಾರದ ಎಲೆಗಳನ್ನು ಬಿಡುವ, ಉ. ಅಮೆರಿಕದ ಒಂದು ಬಗೆಯ ಮರ. **Sáddleless** (ಗು.); **Sáddler** (ನಾ.) ತಡಿ —ಮಾಡುವವನು, ಮಾರುವವನು; ಹಲ್ಲಣಗಾರ; ಜೀನುಗಾರ; ಅಶ್ವ ಸಜ್ಜುಕಾರ. (ಸೈನಿಕ) ರಾವುತ ದಳದ ಅಶ್ವಸಜ್ಜು ಅಧಿಕಾರಿ. **Sáddlery** (ನಾ.) ಅಶ್ವಸಜ್ಜು, ಕುದುರೆ ಸರಂಜಾಮು; —ಮಾಡುವ, ಇಡುವ, ಸ್ಥಳ.

Sáddle (ಕ್ರಿ. ಸಕ.) (ಕುದುರೆ, ಮೊ. ಕ್ಕೆ) ತಡಿ, ಜೀನು, —ಹಾಕು; ಹಲ್ಲಣಿಸು, ಸಜ್ಜು ಮಾಡು. (ಒಬ್ಬನಿಗೆ) ಕರ್ತವ್ಯ, ಜವಾಬ್ದಾರಿ, ಮೊ. ನ್ನು ಹೊರಿಸು (*With* ಉಪ. ಜೊಡನೆ); ಭಾರ ವಹಿಸು, ಹೊಣೆ ಹಾಕು [(*Up*)*on* ಉಪ. ಜೊಡನೆ]

Sádducee ಸ್ಯಾಡ್ಯುಸೀ (ನಾ.) ಸತ್ತವರ ಪುನರುತ್ಥಾನ, ದೇವ ದೂತರು, ಪಿಶಾಚಿಗಳು, ಮೊ. ಗಳ ಅಸ್ತಿತ್ವ, ಸಾಂಪ್ರದಾಯಿಕ ನಿಯಮಗಳ ನಿರ್ಬಂಧ—ಇವನ್ನು ಒಪ್ಪದಿದ್ದ, (Pharisee ಪಂಗಡ ದಿಂದ ಭಿನ್ನರಾದ) ಕ್ರಿಸ್ತ ವಿರೋಧಿಗಳಾಗಿದ್ದ, ಯೆಹೂದ್ಯ ವೈದಿಕ ಪಂಗಡದವನು (Pharisee ನೋಡಿ). **Sadducéan** (ಗು.); **Sádduceeism** (ನಾ.)

Sádism ಸಾ(ಸೇ)ಡಿಸ್ಮ್ (ನಾ.) ಹಿಂಸೆಯ ಮೂಲಕ ಕಾಮ ವನ್ನು ತೃಪ್ತಿಪಡಿಸಿಕೊಳ್ಳುವ ವಿಕಾರ; ಕ್ರೌರ್ಯ ಕಾಮವಿಕಾರ; ಕ್ರೌರ್ಯ ರತಿ.

Safe[1] ಸೇಫ್ (ನಾ.) ಗಾಳಿ ಬೆಳಕುಗಳ ಸಂಚಾರಕ್ಕೆ ಅವಕಾಶವಿರುವ, ಆಹಾರಪದಾರ್ಥಗಳ ಅಲಮಾರು (=Meat-s.); ಅಮೂಲ್ಯ ವಸ್ತುಗಳನ್ನಿಡುವ, ಬೆಂಕಿಯಿಂದ ಸುಡದ ಮತ್ತು ಕಳ್ಳರಿಂದ ಒಡೆಯ ಲಾಗದ ಪೆಟ್ಟಿಗೆ: ತಿಜೋರಿ, ಕಬ್ಬಿಣದ ಪೆಟ್ಟಿಗೆ.

Safe[2] ಸೇಫ್ (ಗು.) ಸುರಕ್ಷಿತವಾದ, ಭದ್ರವಾದ, ಅಪಾಯವಿಲ್ಲದ, ನಿರಪಾಯಕರ, ಜೋಪಾನದ, ಜಾಗರೂಕತೆಯ, ನೆಮ್ಮದಿಯ, ಕ್ಷೇಮದ, ಗಟ್ಟಿಮುಟ್ಟಾದ, ಬಂದೋಬಸ್ತಾದ, ನಿಸ್ಸಂದೇಹವಾದ, ಖಾತ್ರಿಯಾದ, ವಿಶ್ವಸನೀಯ [(Come, bring, arrive, keep, ಮೊ. ಕ್ರಿಯಾಪದಗಳ ಮುಂದೆ ಆಖ್ಯಾತ ಭಾಗವಾಗಿ ಪ್ರ.; ಕ್ರಿ. ವಿ. ಯಂತೆ ಅನ್ವಯ: ಸುರಕ್ಷಿತವಾಗಿ, ಭದ್ರವಾಗಿ ಮೊ. ಅರ್ಥ) Parcel came s. Saw them s. home. (ಅನೇಕ ವೇಳೆ) S. and sound. Is s. from his enemies. Is it s. to leave him? S. custody ಭದ್ರ —ರಕ್ಷಣೆ, ಸ್ವಾಧೀನ. S. convoy ಭದ್ರ ಬೆಂಗಾವಲು. Err on the s. side ಅಪಾಯವಿಲ್ಲದ ಕಡೆ ತಪ್ಪುಮಾಡು. It is s. to say (ಅತಿಶಯೋಕ್ತಿಯ ಅಥವಾ ಅಸತ್ಯದ ಭಯವಿಲ್ಲದೆ) —ಎಂದು ಧಾರಾಳವಾಗಿ ಹೇಳಬಹುದು. Have got him s. ತಪ್ಪಿಸಿಕೊಳ್ಳದಂತೆ, ಹಾನಿಮಾಡದಂತೆ, ಭದ್ರವಾಗಿ ಅವನನ್ನು ಹಿಡಿದಿಟ್ಟಿದ್ದೇನೆ. A s. critic ಅಪಾಯ ಮಾಡದ ವಿಮರ್ಶಕ; ದುಡುಕಿಲ್ಲದ, ಜಾಗರೂಕನಾದ, ವಿಮರ್ಶಕ. S. methods ನಿರಪಾಯದ, ಭರವಸೆಯ, —ಮಾರ್ಗಗಳು, ವಿಧಾನಗಳು. A s. catch (ಕ್ರಿಕೆಟ್ಟಿನಲ್ಲಿ) ತಪ್ಪದೆ ಬುತ್ತಿಹಿಡಿಯುವವನು. Is a s. first ಖಂಡಿತವಾಗಿ ಮೊದಲ ತರಗತಿಯಲ್ಲಿ ತೇರ್ಗಡೆಯಾಗುವವನು. Is s. to win ಧಾರಾಳವಾಗಿ ಗೆಲ್ಲಬಹುದು]. **S. conduct** ನಿರ್ದಿಷ್ಟ ಸಂದರ್ಭದಲ್ಲಿ ಅಥವಾ ಪ್ರಾಂತದಲ್ಲಿ ಬಂಧನವಾಗಲಿ ಬಾಧೆಯಾಗಲಿ ಆಗದಂತೆ ರಾಜ, ಸೇನಾನಾಯಕ, ಮೊ. ರು ಒಬ್ಬನಿಗೆ ಕೊಟ್ಟ ವಿಶೇಷ ರಕ್ಷಣೆ(ಯ ಪತ್ರ): ಅಭಯ(ಪತ್ರ). **S. deposit** ಪ್ರತ್ಯೇಕವಾಗಿ ಬಾಡಿಗೆಗೆ ಕೊಡಲು ಅನುಕೂಲಿಸುವಂತಿರುವ, ಕಳ್ಳರು ನುಗ್ಗಲಾಗದ ಭದ್ರವಾದ ಕೋಣೆಗಳನ್ನೂ ಒಡೆಯಲಾಗದ ತಿಜೋರಿಗಳನ್ನೂ ಉಳ್ಳ ಕಟ್ಟಡ: ಸುರಕ್ಷಿತ ನ್ಯಾಸಾಗಾರ; ಭದ್ರ ಕೊಟಡಿ. **S.-guard** (ನಾ., ಕ್ರಿ. ಸಕ.) =S. conduct; (ರಾಜ್ಯ ವ್ಯವಸ್ಥೆಯಲ್ಲಿ, ನ್ಯಾಯ ನಿಬಂಧನೆಯಲ್ಲಿ ಅಡಕಮಾಡಿರುವ) ರಕ್ಷಣೆಯ, ಕಾಪು, —ಷರತ್ತು; (ಅಪಾಯ ತಟ್ಟದಂತೆ ಏರ್ಪಡಿಸಿರುವ) ರಕ್ಷಣೆ, ರಕ್ಷಣೋಪಾಯ. (ಕ್ರಿ.) ರಕ್ಷಣೋಪಾಯದಿಂದ, ಮುಂಜಾಗರೂಕತೆಯಿಂದ, —ಕಾಪಾಡು (S.-guarding duties ಅನ್ಯಾಯವಾದ ಪ್ರತಿಸ್ಪರ್ಧೆಯಿಂದಾಗುವ ಹಾನಿಯನ್ನು ನಿವಾರಿಸಲು ಆಮದು ಸರಕಿನಮೇಲೆ ಹಾಕುವ ಸುಂಕ: ರಕ್ಷಣ ಸುಂಕ). **S.-keeping** ರಕ್ಷಣೆ, ವಶ, ಸುಪರ್ದು. **Sáfely** (ಕ್ರಿ. ವಿ.); **Sáfeness** (ನಾ.); **Sáfety** ಸೇಫ್ಟಿ (ನಾ.) ಸುರಕ್ಷಿತತ್ವ, ಸುರಕ್ಷಣೆ, ನಿರಪಾಯತೆ, ನೆಮ್ಮದಿ, ಕ್ಷೇಮ, ನಿರುಪದ್ರವತೆ, ನಿರ್ಭಯತೆ, ಭದ್ರತೆ, ಬಂದೋಬಸ್ತು [There is s. in numbers (ಗಾದೆ). Play for s. (ಆಟದಲ್ಲಿ; ರೂಪ. ಸಹ) (ಸಾ., ತಿರಸ್ಕಾರ ಪ್ರ.) ಆತ್ಮರಕ್ಷಣೆಯ ದೃಷ್ಟಿಯಿಂದ —ವರ್ತಿಸು, ಆಡು; ಅಪಾಯ ಸಂದರ್ಭಗಳಿಂದ ಆದಷ್ಟು ದೂರವಾಗಿರು. S. first (ರಸ್ತೆಯ ಪಾದಚಾರಿಗಳಿಗೆ ಮತ್ತು ಕಾರ್ಖಾನೆಯ ಕೆಲಸಗಾರರಿಗೆ, ಸಾ., ಎಲ್ಲರಿಗೂ ಎಚ್ಚರಿಕೆ ಹೇಳುವ ಸೂಕ್ತಿ): ಆತ್ಮರಕ್ಷಣೆ ಪ್ರಥಮ; ಮೊದಲು ಸುರಕ್ಷಿತವಾಗಿರುವುದನ್ನು ನೋಡಿಕೊ. Factor *or* coefficient of s. (ಯಂತ್ರ ಶಿಲ್ಪದಲ್ಲಿ) ಒಂದು ವಸ್ತುವಿನಮೇಲೆ ಹಾಕುವ ಭಾರಕ್ಕೂ ಆ ವಸ್ತುವಿನ ಧಾರಣಶಕ್ತಿಗೂ ಇರುವ ಪ್ರಮಾಣ: ಸುರಕ್ಷಣ —ಪ್ರಮಾಣ, ಗುಣಕ]. ಬಂದೂಕು ತನ್ನಷ್ಟಕ್ಕೆ ತಾನೆ, ಅಕಸ್ಮಾತ್ತಾಗಿ, ಸಿಡಿಯದಂತೆ ನೋಡಿಕೊಳ್ಳಲು ಕುದುರೆಯನ್ನು ಬಿಗಿಹಿಡಿಯುವ ಅಗುಳಿ: (ಬಂದೂಕಿನ) ಕಾಪು ಅಗುಳಿ (=**S.-bolt**). ಎರಡು ಚಕ್ರಗಳೂ ಹೆಚ್ಚು ಕಡಮೆ ಒಂದೇ ಅಳತೆಯಲ್ಲಿರುವ, ತಗ್ಗುಪೀಠದ, ಈಗ ರೂಢಿಯಲ್ಲಿರುವ ಬೈಸಿಕಲ್ಲು (=**S.-bicycle**; ಎದುರು ಪದ: Ordinary). **S.-curtain** ನಾಟಕ ಮಂದಿರದಲ್ಲಿ ಪ್ರೇಕ್ಷಕಾಂಗಣವನ್ನೂ ರಂಗ ಸ್ಥಳವನ್ನೂ ಬೇರ್ಪಡಿಸುವ ಬೆಂಕಿ ಹೊತ್ತದ ಪರದೆ: ಕಾಪು ತೆರೆ. **S.-film** ನಿಧಾನವಾಗಿ ಬೆಂಕಿ ಹಿಡಿಯುವ ಅಥವಾ ಕೊಂಚವೂ ಬೆಂಕಿ ಹಿಡಿಯದ ಆಧಾರವಸ್ತುವಿನಿಂದ ತಯಾರಿಸಿದ ಚಲನಚಿತ್ರ ಪಟಲ: ನಿರಪಾಯ ಪಟಲ, ಸುರಕ್ಷಿತ ಪಟಲ. **S.-fuse** ನಿರಪಾಯ ದೂರದಿಂದ ಹೊತ್ತಿಸಬಹುದಾದ ಜಾವಿಗೆ ಬತ್ತಿ; ತಡೆದು ಉರಿಯುವ, ಆದುದರಿಂದ ನಿರಪಾಯ ದೂರಕ್ಕೆ ಹೋಗಲವಕಾಶಕೊಡುವ, ಕ್ಷೇಮದ ಜಾವಿಗೆ ಬತ್ತಿ; (ವಿದ್ಯುತ್) ಕ್ಷೇಮ ರಕ್ಷಾ ತಂತು. **S.-lamp** ಗಣಿಗಳೊಳಗಿನ ಸಿಡಿವಾಯುವನ್ನು ಹೊತ್ತಿಸದಂತೆ ಅಳವಡಿಸಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಣಿಗಾರರ ದೀಪ : ರಕ್ಷಿತ ದೀಪ; ಅನಪಾಯ --. **S.-match** ನಿರ್ದಿಷ್ಟ ರೀತಿಯಲ್ಲಿ ಸಂಸ್ಕರಿಸಿದ ಮೇಲ್ಮೈಯ ಮೇಲೆ ಗೀರಿದರೆ ಮಾತ್ರ ಹೊತ್ತಿಕೊಳ್ಳುವ ಬೆಂಕಿಕಡ್ಡಿ : ನಿರಪಾಯದ ಬೆಂಕಿಕಡ್ಡಿ. **S.-pin** ಸೂಜಿಯ ತುದಿ ಈಚೆಗೆ ಬರದಂತೆಯೂ ಧರಿಸಿದವನನ್ನು ಚುಚ್ಚದಂತೆಯೂ ಅದರ ತಲೆಯ ಕುಲಾವಿಯೊಳಗೆ ಆ ತುದಿಯನ್ನು ಸಿಕ್ಕಿಸಲಾಗುವಂತೆ ಅಳವಡಿಸಿದ ಒಂದು ಬಗೆಯ ಸೂಜಿ: ನಿರಪಾಯದ ಸೂಜಿ ; ಕ್ಷೇಮ ಸೂಜಿ. **S. razor** (Razor ನೋಡಿ). **S.-valve** (ಕುದಿಪಾತ್ರೆಯಲ್ಲ ಆವಿಯ ಒತ್ತಡ ಹೆಚ್ಚಿದಾಗ ತಾನಾಗಿ ತೆರೆದುಕೊಂಡು ಹೆಚ್ಚಿನ ಆವಿಯನ್ನು ಹೊರಕ್ಕೆ ಬಿಟ್ಟು ಒತ್ತಡವನ್ನಿಳಿಸುವಂತೆ ಅಳವಡಿಸಿರುವ) ರಕ್ಷಣ ಕವಾಟ. (ರೂಪ.) ಉದ್ರೇಕ, ಮೊ. ನ್ನು ನಿರಪಾಯವಾಗಿ ಹೊರಗೆಡಹುವ ಮಾರ್ಗ ; ವಿಸರ್ಜನೋಪಾಯ (Sit on the s.-valve ದಬ್ಬಾಳಿಕೆ ನಡಸು, ಅದುಮಿಡು)

Sáffian ಸ್ಯಾಫಿಯನ್ (ನಾ.) ಒಂದು ನಿರ್ದಿಷ್ಟ ರೀತಿಯಲ್ಲಿ ಹದಮಾಡಿ, ಉಜ್ಜ್ವಲ ವರ್ಣಗಳನ್ನು ಕೊಟ್ಟ, ಆಡಿನ ಅಥವಾ ಕುರಿಯ ಚರ್ಮ.

Sáfflower ಸ್ಯಾಫ್ಲೌ(ಅ)ರ್ (ನಾ.) ಕುಸುಂಬೆ ಗಿಡ ; ಇದರ ಹೂವಿನ ಒಣಗಿಸಿದ ದಳಗಳು ; ಇದರಿಂದ ಮಾಡಿದ ಬಣ್ಣ ; ಕುಸುಂಬೆ ಬಣ್ಣ ; —ವರ್ಣದ್ರವ್ಯ.

Sáffron ಸ್ಯಾಫ್ರನ್ (ನಾ., ಗು., ಕ್ರಿ. ಸಕ.) (ಕುಂಕುಮ)ಕೇಸರಿ (ಗಿಡ) (Bastard S. ಕುಸುಂಬೆ ಗಿಡ). ಕೇಸರಿ ಬಣ್ಣ(ದ) (S. cake ಕೇಸರಿ ಹಾಕಿದ ರೊಟ್ಟಿ, ದೋಸೆ. ಕೇಸರಿಬಿಲ್ಲೆ). (ಕ್ರಿ.) ಕೇಸರಿ (ಬಣ್ಣ) ಹಾಕು. **Sáffrony** (ಗು.)

Sáfranin ಸ್ಯಾಫ್ರನಿನ್ (ನಾ.) ಕೇಸರ ವರ್ಣದ್ರವ್ಯ. (ಕಲ್ಲಿದ್ದಲ ಟಾರಿಣ್ಣಿಯಿಂದ ತೆಗೆದ) ಹಳದಿ ಛಾಯೆಯ ಕೆಂಪು ವರ್ಣದ್ರವ್ಯ.

Sag ಸ್ಯಾಗ್ (ಕ್ರಿ., ನಾ.) (ಭಾರದಿಂದ, ಒತ್ತಡದಿಂದ) ಸಗ್ಗು, ಕುಸಿ, ತಗ್ಗು, ಕುಗ್ಗು, ಜೋಲು, ತೊಂಗು, ತುಯ್ಯು, ಮಧ್ಯದಲ್ಲಿ ಕೆಳಕ್ಕೆ ಬಾಗು (Gate, bridge, sags. Ceiling, beam, stretched rope, ladder, sags) ; —ವಂತೆ ಮಾಡು. (ವಾಣಿಜ್ಯ) ಬೆಲೆ ಇಳಿ. (ಹಡಗಿನ ವಿಷಯದಲ್ಲಿ) ದಾರಿಬಿಟ್ಟು ಸರಿ (ಮು., S. to leeward). (ನಾ.) ಸಗ್ಗಿದ, ಕುಸಿದ, ಬಾಗಿದ, —ಮೊತ್ತ (ಕೆಳ ಬಾಗಿನ ಮಧ್ಯ ಬಿಂದುವಿಗೂ ಕೊನೆಗಳನ್ನು ಕೂಡಿಸುವ ಮಟ್ಟ ರೇಖೆಗೂ ಇರುವ ಲಂಬ ದೂರ) ; ಕುಸಿತ; ತುಯ್ತ ; (ಬೆಲೆಯ) ಇಳಿತ. (ನಾವೆ) ಗಾಳಿ ಮರೆಯ ಪಕ್ಕಕ್ಕೆ ಓಲು(ವ ಪ್ರವೃತ್ತಿ). **Sággy** (ಗು.)

Sága ಸಾಗ (ನಾ.) ಮು., ಐಸ್‌ಲ್ಯಾಂಡಿನ ವೀರ ಕುಲಗಳ ಅಥವಾ ನಾರ್ವೆಯ ರಾಜರ ಚರಿತ್ರೆಯನ್ನೊಳಗೊಂಡ, ಮಧ್ಯಯುಗದ ಗದ್ಯ ಕಥನ. ಸಾಹಸ ಕಥೆ ; ವೀರ ಕಥೆ.

Sagácious ಸಗೇಷಸ್ (ಗು.) (ಭೇದಿಸಿ ತಿಳಿಯುವ) ಚುರುಕು ಬುದ್ಧಿಯ; ಸೂಕ್ಷ್ಮ ವಿವೇಚನೆಯುಳ್ಳ ; ವ್ಯಾವಹಾರಿಕ—ಬುದ್ಧಿವಂತಿಕೆಯ, ಜಾಣತನದ ; ತೀಕ್ಷ್ಣಮತಿಯಾದ ; ಸೂಕ್ಷ್ಮ ಪರಿಜ್ಞಾನವುಳ್ಳ. (ಪ್ರಾಣಿಗಳ ವಿಷಯದಲ್ಲಿ) ಅಸಾಮಾನ್ಯ ಬುದ್ಧಿಯ, ವಿವೇಚನಾ ಶಕ್ತಿಯಿರುವಂತೆ ತೋರುವ. **Sagáciously** (ಕ್ರಿ. ವಿ.) ; **Sagácity** ಸಗ್ಯಾಸಿಟಿ (ನಾ.)

Sage[1] ಸೇಜ್ (ನಾ.) ಮಾಸಲು ಬೂದು ಹಸುರು ಬಣ್ಣದ ಎಲೆಗಳುಳ್ಳ ಒಂದು ಸುವಾಸನಾ ಸಸ್ಯ ; ಕರ್ಪೂರದ ಗಿಡ; ಅಡಿಗೆಯಲ್ಲಿ ಉಪಯೋಗಿಸುವ ಇದರ ಎಲೆಗಳು (S. and onions ಬಾತು, ಹಂದಿ, ಮೊ. ಗಳ ಮಾಂಸವನ್ನು ಬೇಯಿಸುವಲ್ಲಿ ಅದರಲ್ಲಿ ಹೂರಣವಾಗಿ ತುಂಬುವ ಮಸಾಲೆ). S.-brush ಅಮೆ. ಸಂ. ಗಳ ಕೆಲವು ಬಂಜರು ಜಿಲ್ಲೆಗಳಲ್ಲಿ ಬೆಳೆಯುವ ಹಲವು ಬಗೆಯ ಕ್ಷಾರಸಸ್ಯ (S.-cock, hare ಇದರ ಪೊದೆಯಲ್ಲಿ ವಾಸಿಸುವ ಕೋಳಿ, ಮೊಲ). S. cheese ಮೊಸರಿಗೆ ಕರ್ಪೂರ ಗಿಡದ ಎಲೆಯ ಕಷಾಯ ಹಾಕಿ ಪರಿಮಳಿಸಿದ ಚೀಸು. S.-green ಕರ್ಪೂರ ಗಿಡದ ಎಲೆಯ ಹಸುರು. S. tea (ಔಷಧವಾಗಿ ಉಪಯೋಗಿಸುವ) ಕರ್ಪೂರ ಗಿಡದ ಎಲೆಗಳ ಕಷಾಯ. **Ságy** (ಗು.)

Sage[2] ಸೇಜ್ (ಗು., ನಾ.) ಪ್ರಾಜ್ಞ, ವಿವೇಚನೆಯುಳ್ಳ, ಅನುಭವಜ್ಞಾನವುಳ್ಳ, ಆಳವೂ ವಿಸ್ತಾರವೂ ಆದ ವಿವೇಕವುಳ್ಳ, ಜ್ಞಾನಿಯಾದ (ಅನೇಕ ವೇಳೆ, ವ್ಯಂಗ್ಯಾರ್ಥದಲ್ಲಿ). ವಿವೇಕಿಯಂತೆ ತೋರುವ ; ಗಂಭೀರ ಮುಖದ. (ನಾ.) ಮಹಾಪ್ರಾಜ್ಞ, ಜ್ಞಾನಿ (ಅನೇಕ ವೇಳೆ, ವ್ಯಂಗ್ಯಾರ್ಥದಲ್ಲಿ) (The seven sages of Greece ಗ್ರೀಸಿನ ಸಪ್ತ ಮಹಾಜ್ಞಾನಿಗಳು). ಋಷಿ. **Ságely** (ಕ್ರಿ. ವಿ.) ; **Ságeness** (ನಾ.); **Ságeship** (ನಾ.)

Sággar ಸ್ಯಾಗರ್ (ನಾ.) ನಾಜೂಕಾದ ಪಿಂಗಾಣಿಯ ಪಾತ್ರೆಗಳನ್ನು ಅಥವಾ ಕುಂಭಕಲೆಯ ಮಾದರಿಗಳನ್ನು ನೇರವಾಗಿ ಬೆಂಕಿಗೆ, ಸುಡು ಅನಿಲಗಳಿಗೆ, ಗುರಿಯಾಗದಂತೆ ಒಳಗಿಟ್ಟು ಸುಡುವುದಕ್ಕಾಗಿರುವ, ಸುಟ್ಟ ಮಣ್ಣಿನ ಕೋಶ.

Sagítta ಸಜಿಟ (ನಾ.) (ಖ. ವಿ.) ಉತ್ತರ ದಿಕ್ಕಿನಲ್ಲಿಯ ಬಾಣಾಕಾರದ ಒಂದು ನಕ್ಷತ್ರ ಪುಂಜ. **Ságittarius** ಸ್ಯಾಜಿಟೇರಿಯಸ್ (ನಾ.) (ಖ. ವಿ.) ಧನುಸ್ಸು ; ಧನೂರಾಶಿ

Ságittate(d) ಸ್ಯಾಜಿಟೇಟ್(ಟೆಡ್) (ಗು.) (ಸ. ವಿ., ಪ್ರಾ. ವಿ.) ಅಂಬಿನ ತಲೆಯಾಕಾರದ.

Ságo ಸೇಗೊ (ನಾ.) ಕಡುಬು, ಮೊ. ನ್ನು ಮಾಡುವ ಒಂದು ಬಗೆಯ ಹಿಟ್ಟು ; ಸಬ್ಬಕ್ಕಿ, ಸಾಗು ಅಕ್ಕಿ, ಸೀಮೆ ಅಕ್ಕಿ. ಈ ಹಿಟ್ಟು ಸಿಗುವ ಚೇಗುಳ್ಳ ತಾಳೆಯ ಜಾತಿಯ ಮರ ; ಸೇಗೊ —ಹಿಟ್ಟು, ಮರ.

Sahára ಸಹಾರ (ನಾ.) ಸಹರಾ ಮರುಭೂಮಿ ; ಮರಳುಗಾಡು, ಮರುಭೂಮಿ (ರೂಪ. ಸಹ). **Sahâran** (ಗು.) ; **Sahárian** (ಗು.); **Sahâric** (ಗು.)

Sáhib ಸಾಹಿಬ್, ಸಾಇಬ್ (ನಾ.) (ಆಂ. ಇಂ.) (ಗೌರವದ ಮಾತು) ಸಾಹೇಬರು (ಇಂಡಿಯದಲ್ಲ ದೇಶೀಯ ಸೇವಕರು ಐರೋಪ್ಯರನ್ನು ಕುರಿತು ಹೇಳುವಲ್ಲಿ). (ಸಾ., ಬಳ. ಮಾ.) ದೊಡ್ಡ ಮನುಷ್ಯ.

Said. Say ಧಾತುವಿನ ಭೂತ ಮತ್ತು ಭೂ. ಕೃ.

Saíga ಸೇಗ, ಸೆಯ್ಗ, ಸೈಗ (ನಾ.) ರಷ್ಯದ ಬಯಲು ಸೀಮೆಯ ಜಿಂಕೆ.

Sail ಸೇಲ್, ಸೆಯ್‌ಲ್ (ನಾ.) ಹಡಗಿನ ಪಟ, ನೌಕಾ ಪಟ, ಹಾಯಿ ; (ಸಾಮೂಹಿಕವಾಗಿ) ಹಡಗಿನ ಹಾಯಿಗಳು [Carry s. (ಹಡಗಿನ ವಿಷಯದಲ್ಲಿ) ಪಟಗಳನ್ನು ಧರಿಸು. Crowd s. (Crowd ನೋಡಿ). Hoist s. ಪಟ —ಏರಿಸು, ಬಿಚ್ಚು. Lower s. ಪಟ —ಇಳಿಸು, ಸುತ್ತಿಡು. Make, set, shorten, strike, s. (ಆಯಾ ಪದವನ್ನು ನೋಡಿ). Take in s. (ರೂಪ.) ಆಸೆಗಳನ್ನು ಮಿತಿಯಲ್ಲಿಡು ; ಕಡು ಬಯಕೆಗಳು ಬೇಡ. Take wind out of sails (Wind[1] ನೋಡಿ). Full s. (ಕ್ರಿ. ವಿ.) ಎಲ್ಲ ಪಟಗಳನ್ನೂ ಏರಿಸಿ : ಪೂರ್ಣ ವೇಗದಿಂದ. Under s. ಪಟಗಳನ್ನು—ಏರಿಸಿ, ಬಿಚ್ಚಿ]. (ಸಾಮೂಹಿಕವಾಗಿ) ಹಡಗುಗಳು, ನೌಕೆಗಳು (A fleet of twenty s.); ಹಡಗು, ನೌಕೆ [(ಮು., S. ho ! ಹೋ, ಹಡಗು ! (ಕಾಣಿಸಿತು, ಬಂತು, ಎಂಬಲ್ಲಿ)]. ಗಾಳಿಯಂತ್ರದ ತೋಳಿಗೆ ಸಿಕ್ಕಿಸಿದ, ಈಗ ಸಾ., ಹಲಗೆಗಳಿಂದ ಮಾಡಿದ, ಗಾಳಿ ಹಿಡಿಯುವ ಸಾಧನ : (ಗಾಳಿಯಂತ್ರದ) ರೆಕ್ಕೆ, ಕೈ. ಒಂದು ಜಾತಿಯ ಮೀನಿನ ಬೆನ್ನ ಬಳಿಯ ಈಜುರೆಕ್ಕೆ. ಒಂದು ಜಾತಿಯ ಶೀರ್ಷಪಾದಿಯ ಸ್ಪರ್ಶಾಂಗ. ಹಡಗಿನ ಅಟ್ಟದಮೇಲೂ, ಗಣಿಯ ಮೇಲ್ದಾಗದಲ್ಲೂ ಗಾಳಿ ಬೆಳಕುಗಳಿಗಾಗಿ ಮಾಡಿರುವ ರಟ್ಟುಬಟ್ಟೆಯ ಲಾಳಿಕೆ : ಗಾಳಿ ಲಾಳಿಕೆ (=Wind-s.). [S.-arm ಗಾಳಿಯಂತ್ರದ—ತೋಳು, ರೆಕ್ಕೆ. S.-axle ಗಾಳಿಯಂತ್ರದ ಅಚ್ಚು. S.-cloth ಹಾಯಿ(ಗಳ ರಟ್ಟು)ಬಟ್ಟೆ ; ಉಡುಪಿಗಾಗುವ ಒಂದು ಬಗೆಯ ರಟ್ಟು ಬಟ್ಟೆ. S.-fish ದೊಡ್ಡ ಬೆನ್ನೀಜುರೆಕ್ಕೆಗಳುಳ್ಳ ಹಲವು ಬಗೆಯ ಮೀನು]. ಹಡಗು ಪ್ರಯಾಣ, ನೌಕಾ ಯಾನ, ನೌಕಾ ವಿಹಾರ (Go for a s.) ನಿರ್ದಿಷ್ಟ ಅವಧಿಯ ಸಮುದ್ರ ಯಾನ (Is ten days' s. from Plymouth). **(-)sailed** (ಗು.) ; **Sáilless** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sail (ಕ್ರಿ.) (ಹಡಗು ಅಥವಾ ಹಡಗಿನಲ್ಲಿಯ ವ್ಯಕ್ತಿ) ಹಾಯಿಗಳ ಸಹಾಯದಿಂದ ಹೋಗು, ಹಾಯಿ ಹಡಗಿನಲ್ಲಿ ಪ್ರಯಾಣಮಾಡು [Sailing-ship, -vessel ಹಾಯಿ ಹಡಗು (ಎದುರು ಪದ: Steamer). S. close to *or* near the wind ಹೆಚ್ಚು ಕಡಮೆ ಗಾಳಿಗೆ ಎದುರಾಗಿ ಹೋಗು. (ರೂಪ.) ನಿಯಮವನ್ನು, ನೀತಿ ತತ್ತ್ವವನ್ನು, —ಅತಿಕ್ರಮಿಸುವಂತಿರು; (ನ್ಯಾಯ ನೀತಿಗಳ) ಎಲ್ಲೆ ಮೀರುವಂತಿರು]. (ಹಡಗು ಅಥವಾ ಹಡಗಿನಲ್ಲಿಯ ವ್ಯಕ್ತಿ) ಜಲಸಂಚಾರಮಾಡು; ಸಮುದ್ರಯಾನ ಮಾಡು; ಸಮುದ್ರಪ್ರಯಾಣ ಹೊರಡು [Sailing orders (ಹಡಗಿನ ಯಜಮಾನನಿಗೆ ಕೊಟ್ಟಿರುವ, ಹೊರಡುವ ಕಾಲ, ಮುಟ್ಟಬೇಕಾದ ಸ್ಥಳ, ಮೊ. ವಿವರಗಳನ್ನೊಳಗೊಂಡ) ನೌಕಾ ಸಂಚಾರಾಜ್ಞೆ, ಸಮುದ್ರ ಪ್ರಯಾಣಾಜ್ಞೆ]. (ಹಕ್ಕಿ, ಮೋಡ, ಚಂದ್ರ, ಮೊ. ಗಳ ವಿಷಯದಲ್ಲಿ) (ಆಕಾಶದಲ್ಲಿ) ತೇಲಿಕೊಂಡು ಹೋಗು, ತೇಲು. (ಮು., ಹೆಂಗಸರ ವಿಷಯದಲ್ಲಿ) ಠೀವಿಯಿಂದ ನಡೆ. (ಸಮುದ್ರ, ಆಕಾಶ, ಮೊ. ಗಳಲ್ಲಿ) ಸಂಚರಿಸು, ವಿಹರಿಸು. (ಹಡಗನ್ನು) ನಡಸು [Plain sailing (Plain[1] ನೋಡಿ). Sailing-master ಹಡಗು (ಮು., ವಿಹಾರದೋಣಿ) ನಡಸುವ ಅಧಿಕಾರಿ; ನೌಕಾ ಸಂಚಾರಾಧಿಕಾರಿ]. (ಆಟದ ದೋಣಿ ಯನ್ನು) ತೇಲಬಿಡು. S. into (ಅಸಂ.) ಮೇಲೆ ಬೀಳು, ರೇಗಾಡು, ಬಯ್ಯು, ತರಾಟೆಗೆ ತೆಗೆದುಕೊ. **Sailer** (ನಾ.) ನಿರ್ದಿಷ್ಟ ಸಂಚಾರ ಶಕ್ತಿಯ ಹಡಗು (Fast, good, bad, s.). **Sailor** (ನಾ.) ನಾವಿಕ, ಕಲಾಸಿ (Good, bad, s. ಸಮುದ್ರಪಿತ್ತದಿಂದ ನರಳದ, ನರಳುವ, ನಾವಿಕ). S. hat ಕಲಾಸಿ ಟೊಪ್ಪಿಗೆ; ಚಪ್ಪಟೆಯ ಮೇಲ್ಭಾಗವೂ ನೇರವಾದ ಕಿರಿಯಗಲದ ಚಾಚು ಏಣೂ ಉಳ್ಳ ಹೆಂಗಸರ ಟೊಪ್ಪಿಗೆ; ನಾವಿಕರ ಟೊಪ್ಪಿಗೆಯಂತೆ ಮೇಲ್ಮಡಿಚಿದ ಏಣುಳ್ಳ, ಹುಡುಗರ ಟೊಪ್ಪಿಗೆ. S.-man (ತಿರಸ್ಕಾರ ಮತ್ತು ಹಾಸ್ಯ ಪ್ರ.) ನಾವಿಕ, ಕಲಾಸಿ. Sailors' home (ಅಗ್ಗದ ವೆಚ್ಚದಲ್ಲಿ ಕಲಾಸಿಗಳು ಇಳಿದುಕೊಳ್ಳಲು ತೀರಪ್ರದೇಶದಲ್ಲಿ ಏರ್ಪಡಿಸಿರುವ) ಕಲಾಸಿಖಾನೆ, ನಾವಿಕ ಬಿಡಾರ. S.'s knot ಕೊರಳ ಪಟ್ಟಿಯನ್ನು ಕಟ್ಟುವ ಒಂದು ವಿಧಾನ: ಕಲಾಸಿ ಗಂಟು. **Sailoring** (ನಾ.) ಕಲಾಸಿ ಕಸುಬು; ನಾವಿಕ ಕಾರ್ಯ. **Sailorless** (ಗು.); **Sailorly** (ಗು.)

Sain ಸೇನ್ (ಕ್ರಿ. ಸಕ.) (ಪ್ರಾಚೀ. ಪ್ರ.) ಶಿಲುಬೆಯಾಕಾರದ ಕರನ್ಯಾಸ ಮಾಡು, ಶಿಲುಬೆಗುರುತು ಮಾಡು, ಹರಸು; ದೈವಿಕ ಅಥವಾ ಮಾಂತ್ರಿಕ ಶಕ್ತಿಯಿಂದ ಕಾಪಾಡು, ರಕ್ಷಿಸು; ರಕ್ಷೆ ಹಾಕು.

Saint ಸೆಯ್ಂಟ್, ಸೆಂಟ್, ಸ್ಂಟ್ (ಗು., ನಾ., ಕ್ರಿ. ಸಕ.) (ಸಂಕ್ಷಿಪ್ತ: St, S.; ಬ. ವ. Sts, SS.) ಪೂಜ್ಯ, ಪವಿತ್ರ; ಸಂತರ ಪಂಕ್ತಿಗೆ ಸೇರಿ(ಸಿ)ದ; ವಿಶೇಷ ಪುಣ್ಯದಿಂದ ಸ್ವರ್ಗದಲ್ಲಿ ಉಚ್ಚ ಸ್ಥಾನವನ್ನೂ ಭೂಮಿಯಲ್ಲಿ ಪೂಜ್ಯತೆಯನ್ನೂ ಪಡೆದವನೆಂದು ಕ್ರೈಸ್ತ ಮತ ಅಧಿಕಾರ ಪೂರ್ವಕವಾಗಿ ಅಂಗೀಕರಿಸಿದ [ಸಾ., ಹೆಸರಿನ ಹಿಂದೆ ಪ್ರ.; ಉದಾ., St Paul ಸಂತ ಪಾಲ್. (ಅಧ್ಯಾಹಾರ ಪ್ರ.): St Peter's ಸಂತ ಪೀಟರಿನ ಚರ್ಚು. (ಷಷ್ಠೀ ವಿಭಕ್ತಿ ಚಿಹ್ನೆಯಿಲ್ಲದೆ) St Andrews ಸಂತ ಆಂಡ್ರೂಸಿನ (ಚರ್ಚಿರುವ) ಪಟ್ಟಣ. (ಸಂತರ ಹೆಸರಿನ ಚರ್ಚು ಅಲ್ಲದಿದ್ದರೂ ಕೆಲವು ಚರ್ಚುಗಳ ಹೆಸರ ಹಿಂದೆ ಪ್ರ. ಉಂಟು): St Saviour's, St Sepulchre's, St Faith, St Cross). St —'s day (—) ಸಂತನ ಸ್ಮಾರಕೋತ್ಸವ, ಪುಣ್ಯದಿನ. St Andrew ಸ್ಕಾಟ್ಲೆಂಡಿನ ರಕ್ಷಕ ಸಂತ ಆಂಡ್ರೂ (St Andrew's day ನೊವೆಂಬರ್ ೩೦). St Anthony's, Elmo's, fire (Fire ನೋಡಿ). St Bartholomew ಸಂತ ಬಾರ್ತಾಲೊಮ್ಯು (St B.'s =St B.'s Hospital ಲಂಡನಿನಲ್ಲಿಯ ಸಂತ ಬಾರ್ತಾಲೊಮ್ಯು ಆಸ್ಪತ್ರೆ) (ಸಂಕ್ಷಿಪ್ತ: Bart's). St Bernard ಸಂತ ಬರ್ನಾರ್ಡ್ (The Great, Little, St B. ಆಲ್ಪ್ಸ್ ಪರ್ವತದ ಎರಡು ಅಪಾಯದ ಕಣಿವೆಗಳು. St B. dog *or* St B. ಈ ಕಣಿವೆಗಳಲ್ಲಿ ದಾರಿ ತಪ್ಪಿದ ಪ್ರಯಾಣಿಕರನ್ನು ಪತ್ತೆಮಾಡಿ ಸಂರಕ್ಷಿಸುವುದಕ್ಕಾಗಿ ಅಲ್ಲಿಯ ಸತ್ರದ ಸಂನ್ಯಾಸಿಗಳು ಇಟ್ಟುಕೊಂಡಿರುವ (ಮೂರಡಿ ಎತ್ತರದ) ಭಾರಿ ನಾಯಿ ಜಾತಿ: ಬರ್ನಾರ್ಡ್ ನಾಯಿ (ಜಾತಿ). St Cecilia (ಸಂಗೀತಾಭಿಮಾನಿ) ಸಂತ ಸಿಸಿಲಿಯಾ. St Charles (ಸಂತರ ಪಂಕ್ತಿಗೆ ಸೇರಿಕೆಯಾದ) ಇಂಗ್ಲೆಂಡಿನ ಮೊದಲನೆಯ ಚಾರ್ಲ್ಸ್ ದೊರೆ. St David ವೇಲ್ಸಿನ ರಕ್ಷಕ ಸಂತ ಡೇವಿಡ್ (St D.'s day ಮಾರ್ಚಿ ೧). St Denis ಫ್ರಾನ್ಸಿನ ರಕ್ಷಕ ಸಂತ ಡೆನಿಸ್. St George ಇಂಗ್ಲೆಂಡಿನ ರಕ್ಷಕ ಸಂತ ಜಾರ್ಜ್ (St G.'s day ಏಪ್ರಿಲ್ ೨೩). St G.'s ಇಂಗ್ಲೆಂಡಿನಲ್ಲಿಯ ಸಂತ ಜಾರ್ಜ್ ಆಸ್ಪತ್ರೆ. St G.'s, Hanover Square ಹಲವು ಶ್ರೀಮಂತ ವಿವಾಹಗಳು ನಡೆಯುವ ಲಂಡನಿನಲ್ಲಿಯ ಸಂತ ಜಾರ್ಜ್ ಚರ್ಚು. St G.'s cross ನಾಲ್ಕು ಬಾಹುಗಳೂ ಸಮವಾಗಿರುವ ಶಿಲುಬೆ: ಸಂತ ಜಾರ್ಜ್ ಶಿಲುಬೆ. St Germain ಪ್ಯಾರಿಸ್ಸಿನ ಶ್ರೀಮಂತರ ವಸತಿ (=Faubourg St G.). St Gotthard (The St G. ಆಲ್ಪ್ಸ್ ಪರ್ವತದ ಸಂತ ಗಾತರ್ಡ್ ಕಣಿವೆ ಅಥವಾ ಸುರಂಗ ರೈಲು ದಾರಿ). St Helena ಹೆಲೀನ ದ್ವೀಪ (ನೆಪೋಲಿಯನನ್ನು ಗಡೀಪಾರು ಮಾಡಿ ಬಂಧನದಲ್ಲಿಟ್ಟಿದ್ದ ಸ್ಥಳ). (ರೂಪ.) ಗಡೀಪಾರು ಸ್ಥಳ. St James's ಬ್ರಿಟಿಷ್ ರಾಜಾಸ್ಥಾನ (=The Court of St James's *or* St James) (ಲಂಡನಿನಲ್ಲಿಯ ಸಂತ ಜೇಮ್ಸ್ ಅರಮನೆಯ ಸಂಬಂಧದಿಂದ); ಸಂತ ಜೇಮ್ಸ್ ಅರಮನೆಯ ಸುತ್ತಣ ನವನಾಗರಿಕರ ವಾಸಸ್ಥಾನ. St John's-wort ಹಳದಿ ಹೂವು ಬಿಡುವ ಹಲವು ಬಗೆಯ ಸಸ್ಯ. St Leger ಮೂರು ವರ್ಷ ವಯಸ್ಸಿನ ಕುದುರೆಗಳಿಗಾಗಿ ಡನ್‌ಕ್ಯಾಸ್ಟರಿನಲ್ಲಿ ಏರ್ಪಡಿಸಿರುವ ಕುದುರೆ ಜೂಜು (ಇದನ್ನು ಮೊದಲು ಏರ್ಪಡಿಸಿದವನ ಹೆಸರಿನಿಂದ). St Lubbock's day ೧೮೭೧ರಲ್ಲಿ Sir J. Lubbock ಎಂಬಾತನು ತಂದ ಶಾಸನದಿಂದ ಆಚರಣೆಗೆ ಬಂದ ಬ್ಯಾಂಕು ರಜಾ ದಿನ(ಗಳಲ್ಲೊಂದು). St Luke's summer (Summer ನೋಡಿ). St Mark's ವೆನಿಸ್ಸಿನಲ್ಲಿಯ ಸಂತ ಮಾರ್ಕ್ ಚರ್ಚು. St Martin's-le-Grand (ಇಂಗ್ಲೆಂಡಿನ) ಪ್ರಧಾನ ಅಂಚೆ ಕಚೇರಿ. St Martin's summer (Summer ನೋಡಿ). St Michael (ಬೀಜ ಬಹು ಮಟ್ಟಿಗೆ ಇಲ್ಲವೇ ಇಲ್ಲದ, ತೆಳು ಸಿಪ್ಪೆಯ) ಒಂದು ಜಾತಿಯ ಕಿತ್ತಳೆ. St Michael and St George ಒಂದು 'ನೈಟ್' ಪದವಿ. St Monday (Monday ನೋಡಿ). St Patrick ಐರ್ಲೆಂಡಿನ ರಕ್ಷಕ ಸಂತ ಪ್ಯಾಟ್ರಿಕ್ (St P.'s day ಮಾರ್ಚಿ ೧೭. Order of St P. ಐರ್ಲೆಂಡಿನ 'ನೈಟ್' ಪದವಿ). St Paul's ಲಂಡನಿನಲ್ಲಿಯ ಬಿಷಪ್ಪಿನ ಅಧಿಕಾರಪೀಠವಿರುವ ಅತ್ಯಂತ ಹೆಸರುವಾಸಿಯಾದ ದೊಡ್ಡ ಚರ್ಚು: ಸಂತ ಪಾಲ್ ಚರ್ಚು. St Peter's ರೋಮಿನ ವ್ಯಾಟಿಕನ್ ಗುಡ್ಡದ ಮೇಲಿರುವ ಸಂತ ಪೀಟರಿನ ಚರ್ಚು (St P.'s chair ಪೋಪ್ ಗುರುವಿನ, ಪದವಿ, ಅಧಿಕಾರ). St Sophia ಕಾನ್‌ಸ್ಟಾಂಟಿನೋಪಲಿನಲ್ಲಿಯ (ಈಗಿನ ಇಸ್ತಾಂಬುಲ್ ಅಲ್ಲಿಯ) ಸಂತ ಸೋಫಿಯ ಮಸೀದಿ. St Stephen's ಬ್ರಿಟಿಷ್ ಪಾರ್ಲಿಮೆಂಟು (ಹಿಂದೆ, ಪಾರ್ಲಿಮೆಂಟಿನ ಪ್ರಜಾಪ್ರತಿನಿಧಿ ಸಭೆ ವೆಸ್ಟ್‌ಮಿನ್‌ಸ್ಟರಿನಲ್ಲಿಯ ಸಂತ ಸ್ಟೀಫನ್ಸ್ ಆರಾಧನ ಮಂದಿರದಲ್ಲಿ ಸೇರುತ್ತಿದ್ದ ಕಾರಣದಿಂದ). St Swithun('s day) ಜುಲೈ ೧೫ (ಈ ದಿನ ಮಳೆ ಬಂದರೆ ಮುಂದಿನ ೪೦ ದಿನಗಳೂ ಮಳೆಯಾಗುತ್ತದೆಂದೂ, ಬರದಿದ್ದರೆ ೪೦ ದಿನಗಳೂ ಮಳೆಯಾಗುವುದಿಲ್ಲವೆಂದೂ ಜನರ ನಂಬಿಕೆ). St Thomas's ಲಂಡನಿನಲ್ಲಿಯ ಸಂತ ತಾಮಸ್ ಆಸ್ಪತ್ರೆ. St Valentine's day (Valentine ನೋಡಿ). St Vitus's dance (Dance ನೋಡಿ)]. (ನಾ.) ಪುಣ್ಯಾತ್ಮ, ಸ್ವರ್ಗಸ್ಥ, ದಿವಂಗತ. ಸಾಧು, ಸಂತ [Patron s. (ಒಬ್ಬ ವ್ಯಕ್ತಿಯ ಅಥವಾ ಒಂದು ಸ್ಥಳದ, ಮು., ಚರ್ಚಿನ) ರಕ್ಷಕ ಸಂತ, ಅಭಿಮಾನಿ ಸಂತ]. (ಬೈಬಲ್, ಪ್ರಾಚೀ. ಪ್ರ., ಕೆಲವು ನವೀನ ಪಂಗಡದವರಲ್ಲಿಯೂ ಪ್ರ.) ದೇವಪ್ರಿಯ, ಕ್ರೈಸ್ತ (ಮತದವನು). ಪವಿತ್ರ, ಪುಣ್ಯ, ಪೂಜ್ಯ, —ಪುರುಷ [Would provoke, try the patience of, a s. ಎಂಥ ಸಾಧುವನ್ನೂ ರೇಗಿಸುತ್ತದೆ; ಎಂಥ ಸಾಧುವೂ ಸೈರಿಸನು. Young saints old devils *or* sinners (ಚಿಕ್ಕಂದಿನ ವೈರಾಗ್ಯ ಒಳ್ಳೆಯ ಲಕ್ಷಣವಲ್ಲ ಎಂಬಲ್ಲಿ): ಬಾಲ್ಯ ಸಂನ್ಯಾಸಿ ವೃದ್ಧ ವಿಲಾಸಿ. Latter-day saints (Latter ನೋಡಿ). S.'s-day (ಚರ್ಚಿನಲ್ಲಿ ಆಚರಿಸುವ) ಸಂತನ ಸ್ಮಾರಕೋತ್ಸವ, ಪುಣ್ಯದಿನ].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕ್ರಿ.) ಸಂತರ ಪಂಕ್ತಿಗೆ ಸೇರಿಸು, ಸಂತನನ್ನಾಗಿ ಪರಿಗಣಿಸು, ಸಂತನೆಂದು ಕರೆ. (ಭೂ. ಕೃ. ನಲ್ಲ) ಸಂತನೆಂದು ಪರಿಗಣಿಸಲು ಯೋಗ್ಯನಾದ; ಪೂಜ್ಯ; ಪುಣ್ಯಜೀವನದ; (ಸ್ಥಳ, ಮೊ. ಗಳ ವಿಷಯದಲ್ಲಿ) ಪವಿತ್ರವಾದ. **Saíntdom** (ನಾ.); **Saínthood** (ನಾ.); **Saíntlike** (ಗು.); **Saíntling** (ನಾ.) ಚಿಕ್ಕ ಸಂತ, ಉಪಸಂತ, ಮರಿ ಸಂತ. **Saíntly** (ಗು.); **Saíntliness** (ನಾ.); **Saíntship** (ನಾ.)

Saint-Simónian ಸೇಯ್ಂಟ್‌ಸೈ(ಸಿ)ಮೋನಿಯನ್, ಸೆಂಟ್— (ಗು., ನಾ.) ಎಲ್ಲ ಆಸ್ತಿಯ ಮತ್ತು ಬೆಳೆ ಹಂಚಿಕೆಯ ಅಧಿಕಾರವೂ ರಾಜ್ಯಕ್ಕೆ ಸೇರಿರಬೇಕೆಂದು ವಾದಿಸಿದ Comte de Saint-Simon (೧೭೬೦-೧೮೨೫) ಎಂಬಾತನ ಸಮಾಜ ಸ್ವಾಮ್ಯವಾದದ (ಅನುಯಾಯಿ). **Saint-Símonism** (—ಸೈ—) (ನಾ.); **Saint-Símonist** (ನಾ.); **Saint-Símonite** (ನಾ.); **Saint-Simónianism** (ನಾ.)

Saith. Say ಧಾತುವಿನ ವರ್ತಮಾನ ಪ್ರಥಮ ಪುರುಷ ಏ. ವ. ದ ಪ್ರಾಚೀ. ಪ್ರ. ರೂಪ.

Saític ಸೇಇಟಿಕ್ (ಗು.) ಕೆಳ ಈಜಿಪ್ಟಿನ ಪುರಾತನ ರಾಜಧಾನಿಯಾದ ಸೇಯಿಸ್ ಪಟ್ಟಣದ (S. dynasties ಈಜಿಪ್ಟಿನ ೨೬-೩೦ನೆಯ ದೊರೆಗಳು)

Sake^1 ಸೇಕ್ (ನಾ.) —ಓಸ್ಕರ(ವಾಗಿ), ಸಲುವಾಗಿ, ಅರ್ಥವಾಗಿ, ನಿಮಿತ್ತ(ವಾಗಿ), —ಗಾ(ಕ್ಕಾ)ಗಿ [For my s. ನನಗೋಸ್ಕರ. For peace' s. ಶಾಂತಿ ಸಂರಕ್ಷಣೆಗಾಗಿ. For children's s. ಮಕ್ಕಳ ಸಲುವಾಗಿ. For all our sakes (ವಿರಳವಾಗಿ, our s.) ನಮ್ಮೆಲ್ಲರ ನಿಮಿತ್ತವಾಗಿ. For his name's s. ಅವನ—ಹೆಸರಿಗಾಗಿ, ಹೆಸರಿನ ರಕ್ಷಣಾರ್ಥವಾಗಿ. For any s. (ಬೇಡಿಕೆಗಳಲ್ಲಿ) ಏತಕ್ಕಾದರೂ ಆಗಲಿ, ದಮ್ಮಯ್ಯ. For old s.'s s. ಹಿಂದಿನ ದಿನಗಳ ನೆನಪಿಗಾಗಿ; ಹಿಂದಿನ ಸ್ನೇಹದ, ಸಂಬಂಧದ, ಸಲುವಾಗಿ]

Sake^2 ಸ್ಯಾಕೆ(ೀ) (ನಾ.) (ಜಪಾನರ) ಅಕ್ಕಿಯ ಮದ್ಯ.

Sáker ಸೇಕರ್ (ನಾ.) ಹಕ್ಕಿಯ ಬೇಟೆಯಲ್ಲಿ ಉಪಯೋಗಿಸುವ ದೊಡ್ಡ ತೆರನ (ಹೆಣ್ಣು) ಡೇಗೆ ಹಕ್ಕಿ, ಗಿಡಗ (ಗಂಡಿಗಿಂತ ಹೆಣ್ಣು ದೊಡ್ಡ ಆಕಾರದ್ದು). (ಚರಿತ್ರೆ) ಒಂದು ಹಳೆಯ ಮಾದರಿಯ ಫಿರಂಗಿ. **Sákeret** (ನಾ.) ಗಂಡು ಡೇಗೆ.

Sákia ಸಾಕಿಯ (ನಾ.) ಪೂರ್ವ ದೇಶಗಳಲ್ಲಿ ವ್ಯವಸಾಯಕ್ಕೆ ಉಪಯೋಗಿಸುವ, ಘಟಚಕ್ರದಂಥ, ಒಂದು ಬಗೆಯ ನೀರೆತ್ತುವ ಚಕ್ರ: ಸಾಕಿಯ.

Sa(u)l ಸಾಲ್ (ನಾ.) ಸಾಲವೃಕ್ಷ.

Sálable, etc. **Sale** ನೋಡಿ.

Salácious ಸಲೇಷಸ್ (ಗು.) ಬೆದೆ ಹತ್ತಿದ, ಕಾಮತೃಷ್ಣೆಯುಳ್ಳ, ಕಾಮುಕ. **Saláciously** (ಕ್ರಿ. ವಿ.); **Saláciousness** (ನಾ.); **Salácity** ಸಲ್ಯಾಸಿಟಿ (ನಾ.) ಕಾಮೋದ್ರೇಕ, ಕಾಮತೃಷ್ಣೆ.

Sálad ಸ್ಯಾಲಡ್ (ನಾ.) ಕೋಸುಂಬರಿ, ಪಚ್ಚಡಿ(ಗೆ ತಕ್ಕ ತರಕಾರಿ); ಹಸಿಯಾಗಿ ತಿನ್ನಬಹುದಾದ ಕಾಯಿಪಲ್ಯ; ಹಸಿ ತರಕಾರಿ. ಹಣ್ಣಿನ ರಸಾಯನ (=Fruit s.). S.-days ಅನುಭವವಿಲ್ಲದ ಯೌವನ, ಹಸಿ ಹರೆಯ. S.-dressing ಕೋಸುಂಬರಿಯ ಅಥವಾ ಪಚ್ಚಡಿಯ ಜೊತೆಯಲ್ಲಿ ಉಪಯೋಗಿಸುವ ಎಣ್ಣೆ, ಹುಳಿ, ಕೆನೆ, ಮೊ. ಗಳ ಮಿಶ್ರಣ: ಕೋಸುಂಬರಿ ಪರಿಕರ, ಮಸಾಲೆ. S.-oil ಉತ್ಕೃಷ್ಟವಾದ ಆಲಿವ್ ಎಣ್ಣೆ.

Sálamander ಸ್ಯಾಲಮ್ಯಾ(ಮಾ)ಂಡರ್ (ನಾ.) ಬೆಂಕಿಯಲ್ಲಿ ವಾಸಮಾಡಿಕೊಂಡು ಬದುಕಿರಬಲ್ಲದೆಂದು ಜನ ನಂಬಿದ್ದ ಓತಿಕ್ಯಾತದಂಥ ಪ್ರಾಣಿ; ಬೆಂಕಿ ಮೊಸಳೆ, ಅಗ್ನಿ ಮಕರ. ಬಹು ತಾಪ ಸಹಿಸಬಲ್ಲವನು, ತಾಪ ಸಹಿಷ್ಣು; ಉಗ್ರ ಯೋಧ. ಬೆಂಕಿಯಲ್ಲಿ ವಾಸಿಸುವ ಭೂತ: ಅಗ್ನಿಭೂತ. (ಪ್ರಾ. ವಿ.) ಬಾಲವುಳ್ಳ, ಹಲವು ಬಗೆಯ, ಭೂ ಜಲ ಜೀವಿ [**Salamándroid** (ಗು., ನಾ.) ಬೆಂಕಿ ಮೊಸಳೆಯಂಥ (ಪ್ರಾಣಿ)]. ಕೋವಿಮದ್ದನ್ನು ಹೊತ್ತಿಸುವ, ಕೆಂಪಗೆ ಕಾದ ಕಬ್ಬಿಣ. ಮೊಟ್ಟೆ ದೋಸೆ, ಮೊ. ನ್ನು ಕಂದು ತಿರುಗುವಂತೆ ಸುಡಲು ಅದರಮೇಲೆ ಇಡುವ ಕಾದ ಕಾವಲಿ. **Salamándrian** (ಗು.); **Salamándrine** (ಗು.)

Sal-ammóniac ಸ್ಯಾಲಮೋನಿಆ್ಯಕ್ (ನಾ.) ನವಾಸಾಗರ; ಅಮೋನಿಯಂ ಕ್ಲೋರೈಡು.

Saláriat. **Salary** ನೋಡಿ.

Sálary ಸ್ಯಾಲರಿ (ನಾ., ಕ್ರಿ. ಸಕ.) ಒಬ್ಬನು ಮಾಡುವ (ಸಾ., ಬುದ್ಧಿ ಉಪಯೋಗಿಸಿ ಮಾಡುವ) ಕೆಲಸಕ್ಕೆ ಪ್ರತಿಫಲವಾಗಿ ನಿಯತ ಕಾಲಕ್ಕೆ ಗೊತ್ತಾಗಿ ಕೊಡುವ ಹಣ: ಸಂಬಳ, ಪಗಾರ, ತಲಬು, ವೇತನ (Wages ಪದ ನೋಡಿ). (ಕ್ರಿ.) —ಕೊಡು. **Saláriat** ಸಲೇರಿಯಟ್ (ನಾ.) (ಕೂಲಿಕಾರರಿಂದ ಭಿನ್ನರಾದ) ಸಂಬಳದಾರರು.

Sale ಸೇಲ್ (ನಾ.) ಮಾರಾಟ, ಮಾರಿಕೆ, ಬಿಕರಿ, ವಿಕ್ರಯ, ವ್ಯಾಪಾರ [On, for, s. ಮಾರಾಟಕ್ಕೆ, —ಕ್ಕಾಗಿ. The sales were enormous. S. & (or) return ಮಾರಾಟವಾಗದೆ ನಿಂತದ್ದನ್ನು ಹಿಂದಿರುಗಿಸುವ ಹಕ್ಕಿನ (ಅಥವಾ ಷರತ್ತಿನ) ಮೇಲೆ ಚಿಲ್ಲರೆ ವ್ಯಾಪಾರಿ ಸರಕು ಪಡೆಯುವ ಏರ್ಪಾಟು: ಮಾರಾಟವಾಗದ್ದು ವಾಪಸ್ಸು]. (ಬಹಿರಂಗ) ಹರಾಜು, ಲಿಲಾವು (Put up for s. ಹರಾಜಿಗೆ ಇಡು). ಪದಾರ್ಥದ ಸಕಾಲದ ಕಡೆಯ ಭಾಗದಲ್ಲಿ, ಉಳಿದ ಸರಕನ್ನು ರಿಯಾಯಿತಿ ಬೆಲೆಗೆ ಮಾರಿಹಾಕಿಬಿಡುವುದು: ಸಕಾಲಾಂತ್ಯ ವಿಕ್ರಯ. Bill of s. (Bill^3 ನೋಡಿ). S.-ring ಹರಾಜಿನಲ್ಲಿ ಬೆಲೆಯ ಹತೋಟಿಗಾಗಿ ಏರ್ಪಡಿಸಿಕೊಂಡಿರುವ ಗಿರಾಕಿಗಳ ಒಳಸಂಚು ಕೂಟ. **Sál(e)able** (ಗು.) ಮಾರಾಟವಾಗುವ, ಮಾರಾಟಕ್ಕೆ ತಕ್ಕ, ಬಿಕರಿಯಾಗುವ, ವಿಕ್ರಯ ಯೋಗ್ಯ (S. price ಮಾರಿಕೆಯಾಗುವ ಬೆಲೆ). **Sal(e)abílity** (ನಾ.); **Sálesman** (ನಾ.) (ಅಂಗಡಿಯಲ್ಲಿ ಸರಕನ್ನು ಮಾರುವ ಅಥವಾ ಮಾರಲು ನೇಮಕವಾಗಿರುವ ಅಥವಾ ಉತ್ಪನ್ನಕಾರನಿಗೂ ಚಿಲ್ಲರೆ ವ್ಯಾಪಾರಿಗೂ ಮಧ್ಯವರ್ತಿಯಾಗಿರುವ) ಮಾರಾಟಗಾರ. **Sálesmanship** (ನಾ.) ಮಾರಾಟದ —ಕಲೆ, ಜಾಣತನ; ವಿಕ್ರಯ ಚಾತುರ್ಯ. **Sáleswoman** (ನಾ., ಸ್ತ್ರೀ.) ಮಾರಾಟಗಾತಿ.

Sálem ಸೇಲೆಮ್ (ನಾ.) ನಾನ್‌ಕನ್‌ಫಾರ್ಮಿಸ್ಟ್ ಕ್ರೈಸ್ತ ಪಂಗಡದವರ ಆರಾಧನ ಮಂದಿರ.

Sálep ಸ್ಯಾಲೆಪ್ (ನಾ.) ಸಾಲಾಮಿಸ್ರಿ (ಜಾತಿಯ ಗಡ್ಡೆಗಳಿಂದ ತಯಾರಿಸಿದ ಪುಷ್ಟಿಕರವಾದ ಒಂದು ಹಿಟ್ಟು)

Salerátus ಸ್ಯಾಲರೇಟಸ್ (ನಾ.) (ಅಮೆ. ಸಂ.) ರೊಟ್ಟಿಯ ಉದುಗು ಪುಡಿಯ ತಯಾರಿಕೆಯಲ್ಲಿ ಉಪಯೋಗಿಸುವ, ಅಶುದ್ಧ ಪೊಟಾಸಿಯಂ ಅಥವಾ ಸೋಡಿಯಂ ದೈಕಾರ್ಬೊನೇಟು.

Sálian ಸೇಲಿಯನ್ (ಗು.) ಪುರಾತನ ರೋಮಿನಲ್ಲಿದ್ದ ಮಾರ್ಸ್ ದೇವತಾ ಪೂಜಾರಿಗಳಾದ ಸೇಲಿಯೈಗಳ (S. hymns, dance)

Sálic ಸ್ಯಾ(ಸೇ)ಲಿಕ್, **Salíque** ಸಲೀಕ್ (ಗು.) S. law ಒಂದು ಪ್ರಾಚೀನ ಫ್ರೆಂಚ್ ಧರ್ಮಶಾಸ್ತ್ರ; (ಫ್ರಾನ್ಸ್ ದೇಶದ ರಾಜಸಂತತಿಯಲ್ಲಿ ಉತ್ತರಾಧಿಕಾರದ ಮೂಲಭೂತ ನಿಯಮವೆಂದು ಹೇಳುವ) ಹೆಂಗಸರಿಗೆ ರಾಜ್ಯಾಧಿಕಾರವಿಲ್ಲದ, ಪಟ್ಟಕ್ಕೆ ಬರುವ ಉತ್ತರಾಧಿಕಾರವಿಲ್ಲದ, ನ್ಯಾಯ.

Sálicin ಸ್ಯಾಲಿಸಿನ್ (ನಾ.) ವಿಲೋ ಮರದ ತೊಗಟೆಯಿಂದ ತೆಗೆದ, ಔಷಧವಾಗಿ ಉಪಯೋಗಿಸುವ, ಕಹಿಯಾದ, ಸ್ಫಟಿಕಾಕೃತಿಯ ಘಟಕ: ಸ್ಯಾಲಿಸಿನ್. **Sálicyl** (ನಾ.) ಸ್ಯಾಲಿಸಿಲಿಕ್ ಆಮ್ಲದ ಮೂಲ ಘಟಕ: ಸ್ಯಾಲಿಸಿಲ್. **Salicýlic** (ಗು.) S. acid ಸ್ಯಾಲಿಸಿಲಿಕ್ ಆಮ್ಲ (ಪೂತಿನಾಶಕವಾಗಿಯೂ ಸಂಧಿವಾತ ರೋಗ ಪರಿಹಾರಕವಾಗಿಯೂ ಉಪಯೋಗ). **Salícylate** (ನಾ.) ಸ್ಯಾಲಿಸಿಲಿಕ್ ಆಮ್ಲದ ಲವಣ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Salícylize (ಕ್ರಿ. ಸಕ.) ಸ್ಯಾಲಿಸಿಲಿಕ್ ಆಮ್ಲದಿಂದ ಸಂಸ್ಕರಿಸು [=**Salícylate** —ಲೇಟ್ (ಕ್ರಿ. ಸಕ.)]. **Salícylism** (ನಾ.) ಸ್ಯಾಲಿಸಿಲಿಕ್ ಆಮ್ಲದ ಅಥವಾ ಲವಣದಪ್ರಯೋಗದಿಂದ ಉಂಟಾಗುವ ವಿಷಸ್ಥಿತಿ. **Salícylous** (ಗು.)

Salícional ಸಲಿಷನಲ್, **Sálicet** ಸ್ಯಾಲಿಸೆಟ್ (ನಾ.) (ಆರ್ಗನ್ ವಾದ್ಯದಲ್ಲಿ) ವಿಲೋ ಗಿಡದ ಕೊಳವೆಯಿಂದ ಹೊರಡುವಂಥ ಮೃದು ನಾದವುಳ್ಳ, ನಾದನಳಿಕೆ ತಂಡ.

Sálient ಸೇಲಿಯೆಂಟ್ (ಗು., ನಾ.) (ಪಾಂಡಿತ್ಯ ಅಥವಾ ಹಾಸ್ಯ ಪ್ರ.) ನೆಗೆದಾಡುವ, ಜಿಗಿದಾಡುವ, ಕುಣಿದಾಡುವ. (ಕಾವ್ಯ ಪ್ರ.; ನೀರು, ಮೊ. ಗಳ ವಿಷಯದಲ್ಲಿ) ಚಿಮ್ಮುವ. [(ಪ್ರಾಚೀ. ಪ್ರ.) S. point ಪ್ರಥಮಾವಸ್ಥೆ, ಪ್ರಾರಂಭದಶೆ, ಪ್ರಪ್ರಥಮ, ಆರಂಭ (ಆದಿಯಲ್ಲಿ ವೈದ್ಯ ಪ್ರ. =ಭ್ರೂಣದಲ್ಲಿ ಕಂಡುಬರುವ ಹೃತ್ಕೋಶ)]. (ಕೋನದ ವಿಷಯದಲ್ಲಿ; ಮು., ಕೋಟೆಯ ಶಿಲ್ಪದಲ್ಲಿ) ಹೊರಗಡೆಗೆ ಚಾಚಿರುವ, ಹೊರಮುಖವಾದ (ಎದುರು ಪದ: Re-entrant). ಹೊರ ಚಾಚಿಕೊಂಡಿರುವ, ಎದ್ದು ಕಾಣುವ, ಪ್ರಧಾನವಾಗಿ ಕಾಣುವ (S. points, features, characteristics). (ನಾ.) (ಕೋಟೆಯಲ್ಲಿ) ಹೊರ ಚಾಚಿಕೊಂಡಿರುವ ಭಾಗ, ಹೊರ ಮುಖವಾದ ಕೋನ. **Sáliently** (ಕ್ರಿ. ವಿ.); **Sálience** (ನಾ.); **Sáliency** (ನಾ.)

Salíferous ಸಲಿಫರಸ್ (ಗು.) (ಭೂ. ವಿ.) (ಭೂಸ್ತರದ ವಿಷಯದಲ್ಲಿ) ಹೆಚ್ಚು ಉಪ್ಪುಳ್ಳ, ಚೌಳಾದ.

Sáline ಸೇಲೈನ್, **Salíne** ಸಲೈನ್ (ಗು., ನಾ.) (ಸರೋವರ, ಚಿಲುಮೆ, ಮೊ. ಗಳ ವಿಷಯದಲ್ಲಿ) ಲವಣ(ಗಳು) ಸೇರಿದ, ಉಪ್ಪುಗೂಡಿದ; (ರುಚಿಯ ವಿಷಯದಲ್ಲಿ) ಉಪ್ಪಾದ. ರಾಸಾಯನಿಕ ಲವಣಗಳ, ಲವಣ ಸ್ವಭಾವದ. (ಔಷಧಗಳ ವಿಷಯದಲ್ಲಿ) ಕ್ಷಾರ ಲೋಹಗಳ ಅಥವಾ ಮ್ಯಾಗ್ನೀಷಿಯಮ್ಮಿನ ಲವಣ(ಗಳನ್ನು) ಹಾಕಿದ; ಲವಣಯುಕ್ತ, ಲವಣ ಮಿಶ್ರಿತ. (ನಾ.) ಉಪ್ಪುನೀರಿನ, ಚೌಳು, —ಸರೋವರ, ಚಿಲುಮೆ, ಜೌಗು, ಮೊ. ವು. ಉಪ್ಪಿನ—ಮಡಿ, ಕೊಪ್ಪರಿಗೆ, ಕಾರಖಾನೆ. ಉಪ್ಪು, ಲವಣ (—ಪದಾರ್ಥ). ಭೇದಿ ಉಪ್ಪು; ಉಪ್ಪು ಬೆರಸಿದ ನೀರು; ಲವಣ ದ್ರಾವಣ. **Salínity** ಸಲಿನಿಟಿ (ನಾ.) ಲವಣತ್ವ. **Salíno-** ಸಲೈನೊ— (ಸ. ಪೂ. ಪ.); **Salinómeter** ಸ್ಯಾಲಿನಾಮಿಟರ್ (ನಾ.) ಲವಣಾಂಶ ಮಾಪಕ.

Salíque. **Salic** ನೋಡಿ.

Salíva ಸಲೈವ (ನಾ.) ಜೊಲ್ಲು, ಲಾಲಾ(ರಸ); ಉಗುಳು, ಬಾಯಿ ನೀರು. **Sálivary** ಸ್ಯಾಲಿವರಿ, **Salívary** ಸಲೈವರಿ (ಗು.); **Sálivate** ಸ್ಯಾಲಿವೇಟ್ (ಕ್ರಿ.) (ಸಾ., ಪಾದರಸ ಪ್ರಯೋಗದಿಂದ) ಹೆಚ್ಚಾಗಿ ಜೊಲ್ಲು ಬರಿಸು, ಲಾಲಾ(ರಸ) ಉತ್ಪತ್ತಿ ಮಾಡು; (ಹೆಚ್ಚಾಗಿ) ಜೊಲ್ಲು ಸುರಿ, ಲಾಲಾಸ್ರವವಾಗು. **Salivátion** (ನಾ.)

Salle (F) ಸಾಲ್ (ನಾ.) (ವಿರ. ಪ್ರ.) ಕೋಣೆ, ಹಜಾರ. **S.-a-mangér** (ಸಾಲ್‌ಅಮಾನ್‌ಷೇ) ಊಟದ ಮನೆ; ತಿಂಡಿತೀರ್ಥದ ಮನೆ, ಕಾಫಿಯ ಕೋಣೆ. **S.-d'attente** (— ಡಾಟಾಂಟ್) ರೈಲ್ವೆ ನಿಲ್ದಾಣದಲ್ಲಿಯ ತಂಗು ಕೋಣೆ.

Sállenders ಸ್ಯಾಲೆಂಡರ್ಸ್ (ನಾ., ಬ. ವ.) ಕುದುರೆಯ ಹಿಂಗಾಲಿನ ಮುಂಡು ಕೀಲಿನೊಳಗೆ ಏಳುವ ಒಣ ಗುಳ್ಳೆ.

Sállow[1] ಸ್ಯಾಲೋ (ನಾ.) ಕುರುಚಲಾಗಿಯೊ ಪೊದೆಯಾಗಿಯೊ ಬೆಳೆಯುವ ವಿಲೋ ಜಾತಿಯ ಮರ; ನಿರವಂಜಿ ಜಾತಿಯ ಮರ; ಸ್ಯಾಲೋ ಮರದ —ಕೊಂಬೆ, ದಾರು. **Sállowy** (ಗು.)

Sállow[2] ಸ್ಯಾಲೋ (ಗು., ನಾ., ಕ್ರಿ.) (ಮನುಷ್ಯನ ಚರ್ಮ, ಮುಖವರ್ಣ, ಮೊ. ಗಳ ವಿಷಯದಲ್ಲಿ; ಮರದ ಎಲೆಗಳ ವಿಷಯದಲ್ಲಿ ವಿರ. ಪ್ರ.) ಅನಾರೋಗ್ಯ ಸೂಚಕವಾದ ಹಳದಿ ಬಣ್ಣ(ದ), ಕಂದು ಹಳದಿ ಬಣ್ಣ(ದ), ಪಾಂಡುರ ವರ್ಣ(ದ). (ಕ್ರಿ.) —ಆಗು, ಮಾಡು. **Sállowish** (ಗು.); **Sállowness** (ನಾ.)

Sálly[1] ಸ್ಯಾಲಿ (ನಾ., ಕ್ರಿ. ಅಕ.) (ಮುತ್ತಿಗೆಗೆ ಗುರಿಯಾದವರು) ಮುತ್ತಿಗೆ ಹಾಕಿದವರ ಮೇಲೆ ಹೊರ ನುಗ್ಗುವುದು, ದಾಳಿ ಮಾಡುವುದು; ಹೊರ ದಾಳಿ (S.-port ಹೊರ ದಾಳಿಗಾಗಿ ಕೋಟೆಯಲ್ಲಿ ಮಾಡಿರುವ ಬಾಗಿಲು: ದಿಡ್ಡಿ ಬಾಗಿಲು). ಹೊರ ಹೊರಡುವುದು, ಪ್ರಸ್ಥಾನ, ಸಂಚಾರ, ವಿಹಾರ. ಥಟ್ಟನೆ —ಕಾರ್ಯೋನ್ಮುಖವಾಗುವುದು, ಚಟುವಟಿಕೆಗೊಳ್ಳುವುದು; ಕಾರ್ಯ ಪ್ರವೃತ್ತಿ ಕೆರಳುವುದು. ಭಾವ ಸ್ಫೋಟನ, ಭಾವದ ಉಕ್ಕು. (ವಿರ. ಪ್ರ.) ಕಟ್ಟು ಕಿತ್ತುಕೊಂಡು ಹೋಗುವುದು, ಸ್ವೇಚ್ಛಾವರ್ತನೆ. (ಮನುಷ್ಯನಮೇಲೆ ಎದುರು ಬೀಳಲು ಅಥವಾ ವಾದದಲ್ಲಿ ಮಾತು ತಿರುಗಿಸಲು ಆಡುವ) ಬಾಯಿ ಮುಚ್ಚಿಸುವ ಪ್ರತ್ಯುಕ್ತಿ, ಚಮತ್ಕಾರ ನುಡಿ, ನರ್ಮೋಕ್ತಿ, ಪರಿಹಾಸ್ಯದ ಏಟು; ಚಾಲಾಕಿನ ಮಾತು. (ಕ್ರಿ.) (ಮುತ್ತಿಗೆ ಹಾಕಿದವರಮೇಲೆ) ಹೊರ ನುಗ್ಗು, ಹೊರ ದಾಳಿಮಾಡು (ಅನೇಕ ವೇಳೆ *out* ಉಪ. ದೊಡನೆ). ಪ್ರಯಾಣ, ಸಂಚಾರ, —ಹೊರಡು (*Out, forth* ಉಪ. ದೊಡನೆ); ತಿರುಗಾಟಕ್ಕೆ ಹೋಗು, ಸುತ್ತಾಡಿಕೊಂಡು ಬರಲು ಹೊರಡು. (ವಿರ. ಪ್ರ.) ಥಟ್ಟನೆ ಹೊರಬೀಳು, ಹೊರಹೊಮ್ಮು (While yet his warm blood sallied from the wound)

Sálly[2] ಸ್ಯಾಲಿ (ನಾ.) ಗಂಟೆ ಬಾರಿಸುವುದಕ್ಕಾಗಿ ಗಂಟೆಯ ಹಗ್ಗವನ್ನು ಎಳೆದೊಡನೆ ಉಂಟಾಗುವ ಗಂಟೆಯ ಮೊದಲ ಮೇಲ್ಮುಖ ಚಲನೆ; ಆ ಸ್ಥಿತಿಯಲ್ಲಿ ಅದರ ನಾದ (=Hand-stroke. ಎದುರು ಪದ: Back-stroke); ಮೇಲ್ಮುಖ ಚಲನೆಯಲ್ಲಿರುವ ಗಂಟೆಯ ಸ್ಥಿತಿ. ಹಿಡಿತಕ್ಕೆ ಅನುಕೂಲಿಸುವಂತೆ ಉಣ್ಣೆಯನ್ನು ಸೇರಿಸಿ ಹೊಸೆದ, ಗಂಟೆಯ ಹಗ್ಗದ ಹಿಡಿ. S.-hole ಗಂಟೆಯ ಹಗ್ಗ ಹಾದುಹೋಗಿರುವ ಕಂಡಿ; ಗಂಟೆಯ ಹಗ್ಗದ ಕಂಡಿ.

Sally[3] ಸ್ಯಾಲಿ (ನಾ.) Sarah ಎಂಬುದರ ಬಳಕೆಯ ರೂಪ. Aunt S. (Aunt ನೋಡಿ). S. Lunn ಒಂದು ಬಗೆಯ ಸಿಹಿ ದೋಸೆ (ಇಂಗ್ಲೆಂಡಿನಲ್ಲಿಯ ಬಾತ್ ಪಟ್ಟಣದಲ್ಲಿ ಮೊದಲು ಇಂಥ ದೋಸೆಗಳನ್ನು ಮಾರುತ್ತಿದ್ದಳೆಂದು ಹೇಳುವ S. Lunn ಎಂಬಾಕೆಯ ಹೆಸರಿನಿಂದ ಬಂದಿರಬಹುದು)

Salmagúndi ಸ್ಯಾಲ್ಮಗಂಡಿ (ನಾ.) ಮಾಂಸ, ಮೀನು, ಮೊಟ್ಟೆ, ಈರುಳ್ಳಿ, ಮಸಾಲೆ, ಮೊ. ಗಳನ್ನು ಹಾಕಿ ಮಾಡಿದ ಒಂದು ಬಗೆಯ ಭಕ್ಷ್ಯ. (ವಸ್ತು, ವಿಷಯ, ಗುಣ, ಮೊ. ಗಳ) ಸಂಕೀರ್ಣ, ಮಿಶ್ರಣ, ಕಲಸುಮೇಲೋಗರ (ರೂಪ.)

Sálmon ಸ್ಯಾಮನ್ (ನಾ., ಜಾತ್ಯೇಕವಚನ, ಬ. ವ. ವಾಗಿಯೂ ಪ್ರ.; ಗು.) ಬೆಳ್ಳಿಯಂಥ ಶಲ್ಕವುಳ್ಳ, ಪಾಟಲ ವರ್ಣದ ಮಾಂಸವುಳ್ಳ, ಮೊಟ್ಟೆಯಿಡುವುದಕ್ಕಾಗಿ ನದಿಗಳಿಗೆ ಏರಿಹೋಗುವ, ಆಹಾರಕ್ಕಾಗಿ ಬಹಳ ಜನ ಅಪೇಕ್ಷಿಸುವ, ಒಂದು ದೊಡ್ಡ ಜಾತಿಯ ಮೀನು: ಸಾಮನ್ ಮೀನು [S.-colour(ed) (ಸಾಮನ್ ಮಾಂಸದಂಥ) ಕಿತ್ತಿಳೆ ಪಾಟಲ ವರ್ಣ(ದ). S.-ladder, -leap, -pass, -stair ಸಾಮನ್ ಮೀನುಗಳು ಕಟ್ಟೆ ದಾಟಿ ನದಿಗೆ ಹಾಯುವುದಕ್ಕಾಗಿ ಮಾಡಿರುವ ಸೋಪಾನ, ಮೊ. ವು: ಸಾಮನ್ ಸೋಪಾನ. S.-steak ಸಾಮನ್ ಮಾಂಸದ ಹುರಿದ, ಕರಿದ, —ಹೋಳು, ಕಂಡ. S.-trout ಸಾಮನ್ ಮೀನನ್ನು ಹೋಲುವಂಥ ಉ. ಯೂರೋಪಿನ ಮೀನು]. (ಗು.) ಕಿತ್ತಿಳೆ ಪಾಟಲ ವರ್ಣದ, ಹಳದಿಗೆಂಪಿನ. **Sálmonoid** ಸ್ಯಾಲ್ಮೊನಾಯ್ಡ್ (ಗು., ನಾ.) ಸಾಮನ್ ಮೀನಿನಂಥ (ಮೀನು); ಸಾಮನ್ ಜಾತಿಯ ಮೀನು.

Salomónic ಸ್ಯಾಲೊಮಾನಿಕ್, **Salomónian** —ಮೋನಿಯನ್ (ಗು.) (ಅತ್ಯಂತ ಪ್ರಾಜ್ಞನೆಂದು ಪ್ರಸಿದ್ಧನಾಗಿರುವ ಇಸ್ರೇಲರ ದೊರೆ) ಸಾಲೊಮನ್ನಿನ(ಂಥ)

Salón (F) ಸಾಲಾನ್ (ನಾ.) (ಮು., ಫ್ರಾನ್ಸಿನ ಶ್ರೀಮಂತರ ಮನೆಗಳಲ್ಲಿ) ದಿವಾನ್‌ಖಾನೆ; (ಮು., ಪ್ಯಾರಿಸ್ಸಿನ ಶ್ರೀಮಂತೆಯ, ಸಮಾಜ ಪ್ರಮುಖೆಯ ಅಥವಾ ಸಮಾಜ ನೇತ್ರಿಯ) ಸ್ವಾಗತಶಾಲೆ; ಇಲ್ಲಿ ನೆರೆಯುವ ಪ್ರಸಿದ್ಧ ವ್ಯಕ್ತಿಗಳ ಸಂತೋಷ ಕೂಟ; ಪ್ರತಿಷ್ಠಿತರ—ಸಭೆ, ಕೂಟ. The S. ಪ್ಯಾರಿಸ್ಸಿನಲ್ಲಿ ನಡೆಯುವ ಜೀವಂತ ಕಲೆಗಾರರ ಕಲಾಕೃತಿಗಳ ವಾರ್ಷಿಕ ಪ್ರದರ್ಶನ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Saloón ಸಲೂನ್ (ನಾ.) (ಮು., ಹೋಟಲುಗಳಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಸಭೆ, ಪ್ರದರ್ಶನ, ಮೊ. ಕ್ಕೆ ಯೋಗ್ಯವಾದ) ದೊಡ್ಡ ಕೋಣೆ, ಹಜಾರ, ಮಹಾಶಾಲೆ. ಹಡಗಿನಲ್ಲಿಯ ಮೊದಲನೆಯ ತರಗತಿಯವರ ಅಥವಾ ಎಲ್ಲ ಪ್ರಯಾಣಿಕರ (ಉಪಯೋಗದ) ದೊಡ್ಡ ಕೋಣೆ: ಹಡಗಿನ ಸಲೂನ್; —ಠೀಕು ಕೋಣೆ. (ಬೇರೆ ಬೇರೆ ಅರೆಗಳಾಗಿ ವಿಂಗಡಿಸಿರದ) ದಿವಾನ್‌ಖಾನೆಯಂತೆ ಸುಸಜ್ಜಿತವಾದ, ಅಖಂಡ ರೈಲು ಡಬ್ಬಿ: ರೈಲು ಸಲೂನ್, ಠೀಕು ಡಬ್ಬಿ (=S.-car, -carriage). (Sleeping, dining, -s. ಮಲಗುವ, ಊಟದ, ಸಲೂನ್). ದೊಡ್ಡ ವಿಮಾನಗಳಲ್ಲಿ ಪ್ರಯಾಣಿಕರ ಅರೆ. (ನಿರ್ದಿಷ್ಟ ಉದ್ದೇಶಕ್ಕಾಗಿ ಏರ್ಪಡಿಸಿರುವ) ಶಾಲೆ (Billiard, dancing, shaving, shooting, -s.). (ಅಮೆ. ಸಂ.) ಮದ್ಯದ ಅಂಗಡಿ, ಪಾನ ಶಾಲೆ. S. bar (ಇಂಗ್ಲೆಂಡಿನ ತಂಗುದಾಣಗಳಲ್ಲಿಯ) ಪ್ರಥಮ ಶ್ರೇಣಿಯ ಪಾನಶಾಲೆ. S. car ರೈಲು ಸಲೂನ್. ಚಾಲಕನ ಹಿಂಗಡೆ ವಿಂಗಡಣೆಯಿಲ್ಲದೆ, ಪೆಟ್ಟಿಗೆಯಂತೆ ಸುತ್ತಲೂ ಮುಚ್ಚಿರುವ, ಮೋಟಾರು ಬಂಡಿ. S. deck (ಹಡಗಿನಲ್ಲಿ) ಸಲೂನ್ ಪ್ರಯಾಣಿಕರಿಗೆ ಮೀಸಲಾಗಿಟ್ಟಿರುವ ಅಟ್ಟ: ಸಲೂನ್ ಅಟ್ಟ. S.-keeper (ಅಮೆ. ಸಂ.) ಪಾನಶಾಲೆ ಇಟ್ಟಿರುವವನು. S. pistol, rifle (ಬಂದೂಕು ಅಭ್ಯಾಸದ ಸಲೂನಿನಲ್ಲಿ ಉಪಯೋಗಿಸಲು ತಕ್ಕ) ಹತ್ತಿರ ಹಾರಿಕೆಯ ಹಗುರ ತುಪಾಕಿ.

Saloóp ಸಲೂಪ್ (ನಾ.) ಸಾಲಾಮಿಸ್ರಿ. ಸಾಲಾಮಿಸ್ರಿ ಬಿಸಿ ಪಾನೀಯ ಅಥವಾ ಸಾಸಫ್ರಾಸ್ ಪಾನೀಯ (ಹಿಂದೆ ಲಂಡನಿನ ಬೀದಿಯಂಗಡಿಗಳಲ್ಲಿ ಕಾಫಿಗೆ ಬದಲಾಗಿ ಮಾರುತ್ತಿದ್ದದ್ದು)

Salópian ಸಲೋಪಿಯನ್ (ಗು., ನಾ.) ಇಂಗ್ಲೆಂಡಿನ ಷ್ರಾಪ್‌ಷರ್ ಕೌಂಟಿಯ(ವನು). ಷ್ರೂಸ್‌ಬರಿ ವಿದ್ಯಾಶಾಲೆಯ(ವನು)

Salt ಸಾಲ್ಟ್ (ನಾ., ಗು., ಕ್ರಿ. ಸಕ.) (ಸಾಮಾನ್ಯವಾದ) ಅಡಿಗೆಯ ಉಪ್ಪು (=Common salt); (ಸೋಡಿಯಂ ಕ್ಲೋರೈಡ್ ಎಂಬ) ಲವಣ. [Bay, rock, sea, -s. (ಆಯಾ ಪದವನ್ನು ನೋಡಿ). White s. (ಕಂದು ಕಲ್ಲುಪ್ಪನ್ನು ಶುದ್ಧಪಡಿಸಿ ತಯಾರಿಸಿದ) ಅಡಿಗೆ ಉಪ್ಪು, ಬಿಳಿಯ ಉಪ್ಪು. Table s. ಬಡಿಸುವುದಕ್ಕಾಗಿ ಪುಡಿಮಾಡಿದ ಬಿಳಿಯ ಉಪ್ಪು: ಬಿಳಿಯ ಪುಡಿಯುಪ್ಪು, ಬಡಿಸುವ ಉಪ್ಪು. In s. (ಕೆಡದಂತೆ ಇಡುವುದಕ್ಕಾಗಿ) ಉಪ್ಪು ಉದುರಿಸಿದ; ಉಪ್ಪಿನಲ್ಲಿ, ಉಪ್ಪುನೀರಿನಲ್ಲಿ, —ಊರಿಟ್ಟ. Eat s. with (ಒಬ್ಬನ) ಅತಿಥಿಯಾಗು. Eat one's s. ಒಬ್ಬನ —ಅತಿಥಿಯಾಗಿರು, ಆಶ್ರಿತನಾಗಿರು, ಉಪ್ಪು ತಿನ್ನು. Is not worth his s. ಅವನು ಅಪ್ರಯೋಜಕ, ದಂಡಪಿಂಡ. Any one worth his s. ಸಮರ್ಥರಾದವರು ಯಾರೇ ಆಗಲಿ. Drop pinch of s. on tail of (ಸರೆ)ಹಿಡಿ (ತೋಕೆಯಮೇಲೆ ಉಪ್ಪು ಹಾಕಿ ಹಕ್ಕಿಯನ್ನು ಸುಲಭವಾಗಿ ಹಿಡಿಯಬಹುದೆಂದು ಮಕ್ಕಳಿಗೆ ಹಾಸ್ಯವಾಗಿ ಹೇಳುತ್ತಿದ್ದುದರ ಸಂಬಂಧದಿಂದ). Take with a grain of s. ಅತ್ಯುಕ್ತಿಯೆಂದು, ಉತ್ಪ್ರೇಕ್ಷೆಯೆಂದು, ಪರಿಗಣಿಸು; (ಅದ್ದರಿಂದ) ಪೂರ್ತಿ ನಂಬದಿರು. Am not made of s. (ಕರಗಿ ಹೋಗುತ್ತೇನೆಂಬ ಹೆದರಿಕೆಯಿಲ್ಲದೆ) ಮಳೆಯಲ್ಲಿ ಹೋಗಬಲ್ಲೆ; ನಾನೇನೂ (ಮಳೆಯಲ್ಲಿ) ಕರಗಿಹೋಗುವುದಿಲ್ಲ. The s. of the earth ಪ್ರಪಂಚದ (ಉತ್ತಮತೆಗೆ ಕಾರಣರಾದ) ಸಾರಪ್ರಾಯರು, ಸಾರಶ್ರೇಷ್ಠರು. (ಆಧುನಿಕ ಲಾಘವ ಪ್ರ.) ಬಲಿಷ್ಠರು, ಧನಾಢ್ಯರು, ಶ್ರೀಮಂತರು]. ಕಾರ, ಚುರುಕು, ರುಚಿ, ಸ್ವಾರಸ್ಯ [No s. in such tears ಬರಿಯ ಕಣ್ಣೀರು; ಬೂಟಾಟಿಕೆಯ ಅಳು. Talk full of s. ಸ್ವಾರಸ್ಯವಾದ ಮಾತು. Attic s. (Attic[1] ನೋಡಿ)]. (ಪ್ರಾಚೀನ ರ. ವಿ.) ಘನರೂಪದ, ಕರಗುವ, ಬೆಂಕಿ ಹೊತ್ತದ, ರುಚಿಕರವಾದ ವಸ್ತು: ಲವಣ [(ಕೆಲವು ಸಂಯುಕ್ತ ಪದಗಳಲ್ಲಿ ವಿನಾ ಅರೂಢಿ); S. of lemon (Lemon ನೋಡಿ). Epsom s. (Epsom ನೋಡಿ). Glauber's s. (ಆ ಪದವನ್ನು ನೋಡಿ). Smelling s. (Smell ನೋಡಿ)]. (ರ. ವಿ.) ಕ್ಷಾರ ಮತ್ತು ಅಮ್ಲ ಘಟಕಗಳು ಸೇರಿ ಆದ ಸಂಯುಕ್ತ; ತನ್ನ ಎಲ್ಲ ಅಥವಾ ಕೆಲವು ಜಲಜನಕ ಅಂಶಕ್ಕೆ ಬದಲು ಲೋಹ ಮೂಲ ಧಾತುವುಳ್ಳ ಅಮ್ಲ: ಲವಣ. ಬಡಿಸಿಕೊಳ್ಳುವುದಕ್ಕೆ ಉಪ್ಪು ಹಾಕಿಟ್ಟಿರುವ ಸೀಸೆ: ಉಪ್ಪಿನ ಸೀಸೆ, ಡಬ್ಬಿ (=S.-cellar) [(ಚರಿತ್ರೆ) Above the s. ಮನೆಯವರ, ದೊಡ್ಡ ಮನುಷ್ಯರ, —ಪಂಕ್ತಿಯಲ್ಲಿ; ಮೇಲು ಪಂಕ್ತಿಯಲ್ಲಿ, Below the s. ಆಳುಗಳ ಅಥವಾ ಆಶ್ರಿತರ ಪಂಕ್ತಿಯಲ್ಲಿ; ಕೆಳ ಪಂಕ್ತಿಯಲ್ಲಿ (ಹಿಂದಿನ ಕಾಲದಲ್ಲಿ ಹೀಗೆ ವಿಂಗಡಿಸಲು ಮಧ್ಯೆ ಇಡುತ್ತಿದ್ದ ದೊಡ್ಡ ಉಪ್ಪಿನ ಡಬ್ಬಿಯ ಕಾರಣದಿಂದ)]. (ಹುಲ್ಲುಗಾವಲಾಗಿಯೂ ಉಪ್ಪುಮಾಡಲು ನೀರು ಬಟ್ಟುಕೊಳ್ಳುವುದಕ್ಕೂ ಉಪಯೋಗಿಸುವ) ಸಮುದ್ರ ನೀರು ನುಗ್ಗಲಿನ ಜೌಗು ಪ್ರದೇಶ: ಉಪ್ಪು ಜೌಗು (=S.-marsh). (ಬ. ವ.) ನದಿಗೆ ಸಮುದ್ರದ ನೀರು ವಿಪರೀತವಾಗಿ ನುಗ್ಗಿ ಬರುವುದು: ಉಪ್ಪಿನ, ಸಮುದ್ರದ, —ನುಗ್ಗು, ಪ್ರವಾಹ. ನುರಿತ, ಪಳಗಿದ, —ನಾವಿಕ (ಮು., Old s.). [**S.-cat** ಪಾರಿವಾಳಗಳು ಹೊರಕ್ಕೆ ಹಾರಿ ಹೋಗದೆ ಮನೆಯಲ್ಲೇ ಇರುವಂತೆ ಅವನ್ನು ಆಕರ್ಷಿಸಿಟ್ಟಿರಲು ಅವಕ್ಕೆ ಕೊಡುವ ಉಪ್ಪು, ಗರಸು, ಸುಣ್ಣ, ಮೂತ್ರ, ಮೊ. ಗಳನ್ನು ಬೆರಸಿದ ಉಂಡೆ; ಉಪ್ಪಿನ ಉಂಡೆ. **S.-cellar** ಉಪ್ಪಿನ ಸೀಸೆ, —ಡಬ್ಬಿ (ಮೇಲೆ ನೋಡಿ). **S.-glaze** ಕುಲುಮೆಯಲ್ಲಿ ಪಿಂಗಾಣಿ ಸಾಮಾನುಗಳು ಕಾಯುತ್ತಿರುವಾಗಲೆ ಉಪ್ಪು ಎರಚಿ ಅವಕ್ಕೆ ಕೊಡುವ ಒಂದು ಬಗೆಯ ಮೆರುಗು: ಉಪ್ಪು ಮೆರುಗು. **S.-lick** ಉಪ್ಪು ಊರಿದ ನೆಲವನ್ನು ನೆಕ್ಕಲು ಪ್ರಾಣಿಗಳು ಗುಂಪು ಕೂಡುವ ಸ್ಥಳ: ಉಪ್ಪು ನೆಕ್ಕಲು. **S.-marsh** ಉಪ್ಪು ಜೌಗು (ಮೇಲೆ ನೋಡಿ). **S.-mine** ಕಲ್ಲುಪ್ಪು ಗಣಿ. **S.-pan** ಉಪ್ಪಿನ —ಮಡಿ, ಕೊಪ್ಪರಿಗೆ, ತೊಟ್ಟಿ. **S.-pit** ಉಪ್ಪು (ದೊರೆಯುವ) ಗುಂಡಿ. **S.-pond** ಸಮುದ್ರದ ನೀರನ್ನು ಇಂಗಿಸುವ ಸ್ವಾಭಾವಿಕ ಅಥವಾ ಕೃತಕ ಸ್ಥಳ: ಉಪ್ಪಿನ ಕೊಳ. **S.-spoon** ಉಪ್ಪು (ಬಡಿಸುವ) ಚಮಚ (ಮೋಟು ಹಿಡಿಯುಳ್ಳ ಗುಂಡು ಬಟ್ಟಲನದು). **S.-well** ಉಪ್ಪಿನ ನೀರಿನ ಬಾವಿ. **S.-works** ಉಪ್ಪಿನ ಕಾರಖಾನೆ. **Saltwort** ಹಲವು ಬಗೆಯ ಕಡಲ ಮತ್ತು ಉಪ್ಪು ಜೌಗಿನ ಸಸ್ಯ]. (ಗು.) ಉಪ್ಪು —ಹಾಕಿದ, ಊರಿದ; ಉಪ್ಪಿನಲ್ಲಿ—ಊರಿಟ್ಟ, ಊರಹಾಕಿದ; ಚೌಳಿನ (ಸೌಳಿನ), ಚೌಳಾದ, ಉಪ್ಪುಳ್ಳ, ಉಪ್ಪಿನ ರುಚಿಯುಳ್ಳ. (ಸಸ್ಯಗಳ ವಿಷಯದಲ್ಲಿ) ಸಮುದ್ರದಲ್ಲಿ, ಉಪ್ಪಿನ ಜೌಗಿನಲ್ಲಿ, —ಬೆಳೆಯುವ. (ಕಣ್ಣೀರು, ದುಃಖ, ಮೊ. ಗಳ ವಿಷಯದಲ್ಲಿ) ಸಂಕಟದ, ತೀಕ್ಷ್ಣವಾದ; (ಹಾಸ್ಯ, ಜಾಣ್ಣುಡಿ, ಮೊ. ವು) ಕಟುವಾದ, ಕಾರವಾದ, ಚುಚ್ಚುವ; (ಕಥೆ, ಕುಚೋದ್ಯ, ಮೊ. ಗಳ ವಿಷಯದಲ್ಲಿ) ಅಶ್ಲೀಲವಾದ; ಮಸಾಲೆ ಕಟ್ಟಿದ; (ಬೆಲೆ, ಮೊ. ಗಳ ವಿಷಯದಲ್ಲಿ; ಅಸಂ.) ದುಬಾರಿಯಾದ. [**S. horse** (ನಾವಿಕ ಅಸಂ.) ಉಪ್ಪು ಹಾಕಿದ ಗೋಮಾಂಸ. **S. junk** ಉಪ್ಪಿಟ್ಟ ಮಾಂಸ. **S. water** ಸಮುದ್ರ ನೀರು, ಉಪ್ಪಿನ ನೀರು; ಕಣ್ಣೀರು. **S.-water** (ಗು.) ಸಮುದ್ರದ, ಸಮುದ್ರವಾಸಿಯಾದ]. (ಕ್ರಿ.) ಉಪ್ಪಿನಲ್ಲಿ, ಉಪ್ಪಿನ ನೀರಿನಲ್ಲಿ, —ಊರಹಾಕು, ಊರಿಡು. [S. down money *or* stock (ಅಸಂ.) ಹಣವನ್ನು ಅಥವಾ ಬಂಡವಾಳ ಪತ್ರವನ್ನು ಕೂಡಿಡು]. ಉಪ್ಪು ಉದುರಿಸು, ಎರಚು (ಮು., ಬೀದಿಯಲ್ಲಿಯ ಹಿಮವನ್ನು ಕರಗಿಸುವುದಕ್ಕಾಗಿ); ಉಪ್ಪಿನ ರುಚಿ ಕೊಡು, ಉಪ್ಪು ಹಾಕಿ ಮಾಡು; (ರೂಪ.) ಕಟು, ತೀಕ್ಷ್ಣ, ಸ್ವಾರಸ್ಯಯುಕ್ತ, —ಮಾಡು. (ಭೂ. ಕೃ. ನಲ್ಲಿ; ಕುದುರೆಯ ಅಥವಾ ಮನುಷ್ಯನ ವಿಷಯವಾಗಿ: ವಾಯುಗುಣದಿಂದ ಅಥವಾ ಇತರ ಪರಿಸ್ಥಿತಿಗಳಿಂದ ಬರುವ ರೋಗ ರುಜಿನಾದಿಗಳು ತಟ್ಟದಂತೆ) ಪಳಗಿಹೋದ, ಅಭ್ಯಾಸವಾದ (ರೂಪ. ಸಹ). (ಮು., ಛಾಯಾಚಿತ್ರದಲ್ಲಿ: ಕಾಗದವನ್ನು) ಲವಣದ್ರಾವಣದಲ್ಲಿ ಸಂಸ್ಕರಿಸು. [(ವ್ಯಾಪಾರ ಅಸಂ.) S. an account ವಿಪರೀತ ಬೆಲೆ ಹಾಕು. S. the books ಸುಳ್ಳು ಲೆಕ್ಕಗಳಿಂದ ಆಯವನ್ನು ಹೆಚ್ಚಾಗಿ ತೋರಿಸು (ಅಂಗಡಿಯನ್ನು ಕೊಂಡುಕೊಳ್ಳುವವನಿಗೆ ಆಸೆ ತೋರಿಸುವುದಕ್ಕಾಗಿ). (ಗಣಿ ಕೆಲಸದ ಅಸಂ.) S. a mine (ಗಣಿ ಬಹಳ ಸಂಪದ್ಯುಕ್ತವೆಂದು ತೋರಿಸಲು) ಹೊರಗಿನಿಂದ ಅದಿರು, ಮೊ. ನ್ನು ತಂದಿಡು]. **Sálter** (ನಾ.) ಉಪ್ಪು—ತಯಾರುಮಾಡುವವನು, ಮಾರುವವನು; ಉಪ್ಪುಗಾರ, ಉಪ್ಪಾರ. =Dry-s. (Dry ನೋಡಿ). ಉಪ್ಪಿನ ಕಾರಖಾನೆಯಲ್ಲಿ ಕೆಲಸ ಮಾಡುವವನು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಪ್ಪಿನ ಕೆಲಸಗಾರ. ಮಾನು, ಮೊ. ಕ್ಕೆ ಉಪ್ಪಿಡುವವನು. **Sáltern** (ನಾ.) ಉಪ್ಪಿನ ಕಾರಖಾನೆ, ಉಪ್ಪಿನ ಮಡಿ. **Sálting** (ನಾ.) (ಕ್ರಿಯಾರ್ಥಗಳಲ್ಲಿ) ; (ಬ. ವ. ದಲ್ಲಿ) ಉಪ್ಪುನೆಲ, ಚೌಳುನೆಲ. **Sáltless** (ಗು.) ; **Sálty** (ಗು.) ; **Sáltiness** (ನಾ.) ; **Sáltish** (ಗು.) ಉಪ್ಪುಪ್ಪಾದ. **Sáltly** (ಕ್ರಿ. ವಿ.) ; **Sáltness** (ನಾ.)

Saltátion ಸ್ಯಾಲ್ಟೇಷನ್ (ನಾ.) ನೆಗೆಯುವುದು ; ಥಟ್ಟನೆಯ—ಜಿಗಿತ, ಹಾರಿಕೆ ; (ಜೀ. ವಿ., ಸ. ವಿ.) (ಜೀವರೂಪ ವಿಕಾಸದಲ್ಲ ಜಾತಿಲಕ್ಷಣದ) ಥಟ್ಟನೆಯ —ಬದಲಾವಣೆ, ಬೆಳವಣಿಗೆ. **Sáltatory** ಸ್ಯಾಲ್ಟಟರಿ (ಗು.) ; **Saltatórial** —ಟೋರಿಯಲ್ (ಗು.)

Sálter, Sáltern. **Salt** ನೋಡಿ.

Sáltigrade ಸ್ಯಾಲ್ಟಿಗ್ರೇಡ್ (ಗು., ನಾ.) ಹಾರುಗಾಲಿನ (ಜೇಡ)

Sáltimbánco (It.) ಸ್ಯಾಲ್ಟಿಂಬ್ಯಾಂಕೊ (ನಾ.) ಅಳಲೆಕಾಯಿ ಪಂಡಿತ, ಅಡ್ಡಕಸಬಿ ವೈದ್ಯ, ಪಂಡಿತವೇಷಿ.

Sáltire ಸ್ಯಾಲ್ಟೈ(ಅ)ರ್ (ನಾ.) (ವಂಶಲಾಂಛನ ವಿದ್ಯೆ) ಕತ್ತರಿ ಗುರುತು (In s., per s. ಕತ್ತರಿ ಗುರುತಾಗಿ). **Sáltirewise** (ಕ್ರಿ. ವಿ.)

Saltpétre ಸಾಲ್ಟ್‌ಪೀಟರ್ (ನಾ.) ಪೆಟ್ಲುಪ್ಪು ; ಸೋರುಪ್ಪು ; ಕಡ್ಡಿಯುಪ್ಪು ; ಯವಕ್ಷಾರ ; ಪೊಟ್ಯಾಸಿಯಂ ನೈಟ್ರೇಟ್ ಲವಣ (Chile *or* cubic s. ಸೋಡಿಯಂ ನೈಟ್ರೇಟು). S.-paper = Touch-paper (Touch ನೋಡಿ). S. rot ಹೊಸ ಅಥವಾ ತೇವದ ಗೋಡೆಯ ಮೇಲೆ ಉಪ್ಪುಗಟ್ಟುವುದು.

Sáltus ಸ್ಯಾಲ್ಟಸ್ (ಏ. ವ.), ಸಾಲ್ಟ್ಯೂಸ್ (ಬ. ವ.) (ನಾ.) (ಮು., ವಾದ ಸರಣಿಯಲ್ಲಿ) ಥಟ್ಟನೆ ಬದಲಾಗುವುದು, ಹಾರುವುದು ; ಸರಣಿ —ವಿಚ್ಛಿತ್ತಿ, ಭಂಗ.

Salúbrious ಸಲೂ(ಲ್ಯೂ)ಬ್ರಿಯಸ್ (ಗು.) (ಮು., ಹವ, ಗಾಳಿ, ಮೊ. ಗಳ ವಿಷಯವಾಗಿ ; ವಿರಳವಾಗಿ ಆಹಾರ, ವ್ಯಾಯಾಮ, ಮೊ. ಗಳ ವಿಷಯವಾಗಿ) ಆರೋಗ್ಯಕರ, ಹಿತಕರ. **Salúbriously** (ಕ್ರಿ. ವಿ.) ; **Salúbrity** (ನಾ.)

Salúki ಸಲೂಕಿ(ಗಿ) (ನಾ.) ಅರೇಬಿಯದ ಒಂದು ಬಗೆಯ ಬೇಟೆಯ ನಾಯಿ (ಜಿಂಕೆ ಬೇಟೆಯದು)

Sálutary ಸ್ಯಾಲ್ಯುಟರಿ (ಗು.) ಸತ್ಪರಿಣಾಮಕಾರಿಯಾದ ; ಹಿತಕರ ; ಪರಿಷ್ಕಾರದ ; ಆತ್ಮಶೋಧನಕಾರಕ ; ಬುದ್ಧಿಯನ್ನು ಹದಗೊಳಿಸುವ. (ವಿರ. ಪ್ರ.) ಆರೋಗ್ಯಕರ. **Salutíferous** ಸ್ಯಾಲ್ಯುಟಿಫೆರಸ್ (ಗು.) (ವಿರ. ಪ್ರ.) ಆರೋಗ್ಯದಾಯಕ, ಹಿತಕಾರಕ.

Salúte ಸಲೂ(ಲ್ಯೂ)ಟ್ (ಕ್ರಿ., ನಾ.) (ಮಾತಿನಿಂದ ಅಥವಾ ಅಭಿನಯದಿಂದ) ವಂದನೆ, ನಮಸ್ಕಾರ, ಪ್ರಣಾಮ, —ಮಾಡು. (ವಿರ. ಪ್ರ.) (ದೊರೆ, ಮೊ. ರಿಗೆ) ಸ್ವಾಗತಿಸು, ಜಯಕಾರ ಮಾಡು. (ಪ್ರಾಚೀ. ಪ್ರ.) (ಮು., ಎದುರುಗೊಳ್ಳುವಾಗ ಅಥವಾ ಬೀಳ್ಕೊಳ್ಳುವಾಗ, ವ್ಯಕ್ತಿ, ಕೆನ್ನೆ, ಕೈ, ಮೊ. ಗಳನ್ನು) ಮುತ್ತಿಡು. (ಆಣೆ, ಮುಗುಳುನಗೆ, ತೋಫು, ಮೊ. ಗಳಿಂದ) ಎದುರುಗೊಳ್ಳು, ಸ್ವಾಗತಿಸು ; ಆಮಂತ್ರಿಸು (*With* ಉಪ. ಮೊದನೆ). (ಕಣ್ಣು, ಕಿವಿ, ವ್ಯಕ್ತಿ, ಮೊ. ಕ್ಕೆ) ಗೋಚರವಾಗು, (—ವೊ. ನ್ನು) ಎದುರುಗೊಳ್ಳು. (ನಾ.) (ಗೌರವ, ಸ್ವಾಮಿನಿಷ್ಠೆ, ಮೊ. ನ್ನು ತೋರಿಸುವುದಕ್ಕಾಗಿ : ಅಭಿನಯದ ಮೂಲಕ) ಅಭಿವಂದನೆ, ಪ್ರಣಾಮ. (ಸೈನಿಕ, ನಾವೆ) ಗೌರವಾರ್ಥವಾಗಿ ದೇಹವನ್ನಾಗಲಿ ಶಸ್ತ್ರವನ್ನಾಗಲಿ ಒಂದು ಗೊತ್ತಾದ ರೀತಿಯಲ್ಲಿ ಚಲಿಸುವುದು ಅಥವಾ ವಿನ್ಯಾಸಮಾಡುವುದು, ಬಾವುಟವನ್ನು ಹಾರಿಸುವುದು, ತೋಫು ಹೊಡೆಯುವುದು (ಅಭಿವಂದನೆಯ ವಿವಿಧ ರೂಪಗಳು) [A s. of 7 guns ಏಳು ಕುಶಾಲು ತೋಪುಗಳ ಅಭಿವಂದನೆ. The s. (ಸಿಪಾಯಿ, ಮೊ. ರ) ಅಭಿವಂದನೆ (ಮಾಡುವಾಗಿನ ವಿನ್ಯಾಸ). Take the s. (ಮು., ಶ್ರೇಷ್ಠಾಧಿಕಾರಿಯ ವಿಷಯದಲ್ಲಿ) ಅಭಿವಂದನೆಯನ್ನು ಸ್ವೀಕರಿಸು]. (ಕತ್ತಿ ವರಿಸೆ) ಪ್ರಾರಂಭದಲ್ಲಿ ಎದುರಾಳಿಯನ್ನು ಸ್ವಾಗತಿಸಿ ಮಾಡುವ ಕೆಲವು ಔಪಚಾರಿಕ ವರಿಸೆ : ಅಭಿವಂದನ ವರಿಸೆ. (ಸ್ವಾಗತಾರ್ಥವಾಗಿ, ವಂದನಾರ್ಥವಾಗಿ, ಕೊಟ್ಟ) ಮುತ್ತು, ಚುಂಬನ (ಪ್ರಾಚೀ. ಪ್ರ. ಅಥವಾ ಹಾಸ್ಯ ಪ್ರ. ; ಅನೇಕ ವೇಳೆ, A chaste s.). **Salutátion** ಸ್ಯಾಲ್ಯುಟೇಷನ್ (ನಾ.) ವಂದನೆ, ನಮಸ್ಕಾರ, ಕುಶಲಪ್ರಶ್ನೆ (—ಮಾಡುವುದು); (ಅಭಿನಯದಿಂದ) ಅಭಿವಂದನೆ (ಈಗ ಸಾ., Salute); [The Angelic S. = The Ave Maria (Ave ನೋಡಿ)]. **Salutátional** (ಗು.) ; **Salútatory** ಸಲ್ಯೂ(ಲೂ)ಟಟರಿ (ಗು.)

Salutíferous. **Sálutary** ನೋಡಿ.

Sálvage ಸ್ಯಾಲ್‌ವೆ(ವಿ)ಜ್ (ನಾ., ಕ್ರಿ. ಸಕ.) ಹಡಗನ್ನು ಅಥವಾ ಹಡಗಿನ ಸರಕನ್ನು ನಾಶವಾಗದಂತೆ ಅಥವಾ ಶತ್ರುವಿಗೆ ಸೆರೆಯಾಗದಂತೆ ರಕ್ಷಿಸುವುದು ; ಇದಕ್ಕಾಗಿ ಕೊಡುವ ಪ್ರತಿಫಲ ; (ಮುಳುಗಿಹೋಗಿರುವ ಹಡಗನ್ನು, ಸರಕನ್ನು) ಜಲಸಮಾಧಿಯಿಂದ ಎತ್ತಿ ರಕ್ಷಿಸುವುದು ; ನೌಕೋದ್ಧಾರ ; ನೌಕಾ ಸಂರಕ್ಷಣೆ(ಗಾಗಿ ಕೊಡುವ ಪ್ರತಿಫಲ) [(ವಿಶೇಷಣವಾಗಿಯೂ ಪ್ರ.): S. money ನೌಕಾ ಸಂರಕ್ಷಣೆಯ ಹಣ]. (ಬೆಂಕಿ, ಮೊ. ಗಳಿಂದ) ಆಸ್ತಿಯನ್ನು ರಕ್ಷಿಸುವುದು ; ಹೀಗೆ ರಕ್ಷಿಸಿದ ಆಸ್ತಿ. (ಕ್ರಿ.) (ನೀರು, ಬೆಂಕಿ, ಮೊ. ಗಳ ಪಾಲಾಗದಂತೆ) ಕಾಪಾಡು, ರಕ್ಷಿಸು.

Sálvarsan ಸ್ಯಾಲ್‌ವರ್‌ಸ್ಯನ್ (ನಾ.) (ಮು.) ಪರಂಗಿ (ಉಪದಂಶ) ರೋಗದಲ್ಲಿ ಉಪಯೋಗಿಸುವ ಔಷಧ (ವ್ಯಾಪಾರ ಸ್ವಾಮ್ಯದ ಹೆಸರು) : 'ಸಾಲ್‌ವರ್‌ಸನ್'.

Salvátion ಸ್ಯಾಲ್ವೇಷನ್ (ನಾ.) ಆತ್ಮದ ಸಂರಕ್ಷಣೆ, ಆತ್ಮೋದ್ಧಾರ ; (ಪಾಪಗಳಿಂದ) ಬಿಡುಗಡೆ, ವಿಮೋಚನೆ ; ಮೋಕ್ಷ, ಮುಕ್ತಿ [Find s. ಕ್ರೈಸ್ತ ಧರ್ಮ ಸ್ವೀಕರಿಸು. (ಹಾಸ್ಯ ಪ್ರ.) ನೀತಿ ತತ್ತ್ವ, ಮೊ. ಗಳಿಂದ ನುಣುಚಿಕೊಳ್ಳುವುದಕ್ಕೆ ಅನುಕೂಲ ಸೂತ್ರ ಕಂಡುಹಿಡಿ]. (ನಷ್ಟ, ವಿಪತ್ತು, ಮೊ. ಗಳಿಂದ) ಸಂರಕ್ಷಣೆ, ಸಂರಕ್ಷಕ (Be the s. of). S. Army ಜನಸಮುದಾಯದಲ್ಲಿ ಧರ್ಮೋಜ್ಜೀವನಗೊಳಿಸುವುದಕ್ಕಾಗಿ ಸೈನಿಕಮಾದರಿಯ ಮೇಲೆ ಏರ್ಪಟ್ಟ ಒಂದು ಸಂಸ್ಥೆ : ಧರ್ಮೋದ್ಧಾರ ಸೈನ್ಯ, ಮೋಕ್ಷ ಸೈನ್ಯ. **Salvátionism** (ನಾ.) ಮೋಕ್ಷ ತತ್ತ್ವ, ಮುಕ್ತಿಬೋಧನೆ ; ಮೋಕ್ಷ ಸೈನ್ಯ ತತ್ತ್ವ ಪದ್ಧತಿ. **Salvátionist** (ನಾ.) ಮೋಕ್ಷ ಸೈನ್ಯದವನು.

Salve ಸಾವ್ (ನಾ., ಕ್ರಿ. ಸಕ.) (ಹುಣ್ಣು, ಗಾಯ, ಮೊ. ನ್ನು ಗುಣಪಡಿಸುವ) ಮುಲಾಮು, ಅಂಜನ, ಲೇಪ [ಈಗ ಮು., ಕಾವ್ಯ ; ಮತ್ತು Lip-s. ಎಂಬಲ್ಲಿ (Lip ನೋಡಿ)]. (ಕುರಿಗಳಿಗೆ ಬಳಿಯುವುದಕ್ಕಾಗಿ ಮಾಡಿದ) ಟಾರೆಣ್ಣೆ ಮತ್ತು ಚರಬಿಯ ಮಿಶ್ರಣ. [ನೊಂದ ಮನಸ್ಸು, ಅಳುಕು, ಮೊ. ನ್ನು, (ಪ್ರಾಚೀ. ಪ್ರ.) ಅಸಂಬದ್ಧತೆ, ತಪ್ಪು—ಇವನ್ನು] ಶಮನಮಾಡುವಂಥದು ; (ಉಪ)ಶಾಮಕ, ಉಪಶಮನಕಾರಿ (*For* ಉಪ. ಮೊದನೆ). (ಕ್ರಿ.) (ಗಾಯ, ಮೊ. ಕ್ಕೆ) ಮುಲಾಮು ಹಚ್ಚು (ರೂಪಕಾರ್ಥದಲ್ಲಿ ಹೊರತು ಪ್ರಾಚೀ. ಪ್ರ.) ; (ಕುರಿಗಳಿಗೆ) ಟಾರೆಣ್ಣೆ ಮತ್ತು ಚರಬಿಗಳ ಮಿಶ್ರಣವನ್ನು—ಬಳಿ, ಹಚ್ಚು. (ಕುಂದು, ಕಳಂಕ, ಅಪಮಾನ, ಮೊ. ನ್ನು) ಸವರಿಸು, ಪರಿಹರಿಸು (ಪ್ರಾಚೀ. ಪ್ರ.). (ಗರ್ವ, ಆತ್ಮಪ್ರೀತಿ, ಮನಸ್ಸಾಕ್ಷಿ, ಮೊ. ನ್ನು) ಸಮಾಧಾನಪಡಿಸು, ಸಂತವಿಡು ; (ಕೆರಳನ್ನು) ಉಪಶಮನಮಾಡು ; (ಕಷ್ಟ, ಸಂದೇಹ, ಮೊ. ನ್ನು) ಬಿಡಿಸು, ಕಳೆ ; ನಿವಾರಣೆಮಾಡು ; ಮಾನ ಹಾನಿಯಾಗದಂತೆ ಸಮಾಧಾನ ಕೊಡು ; (ಅಸಂಗತಿಯನ್ನು) ಸರಿಹೊಂದಿಸು ; (ಮನಸ್ಸನ್ನು) ನೆಮ್ಮದಿಗೊಳಿಸು. (ಹಡಗನ್ನು ಅಥವಾ ಹಡಗಿನ ಸರಕನ್ನು ನೀರು ಪಾಲಾಗದಂತೆ, ವಸ್ತುವನ್ನು ಬೆಂಕಿಯ ಪಾಲಾಗದಂತೆ) ಕಾಪಾಡು, ರಕ್ಷಿಸು. **Sálvable** ಸ್ಯಾಲ್ವಬ್‌ಲ್ (ಗು.) (ದೇವ. ಶಾ.) ಮೋಕ್ಷಸಾಧ್ಯ. (ಹಡಗು, ಸರಕು) ರಕ್ಷಿಸಬಹುದಾದ, ಉಳಿಸಬಹುದಾದ. **Sálvor** ಸ್ಯಾಲ್ವರ್ (ನಾ.) ರಕ್ಷಕ —ಹಡಗು, ಮನುಷ್ಯ.

Sálver ಸ್ಯಾಲ್ವರ್ (ನಾ.) (ಸೇವಕರು ತಮ್ಮ ಯಜಮಾನರಿಗೆ ತಿಂಡಿ, ಕಾಗದ, ಭೇಟಿ ಚೀಟಿ, ಮೊ. ಗಳನ್ನು ತಂದುಕೊಡುವುದಕ್ಕೆ ಉಪಯೋಗಿಸುವ, ಚಿನ್ನ, ಬೆಳ್ಳಿ, ಹಿತ್ತಾಳೆ, ಮೊ. ರ) ಕೈ ತಟ್ಟೆ.

Sálvo[1] ಸ್ಯಾಲ್ವೊ (ನಾ. ; ಬ. ವ. -oes) ಉಳಿಕೆ ಮಾತು ; ವಿನಾಯಿತಿ —ವಾಕ್ಯ, ಷರತ್ತು (*Of* ಉಪ. ಮೊದನೆ. With an express s.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

of their rights ತಮ್ಮ ಹಕ್ಕುಬಾಧ್ಯತೆಗಳ ಬಗ್ಗೆ ಸ್ಪಷ್ಟ ವಿನಾಯಿತಿ ಷರತ್ತು ಹಾಕಿಕೊಂಡು). (ವಂಚನೆಯ ಉದ್ದೇಶದಿಂದ) ಮನಸ್ಸಿನಲ್ಲಿಟ್ಟು ಕೊಂಡಿರುವ —ಪರಿಮಿತಿ, ಷರತ್ತು; ಜಾರಿಕೊಳ್ಳುವ ಉಪಾಯ, ಕುಂಟುನೆಪ. ಮಾನ ಕಾಪಾಡಿಕೊಳ್ಳುವ, ಕೀರ್ತಿಯನ್ನುಳಿಸಿಕೊಳ್ಳುವ, —ಮಾರ್ಗ. ಮನಸ್ಸಾಕ್ಷಿಯನ್ನು ಸಮಾಧಾನಪಡಿಸುವ, ಅಭಿಮಾನ ಭಂಗಕ್ಕೆ ಉಪಶಮನಮಾಡುವ, —ಉಪಾಯ; ಶಾಮಕೋಪಾಯ, ಸಮಾಧಾನ ಮಾರ್ಗ.

Sálvo² ಸ್ಯಾಲ್ವೋ (ನಾ.; ಬ. ವ. -oes) (ಅಭಿವಂದನಾರ್ಥವಾಗಿ ಅಥವಾ ಕಡಲ ಕಾಳಗದಲ್ಲಿ) ಒಟ್ಟಿಗೆ ಫಿರಂಗಿ (ಗುಂಡು)ಹಾರಿಸುವುದು; ಸುರುಟು. ಮಂದಿ ಒಟ್ಟಿಗೆ ಗಟ್ಟಿಯಾಗಿ ಸೂಚಿಸುವ ಮೆಚ್ಚಿಕೆ; ಶ್ಲಾಘನೆಯ ವರಿಸೆ; ಜಯಘೋಷದ ವರಿಸೆ (Salvoes of applause)

Sal volátile ಸ್ಯಾಲ್ ವೊಲ್ಯಾಟಿಲೀ(ಲೆ) (ನಾ.) ಅಮೋನಿಯಂ ಕಾರ್ಬೊನೇಟು. (ಜ್ಞಾನ ತಪ್ಪಿರುವಾಗ ಚಿಕಿತ್ಸೆಗಾಗಿ ಉಪಯೋಗಿಸುವ) ಅಮೋನಿಯಂ ಕಾರ್ಬೊನೇಟಿನ ಸುವಾಸಿತ ದ್ರಾವಣ.

Sálvor. Salve ನೋಡಿ.

Sam ಸ್ಯಾಮ್ (ನಾ.) (ಅಸಂ.) Stand S. (ಮು., ಕುಡಿತದ) ವೆಚ್ಚ ವಹಿಸು. Upon my S. (ಆಣೆಯಿಡುವಲ್ಲಿ ಪ್ರ.)

Samáritan ಸಮ್ಯಾರಿಟನ್ (ನಾ., ಗು.) (ಪ್ಯಾಲಸ್ಟೈನಿನ) ಸಮೇರಿಯ ಪ್ರಾಂತದವನು;—ಭಾಷೆ (Good S. ನಿಜವಾದ ಉಪಕಾರಿ, ದಯಾಳು). ಸಮ್ಯಾರಿಟನ್ ಮತ ಪದ್ಧತಿಯವನು. (ಗು.) ಸಮೇರಿಯ ಪ್ರಾಂತದ, ಸಮ್ಯಾರಿಟನ್ನರ (The S. pentateuch ಸಮ್ಯಾರಿಟನ್ನರಲ್ಲಿ ಬಳಕೆಯಲ್ಲಿರುವ, ಸಮೇರಿಯ ಲಿಪಿಯಲ್ಲಿ ಅಥವಾ ಪ್ರಾಚೀನ ಹೀಬ್ರೂ ಲಿಪಿಯಲ್ಲಿ ಮೂಲ ಹಸ್ತಪ್ರತಿ ಇರುವ, ಬೈಬಲ್ಲಿನ ಹಳೆಯ ಒಡಂಬಡಿಕೆಯ ಮೊದಲ ಪಂಚಕದ ಪಾಠಾಂತರ: ಸಮೇರಿಯಾ ಪಾಠ ಪಂಚಕ). **Samáritanism** (ನಾ.)

Sámbo ಸ್ಯಾಂಬೊ (ನಾ., ಬ. ವ. -os, -oes) (ಮು., ನೀಗ್ರೊ ಮತ್ತು ಇಂಡಿಯನ್ ಅಥವಾ ನೀಗ್ರೊ ಮತ್ತು ಯೂರೋಪಿಯನ್) ಮಿಶ್ರಜಾತಿಯವನು, ಬೆರಕೆಜಾತಿಯವನು, ಅಡನಾಡಿ; ನೀಗ್ರೊ(ವಿಗೆ ಅಡ್ಡ ಹೆಸರು)

Sam Browne ಸ್ಯಾಮ್ ಬ್ರೌನ್ (ನಾ.) ಬ್ರಿಟಿಷ್ ಸೈನಿಕಾಧಿಕಾರಿಗಳ ತೊಗಲಿನ ನಡುಪಟ್ಟಿ ಮತ್ತು ಭುಜಪಟ್ಟಿಗಳು (Sir S. J. Browne ಎಂಬ ಕಲ್ಪಕನ ಹೆಸರಿನಿಂದ)

Sámbur ಸ್ಯಾಂಬರ್ (ನಾ.) ಇಂಡಿಯದ ಒಂದು ಜಾತಿಯ ಜಿಂಕೆ; ಸಂಬರ; ಕಡವೆ.

Same ಸೇಮ್ (ಗು.) ಒಂದೇ —ರೀತಿಯ, ಬಗೆಯ, ಸಮನಾದ; ವೈವಿಧ್ಯವಿಲ್ಲದ, ವ್ಯತ್ಯಾಸವಿಲ್ಲದ, ಬದಲಾಗದ; ಹಿಂದೆ ಹೇಳಿದ, ಪೂರ್ವೋಕ್ತ; ಅದೇ, ಒಂದೇ [The life is perhaps a little s. ಜೀವನ ಬಹುಶಃ ಒಂದೇ ರೀತಿಯದು; ಜೀವನದಲ್ಲಿ ಅಷ್ಟಾಗಿ ವೈವಿಧ್ಯವಿಲ್ಲ. What is the use of that s. talk? (ತಿರಸ್ಕಾರಪೂರ್ವಕವಾಗಿ)]. (ಗ್ರಾಮ್ಯ ಅಥವಾ ವಾಣಿಜ್ಯ ಪ್ರ.) =The s. (ಸ. ನಾ., ಕ್ರಿ. ವಿ. ಅರ್ಥಗಳಲ್ಲಿ). The s. (ಗು., ಸ. ನಾ., ಕ್ರಿ. ವಿ.) ಅದೇ ಆದ, ಭಿನ್ನವಲ್ಲದ, ತದ್ವತ್ತಾದ, ಏಕ ಪ್ರಕಾರದ [(The very s., Just the s. (ಏ. ವ. ಪ್ರ.) One and the s. It is all the, just the, s. to me ನನಗೆ ಎಲ್ಲಾ ಒಂದೇ, ವ್ಯತ್ಯಾಸವೇನೂ ಇಲ್ಲ. Much the s. ಹೆಚ್ಚು ಕಡಮೆ ಒಂದೇ; ಅಷ್ಟು ವ್ಯತ್ಯಾಸವೇನೂ ಇಲ್ಲ. At the s. time ಆದರೂ (ಹಿಂದೆ ಹೇಳಿದುದಕ್ಕೆ ವಿರುದ್ಧವಾದ, ಆದರೆ ನಿಜವಾದ ಅಥವಾ ಜ್ಞಾಪಕದಲ್ಲಿಡಬೇಕಾದ ವಿಷಯವನ್ನು ಸೇರಿಸುವಾಗ ಪ್ರ.). By the s. token (Token ನೋಡಿ). Sailors received the s. pay as soldiers ಸಿಪಾಯಿಗಳ ಸಂಬಳದಷ್ಟೇ ನಾವಿಕರೂ ಪಡೆದರು. Gave the s. answer as before ಹಿಂದಿನ ಉತ್ತರವನ್ನೇ ಕೊಟ್ಟನು]. (ಸ. ನಾ.) ಅದೇ ಮನುಷ್ಯ, ಅವನೇ (To, from, the s. ಎಂಬಲ್ಲಿ ಹೊರತು ಈಗ ವಿರ. ಪ್ರ.); ಅದೇ (ವಸ್ತು, ವಿಷಯ) (We must all say, do, the s.); ಹಿಂದೆ ಹೇಳಿದ, ಪೂರ್ವೋಕ್ತ, —ಮನುಷ್ಯ, ವಿಷಯ, ವಸ್ತು [(ಪ್ರಾಚೀ. ಪ್ರ., ನ್ಯಾ. ಶಾ., ವಾಣಿಜ್ಯ, ಮತ್ತು ಗ್ರಾಮ್ಯ; ಕೆಲವು ವೇಳೆ ವಾಣಿಜ್ಯದಲ್ಲೂ ಗ್ರಾಮ್ಯ ಪ್ರ. ದಲ್ಲೂ The ಬಿಟ್ಟೂ ಪ್ರ.) He that shall endure unto the end, the s. shall be saved. To repairing sleeve of s. 1/3). (ಕ್ರಿ. ವಿ.) ಅದೇ ರೀತಿಯಲ್ಲಿ, ಹಾಗೆಯೇ, ಅದೇ ಪ್ರಕಾರವಾಗಿ (Think the s. of. Feel the s. to. All the s. ಆದರೂ ಕೂಡ, ಹಾಗಿದ್ದರೂ, ಹೇಗೇ ಇರಲಿ. Just the s. ಹಾಗಾದರೂ). **Sámeness** (ನಾ.) ಒಂದೇ ಸಮನಾಗಿರುವುದು; ಏಕ ರೀತಿ; ವೈವಿಧ್ಯವಿಲ್ಲದಿರುವುದು.

Sámel ಸ್ಯಾಮೆಲ್ (ಗು.) (ಇಟ್ಟಿಗೆ, ಹೆಂಚು, ಮೊ. ಗಳ ವಿಷಯದಲ್ಲಿ) ಅರ್ಧ —ಬೆಂದ, ಸುಟ್ಟ; ಅರೆಗಾವಿನ.

Sámian ಸೇಮಿಯನ್ (ಗು., ನಾ.) ಸೇಮಾಸ್ ದ್ವೀಪದ(ವನು) (S. ware ರೋಮನ್ ಪಾಳು ನೆಲಗಳಲ್ಲಿ ದೊರೆಯುವ ಹಿಂದಿನ ಕಾಲದ ನಯಗೆಲಸದ ಮಡಕೆ ಕುಡಿಕೆ)

Sámite ಸ್ಯಾಮೈಟ್ (ನಾ.) (ಪ್ರಾಚೀ. ಪ್ರ.) (ಮಧ್ಯ ಯುಗದಲ್ಲಿ ಉಡುಪಿಗಾಗಿ ಉಪಯೋಗಿಸುತ್ತಿದ್ದ, ಕೆಲವು ವೇಳೆ ಚಿನ್ನದ ಸರಿಗೆ ಹಾಕಿ ನೆಯ್ದ) ಅಮೂಲ್ಯ ರೇಷ್ಮೆ ಬಟ್ಟೆ.

Sámlet ಸ್ಯಾಂಲೆಟ್ (ನಾ.) ಸಾಮನ್ ಮೀನು ಮರಿ.

Sámnite ಸ್ಯಾಮ್ನೈಟ್ (ನಾ., ಗು.) ಪ್ರಜಾಸತ್ತೆಯ ರೋಮ್ ರಾಜ್ಯಕ್ಕೆ ವಿರುದ್ಧವಾಗಿದ್ದ, ಸ್ಯಾಮ್ನಿಯ ಪ್ರಾಂತವಾಸಿಗಳಾಗಿದ್ದ, ಒಂದು ಪ್ರಾಚೀನ ಇಟಲಿಯ ಜನವರ್ಗದವನು. (ಗು.) ಸ್ಯಾಮ್ನೈಟ್ ಜನರ.

Samóan ಸಮೋಅನ್ (ಗು., ನಾ.) ಸಮೋವ ದ್ವೀಪದ(ವನು, ಭಾಷೆ)

Sámpan ಸ್ಯಾಂಪ್ಯಾನ್ (ನಾ.) ಚೀಣೀಯ ಮಾದರಿಯ ಸಣ್ಣ ದೋಣಿ.

Sámple ಸಾಂಪ್ಲ್ (ನಾ., ಕ್ರಿ. ಸಕ.) ಮೊತ್ತದ ಅಥವಾ ರಾಶಿಯ ಗುಣಗಳನ್ನು ನಿದರ್ಶಿಸುವ ಅದರ ಸಣ್ಣ ಭಾಗ: ಮಾದರಿ, ನಮೂನೆ, ರುಖಮು, ಮೋಸ್ತ್ರ [ಮು., ವ್ಯಾಪಾರಗಾರನು ತನ್ನ ಸರಕಿನ ಪರೀಕ್ಷಾರ್ಥವಾಗಿ ಕೊಡುವಂಥದು. S.-card ನಮೂನೆಯನ್ನು(ಗಳನ್ನು) ಹಚ್ಚಿಟ್ಟಿರುವ ಚೀಟಿ: ಮಾದರಿ ಚೀಟಿ] [(ರೂಪ. ಸಹ) If that is a fair s. of his proceedings]. (ಕ್ರಿ.) ನಮೂನೆ, ಮಾದರಿ, —ಕೊಡು, ನೋಡು; ಗುಣ ಪರೀಕ್ಷೆಮಾಡು, ರುಚಿ ನೋಡು. **Sámpler** (ನಾ.) ಮಾದರಿ ಪರೀಕ್ಷಕ. (ಹುಡುಗಿ ತನ್ನ ಹಸ್ತಕೌಶಲ ನಿದರ್ಶನಾರ್ಥವಾಗಿ ಹಾಕಿದ) ಮಾದರಿಯ ಕಸೂತಿ ಕೆಲಸ. ಉಳಿದೆಲ್ಲ ಮರಗಳನ್ನು ಕಡಿದುರುಳಿಸಿದಮೇಲೆ (ಮಾದರಿಗೆ) ಉಳಿಸಿರುವ ಒಂಟಿ ಎಳೆಯ ಮರ.

Sámson ಸ್ಯಾಂಸನ್, **Sámpson** —ಪ್ಸನ್ (ನಾ.) ಬಹು ಬಲಶಾಲಿ, ಶಕ್ತಿವಂತ, ಬಲಿಷ್ಠ, ಜಗಜಟ್ಟಿ (ನಮ್ಮಲ್ಲಿಯ ಭೀಮನಂತೆ) (ಬೈಬಲ್ಲಿನಲ್ಲಿ ಹೇಳಿರುವ ಯೆಹೂದ್ಯ ಬಲಶಾಲಿಯ ಹೆಸರಿನಿಂದ). (ನಾವೆ) S.'s-post ಹಡಗಿನ ಅಟ್ಟಗಳ ನಡುವೆ ಹಾಯ್ದಿರುವ ಬಲವಾದ ಕಂಬ; ತಿಮಿಂಗಿಲ ಬೇಟೆಯ ದೋಣಿಯಲ್ಲಿ ಈಟಿಗಾಳದ ಹಗ್ಗ ಕಟ್ಟುವ ಕಂಬ; ಭೀಮಗಂಬ. **Sámsonite** (ನಾ.) ಒಂದು ಸಿಡಿಮದ್ದು.

Sámurai (ಜಪಾನ್ ಭಾಷೆ) ಸ್ಯಾಮುರೈ (ನಾ., ಬ. ವ. ಅದೇ) (ಚರಿತ್ರೆ) ಜಪಾನಿನ—ಸೈನಿಕ ಜಾತಿಯವನು, ಕ್ಷತ್ರಿಯ; ಜಪಾನಿನ ಸೈನ್ಯಾಧಿಕಾರಿ.

Sánad ಸ್ಯಾ(ಸ)ನಡ್ (ನಾ.) (ಇಂಡಿಯ) ಸನ್ನದು.

Sánative ಸ್ಯಾನಟಿವ್, **-tory** —ಟರಿ (ಗು.) ಗುಣಕಾರಿಯಾದ; (ಶಾರೀರಕ ಅಥವಾ ಮಾನಸಿಕ) ಸ್ವಾಸ್ಥ್ಯದ, ಸ್ವಾಸ್ಥ್ಯವನ್ನುಂಟು ಮಾಡುವ; ಆರೋಗ್ಯಕರ; ರೋಗ ಪರಿಹಾರಕ. **Sanatórium** —ಟೋರಿಯಂ (ನಾ., ಬ. ವ. -ia —ಯ) ಕ್ಷಯ ರೋಗಿಗಳ ಅಥವಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಯಿಲೆಯಿಂದ ದುರ್ಬಲರಾದವರ ಚಿಕಿತ್ಸಾಲಯ ; ಕ್ಷಯ ರೋಗದ ಆಸ್ಪತ್ರೆ. ಆರೋಗ್ಯಾಭಿವೃದ್ಧಿಗಾಗಿ ಜನರು ಹೋಗುವ, ಒಳ್ಳೆಯ ಹವಾ ಇರುವ, ಸ್ಥಳ : ಆರೋಗ್ಯವರ್ಧಕ ಸ್ಥಳ.

Sanbeníto ಸ್ಯಾನ್‌ಬೆನೀಟೊ (ನಾ. ; ಬ. ವ. -os) (ಹಿಂದೆ ಸ್ಪೈನಿನ ಪಾಷಂಡಿಗಳ ವಿಚಾರಣಾಸ್ಥಾನದಲ್ಲಿ) ತಪ್ಪೊಪ್ಪಿಕೊಂಡ ಪಾಷಂಡಿ ಧರಿಸುತ್ತಿದ್ದ, ಹಿಂದುಗಡೆಯೂ ಮುಂದುಗಡೆಯೂ ಕೆಂಪು ಬಣ್ಣದ ಸಂತ ಆಂಡ್ರೂಸ್ ಶಿಲುಬೆಯ (ಕತ್ತರಿಯ) ಗುರುತು ಇದ್ದ, ಹಳದಿಯ ಬಣ್ಣದ, ಭುಜವಸ್ತ್ರಾಕಾರದ, ಪಶ್ಚಾತ್ತಾಪ ಸೂಚಕ ವಸ್ತ್ರ : ಪಾಷಂಡಿಯ ಪಶ್ಚಾತ್ತಾಪ ವಸ್ತ್ರ. (ಪಾಷಂಡಿ ಧರ್ಮಭ್ರಷ್ಟರ ದಹನದಲ್ಲಿ) ಪಶ್ಚಾತ್ತಾಪ ಸೂಚನೆ ದಹನಕ್ಕೆ ಗುರಿಯಾದ ಪಾಷಂಡಿ ಧರಿಸುತ್ತಿದ್ದ, ಉರಿ ಜ್ವಾಲೆಗಳ ಮತ್ತು ಭೂತಗಳ ಚಿತ್ರಗಳಿದ್ದ, ಕಪ್ಪು ವಸ್ತ್ರ : ಪಾಷಂಡಿಯ ಬಲವಸ್ತ್ರ.

Sánctify ಸ್ಯಾಂಕ್ಟಿಫೈ (ಕ್ರಿ. ಸಕ.) ಮೀಸಲಾಗಿಡು ; ಮುಡಿಪು ಕಟ್ಟು ; ಪವಿತ್ರೀಕರಿಸು ; ಶುದ್ಧಿಮಾಡು ; ಸಂಸ್ಕರಿಸು [(ಭೂ. ಕೃ. ನಲ್ಲಿ ; ಅನೇಕ ವೇಳೆ ವ್ಯಂಗ್ಯವಾಗಿ) = Sanctimonious (Such sanctified airs)]. ಪವಿತ್ರತೆ ಕೊಡು, ಧರ್ಮಸಮ್ಮತಮಾಡು, ಧರ್ಮಮುದ್ರೆ ಒತ್ತು, ಧರ್ಮದ ಬಣ್ಣ ಕೊಡು, ಧರ್ಮಸಮರ್ಥನೆ ಮಾಡು (The end sanctifies the means). ಪುಣ್ಯಕರಮಾಡು. **Sanctificátion** (ನಾ.) ; **Sanctimónious** —ಮೋನಿಯಸ್ (ಗು.) ಪವಿತ್ರತೆಯನ್ನು ಅಥವಾ ಧಾರ್ಮಿಕತೆಯನ್ನು ನಟಿಸುವ ; ಕಪಟ ಧಾರ್ಮಿಕತೆಯ ; ಧರ್ಮಡಾಂಭಿಕತೆಯ ; ಧರ್ಮಾಡಂಬರದ ; ಅಪಾರ್ಥಭೂತಿತನದ. **Sanctimóniously** (ಕ್ರಿ. ವಿ.) ; **Sanctimóniousness** (ನಾ.) ; **Sánctimony** —ಮನಿ (ನಾ.) ಕಪಟ ಧಾರ್ಮಿಕತೆ, ಧರ್ಮಾಡಂಬರ; ಆಚಾರಡಾಂಭಿಕತೆ. **Sánctitude**—ಟ್ಯೂಡ್ (ನಾ.) (ವಿರ. ಪ್ರ.) ಪೂಜ್ಯತೆ ; ಪವಿತ್ರತೆ. **Sánctity** (ನಾ.) ಪವಿತ್ರತೆ, ಪುಣ್ಯತೆ, ಗೌರವಾರ್ಹತೆ [Odour of s. (Odour ನೋಡಿ)]. (ಬ. ವ.) ಪವಿತ್ರ—ಕರ್ತವ್ಯಗಳು, ಭಾವನೆಗಳು, ಮೊ. ವು (The sanctities of the home). **Sánctuary** ಸ್ಯಾಂಕ್ಚುಅರಿ (ನಾ.) ಪವಿತ್ರಸ್ಥಳ, ಪೂಜ್ಯಸ್ಥಾನ, ದೇವಾಲಯ, ಪೂಜಾಗಾರ, ಆರಾಧನ ಮಂದಿರ, ಗರ್ಭಗುಡಿ, ಗರ್ಭಗೃಹ (ರೂಪ. ಸಹ). ಮಧ್ಯಕಾಲದ ಚರ್ಚು ಕಾನೂನು ಮೇರೆಗೆ, ಯಾವ ಪವಿತ್ರಸ್ಥಳವನ್ನು ಆಶ್ರಯಿಸಿದರೆ ಅಪರಾಧಿಗಳನ್ನೂ ಸಾಲಗಾರರನ್ನೂ ಬಂಧಿಸುವಂತಾಗಲಿ ದಂಡಿಸುವಂತಾಗಲಿ ಅವಕಾಶವಿರಲಿಲ್ಲವೊ ಅಂಥ ಸ್ಥಳ : ಪವಿತ್ರಾಶ್ರಯ ; ಸಂಪ್ರದಾಯದಿಂದ ಅಥವಾ ಕಾನೂನು ಮೇರೆಗೆ ಇಂಥ ರಕ್ಷಣೆ ಸ್ಥಾಪಿತವಾಗಿರುವ ಸ್ಥಳ : ಶರಣಸ್ಥಾನ, ಶರಣಾಲಯ, ಆಶ್ರಯ (ಸ್ಥಾನ) (London, the s. of political refugees) ; ಆಶ್ರಯಕೊಡುವ ಹಕ್ಕು, ಶರಣಾಗತ ರಕ್ಷಣೆ (Violate *or* break s. ಶರಣು ಹೊಕ್ಕವನನ್ನು ಬಂಧಿಸು, ದಂಡಿಸು ; ಶರಣ್ಯತಾ ಭಂಗಮಾಡು ; ಆಶ್ರಯ ಧರ್ಮೋಲ್ಲಂಘನೆ ಮಾಡು. Take, seek, s. ಆಶ್ರಯ ಪಡೆ, ಶರಣು ಹೊಗು). (ಬೇಟೆ, ಮೊ. ಗಳಲ್ಲಿ) ಬೇಟೆಯ ನಿಷಿದ್ಧ—ಕಾಲ, ಸ್ಥಳ. **Sánctum (Sanctórum)** ಸ್ಯಾಂಕ್ಟಂ (ಸ್ಯಾಂಕ್ಟೋರಂ) (ನಾ.) (ಯೆಹೂದ್ಯ ದೇವಾಲಯದಲ್ಲಿ) ಪವಿತ್ರಸ್ಥಳ (s.), ಗರ್ಭಗುಡಿ (s.s.) (ರೂಪ. ಸಹ). (ಇತರರಿಗೆ ಪ್ರವೇಶವಿಲ್ಲದ, ವ್ಯಕ್ತಿಯ) ಸ್ವಂತ ಕೋಣೆ, ಏಕಾಂತ ಗೃಹ. **Sánctus** (L) (ನಾ.) ಕ್ರೈಸ್ತ ಪ್ರಭುಭೋಜನ ಸಂಸ್ಕಾರದ ಪೂರ್ವ ಭಾಗವನ್ನು ಮುಗಿತಾಯಗೊಳಿಸುವ 'ಪವಿತ್ರ, ಪವಿತ್ರ, ಪವಿತ್ರ' ('Holy, holy, holy') ಎಂದು ಮೊದಲಾಗುವ ಸ್ತೋತ್ರ ; ಇದಕ್ಕೆ ಅಳವಡಿಸಿದ ಸಂಗೀತ. S. bell ಈ ಕಾಲದಲ್ಲಿ ಬಾರಿಸುವ ಗಂಟೆ.

Sanctimónious, etc. **Sanctify** ನೋಡಿ.

Sánction ಸ್ಯಾಂಕ್ಷನ್ (ನಾ., ಕ್ರಿ. ಸಕ.) (ಚರಿತ್ರೆ) (ಮು., ಮರೀಯ) ನ್ಯಾಯ ; ಕಾನೂನು, ಶಾಸನ, ನಿರ್ಣಯ, ತೀರ್ಪು [Pragmatic s. (Pragmatic ನೋಡಿ)]. (ನಿಯಮೋಲ್ಲಂಘನೆಗಾಗಿ ವಿಧಿಸಿರುವ) ಶಿಕ್ಷೆ, ದಂಡ(ನೆ) (= Vindicatory *or* punitive s.) ; (ನಿಯಮ ಪಾಲನೆಗಾಗಿ ಕೊಡುವ) ಪ್ರತಿಫಲ, ಬಹುಮಾನ (= Remunerative s.) ; (ಶಾಸನದಲ್ಲಿ) ದಂಡ ವಿಧಾಯಕ ವಾಕ್ಯ ; ನೀತಿಪಾಲನೆಗೆ ಪ್ರೇರಕವಾದ ನಿರ್ಬಂಧ ; ದಂಡ ಶಕ್ತಿ ; ಶಿಕ್ಷಾ ಶಕ್ತಿ (With regard to any supposed moral standard, what is its s.?). (ಶ್ರೇಷ್ಠಾಧಿಕಾರಿಯಿಂದ ಒಂದು ಕಾನೂನು, ಮೊ. ಕ್ಕೆ) ಒಪ್ಪಿಗೆ, ದೃಢೀಕರಣ, ಅನುಮತಿ, ಅಪ್ಪಣೆ, ಮಂಜೂರು; (ಸಂಪ್ರದಾಯ, ಮೊ. ಗಳಿಂದ, ಒಂದು ಕಾರ್ಯ, ಮೊ. ಕ್ಕೆ ದೊರೆತ) ಅನುಮೋದನೆ, ಅಧಿಕಾರಮುದ್ರೆ. (ಕ್ರಿ.) ಮಂಜೂರು ಮಾಡು, ಸ್ಥಿರೀಕರಿಸು ; ಒಪ್ಪಿಗೆ, ಅನುಮತಿ, —ಕೊಡು ; ಅಧಿಕಾರವುದ್ರೆ ಒತ್ತು ; ಬಂಧಕವಾಗಿ ಮಾಡು ; ಅಧಿಕಾರಯುಕ್ತ ಮಾಡು ; (ಒಂದು ಕಾರ್ಯ, ಮೊ. ಕ್ಕೆ) ಅನುಮೋದನೆ ಕೊಡು. (ಕಾನೂನು, ಮೊ. ನ್ನು ಜನರು ಪಾಲಿಸಲು ಒತ್ತಾಯಪಡಿಸುವಂತೆ ಅದಕ್ಕೆ) ಪ್ರತಿಫಲ, ದಂಡ, —ವಿಧಿಸು ; ನಿರ್ಬಂಧಪಡಿಸು. **Sánctionless** (ಗು.)

Sánctitude, Sánctity, Sánctuary, Sánctum, Sánctus. **Sanctify** ನೋಡಿ.

Sand ಸ್ಯಾಂಡ್ (ನಾ.) ಮರಳು, ಮಣಲು, ಉಸುಬು, ಹೊಯಿಗೆ ; (ಬ. ವ. ದಲ್ಲೂ ಪ್ರ.) (ಕಡಲತಳದ) ಮರಳದಂಡೆ; (ಸಾ., ಬ. ವ. ದಲ್ಲಿ) ಮರಳ ಕಣ ; (ಬ. ವ. ದಲ್ಲಿ) ಮರಳ —ಹರವು, ನೆಲ [Numberless as the sand(s) ಮರಳ ಕಣಗಳಂತೆ ಅಸಂಖ್ಯಾತ. Rope of s. (Rope ನೋಡಿ). Built on s. ಅಸ್ಥಿರವಾದ, ಬುಡಭದ್ರವಿಲ್ಲದ. Plough the sand(s) (Plough ನೋಡಿ). The sands are running out ಅವಧಿ ಮುಗಿಯುತ್ತ ಬಂದಿದೆ, ಮುಗಿಯುತ್ತಿದೆ; ದಿನಗಳು ಜಾರುತ್ತಿವೆ, ಕಳೆದುಹೋಗುತ್ತಿವೆ (ಮರಳು ಗಡಿಯಾರದಲ್ಲಿ ಮರಳು ಸುರಿದು ಹೋಗುತ್ತಿರುವುದರ ಸಂಬಂಧದಿಂದ)]. (ಅಮೆ. ನಂ. ಆಸಂ.) ಧೈರ್ಯ, ಸ್ಥೈರ್ಯ, ತಾಕತ್ತು. **S.-bag** (ನಾ.) (ಹಂಗಾಮಿ ಸೈನಿಕ ರಕ್ಷಣೆಗಳ ಏರ್ಪಾಟಿನಲ್ಲಿ, ಹಡಗಿಗೆ ಅಥವಾ ಆಕಾಶಬುಟ್ಟಿಗೆ ಭಾರ ಭರತಿಯಲ್ಲಿ, ಪುಂಡರು ಗುರುತು ಬೀಳದಂತೆ ಬಲವಾಗಿ ಏಟು ಹೊಡೆಯುವಲ್ಲಿ, ಕೊರೆತದ ತಗಡಿಗೆ ಆಧಾರವಾಗಿ, ಬಾಗಿಲಲ್ಲಿ ಅಥವಾ ಕಿಟಕಿಯಲ್ಲಿ ಗಾಳಿಯ ತಡೆಯಾಗಿ, ಉಪಯೋಗಿಸುವ) ಮರಳು ಚೀಲ. **Sándbag** (ಕ್ರಿ. ಸಕ.) ಮರಳು ಚೀಲದಿಂದ—ರಕ್ಷಣೆ ಹಾಕು, ತಡೆ ಮಾಡು, ಹೊಡೆದು ಕೆಡವು. **S.-bank** (ಕಡಲ ಅಥವಾ ಹೊಳೆಯ) ಮರಳದಂಡೆ. **S.-bar** ರೇವಿನ ಅಥವಾ ನದಿಯ ಬಾಯ ಹತ್ತಿರದ ಮರಳದಂಡೆ, ಮರಳ ಕಟ್ಟೆ. **S. bath** (ರಾಸಾಯನಿಕ ಪ್ರಕ್ರಿಯೆಗಳಲ್ಲಿ ಎಲ್ಲ ಕಡೆಯೂ ಒಂದೇ ಪ್ರಕಾರದ ಶಾಖ ಕೊಡಲು ಉಪಯೋಗಿಸುವ) ಕಾಯಿಸಿದ ಮರಳಿನ ಪಾತ್ರೆ ; ಮರಳ ತಾಪಕ. **S.-bed** ಮರಳ ಪದರ, ಸಿಕತಸ್ತರ. **S.-blast** (ಗಾಜು, ಮೊ. ಗಳಿಗೆ ಒರಟು ಮೇಲ್ಮೈ ಕೊಡುವುದಕ್ಕಾಗಿ, ಒತ್ತಡದ ಗಾಳಿಯ ಅಥವಾ ಆವಿಯ ಮೂಲಕ ಚಿಮ್ಮಿದ) ಮರಳ ಚಿಮ್ಮಲು. **S.-box** (ಚರಿತ್ರೆ) ಮಸಿ ಹೀರುವುದಕ್ಕಾಗಿ ಮರಳು ಉದುರಿಸುವ ಡಬ್ಬಿ : ಮರಳ ಡಬ್ಬಿ ; (ಎರಕದ ಕೆಲಸದಲ್ಲಿ ಉಪಯೋಗಿಸುವ) ಮರಳ ಅಚ್ಚು ; (ಒದ್ದೆಯ ಮತ್ತು ಜಾರಿಕೆಯ ರೈಲು ಕಂಬಿಗಳಮೇಲೆ ಎರಚುವುದಕ್ಕಾಗಿ ಎಂಜಿನಿನಲ್ಲಿ ತುಂಬಿಟ್ಟುಕೊಂಡಿರುವ) ಮರಳ ಪೆಟ್ಟಿಗೆ ; (ಗಾಲ್ಫ್ ಆಟದಲ್ಲಿ ; ಆಟದ ಪ್ರಾರಂಭದಲ್ಲಿ ಚೆಂಡನ್ನು ಜೋರಾಗಿ ಹೊಡೆಯಲು ಅನುಕೂಲಿಸುವಂತೆ ಅದನ್ನು ಕೂಡಿಸಲು ಮಾಡಿಕೊಳ್ಳುವ ಮರಳ ಕುಪ್ಪೆಗೆ) ಮರಳನ್ನು ತುಂಬಿಟ್ಟಿರುವ ಪಾತ್ರೆ ; ಮರಳ ತೊಟ್ಟಿ. **S.-boy** ಮರಳು ಮಾರುವ ಹುಡುಗ (ಈಗ Jolly as a s.-b. ಎಂಬಲ್ಲಿ ಮಾತ್ರ). **S.-cloud** ಸೈಮೂಮ್ ಬಿರುಗಾಳಿಯಲ್ಲಿ ತೂರಿಬರುವ ಮರಳು : ಮರಳ ಮುಗಿಲು. **S.-crack** ಕುದುರೆಯ ಗೊರಸಿನ (ಕೊಳಗದ) ಒಂದು ರೋಗ ; (ಕಾದ ಮರಳಮೇಲೆ ನಡೆಯುವುದರಿಂದ ಮನುಷ್ಯರಿಗೆ ಆಗುವ) ಅಂಗಾಲ ಬಿರಿತ ; (ಸರಿಯಾಗಿ ಕಲಸದೆ ಬೆರಸದೆ ಇರುವುದರಿಂದ ಇಟ್ಟಿಗೆಯಲ್ಲಿ ಆಗುವ) ಬಿರುಕು. **S.-eel** ಹಾವುಮೀನಿನಂಥ ಮೀನು. **S.-fly** ಹಲವು ಬಗೆಯ ಮಶಕ ; ಒಂದು ಬಗೆಯ ಗಾಳದ ನೊಣ. **S.-glass** ಮೇಲಿನ ಬುರುಡೆಯಿಂದ ಕೆಳಗಿನ ಬುರುಡೆಗೆ ಮರಳು ತೆಳ್ಳಗೆ ಹರಿದುಬಂದು ಒಂದು ನಿರ್ದಿಷ್ಟ ಕಾಲದಲ್ಲಿ ಮೇಲಿನ ಬುರುಡೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬರಿದಾಗುವ, ಮಧ್ಯದಲ್ಲಿ ಅತಿ ಕಿರಿದಾದ ಸೊಂಟದಂಥ ಸಂಬಂಧ ಪಡೆದಿರುವ, ಕಾಲವನ್ನು ಅಳೆಯಲು ಹಿಂದೆ ಉಪಯೋಗಿಸುತ್ತಿದ್ದ, ಒಂದು ಸಲಕರಣೆ : ಮರಳು ಗಡಿಯಾರ (Hour, minute, -glass). **S.-hill** ಮರಳ—ದಿಣ್ಣೆ, ದಿಬ್ಬ, ಗುಡ್ಡ. **S.-iron** ಮರಳಿನಿಂದ ಚೆಂಡನ್ನು ಮೇಲೆತ್ತುವ ಗಾಲ್ಫ್ ದಾಂಡು : ಮರಳು ದಾಂಡು. **S.-man** ನಿದ್ರಾದೇವತೆ [=Dustman (Dust ನೋಡಿ)]. **S.-martin** ಮರಳ ಕುಳಿಯಲ್ಲಿ, ಮರಳ ದಂಡೆಯಲ್ಲಿ, —ಗೂಡು ಕಟ್ಟುವ ಬಾನಕ್ಕಿ. **S.-paper** (ನಾ., ಕ್ರಿ. ಸಕ.) ಮರಳು ಕಾಗದ, ಪಟ್ಟೀಲು ಕಾಗದ, ಉಪ್ಪುಕಾಗದ(ದಿಂದ ಉಜ್ಜು); ಹಂಸಪಟ್ಟಿ (ಯಿಂದ ಉಜ್ಜು). **S.-piper** ತೇವದ ಮರಳು ಪ್ರದೇಶಗಳಲ್ಲಿ ಸೇರಿ ಕೊಳ್ಳುವ ಹಲವು ಬಗೆಯ ಹಕ್ಕಿ. **S.-pump** ಬೈರಿಗೆ ಕಂಡಿ, ಹದಿಗೂಡು, ಮೊ. ಗಳಿಂದ ತೇವದ ಮರಳು, ಮಣ್ಣು, ಮೊ. ಗಳನ್ನು ಎತ್ತಿ ಹಾಕುವ ಪಂಪು : ಮರಳೆತ್ತುವ ಪಂಪು. **S.-shoes** ಮರಳಮೇಲೆ ನಡೆಯಲು ಅನುಕೂಲಿಸುವ ರಬ್ಬರಿನ ಅಥವಾ ಸಣಬಿನ ಅಟ್ಟೆಯ ಜೋಡು: ಮರಳ ಜೋಡು. **S.-spout** (ಮರಳುಗಾಡಿನಲ್ಲಿ) ಸುಂಟರಗಾಳಿ ಎಬ್ಬಿಸಿದ ಮರಳಗಂಬ. **Sandstone** ಮರಳುಗಲ್ಲು (Old *and* New Red s.-s. ಬ್ರಿಟನ್ನಿನ, ಇಂಗಾಲಸ್ತರದ ಕೆಳಗಡೆಯ ಮತ್ತು ಮೇಲುಗಡೆಯ, ಕೆಮ್ಮರಳು ಶಿಲೆಗಳು). **S.-storm** ಮರಳು (ತೂರುವ) ಬಿರುಗಾಳಿ. **Sándy**[1] (ಗು.) ಮರಳಿನ(ಂಥ). (ಕೂದಲಿನ ವಿಷಯದಲ್ಲಿ) ಹಳದಿ ಗೆಂಪಿನ; (ವ್ಯಕ್ತಿಯ ವಿಷಯದಲ್ಲಿ) ಹಳದಿಗೆಂಪು ಕೂದಲಿನ. **Sándiness** (ನಾ.) ; **Sándyish** (ಗು.)

Sand (ಕ್ರಿ. ಸಕ.) ಮರಳು —ಎರಚು, ಉದುರಿಸು ; ಮರಳಿನಲ್ಲಿ ಹೂಳು ; ಮೇಲೆ ಮರಳು ಹಾಕು. (ಸಕ್ಕರೆ, ಉಣ್ಣೆ, ಮೊ. ಕ್ಕೆ) ಮರಳು ಬೆರಸು. ಮರಳಿನಿಂದ ಉಜ್ಜು, —ಉಜ್ಜಿ ಬೆಳಗು.

Sándal[1] ಸ್ಯಾಂಡಲ್ (ನಾ., ಕ್ರಿ. ಸಕ.) ಕೆರ, ಮೆಟ್ಟು, ಎಕ್ಕಡ, ಚಪ್ಪಲಿ (ಮು., ಪುರಾತನ ಗ್ರೀಕರದು, ರೋಮನರದು ಮತ್ತು ಕೆಲವು ಪೂರ್ವ ದೇಶೀಯರದು). ಮೇಲಡಿಯ ಮೇಲೂ ಹರಡಿನ ಸುತ್ತಲೂ ಹಾದು ಜೋಡನ್ನು ಬಿಗಿದುಕಟ್ಟುವ ಪಟ್ಟಿ : ಜೋಡುಪಟ್ಟಿ. (ಕ್ರಿ.) —ಹಾಕಿಕೊ, ಮೆಟ್ಟಿಕೊ ; (ಜೋಡಿಗೆ) ಪಟ್ಟಿ —ಹಾಕು, ಕಟ್ಟು, ಬಿಗಿ.

Sándal[2]**(wood)** ಸ್ಯಾಂಡಲ್(ವುಡ್) (ನಾ.) ಶ್ರೀಗಂಧದ ಮರ(ದ ದಾರು) ; ಚಂದನ (White, yellow, red, s.-w. ಇದರಲ್ಲಿ ಕೆಲವು ಜಾತಿ). Sandal-tree ಶ್ರೀಗಂಧ ವೃಕ್ಷ.

Sándarac ಸ್ಯಾಂಡರ್ರ್ಯಾಕ್ (ನಾ.) ಮಣಿಶಿಲೆ (=Realgar). ಮೆರುಗೆಣ್ಣೆಯ ಮತ್ತು ರೇಜು ಪುಡಿಯ ತಯಾರಿಕೆಯಲ್ಲಿ ಉಪಯೋಗಿಸುವ ಒಂದು ಬಗೆಯ ರಾಳ (=Gum s.)

Sánd-blind ಸ್ಯಾಂಡ್‌ಬ್ಲೈಂಡ್ (ಗು., ಪ್ರಾಚೀ. ಪ್ರ.) ಮಬ್ಬುಗಣ್ಣಿನ; ಅರೆಕುರುಡಾದ ; ಮಂದದೃಷ್ಟಿಯ.

Sá(u)nders ಸಾಂಡರ್ಸ್ (ನಾ.) ಶ್ರೀಗಂಧದ ಮರ. Red s. (Red ನೋಡಿ)

Sándhurst ಸ್ಯಾಂಡ್‌ಹರ್ಸ್ಟ್ (ನಾ.) (ಇಂಗ್ಲೆಂಡಿನಲ್ಲಿ) ಸ್ಯಾಂಡ್‌ಹರ್ಸ್ಟ್‌ನಲ್ಲಿಯ ಬ್ರಿಟಿಷ್ ಪದಾತಿಗಳ ಮತ್ತು ರಾವುತರ ಸೈನ್ಯ ಶಿಕ್ಷಣಶಾಲೆ.

Sándiver ಸ್ಯಾಂಡಿವರ್ (ನಾ.) (ಗಾಜು ತಯಾರಿಕೆಯಲ್ಲಿ : ಗಾಜು ಗಟ್ಟಿಗೊಂಡಾಗ ಮೇಲೆ ತೇಲುವ, ದ್ರವರೂಪದ, ಲವಣಯುಕ್ತವಾದ, ಬಿಳಿಯ ಬಣ್ಣದ) ಗಾಜಿನ ಕಿಟ್ಟ.

Sándwich ಸ್ಯಾಂಡ್‌ವಿಚ್(ಜ್) (ನಾ., ಕ್ರಿ. ಸಕ.) ಎರಡು ತೆಳುರೊಟ್ಟಿ ಬಿಲ್ಲೆಗಳ ನಡುವೆ ಮಾಂಸದ ಅಥವಾ ಇತರ ರುಚಿಪದಾರ್ಥದ ಪದರ ವಿಟ್ಟು ಅಂಟಿಸಿ ಮಾಡಿದ ಹಲ್ಲೆ : ಸ್ಯಾಂಡ್‌ವಿಚ್ [Ham, egg, caviare, cucumber, s. (ರೂಪ.) A s. of good and bad ಒಳ್ಳೆಯದರ ಮತ್ತು ಕೆಟ್ಟದ್ದರ ಮಿಶ್ರಣ]. ತಾನು ನಡುವೆಯಿದ್ದು ತನ್ನ ಮುಂದುಗಡೆಯೊಂದು, ತನ್ನ ಹಿಂದುಗಡೆಯೊಂದು ಜಾಹಿರಾತು ಪಟವನ್ನು ಹೊತ್ತುಕೊಂಡು ತಿರುಗುವ ಮನುಷ್ಯ, ಹುಡುಗ (=S.-man, -boy) [S.-board ಇಂಥ ಜಾಹಿರಾತು ಪಟ(ಗಳಲ್ಲೊಂದು). S.-boat (ದೋಣಿಯ ಪಂದ್ಯದಲ್ಲಿ : ಮೇಲ ತಂಡದಲ್ಲಿ ಕೊನೆಯ ಸ್ಥಾನವನ್ನೂ, ಕೆಳ ತಂಡದಲ್ಲಿ ಮೊದಲ ಸ್ಥಾನವನ್ನೂ ಪಡೆದ) ಮಧ್ಯದ ದೋಣಿ]. (ಕ್ರಿ.) (ಪದಾರ್ಥ, ವಾಕ್ಯ, ಮೊ. ನ್ನು ಭಿನ್ನ ಜಾತಿಯ) ಎರಡರ ನಡುವೆ ಸೇರಿಸು.

Sándy[1]. **Sand** ನೋಡಿ.

Sandy[2] ಸ್ಯಾಂಡಿ (ನಾ.) ಸ್ಕಾಟ್ಲೆಂಡಿನವನು (ಅಡ್ಡಹೆಸರು)

Sane ಸೇನ್ (ಗು.) ಬುದ್ಧಿ ನೆಟ್ಟಗಿರುವ, ಸರಿಯಾಗಿರುವ ; ಸ್ವಸ್ಥ ಬುದ್ಧಿಯ, —ಮನಸ್ಸಿನ ; ಹುಚ್ಚಿಲ್ಲದ ; (ಅಭಿಪ್ರಾಯ, ಮೊ. ಗಳ ವಿಷಯದಲ್ಲಿ) ಮಿತವಾದ, ಸುವಿಚಾರದ, ವಿವೇಕಯುಕ್ತ. **Sánely** (ಕ್ರಿ. ವಿ.) ; **Sánity** ಸ್ಯಾನಿಟಿ (ನಾ.) ಬುದ್ಧಿ ನೆಟ್ಟಗಿರುವುದು ; ಬುದ್ಧಿ ಸ್ವಾಸ್ಥ್ಯ; ಅತಿಗೆ ಹೋಗದಿರುವುದು ; ವಿವೇಕ.

Sang. Sing ಧಾತುವಿನ ಭೂತ ರೂಪ.

Sánga(r) ಸಂಗ(ರ್) ಇಂಡಿಯದ ಬೆಟ್ಟಗುಡ್ಡ ನಿವಾಸಿಗಳು ರಕ್ಷಣಾರ್ಥವಾಗಿ ಕಟ್ಟಿಕೊಳ್ಳುವ ಎದೆಮಟ್ಟದ ಕಲ್ಲಿನ ಕಾಪುಗೋಡೆ ; ಸಂಗರ (ಹಿಂದಿ : ಸಂಗ)

Sang-froid (F) ಸಾನ್‌ಫ್ವ್ರಾ (ನಾ.) (ಅಪಾಯ ಸ್ಥಿತಿಯಲ್ಲಿ, ಕ್ಷೋಭಕಾರಕ ಸ್ಥಿತಿಯಲ್ಲಿ) ಕಲಕವಿಲ್ಲದಿರುವುದು, ಮನಸ್ಥೈರ್ಯ(ವಿರುವುದು), ಅಕ್ಷುಬ್ಧತೆ, ನಿರ್ಲಕ್ಷ್ಯ.

Sangraíl, -real. **Grail**[2] ನೋಡಿ.

Sanguificátion ಸ್ಯಾಂಗ್ವಿಫಿಕೇಷನ್ (ನಾ.) (ಆಹಾರ) ರಕ್ತವಾಗುವುದು ; ರಕ್ತೀಕರಣ, ರಕ್ತೋತ್ಪತ್ತಿ.

Sánguinary ಸ್ಯಾಂಗ್ವಿನರಿ (ಗು.) ರಕ್ತಪಾತದ, ಕೊಲೆಯ ; ರಕ್ತಪಾತೋತ್ಸಾಹದ ; ರಕ್ತಪಾತ ಪ್ರಿಯ ; ಕೊಲೆಯಲ್ಲಿ ನಲಿವ ; ರಕ್ತಮಯ ; ಕೊಲೆಯ ಗೀಳುಳ್ಳ. (ಕಾನೂನುಗಳ ವಿಷಯದಲ್ಲಿ) ಲೀಲಾಜಾಲವಾಗಿ ಮರಣದಂಡನೆ ವಿಧಿಸಿಬಿಡುವ. (ಹಿಂದೆ bloody ಎಂಬ ಪದಕ್ಕೆ ಸೌಮ್ಯರೂಪದ ಪ್ರತಿ ಪದವಾಗಿಯೂ, ಈಗ ದುರ್ಭಾಷೆಗೆ ಪಾಂಡಿತ್ಯ ಪ್ರದರ್ಶಕ ಪದವಾಗಿಯೂ ಪ್ರ.) ಹಾಳಾದ. **Sánguinarily** (ಕ್ರಿ. ವಿ.); **Sánguinariness** (ನಾ.) ; **Sánguine** ಸ್ಯಾಂಗ್ವಿನ್ (ಗು., ನಾ., ಕ್ರಿ. ಸಕ.) ರಕ್ತವರ್ಣದ, ರಕ್ತಗೆಂಪಿನ (ಗ್ರಾಂಥಿಕ ಪ್ರ. ; ಮತ್ತು ಪ್ರಕೃತಿ ಚರಿತ್ರೆ : S. ant, sponge, turtle). ರಕ್ತದ (ವಿರ. ಪ್ರ. ; S. rain ರಕ್ತವೃಷ್ಟಿ). (ಚರಿತ್ರೆ) (ಕೆಂಪಾದ ಮುಖವರ್ಣವೂ, ಧೈರ್ಯವೂ, ಭರವಸೆಯೂ, ಪ್ರಣಯಾಸಕ್ತಿಯೂ ಇರುವಂತೆ ಶರೀರದಲ್ಲಿ ಇತರ ರಸ ಧಾತುಗಳಿಗಿಂತ) ರಕ್ತ ಧಾತು ಹೆಚ್ಚಾಗಿರುವ ಪ್ರವೃತ್ತಿಯ ; ರಕ್ತ ಪ್ರವೃತ್ತಿಯ. (ಮುಖವರ್ಣ) ಕಳೆ ತೀವಿದ, ಉಜ್ಜ್ವಲ, ಕೆಂಪನೆಯ, ರಂಗಿನ. ಸ್ವಾಭಾವಿಕವಾಗಿ ಗೆಲವಿನ, ಉತ್ಸಾಹದ ; ಭರವಸೆಯುಳ್ಳ ; ಎಲ್ಲವೂ ಸುಸೂತ್ರವಾಗಿ ನಡೆಯುವುದೆಂಬ ನಿರೀಕ್ಷಣೆ ತುಂಬಿದ ; ಆಶಾವಾದಿಯಾದ. (ನಾ.) ಕೆಂಬಣ್ಣದ ಬಳಪ(ದ ರೇಖಾಚಿತ್ರ). (ಕ್ರಿ.) (ಕಾವ್ಯ) ರಕ್ತದಿಂದ ಕರೆಮಾಡು ; ಆರಕ್ತಮಾಡು. **Sánguinely** (ಕ್ರಿ. ವಿ.) ; **Sánguineness** (ನಾ.) ; **Sanguíneous** (ಗು.) (ವೈ. ಶಾ.) ರಕ್ತದ ; ರಕ್ತವರ್ಣದ (ಮು., ನ. ವಿ.) ; ರಕ್ತಾಧಿಕ್ಯದ ; ಉತ್ಸಾಹಭರಿತ.

Sánhedrim ಸ್ಯಾನಿಡ್ರಿಮ್, **-drin** —ಡ್ರಿನ್ (ನಾ.) ಪುರಾತನ ಜೆರುಸಲೆಮಿನಲ್ಲಿಯ ೭೧ ಮಂದಿ ಸದಸ್ಯರನ್ನೊಳಕೊಂಡ, ಶ್ರೇಷ್ಠ ನ್ಯಾಯಸ್ಥಾನ ಮತ್ತು ಮಂತ್ರಣ ಸಭೆ. **Sánhedrist** (ನಾ.) ಈ ಸಭೆಯ ಸದಸ್ಯ.

Sánify ಸ್ಯಾನಿಫೈ (ಕ್ರಿ. ಸಕ.) (ಸ್ಥಳವನ್ನು) ಆರೋಗ್ಯಕರ, ಪಾಕೀಜು, —ಮಾಡು ; (ಸ್ಥಳದ) ಆರೋಗ್ಯಸ್ಥಿತಿಯನ್ನು, ನೈರ್ಮಲ್ಯವನ್ನು, —ಉತ್ತಮಗೊಳಿಸು. **Sánitary** ಸ್ಯಾನಿಟರಿ (ಗು.) (ಮು., ರೋಗದ ಸೋಂಕು, ಕಶ್ಮಲ, ಸೇರದಂತೆ) ಆರೋಗ್ಯ ನಿಯಮಗಳ, ನೈರ್ಮಲ್ಯ ಸಂಬಂಧವಾದ ; (ರೋಗ ಸೋಂಕದಂತೆ) ನಿರ್ಮಲವಾದ, ಶುಚಿಯಾದ, ಚೊಕ್ಕಟವಾದ. S. towel ಋತುಸ್ರಾವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಲದಲ್ಲ ಉಪಯೋಗಿಸುವ(ಂಥ) ಚೌಕ. **Sánitarily** (ಕ್ರಿ. ವಿ.) ; **Sánitariness** (ನಾ.) ; **Sánitarist** (ನಾ.) =**Sanitárian** ಸ್ಯಾನಿಟೇರಿಯನ್ (ನಾ.) ನೈರ್ಮಲ್ಯ —ಶಾಸ್ತ್ರಜ್ಞ, ವಾದಿ. **Sánitas** ಸ್ಯಾನಿಟ್ಯಾಸ್ (ನಾ.) ಪೂತಿನಾಶಕವೂ ಸೋಂಕು ನಿವಾರಕವೂ ಆದ ಒಂದು ತಯಾರಿಕೆ (ವ್ಯಾಪಾರದ ಹೆಸರು). **Sanitátion** ಸ್ಯಾನಿಟೇಷನ್ (ನಾ.) ಪಾಕೀಜು; ನೈರ್ಮಲ್ಯ ; ನಿರ್ಮಲೀಕರಣ ; ನೈರ್ಮಲ್ಯಶಾಸ್ತ್ರ, —ವಿಧಾನ. **Sanitátionist** (ನಾ.) ; **Sánitate** (ಕ್ರಿ.) ಆರೋಗ್ಯಕರ, ನಿರ್ಮಲ, —ಮಾಡು ; ನೈರ್ಮಲ್ಯ ಸ್ಥಿತಿಯಲ್ಲಿರಿಸು ; ನೈರ್ಮಲ್ಯ ಸಾಧನಗಳನ್ನು ಒದಗಿಸು.

Sánitary, Sánitas, Sanitátion, etc. **Sanify** ನೋಡಿ.

Sánity. **Sane** ನೋಡಿ.

Sánjak ಸ್ಯಾನ್‌ಜ್ಯಾಕ್ (ನಾ.) ತುರ್ಕಿ ಪ್ರಾಂತದ ಒಂದು ಆಡಳಿತ ವಿಭಾಗ : ಜಿಲ್ಲೆ.

Sank. Sink ಧಾತುವಿನ ಭೂತ ರೂಪ.

Sans ಸ್ಯಾನ್ಸ್, ಸಾನ್ (ಉಪ.) ಇಲ್ಲದೆ, ರಹಿತವಾಗಿ, ವಿಹೀನವಾಗಿ, ವಿನಾ. S. teeth, s. eyes, s. taste, s. everything ಹಲ್ಲಿಲ್ಲದೆ, ಕಣ್ಣಿಲ್ಲದೆ, ರುಚಿಜ್ಞಾನವಿಲ್ಲದೆ, ಏನೂ ಇಲ್ಲದೆ. (ಫ್ರೆಂಚ್ ನಮಾನಪದಗಳಲ್ಲಿ ; ಉಚ್ಚಾರ : ಸಾನ್) : **S. ceremonie** ಸಾನ್ ಸೆರೆಮಾನೀ (ಕ್ರಿ. ವಿ.) ಮರ್ಯಾದೆಯ ಕಟ್ಟುನಿಟ್ಟಿಲ್ಲದೆ ; ನಿರ್ದಾಕ್ಷಿಣ್ಯವಾಗಿ. **Sansculótte** ಸ್ಯಾನ್ಸ್‌ಕ್ಯುಲಾಟ್, ಸಾನ್— (ನಾ.) (ಪದಶಃ ಅರ್ಥ) ಚಡ್ಡಿಯಿಲ್ಲದವನು. (ಫ್ರೆಂಚ್ ಕ್ರಾಂತಿಕಾಲದಲ್ಲಿ) ಸಮಾಜದ ಕೆಳದರ್ಜೆಯ ಪ್ರಜಾಸ್ವಾತಂತ್ರ್ಯವಾದಿ ; ಉಗ್ರ ಸ್ವಾತಂತ್ರ್ಯವಾದಿ, ಕ್ರಾಂತಿಕಾರ. **Sansculótterie** (ನಾ.) ಇವರ ತತ್ತ್ವ, ವರ್ತನೆ, ಸಮುದಾಯ. **Sansculóttic** (ಗು.) —ಸ್ವಾತಂತ್ರ್ಯವಾದಿಗಳ ; ಕ್ರಾಂತಿಕಾರಕ ; ಒಳ್ಳೆಯ ಬಟ್ಟೆಯಿಲ್ಲದ, ಮೈತುಂಬ ಬಟ್ಟೆಯಿಲ್ಲದ. **Sansculóttism** (ನಾ.) ; **S. doúte** ಸಾನ್‌ಡೂಟ್ (ಕ್ರಿ. ವಿ.) ನಿಸ್ಸಂದೇಹವಾಗಿ. **S. facon** ಸಾನ್ ಫಾಸಾನ್ (ಕ್ರಿ. ವಿ.) ಮುಚ್ಚುಮರೆಯಿಲ್ಲದೆ, ವಿಹಿತೋಪಚಾರಗಳಿಲ್ಲದೆ. **S.-gene** ಸಾನ್‌ಝೇನ್ (ನಾ.) ಸಂಪ್ರದಾಯವನ್ನು, ಮರ್ಯಾದೆಯನ್ನು, ಲಕ್ಷಿಸದಿರುವುದು, ತಿಳಿಯದಿರುವುದು ; ಮರ್ಯಾದೋಪಚಾರವಿಲ್ಲದಿರುವುದು ; ಸಂಕೋಚಪಡದಿರುವುದು ; ಸಲಿಗೆ. **S. peur et s. repróche** ಸಾನ್ ಪೂರ್ ಏ ಸಾನ್ ರೆಪ್ರಾಷ್ (ಗು.) ನಿರ್ಭಯವಾದ ಮತ್ತು ನಿರ್ದುಷ್ಟವಾದ; ಧೀರೋದಾತ್ತ. **S. phrase** ಸಾನ್‌ಫ್ರಾಸ್ (ಕ್ರಿ. ವಿ.) ಒಂದು ಮಾತಿನಲ್ಲಿ, ವಿಶೇಷಣಗಳಿಲ್ಲದೆ, ಬಳಸಿಲ್ಲದೆ. **S.-souci** ಸಾನ್‌ಸೂಸೀ (ನಾ.) ನಿರಾಲೋಚನೆ, ಹಾಯಾಗಿರುವುದು, ನಿಶ್ಚಿಂತೆ.

Sansérif ಸ್ಯಾನ್ಸೆರಿಫ್ (ನಾ., ಗು.) (ಮುದ್ರಣ) ಅಕ್ಷರದ ಮೇಲೆ ಮತ್ತು ಕೆಳಗೆ ರೇಖಾ ವೈಖರಿಗಳಿಲ್ಲದ (ಅಚ್ಚಿನ ಮೊಳೆ)

Sánskrit, -scrit ಸ್ಯಾನ್‌ಸ್ಕ್ರಿಟ್ (ನಾ., ಗು.) ಸಂಸ್ಕೃತ ಭಾಷೆ(ಯ). **Sanskrític** (ಗು.) ; **Sánskritist** (ನಾ.) ಸಂಸ್ಕೃತ ವಿದ್ವಾಂಸ.

Sánta Claús ಸ್ಯಾಂಟ ಕ್ಲಾಸ್ (ನಾ.) ಕ್ರಿಸ್‌ಮಸ್ ಹಬ್ಬದ ಹಿಂದಿನ ರಾತ್ರಿ ಮಕ್ಕಳ ಕಾಲುಚೀಲಗಳನ್ನು ಬಹುಮಾನ ವಸ್ತುಗಳಿಂದ ತುಂಬಿ ಹೋಗುತ್ತಾನೆಂದು ನಂಬುವ ಕಾಲ್ಪನಿಕ ವ್ಯಕ್ತಿ : ಕ್ರಿಸ್‌ಮಸ್ ತಾತ.

Sánton (ಸ್ಪ್ಯಾನಿಷ್) ಸ್ಯಾಂಟನ್ (ನಾ.) ಮುಸಲ್ಮಾನ ಸಂನ್ಯಾಸಿ, ವಿರಕ್ತ ; ಫಕೀರ.

Santónica ಸ್ಯಾಂಟಾನಿಕ (ನಾ.) ಯೂರೋಪು ಖಂಡದ ಒಂದು ಬಗೆಯ ಸಸ್ಯ. **Sántonin** ಸ್ಯಾಂಟೊನಿನ್ (ನಾ.) (ಅಂತ್ರಕ್ರಿಮಿ ನಾಶಕವಾದ) ಈ ಗಿಡದ ಸಾರ ; 'ಸ್ಯಾಂಟೊನಿನ್'.

Saórstat Eireann ಸಯೊರಸ್ಟತ್ ಏ(ಅ)ರನ್, ಸೇ(ಅ)ರ್‌ಸ್ಟಾಟ್— (ನಾ.) ಐರಿಷ್ ಸ್ವತಂತ್ರ ರಾಷ್ಟ್ರ (=The Irish Free State)

Sap[1] ಸ್ಯಾಪ್ (ನಾ., ಕ್ರಿ. ಸಕ.) ಸಸ್ಯದ ಜೀವರಸ ; ಸಸ್ಯರಸ ; (ರೂಪ.) ವೀರ್ಯ, ಸತ್ತ್ವ, ಅಂತಸ್ಸಾರ (The s. of youth. There is no s. in a written constitution). ದಾರುವಿನ ಮೃದುವಾದ ಹೊರ ಪದರಗಳು ; ಬಿಳಿಮರ (=S.-wood). [S.-green (ನಾ., ಗು.) ('ಬಕ್‌ತಾರನ್' ಎಂಬ ಗಿಡದ ಕಾಯಿಗಳಿಂದ ತಯಾರಿಸಿದ) ಒಂದು ಬಗೆಯ ಹಸುರು ವರ್ಣದ್ರವ್ಯ ; ಇಂಥ ಹಸುರು ಬಣ್ಣ(ದ). S.-lath ಬಿಳಿಮರದಿಂದ ಮಾಡಿದ ದಬ್ಬೆ]. (ಕ್ರಿ.) (ದಾರುವಿನಿಂದ) ಸಸ್ಯರಸ ಎಳೆದುಹಾಕು, ಹೀರಿಬಿಡು ; ಜೀವರಸವನ್ನು ಒಣಗಿಸು, ಬತ್ತಿಸು ; (ರೂಪ.) ನಿಸ್ಸಾರ, ನಿಸ್ಸತ್ತ್ವ, ನಿರ್ವೀರ್ಯ, —ಮಾಡು (His energy, constitution, belief, had been sapped by). (ದಿಮ್ಮಿಯ ಮೇಲಿನ) ಬಿಳಿಮರ ತೆಗೆದುಹಾಕು. **Sápful** (ಗು.) ; **Sápless** (ಗು.) ; **Sápper**[1] (ನಾ.) ಬಿಳಿಮರ ತೆಗೆದುಹಾಕುವ ಆಯುಧ. (ಸಸ್ಯವನ್ನು ಕೊರೆದು) ಜೀವರಸ ಹೀರಿ ಜೀವಿಸುವ ಕೀಟ. **Sáppy** (ಗು.) ; **Sáppiness** (ನಾ.) ; **Sápling** (ನಾ.) ಎಳೆಯ ಗಿಡ ; ಸಸಿ. (ರೂಪ.) ಚಿಣ್ಣ, ತರುಣ ; ವರ್ಷ ತುಂಬಿರದ ಬೇಟೆನಾಯಿ.

Sap[2] ಸ್ಯಾಪ್ (ನಾ., ಕ್ರಿ.) (ಮುತ್ತಿಗೆ ಹಾಕುವವರು ಮುತ್ತಿಗೆಯ ಸ್ಥಳಕ್ಕೆ ಗುಪ್ತವಾಗಿ ಹೋಗಲು ಅನುಕೂಲಿಸುವಂತೆ ನೆಲದಲ್ಲ ತೋಡಿದ) ಮುಚ್ಚು ಕಂದಕ, ಸುರಂಗದಾರಿ ; ಮುತ್ತಿಗೆಯ ಕಂದಕ, ಸುರಂಗ (ಮಾಡುವುದು). (ರೂಪ.) (ನಂಬಿಕೆ, ಸ್ಥೈರ್ಯ, ಮೊ. ನ್ನು) ನಿಧಾನವಾಗಿ, ಒಳಗೇ —ಶಕ್ತಿಗುಂದಿಸುವುದು, ಕುಗ್ಗಿಸುವುದು, ಇಂಗಿಸುವುದು, ಹಾಳುಮಾಡುವುದು. [S.-head ಸುರಂಗ ದಾರಿಯ ಮುನ್ ತುದಿ. S.-roller ಸುರಂಗ ದಾರಿಯ ಮುನ್ ತುದಿಯ ರಕ್ಷಣೆಗಾಗಿಟ್ಟಿರುವ ತೊಂಬೆ : ಸುರಂಗ ತೊಂಬೆ]. (ಕ್ರಿ.) ಮುಚ್ಚುಕಂದಕ, ಸುರಂಗ, —ತೋಡು ; ಸುರಂಗಮಾರ್ಗವಾಗಿ ಸಮೀಪಿಸು. (ಅಡಿಪಾಯ ಕಳಚಿ) ಕುಸಿದುಬೀಳುವಂತೆ ಮಾಡು, ಭದ್ರತೆ ಕೆಡಿಸು ; ಬುಡ ಉರುಳಿಸು (Walls sapped by the stream). (ರೂಪ.) ಒಳಗೊಳಗೇ, ಅಗೋಚರವಾಗಿ, —ತಿಂದುಹಾಕು, ದುರ್ಬಲಮಾಡು ; ಬುಡಕ್ಕೆ ನೀರುತಿದ್ದು (Health sapped by the damp climate. Science was sapping old beliefs). **Sápper**[2] ಸ್ಯಾಪರ್ (ನಾ.) (ಕ್ರಿಯಾರ್ಥಗಳಲ್ಲಿ). ಬ್ರಿಟಿಷ್ ಸೈನಿಕ ಶಿಲ್ಪಶಾಖೆಯ ಸಾಮಾನ್ಯ ಸೈನಿಕ : ಸುರಂಗಕಾರ ; ಸುರಂಗ ಶಿಲ್ಪಸೈನಿಕ [Royal Sappers & Miners ಬ್ರಿಟಿಷ್ ಸೈನಿಕ ಶಿಲ್ಪದಳ(ದ ಹಿಂದಿನ ಹೆಸರು)]

Sap[3] ಸ್ಯಾಪ್ (ಕ್ರಿ. ಅಕ., ನಾ.) (ವಿದ್ಯಾಶಾಲೆಯ ಅಸಂ.) ಕಷ್ಟಪಟ್ಟು, ಚೆನ್ನಾಗಿ, —ವ್ಯಾಸಂಗಮಾಡು, ಗಟ್ಟಿಮಾಡು. (ನಾ.) ಕಷ್ಟಪಟ್ಟು ಓದುವವನು ; ಪುಸ್ತಕ ಪಿಶಾಚಿ [=**Sápper**[3] (ನಾ.)]. ಬೇಸರದ, ಫಜೀತಿಯ, —ಕೆಲಸ ; ತೊಂದರೆ (It is such a, too much, s.)

Sap[4] ಸ್ಯಾಪ್ (ನಾ.) ತಿಳಿಗೇಡಿ ; ದಡ್ಡ.

Sáp(p)an-wood ಸ್ಯಾಪನ್‌ವುಡ್ (ನಾ.) ಕೆಂಪು ಅಥವಾ ಹಳದಿ ವರ್ಣದ್ರವ್ಯ ದೊರೆಯುವ, ಏಷ್ಯಾ ಖಂಡದ ಉಷ್ಣದೇಶಗಳಲ್ಲಿಯ, ಒಂದು ಮರ : ಪತಂಗದ ಮರ ; ಸಪ್ಪಂಗ ಮರ.

Sápid ಸ್ಯಾಪಿಡ್ (ಗು.) (ಹಿತವಾದ) ರುಚಿಯುಳ್ಳ ; ಸವಿಯಾದ ; (ಮಾತು, ಲೇಖನ, ಮೊ. ವು) ಸಪ್ಪೆಯಲ್ಲದ, ರಸವತ್ತಾದ, ಸ್ವಾರಸ್ಯವಾದ. **Sapídity** (ನಾ.)

Sápient ಸ್ಯಾ(ಸೇ)ಪಿಯೆಂಟ್ (ಗು.) ಪ್ರಾಜ್ಞ, ವಿವೇಕಿಯಾದ (ವಿರ. ಪ್ರ.) ; (ಈಗ ವ್ಯಂಗ್ಯ ಪ್ರ.) ಮಹಾ ಬುದ್ಧಿವಂತಿಕೆಯ ; ಪ್ರಾಜ್ಞನೆಂದು, —ತೋರಿಸಿಕೊಳ್ಳುವ, ತಿಳಿದುಕೊಂಡಿರುವ ; ಪಂಡಿತಂಮನ್ಯ ; ವಿವೇಕಾಭಾಸದ. **Sápiently** (ಕ್ರಿ. ವಿ.) ; **Sápience** (ನಾ.) ವಿವೇಕ, ತಿಳಿವಳಿಕೆ, ಅರಿವು, ಜ್ಞಾನ. **Sapiéntial** ಸೇಪಿಎನ್ಷಲ್ (ಗು.) ಜ್ಞಾನ ಬೋಧೆಯ [The s. books (ಬೈಬಲ್ಲಿನ ಕಲವು ಪ್ರಕರಣಗಳು)]

Sápling. **Sap**[1] ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sapodílla ಸ್ಯಾಪೊಡಿಲ (ನಾ.) ಅಮೆರಿಕದ ಉಷ್ಣಪ್ರದೇಶಗಳಲ್ಲಿ ಬೆಳೆಯುವ, ಬಾಳೆಕೆ ಬರುವ ದಾರುವುಳ್ಳ, ತಿನ್ನಬಹುದಾದ ಹಣ್ಣುಬಿಡುವ, ಒಂದು ಬಗೆಯ ದೊಡ್ಡ ನಿತ್ಯಹಸುರು ಮರ. S. plum ಇದರ ಹಣ್ಣು.

Saponáceous ಸ್ಯಾಪೊನೇಷಸ್ (ಗು.) ಸಾಬೂನಿನ(ಂಥ), ಸಾಬೂನನ್ನೊಳಗೊಂಡ ; (ಹಾಸ್ಯವಾಗಿ ರೂಪ.) ಬೆಣ್ಣೆಹಚ್ಚುವ, ಹೊಗಳಿಕೆಯ. **Sapónify** ಸಪಾನಿಫೈ (ಕ್ರಿ.) (ಕೊಬ್ಬು, ಎಣ್ಣೆ, ಮೊ. ಗಳ ವಿಷಯದಲ್ಲಿ : ಕ್ಷಾರ ಮಿಶ್ರಣದಿಂದ) ಸಾಬೂನುಮಾಡು, ಸಾಬೂನಾಗು. **Sapónifiable** (ಗು.) ; **Saponificátion** (ನಾ.)

Sápor ಸೇಪರ್ (ನಾ.) ರುಚಿ ; ಆಸ್ವಾದ.

Sápphic ಸ್ಯಾಫಿಕ್ (ಗು., ನಾ.) ಲೆಸ್ಬಾಸಿನ ಗ್ರೀಕ್ ಕವಯಿತ್ರಿ (ಕ್ರಿ. ಪೂ. ೬೦೦) ಸಾಫೋವಿನ. [S. vice ಸ್ತ್ರೀಯರ ಪರಸ್ಪರ ಅಸ್ವಾಭಾವಿಕ ಕಾಮವ್ಯಾಪಾರ (=**Sápphism** ನಾ.). S. verse, stanza ಸಾಫೋ ಕವಯಿತ್ರಿ ಬಳಕೆಗೆ ತಂದ ಪದ್ಯಜಾತಿ]. (ನಾ., ಬ. ವ. ದಲ್ಲಿ) ಸಾಫೋ ಜಾತಿಯ ಪದ್ಯಗಳು.

Sápphire ಸ್ಯಾಫೈರ್ (ನಾ., ಗು.) ಪಾರದರ್ಶಕವಾದ, ನೀಲವರ್ಣದ, ಒಂದು ಪ್ರಶಸ್ತಶಿಲೆ : ನೀಲಮಣಿ, ಇಂದ್ರನೀಲ. (ಖನಿಜ) ಅಲ್ಯೂಮಿನಿಯಂ ಭಸ್ಮದ ಯಾವುದಾದರೂ ಸ್ವಾಭಾವಿಕ ಸ್ಫಟಿಕಾಕೃತಿಯ ಪ್ರಶಸ್ತ ಖನಿಜ (ನೀಲ, ಕೆಂಪು, ಮೊ. ವು). ಉಜ್ಜ್ವಲ ನೀಲವರ್ಣ, ಇಂದ್ರನೀಲವರ್ಣ, ಆಕಾಶನೀಲ. ಹಲವು ಬಗೆಯ ಹಾಡುಹಕ್ಕಿ. (ಗು.) ಆಕಾಶನೀಲಿ ಬಣ್ಣದ, ಇಂದ್ರನೀಲವರ್ಣದ. **Sápphirine** ಸ್ಯಾಫೈರೈನ್ (ನಾ., ಗು.) ಒಂದು ಮಾಸಲು ನೀಲ ಪ್ರಶಸ್ತಶಿಲೆ. (ಗು.) ಇಂದ್ರನೀಲ(ವರ್ಣ)ದ ; ಇಂದ್ರನೀಲ ಮಣಿಯಿಂದ ಮಾಡಿದ.

Sapr(o)- ಸ್ಯಾಪ್(ರೊ)— (ಸ. ಪೂ. ಪ.) ಕೊಳೆತ, ನಾರುವ, ಪೂತಿ—. **Sapraémia** ಸ್ಯಾಪ್ರೀಮಿಯ (ನಾ.) ಪೂತಿ ರಕ್ತತೆ, ವಿಷರಕ್ತತೆ. **Sapraémic** (ಗು.) ; **Saprogénic** ಸ್ಯಾಪ್ರೊಜೆನಿಕ್ (ಗು.) ಪೂತಿಕಾರಕ, ಪೂತಿಜನ್ಯ.. **Saprógenous** (ಗು.) ; **Sáprophile** (ಗು., ನಾ.) ಪೂತಿವಸ್ತುವಿನಲ್ಲಿರುವ (ಏಕಾಣುಜೀವಿ) ; ಪೂತಿವಾಸಿ (ಕ್ರಿಮಿ). **Sáprophyte** ಕೊಳೆತ ಜೈವಿಕ ಪದಾರ್ಥದಿಂದ ಬೆಳೆಯುವ ಸಸ್ಯ, ಸಸ್ಯಾಣು : ಪೂತಿಜನ್ಯ ಸಸ್ಯ.

Sar ಸ್ಯಾರ್ (ನಾ.) ಒಂದು ಬಗೆಯ (ಕಡಲ) ಮೀನು.

Sáracen ಸ್ಯಾರಸೆನ್ (ನಾ., ಗು.) ಸಿರಿಯಾ ಅರೇಬಿಯಾ ಮರಳುಗಾಡಿನ ಚರ ಪಶುಪಾಲಕಕುಲದವನು (ಗ್ರೀಕರ ಮತ್ತು ರೋಮನರ ಪ್ರ.); ಅರಬ್ಬಿಯವನು; (ಕ್ರುಸೇಡ್ ಯುದ್ಧಗಳಲ್ಲಿ ಕ್ರೈಸ್ತರಿಗೆ ವಿರುದ್ಧವಾಗಿ ನಿಂತ) ಮಹಮ್ಮದೀಯ, ಮುಸಲ್ಮಾನರವನು. [S. corn ಒಂದು ಧಾನ್ಯ (=Buckwheat). S.'s head (ವಂಶಲಾಂಛನದ ಅಥವಾ ಪ್ರಯಾಣಿಕರ ತಂಗುದಾಣದ ಗುರುತಾಗಿ) ಮುಸಲ್ಮಾನನ ತಲೆ]. (ಗು.) ಮುಸಲ್ಮಾನರ ; (ಮು., ವಾಸ್ತುಶಿಲ್ಪದ ವಿಷಯದಲ್ಲಿ) ಮುಸಲ್ಮಾನರ ಪದ್ಧತಿಯ [=**Saracénic** (ಗು.)]

Saratóga (trunk) ಸ್ಯಾರಟೋಗ (ಟ್ರಂಕ್) (ನಾ.) ವಿಶೇಷವಾಗಿ ಮಹಿಳೆಯರು ಉಪಯೋಗಿಸುವ, ಪ್ರಯಾಣದ ದೊಡ್ಡ ಪೆಟ್ಟಿಗೆ, ಟ್ರಂಕು.

Sárcasm ಸಾರ್‌ಕ್ಯಾಸ್ಮ್ (ನಾ.) (ಮು., ವ್ಯಂಗ್ಯವಾಗಿ ಆಡಿದ) ಕಹಿಯಾದ, ಮನ ನೋಯಿಸುವ, ಕೆಣಕುವ, —ಮಾತು, ನುಡಿ ; ಕಟು, ಚುಚ್ಚು, —ಮಾತು, ಹಾಸ್ಯ, ನುಡಿ (ಆಡುವುದು) ; ಕೊರಚಾಟ, ಅಣಕ. **Sárcast** ಸಾರ್‌ಕ್ಯಾಸ್ಟ್ (ನಾ.) (ವಿರ. ಪ್ರ.) ಅಣಕನುಡಿಗಾರ, ಕಟುಹಾಸ್ಯಗಾರ. **Sarcástic** (ಗು.) ಕೊರಚಾಟದ, ಕಟುವಾದ, ಅಣಕದ. **Sarcástically** (ಕ್ರಿ. ವಿ.)

Sarcélle ಸಾರ್ಸೆಲ್ (ನಾ.) ಹಲವು ಬಗೆಯ ಸಣ್ಣ ಬಾತು(ಕೋಳಿ)

Sárcenet. **Sarsenet** ನೋಡಿ.

Sárco- ಸಾರ್ಕೊ—, **Sarcó-** ಸರ್ಕಾ— (ಸ. ಪೂ. ಪ.) ಮಾಂಸ—. **-logy** ದೇಹದ ಮಾಂಸ ಭಾಗಗಳ ಅಂಗರಚನಾ ಶಾಸ್ತ್ರ : ಮಾಂಸವಿಜ್ಞಾನ, ಮಾಂಸಾಂಗ ವಿಜ್ಞಾನ. **-plasm** ಸ್ನಾಯು ತಂತುಗಳ ಮಧ್ಯದಲ್ಲಿರುವ ಒಂದು ಕಾಚದ್ರವದಂಥ ಪದಾರ್ಥ : ಸ್ನಾಯು—ಜೀವದ್ರವ್ಯ, ಅಂಗಾಂಶ.

Sárcode ಸಾರ್ಕೋಡ್ (ನಾ.) ಪ್ರಾಣಿಯ ಜೀವದ್ರವ್ಯ.

Sarcóma ಸಾರ್ಕೋಮ (ನಾ. ; ಬ. ವ. -mata —ಮಟ) ಮಾಂಸ (ಅಂಗಾಂಶದ) ಗಡ್ಡೆ, ಗಂತಿ.

Sarcóphagus ಸಾರ್ಕಾಫಗಸ್ (ನಾ. ; ಬ. ವ. -gi —ಜೈ, —ಗೈ) (ಚಿತ್ರ, ಲಿಪಿ, ಮೊ. ನ್ನು ಕೊರೆದ) ಕಲ್ಲಿನ ಶವ ಸಂಪುಟ.

Sárcous ಸಾರ್ಕಸ್ (ಗು.) ಮಾಂಸದ ; —ದಿಂದ ಕೂಡಿದ ; ಸ್ನಾಯುವಿನ.

Sard ಸಾರ್ಡ್ (ನಾ.) ಹಳದಿ ಅಥವಾ ಕಿತ್ತಿಳೆ ಬಣ್ಣದ 'ಕಾರ್ನಿಲಿಯನ್' ಪ್ರಶಸ್ತಶಿಲೆ.

Sardanapálian ಸಾರ್ಡನಪೇಲಿಯನ್ (ಗು.) (ಭೋಗಲಾಲಸನೂ ಸ್ತ್ರೈಣನೂ ಎಂದು ಪ್ರಸಿದ್ಧನಾದ, ಅಸ್ಸೀರಿಯಾ ದೇಶದ ದೊರೆ) ಸಾರ್ಡನಪೇಲಸ್ ಎಂಬಾತನ(ಂಥ) ; ಭೋಗಲಾಲಸೆಯ ; ಸ್ತ್ರೈಣ.

Sardélle ಸಾರ್ಡೆಲ್ (ನಾ.) ಸಾರ್ಡೀನ್ ಜಾತಿಯ ಒಂದು ಮೀನು.

Sárdine[1] ಸಾರ್ಡೈನ್ (ನಾ.) ಒಂದು ಪ್ರಶಸ್ತಶಿಲೆ.

Sardíne[2] ಸಾರ್ಡೀನ್ (ನಾ.) (ಸಾರ್ಡೀನಿಯ ಮತ್ತು ಬ್ರಿಟನಿಗಳ ಕರೆಯಾಚೆ ದೊರೆಯುವ, ಡಬ್ಬಗಳಲ್ಲಿ ಎಣ್ಣೆಯಲ್ಲಿ ಊರಹಾಕಿ ಉಪಯೋಗಿಸುವ) ಹೆರಿಂಗ್ ಜಾತಿಯ ಮೀನು ; ಸಾರ್ಡೀನ್ ಮೀನು [Is packed like sardines (ಜನಸಂದಣಿಯ ವಿಷಯದಲ್ಲಿ) ಸಾರ್ಡೀನ್ ಮೀನಿನಂತೆ ಕಿಕ್ಕಿರಿದಿದೆ]

Sardínian ಸಾರ್ಡಿನಿಯನ್ (ಗು., ನಾ.) ಸಾರ್ಡಿನಿಯ ದ್ವೀಪದ(ವನು), ರಾಜ್ಯದ(ವನು)

Sardónic ಸಾರ್ಡಾನಿಕ್ (ಗು.) (ನಗು, ಹಾಸ್ಯ, ವಿನೋದ, ಮೊ. ಗಳ ವಿಷಯದಲ್ಲಿ) ಕಟುವಾದ, ವಿಕಟ, ಹಳಿಯುವ, ಜರೆತದ. **Sardónically** (ಕ್ರಿ. ವಿ.)

Sárdonyx ಸಾರ್ಡೊನಿಕ್ಸ್ (ನಾ.) ಸಾರ್ಡ್ ಪ್ರಶಸ್ತಶಿಲೆಯ ಪದರವೂ ಬಿಳಿ ಶಿಲೆಯ ಪದರವೂ ಪರ್ಯಾಯವಾಗಿ ಬರುವ ಒಂದು ಬಗೆಯ ಗೋಮೇದಿಕ ; ಸಾರ್ಡ್ ಗೋಮೇದಿಕ.

Sargásso ಸಾಗ್ಯಾರ್ಸೊ (ನಾ. ; ಬ. ವ. -oes, -os) ಅಟ್ಲಾಂಟಿಕ್ ಸಾಗರದ 'ಗಲ್ಫ್ ಸ್ಟ್ರೀಮ್' ಎಂಬ ಉಷ್ಣೋದಕ ಪ್ರವಾಹದಲ್ಲಿಯೂ ಸಾರ್‌ಗ್ಯಾಸೊ ಸಮುದ್ರ (S. sea) ಎಂದು ಹೆಸರುಗೊಂಡಿರುವ ಅಟ್ಲಾಂಟಿಕ್ ಸಾಗರದ ಉತ್ತರ ಭಾಗದಲ್ಲಿಯೂ ದ್ವೀಪಗಳಂತೆ ಒಟ್ಟರೊಟ್ಟಿಲಾಗಿ ತೇಲುವ ಸಮುದ್ರದ ಕಳೆ, ಜೊಂಡು.

Sári, Sáree ಸಾರಿ (ನಾ.) ಸೀರೆ.

Sark ಸಾರ್ಕ್ (ನಾ.) (ಸ್ಕಾ. ಪ್ರ.) ಷರಟು, ಜುಬ್ಬ ; ಒಳ ಕುಪ್ಪಸ. **Sárking** (ನಾ.) ತೀರುಗಳಿಗೂ ಚಾವಣಿಗೂ ನಡುವಣ ಹಲಗೆಗಳು ; ಚಾವಣಿಯ ಹಲಗೆ ಕಟ್ಟಡ.

Sarmátion ಸಾರ್ಮೇಷ(ಷ್)ನ್ (ಗು., ನಾ.) (ಈಗ ರಷ್ಯಾ ಮತ್ತು ಪೋಲೆಂಡ್ ದೇಶಗಳಾಗಿ ಪರಿಣಮಿಸಿರುವ) ಪುರಾತನ ಸಾರ್ಮೇಷಿಯ ದೇಶದ(ವನು) ; (ಕಾವ್ಯ) ಪೋಲೆಂಡಿನ(ವನು)

Sármentose ಸಾರ್ಮೆಂಟೋಸ್, **Sarméntous** ಸಾರ್ಮೆಂಟಸ್ (ಗು.) (ಸ. ವಿ.) ಉದ್ದವಾಗಿಯೂ ತೆಳ್ಳಗೂ ಇರುವ ಹಬ್ಬು ಕಾಂಡಗಳುಳ್ಳ ; ಹರಿ ತಾಳುಗಳುಳ್ಳ.

Sarsaparílla ಸಾರ್ಸಪರಿಲ (ನಾ.) (ಅಮೆರಿಕದ ಉಷ್ಣ ಪ್ರದೇಶಗಳಲ್ಲಿ, ಮು., ಜಮೇಯಿಕದಲ್ಲಿ, ಬೆಳೆಯುವ) ಸೊಗದೆ ಬೇರಿನಂಥ ಸಸ್ಯ ; (ಬಲವರ್ಧಕ ಔಷಧವಾಗಿ ಉಪಯೋಗಿಸುವ) ಸೊಗದೆ ಬೇರು, ಸುಗಂಧಿ ಬೇರು ; —ಬೇರಿನ ಕಷಾಯ, ಸಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sársenet, -cenet ಸಾರ್ಸ್‌ನೆಟ್ (ನಾ.) (ಈಗ ಮು., ಅಸ್ತರಿಯಾಗಿ ಉಪಯೋಗಿಸುವ) ಒಂದು ಬಗೆಯ ನಯವಾದ ರೇಷ್ಮೆ ಬಟ್ಟೆ.

Sártor ಸಾರ್ಟರ್ (ನಾ.) ದರ್ಜಿಯವನು ; ಚಿಪ್ಪಿಗ. **Sartórial** ಸಾರ್ಟೋರಿಯಲ್ (ಗು.) ದರ್ಜಿಯವನ ; ದರ್ಜಿ ಕೆಲಸದ ; ಗಂಡಸರ ಉಡುಪಿನ.

Sash[1] ಸ್ಯಾಷ್ (ನಾ.) (ಸಮವಸ್ತ್ರದ ಭಾಗವಾಗಿ ಗಂಡಸು ಧರಿಸುವ, ಹೆಂಗಸು ಅಥವಾ ಮಗು ನಡುವಿನ ಸುತ್ತ ಧರಿಸುವ) ಅಲಂಕಾರಪಟ್ಟಿ ; ಹೆಗಲಪಟ್ಟಿ ; ನಡುಪಟ್ಟಿ. **Sáshed**[1] (ಗು.)

Sash[2] ಸ್ಯಾಷ್ (ನಾ.) ಕಿಟಕಿಯ ಗಾಡಿಗಳಲ್ಲಿ ಮೇಲಕ್ಕೂ ಕೆಳಕ್ಕೂ ಸರಿದಾಡಲು ಅನುಕೂಲಿಸುವಂತೆ ಅಳವಡಿಸಿರುವ, ಗಾಜಿನ ಹಲಗೆಗಳು ಹಾಕಿದ, ಸಾ., ಮರದಿಂದ ಮಾಡಿದ ಕಿಟಕಿ ಕದದ ಚೌಕಟ್ಟು : ಕಿಟಕಿಯ ಜಾರುಕದದ ಚೌಕಟ್ಟು ; ಸಸ್ಯಗೃಹದ ಅಥವಾ ಸಸ್ಯ ಚೌಕಟ್ಟಿನ ಗಾಜಿನ ಜಾರು ಕಿಟಕಿ. (ವಿರ. ಪ್ರ.) ತಿರುಗಣಿ ಕಿಟಕಿ. [S.-cord, -line ಕಿಟಕಿಯ ಜಾರು ಬಾಗಿಲುಗಳಿಗೆ ತೂಗುಭಾರಗಳನ್ನು ಕಟ್ಟುವ ಬಲವಾದ ಹಗ್ಗ, ಹುರಿ ; ತೂಗುಭಾರದ ಹುರಿ. S.-pocket ಕಿಟಕಿ ಚೌಕಟ್ಟಿನಲ್ಲಿ ತೂಗುಭಾರಗಳು ಸರಿದಾಡಲು ಮಾಡಿರುವ ಅವಕಾಶ : ತೂಗುಭಾರ ಸರಿಯುವ ಕಂಡಿ. S.-pulley ತೂಗುಭಾರದ ಹುರಿ ಹಾಯ್ದಿರುವ ಕಪ್ಪಿ. S.-tool ಗಾಜುಹಾಕುವವನ, ವರ್ಣಚಿತ್ರಕಾರನ, ಹಲವು ಬಗೆಯ ಕುಂಚಿಗೆ. S.-weight ಜಾರು ಬಾಗಿಲುಗಳನ್ನು ಯಾವ ಎತ್ತರದಲ್ಲಿ ಬೇಕಾದರೆ ಆ ಎತ್ತರದಲ್ಲಿ ನರಿಸಿ ನಿಲ್ಲಿಸಲು ಅನುಕೂಲಿಸುವಂತೆ ಕಿಟಕಿಯ ಕದಕ್ಕೆ ಕಟ್ಟಿರುವ ಭಾರ : ತೂಗುಭಾರ. S.-window ಜಾರು ಬಾಗಿಲ ಕಿಟಕಿ]. **Sáshed**[2] (ಗು.) ; **Sáshless** (ಗು.)

Sásin (ನೇಪಾಳ ಭಾಷೆ) ಸ್ಯಾಸಿನ್ (ನಾ.) ಹಿಂದೂ ದೇಶದ ಜಿಂಕೆ ; ಚಿಗರಿ.

Sassáby ಸಸೇಬಿ (ನಾ.) ದ. ಆಫ್ರಿಕದ ದೊಡ್ಡ ಜಾತಿಯ ಜಿಂಕೆ

Sássafras ಸ್ಯಾಸಫ್ರಾಸ್ (ನಾ.) ಔಷಧೋಪಯುಕ್ತವಾದ ತೊಗಟೆ ಯುಳ್ಳ, ಉ. ಅಮೆರಿಕದ, ಸಣ್ಣ ಜಾತಿಯ ಒಂದು ಮರ ; ಇದರ ತೊಗಟೆ(ಯ ಕಷಾಯ)

Sassánian ಸ್ಯಾಸೇನಿಯನ್, **Sássanid** ಸ್ಯಾಸನಿಡ್ (ನಾ., ಗು.) (ಕ್ರಿ. ಶ. ೨೧೧-೬೫೧ ರ ವರೆಗೆ ಪಾರಸೀ ಸಾಮ್ರಾಜ್ಯವಾಳಿದ) ಸಾಸಾನ್ ಮನೆತನದ [ವನು (ಮು., ದೊರೆ)]

Sássenach ಸ್ಯಾಸೆನಾಖ್ (ನಾ., ಗು.) (ಸ್ಕಾ. ಪ್ರ. ಮತ್ತು ಐರಿಷ್ ಪ್ರ.) ಇಂಗ್ಲಿಷ್ ; ಇಂಗ್ಲಿಷಿನವನು.

Sat. Sit ಧಾತುವಿನ ಭೂತ ಮತ್ತು ಭೂ. ಕೃ.

Sátan ಸೇಟನ್ (ನಾ.), (ಪ್ರಾಚೀ. ಪ್ರ.) **Sátanas** ಸ್ಯಾಟನ್ಯಾಸ್ (ನಾ.) ಪಾಪ ಪುರುಷ ; ಭಗವದ್ವೈರಿ ; (ಮನುಷ್ಯನನ್ನು ಪಾಪಕ್ಕೆ ಪ್ರೇರಿಸಿ ದೈವಭಕ್ತಿಯನ್ನು ತಪ್ಪಿಸಿ ಭ್ರಷ್ಟನನ್ನಾಗಿ ಮಾಡಿದ) ಸೈತಾನ. **Satánic(al)** ಸಟ್ಯಾನಿಕ್(ಕಲ್) (ಗು.) ಸೈತಾನಿನ(ಂಥ) ; ಪೈಶಾಚಿಕ ; ಕ್ರೂರ, ಕಠೋರ [His S. majesty ಸೈತಾನ ಮಹಾಪ್ರಭು. S. school (ದೈವನಿಷ್ಠೆ, ಮೊ. ನ್ನು ಧಿಕ್ಕರಿಸಿದವರೆಂಬು) ಬೈರನ್, ಷೆಲ್ಲಿ ಮತ್ತು ಅವರ ಅನುಕರಣಕಾರರ ಪಂಥ(ಕ್ಕೆ Southey ಕವಿ ಇಟ್ಟ ಹೆಸರು): ದೈವಭ್ರಷ್ಟ ಪಂಥ, ಸೈತಾನ ಪಂಥ]. **Satánically** (ಕ್ರಿ. ವಿ.) ; **Sátanism** ಸೇಟನಿಸ್ಮ್ (ನಾ.) ಸೈತಾನೀ ಪ್ರವೃತ್ತಿ ; ಪೈಶಾಚಿಕ ಪ್ರವೃತ್ತಿ ; ಪಿಶಾಚ ವರ್ತನೆ ; ಘೋರ ದೌಷ್ಟ್ಯ. (ಷೆಲ್ಲಿ, ಮೊ. ರ) ಸೈತಾನ ಪಂಥದ ಲಕ್ಷಣ. ಸೈತಾನಾರಾಧನೆ. **Sátanist** (ನಾ.) ಸೈತಾನೀ ಪ್ರವೃತ್ತಿಯವನು. **Sátanize** (ಕ್ರಿ. ಸಕ.); **Satanólogy** ಸೇಟನಾಲೊಜಿ (ನಾ.) ಸೈತಾನ —ಚರಿತ್ರೆ, ಶಾಸ್ತ್ರ.

Satára ಸಟಾರ (ನಾ.) ಅಡ್ಡನಾದ ಉಬ್ಬೆಳೆಗಳುಳ್ಳ, ಭಾರವಾದ, ಒಂದು ಬಗೆಯ ಬನಾತ್ ಬಟ್ಟೆ ; ಸತಾರ ಬಟ್ಟೆ (ದ. ಇಂಡಿಯದ ಸತಾರ ಸಂಬಂಧದಿಂದ)

Sátchel ಸ್ಯಾಚೆಲ್, —ಚ್‌ಲ್ (ನಾ.) ಸಾ., ಚರ್ಮದಿಂದ ಮಾಡಿದ, ಭುಜಕ್ಕೆ ತೂಗಹಾಕಲು ಪಟ್ಟಿಯುಳ್ಳ, ಮು., ಶಾಲೆಗೆ ಹೋಗಿ ಬರುವಾಗ ಪುಸ್ತಕ, ಮೊ. ನ್ನು ಹಾಕಿಕೊಂಡು ಹೋಗುವ, ಸಣ್ಣ ಚೀಲ ; (ಹುಡುಗರ) ಸ್ಲೇಟು ಪುಸ್ತಕಗಳ ಚೀಲ. **Sátchelled** (ಗು.)

Sate ಸೇಟ್ (ಕ್ರಿ. ಸಕ.) (ಆಸೆಯನ್ನು, ಆಸೆಯುಳ್ಳ ಮನುಷ್ಯನನ್ನು) ತೃಪ್ತಿಗೊಳಿಸು, ಸಂತೃಪ್ತಮಾಡು, ತಣಿಸು ; ಕಟ್ಟರೆ ಹಿಡಿಸು, ವೆಗಟಿಸು, ಕಟ್ಟಡಚು (Sated *with*). **Sáteless** (ಗು.) (ಕಾವ್ಯ) ತೃಪ್ತಿಪಡಿಸಲಾಗದ, ತಣಿಯದ. **Sátiate**[1] ಸೇಷಿಯೆಟ್, ಸೇಷ್ಯೆಟ್ (ಗು.) ತೃಪ್ತ, ತಣಿದ ; ಕಟ್ಟರೆ ಹಿಡಿದ, ವೆಗಟಾದ. **Sátiate**[2] ಸೇಷಿಏಟ್ (ಕ್ರಿ.) =Sate. **Sátiable** ಸೇಷಿಅಬ್‌ಲ್, ಸೇಷಬ್‌ಲ್ (ಗು.) (ವಿರ. ಪ್ರ.) ; **Satiátion** ಸೇಸಿ(ಷಿ)ಏಷನ್ (ನಾ.) ಸಂತೃಪ್ತಿ, ತಣಿವು, ಕಟ್ಟರೆ, ವೆಗಟು. **Satíety** ಸಶೈಏಟಿ (ನಾ.) ಹೊಟ್ಟೆಬಿರಿಯ ತೃಪ್ತಿ, ಕಟ್ಟರೆ, ವೆಗಟು (To s. ವೆಗಟಾಗುವಷ್ಟು). (ವಿರ. ಪ್ರ.) ಅತಿಸಮೃದ್ಧಿ ; ತುಂಬು ತುಳುಕು.

Sateén ಸಟೀನ್ (ನಾ.) ನಯವಾದ ಹೊಳಪು ಮೇಲ್ಮೈಯುಳ್ಳ ಹತ್ತಿಯ ಅಥವಾ ಉಣ್ಣೆಯ ಬಟ್ಟೆ ; ಸಾಟೀನು ಬಟ್ಟೆ.

Sátellite ಸ್ಯಾಟೆಲೈಟ್ (ನಾ.) (ಒಬ್ಬನ) ಅನುಯಾಯಿ, ಅನುಚರ, ಬೆಂಬಳಿಗ, ಆಶ್ರಿತ ; (ದೊಡ್ಡಮನುಷ್ಯನ) ಕಿಂಕರ, ಕೈಕೆಳಗಿನವನು, ಪರಿವಾರದವನು. (ಮತ್ತೊಂದು ಗ್ರಹದ ಸುತ್ತ ತಿರುಗುವ) ಉಪಗ್ರಹ (ರೂಪ. ಸಹ). **Satellític** —ಲಿಟಿಕ್ (ಗು.)

Sáti. Suttee ನೋಡಿ.

Sátiate, etc., Satíety. Sate ನೋಡಿ.

Sátin ಸ್ಯಾಟಿನ್ (ನಾ., ಗು., ಕ್ರಿ. ಸಕ.) ಒಂದು ಪಕ್ಕ ನಯವಾದ ಮೇಲ್ಮೈಯುಳ್ಳ ಒಂದು ಬಗೆಯ ರೇಷ್ಮೆ ಬಟ್ಟೆ : ಸಾಟಿನ್ ಬಟ್ಟೆ [Denmark s. ಮಹಿಳೆಯರ ಜೋಡಿಗೆ ಉಪಯೋಗಿಸುವ ನಯವಾದ ಒಂದು ಬಗೆಯ ಉಣ್ಣೆಯ ಬಟ್ಟೆ. White s. ಒಂದು ಬಗೆಯ ಸಸ್ಯ (=Honesty) ; ಒಂದು ಬಗೆಯ ಪತಂಗ]. (ಅಸಂ.) ಜಿನ್ ಮದ್ಯ (=White s.). (ಗು.) ಸಾಟಿನ್ ಬಟ್ಟೆಯಂತೆ ನುಣುಪಾಗಿರುವ [**S. beauty, carpet** ಹಲವು ಬಗೆಯ ಪತಂಗ. **S. cloth** ಸಾಟಿನಿನಂಥ (ನೆಯ್ಗೆಯುಳ್ಳ) ಉಣ್ಣೆಯ ಬಟ್ಟೆ. **S. finish** ಲೋಹ ಕೂರ್ಚದಿಂದ ಬೆಳ್ಳಿಗೆ ಕೊಟ್ಟ ಹೊಳಪು : ಸಾಟಿನ್—ಹೊಳಪು, ಮೆರುಗು. **S.-flower** ಹಲವು ಬಗೆಯ ಸಸ್ಯ (Honesty, ಮೊ. ವು). **S. gypsum** ನಾರು ನಾರಾದ, ಮುತ್ತಿನ ಹೊಳಪುಳ್ಳ, ಒಂದು ಬಗೆಯ ಜಿಪ್ಸಂ. **S. paper** ನುಣುಪಾದ ಹೊಳಪುಳ್ಳ ಬರೆವಣಿಗೆಯ ಕಾಗದ; ರೇಷ್ಮೆ (ನುಣುಪಿನ) ಕಾಗದ. **S. pug, pygmy** ಹಲವು ಬಗೆಯ ಪತಂಗ. **S. sheeting** ಕಳಪೆ ರೇಷ್ಮೆ ಮತ್ತು ಹತ್ತಿಯ ಮಿಶ್ರ ಬಟ್ಟೆ. **S.-spar** ನಾರು ನಾರಾದ ಕ್ಯಾಲ್ಸಿಯಂ ಕಾರ್ಬೊನೇಟು. **S.-stitch** ಕಸೂತಿ ಕೆಲಸದಲ್ಲಿ ಸಾಟಿನ್ ಮೇಲ್ಮೈಕೊಡುವ ಹೊಲಿಗೆ. **S.-stone** =S. gypsum. **S.-straw** ಟೊಪ್ಪಿಗೆಗಳನ್ನು ಮಾಡಲು ಉಪಯೋಗಿಸುವ ಮೃದುವಾದ ಬಳುಕುವ ಹುಲ್ಲು: ರೇಷ್ಮೆ ಹುಲ್ಲು. **S. white** ಕೃತಕ ಕ್ಯಾಲ್ಸಿಯಂ ಸಲ್ಫೇಟು. **S.-wood** ಉಷ್ಣ ದೇಶಗಳಲ್ಲಿ ದೊರೆಯುವ ಉತ್ತಮ ಗುಣದ ಒಂದು ಮರದ ದಾರು ; ಹುರಗಲು ಮರ]. (ಕ್ರಿ.) (ಕಾಗದ, ಬೆಳ್ಳಿ, ಮೊ. ಕ್ಕೆ) ನುಣುಪು ಮೈ, ಹೊಳಪು ಮೈ, —ಕೊಡು. **Sátiny** (ಗು.) ; **Satinétte** (ನಾ.) =Satinet. **Sátinet** (ನಾ.) ಕೃತಕ ಸಾಟಿನ್ ಬಟ್ಟೆ.

Sátire ಸ್ಯಾಟೈ(ಅ)ರ್ (ನಾ.) (ರೋ. ಪ್ರಾ.) ಬಳಕೆಯಲ್ಲಿದ್ದ ಅವಿವೇಕ ಮತ್ತು ಅನಾಚಾರಗಳನ್ನು ಖಂಡಿಸಿ ಬರೆದ ಕಾವ್ಯ. ವ್ಯಕ್ತಿಗಳನ್ನು, ಅವಿವೇಕ ಮತ್ತು ಅನಾಚಾರಗಳನ್ನು, (ಅಪ)ಹಾಸ್ಯ ಮಾಡಿ ಬರೆದ ಪದ್ಯ ಅಥವಾ ಗದ್ಯ ಪ್ರಬಂಧ: ವಿಡಂಬನ (ಕಾವ್ಯ), ಅಣಕ(ವಾಡು); ವಿಡಂಬನ ಸಾಹಿತ್ಯ. ಅಪಹಾಸ್ಯಕ್ಕೀಡುಮಾಡುವ—ವಿಷಯ, ವಸ್ತು ; ಅಪಹಾಸ್ಯಾಸ್ಪದ (Our lives are a s. upon our religion). (ಅವಿವೇಕ ಮತ್ತು ಅನಾಚಾರಗಳನ್ನು ಹೊರಗೆಳೆದು, ತಿದ್ದುವುದಕ್ಕಾಗಿ) ವಿಡಂಬನೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುಚೋದ್ಯ, ಅಪಹಾಸ್ಯ(ಮಾಡುವುದು). **Satíric** ಸಟಿರಿಕ್ (ಗು.) ವಿಡಂಬನೆಯ, ವಿಡಂಬನಾತ್ಮಕ, ವಿಡಂಬನ ಕಾವ್ಯ ಬರೆಯುವ (S. poem, poet, intent). **Satírical** ಸಟಿರಿಕಲ್ (ಗು.) = Satiric ; ವಿಡಂಬನೆ ಮಾಡುವ, ವಿಡಂಬನಶೀಲ, ಅಪಹಾಸ್ಯಕಾರಿ. **Satírically** (ಕ್ರಿ. ವಿ.); **Sátirist** ಸ್ಯಾಟಿರಿಸ್ಟ್ (ನಾ.) ವಿಡಂಬನಕಾರ ; ಅಣಕಗಾರ. **Sátirize** —ರೈಸ್ (ಕ್ರಿ. ಸಕ.) ವಿಡಂಬನೆ, ಕಟುಹಾಸ್ಯ, —ಮಾಡು ; ವಿಡಂಬನ ಕಾವ್ಯ, ಅಣಕವಾಡು, —ಬರೆ.

Sátis (L) ಸ್ಯಾ(ಸೇ)ಟಿಸ್ (ಕ್ರಿ. ವಿ., ನಾ.) ಸಾಕು, ಸಾಕಷ್ಟು. Jam s. ಆಗಲೆ ಸಾಕಷ್ಟು. S. superque ಸಾಕು ಸಾಕಾದಷ್ಟು ; ಸಾಕಷ್ಟಲ್ಲದೆ ಮಿತಿಮೀರಿ.

Sátisfy ಸ್ಯಾಟಿಸ್‌ಫೈ (ಕ್ರಿ.) [ಸಾಲವನ್ನು, (ವಿರ. ಪ್ರ.) ಸಾಲಗಾರನಿಗೆ] ಕೊಟ್ಟುಬಿಡು, ತೀರಿಸಿಬಿಡು ; (ಷರತ್ತನ್ನು, ವಾಗ್ದಾನವನ್ನು) ನೆರವೇರಿಸು, ಪಾಲಿಸು ; (ಕೋರಿಕೆಯನ್ನು) ಈಡೇರಿಸು, ಸಫಲಗೊಳಿಸು. (ಯೇಸು ಕ್ರಿಸ್ತನ ವಿಷಯದಲ್ಲಿ) ಮನುಷ್ಯರ ಪಾಪಗಳಿಗಾಗಿ ಪ್ರಾಯಶ್ಚಿತ್ತ ಮಾಡಿಕೊ. (ನಿರೀಕ್ಷೆ, ಅಪೇಕ್ಷೆ) ತೃಪ್ತಿಗೊಳಿಸು, ಸಫಲಗೊಳಿಸು ; (ಭಾವನೆ, ಮುನ್ನೆಣಿಕೆ, ಮೊ. ಗಳಿಗೆ) ಸರಿಹೋಗು ; (ಒಬ್ಬನಿಗೆ, ಅವನ ಅಭಿರುಚಿಗೆ) ಸಾಕೆಂದು ಒಪ್ಪಿಗೆಯಾಗಿರು, ತೃಪ್ತಿಕರವಾಗಿರು, ತೃಪ್ತಿಪಡಿಸು [S. the examiners (ವಿ. ವಿ. ನಿ. ಗಳಲ್ಲಿ) (ಘನ ಪಾಂಡಿತ್ಯವಿಲ್ಲದೆ) ಸಾಮಾನ್ಯ ತೇರ್ಗಡೆ ಹೊಂದು, ಪರೀಕ್ಷಕರ ಸಾಮಾನ್ಯ ಒಪ್ಪಿಗೆ ಪಡೆ]. (ಕರ್ಮಣಿ) ತೃಪ್ತಿಪಡು, ತೃಪ್ತನಾಗು (*With* ಉಪ. ದೊಡನೆ); ಸಾಕೆಂದು ಭಾವಿಸು (Rest satisfied ತೃಪ್ತಿಪಟ್ಟುಕೊಂಡು ಸುಮ್ಮನಿರು). ತೃಪ್ತಿಕೊಡು, ತೃಪ್ತಿಕರವಾಗಿರು. (ಹಸಿವು, ಅಪೇಕ್ಷೆ, ಮೊ. ನ್ನು) ತೃಪ್ತಿಪಡಿಸು, ತುಷ್ಟಿಪಡಿಸು. (—ಎಂಬುದಕ್ಕೆ, ಎಂದು) ತಕ್ಕಷ್ಟು ರುಜುವಾತು ಒದಗಿಸು, ಮನದಟ್ಟುಮಾಡಿಕೊಡು, ಖಾತ್ರಿ ಮಾಡಿಕೊಡು (S. oneself ಖಾತ್ರಿಮಾಡಿಕೊ, ಖಂಡಿತ—). (ಆಕ್ಷೇಪಣೆಗೆ, ಸಂದೇಹಕ್ಕೆ) ಸಮಾಧಾನಕೊಡು,—ಕೊಟ್ಟು ಪರಿಹರಿಸು. **Sátisfiable** (ಗು.) ; **Sátisfying** (ಗು.) ; **Sátisfyingly** (ಕ್ರಿ. ವಿ.) ; **Satisfáction** (ನಾ.) (ಕ್ರಿಯಾರ್ಥಗಳಲ್ಲಿ) ; ಸಮಾಧಾನ, ಪರಿಹಾರ, ಪ್ರಾಯಶ್ಚಿತ್ತ (*For* ಉಪ. ದೊಡನೆ) ; (ನಷ್ಟ) ಪರಿಹಾರವಾಗಿ ಪಡೆದದ್ದು, ತೆಗೆದುಕೊಂಡದ್ದು. (ಮತ) (ವಿಧಿಪೂರ್ವಕವಾಗಿ ಪಾಪಿ ಮಾಡಿಕೊಳ್ಳುವ) ಪ್ರಾಯಶ್ಚಿತ್ತ ; (ದೇವ. ಶಾ. ; ಮನುಷ್ಯರ ಪಾಪಗಳಿಗಾಗಿ) ಕ್ರಿಸ್ತನು ಮಾಡಿಕೊಂಡ ಪ್ರಾಯಶ್ಚಿತ್ತ [Make s. In s. of. Enter s. (ನ್ಯಾ. ಶಾ.) ಪರಿಹಾರ ಸಂದಿದೆಯೆಂದು ನ್ಯಾಯಸ್ಥಾನದ ದಾಖಲೆಯಲ್ಲಿ ಬರೆ. Christ is the s. for our sins]. (ಮಾನನಷ್ಟ ಮಾಡಿದವನ ಮೇಲೆ) ದ್ವಂದ್ವ ಯುದ್ಧ(ದ ಅವಕಾಶ) (Give, demand, s.). ನೆರವೇರಿಕೆ ; ತೃಪ್ತಿ, ಸಮಾಧಾನ (ಪಡೆಯುವುದು, ಮಾಡುವುದು, ಮಾಡುವಂಥದು) (Find s. in. If you can prove it to my s.). **Satisfáctory** —ಫ್ಯಾಕ್ಟರಿ (ಗು.) (ದೇವ. ಶಾ.) ಪ್ರಾಯಶ್ಚಿತ್ತಾರ್ಥ. ತೃಪ್ತಿಕರ ; ಸಮಾಧಾನಕರ ; ಒಪ್ಪುವ ; ಯುಕ್ತ ; ಸಮರ್ಪಕ; ಸಾಕಾದ (S. proof). **Satisfáctorily** (ಕ್ರಿ. ವಿ.) ; **Satisfáctoriness** (ನಾ.)

Sátrap ಸ್ಯಾಟ್ರ್ಯಾಪ್ (ನಾ.) ಪ್ರಾಚೀನ ಪಾರಸಿಕ ಸಾಮ್ರಾಜ್ಯದಲ್ಲಿ ಪ್ರಾಂತ ಆಡಳಿತಾಧಿಕಾರಿ, ಮಾಂಡಲಿಕ : ಕ್ಷತ್ರಪ [**Sátrapy** (ನಾ.) —ಅಧಿಕಾರ] (ಆಧುನಿಕ ಪ್ರ.) ಕೈಕೆಳಗಿನ ಪ್ರಾಂತಾಧಿಕಾರಿ, ನೆಲಸು ನಾಡಿನ ಆಡಳಿತಾಧಿಕಾರಿ ; ಪಾಳೆಯಗಾರ (ಮು., ಅಲಂ., ಭೋಗ ಮತ್ತು ದಬ್ಬಾಳಿಕೆಗಳ ಅರ್ಥಗರ್ಭಿತವಾಗಿ)

Sátsuma (ware) ಸ್ಯಾಟ್‌ಸ್ಯುಮ (ವೇರ್) (ನಾ.) ಬಾದಾಮಿ ಬಣ್ಣದ, ಎಳಹಳದಿ ಬಣ್ಣದ, —ಮಣ್ಣಿನ ಸಾಮಾನುಗಳು (ಜಪಾನ್ ದೇಶದ ಒಂದು ಪ್ರಾಂತದ ಹೆಸರಿನಿಂದ)

Sáturate ಸ್ಯಾಟ್ಯುರೇಟ್, —ಚ— (ಕ್ರಿ.) ಪೂರಿತಮಾಡು ; ಪೂರ್ತಿ —ತುಂಬು, ನೆನಸು ; ಊರಿಸು, ವ್ಯಾಪನಗೊಳಿಸು (*With* ಉಪ. ದೊಡನೆ) ; (ಒಂದು ವಸ್ತುವಿನಲ್ಲಿ ಮತ್ತೊಂದು ಪದಾರ್ಥವನ್ನು, ವಾಯುವಿನಲ್ಲಿ ತೇವವನ್ನು, ಲೋಹದಲ್ಲಿ ಕಾಂತತೆ ಅಥವಾ ವಿದ್ಯುತ್ತನ್ನು) ಪರಮಾವಧಿ ಪ್ರಮಾಣದಲ್ಲಿ ಪೂರಣಮಾಡು : ಸಂಪೂರಣಮಾಡು. (ಭೂ. ಕ್ರ., ಬಣ್ಣದ ವಿಷಯದಲ್ಲಿ) ಬಿಳಿಪು ಮಿಶ್ರವಿಲ್ಲದ ; ಅಚ್ಚ ; ಗಾಢ. (ಕ್ರಿ. ಅಕ.) ಉನಿ, ನೆನೆ. **Sáturate** —ರೆಟ್ (ಗು.) (ಕಾವ್ಯ, ಬಣ್ಣದ ಅರ್ಥ ವಿನಾ) ; **Sáturable** (ಗು.) ; **Sáturation** (ನಾ.)

Sáturday ಸ್ಯಾಟರ್‌ಡೇ(ಡಿ) (ನಾ.) ವಾರದ ಏಳನೆಯ ದಿನ : ಶನಿವಾರ [Holy, Hospital, S. (ಆಯಾ ಪದವನ್ನು ನೋಡಿ). S.-to-Monday = Week-end (Week ನೋಡಿ)]

Sáturn ಸ್ಯಾಟರ್ನ್ (ನಾ.) (ರೋ. ಪ್ರಾ.) (ಸಂಪತ್ತಿನಿಂದಲೂ ಸರಳತೆಯಿಂದಲೂ ಕೂಡಿದ್ದ ಸುವರ್ಣಯುಗದಲ್ಲಿ ಪ್ರಪಂಚದ ಒಡೆಯನಾಗಿದ್ದ, ಗ್ರೀಕರ ಜ್ಯೂಸ್ ದೇವತೆಯ ತಂದೆಯಾದ ಕ್ರೋನಸ್ಸೇ ಎಂದು ಈಚೆಗೆ ಗುರುತಿಸಿರುವ) ಇಟ್ಯಾಲಿಯನ್ನರ ವ್ಯವಸಾಯಾಧಿದೇವತೆ. (ಖ. ವಿ.) (ಎಂಟು ಉಪಗ್ರಹಗಳನ್ನೂ ಚಪ್ಪಟೆಯಾದ ಒಂದು ವಲಯವನ್ನೂ ಉಳ್ಳ) ಶನಿ ಗ್ರಹ. (ರಸ ವಾದ) ಸೀಸ(ಕ್ಕೆ ಹೆಸರು). **Saturnália** (ನಾ., ಬ. ವ.) (ಪ್ರಾಚೀನ ರೋಮನರ) ಸ್ಯಾಟರ್ನ್ ದೇವತೆಯ ಮಹೋತ್ಸವ; ಶನೀಶ್ವರ ಹಬ್ಬ (ನಮ್ಮಲ್ಲಿಯ ಹೋಳಿ ಹಬ್ಬದಂಥದು ; ಈಗಿನ ಕ್ರಿಸ್ಮಸ್ ಹಬ್ಬದ ಕಾಲಕ್ಕೆ ಪೂರ್ವದಲ್ಲಿ ಆಚರಣೆಯಲ್ಲಿದ್ದುದು). (ರೂಪ.) ಸ್ವೇಚ್ಛಾಕ್ರೀಡೆಯ —ದೃಶ್ಯ, ಕಾಲ (ಏ. ವ. ಪ್ರ.; a s. of crime). **Saturnálian** (ಗು.) ; **Satúrnian** ಸ್ಯಾಟರ್‌ನಿಯನ್ (ಗು., ನಾ.) ಶನಿ—ದೇವತೆಯ, ಗ್ರಹದ ; ಸುವರ್ಣ ಯುಗದ, ಸುಭಿಕ್ಷಕಾಲದ (S. age ಸುವರ್ಣ ಯುಗ). [S. metre, verse (ಗ್ರೀಕ್ ಛಂದಸ್ಸು ಬಳಕೆಗೆ ಬರುವ ಮೊದಲು ಲ್ಯಾಟಿನ್ ಕವಿತೆಯಲ್ಲಿ ಬಳಸುತ್ತಿದ್ದ) ಒಂದು ಬಗೆಯ ಛಂದಸ್ಸು]. (ನಾ.) ಶನಿ ಗ್ರಹ ನಿವಾಸಿ. (ಬ. ವ. ದಲ್ಲಿ) = S. verse. **Satúrnic** (ಗು.) (ರೋಗ ನಿದಾನ) ಸೀಸ ವಿಷ ಸಂಬಂಧವಾದ, —ದಿಂದ ಬಂದ. **Sáturnism** (ನಾ.) ; **Sáturnine** (ಗು.) ಮೂದೇವಿ ಬಡಿದ(ಂತಿರುವ) ; ಜೋಲು ಮೋರೆಯ ; ಜೋಪದ್ರೆಯ ; ಖಿನ್ನ ; ಚಿಂತಾಕ್ರಾಂತ. (ಮುಖಲಕ್ಷಣ) ಜಡ ಸ್ವಭಾವದ [**Sáturninely** (ಕ್ರಿ. ವಿ.)] . ಸೀಸದ (A s. poultice). ಸೀಸ ವಿಷದ, —ದಿಂದಾದ, —ದಿಂದ ನರಳುವ (S. patients, symptoms)

Sátyr ಸ್ಯಾಟರ್ (ನಾ.) ಕುದುರೆಯ ಕಿವಿಗಳನ್ನೂ ಬಾಲವನ್ನೂ ಉಳ್ಳ [(ಅಥವಾ ರೋಮನ್ನರು ಚಿತ್ರಿಸಿರುವಂತೆ ಆಡಿನ ಕಿವಿಗಳು, ಬಾಲ, ಕಾಲುಗಳು ಮತ್ತು ಮೊಳೆಯುತ್ತಿರುವ ಕೊಂಬುಗಳು ಉಳ್ಳ) ಗ್ರೀಕ್ ವನದೇವತೆಗಳ ವರ್ಗಕ್ಕೆ ಸೇರಿದ] ಮನುಷ್ಯಾಕೃತಿಯ ಒಂದು ವನದೇವತೆ : 'ಸ್ಯಾಟರ್' ದೇವತೆ. (ಪಶುವಂತೆ) ಅತಿಕಾಮಿ, ನಿರ್ಲಜ್ಜೆಯ ಕಾಮುಕ. (ವಿರ. ಪ್ರ.) ನರವಾನರ. ಒಂದು ಬಗೆಯ ಚಿಟ್ಟೆ. **Satýric** ಸ್ಯಾಟಿರಿಕ್ (ಗು.) ಸ್ಯಾಟರ್ ದೇವತೆಗಳ (ಮು., S. drama ಈ ವನದೇವತೆಗಳ ಮೇಳವುಳ್ಳ ಪ್ರಾಚೀನ ಗ್ರೀಕ್ ನಾಟಕ)

Sauce ಸಾಸ್ (ನಾ., ಕ್ರಿ. ಸಕ.) ಆಹಾರದೊಂದಿಗೆ ರುಚಿಗಾಗಿ ತೆಗೆದುಕೊಳ್ಳುವ ದ್ರವರೂಪದ ವ್ಯಂಜನ ; ಸವಿ, ಗೊಜ್ಜು, ಸಾಂಬಾರು [Bread, egg, mint, parsley, tomato, s. White s. ಕರಗಿದ ಬೆಣ್ಣೆ, ಹಿಟ್ಟು, ಮೊ. ಗಳನ್ನು ಉಳ್ಳದ್ದು. Hunger is the best s. ಹಸಿದು ಉಂಡರೆ ರುಚಿ ಬಹಳ. S. for the gander (Gander ನೋಡಿ). Serve with the same s. (ಮುಯ್ಯಿಗೆ) ಮುಯ್ಯಿ ತೀರಿಸು ; ತಕ್ಕ ಪ್ರತೀಕಾರಮಾಡು]. (ರೂಪ.) ರುಚಿ ಕೊಡುವ(ಂಥ)ದು ; ಚುರುಕು, ಉತ್ಸಾಹ, —ಕೊಡುವ(ಂಥ)ದು (Is tame without the s. of danger). (ಕೆಲವು ಕೈಗಾರಿಕೆಯ ವಿಧಾನಗಳಲ್ಲಿ ಉಪಯೋಗಿಸುವ) ಉಪ್ಪು ಮತ್ತು ಇತರ ಪರಿಕರಗಳ ದ್ರಾವಣ. ದುರಹಂಕಾರ, ಠೇಂಕಾರ, ತರೆಹರಟೆ, ಧಾರ್ಷ್ಟ್ಯ (None of your s. !). (S.-alone ಹಿಂದೆ ಪಚ್ಚಡಿಗಳಿಗೂ ಸಾಂಬಾರುಗಳಿಗೂ ರುಚಿಕಟ್ಟಲು ಉಪಯೋಗಿಸುತ್ತಿದ್ದ ಒಂದು ಬಗೆಯ ಬೇಲಿಯ ಸಸ್ಯ. S.-boat ಸಾಂಬಾರು ಬಡಿಸುವ ಪಾತ್ರೆ ; ಒಂದು ಬಗೆಯ ಗೋಮುಖಿ ಪಾತ್ರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

S.-box ತರೆಹರಟೆಯ —ಮಗು, ಮನುಷ್ಯ ; ದುರಹಂಕಾರಿ. Sauce-pan ಅಡಿಗೆಗೆ ಉಪಯೋಗಿಸುವ, ಬದಿಯಲ್ಲಿ ಉದ್ದ ಹಿಡಿಯಿರುವ, ಡಬರಿ). (ಕ್ರಿ.) (ಏಕ. ಪ್ರ.) ಮಸಾಲೆಹಾಕಿ, ವ್ಯಂಜನಗಳನ್ನು ಪ್ರಯೋಗಿಸಿ, (ಆಹಾರವನ್ನು) —ರುಚಿಕಟ್ಟು. ತಯಾರಿಸು. (ರೂಪ.) ಹಿತಕರವಾಗಿ ಮಾಡು ; ರುಚಿಯಾಗಿಸು. (ಗ್ರಾಮ್ಯ ; ಒಬ್ಬನೊಡನೆ) ಧಾರ್ಷ್ಟ್ಯದಿಂದ, ದುರಹಂಕಾರದಿಂದ, ನಡೆದುಕೊ. **Saúceless** (ಗು.); **Saúcy** ಸಾಸಿ (ಗು.) ಹಿರಿಯರನ್ನು ಲಕ್ಷಿಸದ, ಅಮರ್ಯಾದೆಮಾಡುವ ; ಉದ್ಧತ ; ಧೃಷ್ಟ. (ಅನಂ.) (ಹಡಗಿನ ವಿಷಯದಲ್ಲಿ) ಠೀಕಾಗಿಯೂ ಚುರುಕಾಗಿಯೂ ಇರುವ ; ಅಚ್ಚುಕಟ್ಟಾದ. **Saúcily** (ಕ್ರಿ. ವಿ.) ; **Saúciness** (ನಾ.)

Saúcer ಸಾಸರ್ (ನಾ.) ತುಂಬು ಬಟ್ಟಲಿನ ದ್ರವ ಕೆಳಗೆ ಚೆಲ್ಲದಂತೆ ಬಟ್ಟಲನ್ನು ಇಡುವ ಸಣ್ಣ ತಟ್ಟೆ: ಬಟ್ಟಲ ತಟ್ಟೆ [**S. eye** ದೊಡ್ಡ ದುಂಡ ಕಣ್ಣು ; ದೊಗಸೆಗಣ್ಣು. **Saucer-eyed** (ಗು.)]. ನೀರೆಲ್ಲಾ ಒಡನೆಯೆ ಹರಿದುಹೋಗದಂತೆ ತಡೆಯಲು ಹೂವಿನ ಕುಂಡದ ಕೆಳಗೆ ಇಡುವ ಪಾತ್ರೆ. ಸಣ್ಣ ತಟ್ಟೆ. **Saúcerful** (ನಾ.) ; **Saúcerless** (ಗು.)

Saúcy. **Sauce** ನೋಡಿ.

Saul. **Sal** ನೋಡಿ.

Saúnders. **Sanders** ನೋಡಿ.

Saúnter ಸಾಂಟರ್ (ಕ್ರಿ. ಅಕ., ನಾ.) ಗೊತ್ತುಗುರಿಯಿಲ್ಲದೆ, ಆರಾಮವಾಗಿ, ಸಾವಕಾಶವಾಗಿ, ಬಿಡುವೀಸಾಗಿ, —ತಿರುಗಾಡು, ಅಡ್ಡಾಡು ; ಎಡೆಯಾಡು, ಠಳಾಯಿಸು [(ರೂಪ.) S. through life ನಿಶ್ಚಿಂತೆಯಾಗಿ, ಸುಖವಾಗಿ, —ಜೀವನ ಸಾಗಿಸು, ಕಾಲಹರಣಮಾಡು]. (ನಾ.) ಆರಾಮದ ತಿರುಗಾಟ, ಅಡ್ಡಾಟ. **Saúnterer** (ನಾ.) ; **Saúnteringly** (ಕ್ರಿ. ವಿ.)

Saúrian ಸಾರಿಯನ್ (ಗು., ನಾ.) (ಮೊಸಳೆ, ಹಲ್ಲಿ, ಮೊ. ನ್ನೊಳಕೊಂಡ) ಸರಟ ವರ್ಗದ (ಪ್ರಾಣಿ). **Saúria** ಸಾರಿಯ (ನಾ., ಬ. ವ.) ಸರಟ ವರ್ಗ. **Saúro-** (ಸ. ಪೂ. ಪ.) [**-phagous** (ಗು.) ಹಲ್ಲಿಯನ್ನು ತಿನ್ನುವ, ಸರಟ ಭಕ್ಷಕ]. **Saúroid** (ಗು., ನಾ.) ಸರಟ ಕಲ್ಪ ; ಹಲ್ಲಿಯಂಥ (ಮೀನು)

Saúry ಸಾರಿ (ನಾ.) ನಿಡು ಕೊಕ್ಕಿನ ಒಂದು ಕಡಲಮೀನು.

Saúsage ಸಾಸೆ(ಸಿ)ಜ್ (ನಾ.) (ನಣ್ಣಗೆ ಹೋಳುಮಾಡಿದ ಮಾಂಸವನ್ನು ಹೂರಣಮಾಡಿ, ಮಸಾಲೆಹಾಕಿ, ಕರುಳಿನ ಕೊಳವೆಯ ಚೀಲಕ್ಕೆ ತುಂಬಿ ಕೆಲವು ಅಂಗುಲಗಳ ಉದ್ದದ ಭಾಗಗಳನ್ನಾಗಿ ವಿಂಗಡಿಸಿದ) ಒಂದು ಬಗೆಯ ಮಾಂಸಭಕ್ಷ್ಯ, ಇಂಥ ಭಕ್ಷ್ಯದ ಒಂದು ತುಂಡು ; ಸಾಸೆಜ್. (ಸೈನಿಕ ಅನಂ.) =Kite balloon (Kite ನೋಡಿ). S.-filler, -grinder, -machine (ಸಾಸೆಜ್ ಮಾಡುವ ಸಲಕರಣೆಗಳು) : ಸಾಸೆಜ್—ಪೂರಕ, ಪೇಷಕ, ಯಂತ್ರ. S.-meat (ಸಾಸೆಜಿನಲ್ಲಿ ಉಪಯೋಗಿಸುವ, ಟರ್ಕಿ ಕೋಳಿಯಲ್ಲಿ ಹುದುಗಿಸುವ) ಹೂರಣ ಮಾಂಸ. S. roll ಹೂರಣ ಮಾಂಸವನ್ನು ಕಣಕದಲ್ಲಿಟ್ಟು ಬೇಯಿಸಿ ಮಾಡಿದ ಸಾಸೆಜ್.

Saúte (F) ಸೋಟೇ (ಗು.) (ಸ್ತ್ರೀ., -ee ; ಬ. ವ. -es, ಸ್ತ್ರೀ. -ees) ಕಾದ ಬಾಣಲೆಯಲ್ಲಿ ತುಸ ಜಿಡ್ಡು ಹಾಕಿ ಬೇಗನೆ ಕರಿದ, ಹುರಿದ.

Saúve-qui-peút (F) ಸೋವ್‌ಕೀಪ(ರ್) (ನಾ.) ಚೆಲ್ಲಾಪಿಲ್ಲಿ ಓಟ ; ದಿಕ್ಕುಪಾಲಾಗಿ, ಅಸ್ತವ್ಯಸ್ತ, —ಪಲಾಯನ.

Sávage ಸ್ಯಾವೆ(ವಿ)ಜ್ (ಗು., ನಾ., ಕ್ರಿ. ಸಕ.) (ಪ್ರಾಚೀ. ಪ್ರ.) ಕೃಷಿ ಮಾಡಿಲ್ಲದ, ಕಾಡಾದ (A s. scene). ಅಸಂಸ್ಕೃತ, ಅನಾಗರಿಕ, ಪ್ರಾಕೃತ, ಕಾಡು (S. tribes, life). ಕ್ರೂರ, ಉಗ್ರ, ಘೋರ (S. persecution, revenge, criticism). (ಬಳ. ಮಾ.) ರೇಗಿದ, ಕೆರಳಿದ, ಸಿಟ್ಟಿನ. (ವಂಶರಾಂಥನ ವಿದ್ಯೆ ; ಮನುಷ್ಯಾಕೃತಿಯ ವಿಷಯದಲ್ಲಿ) ಬತ್ತಲೆ, ನಗ್ನ. (ನಾ.) ಕಾಡುಮನುಷ್ಯ ; ಅನಾಗರಿಕ, ಕ್ರೂರ, —ಮನುಷ್ಯ ; ಕಿರಾತ. (ಕ್ರಿ.) (ಕುದುರೆಯ ವಿಷಯದಲ್ಲಿ : ಮನುಷ್ಯನನ್ನು) ಮೇಲೆ ಬಿದ್ದು ಕಚ್ಚು, ತುಳಿದುಹಾಕು (Was savaged by his horse). **Sávagely** (ಕ್ರಿ. ವಿ.) ; **Sávageness** (ನಾ.) ; **Sávagery** —ಜ್ರಿ, —ಜರಿ (ನಾ.) ಕಾಡುತನ ; ಅನಾಗರಿಕತೆ ; ಕ್ರೌರ್ಯ. **Sávagedom** (ನಾ.) ಕಾಡುಜನರು, ಅನಾಗರಿಕರು ; ಕಾಡುತನ, ಅನಾಗರಿಕತೆ.

Savánna(h) ಸವ್ಯಾನ (ನಾ.) (ಮು., ಅಮೆರಿಕದ ಉಷ್ಣ ದೇಶಗಳಲ್ಲಿ) ಮರಗಿಡಗಳಿಲ್ಲದ ಹುಲ್ಲುಮೈದಾನ ; ಹುಲ್ಲುಗಾಡು.

Savánt (F) ಸಾ(ಸ್ಯಾ)ವಾನ್, ಸ್ಯಾವ್ಯಂಟ್ (ನಾ.) ವಿದ್ವಾಂಸ, ಪಂಡಿತ (ಮು., ಪ್ರಸಿದ್ಧ ವೈಜ್ಞಾನಿಕ)

Saváte (F) ಸಾವಾಟ್ (ನಾ.) (ಮುಷ್ಟಿಯ ಜೊತೆಗೆ ಕಾಲು ತಲೆಗಳನ್ನೂ ಉಪಯೋಗಿಸಬಹುದಾದ) ಫ್ರೆಂಚರ ಒಂದು ಬಗೆಯ ಮುಷ್ಟಿ ಕಾಳಗ.

Save[1] ಸೇವ್ (ಕ್ರಿ., ನಾ.) ಕಾಪಾಡು, ಸಲಹು, ಹೊರೆ, ಉಳಿಸು, ಬದುಕಿಸು, ರಕ್ಷಿಸು, ಸಂರಕ್ಷಣೆಮಾಡು, ಪಾರುಮಾಡು, ಬಚಾಯಿಸು, ಬಿಡುಗಡೆಮಾಡು, ಬಿಡಿಸು, ತಪ್ಪಿಸು [S. me, God s. me, from my friends (ಉದ್ದೇಶ ಒಳ್ಳೆಯದಾದರೂ ಅನಾವಶ್ಯಕವೂ ಅಯುಕ್ತವೂ ಆದ ಸಹಾಯ ಅಥವಾ ಉಪಕಾರ ಮಾಡಬಂದವರ ವಿಷಯದಲ್ಲಿ) ದೇವರೇ ! ನನ್ನ ಸ್ನೇಹಿತರಿಂದ ನನ್ನನ್ನು ಪಾರುಮಾಡು. S. us ! (ಆಶ್ಚರ್ಯ ಸೂಚಕ ವಾಕ್ಯ) : ದೇವರೇ ಗತಿ ! S. one's bacon, face (ಆಯಾ ಪದವನ್ನು ನೋಡಿ). S. the situation ಕಷ್ಟದಿಂದ ಪಾರಾಗುವ ದಾರಿ ಹುಡುಕು, ಬಚಾಯಿಸು. S. appearances ಮಾನ ಬಚಾಯಿಸಿಕೊ; ಮಾನ ಬಯಲಾಗುವುದನ್ನು ತಪ್ಪಿಸಿಕೊ]. (ಕಾಲ್ಚೆಂಡಾಟ) ಎದುರಾಳಿಗಳು ಗೆಲ್ಲಂಕ ಪಡೆಯದಂತೆ, ಗೋಲುಮಾಡದಂತೆ, ತಪ್ಪಿಸು [(ನಾ.) ಹೀಗೆ ತಡೆಯುವುದು, ಬಚಾವಣೆ (A clever s.)]. ವಿಮೋಚನೆ ಮಾಡು, ಮುಕ್ತಿಕೊಡು (The saving of souls). (ವರ್ತಮಾನ ಕೃ.) ಇತರ ಲೋಪದೋಷಗಳನ್ನು ಮುಚ್ಚುವ, ಪರಿಹರಿಸುವ ; ಉದ್ಧಾರಕ, ಪರಿಹಾರಕ (By the saving grace of God. Has the saving grace of humour). (ಮುಂದಿನ ಉಪಯೋಗಕ್ಕಾಗಿ) ವೆಚ್ಚಮಾಡದೆ ಉಳಿಸು, ಕೂಡಿಡು, ಮಿಗಿಸು [S. one's breath ಉಸಿರು ಹಾಳುಮಾಡಿಕೊಳ್ಳದಿರು ; ಮೌನವಾಗಿರು. Has never saved ಎಂದೂ ಹಣ ಕೂಡಿಟ್ಟಿಲ್ಲ, ಮಿಗಿಸಿಟ್ಟಿಲ್ಲ. S. up (ಮಿತವ್ಯಯದಿಂದ) ಹಣ ಕೂಡಹಾಕು. You may s. your pains *or* trouble ನೀನು ತೊಂದರೆ ತೆಗೆದುಕೊಂಡರೂ ವ್ಯರ್ಥವಾಗುತ್ತದೆ]. ತೊಂದರೆ, ವೆಚ್ಚ, ಆವಶ್ಯಕತೆ, —ತಪ್ಪಿಸು, ಉಳಿಸು [That will s. me Rs. 50. His secretary saved him many interviews. S. the follow-on (ಕ್ರಿಕೆಟ್) ಮೊದಲನೆಯ ಸರದಿ ಮುಗಿದ ಹಿಂದೆಯೆ ಎರಡನೆಯ ಸರದಿ ಆಟವಾಡದಂತೆ ಸಾಕಾದಷ್ಟು ಗೆಲ್ಲಂಕ ಪಡೆದು ತಪ್ಪಿಸಿಕೊ. Stitch in time saves nine ಸಕಾಲದಲ್ಲಿ ಮಾಡಿದರೆ ಸಾವಿರ ಶ್ರಮ ಉಳಿದೀತು] ಹೊತ್ತಿಗೆ ಸರಿಯಾಗಿರು, ಅವಕಾಶವನ್ನು ಹಿಡಿ, ಸಂದರ್ಭ ಕಳೆದುಕೊಳ್ಳದಿರು (Write hurriedly to save the post. Shall we s. the tide ? ಉಬ್ಬರವಿಳಿತದ ಪ್ರಯೋಜನವನ್ನು ಪಡೆಯೋಣವೊ ?). ಕಾಯ್ದಿಡು, ವಿನಾಯಿತಿ ಮಾಡು [(ಮು.) Saving clause ವಿನಾಯಿತಿ ವಾಕ್ಯ, ಕಾಪು ಷರತ್ತು. Saving your reverence (Revere ನೋಡಿ). S. the mark (Mark ನೋಡಿ)]. (ವರ್ತಮಾನ ಕೃ. ಉಪ. ವಾಗಿ ಪ್ರ.) ಬಿಟ್ಟು, ಉಳಿದು, ಹೊರತು, ವಿನಾ (=Save[2]). **S.-all** ಕಡೆಯ ಚೂರು ಕೂಡ ಹಾಳಾಗದಂತೆ ಪೂರ್ತಿ ಉರಿಸುವುದಕ್ಕಾಗಿ ಮೋಂಬತ್ತಿಯನ್ನು ಮೊನಚು ಕಂಬಿಗೆ ಸಿಕ್ಕಿಸಿ ಅಳವಡಿಸಿರುವ ಸಣ್ಣ ತಟ್ಟೆ. ಜಿಪುಣ. ಹಾಳಾಗದಂತೆ, ನಷ್ಟವಾಗದಂತೆ, ತಡೆಯುವ ಸಾಧನ. **Savings-bank** ಸ್ವಲ್ಪ ಸ್ವಲ್ಪ ಠೇವಣಾತಿಗಳನ್ನು ಬಡ್ಡಿಗಾಗಿ ತೆಗೆದುಕೊಂಡು, ಠೇವಣಿದಾರರು ಹಣ ಕೂಡಹಾಕಲು ಅನುಕೂಲ ಒದಗಿಸುವ ಬ್ಯಾಂಕು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಳಿತಾಯದ ಬ್ಯಾಂಕು, ಸೇವಿಂಗ್ಸ್ ಬ್ಯಾಂಕು [Post-office s.-b. ಅಂಚೆಕಚೇರಿಯ (ಮೂಲಕ ನಡಸುವ) ಸೇವಿಂಗ್ಸ್ ಬ್ಯಾಂಕು (ಏರ್ಪಾಟು)]. **Sáv(e)able** (ಗು.); **Sáver** (ನಾ.) ರಕ್ಷಕ. ಕೂಡಹಾಕುವವನು, ಮಿತವ್ಯಯಿ. **-saver** (ನಾ.); **-saving** (ಗು.); **Sáving** (ನಾ.) (ನಾ., ಬ. ವ. ದಲ್ಲಿ) ಕೂಡಹಾಕುವುದು, ಕೂಡ ಹಾಕಿದ್ದು; ಕ್ಷೇಮದ್ರವ್ಯ. ಮಿಗಿತಾಯ, ಉಳಿತಾಯ. **Sávingly** (ಕ್ರಿ. ವಿ.)

Save[2] ಸೇವ್ (ಉಪ., ಸಂ. ಅವ್ಯ.) ಬಿಟ್ಟು, ಉಳಿದು, ಹೊರತು, ವಿನಾ [ದ್ವಿತೀಯಾ ವಿಭಕ್ತಿಯ ನಾಮವಾಚಕದೊಡನೆ ಅಥವಾ *that* ಪದವಿರುವ ವಾಕ್ಯಭಾಗದೊಡನೆ ಪ್ರ.: All s. him. I am well s. that I have a cold. (ಪ್ರಾಚೀ. ಪ್ರ., ಕಾವ್ಯ, ಸಾಮಾನ್ಯ ಬರವಣಿಗೆಯಲ್ಲಿ ಗಾಂಭೀರ್ಯದ ತೋರ್ಕೆಗಾಗಿ ಮತ್ತು ಪುನರುಕ್ತಿಯಲ್ಲಿ ಪ್ರ.): S. & except]. (ಸಂ. ಅವ್ಯ.; ಪ್ರಾಚೀ. ಪ್ರ.) (Thou seest no beauty s. thou make it)

Sáviour ಸೇವ್ಯರ್ (ನಾ.) ಉದ್ಧಾರಕ, ವಿಮೋಚಕ, ಆಪದ್ರಕ್ಷಕ, ಸಂರಕ್ಷಕ (ರಾಷ್ಟ್ರ, ಮೊ. ನ್ನು ವಿಪತ್ತಿನಿಂದ ಪಾರುಮಾಡಿಸುವವನು ಸಹ) (The, our, S. ಯೇಸು ಕ್ರಿಸ್ತ)

Sávoir faíre (F) ಸಾ(ಸ್ವಾ)ವ್ವಾರ್ ಫೇರ್ (ನಾ.) ಪರಿಸ್ಥಿತಿಯನ್ನು ಬೇಗ ಗ್ರಹಿಸಿ ಯುಕ್ತವಾದುದನ್ನು ಬೇಗ ಮಾಡುವುದು; ಸಮಯೋಚಿತ—ಕಾರ್ಯವಿಚಕ್ಷಣೆ, ಚಾಕಚಕ್ಯ, ಚಾತುರ್ಯ; ಸಮಯೋಚಿತಜ್ಞತೆ. **Savoir vívre** (F) —ವೀವ್ರ್ (ನಾ.) ಸಮಾಜದಲ್ಲಿ ಸದ್ವರ್ತನೆ; ಸಭ್ಯತೆ.

Sávory ಸೇವರಿ (ನಾ.) ಅಡಿಗೆಯಲ್ಲಿ ಉಪಯೋಗಿಸುವ ಪುದೀನ ಜಾತಿಯ ಒಂದು ಬಗೆಯ ಸುವಾಸನಾ ಸಸ್ಯ.

Sávour ಸೇವರ್ (ನಾ., ಕ್ರಿ.) ರುಚಿ, ಸವಿ (ರೂಪ. ಸಹ). (ವಿರ. ಪ್ರ.) ವಾಸನೆ, ಗಂಧ (ರೂಪ. ಸಹ). ಸುಳಿವು, ಸೂಚನೆ, ಛಾಯೆ, ಬಣ್ಣ, ಲಕ್ಷಣ (*Of* ಉಪ. ದೊಡನೆ. S. of preciosity ಅತಿ ನಯಗಾರಿಕೆಯ ಛಾಯೆ, ಲಕ್ಷಣ). (ಕ್ರಿ.) (ಪ್ರಾಚೀ. ಪ್ರ.) ರುಚಿ ನೋಡು, ಆಸ್ವಾದಿಸು, ಸವಿ (ರೂಪ. ಸಹ); (ವಿರ. ಪ್ರ.) ರುಚಿ ಕೊಡು. ಛಾಯೆ, ಲಕ್ಷಣ, —ತೋರು, ಇರು (*Of* ಉಪ. ದೊಡನೆ) (The offer savours of impertinence). **Sávourless** (ಗು.); **Sávoury** ಸೇವರಿ (ಗು., ನಾ.) ಬಾಯಲ್ಲಿ ನೀರೂರಿಸುವ (ರುಚಿಯುಳ್ಳ), ರುಚಿಕರವಾದ, ರಸವತ್ತಾದ, ಘಮ ಘಮಿಸುವ. (ಸ್ಥಳಗಳು, ಮೊ. ಗಳ ವಿಷಯದಲ್ಲಿ: ನಿಷೇಧ ಪ್ರ. ದಲ್ಲಿ ಮಾತ್ರ) ದುರ್ಗಂಧವಿಲ್ಲದ, ದುರ್ನಾತ ಬಡಿಯದ. (ಅಡಿಗೆಯ ಪದಾರ್ಥಗಳ ವಿಷಯದಲ್ಲಿ) ಉಪ್ಪು ಹಾಕಿದ, ಕಾರದ, ಸಿಹಿಯಲ್ಲದ (Sweet *or* s. omelette). (ನಾ.) (ಮು., ಊಟದ ಮೊದಲಲ್ಲಿ ಹಸಿವಿಗೆ ಉತ್ತೇಜಕವಾಗಿಯಾಗಲಿ ಊಟದ ಕೊನೆಯಲ್ಲಿ ಜೀರ್ಣಕಾರಿಯಾಗಿಯಾಗಲಿ ಬಡಿಸಿದ) ಉಪ್ಪಿನ, ಕಾರದ, —ಪದಾರ್ಥ, ಭಕ್ಷ್ಯ. **Sávourily** (ಕ್ರಿ. ವಿ.); **Sávouriness** (ನಾ.)

Savóy ಸವಾಯ್ (ನಾ.) ಸುಕ್ಕೆಲೆಗಳುಳ್ಳ ಒಂದು ಬಗೆಯ ಕೋಸುಗಡ್ಡೆ (ಫ್ರಾನ್ಸಿನ Savoie ಎಂಬ ಪ್ರಾಂತದಿಂದ). **Savóyard** ಸ(ಸ್ವಾ)ವಾಯ್‌ಆರ್ಡ್ (ಗು., ನಾ.) ಸವಾಯ್ ಪ್ರಾಂತದ(ವನು)

Sávvy ಸ್ಯಾವಿ (ಕ್ರಿ., ನಾ.) ತಿಳಿ(ದುಕೊ) [(ಅಸಂ.) ಗೊತ್ತಾಯಿತೊ? ತಿಳಿಯಿತೊ? No s. (ನನಗೆ, ಅವನಿಗೆ) ಗೊತ್ತಿಲ್ಲ, ತಿಳಿಯುವುದಿಲ್ಲ]. (ನಾ.) ತಿಳಿವಳಿಕೆ, ಬುದ್ಧಿವಂತಿಕೆ, ಸಮಯೋಚಿತ ಜಾಣತನ.

Saw[1] ಸಾ (ನಾ.) ಗರಗಸ, ರಂಪ [Annular, crown, cylinder, s. ದುಂಡನೆಯ ಕಂಡಿ ಕೊರೆಯಲು ಉಪಯೋಗಿಸುವ, ಹಲ್ಲು ಏಣುಳ್ಳ, ಉರುಳೆ: ದುಂಡು, ಉರುಳೆ, —ಗರಗಸ. Band, bow[1], frame, fret[1], -s. (ಆಯಾ ಪದವನ್ನು ನೋಡಿ). Circular s. (Circular ನೋಡಿ). Cross-cut s. (ಎಳೆಗೆ ಅಡ್ಡಲಾಗಿ ಕೊಯ್ಯುವ) ಅಡ್ಡ ಕೊಯ್ತದ ಗರಗಸ. Hack-s. (Hack[1] ನೋಡಿ). Hand-s. (ಒಂದು ಕೈಯಲ್ಲಿ ಹಿಡಿದು ಕೊಯ್ಯುವ) ಕೈ ಗರಗಸ. Jig-s., Jig-s. puzzle (Jig ನೋಡಿ). Pit-s. (ಒಬ್ಬನು ಕುಳಿಯೊಳಗೂ ಒಬ್ಬನು ಮೇಲೂ ನಿಂತು ಕೊಯ್ಯುವ) ಕುಳಿ ಗರಗಸ. Reciprocating s. ಯಾಂತ್ರಿಕವಾಗಿ ಹಿಂದಕ್ಕೂ ಮುಂದಕ್ಕೂ ಸರಿದಾಡುವ ಗರಗಸ. Rip-s. (ಎಳೆಯನ್ನನುಸರಿಸಿ ಕೊಯ್ಯುವ) ಉದ್ದ ಕೊಯ್ತದ ಗರಗಸ. Stone-s. ಮರಳು ಮತ್ತು ನೀರು ಉಪಯೋಗಿಸಿ ಘರ್ಷಣದಿಂದ ಕಲ್ಲನ್ನು ಕೊಯ್ಯುವ, ಹಲ್ಲಿಲ್ಲದ, ಚೌಕಟ್ಟು ಗರಗಸ: ಕಲ್ಲು (ಕೊಯ್ಯುವ) ಗರಗಸ] (ಪ್ರಾ. ವಿ., ಮೊ.) ಗರಗಸದಂಥ ಹಲ್ಲು ಏಣುಳ್ಳ ಅಂಗ, ಭಾಗ. ಕ್ರಕಚ—ಅಂಗ, ಭಾಗ. **Sawbones** (ಅಸಂ.) ಶಸ್ತ್ರ —ಚಿಕಿತ್ಸಕ, ವೈದ್ಯ. **S.-doctor** ಗರಗಸದ ಹಲ್ಲು ಮಾಡುವ ಯಂತ್ರ: ಹಲ್ಲು ಕೊರಕ. **Sawdust** ಮರಕೊಯ್ಯುವಾಗ ಉದುರುವ ಮರದ ಪುಡಿ: ರಂಪದ, ಗರಗಸದ, —ಪುಡಿ [Let the s.-d. out of (ರೂಪ.) ಬಂಡವಾಳವಿಲ್ಲದ ಬಡಾಯಿಯನ್ನು, ಪೊಳ್ಳನ್ನು, ಜೊಳ್ಳನ್ನು, —ಹೊರಗೆಡವು, ಬಯಲು ಮಾಡು (ಬೊಂಬೆಯೊಳಗೆ ತುಂಬಿರುವ ಮರದ ಪುಡಿಯ ಸಂಬಂಧದಿಂದ)]. **S-fish** ಗರಗಸದಂಥ ಹಲ್ಲುಮೂತಿಯುಳ್ಳ, ಒಂದು ಜಾತಿಯ ದೊಡ್ಡ ಮೀನು: ಗರಗಸ ಮೀನು. **S.-fly** ಗರಗಸದಂಥ ಅಂಡಸ್ಥಾಪಕಾಂಗವುಳ್ಳ, ಸಸ್ಯಪೀಡಕ ನೊಣ (ಜಾತಿ): ಗರಗಸ ನೊಣ. **S.-frame** ಗಗಗಸದ ಅಲಗನ್ನು ಬಿಗಿಯಾಗಿ ಎಳೆದು ಹಿಡಿದಿಡುವ ಚೌಕಟ್ಟು: ಗರಗಸದ ಚೌಕಟ್ಟು. **S.-gate**=S.-frame. **S.-gin** ಗರಗಸದಂತೆ ಹಲ್ಲುಳ್ಳ ಹತ್ತಿ ಬಿಡಿಸುವ ಚಕ್ರ, ರಾಟೆ: ಗರಗಸ ರಾಟೆ. **S.-horse** ಕೊಯ್ಯಬೇಕಾದ ಮರವನ್ನು ಹಿಡಿದಿಟ್ಟುಕೊಳ್ಳುವ ಆಸರೆ, ನಿಲವು. **S.-mill** (ನೀರಿನಿಂದ ಅಥವಾ ಆವಿಯಿಂದ ಕೆಲಸ ಮಾಡುವ) ಮರ ಕೊಯ್ಯುವ ಯಂತ್ರ, —ಕಾರ್ಖಾನೆ. **S.-pit** ಮರಕೊಯ್ಯುವ ಕುಳಿ, ಗುಂಡಿ. **S.-set** (ಗರಗಸದ ಅಲಗಿಗಿಂತ ಕೊಯ್ಲು ಸಂದು ಅಗಲವಾಗಿರುವಂತೆ ಮಾಡುವುದಕ್ಕಾಗಿ) ಹಲ್ಲುಗಳನ್ನು ಪರ್ಯಾಯ ಕ್ರಮದಲ್ಲಿ ಎಡಕ್ಕೆ ಮತ್ತು ಬಲಕ್ಕೆ ಕೊಂಚ ಬಾಗಿಸಲು ಉಪಯೋಗಿಸುವ ಆಯುಧ: ಗರಗಸದ ಹಲ್ಲು ತಿರುಚಿ. **S.-wort** ಹಳದಿ ಬಣ್ಣ ದೊರೆಯುವ, ಗರಗಸದ ಏಣಿನಂಥ ಏಣುಳ್ಳ ಎಲೆ ಬಿಡುವ, ಒಂದು ಬಗೆಯ ಸಸ್ಯ. **S.-wrack** ಗರಗಸದ ಹಲ್ಲುಗಳಂತೆ ಏಣುಳ್ಳ ಒಂದು ಬಗೆಯ ಸಮುದ್ರ ಕಳೆ. **S.-wrest**=S.-set.

Saw [(ಕ್ರಿ.; ಭೂತ. sawed; ಭೂ. ಕೃ. sawn, (ವಿರ. ಪ್ರ.) sawed] ಗರಗಸದಿಂದ ಕುಯ್ಯಿ, ಮರ ಕುಯ್ಯಿ; —ದಿಂದ ಕೊಯ್ದು ಆಕಾರಕೊಡು; ಗರಗಸ ಉಪಯೋಗಿಸು; (ಗರಗಸದಂತೆ, ಗರಗಸದಿಂದ ಕೊಯ್ಯುವವನಂತೆ) ಹಿಂದಕ್ಕೂ ಮುಂದಕ್ಕೂ ಆಡು, ಆಡಿಸು; (ಗಾಳಿ, ಮೊ. ನ್ನು) ಕೈಯಾಡಿಸಿ ಸೀಳು, ಭೇದಿಸು. (ಕರ್ಮಣಿ ಪ್ರಾಯ ಪ್ರ.) ಕೊಯ್ಯುವುದಕ್ಕೆ ಬರು (Saws easily, badly). (ಪುಸ್ತಕದ ರಟ್ಟುಕಟ್ಟು; ಪುಸ್ತಕದ ಒಟ್ಟುಗೂಡಿಸಿದ ಹಾಳೆಗಳ ಕಟ್ಟಿನ ಬೆನ್ನಿನಲ್ಲಿ ದಾರ ಹಾಯಿಸಲು) ಸಂದು ಕೊಯ್ಯಿ. **Sawyer** (ನಾ.) ಮರ ಕೊಯ್ಯುವವನು, ಗರಗಸದವನು [Top-s. (Top[1] ನೋಡಿ)]. (ಅಮೆ. ಸಂ.) ಬುಡ ಸಮೇತ ಉರುಳಿಕೊಂಡು ನದಿಯಲ್ಲಿ ತೇಲುತ್ತಿರುವ ಅಥವಾ ಸಿಕ್ಕಿಹಾಕಿಕೊಂಡಿರುವ ಮರ (ಕೊಯ್ಯುವ ಗರಗಸದಂತೆ ಮೇಲಕ್ಕೂ ಕೆಳಕ್ಕೂ ಆಡುವ ಕಾರಣದಿಂದ). ಮರ ಕೊರೆಯುವ ಹಲವು ಬಗೆಯ ಮರಿಹುಳು.

Saw[2] ಸಾ (ನಾ.) ನಾಣ್ಣುಡಿ, ಲೋಕೋಕ್ತಿ (Old, wise, s.)

Saw[3]. See ಧಾತುವಿನ ಭೂತ ರೂಪ.

Sawder ಸಾಡರ್ (ನಾ.) Soft s. ಹೊಗಳಿಕೆ; ಪ್ರಶಂಸೆ; ಉಬ್ಬಿಸುವ, ಪುಸಲಾಯಿಸುವ, —ಮಾತು.

Sawney ಸಾನಿ (ನಾ.) ಸ್ಕಾಟ್ಲೆಂಡಿನವನು (ಅಡ್ಡಹೆಸರು). ಪೆದ್ದ, ಗುಗ್ಗು, ಗಾಂಪ.

Sawyer. Saw[1] ನೋಡಿ.

Sax ಸ್ಯಾಕ್ಸ್, **Zax** ಜ್ಯಾಕ್ಸ್ (ನಾ.) ಮೊಳೆ ಹೊಡೆಯಲು ರಂಧ್ರ ಕೊರೆಯುವ ಮೊನೆಯುಳ್ಳ, ಚಾವಣಿಯ ಕಲ್ಲುಹಲಗೆಗಳನ್ನು ಸಮರುವ, ತುಂಡು ಕತ್ತಿ; ಸಮರು ಕತ್ತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sáxatile ಸ್ಯಾಕ್ಸಟೈ(ಟಿ)ಲ್ (ಗು.) ಶಿಲಾ ಸಂಬಂಧವಾದ. (ಪ್ರಕೃತಿ ಚರಿತ್ರೆ) ಕಲ್ಲುಗಳ ಮೇಲೆ, ಮಧ್ಯೆ, —ಬೆಳೆಯುವ, ವಾಸಿಸುವ; ಶಿಲಾವಾಸಿಯಾದ.

Saxe ಸೇಕ್ಸ್ (ನಾ.) ಒಂದು ಬಗೆಯ ಛಾಯಾಚಿತ್ರ ಕಾಗದ; ಗಂಧಕಾಮ್ಲದಲ್ಲಿ ದ್ರಾವಣಮಾಡಿದ ನೀಲಿ ಬಣ್ಣ (=Saxon blue)

Sáxhorn ಸ್ಯಾಕ್ಸ್‌ಹಾರ್ನ್ (ನಾ.) ತುತೂರಿಯಂಥ ಒಂದು ವಾದ್ಯ.

Saxícoline ಸ್ಯಾಕ್ಸಿಕೊಲೈನ್, **-lous** —ಲಸ್ (ಗು.) (ಪ್ರಕೃತಿ ಚರಿತ್ರೆ) =Saxatile.

Sáxon ಸ್ಯಾಕ್ಸನ್ (ನಾ., ಗು.) ೫-೬ನೆಯ ಶ. ಮಾ. ಗಳಲ್ಲಿ ಇಂಗ್ಲೆಂಡನ್ನು ಗೆದ್ದ ಟ್ಯೂಟಾನಿಕ್ ಬುಡಕಟ್ಟಿನ ಉ. ಜರ್ಮನ್ ಜನ ವರ್ಗದವನು; ಅವರ ಭಾಷೆ (Old Saxons ಇಂಗ್ಲೆಂಡಿಗೆ ಹೋಗದೆ ಜರ್ಮನಿಯಲ್ಲೆ ನೆಲಸಿದ ಈ ಜನವರ್ಗದ ಭಾಗ. Old S. ಇವರ ಭಾಷೆ). =Anglo-S. (Angles ನೋಡಿ). ಜರ್ಮನಿಯ ಈಗಿನ ಸ್ಯಾಕ್ಸನಿ ಪ್ರಾಂತದವನು. ಇಂಗ್ಲಿಷಿನ ಟ್ಯೂಟಾನಿಕ್ ಅಂಶಗಳು (ರೊಮಾನ್ಸ್ ಅಥವಾ ಲ್ಯಾಟಿನ್ ಅಂಶಗಳಿಂದ ಭಿನ್ನವಾಗಿ). (ಗು.) ಸ್ಯಾಕ್ಸನ್‌ನ (S. architecture ಇಂಗ್ಲೆಂಡಿನಲ್ಲಿ ನಾರ್ಮನ್ ರೀತಿಗೆ ಮೊದಲು ರೂಢಿಯಲ್ಲಿದ್ದ ಒಂದು ಬಗೆಯ ಒರಟು ರೋಮನ್ ರೀತಿಯ ವಾಸ್ತುಶಿಲ್ಪ: ಸ್ಯಾಕ್ಸನ್ ವಾಸ್ತುಶಿಲ್ಪ). ಸ್ಯಾಕ್ಸನ್ ಭಾಷೆಯ (S. words ಟ್ಯೂಟಾನಿಕ್ ಮೂಲದ ಶಬ್ದಗಳು). S. blue ಗಂಧಕಾಮ್ಲದಲ್ಲಿ ದ್ರಾವಣಮಾಡಿದ ನೀಲಿ ಬಣ್ಣ. **Sáxondom** (ನಾ.) ಆ್ಯಂಗ್ಲೊಸ್ಯಾಕ್ಸನ್ ರಾಜ್ಯ; ಆ್ಯಂಗ್ಲೊಸ್ಯಾಕ್ಸನರು. **Sáxonism** (ನಾ.) ಆ್ಯಂಗ್ಲೊಸ್ಯಾಕ್ಸನ್ ಪ್ರಯೋಗ, ಭಾಷಾ ರೂಢಿ, ಲಕ್ಷಣ; ಆ್ಯಂಗ್ಲೊಸ್ಯಾಕ್ಸನ್ ಒಲವು. **Sáxonist** (ನಾ.) ಆ್ಯಂಗ್ಲೊಸ್ಯಾಕ್ಸನ್ ಪಂಡಿತ. **Sáxonize** (ಕ್ರಿ.) ಆ್ಯಂಗ್ಲೊಸ್ಯಾಕ್ಸನ್ (ರೀತಿಯದನ್ನಾಗಿ) ಮಾಡು, (ರೀತಿಯದಾಗಿ) ಆಗು. **Sáxony** (ನಾ.) ನಯವಾದ ಉಣ್ಣೆ(ಯ ಬಟ್ಟೆ) (ಜರ್ಮನಿಯ Saxony ಪ್ರಾಂತದ ಹೆಸರಿನಿಂದ)

Sáxophone ಸ್ಯಾಕ್ಸೊಫೋನ್ (ನಾ.) ಹಿತ್ತಾಳೆಯ ದಪ್ಪ ಧ್ವನಿಯ ಒಂದು ಬಗೆಯ ನಾಳಿಕಾ ವಾದ್ಯ.

Sáxatuba ಸ್ಯಾಕ್ಸ್‌ಟ್ಯೂಬ (ನಾ.) ಒಂದು ಬಗೆಯ ತುತೂರಿಯಂಥ ದೊಡ್ಡ ವಾದ್ಯ.

Say[1] ಸೇ (ನಾ.) (ಈಗ ವಿರ. ಪ್ರ.) ಸರ್ಜಿನಂಥ, ನಯವಾದ, ಒಂದು ಬಗೆಯ ಉಣ್ಣೆಯ ಬಟ್ಟೆ.

Say[2] ಸೇ (ಕ್ರಿ.; ಭೂತ., ಭೂ. ಕೃ. Said ಸೆಡ್; ಪ್ರಾಚೀ. ಪ್ರ., ಪ್ರಥಮ ಪುರುಷ ವರ್ತಮಾನ ಏ. ವ. Saith ಸೆತ್; ನಾ.) ಹೇಳು, ನುಡಿ, ಉಸಿರು, ಎನ್ನು, ಆಡು, ಮಾತಾಡು, ಒಪ್ಪಿಸು, ಉಚ್ಚರಿಸು [S. the word ಒಂದು ಮಾತು ಹೇಳು, ಅಪ್ಪಣೆ ಕೊಡು. S. no more ಸಾಕು ಮಾಡು, ಬಾಯಿ ಮುಚ್ಚು, ಮಾತು ನಿಲ್ಲಿಸು. S a good word for (ಒಬ್ಬನ ಪರವಾಗಿ) ಒಂದು ಒಳ್ಳೆಯ ಮಾತು ಆಡು, ಶ್ಲಾಘಿಸು, ಶಿಫಾರಸು ಮಾಡು. S. no ಇಲ್ಲವೆನ್ನು, ಆಗುವುದಿಲ್ಲವೆನ್ನು, ಒಪ್ಪದಿರು. S. yes ಹೌದೆನ್ನು, ಆಗುತ್ತದೆ ಎನ್ನು, ಒಪ್ಪಿಕೊ. S. out ಪೂರ್ತಿಯಾಗಿ, ಸ್ಪಷ್ಟವಾಗಿ, ಬಾಯಿಬಿಟ್ಟು, —ಹೇಳಿಬಿಡು. S. (one) nay (ಒಬ್ಬನ ಕೋರಿಕೆಗೆ) ಇಲ್ಲವೆನ್ನು, ತಿರಸ್ಕರಿಸು. Has said his s. ಹೇಳಬೇಕಾದ್ದನ್ನು —ಹೇಳಿಬಿಟ್ಟಿದ್ದಾನೆ, ಹೇಳಿಬಿಟ್ಟನು. S. lesson ಪಾಠ ಒಪ್ಪಿಸು. S. something ಸ್ವಸ್ತಿ ವಾಚನ ಹೇಳು; ಏನಾದರೂ ಮಾತನಾಡು. That is to s. ಎಂದರೆ (The whole family, t.i.t.s. four persons). Saying and doing ಆಡುವುದು ಮಾಡುವುದು. I s. (ಗಮನ ಸೆಳೆಯುವ, ಸಂಭಾಷಣೆ ಆರಂಭಿಸುವ, ಆಶ್ಚರ್ಯ ಸೂಚಿಸುವ ಉದ್ಗಾರದ ಮಾತು): ಎಲ! (I s., who was that? I s. what a beauty!). Dare s. (Dare ನೋಡಿ). They s., it is said (ಗಾಳಿವರ್ತಮಾನವನ್ನು ಹೇಳಲು ಆರಂಭಿಸುವಾಗ): ಎಂದು (ಜನ) ಹೇಳುತ್ತಾರೆ, ಆಡಿಕೆ ಇದೆ. Goes without saying ಹೇಳಬೇಕಾಗಿಯೇ ಇಲ್ಲ, ಸ್ಪಷ್ಟವಾಗಿದೆ. Hear s. ಎಂದು ಹೇಳುವುದನ್ನು ಕೇಳು. You may well s. so ನೀನು ಹಾಗೆ ನ್ಯಾಯವಾಗಿ, ಧಾರಾಳವಾಗಿ, ಹೇಳಬಹುದು. S. away ಹೇಳ ಬೇಕಾದ್ದನ್ನು ಹೇಳಿಬಿಡು. I cannot s. ನಾನು ಹೇಳಲಾರೆ, ಅಭಿಪ್ರಾಯ ಕೊಡಲಾರೆ. What s. you to a theatre? ನಾಟಕಕ್ಕೆ ಏನನ್ನುತ್ತೀರಿ? ನಾಟಕಕ್ಕೆ ಹೋಗೋಣವೆ? And so s. all of us ನಾವೆಲ್ಲರೂ ಅದನ್ನೇ ಹೇಳುತ್ತೇವೆ, ಅದೇ ಅಭಿಪ್ರಾಯ ಪಡುತ್ತೇವೆ. Let us s., *or* s. ಎನ್ನೋಣ; ಹಾಗಿಟ್ಟುಕೊಳ್ಳೋಣ; ಉದಾಹರಣೆಗೆ (Any country, let us s. Sweden, might do the same. Well, s. it were true, what then? ಒಳ್ಳೆಯದು, ಅದು ನಿಜವೆಂದೇ ಇಟ್ಟುಕೊಳ್ಳೋಣ, ಮುಂದೇನು? A few of them, s. a dozen *or* so ಅವರಲ್ಲಿ ಕೆಲವರು, ಸುಮಾರು ಹನ್ನೆರಡು ಮಂದಿ]. (ನಾ.) ಹೇಳಬೇಕಾದ್ದು (ಹೇಳುವ ಅವಕಾಶ); ಹೇಳಿಕೆ, ಅಭಿಪ್ರಾಯ; ಮಾತಾಡುವ, ಅಭಿಪ್ರಾಯ ಕೊಡುವ — ಅವಕಾಶ, ಅಧಿಕಾರ (S. your s. ಹೇಳಬೇಕಾದ್ದನ್ನು ಹೇಳು. Had no s. in the matter ಆ ವಿಷಯದಲ್ಲಿ ನನಗೆ ಮಾತಾಡುವ, ಅಭಿಪ್ರಾಯ ಕೊಡುವ, —ಅವಕಾಶ, ಅಧಿಕಾರ, ಇರಲಿಲ್ಲ). **Sáying** ಸೇಇಂಗ್ (ನಾ.) (ಕ್ರಿಯಾರ್ಥಗಳಲ್ಲಿ); ನಾಣ್ಣುಡಿ, ಗಾದೆ, ಸಾಮತಿ, ಸೂಕ್ತಿ (As the s. is ಗಾದೆ ಇರುವಂತೆ)

Sbírro (It.) ಸ್ಬಿರ್ರೊ (ನಾ., ಬ. ವ. -ri, —ರೀ) ಇಟಲಿಯ ಪೊಲೀಸಿನವನು.

Scab ಸ್ಕ್ಯಾಬ್ (ನಾ., ಕ್ರಿ. ಅಕ.) ಗಾಯ ಮಾಯುವಲ್ಲಿ ಅದರಮೇಲೆ ಕಟ್ಟುವ ಒರಟು ಒಣಕಲು ಪದರ: ಹಕ್ಕು, ಹಕ್ಕಳೆ, ಹುರುಪು; ಕಜ್ಜಿ, ತುರಿ, ದದ್ದು, ಮೊ. ಚರ್ಮವ್ಯಾಧಿ. ಸಸ್ಯಗಳ ಹಲವು ಬಗೆಯ ಅಣಬೆ ರೋಗ. (ಪ್ರಾಚೀ. ಪ್ರ.) ಶುದ್ಧ ಅಯೋಗ್ಯ, ತುಂಟ; ಹಲ್ಕ. (ಕೆಲಸಗಾರರ ಸಂಘ ತತ್ತ್ವ) ಸಂಘಕ್ಕೆ ಅಥವಾ ಮುಷ್ಕರಕ್ಕೆ ಸೇರಲು ತಿರಸ್ಕರಿಸುವ ಅಥವಾ ಮುಷ್ಕರಕಾರರ ಸ್ಥಳದಲ್ಲಿ ಹೋಗಿ ಕೆಲಸ ಮಾಡುವ, ಕೆಲಸಗಾರ: ಜೊತೆ ಕೆಲಸಗಾರರ ದ್ರೋಹಿ. (ಕ್ರಿ.) (ಗಾಯದ ವಿಷಯದಲ್ಲಿ) ಹಕ್ಕುಗಟ್ಟು, ಮಾಯು. **Scabbed** (ಗು.); **Scábby** (ಗು.); **Scábbily** (ಕ್ರಿ. ವಿ.); **Scábbiness** (ನಾ.)

Scábbard ಸ್ಕ್ಯಾಬರ್ಡ್ (ನಾ.) (ಕತ್ತಿ, ಸನೀನು, ಮೊ. ಗಳ) ಒರೆ, ಕೋಶ (Fling, throw, away the s. ಕೊನೆಯ ವರೆಗೂ ಕಾದಾಡಲು ಸಿದ್ಧನಾಗು, ಬದ್ಧನಾಗು; ಶಾಂತಿ ಸಂಧಾನಗಳ ಮಾತನ್ನು ಬಿಟ್ಟುಬಿಡು; ಯುದ್ಧಕ್ಕೆ ಸಂಕಲ್ಪಿಸು). S.-fish ಕತ್ತಿಯ ಒರೆಯಾಕಾರದ, ಬೆಳ್ಳಿಯ ಬಣ್ಣದ, ಒಂದು ಕಡಲಮೀನು: ಒರೆಮೀನು.

Scábies ಸ್ಕೇಬಿಈಸ್ (ನಾ.) ಕಜ್ಜಿ, ತುರಿ. **Scábious** ಸ್ಕೇಬಿಯಸ್ (ಗು., ನಾ.) ಹಕ್ಕುಗಟ್ಟಿದ; ಕಜ್ಜಿ, ತುರಿ, —ಎದ್ದ, ಬಂದ. (ನಾ.) ನೀಲಿ, ಪಾಟಲ ಅಥವಾ ಬೆಳ್ಳಿಯ ಬಣ್ಣದ ಹೂವು ಬಿಡುವ ಹಲವು ಬಗೆಯ ಸಸ್ಯ.

Scábrous ಸ್ಕೇಬ್ರಸ್ (ಗು.) (ಪ್ರಾ. ವಿ., ಸ. ವಿ., ಮೊ.) ಒರಟು ಮೈಯುಳ್ಳ, ಒರಚೊರಟಾದ, ತರಕಲಾದ. (ಶೈಲಿಯ ವಿಷಯದಲ್ಲಿ) ಕರ್ಕಶ, ಅಪರಿಷ್ಕೃತ. (ಸಾಹಿತ್ಯದಲ್ಲಿ ವಿಷಯ, ಸನ್ನಿವೇಶ, ಮೊ. ಗಳು) ನಾಜೂಕಿನಿಂದ, ಚಾತುರ್ಯದಿಂದ, ಸೂಕ್ಷ್ಮವಾಗಿ, —ಚಿತ್ರಿಸ ಬೇಕಾದ, ಹೇಳಬೇಕಾದ; ಮರ್ಯಾದೆಯಿಂದ ವರ್ಣಿಸಲು ಕಷ್ಟ ವಾದ; ಅಶ್ಲೀಲವಾಗಬಹುದಾದ. **Scábrousness** (ನಾ.)

Scad ಸ್ಕ್ಯಾಡ್ (ನಾ.) ಒಂದು ಬಗೆಯ ಮೀನು.

Scáffold ಸ್ಕ್ಯಾಫೊಲ್ಡ್ (ನಾ., ಕ್ರಿ. ಸಕ.) ಅಪರಾಧಿಗಳನ್ನು ವಧಿಸಲು ಅಥವಾ ಗಲ್ಲಿಗೇರಿಸಲು ಏರ್ಪಡಿಸಿರುವ ಮರದ ಅಟ್ಟ, ವೇದಿಕೆ: ಗಲ್ಲು ಅಟ್ಟ; ವಧ, ವಧ್ಯ, —ವೇದಿಕೆ (The s. ಮರಣದಂಡನೆ, ಗಲ್ಲು). (ಪ್ರದರ್ಶನ ವಸ್ತುಗಳನ್ನು ಇಡುವ, ಪ್ರೇಕ್ಷಕರಿಗಾಗಿ ಮಾಡಿರುವ) ವೇದಿಕೆ, ಜಗಲಿ, ಅಟ್ಟ, ಅಟ್ಟಣೆ. (ಮನೆ, ಮೊ. ನ್ನು ಕಟ್ಟುವಾಗ ಅಥವಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದುರಸ್ತು ಮಾಡುವಾಗ ಕೆಲಸಗಾರರು ನಿಂತು ಕೆಲಸಮಾಡಲು ತಾತ್ಕಾಲಿಕವಾಗಿ ಕಟ್ಟಿದ) ಸಾರುವೆ; ಕಾಲಾವಧಿ. (ಅಂ. ರ. ಶಾ., ಭ್ರೂಣಶಾಸ್ತ್ರ; ಮುಂದೆ ತನ್ನ ಮೇಲೆ ಬೆಳೆಯಲಿರುವ ಭಾಗಗಳ ರೂಪ ರೇಖೆಗಳನ್ನು ವ್ಯಕ್ತಗೊಳಿಸುವ) ಮೂಲ ಕಟ್ಟು, ಆಧಾರ ಕಟ್ಟು (=Scaffolding ಸಹ) (The s. of the skull). (ಕ್ರಿ.) ಸಾರುವೆ ಕಟ್ಟು, —ಹಾಕು. **Scáffolding** (ನಾ.) ಸಾರುವೆ (ಕಟ್ಟುವ ಸಾಮಾನು); ಸಾರುವೆ ಕಟ್ಟುವುದು. ಅಟ್ಟಣೆ, ವೇದಿಕೆ; ಆಧಾರ ಕಟ್ಟು (S.-pole ಸಾರುವೆ ಕಟ್ಟಡದ ಆಧಾರಸ್ತಂಭ)

Scáglia (It.) ಸ್ಕಾ(ಸ್ಕ್ಯಾ)ಲ್ಯ (ನಾ.) ಇಟಲಿಯ ಕೆಂಪು ಛಾಯೆಯ ಸುಣ್ಣಕಲ್ಲು.

Scaglióla ಸ್ಕ್ಯಾಲ್ಯೋಲ (ನಾ.) ಗಾರೆ ಮತ್ತು ಅಂಟು ಸೇರಿಸಿ, ಬೇರೆ ಬೇರೆ ಬಣ್ಣಗಳು ಹಾಕಿ, ಮಾಡಿದ ಕೃತಕ ಕಲ್ಲು: ಗಾರೆಗಲ್ಲು.

Scaláriform ಸ್ಕಲ್ಯಾರಿಫಾರ್ಮ್ (ಗು.) (ಸ. ವಿ., ಪ್ರಾ. ವಿ.) (ಹುಳುಗಳ ರೆಕ್ಕೆಗಳಲ್ಲಿಯ ಎಳೆಗಳು, ರಚನೆಯಲ್ಲಿಯ ತೆಳುಪಟ್ಟಿಗಳು, ಮೊ. ಗಳ ವಿಷಯದಲ್ಲಿ) ಏಣಿಯಾಕಾರದ, ಮೆಟ್ಟಿಲು ಮೆಟ್ಟಿಲಾದ, ಅಡ್ಡಪಟ್ಟಿಗಳುಳ್ಳ.

Scálawag, -lla- ಸ್ಕ್ಯಾಲವ್ಯಾಗ್, **-lly-** —ಲಿ— (ನಾ.) ಪುಷ್ಟಿಯಿಲ್ಲದ, ಗಿಡ್ಡ, —ಪ್ರಾಣಿ; (ಕೆಲಸಕ್ಕೆ ಬಾರದ) ಬಡಕಲು ಪ್ರಾಣಿ (ಮು., ಬಡಕಲು ದನ). ಅಪ್ರಯೋಜಕ, ಅಯೋಗ್ಯ; ಪೋಲಿ; ಮೈಗಳ್ಳ.

Scald[1] ಸ್ಕಾಲ್ಡ್ (ಕ್ರಿ. ಸಕ., ನಾ.) (ಬಿಸಿ ದ್ರವ, ಆವಿ, ಮೊ. ಗಳಿಂದ ಚರ್ಮ, ಮೊ. ನ್ನು) ಸುಡು, ಬೇಯಿಸು, ಬೊಬ್ಬೆ ಎಬ್ಬಿಸು (Was scalded to death by the steam. Scalding tears ಸುಡುವ ಕಣ್ಣೀರು; ಕಡು ದುಃಖದ ಕಣ್ಣೀರು). (ಹಾಲು, ಮೊ. ನ್ನು) ಕುದಿ ಶಾಖದ ಹತ್ತಿರ ಹತ್ತಿರ ಕಾಯಿಸು; ಎಳಕುದಿ ಕಾಯಿಸು (Scalded cream ಹೀಗೆ ಕಾಯಿಸಿದ ಹಾಲಿನ ಕೆನೆ: ಎಳಕುದಿ ಕೆನೆ). (ಪಾತ್ರೆಯನ್ನು) ಕುದಿನೀರು ಹಾಕಿ ಗಲಬರಿಸು (*Out* ಉಪ. ದೊಡನೆ). (ನಾ.) ಸುಡುತ, ಬೊಬ್ಬೆ, ಹೊಪ್ಪಳೆ (For scalds & burns). **Scálder** (ನಾ.) ಹಾಲು ಕಾಯಿಸುವವನು; —ಸುವ ಪಾತ್ರೆ. (ಕುದಿನೀರಿನಿಂದ) ಪಾತ್ರೆ ಬೆಳಗುವವನು, ತೊಳೆಯುವವನು.

Scald[2], **Skald** ಸ್ಕಾಲ್ಡ್ (ನಾ.) ಪ್ರಾಚೀನ ಸ್ಕಾಂಡಿನೇವಿಯದಲ್ಲಿ ಮಹಾಪುರುಷರನ್ನು ಕುರಿತು ಕವಿತೆ ಕಟ್ಟಿ ಹಾಡುತ್ತಿದ್ದ ಕವಿ. **Scáldic** (ಗು.)

Scáld-head ಸ್ಕಾಲ್ಡ್‌ಹೆಡ್ (ನಾ.) ತಲೆಗೆ ಹತ್ತುವ ಹುಳುಕಡ್ಡಿ, ಮೊ. ಪಟ್ಟೆರೋಗ (ಸಾ., ಮಕ್ಕಳಲ್ಲಿ)

Scale[1] ಸ್ಕೇಲ್ (ನಾ., ಕ್ರಿ.) ಮೀನು, ಸರೀಸೃಪ, ಮೊ. ಗಳ ಚರ್ಮವನ್ನು ರಕ್ಷಿಸುವ, ಹೆಂಚು ಹೊದಿಸಿದಂತೆ ಒಂದರಮೇಲೊಂದು ಜೋಡಣೆಯಾಗಿರುವ, ಕೊಂಬು ಪದಾರ್ಥದ ತೆಳು ಫಲಕ(ಗಳಲ್ಲೊಂದು): ಶಲ್ಕ, ಪೊರೆ, ಚಿಕ್ಕೆ; (ಪೊರೆಯಂಥ) ತೆಳು ಪದರ, ಸಿಪ್ಪೆ, ಹೊಟ್ಟು, ಅಂಕುರ ಪತ್ರ, ತೊಟ್ಟಿನ ಎಲೆ, ಮೊ. ವು. (ಕುದಿಪಾತ್ರೆಯ ಒಳಗಡೆ, ಹಲ್ಲು, ಮೊ. ಗಳ ಮೇಲೆ, ಕಟ್ಟುವ) ಹೆಪ್ಪು. [**S.-armour** ತೊಗಲು, ಮೊ. ಗಳ ಮೇಲೆ ಲೋಹಶಲ್ಕಗಳನ್ನು ಹಾಕಿ ಮಾಡಿದ ಕವಚ: ಲೋಹ ಶಲ್ಕ ಕವಚ. **S.-board** (ಕನ್ನಡಿ, ಚಿತ್ರ, ಮೊ. ಗಳ ಹಿಂಭಾಗಕ್ಕೆ ಹಾಕುವ) ತೆಳು ಹಲಗೆ, ರಟ್ಟು. **S.-borer** ಕುದಿ ಕೊಳವೆಯೊಳಗಿನ ಹೆಪ್ಪನ್ನು ಹೆರೆದುಹಾಕುವ ಸಲಕರಣೆ: ಹೆಪ್ಪುಹೆರಕ. **S.-fern** ಒಂದು ಬಗೆಯ ಜರೀ ಗಿಡ. **S.-insect** ಕೆಲವು ಸಸ್ಯಗಳಿಗೆ ಅಂಟಿಕೊಂಡು ಹಾನಿಮಾಡುವ, ಹಲವು ಬಗೆಯ ಶಲ್ಕ ಕೀಟ. **S.-moss** ಪೊರೆಯಂಥ ಎಲೆ ಬಿಡುವ ಪಾಚಿಯಂಥ ಸಸ್ಯ. **S.-winged** ಶಲ್ಕಪಕ್ಷವುಳ್ಳ. **S.-work** ಹೆಂಚು ಹೊದಿಸಿದಂತೆ ಪದರಗಳು ಒಂದರ ಮೇಲೊಂದು ಹಾಯ್ದಿರುವ ರಚನೆ]. (ಕ್ರಿ.) (ಮೀನು, ಬಾದಾಮಿ, ಬಟಾಣಿ, ಮೊ. ರಿಂದ) ಪೊರೆ, ಹೊಟ್ಟು, ಸಿಪ್ಪೆ, —ತೆಗೆದುಹಾಕು; ಪೊರೆ— ಆಗು, ಬಿಡು; (ಚರ್ಮ, ಲೋಹ, ಮೊ. ವು) ಚಿಕ್ಕೆ ಚಿಕ್ಕೆಯಾಗಿ ಬರು, ಬಿದ್ದುಹೋಗು; ಹೆಪ್ಪು, ಹೆಕ್ಕಳಿಕೆ,—ಕಟ್ಟು. **Scálable**[1] (ಗು.); **(-)scaled** (ಗು.); **Scáleless** (ಗು.); **Scály** (ಗು.) ಚಿಕ್ಕೆ ಚಿಕ್ಕೆಯಾದ; ಪೊರೆಯುಳ್ಳ; ಶಲ್ಕವಂತ. **Scáliness** (ನಾ.)

Scale[2] ಸ್ಕೇಲ್ (ನಾ., ಕ್ರಿ. ಸಕ.) ತಕ್ಕಡಿಯ ತಟ್ಟೆ, ತ್ರಾಸಿನ ಬಟ್ಟಲು [Throw sword into s. ಕೇಳಿಕೆಯನ್ನು, ಹಕ್ಕನ್ನು, —ಸಮರ್ಥಿಸಲು ಆಯುಧವನ್ನು ಒಡ್ಡು; ಕತ್ತಿಯಿಂದ ಸಾಧಿಸು. Turn the s. (ಉದ್ದೇಶ ಅಥವಾ ಪರಿಸ್ಥಿತಿ) ಒಂದು ವಿಚಾರವನ್ನು ನಿರ್ಧರ ಮಾಡು, ತೀರ್ಮಾನಕ್ಕೆತರು. (ಬ. ವ.) The scales ತುಲಾರಾಶಿ(=Libra)]. (ಬ. ವ.) ತಕ್ಕಡಿ, ತ್ರಾಸು, ಚಿಂತಾಲು (=A pair of scales) (Hold the scales even ನಿಷ್ಪಕ್ಷಪಾತವಾಗಿ —ಇರು, ನೋಡು). (ಕ್ರಿ.) ತಕ್ಕಡಿಯಲ್ಲಿ ತೂಗು (ವಿರ. ಪ್ರ.); (ತೂಗಿದ ವಸ್ತುವಿನ ವಿಷಯದಲ್ಲಿ) ತೂಕವಾಗು, ತೂಗು (Scales 10 st., 100 lb.). **Scálable**[2] (ಗು.) (ತಕ್ಕಡಿಯಲ್ಲಿ) ತೂಗಲಾಗುವ.

Scale[3] ಸ್ಕೇಲ್ (ನಾ., ಕ್ರಿ.) (ಅಂತಸ್ತುಗಳ) ಶ್ರೇಣಿ, ಪಂಕ್ತಿ, ಮೆಟ್ಟಿಲು ಸಾಲು, ದರ್ಜೆ, ಮಟ್ಟ, ಪ್ರಮಾಣ [Is high in the s. of creation ಸೃಷ್ಟಿಯ ಉನ್ನತ ಶ್ರೇಣಿಯಲ್ಲಿದೆ. Sink in the s. ಕೆಳ ಮಟ್ಟಕ್ಕೆ ಬೀಳು, ಕೆಳ ದರ್ಜೆಗೆ ಇಳಿ. At the top, bottom, of the s. ಶ್ರೇಣಿಯ ಮೇಲ್ತುದಿಯಲ್ಲಿ, ಬುಡದಲ್ಲಿ. Sliding s. (Slide ನೋಡಿ)]. (ಸಂ.) ಸರಳೆ, ಸ್ವರ ಶ್ರೇಣಿ, ಸ್ವರ ಗ್ರಾಮ (Play, sing, run over one's, scales ಅಭ್ಯಾಸಕ್ಕಾಗಿ ಸರಳೆ—ಬಾರಿಸು, ಹಾಡು, ಕೂಗು). ಸಂಖ್ಯಾನ ಪದ್ಧತಿಯ ತಳಹದಿ; ಸಂಖ್ಯಾಕ್ರಮ, ಮಾನ (=S. of notation) [The ordinary *or* denary *or* decimal s. ಸಾಮಾನ್ಯ ಸಂಖ್ಯಾಕ್ರಮ, ದಶಮಾನ. Binary s. ದ್ವಿಮಾನ (ವಿವರಣೆಗೆ Binary ನೋಡಿ). Ternary s. ತ್ರಿಮಾನ. Septenary s. ಸಪ್ತಮಾನ. ಹದಿನಾಲ್ಕನ್ನು ದ್ವಿಮಾನದಲ್ಲಿ ೧೧೧೦ (=೦+೨+೪+೮) ಎಂದೂ, ತ್ರಿಮಾನದಲ್ಲಿ ೧೧೨ (=೨+೩+೯) ಎಂದೂ, ಸಪ್ತಮಾನದಲ್ಲಿ ೨೦ (=೦+೧೪) ಎಂದೂ, ದಶಮಾನದಲ್ಲಿ ೧೪ (=೪+೧೦) ಎಂದೂ ಬರೆಯಬೇಕಾಗುತ್ತದೆ]. ಅಳತೆ, ಪ್ರಮಾಣ (A building of small s. but fine proportions ಅಳತೆ ಚಿಕ್ಕದಾದರೂ ಅಚ್ಚುಕಟ್ಟಾದ ಕಟ್ಟಡ. Large, small, -s. map ದೊಡ್ಡಳತೆಯ, ಚಿಕ್ಕಳತೆಯ, ಭೂಪಟ. To s. ಅಳತೆಯ ಮೇರೆಗೆ. The s. to be an inch to the mile ಅಳತೆ ಮೈಲಿಗೆ ಒಂದು ಅಂಗುಲದಂತೆ ಇರಬೇಕು); (ಭೂಪಟದಲ್ಲಿ ಎರಡು ಸ್ಥಳಗಳಿಗಿರುವ ದೂರವನ್ನು ಕಂಡುಹಿಡಿಯುವುದಕ್ಕಾಗಿ) ಪ್ರಮಾಣವನ್ನು ತೋರಿಸುವ ಸಮ ವಿಭಾಗಗಳುಳ್ಳ ಗೆರೆ; ಅಳತೆಗೆರೆ. ಅಳತೆ —ಪಟ್ಟಿ, ಕೋಲು, ಕಡ್ಡಿ; ಮಾಪಕ, ಮಾನದಂಡ [Gunter's s. (Gunter ನೋಡಿ)]. (ಕ್ರಿ.) (ಗೋಡೆ, ಕಡಿದಾದ ಸ್ಥಳ, ಮೊ. ನ್ನು ಏಣಿಯಿಂದ, ಕೈಕಾಲೂರಿಕೊಂಡು) ಹತ್ತು, ಏರು (Scaling-ladder ಲಗ್ಗೆ ಹತ್ತುವ ಏಣಿ) [**Scálable**[3] (ಗು.) ಹತ್ತಲಾಗುವ]. ಅಳತೆಯ ಪ್ರಕಾರ, ಪ್ರಮಾಣಾನುಸಾರ, —ತೋರಿಸು (S. up, down ಪ್ರಮಾಣಾನುಸಾರ ದೊಡ್ಡದಾಗಿ, ಚಿಕ್ಕದಾಗಿ, ತೋರಿಸು; ದೊಡ್ಡಳತೆಯಲ್ಲಿ, ಚಿಕ್ಕಳತೆಯಲ್ಲಿ, ತೋರಿಸು). (ಮೊತ್ತಗಳು, ಮೊ. ಗಳ ವಿಷಯದಲ್ಲಿ) ಒಂದೇ ಮಾನದಿಂದ ಅಳೆಯಲಾಗು, ಸಮಮಾಪ್ಯವಾಗಿರು.

Scaléne ಸ್ಕೇಲೀನ್ (ಗು., ನಾ.) ಅಸಮ ಭುಜದ [S. triangle ಅಸಮ ಭುಜದ ತ್ರಿಕೋನ (ಯಾವ ಎರಡು ಭುಜಗಳೂ ಸಮವಾಗಿಲ್ಲದ್ದು). S. cone, cylinder ಅಕ್ಷ ಆಧಾರಕ್ಷೇತ್ರಕ್ಕೆ ಓರೆಯಾಗಿರುವ ಶಂಕು, ಸ್ತಂಭಾಕೃತಿ. S. muscle ಪಕ್ಕೆಲುಬನ್ನೂ ಬೆನ್ನುಮೂಳೆಯನ್ನೂ ಕೂಡಿಸುವ ತ್ರಿಭುಜಸ್ನಾಯು(ಗಳಲ್ಲೊಂದು)]. (ನಾ.) ಅಸಮತ್ರಿಕೋನ; ತ್ರಿಭುಜಸ್ನಾಯು.

Scall ಸ್ಕಾಲ್ (ನಾ.) (ಪ್ರಾಚೀ. ಪ್ರ.) ಚರ್ಮದ ಮೇಲೇಳುವ ಹುರುಪು, ಪೊರೆ (Dry s. ಕಜ್ಜಿ, ತುರಿ. Moist s. ಕರಪಾಣಿ)

Scállawag. Scalawag ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Scállion ಸ್ಕ್ಯಾಲಿಯನ್ (ನಾ.) ಒಂದು ಬಗೆಯ ಈರುಳ್ಳಿ.

Scállop ಸ್ಕ್ಯಾಲಪ್, **Scó-** ಸ್ಕಾ— (ನಾ., ಕ್ರಿ. ಸಕ.) (ಕಪ್ಪೆಚಿಪ್ಪಿನಂಥ ಚಿಪ್ಪುಳ್ಳ) ಒಂದು ಬಗೆಯ ಇಚ್ಚಿಪ್ಪು ಮೀನು. (ಚರಿತ್ರ) ಪಾಲೆಸ್ಟೈನಿನ ಯಾತ್ರಿಕರು ಅಲ್ಲಿಗೆ ಹೋಗಿಬಂದುದರ ಚಿಹ್ನೆಯಾಗಿ ಧರಿಸುತ್ತಿದ್ದ ಇದರ ಒಂದು ಚಿಪ್ಪು (S.-shell). (ಆಧುನಿಕ ಪ್ರ.) ಸಿಂಪಿ, ಮಾಂಸದ ಹೋಳು, ಮೊ. ನ್ನು ಬೇಯಿಸುವ, ಬಡಿಸುವ, ಇದರ ಚಿಪ್ಪು; ಮಳಿ ಚಿಪ್ಪು. ಇಂಥ ಆಳವಿಲ್ಲದ ಪಾತ್ರೆ; ತಟ್ಟೆ, ಬೋಗುಣಿ. (ಬ. ವ.) ಈ ಚಿಪ್ಪಿನ ಮಾದರಿಯಲ್ಲಿ ಕತ್ತರಿಸಿದ ಕರೆಯಲಂಕಾರ: ಮಳಿಚಿಪ್ಪಿನ ಕರೆಯಲಂಕಾರ. (ಕ್ರಿ.) ಮಳಿಚಿಪ್ಪಿನಲ್ಲಿ ಬೇಯಿಸು. (ಕರೆಗೆ, ಬಟ್ಟೆಗೆ) ಮಳಿಚಿಪ್ಪಿನ ಅಲಂಕಾರಮಾಡು. **Scálloping** (ನಾ.) ಮಳಿಚಿಪ್ಪು ಗಳನ್ನು ಸಂಗ್ರಹಿಸುವುದು; ಮಳಿಚಿಪ್ಪಿನ ಅಲಂಕಾರ (ಮಾಡುವುದು)

Scállywag. Scalawag ನೋಡಿ.

Scalp ಸ್ಕ್ಯಾಲ್ಪ್ (ನಾ., ಕ್ರಿ. ಸಕ.) ತಲೆಯ ನೆತ್ತಿ; ಈ ಭಾಗದ ಚರ್ಮ ಮತ್ತು ಕೂದಲು; ರೆಡ್ ಇಂಡಿಯನರು ಜಯಚಿಹ್ನೆಯಾಗಿ ಶತ್ರುವಿನ ತಲೆಯಿಂದ ಕೊಯ್ದುಕೊಳ್ಳುತ್ತಿದ್ದ ನೆತ್ತಿಯ ಭಾಗ; ಜಯಸ್ಮಾರಕ [Take s. ನೆತ್ತಿಯ ಚರ್ಮ ಕೀಳು, ತೆಗೆದುಕೊ. Out for scalps ಹೋರಾಟಕ್ಕೆ, ಯುದ್ಧಕ್ಕೆ, —ಸಿದ್ಧನಾಗಿ; (ರೂಪ.) ಮೇರೆ ಮೀರುವ, ಆಕ್ರೋಶದ, ಉಗ್ರವಿಮರ್ಶೆಯ,—ಮನೋಭಾವದಲ್ಲಿ]. ಬೆಟ್ಟದ ಬೋಳು ನೆತ್ತಿ; ತಿಮಿಂಗಿಲದ (ಕಳ ದವಡೆ ಬಿಟ್ಟು) ತಲೆಯ ಮೇಲ್ಭಾಗ, ಮೇಲ್ತಲೆ. [S.-lock ರೆಡ್ ಇಂಡಿಯನ್ ಜನರು ಶತ್ರುವನ್ನು ಮೂದಲಿಸಿ ಯುದ್ಧಕ್ಕೆ ಕರೆಯಾಗಿ ಬಿಡುತ್ತಿದ್ದ ಜುಟ್ಟು; ಪಂಥ, ಪ್ರತಿಜ್ಞಾ, —ಶಿಖೆ]. (ಕ್ರಿ.) ನೆತ್ತಿಯ ಚರ್ಮ, ಜುಟ್ಟು, —ಕೀಳು, ಸುಲಿ. ಉಗ್ರವಾಗಿ, ಕಟುವಾಗಿ, —ಟೀಕಿಸು, ಖಂಡಿಸು. **Scálpless** (ಗು.)

Scálpel ಸ್ಕ್ಯಾಲ್ಪಲ್ (ನಾ.) ಲೇಖನಿಯಂತೆ ಹಿಡಿದುಕೊಳ್ಳಲಾಗುವ, ಶಸ್ತ್ರವೈದ್ಯನ ಹಗುರವಾದ ಸಣ್ಣ ಚೂರಿ.

Scálper ಸ್ಕ್ಯಾಲ್ಪರ್, **Scaúper** ಸ್ಕಾಪರ್ (ನಾ.) ಕೆತ್ತನೆಗಾರರು ಉಪಯೋಗಿಸುವ ಒಂದು ಬಗೆಯ ಕೊರೆಯುವ ಸಲಕರಣೆ: ಉಗುರುಳಿ.

Scálpriform ಸ್ಕ್ಯಾಲ್ಪ್ರಿಫಾರ್ಮ್ (ಗು.) (ಬಾಚಿಹಲ್ಲಿನ ವಿಷಯದಲ್ಲಿ) ಉಳಿಯಾಕಾರದ.

Scámmony ಸ್ಕ್ಯಾಮೊನಿ (ನಾ.) ತೀವ್ರ ಭೇದಿಕಾರಿಯಾದ ಒಂದು ಬಗೆಯ ಗೋಂದುರಾಳ (ದೊರೆಯುವ ಒಂದು ಸಸ್ಯ)

Scamp[1] ಸ್ಕ್ಯಾಂಪ್ (ನಾ.) ಪೋಕರಿ, ತುಂಟ (ಪ್ರೀತಿ ಸೂಚಕವಾಗಿಯೂ ಪ್ರ.). **Scámpish** (ಗು.)

Scamp[2] ಸ್ಕ್ಯಾಂಪ್ (ಕ್ರಿ. ಸಕ.) (ಕೆಲಸ, ಮೊ. ನ್ನು) ಅರೆ ಕೊರೆಯಾಗಿ, ಕಾಟಾಚಾರಕ್ಕೆ, —ಮಾಡು.

Scámper ಸ್ಕ್ಯಾಂಪರ್ (ಕ್ರಿ. ಅಕ., ನಾ.) (ಬೆದರಿದ ಪ್ರಾಣಿಗಳಂತೆ, ಆಟವಾಡುತ್ತಿರುವ ಮಕ್ಕಳಂತೆ) ದಿಕ್ಕುಪಾರಾಗಿ —ಚೆದರು, ಓಡು, ಎಗರಾಡು; ಚೆಲ್ಲಾಪಿಲ್ಲಿಯಾಗು; ವಿನೋದಕ್ಕಾಗಿ ನಾಗಾಲೋಟ ದಲ್ಲಿ ಕುದುರೆ ಸವಾರಿ ಹೋಗು; ಆತುರದಲ್ಲಿ ದೇಶಸಂಚಾರ ಮಾಡು; ಬೇಗ ಬೇಗನೆ ಓದು. (ನಾ.) ಆತುರದ, ಶೀಘ್ರದ, —ಓಟ; ವಿನೋದದ ಕುದುರೆ ಸವಾರಿ; ತ್ವರಿತ ದೇಶ ಸಂಚಾರ, ಪರ್ಯಟನ (S. through Normandy); ಬೇಗ ಬೇಗನೆ ಓದುವುದು; ಆತುರದ ಓದು, ತಿರುವಿಹಾಕುವುದು (S. through Dickens)

Scan ಸ್ಕ್ಯಾನ್ (ಕ್ರಿ.) (ಪದ್ಯ ಪಂಕ್ತಿ, ಮೊ. ಗಳ) ಗುರು ಲಘು ಗುರುತಿಸು, ಪ್ರಸ್ತಾರ ಹಾಕು, ಗಣ ವಿಭಾಗ ಮಾಡು; (ಪದ್ಯದ ರಚನಾ ಕ್ರಮವನ್ನು ಕಂಡುಹಿಡಿಯುವುದಕ್ಕಾಗಿ) ಗತಿ, ಧಾಟಿ, —ಹಿಡಿದು ಓದು; ಛಂದಸ್ಸು ಸರಿಯಾಗಿರು, ಛಂದೋಬದ್ಧವಾಗಿರು, ಸರಿಯಾಗಿ ಓಡು (Line does not s. Line scans smoothly). (ಮುಖ, ದಿಗಂತ, ಮೊ. ರ ಎಲ್ಲ ಭಾಗಗಳನ್ನೂ) ಸೂಕ್ಷ್ಮವಾಗಿ, ವಿವರವಾಗಿ, —ಪರಿಶೀಲಿಸು; ಆರಯ್ದು ನೋಡು; ನಿಟ್ಟಿಸಿ ನೋಡು. **Scánsion** (ನಾ.) ಪ್ರಸ್ತಾರ (ಕ್ರಮ); ಪ್ರಸ್ತಾರ ಹಾಕುವುದು; ಛಂದೋ ವಿನ್ಯಾಸ.

Scándal ಸ್ಕ್ಯಾಂಡಲ್, —ಡ್ಲ್ (ನಾ.) ಅಪನಿಂದೆ, ಲೋಕಾಪವಾದ, ಕಳಂಕ (ತರುವಂಥದು); ನಾಚಿಕೆಗೇಡು; ಗುಲ್ಲು. (ನ್ಯಾ. ಶಾ.) ಅವಮಾನಕಾರಕ ಆಪಾದನೆ, ಮಾನಭಂಗಕಾರಿ; ನ್ಯಾಯಸ್ಥಾನದ ಘನತೆ ಗೌರವಗಳಿಗೆ ಕುಂದು ತರುವಂಥ ಅಪ್ರಾಸಂಗಿಕವಾದ ಅಥವಾ ಅಶ್ಲೀಲವಾದ ವಿಷಯ: ಗೌರವಹಾನಿಕಾರಿ; **Scándalous** (ಗು.); **Scándalously** (ಕ್ರಿ. ವಿ.); **Scándalousness** (ನಾ.); **Scándal-monger** (ನಾ.) ಗುಲ್ಲುಗಾರ, ಅಪನಿಂದಕ, ಕೆಸರೆಬ್ಬಿಸುವವನು (ರೂಪ.). **Scándalize**[1] (ಕ್ರಿ. ಸಕ.) ಗುಲ್ಲೆಬ್ಬಿಸು, ಅಪನಿಂದೆ ಹರಡು (ವಿರ. ಪ್ರ.); (ಕಾವ್ಯ ಪ್ರ.) ಅವಮಾನಗೊಳಿಸು, ಮಾನಭಂಗಮಾಡು, ಹೆಸರು ಕೆಡಿಸು. ನೀತಿ ಭಂಗ, ಔಚಿತ್ಯ ಭಂಗ, ಮೊ. ಗಳಿಂದ ಅಸಹ್ಯ ಗೊಳಿಸು, ಜುಗುಪ್ಸೆ ಹುಟ್ಟಿಸು.

Scándalize[2] ಸ್ಕ್ಯಾಂಡಲೈಸ್ (ಕ್ರಿ. ಸಕ.) (ನಾವೆ; ಪಟದ) ವಿಸ್ತೀರ್ಣ ಕಡಮೆಮಾಡು; (ಪಟವನ್ನು) ಚಿಕ್ಕದು ಮಾಡು.

Scándalum magnátum (L) ಸ್ಕ್ಯಾಂಡಲಂ ಮ್ಯಾಗ್ನೇಟಂ (ನಾ.) ಪ್ರತಿಷ್ಠಾವಂತರಮೇಲೆ ಮಾನಹಾನಿಕರವಾದ ದೋಷಾರೋಪ; ಘನವಂತರ ಮಾನಹಾನಿ (ಮಾಡುವುದು)

Scandinávian ಸ್ಕ್ಯಾಂಡಿನೇವಿಯನ್ (ಗು., ನಾ.) (ಡೆನ್ಮಾರ್ಕ್, ನಾರ್ವೆ, ಸ್ವೀಡನ್, ಐಸ್ಲಂಡ್‌ಗಳನ್ನೊಳಕೊಂಡ) ಸ್ಕ್ಯಾಂಡಿನೇವಿಯದ (ನಿವಾಸಿ, ಭಾಷಾ ವರ್ಗ)

Scánsion. Scan ನೋಡಿ.

Scansórial ಸ್ಕ್ಯಾನ್ಸೋ(ಅ)ರಿಯಲ್ (ಗು.) (ಹಕ್ಕಿಗಳ ವಿಷಯದಲ್ಲಿ) ಹತ್ತುವ, ಏರುವ, —ಸ್ವಭಾವದ; ಆರೋಹಿ; (ಅವುಗಳ ಪಾದಗಳ ವಿಷಯದಲ್ಲಿ) ಹತ್ತಲು ಅನುಕೂಲಿಸುವ.

Scant ಸ್ಕ್ಯಾಂಟ್ (ಗು., ಕ್ರಿ. ಸಕ.) ಸಾಕೂ ಸಾಕಾಗದ, ಸಾಲದ, ಕಡಮೆ ಯಾದ, ಕೊರೆಯಾದ (ಪ್ರಾಚೀ. ಪ್ರ., ಕಾವ್ಯ ಪ್ರ., ಮತ್ತು ಕೆಲವು ಪದಪುಂಜಗಳಲ್ಲಿ ಮಾತ್ರ: With s. courtesy ತೃಣಪ್ರಾಯವಾಗಿ ಗಣಿಸಿ. S. of breath ಉಸಿರು ಸಾಲದೆ). (ಕ್ರಿ.) (ಪ್ರಾಚೀ. ಪ್ರ.) ಸಾಕೂ ಸಾಕಾಗದಂತೆ ಕೊಡು, ಜಿಪುಣತನ ತೋರಿಸು; (ಕೊಡುವಲ್ಲಿ) ಕೈ ಬಿಗಿಹಿಡಿ. **Scántly** (ಕ್ರಿ. ವಿ.); **Scánty** (ಗು.) (ಅಳತೆ, ಮೊತ್ತ, ಸರಬರಾಜು, ಮೊ. ವು) ಅಲ್ಪ, ರವಷ್ಟು, ಸಾಲದ, ಸಾಕಾಗದ, ಕಡಮೆಯಾದ, ವಿರಳ (ಎದುರು ಪದ: Ample). **Scántily** (ಕ್ರಿ.ವಿ.); **Scántiness** (ನಾ.)

Scántling ಸ್ಕ್ಯಾಂಟ್ಲಿಂಗ್ (ನಾ.) (ಪ್ರಾಚೀ. ಪ್ರ.) ಮಾದರಿ, ನಮೂನೆ. ಸ್ವಲ್ಪ, ಕೊಂಚ, ಚೂರು, ತುಸ; ಸಣ್ಣ—ತೊಲೆ, ದೂಲ (ಐದಂಗುಲ ಕ್ಕಿಂತ ಕಡಮೆ ದಪ್ಪ, ಅಗಲ ಉಳ್ಳದ್ದು). ಕಲ್ಲನ್ನು ಕಡಿಯಬೇಕಾದ, ಮರ ವನ್ನು ಕೊಯ್ಯಬೇಕಾದ, ಒಂದು ಗಾತ್ರ, ಅಳತೆ; (ಮು., ಹಡಗು ಕಟ್ಟಡದಲ್ಲಿ; ಭಾಗಗಳ) ಗೊತ್ತಾದ ಅಳತೆ, ಪ್ರಮಾಣ. ಪೀಪಾಯಿ ಇಡುವ ತಿಕ್ಕಡಿಗಾಲು ಪೀಠ; ತಿವಟಿಗೆ.

Scape[1] ಸ್ಕೇಪ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) = Escape. [Hair-breadth scapes = Hairbreadth escapes (Hair ನೋಡಿ)]

Scape[2] ಸ್ಕೇಪ್ (ನಾ.) (ಸ. ವಿ.) (ಪ್ರಿಂರೋಸ್ಸಿನಲ್ಲಿರುವಂತೆ, ಎಲೆಗಳು ಬಿಡದೆ ಹೂವು ಮಾತ್ರ ಬಿಡುವ) ಆಧಾರಕಾಂಡ; (ಕೀಟ ವಿಜ್ಞಾನ) ಸ್ಪರ್ಶ ತಂತುವಿನ, ಸ್ಪರ್ಶಾಂಗದ, —ಬುಡ. ಗರಿಯ ಪ್ರಧಾನ ಕಾಂಡ, ದಿಂಡು. (ವಾ. ಶಾ.) ಕಂಬದ ಕಾಂಡ, ದಿಂಡು.

Scápegoat ಸ್ಕೇಪ್‌ಗೋಟ್ (ನಾ.) (ಬೈಬಲ್ ಹಳೆಯ ಒಡಂಬಡಿಕೆ) ಯೆಹೂದ್ಯ ಪುರೋಹಿತನು ಜನರ ಪಾಪಗಳನ್ನೆಲ್ಲ ತಲೆಯಮೇಲೆ ಹೊರಿಸಿ ಕಾಡಿಗೆ ಅಟ್ಟಿಬಿಡುತ್ತಿದ್ದ ಆಡು, ಮೇಕೆ. ಇತರರ ತಪ್ಪು ಗಳನ್ನು ಹೊತ್ತುಕೊಂಡವನು; ಇತರರ ಪಾಪಕ್ಕೆ ಗುರಿಯಾದವನು; ಪಾಪ ಪಶು; ಪಾಪ ಬಲಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Scápegrace ಸ್ಕೇಪ್‌ಗ್ರೇಸ್ (ನಾ.) ಚೇಷ್ಟೆಗಳಿಂದ ತೊಂದರೆಗೆ ಸಿಕ್ಕಿಕೊಳ್ಳುವ ಮಂದಬುದ್ಧಿ(ಯ ಮಗು); ಕೀಟಲೆಯ ಮಗು.

Scápement = Escapement.

Scáphoid ಸ್ಕ್ಯಾಫಾಯ್ಡ್ (ಗು., ನಾ.) (ಅಂ. ರ. ಶಾ.) ದೋಣಿಯಾಕಾರದ (ಎಲುಬು) [S. bone (ಅಂಗೈಯ ಅಥವಾ ಅಂಗಾಲಿನ) ದ್ರೋಣಾಸ್ಥಿ]

Scápula (L) ಸ್ಕ್ಯಾಪ್ಯುಲ (ನಾ.; ಬ. ವ. -lae —ಲೀ) ಹೆಗಲೆಲುಬು, ಮುಡುಹು; ಸ್ಕಂಧಾಸ್ಥಿ. **Scápular** (ಗು., ನಾ.) ಹೆಗಲಿನ, ಹೆಗಲೆಲುಬಿನ [S. arch = Shoulder-girdle (Girdle ನೋಡಿ). S. feathers ರೆಕ್ಕೆಯ ಬುಡದಲ್ಲಿ ಬೆಳೆಯುವ ಗರಿ]. (ನಾ.) ಕ್ರೈಸ್ತ ಸಂನ್ಯಾಸಿಗಳು ತೊಡುವ, ಹೆಗಲು ಮುಚ್ಚುವ, ಗಿಡ್ಡ ಅಂಗಿ. ಸಂನ್ಯಾಸಿ ವರ್ಗಕ್ಕೆ ಪ್ರವೇಶ ದೊರೆತದ್ದರ ಚಿಹ್ನೆಯಾದ, ಹೆಗಲಮೇಲೆ ಅಡ್ಡಪಟ್ಟಿಯಿಂದ ಸೇರಿಸಿ ಬೆನ್ನಮೇಲೂ ಎದೆಯ ಮೇಲೂ ಇಳಿಯಬಿದ್ದಿರುವ, ಎರಡು ಪಟ್ಟಿಗಳು: ಹೆಗಲ ಪಟ್ಟಿಗಳು (= **Scápulary**). ಹೆಗಲ—ಒತ್ತು ಕಟ್ಟು, ಪಟ್ಟಿ. ರೆಕ್ಕೆಯ ಬುಡದ ಗರಿ. **Scápulo-** (ಸ. ಪೂ. ಪ.) ಹೆಗಲ—; ಸ್ಕಂಧ—. **-húmeral, -rádial, -úlnar** ಭುಜದ ಮತ್ತು ಮೇಲು ರಟ್ಟೆಯ, — ಮತ್ತು ರೇಡಿಯಸ್ ಮೂಳೆಯ, —ಮತ್ತು ಮುಂಗೈ ಒಳ ಎಲುಬಿನ.

Scar[1] ಸ್ಕಾರ್ (ನಾ., ಕ್ರಿ.) (ಹುಣ್ಣು, ಗಾಯ, ಸುಟ್ಟ ಸ್ಥಳ, ಮೊ. ವು ಮಾದಮೇಲೆ ನಿಲ್ಲುವ) ಗಾಯದ ಕಲೆ, ಮಚ್ಚೆ, ಕಳಂಕ (ರೂಪ. ಸಹ). ಮರದಲ್ಲಿ ಎಲೆ, ಮೊ. ವು ಉದುರಿದ ಸ್ಥಳದಲ್ಲಿ ನಿಂತ ಗುರುತು. (ಕ್ರಿ.) ಗಾಯದ ಗುರುತು, ಕಲೆ, —ಆಗು, ಮಾಡು (ಮು., ಭೂ. ಕೃ. ನಲ್ಲ); ಮಾಯಿ, ಮಾಯಿಸು; ಕಲೆಗಟ್ಟು. ಕಳಂಕಿತ ಮಾಡು. **Scárless** (ಗು.)

Scar[2], **Scaur** ಸ್ಕಾರ್ (ನಾ.) ಬೆಟ್ಟದ ಕಡಿದು ಭಾಗ; ಪ್ರಪಾತ.

Scárab ಸ್ಕ್ಯಾರಬ್ (ನಾ.) ಪ್ರಾಚೀನ ಈಜಿಪ್ಟಿನಲ್ಲಿ ಪವಿತ್ರವೆಂದು ಗಣಿಸಿದ್ದ ಜೀರುಂಡೆ; ಜೀರುಂಡೆ ವರ್ಗದ ಕೀಟ; ಜೀರುಂಡೆಯಾಕಾರದಲ್ಲಿ ಕತ್ತರಿಸಿ, ಚಪ್ಪಟೆಯ ಮುಖದಮೇಲೆ ಸಂಕೇತಗಳನ್ನು ಕೆತ್ತಿರುತ್ತಿದ್ದ ಈಜಿಪ್ಟಿನ ಪುರಾತನ ರತ್ನ: ಜೀರುಂಡೆ ರತ್ನ. **Scarabaéid** ಸ್ಕ್ಯಾರಬೀಇಡ್ (ಗು., ನಾ.) ಜೀರುಂಡೆ ವರ್ಗದ (ಕೀಟ). **Scarabaéoid** ಸ್ಕ್ಯಾರಬೀಆಯ್ಡ್ (ಗು., ನಾ.) ಜೀರುಂಡೆಯಂಥ; ಜೀರುಂಡೆ ರತ್ನದಂಥ (ರತ್ನ)

Scarabaéid, Scarabaéoid. **Scarab** ನೋಡಿ.

Scáramouch ಸ್ಕ್ಯಾರಮೌಚ್ (ಗು., ನಾ.) (ಪ್ರಾಚೀ. ಪ್ರ.) ಜಂಬಗಾರ ಹೇಡಿ, ಬಡಾಯಿಕೋರ (ಇಟ್ಯಾಲಿಯನ್ ಪ್ರಹಸನಗಳಲ್ಲಿ ತಪ್ಪದೆ ಬರುವ ಒಂದು ಪಾತ್ರ). ಪೋಲಿ, ಪೋಕರಿ, ಪಟಿಂಗ.

Scárce ಸ್ಕೇರ್ಸ್ (ಗು., ಕ್ರಿ. ವಿ.) (ಸಾ., ಆಹಾರ, ಹಣ, ಮೊ. ಗಳ ವಿಷಯದಲ್ಲಿ) ಸಾಲದ, ಸಾಕಾಗದ, ಕಡಮೆಯಾದ, ಅಲ್ಪ, ಸ್ವಲ್ಪ, ವಿರಳ, ಅಪರೂಪ, ದುರ್ಲಭ, ಅಪೂರ್ವ [A s. book. Make oneself s. (ಆಳ. ಮಾ.) ಕಾಣಿಸಿಕೊಳ್ಳದೆ ಹೋಗು, ಅಪರೂಪವಾಗು]. (ಕ್ರಿ. ವಿ.) = Scarcely. **Scárcely** (ಕ್ರಿ. ವಿ.) ಕೇವಲ, ಮಾತ್ರ; ಅಪರೂಪವಾಗಿ, ವಿರಳವಾಗಿ (Is s. seventeen years old. I s. know him). ಖಂಡಿತ ಇಲ್ಲ, ಬಹುಶಃ ಇಲ್ಲ (You will s. maintain that. He can s. have said so ಅವನು ಹಾಗೆ ಹೇಳಿಯೇ ಇರಲಾರ). ಇಲ್ಲ (ಎನ್ನುವುದಕ್ಕೆ ಸೌಮ್ಯ ಪ್ರ.) (I s. think so, know what to say). **Scárcity** (ನಾ.) ವಿರಳತೆ, ದುರ್ಲಭತೆ, ಕೊರತೆ, ಅಭಾವ (*Of* ಉಪ. ದೊಡನೆ. S. of rain, food); ಬರ, ಕ್ಷಾಮ, ದುರ್ಭಿಕ್ಷ. **Scárceness** (ನಾ.)

Scárcement ಸ್ಕೇರ್ಸ್‌ಮೆಂಟ್ (ನಾ.) (ಗೋಡೆಯಲ್ಲಿ) ತೋಡು ಗೂಡು; ಇದರಿಂದಾದ ಚಾಚು; (ಬಂಡೆಯಲ್ಲಿ) ಚಾಚು.

Scare ಸ್ಕೇರ್ (ಕ್ರಿ. ಸಕ., ನಾ.) (ಮಗು, ಮುಟ್ಠಾಳ, ಪ್ರಾಣಿ, ಮೊ. ನ್ನು) ಥಟ್ಟನೆ—ದಿಗಿಲು ಬೀಳಿಸು, ಹೆದರಿಸು, ಬೆದರಿಸು, ಗಾಬರಿ ಹಿಡಿಸು (Scared face, expression ಬೆದರಿದ ಮುಖ, ನೋಟ. S. away ಬೆದರಿಸಿ ಓಡಿಸು). (ಹಕ್ಕಿ, ಮೊ. ನ್ನು) ಪೈರು ತಿನ್ನದಂತೆ ಓಡಿಸು; ಸೋವು, ಅಟ್ಟು. (ನಾ.) ಗೊಡ್ಡು ಹೆದರಿಕೆ; ನಿಷ್ಕಾರಣವಾದ, ಬರಿಯ, —ದಿಗಿಲು, ಕಳವಳ, ಗಾಬರಿ (ಸಾ., ಯುದ್ಧ, ಶತ್ರುಗಳ ದಂಡಯಾತ್ರೆ, ವ್ಯಾಪಾರದ ನಷ್ಟ, ಮೊ. ಗಳ ವಿಷಯದಲ್ಲಿ). **Scarécrow** (ನಾ.) (ಹಕ್ಕಿಗಳು ಬರದಂತೆ ಹೊಲ ಗದ್ದೆಗಳಲ್ಲಿ, ತೋಟಗಳಲ್ಲಿ, ಇಡುವ) ಬೆದರು (ಗೊಂಬೆ), ಬೆರ್ಚು, ಬೆಚ್ಚಗೆ; ಗುಮ್ಮ; ವಿಚಿತ್ರ ವೇಷಿ; ನರಪೇತಲ, ಕದಿರುಕಡ್ಡಿ. **Scare-head(ing), -lin** (ವೃತ್ತಪತ್ರಿಕೆಗಳಲ್ಲಿ; ಅತಿ ದೊಡ್ಡಕ್ಷರಗಳಲ್ಲಿರುವ) ಗಾಬರಿ ತಲೆಪಂಕ್ತಿ **Scarémonger** (ನಾ.) ಗಾಬರಿ ಹರಡುವವನು, ಹುಸಿ ಹೆದರಿಕೆ ಹುಟ್ಟಿಸುವವನು.

Scarf[1] ಸ್ಕಾರ್ಫ್ (ನಾ.; ಬ. ವ. -fs, -ves) ಬೆಚ್ಚಗಿರುವುದಕ್ಕಾಗಿ ಅಥವಾ ಅಲಂಕಾರಕ್ಕಾಗಿ ಕೊರಳು ಸುತ್ತ, ಹೆಗಲಮೇಲೆ, ಅಥವಾ ಉತ್ತರೀಯದಂತೆ, ಧರಿಸುವ ಕಿರಿಯಗಲದ ಉದ್ದನೆಯ ಬಟ್ಟೆ: ಕಂಠವಸ್ತ್ರ, ಅಂಗವಸ್ತ್ರ, ಉತ್ತರೀಯ. (ಗಂಡಸಿನ) ಕೊರಲಪಟ್ಟಿ [S.-pin, -ring ಕೊರಲಪಟ್ಟಿಯ ಹಿಡಿಕೆ ಸೂಜಿ, ಉಂಗುರ (ಸಾ., ಬಂಗಾರದ್ದು ಅಥವಾ ರತ್ನಖಚಿತವಾದದ್ದು)]. **S.-loom** ಕಿರಿಯಗಲದ ಬಟ್ಟೆ ನೇಯುವ ಮಗ್ಗ: ಪಟ್ಟೆ ಮಗ್ಗ. **S.-skin** ಪದೇ ಪದೇ ಪೊರೆ ಪೊರೆಯಾಗಿ ಉದುರಿಹೋಗುವ, ಚರ್ಮದ ಹೊರಪದರ: ಹೊರ ಚರ್ಮ (ಮು., ಉಗುರಿನ ಬುಡದಲ್ಲಿಯದು, ಉಗುರಿನ ಕಣ್ಣಿನದು). **Scarfed** (ಗು.); **Scarf-wise** (ಕ್ರಿ. ವಿ.) ದವಾಲಿಯ ರೀತಿಯಲ್ಲಿ.

Scarf[2] ಸ್ಕಾರ್ಫ್ (ಕ್ರಿ. ಸಕ., ನಾ.) (ಮರ, ಲೋಹ, ಚಕ್ಕಳ, ಮೊ. ಗಳ ತುಂಡುಗಳ ಜೋಡಣೆಯಲ್ಲಿ) ಹೆಂಚು ಹೊದಿಸಿದಂತೆ ಕೂಡಿಸಿದರೂ ದಪ್ಪ ಹೆಚ್ಚದಂತೆ ಏಣನ್ನು ಹೆರೆದು ಜೋಡಿಸು; ಪಡ ಕೂಡಿಸು. (ತಿಮಿಂಗಿಲವನ್ನು) ತುಂಡು ತುಂಡಾಗಿ ಕತ್ತರಿಸು. (ನಾ.) ಪಡ ಪದರು ಜೋಡಣೆ (S.-joint), ಬೆಸಗೆ (S.-weld). ಕೂರುಗೆ ಕಂಡಿ; ಗಾಡಿ; ಪಡ.

Scárify ಸ್ಕೇರಿಫೈ (ಕ್ರಿ. ಸಕ.) (ಶಸ್ತ್ರವೈದ್ಯ) ಈಟಿ ಶಸ್ತ್ರದಿಂದ ಗೀರು, ಚುಚ್ಚು; ಚುಚ್ಚಿ ರಕ್ತ ತೆಗೆ; (ಧಮನಿಗಳನ್ನು ಕತ್ತರಿಸದಂತೆ) ಮೇಲ್ಗಡೆ ಮಾತ್ರ ಶಸ್ತ್ರ ಹಾಕು; ಚರ್ಮ ಕತ್ತರಿಸಿ ಹಾಕು; ಗೀರು ಗಾಯ ಮಾಡು. (ರೂಪ.) ಕಟು ಟೀಕೆ, ಮೊ. ಗಳಿಂದ ಮನಸ್ಸನ್ನು ನೋಯಿಸು, ಚುಚ್ಚು. (ನೆಲವನ್ನು) ಕುಂಟೆ ಹೊಡೆ, ಹರತೆ ಮಾಡು, ಹರಗು. **Scarificátion** (ನಾ.); **Scárificator** (ನಾ.) (ಕ್ರಿಯಾರ್ಥಗಳಲ್ಲಿ); ಏಕ ಕಾಲದಲ್ಲಿ ಹಲವು ಚುಚ್ಚುಗಳನ್ನು, ಗೀರು ಗಾಯಗಳನ್ನು, ಮಾಡುವ ಒಂದು ಶಸ್ತ್ರ ಸಲಕರಣೆ. **Scárifier** (ನಾ.) (ಕ್ರಿಯಾರ್ಥಗಳಲ್ಲಿ); = Scarificator; ಕುಂಟೆ, ಹರತೆ ಯಂತ್ರ. ರಸ್ತೆಯ ಮೇಲ್ಮೈಯನ್ನು ಸಾಲು ಸಾಲಾಗಿ ಸೀಳುವ, ಬಗಿದುಹಾಕುವ, ಯಂತ್ರಸಲಕರಣೆ.

Scárious ಸ್ಕೇರಿಯಸ್ (ಗು.) (ಸ. ವಿ.) (ತೊಟ್ಟಿನ ಎಲೆ, ಮೊ. ಗಳ ವಿಷಯದಲ್ಲಿ) ತೆಳುವಾಗಿಯೂ ಒಣಗಿಯೂ ಪೊರೆ ಪೊರೆಯಾಗಿಯೂ ಇರುವ; ಬತ್ತಿದ, ಒಣಕಲಾದ.

Scarlatína ಸ್ಕಾರ್ಲಟೀನ (ನಾ.) = Scarlet fever (Fever ನೋಡಿ)

Scárlet ಸ್ಕಾರ್ಲೆಟ್ (ನಾ., ಗು.) ಕಡುಗೆಂಪು ಬಣ್ಣ(ದ); ಅರುಣ ವರ್ಣ(ದ); ಕೇಸರಿ ಬಣ್ಣ(ದ); —ಬಟ್ಟೆ, ಉಡುಪು (Dressed in s.). **S. admiral** ಒಂದು ಬಗೆಯ ಚಿಟ್ಟೆ: ಕೆಂಚಿಟ್ಟೆ. **S. fever** ಕೆಂಜ್ವರ (Fever ನೋಡಿ); (ಹಾಸ್ಯ ಪ್ರ.) ಸೈನಿಕರಲ್ಲಿ ಮೋಹ. **S.-grain** ರಷ್ಯ ಮತ್ತು ತುರ್ಕಿ ದೇಶಗಳಲ್ಲಿ ಅದರಿಂದ ಕೆಂಪು ವರ್ಣದ್ರವ್ಯವನ್ನು ತಯಾರಿಸುವ ಒಂದು ಬಗೆಯ ಪೊರೆ ಹುಳು: ಕೆಂಚ ಹುಳು. **S. hat** ಕ್ರೈಸ್ತ ಧರ್ಮಾಧ್ಯಕ್ಷನ (ಕಾರ್ಡಿನಲ್ಲನ) ಟೊಪ್ಪಿಗೆ; ಕಾರ್ಡಿನಲ್ಲನ ಅಧಿಕಾರ, ಪದವಿ. **S. rash** ಕೆಂದೊಕ್ಕೆ, ಕೆಂದಡಾರ. **S. runner** ಕಡುಗೆಂಪು ಹೂವಿನ ಅವರೆ ಜಾತಿಯ ಬಳ್ಳಿ. **S. woman, whore** (ನಿಂದನೆಯ ಪದವಾಗಿ ಪ್ರ.) ರೋಮನ್ ಕ್ಯಾತೊಲಿಕ್ ಮತ.

Scároid. **Scarus** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Scarp ಸ್ಕಾರ್ಪ್ (ನಾ., ಕ್ರಿ. ಸಕ.) ಕೋಟೆಯ ಕಂದಕದ ಒಳ ಗೋಡೆ, ಒಳವೋರೆ ; ಕಡಿದಾದ —ಓರೆ, ಇಳಿಜಾರು. (ಕ್ರಿ.) (ಇಳಿಜಾರನ್ನು) ಕಡಿದುಮಾಡು ; (ಕಂದಕಕ್ಕೆ) ಕಡಿದಾದ ಓರೆಗಳನ್ನು ಮಾಡು. (ಬೆಟ್ಟದ ಪಾರ್ಶ್ವ, ಮೊ. ಗಳ ವಿಷಯದಲ್ಲಿ ; ಭೂ. ಕೃ.) ಕಡಿದಾದ, ಪ್ರಪಾತವುಳ್ಳ.

Scárus ಸ್ಕೇ(ಅ)ರಸ್ (ನಾ.) ಗಿಣಿಮೂಗಿನಂಥ ಮೂತಿಯುಳ್ಳ ಹಲವು ಬಗೆಯ ಉಜ್ಜ್ವಲ ವರ್ಣದ ಮೀನು. **Scároid** ಸ್ಕ್ಯಾ(ಸ್ಕೇ)ರಾಯ್ಡ್ (ಗು., ನಾ.) ಸ್ಕೇರಸ್ ವರ್ಗದ (ಮೀನು) ; ಸ್ಕೇರಸ್ ಮೀನಿನಂಥ.

Scathe ಸ್ಕೇದ್ (ಕ್ರಿ. ಸಕ., ನಾ.) (ಬೆಂಕಿಯಿಂದ ಸೀಯಿಸಿ, ಬತ್ತಿಸಿ) ಹಾಳು ಮಾಡು, ಹಾನಿಗೊಳಿಸು ; ಸೀದುಹಾಕು ; ಗಾಸಿಗೊಳಿಸು [(ಕಾವ್ಯ ಮತ್ತು ಅಲಂ.) ; (ಕಟು ಭಾಷಣ, ಮೊ. ಗಳ ವಿಷಯದಲ್ಲಿ ರೂಪ.) : Scathing sarcasm, remarks ಇರಿಯುವ, ಸುಡು, —ಅಣಕ, ಟೀಕೆ]. (ನಿಷೇಧಾರ್ಥಕ ಪ್ರ. ಗಳಲ್ಲಿ) ಅತ್ಯಲ್ಪ ಹಾನಿಮಾಡು [Shall not be scathed ಕೊಂಚವೂ ಹಾನಿಯಾಗುವುದಿಲ್ಲ (ಮು., Unscathed)]. (ನಾ.) (ವಿರ. ಪ್ರ. ; ಸಾ., ನಿಷೇಧಾರ್ಥಕ ಪ್ರ.) ಹಾನಿ, ಕೇಡು, ನಷ್ಟ, ಗಾಸಿ (Without s. ಕೆಡುಕಾಗದೆ, ಹಾನಿ ತಟ್ಟದೆ). **Scátheless** (ಗು.) ನಿರಪಾಯವಾಗಿ, ಹಾನಿ ತಟ್ಟದೆ. **Scáthingly** (ಕ್ರಿ. ವಿ.) ಕಟುವಾಗಿ, ಇರಿಯುವಂತೆ, ತೀಕ್ಷ್ಣವಾಗಿ.

Scatólogy ಸ್ಕಟಾಲೊಜಿ (ನಾ.) ಪುರೀಷ ವಿಜ್ಞಾನ; ಶಿಲೀಭೂತ ಪುರೀಷದ ವ್ಯಾಸಂಗ. ಗೊಬ್ಬರದ ಬರೆವಣಿಗೆ ; ಅಶ್ಲೀಲ ಸಾಹಿತ್ಯ ; ಹೊಲಸು ವಿಷಯಗಳಲ್ಲಿ ಆಸಕ್ತಿ. **Scatóphagous** —ಫಗಸ್ (ಗು.) ಸಗಣಿ ತಿನ್ನುವ.

Scátter ಸ್ಕ್ಯಾಟರ್ (ಕ್ರಿ.) ಸಿಕ್ಕಾಬಟ್ಟೆ ಬಿಸಾಡು, ಎರಚು, ಚೆದರು, ಚೆದರಿಸು, ಕೆದರು, ಕೆದರಿಸು ; ಚೆಲ್ಲಾಪಿಲ್ಲಿ, ದಿಕ್ಕುಪಾಲು, —ಮಾಡು, ಆಗು ; ಈಡಾಡು ; ದಿಕ್ಕೆಟ್ಟು ಓಡು, ಓಡಿಸು ; (ಮೋಡ, ನೆಟ್ಟಿಕೆ, ಮೊ. ಗಳ ವಿಷಯದಲ್ಲಿ) ಹಾರಿಹೋಗು; (ಬೆಳಕನ್ನು) ಹರಡು, ಬೀರು ; (ಫಿರಂಗಿಯ ವಿಷಯದಲ್ಲಿ) ವ್ಯಾಪಕವಾಗಿ, ಹರಡಿ ಬೀಳುವಂತೆ, —ಗುಂಡು ಹಾರಿಸು ; (ಭೂ. ಕೃ.) ದೂರ ದೂರ ಹರಡಿರುವ, ವಿರಳ, ಅಲ್ಲೊಂದು ಇಲ್ಲೊಂದು ಇರುವ (Scattered hamlets, instances). **S.-brain** ಏಕಾಗ್ರ ಗಮನವಿಲ್ಲದ ಮನುಷ್ಯ ; ಗಮನಗೇಡಿ. **S.-brained** (ಗು.). **Scátteringly** (ಕ್ರಿ. ವಿ.)

Scaúper. **Scalper** ನೋಡಿ.

Scaur. **Scar**[2] ನೋಡಿ.

Scávenger ಸ್ಕ್ಯಾವೆಂಜರ್ (ನಾ., ಕ್ರಿ. ಅಕ.) ಬೀದಿ ಗುಡಿಸುವವನು ; ಥಂಗಿ, ತೋಟಿ, ಜಲಗಾರ, ಜಾಡಮಾಲಿ. ಕೊಳೆತ ಮಾಂಸ, ಹೊಲಸು, —ತಿನ್ನುವ ಪ್ರಾಣಿ (=S.-beetle, -crab—ತಿನ್ನುವ ಜೀರುಂಡೆ, ನಳ್ಳಿ). ಹೊಲಸು ಬರಹಗಾರ; ಅಶ್ಲೀಲ ಲೇಖಕ. (ಕ್ರಿ.) ಬೀದಿ ಗುಡಿಸು, ಥಂಗಿ ಕೆಲಸ ಮಾಡು, ಜಾಡಮಾಲಿಯಾಗಿರು [=**Scávenge** (ಕ್ರಿ.)]. **Scávengery** (ನಾ.) ಊರಿನ ಪಾಕೀಜು, ಥಂಗಿ ಏರ್ಪಾಟು.

Scena, Scenário. **Scene** ನೋಡಿ.

Scend. **Send**[2] ನೋಡಿ.

Scene ಸೀನ್ (ನಾ.) (ಪ್ರಾಚೀ. ಪ್ರ.) ನಾಟಕರಂಗ, ರಂಗಭೂಮಿ [(ರೂಪ.) Quit the s. (ಜೀವನ)ರಂಗ ಬಿಟ್ಟುಹೊರಡು, ಸತ್ತುಹೋಗು]. ಪ್ರದರ್ಶನ ಸ್ಥಳ, ರಂಗಸ್ಥಳ (The world is a s. of strife ಪ್ರಪಂಚ ಹೋರಾಟದ ಒಂದು ಕಳ). ಕಥೆಯ ಅಥವಾ ನಾಟಕದ ಘಟನೆಗಳು ನಡೆಯುವ ಸ್ಥಳ ; ಘಟನ, ಕಾರ್ಯ, —ಕ್ಷೇತ್ರ, ಸ್ಥಾನ (The s. is laid in India. The s. of the disaster was the North Sea). ನಾಟಕಾಂಕದ ಒಂದು ವಿಭಾಗ : ದೃಶ್ಯ, ನೋಟ (Act II. s. iii. The famous duel s. Carpenter-s. ತೆರೆಯ ಹಿಂದೆ ಮುಂದಿನ ನಾಟಕ ಭಾಗಕ್ಕೆ ಬಡಗಿ ಸಲಕರಣೆಯನ್ನು ಅಳವಡಿಸುವ ಕಾಲದಲ್ಲಿ ತೆರೆಯ ಮುಂಭಾಗದಲ್ಲಿ ತೋರುವ ದೃಶ್ಯ ; ಇದರ ಚಿತ್ರಪರದೆ). (ರೂಪ.) ಘಟನೆ, ಜೀವನ ಚಿತ್ರ ; ರಂಪ, ಅವಾಂತರ (Now, don't make a s.). ಸ್ಥಳವನ್ನು ಯಥಾವತ್ತಾಗಿ ಪ್ರದರ್ಶಿಸಲು ಕೃತಕವಾಗಿ ತೊಂಗು ಪರದೆ, ಪಕ್ಕ ಚಿತ್ರಹಲಗೆ, ಪರದೆ, ಮೊ. ಗಳ ಮೂಲಕ ಸಜ್ಜುಗೊಳಿಸಿದ ದೃಶ್ಯ : ರಂಗ ದೃಶ್ಯ ; ರಂಗಸ್ಥಳದ ದೃಶ್ಯ ಸಲಕರಣೆ ; ರಂಗಸಜ್ಜು ; ರಂಗಪ್ರಸಾಧನ; ತೆರೆ, ಪರದೆ [Behind the scenes ಪರದೆಯ ಹಿಂದೆ ; ನೇಪಥ್ಯದಲ್ಲಿ. (ರೂಪ.) ಸಾರ್ವಜನಿಕರ ಕಣ್ಣಿಗೆ ಬೀಳದೆ, ರಹಸ್ಯವಾಗಿ, ಗೋಪ್ಯವಾಗಿ (ನಡೆಯುವ ಸಂಗತಿಗಳನ್ನು ತಿಳಿದುಕೊಳ್ಳುವ ಸ್ಥಿತಿಯಲ್ಲಿ). Set s. (ರಂಗಸ್ಥಳದಲ್ಲಿ) ಘನ ಭಾಗಗಳನ್ನು ಅಳವಡಿಸಿ ರಚಿಸಿದ ದೃಶ್ಯ : ಸಿದ್ಧ ದೃಶ್ಯ. Drop-s. (Drop ನೋಡಿ)]. (ರೂಪ.) (ನಾಟಕರಂಗದಂತೆ ಕಣ್ಣಮುಂದೆ ಹರಡಿರುವ) ಪ್ರಕೃತಿ ದೃಶ್ಯ, —ನೋಟ [A silvan, desolate, s. ವನ, ಪಾಳು, ದೃಶ್ಯ. Change of s. (ಪ್ರಯಾಣದಿಂದ ದೊರೆತ) ನೋಟ(ಗಳ) ಬದಲಾವಣೆ]. **S.-dock** ರಂಗಸ್ಥಳದ ಪಕ್ಕದಲ್ಲಿ ರಂಗೋಪಕರಣಗಳನ್ನು ಇಡುವ ಸ್ಥಳ. **S.-painter** ದೃಶ್ಯ ಚಿತ್ರಕ. **S.-painting** ದೃಶ್ಯ ಚಿತ್ರಣ. **S.-shifter** ದೃಶ್ಯಗಳನ್ನು ಬದಲಾಯಿಸಿ ಜೋಡಿಸುವವನು; ದೃಶ್ಯ ಜೋಡಣೆಗಾರ ; ಪರದೆ ಎಳೆಯುವವನು. **Scéna** (It.) ಷೇನಾ (ನಾ.) (ಸಂ.) ಸಂಗೀತ ನಾಟಕದ —ಒಂದು ಭಾಗ, ದೃಶ್ಯ ; ಏಕಪಾತ್ರದ ನಾಟಕೀಯ ಗೀತೆ. **Scenário** (It.) ಸೆ(ಷೆ)ನಾ(ನೇ)ರಿಯೊ (ನಾ.) ದೃಶ್ಯಗಳ ಹಂಚಿಕೆ, ಪಾತ್ರಗಳ ಪ್ರವೇಶ, ಮೊ. ವಿವರಗಳ ಪಟ್ಟಿ ; ದೃಶ್ಯ ವಿವರ ; ನಾಟಕವಸ್ತುವಿನ ಸಾರಾಂಶ ; ಗೀತೆಗಳ ಗೋಷ್ವಾರೆ ; ಸಂಗೀತ ನಾಟಕದ ಪಾಠ ಪುಸ್ತಕ ; (ಚಲನಚಿತ್ರ) (ಲಿಖಿತದಲ್ಲಿರುವ) ಕಥಾ ವಿವರ. **Scénery** ಸೀನರಿ (ನಾ.) ರಂಗ ದೃಶ್ಯ ; ರಂಗ ಸಜ್ಜು, ದೃಶ್ಯ ಸಲಕರಣೆ ; (ಒಂದು ಸ್ಥಳದ) ಪ್ರಕೃತಿ ದೃಶ್ಯ, ನೋಟ (The s. is imposing). **Scénic** ಸೀನಿಕ್ (ಗು.) ರಂಗಸ್ಥಳದ, ರಂಗಭೂಮಿಯ ಮೇಲಿನ (S. performances) ; ಪ್ರದರ್ಶನಾತ್ಮಕ ; ಚಿತ್ರಮಯ ; (ಚಿತ್ರ, ಮೊ. ಗಳ ವಿಷಯದಲ್ಲಿ) ಕಥಾ ನಿರೂಪಕ ; ಸನ್ನಿವೇಶ, ಘಟನ, —ಚಿತ್ರಕ ; (ಮನೋಭಾವಗಳು, ಭಾವೋದ್ರೇಕಗಳು, ಮೊ. ಗಳ ವಿಷಯದಲ್ಲಿ) ತೋರ್ಕೆಯ, ಪ್ರದರ್ಶನದ, ಕೃತಕ, ನಟನೆಯ. **Scénically** (ಕ್ರಿ. ವಿ.) ; **Scenógraphy** ಸೀನಾಗ್ರಫಿ (ನಾ.) ಯಥಾದೃಷ್ಟ —ರೇಖನ, ಚಿತ್ರಣ [ತಳ ನಕ್ಷೆಯಾಗಲ ಲಂಬ ನಕ್ಷೆಯಾಗಲ ಅಲ್ಲದ, ನೋಟಕನಿಗೆ ದೃಶ್ಯ (ಮು., ಕಟ್ಟಡ) ಹೇಗೆ ಕಾಣುತ್ತದೆಯೋ ಅದೇ ರೀತಿ ಬರೆದ, ಚಿತ್ರ]. **Scénograph** ಸೀನೊಗ್ರಾಫ್ (ನಾ.) ದೃಶ್ಯ ಚಿತ್ರ(ಕಾರ). **Scenógrapher** ಸೀನಾಗ್ರಫರ್ (ನಾ.) ; **Scenográphic** ಸೀನೊಗ್ರ್ಯಾಫಿಕ್ (ಗು.); **Scenográphically** (ಕ್ರಿ. ವಿ.)

Scent ಸೆಂಟ್ (ಕ್ರಿ., ನಾ.) ವಾಸನೆಯಿಂದ ತಿಳಿ ; ವಾಸನೆ ಹಿಡಿ (S. game ಬೇಟೆಯನ್ನು ವಾಸನೆಯಿಂದ ತಿಳಿ). (ರೂಪ.) (ಒಂದರ ಇರವನ್ನು) ಶಂಕಿಸು, ಸುಳಿವು ತಿಳಿ, ಗುಮಾನಿ ಹಿಡಿ (S. treachery. S. a job ಕೆಲಸ ಖಾಲಿಯಿದೆಯೆಂದು, ಅಥವಾ ನೌಕರಿ ಸಿಕ್ಕುವುದೆಂದು, ಸುಳಿವು ತಿಳಿ. S. out ವಾಸನೆಯಿಂದ, ಹುಡುಕಾಟದಿಂದ, ಕಂಡುಹಿಡಿ). ಸುವಾಸನೆಗೊಳಿಸು, ಪರಿಮಳಿಸು, ವಾಸನೆ ಕಟ್ಟು (Rose scents the air. Scented dames) ; ಗಬ್ಬು ನಾತ ಮಾಡು, ದುರ್ವಾಸನೆ ಹಿಡಿಸು (Carrion scents the air). ವಾಸನೆ ನೋಡು, ಮೂಸಿ ನೋಡು, ಮೂಸು (Goes scenting about). (ನಾ.) (ಸು)ವಾಸನೆ, (ಸು)ಗಂಧ, ಪರಿಮಳ, ಕಂಪು (The s. of hay). (ಬೇಟೆ; ನಾಯಿಯ ಮೂಗಿಗೆ ವಾಸನೆಯಿಂದ ತಿಳಿಯುವ) ಬೇಟೆಯ ಜಾಡು, ಸುಳಿವು [Follow up, lose, recover, s. (ರೂಪ. ಸಹ). On the s. ಸುಳಿವು ತಿಳಿದು, ಜಾಡು ಹಿಡಿದು. Put off the s. ಸುಳ್ಳು ಸೂಚನೆಗಳಿಂದ —ಮೋಸಗೊಳಿಸು, ಜಾಡು ತಪ್ಪಿಸು. Cold s. ಸೂಕ್ಷ್ಮ, ಅಸ್ಪುಟ, —(ಬೇಟೆಯ) ವಾಸನೆ. Hot s. ತೀಕ್ಷ್ಣ, ಕಟು, —(ಬೇಟೆಯ) ವಾಸನೆ]. ಕಾಗದದ ಬೇಟೆಯಾಟದಲ್ಲಿ ಜಾಡು ತೋರಲು ಹಾಕಿಕೊಂಡು ಹೋಗುವ ಕಾಗದದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚೂರುಗಳು : ಜಾಡು ಕಾಗದ ಚೂರು [False s. ದಾರಿ ತಪ್ಪಿಸಲು, ಮೋಸಕ್ಕಾಗಿ, ಹಾಕಿದ ಕಾಗದ ಚೂರು : ಸುಳ್ಳು ಜಾಡು (ರೂಪ. ಸಹ)]. ವಾಸನೆ ಹಿಡಿಯುವ, ವಾಸನೆಗಳ ವ್ಯತ್ಯಾಸ ತಿಳಿಯುವ, ವಾಸನೆ ಯಿಂದ ಒಂದನ್ನು ಕಂಡುಹಿಡಿಯುವ, —ಶಕ್ತಿ : ಘ್ರಾಣಶಕ್ತಿ ; ಸೂಕ್ಷ್ಮಗ್ರಹಣ ಶಕ್ತಿ (Some dogs have practically no s. Keen-scented ತೀಕ್ಷ್ಣ ಘ್ರಾಣಶಕ್ತಿಯುಳ್ಳ). (ಹೂವು, ಮೊ. ಗಳಿಂದ ಭಟ್ಟಿಯಿಳಿಸಿದ) ಸುಗಂಧ, ಪರಿಮಳ, ಅತ್ತರು (ಮೊ. ದ್ರವ). **S.-bag** (ಕೆಲವು ಪ್ರಾಣಿಗಳಲ್ಲಿರುವ) ಸುಗಂಧ—ಕೋಶ, ಗ್ರಂಥಿ. (ಬೇಟೆಯಾಡು ವಲ್ಲ) ನಾಯಿಗಳಿಗೆ ಕೃತಕ ವಾಸನೆ ತೋರಿಸುವುದಕ್ಕಾಗಿ ದಾರಿಯಲ್ಲಿ ಎಳೆದುಕೊಂಡು ಹೋಗುವ ವಾಸನೆ ಚೀಲ. **S.-bottle** ಪರಿಮಳ (ತುಂಬಿದ) ಸೀಸೆ. **S.-gland** (ಕಸ್ತೂರಿ, ಪುನಗು, ಮೊ. ನ್ನು ಸ್ರವಿಸುವ) ಸುಗಂಧ ಗ್ರಂಥಿ. **S.-organ** ಸುಗಂಧ —ಕೋಶ, ಗ್ರಂಥಿ ; ಸುಗಂಧಾಂಗ. **(-)scénted** (ಗು.); **Scénted** (ಗು.) ಸುವಾಸಿತ, ಪರಿಮಳ ಕಟ್ಟಿದ (S. caper ಒಂದು ಬಗೆಯ ಸುವಾಸಿತ ತೇಯೆಲೆ ; ಸುಗಂಧದ ಟೀ ಸೊಪ್ಪು. S. fern ಮಾದಳ ಕಂಪಿನ ಜರೀ ಗಿಡ). **Scéntless** (ಗು.)

Scépsis, Sk-. **Sceptic** ನೋಡಿ.

Scéptic ಸ್ಕೆ(ಸೆ)ಪ್ಟಿಕ್, **Sk-** ಸ್ಕೆ— (ನಾ., ಗು.) ನಿಶ್ಚಯ ಜ್ಞಾನ ಸಾಧ್ಯವಿಲ್ಲವೆಂದು ವಾದಿಸುವವನು : ಸಂದೇಹ ವಾದಿ ; ಕ್ರೈಸ್ತ ಮತದ (ಅಥವಾ ಒಟ್ಟಿನಲ್ಲಿ ಮತಗಳ) ಸಿದ್ಧಾಂತಗಳನ್ನು ನಂಬದಿರು ವವನು : ಅಜ್ಞೇಯತಾ ವಾದಿ; (ಜನಬಳಕೆಯಲ್ಲಿ) ನಾಸ್ತಿಕ. ಸಂದೇಹ ಸ್ವಭಾವದವನು ; ಸಂದೇಹಿ, ಅನಿಶ್ಚಯಿ. ಒಂದು ಸಂಗತಿಯ ಅಥವಾ ಸಿದ್ಧಾಂತದ ಸತ್ಯತೆಯನ್ನು ಒಪ್ಪಿಕೊಳ್ಳುವುದಕ್ಕೆ ಪ್ರಮಾಣ (ರುಜುವಾತು) ಸಾಲದೆಂದು ಸಂದೇಹಪಡುವವನು; ತಿರಸ್ಕಾರಬುದ್ಧಿಯವನು. (ಗು.) (ನಾಮಪದದ ಅರ್ಥಗಳಲ್ಲಿ). **Scéptical, Sk-** (ಗು.) ವಿಚಾರ ಮಾಡಿ ಒಂದು ತೀರ್ಮಾನಕ್ಕೆ ಬರಲಾಗದ ; ಅನಿಶ್ಚಿತ (ಮತಿ) ; ಸಂದೇಹಪಡುವ ; ನಂಬದ ; ಯಾವುದನ್ನೂ ಪರೀಕ್ಷೆಮಾಡುವ, —ಮಾಡದೆ ಒಪ್ಪದಿರುವ. ಸಂದೇಹವಾದಿಗಳ ಅಭಿಪ್ರಾಯಗಳನ್ನುಳ್ಳ, —ಗಳಿಂದ ಪ್ರೇರಿತವಾದ, —ಗಳನ್ನು ಅನುಮೋದಿಸುವ. **Scépti-cally** (ಕ್ರಿ. ವಿ.) ; **Scépticism** (ನಾ.) ಅಜ್ಞೇಯತಾ ವಾದ ; ಸಂದೇಹ ವಾದ ; ಅನಿಶ್ಚಯ ; ಸಂದೇಹ. **Scépsis** ಸ್ಕೆ(ಸೆ)ಪ್ಸಿಸ್, **Sk-** (ನಾ.) ವಿಮರ್ಶ, ವಿಚಾರ, —ಬುದ್ಧಿ ; ತಾತ್ತ್ವಿಕ ಸಂದೇಹ ; (ತತ್ತ್ವಶಾಸ್ತ್ರದಲ್ಲಿ) ಸಂದೇಹ —ವಾದ, ದೃಷ್ಟಿ, ಭಾವ.

Scéptre ಸೆಪ್ಟರ್ (ನಾ.) ಪ್ರಭುತ್ವ ಚಿಹ್ನೆಯಾಗಿ ರಾಜನು ಕೈಯಲ್ಲಿ ಧರಿಸುವ, ರತ್ನ ಖಚಿತವಾದ ಚಿನ್ನದ ದಂಡ : ರಾಜದಂಡ. (ರೂಪ.) ರಾಜಾಧಿಕಾರ, ಪ್ರಭುತ್ವ, ಸಾರ್ವಭೌಮತ್ವ. **Scéptred** ಸೆಪ್ಟರ್ಡ್ (ಗು.) ; **Scéptreless** (ಗು.)

Schédule ಷೆ(ಸ್ಕೆ)ಡ್ಯೂಲ್ (ನಾ., ಕ್ರಿ. ಸಕ.) (ಮು., ದಸ್ತೈವಜು, ಮೊ. ಗಳಿಗೆ ಅನುಬಂಧರೂಪದಲ್ಲಿ ಸೇರಿಸಿದ, ಆಸ್ತಿ, ಮೊ. ಗಳ) ತಪ್ಸೀಲು, (ವಿವರ) ಪಟ್ಟಿ [S. time (ರೈಲು ಗಾಡಿಗಳು, ಮೊ. ಗಳ) ಗೊತ್ತಾದ ಕಾಲ. On s. ವೇಳಾ ಪಟ್ಟಿಯ ಕಾಲಕ್ಕೆ ಸರಿಯಾಗಿ]. (ಕ್ರಿ.) ಪಟ್ಟಿ —ಮಾಡು, ತಯಾರಿಸು ; ಪಟ್ಟಿಯಲ್ಲಿ —ಸೇರಿಸು, ಕಾಣಿಸು. **Schédular** (ಗು.)

Scheik. = Sheikh.

Schéma ಸ್ಕೀಮ (ನಾ., ಬ. ವ.-ta —ಟ) ಮುಖ್ಯಾಂಶ ಸೂಚಿ; ಸಂಗ್ರಹ; ಅಡಕ ; ರೂಪ ರೇಖೆ ; ನಕ್ಷೆ. (ತರ್ಕ) ಪ್ರತಿಜ್ಞೆಯ ಒಂದು ನಿರೂಪಣ ಕ್ರಮ. (ವ್ಯಾ., ಅಲಂ.) ಅಲಂಕಾರ. (ಕ್ಯಾಂಟನ ತತ್ತ್ವ ಶಾಸ್ತ್ರ) ಸಾಮಾನ್ಯ ಮಾದರಿ, ಮುಖ್ಯ ರೂಪ ; (ಒಂದು ವರ್ಗದ ಎಲ್ಲ ವಸ್ತು ಗಳಿಗೂ ಇರುವ) ಸಮಾನ ಲಕ್ಷಣದ ಭಾವ. **Schemátic** ಸ್ಕಿಮ್ಯಾಟಿಕ್ (ಗು.) ; **Schemátically** (ಕ್ರಿ. ವಿ.)

Scheme ಸ್ಕೀಮ್ (ನಾ., ಕ್ರಿ.) ಕ್ರಮ, ವಿಧಾನ, ಕಟ್ಟು, ರಚನೆ, ವಿನ್ಯಾಸ [S. of colour (ಚಿತ್ರ, ಮೊ. ಗಳಲ್ಲಿ) ಹಲವು ಬಣ್ಣಗಳನ್ನು ಹೊಂದಿಸಿರುವ ಕ್ರಮ : ವರ್ಣವಿನ್ಯಾಸ(ದ ತತ್ತ್ವ)]. (ವರ್ಗೀಕರಣ, ಗೊತ್ತುಪಡಿಸಿದ ಕಾಲ, ಮೊ. ಗಳ) ಪಟ್ಟಿ, ಸೂಚಿ ; ಮುಖ್ಯಾಂಶಗಳ ಸಂಗ್ರಹ, ಅಡಕ, ಗೋಷ್ವಾರೆ, ರೂಪರೇಖೆ, ಸ್ಥೂಲಚಿತ್ರ ; (ಕಾರ್ಯ, ಮೊ. ಗಳ) ಹಂಚಿಕೆ, ಯೋಜನೆ, ವ್ಯವಸ್ಥೆ, ಏರ್ಪಾಟು. (ಒಳ) ಸಂಚು, ಹೂಟ, ಪಿತೂರಿ, ತಂತ್ರ, ಮಸಲತ್ತು, ಕೂಟೋಪಾಯ. (ಕ್ರಿ.) ಯೋಜನೆ, ಮೊ. ನ್ನು ಮಾಡು; ಸಂಚು, ಮೊ. ನ್ನು ನಡಸು (*To* do, *for* ಸಹ). ಹಂಚಿಕೆ ಹಾಕು, ಏರ್ಪಾಟು ಮಾಡು. **Schémer** (ನಾ.) ಯೋಜನೆಗಾರ; ಸಂಚುಗಾರ. **Schéming** (ಗು.) ಸಂಚು ನಡಸುವ, ಮಸಲತ್ತು ಮಾಡುವ.

Scherzándo (It.) ಸ್ಕೆ(ೕ)ಟ್ಸಾರ್ಂಡೊ (ಸಂ. ಸೂಚನೆ) ಉಲ್ಲಾಸವಾಗಿ, ಗೆಲವಾಗಿ, ವಿಲಾಸದಿಂದ. **Scherzo** ಸ್ಕೆ(ೕ)ಟ್ಸೊರ್ (ನಾ.) (ಸಂ.) ಗೆಲವಿನ, ಉತ್ಸಾಹದ, ಹಾಸ್ಯದ, —ಗೀತೆ, ಗತಿ.

Schérzo. **Scherzando** ನೋಡಿ.

Schísm ಸಿಸ್ಮ್ (ನಾ.) (ಒಗ್ಗಟ್ಟಾಗಿದ್ದ ಸಮಾಜದಲ್ಲಿ, ಪಂಗಡಗಳಾಗಿ) ಒಡಕು, ಛಿದ್ರ, ಭೇದ ; ಪರಸ್ಪರ ವಿರೋಧ (ಸಾಮಾನ್ಯಾರ್ಥದಲ್ಲಿ ವಿರ. ಪ್ರ. The eternal and inevitable s. between the Romanticists and the Classicists). (ಮು.) ತತ್ತ್ವ, ಆಚಾರ, ಮೊ. ಗಳ ವಿಷಯವಾಗಿ ಭಿನ್ನಾಭಿಪ್ರಾಯ ಬಂದು ಒಂದು ಮತ ಸಂಸ್ಥೆ ಪಂಗಡಗಳಾಗಿ ಒಡೆಯುವುದು ; ಬೇರ್ಪಾಟು. ಭಿನ್ನ —ಪಂಗಡ, ಪಕ್ಷ; ಶಾಖೆ. ಛಿದ್ರಿಸುವ, ಭೇದ ಬೆಳಸುವ —ಅಪರಾಧ, ಪಾತಕ (From all false doctrine, heresy, and s.). **Schismátic** ಸಿಸ್ಮ್ಯಾಟಿಕ್ (ಗು., ನಾ.), **-ical** (ಗು.) (ಮತ) ಛಿದ್ರಕಾರಕ ; ಛಿದ್ರಪಾತಕದ. (ನಾ.) (ಮತ) ಛಿದ್ರಕಾರಿ. ಭಿನ್ನ ಶಾಖೆಯವನು. **Schismátically** (ಕ್ರಿ. ವಿ.)

Schist ಷಿಸ್ಟ್ (ನಾ.) ಬೇರೆ ಬೇರೆ ಖನಿಜಗಳ ಸ್ತರಗಳುಳ್ಳ, ತೆಳುವಾದ ಅನಿಯತ ಫಲಕಗಳಾಗಿ ಸೀಳುವ, ಹಲವು ಬಗೆಯ ಪದರಗಲ್ಲು ಬಂಡೆ : ಭಿನ್ನ ಸ್ತರ ಶಿಲೆ. **Schístose** (ಗು.) ಪದರಗಲ್ಲು ರಚನೆಯ, ಭಿನ್ನ ಸ್ತರ ರಚನೆಯ ; ಪದರ ಪದರವಾದ.

Schizánthus ಸ್ಕೈ(ಸ್ಕಿ)ಜ಼್ಯಾಂತಸ್ (ನಾ.) ಬಿಳಿಯ, ಊದಾ, ಅಥವಾ ಕಡುಗೆಂಪು ಬಣ್ಣದ ಅಂದವಾದ ಹೂವು ಬಿಡುವ, ಭಿನ್ನ ಪರ್ಣದ, ಹಲವು ಬಗೆಯ ವಾರ್ಷಿಕ ಸಸ್ಯ.

Schízomycéte ಸ್ಕೈ(ಸ್ಕಿ)ಜ಼ೊಮೈಸೀಟ್ (ನಾ.) ದಂಡಾಣು ಜೀವಿ, ಏಕಾಣು ಜೀವಿ, ಸೂಕ್ಷ್ಮಾಣು ಜೀವಿ, ಮೊ. ನ್ನು ಒಳಕೊಂಡ, ಶೈವಲಕ್ಕೂ ಶಿಲೀಂಧ್ರಕ್ಕೂ ನಡುವಣದಾದ, ಅನೇಕ ವೇಳೆ ಏಕಜೀವ ಕಣ ಅವಯವಿಗಳನ್ನು ಒಳಕೊಂಡ ಒಂದು ವರ್ಗದ ಸಸ್ಯಜೀವಿ. **Schizomycétae, -tes** (ನಾ., ಬ. ವ.)

Schmelz ಷ್ಮೆಲ್ಟ್ಸ್, **Schmélze** ಷ್ಮೆಲ್ಟ್ಸ (ನಾ.) ಬಿಳಿಯ ಗಾಜಿನ ಮೇಲೆ (ಕೆಂಪು) ಬಣ್ಣದ ಪೊರೆ ಹರಡುವಂತೆ ಮಾಡಲು ಉಪಯೋಗಿ ಸುವ ಒಂದು ಗಾಜು ; ಬಣ್ಣ ತೆಗೆದುಕೊಳ್ಳುವಂತೆ ತಯಾರಿಸಿದ ಹಲವು ಬಗೆಯ ಬೊಹೀಮಿಯಾ ಗಾಜು.

Schnórrer ಷ್ನಾರರ್ (ನಾ.) ಯೆಹೂದ್ಯ—ಭಿಕ್ಷುಕ, ತಿರುಕ.

Schólar ಸ್ಕಾಲರ್ (ನಾ.) (ಪ್ರಾಚೀ. ಪ್ರ. ಅಥವಾ ಗ್ರಾಮ್ಯ) ಪಾಠ ಶಾಲೆಯ ಹುಡುಗ, ಹುಡುಗಿ. (ಅಲಂ.) ವಿದ್ಯಾರ್ಥಿ(ನಿ), ಶಿಷ್ಯ, ಶಿಷ್ಯೆ (The Romans confessed themselves the scholars of the Greeks); ವಿದ್ಯಾರ್ಥಿ ದಸೆಯಲ್ಲಿರುವವನು, ಕಲಿಯುತ್ತಿರುವವನು (At 90 he was still a s.). ವಿದ್ವಾಂಸ, ಪಂಡಿತ, ವ್ಯುತ್ಪನ್ನ; ಸಾಹಿತ್ಯವಿಶಾರದ (ಮು., ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯಗಳಲ್ಲಿ) (A s. & a gentleman ವಿದ್ಯಾವಿನಯ ಸಂಪನ್ನ). (ವಿ. ವಿ. ನಿ.) ಸ್ಪರ್ಧೆಯ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ, ಉಚಿತವಾಗಿಯೊ ಕಡಮೆ ರುಸುಮು ಕೊಟ್ಟೊ ವಿದ್ಯಾರ್ಜನೆಮಾಡುತ್ತಿರುವವನು : ವಿದ್ಯಾರ್ಥಿ ವೇತನಿ, ವೇತನ ವಿದ್ಯಾರ್ಥಿ [Rhodes s. (Rhodes ನೋಡಿ)].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Schólarly (ಗು.) ವಿದ್ವತ್, ಪಾಂಡಿತ್ಯ, —ಪೂರ್ಣ; ಪಂಡಿತೋಚಿತ; ಪ್ರೌಢ. **Schólarship** (ನಾ.) ವಿದ್ವತ್ತು, ಪಾಂಡಿತ್ಯ, ಕಲ್ಮೆ. ವಿದ್ಯಾರ್ಥಿವೇತನ. **Scholástic** ಸ್ಕೊಲ್ಯಾಸ್ಟಿಕ್ (ಗು., ನಾ.) ವಿಶ್ವವಿದ್ಯಾನಿಲಯಗಳ, ವಿದ್ಯಾಶಾಲೆಯ, ಸಂಪ್ರದಾಯಬದ್ಧ ವಿದ್ಯಾಭ್ಯಾಸದ, ಶಿಕ್ಷಣದ, ಉಪಾಧ್ಯಾಯರ, ಅಧ್ಯಾಪಕರ, ವ್ಯಾಸಂಗದ, ಶುಷ್ಕ ವಿದ್ವತ್ತಿನ, ಅತಿ ಪಾಂಡಿತ್ಯದ, ಪದ ಪ್ರಾಧಾನ್ಯದ (A s. education, post. S. manners, life. S. agent ಉಪಾಧ್ಯಾಯರುಗಳಿಗೆ ಕೆಲಸ ಹುಡುಕಿಕೊಡುವ ದಳ್ಳಾಳಿ). (ಮಧ್ಯ ಯುಗದ) ತಾರ್ಕಿಕರ, ಅತಿಸೂಕ್ಷ್ಮ ತರ್ಕದ (S. theology ಶ್ರುತಿವಾಕ್ಯಗಳಲ್ಲಿ ಕೇವಲ ಶ್ರದ್ಧೆಯಿಟ್ಟು ಬಹು ಸೂಕ್ಷ್ಮವಾದ ಅನುಮಾನ ಸರಣಿಯಿಂದ ಸಿದ್ಧಾಂತಪಡಿಸಿದ ದೇವತಾ ಶಾಸ್ತ್ರ: ಅತಿಸೂಕ್ಷ್ಮ ತರ್ಕದ, ತಾರ್ಕಿಕರ, —ದೇವತಾ ಶಾಸ್ತ್ರ). (ನಾ.) ತಾರ್ಕಿಕ; ತಾರ್ಕಿಕ ಪ್ರವೃತ್ತಿಯ ಆಧುನಿಕ ದೇವತಾ ಶಾಸ್ತ್ರಜ್ಞ: ತಾರ್ಕಿಕ ದೇವತಾ ಶಾಸ್ತ್ರಜ್ಞ. ಜೆಸುಯಿಟ್ ಸಂಸ್ಥೆಯಲ್ಲಿ ಮೂರನೆಯ ವರ್ಗದ ಸದಸ್ಯ, ದೀಕ್ಷೆಯಾಗಿಲ್ಲದ ಶಿಷ್ಯ. **Scholástically** (ಕ್ರಿ. ವಿ.); **Scholásticism** (ನಾ.) ತಾರ್ಕಿಕ ತತ್ತ್ವ, ಪದ್ಧತಿ; ಅತಿಸೂಕ್ಷ್ಮ ಪಾಂಡಿತ್ಯ; ವಿದ್ಯಾಶಾಲಾ ಪದ್ಧತಿಯ ಅಂಧಾನುಸರಣೆ; ಸಂಪ್ರದಾಯ ತತ್ತ್ವಗಳಲ್ಲಿ ಮತ್ತು ಸಂಪ್ರದಾಯ ವ್ಯಾಖ್ಯಾನ ಮಾರ್ಗಗಳಲ್ಲಿ ಅಂಧ ಶ್ರದ್ಧೆ.

Scholastic, etc. Scholar ನೋಡಿ.

Schóliast ಸ್ಕೋಲಿಯ್ಯಾಸ್ಟ್ (ನಾ.) (ಮು., ಪ್ರಾಚೀನ ಗ್ರಂಥಗಳಿಗೆ) ಅಧಿಕಾರಯುತವಾದ ಭಾಷ್ಯ, ವ್ಯಾಖ್ಯಾನ, ಟಿಪ್ಪಣಿ, —ಬರೆಯುವವನು (ಮು., ಪುರಾತನ ವ್ಯಾಕರಣ ಪಂಡಿತ); ಪ್ರಾಚೀನ ಟೀಕಾಕಾರ. **Scholiástic** (ಗು.); **Schólium** ಸ್ಕೋಲಿಯಂ (ನಾ., ಬ. ವ. -ia) (ಪಕ್ಕ) ಟಿಪ್ಪಣಿ, ಟೀಕೆ, ವ್ಯಾಖ್ಯೆ, ಭಾಷ್ಯ, ವೃತ್ತಿ (ಮು., ಪ್ರಾಚೀನ ಗ್ರಂಥಗಳ ವಾಕ್ಯಗಳಿಗೆ ಪುರಾತನ ಭಾಷಾ ಪಂಡಿತರು ಬರೆದಂಥವು)

School[1] ಸ್ಕೂಲ್ (ನಾ.) (ಸಾ., ಪ್ರಾಥಮಿಕ ದರ್ಜೆಯ ಅಥವಾ ಕನಟಿಗೆ ಸಂಬಂಧಿಸಿದ) ಪಾಠಶಾಲೆ, ವಿದ್ಯಾಶಾಲೆ, ವಿದ್ಯಾಲಯ, ಮಠ [Board, Day, Free, Grammar, Night, Normal, Primary, Private, Public, Sunday, Technical, s. (ಆಯಾ ಪದವನ್ನು ನೋಡಿ). Boarding s. (Board ಕ್ರಿ. ನೋಡಿ). Mixed s. (Mix ನೋಡಿ). Ragged s. (Rag[1] ನೋಡಿ). Secondary s. (Second ನೋಡಿ). Continuation s. (Continue ನೋಡಿ). Evening-s. = Night-s. (Night ನೋಡಿ). High s. = Secondary s.; ಊರಿನ ಪ್ರಧಾನ ಪಾಠಶಾಲೆ. Keep a s. ಖಾಸಗಿ ಪಾಠಶಾಲೆ ನಡಸು. There will be no s. today ಈ ದಿನ ಪಾಠಶಾಲೆ ಇಲ್ಲ. Go to s. ಪಾಠಶಾಲೆಗೆ ಹೋಗು. Leave s. ಪಾಠಶಾಲೆ ಬಿಟ್ಟುಬಿಡು. Go to s. to (ರೂಪ.) (—ರ) ಕೈಕೆಳಗೆ ಕಲಿತುಕೊ; ನೋಡಿ ಕಲ(ತುಕೊ)]. ಪಾಠಶಾಲೆಯ ಕಟ್ಟಡ, ಉಪನ್ಯಾಸ ಮಂದಿರ, ಕೋಣೆ (The fifth-form s. The chemistry s.). (ವಿದ್ಯಾಶಾಲೆಯ) ವಿದ್ಯಾರ್ಥಿಗಳು (The whole s. knows). (ವಿದ್ಯಾಶಾಲೆಯ) ಶಿಕ್ಷಣದ ಕಾಲ. (ರೂಪ.) ಶಿಕ್ಷಣ ಕೊಡುವ, ಶಿಸ್ತು ಕಲಿಸುವ —ಸಂದರ್ಭ, ವೃತ್ತಿ; ಶಿಕ್ಷಣಶಾಲೆ (In the s. of adversity ಕಷ್ಟಸ್ಥಿತಿಗಳ ಶಿಕ್ಷಣಶಾಲೆಯಲ್ಲಿ). (ಮಧ್ಯ ಯುಗದ) ಪ್ರವಚನ ಮಂದಿರ (The schools ಮಧ್ಯ ಯುಗದ ವಿಶ್ವವಿದ್ಯಾನಿಲಯಗಳು, ಪ್ರಾಧ್ಯಾಪಕರು, ಪಾಠಪ್ರವಚನಗಳು ಮತ್ತು ವಾಕ್ಯಾರ್ಥಗಳು. The theology of the schools ಈ ವಿದ್ಯಾನಿಲಯಗಳಲ್ಲಿ ಬೋಧಿಸುತ್ತಿದ್ದ ದೇವತಾ ಶಾಸ್ತ್ರ. S. doctors ಈ ವಿದ್ಯಾನಿಲಯಗಳ ಪ್ರಾಧ್ಯಾಪಕರು, ದೇವತಾ ಶಾಸ್ತ್ರಜ್ಞರು, ತಾರ್ಕಿಕರು). ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕ ಪರೀಕ್ಷಾ ವ್ಯವಸ್ಥೆ ಇರುವ ವ್ಯಾಸಂಗ ಶಾಖೆ (The history, mathematical, s. ಚರಿತ್ರೆಯ, ಗಣಿತದ, ಶಾಖೆ). ವಿಶ್ವವಿದ್ಯಾನಿಲಯದ ಪರೀಕ್ಷಾ ಭವನ; (ಬ. ವ. ದಲ್ಲಿ) ವಿಶ್ವವಿದ್ಯಾನಿಲಯದ ಪರೀಕ್ಷೆಗಳು [In the schools ವಿಶ್ವವಿದ್ಯಾನಿಲಯದ ಪರೀಕ್ಷೆಗೆ ಹೋಗಿ, ಕುಳಿತು. (ವಿದ್ಯಾರ್ಥಿಯ ವಿಷಯದಲ್ಲಿ) In for his schools]. (ದಾರ್ಶನಿಕ, ಕಲೆಗಾರ, ಮೊ. ರ) ಶಿಷ್ಯವರ್ಗ, ಅನುಯಾಯಿಗಳು; ಪಂಥ, ಪರಂಪರೆ, ಸಂಪ್ರದಾಯ (Left no s. behind him ಅವನು ಯಾವ ಪಂಥವನ್ನೂ ಸ್ಥಾಪಿಸಿ ಹೋಗಲಿಲ್ಲ. Roman s. of painters ರೋಮನ್ ಪದ್ಧತಿಯ ವರ್ಣಚಿತ್ರಕಾರರು. Romantic s. of literature ಸಾಹಿತ್ಯದಲ್ಲಿ ರಂಜಕ ಪಂಥ, ಭಾವನಾ ಸ್ವಾತಂತ್ರ್ಯದ ಪಂಥ. Peripatetic s. of philosophy ದರ್ಶನದಲ್ಲಿ ಅರಿಸ್ಟಾಟಲನ ಪಂಥ. Laissez-faire s. of politics (ಕೈಗಾರಿಕೆ, ವ್ಯಾಪಾರ, ಮೊ. ಗಳಲ್ಲಿ) ಸರ್ಕಾರದ ತಾಟಸ್ಥ್ಯ ನೀತಿಪಂಥ (ವಾದಿಗಳು). Blue-water s. of politics ರಾಜ್ಯನೀತಿಯಲ್ಲಿ ನೌಕಾಬಲ ಪ್ರಾಧಾನ್ಯದ ಪಂಥ. Tubingen s. ವಿಚಾರಯುಕ್ತವಾದ ದೇವತಾ ಶಾಸ್ತ್ರ ವಿಮರ್ಶ ಪದ್ಧತಿ. A gentleman of the old s. ಪೂರ್ವ ಕಾಲದ ಸಂಪ್ರದಾಯದವನು). (ಸಂ.; ನಿರ್ದಿಷ್ಟ ಪದ್ಧತಿಯ) ಸಂಗೀತ ಶಿಕ್ಷಣ ಪುಸ್ತಕ, ಕೈಪಿಡಿ (-'s violin s. S. of counterpoint); (ನಿರ್ದಿಷ್ಟ) ಸಂಗೀತ ಪದ್ಧತಿ. **S.-board** (ಸಾರ್ವಜನಿಕ ಪ್ರಾಥಮಿಕ ಪಾಠಶಾಲೆಗಳನ್ನೂ ಮತ್ತು ಪಾಠಶಾಲೆಗಳಿಗೆ ತಕ್ಕ ಕಟ್ಟಡ, ಮೊ. ನ್ನೂ ಒದಗಿಸುವ ಜವಾಬ್ದಾರಿಯುಳ್ಳ) ಸ್ಥಳೀಯ ಪಾಠಶಾಲಾ ಮಂಡಲಿ, ಸಮಿತಿ. **S.-book** ಪಾಠಶಾಲೆಗಳಲ್ಲಿ ಉಪಯೋಗಿಸುವ ಪುಸ್ತಕ: ಶಾಲಾ ಪುಸ್ತಕ. **Schoólboy** ಶಾಲೆಯ ಹುಡುಗ (ಅನೇಕ ವೇಳೆ ವಿಶೇಷಣ ಪ್ರ.: S.-b. mischief, spirits ಹುಡುಗು ಚೇಷ್ಟೆ, ಉತ್ಸಾಹ). **S.-dame** ಮಠದ ಅಜ್ಜಿ, ಅಜ್ಜಿಕೆ, ಉಪಾಧ್ಯಾಯಿನಿ. **S.-days** ಶಾಲಾ ದಿನಗಳು; ವಿದ್ಯಾಶಾಲೆಯಲ್ಲಿ (ವಿದ್ಯಾರ್ಥಿಯಾಗಿ) ಕಳೆದ ಕಾಲ. **S. divine** ಮಧ್ಯ ಯುಗದ ವಿ. ವಿ. ನಿ. ದ ದೇವತಾ ಶಾಸ್ತ್ರಜ್ಞ. **S. divinity** —ಶಾಸ್ತ್ರ. **S. fee(s)** ಶಾಲೆಯ ತೆರ, ಫೀಜು. **Schoólfellow** (ಏಕ ಕಾಲದಲ್ಲಿ ಅಥವಾ ಬೇರೆ ಕಾಲದಲ್ಲಿ ಇದ್ದ) ಶಾಲಾ ಸ್ನೇಹಿತ. **Schoólgirl** ಶಾಲೆಯ ಹುಡುಗಿ. **Schoólhouse** (ಮು., ಹಳ್ಳಿಯ) ಶಾಲೆಯ ಕಟ್ಟಡ, ಶಾಲಾ ಮಂದಿರ. **School house** ಶಾಲೆಯ ಪಕ್ಕದಲ್ಲಿ ಉಪಾಧ್ಯಾಯರ ವಾಸಕ್ಕೆ ಮಾಡಿಕೊಟ್ಟಿರುವ ಮನೆ; (ಸಾರ್ವಜನಿಕ ವಿದ್ಯಾಶಾಲೆಯಲ್ಲಿ ಮುಖ್ಯಾಧ್ಯಾಪಕನ ನೇರವಾದ ಮೇಲ್ವಿಚಾರಣೆಗೆ ಒಳಪಟ್ಟ) ವಿದ್ಯಾರ್ಥಿ ಮಂದಿರ. **S.-inspector** ಪಾಠಶಾಲೆಗಳ ಮೇಲ್ವಿಚಾರಕ. **S.-ma'am, -marm** (ಬಳ.ಮಾ., ಅಮೆ. ಸಂ.) ಉಪಾಧ್ಯಾಯಿನಿ, ಶಾಲಾ ಅಧ್ಯಾಪಕಿ. **Schoólman** ಯೂರೋಪಿನಲ್ಲಿ ಮಧ್ಯ ಯುಗದ ವಿ. ವಿ. ನಿ. ದ ಪ್ರಾಧ್ಯಾಪಕ; ಅರಿಸ್ಟಾಟಲನ ತರ್ಕ ಪದ್ಧತಿಯನ್ನನುಸರಿಸುವ ದೇವತಾ ಶಾಸ್ತ್ರಜ್ಞ; ತಾರ್ಕಿಕ. **Schoólmaster** ಉಪಾಧ್ಯಾಯ, ಅಧ್ಯಾಪಕ, ಬೋಧಕ; ಓಜ (ಗ್ರಾಂ.) (The schoolmaster is abroad ಎಲ್ಲೆಲ್ಲಿಯೂ ವಿದ್ಯೆ ಹರಡುತ್ತಿದೆ). **S.-mate** (ಏಕ ಕಾಲದಲ್ಲಿ ಒಂದೇ ಶಾಲೆಯಲ್ಲಿದ್ದ) ಶಾಲಾ ಸ್ನೇಹಿತ. **S. miss** ಅನನುಭವಿಯಾದ, ನಾಚಿಕೆಪಡುವ, —ಹುಡುಗಿ; ಮುಗ್ಧೆ. **Schoólmistress** ಉಪಾಧ್ಯಾಯಿನಿ, ಅಧ್ಯಾಪಕಿ, ಬೋಧಕಿ. **S. pence** ಪ್ರಾಥಮಿಕ ಶಾಲಾ ವಿದ್ಯಾರ್ಥಿ ವಾರ ವಾರವೂ ತಂದು ಕೊಡುವ ರುಸುಮು. **Schoólroom** ಪಾಠದ —ಕೊಟಡಿ, ಕೋಣೆ (ಪಾಠಶಾಲೆಯದು ಅಥವಾ ಮನೆಯಲ್ಲಿಯದು). **S.-ship** ಹುಡುಗರಿಗೆ ನಾವಿಕ ವಿದ್ಯೆ ಕಲಿಸಿಕೊಡುವ ಹಡಗು: ಶಿಕ್ಷಣ, ಬೋಧನ, —ನೌಕೆ. **S.-teacher** (ಮು., ಪ್ರಾಥಮಿಕ) ಶಾಲಾ ಉಪಾಧ್ಯಾಯ(ಯಿನಿ). **S.-time** (ಶಾಲೆಯಲ್ಲಿ ಅಥವಾ ಮನೆಯಲ್ಲಿ) ಪಾಠದ ಹೊತ್ತು, ವ್ಯಾಸಂಗ ಕಾಲ; = S.-days.

School (ಕ್ರಿ. ಸಕ.) ಶಾಲೆಗೆ ಹಾಕು, ವಿದ್ಯೆ ಕಲಿಸು (ವಿರ. ಪ್ರ.). ಬೋಧನೆಮಾಡು, ಹೇಳಿಕೊಡು, ಶಿಕ್ಷಣಕೊಡು; ಶಿಸ್ತಿಗೆ, ಹತೋಟಿಗೆ, —ಒಳಪಡಿಸು; ಅಭ್ಯಾಸಮಾಡಿಸು, ನುರಿಯಿಸು, ತಿದ್ದು (Must s. his temper ಕೋಪವನ್ನು ಹತೋಟಿಗೆ ತಂದುಕೊಳ್ಳಲು ಕಲಿಯಬೇಕು. S. oneself to patience ತಾಳ್ಮೆಯಿಂದ ಇರುವುದನ್ನು ಕಲಿ. Will not be schooled ಶಿಕ್ಷಣಕ್ಕೆ, ಅಂಕೆಗೆ, ಒಳಪಡುವುದಿಲ್ಲ). **Schoólable** (ಗು.) (ವಯಸ್ಸು, ಮೊ. ಕಾರಣಗಳಿಂದ) ಶಾಲೆಗೆ ಹಾಕಬಹುದಾದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒತ್ತಾಯ ಶಿಕ್ಷಣ ಕೊಡಬಹುದಾದ, ಶಿಕ್ಷಣೀಯ ; ಶಿಕ್ಷಣ ಯೋಗ್ಯ. **Schoóling** (ನಾ.) ಶಿಕ್ಷಣ ಕೊಡುವುದು ; ಶಾಲೆಗೆ ಕಳುಹಿಸುವುದು ; ಶಾಲಾ —ಶಿಕ್ಷಣ, ಬೋಧನೆ ; ಶಾಲಾ ಶಿಕ್ಷಣದ ವೆಚ್ಚ.

School[2] ಸ್ಕೂಲ್ (ನಾ., ಕ್ರಿ. ಅಕ.) ಆಹಾರಕ್ಕಾಗಿ ಅಥವಾ ವಲಸೆಗಾಗಿ ಒಟ್ಟಿಗೆ ಈಜುತ್ತಿರುವ ಮೀನು, ತಿಮಿಂಗಿಲ, ಮೊ. ಗಳ ಗುಂಪು. (S.-fish ಮಂದೆ ಮೀನು ; ಹಿಂಡುಗೂಡುವ ಮೀನು). (ರೂಪ.) ಗುಂಪು, ಮಂದೆ. (ಕ್ರಿ.) ಒಟ್ಟಿಲಾಗು ; ಗುಂಪು, ಮಂದೆ, ಹಿಂಡು, —ಕೂಡು.

Schoóner ಸ್ಕೂನರ್ (ನಾ.) ಉದ್ದುದ್ದನಾಗಿ ಪಟ ಕಟ್ಟಿದ, ಎರಡು ಅಥವಾ ಹೆಚ್ಚು ಕೂವೆಗಳುಳ್ಳ ಹಡಗು.

Schorl ಷಾರ್‌ಲ್ (ನಾ.) ಕಪ್ಪು 'ಟೂರ್ಮಲಿನ್' —ಖನಿಜ, ಪ್ರಶಸ್ತ ಶಿಲೆ.

Sciágraphy ಸೈಆ್ಯಗ್ರಫಿ, **Ski-** ಸ್ಕೈ— (ನಾ.) ಚಿತ್ರ ರೇಖನ, ಮೊ. ಗಳಲ್ಲಿ ನೆಳಲು ಬೆಳಕು ತೋರಿಸುವುದಕ್ಕಾಗಿ ಛಾಯೆ ಹಾಕುವ ಕಲೆ : ಛಾಯಾಕಲೆ. ರಾಂಟ್‌ಜೆನ್ (ಕಿರಣಗಳ ಮೂಲಕ) ಛಾಯಾಗ್ರಹಣ (ನಾ., Ski-). (ವಾ. ಶಾ.) ಮನೆ, ಮೊ. ಗಳ ಒಳ ಭಾಗವನ್ನು ತೋರಿಸುವ ಲಂಬನಕ್ಷೆ : ಒಳ ಲಂಬ ನಕ್ಷೆ (=Sciagraph). (ಖ. ವಿ.) ಸೂರ್ಯ, ಚಂದ್ರ, ನಕ್ಷತ್ರ, ಮೊ. ಗಳಿಂದಾದ ನೆರಳಿನಿಂದ ಹೊತ್ತು ಕಂಡುಹಿಡಿಯುವ ವಿದ್ಯೆ : ಛಾಯಾ ವಿದ್ಯೆ ; ಛಾಯಾ ಕಾಲನಿರ್ಣಯ (ವಿದ್ಯೆ). **Sciágram** (ನಾ.) ರಾಂಟ್‌ಜೆನ್ (ಕಿರಣ) ಛಾಯಾ ಚಿತ್ರ. **Sciagrammátic** (ಗು.); **Sciagrammátically** (ಕ್ರಿ. ವಿ.) ; **Sciágraph** (ನಾ., ಕ್ರಿ. ಸಕ.) ಒಳ ಲಂಬ ನಕ್ಷೆ (ಬರೆ). **Sciagráphic** (ಗು.) ; **Sciagráphically** (ಕ್ರಿ. ವಿ.)

Sciámachy ಸೈಆ್ಯಮಕಿ, **Ski-** ಸ್ಕೈ—, **Sció-** ಸೈಒ— (ನಾ.) ನೆರಳಿನೊಡನೆ ಹೋರಾಟ ; ಕಾಲ್ಪನಿಕ, ವ್ಯರ್ಥ, —ಕದನ ; (ಅಭ್ಯಾಸಕ್ಕಾಗಿ ಕೈಯಾಡಿಸಿ ಮಾಡುವ) ತೋರಿಕೆ ಕಾದಾಟ.

Sciátic ಸೈಆ್ಯಟಿಕ್ (ಗು.) ಟೊಂಕದ, ರೊಂಡಿಯ, ಕಟಿಯ (S. artery, nerve) ; ಕಟಿನರದ, ಕಟಿನರಕ್ಕೆ ಸಂಬಂಧಪಟ್ಟ. ಕಟಿನರ ಬೇನೆಯಿಂದ ನರಳುವ, —ಬೇನೆಗೆ ಒಳಗಾಗುವ ; ಕಟಿ ವಾಯುರೋಗದ. **Sciátically** (ಕ್ರಿ. ವಿ.) ; **Sciática** (ನಾ.) ಕಟಿನರ ಬೇನೆ, ಕಟಿವಾಯು, ಸೊಂಟನೋವು.

Scíence ಸೈಎನ್ಸ್ (ನಾ.) (ಪ್ರಾಚೀ. ಪ್ರ.) ಜ್ಞಾನ, ಅರಿವು. ವ್ಯವಸ್ಥಿತ, ಕ್ರೋಢೀಕೃತ, —ಜ್ಞಾನ, ವಿದ್ಯೆ ; ಶಾಸ್ತ್ರ, ವಿಜ್ಞಾನ; ಶಾಸ್ತ್ರಾಭ್ಯಾಸ ; ಶಾಸ್ತ್ರ —ವ್ಯಾಸಂಗ, ಪರಿಶ್ರಮ. (ಸಾಮೂಹಿಕವಾಗಿ) ಪ್ರಕೃತಿ, ಭೌತ, —ವಿಜ್ಞಾನ (=Natural s.) [S. now shares the curriculum with literature, history & mathematics. Man of s. ವಿಜ್ಞಾನ—ಪ್ರವೀಣ, ಸಂಶೋಧಕ ; ವೈಜ್ಞಾನಿಕ. Moral, political, s. ನೀತಿ ವಿಜ್ಞಾನ, ರಾಜ್ಯ—. Social s. ಸಮಾಜ ವಿಜ್ಞಾನ. Ethical s. ನೀತಿ, ಶೀಲ, —ವಿಜ್ಞಾನ. Physical s. ಭೌತವಿಜ್ಞಾನ. Chemical s. ರಸಾಯನ ವಿಜ್ಞಾನ. The s. of optics ದೃಗ್ ವಿಜ್ಞಾನ. The s. of philology ಭಾಷಾ ಶಾಸ್ತ್ರ. Exact s. (Exact ನೋಡಿ). Pure s. ಸ್ವತಸ್ಸಿದ್ಧ ಸತ್ಯಗಳಿಂದ ಸಿದ್ಧವಾದ ನಿಗಮನಗಳನ್ನು (deductions) ಆಧಾರವಾಗುಳ್ಳ ವಿಜ್ಞಾನ, ಶಾಸ್ತ್ರ : ಶುದ್ಧ—ವಿಜ್ಞಾನ, ಶಾಸ್ತ್ರ (ಉದಾ., ಗಣಿತ, ತರ್ಕ). Natural, physical, s. ವಾಸ್ತವಿಕ ಗೋಚರ ವಿಷಯಗಳನ್ನು ಕುರಿತ, ಸಮೀಕ್ಷೆ, ಪ್ರಯೋಗ ಮತ್ತು ಅನುಗಮನಗಳ (inductions) ಮೇಲೆ ಆಧಾರಗೊಂಡ ವಿಜ್ಞಾನ: ಪ್ರಕೃತಿ, ಭೌತ,—ವಿಜ್ಞಾನ (ಉದಾ., ರಸಾಯನ ವಿಜ್ಞಾನ : ಜೀವ ವಿಜ್ಞಾನ). The dismal s. (Dismal ನೋಡಿ)] . (ಬಲ ಅಥವಾ ಸ್ವಾಭಾವಿಕ ಸಾಮರ್ಥ್ಯಕ್ಕೆ ವ್ಯತಿರಿಕ್ತವಾಗಿ ; ಪ್ರವೀಣನ) ಕೌಶಲ, ಚಾತುರ್ಯ, ತಂತ್ರ (ಮು., ಮುಷ್ಟಿ ಕಾಳಗ, ಮೊ. ಹೋರಾಟಗಳಲ್ಲಿ). **Sciéntial** ಸೈಎನ್‌ಷಲ್ (ಗು.) ಜ್ಞಾನದ, ವಿದ್ಯೆಯ; ವಿಜ್ಞಾನ ಸಂಬಂಧವಾದ ; ಜ್ಞಾನಸಂಪನ್ನ. **Sciéntially** (ಕ್ರಿ. ವಿ.) ; **Scíentism** (ನಾ.) ವೈಜ್ಞಾನಿಕ— ಪದ್ಧತಿ, ತತ್ತ್ವ, ಪ್ರವೃತ್ತಿ ; ವೈಜ್ಞಾನಿಕತೆ.

Scíentist (ನಾ.) ವಿಜ್ಞಾನಿ, ವೈಜ್ಞಾನಿಕ. **Scientífic** (ಗು.) (ಶೋಧನೆ, ಮೊ. ಗಳ ವಿಷಯದಲ್ಲಿ) ಶಾಸ್ತ್ರೀಯ (ವಾದ) : ವಿಜ್ಞಾನ—ಪದ್ಧತಿಯ, ಮಾರ್ಗದ ; ಕ್ರಮಬದ್ಧವಾದ, ವ್ಯವಸ್ಥಿತ, ನಿಷ್ಕೃಷ್ಟ ; ವಿಜ್ಞಾನಕ್ಕೆ ಸಂಬಂಧಪಟ್ಟ, —ದಲ್ಲಿ ಉಪಯೋಗಿಸುವ, —ದಲ್ಲಿ ನಿರತನಾದ ; ವೈಜ್ಞಾನಿಕ (S. instruments, books, terminology ವೈಜ್ಞಾನಿಕ ಸಲಕರಣೆಗಳು, ಪುಸ್ತಕಗಳು, ಪರಿಭಾಷೆ. S. men ವಿಜ್ಞಾನಿಗಳು). (ಕಾರ್ಯ ಅಥವಾ ಕಾರ್ಯಕರ್ತರ ವಿಷಯದಲ್ಲಿ) ಪ್ರಾವೀಣ್ಯತೆಯುಳ್ಳ, ಕೌಶಲದ, ತಂತ್ರವನ್ನು ಬಲ್ಲ (A s. game, boxer. S. cruelty ವಿಜ್ಞಾನ ಕೌಶಲದಿಂದ ಏರ್ಪಡಿಸಿದ ಕ್ರೌರ್ಯ). **Scientífically** (ಕ್ರಿ. ವಿ.)

Sciénter ಸೈಎಂಟರ್ (ಕ್ರಿ. ವಿ.) (ನ್ಯಾ. ಶಾ.) ತಿಳಿದೂ ತಿಳಿದು ; ಬೇಕೆಂದು ; ಉದ್ದೇಶಪೂರ್ವಕವಾಗಿ.

Scílicet ಸೈಲಿಸೆಟ್ (ಕ್ರಿ. ವಿ.) (ಸಂಕ್ಷಿಪ್ತ : Sc., Scil.) (ಅಧ್ಯಾಹಾರವಾಗಿರುವುದರ ಅಥವಾ ಸಂದಿಗ್ಧವಾಗಿರುವುದರ ವಿವರಣೆ ಕೊಡಬೇಕಾದ ಸಂದರ್ಭದಲ್ಲಿ) ಎಂದರೆ, ಏನೆಂದರೆ, ಹಾಗೆಂದರೆ, ಅರ್ಥಾತ್.

Scímitar, -miter ಸಿಮಿಟರ್ (ನಾ.) (ಕೊನೆಯಲ್ಲಿ ಅಗಲ ಹೆಚ್ಚುತ್ತ ಹೋಗುವ) ಬಾಗುಕತ್ತಿ, ಕುಡುಗತ್ತಿ.

Scintílla ಸಿಂಟಿಲ (ನಾ.) ಕಿಡಿ ; ಕಣ. ಅಣು, ಲವ, ಲೇಶ (Not a s. of evidence). **Scíntillate** (ಕ್ರಿ. ಅಕ.) ಕಿಡಿಗೆದರು ; ಮಿನುಮಿನುಗು, ಮಿರುಗು. **Scíntillant** (ಗು.) ; **Scintillátion** (ನಾ.)

Scíolist ಸೈಒಲಿಸ್ಟ್ (ನಾ.) ಹೆಚ್ಚು ತಿಳಿದಿಲ್ಲದಿದ್ದರೂ ತಿಳಿದವನಂತೆ ನಟಿಸುವವನು ; ಪಂಡಿತಂಮನ್ಯ ; ಪಂಡಿತವೇಷಿ ; ಬೂಟಾಟಿಕೆ ಪಂಡಿತ. **Scíolism** (ನಾ.) ; **Sciolístic** (ಗು.)

Sciólto (It.) ಷಾಲ್ಟೊ (ಗು.) (ಸಂ. ಸೂಚನೆ) ನಿರ್ಬಂಧವಿಲ್ಲದೆ, ಇಷ್ಟಾನುಸಾರ. ಬಿಡಿ ಬಿಡಿಯಾಗಿ, ಬಿಡಿಸಿ ಬಿಡಿಸಿ (Legato ಪದ ದೊಡನೆ ಹೋಲಿಸಿ)

Sciómachy. **Sciamachy** ನೋಡಿ.

Scíon ಸೈಅನ್ (ನಾ.) ಹುಟ್ಟಹಾಕುವುದಕ್ಕಾಗಿ ಅಥವಾ ಕಸಿ ಕಟ್ಟುವುದಕ್ಕಾಗಿ ಕತ್ತರಿಸಿದ ಕೊಂಬೆ ; ಕಸಿ ಕೊಂಬೆ, ಹುಟ್ಟಹಾಕುವ ರೆಂಬೆ ; ಕುಡಿ ; ಕೊನೆ ; ಅಂಟು ; ಹುಟ್ಟು ; (ಮು., ಕುಲೀನ) ಸಂತತಿಗೆ ಅಂಕುರಪ್ರಾಯನಾದವನು ; ಸಂತತಿಯವನು, ವಂಶಜ (A s. of a royal stock ರಾಜಪಿಂಡೆ)

Scíre fácias (L) ಸೈ(ಅ)ರಿ ಫೇಷಿಅ್ಯಸ್ (ನಾ.) ತೀರ್ಪು, ಸ್ವಾಮ್ಯದ ಸನ್ನದು, ಮೊ. ನ್ನು ಜಾರಿಗೆ ತರುವ ಅಥವಾ ರದ್ದುಮಾಡುವ ನ್ಯಾಯಸ್ಥಾನದ ಆಜ್ಞಾ ಪತ್ರ.

Scirocco. **Sirocco** ನೋಡಿ.

Scírrhus ಸಿ(ಸ್ಕಿ)ರಸ್ (ನಾ.) (ಮು., ಏಡಿಹುಣ್ಣಿನ ಮೊದಲ ಅವಸ್ಥೆಯಲ್ಲಿ ಕಾಣಿಸಿಕೊಳ್ಳುವ) ಗಟ್ಟಿ ಗಂತಿ, ಗಡ್ಡೆ, ದುರ್ಮಾಂಸ. **Scírrhoid** (ಗು.) ಗಂತಿಯಂಥ. **Scírrhous** (ಗು.) ಗಂತಿಯ(ಂಥ) ; ಜಡ್ಡುಕಟ್ಟಿದ. **Scirrhósity** (ನಾ.) ಅಂಗ (ಅಥವಾ ಅದರ ಭಾಗ) ಜಡ್ಡುಕಟ್ಟಿಹೋಗಿರುವುದು ; ಗಡ್ಡೆ ಕಟ್ಟಿದ ಸ್ಥಿತಿ.

Scíssel ಸಿಸೆಲ್ (ನಾ.) ಲೋಹದ ಕೆಲಸದಲ್ಲಿ ಕತ್ತರಿಸಿಬಿದ್ದ ಕಳಪೆಯ ಚೂರು ; ನಾಣ್ಯಕ್ಕಾಗಿ ಬಿಲ್ಲೆಗಳನ್ನು ಕತ್ತರಿಸಿದಮೇಲೆ ಉಳಿಯುವ ಲೋಹದ ಚೂರು : ಲೋಹದ ಚೂರುಪಾರು.

Scíssile ಸಿಸ್ಸೈ(ಸಿ)ಲ್ (ಗು.) ಕತ್ತರಿಸಲಾಗುವ, ವಿಭಾಗಮಾಡಲಾಗುವ ; ಛೇದ್ಯ. **Scíssion** ಸಿಷ(ಷ್)ನ್ (ನಾ.) ಕತ್ತರಿಸುವುದು, ಕತ್ತರಿಕೆ ; ಛೇದನ. (ರೂಪ.) ಭೇದ(ನ), ಒಡಕು.

Scíssion. **Scissile** ನೋಡಿ.

Scíssor ಸಿಸರ್ (ಕ್ರಿ. ಸಕ.) ಕತ್ತರಿಯಿಂದ ಕತ್ತರಿಸು (*Off*, *up*, *into*, ಮೊ. ಉಪ. ದೊಡನೆ). (ಪುಸ್ತಕ, ಮೊ. ಗಳಿಂದ) ಕತ್ತರಿಸಿ ತೆಗೆ (*Out* ಉಪ. ದೊಡನೆ). **Scíssoring** (ನಾ.) ; **Scíssors** (ನಾ., ಬ. ವ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕತ್ತರಿ (ಅನೇಕ ವೇಳೆ, A pair of s.). Buttonhole s. ಬಟ್ಟೆಯ ಅಂಚು ಬಟ್ಟು ಮುಂದಕ್ಕೆ ಕತ್ತರಿಸಲು ಅನುಕೂಲಸುವಂತೆ, ಕೀಲಿನ ಹತ್ತಿರ ಅಲಗುಗಳಲ್ಲಿ ತೆರಪುಳ್ಳ ಕತ್ತರಿ: ಕಾಜ ಕತ್ತರಿ. Lamp-s. ದೀಪದ ಬತ್ತಿ (ಕತ್ತರಿಸುವ) ಕತ್ತರಿ. Nail-s. ಉಗುರು ಕತ್ತರಿ. S. and paste ಇತರರ ಪುಸ್ತಕಗಳಿಂದ ಕತ್ತರಿಸಿ ತೆಗೆದು ಗ್ರಂಥರಚನೆಮಾಡುವುದು; ಕತ್ತರಿ ಗೋಂದಿನ, ತೇಪೆಯ, —ಗ್ರಂಥ (ರಚನೆ). Scissor-bill ಸ್ಕಿಮರ್ ಎಂಬ ನೀರುಹಕ್ಕಿ. Scissor-bird, -tail ಉದ್ದವಾದ ಸೀಳುಪುಕ್ಕವುಳ್ಳ ಹಲವು ಬಗೆಯ ಹಕ್ಕಿ. Scissor-tooth (ಮಾಂಸಾಹಾರಿ ಪ್ರಾಣಿಗಳಲ್ಲಿ) ಕತ್ತರಿ ಹಲ್ಲು. **Scíssorwise** (ಕ್ರಿ. ವಿ.) ಕತ್ತರಿಯಾಕಾರದಲ್ಲಿ.

Sciúrine ಸ್ಯೈ(ಸಿ)ಯುರ್ಯೈ(ರಿ)ನ್ (ಗು.) ಅಳಿಲು ವರ್ಗದ; ಅಳಿಲನಂಥ; ಇಣಚಿಯ. **Sciúroid** ಸ್ಯೈಯೂರಾಯ್ಡ್ (ಗು.) ಅಳಿಲನಂಥ, ಅಳಿಲನ್ನು ಹೋಲುವ.

Sclav, Sclavónic, etc. =Slav, Slavonic, etc.

Scléra ಸ್ಕ್ಲೀರ, ಸ್ಕ್ಲಿಯರ (ನಾ.) (ಅಂ. ರ. ಶಾ.) ಕಣ್ಣುಗುಡ್ಡೆಯ ಬಿಳಿ ಪೊರೆ. **Sclerítis** (ನಾ.) ಬಿಳಿ ಪೊರೆಯ ಊತ, ಕೆರಳು. **Sclerótomy** (ನಾ.) ಬಿಳಿ ಪೊರೆಯ ಕೊಯ್ತ; ಶ್ವೇತಪಟಲಚ್ಛೇದನ.

Scleríasis ಸ್ಕ್ಲಿಯರೈಅಸಿಸ್ (ನಾ.) (ರೋಗ ನಿದಾನ) ಅಂಗಾಂಶ ಪೆಡಸಾಗುವುದು, ಅಸ್ಥೀಭೂತವಾಗುವುದು; ಜಡ್ಡು.

Sclér(o)- ಸ್ಕ್ಲಿಯರ್(ಒ)— (ಸ. ಪೂ. ಪ.) ಗಟ್ಟಿ—, ಪೆಡಸು—, ಗಡುಸು—, ಕಠಿನ—. **Sclerénchyma** (ನಾ.) ಹವಳದ ಗಟ್ಟಿ ಭಾಗ; ಸಸ್ಯದ ಗಟ್ಟಿ ಭಾಗ (ಉದಾ., ಕರಟ, ಬೀಜಕೋಶ, ಮೊ. ವು). **Sclerodérm(at)ous** (ಗು.) (ಸರೀಸೃಪ, ಮೀನು, ಮೊ. ಗಳ ವಿಷಯದಲ್ಲಿ) ಗಟ್ಟಿ ಹೊರ ಚರ್ಮದ; ಗಡುಸು ಚರ್ಮದ. **Sclérogen** (ನಾ.) ಸಸ್ಯಜೀವಕಣಗಳ ಒಳಮೈಯಲ್ಲಿ ಕಟ್ಟುವ ಗಡುಸು ಪದಾರ್ಥ. **Scléroid** (ಗು.) (ಸ. ವಿ., ಪ್ರಾ. ವಿ.) ಗಡುಸಾದ, ಗಟ್ಟಿ ರಚನೆಯ. **Scleróma** (ನಾ., ಬ. ವ. -mata), **Sclerósis** ಸ್ಕ್ಲಿಯರೋಸಿಸ್ (ನಾ., ಬ. ವ. -ses) ಅಂಗಾಂಶ ಪೆಡಸಾಗುವ ರೋಗ; ಜಡ್ಡು ರೋಗ; (ಸ. ವಿ.) ಜೀವಕಣದ ಗೋಡೆ ಗಡುಸಾಗುವುದು (-sis). **Sclérosed** —ರೋಸ್ಡ್ (ಗು.); **Scleroméninx** (ನಾ.) = Dura mater. **Scleroskéleton** (ನಾ.) (ಟರ್ಕಿ ಕೋಳಿಯ ಕಾಲಿನಲ್ಲಿಯಂತೆ) ಸ್ನಾಯುರಜ್ಜು, ಮೊ. ವು ಎಲುಬಾಗಿ ಪರಿಣಮಿಸಿ ಗಡುಸಾದ ಭಾಗ: ಅಸ್ಥೀಭೂತ ಭಾಗ. **Sclerósteous** (ಗು.) ಅಸ್ಥೀಭೂತ (ಸ್ನಾಯು ಸ್ವಭಾವದ). **Sclerótic** —ರಾಟಿಕ್ (ಗು., ನಾ.) ಜಡ್ಡು ರೋಗದ; ಗಡುಸಾಗುವ. ಕಣ್ಣುಗುಡ್ಡೆಯ ಬಿಳಿ ಪೊರೆಯ. (ನಾ.) ಕಣ್ಣುಗುಡ್ಡೆಯ ಬಿಳಿ ಪೊರೆ. **Sclerotítis** —ರೊಟೈಟಿಸ್ (ನಾ.) ಬಿಳಿ ಪೊರೆಯ ಊತ, ಕೆರಳು. **Sclérous** (ಗು.) (ರೋಗ ನಿದಾನ, ಅಂ. ರ. ಶಾ., ಸ. ವಿ.) ಗಡುಸಾದ, ಪೆಡಸಾದ, ಜಡ್ಡುಗಟ್ಟಿದ, ಅಸ್ಥೀಭೂತ.

Scobs ಸ್ಕಾಬ್ಸ್ (ನಾ.) ರಂಪದ ಪುಡಿ; (ಕೊಂಬು, ದಂತ, ಲೋಹ, ಮೊ. ಗಳ) ಹೆರೆದ, ಉಜ್ಜಿ ಹಾಕಿದ ಹುಡಿ. **Scóbiform** ಸ್ಕೋಬಿಫಾರ್ಮ್ (ಗು.) (ಸ. ವಿ.) (ಬೀಜಗಳ ವಿಷಯದಲ್ಲಿ) ರಂಪದ ಪುಡಿಯಂತೆ, ಅರದ ಪುಡಿಯಂತೆ, —ಇರುವ.

Scoff ಸ್ಕಾಫ್ (ನಾ., ಕ್ರಿ. ಅಕ.) ಹೀಯಾಳಿಸುವ ಅಣಕ, ಅಪಹಾಸ(ದ ಮಾತು); ಜರೆತ; ಅವಹೇಳನ; ಧಿಕ್ಕಾರ; ನಗೆಗೇಡು, ಹಾಸ್ಯಾಸ್ಪದವಾದದ್ದು (The s. of withered age and beardless youth). (ಕ್ರಿ.) (ಧರ್ಮ, ಗೌರವಾರ್ಹವಾದುದು, ಮೊ. ನ್ನು) ಕಡೆಗಣಿಸಿ ಮಾತಾಡು, ಹೀಯಾಳಿಸು; ಧಿಕ್ಕಾರ ತೋರಿಸು, ಅಲ್ಲಗಳೆ, ಕೊರಚಾಡು (ಗ್ರಾಂ.) (*At* ಉಪ. ಜೊಡನೆ). **Scóffer** (ನಾ.); **Scóffingly** (ಕ್ರಿ. ವಿ.)

Scold ಸ್ಕೋಲ್ಡ್ (ಕ್ರಿ., ನಾ.) ತಪ್ಪುಹಿಡಿದು ಬಯ್ಯಿ, ದೂಷಣೆಮಾಡು; ನಿಂದಿಸು; (ತಂದೆತಾಯಿಗಳು ಮಕ್ಕಳ ವಿಷಯದಲ್ಲಿ, ಯಜಮಾನ ಸೇವಕನ ವಿಷಯದಲ್ಲಿ) ಗದರಿಸು. (ನಾ.) ಬೈಗುಳದ ಹೆಂಗಸು; ಬಯ್ಯಾಳಿ **Scólding** (ನಾ.) ಬೈಗುಳು, ಗದರಿಕೆ.

Scólex ಸ್ಕೋಲೆಕ್ಸ್ (ನಾ., ಬ. ವ. léces ಸ್ಕೊಲೀಸೀಸ್) ಭ್ರೂಣಾವಸ್ಥೆಯಲ್ಲಿಯ ಲಾಡಿಹುಳು.

Scoliósis ಸ್ಕಾಲಿಯೋಸಿಸ್ (ನಾ.) ಬೆನ್ನುಮೂಳೆಯ ಪಕ್ಕಬಾಗು. **Scoliótic** (ಗು.)

Scóllop. **Scallop** ನೋಡಿ.

Scolopáceous ಸ್ಕಾಲೊಪೇಷಸ್ (ಗು.), **Scolópacine** ಸ್ಕಾಲೊಪಸ್ಸೈ(ಸಿ)ನ್ (ಗು.), **Scolópacoid** ಸ್ಕೊಲಾಪಕಾಯ್ಡ್ (ಗು.) ಉಲ್ಲಂಗಿ ಹಕ್ಕಿಯ(ಂಥ)

Scolopéndrine ಸ್ಕಾಲೊಪೆಂಡ್ರೈ(ರಿ)ನ್ (ಗು.) ಜರೀ ಹುಳುವಿನ(ಂಥ); ಜರೀ ಹುಳುವಿನ ಸ್ವಭಾವದ. **Scolopéndrium** (ನಾ.) ಹಲವು ಬಗೆಯ ಜರೀ ಗಿಡ.

Scómber ಸ್ಕಾಂಬರ್ (ನಾ.) ಒಂದು ಜಾತಿಯ ಮೀನು. **Scómbrid** (ನಾ.) ಸ್ಕಾಂಬರ್ ವರ್ಗದ ಮೀನು. **Scómbroid** (ಗು., ನಾ.) ಸ್ಕಾಂಬರ್ ಮೀನಿನಂಥ (ಮೀನು)

Scon. **Scone** ನೋಡಿ.

Sconce[1] ಸ್ಕಾನ್ಸ್ (ನಾ.) ಮೋಂಬತ್ತಿ ಹಿಡಿಕೆ; ಗೋಡೆಗೆ ತಗುಲ ಹಾಕುವ ಮೋಂಬತ್ತಿ ಪೀಠ.

Sconce[2] ಸ್ಕಾನ್ಸ್ (ನಾ.) (ಹಿಂದಿನ ಹಾಸ್ಯ ಪ್ರ.) ತಲೆ, ನೆತ್ತಿ (A crack on the s.)

Sconce[3] ಸ್ಕಾನ್ಸ್ (ನಾ.) (ಸಾ., ಹಾಯ್ಗಡ, ಕಣಿವೆ, ಮೊ. ಗಳ ರಕ್ಷಕವಾದ) ಸಣ್ಣ ಕೋಟೆ, ಕಿಲ್ಲೆ. (ಪ್ರಾಚೀ. ಪ್ರ.) ಮರೆ, ಆಶ್ರಯ. ಒಲೆಯ ಪಕ್ಕದ ಕಲ್ಲುಮಣೆ.

Sconce[4] ಸ್ಕಾನ್ಸ್ (ಕ್ರಿ. ಸಕ., ನಾ.) (ಆಕ್ಸ್‌ಫರ್ಡ್ ವಿ. ವಿ. ನಿ. ದಲ್ಲಿ; ಒಬ್ಬನು ಕೂಟ ಭೋಜನದ ಮರ್ಯಾದೆಗೆ ಭಂಗತಂದ ತಪ್ಪಿಗಾಗಿ ಅವನಮೇಲೆ) ಮದ್ಯ ಕುಡಿಯಕೂಡದೆಂದು ದಂಡ ವಿಧಿಸು; ಮದ್ಯಕ್ಕೆ ಸೊನ್ನೆ ಸುತ್ತು, ಸಂಚಕಾರ ಹಾಕು (Jones was sconced. Puns are sconced). (ಚರಿತ್ರೆ) (ದಂಡ ವಿಧಿಸುವ ವಿ. ವಿ. ನಿ. ದ ಅಧಿಕಾರಿಗಳ ವಿಷಯದಲ್ಲಿ) ಶಿಸ್ತಿಗೆ ಭಂಗ ತಂದದ್ದಕ್ಕಾಗಿ ಹೀಗೆ ದಂಡ ವಿಧಿಸು. (ನಾ.) ಮದ್ಯ ಕುಡಿಯಕೂಡದೆಂಬ ದಂಡ; ಮದ್ಯ ದಂಡ.

Scon(e) ಸ್ಕಾ(ಸ್ಕೋ)ನ್ (ನಾ.) (ಕಾವಲಿಯಮೇಲೆ ಹೊಯ್ದ) ಗೋಧಿ ದೋಸೆ, ಯವೆ—; ದೋಸೆಯ ನಾಲ್ಕನೆಯ ಒಂದು ಭಾಗ; ಕಾಲು ದೋಸೆ (ಒಂದು ಗುಂಡುದೋಸೆಯನ್ನು ನಾಲ್ಕಾಗಿ ಕತ್ತರಿಸಿದ್ದು ಅಥವಾ ಕಾಲು ದೋಸೆಯಾಕಾರದಲ್ಲಿ ಹೊಯ್ದದ್ದು)

Scoop ಸ್ಕೂಪ್ (ನಾ., ಕ್ರಿ. ಸಕ.) (ಧಾನ್ಯ, ಸಕ್ಕರೆ, ಇದ್ದಿಲು, ಮೊ. ನ್ನು ತೋಡಿ ಮತ್ತೊಂದಕ್ಕೆ ಹಾಕಿಕೊಳ್ಳಲು ಅನುಕೂಲಿಸುವ, ಮೋಟುಹಿಡಿಯ, ಆಳವಾದ ಪಾತ್ರವುಳ್ಳ) ತೋಡು ಕೈ, ಗೋರಿಗೆ. ಉದ್ದ ಹಿಡಿಯ, ಸೌಟಿನಾಕಾರದ, ಅದ್ದು ಪಾತ್ರೆ; ಉದ್ದ ಸೌಟು, ಮೊಗೆ. (ಶಸ್ತ್ರ ಚಿಕಿತ್ಸೆಯಲ್ಲಿ, ಬೆಣ್ಣೆ ತೆಗೆದುಹಾಕಿಕೊಳ್ಳುವಲ್ಲಿ, ಉಪಯೋಗಿಸುವ) ಉಗುರುಳಿಯಂಥ ಸಲಕರಣೆ: ಗೋರು ಚಮಚ. ಕಲ್ಲಿದ್ದಲ ತೊಟ್ಟಿ. ತೋಡುವುದು, ಗೋರುವುದು, ಮೊಗೆಯುವುದು (With a, at one, s. ಒಂದೇ ಸಲ ತೋಡಿಕೊಂಡು, ಗೋರಿ, ಮೊಗೆದು). (ಅಸಂ.) (ಶೀಘ್ರವಾಗಿ ಮಾಡಿದ, ಅಥವಾ ಪ್ರತಿಸ್ಪರ್ಧಿಗಳು ಬಂದಾರೆಂಬ ಮುನ್ನೆಣಿಕೆಯಿಂದ ಮಾಡಿದ) ವಿಪರೀತ, ಭಾರಿ, —ಲಾಭ; ದೋಚು ಲಾಭ. [S.-net ನದಿಯ ತಳವನ್ನು, ಬಾಚಲು, ಗೋರಲು, ಅನುಕೂಲಿಸುವ ಬಲೆ: ಬಾಚು ಬಲೆ, ಗೋರು ಬಲೆ; ಏಡಿ ಹಿಡಿಯುವ ಕೈ ಬಲೆ. S.-wheel (ಬೇಸಾಯ, ಮೊ. ರಲ್ಲಿ ಬಳಸುವ) ಪರಿಧಿಯಲ್ಲಿ ತೊಟ್ಟಿಗಳನ್ನುಳ್ಳ ನೀರೆತ್ತುವ ಚಕ್ರ; ಘಟ ಚಕ್ರ]. (ಕ್ರಿ.) ತೋಡು ಕೈಯಿಂದ (ಹೇಗೊ ಹಾಗೆ) ತೆಗೆ, ಎತ್ತು, (*Up* ಉಪ. ಜೊಡನೆ); —ತೋಡು, ಮೊಗೆ, ಗೋರು (*Out* ಉಪ. ಜೊಡನೆ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಅಸಂ. ; ಇದ್ದಕ್ಕಿದ್ದಹಾಗೆ, ಅದೃಷ್ಟ ಕುಲಾಯಿಸಿ) ವಿಪರೀತ ಲಾಭ ಪಡೆ, ದೋಚಿಕೊ. **Scoóper** (ನಾ.) (ಕ್ರಿಯಾರ್ಥಗಳಲ್ಲಿ) ; (ಕೆತ್ತನೆಗಾರನ) ಕೊರೆಯುಳಿ, ಗೋರುಳಿ, ಉಗುರುಳಿ. ಒಂದು ಜಾತಿಯ ಹಕ್ಕಿ.

Scoot ಸ್ಕೂಟ್ (ಕ್ರಿ. ಅಕ.) (ಅಸಂ.) ಓಡು, ದೌಡಾಯಿಸು, ಥಟ್ಟನೆ ಎದ್ದೋಡು. **Scoóter** (ನಾ.) (ಕ್ರಿಯಾರ್ಥಗಳಲ್ಲಿ) ; ಒಂದರ ಹಿಂದೊಂದರಂತೆ ಎರಡು ತಗ್ಗು ಚಕ್ರಗಳನ್ನು ಒಂದು ಹಲಗೆಗೆ ಅಳವಡಿಸಿ, ಹಿಡಿಕೆ ಹಾಕಿ, ಒಂದು ಕಾಲನ್ನು ಹಲಗೆಯ ಮೇಲೆ ಊರಿ ಮತ್ತೊಂದು ಕಾಲಿನಲ್ಲಿ ನೆಲವನ್ನು ಒತ್ತಿ ನಡಸುವ ಮಕ್ಕಳಾಟದ ಬಂಡಿ (Motor s. ಮೋಟಾರು ಯಂತ್ರದಿಂದ ನಡೆಯುವ ಇಂಥ ಬಂಡಿ) ; ಕರೆಯಲ್ಲಿ ಓಡಾಡುವ ಮೋಟಾರು ದೋಣಿ.

Scópa ಸ್ಕೋಪ, **Scópula** ಸ್ಕಾಪ್ಯುಲ (ನಾ., ಬ. ವ. -ae) (ಕೀಟ ವಿಜ್ಞಾನ) (ಮು., ದುಂಬಿಯ ಕಾಲುಗಳಮೇಲಿರುವ, ಪರಾಗ ಸಂಗ್ರಹಣಕ್ಕೆ ಉಪಯೋಗವಾಗುವ) ಸಣ್ಣ ಬಿರುಗೂದಲ ಕುಚ್ಚು ; ಪರಾಗ ಕೂರ್ಚ ; ಕೂರ್ಚರೋಮ. **Scópate** ಸ್ಕೋಪೇಟ್ (ಗು.) ಪರಾಗ ಕೂರ್ಚವುಳ್ಳ ; ಕೂರ್ಚರೋಮವುಳ್ಳ ; ಕುಚ್ಚಿನಾಕಾರದ ; ಕೂರ್ಚದಂಥ. **Scópiferous** (ಗು.) ಪರಾಗ ಕೂರ್ಚವುಳ್ಳ ; ಕೂರ್ಚರೋಮವುಳ್ಳ. **Scópiform** (ಗು.) (ಪ್ರಕೃತಿ ಚರಿತ್ರೆ) ಕೂರ್ಚಾಕಾರದ ; ಕುಚ್ಚು ಕುಚ್ಚಾಗಿರುವ. **Scópulate** ಸ್ಕಾಪ್ಯುಲೇಟ್ (ಗು.) ಕೂರ್ಚದಂಥ. **Scópuliform** (ಗು.) ಕೂರ್ಚಾಕಾರದ.

Scope ಸ್ಕೋಪ್ (ನಾ.) ಗುರಿ, ಉದ್ದೇಶ, ಆಶಯ (ಈಗ ವಿರ. ಪ್ರ.). ವ್ಯಾಪ್ತಿ, ಪ್ರಸರ, ಕ್ಷೇತ್ರ, ಅವಕಾಶ, ಆಸ್ಪದ, ಇಂಬು, ಹರವು (Is beyond my s. ನನ್ನ ವ್ಯಾಪ್ತಿಗೆ, ಹದ್ದಿಗೆ, —ಮೀರಿದ್ದು. Seeks s. for his energies). (ನಾವೆ ; ಹಡಗು ಲಂಗರು ಹಾಕಿರುವಾಗ) ಹಡಗಿಗೂ ಲಂಗರಿಗೂ ಇರುವ ಹೊರಜಿಯ ಉದ್ದ.

-scope —ಸ್ಕೋಪ್ (ಉ. ಪ್ರ.) (ವೀಕ್ಷಣ ಸಲಕರಣೆಗಳ ಹೆಸರಿನಲ್ಲಿ ಪ್ರ.) —ದರ್ಶಕ (ಉದಾ., Gyroscope ಭ್ರಮಣದರ್ಶಕ. Microscope ಸೂಕ್ಷ್ಮದರ್ಶಕ. Telescope ದೂರದರ್ಶಕ). **-scópic** —ಸ್ಕಾಪಿಕ್ (ಗುಣವಾಚಕದ ಉ. ಪ್ರ.) ; **-scopy** (ನಾಮವಾಚಕದ ಉ. ಪ್ರ.) —ದ ಪ್ರಯೋಗ (ವಿಜ್ಞಾನ) ; —ದಿಂದ ಪರೀಕ್ಷೆ.

Scorbútic ಸ್ಕಾರ್ಬ್ಯೂಟಿಕ್ (ಗು., ನಾ.) ರಕ್ತಪಿತ್ತ ರೋಗದ(ಂಥ). (ನಾ.) ರಕ್ತಪಿತ್ತ ರೋಗಿ. **Scorbútically** (ಕ್ರಿ. ವಿ.)

Scorch ಸ್ಕಾರ್ಚ್ (ಕ್ರಿ., ನಾ.) (ಜ್ವಾಲೆಯಿಂದ, ಶಾಖದ ಕಿರಣಗಳಿಂದ) ಸುಡು, ಕಮರಿಸು, ಸೀಯಿಸು, (ಸುಟ್ಟು) ಕರಿಕುಮಾಡು (A wit that scorches ತೀಕ್ಷ್ಣ, ಮನಸ್ಸು ಇರಿಯುವ, —ಚಮತ್ಕಾರ ನುಡಿ). (ಅಸಂ.) (ಬೈಸಿಕಲ್ ಸವಾರ, ಮೋಟಾರು ಚಾಲಕ, ಮೊ. ರ ವಿಷಯದಲ್ಲಿ) ವಿಪರೀತ ವೇಗದಿಂದ —ಹೋಗು, ಬಿಡು ; (ನಾ.) ಹೀಗೆ ವಿಪರೀತ ವೇಗದಿಂದ ಹೋಗುವುದು, ಬಿಡುವುದು. **Scórcher** (ನಾ.) (ಕ್ರಿಯಾರ್ಥಗಳಲ್ಲಿ) ; (ಅಸಂ.) ಅತ್ಯುತ್ತಮ ಮಾದರಿ, ಥರ್ಜರಿಯಾದುದು. **Scórching** (ಗು.) ; **Scórchingly** (ಕ್ರಿ. ವಿ.)

Score ಸ್ಕೋ(ಅ)ರ್ (ನಾ., ಕ್ರಿ.) (ಕೆತ್ತಿದ) ಕಚ್ಚು (ಹಿಂದಿನ ಕಾಲದಲ್ಲಿ ಲೆಕ್ಕ ಇಡುವುದಕ್ಕಾಗಿ) ; (ಗೀರಿದ, ಎಳೆದ) ಗೆರೆ, ಗೀಟು, ಗೀರು (Rock covered with scores). (ವಿರ. ಪ್ರ.) (ಓಟದ ಮತ್ತು ಬಂದೂಕಿನ ಪಂದ್ಯಗಳಲ್ಲಿ) ಸ್ಪರ್ಧಿ ನಿಂತುಕೊಳ್ಳಬೇಕಾದ ಸ್ಥಳದ ಗುರುತು, ಗೆರೆ : ನಿಲು —ಗೆರೆ, ಗುರುತು [Go off at s. ಹುರಿಪಿನಿಂದ ಆರಂಭಿಸು, ಹೊರಡು (ಮು., ತನಗೆ ಪ್ರಿಯವಾದ ವಿಷಯದಮೇಲೆ ಉಪನ್ಯಾಸಕ್ಕೆ)]. (ನಾವೆ: ಪಟ್ಟಿಯನ್ನು ಅಥವಾ ಹಗ್ಗವನ್ನು ಹಾಯಿಸುವುದಕ್ಕಾಗಿ ಹಲಗೆಯಲ್ಲಿ, ಅಚ್ಚಿನಲ್ಲಿ ಮಾಡಿರುವ) ಗಾಡಿ. (ಹಿಂದಿನ ಕಾಲದ ತಂಗುದಾಣಗಳಲ್ಲಿ ಗಿರಾಕಿಗಳ ಹೆಸರಿನ ಮುಂದೆ ಗೀರುಗಳನ್ನೆಳೆದು ಇಡುತ್ತಿದ್ದ) ಕುಡಿತದ (ಸಾಲದ) ಲೆಕ್ಕ ; (ಗೋಷ್ಠಿಯ ಔತಣದ) ಮದ್ಯದ ಲೆಕ್ಕಾಚಾರ [Pay one's s. ತನ್ನ ಲೆಕ್ಕ ಬಗೆಹರಿಸು. Death pays all scores ಸಾವು ಎಲ್ಲ ಲೆಕ್ಕವನ್ನೂ ಬಗೆಹರಿಸುತ್ತದೆ. Pay off old scores (ರೂಪ.) ಹಳೆಯ ಸೇಡನ್ನು ತೀರಿಸಿಕೊ. Quit scores with ಮುಯ್ಯಿತೀರಿಸಿಕೊ]. (ಆಟಗಳಲ್ಲಿ ಆಟಗಾರರು ಅಥವಾ ಪಕ್ಷ ಮಾಡಿದ) ಗೆಲ್ಲಂಕ ; ಗೆಲ್ಲಂಕದ —ಪಟ್ಟಿ, ದಾಖಲೆ [S.-book, -card, -sheet (ಮು., ಕ್ರಿಕೆಟ್ ಆಟದಲ್ಲಿ) ಗೆಲ್ಲಂಕದ ಪುಸ್ತಕ, ರಟ್ಟು, ಹಾಳೆ. Keep s. ಗೆಲ್ಲಂಕಗಳ ಲೆಕ್ಕ ಬರೆ, ದಾಖಲೆ ಇಡು]. (ಸಂ.) ಪ್ರಸ್ತಾರ ಸೂಚಿ [Full s. ಪ್ರತಿ ಯೊಂದು ವಾದ್ಯಸಂಗೀತ ಭಾಗಕ್ಕೂ ಪ್ರತ್ಯೇಕ ಪ್ರಸ್ತಾರ ಸೂಚಿ ಇರುವದು : ಪೂರ್ಣ ಪ್ರಸ್ತಾರ ಸೂಚಿ]. ಇಪ್ಪತ್ತು, ಇಪ್ಪತ್ತರ ತಂಡ, ಬೀಸಿಗೆ, ವಿಂಶತಿ [Three s. & ten (ಮನುಷ್ಯನ ಸಾಮಾನ್ಯ ಆಯುಃಪ್ರಮಾಣವೆಂದು ಹೇಳುವ) ಎಪ್ಪತ್ತು ವರ್ಷ. Scores of people ಹಲವು ಮಂದಿ, ನೂರಾರು ಜನ]. ಕಾರಣ, ನಿಮಿತ್ತ, ಆಧಾರ, ವಿಷಯ (Rejected on the s. of absurdity ಅಸಂಬದ್ಧವೆಂಬ ಕಾರಣದಿಂದ ತಿರಸ್ಕೃತ ವಾಗಿ. You may be easy on that s. ಆ ವಿಷಯದಲ್ಲಿ ನೀನು ನಿರಾತಂಕವಾಗಿ, ನಿಶ್ಚಿಂತೆಯಾಗಿ, ಇರಬಹುದು). (ಅಸಂ.) ಇನ್ನೊಬ್ಬನನ್ನು ಗೆದ್ದ —ಮಾತಿನೇಟು, ನಡೆವಳಿಕೆ (Given to making cheap scores ಅಗ್ಗದ ಜಯ ಪಡೆಯುವ ಸ್ವಭಾವದ) ; ಒಳ್ಳೆಯ ಅದೃಷ್ಟದ ಹೊಡೆತ (What a s. !). (ಕ್ರಿ.) ಕಚ್ಚು, ಗುರುತು, —ಮಾಡು ; ಗೀಟು, ಗೆರೆ, ಗೀರು, —ಹಾಕು, ಎಳೆ ; ಗೀರು (S. out words ಮಾತುಗಳಮೇಲೆ ಗೆರೆ ಎಳೆ ; ಮಾತುಗಳನ್ನು ಹೊಡೆದುಹಾಕು. S. under ಮಾತುಗಳ ಕೆಳಗೆ ಗೀಟು ಹಾಕು). (ತಂಗುದಾಣದಲ್ಲಿ ಮದ್ಯದ ಲೆಕ್ಕ) ಗಿರಾಕಿಯ ಲೆಕ್ಕಕ್ಕೆ ಸೇರಿಸು, ಬರೆ (*Against, to*; ಅನೇಕ ವೇಳೆ *up* ಉಪ. ದೊಡನೆ). ಲೆಕ್ಕ —ಇಡು, ಬರೆ. (ರೂಪ.) (ಮತ್ತೊಬ್ಬನ ಅಪರಾಧ ವನ್ನು) ಮನಸ್ಸಿನಲ್ಲಿ ಲೆಕ್ಕ ಹಾಕಿಕೊ, ಮನಸ್ಸಿನಲ್ಲಿಟ್ಟುಕೊಂಡಿರು (*Against, to* ಉಪ. ದೊಡನೆ). (ಕ್ರಿಕೆಟ್ ಆಟ, ಮೊ. ಗಳಲ್ಲಿ) ಗೆಲ್ಲಂಕ ಗಳ ಲೆಕ್ಕ ಇಡು, ಬರೆ ; ಗೆಲ್ಲಂಕಮಾಡು, —ಗಳಿಸು (Has scored a century at cricket). ಪಡೆ, ಗಳಿಸು (Has scored a success). ಅನುಕೂಲ, ಪ್ರಯೋಜನ, —ಪಡೆದಿರು ; ಅದೃಷ್ಟ ಪಡೆದಿರು (That is where he scores. We shall s. by it). (ಸಂ.) = Orchestrate (Orchestra ನೋಡಿ) ; ಬೇರೆಯ ವಾದ್ಯಕ್ಕಾಗಿ ಸಿದ್ಧಪಡಿಸು ; ಪ್ರಸ್ತಾರ ಸೂಚಿ ಬರೆ. S. off (ಅಸಂ.) (ವಾದ, ಮೊ. ಗಳಲ್ಲಿ) ಸೋಲಿಸು, ಜಯ ಪಡೆ, ಹೊಡೆದು ಕೆಡವು ; ಮುಖಭಂಗಮಾಡು. **Scórer** (ನಾ.) ಗೆಲ್ಲಂಕದ ಪಟ್ಟಿ, ಗೆಲ್ಲಂಕದ ದಾಖಲೆ, —ಇಡುವವನು ; ಗೆಲ್ಲಂಕದ ಲೆಕ್ಕಗಾರ. **Scóring** (ನಾ.)

Scória ಸ್ಕೋ(ಅ)ರಿಯ (ನಾ., ಬ. ವ. -ae —ರಿಈ) ಕಣಮಯ ಶಿಲಾರಸ(ದ ತುಂಡು) ; ಶಿಲಾರಸದ ಗಟ್ಟಿ. (ಲೋಹ ಕರಗಿಸುವಲ್ಲಿ ಉಳಿಯುವ) ಗಸಿ ; ಕಿಟ್ಟ. **Scórify** (ಕ್ರಿ. ಸಕ.) ಕಿಟ್ಟಮಾಡು ; ಕಿಟ್ಟಕ್ಕೆ ತಿರುಗಿಸು ; (ಅದಿರಿನೊಡನೆ ಬಳಿಗಾರ ಮತ್ತು ಸೀಸ ಬೆರಸಿ ಕಿಟ್ಟ ಕಾಯಿಸಿ) ಲೋಹ ಶುದ್ಧತೆಯನ್ನು ಪರೀಕ್ಷಿಸು. **Scorificátion** (ನಾ.) ಕಿಟ್ಟ ಕರಣ ; ಕಿಟ್ಟ ಮಾಡುವುದು ; ಈ ಮೂಲಕ ಲೋಹ ಪರೀಕ್ಷೆ. **Scórifier** (ನಾ.) (ಲೋಹ ಶುದ್ಧತೆಯನ್ನು ಪರೀಕ್ಷಿಸುವಲ್ಲಿ) ಕಿಟ್ಟಮಾಡುವ ಕಾವುಜೇಡಿನ ಮೂಸೆ, ಕುಲುಮೆ.

Scorn ಸ್ಕಾರ್ನ್ (ನಾ., ಕ್ರಿ. ಸಕ.) ಇಳಿಕೆ, ತೃಣೀಕಾರ, ತಿರಸ್ಕಾರ, ಧಿಕ್ಕಾರ (—ಮಾಡು) ; ಜರೆ(ತ) ; ತುಚ್ಛೀಕರಿಸು ; ಏಳಿಸು ; (Think s. of ಧಿಕ್ಕರಿಸು, ಕಡೆಗಣಿಸು. Laugh to s. ಗೇಲಮಾಡಿ ನಗು). ತಿರಸ್ಕಾರ ಪಾತ್ರ, ಅವಜ್ಞಾ ವಿಷಯ (A s. to, the s. of. Thou makest us a reproach to our neighbours, a s. and a derision to them that are round about us). ಹೀನಾಯವಾಗಿ ತಿಳಿ, ಹೇಸು (Scorns lying, a lie, to lie). **Scórner** (ನಾ.) (ಪ್ರಾಚೀ. ಪ್ರ.) ; **Scórnful** (ಗು.) ; **Scórnfully** (ಕ್ರಿ. ವಿ.) ; **Scórnfulness** (ನಾ.)

Scórpio ಸ್ಕಾರ್ಪಿಯೊ (ನಾ.) (ಖ. ವಿ.) ವೃಶ್ಚಿಕ (ರಾಶಿ)

Scórpion ಸ್ಕಾರ್ಪಿಅನ್ (ನಾ.) ಚೇಳು, ವೃಶ್ಚಿಕ. (ಬೈಬಲ್) ಲೋಹದ ಮೊನೆಗಳನ್ನು ಅಳವಡಿಸಿದ ಚಾವಟಿ : ಲೋಹ ಮೊನೆ ಚಾವಟಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಖ. ವಿ.) ವೃಶ್ಚಿಕ ರಾಶಿ. ಒಂದು ಬಗೆಯ ಯುದ್ಧ ಕವಣೆ. (S.-fish ತಲೆಯಮೇಲೂ ಈಜುರೆಕ್ಕೆಯ ಮೇಲೂ ಮುಳ್ಳುಮೊನೆಗಳುಳ್ಳ ಒಂದು ಬಗೆಯ ಮೀನು : ಚೇಳು ಮೀನು. S.-shell ಚಿಪ್ಪಿನ ಬಾಯ ಹೊರ ತುಟಿಯ ಅಂಚಿನಲ್ಲಿ ಉದ್ದನೆಯ ಮುಳ್ಳು ಮೊನೆಗಳುಳ್ಳ ಚಿಪ್ಪು ಮೀನು : ಚೇಳುಸಿಂಪಿ).

Scórpioid ಸ್ಕಾರ್ಪಿಯಾಯ್ಡ್ (ನಾ., ಗು.) (ಸ. ವಿ.) ಚೇಳಿನ ಕೊಂಡಿಯಂತೆ ಸುರುಳಿ ಸುತ್ತಿಕೊಂಡಿದ್ದು, ಅರಳುವಾಗ ಸುರುಳಿ ಬಿಚ್ಚಿಕೊಳ್ಳುವ (ಪುಷ್ಪ ಮಂಜರಿ) ; ವೃಶ್ಚಿಕ (ಪುಷ್ಪ) ಮಂಜರಿ. (ಪ್ರಾ. ವಿ.) ಚೇಳಿನಂಥ ; ವೃಶ್ಚಿಕ ವರ್ಗದ.

Scot[1] ಸ್ಕಾಟ್ (ನಾ.) (ಚರಿತ್ರೆ) ತೆರಿಗೆ ; ತೆರ ; ವಂತಿಗೆ ; ಚಂದಾ (Pay s. & lot ಊರಿನ ವೆಚ್ಚಗಳನ್ನು ಹಂಚಿಕೊ : ತೆರಿಗೆ ಕೊಡು). S.-free (ಆಧುನಿಕ ಪ್ರ.) : ಏನೂ ಕೊಡಬೇಕಾಗಿಲ್ಲದೆ, ಬಿಟ್ಟಿ (ವಿರ. ಪ್ರ.); (ಸಾ.) ಯಾವ ನಿರ್ಬಂಧವೂ ಇಲ್ಲದೆ, ಸುರಕ್ಷಿತವಾಗಿ, ಶಿಕ್ಷೆಯಾಗದೆ, ಮಾಫಿಯಾಗಿ (Go s.-f.)

Scot[2] ಸ್ಕಾಟ್ (ನಾ.) (ಬ. ವ. ದಲ್ಲಿ) ೬ನೆಯ ಶ. ಮಾ. ದಲ್ಲಿ ಐರ್ಲೆಂಡಿನಿಂದ ಸ್ಕಾಟ್ಲೆಂಡಿಗೆ ವಲಸೆಬಂದು ನೆಲಸಿದ ಕೆಲ್ಟ್ ಜನವರ್ಗ (Picts & Scots). ಸ್ಕಾಟ್ಲೆಂಡಿನವನು. **Scotch**[1] (ಗು., ನಾ.) ಸ್ಕಾಟ್ಲೆಂಡಿನ(ವರ) ; ಸ್ಕಾಟ್ಲೆಂಡಿನ ಆಗ್ನೇಯ ಭಾಗದವರು ಬಳಸುವ ಇಂಗ್ಲಿಷ್ ಭಾಷಾ ಪ್ರಭೇದದ (ಸ್ಕಾಚ್ ಜನರಲ್ಲಿಯೂ, ಇಂಗ್ಲಿಷ್ ಬರಹಗಾರರ ಗಂಭೀರ ಶೈಲಿಯಲ್ಲಿಯೂ Scottish ಎಂಬ ಪದ ಹೆಚ್ಚು ಬಳಕೆಯಲ್ಲಿದೆ ; ಸ್ಕಾಚ್ ಜನರಲ್ಲಿ Scots ಎಂಬ ಪದವೂ ಬಳಕೆಯಲ್ಲಿಂಟು) [The S. ಸ್ಕಾಟ್ಲೆಂಡಿನವರು ; ಸ್ಕಾಚ್—ಜನ, ಜನಾಂಗ. Pound Scots ಹಿಂದೆ ಸ್ಕಾಚ್ ಜನರಲ್ಲಿ ಚಲಾವಣೆಯಲ್ಲಿದ್ದ ಒಂದು ನಾಣ್ಯ (೧ ಷಿ. ೮ ಪೆ. ಬೆಲೆಯದು). S. broth ಜವೆಗೋಧಿ ನುಚ್ಚು ಮತ್ತು ತರಕಾರಿ ಹಾಕಿ ಮಾಡಿದ ಸಾರು, ಕಟ್ಟು. S. cap ಸ್ಕಾಚ್ ಕುಲಾವಿ (ಸ್ಕಾಟ್ಲೆಂಡಿನ ಮೇಲ್ನಾಡಿನವರು ಧರಿಸುವಂಥದು). S. whisky (ಮೊದಲು ಸ್ಕಾಟ್ಲೆಂಡಿನಲ್ಲಿ ತಯಾರಾಗುತ್ತಿದ್ದ) ಒಗರು ರುಚಿಯ ವ್ಹಿಸ್ಕಿ ಮದ್ಯ : ಸ್ಕಾಚ್ ವ್ಹಿಸ್ಕಿ. S. pebble ಹಲವು ಬಗೆಯ ಪ್ರಶಸ್ತಶಿಲೆ : ಸ್ಕಾಚ್ ಶಿಲೆ. S. collops ಮಾಂಸ ಮತ್ತು ಈರುಳ್ಳಿಯ ಬಾಳಕ. S.-&-English ಒಂದು ಬಗೆಯ ಮಕ್ಕಳ ಆಟ] . (ನಾ.) ಇಂಗ್ಲಿಷ್ ಭಾಷೆಯ ಸ್ಕಾಚ್ ಪ್ರಾಂತ ಪ್ರಭೇದ; ಸ್ಕಾಚ್ ವ್ಹಿಸ್ಕಿ (S. & soda ಸ್ಕಾಚ್ ವ್ಹಿಸ್ಕಿ ಮತ್ತು ಸೋಡಾ ಬೆರಸಿದ ಪಾನೀಯ). **Scótchman** (ನಾ.), **Scótsman** (ನಾ.) ಸ್ಕಾಟ್ಲೆಂಡಿನವನು (Flying Scotsman ಲಂಡನ್ನಿನಿಂದ ಸ್ಕಾಟ್ಲೆಂಡಿಗೆ ಹೋಗುವ ಬಹು ವೇಗದ ಎಕ್ಸ್‌ಪ್ರೆಸ್ ರೈಲು ಗಾಡಿ). **Scótchwoman** (ನಾ., ಸ್ತ್ರೀ.), **Scótswoman** (ನಾ., ಸ್ತ್ರೀ.) ; **Scótland Yárd** ಸ್ಕಾಟ್‌ಲಂಡ್ ಯಾರ್ಡ್ (ನಾ.) ಲಂಡನ್ನಿನ ಪೋಲೀಸು ದಳ, (ಮು., ಪತ್ತೇದಾರಿ ದಳ); ಈ ದಳದ ಪ್ರಧಾನ ಕಾರ್ಯಸ್ಥಾನ (Great, New, S. Y. ಈ ದಳದ ಹಿಂದಿನ, ಈಗಿನ, ಕೇಂದ್ರ ಕಾರ್ಯಸ್ಥಾನಗಳು). **Scots** (ನಾ.) (Scotch[1] ನೋಡಿ). **Scót(t)ice** ಸ್ಕಾಟಿಸೀ (ಕ್ರಿ. ವಿ.) ಸ್ಕಾಚ್ ಭಾಷೆಯಲ್ಲಿ. **Scót(t)icism** —ಸಿಸ಼್ಂ (ನಾ.) ಸ್ಕಾಚ್ ಭಾಷಾ —ರೂಢಿ, ಪ್ರಯೋಗ. **Scót(t)icize** —ಸೈಜ಼್ (ಕ್ರಿ.) ಸ್ಕಾಚ್ ಭಾಷಾ ರೂಢಿಯನ್ನು, ಸ್ಕಾಚ್ ಪದ್ಧತಿಯನ್ನು —ಅನುಕರಿಸು ; ಸ್ಕಾಚ್ ಮಾದರಿಯಂತೆ ಮಾಡು. **Scóttish** (ಗು.) (Scotch[1] ನೋಡಿ)

Scotch[1], **Scótchman, etc.** **Scot**[2] ನೋಡಿ.

Scotch[2] ಸ್ಕಾಚ್ (ಕ್ರಿ. ಸಕ., ನಾ.) (ಪ್ರಾಚೀ. ಪ್ರ.) ಕಚ್ಚು(ಗಳನ್ನು) ಮಾಡು, ಗೀರು, ಬಗರು. ಮೊದಲಲ್ಲೆ ಮೊಟಕಿ ಹಾಕು, ಚಿಗುಟಿ ಹಾಕು. (ಕೊಲ್ಲದೆ) ಗಾಯಗೊಳಿಸು, ಗಾಸಿಮಾಡು ; ಸ್ವಲ್ಪ ಊನ ಮಾಡು (We have scotched the snake, not killed it). (ನಾ.) ಕೊಯ್ತ, ಕಚ್ಚು ; ಗೀರು, ಗೆರೆ (ಮು., ಕುಂಟೆಬಿಲ್ಲೆಯ ಆಟದ ಮನೆಯ ಗೆರೆ)

Scotch[3] ಸ್ಕಾಚ್ (ನಾ., ಕ್ರಿ. ಸಕ.) (ಇಳಿಜಾರಿನಲ್ಲಿ ಬಂಡಿಯ ಗಾಲಿ ಉರುಳಿಹೋಗದಂತೆ ತಡೆಯಲು ಗಾಲಿಯ ಮುಂದೆ ಇಡುವ) ತಡೆಮರ, ಗೊದಮ. (ಕ್ರಿ.) —ಹಾಕು, ಹಾಕಿ ತಡೆ ; ತಡೆಗಟ್ಟು.

Scóter ಸ್ಕೋಟರ್ (ನಾ.) ಒಂದು ದೊಡ್ಡ ಕಡಲ ಬಾತುಕೋಳಿ.

Scótia ಸ್ಕೋಷಿಯ, ಸ್ಕೋಷ (ನಾ.) ಕಂಬದ ಪೀಠದಲ್ಲಿ ಒಳಬಾಗು ರಚನೆ.

Scótism ಸ್ಕೋಟಿಸ಼್ಂ (ನಾ.) (ಚರಿತ್ರೆ) ೧೩ನೆಯ ಶ. ಮಾ. ದ ಡನ್ಸ್ ಸ್ಕೋಟಸ್ ಎಂಬ ದಾರ್ಶನಿಕನ ತತ್ತ್ವ, ಪದ್ಧತಿ. **Scótist** (ನಾ.)

Scótland Yárd. **Scot**[2] ನೋಡಿ.

Scóto- ಸ್ಕಾ(ಸ್ಕೋ)ಟೊ— (ಸ. ಪೂ. ಪ.) ಕತ್ತಲೆ—, ಅಂಧಕಾರ—. **-dinia** (—ಡೈನಿಯ) ತಲೆಸುತ್ತು, ತಲೆತಿರುಗು. **-graph** ಕತ್ತಲೆಯಲ್ಲಿ ಬರೆಯುವ ಸಲಕರಣೆ : ಅಂಧಕಾರ ಲೇಖಕ. **Scotóma** ಸ್ಕೊಟೋಮ (ನಾ., ಬ. ವ. -ata) (ರೋಗ ನಿದಾನ) ದೃಷ್ಟಿಕ್ಷೇತ್ರದಲ್ಲಿ ಒಂದು ಭಾಗ ಕತ್ತಲೆಗವಿಯುವುದು, ಮಬ್ಬಾಗುವುದು; ನೋಟ ಮಬ್ಬು.

Scots, Scótticism, Scóttish, etc. **Scot**[2] ನೋಡಿ.

Scoúndrel ಸ್ಕೌಂಡ್ರೆಲ್ (ನಾ.) ಏತಕ್ಕೂ ಹೇಸದವನು ; ದಗಾಕೋರ, ಪಟಿಂಗ, ಠಕ್ಕ. **Scoúndreldom** (ನಾ.) ಪಟಿಂಗರು, ಠಕ್ಕರು. =Scoundrelism. **Scoúndrelism** (ನಾ.) ಪಟಿಂಗತನ. **Scoúndrelly** (ಕ್ರಿ. ವಿ.)

Scoúr ಸ್ಕೌ(ಅ)ರ್ (ಕ್ರಿ. ಸಕ., ನಾ.) ಉಜ್ಜಿ —ಚೊಕ್ಕಟಮಾಡು, ಶುಭ್ರಮಾಡು; ಬೆಳಗು; ಉಜ್ಜು ; ತಿಕ್ಕು [S. metal (ಮರಳು, ಮೊ. ಗಳಿಂದ) ಲೋಹವನ್ನು ಬೆಳಗು. S. clothes (ಸಾಬೂನು, ಮೊ. ಗಳಿಂದ) ಬಟ್ಟೆಗಳನ್ನು ತಿಕ್ಕು, ತೀಡು] . (ನಾಲೆ, ಬಂದರು, ಕೊಳಾಯಿ, ಮೊ. ನ್ನು) ನೀರನ್ನು ಬಲವಾಗಿ ನುಗ್ಗಿಸಿ, ಕೊಚ್ಚಿ—ಚೊಕ್ಕಟ ಮಾಡು. (ಔಷಧ, ವೈದ್ಯ, ಮೊ. ವಿಷಯದಲ್ಲಿ) ಜೋರಾಗಿ ಭೇದಿ ಮಾಡಿಸು (S. worms ಗಾಳಕ್ಕೆ ಯೋಗ್ಯವಾಗಿ ಮಾಡಲು ಹುಳುಗಳಿಗೆ ಭೇದಿಮಾಡಿಸು). (ಉಜ್ಜುವುದು, ಮೊ. ಗಳಿಂದ) ಕಿಲುಬು, ತುಕ್ಕು, ಕೊಳೆ, —ತೆಗೆ (ರೂಪ. ಸಹ) (*Away, off* ಉಪ. ದೊಡನೆ). [Scouring-rush (ಮರ. ಮೊ. ಕ್ಕೆ) ಉಜ್ಜಿ ಮೆರುಗುಕೊಡಲು ಉಪಯೋಗಿಸುವ ಜೊಂಡು] . (ನಾ.) (ಕಶ್ಮಲ, ಮೊ. ವು ಹೊರಟುಹೋಗುವಂತೆ) ಕಾಲುವೆ, ಮೊ. ನ್ನು ವೇಗ ಪ್ರವಾಹ ಕೊಚ್ಚುವುದು : ಕೊಚ್ಚಾಟ (The s. of tide). (ಜಾನುವಾರುಗಳ) ಭೇದಿರೋಗ, ಅತಿಸಾರ, ಉಚ್ಚಲು (ರೋಗ). ಬಟ್ಟೆ ಉಜ್ಜುವ ಸಾಬೂನು, ಮೊ. ಪದಾರ್ಥ. **(-)scourer** (ನಾ.)

Scour[2] ಸ್ಕೌ(ಅ)ರ್ (ಕ್ರಿ.) [ಮು., ಹುಡುಕುತ್ತ ಅಥವಾ (ಶತ್ರುವನ್ನು) ಬೆನ್ನುಹತ್ತಿ] ಹರಿದಾಡು, ಓಡಾಡು, ಸುತ್ತಾಡು; ಬೇಗ ಬೇಗ—ಹೋಗು, ಹುಡುಕಾಡು, ಶೋಧಿಸು (S. the plain, coast, woods)

Scourge ಸ್ಕರ್ಜ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) (ಮನುಷ್ಯರನ್ನು ದಂಡಿಸುವ) ಚಾ(ವ)ಟಿ, ಚಬುಕು, ಬಾರುಕೋಲು, ಕೋರಡೆ. ದೈವಿಕ ಅಥವಾ ಇತರ ಶಿಕ್ಷಾ ಸಾಧನ; ದೇವರ ಆಗ್ರಹ ಸ್ವರೂಪ ಎಂದು ಪರಿಗಣಿತವಾದ ಮನುಷ್ಯ, ವಸ್ತು; ದೈವ— ಶಿಕ್ಷೆ, ದಂಡನೆ; ಉಪದ್ರವ, ಪೀಡೆ (ಉದಾ., ಬರ, ಯುದ್ಧ, ಮೊ. ವು) (The white s. ಒಂದು ಬಗೆಯ ಕ್ಷಯರೋಗ). (ಕ್ರಿ.) (ಪ್ರಾಚೀ. ಪ್ರ.) ಚಾ(ವ)ಟಿಯಿಂದ ಹೊಡೆ, ತೀಡು ; ಕಶಾ ಪ್ರಹಾರಮಾಡು. (ದೇವರ ವಿಷಯದಲ್ಲಿ : ದುಷ್ಟರನ್ನು) ದಂಡಿಸು, ಶಿಕ್ಷಿಸು ; ಪೀಡಿಸು, ಉಪದ್ರವಕೊಡು ; (ದೇಶ, ಮೊ. ನ್ನು) ಯುದ್ಧ, ಉಪದ್ರವ, ಮೊ. ರಿಂದ ಹಾಳುಮಾಡು, ಧ್ವಂಸಮಾಡು. ಕಟುವಾಗಿ ಟೀಕಿಸು ; ವಿಡಂಬನೆಯಿಂದ, ನಿಂದೆಯಿಂದ, ಅಪ್ಪಳಿಸಿಬಿಡು.

Scout[1] ಸ್ಕೌಟ್ (ನಾ., ಕ್ರಿ. ಅಕ.) (ಸೈನ್ಯ, ಮೊ. ವು) ಶತ್ರುವಿನ, ಸುತ್ತುಮುತ್ತಲ, ಸುದ್ದಿ ತಿಳಿದುಬರಲು ಹೋದ, ಕಳುಹಿಸಲ್ಪಟ್ಟ, ಮನುಷ್ಯ : ಅನ್ವೇಷಕ, ಬೇಹುಕಾರ, ಅಗ್ರಚಾರ, ಪಾಳತಿಗಾರ [Boy s. (Boy ನೋಡಿ). S.-master ಬೇಹುಕಾರರ ನಾಯಕ. ಬಾಲಚಮೂ ಶಿಕ್ಷಕ] . ಬೇಹು ಹಡಗು. ಸಣ್ಣ ಶೀಘ್ರ ಏಕಾಸನ ವಿಮಾನ : ಬೇಹು ವಿಮಾನ. (ಆಕ್ಸ್‌ಫರ್ಡ್ ವಿ. ವಿ. ನಿ.) ಕಾಲೇಜು ಜವಾನ (Gyp, Skip[2] ಪದಗಳೊಡನೆ ಹೋಲಿಸಿ). (ಕ್ರಿಕೆಟ್, ಪ್ರಾಚೀ. ಪ್ರ.) ಆಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೋರಿಸುವವನು. (ಮು., ಸೈನಿಕ) ಸುದ್ದಿ ಸಂಗ್ರಹಣ, ಬೇಹು (On the s.). ಹಲವು ಬಗೆಯ ಹಕ್ಕಿ. (ಕ್ರಿ.) ಸುದ್ದಿ ಸಂಗ್ರಹಿಸು ; ಬೇಹು ಕೆಲಸ ಮಾಡು ; (ಸುದ್ದಿ ಸಂಗ್ರಹಣಕ್ಕಾಗಿ) ಸುತ್ತಾಡು, ಸಂಚರಿಸು (Out scouting)

Scout[2] ಸ್ಕೌಟ್ (ಕ್ರಿ. ಸಕ.) (ಸೂಚನೆ, ಅಭಿಪ್ರಾಯ, ಮೊ. ನ್ನು) ಜರೆದು ತಿರಸ್ಕರಿಸು, ಅಪಹಾಸದಿಂದ ಅಲ್ಲಗಳೆ.

Scow ಸ್ಕೌ (ನಾ.) (ಮು., ಅಮೆ. ಸಂ.) ಒಂದು ಬಗೆಯ ಚಪ್ಪಟೆ ತಳದ ದೋಣಿ.

Scowl ಸ್ಕೌಲ್ (ಕ್ರಿ., ನಾ.) ಮುಖ—ಗಂಟುಹಾಕಿಕೊ, ಸಿಂಡರಿಸಿಕೊ ; ಹುಬ್ಬು ಗಂಟಿಕ್ಕು ; ಸಿಡುಕುಮೋರೆ ಮಾಡು ; (ವಸ್ತುಗಳ ವಿಷಯದಲ್ಲಿ) ಮಂಕು ಕವಿದಿರು, ವಿಷಣ್ಣವಾಗಿರು. [S. down (ಮನುಷ್ಯ, ವಿರೋಧ, ಮೊ. ನ್ನು) ಹುಬ್ಬುಗಂಟಿಕ್ಕಿ ಅಡಗಿಸಿಬಿಡು, ಜಬರಿಸು]. (ನಾ.) ಹುಬ್ಬು ಗಂಟು, ಸಿಡುಕುಮೋರೆ, ಕ್ರೋಧಮುದ್ರೆ. **Scowlingly** (ಕ್ರಿ. ವಿ.)

Scrábble ಸ್ಕ್ರ್ಯಾಬ್‌ಲ್ (ಕ್ರಿ. ಅಕ.) (ಬೈಬಲ್) ಸಿಕ್ಕಾಬಟ್ಟೆ ಗೀಚು, ಬರೆ. (ಹುಡುಕುವುದಕ್ಕಾಗಿ, ಸಂಗ್ರಹಿಸುವುದಕ್ಕಾಗಿ ಆತುರದಿಂದ) ಕೆದಕು, ಬೆದಕು, ತಡಕಾಡು (*About* ಉಪ. ದೊಡನೆ)

Scrag ಸ್ಕ್ರ್ಯಾಗ್ (ನಾ., ಕ್ರಿ. ಸಕ.) ಮೂಳೆ ಬಿಟ್ಟುಕೊಂಡಿರುವ, ಬಡಕಲು,—ಮನುಷ್ಯ, ಪ್ರಾಣಿ ; ಸಣಕಲ ; ಕದಿರುಕಡ್ಡಿ ; ಬಡಕಲು ಗಿಡ. (ಆಹಾರವಾಗಿ ಉಪಯೋಗಿಸುವ) ಸತ್ತ ಪ್ರಾಣಿಯ ತೆಳು ಮಾಂಸದ (ಮೂಳೆಯ) ಭಾಗ (ಮು., ಕುರಿಯ ಕತ್ತಿನ ಮಾಂಸ). (ಅಸಂ.) (ಮನುಷ್ಯನ) ಕೊರಲು, ಕತ್ತು. (ಕ್ರಿ.) (ಅಸಂ.) ಗಲ್ಲಿಗೇರಿಸಿ, ಕತ್ತುತಿರಿಚಿ,—ಕೊಲ್ಲು, ಸಾಯಿಸು ; ಕತ್ತು—ಹಿಸುಕು, ತಿರಿಚು. (ಕಾಲ್ಚೆಂಡಾಟ) ಕುತ್ತಿಗೆ ಹಿಡಿದು ಜಗ್ಗು. (ಶಾಲಾ ಅಸಂ.) (ಹಿಂಸೆ ಕೊಡುವುದಕ್ಕಾಗಿ) ಕುತ್ತಿಗೆಗೆ ತೋಳುಹಾಕಿ ಹಿಸುಕು. **Scrággy** (ಗು.); **Scrággily** (ಕ್ರಿ. ವಿ.); **Scrágginess** (ನಾ.)

Scrámble ಸ್ಕ್ರ್ಯಾಂಬ್‌ಲ್ (ಕ್ರಿ., ನಾ.) (ಕಡಿದಾದ ಅಥವಾ ಒರಟು ನೆಲದಲ್ಲಿ) ಕೈಕಾಲೂರಿ, ಅಂಬೆಗಾಲಿಡುತ್ತ—ಹತ್ತು, ಏರು, ಸಾಗಿಹೋಗು; ತೆವಳಿಕೊಂಡು, ದೇಕಿಕೊಂಡು, —ಹೋಗು ; (ಇತರರಿಗೆ ಬಿಡದೆ ಸಾಧ್ಯವಾದಷ್ಟನ್ನು ತಾನು ತೆಗೆದುಕೊಳ್ಳುವುದಕ್ಕಾಗಿ) ಹಿಗ್ಗಾ ಮುಗ್ಗಾ ಹೋರಾಡು, ಕಚ್ಚಾಡು (*For* ಉಪ. ದೊಡನೆ: S. for pennies, place, wealth, a living). (ನಾಣ್ಯ, ಮೊ. ನ್ನು) ಹೋರಾಟ ವಿಕ್ಕಿಸಲು, ಕಚ್ಚಾಟಕ್ಕಾಗಿ, —ಎರಚು, ಎಸೆ. (ಬಾಣಲೆಯಲ್ಲಿ ಹಾಲು ಬೆಣ್ಣೆಗಳೊಡನೆ) ಮೊಟ್ಟೆಯ ಲೋಳೆಯನ್ನು ಬೇಯಿಸು. (ನಾ.) ಅಂಬೆಗಾಲಿಡುತ್ತ, ದೇಕಿಕೊಂಡು —ಹತ್ತುವುದು, ಹೋಗುವುದು. ಮೇಲಾಟ, ಹೋರಾಟ, ಕಚ್ಚಾಟ (A s. for office). **Scrámblingly** (ಕ್ರಿ. ವಿ.)

Scran ಸ್ಕ್ರ್ಯಾನ್ (ನಾ.) (ಅಸಂ.) ಆಹಾರ ; ತಿಂಡಿ ; ತಿಂದುಳಿದ ಚೂರುಪಾರು. Bad s. to —*i* (ಆ್ಯಂಗ್ಲೊ ಐರಿಷ್) (—ಗೆ) ದುರದೃಷ್ಟ !

Scránnel ಸ್ಕ್ರ್ಯಾನೆಲ್ (ಗು.) (ಪ್ರಾಚೀ. ಪ್ರ.) (ಧ್ವನಿಯ ವಿಷಯದಲ್ಲಿ) ಸಣ್ಣ, ದುರ್ಬಲ, ಕೀರಲು, ಕರ್ಕಶ.

Scrap[1] ಸ್ಕ್ರ್ಯಾಪ್ (ನಾ., ಕ್ರಿ. ಸಕ.) ತುಂಡು, ತುಣುಕು, ಹರುಕು, ಮುರುಕು, ತುಕಡಿ, ಹೋಳು, ಚೂರು ; (ಬ. ವ.) ಹರುಕು ಮುರುಕು, ಚೂರುಪಾರು, ಕೆಲಸಕ್ಕೆ ಬಾರದ ಉಳಿಕೆ ಪಳಿಕೆ. (ಒಂದು ಸಂಗ್ರಹದಲ್ಲಿ ಸೇರಿಸಿಡುವುದಕ್ಕಾಗಿ ಪುಸ್ತಕದಿಂದ ಅಥವಾ ವೃತ್ತಪತ್ರಿಕೆಯಿಂದ) ಕತ್ತರಿಸಿ ತೆಗೆದ ಪ್ರಕರಣ, ಚಿತ್ರ (S.-book ಇಂಥವನ್ನು ಅಂಟಿಸಿಡುವ ಪುಸ್ತಕ : ಆಯ್ಕೆಯಂಟಿಸುವ ಪುಸ್ತಕ). [S. of paper (ತಿರಸ್ಕಾರವಾಗಿ): ಒಂದು ಕಾಗದದ ಚೂರು (ಸುಲಭವಾಗಿ ನಿರಾಕರಿಸಿಬಿಡಬಹುದಾದ ವಾಗ್ದಾನ, ಕರಾರು ಪತ್ರ, ಮೊ. ವು)]. ಕಸ, ಕಳಪೆ [S.-heap ಕಸದ ಗುಡ್ಡೆ, ತಿಪ್ಪೆ. S.-h. policy (ರೂಪ.) ನಿಷ್ಪ್ರಯೋಜಕವಾದುದನ್ನು ಒಡನೆಯೇ ತಿರಸ್ಕರಿಸುವ, ತಿಪ್ಪೆಗೆಸೆಯುವ, ನೀತಿ]. (ಮತ್ತೆ ಕರಗಿಸಿ ಉಪಯೋಗಿಸುವುದಕ್ಕಾಗಿ ಕೂಡಹಾಕಿದ) ಲೋಹದ ಚೂರುಪಾರು (=S.-iron, -metal). (ಏ. ವ. ಅಥವಾ ಬ. ವ.) ಮೀನಿನಿಂದ ಅಥವಾ ಕರಗಿಸಿದ ಕೊಬ್ಬಿನಿಂದ ಎಣ್ಣೆಯನ್ನು ಹಿಂಡಿದಮೇಲೆ ಉಳಿಯುವ ಚರಟ; ಹಿಂಡಿ (S.-cake ಮೀನಿನ ಹಿಂಡಿ). (ಕ್ರಿ.) ತಿಪ್ಪೆಗೆಸೆ, ತಿಪ್ಪೆಗೆ ಸೇರಿಸು ; (ಸವಕಲು ಯಂತ್ರ, ಮೊ. ನ್ನು) ಬಿಚ್ಚಿ ಮೂಲೆಗೆ ಹಾಕು ; (ಹಡಗು, ಸರಬರಾಯಿ, ಮೊ. ನ್ನು) ನಿರುಪಯೋಗವಾದದ್ದೆಂದು ಬೀಳುಗಳೆ, ಬಿಸಾಡು. (ರೂಪ.) ರದ್ದು ಮಾಡು. **Scráppy** (ಗು.) ಚೂರುಪಾರಾದ, ಹರುಕು ಮುರುಕಾದ ; ಚೂರುಪಾರುಗಳನ್ನು ಜೋಡಿಸಿ ಮಾಡಿದ ; ತೇಪೆಹಾಕಿದ. ಅಸಂಬದ್ಧ. **Scráppily** (ಕ್ರಿ. ವಿ.) ; **Scráppiness** (ನಾ.)

Scrap[2] ಸ್ಕ್ರ್ಯಾಪ್ (ನಾ., ಕ್ರಿ. ಅಕ.) (ಅಸಂ.) ಹೋರಾಟ, ಕಚ್ಚಾಟ, ಕಾದಾಟ (ಮು., ಪೂರ್ವೋದ್ದಿಷ್ಟವಲ್ಲದುದು) (Had a bit of a s. with —ಒಡನೆ ಕೊಂಚ ಕಾದಾಟವಾಯಿತು). (ಕ್ರಿ.) ಹೋರಾಡು, ಕಚ್ಚಾಡು, ಕಾದಾಡು.

Scrape ಸ್ಕ್ರೇಪ್ (ಕ್ರಿ., ನಾ.) ಹೆರೆದು, ಕೆರೆದು, —ಮಟ್ಟಮಾಡು, ನಯ ಮಾಡು, ಮೆರುಗು ಕೊಡು ; ಉಜ್ಜು, ತಿಕ್ಕು, ಹೆರೆ(ದುಹಾಕು), ಕೆರೆ(ದುಹಾಕು) (S. ship's bottom ಹಡಗಿನ ತಳಕ್ಕೆ ಅಂಟಿಕೊಂಡಿರುವ ಕಸಡಗಳನ್ನು ಕೆರೆದುಹಾಕು. S. one's chin ಗಡ್ಡ ಬೋಳಿಸಿಕೊ, ಕ್ಷೌರಮಾಡಿಕೊ. S. one's boots ಜೋಡಿನ ಅಟ್ಟೆಗೆ ಹತ್ತಿಕೊಂಡಿರುವ ಮಣ್ಣು, ಮೊ. ನ್ನು ಕೆರೆದುಹಾಕು. S. one's plate ತಟ್ಟೆಯನ್ನು ಬಳಿದು ತಿನ್ನು, ಚೊಕ್ಕಟ ಮಾಡು. S. away ಹೆರೆದುಹಾಕಿ ಬಿಡು, ಉಜ್ಜಿ ಉಜ್ಜಿ ಸಣ್ಣಗೆ ಮಾಡು. S. down=S. away ; ಸುತ್ತ ಕೆರೆದು, ಹೆರೆದು, —ಹಾಕು). (ಕರೆ, ಉಬ್ಬು, ಮೊ. ನ್ನು) ಉಜ್ಜಿಹಾಕು (*Off*, *out*, *away* ಉಪ. ದೊಡನೆ). (ಹೆರೆದು, ಕೆರೆದು, ಹಳ್ಳ) ತೋಡು, ಕೊರೆ (*Out* ಉಪ. ದೊಡನೆ). ಕರ ಕರ ಶಬ್ದವಾಗು ; —ಮಾಡು(ವಂತೆ ಎಳೆ); ಘರ್ಷಣೆ —ಮಾಡು, ಆಗು [S. one's feet (ಮನಸ್ಸಿನ ಒದ್ದಾಟದಿಂದ ಅಥವಾ ಭಾಷಣಕಾರನ ಮಾತು ಕೇಳದಂತೆ ಮಾಡುವುದಕ್ಕಾಗಿ) ಕಾಲು ಉಜ್ಜಿ ಕರ ಕರ ಶಬ್ದಮಾಡು ; (ಒಡ್ಡೊಡ್ಡಾಗಿ ವಂದನೆ ಮಾಡುವಲ್ಲಿ) ಕಾಲನ್ನು ಜಗ್ಗೆಂದು ಹಿಂದಕ್ಕೆಳೆದುಕೊ. S. bow across fiddle-strings, s. fiddle, *or* s. ಪಿಟೀಲು ಬಾರಿಸು, ನುಡಿಸು; —ಮೇಲೆ ಕಮಾನು ಎಳೆ]. ಉಜ್ಜುವಂತೆ, ಸೋಕುವಂತೆ, —ಹೋಗು ; ಸವರಿಕೊಂಡುಹೋಗು [S. against, along, the wall. S. through ಸ್ವಲ್ಪ ಗಾಸಿಪಟ್ಟು ಬಚಾವಾಗು, ನುಣುಚಿಕೊ, ಪಾರಾಗು ; (ಪರೀಕ್ಷೆ, ಮೊ ಗಳಲ್ಲಿ) ಸ್ವಲ್ಪದಲ್ಲಿ ತೇರ್ಗಡೆಯಾಗು (ಎಂಬಲ್ಲಿ ರೂಪ.)]. ಅಲ್ಲಿಷ್ಟು ಇಲ್ಲಿಷ್ಟು ಕೆರೆದು, ಮಿತವ್ಯಯದಿಂದ, ಕಷ್ಟಪಟ್ಟು, —ಕೂಡಹಾಕು, ಸಂಗ್ರಹಿಸು (ಸಾ., *up*, *together* ಉಪ. ದೊಡನೆ) (S.-penny ಕಾಸಿಗೆ ಕಾಸು ಗಂಟುಹಾಕಿ ಕೂಡಿಸುವವನು, ಜಿಪುಣ. S. acquaintance with ಪ್ರಯತ್ನಪಟ್ಟು, ಮೇಲೆಬಿದ್ದು ಹೋಗಿ, ಪರಿಚಯ ಸಂಪಾದಿಸು). ಮಿತವ್ಯಯವನ್ನು, ಹಿಡಿತವನ್ನು, ಅಭ್ಯಾಸಮಾಡು (Work & s. as one may). (ನಾ.) (ಕ್ರಿಯಾರ್ಥಗಳಲ್ಲಿ) ; ಕರ ಕರ ಶಬ್ದ, ಕರ ಕರನೆ ಕೆರೆಯುವುದು [A s. of the pen ಲೇಖನಿಯ ಗೀಚು (ಉದಾ., ಒಬ್ಬನ ರುಜು)]. ವಂದನೆ ಮಾಡುವಾಗಿನ ಕಾಲುಜ್ಜಾಟ; ಹಿಂದಕ್ಕೆ ಕಾಲುಜ್ಜಿ ಮಾಡುವ ನಮಸ್ಕಾರ. (ಮು., ಮನಸ್ವೀ ನಡತೆಯ ಫಲವಾಗಿ) ಇಕ್ಕಟ್ಟು, ತೊಂದರೆ. **Scráper** (ನಾ.) ; **Scráping** (ನಾ.)

Scratch[1] ಸ್ಕ್ರ್ಯಾಚ್ (ಕ್ರಿ., ನಾ., ಗು.) (ಉಗುರು, ಮೊನೆ, ಮೊ. ಗಳಿಂದ ಮೇಲೆ ಮೇಲೆ) ಗೀರು, ಗೀಚು, ಬಗರು, ಪರಚು [S. the surface of ಮೇಲೆ ಮೇಲೆ ಕೆದಕು ; ಒಳಹೊಕ್ಕು, ಆಳವಾಗಿ, ನೋಡದಿರು. S. a Russian and you find a Tartar (ನಾಗರಿಕತೆ ಮನುಷ್ಯನ ಸ್ವಭಾವವನ್ನು ಬದಲಾಯಿಸುವುದಿಲ್ಲ ಎಂಬ ಅರ್ಥದಲ್ಲಿ): ಸ್ವಲ್ಪ ಕೆಣಕಿದರೆ ಸಾಕು, ಒರಟುತನ ಕಾಣಿಸಿಕೊಳ್ಳುತ್ತದೆ. Stones scratched with rude letters *or* pictures ಒರಟು ಅಕ್ಷರಗಳನ್ನೊ ಚಿತ್ರಗಳನ್ನೊ ಗೀರಿರುವ ಕಲ್ಲುಗಳು]. ಗೀರಿಕೊ, ತರಚಿಕೊ (Have scratched my hands badly ನನ್ನ ಕೈಗಳು ಬಹಳ ತರಚಿಹೋಗಿವೆ). (ಅಕ್ಷರ, ಚಿತ್ರ, ಮೊ. ನ್ನು) ಗೀಚು, ಕುರುಕು; (ಕಂದಿ) ಕೊರೆ. (ನವೆ, ಮೊ. ನ್ನು ಪರಿಹರಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊಳ್ಳಲು) ಕೆರೆ, ತುರಿಸು [S. one's head (ಸಮಸ್ಯ ಬಗೆಹರಿಯದೆ) ತಲೆ ಕೆರೆದುಕೊ. S. my back and I will s. yours ನನ್ನನ್ನು ನೀನು ಹೊಗಳು, ನಿನ್ನನ್ನು ನಾನು ಹೊಗಳುತ್ತೇನೆ]. (ಹುಡುಕುವುದಕ್ಕಾಗಿ) ಕೆದಕು, ಬೆದಕು (S. about for stray seeds, evidence). (ಅಲ್ಲಷ್ಟು ಇಲ್ಲಷ್ಟು ಕೆರೆದು, ಉಳಿಸಿ) ಕೂಡಹಾಕು, ಸಂಗ್ರಹಿಸು (*Together*, *up* ಉಪ.ದೊಡನೆ). (ಬರೆದ ಮಾತು, ಪಟ್ಟಿಯಿಂದ ಹೆಸರು, ಮೊ. ನ್ನು) ಹೊಡೆದುಹಾಕು (*Out* or *through* ಉಪ. ದೊಡನೆ), (ಚಾಕುವಿನಿಂದ) ತರಚಿಹಾಕು, ಅಳಿಸಿಬಿಡು ; ಮೇಲೆ ಗೀಚೆಳೆದುಬಿಡು (*Off* ಉಪ. ದೊಡನೆ) ; (ಹೀಗೆ ಗೀಚೆಳೆದು ಕುದುರೆ, ಉಮೇದುವಾರ, ಮೊ. ನ್ನು ಒಂದು ಸ್ಪರ್ಧೆಯಿಂದ) ವಜಾಮಾಡು, ಹಿಂದಕ್ಕೆ ತೆಗೆದುಕೊ. [S. along (ಅಸಂ.) ಹಾಗೂ ಹೀಗೂ ತಳ್ಳಿಕೊಂಡುಹೋಗು ; ಹೇಗೋ ಕಷ್ಟಪಟ್ಟುಕೊಂಡು ಜೀವನಮಾಡು, ಕಾಲಹಾಕು]. (ನಾ.) ಗೆರೆ, ಗೀಟು; ಗೀರು, ಗೀಚು (ಸದ್ದು) [A s. of the pen (ಸುಲಭವಾಗಿ ಹಾಕಿದ ರುಜು, ಕೊಟ್ಟ ಅಪ್ಪಣೆ) : ಲೇಖನಿಯ ಒಂದು ಗೀಚು]. ಕೆರೆತ, ತುರಿಸಿಕೆ ; ನಸುಗಾಯ, ತರಚಿಕೆ (Got off with a s. or two ಸ್ವಲ್ಪ ಪರಚಿಸಿ ಕೊಂಡು ಪಾರಾದನು). (ಪಂದ್ಯದಲ್ಲಿ) ಸ್ಪರ್ಧಿಗಳು ಓಡಲು ಆರಂಭಿಸುವ ಗೆರೆ; ಪ್ರಾರಂಭಸ್ಥಾನ, ಪ್ರಾರಂಭದ ಗೆರೆ [Toe, come to, come up to, the s. ಸರಿಯಾದ ಕಾಲಕ್ಕೆ —ಬರು, ಕಾಣಿಸಿಕೊ ; ಹಿಂದೇಟು ಹಾಕದಿರು, ಹಿಂಜರಿಯದಿರು (ಅನೇಕ ವೇಳೆ ರೂಪ.). S.-race ಎಲ್ಲರಿಗೂ ಸಮಾನ ಅನುಕೂಲವಿರುವ ಪಂದ್ಯ : ಸಮಾನ ಪಂದ್ಯ (ಎದುರು ಪದ : Handicap). S. man *or* s. (ರಿಯಾಯಿತಿ ಪಂದ್ಯದಲ್ಲಿ) ಯಾವ ರಿಯಾಯಿತಿಯನ್ನೂ ಪಡೆಯದೆ ಆರಂಭದ ಗೆರೆಯ ಹತ್ತಿರ ನಿಂತಿರುವ ಸ್ಪರ್ಧಿ]. (ಬ. ವ.) ಹಿಮ್ಮಡಿಯ ಮೇಲುಗಡೆ ಒಣ ಬಿರಿತಗಳಾಗುವ ಒಂದು ಕುದುರೆಯ ರೋಗ. ತಲೆಯ ಒಂದು ಭಾಗವನ್ನು ಮಾತ್ರ ಮುಚ್ಚುವಂಥ ಕೂದಲಕುಲಾವಿ, ವಿಗ್ (=S. wig). [S. cat ಸೇಡಿನ—ಮಗು, ಹೆಂಗಸು ; ಸೇಡುಗಾತಿ. S.-work ಗೀರು ಅಲಂಕಾರ (Graffito ಪದದ ಎರಡನೆಯ ಅರ್ಥ ನೋಡಿ)]. (ಗು.) ಅಡ್ಡಾದಿಡ್ಡಿ ಯಾಗಿ ಕೂಡಹಾಕಿದ, ತೇಪೆ ಹಾಕಿದ, ಹೊಂದಿಕೆಯಿಲ್ಲದ, ಕಲಬೆರಕೆಯ (A s. crew, collection, team). **Scrátchy** (ಗು.) (ಚಿತ್ರ, ಮೊ. ಗಳ ವಿಷಯದಲ್ಲಿ) ಅಡ್ಡಾದಿಡ್ಡಿಯಾಗಿ ಮಾಡಿದ, ಗೀಚಿಹಾಕಿದ, ನಯ ನಾಜೂಕಿಲ್ಲದ ; (ಲೇಖನಿಯ ವಿಷಯದಲ್ಲಿ) ಕರ ಕರ ಸದ್ದು ಮಾಡುವ, ಕಾಗದದಲ್ಲಿ ಕಚ್ಚಿಕೊಳ್ಳುವ, ತರಕಲಾಗಿ ಬರೆಯುವ ; (ಕರಾಸಿಗಳ ತಂಡ, ಮೊ. ಗಳ ವಿಷಯದಲ್ಲಿ) ಪರಸ್ಪರ ಹೊಂದಿಕೆಯಿಲ್ಲದ, ಅವ್ಯವಸ್ಥೆಯ. **Scrátchily** (ಕ್ರಿ. ವಿ.) ; **Scrátchiness** (ನಾ.)

Scratch[2] ಸ್ಕ್ರ್ಯಾಚ್ (ನಾ.) Old S. ಸೈತಾನ.

Scrátchy, etc. **Scratch**[1] ನೋಡಿ.

Scrawl ಸ್ಕ್ರಾಲ್ (ಕ್ರಿ., ನಾ.) ಅವಸರವಸರವಾಗಿ, ಕೋಚು ಕೋಚಾಗಿ, ಬರೆ; ಗೀಚು; ಕುರುಕು; (ಹೀಗೆ ಕಾಗದ, ಮೊ. ಗಳ ಮೇಲೆಲ್ಲಾ) ಗೀಚಿ ಹಾಕು (*Over*, *all over* ಪದಗಳೊಡನೆ). (ನಾ.) ಗೀಚು ಬರವಣಿಗೆ, ಗೀಚಿಕೆ ; ಅವಸರವಾಗಿ ಬರೆದ (ಗೀಚಿದ) ಕಾಗದ.

Scray ಸ್ಕ್ರೇ (ನಾ.) ಒಂದು ಕಡಲ ಹಕ್ಕಿ.

Scream ಸ್ಕ್ರೀಮ್ (ಕ್ರಿ., ನಾ.) (ಹೆದರಿಕೆ, ನೋವು, ಮೊ. ಗಳಿಂದ) ಕಿರಿಚು, ಅರಚು, ಕೀರು, ಕಿರಲು, ಚೀರು, ಚೀತ್ಕರಿಸು ; (ಆವಿ ಎಂಜಿನು, ಮೊ. ವು) ಕೀಚಾಗಿ ಕೂಗು, ಶೀಟಿ ಹಾಕು. ಕಿರಲುನಗು ನಗು, ಕೇಕೆ ಹಾಕಿ ನಗು (S. with laughter. Screaming farce, fun ಪ್ರೇಕ್ಷಕರು ಕಿರಲುನಗು ನಗುವಂಥ ಪ್ರಹಸನ, ತಮಾಷೆ; ವಿಪರೀತ ತಮಾಷೆ). ಕಿರಿಚಿ ಹೇಳು, ಗಟ್ಟಿಯಾಗಿ ಕೂಗಿಕೊ (S. out a curse, order) [**Screámingly** (ಕ್ರಿ. ವಿ.)]. (ನಾ.) ಕಿರಿಚಿಕೆ ; ಚೀರಲು (ಧ್ವನಿ) ; ಚೀತ್ಕಾರ, ಅರಚಾಟ, ಚೀರಾಟ (Screams of pain, laughter ನೋವಿನ ಚೀರಾಟ, ನಗುವಿನ ಕಿರಲು). (ಅಸಂ.) ವಿಪರೀತ ನಗುವಿನ, —ತಮಾಷೆ, ವೈಚಿತ್ರ್ಯ. (ರೀತಿ, ಭಾವ, ಮೊ. ಗಳಲ್ಲಿ) ಅತಿರೇಕ, ಉತ್ಕಟತೆ. **Screámer** (ನಾ.) (ಕ್ರಿಯಾರ್ಥಗಳಲ್ಲಿ). ಹಲವು ಬಗೆಯ ಹಕ್ಕಿ. (ಅಸಂ.) ಕಿರಲುನಗು ಹುಟ್ಟಿಸುವ, ವಿಪರೀತ ನಗು ಬರಿಸುವ, —ಕಥೆ, ವಿಷಯ. (ಅಸಂ.) ಅಸಾಧಾರಣವಾದ, ಅತಿಸೊಗಸಾದ, ಝರ್ಜರಿ, —ಮಾದರಿ. **Screámy** (ಗು.) ; **Screámily** (ಕ್ರಿ. ವಿ.) ; **Screáminess** (ನಾ.)

Scree ಸ್ಕ್ರೀ (ನಾ.) (ಅನೇಕ ವೇಳೆ ಬ. ವ. ದಲ್ಲಿ ಪ್ರ.) ನಡೆದಾಗ ಕೆಳಕ್ಕೆ ಉರುಳಿಹೋಗುವ, ಜಾರಿ ಬೀಳುವ, ಕಿಗ್ಗಲ್ಲುಗಳು ; ಇವು ತುಂಬಿರುವ ಬೆಟ್ಟದ ಇಳಿಜಾರು.

Screech ಸ್ಕ್ರೀಚ್ (ಕ್ರಿ., ನಾ.) (ದಿಗಿಲು, ಸಿಟ್ಟು, ನೋವು, ಮೊ. ಗಳಿಂದ, (ಕರ್ಕಶವಾಗಿ) ಕಿರಿಚು, ಅರಚು, ಚೀರು, ಚೀತ್ಕಾರ ಮಾಡು (ಸಾ.) ಹಾಸ್ಯ ಪ್ರ., ಅಥವಾ ತಿರಸ್ಕಾರ ಪ್ರ.). (ನಾ.) ಚೀರಾಟ, ಚೀತ್ಕಾರ. S.-owl ಚೀರುಗೂಬೆ (ಉದಾ., Barn-owl ಜಾತಿ)

Screed ಸ್ಕ್ರೀಡ್ (ನಾ.) ಉದ್ದವಾದ ಬೇಸರ ಹಿಡಿಸುವ ಉಪನ್ಯಾಸ, ಲೇಖನ ; ಕಗ್ಗ (ಮು., ಗೋಳುಕರೆಯ, ದೂರಿನ, ಪಟ್ಟಿ). (ಯಾವ ದಪ್ಪಕ್ಕೆ ಗಿಲಾವು ಮಾಡಬೇಕೋ ಆ ದಪ್ಪದ ಗಿಲಾವು ತೊಡೆಯುವಂತೆ, ಸೂಚಕವಾಗಿ ಗೋಡೆಯ ಮೇಲ್ಮೈಯಲ್ಲಿ) ಅಲ್ಲಲ್ಲಿಗೆ ತೊಡೆದಿರುವ ಗಾರೆಯ, ಅಥವಾ ಬಿಗಿಸಿದ ಮರದ, ಲಂಬ ಪಟ್ಟಿ(ಗಳಲ್ಲೊಂದು) ; ಗಿಲಾವು (ಗಚ್ಚು) ಸೂಚಕ ಪಟ್ಟಿ.

Screen ಸ್ಕ್ರೀನ್ (ನಾ., ಕ್ರಿ. ಸಕ.) (ಕ್ರೈಸ್ತ ದೇವಾಲಯದ ಅಥವಾ ಕೊಟಡಿಯ ಒಂದು ಭಾಗವನ್ನು ಮತ್ತೊಂದು ಭಾಗದಿಂದ ಪೂರ್ತಿಯಾಗಿ ಮುಚ್ಚಿಬಿಡದೆ ಪ್ರತ್ಯೇಕಿಸುವ, ಸಾ., ಬಾಗಿಲುಳ್ಳ, ಮರದ ಅಥವಾ ಕಲ್ಲಿನ) ಅಡ್ಡ ತೆರೆ, ತಡಕೆ [Rood-s. (Rood ನೋಡಿ)]; ಅಡ್ಡಗೋಡೆ ; ತಡಕೆ—. ಅಂಗಳ, ಮೊ. ನ್ನು ಸುತ್ತುವರಿದ ಚಿತ್ರ ಬರೆದ ಗೋಡೆ. (ಅತಿಯಾದ ಶಾಖ, ಬೆಳಕು, ಗಾಳಿ, ಮೊ. ನ್ನು ತಡೆಗಟ್ಟುವ, ಅಥವಾ ಹೊರಗಿನ ದೃಷ್ಟಿಗೆ ಬೀಳದಂತೆ ತಡೆಯಾಗಿರುವ, ಸುಲಭವಾಗಿ ಒಯ್ಯಬಹುದಾದ) ತಟ್ಟಿ, ತೆರೆ, ನೆರಿಕೆ ; ಪರದೆ ; ಜವನಿಕೆ (Fire, window, folding, -s. ಬೆಂಕಿ ಮರೆ, ಕಿಟಕಿ ತೆರೆ, ಮಡಿಚು ನೆರಿಕೆ). (ಮು., ದೃಷ್ಟಿಗೆ ಬೀಳದಂತೆ) ಆಶ್ರಯಕೊಟ್ಟ ವಸ್ತು ; ಮನಸ್ಸಿನ ಉದ್ದೇಶವನ್ನು ಮರೆಮಾಡಲು ತಾಳಿದ ಮುಖಭಾವ, ಕೈಕೊಂಡ ಕಾರ್ಯಕ್ರಮ ; ಇವುಗಳಿಂದ ದೊರೆತ ರಕ್ಷಣೆ ; ಮರೆ ; ಆಚ್ಛಾದನೆ ; ಆಶ್ರಯ (Prepared the attack behind a s. of trees. Put on a s. of indifference. A cavalry s. ತಮ್ಮ ಕಡೆಯ ಮುಖ್ಯ ಸೈನ್ಯದೊಡನೆ ಶತ್ರು ಸೈನ್ಯದ ಅನ್ವೇಷಕ ದಳದವರು ಸಂಪರ್ಕ ಬೆಳಸಲು ಆಗದಂತೆ ತಡೆಯಾಗಿ ಒಡ್ಡುವ ರಾವುತ ದಳ: ರಾವುತ ದಳದ—ಮರೆ, ತಡೆ. Under s. of night ಇರುಳ ಮರೆಯಲ್ಲಿ). (ತಂತಿಯ ಜಾಲಂದರ ಹಾಕಿದ) ಪ್ರಕಟನೆಯ ಹಲಗೆ. ಚಲನಚಿತ್ರದ, ದೀಪಚಿತ್ರದ, ಛಾಯಾ ಚಿತ್ರದ, —ತೆರೆ, ಪರದೆ ; ಚಲನಚಿತ್ರ, ಚಲಚ್ಚಿತ್ರ. ವಿದ್ಯುಚ್ಛಕ್ತಿಯ ಅಥವಾ ಕಾಂತಶಕ್ತಿಯ ಚೋದನೆಯನ್ನು, ಇದೇ ರೀತಿಯ ಇತರ ಭೌತ ಪ್ರಕ್ರಿಯೆಗಳನ್ನು ತಡೆಗಟ್ಟುವ ವಸ್ತು : ನಿರೋಧಾವರಣ ; ಚೋದನ ನಿರೋಧಕ. (ಮು., ಕಲ್ಲಿದ್ದಲು, ಮೊ. ಗಳನ್ನು ಗಾತ್ರದ ಪ್ರಕಾರ ವಿಂಗಡ ಮಾಡಲು ಅನುಕೂಲವಾಗುವ) ದೊಡ್ಡ (ಕಂಡಿಗಳ)—ಜಲ್ಲಡಿ, ಒಂದರಿ ; ಸಾರಣಿಗೆ. (ಕ್ರಿ.) ಮರೆ —ಮಾಡು, ಅಗಿರು (*From* ಉಪ. ದೊಡನೆ) ; (ರೂಪ.) (ತಪ್ಪನ್ನು, ದೋಷವನ್ನು, ತನ್ನ ಮೇಲೆ ಹಾಕಿ ಕೊಂಡು ಅಥವಾ ಮತ್ತೊಬ್ಬನ ಮೇಲೆ ತಿರುಗಿಸಿ, ಒಬ್ಬನ) ದೋಷವನ್ನು ಮರೆಮಾಜು, ಮುಚ್ಚು ; (ಒಬ್ಬನನ್ನು ಶಿಕ್ಷೆಯಿಂದ, ಶತ್ರುವಿನಿಂದ, ತಪ್ಪಿಸುವುದಕ್ಕಾಗಿ) ರಕ್ಷಣೆ, ಆಶ್ರಯ, —ಕೊಡು (Exertions were made to s. him from justice). (ದೀಪಚಿತ್ರವನ್ನು, ಚಲನಚಿತ್ರವನ್ನು) ಪರದೆಯ ಮೇಲೆ ತೋರಿಸು. (ಕಲ್ಲಿದ್ದಲು, ಮೊ. ನ್ನು) ಜಲ್ಲಡಿ—ಹಿಡಿ, ಆಡು (Screened-coal ; Screenings ಜರಡಿಯಾಡಿ ಬಂದ ಕಸ, ಕಳಪೆ)

Screeve ಸ್ಕ್ರೀವ್ (ಕ್ರಿ. ಅಕ.) (ಅಸಂ.) ರಸ್ತೆಯ ಪಕ್ಕದ ನೆಲಗಟ್ಟಿನಮೇಲೆ ಚಿತ್ರಗಳನ್ನು ಬರೆ. **Screéver** (ನಾ.) ನೆಲಗಟ್ಟು ಚಿತ್ರಗಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Screw ಸ್ಕ್ರೂ (ನಾ.) ತಿರುಪು, ಮರಸುತ್ತು, ಮೊರೆ [Male *or* exterior s. (Male ನೋಡಿ). Female *or* interior s. (Female ನೋಡಿ). Wood-, common, s.]. ತಿರುಪಳಿ, ತಿರುಪು ಮೊಳೆ ; ಸ್ಕ್ರೂ ಮೊಳೆ ; ತಿರುಪು ಗುಬ್ಬಿಮೊಳೆ (=S.-bolt); (ಒತ್ತಡಕ್ಕಾಗಿ ಉಪಯೋಗಿಸುವ, ಮರದ ಅಥವಾ ಲೋಹದ) ತಿರುಪು ಯಂತ್ರ ಸಲಕರಣೆ ; ತಿರುಪೊತ್ತಿಗೆ. [Archimedean s. (Archimedean ನೋಡಿ). Endless *or* perpetual s. ಹಲ್ಲು ಚಕ್ರ ದೊಡನೆ ಕೂಡಿಕೊಂಡು ಅದಕ್ಕೆ ನಿರಂತರ ಚಲನೆ ಕೊಡುವ ತಿರುಪು ದಂಡ ; ನಿರಂತ(ರ) ತಿರುಪು. Differential *or* Hunter's s. ಭಿನ್ನ ಸೂತ್ರಾಂತರ ದೂರಗಳ ಎರಡು ತಿರುಪುಗಳು, ಒಂದರ ಸೂತ್ರದ ಹೊರ ಸುತ್ತು ಮತ್ತೊಂದರ ಸೂತ್ರದ ಒಳ ಸುತ್ತಿನಲ್ಲಿ ಚಲಿಸುವಂತೆ ಅಳವಟ್ಟಿದ್ದು, ಬಹಳ ಎತ್ತುಶಕ್ತಿಯುಳ್ಳ ತಿರುಪು ಯಂತ್ರ : ಭಿನ್ನಸೂತ್ರಾಂತರಗಳ ತಿರುಪು ಯಂತ್ರ. Left-handed s. ಎಡ ಸುತ್ತು, ಎಡಮುರಿ, —ತಿರುಪು ; Right-and-left s. ಒಂದು ಕೊನೆಯಲ್ಲಿ ಬಲಮುರಿ ಸುತ್ತುಗಳೂ ಮತ್ತೊಂದು ಕೊನೆಯಲ್ಲಿ ಎಡಮುರಿ ಸುತ್ತುಗಳೂ ಇರುವ ತಿರುಪು : ಎಡ ಬಲ (ಸುತ್ತು) ತಿರುಪು. Interrupted s. ಸೂತ್ರದ ಕೆಲವು ಭಾಗ ಗಳನ್ನು ಕತ್ತರಿಸಿಹಾಕಿರುವ ತಿರುಪು : ತೆರಪು ತಿರುಪು. Have a s. loose ಕೊಂಚ ಅತಂತ್ರವಾಗಿರು, ಐಬಾಗಿರು ; ಸ್ವಲ್ಪ ಮಿದುಳು ಕೆಟ್ಟಿರು. Put the s. on (ಮು., ಹಣ ಕೀಳುವುದು, ಭಯಪಡಿಸುವುದು, ಮೊ. ಕ್ಕಾಗಿ) ಬಲಾತ್ಕಾರಪಡಿಸು, ಒತ್ತಾಯಹಾಕು]. (ಹಡಗಿನ ಅಥವಾ ವಿಮಾನದ ಹಿಂಭಾಗದಲ್ಲಿ ಹೊರ ಚಾಚಿಕೊಂಡಿದ್ದು, ನೀರಿನಲ್ಲಿ ಅಥವಾ ವಾಯುವಿನಲ್ಲಿ ಮರಸುತ್ತಿನಂತೆ ತಿರುಗುವುದರಿಂದ ಚಲನೆ ಕೊಟ್ಟು ನಡ ಸುವ, ಸುರುಳಿಯಲಗುಗಳುಳ್ಳ) ತಿರುಪು ಚಾಲಕ (=S.-propeller) ; ತಿರುಪು (ಚಾಲಕ) ಹಡಗು [S. steamer (ಸಂಕ್ಷಿಪ್ತ: s.s.)]. (ತಿರುಪು ಮೊಳೆಯ) ಒಂದು ಸುತ್ತು (Give it another s. ಇನ್ನೊಂದು ಸುತ್ತು ತಿರುಗಿಸು, ಕೊಡು). (ಪಕ್ಕದಲ್ಲಿ ಹೊಡೆದ ಬಿಲಿಯರ್ಡ್ಸ್ ಚೆಂಡಿನಂತೆ ತಿರುಗುವ) ಓರೆಸುತ್ತು, ವಕ್ರಭ್ರಮಣ. (ಹೊಗೆಸೊಪ್ಪು, ಮೊ. ನ್ನು ಸುತ್ತಿಕೊಡುವ) ಶಂಕುವಿನಾಕಾರದ ಕಾಗದದ ಸಣ್ಣ ಪೊಟ್ಟಣ ; ಕಾಗದದ ಸುತ್ತು. ಜಿಪುಣ ; ಹಣ ಹಿಂಡುವವನು, ಸುಲಿಗೆಕೋರ. (ಅಸಂ.) ಸಂಬಳ, ಕೂಲಿ, ಜೀತ. **S. coupling** (ಕೊಳವೆಗಳ ಅಥವಾ ಸರಳುಗಳ ಕೊನೆಗಳನ್ನು ಸೇರಿಸುವ, ಕ್ರಮವಾಗಿ ಎರಡು ಕೊನೆಗಳಲ್ಲೂ ಎಡ ಬಲ ಒಳಸುತ್ತಿನ ತಿರುಪುಳ್ಳ) ತಿರುಪು—ಸೇರಿಕೆ, ಜೋಡಣೆ. **S.-cutter** ತಿರುಪು ಕೊಯ್ಯುವ ಸಲಕರಣೆ ; ತಿರುಪು ಕೊರಕ. **S.-driver** ತಿರುಪು ಮೊಳೆಯನ್ನು ತಿರುಗಿಸಿ ಬಿಗಿಸುವ ಸಲಕರಣೆ : ತಿರುಪುಳಿ, ತಿರುಗುಳಿ. **S.-eye** ದಾರ, ಮೊ. ನ್ನು ಹಾಯಿಸಲು ತಲೆಯಲ್ಲಿ ಕಣ್ಣು ಕೊರೆದಿರುವ ತಿರುಪು : ಕಣ್ಣು ತಿರುಪು. **S.-gear** ಹಲ್ಲು ಚಕ್ರದ ಅಥವಾ ಹಲ್ಲು ಕದಿರಿನ ಒಡನೆ ಕೂಡಿರುವ ಕೊನೆಯಿಲ್ಲದ ತಿರುಪು. **S.-hook** (ಮರದ ಪಟ್ಟಿಗೆ ತಿರುಪಿ ನಿಲ್ಲಿಸಲು ಅನುಕೂಲಿಸುವಂತೆ ಒಂದು ಕೊನೆಯಲ್ಲಿ ಸುತ್ತುಗಳಿರುವ, ಬಟ್ಟೆ, ಮೊ. ನ್ನು ತೂಗಹಾಕುವ) ತಿರುಪು ಕೊಕ್ಕೆ. **S.-jack** ದಟ್ಟವಾದ ಹಲ್ಲುಗಳನ್ನು ಬಿಡಿಸಿ ಸಮಾಂತರದಲ್ಲಿರಿಸುವ ಒಂದು ದಂತವೈದ್ಯ ಸಲಕರಣೆ. ತಿರುಪಿನ ಊರೆಯೆತ್ತಿಗೆ. **S. -pile** (ತಿರುಪಿ ಒಳಗಿಳಿಸಲು ಅನುಕೂಲಿಸುವಂತೆ ಕೆಳ ಕೊನೆಯಲ್ಲಿ ಸುತ್ತುಗಳಿರುವ) ತಿರುಪು ದಸಿ. **S.-pine** ಕೇದಗೆ, ತಾಳೆಗಿಡ. **S.-plate** ತಿರುಪು ಕೊಯ್ಯುವ ಅಚ್ಚನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳುವ ಒಂದು ಲೋಹಫಲಕ ಸಲಕರಣೆ ; ತಿರುಪು ಕೊಯ್ಯಲು (ಬೇರೆ ಬೇರೆ ವ್ಯಾಸಗಳ) ಕಂಡಿ ಅಚ್ಚು ಗಳನ್ನುಳ್ಳ ಉಕ್ಕಿನ ಲೋಹಫಲಕ ಸಲಕರಣೆ ; ತಿರುಪು (ಕೊರಕದ) ಫಲಕ. **S. press** ತಿರುಪಿನ ಒತ್ತು, ಮುದ್ರಣ, —ಯಂತ್ರ ; ತಿರುಪೊತ್ತಿಗೆ (ಮು., ಮುದ್ರಣಕಾರರೂ ಪುಸ್ತಕ ರಟ್ಟುಗಾರರೂ ಉಪ ಯೋಗಿಸುವಂಥದು). **S.-tap** ಒಳಸುತ್ತು ತಿರುಪುಗಳನ್ನು ಮಾಡುವ ಸಲಕರಣೆ. **S. valve** ತಿರುಪಿನ ಮೂಲಕ ಚಲಿಸುವ ಕವಾಟ, ಬಿರಡೆ: ತಿರುಪು—ಕವಾಟ, ಬಿರಡೆ. **S.-wheel** ಕೊನೆಯಿಲ್ಲದ ತಿರುಪಿನ ಚಕ್ರ. **S.-wrench** ತಿರುಪಿನ (ಅಥವಾ ತಿರುಪುಗಟ್ಟಿಯ) ತಲೆಗೆ ಅಡಕವಾಗುವ ಬಾಯಿರುವ, ತಿರುಪನ್ನು (ಅಥವಾ ತಿರುಪುಗಟ್ಟಿ ಯನ್ನು) ತಿರುಗಿಸಲನುಕೂಲಿಸುವ ಬಿಲ್ಮುಡಿಕೆ ; ತಿರುಪಿನಿಂದ ಚಲಿಸುವ ಚಲದವಡೆಗಳುಳ್ಳ ಬಿಲ್ಮುಡಿಕೆ ; ತಿರುಪು ಬಿಲ್ಮುಡಿಕೆ.

Screw (ಕ್ರಿ.) ತಿರುಪು ಮೊಳೆಯಿಂದ(ಗಳಿಂದ) ಬಂಧಿಸು, ಬಿಗಿಸು [S. up door ಬಾಗಿಲನ್ನು ಭದ್ರವಾಗಿ ಹಾಕಿಬಿಡು, ಮುಚ್ಚಿಬಿಡು (ಮು., ವಿ. ವಿ. ನಿ. ದಲ್ಲಿ ಹಾಸ್ಯಕ್ಕಾಗಿ). S. up person ವ್ಯಕ್ತಿಯನ್ನು ಒಳಗೆ ಕೂಡಿ ಬಾಗಿಲು ಭದ್ರಪಡಿಸು. (ರೂಪ.) ಬೋಧನೆ ಮಾಡಿ ಸರಿಪಡಿಸು, ಸರಿಪಡಿಸಿಕೊ. His head is screwed on the right way ಅವನು ಬುದ್ಧಿವಂತನಾಗಿದ್ದಾನೆ, ಮರ್ಮಜ್ಞನಾಗಿದ್ದಾನೆ]. (ತಿರುಪು ಮೊಳೆಯಂತೆ) ತಿರುಗಿಸು, ಸುತ್ತು (*Up* ಉಪ. ಜೊಡನೆ. ಪಿಟೀಲಿನ ಕಿವಿಗಳನ್ನು ತಿರುಪುವ ಸಂಬಂಧದಿಂದ) ; ಹೆಚ್ಚು ಬಿಗಿಮಾಡು ; ಹುರಿಗೊಳಿಸು (S. up one's courage ಮನಸ್ಸು ಗಟ್ಟಿಮಾಡಿಕೊ ; ಸ್ಥೈರ್ಯ ತಂದುಕೊ. The management wants screwing up ಆಡಳಿತದಲ್ಲ ಬಿಗಿ ಬೇಕು). ಬಲಾತ್ಕರಿಸು, ಒತ್ತಾಯಹಾಕು, ನಿರ್ಬಂಧಪಡಿಸು, ಪೀಡಿಸು. ಜಿಪುಣತನ ಮಾಡು, ಮುಷ್ಟಿ ಬಿಗಿಹಿಡಿ. (ಒಬ್ಬನಿಂದ ಒಪ್ಪಿಗೆ, ಹಣ, ಮೊ. ನ್ನು) ಬಲವಂತದಿಂದ ಕೀಳು, ಸುಲಿಗೆ ಮಾಡು (*Out of*); ತಿರಿಚು, ಕೊಂಕಿಸು, ಸಂಕುಚಿಸು, ವಕ್ರಮಾಡು (S. one's face into wrinkles. S. up one's eyes ಕಣ್ಣು ಕಿರಿದುಮಾಡು). (ತಿರುಪು ಮೊಳೆ) ತಿರುಗು, ಸುತ್ತು ; (ಉರುಳು ಚೆಂಡು, ಮನುಷ್ಯ) ಸುರುಳಿ ಸುತ್ತಿಕೊಂಡು, ಗಿರಕಿ ಹೊಡೆಯುತ್ತ, —ಹೋಗು ; ಗಿರಕ್ಕನೆ ಅಡ್ಡದಾರಿ ಹಿಡಿ. **Screẃable** (ಗು.); **Screwed** (ಗು.) (ಅಸಂ.) ಕುಡಿದು ಅಮಲೇರಿದ.

Screw[2] ಸ್ಕ್ರೂ (ನಾ.) ಕೆಟ್ಟ, ತುಂಟ, ಜೀರ್ಣವಾದ, —ಕುದುರೆ. **Screẃy** (ಗು.)

Scribáceous, Scríbble[2], **etc.** Scribe ನೋಡಿ.

Scríbble[1] ಸ್ಕ್ರಿಬ್'ಲ್ (ಕ್ರಿ. ಸಕ.) (ಉಣ್ಣೆ, ಹತ್ತಿ, ಮೊ. ನ್ನು) ಒರಟೊರಟಾಗಿ ಎಕ್ಕು, ಹಿಂಜು ; ಒರಟು ಎಕ್ಕು ಯಂತ್ರಕ್ಕೆ ಕೊಟ್ಟು ಹಾಯಿಸು. **Scríbbler**[1] (ನಾ.) ಒರಟು ಎಕ್ಕು ಯಂತ್ರ ; ಎಕ್ಕು ವವನು.

Scribe ಸ್ಕ್ರೈಬ್ (ನಾ., ಕ್ರಿ. ಸಕ.) (ವಿರ. ಪ್ರ.) ಬರೆಯುವವನು, ಬರವಣಿಗೆಗಾರ, ಲಿಪಿಕಾರ (Am no great s. ನಾನು ಒಳ್ಳೆಯ ಲೇಖಕನಲ್ಲ ; ನನ್ನ ಬರವಣಿಗೆ ಚೆನ್ನಾಗಿಲ್ಲ). (ಬೈಬಲ್) ಯೆಹೂದ್ಯ ಧರ್ಮ ಗ್ರಂಥಗಳ ಪ್ರಾಚೀನ ಪ್ರತಿಕಾರ ಮತ್ತು ಭಂಡಾರಿ ; ಯೆಹೂದ್ಯ— ಧರ್ಮಶಾಸ್ತ್ರಜ್ಞ, ಶಾಸ್ತ್ರಿ; (ಯೇಸು ಕ್ರಿಸ್ತನ ಕಾಲದಲ್ಲಿದ್ದು ಆತನ ಬೋಧೆಗಳನ್ನು ಪ್ರತಿಭಟಿಸುತ್ತಿದ್ದ) ಯೆಹೂದ್ಯ ನ್ಯಾಯಸೂತ್ರ ವ್ಯಾಖ್ಯಾ ಕಾರ, ನ್ಯಾಯಶಾಸ್ತ್ರಜ್ಞ. ದಾಖಲೆ ಅಧಿಕಾರಿ ; ಗುಮಾಸ್ತ ; ಕಾರ ಕೂನ. (ಹಾಸ್ಯ ಅಥವಾ ತಿರಸ್ಕಾರ ಪ್ರ.) ಬರಹಗಾರ, ಲೇಖಕ. ಗರಗಸ, ಮೊ. ಗಳಿಂದ ಕೊಯ್ಯುವುದಕ್ಕೆ ಮರ, ಇಟ್ಟಿಗೆ, ಮೊ. ಗಳ ಮೇಲೆ ಗೆರೆ ಗುರುತು ಮಾಡಲು ಅಥವಾ ಪೀಪಾಯಿ, ಮೊ. ಗಳ ಮೇಲೆ ಕೆತ್ತಿ ಬರೆಯಲು, ಉಪಯೋಗಿಸುವ ಮೊನೆ ಆಯುಧ : ಮೊನೆ, ಗೀರು, —ಕಂಬಿ; ಕಂಠ (=S.-awl). (ಕ್ರಿ.) (ಕಂಠ, ಮೊ. ಗಳಿಂದ) ಗುರುತು ಮಾಡು, ಗೆರೆ ಹಾಕು, ಗೀರು. [Scribing-compass (ವೃತ್ತಗಳನ್ನೆಳೆಯುವ) ಗೀರು ಕೈವಾರ. Scribing-iron ಕಂಠ, ಮೊನೆಕಂಬಿ]. ಬರೆ, ಲಿಪಿಮಾಡು; ಗುಮಾಸ್ತೆಯ ಕೆಲಸಮಾಡು. **Scribáceous** (ಗು.) (ವಿರ. ಪ್ರ.) ಬರವಣಿಗೆಯ ಹವ್ಯಾಸದ, ಲೇಖನಾಸಕ್ತ. **Scríbal** (ಗು.) ('ಕಂಠ' ಎಂಬ ಅರ್ಥ ವಿನಾ ನಾಮವಾಚಕದ ಅರ್ಥಗಳಲ್ಲಿ). **Scríber** (ನಾ.) ಗೀರು ಸಲಕರಣೆ, ಕಂಠ. **Scríbble**[2] ಸ್ಕ್ರಿಬ್'ಲ್ (ಕ್ರಿ., ನಾ.) (ಅಂದವಾದ ಬರವಣಿಗೆಗೆ ಅಥವಾ ವಾಕ್ಯರಚನೆಗೆ ಗಮನಕೊಡದೆ) ಅವಸರವಸರ ವಾಗಿ, ಅಸ್ಪಷ್ಟವಾಗಿ, —ಬರೆ(ದುಹಾಕು) ; ಗೀಚು, ಗೀಚಿಹಾಕು. (ಲೇಖನಗಳನ್ನು) ಯೋಚನೆಯಿಲ್ಲದೆ ಸುಮ್ಮನೆ ಬರ ಬರೆದು ಹಾಕು ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಳಪೆ ಲೇಖನಗಳನ್ನು ಬರೆ. (ಸ್ವಾರ್ಥಕ, ಹಾಸ್ಯ ಪ್ರ., ನಿರಭಿಮಾನದಿಂದ ಹೇಳಿಕೊಳ್ಳುವಲ್ಲಿ) ವೃತ್ತಪತ್ರಿಕೆಗೆ ಲೇಖನ ಗೀಚುವವನಾಗಿರು (ವೃತ್ತಪತ್ರಿಕಾ ಲೇಖಕನಾಗಿರು), ಗ್ರಂಥ ಗೀಚುವವನಾಗಿರು (ಗ್ರಂಥ ಕರ್ತನಾಗಿರು) (ತಿರಸ್ಕಾರ ಪ್ರ. ಸಹ). ಕವನ, ಮೊ. ನ್ನು ಬರೆ; ಬರಹಗಾರನಾಗಿರು. (Scribbling-paper, diary ತೋಚಿದ್ದನ್ನು ನೆನಪಿಗಾಗಿ ಗುರುತು ಹಾಕಿಕೊಳ್ಳುವ, ಕಾಗದ, ದಿನಚರಿ). (ನಾ.) ಅವಸರದ, ಅಲಕ್ಷ್ಯದ, ಕೋಚು ಕೋಚು, —ಬರವಣಿಗೆ, ಬರಹ; ಗೀಚು ಬರಹ; ಗೀಚು ಚೀಟಿ; ಗೀಚಿಕೆ. **Scríbblement** (ನಾ.) (ವಿರ. ಪ್ರ.) ಗೀಚು ಚೀಟಿಯಲ್ಲಿ ಗುರುತುಮಾಡಿದ್ದು; ಗೀಚಿಕೆ. **Scríbbler²** (ನಾ.)

Scrim ಸ್ಕ್ರಿಮ್ (ನಾ.) ಕುರ್ಚಿ, ಮೊ. ಗಳ ಮೆತ್ತೆಗೆ ಉಪಯೋಗಿಸುವ ಅಸ್ತರಿ ಬಟ್ಟೆ; (ಕಿಟಕಿಯ ತೆರೆ, ಮೊ. ಗಳಿಗಾಗಿ ಉಪಯೋಗಿಸುವ) ಹಗುರವಾದ ಒರಟು ಬಟ್ಟೆ; ತೆರೆ ಬಟ್ಟೆ.

Scrímmage ಸ್ಕ್ರಿಮಿಜ್, **Scrú-** ಸ್ಕ್ರ— (ನಾ.) ದೊಂಬಿ ಜಗಳ; ತುಮುಲು— ಕಾದಾಟ, ಬಡಿದಾಟ (ಸಾ., Scri-); (ರಗ್ಬೀ ಕಾಲ್ಚೆಂಡಾಟ) ನೆಲದಮೇಲೆ ಬಿದ್ದಿರುವ ಚೆಂಡಿಗೆ ಮುನ್ ಸಾಲಿನ ಆಟಗಾರರ ನುಗ್ಗುನೂಕಲು (ಸಾ., Scru-; ಸಂಕ್ಷಿಪ್ತ: Scrum)

Scrimp ಸ್ಕ್ರಿಂಪ್ (ಕ್ರಿ.) (ಆಹಾರ, ಹಣ, ಮೊ. ನ್ನು) ಹಿಡಿತದಿಂದ, ಜಿಪುಣತನದಿಂದ, —ಸರಬರಾಯಿ ಮಾಡು, ಒದಗಿಸು; ಜಿಪುಣತನ ಮಾಡು; ಬಿಗಿಹಿಡಿ. **Scrímpy** (ಗು.)

Scrímshank ಸ್ಕ್ರಿಂಷ್ಯಾಂಕ್ (ಕ್ರಿ. ಅಕ.) (ಸೈನಿಕ ಅಸಂ.) ಕೆಲಸಕ್ಕೆ— ಹಿಂದೆಗೆ, ಹಿಂದೇಟು ಹಾಕು; ಮೈಗಳ್ಳತನ ಮಾಡು. **Scrím-shanker** (ನಾ.) ಮೈಗಳ್ಳ.

Scrímshaw ಸ್ಕ್ರಿಂಷಾ (ಕ್ರಿ., ನಾ.) (ನಾವಿಕರ ವಿಷಯದಲ್ಲಿ, ಬೇಜಾರು ಪರಿಹಾರಕ್ಕಾಗಿ; ಕಪ್ಪೆಚಿಪ್ಪು, ದಂತ, ಮೊ. ಗಳ ಮೇಲೆ ಕೊರೆತದ ಅಥವಾ ಬಣ್ಣದ) ಚಿತ್ರ ಬಿಡಿಸು, ಅಲಂಕಾರ ಮಾಡು. (ನಾ.) ಹೀಗೆ ಚಿತ್ರ ಬಿಡಿಸಿದ, ಅಲಂಕರಿಸಿದ, —ಚಿಪ್ಪು, ದಂತ.

Scrínium ಸ್ಕ್ರೈನಿಯಂ (ನಾ., ಬ. ವ. -ia) (ರೋ. ಪ್ರಾ.) ಹಸ್ತಪ್ರತಿಗಳ ಸುರುಳಿ ಇಡುವ ಕೊಳವೆ ಪೆಟ್ಟಿಗೆ.

Scrip¹ ಸ್ಕ್ರಿಪ್ (ನಾ.) (ಪ್ರಾಚೀ. ಪ್ರ.) (ಭಿಕ್ಷುಕ, ಪ್ರಯಾಣಿಕ, ಯಾತ್ರಿಕ, ಮೊ. ರ) ಚೀಲ; ಜೋಳಿಗೆ.

Scrip² ಸ್ಕ್ರಿಪ್ (ನಾ.) (ಎಲ್ಲ ಕಂತುಗಳನ್ನೂ ಸಲ್ಲಿಸಿದಮೇಲೆ ವಿಹಿತ ಕ್ರಮದ ಬಂಡವಾಳದ ಪಾಲುಪತ್ರ ಪಡೆಯುವುದಕ್ಕೂ ಲಾಭಾಂಶ, ಮೊ. ನ್ನು ಪಡೆಯುವುದಕ್ಕೂ ಅಧಿಕಾರ ಕೊಡುವ, ಮೊದಲನ ಕಂತು ಪಾವತಿ ಮಾಡಿದಾಗ ಬ್ಯಾಂಕು ಅಥವಾ ಕಂಪೆನಿ ಕೊಡುವ) ತಾತ್ಕಾಲಿಕ, ಹಂಗಾಮಿ, —ರಸೀತಿ, ಪಾವತಿಪತ್ರ. (ಸಾಮೂಹಿಕವಾಗಿ) ಹಂಗಾಮಿ ಪಾವತಿ ಪತ್ರಗಳು [(Sub)scrip(tion receipt) ಎಂಬುದರ ಸಂಕ್ಷಿಪ್ತ]

Script ಸ್ಕ್ರಿಪ್ಟ್ (ನಾ.) (ನ್ಯಾ. ಶಾ.) ಮೂಲಪತ್ರ, ಅಸಲು ದಾಖಲೆ ('ಪ್ರತಿ'ಗೆ ಅಥವಾ ನಕಲಗೆ ವಿರುದ್ಧವಾಗಿ). ಕೈಬರವಣಿಗೆ, ಬರವಣಿಗೆ ಅಕ್ಷರ, ಹಸ್ತಾಕ್ಷರ (ಮುದ್ರಣಾಕ್ಷರ ಅಥವಾ ಅಚ್ಚು ಬರವಣಿಗೆಗೆ ವಿರುದ್ಧವಾಗಿ); ಕೈಬರವಣಿಗೆಯಂಥ ಮುದ್ರಣಾಕ್ಷರ. (ನಾಟಕಶಾಲೆಯ ಮಾತು) ಹಸ್ತಪ್ರತಿ. (ಚಲನಚಿತ್ರ) (ಕಥಾ ಸಾರಾಂಶ, ಪಾತ್ರ ವಿವರ, ದೃಶ್ಯಗಳ ಅಳವಡಿಕೆ, ಮೊ. ನ್ನೊಳಕೊಂಡ) ಲಿಪಿ ಪ್ರತಿ. **Scriptórium** ಸ್ಕ್ರಿಪ್ಟೋ(ಅ)ರಿಯಂ (ನಾ.) (ಮು., ಸಂನ್ಯಾಸಿ ಮಠದಲ್ಲಿ) ಬರವಣಿಗೆ ಕೋಣೆ, ಲೇಖನಶಾಲೆ.

Scrípture ಸ್ಕ್ರಿಪ್ಟ್ಯೂರ್, —ಚರ್ (ನಾ.) ಬೈಬಲ್; ಕ್ರೈಸ್ತವೇದ (Holy S., the Scriptures); ಬೈಬಲ್ ವಾಕ್ಯ, ಶ್ರುತಿ ವಾಕ್ಯ (A, the, s.); (ವಿಶೇಷಣವಾಗಿ) ಬೈಬಲ್ಲಿನಿಂದ ಉದ್ಧರಿಸಿದ, ಬೈಬಲ್ಲಿನ (A s. text, lesson). (ಕ್ರೈಸ್ತೇತರರ) ಪವಿತ್ರ ಗ್ರಂಥ; ಮತ, ಧರ್ಮ, ಶಾಸ್ತ್ರ, —ಗ್ರಂಥ; ಶ್ರುತಿ. (ಪ್ರಾಚೀ. ಪ್ರ.) ಬರಹ, ಲಿಪಿ; ಹಸ್ತಪ್ರತಿ; ಆದರ್ಶ —ಸೂಕ್ತಿ, ವಾಕ್ಯ. S.-reader ಬಡವರ ಮನೆಗಳಿಗೆ ಹೋಗಿ ಬೈಬಲ್ ಓದಿ ಹೇಳುವವನು: ಬೈಬಲ್— ಪಾಠಕ, ವಾಚಕ. **Scríptural** (ಗು.) ಬೈಬಲ್, ಶ್ರುತಿ, —ಸಂಬಂಧವಾದ, ಸಮ್ಮತವಾದ, ಆಧಾರವುಳ್ಳ (A s. doctrine). **Scrípturalism** (ನಾ.) ಬೈಬಲ್ಲನ್ನು ಅಕ್ಷರಶಃ ಅನುಸರಿಸುವುದು: ಬೈಬಲ್ ನಿಷ್ಠೆ. **Scrípturalist** (ನಾ.); **Scrípturally** (ಕ್ರಿ. ವಿ.); **Scrípturalness** (ನಾ.)

Scrívener ಸ್ಕ್ರಿವ್‌ನರ್ (ನಾ.) (ಚರಿತ್ರೆ) ಬರಹದ ಕಸಬಿನವನು; ಬರಹಗಾರ; ರಾಯಸದವನು; ಗುಮಾಸ್ತೆ, ಕಾರಕೂನ [S.'s palsy (ಆಧುನಿಕ ಪ್ರ.) ಬರಹಗಾರರ ಕೈ ಸೆಡೆತ]. ಕರಾರು, ದಸ್ತೈವಜು, ಮೊ. ಗಳನ್ನು ಬರೆಯುವ ಅಧಿಕಾರಿ; 'ನೋಟರಿ' ಎಂಬ ಪ್ರಮಾಣ ಪತ್ರಾಧಿಕಾರಿ. ದಳ್ಳಾಳಿ; ಸರಾಫ; ಸಾಲ ಕೊಡುವವನು; ಸಾಲಿಗ.

Scrobículate ಸ್ಕ್ರೊಬಿಕ್ಯುಲೆಟ್, **-lated** —ಲೇಟೆಡ್ (ಗು.) (ಸ. ವಿ., ಪ್ರಾ. ವಿ.) ಕುಳಿ ಕುಳಿಯಾದ; ಕುಳಿಗಳಿರುವ; ಸುಕ್ಕುಗಳಿರುವ.

Scrófula ಸ್ಕ್ರಾಫ್ಯುಲ (ನಾ.) ಗ್ರಂಥಿಗಳು ಊದಿಕೊಂಡು ಕ್ಷಯ ಪ್ರವೃತ್ತಿಯುಳ್ಳ ದೇಹಸ್ಥಿತಿ: ಗಂಡಮಾಲೆ. **Scrófulous** (ಗು.); **Scrófulously** (ಕ್ರಿ. ವಿ.); **Scrófulousness** (ನಾ.)

Scroll ಸ್ಕ್ರೋಲ್ (ನಾ., ಕ್ರಿ.) ಚರ್ಮಕಾಗದದ ಸುರುಳಿ; ಸುರುಳಿ (ಯಾಕಾರದ)— ಪುಸ್ತಕ, ಗ್ರಂಥ. (ಪ್ರಾಚೀ. ಪ್ರ.) (ಹೆಸರು) ಪಟ್ಟಿ. (ಕರಡು) ಪ್ರತಿ (Preserve the s. of a letter). (ವಾಸ್ತುಶಿಲ್ಪ, ಮೊ. ಗಳಲ್ಲಿ) ಸುರುಳಿಯಲಂಕಾರ; ಆವರ್ತ, ಸುರುಳಿ ಮೂತಿ (ಪಿಟೀಲಿನ ಹಿಡಿ, ಕುರ್ಚಿ, ಮೊ. ಗಳಲ್ಲಿಯದು); (ಬರವಣಿಗೆಯಲ್ಲಿ, ರುಜುವಿನ ಜೊತೆಗೆ ಎಳೆಯುವ) ಕೊಂಕು ಗೆರೆಯ, ಸುರುಳಿಯಂಥ —ವೈಖರಿ; ಠೀವಿ ಗೆರೆ. ವಂಶಲಾಂಛನ ಸೂಕ್ತಿಯನ್ನು ಕೆತ್ತಿದ ಬಿರುದು ಪಟ್ಟಿ(ಯ ಸುರುಳಿ). ಆವರ್ತ ರೇಖಾ ವಿನ್ಯಾಸ; ಸುರುಳಿ —ಚಿತ್ರ, ಚಿತ್ರಾಲಂಕಾರ. [**S.-bone** ಬುಗುರಿಯಾಕಾರದ, ಸುರುಳಿ ಸುತ್ತಿದ, ಮೂಗಿನ ಎಲುಬು. **S.-gear** ಸುರುಳಿ ಹಲ್ಲು ಚಕ್ರದ ಚಾಲಕ. **S.-head** ಹಡಗಿನ ಮೂತಿಯಲ್ಲಿಯ ಸುರುಳಿಯಲಂಕಾರ; ಸುರುಳಿ ತಲೆ. **S.-lathe** ಸುರುಳಿ ಕೆಲಸದ —ಚರಕಿ, ಕಡೆತದ ಯಂತ್ರ. **S.-saw** ಚಿತ್ರಗೆಲಸದ, ಸುರುಳಿ ಕೆಲಸದ,— ಗರಗಸ. **S.-wheel** ಸುರುಳಿ ಸಾಲುಗಳಲ್ಲಿ ಹಲ್ಲುಗಳನ್ನು ಅಳವಡಿಸಿರುವ, ತಟ್ಟೆಯಾಕಾರದ, ಹಲ್ಲುಚಕ್ರ: ಸುರುಳಿ ಹಲ್ಲುಚಕ್ರ. **S.-work** ಸುರುಳಿ (ಚಿತ್ರ) ಕೆಲಸ (ಮು., ಸುರುಳಿ ಕೆಲಸದ ಗರಗಸದಿಂದ ಕೊಯ್ದು ಬಿಡಿಸಿದ್ದು)]. (ಕ್ರಿ.) (ವಿರ. ಪ್ರ.) ಕಾಗದದಂತೆ ಸುರುಳಿ —ಸುತ್ತು, ಸುತ್ತಿಕೊ; ಸುರುಳಿಗಳಿಂದ ಅಲಂಕಾರಮಾಡು; ಸುರುಳಿಯಲಂಕಾರ ಮಾಡು (ಮು., ಭೂ. ಕ್ಯ. ನಲ್ಲಿ)

Scroop ಸ್ಕ್ರೂಪ್ (ನಾ., ಕ್ರಿ. ಅಕ.) ಕರ ಕರ ಶಬ್ದ(ಮಾಡು); ಕಿರುಗುಟ್ಟು(ವ ಶಬ್ದ); (ರೇಷ್ಮೆಯ ಉಡುಪಿನಂತೆ) ಮುರು ಮುರು ಶಬ್ದ (ಮಾಡು)

Scrótum ಸ್ಕ್ರೋಟಮ್ (ನಾ.; ಬ. ವ. -ta —ಟ) ವೃಷಣಕೋಶ. **Scrótal** (ಗು.); **Scrotítis** (ನಾ.) ವೃಷಣಕೋಶದ ಉರಿಯೂತ. **Scrótocele** (ನಾ.) —ಅಂಡವಾಯು.

Scrounge ಸ್ಕ್ರಾಂಜ್ (ಕ್ರಿ.) (ಅಸಂ.) ಪತ್ತೆಯಿಲ್ಲದೆ, ಹೇಳದೆ ಕೇಳದೆ, —ಎತ್ತಿಕೊಂಡು ಹೋಗು; ಎಗರಿಸು; ಅಪಹರಿಸು. (ಹೊತ್ತು ಹಾಕಲು) ಹುಡುಕಾಡು, ಹೊಂಚುಹಾಕು. **Scroúnger** (ನಾ.)

Scrub¹ ಸ್ಕ್ರಬ್ (ನಾ.) ಕುರುಚಲು, ಪೊದೆ (—ಬೆಳೆದ ಪ್ರದೇಶ). ಸವೆದುಹೋದ, ಮೊಂಡು, —ಪೊರಕೆ, ಉಜ್ಜುತೊಡಪ; ಮೋಟ, ಮೊಂಡು, —(ಬಿರುಗೂದಲ), ಮಿಾಸೆ. ಗುಜ್ಜು, ಗಿಡ್ಡ, —ಪ್ರಾಣಿ, ಸಸ್ಯ; ತರಕಟಾಲು, ಕ್ಷುದ್ರ, —ಮನುಷ್ಯ; ಕರಟಲ; ಅನಾಮಧೇಯ. S.-oak ಅಮೆರಿಕದ ಗಿಡ್ಡ ಜಾತಿಯ ಓಕ್ ಮರ. **Scrúbby** (ಗು.); **Scrúbbiness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Scrub[2] ಸ್ಕ್ರಬ್ (ಕ್ರಿ., ನಾ.) (ಮು., ಸಾಬೂನು ನೀರು ಹಾಕಿ) ಉಜ್ಜು, ತಿಕ್ಕು; ಉಜ್ಜಿ, ತಿಕ್ಕಿ, —ತೊಳೆ. ಪೊರಕೆ ಹಿಡಿ (Would rather s. for my living ಪೊರಕೆ ಹಿಡಿದು, ಮುಸುರೆ ತಿಕ್ಕಿ, ಜೀವನ ಸಂಪಾದಿಸಿ ಯೇನು). ಜೀತ ಬಡಿ, ಕತ್ತೆ ಚಾಕರಿ ಮಾಡು. ಕಲ್ಲಿದ್ದಲ ಅನಿಲ ವನ್ನು ಸೋಸು; —ಅನಿಲದಿಂದ (ಕೆಲವು ವಸ್ತುಗಳನ್ನು) ತೆಗೆ. (ನಾ.) ಉಜ್ಜುವುದು, ತಿಕ್ಕುವುದು (Give it a good s.). ಮೊಂಡ— ಪೊರಕೆ, ಬರಲು, ಉಜ್ಜುತೊಡಪ. ಕತ್ತೆಚಾಕರಿಯವನು. **Scrúbber** (ನಾ.) (ಕ್ರಿಯಾರ್ಥಗಳಲ್ಲಿ). ನೀರನ್ನು ಸಿಂಪಡಿಸಿ ಕಲ್ಲಿದ್ದಲ ಅನಿಲ ವನ್ನು ಸೋಸುವ ಸಲಕರಣೆ; ಮಾರ್ಜಕ. **Scrúbbing** (ನಾ.)

Scruff ಸ್ಕ್ರಫ್ (ನಾ.) ಕುತ್ತಿಗೆಯ ಹಿಂಭಾಗ; ಹಿಂಗತ್ತು; ಹೆಗ್ಗತ್ತು; ಹೆಡಕು [Take by the s. of the neck ಹಿಂಗತ್ತನ್ನು ಹಿಡಿ(ದು ಎತ್ತು, ಎಳೆ)]

Scrúmmage. **Scrimmage** ನೋಡಿ.

Scrúmptious ಸ್ಕ್ರಂಪ್ಷಸ್ (ಗು.) (ಅಸಂ.) ಸೊಗಸಾದ, ಭರ್ಜರಿ ಯಾದ, ಭೇಷಾದ, ಮೇಲ್ತರದ.

Scrunch = Crunch.

Scrúple ಸ್ಕ್ರೂಪ್‌ಲ್ (ನಾ., ಕ್ರಿ.) (ಔಷಧ ವ್ಯಾಪಾರಿಗಳ ತೂಕದಲ್ಲಿ) ೨೦ ಗ್ರೇನು ತೂಕ. (ಪ್ರಾಚೀ. ಪ್ರ.) ಲವ, ಲೇಶ. (ಕಾರ್ಯ ನಡಸು ವುದರ ಅಥವಾ ಅದಕ್ಕೆ ಒಪ್ಪಿಗೆಕೊಡುವುದರ ನೀತಿ, ಔಚಿತ್ಯ, ಮೊ. ಗಳ ಬಗ್ಗೆ ಮನಸ್ಸಿನ) ನಚ್ಚು, ಶಂಕೆ, ಅಳುಕು; ಅಧರ್ಮಭೀತಿ; ಧರ್ಮ ಸೂಕ್ಷ್ಮತೆ; ಮನಸ್ಸಾಕ್ಷಿಯ ಆಕ್ಷೇಪಣೆ (Make no s. to do ಮಾಡಲು ಅಳುಕದಿರು; ನಿರಾತಂಕ ಮನಸ್ಸಿನಿಂದ ಮಾಡು. Man of no scruples ಯಾವ ಅಳುಕೂ ಇಲ್ಲದವನು; ಯಾವುದಕ್ಕೂ ಹೇಸದವನು). (ಕ್ರಿ.) ಶಂಕೆಪಡು, ಅಳುಕು (ವಿರ. ಪ್ರ.); (ಮನಸ್ಸಾಕ್ಷಿಯ ಆಕ್ಷೇಪಣೆ ಯಿಂದ) ಹೇಸು, ಹಿಂಜರಿ, ಹಿಂದೆಗೆ, ಹಿಂದು ಮುಂದು ನೋಡು (Would s. lying, a lie. Does not s. to say ಹೇಳಲು ಹಿಂದು ಮುಂದು ನೋಡುವುದಿಲ್ಲ, ಹಿಂಜರಿಯುವುದಿಲ್ಲ). **Scrúpulous** ಸ್ಕ್ರೂಪ್ಯುಲಸ್ (ಗು.) ಯಾವುದರಲ್ಲೂ ಅಸಮಾಧಾನಕ್ಕೆಡೆಗೊಡದಂತೆ ಎಚ್ಚರಿಕೆಯುಳ್ಳ; ಸೂಕ್ಷ್ಮ ವಿವರಗಳಿಗೂ ಗಮನಕೊಡುವ; ಬಹು ಎಚ್ಚರಿಕೆಯ; ಅತ್ಯಂತ, —ನಿಷ್ಠೆಯ, ಕಟ್ಟುನಿಟ್ಟಿನ; ಚಚು ತಪ್ಪದ (S. persons. S. honesty, cleanliness, care, method, respect, attention). ಅಲ್ಪ ವಿವರಗಳಿಗೂ (ಮು., ಆತ್ಮಸಾಕ್ಷಿಯ ಸಣ್ಣ ಪುಟ್ಟ ಅಂಶಗಳಿಗೂ) ಅತಿಗಮನ ಕೊಡುವ; ವಿಪರೀತ ಅಳುಕಿನ. **Scrúpulously** (ಕ್ರಿ. ವಿ.); **Scrúpulousness** (ನಾ.); **Scrúpulósity** ಸ್ಕ್ರೂಪ್ಯುಲಾಸಿಟಿ (ನಾ.) ಅಳುಕು(ವುದು) (Avoid a needless s. of conscience)

Scrutátor ಸ್ಕ್ರುಟೇಟರ್ (ನಾ.) ಸೂಕ್ಷ್ಮದರ್ಶಿ, ಶೋಧಕ, ಅನ್ವೇಷಕ (ಮು., ವೃತ್ತಪತ್ರಿಕೆಗಳಲ್ಲಿ ಬರುವ ಲೇಖನಗಳ ಕೆಳಗೆ ಹಾಕುವ ಸಂಕೇತ ನಾಮವಾಗಿ)

Scrutineér, Scrútinize, etc. **Scrutiny** ನೋಡಿ.

Scrútiny ಸ್ಕ್ರೂಟಿನಿ (ನಾ.) ವಿಮರ್ಶಕ ದೃಷ್ಟಿ, ಸೂಕ್ಷ್ಮಪರಿಶೀಲನೆ, ಪರಿಶೋಧನೆ, ಕೂಲಂಕಷ ಪರೀಕ್ಷೆ, ತನಿಖೆ. ಪ್ರತಿಸ್ಪರ್ಧಿಗಳಿಗೆ ಬಹು ಸಮೀಪ ಸಂಖ್ಯೆಯ ಮತಗಳು (Votes) ಬಂದು ಅಥವಾ ಅಕ್ರಮ ನಡೆದಿದೆ ಎಂದು ಶಂಕೆ ತೋರಿ, ಮತಗಳ ಪರಿಶೀಲನೆ ಅಪೇಕ್ಷಣೀಯ ವೆಂದು ಕಂಡುಬಂದಾಗ ಅಧಿಕಾರಪೂರ್ವಕವಾಗಿ ನಡಸುವ ಶೋಧನೆ: ಮತ —ಶೋಧನೆ, ತನಿಖೆ (Demand a s.). **Scrutineér** (ನಾ.) (ಕ್ರಿಯಾರ್ಥಗಳಲ್ಲಿ); ಮತ —ಶೋಧಕ, ತನಿಖೆಗಾರ. **Scrútinize** (ಕ್ರಿ. ಸಕ.) ಸೂಕ್ಷ್ಮವಾಗಿ ಪರಿಶೀಲಿಸು, ಪರಿಶೋಧಿಸು, ತನಿಖೆಮಾಡು. **Scrútinizingly** (ಕ್ರಿ. ವಿ.)

Scry ಸ್ಕ್ರೈ (ಕ್ರಿ. ಅಕ.) (ಮಣಿ ವೀಕ್ಷಣದಲ್ಲಿ) ಮಣಿ ನೋಡು (Crystal ಪದದ ಕೆಳಗೆ Crystal-gazing ನೋಡಿ). **Scrýer** (ನಾ.)

Scud ಸ್ಕಡ್ (ಕ್ರಿ. ಅಕ., ನಾ.) (ಸುಲಭ ಸರಾಗ ಚಲನೆಯಿಂದ) ನೇರ ವಾಗಿ ಜೋರಾಗಿ ಓಡು, ಹಾರು; ತೇಲಿಕೊಂಡು ಹೋಗು. (ನಾವೆ) ಗಾಳಿಯ ಮುಂದೆ ಓಡು. (ನಾ.) ಜೋರು —ಓಟ, ಹಾರಿಕೆ; ಗಾಳಿಯಿಂದ ಚೆದರಿ ಓಡುತ್ತಿರುವ ಮುರುಕು ಮೋಡಗಳು; ಓಟದ ತೇಲು ಮೋಡಗಳು.

Scúdo ಸ್ಕ್ಯೂ(ಸ್ಕೂ)ಡೊ (ನಾ.; ಬ. ವ. -di —ಡೀ) ಸುಮಾರು ೪ ಷಿ. ಬೆಲೆಯ, ಇಟಲಿಯ ಒಂದು ಹಳೆಯ ಬೆಳ್ಳಿಯ ನಾಣ್ಯ. ಇಟಲಿಯ ೫ ಫ್ರಾಂಕು ನಾಣ್ಯ.

Scuff[1] ಸ್ಕಫ್ (ಕ್ರಿ. ಅಕ.) ಕಾಲೆಳೆದುಕೊಂಡು ನಡೆ.

Scuff[2] ಸ್ಕಫ್ (ನಾ.) ಹಿಂಗತ್ತು, ಹೆಡಕು (ಈಗ ಸಾ., Scruff)

Scúffle ಸ್ಕಫ್‌ಲ್ (ಕ್ರಿ. ಅಕ., ನಾ.) (ಮು., ಒಬ್ಬರನ್ನೊಬ್ಬರು ತಳ್ಳಾಡುವ) ನೂಕುನುಗ್ಗಲಿನ —ಜಗಳ, ಹೋರಾಟ, ಬಡಿದಾಟ; ತುಮುಲ (Above the s. of provincial and unprofessional annoyances). (ಕ್ರಿ.) ಹೀಗೆ ಕಾದಾಡು, ಹೋರಾಡು, ಬಡಿದಾಡು.

Scug ಸ್ಕಗ್ (ನಾ.) (ಪಾಠಶಾಲೆಯ ಅಸಂ.) ಕೆಚ್ಚು, ಸಮಾಜಪ್ರಿಯತೆ, ನಡತೆ, ಕ್ರೀಡಾಸಕ್ತಿ, ಮೊ. ಗಳಿಲ್ಲದವನು; ಯಾವೊಂದು ವಿಶಿಷ್ಟ ಗುಣವೂ ಇಲ್ಲದವನು; ಗೂಬೆ (ರೂಪ.)

Scull (ನಾ., ಕ್ರಿ.) (ಒಂಟಿ ಹುಟ್ಟುಕಾರನು ಉಪಯೋಗಿಸುವ ಜೋಡಿ ಹುಟ್ಟುಗಳಲ್ಲೊಂದಾದ) ಸಣ್ಣ ಹಗುರ ಹುಟ್ಟು; ದೋಣಿಯ ಹಿಂತುದಿ ಯಲ್ಲಿಯ ಹಿಡಿಕೆಯಲ್ಲಿ ಆಳವಟ್ಟು, ಹಡಗಿನ ತಿರುಪಿನಂತೆ, ತಿರಿಚು ವರಿಸೆಗಳಿಂದ ನಡಸುವ, ಉದ್ದ ಹುಟ್ಟು. (ಕ್ರಿ.) ಇಂಥ ಹುಟ್ಟುಗಳಿಂದ (ದೋಣಿ) ನಡಸು, ಹುಟ್ಟುಹಾಕು. **Scúller** (ನಾ.) ಇಂಥ ಹುಟ್ಟು ಹಾಕುವವನು; ಇಂಥ ಹುಟ್ಟಿನ ದೋಣಿ.

Scúllery ಸ್ಕಲರಿ (ನಾ.) (ಅಡಿಗೆಯ ಮನೆಗೆ ಸೇರಿದ) ಮುಸುರೆ ತೊಳೆ ಯುವ, ತಟ್ಟೆ ಬಟ್ಟಲು ತೊಳೆಯುವ, —ಕೋಣೆ.

Scúllion ಸ್ಕಲ್ಯನ್ (ನಾ.) (ಪ್ರಾಚೀ. ಪ್ರ., ಕಾವ್ಯ, ಅಲಂ.) ಅಡಿಗೆ ಯವನ ಆಳು; ಮುಸುರೆ ತಿಕ್ಕುವ, ತಟ್ಟೆ ತೊಳೆಯುವ, ಆಳು; (ಸುತ್ತುಗೆಲಸದ) ಮಾಣಿ; ಪರಿಚಾರಕ.

Sculp ಸ್ಕಲ್ಪ್ (ಕ್ರಿ. ಸಕ.) (ಬಳ. ಮಾ.) = Sculpture.

Scúlpsit (L) ಸ್ಕಲ್ಪ್‌ಸಿಟ್ (ಕ್ರಿ., ಪ್ರಥಮ ಪುರುಷ ಏ. ವ. ಭೂತಕಾಲ; ಸಂಕ್ಷಿಪ್ತ: Sc., Sculps.) (ಇಂಥವನು) ಕೆತ್ತಿದನು, ಕೊರೆದನು, ರೂಪಿಸಿದನು. **Sculpsérunt** (L) —ಸಿಯರಂಟ್ (ಕ್ರಿ., ಪ್ರಥಮ ಪುರುಷ ಬ. ವ. ಭೂತ ಕಾಲ; ಸಂಕ್ಷಿಪ್ತ: Sc., Sculps). (ಇಂಥವರು) ಕೆತ್ತಿದರು, ಕೊರೆದರು, ರೂಪಿಸಿದರು.

Scúlptor. **Sculpture** ನೋಡಿ.

Scúlpture ಸ್ಕಲ್ಪ್‌ಚ್ಯುರ್, —ಚರ್ (ನಾ., ಕ್ರಿ.) ಶಿಲೆ, ದಾರು, ಜೇಡಿ, ಅಥವಾ ಲೋಹ —ಇವುಗಳಿಂದ ರೂಪಿಸಿ ಆಕೃತಿ ಕೊಡುವ ಕಲೆ; ಶಿಲ್ಪ (ಕಲೆ); ಮೂರ್ತಿ ಶಿಲ್ಪ; ಶಿಲ್ಪಕೃತಿ, ಕೆತ್ತನೆ (ಕೆಲಸ). (ನ. ವಿ., ಪ್ರಾ. ವಿ.) (ಚಿಪ್ಪು, ಮೊ. ಗಳ ಮೇಲಿನ) ಉಬ್ಬು ಗುರುತು ಅಥವಾ ತಗ್ಗು ಗುರುತು. (ಕ್ರಿ.) ಶಿಲ್ಪ ಕೆತ್ತು; ಶಿಲ್ಪ ಕೆಲಸಮಾಡು. ಶಿಲ್ಪದಲ್ಲಿ ರೂಪಿಸು; ಶಿಲ್ಪಾಲಂಕಾರ ಮಾಡು. (ನ. ವಿ., ಪ್ರಾ. ವಿ.) (ಭೂ. ಕೃ.) ಉಬ್ಬು, ತಗ್ಗು, —ಗುರುತುಗಳುಳ್ಳ. **Scúlptor** (ನಾ.) ಶಿಲ್ಪಿ; ಮೂರ್ತಿಕಾರ; ರೂವಾರಿ. **Scúlptress** (ನಾ., ಸ್ತ್ರೀ.); **Scúlptural** (ಗು.); **Scúlpturally** (ಕ್ರಿ. ವಿ.); **Sculpturésque** (ಗು.) ಶಿಲ್ಪದಂತೆ ಕಾಣುವ, ಶಿಲ್ಪ ಗುಣಗಳುಳ್ಳ; ಸ್ಪಷ್ಟಾಕಾರದ; ಗಂಭೀರಮುದ್ರೆಯ.

Scum ಸ್ಕಂ (ನಾ., ಕ್ರಿ.) (ಮು., ದ್ರವಗಳನ್ನು ಕುದಿಸುವಾಗ ಅಥವಾ ಹುದುಗೇಳುವಾಗ ಮೇಲೆ ತೇಲುವ) ಕಸ, ಕಲ್ಮಷ, ನೊರೆ, ಬುರುಗು; (ಲೋಹ ಕರಗಿಸುವಾಗ ಬರುವ) ಕಿಟ್ಟ, ಮಷ್ಟು. (ರೂಪ.) ಕಳಪೆ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೀಳುಮಂದಿ ; ತುಚ್ಛ, ನೀಚ, —ಜನ. (ಕ್ರಿ.) ಕಸ, ಕೊಳೆ, —ತೆಗೆ, ಬಾಚಿಹಾಕು; (ದ್ರವದ ಮೇಲುಗಡೆ) ಕಸ, ಕೊಳೆ, —ಕಟ್ಟು; (ದ್ರವ) ಪೊರೆಗಟ್ಟು. **Scúmmy** (ಗು.)

Scúmble ಸ್ಕಂಬ್‌ಲ್ (ಕ್ರಿ. ಸಕ., ನಾ.) ಅಪಾರದರ್ಶಕ ವರ್ಣದ ತೆಳು ತೊಡೆತದಿಂದ (ತೈಲಚಿತ್ರದ) ಮಿರು ಬಣ್ಣ ತಗ್ಗಿಸು, ಶಮನಮಾಡು; ಹೊಳಪು —ತಗ್ಗಿಸು, ಕುಂದಿಸು. (ನಾ.) ಹೊಳಪು ಶಮನ(ಮಾಡುವುದು); ಬಣ್ಣದ ತಗ್ಗು.

Scúncheon ಸ್ಕನ್ಷನ್,—ಚನ್ (ನಾ.) ಮೇಲಿನ ಅಷ್ಟಕೋನ ಗೋಪುರದ ಎಂಟು ಪಾರ್ಶ್ವಗಳಲ್ಲಿ ಒಂದು ಬಿಟ್ಟು ಒಂದರಂತೆ ಬರುವ ನಾಲ್ಕು ಪಾರ್ಶ್ವಗಳಿಗೆ ಆಧಾರವಾಗಿರಲು, ಕೆಳಗಿನ ಚೌಕನೆಯ ಗೋಪುರದ ಮೂಲೆಗಳಲ್ಲಿ ಅಡ್ಡಲಾಗಿಟ್ಟ ಕಲ್ಲು ಅಥವಾ ಕಮಾನು(ಗಳಲ್ಲೊಂದು): ಮೂಲೆ —ಚಪ್ಪಡಿ, ಕಮಾನು. ಬಾಗಿಲ ಅಥವಾ ಕಿಟಕಿಯ ತೆರಪಿನಲ್ಲಿ ಗೋಡೆಯ ಒಳಪೋರೆ, ಒಳಯೇಣು.

Scúpper[1] ಸ್ಕಪರ್ (ನಾ.) (ಹಡಗಿನ ಅಟ್ಟದಿಂದ ನೀರನ್ನು ಹೊರ ಸಾಗಿಸಲು ಪಕ್ಕದಲ್ಲಿ ಮಾಡಿರುವ) ಹಡಗಿನ ನೀರುಗಂಡಿ, ತೂಬುಗಂಡಿ.

Scúpper[2] ಸ್ಕಪರ್ (ಕ್ರಿ. ಸಕ.) (ಅಸಂ.) (ಇದ್ದಕ್ಕಿದ್ದಹಾಗೆ ಮೇಲೆಬಿದ್ದು) ಕೊರೆಮಾಡು; (ಹಡಗನ್ನು, ಕರಾಸಿಗಳನ್ನು) ಮುಳುಗಿಸು. ಧ್ವಂಸಮಾಡು; ನಿಪಾತವೆಬ್ಬಿಸು.

Scurf ಸ್ಕರ್ಫ್ (ನಾ.) (ಕೆಳಗಡೆ ಹೊಸ ಚರ್ಮ ಹುಟ್ಟಿದಹಾಗೆಲ್ಲ ಮೇಲುಗಡೆ ಉದುರುತ್ತಹೋಗುವ ನತ್ತ ಚರ್ಮದ) ಹುರುಪು; ಹಗರು; (ಮು.) ತಲೆಯ —ಹೊಟ್ಟು, ಸಿಬ್ಬು, ಸಿಂಡು (=Dandruff). (ಮೇಲುಗಡೆ ಕಟ್ಟುವ) ಪೊರೆ, ಹಕ್ಕು, ಹಕ್ಕಳೆ, ಶಲ್ಕ. **Scúrfy** (ಗು.); **Scúrfiness** (ನಾ.)

Scúrrilous ಸ್ಕರಿಲಸ್, (ಪ್ರಾಚೀ. ಪ್ರ.) **Scúrril(e)** ಸ್ಕರಿಲ್ (ಗು.) (ಮನುಷ್ಯನ ಅಥವಾ ಭಾಷೆಯ ವಿಷಯದಲ್ಲಿ) ಥಂಡ, ದುರ್ಭಾಷೆಯ, ಅಶ್ಲೀಲ; ಕೀಳು, ಅಶ್ಲೀಲ, —ಹಾಸ್ಯದ. **Scúrrilously** (ಕ್ರಿ. ವಿ.); **Scurrílity** (ನಾ.)

Scúrry ಸ್ಕರಿ (ಕ್ರಿ. ಅಕ., ನಾ.) (ಸಣ್ಣ ಬಿರು ಹೆಜ್ಜೆಗಳಿಂದ) ದಿಕ್ಕಾಬಟ್ಟೆ ಓಟ(ಕೀಳು) (The scurrying mice). ಇಂಥ ಓಟದ ಸದ್ದು.

Scúrvy ಸ್ಕರ್ವಿ (ಗು., ನಾ.) ಕೀಳು, ತುಚ್ಛ, ಕ್ಷುದ್ರ, ಕುತ್ಸಿತ (A s. trick, fellow). (ನಾ.) ಒಸಡು ಊದುವುದು, ದೇಹ ಅತಿದುರ್ಬಲವಾಗುವುದು, ಬಾಯಿ ದುರ್ವಾಸನೆ ಹೊಡೆಯುವುದು, ಚರ್ಮ ಬೊಕ್ಕೆ ಏಳುವುದು, ಕೈಕಾಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು, ಮೊ. ಲಕ್ಷಣಗಳುಳ್ಳ, ನಾವಿಕರಿಗೂ ಉಪ್ಪೂರಿದ ಮಾಂಸ ತಿನ್ನುತ್ತ ಸಾಕಷ್ಟು ಕಾಯಿಪಲ್ಯ ಬಳಸದವರಿಗೂ ಬರುವ ಒಂದು ರಕ್ತರೋಗ: ರಕ್ತಪಿತ್ತ (ವ್ಯಾಧಿ). S.-grass ರಕ್ತಪಿತ್ತಕ್ಕೆ ಪರಿಹಾರಕವಾಗಿ ಉಪಯೋಗಿಸುವ (ಸಾಸವೆ ಜಾತಿಗೆ ಸೇರಿದ) ಒಂದು ಸಸ್ಯ. **Scúrvied** (ಗು.) ರಕ್ತಪಿತ್ತ ವ್ಯಾಧಿ ತಗುಲಿದ; —ಯಿಂದ ನರಳುವ. **Scúrvily** (ಕ್ರಿ. ವಿ.) ನಿಕೃಷ್ಟವಾಗಿ, ಸಣ್ಣತನದಿಂದ.

Scut ಸ್ಕಟ್ (ನಾ.) (ಮೊಲ, ಜಿಂಕೆ, ಮೊ. ಗಳ) ಮೋಟು ಬಾಲ.

Scútage ಸ್ಕ್ಯೂಟ(ಟಿ)ಜ್ (ನಾ.) (ಚರಿತ್ರ) ಊಳಿಗಮಾನ್ಯದ ಹಿಡುವಳಿದಾರನು ತನ್ನ ಒಡೆಯನಿಗೆ ಸೇವೆಯ ಬದಲು ಸಲ್ಲಿಸುವ ಹಣ; ಸೇವೆ ಹಣ; ಊಳಿಗ ತೆರ.

Scutch ಸ್ಕಚ್ (ಕ್ರಿ. ಸಕ., ನಾ.) (ನೆನಸಿದ ಸಣಬು, ಮೊ. ನ್ನು) ಚೆಚ್ಚಿ, ಬಡಿದು, —ಎಳೆ ಬಿಡಿಸು; ನಾರು ಬಿಡಿಸು. ತೆನೆ —ಒಕ್ಕು, ಬಡಿ. (S.-blade, scutching-sword ನಾರು ಬಿಡಿಸುವ ಕತ್ತಿ). (ನಾ.) ನಾರು ಬಿಡಿಸುವ (ಯಂತ್ರದ) ಮುಳ್ಳು ಸಲಕರಣೆ (=Scutcher). (ಸಣಬು ಬಡಿದಾಗ ಬರುವ) ಒರಟು ನಾರು, —ಎಳೆ. **Scútcher** (ನಾ.) ನಾರು ಬಿಡಿಕೆ (ಯಂತ್ರ); ತೆನೆ ಬಡಿಯುವ ಯಂತ್ರ ಭಾಗ; ತೆನೆ, ನಾರು, —ಬಡಿಯುವವನು.

Scútcheon ಸ್ಕಚನ್ (ನಾ.)=Escutcheon; ವಂಶಲಾಂಛನ ಖೇಟಕ.

Scute. **Scutum** ನೋಡಿ.

Scutéllum ಸ್ಕ್ಯುಟೆಲಮ್ (ನಾ.; ಬ. ವ. -lla) (ಪ್ರಕೃತಿ ಚರಿತ್ರೆ) ಸಸ್ಯಗಳು, ಕೀಟಗಳು, ಪಕ್ಷಿಗಳು, ಮೊ. ಗಳಲ್ಲಿಯ ಗುರಾಣಿಯಾಕಾರದ ಫಲಕ, ಶಲ್ಕ, ಪೊರೆ; (ಮು.) ಹಕ್ಕಿಯ ಕಾಲಿನ ಕೊಂಬು ಪದಾರ್ಥದ ಪೊರೆ: ಕಾಯಿ, ಗಂಟು. **Scútellate(d)** (ಗು.) —ಉಳ್ಳ. **Scutéllar** (ಗು.) —ಉಳ್ಳ; —ಗೆ ಸಂಬಂಧಪಟ್ಟ. **Scutellátion** (ನಾ.) ಶಲ್ಕದಂಥ, ಕಾಯಿಯಂಥ, —ರಚನೆ.

Scútter ಸ್ಕಟರ್ (ಕ್ರಿ. ಅಕ.) ದಿಕ್ಕಾಬಟ್ಟೆ ಪುಟಪುಟನೆ ಓಡು, ಪರೆದಾಡು, ಹರಿದಾಡು.

Scúttle[1] ಸ್ಕಟ್‌ಲ್ (ನಾ.) ಅಡಿಗೆಗೆ ಕಲ್ಲಿದ್ದಲು ತಂದಿಟ್ಟುಕೊಳ್ಳುವ ಸಣ್ಣ—ತೋಡುಕ್ಕೈ, ತೊಟ್ಟಿ (=Coal-s.); (ಬಾಯಿ ಅಗಲವಾಗಿಯೂ ತಳ ಕಿರಿದಾಗಿಯೂ ಇರುವ) ಹೆಡಗೆ, ಗೆರಸೆ, ಕುಕ್ಕೆ.

Scúttle[2] ಸ್ಕಟ್‌ಲ್ (ನಾ., ಕ್ರಿ. ಸಕ.) (ಮನೆಯ ಗೋಡೆಯಲ್ಲಿ ಅಥವಾ ಸೂರಿನಲ್ಲಿ, ಹಡಗಿನ ಅಟ್ಟದಲ್ಲಿ ಅಥವಾ ಪಕ್ಕದಲ್ಲಿ ಮಾಡಿರುವ) ಮುಚ್ಚಳಗಂಡಿ, ಸರಕಿಳಿಸುವ ಕಂಡಿ, ಕಂಡಿ ಮುಚ್ಚಳ; ಬೆಳಕುಗಂಡಿ, ಗವಾಕ್ಷ. (S.-butt, -cask ಸಾ., ಹಡಗಿನ ಅಟ್ಟದಮೇಲೆ ಕುಡಿಯುವ ನೀರನ್ನು ತುಂಬಿ ಇಟ್ಟಿರುವ, ನೀರನ್ನು ತೊಟ್ಟಿಯಲ್ಲಿ ಎತ್ತಿಕೊಳ್ಳಲು ಮುಚ್ಚಳದಲ್ಲಿ ಚೌಕ ಕಂಡಿ ಮಾಡಿರುವ, ನೀರ ತೊಟ್ಟಿ, ಪೀಪಾಯಿ: ಹಡಗಿನ ಕುಡಿಯುವ ನೀರಿನ—ತೊಟ್ಟಿ, ಪೀಪಾಯಿ). (ಕ್ರಿ.) (ಮು., ಮುಳುಗಿಸಿಬಿಡುವುದಕ್ಕಾಗಿ) ಹಡಗಿನಲ್ಲಿ ಕಂಡಿ, ತೂತು, —ಕೊರೆ, ಮಾಡು; ಹಡಗನ್ನು ಕಂಡಿ ಕೊರೆದು ಮುಳುಗಿಸು.

Scuttle[3] ಸ್ಕಟ್‌ಲ್ (ಕ್ರಿ. ಅಕ., ನಾ.) ಅವಸರವಾಗಿ ಓಡು, ಓಡಾಡು, ಧಾವಿಸು; ಓಡಿಹೋಗು; (ಅಸಂ.) (ಅಪಾಯಕ್ಕೆ, ಕಷ್ಟಕ್ಕೆ, ಎದೆಗೊಟ್ಟು ನಿಲ್ಲದೆ) ಓಟಕೀಳು, ಪಲಾಯನ ಮಾಡು; (ಆಕ್ರಮಿಸಿಕೊಂಡಿರುವ ದೇಶವನ್ನು ಬಿಟ್ಟು) ತರಾತುರಿಯಾಗಿ ವಾಪಸು ಹೋಗು. (ನಾ.) (ಕ್ರಿಯಾರ್ಥಗಳಲ್ಲಿ); ಅವಸರದ ನಡಗೆ, ಓಟ, ವಾಪಸು.

Scútum ಸ್ಕ್ಯೂಟಂ (ನಾ., ಬ. ವ. -ta —ಟ) (ರೋ. ಪ್ರಾ.) (ಸೈನಿಕನ ದೀರ್ಘಚತುರಸ್ರಾಕಾರದ, ಅಂಡಾಕಾರದ ಅಥವಾ ಅರೆಯುರುಳೆಯಾಕಾರದ) ಗುರಾಣಿ, ಅಡ್ಡಣ. (ಅಂ. ರ. ಶಾ.) ಮಂಡಿಚಿಪ್ಪು. (ಪ್ರಾ. ವಿ.; ಮೊಸಳೆ, ಆಮೆ, ಮೊ. ಗಳ) ಗುರಾಣಿಯಂಥ, ಕೊಂಬು ಪದಾರ್ಥದ ಫಲಕ, ಪೊರೆ, ಶಲ್ಕ (=**Scute**). **Scúted** (ಗು.) ಗುರಾಣಿಯ; ಗುರಾಣಿಯಾಕಾರದ. **Scútiform** (ಗು.) ಗುರಾಣಿಯಾಕಾರದ.

Scýlla ಸಿಲ (ನಾ.) ಸಿಸಿಲಿ ದ್ವೀಪದ ಕರೆಯಲ್ಲಿಯ ಕರಿಬ್ಡಿಸ್ ಎಂಬ ಅಪಾಯಕರವಾದ ಸಮುದ್ರದ ಸುಳಿಗೆ ಎದುರಾಗಿ ಇಟಲಿಯ ಕರೆಯಲ್ಲಿರುವ ಒಂದು ಅಪಾಯಕರವಾದ ಅರೆಬಂಡೆ. (ಗ್ರೀಕ್ ಪುರಾಣ) ಈ ಬಂಡೆಯ ಮೇಲಿರುವನೆಂದು ಹೇಳುತ್ತಿದ್ದ, ಆರು ತಲೆಗಳುಳ್ಳ ಒಬ್ಬ ಸಮುದ್ರ ರಾಕ್ಷಸ. Between S. & Charybdis (Charybdis ನೋಡಿ)

Scýphus ಸ್ಕೈಫಸ್ (ನಾ., ಬ. ವ. -phi —ಫೈ) (ಗ್ರೀಕ್ ಪ್ರಾಚೀನ) ಕಾಲಿಲ್ಲದ, ಎರಡು ಹಿಡಿಗಳುಳ್ಳ, ದೊಡ್ಡ ಕುಡಿಯುವ ಬಟ್ಟಲು. (ಸ. ವಿ.) ಬಟ್ಟಲಾಕಾರದ ಭಾಗ; ಪುಷ್ಪ, ಬೀಜ, —ಮುಕುಟ. **Scýphose** —ಫೋಸ್ (ಗು.) ಬಟ್ಟಲಾಕಾರದ ಭಾಗಗಳುಳ್ಳ; ಮುಕುಟಾಂಗಗಳುಳ್ಳ. **Scýphi-** (ಸ. ಪೂ. ಪ.)

Scythe ಸೈದ್ (ನಾ., ಕ್ರಿ. ಸಕ.) (ಹುಲ್ಲು, ಬೆಳೆ, ಮೊ. ನ್ನು ಕೊಯ್ಯಲು ಉಪಯೋಗಿಸುವ, ಸುಮಾರು ೫ ಅಡಿ ಉದ್ದದ ಕೊಂಕು ಕೋಲಿಗೆ ಜೋಡಿಸಿರುವ, ನಸು ಬಾಗಿದ ಉದ್ದ ಅಲಗುಳ್ಳ) ಕೊಯ್ಲುಗತ್ತಿ, ಕುಡುಗೋಲು; ಕೋಲ್ಗತ್ತಿ. ಪುರಾತನ ಯುದ್ಧ ರಥದ ಅಚ್ಚಿಗೆ ಎರಡು ಕೊನೆಗಳಲ್ಲೂ ಜೋಡಿಸಿದ್ದ ಕತ್ತಿಯಲಗು. (ಕ್ರಿ.) —ಇಂದ ಕೊಯ್ಯಿ. **Scýthed** (ಗು.) ಕೊಯ್ಲುಗತ್ತಿಯುಳ್ಳ; ಕೊಯ್ಲುಗತ್ತಿಯಲಗುಳ್ಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Scýthian ಸಿದಿ(ತಿ)ಯನ್ (ಗು., ನಾ.) (ಕಪ್ಪು ಸಮುದ್ರದ ಉ. ಪ್ರದೇಶ ದಲ್ಲಿದ್ದ) ಪುರಾತನ ಸಿಥಿಯ ದೇಶದ(ವನು). (ಸಮೇಟಿಕ್ ಅಥವಾ ಇಂಡೋ ಯೂರೋಪಿಯನ್ ವರ್ಗದಿಂದ ಭಿನ್ನವಾದ ಏಷ್ಯಾ ಖಂಡದ ಒಂದು ಭಾಷಾ ವರ್ಗವಾದ) ಸಿಥಿಯನ್ ಭಾಷಾ ವರ್ಗ.

'sdeath ಸ್ಡೆತ್ (ಭಾವ. ಅವ್ಯ.) (ಪ್ರಾಚೀ. ಪ್ರ.) ಕೋಪ, ಆಶ್ಚರ್ಯ, ಮೊ. ನ್ನು ಸೂಚಿಸುವ ಪದ (God's death ಎಂಬುದರ ಸಂಕ್ಷಿಪ್ತ)

Se- (ಪೂ. ಪ್ರ.) 'ಇಲ್ಲದೆ, ಪ್ರತ್ಯೇಕ' ಎಂಬ ಅರ್ಥದ ಲ್ಯಾಟಿನ್ ಪ್ರತ್ಯಯ (Secede, Seclude)

Sea ಸೀ (ನಾ.) ಕಡಲು, ಸಮುದ್ರ, ಸಾಗರ, ಮುನ್ನೀರು (ಗ್ರಾಂ.) [On the sea ಸಮುದ್ರದ ಮೇಲೆ, ಹಡಗಿನಲ್ಲಿ ; ಸಮುದ್ರ ತೀರದಲ್ಲಿ, ಕರಾವಳಿಯಲ್ಲಿ. Go to s., Follow the s. ನಾವಿಕನಾಗು, ನಾವಿಕ ವೃತ್ತಿ ಅವಲಂಬಿಸು. Put to s. ತೀರ, ರೇವು —ಬಿಟ್ಟು ಹೊರಡು, ಬಿಡು. Arm of the s. (ಆಳವಾದ) ಸಮುದ್ರ —ಶಾಖೆ, ಚಾಚು; ಖಾರಿ. At s. (ಮು., ನೆಲ ಕಾಣದಷ್ಟು) ತೀರದಿಂದ ದೂರ ದಲ್ಲಿ; ಸಮುದ್ರ ಮಧ್ಯದಲ್ಲಿ. (ರೂಪ.) ದಿಗ್ಭ್ರಾಂತನಾಗಿ, ದಿಕ್ಕುತೋಚದೆ, ನೆರೆ ತಪ್ಪಿ. Between devil and deep s. (Devil ನೋಡಿ). There's as good fish in the s. as ever came out of it (Fish[1] ನೋಡಿ). When the s. gives up its dead ಅಂತಿಮ ಮಹಾ ವಿಚಾರಣೆಯ ದಿನ ; ಎಲ್ಲ ಜೀವರುಗಳ ಪುನರುತ್ಥಾನವಾದಾಗ ; ಪ್ರಳಯವಾದಾಗ. Beyond, over, s. *or* seas ಸಮುದ್ರದ ಆಚೆಯ ದೇಶದಲ್ಲಿ, ದೇಶಕ್ಕೆ ; ದೇಶಾಂತರದಲ್ಲಿ, ದೇಶಾಂತರಕ್ಕೆ. The high seas ಕರೆಯಿಂದ ಮೂರು ಮೈಲಿ ಬಿಟ್ಟು ಉಳಿದ ಸಮುದ್ರ ಭಾಗ ; ಸಾರ್ವಜನಿಕ ಸಮುದ್ರ ಭಾಗ ; ನಡುಗಡಲು. Mistress of the s. *or* seas ಪ್ರಧಾನ ನೌಕಾಬಲವುಳ್ಳ ರಾಜ್ಯ : ಕಡಲ ರಾಣಿ. Inland s. ನೆಲ ಸುತ್ತುವರಿದ ಕಡಲು : ಒಳನಾಡ ಕಡಲು (ಉದಾ., ಕ್ಯಾಸ್ಪಿಯನ್ ಸಮುದ್ರ) ; (ವಿರ. ಪ್ರ.) ಸೀನೀರಿನ ದೊಡ್ಡ ಸರೋವರ. Closed s. =Mare clausum (Mare[1] ನೋಡಿ). The seven seas ಉತ್ತರ ಮತ್ತು ದಕ್ಷಿಣ ಧ್ರುವ ಸಾಗರಗಳು, ಉತ್ತರ ಮತ್ತು ದಕ್ಷಿಣ ಪೆಸಿಫಿಕ್ ಸಾಗರ ಗಳು, ಉತ್ತರ ಮತ್ತು ದಕ್ಷಿಣ ಅಟ್ಲಾಂಟಿಕ್ ಸಾಗರಗಳು, ಮತ್ತು ಹಿಂದೂ ಸಾಗರ; ಸಪ್ತ —ಸಾಗರ, ಸಮುದ್ರ. The four seas ಗ್ರೇಟ್ ಬ್ರಿಟನ್ನನ್ನು ಸುತ್ತುವರಿದಿರುವ, ನಾಲ್ಕು ಸಮುದ್ರಗಳು]. ಸಮುದ್ರ ಸ್ಥಿತಿ, ದೊಡ್ಡ ಅಲೆ, ಉಬ್ಬರ [A heavy s. ದೊಡ್ಡ ಅಲೆಗಳೆದ್ದ ಸಮುದ್ರ. Seas mountains high ಬೆಟ್ಟದೆತ್ತರದ ಅಲೆಗಳು. Ship a s. (ದೋಣಿ, ಮೊ. ಗಳ ವಿಷಯದಲ್ಲಿ) ಅಲೆಗೆ ಸಿಕ್ಕು, ಅಲೆಯಿಂದ ಕೊಚ್ಚಿಹೋಗು. Long s. ನಿಡುದೆರೆಗಳ, ಉದ್ದ ಅಲೆಗಳ, —ಕಡಲು. Short s. ಕಿರುದೆರೆಗಳ, ಸಣ್ಣ ಅಲೆಗಳ, —ಕಡಲು. S. like looking-glass *or* sheet of glass ಶಾಂತ, ಸ್ತಬ್ಧ, —ಸಮುದ್ರ. Half seas over ಅತಿಯಾಗಿ, ವಿಪರೀತ, ಕುಡಿದು ಅಮಲೇರಿದ]. (ರೂಪ.) (ಸಮುದ್ರ ದಂತೆ) ಅಪಾರ, ರಾಶಿ (A s. of troubles ಅಪಾರ ಕಷ್ಟಗಳು. Seas of blood). [(ಬೈಬಲ್) Brazen *or* molten s. ಹಿತ್ತಾಳೆಯ ಅರ್ಘ್ಯಪಾತ್ರೆ]. (ವಿಶೇಷಣವಾಗಿ ಅಥವಾ ಸ. ಪೂ. ಪ.) ಸಮುದ್ರದಲ್ಲಿ ವಾಸಿಸುವ, ಸಮುದ್ರದ ಮೇಲೆ ಉಪಯೋಗಿಸುವ, ಸಮುದ್ರದ, ಕಡಲ (S. cucumber, -fox, raven, etc.). **S. acorn** ಬಾರ್ನಕಲ್ ಎಂಬ ಚಿಪ್ಪಿನ ಪ್ರಾಣಿ. **S. air** ಸಮುದ್ರತೀರದ ಗಾಳಿ, ಕರಾವಳಿ ಹವ (ಮು., ರೋಗಿಗಳಿಗೆ ಆರೋಗ್ಯಕರವೆಂದು ಶಿಫಾರ ಸಾದದ್ದು). **S.-anchor** =Drag-anchor (Drag ನೋಡಿ). **S. anemone** (Anemone ನೋಡಿ). **S.-angel**=Angel fish (Angel ನೋಡಿ). **S.-arrow** ಒಂದು ಜಾತಿಯ ಕಟಲ್ ಮೀನು. **S. asparagus** ಒಂದು ಬಗೆಯ ಮೃದುಚಿಪ್ಪಿನ ನಳ್ಳಿ. **S.-barrow** ಸ್ಕೇಟ್ ಮೀನಿನ ಮೊಟ್ಟೆಯ ಕೋಶ. **S. bathing** ಸಮುದ್ರ ಸ್ನಾನ. **S. bear** ಧ್ರುವ ಪ್ರದೇಶದ ಬಿಳಿಯ ಕರಡಿ ; ಕಡಲ ಕರಡಿ ; ತುಪ್ಪುಳ ವುಳ್ಳ ಒಂದು ಬಗೆಯ ಸೀಲ್ ಪ್ರಾಣಿ. **S.-bells** ಸಮುದ್ರತೀರದ ಒಂದು ಕಳೆ. **S.-belt** ಹಲವು ಬಗೆಯ ಸಮುದ್ರದ ಕಳೆ. **Seáboard** ಸಮುದ್ರ ತೀರ, ಕಡಲ ಕರೆ, ಕರಾವಳಿ. **S.-boat** ಸಮುದ್ರದ —ದೋಣಿ, ಹಡಗು (Is a good, bad, s.-b.). **S.-born** ಕಡಲಲ್ಲಿ ಹುಟ್ಟಿದ (ಕಾವ್ಯ ; ಮು., ಅಫ್ರೊಡೈಟಿ ದೇವತೆಯ ವಿಷಯದಲ್ಲಿ). **S.-borne** ಕಡಲ ಮೂಲಕ ಸಾಗಿಸಿದ, ಕಡಲ ಸಾಗಣೆಯ (S.-b. commerce, goods). **S.-bow** ಕಡಲ (ತುಂತುರಿನ) ಕಾಮನ ಬಿಲ್ಲು ; ಸಮುದ್ರ ಚಾಪ. **S. breeze** ಹಗಲಿನಲ್ಲಿ ಸಮುದ್ರದ ಕಡೆಯಿಂದ ನೆಲದ ಕಡೆಗೆ ಬೀಸುವ ಗಾಳಿ : ಸಮುದ್ರದ, ಕಡಲ, —ಗಾಳಿ (ನೆಲಗಾಳಿಗೆ ವಿರುದ್ಧವಾಗಿ). **S.-calf** ಸೀಲ್ ಪ್ರಾಣಿ. **S. canary** ಬಿಳಿಯ ತಿಮಿಂಗಿಲ (ಕನೇರಿ ಹಕ್ಕಿಯಂತೆ ಸಿಳ್ಳು ಹಾಕು ವುದರಿಂದ). **S. captain** (ಕಾವ್ಯ, ಅಲಂ.) ದೊಡ್ಡ, ಪ್ರಖ್ಯಾತ, —ನಾವಿಕ, ನೌಕಾಧಿಪತಿ ; (ವ್ಯಾಪಾರದ ಅಥವಾ ನೌಕಾಬಲದ) ಹಡಗಿನ ಯಜಮಾನ. **S. change** ಸಮುದ್ರದಿಂದಾದ ಬದಲಾವಣೆ, ಪರಿವರ್ತನೆ. **S. chestnut** ಒಂದು ಬಗೆಯ ಸಮುದ್ರಪ್ರಾಣಿ. **S.-cloth** (ರಂಗಸ್ಥಳದಲ್ಲಿ ಸಮುದ್ರತೀರ ತೋರಿಸುವುದಕ್ಕಾಗಿ ಉಪ ಯೋಗಿಸುವ) ಸಮುದ್ರದ (ಬಣ್ಣದ) ಬಟ್ಟೆ. **S. coal** (ಪ್ರಾಚೀ. ಪ್ರ.) ಕಲ್ಲಿದ್ದಲು (ಮೊದಲು ನ್ಯೂಕ್ಯಾಸ್ಲ್‌ನಿಂದ ಸಮುದ್ರದ ಮೂಲಕ ಕಲ್ಲಿದ್ದಲನ್ನು ತರುತ್ತಿದ್ದ ಕಾರಣದಿಂದ; ಸಾಮಾನ್ಯ ಇದ್ದಲಿಗೆ ವಿರುದ್ಧವಾಗಿ). **S. coast** ಸಮುದ್ರತೀರ, ಕಡಲ ಕರೆ, ಕರಾವಳಿ. **S.-cock** ಹಲವು ಬಗೆಯ ಕಡಲ ಹಕ್ಕಿ, ಮೀನು. ಹಡಗಿನ ಒಳ ಭಾಗಕ್ಕೆ ಸಮುದ್ರದ ನೀರನ್ನು ಬಿಟ್ಟುಕೊಳ್ಳಲು ಮಾಡಿರುವ ಕವಾಟ : ಸಮುದ್ರ ಕವಾಟ. **S. colander** ಜರಡಿಯಲ್ಲಿಯಂತೆ ರಂಧ್ರಗಳುಳ್ಳ ಒಂದು ಸಮುದ್ರದ ಕಳೆ. **S. cook** (ನಾವಿಕ) ಹಡಗಿನ ಅಡಿಗೆಯವನು (ಬೈಗುಳದ ಮಾತು). **S. cow** ಮೀನಿನಂಥ ಒಂದು ಸಸ್ತನಿ ಪ್ರಾಣಿ : ಸಮುದ್ರ ಗೋವು, ಕಡಲ ಹಸು. ವಾಲ್‌ರಸ್ ಎಂಬ ಒಂದು ಸಮುದ್ರ ಸಸ್ತನಿ ಪ್ರಾಣಿ. **S. crow** ಒಂದು ಬಗೆಯ ಗಲ್ ಹಕ್ಕಿ. **S. cucumber** (ಸೌತೆಯ ಕಾಯಿಯಾಕಾರದ) ಒಂದು ಬಗೆಯ ಸಮುದ್ರಪ್ರಾಣಿ : ಕಡಲ ಸೌತೆ. **S.-devil** ಹಲವು ಬಗೆಯ ಮೀನು. **S.-dog** ಹಲವು ಬಗೆಯ ಸೀಲ್ ಪ್ರಾಣಿ ; ಹಲವು ಬಗೆಯ ಸಣ್ಣ ಕಡಲ ಮೀನು : ಹಳೆಯ ನುರಿತ ನಾವಿಕ (ಮು., ಎಲಿಸಬೆತ್ ಕಾಲದ ನೌಕಾಧಿಪತಿಗಳ ವಿಷಯ ದಲ್ಲಿ). ಬಿರುಗಾಳಿ ಮಳೆಯನ್ನು ಸೂಚಿಸುವ ದಿಗಂತ ಪ್ರಾಂತದ ಬೆಳಕು. **S. eagle** ಮೀನು ಹಿಡಿಯುವ ಹದ್ದು, ಕಡಲ ಹದ್ದು. **S.-ear** ತಿನ್ನಲಾಗುವ ಚಿಪ್ಪಿನ ಒಂದು ಮೃದ್ವಂಗಿ. **S. elephant** ಸೊಂಡಿಲುಳ್ಳ, ದೊಡ್ಡ ಜಾತಿಯ, ಸೀಲ್ ಪ್ರಾಣಿ : ಕಡಲಾನೆ. **S.-fan** ಒಂದು ಬಗೆಯ ಹವಳ. **Seáfaring** (ಗು., ನಾ.) (ವಾಡಿಕೆಯಾಗಿ) ಸಮುದ್ರ ಸಂಚಾರ(ದ) (S.-f. man ನಾವಿಕ) [**Seáfarer** (ವಿರ. ಪ್ರ.) ನಾವಿಕ, ಸಮುದ್ರ ಸಂಚಾರಿ]. **S. fennel** ಒಂದು ಬಗೆಯ ಸಸ್ಯ. **S.-fight** ಕಡಲ ಕಾಳಗ, ನೌಕಾ ಯುದ್ಧ. **S.-flower**=S. anemone. **S. fog** (ನೆಲದ ಶಾಖಕ್ಕೂ ಕಡಲ ಶಾಖಕ್ಕೂ ಅಂತರವಿದ್ದು ಅದರಿಂದ ಉಂಟಾಗಿ ನೆಲದಮೇಲೆ ಕೊಂಚ ದೂರ ಹರಡಿಕೊಳ್ಳುವ) ಕಡಲ ಕಾವಳ. **S.-fowl** ಕಡಲ ಕೋಳಿ. **S.-fox** ನಿಡುಬಾಲದ ಷಾರ್ಕ್ ಮೀನು. **S. front** ಪಟ್ಟಣದ ಸಮುದ್ರಮುಖ ಭಾಗ. **S. furbelow** ಹಲವು ಬಗೆಯ ಕಂದು ಬಣ್ಣದ ಸಮುದ್ರದ ಕಳೆ. **S.-gauge** ಹಡಗು ತೇಲಲು ಬೇಕಾದ ನೀರಿನ ಆಳ : ಹಡಗಿನ ತೇಲಾಳ. (ಕಡಲಿನ ಆಳ ಕಂಡು ಹಿಡಿಯುವ) ಒಂದು ಬಗೆಯ ಆಳದ ಗುಂಡು. **S. gherkin** =S. cucumber. **S. gilliflower** ಕಡಲ ತೀರದ ಒಂದು ಹೂವಿನ ಸಸ್ಯ. **S.-girt** (ಕಾವ್ಯ, ಅಲಂ.) (ದ್ವೀಪ, ಮೊ. ಗಳ ವಿಷಯದಲ್ಲಿ) ಸಮುದ್ರ ಪರಿವೃತ, ಕಡಲು ಬಳಸಿದ. **S.-god(dess)** ಸಮುದ್ರ ದೇವತೆ. **Seágoing** (ಹಡಗಿನ ವಿಷಯದಲ್ಲಿ) ಸಮುದ್ರ ಸಂಚಾರದ, ದೂರ ಪ್ರಯಾಣದ (ಕರಾವಳಿ ಸಂಚಾರದ್ದಲ್ಲದ). (ಮನುಷ್ಯನ ವಿಷಯದಲ್ಲಿ) ಸಮುದ್ರ ಸಂಚಾರದ. **S.-grape** ಫರ್ ಜಾತಿಯ ಪೊದೆ. (ಬ. ವ.) ಕಟಲ್ ಮೀನಿನ ಮೊಟ್ಟೆಗಳು. **S.-green** (ಗು., ನಾ.) ಸಮುದ್ರದ ಬಣ್ಣದಂಥ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೀಲ ಛಾಯೆಯ ಹಸುರು (ಬಣ್ಣದ): ಕಡಲ ಹಸುರು (ಬಣ್ಣದ). **S.-gull** ಕಡಲು ಗರ್ ಹಕ್ಕಿ. **S.-hedgehog** = S.-urchin. **S.-hog** ಕಡಲ ಹಂದಿ; (ಅಸಂ.) ವೇಗದ ಜಹಜು. **S.-horse** (ಗ್ರೀಕ್ ಪುರಾಣ) ಸಮುದ್ರದೇವತೆಯ ರಥಕ್ಕೆ ಹೂಡಿದ, ಕುದುರೆಯ ತಲೆಯೂ ಮೀನಿನ ಬಾಲವೂ ಉಳ್ಳ ಒಂದು ಪ್ರಾಣಿ: ಮೀನಾಶ್ವ, ಕಡಲ ಕುದುರೆ; ಕೋರೆಹಲ್ಲಿನ ಒಂದು ಸಮುದ್ರ ಸಸ್ತನಿ ಪ್ರಾಣಿ (= Walrus). **S. kale** ತರಕಾರಿಯಾಗಿ ಉಪಯೋಗಿಸುವ ಒಂದು ಸಸ್ಯ. **S.-king** ಮಧ್ಯಕಾಲದ, ಸ್ಕಾಂಡಿನೇವಿಯದ, ಕಡಲ ಕಳ್ಳರ ನಾಯಕ; ಕಡಲ ದೊರೆ. **S. lace** ಉದ್ದವಾದ ಹುರಿಯಂಥ ಪರ್ಣಾಂಗಗಳುಳ್ಳ ಒಂದು ಬಗೆಯ ಸಮುದ್ರದ ಕಳೆ. **S. lawyer** (ನಾಮಿಕ; ತಿರಸ್ಕಾರ ಪ್ರ.) ಕುತರ್ಕದ, ಕುಯುಕ್ತಿಯ, —ಮನುಷ್ಯ; ವಾಗ್ವಾದದ ನಾವಿಕ. **S.-legs** ತೂಗಾಡುತ್ತಿರುವ ಹಡಗಿನ ಅಟ್ಟದಮೇಲೆ ನಡೆಯುವ ಸಾಮರ್ಥ್ಯ (Has not yet got his s.-l.). **S.-lemon** ಹಳದಿ ಬಣ್ಣದ, ಅಂಡಾಕಾರದ, ಒಂದು ಮೃದ್ವಂಗಿ; ಕಡಲ ನಿಂಬೆ. **S. leopard** ಹಲವು ಬಗೆಯ, ಮಚ್ಚೆಗಳುಳ್ಳ ಸೀಲ್ ಪ್ರಾಣಿ: ಕಡಲ ಚಿರತೆ. **S. level** (ಬೆಟ್ಟ, ಮೊ. ಗಳ ಎತ್ತರವನ್ನೂ ವಾಯುಭಾರ ಪ್ರಮಾಣವನ್ನೂ ಸೂಚಿಸುವಲ್ಲಿ ಆಧಾರವಾಗಿಟ್ಟುಕೊಳ್ಳುವ) ಉಬ್ಬರವಿಳಿತದ ಸರಾಸರಿ ಮಟ್ಟಕ್ಕೆ ಸಮನಾದ ಮಟ್ಟ: ಸಮುದ್ರ ಮಟ್ಟ (= Mean s. level) (Corrected to s. l. ಸಮುದ್ರ ಮಟ್ಟಕ್ಕೆ ತಿದ್ದಿ ಸರಿಪಡಿಸಿದ). **S. lily** ನೈದಿಲೆಯಾಕಾರದ ಒಂದು ವಲ್ಕವಂತ ಪ್ರಾಣಿ. **S.-line** ಸಮುದ್ರ ದಿಗಂತ. **S. lion** ದೊಡ್ಡ ಕಿವಿಗಳುಳ್ಳ, ಮು., ಕೇಸರವುಳ್ಳ, ಹಲವು ಬಗೆಯ ಸೀಲ್ ಪ್ರಾಣಿ: ಸಮುದ್ರ ಸಿಂಹ. **Seáman** (ಬ. ವ. -men) ನಾವಿಕ; (ನೌಕಾ ಸೈನ್ಯ) ಅಧಿಕಾರಿ ದರ್ಜೆಗೆ ಕೆಳಗಿನ ದರ್ಜೆಯ ನಾವಿಕ (Able-bodied s.-m. ವಿಶೇಷ ವರ್ಗದ ನಾವಿಕ. Ordinary s.-m. ಸಾಧಾರಣ ದರ್ಜೆಯ ನಾವಿಕ); ನೌಕಾ ಪ್ರವೀಣ; ನೌಕಾ ಚಾಲಕ (Good, bad, no, s.-m.) [**Seámanlike** (ಗು.); **Seámanly** (ಗು.); **Seámanship** (ನಾ.)]. **S.-mark** (ಸಮುದ್ರ ಸಂಚಾರದಲ್ಲಿ ಮಾರ್ಗದರ್ಶಕವಾದ) ಬೆಳಕು ಮನೆ, ದೀಪದ ಮನೆ ಅಥವಾ ಎತ್ತರ ವಸ್ತು: ಕಡಲ ಗುರುತು. **S.-mat** ಸಮುದ್ರದಲ್ಲಿ ಚಪ್ಪಟೆಯಾಗಿ ಚಾಪೆಯಂತೆ ಹೆಣೆದು ಹರಡಿಕೊಂಡಿರುವ ಒಂದು ಅಕಶೇರುಕ ಸಂಯುಕ್ತ ಪ್ರಾಣಿ: ಕಡಲ ಚಾಪೆ. **S. melon** ಒಂದು ಬಗೆಯ ಸಮುದ್ರ ಪ್ರಾಣಿ: ಕಡಲ ಕಲ್ಲಂಗಡಿ. **S.-mew** ಗರ್ ಹಕ್ಕಿ. **S. mile** = Geographical mile (Mile ನೋಡಿ). **S. monster** ಭಯಂಕರ, ವಿಚಿತ್ರ, ಅದ್ಭುತ, —ಸಮುದ್ರ ಪ್ರಾಣಿ; ಸಮುದ್ರ ಭೂತ. **S. moss** ಪಾಚಿಯಂಥ ಒಂದು ಅಕಶೇರುಕ ಸಂಯುಕ್ತ ಪ್ರಾಣಿ ಅಥವಾ ಸಮುದ್ರ ಕಳೆ: ಸಮುದ್ರ ಪಾಚಿ. **S.-mouse** ವಿವಿಧ ವರ್ಣಸ್ಫುರಣದ ಒಂದು ಕಡಲ ಹುಳು. **S. mud** (ಗೊಬ್ಬರವಾಗಿ ಉಪಯೋಗವಾಗುವ) ಉಪ್ಪು ಜವುಗು ಪ್ರದೇಶಗಳ ಜೌಳುಮಣ್ಣು: ಕಡಲ ಮಣ್ಣು. **S. necklace** ಸುರುಳಿ ಚಿಪ್ಪುಳ್ಳ ಒಂದು ಸಮುದ್ರ ಪ್ರಾಣಿಯ ಮೊಟ್ಟೆಯ ಕೋಶಗಳ ಸರ. **S. needle** ಒಂದು ಬಗೆಯ ಈಟಿಮೂತಿಯ ಮೀನು. **S. nettle** ಜೆಲ್ಲಿ ಮೀನು, ಅಂಬಲ ಮೀನು. **S.-nymph** ಸಮುದ್ರಾಪ್ಸರೆ. **S. oak** ಒಂದು ಬಗೆಯ ಸಮುದ್ರದ ಕಳೆ. **S. ooze** ಕಡಲ ಮಣ್ಣು. **S. orange** ಗುಂಡುಗುಂಡಾಗಿರುವ ಕಿತ್ತಿಳೆ ಬಣ್ಣದ ಒಂದು ಸಮುದ್ರಪ್ರಾಣಿ. **S.-orb** ಬುರುಡೆ ಮೀನು. **S. otter** ಬೆಲೆ ಬಾಳುವ ತುಪ್ಪುಳು ಚರ್ಮವುಳ್ಳ, ಒಂದು ಬಗೆಯ ಉದ್ರ: ಕಡಲ ಉದ್ರ, ಕಡಲ ನಾಯಿ. **S.-owl** ಒಂದು ವಿಕಾರ ಮೀನು: ಕಡಲ ಗೂಬೆ. **S.-ox** ವಾಲ್‌ರಸ್ ಎಂಬ ಸಮುದ್ರ ಪ್ರಾಣಿ: ಸಮುದ್ರ ಗೋವು, ಕಡರಾವು. **S.-pad** ನಕ್ಷತ್ರ ಮೀನು. **S. parrot** ಉ. ಅಟ್ಲಾಂಟಿಕ್ ಸಾಗರದ ಒಂದು ಕಡಲ ಹಕ್ಕಿ. **S. pass** (ಯುದ್ಧಕಾಲದಲ್ಲಿ ತಟಸ್ಥ ದೇಶದ ಹಡಗುಗಳಿಗೆ ಇರುವ) ಕಡಲ ರಹದಾರಿ, ಸಮುದ್ರ ಪರವಾನಗಿ. **S.-pay** ಯುದ್ಧ ಸನ್ನದ್ಧ ಹಡಗಿನಲ್ಲಿ ಕೆಲಸಮಾಡುವುದಕ್ಕಾಗಿ ಕೊಡುವ ಸಂಬಳ: ಕಡಲ ಸಂಬಳ. **S. peach, pear** ಒಂದು ಜಾತಿಯ ಮೃದ್ವಂಗಿ. **S.-pen** ಗರಿಯಾಕಾರದ ಒಂದು ಸೂಕ್ಷ್ಮ ಪ್ರಾಣಿ. **S. pie** ನಾವಿಕನು ತಿನ್ನುವ ತರಕಾರಿ ಸೇರಿದ ಒಂದು ಮಾಂಸಗಡುಬು; ಒಂದು ಕರಾವಳಿ ಹಕ್ಕಿ. **S.-piece** ಸಮುದ್ರದೃಶ್ಯ ಚಿತ್ರ. **Seapíet** (—ಪೈಎಟ್) ಒಂದು ಕರಾವಳಿ ಹಕ್ಕಿ (= S. pie). **S.-pig** ಕಡಲ ಹಂದಿ. ಸಸ್ಯಾಹಾರಿಯಾದ ಒಂದು ದೊಡ್ಡ ಸಸ್ತನಿ ಪ್ರಾಣಿ (= Dugong). **S.-pike** ಒಂದು ಈಟಿಮೂತಿಯ ಮೀನು ಜಾತಿ (= Garfish). 'ಕಾಡ್' ಜಾತಿಯ ಒಂದು ಮೀನು. **S. pilot** ಒಂದು ಕರಾವಳಿ ಹಕ್ಕಿ (= S. pie). **S.-pincushion** ಸ್ಕೇಟ್ ಮೀನಿನ ಮೊಟ್ಟೆಯ ಕೋಶ. **S. pink** ಒಂದು ಕರಾವಳಿ ಹೂವು ಗಿಡ. **S.-plane** ನೀರಿನಿಂದ ಹಾರಿಹೋಗುವುದಕ್ಕೂ ನೀರಮೇಲೆ ಇಳಿಯುವುದಕ್ಕೂ ಅನುಕೂಲಿಸುವಂತೆ ರಚಿಸಿದ ವಿಮಾನ: ಕಡಲ, ಸಮುದ್ರ,—ವಿಮಾನ. **S. poacher** ಒಂದು ಬಗೆಯ ಸಣ್ಣ ಮೀನು. **Seáport** ರೇವು ಪಟ್ಟಣ. **S. pumpkin** = S. melon. **S.-purse** = S. pincushion. **S. raven** ಹಲವು ಬಗೆಯ ಸಮುದ್ರ ಮೀನು. **S. robin** ಹಲವು ಬಗೆಯ ಸಮುದ್ರ ಮೀನು. **S.-room** ಹಡಗು ತಿರುಗುವುದು, ಮೊ. ಕ್ಕೆ ಸಂಪೂರ್ಣ ಅವಕಾಶವಿರುವ ಸಮುದ್ರ ಪ್ರದೇಶ. **S. rover** ಕಡಲುಗಳ್ಳ(ನ), ತನದ ಹಡಗು). **S.-salt** ಕಡಲುಪ್ಪು. **S.-scape** ಸಮುದ್ರದೃಶ್ಯ ಚಿತ್ರ. **S. serpent** ಹಲವು ಬಗೆಯ ಸಮುದ್ರ ಸರ್ಪ, ಕಡಲ ಹಾವು; ಸರ್ಪಾಕಾರದ ದೊಡ್ಡ ಸಮುದ್ರ ರಾಕ್ಷಸ (ಇದನ್ನು ನೋಡಿರುವುದಾಗಿ ಕೆಲವೊಮ್ಮೆ ಜನ ಹೇಳಿದರೂ ಇದರ ಅಸ್ತಿತ್ವವನ್ನು ಪ್ರಕೃತಿ ವೈಜ್ಞಾನಿಕರು ನಂಬುವುದಿಲ್ಲ). **Seashóre** ಸಮುದ್ರ ತೀರ, ಕಡಲ ಕರೆ; (ನ್ಯಾ. ಶಾ.) ಕಡಲ ಉಬ್ಬರದ ಮಟ್ಟಕ್ಕೂ ಇಳಿತದ ಮಟ್ಟಕ್ಕೂ ನಡುವಣ ನೆಲ. **Seásick** ಹಡಗು, ಮೊ. ಗಳ ಚಲನೆಯಿಂದ ಸಮುದ್ರ ಪ್ರಯಾಣಿಕರಿಗೆ ಬರುವ ವಾಂತಿ (ಪ್ರವೃತ್ತಿ) ರೋಗದ; ಸಮುದ್ರ ಪಿತ್ತದ. **Seásickness** (ನಾ.); **Seaside** (ಕಾಯಿಮ್ಮಾದ ಅಥವಾ ವಿರಾಮ ಕಾಲದ ವಾಸಕ್ಕಾಗಿ ಗೊತ್ತಾಗಿರುವ ಅಥವಾ ಯಾವುದಾದರೂ) ಸಮುದ್ರತೀರ ಸ್ಥಳ(ಗಳು), ಕಡಲ ಪಕ್ಕ (Do you like the s.-s.?). **S.-sleeve** ಕಟ್‌ಲ್ ಮೀನು. **S. snail** ಸಣ್ಣ ಲೋಳೆ ಮೀನು; ಒಂದು ಬಗೆಯ ಚಿಪ್ಪುಮೀನು. **S. snipe** ಹಲವು ಬಗೆಯ ಹಕ್ಕಿ; ಒಂದು ಬಗೆಯ ಮೀನು. **S. squirt** ಒಂದು ಬಗೆಯ ಮೃದ್ವಂಗಿ ಪ್ರಾಣಿ. **S. strawberry** ಹವಳದ ಹುಳುವಿನಂಥ ಒಂದು ಜಾತಿಯ ಪ್ರಾಣಿ. **S. sunflower** = S. anemone. **S. swallow** ಹಲವು ಬಗೆಯ ಕಡಲ ಹಕ್ಕಿ. **S.-tangle** ಹಲವು ಬಗೆಯ ಸಮುದ್ರದ ಕಳೆ. **S.-toad** = Angler ಎಂಬ ಮೀನು (Angle[2] ನೋಡಿ). **S.-urchin** ಒಂದು ಬಗೆಯ ಸಸ್ಯ. **S.-wall** ಸಮುದ್ರದ ನುಗ್ಗನ್ನು ತಡೆಯುವುದಕ್ಕಾಗಿ ಹಾಕಿದ ಕಟ್ಟೆ: ಸಮುದ್ರ ಕಟ್ಟೆ, ಕಡಲ ತಡೆ (ಗೋಡೆ). **S.-ware** (ಗೊಬ್ಬರ, ಮೊ. ಕ್ಕಾಗಿ ಕೂಡಹಾಕಿದ) ಸಮುದ್ರದ ಕಳೆ, ಸೆತ್ತೆ. **S.-water** ಕಡಲು ನೀರು. **S.-way** ಹಡಗು ಪ್ರಯಾಣಮಾಡಿರುವ ದೂರ; ಹಡಗಿನ ಮುನ್ನಡೆ; ಸಮುದ್ರಮಾರ್ಗ. ಕ್ಷುಬ್ಧ ಸಮುದ್ರದಲ್ಲಿ ಹಡಗು ಸಿಕ್ಕಿಬಿದ್ದಿರುವ ಸ್ಥಳ (In a s.-w.). **Seaweed** ಸಮುದ್ರದ ಕಳೆ. **S.-whip** ಚಾವಟಿಯಾಕಾರದ ಹವಳದ ಗಿಡ; ಕಡಲ ಚಾವಟಿ. **S. whipcord** ಒಂದು ಬಗೆಯ ಸಮುದ್ರದ ಕಳೆ. **S.-wife** ಒಂದು ಬಗೆಯ ಮೀನು. **Seáwind** = Seabreeze. **S.-wing** ಒಂದು ಇಚ್ಛಿಪ್ಪಿನ ಮೃದ್ವಂಗಿ ಪ್ರಾಣಿ. **Seáwithwind** ಕರಾವಳಿಯಲ್ಲಿ ಬೆಳೆಯುವ ಒಂದು ಕಳೆ. **S.-wolf** ಕಡಲಾನೆ; ಹಲವು ಬಗೆಯ ಮೀನು; ಕಡಲಗಳ್ಳ. **Seáworthy** (ಹಡಗಿನ ವಿಷಯದಲ್ಲಿ) ಸಮುದ್ರ ಸಂಚಾರಕ್ಕೆ ಯೋಗ್ಯವಾದ, ಬಲವಾದ ಮತ್ತು ಒಳ್ಳೆಯ ಸಜ್ಜುಳ್ಳ. **Seáworthiness** (ನಾ.); **Seáward** (ಗು., ಕ್ರಿ. ವಿ., ನಾ.) ಸಮುದ್ರದ ಕಡೆ(ಗೆ, ಯ). **Seáwards** (ಕ್ರಿ. ವಿ.)

Seal[1] ಸೀಲ್ (ನಾ., ಕ್ರಿ. ಅಕ.) ಈಜುವುದಕ್ಕೆ ಅನುಕೂಲಿಸುವಂಥ ಮೋಟು ಕಾಲುಗಳು, ತುಪ್ಪುಳು ಅಥವಾ ಕೂದಲು, ಮತ್ತು ದುಂಡು ಮುಖ ಉಳ್ಳ, ಮೀನು ತಿನ್ನುವ, ಸ್ಥಲಜಲ ಜೀವಿಯಾದ, ಹಲವು ಬಗೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾಂಸಾಹಾರಿ ಸಮುದ್ರ ಸಸ್ತನಿ ಪ್ರಾಣಿ: ಸೀಲ್ ಪ್ರಾಣಿ [(ಕ್ರಿ) —ಬೇಟೆಯಾಡು]. (Eared s. *or* otary ಕಡಲ ಕರಡಿ, ಕಡಲಾನೆ, ಸಮುದ್ರ ಸಿಂಹ, ತುಪ್ಪುಳು ಸೀಲ್ ಪ್ರಾಣಿ, ಮೊ. ನ್ನೊಳಕೊಂಡ ವರ್ಗದ, ಸ್ಪಷ್ಟವಾದ ಹೊರ ಕಿವಿಗಳುಳ್ಳ, ಹಲವು ಬಗೆಯ ಸೀಲ್ ಪ್ರಾಣಿ: ಕಿವಿಯುಳ್ಳ ಸೀಲ ಪ್ರಾಣಿ). =Sealskin. S.-fishery ಸೀಲ್ ಬೇಟೆ(ಯಾಡುವ ಸ್ಥಳ) [=**Seálery** (ನಾ.)]. S.-rookery ಸೀಲ್ ಸಂತಾನವೃದ್ಧಿಯ ಸ್ಥಳ; ಸೀಲ್ ಪ್ರಾಣಿಗಳ —ಬೀಡು, ನೆಲೆ. **Seálskin** ಸೀಲ್ ತುಪ್ಪುಳು ಚರ್ಮ(ದಿಂದ ಮಾಡಿದ ಹೆಂಗಸಿನ ಗಿಡ್ಡ ಅಂಗಿ). **Seáler**[1] (ನಾ.) ಸೀಲ್ ಬೇಟೆಗಾರ; ಸೀಲ್ ಬೇಟೆಯ ಹಡಗು.

Seal[2] ಸೀಲ್ (ನಾ., ಕ್ರಿ. ಸಕ.) ಪ್ರಾಮಾಣ್ಯದ ಖಾತರಿಗಾಗಿ ರುಜುವಿನ ಜೊತೆಗೆ ದಸ್ತೈವಜು, ಮೊ. ಗಳಲ್ಲಿಯೂ ಯಜಮಾನರು, ಮೊ. ರ ತಿಳಿವಳಿಕೆಗೆ ಬಾರದಂತೆ ಒಡೆಯುವುದನ್ನು ತಪ್ಪಿಸುವುದಕ್ಕಾಗಿ ಲಕೋಟೆ, ಪೆಟ್ಟಿಗೆ, ಕೊಟಡಿಯ ಅಥವಾ ಮನೆಯ ಬಾಗಿಲು, ಮೊ. ಗಳಿಗೂ ಹಚ್ಚುವ, ಮುದ್ರಿಕೆಯ ಗುರುತುಹಾಕಿದ ಅರಗು ಅಥವಾ ಸೀಸ ಅಥವಾ ಅಂತಹ ಇತರ ಪದಾರ್ಥ: ಮುದ್ರೆ, ಮೊಹರು [Given under my hand & s. ನಾನು ರುಜುಹಾಕಿ ಮೊಹರುಮಾಡಿ ಕೊಟ್ಟದ್ದು. Set one's s. to ಅಧಿಕಾರವತ್ತಾಗಿ ಮಾಡು, ಸ್ಥಿರೀಕರಿಸು, ಮುದ್ರೆ ಒತ್ತು. Leaden s. (ಬಿಗಿದುಕಟ್ಟಿರುವ ತಂತಿಯ ಕೊನೆಗಳನ್ನು ಕಚ್ಚಿಸಿ ಹಾಕಿದ) ಸೀಸದ ಮೊಹರು. (ರೂಪ.) Under s. of confidence, silence ಗುಟ್ಟು ರಟ್ಟುಮಾಡ ಕೂಡದೆಂದು, ಬಾಯಿ ಬಿಡಕೂಡದೆಂದು, ನಿರ್ಬಂಧ ಹಾಕಿ]. ಅರಗಿನ ಮೊಹರಿಗೆ ಸಮನಾಗಿ ಭಾವಿಸಿ, ಪತ್ರ, ಮೊ. ಗಳ ಮೇಲೆ ಹಾಕಿದ ಮುದ್ರೆ: ಠಸ್ಸೆ. (ರೂಪ.) (ಸ್ಪಷ್ಟವಾದ ಅಥವಾ ಭವಿಷ್ಯಸೂಚಕ) ಗುರುತು, ಚಿಹ್ನೆ; ಮುದ್ರೆ (Has the s. of death in his face). ಅರಗು, ಮೊ. ಗಳ ಮೇಲೆ ಒತ್ತುವ, ಲೋಹ, ಮೊ. ಗಳ ಗುರುತುಬಿಲ್ಲೆ: ಉಂಡಿಗೆ, ಮುದ್ರಿಕೆ. [S.-ring ಮುದ್ರೆಯುಂಗುರ. The seals (ಲಾರ್ಡ್ ಛಾನ್ಸೆಲರ್ ಅಥವಾ ಸೆಕ್ರೆಟರಿ ಆಫ್ ಸ್ಟೇಟ್ ತನ್ನ ಅಧಿಕಾರ ಕಾಲದಲ್ಲಿ ತನ್ನ ಬಳಿ ಇಟ್ಟುಕೊಂಡಿರುವ) ಅಧಿಕಾರಮುದ್ರೆಗಳು. Great S. (ಪಾರ್ಲಿಮೆಂಟಿನ ಶಾಸನಗಳು, ಕೌಲು ಕರಾರುಗಳು, ಸರಕಾರದ ಮುಖ್ಯ ಕಾಗದಪತ್ರಗಳು—ಇವಕ್ಕೆ ಹಾಕುವ, ಲಾರ್ಡ್ ಛಾನ್ಸೆಲರ್ ಅಥವಾ ಲಾರ್ಡ್ ಕೀಪರ್ ಎಂಬ ಅಧಿಕಾರಿ ತನ್ನ ವಶದಲ್ಲಿಟ್ಟುಕೊಂಡಿರುವ) ಮಹಾಮುದ್ರೆ. Privy S. (Privy ನೋಡಿ). Fisher's S. (ಸಂತ ಪೀಟರು ಮೀನು ಹಿಡಿಯುತ್ತಿರುವಂತೆ ಚಿಹ್ನೆಯಿರುವ) ಪೋಪಿನ ಮುದ್ರಿಕೆ]. ಖಾತರಿಯ ಅಥವಾ ಸ್ಥಿರೀಕರಣದ ಗುರುತಾದ ಕೆಲಸ, ವಸ್ತು, ಸಂಗತಿ: ಕುರುಹು [S. of love ಪ್ರೇಮದ ಕುರುಹು (ಮುತ್ತು, ಮಗು ಹುಟ್ಟುವುದು, ಮೊ. ದು). Baptism & the Lord's Supper are seals of God's covenant with us]. ರಂಧ್ರ, ಮೊ. ನ್ನು ಮುಚ್ಚಲು ಉಪಯೋಗಿಸುವ ಪದಾರ್ಥ (ಮು., ಚರಂಡಿಯ ಕೊಳವೆಯಲ್ಲಿ ದುರ್ವಾಯು ಹೊರಬರದಂತೆ ತಡೆಯುವ ನೀರು): (ನೀರು) ಮುಚ್ಚಿಗೆ [S.-pipe ಮುಚ್ಚಿಗೆ ಕೊಳಾಯಿ (Dip-pipe ಹೋಲಿಸಿ: Dip ಪದ ನೋಡಿ)]. (ಕ್ರಿ.) ಮುದ್ರೆ, ಮೊಹರು, —ಒತ್ತು, ಹಾಕು; —ಒತ್ತಿ ಅಂಟಿಸು, ಬಂಧಿಸು; ಠಸ್ಸೆ —ಒತ್ತು, ಹಾಕು; ಮುದ್ರೆಯೊತ್ತಿ ಸರಿಯೆಂದು ದೃಢಪಡಿಸು, ಸ್ಥಿರೀಕರಿಸು [Sealed Book ೨ನೆಯ ಚಾರ್ಲ್ಸ್ ದೊರೆಯ ಕಾಲದಲ್ಲಿ ಮಹಾಮುದ್ರೆಯೊತ್ತಿ ಖಾತರಿಪಡಿಸಿದ, ಸಾಮಾನ್ಯ ಪ್ರಾರ್ಥನೆಯ ಪುಸ್ತಕದ, ಋಜುಪ್ರತಿ(ಗಳಲ್ಲೊಂದು)]. (ಶ್ರದ್ಧೆ, ಮೊ. ನ್ನು, ವಿಹಿತ ಕರ್ಮದ ಮೂಲಕ) ದೃಢೀಕರಿಸು (Peace was concluded and sealed by a marriage). ಭದ್ರವಾಗಿ, ಬಿಗಿಯಾಗಿ, —ಮುಚ್ಚಿಬಿಡು [To seal a person's eye ಕಣ್ಣು ಇಂಗಿಸಿಬಿಡು, ಕುರುಡುಮಾಡು. My lips are sealed (ರೂಪ.) ನನ್ನ ಬಾಯಿ ಕಟ್ಟಿದೆ; ನಾನು ಬಾಯಿಬಿಡುವಹಾಗಿಲ್ಲ, ಮಾತಾಡುವಂತಿಲ್ಲ. It is a sealed book to me ಆ ವಿಷಯ ನನಗೆ ಏನೂ ತಿಳಿಯದು ಮತ್ತು ತಿಳಿಯುವಂತಿಲ್ಲ. Windows must be sealed up (ಸಂದುಗಳಿಗೆಲ್ಲಾ ಕಾಗದ, ಮೊ. ನ್ನು ಹಚ್ಚಿ) ಕಿಟಕಿಗಳನ್ನು ಚೆನ್ನಾಗಿ ಮುಚ್ಚಿಬಿಡಬೇಕು. S. up tin ಡಬ್ಬವನ್ನು ಗಾಳಿ ಹೊಗದಂತೆ ಬೆಸೆ. S. pipe ಕೊಳಾಯಿಗೆ ನೀರು ಮುಚ್ಚಿಗೆ ಅಳವಡಿಸು]. ಸಂಕೇತ—ಮಾಡಿಡು, ಹಾಕಿಡು; ಮೀಸಲಿಡು, ಗೊತ್ತುಪಡಿಸು, ಗುರಿಮಾಡು; (ಕೊನೆಯದಾಗಿ) ನಿರ್ಣಯಿಸಿಬಿಡು, ನಿರ್ಧರಿಸು (His fate is sealed ಅವನ ಹಣೆಯ ಬರಹ ಗೊತ್ತಾಗಿ ಹೋಗಿದೆ, ನಿರ್ಧರವಾಗಿ ಹೋಗಿದೆ. Death has sealed her for his own ಆಕೆಯನ್ನು ಮೃತ್ಯು ತನಗೆ ಮೀಸಲು ಮಾಡಿಕೊಂಡಿದೆ). (ನೌಕಾಧಿಪತ್ಯದ ಕಚೇರಿಯ ವಿಷಯದಲ್ಲಿ: ಯುದ್ಧ ಶಸ್ತ್ರದ ಮಾದರಿ, ಮೊ. ನ್ನು) ಅಧಿಕಾರಿಕವಾಗಿ ಅಂಗೀಕರಿಸು (Sealed pattern). ಭದ್ರಪಡಿಸು, ಬಿಗಿಯಾಗಿಡು (*Up* ಉಪ. ದೊಡನೆ). (ಕೊಕ್ಕೆ, ಮೊ. ನ್ನು ಗೋಡೆ, ಮೊ. ಗಳ ಒಳಕ್ಕೆ ಸಿಮೆಂಟು, ಮೊ. ನ್ನು ಹಾಕಿ) ಕಚ್ಚಿಸು, ಬಿಗಿಸು. Sealing-wax ಅರಗು. **Seáler**[2] (ನಾ.)

Seam ಸೀಮ್ (ನಾ., ಕ್ರಿ. ಸಕ.) (ಎರಡು ಬಟ್ಟೆಯ ತುಂಡುಗಳ ಅಂಚು ಗಳನ್ನು) ಕೂಡಿಸಿ ಹೊಲಿದ ರೇಖೆ; ಕೂಡು ಹೊಲಿಗೆ(ಯ ರೇಖೆ). (ಎರಡು ಹಲಗೆಗಳ ಅಂಚು ಕೂಡಿಸಿ ಆದ) ಸೇರುವೆ, ಜೋಡಣೆ; (ಜೋಡಣೆಯಾದ ಎರಡು ಹಲಗೆ, ಮೊ. ಗಳ ಸಮಾಂತರ ಅಂಚುಗಳು ಬಿಟ್ಟುಕೊಂಡದ್ದರಿಂದ ಆದ) ಸೇರುವೆಯ ಸಂದು (Ship's seams want caulking ಹಡಗಿನ ಹಲಗೆಸೇರುವೆಯ ಸಂದುಗಳನ್ನು ಕೀಲೆಣ್ಣೆಯ ದಾರಗಳಿಂದ ಗಿಡಿದು ಮುಚ್ಚಬೇಕಾಗಿದೆ). (ಗಾಯದ) ಕಲೆ, ಗುರುತು. ಎರಡು ದೊಡ್ಡ ಸ್ತರಗಳನ್ನು ಪ್ರತ್ಯೇಕಿಸುವ ನಡುವಣ ತೆಳು ಪದರ, ನಡುಗೆರೆ (ಕಲ್ಲಿದ್ದಲಿನ ಸ್ತರಗಳಲ್ಲಿ ಸಹ). (ಅಂ. ರ. ಶಾ.) (ಹೊಲಿದು ಸೇರಿಸಿದಂತೆ ತೋರುವ) ಮೂಳೆಗಳ ಸೇರುವೆ; (ಶಸ್ತ್ರಚಿಕಿತ್ಸೆ) ಗಾಯದ ಹೊಲಿಗೆ ಸೇರುವೆ. [S.-lace =Seaming-lace. S.-presser ಉಳುಮೆಯ ಬೆನ್ನುಸಾಲುಗಳನ್ನು ಚಪ್ಪಟೆಮಾಡುವ ಒಂದು ಬೇಸಾಯದ ಸಲಕರಣೆ: ಕುಂಟೆ. ದರ್ಜಿಯವನ ಇಸ್ತ್ರಿಪೆಟ್ಟಿಗೆ]. (ಕ್ರಿ.) ಅಂಚು ಸೇರಿಸಿ ಹೊಲಿ (ವಿರ. ಪ್ರ.). ಕಲೆ, ಗುರುತು, ಬಿರುಕು, ಸಂದು, —ಮಾಡು [(ಮು., ಭೂ. ಕೃ. ನಲ್ಲಿ): Seamed with wounds, cracks]. (ಹೆಣಿಗೆಯ ಕೆಲಸ: ಕಾಲುಚೀಲ, ಮೊ. ಗಳಲ್ಲಿ). ಉಬ್ಬು —ಕಟ್ಟು, ಮಾಡು. Seaming-lace ಕುರ್ಚಿಯ ಮೆತ್ತೆ, ಮೊ. ಗಳಲ್ಲಿಯ ಕೂಡು ಹೊಲಿಗೆಗಳ ಮೇಲೆ ಸೇರಿಸಿ ಹೊಲಿಯುವ ಅಂಚುಪಟ್ಟಿ: ಕೂಡು (ಹೊಲಿಗೆಯ ಅಂಚು)ಪಟ್ಟಿ. **Seámless** (ಗು.); **Seámstress** ಸೆ(ಸೀ)ಮ್‌ಸ್ಟ್ರೆಸ್, **Semp-** ಸೆಮ್(ಪ್)— (ನಾ., ಸ್ತ್ರೀ.) ಚಿಪ್ಪಿಗರವಳು, ದರ್ಜಿಯವಳು. **Seámy** (ಗು.) ಕಲೆ, ಗುರುತು, ಕೂಡು ಹೊಲಿಗೆ. ಅಂಚು ಸೇರುವೆ, —ಕಾಣುವ [S. side (ಬಟ್ಟೆ, ಮೊ. ಗಳಲ್ಲಿ) ಅಂಚು ಮಡಿಕೆ ಕಾಣುವ ಒಳ ಭಾಗ. (ರೂಪ.) ಪ್ರದರ್ಶನ ಯೋಗ್ಯವಲ್ಲದ, ಸೊಗಸದ, —ಪಕ್ಕ]. (ರೂಪ.) ನಿಕೃಷ್ಟ, ಕೀಳಾದ (A s. trade)

Seámstress. **Seam** ನೋಡಿ.

Seánad Eíreann ಷ್ಯಾನಡ್ ಏ(ಅ)ರನ್, ಸಾನಾಡ್ ಏ(ಅ)ರಿನ್ (ನಾ.) ಸ್ವತಂತ್ರ ಐರ್ಲೆಂಡ್ ರಾಷ್ಟ್ರದ ವರಿಷ್ಠ ಶಾಸನ ಸಭೆ.

Seánce (F) ಸೇಆನ್ಸ್ (ನಾ.) (ಸಂಘ, ಶಾಸನ ಸಭೆ, ಮೊ. ಗಳ) ಅಧಿವೇಶನ, ಕೂಟ, ಸಭೆ. ಪ್ರೇತ ವ್ಯವಹಾರಗಳ ಪ್ರದರ್ಶನಕ್ಕಾಗಿ ಅಥವಾ ಪರಿಶೋಧನೆಗಾಗಿ ಸೇರುವ ಸಭೆ.

Sear[1] ಸೀಅರ್ (ಗು., ಕ್ರಿ. ಸಕ.), **Sere**[1] ಸಿಯರ್ (ಗು.) (ಎಲೆಗಳು, ಹೂವುಗಳು, ಮೊ. ಗಳ ವಿಷಯದಲ್ಲಿ; ವಯಸ್ಸು, ಮೊ. ಗಳ ವಿಷಯದಲ್ಲಿ ರೂಪಕವಾಗಿ) ಬತ್ತಿ(ಹೋ)ದ, ಬಾಡಿದ, ಸೊರಗಿದ, ಒಣಗಿ(ಹೋ)ದ (The s., the yellow leaf ಹಣ್ಣು ವಯಸ್ಸು; ಮುಪ್ಪು, ವಾರ್ಧಿಕ್ಯ). (ಕ್ರಿ.) ಬತ್ತಿಸು, ಬಾಡಿಸು, ಒಣಗಿಸು (ವಿರ. ಪ್ರ.); (ಕಾದ ಕಬ್ಬಿಣದಿಂದ) ಸುಡು, ಬರೆಹಾಕು; ಜಡ್ಡುಮಾಡು, ಮೊಂಡುಮಾಡು (A seared conscience). Searing-iron ಬರೆಹಾಕುವ ಕಂಬಿ, ಸಲಾಕಿ; ಬರೆಗಂಬಿ.

Sear[2]. **Sere**[2] ನೋಡಿ.

Search ಸರ್ಚ್ (ಕ್ರಿ., ನಾ.) ಹುಡುಕು, ತಡಕು, ಅರಸು, ಬೆದಕು, ಪರೀಕ್ಷಿಸು, (ಪರಿ)ಶೋಧಿಸು, ಅನ್ವೇಷಣಮಾಡು; ಚೆನ್ನಾಗಿ, ಒಳ ಹೊಕ್ಕು, —ನೋಡು (S. a wound ಗಾಯ ಬೆದಕಿ ನೋಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

S. men's hearts ಮನುಷ್ಯರ ಹೃದಯಗಳನ್ನು ಒಳಹೊಕ್ಕು ನೋಡು, ಶೋಧಿಸು). (ಸಿಡಿಗುಂಡು, ಗೋಲಂದಾಜಿನವರು, ಮೊ. ವಿಷಯದಲ್ಲಿ ; ಕಂದಕ, ಮೊ. ಗಳ) ಎಲ್ಲ ಸ್ಥಳಗಳನ್ನೂ, ಮೂಲೆಗಳನ್ನೂ,—ಭೇದಿಸು, ವ್ಯಾಪಿಸು. (ಪ್ರಾಚೀ. ಪ್ರ.) ಹುಡುಕಿಕೊಂಡುಹೋಗು, ಹುಡುಕಿ ತೆಗೆ (*Out* ಪದದೊಡನೆ ಈಗಲೂ ರೂಢಿ: To s. out the truth). ತಲಾಷು, ಝಡತಿ, —ಮಾಡು ; ಶೋಧನೆ ನಡಸು (*For* ಉಪ. ದೊಡನೆ). (ವರ್ತಮಾನ ಕೃದಂತ) ಸಂಪೂರ್ಣ (ಶೋಧನಾತ್ಮಕ)ವಾದ, ಕೂಲಂಕಷ ವಾದ, ಸೂಕ್ಷ್ಮ (A searching discourse) [**Seárchingly** (ಕ್ರಿ. ವಿ.)]. (ನಾ.) ಹುಡುಕಾಟ, ಪರೀಕ್ಷಣ, (ಪರಿ)ಶೋಧನೆ, ಅನ್ವೇಷಣೆ ; ತಲಾಷು, ಝಡತಿ [The s. *for* or *of*. The right of s. (ಅಂತರ ರಾಷ್ಟ್ರೀಯ ನ್ಯಾ. ಶಾ.) ತಟಸ್ಥ ರಾಜ್ಯದ ಹಡಗುಗಳನ್ನು ನಿಲ್ಲಿಸಿ ಅವುಗಳಲ್ಲಿ ನಿಷಿದ್ಧ ವಸ್ತುಗಳಿವೆಯೇ ಎಂದು ಶೋಧಿಸಲು ಯುದ್ಧ ರಾಜ್ಯಕ್ಕೆ ಇರುವ ಹಕ್ಕು : ಹಡಗು ಶೋಧನೆಯ, ಝಡತಿಯ, ಹಕ್ಕು]. **S.-light** (ಮು., ಶತ್ರು ನೌಕೆಯಮೇಲೆ ಬೆಳಕು ಹಾಕಲು ಉಪಯೋಗಿಸುವ) ಯಾವ ಕಡೆಗೆ ಬೇಕಾದರೂ ತಿರುಗಿಸಿ ಪ್ರಬಲ ಪ್ರಕಾಶವನ್ನು ಬೀರಬಲ್ಲ ವಿದ್ಯುಚ್ಛಾಪ ದೀಪ : ಶೋಧನ ದೀಪ (ರೂಪ. ಸಹ). **S.-party** ತಪ್ಪಿಸಿಕೊಂಡ ಅಥವಾ ಅವಿತುಕೊಂಡ ಮನುಷ್ಯನನ್ನೊ ಕಳೆದುಹೋದ ಅಥವಾ ಬಚ್ಚಿಟ್ಟ ವಸ್ತುವನ್ನೊ ಹುಡುಕುವವರ ಗುಂಪು : ಶೋಧನ ದಳ ; ಹುಡುಕು ತಂಡ. **S.-warrant** ಕಳವು ಮಾಲು, ಮೊ. ನ್ನು ಬಚ್ಚಿಟ್ಟುಕೊಂಡಿರುವನೆಂದು ಶಂಕೆಗೆ ಗುರಿಯಾದವನ ಮನೆ, ಮೊ. ನ್ನು ಶೋಧಿಸಲು ನ್ಯಾಯಾಧಿಕಾರಿ ಕೊಟ್ಟ ಅಧಿಕಾರ ಪತ್ರ : ಶೋಧನಾಧಿಕಾರ ಪತ್ರ, ಝಡತಿ ಹುಕುಂ. **Seárcher** (ನಾ.) ; **Seárching** (ನಾ.) (ಕ್ರಿಯಾರ್ಥಗಳಲ್ಲಿ). Searchings of heart (ಮಾಡಿದ ಅಪರಾಧ, ಮೊ. ಗಳಿಂದ ಮೂಡುವ) ಮನಸ್ಸಿನ ಅಳುಕು, ಹೃದಯ ಪರೀಕ್ಷೆ. **Seárchless** (ನಾ.)

Seáson ಸೀಸ಼ನ್ (ನಾ., ಕ್ರಿ.) ಸಕಾಲ ; ಸುಸಮಯ ; ಅನುಕೂಲ ಸಂದರ್ಭ ; (ಯಾವುದಾದರೊಂದು ವಸ್ತು) ಸಮೃದ್ಧಿಯಾಗಿ ದೊರೆಯುವ, ಬಳಕೆಯಾಗಿರುವ, —ಕಾಲ [A word in s. ಸಕಾಲದಲ್ಲಿ ಕೊಟ್ಟ ಬುದ್ಧಿವಾದ, ಸಲಹೆ. In s. & out of s. ಗೊತ್ತುಗುರಿಯಿಲ್ಲದೆ ಎಲ್ಲಾ ಕಾಲದಲ್ಲಿಯೂ ; ಹೊತ್ತುಗೊತ್ತುಗಳಿಲ್ಲದೆ. Mangoes are in s. ಈಗ ಒಳ್ಳೆಯ ಮಾವಿನ ಹಣ್ಣಿನ ಕಾಲ. The holiday s. ವಿಶ್ರಾಂತಿಯ, ಹಬ್ಬದ, ಉತ್ಸವಗಳ, —ಕಾಲ (ಮು., Christmas, Easter, Whitsuntide, ಮೊ. ವು). The London s. ಲಂಡನ್ ಪಟ್ಟಣದ ಚಟುವಟಿಕೆಯ ಕಾಲ (ಪ್ರೇಕ್ಷಕರೂ ಅಭ್ಯಾಗತರೂ ಹೆಚ್ಚುಗಟ್ಟಳೆಯಾಗಿ ಬರುವ, ಸಮಾಜ ಹೆಚ್ಚು ಉತ್ಸಾಹ ಮತ್ತು ಚಟುವಟಿಕೆಗಳಿಂದ ಕೂಡಿರುವ, ಕಾಲ). The theatrical, cricket, s. ನಾಟಕ ಪ್ರದರ್ಶನಗಳ, ಕ್ರಿಕೆಟ್ ಆಟಗಳ, —ಕಾಲ. Close, open, s. (ನಿರ್ದಿಷ್ಟ ಪ್ರಾಣಿಯ) ಬೇಟೆಗೆ ನಿಷೇಧವಿರುವ, ಅನುಮತಿ ಇರುವ, ಕಾಲ]. ನಿರ್ದಿಷ್ಟ ಪ್ರಮಾಣದ ಕಾಲ, ಕೆಲವು ಕಾಲ [May endure for a s. ಈವೊಂದು ಕಾಲ ತಡೆಯಬಹುದು. S.-ticket (ಪ್ರಯಾಣ, ಪ್ರದರ್ಶನ, ಮೊ. ಗಳಿಗೆ ; ಒಂದು ವರ್ಷ, ಆರು ತಿಂಗಳು, ಮೂರು ತಿಂಗಳು, ತಿಂಗಳು, ಮೊ.) ಒಂದು ಗೊತ್ತಾದ ಅವಧಿಯವರೆಗೂ ಬೇಕಾದಷ್ಟು ಬಾರಿ ಹೋಗಿಬರಲು ಅವಕಾಶವಿರುವಂತೆ ಕಡಮೆಯ ದರದಲ್ಲಿ ಕೊಟ್ಟ ಪ್ರವೇಶ ಪತ್ರ : ನಿಯತಕಾಲ ಪ್ರವೇಶ ಚೀಟಿ ; ಸೀಸ಼ನ್ ಟಿಕೀಟು]. ಋತು ; ಕಾಲ [The four seasons ವಸಂತ, ಗ್ರೀಷ್ಮ, ಶರತ್, ಶಿಶಿರ, —ಋತು. The dry, rainy, s. (ಸಮಶೀತೋಷ್ಣ ವಲಯದ ನಾಲ್ಕು ಕಾಲಗಳಿಗೆ ಬದಲು ಉಷ್ಣ ವಲಯದಲ್ಲಿ ಕಂಡುಬರುವ ಎರಡು ಕಾಲಗಳು) : ಮಳೆಯಿಲ್ಲದ ಕಾಲ, ಮಳೆಗಾಲ]. (ಕ್ರಿ.) (ರೂಢಿ, ವಾಯುಗುಣಕ್ಕೆ ಒಗ್ಗಿಸುವುದು, ಒಂದರ ಪ್ರಭಾವಕ್ಕೆ ಈಡುಮಾಡುವುದು, ವಿಶೇಷ ರೀತಿಯ ತಯಾರಿಕೆ, ಉಪಯೋಗ, ಮೊ. ಗಳಿಂದ) ಪಳಗಿಸು, ಹದಮಾಡು, ಒಗ್ಗಿಸು, ಸಂಸ್ಕರಿಸು, ಮಾಗಿಸು, ಪರಿಪಾಕಕೊಡು, ಪಕ್ವಮಾಡು ; ಪಳಗು, ಹದಗೊಳ್ಳು, ಮಾಗು, ಪಕ್ವವಾಗು (Seasoned soldiers ಪಳಗಿದ ಸಿಪಾಯಿಗಳು. Seasoned timber ಹದಗೊಳಿಸಿದ ಚೌಬೀನೆ. Seasoned wine ಮಾಗಿದ, ಪಕ್ವವಾದ, —ದ್ರಾಕ್ಷಾಮದ್ಯ). (ಉಪ್ಪು, ಮಸಾಲೆ, ಹಾಸ್ಯ, ಮೊ. ಗಳಿಂದ) ರುಚಿಗೊಳಿಸು, ಸವಿಮಾಡು, ಒಗ್ಗರಣೆಹಾಕು (Highly seasoned dishes. Conversation seasoned with humour ಹಾಸ್ಯದಿಂದ ಮಸಾಲೆಕಟ್ಟಿದ ಸಂಭಾಷಣೆ). (ತೀಕ್ಷ್ಣತೆಯನ್ನು) ಕಡಮೆಮಾಡು, ತಗ್ಗಿಸು (Let mercy s. justice ಕರುಣೆ ನ್ಯಾಯವನ್ನು ಮೃದುಮಾಡಲಿ). **Seásonable** (ಗು.) ಆಯಾ ಕಾಲಕ್ಕೆ, ಋತುವಿಗೆ, —ತಕ್ಕ ; ಕಾಲೋಚಿತ, ಕಾಲಿಕ [S. weather ಕಾಲೋಚಿತವಾದ ಹವ (ಉದಾ., ಬೇಸಗೆಯಲ್ಲ ಸೆಕೆ)] ; ಸಮಯೋಚಿತ, ಸಂದರ್ಭೋಚಿತ (S. aid, caution). **Seásonableness** (ನಾ.); **Seásonably** (ಕ್ರಿ. ವಿ.); **Seásonal** (ಗು.) ಆಯಾ ಋತುವಿಗೆ ತಕ್ಕ; ಆಯಾ ಕಾಲದ, ಕಾಲ ಕಾಲದ, ಕಾಲಿಕ. **Seásonally** (ಕ್ರಿ. ವಿ.) ; **Seásonless** (ಗು.) ; **Seásoner** (ನಾ.) ಹದ ಮಾಡುವವನು ; —ವದು ; ಸಂಸ್ಕಾರಕ. ರುಚಿಕಾರಕ, ಮಸಾಲೆ. **Seásoning** (ನಾ.) (ಕ್ರಿಯಾರ್ಥಗಳಲ್ಲಿ) ; ರುಚಿಕಾರಕ ; ಮಸಾಲೆ.

Seásonable, etc. **Season** ನೋಡಿ.

Seat ಸೀಟ್ (ನಾ., ಕ್ರಿ. ಸಕ.) ಕುಳಿತುಕೊಳ್ಳುವುದಕ್ಕಾಗಿ ಮಾಡಿರುವ ಸಲಕರಣೆ, ಸ್ಥಳ (ಕುರ್ಚಿ, ಮಣೆ, ಮೊ. ವು) : ಆಸನ, ಪೀಠ, ಕುಳ್ಳೆಡೆ (The seats are uncomfortable ಪೀಠಗಳು ಹಿತವಾಗಿಲ್ಲ). (ಪೀಠದಮೇಲೆ) ಕುಳಿತುಕೊಳ್ಳುವುದು ; ಪೀಠಮಂಡನ, ಆಸನಾರೋಹಣ (Took his s. on the throne ಸಿಂಹಾಸನಾರೋಹಣ ಮಾಡಿದನು. Pray take a s. ದಯಮಾಡಿ ಕುಳಿತುಕೊಳ್ಳಿ). (ಕುರ್ಚಿ, ಮೊ. ಗಳ) ಕುಳಿತುಕೊಳ್ಳುವ ಭಾಗ, ಪೃಷ್ಠ (ಭಾಗ). (ಯಂತ್ರ, ಮೊ. ಗಳಲ್ಲಿ; ಮತ್ತೊಂದು ಭಾಗಕ್ಕೆ) ಆಧಾರ(ವಾದ ಭಾಗ): ಪೀಠ (S. of valve ಕವಾಟ ಪೀಠ). ಅಂಡು, ಪಿರ್ರೆ, ಪೃಷ್ಠ; (ಷರಾಯಿ, ಮೊ. ಗಳ) ಪಿರ್ರೆಭಾಗ, ಪೃಷ್ಠ. ಎಡೆ, ಸ್ಥಾನ, ನೆಲೆ, ಕ್ಷೇತ್ರ (The liver is the s. of disease. The s. of war is mountainous. An ancient s. of learning). (ತೋಪಿನಿಂದಲೂ ಹುಲ್ಲು ಮೈದಾನದಿಂದಲೂ ಕೂಡಿದ) ಹಳ್ಳಿಯ ಮಹಲು (Has a s. in Norfolk). ಒಂದು ಸ್ಥಳದಲ್ಲಿ (ಪ್ರೇಕ್ಷಕ ಪೀಠದಲ್ಲಿ) ಕುಳಿತುಕೊಳ್ಳುವ ಅಧಿಕಾರ (Have taken two seats for Macbeth ಮ್ಯಾಕ್‌ಬೆತ್ ನಾಟಕ ನೋಡುವುದಕ್ಕೆ ಎರಡು ಪೀಠಗಳಿಗೆ, ಸ್ಥಳಗಳಿಗೆ, ಟಿಕೀಟು ಕೊಂಡಿದ್ದೇನೆ). ಒಂದು ಮಂಡಲಿಯ ಅಥವಾ ಶಾಸನ ಸಭೆಯ ಸದಸ್ಯನಾಗಿ ಕುಳಿತುಕೊಳ್ಳುವ ಅಧಿಕಾರ; ಸದಸ್ಯ ಸ್ಥಾನ (Lost his *or* the s. ಅವನು ತನ್ನ ಸದಸ್ಯ ಸ್ಥಾನವನ್ನು ಕಳೆದುಕೊಂಡನು ; ಅವನಿಗೆ ಮತ್ತೆ ಚುನಾವಣೆಯಾಗಲಿಲ್ಲ). (ಕುದುರೆ, ಬೈಸಿಕಲ್, ಮೊ. ಗಳ ಮೇಲೆ) ಕುಳಿತ (ರೀತಿ), ಏರಾಟ (Has a good, firm, graceful, s.). (ಕ್ರಿ.) ಕುಳ್ಳಿರಿಸು, ಕುಳಿತುಕೊ, ಕೂರು [S. candidate ಉಮೇದುವಾರನನ್ನು (ಶಾಸನ ಸಭೆಗೆ) ಚುನಾಯಿಸು, ಆಯ್]. (ಭೂ. ಕೃ.) ಕುಳಿತುಕೊಂಡು ; ಆರೂಢನಾಗಿ (Pray be seated ದಯಮಾಡಿ ಕುಳಿತುಕೊಳ್ಳಿ). ಪೀಠಗಳನ್ನು, ಆಸನಗಳನ್ನು, —ಒದಗಿಸು, ಅಳವಡಿಸು, ಹವಣಿಸು ; ಪೀಠಗಳಿಂದ ಸಜ್ಜಿತಮಾಡು [Is seated for 5000 ೫೦೦೦ (ಜನಕ್ಕೆ) ಪೀಠಗಳಿವೆ]. (ಕೊಠಡಿ) (—ಮಂದಿಗೆ) ಪೀಠಗಳನ್ನು ಹೊಂದಿರು, ಸ್ಥಳ ಇರು. (ಕುರ್ಚಿ, ಷರಾಯಿ, ಮೊ. ಗಳ) ಪೃಷ್ಠವನ್ನು ಸರಿಮಾಡು. (ಸರಿಯಾದ) ಸ್ಥಾನದಲ್ಲಿ—ಇರಿಸು, ನೆಲೆಗೊಳಿಸು, ಸ್ಥಾಪನೆಮಾಡು (S. machinery ಯಂತ್ರವನ್ನು ಆಧಾರದಮೇಲೆ ಇಡು, ಕೂರಿಸು. A deep-seated disease ಬೇರೂರಿದ, ಆಳವಾಗಿ ನೆಲೆಗೊಂಡ, —ವ್ಯಾಧಿ. The Turks seated themselves on the Bosphorus —ಸ್ಥಾಪನೆಯಾದರು). (-)**seater** (ನಾ.) (ಮೋಟಾರು ಬಂಡಿ, ವಿಮಾನ, ಮೊ. ಗಳ ವಿಷಯದಲ್ಲಿ) (-)ಪೀಠಗಳುಳ್ಳದ್ದು (A six-s.). **Seáting** (ನಾ.) ಪೀಠ ವ್ಯವಸ್ಥೆ ; ಪೀಠ (ಭಾಗ) ; ಪೀಠೋಪಸ್ಕರ ವಸ್ತುಗಳು. **Seátless** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sebáceous ಸಿಬೇಷಸ್ (ಗು.) ನೆಣದ, ಕೊಬ್ಬಿನ, ಮೇದಸ್ಸಿನ. S. gland, follicle, duct (ಜಿಡ್ಡು ಪದಾರ್ಥವನ್ನು ಅಥವಾ ಮೇದೋಧಾತುವನ್ನು ಸ್ರವಿಸುವ ಅಥವಾ ಕೂದಲು ಮತ್ತು ಚರ್ಮಗಳಿಗೆ ಒಯ್ಯುವ) ಮೇದೋಗ್ರಂಥಿ, ಮೇದಃಕುಹರ, ಮೇದೋವಾಹಕ. S. humour ಮೇದೋಧಾತು.

Sebéstan, -en ಸಿಬೆಸ್ಟ(ಸ್ಟೆ)ನ್ (ನಾ.) ಪೂರ್ವದೇಶಗಳಲ್ಲಿಯೂ ಹಿಂದೆ ಯೂರೋಪಿನಲ್ಲಿಯೂ ಔಷಧವಾಗಿ ಉಪಯೋಗಿಸುತ್ತಿದ್ದ, ಪ್ಲಂ ಹಣ್ಣಿನಂಥ ಒಂದು ಹಣ್ಣು : ಚೆಳ್ಳೆ ಹಣ್ಣು.

Sec (F) ಸೆಕ್ (ಗು.) (ಮದ್ಯದ ವಿಷಯದಲ್ಲಿ) ಸಿಹಿಯಲ್ಲದ.

Sécant ಸೆ(ಸೀ)ಕಂಟ್ (ಗು., ನಾ.) (ಗಣಿತ) ಕತ್ತರಿಸುವ, ಛೇದಕ. (ನಾ.) (ಜ್ಯಾಮಿತಿ) ವೃತ್ತಖಂಡದ ರೇಖೆ ; ಛೇದಕ. (ತ್ರಿಕೋನಮಿತಿ) ವರ್ತುಲ ರೇಖೆಯು ಎರಡು ಕೊನೆಗಳಲ್ಲಿ ಒಂದು ಕೊನೆಯಿಂದ ತ್ರಿಜ್ಯ ರೇಖೆಯನ್ನೆಳೆದು ಮುನ್ ಚಾಚಿಸಿ, ಮತ್ತೊಂದು ಕೊನೆಯಲ್ಲಿ ಸ್ಪರ್ಶ ರೇಖೆಯನ್ನು ಎಳೆದು ಲಂಬಿಸಿದರೆ, ಆ ಎರಡು ರೇಖೆಗಳೂ ಸಂಧಿಸುವ ಬಿಂದುವಿನಿಂದ ವರ್ತುಲದ ಕೇಂದ್ರದವರೆಗಿನ ರೇಖೆಯ ಉದ್ದ) : ಛೇದಕ ರೇಖೆ ; ಸೀಕಂಟ್ ರೇಖೆ ; ಈ ಛೇದಕ ರೇಖೆಗೂ ತ್ರಿಜ್ಯಕ್ಕೂ ಇರುವ ಪ್ರಮಾಣ : ಸೀಕಂಟ್. S. of angle (ಸಮಕೋನಯುಕ್ತ ತ್ರಿಕೋನದಲ್ಲಿ) ಕರ್ಣಕ್ಕೂ ನಿರ್ದಿಷ್ಟ ಕೋನವನ್ನೊಳಕೊಂಡ ಮತ್ತೊಂದು ಭುಜಕ್ಕೂ ಇರುವ ಪ್ರಮಾಣ (ಸಂಕ್ಷಿಪ್ತ : Sec ; $\text{Sec } 60° = 2$)

Sécateur ಸೆಕಾಟರ್ (ನಾ.) ಸಮರುಗತ್ತರಿ, ಕಸಿಗತ್ತರಿ.

Sécco (It.) ಸೆಕ್ಕೊ (ನಾ.) ಒಣಗಿದ ಗಾರೆಗೆಚ್ಚಿನಮೇಲೆ ನೀರಿನಬಣ್ಣದಿಂದ ಚಿತ್ರ ಬರೆಯುವುದು : ಒಣಗಾರೆಯ ವರ್ಣಚಿತ್ರ (ಕಲೆ)

Séccotine ಸೆಕೊಟೀನ್ (ನಾ., ಕ್ರಿ. ಸಕ.) ಒಂದು ಬಗೆಯ ದ್ರವರೂಪದ ಮರವಜ್ರ ; ಅಂಟು. (ಕ್ರಿ.) —ಇದ ಅಂಟಿಸು (*On, together*, ಮೊ. ಉಪ. ದೊಡನೆ) (ತಯಾರಿಕೆಯವರು ಇಟ್ಟ ಹೆಸರು)

Secéde ಸಿಸೀಡ್ (ಕ್ರಿ. ಅಕ.) (ರಾಜಕೀಯ ಸಂಸ್ಥೆ ಅಥವಾ ಮತ ಸಂಸ್ಥೆ, ಸಂಯುಕ್ತರಾಜ್ಯ, ಮೊ. ಗಳಿಂದ) ವಿಧಿವತ್ತಾಗಿ, ಸ್ಪಷ್ಟೋಕ್ತಿಯಿಂದ, ಬೇರೆಯಾಗು, ಪ್ರತ್ಯೇಕವಾಗು, ವಿಯುಕ್ತವಾಗು ; ಬಿಟ್ಟುಹೋಗು, ತ್ಯಜಿಸು. **Secéder** (ನಾ.) ; **Secéssion** ಸಿಸೆಷನ್ (ನಾ.) ಬೇರೆಯಾಗುವುದು, ಬಿಟ್ಟುಹೋಗುವುದು, ವಿಯೋಜನೆ (War of S. ಅಮೆ. ಸಂ. ದ ೧೧ ದಕ್ಷಿಣ ಸಂಸ್ಥಾನಗಳು ಪ್ರತ್ಯೇಕವಾದ್ದರಿಂದ ಸಂಭವಿಸಿದ ೧೮೬೧-೬೫ರ ಒಳ ಯುದ್ಧ). **Secéssionism** (ನಾ.) ; **Secéssionist** (ನಾ.) ಬಿಟ್ಟುಹೋಗಬೇಕೆಂದು ವಾದಿಸುವವನು ; ತ್ಯಜನವಾದಿ.

Secérnent ಸಿಸರ್ನೆಂಟ್ (ಗು., ನಾ.) (ಶ. ವಿ.) ಸ್ರವಿಸುವ, ಸ್ರವಿಸಬಲ್ಲ ; ಸ್ರಾವಕ. (ನಾ.) ಸ್ರಾವಕಾಂಗ ; ಸ್ರಾವೋತ್ತೇಜಕ (ಔಷಧವಸ್ತು, ಮೂಲಿಕೆ)

Secéssion. **Secede** ನೋಡಿ.

Seclúde ಸಿಕ್ಲೂಡ್ (ಕ್ರಿ. ಸಕ.) (ಮನುಷ್ಯ, ಸ್ಥಳ, ಮೊ. ನ್ನು ಸಮಾಜದಿಂದ, ಜನಸಂಚಾರದಿಂದ) ಪ್ರತ್ಯೇಕವಾಗಿ, ಬೇರೆಯಾಗಿ, ವಿವಿಕ್ತವಾಗಿ, ದೂರವಾಗಿ, —ಇರಿಸು ; ಏಕಾಂತದಲ್ಲಿರಿಸು (S. oneself from society ಬೇರೆಯಾಗಿರು, ದೂರವಾಗಿದ್ದುಬಿಡು. A secluded spot, life ವಿವಿಕ್ತ —ಸ್ಥಳ, ಜೀವನ). **Seclúdedly** (ಕ್ರಿ. ವಿ.) ; **Seclúsion** ಸಿಕ್ಲೂಷ(ಷ್)ನ್ (ನಾ.) ಏಕಾಂತ(ವಾಗಿರುವುದು), ವಿವಿಕ್ತತೆ ; ಏಕಾಂತ, ವಿವಿಕ್ತ,— ಸ್ಥಳ. **Seclúsionist** (ನಾ.)

Sécond ಸೆಕಂಡ್ (ಗು., ನಾ., ಕ್ರಿ. ಸಕ.) ಎರಡನೆಯ, ದ್ವಿತೀಯ [The, a, s. ಎರಡನೆಯದು. (ಅಧ್ಯಾಹಾರ ಪ್ರ., ನಾ.) The s. = The s. day of month ತಿಂಗಳ ಎರಡನೆಯ ತಾರೀಖು, ದಿನ. In the s. place ಎರಡನೆಯದಾಗಿ. S. to none ಯಾರಿಗೂ ಕಡಮೆಯಿಲ್ಲದವನು ; ಯಾರೂ ಮೀರಲಾಗದವನು. S. class ಎರಡನೆಯ ತರಗತಿ, ದುಯ್ಯಂ. S. cabin (ಪ್ರಯಾಣಿಕರ ಹಡಗಿನಲ್ಲಿ) ಎರಡನೆಯ ತರಗತಿಯ ಸ್ಥಳ. Come in, finish, s. ಪಂದ್ಯದಲ್ಲಿ ಎರಡನೆಯವನಾಗಿ ಬರು. S. floor ಎರಡನೆಯ—ಮಹಡಿ, ಉಪ್ಪರಿಗೆ, ಅಂತಸ್ತು. S. distance (ಪ್ರಕೃತಿ ದೃಶ್ಯ ಚಿತ್ರದಲ್ಲಿ) ಮುನ್ನೆಲೆಗೂ ಹಿನ್ನೆಲೆಗೂ ನಡುವಣ ಸ್ಥಳ ; ನಡು ನೆಲೆ]. ಮತ್ತೊಂದು ; ಹೆಚ್ಚಿನ ; ಅಧಿಕ ; ಪುನರ್—, ಮರು— [**S. advent** (ಯೇಸು ಕ್ರಿಸ್ತನು ಮತ್ತೊಮ್ಮೆ ಸಶರೀರನಾಗಿ ಬಂದು ಐಹಿಕಾಧಿಪತ್ಯ ನಡಸುತ್ತಾನೆಂದು ನಂಬುವವರ ಪ್ರಕಾರ) ಯೇಸು ಕ್ರಿಸ್ತನ ಪುನರವತಾರ, ಪುನರಾಗಮನ. **Second-ádventist** (ನಾ.) ಪುನರವತಾರ ವಾದಿ. **S. ballot** (ಒಂದು ಚುನಾವಣೆಯಲ್ಲಿ ಎಲ್ಲರಿಗಿಂತ ಮೇಲೆ ಬಂದವನಿಗೆ ದೊರೆತ ಅಭಿಮತಗಳ ಸಂಖ್ಯೆ ಒಟ್ಟು ಗಣನೆಯಾದ ಅಭಿಮತ ಸಂಖ್ಯೆಯಲ್ಲಿ ಸೇಕಡ ೫೦ಕ್ಕಿಂತ ಕಡಮೆಯಾಗಿದ್ದರೆ ಅವನನ್ನೂ ಅವನ ತರುವಾಯ ಹೆಚ್ಚು ಸಂಖ್ಯೆ ಪಡೆದವನನ್ನೂ ಮಾತ್ರ ನಿಲ್ಲಿಸಿ ಮಾಡುವ) ಎರಡನೆಯ ಸಾರಿಯ ಚುನಾವಣೆ. **S. chamber** (ಎರಡು ಸಭೆಗಳುಳ್ಳ ಶಾಸನ ಸಂಸ್ಥೆಗಳಲ್ಲಿ) ಮೇಲಿನ, ವರಿಷ್ಠ, —ಸಭೆ. **S. coming** = S. advent. **S. division** (Divide ಪದದ ಕೆಳಗೆ Division ನೋಡಿ). **S. nature** ಹುಟ್ಟುಗುಣದಷ್ಟು ಸ್ವಾಭಾವಿಕವಾಗಿಹೋದ ಅಭ್ಯಾಸ ಗುಣ : ಎರಡನೆಯ ಸ್ವಭಾವ (Habit is s. n.). **S. self** (Self ನೋಡಿ). **S. teeth** (ಮಕ್ಕಳ ಹಾಲುಹಲ್ಲುಗಳು ಬಿದ್ದುಹೋದನಂತರ) ಎರಡನೆಯ ಬಾರಿ ಹುಟ್ಟುವ ಹಲ್ಲುಗಳು ; ವಯಸ್ಕರ ಹಲ್ಲು (Milk ಪದದ ಕೆಳಗೆ Milk-teeth ನೋಡಿ). **S. thoughts** (ಮೊದಲು ದುಡುಕಿನಿಂದ, ಆತುರದಿಂದ ಮಾಡಿದ್ದು, ಆಮೇಲೆ) ಪುನರ್ವಿಮರ್ಶೆಯಿಂದ, ಪುನಃ ಪರಿಶೀಲನೆಯಿಂದ, ಬಂದ ಅಭಿಪ್ರಾಯ, ನಿರ್ಣಯ ; ಪುನರಾಲೋಚನೆ. **S. wind** (Wind[1] ನೋಡಿ)]. ಎರಡನೆಯ, ಕಡಮೆಯ, —ದರ್ಜೆಯ ; ಅಪ್ರಧಾನ, ಗೌಣ ; ಸ್ವಪ್ರತಿಭೆಯಿಲ್ಲದ ; ನಕಲಿನ, ಅನುಕರಣದ ; ರೂಪಕವಾದ [**S. cause** ಮತ್ತೊಂದು ಕಾರಣದಿಂದ ಉಂಟಾದ ಕಾರಣ ; ಉತ್ಪನ್ನ ಕಾರಣ. **S. childhood** (Child ಪದದ ಕೆಳಗೆ Childhood ನೋಡಿ). **S. Solomon** ಸಾಲೊಮನ್ ಸದೃಶ ವ್ಯಕ್ತಿ ; ಎರಡನೆಯ ಸಾಲೊಮನ್. **S. fiddle** ಎರಡನೆಯ, ಅಧೀನ, —ಪಾತ್ರ (ವಹಿಸಿ) (Play s. fiddle ಒಬ್ಬನ— ಹಿಮ್ಮೇಳದವನಾಗು, ಹಿಮ್ಮೇಳ ಹಿಡಿ ; ಅಧೀನ ಪಾತ್ರ ವಹಿಸು). **S. intention** (Intense ಪದದ ಕೆಳಗೆ Intention ನೋಡಿ). **S. sight** (Sight ನೋಡಿ). **S.-best** ಎರಡನೆಯ ದರ್ಜೆಯ, ಅಷ್ಟು ಉತ್ತಮವಲ್ಲದ (Come off s.-b. ಸ್ಪರ್ಧೆಯಲ್ಲಿ ಗೆಲ್ಲದೆ ಎರಡನೆಯವನಾಗು ; ತೇರ್ಗಡೆಯಾಗದೆ ಹೋಗು). **S.-class** ಎರಡನೆಯ, ಕಡಮೆಯ, —ದರ್ಜೆಯ, ತರಗತಿಯ. S.-c. passenger (ರೈಲು, ಮೊ. ಗಳಲ್ಲಿ) ಎರಡನೆಯ ತರಗತಿಯ ಪ್ರಯಾಣಿಕ. **S.-hand**[1] (ಬಟ್ಟೆ, ಪುಸ್ತಕ, ಸಾಮಾನು, ಮೊ. ಗಳ ವಿಷಯದಲ್ಲಿ) ಇನ್ನೊಬ್ಬರು ಉಪಯೋಗಿಸಿಬಿಟ್ಟ ; ಹಳೆಯ, ಬಳಸಿದ ; (ಸಂಗತಿ, ಮೊ. ಗಳ ವಿಷಯದಲ್ಲಿ) ಮತ್ತೊಬ್ಬರಿಂದ—ಬಂದ, ತೆಗೆದುಕೊಂಡ ; ಕೇಳು ಮಾತಾದ : ಪರೋಕ್ಷವಾಗಿ ಬಂದ, ಪಡೆದ (At s. hand). **S. lieutenant** (ಲೆಫ್ಟಿನೆಂಟಿಗಿಂತ ಕೆಳಗಿನ) ಒಬ್ಬ ಸೈನಿಕಾಧಿಕಾರಿ. **S.-pair back, front** ಮನೆಯ ಎರಡನೆಯ ಮಹಡಿಯಲ್ಲಿ ಹಿಂಭಾಗದ, ಮುಂಭಾಗದ, ಕೋಣೆ (Pair ನೋಡಿ). **S. person** (ವ್ಯಾ.) ಮಧ್ಯಮ ಪುರುಷ. **S.-rate** (ಗು., ನಾ.) ಎರಡನೆಯ ದರ್ಜೆಯ, ಉತ್ತಮವಲ್ಲದ, ಸಾಮಾನ್ಯ (ವಸ್ತು, ಮನುಷ್ಯ) ; (ಹಡಗಿನ ವಿಷಯದಲ್ಲಿ) ಎರಡನೆಯ ತರಗತಿಗೆ ಸೇರಿದ (ಯುದ್ಧ ಹಡಗು)]. (ನಾ.) (ಪಂದ್ಯ, ಮೊ. ಗಳಲ್ಲಿ) ಎರಡನೆಯವನು, ಎರಡನೆಯದು (A good s. ಒಂದನೆಯದರ ಹತ್ತಿರ ಹತ್ತಿರಕ್ಕೆ ಬರುವ, ಬಂದ, ಎರಡನೆಯದು). (ಪರೀಕ್ಷೆಯಲ್ಲಿ) ಎರಡನೆಯ ತರಗತಿ(ಯಲ್ಲಿ ತೇರ್ಗಡೆಯಾದವನು). ಇನ್ನೊಬ್ಬ, ಮತ್ತೊಬ್ಬ, ಇನ್ನೊಂದು, ಮತ್ತೊಂದು, ತರುವಾಯದವನು, ತರುವಾಯದ್ದು. (ಸಂ.) ಸ್ವರಾಷ್ಟಕದ ಸ್ವರಶ್ರೇಣಿಯಲ್ಲಿ ನಿರ್ದಿಷ್ಟ ಸ್ವರಕ್ಕೆ ಎರಡನೆಯ ಸ್ವರ ; ಈ ಎರಡು ಸ್ವರಗಳ ಸ್ಥಾಯಿಗಳಿಗಿರುವ ಅಂತರ ; ಈ ಎರಡು ಸ್ವರಗಳ ಮೇಳ ; ಸ್ವರಾಷ್ಟಕ ಶ್ರೇಣಿಯಲ್ಲಿ ಎರಡನೆಯ ಸ್ವರ ; ನಿರ್ದಿಷ್ಟ ರಾಗಕ್ಕೆ ಮೇಳವಾಗಿರುವ, ಎರಡನೆಯ ಧ್ವನಿ, ವಾದ್ಯ,

CC-0. In Public Domain. Gurukul Kangri Collection, Haridwar

ಅಥವಾ ಭಾಗ. (ಬ. ವ.) ಎರಡನೆಯ ದರ್ಜೆಯ, ದುಯ್ಯಂ,—ಸರಕುಗಳು (ಮು., ಹಿಟ್ಟಿನ ತರಿ; ಇವರ ರೊಟ್ಟಿ). (ದ್ವಂದ್ವ ಯುದ್ಧದಲ್ಲಾಗಲಿ ಮುಷ್ಟಿಕಾಳಗದಲ್ಲಾಗಲಿ, ನ್ಯಾಯಭಂಗವಾಗದಂತೆ ನೋಡಿಕೊಳ್ಳುವುದಕ್ಕಾಗಿ, ಹೋರಾಳುಗಳು ತಮ್ಮ ಸಂಗಡ ಕರೆದುಕೊಂಡು ಹೋಗುವ) ಸಹಾಯಕ, ದ್ವಿತೀಯ. (ಕಾಲಮಾನ ಅಥವಾ ಕೋನ ಮಾನದಲ್ಲಿ) ನಿಮಿಷದ ಅರುವತ್ತನೆಯ ಒಂದು ಭಾಗ: ಸೆಕಂಡ್. (ಶಿಥಿಲ ಪ್ರ.) ಸ್ವಲ್ಪ ಕಾಲ, ಕ್ಷಣ (Wait a s. ಒಂದು ಕ್ಷಣ ತಾಳು). [S of exchange (Exchange ನೋಡಿ). **S.-hand**[2] (ಕೆಲವು ಗಡಿಯಾರಗಳಲ್ಲಿ ಸೆಕಂಡುಗಳನ್ನು ತೋರಿಸಲು ಹಾಕಿರುವ) ಸೆಕಂಡು ಮುಳ್ಳು. **S.-mark** ಕಾಲವನ್ನು ಅಥವಾ ಕೋನ ದೂರವನ್ನು ಸೂಚಿಸುವ ಸಂಖ್ಯೆಯಲ್ಲಿ ಸೆಕಂಡು ಅಂಕಿಯಮೇಲೆ ಹಾಕುವ ಗುರುತು (″) (1° 6′ 40″ ೧ ಡಿಗ್ರಿ ೬ ಮಿನಿಟ್ಟು ೪೦ ಸೆಕಂಡು. 1h. 35′ 15″ ೧ ಗಂಟೆ ೩೫ ನಿಮಿಷ ೧೫ ಸೆಕಂಡು); ಅಂಗುಲ ಸೂಚಕ ಚಿಹ್ನೆ (10″ ೧೦ ಅಂಗುಲ)]. (ಕ್ರಿ.) ಬಲ ಕೊಡು, ಪುಷ್ಟೀಕರಿಸು (S. words with deeds ಆಡಿದ್ದನ್ನು ಮಾಡಿ ಪುಷ್ಟೀಕರಿಸು; ಮಾತುಗಳಿಗೆ ಕೃತ್ಯದಿಂದ ಬಲ ಕೊಡು); (ಚರ್ಚೆಯಲ್ಲಿ ಸೂಚಕನನ್ನು ಅಥವಾ ಸೂಚನೆಯನ್ನು) ಅನುಮೋದಿಸು; (ಸೂಚಕನಿಗೆ, ಸೂಚನೆಗೆ) ಬೆಂಬಲಕೊಡು, ನೆರವಾಗು (Will you s. me if I move the proposition ?). (ಸೈನಿಕ: ಸಾ., **Secónd**) (ಒಬ್ಬ ಅಧಿಕಾರಿಯನ್ನು ಬೇರೆ ಕೆಲಸಕ್ಕೆ ನಿಯೋಜಿಸುವುದಕ್ಕಾಗಿ ಆತನ ದಳದಿಂದ) ತಾತ್ಕಾಲಿಕವಾಗಿ ಬಿಡುಗಡೆಮಾಡು, ಬಿಟ್ಟುಕೊಡು. **Sécondary** (ಗು., ನಾ.) ಎರಡನೆಯ (ಗಣನೆಯ, ದರ್ಜೆಯ); ತರುವಾಯದ; ಅಪ್ರಧಾನ, ಗೌಣ, ಆನುಷಂಗಿಕ; ಕೆಳ, ಕಡಮೆ,—ದರ್ಜೆಯ [S. colour (Colour ನೋಡಿ). S. education, school ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿ ಇನ್ನೂ ವಿಶ್ವವಿದ್ಯಾನಿಲಯಕ್ಕಾಗಲಿ ವೃತ್ತಿಗಾಗಲಿ ಹೋಗದಿರುವ, ಮು., ೧೩-೧೯ ವಯಸ್ಸಿನ ಹುಡುಗರ ವಿದ್ಯಾಭ್ಯಾಸ, ವಿದ್ಯಾಶಾಲೆ: ಮಾಧ್ಯಮಿಕ—ವಿದ್ಯಾಭ್ಯಾಸ, ವಿದ್ಯಾಶಾಲೆ; ಹೈ ಸ್ಕೂಲು ದರ್ಜೆಯ—. S. planet ಉಪಗ್ರಹ]. (ಭೂ. ವಿ.) ಎರಡನೆಯ ಭೂಯುಗದ. (ನಾ.) ಪ್ರತಿನಿಧಿ, ನಿಯೋಗಿ. ಬಿಷಪ್ಪಿನ ಪೀಠವಿರುವ ಆರಾಧನ ಮಂದಿರದ ಎರಡನೆಯ ದರ್ಜೆಯ ಅಧಿಕಾರಿ. ಉಪಗ್ರಹ. ರೆಕ್ಕೆಯ ಎರಡನೆಯ ಕೀಲಿನ ಬಳಿಯ ಗರಿ; ಕೀಟದ ಹಿನ್ ರೆಕ್ಕೆ. ಎರಡನೆಯ (ಭೂಯುಗದ) ಸ್ತರ. **Sécondarily** (ಕ್ರಿ.ವಿ.); **Secónde** (F) ಸೆಕಾಂಡ್, ಸಗಾಂಡ್ (ನಾ.) ಕತ್ತಿವರಿಸೆಯ ಒಂದು ಪಟ್ಟು. **Séconder** ಸೆಕಂಡರ್ (ನಾ.) ಅನುಮೋದಕ, ಬೆಂಬಲಕಾರ. **Sécondly** (ಕ್ರಿ. ವಿ.) ಎರಡನೆಯದಾಗಿ.

Sécondary, Secónde, etc. **Second** ನೋಡಿ.

Secóndo (It.) ಸೆಕೊಂಡೊ (ನಾ.) 'ಡ್ಯೂಎಟ್' ಎಂಬ ಸಂಗೀತದಲ್ಲಿ ಎರಡನೆಯ ಗಾಯಕ ಅಥವಾ ಕೆಳಗಿನ ಸ್ಥಾಯಿಯ ಕಂಠ, ವಾದ್ಯ.

Sécrecy. **Secret** ನೋಡಿ.

Sécret ಸೀಕ್ರೆಟ್ (ಗು., ನಾ.) ಗುಟ್ಟಾದ, ಗೋಪ್ಯವಾದ, ರಹಸ್ಯವಾದ; ಮುಚ್ಚಿಟ್ಟ; ಗುಪ್ತ, ಗೂಢ [S. treaty, door. The s. parts (ದೇಹದ) ಗುಹ್ಯಭಾಗಗಳು, ಜನನೇಂದ್ರಿಯಗಳು. S. service (ಮು., ಸರ್ಕಾರಕ್ಕಾಗಿ ಮಾಡುವ ರಾಜಕೀಯ, ಮೊ.) ಗೂಢ ಸಮಾಚಾರ ಸಂಗ್ರಹಣದ ಕೆಲಸ; ಗುಪ್ತ ಸೇವೆ; ಪತ್ತೇದಾರಿ ಕೆಲಸ. S.-s. money (ಖರ್ಚಿನ ವಿವರಗಳನ್ನು ಕೊಡಬೇಕಾಗಿಲ್ಲದ, ಇಂಥ ಸೇವೆಗೆ ಪ್ರತಿಫಲವಾಗಿ ವಿನಿಯೋಗಿಸುವ) ಗುಪ್ತ ಸೇವಾ ಧನ]. ಗೋಪ್ಯ ಸ್ವಭಾವದ, ಗುಟ್ಟು ಬಿಟ್ಟುಕೊಡದ; (ಸ್ಥಳ, ಮೊ. ಗಳು) ಏಕಾಂತ, ವಿವಿಕ್ತ. (ನಾ.) ಗುಟ್ಟು, ರಹಸ್ಯ, ಏಕಾಂತ, ಅಂತರಂಗ (Keep a *or* the s. ಗುಟ್ಟು ಇಟ್ಟುಕೊ, ಬಿಟ್ಟುಕೊಡದಿರು. In s. ಗುಟ್ಟಿನಲ್ಲಿ, ಗುಟ್ಟಾಗಿ. In the s. ಗುಟ್ಟು ತಿಳಿದು; —ತಿಳಿದವರಲ್ಲಿ ಸೇರಿ. Open s. ಎಲ್ಲರಿಗೂ ತಿಳಿದಿರುವ, ತಿಳಿದುಕೊಳ್ಳಲು ಹೊರಟರೆ ತಿಳಿಯುವ, —ಗುಟ್ಟು; ತೆರೆದ, ಬಯಲ, —ಗುಟ್ಟು; ಪ್ರಕಟ ರಹಸ್ಯ). ವಿವರಣೆ, ಕಾರಣ, —ತಿಳಿಯದ ವಿಷಯ; ರಹಸ್ಯ, ಮರ್ಮ (The secrets of nature ಪ್ರಕೃತಿಯ ರಹಸ್ಯಗಳು). ಫಲ ಪ್ರಾಪ್ತಿಗೆ ನಿಜವಾಗಿ ಸಾಧಕವಾದ ಆದರೆ ಸಾಮಾನ್ಯವಾಗಿ ರೂಢಿಯಲ್ಲಿಟ್ಟುಕೊಳ್ಳದ ನಡೆವಳಿಕೆ: ಗುಟ್ಟು, ಮರ್ಮ (*Of* ಉಪ. ದೊಡನೆ) (The s. of success is to try again ಪುನಃ ಪ್ರಯತ್ನವೇ ಜಯದ ಗುಟ್ಟು). (ರೋ. ಕ್ಯಾ.) ಪ್ರಭು ಭೋಜನದ ಆರಾಧನೆಯಲ್ಲಿ ಪುರೋಹಿತನ ಏಕಾಂತ ಪ್ರಾರ್ಥನೆ. (ಬ. ವ. ದಲ್ಲಿ) ಜನನೇಂದ್ರಿಯಗಳು, ಗುಹ್ಯ ಭಾಗಗಳು. **Sécretly** (ಕ್ರಿ. ವಿ.); **Sécrecy** ಸೀಕ್ರೆಸಿ (ನಾ.) ಗುಟ್ಟಾಗಿಡುವುದು, ಮುಚ್ಚಿಡುವುದು, ಬಚ್ಚಿಡುವುದು; ಹೀಗೆ ಇಡುವ ಸಾಮರ್ಥ್ಯ; ರಹಸ್ಯ ಸ್ವಭಾವ; ಗೋಪ್ಯತೆ, ಮಾರ್ಮಿಕತೆ, ಮರ್ಮ (The gift of s. ಗುಟ್ಟಾಗಿಡುವ ಶಕ್ತಿ, ಜಾಣ್ಮೆ. There can be no s. about it ಅದರ ಬಗ್ಗೆ ಏನೂ ರಹಸ್ಯವಿರಲಾರದು. In s. ಗುಟ್ಟಾಗಿ, ಗೋಪ್ಯವಾಗಿ). **Sécretive** ಸೀಕ್ರಿಟಿವ್, **Secrétive** ಸಿಕ್ರೀ— (ಗು.) ಮುಚ್ಚಿಡುವ ಸ್ವಭಾವದ, ಗೋಪ್ಯ ಪ್ರವೃತ್ತಿಯ, ಮುಚ್ಚುಮರೆಯ, ಗುಟ್ಟುಬಿಡದ. **Sécretively** (ಕ್ರಿ. ವಿ.); **Sécretiveness** ಸೀಕ್ರಿಟಿವ್‌ನೆಸ್, **Secré-** ಸಿಕ್ರೀ— (ನಾ.)

Secretairé (F) ಸೆಕ್ರಿಟೇ(ಅ)ರ್, ಸಕ್ರೆಟೇರ್ (ನಾ.) = Escritoire.

Sécretary ಸೆಕ್ರಿಟರಿ (ನಾ.) ಪತ್ರವ್ಯವಹಾರ, ಲೇಖನ ಕಾರ್ಯ, ಸಮಾಚಾರ ಸಂಗ್ರಹಣ ಮತ್ತು ಇತರ ಗೋಪ್ಯ ವಿಷಯಗಳಲ್ಲಿ, ಒಬ್ಬನಿಗೆ ಸಹಾಯಕನಾಗಿ ನೇಮಕನಾದವನು; ಕಾರ್ಯ ಸಹಾಯಕ; ರಾಯಸದವನು; ಕರಣಿಕ; ಕಾರಭಾರಿ; ಕಾರ್ಯದರ್ಶಿ [Private s. ಆಪ್ತ ಕಾರ್ಯದರ್ಶಿ. Unpaid s. ಅನುಭವ ಪಡೆಯುವುದಕ್ಕಾಗಿ ಪ್ರಮುಖ ರಾಜಕೀಯಜ್ಞನ ಬಳಿ ಸಂಬಳವಿಲ್ಲದೆ ಕಾರ್ಯದರ್ಶಿಯಾಗಿ ಕೆಲಸಮಾಡುವವನು: ಸಂಬಳವಿಲ್ಲದ (ಉಮೇದುವಾರ) ಕಾರ್ಯದರ್ಶಿ]. ಸಂಘ, ಸಂಸ್ಥೆ, ಮಂಡಲಿ, ಮೊ. ಗಳಲ್ಲಿ ಪತ್ರವ್ಯವಹಾರ, ಲೆಕ್ಕಪತ್ರಗಳ ರಕ್ಷಣೆ, ಮೊ. ಕೆಲಸಗಳಿಗಾಗಿ ನೇಮಕವಾದ ಅಧಿಕಾರಿ: ಕಾರ್ಯದರ್ಶಿ, ವ್ಯವಹಾರದರ್ಶಿ [Honorary s. (ಸಂಕ್ಷಿಪ್ತ: Hon. sec.) (ಸಂಬಳವಿಲ್ಲದೆ ಕೆಲಸಮಾಡುವ) ಗೌರವ ಕಾರ್ಯದರ್ಶಿ]. ಸರಕಾರದ ಇಲಾಖೆಯ ಮೇಲಧಿಕಾರಿ: ಮಂತ್ರಿ, ಸಚಿವ [The S. of State for the Home Department *or* Home S. ಸ್ವದೇಶಾಂಗ ಸಚಿವ, ಒಳಾಡಳಿತದ ಮಂತ್ರಿ. The S. of State for Foreign Affairs *or* Foreign S. ವಿದೇಶಾಂಗ ಸಚಿವ, ಹೊರಾಡಳಿತದ ಮಂತ್ರಿ, ಸಂಧಿವಿಗ್ರಹಿ. The S. of State for War *or* War S. ಯುದ್ಧ ಮಂತ್ರಿ, ಸಮರ ಸಚಿವ. The S. of State for the Colonies *or* Colonial S. ನೆಲಸುನಾಡು ಮಂತ್ರಿ. The S. of State for India *or* Indian S. ಭಾರತ (ಶಾಖೆಯ)—ಮಂತ್ರಿ, ಸಚಿವ. The S. for Scotland. Under-s. (ಮಂತ್ರಿಗಳಿಗೆ ಸಹಾಯಕರಾದ) ಉಪಸಚಿವ(ರಲ್ಲೊಬ್ಬ), ಉಪಮಂತ್ರಿ(ಗಳಲ್ಲೊಬ್ಬ) (ಇವರಲ್ಲಿ ಒಬ್ಬನು ಕಾಯಮ್ಮಾಗಿ ಕಚೇರಿ ಕೆಲಸದ ವ್ಯವಸ್ಥಾಪಕನಾಗಿಯೂ —ಸ್ಥಾಯಿ ಉಪಮಂತ್ರಿ,— ಮತ್ತೊಬ್ಬನು ಎರಡನೆಯ ಶಾಸನ ಸಭೆಯಲ್ಲಿ ಮಂತ್ರಿಯ ಪ್ರತಿನಿಧಿಯಾಗಿಯೂ ಇರುವವನು). Permanent s. ಸ್ಥಾಯಿ ಉಪಮಂತ್ರಿ. S. of legation *or* embassy ರಾಯಭಾರಿಯ ಮುಖ್ಯ ನಿಯೋಗಿ ಮತ್ತು ಕಾರ್ಯದರ್ಶಿ]. ಬರವಣಿಗೆಯ ಮೇಜು (= Escritoire). (ಮುದ್ರಣ) ಕೈಬರವಣಿಗೆ ಅಕ್ಷರದ ಬಗೆಯ ಅಚ್ಚಿನ ಮೊಳೆ. **S.-bird** ಬರಹಗಾರನು ಕಿವಿಗೆ ಸಿಕ್ಕಿದ ಲೇಖನಿಯನ್ನು ಹೋಲುವಂಥ ತಲೆಜುಟ್ಟುಳ್ಳ, ಹಾವುಗಳನ್ನು ಹಿಡಿದು ತಿನ್ನುವ, ಆಫ್ರಿಕದ ಒಂದು ಹಕ್ಕಿ. **Secretárial** —ಟೇ(ಅ)ರಿಯಲ್ (ಗು.); **Secretáriat(e)** —ಯ(ಯೆ)ಟ್ (ನಾ.) ಕಾರ್ಯದರ್ಶಿಯ—ಕಚೇರಿ, ಇಲಾಖೆ, ಶಾಖೆ, ಸಿಬ್ಬಂದಿ. **Sécretaryship** (ನಾ.) ಕಾರ್ಯದರ್ಶಿತ್ವ; ಕಾರ್ಯದರ್ಶಿಯ ಕೆಲಸ.

Secréte ಸಿಕ್ರೀಟ್ (ಕ್ರಿ. ಸಕ.) (ವಸ್ತು, ವ್ಯಕ್ತಿ, ಮೊ. ನ್ನು) ಬಚ್ಚಿಡು, ಮುಚ್ಚಿಡು, ಮರಸಿಡು, ಬಯ್ತಿಡು; ಬಚ್ಚಿಟ್ಟುಕೊ, ಮರಸಿಟ್ಟುಕೊ (*Oneself*). (ಶ. ವಿ.; ಗ್ರಂಥಿ, ಅಂಗ, ವ್ಯಕ್ತಿ, ಮೊ. ಗಳ ವಿಷಯದಲ್ಲಿ) ಊರು, ಒಸರು, ಸ್ರವಿಸು, ದ್ರವಿಸು. **Secrétion** ಸಿಕ್ರೀಷನ್ (ನಾ.) (ಕ್ರಿಯಾರ್ಥಗಳಲ್ಲಿ); (The s. of stolen goods ಕದ್ದ ಸಾಮಾನುಗಳ

Digitized by Arya Samaj Foundation Chennai and eGangotri

ಬಚ್ಚಿಡುವಿಕೆ). (ಶ. ವಿ.) ದೇಹದ ಉಪಯೋಗಕ್ಕಾಗಿ ಅಥವಾ ದೇಹ ದಿಂದ ಹೊರಕ್ಕೆ ವಿಸರ್ಜನೆಗಾಗಿ ರಕ್ತದಿಂದ (ಅಥವಾ ಮರದ ವಿಷಯದಲ್ಲಿ ಜೀವರಸದಿಂದ) ಕೆಲವು ವಿಶೇಷ ಪದಾರ್ಥಗಳು ಬೇರ್ಪಡುವುದು: ಸ್ರವಣ; ಹೀಗೆ ಬೇರ್ಪಟ್ಟ ಪದಾರ್ಥ: ಸ್ರಾವ [ಉದಾ., ಜೊಲ್ಲು, ಮೂತ್ರ; (ಮರದ ವಿಷಯದಲ್ಲಿ) ರಾಳ, ಗೋಂದು]. **Secrétor** (ನಾ.) ಸ್ರಾವಕ. **Secrétory** (ಗು.)

Secrétion, Secrétory, etc. Secrete ನೋಡಿ.

Sécretive, etc. Secret ನೋಡಿ.

Sect ಸೆಕ್ಟ್ (ನಾ.) (ಒಂದು ಧರ್ಮದ) ಒಳ ಪಂಗಡ, ಉಪ ಶಾಖೆ; ಪಕ್ಷ, ಪಂಥ; ಒಂದು ಪಂಥದವರು, ಪಂಗಡದವರು. **Sectárian** ಸೆಕ್ಟೇ(ಅ)ರಿಯನ್ (ಗು., ನಾ.) ಪಂಥಾಭಿಮಾನದ(ವನು). **Sectárianism** (ನಾ.) ಪಂಥಾಭಿಮಾನ. **Sectárianize** (ಕ್ರಿ.) ಮತೀಯ, ಪಂಥೀಯ, —ಮಾಡು (Sectarianized colleges); ಪಂಥಗಳಾಗಿ ಒಡೆ; ಪಂಥಾಭಿಮಾನದಿಂದ ವರ್ತಿಸು; **Séctary** ಸಕ್ಟರಿ (ನಾ.) ಪಂಗಡದವನು, ಪಂಥದವನು, ಪಂಥಾನುಯಾಯಿ; ಮತಾನುಯಾಯಿ (ಮು., ಇಂಗ್ಲೆಂಡಿನ ಒಳಯುದ್ಧ ಸಮಯದಲ್ಲಿ ಸ್ವತಂತ್ರ ಪಂಗಡದವನು, ಪ್ರೆಸ್ಬಿಟೇರಿಯನ್ ಪಂಥದವನು)

Séctary. Sect ನೋಡಿ.

Séctile ಸೆಕ್‌ಟೈ(ಟಿ)ಲ್ (ಗು.) ಕತ್ತರಿಸಲಾಗುವ, ಸೀಳಲಾಗುವ, ಛೇದ್ಯ (ಮು., ಮೃದು ಖನಿಜಗಳ ವಿಷಯದಲ್ಲಿ)

Séction ಸೆಕ್‌ಷನ್ (ನಾ., ಕ್ರಿ. ಸಕ.) ಕತ್ತರಿಸುವುದು, ಕತ್ತರಿಸಿಹಾಕುವುದು; ಕತ್ತರಿಕೆ; ಛೇದ(ನ). (ಕತ್ತರಿಸಿದ) ಭಾಗ, ಖಂಡ, ವಿಭಾಗ, ಪರ್ವ (ಉದಾ., ಕಬ್ಬಿನಲ್ಲಿ ಎರಡು ಗೆಣ್ಣುಗಳ ನಡುವಣ ಭಾಗ). ಗ್ರಂಥದ ಉಪ ವಿಭಾಗ: ಪರಿಚ್ಛೇದ, ಪ್ರಕರಣ [S.-mark ಪ್ರಕರಣ ಚಿಹ್ನೆ (§) (§ 20 ೨೦ನೆಯ ಪ್ರಕರಣ)]. (ಜೋಡಿಸಿ ಮಾಡಬಹುದಾದ ಸುಲಭ ಸಾಗಣೆಯ ದೋಣಿ, ಮರದ ಮನೆ, ಮೊ. ಗಳ) ಜೋಡಣೆಯ ಅಂಗ, ಭಾಗ(ಗಳಲ್ಲೊಂದು). (ಸೈನಿಕ) ಅರ್ಧ ದಳದಲ್ಲಿ ಒಂದು ವಿಭಾಗ; ತುಕಡಿ (ಸಾ., ದಳದ ನಾಲ್ಕು ಭಾಗಗಳಲ್ಲಿ ಒಂದು). ಜನತೆಯಲ್ಲಿ ಪ್ರತ್ಯೇಕ ಹಿತಗಳೂ ವೈಶಿಷ್ಟ್ಯವೂ ಉಳ್ಳ ಒಂದು ಗುಂಪು; ಪಂಗಡ, ವರ್ಗ. [Microscopic s. ಸೂಕ್ಷ್ಮದರ್ಶಕೀಯ ಪರೀಕ್ಷೆಗಾಗಿ ಒಂದು ವಸ್ತುವಿನಿಂದ ಕತ್ತರಿಸಿ ತೆಗೆದ ತೆಳು ಪದರ: ಸೂಕ್ಷ್ಮದರ್ಶಕೀಯ ಛೇದ. Subject falls into five sections ವಿಷಯ ಐದು ಪ್ರಕರಣಗಳಾಗಿ ವಿಂಗಡವಾಗುತ್ತದೆ. The last s. of the journey. S.-commanders will be responsible ತುಕಡಿ ನಾಯಕರು ಜವಾಬುದಾರರಾಗಿರುವರು. Popular with all sections and classes ಎಲ್ಲ ಪಂಗಡಗಳ ಮತ್ತು ವರ್ಗಗಳ ಮೆಚ್ಚಿಗೆಯನ್ನು ಪಡೆದು]. ಘನಾಕೃತಿಯನ್ನು ಸಮತಲದಿಂದ ಕೊಯ್ಯುವುದು, ಹಾಗೆ ಕೊಯ್ದು ಆದ ಸಮತಲ ರೇಖಾಕೃತಿ, ಹಾಗೆ ಕೊಯ್ದರೆ ಕಾಣುವ(ಂತೆ ನಿರೂಪಿಸಿದ) ಒಳ ರಚನೆ: ಕೊಯ್ತ, ಛೇದ (ಮುಖ) [Conic s. (Cone ಪದದ ಕೆಳಗೆ Conic ನೋಡಿ). Conic sections ಶಂಕುಚ್ಛೇದ ಗಣಿತ. Vertical, horizontal, longitudinal, oblique, s. ನಿಲುವು, ಅಡ್ಡ, ನೀಳ, ಓರೆ, —ಕೊಯ್ತ; ಊರ್ಧ್ವ, ಸಮ, ದೀರ್ಘ, ವಕ್ರ, —ಛೇದ]. (ಪ್ರಕೃತಿ ಚರಿತ್ರೆ) ಒಳ —ಜಾತಿ, ಪಂಗಡ. ಪ್ರಕರಣ ಚಿಹ್ನೆ (§). (ಕ್ರಿ.) ಭಾಗಗಳಾಗಿ, ಪರ್ವಗಳಾಗಿ, —ಕತ್ತರಿಸು, ಛೇದಿಸು; ಪ್ರಕರಣಗಳಾಗಿ, ವರ್ಗಗಳಾಗಿ, —ವಿಭಾಗ ಮಾಡು, ವಿಂಗಡಿಸು. **Séctional** (ಗು.); **Séctionally** (ಕ್ರಿ. ವಿ.); **Séctionalism** (ನಾ.) ಪಂಗಡ—ಭಾವನೆ, ತತ್ತ್ವ. **Séctionalize** (ಕ್ರಿ. ಸಕ.) ಪಂಗಡಗಳಾಗಿ—ವಿಭಾಗಿಸು, ವಿಂಗಡಿಸು.

Séctor ಸೆಕ್ಟರ್ (ನಾ.) (ಅಂಕ) ವೃತ್ತದ ಎರಡು ತ್ರಿಜ್ಯಗಳ ಮತ್ತು ಆ ತ್ರಿಜ್ಯಗಳಿಂದ ಪರಿಮಿತವಾದ ಚಾಪದ ಒಳಗೆ ಅಡಕವಾದ ಭಾಗ: ತ್ರಿಜ್ಯ ವೃತ್ತಖಂಡ (S. of sphere ಸಮತಲ ತ್ರಿಜ್ಯ ವೃತ್ತಖಂಡವು ತನ್ನ ಒಂದು ತ್ರಿಜ್ಯದಮೇಲೆ ಸುತ್ತು ತಿರುಗುವುದರಿಂದ ಫಲಿಸುವ ಘನಾಕೃತಿ: ತ್ರಿಜ್ಯ ಗೋಳ ಖಂಡ). (ಸೈನಿಕ) ಸೈನ್ಯ ಕಾರ್ಯಕ್ಷೇತ್ರದ ವಿಭಾಗ. ಜ್ಯಾ, ಸ್ಪರ್ಶರೇಖೆ, ಮೊ. ಸೂಚಕ ರೇಖೆಗಳನ್ನೊಳಕೊಂಡ, ಎರಡು ಚಪ್ಪಟೆ ಪಟ್ಟಿಗಳನ್ನು ಕೀಲಿಸಿ ಮಾಡಿದ ಒಂದು ಗಣಿತ ಸಲಕರಣೆ: ತ್ರಿಜ್ಯಪಟ್ಟಿ. **Séctoral** (ಗು.) ತ್ರಿಜ್ಯ ವೃತ್ತಖಂಡದ. **Sectórial** ಸೆಕ್ಟೋ(ಅ)ರಿಯಲ್ (ಗು., ನಾ.) ತ್ರಿಜ್ಯ ವೃತ್ತಖಂಡಾಕಾರದ; ತ್ರಿಜ್ಯ ವೃತ್ತಖಂಡದ; ತ್ರಿಜ್ಯಪಟ್ಟಿಯ. ಕತ್ತರಿಸುವ (ಹಲ್ಲು)

Sécular ಸೆಕ್ಯುಲರ್ (ಗು., ನಾ.) ಐಹಿಕ, ಲೌಕಿಕ, ಪ್ರಾಪಂಚಿಕ, ಸಾಂಸಾರಿಕ, ವ್ಯಾವಹಾರಿಕ [S. affairs. The s. clergy ಮಠವಾಸಿಗಳಲ್ಲದ ಪಾದ್ರಿಗಳು, ಪುರೋಹಿತರು, ಮೊ. ರು: ಲೌಕಿಕ ಪಾದ್ರಿಗಳು, ಪುರೋಹಿತರು (ವಿರುದ್ಧ ಪದ: Regular). The s. arm (ಚರಿತ್ರೆ) (ಹೆಚ್ಚು ಕಠಿನ ಶಿಕ್ಷೆಗಾಗಿ ಮಠೀಯ ನ್ಯಾಯಸ್ಥಾನಗಳು ಅಪರಾಧಿಯನ್ನು ವರ್ಗಾಯಿಸುತ್ತಿದ್ದ) ಲೌಕಿಕ ಅಧಿಕಾರ; ರಾಜಕೀಯ ಶಕ್ತಿ]. ಅವೈದಿಕ, ಧಾರ್ಮಿಕವಲ್ಲದ; ಲೌಕಿಕ ಶಿಕ್ಷಣದ (S. schools). ಶತಮಾನಕ್ಕೊಮ್ಮೆ, ಯುಗಕ್ಕೊಮ್ಮೆ —ನಡೆಯುವ, ಬರುವ [S. games ಪ್ರಾಚೀನ ರೋಮಿನಲ್ಲಿ ಬಹು ಕಾಲಕ್ಕೊಮ್ಮೆ ನಡೆಯುತ್ತಿದ್ದ ಉತ್ಸವ: ಯುಗೋತ್ಸವ. S. hymn ಯುಗೋತ್ಸವ ಗೀತೆ. The s. bird ಫೀನಿಕ್ಸ್ ಹಕ್ಕಿ]. ಯುಗಾಂತರಗಳ ವರೆಗೆ, ಶತಮಾನಗಳ ವರೆಗೆ, ದೀರ್ಘಕಾಲ, —ನಡೆಯುವ, ಇರುವ; ಯುಗಯುಗಾಂತರದ, ತಲ ತಲಾಂತರದ, ದೀರ್ಘಕಾಲಿಕ [(ಎದುರು ಪದಗಳು: Periodical, cyclic). S. change ನಿಧಾನವಾಗಿ ಬಡದೆ ನಡೆಯುವ ಮಾರ್ಪಾಟು, ಬದಲಾವಣೆ; ಯುಗಗಟ್ಟಲೆಯ, ದೀರ್ಘಕಾಲದ, —ಕೊಂಡ ಕೊಂಚ ವ್ಯತ್ಯಾಸ. S. cooling *or* refrigeration ಭೂಮಿ ಕಾವು ಆರಿ ಪ್ರವಾಹೀರೂಪದಿಂದ ಘನರೂಪಕ್ಕೆ ತಿರುಗುವುದು: ಯುಗಾಂತರ ಶೀತಲೀಭವನ. S. acceleration ಆಕಾಶಸ್ಥ ಕಾಯದ ಚಲನೆಯಲ್ಲಿ ನಿಧಾನವಾಗಿ ಉಂಟಾಗುವ ಗತಿವೃದ್ಧಿ: ಯುಗಾಂತರ ಗತಿವೃದ್ಧಿ. S. fame ಆಚಂದ್ರಾರ್ಕ, ಶಾಶ್ವತ, —ಕೀರ್ತಿ. The s. rivalry between Church and State ಮಠಾಧಿಪತ್ಯಕ್ಕೂ ರಾಜಕೀಯ ಪ್ರಭುತ್ವಕ್ಕೂ ಇರುವ ಶತಮಾನಾಂತರಗಳ ಸ್ಪರ್ಧೆ]. (ನಾ.) ಮಠವಾಸಿಯಲ್ಲದ —ಪಾದ್ರಿ, ಪುರೋಹಿತ. **Sécularism** (ನಾ.) ಲೌಕಿಕ, ಐಹಿಕ, —ದೃಷ್ಟಿ, ನೀತಿ. **Sécularist** (ನಾ.) ಲೌಕಿಕ ವಾದಿ, ಐಹಿಕವಾದಿ. **Sécularize** (ಕ್ರಿ. ಸಕ.) ಲೌಕಿಕ, ಪ್ರಾಪಂಚಿಕ, —ವನ್ನಾಗಿಮಾಡು. **Sécularizátion** (ನಾ.); **Secularity** (ನಾ.) ಲೌಕಿಕತೆ, ಐಹಿಕತ್ವ. **Sécularly** (ಕ್ರಿ. ವಿ.)

Secúnd ಸಿಕಂಡ್ (ಗು.; ಸ. ವಿ., ಪ್ರಾ. ವಿ.) ಒಂದು ಪಕ್ಕದಲ್ಲಿ ಮಾತ್ರ ಅಳವಟ್ಟ; ಒಪ್ಪಕ್ಕದ, ಏಕ ಪಾರ್ಶ್ವದ. **Secúndly** (ಕ್ರಿ. ವಿ.)

Secúndo (L) ಸಿಕಂಡೊ (ಕ್ರಿ. ವಿ.) ಎರಡನೆಯದಾಗಿ (Primo ನೋಡಿ)

Secúndum (L) ಸಿಕಂಡಮ್ (ಉಪ.) —ಆಗಿ, ಮೇರೆಗೆ, ಅನುಸಾರವಾಗಿ. **S. artem** ಕೃತಕವಾಗಿ. ಚಾತುರ್ಯದಿಂದ; ಶಾಸ್ತ್ರೀಯವಾಗಿ, ಕೌಶಲದಿಂದ. **S. naturam** ಸ್ವಾಭಾವಿಕವಾಗಿ, ಸಹಜವಾಗಿ, ಅಕೃತಕವಾಗಿ. **S. quid** ಕೆಲವು ವಿಷಯಗಳಲ್ಲಿ, ದೃಷ್ಟಿಗಳಲ್ಲಿ, —ಮಾತ್ರ; ಸೋಪಾಧಿಕವಾಗಿ; ಪರಿಮಿತಿಗಳಿಗೊಳಪಟ್ಟು.

Secúndus ಸಿಕಂಡಸ್ (ಗು.) (ಪಾಠಶಾಲೆಯಲ್ಲಿ) ಆ ಹೆಸರಿನವರಲ್ಲಿ ಎರಡನೆಯ (Primus[1] ನೋಡಿ)

Secúre ಸಿಕ್ಯೂ(ಅ)ರ್ (ಗು., ಕ್ರಿ. ಸಕ.) ನಿಶ್ಚಿಂತೆಯ, ನಿರಾತಂಕವಾದ, ನಿರಾಳವಾದ, ನೆಮ್ಮದಿಯ, ನಿರ್ಭಯವಾದ (A quiet s. existence ಶಾಂತವಾದ ನಿರಾತಂಕ ಜೀವನ. Dwell s. ನಿರ್ಭಯವಾಗಿ ವಾಸಮಾಡು). (ಪ್ರಾಚೀ. ಪ್ರ.) ದೃಢ ನೆಚ್ಚಿಕೆಯ, ನಿಶ್ಶಂಕೆಯ, ಸಂಶಯರಹಿತದ (A s. fool ಅತಿಧೈರ್ಯದ ಮೂರ್ಖ; ಬೆಪ್ಪ. The s. hope of salvation ಮೋಕ್ಷದ ದೃಢ ಭರವಸೆ). ಸುರಕ್ಷಿತವಾದ, ಅಭೇದ್ಯ; ಧ್ರುವವಾದ, ದೃಢವಾದ (A s. foundation).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಆಖ್ಯಾತಕ ಪ್ರ.) ಭದ್ರವಾಗಿ, ತಪ್ಪಿಸಿಕೊಳ್ಳದಂತೆ (Have got him s.). ಭರವಸೆಯುಳ್ಳ, ದೃಢನಂಬಿಕೆಯುಳ್ಳ, ಅಬಾಧಿತ (S. of victory. S. *against* assault ಆಕ್ರಮಣದಿಂದ ಅಬಾಧಿತ. S. *from* interruption). (ಕ್ರಿ.) (ಪಟ್ಟಣ, ಬಂದರು, ಮೊ. ನ್ನು ಕೋಟೆಕೊತ್ತಳ, ಮೊ. ಗಳಿಂದ) ಭದ್ರಪಡಿಸು, ಸುರಕ್ಷಿತಮಾಡು, ಬಲಪಡಿಸು; ಹಿಡಿದು ದೃಢವಾಗಿ ಬಂಧಿಸು, ಬಂದೋಬಸ್ತು ಮಾಡು, ಜೋಪಾನ ಮಾ(ಡಿ)ಡು, ಬಿಗಿಸು, ಭದ್ರವಾಗಿ ಮುಚ್ಚಿಬಿಡು [S. prisoner, valuables, buckle, window. S. vein (ಶಸ್ತ್ರ ಚಿಕಿತ್ಸೆಯಲ್ಲಿ) (ರಕ್ತಸ್ರಾವವನ್ನು ತಡೆಯುವುದಕ್ಕಾಗಿ) ಧಮನಿಯನ್ನು ಬಂಧಿಸು, ರಕ್ತನಾಳವನ್ನು ಬಿಗಿ(ದು ಕಟ್ಟು). S. arms (ಸೈನಿಕ; ಮಳೆಯಿಂದ ರಕ್ಷಿಸುವುದಕ್ಕಾಗಿ) ಬಂದೂಕಿನ ಬಾಯಿ ಕೆಳ ಮುಖವಾಗು ವಂತೆಯೂ ಚಾಪು ಕವುಂಕುಳ ಸಂದಿಯಲ್ಲಡಗುವಂತೆಯೂ ಇಟ್ಟುಕೊ; ಬಂದೂಕು ಭದ್ರಮಾಡು]. ಭರವಸೆ ಕೊಡು, ಆಧಾರವುಳ್ಳದ್ದಾಗಿ ಮಾಡು, ಸುರಕ್ಷಿತಮಾಡು (Loan secured on landed property. To s. the labourer the *or* in the fruits of his labour ಶ್ರಮಜೀವಿಗೆ ತನ್ನ ಶ್ರಮದ ಫಲ ದೊರೆಯುವ ಭರವಸೆಕೊಡು). (ಮು., ಬಯಸಿದ್ದನ್ನು, ಸ್ಪರ್ಧಿಸಿದ್ದನ್ನು) ಗಳಿಸು, ದೊರಕಿಸಿಕೊ, ಸಂಪಾದಿಸು (Have secured the prize, my ends). **Secúrable** (ಗು.); **Secúrely** (ಕ್ರಿ. ವಿ.); **Secúrity** (ನಾ.) (ಗುಣ ವಾಚಕಾರ್ಥಗಳಲ್ಲಿ); ಭರವಸೆ; ಕ್ಷೇಮ; ಭದ್ರತೆ, ರಕ್ಷಣೆ (Pride should at least be a s. against meanness ಅಲ್ಪತನಕ್ಕೆ ಬೀಳದಂತೆ ತನ್ನ ಹೆಮ್ಮೆಯಾದರೂ ಸಾಕಷ್ಟು ರಕ್ಷಣೆಯಾಗಿರಬೇಕು; ಇನ್ನು ಯಾವುದಕ್ಕಲ್ಲದಿದ್ದರೂ ತನ್ನ ಹೆಮ್ಮೆಯನ್ನು ಉಳಿಸಿಕೊಳ್ಳುವುದ ಕ್ಕಾದರೂ ಅಲ್ಪತನಕ್ಕೆ ಇಳಿಯಬಾರದು. In s. for —ಗೆ ಆಧಾರವಾಗಿ, ಈಡಾಗಿ); (ಸಾಲ, ಮೊ. ಕ್ಕೆ) ಆಧಾರ, ಜಾಮೀನು, ಹೊಣೆ. ಸಾಲ ಪತ್ರ, ಆಧಾರಪತ್ರ; (ಮು., ಬ. ವ. ದಲ್ಲಿ) ಸಾಲಪತ್ರಗಳು, ಬಂಡವಾಳ ಪತ್ರಗಳು, ಖಜಾನೆಯ ಹುಂಡಿಗಳು.

Secúriform ಸಿಕ್ಯೂ(ಅ)ರಿಫಾರ್ಮ್ (ಗು.) (ಮು., ಪ್ರಕೃತಿ ಚರಿತ್ರೆ) ಕೊಡಲಿಯಾಕಾರದ, ಕುಠಾರಾಕಾರದ.

Secúrity. **Secure** ನೋಡಿ.

Sedán(-chair) ಸಿಡ್ಯಾನ್(ಚೇರ್) (ನಾ.) ಎರಡು ಅಡ್ಡ ಗಣೆಗಳು ಹಾಕಿ ಇಬ್ಬರು ಬೋಯಿಗಳು ಹೊರುವ, ಒಬ್ಬನು ಕುಳಿತುಕೊಳ್ಳಲು ಅವಕಾಶವುಳ್ಳ, ೧೭-೧೮ನೆಯ ಶತಮಾನಗಳಲ್ಲಿ ಬಳಕೆಯಲ್ಲಿದ್ದ ಒಂದು ಬಗೆಯ ಕುರ್ಚಿ: ಪಲ್ಲಕ್ಕಿ ಕುರ್ಚಿ; ಡೋಲಿ; ಮೇನ. ಸುತ್ತು ಮುಚ್ಚಿದ ಒಂದು ಬಗೆಯ ಮೋಟಾರು ಬಂಡಿ. =Lady-chair (Lady ನೋಡಿ)

Sedáte ಸಿಡೇಟ್ (ಗು.) (ವ್ಯಕ್ತಿ, ನಡತೆ, ನೋಟ, ಮಾತು, ಬರವಣಿಗೆ, ಮೊ. ಗಳ ವಿಷಯದಲ್ಲಿ) ಶಾಂತವಾದ, ಸಮಾಧಾನದ, ಸ್ತಿಮಿತ ವಾದ, ಗಂಭೀರವಾದ, ನಿರುದ್ವೇಗದ (Too s. for her years). **Sedátely** (ಕ್ರಿ. ವಿ.); **Sedáteness** (ನಾ.); **Sédative** ಸೆಡಟಿವ್ (ಗು., ನಾ.) ಶಾಮಕ (ಔಷಧ, ಪ್ರಭಾವ)

Se defendéndo (L) ಸೀ ಡೀಫೆಂಡೆಂಡೊ (ಕ್ರಿ. ವಿ.) ಆತ್ಮರಕ್ಷಣೆ ಗಾಗಿ (ನರಹತ್ಯೆಯ ಅಪಾದಿತನು ಹೂಡುವ ವಾದ)

Sédentary ಸೆಡೆಂಟರಿ (ಗು., ನಾ.) ಕುಳಿತುಕೊಂಡಿರುವ, ಆಸೀನ (S. posture, statue ಕುಳಿತಿರುವ—ಭಂಗಿ, ಪ್ರತಿಮೆ). (ಸ್ವಾಭಾವಿಕ ವಾಗಿ, ಉದ್ಯೋಗ ಕಾರಣದಿಂದ) ಹೆಚ್ಚಾಗಿ ಕುಳಿತೇ ಇರುವ, ಕುಳಿತು ಕೊಂಡೇ ಕೆಲಸಮಾಡುವ (ಅಭ್ಯಾಸದ); ಚಟುವಟಿಕೆಯಿಲ್ಲದ, ಜಡತನದ, ವ್ಯಾಯಾಮ ತೆಗೆದುಕೊಳ್ಳದ. (ಪ್ರಾ. ವಿ., ಮೊ.) ವಲಸೆಹೋಗದ, ಒಂದೇ ಕಡೆ ನೆಲಸಿರುವ (S. birds); (ಜೇಡರ ಹುಳುವಿನ ವಿಷಯದಲ್ಲಿ) ಬೇಟೆ ಬಲೆಗೆ ಬೀಳುವ ವರೆಗೆ ಕಾದು ಕುಳಿತಿರುವ. (ನಾ.) ಹೆಚ್ಚಾಗಿ ಕುಳಿತೇ ಇರುವ ಅಭ್ಯಾಸದವನು, ಕುಳಿತು ಕೆಲಸಮಾಡುವ ಅಭ್ಯಾಸ ದವನು. ಬೇಟೆಗೆ ಕಾದು ಕುಳಿತಿರುವ ಜೇಡರ ಹುಳು. **Sédentarily** (ಕ್ರಿ. ವಿ.); **Sédentariness** (ನಾ.)

Sedérunt (L) ಸಿಡಿಯರಂಟ್ (ನಾ.) (ಮತ ಸಭೆ ಅಥವಾ ಇತರ ಮಂಡಲ) ಸಭೆ ಸೇರಿರುವುದು; ಕೂಟ, ಅಧಿವೇಶನ; ಸಂಭಾಷಣ, ಪಾನ, —ಗೋಷ್ಠಿ (Had a long s.)

Sedge ಸೆಜ್ (ನಾ.) ತೃಣ ವರ್ಗದ ಹಲವು ಬಗೆಯ ಸಸ್ಯ; ಗೇಕು, ಜೇಕು; ಜಂಬು; ಜಂಬು (ಬೆಳೆದಿರುವ) —ಮಡಿ, ದಂಡೆ, ಮೆಳೆ. S. warbler, -wren ಜಂಬು ಮೆಳೆಗೆ ಬರುವ ಒಂದು ಹಾಡು ಹಕ್ಕಿ: ಜಂಬು ಹಕ್ಕಿ. **Sédgy** (ಗು.)

Sedília ಸಿಡಿಲಿಯ (ನಾ., ಬ. ವ.; ಏ. ವ. **Sedíle** ಸಿಡೈಲಿ, ವಿರ. ಪ್ರ.) ಕ್ರೈಸ್ತ ದೇವಾಲಯದಲ್ಲಿ ಪಾದ್ರಿಗಳು ಕುಳಿತುಕೊಳ್ಳುವುದಕ್ಕಾಗಿ ಮಾಡಿರುವ, ಸಾ., ಮೇಲುಕಟ್ಟು, ಮೊ. ಗಳಿಂದ ಅಲಂಕರಿಸಿದ, (ಸಾ., ಕಲ್ಲಿನ ಮೂರು) ಆಸನಗಳ ತಂಡ, ಪೀಠ ಪಂಕ್ತಿ.

Sédiment ಸೆಡಿಮೆಂಟ್ (ನಾ.) ಗಸಿ, ಗಷ್ಟು, ಮಡ್ಡಿ, ಚರಟ. **Sediméntary** (ಗು.)

Sedítion ಸಿಡಿಷ(ಷ್)ನ್ (ನಾ.) ಪ್ರತಿಷ್ಠಿತ ಸರ್ಕಾರವನ್ನು ಉರುಳಿಸಲು ಯತ್ನಿಸುವ —ಚಳವಳಿ, ಸಂಚು; ಸರಕಾರ ವಿರುದ್ಧ ಚಳವಳಿ; ರಾಜದ್ರೋಹ, ರಾಜ್ಯದ್ರೋಹ; ಪ್ರಜಾಕ್ಷೋಭಕ —ಚಳವಳಿ, ಕಾರ್ಯ, ಭಾಷಣ. **Sedítious** (ಗು.); **Sedítiously** (ಕ್ರಿ. ವಿ.); **Sedítiousness** (ನಾ.)

Sedúce ಸಿಡ್ಯೂಸ್ (ಕ್ರಿ. ಸಕ.) ತಪ್ಪುದಾರಿಗೆ ಎಳೆ; ದುರ್ಮಾರ್ಗಕ್ಕೆ —ಬೀಳಿಸು, ಒಯ್ಯಿ; ಪಾಪಕ್ಕೆ —ಪ್ರೇರಿಸು, ಸೆಳೆ; ದುಷ್ಪ್ರೇರಣೆ ಮಾಡು; (ಪ್ರೇರಿಸಿ ಹೆಂಗಸನ್ನು) ಭ್ರಷ್ಟಮಾಡು, ಪಾತಿವ್ರತ್ಯ ಹಾನಿ ಮಾಡು, ಸತೀತ್ವ ಕೆಡಿಸು. **Sedúcement** (ನಾ.) (ವಿರ. ಪ್ರ.); **Sedúcer** (ನಾ.); **Sedúcible** (ಗು.); **Sedúcingly** (ಕ್ರಿ. ವಿ.); **Sedúction** (ನಾ.) (ಕ್ರಿಯಾರ್ಥಗಳಲ್ಲಿ); ಪಾಪಕ್ಕೆ, ದುರ್ಮಾರ್ಗಕ್ಕೆ, ಎಳೆಯುವಂಥದು; (ವಿನೋದವಾದ, ದೋಷವರ್ಜಿತವಾದ, ಪ್ರ.) ಆಕರ್ಷಣೆ, ಮೋಹನ (The seductions of a great capital, beauty, the country ದೊಡ್ಡ ರಾಜಧಾನಿಯ, ಸೌಂದರ್ಯದ, ಗ್ರಾಮುಪ್ರದೇಶದ, ಆಕರ್ಷಣೆ). **Sedúctive** (ಗು.) ದುಷ್ಪ್ರೇರಕ; ಮೋಹಕ, ಆಕರ್ಷಕ. **Sedúctively** (ಕ್ರಿ. ವಿ.); **Sedúctiveness** (ನಾ.)

Sédulous ಸೆಡ್ಯುಲಸ್ (ಗು.) ಸ್ಥಿರ, ದೃಢ, ದೀರ್ಘ, —ಪ್ರಯತ್ನದ; ಉದ್ಯೋಗ, ಶ್ರಮ, —ಶೀಲ; ಅಧ್ಯವಸಾಯವುಳ್ಳ; ಶ್ರದ್ಧೆಯುಳ್ಳ; ಶ್ರಮ ತೆಗೆದುಕೊಳ್ಳುವ; ಪ್ರಯತ್ನಪೂರ್ವಕವಾದ (S. care, attentions. Play the s. ape ಮತ್ತೊಬ್ಬನ ಶೈಲಿಯನ್ನು ಮಂಗನಂತೆ ಸತತವಾಗಿ ಅನುಕರಣಮಾಡು). **Sédulously** (ಕ್ರಿ. ವಿ.); **Sédulousness** (ನಾ.); **Sedúlity** ಸಿಡ್ಯೂಲಿಟಿ (ನಾ.)

See[1] ಸೀ (ಕ್ರಿ.; ಭೂತ. Saw, ಭೂ. ಕೃ. Seen ಸೀನ್) ನೋಡು, ಕಾಣು, ಹಾರು (ಗ್ರಾಂ.), ಈಕ್ಷಿಸು, ದೃಷ್ಟಿಸು, ಅವಲೋಕಿಸು, ಸಂದರ್ಶಿಸು [S. into millstone, through brickwall (ರೂಪ.) ಪ್ರಕೃತ್ಯತೀತ, ಅಸಾಧಾರಣ, —ತೀಕ್ಷ್ಣಬುದ್ಧಿಯಿರು; ಚಾಣಾಕ್ಷನಾಗಿರು. Seeing is believing ತನ್ನ ಕಣ್ಣಾರೆ ನೋಡುವುದೇ ಉತ್ತಮ ಪ್ರಮಾಣ; ಪ್ರತ್ಯಕ್ಷವೇ ಪ್ರಮಾಣ. S. double (Double ನೋಡಿ). S. red (ಅಸಂ.) ಪದಾರ್ಥಗಳನ್ನು ರಕ್ತವರ್ಣ ವಾಗಿ ನೋಡು; ಕೋಲೆಮಾಡುವಷ್ಟು ರೋಷಗೊಳ್ಳು, ಉದ್ರೇಕಗೊಳ್ಳು. S. through (ರೂಪ.) ಮೋಸಹೋಗದಿರು; ಒಳಹೊಕ್ಕು ನೋಡು; ತೋರಿಕೆಯನ್ನು ಭೇದಿಸಿ ನೋಡು; ನಿಜ ಸ್ಥಿತಿ, ನಿಜ ಸ್ವಭಾವ, —ತಿಳಿ. S. the light ಪ್ರಪಂಚದಲ್ಲಿ ಹುಟ್ಟು, ಜನಿಸು, ಕಣ್ಣುಬಿಡು; ಪ್ರಕಟ ವಾಗು, ಬೆಳಕಿಗೆ ಬರು (His book never saw the light). ವಿಷಯ ಗ್ರಹಿಸು; ಪರಿಹಾರ ತಿಳಿ. Things seen ಕಂಡದ್ದು (ಕೇಳಿದ್ದಾಗಲಿ ಊಹಿಸಿದ್ದಾಗಲಿ ಅಲ್ಲ). S. visions ದಿವ್ಯ ದೃಷ್ಟಿ ಯುಳ್ಳವನಾಗಿರು. See things ಭ್ರಾಂತಿ ಭ್ರಮೆಗಳಿರು. S. stars (ತಲೆಯ ಮೇಲೆ ಪೆಟ್ಟುಬಿದ್ದದ್ದರಿಂದ) ಕಣ್ಣಮುಂದೆ ಕುಣಿಯುವ ಬೆಳಕು ಗಳನ್ನು ಕಾಣು, ದೀಪಗಳು ಕುಣಿದಂತೆ ಕಾಣು; ಚುಕ್ಕಿಗಳು ಕುಣಿದಂತೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಣು. S. the back of (ಭೇಟಿಗೆ ಬಂದವರು, ಮುತ್ತಿಗೆ ಹಾಕಿದವರು, ಮೊ. ರ) ಕಾಟ ತಪ್ಪಿಸಿಕೊ, ತೊಲಗಿಸಿಕೊ. S. one's way to *do* or to *do*ing ನಿರ್ವಹಿಸು, ನಿಭಾಯಿಸು(—ವ ಉಪಾಯ ಕಾಣು). S. the sights, town (ಪ್ರೇಕ್ಷಕನಾಗಿ) ನೋಟಗಳನ್ನು, ಊರನ್ನು, ನೋಡು. S. over (house) (ಮನೆ) ಸುತ್ತ ನೋಡು, ಪರೀಕ್ಷಿಸು. Worth seeing ಪ್ರೇಕ್ಷಣೀಯ, ನೋಡತಕ್ಕ. S. p. 15 (ಹಿನೆಯ ಪುಟ ನೋಡಿ. S. thing done ಕೆಲಸ ಆಗುವಂತೆ ನೋಡಿಕೊ]. ಓದಿ, ನೋಡಿ, —ತಿಳಿ, ಗ್ರಹಿಸು; ಪರಿಶೀಲಿಸು, ವಿಚಾರಮಾಡು, ಪರ್ಯಾಲೋಚಿಸು [Cannot s. a *or* the joke ಹಾಸ್ಯವನ್ನು ಗ್ರಹಿಸಲಾರ, ತಿಳಿದುಕೊಳ್ಳಲಾರ. Do you s. what I mean? (ಬಳ. ಮಾ.; ಅಧ್ಯಾಹಾರ ಪ್ರ.) s.? (ನನ್ನ ಅಭಿಪ್ರಾಯ, ಅರ್ಥ) ನಿನಗೆ ಗೊತ್ತಾಗುತ್ತದೆಯೊ? ತಿಳಿಯುತ್ತದೆಯೊ? You s. ನೋಡಿ; ನಿಮಗೆ ತಿಳಿದೇ ಇದೆ, ಗೊತ್ತೇ ಇದೆ; ನಾನು ವಿವರಿಸಬೇಕಾಗಿದೆ. I s. (ನೀನು ವಿವರಿಸಿದ್ದರಮೇಲೆ) ಈಗ ನನಗೆ ಗೊತ್ತಾಯಿತು, ತಿಳಿಯಿತು. As far as I can s. ನನಗೆ ತಿಳಿದ ಮಟ್ಟಿಗೆ, ನನ್ನ ಬುದ್ಧಿಗೆ. Seeing no other course is open to us ನಮಗೆ ಬೇರೆ ದಾರಿಯಿಲ್ಲದ್ದರಿಂದ, ಬೇರೆ ಮಾರ್ಗವಿಲ್ಲದ ಕಾರಣ]. ಅನುಭವ ಪಡೆ [Have seen five reigns ಐದು ರಾಜ್ಯಭಾರಗಳನ್ನು, ಆಳಿಕೆಗಳನ್ನು, ನೋಡಿದ್ದೇನೆ. Will never s. 50 again ಮತ್ತೆ ಐವತ್ತು ನೋಡುವಂತಿಲ್ಲ; ಐವತ್ತರ ವಯಸ್ಸು ಆಗಿಹೋಗಿದೆ. S. life (ಮು., ವಿಷಯಾಸಕ್ತನಾಗಿ) ಜೀವನದ ರುಚಿ ನೋಡು, ಭೋಗಪಡು; ಪ್ರಪಂಚಾನುಭವ ಪಡೆ. (ಪ್ರಾಚೀ. ಪ್ರ.) Well seen ನುರಿತ, ಅನುಭವ ಪಡೆದ (*In* ಉಪ. ಜೊಡನೆ). Has seen service ನುರಿತ ಕೈ; ಹಳಬ. Has seen better, its best, days ಹಿಂದೆ ಚೆನ್ನಾಗಿತ್ತು, ಉಚ್ಛ್ರಾಯ ಸ್ಥಿತಿಯಲ್ಲಿತ್ತು (ಈಗ ಅವನತಿ ಹೊಂದಿದೆ ಎಂಬ ಅರ್ಥದಲ್ಲಿ). Have seen the day when (ಗತ ಕಾಲದ ಸ್ಥಿತಿ ಗತಿಗಳ ಕಡೆಗೆ ಗಮನ ಸೆಳೆಯುವಲ್ಲಿ). S. (thing) through *or* out ಬಿಡದೆ ಸಾಧಿಸು, ಕೊನೆಮುಟ್ಟಿಸು. S. (person or thing) blowed *or* damned —ಕ್ಕೆ ಮೊದಲು ಧ್ವಂಸಮಾಡಿ ಬಿಡುತ್ತೇನೆ]. ಭೇಟಿ ಕೊಡು, ದರ್ಶನ ಕೊಡು; ಭೇಟಿಮಾಡು, ದರ್ಶನ ಮಾಡು, ನೋಡು (When will you come and s. us? Can s. you for five minutes). ಚಿತ್ರಿಸಿಕೊ, ಮನಸ್ಸಿಗೆ ತಂದುಕೊ, ಭಾವಿಸಿಕೊ (Cannot s. myself submitting to it). (—ಆಗುವುದನ್ನು) ಒಪ್ಪು, ಸಮ್ಮತಿಸು (Do not s. being made use of). ಜೊತೆಯಲ್ಲಿ ಹೋಗು, ಸಂಗಡ ಹೋಗು, ಕಳಿಸಿ ಬಾ, ಬೀಳ್ಕೊಡಹೋಗು [May I s. you home ನಿಮ್ಮನ್ನು ಮನೆಯ ವರೆಗೆ ಬಿಟ್ಟುಬರಲೆ, ಮನೆಗೆ ಕಳಿಸಿಬರಲೆ? S. him off the premises ಅವನನ್ನು ಮನೆಯಿಂದ ಆಚೆಗೆ ಕಳಿಸಿ ಬಾ. S. off (ನಾವಿಕ ಅಸಂ.) ಮಾರಿಸು, ಸೋಲಿಸು. Will you see me through the difficulty? ನನ್ನನ್ನು ತೊಂದರೆಯಿಂದ ಪಾರುಗಾಣಿಸುವೆಯಾ?]. ಅಭಿಪ್ರಾಯಪಡು, ಎಣಿಸು [I s. it differently now ಈಗ ಬೇರೆ ಅಭಿಪ್ರಾಯಪಡುತ್ತೇನೆ. S. good ಸರಿ, ಯುಕ್ತ,—ಎಂದು ಎಣಿಸು. S. eye to eye (Eye ನೋಡಿ)]. ಏರ್ಪಾಟು ಮಾಡು, ನೋಡಿಕೊ, ಗಮನಕೊಡು, ಜೋಕೆಯಿಂದಿರು, ಹುಷಾರಾಗಿರು (S. that it is done ಅದು ನಡೆಯುವಂತೆ, ಆಗುವಂತೆ, ಏರ್ಪಡಿಸು. S. you don't catch your foot ನಿನ್ನ ಕಾಲು ಸಿಕ್ಕಿಹಾಕಿಕೊಳ್ಳಬೇಡ, ಹುಷಾರು. S. to one's business ತನ್ನ ಕೆಲಸ ನೋಡಿಕೊ, ತನ್ನ ಕೆಲಸಕ್ಕೆ ಗಮನಕೊಡು. Will s. about it ಅದಕ್ಕೆ ಏರ್ಪಾಟು ಮಾಡುತ್ತೇನೆ. S. after ರಕ್ಷಣೆ ನೋಡಿಕೊ. S. to it that no one escapes ಯಾವನೂ ತಪ್ಪಿಸಿಕೊಳ್ಳದಂತೆ ನೋಡಿಕೊ). ಪರೀಕ್ಷೆ, ವಿಚಾರಣೆ, —ನಡಸು, ಮಾಡು (Must s. into it ವಿಚಾರಿಸಬೇಕು). ಪರ್ಯಾಲೋಚಿಸು, ವಿಚಾರಮಾಡು [Let me s. (ಉತ್ತರ ಕೊಡುವುದಕ್ಕೆ, ವಿವರಗಳನ್ನು ಒದಗಿಸುವುದಕ್ಕೆ, ಕಾಲಾವಕಾಶ ಬೇಕಾದಾಗ ಹೇಳುವ ಮಾತು): ಸ್ವಲ್ಪ ಯೋಚಿಸಬೇಕು; ಯೋಚಿಸೋಣ, ನೋಡೋಣ. Will s. about it (ಒಡನೆಯೇ ಕಾರ್ಯ ನಡಸಲು ನಿರಾಕರಿಸುವಾಗ ಹೇಳುವ ಉಪಚಾರದ ಮಾತು): ಒಳ್ಳೆಯದು, ನೋಡುತ್ತೇನೆ]. (ಇಸ್ಪೀಟಾಟ, ಮೊ. ಗಳಲ್ಲಿ) ಪಣವೊಪ್ಪಿಕೊ, ಸರಿಪಣವೊಡ್ಡು.

Séer[1] ಸೀಅರ್ (ನಾ.) ನೋಡುವವನು, ಪ್ರೇಕ್ಷಕ. **Seer**[2] ಸಿಯರ್ (ನಾ.) ಪ್ರವಾದಿ, ದಿವ್ಯದೃಷ್ಟಿಯುಳ್ಳವನು, ದಿವ್ಯಜ್ಞಾನಿ; ಭವಿಷ್ಯವಾದಿ.

See[2] ಸೀ (ನಾ.) (ಆರ್ಚ್)ಬಿಷಪ್ಪಿನ ಅಧಿಕಾರ—ಪ್ರಾಂತ, ಕ್ಷೇತ್ರ, ಪೀಠ (The s. of Norwich, Canterbury, Rome. Holy s. ರೋಮ್ ಮಠಾಧಿಪತ್ಯ; ರೋಮ್ —ಮಠ, ಪೀಠ. Several new sees were created ಹಲವು ಮಠಗಳು, ಮಠಾಧಿಪತ್ಯಗಳು, ಸೃಷ್ಟಿಯಾದುವು)

Seed ಸೀಡ್ (ನಾ.) ಬಿತ್ತ, ಬೀಜ, (ಬಿತ್ತನೆ) ಕಾಳು [To be kept for *or* as s. ಬಿತ್ತನೆಗಾಗಿ ಇಡಬೇಕು. Go, run, to s. (ಹೂವು ಬಿಡುವುದು ನಿಂತು) ಬೀಜಕ್ಕೆ ಇಟ್ಟುಕೊ, ತಿರುಗು. (ರೂಪ.) ಸತ್ವಹೀನವಾಗು, ಹರುಕು ಮುರುಕಾಗು; ಬರಡು, ಸುಸ್ತು,—ಬೀಳು; ಜೂಲು ಜೂಲು, ಚಿಂದಿ ಚಿಂದಿ, —ಆಗು]. ಪುರುಷಧಾತು, ವೀರ್ಯ, ರೇತಸ್ಸು. (ಬೈಬಲ್) ಸಂತಾನ, ಸಂತತಿ [Raise up s. ಸಂತಾನೋತ್ಪತ್ತಿ ಮಾಡು, ಮಕ್ಕಳು ಹುಟ್ಟಿಸು. The s. of Abraham ಯೆಹೂದ್ಯರು (ಏಬ್ರಹ್ಯಾಮಿನ ಸಂತಾನ)]. ಬೀಜ, ಮೂಲ(ಕಾರಣ) (Seeds of strife ಕಲಹದ—ಮೂಲ, ಬೀಜ. Sow the seeds of —ರ ಬೀಜ ಬಿತ್ತು; ಹುಟ್ಟಿಸು). **S.-cake** (ರುಚಿಗಾಗಿ, ಮು., ಸೋಪಿನ) ಬೀಜ ಹಾಕಿದ ರೊಟ್ಟಿ, ದೋಸೆ. **S.-coral** ಬಿತ್ತದಂಥ ಸಣ್ಣ ಸಣ್ಣ ಬಿಡಿ ಹವಳ. **S.-corn** ಬಿತ್ತನೆ ಕಾಳು. **S.-drill** ಕೂರಿಗೆ(ಯಂತ್ರ). **S.-eater** ಒಂದು ಬಗೆಯ ಹಕ್ಕಿ. **S.-fish** ಮೊಟ್ಟೆಯಿಡುವ ಸ್ಥಿತಿಯಲ್ಲಿಯ ಮೀನು. **S.-leaf** ಮೂಲಪರ್ಣ, ಬೀಜಪತ್ರ. **S.-lobe** ಬೀಜಪತ್ರ. **S.-oysters** ಬೆಳೆಗಾಗಿ ತಂದಿಡುವ ಚಿಕ್ಕ ಆಯ್‌ಸ್ಟರ್ ಮೀನು: ಬೀಜದ ಆಯ್‌ಸ್ಟರ್ ಮೀನು. **S.-pearl** ಸಣ್ಣ ಮುತ್ತು. **S.-plot** ಬಿತ್ತನೆ ಮಡಿ; (ರಾಜ್ಯದ್ರೋಹ, ಮೊ. ಗಳ ವಿಷಯದಲ್ಲಿ ರೂಪ.) ಹುಟ್ಟುನೆಲ, ಅಂಕುರಕ್ಷೇತ್ರ. **Seedsman** ಬೀಜದ ವ್ಯಾಪಾರಿ. **S.-time** ಬಿತ್ತನೆಯ ಕಾಲ. **S.-vessel** ಬೀಜಕೋಶ. **S.-wool** ಕಾಳು ಬಿಡಿಸಿಲ್ಲದ ಹತ್ತಿ. **Seédless** (ಗು.). **Seédy** (ಗು.) ಬೀಜ ತುಂಬಿದ; ಬೀಜಮಯ; ಬೀಜಕ್ಕೆ—ಬಂದ, ತಿರುಗುವ. (ಬ್ರಾಂದಿ ಮದ್ಯದ ವಿಷಯದಲ್ಲಿ) ದ್ರಾಕ್ಷಿಬಳ್ಳಿಯ ಜೊಂಡು ವಾಸನೆಯುಳ್ಳ, ರುಚಿಯುಳ್ಳ. (ಅಸಂ.) ಹರುಕು ಕೊಳಕುಗಳುಳ್ಳ; ಚಿಂದಿಗಳನ್ನು ಧರಿಸಿದ; ಮೈಸ್ವಸ್ಥವಿಲ್ಲದ; ಸ್ವಲ್ಪ ಅನಾರೋಗ್ಯದ. **S.-toe** ಕುದುರೆಯ ಗೊರಸಿನ (ಕೊಳಗದ) ರೋಗ. **Seédily** (ಕ್ರಿ. ವಿ.); **Seédiness** (ನಾ.)

Seed (ಕ್ರಿ.) ಬೀಜಕ್ಕೆ —ತಿರುಗು, ಬರು; ಬೀಜ—ಬಿಡು, ಕೆಳಗೆ ಉದುರು(ರಿಸು); ಬಿತ್ತ (ಹೇಗೊ ಹಾಗೆ) ಎರಚು, ಚೆಲ್ಲು; ಬಿತ್ತು. (ಹಣ್ಣು, ಮೊ. ಗಳಿಂದ, ತೆನೆ, ಮೊ. ಗಳಿಂದ) ಬೀಜ—ತೆಗೆ, ಬಿಡಿಸು. (ವ್ಯಾಯಾಮ ಸ್ಪರ್ಧೆ) ಕೊನೆ ಕೊನೆಯಲ್ಲಿ ಒಳ್ಳೆಯ ಪಂದ್ಯಗಳು ಬೀಳುವಂತೆ (ಪ್ರಬಲ ಸ್ಪರ್ಧಿಗಳ ಪಂದ್ಯಗಳು ಕೊನೆಗೆ ಬರುವಂತೆ) ಆರಿಸಿ ವಿಂಗಡಿಸು. Seeding-machine ಬಿತ್ತನೆ ಯಂತ್ರ. Seeding-plough ಉಳುತ್ತಹೋದಂತೆಲ್ಲ ಹಿಂದೆಯೇ ನೇಗಿಲಸಾಲಿನಲ್ಲಿ ಬಿತ್ತುತ್ತ ಹೋಗುವ ನೇಗಿಲು; ಬಿತ್ತನೆಯ ನೇಗಿಲು. **Seéder** (ನಾ.) ಕೂರಿಗೆ (ಯಂತ್ರ) (ದ್ರಾಕ್ಷಿ ದ್ರಾಕ್ಷಿ, ಮೊ. ರಿಂದ) ಬಿತ್ತ ತೆಗೆಯುವ ಸಲಕರಣೆ. ಮೊಟ್ಟೆ ಇಕ್ಕುವ ಮೀನು. **Seédling** (ನಾ.) ಬೀಜ ಬಿತ್ತಿ ಮೊಳೆತ ಸಸಿ (ಕೊಂಬೆ ಅಂಟಿನಿಂದ ಮೊಳೆಯಿಸಿದ್ದಲ್ಲ); ಬೀಜಾಂಕುರ; ಅಗೆ; ಸಸಿ.

Seek ಸೀಕ್ (ಕ್ರಿ.; ಭೂತ., ಮತ್ತು ಭೂ. ಕೃ. Sought ಸಾಟ್) ಹುಡುಕು, ಅರಸು; ಅನ್ವೇಷಿಸು; ಕಾಣಲು, ಪಡೆಯಲು, —ಪ್ರಯತ್ನಿಸು, ಆತುರ ತೋರು; ವಿಚಾರಿಸು; ಕೇಳು, ಕೋರು (Thing *of* person). ಉದ್ದೇಶಪಡು, ಗುರಿಯಾಗಿಟ್ಟುಕೊಂಡು ಹೋಗು; ಮಾಡಲು ಪ್ರಯತ್ನಪಡು (*To* do); (ಬುದ್ಧಿವಾದ, ಆರೋಗ್ಯಲಾಭ, ಮೊ. ಕ್ಕೆ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಬ್ಬನನ್ನು, ಒಂದು ಸ್ಥಳವನ್ನು) ಆಶ್ರಯಿಸು, ಬಳಿಸಾರು [What are you seeking? ಏನನ್ನು ಹುಡುಕುತ್ತಿದ್ದೀಯೆ? Seeks my aid ನನ್ನ ಸಹಾಯವನ್ನು ಕೋರುತ್ತಾನೆ. Seeks to kill me ನನ್ನನ್ನು ಕೊಲ್ಲಲು ಪ್ರಯತ್ನಿಸುತ್ತಾನೆ, ಹವಣಿಸುತ್ತಾನೆ. Sought his bed. S. dead! (ಕೊಂದ ಬೇಟೆಯನ್ನು ಹುಡುಕಿ ತರಲು ಬೇಟೆನಾಯಿಗೆ ಕೊಡುವ ಆಜ್ಞೆ). S. out (ಉದ್ದೇಶಪಟ್ಟು) ಹುಡುಕಿಕೊಂಡುಹೋಗು (ಮು., ಸಹವಾಸದಲ್ಲಿರಲು ವಿಶೇಷ ಪ್ರಯತ್ನಪಡು). ಕಂಡುಹಿಡಿ. S. through (ಸ್ಥಳವನ್ನು, ಸಂಪುಟವನ್ನು) ಶೋಧಿಸಿ ನೋಡು]. ಅಪೇಕ್ಷಿಸಿ ಕೇಳು, ವಿಚಾರಿಸು (*After, for* ಉಪ. ದೊಡನೆ) (Sought-after ಬಹಳವಾಗಿ ಅಪೇಕ್ಷಿಸುವ; ಬಹಳ ಗಿರಾಕಿಯಿರುವ; ಸಾಮಾನ್ಯವಾಗಿ ಎಲ್ಲರೂ ಬಯಸುವ). (ಪ್ರಾಚೀ. ಪ್ರ.) (ಒಬ್ಬನಲ್ಲಿಗೆ, ಒಂದು ಸ್ಥಳಕ್ಕೆ) ಹೆಚ್ಚು ಸಂಖ್ಯೆಯಲ್ಲಿ ಹೋಗಿಬರು, ಆಶ್ರಯಿಸು (*To* ಉಪ. ದೊಡನೆ). [Is to s. *or* much to s. ಕೊರತೆಯಾಗಿದೆ, ಇಲ್ಲವಾಗಿದೆ, ಇನ್ನೂ ದೊರೆತಿಲ್ಲ (An efficient leader is yet to s.)]. **(-)seeker** (ನಾ.)

Seel ಸೀಲ್ (ಕ್ರಿ. ಸಕ.) (ಪ್ರಾಚೀ. ಪ್ರ.) (ಕಣ್ಣನ್ನು) ಮುಚ್ಚು; (ಡೇಗೆಯ) ರೆಪ್ಪೆಗಳನ್ನು ಕೂಡಿಸಿ ಹೊಲಿದು ಕಣ್ಣುಗಳನ್ನು ಮುಚ್ಚು. (ರೂಪ.) ಮೋಸಮಾಡು; ಕಣ್ಣುಕಟ್ಟು.

Seem ಸೀಮ್ (ಕ್ರಿ. ಅಕ.) (ಹಾಗೆಂದು, ಇರುವಂತೆ) ತೋರು, ಕಾಣು; ತೋರು; ಭಾಸವಾಗು [The man who seemed the ring-leader. Seems to be a good fellow, saint. Do not s. to (ಅಸಂ.) ಏಕೋ (—) ಇಲ್ಲ (I do not s. to like him ಏಕೋ ಅವನನ್ನು ಕಂಡರೆ ನನಗೆ ಆಗುವುದಿಲ್ಲ). S. good to (ಅನುಸರಿಸಲು) ಒಳ್ಳೆಯದಾಗಿ, ಉತ್ತಮವಾಗಿ, —ಇರು, ಕಾಣು. What seemeth him good (ಪ್ರಾಚೀ. ಪ್ರ.) ಅವನಿಗೆ ಚೆನ್ನಾಗಿ ಕಂಡದ್ದು; —ಕಂಡು ಅವನು ಆರಿಸಿದ್ದು. It seems to me that it will rain ಮಳೆ ಬರುವಹಾಗೆ ನನಗೆ ತೋರುತ್ತದೆ. Me seems, -seemeth, -seemed (ಪ್ರಾಚೀ. ಪ್ರ.) = It seems, seemed to me]. (ವರ್ತಮಾನ ಕೃ.) ಹೊರ ತೋರಿಕೆಯ, ಬರಿ ನಟನೆಯ, ಕಪಟದ; ತೋರಿಕೆಯ ಮತ್ತು ಬಹುಶಃ —ನಿಜವಲ್ಲದ, ನಿಜವಾದ [The seeming and the real. A seeming friend. Seeming-virtuous (ಸಾ., ಬರಿ ನಟನೆಯುದೆಂಬ ಸೂಚನೆ)]. **Seémingly** (ಕ್ರಿ. ವಿ.)

Seémly ಸೀಮ್ಲಿ [ಗು., ಕ್ರಿ. ವಿ. (ವಿರ. ಪ್ರ)] ಸಭ್ಯ, ಯೋಗ್ಯ, ಗಂಭೀರ(ವಾಗಿ); ಒಪ್ಪುವ(ರೀತಿಯಲ್ಲಿ). **Seémliness** (ನಾ.)

Seen. See ಧಾತುವಿನ ಭೂ. ಕೃ.

Seep ಸೀಪ್ (ಕ್ರಿ. ಅಕ., ನಾ.) ಜಿನುಗು(ವುದು), ಸ್ರವಿಸು(ವುದು), ತೊಟ್ಟಿಕ್ಕು(ವುದು); ಸೆಳೆ(ಯಿಕ್ಕು). **Seépage** (ನಾ.)

Seer[1,2]. **See** ನೋಡಿ.

Seer[3] ಸಿಯರ್, ಸೀರ್, ಸೇರ್ (ನಾ.) (ಇಂಡಿಯದಲ್ಲಿ) (ತೂಕದ, ಅಳತೆಯ) ಸೇರು.

Seésaw ಸೀಸಾ (ಗು., ಕ್ರಿ. ವಿ., ನಾ., ಕ್ರಿ. ಅಕ.) ಗರಗಸದಂತೆ ಹಿಂದಕ್ಕೂ ಮುಂದಕ್ಕೂ (ಅಥವಾ ಕೆಳಕ್ಕೂ ಮೇಲಕ್ಕೂ) ಚಲಿಸುವ; ಗರಗಸ ಚಲನೆಯ (S. motion. Go s. ಹಿಂದಕ್ಕೂ ಮುಂದಕ್ಕೂ ತೂಗಾಡು). (ನಾ.) ನಡುವಣ ಆಧಾರವೊಂದರಮೇಲೆ ತೂಗಾಡುವ ಉದ್ದವೆಯ ಹಲಗೆಯ ಒಂದೊಂದು ಕೊನೆಯಲ್ಲೂ ಒಬ್ಬೊಬ್ಬನು ಕುಳಿತು ತೂಗಾಡುವ ಆಟ; ತೂಗುತೊಲೆಯಾಟ; ಆಡುಹಲಗೆಯ ಆಟ. (ಈ ಆಟದ) ತೂಗುತೊಲೆ, ಆಡುಹಲಗೆ. (ಕ್ರಿ.) ತೂಗುತೊಲೆಯ, ಆಡುಹಲಗೆಯ, —ಆಟವಾಡು; ಹೀಗೆ ಮೇಲಕ್ಕೂ ಕೆಳಕ್ಕೂ ಚಲಿಸು; (ಕಾರ್ಯನೀತಿ, ಮೊ. ಗಳಲ್ಲಿ) ತೂಗಾಡು, ಡೋಲಾಯಮಾನವಾಗಿರು.

Seethe ಸೀದ್ (ಕ್ರಿ.; ಭೂತ., ಭೂ. ಕೃ. Seethed; ಪ್ರಾಚೀ. ಪ್ರ., ಭೂತ. Sod, ಭೂ. ಕೃ. Sodden) (ಪ್ರಾಚೀ. ಪ್ರ.) ಕುದಿನೀರಿನಲ್ಲಿ ಬೇಯಿಸು, ಬೇಯು (Thou shalt not s. a kid in his mother's milk). (ರೂಪ.) ಕುದಿ; ಕುತಕುತವಾಗು, ತಳಮಳಿಸು (The seething waters. Madness seething in his brain)

Segar = Cigar (ಎಂಬುದರ ಅಶುದ್ಧರೂಪ)

Ségment ಸೆಗ್‌ಮೆಂಟ್ (ನಾ., ಕ್ರಿ.) ಒಂದು ಪದಾರ್ಥದಿಂದ ಕತ್ತರಿಸಿದ, ಬೇರ್ಪಡಿಸಬಹುದಾದ, ಬೇರ್ಪಟ್ಟಹಾಗೆ ಕಾಣುವ, ಬೇರ್ಪಡುವ ಹಾಗೆ ಕಾಣುವ, —ಭಾಗ, ತುಂಡು; ಸಂಧ್ಯಂತರ ಖಂಡ; ತೊಳೆ, ಹೋಳು, ಖಂಡ (ಉದಾ., ಕೈಕಾಲುಗಳ ಅಥವಾ ತಲೆಬುರುಡೆಯ ಒಂದು ವಿಭಾಗ, ಕಿತ್ತಳೆ ಹಣ್ಣಿನ ಒಂದು ತೊಳೆ). (ಜ್ಯಾ.) ಯಾವುದಾದರೂ ಒಂದು ಆಕೃತಿಯಲ್ಲಿ ಸರಳ ರೇಖೆಯಿಂದ ಅಥವಾ ಸಮತಲದಿಂದ ಕತ್ತರಿಸಿದ ಭಾಗ: ಖಂಡ [S. of circle ಚಾಪಕ್ಕೂ ಜ್ಯಾವಿಗೂ ನಡುವಣ ಭಾಗ: ಜ್ಯಾವೃತ್ತ ಖಂಡ. S. of sphere ಕೇಂದ್ರದ ಮೂಲಕ ಹಾಯ್ದಿಲ್ಲದ ಯಾವುದಾದರೂ ಸಮತಲದಿಂದ ಕತ್ತರಿಸಿದ ಗೋಳ ಭಾಗ: ಗೋಳ ಖಂಡ. S. of line ಎರಡು ಬಿಂದುಗಳ ನಡುವಣ ರೇಖೆ, ಭಾಗ: ರೇಖಾ ಭಾಗ. S.-gear, -rack, -wheel ವೃತ್ತದ ಚಾಪದಲ್ಲಿ ಮಾತ್ರ ಹಲ್ಲುಗಳುಳ್ಳ ಚಾಲಕ (ಚಕ್ರ), ಮೊ. ವು. S.-saw ವೃತ್ತಖಂಡದ(ಮೇಲೆ ಹಲ್ಲುಗಳುಳ್ಳ) ಗರಗಸ; ವೃತ್ತಖಂಡಗಳನ್ನು ಜೋಡಿಸಿ ಮಾಡಿದ ಬಟ್ಟಗರಗಸ, ಚಕ್ರಗರಗಸ; ವೃತ್ತಖಂಡಾಕೃತಿಯಲ್ಲಿ ಕೊಯ್ಯುವ ಗರಗಸ. S.-shell ಸಿಡಿಯಲು ಅನುಕೂಲವಾಗುವಂತೆ, ಒಳಗಿನ ಸಿಡಿಮದ್ದಿಗೂ ಹೊರಗಿನ ಸೀಸದ ಕೋಶಕ್ಕೂ ನಡುವೆ, ಭಾಗಗಳ ಜೋಡಣೆಯ ಕಬ್ಬಿಣದ ಆವರಣವುಳ್ಳ ಸಿಡಿಗುಂಡು. S.-valve ತ್ರಿಜ್ಯಾನುವರ್ತಿಯಾಗಿ ಜಾರುವ ಚಲಕವಾಟ]. (ಕ್ರಿ.) ಖಂಡಗಳಾಗಿ, ಭಾಗಗಳಾಗಿ, —ಮಾಡು, ಆಗು; ಭಾಗಭಾಗ —ಆಗು, ಮಾಡು. (ಭ್ರೂಣ) ಛಿನ್ನವಾಗು, ಭಾಗಗಳಾಗಿ ಒಡೆ. (ಶ. ವಿ.) ಖಂಡಾಂಕುರ ಕ್ರಮದಲ್ಲಿ (Gemmation) ಸಂತಾನೋತ್ಪತ್ತಿ —ಆಗು, ಮಾಡು. **Segméntal** (ಗು.); **Segméntally** (ಕ್ರಿ. ವಿ.); **Ségmentary** (ಗು.); **Segmentátion** (ನಾ.)

Ségregate ಸೆ(ಸಿ)ಗ್ರಿಗೇಟ್ (ಕ್ರಿ.), **Ségregate** ಸೆಗ್ರಿಗೆಟ್ (ಗು.) (ಉಳಿದವುಗಳಿಂದ) ಬೇರ್ಪಡಿಸಿಡು, ಪ್ರತ್ಯೇಕಿಸು, ಬೇರೆ ಮಾಡು; (ಅಕ., ಸ್ಫಟಿಕಶಾಸ್ತ್ರ) ರಾಶಿಯಿಂದ ಬೇರ್ಪಟ್ಟು ಕೇಂದ್ರಗಳ ಅಥವಾ ಬಿರುಕುಗಳ ಸುತ್ತ ಶೇಖರವಾಗು; ಒಂದರಿಂದ ಬೇರ್ಪಟ್ಟು ಬೇರೆ ಒಟ್ಟುಗೂಡು. (ಗು.) (ಪ್ರಾಚೀ. ಪ್ರ.) ಬೇರ್ಪಟ್ಟ, ಪ್ರತ್ಯೇಕವಾದ. (ಪ್ರಾ. ವಿ.) ಸರಳ, ಬಿಡಿಯಾದ, ಒಂಟಿಯಾದ; ಸಂಯುಕ್ತ, ಸಂಘಟಿತ, —ವಲ್ಲದ. (ಸ. ವಿ.) S. polygamy ಒಂದೇ ಪುಷ್ಪಪಾತ್ರದಲ್ಲಿಯ ಪ್ರತಿಯೊಂದು ಪುಷ್ಪಕವೂ ತನ್ನದೇ ಆದ ಪುಷ್ಪಾವರಣವನ್ನು ಸಹ ಉಳ್ಳ ಸಂಕೀರ್ಣ ಪುಷ್ಪ. **Segregátion** (ನಾ.); **Ségregative** (ಗು.)

Séid ಸೇಇಡ್, ಸೀದ್ (ನಾ.) ಮಹಮ್ಮದ್ ಪೈಗಂಬರನ ಮಗಳಾದ ಫಾತಿಮ ಮತ್ತು ಸೋದರನ ಮಗ ಅಲಿ ಇವರ ಮೂಲಕ ಬೆಳೆದು ಬಂದ ವಂಶದವನು; ಸಯ್ಯದ್ (ವಂಶದವನು)

Seídlitz powder ಸೆಡ್‌ಲಿಟ್ಸ್ ಪೌಡರ್ (ನಾ.) ಒಂದು ಭೇದಿ ಪುಡಿ, ವಿರೇಚಕ ಚೂರ್ಣ (ಇದರಲ್ಲಿಯ ಎರಡು ಪುಡಿಗಳನ್ನು ಬೇರೆ ಬೇರೆಯಾಗಿ ನೀರಿನಲ್ಲಿ ಬೆರಸಿ ಆ ಎರಡು ದ್ರಾವಣಗಳನ್ನೂ ಪರಸ್ಪರ ಸೇರಿಸಿ ನೊರೆಗೂಡಿದ ಔಷಧವಾಗಿ ಕುಡಿಯುತ್ತಾರೆ)

Seigneúr ಸೇ(ಸೆ)ನ್ಯರ್, **Seígnior** ಸೀನ್ಯರ್, ಸೇನಿಯೊರ್ (ನಾ.) ಊಳಿಗಮಾನ್ಯದ ಒಡೆಯ, ಧಣಿ; ಜಹಗೀರುದಾರ. Grand Seigneur (F) ದೊಡ್ಡಮನುಷ್ಯ, ಶ್ರೀಮಂತ. The Grand Seignior (ಹಿಂದೆ) ತುರ್ಕಿ ಸುಲ್ತಾನ. **Seigniórial** (ಗು.); **Seígniorage** ಸೇನ್ಯೊರೆಜ್, ಸೀನ್ಯರೆಜ್ (ನಾ.) ತನ್ನ ಹಕ್ಕಾಗಿ ದೊರೆ ಅಥವಾ ಊಳಿಗಮಾನ್ಯದ ಧಣಿ ಕೇಳುವ ಪಾಲು; ದೊರೆಯ, ಧಣಿಯ, —ಪಾಲು; ತೆರುವಳಿ (ಮು., ಒಬ್ಬನು ನಾಣ್ಯಮಾಡಿಸಲು ಟಂಕಸಾಲೆಗೆ ತೆಗೆದುಕೊಂಡುಬಂದ ಚಿನ್ನದ ಅಥವಾ ಬೆಳ್ಳಿಯ ಗಟ್ಟಿಯಲ್ಲಿ ದೊರೆಗೆ ಇರುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೇಕಡ ಅಂಶದ ಹಕ್ಕು: ನಾಣ್ಯ ಮುದ್ರಣದ ತೆರುವಳಿ). **Seígniory** ಸೇನ್ಯೆರಿ, ಸೀನ್ಯರಿ (ನಾ.) ಒಡೆತನ, ದೊರೆತನ; ಪ್ರಭುತ್ವಾಧಿಕಾರ, ಪ್ರಭುತ್ವ; (ಶ್ರೀಮಂತನ) ಜಹಗೀರಿ. ಮಧ್ಯ ಕಾಲದ ಇಟಲಿಯ ಪ್ರಜಾಪ್ರಭುತ್ವದಲ್ಲಿ ನಗರಸಭೆ, ಪೌರಸಭೆ.

Seine ಸೇನ್, ಸೀನ್ (ನಾ., ಕ್ರಿ.) (ಮೇಲುಗಡೆ ಅಂಚಿನಲ್ಲಿ ತೇಲು ಬೆಂಡುಗಳನ್ನೂ ಕೆಳಗಡೆ ಅಂಚಿನಲ್ಲಿ ಭಾರಗಳನ್ನೂ ಕಟ್ಟಿ, ಮೀನುಗಳನ್ನು ಸುತ್ತುವರಿದು, ಸಾ., ದಡಕ್ಕೆ ಎಳೆದುಕೊಳ್ಳಬಹುದಾದ) ಒಂದು ಬಗೆಯ ಮೀನು ಬಲೆ. (S.-gang ಸೇನ್ ಬಲೆಯ ಬೆಸ್ತರ ತಂಡ. S.-needle ಈ ಬಲೆ ಹೆಣೆಯುವ ಸೂಜಿ. S.-roller ಈ ಬಲೆಯನ್ನು ಎಳೆದುಕೊಳ್ಳಲು ಸುತ್ತುವ ಉರುಳೆ). (ಕ್ರಿ.) ಸೇನ್ ಬಲೆಯಿಂದ ಮೀನು ಹಿಡಿ. **Seiner** (ನಾ.) ಸೇನ್ ಬಲೆಯ ಬೆಸ್ತ.

Seise, Seísin. Seize ನೋಡಿ.

Seísmic ಸೈಸ್ಮಿಕ್, (ವಿ. ಪ್ರ.) **Seismal** ಸೀಸ್ಮಲ್ (ಗು.) ನೆಲನಡುಗಿನ; ಭೂಕಂಪದ.

Seísmo- ಸೈಸ್ಮೊ— (ಸ. ಪೂ. ಪ.) ಭೂಕಂಪ—. **-gram** ಭೂಕಂಪ ಲೇಖನ. **Seísmograph, Seismómeter, Seísmoscope** ಭೂಕಂಪದ ಶಕ್ತಿ, ಪ್ರಾಂತ, ಮೊ. ನ್ನು ತಿಳಿಸುವ ಯಂತ್ರ ಸಲಕರಣೆಗಳು: ಭೂಕಂಪ ಲೇಖಕ, ಮಾಪಕ, ದರ್ಶಕ. **-graphy, -grapher, -gráphic(al); -metry, -métric(al); -scopy, -scópic; -logy** ಭೂಕಂಪ ಶಾಸ್ತ್ರ. **-lógical, -lógically, -logist.**

Seize ಸೀಸ್ (ಕ್ರಿ.) (ನ್ಯಾ. ಶಾ.) (ಆಸ್ತಿ, ಊಳಿಗಮಾನ್ಯ, ವ್ಯವಹಾರ, ಮೊ. ನ್ನು) ಸ್ವಾಧೀನಕ್ಕೆ ಕೊಡು, ಸ್ವಾಧೀನಪಡಿಸು (= **Seise** ಸಹ) (*Of* ಉಪ. ದೊಡನೆ) [(ವ. ಭೂ. ಕೃ. ನಲ್ಲಿ) Seized *or* seised of ನ್ಯಾಯ ಸಮ್ಮತವಾಗಿ ಸ್ವಾಧೀನಕ್ಕೆ ತೆಗೆದುಕೊಂಡ (The court is seized of this matter ಈ ವಿಚಾರವನ್ನು ನ್ಯಾಯಸ್ಥಾನ ಸ್ವಾಧೀನಕ್ಕೆ ತೆಗೆದುಕೊಂಡಿದೆ). (ರೂಪ.) ಅರಿತ, ತಿಳಿದ, ತಿಳಿಸಲ್ಪಟ್ಟ. Stand seized of (ಜಮೀನು, ಆಸ್ತಿ) ಸ್ವಾಧೀನ ಪಡೆ(ದಿರು)]. (ನಿಷಿದ್ಧ ಸರಕು, ಕಾಗದಪತ್ರ, ಮೊ. ನ್ನು ನ್ಯಾಯಸ್ಥಾನದ ಆಜ್ಞಾಪತ್ರದಿಂದ ಅಥವಾ ನ್ಯಾಯಾಧಿಕಾರದಿಂದ) ವಶಪಡಿಸಿಕೊ, ಸ್ವಾಧೀನಪಡಿಸಿಕೊ, ಹಿಡಿ, ಮುಟ್ಟುಗೋಲು ಹಾಕು, ಜಪ್ತಿ ಮಾಡು. ಬಲಾತ್ಕಾರವಾಗಿ, ಹಠಾತ್ತಾಗಿ, —ಹಿಡಿ(ದುಬಿಡು), ತುಡುಕು; ಬೇಗ, ಸ್ಪಷ್ಟವಾಗಿ, ಗ್ರಹಿಸು (S. fortress. S. an idea ಭಾವವನ್ನು ಗ್ರಹಿಸು, ಹಿಡಿ. Was seized with panic ಗಾಬರಿ ಹಿಡಿಯಿತು). ಉತ್ಸುಕತೆಯಿಂದ, ತವಕದಿಂದ, —ತುಡುಕು, ಹಿಡಿದುಕೊ (*Upon* ಉಪ. ದೊಡನೆ) (S. upon a pretext). (ನಾವೆ) (ಹಗ್ಗ, ಮೊ. ಗಳಿಂದ) ಬಂಧಿಸು; (ಹುರಿ, ತಂತಿ, ಮೊ. ನ್ನು ಹಲವು ಸುತ್ತು ಸುತ್ತಿ ಹಗ್ಗದ ಎರಡು ತುಂಡುಗಳನ್ನು, ಅಥವಾ ಎರಡು ಹಗ್ಗಗಳನ್ನು) ಒಂದಾಗಿ ಬಿಗಿ(ದು ಕಟ್ಟು) [S. ropes together. S. one up (ಕಶೆಯಿಂದ ಹೊಡೆಯುವುದಕ್ಕಾಗಿ) ಹಡಗಿನ ಹಗ್ಗಕ್ಕೆ (ಒಬ್ಬನನ್ನು) ಬಿಗಿದು ಕಟ್ಟು]. **Seízable** (ಗು.); **Seízing** (ನಾ.) (ಸಾ., ಬ. ವ. ದಲ್ಲಿ) ಬಿಗಿದು ಕಟ್ಟುವ ಹುರಿ, ಹಗ್ಗ. **Seízin, Seísin** ಸೀಸಿನ್ (ನಾ.) (ನ್ಯಾ. ಶಾ.) ನಿರುಪಾಧಿಕವಾಗಿ ಅಥವಾ ಸೋಪಾಧಿಕವಾಗಿ ಯಾವಜ್ಜೀವವೂ ಮಾನ್ಯ ಸ್ವಾಧೀನ ಪಡೆಯುವುದು; ಇಂಥ ಮಾನ್ಯ. **Seízor** (ನಾ.) (ನ್ಯಾ. ಶಾ. ದ ಅರ್ಥದಲ್ಲಿ) ಸ್ವಾಧೀನಕ್ಕೆ ತೆಗೆದುಕೊಂಡವನು. **Seízure** ಸೀಷರ್ (ನಾ.) (ಕ್ರಿಯಾರ್ಥಗಳಲ್ಲಿ); ಥಟ್ಟನೆ (ತೀಕ್ಷ್ಣವಾಯು, ಮೊ.) ರೋಗಗ್ರಸ್ತವಾಗುವುದು; ರೋಗದ —ಹಿಡಿತ, ಹೊಡೆತ.

Seízin, Seízure. Seize ನೋಡಿ.

Séjant ಸೀಜಂಟ್ (ಗು.) (ವಂಶಲಾಂಛನ) ಮುಂಗಾಲುಗಳನ್ನು ನೆಟ್ಟಗೆ ಊರಿಕೊಂಡು ಕುಳಿತಿರುವ.

Séjugous ಸೀಜುಗಸ್ (ಗು.) (ಸ. ವಿ.) ಆರು ಜೊತೆ ಪತ್ರಕಗಳುಳ್ಳ.

Sejúnction ಸಿಜಂಕ್‌ಷನ್ (ನಾ.) (ಪ್ರಾಚೀ. ಪ್ರ.) ಬಿಚ್ಚಿ ಬೇರೆ ಬೇರೆ ಮಾಡುವುದು, ಪ್ರತ್ಯೇಕಿಸುವುದು; ವಿಯೋಜನೆ.

Sékos ಸೀಕಾಸ್ (ನಾ.) (ಪ್ರಾಚೀನ ಶೋಧನ ಶಾಸ್ತ್ರ) ಪುರಾತನ ದೇವಾಲಯದ ಗರ್ಭಗುಡಿ.

Sélah ಸೀಲ (ನಾ.) ಸ್ತೋತ್ರ ಗೀತೆಗಳ ಬೈಬಲ್ಲಿನ ಪಾಠಾಂತರದಲ್ಲಿ ಉಳಿಸಿಕೊಂಡಿರುವ, ಸಂಗೀತ ಸೂಚನೆ (ಅಥವಾ ಯತಿ ಸೂಚನೆ) ಎಂಬುದಾಗಿ ಊಹಿಸಲ್ಪಟ್ಟಿರುವ, ಅರ್ಥ ತಿಳಿಯದ ಒಂದು ಹೀಬ್ರೂ ಪದ.

Séldom ಸೆಲ್‌ಡಮ್ [ಕ್ರಿ. ವಿ., (ವಿ. ಪ್ರ., ತರತಮ ರೂಪಗಳು -er, -est)] ಅಪರೂಪವಾಗಿ, ವಿರಳವಾಗಿ, ಎಲ್ಲೋ ಒಮ್ಮೊಮ್ಮೆ, ಕ್ವಚಿತ್ತಾಗಿ (S. or never ಅಪರೂಪವಾಗಿ ಅಥವಾ ಇಲ್ಲವೇ ಇಲ್ಲ. Very s., not s.)

Seléct ಸಿಲೆಕ್ಟ್ (ಗು., ಕ್ರಿ. ಸಕ.) (ಅತ್ಯುತ್ತಮ ಗುಣದ್ದೆಂದು) ಆಯ್ದ, ಆಯಪಾಣಿಯಾದ, ಉತ್ಕೃಷ್ಟ, ಕಳಪೆಗಳನ್ನೆಲ್ಲ ನೂಕಿ ತೆಗೆದ. (ಸಮಾಜ, ಮೊ. ವು) ಅಪರೀಕ್ಷಿತರನ್ನು ಸೇರಿಸಿಕೊಳ್ಳದ, ಎಚ್ಚರಿಕೆಯಿಂದ ಸೇರಿಸಿಕೊಂಡ ಸದಸ್ಯರ, ಸದಸ್ಯರನ್ನು ಎಚ್ಚರಿಕೆಯಿಂದ ಸೇರಿಸುವ. (ಕ್ರಿ.) (ಉತ್ತಮವಾದುದೆಂದು, ಅತ್ಯಂತ ಯೋಗ್ಯವೆಂದು) ಆರಿಸು, ಆಯಿ, ಆಯ್ದು ತೆಗೆ. **Seléctness** (ನಾ.); **Seléctive** (ಗು.); **Seléctively** (ಕ್ರಿ. ವಿ.); **Selectívity** (ನಾ.) (ನಿಸಂತು ಗ್ರಾಹಕ ಸಲಕರಣೆಗಳು, ಮೊ. ಗಳ ವಿಷಯದಲ್ಲಿ) ಇತರ ತರಂಗ ವಿಸ್ತಾರದ ವಾರ್ತೆಗಳು ಬಾಧೆಮಾಡದಂತೆ ಗೊತ್ತಾದ ಯಾವುದಾದರೂ ತರಂಗ ವಿಸ್ತಾರದ ವಾರ್ತೆಯನ್ನು ಗ್ರಹಿಸುವ ಸಾಮರ್ಥ್ಯ; ವಿಶಿಷ್ಟ ತರಂಗ ಗ್ರಾಹಕ ಸಾಮರ್ಥ್ಯ. **Seléctor** (ನಾ.); **Seléction** ಸಿಲೆಕ್‌ಷನ್ (ನಾ.) (ಕ್ರಿಯಾರ್ಥಗಳಲ್ಲಿ); ಆಯ್ಕೆ; ವರಣ; ಆಯ್ದದ್ದು; ಆಯ್ದು ಮಾಡಿದ ಸಂಗ್ರಹ (A fine s. of summer goods. The new headmaster is a good s.). (ಜೀ. ವಿ.) (ಪ್ರಾಣಿ ಅಥವಾ ಸಸ್ಯ ವರ್ಗಗಳಲ್ಲಿ) ಅಳಿದುಹೋಗದೆ ಉಳಿದುಕೊಳ್ಳಲು ಅಥವಾ ಸಂತಾನ ಬೆಳಸಲು ಹೆಚ್ಚು ಯೋಗ್ಯವಾದ ಮಾದರಿಗಳು ನಾನಾ ವಿಧಗಳಲ್ಲಿ (Natural, sexual, physical, artificial, methodical, unconscious, s.) ವಿಂಗಡಗೊಳ್ಳುವುದು; ಸತ್ತ್ವವುಳ್ಳ, ಯೋಗ್ಯ, —ಮಾದರಿಗಳ ವಿಂಗಡಿಕೆ, ಆಯ್ಕೆ.

Sélenite. Selenium ನೋಡಿ.

Selénium ಸಿಲೀನಿಯಮ್ (ನಾ.) ಗಂಧಕ ಮತ್ತು ಟೆಲ್ಯೂರಿಯಂಗಳ ವರ್ಗಕ್ಕೆ ಸೇರಿದ, ಅದರ ವಿದ್ಯುನ್ನಿರೋಧಕ ಶಕ್ತಿ ಬೆಳಕಿನಲ್ಲಿ ಮತ್ತು ಕತ್ತಲೆಯಲ್ಲಿ ಬೇರೆ ಬೇರೆಯಾಗಿರುವುದರಿಂದ ವಿಶೇಷ ಉಪಯೋಗಗಳಿಗೆ ಬರುವ, ಒಂದು ಅಲೋಹ ಮೂಲಧಾತು: ಸಿಲೀನಿಯಂ. **Selénic** ಸಿಲೆನಿಕ್ (ಗು.) S. acid ಸಿಲೀನಿಯಮ್ಮಿನ ಒಂದು ದ್ವಿಕ್ಷಾರಕಾಮ್ಲ: ಸಿಲೆನಿಕ್ ಆಮ್ಲ (H_2SeO_4). **Sélenate** ಸೆಲಿನೇಟ್ (ನಾ.) ಸಿಲೆನಿಕ್ ಆಮ್ಲದ ಲವಣ: ಸೆಲಿನೇಟ್ ಲವಣ. **Selénious** ಸಿಲೀನಿಅಸ್ (ಗು.) S. acid ಸಿಲೀನಿಯಸ್ ಆಮ್ಲ (H_2SeO_3). **Sélenite** ಸೆಲಿನೈಟ್ (ನಾ.) ಸಿಲೀನಿಯಸ್ ಆಮ್ಲದ ಲವಣ: ಸೆಲಿನೈಟ್ ಲವಣ. ಹಲವು ವೇಳೆ ಪಾರದರ್ಶಕವಾದ ತೆಳು ಫಲಕಗಳ ರೂಪದಲ್ಲಿರುವ ಕ್ಯಾಲ್ಸಿಯಂ ಸಲ್ಫೇಟಿನ ಸ್ಫಟಿಕ: ಸೆಲಿನೈಟ್ ಸ್ಫಟಿಕ. (Selénite ಸಿಲೀನೈಟ್) ಚಂದ್ರನಿವಾಸಿ (ಮನುಷ್ಯ). **Selenític** ಸೆಲಿನಿಟಿಕ್ (ಗು.) ಸೆಲಿನೈಟ್ ಸ್ಫಟಿಕದ. ಚಂದ್ರ ಸಂಬಂಧವಾದ, ಚಂದ್ರ ಪ್ರಭಾವಕ್ಕೆ ಒಳಪಟ್ಟ.

Selen(o)- ಸೆಲೀನ್(ನೊ)— (ಸ. ಪೂ. ಪ.) ಚಂದ್ರ—. **-céntric** ಚಂದ್ರ —ಕೇಂದ್ರಕ, ಕೇಂದ್ರೀಯ. **Selénodont** ಅರ್ಧ ಚಂದ್ರಾಕಾರದ ಹಲ್ಲು ದಿಣ್ಣೆಗಳುಳ್ಳ (ಸಸ್ತನಿ): ಚಂದ್ರದಂತ ಪ್ರಾಣಿ. **-graphy** ಚಂದ್ರಮಂಡಲದ ಮೇಲ್ಮೈ ಲಕ್ಷಣಗಳನ್ನು ವಿವರಿಸುವ ಶಾಸ್ತ್ರ: ಚಂದ್ರ(ಮಂಡಲ) ವಿವರಣೆ. **-graph** ಚಂದ್ರನ ಮೇಲ್ಮೈಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೇಖಾಚಿತ್ರ ಅಥವಾ ಛಾಯಾಚಿತ್ರ: ಚಂದ್ರಪಟ. **-grapher** (ನಾ.); **-gráphic** (ಗು.); **-logy** ಚಂದ್ರನ ಚಲನೆಗಳು, ಜ್ಯೋತಿರ್ವಿಜ್ಞಾನ ಸಂಬಂಧಗಳು, ಮತ್ತು ಹೊರಪದರದ ಚರಿತ್ರೆ, ಮೊ. ಗಳನ್ನು ವಿವರಿಸುವ ಶಾಸ್ತ್ರ: ಚಂದ್ರ ವಿಜ್ಞಾನ. **-logist** (ನಾ.); **-trópic** (ಸಸ್ಯ, ಮೊ. ಗಳ ವಿಷಯದಲ್ಲಿ) ಚಂದ್ರನ ಕಡೆಗೆ ತಿರುಗುವ, ಬಗ್ಗುವ; ಚಂದ್ರಾವರ್ತ. **-tropism** (ನಾ.); **-tropy** (ನಾ.)

Seleúcid ಸಿಲ್ಯೂಸಿಡ್ (ನಾ., ಬ. ವ. -ids, -idae —ಡೀ) ಸಿಲ್ಯೂಕಸ್ ವಂಶದವನು (ಈ ವಂಶವು ಸಿಲ್ಯೂಕಸ್ ದಂಡನಾಯಕನಿಂದ ಸ್ಥಾಪಿತವಾಗಿ ಸುಮಾರು ಕ್ರಿ. ಪೂ. ೩೧೨ರಿಂದ ೬೪ರ ವರೆಗೆ ಸಿರಿಯವನ್ನು ಆಳಿತು). **Seleúcidan** (ಗು.) ಸಿಲ್ಯೂಕಸ್ ವಂಶದ, ವಂಶೀಯರ (S. era)

Self ಸೆಲ್ಫ್ (ನಾ., ಬ. ವ. -lves, ಸೆಲ್ವ್ಸ್; ಗು.) ತಾನು, ಆತ್ಮ, ಸ್ವ, ಸ್ವಯಂ [The study of the s ಆತ್ಮ—ಜಿಜ್ಞಾಸೆ, ವಿವೇಚನೆ, ವಿಚಾರ. One's former s. ಒಬ್ಬನ, ತನ್ನ,—ಹಿಂದಿನ ಸ್ಥಿತಿ, ಪೂರ್ವ ಸ್ವರೂಪ. One's better s. ಒಬ್ಬನ, ತನ್ನ, —ಉತ್ತಮ ಸ್ವಭಾವ, ಉದಾತ್ತ ಸ್ವಭಾವ. One's second s. ಒಬ್ಬನ, ತನ್ನ, —ಆಪ್ತ ಸ್ನೇಹಿತ; ಆತ್ಮಸಮ. (ಮು.) His, its, own, *or* very, s. =Himself, etc. Caesar's, pity's, s. (ಅಲಂ.)=Caesar himself, pity itself]. ಸ್ವಾರ್ಥ(ಪರತೆ), ಸ್ವವಿಚಾರ, ಸ್ವಹಿತ (S. is a bad guide to happiness). ಆದ್ಯಂತ ಒಂದೇ ಬಣ್ಣದ, ಸ್ವಾಭಾವಿಕ ವರ್ಣದ, —ಹೂವು. (ವಾಣಿಜ್ಯ ಪ್ರ., ಗ್ರಾಮ್ಯ ಅಥವಾ ಹಾಸ್ಯ ಪ್ರ.)=Myself, yourself, himself, etc. [Cheque drawn to s. ತನ್ನ ಹೆಸರಿಗೇ ಬರೆದ ಚೆಕ್ಕು. A ticket admitting s. and friend ತನಗೂ ತನ್ನ ಸ್ನೇಹಿತನಿಗೂ ಪ್ರವೇಶಕೊಡುವ ಚೀಟಿ. Our noble selves (ಹಾಸ್ಯ ಪ್ರ.; ಸ್ವಸ್ತಿಪಾನದಲ್ಲಿ)]. (ಗು.) (ಬಣ್ಣದ ವಿಷಯದಲ್ಲಿ) ಆದ್ಯಂತ ಒಂದೇ ಆದ, ಒಂದೇ ವಿಧದ. (ಹೂವಿನ ವಿಷಯದಲ್ಲಿ) ಒಂದೇ ಬಣ್ಣದ, ಸ್ವಾಭಾವಿಕ ವರ್ಣದ. **Sélfhood** ಸೆಲ್ಫ್‌ಹುಡ್ (ನಾ.) (ವಿರ. ಪ್ರ.) ಆತ್ಮತಾ ಜ್ಞಾನ, ಆತ್ಮವತ್ವ, ವೈಯಕ್ತಿಕತೆ, ವ್ಯಕ್ತಿಮತ್ವ. **Sélfish** ಸೆಲ್ಫಿಷ್ (ಗು.) ಸ್ವಂತ ಹಿತಗಳನ್ನೂ ಸ್ವಪ್ರಯೋಜನಗಳನ್ನೂ ಮುಖ್ಯವಾಗಿ ಗಮನಿಸುವ; ಸ್ವಾರ್ಥಪರ; ಸ್ವಪ್ರಯೋಜನಾಸಕ್ತ; (ಉದ್ದೇಶ, ಮೊ. ವು) ಸ್ವಾರ್ಥಪ್ರೇರಿತ [S. theory of morals ಯಾವುದಾದರೊಂದು ರೀತಿಯ ಭೋಗಾಪೇಕ್ಷೆಯೇ ಪ್ರತಿಯೊಂದು ಕಾರ್ಯಕ್ಕೂ ಮೂಲತಃ ಪ್ರೇರಕವೆಂಬ ವಾದ: ಸ್ವಾರ್ಥ (ನೀತಿ) ವಾದ. **Sélfishly** (ಕ್ರಿ. ವಿ.); **Sélfishness** (ನಾ.); **Sélfless** (ಗು.) ನಿಸ್ವಾರ್ಥ; ಸ್ವಾರ್ಥ ರಹಿತ. **Sélflessness** (ನಾ.); **Sélfness** (ನಾ.) (ವಿರ. ಪ್ರ.) =Selfhood. **Sélfsame** (Same ಎಂಬುದರ ಅವಧಾರಣಾ ರೂಪ): ಅದೇಯೆ; ಅನನ್ಯ.

Self- (ಸ. ಪೂ. ಪ.) ಆತ್ಮ—, ಸ್ವ—, ಸ್ವಯಂ—, ಸ್ವತಃ—, ತಾನೇ, ತನ್—, ಅದೇ—, ಒಂದೇ—. **S.-abandonment** ತಾನಾಗಿ ಅಧೀನನಾಗುವುದು; ಆತ್ಮ ಪರಿತ್ಯಾಗ. **S.-abasement** ತನ್ನನ್ನೇ ಹೀನೈಸಿಕೊಳ್ಳುವುದು; ಆತ್ಮ ತುಚ್ಛೀಕರಣ. **S.-abhorrence** ತನ್ನ ವಿಷಯದಲ್ಲಿ ತಾನೇ ಹೇಸಿಕೊಳ್ಳುವುದು, ದ್ವೇಷಿಸಿಕೊಳ್ಳುವುದು; ಆತ್ಮ—ಜುಗುಪ್ಸೆ, ಧಿಕ್ಕಾರ, ದ್ವೇಷ. **S.-abnegation** ಅಹಂತಾ, ಆತ್ಮಾಭಿಮಾನ, —ನಿರಾಕರಣೆ. **S.-absorbed** ಆತ್ಮಮಗ್ನ; ಸ್ವಾರ್ಥಪರಾಯಣ. **S.-absorption.** **S.-abuse** ಮುಷ್ಟಿ ಮೈಥುನ. **S.-accusation** ಆತ್ಮನಿಂದೆ. **S.-accusatory** —ನಿಂದಕ. **S.-acting** ತನ್ನಷ್ಟಕ್ಕೆ ತಾನೇ ಕೆಲಸಮಾಡುವ, ನಡೆಯುವ; ಸ್ವತಶ್ಚಲಿ; ಸ್ವಯಂ ಕಾರಕ. **S.-action** ಸ್ವಯಂ —ಚಲನೆ, ಕ್ರಿಯೆ. **S.-activity** (ಬಾಹ್ಯ ಪ್ರಚೋದನೆಯಿಲ್ಲದೆ) ಸ್ವಯಂ (ಚಲನ) ವ್ಯಾಪಾರ. **S.-adjusting** (ಯಂತ್ರ, ಮೊ. ಗಳ ವಿಷಯದಲ್ಲಿ) ತಾನಾಗಿಯೇ —ಹೊಂದಿಕೊಳ್ಳುವ, ಜೋಡಣೆಯಾಗುವ; ಸ್ವಯಂ ನಿಯೋಜಕ. **S.-adjustment.** **S.-admiration** ತನ್ನನ್ನು ತಾನೇ ಮೆಚ್ಚಿಕೊಳ್ಳುವುದು; ಆತ್ಮಶ್ಲಾಘನೆ. **S.-aggrandizement** ಇತರರಿಗೆ ಅವಕಾಶಕೊಡದೆ (ಪದವಿ, ಅಧಿಕಾರ, ಐಶ್ವರ್ಯ, ಮೊ. ನ್ನು) ತನಗೇ —ಹೆಚ್ಚಿಸಿಕೊಳ್ಳುವುದು, ಗಳಿಸಿಕೊಳ್ಳುವುದು; ಸ್ವಾಭಿವೃದ್ಧಿ; ಸ್ವಲಾಭ ಸಂವೃದ್ಧಿ; ಸ್ವಪ್ರತಿಷ್ಠೆ. **S.-appointed** ತನ್ನನು ತಾನೇ ನೇಮಿಸಿಕೊಂಡ; ಸ್ವಯಂ ನಿಯುಕ್ತ; ಸ್ವನಿಯಾಮಿತ. **S.-appreciation** ಆತ್ಮಪ್ರಶಂಸೆ. **S.-approval, -approbation** (ತಾನು ಮಾಡಿದ ಕೃತ್ಯಕ್ಕೆ) ತಾನೇ ಕೊಟ್ಟುಕೊಂಡ ಒಪ್ಪಿಗೆ, ಅನುಮೋದನೆ; ಸ್ವಸಮ್ಮತಿ, ಆತ್ಮಾನುಮೋದನೆ. **S.-asserting, -assertive** ತನ್ನ ಪಂಥವನ್ನೇ, ತನ್ನ ಹೆಚ್ಚುಗಾರಿಕೆಯನ್ನೇ, —ಒತ್ತಿ ಹೇಳುವ; ಆತ್ಮ ಪ್ರತಿಷ್ಠಾಪನೆಯ; ಹಠವಾದಿಯಾದ. **S.-assertion.** **S.-assumed** [(ತನಗೆ ಹಕ್ಕಿಲ್ಲದ) ಬಿರುದು, ಮೊ. ಗಳ ವಿಷಯದಲ್ಲಿ; ಇತರರು ಯಾರೂ ಕೊಡದೆ] ತಾನೇ ವಹಿಸಿಕೊಂಡ, ಕೊಟ್ಟುಕೊಂಡ; ಸ್ವಯಮಾರೋಪಿತ. **S.-begotten** ಸ್ವಶಕ್ತಿಯಿಂದಲೇ, ಸ್ವಪ್ರಯತ್ನದಿಂದಲೇ, —ಪಡೆದ, ಹುಟ್ಟಿಸಿದ; ಆತ್ಮಜನಿತ. **S.-betrayal** ತನ್ನ ಹುಳುಕನ್ನು, ಗುಟ್ಟನ್ನು, ತಾನೇ ರಟ್ಟುಮಾಡುವುದು; ಸ್ವಲೋಪ ಪ್ರಕಾಶನ; ಆತ್ಮದ್ರೋಹ. **S.-binder** ತಾನಾಗಿ ಕಂತೆ ಕಟ್ಟುವ ಸಲಕರಣೆಯುಳ್ಳ ಕೊಯ್ಲು ಯಂತ್ರ. **S.-blinded** ತಾನಾಗಿ ಕುರುಡುಮಾಡಿಕೊಂಡ; ತನ್ನ ಲೋಪದೋಷಗಳನ್ನು ತಾನು ಅರಿಯದ; ಆತ್ಮಾಂಧ. **S.-born** ತಾನಾಗಿ, ತನ್ನಲ್ಲೇ, —ಹುಟ್ಟಿದ; ಸ್ವಯಂ ಜನಿತ; ಸ್ವಯಂಭೂ. **S.-centred(ness)** ಸ್ವಾರ್ಥಮಗ್ನ(ತೆ); ಸ್ವವಿಚಾರಾಸಕ್ತ(ತೆ). **S.-closing** ತಾನಾಗಿ ಮುಚ್ಚಿಕೊಳ್ಳುವ. **S.-cocking** (ಬಂದೂಕಿನ ವಿಷಯದಲ್ಲಿ) ತಾನಾಗಿ ಕೀಲಿನಿಂದ ಎತ್ತಲ್ಪಡುವ ಚಾಪುಳ್ಳ, ಕುದುರೆಯುಳ್ಳ. **S.-collected** ಶಾಂತಿ ಮತ್ತು ಚಿತ್ತಸ್ಥೈರ್ಯವುಳ್ಳ; ಶಾಂತ ಮನಸ್ಕ; ಅಕ್ಷುಭಿತ; ಸಮಾಹಿತ(ಚಿತ್ತವುಳ್ಳ). **S.-colour(ed)** (ಹೂವು ಮತ್ತು ವಸ್ತುಗಳ ವಿಷಯದಲ್ಲಿ) ಆದ್ಯಂತವಾಗಿ ಒಂದೇ ಬಣ್ಣದ; ಏಕ ವರ್ಣ(ಕ). (ಹೂವಿನ ವಿಷಯದಲ್ಲಿ: ಕೃಷಿ ಮಾಡಿದ್ದರಿಂದ ಬದಲಾಯಿಸದೆ) ಮೊದಲಿನ ಸ್ವಾಭಾವಿಕ ವರ್ಣ(ದ). **S.-command** ಕೋಪ ತಾಪಗಳಿಗೆ ಎಡೆಗೊಡದೆ ಮನಸ್ಸನ್ನು ವಶದಲ್ಲಿಟ್ಟುಕೊಂಡಿರುವುದು; ಆತ್ಮಸಂಯಮ. **S.-communion** ಮು., ತನ್ನ ಸ್ವಭಾವ ಅಥವಾ ನಡತೆಯನ್ನು ಕುರಿತು ಚಿಂತನೆ: ಆತ್ಮ (ಸ್ವಭಾವ) ಚಿಂತನೆ; ಆತ್ಮಯೋಗ; ಆತ್ಮಾನುಸಂಧಾನ. **S.-complacent, -complacency** ಸ್ವವಿಷಯದಲ್ಲಿ ಅತಿಸುಲಭವಾಗಿ ಮೆಚ್ಚಿಕೊಳ್ಳುವ, ಮನಸ್ತೃಪ್ತಿಪಡುವ; —ವುದು; ಆತ್ಮತೃಪ್ತ, —ತೃಪ್ತಿ; ಸ್ವಸಂತುಷ್ಟ, —ಸಂತುಷ್ಟಿ. **S.-conceit(ed)** ಸ್ವವಿಷಯದಲ್ಲಿ, ಸ್ವಸಾಮರ್ಥ್ಯದ ವಿಷಯದಲ್ಲಿ, ಅತಿಶಯವಾದ ಅಭಿಮಾನ(ವುಳ್ಳ); ದುರಭಿಮಾನ(ವುಳ್ಳ); ಹೆಮ್ಮೆ(ಯುಳ್ಳ); ಅಹಂಕಾರ(ವುಳ್ಳ). **S.-condemned, -condemnation** (ತನ್ನ ಮಾತುಗಳಿಂದ ಅಥವಾ ತನ್ನ ಕಾರ್ಯಗಳಿಂದ) ತಾನು ತಪ್ಪಿತಸ್ಥನೆಂದು ತಾನೇ ರುಜುವಾತುಪಡಿಸಿಕೊಂಡ; —ಕೊಳ್ಳುವುದು; ಆತ್ಮದೂಷಿತ, —ದೂಷಣೆ; ಆತ್ಮಖಂಡನೆ(ಯ). **S.-confidence** ದಿಟ್ಟತನ, ಆತ್ಮವಿಶ್ವಾಸ. **-confident(ly)** ಆತ್ಮವಿಶ್ವಾಸವುಳ್ಳ, —ದಿಂದ. **S.-congratulation** ತನ್ನನ್ನು ತಾನು ಮೆಚ್ಚಿಕೊಳ್ಳುವುದು; ಆತ್ಮಾಭಿನಂದನೆ. **S.-conquest** ತನ್ನ ಗೆಲುವು; ಆತ್ಮಸಂಯಮ; ಆತ್ಮವಿಜಯ. **S.-conscious(ness)** ತನ್ನ ವ್ಯಕ್ತಿತ್ವವನ್ನು—ಮರೆಯಲಾಗದ, ಎತ್ತಿ ತೋರುವ; ಆತ್ಮತಾ ಜ್ಞಾನ(ವುಳ್ಳ); ಪ್ರಜ್ಞೆ(ಯುಳ್ಳ); ಮೈಯರಿವು(ಳ್ಳ); ಎಚ್ಚತ್ತ; (ತಾನು ಎಲ್ಲರ ಗಮನಕ್ಕೂ ಪಾತ್ರನಾಗಿರುವೆನೆಂಬ) ಸ್ವಾಭಿಮಾನ(ದ), ಸ್ವಪ್ರತಿಷ್ಠೆ(ಯ); ಆತ್ಮಪ್ರಾಮುಖ್ಯದ ಅರಿವು(ಳ್ಳ). (ತ. ಶಾ.) ಅಹಂಕಾರ, ಆತ್ಮಜ್ಞಾನ(ವುಳ್ಳ). **S.-consistent** ನಡೆ ನುಡಿಗಳು ಒಂದಾಗಿರುವ; (ಅಭಿಪ್ರಾಯಗಳನ್ನು ಬದಲಾಯಿಸದೆ) ಏಕರೀತಿಯಿರುವ; ಆತ್ಮ ಸಾಂಗತ್ಯವಿರುವ. **-consistency.** **S.-constituted** (ತನಗೆ ಹಕ್ಕಿಲ್ಲದಿದ್ದರೂ) ತಾನೇ ಅಧಿಕಾರ—ವಹಿಸಿಕೊಂಡ, ಆರೋಪಿಸಿಕೊಂಡ; ಸ್ವಯಂ ನಿಯೋಜಿತ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಯಮಾರೋಪಿತ. **S.-consuming** (ಮತ್ತೊಬ್ಬರು ಉರಿ ಹಚ್ಚದೆ) ತಾನಾಗಿಯೇ ಹೊತ್ತಿಕೊಂಡು ಉರಿಯುವ, ಸ್ವಯಂ ದಾಹ್ಯ (ಉದಾ., ರಂಜಕ). **S.-contained** (ತನ್ನ ಭಾವನೆಗಳನ್ನೂ ಕಾರ್ಯ ಕಲಾಪಗಳನ್ನೂ ಇತರರಿಗೆ ಹೇಳದೆ) ತನ್ನಲ್ಲೇ ಇಟ್ಟುಕೊಳ್ಳುವ; ಮೌನ ವೃತ್ತಿಯ; ಅಲ್ಪ ಭಾಷಿಯಾದ. ಸ್ವಯಂ ಪೂರ್ಣವಾದ; ಅಡಕ ವಾದ; ಎಲ್ಲ ಅನುಕೂಲಗಳೂ ತನ್ನಲ್ಲೇ ಅಡಕವಾಗಿರುವ. **S.-contempt** ಆತ್ಮ ತಿರಸ್ಕಾರ. **-contemptuous(ly). S.-content(ed)** ಆತ್ಮತೃಪ್ತಿ(ಪ್ತ); ಸ್ವಸಂತುಷ್ಟಿ(ಷ್ಟ). **S.-contradiction** ಹಿಂದೆ ಹೇಳಿದ್ದಕ್ಕೆ ವಿರೋಧವಾಗಿ ಹೇಳುವುದು; ಸ್ವೋಕ್ತಿ ವಿರುದ್ಧ. **-contradictory. S.-control**=S.-command. **S.-convicted** ತನ್ನ ಆತ್ಮಸಾಕ್ಷಿಯಿಂದಲೇ, ಮಾತುಗಳಿಂದಲೇ, ಕಾರ್ಯಗಳಿಂದಲೇ, ತಪ್ಪಿತಸ್ಥನೆಂದು ನಿರ್ಣಯಿಸಲ್ಪಟ್ಟ; ಸ್ವನಿಶ್ಚಿತ —ಅಪರಾಧವುಳ್ಳ, ದೋಷವುಳ್ಳ. **S.-created** ಸ್ವಯಂ —ಸೃಷ್ಟ, ನಿರ್ಮಿತ; ಆತ್ಮ ಜನಿತ. **-creation. S.-critical, -criticism** ಆತ್ಮ ವಿಮರ್ಶಕ, —ವಿಮರ್ಶೆ. **S.-culture** ಸ್ವಸಾಧಿತ ಸಂಸ್ಕೃತಿ; ಆತ್ಮ ಸಂಸ್ಕಾರ; ಆತ್ಮ ವ್ಯವಸಾಯ. **S.-deceiving** ಆತ್ಮವಂಚನೆಯ. **-deceiver** —ವಂಚಕ. **-deceit, -deception** —ವಂಚನೆ. **S.-defence** ಆತ್ಮರಕ್ಷಣೆ [In s.-d. ಆತ್ಮರಕ್ಷಣೆಗಾಗಿ (ಆಕ್ರಮಣ ಕ್ಕಾಗಿ ಅಲ್ಲ). Art of s.-d. ಮುಷ್ಟಿಕಾಳಗ ವಿದ್ಯೆ]. **S.-delusion** ಆತ್ಮ—ಭ್ರಮೆ, ಭ್ರಾಂತಿ; ಆತ್ಮವಂಚನೆ. **S.-denying** ಸ್ವಾರ್ಥ ತ್ಯಾಗದ [S.-d. ordinance (ಇಂಗ್ಲೆಂಡಿನ ಚರಿತ್ರೆ) ಪಾರ್ಲಿಮೆಂಟಿನ ಸದಸ್ಯರಿಗೆ ಸೈನಿಕಾಧಿಕಾರ ಅಥವಾ ಇತರ ಲೌಕಿಕಾಧಿಕಾರವನ್ನು ರದ್ದು ಗೊಳಿಸಿದ ಲಾಂಗ್ ಪಾರ್ಲಿಮೆಂಟಿನ ಶಾಸನ (Long Parliament ರಚಿಸಿದ್ದು) (ಪ್ರಾಸ್ತಾವಿಕವಾಗಿ ಸಹ ಪ್ರ.)]. **-denial** ಸ್ವಾರ್ಥ ತ್ಯಾಗ. **S.-dependent** ಸ್ವಾವಲಂಬಿ. **-dependence** ಸ್ವಾವ ಲಂಬನೆ. **S.-depreciation** ಆತ್ಮನಿಕೃಷ್ಟತೆ; ಆತ್ಮಾಪಕರ್ಷ. **-depreciative. S.-despair** ಆತ್ಮನಿರಾಶೆ. **S.-destroying** ಆತ್ಮ —ನಾಶಕ, ಘಾತುಕ. **-destruction** ಆತ್ಮಘಾತ; ಆತ್ಮ ಹತ್ಯೆ. **S.-determining, -determination** ಮನಸ್ಸಂಕಲ್ಪ(ವುಳ್ಳ); ಸ್ವನಿಶ್ಚಯ(ವುಳ್ಳ); ಆತ್ಮನಿರ್ಣಯಾಧಿಕಾರ(ವುಳ್ಳ) (ವಿಧಿವಶ ಎಂಬುದಕ್ಕೆ ವಿರುದ್ಧವಾಗಿ). (ಆಧುನಿಕ ರಾಜಕೀಯ; ಜನಾಂಗದ ವಿಷಯದಲ್ಲಿ) ತನ್ನ ರಾಜ್ಯಾಡಳಿತ ಕ್ರಮವನ್ನು ತಾನೇ ನಿರ್ಣಯಿಸಿಕೊಳ್ಳುವ ಹಕ್ಕು(ಳ್ಳ): ಆತ್ಮನಿರ್ಣಯದ ಹಕ್ಕು(ಳ್ಳ). **S.-development** ಆತ್ಮವಿಕಾಸ, ಆತ್ಮವೃದ್ಧಿ. **S.-devotion** (ಒಬ್ಬನಿಗೆ, ಒಂದು ಮಹೋದ್ದೇಶಕ್ಕೆ) ಆತ್ಮಾರ್ಪಣೆ, ಆತ್ಮನಿವೇದನೆ. **S.-discipline** ಆತ್ಮ—ದಂಡನೆ, ಶಾಸನ, ಸಂಯಮ. **S.-disparagement** ಆತ್ಮನಿಕೃಷ್ಟತೆ; ಆತ್ಮ ಲಾಘವ. **S.-display** ತನ್ನ, ತನ್ನ ಶಕ್ತಿಗಳ, ತನ್ನ ಸಂಪತ್ತಿನ, ಮೆರೆತ: ಆತ್ಮ ಪ್ರದರ್ಶನ; ಡಾಂಭಿಕತೆಯ ಪ್ರದರ್ಶನ; ಜಂಬ ಗಾರಿಕೆ. **S.-dispraise** ಆತ್ಮದೂಷಣೆ, —ನಿಂದೆ. **S.-distrust(ful)** ಸ್ವಸಾಮರ್ಥ್ಯದಲ್ಲಿ ಸಂಶಯ(ವುಳ್ಳ), ಅಪನಂಬಿಕೆ(ಯುಳ್ಳ); ಆತ್ಮ ಸಂಶಯ(ವುಳ್ಳ). **S.-educated** ಆತ್ಮ, ಸ್ವ(ಯಂ), —ಶಿಕ್ಷಿತ. **-education** —ಶಿಕ್ಷಣ. **S.-effacement** (ನಾಚಿಕೆಯಿಂದ, ದೈನ್ಯ ದಿಂದ) ಕಣ್ಮರೆಯಾಗಿರುವುದು, ಹಿಂದೆಯೇ ನಿಂತಿರುವುದು; ಅಹಂತಾ, ಆತ್ಮತಾ, —ಅಪನೋದನ, ದಮನ. **S.-elective** (ಸದಸ್ಯರನ್ನು) ತಾನೇ ಚುನಾಯಿಸಿಕೊಳ್ಳುವ ಹಕ್ಕುಳ್ಳ; ಸ್ವಂತ ಚುನಾವಣಾಧಿ ಕಾರವುಳ್ಳ; ಸ್ವಯಂ ವರಣಾಧಿಕಾರವುಳ್ಳ. **S.-esteem** ಆತ್ಮಾಭಿ ಮಾನ, ಸ್ವಾಭಿಮಾನ, ಆತ್ಮಗೌರವ; ಸ್ವಪ್ರತಿಷ್ಠೆ. **S.-evident(ly)** ಸ್ವತಸ್ಸಿದ್ಧ(ವಾಗಿ), ಸ್ವಯಂ ವ್ಯಕ್ತ(ವಾಗಿ). **S.-examination** ತನ್ನನ್ನು ತಾನೇ ಪರೀಕ್ಷಿಸಿಕೊಳ್ಳುವುದು; ಆತ್ಮ ಪರೀಕ್ಷೆ, —ಶೋಧನೆ. **S.-executing** (ಜಾರಿಗೆ ಬರಲು ಶಾಸನ, ಮೊ. ವು ಆವಶ್ಯಕವಿಲ್ಲದೆ) ತಾನಾಗಿಯೇ ಜಾರಿಗೆ ಬರುವ; ಸ್ವಯಂ ನಿರ್ವಾಹಕ. **S.-existent** ಸ್ವತಂತ್ರವಾಗಿ ತಾನೇ ಅಸ್ತಿತ್ವದಲ್ಲಿರುವ; ಸ್ವಯಂಭೂ. **S.-explaining, -explanatory** ಸ್ವವಿವರಣಾತ್ಮಕ. **S.-faced** (ಕಲ್ಲಿನ ವಿಷಯದಲ್ಲಿ) ಕೆತ್ತಿ ಆಕಾರ ಕೊಟ್ಟಿಲ್ಲದ, ನಯಮಾಡಿಲ್ಲದ; ಸ್ವಾಭಾವಿಕ ಸ್ಥಿತಿಯಲ್ಲಿರುವ. **S.-feeding, -feeder** ಉರುವ ಲನ್ನು, ಮುಗಿದುಹೋದ ವಸ್ತುಗಳನ್ನು, ತಾನಾಗಿ ಒದಗಿಸಿಕೊಳ್ಳುವ (ಕುಲುಮೆ ಯಂತ್ರ). **S.-fertilizing, -fertilized, -fertile** (ಸಸ್ಯಗಳ ವಿಷಯದಲ್ಲಿ; ಇತರ ಪುಷ್ಪಪರಾಗದಿಂದಲ್ಲದೆ) ಸ್ವಂತ ಪುಷ್ಪ ಪರಾಗದಿಂದ ಗರ್ಭ ಧರಿಸುವ; ಸ್ವಯಂ ಗರ್ಭವತ್ತಾಗಿರುವ; (ಭೂಮಿಯ ವಿಷಯದಲ್ಲಿ) ತನ್ನಲ್ಲೇ ಬೆಳೆದ ಸಸ್ಯಗಳಿಂದ ಫಲವತ್ತಾ ಗುವ. **-fertility. S.-flattering, -flattery** ಆತ್ಮಪ್ರಶಂಸೆ(ಯ). **S.-forgetful(ness)** ತನ್ನ (ಪ್ರಯೋಜನದ) ಮರವು(ಳ್ಳ); ಆತ್ಮ, ಸ್ವಾರ್ಥ, —ವಿಸ್ಮೃತಿ(ಯುಳ್ಳ). **S-generating** ಸ್ವನಿರ್ಮಾಪಕ; ಆತ್ಮಜನಕ. **S.-glazed** (ಪಿಂಗಾಣಿ) ಆದ್ಯಂತವಾಗಿ ಒಂದೇ ಬಣ್ಣದ ಹೊಳಪುಳ್ಳ. **S.-glorification** ಬಡಾಯಿ ಕೊಚ್ಚುವುದು; ಆತ್ಮ ಶ್ಲಾಘನೆ; ಆತ್ಮ ಮಹಿಮಾ ಪ್ರಕಾಶನ. **S.-governing** ಸ್ವರಾಜ್ಯಾ ಧಿಕಾರವುಳ್ಳ, ಸ್ವತಂತ್ರ ಆಳಿಕೆಯ. The s.-g. colonies —ವಸಾಹತುಗಳು [ಎದುರು ಪದ: Crown Colonies (Crown ನೋಡಿ)]. **-government** ಸ್ವರಾಜ್ಯ; ಸ್ವತಂತ್ರ ರಾಜ್ಯ; ಆತ್ಮ ಶಾಸನ. **S.-gratulation** ಆತ್ಮಾಭಿನಂದನೆ. **S.-heal** ಸ್ವಯಂ ಗುಣಕಾರಿ (ಮೂಲಿಕೆ) (ವೈದ್ಯನ ಸಹಾಯವಿಲ್ಲದೆ ಗುಣ ಮಾಡುವಂಥದು). **S.-help** (ಇತರರ ಸಹಾಯವನ್ನು ನಿರೀಕ್ಷಿಸದೆ ಮಾಡುವ) ಸ್ವಂತ ಪ್ರಯತ್ನ; ಆತ್ಮ ಸಹಾಯ. **S.-humiliation** ತನ್ನನ್ನು ತಾನೇ ಹೀನೈಸಿಕೊಳ್ಳುವುದು; ಆತ್ಮ —ನೈಚ್ಯ, ದೈನ್ಯ. **S.-immolation** (ಸಹಗಮನದ ಮೂಲಕ, ಮೊ. ಗಿ) ಆತ್ಮಬಲಿ. **S.-important, -importance** ಆತ್ಮಪ್ರಾಶಸ್ತ್ಯ(ವುಳ್ಳ); ಸ್ವಪ್ರತಿಷ್ಠೆ(ಯ); ಸೊಕ್ಕಿನ; ಸೊಕ್ಕು. **S.-imposed** (ಕೆಲಸ, ಮೊ. ದು) ತನಗೆ ತಾನೇ ನೇಮಿಸಿ ಕೊಂಡ, ಮೇಲೆ ಎಳೆದುಕೊಂಡ; ಸ್ವಯಂ ಕೃತ. **S.-impotent** ಸ್ವಯಂ ನಿರ್ವೀರ್ಯ; ಸ್ವಯಂ ಫಲವತ್ತಲ್ಲದ (ಎದುರು ಪದ: S.-fertile). **S.-improvement** ಆತ್ಮಾಭಿವೃದ್ಧಿ. **S.-inductive, -induction.** ಒಂದು ಪ್ರವಾಹ ಮಾರ್ಗದಲ್ಲಿ ಪ್ರವಾಹ ವ್ಯತ್ಯಾಸ ದಿಂದ ಬೇರೆ ಪ್ರವಾಹವನ್ನು ಪ್ರಚೋದಿಸುವ, —ವುದು; ಸ್ವಯಂ (ವಿದ್ಯುತ್ಪ್ರವಾಹ) ಪ್ರಚೋದಕ, ಪ್ರಚೋದನೆ. **S.-indulgent, -indulgence** ವಿಷಯಲೋಲುಪ(ತೆ); ಭೋಗಾಸಕ್ತ(ಕ್ತಿ). **S.-inflicted** ತನಗೆ ತಾನೇ—ಮಾಡಿಕೊಂಡ, ವಿಧಿಸಿಕೊಂಡ; ಸ್ವಯಂ ಕೃತ. **S.-interest(ed)** ಸ್ವಪ್ರಯೋಜನ(—ನಾಸಕ್ತ); ಆತ್ಮಹಿತ; ಸ್ವಾರ್ಥ(ಪರ). **S.-invited** ತಾನಾಗಿ ಕರಸಿಕೊಂಡು ಬಂದ, ಯಾರೂ ಕರೆಯದೆ ತಾನಾಗಿ ಬಂದ; ಆತ್ಮಾಹೂತ; ಅನಾ ಹೂತ. **S.-involved** ಸ್ವವಿಚಾರಮಗ್ನ; ತಾನಾಗಿ ಸಿಕ್ಕಿಕೊಂಡ, ಸಿಕ್ಕಿಬಿದ್ದ. **S.-justification** ತಾನು ಮಾಡಿದ್ದನ್ನು ಸಮರ್ಥನೆ ಮಾಡಿಕೊಳ್ಳುವುದು; ಆತ್ಮ ಸಮರ್ಥನೆ. **S.-kindled** ತನಗೆ ತಾನೇ ಹೊತ್ತಿಕೊಂಡ; ಸ್ವಯಂ ಉದ್ದೀಪಿತ. **S.-knowledge** ಆತ್ಮ (ಪರಿ)ಜ್ಞಾನ. **S.-laudation** ಆತ್ಮಪ್ರಶಂಸೆ. **S.-love** ಆತ್ಮಾನು ರಾಗ; ಸ್ವಾರ್ಥ; ಭೋಗಾಸಕ್ತಿ; ಸ್ವಾಭಿಮಾನ, ಮಮಕಾರ; (ವಿರ. ಪ್ರ.) ಆತ್ಮಾಭಿವೃದ್ಧಿಯ ಬಯಕೆ, ಆಸೆ. **S.-luminous** ಸ್ವಯಂ ಪ್ರಕಾಶಿತ. **S.-made** ಸ್ವಪ್ರಯತ್ನದಿಂದ ಉನ್ನತ ಸ್ಥಿತಿಗೆ ಬಂದ. **S.-mastery** ಆತ್ಮ ಸಂಯಮ. **S.-mortification** ದೇಹದಂಡನೆ, ತಪಸ್ಸು; ಆತ್ಮನಿಗ್ರಹ; ಪ್ರಾಯಶ್ಚಿತ್ತ; ಸ್ವಾಪಮಾನ, ಆತ್ಮತೇಜೋವಧೆ. **S.-moving, -motion** ಸ್ವಯಂಚಲ,—ಚಲನೆ. **S.-murder(er)** ಆತ್ಮಘಾತ(ಕ); ಆತ್ಮಹತ್ಯೆ, —ಹತ್ಯಕಾರ. **S.-opinion** ತನ್ನ ಅಭಿಪ್ರಾಯಗಳ ಪಟ್ಟು ಹಿಡಿಯುವುದು; ಸ್ವಾಭಿಪ್ರಾಯದ ಛಲ; ಸ್ವಮತಾಗ್ರಹ; ದುರಾಗ್ರಹ. **S.-opinioned, -opinionated** —ವುಳ್ಳ. **S.-partial(ity)** ಸ್ವ(ವಿಷಯಕ) ಪಕ್ಷಪಾತ(ವುಳ್ಳ); ಸ್ವಾತ್ಮ ಪಕ್ಷಪಾತ(ವುಳ್ಳ). **S.-pity** ತನ್ನ ವಿಷಯದಲ್ಲಿ ಮರುಕ; ಸ್ವಾನುಕಂಪ. **S.-pleasing** ಸ್ವಸಂತೋಷಾರ್ಥಕ. **S.-poised** (ಆಧಾರವಿಲ್ಲದೆ) ತಾನಾಗಿ ಸಮತೂಕದಲ್ಲಿರುವ, ತೇಲಾಡುತ್ತಿರುವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

S.-pollution ಮುಷ್ಟಿಮೈಥುನ. **S.-possessed, -possession** (ಉದ್ರೇಕಿಸುವ ಸನ್ನಿವೇಶ ಸಂದರ್ಭಗಳಲ್ಲಿ) ಸ್ವಸ್ಥಚಿತ್ತ(ತೆ), ಅಕ್ಷುಬ್ಧ(ತೆ), ಶಾಂತ(ತೆ). **S.-praise** ಆತ್ಮಪ್ರಶಂಸೆ (S.-p. is no recommendation). **S.-preservation** (ಪ್ರಜ್ಞೆಯುಳ್ಳ ಪ್ರಾಣಿಗಳಲ್ಲಿ; ಅಪಾಯಕ್ಕೆ ಸಿಕ್ಕದೆ) ತಮ್ಮನ್ನು ತಾವು ಕಾಪಾಡಿಕೊಳ್ಳಬೇಕೆಂಬ ಮತ್ತು ಜೀವಿಸಿರಬೇಕೆಂಬ ಮೂಲ ಹುಟ್ಟುಗುಣ: ಆತ್ಮ ಸಂರಕ್ಷಣೆ; ಪ್ರಾಣ ಉಳಿಸಿಕೊಳ್ಳಬೇಕೆಂಬ ಆಸೆ **S.-profit** ಸ್ವಪ್ರಯೋಜನ; ಸ್ವಂತ ಲಾಭ. **S.-propagating** ಸ್ವಯಂ ಸಂತಾನವರ್ಧಕ; ಸ್ವಸಂವರ್ಧಕ. **S.-raker** ಬೆಳೆಯನ್ನು ಕಂತೆ ಕಟ್ಟಲು ಅನುಕೂಲಿಸುವಂತೆ ತಂಡಗಳಾಗಿ ಮಾಡುವ ಹಲುದೆಗಳುಳ್ಳ ಕೊಯ್ಲು ಯಂತ್ರ. **S.-realization** ತನ್ನ ಎಲ್ಲ ಶಕ್ತಿಗಳನ್ನೂ ಪೂರ್ಣವಾಗಿ ವೃದ್ಧಿಗೊಳಿಸುವುದು; ಆತ್ಮಗುಣ ಮೂರ್ತೀಕರಣ; ಆತ್ಮಸಿದ್ಧಿ; ಆತ್ಮಸಾಕ್ಷಾತ್ಕಾರ. **S.-recording** (ವೈಜ್ಞಾನಿಕ ಯಂತ್ರ ಸಲಕರಣೆಗಳಲ್ಲಿ) ಸ್ವಯಂ —ನಿರ್ದೇಶಕ, ಲೇಖಕ. **S.-regarding, -regard** (ಸ್ವಾರ್ಥ ದೋಷವಿಲ್ಲದ) ಸ್ವಂತ ವಿಚಾರ(ದ); ಸ್ವಂತಕ್ಕೆ ಸಂಬಂಧಿಸಿದ; ಆತ್ಮಗೌರವ(ವುಳ್ಳ) (ಎದುರು ಪದ: Altruism). **S.-registering** ಸ್ವಯಂ ಲೇಖಕ. **S.-regulating** (ಯಂತ್ರದ ವಿಷಯದಲ್ಲಿ; ವೇಗದ) ಸ್ವಯಂ ನಿಯಂತ್ರಕ. **S.-reliant, -reliance** ಸ್ವಾವಲಂಬಿ, ಸ್ವಾವಲಂಬನೆ. **S.-renunciation** ನಿಸ್ಸ್ವಾರ್ಥ; ವೈರಾಗ್ಯ. **S.-repression** ಇಂದ್ರಿಯ ದಮನ; ಆತ್ಮನಿಗ್ರಹ. **S.-reproach(ful)** ಆತ್ಮನಿಂದೆ, —ನಿಂದಕ; ಆತ್ಮ ದೂಷಣೆ(ಯುಳ್ಳ). **S.-repugnant** = S.-contradictory; ಪೂರ್ವಾಪರ ವಿರುದ್ಧ. **S.-respecting, -respect, -respectful** ಆತ್ಮಗೌರವ(ವುಳ್ಳ). **S.-restrained, -restraint** ಆತ್ಮಸಂಯಮ(ವುಳ್ಳ); ದಮೆ(ಯುಳ್ಳ). **S.-revealing, -revelation** ಆತ್ಮ (ಸ್ವಭಾವ) ಪ್ರಕಾಶಕ,—ಪ್ರಕಾಶನ; ಸ್ವತಃ ಪ್ರಕಟ(ನ). **S.-reverent, -reverence** (ಅಲಂ., ಕಾವ್ಯ, ಮತ್ತು ದೇವ. ಶಾ.) ಆತ್ಮಗೌರವ(ವುಳ್ಳ). **S.-righteous(ness)** ತಾನು ಧರ್ಮಿಷ್ಠನೆಂದು ನಂಬಿಕೊಂಡಿರುವ, —ನಂಬಿಕೆ; ಸ್ವಧರ್ಮಿಷ್ಠತಾಭಿಮಾನ(ವುಳ್ಳ). **S.-righting** (ದೋಣಿಯ ವಿಷಯದಲ್ಲಿ: ಮಗುಚಿಕೊಂಡರೆ) ತಾನೇ —ಸರಿಯಾಗುವ, ನೇರ್ಪಾಗುವ. **S.-sacrificing, -sacrifice** ಸ್ವಂತ ಹಿತಗಳನ್ನೂ ಸ್ವಂತ ಇಚ್ಛೆಗಳನ್ನೂ ಬದಿಗಿರಿಸಿ ಇತರರ ಹಿತಸಾಧನೆಮಾಡುವ, —ಮಾಡುವುದು; ಸ್ವಾರ್ಥತ್ಯಾಗ(ದ); ಆತ್ಮಬಲಿ(ಯ). **S.-satisfied, -satisfaction** ಆತ್ಮತೃಪ್ತ, —ತೃಪ್ತಿ; ಪ್ರತಿಷ್ಠೆ(ಯ); ಅಹಂಕಾರ ದ). **S.-scorn** ಆತ್ಮತಿರಸ್ಕಾರ. **S.-seeking, -seeker** ಸ್ವಾರ್ಥ(ಪರ); ಸ್ವಾರ್ಥಾನ್ವೇಷಕ, ಸ್ವಾರ್ಥಾನ್ವೇಷಣೆ. **S.-slaughter** ಆತ್ಮಹತ್ಯೆ. **S.-sown** (ಮನುಷ್ಯ ಹುಟ್ಟುಹಾಕದೆ) ಬೀಜ ತಾನಾಗಿ ಉದುರಿ ಹುಟ್ಟಿಕೊಂಡ; ತಾನಾಗಿಯೇ ಬಿತ್ತನೆಯಾದ. **S.-starter** ಮೋಟಾರು ಬಂಡಿಯನ್ನು ಹೊರಡಿಸಲನುಕೂಲಿಸುವ ಒಂದು ವಿದ್ಯುತ್ ಸಲಕರಣೆ: ಸ್ವತಃ ಚಾಲಕ. **S.-sterile** = S.-impotent. **-sterility.** **S.-styled** (ಹಕ್ಕಿಲ್ಲದೆ) ತಾನೇ ಆ ಹೆಸರು ಕೊಟ್ಟುಕೊಂಡ; ಸ್ವಯಂ ಆರೋಪಿತ. **S.-sufficing** ಹೊರಗಿನಿಂದ, ಇತರರಿಂದ, —ಏನನ್ನೂ ಅಪೇಕ್ಷಿಸದ; ಸ್ವಯಂಪೂರ್ಣ; ತಾನು ಪರಿಪೂರ್ಣನೆಂದು ಹೆಮ್ಮೆಯಿರುವ; ಸ್ವಾವಲಂಬನೆಯ; ಸ್ವತಂತ್ರವಾದ. **-sufficient** = S.-sufficing. **-sufficiency.** **S.-suggestion** (ಸುಪ್ತಾವ್ಯವಾಹನ ವಿದ್ಯೆಯಲ್ಲಿಯಂಥ) ಸ್ವಯಂ ಪ್ರೇರಣೆ, —ಚೋದನೆ. **S.-support(ing)** ಸ್ವಂತ ಆಧಾರ(ವುಳ್ಳ); (ಜೀವನೋಪಾಯ, ವೆಚ್ಚ, ಮೊ.ನ್ನು) ಸ್ವಂತವಾಗಿ ನಿರ್ವಹಿಸಿಕೊಳ್ಳುವ. **S.-surrender** (ಒಂದು ಉದ್ದೇಶಕ್ಕೆ, ಪ್ರಭಾವಕ್ಕೆ) ಆತ್ಮಾರ್ಪಣೆ. **S.-sustaining, -sustained** ಸ್ವಾವಲಂಬನೆಯುಳ್ಳ, ಸ್ವಾವಲಂಬಿ. **S.-taught** ಸ್ವಯಂ ಶಿಕ್ಷಿತ. **S.-tormenting, -torture** ಆತ್ಮಹಿಂಸಕ, —ಹಿಂಸೆ. **S.-violence** ಆತ್ಮಘಾತ; (ಮು.) ಆತ್ಮಹತ್ಯೆ. **S.-will(ed)** ಹಠಮಾರಿತನ(ದ); ದುರಾಗ್ರಹ(ವುಳ್ಳ); ಸ್ವೈರ(ತೆ). **S.-winding** (ಗಡಿಯಾರ) ತಾನೇ ಕೀಲು ಕೊಟ್ಟುಕೊಳ್ಳುವ (ಸಲಕರಣೆಯುಳ್ಳ). **S.-worship** ಆತ್ಮಾರಾಧನೆ, ಆತ್ಮಪೂಜೆ.

Sell ಸೆಲ್ (ಕ್ರಿ.; ಭೂತ., ಭೂ. ಕೃ. Sold ಸೋಲ್ಡ್; ನಾ.) ಹಣಕ್ಕೆ ಪ್ರತಿಯಾಗಿ ಕೊಟ್ಟುಬಿಡು; ಬೆಲೆಗೆ ಕೊಡು; ಮಾರು; ವಿಕ್ರಯಿಸು; ವ್ಯಾಪಾರ ಮಾಡು (Buy, barter ನೋಡಿ) [S. one's life dearly (ಯುದ್ಧದಲ್ಲಿ) ತಾನು ಸಾಯುವುದಕ್ಕೆ ಮೊದಲು ಶತ್ರುಗಳಲ್ಲಿ ಹಲವರನ್ನು ಬಲಿ ತೆಗೆದುಕೊ. Selling-race, -handicap ಗೆದ್ದ ಕುದುರೆಯನ್ನು (ಹೆಚ್ಚು ಬೆಲೆ ಕೊಡುವ ಸವಾಲುದಾರನಿಗೆ) ಮಾರಬೇಕೆಂಬ ಷರತ್ತುಳ್ಳ ಜೂಜು. S. one a pup (Pup ನೋಡಿ). Do you sell candles? ನಿನ್ನಲ್ಲಿ ಮೋಂಬತ್ತಿಗಳಿವೆಯೊ?]. (ಹಣಕ್ಕಾಗಿ ಅಥವಾ ಇತರ ಬಹುಮಾನಕ್ಕಾಗಿ) ಬಿಟ್ಟುಕೊಡು, ವಿಶ್ವಾಸಘಾತ ಮಾಡು, ದ್ರೋಹಮಾಡು (S. one's country). (ಹಣಕ್ಕಾಗಿ ಅಥವಾ ತುಚ್ಛ ಲಾಭಕ್ಕಾಗಿ) ಮಾರಿಕೊ, ದುರುಪಯೋಗಪಡಿಸು [S. justice ನ್ಯಾಯವಿಕ್ರಯ ಮಾಡು. S.-oneself (ಹಣಕ್ಕಾಗಿ) ಒಬ್ಬನ ಅಡಿಯಾಳಾಗು, ತನ್ನನ್ನು ಮಾರಿಕೊ. S. one's honour *or* chastity]. (ಅನು.) ಮಾತಿಗೆ ತಪ್ಪಿ ಅಥವಾ ಕುತಂತ್ರಮಾಡಿ ನಿರಾಶೆಗೊಳಿಸು, ವಂಚಿಸು, ಮೋಸಮಾಡು [Sold again! (ಮೋಸಹೋದವನಿಗೆ ಹೇಳುವ ಅಥವಾ ಮೋಸಹೋದವನ ಉದ್ಗಾರ): ಪುನಃ ಬೇಸ್ತುಬಿದ್ದ, —ಬಿದ್ದೆ]. (ಸರಕಿನ ವಿಷಯದಲ್ಲಿ) ಬೆಲೆಯಾಗು, ಗಿರಾಕಿಯಿರು (Will never s.). [S. off (ಮು., ಕಡಮೆ ಬೆಲೆಗೆ, ಬೆಲೆ ಇಳಿಸಿ) ಉಳಿದ ಸರಕೆಲ್ಲವನ್ನೂ ಮಾರಿಬಿಡು. S. out (ಚರಿತ್ರೆ) ಅಧಿಕಾರ ಸನ್ನದನ್ನು ಮಾರಿಕೊಂಡು ಸೈನ್ಯವನ್ನು ಬಿಡು; ಬಂಡವಾಳದ (ಎಲ್ಲ ಅಥವಾ ಕೆಲವು) ಪಾಲುಗಳನ್ನು, ಮಾರಾಟದ ಸರಕೆಲ್ಲವನ್ನೂ, —ಮಾರಿಬಿಡು (*Out* ಉಪ. ಇಲ್ಲದೆ ಸಹ). S. up (ಸಾಲಕ್ಕೆ ಕಟ್ಟಿಕೊಳ್ಳುವ ಬಗ್ಗೆ) ಸಾಲಗಾರನ ಸರಕನ್ನು ಜಫ್ತಿಮಾಡಿ ಅಥವಾ ಕಾನೂನು ಕ್ರಮದಿಂದ ಮಾರು] [**(-)seller** (ನಾ.)]. (ನಾ.) ಬೇಸ್ತು (ಬೀಳುವುದು), ಮೋಸ (ಹೋಗುವುದು) (What a s.!)

Séllanders = Sallenders.

Séltzer(-water) ಸೆಲ್ಟ್‌ಸರ್(ವಾಟರ್) (ನಾ.) ಜರ್ಮನಿಯ ಸೆಲ್ಟರ್ಸ್ ಎಂಬ ಹಳ್ಳಿಯ ಬಳಿ ದೊರೆಯುವ ಔಷಧೋಪಯುಕ್ತವಾದ ಖನಿಜ ಜಲ; ಇಂತಹ ಕೃತಕ ಖನಿಜ ಜಲ; (ಇಂಗಾಲಾಮ್ಲ ವಾಯುವನ್ನು ಹುದುಗಿಸಿರುವ) ಸೋಡಾ ಪಾನೀಯ.

Séltzogene ಸೆಲ್‌ಟ್ಸೊಜೀನ್ (ನಾ.) = Gazogene.

Sélvage ಸೆಲ್‌ವೆ(ವಿ)ಜ್, **Sélvedge** —ವೆಜ್ (ನಾ.) ಬಟ್ಟೆಯ —ಅಂಚು, ಕರೆ, ಅರುಗು, ಸೆರಗು. ನೆಯ್ದ ಬಟ್ಟೆಯ ಕೊನೆಯಲ್ಲಿ ಅನಂತರ ಹರಿದುಹಾಕಿಬಿಡುವುದಕ್ಕಾಗಿ ಅಥವಾ ಕೂಡುಹೊಲಿಗೆಯಿಂದ ಮರೆಮಾಡುವುದಕ್ಕಾಗಿ ಮಾಡಿರುವ ಅಂಚು; ಅಂಚುಪಟ್ಟಿ. (ಬೀಗದಲ್ಲಿ) ಅಗುಳಿಯನ್ನು ಹಿಡಿದುಕೊಳ್ಳುವ, ತೂರಿಸಲು ಇರುವ, —ಪಕ್ಕ ಫಲಕ; ತಾಪಾಳು ಗೂಡು. **Sélvaged** (ಗು.)

Selves. **Self** ನೋಡಿ.

Semántics ಸಿಮ್ಯಾಂಟಿಕ್ಸ್ (ನಾ., ಬ. ವ.) = Semasiology.

Sémaphore ಸೆಮಫೋರ್ (ನಾ., ಕ್ರಿ.) ತೂಗು ತೋಳುಗಳು, ಕೆಂಪು ಮತ್ತು ಹಸುರು ದೀಪಗಳು —ಇವುಗಳನ್ನುಳ್ಳ, ಈಗ ಮು., ರೈಲು ದಾರಿಗಳಲ್ಲಿ ಹಗಲಿನಲ್ಲೂ ರಾತ್ರಿಯಲ್ಲೂ ಉಪಯೋಗಿಸುವ ಸನ್ನೆಗಂಬ; (ರೈಲು ಮಾರ್ಗದ) ಕೈಗಂಬ, ಕೈಮರ. ಎರಡು ತೋಳುಗಳ ಅಥವಾ ಎರಡು ಬಾವುಟಗಳ ಚಲನೆಯಿಂದ ಮಾಡುವ ಸೈನಿಕ ಸಂಜ್ಞೆ; ತೋಳು ಸನ್ನೆ. (ಕ್ರಿ.) —ಮೂಲಕ ಸನ್ನೆಮಾಡು, ವರ್ತಮಾನ ಕಳುಹಿಸು. **Semaphóric** (ಗು.); **Semaphórically** (ಕ್ರಿ. ವಿ.)

Semasiólogy ಸಿಮೇಸಿಯಾಲೊಜಿ (ನಾ.) ಭಾಷಾ ಶಾಸ್ತ್ರದಲ್ಲಿ (ಶಬ್ದಗಳ ಅಕ್ಷರ ಸಂಯೋಜನೆ, ಉಚ್ಚಾರಣೆ, ಮೊ. ಗಳನ್ನು ಬಿಟ್ಟು) ಅರ್ಥಕ್ಕೆ ಸಂಬಂಧಪಟ್ಟ ಭಾಗ: ಮಾತುಗಳ ಅರ್ಥದ ಚರಿತ್ರೆ; ಶಬ್ದಾರ್ಥ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿರ್ವಚನ ಶಾಸ್ತ್ರ. **Semasiológical** (ಗು.); **Semasiológically** (ಕ್ರಿ. ವಿ.)

Semátic ಸಿಮ್ಯಾಟಿಕ್ (ಗು.) (ಪ್ರಕೃತಿ ಚರಿತ್ರೆ; ಪ್ರಾಣಿಗಳ ಮೈ ಬಣ್ಣ ಅಥವಾ ಮೈ ಗುರುತುಗಳ ವಿಷಯದಲ್ಲಿ) ಅಪಾಯದ ಪ್ರಾಣಿಗಳೆಂದು ಸೂಚಿಸುವ; ಅಪಾಯ ಸೂಚಕ; ಸಮೀಪಿಸಬಾರದೆಂದು ಶತ್ರು (ಪ್ರಾಣಿ)ಗಳಿಗೆ ಎಚ್ಚರಿಕೆ ಕೊಡುವ; ಗಮನ ಸೆಳೆಯುವ.

Sémblable. **Semblance** ನೋಡಿ.

Sémblance ಸೆಂಬ್ಲನ್ಸ್ (ನಾ.) ಹೋಲಿಕೆ; ಹೊರ ರೂಪ; ತೋರಿಕೆ; ಸೋಗು (Put on a s. of anger. Bears the s. of an angel & the heart of a devil ಗೋಮುಖವ್ಯಾಘ್ರ). **Sémblable** (ಗು.) (ಪ್ರಾಚೀ. ಪ್ರ.) (—ರ) ಹೋಲಿಕೆಯಿರುವ; (—ಅಂತೆ) ತೋರುವ.

Sémee, Séme ಸೆಮಿ (ಗು.) (ವಂಶಲಾಂಛನ) ಅನೇಕ ಸಣ್ಣ ಸಣ್ಣ (ನಕ್ಷತ್ರ, ನೈದಿಲೆ, ಮೊ.) ಚಿಹ್ನೆಗಳ ವಿನ್ಯಾಸದಿಂದ ತುಂಬಿದ, ನಿಬಿಡವಾದ.

Semeiólogy, Semeiótics. **Semiology** ನೋಡಿ.

Sémen ಸೀಮೆನ್ (ನಾ.) ವೀರ್ಯ; ರೇತಸ್ಸು; ಶುಕ್ಲ.

Seméster ಸಿಮೆಸ್ಟರ್ (ನಾ.) (ಜರ್ಮನಿಯ ಮತ್ತು ಇತರ ಕೆಲವು ವಿ. ವಿ. ನಿ. ಗಳಲ್ಲಿ) ಆರು ತಿಂಗಳ ವ್ಯಾಸಂಗ ಕಾಲ; ಷಾಣ್ಮಾಸಿಕ ಶಿಕ್ಷಣ ಕಾಲ.

Semi- ಸೆಮಿ— (ಸ. ಪೂ. ಪ.) ಮುಂದೆ ಹೇಳಿರುವ ಅರ್ಥಗಳಲ್ಲಿ:

1. ಅರ್ಧ—; ಅರೆ—.
2. ಎರಡು ಪಕ್ಕಗಳಲ್ಲಿ, ಎರಡು ದಿಕ್ಕುಗಳಲ್ಲಿ, —ಒಂದರ, ಒಂದರಲ್ಲಿ; ಒಂದು, ಕೆಲವು, —ಅಂಶದಲ್ಲಿ.
3. ಸ್ವಲ್ಪ ಹೆಚ್ಚು ಕಡಮೆ; (—ಇಂತ) ಅಷ್ಟೇನೂ ಮೇಲಲ್ಲದ.
4. (—ಇಂತ) ಸ್ವಲ್ಪ ಕಡಮೆಯ, ಕಡಮೆ ದರ್ಜೆಯ; ಆ ವರ್ಣನೆಗೆ ತಕ್ಕದ್ದಲ್ಲದ, ಯೋಗ್ಯತೆಯಿಲ್ಲದ.
5. ಅಸಮಗ್ರ(ವಾಗಿ); ಅಪೂರ್ಣ; ಖಂಡ.
6. ಪ್ರತಿ ಅರ್ಧ (—ದಲ್ಲಿ), (—ಕ್ಕೆ) ಎರಡು ಬಾರಿ, —ತರೆ ದೋರುವ, ಪ್ರಕಟವಾಗುವ.

S.-annual(ly) (6) ಅರ್ಧ ವರ್ಷಕ್ಕೊಮ್ಮೆ (ಬರುವ, ನಡೆಯುವ, ಪ್ರಕಟವಾಗುವ). ಅರ್ಧ ವರ್ಷ ಮಾತ್ರ ಇರುವ (ಸಸ್ಯ); ಅರ್ಧ ವಾರ್ಷಿಕ. **S.-barbarian, -barbarism** (3). **S.-bull** (5) ಚುನಾಯಿತನಾದ ಪೋಪ್ ಗುರು ಪಟ್ಟಾಭಿಷೇಕವಾಗುವುದಕ್ಕೆ ಮೊದಲು ಹೊರಡಿಸುವ ನಿರೂಪ, ಆಜ್ಞೆ; ಪೋಪ್ ಗುರುವಿನ ನಿರೂಪ (ಮುದ್ರೆಯ ಒಂದು ಮುಖ ಬರಿದಾಗಿರುತ್ತದೆ). **S.-centennial** (6) ಅರ್ಧ ಶತಮಾನಕ್ಕೊಮ್ಮೆ, ಐವತ್ತು ವರ್ಷಗಳಿಗೊಮ್ಮೆ,—ನಡೆಯುವ; ಅರ್ಧ ಶತಾಬ್ದಿಕ. **S.-chorus** (1) ಗಾಯಕ ತಂಡದ ಸ್ವಲ್ಪ, ಅರ್ಧ, —ಭಾಗ; ಆ ಅರ್ಧ ಭಾಗದವರು ಮಾತ್ರ ಹಾಡುವ ಗೀತ: ಅರೆ ಮೇಳ. **Semicircle, -círcular** (1) ಅರ್ಧ ವೃತ್ತ; ಅರ್ಧ ವೃತ್ತಾಕಾರ(ದ), ಅರ್ಧಚಂದ್ರಾಕೃತಿ(ಯಲ್ಲಿರುವ); ಆ ಆಕಾರದ ವಸ್ತು; —ದಲ್ಲಿ ಜೋಡಿಸಿದ ವಸ್ತುಗಳ ತಂಡ. ಕೋನಮಾಪಕ (ಸಲಕರಣೆ). **Semicólon** (4) (ಪೂರ್ಣವಿರಾಮಕ್ಕೂ ಅಲ್ಪವಿರಾಮಕ್ಕೂ ಮಧ್ಯಸ್ಥವಾದ) ಅರ್ಧವಿರಾಮ (ಚಿಹ್ನೆ) (;). **S.-cylinder, -cylindrical** (1) ಅರೆಯುರುಳಿಯ, —ಯಾಕಾರದ). **S.-detached** (2) (ಮನೆ) ಪಕ್ಕದ ಮನೆಗೆ ಮಧ್ಯದ ಗೋಡೆಯಿಂದ ಕೂಡಿಕೊಂಡು ವಸ್ತುತಃ ಪ್ರತ್ಯೇಕವಾಗಿರುವ; ಅರ್ಧ ಪ್ರತ್ಯೇಕವಾದ. **S.-dome** (4, 1) (ಲಂಬ ಕೊಯ್ತದಿಂದಾದ) ಅರೆಗುಮ್ಮಟ. ಸರಿಸುಮಾರು ಗುಮ್ಮಟದಂತಿರುವ; ಗುಮ್ಮಟಕಲ್ಪ. **S.-double** (5) (ಸ. ವಿ.) ಹೊರಗಿನ ಕೇಸರಗಳು ಮಾತ್ರ ದಳಗಳಾಗಿ ಮಾರ್ಪಟ್ಟಿರುವ. **S.-final** (4) ಕೊನೆಯ ಪಂದ್ಯಾಟಕ್ಕೆ ಹಿಂದಿನದು; ಉಪಾಂತ ಪಂದ್ಯ. **S.-fluid** (4) (ಗು., ನಾ.) ಅರ್ಧ ಪ್ರವಾಹೀ, ಜಿಗುಟಾದ (—ದ್ರವ). **S.-fused** (5); **S.-infidel** (3); **S.-infinite** (2) ಒಂದು ಕಡೆಯಲ್ಲಿ ಮಿತಿಯುಳ್ಳದ್ದಾಗಿಯೂ ಮತ್ತೊಂದು ಕಡೆಯಲ್ಲಿ ಅನಂತವಾಗಿಯೂ ಚಾಚಿರುವ, ಇರುವ; ಒಂದು ಬಿಂದುವಿನಿಂದ ಆರಂಭವಾಗಿ ಕೊನೆಯೇ ಇಲ್ಲದ. **Semilúnar** (1, 4) ಅರ್ಧ ಚಂದ್ರಾಕೃತಿಯ, ಬಾಲಚಂದ್ರಾಕೃತಿಯ (ಮು., ಅಂ. ರ. ಶಾ. ಪದಗಳಲ್ಲಿ: S.-l. bone, cartilage, fold, lobe). **S.-monthly** (6). **S.-mute** (3) (ಗು., ನಾ.) (ಮು., ಹುಟ್ಟು ಕಿವುಡಿಂದ) ಬಹುಮಟ್ಟಿಗೆ ಮೂಕಾದ (ಮನುಷ್ಯ); ಅರೆಮೂಕ. **S.-official(ly)** (4) ಅರ್ಧ ಅಧಿಕಾರಯುತ(ವಾಗಿ) (ತನ್ನಿಂದ ಆ ಸುದ್ದಿ ಅಥವಾ ಲೇಖನಗಳು ಬಂದುವೆಂದು ಆರೋಪಿಸಕೂಡದೆಂಬ ಷರತ್ತಿನಿಂದ ಒಬ್ಬ ಅಧಿಕಾರಿ ವೃತ್ತಪತ್ರಿಕೆಗಳಿಗೆ ಕೊಟ್ಟ ಸುದ್ದಿ ಅಥವಾ ಲೇಖನಗಳ ವಿಷಯದಲ್ಲಿ). **S.-plume** (2) ದೃಢವಾದ ಕಾಂಡವೂ ತುಪ್ಪುಳು ತುದಿಯೂ ಉಳ್ಳ ಗರಿ; ಅರೆಪುಕ್ಕ. **S.-precious** (4) (ರತ್ನಗಳ ವಿಷಯದಲ್ಲಿ) ಅರ್ಧ ಪ್ರಶಸ್ತ. **S.-smile** (4). **Sémitone** (1) (ಸಂ.) ಅರ್ಧ ಸ್ವರ; ಸ್ವರಾಂಶ. **S.-transparent** (1) ಅರ್ಧ ಪಾರದರ್ಶಕ. **S.-tropical** (4) ಉಷ್ಣವಲಯದ ಅಂಚಿನಲ್ಲಿರುವ ದೇಶಗಳ(ಂಥ). **S.-tubular** (1) ಉದ್ದಕ್ಕೆ ಸೀಳಿದ ಕೊಳವೆಯ ಅರ್ಧ ಭಾಗದ ಆಕಾರವುಳ್ಳ; ಅರ್ಧ ನಾಳಾಕೃತಿಯ; ದೋಣಿಯಾಕಾರದ. **S.-uncial** (5) (ಹಿಂದಿನ ಹಸ್ತಪ್ರತಿಗಳ ಕೈಬರವಣಿಗೆಯ ಅಕ್ಷರಗಳ ವಿಷಯದಲ್ಲಿ) ಮಧ್ಯಸ್ಥ —ರೀತಿಯ, ಗಾತ್ರದ. **Sémivowel, -vócal** (2) ಸ್ವರಕ್ಕೂ ವ್ಯಂಜನಕ್ಕೂ ನಡುವಣ ಉಚ್ಚಾರವುಳ್ಳ (ಧ್ವನಿ); ಇದನ್ನು ಸೂಚಿಸುವ ಅಕ್ಷರ; ಅರ್ಧ ಸ್ವರ, ವಿಕಲ್ಪ ಸ್ವರ, ಅಂತಸ್ಥ ವರ್ಣ(ದ) (ಉದಾ., y, w). ಸ್ವರ ಸಹಾಯವಿಲ್ಲದೆ ಉಚ್ಚಾರವಾಗುವ ವ್ಯಂಜನ (ಉದಾ., l, m, z). **S.-weekly** (6)

Séminal ಸೆ(ಸೀ)ಮಿನಲ್ (ಗು.) ಬೀಜದ, ರೇತಸ್ಸಿನ; ಸಂತಾನೋತ್ಪಾದನೆಯ; ಜೀವಾಂಕುರದ; (ಸಂತಾನ)ಜನಕ; ಮೂಲದ (S. fluid ರೇತಸ್ಸು. In the s. state ಮೂಲಾವಸ್ಥೆಯಲ್ಲಿ, ಅಂಕುರಾವಸ್ಥೆಯಲ್ಲಿ. S. principles ಕಾರ್ಯ ಬೀಜಗರ್ಭಿತ ತತ್ತ್ವಗಳು; ಬೀಜ, ಮೂಲ, —ತತ್ತ್ವಗಳು). **Séminally** (ಕ್ರಿ. ವಿ.); **Seminátion** (ನಾ.) (ಸ. ವಿ.) ಬಿತ್ತನೆ; ಬೀಜಾವಾಪನ; ಬೀಜ ಪ್ರಸಾರಣೆ. **Seminíferous** ಸೆಮಿನಿಫೆರಸ್ (ಗು.) ಬೀಜಗಳನ್ನು ಒಡುವ; ಬೀಜೋತ್ಪಾದಕ; ವೀರ್ಯ—ಜನಕ, ವಾಹಕ, ಧರಿತ.

Séminar. **Seminary** ನೋಡಿ.

Séminary ಸೆಮಿನರಿ (ನಾ.) (ಮೊಳಕೆಗಳಿಗಾಗಿ) ಒಟ್ಟಿಲು ಹೊಯ್ಯುವ ಜಾಗ; ಒಟ್ಟಿಲು ಮಡಿ; ಬೀಜಾವಾಪನೆಯ ಕ್ಷೇತ್ರ. ಶಿಕ್ಷಣದ ಸ್ಥಳ; ಶಿಕ್ಷಣಶಾಲೆ; ಪಾಠಶಾಲೆ [ಹಿಂದೆ School ಎಂಬ ಶಬ್ದಕ್ಕೆ ಪ್ರ. (Academy ಹೋಲಿಸಿ). ಈಗ ರೂಪಕಾರ್ಥದಲ್ಲಿ ಅಥವಾ ರೋ. ಕ್ಯಾ. ಮತ್ತು ಜೆಸ್ಯೂಯಿಟ್ ಪಾಠಶಾಲೆಗಳ ವಿಷಯದಲ್ಲಿ ವಿನಾ ವಿರ. ಪ್ರ.]. **Séminarist** (ನಾ.) ಜೆಸ್ಯೂಯಿಟ್ ಪಾಠಶಾಲೆಯ —ವಿದ್ಯಾರ್ಥಿ, ಬೋಧಕ. **Séminar** —ನಾರ್ (ವಿ. ವಿ. ನಿ. ಗಳಲ್ಲಿ) (ಒಬ್ಬ ಮಹೋಪಾಧ್ಯಾಯನ ಮಾರ್ಗದರ್ಶಿತ್ವದಲ್ಲಿ ಪ್ರೌಢ ವ್ಯಾಸಂಗ ಮತ್ತು ಸ್ವತಂತ್ರ ಸಂಶೋಧನೆಗಳನ್ನು ನಡಸುವ ಪರಿಮಿತ) ಪ್ರೌಢ ವಿದ್ಯಾರ್ಥಿವರ್ಗ.

Semiólogy ಸೀಮಿ(ಮೈ)ಆಲೊಜಿ, **Semiótics** ಸೀಮಿ(ಮೈ)ಆಟಿಕ್ಸ್, **-meio-** —ಮೈಓ— (ನಾ.) ರೋಗಲಕ್ಷಣಗಳನ್ನು ಕುರಿತ ರೋಗ ನಿದಾನ ಶಾಸ್ತ್ರ ಭಾಗ; ರೋಗಲಕ್ಷಣ ಶಾಸ್ತ್ರ.

Sémite ಸೀಮೈಟ್, ಸೆ— (ನಾ., ಗು.) ಷೆಮ್ ಎಂಬವನಿಂದ ಉತ್ಪನ್ನವಾದುವೆಂದು ಊಹಿಸುವ (ಮು., ಯೆಹೂದ್ಯ, ಆರಮಿಯನ್, ಫಿನಿಷಿಯನ್, ಅರಬ ಮತ್ತು ಅಸ್ಸೀರಿಯನ್) ವಂಶಗಳಲ್ಲಿ ಯಾವುದಾದರೂ ಒಂದರ, ಒಂದಕ್ಕೆ ಸೇರಿದ(ವನು); ಷೆಮ್ ವಂಶದ(ವನು). **Semític** ಸಿಮಿಟಿಕ್ (ಗು., ನಾ.) ಸೆಮೈಟರ (ಭಾಷಾ ವರ್ಗ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sémitism ಸೀ(ಸೆ)ಮಿ(ಮ್ಯ್ಯೆ)ಟಿಸ್ಮ್ (ನಾ.) ಸಿಮಿಟಿಕ್ ಜನರ ಸ್ವಭಾವ ಲಕ್ಷಣಗಳು ; ಸಿಮಿಟಿಕ್—ಪದ, ನುಡಿಕಟ್ಟು. **Sémitist** (ನಾ.) ಸಿಮಿಟಿಕ್(ಭಾಷಾ) ಪಂಡಿತ. **Sémitize** (ಕ್ರಿ. ಸಕ.) ಸಿಮಿಟಿಕ್ ರೀತಿಯದನ್ನಾಗಿ ಮಾಡು.

Semolína ಸೆಮೊಲೀನ, **Sémola** ಸೆಮೊಲ (ನಾ.) (ಗೋಧಿಯ) ದಪ್ಪ ರವೆ (ಹಿಟ್ಟನ್ನು ಒಂದರಿ ಅಡಿದಮೇಲೆ ಉಳಿಯುವಂಥದು)

Sempitérnal ಸೆಂಪಿಟರ್ನಲ್ (ಗು.) (ವಿರ. ಪ್ರ.) ಅಂತ್ಯವಿಲ್ಲದ, ಶಾಶ್ವತ, ಚಿರಸ್ಥಾಯಿ (Eternal ಎಂಬ ಪದಕ್ಕೆ ಅಲಂಕಾರಿಕ ಪ್ರ.)

Sémplice (It.) ಸೆಂಪ್ಲಿ(ಲ)ಚೇ (ಸಂ. ಸೂಚನೆ) ಆಡಂಬರವಿಲ್ಲದೆ ; ಸರಳವಾಗಿ.

Sémpre (It.) ಸೆಂಪ್ರೇ (ಸಂ. ಸೂಚನೆ) ಮೊದಲಿಂದ ಕೊನೆಯವರೆಗೂ; ಪೂರ್ತಿ ಕಾಲದ ವರೆಗೂ (ಇತರ ಸೂಚನೆಗಳೊಂದಿಗೆ ಪ್ರ. ; Sempre forte —ಗಟ್ಟಿಯಾಗಿ. S. piano)

Sémpstress. **Seam** ನೋಡಿ.

Sen ಸೆನ್ (ನಾ.) ಜಪಾನಿನ ಒಂದು ತಾಮ್ರದ ನಾಣ್ಯ (ಯೆನ್ ನಾಣ್ಯದ $\frac{1}{100}$ ಭಾಗ)

Senárius ಸಿನೇರಿಯಸ್ (ನಾ. ; ಬ. ವ. -ii —ಯ್ಯೈ) ಆರು ಗಣ ಗಳುಳ್ಳ ಒಂದು ಲ್ಯಾಟಿನ್ ಪದ್ಯ (ಜಾತಿ), ಛಂದಸ್ಸು (ಮು., ೨—ಗಣದ ತ್ರಿಃ ಪ್ರಮಾಣದ ಪದ್ಯಜಾತಿ)

Sénary ಸೀನರಿ, ಸೆ— (ಗು.) ಆರರ (ಆಧಾರವುಳ್ಳ) ; ಆರಾರಾಗಿ ಹೆಚ್ಚುವ; ಷಟ್‌ಕ್ರಮಿಕ [S. scale ಷಣ್ಮಾನ (Scale ನೋಡಿ. Binary ಹೋಲಿಸಿ)]

Sénate ಸೆನಟ್ (ನಾ.) (ಮೂಲಾರ್ಥ: ವೃದ್ಧರ ಸಭೆ) ; ಪುರಾತನ ರೋಮನ್ ಪ್ರಜಾಪ್ರಭುತ್ವ ರಾಜ್ಯದ ಶಾಸನ ಸಭೆ ಮತ್ತು ಆಡಳಿತ ಮಂಡಲಿ; ಪುರಾತನ ಅಥೆನ್ಸಿನ ಮತ್ತು ಸ್ಪಾರ್ಟದ ಮಂತ್ರಾಲೋಚನ ಸಭೆ ; (ಕೆಲವು ಪಾರ್ಲಿಮೆಂಟುಗಳಲ್ಲಿ) ದ್ವಿತೀಯ ಸಭೆ. ಶಾಸನ ಸಭೆಗಳಲ್ಲಿ ಎರಡನೆಯ ಅಂಗ. (ಅಲಂ.) ಯಾವುದಾದರೂ ಶಾಸನ ಸಭೆಯ ಕಾರ್ಯಕಲಾಪಗಳು ಅಥವಾ ಸದಸ್ಯರು (The S., the pulpit and the press ಶಾಸನ ಸಭೆ, ಭಾಷಣಕಾರರು ಮತ್ತು ವೃತ್ತ ಪತ್ರಿಕೆಗಳು). (ವಿ. ವಿ. ನಿ. ಗಳ) ಶಾಸಕ ಸಭೆ, ಆಡಳಿತ ಮಂಡಲಿ. S. house (ಮು., ಕೇಂಬ್ರಿಜ್ಜಿನ ವಿ. ವಿ. ನಿ. ದ) ಶಾಸಕ ಸಭಾ ಮಂದಿರ. **Sénator** ಸೆನಟರ್ (ನಾ.) —ಸಭೆಯ ಸದಸ್ಯ. **Senatórial** (ಗು.) ; **Senatórially** (ಕ್ರಿ. ವಿ.) ; **Sénatorship** (ನಾ.)

Senátus (L) ಸಿನೇಟಸ್ (ನಾ.) ಪುರಾತನ ರೋಮನ್ ಶಾಸನ ಸಭೆ [S. populusque Romanus (ಸಂಕ್ಷಿಪ್ತ: S.P.Q.R.) ರೋಮಿನ ಶಾಸನ ಸಭೆ ಮತ್ತು ಜನ: ರೋಮ್ —ರಾಷ್ಟ್ರ, ರಾಜ್ಯ. S.-consult(um) ರೋಮನ್ ರಾಜ್ಯ ಶಾಸನ]

Send[1] ಸೆಂಡ್ (ಕ್ರಿ. ; ಭೂತ., ಭೂ. ಕೃ. Sent ಸೆಂಟ್) ಕಳುಹಿಸು, ರವಾನಿಸು, ರವಾನೆಮಾಡು, ಅಟ್ಟು [S. message *or* messenger to. S. coals to Newcastle (Coal ನೋಡಿ). S. word (*that, to* do)(—ಎಂದು) ಸಮಾಚಾರ, ಮಾತು, —ಕಳುಹಿಸು ; ಸುದ್ದಿ ಮುಟ್ಟಿಸು ; (—ಕ್ಕೆ, ಗೆ) ಹೇಳಿಕಳುಹಿಸು. S. up *or* in (one's name, an exhibit) (ಒಬ್ಬನ ಹೆಸರನ್ನು, ಪ್ರದರ್ಶಿಸಬೇಕಾದ ವಸ್ತು ವನ್ನು) ಸ್ಪರ್ಧೆಗೆ —ಕಳುಹಿಸು, ದಾಖಲ್ಮಾಡಿಸು]. (ದೇವರು, ವಿಧಿ, ಮೊ. ಗಳ ವಿಷಯದಲ್ಲಿ) ಕರುಣಿಸು, ದಯಪಾಲಿಸು, ಅನು ಗ್ರಹಿಸು, ಆಗಿಸು (S. rain ಮಳೆ ಕರುಣಿಸು. God s. it may not be so! ಹಾಗಾಗದಿರಲೆಂದು ದೇವರು ಅನುಗ್ರಹಿಸಲಿ! S. him victorious ಜಯಶೀಲನಾಗುವಂತೆ ಅವನನ್ನು ಅನುಗ್ರಹಿಸು). ಚಿಮ್ಮು, ಹೊಡೆ ; (ಮುಂದಕ್ಕೆ ಅಥವಾ ಹಿಂದಕ್ಕೆ) ತಳ್ಳು (S. bullet ಗುಂಡು ಹೊಡೆ. Sent his temperature up, down ಅವನ ಶರೀರ ಶಾಖವನ್ನು ಏರಿಸಿತು, ಇಳಿಸಿತು. S. out *or* forth leaves ಎಲೆ ಬಿಡು. S. steam, odour ಆವಿ, ವಾಸನೆ, ಹೊರಸೂಸು). ಕಳುಹಿಸಿ ಬಿಡು, ವಜಾಮಾಡು [*Off, away* ಉಪ. ದೊಡನೆ ಅಥವಾ ಕ್ರಿಯಾರ್ಥ ಪೂರಕದೊಡನೆ ಅಥವಾ ಕ್ರಿ. ವಿ. ಪದಪುಂಜದೊಡನೆ. Sent him away, packing, flying, about his business, to the right-about (ಕೆಲಸದಿಂದ) ಏಕದಂ ವಜಾಮಾಡಿದನು. S. to Coventry (Coventry ನೋಡಿ). S. down ವಿ. ವಿ. ನಿ. ದಿಂದ, (ಕೆಲವು ಕಾಲ) ಅಟ್ಟಿಬಿಡು, ಹೊರದೂಡು. S. off letter, parcel ಕಾಗದವನ್ನು, ಭಾಂಗಿಯನ್ನು, ರವಾನಿಸು. S. off (person) (ಪ್ರಯಾಣ ಹೊರಟ ಮನುಷ್ಯನನ್ನು ಮರ್ಯಾದೆಯೊಡನೆ) ಬೀಳ್ಕೊಡು, ಸಾಗ ಕಳುಹಿಸು. S.-off (ನಾ.) ಬೀಳ್ಕೊಡುವುದು. (ಗ್ರಂಥ, ಮೊ. ಗಳ) ಪ್ರಶಂಸಾತ್ಮಕ ವಿಮರ್ಶೆ]. (—)ಆಗಿಸು, ಹಿಡಿಸು (S. mad). ಸುದ್ದಿ ಅಥವಾ ಕಾಗದ ಕಳುಹಿಸು (Sent to warn me. S. for him ಅವನಿಗೆ —ಬರಹೇಳು, ಕರೆಕಳುಹಿಸು. S. for the book ಪುಸ್ತಕ ಕೊಂಡು ತರಿಸು). **Sénder** (ನಾ.)

Send[2], **Scend** ಸೆಂಡ್ (ನಾ., ಕ್ರಿ. ಅಕ.) (ನಾವೆ ; ಭೂತ., -ed) ಅಲೆಯ ಇಳುಕಲಿನಿಂದ ಆದ ರಭಸದ ನೂಕಾಟ ; ಅಲೆಯ ಇಳಿನೂಕು, ನೂಕಲು (S. of the sea); (ಇದರಿಂದ ಹಡಗಿನ) ಉದ್ದ ಮುಖನಾದ ಮುಳುಕು. (ಕ್ರಿ.) (ಹಡಗಿನ ವಿಷಯದಲ್ಲಿ) ಅಲೆಯ ಇಳಿನೂಕಿನಿಂದ —ಉದ್ದ ಮುಖನಾಗಿ ಮುಳುಗು, ಏಳು ಬೀಳು.

Séndal ಸೆಂಡಲ್ (ನಾ.) ಬೆಲೆ ಬಾಳುವ ಉಡುಪುಗಳಿಗೂ ಬಾವುಟ ಗಳಿಗೂ ಉಪಯೋಗಿಸುತ್ತಿದ್ದ, ಮಧ್ಯ ಕಾಲದ ರೇಷ್ಮೆ ಬಟ್ಟೆ.

Sénega ಸೆನಿಗ, **-ka** —ಕ (ನಾ.) ಅಮೆರಿಕದ ಒಂದು ಸಸ್ಯ (=S.-snake-root). ಇದರ ಬೇರಿನಿಂದ ಮಾಡಿದ (ಕೆಮ್ಮಿನ) ಔಷಧ (ಹಿಂದೆ ಹಾವು ಕಚ್ಚಿದ್ದಕ್ಕೆ ಔಷಧವಾಗಿ ಉಪಯೋಗಿಸುತ್ತಿದ್ದರು)

Senéscent ಸಿನೆಸೆಂಟ್ (ಗು.) ಮುದಿಯಾಗುತ್ತಿರುವ ; ಮುಪ್ಪಡಸು ತ್ತಿರುವ. **Senéscence** (ನಾ.)

Séneschal ಸೆನಿಷ(ಷ್)ಲ್ (ನಾ.) ಮಧ್ಯಕಾಲದ ಶ್ರೀಮಂತರ ಮನೆಯ ಪಾರುಪತ್ಯಗಾರ, ಮನೆವಾರ್ತೆಯವನು.

Senhór (ಪೋರ್ಚುಗೀಸ್) ಸೆನ್ಯೋರ್ (ನಾ.) ಇಂಗ್ಲಿಷಿನ Mister ಪದಕ್ಕೆ ಪೋರ್ಚುಗೀಸಿನ ಸಾಮ್ಯಪದ: ಶ್ರೀಮಾನ್. **Senhóra** ಸೆನ್ಯೋರ, **Senhoríta** ಸೆನ್ಯೋರೀಟಾ (ಪೋರ್ಚುಗೀಸ್ ಹೆಂಗಸರ ವಿಷಯದಲ್ಲಿ) ಶ್ರೀಮತಿ.

Sénile ಸೀನೈ(ನಿ)ಲ್ (ಗು.) ಮುಪ್ಪಿನ (ದೌರ್ಬಲ್ಯ ತೋರುವ) ; ಮುದಿತನದ ; ಮುದಿತನಕ್ಕೆ—ಸಂಬಂಧಿಸಿದ, ಸಹಜವಾದ (S. atrophy, apathy, garrulity, dementia, etc.). **Senílity** ಸಿನಿಲಿಟಿ (ನಾ.) ಮುಪ್ಪು, ಮುದಿತನ ; ವಾರ್ಧಕ್ಯ ; ಜರೆ ; ಅರುಳು ಮರುಳು.

Sénior ಸೀನಿಯರ್ (ಗು., ನಾ.) (ವಯಸ್ಸಿನಿಂದ ಅಥವಾ ಹೆಚ್ಚು ಕಾಲ ಇದ್ದುದರಿಂದ, ಅಥವಾ ಹೆಚ್ಚಿನ ಪದವಿಯಲ್ಲಿ ಇರುವುದರಿಂದ) ಹಿರಿಯ, ಮೇಲಿನ, ಜ್ಯೇಷ್ಠ (*To* ಉಪ. ದೊಡನೆ) ; ಮೇಲಿನ —ದರ್ಜೆಯ, ಅಂತಸ್ತಿನ [ಎದುರು ಪದ: Junior. Is two years s. to me. The s. service (ಸೈನಿಕ ವೃತ್ತಿಗೆ ವಿರುದ್ಧವಾಗಿ) ನೌಕಾ—ವೃತ್ತಿ, ಇಲಾಖೆ. The s. members of the family, university, etc. The s. partner (ವ್ಯಾಪಾರ ಸಂಸ್ಥೆಯ) ಮುಖ್ಯಸ್ಥ, ಹಿರಿಯ ಪಾಲುದಾರ. S. optime (Wrangler ನೋಡಿ). S. classic ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳ ಆನರ್ಸ್ ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಪಡೆದ ವಿದ್ಯಾರ್ಥಿ. S. Wrangler (Wrangler ನೋಡಿ). S. man (ವಿ. ವಿ. ನಿ. ದಲ್ಲಿ) ಹಿರಿಯ, ಹಳೆಯ, ಮೇಲಿನ ತರಗತಿಯ, —ವಿದ್ಯಾರ್ಥಿ (ಎದುರು ಪದ: Freshman). ಒಂದೇ ಹೆಸರಿನ ತಂದೆ, ಮಗ ಅಥವಾ ಪಾಠಶಾಲೆಯಲ್ಲಿ ಇಬ್ಬರು ಹುಡುಗರು ಇದ್ದರೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯತ್ಯಾಸ ತೋರಿಸುವುದಕ್ಕಾಗಿ ತಂದೆಯ ಹೆಸರಿನ, ದೊಡ್ಡವನ ಹೆಸರಿನ, ಜೊತೆಗೆ ಸೇರಿಸಿ ಪ್ರ. (ಸಂಕ್ಷಿಪ್ತ: Sen., Sr.) John Smith Sen., (ಅಥವಾ ಪಾಠಶಾಲೆಯಲ್ಲಿ) Smith Sen.]. (ನಾ.) ಹಿರಿಯವನು ; ಜ್ಯೇಷ್ಠ ; ಮೇಲಿನವನು ; (—ಕ್ಕಿಂತ) ಹೆಚ್ಚು ಕಾಲ —ಉದ್ಯೋಗ ಮಾಡಿದವನು, ಸದಸ್ಯನಾಗಿದ್ದವನು (Is my s.). =S. wrangler, classic *or* man. **Seniórity** —ಯಾರಿಟಿ (ನಾ.) ಹಿರಿಯತನ, (ಅಧಿಕಾರ) ಜ್ಯೇಷ್ಠತೆ.

Senióres prióres (L) ಸೀನಿಯೋರೀಸ್ ಪ್ರೈಯೊರೀಸ್ (ವಾಕ್ಯ) ಹಿರಿಯರು ಮೊದಲು (ಮರ್ಯಾದೆಯ ವಿಷಯದಲ್ಲಿ ಕಿರಿಯರಿಗೆ ಎಚ್ಚರಿಕೆ ಕೊಡುವಲ್ಲಿ ಪ್ರ.)

Sénna ಸೆನ (ನಾ.) ಆವರಿಕೆ (ತಂಗಡಿ) ಜಾತಿಯ ಸಸ್ಯ; ನೆಲಾವರಿಕೆ; ಸೋನಾಮುಖಿ. (ವಿರೇಚಕವಾಗಿ ಉಪಯೋಗಿಸುವ) ಇದರ ಒಣಗಿದ ಎಲೆಗಳು.

Sénnet ಸೆನೆಟ್ (ನಾ.) (ಚರಿತ್ರೆ) (ಷೇಕ್ಸ್‌ಪಿಯರಿನ ನಾಟಕ ಪ್ರದರ್ಶನಗಳಲ್ಲಿ ಅಥವಾ ಇತರ ನಾಟಕ ಪ್ರದರ್ಶನಗಳಲ್ಲಿ: ನಟ ವರ್ಗದ ಪ್ರವೇಶದ ಅಥವಾ ನಿಷ್ಕ್ರಮಣದ ರಂಗ ಸೂಚನೆಯಾಗಿ) ತುತೂರಿಯ ಕೂಗು, ತೂರ್ಯಸ್ವನ.

Sénnight ಸೆನ್ನೈಟ್ (ನಾ.) (ಪ್ರಾಚೀ. ಪ್ರ.) ಒಂದು ವಾರ ; ಸಪ್ತಾಹ (ಮು., Tuesday, etc., s. ಮಂಗಳವಾರ, ಮೊ. ರಿಂದ ಒಂದು ವಾರ) (Seven-night ಎಂಬುದರಿಂದ ಬಂದಿರಬಹುದು)

Sénnit ಸೆನಿಟ್, **Sinnet** ಸಿನೆಟ್ (ನಾ.) (ನಾವೆ) (ಮೂರರಿಂದ ಹಿಡಿದು ಒಂಬತ್ತರ ವರೆಗೆ ಹುರಿಗಳನ್ನು ಉಪಯೋಗಿಸಿ ಹೆಣೆದು ಮಾಡಿದ) ಚಪ್ಪಟೆಯ, ದುಂಡನೆಯ, ಚೌಕನೆಯ,—ಹಗ್ಗ, ಹೊರಜಿ (Common s. ಚಪ್ಪಟೆಯ ಹಗ್ಗ. Round, square, s.)

Senór (ಸ್ಪ್ಯಾನಿಷ್ ಭಾಷೆ) ಸೆನ್ಯೋರ್ (ನಾ.) ಇಂಗ್ಲಿಷಿನ Mister ಪದಕ್ಕೆ ಸ್ಪ್ಯಾನಿಷ್ ಭಾಷೆಯ ಸಾಮ್ಯ ಪದ : ಶ್ರೀಮಾನ್. **Senóra** —ರ (ಸ್ತ್ರೀ.) ಶ್ರೀಮತಿ (ಹೆಸರಿನ ಹಿಂದೆ ಹಾಕದೆ ಹಾಗೆಯೆ ಸಹ ಪ್ರ. ಉಂಟು) ; ಸ್ಪ್ಯಾನಿಷ್ ಮಹಿಳೆ. **Senoríta** ಸೇನ್ಯೋರೀಟ (ನಾ.) ಸ್ಪ್ಯಾನಿಷ್ ಯುವತಿ(ಯ ವಿಷಯದಲ್ಲಿ ಒಕ್ಕಣೆ : ಶ್ರೀಮತಿ)

Sensátion ಸೆನ್‌ಸೇಷನ್ (ನಾ.) ದೇಹದ ಅಥವಾ ದೇಹ ಭಾಗಗಳ ಸ್ಥಿತಿಯ, ಇಂದ್ರಿಯಾನುಭವಗಳ, ಮನಸ್ಸಿನ ಬಗೆಯ, ರಸೋದ್ರೇಕಗಳ—ಗೋಚರದ ಅರಿವು, ಪ್ರಜ್ಞೆ ; ಸಂವೇದನೆ; ಇಂದ್ರಿಯಜನ್ಯ ಜ್ಞಾನ ; ಅನುಭವ (Had a s. of giddiness, pain, thirst, pride. In search of a new s.). ಭಾವೋದ್ರೇಕ, ರಸೋದ್ರೇಕ; ಕೋಲಾಹಲ; ತೀವ್ರಾಸಕ್ತಿಯ— ಉದ್ದೀಪನ, ಪ್ರದರ್ಶನ ; ಚಿತ್ತಕ್ಷೋಭೆ ; ಉದ್ದೀಪಕ ; ರಸೋದ್ರೇಕ ಜನಕ [Made a great s. ಬಹಳ ಕೋಲಾಹಲವೆಬ್ಬಿಸಿತು. S. among the audience ಶ್ರೋತೃಗಳಲ್ಲಿ ಭಾವೋದ್ರೇಕ, ತೀವ್ರಾಸಕ್ತಿ (ಗಾಢ ಮೌನ, ಶ್ಲಾಘನೆ, ಅಥವಾ ಇತರ ರೀತಿ ಪ್ರದರ್ಶಿತವಾದದ್ದು). A three-days s. ಮೂರು ದಿನಗಳ —ಕೋಲಾಹಲ, ಕೌತುಕ. What is the latest s.? The essence of melodrama is s.]. **Sensátional** (ಗು.) ಭಾವೋದ್ರೇಕಕಾರಿ, ಕೌತುಕಕಾರಿ, ಆಶ್ಚರ್ಯಕರ. **Sensátionally** (ಕ್ರಿ. ವಿ.) ; **Sensátionalism** ಸೆನ್‌ಸೇಷನಲಿಸ್ಮ್ (ನಾ.) (ತ. ಶಾ.) ಕೇವಲ ಸಂವೇದನೆಗಳಿಂದ ಮಾತ್ರ ಭಾವೋತ್ಪಾದನೆಯಾಗುವುದೆಂಬ ವಾದ; ಸಂವೇದನೆಯೊಂದೇ ಜ್ಞಾನದ ಮೂಲವೆಂಬ ವಾದ ; ಸಂವೇದನ ಜ್ಞಾನ ವಾದ, ಭಾವ ವಾದ. (ಸಾಹಿತ್ಯ, ರಾಜಕೀಯ ಚಳವಳಿ, ಮೊ. ಗಳಲ್ಲಿ) ಭಾವೋದ್ರೇಕ ಪ್ರವೃತ್ತಿ ; ಉದ್ದೀಪಕ ಮಾರ್ಗಾನುಸರಣೆ. **Sensátionalist** (ನಾ.) ; **Sensátionary** (ಗು.) (ವಿರ. ಪ್ರ.) =Sensational.

Sense ಸೆನ್ಸ್ (ನಾ.) ಸಂವೇದನೆಯನ್ನುಂಟುಮಾಡುವ ದೇಹದ ವಿಶೇಷ ಶಕ್ತಿಗಳಲ್ಲೊಂದು : ಜ್ಞಾನೇಂದ್ರಿಯ, ಇಂದ್ರಿಯ, ಕರಣ [The five senses ಪಂಚೇಂದ್ರಿಯಗಳು (Sight ದರ್ಶನೇಂದ್ರಿಯ, hearing ಶ್ರವಣೇಂದ್ರಿಯ, smell ಘ್ರಾಣೇಂದ್ರಿಯ, taste ರಸನೇಂದ್ರಿಯ, touch ಸ್ಪರ್ಶೇಂದ್ರಿಯ). Sixth[1] *or* muscular s. ಸ್ನಾಯು ಶ್ರಮದ ಸಂವೇದನೆಯನ್ನುಂಟುಮಾಡುವ ಶಕ್ತಿ: ಸ್ನಾಯು ವಿಷಯಕ ಇಂದ್ರಿಯ. Sixth[2] s. (ನೀತಿವಿಚಾರದಲ್ಲಿ) ಅಂತರ್ಬೋಧೆ. Quick, keen, senses ಚುರುಕು, ತೀಕ್ಷ್ಣ, ಇಂದ್ರಿಯಗಳು. A dull s. of smell]. (ಬ. ವ. ದಲ್ಲಿ) ಬುದ್ಧಿ, ಪ್ರಜ್ಞೆ, ಚಿತ್ತಸ್ವಾಸ್ಥ್ಯ, ವಿವೇಕ [Have you taken leave of, are you out of, your senses? ನಿನಗೆ ಹುಚ್ಚು ಹಿಡಿದಿದೆಯೊ ಏನು ? ನಿನಗೆ ಬುದ್ಧಿಯಿಲ್ಲವೋ ಏನು ? He will soon come to his senses (ತನ್ನ ಹುಚ್ಚಾಟ, ಅವಿವೇಕ, ಅರಿವಾಗಿ) ಅವನಿಗೆ ಬೇಗನೆಯೆ ಬುದ್ಧಿ ಬರುತ್ತದೆ. We must bring him to his senses ನಾವು ಅವನಿಗೆ ಬುದ್ಧಿ ಕಲಿಸಬೇಕು, ತಪ್ಪು ದಾರಿ ಬಿಡಿಸಬೇಕು. Frightened out of his sense ಗಾಬರಿಯಿಂದ ಬುದ್ಧಿ ಕೆಟ್ಟು. In one's senses ಸ್ವಸ್ಥಬುದ್ಧಿಯಲ್ಲಿ ; ಹುಚ್ಚಿಲ್ಲದೆ]. ವಸ್ತುಗಳ ಇರುವಿಕೆಯನ್ನು ಅಥವಾ ಗುಣಗಳನ್ನು (ಇಂದ್ರಿಯಗಳಿಂದ) ಗ್ರಹಿಸುವ, ಅನುಭವಿಸುವ, ತಿಳಿಯುವ, ಸಾಮರ್ಥ್ಯ : ಇಂದ್ರಿಯ—ಚೈತನ್ಯ, ಶಕ್ತಿ; ಇಂದ್ರಿಯ(ಗಳ) ಸೂಕ್ಷ್ಮತೆ, ಗ್ರಹಣಶಕ್ತಿ [S.-perception ಇಂದ್ರಿಯ ಗೋಚರ ಜ್ಞಾನ ; ಇಂದ್ರಿಯ ಬೋಧೆ. Errors of s. (ವಸ್ತು ಜ್ಞಾನದಲ್ಲಿ) ಇಂದ್ರಿಯಜನ್ಯ ದೋಷಗಳು, ಇಂದ್ರಿಯ ಗ್ರಹಣ ದೋಷಗಳು. The pleasures of sense ಇಂದ್ರಿಯ—ಸುಖಗಳು, ಭೋಗಗಳು ; ವಿಷಯಸುಖ. Has a plant s.?]. ಸಂವೇದನೆ ; ಅರಿವು, ಜ್ಞಾನ, ಭಾವನೆ, ಅನುಭವ [*Of* ಉಪ. ದೊಡನೆ. A *or* the s. of pleasure, pain, shame. Labouring under a s. of wrong ತನಗೆ ಅನ್ಯಾಯವಾಗಿದೆಯೆಂಬ, ಕೆಡುಕಾಗಿದೆಯೆಂಬ, ಭಾವನೆಯಿಂದ ಕ್ಲೇಶಪಡುತ್ತ. Civic s. ಪೌರಧರ್ಮ ವಿವೇಕ. Road s. (Road ನೋಡಿ)]. ಸೂಕ್ಷ್ಮದೃಷ್ಟಿ, ಮರ್ಮಜ್ಞತೆ ; ಒಂದು ವಿಷಯದ ಅಥವಾ ಪರಿಸ್ಥಿತಿಯ ಮರ್ಮವನ್ನು ತಿಳಿದು ಅದಕ್ಕೆ ತಕ್ಕಂತೆ ನಡೆದುಕೊಳ್ಳುವ ಹುಟ್ಟುಗುಣ, ಅಭ್ಯಾಸ ಗುಣ ; ಪರಿಜ್ಞಾನ (S. of locality, distance. S. of humour ಹಾಸ್ಯ ದರ್ಶನ ಶಕ್ತಿ ; ಹಾಸ್ಯ ದೃಷ್ಟಿ. S. of beauty ಸೌಂದರ್ಯ ಜ್ಞಾನ. S. of gratitude ಉಪಕಾರ ಸ್ಮರಣೆ ; ಕೃತಜ್ಞತಾ ಭಾವ. A keen s. of honour ಗೌರವದ ವಿಷಯದಲ್ಲಿ ತೀವ್ರ ಪರಿಜ್ಞಾನ. The moral, religious, aesthetic, s.). ವ್ಯವಹಾರ ಜ್ಞಾನ, ಯುಕ್ತಾಯುಕ್ತ ಪರಿಜ್ಞಾನ, ತಿಳಿವಳಿಕೆ, ವಿವೇಕ, ಸಾಮಾನ್ಯ ಬುದ್ಧಿ ; —ಇವುಗಳಿಗೆ ಹೊಂದಿಕೆ, ಅನುವರ್ತನೆ (Sound, good, common, s. A man of s. ವಿವೇಕಶಾಲಿ. Now you are talking s. ಈಗ ನೀನು ವಿವೇಕದ ಮಾತು ಆಡುತ್ತಿದ್ದೀಯೆ). ಅರ್ಥ, ಆಶಯ, ಅರ್ಥಮಾಡಿಕೊಳ್ಳಬೇಕಾದ ರೀತಿ ; ಅರ್ಥ—ಸ್ಪಷ್ಟತೆ, ಸಾಂಗತ್ಯ, ಯುಕ್ತತೆ [Does not make s. ಅರ್ಥವಾಗುವುದಿಲ್ಲ. In the strict, limited, literal, figurative, moral, metaphorical, legal, s. In the pickwickian s. (Pickwick ನೋಡಿ). In the proper, full, s. In a vague s. ಒಂದು ಅಸ್ಪಷ್ಟ—ರೀತಿಯಲ್ಲಿ, ಅರ್ಥದಲ್ಲಿ. In a s. ಒಂದು—ರೀತಿಯಲ್ಲಿ, ಅರ್ಥದಲ್ಲಿ (What you say is true in a sense)]. ಹೆಚ್ಚು ಜನರ—ಅಭಿಪ್ರಾಯ, ಅಭಿಮತ (Take the s. of the meeting ಸಭೆಯ ಒಟ್ಟು ಅಭಿಪ್ರಾಯ ತೆಗೆದುಕೊ). [S.-body, -capsule, -cavity, -cell, -centre, -organ (ಪ್ರಾಣಿಗಳಲ್ಲಿ ಸಂವೇದನೋತ್ಪಾದನೆಗೆ ಸಂಬಂಧಿಸಿದ ಭಾಗಗಳು): ಸಂವೇದನ —ಅಂಗ, ಮೃದ್ವಸ್ಥಿಕೋಶ, ಕುಹರ, ಜೀವಕೋಶ, ಕೇಂದ್ರ, ಇಂದ್ರಿಯ]. (ಕ್ರಿ.) (ಬಾಹ್ಯ ವಸ್ತುವನ್ನು) (ಇಂದ್ರಿಯಗಳ ಮೂಲಕ) ತಿಳಿ, ಗ್ರಹಿಸು ; (ಮು.) ಅಸ್ಪಷ್ಟವಾಗಿ—ಅರಿವು ಪಡೆದಿರು, ತಿಳಿ. **Sénseless** (ಗು.) ಬುದ್ಧಿ, ಪ್ರಜ್ಞೆ, —ಇಲ್ಲದ; ಅವಿವೇಕದ (Knock senseless ಪ್ರಜ್ಞೆ ತಪ್ಪುವಂತೆ ಹೊಡೆದು ಕೆಡವು. **Sénselessly** (ಕ್ರಿ. ವಿ.) ; **Sénselessness** (ನಾ.); **Sensibility** (ನಾ.) ಇಂದ್ರಿಯ ಗ್ರಹಣ ಶಕ್ತಿ ; ಸಂವೇದನ ಶಕ್ತಿ (Skin lost

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

its s.); ಸುಲಭವಾಗಿ ಪ್ರತಿಕ್ರಿಯೆ ತೋರುವುದು; ಬೇಗ ಮನೋವಿಕಾರಕ್ಕೊಳಗಾಗುವುದು; ಮನಸ್ಸಿನ ಸೂಕ್ಷ್ಮತೆ; ಸಂವೇದನ ಸೂಕ್ಷ್ಮತೆ (Sense & s. ವಿವೇಕ ಮತ್ತು ಸೂಕ್ಷ್ಮದರ್ಶಿತೆ); ಸೂಕ್ಷ್ಮಾನುಭವಶೀಲತೆ, ರಸಾರ್ದ್ರತೆ (S. to kindness ದಯೆಗೆ ಸಗ್ಗುವುದು, ಕರಗುವುದು); (ಮನಸ್ಸಿನ) ಅತಿ ಸೂಕ್ಷ್ಮತೆ, ಅತಿ ನಾಜೂಕು; ಮುಟ್ಟಿದರೆ ಮುನಿಯುವ ಗುಣ. (ಬ. ವ. ದಲ್ಲಿ; ಹಲವು ವಿಚಾರಗಳಲ್ಲಿ) ಮನಸ್ಸಿನ ಸೂಕ್ಷ್ಮತೆ. **Sénsible** ಸೆನ್ಸಿಬ್‌ಲ್ (ಗು.) ಇಂದ್ರಿಯ—ವೇದ್ಯ, ಗೋಚರ, ಗ್ರಾಹ್ಯ (S. phenomena, things). ಗೋಚರಕ್ಕೆ ಬರುವಷ್ಟು ದೊಡ್ಡದಾದ; ಗಮನಾರ್ಹ (A s. difference, increase). (ಪ್ರಾಚೀ. ಪ್ರ.) ಸುಲಭವಾಗಿ, ಬೇಗ, —ಪ್ರತಿಕ್ರಿಯೆ ತೋರುವ; ಸೂಕ್ಷ್ಮವಾದ (*To* ಉಪ. ದೊಡನೆ). ಅರಿವುಳ್ಳ, ಬಲ್ಲ, ಗ್ರಹಿಕೆಯುಳ್ಳ, ತಿಳಿದ (Was s. of his peril, your kindness). ಒಳ್ಳೆಯ ತಿಳಿವಳಿಕೆಯುಳ್ಳ, ವಿವೇಕವುಳ್ಳ, ಸಮಂಜಸವಾದ, ನ್ಯಾಯವಾದ, ಮಿತವಾದ, ಕಾರ್ಯದೃಷ್ಟಿಯುಳ್ಳ (A s. man ವಿವೇಕಿ, ಬುದ್ಧಿವಂತ. A s. course, compromise ವಿವೇಕವಾದ, ನ್ಯಾಯವಾದ, ಮಾರ್ಗ, ರಾಜಿ. That is very s. of him ಹಾಗೆ ಅವನು ನಡೆದದ್ದು ಬುದ್ಧಿಶಾಲಿತನ, ವಿವೇಕ). **Sénsibly** (ಕ್ರಿ. ವಿ.); **Sénsibleness** (ನಾ.); **Sensórium** ಸೆನ್‌ಸೋರಿಯಮ್ (ನಾ., ಬ. ವ. -ia —ರಿಯ, -s.) ಸಂವೇದನೆಯ (ಮೂಲ) ಸ್ಥಾನ; ಮಿದುಳು; ಮಿದುಳು ಮತ್ತು ಬೆನ್ನುಹುರಿ; ಮಿದುಳಿನ ಬೂದು ದ್ರವ್ಯ. (ಜೀ. ವಿ.) (ನರವ್ಯೂಹ, ಮೊ. ವು ಸೇರಿ) ಜ್ಞಾನೇಂದ್ರಿಯ ವ್ಯೂಹ. **Sénsory** ಸೆನ್‌ಸೊರಿ, **Sensórial** ಸೆನ್‌ಸೋರಿಯಲ್ (ಗು.) ಇಂದ್ರಿಯಗಳ (ಸಂಬಂಧವಾದ), ಮಿದುಳಿನ, ಜ್ಞಾನೇಂದ್ರಿಯ ವ್ಯೂಹದ; ವೇದನೆಗಳ (ಸಂಬಂಧವಾದ); ಜ್ಞಾನ ವಾಹಕ, ಸಂವೇದನ ವಾಹಕ.

Sensibílity, Sénsible. Sense ನೋಡಿ.

Sénsitive (ಗು., ನಾ.) (ವಿರ. ಪ್ರ.) ಇಂದ್ರಿಯಗಳ, ಇಂದ್ರಿಯ ಸಂಬಂಧವಾದ, ವೇದನೆಗಳ. (ಮು., ತನ್ನ ವಿಚಾರವಾಗಿ ಇತರರು ತೋರುವ ಮನೋವೃತ್ತಿ, ಪಡುವ ಅಭಿಪ್ರಾಯಗಳು, ಮೊ. ಬಾಹ್ಯ ಪ್ರಭಾವಗಳಿಗೆ) ಸುಲಭವಾಗಿ ಮನೋವಿಕಾರ ಹೊಂದುವ, ಪ್ರತಿಕ್ರಿಯೆ ತೋರುವ (*To* ಉಪ. ದೊಡನೆ); ಸುಲಭವಾಗಿ ಮನಸ್ಸಿಗೆ ಹಚ್ಚಿಕೊಳ್ಳುವ; ಸುಲಭ ಸಂವೇಗಿಯಾದ; ಅನುಭವಗ್ರಾಹಿಯಾದ; ಸೂಕ್ಷ್ಮ ಮನಸ್ಸಿನ; ಶೀಘ್ರ —ವೇದಿ, ಗ್ರಾಹಿ. (ಯಂತ್ರ ಸಲಕರಣೆ, ಮೊ. ವು) ಪರಿಸ್ಥಿತಿಗಳ ಅಲ್ಪ ವ್ಯತ್ಯಾಸಗಳಿಗೂ ಸಂವಾದಿಯಾದ ಪ್ರತಿಕ್ರಿಯೆ ತೋರುವ (*To* ಉಪ. ದೊಡನೆ); ಅಲ್ಪ ವ್ಯತ್ಯಾಸಗಳನ್ನೂ ಗುರುತಿಸುವ, ನಿರ್ದೇಶಿಸುವ; ಸೂಕ್ಷ್ಮ (S. market ಬೆಲೆಗಳು ಶೀಘ್ರ ವ್ಯತ್ಯಾಸ ಹೊಂದುವ ಪೇಟೆ). (ರ. ವಿ.) ತಕ್ಕ ರಾಸಾಯನಿಕ ಕಾರಕದಿಂದ ಸುಲಭದಲ್ಲಿ ವ್ಯತ್ಯಾಸಗೊಳ್ಳುವ, ಪರಿಣಾಮಗೊಳ್ಳುವ; —ಕಾರಕಕ್ಕೆ ಬೇಗ ಪ್ರತಿಕ್ರಿಯೆ ತೋರುವ (*To* ಉಪ. ದೊಡನೆ); ಸೂಕ್ಷ್ಮ. [(ಛಾಯಾಚಿತ್ರ ಗ್ರಹಣ) S. paper ಬೆಳಕಿನ ರಾಸಾಯನಿಕ ಕ್ರಿಯೆಗೆ ಒಳಪಡುವ ಕಾಗದ: ಸೂಕ್ಷ್ಮ(ಗ್ರಾಹಿ) ಕಾಗದ; ಛಾಯಾಗ್ರಾಹಕ (ಕಾಗದ). S. plant (ಮುಟ್ಟಿದರೆ ಎಲೆ ಮುದುಡಿಕೊಳ್ಳುವ) 'ಮುಟ್ಟಿದರೆ ಮುನಿ', 'ಮುಟ್ಟಲು ಮುರಕಿ' ಎಂಬ ಸಸ್ಯಜಾತಿ]. (ನಾ.) ಸುಪ್ರಾತ್ಯಕ್ಷ ವಾಹನೆ, ಮೊ. ಪ್ರಭಾವಗಳಿಗೆ (ಸುಲಭವಾಗಿ) ಈಡಾಗುವ ವ್ಯಕ್ತಿ. **Sénsitively** (ಕ್ರಿ. ವಿ.); **Sénsitiveness** (ನಾ.); **Sensitívity** (ನಾ.) (ರ. ವಿ., ಛಾಯಾಚಿತ್ರ ಗ್ರಹಣ, ಶ. ವಿ., ಮ. ಶಾ.). **Sénsitize** (ಕ್ರಿ. ಸಕ.) (ಛಾಯಾಚಿತ್ರ ಗ್ರಹಣ ಕಾಗದ, ಫಲಕ, ಪಟಲ —ಇವನ್ನು) ಬೆಳಕಿನ ಕ್ರಿಯೆಗೆ ಸೂಕ್ಷ್ಮಮಾಡು; ಛಾಯಾಗ್ರಾಹಕವನ್ನಾಗಿ ಮಾಡು. **Sensitizátion** (ನಾ.); **Sénsitizer** (ನಾ.); **Sensitómeter** (ನಾ.) ಛಾಯಾಚಿತ್ರ ಪಟಲ, ಮೊ. ಗಳ ಸೂಕ್ಷ್ಮತೆಯನ್ನು ಅಳೆಯುವ ಸಲಕರಣೆ; (ಛಾಯಾಚಿತ್ರ ಪಟಲ) ಸೂಕ್ಷ್ಮತಾ ಮಾಪಕ.

Sensórial, Sensórium, Sénsory. Sense ನೋಡಿ.

Sénsual ಸೆನ್‌ಸ್ಯುಅಲ್, —ಷುಅಲ್ (ಗು.) (ವಿರ. ಪ್ರ.) ಇಂದ್ರಿಯದ, ಸಂವೇದನೆಯ, ಮಿದುಳಿನ, ಜ್ಞಾನದ. (ಬುದ್ಧಿಗಾಗಲಿ ಆತ್ಮಕ್ಕಾಗಲಿ ಸಂಬಂಧಪಡದೆ) ಕೇವಲ ಇಂದ್ರಿಯಗಳ, ಇಂದ್ರಿಯಾವಲಂಬಿಯಾದ; ಇಂದ್ರಿಯಸುಖದ, ವಿಷಯ ಲೋಲುಪತೆಯ; ಭೋಗಾಸಕ್ತಿಯ (S. pleasures ಇಂದ್ರಿಯ, ವಿಷಯ, —ಸುಖಗಳು). ವಿಷಯಾಸಕ್ತ, ವಿಷಯಲಂಪಟ; (ಆಹಾರ, ಸಂಭೋಗ—ಇವುಗಳಲ್ಲಿ) ಸ್ವೇಚ್ಛಾ ಪ್ರವೃತ್ತಿಯ. (ತ. ಶಾ.) ಸಂವೇದನ ಜ್ಞಾನ —ವಾದದ, ವಾದಿಯಾದ, ವಾದಾನುಸಾರವಾದ (Sensation ಪದದ ಕೆಳಗೆ Sensationalism ನೋಡಿ). **Sénsualism** (ನಾ.) ಸಂವೇದನ, ಇಂದ್ರಿಯ, —ಜ್ಞಾನ ವಾದ. ವಿಷಯಲಂಪಟತ್ವ. **Sénsualist** (ನಾ.); **Sensuálity** —ಆ್ಯಲಿಟಿ (ನಾ.) ವಿಷಯಲಂಪಟತ್ವ. **Sénsually** (ಕ್ರಿ. ವಿ.); **Sénsualize** (ಕ್ರಿ. ಸಕ.); **Sensualizátion** (ನಾ.); **Sénsuous** (ಗು.) (Sensual ಎಂಬುದರಲ್ಲಿರುವ ವಿಷಯಲಂಪಟತ್ವಾದಿ ಕೆಟ್ಟ ಅರ್ಥಗಳಿಲ್ಲದೆ) ಇಂದ್ರಿಯಗಳ, —ಗಳಿಂದ ದೊರೆತ, —ಗಳ ಸಂಬಂಧವಾದ, —ಗಳ ಮೇಲೆ ಪರಿಣಾಮ ಮಾಡುವ; ಇಂದ್ರಿಯ ಗೋಚರದ (Non-moral ಮತ್ತು immoral ಪದಗಳಿಗಿರುವ ಅರ್ಥ ವ್ಯತ್ಯಾಸದಂತೆ Sensuous ಮತ್ತು Sensual ಪದಗಳಿಗೆ ಅರ್ಥವ್ಯತ್ಯಾಸವಿರುತ್ತದೆ. Non-moral, immoral ನೋಡಿ). **Sénsuously** (ಕ್ರಿ. ವಿ.); **Sénsuousness** (ನಾ.)

Sénsuous, etc. Sensual ನೋಡಿ.

Sent. Send ಧಾತುವಿನ ಭೂತ., ಭೂ. ಕೃ.

Séntence ಸೆಂಟೆನ್ಸ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) (ಒಂದು ಮಾರ್ಗಾನುಸರಣೆಯ ಅಥವಾ ಒಂದು ತೀರ್ಮಾನದ ಬಗ್ಗೆ ಪರವಾದ ಅಥವಾ ವಿರೋಧವಾದ) ಅಭಿಪ್ರಾಯ (My s. is for war). (ಪ್ರಾಚೀ. ಪ್ರ.) ಸಾರವತ್ತಾದ ನುಡಿ, ಅಡಕವಾದ ಸೂಕ್ತಿ, ಸೂತ್ರ, ಗಾದೆ, ಸಾಮತಿ [(ಈಗ ಬಳಕೆಯಲ್ಲಿ) **Senténtious** ಸೆಂಟೆನ್‌ಷಸ್ (ಗು.) ಬಹಳ ಅಡಕವಾದ; ಸಾರೋಕ್ತಿಗಳಿಂದ ತುಂಬಿದ; ಸೂತ್ರಮಯ; (ಪ್ರವಚನ, ಶೈಲಿ, ಮೊ. ವು) ಕೃತಕವಾಗಿ, ಆಡಂಬರವಾಗಿ, —ಸೂತ್ರನಿಷ್ಠೆ ತೋರುವ; (ವ್ಯಕ್ತಿ) ಆಡಂಬರವಾಗಿ ನೀತಿ ಹೇಳುವ. **Senténtiously** (ಕ್ರಿ. ವಿ.); **Senténtiousness** (ನಾ.)]. (ವಿರ. ಪ್ರ.) [ಪಂಚಾಯಿತಿ, (ಮರೀಯ) ನ್ಯಾಯಸ್ಥಾನ, ಮೊ. ವು ಹೇಳಿದ] ತೀರ್ಪು, ನಿರ್ಣಯ. (ತಕ್ಸೀರು ವಿಚಾರಣೆಯಲ್ಲಿ ಅಪರಾಧಿಗೆ ವಿಧಿಸಿದ) ಶಿಕ್ಷೆ(ಯ —ಆಜ್ಞೆ, ತೀರ್ಪು) (ರೂಪ. ಸಹ). (ವ್ಯಾ.) ವಾಕ್ಯ [(ಕರ್ತೃ ಅಥವಾ ಕ್ರಿಯಾಪದ ಅಧ್ಯಾಹಾರವಾಗಿದ್ದರೂ ಸಹ: Go ಹೋಗು. What? ಏನು ಹೇಳಿದೆ? Hearts trumps = Hearts are trumps). Simple s. (ಒಂದು ಕರ್ತೃಪದ, ಒಂದು ಕ್ರಿಯಾಪದ ಮಾತ್ರ ಇರುವ) ಸಾಮಾನ್ಯ, ಸರಳ, —ವಾಕ್ಯ. Compound s. (ಒಂದಕ್ಕಿಂತ ಹೆಚ್ಚು ಪ್ರಧಾನ ವಾಕ್ಯಾಂಶಗಳನ್ನುಳ್ಳ) ಸಂಯೋಜಿತ, ಸಂಯುಕ್ತ, —ವಾಕ್ಯ. Complex s. (ಅಧೀನ ವಾಕ್ಯಾಂಶಗಳೂ ಒಂದು ಪ್ರಧಾನ ವಾಕ್ಯವೂ ಇರುವ) ಮಿಶ್ರ ವಾಕ್ಯ]. (ಶಿಥಿಲವಾಗಿ ವ್ಯಾಕರಣದಲ್ಲಿ) ಅಧೀನ ವಾಕ್ಯ, ವಾಕ್ಯಾಂಶ (= Subordinate s.). (ಕ್ರಿ.) (ದಂಡನೆಗೊಳಪಟ್ಟ ಅಪರಾಧಿಗೆ) ಶಿಕ್ಷೆಯ ತೀರ್ಪು ಹೇಳು, ಶಿಕ್ಷೆ ವಿಧಿಸು (*To* ಉಪ. ದೊಡನೆ. Sentenced to six months' rigorous imprisonment). **Senténtial** —ಷಲ್ (ಗು.) (ವಿರ. ಪ್ರ.) (ವ್ಯಾಕರಣದ) ವಾಕ್ಯಕ್ಕೆ ಸಂಬಂಧಿಸಿದ (A s. pause)

Séntient ಸೆನ್‌ಷೆಂಟ್, —ಷ್‌ಂಟ್ (ಗು.) ಇಂದ್ರಿಯಗ್ರಹಣಶಕ್ತಿಯುಳ್ಳ; ಇಂದ್ರಿಯ ಜ್ಞಾನ ವಿಶಿಷ್ಟ; ಇಂದ್ರಿಯ ಚೈತನ್ಯಯುಕ್ತ; ಇಂದ್ರಿಯ ವ್ಯಾಪಾರವುಳ್ಳ. **Séntiently** (ಕ್ರಿ. ವಿ.); **Séntience** (ನಾ.)

Séntiment ಸೆಂಟಿಮೆಂಟ್ (ನಾ.) ಭಾವ(ನೆ); ಮನೋಭಾವ(ನೆ); (ಒಂದು ವಿಷಯದಲ್ಲಿ ಒಬ್ಬನ) ಭಾವನಾ ಸಮುಚ್ಚಯ; ಚಿತ್ತವೃತ್ತಿ; ರಸಭಾವ (ರಂಜಿತ —ದೃಷ್ಟಿ, ಅಭಿಪ್ರಾಯ); ರಸ [The s. of pity ಕರುಣ ರಸ. The s. of patriotism ದೇಶವಾತ್ಸಲ್ಯ ರಸ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Animated by noble sentiments ಉದಾತ್ತ ರಸ ಭಾವಗಳಿಂದ ಉತ್ಸಾಹಗೊಂಡು, ಹುರಿದುಂಬಿ. My s. towards him is one of respect ಆತನ ವಿಷಯದಲ್ಲಿ ನನ್ನ ಭಾವನೆ ಗೌರವದ್ದು. These are (ಅನೇಕ ವೇಳೆ ಹಾಸ್ಯವಾಗಿ them's) my sentiments (ಆ ವಿಚಾರದಲ್ಲಿ) ನನ್ನ ಅಭಿಪ್ರಾಯಗಳಿವು, ಭಾವನೆಗಳಿವು]. (ಕಲೆ) ತಾನು ಚಿತ್ರಿಸಿರುವ ಅಥವಾ ವರ್ಣಿಸಿರುವ ವಿಷಯದಲ್ಲಿ ಕಲೆಗಾರನ ಸಹಾನುಭೂತಿ ದೃಷ್ಟಿಯಿಂದ ಫಲಿಸುವ ಪರಿಣಾಮಕಾರಿಯಾದ ಗುಣ: ರಸ. ತರ್ಕ ವಿಚಾರಗಳಿಗಿಂತ ರಸ ಭಾವಗಳಿಗೆ ಅಧೀನವಾಗುವ ಪ್ರವೃತ್ತಿ; ರಸಾಧೀನತೆ, ಭಾವಾತಿರೇಕ; ಭಾವಾವೇಶ ರೂಪದ ದೌರ್ಬಲ್ಯ; ಬಿನ್ನಾಣದ, ಕೃತಕ, —ಅಂತಃಕರಣ, ಪ್ರೇಮ (ಪ್ರದರ್ಶನ); ಭಾವ ವಿಕಾರ; ಭಾವ ವಿಕಾರಗಳ ಅತಿವೃದ್ಧಿ. (ಸ್ವಸ್ತಿ ಪಾನ, ಮೊ. ಸಂದರ್ಭಗಳಲ್ಲಿ; ಇಚ್ಛಾ ಸೂಚನೆಯ ಅಥವಾ ಪ್ರಾರ್ಥನೆಯ) ಸೂತ್ರರೂಪದ ಸಾರೋಕ್ತಿ(ಯ ಆಶಯ); ಆಶೀರ್ವಚನ (The s. is good though the words are injudicious. I call upon Mr. Jones for a song or a s.). **Sentiméntal** (ಗು.) ರಸ ಭಾವಾತಿರೇಕವುಳ್ಳ, ರಸ ಭಾವವಶಂಗತನಾದ. **Sentiméntally** (ಕ್ರಿ. ವಿ.); **Sentimentálity** (ನಾ.); **Sentiméntalism** (ನಾ.); **Sentiméntalist** (ನಾ.); **Sentiméntalize** (ಕ್ರಿ.)

Séntinel ಸೆಂಟಿನ'ಲ್, —ನೆಲ್ (ನಾ., ಕ್ರಿ. ಸಕ.) ಕಾವಲು ಕಾಯುವ ಸಿಪಾಯಿ; ಕಾವಲುಗಾರ; ಪಹರೆಯವನು. ಹಿಂದೂ ಸಾಗರದ ಒಂದು ಜಾತಿಯ ನಳ್ಳಿ, ಏಡಿ (=S. crab). (ಕ್ರಿ.) (ಕಾವ್ಯ) ಕಾವಲು ಕಾಯಿ; ಪಹರೆ ಇರು. (ವಿರ. ಪ್ರ.) ಪಹರೆ(ಯವರನ್ನು) ಇಡು; ಕಾವಲು ಇಡು.

Séntry ಸೆಂಟ್ರಿ (ನಾ.) (Sentinel ಪದಕ್ಕೆ ಬಳಕೆಯಾಗಿ ಸೈನಿಕ ಪ್ರ.): ಕಾವಲು ಸಿಪಾಯಿ. S.-board ಪಹರೆಯವನು ನಿಲ್ಲುವುದಕ್ಕಾಗಿ ಹಡಗಿನ ದ್ವಾರದ ಆಚೆ ಹಾಕಿರುವ ವೇದಿಕೆ; ಪಹರೆಯ ವೇದಿಕೆ. S.-box ಪಹರೆಯವನು ನಿಲ್ಲಲು ಮಾಡಿರುವ ಮರದ ಗೂಡು; ಕಾವಲು ಗೂಡು. S.-go ಹಿಂದಕ್ಕೂ ಮುಂದಕ್ಕೂ ಕಾವಲು ತಿರುಗುವ ಕೆಲಸ: ಪಹರೆ (ತಿರುಗಾಟ, ಅಡ್ಡಾಟ)

Sépal ಸೆಪಲ್ (ನಾ.) ಪುಷ್ಪಪಾತ್ರದ ಪತ್ರ (Petal ನೋಡಿ)

Séparate ಸೆಪರೆಟ್ (ಗು., ನಾ.) ಬೇರ್ಪಟ್ಟಿರುವ, ಬೇರೆಯಾದ, ಪ್ರತ್ಯೇಕವಾದ, ವಿಭಕ್ತ, ಬಿಡಿಯಾದ, ತನಿಯಾದ, ಬಿಡಿಗಳ [(*From* ಉಪ. ಮೊದನೆ ಅಥವಾ ಇಲ್ಲದೆಯೆ ಪ್ರ.) The s. members of the body. Live in s. rooms. S. estate ಗಂಡನ ಆಡಳಿತಕ್ಕೆ ಸೇರಿಲ್ಲದ ಹೆಂಡತಿಯ ಆಸ್ತಿ; ಸ್ತ್ರೀ ಸ್ವತ್ತು. S. maintenance (ಒಪ್ಪಿಕೆಯಿಂದ ಬೇರೆಯಾದ ಹೆಂಡತಿಗೆ ಗಂಡನು ಕೊಡುವ) ಪ್ರತ್ಯೇಕ ಜೀವನಾಂಶ (Alimony ನೋಡಿ)]. (ನಾ.) ಪ್ರತ್ಯೇಕವಾಗಿ ಹಂಚಲು (ಸಂಘದ ನಡೆವಳಿಕೆ, ಪತ್ರಿಕೆ, ಮೊ. ಗಳಿಂದ) ಪುನರ್ಮುದ್ರಣ ಮಾಡಿದ ಬಿಡಿ ಲೇಖನದ ಪ್ರತಿ. **Séparately** (ಕ್ರಿ. ವಿ.); **Séparateness** (ನಾ.); **Séparatism** (ನಾ.) (ಮು., ರಾಜಕೀಯ ಮತ್ತು ಧಾರ್ಮಿಕ ಸ್ವಾತಂತ್ರ್ಯ ಸಂಬಂಧವಾಗಿ) ಪ್ರತ್ಯೇಕತಾ ವಾದ (ಎದುರು ಪದ: Unionism). **Séparatist** (ನಾ., ಗು.) ಪ್ರತ್ಯೇಕತಾ ವಾದಿ(ಗಳ); ಪ್ರತ್ಯೇಕತಾ ವಾದದ (ಎದುರು ಪದ: Unionist)

Séparate ಸೆಪರೇಟ್ (ಕ್ರಿ.) ಬೇರ್ಪಡು, ಬೇರ್ಪಡಿಸು; ಬೇರೆಯಾಗು, —ಮಾಡು; ಪ್ರತ್ಯೇಕಿಸು, ಪ್ರತ್ಯೇಕವಾಗು (*From* ಉಪ. ಮೊದನೆ); ವಿಯೋಜಿಸು; ಅಗಲು; ಭಿನ್ನ ಮಾರ್ಗದಲ್ಲಿ ಹೋಗು; ಚೆದರು. (ಹಾಲು, ಕಾಳು, ಅದುರು, ಹಣ್ಣು, ಮೊ. ರಲ್ಲಿ ಉಪಯೋಗಾರ್ಹವಾದುವನ್ನು, ನಿರುಪಯೋಗವಾದುವನ್ನು) ವಿಂಗಡಿಸು; (ಬೆಳಕು, ರಾಸಾಯನಿಕ ವಸ್ತು, ಮೊ. ನ್ನು) ಘಟಕಗಳಾಗಿ ಪೃಥಕ್ಕರಿಸು; ವಿಘಟಿಸು; (ಕೆನೆ, ಮೊ. ನ್ನು) ಬೇರೆ ತೆಗೆ. **Séparator** (ನಾ.); **Séparable** (ಗು.); **Séparableness** (ನಾ.); **Separability** (ನಾ.); **Séparably** (ಕ್ರಿ. ವಿ.); **Séparative** (ಗು.); **Séparatory** (ಗು.) (ವಿರ. ಪ್ರ.); **Separátion** (ನಾ.) (ಕ್ರಿಯಾರ್ಥಗಳಲ್ಲಿ); ಅಗಲಿಕೆ; ವಿರಹ. ದಾಂಪತ್ಯದ ಅಪೂರ್ಣ ವಿಚ್ಛೇದನ; ವಿವಾಹ ವಿಚ್ಛೇದನವಿಲ್ಲದೆ ಗಂಡ ಹೆಂಡಿರ ಪ್ರತ್ಯೇಕ ವಾಸ (Judicial s. ನ್ಯಾಯಸ್ಥಾನದ ಆಜ್ಞಾನುಸಾರ ಗಂಡ ಹೆಂಡಿರ ಪ್ರತ್ಯೇಕ ವಾಸ). S. allowance (ಯುದ್ಧ ಕಾಲದಲ್ಲಿ) ಸೈನಿಕನ ಹೆಂಡತಿಗೆ (ಅವನೂ ಸರ್ಕಾರವೂ ಸೇರಿ) ಕೊಡುವ ಜೀವನಾಂಶ, ಭತ್ಯ.

Separátum ಸೆಪರೇಟಮ್ (ನಾ.; ಬ. ವ. -ta —ಟ) =Separate (ನಾ.)

Sépia ಸೀಪಿಯ (ನಾ.) ಕಟ್'ಲ್ ಮೀನಿನ ಕಪ್ಪು ದ್ರವ. (ಈ ದ್ರವದಿಂದ ತಯಾರಿಸಿದ, ಏಕವರ್ಣದ ಚಿತ್ರರೇಖನದಲ್ಲೂ ಜಲವರ್ಣಗಳಲ್ಲೂ ಉಪಯೋಗಿಸುವ) ಒಂದು ಕಂದು ವರ್ಣದ್ರವ್ಯ: ಸೀಪಿಯ ಬಣ್ಣ (Warm s. ಸ್ವಲ್ಪ ಕೆಂಪು ಬೆರಕೆಯಾದ ಸೀಪಿಯ ಬಣ್ಣ); ಕಪ್ಪು (ಛಾಯೆಯ) ಕೆಂಗಂದು ಬಣ್ಣ; ಈ ಬಣ್ಣದ ಚಿತ್ರ (S.-drawing)

Sépoy ಸೀಪಾಯ್ (ನಾ.) ಐರೋಪ್ಯ ಪದ್ಧತಿಯಲ್ಲಿ ತರಬೇತಾದ, ಮು., ಬ್ರಿಟಿಷ್ ಇಂಡಿಯದ ಸೈನ್ಯದಲ್ಲಿರುವ, ದೇಶೀಯ ಸೈನಿಕ: ಸಿಪಾಯಿ.

Seps ಸೆಪ್ಸ್ (ನಾ.) ಉರಗ ವರ್ಗದ ಹಲ್ಲಿ ಜಾತಿ: ಹಾವಿನಾಕಾರದ ಹಲ್ಲಿ.

Sépsis ಸೆಪ್'ಸಿಸ್ (ನಾ.) (ವೈ. ಶಾ.) ಕೊಳೆಯುವಿಕೆ; ಗಾಯ, ಮೊ. ಗಳ ಕೊಳೆತ; ಕೀವು (ನಂಜು); ಕೀತ ನಂಜು; ರಕ್ತವಿಷ. **Séptic** ಸೆಪ್ಟಿಕ್ (ಗು., ನಾ.) (ವೈ. ಶಾ.) ಕೊಳೆತದ; ಕೊಳೆಯಿಸುವ; ಪೂತಿ—ಕಾರಿ, ಸಂಬಂಧಿ; ರಕ್ತವಿಷದ. [S. tank ಮಲಮೂತ್ರ ಮಿಶ್ರಣವಾದ ಊರಿನ ರೊಚ್ಚುನೀರನ್ನು ಏಕಾಣುಜೀವಿಗಳ ಮೂಲಕ ಸಂಸ್ಕರಿಸಿ (ಜನರ ಉಪಯೋಗಕ್ಕೆ) ನಿರಪಾಯವಾಗುವಂತೆ ಮಾಡುವ ಕೊಳ: ಮಲನಾಶಕ ಕೊಳ]. (ನಾ.) ಕೊಳೆಯಿಸುವ ಪದಾರ್ಥ; ಪೂತಿಕಾರಕ. **Séptically** (ಕ್ರಿ. ವಿ.); **Septícity** (ನಾ.); **Septicaémia** ಸೆಪ್ಟಿಸೀಮಿಯ (ನಾ.) (ರೋಗ ನಿದಾನ) ನೆತ್ತರ ನಂಜು: ರಕ್ತವಿಷ: ರಕ್ತದೋಷ. **Septicaémic** (ಗು.)

Sept ಸೆಪ್ಟ್ (ನಾ.) (ಮು., ಐರ್ಲೆಂಡಿನಲ್ಲಿ) ಬಣ; ಕುಲ; ವಂಶ. **Séptal**[1] ಸೆಪ್ಟಲ್ (ಗು.) ಬಣದ; ಕುಲದ.

Sept- ಸೆಪ್ಟ್—, **Septem-** ಸೆಪ್ಟೆಂ—, **Septi-** ಸೆಪ್ಟಿ—(ಸ. ಪೂ. ಪ.) ಏಳು—; ಸಪ್ತ—. **Séptan** (ಜ್ವರದ ವಿಷಯದಲ್ಲಿ) ಪ್ರತಿ ಆರನೆಯ ದಿನ (ಜ್ವರ ಬಂದ ದಿನವೂ ಸೇರಿ ಏಳು ದಿನಕ್ಕೊಮ್ಮೆ) ಬರುವ; ವಾರದ (ಗಡುವಿನ); ಸಾಪ್ತಾಹಿಕ. **Séptangle** ಸಪ್ತ ಕೋನಾಕೃತಿ; ಸಪ್ತ ಭುಜಿ. **Septángular** ಸಪ್ತ ಕೋಣಿಕ. **Septempártite** ಏಳು ಭಾಗಗಳಾದ; ಸಪ್ತ ವಿಭಾಗಿ. **Septenárius** ಸೆಪ್ಟಿನೇರಿಯಸ್ (ನಾ.) ಏಳು ಗಣಗಳ ಒಂದು ಪದ್ಯ ಜಾತಿ. **Septénary** (ಗು., ನಾ.) ಏಳರ (ಸಂಖ್ಯೆಯುಳ್ಳ); ಏಳನ್ನು ಒಳಕೊಂಡಿರುವ; ಏಳರ ಸಂಖ್ಯೆ ಆಧಾರವಾಗಿರುವ; ಏಳೇಳರ (ತಂಡದ); ಸಪ್ತ ವಾರ್ಷಿಕ; ಸಪ್ತ ಸಂಖ್ಯಕ; ಸಪ್ತಾತ್ಮಕ; ಸಪ್ತಕ. **Séptenate** (ನ. ವಿ.) ಏಳು ಭಾಗಗಳುಳ್ಳ. **Septénnate** ಏಳು ವರ್ಷಗಳ ಕಾಲ(ಕ್ಕೆ ಮಾಡಿದ ವ್ಯವಸ್ಥೆ, ಯೋಜನೆ). **Septénnial** ಏಳು ವರ್ಷದ, —ಕಾಲ ಇರುವ, ನಡೆಯುವ; ಏಳು ವರ್ಷಕ್ಕೊಮ್ಮೆ ಬರುವ; ಸಪ್ತ ವಾರ್ಷಿಕ. **Septénnially** ಏಳು ವರ್ಷಕ್ಕೊಮ್ಮೆ. **Septénnium** (ಬ. ವ. -ia) ಏಳು ವರ್ಷ ಕಾಲ. **Septét(te)** ಏಳು ದನಿಗಳ, ಗಾಯಕರ, ವಾದ್ಯಗಳ, ಬಾಜಕರ ಮೇಳ(ಕ್ಕೆ ಅಳವಡಿಸಿದ ಸಂಗೀತ ಕೃತಿ); (ರೂಪ.; ಯಾವುದಾದರೂ) ಏಳರ ತಂಡ; ಸಪ್ತಕ. **Séptfoil** =Tormentil ಎಂಬ ಸಸ್ಯ. (ಮು., ರೋ. ಕ್ಯಾ. ಮತದಲ್ಲಿ ಸಪ್ತ ಸಂಸ್ಕಾರಗಳ ಸಂಕೇತವಾದ) ಏಳು ಪಾಳಿಗಳುಳ್ಳ ಒಂದು ಅಲಂಕಾರ; ಸಪ್ತದಳ ಪುಷ್ಪಾಭರಣ. **Septiláteral** (ಸೆಪ್ಟಿಲ್ಯಾಟರಲ್) ಸಪ್ತ ಭುಜಗಳುಳ್ಳ. **Septíllion** ೧೦ ಲಕ್ಷದ ಏಳನೆಯ ಘಾತ (೧ ರ ಮುಂದೆ ೪೨ ಸೊನ್ನೆಗಳನ್ನು ಹಾಕಿದರೆ ಆಗುವ ಸಂಖ್ಯೆ). **Septisýllable** ಏಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉಚ್ಚಾರಾಂಶಗಳುಳ್ಳ ಮಾತು. **Séptuple** ಸೆಪ್ಟ್ಯೂಪ್'ಲ್ (ಗು., ನಾ., ಕ್ರಿ.) ಏಳು ಮಡಿ, ಏಳರಷ್ಟು (ಮೊತ್ತ). (ಕ್ರಿ.) ಏಳರಿಂದ ಗುಣಿಸು; ಏಳರಷ್ಟು —ಹೆಚ್ಚಿಸು, ಹೆಚ್ಚು.

Sépta. **Septum** ನೋಡಿ.

Séptal[1]. **Sept** ನೋಡಿ.

Séptal[2], **Séptate, Septátion.** **Septum** ನೋಡಿ.

Septémber ಸೆಪ್ಟೆಂಬರ್ (ನಾ.) ಇಂಗ್ಲಿಷ್ ವರ್ಷದ ಒಂಬತ್ತನೆಯ ತಿಂಗಳು; ಸೆಪ್ಟೆಂಬರ್. **Septémbrist** (ನಾ.) (ಫ್ರಾನ್ಸಿನ ಮಹಾ ಕ್ರಾಂತಿಯ ಕಾಲದಲ್ಲಿ) ೧೭೯೨ನೆಯ ಇಸವಿ ಸೆಪ್ಟೆಂಬರ್ ೨, ೩ನೆಯ ತಾರೀಕುಗಳಲ್ಲಿ ಪ್ಯಾರಿಸ್ಸಿನಲ್ಲಿ ನಡೆದ ಕಗ್ಗೊಲೆಯಲ್ಲಿ ಭಾಗ ವಹಿಸಿದವನು.

Séptic, etc., Septicaémia. **Sepsis** ನೋಡಿ.

Séptimal ಸೆಪ್ಟಿಮಲ್ (ಗು.) ಏಳರ (ಸಂಖ್ಯೆಯ)

Séptime ಸೆಪ್ಟಿ(ೀ)ಮ್ (ನಾ.) (ಖಡ್ಗವಿದ್ಯೆ) ಏಟು ತಪ್ಪಿಸಿಕೊಳ್ಳುವ ಒಂದು ವರಿಸೆ.

Séptimus ಸೆಪ್ಟಿಮಸ್ (ಗು.) (ಹುಡುಗರ ಪಾಠಶಾಲೆಯಲ್ಲಿ) ಆ ಹೆಸರಿನ (ವರಲ್ಲಿ) ಏಳನೆಯ (Primus[1] ನೋಡಿ)

Septuagenárian ಸೆಪ್ಟ್ಯುಅಜಿನೇರಿಯನ್ (ಗು., ನಾ.) ೭೦ರಿಂದ ೮೦ ವರ್ಷದೊಳಗಿನ(ವನು); ಎಪ್ಪತ್ತು ವರ್ಷದ; ಎಪ್ಪತ್ತರ (ಮುದುಕ, ಮುದುಕಿ). **Septuagénary** —ಜೀನರಿ (ಗು.) ಎಪ್ಪತ್ತರ.

Septuagésima ಸೆಪ್ಟ್ಯುಅಜೆಸಿಮ (ನಾ.) 'ಲೆಂಟ್' ಹಬ್ಬಕ್ಕೆ ಮುಂಚಿನ ಮೂರನೆಯ ಭಾನುವಾರ (=S. Sunday) (ಈಸ್ಟರ್ ಹಬ್ಬಕ್ಕೆ ಸುಮಾರು ೬೩ ದಿನ ಮುಂಚಿನದು)

Séptuagint ಸೆಪ್ಟ್ಯುಅಜಿಂಟ್ (ನಾ.) ಸು., ಕ್ರಿ. ಪೂ. ೨೭೦ರಲ್ಲಿ ೭೦ ಮಂದಿ ಭಾಷಾಂತರಕಾರರಿಂದ ರಚಿಸಲ್ಪಟ್ಟಿತೆಂದು ಹೇಳುವ (ಬೈಬಲ್ಲಿನ) ಹಳೆಯ ಒಡಂಬಡಿಕೆಯ ಗ್ರೀಕ್ ಭಾಷಾಂತರ.

Séptum ಸೆಪ್ಟಮ್ (ನಾ.) (ಶ. ವಿ., ಸ. ವಿ., ಜೀ. ವಿ.; ಬ. ವ. -ta —ಟ) (ಮೂಗಿನ ಎರಡು ಹೊಳ್ಳೆಗಳನ್ನು ಪ್ರತ್ಯೇಕಿಸುವ ಅಥವಾ ಗಸಗಸೆ ಹಣ್ಣಿನ ಎರಡು ಗೂಡುಗಳನ್ನು ಪ್ರತ್ಯೇಕಿಸುವ) ನಡು ತಡಕೆ; ವಿಭಾಜಕ ಭಿತ್ತಿ. **Séptal**[2] (ಗು.) ನಡು ತಡಕೆಯ. **Séptate** ಸೆಪ್'ಟೇಟ್ (ಗು.) (ಸ. ವಿ., ಪ್ರಾ. ವಿ., ಅಂ. ರ. ಶಾ.) —ಉಳ್ಳ; ವಿಭಾಗವಾದ. **Septátion** (ನಾ.)

Sépulchre ಸೆಪಲ್'ಕರ್ (ನಾ., ಕ್ರಿ. ಸಕ.) (ಮು., ಬಂಡೆಯಲ್ಲಿ ಕೊರೆದು ಮಾಡಿದ, ಕಲ್ಲಿನಿಂದ ಅಥವಾ ಇಟ್ಟಿಗೆಯಿಂದ ಕಟ್ಟಿ ಮಾಡಿದ) ಸಮಾಧಿ ಗುಹೆ; ಗೋರಿ; ಹೆಣ ಹೂಳುವ —ಗುಹೆ, ನೆಲಮನೆ. [The Holy S. ಕ್ರಿಸ್ತನ ಸಮಾಧಿ ಗುಹೆ. Whited s. (ಬೈಬಲ್ ಪ್ರ.) ಬೂಟಾಟಿಗ; ಠಕ್ಕ]. (ಕ್ರಿ.) ಗೋರಿಯಲ್ಲಿಡು; ಹೂಗಿ. **Sepúlchral** ಸಿಪಲ್'ಕ್ರಲ್ (ಗು.) ಗೋರಿಯ; ಸಮಾಧಿ ಗುಹೆಯ(ಗಳ); ಗೋರಿ ಮಾಡುವುದರ; ಹೆಣ ಹೂಳುವುದರ (S. mound, pillar, etc. S. customs ಸಮಾಧಿಯ ಪದ್ಧತಿಗಳು). ಸಮಾಧಿ (ಗುಹಾ) ಸೂಚಕ; ಶವ ಸಂಸ್ಕಾರದ; ಗೋಳುಕರೆಯ; ದುಃಖಧಾರದ; ಹೆಣಮೋರೆಯ; ಅಳುಮೋರೆಯ (A s. look, voice). **Sepúlchrally** (ಕ್ರಿ. ವಿ.)

Sépulture ಸೆಪಲ್'ಟ್ಯುರ್, —ಚರ್ (ನಾ.) ಹೆಣ ಹೂಳುವುದು, ಗೋರಿ ಮಾಡುವುದು; ಶವ ಸಂಸ್ಕಾರ.

Sequácious ಸಿಕ್ವೇಷಸ್ (ಗು.) (ಪಾಂಡಿತ್ಯ ಪ್ರ.) (ಮುಖಂಡನನ್ನು) ಹಿಂಬಾಲಿಸುವ, ಅನುಸರಿಸುವ (ಪ್ರವೃತ್ತಿಯುಳ್ಳ); ಸ್ವತಂತ್ರ ಬುದ್ಧಿಯಿಲ್ಲದ, ಸ್ವತಂತ್ರ ಕಲ್ಪನಾಶಕ್ತಿಯಿಲ್ಲದ; ಪರಾವಲಂಬಿಯಾದ; ದಾಸ್ಯಭಾವವುಳ್ಳ; (ಸ್ವತಂತ್ರಾಭಿಪ್ರಾಯವಿಲ್ಲದೆ, ಮತ್ತೊಬ್ಬನ ಅಭಿಪ್ರಾಯವನ್ನು) ಗುಲಾಮನಂತೆ ಅನುಸರಿಸುವ. (ವಿಚಾರ ಸರಣಿಯ ಅಥವಾ ತರ್ಕಿಸುವವನ ವಿಷಯದಲ್ಲಿ) ಅಸಂಬದ್ಧವಲ್ಲದ; ಸಂಗತವಾದ; ಸುಬದ್ಧ(ವಾಗಿರುವ); ಕ್ರಮಾನುಗತ. **Sequáciously** (ಕ್ರಿ. ವಿ.); **Sequácity** —ಕ್ವಾ್ಯಸಿಟಿ (ನಾ.)

Séquel ಸೀಕ್ವೆಲ್ (ನಾ.) ಒಂದರ ತರುವಾಯದ, ಮುಂದಿನ, —ಪ್ರಕರಣ, ಪ್ರಸಂಗ; (ಕಥೆ, ವಿಧಾನ, ಮೊ. ಗಳಲ್ಲಿ: ನಿಲುಕಡೆಯ ಅಥವಾ ತಾತ್ಕಾಲಿಕ ಮುಕ್ತಾಯದ ತರುವಾಯ ಬರುವ) ಉತ್ತರ ಭಾಗ, ಉತ್ತರಾಂಶ; ಮುಂದಿನ —ಕಥೆ, ಭಾಗ (In the s. ಅನುಕ್ರಮದಲ್ಲಿ, ತರುವಾಯ, ಆಮೇಲೆ). ಪರಿಣಾಮ (ಫಲಗಳು); ಫಲಿತಾಂಶ. (ವಿರ. ಪ್ರ.) ಒಂದು ವಾದ ಸರಣಿಯ —ಫಲಿತಾಂಶ, ಮುಗಿವು; ಮುಗಿತಾಯ. ಅನುಮಿತಿ; ನಿರ್ಣಯ; ತೀರ್ಮಾನ.

Sequéla (L) ಸಿಕ್ವೀಲ (ನಾ.; ರೋಗ ನಿದಾನ, ಸಾ., ಬ. ವ. ದಲ್ಲಿ -ae —ಲಿ) ಒಂದು ರೋಗ ಬಂದಮೇಲೆ ಅದರ ಪರಿಣಾಮವಾಗಿ ಕಾಣಿಸಿಕೊಳ್ಳುವ ಬೇರೊಂದು ರೋಗ (ಲಕ್ಷಣ): ಮರು ಕುತ್ತ, ಜನ್ಯ ರೋಗ (Heart-disease is one of the sequelae of rheumatic fever)

Séquence ಸೀಕ್ವೆನ್ಸ್ (ನಾ.) ಕ್ರಮಾನುಗತಿ; ಅನುಕ್ರಮ; ಹಿಂದೆಯೇ, ಅನುಗೂಡಿ, ಮಾರನೆಯದಾಗಿ, —ಅನುಸರಿಸಿ ಬರುವುದು; ಆನುಪೂರ್ವಿ; ಪರಿವಿಡಿ, ಪಾಳಿ; ಪರಂಪರಾಕ್ರಮ; (ಒಂದು ತತ್ತ್ವದ ಕ್ರಮವನ್ನನುಸರಿಸಿ) ಅನುಗೂಡಿ ಬರುವ, ಒಂದರ ಹಿಂದೊಂದರಂತೆ ಬರುವ, —ವಸ್ತುಗಳ ತಂಡ; ಎಡೆಬಿಡದ ಸಾಲು; ನಿರಂತರ ಶ್ರೇಣಿ; ಅವಿಚ್ಛಿನ್ನ ಪರಂಪರೆ [Shall follow the s. of events. Give the facts in historical s. A s. of clubs (ಇಸ್ಪೀಟು) ಕಳಾವರಿನ ಅನುಕ್ರಮದ ಎಲೆಗಳು. The s. spring ಮುಂದಿನ, ಮಾರನೆಯ, ವಸಂತಕಾಲ]. ಕಾರ್ಯಕಾರಣ ಸಂಬಂಧವಿಲ್ಲದ ಕೇವಲ ಅನುಕ್ರಮ, ಅನುಗತಿ [('ಇದಾದಮೇಲೆ ಆಯಿತು' ಎನ್ನುವುದಕ್ಕೂ 'ಇದರಿಂದ ಆಯಿತು' ಎನ್ನುವುದಕ್ಕೂ ಇರುವ ಸಂಬಂಧದಷ್ಟೇ ಅನುಕ್ರಮಕ್ಕೂ ಪರಿಣಾಮಕ್ಕೂ ಸಂಬಂಧವಿದೆ). Is causalty anything beyond invariable s.?]. (ಸಂ.) ಒಂದೇ ರೀತಿಯ ಸ್ವರ ಕಟ್ಟುಳ್ಳ ನುಡಿಗಳು ಬೇರೆ ಬೇರೆ ಸ್ಥಾಯಿಗಳಲ್ಲಿ ಒಂದಾದ ಮೇಲೊಂದರಂತೆ ಬರುವುದು. (ವ್ಯಾ.) S. of tenses ಉಪವಾಕ್ಯದ ಕ್ರಿಯಾಪದದ ಕಾಲ ರೂಪಗಳನ್ನು ಪ್ರಧಾನ ವಾಕ್ಯದ ಕ್ರಿಯಾಪದದ ಕಾಲ ರೂಪಗಳಿಗೆ ಹೊಂದಿಸುವುದು: ಕಾಲ ರೂಪಗಳ ಅನ್ವಯ (I should think you *were* satisfied now). (ಕ್ರೈಸ್ತ ಮತ: ಪ್ರಾರ್ಥನೆಯಲ್ಲಿ) ಸುವಾರ್ತೆಗೆ ಮೊದಲು, ದೈವಸ್ತುತಿಯ ತರುವಾಯ ಹೇಳುವ ಅಥವಾ ಹಾಡುವ ಛಂದೋಬದ್ಧವಾದ ಗದ್ಯ (ಕೃತಿ) (=Prose). **Séquent** ಸೀಕ್ವೆಂಟ್ (ಗು.); **Sequéntial** ಸಿಕ್ವೆನ್'ಷ(ಷ್)ಲ್ (ಗು.); **Sequéntially** (ಕ್ರಿ. ವಿ.); **Sequentiálity** (ನಾ.)

Sequéntes (L) ಸಿಕ್ವೆಂಟೀಸ್, **Sequéntia** (L) ಸಿಕ್ವೆನ್'ಷಿಯ (ಸಂಕ್ಷಿಪ್ತ: Seq. ಅಥವಾ Seqq.) (ಮತ್ತು) ಮುಂದಿನ ಸಾಲುಗಳು, ಮುಂದೆ ಇರುವದು [ಸೂಚನೆಗಳಲ್ಲಿ ಸಾಲಿನ ಮತ್ತು ಪುಟದ ಸಂಖ್ಯೆಗಳಿಗೆ et (=ಮತ್ತು) ಪದದೊಡನೆ ಅಥವಾ ಬಿಡಿಯಾಗಿ ಪ್ರ.]

Sequéster ಸಿಕ್ವೆಸ್ಟರ್ (ಕ್ರಿ.) (ಜನ ಸಂಪರ್ಕವಿಲ್ಲದಂತೆ) ಬೇರೆಯಾಗಿಡು, ಪ್ರತ್ಯೇಕವಾಗಿರಿಸು, ವಿವಿಕ್ತ ಸ್ಥಾನದಲ್ಲಿಡು (S. oneself from the world ಏಕಾಂತವಾಸ ಮಾಡು, ವಿರಕ್ತನಾಗು). [(ಮು., ಭೂ. ಕೃ. ನಲ್ಲಿ) A sequestered life ಏಕಾಂತ —ವಾಸ, ಜೀವನ; A sequestered retreat, cottage ವಿವಿಕ್ತ ಸ್ಥಳ, ಕುಟೀರ]. (ನ್ಯಾ. ಶಾ.) (ಸಾಲಗಾರನ ಆಸ್ತಿ, ಮೊ. ನ್ನು) ತಾತ್ಕಾಲಿಕವಾಗಿ, (ಅದರ ವರಮಾನದಿಂದ) ಸಾಲ ತೀರಿಕೆಯಾಗುವವರೆಗೆ, —ಸ್ವಾಧೀನಪಡಿಸಿಕೊ; (ವಾದಗ್ರಸ್ತವಾದ ಸ್ವತ್ತನ್ನು) ಕಕ್ಷಿಯ ಸ್ವಾಧೀನ ತಪ್ಪಿಸಿ, —ನ್ಯಾಯಸ್ಥಾನದ ಅಧೀನಕ್ಕೆ ತೆಗೆದುಕೊ, ತಟಸ್ಥನ ಅಧೀನಕ್ಕೆ ವಹಿಸು; (ವಿಧವೆಯ ವಿಷಯದಲ್ಲಿ) ಗಂಡನ ಆಸ್ತಿಯ ಸಂಬಂಧಗಳನ್ನು, ಹಕ್ಕುಬಾಧ್ಯತೆಗಳನ್ನು, ತ್ಯಜಿಸಿಬಿಡು. ಜಪ್ತಿ ಮಾಡು, ಮುಟ್ಟುಗೋಲು ಹಾಕು. **Sequéstrable** ಸಿಕ್ವೆಸ್ಟ್ರಬ್'ಲ್, **Sé-** ಸೀ— (ಗು.); **Sequéstrate** ಸಿಕ್ವೆಸ್ಟ್ರೇಟ್, **Sé** ಸೀ— (ಕ್ರಿ. ಸಕ.) (Sequester ಪದದ ನ್ಯಾ. ಶಾ. ದ ಅರ್ಥಗಳಲ್ಲಿ). **Sequestrátion** (ನಾ.);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Séquestrator (ನಾ.) (ನ್ಯಾ. ಶಾ.) (ಸಾಲ ತೀರಿಕೆಯಾಗುವವರೆಗೆ) ಆಸ್ತಿಯನ್ನು ತಾತ್ಕಾಲಿಕವಾಗಿ ಸ್ವಾಧೀನ ತೆಗೆದುಕೊಂಡವನು; (ನ್ಯಾಯಸ್ಥಾನ ನೇಮಿಸಿದ) ಆಸ್ತಿಯ —ರಕ್ಷಕ, ನಿರ್ವಾಹಕ.

Sequéstrum ಸಿಕ್ವೆಸ್ಟ್ರಮ್ (ನಾ., ಬ. ವ. -ra —ಸ್ಟ್ರ) ಜೀವಂತ ಮೂಳೆಯಿಂದ ಬೇರ್ಪಟ್ಟು ಸ್ವಸ್ಥಾನದಲ್ಲಿರುವ ಸತ್ತ ಮೂಳೆಯ ಚೂರು, ಕೊಳೆತ ಎಲುಬು ಚೂರು. **Sequéstral** (ಗು.); **Sequestrótomy** ಸೀಕ್ವೆಸ್ಟ್ರಾಟೊಮಿ (ನಾ.) ಕೊಳೆತ ಎಲುಬನ್ನು ಕತ್ತರಿಸಿ ತೆಗೆಯುವುದು; ಪೂತ್ಯಸ್ಥಿ ನಿರ್ಹರಣ.

Séquin ಸೀಕ್ವಿನ್ (ನಾ.) (ಚರಿತ್ರೆ) ಸು., ೯ ಷಿ., ೪ ಪೆನಿ ಬೆಲೆಯ, ವೆನಿಸಿನ ಒಂದು ಚಿನ್ನದ ನಾಣ್ಯ. ಉಡುಪು, ಮೊ. ಗಳಿಗೆ ಸೇರಿಸಿ ಹೊಲಿಯುವ, ನಾಣ್ಯದಾಕಾರದ, ಬೆಳ್ಳಿ, ಮೊ. ಗಳ ಅಲಂಕಾರದ ಬಟ್ಟು; ಚಮಕಿ ಬಟ್ಟು.

Serác ಸೆರ್ಯಾಕ್ (ನಾ.) ನೀರ್ಗಲ್ಲನದಿ ಕಡಿದಾದ ಇಳಿಜಾರಿನಲ್ಲಿ ಬರುವಾಗ ಒಡೆದು ಆಗುವ, ನೀರ್ಗಲ್ಲನದಿಯ ಆಳವಾದ ಬಿರುಕುಗಳಲ್ಲಿ ಏರ್ಪಡುವ,—ಗೋಪುರಾಕೃತಿಯ ನೀರ್ಗಲ್ಲ ರಾಶಿ; ನೀರ್ಗಲ್ಲು ಗೋಪುರ (ಸಾ., ಬ. ವ. ದಲ್ಲಿ)

Seráglio ಸೆರಾಲ್ಯೋ (ನಾ.) ಸುತ್ತು ಗೋಡೆಯುಳ್ಳ ಅರಮನೆ; (ಚರಿತ್ರೆ) (ಮು., ಹಿಂದೆ ಕಾನ್‌ಸ್ಟ್ಯಾಂಟಿನೋಪಲಿನಲ್ಲಿ ಸರ್ಕಾರದ ಕಚೇರಿ, ಮೊ. ಗಳನ್ನೊಳಗೊಂಡ) ಟರ್ಕಿ ಸುಲ್ತಾನನ ಅರಮನೆ. ರಾಣಿವಾಸ; ಜನಾನಾ: ಹೆಂಡವಾಸ (ಗ್ರಾಂ.)

Seraí ಸೆರಾಇ, —ರೈ, —ರೇ, **Serái** —ರಾಇ (ನಾ.) = Caravanseral.

Seráng ಸರ್ಯಾಂಗ್ (ನಾ.) (ಆಂ. ಇಂ.) ಈಸ್ಟ್ ಇಂಡಿಯದ ಕಲಾಸಿಗಳ ದೇಶೀಯ ನಾಯಕ.

Séraph ಸೆರಫ್ (ನಾ.; ಬ. ವ. -phim —ಫಿಮ್, -phs —ಫ್ಸ್) ಸ್ವರ್ಗ ಲೋಕದವನು; ದೇವತೆ; ಒಂಬತ್ತು ದೇವದೂತ ವರ್ಗಗಳಲ್ಲಿ (ದೈವ ಪ್ರೇಮೋದ್ದೀಪಿತರೂ ತೇಜೋಯುತರೂ ಉತ್ಸಾಹಪೂರಿತರೂ ಪರಿಶುದ್ಧರೂ ಇರುವ) ಮೊದಲನೆಯ ವರ್ಗದ ದೇವದೂತ; ಜ್ಯೇಷ್ಠ ವರ್ಗದ ದೇವದೂತ. [Order of the Seraphim (ಸ್ವೀಡನ್ನಿನಲ್ಲಿ) ಒಂದು 'ನೈಟ್' ಮಂಡಲ]. **Seráphic** ಸೆರ್ಯಾಫಿಕ್ (ಗು.) ಸೆರಫಿಮ್ ದೇವದೂತರ; —ದೂತರಿಗೆ ಸಂಬಂಧಿಸಿದ; ಸೆರಫನ್ನು ಹೋಲುವ; ಲೋಕೋತ್ತರ; ಸ್ವರ್ಗಯೋಗ್ಯ; ದಿವ್ಯ (The S. Doctor = St Bonaventura ಎಂಬ ದೊಡ್ಡ ಪಂಡಿತ ಸಂನ್ಯಾಸಿ. S. Father = St Francis of Assissi). **Seráphically** (ಕ್ರಿ. ವಿ.)

Seraphína ಸೆರಫೀನ, **Séraphine** ಸೆರಫೀನ್ (ನಾ.) ಈಗಿನ ಹಾರ್ಮೋನಿಯಂ ವಾದ್ಯದ ಮೊದಲ ರೂಪ.

Seraskiér ಸೆರ್ಯಾಸ್‌ಕೀಯರ್ (ನಾ.) ತುರ್ಕಿ ದೇಶದ —(ಪ್ರಧಾನ) ಸೈನ್ಯಾಧಿಪತಿ, ಯುದ್ಧ ಮಂತ್ರಿ.

Serb ಸರ್ಬ್ (ನಾ.), **Sérbia(n)** ಸರ್ಬಿಯ(ನ್) (ಗು., ನಾ.) ಸರ್ಬಿಯ ದೇಶದ (ಭಾಷೆ, ನಿವಾಸಿ). **Serbo-** (ಸ. ಪೂ. ಪ.)

Serbónian bog ಸರ್ಬೋನಿಯನ್ ಬಾಗ್ (ನಾ.) ನೈಲ್ ನದೀ ಮುಖಜ ಭೂಮಿಗೂ ಸೂಯೆಸ್ ಭೂಕಂಠಕ್ಕೂ ನಡುವೆ ಮೊದಲು ಇದ್ದ ಕಳ್ಳ ಉಸುಬು ನೆಲ. (ರೂಪ.) ಬಿಡುಗಡೆ ಹೊಂದಲು, ಪಾರಾಗಲು, ಕಷ್ಟವಾದ—ಇಕ್ಕಟ್ಟು, ಬಿಕ್ಕಟ್ಟು.

Sere[1], **Sear**[1] ನೋಡಿ.

Sere[2], **Sear**[2] ಸಿಯರ್ (ನಾ.) ಬಂದೂಕು ಕುದುರೆಯನ್ನು ಅರ್ಧ ಅಥವಾ ಪೂರ್ತಿ ಎಳೆದುಹಿಡಿದಿರುವ ಕೊಕ್ಕೆ; ಚಾಪು ತಡೆ.

Serein (F) ಸರ್ರ್ಯಾನ್ (ನಾ.) (ಉಷ್ಣವಲಯ ಪ್ರದೇಶದಲ್ಲಿ) ಮೋಡವಿಲ್ಲದ ಆಕಾಶದಿಂದ ಬೀಳುವ ಸೋನೆ ಮಳೆ.

Serenáde ಸೆರಿ(ರೆ)ನೇಡ್ (ನಾ., ಕ್ರಿ. ಸಕ.) (ಮು., ತನ್ನ ಇನಿಯಳ ಕಿಟಕಿಯ ಕೆಳಗೆ ನಿಂತು ಇನಿಯನು ಸಂಜೆ ಹೊತ್ತಿನಲ್ಲಿ ಹಾಡುವ ಅಥವಾ ಬಾಜಿಸುವ) ಪ್ರೇಮ ಗೀತ. = Serenata. (ಕ್ರಿ.) (ಒಬ್ಬಳಿಗೆ) ಪ್ರೇಮ ಗೀತ ಹಾಡು, —ಬಾಜಿಸು. **Serenáder** (ನಾ.)

Serenáta ಸೆರೆನಾಟ (ನಾ.) (ಸಂ.) ಹಳ್ಳಿಯ ಜೀವನದ ವಸ್ತುವಿರುವ, ಬಯಲಿನಲ್ಲಿ ಆಡುವ, (ಭಾವ) ಗೀತ ನಾಟಕ; ಬಯಲಿನ ಗೀತ ನಾಟಕ. ಸರಳ ಸಂಗೀತ ಮೇಳ, ವಾದ್ಯ ಮೇಳ.

Seréne ಸಿ(ಸೆ)ರೀನ್ (ಗು., ನಾ., ಕ್ರಿ. ಸಕ.) (ಆಕಾಶ, ಗಾಳಿ, ಮೊ. ವು) ನಿರ್ಮಲವೂ ಶಾಂತವೂ ಆದ; (ಸಮುದ್ರ, ಮೊ. ವು) ಅಕ್ಷುಬ್ಧ, ಪ್ರಶಾಂತ. ಪ್ರಸನ್ನ, ನಿರಾಕುಲ, ನಿರುದ್ವೇಗ, ಶಾಂತ ಮನಸ್ಕ, ಉಪಶಾಂತ [A s. temper, look, life. (ಅಸಂ.) All s. ಎಲ್ಲಾ ಸರಿಯಾಗಿದೆ. His, Her, Their, Your, S. Highness(es) (ಸಂಕ್ಷಿಪ್ತ: H.S.H., T.S.H.) (ಇಂಗ್ಲೆಂಡೇತರ ಯೂರೋಪಿನ ಕೆಲವು ದೊರೆಗಳ ಒಕ್ಕಣೆಗಳು: ಪ್ರಶಾಂತ ಪ್ರಭುಗಳು)]. (ನಾ.) (ಆಕಾಶ, ಸಮುದ್ರ, ಮೊ. ಗಳ) ಪ್ರಶಾಂತ ವಿಸ್ತಾರ. (ಕ್ರಿ.; ಕಾವ್ಯ) ಪ್ರಶಾಂತಮಾಡು. **Serénely** (ಕ್ರಿ. ವಿ.); **Serénity** (ನಾ.) ಪ್ರಶಾಂತತೆ, ಪ್ರಸನ್ನತೆ.

Serf ಸರ್ಫ್ (ನಾ.) (ಊಳಿಗಮಾನ್ಯದ) ಜೀತದ ಆಳು; ಜಮೀನಿನಲ್ಲಿ ದುಡಿಯುವ ಮತ್ತು ಧಣಿ ಜಮೀನನ್ನು ಮಾರಿದಾಗ ಜಮೀನಿನೊಡನೆ ತಾನೂ ಹೊಸ ಧಣಿಗೆ ಸೇರಿಹೋಗುವ ಜೀತಗಾರ; ಮಾರಿಕೆಯಾಗುವ ಜಮೀನು ಜೀತಗಾರ (Slave ನೋಡಿ); ಗುಲಾಮ ಚಾಕರಿ ಮಾಡುವವನು; ದುಡಿತದ ತೊತ್ತು. **Sérfage** (ನಾ.), **Sérfdom** (ನಾ.) ಜಮೀನು —ಜೀತ, ಗುಲಾಮಗಿರಿ. **Sérfhood** (ನಾ.) ಜಮೀನು ಜೀತಗಾರರು; —ಗಾರರ ಪಂಗಡ.

Serge ಸರ್ಜ್ (ನಾ.) ಬಾಳಿಕೆ ಬರುವ ಒಂದು ಬಗೆಯ ಉಣ್ಣೆ ಬಟ್ಟೆ; ಬನಾತು ಬಟ್ಟೆ; 'ಸರ್ಜ್' ಬಟ್ಟೆ [Silk s. (ಸರ್ಜು ಬಟ್ಟೆಯಂತೆ ಕಾಣುವ) ರೇಷ್ಮೆಯ ಅಸ್ತರಿ ಬಟ್ಟೆ]. **Sergétte** ಸರ್ಜೆಟ್ (ನಾ.) ತೆಳು 'ಸರ್ಜ್' ಬಟ್ಟೆ.

Sérgeant, -j- ಸಾರ್ಜಂಟ್, ಸಾರ್ಜ್‌ಅಂಟ್ (ನಾ.) (ಚರಿತ್ರೆ) ಮೇಲು ದರ್ಜೆಯ —ವಕೀಲ, ನ್ಯಾಯವಾದಿ (-j-). (ಸೈನಿಕ; -g-; ಸಂಕ್ಷಿಪ್ತ: Serg.) 'ಕಾರ್ಪೊರಲ್' ಅಧಿಕಾರಿಗೆ ಮೇಲ್ಪಟ್ಟ, ನಾಸನ್ನದಿನ ಒಬ್ಬ ಅಧಿಕಾರಿ (ಕವಾಯತು ಕಲಿಸುವುದು, ಸಣ್ಣ ತುಕಡಿಯ ನಾಯಕನಾಗಿರುವುದು, ಮೊ. ಕೆಲಸಗಳುಳ್ಳ, ದಳಕ್ಕೆ ನೇಮಕರಾದ ನಾಲ್ವರಲ್ಲೊಬ್ಬ ಸಣ್ಣ ಅಧಿಕಾರಿ); ಸಾರ್ಜಂಟು [S. major *or* regimental s. m. (ಸಂಕ್ಷಿಪ್ತ: R.S.M.) ದಳಕ್ಕೆ ಸಂಬಂಧಪಟ್ಟ, ಸನ್ನದು ಪಡೆದ ರೇಖನ ಸಹಾಯಕ. Company s. major (ಸಂಕ್ಷಿಪ್ತ: C.S.M.) ದಳದ ಪ್ರಧಾನ ನಾಸನ್ನದು ಅಧಿಕಾರಿ. Lance-s. ತನ್ನ ಸಂಬಳದ ಮೇರೆಯ ಸಾರ್ಜಂಟ್ ಕೆಲಸದ ಬದಲು ನೋಡುವ 'ಕಾರ್ಪೊರಲ್']. ಪ್ಯಾದೆಗೂ ಇನ್‌ಸ್ಪೆಕ್ಟರಿಗೂ ನಡುವಣ ದರ್ಜೆಯ ಪೊಲೀಸ್ ಅಧಿಕಾರಿ. [S.-at-arms ಶಿಸ್ತುಪಾಲನಾದಿ ಕರ್ತವ್ಯಗಳುಳ್ಳ, ನ್ಯಾಯಸ್ಥಾನದ, ಪಾರ್ಲಿಮೆಂಟಿನ, ಅಥವಾ (ಲಂಡನ್) ನಗರದ ಕೆಲವರು ಅಧಿಕಾರಿಗಳು. Common s. ಲಂಡನ್ ನಗರದ ಒಬ್ಬ ನ್ಯಾಯಾಧಿಕಾರಿ. S.-fish ಒಂದು ಜಾತಿಯ ಮೀನು (ಸಾರ್ಜಂಟುಗಳ ಅಂಗಿಯ ತೋಳಿನ ಮೇಲಿರುವ ಬಿರುದುಪಟ್ಟಿಗಳಂಥ ಪಕ್ಕ ಪಟ್ಟೆಗಳುಳ್ಳ ಕಾರಣದಿಂದ)]. **Sérgeantship** (ನಾ.)

Sergétte. Serge ನೋಡಿ.

Sérial, etc., Sériate, etc., Seriátim. Series ನೋಡಿ.

Séric ಸೆರಿಕ್, ಸೀ— (ಗು.) (ಅಲಂ.) ಚೀಣೀಯರ: ಚೀನಾದ. ರೇಷ್ಮೆಯ.

Serícious ಸಿರಿಷಸ್, —ಷಿಅಸ್ (ಗು.) (ಸ. 'ವಿ., ಪ್ರಾ. ವಿ.) ರೇಷ್ಮೆಯ(ಂಥ) ಮೇಲ್ಮೈಯುಳ್ಳ; ರೇಷ್ಮೆಯ(ಂಥ); ಮೃದುವಾಗಿಯೂ ಹೊಳಪಾಗಿಯೂ ಇರುವ; ರೇಷ್ಮೆಯಂಥ (ನುಣುಪಿನ ಹೊಳಪುಳ್ಳ) —ತುಪ್ಪಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಚ್ಚಿದ, ತುಪ್ಪುಳುಗೂಡಿದ. **Séri(ci)culture** ಸೆರಿ(ಸಿ)ಕಲ್‌ಟ್ಯುರ್, —ಚರ್ (ನಾ.) ರೇಷ್ಮೆ ಹುಳು ಸಾಕುವುದು, ಕಚ್ಚಾ ರೇಷ್ಮೆಯ ತಯಾರಿಕೆ; ರೇಷ್ಮೆ ವ್ಯವಸಾಯ. **Seri(ci)cúltural** (ಗು.); **Seri(ci)cúlturist** (ನಾ.)

Séri(ci)culture, etc. Sericious ನೋಡಿ.

Séries ಸೀರೀಸ್, ಸೀರಿಈಸ್ (ನಾ.) (ಬ. ವ. ಅದೇ) (ಒಂದೇ ಬಗೆಯ ಮತ್ತು ಪರಸ್ಪರ ಸಮಾನ ಸಂಬಂಧವುಳ್ಳ ವಸ್ತುಗಳ) ಸಾಲು, ಪರಂಪರೆ, ಸರಪಣಿ, ಪಂಕ್ತಿ, ಮಾಲೆ, ಶ್ರೇಣಿ, ಸರಣಿ, ಆವಳಿ (A s. of kings, misfortunes. In s. ಅನುಕ್ರಮದಲ್ಲಿ, ಅನುಕ್ರಮವಾಗಿ. S. of stamps, coins, etc. ಒಬ್ಬನ ಆಳಿಕೆಯಲ್ಲಿ, ಅಥವಾ ಒಂದೇ ಕಾಲದಲ್ಲಿ ಛಾಪಿಸಿದ ಬೇರೆ ಬೇರೆ ವರ್ಗದ ಅಂಚೆಯ ತರೆಟೀಟಗಳು, ನಾಣ್ಯಗಳು, ಮೊ. ವು. The whole s. of reform acts ಸುಧಾರಣಾ ಶಾಸನಗಳ ಪೂರ್ಣ ಪರಂಪರೆ). (ನಿಯತ ಕಾಲಿಕ ಪತ್ರಿಕೆಯ ಒಂದು ಸಂಪುಟದ) ಅನುಕ್ರಮ ಸಂಚಿಕೆಗಳು; (ಒಂದು ವಿಷಯದ ಮೇಲಿನ ಅಥವಾ ಒಬ್ಬ ಲೇಖಕನ) ಲೇಖನಮಾಲೆ (First, second, s.). ಒಂದೇ ಆಕಾರ, ಗಾತ್ರ ಮತ್ತು ಮಾಟಗಳುಳ್ಳ ಅಥವಾ ಒಂದೇ ಶಿರನಾಮೆಯಲ್ಲಿ (ಹೆಸರಿನಲ್ಲಿ) ಹೊರಡುವ ಅಥವಾ ಒಬ್ಬ ಪ್ರಧಾನ ಸಂಪಾದಕನ ಮೇಲ್ವಿಚಾರಣೆಯಲ್ಲಿ ಪ್ರಕಟವಾಗುವ ಸ್ವತಂತ್ರ ಗ್ರಂಥಗಳ ತಂಡ: ಗ್ರಂಥಮಾಲೆ (The Men-of-Letters s.). (ಭೂ. ವಿ.) ಪರಸ್ಪರ ಸಾಮಾನ್ಯ ಲಕ್ಷಣವುಳ್ಳ ಸ್ತರಗಳ ಶ್ರೇಣಿ. (ರ. ವಿ.) ಸಾಮಾನ್ಯ ಗುಣಗಳುಳ್ಳ ಮೂಲಧಾತುಗಳ ವರ್ಗ, ಶ್ರೇಣಿ; ಸಾಮಾನ್ಯ ಘಟಕವುಳ್ಳ ಸಂಯುಕ್ತಗಳ ವರ್ಗ. (ಗಣಿತ) ಒಂದು ಗೊತ್ತಾದ ರೀತಿಯಲ್ಲಿ ಏರುತ್ತ ಹೋಗುವ ಅಥವಾ ಒಂದು ಸಾಮಾನ್ಯ ಸಂಬಂಧದಿಂದ ನಿರ್ಧರವಾಗುವ ಬೇರೆ ಬೇರೆ ಬೆಲೆಗಳುಳ್ಳ ಸಂಖ್ಯೆಗಳ ತಂಡ: ಸಂಖ್ಯಾ ಶ್ರೇಣಿ [Arithmetical, Geometrical, s. = Arithmetical, Geometrical, progression (Arithmetic, Geometry ನೋಡಿ)]. (ವಿದ್ಯುತ್) ವಿದ್ಯುತ್ಕೋಶ ಶ್ರೇಣಿ (ಒಂದು ಕೋಶದ ಧನ ಧ್ರುವವನ್ನು ಮುಂದಿನ ಕೋಶದ ಋಣ ಧ್ರುವದೊಡನೆ ಕ್ರಮವಾಗಿ ಸಂಬಂಧಿಸಿ ಏರ್ಪಡಿಸಿದ್ದು). (ಪ್ರಾ. ವಿ.) ಪರಸ್ಪರ ಸಂಬಂಧವುಳ್ಳ ಹಲವು ಜಾತಿಗಳು, ವಂಶಗಳು; ವಂಶಾವಳಿ (Group ಶಬ್ದದಂತೆ ಅನಿರ್ದಿಷ್ಟವಾಗಿ ಪ್ರ.). **Sérial** (ಗು., ನಾ.) ಶ್ರೇಣಿಯ; ಶ್ರೇಣಿಯಲ್ಲಿರುವ; ಶ್ರೇಣಿಗೆ —ಸೇರಿರುವ, ಸೇರಿದ; ಅನುಕ್ರಮಿಕ. (ಕಥೆ, ಮೊ. ವು) ಅನುಕ್ರಮ ಭಾಗಗಳಲ್ಲಿ, ಸಂಚಿಕೆಗಳಲ್ಲಿ, ಪ್ರಕಟವಾಗುವ (S. rights ಹೀಗೆ ಪ್ರಕಟವಾಗುವ ಕಥೆ, ಮೊ. ಗಳ ಗ್ರಂಥ ಸ್ವಾಮ್ಯ: ಮಾಲಾ ಗ್ರಂಥ ಸ್ವಾಮ್ಯ). (ಪ್ರಕಟನೆ) ನಿಯತ ಕಾಲಿಕ. (ನಾ.) ಅನುಕ್ರಮ ಭಾಗಗಳಲ್ಲಿ, ಸಂಚಿಕೆಗಳಲ್ಲಿ, —ಪ್ರಕಟವಾಗುವ ಕಥೆ, ಗ್ರಂಥ, ಪತ್ರಿಕೆ. **Seriálity** (ನಾ.) ಅನುಕ್ರಮ —ವ್ಯವಸ್ಥೆ, ಏರ್ಪಾಟು. **Sérialist** (ನಾ.); **Sérially** (ಕ್ರಿ. ವಿ.); **Sériate**[1] ಸೀರಿಯೆಟ್, **-ated** —ಯೇಟೆಡ್ (ಗು.) ಅನುಕ್ರಮವಾಗಿರುವ, ಒಂದು ಶ್ರೇಣಿಯಾಗಿರುವ; ಕ್ರಮವಾಗಿ ಜೋಡಿಸಿದ. **Sériate**[2] ಸೀರಿಯೇಟ್ (ಕ್ರಿ. ಸಕ.) ಅನುಕ್ರಮವಾಗಿ —ಇಡು, ಅಣಿಮಾಡು; ಕ್ರಮದಲ್ಲಿರಿಸು. **Seriátion** (ನಾ.), **Seriátim** ಸೀ(ಸೆ)ರಿಯೇಟಿಮ್ (ಕ್ರಿ. ವಿ.) ಒಂದೊಂದು ಅಂಶವಾಗಿ; ಕ್ರಮವಾಗಿ ಒಂದು ವಿಷಯವಾದಮೇಲೆ ಮತ್ತೊಂದು ವಿಷಯದಂತೆ; ಕ್ರಮಶಃ; ಪಾಳಿಯಾಗಿ, ಪರಿವಿಡಿಯಾಗಿ; ಯಥಾಕ್ರಮವಾಗಿ (Consider, examine, discuss, take, s. ಒಂದೊಂದು ಅಂಶವಾಗಿ, ಕ್ರಮಶಃ, —ಪರ್ಯಾಲೋಚಿಸು, ಪರೀಕ್ಷಿಸು, ಚರ್ಚಿಸು, ತೆಗೆದುಕೊ)

Sérif, (ಈಗ ವಿರ. ಪ್ರ.) **Cériph** ಸೆರಿಫ್ (ನಾ.) (ಮುದ್ರಣಾಕ್ಷರ) ಅಕ್ಷರದ ಮೇಲೆ, ಕೆಳಗೆ, ರೇಖಾ ವೈಖರಿಯ ಅಡ್ಡಗೀಟು [ಮು., Sanserif (ಇಂಥ ಅಡ್ಡಗೀಟುಗಳಿಲ್ಲದ) ಎಂಬಲ್ಲಿ (ಅಡ್ಡಗೀಟುಗಳಿರುವುದಕ್ಕೆ T, ಇಲ್ಲದುದಕ್ಕೆ ⊥)]

Sérin ಸೆರಿನ್ (ನಾ.) 'ಕನೇರಿ' ಜಾತಿಗೆ ಸೇರಿದ ಮಧ್ಯ ಯೂರೋಪಿನ ಒಂದು ಹಾಡು ಹಕ್ಕಿ.

Serinétte ಸೆರಿನೆಟ್ (ನಾ.) ಹಾಡು ಹಕ್ಕಿಗಳಿಗೆ ಶಿಕ್ಷಣ ಕೊಡುವ ಒಂದು ವಾದ್ಯ.

Serínga ಸೆರಿಂಗ (ನಾ.) ಬ್ರಸಿಲ್ ದೇಶದ ರಬ್ಬರ್ ಮರದ ಜಾತಿಗಳು.

Serio-cómic ಸೀರಿಯೊಕಾಮಿಕ್ (ಗು.) ಗಂಭೀರ ಮತ್ತು ಹಾಸ್ಯ ಮಿಳಿತ; ಗಂಭೀರ ಹಾಸ್ಯಗಳ; ಹಾಸ್ಯದ ಉದ್ದೇಶವಿದ್ದು ಗಾಂಭೀರ್ಯದ ತೋರಿಕೆಯುಳ್ಳ; ಗಂಭೀರ ಉದ್ದೇಶವಿದ್ದು ಹಾಸ್ಯದ ತೋರಿಕೆಯುಳ್ಳ. **Serio-cómically** (ಕ್ರಿ. ವಿ.)

Serióso (It.) ಸೆರ್ಯೋಸೊ (ಸಂ. ಸೂಚನೆ) ಗಂಭೀರವಾಗಿ.

Sérious ಸೀರಿಯಸ್ (ಗು.) ವಿಚಾರಶೀಲ, ಆಲೋಚನಪರ; ಶ್ರದ್ಧಾಯುಕ್ತ; ಗಂಭೀರ(ಮುದ್ರೆಯ); ಘನವಾದ; ಹೊಣೆಯುಳ್ಳ, ಜವಾಬ್ದಾರಿಯ (ಬುದ್ಧಿಯ); ಹುಡುಗಾಟಿಕೆಯ(ದ)ಲ್ಲದ; ಅಸಡ್ಡೆಯಿಲ್ಲದ, ಎಚ್ಚರಗೇಡಿತನದ್ದಲ್ಲದ (Has a s. look, air. S. politician ತನ್ನ ಶಕ್ತಿ ಸಾಮರ್ಥ್ಯಗಳೆಲ್ಲವನ್ನೂ ರಾಜಕೀಯಕ್ಕೆ ಉಪಯೋಗಿಸುವವನು: ಶ್ರದ್ಧಾವಂತನಾದ ರಾಜಕೀಯ ವ್ಯವಹಾರಿ. S. thought ಸಾವಧಾನದ, ಘನ, ಗಂಭೀರ, —ಆಲೋಚನೆ). ಮುಖ್ಯವಾದ, ಮಹತ್ತ್ವದ; ಗುರುತರ; ಆಲೋಚನಾರ್ಹ; ಕಳವಳಕ್ಕೆ, ಚಿಂತೆಗೆ, —ಕಾರಣವಾದ; ಅಪಾಯ ತರುವ; ಬಲವಾದ; ಪ್ರಬಲ; ಉಪೇಕ್ಷಿಸಲಾಗದ; ಲಘುವಲ್ಲದ (This is a s. matter. S. illness, danger, defeat). ಮನಃಪೂರ್ವಕವಾದ; ವ್ಯಂಗ್ಯವಲ್ಲದ; ಪರಿಹಾಸ, ಹುಡುಗಾಟ, —ಅಲ್ಲದ; ಶ್ರದ್ಧಾಯುಕ್ತವಾದ (Are you s.? ನಿಜವೋ? ನಿಜವಾದ ಉದ್ದೇಶದಿಂದ ಹೇಳುತ್ತೀಯೋ? ತಮಾಷೆಯಲ್ಲವೋ? Made a s. attempt ಮನಃಪೂರ್ವಕವಾದ, ಬಲವಾದ, —ಪ್ರಯತ್ನ ಮಾಡಿದನು). (ಮತ)ಧರ್ಮ ಸಂಬಂಧವಾದ; ನೀತಿ ಸಂಬಂಧವಾದ; ಧಾರ್ಮಿಕ; ನೈತಿಕ; ಪಾರಮಾರ್ಥಿಕ, ಆಮುಷ್ಮಿಕ (S. subjects). (ಈಗ ಮು., ಹಾಸ್ಯ ಪ್ರ.) (ಮತ) ಧರ್ಮ ಶ್ರದ್ಧೆಯುಳ್ಳ, ಮೋಕ್ಷಚಿಂತಾನಿಷ್ಠ, ಮೋಕ್ಷಾಕಾಂಕ್ಷಿ. **Sériously** (ಕ್ರಿ. ವಿ.) (ಮು., ತಾನು ಮುಂದೆ ಹೇಳುವ ವಾಕ್ಯಕ್ಕೆ ಪೀಠಿಕೆಯಾಗಿ ಮತ್ತು ವ್ಯಂಗ್ಯ, ಮೊ. ವು ಸಾಕೆಂದೂ, ಹುಡುಗಾಟಿಕೆಯ ವಿಷಯವಲ್ಲವೆಂದೂ ಅರ್ಥಗರ್ಭಿತವಾಗಿ). **Sériousness** (ನಾ.)

Sériph = Serif.

Sérjeant = Sergeant.

Sérmon ಸರ್ಮನ್ (ನಾ., ಕ್ರಿ. ಸಕ.) (ಕ್ರೈಸ್ತ ದೇವಾಲಯದಲ್ಲಿ ಉಪದೇಶ ವೇದಿಕೆಯಿಂದ ಮಾಡಿದ, ಆಶು ಭಾಷಣ ರೂಪದ ಅಥವಾ ಲೇಖನ ರೂಪದ) ಧರ್ಮೋಪದೇಶ, ಧರ್ಮ ಪ್ರವಚನ, ಧರ್ಮಬೋಧೆ; ಸ್ಥಳಾಂತರದಲ್ಲಿ ಮಾಡಿದ ಅಥವಾ ಮುದ್ರಿಸಿ ಪ್ರಕಟಿಸಿರುವ ಇಂಥ ಧರ್ಮಬೋಧೆ, ನೀತಿಬೋಧೆ; ಧರ್ಮೋಪನ್ಯಾಸ (= Lay s.); [S. on the Mount (ಬೈಬಲ್ಲಿನಲ್ಲಿ ಹೇಳಿರುವ) ಕ್ರಿಸ್ತನ ಧರ್ಮೋಪದೇಶ (ಸಿನ್ನೈ ಬೆಟ್ಟದ ಮೇಲೆ ಮಾಡಿದ್ದು)]. (ಸ್ವಾಭಾವಿಕ ವಸ್ತುಗಳಿಂದ ಸೂಚಿತವಾಗುವ) ನೀತ್ಯುಪದೇಶ, ನೀತಿ (ವಿಮರ್ಶೆ) (ಮು., Sermons in stones). (ತಪ್ಪು ಹಿಡಿದು) ಬುದ್ಧಿವಾದ, ವಾಗ್ದಂಡನೆ. (ಕ್ರಿ.) ಬುದ್ಧಿವಾದ ಹೇಳು, ವಾಗ್ದಂಡನೆ ಮಾಡು. **Sérmonet** (ನಾ.), **Sermonétte** (ನಾ.) ಸಣ್ಣ, ಚಿಕ್ಕ, —ಧರ್ಮೋಪದೇಶ, ಬುದ್ಧಿವಾದ. **Sérmonize** (ಕ್ರಿ.); **Sérmonizer** (ನಾ.)

Sero- ಸೀರೊ— (ಸ. ಪೂ. ಪ.) ದುಗ್ಧರಸ—; ರಸಿಕೆ—. **S.-púrulent** ರಸಿಕೆಯ ಮತ್ತು ಕೀವಿನ. **S.-sanguínolent** ರಸಿಕೆಯ ಮತ್ತು ರಕ್ತದ.

Sérotine ಸೆರೊಟೈನ್ (ನಾ.) ಚೆಸ್‌ನಟ್ ಬಣ್ಣದ ಯೂರೋಪಿನ ಒಂದು ಬಾವಲಿ ಹಕ್ಕಿ.

Serótinous ಸಿರಾಟೈನಸ್ (ಗು.) (ಸ. ವಿ.) ಕಾಲ ಮೀರಿ —ತಲೆದೋರುವ, ಹುಟ್ಟುವ, ಹೂವು ಬಿಡುವ.

Sérous. Serum ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sérpent ಸರ್‌ಪೆಂಟ್ (ನಾ.) (ಸಾ., ದೊಡ್ಡಜಾತಿಯ) ಹಾವು ; ಸರ್ಪ (ಅಲಂ. ಪ್ರ. ದಲ್ಲಿ Snake ಪದಕ್ಕಿಂತ ಹೆಚ್ಚು ರೂಢಿ) [The, the old, S. ಸೈತಾನ (ಬೈಬಲ್ ಪ್ರಯೋಗದಿಂದ)]. (ರೂಪ.) ಮರ್ಮಭೇದಕ ; ರಹಸ್ಯ—; ದ್ರೋಹಿ; ಮೋಸಗಾರ, ತಂತ್ರಿ, ವಿಶ್ವಾಸ ಘಾತುಕ (ಮು., ನೀಚ ಉದ್ದೇಶಗಳಿಂದ ಆಪ್ತನಂತೆ ಉಪಾಯಮಾಡಿ ಸೇರಿಕೊಳ್ಳುವವನು). (The S. ಉತ್ತರ ದಿಕ್ಕಿನ ಒಂದು ನಕ್ಷತ್ರಪುಂಜ: ಭುಜಂಗ ರಾಶಿ). (ಬಲವಾದ ನಾದ ಕೊಡುವ, ಈಗ ಬಳಕೆಯಲ್ಲಿಲ್ಲದ) ಹಲವು ಬಾಗುಗಳುಳ್ಳ ಮರದ ಒಂದು ಗಾಳಿವಾದ್ಯ. [Pharaoh's s. (Pharaoh ನೋಡಿ). S.-charmer ಹಾವಾಡಿಗ (ಮು., ನಾಗಸ್ವರದಿಂದ ಹಾವುಗಳನ್ನು ವಶಪಡಿಸಿಕೊಳ್ಳುವವನು). S.-eater = Secretary-bird (Secretary ನೋಡಿ). S.-grass ಆಲ್ಪ್ಸ್ ಪರ್ವತದ ಒಂದು ಸಸ್ಯ. S. lizard ಹಾವಿನಾಕಾರದ ಹಲ್ಲಿ. S.'s-tongue ಒಂದು ಸಣ್ಣ ಜಾತಿಯ ಜರೀ ಗಿಡ]. **Serpéntiform** (ಗು.) ಹಾವಿನಾಕಾರದ. **Sérpent-like** (ಗು.) ಹಾವಿನಂಥ. **Sérpentine** —ಪೆಂಟೈನ್ (ಗು., ನಾ., ಕ್ರಿ. ಅಕ.) ಹಾವಿನ(ಂಥ) (ರೂಪ. ಸಹ). (ಸರ್ಪದ ಗತಿಯಂತೆ) ತಿರುಪು ಮುರಿವುಗಳುಳ್ಳ; ಸುರುಳಿಯಾದ; ಸಿಂಬಿಯಾಕಾರದ; (ಹಾವಿನಂತೆ) ಡೊಂಕು ಡೊಂಕಾದ; ತಂತ್ರಿ(ಯಾದ), ಕಪಟಿ(ಯಾದ), ಕುಟಿಲ(ಬುದ್ಧಿಯ), ವಂಚಕ [S. windings (ನದಿ, ರಸ್ತೆ, ಮೊ. ಗಳ ವಿಷಯದಲ್ಲಿ, ಅಥವಾ ವ್ಯಂಗ್ಯದ ವಿಷಯದಲ್ಲಿ) ತಿರುಪು ಮುರಿವುಗಳು, ಡೊಂಕು ಬಂಕುಗಳು. S. motion. S. wisdom (ಬೈಬಲ್ ಪ್ರ. ದಿಂದ) ಜಾಗರೂಕ ವಿವೇಕ; ಆಳವಾದ ವಿವೇಚನಾಶಕ್ತಿ. S. dance ವಿಶೇಷ ವಸ್ತ್ರವಿನ್ಯಾಸದಿಂದ ಉಜ್ಜ್ವಲಗೊಳಿಸಿದ, ತಿರುಪು ಮುರಿವು ಚಲನೆಗಳ ಒಂದು ಬಗೆಯ ನೃತ್ಯ: ಹಾವು ಕುಣಿತ; ಸರ್ಪನೃತ್ಯ. S. verse ಪಂಕ್ತಿಯ ಆದ್ಯಂತ ಪದಗಳು ಒಂದೇ ಆಗಿರುವ ಪದ್ಯ: ಫಣಿಪದ್ಯ. The S. ಲಂಡನ್ನಿನ ಹೈಡ್‌ಪಾರ್ಕ್ ಎಂಬ ಉದ್ಯಾನದಲ್ಲಿ ಒಂದು ಸರ್ಪಾಕಾರದ ಸರಸ್ಸು]. (ನಾ.) ಕೆಲವು ವೇಳೆ ಹಾವಿನ ಚರ್ಮದಂತೆ ಮಚ್ಚೆಗಳುಳ್ಳ, ಬಹಳ ಹೊಳಪು ಪಡೆಯುವ ಮತ್ತು ಅಲಂಕಾರವಾಗಿ ಉಪಯೋಗಿಸುವ, ಜಲಯುಕ್ತ ಮ್ಯಾಗ್ನೀಸಿಯಂ ಸಿಲಿಕೇಟುಗಳಾಗಿರುವ, ದಟ್ಟ ಹಸುರಿನ ಅಥವಾ ಇತರ ಬಣ್ಣದ ಮೃದು ಶಿಲೆ: ಸರ್ಪಶಿಲೆ. (ನೀರ್ಗಲ್ಲ ಜಾರಾಟ: ದಿಕ್ಕು ಬದಲಾಯಿಸುವಾಗ ಪಾದುಕೆಯಿಂದಾದ) ತರಂಗಾಕಾರದ ಡೊಂಕುಬಂಕ ಗೆರೆ. (ಕ್ರಿ.) ಡೊಂಕು ಡೊಂಕಾಗಿ, ಸರ್ಪಗತಿಯಲ್ಲಿ, —ಚಲಿಸು.

Serpíginous ಸರ್ಪಿಜಿನಸ್ (ಗು.) (ರೋಗ ನಿದಾನ) 'ಹರ್ಪೀಸ್' (Herpes) ಎಂಬ ಚರ್ಮರೋಗ ತಗುಲಿದ; ಹುಳುಕಡ್ಡಿ, ಗಜಕರ್ಣ, ಇಸಬು, —ತಗುಲಿದ. (ಚರ್ಮರೋಗದ ವಿಷಯದಲ್ಲಿ) ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹರಿಯುವ, ಹರಡುವ.

Sérpula ಸರ್‌ಪ್ಯುಲ (ನಾ.; ಬ. ವ. -lae —ಲೀ) ಒಂದು ಬಗೆಯ ಕಡಲ ಹುಳು.

Sérra ಸೆರ (ನಾ.) (ಅಂ. ರ. ಶಾ., ಸ. ವಿ., ಪ್ರಾ. ವಿ.; ಬ. ವ. -ae —ರೀ) ಗರಗಸದ ಹಲ್ಲುಗಳಂತೆ ಹಲ್ಲುಳ್ಳ—ಅಂಗ, ರಚನೆ, ಅಂಚು. **Sérrate** ಸೆರೇಟ್ (ಗು.), **Serráte** —ರೇಟ್ (ಕ್ರಿ. ಸಕ.) (ಮು., ಅಂ. ರ. ಶಾ., ಸ. ವಿ., ಪ್ರಾ. ವಿ.) ಗರಗಸದಂತೆ ಹಲ್ಲುಳ್ಳ, ಗರಗಸದಂಥ ಅಂಚುಳ್ಳ; ದಂತುರ. (ಕ್ರಿ.) ಗರಗಸದಂತೆ ಅಂಚು —ಮಾಡು, ಒದಗಿಸು (ಸಾ., ಭೂ. ಕೃ., ಆದರೆ ಗುಣವಾಚಕವಾಗಿ ಪ್ರ.) **Serrá-tion** (ನಾ.)

Serradílla ಸೆರಡಿಲ (ನಾ.) ದನಗಳ ಮೇವಿಗಾಗಿ ಬೆಳಸುವ, ಮೂರೆಲೆಯ ದಳಗಳುಳ್ಳ ಸಸ್ಯ ಜಾತಿ.

Sérrate, etc. **Serra** ನೋಡಿ.

Sérrefile ಸೆರ್‌ಫೈಲ್ (ನಾ.) (ಸೈನ್ಯ; ಸಾ., ಬ. ವ. ದಲ್ಲಿ) ದಳದ ಹಿಂಭಾಗದಲ್ಲಿ ನಿಲ್ಲಿಸಿದ, ನಾಸನ್ನದಿನ, ಹೆಚ್ಚಿನ ಸೈನಿಕಾಧಿಕಾರಿಗಳ ಸಾಲು; ಈ ಸಾಲಿನ ಸೈನಿಕಾಧಿಕಾರಿ; ಹಿನ್ ಸಾಲಿನ ನಾಸನ್ನದು ಸೈನಿಕಾಧಿಕಾರಿ.

Serri- ಸೆರಿ— (ಸ. ಪೂ. ಪ.) ಗರಗಸದಂಥ (ಹಲ್ಲುಳ್ಳ)—. **Sérricorn** (ಗು., ನಾ.) ಗರಗಸದಂಥ ಸ್ಪರ್ಶಾಂಗವುಳ್ಳ (ಜೀರುಂಡೆ). **Sérriferous** (ಗು.) ಗರಗಸ ರಚನೆಯ ಅಂಗವುಳ್ಳ. **Sérriform** (ಗು.) ಗರಗಸದಾಕಾರದ. **Serriróstrate** (ಹಕ್ಕಿಯ ವಿಷಯದಲ್ಲಿ) ಗರಗಸ ಕೊಕ್ಕಿನ.

Sérried ಸೆರಿಡ್ (ಗು.) (ಸೈನಿಕರ, ಮರಗಳ, —ಸಾಲಿನ ವಿಷಯದಲ್ಲಿ) ಭುಜಕ್ಕೆ ಭುಜ ಸೋಕಿಸಿಕೊಂಡು ನಿಂತಿರುವ, ಒತ್ತಾದ, ಎಡೆಬಿಡದ, ದಟ್ಟವಾದ.

Sérromotor ಸೆರೊಮೋಟರ್ (ನಾ.) (ಹಡಗಿನ ಎಂಜಿನಿನಲ್ಲಿ) ಆವಿಯ ಬಲದಿಂದ ಹಡಗನ್ನು ಹಿಂದಕ್ಕೆ ನಡಸುವ ಒಂದು ಚಾಲಕ ಉಪಕರಣ.

Sérrulate ಸೆರ್ಯು(ರು)ಲೇಟ್, **-ated** —ಲೇಟೆಡ್ (ಗು.) ಸೂಕ್ಷ್ಮವಾದ ಗರಗಸದ ಹಲ್ಲುಗಳುಳ್ಳ. **Serrulátion** (ನಾ.)

Sérum ಸೀರಮ್ (ನಾ.) ಒಡೆದ ಹಾಲನ್ನು ಶೋಧಿಸಿ ತೆಗೆದ ದ್ರವ: ಹಾಲು ಒಡೆದ ನೀರು. ರಕ್ತದ ತೆಳು ಪಾರದರ್ಶಕ ಭಾಗ (ಹಸುರು ಛಾಯೆಯ ಒಂದು ಹಳದಿ ದ್ರವ); ರಕ್ತಸಾರ; ವಸೆ; ಅನ್ನಕ್ಷೀರ; ದುಗ್ಧರಸ. ಪ್ರಾಣಿಗಳ ಶರೀರದ (ಹೃದಯಾವರಣ, ಮೊ. ಗಳಿಂದ ಸ್ರವಿಸುವ) ನೀರಿನಂಥ ದ್ರವ; (ಸಿಡುಬು, ಮೊ. ಗಳ) ಹಾಲು. **Sérous** (ಗು.); **Serósity** (ನಾ.)

Sérval ಸರ್ವಲ್ (ನಾ.) ಕಪ್ಪು ಚುಕ್ಕೆಗಳುಳ್ಳ, ಕೆಂಚು ಹಳದಿ ಬಣ್ಣದ, ಮಾಂಸಾಹಾರಿಯಾದ, ಆಫ್ರಿಕದ ಒಂದು ಕಾಡುಬೆಕ್ಕು: ಹುಲಿಬೆಕ್ಕು.

Sérvant. **Serve** ನೋಡಿ.

Serve ಸರ್ವ್ (ಕ್ರಿ.) (ಒಬ್ಬನ) ಆಳಾಗಿರು, ಸೇವೆಮಾಡು, ಸೇವಕನಾಗಿರು; ದುಡಿ, ಗೆಯ್ಮೆಮಾಡು, ಊಳಿಗಮಾಡು [S. two masters (ಕಷ್ಟದ ಕೆಲಸ, ಆಗದ ಕೆಲಸ ಎಂಬ ಅರ್ಥದಲ್ಲಿ): ಪರಸ್ಪರ ವಿರೋಧವಾದ ಎರಡು ತತ್ತ್ವಗಳನ್ನು ಅನುಸರಿಸಲು ಹೋಗು; ಇಬ್ಬರು ಧಣಿಗಳ ಊಳಿಗ ಮಾಡು. S. the Lord *or* God ದೇವರ ಸೇವೆಮಾಡು; ಭಗವದ್ಭಕ್ತನಾಗಿರು. S. the devil ಸೈತಾನಿನ ಶಿಷ್ಯನಾಗಿರು; ಪಾಪಸಾಧಕನಾಗು; ಕಿರಾತನಾಗಿರು. S. tables (ಬೈಬಲ್ ಪ್ರ.) ಆತ್ಮೋದ್ಧಾರವನ್ನು ದೂರಮಾಡಿ ದೇಹ ಸೌಖ್ಯದಲ್ಲಿ ನಿರತನಾಗು. (ಪಾದ್ರಿಯ ವಿಷಯದಲ್ಲಿ) ಪರಮಾರ್ಥವನ್ನು ಬದಿಗಿಟ್ಟು ಐಹಿಕ ವ್ಯಾಪಾರದಲ್ಲಿ ನಿರತನಾಗು. S. at table ಊಟದ ಮೇಜಿನ ಪರಿಚಾರಕನಾಗಿರು. S. in army ಸೈನ್ಯದಲ್ಲಿ ನೌಕರನಾಗಿರು. Has served in India ಇಂಡಿಯದಲ್ಲಿ (ಮು., ಸೈನಿಕನಾಗಿ) ಕೆಲಸ ಮಾಡಿದ್ದಾನೆ]. ಕೆಲಸಕ್ಕೆ —ಆಗು, ಸಲ್ಲು, ಒದಗು, ಬರು; ಉಪಯೋಗವಾಗು, ಉಪಯುಕ್ತವಾಗು; ಸಾಕಾಗು; ತಕ್ಕದ್ದಾಗಿರು; ನಿರ್ವಹಿಸು [S. a purpose. S. the purpose of (—ಕ್ಕೆ) ಉಪಯುಕ್ತವಾಗಿರು; (—ರ) ಬದಲಾಗಿ ಉಪಯೋಗಕ್ಕೆ ಬರು. To s. some private ends ಸ್ವಾರ್ಥ ಸಾಧನೆಗಾಗಿ; ಸ್ವಂತ ಉದ್ದೇಶ ಸಾಧನೆಗಾಗಿ. Serves the *or* one's turn *or* need (—ಕ್ಕೆ) ಸಾಕಾಗುತ್ತದೆ, ಸರಿಬರುತ್ತದೆ. It will s. ನಮ್ಮ ಕೇವಲ ಆವಶ್ಯಕತೆಗೆ—ಸಾಕು, ಸಾಕಾಗುತ್ತದೆ. Nothing would s. him *or* s. but absolute submission ಸಂಪೂರ್ಣ ಶರಣಾಗತಿಯ ಹೊರತು ಮತ್ತೆ ಯಾವುದೂ (ಅವನಿಗೆ) ತೃಪ್ತಿಯುಂಟುಮಾಡುವಹಾಗಿರಲಿಲ್ಲ. As memory serves ಜ್ಞಾಪಕಕ್ಕೆ ಬಂದಹಾಗೆ, ನೆನಪಾದಾಗ. As occasion serves ಅನುಕೂಲವಾದಾಗ; ಸಂದರ್ಭ ಒದಗಿದಾಗ. The tide serves ಬಂದರನ್ನು ಬಿಡಲು ಭರತ (ಏರು) ಅನುಕೂಲವಾಗಿದೆ. Curate serves two parishes ಪಾದ್ರಿಯ ಸಹಾಯಕನು ಎರಡು ಪ್ಯಾರಿಷ್‌ಗಳ ಕೆಲಸ ನೋಡಿಕೊಳ್ಳುತ್ತಾನೆ, ನಿರ್ವಹಿಸುತ್ತಾನೆ. S. an office (—ರ) ಅಧಿಕಾರ ನಡಸು ಕೆಲಸ ನಿರ್ವಹಿಸು, ಪದವಿಯಲ್ಲಿರು. S. one's apprenticeship ಉಮೇದುವಾರನಾಗಿ ಶಿಕ್ಷಣ ಪಡೆ, ತರಬೇತಾಗು. S. a sentence ಪೂರ್ತಿ ಕಾಲ ಶಿಕ್ಷೆಯನ್ನು, ಕಾರಾಗೃಹವಾಸವನ್ನು, —ಅನುಭವಿಸು. S. one's time ತನ್ನ ಕ್ಲುಪ್ತ ಕಾಲದವರೆಗೆ ಅಧಿಕಾರಮಾಡು, ಪದವಿಯಲ್ಲಿರು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

=S. a sentence. S. time ಕಾರಾಗೃಹವಾಸ, ಮೊ. ನ್ನು ಅನುಭವಿಸು. S. gun, battery ಫಿರಂಗಿಯನ್ನು, ಫಿರಂಗಿ ತಂಡವನ್ನು, ಬಿಡದೆ ಹಾರಿಸುತ್ತಿರು. S. mare (ಮು., ಬಾಡಿಗೆ ಕೊಟ್ಟು ತಂದ ಗಂಡು ಕುದುರೆಯ ವಿಷಯದಲ್ಲಿ) ಹೆಣ್ಣು ಕುದುರೆಯಮೇಲೆ ಹಾರು. S. rope, etc. (ನಾವೆ) (ಕೊನೆಗಳು ಕಿತ್ತುಬರದಂತೆ, ಬಿಚ್ಚಿಕೊಳ್ಳದಂತೆ, ಹಗ್ಗ, ಮೊ. ಗಳಿಗೆ) ಸಣ್ಣ ಹುರಿ ಸುತ್ತಿ ಬಲಪಡಿಸು]. (ಭಕ್ಷ್ಯ) ಬಡಿಸು, ಇಕ್ಕು (*Up* ಉಪ. ಮೊಡನೆ); (ಮೇಜಿನಮೇಲೆ ಆಹಾರ, ಊಟ) ಸಿದ್ಧಗೊಳಿಸು, ಅಣಿಮಾಡು; ಹಂಚು, ವಿನಿಯೋಗಿಸು; (ಒಬ್ಬನಿಗೆ) ಒದಗಿಸು, ಸರಬರಾಯಿಮಾಡು (*With* ಉಪ. ದೊಡನೆ); (ನ್ಯಾಯಸ್ಥಾನದ ಆಜ್ಞಾಪತ್ರ, ಮೊ. ಗಳನ್ನು) ಕಾನೂನು ಪ್ರಕಾರ ಜಾರಿಮಾಡು; (ಆಟದಲ್ಲಿ; ಎಲ್ಲೆಯ ಗೆರೆಯಲ್ಲಿ ನಿಂತು) ಚೆಂಡು ಹೊಡೆದು —ಕಳುಹಿಸು, ಆಟ ಪ್ರಾರಂಭಿಸು [Fish served up nearly cold. Dinner is served ಬಡಿಸಿ ಸಿದ್ಧವಾಗಿದೆ (ಪರಿಚಾರಕನ ಅರಿಕೆ). S. ammunition, rations, out *or* round ಮದ್ದುಗುಂಡುಗಳನ್ನು, ಪಡಿಭತ್ಯವನ್ನು, ಹಂಚು. Was serving a customer with stockings ಗಿರಾಕಿಗೆ ಕಾಲುಚೀಲಗಳನ್ನು ಕೊಡುತ್ತಿದ್ದನು, ಮಾರುತ್ತಿದ್ದನು. S. with the same sauce (ರೂಪ.) ಮುಯ್ಯಿಗೆ ಮುಯ್ಯಿ ತೀರಿಸು; ಅದೇ ರೂಪದಲ್ಲಿ ಪ್ರತೀಕಾರ ಮಾಡು. S. the town with water ಊರಿಗೆ ನೀರು ಒದಗಿಸು, ಸರಬರಾಯಿ ಮಾಡು. S. with writ ಒಬ್ಬನಮೇಲೆ ಆಜ್ಞಾಪತ್ರ ಜಾರಿಮಾಡು. S. warrant, writ, notice, etc. (*On* ಉಪ. ಮೊಡನೆ). (ಟೆನಿಸ್ ಆಟದಲ್ಲಿ) Player serves a ball, serves well, badly]. ಕಾಣು, ನಡೆದುಕೊ; ಮುಯ್ಯಿ ತೀರಿಸು, ಶಾಸ್ತಿಮಾಡು, ಶಾಸ್ತಿಯಾಗು (*Out* ಉಪ. ಮೊಡನೆ) [Has served me shamefully ನನ್ನ ವಿಷಯದಲ್ಲಿ ನಾಚಿಕೆಗೇಡಿತನದಿಂದ (ನೀಚವಾಗಿ) ನಡೆದುಕೊಂಡಿದ್ದಾನೆ. Served them a trick ಅವರಮೇಲೆ ಒಂದು ತಂತ್ರ ಹೂಡಿದನು; ಅವರನ್ನು ಮೋಸಗೊಳಿಸಿದನು. S. *or* serves him right! ತಕ್ಕ ಶಾಸ್ತಿ ಆಯಿತು! Shall manage to s. him out ಅವನ ಮೇಲೆ ಮುಯ್ಯಿ ತೀರಿಸಿಕೊಳ್ಳುತ್ತೇನೆ]. (Serving-man ಗಂಡಾಳು, ಸೇವಕ). (ನಾ.) (ಟೆನಿಸ್, ಮೊ. ಆಟಗಳಲ್ಲಿ) ಸರದಿಯ ಮೊದಲ ಹೊಡೆತ; ಮೊದಲ ಹೊಡೆತದ ಸರದಿ (Whose s. is it?) (-)**sérver** (ನಾ.); **Sérvant** ಸರ್‌ವಂಟ್ (ನಾ.) (ಸಾ., ಮನೆಯ ಕೆಲಸದ) ಆಳು; ಸೇವಕ; ಭೃತ್ಯ; ಜವಾನ; ಚಾಕರ [Public servants ಸರಕಾರದ ನೌಕರರು. Railway company's servants ರೈಲ್ವೆ ಕಂಪೆನಿಯ ನೌಕರರು. Civil s. ಮುಲ್ಕಿ—ನೌಕರ, ಅಧಿಕಾರಿ (Civil ನೋಡಿ). Outdoor s. ಹೊರಗೆಲಸದ ಆಳು (ಕಾಸ್ತಾರ, ತೋಟದ ಮಾಲಿ, ಮೊ. ರು). Indoor s. ಒಳಗೆಲಸದ ಆಳು (ಅಡಿಗೆಯವನು, ಪರಿಚಾರಕ, ಮೊ. ರು). Domestic s. ಮನೆಯಾಳು. General, Livery, s. (ಆಯಾ ಪದವನ್ನು ನೋಡಿ). S.-girl, -maid ಮನೆಗೆಲಸದವಳು; ಹೆಣ್ಣಾಳು. The s. question ಆಳುಗಳನ್ನು ದೊರಕಿಸಿಕೊಳ್ಳುವ ಮತ್ತು ಅಂಕೆಯಲ್ಲಿಟ್ಟುಕೊಳ್ಳುವ ಸಮಸ್ಯೆ: ಆಳುಗಳ, ಸೇವಕರ, —ಸಮಸ್ಯೆ. Servants' hall (ದೊಡ್ಡ ಕುಟುಂಬಗಳಲ್ಲಿ) ಆಳುಗಳು ಊಟ, ಮೊ. ಗಳನ್ನು ಮಾಡುವ ಕೋಣೆ: ಆಳುಗಳ ಕೋಣೆ. S. of servants (of God) (ಭಗವಂತನ) ಅಡಿಯಾಳು, ಭೃತ್ಯಾನುಭೃತ್ಯ, ದಾಸಾನುದಾಸ (ಮು., ಕ್ರೈಸ್ತ ಜಗದ್ಗುರುಗಳಾದ ಪೋಪರ ಬಿರುದು). A good s. but a bad master (ಒಳ್ಳೆಯ ಆಳು ಆದರೆ ಕೆಟ್ಟ ಒಡೆಯ; ಊಳಿಗಕ್ಕೆ ತಕ್ಕದ್ದೇ ಹೊರತು ಒಡೆತನಕ್ಕಲ್ಲ]. ಲೆಂಕ; ಅಡಿಯ; ಕಿಂಕರ [A s. of Jesus Christ. Your humble s. (ಪ್ರಾಚೀ. ಪ್ರ.; ವ್ಯಂಗ್ಯ ಮರ್ಯಾದೆ) ತಮ್ಮ ಪಾದಸೇವಕ. Your obedient s. (Obedience ನೋಡಿ)]. **Sérvice**[1] (ನಾ.) ಸೇವಕತನ; ತೊತ್ತುಗೆಲಸ; ಸೇವೆ (ಮಾಡುವುದು); ಊಳಿಗ; ಚಾಕರಿ; ಕೆಲಸ [Girl goes out to s. Take s. with (—ಗೆ) ಆಳಾಗು, ಸೇವಕನಾ(ಳಾ)ಗು; (—ಬಳಿ) ಚಾಕರಿಗೆ ಸಿಲ್ಲು, —ಚಾಕರಿ ಮಾಡು. Take into one's s. ಚಾಕರಿಗೆ—ಇಟ್ಟುಕೊ, ನೇಮಿಸಿಕೊ].

(ಅರಮನೆಯ, ಸರ್ಕಾರದ, ಸಾರ್ವಜನಿಕ) ಕೆಲಸದ ಇಲಾಖೆ, ಖಾತೆ, ಶಾಖೆ. ಸಾರ್ವಜನಿಕ ಸೇವೆ(ಯ ಸಂಸ್ಥೆ); ಇವುಗಳ ನೌಕರರು, ಉದ್ಯೋಗಸ್ಥರು; ಇವುಗಳಲ್ಲಿ ನೌಕರಿ, ಚಾಕರಿ, ಉದ್ಯೋಗ [The fighting, *or* the, services ನಾವಿಕ ಸೈನ್ಯ, ಭೂ ಸೈನ್ಯ ಮತ್ತು ವೈಮಾನಿಕ ಸೈನ್ಯ (ಖಾತೆಗಳು): ಯುದ್ಧ ಖಾತೆಗಳು. The public services ಸರಕಾರದ —ನೌಕರಿಗಳು, ಇಲಾಖೆಗಳು; ಸಾರ್ವಜನಿಕ —ಸೇವಾ ಸಂಸ್ಥೆಗಳು, ಉದ್ಯೋಗಗಳು. The civil, covenanted, secret, s. (ಆಯಾ ಪದವನ್ನು ನೋಡಿ). The preventive s. (Prevent ನೋಡಿ). Is on s., in active s. ಉದ್ಯೋಗದಲ್ಲಿ, ಕೆಲಸಮಾಡುತ್ತ,—ಇದ್ದಾನೆ (ರಜದಮೇಲಲ್ಲ); ಯುದ್ಧಕ್ಕೆ ಹೋಗಿದ್ದಾನೆ. See s. (ಮು., ಸೈನಿಕನಾಗಿ, ನಾವಿಕನಾಗಿ) ಪಳಗು, ನುರಿ; ಯುದ್ಧಾನುಭವ ಪಡೆ]. (ವಿಶೇಷಣವಾಗಿ) ಯುದ್ಧದ ಇಲಾಖೆಯಿಂದ ಮಂಜೂರಾದ ಮಾದರಿಯ (The s. rifle). ಸೇವೆ; ಅಪ್ಪಣೆ ನಡಸುವುದು [At your s. ತಮ್ಮ ಅಪ್ಪಣೆ ನಡಸಲು, ಸೇವೆ ಮಾಡಲು,—ಸಿದ್ಧನಾಗಿದ್ದೇನೆ: ತಮ್ಮ ಆಜ್ಞಾಧಾರಕ. On his, her, Majesty's s. (ಸಂಕ್ಷಿಪ್ತ: O.H.M.S.) (ಬ್ರಿಟಿಷ್ ಸರಕಾರಿ ಲಕ್ಕೋಟೆಗಳ ಮೇಲೆ ಒತ್ತುವ ಒಕ್ಕಣೆ): ಸಾರ್ವಭೌಮ ಸರಕಾರ. Personal s.[1] ಸ್ವಾಮಿನಿಷ್ಠೆ, ಮೊ. ಊಳಿಗಮಾನ್ಯದ ಕರ್ತವ್ಯಗಳು; ಖಾಸ್ ಸೇವೆ. Feudal s. ಊಳಿಗಮಾನ್ಯ ಸೇವೆ. Yeoman's s. (Yeoman ನೋಡಿ). Will you do me a s.? ನನಗೊಂದು ಉಪಕಾರ, ಸೇವೆ,—ಮಾಡುತ್ತೀಯಾ? Has seen s. ಬಹಳ ಉಪಯೋಗಿಸಿದೆ; ಜೀರ್ಣವಾಗಿ, ಶಿಥಿಲವಾಗಿ, —ಹೋಗಿದೆ. My s. to him (ಕಾಗದ ಪತ್ರಗಳಲ್ಲಿ: ಮೂರನೆಯವರಿಗೆ ನಮಸ್ಕಾರಗಳನ್ನು ತಿಳಿಸಿ ಎಂಬ ಗೌರವದ ಅರಿಕೆ): (—ಗೆ) ನನ್ನ ನಮಸ್ಕಾರಗಳು]. ಪ್ರಯೋಜನ, ಉಪಕಾರ, ಸಹಾಯ (Can I be of s. to you? Will it be of s. to you?). (ಕೆಲವು ಸಂದರ್ಭಗಳಿಗೆ ಗೊತ್ತಾದ) ವಿಧ್ಯುಕ್ತವಾದ ಸಂಸ್ಕಾರ, ಆರಾಧನೆ; ದೇವತಾರಾಧನೆ; ಆರಾಧನೆಯ ಭಕ್ತರಸಭೆ; ಆರಾಧನೆಗೆ, ಸಂಸ್ಕಾರಕ್ಕೆ, —ಹೊಂದಿಸಿದ ಸಂಗೀತ; ಆರಾಧನೆಯ ಸಂಗೀತ [The communion, burial, s. Divine s. (ಸಾ., 'a' ಎಂಬ ಗುಣವಾಚಕವಿಲ್ಲದೆ ಪ್ರ.) ದೇವರ ಆರಾಧನೆ. Special services ವಿಶೇಷ ಆರಾಧನೆಗಳು. Are you going to s. *or* the services? -'s s. (—ನು) ರಚಿಸಿದ ಆರಾಧನೆಯ ಸಂಗೀತ. Full s. (ತನಿಯಾದ ಹಾಡಿಕೆಯಿಲ್ಲದೆ) ಗಾಯಕವೃಂದ ಒಟ್ಟಾಗಿ ಹಾಡಿ ಮಾಡುವ ದೇವತಾರಾಧನೆ; ಸಾಧ್ಯವಾದ ಕಡೆಗಳಲ್ಲೆಲ್ಲ ಸಂಗೀತ ಸೇರಿಸಿ ಮಾಡುವ ಆರಾಧನೆ. Plain s. ಓದಿ ಮಾಡುವ, ಕೊನೆತನಕ ಒಂದೇ ರಾಗದಲ್ಲಿ ಮಾಡುವ, —ಆರಾಧನೆ. S.-book (ಕ್ರೈಸ್ತ) ಆರಾಧನೆಯ ಪುಸ್ತಕ (ಉದಾ., The Book of Common Prayer); ಕ್ರೈಸ್ತ ಸಂಸ್ಕಾರಗಳ ಪುಸ್ತಕ. Church-s. (Church ನೋಡಿ)]. (ಆಜ್ಞಾಪತ್ರ, ಮೊ. ಗಳ ವಿಷಯದಲ್ಲಿ) ಕಾನೂನು ಪ್ರಕಾರ ಜಾರಿ (ಮಾಡುವುದು) [Personal s.[2] ಒಳಗಿನ ವಿಷಯಗಳನ್ನು ತಿಳಿಯಹೇಳಿ ಕೈಗೆ ಪಾವತಿ, ಜಾರಿ: ಖುದ್ದು ಜಾರಿ. (Of writ, etc.) S. by publication, substitution ಕೆಲವು ಸಂದರ್ಭಗಳಲ್ಲಿ ಸಾಕೆಂದು ಅಂಗೀಕರಿಸಿರುವುದರಿಂದ, ಕಾಣುವ ಕಡೆ ಅಂಟಿಸಿಯಾಗಲಿ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿಯಾಗಲಿ ಸಂಬಂಧಪಟ್ಟವನ ನೆರೆಯವನು, ಮೊ. ರಿಗೆ ತಲುಪಿಸಿಯಾಗಲಿ ಜಾರಿಮಾಡುವುದು: ಪ್ರಕಟನೆಯ ಮೂಲಕ, ಬದಲಿಯ ಮೂಲಕ, —ಜಾರಿ; ಬದಲ್‌ಜಾರಿ. Accept s. ಜಾರಿ ಅಂಗೀಕರಿಸು]. (ತಟ್ಟೆ, ಮೊ.) ಬಡಿಸುವ ಪಾತ್ರೆಗಳು (Dinner s.). (ಸಾರ್ವಜನಿಕ ಉಪಯೋಗದ) ಏರ್ಪಾಟು, ವ್ಯವಸ್ಥೆ, ಸರಬರಾಯಿ (Telephone, water, s.). (ವಾಹನ ಸಂಚಾರ) ಗೊತ್ತಾದ ಕಾಲಗಳಲ್ಲಿ ಹೋಗಿ ಬರುವ ರೈಲುಗಳು, ಜಹಜುಗಳು, ಬಸ್ಸುಗಳು, ಮೊ. ಗಳ ವ್ಯವಸ್ಥೆ, ಏರ್ಪಾಟು. (ಟೆನಿಸ್, ಮೊ. ಆಟಗಳಲ್ಲಿ) ಸರದಿಯ ಚೆಂಡು ಹೊಡೆದು —ಕಳುಹಿಸುವುದು, ಆಟ ಪ್ರಾರಂಭಿಸುವುದು; ಸರದಿಯ ಚೆಂಡು ಹೊಡೆತದ —ರೀತಿ, ಸರದಿ; =Serve (S.-line ಹೊಡೆದ ಚೆಂಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಲ್ಲಿಯವರೆಗೆ ಹೋಗಿ ಬೀಳಬಹುದೆಂಬುದರ ಪರಿಮಿತಿಯ ಗೆರೆ: ಚೆಂಡು ಹೊಡೆತದ ಪರಿಮಿತಿಯ ಗೆರೆ). **S.-pipe** ಮುಖ್ಯ ಕೊಳಾಯಿಯಿಂದ ಮನೆಗೆ ನೀರನ್ನು ಸಾಗಿಸುವ ಕೊಳಾಯಿ: ಮನೆಯ ನೀರು ಸರಬರಾಯಿಯ ಕೊಳಾಯಿ. **Sérviceable** ಸರ್‌ವಿಸಬ್‌ಲ್ (ಗು.) ಪ್ರಯೋಜನಕರ; ಉಪಯೋಗಕ್ಕೆ, ಕೆಲಸಕ್ಕೆ,—ಬರುವ; ಉಪಯುಕ್ತ; ಸೇವೆ ಸಲ್ಲಿಸಲು—ಸಿದ್ಧವಾಗಿರುವ, ಇಷ್ಟವುಳ್ಳ, ಸಾಮರ್ಥ್ಯವಿರುವ; ಉಪಕಾರಕ (A s. person, reminder, instrument). ಬಾಳಿಕೆ ಬರುವ; ದೃಢ; ಕೇವಲ ಅಲಂಕಾರಕ್ಕಲ್ಲದೆ ಒರಟು ಕೆಲಸಕ್ಕೂ ಸಾಮಾನ್ಯ ಉಪಯೋಗಕ್ಕೂ ತಕ್ಕದ್ದಾದ. **Serviceably** (ಕ್ರಿ. ವಿ.); **Sérviceableness** (ನಾ.)

Sérvian = Serbian (Serb ನೋಡಿ)

Sérvice[1]. **Serve** ನೋಡಿ.

Sérvice[2] ಸರ್ವಿಸ್ (ನಾ.) ಇಂಗ್ಲೆಂಡ್ ದೇಶದಲ್ಲಿ ವಿರಳವಾದ, ಯೂರೋಪಿನ ಒಂದು ಬಗೆಯ ಮರ (=S.-tree). 'ಪೇರ್' ಆಕಾರದ ಇದರ ಹಣ್ಣು (=S.-berry)

Sérviceable, etc. **Serve** ನೋಡಿ.

Serviétte ಸರ್ವಿಯೆಟ್ (ನಾ.) (ಮು., ಪರಿಚಾರಕರು ಅಥವಾ ಸೇವಕರು ಉಪಯೋಗಿಸುವ) ಊಟದ ಮೇಜಿನ ಕೈಚೌಕ.

Sérvile ಸರ್ವೈಲ್, —ವಿಲ್ (ಗು.) ಗುಲಾಮನ(ರ); ಗುಲಾಮತನದ; ದಾಸ್ಯದ; ಗುಲಾಮ— [S. war (ರೋಮನ್ ಚರಿತ್ರೆ) ದಂಗೆಯೆದ್ದ ಗುಲಾಮರಿಗೂ ಅವರ ಯಜಮಾನರಿಗೂ ನಡೆದ ಯುದ್ಧ: ಗುಲಾಮರ ಯುದ್ಧ. S. class ಗುಲಾಮರ—ವರ್ಗ, ಪಂಗಡ. S. labour ಗುಲಾಮರ—ದುಡಿತ, ಶ್ರಮ. S. letter (ರೂಪ.) ಮತ್ತೊಂದು ಅಕ್ಷರದ ಉಚ್ಚಾರಣೆಯನ್ನು ಸೂಚಿಸುವುದರ ಹೊರತು ಬೇರೆ ಕಾರ್ಯವಿಲ್ಲದ ಅಕ್ಷರ: ಉಚ್ಚಾರ ಸೂಚಕ ವರ್ಣ (ಉದಾ., manageable, saleable ಪದಗಳಲ್ಲಿ *e* ಎಂಬ ಅಕ್ಷರ)]. ಗುಲಾಮನಂಥ; ಬಹಳ ದೈನ್ಯ ತೋರುವ; ಹಲ್ಲುಗಿರಿದು ಬೇಡಿಕೊಳ್ಳುವ; ಕೀಳು ಮನಸ್ಸಿನ; ಅಧಮ; ದಾಸ್ಯವೃತ್ತಿಯ; ಸಂಪೂರ್ಣ ಪರಾವಲಂಬಿಯಾದ (S. spirit, creature, submission. S. flattery ಹಲ್ಲುಗಿರಿಯುತ್ತ ಮಾಡುವ ಪ್ರಶಂಸೆ, ಹೊಗಳಿಕೆ. S. fear, imitation). **Servility** (ನಾ.); **Sérvilely** (ಕ್ರಿ. ವಿ.)

Sérvitor ಸರ್ವಿಟರ್ (ನಾ.) (ಪ್ರಾಚೀ. ಪ್ರ., ಕಾವ್ಯ) ಅನುಚರ, ಸೇವಕ, ಆಳು. (ಆಕ್ಸ್‌ಫರ್ಡ್ ವಿ. ವಿ. ನಿ. ಚರಿತ್ರೆ) ಕಾಲೇಜಿನ ನಿಧಿಯಿಂದ ಸಹಾಯ ಹೊಂದಿ (ಅಥವಾ ತೆರದಲ್ಲಿ ರಿಯಾಯಿತಿ ಪಡೆದು) ಅದಕ್ಕೆ ಪ್ರತಿಯಾಗಿ ಸೇವಕನ ಕೆಲಸಗಳನ್ನು (ಊಟದ ಮೇಜಿನ ಪರಿಚಾರಕ ಕೆಲಸವನ್ನು) ಮಾಡುವ ಕೆಳಗಿನ ತರಗತಿಯ ವಿದ್ಯಾರ್ಥಿ: ಸೇವಾ ವಿದ್ಯಾರ್ಥಿ [**Sérvitorship** (ನಾ.)]

Sérvitude ಸರ್ವಿಟ್ಯೂಡ್ (ನಾ.) ಗುಲಾಮಗಿರಿ, ದಾಸ್ಯ (ರೂಪ. ಸಹ). (ಮು., ಅನ್ಯೈಚ್ಛಿಕವಾದ) ಪರಾಧೀನತೆ; ಅಡಿಯಾಳಾಗಿರುವುದು; ಅಡಿಮೆ; (ಶಿಕ್ಷೆಯಾಗಿ) ಗುಲಾಮ ದುಡಿತ [Penal s. (Penal ನೋಡಿ)]. (ನ್ಯಾ. ಶಾ.) ಒಬ್ಬನ ಆಸ್ತಿ, ಅಧಿಕಾರ, ಮೊ. ವು (ಧಣಿಯಲ್ಲದ) ಮತ್ತೊಬ್ಬನ ಮಾಮೂಲು ಹಕ್ಕಿಗೆ, ಅನುಭೋಗದ ಹಕ್ಕಿಗೆ, ಒಳಪಟ್ಟಿರುವುದು.

Servo- =Serbo- (Serb ನೋಡಿ)

Sésame ಸೆಸಮಿ, ಸೀಸಮ್ (ನಾ.) ಎಳ್ಳಿನ ಗಿಡ; ಎಳ್ಳು; ತಿಲ (ಸಸ್ಯ). [Open s. (ಸಾ., ಪ್ರವೇಶ ಸಾಧ್ಯವಿಲ್ಲದ ಗುಪ್ತ ಸ್ಥಳಕ್ಕೆ ಪ್ರವೇಶ ದೊರಕಿಸಿಕೊಡುವ) ಇಂದ್ರಜಾಲಿಕ ಸಂಕೇತಾಜ್ಞೆ (Arabian Nights ಎಂಬ ಕಥಾವಳಿಯಲ್ಲಿಯ ಒಂದು ಕಥೆಯ ಸಂದರ್ಭದಿಂದ)]. **Sésamoid** ಸೆಸಮಾಯ್ಡ್ (ಗು., ನಾ.) ಎಳ್ಳುಬೀಜದ, ಎಳ್ಳಿನ,—ಆಕಾರದ; ತಿಲಕಲ್ಪ (ಮು., ಮಂಡಿಚಿಪ್ಪು, ಮೊ. ಸ್ವತಂತ್ರ ಸಣ್ಣ ಎಲುಬುಗಳ ವಿಷಯದಲ್ಲಿ). (ನಾ.) ಎಳ್ಳಿನಾಕಾರದ ಎಲುಬು; ತಿಲಾಸ್ಥಿ.

Sesqui- ಸೆಸ್‌ಕ್ವಿ— (ಸ. ಪೂ. ಪ.) ಲ್ಯಾಟಿನ್ ಪದಗಳಲ್ಲಿ: (1) ಒಂದೂವರೆ (ಉದಾ., Sesquipedalis ಒಂದೂವರೆ ಅಡಿ ಉದ್ದ). (2) $1\frac{1}{2}$: 1 ಅಥವಾ 3: 2 ಎಂಬ ಪ್ರಮಾಣದಲ್ಲಿರುವ (=Sesquialter) (3) (n+1): n ಎಂಬ ಪ್ರಮಾಣದಲ್ಲಿರುವ (ಉದಾ., Sesquitertius 4: 3; Sesquiquartus 5: 4). ಇಂಗ್ಲಿಷ್ ಪದಗಳಲ್ಲಿ: (1) (ರ. ವಿ. ಪದಗಳು): ಸೇರಿರುವ ಮೂಲವಸ್ತು ಮತ್ತು ಮೂಲ ಲೋಹಧಾತು 3: 2 ಪ್ರಮಾಣದಲ್ಲಿರುವ [Iron sesquioxide = Fe_2O_3 ಆಮ್ಲಜನಕ ಮತ್ತು ಕಬ್ಬಿಣ 3: 2 ಪ್ರಮಾಣದಲ್ಲಿರುವ ಕಬ್ಬಿಣದ ಆಕ್ಸೈಡು. Sesquibasic (ಲವಣದ ವಿಷಯದಲ್ಲಿ) ಪ್ರತ್ಯಾಮ್ಲ ಮತ್ತು ಆಮ್ಲ 3: 2 ಪ್ರಮಾಣದಲ್ಲಿರುವ]. (2) (ಗಣಿತದ ಪದಗಳು): Sesquialteral 3: 2; -tertial 4: 3; -quartal 5: 4; -quintal 6: 5; -sextal 7: 6; -septimal 8: 7: -octaval 9: 8; -nonal 10: 9. (3) (ಸಂಗೀತದ ಪದಗಳು): ಸ್ವರಗಳ ಅಂತರದ ವಿಷಯದಲ್ಲಿ: -altera 2: 3; -tertia 4: 3 (ಹೀಗೆಯೆ ಉಳಿದವು). (4) (ಇತರ ಪದಗಳು): -ocellus (ಕೀಟ ವಿಜ್ಞಾನ) ಸಣ್ಣ ಮಚ್ಚೆಯನ್ನು ಒಳಕೊಂಡ ದೊಡ್ಡ ಮಚ್ಚೆ (=Sesquialter). -pedalian ಒಂದೂವರೆ ಅಡಿ ಉದ್ದದ (ಮಾತು); (ಅನೇಕ ಉಚ್ಚಾರಾಂಶಗಳುಳ್ಳ) ಬಹು ದೀರ್ಘ ಪದ; ತೊಡಕುಳ್ಳದ್ದೂ ಪಾಂಡಿತ್ಯ ಪ್ರದರ್ಶಕವೂ ಆದ (ಪದ). -plicate ಘನಕ್ಕೂ ವರ್ಗಕ್ಕೂ ಇರುವ ಪ್ರಮಾಣದಲ್ಲಿರುವ. -tone $1\frac{1}{2}$ ಸ್ವರದ ಅಂತರ.

Sess. **Cess** ನೋಡಿ.

Séssile ಸೆಸ್ಸೈಲ್, —ಸಿ— (ಗು.) (ಸ. ವಿ., ಪ್ರಾ. ವಿ.) (ಹೂವು, ಎಲೆ, ಕಣ್ಣು, ಮೊ. ಗಳ ವಿಷಯದಲ್ಲಿ) ದಂಟು, ತೊಟ್ಟು, ಕಾವು, —ಇಲ್ಲದ; ಮೂಲಕ್ಕೆ ಸೇರಿಕೊಂಡಿರುವ; ನಿರ್ವೃಂತ.

Séssion ಸೆಷನ್, —ಷ್ನ್ (ನಾ.) (ವಿರ. ಪ್ರ.) ಕುಳಿತಿರುವುದು; ಕುಳಿತುಕೊಳ್ಳುವುದು; ಕುಳಿತಿರುವ—ಸ್ಥಿತಿ, ಭಂಗಿ. (ಮಂತ್ರಾಲೋಚನೆಗಾಗಿ ಅಥವಾ ನ್ಯಾಯನಿರ್ಣಯಕ್ಕಾಗಿ) ಒಂದು ಬಾರಿಯ ಸಭೆ—ಸೇರುವುದು, ಕೂಡುವುದು: ಒಂದು ಅಧಿವೇಶನ (ಕಾಲ); ಸಭೆ ಪ್ರಾರಂಭವಾದ ಮೊದಲುಗೊಂಡು (ಪ್ರತಿದಿನ ಅಥವಾ ಕ್ರಮವಾದ ಅಲ್ಪ ಅಂತರಗಳಲ್ಲಿ ಹಲವು ಬಾರಿ ಸೇರಿ) ಮುಕ್ತಾಯವಾಗುವವರೆಗಿನ ಕಾಲ; ಸಭಾ—ಕಾಲ, ರುತು. (ಒಂದು ವರ್ಷದಲ್ಲಿ ಪಾರ್ಲಿಮೆಂಟು, ಮೊ.) ಶಾಸನ ಸಭೆಗಳು ಪ್ರಾರಂಭವಾಗಿ ನಡೆಯುವ ಕಾಲಾವಧಿ [In s. ಕಾರ್ಯನಿರ್ವಹಣಕ್ಕಾಗಿ ಸಭೆ ಸೇರಿ (ವಿರಾಮ ಕಾಲವಲ್ಲ). Had a long s. ದೀರ್ಘಕಾಲ ಸಭೆ ಸೇರಿತ್ತು, ನಡೆಯಿತು. Autumn s. (Autumn sitting ಎಂಬುದಕ್ಕೆ ಅಪಪ್ರಯೋಗ) ಪಾರ್ಲಿಮೆಂಟಿನ ಶರತ್ಕಾಲದ ಅಧಿವೇಶನ (ಬೇಸಗೆಯಲ್ಲಿ ಸೇರಿದ ಪಾರ್ಲಿಮೆಂಟ್ ಸಭೆ ಆಗ ಮುಕ್ತಾಯಗೊಳ್ಳದೆ ದೀರ್ಘ ಕಾಲ ಮುಂದಕ್ಕೆ ಹಾಕಲ್ಪಟ್ಟಮೇಲೆ ಕೆಲವು ವೇಳೆ ಕೆಲಸಗಳ ಒತ್ತಾಯದಿಂದ, ಆಗಸ್ಟ್ ಸೆಪ್ಟೆಂಬರ್ ತಿಂಗಳುಗಳಲ್ಲಿ ಮತ್ತೆ ಸೇರುವುದು)]. (ಮು., ಸ್ಕಾ. ಪ್ರ., ಮತ್ತು ಅಮೆ. ಸಂ.) ವಿಶ್ವವಿದ್ಯಾನಿಲಯದ ವ್ಯಾಸಂಗ ಕಾಲ. Quarter-sessions (Quarter ನೋಡಿ). Petty sessions ಕೆಲವು ಬಗೆಯ (ಸಣ್ಣ) ಅಪರಾಧಗಳನ್ನು (ಹೆಚ್ಚು ವಿವರಗಳಿಗೆ ಹೋಗದೆ) ಶೀಘ್ರ ವಿಚಾರಣೆಮಾಡಿ ತೀರ್ಪುಕೊಡಲು ಇಬ್ಬರು ಅಥವಾ ಹೆಚ್ಚು ಮಂದಿ ಶಾಂತಿಪಾಲಕ ನ್ಯಾಯಾಧಿಪತಿಗಳುಳ್ಳ ನ್ಯಾಯಸ್ಥಾನ: ಚಿಲ್ಲರೆ ಅಪರಾಧಗಳ ನ್ಯಾಯಸ್ಥಾನ. Court of S. ಸ್ಕಾಟ್ಲೆಂಡಿನ ಪ್ರಧಾನ ವ್ಯವಹಾರ ನ್ಯಾಯಸ್ಥಾನ. Kirk-s. (Kirk ನೋಡಿ). **Séssional** (ಗು.) [S. order (ಪಾರ್ಲಿಮೆಂಟ್) ಒಂದು ಅಧಿವೇಶನಕ್ಕೆ ಮಾತ್ರ ಅನ್ವಯಿಸುವ, ಪ್ರತಿ ಸಭಾಧಿವೇಶನಕ್ಕೂ ಹೊಸದು ಮಾಡಿಕೊಳ್ಳಬೇಕಾದ, ಆಜ್ಞೆ]

Sésterce ಸೆಸ್ಟರ್ಸ್ (ಬ. ವ. -s. —ಸಿಸ್), **Sestértius** ಸೆಸ್ಟರ್ಷಿಅಸ್ (ನಾ., ಬ. ವ. -ii —ಷಿಐ) (ನಾ.) ಪ್ರಾಚೀನ ರೋಮಿನ ಬೆಳ್ಳಿಯ (ಅಮೇಲೆ ಕಂಚಿನ) ನಾಣ್ಯ ಮತ್ತು ಗೊತ್ತಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆಲೆಯ ಹಣ (=¼ ಡಿನೇರಿಯಸ್, ಸು., ೨ ಪೆನಿ). **Sestértium** —ಷಿಯಮ್, —ಷ್ಮ್ (ನಾ., ಬ. ವ. -ia —ಷಿಯ) =೧೦೦೦ ಸೆಸ್ಟರ್ಸ್ ಹಣ.

Sestét ಸೆಸ್‌ಟೆಟ್ (ನಾ.) =Sextet; ಸಾನೆಟ್ (Sonnet) ಎಂಬ ೧೪ ಸಾಲಿನ ಪದ್ಯದ ಕಡೆಯ ಆರು ಸಾಲುಗಳು, ಮುಕ್ತಾಯ ಷಟ್ಕ.

Sestína ಸೆಸ್‌ಟೀನ (ನಾ.) ಆರು ಸಾಲಿನ ಆರು ಪದ್ಯಗಳೂ ಕೊನೆಯಲ್ಲಿ ಮೂರು ಸಾಲಿನ ಒಂದು ಪದ್ಯವೂ ಇರುವ, ಪ್ರಾಸವಿರುವ ಅಥವಾ ಇಲ್ಲದ ಒಂದು ಪದ್ಯ ಜಾತಿ.

Set ಸೆಟ್ (ಕ್ರಿ.) ಇಡು, ಇರಿಸು, ನೆಡು, ನಿಲ್ಲಿಸು, ಕೂಡಿಸು, ಸ್ಥಾಪಿಸು, ಹೂಡು [(ಸಾ., ಕ್ರಿ. ಪಿ. ದೊಡನೆ ಅಥವಾ ಕ್ರಿ. ವಿ. ಪದಪುಂಜದೊಡನೆ): S. load *or* passenger down, statue up. S. foot (on) ಹೆಜ್ಜೆಯಿಡು, ಪಾದ ಊರು. S. (thing) against (another) (ಮತ್ತೊಂದಕ್ಕೆ) ಸರಿತೂಕವಾಗಿಡು; ಸಮತೂಕವಾಗಿ, ಈಡಾಗಿ, —ಪರಿಗಣಿಸು. S. apart ಎತ್ತಿಡು, ಮೀಸಲಾಗಿಡು, ಪ್ರತ್ಯೇಕವಾಗಿಡು. S. aside ಎತ್ತಿಡು, ಬದಿಗಿಡು; ನಿರಾಕರಿಸು, ತಳ್ಳಿಹಾಕು, ನಿರ್ಲಕ್ಷಿಸು, ಹೊಡೆದುಹಾಕು. S. by ಮುಂದಿನ ಉಪಯೋಗಕ್ಕೆ —ತೆಗೆದಿಡು, ಮಿಗಿಸಿಡು; ಎತ್ತಿಡು. S. stone out ಒಂದು ಕಲ್ಲನ್ನು (ಅದರ ಏಣು ಕೆಳಗಿನ ಕಲ್ಲಿಗಿಂತ) ಮುಂದಕ್ಕೆ ಚಾಚಿಕೊಂಡಿರುವಂತೆ ಇಡು. S. (person) over (others *or* thing) (ಒಬ್ಬನನ್ನು) ಇತರರಮೇಲೆ ಅಧಿಕಾರ ಮಾಡಲು ಕೂರಿಸು. S. pen to paper ಕಾಗದಕ್ಕೆ ಲೇಖನಿ ಹೂಡು; ಲೇಖನಿಯಿಂದ ಬರೆಯತೊಡಗು. S. spurs to the horse ಚುಚ್ಚು ಚಕ್ರದಿಂದ ಕುದುರೆಯನ್ನು ಚೋದಿಸು, —ಚುಚ್ಚಿ ಓಡಿಸು. S. one's hand to document ಪತ್ರಕ್ಕೆ ರುಜು ಹಾಕು. S. one's seal to document. ಪತ್ರಕ್ಕೆ ಮುದ್ರೆಯೊತ್ತು. S. one's hand to task ಕೆಲಸಕ್ಕೆ ಕೈಹಾಕು, ಕೆಲಸ ಪ್ರಾರಂಭಿಸು. S. fire to ಬೆಂಕಿ ಹೊತ್ತಿಸು. S. the axe to ಕತ್ತರಿಸಿ ಹಾಕಲು, ನಾಶಮಾಡಲು, —ತೊಡಗು; ಬುಡಕ್ಕೆ ಕೊಡಲಿ ಹಾಕು. S. one's wits to question ಪ್ರಶ್ನೆ, ಸಮಸ್ಯೆ, ಬಿಡಿಸಲು —ಬುದ್ಧಿ ಹಚ್ಚು, ಬುದ್ಧಿ ಪ್ರಯೋಗಿಸು. S. one's wits to another's (ಒಬ್ಬನೊಡನೆ) ಬುದ್ಧಿಗೆ ಬುದ್ಧಿಯನ್ನು ಓಡಿಸು; ವಾದಿಸು, ಚರ್ಚೆಮಾಡು. S. shoulder to wheel (Shoulder ನೋಡಿ). Set a (ಅಥವಾ ನಾವೆ the) watch (ಸ್ಥಳದಲ್ಲಿ) ಕಾವಲು ಹಾಕು, ಪಹರೆ ಇಡು. S. chairs (ಭೇಟಿ ಬರುವವರು, ಮೊ. ರಿಗೆ) ಕುರ್ಚಿಗಳನ್ನು ಹಾಕು, ಅಣಿಮಾಡಿಡು. S. clock *or* watch ಗಡಿಯಾರದ ಮುಳ್ಳುಗಳನ್ನು ಸರಿಯಾದ ಹೊತ್ತು ತೋರಿಸುವಂತೆ ತಿರುಗಿಸಿ ಇಡು. S. alarum (ಗೊತ್ತಾದ ಹೊತ್ತಿಗೆ ಬಾರಿಸುವಂತೆ) ಎಚ್ಚರಿಕೆ ಗಂಟೆಯನ್ನು ತಿರುಗಿಸಿ ಇಡು. S. eggs (ಕಾವು ಕೊಡಲು ಹೇಂಟೆ ಕುಳಿತುಕೊಳ್ಳುವುದಕ್ಕಾಗಿ) ಮೊಟ್ಟೆಗಳನ್ನಿಡು. S. hen (ಮೊಟ್ಟೆಗಳಿಗೆ ಕಾವು ಕೊಡಲು) ಹೇಂಟೆಯನ್ನು (ಮೊಟ್ಟೆಗಳ ಮೇಲೆ) ಕೂಡಿಸು, ಕೂಡುವಂತೆ ಮಾಡು. S. seed, plant ಬೀಜ ಬಿತ್ತು, ಸಸ್ಯ ನೆಡು. Quickset (Quick ನೋಡಿ). S. butterfly, etc. ಚಿಟ್ಟೆ, ಮೊ. ಗಳನ್ನು ಮಾದರಿಗಾಗಿ ಹರಡಿ ಅಣಿಮಾಡಿಡು. S. sail ಹಾಯಿಗಳನ್ನು ಏರಿಸು, ಎತ್ತಿ ಕಟ್ಟು; ಸಮುದ್ರ ಪ್ರಯಾಣ ಹೊರಡು. S trap ಬೋನು ಒಡ್ಡು. S. razor (ಸಾಣೆ ಹಿಡಿದಮೇಲೆ) ಕ್ಷೌರಕತ್ತಿಯ ಮೊನೆ ಹದ ಮಾಡು. S. saw ಗರಗಸದ ಹಲ್ಲುಗಳಿಗೆ ಪರ್ಯಾಯಕ್ರಮದಲ್ಲಿ —ಹೊರಬಾಗು ಕೊಡು, ಹೊರಮುಖವಾಗಿ ತಿರಿಚು; ಗರಗಸಕ್ಕೆ ಚಪರಾಸ್ ಹಾಕು. S. table ಊಟಕ್ಕೆ ಮೇಜನ್ನು ಸಿದ್ಧಗೊಳಿಸು, ಅಣಿಮಾಡು; ಮೇಜು ಹಾಕಿ ಬಡಿಸು. S. *or* S. up type (ಪದಗಳಾಗುವಂತೆ) ಅಚ್ಚುಮೊಳೆ ಜೋಡಿಸು. S. up MS. ಹಸ್ತಪ್ರತಿಯಲ್ಲಿರುವುದನ್ನು ಅಚ್ಚುಮೊಳೆಯಲ್ಲಿ ಜೋಡಿಸು. S. close, wide (ಪದಗಳನ್ನು ಅಥವಾ ಅಕ್ಷರಗಳನ್ನು) ಒತ್ತಾಗಿ (ತೆರಪಿಲ್ಲದಂತೆ), ಬಿಡಿ ಬಿಡಿಯಾಗಿ (ಹೆಚ್ಚು ತೆರಪಿರುವಂತೆ) ಮುದ್ರಿಸು. S. out[1] ಹರವಾಗಿ, ವಿಸ್ತಾರವಾಗಿ, —ಇರಿಸು; ಹರಡಿಡು. S. one's cap at (Cap ನೋಡಿ)]. ಜೋಡಿಸು, ಬಂಧಿಸು, ನೆಲೆಗೊಳಿಸು, ಕೇವಣಿಸು, ಭದ್ರಮಾಡಿ ಇಡು, ನಿರ್ಧರಿಸು, ತೀರ್ಮಾನಿಸು, ನೇಮಿಸು [S. bone, joint ಮುರಿದ ಅಥವಾ ಸ್ಥಾನ ತಪ್ಪಿದ ಮೂಳೆಯನ್ನು, ಕೀಲನ್ನು, —ಸ್ವಸ್ಥಾನದಲ್ಲಿಡು, ಸರಿಯಾಗಿ ಜೋಡಿಸಿಡು. S. fracture *or* dislocation ಮೂಳೆ ಮುರಿದಿರುವುದನ್ನು, ಸ್ಥಳ ತಪ್ಪಿರುವುದನ್ನು, ಸರಿಪಡಿಸಿಡು. S. eyes on (—ಮೇಲೆ) ಕಣ್ಣಿಡು, ಕಣ್ಣು ಹಾಕು, ದೃಷ್ಟಿ ನೆಡು; ನೋಡು. S. diamond, etc. (ಚಿನ್ನ, ಮೊ. ಗಳಲ್ಲಿ) ವಜ್ರ, ಮೊ. ನ್ನು ಖಚಿತಮಾಡು, ಕೇವಣಿಸು. S. stake in ground ದಸಿಯನ್ನು ನೆಲದಲ್ಲಿ ನೆಡು. Close-s. ಬಹಳ ಹತ್ತಿರ ಹತ್ತಿರವಾಗಿ, ತೆರಪಿಲ್ಲದೆ, ಒತ್ತಾಗಿ,—ಜೋಡಿಸಿದ, ಕೇವಣಿಸಿದ. S. one's heart, mind, hopes, etc. on (ಒಂದರಮೇಲೆ) ಮನಸ್ಸನ್ನು, ಭರವಸೆಯನ್ನು, ನಿರೀಕ್ಷೆಯನ್ನು —ಇಡು, ನಿಲ್ಲಿಸು. S. one's life on a chance ಪ್ರಾಣವನ್ನು ಅದೃಷ್ಟ ಪರೀಕ್ಷೆಗೆ, ಆಕಸ್ಮಿಕಕ್ಕೆ, —ಈಡು ಮಾಡು, ಒಡ್ಡು. S. price on (—ರ) ಬೆಲೆ —ತಿಳಿಸು, ಪ್ರಕಟಿಸು. S. person against another *or* a thing (ಒಬ್ಬನನ್ನು) ಮತ್ತೊಬ್ಬನಮೇಲೆ ಎತ್ತಿಕಟ್ಟು. (ಒಬ್ಬನಿಗೆ) ಮತ್ತೊಬ್ಬನಮೇಲೆ ಜಿದ್ದು ಹುಟ್ಟಿಸು. S. price on one's life *or* head (Price ನೋಡಿ). S. store *or* much by, (ಅಧ್ಯಾಹಾರವಾಗಿ) S. by ಬಹಳ ಬೆಲೆ ಕಟ್ಟು; ಬೆಲೆಯುಳ್ಳದ್ದೆಂದು ಎಣಿಸು; ಬಹಳ ಭರವಸೆ, ನಿರೀಕ್ಷಣೆ, —ಇಡು. S. one's face *or* oneself against (—ನ್ನು) ಬಲವಾಗಿ ಎದುರಿಸು, ವಿರೋಧಿಸು. S. one's teeth ಹಲ್ಲು ಕಚ್ಚಿಕೊ; (ಮು., ರೂಪ.) ಹಲ್ಲು ಕಚ್ಚಿಕೊಂಡು ಪ್ರಯತ್ನಿಸು, ದೃಢ ಮನಸ್ಸು ಮಾಡು]. (ಅನೇಕ ವೇಳೆ ಭೂ. ಕೃ.) ನಿಶ್ಚಲ, ನೆಟ್ಟ, ದೃಢ (S. smile, eyes, look, purpose). [Of s. purpose ಉದ್ದೇಶಪೂರ್ವಕವಾಗಿ; ಬುದ್ಧಿಪೂರ್ವಕವಾಗಿ. S. time ಮೊದಲೇ ಗೊತ್ತುಪಡಿಸಿದ ಕಾಲ, ಹೊತ್ತು. S. scene (Scene ನೋಡಿ). S. piece (ಸುಡುಮದ್ದಿನ ವಿನೋದದಲ್ಲಿ) ಸಾರುವೆಯ ಮೇಲೆ ಕಟ್ಟಿದ ಬಾಣಬಿರುಸಿನ ವಿನೋದ. S. phrase, terms ರೂಢಿಯ, ಪೂರ್ವಸಿದ್ಧ, —ವಚನ, ಪದಸಾಮಗ್ರಿ, ಪದಸರಣಿ. S. forms of prayers ಸಾಂಪ್ರದಾಯಿಕ ರೂಪದಲ್ಲಿರುವ, ಸಿದ್ಧ ಮಾದರಿಗಳ, —ಪ್ರಾರ್ಥನಾ ಗೀತಗಳು, ಸ್ತೋತ್ರಗಳು (ಆಶು ಸ್ತೋತ್ರಗಳಲ್ಲ). S. speech ಮೊದಲೇ ಸಿದ್ಧಗೊಳಿಸಿದ, ಬರೆದಿಟ್ಟುಕೊಂಡಿರುವ, —ಭಾಷಣ; ಪೂರ್ವಸಿದ್ಧ ಭಾಷಣ. S. fair (ಹವದ ವಿಷಯದಲ್ಲಿ; ಮುಂದೆ ಬದಲಾಯಿಸುವ ಸೂಚನೆಯಿಲ್ಲದೆ) ಸೊಗಸಾದ, ಹಿತಕರವಾದ, ಅನುಕೂಲವಾದ. S. on *or* upon ಪಡೆಯಲು—ದೃಢ ಮನಸ್ಸು ಮಾಡಿದ, ನಿರ್ಧರಿಸಿದ. (—ಲ್ಲಿ) ಮಗ್ನವಾದ, ಮನಸ್ಸು ನೆಟ್ಟ. Batsman is s. (ಚೆಂಡೆಸೆಗಾರನಿಗೆ ಅಳುಕದೆ) ದಾಂಡುಗಾರನು ಚೆನ್ನಾಗಿ ಊರಿ ನಿಂತಿದ್ದಾನೆ]. ಗೊತ್ತಾದ ಸ್ಥಿತಿಯಲ್ಲಿ ಇಡು; ಅಣಿಮಾಡಿ ಇಡು [S. things right, to rights, in order ಸರಿಯಾದ ಸ್ಥಿತಿಯಲ್ಲಿ, ನೇರ್ಪಡಿಸಿ, ಇಡು; ಕ್ರಮಪಡಿಸು. S. things in motion ಚಲಿಸುವಂತೆ ಮಾಡು; ಕಾರ್ಯಾರಂಭಮಾಡಿಸು. S. one's house in order (ರೂಪ.) ತನ್ನ ವ್ಯವಹಾರಗಳನ್ನು ಕ್ರಮಕ್ಕೆ ತಂದುಕೊ; ನೇರ್ಪಡಿಸಲು ಸುಧಾರಣೆಗಳನ್ನು ತರು. S. question at rest ಪ್ರಶ್ನೆಯನ್ನು, ಸಮಸ್ಯೆಯನ್ನು, —ಬಗೆಹರಿಸು, ಇತ್ಯರ್ಥಪಡಿಸು. S. person's heart at rest (ಒಬ್ಬನನ್ನು) ಸಮಾಧಾನಗೊಳಿಸು, ಶಮನಗೊಳಿಸು. S. person on his feet ಬಿದ್ದವನನ್ನು ಎಬ್ಬಿಸಿ ನಿಲ್ಲಿಸು; ಒಬ್ಬನು ಅವನ ಕಾಲಮೇಲೆ ಅವನು ನಿಂತುಕೊಳ್ಳುವಂತೆ ಮಾಡು; ಸ್ವತಂತ್ರನಾಗುವಂತೆ, ಸ್ವಾವಲಂಬಿಯಾಗುವಂತೆ, —ಮಾಡು. S. one in the way ದಾರಿ ತೋರಿಸು, ಮಾರ್ಗದರ್ಶನ ಮಾಡು. S. one on his way (ಪ್ರಾಚೀ. ಪ್ರ.) (ಬೀಳ್ಕೊಡುವಾಗ) ಜೊತೆಯಲ್ಲಿ ಸ್ವಲ್ಪ ದೂರ ಹೋಗಿ ಬಾ, ಸ್ವಲ್ಪ ದೂರ ಹೋಗಿ ಬಿಟ್ಟುಬರು. S. one right (ತಾನಾಗಿ ಮುಂದೆ ಬಿದ್ದು) ಒಬ್ಬನ ತಪ್ಪನ್ನು ತಿದ್ದು, ಸರಿಪಡಿಸು. S. one at ease (ಒಬ್ಬನನ್ನು ಪೇಚಾಟವಿಲ್ಲದಂತೆ. ಕಳವಳಪಡದಂತೆ) ಸಮಾಧಾನಗೊಳಿಸು; ಮನಸ್ಸನ್ನು ನಿರಾತಂಕಗೊಳಿಸು, (ನಾಚಿಕೆ ಬಿಡಿಸಿ) ಸಲಿಗೆಯಿಂದ ವರ್ತಿಸುವಂತೆ ಮಾಡು. S. at liberty,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

S. free (ಬಂಧನದಿಂದ) ಬಿಡುಗಡೆ ಮಾಡು ; ಸ್ವತಂತ್ರವಾಗಿ (ಹೋಗಲು) ಬಿಟ್ಟುಬಿಡು. S. persons by the ears, at variance *or* loggerheads (ಒಬ್ಬರೊಬ್ಬರಿಗೆ) ಜಗಳ ಹುಟ್ಟಿಸು. S. on fire ಬೆಂಕಿ ಹಚ್ಚು. S. Thames on fire (Fire ನೋಡಿ). S. movement, etc. on foot (ಒಂದರ ಬಗ್ಗೆ) ಕಾರ್ಯಕ್ರಮ, ಚಳವಳಿ —ಹೂಡು, ಪ್ರಾರಂಭಿಸು. S. table, company, etc., laughing *or* on *or* in a roar (ಗೋಷ್ಠಿ, ಮೊ. ಗಳಲ್ಲಿ) ನಗುವೆಬ್ಬಿಸು. S. teeth on edge (Edge ನೋಡಿ). S. at defiance ಪ್ರತಿಭಟಿಸು, ನಿರ್ಲಕ್ಷಿಸು. S. at naught ಕಡೆಗಣಿಸು, ನಿರ್ಲಕ್ಷಿಸು]. (ಕೆಲಸಕ್ಕೆ) ಹಚ್ಚು, ತೊಡಗು, ಹಾಕು [S. him to dictation, wood-chopping. Shall s. to work now ಕೆಲಸಕ್ಕೆ —ತೊಡಗುತ್ತೇನೆ, ಕೈಹಚ್ಚುತ್ತೇನೆ. S. oneself to do (—ಮಾಡಲು) ಮನಸ್ಸು ಮಾಡು, ಸಂಕಲ್ಪಿಸು, ಕೈಹಾಕು]. (ಮಾದರಿಯಾಗಿ, ಒಬ್ಬನು ಅದರಲ್ಲಿ ತೊಡಗುವುದಕ್ಕಾಗಿ) ಮುಂದಿಡು, ಪ್ರದರ್ಶಿಸು, ಮಾರ್ಗದರ್ಶನ ಮಾಡು [S., s. person, an example, task, problem ಮೇಲ್ಪಂಕ್ತಿ, ಹಾಕು, (ಮಾಡಲು) ಕೆಲಸ ನಿಯಮಿಸು, ಪ್ರಶ್ನೆ ಕೊಡು. S. the fashion ಸಂಪ್ರದಾಯ ಹಾಕು. S. the pace ಹೆಜ್ಜೆಯ ಗತಿಯನ್ನು ತೋರಿಸು, ನಿರ್ಧರಿಸು (ರೂಪ. ಸಹ). S. paper (ಪರೀಕ್ಷ್ಯರಿಗಾಗಿ) ಪ್ರಶ್ನಪತ್ರಿಕೆ ಸಿದ್ಧಗೊಳಿಸು, ರಚಿಸು. S. the temperament (ಪಿಯಾನೊ ವಾದ್ಯದ ಶ್ರುತಿ ಸರಿಮಾಡುವಲ್ಲಿ) ಉಳಿದವುಗಳಿಗೆ ಪ್ರಮಾಣ ವಾಗಿರುವಂತೆ ಒಂದು ಸ್ವರಾಷ್ಟಕದ ಸ್ವರಗಳ ಅಂತರವನ್ನು ಅಳವಡಿಸು. S. (to music) (ಹಾಡಿಗೆ, ಮಾತುಗಳಿಗೆ : ಸಂದರ್ಭಕ್ಕನುಸಾರವಾದ) ಸಂಗೀತ ಹೊಂದಿಸು ; ಸ್ವರ ಜೋಡಣೆ ಮಾಡು]. (ಮೇಲ್ಮೈಯಲ್ಲಿ) ಹುದುಗಿಸಿಡು, ಕೇವಣಿಸು, ಖಚಿತಮಾಡು (*With* ಉಪ. ದೊಡನೆ) (Gold s. with gems. Field s. with daisies. Sky s. with stars). (ದ್ರವಸ್ಥಿತಿಯಿಂದ, ಮೆತುಸ್ಥಿತಿಯಿಂದ ಅಥವಾ ಚಂಚಲಸ್ಥಿತಿ ಯಿಂದ) ಘನೀಭೂತವಾಗು, ಗಟ್ಟಿಯಾಗು, ಬಿರುಸಾಗು, ದೃಢವಾಗು; ಹೆತ್ತುಕೊ, ಹೆಪ್ಪುಕಟ್ಟು; ಆಕಾರ—ತಾಳು, ಪಡೆ; ನಿಷ್ಕೃಷ್ಟ ರೂಪಕ್ಕೆ ಬರು ; ಬಲಿ, ಪಕ್ವವಾಗು [Egg sets (ಬೇಯಿಸುವುದರಿಂದ ಅಥವಾ ಹೇಂಟೆ ಕಾವು ಕೊಡುವುದರಿಂದ) ಮೊಟ್ಟೆ ಹೆಪ್ಪುಕಟ್ಟುತ್ತದೆ. Hard s. (Hard ನೋಡಿ). Blossom sets (ದಳಗಳು ಉದುರಿ) ಹೂವು ಮಿಡಿ ಯಾಗುತ್ತದೆ. Fruit sets (ಹೂವಿನಿಂದ) ಮಿಡಿ—ಕಾಣಿಸಿಕೊಳ್ಳುತ್ತದೆ, ಹುಟ್ಟುತ್ತದೆ. Tree sets ಮರ ಫಲ ಬಿಡುತ್ತದೆ, (ಹೂವು ಉದುರಿ) ಹೀಚು ಬಿಡುತ್ತದೆ. Plaster of Paris sets quickly —ಬೇಗ ಗಟ್ಟಿ ಯಾಗುತ್ತದೆ. When his body, character, has s. —ರೂಪ ಗೊಂಡಾಗ, ನಿಷ್ಕೃಷ್ಟವಾದಾಗ. Thickset (Thick ನೋಡಿ). Over-exercise sets a boy's muscles prematurely ಮಿತಿಮೀರಿದ ವ್ಯಾಯಾಮವು ಹುಡುಗನ ಸ್ನಾಯುಗಳನ್ನು ಕಾಲಕ್ಕೆ ಮುಂಚೆ ಕಠಿನ ಮಾಡುತ್ತದೆ. Bone sets ಎಲುಬು ಗಡುಸಾಗುತ್ತದೆ. Face sets ಮುಖ ಕಠಿನಭಾವ—ತೋರುತ್ತದೆ, ತಾಳುತ್ತದೆ; ಮುಖ ಗಂಟಿಕ್ಕುತ್ತದೆ. Eyes s. (ಸತ್ತಾಗ, ಮೂರ್ಛೆ ಹೋದಾಗ, ಮೊ. ಸಂದರ್ಭಗಳಲ್ಲಿ) ಕಣ್ಣುಗಳು —ಆಡುವುದಿಲ್ಲ, ನಿಶ್ಚಲವಾಗುತ್ತವೆ]. ಕ್ಷಿತಿಜದಿಂದ ಕೆಳಕ್ಕೆ ಇಳಿ ; ಮುಳುಗು, ಅಸ್ತಮಿಸು (ರೂಪ. ಸಹ) (Sun, moon, sets. His star has s. *or* is s. ಅವನ ಪ್ರಾಬಲ್ಯ,. ವೈಭವ, —ಅಸ್ತಮಿಸಿದೆ). (ಉಬ್ಬರವಿಳಿತ, ಪ್ರವಾಹ, ಮೊ. ಗಳ ವಿಷಯದಲ್ಲಿ) ಚಲನಗೊಳ್ಳು, ಹರಿಯ ತೊಡಗು, ಶಕ್ತಿಗೂಡು, ಬಲವಾಗು ; (ಮನೋಭಾವ, ಪದ್ಧತಿ, ಮೊ. ಗಳ ವಿಷಯದಲ್ಲಿ) ಒಲೆ, ಪ್ರವೃತ್ತಿಯಿರು, ಬಲಗೊಳ್ಳು, ಉನ್ಮುಖವಾಗಿರು (Tide sets in ಭರತ ಪ್ರಾರಂಭವಾಗಿದೆ. Current sets strongly ಪ್ರವಾಹ ಬಲವಾಗುತ್ತದೆ. Opinion is setting against it ಅಭಿಪ್ರಾಯ ಅದಕ್ಕೆ ವಿರುದ್ಧವಾಗುತ್ತಿದೆ. His soul s. to grief ಅವನ ಜೀವ ದುಃಖೋನ್ಮುಖವಾಗಿ). (ಬೇಟೆಯ ನಾಯಿಯ ವಿಷಯದಲ್ಲಿ : ಬೇಟೆ ಹತ್ತಿರದಲ್ಲಿದೆ ಎಂದು ಸೂಚಿಸುತ್ತ) ಸೆಡೆತು, ನಿಮಿರಿ, —ನಿಂತು ಬಿಡು. (ನರ್ತಕರ ವಿಷಯದಲ್ಲಿ) ಪರಸ್ಪರ ಅಭಿಮುಖವಾಗಿ ಕುಣಿ (S. to partners). (ಉಡುಪಿನ ವಿಷಯದಲ್ಲಿ : ತೊಟ್ಟುಕೊಂಡವನಿಗೆ) ಸರಿ ಯಾಗಿ ಕುಳಿತುಕೊ, ಸರಿಯಾಗು, ಅಡಕವಾಗು (S. well, badly). Sharp-s. (Sharp ನೋಡಿ). **Sétter** (ನಾ.) (ಕ್ರಿಯಾರ್ಥ ಗಳಲ್ಲಿ). ಬೇಟೆಯನ್ನು ಪತ್ತೆಹಿಡಿದೊಡನೆಯೆ ಸೆಡೆತು ನಿಲ್ಲುವಂತೆ ತರಪೇತಾದ, ನಿಡುಗೂದಲ, ಹಲವು ಬಗೆಯ ನಾಯಿ : ಸೆಡೆ ನಾಯಿ (English, Irish, Gordon, s. ಇದರ ಜಾತಿಗಳು). **S.-on** ಛೂಬಿಡುವವನು ; ಪ್ರೇರೇಪಕ, ಚಿತಾವಣೆಗಾರ. **Sétting** (ನಾ.) (ಕ್ರಿಯಾರ್ಥಗಳಲ್ಲಿ). ಕವನ, ಮೊ. ಗಳ—ಸಂಗೀತ ಕ್ರಮ, ಸ್ವರ ಜೋಡಣೆ. ರತ್ನವನ್ನು ಖಚಿಸಿರುವ ಕಟ್ಟಡ, ಗೂಡು, ಕುಂದಣ ; (ರೂಪ.) (ಒಂದು ವಸ್ತುವನ್ನು, ಘಟನೆಯನ್ನು, ಪರಿಸ್ಫುಟಗೊಳಿಸುವ ಅದರ) ಹಿನ್ನೆಲೆ, ಸನ್ನಿವೇಶ, ಪರಿಸ್ಥಿತಿ, ಆವರಣ. (ನಾಟಕಶಾಲೆ) ರಂಗಭೂಮಿಯ ಮೇಲೆ ಏರ್ಪಡಿಸಿರುವ ಪ್ರದರ್ಶನ ಸನ್ನಿವೇಶ; ದೃಶ್ಯ ಸಲಕರಣೆ, ರಂಗಸಜ್ಜು; ವೇಷಭೂಷಣಗಳ ಹೊಂದಿಕೆ, ವ್ಯವಸ್ಥೆ ; ರಂಗ ವಿಧಾನ. S.-board ಕೀಟಶಾಸ್ತ್ರಜ್ಞರು ಕೀಟಗಳ ಮಾದರಿ ಗಳನ್ನು ಅಳವಡಿಸಿಡುವ ಹಲಗೆ : ಕೀಟವಿನ್ಯಾಸ ಫಲಕ. S.-box ಅಂತಸ್ತುಗಳಾಗಿ ಅಥವಾ ಸೆಳೆಖಾನೆಗಳಾಗಿ ಕೀಟವಿನ್ಯಾಸ ಫಲಕಗಳನ್ನು ಅಳವಡಿಸಿಟ್ಟಿರುವ ಪೆಟ್ಟಿಗೆ : ಕೀಟವಿನ್ಯಾಸ ಪೆಟ್ಟಿಗೆ. S.-needle ಮಾದರಿ ಕೀಟಗಳನ್ನು ಅಳವಡಿಸುವ, ಮರದ ಹಿಡಿಯ ಸೂಜಿ: ಕೀಟವಿನ್ಯಾಸದ ಸೂಜಿ. S.-rule ಅಚ್ಚಿನ ಮೊಳೆಗಳನ್ನು ಜೋಡಿಸುವಾಗ ಅವನ್ನು ತಾತ್ಕಾಲಿಕವಾಗಿ ಕದಲದಂತೆ ಇಡಲು ಉಪಯೋಗಿಸುವ ಹಿತ್ತಾಳೆಯ ಅಥವಾ ಉಕ್ಕಿನ ಪಟ್ಟಿ : ಜೋಡಣೆ ಪಟ್ಟಿ, ಒತ್ತುಪಟ್ಟಿ. S.-stick = Composing-stick (Compose ನೋಡಿ)

ಕ್ರಿ. ವಿ. ಮತ್ತು ಉಪ. ಗಳೊಡನೆ : S. about (ಕೆಲಸಕ್ಕೆ, —ಮಾಡಲು) ಆರಂಭಿಸು, ಕೈಯಿಡು, ತೊಡಗು. S. back ತಡೆ (ಗಟ್ಟು) ; ಹಿಂದುವರಿಸು, ಹಿನ್ನಡಸು. S. down ಬರೆದಿಡು, ಬರಹದಲ್ಲಿ ಕಾಣಿಸು ; (—ಎಂದು) ಹೇಳು, ಪರಿಗಣಿಸು (*As*) ; (ಕಾರಣವೆಂದು, ಸೇರಿದ್ದೆಂದು) ತಳಿ, ಆರೋಪಿಸು (*To*). S. forth ಪ್ರಕಟಿಸು, ಒಕ್ಕಣಿಸು, ವಿವರಿಸು, ಪ್ರತಿಪಾದಿಸು ; ಅಲಂಕರಿಸು, ಅಂದಗೊಳಿಸು ; (ಪ್ರಯಾಣ, ದಂಡಯಾತ್ರೆ) ಹೊರಡು, ಪ್ರಾರಂಭಿಸು. S. forward (ಒಬ್ಬನ, ಒಂದು ಯೋಜನೆಯ) ಪುರೋವೃದ್ಧಿಗೆ, ಮುನ್ನಡೆಗೆ, —ಸಹಾಯವಾಗು : ಮುನ್ನಡಸು ; (ಪ್ರಾಚೀ. ಪ್ರ.) ಮುನ್ನಡೆಯತೊಡಗು, ಮುಂದುವರಿ. S. in (ಕೆಲಸಕ್ಕೆ) ಪ್ರಾರಂಭಿಸು (*To* ಉಪ. ದೊಡನೆ) ; ತಲೆದೋರು, ಕಾಣಿಸಿಕೊ, ಹುಟ್ಟು ; ಎಡೆಬಿಡದೆ ಬರು, ರೂಢಿಯಾಗು, ಸ್ಥಿರವಾಗು (It sets in to rain ಮಳೆಗೆ ಇಟ್ಟುಕೊಳ್ಳುತ್ತದೆ). S. off ಅಲಂಕಾರವಾಗಿ, ಕಾಂತಿವರ್ಧಕವಾಗಿ, —ಇರು ; ಎದ್ದು ಕಾಣುವಂತೆ, ಪ್ರಮುಖವಾಗುವಂತೆ, —ಮಾಡು. (ನಗುವುದಕ್ಕೆ, ಇಷ್ಟ ವಿಷಯದಮೇಲೆ ಮಾತನಾಡುವುದಕ್ಕೆ) ತೊಡಗಿಸು, ಹಚ್ಚು ; ಪ್ರಯಾಣ ಹೊರಡು. S. on ಚುಚ್ಚಿ ಕೊಡು. ಚಿತಾಯಿಸು, ಹಚ್ಚಿ ಕೊಡು, ಪ್ರೇರೇಪಿಸು ; (ಆಕ್ರಮಣಕ್ಕೆ) ಮುನ್ನುಗ್ಗು. (ನಾಯಿಯನ್ನು) ಛೂಬಿಡು ; ಮೇಲೆ ಬೀಳು, ಆಕ್ರಮಣ ಮಾಡು. S. out ಅಲಂಕಾರ ಮಾಡು, ಅಂದಗೊಳಿಸು; ಪ್ರದರ್ಶಿಸು, ಪ್ರತಿ ಪಾದಿಸು, ವಿವರಿಸು ; ಪ್ರಯಾಣ ಹೊರಡು. S. to (ಮು., ಕಾದಾಟಕ್ಕೆ, ವಾದಕ್ಕೆ) ಹುರುಪಿನಿಂದ ತೊಡಗು. S. up (ಅಂಗಸಾಧನೆಯಿಂದ) ಮೈ ಕಟ್ಟು ಬೆಳಸು, ದೇಹಸೌಷ್ಠವ ಪಡೆ (ಮು., ಭೂ. ಕೃ. ನಲ್ಲಿ : A well s.-up man) ; (ಸಂಸ್ಥೆ, ವ್ಯಾಪಾರ, ಮೊ. ನ್ನು) ಸ್ಥಾಪಿಸು, ಪ್ರಾರಂಭಿಸು ; (ಹುಣ್ಣು, ರೋಗಸ್ಥಿತಿ, ಮೊ. ನ್ನು) ಉಂಟುಮಾಡು ; (ಒಬ್ಬನನ್ನು, ಒಂದು ವೃತ್ತಿ, ಮೊ. ಗಳಲ್ಲಿ) ನಿಲ್ಲಿಸು, ನೆಲೆಗೊಳಿಸು ; (ತಾನು ಒಂದು ವೃತ್ತಿ, ಮೊ. ಗಳಲ್ಲಿ) ನಿಲ್ಲು, ನೆಲಸು ; (ಬೇಕಾದ ಸಾಮಗ್ರಿಯನ್ನು) ಒದಗಿಸು, ಹವಣಿಸು (*In* or *with* ಉಪ. ದೊಡನೆ : Am s. up with novels for the winter) ; (ಪ್ರಕಟನೆ, ಮೊ. ನ್ನು) ಕಾಣುವಂತೆ ಇಡು ; (ಉದಾಹರಣೆ, ಮಾದರಿ, ಪ್ರಮಾಣ) ಹಾಕಿಕೊಡು, ಸ್ಥಾಪಿಸು ; (ಪ್ರತಿಭಟನೆ, ಚೀತ್ಕಾರ, ಮೊ. ನ್ನು) ಗಟ್ಟಿಯಾಗಿ ಎಬ್ಬಿಸು ; (ತತ್ತ್ವ, ಮೊ. ನ್ನು) ಪ್ರತಿಪಾದಿಸು : (ಗ್ಲಾನಿಯಿಂದ, ಅನಾರೋಗ್ಯದಿಂದ) ಸ್ವಾಸ್ಥ್ಯಗೊಳಿಸು, ಚೇತರಿಸಿಕೊಳ್ಳುವಂತೆ ಮಾಡು : ಸ್ವಾಸ್ಥ್ಯ ಹೊಂದು, ಚೇತರಿಸಿಕೊ. S. up for

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(—ಎಂದು) ತೋರ್ಪಡಿಸಿಕೊ, ನಟಿಸು (Sets up for a scholar ಪಂಡಿತನೆಂದು ತೋರ್ಪಡಿಸಿಕೊಳ್ಳುತ್ತಾನೆ). S. upon =S. on.

Set ಸೆಟ್ (ನಾ.) (ಒಂದೇ ಬಗೆಯ ಅಥವಾ ಪರಸ್ಪರ ಪೂರಕವಾದ ವಸ್ತುಗಳ ಅಥವಾ ವ್ಯಕ್ತಿಗಳ) ತಂಡ, ಕಟ್ಟು, ಜೊತೆ, ಜೋಡಿ, ವರ್ಗ, ಶ್ರೇಣಿ, ಕೂಟ [S. of teeth (ಸ್ವಾಭಾವಿಕವಾದ ಅಥವಾ ಕೃತಕವಾದ) ಹಲ್ಲುಸಾಲು, ಹಲ್ಲುಕಟ್ಟು. Dinner s. ಊಟದ ಪಾತ್ರೆಗಳು (ತಟ್ಟೆ, ಬಟ್ಟಲು, ಮೊ. ವು) (=Dinner-service) (Serve ನೋಡಿ). Toilet s. ಪ್ರಸಾಧನ(ಕ್ಕೆ ಉಪಯೋಗಿಸುವ) ಪಾತ್ರೆಗಳು. The racing, political, s. ಕುದುರೆ ಜೂಜುಗಾರರ, ರಾಜಕೀಯ ವ್ಯವಹಾರಿಗಳ, ವರ್ಗ. S. of quadrilles *or* s. ಚೌಕನೆಯ ಕುಣಿತ(ದ ಚಲನ ವಲನ ವಿನ್ಯಾಸ). S. of dancers *or* s. ಈ ಚೌಕನೆಯ ಕುಣಿತಕ್ಕೆ ಬೇಕಾದ ನರ್ತಕ ಸಂಖ್ಯೆ, ಜೊತೆಗಳು. The first, second, s. (ಟೆನಿಸ್ ಆಟ, ಮೊ. ಗಳಲ್ಲಿ) ಮೊದಲನೆಯ, ಎರಡನೆಯ, ಆಟತಂಡ. S. of Exchange (ಕೊಟ್ಟ ಹುಂಡಿ ತಪ್ಪುದಾರಿ ಹಿಡಿಯ ಬಹುದೆಂಬ ಶಂಕೆಯಿಂದ ಕೊಡುವ) ಒಂದೇ ಹುಂಡಿಯ ಮೂರು ಪ್ರತಿಗಳ ತಂಡ] . (ಹುಟ್ಟಹಾಕುವುದಕ್ಕಾಗಿ) ಅಂಟು, ಸಸಿ, ಅಗೆ. (ಹೂವು ಉದುರಿ ಕಾಣಿಸಿದ) ಹೀಚು (ಕಾವ್ಯ) (ಸೂರ್ಯನ, ದಿನದ) ಮುಳುಗು, ಅಸ್ತ (ಮಯ). (ಪ್ರವಾಹ, ಗಾಳಿ, ಅಭಿಪ್ರಾಯ, ಮೊ. ಗಳ) ಪ್ರವಣತೆ, ಒಲವು, ಸೆಳೆತ (The s. of the current ಪ್ರವಾಹದ ಸೆಳೆತ. The s. of his mind is towards intolerance ಅವನ ಮನಸ್ಸಿನ ಪ್ರವೃತ್ತಿ ಅಸಹನೆಯ ಕಡೆಗೆ ಇದೆ). ಅಳವಟ್ಟಿರುವ ರೀತಿ ; ರೂಪ, ಆಕಾರ ; ರೂಢಿಯಾದ ನಿಲವು ; (ತಲೆ, ಮೊ. ವು ಇರುವ) ಧಂಗಿ ; ವಿನ್ಯಾಸ ; (ಉಡುಪು, ಮೊ. ಗಳು) ಮೈಮೇಲೆ ಕುಳಿತು ಕೊಳ್ಳುವ ರೀತಿ, ಹೊಂದಿಕೆ (The s. of the hills ಗುಡ್ಡಗಳ ವಿನ್ಯಾಸ. The s. of his head). (ಒಂದೇ ನಮೂನೆ ಭಾರಕ್ಕೆ ಒಳಪಟ್ಟದ್ದರಿಂದ ಅಥವಾ ಒಂದೇ ಸ್ಥಿತಿಯಲ್ಲಿ ಇದ್ದದ್ದರಿಂದ ಉಂಟಾಗುವ) ಬಾಗು, ಓಲು, ರೂಪ ಬದಲಾವಣೆ (Has got a s. to the right ಅದು ಬಲಕ್ಕೆ ಬಾಗಿದೆ, ಓಲಿದೆ). ಗರಗಸದ ಹಲ್ಲುಗಳು ಒಂದು ಬಿಟ್ಟು ಒಂದರಂತೆ (ಎಡಕ್ಕೆ ಅಥವಾ ಬಲಕ್ಕೆ) ಓಲಿರುವುದು ; ಈ ಓಲಿನ ಪ್ರಮಾಣ. (ಗೋಡೆಗೆ) ಗಾರೆಯ ಕೊನೆಯ ಮೆತ್ತಡ, ಮೆತ್ತನೆ. (ಕಲ್ಲಿದ್ದಲ ಗಣಿಯಲ್ಲಿ) ಸುರಂಗದ ಪಕ್ಕಗಳಿಗೆ ಆಧಾರವಾದ ಮರದ ದಿಮ್ಮಿ ಕಟ್ಟು. (ಅಚ್ಚಿನ ಮೊಳೆಗಳಲ್ಲಿ) (ಅಕ್ಷರಗಳು ಒತ್ತಾಗಿ ಅಥವಾ ಬಿಡಿಯಾಗಿ ಇರುವಂತೆ ಕಾಣಿಸಲು) ಅಕ್ಷರಕ್ಕೂ ಮೊಳೆಯ ಅಂಚಿಗೂ ಇರುವ ಅಂತರ. ಗೂಡಿನಲ್ಲಿರುವ ಮೊಟ್ಟೆಗಳ ತಂಡ ; ಹಕ್ಕಿ ಕಾವಿಗೆ ಕೂಡುವ ಮೊದಲು ಒಮ್ಮೆ ಇಟ್ಟ ಮೊಟ್ಟೆಗಳು ; ಒಂದು ತಂಡದ ಮೊಟ್ಟೆಗಳು. ಬೇಟೆ ನಾಯಿ ಬೇಟೆಯ ಹತ್ತಿರದಲ್ಲಿ ಸೆಡೆತು ನಿಂತು ಮಾಡುವ ಸೂಚನೆ [(ಅನೇಕ ವೇಳೆ) Dead s. Make a dead s. at (ರೂಪ.) (ವಾದ, ಅಪಹಾಸ್ಯ, ಮೊ. ಗಳಿಂದ) ತೀವ್ರವಾಗಿ ಪ್ರತಿಭಟಿಸು, ಮೇಲೆ ಬೀಳು ; ಉತ್ಕಟಾವಸ್ಥೆಗೆ, ವಿಷಮಾವಸ್ಥೆಗೆ, ತರಲು—ನಿರ್ಧರಿಸು, ಹಟ ಹಿಡಿ]. ಬ್ಯಾಡ್ಜರ್ ಮೃಗದ ಬಿಲ. ಹಾಸುಗಲ್ಲು. ತೂತು ಕೊರೆಯುವ, ಮೊಳೆ ಹೊಡೆಯುವ ಮತ್ತು ಸೆಳೆಯುವ, ಹಲವು ಬಗೆಯ ಸಲಕರಣೆ. (ನಾಟಕಶಾಲೆ) =S. scene. **S.-back** (ಪ್ರಗತಿಗೆ) ತಡೆ, ಪ್ರತಿಬಂಧ ; ಮರುಕೊಳಿಸುವುದು ; ಹಿನ್ನಡೆ, ಹಿಮ್ಮೆಟ್ಟು. **S.-down** (ಅನಿರೀಕ್ಷಿತವಾದ, ಅಪಮಾನಕರವಾದ) ಛೀಪೆಟ್ಟು, ವಾಗ್ದಂಡನೆ. **S.-off** (ಲೆಕ್ಕಾಚಾರ, ಮೊ. ಗಳಲ್ಲಿ) ಪಡಿ, ಈಡು, ಉತ್ತಾರ, ಪರಿಹಾರ; ಎದುರು ದಾವ; ಕಾಂತಿವರ್ಧಕ, ಅಲಂಕಾರಕ; ಭೂಷಣಪ್ರಾಯವಾದದ್ದು. (ವಾ. ಶಾ.) =Offset. **S.-out** ಪ್ರಾರಂಭ, ಉಪಕ್ರಮ, ಮೊದಲು (At the first s.-o. ಪ್ರಥಮದಲ್ಲಿಯೆ, ಪ್ರಾರಂಭದಲ್ಲಿಯೆ). ಸಜ್ಜು ; (ಪಾತ್ರೆ, ಆಹಾರ, ಸಾಮಾನು, ಮೊ. ಗಳ) ಅಣಿ, ಓರಣ, ಪ್ರದರ್ಶನ. **S.-to** (ಮು., ಮುಷ್ಟಿಯಿಂದ ಮಾಡುವ) ದ್ವಂದ್ವ ಯುದ್ಧ ; (ರೂಪ.) ಹೋರಾಟ ; ವಾಕ್ಕಲಹ ; ವಾಗ್ವಾದ. **S.-up** (ದೇಹದ) ನಿಲವು, ಧಂಗಿ.

Setáceous ಸಿ(ಲ)ಟೇಷಸ್ (ಗು.) ಬಿರುಗೂದಲುಳ್ಳ, ಬಿರುಗೂದಲಿನಂಥ, ಬಿರುಗೂದಲಿನಾಕಾರದ. **Setáceously** (ಕ್ರಿ. ವಿ.) ; **Setíferous** ಸಿಟಿಫೆರಸ್ (ಗು.), **Setígerous** ಸಿಟಿಜೆರಸ್ (ಗು.), **Setóse** ಸಿಟೋಸ್ (ಗು.) ಬಿರುಗೂದಲುಳ್ಳ.

Setíferous, Setígerous, Setóse. **Setaceous** ನೋಡಿ.

Séton ಸೀಟನ್ (ನಾ.) (ಕುದುರೆ, ಮೊ. ಗಳ ಶಸ್ತ್ರವೈದ್ಯ) ರಕ್ತ, ಕೀವು, ಮೊ. ಗಳ ಸ್ರಾವಕ್ಕಾಗಿಯೂ ಬೇರೊಂದು ಭಾಗದ ನೋವನ್ನು ಕಡಮೆ ಮಾಡುವುದಕ್ಕಾಗಿಯೂ ಚರ್ಮದ ಪದರದ ಮೂಲಕ ಹೊಗಿಸಿದ ದಾರ, ಬಟ್ಟೆಯ ಪಟ್ಟಿ, ಮೊ. ವು : ಗಾಯಬತ್ತಿ. **S.-needle** ಈ ಬತ್ತಿಯನ್ನು ತೂರಿಸುವ ಸೂಜಿ : ಗಾಯಬತ್ತಿ ಸೂಜಿ.

Set square ಸೆಟ್ ಸ್ಕ್ವೇರ್ (ನಾ.) ನಕ್ಷೆಗಾರನು ಕೋನ ರೇಖೆಗಳನ್ನು ಬರೆಯಲು ಉಪಯೋಗಿಸುವ ೯೦°, ೬೦°, ೩೦° ಗಳ, ಇಲ್ಲವೆ ೯೦°, ೪೫°, ೪೫° ಗಳ ಕೋನಗಳುಳ್ಳ, ಮರದ ಅಥವಾ ಲೋಹದ ಫಲಕ ಸಲಕರಣೆ : ಮುಮ್ಮೂಲೆ ಪಟ್ಟಿ.

Sett ಸೆಟ್ (ನಾ.) ಕೆಲವು ಪಾರಿಭಾಷಿಕ ಪ್ರಯೋಗಗಳಲ್ಲಿ Set (ನಾ.) ಪದಕ್ಕೆ ಬದಲಾಗಿ ಉಪಯೋಗಿಸುವ ರೂಪ.

Setteé ಸೆಟೀ (ನಾ.) ಒಬ್ಬರಿಗಿಂತ ಹೆಚ್ಚು ಮಂದಿ ಕುಳಿತುಕೊಳ್ಳುವಂತೆ ರಚಿಸಿರುವ, ತೋಳುಗಳೂ ಒರಗುಬೆನ್ನೂ ಉಳ್ಳ, ಒಂದು ಬಗೆಯ ಉದ್ದ ಪೀಠ.

Sétter, Sétting. **Set** (ಕ್ರಿ.) ನೋಡಿ.

Séttle[1] ಸೆಟ್‌ಲ್ (ನಾ.) ಎತ್ತರವಾದ ಬೆನ್ನೂ ತೋಳುಗಳೂ ಉಳ್ಳ, ಪೀಠದ ಕೆಳಗೆ ನೆಲದವರೆಗೆ ಪೆಟ್ಟಿಗೆಯುಳ್ಳ, ಒಂದು ಬಗೆಯ ಬೆಂಚು : ಪೆಟ್ಟಿಗೆ ಬೆಂಚು.

Séttle[2] ಸೆಟ್‌ಲ್ (ಕ್ರಿ.) (ಹೆಚ್ಚು ಕಡಮೆ ಕಾಯಮ್ಮಾದ ಸ್ಥಳದಲ್ಲಿ, ಜೀವನ ಕ್ರಮದಲ್ಲಿ) ನೆರೆಯಾಗಿ —ನಿಲ್ಲು, ನಿಲ್ಲಿಸು ; ನೆಲೆಗೊಳ್ಳು, ನೆಲೆಗೊಳಿಸು; ನೆಲಸು ; ಸ್ಥಾಪಿಸು, ಸ್ಥಾಪನೆಯಾಗು (ಅನೇಕ ವೇಳೆ *down* ಪದ. ದೊಡನೆ) ; ಕಾಲೂರು, ತಳವೂರು, ನಿಲ್ಲು, ಇಡು, ಮಡಗು ; (ಕೆಲವು ಕಾಲ, ವಿಶ್ರಾಂತಿಗಾಗಿ) ಕೂರು, ಕೂರಿಸು, ತಂಗು ; ಸ್ತಿಮಿತಕ್ಕೆ —ಬರು, ತರು ; ಸ್ಥಿರ —ವಾಗು, ಮಾಡು ; ಶಾಂತ, ಸಮಾಧಾನ, —ಆಗು, ಮಾಡು ; ತಿಳಿಯಾಗು, ತಿಳಿಯಾಗಿಸು (ಅನೇಕ ವೇಳೆ *down* ಉಪ. ದೊಡನೆ) ; ಗೊತ್ತುಮಾಡು, ಗೊತ್ತಿಗೆ ಬರು ; ನಿರ್ಧರಿಸು, ನಿರ್ಧರವಾಗು; ತೀರ್ಮಾನ, ಇತ್ಯರ್ಥ,—ಆಗು, ಮಾಡು; ತೀರಿಸು; ಬಗೆಹರಿ, ಬಗೆಹರಿಸು [Shall s. in Bangalore ಬೆಂಗಳೂರಿನಲ್ಲಿ ನೆಲಸುತ್ತೇನೆ. S. feet in stirrups ಅಡಿಯನ್ನು ರಿಕಾಪಿನಲ್ಲಿಡು. S. oneself in chair ಕುರ್ಚಿಯಲ್ಲಿ ಕೂರು. S. down to married life ಮದುವೆಯಾಗಿ ಸಂಸಾರದಲ್ಲಿ ನಿಲ್ಲು. Cannot s. to anything ಅವನು ಎಲ್ಲೂ ಸ್ತಿಮಿತವಾಗಿರಲಾರ, ಸ್ಥಿರವಾಗಿ ನಿಲ್ಲಲಾರ. Stand beer to s. ಬಿಯರ್ ಮದ್ಯವನ್ನು ತಿಳಿಯಾಗಲು ಬಿಡು. Let the excitement s. down ಗಡಿಬಿಡಿ, ಉದ್ರೇಕ, —ಶಾಂತವಾಗಲಿ. Must get it settled up ಅದನ್ನು ಇತ್ಯರ್ಥಮಾಡಿಸಿಕೊಳ್ಳಬೇಕು. Settled convictions ದೃಢಗೊಂಡ ಮನವರಿಕೆಗಳು ; ಬೇರೂರಿದ ನಿಶ್ಚಯಗಳು. Settled melancholy ಸ್ಥಿರವಾಗಿ ನೆಲಸಿದ ವಿಷಣ್ಣತೆ. Settled order, state, government ವ್ಯವಸ್ಥಿತ —ಕ್ರಮ, ಸ್ಥಿತಿ, ಸರಕಾರ ; ಸ್ಥಿರ ವ್ಯವಸ್ಥೆ, ಸ್ತಿಮಿತ ಸ್ಥಿತಿ, ಸ್ಥಾಪಿತ ಸರಕಾರ. A liqueur to s. one's dinner ತಿಂದದ್ದು ಜೀರ್ಣವಾಗುವುದಕ್ಕಾಗಿ ಕುಡಿದ ಮದ್ಯ. S. the day ದಿನ, ತಾರೀಖು,—ಗೊತ್ತುಪಡಿಸು. S. quarrel, question ಜಗಳವನ್ನು, ಪ್ರಶ್ನೆಯನ್ನು, ಬಗೆಹರಿಸು. What have you settled on *or* settled? ನೀನು ಏನನ್ನು ನಿರ್ಧರಿಸಿದ್ದೀಯೆ ? S. the succession ಪಟ್ಟಕ್ಕೆ ಯಾರು ಬರಬೇಕೆಂಬುದನ್ನು ನಿರ್ಧರಿಸು. That settles the matter *or* question ಅದು ವಿಷಯವನ್ನು ಬಗೆಹರಿಸಿತು. S. one's affairs (ಮು., ಸಾಯುವುದಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊದಲು ಅಂತಿಮ ಇಷ್ಟಪತ್ರ ಬರೆಯುವುದು, ಮೊ. ಗಳ ಮೂಲಕ) ಸ್ಥಿತಿಗತಿಗಳನ್ನು ಗೊತ್ತುಮಾಡಿಡು]. ನೆಲಸುನಾಡಿನಲ್ಲಿ ನೆಲಸು; (ದೇಶದಲ್ಲಿ) ನೆಲಸುನಾಡಿಗರನ್ನು ಸ್ಥಾಪಿಸು; ನೆಲಸುನಾಡಿಗನಾಗಿ ನಿಲ್ಲು; ನೆಲಸುನಾಡು ಸ್ಥಾಪಿಸು. (ದ್ರವದ ತಳಭಾಗಕ್ಕೆ, ಕೆಳಗಡೆಗೆ) ಇಳಿ; ತಳದಲ್ಲಿ ನಿಲ್ಲು; ಗಟ್ಟಿಯಾಗು, ಕೂತುಕೊ (The solid matter soon settles ಘನಪದಾರ್ಥ ಬೇಗನೆ ತಳದಲ್ಲಿ ನಿಲ್ಲುತ್ತದೆ. Soil, house, foundation, settles ಮಣ್ಣು, ಮನೆ, ತಳಹದಿ, ಕೂತುಕೊಳ್ಳುತ್ತದೆ, —ಭದ್ರವಾಗಿ ಕೂರುತ್ತದೆ. Ship settles ಹಡಗು ತಳ ಮುಟ್ಟುತ್ತದೆ, ತೇಲುವುದಿಲ್ಲ). ಸಮಾಪ್ತಿ ಮಾಡಿಬಿಡು; ತೀರಿಸಿಬಿಡು; (ಲೆಕ್ಕ, ಮೊ. ನ್ನು) ಬಗೆಹರಿಸು, ಫೈಸಲು ಮಾಡು, ಪರಿಹರಿಸು. [S. person (ಒಬ್ಬನನ್ನು ವಾದ, ಪ್ರತಿಭಟನೆ, ಕೊರೆ, ಮೊ. ಉಪಾಯದಿಂದ) ಪೂರೈಸಿಬಿಡು; ಕಾಟವನ್ನು ಪರಿಹರಿಸಿಕೊ. S. up (accounts) (ಲೆಕ್ಕ) ಬಗೆಹರಿಸು, ಫೈಸಲು ಮಾಡು. S. person's hash *or* business (Hash ನೋಡಿ). Settled (ಹಣ ಸಂದ ಹುಂಡಿ, ಮೊ. ಗಳ ಮೇಲೆ ಬರೆಯುವ ಒಕ್ಕಣೆ) ಫೈಸಲಾಗಿದೆ. Will you s. for me? ನನಗಾಗಿ ನೀನು ಆ ಬೆಲೆಪಟ್ಟಿಯನ್ನು (ಹಣ ಕೊಟ್ಟು) ಫೈಸಲು ಮಾಡುವೆಯಾ? S. with creditors ಸಾಲಗಾರರೊಡನೆ ಲೆಕ್ಕ ಫೈಸಲು ಮಾಡಿಕೊ. Settling-day ಲೆಕ್ಕತೀರ್ಮಾನದ ದಿನ (ಮು., ಪತ್ರವ್ಯಾಪಾರ ಕಚ್ಚೇರಿಯಲ್ಲಿ ಪಕ್ಷಕ್ಕೊಮ್ಮೆ ಲೆಕ್ಕ ತೀರ್ಮಾನ ಮಾಡುವ ದಿನ)]. (ಆಸ್ತಿ, ಮೊ. ನ್ನು) ಜೀವಾವಧಿ ಅನುಭೋಗಕ್ಕೆ ಕೊಡು, ವಹಿಸಿಕೊಡು [Settled an annuity on him ಅವನಿಗೆ ಜೀವಾವಧಿ ವರ್ಷಾಶನವನ್ನು ಕೊಟ್ಟನು. Settled all his property on his wife ಅವನು ಎಲ್ಲ ಆಸ್ತಿಯನ್ನೂ ತನ್ನ ಹೆಂಡತಿಗೆ ಬರೆದುಕೊಟ್ಟನು, ವಹಿಸಿಬಿಟ್ಟನು. Settled estate ಗೊತ್ತಾದ ಷರತ್ತಿನಮೇಲೆ ಜೀವಾವಧಿ ಅನುಭೋಗವುಳ್ಳ ಹಿಡುವಳಿ(ಯ ಆಸ್ತಿ): ಜೀವಾವಧಿ ಹಿಡುವಳಿ(ಯ ಆಸ್ತಿ)]. **Séttlement** (ನಾ.) (ಕ್ರಿಯಾರ್ಥಗಳಲ್ಲಿ); (ನ್ಯಾ. ಶಾ.) (ದಾನ ವಿಕ್ರಯಗಳ ಮೂಲಕವಾಗಿ ಮತ್ತು ವಂಶಿಕ ಹಕ್ಕಿಗಿಂತಲೂ ಬೇರೆ ರೀತಿಯಲ್ಲಿ ಪ್ರಯೋಜ್ಯರಿಗೆ ಆಸ್ತಿ ಭಾಗ ದೊರೆಯುವಂತೆ ಮಾಡಿದ) ಆಸ್ತಿ ವ್ಯವಸ್ಥೆ; ಈ ಆಸ್ತಿಯ ವರ್ಗಾವಣೆ; ಇದರ ವರ್ಗಪತ್ರ [Marriage s. (ತನ್ನ ಹೆಂಡತಿ, ಆಕೆಯಲ್ಲಿ ಹುಟ್ಟುವ ತನ್ನ ಮಕ್ಕಳು, ಮೊ. ರಿಗಾಗಿ ಮದುವೆಗೆ ಮೊದಲೊ ಆಮೇಲೊ ಆಸ್ತಿ ಕೊಡುವುದು): ಮದುವೆಯ ತೆರ]. ಸಮಾಜ ಸುಧಾರಣೆಯ ಉದ್ದೇಶದಿಂದ ಕೆಲಸಗಾರರೊಡನೆ ಆಪ್ತ ಸಂಬಂಧ ಬೆಳಸುವುದಕ್ಕಾಗಿ ಬಡವರ ವಸತಿ ಪ್ರದೇಶದಲ್ಲಿಯೆ ವಾಸಮಾಡುವ ವಿದ್ಯಾವಂತರ ತಂಡ: ಸುಧಾರಕ(ರ) ವಸತಿ; ಸೇವಾ ವಸತಿ. ವಸಾಹತು; ಪಾಳೆಯ; ನೆಲಸುನಾಡು. (ತಳ ಸಡಿಲವಾಗಿ ಗೋಡೆ, ಮನೆ, ಮೊ. ಗಳು) ಕೂರುವುದು. (ಇಂಡಿಯದಲ್ಲಿ) ಭೂಗಂದಾಯದ —ಶಿಸ್ತು, ವ್ಯವಸ್ಥೆ. Act of S. ಇಂಗ್ಲೆಂಡಿನ ರಾಜ್ಯಾಧಿಕಾರವನ್ನು ಹ್ಯಾನೋವರ್ ಮನೆತನದ ಸೋಫಿಯಾವಿಗೂ ಆಕೆಯ ಉತ್ತರಾಧಿಕಾರಿಗಳಿಗೂ ವಹಿಸಿದ ೧೭೦೧ರ ಶಾಸನ. **Séttler** (ನಾ.) (ಕ್ರಿಯಾರ್ಥಗಳಲ್ಲಿ); ನೆಲಸುನಾಡಿಗ; ನೆಲಸಿಗ; ಮೊದಲಲ್ಲಿ ನೆಲಸಿದವನು. (ಅಸಂ.) ತೀರಿಸಿ ಬಿಡುವ, ಫೈಸಲು ಮಾಡುವ, —ಏಟು, ವಾದ, ಘಟನೆ; ನಿರ್ಣಾಯಕ.

Séven ಸೆವ್‌ನ್ (ಗು., ನಾ.) ಏಳು, ಸಪ್ತ (೭, 7, VII) [(ಅನೇಕ ವೇಳೆ ಅಧ್ಯಾಹಾರವಾದ ನಾಮಪದದೊಡನೆ ಅನ್ವಯವಾಗಿ): S. of them ಅವರಲ್ಲಿ ಏಳ್ವರು. S. o'clock *or* s. ಏಳು ಗಂಟೆ. One & s., 1/7 ಒಂದು ಷಿಲಿಂಗು ಏಳು ಪೆನಿ. S. & six, 7/6 ಏಳು ಷಿಲಿಂಗು ಆರು ಪೆನಿ. Twenty-s. *or* s.-&-twenty ೨೭. Was s. last birthday ಹಿಂದಿನ ಹುಟ್ಟಿದ ಹಬ್ಬಕ್ಕೆ ಏಳು ವರ್ಷವಾಗಿತ್ತು. One-&-sevenpenny ಒಂದು ಷಿಲಿಂಗು ಏಳು ಪೆನಿ ಬೆಲೆಯ. The s. sages *or* wise men (Sage[2] ನೋಡಿ). The s. sleepers ರೋಮನ್ ಚಕ್ರವರ್ತಿಯಾದ ಡೀಷಿಯಸ್ಸಿನ ಹಿಂಸೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಗುಹೆಯಲ್ಲಿ ಅಡಗಿಕೊಂಡಿದ್ದು ಹಾಗೆಯೇ ೨೦೦ ವರ್ಷಗಳ ಕಾಲ ನಿದ್ರೆಹೋಗಿ ರೋಮನ್ ರಾಜ್ಯ ಕ್ರೈಸ್ತ ಮತೀಯವಾದಮೇಲೆ ಥಿಯೊಡೊಸಿಯಸ್ಸಿನ ಕಾಲದಲ್ಲಿ ಎಚ್ಚತ್ತುಬಂದರೆಂದು ಕ್ರೈಸ್ತ ಕಥೆಯಲ್ಲಿ ಹೇಳುವ ಏಳು ಜನ ಕ್ರೈಸ್ತರು; ಸಪ್ತ ನಿದ್ರಿತರು. The s. virtues (Virtue ನೋಡಿ). The s. deadly sins (Sin ನೋಡಿ). The s. wonders of the world (Wonder ನೋಡಿ). S.-gills ಒಂದು ಬಗೆಯ ಷಾರ್ಕ್ ಮೀನು. S.-league boots ಹಾಕಿಕೊಂಡವನಿಗೆ ಒಂದು ಹೆಜ್ಜೆಗೆ ಏಳು ಹರಿದಾರಿ ಹೋಗುವ ಶಕ್ತಿಕೊಡುವ ಮೋಜಗಳು: ಏಳು ಹರಿದಾರಿ ಮೋಜಗಳು (ಒಂದು ಅದ್ಭುತ ಕಥೆಯಲ್ಲಿ ಉಕ್ತವಾಗಿದೆ). Seventy times s. ಅಸಂಖ್ಯಾತ ಸಂಖ್ಯೆ, ಅಪಾರ ಸಂಖ್ಯೆ (ಬೈಬಲ್ ಪ್ರ. ದ ಸಂಬಂಧದಿಂದ)]. (ನಾ.) ಏಳು; ಏಳರ—ಸಂಖ್ಯೆ, ಗುಂಪು, ತಂಡ [By sevens ಏಳೇಳಾಗಿ. At sixes & sevens (Six ನಾ. ನೋಡಿ)]. ಏಳನೆಯ ಬಂದಿನ ಇಸ್ಪೀಟೆಲೆ. **Sévenfold** (ಗು., ಕ್ರಿ. ವಿ.) ಏಳು ಮಡಿ, ಏಳರಷ್ಟು. **Séventeen** (ಗು., ನಾ.) ಹದಿನೇಳು [Sweet s. (ತರುಣಿಯ) ಹದಿನೇಳರ ಪ್ರಾಯ(ದ ಚೆಲುವು, ಕಳೆ). **Seventeénth** (ಗು., ನಾ.) ಹದಿನೇಳನೆಯ(ದು). **Séventh** (ಗು., ನಾ.) ಏಳನೆಯ(ದು) [The s. ಏಳನೆಯ ತಾರೀಖು. S. day (ಭಾನುವಾರಕ್ಕೆ ಬದಲಾಗಿ ಶನಿವಾರವನ್ನು ವಿಶ್ರಾಂತಿ ದಿನವನ್ನಾಗಿ ಆಚರಿಸುವವರಲ್ಲಿ): ಶನಿವಾರ. S.-day ಶನಿವಾರ ಸಬ್ಬತು ಆಚರಿಸುವ. S.-day Adventists ಕ್ರಿಸ್ತನ ಸಹಸ್ರ ವರ್ಷದ ಐಹಿಕ ರಾಜ್ಯಭಾರದಲ್ಲಿ ನಂಬಿಕೆಯುಳ್ಳ, ಶನಿವಾರವನ್ನು ಸಬ್ಬತು ದಿನವಾಗಿ ಆಚರಿಸುವ, ಒಂದು ಕ್ರೈಸ್ತ ಪಂಗಡ. In the s. heaven ಏಳನೆಯ ಸ್ವರ್ಗದಲ್ಲಿ; ಪರಮಾನಂದದಲ್ಲಿ, ಪರಮ ತೃಪ್ತಿಯಲ್ಲಿ. S. part ಏಳನೆಯ ಒಂದು ಭಾಗ $(=\frac{1}{7})$]. ಏಳನೆಯ ಒಂದು ಭಾಗ. (ಸಂ.) ಒಂದು ನಿರ್ದಿಷ್ಟ ಸ್ವರದಿಂದ ಏಳನೆಯ ಸ್ವರ, ಸಪ್ತಮ; ಒಂದು ಸ್ವರಕ್ಕೂ ಅದರ ಏಳನೆಯದಕ್ಕೂ ಇರುವ ಅಂತರ; ಒಂದು ಸ್ವರಕ್ಕೂ ಅದರ ಸಪ್ತಮಕ್ಕೂ ಇರುವ ಸ್ವರ ಮೇಳ. **Séventhly** (ಕ್ರಿ. ವಿ.) ಏಳನೆಯದಾಗಿ. **Séventy** (ಗು., ನಾ.) ಎಪ್ಪತ್ತು (೭೦, 70, LXX) [S.-one, one-&-s. ೭೧. The s. ಸಂತ ಲ್ಯೂಕ್ ಸುವಾರ್ತೆಯಲ್ಲಿ ಹೇಳಿರುವ ೭೦ ಮಂದಿ ಕ್ರಿಸ್ತ ಶಿಷ್ಯರು. ಪುರಾತನ ಜೆರುಸಲೆಮಿನಲ್ಲಿದ್ದ, ೭೧ ಮಂದಿ ಸದಸ್ಯರ ಶ್ರೇಷ್ಠ ನ್ಯಾಯಸ್ಥಾನ. ಬೈಬಲ್ಲಿನ ಹಳೆಯ ಒಡಂಬಡಿಕೆಯ ಭಾಗಗಳನ್ನು ಗ್ರೀಕಿಗೆ ಭಾಷಾಂತರಿಸಿದ ಎಪ್ಪತ್ತು ಮಂದಿ ಭಾಷಾಂತರಕಾರರು. The seventies (ಶತಮಾನದ ಅಥವಾ ವಯಸ್ಸಿನ) ೭೦ರಿಂದ ೮೦ರ ವರೆಗಿನ ವರ್ಷಗಳು: ಸಪ್ತತಿಗಳು]. **S.-four** (ಚರಿತ್ರೆ) ೭೪ ಫಿರಂಗಿಗಳ ಯುದ್ಧ ನೌಕೆ. **S.-five** ೭೫ ಮಿಲಿಮೀಟರ್ ಬಾಯಗಲದ ಫ್ರೆಂಚ್ ಫಿರಂಗಿ. **Séventieth** (ಗು., ನಾ.) ಎಪ್ಪತ್ತರ(ದು).

Séver ಸೆವರ್ (ಕ್ರಿ.) ಬೇರ್ಪಡಿಸು, ಪ್ರತ್ಯೇಕಿಸು, ಅಗಲಿಸು, ಕಳಚಿಹಾಕು, ವಿಯೋಜಿಸು; (ಕ್ರಿ. ಅಕ., ವಿರ. ಪ್ರ.) ಬೇರ್ಪಡು, ಮೊ. ವು; ಕತ್ತರಿಸು, ಕಡಿ(ದುಹೋಗು), ಹರಿ(ದುಹೋಗು), ಕಿತ್ತುಹೋಗು, ತಪ್ಪಿಹೋಗು (S. husband & wife ಗಂಡಹೆಂಡಿರನ್ನು ಅಗಲಿಸು. The rope severed under the strain ಭಾರದಿಂದ, ತುಯ್ತದಿಂದ, —ಹಗ್ಗ ಕಡಿದುಹೋಯಿತು, ಕಿತ್ತುಹೋಯಿತು. Severed his head ಅವನ ತಲೆಯನ್ನು ಕಡಿದುಹಾಕಿದನು, ತೆಗೆದುಹಾಕಿದನು. S. oneself from the Church ಕ್ರೈಸ್ತ ಮತದ ಸಂಬಂಧ ಬಿಟ್ಟುಬಿಡು; —ಮತದಿಂದ ಪ್ರತ್ಯೇಕವಾಗು). (ನ್ಯಾ. ಶಾ.) (ಒಟ್ಟಿಗೆ ಹೂಡಿದ ವ್ಯವಹಾರದಲ್ಲಿ) ಪ್ರತ್ಯೇಕವಾಗಿ, ಸ್ವತಂತ್ರವಾಗಿ, —ವ್ಯವಹಾರ ನಡಸು. **Séverable** (ಗು.); **Séverance** (ನಾ.)

Séveral ಸೆವೆರಲ್ (ಗು., ಸ. ನಾ.) ಬೇರೆ ಬೇರೆ, ಪ್ರತ್ಯೇಕ, ವಿವಿಧ, ನಾನಾ, ಆಯಾ, ಅವರವರ, ಅದರದರ, ತಮ್ಮ ತಮ್ಮ, ನಮ್ಮ ನಮ್ಮ, ನಿಮ್ಮ ನಿಮ್ಮ, ಒಬ್ಬೊಬ್ಬ, ಒಂದೊಂದು [All of us in our s. stations ನಾವೆಲ್ಲ ನಮ್ಮ ನಮ್ಮ ಸ್ಥಾನಗಳಲ್ಲಿ. Each has his s. ideal ಪ್ರತಿಯೊಬ್ಬನಿಗೂ ಅವನವನ, ಬೇರೆ ಬೇರೆ, ಆದರ್ಶವಿದೆ. Went their s. ways ಅವರು ತಮ್ಮ ತಮ್ಮ ದಾರಿ ಹಿಡಿದು ಹೋದರು. Indictment of three s. counts ಮೂರು ಪ್ರತ್ಯೇಕ ಆಪಾದನಾಂಶಗಳುಳ್ಳ ಆಪಾದನ ಪತ್ರ; ಮೂರು ಬೇರೆ ಬೇರೆ ಅಂಶಗಳ ಆಪಾದನೆ. The s. members of the Board

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂಡಲಿಯ ನಾನಾ ಸದಸ್ಯರು ; ಮಂಡಲಿಯ ಸದಸ್ಯರು ಒಬ್ಬೊಬ್ಬರೂ. Each s. ship sank her opponent ಪ್ರತಿಯೊಂದು ಹಡಗೂ ತನ್ನ ತನ್ನ ಎದುರು ಹಗೆ ಹಡಗನ್ನು ಮುಳುಗಿಸಿತು. Collective & s. responsibility ಸಂಯುಕ್ತ ಮತ್ತು ಪ್ರತ್ಯೇಕ ಜವಾಬ್ದಾರಿ ; ಒಟ್ಟು ಮತ್ತು ತನಿ ಹೊಣೆ. Joint & s. bond ಪ್ರತಿಯೊಬ್ಬನೂ ಒಟ್ಟು ಹಣಕ್ಕೆ ಹೊಣೆಯಾಗಿರುವಂತೆ ಇಬ್ಬರು (ಅಥವಾ ಹಲವರು) ರುಜುಹಾಕಿದ ಪತ್ರ: ಸಂಯುಕ್ತ ಮತ್ತು ಪ್ರತ್ಯೇಕ ಜವಾಬ್ದಾರಿಯ ಪತ್ರ ; ಕೂಡು ಮತ್ತು ತನಿ ಹೊಣೆಯ ಪತ್ರ. S. estate (ಇತರರಿಗೆ ಭಾಗವಿಲ್ಲದ) ತನಿ, ಪ್ರತ್ಯೇಕ, —ಆಸ್ತಿ]. (ಎರಡಕ್ಕಿಂತ ಹೆಚ್ಚು, ಆದರೆ ಬಹಳ ಹೆಚ್ಚಲ್ಲ): ಕೆಲವು, ಕೆಲವರು ; ಹಲವು, ಹಲವರು, ಅನೇಕ (ಮಂದಿ) (Have called s. times. S. of you have seen him). **Séverally** (ಕ್ರಿ. ವಿ.) ; **Séveralty** (ನಾ.) (ಮತ್ತೊಬ್ಬರಿಗೆ ಭಾಗವಿಲ್ಲದ) ತನಿ ಹಿಡುವಳಿ, ಪ್ರತ್ಯೇಕಾನುಭೋಗ.

Séveralty. **Several** ನೋಡಿ.

Sevére ಸಿವಿಯರ್ (ಗು., ತರ ಭಾವ -er, ತಮ ಭಾವ -est) ಬಿರುಸಾದ, ಕಡುವಾದ ; ಕಟ್ಟುನಿಟ್ಟಿನ, ನಿರ್ದಾಕ್ಷಿಣ್ಯದ ; ಕ್ರೂರ, ಕಠಿನ, ಕಠೋರ, ನಿಷ್ಠುರ, ಪ್ರಚಂಡ, ವಿಪರೀತ ; ತಾಳಲು ಕಷ್ಟವಾದ, ದುಸ್ಸಹ ; ಪ್ರಯಾಸಕರ, ಕಷ್ಟಕರ [S. look ಕಠಿನ—ದೃಷ್ಟಿ, ಮುಖಭಾವ ; ಬಿರುನೋಟ. S. discipline ಕಠಿನವಾದ ಶಿಸ್ತು. S. critic ನಿಷ್ಠುರ, ನಿರ್ದಾಕ್ಷಿಣ್ಯದ, —ವಿಮರ್ಶಕ. S. sentence ಕಠಿನ ಶಿಕ್ಷೆ. S. self-control ಕಠಿನ ಆತ್ಮಸಂಯಮ. S. upon (ಒಬ್ಬನಮೇಲೆ) ಉಗ್ರವಾಗಿ, ವಿಪರೀತ ಕಟುವಾಗಿ. S. weather ಕೊರೆಯುವ, ಬಿರುಗಾಳಿ ಮಳೆಯ, —ಹವ. S. winter ತೀವ್ರ ಚಳಿಗಾಲ. S. test ಕಠಿನ ಪರೀಕ್ಷೆ. S. pain ತಾಳಲಾಗದ, ವಿಪರೀತ, —ನೋವು. S. competition ತೀಕ್ಷ್ಣ ಸ್ಪರ್ಧೆ]. ನಿರಾಡಂಬರದ ; ಅಲಂಕಾರ ರಹಿತ ; ಅನಾವಶ್ಯಕವಾದುವನ್ನೆಲ್ಲ ತೆಗೆದು ಹಾಕಿರುವ ; ಅಡಕವಾದ ; ಹಿಡಿತವುಳ್ಳ ; ಬಿಗಿಯುಳ್ಳ (S. architecture, beauty, simplicity ನಿರಾಡಂಬರದ ವಾಸ್ತುಶಿಲ್ಪ, ಚೆಲುವು, ಸರಳತೆ. S style ಅಡಕವಾದ, ಬಿಗಿ, —ಶೈಲಿ). ವ್ಯಂಗ್ಯವಾದ, ಕಟುವಾದ (S. remarks. You are pleased to be s.). **Sevérely** (ಕ್ರಿ. ವಿ.) [Leave, *or* let, s. alone (ಅನಮ್ಮತಿಯನ್ನು, ಅಸಾಧ್ಯ ಎಂಬುದನ್ನು ಹಾಸ್ಯವಾಗಿ, ಸೂಚಿಸುವಲ್ಲಿ) ಅದರ ಗೊಡವೆ ನಿನಗೆ ಬೇಡ]. **Sevérity** ಸಿವೆರಿಟಿ (ನಾ.)

Sévery ಸೆವೆರಿ (ನಾ.) (ವಾ. ಶಾ.) ಕಮಾನು ಮೇಲ್ಚಾವಣಿಯ ಅಂಕಣ.

Sew ಸೋ (ಕ್ರಿ.; ಭೂತ. Sewed ಸೋಡ್; ಭೂ. ಕೃ. Sewn ಸೋನ್, Sewed) ಹೊಲಿ(ಗೆ ಹಾಕು), ಹೊಲಿದುಬಿಡು ; ಹೊಲಿದು —ಮಾಡು, ಸೇರಿಸು, ಮುಚ್ಚಿಬಿಡು ; ಹೊಲಿಗೆ ಕೆಲಸಮಾಡು [S. cloth, sheets of book, boot, buttonhole. S. on a button ಗುಂಡಿಯನ್ನು ಹೊಲಿ. S. in a patch. S. up money in a bag. S. one up (ಅನಂ.) ಸುಸ್ತುಮಾಡಿ ಹಾಕು, ದಣಿಸು ; (ಭೂ. ಕೃ. ನಲ್ಲಿ) ಅಮಲೇರಿದ]. Sewing-machine ಹೊಲಿಗೆ ಯಂತ್ರ. Sewing-press ಪುಸ್ತಕ ಹೊಲಿಯುವ ಯಂತ್ರ. **Sewer**[1] (ನಾ.) ಹೊಲಿಯುವವನು, ಹೊಲಿಗೆಯವನು; ದರ್ಜಿ, ಚಿಪ್ಪಿಗ, ಮೊಚ್ಚಿ. **Sewing** (ನಾ.)

Sewage ಸ್ಯೂಎ(ಇ)ಜ್ (ನಾ., ಕ್ರಿ. ಸಕ.) ಗ್ರಾಮಸಾರಾದಿ ಚರಂಡಿಯ ಹೊಲಸು, ಊರಿನ ರೊಚ್ಚು (S.-farm ಚರಂಡಿಯ ರೊಚ್ಚನ್ನು ಗೊಬ್ಬರವಾಗಿ ಉಪಯೋಗಿಸುವ ತೋಟ, ಹೊಲ ; ಗ್ರಾಮಪಾಕೀಜನ, ಗ್ರಾಮಸಾರದ,—ತೋಟ, ಹೊಲ. S.-grass ಗ್ರಾಮಸಾರದ (ನೆಲದ) ಹುಲ್ಲು). (ಕ್ರಿ.) ಗ್ರಾಮಸಾರದ ಗೊಬ್ಬರ, ರೊಚ್ಚು ಗೊಬ್ಬರ, —ಹಾಕು. **Sewer**[2] ಸ್ಯೂಅರ್ (ನಾ., ಕ್ರಿ. ಸಕ.) ಗ್ರಾಮಸಾರ, ಮೊ. ನ್ನು ಸಾಗಿಸುವ —ಚರಂಡಿ, ಕೊಳಾಯಿ ; ಗ್ರಾಮಸಾರದ ಮೋರಿ [S.-gas ಮೋರಿಯ ದುರ್ನಾತದ ಗಾಳಿ, ಚರಂಡಿಯ ದುರ್ವಾಯು. S. rat ಈ ಮೋರಿಗಳಲ್ಲಿ ವಾಸಿಸುವ ಸಾಮಾನ್ಯ ಇಲಿ ; ಮೋರಿ ಇಲಿ.] (ಕ್ರಿ.) ಚರಂಡಿಗಳ ಮೂಲಕ ಗ್ರಾಮಸಾರ ಸಾಗಿಸು ; ಗ್ರಾಮಸಾರ ಚರಂಡಿ ವ್ಯವಸ್ಥೆಮಾಡು. **Sewerage** (ನಾ.) ಗ್ರಾಮಸಾರ ಚರಂಡಿಗಳು, ಚರಂಡಿಯ ವ್ಯವಸ್ಥೆ.

Sewer[1]. **Sew** ನೋಡಿ.

Sewer[2]. **Sewage** ನೋಡಿ.

Sewer[3] ಸ್ಯೂಅರ್ (ನಾ.) (ಚರಿತ್ರೆ) ಭೋಜನ ವ್ಯವಸ್ಥೆಮಾಡುವುದು, ಅತಿಥಿಗಳನ್ನು ಅವರವರ ಸ್ಥಾನಗಳಲ್ಲಿ ಕೂರಿಸುವುದು, ಆಹಾರ ಪದಾರ್ಥಗಳನ್ನು ರುಚಿ ನೋಡುವುದು, ಪದಾರ್ಥಗಳನ್ನು ತಂದು ಬಡಿಸುವುದು —ಈ ಕೆಲಸಗಳನ್ನುಳ್ಳ ಪರಿಚಾರಕ : ಊಟದ ಪಾರುಪತ್ಯಗಾರ ; ಭೋಜನ ವ್ಯವಸ್ಥಾಪಕ.

Sewerage. **Sewage** ನೋಡಿ.

Sewn. Sew ಧಾತುವಿನ ಭೂ. ಕೃ. ರೂಪ.

Sex ಸೆಕ್ಸ್ (ನಾ.) (ಪ್ರಾಣಿಗಳಲ್ಲಿ : ಗಂಡು ಅಥವಾ ಹೆಣ್ಣು ಎಂಬ) ಲಿಂಗ ಲಕ್ಷಣ ; ಲಿಂಗ ಜಾತಿ (Without distinction of age or s. ವಯೋಭೇದ ಲಿಂಗಭೇದಗಳಿಲ್ಲದೆ). (ಸಾಮೂಹಿಕವಾಗಿ) ಗಂಡಸರು, ಹೆಂಗಸರು ; ಪುರುಷ ಜಾತಿ, ಸ್ತ್ರೀ ಜಾತಿ [The fair, gentle, softer, weaker, s. ಅಬಲಾ ಜಾತಿ ; ಹೆಂಗಸರು. (ಹಾಸ್ಯ ಪ್ರ.) The s. ಸ್ತ್ರೀ ಜಾತಿ, ಹೆಂಗಸರು. The sterner s. ಗಡುಸು ಜಾತಿ ; ಗಂಡಸರು]. (ವಿಶೇಷಣವಾಗಿ) ಲಿಂಗ ಜಾತೀಯ, ಲಿಂಗ ಸಂಬಂಧವಾದ, ಲೈಂಗಿಕ (S. instinct, urge ಲೈಂಗಿಕಾಕರ್ಷಣೆಯ ಹುಟ್ಟುಗುಣ, ಪ್ರಚೋದನೆ ; ಕಾಮ, ಕಾಮ ಪ್ರಚೋದನೆ. S. appeal ಲೈಂಗಿಕಾಕರ್ಷಣೆ ; ಲೈಂಗಿಕ, —ರಂಜನೆ, ಸ್ವಾರಸ್ಯ ; ಕಾಮರಂಜನೆ). **Séxless** (ಗು.) ; **Séxlessness** (ನಾ.); **Séxual** ಸೆಕ್‌ಸ್ಯು(ಷು)ಅಲ್ (ಗು.) ಸ್ತ್ರೀ ಪುರುಷ ವಿಷಯಕ, ಪುಂಸ್ತ್ರೀ ಭಾವದ ; ಲಿಂಗ ಸಂಬಂಧವಾದ ; ಲೈಂಗಿಕ [S. organs ಜನನೇಂದ್ರಿಯಗಳು. S. intercourse, commerce ಸ್ತ್ರೀ ಪುರುಷ ಸಂಭೋಗ, ಮೈಥುನ. S. affinity ಸ್ತ್ರೀ ಪುರುಷರ ಪರಸ್ಪರಾಕರ್ಷಣೆ, ಲೈಂಗಿಕಾಕರ್ಷಣೆ. S. selection (ಜೀವಿ ವಿಕಾಸದಲ್ಲಿ) ಲೈಂಗಿಕ ಆಯ್ಕೆ (Select ನೋಡಿ). S. appetite ಸಂಭೋಗಾಪೇಕ್ಷೆ, ಕಾಮದ ಹಸಿವು. S. indulgence ಕಾಮಲಂಪಟತೆ]. (ಸ. ವಿ.) (ವರ್ಗೀಕರಣದಲ್ಲಿ) ಲಿಂಗಭೇದಾನುಸಾರವಾದ, ಲಿಂಗಾನುಸಾರಿಯಾದ [**Séxualist** (ನಾ.) ಲೈಂಗಿಕ ವರ್ಗೀಕರಣ ವಾದಿ]. **Sexuálity** —ಆ್ಯಲಿಟಿ (ನಾ.) ಲಿಂಗ ವಿಶಿಷ್ಟತೆ, ಲೈಂಗಿಕತ್ವ, ಲೈಂಗಿಕಾಸಕ್ತಿ, ವಿಷಯಾಸಕ್ತಿ, ಲೈಂಗಿಕ ಪ್ರವೃತ್ತಿ. **Séxualize** —ಅಲೈಸ್ (ಕ್ರಿ. ಸಕ.) ಲೈಂಗಿಕವಾಗಿ ಮಾಡು ; ಲೈಂಗಿಕ ದೃಷ್ಟಿಯಿಂದ, ಪುಂಸ್ತ್ರೀಭಾವದಿಂದ —ನೋಡು ; ಲಿಂಗಭಾವವನ್ನು ಆರೋಪಿಸು. **Sexualizátion** (ನಾ.) ; **Séxually** (ಕ್ರಿ. ವಿ.)

Sex- ಸೆಕ್ಸ್—, **Sexi-** ಸೆಕ್ಸಿ— (ಸ. ಪೂ. ಪ.) ಆರು—, ಷಟ್—. **Séxangle** (ನಾ.) ಷಟ್ಕೋನ. **Séxangular** (ಗು.) ; **Séxangularly** (ಕ್ರಿ. ವಿ.) ; **Sexcenténary** (ಗು., ನಾ.) ಆರುನೂರರ ಆರುನೂರು ವರ್ಷದ, ಷಟ್ ಶತಮಾನದ. (ನಾ.) ಷಟ್ ಶತಮಾನೋತ್ಸವ. **Sexdígitate** (ಗು.) ಆರು ಬೆರಳುಳ್ಳ ; ಷಡಂಗುಲೀಯ. **Sexénnial** (ಗು.) ಆರು ವರ್ಷ(ಕ್ಕೊಮ್ಮೆ) ನಡೆಯುವ, ಆರು ವರ್ಷ ಬಾಳುವ ; ಷಾಡ್ವಾರ್ಷಿಕ. **Sexénnially** (ಕ್ರಿ. ವಿ.); **Séxfid** (ಗು.) (ಸ. ವಿ.) ಆರು ಪಾಲಾದ ; ಷಡ್ ವಿಭಕ್ತ. **Séxfoil** (ನಾ.) (ವಾಸ್ತುಶಿಲ್ಪದಲ್ಲಿ ಅಥವಾ ಇತರ ಅಲಂಕಾರದಲ್ಲಿ) ಆರು ದಳಗಳುಳ್ಳ, ಆರು ದಳಗಳಾಗಿ ವಿಭಾಗವಾದ, —ಆಕೃತಿ, ಅಲಂಕಾರ ; ಷಡ್ದಳಾಲಂಕಾರ. ಷಡ್ದಳ ಪುಷ್ಪ ; ಷಡ್ದಳ ಪತ್ರ(ಗಳ ಸಸ್ಯ). **Sexíllion** (ನಾ.) (ಇಂಗ್ಲಿಷರ ಗಣನೆಯ ಪ್ರಕಾರ) ೧ರ ಮುಂದೆ ೩೬ ಸೊನ್ನೆಗಳನ್ನು ಇಟ್ಟರೆ ಆಗುವ ಸಂಖ್ಯೆ (10^{36}) ; (ಫ್ರೆಂಚ್ ಮತ್ತು ಅಮೇರಿಕನ್ ಗಣನೆಯ ಪ್ರಕಾರ) ೧ರ ಮುಂದೆ ೨೧ ಸೊನ್ನೆಗಳನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಟ್ಟರೆ ಆಗುವ ಸಂಖ್ಯೆ (10^{21}). **Sexisýllable** (ನಾ.) ಆರು ಉಚ್ಚಾರಾಂಶಗಳುಳ್ಳ ಮಾತು, ಷಡುಚ್ಚಾರಾಂಶ ಪದ. **Sexisyllábic** (ಗು.) **Sex(i)valent** (ಗು.) (ರ. ವಿ.) ಜಲಜನಕದ ಆರು ಪರಮಾಣುಗಳ ಸಂಯೋಜಕಶಕ್ತಿಯುಳ್ಳ; ಷಡ್‌ಯೋಗ ಶಕ್ತ. **Sexpártite** (ಗು.) ಆರು ಭಾಗಗಳಾದ, ಷಡ್ ವಿಭಕ್ತ. **Séxtuple** (ಗು., ನಾ., ಕ್ರಿ.) ಆರರಷ್ಟರ; ಆರು ಮಡಿ(ಯ). (ಕ್ರಿ.) ಆರು ಮಡಿ ಮಾಡು; ಆರರಿಂದ ಗುಣಿಸು.

Sexagenárian ಸೆಕ್ಸಜಿನೇ(ಅ)ರಿಯನ್ (ಗು., ನಾ.) ೬೦ರಿಂದ ೭೦ರ ನಡುವಣ ವಯಸ್ಸಿನ(ವನು); ಷಷ್ಟೀಯ. **Sexagénary** ಸೆಕ್ಸಜೀನರಿ, **Sexágenary** ಸೆಕ್ಸ್ಯಾಜಿನರಿ (ಗು.) ಆರುವತ್ತರ; ಅರುವತ್ತರುವತ್ತಾಗಿ ಹೋಗುವ; ಷಷ್ಟಿ ಕ್ರಮದ.

Sexagésima ಸೆಕ್ಸಜೆಸಿಮ (ನಾ.) ಲೆಂಟ್ ವ್ರತದ ಹಿಂದಿನ ಭಾನುವಾರದ ಹಿಂದಿನ ಭಾನುವಾರ (=S. Sunday). **Sexagésimal** (ಗು., ನಾ.) ಅರುವತ್ತನೆಯ; ಅರುವತ್ತರ; ಅರುವತ್ತರುವತ್ತಾಗಿ ಹೋಗುವ, ಷಷ್ಟಿ ಕ್ರಮದ [S. fractions, sexagesimals (ವೃತ್ತದ ಮತ್ತು ಘಂಟೆಯ ವಿಭಾಗಗಳಲ್ಲಿಯಂತೆ) ಛೇದ ಅರುವತ್ತರ ಕ್ರಮದಲ್ಲಿ ಹೋಗುತ್ತಿರುವ ಭಿನ್ನರಾಶಿಗಳು: ಷಷ್ಟಿ ಭಿನ್ನರಾಶಿಗಳು (ಉದಾ., $\frac{1}{60}$, $\frac{1}{3600}$, $\frac{1}{216000}$)]. **Sexagésimally** (ಕ್ರಿ. ವಿ.)

Sext, Sexte ಸೆಕ್ಸ್ಟ್ (ನಾ.) (ಚರ್ಚಿನಲ್ಲಿ) (ಸೂರ್ಯೋದಯಾತ್ಪರ) ಆರನೆಯ ಘಂಟೆಯ ದೇವತಾ ಸ್ತೋತ್ರ; ಮಧ್ಯಾಹ್ನದಲ್ಲಿ ಹೇಳುವ ಪ್ರಾರ್ಥನೆ.

Séxtain ಸೆಕ್ಸ್ಟೇನ್ (ನಾ.) ಆರು ಸಾಲಿನ ಪದ್ಯ, ಷಟ್ಪದಿ.

Séxtan ಸೆಕ್ಸ್ಟನ್ (ಗು.) (ಜ್ವರ, ಮೊ. ಗಳ ವಿಷಯದಲ್ಲಿ: ಎರಡು ದಿನವೂ ಸೇರಿ) ಆರು ದಿನಕ್ಕೊಮ್ಮೆ ಬರುವ, ಆರರ.

Séxtant ಸೆಕ್ಸ್ಟಂಟ್ (ಗು.) (ಗ. ಪ್ರ.) ವೃತ್ತದ ಆರನೆಯೊಂದು ಭಾಗ. ಸಮುದ್ರಯಾನದಲ್ಲೂ ಮೋಜಿಣಿಯಲ್ಲೂ ಕೋನ ದೂರಗಳನ್ನು ಅಳೆಯಲು ಉಪಯೋಗಿಸುವ, ವೃತ್ತ ಷಟ್ಖಂಡಾಕಾರದ ಒಂದು ಸಲಕರಣೆ: ಷಷ್ಠಕ.

Sextét(te) ಸೆಕ್ಸ್ಟೆಟ್ (ನಾ.) ಆರು ಧ್ವನಿಗಳ, ಗಾಯಕರ, ವಾದ್ಯಗಳ ಅಥವಾ ವಾದ್ಯಗಾರರ ತಂಡ(ಕ್ಕೆ ರಚಿಸಿದ ಸಂಗೀತ ಕೃತಿ). ಆರರ ತಂಡ; ಷಟ್ಕ.

Sextíllion ಸೆಕ್ಸ್ಟಿಲ್ಯನ್ (ನಾ.) =Sexillion (Sex- ನೋಡಿ)

Séxto ಸೆಕ್ಸ್ಟೊ (ನಾ.; ಬ. ವ. -os) ಹಾಳೆಗಳನ್ನು ಆರಾಗಿ ಮಡಿಸಿ ಮಾಡಿದ ಪುಸ್ತಕ: ಷಟ್ಪತ್ರ. **Sextodécimo** —ಡೆಸಿಮೊ [ನಾ.; ಸಂಕ್ಷಿಪ್ತ: 16mo (ಬಳಕೆಯ ಉಚ್ಚಾರ: ಸಿಕ್ಸ್ಟೀನ್ಮೊ)] ಹದಿನಾರು ಪತ್ರಗಳಾಗಿ ಮಡಿಸಿದ ಹಾಳೆ(ಗಳ ಪುಸ್ತಕ); ಷೋಡಶ ಪತ್ರ; ಈ ತೆರನ ಹದಿನಾರರ ಮಡಿಕೆ (In s.); ಷೋಡಶ ಪತ್ರಾಕಾರದ ಪುಸ್ತಕ.

Séxton ಸೆಕ್ಸ್ಟನ್ (ನಾ.) ಚರ್ಚು, ಅದರ ಪಾತ್ರೆ ಪದಾರ್ಥಗಳು, ಬಟ್ಟೆ ಬರೆಗಳು, ಸಮಾಧಿ ಭೂಮಿ—ಇವುಗಳ ಮೇಲ್ವಿಚಾರಣೆಯನ್ನೂ ಅನೇಕ ವೇಳೆ ಗಂಟೆ ಹೊಡೆಯುವುದು, ಹೆಣದ ಗುಳಿ ಅಗೆಯುವುದು, ಮೊ. ಕೆಲಸಗಳನ್ನೂ ನೋಡಿಕೊಳ್ಳುವ ಅಧಿಕಾರಿ: ಚರ್ಚಿನ (ಉಗ್ರಾಣದ) ಪಾರುಪತ್ಯಗಾರ; ಸೆಕ್ಸ್ಟನ್. **S. beetle** ಮೊಟ್ಟೆಗಳಿಗೆ ಅನುಕೂಲವಾದ (ವೃದ್ಧಿ) ಸ್ಥಳವಾಗುವಂತೆ ಕೊಳೆತ ಮಾಂಸವನ್ನು ಹೂತಿಡುವ ಹಲವು ಬಗೆಯ ಜೀರುಂಡೆ.

Séxtus ಸೆಕ್ಸ್ಟಸ್ (ಗು.) (ಪಾಠಶಾಲೆಯಲ್ಲಿ) ಒಂದೇ ಹೆಸರಿನವರಲ್ಲಿ ಆರನೆಯ.

Séxual, etc. **Sex** ನೋಡಿ.

Sforzándo (It.) ಸ್ಫಾರ್ಟ್ಸಾಂಡೊ (ಸಂ. ಸೂಚನೆ) ಥಟ್ಟನೆ—ಜೋರಾಗಿ, ಒತ್ತಿ.

Sfumáto (It.) ಸ್ಫೂಮಾಟೊ (ಗು.) (ವರ್ಣಚಿತ್ರದಲ್ಲಿ) ಅಸ್ಪಷ್ಟ ರೂಪರೇಖೆಯ.

Shábby ಷ್ಯಾಬಿ (ಗು.) ಕೀಳಾದ, ನೀಚ, ಹೇಯ, ತುಚ್ಛ, ಹೀನ, ಅಯೋಗ್ಯ (Played me a shabby trick). ಜಿಪುಣನಾದ, ಕೃಪಣನಾದ, ಜೀನತನದ. (ಹಳತಾಗಿ) ಹರುಕಲಾದ, ಚಿಂದಿಯಾದ; ಜೀರ್ಣವಾದ; ಹರುಕು ಮುರುಕಾದ; ದರಿದ್ರ; ದುಃಸ್ಥಿತಿಯಲ್ಲಿರುವ. S.-genteel ಗತವೈಭವದ ಚಿಹ್ನೆಗಳುಳ್ಳ; ಹೀನಸ್ಥಿತಿಯಲ್ಲಿದ್ದರೂ ದೊಡ್ಡಸ್ತಿಕೆಯ ತೋರಿಕೆಯ. **Shábbily** (ಕ್ರಿ. ವಿ.); **Shábbiness** (ನಾ.); **Shábbyish** (ಗು.)

Shábrack ಷ್ಯಾಬ್ರ್ಯಾಕ್ (ನಾ.) (ರಾವುತ ದಳದವರು ಜೀನಿನ ಕೆಳಗೆ ಹಾಕಲು ಉಪಯೋಗಿಸುವ) ಜೀನು ಬಟ್ಟೆ; —ಕಂಬಳಿ; ತಡಿ.

Shack ಷ್ಯಾಕ್ (ನಾ.) (ಅಮೆ. ಸಂ.) (ಸಾ., ಮರದ ಕೊರಡುಗಳ) ಒಡ್ಡ ಗುಡಿಸಲು.

Sháckle ಷ್ಯಾಕ್‌ಲ್ (ನಾ., ಕ್ರಿ. ಸಕ.) (ಲೋಹದ) ಕೊಂಡಿ, ಉಂಗುರ, ಬಳೆ; ಚಿಲಕದ ಕೊಂಡಿ; ಸರಪಳಿಗಳು, ಮೊ. ನ್ನು ಕೂಡಿಸಲು ಉಪಯೋಗಿಸುವ, ಗುಬ್ಬಿ ಮೊಳೆಯಿಂದ ಮುಚ್ಚುವ ⊓ ಆಕಾರದ ಕೊಂಡಿ; ಕೂಡು ಕೊಂಡಿ. (ಕಾಲಿನ ಅಥವಾ ಕೈಯ) ಕೋಳ, ಬೇಡಿ, ಸಂಕೋಲೆ; (ಬ. ವ.) ತೊಡರು, ಅಡ್ಡಿ, ತಡೆ, ಬಂಧನ (The shackles of convention ಸಂಪ್ರದಾಯದ ಶೃಂಖಲೆ, ಬಂಧನ). ದೂರಲೇಖನ ತಂತಿಯ ವಿದ್ಯುನ್ನಿರೋಧಕ. [S.-bolt ಕೊಂಡಿಯ ತಾಪಾಳು, ಅಗುಳಿ; ತಾಪಾಳಿರುವ ಕೊಂಡಿ. S.-joint (ಕೆಲವು ಮೀನುಗಳಲ್ಲಿ) ಮತ್ತೊಂದು ಎಲುಬಿನ ರಂಧ್ರದಲ್ಲಿ ಹಾದು ಉಂಗುರವಾಗಿರುವ ಸಂಧಿ: ಉಂಗುರ ಸಂಧಿ]. (ಕ್ರಿ.) ಸಂಕೋಲೆ—ಹಾಕು, ತೊಡಿಸು; ಕೊಂಡಿ ಕೂಡಿಸು; ತಡೆಯೊಡ್ಡು, ಬಂಧನ ಹಾಕು.

Shad ಷ್ಯಾಡ್ (ನಾ.) ಒಂದು ಜಾತಿಯ ಮೀನು.

Sháddock ಷ್ಯಾಡಕ್ (ನಾ.) ಚಕ್ಕೋತ(ನೆ) (ಜಾತಿಯ ಗಿಡ, ಹಣ್ಣು) (ವೆಸ್ಟ್ಇಂಡೀಸ್ ದ್ವೀಪಗಳಿಗೆ ತಂದು ಮೊದಲು ಬೆಳೆಸಿದವನ ಹೆಸರಿನಿಂದ)

Shade ಷೇಡ್ (ನಾ.) (ತಂಪುಗೂಡಿದ) ನೆರಳು, ಛಾಯೆ; ಮಬ್ಬು, ಮಸುಕು; (ರೂಪ.) ಮರೆ, ಆಚ್ಛಾದನೆ [Throw into the s. (ಅತಿಶಯಿಸಿ ಬೆಳಗಿ) ಮರಸು, ಮಸುಳಿಸು]. (ಅನೇಕ ವೇಳೆ ಬ. ವ. ದಲ್ಲಿ) ನೆರಳಾದ ಸ್ಥಳ, ತಂಪಾದ ಸ್ಥಳ; (ಬ. ವ. ದಲ್ಲಿ) ಇರುಳ ಮಬ್ಬು; ಬೈಗಿನ—; ಕತ್ತಲೆ, ಕಾವಳ. ಚಿತ್ರದ ನೆರಳು ಭಾಗ [Without light & s. (ಚಿತ್ರಗಳ ವಿಷಯದಲ್ಲಿ, ಮತ್ತು ರೂಪಕವಾಗಿ ವರ್ಣನೆ, ಪಾತ್ರ, ಮೊ. ಗಳ ವಿಷಯದಲ್ಲಿ) ಏಕ ರೀತಿಯಾದ, ವೈವಿಧ್ಯವಿಲ್ಲದ; ಒಂದೇ ಸಮನೆ— ರಂಗುಬಡಿಯುವ, ಮಂಕಾಗಿರುವ]. ಒಂದೇ ಬಣ್ಣದಲ್ಲಿ ಅದರ ಗಾಢತೆಯನ್ನನುಸರಿಸಿ ತೋರುವ ಛಾಯಾಂತರ: (ಬಣ್ಣದ) ಛಾಯೆ [In all shades of purple ಊದಾ ಬಣ್ಣದ ಎಲ್ಲ ಛಾಯೆಗಳಲ್ಲಿ. (ರೂಪ.) People of all shades of opinion ನಾನಾ ಅಭಿಪ್ರಾಯಚ್ಛಾಯೆಯ ಜನರು. Delicate shades of meaning ಅರ್ಥದ ಸೂಕ್ಷ್ಮಚ್ಛಾಯೆಗಳು]. ಕೊಂಚ, ಸ್ವಲ್ಪ (Am a s. better today ಇಂದು ಕೊಂಚ ಮೇಲಾಗಿದ್ದೇನೆ). ಹುರುಳಿಲ್ಲದ್ದು; ಅಭೌತವಾದದ್ದು; ಅವಾಸ್ತವಿಕವಾದದ್ದು (Is the shadow of a s. ಅದು ಬರಿಯ ಭ್ರಾಂತಿ; ಬರಿಯ ನೆರಳಿನ ನೆರಳು). ಭೂತ, ಪ್ರೇತ [Spoke with the s. of Homer ಹೋಮರಿನ ಪ್ರೇತದೊಡನೆ ಮಾತಾಡಿದನು. Went down to the shades ಪ್ರೇತಲೋಕಕ್ಕೆ ಹೋದನು; ಸತ್ತುಹೋದನು. S. of —! (ದೊಡ್ಡ ತಪ್ಪು, ಅಪರಾಧ, ಮೊ ಗಳನ್ನು ಕಂಡಾಗ ಹೇಳುವ, ಆಶ್ಚರ್ಯಸೂಚಕ ಉದ್ಗಾರ):—ಪ್ರೇತವೂ ಕೆರಳುತ್ತದೆ (ಎಂಬ ಅಭಿಪ್ರಾಯದಿಂದ)]. ಬೆಳಕಿನ ಅಥವಾ ಶಾಖದ ಮರೆ, ತೆರೆ (Sun-s. ಬಿಸಿಲುಕೊಡೆ, ಬಿಸಿಲು ಮರೆ. Candle-s. ಮೋಂಬತ್ತಿ ದೀಪದ ಮರೆ, ಮರಸು. Lamp-s. ದೀಪದ —ಮರೆ, ಮರಸು). ಕಣ್ಣು— ಕಾಪು, ಮರೆ, ಮರಸು; (ವಸ್ತುವಿಗೆ) ಗಾಜಿನ—ಮರೆ, ಆವರಣ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Shádeless (ಗು.) ; **Shády** (ಗು.) ನೆರಳಿನಲ್ಲಿರುವ, ನೆರಳಾಗಿರುವ ; (ಕ್ರಿಯೆ, ವರ್ತನೆ, ಮೊ. ಗಳು) ಶಂಕಾಸ್ಪದ, ಸಂಶಯಾಸ್ಪದ ; ಬೆಳಕಿಗೆ ಬರಲೊಲ್ಲದ, ಮರೆಯಲ್ಲೆ ನಡೆಯುವ ; ಕಳಂಕಿತ. On the s. side of forty (ವಯಸ್ಸು) ನಲವತ್ತರಾಚೆ. **Shádily** (ಕ್ರಿ. ವಿ.) ; **Shádiness** (ನಾ.)

Shade (ಕ್ರಿ.) (ವಿಪರೀತ ಬೆಳಕಿನಿಂದ) ಮರೆಮಾಡು, ನೆರಳು ಮಾಡು (Shaded his eyes with his hand ತನ್ನ ಕೈಗಳಿಂದ ಕಣ್ಣಿಗೆ ಮರೆಮಾಡಿಕೊಂಡನು. Trees s. the street ಮರಗಳು ಬೀದಿಗೆ ನೆರಳು ಮಾಡುತ್ತವೆ). (ಬೆಳಕು ಬೀಳದಂತೆ, ಅಥವಾ ಮಿತವಾಗಿ ಬೀಳುವಂತೆ) (ಬೆಳಕನ್ನು) ಮರೆಯಿಂದ, ಮರೆಯಾಗಿ,—ಮುಚ್ಚು, ಕವಿ, ಆಚ್ಛಾದಿಸು; ಮಬ್ಬು, ಮಂಕು, —ಮಾಡು, ಕವಿಸು (A sullen look shaded his face ಸಿಡುಕಿನಿಂದ ಅವನ ಮುಖ ಕಪ್ಪಾಯಿತು). (ರೇಖಾಚಿತ್ರ) (ನೆರಳು ಬೆಳಕುಗಳ ಭಾವವನ್ನಾಗಲಿ ಬಣ್ಣದ ಬಗೆ ಬಗೆಯ ಛಾಯೆಗಳನ್ನಾಗಲಿ ತೋರಿಸುವುದಕ್ಕಾಗಿ ಸಮಾಂತರ ಗೆರೆಗಳಿಂದ) ಕಪ್ಪು, ನೆರಳು,—ಮಾಡು. (ಬಣ್ಣದ ಅಥವಾ ಬೆಳಕಿನ ವಿಷಯದಲ್ಲಿ ; ರೂಪಕವಾಗಿ ಅಭಿಪ್ರಾಯ, ಪದ್ಧತಿ, ಮೊ. ಗಳ ವಿಷಯದಲ್ಲಿ) ಬೇರೆಯ ಬಗೆಗೆ ಕ್ರಮೇಣ ತೇಲು, ತಿರುಗು, ಮಾರ್ಪಾಟಾಗು ; ಕ್ರಮೇಣ ವರ್ಣಾಂತರವಾಗು (*Into, off* ಉಪ. ಮೊಡನೆ) ; (ಬಣ್ಣ, ಮೊ. ನ್ನು) ಮತ್ತೊಂದು ಬಗೆಗೆ ಕ್ರಮೇಣ ತಿರುಗಿಸು, ಮಾರ್ಪಡಿಸು (*Into* ಉಪ. ಮೊಡನೆ). (ಆರ್ಗನ್ ವಾದ್ಯದ ನಾದ ನಾಳಿಯ) ಸ್ಥಾಯಿ ಬದಲಾಯಿಸು. **Sháding** (ನಾ.) (ರೇಖಾ ಚಿತ್ರದಲ್ಲಿ) ಕಪ್ಪು, ನೆರಳು, —ಮಾಡುವುದು ; ಛಾಯೆ.

Shadoóf ಷಡೂಫ್ (ನಾ.) (ಈಜಿಪ್ಟ್ ದೇಶದ ನೀರೆತ್ತುವ) ಏತ.

Shádow ಷ್ಯಾಡೊ (ನಾ.) ನೆರಳು, ಛಾಯೆ ; ಕತ್ತಲೆ, ಅಂಧಕಾರ, ಮಬ್ಬು [The s. of death is on his face ಮರಣಚ್ಛಾಯೆ ಅವನ ಮುಖದಮೇಲೆ ಇದೆ. Valley of the s. of death (Valley ನೋಡಿ). The shadows of night ಇರುಳ ಕತ್ತಲೆ ; ರಾತ್ರಿಯ ಮಬ್ಬು. Under the s. of misfortune ದುರದೃಷ್ಟದ —ನೆರಳಿನಲ್ಲಿ, ಅಂಧಕಾರದಲ್ಲಿ. May your s. never grow less ! ನಿನ್ನ ನೆರಳು ಎಂದಿಗೂ ಕುಗ್ಗದಿರಲಿ (ನಿನ್ನ ಆಯುರಾರೋಗ್ಯಭಾಗ್ಯಗಳು ಕುಗ್ಗದಿರಲಿ ; ಪ್ರವರ್ಧಮಾನವಾಗುತ್ತಿರು)]. (ರೂಪ.) (ಎಡೆಬಿಡದ) ಅನುವರ್ತಿ, ಸಂಗಾತಿ; ನೆರಳು (Sin & her s. death ಪಾಪದೇವತೆ ಮತ್ತು ಅದರ ಅನುವರ್ತಿ ಮೃತ್ಯು). ಪ್ರತಿಬಿಂಬ, ಪಡಿನೆಳಲು, ಛಾಯೆ ; ಸುಳಿವು, ಮುನ್ ಸೂಚನೆ (Coming events cast their shadows before ನಡೆಯಲಿರುವ ಘಟನೆಗಳು ಮೊದಲೇ ತಮ್ಮ ಸುಳಿವು, ಛಾಯೆ, ತೋರುತ್ತವೆ). ಲವ, ಲೇಶ (Without a s. of doubt ಲೇಶ ಮಾತ್ರವೂ ಸಂದೇಹವಿಲ್ಲದೆ). ಹುರುಳಿಲ್ಲದ್ದು, ಅಭೌತವಾದದ್ದು, ಅವಾಸ್ತವಿಕವಾದದ್ದು (Catch at shadows ನೆರಳು ಹಿಡಿಯಹೋಗು. Having only the s. of freedom ಸ್ವಾತಂತ್ರ್ಯದ ಛಾಯೆ ಮಾತ್ರ ಇದ್ದು). ಪ್ರೇತ (A terrible s. with uplifted hand. Is but the s. of his former self ಅವನು ತುಂಬ ಇಳಿದು ಹೋಗಿದ್ದಾನೆ ; ಅವನು ಪ್ರೇತವಾಗಿಹೋಗಿದ್ದಾನೆ. Worn to a s. ತುಂಬ ಕೃಶವಾಗಿ, ಬಡಕಲಾಗಿ). ಮರೆ, ಅಜ್ಞಾತವಾಸ (Content to live in the s. ಮರೆಯಲ್ಲಿ, ಜನದ ಕಣ್ಣಿಗೆ ಬೀಳದೆ, —ಜೀವಿಸುವುದರಲ್ಲಿ ತೃಪ್ತನಾಗಿ). ಆಶ್ರಯ (Under the s. of the Almighty ಸರ್ವಶಕ್ತನ ಆಶ್ರಯದಲ್ಲಿ). (ನೌಕೆ) ನಾಲ್ಕು ಮೂಲೆಯ ಹಗುರ ಹಾಯಿ. (ಒಬ್ಬನ ಚಲನ ವಲನಗಳನ್ನೆಲ್ಲಾ ಗುಟ್ಟಾಗಿ ಗಮನಿಸಲು ಅವನ ಹಿಂದೆಯೇ ಅನುಸರಿಸಿ ಹೋಗುವ) ಗೂಢಚಾರ. S.-stitch ಒಂದು ಬಗೆಯ ಕಸೂತಿ ಹೊಲಿಗೆ. **Shádowless** (ಗು.) ; **Shádowy** (ಗು.) ; **Shádowiness** (ನಾ.)

Shádow (ಕ್ರಿ. ಸಕ.) (ಮು., ಕಾವ್ಯ) ನೆರಳು —ಮಾಡು, ಕವಿಸು ; ಆಚ್ಛಾದಿಸು, ಮರೆಮಾಡು, ಮರಸು. ಅಸ್ಪಷ್ಟವಾಗಿ, ಮಬ್ಬುಮಬ್ಬಾಗಿ, ಸಂಕೇತವಾಗಿ, ಮುನ್ ಸೂಚನೆಯಾಗಿ, — ತೋರಿಸು, ಕಾಣಿಸು (*Forth* ಉಪ. ಮೊಡನೆ) ; ಛಾಯೆ— ಕಾಣಿಸು, ತೋರಿಸು. ಹಿಂದೆಯೇ ಹೋಗುತ್ತಿದ್ದು ಒಬ್ಬನ ಚಲನ ವಲನಗಳನ್ನು ಗುಟ್ಟಾಗಿ ಗಮನಿಸುತ್ತಿರು; (ಇದಕ್ಕಾಗಿ) ಹಿಂಬಾಲಿಸುತ್ತಿರು, ಬೆನ್ನುಹಿಡಿದು ಹೋಗುತ್ತಿರು.

Shády, etc. Shade ನೋಡಿ.

Shaft ಷಾಫ್ಟ್ (ನಾ.) ಭರ್ಜಿಯ, ಈಟಿಯ, —ಹಿಡಿ(ಕೆ), ಕೋಲು ; ಭರ್ಜಿ, ಈಟಿ ; (ಉದ್ದಬಿಲ್ಲಿನ) ಬಾಣ(ದ ಕಾಂಡ) ; ಅಂಬು, ಕಣೆ [Cloth-yard s. ಒಂದು ಗಜ ಉದ್ದದ ಬಾಣ. (ರೂಪ.) Shafts of envy ಮಾತ್ಸರ್ಯದ ಬಾಣಗಳು]. ಬೆಳಕಿನ ಕಿರಣ ; ಮಿಂಚಿನ —ರೇಖೆ, ಕೋಲು ; ವಿದ್ಯುಲ್ಲೇಖೆ ; ಸಿಡಿಲು. (ಮರದ) ತಾಳು, ಕಾಂಡ ; (ಹೂವಿನ) ಕಾವು, ದಂಟು, ದಂಡ; (ಕಂಬದ) ದಿಂಡು ; ಕೂಡುಗಂಬಗಳ ಒಂದು ಕಂಬ ; ಶಿಖರ ಶಲಾಕೆ. ಚಾವಣಿಯ ಮೇಲ್ಭಾಗದ ಹೊಗೆಕೊಳವೆ; ಗರಿಯ—ದಿಂಡು, ನಡುಕಡ್ಡಿ. ಗಾತ್ರವಾದ ಭಾಗಗಳನ್ನು ಕೂಡಿಸುವ ಅಥವಾ ಅವಕ್ಕೆ ಆಧಾರವಾದ ತೆಳುವೂ ನೀಳವೂ ನೇರವೂ ಆದ ಭಾಗ : ಕಾಂಡ. (ಯಂತ್ರಶಿಲ್ಪ) (ದೊಡ್ಡ) ಅಚ್ಚು ; (ಕೂಡುಪಟ್ಟಿಗಳ ಮೂಲಕ ಅಥವಾ ಹಲ್ಲುಚಕ್ರಗಳ ಮೂಲಕ ಬಲವನ್ನು ಸಾಗಿಸುವ) ಚಾಲಕದಂಡ, ಆವರ್ತದಂಡ. (ಆಯುಧ, ಮೊ. ಗಳ) ಹಿಡಿ, ಕಾವು ; (ಬಂಡಿಯ) ಮೂಕಿ, ದೂರಿ, ಈಸು (S.-horse ಮೂಕಿ ಮಧ್ಯದ ಕುದುರೆ). ಗಣಿಯ ಒಳಕ್ಕೆ ಇಳಿಯಲು ಮಾಡಿರುವ, ಲಂಬ ಅಥವಾ ಇಳುಕಲು ತೋಡುದಾರಿ ; ಗಣಿಯ— ಬಾವಿಮಾರ್ಗ, ಸುರಂಗ ; ಊದು ಕುಲುಮೆಯ ಕೊಳವೆ. ಸುರಂಗ, ಚರಂಡಿ, ಮೊ. ಗಳಿಂದ ಹೊಗೆ, ದುರ್ವಾಯು, ಮೊ. ಗಳು ಮೇಲಕ್ಕೆ ಹೋಗಲು ಮಾಡಿರುವ ಕೊಳವೆಗಂಬ : ಹೊಗೆ, ಗಾಳಿ, —ಕಂಬ, ಗೂಡು. **Sháfting** (ನಾ.) (ಚಲನೆ ಕೊಡುವ, ಚಲನೆ ವರ್ಗಾಯಿಸುವ) ಅಕ್ಷದಂಡ ಯೋಜನೆ. ಯಾವುದರಲ್ಲಿ ಅಚ್ಚುಗಳನ್ನು ಕತ್ತರಿಸಿಕೊಳ್ಳಬಹುದೊ ಆ ಪದಾರ್ಥ ; ಕಂಬಗಳ—ದಿಂಡುಗಳು, ಕಾಂಡಗಳು.

Shag[1] ಷ್ಯಾಗ್ (ನಾ.) ಒರಟೊರಟಾಗಿ ಬೆಳೆದ ಕೂದಲು ; ಪೊದೆ ಗೂದಲು ; ದೊರಗುಗೂದಲು. (ಕೂದಲು, ಮೊ. ಗಳ) ಜಡೆ, ಬೊಂತೆ. (ಪ್ರಾಚೀ. ಪ್ರ.) ಉದ್ದ ಗುಂಜಿನ ಒರಟು ಬಟ್ಟೆ, ಗುಂಜು ಬಟ್ಟೆ. ಸಣ್ಣ ಸಣ್ಣಗೆ ಕತ್ತರಿಸಿದ ಒರಟು ಹೊಗೆಯಸೊಪ್ಪು. **Shágged** (ಗು.) ಬೊಂತೆ, ಜಡೆ, —ಗಟ್ಟಿದ, ಬೆಳೆದ. **Shággy** (ಗು.) ಹೆಚ್ಚಾಗಿ ಕೂದಲು ಬೆಳೆದ ; ಒರಟುಗೂದಲಿನ ; ಪೊದೆಗೂದಲಿನ ; (ಕೂದಲ ವಿಷಯದಲ್ಲಿ) ಒರಟಾದ, ಪೊದೆಯಾಗಿ ಬೆಳೆದಿರುವ, ಬಾಚಿಲ್ಲದ, ಜಡೆಗಟ್ಟಿದ, ಬೊಂತೆಯಾದ. (ಭೂಮಿ, ಮೊ. ಗಳ ವಿಷಯದಲ್ಲಿ) ಪೊದೆ, ಕಾಡು, —ಬೆಳೆದ ; (ಮರಗಳು, ಮೊ. ಗಳ ವಿಷಯದಲ್ಲಿ) ಸೊಟ್ಟಪಟ್ಟ ಹೆಣೆದುಕೊಂಡ ರೆಂಬೆಗಳ. (ಸ. ವಿ., ಜೀ. ವಿ.) ಉದ್ದವಾದ ಒರಟು ಕೂದಲು ತುಂಬಿರುವ ; ಲೋಮಶ. **Shággily** (ಕ್ರಿ. ವಿ.) ; **Shágginess** (ನಾ.)

Shag[2] ಷ್ಯಾಗ್ (ನಾ.) ಶಿಖೆಯುಳ್ಳ 'ಕಾರ್ಮೊರಂಟ್' ಎಂಬ ಕಡಲ ಹಕ್ಕಿ.

Shagreén ಷಗ್ರೀನ್ (ನಾ.) ಕುದುರೆ, ಕತ್ತೆ, ಒಂಟೆ, ಮೊ. ಪ್ರಾಣಿಗಳ ತೊಗಲಿನಿಂದ ಮಾಡಿದ, ಕೃತಕ ಕಣ ರಚನೆಯ ಮೇಲ್ಮೈ ಉಳ್ಳ, ಸಾ., ಹಸುರು ಬಣ್ಣ ಹಾಕಿದ, ಹದಮಾಡಿಲ್ಲದ ಚರ್ಮ. ಉಜ್ಜುವುದಕ್ಕೂ ಹೊಳಪು ಕೊಡುವುದಕ್ಕೂ ಉಪಯೋಗಿಸುವ, ಸ್ವಾಭಾವಿಕವಾಗಿ ಗಂತಿ ಗಂತಿಯಾದ, ಷಾರ್ಕ್ ಮೀನಿನ ತೊಗಲು.

Shah ಷಾ (ನಾ.) ಪರ್ಷಿಯದ ದೊರೆ ; ಪಾದಷಾ.

Shake ಷೇಕ್ (ಕ್ರಿ.) (ಭೂತ. Shook ಷುಕ್, ಭೂ. ಕೃ. Shaken ಷೇಕ್‌ನ್) ಅದಿರು, ಅಲ್ಲಾಡು, ಅಲುಗಾಡು ; ಕುಲುಕು ; —ಇಸು ; ತುಳುಕಾಡು ; ಒದರು, ಜಾಡಿಸು, ಕೊಡವು [Deserves a good shaking ಅವನನ್ನು ಚಟುವಟಿಕೆಗೊಳಿಸಬೇಕಾಗಿದೆ, —ಆಲಸ್ಯದಿಂದ ಎಬ್ಬಿಸಬೇಕಾಗಿದೆ. S. hands ಕೈಕುಲುಕು, ಹಸ್ತಲಾಘವ ಕೊಡು (ಪರಸ್ಪರ ಸಂಧಿಸಿದಾಗ ಅಥವಾ ಬೀಳ್ಕೊಳ್ಳುವಾಗ, ರಾಜಿಯಾದುದರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೂಚಕವಾಗಿ ಅಥವಾ ಅಭಿನಂದನಕ್ಕಾಗಿ, ಒಪ್ಪಂದದ ತರುವಾಯ). S. a carpet ಜಮಖಾನೆ ಝಾಡಿಸು]. ನಡುಗು, ಅದಿರು, ಬಳುಕು; —ಇಸು; ತೂಗು, ತೊನೆ, ಒಲೆ, ಕಂಪಿಸು, ಝಳಪಿಸು [S. one's fist, stick, etc. in person's face *or* at ಮುಷ್ಟಿ, ಕೋಲು, ಮೊ. ಗಳಿಂದ ಒಬ್ಬನನ್ನು ಬೆದರಿಸು, ಹೆದರಿಸು. S. a leg ಕುಣಿ. S. one's head (ತಿರಸ್ಕಾರ, ಅಸಮ್ಮತಿ, ಮೊ. ನ್ನು ಸೂಚಿಸುವುದಕ್ಕಾಗಿ) ತಲೆ ಯಾಡಿಸು, ತಲೆ ತೂಗು (*Over*, *at* ಉಪ. ದೊಡನೆ ಸಹ). S. with fear, cold, etc. ಭಯ, ಚಳಿ, ಮೊ. ಗಳಿಂದ ನಡುಗು. S. in one's shoes ಹೆದರಿಕೆಯಿಂದ ನಡುಗು, ತತ್ತರಿಸು]. ಕಲಕು; ಗಾಬರಿ—ಮಾಡು, ಆಗು; ತಲ್ಲಣಿಸು, ತಲ್ಲಣಗೊಳಿಸು (Was much shaken by, with, at, the news. Shook my composure ನನ್ನ ಶಾಂತಿಯನ್ನು ಕಲಕಿಬಿಟ್ಟಿತು. S. him out of his lethargy ಆಲಸ್ಯ ಬಿಟ್ಟು ಏಳುವಂತೆ ಚುರುಕುಗೊಳಿಸು). ಶಕ್ತಿ, ಬಲ, ಸ್ಥೈರ್ಯ, ಧೈರ್ಯ—ಕುಂದು, ಕುಂದಿಸು, ಉಡುಗಿಸು; ಕುಗ್ಗಿಸು, ಕದಲಿಸು, ಸಡಿಲಿಸು (The firm's credit was shaken ಸಂಸ್ಥೆಯ ನಂಬಿಕೆಗೆ, ಒಳ್ಳೆಯ ಹೆಸರಿಗೆ, ಧಕ್ಕೆ ತಗುಲಿತು. His faith was shaken ಅವನ ನಂಬಿಕೆ, ವಿಶ್ವಾಸ, ಕದಲಿಹೋಯಿತು. The ranks were shaken but not broken ಸೈನಿಕರ ಸಾಲುಗಳು ಕದಲಿದರೂ ಮುರಿಯಲಿಲ್ಲ). (ಧ್ವನಿ, ಸ್ವರ, ಮೊ. ಗಳ ವಿಷಯದಲ್ಲಿ) ಅದಿರು, ಕಂಪಿಸು, ನಡುಗು (His voice shook with emotion ರಾಗಾವೇಶದಿಂದ, ಭಾವೋದ್ರೇಕದಿಂದ, ಅವನ ಧ್ವನಿ ಕಂಪಿತವಾಯಿತು, ನಡುಗಿತು. Must learn to s. ಸ್ವರ ಕಂಪನ ಮಾಡುವುದನ್ನು ಕಲಿಯಬೇಕು). (ವಿಧ್ಯರ್ಥದಲ್ಲಿ: ಬಳ. ಮಾ., ಮು., ಅಮೆ. ಸಂ.) ಕೈಕುಲುಕು, ಹಸ್ತಲಾಘವ ಕೊಡು. S. down (ಮರದಿಂದ ಹಣ್ಣುಗಳನ್ನು) ಅಲ್ಲಾಡಿಸಿ ಕೆಡವು; ಉದುರಿಸು; (ಹುಲ್ಲು, ಮೊ. ನ್ನು) ಉದುರಿಸಿ ಹರವು; (ಜಮಖಾನೆ, ಮೊ. ನ್ನು) ಕೊಡವು, ಝಾಡಿಸಿ ಹಾಸು; (ಕಾಳು, ಮೊ. ನ್ನು ಪಾತ್ರೆಯಲ್ಲಿ) ಅಡಕವಾಗುವಂತೆ ಕುಲುಕು. (ಸಂಗಡಿಗರೊಡನೆ, ಸನ್ನಿವೇಶಕ್ಕೆ ತಕ್ಕಂತೆ) ಹಾಯಾಗಿ ಹೊಂದಿಕೊ, ಅಡಕವಾಗು, ಸವರಿಸಿಕೊ. S. off [ದೂಳು, ಮೊ. ನ್ನು; (ರೂಪ.) ಅನಿಷ್ಟ ವ್ಯಕ್ತಿ, ತೊಂದರೆ, ಮೊ. ನ್ನು] ಝಾಡಿಸಿ ಹಾಕು, ತೊಲಗಿಸು [S. off the dust from one's feet (Dust ನೋಡಿ)]. S. out (ಪಾತ್ರೆ, ಬಟ್ಟೆ, ಮೊ. ಗಳೊಳಗಿರುವುದನ್ನು) ಆಚೆಗೆ ಕೊಡವಿಬಿಡು, ಝಾಡಿಸಿ ಬರಿದುಮಾಡು; (ಹಾಯಿ, ಬಾವುಟ, ಮೊ. ಗಳನ್ನು) ಬಿಚ್ಚು, ಹರವು. S. up ಚೆನ್ನಾಗಿ ಬೆರೆಯುವಂತೆ—ಕುಲುಕು, ಅಲ್ಲಾಡಿಸು; (ದಿಂಬು, ಮೊ. ನ್ನು) ಅಲ್ಲಾಡಿಸಿ, ಕುಲುಕಿ, —ಸರಿಮಾಡು. ಆಲಸ್ಯ, ಸಂಪ್ರದಾಯಬದ್ಧ ಸ್ಥಿತಿ, ಮೊ. ಗಳಿಂದ ಕುಲುಕಿಬ್ಬಿಸು, ಹೊಡೆದೆಬ್ಬಿಸು. **Shákable** (ಗು.); **Shákedown** (ನಾ.) ಹುಲ್ಲನ್ನು ಹರವಿ ಮಾಡಿದ ಹಾಸಿಗೆ; ಹೇಗೋ ಸವರಿಸಿ ಮಾಡಿದ ಹಾಸಿಗೆ; ಕೊಡಹುವುದು, ಒದರುವುದು, ಉದುರಿಸುವುದು. **Sháker** (ನಾ.) (ಕ್ರಿಯಾರ್ಥಗಳಲ್ಲಿ); (S-) ಮೊದಲು ಮ್ಯಾಂಚೆಸ್ಟರಿನಲ್ಲಿ ಹುಟ್ಟಿ ಈಗಲೂ ಅಮೆ. ಸಂ. ದಲ್ಲಿ ರೂಢಿಯಲ್ಲಿರುವ, ಕ್ರಿಸ್ತನ ಎರಡನೆಯ ಆಗಮನ ಆಗಲೆ ಆಗಿರುವುದೆಂದು ನಂಬುವ, ಒಂದು ಕ್ರೈಸ್ತ ಪಂಗಡದವನು [**Shákeress** (ನಾ., ಸ್ತ್ರೀ.); **Shákerism** (ನಾ.)]. **Sháking** (ನಾ.); **Sháky** (ಗು.) ಕಂಪಿಸುವ, ಅಲ್ಲಾಡುವ, ನಡುಗುವ, ಕುಲುಕುವ, ಭದ್ರವಿಲ್ಲದ, ಸಡಿಲವಾದ, ಬಿಗಿಯಿಲ್ಲದ, ತೂಗಾಡುವ, ನಂಬಲಾಗದ, ಅಸ್ಥಿರ (S. credit, voters). **Shákily** (ಕ್ರಿ. ವಿ.); **Shákiness** (ನಾ.)

Shake (ನಾ.) ಅಳ್ಳಾಡುವುದು, ಅಳ್ಳಾಟ, ಅಲುಗಾಟ, ಕುಲುಕಾಟ; ಅದಿರಾಟ; ನಡುಕ, ಕಂಪನ (ಸ್ವರ, ಧ್ವನಿಗಳದು ಸಹ); ತೂಗಾಟ, ತೊನೆತ, ಒಲೆತ, ಕಲಕ, ಕ್ಷೋಭೆ [All of a s. ಮೈಯಲ್ಲ ನಡುಗುತ್ತ. The shakes (ಚಳಿಜ್ವರದ) ನಡುಕ]. ಕ್ಷಣ (In two shakes of a lamb's tail, in two shakes ಒಂದು ಕ್ಷಣದೊಳಗೆ; ಒಂದು ಚುಟಿಕೆಯಲ್ಲಿ). (ಬೆಳೆಯುತ್ತಿರುವ ದಾರುವಿನಲ್ಲಿಯ) ಬಿರುಕು, ಸೀಳು. (ಆಸಂ.) Is no great shakes ಅಷ್ಟೇನೂ ಶ್ರೇಷ್ಠವಾದುದು, ಪ್ರಮುಖವಾದುದು, —ಅಲ್ಲ. S.-out (ಪತ್ರ ವ್ಯಾಪಾರ) ದುರ್ಬಲರಾದ ಸಟ್ಟಾ ವ್ಯಾಪಾರದವರನ್ನು ವ್ಯಾಪಾರ ಚ್ಯುತರನ್ನಾಗಿ ಮಾಡಿಬಿಡುವ ವಿಷಮ ಸ್ಥಿತಿ, ಝಾಡಿಕೆ, ಕೊಡವಾಟ. S.-up ಹೊಡೆದೆಬ್ಬಿಸುವುದು, ಚಟುವಟಿಕೆಗೊಳಿಸುವುದು, ಅಳ್ಳಾಡಿಸುವುದು.

Sháker, etc. **Shake** ನೋಡಿ.

Shak(e)spé(a)rian, -ean ಷೇಕ್ಸ್‌ಪೀ(ಅ)ರಿಯನ್ (ಗು.) (ಇಂಗ್ಲೆಂಡ್ ದೇಶದ ಪ್ರಸಿದ್ಧ ನಾಟಕಕಾರನಾದ) ಷೇಕ್ಸ್‌ಪಿಯರಿನ (ಶೈಲಿಯ). **Shak(e)spe(a)riána** (ನಾ., ಬ. ವ.) ಷೇಕ್ಸ್‌ಪಿಯರ್ ಸಂಬಂಧವಾದ—ಸಂಗತಿಗಳು, ವಿಚಾರಗಳು, ಸಾಹಿತ್ಯ.

Sháko ಷ್ಯಾಕೋ (ನಾ.) (ಹೆಚ್ಚು ಕಡಮೆ ಕೊಳವೆಯಾಕಾರದಲ್ಲಿರುವ ನಿಮಿರಿದ ಗರಿ ಅಥವಾ ಕುಚ್ಚು ಉಳ್ಳ) ಒಂದು ಬಗೆಯ ಸೈನಿಕ ಟೋಪಿ.

Sháky, etc. **Shake** ನೋಡಿ.

Shale ಷೇಲ್ (ನಾ.) (ಸುಲಭವಾಗಿ ತೆಳುಪದರಗಳಾಗಿ ಒಡೆಯುವ, ಸ್ಲೇಟು ಕಲ್ಲಿನಂತಿದ್ದು ಅದಕ್ಕಿಂತಲೂ ಮೃದುವೂ, ಕಡಮೆ ಗಟ್ಟಿಯೂ ಆದ, ಹಲವು ಬಗೆಯ) ಜೇಡಿ ಪದರಗಲ್ಲು. S.-oil ಬಿಟ್ಯೂಮೆನ್ ಕೂಡಿದ ಇಂಥ ಜೇಡಿ ಪದರಗಲ್ಲಿನಿಂದ ತೆಗೆದ ಒಂದು ಬಗೆಯ ನ್ಯಾಫ್ತ ಎಣ್ಣೆ. **Shály** (ಗು.)

Shall ಷಲ್ [ಸಹಾಯಕ ಕ್ರಿ.; (ವರ್ತಮಾನರೂಪ). I, he, we, you, they, s.; thou shalt. (ಭೂತ. ಮತ್ತು ಸಂಭಾವನಾ ರೂಪ) I, he, we, you, they, should (ಉಚ್ಚಾರ: ಷುಡ್); thou shouldst (ಉಚ್ಚಾರ: ಷುಡ್‌ಸ್ಟ್), *or* shouldest (—ಡೆಸ್ಟ್). (ನಿಷೇಧ ರೂಪ) Shall not, shan't (ಷಾಂಟ್); should not, shouldn't]. S. ಮತ್ತು should ಪದಗಳ ಪ್ರಯೋಗ ಈ ಮುಂದಿನಂತೆ ಇದೆ: (೧) ಉತ್ತಮ ಪುರುಷದಲ್ಲಿ ಸಾಮಾನ್ಯ ಭವಿಷ್ಯತ್, ಸಂಭಾವನಾ ಮತ್ತು ಪ್ರಶ್ನಾರ್ಥಕ ಸೂಚಕವಾಗಿ (ಮಿಕ್ಕ ಪುರುಷಗಳಲ್ಲಿ will ಮತ್ತು would ಪದಗಳು ಪ್ರಯೋಗವಾಗುತ್ತವೆ) (We s. hear about it tomorrow ಅದರ ವಿಷಯವಾಗಿ ನಾಳೆ ನಮಗೆ ತಿಳಿಯುತ್ತದೆ. I should have been killed if I had let go ನಾನು ಹಿಡಿತ ಬಿಟ್ಟಿದ್ದಿದ್ದರೆ ನಾನು ಸಾಯುತ್ತಿದ್ದೆ. S. I hear from you soon? ನಿನ್ನಿಂದ ಬೇಗ ಉತ್ತರ, ಪತ್ರ, ಬರುವುದುಂಟೋ?). (೨) ಪ್ರಥಮ ಮತ್ತು ಮಧ್ಯಮ ಪುರುಷಗಳಲ್ಲಿ ಮಾತಾಡುವವನ ಇಷ್ಟಾರ್ಥವನ್ನು ಸೂಚಿಸುವ ಭವಿಷ್ಯತ್ ಅಥವಾ ಸಂಭಾವನಾ ಸೂಚಕವಾಗಿ (ಉತ್ತಮ ಪುರುಷದಲ್ಲಿ will ಮತ್ತು would ಪದಗಳು ಪ್ರಯೋಗವಾಗುತ್ತವೆ) (You s. not catch me again ನನ್ನನ್ನು ನೀನು ಪುನಃ ಹಿಡಿಯುವುದಿಲ್ಲ; ಪುನಃ ನಿನ್ನ ಕೈಗೆ ನಾನು ಸಿಕ್ಕುವುದಿಲ್ಲ. He should not have gone if I could have prevented it ನಾನು ತಡೆಯಲಾಗಿದ್ದರೆ ಅವನು ಹೋಗುತ್ತಿರಲಿಲ್ಲ). (೩) (೧)ನೆಯ ಪ್ರಯೋಗದ ಉತ್ತಮ ಪುರುಷದ ವಾಕ್ಯಗಳನ್ನು ಮಿಕ್ಕ ಪುರುಷಗಳಿಗಾಗಲಿ ಮಿಕ್ಕ ಪುರುಷಗಳ ವಾಕ್ಯಗಳನ್ನು ಉತ್ತಮ ಪುರುಷಕ್ಕಾಗಲಿ ಅನುವಾದಮಾಡಿ ಹೇಳುವಾಗ will ಮತ್ತು would ಪದಗಳಿಗೆ ಪರ್ಯಾಯವಾಗಿ [He says *or* said, you say *or* said, that he, you, s. *or* should never manage it ಅವನು, ನೀನು, ಎಂದಿಗೂ ಅದನ್ನು ನಿರ್ವಹಿಸುವುದಿಲ್ಲವೆಂದು ಹೇಳುತ್ತಾನೆ, ಹೇಳಿದನು, ಹೇಳುತ್ತೀಯೆ, ಹೇಳಿದೆ (ಇಂಥ ಕಡೆ ಈಗ will ಮತ್ತು would ರೂಪಗಳೇ ಹೆಚ್ಚು ಬಳಕೆ). He says I s. never manage it (ಈಗ ಇಂಥ ಕಡೆ will ಪ್ರ. ವಿರಳ)]. (೪) S. ಅಥವಾ Should ಪದವುಳ್ಳ (೨)ನೆಯ ಪ್ರಯೋಗದ ವಾಕ್ಯಗಳನ್ನು ಪುರುಷಾಂತರಿಸಿ ಅನುವಾದಮಾಡಿ ಹೇಳುವಾಗ (You promised I, he, should not catch you at it again ಪುನಃ ಅಪರಾಧಮಾಡಿ ನನ್ನ, ಅವನ, ಕೈಗೆ ಸಿಕ್ಕುವುದಿಲ್ಲವೆಂದು ನೀನು ಮಾತುಕೊಟ್ಟಿದ್ದೆ). (೫) (೧)ನೆಯ ಪ್ರಯೋಗದ ಮಧ್ಯಮ ಪುರುಷದ ಪ್ರಶ್ನಾರ್ಥಕ ವಾಕ್ಯಗಳಲ್ಲಿ (S. you be going to church? ನೀನು ಚರ್ಚಿಗೆ ಹೋಗುವುದುಂಟೋ?). (೬) ಯಾವ ಪುರುಷದಲ್ಲಾಗಲಿ ವಿಧಿ, ಕರ್ತವ್ಯ, ಮೊ. ಗಳನ್ನು ಸೂಚಿಸುವುದಕ್ಕಾಗಿ (Thou shalt

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

not steal ಕದಿಯಬೇಡ; ಕಳ್ಳತನ ಮಾಡಬೇಡ. I, you, he, should really have been careful ನಾನು ನೀನು, ಅವನು, ನಿಜವಾಗಿಯೂ ಎಚ್ಚರಿಕೆಯಿಂದ ಇರಬೇಕಾಗಿತ್ತು. S. I, he, open the door? ನಾನು, ಅವನು, ಬಾಗಿಲನ್ನು ತೆರೆಯಲೆ? Why should I, he, you, obey?). (೭) ಎಲ್ಲ ಪುರುಷಗಳಲ್ಲಿ ಸಂಭಾವನಾರ್ಥ ಸೂಚಕವಾಗಿ (If, when, we s. be defeated ನಮಗೆ ಅಪಜಯ ವಾದಾಗ,—ವಾದರೆ. Any one who should say ಹೇಳುವವನು ಯಾವನಾದರೂ. If he should happen to be there). (೮) ಎಲ್ಲ ಪುರುಷಗಳಲ್ಲಿ may ಮತ್ತು might ಪದಗಳಿಗೆ ಪರ್ಯಾಯವಾಗಿ (To the end that I, you, he, s. *or* should not be able). (೯) ಇತರ ಕೆಲವು ವಿವಿಧ ನುಡಿಕಟ್ಟುಗಳಲ್ಲಿ [It should seem = It seems. You s. find (ಪ್ರಾಚೀ. ಪ್ರ.) ಖಂಡಿತ ನೀನು ನೋಡುವೆ. It is surprising that I, you, he, should be *or* have been so foolish ನಾನು, ನೀನು, ಅವನು, ಅಷ್ಟು ಅವಿವೇಕಿಯಾಗಿರುವುದು, ಅವಿವೇಕಿಯಾಗಿದ್ದುದು, ಆಶ್ಚರ್ಯ]

Shalloón ಷಲೂನ್ (ನಾ.) ಅಂಗಿಯ ಅಸ್ತರಿಗೂ ಹೆಂಗಸರ ಉಡುಪಿಗೂ ಉಪಯೋಗಿಸುವ ಒಂದು ಬಗೆಯ ಹಗುರ ಉಣ್ಣೆಯ ಬಟ್ಟೆ.

Shállop ಷ್ಯಾಲಪ್ (ನಾ.) ಹಗುರವಾದ ತೆರಪು ದೋಣಿ.

Shal(l)ót ಷಲಾಟ್ (ನಾ.) (ಬೆಳ್ಳುಳ್ಳಿಯಂಥ, ಆದರೆ ಅದರಷ್ಟು ಕಟು ವಾಸನೆಯಿಲ್ಲದ ಹಿಳುಕುಗಳುಳ್ಳ ಗೆಡ್ಡೆ ಬಿಡುವ) ಈರುಳ್ಳಿ ಜಾತಿಯ ಸಸ್ಯ.

Shállow ಷ್ಯಾಲೋ (ಗು., ತರತಮ ರೂಪಗಳು -er, -est; ನಾ., ಕ್ರಿ.) ತೆಳ್ಳಗಿನ, ಆಳವಿಲ್ಲದ, ಗಾಧ (ರೂಪ. ಸಹ) (A s. mind, man ಅಲ್ಪಮತಿ. A s. argument ಆಳವಿಲ್ಲದ ವಾದ. A s. love ಆಳ ವಿಲ್ಲದ, ಮೇಲು ಮೇಲಿನ, —ಪ್ರೇಮ. S.-brained ಮಂದಬುದ್ಧಿ ಯಾದ. S.-hearted ಗಾಢಾಸಕ್ತಿಯಿಲ್ಲದ; ಗಾಢಾನುರಾಗವಿಲ್ಲದ. S.-pated ಪೊಳ್ಳುತಲೆಯ, ಮಂದಬುದ್ಧಿಯಾದ). (ನಾ.) ಆಳವಿಲ್ಲದ—ಸ್ಥಳ, ಜಲಪ್ರದೇಶ. (ಕ್ರಿ.) ಆಳವಿಲ್ಲದ್ದಾಗಿ ಮಾಡು, ಆಗು. **Shállowly** (ಕ್ರಿ. ವಿ.); **Shállowness** (ನಾ.)

Shalt. Shall ನೋಡಿ.

Sham ಷ್ಯಾಮ್ (ಕ್ರಿ., ನಾ., ಗು.) ನಟಿಸು, ಸೋಗುಹಾಕು, ವೇಷ ತೆಗೆ, ಆಟ ಕಟ್ಟು, ಮೋಸಮಾಡು, ಠಕ್ಕಿಸು (S. illness, sleep, a faint). (ನಾ.) ಠಕ್ಕು, ಮೋಸ, ನಟನೆ, ಕಪಟ, ಕೃತ್ರಿಮ, ಸೋಗು (This age of shams). ಮೋಸಗಾರ, ಠಕ್ಕುಗಾರ; ಮೋಸದ, ಠಕ್ಕಿನ, —ವಸ್ತು; ಧದ್ಮ—ವ್ಯಕ್ತಿ, ವಸ್ತು. ಹಾಸಿಗೆ ಠೀವಿಯಾಗಿ ಕಾಣಲು ಹಗಲ ಹೊತ್ತು ಅದರ ಮೇಲೆ ಹರವಿರುವ ಕಸೂತಿ ಕೆಲಸದ ಬಟ್ಟೆ: ಠಕ್ಕಿನ ಮುಸುಕು (ಬಟ್ಟೆ) (=Sheet-s., pillow-s.). (ಗು.) ಮೋಸದ; ಠಕ್ಕಿನ; ಸೋಗಿನ; ಖೋಟಾ [S. fight (ಅಭ್ಯಾಸಕ್ಕಾಗಿ ಸೈನ್ಯದಳಗಳು ಮಾಡುವ) ಹುಸಿಕಾಳಗ, ಕೃತಕ ಕದನ. S. plea (ನ್ಯಾ. ಶಾ.) ಕಾಲಹರಣಕ್ಕಾಗಿ ಹೂಡಿದ—ಕಳ್ಳ ನೆವ, ಸುಳ್ಳು ನೆವ]. **Shámmer** (ನಾ.)

Shámanism ಷ್ಯಾ(ಷಾ)ಮನಿಸ್ಮ್ (ನಾ.) (ಭೂತಗಳು, ಪ್ರೇತಗಳು ಮತ್ತು ಉಪದೇವತೆಗಳಲ್ಲಿ ನಂಬಿಕೆಯುಳ್ಳ ಮತ್ತು ಅವನ್ನು ಒಲಿಸಿಕೊಳ್ಳಲು ಮಾಂತ್ರಿಕ ಪುರೋಹಿತರಿಗೆ ಮಾತ್ರ ಶಕ್ತಿಯುಂಟೆಂದು ನಂಬುವ) ಸೈಬೀರಿಯಾ ದೇಶದ ಜನಗಳ ಒಂದು ಮತ.

Shámble ಷ್ಯಾಂಬ್‌ಲ್ (ಕ್ರಿ. ಅಕ., ನಾ.) (ಮಂಡಿ ಊನವಾಗಿರುವಂತೆ) ವಕ್ರವಾಗಿ, ವಿಕಾರವಾಗಿ, ಕಾಲೆಳೆದುಕೊಂಡು, —ಹೋಗು, ನಡೆ (Shambling gait ಸೆಳೆಗಾಲು ನಡಗೆ). (ನಾ.) ಹೇಟಗಾಲು, ಸೆಳೆ ಗಾಲು, —ನಡಗೆ.

Shámbles ಷ್ಯಾಂಬ್‌ಲ್ಸ್ (ನಾ., ಬ. ವ.; ಅನೇಕ ವೇಳೆ ಏ. ವ. ದಂತೆ ಅನ್ವಯ) (ಕಟುಕನ) ಕಸಾಯಿ—ಮನೆ, ಖಾನೆ; ಕಟುಕರಂಗಡಿ. ಕಗ್ಗೊಲೆಯ ಕಳ (The place became a s.)

Shame ಷೇಮ್ (ನಾ.) ತಾನು ತಪ್ಪು ಮಾಡಿದುದರ, ತನ್ನ ಒಂದು ಕೊರತೆಯ, ತಾನು ನಗೆಗೀಡಾದ, ಮರ್ಯಾದೆ ಮೀರಿದುದರ, ಮೊ. ಗಳ ಅರಿವಿನಿಂದ ಪ್ರೇರಿತವಾದ ಅಪಮಾನಭಾವ: ನಾಚಿಕೆ, ಸಿಗ್ಗು, ಎಗ್ಗು, ಲಜ್ಜೆ; ನಾಣು (ಗ್ರಾಂ.) (Flushed with s. ನಾಚಿಕೆ ಯಿಂದ ಮುಖ ಕೆಂಪೇರಿ. For s.! ನಾಚಿಕೆಗೇಡು! Is quite without *or* lost to s. ನಾಚಿಕೆ ಗೀಚಿಕೆ—ಏನೂ ಇಲ್ಲ, ಎಲ್ಲಾ ಬಿಟ್ಟವನು). ಅವಮಾನ, ಅವಹೇಳನ, ನಾಚಿಕೆಗೇಡು [S. on you! ನಿನ್ನ ಮುಖಕ್ಕೆ ಥೂ! Put one to s. (ಉತ್ತಮ ಗುಣ, ಮೊ. ಗಳಿಂದ, ಒಬ್ಬನನ್ನು) ನಾಚುವಂತೆ ಮಾಡು, ನಾಚಿಸು]. ಅವಮಾನಕಾರಕ, ಲಜ್ಜಾಸ್ಪದ (Is a s. to his parents. It is a sin and a s.).

Shámefaced —ಫೇಸ್ಟ್ (ಗು.) ಸಿಗ್ಗಾಳಿ; ನಾಚಿಕೆಯುಳ್ಳ; ಸಂಕೋಚ ಪ್ರಕೃತಿಯ; ಲಜ್ಜಾಶೀಲ; ನಾಚಿದ, ಲಜ್ಜಿತ; (ಕಾವ್ಯ: ಗುಣ, ಹೂವು, ಮೊ. ಗಳ ವಿಷಯದಲ್ಲಿ) ಮರೆಯಲ್ಲಿರುವ, ನಿರಾಡಂಬರದ, ಎದ್ದು ಕಾಣಿಸಿಕೊಳ್ಳದ. **Shámefacedly** —ಫೇಸೆಡ್ಲಿ, —ಫೇಸ್ಟ್ಲಿ (ಕ್ರಿ. ವಿ.); **Shámefacedness** —ಫೇಸ್(ಸಿ)ಡ್‌ನೆಸ್, —ಫೇಸ್ಟ್‌ನೆಸ್ (ನಾ.); **Shámeless** (ಗು.) ನಾಚಿಕೆಯಿಲ್ಲದ, ನಿರ್ಲಜ್ಜೆಯ. **Shámelessly** (ಕ್ರಿ. ವಿ.); **Shámelessness** (ನಾ.); **Shámeful** (ಗು.) ನಾಚಿಕೆಗೇಡಿಯಾದ, ಲಜ್ಜಾಸ್ಪದವಾದ, ಅವಮಾನಕರವಾದ. **Shámefully** (ಕ್ರಿ. ವಿ.); **Shámefulness** (ನಾ.)

Shame (ಕ್ರಿ.) (—ಕ್ಕೆ) ನಾಚಿಕೆ, ಲಜ್ಜೆ, —ಪಡು, ಗೊಳ್ಳು; ನಾಚು (*To* ಉಪ. ದೊಡನೆ) (ಪ್ರಾಚೀ. ಪ್ರ., ಸಾ., ನಿಷೇಧಾರ್ಥದಲ್ಲಿ: He shamed not to say). ಅವಮಾನಕರವಾಗಿರು, ಲಜ್ಜಾಸ್ಪದ ವಾಗಿರು; ಅವಮಾನಗೊಳಿಸು; ನಾಚಿಸು (A dog's fidelity shames us ನಾಯಿಯ ಸ್ವಾಮಿನಿಷ್ಠೆ ನಮ್ಮನ್ನು ನಾಚಿಸುತ್ತದೆ). ನಾಚಿಕೆಯಿಂದ ಹೆದರಿ, ನಾಚಿಕೆಪಟ್ಟು, ಒಂದು ಕೆಲಸವನ್ನು ಮಾಡು ವಂತೆ, ಬಿಡುವಂತೆ, —ಮಾಡು (*Into, out of* ಪದಗಳೊಡನೆ). Tell the truth & s. the devil ನಿಜವನ್ನಾಡಿ ಸೈತಾನನಿಗೆ ನಾಚಿಕೆ ಗೊಳಿಸು, ದಿಗ್ಭ್ರಮೆಗೊಳಿಸು.

Shámmy ಷ್ಯಾಮಿ, **Shámoy** ಷ್ಯಾಮಾಯ್ (ನಾ.) = Chamois.

Shampoó ಷ್ಯಾಂಪೂ (ಕ್ರಿ. ಸಕ., ನಾ.) (ದೇಹ. ಮೊ. ನ್ನು ಬಿಸಿ ನೀರು ಸ್ನಾನಮಾಡಿಸಿ) ನೀವು, ತೀಡು, ಮರ್ದಿಸು; ಅಂಗಮರ್ದನ ಮಾಡು, ಸಂವಾಹನ ಮಾಡು (ಮೊದಲ ಅರ್ಥ; ಈಗ ವಿರ ಪ್ರ.); (ತಲೆಯನ್ನು, ಕೂದಲನ್ನು; ಸಾಬೂನು, ಮೊ. ನ್ನು ಹಾಕಿ) ಉಜ್ಜಿ, ತಿಕ್ಕಿ, —ತೊಳೆ. (ನಾ.)(ತಲೆಯನ್ನು) ಉಜ್ಜಿ ತೊಳೆಯುವುದು; ತಿಕ್ಕು, ಉಜ್ಜು, —ತೊಳೆತ.

Shámrock ಷ್ಯಾಂರಾಕ್ (ನಾ.) ಐರ್ಲೆಂಡಿನ ರಾಷ್ಟ್ರೀಯ ಚಿಹ್ನೆಯಾಗಿ ಉಪಯೋಗಿಸುತ್ತಿರುವ, ತ್ರಿದಳಪರ್ಣಗಳ (ಮೂರು ದಳದ ಎಲೆ ಬಿಡುವ) ಹಲವು ಬಗೆಯ ಸಸ್ಯ (Leek, rose, thistle ಪದಗಳನ್ನು ನೋಡಿ)

Shándrydan ಷ್ಯಾಂಡ್ರಿಡ್ಯಾನ್ (ನಾ.) ಹಗುರವಾದ ಎರಡು ಚಕ್ರದ ಬಂಡಿ; ಹಳೆಯ ಮಾದರಿಯ ಮುರುಕಲು ಬಂಡಿ.

Shándygaff ಷ್ಯಾಂಡಿಗ್ಯಾಫ್ (ನಾ.) ಬಿಯರ್ ಮತ್ತು ಶುಂಠಿ ಸೋಡಾಗಳ ಮಿಶ್ರಪಾನೀಯ.

Shanghaí ಷ್ಯಾಂಘೈ (ಕ್ರಿ. ಸಕ.) (ನಾವಿಕ ಅಸಂ.) ಔಷಧ ಸೇವನೆ ಯಿಂದ (ಅಫೀಮು, ಮೊ. ರಿಂದ) ಮತ್ತುಬರಿಸಿ, ಜ್ಞಾನ ತಪ್ಪಿಸಿರುವಾಗ ನಾವಿಕನನ್ನಾಗಿ ಹಡಗಿಗೆ ಸೇರಿಸು; ಮೋಸ ಮತ್ತು ಬಲಾತ್ಕಾರ ಗಳಿಂದ ಸೇರಿಸಿಕೊ, ಕರೆದುಕೊಂಡು ಬಾ.

Shank ಷ್ಯಾಂಕ್ (ನಾ., ಕ್ರಿ. ಅಕ.) ಕಾಲು [Shanks's mare ತನ್ನ ಕಾಲುಗಳು (ಸವಾರಿ, ಮೊ. ಗಳಿಗೆ ವ್ಯತಿರಿಕ್ತವಾಗಿ)]. ಮಂಡಿಯಿಂದ ಹರಡಿನ ವರೆಗಿನ ಕಾಲಿನ ಭಾಗ: ಮೊಣಕಾಲು, ಕಣಕಾಲು, ಜಂಘೆ; ಮೊಣಕಾಲ ಮೂಳೆ; ಜಂಘಾಸ್ಥಿ. ಹಕ್ಕಿಯ ಪಾದದ ಲಂಬ ಭಾಗ. ಹೂವಿನ ಕಾವು, ತೊಟ್ಟು. ಕಾಲುಚೀಲದ ಕಾಲಿನ ಭಾಗ; (ಕಂಬ, ಮೊ. ಗಳ) ದಿಂಡು, ಕಾಂಡ; (ಆಯುಧ, ಬೀಗದ ಕೈ, ಚಮಚ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊ. ಗಳ) ಕಾವು, ಕೋಲು ; ಮೀನು ಕೊಕ್ಕೆಯ ನೇರ ಭಾಗ ; ಪಾದ ರಕ್ಷೆಯ ಅಟ್ಟೆಯ ಕಿರಿದಗಲದ ನಡುವಣ ಭಾಗ. (ಕ್ರಿ.) S. off (ಹೂವು ಗಳ ವಿಷಯದಲ್ಲಿ) ತೊಟ್ಟು ಕೊಳೆತು ಉದುರಿಹೋಗು. (-)**shanked** (ಗು.)

Shan't. **Shall** ನೋಡಿ.

Shánty[1] ಷ್ಯಾಂಟಿ (ನಾ.) ಗುಡಿಸಿಲು, ಜೋಪಡಿ, ಕುಟೀರ.

Shánty[2] (ನಾ.) = Chanty (ಎಂಬುದರ ಮತ್ತೊಂದು ರೂಪ)

Shape ಷೇಪ್ [ಕ್ರಿ.. ಭೂತ. Shaped ; ಭೂ. ಕೃ. Shaped, Shapen (ಪ್ರಾಚೀ. ಪ್ರ.)] ನಿರ್ಮಿಸು, ರೂಪಿಸು, ಸೃಷ್ಟಿಸು (I was shapen in wickedness) ; ಗೊತ್ತಾದ ಅಥವಾ ಬೇಕಾದ ರೂಪಕ್ಕೆ, ಆಕಾರಕ್ಕೆ—ತರು, ಬರು (Shaped like a pear); ರೂಪ, ಮಾಟ, ಆಕಾರ, —ಕೊಡು (*To* ಉಪ. ಜೊಡನೆ. Some sleeves are shaped to the elbow) ; ಯೋಜಿಸು ; (ಅನುಸರಿಸಬೇಕಾದ ಮಾರ್ಗ, ಮೊ. ನ್ನು) ನಿರ್ದೇಶಿಸು, ಗೊತ್ತುಮಾಡು, ಹೂಡು ; (ಮನಸ್ಸಿನಲ್ಲಿ) ಕಲ್ಪಿಸಿಕೊ, ರೂಪಿಸಿಕೊ ; ರೂಪ, ಆಕಾರ, —ಗೊಳ್ಳು, ಪಡೆ ; (ಶೀಲ, ಶಕ್ತಿ, ಮೊ. ಗಳ) ಭವಿಷ್ಯದ ಲಕ್ಷಣ ತೋರು (Shapes well ಚೆನ್ನಾಗಿ ರೂಪಗೊಳ್ಳುತ್ತಿದೆ ; ಚೆನ್ನಾಗಿ ಆಗುವ ಸೂಚನೆ ಕೊಡುತ್ತದೆ). **Shápable** (ಗು.) ; **Sháper** (ನಾ.) (ಕ್ರಿಯಾರ್ಥಗಳಲ್ಲಿ) ; ಹತ್ತರಿ ಹಿಡಿಯುವುದು, ಮುದ್ರೆಯೊತ್ತುವುದು, ಅಚ್ಚೊತ್ತುವುದು, (ಚರಕಿಯಂತ್ರದಲ್ಲಿ) ಕಡೆಯುವುದು, ಮೊ. ಕೆಲಸಗಳಿಗೆ ಉಪಯೋಗಿಸುವ ಹಲವು ಬಗೆಯ ಯಂತ್ರ ಸಲಕರಣೆ ; ಲೋಹದ ತುಂಡುಗಳಿಗೆ, ಯಂತ್ರ ಭಾಗಗಳಿಗೆ, ತಕ್ಕ ಆಕಾರ ಕೊಡುವ, ಯಂತ್ರ, ಆಯುಧ : ರೂಪಕಾರಿ ; ಅಚ್ಚು.

Shape (ನಾ.) ರೂಪ, ಆಕಾರ, ಆಕೃತಿ (Spherical in s. ಆಕಾರದಲ್ಲಿ ಗೋಳವಾಗಿ ; ಗೋಳಾಕಾರವಾಗಿ. Intention took shape in action ಇಂಗಿತ ಕಾರ್ಯದಲ್ಲಿ ರೂಪಗೊಂಡಿತು). ವೇಷ, ಜೋಹ (Monster in human s. The brute serpent in whose s. I Man deceived). ರೀತಿ, ಬಗೆ, ಪ್ರಕಾರ (In any s. *or* form ಯಾವ ಬಗೆಯಲ್ಲಾಗಲಿ). ವ್ಯವಸ್ಥಿತ ರೂಪ ; ಕ್ರಮ ; ವ್ಯವಸ್ಥೆ [Get one's ideas into s. ಭಾವನೆಗಳನ್ನು ವ್ಯವಸ್ಥಿತ ರೂಪಕ್ಕೆ ತಂದುಕೊ, ಕ್ರಮಗೊಳಿಸಿಕೊ. Lick into s. (Lick ನೋಡಿ). Give s. to (—ಕ್ಕೆ) ವ್ಯವಸ್ಥಿತ ರೂಪ ಕೊಡು]. ಅಸ್ಪಷ್ಟಾಕೃತಿ; ಛಾಯೆ; ಭೂತ; ಪ್ರೇತ (A s. loomed through the mist ಮಬ್ಬಿನಲ್ಲಿ ಒಂದು ಪ್ರೇತಾಕಾರ ಕಾಣಿಸಿಕೊಂಡಿತು) ; (ಕೆಲಸಗಾರನ) ಮಾದರಿ ; (ಟೋಪಿ, ಮೊ. ಗಳಿಗೆ ಆಕಾರ ಕೊಡುವ) ಅಚ್ಚು ; ಸಕ್ಕರೆ, ಬೆಲ್ಲ, ಮೊ. ಗಳ ಅಚ್ಚು. ನಟನು ಧರಿಸುವ ಮೈಮೆತ್ತೆ, ಆಕಾರ ಮೆತ್ತೆ. (-)**shaped** (ಗು.) ; **Shápeless** (ಗು.) ; **Shápelessly** (ಕ್ರಿ. ವಿ.) ; **Shápelessness** (ನಾ.) ; **Shápely** (ಗು.) ಅಂದವಾದ ಮೈಕಟ್ಟುಳ್ಳ, ರೂಪವಂತ, ಆಕಾರ ಸೌಷ್ಠವವುಳ್ಳ. **Shápeliness** (ನಾ.)

Shard ಷಾರ್ಡ್, **Sherd** ಷರ್ಡ್ (ನಾ.) (ಪ್ರಾಚೀ. ಪ್ರ.) ಮಡಕೆ ಚೂರು, ಹೆಂಚಿನ ಬಕರಿ, ಬೋಕಿ (ಹೂವಿನ ಕುಂಡದ ತೂತು ಮುಚ್ಚುವುದಕ್ಕೆ ತೋಟಗಾರರು ಉಪಯೋಗಿಸುವುದು). ಜೀರುಂಡೆಯ ಪಕ್ಷಕೋಶ.

Share[1] ಷೇರ್ (ನಾ.) ಪಾಲು, ಭಾಗ, ಅಂಶ, ಹಸುಗೆ, ಹಿಸ್ಸೆ [Must get a s. of the plunder. Go shares ಇತರರೊಡನೆ ನ್ಯಾಯವಾಗಿ ಹಂಚಿಕೊ. S. & s. alike ಸಮನಾಗಿ, ನ್ಯಾಯವಾಗಿ, —ಹಂಚಿಕೊ, ಭಾಗಮಾಡಿಕೊ. Has a s. in the property ಅವನಿಗೆ ಆಸ್ತಿಯಲ್ಲಿ ಒಂದು ಹಿಸ್ಸೆ ಇದೆ. Lion's s. (Lion ನೋಡಿ)]. (ಬ್ಯಾಂಕು, ಮೊ. ಗಳ) ಬಂಡವಾಳ ಪಾಲು [Holds 50 shares ಅವನಿಗೆ ೫೦ ಪಾಲುಗಳು ಇವೆ. Deferred shares (Defer[1] ನೋಡಿ). Preference *or* preferred shares (Prefer ನೋಡಿ). S.-list ನಾನಾ ಬ್ಯಾಂಕುಗಳ ಪಾಲುಗಳ ಚಾಲ್ತಿ ಬೆಲೆಯನ್ನು ತಿಳಿಸುವ ಪಟ್ಟಿ : ಪಾಲು(ಗಳ ಬೆಲೆ) ಪಟ್ಟಿ]. **Shárebroker** (ನಾ.) ಬಂಡವಾಳಪತ್ರದ ದಳ್ಳಾಳಿ. **Sháreholder** (ನಾ.) ಬಂಡವಾಳ ಪಾಲುದಾರ ; ಭಾಗಾಂಶದಾರ ; ಷೇರುದಾರ.

Share (ಕ್ರಿ.) ಪಾಲು, (ವಿ)ಭಾಗ, —ಮಾಡು, ಕೊಡು, ಪಡೆದಿರು, ತೆಗೆದುಕೊ ; ಹಂಚು, ಹಂಚಿಕೊ, ಹಂಚಿಕೊಡು (Would s. his last crust. We must s. alike). S. out ಹಂಚು. **Shãreout** (ನಾ.) (ನೆರವು ನಿಧಿಯ ಸಂಘದ) ಹಂಚಿಕೆ. **Shárer** (ನಾ.) ಹಂಚುವವನು, ಭಾಗ ಮಾಡುವವನು ; ಭಾಗಿ, ಪಾಲಿಗ, ಹಿಸ್ಸೆದಾರ.

Share[2] ಷೇರ್ (ನಾ.) ನೇಗಿಲ ಗುಳ; ಮುಂಜ ; ಬಿತ್ತನೆಯ ಯಂತ್ರದ ಅಥವಾ ಹರತೆ ಯಂತ್ರದ ಅಲಗು. S.-beam ಗುಳ ಸೇರಿಸಿರುವ ನೇಗಿಲಿನ ಭಾಗ.

Shark ಷಾರ್ಕ್ (ನಾ., ಕ್ರಿ.) ದೀರ್ಘಾಕಾರದ, ಪಾರ್ಶ್ವ ಪುಪ್ಫುಸಗಳುಳ್ಳ, ಕೆಳಬಾಯಿಯ ಹಲವು ಬಗೆಯ ಮೀನು : ಷಾರ್ಕ್ ಮೀನು (Basking, Man-eating, White, Blue, Dusky, Bonnet-headed, etc., S.). (ಇತರರ ಕಷ್ಟಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ದುಬಾರಿ ಬಡ್ಡಿ, ಮೋಸ, ಮೊ. ಗಳಿಂದ ಹಣ ಸುಲಿಯುವ) ಸುಲಿಗೆಕೋರ, ಮೋಸಗಾರ [Land-s. (Land ನೋಡಿ). S.-moth ಹಲವು ಬಗೆಯ ಪತಂಗ : ಷಾರ್ಕ್ ಪತಂಗ. S.-oil ಷಾರ್ಕ್ ಮೀನೆಣ್ಣೆ (ಷಾರ್ಕ್ ಮೀನಿನ ಯಕೃತ್ತಿನಿಂದ ತೆಗೆದದ್ದು). S.'s-mouth ಕೂವೆ ಮರ, ಮೊ.. ನ್ನು ತೂರಿಸಲು (ಹಡಗಿನ) ಬಟ್ಟೆ ಚಾವಣಿಯಲ್ಲಿ ಮಾಡಿರುವ ಕಂಡಿ]. (ಕ್ರಿ.) ಸುಲಿಗೆ ಮಾಡು, ಮೋಸಮಾಡು, ಸುಲಿಗೆಕೋರನಾಗಿರು (Sharks for a living); ಮೋಸದಿಂದ, ಕಳ್ಳದಾರಿಯಿಂದ, ನೀಚತನದಿಂದ, ಹೀನಾಯವಾಗಿ, —ಗಳಿಸು, ಸಂಪಾದಿಸು. ಬಕ ಬಕನೆ ನುಂಗು, ಕಬಳಿಸು. **Shárking** (ಗು.) ಸುಲಿಗೆಕೋರ ವೃತ್ತಿಯ.

Sharp ಷಾರ್ಪ್ (ಗು., ನಾ., ಕ್ರಿ. ವಿ., ಕ್ರಿ.) (ಅಲಗು ಅಥವಾ ಮೊನೆ) ಚೂಪಾದ, ಹರಿತವಾದ; ಮೊನಚಾದ ; ಕೂರ್ (ಗ್ರಾಂ.) ; ನಿಶಿತ, ತೀಕ್ಷ್ಣ (S. summit ಮೊನೆ ನೆತ್ತಿ). ಸ್ಪಷ್ಟ, ಸ್ಫುಟ (S. outline ಸ್ಫುಟ ರೂಪರೇಖೆ. S. distinction ಸ್ಪಷ್ಟ ವ್ಯತ್ಯಾಸ. S.-cut ಸ್ಪಷ್ಟ, ಸ್ಫುಟ). ಕಡಿದಾದ, ತಟಕ್ಕನೆ ಬದಲಾಯಿಸುವ (S. turn ಕಡಿದು ತಿರುವು. S. incline ತಟಕ್ಕನೆ ಬದಲಾಯಿಸುವ, ಕಡಿದಾದ, ಓರೆ). ಕಟುವಾದ, ಕಾರವಾದ, ತೀವ್ರವಾದ, ಜೋರಾದ, ಕೊರೆಯುವ, ಚುಚ್ಚುವ, ಕಡುಪಾದ, ಕಠಿನವಾದ, ಕರ್ಕಶವಾದ, ಕೀರಲು, ಕೀಚು (S. flavour ಕಟು ರುಚಿ. S. wine ಜೋರು ಮದ್ಯ. S. voice ಕರ್ಕಶ, ಕೀರಲು, —ಧ್ವನಿ. S. cry ಕಿರಿಚು ಕೂಗು. S. frost ಕೊರೆಯುವ ಹಿಮ. S. words ಚುರುಕು, ಕಠಿನ, —ಮಾತುಗಳು. S. temper ಮುಂಗೋಪ. S. tongue ತಟಕ್ಕನೆ ಆಡುವ, ಬಯ್ಯುವ, ಬಾಯಿ. S. contest ತೀವ್ರ ಸ್ಪರ್ಧೆ). ಚುರುಕಾದ, ತೀಕ್ಷ್ಣ ಬುದ್ಧಿಯ, ಕುಶಾಗ್ರಮತಿಯಾದ, ಸೂಕ್ಷ್ಮ (S.-sighted ತೀಕ್ಷ್ಣ ದೃಷ್ಟಿಯುಳ್ಳ. S.-witted ಚುರುಕು ಬುದ್ಧಿಯುಳ್ಳ ; ಸಮಯಸ್ಫೂರ್ತಿಯುಳ್ಳ. Keep a s. look-out ಚುರುಕು ಕಾವಲಿರು ; ಎಚ್ಚರಿಕೆಯಿಂದ ನೋಡುತ್ತಿರು. As s. as a needle ಕುಶಾಗ್ರಮತಿ). ಗಟ್ಟಿಗನಾದ, ಚಾಲಾಕಿನ, ತಂತ್ರಿಯಾದ, ಉಪಾಯಗಾರನಾದ, ಠಕ್ಕಿನ (Is too s. for me ಅವನದು ನನಗೆ ಮೀರಿದ ಚಾಲಾಕು, ಎಚ್ಚರ; ಅವನು ಚಾಲಾಕಿನಲ್ಲಿ ನನಗಿಂತ ಮೇಲುಗೈ. S. practice ಮೋಸದ ವ್ಯವಹಾರ). ಬಿರುಸಾದ, ರಭಸದ, ಜೋರಾದ, ಶೀಘ್ರವಾದ [Take a s. walk ಬಿರುನಡಗೆ ಹೋಗಿಬಾ. S.'s the word (ಎಚ್ಚರಿಕೆಯ ಮಾತು) ಚುರುಕಾಗಿರು ! S. work ಚುರುಕು ಕೆಲಸ, ಬಿರುಗೆಲಸ ; ಸರ್ವ ಶಕ್ತಿಯನ್ನೂ ಉಪಯೋಗಿಸಬೇಕಾದ ಹೋರಾಟ, ಕೆಲಸ]. (ಧ್ವನಿಶಾಸ್ತ್ರ) ಪರುಷ. (ಸಂ.) ನೈಜಸ್ಥಾಯಿಗಿಂತ (ಸ್ವರಕ್ಕಿಂತ) ಎತ್ತರವಾದ, ಎತ್ತರ ಸ್ಥಾಯಿಯ [(ಎದುರು ಪದ : Flat) ; B, D, s. ಸಾಮಾನ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

B, D, ಸ್ವರಗಳಿಗಿಂತ ಅರ್ಧ ಸ್ಥಾಯಿ ಎತ್ತರದ ಸ್ವರಗಳು]. (ನಾ.) ತೆಳುವಾದ ಹೊಲಿಗೆಯ ಸೂಜಿ; ಸೂಕ್ಷ್ಮಸೂಜಿ. (ಸಂ.) ಎತ್ತರ ಸ್ಥಾಯಿಯ ಸ್ವರ (Sharps & flats ಎತ್ತರ ಮತ್ತು ಮಟ್ಟ ಸ್ವರಗಳು). ಪರುಷಾಕ್ಷರ. (ಕ್ರಿ. ವಿ.) (ಹೊತ್ತಿಗೆ) ಸರಿಯಾಗಿ (At six o'clock s. ಆರು ಗಂಟೆಗೆ ಸರಿಯಾಗಿ). (ಸಂ.) ಎತ್ತರ ಸ್ಥಾಯಿಯಲ್ಲಿ (Is singing s.). [Look s. (Look ನೋಡಿ). S.-set ಹಸಿದ. S.-shod (ಮೋಜಕ್ಕೆ, ಲಾಳಕ್ಕೆ) ಚೂಪುಮೊಳೆ ಹೊಡೆದ]. (ಕ್ರಿ.) ಹರಿತ, ಚೂಪು, ಮೊನಚು, ನಿಶಿತ, ತೀಕ್ಷ್ಣ, ಕಟು —ಮಾಡು, ಆಗು; ಮಸೆ. ಸ್ವರಸ್ಥಾಯಿ ಎತ್ತರಿಸು. (ಇಸ್ಪೀಟಾಟ, ಮೊ. ಗಳಲ್ಲಿ) ಮೋಸ, ತಂತ್ರ, —ಮಾಡು. **Shárpen** (ಕ್ರಿ.); (-)**shárpener** (ನಾ.); **Shárper** (ನಾ.) ಮೋಸಗಾರ, ತಂತ್ರಿ. **Shárply** (ಕ್ರಿ. ವಿ.); **Shárpness** (ನಾ.); **Shárpshooter** (ನಾ.) ಒಳ್ಳೆಯ ಗುರಿಗಾರ.

Shátter ಷ್ಯಾಟರ್ (ಕ್ರಿ.) ಒಡೆದು ಚೂರು ಚೂರು, ಪುಡಿ ಪುಡಿ, ನುಚ್ಚು ನೂರು, —ಆಗು, ಮಾಡು; ಧ್ವಂಸ—ಮಾಡು, ಆಗು (Shattered nerves, constitution, hopes ಜರ್ಜರಿತ, ಭಗ್ನ, —ನರಗಳು, ದೇಹ ಪ್ರಕೃತಿ, ಆಸೆಗಳು)

Shave ಷೇವ್ (ಕ್ರಿ.; ಭೂತ., ಭೂ. ಕೃ. Shaved; ವಿಶೇಷಣ ಪ್ರ. Shaven) ಬೋಳಿಸು; ಕ್ಷೌರ, ಮುಂಡನ, ವಪನ, —ಮಾಡು, ಮಾಡಿಕೊ (He does not s. every day ಅವನು ಪ್ರತಿ ದಿನವೂ ಕ್ಷೌರಮಾಡಿಕೊಳ್ಳುವುದಿಲ್ಲ. A shaven chin ಬೋಳಿಸಿದ ಗಲ್ಲ); ಹತ್ತ ಕತ್ತರಿಸು (A lawn close shaven). (ಮರ, ಮೊ. ನ್ನು) ಹತ್ತರಿ ಹಿಡಿ, ತೋಪಡ ಹಿಡಿ, ಹೆರೆ(ದುಹಾಕು). ಸವರಿಕೊಂಡು ಹೋಗು; ಸ್ವಲ್ಪದರಲ್ಲಿ ತಪ್ಪು. S.-hook ಬೆಸಯುವುದಕ್ಕೆ ಮೊದಲು ಲೋಹಗಳನ್ನು ಉಜ್ಜುವ ಸಲಕರಣೆ: ಉಜ್ಜಲಗು, ಉಜ್ಜಿಗೆ. Shaving-brush ಕ್ಷೌರದ —ಕುಂಚಿಗೆ, ವರಾಕಟ್ಟು. Shaving-horse (ಹತ್ತರಿ ಹಿಡಿಯಬೇಕಾದ ಮರವನ್ನು ಬಿಗಿಯಾಗಿ ಹಿಡಿದಿಡುವ) ಹಿಡಿಕೆ—ಮಣೆ, ಮರ. **Sháving** (ನಾ.) ಕ್ಷೌರ (ಮಾಡುವುದು). ಹತ್ತರಿ —ಹುಡಿ, ಸಿಪ್ಪೆ. **Sháver** (ನಾ.) (ಕ್ರಿಯಾರ್ಥಗಳಲ್ಲಿ); (ಬಳ. ಮಾ.) ಹುಡುಗ, ಪೋರ (Young s.). **Sháveling** (ನಾ.) (ಪ್ರಾಚೀ. ಪ್ರ.) ತಲೆ ಬೋಳಿಸಿಕೊಂಡ ಮನುಷ್ಯ; ಬೋಡಿಗ; ಪಾದ್ರಿ, ಸಂನ್ಯಾಸಿ.

Shave (ನಾ.) ಕ್ಷೌರ, ವಪನ, ಮುಂಡನ; ಸವರಿಕೊಂಡು ಹೋಗುವುದು, ಸ್ವಲ್ಪದರಲ್ಲಿ ತಪ್ಪುವುದು (Had a close s. of it); (ಎರಡು ತುದಿಗಳಲ್ಲೂ ಹಿಡಿಯಿರುವ) ಹೆರೆಯಲಗು; ಉಜ್ಜಲಗು; ತಂತ್ರ, ಮೋಸ, ಠಕ್ಕು.

Sháveling. **Shave** ನೋಡಿ.

Shávian ಷೇವಿಯನ್ (ಗು., ನಾ.) (ಇಂಗ್ಲೆಂಡಿನ ಪ್ರಸಿದ್ಧ ನಾಟಕ ಕಾರನಾದ) ಜಾರ್ಜ್ ಬರ್ನಾರ್ಡ್ ಷಾವಿನ (ರೀತಿಯ); (ನಾ.) ಷಾ ಪಂಥದವನು.

Shaw ಷಾ (ನಾ.) (ಪ್ರಾಚೀ. ಪ್ರ., ಕಾವ್ಯ) ಸಣ್ಣ, ಕುರುಚಲು,—ಕಾಡು; ತೋಪು.

Shawl ಷಾಲ್ (ನಾ., ಕ್ರಿ. ಸಕ.) ಶಾಲು [S.-dance ಶಾಲನ್ನು ಆಡಿಸುತ್ತ ಕುಣಿಯುವ ನರ್ತನ: ಶಾಲು ಕುಣಿತ. S.-pattern (ಪೂರ್ವ ದೇಶಗಳ ಶಾಲನಲ್ಲಿರುವಂಥ) ನಾನಾ ಬಗೆಯ ಚಿತ್ರ ಮಾದರಿ]. (ಕ್ರಿ.) ಶಾಲು ಹೊದಿಸು.

She ಷೀ(ಇ) [ಸ. ನಾ. (ದ್ವಿತೀಯೆ Her; ಷಷ್ಠಿ Her, Hers), ಬ. ವ. They; ನಾ., ಗು.] ಅವಳು, ಆಕೆ (ಹಡಗು, ರೈಲು, ಚಂದ್ರ, ಮೊ. ಸ್ತ್ರೀವ್ಯಕ್ತಿತ್ವಾರೋಪಿತ ವಸ್ತುಗಳ ವಿಷಯದಲ್ಲಿಯೂ ಕೆಲವು ಹೆಣ್ಣು ಹಕ್ಕಿಗಳ ಮತ್ತು ಪ್ರಾಣಿಗಳ ವಿಷಯದಲ್ಲಿಯೂ ಪ್ರ. ಉಂಟು). (ನಾ.) ಹೆಣ್ಣು, ಹೆಂಗಸು, ಸ್ತ್ರೀ (The not impossible s. ಪ್ರೀತಿಸಾಧ್ಯ ಸ್ತ್ರೀ. Is the child a he *or* a she? ಮಗು ಗಂಡೋ ಹೆಣ್ಣೊ? Had a litter of two shes and a he ನಾಯಿ ಎರಡು ಹೆಣ್ಣು ಮರಿಗಳನ್ನೂ ಒಂದು ಗಂಡು ಮರಿಯನ್ನೂ ಹಾಕಿತು). (ಗು.) ಹೆಣ್ಣು ಸ್ತ್ರೀ [S.-ass ಹೆಣ್ಣು ಕತ್ತೆ. S.-devil, -cat ವೈರಸಾಧನೆಯ ಹೆಂಗಸು; ಮತ್ಸರಗ್ರಸ್ತೆ. S.-oak ಆಸ್ಟ್ರೇಲಿಯದ ಹಲವು ಬಗೆಯ ಕ್ಯಾಸರೀನ ಮರ; = Beef-wood (Beef ನೋಡಿ). S.-pine ಶಂಕುವಿನಾಕಾರದ ಕಾಯಿ ಬಿಡುವ, ಆಸ್ಟ್ರೇಲಿಯದ ಒಂದು ಮರ]

Shea ಷೀ, **Shéa** ಷೀಯ (ನಾ.) ಮರಬೆಣ್ಣೆ ದೊರೆಯುವ, ಪ. ಆಫ್ರಿಕದ ಒಂದು ಮರ (S.-butter ಇದರ ಮರಬೆಣ್ಣೆ; ಷೀಯ ಬೆಣ್ಣೆ)

Sheáding ಷೀಡಿಂಗ್ (ನಾ.) ಐಲ್ ಆಫ್ ಮ್ಯಾನ್ ಎಂಬ ದ್ವೀಪದ (ಆರು) ಆಡಳಿತ ವಿಭಾಗ(ಗಳಲ್ಲೊಂದು)

Sheaf ಷೀಫ್ (ನಾ., ಬ. ವ. -ves —ವ್ಸ್; ಕ್ರಿ. ಸಕ.) ಕಟ್ಟು, ಕಂತೆ, ಹೊರೆ, ತಬ್ಬು, ಸೂಡು, ಸಿಪುಡು (S. of papers ಕಾಗದದ ಕಟ್ಟು. S. of arrows ಬಾಣಗಳ ಕಂತೆ. S.-binder ಕಂತೆ, ಅರಿ, —ಕಟ್ಟುವವನು, ಕಟ್ಟುವ ಸಲಕರಣೆ: ಅರಿಗೆ). (ಕ್ರಿ.) —ಮಾಡು, ಕಟ್ಟು.

Shear ಷಿಯರ್ [ಕ್ರಿ.; ಭೂತ. Sheared —ರ್ಡ್, ಪ್ರಾಚೀ. ಪ್ರ. Shore; ಭೂ. ಕೃ. Shorn (ಷಾರ್‌ನ್), ವಿರ. ಪ್ರ. Sheared] (ಕತ್ತಿ, ಮೊ. ಗಳಿಂದ) ಕಡಿ, ಅರಿ, ಛೇದಿಸು (ಕಾವ್ಯ: Shore off his plume. Shore through the bone); (ಕತ್ತರಿ, ಮೊ. ಗಳಿಂದ) ಕತ್ತರಿಸು (S. sheep ಕುರಿಯ ಉಣ್ಣೆ ಕತ್ತರಿಸು. S. cloth ಬಟ್ಟೆಯ ಜುಂಗನ್ನು ಕತ್ತರಿಸು. Shall be shearing tomorrow ನಾಳೆ ನನ್ನ ಕುರಿಗಳ ಉಣ್ಣೆಯನ್ನು ಕತ್ತರಿಸುವೆನು; —ಕತ್ತರಿಸಲು ನಿಶ್ಚಯಿಸಿದ್ದೇನೆ). (ಬೆಳೆ, ಮೊ. ನ್ನು) ಕೊಯ್ಯಿ, ಕೊಯ್ಲುಮಾಡು; (ರೂಪ.) ಸುಲಿ(ಗೆ ಮಾಡು), ಬೋಳು ಮಾಡು, ನುಣ್ಣಗೆ ಮಾಡು (Shorn of glory ಕೀರ್ತಿ ಕಳೆದುಕೊಂಡು); (ಕಟ್ಟಡ, ಪದಾರ್ಥ, ಮೊ. ಗಳ ವಿಷಯದಲ್ಲಿ: ವಿರೂಪಕ ಒತ್ತಡದಿಂದ) ವಕ್ರವಾಗು, ಬಿರಿದುಹೋಗು; (ವಿರೂಪಕ ಒತ್ತಡದ ವಿಷಯದಲ್ಲಿ) ವಕ್ರಮಾಡು, ಬಿರಿಯಿಸು. **Shearer** (ನಾ.); **Shearling** (ನಾ.) ಒಮ್ಮೆ ಉಣ್ಣೆ ಕತ್ತರಿಸಿದ ಕುರಿ.

Shear (ನಾ.) (ಬ. ವ. ದಲ್ಲಿ) ಹೆಗ್ಗತ್ತರಿ, ಸಮರುಗತ್ತರಿ, ಉಣ್ಣೆ ಗತ್ತರಿ [Want a pair of shears. Shearbill ಒಂದು ಜಾತಿಯ ಹಕ್ಕಿ. S.-grass ಹರಿತ ಅಂಚಿನ ಗರಿಗಳುಳ್ಳ ಒಂದು ಜಾತಿಯ ಹುಲ್ಲು. S.-legs = Sheers (Sheer[3] ನೋಡಿ). S. steel (ಉಣ್ಣೆಗತ್ತರಿ, ಇತರ ಛೇದಕಾಯುಧಗಳು, ಮೊ. ನ್ನು ಮಾಡಲು ಉಪಯೋಗಿಸುವ) ಒಂದು ವಿಶೇಷ ಬಗೆಯ ಉಕ್ಕು. Sheartail ಕತ್ತರಿಪುಕ್ಕದ ಒಂದು ಹಾಡು ಹಕ್ಕಿ]. (ಯಂತ್ರಶಿಲ್ಪ) (ಒಂದು ಬಗೆಯ) ವಿರೂಪಕಾರಕವಾದ ತಿರುಪೊತ್ತಡ; ವಿರೂಪಕ ಒತ್ತಡ.

Shearling. **Shear** ನೋಡಿ.

Sheát-fish ಷೀಟ್‌ಫಿಷ್ (ನಾ.) ಯೂರೋಪಿನ ಅತ್ಯಂತ ದೊಡ್ಡ ಜಾತಿಯ ಸೀನೀರು ಮೀನು.

Sheath ಷೀತ್ (ನಾ.; ಬ. ವ. -ths —ದ್ಸ್) (ಆಯುಧದ ಅಲಗು, ಮೊ. ಗಳ) ಕೋಶ, ಒರೆ. (ಸ. ವಿ., ಪ್ರಾ. ವಿ., ಅಂ. ರ. ಶಾ.) ಕೋಶದಂತಿರುವ ಪೊರೆ, ಅಂಗಾಂಶ, ಚರ್ಮ, ಕೊಂಬು ಪದಾರ್ಥದ ಕವಚ, ಮೊ. ವು: ಆವರಣ, ವೇಷ್ಟನ, ಕೋಶ, ಚೀಲ. (ನದಿ ದಡ ಮೀರಿ ಹರಿಯದಂತೆ ಬಿಡಿಗಲ್ಲುಗಳನ್ನು ಪೇರಿಸಿ ಮಾಡಿದ) ದಡ ಕಟ್ಟಣೆ. **Sheáthless** (ಗು.); **Sheathe** ಷೀದ್ (ಕ್ರಿ. ಸಕ.) ಒರೆಯಲ್ಲಿಡು [S. the sword ಕತ್ತಿಯನ್ನು ಒರೆಗೆ ಹಾಕು; ಯುದ್ಧ ನಿಲ್ಲಿಸು (ರೂಪ. ನಹ)]; ಕೋಶದಲ್ಲಿ ಸೇರಿಸು, ಹಾಕು, ಇಡು; ರಕ್ಷಾವರಣ, ಕವಚ, —ಹಾಕು. **Sheáthing** (ನಾ.)

Sheave[1] ಷೀವ್ (ನಾ.) ಹಗ್ಗ ಸರಿದಾಡಲು ಪರಿಧಿಯಲ್ಲಿ ಗಾಡಿ ತೋಡಿರುವ, ಕಪ್ಪಿ, ಮೊ. ಚಕ್ರ: ಕಪ್ಪಿಚಕ್ರ, ಗಡೆ.

Sheave[2] ಷೀವ್ (ಕ್ರಿ. ಸಕ.) ಅರಿ, ಕಂತೆ, ಸೂಡು, —ಕಟ್ಟು.

Sheaves. **Sheaf** ನೋಡಿ.

Shebeén ಷಿಬೀನ್ (ನಾ.) (ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್‌ಗಳಲ್ಲಿ) ರಹದಾರಿ ಇಲ್ಲದ ಮದ್ಯದಂಗಡಿ, ದಾರಿ ಪಕ್ಕದ ಕೀಳ್ದರದ ಪಡಖಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Shed[1] ಷೆಡ್‘ (ಕ್ರಿ. ಸಕ. ; ಭೂತ., ಭೂ. ಕೃ. Shed) ಬೀಳಿಸು, ಉದುರಿಸು, ಬಿಡು, ಉರ್ಚು, ತೊರೆ, ತ್ಯಜಿಸು (Tree sheds leaves. Snake sheds skin. Prime minister sheds colleagues); ಹರಿ(ಸು), ಸುರಿ(ಸು), ಬಸಿ ; ಬೀರು, ಹರಡು, ಪ್ರಸರಿಸು [S. tears ಕಣ್ಣೀರು ಸುರಿಸು. S. one's blood for one's country ತನ್ನ ದೇಶಕ್ಕಾಗಿ ರಕ್ತ ಬಸಿ, ಪ್ರಾಣ ಕೊಡು. S. blood ರಕ್ತ ಹರಿಸು, ಕೊಲೆಮಾಡು. S. light on —ಮೇಲೆ ಬೆಳಕು ಬೀರು (ರೂಪ. ಸಹ). S. love, radiance, perfume, around one ತನ್ನ ಸುತ್ತ ಪ್ರೀತಿ, ತೇಜಸ್ಸು, ಪರಿಮಳ ಬೀರು]. **Shédder** (ನಾ.)

Shed[2] ಷೆಡ್‘ (ನಾ.) (ದನಕರುಗಳನ್ನು ಕಟ್ಟುವುದು, ಮೊ. ಕ್ಕೆ ಉಪಯೋಗಿಸುವ) ಗುಡಿಸಿಲು, ಜೋಪಡಿ ; ಕೊಟ್ಟಿಗೆ ; ಗಾಡಿಖಾನೆ ; ಸಾಮಾನನ್ನು ಶೇಖರಿಸಿಡುವ, ಕರ್ಮಶಾಲೆಯಾಗಿ ಉಪಯೋಗಿಸುವ, —ಮನೆ ; ಪಟ್ಟಡಿ ; ತಾವಾರ ; ಷೆಡ್ಡು. **Shédding** (ನಾ.)

Sheen ಷೀನ್‘ (ನಾ.) ಹೊಳಪು, ಕಾಂತಿ, ಪ್ರಕಾಶ ; ಹೊಗರು (ಗ್ರಾಂ.). **Sheény** (ಗು.) (ಕಾವ್ಯ)

Sheep ಷೀಪ್‘ (ನಾ., ಬ. ವ. Sheep) ಕುರಿ ; ಮೇಷ [ಇದರ ಗಂಡಿಗೆ Ram (ಟಗರು) ಎಂದೂ, ಹೆಣ್ಣಿಗೆ Ewe (ಹೆಂಗುರಿ) ಎಂದೂ, ಮರಿಗೆ Lamb (ಕುರಿಮರಿ) ಎಂದೂ ಹೆಸರು. S. & goats (Goat ನೋಡಿ). Black s. (Black ನೋಡಿ). Cast s.'s eyes ಪ್ರಣಯದೃಷ್ಟಿ ಬೀರು, ಕಾಮುಕದೃಷ್ಟಿಯಿಂದ ನೋಡು. Follow like s. (ಸ್ವತಂತ್ರಾಭಿಪ್ರಾಯವಿಲ್ಲದವರ, ಸ್ವತಂತ್ರವಾಗಿ ನಡೆಯದವರ, ವಿಷಯದಲ್ಲಿ) ಕುರಿಯಂತೆ ಹಿಂಬಾಲಿಸು. As well be hanged for a s. as for a lamb (Lamb ನೋಡಿ). S. that have no shepherd ಕುರುಬನಿಲ್ಲದ ಕುರಿಮಂದೆ ; ಅನಾಯಕ, ದಿಕ್ಕಿಲ್ಲದ, —ಜನ, ಮಂದೆ. Wolf in s.'s clothing (Wolf ನೋಡಿ)]. ಮಜೇಡಿ (ಮುಖಹೇಡಿ) ; (ಕುರಿಯಂಥ) ದಡ್ಡ, ಅಂಜುಬುರಕ [**Sheépish** (ಗು.) ; **Sheépishly** (ಕ್ರಿ. ವಿ.) ; **Sheépishness** (ನಾ.)]. (ಸಾ., ಬ. ವ. ; ಈಗ ಮು., ಹಾಸ್ಯ ಪ್ರ.) ಪಾದ್ರಿಯ ಧಾರ್ಮಿಕ ಪಾಲನೆಗೊಳಪಟ್ಟ ಕ್ರೈಸ್ತ ಸಮುದಾಯ(ದವನು). ಕುರಿಯ —ಚರ್ಮ, ಚಕ್ಕಳ. **S.-bot** ಕುರಿಗಳಿಗೆ ಹಾನಿಕರವಾದ ನೊಣ, ಮರಿಹುಳು. **S.-cote** (ಪ್ರಾಚೀ. ಪ್ರ.), **-fold, -pen** (ವಿರ. ಪ್ರ.) ಕುರಿಯ ದೊಡ್ಡಿ, ರೊಪ್ಪ. **S.-dip** ಕುರಿಯ ಹೇನು, ಮೊ. ಗಳನ್ನು ನಾಶಮಾಡಿ ಉಣ್ಣೆಯನ್ನು ಸರಿಯಾಗಿ ಕಾಪಾಡಲು ಉಪಯೋಗಿಸುವ ಮಾರ್ಜಕ : ಕುರಿ ತೊಳೆಯುವ ಔಷಧ. **S.-dog** ಕುರುಬರ, ಕುರಿ ಕಾಯುವ, —ನಾಯಿ. **S.-farmer, -master** ಕುರಿ ಸಾಕುವವನು, —ಬೆಳಸುವವನು ; ಕುರುಬ. **S.-hook** ಕುರುಬನ ಕೊಕ್ಕೆಕೋಲು, ದೋಟಿ. **S.-louse, -tick** ಕುರಿಹೇನು, ಉಣ್ಣಿ. **S.-pox** ಕುರಿಯ ಸಿಡುಬು ರೋಗ : ಕುರಿಸಿಡುಬು. **S.-run** (ಮು., ಆಸ್ಟ್ರೇಲಿಯಾದಲ್ಲಿ) ಕುರಿಗಳು ಮೇಯುವ ವಿಶಾಲವಾದ ಕಾವಲು : ಕುರಿ ಕಾವಲು. **S.'s fescue** ಒಂದು ಜಾತಿಯ ಮೇವು ಹುಲ್ಲು. **Sheépshank** ಹಗ್ಗದ ಉದ್ದವನ್ನು ತಾತ್ಕಾಲಿಕವಾಗಿ ಕಡಮೆ ಮಾಡಲು ಹಾಕುವ ಒಂದು ಬಗೆಯ ಗಂಟು. **S.'s-head** ಕುರಿಯ ತಲೆ ; (ಆಹಾರವಾಗಿ ಉಪಯೋಗವಾಗುವ) ಒಂದು ಜಾತಿಯ ಕಡಲ ಮೀನು. **S.-shearing** ಕುರಿಯ ಉಣ್ಣೆ ಕತ್ತರಿಸುವುದು ; ಉಣ್ಣೆ ಕತ್ತರಿಸುವ ಹಬ್ಬ. **Sheépskin** ಉಣ್ಣೆ ಸಮೇತ ಕುರಿಯ ಚರ್ಮ(ದ ಹೊದಿಕೆ, ಉಡುಪು) ; (ರಟ್ಟುಕಟ್ಟು, ಮೊ. ಗಳಲ್ಲಿ ಉಪಯೋಗಿಸುವ) ಕುರಿಯ ಚಕ್ಕಳ; ಕುರಿಯ ಚರ್ಮಪತ್ರ(ದ ದಸ್ತೈವಜು, ಪ್ರಶಸ್ತಿಪತ್ರ). **S.-walk** ಕುರಿ (ಮೇಯುವ) ಕಾವಲು. **S.-wash**=S.-dip.

Sheer[1] ಷಿಯರ್‘ (ಗು., ಕ್ರಿ. ವಿ.) ಬರಿಯ, ಶುದ್ಧ, ಕೇವಲ, ಮಾತ್ರ (Did it by s. force ಬರಿಯ ಬಲಾತ್ಕಾರದಿಂದ, ಬಲಪ್ರಯೋಗದಿಂದ, ಮಾಡಿದನು. Is s. waste ಶುದ್ಧ ವ್ಯರ್ಥ. S. folly ಶುದ್ಧ ಮುಟ್ಠಾಳತನ. A s. impossibility ಕೇವಲ ಅಸಾಧ್ಯವಾದದ್ದು. Out of s. love). (ಬಂಡೆ, ಬೀಳು, ಏರು, ಮೊ. ಗಳ ವಿಷಯದಲ್ಲಿ) ಒಂದೇ ನೇರವಾದ, ಬಲು ಕಡಿದಾದ; ಇಳುಕಲೇ ಇಲ್ಲದ; ಪ್ರಲಂಬ. (ವ್ಯಾಪಾರದಲ್ಲಿ : ಕೇಂಬ್ರಿಕ್ ಬಟ್ಟೆ, ಮೊ. ಗಳ ವಿಷಯವಾಗಿ) ಪಾರದರ್ಶಕವಾದ, ಬಲು ತೆಳುವಾದ. (ಕ್ರಿ. ವಿ.) ಬಲು ಕಡಿದಾಗಿ, ಒಂದೇ ನೇರವಾಗಿ, ಸೀದ (Fell 3000 ft s. ಸೀದ ೩೦೦೦ ಅಡಿ ಕೆಳಕ್ಕೆ ಬಿದ್ದ. Rises s. from the water ಒಂದೇ ನೇರವಾಗಿ ನೀರಿನಿಂದ ಮೇಲಕ್ಕೆ ಏಳುತ್ತದೆ)

Sheer[2] ಷಿಯರ್‘ (ಕ್ರಿ. ಅಕ., ನಾ.) (ಹಡಗು) ದಾರಿ ಬಿಟ್ಟುಹೋಗು ; ಪಕ್ಕಕ್ಕೆ —ಸರಿ, ತಿರುಗು ; ಓರೆಯಾಗು. S. off (ದ್ವೇಷ, ಅಸಮಾಧಾನ, ಭಯ, ಮೊ. ಗಳಿಂದ, ಒಬ್ಬನಿಂದ) ದೂರ ಸರಿ, ಬೇರೆ ಹೋಗು, ಬಿಟ್ಟು ಹೋಗು. (ನಾ.) ಥಟ್ಟನೆ ಹಡಗು ದಾರಿ ಬಿಟ್ಟು ಸರಿಯುವುದು, ತಿರುಗುವುದು ; ಹಡಗಿನ ದಿಕ್ಕು ಬದಲಾವಣೆ ; ತಿರುವು. (ಹಡಗಿನ ಅಟ್ಟ, ಅರುಗು, ಹಗ್ಗ ಹುರಿ, ಮೊ. ಗಳ) ಬಾಗು, ಮೇಲೋರೆ.

Sheer[3] ಷಿಯರ್‘ (ನಾ.) (ಬ. ವ.) ಎರಡು (ಅಥವಾ ಮೂರು) ಕಂಬಗಳನ್ನು ಮೇಲು ತುದಿ ಕೀಲಿಸಿ ಕೆಳ ತುದಿಗಳನ್ನು ಅಗಲಿಸಿ ನಿಲ್ಲಿಸಿ, ಭಾರಗಳನ್ನು ಎತ್ತಿ ಇಳಿಸುವುದಕ್ಕೆ ಅನುಕೂಲಿಸುವಂತೆ ಮಾಡಿದ ಒಂದು ಎತ್ತಿಗೆ : ಇಕ್ಕಾಲ (ಅಥವಾ ಮುಕ್ಕಾಲ) ಎತ್ತಿಗೆ (=S.-legs *or* shear-legs) (ಹಡಗುಗಳಿಗೆ ಪಟ ಏರಿಸಿ ಇಳಿಸುವುದು, ಎಂಜಿನುಗಳನ್ನು ಎತ್ತಿ ಇಳಿಸುವುದು, ಮೊ. ಕೆಲಸಗಳಿಗೆ ಉಪಯೋಗ). **S.-hulk** ಮುಕ್ಕಾಲ ಎತ್ತಿಗೆಯನ್ನು ಅಳವಡಿಸಿರುವ ಹಡಗು.

Sheet ಷೀಟ್‘ (ನಾ.) ಮಗ್ಗುಲು ಹಾಸಿಗೆ; ದುಪ್ಪಟಿ; ಹಚ್ಚಡ (Between the sheets ಹಾಸಿಗೆಯಲ್ಲಿ). ತಗಡು, ಹಲಗೆ, ಫಲಕ (A s. of iron, glass). (ನೀರು, ನೀರ್ಗಲ್ಲು, ಹಿಮ, ಜ್ವಾಲೆ, ಬಣ್ಣ, ಮೊ. ಗಳ) ಹರವು, ವಿಸ್ತಾರ, ಪ್ರಸರ (*Of* ಉಪ. ದೊಡನೆ. A s. of water, flame). ಕಾಗದದ ಹಾಳೆ, ಗಜ, ಪಾನು [Book is in sheets ಮುದ್ರಿತ ಹಾಳೆಗಳನ್ನು ಪುಸ್ತಕವಾಗಿ ಸುಮ್ಮನೆ ಜೋಡಿಸಿದೆ (ಹೊಲದು ರಟ್ಟು ಕಟ್ಟಿಲ್ಲ). S. of notepaper (ಸಾ., ಒಮ್ಮೆ ಮಡಿಸಿದ) ಬರೆವಣಿಗೆ ಕಾಗದದ ಹಾಳೆ. S. of quarto ನಾಲ್ಕು ಹಾಳೆಗಳಾಗಿ ಮಡಿಸಿದ ಗಜ ಕಾಗದ : ಚೌಪತ್ರ]. ಅಗ್ಗದ ವೃತ್ತಪತ್ರಿಕೆ (A penny, scurrilous, s.). ಹಾಯಿಯ, ಹಡಗಿನ ಪಟದ, ಬಿಗಿತವನ್ನು ಕ್ರಮಪಡಿಸುವುದಕ್ಕಾಗಿ ಕೆಳಮೂಲೆಯಲ್ಲಿ ಕಟ್ಟಿರುವ ಹಗ್ಗ ಅಥವಾ ಸರಪಣಿ [Flowing s. ಸಡಿಲವಾಗಿ ಕಟ್ಟಿದ ಅಂಥ ಹಗ್ಗ, ಸರಪಣಿ. A s., three sheets, in the wind (ಅಸಂ.) ಸುಮಾರಾಗಿ, ವಿಪರೀತ, —ಕುಡಿದ, ಅಮಲೇರಿದ]. **S.-anchor** (Anchor ನೋಡಿ). **S.-copper, iron, metal** ತಗಡಾಗಿ ಬಡಿದ ತಾಮ್ರ, ಕಬ್ಬಿಣ, ಲೋಹ : ತಾಮ್ರದ, ಕಬ್ಬಿಣದ, ಲೋಹದ, —ತಗಡು. **S. glass** (ಮೊದಲು ಪೊಳ್ಳು ಕೊಳವೆಯಾಗಿ ಮಾಡಿ, ಕತ್ತರಿಸಿ ತೆರೆದು, ಕುಲುಮೆಯಲ್ಲಿ ಚಪ್ಪಟೆ ಮಾಡಿದ) ಫಲಕ ಗಾಜು, ಹಲಗೆ ಗಾಜು. **S. lightning** (Lightning ನೋಡಿ). **Sheéting** (ನಾ.) ಹಚ್ಚಡ, ದುಪ್ಪಟಿ.

Sheet (ಕ್ರಿ. ಸಕ.) ಮಗ್ಗುಲು ಹಾಸಿಗೆ, ಹಚ್ಚಡ, ದುಪ್ಪಟಿ, —ಹಾಸು, ಹೊದಿಸು ; ರಟ್ಟು ಹೊದಿಸು, ಮುಚ್ಚು (The sheeted dead) ; ವಿಸ್ತಾರವಾಗಿ ಹರಡು, ಕವಿ, ಆಚ್ಛಾದಿಸು (The sheeted sky, rain) ; ತಗಡುಗಳಾಗಿ, ಫಲಕಗಳಾಗಿ, —ಮಾಡು, ಆಗು ; (ಹಡಗಿನ ಪಟವನ್ನು) ಹಗ್ಗದಿಂದ, ಸರಪಣಿಯಿಂದ, —ಬಿಗಿ, ಕಟ್ಟು [To s. home ಆದಷ್ಟು ಬಿಗಿಯಾಗಿ, ಚಪ್ಪಟೆಯಾಗಿ, ಕಟ್ಟು. (ರೂಪ.) ಜವಾಬ್ದಾರಿ ಹೊರಿಸು ; ಮನವರಿಕೆ ಮಾಡಿಕೊಡು, ಮನಗಾಣಿಸು]

Sheik(h) ಷೇಕ್‘, ಷೀಕ್‘ (ನಾ.) ಅರಬ್ಬೀ ಅಥವಾ ಮಹಮ್ಮದೀಯ ಜನರ ಒಂದು ಬುಡಕಟ್ಟಿನ, ಮನೆತನದ ಅಥವಾ ಹಳ್ಳಿಯ—ಮುಖಂಡ, ಯಜಮಾನ: ಷೇಕ್‘. ಇಸ್ಲಾಂ ಮತಕ್ಕೆ ಸೇರಿದ ಹಿಂದೂ(ವಿಗೆ ಸಾಮಾನ್ಯ ಹೆಸರು). (ರೂಪ.) (ಪತಿ. ಪ್ರಣಯಿ) ರುಸ್ತುಂ ಗಂಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

S. ul Islam ತುರ್ಕಿದೇಶದ ಮಹಮ್ಮದೀಯ ಮಹಾಧರ್ಮಾಧಿಕಾರಿ, ಇಸ್ಲಾಂ ಧರ್ಮಾಧ್ಯಕ್ಷ.

Shekárry. **Shikar** ನೋಡಿ.

Shékel ಷೆಕ್'ಲ್, —ಕೆಲ್ (ನಾ.) ಬ್ಯಾಬಿಲೋನಿಯರ, ಫಿನೀಷಿಯನರ, ಮತ್ತು ಯೆಹೂದ್ಯರ ಒಂದು ತೂಕದ ಮಾನ ಮತ್ತು ಬೆಳ್ಳಿಯ ನಾಣ್ಯ. (ರೂಪ.) (ಬ. ವ. ದಲ್ಲಿ) ಹಣ, ಸಿರಿ, ಸಂಪತ್ತು.

Shekínah, -ch- (ಹೀಬ್ರೂ) ಷಿಕೈನ (ನಾ.) ದೇವರ ಪೀಠದಮೇಲೆ ಪ್ರತ್ಯಕ್ಷವಾಗಿರುವುದೆಂದು ಭಾವಿಸುವ ದೇವಮಹಿಮೆ ; ದೇವರ ಪ್ರತ್ಯಕ್ಷ ಮಹಿಮೆ.

Shéldrake ಷೆಲ್‌ಡ್ರೇಕ್ (ನಾ., ಕೆಲವು ವೇಳೆ ಸ್ತ್ರೀಲಿಂಗ ರೂಪ Shelduck ಷೆಲ್‌ಡಕ್) ಉಜ್ಜ್ವಲ ವರ್ಣದ ಪುಕ್ಕವುಳ್ಳ ಹಲವು ಜಾತಿಯ ಕಾಡು ಬಾತು.

Shelf ಷೆಲ್ಫ್ (ನಾ., ಬ. ವ. -lves -ವ್ಸ್) ಪದಾರ್ಥಗಳನ್ನು ಇಡಲು ಆಸರೆಗಾಗಿ ಗೋಡೆಯ ಗೂಡಿನಲ್ಲಿ ಜೋಡಿಸಿದ ಅಥವಾ ಗೋಡೆಯಿಂದ ಮುಂಚಾಚಿದ ಅಥವಾ ತೂಗಹಾಕಿದ, ಕಲ್ಲುಹಲಗೆ ಅಥವಾ ಮರದ ಹಲಗೆ : ಬಡು ; (ಅಲಮಾರು, ಬೀರು, ಮೊ. ಗಳಲ್ಲಿ ಪುಸ್ತಕ, ಸಾಮಾನು, ಮೊ. ನ್ನು ಇಡುವ) ಅಂತಸ್ತು ಹಲಗೆ, ಬಡು [On the s. (ಮು., ಕೆಲಸ ಮಾಡಲಾಗದ ಸ್ಥಿತಿಯ ಅಥವಾ ನಿಷ್ಪ್ರಯೋಜಕನಾದ ವ್ಯಕ್ತಿಯ ವಿಷಯದಲ್ಲಿ) ಮೂಲೆಗೆ ಬಿದ್ದು, ನಿರುಪಯೋಗಿಯಾಗಿ] ; (ಕಡಿದು ಬಂಡೆಯ ಮುಖ, ಮೊ. ಗಳಲ್ಲಿ) ಬಡುವಿನಂಥ ಚಾಚು. ನೀರಿನೊಳಗಡೆಯ —ಮರಳುದಿಣ್ಣೆ, ಬಂಡೆ. **Shelved** (ಗು.) ; **Shélfful** (ನಾ.) ಒಂದು ಬಡು ತುಂಬು(ವಷ್ಟು ಸಾಮಾನು)

Shell ಷೆಲ್ (ನಾ.) (ಕಾಯಿ, ಬಿತ್ತ, ಹಣ್ಣು, ಮೊಟ್ಟೆ, ಕೆಲವು ಪ್ರಾಣಿಗಳು ಅಥವಾ ಅವುಗಳ ಅಂಗಗಳು, ಮೊ. ಗಳ) ಗಡುಸು ಹೊರಹೊದಿಕೆ : ಕರಟ; ಚಿಪ್ಪು, ಸಿಂಪಿ, ಹೊಟ್ಟು, ಸಿಪ್ಪೆ, ಪೊರೆ, ಕವಚ, ವಲ್ಕ, ಶಲ್ಕ, ಕವಡೆ, ಶಂಖ (Come out of one's s. ಗೂಡು ಬಿಟ್ಟುಬಾ ; ಮೌನವನ್ನು, ಏಕಾಂತವಾಸವನ್ನು—ಬಿಡು ; ಎಲ್ಲರೊಡನೆ ಬೆರೆ, ಕಲೆ) ; (ಇನ್ನೂ ಪೂರೈಸಿಲ್ಲದ ಅಥವಾ ಒಳ ಜೋಡಣೆ ಬಿಚ್ಚಿಹಾಕಿದ ಮನೆ, ಹಡಗು, ಮೊ. ಗಳ) ಗೋಡೆಗಟ್ಟು, ಹೊರಗಟ್ಟು ; (ಯೋಜನೆ, ಮೊ. ಗಳ) ರೂಪರೇಖೆ, ಸ್ಥೂಲಾಕಾರ. ಶವಸಂಪುಟದ ಒಳಪೆಟ್ಟಿಗೆ. ಹಗುರವಾದ ಪಂದ್ಯದ ದೋಣಿ. ಬಾಣಬಿರುಸುಗಳು, ತೋಟಾಗಳು, ಮೊ. ಗಳ ಸಿಡಿಮದ್ದನ್ನು ತುಂಬುವ ಲೋಹದ ಅಥವಾ ಕಾಗದದ ಕೋಶ : (ಸಿಡಿ)ಮದ್ದಿನ ಕೋಶ ; (ಫಿರಂಗಿ, ಮೊ. ಗಳ ಮೂಲಕ ಹಾರಿಸುವ) ಉರುಳೆಯಾಕಾರದ ಅಗ್ನಿಶಸ್ತ್ರ : ಸಿಡಿಯುರುಳೆ, ಸಿಡಿಗುಂಡು ; ಬಾಂಬು [**Shéll-proof** (ಗು.) ಸಿಡಿಗುಂಡು ಹೊಡೆತ ತಡೆಯುವ, ಸಿಡಿಗುಂಡಿಗೆ ಸಗ್ಗದ ; ಅಗ್ನಿಗೋಳ ನಿವಾರಕ]. ಕತ್ತಿಯ ಹಿಡಿಯ ಕೈಕಾಪು. (ಕಾವ್ಯ) 'ಲೈರ್' ಎಂಬ ತಂತಿವಾದ್ಯ. (ವಿದ್ಯಾಶಾಲೆಗಳಲ್ಲಿ) ಮಧ್ಯಮ—ತರಗತಿ, ವರ್ಗ (೫ ಮತ್ತು ೬ನೆಯ ತರಗತಿಗಳ ನಡುವಣದು). ಹೊರರೂಪ, ತೋರ್ಕೆ. = S.-jacket (ಎಂಬುದರ ಸಂಕ್ಷಿಪ್ತ). **S.-back** (ನಾವಿಕ ಅಸಂ.) ಹಳೆಯ, ಪಳಗಿದ, —ನಾವಿಕ. **S.-bit** ಉಗುರುಳಿಯಾಕಾರದ ಬೈರಿಗೆಯಲಗು. **S. button** ಎರಡು ಲೋಹದ ಬಿಲ್ಲೆಗಳನ್ನು ಬೆಸೆದ್ದು, ಮೊ. ಗಳಲ್ಲಿಟ್ಟು ಮಾಡಿದ ಪೊಳ್ಳುಗುಂಡಿ ; ಸಂಪುಟಗುಂಡಿ. **S.-fish** ಚಿಪ್ಪುಮೀನು ; ವಲ್ಕವಂತ ಜಲಚರ. **S.-gun** ಸಮತಲವಾಗಿ ಸಿಡಿಗುಂಡು ಹಾರಿಸುವ ಫಿರಂಗಿ (Mortar ನೋಡಿ). **S.-heap, -mound** = Kitchen midden (Midden ನೋಡಿ). **S.-jacket** ಸೈನಿಕಾಧಿಕಾರಿಗಳು ಸಾಮಾನ್ಯ ಉಡುಪಿನಲ್ಲಿ ಧರಿಸುವ, ಹಿಂದುಗಡೆ ಸೊಂಟದವರೆಗೆ ಮಾತ್ರ ಬರುವ, ನಡುವಂಗಿ. **S.-lime** ಚಿಪ್ಪುಸುಣ್ಣ, ಸಿಂಪಿ ಸುಣ್ಣ. **S.-marble** ಸಿಂಪಿಗಳ ಅವಶೇಷಗಳುಳ್ಳ ಹಾಲುಗಲ್ಲು : ಸಿಂಪಿ ಹಾಲುಗಲ್ಲು. **S.-shock** ಸಿಡಿಗುಂಡಿನ ಎಡೆಬಿಡದ ಹೊಡೆತ ಮತ್ತು ಇತರ ವಿಧವಾದ ಯುದ್ಧ ಘಾತಗಳಿಗೆ ಸಿಕ್ಕಿದ್ದರ ಪರಿಣಾಮವಾಗಿ ಬುದ್ಧಿ, ಮಾತು, ಮೊ. ಗಳಲ್ಲಿ ಆಗುವ ಅವ್ಯವಸ್ಥೆ : ಸಿಡಿಗುಂಡಿನ ಧಕ್ಕೆ. **S.-work** (ಮರ, ಮೊ. ಗಳ ಮೇಲೆ ಅಂಟಿಸಿ ಮಾಡಿದ) ಸಿಂಪಿ ಅಲಂಕಾರ. **(-)shelled** (ಗು.) ; **Shéll-less** (ಗು.) ; **Shélly** (ಗು.)

Shell (ಕ್ರಿ.) ಚಿಪ್ಪು, ಹೊಟ್ಟು, ಕೋಶ, ಮೊ. ಗಳಿಂದ ಹೊರತೆಗೆ ; —ಮೊ. ಗಳನ್ನು ತೆಗೆ(ದುಹಾಕು), ಸುಲಿ, ಬಿಡಿಸು (S. peas); ಕಳಚು, ಉದುರಿಸು, ಬಿಡು, ಉರ್ಚು ; ಚಿಪ್ಪು, ಮೊ. ಗಳೊಳಗೆ ಹುದುಗಿಸು, ಸೇರಿಸು; ಚಿಪ್ಪು, ಮೊ. ಗಳನ್ನು ನೆಲಕ್ಕೆ ಹಾಕು, ಹಾಸು. (ಶತ್ರುಸೈನ್ಯದ ಮೇಲೆ) ಸಿಡಿಗುಂಡು ಹಾರಿಸು ; (ಪಟ್ಟಣ, ಮೊ. ಗಳ ಮೇಲೆ) ಸಿಡಿಗುಂಡು ದಾಳಿ ಮಾಡು. (ಲೋಹ, ಮೊ. ಗಳ ವಿಷಯದಲ್ಲಿ) ಚಕ್ಕೆ ಚಕ್ಕೆಯಾಗಿ, ತೆಳು ಪೊರೆಗಳಾಗಿ, ಶಲ್ಕಗಳಾಗಿ—ಬರು, ಏಳು. S. out (ಅಸಂ.) (ಹಣವನ್ನು) ಕೊಟ್ಟುಬಿಡು, ತೆತ್ತುಬಿಡು. **Shélling** (ನಾ.) ಸಿಡಿಗುಂಡು ಹಾರಿಸುವುದು, ಸಿಡಿಗುಂಡು ದಾಳಿ.

Shellác ಷೆಲ್ಯಾಕ್ (ನಾ., ಕ್ರಿ. ಸಕ., ಭೂತ. ಮತ್ತು ಭೂ. ಕೃ. -cked, ವರ್ತಮಾನ ಕೃ. -cking) ಶುದ್ಧ ಅರಗು (ಮೆರುಗೆಣ್ಣೆ ತಯಾರಿಸುವುದಕ್ಕಾಗಿ, ಅರಗನ್ನು ಕರಗಿಸಿ ಶೋಧಿಸಿ ತೆಳು ಪದರಗಳಾಗಿ ಎಬ್ಬಿಸಿದ್ದು). (ಕ್ರಿ.) ಅರಗಿನ ಮೆರುಗು ಹಾಕು.

Shélter ಷೆಲ್ಟರ್ (ನಾ., ಕ್ರಿ.) (ಆಕ್ರಮಣ, ಅಪಾಯ, ಶಾಖ, ಗಾಳಿ, ಮೊ. ಗಳಿಂದ ಬಾಧೆಯಾಗದಂತೆ) ಮರೆ, ತಡೆ, ಆಸರೆ, ಕಾಪು, ನೆರಳು (ರೂಪ.) ; ಆಶ್ರಯ, ರಕ್ಷಣೆ, ಶರಣು ; ಗಾಳಿ ಮಳೆಗಳನ್ನು ತಡೆಯುವ ಮರೆ, ಗೂಡು (Cabman's s. ಬಂಡಿ ನಡೆಸುವವನ ಗೂಡು. Find, take, s. ರಕ್ಷಣೆ, ಆಶ್ರಯ, —ಪಡೆ, ತೆಗೆದುಕೊ). (ಕ್ರಿ.) ಆಶ್ರಯ, ರಕ್ಷಣೆ, —ಆಗಿರು, ಕೊಡು ; —ಪಡೆ, ತೆಗೆದುಕೊ (*Under*, *in*, *from* ಉಪ. ದೊಡನೆ) ; (ದೋಷಾರೋಪದಿಂದ) ರಕ್ಷಿಸು, ಕಾಪಾಡು, ಮರೆಮಾಡು (*From* ಉಪ. ದೊಡನೆ) [S. oneself *under*, *beneath*, *behind* —ರ ಆಶ್ರಯ ಪಡೆ, ಶರಣು ಹೊಗು. Sheltered trades ಪರದೇಶೀಯ ಸ್ಪರ್ಧೆಗೆ ಒಳಪಟ್ಟಿಲ್ಲದ ವ್ಯಾಪಾರಗಳು : ಸುರಕ್ಷಿತ ವ್ಯಾಪಾರಗಳು (ಕಟ್ಟಡಗಳ ನಿರ್ಮಾಣ, ಒಳನಾಡ ಸಾಮಾನು ಸಾಗಣೆ, ಮೊ. ವು]. **Shélterless** (ಗು.)

Shélty[1], **-tie** ಷೆಲ್ಟಿ (ನಾ.) ಷೆಟ್ಲಂಡಿನ—ತಟ್ಟು, ಟಾಕಣ.

Shélty[2] ಷೆಲ್ಟಿ (ನಾ.) (ಸ್ಕಾ. ಪ್ರ.) ಒರಟು ಜೋಪಡಿ, ಗುಡಿಸಿಲು.

Shelve[1] ಷೆಲ್ವ್ (ಕ್ರಿ. ಸಕ.) (ಪುಸ್ತಕ, ಮೊ. ನ್ನು) ಅಲಮಾರಿನ ಹಲಗೆಯ ಮೇಲೆ, ಬಡುವಿನಮೇಲೆ, —ಇಡು ; (ರೂಪ.) (ಯೋಜನೆ, ಮೊ. ನ್ನು) ಕೈಬಿಡು, ಮೂಲೆಗೆ ಹಾಕು ; (ಒಬ್ಬನನ್ನು) ಕೆಲಸದಿಂದ ತೆಗೆದುಹಾಕು, ವಜಾಮಾಡು. (ಬೀರು, ಮೊ. ಗಳಿಗೆ) ಹಲಗೆಗಳನ್ನು, ಬಡುಗಳನ್ನು, —ಹಾಕು, ಹವಣಿಸು. **Shélving** (ನಾ.) ಗಡಗಂಚಿ ; ಬಡುಗಳು.

Shelve[2] ಷೆಲ್ವ್ (ಕ್ರಿ. ಅಕ.) (ಕ್ರಮವಾಗಿ, ಸ್ವಲ್ಪ) ಇಳಿಜಾರಾಗು, ಇಳಿಜಾರಾಗಿರು, ಓಟವಾಗಿರು.

Shélves. **Shelf** ನೋಡಿ.

Shemá (ಹೀಬ್ರೂ) ಷೆಮಾ (ನಾ.) ಯೆಹೂದ್ಯರು ನಿತ್ಯ ಬೆಳಗ್ಗೆ ಮತ್ತು ಸಂಜೆ ಪ್ರಾರ್ಥನೆಯಲ್ಲಿ ಹೇಳುವ, ಬೈಬಲ್ಲಿನ ಹಳೆಯ ಒಡಂಬಡಿಕೆಯ ಮೊದಲ ಪಂಚಕದ ಕೆಲವು ವಾಕ್ಯಗಳು : 'Hear, O Isreal, the Lord is our God, the Lord is one' ಎಂಬ ವಾಕ್ಯ (ಎಲ್ಲ ಯೆಹೂದ್ಯ ಪಂಗಡಗಳಿಗೂ ಸಾಮಾನ್ಯವಾಗಿದ್ದು, ಅವರ ಧರ್ಮ ವಿಶ್ವಾಸ ವ್ಯಕ್ತಪಡಿಸುವ ವಾಕ್ಯ ಇದೊಂದೆ)

Shéol ಷೀಓ(ಅ)ಲ್ (ನಾ.) (ಯೆಹೂದ್ಯರ) ಅಧೋಲೋಕ, ಪ್ರೇತಲೋಕ ; ಸಮಾಧಿ, ಗೋರಿ.

Shépherd ಷೆಪರ್ಡ್ (ನಾ., ಕ್ರಿ. ಸಕ.) ಕುರಿ ಕಾಯುವವನು, ಕುರುಬ ; (ರೂಪ.) ಪಾಲಕ, ರಕ್ಷಕ (The good S. ಯೇಸು ಕ್ರಿಸ್ತ). [S.'s-club, -joy, -knot, -purse, -rod ಹಲವು ಬಗೆಯ ಸಸ್ಯ. S.'s crook ಕುರುಬನ ಕೊಕ್ಕೆಕೋಲು, ದೋಟಿ. S.'s pie ಹಿಸುಕಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಿಟ್ಟುಮಾಡಿದ ಆಲೂಗೆಡ್ಡೆಯ ಕಣಕದಲ್ಲಿಟ್ಟು ಬೇಯಿಸಿದ ಮಾಂಸದ ಹೂರಣ. S.'s plaid ಬಟ್ಟೆಯಲ್ಲಿಯ ಕಪ್ಪು ಬಿಳುಪು ಚೌಕುಳಿಯ ನಮೂನೆ; ಕಪ್ಪು ಬಿಳುಪು ಪಪ್ಪಳಿ]. (ಕ್ರಿ.) ಕುರಿ ಕಾಯಿ; (ರೂಪ.) ಕಾಯಿ, ಪಾಲನೆ ಮಾಡು; (ಮಂದಿ, ಮೊ. ನ್ನು) ಕುರಿಮಂದೆಯಂತೆ ನಡಸು, ಓಡಿಸು; ಮಂದೆ ಹೊಡೆ. **Shépherdess** (ನಾ., ಸ್ತ್ರೀ.)

Shéppy ಷೆಪಿ (ನಾ.) ಕುರಿ ದೊಡ್ಡಿ, ರೊಪ್ಪ.

Shérbet ಷರ್‌ಬೆಟ್, —ಬೆಟ್ (ನಾ.) (ಹಣ್ಣಿನ) ಪಾನಕ; ಷರಬತ್ತು (ಇಂಗ್ಲೆಂಡಿನಲ್ಲ ಸಾ., ನೊರೆಯುಕ್ಕುವಂತೆ ಮಾಡಿದ್ದು)

Sherd. Shard ನೋಡಿ.

Sheríf, -eéf ಷ(ಷೆ)ರೀಫ್ (ನಾ.) ಮಹಮ್ಮದನ ದೌಹಿತ್ರ ಸಂತತಿಯವನು (ಹಸುರು ರುಮಾಲನ್ನು ಅಥವಾ ಹಸುರು ಮುಖಪರದೆಯನ್ನು ಹಾಕಿಕೊಳ್ಳುವ ಹಕ್ಕುಳ್ಳವನು); ಮಕ್ಕಾ ಪಟ್ಟಣದ—ಮುಖ್ಯ ನ್ಯಾಯಾಧಿಕಾರಿ, ದಂಡಾಧಿಕಾರಿ.

Shériff ಷೆರಿಫ್ (ನಾ.) ಕೌಂಟಿಯಲ್ಲಿ ಅಥವಾ ಷೈರಿನಲ್ಲಿ ಶಾಂತಿ ಪಾಲನೆ, ನ್ಯಾಯಸ್ಥಾನಗಳ ನಿರ್ದೇಶದ ಮೇರೆಗೆ ನ್ಯಾಯ ನಿರ್ವಹಣೆ, ನಿಯೋಗಿಯ ಮೂಲಕ ಆಜ್ಞೆಗಳನ್ನು ಜಾರಿಮಾಡಿಸುವುದು, ಚುನಾವಣೆಗಳಲ್ಲಿ ಅಧ್ಯಕ್ಷತೆ ವಹಿಸುವುದು, ಮೊ. ಕೆಲಸಗಳುಳ್ಳ, ರಾಜಸನ್ನದು ಪಡೆದ ಮುಖ್ಯಾಧಿಕಾರಿ: ಷೆರೀಫ್; ನಾಡಗೌಡ. **Shériffalty** (ನಾ.), **Shériffdom** (ನಾ.), **Shériffhood** (ನಾ.), **Shériffship** (ನಾ.) ಷೆರೀಫನ—ಅಧಿಕಾರ, ಪದವಿ, ಅಧಿಕಾರ ಕ್ಷೇತ್ರ.

Shérry ಷೆರಿ (ಸ್ಪೆಯ್ನಿನ ಒಂದು ಪಟ್ಟಣವಾದ ಕ್ಸೆರೀಸಿನ ಅಥವಾ ದ. ಸ್ಪೆಯ್ನ್ ಪ್ರಾಂತದ) ಒಂದು ಬಗೆಯ ಬಿಳಿಯ ದ್ರಾಕ್ಷಾ ಮದ್ಯ: ಷೆರಿ ಮದ್ಯ (Brown s. ಕಂದು ಬಣ್ಣದ ಷೆರಿ ಮದ್ಯ). S.-glass (ಒಂದು ಅಳತೆಯ) ಷೆರಿ ಮದ್ಯದ ಗಾಜುಬಟ್ಟಲು. S. cobbler = Cobbler ಎಂಬ ಪಾನೀಯ (Cobble[2] ನೋಡಿ)

Shétland ಷೆಟ್ಲಂಡ್ (ನಾ.) ಸ್ಕಾಟ್ಲೆಂಡಿನ ಸುಮಾರು ಈಶಾನ್ಯಕ್ಕಿರುವ ಒಂದು ದ್ವೀಪಸ್ತೋಮ; ಷೆಟ್ಲಂಡ್ ದ್ವೀಪ [S. lace ಷೆಟ್ಲಂಡ್ ಉಣ್ಣೆಯಿಂದ ಮಾಡಿದ ಕಸೂತಿ ಅಂಚು. S. pony ಗಟ್ಟಿಮುಟ್ಟಾದ, ಸಣ್ಣ ಜಾತಿಯ, ತಟ್ಟು (ಮೊದಲು ಷೆಟ್ಲಂಡಿನಿಂದ ಬಂದದ್ದು). S. wool ಶ್ರೇಷ್ಠ ತೆರದ ಉಣ್ಣೆ.]

Shew, Shewbread. Show ನೋಡಿ.

Shíah ಷೀಯ (ನಾ.), **Shíite** ಷೀಐಟ್ (ನಾ.) ಮಹಮ್ಮದನ ಅಳಿಯನಾದ ಅಲಿಯನ್ನು ಮಹಮ್ಮದನ ತರುವಾಯದ ಪಟ್ಟಾಧಿಕಾರಿಯನ್ನಾಗಿಯೂ ಮೊದಲನೆಯ ಇಮಾಮನನ್ನಾಗಿಯೂ ಅಂಗೀಕರಿಸುವ, ಮೊದಲ ಮೂರು ಕಲೀಫರನ್ನು ಒಪ್ಪದ, ಒಂದು ಮುಸಲ್ಮಾನ ಪಂಗಡದವನು: ಷೀಯ (ಪಂಗಡದವನು) (Sunni ಪದ ನೋಡಿ).

Shíbboleth ಷಿಬೊಲೆತ್ (ನಾ.) (ಸ್ವಪಕ್ಷದವರನ್ನು ಗುರುತಿಸಲು ಮತ್ತು ಪರ ಪಕ್ಷದವರಿಂದ ಪ್ರತ್ಯೇಕಿಸಲು ಸಹಕಾರಿಯಾದ) ಸಂಕೇತ ಪದ, ಲಾಂಛನ, ಪದ್ಧತಿ, ವರ್ತನೆ (The shibboleths of democracy ಪ್ರಜಾಪ್ರಭುತ್ವ ವಾದದ ಕೂಗುಗಳು, ಸಂಕೇತ ವಾಕ್ಯಗಳು, ಪಲ್ಲವಿಗಳು); ಹಿಂದೆ ಅತ್ಯಾವಶ್ಯಕವೆಂದು ಪರಿಗಣಿಸಿದ್ದ, ಈಗ ಓಬೀರಾಯನ ಕಾಲದ್ದೆಂದು ತ್ಯಾಜ್ಯವಾದ ತತ್ತ್ವ, ಮೊ. ವು: ಗೊಡ್ಡು, ಲೊಡ್ಡು, —ತತ್ತ್ವ.

Shield ಷೀಲ್ಡ್ (ನಾ., ಕ್ರಿ. ಸಕ.) ಗುರಾಣಿ, ಡಾಲು, ಅಡ್ಡಣ, ಹರಿಗೆ, ಖೇಟಕ [The other side of the s. (ಒಂದು ಪಕ್ಷವನ್ನೆ ಹಿಡಿದು ವಾದಿಸುತ್ತಿರುವವನಿಗೆ ತಿಳಿದಿಲ್ಲದ ವಿಷಯ, ಮೊ. ಗಳ) ಇನ್ನೊಂದು—ಮುಖ, ದೃಷ್ಟಿ]. (ಯಂತ್ರ, ಮೊ. ಗಳಲ್ಲಿ) ರಕ್ಷಾ—ಕವಚ, ಫಲಕ; ಮರೆ, ಕಾಪು. (ಖಂಡನೆ, ದಂಡನೆ, ಮೊ. ಗಳಿಂದ) ರಕ್ಷಕ, ರಕ್ಷಣೆ. (ಪ್ರಾಣಿಗಳಲ್ಲಿ ಅಥವಾ ಸಸ್ಯಗಳಲ್ಲಿ) ಗುರಾಣಿಯಂಥ ಭಾಗ. (ವಂಶಲಾಂಛನ ವಿದ್ಯೆ) ವಂಶಲಾಂಛನ ಕೆತ್ತಿದ —ಫಲಕ, ಗುರಾಣಿ. [S.-fern ಗುರಾಣಿಯಾಕಾರದ ಫಲಚ್ಛದಗಳುಳ್ಳ ಒಂದು ಜರೀ ಗಿಡ. S.-hand (ಪ್ರಾಚೀ. ಪ್ರ.) ಎಡಗೈ]. (ಕ್ರಿ.) (ತನ್ನ ಅಧಿಕಾರವನ್ನು ಅಥವಾ ಪ್ರಭಾವವನ್ನು ಉಪಯೋಗಿಸಿ ಒಬ್ಬನನ್ನು ಮು., ಖಂಡನೆ, ದಂಡನೆ, ಮೊ. ಗಳಿಂದ) ಕಾಪಾಡು, ರಕ್ಷಿಸು, ಉಳಿಸು (ಅನೇಕ ವೇಳೆ, ಸತ್ಯಾಂಶಗಳನ್ನು ನ್ಯಾಯ ವಿರುದ್ಧವಾಗಿ ಮರೆಮಾಚಿ ಕಾಪಾಡು ಎಂಬ ಅರ್ಥದಲ್ಲಿ ಪ್ರ.); ನಿವಾರಿಸು, ಪರಿಹರಿಸು (God s. that it should so befall ಹಾಗಾಗದಂತೆ ದೇವರು ತಪ್ಪಿಸಲಿ). **Shíeldless** (ಗು.)

Shíer, -est. Shy[1] ನೋಡಿ.

Shift ಷಿಫ್ಟ್ (ಕ್ರಿ., ನಾ.) ಒಂದು ಸ್ಥಾನದಿಂದ ಮತ್ತೊಂದು ಸ್ಥಾನಕ್ಕೆ—ಚಲಿಸು, ಬದಲಾಯಿಸು; (ಸ್ಥಳದಿಂದ) ಕದಲು, ಕದಲಿಸು; (ರೂಪ., ಗುಣ, ಮೊ. ವು) ಬದಲಾಗು; ರೂಪಾಂತರ —ಆಗು, ಮಾಡು [S. one's lodging ತನ್ನ ವಾಸಸ್ಥಾನವನ್ನು ಬದಲಾಯಿಸು. S. one's grounds (ವಾದ, ಮೊ. ಗಳಲ್ಲಿ) ನೆಲೆ ಬದಲಾಯಿಸು. S. load into other hand ಹೊರೆಯನ್ನು ಕೈ ಬದಲಾಯಿಸು. The scene shifts (ರಂಗಸ್ಥಳದಲ್ಲಿ, ಕಾದಂಬರಿಯಲ್ಲಿ) ದೃಶ್ಯ ಬದಲಾಯಿಸುತ್ತದೆ. S. one's shirt (ಪ್ರಾಚೀ. ಪ್ರ.) ಷರಟು ಬದಲಾಯಿಸು, ಬೇರೆ ಷರಟು ಹಾಕಿಕೊ. Cargo shifted (ಹಡಗು ಓಲುವಂತೆ) ಹಡಗಿನ ಸರಕು ಎಡೆ ಸರಿಯಿತು. S. about ಸ್ವಲ್ಪ ಚಲಿಸು, ಸ್ಥಳ ಬದಲಾಯಿಸು. S. off (ಹೊಣೆ, ಮೊ. ನ್ನು) ತೊಲಗಿಸಿಕೊ; ಮತ್ತೊಬ್ಬರಮೇಲೆ ಹಾಕು; ಮತ್ತೊಬ್ಬರ ತಲೆಗೆ ಕಟ್ಟು. Wind shifts round to the East ಗಾಳಿ ಪೂರ್ವ ದಿಕ್ಕಿಗೆ ಬದಲಾಯಿಸುತ್ತದೆ, ಪೂರ್ವ ದಿಕ್ಕಿಗೆ ತಿರುಗುತ್ತದೆ]. ಉಪಾಯ, ತಂತ್ರ, —ಮಾಡು, ಹೂಡು, ನಡಸು; ಹೇಗಾದರೂ, ಹೇಗೋ, —ಸವರಿಸು, ನಿಭಾಯಿಸು; ಜೀವನ ಸಾಗಿಸು (Must s. for himself ಅವನ ಪಾಡು ಅವನು ನೋಡಿಕೊಳ್ಳಬೇಕು). (ಪ್ರಾ. ಪ್ರ.) ನುಣುಚಿಕೊ, ಹೊರಳಿಕೊ (Shifts & prevaricates ನುಣುಚಿಕೊಂಡು, ಹೊರಳಿಕೊಂಡು, ಮಾತಾಡುತ್ತಾನೆ). (ನಾ.) ಸ್ಥಳ, ಸ್ವಭಾವ, —ಬದಲಾವಣೆ: ವ್ಯತ್ಯಾಸ, ಪಲ್ಲಟ, ಪರಿವರ್ತನೆ, ಆವರ್ತ, ಸರದಿ (ಪ್ರಾ. ಪ್ರ.) (The shifts & changes of life ಜೀವನದ—ವ್ಯತ್ಯಾಸ ಪರಿವರ್ತನೆಗಳು, ಆಗು ಹೋಗುಗಳು. S. of crops ಬೆಳೆಗಳ ಸರದಿ); ಸರದಿಯ ಕೆಲಸಗಾರರು; ಸರದಿ(ಯ ಕಾಲ). ಉಪಾಯ, ಯುಕ್ತಿ, ಹಂಚಿಕೆ; ಕುಯುಕ್ತಿ, ಮೋಸ, ಠಕ್ಕು; ನುಣುಚಿಕೆ, ಹೊರಳಿಕೆ; [Make s. *or* a s. ಹೇಗೋ ನಿಭಾಯಿಸು, ಸವರಿಸು (Must make s. without it)]. (ಪ್ರಾಚೀ. ಪ್ರ.) ಒಳ ಕುಪ್ಪಸ. (ಇಟ್ಟಿಗೆಯ ಕಟ್ಟಣೆ, ಮೊ. ಗಳಲ್ಲಿ ಒಂದು ವರಿಸೆಯ ಕೂಡು ಸಂದುಗಳೂ ಮೇಲಿನ ಅಥವಾ ಕೆಳಗಿನ ವರಿಸೆಯ ಕೂಡು ಸಂದುಗಳೂ ಒಂದೇ ಗೆರೆಯಲ್ಲಿರದಂತೆ) ವರಿಸೆಯ ಸರಿತ. **Shíftless** (ಗು.) ಉಪಾಯಗಾಣದ, ಸವರಿಸಿಕೊಳ್ಳುವ ಸಾಮರ್ಥ್ಯವಿಲ್ಲದ; ಸೋಮಾರಿಯಾದ; ನಿಷ್ಪ್ರಯೋಜಕ (Going to hunt up her s. husband). **Shíftlessly** (ಕ್ರಿ. ವಿ.); **Shíftlessness** (ನಾ.): **Shífty** (ಗು.) ಹೊರಳಿಕೊಳ್ಳುವ, ನುಣುಚಿಕೊಳ್ಳುವ; ಉಪಾಯದ, ತಂತ್ರಿಯಾದ, ಠಕ್ಕಿನ (S. eyes ಮೋಸದ ಕಣ್ಣುಗಳು). **Shíftily** (ಕ್ರಿ. ವಿ.); **Shíftiness** (ನಾ.)

Shíite. Shiah ನೋಡಿ.

Shikár ಷಿಕಾರ್ (ನಾ.) (ಆಂ. ಇಂ.) ಷಿಕಾರಿ, ಬೇಟೆ. **Shikáree, -ri, Shekárry** ಷಿಕಾರೀ (ನಾ.) ಬೇಟೆಗಾರ, ಷಿಕಾರಿಯವನು; ಐರೋಪ್ಯ ಬೇಟೆಗಾರನ ಜೊತೆಯಲ್ಲಿ ಹೋಗುವ ದೇಶೀಯ ಅನುಚರ.

Shillélagh, -állah, -élah ಷಿಲೇಲ, **-ály** —ಲಿ (ನಾ.) (ಐರಿಷ್ ಜನರು ಉಪಯೋಗಿಸುವ, ಬ್ಲ್ಯಾಕ್‌ತಾರ್ನ್ ಅಥವಾ ಓಕ್ ಮರದ) ದೊಣ್ಣೆ, ಲಟ್ಟ.

Shílling ಷಿಲಿಂಗ್ (ನಾ., ಸಂಕ್ಷಿಪ್ತ: s.) ಬ್ರಿಟಿಷರ ಒಂದು ಬೆಳ್ಳಿಯ ನಾಣ್ಯ (=೧/೨೦ ಪೌಂಡು) [1/6 ೧ ಷಿ. ೬ ಪೆ. £ 1 1s. 1d. ೧ ಪೌಂ. ೧ ಷಿ. ೧ ಪೆ. Take King's *or* Queen's s. ಸೈನಿಕನಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೇರಿಕೊ (ಹೀಗೆ ಒಂದು ಷಿಲಿಂಗ್ ಪಡೆದು ಸೈನ್ಯಕ್ಕೆ ಸೇರಿಕೊಳ್ಳುತ್ತಿದ್ದ ಹಿಂದಿನ ಪದ್ಧತಿಯಿಂದ). Cut off (one's heir, etc.) with a s. (ಉತ್ತರಾಧಿಕಾರಿ, ಮೊ. ರಿಗೆ ಬುದ್ಧಿಪೂರ್ವಕವಾಗಿ) ಆಸ್ತಿ —ಇಲ್ಲದಂತೆ ಮಾಡು, ತಪ್ಪಿಸು ; ಹಕ್ಕುದಾರಿ ತಪ್ಪಿಸಿ ಮತ್ತೊಬ್ಬರಿಗೆ ಕೊಡು]

Shilly-shally ಷಿಲಿಷ್ಯಾಲಿ (ನಾ., ಕ್ರಿ. ಅಕ.) ಮನಸ್ಸನ್ನು ನಿರ್ಧರಿಸಲು ಅಸಮರ್ಥತೆ; ಅನಿರ್ಧಾರ(ತೆ) ; ಮನಸ್ಸಿನ ತೂಗಾಟ, ಉಯ್ಯಲಾಟ, ಹೊಯ್ದಾಟ ; ಮಾನ ಮೇಷ (ಎಣಿಸುವುದು) ; ಡೋಲಾಯಮಾನತೆ. (ಕ್ರಿ.) (ಒಂದು ರೀತಿ ವರ್ತಿಸಲು, ಒಂದು ಮಾರ್ಗ ಹಿಡಿಯಲು) ಮನಸ್ಸಿನಲ್ಲಿ ತೂಗಾಡು, ಹೊಯ್ದಾಡು, ಅನಿಶ್ಚಯವಾಗಿರು ; ಹಿಂದು ಮುಂದು ನೋಡು.

Shíly. **Shy**[1] ನೋಡಿ.

Shim ಷಿಂ (ನಾ., ಕ್ರಿ. ಸಕ.) (ಯಂತ್ರ, ಮೊ. ಗಳಲ್ಲಿ ಜೋಡಿಸಿದ ಭಾಗಗಳನ್ನು ಬಿಗಿಸುವ) ಪಟ್ಟಿ, ಬೆಣೆ (ಹಾಕು, ಹೊಡೆ)

Shímmer ಷಿಮರ್ (ಕ್ರಿ. ಅಕ., ನಾ.) ಮಿನುಗು ; ಮಂದ ಪ್ರಕಾಶ(ದಿಂದ ಬೆಳಗು)

Shímmy ಷಿಮಿ (ನಾ.) ಒಳಕುಪ್ಪಸ (=Chemise ಎಂಬುದಕ್ಕೆ ಬಳ. ಮಾ. ಮತ್ತು ಮಕ್ಕಳ ಮಾತು)

Shin ಷಿನ್ (ನಾ., ಕ್ರಿ.) ಮಂಡಿಯಿಂದ ಕೆಳಗಿನ ಕಾಲಿನ ಮುಂಭಾಗ· ಮೊಣಕಾಲು, ಕಣಕಾಲು [S.-bone ಮೊಣಕಾಲ ಮೂಳೆ (=Tibia). S. of beef ದನದ ಮೊಣಕಾಲ ಮಾಂಸ. S.-guard (ಕಾಲ್ಚೆಂಡಾಟದಲ್ಲಿ ಹಾಕಿಕೊಳ್ಳುವ) ಮೊಣಕಾಲ ಕಾಪು]. (ಕ್ರಿ.) (ಮರ, ಗೋಡೆ, ಏಣಿ, ಮೊ. ನ್ನು) ಹತ್ತು, ಏರು (*Up* ಉಪ. ದೊಡನೆ) ; (ಕಾಲ್ಚೆಂಡಾಟದಲ್ಲಿ) ಕಣಕಾಲಿನಮೇಲೆ ಒದೆ, ಹೊಡೆ. (ಅಮೆ. ನಂ.) ಮೊಣಕಾಲು ಉಪಯೋಗಿಸು; ನಡೆ, ಓಡು.

Shíndy ಷಿಂಡಿ (ನಾ.) ಗಲಭೆ, ಗೊಂದಲ, ರಂಪ (Kick up a s. ಕುಯಿಲೆಬ್ಬಿಸು ; ರಂಪ, ಗಲಾಟೆ, —ಮಾಡು)

Shine ಷೈನ್ (ಕ್ರಿ., ಭೂತ., ಭೂ. ಕೃ. Shone ಷಾನ್ ; ನಾ.) ಹೊಳೆ, ಬೆಳಗು, ತೊಳಗು, ಪ್ರಕಾಶಿಸು, ಕಾಂತಿ ಕೊಡು, ಕಾಂತಿ ಬೀರು (ರೂಪ. ಸಹ) (Face shone with gratitude ಮುಖ ಕೃತಜ್ಞತಾ ಭಾವದಿಂದ ಕಳೆ ಬೀರಿತು); ಪ್ರತಿಭೆ—ಬೀರು, ತೋರು ; ತೇಜಸ್ವಿಯಾಗಿರು ; ಕಂಗೊಳಿಸು, ಶೋಭಿಸು, ರಾಜಿಸು ; ಎದ್ದು ಕಾಣು (Does not s. in conversation, society ಅವನು ಸಂಭಾಷಣೆಯಲ್ಲಿ, ಗೋಷ್ಠಿಯಲ್ಲಿ, ಶೋಭಿಸುವುದಿಲ್ಲ. Is a shining example ಉಜ್ವಲ ಉದಾಹರಣೆಯಾಗಿದ್ದಾನೆ); (ಬಳ. ಮಾ.) (ಜೋಡು, ಹಿತ್ತಾಳೆಯ ಸಾಮಾನು, ಮೊ. ನ್ನು) ಪ್ರಕಾಶಮಾನವಾಗಿ, ಹೊಳೆಯುವಂತೆ, —ಮಾಡು ; ಹೊಳಪು ಕೊಡು, ಮೆರುಗಿಡು. (ನಾ.) ಹೊಳಪು, ಹೊಗರು (ಗ್ರಾಂ.) ; ಬಿಸಿಲು (=Sunshine) [Rain or s. (Rain ನೋಡಿ)] ; ಪ್ರಕಾಶ, ತೇಜಸ್ಸು (Take the s. out of ಕಾಂತಿಗುಂದಿಸು, ಮಸುಳಿಸು, ಮಾನಲುಮಾಡು ; ಅತಿಶಯಿಸು, ಮೀರಿಸು). (ಅಸಂ.) ಗಲಭೆ, ಗೊಂದಲ, ಕೋಲಾಹಲ. **Shíner** (ನಾ.) (ಅಸಂ.) ನಾಣ್ಯ (ಮು., ಸವರನ್ನು); (ಬ. ವ. ದಲ್ಲಿ) ಕಾಂಚನ, ಹಣ, ಧನ. **Shíny** (ಗು.) ಹೊಳೆಯುವ, ತೊಳಗುವ ; ಮಿರುಗುವ ; ಮೋಡವಿಲ್ಲದ (A s. day) ; ಬೆಳಗಿದ, ಹೊಳಪುಕೊಟ್ಟ (S. hat, boots) ; ಉಜ್ಜಿ, ಸವೆದು, ನವೆದು, —ಹೋದ (S. coat, seams ಗುಂಜೆಗೆಳು ಸವೆದುಹೋದ ಅಂಗಿ, ಹೊಲಿಗೆ). **Shíniness** (ನಾ.)

Shíngle[1] ಷಿಂಗ್ಲ್ (ನಾ., ಕ್ರಿ. ಸಕ.) ಚಾವಣಿಗೆ ಹೆಂಚಿನಹಾಗೆ ಹೊದಿಸುವ ಮರದ ಚೌಕಹಲಗೆ : ಮರಹೆಂಚು. (ಕ್ರಿ.) —ಹೊದಿಸು; (ತಲೆಕೂದಲನ್ನು ಹೆಂಚು ಹೊದಿಸಿದಹಾಗೆ ಕಾಣುವಂತೆ) ಮೆಟ್ಟಿಲು ಮೆಟ್ಟಿಲಾಗಿ—ಹತ್ತಿ ಕತ್ತರಿಸು, ಮಟ್ಟಸವಾಗಿ ಕತ್ತರಿಸು.

Shíngle[2] ಷಿಂಗ್ಲ್ (ನಾ.) (ಕಡಲ ಕರೆಯಲ್ಲಿ ಬಿದ್ದಿರುವ) ನೊರಜುಗಲ್ಲು, ನರಜು. **Shíngly** (ಕ್ರಿ. ವಿ.)

Shíngles ಷಿಂಗ್ಲ್ಸ್ (ನಾ.) (ಅನೇಕ ವೇಳೆ ಸೊಂಟದ ಸುತ್ತ ಹರಡಿಕೊಳ್ಳುವ) ಒಂದು ಬಗೆಯ ದದ್ದು ರೋಗ.

Shínto ಷಿಂಟೊ (ನಾ.) ಪ್ರಕೃತಿ ಪೂಜೆ, ವೀರ ಪೂಜೆ, ಪೂರ್ವಪಿತೃಗಳಿಗೂ ಅಧಿಕಾರಸ್ಥಾನದಲ್ಲಿರುವವರಿಗೂ ಗೌರವ ಮರ್ಯಾದೆ, ಮಿಕಾಡೊ (ಜಪಾನಿನ ಚಕ್ರವರ್ತಿ) ಸೂರ್ಯದೇವಿಯ ಸಂತತಿಯವನು ಎಂಬ ನಂಬಿಕೆ—ಇವುಗಳ ಆಧಾರದಮೇಲೆ ಸ್ಥಾಪಿತವಾಗಿ ಬೌದ್ಧ ಧರ್ಮ ಬರುವುದಕ್ಕಿಂತಲೂ ಹಿಂದಿನಿಂದ ನಡೆದುಕೊಂಡುಬಂದ ಜಪಾನೀ ಮತ : ಷಿಂಟೋ ಮತ ; ಷಿಂಟೋ ಮತಾನುಯಾಯಿ. **Shíntoism** —ಚೋ— (ನಾ.); **Shíntoist** (ನಾ.)

Shíny. **Shine** ನೋಡಿ.

Ship ಷಿಪ್ (ನಾ.) (ಈ ಪದವನ್ನು ಸ್ತ್ರೀಲಿಂಗವಾಗಿ ಪರಿಗಣಿಸಿ ಇದಕ್ಕೆ she, her ಸ. ನಾ. ಗಳನ್ನು ಅನ್ವಯಿಸುವುದುಂಟು) ಹಡಗು, ಜಹಜು, ನಾವೆ, ನೌಕೆ [Battle-s. (Battle ನೋಡಿ). S. of the line ಯುದ್ಧ ನೌಕಾ ಪಂಕ್ತಿಯಲ್ಲಿ ಸೇರಲು ಯೋಗ್ಯವಾದ ದೊಡ್ಡ ಯುದ್ಧ ನೌಕೆ; ಯುದ್ಧ ಪಂಕ್ತಿ ನೌಕೆ (ಬಲವಾದ ಕವಚವೂ ಭಾರಿ ಫಿರಂಗಿಗಳೂ ಉಳ್ಳದ್ದು). Merchant-s. (Merchant ನೋಡಿ). Sailing-s. (Sail ನೋಡಿ). War-s. (War ನೋಡಿ). Sister s. ಮತ್ತೊಂದರ ಮಾದರಿಯಂತೆಯೆ ಕಟ್ಟಿದ ಹಡಗು : ತಂಗಿ ಹಡಗು, ಜೊತೆ ಹಡಗು. S. of the desert ಒಂಟೆ. About s. ಹಡಗಿನ ದಿಕ್ಕನ್ನು ಬದಲಾಯಿಸು. Pump-s. (Pump[1] ನೋಡಿ). Take s. (ಪ್ರಯಾಣಕ್ಕಾಗಿ) ಹಡಗು ಹತ್ತು. On board s. ಹಡಗಿನಲ್ಲಿ ; ಹಡಗು ಹತ್ತಿ. When my s. comes home ನನಗೆ ಐಶ್ವರ್ಯ ಬಂದಾಗ, ಅದೃಷ್ಟ ಕುಲಾಯಿಸಿದಾಗ (ದೇಶ ವಿದೇಶ ವ್ಯಾಪಾರ ಪದ್ಧತಿಯಿಂದ ಬಂದ ಉಪಮಾನ). On shipboard ಹಡಗಿನಲ್ಲಿ, ಹಡಗು ಹತ್ತಿ]. ದೋಣಿ (ಮು., ಪಂದ್ಯದ, ಜೂಜಿನ, —ದೋಣಿ). **S. biscuit** ಹಡಗಿನಲ್ಲಿ ಉಪಯೋಗಿಸುವುದಕ್ಕಾಗಿ ಬಹು ಕಾಲ ತಡೆಯುವಂತೆ ಮಾಡಿದ ಒರಟು ಗಟ್ಟಿ ಬಿಸ್ಕತ್ತು : ಹಡಗು ಬಿಸ್ಕತ್ತು. **S.-breaker** ಹಳೆಯ ಹಡಗುಗಳನ್ನು ಕೊಂಡು ಅವನ್ನು ಒಡೆದು ಮಾರುವವನು : ಹಡಗು ಮುರುಕು ವ್ಯಾಪಾರಿ; ಹಡಗು ಒಡಕ. **S.-broker** ರೇವಿನಲ್ಲಿ ಹಡಗಿನ ಮಾಲೀಕನ ಪರವಾಗಿ ಕಾರಬಾರನ್ನು ನಡಸುವವನು : ಹಡಗಿನ (ರೇವು) ಕಾರಬಾರಿ ; ಹಡಗು ವ್ಯಾಪಾರದ ದಳ್ಳಾಳಿ ; ಹಡಗು ವ್ಯಾಪಾರಿ ; ನೌಕಾ ವಿಮೆಯ ದಳ್ಳಾಳಿ. **S.-builder** ಹಡಗು ಕಟ್ಟುವವನು ; ನೌಕಾ ಶಿಲ್ಪಿ. **S.-building** (ನಾ.) ; **S.-canal** ಹಡಗುಗಳು ದೇಶದ ಒಳ ಭಾಗಕ್ಕೆ ಹೋಗಲು ಮಾಡಿರುವ ಕಾಲುವೆ : ಹಡಗು ಕಾಲುವೆ. **S.-chandler(y)** (Chandler ನೋಡಿ). **S.-fever** ಟೈಫಸ್ ಜ್ವರ (=Typhus). **S.-letter** ಟಪಾಲು ಹಡಗಲ್ಲದ ಇತರ ಹಡಗಿನಲ್ಲಿ ಸಾಗಿಸಿದ ಕಾಗದ. **Shipload** ಒಂದು ಹಡಗು ಭರ್ತಿ. **Shipmate** ತನ್ನೊಡನೆ ಒಂದೇ ಹಡಗಿನಲ್ಲಿ ಕೆಲಸಮಾಡುತ್ತಿರುವವನು: (ಹಡಗಿನ) ಜೊತೆ ಕೆಲಸಗಾರ (ಮು., ಜೊತೆ ನಾವಿಕ). **S.-money** (ಚರಿತ್ರೆ) ಯುದ್ಧಕಾಲದಲ್ಲಿ ದೇಶ ರಕ್ಷಣೆಗೆ ಹಡಗುಗಳನ್ನು ಒದಗಿಸುವುದಕ್ಕಾಗಿ ತೀರಪ್ರದೇಶದ ಜನರಮೇಲೆ ಹಾಕುತ್ತಿದ್ದ ಹಿಂದಿನ ಕಾಲದ ಒಂದು ತೆರಿಗೆ : ಹಡಗು ತೆರಿಗೆ. **Shipowner** ಹಡಗು —ಮಾಲೀಕ, ಒಡೆಯ; ಹಡಗು ಪಾಲುಗಾರ. **S.-railway** (ಒಂದು ಜಲಭಾಗದಿಂದ ಮತ್ತೊಂದು ಜಲಭಾಗಕ್ಕೆ ಭೂಮಾರ್ಗವಾಗಿ) ಹಡಗನ್ನು ಸಾಗಿಸುವ ರೈಲು : ಹಡಗು ರೈಲು. **S.-rigged** ಮೂರು ಕೂವೆಗಳಮೇಲೂ ಚೌಕನೆಯ ಹಾಯಿಗಳುಳ್ಳ. **S.'s articles** ನಾವಿಕರು ಯಾವ ಷರತ್ತುಗಳಮೇಲೆ ಹಡಗಿನಲ್ಲಿ ಕೆಲಸಮಾಡಲು ಒಪ್ಪಿಕೊಂಡಿರುವರೊ ಆ ಷರತ್ತುಗಳು : ಹಡಗು ನೌಕರಿಯ —ಷರತ್ತುಗಳು, ಕರಾರುಗಳು. **S.'s company** (Company ನೋಡಿ). **S.'s corporal** (Corporal ನೋಡಿ). **Shípshape** (ಕ್ರಿ. ವಿ., ಗು.) ಸರಿಯಾದ ಸ್ಥಿತಿಯಲ್ಲಿ(ಯ), ಅಚ್ಚುಕಟ್ಟಾಗಿ(ರುವ), ಸುವ್ಯವಸ್ಥಿತ(ವಾಗಿ) (S. and Bristol fashion ಅಚ್ಚುಕಟ್ಟಾಗಿ, ವ್ಯವಸ್ಥಿತವಾಗಿ). **S.'s husband** ಹಡಗಿನ (ರೇವು) ಕಾರಬಾರಿ. **S.'s papers** ಹಡಗಿನ ಕಾಗದಪತ್ರಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕಾನೂನು ಪ್ರಕಾರ ಇರಿಸಿಕೊಳ್ಳಬೇಕಾದ ಸ್ವಾಮ್ಯಪತ್ರ, ರಹದಾರಿಪತ್ರ, ಕರಾಸಿಪಟ್ಟಿ, ಬಾಡಿಗೆ ಕರಾರು ಪತ್ರ, ದಿನಚರಿ, ಮೊ. ವು). **S.-way** ಹಡಗು ಕಟ್ಟುವುದಕ್ಕೂ ಸಮುದ್ರದಲ್ಲಿ ಅದನ್ನು ತೇಲಬಿಡುವುದಕ್ಕೂ ಆಸರೆಯಾದ ಇಳಿಜಾರು ಕಟ್ಟಡ: ಹಡಗು ಜಾರುವೆ; ಹಡಗು ಕಾಲುವೆ. **S.-worm** ಹಡಗಿನ ಮರಗಳನ್ನು ಕೊರೆಯುವ ಒಂದು ಮೃದ್ವಂಗಿ: ಹಡಗು (ಕೊರೆಯುವ) ಹುಳು. **Shípwreck** (ನಾ., ಕ್ರಿ.) (ಬಿರುಗಾಳಿಗೆ ಸಿಕ್ಕುವುದು, ತೂತು ಬೀಳುವುದು, ನೆಲ ಹತ್ತುವುದು, ಬಂಡೆಗೆ ತಗುಲುವುದು, ಮೊ. ಕಾರಣಗಳಿಂದ) ಹಡಗು ಒಡೆದುಹೋಗುವುದು; ಹಡಗು —ನಾಶ, ಒಡೆತ; (ರೂಪ.) ನಾಶ, ಹಾನಿ, ಧ್ವಂಸ [Make s.w. ಹಾಳಾಗು. Make *or* suffer s.w. of one's hopes (ಒಬ್ಬನ) ಆಸೆಗಳೆಲ್ಲ ಧ್ವಂಸವಾಗಿ ಹೋಗು]. (ಕ್ರಿ.) (ಒಬ್ಬನನ್ನು, ಅವನ ಆಸೆಗಳನ್ನು) ನಾಶಮಾಡು, ಧ್ವಂಸಮಾಡು, ಹಾಳಾಗಿಸು (ಹಡಗಿನ ವಿಷಯದಲ್ಲಿ ವಿರ. ಪ್ರ.); ನಾಶ, ಧ್ವಂಸ, —ಆಗು, ಹೊಂದು; ಹಾಳಾಗಿ ಹೋಗು. **S.-wright** ಹಡಗು ಕಟ್ಟಡಗಾರ; ನೌಕಾಶಿಲ್ಪಿ. **S.-yard** ಹಡಗನ್ನು ಕಟ್ಟುವ, ದುರಸ್ತುಮಾಡುವ, ಸ್ಥಳ: ಹಡಗಿನ ಅಂಗಳ; ಹಡಗು ಬಯಲು. **Shípless** (ಗು.)

Ship (ಕ್ರಿ.) (ಸರಕು, ಪ್ರಯಾಣಿಕರು, ಕರಾಸಿಗಳು, ಮೊ. ನ್ನು) ಹಡಗಿನಲ್ಲಿ ಸಾಗಿಸು, ತೆಗೆದುಕೊಂಡುಹೋಗು, ಕಳುಹಿಸು, ತುಂಬು; (ವಾಣಿಜ್ಯ) (ಸರಕನ್ನು ಭೂಮಾರ್ಗವಾಗಿ ಅಥವಾ ಜಲಮಾರ್ಗವಾಗಿ ರವಾನಿಸಲು) ರವಾನೆದಾರನಿಗೆ ಕಳುಹಿಸಿಕೊಡು. (ಕೂವೆ, ಚುಕ್ಕಾಣಿ, ಮೊ. ನ್ನು) ಹಡಗಿಗೆ ಜೋಡಿಸು, ಹಡಗಿನಲ್ಲಿಡು (S. oars ಹುಟ್ಟುಗಳನ್ನು ತಿರುಗಣಿಯಿಂದ ತೆಗೆದು ದೋಣಿಯೊಳಗೆ ಇಡು). ಹಡಗು ಹತ್ತು; ಹಡಗಿನ ಕೆಲಸಕ್ಕೆ, ನಾವಿಕನಾಗಿ, —ಸೇರಿಕೊ. S. a sea (ಹಡಗಿನ ಅಥವಾ ದೋಣಿಯ ವಿಷಯದಲ್ಲಿ) ಅಲೆ ಬಂದು ನೀರು ತುಂಬಿಕೊ. **Shípment** (ನಾ.) ಸರಕನ್ನು ಹಡಗಿಗೆ ಭರ್ತಿಮಾಡುವುದು, ತುಂಬುವುದು; ಹೀಗೆ ತುಂಬಿದ —ಹಡಗು ಸರಕು, ರವಾನೆ ಸರಕು. **Shípper** (ನಾ.) ಹಡಗುಗಳ ಮೂಲಕ ಸರಕನ್ನು ಕಳುಹಿಸುವ ಅಥವಾ ತರಿಸಿಕೊಳ್ಳುವ ವರ್ತಕ, ಮೊ. ರು: ಹಡಗು ಸಾಗಣೆ ವ್ಯಾಪಾರಿ. **Shípping** (ನಾ.) (ಕ್ರಿಯಾರ್ಥಗಳಲ್ಲಿ); (ಮು., ಒಂದು ದೇಶ, ಬಂದರು, ಮೊ. ಕ್ಕೆ ಸೇರಿದ) ಒಟ್ಟು ಹಡಗುಗಳು, ನೌಕೆಗಳು. S.-agent (ಬಂದರು, ಮೊ. ಗಳಲ್ಲಿರುವ) ಹಡಗು (ಸಂಸ್ಥೆಯ) ನಿಯೋಗಿ, ಹಡಗು ಕಾರಬಾರಿ. S.-articles ನೌಕಾಪತಿಗೂ ನಾವಿಕರಿಗೂ ಸಂಬಳ, ಮೊ. ವಿಷಯಗಳನ್ನು ಕುರಿತು ಆದ ಕರಾರುಗಳು: ಹಡಗು ನೌಕರಿಯ ಕರಾರುಗಳು (=Ship's articles). S.-bill ರವಾನಿಸಿದ ಹಡಗು ಸರಕಿನ ಪಟ್ಟಿ: ರವಾನೆ ಪಟ್ಟಿ. S.-master ಹಡಗು ನೌಕರಿಯ ಕರಾರು ಪತ್ರಕ್ಕೆ ರುಜು ಮಾಡಿಸುವುದು, ನಾವಿಕರನ್ನು ವಜಾಮಾಡುವುದು, ಮೊ. ಕೆಲಸಗಳ ಪ್ರತ್ಯಕ್ಷ ಮೇಲ್ವಿಚಾರಣೆ ನೋಡಿಕೊಳ್ಳುವ ಅಧಿಕಾರಿ: ಹಡಗು ಸಿಬ್ಬಂದಿಯ ಯಜಮಾನ. S.-office ಹಡಗು ಕಾರಬಾರಿಯ, ಹಡಗು ವ್ಯಾಪಾರದ ದಳ್ಳಾಳಿಯ, ಹಡಗು ಸಿಬ್ಬಂದಿಯ ಯಜಮಾನನ, —ಕಚೇರಿ.

-ship —ಷಿಪ್ (ಉ. ಪ್ರ.) ಗುಣವಾಚಕಗಳಿಗೂ ನಾಮವಾಚಕಗಳಿಗೂ ಸೇರಿಸಿ ಭಾವನಾಮಗಳನ್ನು ಮಾಡುವ, ಸ್ಥಿತಿ, ಸ್ಥಾನ, ಅಧಿಕಾರ, ಮೊ. ನ್ನು ಸೂಚಿಸುವ ಪ್ರತ್ಯಯ: —ತ್ವ, —ತೆ, —ತನ, —ಮೆ, ಕೆ, —ಇಕೆ, —ಗಿರಿ (ಉದಾ., Hardship, apprenticeship, membership)

Shire ಷೈ(ಅ)ರ್ (ಉ. ಪ್ರ. ವಾದಾಗ ಉಚ್ಚಾರ: —ಷರ್) (ನಾ.) ಇಂಗ್ಲೆಂಡಿನಲ್ಲಿ ಒಂದು ಜಿಲ್ಲಾ ವಿಭಾಗ; ಕೌಂಟಿ [ಈಗ ಮು., ಜಿಲ್ಲಾ ಹೆಸರುಗಳಲ್ಲಿ ಮಾತ್ರ ಪ್ರ.: ಉದಾ., Hampshire; Devonshire *or* Devon. (ಬ. ವ. ದಲ್ಲಿ) The shires ಸಾ., ಷರ್ ಎಂದು ಅಂತ್ಯವಾಗುವ ಹೆಸರಿನ ಜಿಲ್ಲೆಗಳು: ಷೈರ್ ಪ್ರಾಂತಗಳು; (ಶಿಥಿಲವಾಗಿ) ಮಧ್ಯ ರಾಷ್ಟ್ರದ ಕೌಂಟಿಗಳು; ಬೇಟೆಯ ಜಿಲ್ಲೆಗಳು (Leicestershire, Rutlandshire, Northamptonshire)]. S.-bred horse, s.-horse (ಮು., ಲಿಂಕನ್‌ಷೈರ್ ಮತ್ತು ಕೇಂಬ್ರಿಡ್ಜ್‌ಷೈರ್ ಪ್ರಾಂತಗಳಲ್ಲಿ ಬೆಳಸುವ) ಅತ್ಯಂತ ದೊಡ್ಡ ಜಾತಿಯ, ಭಾರವೆಳೆಯುವ ಕುದುರೆ: ಷೈರ್ ಕುದುರೆ. Knight of the s. (Knight ನೋಡಿ)

Shirk ಷರ್ಕ್ (ಕ್ರಿ. ಸಕ., ನಾ.) (ಕರ್ತವ್ಯ, ಹೊಣೆಗಾರಿಕೆ, ಮೊ. ಗಳಿಂದ) ನ್ಯಾಯವಿಲ್ಲದೆ, ನೀಚತನದಿಂದ, —ತಪ್ಪಿಸಿಕೊ, ಹೊರಳಿಕೊ; ಸ್ವಾರ್ಥತೆಯಿಂದ ಹಿಂದೆಗೆ; ಕಳ್ಳಬೀಳು. (ನಾ.) (ಹೊಣೆ, ಮೊ. ಗಳಿಂದ) ಜಾರಿಕೊಳ್ಳುವವನು; ಮೈಗಳ್ಳ; ಕೆಲಸಗಳ್ಳ. **Shírker** (ನಾ.)

Shir(r) ಷರ್ (ನಾ., ಕ್ರಿ. ಸಕ.) (ಅಮೆ. ಸಂ.) (ಸ್ಥಿತಿಸ್ಥಾಪಕಶಕ್ತಿ ಕೊಡುವುದಕ್ಕಾಗಿ) ಬಟ್ಟೆಯೊಳಕ್ಕೆ ಹೆಣೆದ ರಬ್ಬರ್ ಹಿಗ್ಗುದಾರ; ಹಿಗ್ಗುದಾರ ಹೆಣೆದ ಬಟ್ಟೆ. ಬಟ್ಟೆಯ —ನಿರಿ, ನೆರಿಗೆ. (ಕ್ರಿ.) (ಹಿಗ್ಗುದಾರ ಹೆಣೆದು) ಬಟ್ಟೆಯನ್ನು ನಿರಿ(ಗೆ) ಹಿಡಿ. ಬಟ್ಟೆಗೆ ಹಿಗ್ಗುದಾರ ಹೆಣೆ(ದು ಸ್ಥಿತಿಸ್ಥಾಪಕ ಗುಣ ಕೊಡು). **Shírring** (ನಾ.)

Shirt ಷರ್ಟ್ (ನಾ.) ಕತ್ತಿನಿಂದ ತೊಡೆಯವರೆಗೆ ಬರುವ, ತೋಳುಳ್ಳ, ಮಣಿಕಟ್ಟು ಪಟ್ಟಿಯುಳ್ಳ, ಹತ್ತಿ, ಉಣ್ಣೆ, ರೇಷ್ಮೆ, ಮೊ. ಬಟ್ಟೆಗಳಿಂದ ಮಾಡಿದ ಗಂಡಸಿನ ಒಳ ಅಂಗಿ: ಷರಟು [Night-s. (Night ನೋಡಿ). Stripped to the s., in one's s.-sleeves ಅಂಗಿಯಿಲ್ಲದೆ, ಅಂಗಿ ನಡುವಂಗಿಗಳಿಲ್ಲದೆ; ಷರಟು ಮಾತ್ರ ತೊಟ್ಟು. Near is my s., but nearer is my skin ಎಲ್ಲಕ್ಕಿಂತ ಮೊದಲು ಸ್ವಾರ್ಥ; ಅಪ್ಪರ ಹಿತಕ್ಕೂ ಮೊದಲು ತನ್ನ ಹಿತ. Keep one's s. on (ಅಸಂ.) ತಾಳ್ಮೆಗೆಡದಿರು, ಶಾಂತವಾಗಿರು. Get one's s. off (ಅಸಂ.) ರೇಗಿಸು, ಕೆರಳಿಸು. Put one's s. on, upon (ಅಸಂ.) ಇದ್ದುಬದ್ದುದನ್ನೆಲ್ಲ (ಪಣ) ಒಡ್ಡಿಬಿಡು. Give one a wet s. ಬೆವರಿಳಿಯುವಂತೆ ದುಡಿಸು]. ಗಡುಸು ಕೊರಲಪಟ್ಟಿಯೂ ಮಣಿಕಟ್ಟು ಪಟ್ಟಿಯೂ ಉಳ್ಳ, ಹೆಂಗಸಿನ ಕುಪ್ಪಸ; ಹೆಂಗಸಿನ ಷರಟು. S.-front (ನಾ., ಗಂಜಿಹಾಕಿ ಗಡುಸು ಮಾಡಿದ) ಷರಟಿನ ಎದೆ(ಯ ಭಾಗ), ಮುಂಭಾಗ (S.-f. wicket ಒಂದೇ ಸಮನಾದ, ನಯವಾದ, ಭರ್ಜರಿ ಕ್ರಿಕೆಟ್ ಕಳ); ಷರಟಿನ ತೋಳ್ಕೆಯ ಮುಂಭಾಗ. (-)**shírted** (ಗು.); **Shírtless** (ಗು.); **Shírting** (ನಾ.) ಷರಟು ಬಟ್ಟೆ. **Shírty** (ಗು.) (ಅಸಂ.) ರೇಗಿದ, ಕೋಪಗೊಂಡ, ಕ್ರುದ್ಧ.

Shit ಷಿಟ್ (ಕ್ರಿ. ಅಕ., ನಾ.) ಮಲವಿಸರ್ಜನೆ ಮಾಡು. (ನಾ.) ಹೇಲು, ಮಲ, ಅಮೇಧ್ಯ (ಮನುಷ್ಯನಿಗೆ ಬೈಗುಳದ ಮಾತಾಗಿ ಸಹ ಪ್ರ.)

Shíver[1] ಷಿವರ್ (ಕ್ರಿ. ಅಕ., ನಾ.) (ಚಳಿಯಿಂದ) ನಡುಗು, ಅದಿರು, ಕಂಪಿಸು. (ನಾ.) (ಚಳಿಯ) ನಡುಕ, ಕಂಪನ [(ಅನೇಕ ವೇಳೆ ಬ. ವ.) Gives me the shivers ಮೈ ನಡುಗಿಸುತ್ತದೆ, ನಡುಕ ಬರಿಸುತ್ತದೆ]. Shivering-fit (ಚಳಿಜ್ವರದಲ್ಲಿಯಂಥ) ನಡುಕ(ದ ಕೆರಳು), ಚಳಿ(ಯ ಹೊಡೆತ). **Shíveringly** (ಕ್ರಿ. ವಿ.); **Shívery** (ಗು.) ನಡುಗುವ, ನಡುಗಿಸುವ, ನಡುಕದ.

Shíver[2] ಷಿವರ್ (ನಾ., ಕ್ರಿ.) (ಒಂದು ವಸ್ತು, ಕೆಳಗೆ ಬಿದ್ದು ಅಥವಾ ಪೆಟ್ಟು ತಿಂದು ಚೂರು ಚೂರಾದ್ದರಲ್ಲಿ) ಒಂದು ಚೂರು, ತುಂಡು (ಸಾ., ಬ. ವ. ದಲ್ಲಿ) [In shivers ಚೂರು ಚೂರಾಗಿ (ಒಡೆದುಹೋಗಿ)]. (ಕ್ರಿ.) ಒಡೆದು ಚೂರು ಚೂರು —ಆಗು, ಮಾಡು; [S. my timbers (ನಾವಿಕರ ಆಣೆಯ ಮಾತು)]

Shoal[1] ಷೋಲ್ (ಗು., ನಾ., ಕ್ರಿ. ಅಕ.) ತೆಟ್ಟೆಯಾದ, ಆಳವಿಲ್ಲದ, ಗಾಧ (ನೀರಿನ ವಿಷಯದಲ್ಲಿ ವಾಚ್ಯಾರ್ಥದಲ್ಲಿ ಮಾತ್ರ ಪ್ರ.). (ನಾ.) ಆಳವಿಲ್ಲದ ಸ್ಥಳ(ದಲ್ಲಿ ಕಾಣಿಸುವ ಮರಳು ದಿಬ್ಬ); (ರೂಪ., ಸಾ., ಬ. ವ. ದಲ್ಲಿ) ಅಡಗಿಕೊಂಡಿರುವ, ಕಣ್ಣಿಗೆ ಕಾಣಿಸದ, —ಅಪಾಯಗಳು, ಅಡ್ಡಿ ಆತಂಕಗಳು. (ಕ್ರಿ.) ತೆಟ್ಟೆಯಾಗು(ತ್ತ ಹೋಗು); ಗಾಧವಾಗು(ತ್ತ ಹೋಗು). **Shoály** (ಗು.): **Shoáliness** (ನಾ.)

Shoal[2] ಷೋಲ್ (ನಾ., ಕ್ರಿ. ಅಕ.) (ಮು., ಒಟ್ಟಿಗೆ ಈಜಿಕೊಂಡು ಹೋಗುತ್ತಿರುವ ಮೀನುಗಳ) ದೊಡ್ಡ ತಂಡ, ಗುಂಪು, ಒಟ್ಟಿಲು (=School[2])

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(Shoals of people ಗುಂಪು ಗುಂಪು ಜನ. Gets letters in shoals ತಂಡ ತಂಡವಾಗಿ, ರಾಶಿಗಟ್ಟಲೆ, —ಕಾಗದಗಳು ಬರುತ್ತವೆ). (ಕ್ರಿ.) (ಮೀನುಗಳ ವಿಷಯದಲ್ಲಿ) ಗುಂಪು ಕಟ್ಟು, ಹಿಂಡು ಹಿಂಡಾಗಿ ಈಜು.

Shock[1] (ನಾ.) ರಭಸದ ಹೊಡೆತ; ಸಂಘಟ್ಟನೆ; ಅಘಾತ; ಧಕ್ಕೆ [Three shocks of earthquake were felt ಭೂಕಂಪದ ಮೂರು ಧಕ್ಕೆಗಳು ತಗುಲಿದವು, ಅನುಭವಕ್ಕೆ ಬಂದುವು. S. tactics (ಸೈನಿಕ) ರಾವುತರ ರಭಸದ ದಾಳಿಯಿಂದ ಶತ್ರುವ್ಯೂಹವನ್ನು ಮುರಿಯುವ ಧಕ್ಕೆ ಯುದ್ಧ ತಂತ್ರಗಳು; ಧಕ್ಕೆ ದಾಳಿ ತಂತ್ರಗಳು. S. troops ಹಿಂದಿನ ಮಹಾಯುದ್ಧದಲ್ಲಿ ಜರ್ಮನರು ಉಪಯೋಗಿಸಿದ ವಿಶೇಷ ಸೈನ್ಯದಳ: ಧಕ್ಕೆ ದಳ]. (ಹಠಾತ್ತಾಗಿ ದೈಹಿಕ ಮತ್ತು ಮಾನಸಿಕ ಸ್ವಸ್ಥತೆಯನ್ನು ಪಲ್ಲಟ ಗೊಳಿಸುವ) ಅತ್ಯಂತ ಗಾಬರಿ, ತಲ್ಲಣ, ಗುಂಡಿಗೆ ಒಡೆತ [Was a great s. ಬಹಳ ಗಾಬರಿ ಮಾಡಿತು, ತಲ್ಲಣಗೊಳಿಸಿತು. Electric s. (Electricity ಕೆಳಗೆ Electric ನೋಡಿ)]. (ರೋಗ ನಿದಾನ) ಆಕಸ್ಮಿಕದ ನೋವಿನಿಂದಾಗಲಿ ಭಾವೋದ್ರೇಕದಿಂದಾಗಲಿ ಆದ ನರ ಗಳ ಅತಿ ಪ್ರಚೋದನೆಯ ಪರಿಣಾಮವಾಗಿ ಸಂಭವಿಸುವ ಸುಸ್ತು; (ನರಗಳ) ಧಕ್ಕೆ; ಸುಸ್ತುಧಕ್ಕೆ (Died of s. ಸುಸ್ತುಧಕ್ಕೆಯಿಂದ ಸತ್ತುಹೋದನು. The s. is more dangerous than the loss of blood ರಕ್ತ ನಷ್ಟಕ್ಕಿಂತಲೂ ಸುಸ್ತುಧಕ್ಕೆ ಹೆಚ್ಚು ಅಪಾಯಕರ ವಾದದ್ದು). (ಗೌರವ, ಘನತೆ, ಸ್ಥಿರತೆ, ನಂಬಿಕೆ, ಮೊ. ಗಳಿಗೆ ತಗುಲುವ) ಜೋರು ಪೆಟ್ಟು, ಧಕ್ಕೆ.

Shock (ಕ್ರಿ.) (ಕೋಪ, ಭಯ, ಮೊ. ಗಳಿಂದ) ಎದೆ —ಹಾರಿಸು, ಹಾರು; ಗುಂಡಿಗೆ —ಒಡೆ, ಒಡಸು; ಧಕ್ಕೆ —ತಗುಲು, ಉಂಟು ಮಾಡು; ತಲ್ಲಣಿಸು, ತಲ್ಲಣಗೊಳಿಸು; ತೀರ ಅಸಹ್ಯ, ಅಸಮಾಧಾನ, —ಹುಟ್ಟು, ಹುಟ್ಟಿಸು (His violence shocked his associates. Was shocked at, by, to, hear, etc.). (ಕಾವ್ಯ) ರಭಸದಿಂದ ಡಿಕ್ಕಿ ಹೊಡೆ, ಸಂಘಟ್ಟಿಸು. **Shócker** (ನಾ.) (ಬಳ. ಮಾ.) ಅತಿಕೆಟ್ಟ ಮಾದರಿ, ಅಸಹ್ಯ ಹುಟ್ಟಿಸುವಂಥದು; ಅಗ್ಗದ ಉದ್ರೇಕ ಕಾದಂಬರಿ (Shilling s.). **Shócking** (ಗು., ಕ್ರಿ. ವಿ.); Shocking bad (ಬಳ. ಮಾ.) ಅತಿ ಕೆಟ್ಟ. **Shóckingly** (ಕ್ರಿ. ವಿ.); **Shóckingness** (ನಾ.)

Shock[2] ಷಾಕ್ (ನಾ.) ಬಾಚಿಲ್ಲದ ದೊರಗು ಕೂದಲು; ಬೊಂತೆ, ಜಡೆ ಗಟ್ಟಿದ, —ಕೂದಲು (S. head ಬೊಂತೆಗಟ್ಟಿದ ತಲೆ). **Shock-headed** (ಗು.)

Shock[3] ಷಾಕ್ (ನಾ., ಕ್ರಿ. ಸಕ.) ಕೊಯ್ದು ಒಣಗುವುದಕ್ಕಾಗಿ ಹೊಲದಲ್ಲಿಯೇ ತೆನೆ ಮೇಲು ಮಾಡಿ, ಸಾ., ಹನ್ನೆರಡು ಹನ್ನೆರಡು ಕಂತೆಗಳಂತೆ, ನಿಲ್ಲಿಸಿದ ಪೈರು ಕಟ್ಟುಗಳ ಒಟ್ಟಿಲು: ಕಂತೆಯೊಟ್ಟಿಲು; ನಿಲ್ಲೊಟ್ಟಿಲು. (ಕ್ರಿ.) ನಿಲ್ಲೊಟ್ಟಿಲು ಹಾಕು.

Shócker. Shock[1] ನೋಡಿ.

Shod. Shoe ಧಾತುವಿನ ಭೂತ. ಮತ್ತು ಭೂ. ಕೃ.

Shóddy ಷಾಡಿ (ನಾ., ಗು.) ಹರಿದು ಹಿಂಜಿದ ಹಳೆಯ (ಉಣ್ಣೆಯ) ಬಟ್ಟೆ, ಮೊ. ಗಳಿಂದ ಮಾಡಿದ ದಾರ, ನೂಲು; ಇಂಥ ನೂಲು ಸೇರಿಸಿ ಮಾಡಿದ ಕೀಳು ತೆರನ ಒರಟು ಬಟ್ಟೆ. (ಉತ್ತಮ ತೆರದ್ದೆಂದು ತೋರ್ಪಡಿಸಿಕೊಳ್ಳುವ) ಕೀಳು, ಕಳಪೆ, —ವಸ್ತು, ಮನುಷ್ಯ. (ಗು.) ಕೆಲಸಕ್ಕೆ ಬಾರದ, ಹುರುಳಿಲ್ಲದ, ನಿಕೃಷ್ಟ; ಖೋಟಾ, ಕೃತಕ.

Shoe ಷೂ (ನಾ.) ಪಾದಗಳನ್ನು ಪೂರ್ತಿಯಾಗಿ ಮುಚ್ಚುವ, ಸಾ., ಕಾಲಗೆಣ್ಣಿನ ವರೆಗೆ ಮಾತ್ರ ಬರುವ, ಪಾದರಕ್ಷೆ; ಜೋಡು, ಮೆಟ್ಟು, ಪಾಪಾಸು [That's another pair of shoes ಅದು ಬೇರೆಯ —ವಿಷಯ, ವಿಚಾರ. Dead men's shoes ಆಸೆಯಿಟ್ಟುಕೊಂಡಿರುವ ಉತ್ತರಾಧಿಕಾರಿ ನಿರೀಕ್ಷಿಸುತ್ತಿರುವ, ಸದ್ಯದ ಅನುಭೋಗಿ ಸತ್ತಮೇಲೆ ಬರಲಿರುವ ಆಸ್ತಿ, ಪದವಿ. Be in (another person's) shoes ಇನ್ನೊಬ್ಬನ ಸ್ಥಿತಿಯಲ್ಲಿ (ತಾನು) ಇರು. Die in one's shoes (Die[2] ನೋಡಿ). Where the s. pinches (Pinch ನೋಡಿ). Put the s. on the right foot ದೋಷ, ಮೊ. ನ್ನು ಸರಿಯಾದವನ ಮೇಲೆಯೆ, ತಪ್ಪಿತಸ್ಥನ ಮೇಲೆಯೆ, —ಹೊರಿಸು. Step into the shoes of (another person) ತೆರಪಾದ (ಮತ್ತೊಬ್ಬನ) ಸ್ಥಾನಕ್ಕೆ ಹೋಗು, —ವನ್ನು ತೆಗೆದುಕೊ. Old s. ಕೆಲಸಕ್ಕೆ ಬಾರದ್ದು, ಹಳೆಯ ಜೋಡು. Over (the) shoes (ಒಂದರಲ್ಲಿ) ಮಗ್ನನಾಗಿ, ತೀರ ಮುಳುಗಿ]. (ಕುದುರೆ, ಮೊ. ಗಳ) ಲಾಳ, ಹಲ್ಲೆ; (ಆಕಾರದಲ್ಲಿಯಾಗಲಿ ಉಪಯೋಗ ದಲ್ಲಿಯಾಗಲಿ) ಲಾಳದಂಥ ಅಥವಾ ಜೋಡಿನಂಥ ವಸ್ತು: (ಬಳೆ, ಅಣಸು, ಮೊ.) ತಳರಕ್ಷೆ (ಉದಾ., Wheel-drag, socket, ferrule, mast-step). **Shoéblack** ಜೀವನಕ್ಕಾಗಿ (ದಾರಿಗರ) ಜೋಡುಗಳಿಗೆ ಬಣ್ಣ ಹಾಕುವವನು. **S.-buckle** ಜೋಡಿನ ಚಿಲುಕು ಕಟ್ಟು (ಈಗ ಸಾ., ಅಲಂಕಾರವಾಗಿ ಬಳಸುವಂಥವು). **Shoéhorn** ಕಾಲಿಗೆ ಜೋಡು ಹಾಕಿಕೊಳ್ಳಲು ಅನುಕೂಲಿಸುವ ಕೊಂಬು, ಲೋಹ, ಮೊ. ಗಳಿಂದ ಮಾಡಿದ ಸಲಕರಣೆ: ಜೋಡು ಜಾರಿಗೆ. **S.-lace, -string** ಜೋಡು ಕಟ್ಟುವ ದಾರ; ಜೋಡು ದಾರ. **S.-latchet** (ಬೈಬಲ್ ಪ್ರ.) ಜೋಡಿನ ಬಂಧಿನಿ, ಬಿಗಿಕಟ್ಟು. **S.-leather** ಜೋಡು ಮಾಡುವ ಚರ್ಮ, ಹದಮಾಡಿದ ಚಕ್ಕಳ; ಜೋಡುಗಳು (As good a man as ever trod s.-l. ಬಾಳಿ ಬದುಕಿದ ಯಾರಿಗಿಂತಲೂ ಗುಣದಲ್ಲಿ ಕಡಮೆ ಅಲ್ಲದವನು). **S.-lift** = Shoehorn. **S.-maker** ಜೋಡು ಹೊಲಿಯುವವನು; ಮೋಚಿ, ಚಮ್ಮಾರ. **Shoéless** (ಗು.)

Shoe (ಕ್ರಿ. ಸಕ., ಭೂತ., ಭೂ. ಕೃ. Shod; ವರ್ತಮಾನ ಕೃ. Shoeing) ಜೋಡು —ಹಾಕು, ಹಾಕಿಕೊ; ಲಾಳ ಹೊಡೆ; ತಳರಕ್ಷೆ ಹಾಕು; ಬಳೆ, ಅಣಸು, ಮೊ. ನ್ನು ತೊಡಿಸು (Pole shod with iron)

Shógun ಷೋಗುನ್ (ನಾ.) (ಚರಿತ್ರೆ) ಜಪಾನಿನ ಚಕ್ರವರ್ತಿಯ ಅಧಿಕಾರವನ್ನು ಆಕ್ರಮಿಸಿಕೊಂಡು ಹಲವು ಶತಮಾನಗಳ ಕಾಲ ವಾಸ್ತವಿಕವಾಗಿ ಪ್ರಭುತ್ವ ನಡೆಸಿದ, ವಂಶಪಾರಂಪರ್ಯವಾಗಿ ಆ ಅಧಿಕಾರವನ್ನು ಅನುಭವಿಸುತ್ತಿದ್ದ, ಮುಖ್ಯ ಸೈನ್ಯಾಧಿಪತಿ: ಷೋಗುನ್ (ಕ್ರಿ. ಶ. ೧೮೬೭ರಲ್ಲಿ ಈ ಅಧಿಕಾರಸ್ಥಾನವನ್ನು ತೆಗೆದು ಹಾಕಲಾಯಿತು). **Shógunate** ಷೋಗುನ್ (ನಾ.) —ಅಧಿಕಾರ, ಪದವಿ.

Shone. Shine ಧಾತುವಿನ ಭೂತ. ಮತ್ತು ಭೂ. ಕೃ.

Shoo ಷೂ, ಷು (ಭಾವ. ಅವ್ಯ., ಕ್ರಿ.) ಹಕ್ಕಿ ಅಟ್ಟುವ, ಸೋವುವ, —ಶಬ್ದ (ಮಾಡು); 'ಉಷ್' (ಎನ್ನು); 'ಉಷ್' ಎಂದು ಓಡಿಸು (*Away* ಉಪ. ಜೊಡನೆ)

Shook[1]. Shake ಧಾತುವಿನ ಭೂತ.

Shook[2] ಷುಕ್ (ನಾ., ಕ್ರಿ. ಸಕ.) ಪೀಪಾಯಿಯಾಗಿ ಜೋಡಿಸಲು ಸಿದ್ಧವಾಗಿರುವ (ಪೀಪಾಯಿಯ) ಪಟ್ಟಿಗಳು ಮತ್ತು ಬಳೆಗಳು (ರವಾನೆಗೆ ಅನುಕೂಲಿಸುವಂತೆ, ಇವನ್ನು ಜೋಡಿಸದೆ ಹಾಗೆಯೆ ಕಟ್ಟು ಕಟ್ಟಿ ಇಟ್ಟಿರು ತ್ತಾರೆ). (ಕ್ರಿ.) ಪೀಪಾಯಿಯ ಪಟ್ಟಿಗಳನ್ನು ಕಂತೆ ಕಟ್ಟು.

Shoot ಷೂಟ್ (ಕ್ರಿ.; ಭೂತ., ಭೂ. ಕೃ. Shot ಷಾಟ್) ರಭಸವಾಗಿ, ಬಿರುಸಾಗಿ, ವೇಗವಾಗಿ, ರೊಯ್ಯನೆ, ಛಗ್ಗನೆ —ಏಳು, ನುಗ್ಗು, ಬರು, ಹೋಗು, ಓಡು, ಹಾರು, ಚಿಮ್ಮು (*Along, forth, out, up* ಮೊ. ಉಪ. ಜೊಡನೆ ಸಹ); ಮೊಳೆ, ಅಂಕುರಿಸು, ಚಿಗುರು, ಕೊನರು, ಕುಡಿಯೊಡೆ [Boat shot out from the creek ದೋಣಿ ಖಾರಿಯಿಂದ ಥಟ್ಟನೆ ಹೊರ ಹೊರಟಿತು, ಹೊರ ನುಗ್ಗಿತು. Shooting star (Star ನೋಡಿ). S. ahead (ಸ್ಪರ್ಧಿಗಳು, ಮೊ. ನ್ನು) ಥಟ್ಟನೆ ಮೀರಿಸಿ ಮುನ್ನುಗ್ಗು; ಅಗ್ರೇಸರನಾಗಿ ಬಾ. Tree shoots ಮರ ಮೊಗ್ಗು ಬಿಡುತ್ತದೆ, ಚಿಗುರುತ್ತದೆ. Flame shoots up ಜ್ವಾಲೆ ಮೇಲಕ್ಕೆ ಚಿಮ್ಮುತ್ತದೆ. Prices shot up ಬೆಲೆಗಳು ಥಟ್ಟನೆ ಏರಿಬಿಟ್ಟವು. Cricket-ball shoots ಕ್ರಿಕೆಟ್ ಚೆಂಡು (ನೆಲ ತಾಕಿ ಪುಟವೇರದೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೆಲಮಟ್ಟದಲ್ಲಿ ರೊಯ್ಯನೆ ಓಡುತ್ತದೆ. Child is shooting up ಮಗು ಎತ್ತರವಾಗಿ ಬೆಳೆಯುತ್ತಿದೆ. Shooting pain ಚುಚ್ಚುವ ನೋವು, ಇರಿತ, ಚಳುಕು. Tooth shoots ಹಲ್ಲು ಚಳುಕಾಗುತ್ತದೆ, ಚಳುಕು ಕೊಡುತ್ತದೆ]. ಥಟಕ್ಕನೆ, ಕಡಿದಾಗಿ, ನೆಟ್ಟನೆ, —ಹೊರಚಾಚಿಕೊ, ಚಾಚಿಕೊ (*Out* ಉಪ. ದೊಡನೆ) (Mountain-spur, cape, shoots out). ರಭಸವಾಗಿ, ವೇಗವಾಗಿ, —ಕಳುಹಿಸು, ಬಿಡು, ದೂಡು, ನೂಕು; ಎಸೆ, ಹಾರಿಸು, ಹೊಡೆ [S. rubbish (ಗಾಡಿಯಿಂದ, ಬುಟ್ಟಿಯಿಂದ) ಕುಪ್ಪೆಯನ್ನು, ಕಸವನ್ನು, —ಸರ್ರನೆ ಸುರಿ. Bow shoots arrow ಬಿಲ್ಲು ಬಾಣವನ್ನು ಎಸೆಯುತ್ತದೆ. Gun shoots shell ಫಿರಂಗಿ ಸಿಡಿಗುಂಡನ್ನು ಹಾರಿಸುತ್ತದೆ. Passengers were shot out of coach ಪ್ರಯಾಣಿಕರನ್ನು ಬಂಡಿ ಥಟ್ಟನೆ ಹೊರಕ್ಕೆ ಎಸೆಯಿತು. Sun shoots its rays ಸೂರ್ಯನು ಕಿರಣಗಳನ್ನು ಬೀರುತ್ತಾನೆ. S. out one's lips (ಬೈಬಲ್ ಪ್ರ.) ತಿರಸ್ಕಾರ ಸೂಚಕವಾಗಿ ತುಟಿ ಚಾಚು. S. one's linen ಮಣಿಕಟ್ಟು ಪಟ್ಟಿಯನ್ನು ಒದರಿ ಪ್ರದರ್ಶಿಸು. S. the cat (ಅಸಂ.) ವಾಂತಿಮಾಡು, ಕಕ್ಕು, ಕಾರು. S. fishing-net ಮೀನು ಬಲೆಯನ್ನು (ನದಿ, ಮೊ. ಗಳ ಮೇಲ್ಗೆ) ಬೀಸು, ಎಸೆ. S. bolt of door ಬಾಗಿಲಿನ— ಅಗುಳಿಯನ್ನು ಭದ್ರವಾಗಿ ಹಾಕು, ತಾಪಾಳು ಜಡಿ]. (ಗುಂಡು) ಹಾರಿಸು, ಹೊಡೆ; (ತೋಪು) ಉಡಾಯಿಸು; ಗುಂಡು ಹೊಡೆದು ಘಾತಿಸು, ಕೊಲ್ಲು; ಬಂದೂಕಿನಿಂದ ಬೇಟೆಯಾಡು, ಷಿಕಾರಿಮಾಡು; (ಬಂದೂಕು) ಹಾರು, ಹೊಡೆ [Fool's bolt is soon shot (Bolt[1] ನೋಡಿ). I'll be shot if —(ನಿಷೇಧ ಪ್ರತಿಜ್ಞೆಗಳಲ್ಲಿ) (—ರೆ) ನನ್ನನ್ನು ಗುಂಡು ಹೊಡೆದು ಕೊಲ್ಲಿ. Was shot for a spy ಗೂಢಚಾರನೆಂದು ಅವನನ್ನು ಗುಂಡು ಹೊಡೆದು ಕೊಂದರು. Had his arm shot off (ಗುಂಡಿನ ಹೊಡೆತ, ಮೊ. ಗಳಿಂದ) ಅವನ ತೋಳು ಕತ್ತರಿಸಿಹೋಯಿತು, ಹಾರಿಹೋಯಿತು. S. a match ಗುಂಡು ಹಾರಿಸುವ ಪಂದ್ಯವಾಡು]. (ಕಾಲ್ಚೆಂಡಾಟದಲ್ಲಿ) 'ಗೋಲು' ಮಾಡಲು (ಗುರಿ ಕಂಬಗಳ ನಡುವೆ ತೂರಿಸಲು) (ಚೆಂಡನ್ನು) ಬಿಮ್ಮನೆ ಒದೆ. (ಸೇತುವೆಯ, ಜಲಪಾತದ, —ಕೆಳಗೆ) ರಭಸದಿಂದ ಹೋಗು, ದೋಣಿ ಹೊಡೆದುಕೊಂಡು ಹೋಗು [S. Niagara (Niagara ನೋಡಿ)]. (ಚಲನಚಿತ್ರ) ಛಾಯಾಚಿತ್ರ ತೆಗೆ (S. a scene). [S. up (ಅಮೆ. ಸಂ., ಅಸಂ.) ಸಿಕ್ಕಾಬಟ್ಟೆ ಗುಂಡು ಹಾರಿಸಿ (ಹಳ್ಳಿಯನ್ನು, ಪ್ರಾಂತವನ್ನು) ಹೆದರಿಸು. S. the sun (ನಾವೆ) ಷಷ್ಠಕ(ಕೋನ ಮಾಪಕ)ದಿಂದ ಸೂರ್ಯನ ಮಧ್ಯಾಹ್ನದ ಕೋನೋನ್ನತಿಯನ್ನು ಅಳೆ. S. the moon (ಅಸಂ.) ಬಾಡಿಗೆ ಕೊಡುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ರಾತ್ರಿಯ ಹೊತ್ತು —ಸಾಮಾನು ಸಾಗಿಸು, ಮನೆ ಖಾಲಿಮಾಡಿ ಹೋಗು]. (ಭೂ. ಕೃ.) ಬೇರೆ ಬೇರೆ ದೃಷ್ಟಿ ಕೋನಗಳಲ್ಲಿ ಬೇರೆ ಬೇರೆ ಬಣ್ಣ ಕಾಣುವಂತೆ ನೆಯ್ದ: ಬಗೆ ಬಗೆಯ ಬಣ್ಣದ, ಶಬಲ (Shot silk. Crimson shot with maize-colour). Shooting-box ಷಿಕಾರಿ ಕಾಲದಲ್ಲಿ ತಂಗಲು ಮಾಡಿ ಕೊಂಡಿರುವ ಹಳ್ಳಿಯ ಮನೆ: ಷಿಕಾರಿ —ಬೀಡು, ಮನೆ. Shooting-coat, -jacket, -boots ಷಿಕಾರಿ —ಅಂಗಿ, ನಡುವಂಗಿ, ಜೋಡು. Shooting-iron (ಅಸಂ.) ಅಗ್ನಿಶಸ್ತ್ರ; ಬಂದೂಕು; ಸುತ್ತು ಪಿಸ್ತೂಲು. Shooting-range ಬಂದೂಕು ಅಭ್ಯಾಸದ ಬಯಲು; ಗುರಿದಿಣ್ಣೆ. **Shoótable** (ಗು.); **Shoóter** (ನಾ.) (ಕ್ರಿಯಾರ್ಥಗಳಲ್ಲಿ); ಪುಟ ವೇಳದೆ ನೆಲದಮೇಲೆಯೆ ಸರ್ರನೆ ಓಡುವ ಕ್ರಿಕೆಟ್ ಚೆಂಡು. (ಸಮಾಸ ಪದಗಳಲ್ಲಿ) ಗುಂಡು, ಮೊ. ನ್ನು ಹಾರಿಸುವ ಸಲಕರಣೆ: ಕೋವಿ [Pea-s. (Pea ನೋಡಿ). Six-s. ಆರು ಗುಂಡಿನ ಸುತ್ತು ಪಿಸ್ತೂಲು]. **Shoóting** (ನಾ.) (ಕ್ರಿಯಾರ್ಥಗಳಲ್ಲಿ); (ಒಂದು ಪ್ರದೇಶದಲ್ಲಿ) ಷಿಕಾರಿಯ, ಬೇಟೆಯಾಡುವ, —ಹಕ್ಕು, ಅಧಿಕಾರ; ಷಿಕಾರಿಗಾಗಿ ಬಾಡಿಗೆಗೆ ಕೊಂಡ ಪ್ರದೇಶ: ಬೇಟೆ ಬಯಲು; ಷಿಕಾರಿ ಪ್ರಾಂತ.

Shoot (ನಾ.) (ಗುಂಡು, ಮೊ. ನ್ನು) ಹಾರಿಸುವುದು, ಹೊಡೆಯುವುದು; ರಭಸದ ನುಗ್ಗು, ಹಾರಿಕೆ, ಹೊಡೆತ; ಚಿಮ್ಮು. ಹೊಸದಾಗಿ ಹುಟ್ಟಿದ ಸಣ್ಣ ರೆಂಬೆ; ಕುಡಿ, ಚಿಗುರು, ಅಂಕುರ. ನದಿಯ ಸೆಳೆ ಹರಿತ; ಕಡಿದು ಹೊನಲು; ಇಳಿಗಾಲುವೆ, ಇಳುಕಲು (=Chute); ಷಿಕಾರಿ —ತಂಡ, ವಿಹಾರ, ಅಭ್ಯಾಸ, ಪ್ರಾಂತ.

Shop ಷಾಪ್ (ನಾ.) (ಚಿಲ್ಲರೆ ವ್ಯಾಪಾರದ) ಅಂಗಡಿ [Butcher's s. ಕಟುಕರ ಅಂಗಡಿ. Come to the wrong s. (ರೂಪ.) ತಪ್ಪು ಸ್ಥಳಕ್ಕೆ, ತಪ್ಪು ಮನುಷ್ಯನ ಹತ್ತಿರಕ್ಕೆ, —ಹೋಗು]. ತಯಾರು ಮಾಡುವ, ರಿಪೇರಿ ಮಾಡುವ, —ಸ್ಥಳ: ಪಟ್ಟಡಿ (ಮನೆ), ಕಾರ್ಯ ಶಾಲೆ, ಯಂತ್ರದ ಮನೆ [Engineering-s. ಯಂತ್ರ ಶಿಲ್ಪದ ಕಾರ್ಖಾನೆ. Fitting, pattern, s. (ಕಾರ್ಖಾನೆಯಲ್ಲಿ) ಜೋಡಣೆಯ, ಮಾದರಿ ರಚಿಸುವ, ಶಾಪೆ]. (ಅಸಂ.) ಸಂಸ್ಥೆ [ಉದಾ., ಒಬ್ಬನು ಓದಿದ ಶಾಲೆ, ವಿಶ್ವವಿದ್ಯಾನಿಲಯ, ಮೊ. ವು (ಮು., ವುಲ್‌ವಿಚಿನ ರಾಯಲ್ ಮಿಲಟರಿ ಅಕ್ಯಾಡೆಮಿ). The other s. ಪ್ರತಿಸ್ಪರ್ಧಿ ಸಂಸ್ಥೆ]. ಒಬ್ಬನ ಕಸಬು, ಉದ್ಯೋಗ, ವೃತ್ತಿ; ಇವಕ್ಕೆ ಸಂಬಂಧಪಟ್ಟ —ವಿಷಯ, ಮಾತುಕತೆ [Shut up s. (ನಷ್ಟಹೊಂದಿ ಅಥವಾ ನಡಸಲಾರದೆ) ಅಂಗಡಿ ಮುಚ್ಚಿಬಿಡು; ಕೆಲಸ, ಉದ್ಯೋಗ, —ನಿಲ್ಲಿಸಿಬಿಡು. Talk s. ಸ್ನೇಹ ಸಂಭಾಷಣೆಯಲ್ಲಿ (ಅಪ್ರಕೃತವಾದ) ಕಸಬಿನ, ವ್ಯಾಪಾರದ, ವಿಷಯ ಮಾತನಾಡು. Sink the s. —ಮಾತನಾಡದಿರು; ತನ್ನ ಕಸಬನ್ನು, ವೃತ್ತಿಯನ್ನು, ಮರಸು. Smell of the s. (Smell ನೋಡಿ). All over the s. (ಅಸಂ.) ಎಲ್ಲ ಕಡೆಯೂ, ಸಿಕ್ಕಾಬಟ್ಟೆ, ಚೆಲ್ಲಾಪಿಲ್ಲಿಯಾಗಿ (Have looked for it all over the s. ಅದಕ್ಕಾಗಿ ಎಲ್ಲ ಕಡೆಯೂ ನೋಡಿದ್ದೇನೆ, ಹುಡುಕಿದ್ದೇನೆ. My books are all over the s. ನನ್ನ ಪುಸ್ತಕಗಳು ಸಿಕ್ಕಾಬಟ್ಟೆ, ಚೆಲ್ಲಾಪಿಲ್ಲಿಯಾಗಿ, ಬಿದ್ದಿವೆ. Hitting all over the s. ಸಿಕ್ಕಾಬಟ್ಟೆ, ಎಲ್ಲ ದಿಕ್ಕಿಗೂ, ಹೊಡೆಯುತ್ತ]. **S.-bell** ಗಿರಾಕಿಯು ಬಂದದ್ದನ್ನು ತಿಳಿಸುವ ಬಾಗಿಲ ಗಂಟೆ: ಅಂಗಡಿ ಗಂಟೆ. **S.-boy, -girl** ಅಂಗಡಿಯ (ಕೆಲಸದ) ಹುಡುಗ, ಹುಡುಗಿ. **Shopkeeper** ಅಂಗಡಿ ಇಟ್ಟಿರುವವನು, ಅಂಗಡಿಯವನು, ಅಂಗಡಿಗಾರ (Nation of shopkeepers ಇಂಗ್ಲಿಷ್ ಜನಾಂಗ). **S.-lifter** ಗಿರಾಕಿಯೆಂದು ಸೋಗುಹಾಕಿಕೊಂಡು ಅಂಗಡಿಯ ಸಾಮಾನನ್ನು ಎಗುರಿಸಿಬಿಡುವವನು, ಕದಿಯುವವನು: ಅಂಗಡಿ ಕಳ್ಳ. **Shópman** ಅಂಗಡಿಯವನು; ಅಂಗಡಿಯವನ ಸಹಾಯಕ. **S.-soiled, S.-worn** ಅಂಗಡಿಯಲ್ಲಿ ಗಿರಾಕಿಗಳಿಗೆ ತೋರಿಸಿ ತೋರಿಸಿ ಮಾಸಲಾದ: ಅಂಗಡಿ ಮಾಸಲಾದ. **S.-steward** ಒಂದು ಕಾರ್ಖಾನೆಯಲ್ಲಿಯ ಅಥವಾ ಅದರ ಒಂದು ಶಾಖೆಯಲ್ಲಿಯ ಕೆಲಸಗಾರರು ವ್ಯವಹಾರಗಳಲ್ಲಿ ತಮ್ಮ ಪರ ಮಾತನಾಡಲು ಆರಿಸಿ ಕಳುಹಿಸಿದ ಕೆಲಸಗಾರ: ಕೆಲಸಗಾರರ—ಮಾತು ಮುಖಂಡ, ಪ್ರತಿನಿಧಿ. **Shópwalker** ಒಂದು ಕಾರ್ಖಾನೆಯ ಶಾಖೆಯ (ಕೆಲಸಗಾರರ) ಮೇಲ್ವಿಚಾರಕ; (ದೊಡ್ಡ ಅಂಗಡಿಗಳಲ್ಲಿ) ಗಿರಾಕಿಗಳಿಗೆ ಸರಕಿರುವ ಸ್ಥಳ ತೋರಿಸುವವನು; ಅಂಗಡಿಯ ಚಾರ. **S. window** ಅಂಗಡಿಯ ಸರಕನ್ನು ಪ್ರದರ್ಶಿಸುವ ಕಿಟಕಿ; ಅಂಗಡಿಯ ಪ್ರದರ್ಶನ ಕಿಟಕಿ [Has everything in the s.w. (ರೂಪ.) ಎಲ್ಲವೂ ಮೇಲಿನ ತೋರ್ಕೆ, ಪ್ರದರ್ಶನಾರ್ಥ]. **Shóppy** (ಗು.) ಕಸಬಿನ (ಮಾತುಕತೆಯ), ಕಸಬುದಾರಿಯ, ವೃತ್ತಿ ಸಂಬಂಧವಾದ (S. talk). ಚಿಲ್ಲರೆ ವ್ಯಾಪಾರದ, ಪುಡಿಕಾಸು ವ್ಯಾಪಾರದ; ಹಲವು ಅಂಗಡಿಗಳಿರುವ; ಪೇಟೆಯ (A s. part of town ಊರಿನ ಪೇಟೆಯ ಭಾಗ)

Shop (ಕ್ರಿ. ಅಕ.) (ಸಾಮಾನು ಕೊಂಡುಕೊಳ್ಳಲು, ವ್ಯಾಪಾರಕ್ಕಾಗಿ) ಅಂಗಡಿಗೆ, ಪೇಟೆಗೆ, —ಹೋಗು [**Shópping** (ನಾ.)]. (ಅಸಂ.) ಸೆರೆಯಿಡು, ಬಂಧಿಸು; (ಅಪರಾಧ ತಿಳಿಸುವವನ ವಿಷಯದಲ್ಲಿ: ಸಹಾಪರಾಧಿಯನ್ನು) ಸೆರೆ ಸಿಕ್ಕಿಸು, ಬಂಧನದಲ್ಲಿ ಹಾಕಿಸು.

Shóre[1] ಷೋ(ಅ)ರ್ (ನಾ.) (ಕಡಲು, ಸರೋವರ, ಮೊ. ರ) ಕರೆ, ತೀರ, ದಂಡೆ, ದಡ (In s. ತೀರದ ನೀರಿನಮೇಲೆ). (ನ್ಯಾ. ಶಾ.) ಉಬ್ಬರದ ಮಟ್ಟಕ್ಕೂ ಇಳಿತದ ಮಟ್ಟಕ್ಕೂ ನಡುವಣ ತೀರದ ಭಾಗ. **Shóreless** (ಗು.); **Shóreward** (ಗು., ಕ್ರಿ. ವಿ.) ತೀರದ ಕಡೆಯ, —ಕಡೆ(ಗೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Shore[2] ಷೋ(ಅ)ರ್ (ನಾ., ಕ್ರಿ. ಸಕ.) (ಹಡಗು, ಗೋಡೆ, ಮರ, ಮೊ. ಗಳಿಗೆ ಒರೆಯೊತ್ತಾಗಿ ಕೊಟ್ಟ) ಊರೆ (ಮರ), ಒಡೆ (ಮರ), ಒತ್ತುಗಂಬ, ತಾಂಗು. (ಕ್ರಿ.) —ಕೊಡು, ಕೊಟ್ಟು ನಿಲ್ಲಿಸು (*Up* ಉಪ. ದೊಡನೆ). **Shóring** (ನಾ.) ಊರೆಕೊಡುವುದು ; ಊರೆಗಳು.

Shore[3], **Shorn.** Shear ಧಾತುವಿನ ಭೂತ. ಮತ್ತು ಭೂ. ಕೃ.

Short ಷಾರ್ಟ್ (ಗು.) ಕಾಲದಲ್ಲಾಗಲಿ ದೇಶದಲ್ಲಾಗಲಿ ಸ್ವಲ್ಪಾವಕಾಶದ: ಚಿಕ್ಕ ; ಗಿಡ್ಡ ; ಕುಳ್ಳು ; ಮೋಟು ; ಕುರುಚಲು ; ಕೊಂಚ ; ಸ್ವಲ್ಪ ; ಹ್ರಸ್ವ ; ಲಘು [A s. way off ಕೊಂಚ ದೂರದಲ್ಲಿ. A s. time ago ಸ್ವಲ್ಪ ಹೊತ್ತಿನ ಹಿಂದೆ. His joy had a s. life ಅವನ ಸಂತೋಷ ಅಲ್ಪಕಾಲ ಮಾತ್ರವಿತ್ತು. Something s. ತೀವ್ರ ಮದ್ಯಪಾನೀಯ. Make s. work of ಬೇಗ ಪೂರೈಸಿಬಿಡು, ತೀರಿಸಿಬಿಡು ; ಧ್ವಂಸ ಮಾಡಿಬಿಡು]. ದೂರ ಮುಟ್ಟದ, ಸಮೀಪದ, ಹತ್ತಿರದ, ಸಾಲದ, ಕಡಮೆಯಾದ, ಕೊರೆಯಾದ, ನ್ಯೂನ, ಮೊಟಕಾದ ; ತಟಕ್ಕನೆ ಮೊಟಕಾಗಿ —ನಿಂತ, ಮುಗಿದ [Take s. views ದೂರ ದೃಷ್ಟಿಯಿಲ್ಲದಿರು ; ತಾತ್ಕಾಲಿಕವನ್ನು ಮಾತ್ರ ಪರಿಗಣಿಸು. Has a s. memory ಅವನಿಗೆ ಮರವು ಹೆಚ್ಚು, ಜ್ಞಾಪಕಶಕ್ತಿ ಕಡಮೆ. Are s. of hands ಕೆಲಸಗಾರರು —ಕಡಮೆಯಾಗಿದ್ದಾರೆ, ಸಾಲದು. S. of breath ಉಸಿರಿಲ್ಲದ, ನಿತ್ರಾಣ, ದಮ್ಮಿಲ್ಲದ. A s. ten miles ಹತ್ತು ಮೈಲಿಗಿಂತ ಕಡಮೆ (ತೋರುವ). Cut s. ಸಹಜವಾಗಿ ಮುಗಿಯುವ ಮೊದಲೆ ಮುಗಿಸಿಬಿಡು: ಮೊಟಕು ಮಾಡು, ಹ್ರಸ್ವ ಮಾಡು, ಸಂಕ್ಷೇಪಿಸು. Come s. (of) ನಿರೀಕ್ಷಾ ಭಂಗಮಾಡು ; ಸಾಲದೆ ಬರು ; (ಕರ್ತವ್ಯ, ಮೊ. ನ್ನು) ತಪ್ಪು. Fall s. ಸಾಲದೆ —ಬರು, ಹೋಗು ; ಎಟುಕದಿರು, ಕಡಮೆಯಾಗು. Run s. ಕಡಮೆಯಾಗಿರು, ಸಾಕಾಗದೆ ಹೋಗು (To run s. of meat, brains ಮಾಂಸ, ಬುದ್ಧಿ, ಸಾಲದೆ ಹೋಗು)]. ಸಂಕ್ಷೇಪವಾದ, ಅಡಕವಾದ, ಸಂಗ್ರಹವಾದ, (ಅವಿನಯ ತೋರುವಷ್ಟು) ಮೊಟಕಾದ [The long & the s. of it (Long[1] ನೋಡಿ). In s. ಎರಡು ಮಾತಿನಲ್ಲಿ ; ಸಾರಾಂಶ (ಹೇಳುವುದಾದರೆ). Is called Bob for s. ಬಾಬ್ ಎಂಬುದು ಅವನ ಸಂಕ್ಷಿಪ್ತ ನಾಮ. Was very s. with me ಅವನು ನನ್ನೊಡನೆ ಬಹಳ ಗಡುಸಾಗಿ ನಡೆದುಕೊಂಡನು, ಅವನು ನನ್ನನ್ನು ಮುಖ ಮುರಿದು ಕಳುಹಿಸಿಬಿಟ್ಟನು]. (ಶಿಕ್ಷಾಶಾಸ್ತ್ರ, ಛಂ.) (ಸ್ವರ ಅಥವಾ ಅಕ್ಷರದ ವಿಷಯದಲ್ಲಿ) ಒಂದು ಮಾತ್ರೆಯ ; ಹ್ರಸ್ವ ; ಲಘು ; (ಬಿ. ಮಾ.) ಸ್ವರಭಾರವಿಲ್ಲದ. (ಒಣ ಹಪ್ಪಳ, ಮೊ. ಕರಿಯುವ ಸಾಮಾನು, ಜೇಡಿ, ಮೊ. ಗಳ ವಿಷಯದಲ್ಲಿ) ಜಿಗುಟಿಲ್ಲದ, ಬನಿಯಿಲ್ಲದ, ಪುಡಿ ಪುಡಿಯಾಗುವ; (ಲೋಹದ ವಿಷಯದಲ್ಲಿ) ಪೆಡಸಾದ, ಭಿದುರ. (ಪತ್ರ ವ್ಯಾಪಾರ, ಮೊ. ಗಳಲ್ಲಿ: ಬಂಡವಾಳ ಪಾಲುಗಳು, ಪತ್ರ ವ್ಯಾಪಾರಿ, ಬೆಳೆ, ಮೊ. ಗಳ ವಿಷಯದಲ್ಲಿ) ಕೈಯಲ್ಲಿ ಸಾಕಷ್ಟು ಮೊತ್ತವಿಲ್ಲದೆ, ಸರಕೊಪ್ಪಿಸುವಾಗ ಮೊತ್ತ ಧರ್ತಿಮಾಡಿ ಕೊಡುವ ಭರವಸೆಯ ಮೇಲೆ —ಮಾರಿದ, ಮಾರುವ: ಕಂಥರ್ತಿ ಮಾರಾಟದ (S. sales, contracts). **S. bill, paper** ಮುಂಚಿತವಾಗಿ ಹಣ ಪಾವತಿಯಾಗುವಂತೆ ತಾರೀಕು ಹಾಕಿದ ಹುಂಡಿ, ಪತ್ರ (ಇಂಥ ಹುಂಡಿಗಳು ಸಾ., ೩೦ ದಿನಗಳೊಳಗೆ, ಕೆಲವೊಮ್ಮೆ ೧೦ ದಿನಗಳೊಳಗೆ ಪಾವತಿಗೆ ಪಕ್ವವಾಗುತ್ತವೆ). **Shórt-bread, Shórtcake** ಹೆಚ್ಚಾಗಿ ಬೆಣ್ಣೆ ಮತ್ತು ಸಕ್ಕರೆ ಹಾಕಿ ಮಾಡಿದ ಗರುಗ ರೊಟ್ಟಿ. **S. circuit** ಮಾರ್ಗ ಸಂಕೋಚ (Circuit ನೋಡಿ). **S.-circuit** (ಕ್ರಿ. ಸಕ.) (ವಿದ್ಯುತ್) ಮಾರ್ಗ ಸಂಕೋಚ ವುಂಟುಮಾಡು ; ಮಾರ್ಗ ಸಂಕೋಚದಿಂದ ಪ್ರವಾಹಚ್ಛೇದ ಮಾಡು. **S. clothes, coats** (ಮಗು ಕೊಂಚ ಬೆಳೆದಮೇಲೆ ಹಾಕುವ) ಗಿಡ್ಡ ಉಡುಪು, ಗಿಡ್ಡ ಅಂಗಿ. **Shórt-coat** (ಕ್ರಿ. ಸಕ.) (ಮಗುವಿಗೆ) ಗಿಡ್ಡ ಅಂಗಿ ಹಾಕು. **Shórtcoming** ಕುಂದು, ಕೊರತೆ, ನ್ಯೂನತೆ. **S. cut** (Cut ನಾ. ನೋಡಿ). **S. date** (ಹುಂಡಿ, ಮೊ. ವು ಬೇಗ ಹಣ ಪಾವತಿಗೆ ಪಕ್ವವಾಗುವಂತೆ ಹಾಕಿದ) ಮುಂಚಿನ ತಾರೀಕು. **S.-dated** (ಗು.) ; **S. division** (Divide ಕೆಳಗೆ Division ನೋಡಿ). **S. drink** (ಅನಂ.) ಊಟಕ್ಕೆ ಮೊದಲು ಕುಡಿಯುವ ಕಾಕ್‌ಟೇಲ್, ಮೊ. ಪಾನೀಯ. **Shórthand** (ಭಾಷಣಗಳನ್ನು ಯಥಾವತ್ತಾಗಿ ಬರೆದುಕೊಳ್ಳುವಲ್ಲಿ ಉಪಯೋಗಿಸುವ) ಸಂಕ್ಷಿಪ್ತ ಲಿಪಿ, ಲಘು ಲಿಪಿ. **S.-handed** ಕೆಲಸಗಾರರು, ಕೈಗಳು, —ಕಡಮೆಯಾದ, ಸಾಲದ. **Shórthorn** ಮೋಟುಕೊಂಬಿನ ಜಾತಿಯ ದನ. **S. leg** (Leg ನೋಡಿ). **S. life** ಅಲ್ಪಾಯುಸ್ಸು. **Shortlived** ಅಲ್ಪಕಾಲದ, ಕ್ಷಣಿಕ. **S. rib** (Rib ನೋಡಿ). **S. sea** ಸಣ್ಣ ಚೆದರಲೆಗಳು (ಎದ್ದ ಕಡಲು). **S. shrift** (Shrift ನೋಡಿ). **S. sight** ದೂರದ ವಸ್ತು ಸರಿಯಾಗಿ ಕಾಣಿಸದಿರುವುದು, ದೂರದ ನೋಟ ಸಾಲದಿರುವುದು (ರೂಪ. ಸಹ) ; ಹತ್ತಿರ ನೋಟ ; ಸಮೀಪ ದೃಷ್ಟಿ (ದೋಷ) [**S.-sighted** (ಗು.) ದೂರದೃಷ್ಟಿಯಿಲ್ಲದ ; ಸಮೀಪ ದೃಷ್ಟಿ ದೋಷವುಳ್ಳ. **S.-síghtedly** (ಕ್ರಿ. ವಿ.) ; **S.-síghtedness** (ನಾ.)]. **S. slip** (ಕ್ರಿಕೆಟ್ ಆಟ) (ಗುರಿಕೋಲಿನ ಹಿಂದಿರುವವನ ಬಲಗಡೆಯಲ್ಲಿ) ಆಟ ಕಾಯುವವನ ಒಂದು ಸ್ಥಾನ; ಈ ಸ್ಥಾನದಲ್ಲಿರುವ ಆಟ ಕಾಯುವವನು. **S. story** ಸಣ್ಣ ಕಥೆ. **S. temper** ಬೇಗ ಕೆರಳುವ ಮನಃಪ್ರವೃತ್ತಿ ; ಸಿಡುಕು ಸ್ವಭಾವ ; ಮುಂಗೋಪ [**S.-tempered** (ಗು.)]. **S. waist** (ಉಡುಪಿನಲ್ಲಿ) ಎತ್ತರಿಸಿದ ನಡು, ಸೊಂಟಪಟ್ಟಿ [**S.-waisted** (ಗು.)]. **S. wave** (ನಿಸ್ತಂತು) ೧೧ರಿಂದ ೧೦೦ ಮೀಟರುಗಳ ಉದ್ದದ ತರಂಗ: ಹ್ರಸ್ವ ತರಂಗ ; ಕಿರು ಅಲೆ. **S. weight** (ಇರಬೇಕಾದ್ದಕ್ಕಿಂತ) ಕಡಮೆ ತೂಕ. **S. whist** (Whist[3] ನೋಡಿ). **S.-wind** ದೂರ ಓಡಲು ಶಕ್ತಿಯಿಲ್ಲದ, ಬೇಗ ಸುಸ್ತಾಗುವ, —ಉಸಿರು ; ದಮ್ಮು ; (ರೂಪ.) ದೀರ್ಘವಾಗಿ ಬರೆಯಲು, ಮಾತಾಡಲು, ಶಕ್ತಿಯಿಲ್ಲದಿರುವುದು ; ನಿತ್ರಾಣ; ದಮ್ಮು ಇಲ್ಲದಿರುವುದು [**S.-winded** (ಗು.) ; **S.-windedness** (ನಾ.)]. **Shórtage** ಷಾರ್‌ಟೆ(ಟಿ)ಜ್ (ನಾ.) ಕೊರೆಯಾದ ಮೊತ್ತ, ಕಡಮೆ, ಕೊರೆ, ಕೊರತೆ, ನ್ಯೂನತೆ (There is no s. of talent. A s. of 100 tons). **Shórten** —ಟ್‌ನ್ (ಕ್ರಿ.) ಚಿಕ್ಕದು, ಮೊಟಕು, ಕಡಮೆ, ಹ್ರಸ್ವ, —ಮಾಡು, ಆಗು. ಹಾಯಿಯ ಹರವನ್ನು ಕಡಮೆ ಮಾಡು. **Shórtish** (ಗು.) ಸ್ವಲ್ಪ ಚಿಕ್ಕದಾದ, ಗಿಡ್ಡಾದ. **Shórtly** (ಕ್ರಿ. ವಿ.) ಕೊಂಚ ಹೊತ್ತಿನಲ್ಲೆ, ಬೇಗನೆ ; ಕ್ಷಿಪ್ರವಾಗಿ ; (—ಇಂತ) ಸ್ವಲ್ಪ ಮುಂಚೆ, ತರುವಾಯ (*Before, after*). ಸಂಕ್ಷೇಪವಾಗಿ, ಅಡಕವಾಗಿ. ಮುಖ ಮುರಿದಂತೆ, ಮೊಟಕಿಸಿ, ನಿಷ್ಠುರವಾಗಿ ('I think very differently' answered Elizabeth s.). **Shórtness** (ನಾ.)

Short (ಕ್ರಿ. ವಿ.) ಸಹಜ ಕಾಲಕ್ಕೆ, ನಿರೀಕ್ಷಣೆಯ ಕಾಲಕ್ಕೆ, —ಮೊದಲೆ ; ಇದ್ದಕ್ಕಿದ್ದಹಾಗೆ, ತಟಕ್ಕನೆ ; ಸಂಕ್ಷೇಪವಾಗಿ, ಸಂಗ್ರಹವಾಗಿ, ಕಿರಿದರಲ್ಲಿ ; ಮುಖಮುರಿದಂತೆ, ಗಡುಸಾಗಿ, ನಿಷ್ಠುರವಾಗಿ [Took him up s. ಅವನನ್ನು (ಜಬರಿಕೆಯಿಂದ) ತಟಕ್ಕನೆ ತಡೆದುಬಿಟ್ಟನು ; ಅವನು ಮಾತಾಡುತ್ತಿದ್ದಾಗ ಅವನನ್ನು ಮುಖಮುರಿದು ತಡೆದುಬಿಟ್ಟನು. Stop s. ಇದ್ದಕ್ಕಿದ್ದಹಾಗೆ ನಿಂತುಬಿಡು, ನಿಲ್ಲಿಸಿಬಿಡು ; ಕೊನೆ ಮುಟ್ಟದಿರು. Bring, *or* pull, up s. ಇದ್ದಕ್ಕಿದ್ದಹಾಗೆ ತಡೆ, ನಿಲ್ಲು. Be taken s. ಇದ್ದಕ್ಕಿದ್ದಹಾಗೆ ಭೇದಿ ಕಿತ್ತುಕೊ. Now to speak s. and plain ಮುಚ್ಚುಮರೆಯಿಲ್ಲದೆ ಸಂಗ್ರಹವಾಗಿ ಹೇಳುವುದಾದರೆ. Sell s. (ಕೈಯಲ್ಲಿ ಸರಕಿಲ್ಲದಿರುವಾಗ) ಕಂಥರ್ತಿ ಮಾಡುವ ಭರವಸೆಯ ಮೇಲೆ ಮಾರು: ಕಂಥರ್ತಿ ಮಾರಾಟ ಮಾಡು]. S. of ಹೊರತಾಗಿ, ಉಳಿದು, ಬಿಟ್ಟು, ವಿನಾ (S. of committing suicide ಆತ್ಮಹತ್ಯೆ ಮಾಡಿಕೊಳ್ಳುವುದು ಒಂದು ಬಿಟ್ಟು). **S.-spoken** ಹೆಚ್ಚು ಮಾತಾಡದ, ಮಿತ ಭಾಷಣದ, ಗಡುಸು ಮಾತಿನ.

Short (ನಾ.) ಹ್ರಸ್ವ, ಲಘು, —ಅಕ್ಷರ, ಸ್ವರ, ಚಿಹ್ನೆ [Longs & shorts (Long[1] ನಾ. ನೋಡಿ)]. (ಬ. ವ. ದಲ್ಲಿ) ಮೋಟು, ಗಿಡ್ಡ —ಷರಾಯಿ, ಇಜಾರ ; ಚಲ್ಲಣ, ಚಡ್ಡಿ.

Shot[1] ಷಾಟ್ (ನಾ. ; ಬ. ವ. Shots ಅಥವಾ Shot) (ಫಿರಂಗಿ, ಬಂದೂಕು, ಮೊ. ಗಳ) ಗುಂಡು, ಗೋಲಿ ; ಕ್ಷೇಪಣಿ [Buck[1], case[2],

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

chain, grape, s. (ಆಯಾ ಪದವನ್ನು ನೋಡಿ). Round s. ಬಟ್ಟ ಗುಂಡು. Solid s. ಗಟ್ಟಿ ಗುಂಡು. Chilled s. ಕವಚ ಭೇದಿಸ ಲಾಗುವಂತೆ ಗಡುಸು ಮಾಡಿದ ಮೇಲ್ಮೈಯುಳ್ಳ ಗುಂಡು; ಗಡುಸು ಗುಂಡು. A s. in the locker (Lock[2] ಕ್ರಿ. ಕೆಳಗೆ Locker ನೋಡಿ)]; (ಬ. ವ., ಸಾ., Shot) (ಮು., ಬೇಟೆಯ ಬಂದೂಕುಗಳಲ್ಲಿ ಒಂದು ಬಾರಿಗೆ ತುಂಬಿ ಹಾರಿಸುವ) ಸಣ್ಣ ಸೀಸದ ಗುಂಡು(ಗಳು), ಚರೆ (ಗುಂಡು), ರವೆ (ಗುಂಡು) (Several s. *or* shots were extracted from his arm); ಬಾಣಪ್ರಯೋಗ, ಎಸುಗೆ; ಫಿರಂಗಿಯ, ಬಂದೂಕಿನ, —ಹಾರಿಕೆ, ಹೊಡೆತ; ಗುಂಡು —ಹಾರಿಸುವುದು, ಹಾರಿಕೆ, ಹೊಡೆತ (Several shots were fired ಹಲವು ಗುಂಡು ಹೊಡೆತಗಳನ್ನು ಹೊಡೆದರು); (ಕ್ಷಿಪಣಿಯಿಂದ) ಗುರಿ ಹೊಡೆಯಲು ಪ್ರಯತ್ನ, ಹೊಡೆತ (At each s. he was nearer the bull's-eye); (ರೂಪ.) (ಆಟ, ಊಹೆ, ಮೊ. ಗಳಲ್ಲಿ) ಗುರಿ ಹೊಡೆಯುವ ಪ್ರಯತ್ನ, ಹೊಡೆತ, ಏಟು [A beautiful s. took off the bails ಒಂದು ಭರ್ಜರಿ ಏಟತ ಬೇಲುಗಳನ್ನು ಹಾರಿಸಿಬಿಟ್ಟಿತು. Made a bad s. ತಪ್ಪಾಗಿ ಊಹಿಸಿದನು; ಅವನ ಊಹೆ ತಪ್ಪಾಯಿತು. Am going to have a good s. at winning ಗೆಲ್ಲುವುದಕ್ಕಾಗಿ ಒಳ್ಳೆಯ ಪ್ರಯತ್ನ ಮಾಡುತ್ತೇನೆ. Snap s. (Snap ಕೆಳಗೆ Snapshot ಪದ ನೋಡಿ). Flying s. ಹಾರುತ್ತಿರುವ ಹಕ್ಕಿಗೆ, ಚಲಿಸುತ್ತಿರುವ ಗುರಿಗೆ, ಹೊಡೆದ ಗುಂಡು ಹೊಡೆತ: ಹಾರು(ಗುರಿ) ಹೊಡೆತ. Parthian s. (ಓಡಿ ಹೋಗುತ್ತಿರುವ ಪಾರ್ತಿಯನ್ ರಾವುತನು ತನ್ನ ಹಿಂದುಗಡೆಗೆ ಪ್ರಯೋಗಿಸುತ್ತಿದ್ದ ಕ್ಷಿಪಣಿಯಂತೆ) ಬಿಟ್ಟುಹೊರಡುವ ಸಮಯದಲ್ಲಿ ಮಾಡುವ ಟೀಕೆ. Random s. ಸಿಕ್ಕಾಬಟ್ಟೆ ಹೊಡೆತ]. (-s.) (ಕ್ಷಿಪಣಿ) ಹಾರುವ, ಹೋಗುವ, —ದೂರ; ವ್ಯಾಪ್ತಿ (Bow, rifle, ear, -s. ಬಿಲ್ಲಿನ, ಕೋವಿಯ, ಕಿವಿಯ,—ವ್ಯಾಪ್ತಿ). ಬಂದೂಕು, ಮೊ. ನ್ನು ಹೊಡೆಯುವವನು; ಗುರಿಗಾರ (Is a good s. ಅವನು ಒಳ್ಳೆಯ ಗುರಿಗಾರ. Is a bad s. ಅವನು ಕೆಟ್ಟ ಗುರಿಗಾರ. Is a crack s. ಅವನು ಪಕ್ಕಾ, ಭರ್ಜರಿ, —ಗುರಿಗಾರ). (ವ್ಯಾಯಾಮದಲ್ಲಿ ಕೈಯಿಂದ ಎಸೆಯುವ) ಎಸೆಗುಂಡು. (ಚಲನಚಿತ್ರ) ಛಾಯಾಗ್ರಹಣ, ಛಾಯಾಚಿತ್ರ; ಛಾಯಾಗ್ರಹಣ ವಿಧಾನ. **S.-tower** ಮೇಲುಗಡೆ ಇರುವ ಜಲ್ಲಡಿಯ ಮೂಲಕ ಕರಗಿದ ಸೀಸವನ್ನು ಹೊಯ್ದು ಕೆಳಗಡೆ ಇರುವ ನೀರಿನಲ್ಲಿ ತಂಪಿಸಿ ಗುಂಡುಗಳನ್ನು ಮಾಡುವ ಗೋಪುರ: ಚರೆ ಗೋಪುರ. **Shótproof** (ಗು.) ಗುಂಡು ತೂರಲಾಗದ, ಭೇದಿಸಲಾಗದ; ಗುಂಡು ತಡೆಯುವ.

Shot (ಕ್ರಿ. ಸಕ.) ಗುಂಡು ತುಂಬು; ಗುಂಡು ಹಾಕಿ ಭಾರ ಮಾಡು.

Shot[2]. Shoot ಧಾತುವಿನ ಭೂತ. ಮತ್ತು ಭೂ. ಕೃ.

Shot[3] ಷಾಟ್ (ನಾ.) ಗಿರಾಕಿ ಕೊಡಬೇಕಾದ ಲೆಕ್ಕ; (ಮು.) ಮದ್ಯದ ಅಂಗಡಿಗೆ ಕೊಡಬೇಕಾದ ಹಣ(ದಲ್ಲಿ ಒಬ್ಬನ ಭಾಗ) [Pay up one's s. ಕೊಡಬೇಕಾದ್ದನ್ನು, ತನ್ನ ಭಾಗವನ್ನು, ಕೊಟ್ಟುಬಿಡು. To stand s. ಲೆಕ್ಕದ ಹಣವನ್ನು (ಎಲ್ಲರದನ್ನೂ) ತಾನೇ ಕೊಟ್ಟುಬಿಡು; (ಎಲ್ಲರಿಗೂ) ಪಾನದ ಔತಣ ನಡಸು, ಕೊಡಿಸು (ಈಗ ಬಳ. ಮಾ.)]

Should. **Shall** ನೋಡಿ.

Shoúlder ಷೋಲ್ಡರ್ (ನಾ.) (ಮನುಷ್ಯನ) ತೋಳು, (ಪ್ರಾಣಿಯ) ಮುಂಗಾಲು, (ಹಕ್ಕಿಯ) ರೆಕ್ಕೆ ಸೇರಿಕೊಂಡಿರುವ ಶರೀರದ ಭಾಗ: ಹೆಗಲು, ಮುಡುಹು; ಮುಯ್ಯು (ಗ್ರಾಂ.); ಭುಜ, ಸ್ಕಂಧ; ಹೆಗಲ ಕೀಲು, ಭುಜಸಂಧಿ (=S.-joint); (ಬ. ವ.) ಮೇಲಬೆನ್ನು, ಹೆಗಲು. (ಆಹಾರಕ್ಕಾಗಿ ಕೊಂದ ಪ್ರಾಣಿಯ ವಿಷಯದಲ್ಲಿ) ಮುಂಗಾಲು, ಕತ್ತು ಮತ್ತು ಎದೆ ಸೇರಿಕೊಂಡಿರುವ ಮಾಂಸ ಭಾಗ: ಅಂಸ ಮಾಂಸ. [Head & shoulders (Head ನೋಡಿ). Dislocate one's s. ಹೆಗಲ ಕೀಲು ತಪ್ಪಿಸು. S. to s. ಭುಜಕ್ಕೆ ಭುಜ—ಒತ್ತಿ, ಕೊಟ್ಟು; ಒತ್ತಾಗಿ; ಒಕ್ಕಟ್ಟಿನಿಂದ. Has broad shoulders ಭಾರವನ್ನು, ಹೊಣೆಯನ್ನು,—ಹೊರಬಲ್ಲ; ಹೆಗಲು —ಅಗಲವಾಗಿದೆ, ಗಟ್ಟಿಯಾಗಿದೆ. Old head on young shoulders (Head ನೋಡಿ). Put, set, s. to wheel ಪ್ರಯತ್ನಪಡು, ಹೆಗಲು ಕೊಡು. Straight from the s. (ಒಳ್ಳೆಯ ಏಟಿನ ಅಥವಾ ಬೈಗುಳದ ವಿಷಯದಲ್ಲಿ) ನೇರವಾಗಿ, ಚೆನ್ನಾಗಿ, ಭರ್ಜರಿಯಾಗಿ, —ಕೊಟ್ಟ. S.-of-mutton sail ಹಡಗಿನ ಹಿಂಭಾಗದ ಕಡೆ, ಉದ್ದಸಾಲನಲ್ಲಿ, ಕೂವೆಗೆ ಕಟ್ಟಿದ ಮುಮ್ಮೂಲೆ ಹಾಯಿ. Cold s. (Cold ನೋಡಿ). Cold-s. (ಕ್ರಿ. ಸಕ.) ಅನಾದರಣೆ ಮಾಡು; (—ರ) ಸಹವಾಸಕ್ಕೆ ಅನಿಚ್ಛೆ, ಹೇವರಿಕೆ, ತೋರು. Lay the blame, burden, on the right shoulders ತಪ್ಪನ್ನು, ಭಾರವನ್ನು, —ಸರಿಯಾದವರ ಮೇಲೆ ಹೊರಿಸು, ಹೇರು]. ಬಟ್ಟೆ, ಸೀಸೆ, ಸಲಕರಣೆ, ಮೊ. ಗಳಲ್ಲಿ ಭುಜದಂತೆ ಚಾಚಿಕೊಂಡಿರುವ ಭಾಗ; ಭುಜ. (ಸೈನ್ಯ) (ಬಂದೂಕನ್ನು) ಲಂಬವಾಗಿ ಹೆಗಲಿಗೆ ಆನಿಸಿ ಹಿಡಿದಿರುವ ಧಂಗಿ. **S.-belt** ದವಾಲಿಯಂಥ ಎದೆಪಟ್ಟಿ, ಹೆಗಲಪಟ್ಟಿ. **S.-blade** ಮೇಲುಬೆನ್ನಿನ ದೊಡ್ಡ ಚಪ್ಪಟೆಯ ಎಲುಬು: ಹೆಗಲೆಲುಬು. **S.-brace** (ಮಗು, ಮೊ. ರ ಗುಂಡುಬೆನ್ನನ್ನು ಚಪ್ಪಟೆ ತಿದ್ದುವುದಕ್ಕಾಗಿ ಕಟ್ಟುವ) ಹೆಗಲುಕಟ್ಟು, ಭುಜಬಂಧ. **S.-knot** (ಪೋಷಾಕು ಜವಾನನು ಹೆಗಲಮೇಲೆ ಹಾಕಿಕೊಳ್ಳುವ ಬಟ್ಟೆಯ ಅಥವಾ ಲೋಹದ ಪಟ್ಟಿಯ) ಹೆಗಲ—ಕುಣಿಕೆ, ಗಂಟು. **S.-pegged** (ಕುದುರೆಯ ವಿಷಯದಲ್ಲಿ) ಹೆಗಲು ಸೆಡೆತವುಳ್ಳ. **S.-strap** (ಸೈನಿಕನ ಉಡುಪಿನಲ್ಲಿ ಭುಜಪಟ್ಟಿಗಳನ್ನು ಅವುಗಳ ಸ್ಥಳದಲ್ಲಿ ಹಿಡಿದು ನಿಲ್ಲಿಸುವ, ಸೈನ್ಯ ತುಕಡಿಯ ಹೆಸರು, ಸಂಖ್ಯೆ, ಮೊ. ನ್ನು ನಮೂದಿಸಿರುವ) ಹೆಗಲುಪಟ್ಟಿ. **(-)shouldered** (ಗು.)

Shoúlder (ಕ್ರಿ.) ಹೆಗಲಿನಿಂದ—ನೂಕು, ಒತ್ತು; —ನೂಕಿಕೊಂಡು, ಒತ್ತಿಕೊಂಡು, ಹೋಗು; ಹೆಗಲಮೇಲೆ ಹೊತ್ತುಕೊ, ಹೊರು; ಹೆಗಲು ಕೊಡು (ರೂಪ. ಸಹ); (ಸೈನ್ಯ) S. arms ಬಂದೂಕನ್ನು ಲಂಬವಾಗಿ ಹೆಗಲಿಗೆ ಆನಿಸಿ ಹಿಡಿ.

Shout ಷಾಟ್ (ಕ್ರಿ., ನಾ.) ಗಟ್ಟಿಯಾಗಿ ಕೂಗು; ಬೊಬ್ಬೆ ಹಾಕು; ಅರು, ಅಲು; ಕಿರಿಚು, ಅರಚು, ಅಬ್ಬರಿಸು, ಹುಯಿಲುಮಾಡು, ಕೇಕೆ ಹಾಕು; ಗಟ್ಟಿಯಾಗಿ ಮಾತಾಡು (Shouted for joy. S. at ಗಟ್ಟಿಯಾಗಿ—ಕೂಗಾಡು, ರೇಗಾಡು, ಮಾತಾಡು. All is over but the shouting ಸ್ಪರ್ಧೆ ಮುಗಿದಂತೆಯೆ, ತೀರ್ಮಾನವಾದಂತೆಯೆ); ಗಟ್ಟಿಯಾಗಿ, ಕೂಗಿ, —ಹೇಳು, ಕರೆ; ಉದ್ಘೋಷಿಸು (Shouted to *or* for me to come. He lov'd to hear the vulgar s. his Name ಮಂದಿಜನ ತನ್ನ ಹೆಸರು ಉದ್ಘೋಷಿಸುವುದನ್ನು ಕೇಳಲು ಅವನು ಇಷ್ಟಪಡುತ್ತಿದ್ದನು. S. approbation ಭೇಷ್ ಎಂದು ಕೂಗು). (ನಾ.) (ಸಂತೋಷ, ಸಮ್ಮತಿ, ಅಸಮ್ಮತಿ, ಧಿಕ್ಕಾರ, ಮೊ. ನ್ನು ಸೂಚಿಸುವ ಅಥವಾ ಗಮನ ಸೆಳೆಯುವ) ಗಟ್ಟಿ ಕೂಗು, ಬೊಬ್ಬೆ, ಅಬ್ಬರ, ಕಿರಿಚು, ಕೇಕೆ, ಉದ್ಘೋಷ [My s. (ಅಸಂ.) (ಗೋಷ್ಠಿಗೆ ಮದ್ಯ, ಮೊ. ನ್ನು ತನ್ನ ವೆಚ್ಚದಲ್ಲಿ ತರಿಸುವಲ್ಲಿ) ನನ್ನ —ಕೂಗು, ಸರದಿ]

Shove ಷವ್ (ಕ್ರಿ., ನಾ.) ಜೋರಾಗಿ ತಳ್ಳು, ನೂಕು, ದಬ್ಬು, ದೂಡು; ಬಲವಾಗಿ ಅಥವಾ ಒರಟೊರಟಾಗಿ ತಳ್ಳಿಕೊಂಡು, ನೂಕಿಕೊಂಡು, —ಹೋಗು (*Along, past, through* ಉಪ. ಜೊತೆಗೆ); (ಬಳ. ಮಾ.) ಎಲ್ಲೋ ತುರುಕು (S. it in the drawer ಅದನ್ನು ಸೆಳೆಖಾನೆಯೊಳಕ್ಕೆ ತುರುಕು). [S. off (ದೋಣಿಯನ್ನು ದೂಡಿ ಅಥವಾ ಹುಟ್ಟಿನಿಂದ ದಡವನ್ನು ಒತ್ತಿ) ದೋಣಿಯಲ್ಲಿ ತೀರ ಬಿಟ್ಟುಹೊರಡು. S.-half-penny ಆಧುನಿಕ ರೀತಿಯ 'ಷವರ್ ಬೋರ್ಡ್' ಜೂಜಾಟ (Shovel-board ನೋಡಿ)]. (ನಾ.) ತಳ್ಳು, ದಬ್ಬು, ನೂಕು [Give one a s. off (ಕೆಲಸಕ್ಕೆ ತೊಡಗುವಂತೆ) ಒಬ್ಬನನ್ನು ಮುಂದಕ್ಕೆ ತಳ್ಳು; ಆರಂಭಿಸಲು ಒಬ್ಬನಿಗೆ ಸಹಾಯಮಾಡು]. ಅಗಸೆ ಗಿಡದ ಕಾಂಡದ ದಾರು ಭಾಗ; ಅಗಸೆ ಚೇಗು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Shóvel ಷವ್‌ರ್ (ನಾ., ಕ್ರಿ. ಸಕ.) ಕಲ್ಲಿದ್ದಲು, ಮಣ್ಣು, ಮೊ. ನ್ನು ಎತ್ತಿ ಹಾಕುವುದಕ್ಕಾಗಿ ಉಪಯೋಗಿಸುವ, ನೇರ ಉದ್ದ ಹಿಡಿಯುಳ್ಳ, ಮೊರದ ಆಕಾರದ ಸಲಿಕೆ: ಹಿಡಿಕೆ ಮೊರ; ಗೋರು ಸಲಿಕೆ; ಮೊರಗುದ್ದಲಿ; ಎರೆಗುದ್ದಲಿ [S. hat ಆ್ಯಂಗ್ಲಿಕನ್ ಕ್ರೈಸ್ತ ವೈದಿಕರು ಧರಿಸುವಂಥ ಅಗಲವಾದ ಚಾಚು ಏಣುಳ್ಳ ಟೊಪ್ಪಿಗೆ. S.-head ಹಲವು ಬಗೆಯ ಷಾರ್ಕ್ ಮೀನು. S.-nose ಅಗಲವಾದ ಚಪ್ಪಟೆಮೂಗಿನ —ಪ್ರಾಣಿ, ಮೀನು. S.-nosed (ಗು.)]. (ಕ್ರಿ.) ಮೊರಗುದ್ದಲಿಯಿಂದ (ಹೇಗೋ ಹಾಗೆ) —ಎತ್ತಿಹಾಕು, ಗೋರು (S. food into one's mouth ಆಹಾರವನ್ನು ಬಾಚಿ ಬಾಯಿಗೆ ಅಡಕಿಕೊ; ಬಾಚಿ ಬಾಚಿ, ಬಕ ಬಕನೆ, ತಿನ್ನು). **Shóvelful** (ನಾ.) ಮೊರಗುದ್ದಲಿ ತುಂಬು. **Shóveller** (ನಾ.) (ಕ್ರಿಯಾರ್ಥಗಳಲ್ಲಿ); (ಅಗಲವಾದ ಕೊಕ್ಕುಳ್ಳ) ಒಂದು ಬಗೆಯ ಬಾತು.

Shóvelboard ಷವ್‌ಲ್‌ಬೋ(ಅ)ರ್ಡ್ (ನಾ.) ಬಿಲ್ಲೆಗಳನ್ನು (ಹಿಂದಿನ ಕಾಲದಲ್ಲಿ ನಾಣ್ಯಗಳನ್ನು) ಕೈಯಿಂದಾಗಲಿ ದಾಂಡಿನಿಂದಾಗಲಿ ದೂಡಿ, ಹಡಗಿನ ಅಟ್ಟದಮೇಲೆ ಅಥವಾ ನುಣುಪು ಮೇಲ್ಮೈಮೇಲೆ ಗುರುತಿಸಿರುವ ಅಂಕಣಗಳಿಗೆ ಸೇರಿಸುವ ಒಂದು ಆಟ; ಷವಲ್ ಬೋರ್ಡ್ ಆಟ (ಈಗ ಮು., ಹಡಗಿನ ಅಟ್ಟದಮೇಲೆ ಆಡುವರು)

Show, Shew ಷೋ (ಕ್ರಿ.; ಭೂತ. -ed; ಭೂ. ಕೃ. -n, ವಿರ. ಪ್ರ. -ed) ಕಾಣಿಸು; ತೋರು; ತೋರಿಸು; ತೋರ್ಪಡಿಸು; ಪ್ರಕಾಶ, ಪ್ರಕಟ, ವ್ಯಕ್ತ, ಬಹಿರಂಗ, —ಮಾಡು, ಪಡಿಸು; ಪ್ರದರ್ಶಿಸು; ಮೆರಸು [Showed neither joy nor anger. S. oneself ಹೊರಗೆ ಕಾಣಿಸಿಕೊ. Has nothing to s. for it ಅದಕ್ಕೆ ತೋರಿಸಿಕೊಳ್ಳುವಂಥ ಪ್ರಶಸ್ತಿ, ಕಾರ್ಯಸಿದ್ಧಿ, ಏನೂ ಇಲ್ಲ. Got prizes for all the dogs he showed ಅವನು ಪ್ರದರ್ಶಿಸಿದ ಎಲ್ಲ ನಾಯಿಗಳಿಗೂ ಬಹುಮಾನ ದೊರೆಯಿತು. S. cause ಸಮರ್ಥನೆ ಕೊಡು, ಕಾರಣ ತೋರಿಸು. S. fight ಸುಲಭವಾಗಿ ಸಗ್ಗದಿರು; ಹೋರಾಟ ಹಾಕು. S. one's colours (Colour ನೋಡಿ). S. one's cards *or* hand (Card ನೋಡಿ). S. the (cloven) hoof (Cleave[1] ನೋಡಿ). S. white feather (Feather ನೋಡಿ). S. clean pair of heels (Clean ನೋಡಿ). S. a leg ಹಾಸಿಗೆ ಬಿಟ್ಟು ಏಳು. S. (thing) the fire (ವಸ್ತುವನ್ನು) ಕೊಂಚ ಬಿಸಿಮಾಡು; ಸ್ವಲ್ಪ ಬೆಂಕಿಗೆ ತೋರಿಸು, ಹಿಡಿ]. ಕಾಣು, ಕಾಣಿಸಿಕೊ; ಗೋಚರವಾಗು; ಕಣ್ಣಿಗೆ, ದೃಷ್ಟಿಗೆ, —ಬೀಳು; ತೋರಿಸಿಕೊ [Stain will never s. Buds are just showing ಮೊಗ್ಗುಗಳು ಈಗತಾನೆ ಕಾಣಿಸಿಕೊಳ್ಳುತ್ತಿವೆ. Shows like a disk from here]. ತೋರಿಸಿಕೊಡು, ನಿದರ್ಶನಮಾಡಿ ಕೊಡು, ಪ್ರತಿಪಾದಿಸು, ನಿರೂಪಿಸು, ತಿಳಿಯಪಡಿಸು [Has shown that it is false. S. one the way (ಅನುಷ್ಠಾನಕ್ಕೆ, ದಾರಿ ತಿಳಿಯದವನಿಗೆ) ಮಾರ್ಗ ತೋರಿಸು, ದಾರಿ ಹೇಳಿಕೊಡು. S. one the door (Door ನೋಡಿ). On your own showing ನಿನ್ನ ರುಜುವಾತಿನ, ಹೇಳಿಕೆಯ, ವಾದದ, —ಪ್ರಕಾರವೇ]. ಜೊತೆ ಯಲ್ಲಿ ಹೋಗು, —ಹೋಗಿ ತೋರಿಸು [Showed us round the house ನಮಗೆ ಮನೆಯನ್ನೆಲ್ಲ ತೋರಿಸಿಕೊಂಡು ಬಂದನು. S. one out *or* in ಬಾಗಿಲು ತೆರೆದು (ಒಬ್ಬನನ್ನು) ಆಚೆಗೆ ಕಳುಹು, ಒಳಕ್ಕೆ ಬಿಡು]. S. forth (ಪ್ರಾಚೀ. ಪ್ರ.) ಪ್ರದರ್ಶಿಸು; ಪ್ರತಿಪಾದಿಸು. S. off (ವಸ್ತುವನ್ನು, ಗುಣವನ್ನು) ಒಳ್ಳೆಯ ಪರಿಣಾಮವಾಗುವಂತೆ ಪ್ರದರ್ಶನ ಮಾಡು, ಮೆರಸು, ಪ್ರಮುಖವಾಗಿ ತೋರಿಸು. (ತನ್ನ ಸಂಪತ್ತನ್ನು, ಚಾತುರ್ಯವನ್ನು) ಜಂಬದಿಂದ ತೋರಿಸಿಕೊ, ಮೆರಸು. S. up ಸ್ಪಷ್ಟವಾಗಿ ಕಾಣು, ಎದ್ದುಕಾಣ(ವಂತೆ ಮಾಡು); (ಮೋಸ, ಮೋಸಗಾರ, ಮೊ. ನ್ನು) ಬೆಳಕಿಗೆ ತರು, ಹೊರಗೆಡಹು, ಬಯಲುಮಾಡು. **Shew-bread** ಯೆಹೂದ್ಯರ ದೇವಸ್ಥಾನದಲ್ಲಿ ಪ್ರದರ್ಶಿಸುವ, ಪ್ರತಿ ಸಬ್ಬತು ದಿನ ಹೊಸದಾಗಿ ಬದಲಾಯಿಸುವ, ಹನ್ನೆರಡು ಫರಂಗಿ ರೊಟ್ಟಿಗಳು. **Show-case** (ಸರಕು, ಅಪೂರ್ವ ವಸ್ತು, ಮೊ. ಗಳನ್ನು ಇಟ್ಟು ತೋರಿಸುವ, ಗಾಜು ಹಾಕಿದ) ಪ್ರದರ್ಶನ —ಪೆಟ್ಟಿಗೆ, ಬೀರು. **Show-room, -window** (ಗಿರಾಕಿಗಳು ನೋಡುವುದಕ್ಕಾಗಿ ಸರಕನ್ನು ಇಟ್ಟಿರುವ) ಪ್ರದರ್ಶನ —ಕೋಣೆ, ಕಿಟಕಿ. **S.-place** (ಪ್ರವಾಸಿಗಳು ನೋಡಹೋಗುವ) ಪ್ರೇಕ್ಷಣೀಯ ಸ್ಥಳ.

Show (ನಾ.) ತೋರಿಸುವುದು (Voted by s. of hands ಕೈಗಳನ್ನು ಎತ್ತಿ ತೋರಿಸಿ ಅಭಿಮತಗಳನ್ನು ಕೊಟ್ಟರು). ನೋಟ, ದೃಶ್ಯ, ಆಟ, ತಮಾಷೆ, ಮೆರೆವಣಿಗೆ, ಪ್ರದರ್ಶನ [Dumb s. (Dumb ನೋಡಿ). A fine s. of blossom ಹೂವುಗಳ ಸೊಗಸಾದ ನೋಟ. Flower-s. ಪುಷ್ಪ ಪ್ರದರ್ಶನ. Lord Mayor's s. ಲಂಡನಿನ ಪೌರಸಭಾಧ್ಯಕ್ಷನು ಅಧಿಕಾರ ಸ್ವೀಕಾರ ಮಾಡುವುದಕ್ಕೆ ಹೊರಟಾಗ ನಡೆಯುವ (ಅಲಂಕಾರ ವಾಹನ, ಮೊ. ಗಳ) ಮೆರವಣಿಗೆ: ಪೌರಸಭಾಧ್ಯಕ್ಷನ ಮೆರವಣಿಗೆ]. ತೋರ್ಕೆ, ಸೋಗು, ವೇಷ, ಬೂಟಾಟಿಕೆ, ಮೆರೆತ, ಬಹಿರಾಡಂಬರ (Pierce beneath the shows of things ಪದಾರ್ಥಗಳ ತೋರ್ಕೆಗಳನ್ನು ಭೇದಿಸಿ ನೋಡು. There is a s. of reason in it ಅದರಲ್ಲಿ ನ್ಯಾಯದ ತೋರ್ಕೆ ಇದೆ. Good enough in outward s. ತೋರ್ಕೆಯಲ್ಲಿ, ಮೇಲು ನೋಟದಲ್ಲಿ, —ಸರಿಯಾಗಿದೆ, ಒಳ್ಳೆಯ ದಾಗಿದೆ. Is fond of s. ಅವನು ಆಡಂಬರಪ್ರೇಮಿ. S. Sunday ಆಕ್ಸ್‌ಫರ್ಡ್ ವಿ. ವಿ. ನಿ. ದಲ್ಲಿ ಸ್ಥಾಪಕರ ಸ್ಮಾರಕೋತ್ಸವದ ಹಿಂದಿನ ಭಾನುವಾರ). (ಅಸಂ.) ಕೆಲಸ, ಕಾರ್ಯ, ವಹಿವಾಟು, ವಿಷಯ ವಿಚಾರ, ಸಂಸ್ಥೆ [Boss the s. (Boss[2] ನೋಡಿ). Run the s. (Run ನೋಡಿ). Give away the s. (ಬೇಹುಷಾರಾಗಿ, ತಿಳಿವಳಿಕೆ ಯಿಲ್ಲದೆ) ಒಂದರ ಕುಂದು ಕೊರತೆಗಳನ್ನು, ಗುಟ್ಟನ್ನು, —ಬಿಟ್ಟುಕೊಡು; ಒಂದರ ಪೊಳ್ಳುತನ ಬಯಲು ಮಾಡು. Am sick of the whole s. ಆ ಪ್ರಸಂಗವೆಲ್ಲ ನನಗೆ ಬೇಸರವಾಗಿ ಬಿಟ್ಟಿದೆ, ತೀರ ಅಸಹ್ಯವಾಗಿದೆ]; (ಅಸಂ.) (ಕಾರ್ಯ ನಡೆಸುವ, ಆತ್ಮರಕ್ಷಣೆಯ) ಅವಕಾಶ (Had no s. at all ಅವಕಾಶವೇ ಇರಲಿಲ್ಲ. Give him a fair s. ಅವನಿಗೆ ನ್ಯಾಯ ವಾದ ಅವಕಾಶ ಕೊಡು). (ಪ್ರಸವಶಾಸ್ತ್ರ) ಹೆರಿಗೆಯ ಸಮಯವನ್ನು ಸೂಚಿಸುವ ಸ್ರಾವ: ಪ್ರಸವ ಸೂಚಕ ಸ್ರಾವ. **Shówman** (ನಾ.) (ಮೃಗಾಲಯ, ಪ್ರದರ್ಶನ, ಮೊ. ಗಳ) ಯಜಮಾನ; ಪ್ರದರ್ಶಕ. **Shówy** (ಗು.) ಆಡಂಬರದ, ಬೆಡಗಿನ. **Shówily** (ಕ್ರಿ. ವಿ.); **Shówiness** (ನಾ.)

Shower ಷೌರ್, **Shówer** ಷೌಅರ್ (ನಾ., ಕ್ರಿ.) ಅಲ್ಪಕಾಲದ ಮಳೆಯ ಸುರಿತ; (ಮಳೆ, ಆಲಿಕಲ್ಲು, ಬಾಣ, ಗುಂಡು, ದೂಳು, ಮೊ. ಗಳ) ಅಲ್ಪಕಾಲದ ಸುರಿತ, ಕರೆತ; ಮಳೆ, ವರ್ಷ, ವೃಷ್ಟಿ (*Of* ಉಪ. ಜೊತೆ) [(ರೂಪ.) A s. of gifts, honours ದಾನಗಳ, ಮನ್ನಣೆ ಗಳ, ಸುರಿಮಳೆ. Letters came in showers ಕಾಗದಗಳು ಸುರಿ ಮಳೆಯಾಗಿ ಬಂದುವು. S.-bath ಮೇಲುಗಡೆಯ ಜಲ್ಲಡಿ ಫಲಕದ ಮೂಲಕ ಮಳೆಯಂತೆ ಬೀಳುವ ನೀರಿನ ಸ್ನಾನ: ವೃಷ್ಟಿ ಸ್ನಾನ]. (ಕ್ರಿ.) (ನೀರು, ಬಾಣ, ಮೊ. ನ್ನು) ಸುರಿಸು, ವರ್ಷಿಸು, ಮಳೆಗರೆ; (ಉಡುಗೊರೆ, ದಾನ, ಮೊ. ನ್ನು) ಮೇಲಿಂದಮೇಲೆ ಧಾರಾಳವಾಗಿ ಕೊಡು, ಸುರಿ ಮಳೆ ಸುರಿಸು (*Upon* ಉಪ. ಜೊತೆ); (ಸುರಿಮಳೆಯಾಗಿ) ಸುರಿ. **Showéry** (ಗು.); **Showériness** (ನಾ.)

Shram ಷ್ರ್ಯಾಮ್ (ಕ್ರಿ. ಸಕ.) (ಪ್ರಾಂ. ಪ್ರ.) (ಸಾ., ಭೂ. ಕೃ. ಪ್ರ.) (ಚಳಿಯಿಂದ) ಸೆಡೆತುಕೊಳ್ಳುವಂತೆ ಮಾಡು, ಜೋವು ಹಿಡಿಸು, ಮರ ವಡಿಸು (*With* ಉಪ. ಜೊತೆ)

Shrank. Shrink ಧಾತುವಿನ ಭೂತ.

Shrápnel ಷ್ರ್ಯಾಪ್‌ನೆಲ್ (ನಾ.) ಗುರಿ ಮುಟ್ಟುವುದಕ್ಕಿಂತ ಕೊಂಚ ಮೊದಲಲ್ಲಿ ಸಿಡಿದು ಒಳಗಿನ ಗುಂಡುಗಳನ್ನು ಸುತ್ತಲೂ ಎರಚುವ ಒಂದು ಬಗೆಯ ಸಿಡಿಗುಂಡು: ಷ್ರ್ಯಾಪ್‌ನೆಲ್ ಸಿಡಿಗುಂಡು; ಎರಚು ಸಿಡಿಗುಂಡು; ಒಡೆದು ಚೆದರುವ ಸಿಡಿಗುಂಡು, ಮೊ. ರ ಭಾಗ (ಇದನ್ನು ಕಂಡುಹಿಡಿದ Henry Shrapnel ಎಂಬಾತನ ಹೆಸರಿನಿಂದ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Shred ಶ್ರೆಡ್ [ನಾ. ; ಕ್ರಿ. ಸಕ., ಭೂತ., ಭೂ. ಕೃ. Shredded, (ಪ್ರಾಚೀ. ಪ್ರ.) Shred] ಚೂರು, ಚಿಂದಿ (ಪಂದಿ), ತುಂಡು, ಜೂಲು, ಪೇಲಿಕೆ, ತುಣುಕು; (ಹಣ್ಣು, ಕಾಯಿ, ಮೊ. ಗಳ) ತೆಳು ಉದ್ದ ಚೂರು : ತುರಿ ; ಲೇಶ (Without a s. of clothing on him ಅವನ ಮೈಮೇಲೆ ಒಂದು ಚೂರು ಬಟ್ಟೆಯಿಲ್ಲದೆ. Not a s. of evidence ಲೇಶ ಮಾತ್ರ, ಒಂದು ಚೂರು, ರುಜುವಾತೂ ಇಲ್ಲ. A s. of ground, of toast. Tear an argument to shreds ವಾದವನ್ನು ಚಿಂದಿ ಚಿಂದಿ ಮಾಡಿಬಿಡು, ಛಿದ್ರ ಛಿದ್ರ ಮಾಡಿಬಿಡು). (ಕ್ರಿ.) ಚೂರು ಚೂರು ಮಾಡು, ಚಿಂದಿಮಾಡಿ ಹಾಕು, ಜೂಲೆಬ್ಬಿಸು.

Shrew ಶ್ರೂ (ನಾ.) ಬೈಗುಳದ ಹೆಂಗಸು ; ಗಯ್ಯಾಳಿ, ಚಂಡಿ, ತಾಟಗಿತ್ತಿ. ಹುಳು ಹುಪ್ಪಟೆಗಳನ್ನು ತಿಂದು ಜೀವಿಸುವ, ಉದ್ದ ಮೂತಿಯ, ಸಸ್ತನಿಯಂಥ ಸಣ್ಣ ಇಲಿ (=S.-mouse). **Shrewish** (ಗು.) ; **Shrewishly** (ಕ್ರಿ. ವಿ.) ; **Shrewishness** (ನಾ.)

Shrewd ಶ್ರೂಡ್ (ಗು.) (ನೋವು, ಚಳಿ, ಮೊ. ಗಳ ವಿಷಯದಲ್ಲಿ) ಇರಿಯುವ, ಕೊರೆಯುವ, ಚುಚ್ಚುವ, ತೀಕ್ಷ್ಣ, ಬಲವಾದ [(ಸಾಹಿತ್ಯ ಪ್ರ.) S. blow, knock, thrust, turn] ; ಮರ್ಮಭೇದಿಯಾದ, ಚುರುಕು ಬುದ್ಧಿಯ, ಪರಿಜ್ಞಾನವುಳ್ಳ, ವಿವೇಚನೆಯುಳ್ಳ, ಸೂಕ್ಷ್ಮವಾಗಿ ಪರಿಶೀಲಿಸುವ, ವ್ಯವಹಾರ ನಿಪುಣತೆಯುಳ್ಳ, ಬುದ್ಧಿವಂತಿಕೆಯ (A s. guess ಬುದ್ಧಿವಂತಿಕೆಯ ಸರಿ ಊಹೆ. S. face ಚುರುಕು ಬುದ್ಧಿಯ ಮುಖ). **Shrewdly** (ಕ್ರಿ. ವಿ.) ; **Shrewdness** (ನಾ.)

Shriek ಶ್ರೀಕ್ (ಕ್ರಿ., ನಾ.) (ಭಯ, ನೋವು, ಮೊ. ಗಳಿಂದ) ಚೀರು, ಕೀರು, ಕಿರಿಚು, ಒರಲು ; ಚೀತ್ಕಾರ(ಮಾಡು) ; ಚೀರಾಟ, ಕಿರಿಚಾಟ ; ತಡೆಯಲಸಾಧ್ಯವಾದ ಕೀರಲು ನಗು (ನಗು) (S. with laughter ನಗುವಿನಿಂದ ಗಟ್ಟಿಯಾಗಿ ಚೀರು) ; S. out ಚೀರಿಡು, ಒರಲು, ಕೀರಿ ಹೇಳು.

Shriévalty ಶ್ರೀವಲ್ಟಿ (ನಾ.) ಷರೀಫನ ಪದವಿ ; —ಅಧಿಕಾರ (—ಕ್ಷೇತ್ರ, ಕಾಲ)

Shrift ಶ್ರಿಫ್ಟ್ (ನಾ., ಪ್ರಾಚೀ. ಪ್ರ.) (ಕ್ರೈಸ್ತ ಗುರುವಿನಲ್ಲಿ) ಪಾಪ ನಿವೇದನೆ ; ಪಾಪ ನಿವೇದನೆ ಮತ್ತು ಪಾಪ ವಿಮೋಚನೆ [Short s. (ಎಂಬಲ್ಲಿ ಮಾತ್ರ ಈಗ ಪ್ರ.) : ಶಿಕ್ಷೆ ವಿಧಿಸಿದಮೇಲೆ ಅದನ್ನು ಜಾರಿಗೆ ತರುವುದಕ್ಕೆ ಮೊದಲು ಇರುವ ಅಲ್ಪಾವಕಾಶ ; ಗಲ್ಲಿಗೆ ಹಾಕುವ ಮೊದಲು ಅಪರಾಧಿಗೆ ಪಾಪ ನಿವೇದನೆಗಾಗಿ ಕೊಡುವ ಅಲ್ಪಾವಕಾಶ. To give short s. to ತೀರ್ಪು ಹೇಳಿ ಕೂಡಲೆ ದಂಡಿಸಿಬಿಡು. ಬೇಗ ಪೂರೈಸಿಬಿಡು]

Shrike ಶ್ರೈಕ್ (ನಾ.) ಒಂದು ಬಗೆಯ ಕಲಿಂಗ ಪಕ್ಷಿ.

Shrill ಶ್ರಿಲ್ (ಗು., ಕ್ರಿ.) (ಧ್ವನಿಯ ವಿಷಯದಲ್ಲಿ) ಕಿವಿಯನ್ನು ಕೊರೆಯುವ, ಕೀರಲು, ಕೀಚು, ತೀಕ್ಷ್ಣ [(ರೂಪ. ಸಹ) : Crests of shriller scarlet ಕಣ್ಣು ಕೊರೆಯುವ ತೀಕ್ಷ್ಣ ಕೆಂಪು ತಲೆಜುಟ್ಟು] ; (ರೂಪ.) (ದೋಷಾರೋಪಣ್ ಮಾಡುವಲ್ಲಿ, ದೂರುವಲ್ಲಿ) ಕಿವಿ ತೂತು ಬೀಳುವಂತೆ ಕಿರಿಚುವ (The shrill defiance which meets criticism). (ಕ್ರಿ.) (ಕಾವ್ಯ ಅಥವಾ ಅಲಂ.) ಕೀರಲು ಧ್ವನಿ ಮಾಡು ; (ಹಾಡು, ದೂರು, ಮೊ. ನ್ನು) ಕೀರಲು ಧ್ವನಿಯಲ್ಲಿ ಹೇಳು. **Shrilly** ಶ್ರಿಲ್ಲಿ (ಕ್ರಿ. ವಿ., ಗು.) ; **Shrillness** (ನಾ.)

Shrimp ಶ್ರಿಂಪ್ (ನಾ., ಕ್ರಿ. ಅಕ.) ಉದ್ದಬಾಲದ, ಹತ್ತು ಕಾಲಿನ, ಸಮುದ್ರವಾಸದ, ಹಲವು ಬಗೆಯ ವಲ್ಕವಂತ ಪ್ರಾಣಿ : ಇಂಚಾಕ, ಸೀಗಡಿ, ಜಿಂಗಿ. ಕುಳ್ಳ, ಗಿಡ್ಡ, ಗುಜ್ಜಾರಿ. (ಕ್ರಿ.) ಇಂಚಾಕ ಹಿಡಿ. **Shrimper** (ನಾ.) ಇಂಚಾಕ ಹಿಡಿಯುವವನು, —ಹಿಡಿಯುವ ದೋಣಿ.

Shrine ಶ್ರೈನ್ (ನಾ., ಕ್ರಿ. ಸಕ.) (ಮು., ಪವಿತ್ರ ಅವಶೇಷಗಳುಳ್ಳ) ಸಂಪುಟ, ಕಲಶ. (ಸಾಧು ಸಂತರ, ಸಾ., ವಿಶೇಷವಾಗಿ ಅಲಂಕಾರ ಮಾಡಿದ) ಸಮಾಧಿ, ಬೃಂದಾವನ ; ಪವಿತ್ರಸ್ಥಳ ; ಪುಣ್ಯ, ತೀರ್ಥ, —ಕ್ಷೇತ್ರ ; ದೇವಾಲಯ, ಗುಡಿ ; ಚೈತ್ಯ ; ಆರಾಧನ ಮಂದಿರ. (ಕ್ರಿ.) =Enshrine (ನೋಡಿ)

Shrink ಶ್ರಿಂಕ್ [ಕ್ರಿ. ; ಭೂತ. Shrank ಶ್ರ್ಯಾಂಕ್ ; ಭೂ. ಕೃ. Shrunk ಶ್ರಂಕ್, (ವಿರ. ಪ್ರ.) Shrunken ಶ್ರಂಕನ್] ಸಣ್ಣದು, ಕಡಮೆ, ಸಂಕೋಚ—ಆಗು, ಮಾಡು ; ಕುಗ್ಗು, ಕುಗ್ಗಿಸು ; ಸುಕ್ಕು, ಸುಕ್ಕಿಸು ; ಮುದುರು, ಮುದುರಿಕೊ ; ಸುರುಟು, ಸುರುಟಿಕೊ ; ಹ್ರಸ್ವವಾಗು ; ಹಿಂದಕ್ಕೆ —ತೆಗೆದುಕೊ, ಎಳೆದುಕೊ ; ದೃಷ್ಟಿಗೆ ಬೀಳದಂತೆ ಹಿಂದು ಹಿಂಧಕ್ಕೆ ನಿಲ್ಲು ; ಹಿಮ್ಮೆಟ್ಟು, ಹಿಂಜರಿ, ಅಳುಕು, ಹೇಸು (*From* ಉಪ. ದೊಡನೆ) [S. with cold ಚಳಿಯಿಂದ ಮುದುರಿಕೊ. S. into oneself ಮೌನಮುದ್ರೆ ಧರಿಸು ; ತನ್ನಷ್ಟಕ್ಕೆ ತಾನಿರು. S. cloth (ತರುವಾಯ ಕುಗ್ಗುವುದನ್ನು ತಡೆಯುವುದಕ್ಕಾಗಿ, ಮೊದಲ ನಲ್ಲೆ ನೀರಿನಲ್ಲಿ ನೆನಸಿ) ಬಟ್ಟೆ ಕುಗ್ಗಿಸು, ಸೇದಿಸು. S. wheel-tire on ಗಾಲಿಪಟ್ಟಿಯನ್ನು ಅದು ಕಾದು ಹಿಗ್ಗಿರುವಾಗ ಗಾಲಿಗೆ ತೊಡಿಸಿ ತಣ್ಣಿನಿಂದ ಕುಗ್ಗಿಸಿ ಬಿಗಿಯಾಗಿ ಕಚ್ಚಿಸು ; ಪಟ್ಟಿಯನ್ನು ಬಿಗಿಯಾಗಿ ಕಚ್ಚಿಸು]. (ನಾ.) (ವಿರ. ಪ್ರ.) ಕುಗ್ಗು(ವುದು), ಸಂಕೋಚನ (How much must we allow for the s. ?). **Shrínkable** (ಗು.) ಕುಗ್ಗಿಸ ಲಾಗುವ, ಸುಕ್ಕಿಸಲಾಗುವ, ಸಂಕೋಚ್ಯ. **Shrínkage** (ನಾ.) ಕಡಮೆಯಾಗುವುದು, ಕುಗ್ಗುವುದು ; ಕುಗ್ಗಿದ ಮೊತ್ತ ; ಕುಗ್ಗುವರಿ ; ಸಂಕೋಚನ. **Shrínkingly** (ಕ್ರಿ. ವಿ.) ಹಿಂಜರಿಯುತ್ತ, ಅಳುಕುತ್ತ.

Shrive ಶ್ರೈವ್ (ಕ್ರಿ. ಸಕ. ; ಭೂತ. Shrove ಶ್ರೋವ್, ಭೂ. ಕೃ. Shriven ಶ್ರಿವನ್) (ಪ್ರಾಚೀ. ಪ್ರ.) (ಪಾಪ ನಿವೇದನೆ ಕೇಳಿ, ಪ್ರಾಯಶ್ಚಿತ್ತ ವಿಧಿಸಿ) ಪಾಪ ವಿಮೋಚನೆ ಮಾಡು ; ಪಾಪಕ್ಷಮೆ ಮಾಡು. ಕ್ಷಮಿಸು ; ಮನ್ನಿಸು ; ದೋಷಮುಕ್ತಮಾಡು. (ಪಶ್ಚಾತ್ತಾಪಿಯ ವಿಷಯದಲ್ಲಿ) ಪಾಪ ನಿವೇದನೆ ಮಾಡಿಕೊ, ಪಾಪಮುಕ್ತ ಮಾಡಿಕೊ.

Shrível ಶ್ರಿವಲ್ (ಕ್ರಿ.) (ಬಾಡಿ, ಒಣಗಿಹೋಗಿ) ಸುರುಟು, ಸುರುಟಿಕೊ ; ಮುದುಡು, ಮುದುಡಿಕೊ ; ಸುಕ್ಕು, ಸುಕ್ಕಿಸು ; ಉಡುಗು, ಉಡುಗಿಹೋಗು (Leaf shrivels in the hot sun ಬಿಸಿಲಿನಲ್ಲಿ ಎಲೆ ಸುರುಟಿಕೊಳ್ಳುತ್ತದೆ. The skin shrivels with age ವಯಸ್ಸಾಗುತ್ತ ಚರ್ಮ ಸುಕ್ಕಾಗುತ್ತದೆ. Faculties s. ಮನಸ್ಸಿನ ಶಕ್ತಿಗಳು ಉಡುಗಿಹೋಗುತ್ತವೆ)

Shroff ಶ್ರಾಫ್ (ನಾ., ಕ್ರಿ. ಸಕ.) (ಪೂರ್ವ ದೇಶಗಳಲ್ಲಿ) ಲೇವಾದೇವಿಯವನು, ನಾಣ್ಯ ಮಾರುವೆಯವನು, ಸರಾಫ ; ಖೋಟಾ ನಾಣ್ಯ ಪರೀಕ್ಷಕ. (ಕ್ರಿ.) ನಾಣ್ಯ ಪರೀಕ್ಷೆಮಾಡು.

Shroud ಶ್ರಾಡ್ (ನಾ., ಕ್ರಿ. ಸಕ.) ಹೆಣಕ್ಕೆ ಹೊದಿಸುವ ಬಟ್ಟೆ ; ಶವ ವಸ್ತ್ರ. ಮರೆ(ಮಾಡುವಂಥದು) : ಮುಸುಕು ; ಆಚ್ಛಾದನೆ (Wrapped in a s. of mystery ರಹಸ್ಯದ ಮುಸುಕಿನಲ್ಲಿ ಮುಚ್ಚಿ) ; (ಬ. ವ. ದಲ್ಲಿ) ಹಡಗಿನ ಕೂವೆಗಳ ಆಧಾರ, ಬಿಗಿ, ನಿಲು —ಹಗ್ಗಗಳು. (ಕ್ರಿ.) (ಹೆಣಕ್ಕೆ ಹೂಳುವ ಮೊದಲು) ಬಟ್ಟೆ ಹೊದಿಸು. ಮುಚ್ಚು, ಮರೆಮಾಡು, ಮುಸುಕು ಹಾಕು. **Shroúdless** (ಗು.) (ಹೆಣ) ಬಟ್ಟೆ ಹೊದಿಸಿಲ್ಲದ, ಮುಚ್ಚಿಲ್ಲದ.

Shrove Tuésday ಶ್ರೋವ್ ಟ್ಯೂಸ್ಡೇ (ನಾ.) (ಬೂದಿ ಬುಧವಾರದ ಹಿಂದಿನ ದಿನ) : ಪಾಪ ವಿಮೋಚನ ಮಂಗಳವಾರ. **Shróvetide** (ನಾ.) ಬೂದಿ ಬುಧವಾರದ ಹಿಂದಿನ ಮೂರು ದಿನಗಳು (ಈ ದಿನಗಳಲ್ಲಿ ಪಾಪ ನಿವೇದನ ಕೇಳಿ ವಿಮೋಚನ ಕೊಡುವುದು ವಾಡಿಕೆಯಾಗಿತ್ತು)

Shrub[1] ಶ್ರಬ್ (ನಾ.) ಹೊದರು, ಕಂಟೆ, ಕುರುಚಲು ಗಿಡ, ಗುಲ್ಮ. **Shrúbby** (ಗು.) ಕುರುಚಲು, ಗಿಡಗಂಟಿ, —ಬೆಳೆದ ; ಕುರುಚಲಾದ. **Shrúbbery** (ನಾ.) ಕುರುಚಲ —ತೋಪು, ಗಿಡಗಳು, ಕಾಡು.

Shrub[2] ಶ್ರಬ್ (ನಾ.) (ಹಣ್ಣಿನರಸ ಮತ್ತು ಮದ್ಯಸಾರಗಳಿಂದ ಮಾಡಿದ) ಮದ್ಯ ಷರಬತ್ತು (ಸಾ., Rum-s.)

Shrug ಶ್ರಗ್ (ಕ್ರಿ., ನಾ.) (ಔದಾಸೀನ್ಯ, ಅಸಹಾಯತೆ, ತಿರಸ್ಕಾರ, ಕೋಪ, ಮೊ. ನ್ನು ಸೂಚಿಸುವುದಕ್ಕಾಗಿ) ಭುಜ ಎಗುರಿಸು, ಹೆಗಲು ಹಾರಿಸು. (ನಾ.) (ಭುಜದ) ಹಾರಿಕೆ.

Shrunk(en). **Shrink** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Shuck ಷಕ್ (ನಾ., ಕ್ರಿ. ಸಕ.) ಹೊಟ್ಟು, ಸಿಪ್ಪೆ, ಬೀಜಕೋಶ, ಚಿಪ್ಪು (—ತೆಗೆದುಹಾಕು, ಸುಲಿ)

Shúdder ಷಡರ್ (ಕ್ರಿ. ಅಕ., ನಾ.) (ಭಯ, ಗಾಬರಿ, ಚಳಿ, ಹೇಸಿಗೆ, ಮೊ. ಗಳಿಂದ) ನಡುಗು, ತತ್ತರಿಸು, ಕಂಪಿಸು (I s. to think what might happen ಏನಾಗುವುದೋ ಎಂದು ಯೋಚಿಸಿದರೆ ನನಗೆ ನಡುಕ ಬರುತ್ತದೆ). (ನಾ.) ನಡುಕ, ಕಂಪ. **Shúdderingly** (ಕ್ರಿ. ವಿ.)

Shúffle ಷಫ಼್ಲ್ (ಕ್ರಿ., ನಾ.) ಕಾಲೆಳೆದುಕೊಂಡು, ಕಷ್ಟಪಟ್ಟುಕೊಂಡು —ಹೋಗು, ನಡೆ (Shuffles along rheumatically); (ನಡೆಯುವಾಗ ಅಥವಾ ಬೇಸರಿಕೆಯಿಂದ) ಕಾಲು—ಸೀಟು, ಅತ್ತಿತ್ತ ಎಳೆ (Shuffles his, with his, feet). ಕಲಸು, ಕಲಸುಮೆಲಸು ಮಾಡು, ಟಪಾಯಿಸು [S. cards ಇಸ್ಪೀಟೆಲೆಗಳನ್ನು ಕಲಸು. S. the cards (ರೂಪ.) ಬದಲಾವಣೆಗಳನ್ನು ಮಾಡು; ಹೊಸ ಕಾರ್ಯ ನೀತಿ, ಮೊ. ನ್ನು ಕೈಕೊಂಡು ನೋಡು; (ರೀತಿ ನೀತಿಗಳಲ್ಲಿ) ಕೈವಾಡ ಮಾಡಿ ನೋಡು]. (ಉಡುಪುಗಳನ್ನು) ಆತುರದಿಂದ ತಗುಲಿಸಿಕೊ, ಕಳಚಿಹಾಕು; (ಹೊರೆಯನ್ನು, ಹೊಣೆಯನ್ನು, ಮತ್ತೊಬ್ಬನಮೇಲೆ) ತಳ್ಳಿಬಿಡು (*Off*, *on* ಉಪ. ದೊಡನೆ) (S. off responsibility upon others ಹೊಣೆಗಾರಿಕೆಯನ್ನು ಇತರರ ಮೇಲೆ ತಳ್ಳಿಬಿಡು. Shuffled on his clothes ಮೈಮೇಲೆ ಬಟ್ಟೆ ತಗುಲಿಸಿಕೊಂಡನು). ಸ್ಥಾನ, ನೆಲೆ, —ಬದಲಾಯಿಸುತ್ತಿರು (ವಾದ, ಮೊ. ಗಳಲ್ಲಿ ರೂಪ. ಸಹ); ತೂಗಾಡು, ಒದ್ದಾಡು, ಸ್ತಿಮಿತವಿಲ್ಲದಿರು, ಹೊರಳಿಕೊ. (ನಾ.) ಕಾಲೆಳೆತದನಡಗೆ; (ಇಸ್ಪೀಟೆಲೆ) ಕಲಸುವುದು, ಕಲಸಿಗೆ, ಟಪಾವಣೆ; (ಎಲ್ಲರ, ಎಲ್ಲದರ ಪರಸ್ಪರ) ಸ್ಥಾನ ಬದಲಾವಣೆ, ಪಲ್ಲಟ; ಜಾರಿಕೆ, ಹೊರಳಿಕೆ, ಮೋಸ, ತಂತ್ರ (There is no shuffling in heaven). (ನೃತ್ಯದಲ್ಲಿ) ಕಾಲಿನ ಎಳೆತ (Double s. ಒಂದು ಕಾಲಾದಮೇಲೆ ಮತ್ತೊಂದು ಕಾಲನ್ನು ಶೀಘ್ರವಾಗಿ ಎಳೆದು ಕುಣಿಯುವುದು). **Shúffler** (ನಾ.); **Shúfflingly** (ಕ್ರಿ. ವಿ.)

Shun ಷನ್ (ಕ್ರಿ. ಸಕ.) ಸೇರದೆ—ದೂರ ಹೋಗು, ದೂರವಾಗಿರು; ಗೊಡವೆಗೆ ಹೋಗದಿರು; ದೂರವಿಡು; ಹೊದ್ದದಿರು. **Shúnless** (ಗು.) (ಕಾವ್ಯ) ತಪ್ಪಿಸಿಕೊಳ್ಳಲಾಗದ.

'shun! Attention ಎಂಬ ಆಜ್ಞಾ ವಚನದ ಸಂಕ್ಷಿಪ್ತ ರೂಪ.

Shunt ಷಂಟ್ (ಕ್ರಿ., ನಾ.) [ರೈಲು, ವಿದ್ಯುತ್ಪ್ರವಾಹ (ಭಾಗ), ಮೊ. ನ್ನು] ಪಾರ್ಶ್ವ ಕಂಬಿಗೆ, ಪಕ್ಕ ದಾರಿಗೆ—ಬದಲಾಯಿಸು, ಹರಿಯಬಿಡು; (ರೈಲು, ಮೊ. ಗಳ ವಿಷಯದಲ್ಲಿ; ಬಹು ಮುಖ್ಯವಾದ ವಾಹನ ಸಂಚಾರಕ್ಕೆ ತೆರಪುಮಾಡಿಕೊಡುವುದಕ್ಕಾಗಿ) ಪಕ್ಕ ದಾರಿಗೆ, ಪಕ್ಕ ಕಂಬಿಗೆ, —ಹೋಗು, ತಿರುಗು. (ವಿಷಯದ ಮೇಲಿನ) ಚರ್ಚೆಯನ್ನು —ಮುಂದಕ್ಕೆ ತಳ್ಳಿಡು, ಅಡಗಿಸು, ಅದುಮಿಹಾಕು; (ಯೋಜನೆಯನ್ನು) ಬದಿಗಿರಿಸು; (ವ್ಯಕ್ತಿಯನ್ನು) ಕೆಲಸವಿಲ್ಲದಂತೆ ಕೂರಿಸಿಬಿಡು (Practically General Peel is not shunted, but shelved). (ನಾ.) ಪಕ್ಕ ದಾರಿಗೆ ತಿರುಗುವುದು, —ತಿರುಗಿಸುವುದು; (ವಿದ್ಯುಚ್ಛಕ್ತಿ) ವಿದ್ಯುತ್ಪ್ರವಾಹ ಮಾರ್ಗದ ಎರಡು ಬಿಂದುಗಳನ್ನು ಸಂಯೋಜಿಸಿ, ಮೂಲ ಪ್ರವಾಹದ ಒಂದು ಭಾಗವನ್ನು ತನ್ನ ಮೂಲಕ ತಿರುಗಿಸುವ ವಿದ್ಯುದ್ವಾಹಕ: ಪಾರ್ಶ್ವವಾಹಕ. **Shúnter** (ನಾ.) ರೈಲುಗಳನ್ನು ಪಕ್ಕ ದಾರಿಗೆ ತಿರುಗಿಸುವವನು; —ತಿರುಗಿಸಲು ಅನುಕೂಲಿಸುವ ಸಲಕರಣೆ; ಹೊರಳುಗಂಬಿ (ಸಲಕರಣೆ); (ಅಸಂ.) ಸಮರ್ಥ —ನಿರ್ವಾಹಕ, ವ್ಯವಸ್ಥಾಪಕ.

Shut ಷಟ್ (ಕ್ರಿ.; ಭೂತ., ಭೂ. ಕೃ. Shut) (ಬಾಗಿಲು, ಮುಚ್ಚಳ, ತುಟಿ, ಮೊ. ನ್ನು) ಮುಚ್ಚು, ಮುಚ್ಚಿಕೊ, ಹೊಚ್ಚು, ಬಂಧಿಸು, ಬಂದು ಮಾಡು, ಬಂದಾಗು; (ಕೊಟಡಿ, ಕಿಟಕಿ, ಮೊ. ಗಳ) ಕದ—ಹಾಕು, ಹಾಕಿಕೊ, ಮುಚ್ಚು (S. the door upon ಪರ್ಯಾಲೋಚಿಸಲ್ಲು ನಿರಾಕರಿಸು; ಅವಕಾಶ, ಆಸ್ಪದ,—ಕೊಡದಿರು. S. one's eyes ನೋಡದಂತೆ ನಟಿಸು, ನೋಡಲು ನಿರಾಕರಿಸು. S. one's ears ಕೇಳದಂತೆ ನಟಿಸು, ಕೇಳಲು ನಿರಾಕರಿಸು; ಕಿವಿಗೆ ಹಾಕಿಕೊಳ್ಳದಿರು). (ವ್ಯಕ್ತಿ, ಧ್ವನಿ, ಮೊ. ನ್ನು) ಬಾಗಿಲು ಮುಚ್ಚಿ—ಒಳಗೆ ನಿಲ್ಲಿಸು, ಹೊರಬಿಡದಿರು, ಹೊರಗೆ ನಿಲ್ಲಿಸು, ಒಳಬಿಡದಿರು (*In*, *out* ಉಪ. ದೊಡನೆ); ಒಳಗೆ ಕೂಡಿ, ಹೊರಕ್ಕೆ ಕಳುಹಿಸಿ, —ಬಾಗಿಲು ಮುಚ್ಚು (*Into*, *out of* ಉಪ. ದೊಡನೆ). (S. out from hope ನಿರಾಶೆಗೊಳಿಸು; ಆಸೆಗೆ ಅವಕಾಶ ತಪ್ಪಿಸು). ತಡೆಗಟ್ಟು, ಪ್ರತಿಬಂಧಿಸು (To s. the ports of a country by blockade). (ಬೆರಳು, ಉಡುಪು, ಮೊ. ನ್ನು) (ಬಾಗಿಲು, ಮೊ. ನ್ನು ಮುಚ್ಚಿ) ಸಂದಿನಲ್ಲಿ —ಇರುಕಿಸು, ಸಿಕ್ಕಿಸು (S. his finger into the door-hinge). (ಭಾಗಗಳನ್ನು) ಕೂಡಿಸು, ಮಡಿಚು (S. his teeth ಹಲ್ಲು ಕಚ್ಚಿದನು. S. a knife). S. down (ಕಿಟಕಿಯ ಬಾಗಿಲು, ಮೊ. ನ್ನು) ಕೆಳಗೆಳೆದು ಮುಚ್ಚು. (ಕಾರ್ಖಾನೆ, ಮೊ. ಗಳ ವಿಷಯದಲ್ಲಿ) ಕೆಲಸ ನಿಂತುಹೋಗು, ಮುಚ್ಚಿಹೋಗು, ಬಂದಾಗು. S. in (ಬೆಟ್ಟಗಳು, ಮನೆಗಳು, ಕಡಲು, ಮೊ. ಗಳ ವಿಷಯದಲ್ಲಿ) ಸುತ್ತುವರಿ, ಸುತ್ತುಗಟ್ಟು; (ಹೀಗೆ ನೋಟಕ್ಕೆ, ಪ್ರವೇಶಕ್ಕೆ) ಅಡ್ಡಗಟ್ಟು, ತಡೆಮಾಡು; ಮುಚ್ಚಿಬಿಡು. S. off (ನೀರು, ಅನಿಲ, ಮೊ. ಗಳ) ಪ್ರವಾಹವನ್ನು ನಿಲ್ಲಿಸಿಬಿಡು, ಕವಾಟ ಮುಚ್ಚು. (ಸಮಾಜ, ಮೊ. ಗಳಿಂದ) ದೂರವಾಗಿಡು, ಬಹಿಷ್ಕರಿಸು. S. out (ದೃಶ್ಯ, ಮೊ. ನ್ನು) ಮರೆಮಾಡು, ಮುಚ್ಚಿಬಿಡು; (ಸಾಧ್ಯತೆ, ಮೊ. ನ್ನು) ಪ್ರತಿಬಂಧಿಸು, ನಿಷೇಧಿಸು; ಹೊರಹಾಕು, ಬಹಿಷ್ಕರಿಸು. S. to (ಬಾಗಿಲು, ಮೊ.) ಗಟ್ಟಿಯಾಗಿ, ಭದ್ರವಾಗಿ —ಮುಚ್ಚು, ಮುಚ್ಚಿಕೊ. S. up (ಮನೆಯ ಎಲ್ಲ ಕಿಟಕಿ ಬಾಗಿಲುಗಳನ್ನೂ) ಮುಚ್ಚಿಬಿಡು, ಅಗುಣಿಹಾಕು [S. up shop (ಆ ದಿನದ ವ್ಯಾಪಾರ ಮುಗಿದು ಅಥವಾ ಕಾಯಮ್ಮಾಗಿ) ಅಂಗಡಿ ಬಾಗಿಲು ಹಾಕು, ಅಂಗಡಿ ಮುಚ್ಚಿಬಿಡು]; (ಪೆಟ್ಟಿಗೆ, ಮೊ. ನ್ನು) ಭದ್ರವಾಗಿ ಮುಚ್ಚು; (ಮನುಷ್ಯನನ್ನು) ಒಳಗೆ ಕೂಡಿಹಾಕು, ಬಂಧಿಸು; (ಪದಾರ್ಥವನ್ನು ಪೆಟ್ಟಿಗೆ, ಮೊ. ಗಳಲ್ಲಿ ಹಾಕಿ) ಭದ್ರವಾಗಿ ಮುಚ್ಚಿಡು; (ಬಳ. ಮಾ.) ಬಾಯಿ ಮುಚ್ಚು; ನಿಲ್ಲಿಸು (S. up ಮು., ವಿಧಿರೂಪ ಪ್ರ.); (ಬೈದು, ನಿರಾಕರಿಸಿ) ಬಾಯಿ ಮುಚ್ಚಿಸು. **Shútter** (ನಾ., ಕ್ರಿ. ಸಕ.) (ಕ್ರಿಯಾರ್ಥಗಳಲ್ಲಿ); ಕಿಟಕಿಯ ಕದ; ಕವಾಟ [Put up the shutters ಕೆಲಸ ನಿಲ್ಲಿಸಿಬಿಡು; (ಆ ದಿನದ ಕೆಲಸವನ್ನು ಮುಗಿಸಿ ಅಥವಾ ಶಾಶ್ವತವಾಗಿ) ಕಿಟಕಿ ಬಾಗಿಲು ಮುಚ್ಚಿಬಿಡು]; (ಆರ್ಗನ್ ವಾದ್ಯದಲ್ಲಿ ಶ್ರುತಿಯನ್ನು ಹೆಚ್ಚು ಕಡಮೆ ಮಾಡುವುದಕ್ಕಾಗಿ ಇರುವ) ಶ್ರುತಿ (ನಿಯಂತ್ರಕ) ಕವಾಟ. (ಛಾಯಾಗ್ರಾಹಿ ಪೆಟ್ಟಿಗೆಯಲ್ಲಿ) ಲೆನ್ಸನ್ನು ಮುಚ್ಚುವ, ತೆರೆಯುವ, ಕವಾಟ: ಲೆನ್ಸು ಕವಾಟ. (ಕ್ರಿ.) ಕದ, ಕವಾಟ, —ಇಡು, ಹಾಕು, ಮುಚ್ಚು. **Shútterless** (ಗು.)

Shute. = Chute.

Shúttle ಷಟ್ಲ್ (ನಾ.) (ನೆಯ್ಗೆಯಲ್ಲಿ ಹಾಸು ಎಳೆಗಳ ನಡುವೆ ಹೊಕ್ಕು ಎಳೆಗಳನ್ನು ಹಾಯಿಸುವ) ಲಾಳಿ. ಜಡೆ ಹೊಲಿಗೆಯ ಹೊಲಿಗೆ ಯಂತ್ರದಲ್ಲಿ ಕೆಳದಾರವನ್ನು ಹಿಡಿದುಕೊಂಡಿರುವ ಸಲಕರಣೆ: ದಾರ ಹಿಡಿಕೆ. **S. armature** (ವಿದ್ಯುದುತ್ಪಾದಕ ಯಂತ್ರದಲ್ಲಿ) ಲಾಳಿಯಾಕಾರದ ವಿದ್ಯುತ್ಸಂಗ್ರಾಹಕ. **S. train** (ಸಾ., ಶಾಖಾ ಮಾರ್ಗದಲ್ಲಿ) ಕೊಂಚ ದೂರ ಹೋಗಿಬರುವ ರೈಲು: ಷಟಲ್ (ರೈಲು)ಗಾಡಿ. **Shúttlecock** (ನಾ.) ಅಂಗೈದಾಂಡಿನ ಚೆಂಡಾಟದಲ್ಲಿ ಉಪಯೋಗಿಸುವ, ಗರಿಗಳನ್ನು ಸಿಕ್ಕಿಸಿದ, ಬೆಂಡಿನ ಚೆಂಡು: ಗರಿಚೆಂಡು.

Shy[1] ಷೈ (ಗು.; ತರತಮ ರೂಪ: Shyer, -est; ವಿರಳವಾಗಿ Shíer, -est) (ಪ್ರಾಣಿ, ಹಕ್ಕಿ, ಮೀನು, ಮೊ. ಗಳ ವಿಷಯದಲ್ಲಿ) ಬಲು ಬೇಗ ಗಾಬರಿಬೀಳುವ, ಬೆದರುವ, ಕಣ್ಣು ತಪ್ಪಿಸಿಕೊಳ್ಳುವ, ಅವಿತುಕೊಳ್ಳುವ. ನಾಚುವ, ಸಿಗ್ಗಿನ; ಲಜ್ಜೆಯುಳ್ಳ; (ಒಬ್ಬನಿಂದ, ಒಂದು ಕಾರ್ಯ, ಮೊ. ಗಳಿಂದ) ದೂರವಾಗಿರುವ (*Of* person, *of doing*) [To be *or* look s. on *or* at ಅಪನಂಬಿಕೆಯಿಂದ, ಸಂಶಯದಿಂದ, —ನೋಡು, ಇರು. Fight s. of (Fight ನೋಡಿ)]; ಸಂಕೋಚ ಪ್ರಕೃತಿಯ; ಮಿತವುಳ್ಳ; ಹಿಡಿತಕ್ಕೆ ಸಿಕ್ಕದ; ಪಡೆಯಲು, ಹಿಡಿಯಲು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರ್ಥಮಾಡಲು, —ಕಷ್ಟವಾದ ; (ಅಮೆ. ಸಂ. ಅಸಂ.) ಕಡಮೆ ಫಲ ಬಿಡುವ (That tree is a s. bearer ಆ ಗಿಡ ಹಣ್ಣು ಬಿಡುವುದು ಕಡಮೆ). **-shy** —ರ ಹೆದರಿಕೆಯುಳ್ಳ, ಅನಿಚ್ಛೆಯುಳ್ಳ (Gun-s., work-s.). **Shýly** (ಕ್ರಿ. ವಿ.) ; **Shýness** (ನಾ.)

Shy (ಕ್ರಿ ಅಕ., ನಾ.) (ಸಾ., ಕುದುರೆಯ ವಿಷಯದಲ್ಲಿ ; ರೂಪಕ ವಾಗಿ ಮನುಷ್ಯನ ವಿಷಯದಲ್ಲಿ) ಬೆಚ್ಚು(ವುದು), ಬೆದರು(ವುದು) (*At* ಉಪ. ದೊಡನೆ). **Shýer** (ನಾ.)

Shy² ಷೈ (ಕ್ರಿ., ನಾ.) (ಬಳ. ಮಾ.) (ಕಲ್ಲು, ಮೊ. ನ್ನು) ಎಸೆ, ಬೀರು (ವುದು) ; ಎಸೆತ (Have a s. at —ಗೆ ಎಸೆ, ಬೀರು ; ಗೇಲಿ ಮಾಡು ; ಪಡೆಯಲು ಪ್ರಯತ್ನಪಡು, ಒಂದು ಕೈ ನೋಡು)

Shýlock ಷೈಲಾಕ್ (ನಾ.) ಕಲ್ಲೆದೆಯ ಸಾಲಿಗ ; ಲಗಾಡಸೆಟ್ಟಿ (ಷೇಕ್ಸ್‌ಪಿಯರ್ ಕವಿಯ Merchant of Venice ಎಂಬ ನಾಟಕದಲ್ಲಿಯ ಪಾತ್ರದ ಹೆಸರಿನಿಂದ)

Si ಸೀ (ನಾ.) ಸ್ವರಾಷ್ಟಕದಲ್ಲಿಯ ಏಳನೆಯ ಸ್ವರ (ನಿಷಾದ : ನಿ)

Síamang ಸೈ(ಸೀ)ಅಮ್ಯಾಂಗ್ (ನಾ.) (ಸುಮಾತ್ರ ಮತ್ತು ಮಲಯಾ ದೇಶಗಳ) ಒಂದು ದೊಡ್ಡ ಜಾತಿಯ ಮಂಗ.

Siamése ಸೈಅಮೀಸ್(ಸ್) (ಗು. ; ನಾ., ಬ. ವ. ಅದೇ) ಸಯಾಮಿನ, ಸಯಾಂ ದೇಶದ, ಸಯಾಂ ಜನರ. [S. twins (೧೮೧೧ರಿಂದ ೧೮೭೪ರ ವರೆಗಿದ್ದ, ಒಬ್ಬನ ಎಡ ಭಾಗ ಮತ್ತೊಬ್ಬನ ಬಲ ಭಾಗಕ್ಕೆ ಸೊಂಟದ ಬಳಿ ಕೂಡಿಕೊಂಡಿದ್ದ, Chang ಮತ್ತು Eng ಎಂಬ) ಸಯಾಮಿನ (ಕೂಡುಮೈಯ) ಅವಳಿಮಕ್ಕಳು ; (ರೂಪ.) ಬೇರ್ಪಡಿಸ ಲಾಗದ (ಪ್ರಾಣ)ಸ್ನೇಹಿತರು, ಮೊ. ರು]. (ನಾ.) ಸಯಾಮಿನವನು; ಸಯಾಮಿನ ಭಾಷೆ.

Sib ಸಿಬ್ (ಗು.) (ಪ್ರಾಚೀ. ಪ್ರ., ಸ್ಕಾ. ಪ್ರ.) ರಕ್ತಸಂಬಂಧವುಳ್ಳ, ಬಾಂಧವ್ಯವುಳ್ಳ (ಈಗ ಸಾ., *to* ಉಪ. ದೊಡನೆ)

Sibérian ಸೈಬೀರಿಯನ್ (ಗು., ನಾ.) ಸೈಬೀರಿಯಾ ದೇಶದ(ವನು) (S. dog ಸಾ., ಸ್ಲೆಜ್ ಬಂಡಿಗೆ ಕಟ್ಟುವ ಒಂದು ಜಾತಿಯ ನಾಯಿ : ಸೈಬೀರಿಯ ನಾಯಿ)

Síbilant ಸಿಬಿಲಂಟ್ (ಗು., ನಾ.) 'ಹಿಸ್' ಎನ್ನುವ; 'ಸ್' ಎನ್ನುವ; ಊಷ್ಮ (ಉದಾ., ಸ, ಶ, ಷ, ಸ಼, ಷ಼, ಚ). (ನಾ.) 'ಸ್' —ಧ್ವನಿ, ಅಕ್ಷರ (ಸ, ಶ, ಷ, ಮೊ. ಅಕ್ಷರ) ; ಊಷ್ಮವರ್ಣ. **Síbilance** (ನಾ.), **Síbilancy** (ನಾ.) ಊಷ್ಮಧ್ವನಿ; 'ಸ್' ಧ್ವನಿ. **Síbilate** —ಲೇಟ್ (ಕ್ರಿ.) ಊಷ್ಮೋಚ್ಚಾರ —ಮಾಡು, ಆಗು; 'ಸ್' ಎನ್ನು. **Sibilátion** (ನಾ.)

Síbyl ಸಿಬಿಲ್ (ನಾ.) (ಗ್ರೀಕ್ ಮತ್ತು ರೋಮನ್ ಪುರಾಣ) ದೈವ ಪ್ರೇರಣೆಯಿಂದ ದಿವ್ಯವಾಣಿಗಳನ್ನೂ ಕಾಲಜ್ಞಾನಗಳನ್ನೂ ಹೇಳು ತ್ತಿದ್ದರೆಂದು ಪ್ರತೀತಿಯಿದ್ದ ಹಲವು ಹೆಂಗಸರಲ್ಲೊಬ್ಬಳು: ಪ್ರವಾದಿನಿ, ಭವಿಷ್ಯವಾದಿನಿ (Cumaean, Erythraean, Phrygian, Samian, etc., S. ಆಯಾ ನಾಡಿನ ಪ್ರವಾದಿನಿ). ಕಣಿ ಹೇಳುವ ಮುದುಕಿ; ಕೊರವಂಜಿ ; ಶೂನ್ಯಗಾತಿ ; ಮಾಟಗಾತಿ. **Sibýlline** —ಲೈನ್ (ಗು.) ಸಿಬಿಲ್ ಪ್ರವಾದಿನಿಯ (ಮುಖದಿಂದ ಬಂದ); ಪ್ರವಾದಾತ್ಮಕ; ಗೂಢವಾದ, ರಹಸ್ಯಾತ್ಮಕ, ಮಾಂತ್ರಿಕ. ಅತಿ ದುಬಾರಿಯ (S. value). The S. books ಅನೇಕ ವೇಳೆ ದಂಡಾಧಿಕಾರಿಗಳು ಮಾರ್ಗದರ್ಶನಕ್ಕಾಗಿ ಪರಾಮರ್ಶಿಸುತ್ತಿದ್ದ, ಪ್ರಾಚೀನ ರೋಮನ್ ರಾಜ್ಯದ ಭವಿಷ್ಯವಾದಗಳ ಸಂಕಲನ: ಸಿಬಿಲ್ ಪ್ರವಾದ ಗ್ರಂಥ, ಕಣಿ ಪುಸ್ತಕ. (ರೂಪ.) ಮೊದಲು ನಿರಾಕರಿಸಿ, ತರುವಾಯ ಮೊದಲಗಿಂತ ದುಬಾರಿ ಬೆಲೆಗೆ ಸಂತೋಷದಿಂದ ತೆಗೆದು ಕೊಳ್ಳುವ ವಸ್ತು (ಸಿಬಿಲ್ ಪ್ರವಾದ ಗ್ರಂಥಗಳನ್ನು ಹೀಗೆ ಟಾರ್ಕ್ವಿನ್ ಎಂಬಾತನು ಮೊದಲು ನಿರಾಕರಿಸಿ ತರುವಾಯ ಮೂರು ಪುಸ್ತಕಗಳಿಗೆ ಒಂಬತ್ತರ ಬೆಲೆಕೊಟ್ಟು ಕೊಂಡನೆಂಬ ಪ್ರತೀತಿಯಿಂದ)

Sic (L) ಸಿಕ್ (ಕ್ರಿ. ವಿ.) [(ಅನುವಾದ ಮಾಡಿರುವ ವಾಕ್ಯ ಅಥವಾ ಪದ ಅಶುದ್ಧ ವಾಗಿರುವ ಅಥವಾ ಅಸಂಬದ್ಧವಾಗಿರುವ ಕಾರಣದಿಂದ ಮೂಲದಲ್ಲಿ ವೆಂಬ ಸಂದೇಹ ಬರಬಹುದೆಂದು ತಿಳಿದು) ಮೂಲಕ್ಕೆ ಸರಿಯಾಗಿದೆ, ಯಥಾವತ್ತಾಗಿದೆ ಎಂಬ ಖಾತರಿಗೆ ಕಂಸದಲ್ಲಿ ಬರೆಯುವ ಮಾತು]: ಹೀಗೆ, ಇಂಥ, ಇತಿ. *S. volo s. jubeo* (ವಾಕ್ಯದ ಅರ್ಥ : ನನ್ನ ಇಷ್ಟ ಮತ್ತು ನನ್ನ ಆಜ್ಞೆ ಹೀಗೆ) (ನಾ.) ಸ್ವೇಚ್ಛಾ ಆಜ್ಞೆ ; ಅವಿಚಾರದ ಆಜ್ಞೆ. *S. vos non vobis* (ಮಾಡಿದ ಕಾರ್ಯದ ಕೀರ್ತಿ ಕರ್ತನನ್ನು ಬಿಟ್ಟು ಬೇರೆಯವರಿಗೆ ಸಲ್ಲುವ ಸಂದರ್ಭದಲ್ಲಿ ಹೇಳುವ ವಾಕ್ಯ): ಹೀಗೆ ನೀನು ಮಾಡು, ಆದರೆ ನಿನಗಾಗಿ ಅಲ್ಲ.

Sicánian ಸಿಕೇನಿಯನ್ (ನಾ., ಗು.) ಸಿಸಿಲಿ ದ್ವೀಪದ ಆದಿನಿವಾಸಿ(ಗಳ)

Síccative ಸಿಕಟಿವ್ (ಗು., ನಾ.) ಒಣಗಿಸುವ, ಆರಿಸುವ, —ಗುಣ ವುಳ್ಳ (ವಸ್ತು) : ಶೋಷಕ (ಮು., ತೈಲವರ್ಣ ಬೇಗನೆ ಆರಿಕೊಳ್ಳಲು ಅದರೊಡನೆ ಬೆರಸುವಂಥದು)

Sice¹ ಸೈಸ್ (ನಾ.) (ದಾಳದ ಮೇಲಿನ) ಆರರ ಗರ.

Sice², Syce ಸೈಸ್ (ನಾ.) (ಆಂ. ಇಂ.) ಕುದುರೆಯಾಳು, ಕಾಸ್ತಾರ.

Sícel ಸಿಸೆಲ್, **Síkel** ಸಿಕೆಲ್, **Sicúlian** ಸಿಕ್ಯೂಲಿಯನ್ (ನಾ., ಗು.) ಬಹುಶಃ ಕ್ರಿ. ಪೂ. ೧೧ನೆಯ ಶ. ಮಾ. ದಲ್ಲಿ ಸಿಸಿಲಿಯಲ್ಲಿ ಬಂದು ನೆಲಸಿದ ಜನಾಂಗ(ದವನು) ; (ಪ್ರಾಚೀನ ಗ್ರೀಕ್ ನೆಲಸು ನಾಡಿಗರಿಗೆ ವಿರುದ್ಧವಾಗಿ) ಸಿಸಿಲಿ ದ್ವೀಪದ ಆದಿನಿವಾಸಿ(ಗಳ)

Sicéliot ಸಿಸೆಲಿಯಟ್, **Sike-** ಸಿಕೆ— (ನಾ., ಗು.) ಸಿಸಿಲಿ ದ್ವೀಪದ ಪುರಾತನ ಗ್ರೀಕ್ ನೆಲಸು ನಾಡಿಗ(ರ)

Sicílian ಸಿಸಿಲಿಯನ್ (ಗು., ನಾ.) ಸಿಸಿಲಿಯ (—ದ್ವೀಪದ, ಜನರ) [S. Vespers (ಸಾಯಂ ಪ್ರಾರ್ಥನಾ ಘಂಟೆಯನ್ನು ಬಾರಿಸಿ ಸೂಚನೆ ಕೊಟ್ಟು) ೧೨೮೨ರಲ್ಲಿ ಸಿಸಿಲಿ ದೇಶೀಯರು ನಡಸಿದ ಫ್ರೆಂಚರ ಕೊಲೆ]. (ನಾ.) ಸಿಸಿಲಿಯವನು.

Sick¹ ಸಿಕ್ (ಗು.) ಅಸ್ವಸ್ಥ, ವ್ಯಾಧಿಗ್ರಸ್ತ, ರೋಗದಿಂದ ನಿಶ್ಶಕ್ತನಾದ, ಕಾಯಿಲೆಯ, ಬೇನೆಯ [A s. man ಕಾಯಿಲೆಯ ಮನುಷ್ಯ; ರೋಗಿ. The S. Man (ಹಿಂದಿನ) ತುರ್ಕಿ ಸಾಮ್ರಾಜ್ಯ. The s. ರೋಗಿಗಳು. Be, feel, s. (ಆಧುನಿಕ ಪ್ರ.) ಹೊಟ್ಟೆ ತೊಳಸು, ವಾಂತಿಯಾಗು(ವಂತಿರು). Make s. (ಆಧುನಿಕ ಪ್ರ.) ವಾಂತಿಯಾಗಿಸು. Turn s. ವಾಂತಿ ಯಾಗುವಂತೆ —ಇರು, ಮಾಡು] ; ನೆಮ್ಮದಿಗೆಟ್ಟ, ನರಳುತ್ತಿರುವ, ಬೇಸರವಾಗಿರುವ, ಜುಗುಪ್ಸೆಗೊಂಡ; ರೋಸಿಹೋದ; (ಒಂದರ ವಿಷಯ ದಲ್ಲಿ) ಹಂಬಲಿಸುವ, ಗೀಳು ಹಿಡಿದ (*For* ಉಪ. ದೊಡನೆ) (Am s. at heart ಮನಸ್ಸು ನೆಮ್ಮದಿಯಾಗಿಲ್ಲ. S. of love ಪ್ರೇಮ ಪೀಡಿತ, ವಿರಹತಪ್ತ. Makes me s. to think of it ಅದನ್ನು ಯೋಚಿಸಿದರೆ ಜುಗುಪ್ಸೆಯಾಗುತ್ತದೆ. S. for a sight of home ಮನೆಯ, ಸ್ವದೇಶದ, ಗೀಳು ಹಿಡಿದು) ; ಚಿಟ್ಟು ಹಿಡಿದ, ವೆಗಟಾಗಿ ಹೋದ (*Of* ಉಪ. ದೊಡನೆ; S. of flattery ಹೊಗಳಿಕೆಯಿಂದ ಬೇಸತ್ತು). (ಹಡಗಿನ ವಿಷಯದಲ್ಲಿ) ಸರಿಯಾದ ಸ್ಥಿತಿಯಲ್ಲಿಲ್ಲದ ; ದುರಸ್ತು, ರಿಪೇರಿ, —ಆಗಬೇಕಾಗಿರುವ (ಮು., ರಿಪೇರಿ ಆಗ ಬೇಕಾದುದನ್ನು ನಿರ್ದೇಶಿಸಿ ಪ್ರ.: Nail-s. ಮೊಳೆಗಳು ಹಾಕಿ ರಿಪೇರಿಯಾಗ ಬೇಕಾಗಿರುವ. Paint-s. ಬಣ್ಣ ಹೊಸದು ಹಾಕಬೇಕಾದ). [**S.-bay** (Bay² ನೋಡಿ). **S.-bed** ರೋಗಿಯ ಹಾಸಿಗೆ; ಅಸ್ವಸ್ಥತೆ. **S.-call** ರೋಗಿಗಳೆಲ್ಲರೂ ಬಂದು ನೆರೆಯಬೇಕೆಂದು ತುತ್ತೂರಿ, ಮೊ. ನ್ನು ಊದಿ ಕೊಟ್ಟ ಸೈನಿಕ ಕರೆ : ರೋಗಿಗಳ ಹಾಜರಿ ಕರೆ. **S.-flag** ಸಂಪರ್ಕ ನಿಷೇಧ ಸ್ಥಳದಲ್ಲಾಗಲಿ ಹಡಗಿನಲ್ಲಾಗಲಿ ರೋಗ ವಿದೆಯೆಂದು ತಿಳಿಸುವ ಹಳದಿ ಬಾವುಟ : ರೋಗದ ಬಾವುಟ, ವ್ಯಾಧಿ ಧ್ವಜ. **S. headache** ಪಿತ್ತದ ತಲೆನೋವು. **S.-leave** ಕಾಯಿಲೆ ರಜ. **S.-list** (ಸೈನಿಕ ದಳ, ಹಡಗು, ಮೊ. ಗಳಲ್ಲಿ) ರೋಗಿಗಳ ಪಟ್ಟಿ (On the s.-l. ಕಾಯಿಲೆ ಬಿದ್ದು). **S.-room** ರೋಗಿಯಿರುವ ಅಥವಾ ರೋಗಿಗಳಿಗಾಗಿ ಏರ್ಪಡಿಸಿರುವ ಕೋಣೆ : ರೋಗಿಯ ಕೋಣೆ]. **Sícken** ಸಿಕನ್ (ಕ್ರಿ.) ಕಾಯಿಲೆ ಬೀಳು, —ಬೀಳತೊಡಗು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಸ್ವಸ್ಥವಾಗು ; (—ರ) ರೋಗಲಕ್ಷಣ ತೋರು (Child is sickening for something ಮಗುವಿಗೆ ಯಾವುದೋ ರೋಗ ಬರುವ ಲಕ್ಷಣ ತೋರುತ್ತದೆ) ; ವಾಂತಿ ಬರು(ವಂತಾಗು), ಹೊಟ್ಟೆ ತೊಳಸು, ಅಸಹ್ಯವಾಗು ; ಬೇಸರ, ಜುಗುಪ್ಸೆ, —ಪಡು (*At*, *to* ಉಪ. ದೊಡನೆ) ; ವಾಂತಿ ಬರಿಸು, ಜುಗುಪ್ಸೆಗೊಳಿಸು, ಬೇಸರ ಹಿಡಿಸು, ಅಸಹ್ಯ ಹುಟ್ಟಿಸು (A sickening sight. Was sickened of trying to make peace). **Síckener** (ನಾ.) ಅಸಹ್ಯಕಾರಕ. **Síckening** (ಗು.); **Síckeningly** (ಕ್ರಿ. ವಿ.) ; **Síckish** (ಗು.) ಇರುಸು ಮುರುಸಾಗಿರುವ ; ಹೊಟ್ಟೆ ತೊಳಸುವಂತಿರುವ. **Síckly** (ಗು., ಕ್ರಿ. ಸಕ.) ಕಾಯಿಲೆ ಬೀಳುವ, ರೋಗಪ್ರಕೃತಿಯ, ನಿತ್ಯರೋಗದ, ಅನಾರೋಗ್ಯದ, ರೋಗಿಷ್ಠ ; ರೋಗ ಸೂಚಕ, ನಿತ್ರಾಣದ, ಬಿಳಿಚಿಕೊಂಡ, ನಿಸ್ತೇಜ (S. look, smile, complexion). ರೋಗಕಾರಕ, ಅನಾರೋಗ್ಯಕರ, ಓಕರಿಕೆಯುಂಟುಮಾಡುವ (S. climate, smell, taste) ; ಹೃದಯ ದೌರ್ಬಲ್ಯವುಳ್ಳ, ಮನೋದೌರ್ಬಲ್ಯವುಳ್ಳ. (ಕ್ರಿ.) ರೋಗಕಳೆಯುಂಟುಮಾಡು, ಕಳೆಗುಂದಿಸು, ಸಪ್ಪೆಮಾಡು, ನಿಸ್ತೇಜಮಾಡು (Sicklied with age ಮುಪ್ಪಿನಿಂದ ಕಳೆಗುಂದಿ). **Síckliness** (ನಾ.) ; **Síckness** (ನಾ.) ಕಾಯಿಲೆ(ಯಾಗಿರುವುದು) ; ಬೇನೆ, ರೋಗ, ಅಸ್ವಸ್ಥತೆ, ವ್ಯಾಧಿ, ಜಡ್ಡು, ಕುತ್ತು [Falling s. (Fall ನೋಡಿ). Sleeping s. ಜ್ವರ, ದೀರ್ಘಾಲಸ್ಯ, ದೌರ್ಬಲ್ಯ, ಕಂಪವಾತ, ಕ್ಷೀಣತೆ, ಮೊ. ಲಕ್ಷಣಗಳುಳ್ಳ, ಆಫ್ರಿಕದ ಒಂದು ದಾರುಣ ರೋಗ : ನಿದ್ರಾವಾತರೋಗ. Sleepy s. (ನಿದ್ರಾವಾತರೋಗದಿಂದ ಭಿನ್ನವಾದ, ರೋಗ ಕಾರಣವನ್ನು ಇನ್ನೂ ಕಂಡುಹಿಡಿದಿಲ್ಲದ, ಪ್ರಪಂಚದಲ್ಲೆಲ್ಲ ವ್ಯಾಪಿಸಿರುವ) ಒಂದು ನಿದ್ರಾರೋಗ ; ನಿದ್ರಾಲಸ್ಯ]. ವಾಂತಿ(ಯಾಗುವುದು) ; ಓಕರಿಕೆ.

Sick[2] ಸಿಕ್ (ಕ್ರಿ. ಸಕ.) ಮೇಲೆ ಬಿಡು, ಛೂಬಿಡು [(ಸಾ., ವಿಧಿರೂಪದಲ್ಲಿ): S. him! (ಇಲಿ, ಮೊ. ಗಳ ಮೇಲೆ ನಾಯಿ, ಮೊ. ನ್ನು ಬಿಡುವಾಗ ಹೇಳುವ ಮಾತು) ಛೂ !]

Síckle ಸಿಕ್‌ಲ್ (ನಾ.) ಕುಡುಗೋಲು, ಕುಡುಲು, ಕುಯಿಲುಗತ್ತಿ, ಮಚ್ಚು(ಗತ್ತಿ). (ಖ. ವಿ.) ಸಿಂಹ ರಾಶಿ. Sicklebill ಕುಡುಗೊಕ್ಕಿನ ಹಲವು ಬಗೆಯ ಹಕ್ಕಿ. S.-feather ಹುಂಜದ ಗರಿಗಳಲ್ಲಿ ಉದ್ದನಾದ ನಡುಗರಿ: ಕುಡುಗರಿ. S.-wort ಒಂದು ಸಸ್ಯ (=Heal-all) (Heal ನೋಡಿ)

Sicúlian. **Sicel** ನೋಡಿ.

Side ಸೈಡ್ (ನಾ.) ಒಂದು ವಸ್ತುವಿನ ಚಪ್ಪಟೆಯ ಮೇಲ್ಮೈ(ಗಳಲ್ಲೊಂದು) ; ಮುಖ, ಮೈ ; ಪಕ್ಕ, ಮಗ್ಗುಲು, ಕಡೆ, ಬದಿ, ಕೆಲ, ಬಳಿ, ಪಾರ್ಶ್ವ [Cube has six sides ಘನಾಕೃತಿಗೆ ಆರು ಮುಖಗಳಿವೆ. Two sides of sheet of paper. Sent him six sides of argument ಅವನಿಗೆ ಆರು ಪುಟಗಳಷ್ಟು ವಾದ ಬರೆದು ಕಳುಹಿಸಿದೆನು. The inside & outside of a bowl ಬೋಗುಣಿಯ ಒಳಮೈ ಮತ್ತು ಹೊರಮೈ; —ಒಳ ಭಾಗ ಮತ್ತು ಹೊರ ಭಾಗ. Right, wrong, s. of cloth ಬಟ್ಟೆಯ ಮೇಲು, ಒಳ, —ಪಕ್ಕ, ಮೈ. Backside (Back[1] ನೋಡಿ). Seamy, shady, silver, s. (ಆಯಾ ಪದವನ್ನು ನೋಡಿ)]. (ಗಣಿತ) ಬಾಹು, ಭುಜ (Opposite sides of a parallelogram ಸಮಾನಾಂತರ ಚತುರ್ಭುಜದ ಎದುರು ಬದುರು ಬಾಹುಗಳು). (ಮನುಷ್ಯನ ಅಥವಾ ಪ್ರಾಣಿಯ) ಪಕ್ಕೆ, ಬರಿ, ಅಳ್ಳೆ [S. of mutton ಕುರಿಯ ಪಕ್ಕೆಯ ಮಾಂಸದ ಭಾಗ. One's blind s. (Blind ನೋಡಿ). S. by s. (ಮು., ಪರಸ್ಪರ ಒತ್ತಾಸೆಗಾಗಿ) ಪಕ್ಕ ಪಕ್ಕದಲ್ಲಿ, ಒತ್ತಾಗಿ, —ನಿಂತುಕೊಂಡು. Shake one's sides ಪಕ್ಕೆ ಬಿರಿಯುವಂತೆ ನಗು. S.-splitting ಪಕ್ಕೆ ಬಿರಿಯುವಷ್ಟು ನಗು ಬರಿಸುವ ; ವಿಪರೀತ ವಿನೋದಕರವಾದ]. ಕಡೆ, ದಿಕ್ಕು ; ಮಧ್ಯರೇಖೆಯಿಂದ ವಿಂಗಡವಾದ ಎರಡು ಭಾಗಗಳಲ್ಲೊಂದು [Right, left, s. ಬಲಗಡೆ, ಎಡಗಡೆ ; ಬಲ ಭಾಗ, ಎಡ ಭಾಗ. Debit, credit, s. (ಲೆಕ್ಕದಲ್ಲಿ) ಖರ್ಚು ಭಾಗ, ಜಮಾ ಭಾಗ. Epistle, gospel, s. (ಕ್ರೈಸ್ತ ದೇವಾಲಯದಲ್ಲಿ) ಬಲಿಪೀಠದ ದಕ್ಷಿಣ, ಉತ್ತರ, ಭಾಗ. The north s. ಉತ್ತರ ಮುಖ. The right side of the table ಮೇಜಿನ ಬಲ ಭಾಗ]. ಅಂಚಿನ ಬಳಿಯ ಭಾಗ ; ಬದಿ ; ಅಂಚು, ಅರುಗು ; ಅಷ್ಟು ಮುಖ್ಯವಲ್ಲದ್ದು, ಗೌಣವಾದದ್ದು ; ಹೆಚ್ಚು ಕಡಮೆ ಪ್ರತ್ಯೇಕ ಭಾಗ(ವಾದುದು) (S. of room, road, table ಕೋಣೆಯ, ರಸ್ತೆಯ, ಮೇಜಿನ, —ಪಕ್ಕ, ಅಂಚು, ಅರುಗು). (ವಿಶೇಷಣ ಪ್ರ.) ಗೌಣ [S. issue ಗಮನ ತಿರುಗಿಸುವ ಅಡ್ಡಮಾತು, ಅಡ್ಡವಿಷಯ ; ಅಪ್ರಧಾನ ವಿಷಯ, ಗೌಣ ವಿಚಾರ ; ಪ್ರಾಸಂಗಿಕ ವಿಷಯ. S. line (ಮುಖ್ಯ ಕೆಲಸದ ಜೊತೆಗೆ ಮಾಡುವ) ಅಡ್ಡಕೆಲಸ]. [On one s. ಒಂದು ಪಕ್ಕದಲ್ಲಿ. Look on all sides ಎಲ್ಲ ಕಡೆಯೂ ನೋಡು Came from all sides *or* every s. ದಿಕ್ಕು ದಿಕ್ಕುಗಳಿಂದ ಬಂದರು. Standing at my s. ನನ್ನ ಪಕ್ಕದಲ್ಲಿ ನಿಂತುಕೊಂಡು]. ಕಡೆ, ಮುಖ, ದೃಷ್ಟಿ (Study all sides of the question ವಿಷಯದ ಎಲ್ಲ ಮುಖಗಳನ್ನೂ ಪರಿಶೀಲಿಸು. Has many sides to his character ಅವನ ಶೀಲಸ್ವಭಾವಕ್ಕೆ ಹಲವು ಮುಖಗಳಿವೆ). (ಯುದ್ಧ, ರಾಜಕೀಯ, ಆಟ, ಮೊ. ಗಳಲ್ಲಿ) ಪಕ್ಷ, ಕಕ್ಷಿ, ಪಂಗಡ, ಕಡೆ [The Lord is on my s. ದೇವರು ನನ್ನ ಕಡೆ ಇದ್ದಾನೆ. Take sides ಪಕ್ಷ ವಹಿಸು. Join the winning s. ಗೆಲ್ಲುವ ಕಡೆ ಸೇರಿಕೊ, ಗೆದ್ದೆತ್ತಿನ ಬಾಲ ಹಿಡಿ. On, off, s. (ಕ್ರಿಕೆಟ್ ಆಟದಲ್ಲಿ) ಎಸೆಗಾರನ ಬಲಗಡೆಯ, ಎಡಗಡೆಯ, ಬಯಲು. Cambridge has a strong s. ಕೇಂಬ್ರಿಡ್ಜ್ ವಿ. ವಿ. ನಿ. ದ ಪಕ್ಷ, ಆಟಗಾರರ ತಂಡ, ಬಲವಾಗಿದೆ. On this s. (of) the Alps ಆಲ್ಪ್ಸ್ ಪರ್ವತದ ಈ ಪಕ್ಕದಲ್ಲಿ. On this s. the grave ಜೀವಂತವಾಗಿ. On the right, wrong, s. of forty (Right, Wrong ಪದ ನೋಡಿ). On the wrong s. of the door ಮುಚ್ಚಿದ ಬಾಗಿಲ ಹೊರಗೆ ; ಪ್ರವೇಶವಿಲ್ಲದೆ ಹೊರಗಡೆ. Born on the wrong s. of the blanket (Blanket ನೋಡಿ)]. (ತಂದೆಯ ಅಥವಾ ತಾಯಿಯ) ಕಡೆ, ವಂಶ, ಸಂತತಿ [Well descended on the mother's, maternal, s. ತಾಯಿಯ ಕಡೆ ಒಳ್ಳೆಯ ವಂಶದಿಂದ ಬಂದು. Distaff *or* spindle s. (Distaff ನೋಡಿ). Spear s. (Spear ನೋಡಿ)]. (ಬಿಲ್ಯರ್ಡ್ಸ್) ಚೆಂಡಿನ ಪಕ್ಕಕ್ಕೆ ಹೊಡೆದುಕೊಟ್ಟ —ಸುತ್ತು, ಚಲನೆ, ಭ್ರಮಣೆ. (ಅಸಂ.) ಜಂಬ, ಗರ್ವ (Puts on, has too much, s.) [**Sídy** (ಗು.) ಜಂಬದ]. **S.-arms** ಪಕ್ಕದಲ್ಲಿ ಧರಿಸುವ ಆಯುಧಗಳು : ಕತ್ತಿ, ಕಠಾರಿ, ಸನೀನು, ಮೊ. ವು. **S. axe** ಕಾವು ಒಂದು ಪಕ್ಕಕ್ಕೆ ಬಾಗಿರುವ ಕೊಡಲಿ : ಕುಡು(ಗಾವು) ಕೊಡಲಿ. **Síde-board** ಊಟದ ಮನೆಯಲ್ಲಿ ತಟ್ಟೆ, ಪಾತ್ರೆ, ಮೊ. ನ್ನು ಇರಿಸುವ ಪಕ್ಕ ಮೇಜು, ಅಲಮಾರು, ಕಪಾಟು. **Síde-bone** (ಕೋಳಿಯ ಮಾಂಸವನ್ನು ಕತ್ತರಿಸುವಲ್ಲಿ) ರೆಕ್ಕೆಯ ಕೆಳಗಿನ ಕವಲುಮೂಳೆ, ಪಕ್ಕೆಲುಬು. **S.-car** ಹಗುರವಾದ ಎರಡು ಚಕ್ರದ ಬಂಡಿ [=Jaunting-car (Jaunt ನೋಡಿ)] ; ಮೋಟಾರು ಸೈಕಲ್ಲಿನ ಪಕ್ಕಕ್ಕೆ ಜೋಡಿಸಿದ, ಜೋಡಿಸಲಾಗುವ, ಗಾಡಿ : ಪಕ್ಕ ಗಾಡಿ. **S.-chapel** ಕ್ರೈಸ್ತ ದೇವಾಲಯದ ಕೆಲ ಹಜಾರದಲ್ಲಿ ಅಥವಾ ಪಕ್ಕದಲ್ಲಿ ಇರುವ ಆರಾಧನ ಮಂದಿರ : ಪಕ್ಕ ಗುಡಿ. **S.-dish** (ಊಟ, ಮೊ. ಗಳಲ್ಲಿ ಬಡಿಸುವ) ಹೆಚ್ಚುಗಟ್ಟಳೆಯ ಭಕ್ಷ್ಯ. **S.-drum** ಸೈನಿಕ ವಾದ್ಯದಲ್ಲಿ ಹರೆಕಾರನು ಪಕ್ಕದಲ್ಲಿ ಜೋಲಹಾಕಿಕೊಂಡಿರುವ ಸಣ್ಣ ಇತ್ತಲೆಯ ರಣಡೋಲು, ಹರೆ : ಪಕ್ಕ ಹರೆ. **Sídelight** ಪಕ್ಕದ ಬೆಳಕು, ಕಿಟಕಿಯ ಬೆಳಕು. (ರೂಪ.) ಪ್ರಾಸಂಗಿಕ —ನಿದರ್ಶನ, ಸೂಚನೆ. (ನಾವೆ) (ರಾತ್ರಿ ಸಂಚರಿಸುವ ಹಡಗಿನ) ಎಡ ಪಕ್ಕದ ಕೆಂಪು ದೀಪ ಅಥವಾ ಬಲ ಪಕ್ಕದ ಹಸುರು ದೀಪ. **Sídelong** (ಕ್ರಿ. ವಿ., ಗು.) ಒಂದು ಪಕ್ಕಕ್ಕೆ ಓಲಿ(ರುವ), ಓರೆಯಾಗಿ(ರುವ) (Move s. A s. glance ಓರೆ ನೋಟ). **S.-note** ಪಕ್ಕ ಟಿಪ್ಪಣಿ. **S.-saddle** (ಸಾ., ಹೆಂಗಸಿಗಾಗಿ ; ಎರಡು ಕಾಲುಗಳನ್ನೂ ಒಂದೇ ಪಕ್ಕದಲ್ಲಿ ಇಳಿಯಬಿಟ್ಟು ಕುಳಿತುಕೊಳ್ಳುವಂತೆ ಅಳವಡಿಸಿರುವ) ಪಕ್ಕ ಜೀನು. **S.-seat** (ವಾಹನ, ಮೊ. ಗಳಲ್ಲಿ) ಕುಳಿತವನ ಬೆನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಾಡಿಯ ಪಕ್ಕಕ್ಕೆ ಆಗುವಂತೆ ಏರ್ಪಡಿಸಿದ ಪೀಠ: ಪಕ್ಕ ಪೀಠ. **S.-show** (ಪ್ರಧಾನ ಪ್ರದರ್ಶನದ ಜೊತೆಗೆ ಏರ್ಪಡಿಸಿರುವ) ಉಪ ಪ್ರದರ್ಶನ, ಅಡ್ಡ ತಮಾಷೆ. ಗೌಣ, ಅಪ್ರಧಾನ, —ವಿಷಯ. **S.-slip** (ಕ್ರಿ., ನಾ.) ಪಕ್ಕ(ಕ್ಕೆ)—ಜಾರು, ಹೊರಳು; (ಆಕಾಶಯಾನದ ವಿಷಯದಲ್ಲಿ) ಪಕ್ಕಕ್ಕೆ ಸರಿ(ತ), ಬೀಳು(ವುದು); ಮರದ —ಕುಡಿ, ಅಂಟು; ಗುಟ್ಟಿನ ಪ್ರೀತಿಗೆ ಹುಟ್ಟಿದ ಮಗು, ಮನಸ್ಸಲನದ ಶಿಶು. (ನಾಟಕ ಶಾಲೆಯಲ್ಲಿ ದೃಶ್ಯ ಸಲಕರಣೆಗಳನ್ನು ಸರಿಸಲು ಅನುಕೂಲಿಸುವ) ರಂಗ—ಪಾರ್ಶ್ವ, ಪಕ್ಕ. **Sídesman** ಕ್ರೈಸ್ತ ಮಠದ ಲೌಕಿಕ ಪ್ರತಿನಿಧಿಯ ಸಹಾಯಕ. **S.-step** (ನಾ., ಕ್ರಿ. ಸಕ.) ಪಕ್ಕಕ್ಕೆ ಇಡುವ, ಇಟ್ಟ, ಹೆಜ್ಜೆ: ಪಕ್ಕ ಹೆಜ್ಜೆ; ಗಾಡಿ, ಮೊ. ನ್ನು ಹತ್ತಿ ಇಳಿಯುವುದಕ್ಕೆ ಅನುಕೂಲಿಸುವಂತೆ ಅದರ ಪಕ್ಕಕ್ಕೆ ಅಳವಡಿಸಿರುವ ಮೆಟ್ಟಿಲು: ಪಕ್ಕ ಮೆಟ್ಟಿಲು. (ಕ್ರಿ. ಸಕ.) (ಮು., ಕಾಲ್ಚೆಂಡಾಟದಲ್ಲಿ) ಪಕ್ಕಕ್ಕೆ ಸರಿದು ತಪ್ಪಿಸಿಕೊ; (ರೂಪ.) ತಪ್ಪಿಸಿಕೊ. **S.-stroke** ಪಕ್ಕದಿಂದ, ಪಕ್ಕಕ್ಕೆ, —ಕೊಟ್ಟ ಹೊಡೆತ; ಪಕ್ಕ —ಹೊಡೆತ, ಏಟು; (ಈಜಾಟದಲ್ಲಿ) ಪಕ್ಕ ವರಿಸೆ. **S.-track** (ನಾ., ಕ್ರಿ. ಸಕ.) (ಮುಖ್ಯ ಕಂಬಿದಾರಿಗೆ ಸಂಬಂಧಿಸಿ ಅದಕ್ಕೆ ಸಮಾನಾಂತರವಾಗಿ ಪಕ್ಕದಲ್ಲಿ ಹಾಕಿರುವ) ಪಕ್ಕ ಕಂಬಿದಾರಿ. (ಕ್ರಿ.) ಪಕ್ಕ ಕಂಬಿದಾರಿಗೆ ತಿರುಗಿಸು. (ಮು., ಅಮೆ. ಸಂ.) ಪರಿಶೀಲನೆಯನ್ನು ತಳ್ಳಿಡು, ಮೂಲೆಗೊತ್ತು; ಬೇರೆ ದಾರಿ, ಕವಲುದಾರಿ, —ಹಿಡಿಸು. **S.-view** ಪಕ್ಕ ನೋಟ; ಪಾರ್ಶ್ವ—ದೃಷ್ಟಿ, ದರ್ಶನ. **S.-walk** (ಮು., ಅಮೆ. ಸಂ.) (ರಸ್ತೆಯ ಪಕ್ಕದಲ್ಲಿರುವ) ಕಾಲುನಡಗೆಯ ಪಕ್ಕದಾರಿ. **Sídeward(s)** (ಕ್ರಿ. ವಿ., ಗು.) ಪಕ್ಕಕ್ಕೆ, ಪಕ್ಕದಿಂದ (Moved s.); (ಗು.) ಪಕ್ಕದ, ಪಾರ್ಶ್ವದ (S. motion). **Sídeways** (ಕ್ರಿ. ವಿ., ಗು.) =Sideward(s). **S.-wind** ಪಕ್ಕ ಗಾಳಿ; (ರೂಪ.) ಪರೋಕ್ಷ —ಪ್ರಭಾವ, ಸಾಧನ, ರೀತಿ (Some expressions, which by as. -w. reflected on me). **-síded** (ಗು.); **-sídedly** (ಕ್ರಿ. ವಿ.); **-sídedness** (ನಾ.); **-sídeless** (ಗು.)

Side (ಕ್ರಿ. ಅಕ.) ಪಕ್ಷ —ವಹಿಸು, ಹಿಡಿ, ಅವಲಂಬಿಸು; ಕಡೆ —ಸೇರು, ಇರು (*With* ಉಪ. ದೊಡನೆ). **Síding** (ನಾ.) (ಕ್ರಿಯಾರ್ಥಗಳಲ್ಲಿ). (ಮುಖ್ಯ ಕಂಬಿದಾರಿಗೆ ಸಂಬಂಧಿಸಿ ಅದಕ್ಕೆ ಸಮಾನಾಂತರವಾಗಿ ಪಕ್ಕದಲ್ಲಿ ಸ್ವಲ್ಪ ದೂರದವರೆಗೆ ಹಾಕಿದ) ಪಕ್ಕ ಕಂಬಿದಾರಿ; ಕವಲುದಾರಿ.

Sídelong. **Side** ನೋಡಿ.

Sidéreal ಸೈಡಿ(ಅ)ರಿಯಲ್ (ಗು.) ನಕ್ಷತ್ರಗಳ; ನಕ್ಷತ್ರ—ಪುಂಜಗಳ, ರಾಶಿಗಳ, ಸಂಬಂಧವಾದ; ನಾಕ್ಷತ್ರಿಕ. S. day ಒಂದು ನಕ್ಷತ್ರ (ಮು., ವೃಷಭರಾಶಿಯ ನಕ್ಷತ್ರ) ಮಧ್ಯಾಹ್ನ ರೇಖೆಯನ್ನು ಒಮ್ಮೆ ಹಾದಂದಿನಿಂದ ಮತ್ತೊಮ್ಮೆ ಹಾಯುವುದಕ್ಕೆ ಹಿಡಿಯುವ ಕಾಲ: ನಕ್ಷತ್ರ(ಮಾನ), ನಾಕ್ಷತ್ರಿಕ, —ದಿವಸ (ಸೌರ ದಿನಕ್ಕಿಂತ ಸುಮಾರು ೪ ನಿಮಿಷ ಕಡಮೆ). S. year ಸೂರ್ಯನು ಪುನಃ ಅದೇ ಸ್ಥಿರ ನಕ್ಷತ್ರಕ್ಕೆ ಅದೇ ಸ್ಥಾನ ಸಂಬಂಧವನ್ನು ಪಡೆಯಲು ಹಿಡಿಯುವ ಕಾಲ: ನಾಕ್ಷತ್ರಿಕ ವರ್ಷ (ಸೌರ ವರ್ಷಕ್ಕಿಂತ ೨೦ ನಿಮಿಷ, ೨೩ ಸೆಕಂಡು ಹೆಚ್ಚು). S. time ನಕ್ಷತ್ರಗಳ ಪ್ರತ್ಯಕ್ಷ ದೈನಿಕ ಚಲನೆಯಿಂದ ಗಣನೆಮಾಡುವ ಕಾಲ: ನಕ್ಷತ್ರಮಾನ ಕಾಲ, ನಾಕ್ಷತ್ರಿಕ ಕಾಲ.

Siderógraphy ಸಿಡರಾಗ್ರಫಿ (ನಾ.) ಉಕ್ಕಿನಮೇಲೆ ಕೊರೆಯುವ ಒಂದು ವಿಧಾನ: ಉಕ್ಕು ರೇಖನ, ಆಯೋ ರೇಖನ.

Sídeward(s), Sídeways, Síding. **Side** ನೋಡಿ.

Sídle ಸೈಡ್‌ಲ್ (ಕ್ರಿ. ಅಕ.) (ಪುಕ್ಕಲಾಗಿ, ನಾಚಿಕೆಯಿಂದ, ದೈನ್ಯದಿಂದ) ಪಕ್ಕ ಪಕ್ಕಕ್ಕೆ ನಡೆ; ಓರೆಯಾಗಿ, ಅರುಗಾಗಿ, —ಸರಿ (ಅನೇಕ ವೇಳೆ *along*, *up* ಉಪ. ದೊಡನೆ)

Sidónian ಸೈಡೋನಿಯನ್ (ಗು., ನಾ.) (ಪುರಾತನ ಫೀನೀಷಿಯದ ರಾಜಧಾನಿಯಾದ) ಸೈಡೊನ್ ಪಟ್ಟಣದ(ವನು)

Siege ಸೀಜ್ (ನಾ., ಕ್ರಿ. ಸಕ.) ಮುತ್ತಿಗೆ (ಹಾಕುವುದು), ಆಕ್ರಮಣ (ಮಾಡುವುದು) (ರೂಪ. ಸಹ); ಮುತ್ತಿಗೆಗೆ ಸಿಕ್ಕಿರುವುದು; ಮುತ್ತಿಗೆ ಹಾಕಿರುವಷ್ಟು ಕಾಲ; ಆಕ್ರಮಣ ಕಾಲ [S. lasted 100 days. Push the s. ಮುತ್ತಿಗೆಯನ್ನು ಬಿರುಸಾಗಿ ಸಾಗಿಸು, ಮುಂದೊತ್ತು. Raise the s. of ಮುತ್ತಿಗೆ —ತೆಗೆ, ಎಬ್ಬಿಸು. Lay s. to ಮುತ್ತಿಗೆ ಹಾಕು (ರೂಪ. ಸಹ). Stood a long s. ದೀರ್ಘ ಕಾಲದ ಮುತ್ತಿಗೆಯನ್ನು ತಡೆದುಕೊಂಡಿತು]. (ಇಷ್ಟವಿಲ್ಲದವನ ಕೈಯಲ್ಲಿ ಕೆಲಸ ಮಾಡಿಸಲು) ಮುತ್ತಿಕೊಂಡಿರುವಿಕೆ, ಸತತ ಬಲಾತ್ಕಾರ. [S.-basket ಸೇನಾ ರಕ್ಷಣೆಯ ತೊಂಬೆ (=Gabion). S.-gun ಮುತ್ತಿಗೆಯಲ್ಲಿ ಉಪಯೋಗಿಸುವ ಬಲು ಭಾರಿಯ ಫಿರಂಗಿ: ಮುತ್ತಿಗೆ, ಆಕ್ರಮಣ, —ಫಿರಂಗಿ. S.-train ಮುತ್ತಿಗೆಯ ಗೋಲಂದಾಜ ಮತ್ತು ಯಂತ್ರಸಾಮಗ್ರಿ. S.-works ಮುತ್ತಿಗೆಯ(ವರು ಮಾಡಿಕೊಂಡಿರುವ) ಕಂದಕ, ಕಾಪು, ಮೊ. ವು; ಮುತ್ತಿಗೆಯ ಕಾಪು ಕಟ್ಟಡಗಳು]. (ಕ್ರಿ.) (ಪ್ರಾಚೀ. ಪ್ರ.) ಮುತ್ತಿಗೆ ಹಾಕು, ಆಕ್ರಮಣ ಮಾಡು.

Sien(n)ése ಸೀಎನೀಸ್ (ಗು., ನಾ., ಬ. ವ. ಅದೇ) ಇಟಲಿಯಲ್ಲಿಯ ಸಿಯೆನ್ನ ಪ್ರಾಂತದ(ವನು) (S. school ೧೩-೧೪ನೆಯ ಶತಮಾನದ ಒಂದು ವರ್ಣಚಿತ್ರಕಾರರ ಪಂಥ)

Siénna ಸಿಎನ (ನಾ.) ವರ್ಣದ್ರವ್ಯವಾಗಿ ಉಪಯೋಗಿಸುವ, ಹಸಿಯಲ್ಲಿ ಕಂದು ಹಳದಿಯಾಗಿಯೂ (Raw s.), ಸುಟ್ಟಾಗ ಕೆಂಗಂದಾಗಿಯೂ (Burnt s.), ಇರುವ ಒಂದು ಕಾವಿಮಣ್ಣು.

Siérra ಸಿಎರ (ನಾ.) ಗರಗಸದ ಹಲ್ಲುಗಳಂತೆ ತೋರುವ, ಕಡಿದು ಕೋಡುಗಳುಳ್ಳ ಉದ್ದ ಬೆಟ್ಟಸಾಲು; ಕ್ರಕಚ ಪರ್ವತಶ್ರೇಣಿ. ಸ್ಪೈನಿನ ಒಂದು ಜಾತಿಯ ಮೀನು.

Siésta ಸಿಎಸ್ಟ (ನಾ.) (ಸೆಕೆ ದೇಶಗಳಲ್ಲಿ) ಮಧ್ಯಾಹ್ನದ —ಲಘು ನಿದ್ರೆ, ವಿಶ್ರಾಂತಿ.

Sieve ಸಿವ್ (ನಾ., ಕ್ರಿ. ಸಕ.) ಒಂದರಿ, ಜರಡಿ, ಜಲ್ಲಡಿ, ಸಾರಣಿಗೆ (—ಹಿಡಿ, ಆಡು); —ಇಂದ ಸೋಸು; (ಅಳತೆಯಾಗಿ ಉಪಯೋಗಿಸುವ, ಒರಟಾಗಿ ಹೆಣೆದ) ಕುಕ್ಕೆ, ಹೆಡಗೆ, ಮಂಕರಿ. ಗುಟ್ಟನ್ನು ಇಟ್ಟುಕೊಳ್ಳಲಾರದವನು; ಒಡಕು ಬಾಯಿ(ಯವನು)

Siffleur (F) ಸೀಫ್ಲರ್ (ಸ್ತ್ರೀ.-euse —ಫ್ಲರ್ಸ್) (ನಾ.) ಸಿಳ್ಳು(ಸಂಗೀತ)ಗಾರ.

Sift ಸಿಫ್ಟ್ (ಕ್ರಿ.) ಒಂದರಿ, ಜಲ್ಲಡಿ, —ಆಡು, ಹಿಡಿ; ಶೋಧಿಸು, ಸೋಸು; (ಒರಟು ಭಾಗಗಳಿಂದ ನಯ ಭಾಗಗಳನ್ನು) ಶೋಧಿಸಿ ತೆಗೆ, ಆಯ್ದು ತೆಗೆ, ಬೇರ್ಪಡಿಸು, ಪ್ರತ್ಯೇಕಿಸು (*From*, *out* ಉಪ. ದೊಡನೆ); (ಸಕ್ಕರೆ, ಮೊ. ನ್ನು; ಜಲ್ಲಡಿ, ಚಮಚ, ಮೊ. ಗಳ ಮೂಲಕ) ಉದುರಿಸು; (ಸಾಕ್ಷ್ಯ, ಸಂಗತಿ, ಮೊ. ಗಳ ಸತ್ಯಾಂಶವನ್ನು ತಿಳಿಯುವ ಬಗ್ಗೆ) ಸೂಕ್ಷ್ಮವಾಗಿ ಪರಿಶೀಲಿಸು, ಪರಿಶೋಧಿಸು; ಸೋಸಿ ನೋಡು; (ಗುಣ, ಮೊ. ನ್ನು) ಪರೀಕ್ಷಿಸಿ ನೋಡು, ವಿಭಜಿಸು; (ಹಿಮ, ಬೆಳಕು, ಮೊ. ಗಳ ವಿಷಯದಲ್ಲಿ) (ಜರಡಿಯ ಮೂಲಕವೆಂಬಂತೆ) ಧಾರೆ ಧಾರೆಯಾಗಿ, ಕಣಕಣವಾಗಿ, —ಬೀಳು. (-)**sifter** (ನಾ.) (—) ಶೋಧಕ. **Sífter** (ನಾ.) ಸೋಸು ಸಲಕರಣೆ; ಒಂದರಿ; ಪದಾರ್ಥ ಪರಿಶೋಧಕ.

Sigh ಸೈ (ಕ್ರಿ., ನಾ.) (ವ್ಯಸನ, ಆಯಾಸ, ಆಕಾಂಕ್ಷೆ, ಶ್ರಮ ಪರಿಹಾರ, ಮೊ. ನ್ನು ಸೂಚಿಸಲು) ನಿಟ್ಟುಸಿರುಬಿಡು; ಸುಯ್ಯು (ಗ್ರಾಂ.). (ಬಯಸಿದ ಅಥವಾ ಕಳೆದುಹೋದ ಮನುಷ್ಯನಿಗಾಗಿ, ವಸ್ತುವಿಗಾಗಿ) ಹಂಬಲಿಸು, ಕೊರಗು (*For* ಉಪ. ದೊಡನೆ). ನಿಡುಸುಯ್ದು ಹೇಳು, ತಿಳಿಸು (*Out* ಉಪ. ದೊಡನೆ); (ಗಾಳಿ, ಮೊ. ಗಳ ವಿಷಯದಲ್ಲಿ) ಸುಯ್ಯನ್ನು. (ನಾ.) ನಿಟ್ಟುಸಿರು (ಬಿಡುವುದು, ಬಿಡುವ ಸದ್ದು), ನಿಡುಸುಯ್, ನಿಡುಸುಯಿಲು (A s. of relief ಶ್ರಮ ಪರಿಹಾರದ, ಸಮಾಧಾನದ, ನಿಡುಸುಯಿಲು). **Síghingly** (ಕ್ರಿ. ವಿ.)

Sight ಸೈಟ್ (ನಾ.) ನೋಡುವ, ಕಾಣುವ, —ಶಕ್ತಿ; ದರ್ಶನ (ಶಕ್ತಿ), ದೃಷ್ಟಿ (ಶಕ್ತಿ); ನೋಟ, ಕಾಣ್ಕೆ; ವೀಕ್ಷಣ, ಪ್ರೇಕ್ಷಣ, ಅವಲೋಕನ [Long s., Short *or* near s. (Long, short ನೋಡಿ). Know by s. ಮುಖಪರಿಚಯ ಮಾತ್ರವಿರು, ನೋಡಿ ಮಾತ್ರವಿರು. Loss

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

of s. ಕುರುಡು; ಕಣ್ಣುಹೋಗುವುದು; ದೃಷ್ಟಿನಾಶ. Second s. (ಮುಂದಾಗುವ ಅಥವಾ ದೂರ ನಡೆಯುವ ಘಟನೆಗಳನ್ನು ಕಾಣಲಾಗುವ) ಭವಿಷ್ಯದ್ ದೃಷ್ಟಿ, ದಿವ್ಯದೃಷ್ಟಿ; ಮುಂಗಾಣ್ಕೆ. Catch s. of ನೋಡು, ಕಾಣು; ಕಣ್ಣಿಗೆ ಬೀಳು. Lose s. of ಕಾಣದೆಹೋಗು, ಕಣ್ಣು ತಪ್ಪು. (ರೂಪ.) ದೃಷ್ಟಿಗೆ ಬೀಳದಿರು, ಮರೆತುಹೋಗು (Have lost s. of him ಅವನ ಸುದ್ದಿಯೆ ನನಗೆ ಗೊತ್ತಿಲ್ಲ; ಅವನು ನನ್ನ ಕಣ್ಣಿಗೆ ಬಿದ್ದೇ ಇಲ್ಲ). Get a s. of (ಪ್ರಯತ್ನಪಟ್ಟು) ಒಂದು ನೋಟವನ್ನು ಪಡೆದುಕೊ. Take a s. (*of*, *at*) (ಅಸಂ.) (ತಿರಸ್ಕಾರದಿಂದ) ಅಣಕಸನ್ನೆ ಮಾಡು. At, on, s. ನೋಡಿದೊಡನೆ, ಕಂಡ ಕ್ಷಣ. Plays music at s. (ಪೂರ್ವಾಭ್ಯಾಸವಿಲ್ಲದೆಯೆ) ಕೃತಿಪಟ ನೋಡಿದೊಡನೆ ಬಾರಿಸುತ್ತಾನೆ, ನುಡಿಸುತ್ತಾನೆ. Payable at s. (ಹುಂಡಿ, ಮೊ. ಗಳ ವಿಷಯದಲ್ಲಿ) ತೋರಿಸಿದ ಕೂಡಲೆ ಪಾವತಿಯಾಗುವ. At first s. ಮೇಲು ನೋಟಕ್ಕೆ, ಮೊದಲ ನೋಟಕ್ಕೆ; ಸ್ಥೂಲ ದೃಷ್ಟಿಗೆ, ಆಪಾತತಃ. She found favour in his s. ಆಕೆ ಆತನ ದೃಷ್ಟಿರಾಗಕ್ಕೆ, ಅನುಗ್ರಹಕ್ಕೆ, ಪಾತ್ರಳಾದಳು. Do what is right in one's own s. ತನ್ನ ದೃಷ್ಟಿಯಲ್ಲಿ (ಮನಸ್ಸಿಗೆ) ಸರಿತೋರಿದ್ದನ್ನು ಮಾಡು. In s. ದೃಷ್ಟಿಯಲ್ಲಿ; ದೃಷ್ಟಿಗೆ ಬಿದ್ದು; ಕಾಣುವಂತೆ. Out of s. ಕಣ್ಣಿಗೆ ಮರೆಯಾಗಿ; ದೃಷ್ಟಿಗೆ ಬೀಳದೆ. Heave in s. (Heave ನೋಡಿ). The millennium is in s. ಧರ್ಮಯುಗ ಮೂಡುವುದರಲ್ಲಿದೆ, ಮೂಡುತ್ತಿದೆ. Put out of s. ಕಾಣದಂತೆ ಬಚ್ಚಿಡು, ಮುಚ್ಚಿಡು; ಗಮನಿಸದಿರು, ಅಲಕ್ಷಿಸು. Came in s. of the fort ಕೋಟೆ ಕಾಣಿಸಿತು; ಕೋಟೆ(ಗೆ) ಕಾಣಿಸುವಂತೆ, —ಷ್ಟು ಹತ್ತಿರ ಬಂದನು. Out of s. out of mind ಕಣ್ಣಿಗೆ ಮರೆ ಮನಸ್ಸಿಗೂ ಮರೆ. Out of my s.! (ಆಜ್ಞೆ) ತೊಲಗಾಚೆ! ನನ್ನ ಕಣ್ಣಿಗೆ ಬೀಳಬೇಡ! ನನ್ನ ಕಣ್ಣೆದುರು ನಿಲ್ಲಬೇಡ!]. ನೋಡಿದುದು, ಪ್ರೇಕ್ಷಣೀಯವಾದುದು; ನೋಟ, ಪ್ರದರ್ಶನ, ದೃಶ್ಯ, ತಮಾಷೆ [A sad s. awaited us. A s. for sore eyes ಕಣ್ಣು ನೋವನ್ನು ಕೂಡ ಮರಸುವ ನೋಟ; ಕಣ್ಣಿಗೆ ಹಬ್ಬ, (ಮು.) ಇಷ್ಟವಾದ ಭೇಟಿಗಾರ. Went to see the sights ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು, ನೋಟ ನೋಡಲು, —ಹೋದನು. His face is a perfect s. ಅವನ ಅವಸ್ಥೆಯ ಮುಖ ನೋಡತಕ್ಕದ್ದು. Make a s. of oneself ವಿಚಿತ್ರವೇಷ ಧರಿಸಿಕೊ(ಂಡು ಎಲ್ಲರ ಕಣ್ಣನ್ನೂ ಸೆಳೆ); ವಿಲಕ್ಷಣ ವೇಷದಿಂದ ನಗೆಗೀಡಾಗು]. (ಬಳ. ಮಾ.) ದೊಡ್ಡ — ಮೊತ್ತ, ಪ್ರಮಾಣ (Will cost a s. of money ಅದಕ್ಕೆ ಬಹಳ ಹಣ ಹಿಡಿಯುತ್ತದೆ. Is a long s. better ಬಲು ಮಟ್ಟಿಗೆ ಮೇಲು, ಉತ್ತಮ). (ಫಿರಂಗಿ ಹೊಡೆಯುವಲ್ಲಿ, ದೃಷ್ಟಿಯಂತ್ರದಿಂದ ನೋಡುವಲ್ಲಿ) ನಿಕರವಾದ ಗುರಿ, ದೃಷ್ಟಿ; ದೃಷ್ಟಿ ಸಹಾಯಕ, ಲಕ್ಷ್ಯದರ್ಶಕ [Forgot to put up the leaf of his back s. (ರೈಫಲ್ ಬಂದೂಕು ಹಾರಿಸುವಲ್ಲಿ). The sight(s) of compass ದಿಕ್ಸೂಚಿಯ ಗುರಿದೃಷ್ಟಿ(ಗಳು), ದರ್ಶಕ(ಗಳು)]. **Síghtseer** (ನಾ.) ನೋಟ ನೋಡುವವನು; ನೋಟಕ; (ಪ್ರೇಕ್ಷಣೀಯ ಸ್ಥಳಗಳ) ಪ್ರೇಕ್ಷಕ; ತಮಾಷೆ ನೋಡುವವನು. **Síght-seeing** (ನಾ.); **Síghtworthy** (ಗು.) ನೋಡತಕ್ಕ, ಪ್ರೇಕ್ಷಣೀಯ, ದರ್ಶನ ಯೋಗ್ಯ. **-sighted** (ಗು.) — ದೃಷ್ಟಿಯ. **-sightedly** (ಕ್ರಿ. ವಿ.); **-sightedness** (ನಾ.); **Síghtless** (ಗು.) ಕುರುಡಾದ, ಅಂಧ; (ಕಾವ್ಯ) ಕಣ್ಣಿಗೆ ಕಾಣದ, ಅದೃಶ್ಯ. **Síghtly** (ಗು.) (ಅಮೆ. ಸಂ.) ನೋಡಬಹುದಾದ; ವಿಶಾಲ ದರ್ಶನವುಳ್ಳ; ವಿಕಾರವಲ್ಲದ; ಅಂದವಾದ. **Síghtliness** (ನಾ.)

Sight (ಕ್ರಿ. ಸಕ.) (ಮು., ಹತ್ತಿರ ಬರುವುದರಿಂದ) ಕಾಣು, ದರ್ಶನ ಪಡೆ (S. land, game); ಕಣ್ಣಿಗೆ, ದೃಷ್ಟಿಗೆ, —ಬೀಳು; (ನಕ್ಷತ್ರ, ಮೊ. ನ್ನು) ದೃಷ್ಟಿಯಂತ್ರದಿಂದ, ದರ್ಶಕದಿಂದ, —ವೀಕ್ಷಿಸು; (ಫಿರಂಗಿ, ದಿಕ್ಸೂಚಿ, ಮೊ. ಗಳಿಗೆ) ಗುರಿ, ದೃಷ್ಟಿ, —ಇಡು; ದರ್ಶಕ —ಹವಣಿಸು, ಅಳವಡಿಸು; ಗುರಿಯನ್ನು, ದೃಷ್ಟಿಯನ್ನು, —ಸರಿಪಡಿಸು, ಸರಿಹೊಂದಿಸು (Sighting shot ಗುರಿ, ದೃಷ್ಟಿ, ಸರಿಹೊಂದಿಸಲು ಹೊಡೆಯುವ ಹೊಡೆತ; ಗುರಿ ನೋಡುವ ಹೊಡೆತ); (ಫಿರಂಗಿ, ಮೊ. ನ್ನು; ದರ್ಶಕದ ಮೂಲಕ) ಗುರಿಯಿಡು.

Sígillate ಸಿಜಿಲೇಟ್ (ಗು.) (ಮಡಕೆ ಕುಡಿಕೆಗಳ ವಿಷಯದಲ್ಲಿ: ಅಲಂಕಾರಕ್ಕಾಗಿ) ಮಾದರಿಗಳನ್ನು, ಚಿತ್ರಗಳನ್ನು —ಅಚ್ಚೊತ್ತಿದ, ಮುದ್ರಿಸಿದ: ಚಿತ್ರ ಮುದ್ರಿತ. (ಸ. ವಿ.) ಮುದ್ರೆಯಂಥ ಗುರುತುಗಳುಳ್ಳ, ಮುದ್ರಾಂಕಿತ.

Sígma ಸಿಗ್ಮ (ನಾ.) ಗ್ರೀಕ್ ವರ್ಣಮಾಲೆಯ ಒಂದು ಅಕ್ಷರ ('ಸ'ಕಾರ) (Σ, C; ς, σ). **Sígmate** ಸಿಗ್ಮೆಟ್ (ಗು.), —ಮೇಟ್ (ಕ್ರಿ. ಸಕ.) ಸಿಗ್ಮ ಆಕಾರದ; '*S*' ಆಕಾರದ. (ಕ್ರಿ.) ಸಿಗ್ಮ, 'ಸ'ಕಾರ, —ಸೇರಿಸು. **Sigmátic** ಸಿಗ್ಮ್ಯಾಟಿಕ್ (ಗು.) 'ಸ'ಕಾರ —ಸೇರಿಸಿದ, ಸೇರಿಸಿ ಮಾಡಿದ (ಮು., S. aorist —ಅನಿಶ್ಚಿತ ಭೂತಕಾಲ). **Sigmátion** —ಮೇಷನ್ (ನಾ.) 'ಸ'ಕಾರ ಸೇರಿಸುವುದು. **Sígmoid** (ಗು., ನಾ.) (ಮು., ಅಂ. ರ. ಶಾ.) '*C*' ಅಥವಾ '*S*' ಆಕಾರದ; ಅರ್ಧಚಂದ್ರಾಕಾರದ, ಅರ್ಧವೃತ್ತಾಕಾರದ. (ನಾ.) '*S*' ಆಕಾರದ, ಇಮ್ಮೊಗ ಬಾಗಿದ, —ವಕ್ರ(ರೇಖೆ)

Sígmate, etc., Sigmátic, Sígmoid. **Sigma** ನೋಡಿ.

Sign ಸೈನ್ (ನಾ.) (ಒಂದು ಮೇಲ್ಮೈ, ಮೊ. ರಲ್ಲಿ ರೇಖಿಸಿದ, ಮಾಡಿದ) ಗುರುತು; (ಒಂದು ಪದಕ್ಕಾಗಲಿ ವಾಕ್ಯಾಂಶಕ್ಕಾಗಲಿ ಪ್ರತಿಯಾಗಿ ಉಪಯೋಗಿಸುವ, ಸಂಪ್ರದಾಯದ ಅರ್ಥವುಳ್ಳ) ಚಿಹ್ನೆ, ಅಂಕ(ನ), ಸಂಕೇತ [The s. of the cross (ಕ್ರೈಸ್ತ ವೈದಿಕರು ಹರಸುವಾಗ, ಲೌಕಿಕರು ಗೌರವ ತೋರಿಸುವಾಗ, ಹಣೆಯ ಮೇಲಾಗಲಿ ಎದೆಯ ಮೇಲಾಗಲಿ ಬೆರಳಿನಿಂದ ಮಾಡುವ) ಶಿಲುಬೆ ಗುರುತಿನ ಕರನ್ಯಾಸ. S. manual ಸ್ವಹಸ್ತಾಕ್ಷರ (ರುಜು), ಸ್ವಂತ ಕೈಬರಹ (ರುಜು) (ಮು., ರಾಜರ ಸ್ವಹಸ್ತಲಿಪಿ). Positive *or* plus s. (+) ಧನ ಚಿಹ್ನೆ; ಸಂಕಲನ ಚಿಹ್ನೆ; ಕೂಡುವ ಗುರುತು. Negative *or* minus s. (—) ಋಣ ಚಿಹ್ನೆ; ವ್ಯವಕಲನ ಚಿಹ್ನೆ; ಕಳೆಯುವ ಗುರುತು. Words are the signs of ideas ಮಾತುಗಳು ಭಾವಗಳ ಸಂಕೇತ]. ಕುರುಹು, ಸುಳಿವು, ಸೂಚನೆ, ಲಕ್ಷಣ (*Of*, *that* ಪದದೊಡನೆ); ಲಾಂಛನ, ಖಾತ್ರಿ, ಪ್ರಮಾಣ; (ಸ್ವಪಕ್ಷದವರನ್ನು ತಿಳಿಯಲು ಉಪಯೋಗಿಸುವ) ಗುರುತು ನುಡಿ; ಅದ್ಭುತ, ಪವಾಡ, ಶಕುನ [Violence is a s. of weakness ಹಿಂಸೆ ದೌರ್ಬಲ್ಯದ ಸೂಚನೆ. Shows all the signs of decay ಗ್ಲಾನಿಯ ಎಲ್ಲ ಲಕ್ಷಣಗಳನ್ನೂ ತೋರಿಸುತ್ತದೆ. By this s. ye shall know them ಈ ಕುರುಹಿನಿಂದ ಅವರನ್ನು ನೀವು ತಿಳಿಯಿರಿ, ಗುರುತಿಸಿರಿ. Did signs & wonders ಪವಾಡಗಳನ್ನೂ ಅದ್ಭುತಗಳನ್ನೂ —ಮೆರೆದನು, ಮಾಡಿದನು. S. & countersign (ಜೊತೆಯವರು, ಒಂದು ಗುಂಪಿನವರು, ಪರಸ್ಪರ ಗುರುತಿಸಲು ಉಪಯೋಗಿಸುವ) ಗುಪ್ತ ಸಂಕೇತ (ವಾಕ್ಯಗಳು), ಸಂಕೇತ ಪ್ರತಿ ಸಂಕೇತ. Signs of the times ಕಾಲ ಲಕ್ಷಣಗಳು]. (ಹಿಂದೆ ವ್ಯಾಪಾರಗಾರರು ಪ್ರದರ್ಶಿಸುತ್ತಿದ್ದ, ಈಗಲೂ ಮದ್ಯದಂಗಡಿಯವರೂ ಕೆಲವು ಕ್ಷೌರದಂಗಡಿಯವರೂ ತಮ್ಮ ಅಂಗಡಿಯ ಗುರುತಾಗಿ ಪ್ರದರ್ಶಿಸುವ, ಹಲಗೆಯ ಮೇಲೆ ಬಣ್ಣದಿಂದ ಬರೆದ ವಿಚಿತ್ರ ರೂಪದ) ಲಾಂಛನ (ಚಿತ್ರ), ಸಂಕೇತ (ಚಿತ್ರ), ಗುರುತು ಹಲಗೆ (= **Signboard**) [At the s. of the White Hart (ಪ್ರಾಚೀ. ಪ್ರ.) 'White Hart' ಎಂಬ ವಿಳಾಸದಲ್ಲಿ]. (ಮು., ಕೋರಿಕೆಯನ್ನು ಅಥವಾ ಆಜ್ಞೆಯನ್ನು ಸೂಚಿಸುವ) ಸನ್ನೆ, ಸಂಜ್ಞೆ (Gave him a s. to withdraw. Deaf-&-dumb signs ಕಿವುಡ ಮೂಗರ ಸನ್ನೆಗಳು. Make no s. ಯಾವ ಸನ್ನೆಯನ್ನೂ ಮಾಡದಿರು; ನಿಶ್ಚೇಷ್ಟನಾಗಿರು; ಪ್ರಜ್ಞೆಯಿಲ್ಲದವನಂತೆ ಇರು, ಪ್ರತಿಭಟಿಸದೆ ಸುಮ್ಮನೆ ಇರು). (ಖ. ವಿ.) ರಾಶಿ (ಚಕ್ರದ ಹನ್ನೆರಡು ಮನೆಗಳಲ್ಲೊಂದು). **S.-painter** ಹೆಸರು ಹಲಗೆ, ಗುರುತು ಹಲಗೆ, —ಬರೆಯುವವನು. **Sígnpost** (ಕವಲುರಸ್ತೆ, ಮೊ. ಗಳೆಡೆ ರಸ್ತೆ ಹೋಗುವ ಊರಿನ ಹೆಸರು, ಮೊ. ನ್ನು ಬರೆದಿರುವ) ಕೈಮರ, ಹೆಸರು ಕಂಬ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sign (ಕ್ರಿ.) (ಕರನ್ಯಾಸದ) ಗುರುತುಮಾಡು [S. infant with the sign of the cross (ಕ್ರೈಸ್ತರಲ್ಲಿ, ಜ್ಞಾನಸ್ನಾನ ಮಾಡಿಸುವಾಗ) ಮಗುವಿಗೆ ಕರನ್ಯಾಸದಿಂದ ಶಿಲುಬೆ ಗುರುತುಮಾಡು] ; (ಕಾಗದ, ಪತ್ರ, ಚಿತ್ರ, ಗ್ರಂಥ, ಲೇಖನ, ಮೊ. ಗಳಿಗೆ ಸ್ವಾಮ್ಯ, ಅನುಮತಿ, ಅಧಿಕಾರ, ಮೊ. ನ್ನು ಸೂಚಿಸುವ) (ಸ್ವ)ಹಸ್ತಾಕ್ಷರ, ರುಜು, ಸಹಿ, —ಹಾಕು, ಮಾಡು; ಹೆಸರು, ಮುದ್ರಿಕೆ, ಅಂಕಿತ, —ಹಾಕು (The will had never been signed. Signed as usual with a dicky-bird ವಾಡಿಕೆಯಂತೆ ಸಣ್ಣ ಹಕ್ಕಿಯ ಗುರುತು ಹಾಕಿದನು. Does not s. his contributions to the press ವೃತ್ತಪತ್ರಿಕೆಗಳಿಗೆ ಕಳುಹಿಸುವ ತನ್ನ ಲೇಖನಗಳಿಗೆ ಅವನು ಹೆಸರು ಹಾಕಿಕೊಳ್ಳುವುದಿಲ್ಲ). (ಪತ್ರಕ್ಕೆ ರುಜುಹಾಕಿ ಆಸ್ತಿ, ಅಧಿಕಾರ, ಮೊ. ನ್ನು) ಬರೆದುಕೊಟ್ಟುಬಿಡು (*Away* ಉಪ. ದೊಡನೆ). [ಕರಾರಿಗೆ ರುಜುಹಾಕಿಸಿ(ಕೊಂಡು)] (ಕೆಲಸಕ್ಕೆ) ಸೇರಿ(ಸಿ)ಕೊ (*On* ಉಪ. ದೊಡನೆ ಸಹ) (The man can only be signed on in the presence of the Board of Trade Officer. The manager has signed a new player ವ್ಯವಸ್ಥಾಪಕನು ಒಬ್ಬ ಹೊಸ ಆಟಗಾರನನ್ನು ಸೇರಿಸಿ ಕೊಂಡಿದ್ದಾನೆ). ಸನ್ನೆ, ಸಂಜ್ಞೆ —ಮಾಡು, ಕೊಡು (*To* person, *to* do. Signed to me to come) ; ಸನ್ನೆಮಾಡಿ ತಿಳಿಸು (S. assent). **Sígnable** (ಗು.) ರುಜು—ಮಾಡಬಹುದಾದ, ಮಾಡಬಲ್ಲ, ಮಾಡ ಬೇಕಾದ.

Sígnal ಸಿಗ್ನಲ್ (ಗು., ನಾ., ಕ್ರಿ.) ವಿಶೇಷವಾದ, ಗಮನಾರ್ಹವಾದ, ಪ್ರಸಿದ್ಧ, ಪ್ರಖ್ಯಾತ, ಪ್ರಮುಖ, ಆದರ್ಶಪ್ರಾಯ, ದೃಷ್ಟಾಂತರೂಪದ, ಭಾರಿ, ಮಹತ್ತ್ವದ (S. victory, defeat, reward, punishment, virtue, example) [**Sígnally** (ಕ್ರಿ. ವಿ.)]. (ನಾ.) (ಮು., ದೂರದಲ್ಲಿರುವವರಿಗೆ ಅರ್ಥವಾಗುವಂತೆ ಅಥವಾ ಮೊದಲೆ ಗೊತ್ತು ಪಡಿಸಿಕೊಂಡಂತೆ ಮಾಡುವ) ಸನ್ನೆ, ಸಂಜ್ಞೆ, ಸಂಕೇತ; ಈ ಮೂಲಕ ತಿಳಿಸಿದ ಸುದ್ದಿ: ಸಂಜ್ಞಾ, ಸಂಕೇತ, —ಸಮಾಚಾರ [The s. was to be the dropping of a handkerchief ಕರವಸ್ತ್ರ ವನ್ನು ಕೆಳಹಾಕುವುದೇ ಸಂಕೇತವಾಗಿತ್ತು. Signals are made by day with flags and by night with lights. Fog-s. (Fog[2] ನೋಡಿ). S. of distress (ಕಷ್ಟದಲ್ಲಿ ಸಿಕ್ಕಿರುವ ಹಡಗು ಸಹಾಯ ಕೋರಿ, ಗುಂಡು ಹಾರಿಸಿ ಮಾಡುವ) ಆಪತ್ತು ಸಂಜ್ಞೆ. Storm-s. ಖಗೋಳ ಸಮೀಕ್ಷಾ ಮಂದಿರಗಳಲ್ಲಿ ಬಿರುಗಾಳಿಮಳೆಯ ಸಂಭವ ವನ್ನು ಸೂಚಿಸಲು ಹಾರಿಸುವ ಶಂಕುವಿನಾಕಾರದ ಧ್ವಜ, ಮೊ. ವು: ಬಿರುಗಾಳಿಮಳೆ ಸನ್ನೆ. Code of signals, s.-book (ಮು., ಭೂ ಸೈನ್ಯ ಸಮುದ್ರ ಸೈನ್ಯಗಳಲ್ಲಿ ರಹಸ್ಯ ಸಮಾಚಾರಗಳನ್ನು ಕಳುಹಿಸಲು ಉಪಯೋಗಿಸುವ) ಸಂಕೇತ, ಸಂಜ್ಞಾ, —ಸಂಗ್ರಹ, ಪುಸ್ತಕ]. ಸಂದರ್ಭ, ಪ್ರೇರಕ, ಸೂಚನೆ, ಕಾರಣ (*For* ಉಪ. ದೊಡನೆ. S. for revolt). [S.-box (ರೈಲುದಾರಿಯ ಕೈಮರ ಬೀಳಿಸುವ ಕೀಲ, ಮೊ. ಸಲಕರಣೆಗಳನ್ನಿಟ್ಟಿರುವ) ಸನ್ನೆಗೂಡು, ಕೈಮರದ ಕೀಲಗೂಡು. S.-man (ರೈಲು ಬರುವುದೆಂದು ಕೈಮರ ಬೀಳಿಸಿ) ಸನ್ನೆ ಕೊಡುವ ವನು; ಸನ್ನೆಯಾಳು]. (ಕ್ರಿ.) ಸನ್ನೆ, ಸಂಕೇತ, ಸೂಚನೆ —ಮಾಡು, ಕೊಡು; ಸಂಕೇತದ ಮೂಲಕ ತಿಳಿಸು. **Sígnaller** (ನಾ.) ಸನ್ನೆ ಯಾಳು; ಸಂಕೇತ, ಸಂಜ್ಞಾ, —ಕಾರ, ಸೂಚಕ. **Sígnalize** (ಕ್ರಿ. ಸಕ.) ಗಮನಾರ್ಹ, ಪ್ರಸಿದ್ಧ, ಪ್ರಖ್ಯಾತ, ಮಹತ್ತ್ವಪೂರಿತ —ಮಾಡು; ವೈಶಿಷ್ಟ್ಯ, ಕಳೆ, —ಕೊಡು (His accession was signalized by an amnesty)

Sígnalize. **Signal** ನೋಡಿ.

Sígnatory ಸಿಗ್ನಟರಿ (ಗು., ನಾ.) ಒಪ್ಪಂದಕ್ಕೆ ರುಜು ಹಾಕಿರುವ (ವ್ಯಕ್ತಿ, ಪಕ್ಷ, ರಾಜ್ಯ); ಸಹಿ, ರುಜು, —ದಾರ (The signatories or s. powers to the treaty)

Sígnature ಸಿಗ್ನೆಚರ್, —ಟ್ಯುರ್ (ನಾ.) (ಪ್ರಾಚೀ. ಪ್ರ.) ಗುರುತು, ಚಿಹ್ನೆ, ಲಾಂಛನ, ಲಕ್ಷಣ (Has the s. of passion, of early death, in his face). ರುಜು, ಸಹಿ, ಕೈಬರಹ, (ಸ್ವ)ಹಸ್ತಾಕ್ಷರ, ದಸ್ಕತ್ತು. (ಮುದ್ರಣ) ರಟ್ಟುಗಟ್ಟುವಲ್ಲಿ ಜೋಡಿಸಲು ಅನುಕೂಲಸು ವಂತೆ ಪ್ರತಿಯೊಂದು ಮುದ್ರಿತ ಹಾಳೆಯ ಮೊದಲ ಪುಟದ ಅಡಿಯಲ್ಲಿ ಮುದ್ರಣಕಾರನು ಹಾಕುವ ಗುರುತಿನ ಅಕ್ಷರ ಅಥವಾ ಸಂಖ್ಯೆ: ಪತ್ರ —ಚಿಹ್ನೆ, ಸಂಖ್ಯೆ; ಮಡಿಚಿದ ಇಂಥ ಹಾಳೆ. (ಸಂ.) ಶ್ರುತಿಯನ್ನೂ ಲಯವನ್ನೂ ತೋರಿಸುವುದಕ್ಕಾಗಿ ಸ್ಥಾಯಿ ರೇಖಾವಳಿಯ (Staff) ಮೊದಲಿನಲ್ಲಿ ಹಾಕುವ ಚಿಹ್ನೆಗಳು (Key-s. ಶ್ರುತಿ ಚಿಹ್ನೆ. Rhythm-s. ತಾಳ ಚಿಹ್ನೆ)

Sígnet ಸಿಗ್ನೆಟ್ (ನಾ.) ಮುದ್ರೆ, ಮುದ್ರಿಕೆ, ಮೊಹರು [The s. (ಹಿಂದೆ ವಿಶೇಷ ಉದ್ದೇಶಗಳಿಗಾಗಿ ಉಪಯೋಗಿಸುತ್ತಿದ್ದ) ರಾಜಮುದ್ರಿಕೆ. Writer to the s. (Write ಕೆಳಗೆ Writer ನೋಡಿ)]. S.-ring ಮುದ್ರೆಯುಂಗುರ.

Signíficance, Significátion, etc. **Signify** ನೋಡಿ.

Sígnify ಸಿಗ್ನಿಫೈ (ಕ್ರಿ.) ಗುರುತು, ಕುರುಹು, ಚಿಹ್ನೆ, ಲಕ್ಷಣ, —ಆಗಿರು, ತೋರಿಸು, ಸೂಚಿಸು (A long upper lip signifies obstinacy ನೀಳವಾದ ಮೇಲುತುಟಿ ಮೊಂಡುತನವನ್ನು ಸೂಚಿಸುತ್ತದೆ, —ತನದ ಲಕ್ಷಣ); ಅರ್ಥಕೊಡು, ಅರುಹು (D.D. signifies doctor of divinity); ತಿಳಿಸು, ವ್ಯಕ್ತಪಡಿಸು (He signified his reluctance). ಪ್ರಮುಖವಾಗಿರು, ಮುಖ್ಯವಾಗಿರು, ಪರಿಣಾಮಕಾರಿ ಯಾಗಿರು (ಮು., ನಿಷೇಧಾರ್ಥದಲ್ಲಿ: It does not s. ಅದು ಅಷ್ಟು ಮುಖ್ಯವಲ್ಲ, ಪರಿಣಾಮಕಾರಿಯಲ್ಲ). **Signíficance** —ಫಿಕನ್ಸ್ (ನಾ.) ಅರ್ಥ(ಗರ್ಭಿತವಾಗಿರುವುದು), ಭಾವ(ಗರ್ಭತೆ), ಅಭಿಪ್ರಾಯ, ತಾತ್ಪರ್ಯ (With a look of deep s. ಬಹು ಭಾವಗರ್ಭಿತ ದೃಷ್ಟಿ ಯಿಂದ. Those were the words, but what is their s. ಹೇಳಿದ ಮಾತುಗಳು ಅವು, ಆದರೆ ಅವುಗಳ ಸೂಚಿತಾರ್ಥವೇನು?). ಪ್ರಾಮುಖ್ಯ(ತೆ), ಮಹತ್ತ್ವ (What he thinks about it is of no s.). **Signíficant** (ಗು.) ಅರ್ಥಪೂರ್ಣ (-kin is a s. termination): ಅರ್ಥವತ್ತಾದ, ಅರ್ಥಗರ್ಭಿತ, ಪರಿಣಾಮಕಾರಿಯಾದ; ಗಮನಾರ್ಹವಾದ; ಮಹತ್ತ್ವದ, ಪ್ರಾಮುಖ್ಯವಾದ (The only s. event was—). **Signíficantly** (ಕ್ರಿ. ವಿ.); **Significátion** (ನಾ.) (ವಿರ. ಪ್ರ.) ಅರ್ಥ ಸೂಚನೆ (ಕೊಡುವುದು); (ಮಾತಿನ, ವಾಕ್ಯದ) ಖಚಿತವಾದ ಅರ್ಥ, ಭಾವ, ಅಭಿಪ್ರಾಯ, ತಾತ್ಪರ್ಯ; (ವಿರ. ಪ್ರ.) ಪ್ರಾಮುಖ್ಯ(ತೆ), ಮಹತ್ತ್ವ. **Signíficative** —ಕ(ಕೇ)ಟಿವ್ (ಗು.) ಸೂಚಕವಾದ, ಲಕ್ಷಣ ತೋರುವ (*Of* ಉಪ. ದೊಡನೆ); ಅರ್ಥವತ್ತಾದ; ಭಾವಗರ್ಭಿತವಾದ.

Sígnior ಸೀನ್ಯಾರ್ (ನಾ.) Grand S. ತುರ್ಕಿಯ ಸುಲ್ತಾನ; ಮಹಾ ಶ್ರೀಮಂತ, ಪ್ರಭು.

Sígnor ಸೀನಾ(ನ್ಯೊ)ರ್ (ನಾ., ಬ. ವ. -ri —ರೀ) (ಇಟಲಿಯವರಲ್ಲಿ ಬಳಕೆ ಯಿರುವ ಒಕ್ಕಣೆಯ ಪದ): ಶ್ರೀಮಾನ್. **Signóra** ಸಿನಾ(ನ್ಯೊ)ರಾ (ನಾ., ಬ. ವ. -re —ರೇ); **Signorína** ಸಿ(ೕ)ನ್ಯೊರೀನಾ (ನಾ., ಸ್ತ್ರೀ., ಬ. ವ. -ne —ನೇ) ಶ್ರೀಮತಿ.

Sikh ಸಿ(ೕ)ಕ್ (ನಾ.) ಸಿಕ್ ಮತದವನು. **Síkhism** (ನಾ.) ಸಿಕ್ ಮತ, ಧರ್ಮ, ತತ್ತ್ವ.

Sílage ಸೈಲೆ(ಲ)ಜ್ (ನಾ., ಕ್ರಿ. ಸಕ.) = Ensilage.

Sílence ಸೈಲೆನ್ಸ್ (ನಾ., ಕ್ರಿ. ಸಕ.) ಸದ್ದು, ಗದ್ದಲ; —ಮಾಡದಿರು ವುದು, ಇಲ್ಲದಿರುವುದು; ಮಾತಾಡದಿರುವುದು; ಗುಟ್ಟು ಬಿಟ್ಟುಕೊಡ ದಿರುವುದು; ಸುಮ್ಮನೆ, ಗುಮ್ಮನೆ, —ಇರುವುದು; ಮೌನ, ನಿಶ್ಶಬ್ದ(ತೆ), ಮೂಕತೆ, ಮೂಕಭಾವ, ನೀರವತೆ [The s. of Scripture on the subject ಆ ವಿಷಯದಮೇಲೆ ಶಾಸ್ತ್ರ ಏನೂ ಹೇಳದಿರುವುದು, ಶಾಸ್ತ್ರದ ಮೌನ. S. gives consent ಸುಮ್ಮನೆ ಇದ್ದರೆ ಸಮ್ಮತಿ ಕೊಟ್ಟಂತೆ; ಮೌನ ಒಪ್ಪಿಗೆಯನ್ನು ಸೂಚಿಸುತ್ತದೆ. Keep s. ಬಾಯಿ ಬಿಡದಿರು, ಮಾತಾಡದಿರು. Break s. ಬಾಯಿಬಿಡು, ಮಾತಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Put to s. (ವಾದವನ್ನು ಖಂಡಿಸಿ) ಬಾಯಿ ಮುಚ್ಚಿಸು. In s. ನಿಶ್ಶಬ್ದವಾಗಿ, ನೀರವವಾಗಿ; ಸದ್ದಿಲ್ಲದೆ. S.! ಸದ್ದು! ಗಪ್‌ಚಿಪ್!]. ಮರವೆ, ವಿಸ್ಮೃತಿ, ಅಜ್ಞಾತತೆ (Have passed into s. ಜನರ ನೆನಪಿನಿಂದ ಮರೆತುಹೋಗಿದ್ದಾರೆ). (ಕ್ರಿ.) (ಬಲಾತ್ಕಾರ, ವಾದ, ಮೊ. ಗಳಿಂದ) ಬಾಯಿ —ಕಟ್ಟು, ಮುಚ್ಚಿಸು; ಸುಮ್ಮನಾಗಿಸು, ಮಾತನಾಡದಂತೆ ಮಾಡು, ನಿರುತ್ತರಮಾಡು (Silenced the enemy's batteries ಶತ್ರು ಫಿರಂಗಿಗಳ ಸದ್ದಡಗಿಸಿದನು. Silenced the best debaters in the House ಸಭೆಯ ಅತ್ಯುತ್ತಮ ವಾದಿಗಳ ಬಾಯಿ ಮುಚ್ಚಿಸಿದನು. Silenced the voice of conscience ಆತ್ಮಸಾಕ್ಷಿಯ ದನಿಯನ್ನು ಅಡಗಿಸಿದನು). **Sílencer** (ನಾ.) (ಫಿರಂಗಿ, ಎಣ್ಣೆಯಂಜಿನು, ಮೊ. ಗಳಿಂದ ಅನಿಲ ಹೆಚ್ಚು ಸದ್ದುಮಾಡದೆ ಹೊರ ಹೋಗುವಂತೆ ಮಾಡುವ) ಶಬ್ದ—ಶಾಮಕ, ರೋಧಕ. **Sílent** (ಗು.) ಮಾತಾಡದ, ಮಾತಿಲ್ಲದ, ಸದ್ದಿಲ್ಲದ, ಸುಮ್ಮನಿರುವ, ಬಾಯಿಬಿಡದ, ನಿಶ್ಶಬ್ದ, ಮೂಕ, ಮೌನವಾದ [S. film ಮೂಕ ಚಲನ ಚಿತ್ರ. S. letter ಇದ್ದರೂ ಉಚ್ಚಾರವಾಗದಿರುವ ಅಕ್ಷರ: ಮೂಕಾಕ್ಷರ (ಉದಾ., doubt ಎಂಬ ಶಬ್ದದಲ್ಲಿ b). S. partner (ಕಾರ್ಯ ನಿರ್ವಾಹದಲ್ಲಿ ಭಾಗವಿಲ್ಲದ) ಮೌನ ಪಾಲುಗಾರ. The s. system (ಸೆರೆಮನೆಗಳಲ್ಲಿ ಸೆರೆಯಾಳುಗಳು ಮಾತಾಡಲೇ ಕೂಡದೆಂದು ನಿರ್ಬಂಧವಿರುವ) ಮೌನ ಪದ್ಧತಿ. History is s. upon it ಚರಿತ್ರೆ ಆ ಬಗ್ಗೆ ಏನೂ ಹೇಳುವುದಿಲ್ಲ, ಮೌನವಾಗಿದೆ]. **Sílently** (ಕ್ರಿ. ವಿ.)

Siléus ಸೈಲೀನಸ್ (ನಾ.) (ಗ್ರೀಕ್ ಪುರಾಣ) ಬಾಖಸ್ ದೇವತೆಯ ಸಾಕು ತಂದೆಯಾದ ಕುಡುಕ ಮುದುಕ. ಕುಡಿದು ಖುಷಿಯಾಗಿರುವ ಮುದುಕ.

Silésia ಸಿ(ಸೈ)ಲೀಷ, —ಷಿಯ (ನಾ.) (ಉಡುಪಿನ ಅಸ್ತರಿಗೂ ಕಿಟಕಿಯ ತೆರೆಗಳಿಗೂ ಉಪಯೋಗಿಸುವ, ಹಿಂದೆ ಸೈಲೀಷದಲ್ಲಿ ತಯಾರಿಸುತ್ತಿದ್ದ) ಹಲವು ಬಗೆಯ ನಯವಾದ ಬಟ್ಟೆ.

Silhouétte ಸಿಲುಎಟ್ (ನಾ., ಕ್ರಿ. ಸಕ.) ಬಿಳಿಯ ಹಿನ್ನೆಲೆಯ ಮೇಲೆ ಹೊರ ರೇಖೆಯನ್ನು ತೋರಿಸುವ, ಸಾ., ಒಳಗೆಲ್ಲ ಕಪ್ಪು ಬಣ್ಣ ತುಂಬಿದ ಅಥವಾ ಕಪ್ಪು ಕಾಗದದಲ್ಲಿ ಕತ್ತರಿಸಿದ, ಮನುಷ್ಯನ ಅಥವಾ ವಸ್ತುವಿನ, ಪಾರ್ಶ್ವ ಚಿತ್ರ: ನೆರಳು ಚಿತ್ರ, ಪಾರ್ಶ್ವಚ್ಛಾಯೆ; ಬೆಳಕಿಗೆ ಎದುರಾಗಿ ನೋಡಿದಾಗ ಕಾಣುವ ವ್ಯಕ್ತಿಯ ಅಥವಾ ವಸ್ತುವಿನ ಆಕಾರ: ಛಾಯಾರೂಪ (In s. ಛಾಯಾರೂಪದಲ್ಲಿ ಕಾಣುವ, ಇರಿಸಿದ). (ಕ್ರಿ.) ನೆರಳು ಚಿತ್ರವಾಗಿ, ಪಾರ್ಶ್ವಚ್ಛಾಯೆಯುಲ್ಲಿ, ಛಾಯಾರೂಪದಲ್ಲಿ, —ತೋರಿಸು, ಚಿತ್ರಿಸು (೧೮ನೇಶತಲ್ಲಿ ಫ್ರಾನ್ಸಿನ ಆರ್ಥಿಕ ಸಚಿವನಾಗಿದ್ದ Etienne de Silhouette ಎಂಬಾತನ ಹೆಸರಿನಿಂದ: ಆತನು ಇಂಥ ಚಿತ್ರಗಳನ್ನು ಮಾಡುತ್ತಿದ್ದ ಕಾರಣದಿಂದ ಅಥವಾ ಆತನ ಕೃಪಣತೆಯ ಕಾರಣದಿಂದ ಇರಬಹುದು)

Sílica ಸಿಲಿಕ (ನಾ.) ಹಲವು ಪ್ರಶಸ್ತ ಶಿಲೆಗಳಲ್ಲಿಯೂ ಇತರ ಶಿಲೆಗಳಲ್ಲಿಯೂ, ಮು., ಬೆಣಚುಕಲ್ಲಿನಲ್ಲಿಯೂ ಮರಳಿನಲ್ಲಿಯೂ (ಸಿಕತ) ವಿಶೇಷವಾಗಿ ಇರುವ ಸಿಲಿಕನ್ ಡೈಆಕ್ಸೈಡ್ ಖನಿಜ; ಸಿಲಿಕ. **Sílicated** —ಕೇಟೆಡ್ (ಗು.) ಸಿಲಿಕ —ಲೇಪಮಾಡಿದ, ತುಂಬಿದ, ಮಿಶ್ರಮಾಡಿದ. **Silícic** —ಸಿಕ್ (ಗು.) ಸಿಲಿಕ—ವುಳ್ಳ, ಸಂಬಂಧವಾದ. **Silicíferous** (ಗು.); **Silícify** —ಸಿಫೈ (ಕ್ರಿ.) ಸಿಲಿಕ ಗರ್ಭಿತಮಾಡು; ಸಿಲಿಕ(ವನ್ನಾಗಿ) ಮಾಡು; ಕಲ್ಲಾಗಿಸು, ಕಲ್ಲಾಗು. **Silícificátion** (ನಾ.); **Silícious** (ಗು.); **Silíceous** (ಗು.); **Sílicate** —ಕೆಟ್ (ನಾ.) ಸಿಲಿಕ ಲವಣ. **Silici-** —ಸೈ— **Silico-** —ಕೊ— (ಸ. ಪೂ. ಪ.); **Sílicon** —ಕನ್ (ನಾ.) ಸಂಯುಕ್ತರೂಪದಲ್ಲಿ ಮಾತ್ರ ದೊರೆಯುವ ಒಂದು ಅಲೋಹ ಮೂಲ ಧಾತು: ಸಿಲಿಕನ್. **Silicósis** (ನಾ.) ಸಿಲಿಕ ದೂಳನ್ನು ಉಸಿರಾಡುವುದರಿಂದ ಬರುವ ಒಂದು ರೋಗ: ಸಿಲಿಕ ರೋಗ.

Sílicated, Silícify, Sílicon, Silicósis. **Silica** ನೋಡಿ.

Síliqua ಸಿಲಿಕ್ವ (ನಾ.; ಬ. ವ. -ae —ಕ್ವೀ), **Silíque** ಸಿಲೀಕ್ (ನಾ.) (ಸಾಸಿವೆ ಜಾತಿಯ ಸಸ್ಯಗಳ) ಬೀಜಕೋಶ. **Síliquose** (ಗು.), **Síliquous** —ಕ್ವಸ್ (ಗು.) ಬೀಜಕೋಶವುಳ್ಳ; ಬೀಜಕೋಶ ರೂಪದ.

Silk ಸಿಲ್ಕ್ (ನಾ.) ರೇಷ್ಮೆ(ದಾರ), ಪಟ್ಟೆ(ನೂಲು) [Artificial s. ಕೃತಕ ರೇಷ್ಮೆ. Spun s. (Spin ನೋಡಿ). Thrown s. ಎಳೆಗಳ ತಿರುಚಿಗೆ ವ್ಯತಿರಿಕ್ತವಾಗಿ ಹುರಿಮಾಡಿದ ರೇಷ್ಮೆ: ಹುರಿರೇಷ್ಮೆ]. ರೇಷ್ಮೆ ಬಟ್ಟೆ, ಕೌಶೇಯ [Take s. ರಾಜಸನ್ನದಿನ ಬ್ಯಾರಿಸ್ಟರ್ ಆಗು (ಉಣ್ಣೆ ಬಟ್ಟೆ ಬಿಟ್ಟು ರೇಷ್ಮೆ ನಿಲುವಂಗಿ ತೊಡುವ ಕಾರಣದಿಂದ)]. (ಬ. ವ.) ಹಲವು ಬಗೆಯ ರೇಷ್ಮೆ ಬಟ್ಟೆ, ರೇಷ್ಮೆ ಉಡುಪು. (S-) ರಾಜಸನ್ನದು ಪಡೆದ ಬ್ಯಾರಿಸ್ಟರ್. (ಕೆಲವು ಪದ್ಮರಾಗಗಳಲ್ಲಿಯೂ ಇಂದ್ರನೀಲಗಳಲ್ಲಿಯೂ ಕಾಣಬರುವ) ಒಂದು ಬಗೆಯ ರೇಷ್ಮೆಹೊಳಪು. (ವಿಶೇಷಣವಾಗಿ; ಈಗ ಸಾ., Silken) ರೇಷ್ಮೆಯಿಂದ ಮಾಡಿದ, ರೇಷ್ಮೆ (ಬಟ್ಟೆ)ಯ [S. stockings ರೇಷ್ಮೆ ಕಾಲುಚೀಲಗಳು. Cannot make a s. purse out of a sow's ear (ಮನುಷ್ಯನ ಅಥವಾ ಪದಾರ್ಥದ ಪ್ರಯೋಜಕತೆಗೆ ಮೀರಿದ ಕೆಲಸ ಆಗದು): ಹಂದಿ ಕಿವಿಯಿಂದ ರೇಷ್ಮೆ ಚೀಲ ಆಗದು; ರಾಗಿಹಿಟ್ಟಿನಿಂದ ಒಬ್ಬಟ್ಟು ಆಗದು]. **S.-fowl** ರೇಷ್ಮೆ ಪುಕ್ಕದ ಕೋಳಿ. **S.-gland** ರೇಷ್ಮೆ ಗ್ರಂಥಿ. **S.-reel, -winder** ರೇಷ್ಮೆ ಗೂಡಿನಿಂದ ರೇಷ್ಮೆ ಎಳೆದು ದಾರ ಸುತ್ತುವ ಸಲಕರಣೆ: ರೇಷ್ಮೆ ರಾಟೆ. **S.-worm** ರೇಷ್ಮೆ ಹುಳು. **Sílken** (ಗು.) (ಪ್ರಾಚೀ. ಪ್ರ., ಕಾವ್ಯ) ರೇಷ್ಮೆಯಿಂದ ಮಾಡಿದ. ರೇಷ್ಮೆ ವಸ್ತ್ರ ಧರಿಸಿದ; ರೇಷ್ಮೆಯಂಥ; ರೇಷ್ಮೆಯಂತೆ ಮೃದುವಾದ, ನುಣುಪಾದ, ಹೊಳೆಯುವ. (ನಡತೆ, ಮೊ. ಗಳ ವಿಷಯದಲ್ಲಿ) ನಯವಾದ; ಉಪಾಯವಾಗಿ ಮೆಚ್ಚಿಕೆ ಪಡೆಯುವ, ಹೊಸೆದುಕೊಂಡು ಹೋಗುವ. **Sílky** (ಗು.) (ಮೃದುತ್ವ, ನಯ, ಹೊಳಪು, ಮೊ. ಗಳಲ್ಲಿ) ರೇಷ್ಮೆಯಂಥ (S. manner ನಯವಾದ ನಡತೆ). **Sílkiness** (ನಾ.)

Sill ಸಿಲ್ (ನಾ.) (ಬಾಗಿಲಿನ ಅಥವಾ ಕಿಟಕಿಯ) ಅಡಿ, ತಳ, —ಮರ, ಕಲ್ಲು, ಹಲಗೆ, ಕಟ್ಟು; ಹೊಸ್ತಿಲು, ಹೊಸಿಲು.

Síllabub, Sýl- ಸಿಲಬಬ್ (ನಾ.) ಹಾಲಿಗಾಗಲಿ ಕೆನೆಗಾಗಲಿ ದ್ರಾಕ್ಷಾಮದ್ಯ, ಮೊ. ಅಮ್ಲವನ್ನು ಬೆರೆಸಿ ಮೊಸರಾಗಿಸಿ, ಜಿಲಟಿನ್ನಿನಿಂದ ಗಟ್ಟಿಯಾಗಿಸಿದ ಪಾನೀಯ ಅಥವಾ ಭಕ್ಷ್ಯ: ಒಂದು ಬಗೆಯ ಶ್ರೀಖಂಡ. (ರೂಪ.) ಹುರುಳಿಲ್ಲದ್ದು, ಪೊಳ್ಳು; ಅತ್ಯಲಂಕಾರ ಭಾಷೆ, ಆಡಂಬರದ ಬರೆವಣಿಗೆ.

Síller ಸಿಲರ್ (ನಾ.) (ಸ್ಕಾ. ಪ್ರ.) ಬೆಳ್ಳಿ; ಹಣ, ದುಡ್ಡು.

Síllery ಸಿಲರಿ (ನಾ.) (ಮೊದಲು ಫ್ರಾನ್ಸಿನ ಸಿಲರಿ ಎಂಬ ಊರಿನಲ್ಲಿ ತಯಾರಾಗುತ್ತಿದ್ದ) ಹಲವು ಬಗೆಯ ಶ್ರೇಷ್ಠ ಮದ್ಯ.

Sílly ಸಿಲಿ (ಗು., ನಾ.) (ಪ್ರಾಚೀ. ಪ್ರ.) ಏನೂ ಅರಿಯದ, ಸರಳ, ಅಸಹಾಯ, 'ಅಯ್ಯೋ ಪಾಪ' ಎನಿಸುವ, ಶೋಚನೀಯ, ಮೂಢ, ದುರ್ಬಲ, ದೃಢಕಾಯವಲ್ಲದ. ತಿಳಿಗೇಡಿ, ಪೆದ್ದ, ಬೆಪ್ಪ, ಮುಟ್ಠಾಳ, ಅವಿವೇಕಿ, —ಆದ. The s. season (ಸಾರ ಸುದ್ದಿಗಳ ಅಭಾವದಿಂದ ವೃತ್ತಪತ್ರಿಕೆಗಳು ಕ್ಷುದ್ರ ವಿಷಯಗಳ ಮೇಲೂ ಸಾಮಾನ್ಯ ವಿಷಯಗಳ ಮೇಲೂ ಲೇಖನಗಳನ್ನೂ ಚರ್ಚೆಗಳನ್ನೂ ಪ್ರಕಟಿಸಲು ತೊಡಗುವ) ಗೊಡ್ಡು ಕಾಲ; ಕ್ಷುದ್ರ ಪ್ರಸ್ತಾವ ಕಾಲ (ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳು). S. point, short leg (ಕ್ರಿಕೆಟ್ಟಿನಲ್ಲಿ) ದಾಂಡುಗಾರನಿಗೆ ಅತಿ ಹತ್ತಿರ ನಿಲ್ಲಿಸಿದ ಆಟ ಕಾಯುವವನು. (ನಾ., ಸಾ., ಮಕ್ಕಳ ಮಾತು) ದಡ್ಡ, ಪೆದ್ದ, ಮುಟ್ಠಾಳ (Don't be a s.); ಹುಡುಗಾಟಿಕೆ, ಚಾಲಲೀಲೆ. **Síllily** (ಕ್ರಿ. ವಿ.); **Sílliness** (ನಾ.)

Sílo ಸೈಲೋ (ನಾ., ಕ್ರಿ. ಸಕ.) (ಧಾನ್ಯಗಳ) ಹಗೇವು; ಹಸುರು ಮೇವನ್ನು ಅಡಕಿಡುವ ಹಗೇವು. (ಕ್ರಿ.) ಹಗೇವಿನಲ್ಲಿಡು; ಹಗೇವು ಮೇವು ಮಾಡು (Ensilage ನೋಡಿ)

Silt ಸಿಲ್ಟ್ (ನಾ., ಕ್ರಿ.) (ಕಾಲುವೆ, ರೇವು, ಮೊ. ಗಳಲ್ಲಿ ಕೂಡಿಕೊಳ್ಳುವ ಗೋಡು, ಒಂಡು, ಹೂಳು, ಮೆಕ್ಕಲು. (ಕ್ರಿ.) —ತುಂಬು, ತುಂಬಿಕೊ, ಅಡಚು, ಅಡಚಿಕೊ (*Up* ಉಪ. ದೊಡನೆ. The passage has, is, silted up)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sílvan, Sý- ಸಿಲ್ವನ್ (ಗು.) ಕಾಡಿನ, ಕಾಡುಗಳ, ಕಾಡು(ಗಳು) ಬೆಳೆದ; ವನ್ಯ, ಆರಣ್ಯಕ; ಹಳ್ಳಿಗಾಡಿನ, ಗ್ರಾಮಾಂತರದ (S. deities, paths, poetry)

Sílver ಸಿಲ್ವರ್ (ನಾ.) ಬೆಳ್ಳಿ, ರಜತ, ರೂಪ್ಯ [German s., Nickel s. (ಆಯಾ ಪದ ನೋಡಿ). Fulminating s. (ಸಿಲ್ವರ್ ಆಕ್ಸೈಡ್ ಮತ್ತು ಅಮೋನಿಯ ಸಂಯುಕ್ತವಾದ) ಒಂದು ಸಿಡಿಮದ್ದು. Oxidized s. (Oxide ನೋಡಿ)]. ಬೆಳ್ಳಿಯ ನಾಣ್ಯ, ಶುಭ್ರ (Have you any s. on you? ನಿನ್ನ ಹತ್ತಿರ ಏನಾದರೂ ಶುಭ್ರ ಉಂಟೋ?). ಬೆಳ್ಳಿಯ —ಪದಾರ್ಥ, ಒಡವೆ, ವಸ್ತು, ಪಾತ್ರೆ (Melted down all his s. in the king's service ರಾಜಸೇವೆಯಲ್ಲಿ ತನ್ನ ಬೆಳ್ಳಿಯನ್ನೆಲ್ಲ ಕರಗಿಸಿಬಿಟ್ಟನು). (ಛಾಯಾಗ್ರಾಹಕ ಕಾಗದವನ್ನು ತಯಾರಿಸುವಲ್ಲಿ ಉಪಯೋಗಿಸುವ) ಬೆಳ್ಳಿಯ ಲವಣ, ರೌಪ್ಯ ಲವಣ. (ವಿಶೇಷಣವಾಗಿ) ಬೆಳ್ಳಿಯ, ಬೆಳ್ಳಿಯಿಂದ ಮಾಡಿದ, ರೌಪ್ಯ; ಎರಡನೆಯ (ದರ್ಜೆಯ), ದ್ವಿತೀಯ (ಶ್ರೇಣಿಯ) [=**Sílvern** (ಗು.; ಪ್ರಾಚೀ. ಪ್ರ.). The s. age ಬೆಳ್ಳಿ ಯುಗ (ಮನುಷ್ಯನ ಇಳಿಗತಿಯಲ್ಲಿ ಚಿನ್ನ, ಬೆಳ್ಳಿ, ಹಿತ್ತಾಳೆ, ಕಬ್ಬಿಣ ಎಂಬ ನಾಲ್ಕು ಯುಗಗಳಲ್ಲಿ ಎರಡನೆಯದು). (ಲ್ಯಾಟಿನ್ ಸಾಹಿತ್ಯದಲ್ಲಿ) ಅಗಸ್ಟನ್ ಸಾಹಿತ್ಯ ಯುಗದ ತರುವಾಯ ಬಂದ ಸಾಹಿತ್ಯ ಯುಗ. S. Latin ಈ ಬೆಳ್ಳಿ ಯುಗದ ಲ್ಯಾಟಿನ್ (ಭಾಷೆ). Speech is s. *or* silvern, but silence is golden ಮಾತು ಬೆಳ್ಳಿ, ಮೌನ ಬಂಗಾರ (ಮೌನವಾಗಿರುವುದು ಲೇಸು ಎಂಬ ಅರ್ಥದಲ್ಲಿ)]. (ಬಿಳುಪು, ಹೊಳಪು, ನಾದ, ಮೊ. ಗಳಲ್ಲಿ) ಬೆಳ್ಳಿಯಂಥ [S. hair ಬೆಳ್ಳಿ (ಹೊಳಪಿನ) ಕೂದಲು. Has a s. tongue ಅವನಿಗೆ ಒಳ್ಳೆಯ ಅನುನಯದ ನಾಲಗೆಯಿದೆ, ವಾಗ್ವೈಖರಿಯಿದೆ (**Silver-tongued,** ಗು.). Every cloud has a s. lining (Line³ ಕೆಳಗೆ Lining ನೋಡಿ)]. **S.-bath** (ಫಲಕವನ್ನು ಛಾಯಾಗ್ರಾಹಕವನ್ನಾಗಿ ಮಾಡಲು ಉಪಯೋಗಿಸುವ) ಸಿಲ್ವರ್ ನೈಟ್ರೇಟು ದ್ರಾವಣ (ಪಾತ್ರೆ). **S. fir** ಎಲೆಗಳ ತಳ ಭಾಗದಲ್ಲಿ ಎರಡು ಬೆಳ್ಳಿ ಗೆರೆಗಳಿರುವ ಫರ್ ಮರ. **S.-fish** ಹಲವು ಬಗೆಯ ಮೀನು: ಬೆಳ್ಳಿ ಮೀನು. ಪುಸ್ತಕಗಳಲ್ಲಿಯೂ ಬೂಷ್ಟು ಹಿಡಿದ ಸ್ಥಳಗಳಲ್ಲಿಯೂ ಇರುವ ಬೆಳ್ಳಿ ಬಣ್ಣದ ಹುಳು: ಬೆಳ್ಳಿ ಹುಳು; ನುಸಿ ಹುಳು. **S. foil** ಬೆಳ್ಳಿಯ—ವರ್ತಿ, ರೇಕು. **S. fox** ತುದಿಬಿಳುಪಿನ ಕಪ್ಪು ತುಪ್ಪುಳುಳ್ಳ (ಕಪ್ಪು ಕೂದಲುಳ್ಳ) ಒಂದು ಜಾತಿಯ ನರಿ: ಬೆಳ್ಳಿ ನರಿ; ಚಂಡಕ ನರಿ. **S. gilt** ಚಿನ್ನದ ಮುಲಾಮು ಹಾಕಿದ ಬೆಳ್ಳಿ. ಬೆಳ್ಳಿಯ ರೇಕಿನ ಮೇಲೆ ಹಳದಿ ಅರಗು ಬಳಿದು ಮಾಡುವ ಕೃತಕ ಚಿನ್ನದ ಮುಲಾಮು. **S.-grey** ಹೊಳಪು ನರೆಬಣ್ಣ(ದ); ಬೆಳ್ಳಿ ಬೂದು (ಬಣ್ಣ). **S. leaf** ಬೆಳ್ಳಿಯ —ರೇಕು, ವರಕು. **S.-paper** ಒಂದು ಬಗೆಯ ನುಣುಪಾದ ಬಿಳಿಯ ನವುರು ಕಾಗದ: ಬೆಳ್ಳಿ ಕಾಗದ. (ಶಿಥಿಲ ಪ್ರ.) ತವರದ ರೇಕು. **S.-plate** ಬೆಳ್ಳಿಯ ಪಾತ್ರೆಗಳು, ಸಾಮಾನು (ತಟ್ಟೆ, ಚಮಚ, ಮೊ. ವು). **S. point** ಬೆಳ್ಳಿ ಮೊನೆಯ ಕಂಠ(ದಿಂದ ಸಂಸ್ಕರಿಸಿದ ಕಾಗದದಮೇಲೆ ನಕ್ಷೆ ಬರೆಯುವ ವಿಧಾನ) (A head in s. point ಬೆಳ್ಳಿ ಮೊನೆಯ ಕಂಠದಿಂದ ಬರೆದ ತಲೆಯ ಚಿತ್ರ). **S. print** ಬೆಳ್ಳಿಯ ಲವಣದಿಂದ ಸಂಸ್ಕರಿಸಿದ ಛಾಯಾಗ್ರಾಹಕ ಕಾಗದದಮೇಲೆ ಮುದ್ರಿಸಿದ ಛಾಯಾಚಿತ್ರ: ಬೆಳ್ಳಿ ಯಚ್ಚಿನ ಚಿತ್ರ. **S. sand** ತೋಟಕ್ಕೆ ಹಾಕುವ ನಯವಾದ ಮರಳು: ಬೆಳ್ಳಿ ಮರಳು. **S. side** ಗೋಮಾಂಸದ ತೊಡೆಯ ತುಂಡಿನ ಮೇಲು ಭಾಗ, ಉತ್ತಮ ಭಾಗ. **Sílversmith** ಬೆಳ್ಳಿಯ ಕೆಲಸದವನು, ಅಕ್ಕಸಾಲಿಗ. **S. solder** ಬೆಳ್ಳಿಯ ಬೆಸುಗೆ. **S. standard** ಕಾನೂನು ಮೇರೆಗೆ ಬೆಳ್ಳಿಯ ನಾಣ್ಯಗಳನ್ನು ಮಾತ್ರ ಚಲಾವಣೆ ಮಾಡುವುದು: ಬೆಳ್ಳಿ (ನಾಣ್ಯ).—ಚಲಾವಣೆ, ಪ್ರಮಾಣ; (ನಾಣ್ಯ ಪದ್ಧತಿಯಲ್ಲಿ) ರಜತ ಪ್ರಮಾಣ. **S.-stick** ಅರಮನೆಯಲ್ಲಿ ಕೆಲಸ ಮಾಡುವ ರಾವುತ ದಳದ ಅಧಿಕಾರಿ. **S. streak** ಇಂಗ್ಲಿಷ್ ಕಡಲುಗಾಲುವೆ. **S.-top** ಹುಲ್ಲುಗಳ ಒಂದು ರೋಗ. **S.-weed** ಎಲೆಗಳ ತಳಭಾಗ ಬೆಳ್ಳಿ ಬಿಳುಪಾಗಿರುವ, ಹಳದಿ ಹೂವು ಬಿಡುವ, ಒಂದು ಸಸ್ಯ. **Sílvery** (ಗು.) ಬೆಳ್ಳಿಯಂಥ; (ಧ್ವನಿ) ವಿಶದವೂ ಮೃದುವೂ ಆದ, ಇಂಪಾದ; ಬೆಳ್ಳಿಯ ದನಿಯ (S. voices, laugh). ಬೆಳ್ಳಿಯುಳ್ಳ, ರಜತ ಭರಿತ. **Sílveriness** (ನಾ.)

Sílver (ಕ್ರಿ.) ಬೆಳ್ಳಿಯ ಮುಲಾಮು, ಲೇಪ, ಗಿಲೀಟು, —ಹಾಕು, ಮಾಡು. (ಕನ್ನಡಿಯ ಹಿಂಭಾಗಕ್ಕೆ) ತವರದ ರೇಕು, ಪಾದರಸದ ಲೇಪ, —ಹಾಕು; ರಸ —ಹಾಕು, ಬಳಿ. (ಚಂದ್ರ, ಬಿಳಿಯ ಬೆಳಕು, ಮೊ. ಗಳ ವಿಷಯದಲ್ಲಿ) ಬೆಳ್ಳಿಯಂತೆ ಬೆಳಗು, ಪ್ರಕಾಶಿಸು; ಬೆಳ್ಳಿ ಹೊಳಪು, ಮೆರುಗು, —ಕೊಡು. (ಕೂದಲು) ಬೆಳ್ಳಗಾಗು, ನರೆ(ತುಹೋಗು), (ಕೂದಲನ್ನು) ಬೆಳ್ಳಗೆ ಮಾಡು.

Sílviculture, Sy- ಸಿಲ್ವಿಕಲ್ಚರ್ (ನಾ.) (ಅರಣ್ಯಶಾಸ್ತ್ರ) ಮರಗಳನ್ನು ಬೆಳೆಸಿ ಸಾಕುವ ಕಲೆ; ವೃಕ್ಷ, ಅರಣ್ಯ, —ಕೃಷಿ.

Símian ಸಿಮಿಯನ್ (ಗು., ನಾ.) (ಪ್ರಾ. ವಿ.) ನರವಾನರ(ದ); ಕಪಿ (ಯಂಥ); ಮಂಗ(ನಂಥ). **Símioid** (ಗು.)

Símilar ಸಿಮಿಲರ್ (ಗು., ನಾ.) ಒಂದೇ, ಅದೇ, —ಬಗೆಯ, ತೆರನ, ವಿಧದ; ಅಂಥ, ಹಾಗಿರುವ, ಹೋಲುವ, ಸದೃಶ. (ಜ್ಯಾ.) ಒಂದೇ ರೂಪದ; ಸಮಾನ ರೂಪದ. (ನಾ.) ಸಮಾನ, ಸದೃಶ,—ರೂಪಿ, ವಸ್ತು; (ಬ. ವ.) ಒಂದೇ ಬಗೆಯ ವಸ್ತುಗಳು. **Similárity** —ಲ್ಯಾರಿಟಿ (ನಾ.) ಹೋಲಿಕೆ, ಸಾದೃಶ್ಯ, ಸಾಮ್ಯ. **Símilarly** —ಲರ್ಲಿ (ಕ್ರಿ. ವಿ.) ಹಾಗೆಯೇ, ಅದರಂತೆಯೇ; ಅದೇ —ಪ್ರಕಾರ, ರೀತಿಯಲ್ಲಿ.

Símile ಸಿಮಿಲಿ(ಲೆ) (ನಾ.) ಉಪಮೆ, ಉಪಮಾನ, ಉಪಮಾಲಂಕಾರ; ಹೋಲಿಕೆ, ಸಾದೃಶ್ಯ, ಸಾಮ್ಯ (A style rich in s. and metaphor ಉಪಮೆ ಮತ್ತು ರೂಪಕಗಳಿಂದ ರಂಜಿಸುವ, ತುಂಬಿದ, ಶೈಲಿ). **Simílitude** ಸಿಮಿಲಿಟ್ಯೂಡ್ (ನಾ.) ರೂಪ ಸಾದೃಶ್ಯ, ಆಕಾರ ಸಾಮ್ಯ, (ವಿಶೇಷವಾಗಿ ಕೃತಕವಾದದ್ದು ಅಥವಾ ಕಲ್ಪಿತವಾದದ್ದು); ತೋರ್ಕೆ, ವೇಷ (In, assume, the s. of); ಹೋಲಿಕೆ, ಉಪಮೆ, ಉಪಮಾನ (Talk in similitudes ಉಪಮೆಗಳಲ್ಲಿ ಮಾತಾಡು). (ವಿರ. ಪ್ರ.) ಪಡಿಯಚ್ಚು, ಪಡಿರೂಪ, ಪ್ರತಿಕೃತಿ (Is the very s. of —ರ ಯಥಾವತ್ತಾದ ಪಡಿಯಚ್ಚು). **Símilize** (ಕ್ರಿ.) ಉಪಮೆ(ಗಳನ್ನು) ಉಪಯೋಗಿಸು; ಉಪಮೆಗಳ ಮೂಲಕ ತೋರಿಸು, ನಿರ್ದೇಶಿಸು.

Simílitude, Símilize. Simile ನೋಡಿ.

Símmer ಸಿಮರ್ (ಕ್ರಿ., ನಾ.) ಎಳಕುದಿ (—ಬರು, ಇರು), ಮರಳು, ಮರಳಿಸು; (ರೂಪ.) ಕೋಪದಿಂದ ಒಳ ಕುದಿ, ತಳಮಳಿಸು; (ನಗು, ಕೋಪ, ರೋಷ, ಮೊ. ವು) ಒಳ ಕುದಿ, ಮೆಲ್ಲಗೆ ಉಕ್ಕು. (ನಾ.) ಎಳ ಕುದಿತ (At a, on the, s. ಎಳ ಕುದಿಯುತ್ತ, ಮರಳುತ್ತ)

Simóniac, etc. Simony ನೋಡಿ.

Símon Pure ಸೈಮನ್ ಪ್ಯೂ(ಅ)ರ್ (ನಾ.) ಕೃತಕವಲ್ಲದ, ಸಾಚಾ, —ಮನುಷ್ಯ, ವಸ್ತು (ಸಾ., The real S.P.) ('Bold Stroke for a Wife' ಎಂಬ ನಾಟಕದಲ್ಲಿಯ ಒಂದು ಪಾತ್ರದ ಹೆಸರಿನಿಂದ)

Símony ಸಿ(ಸೈ)ಮೊನಿ (ನಾ.) ಕ್ರೈಸ್ತ ಮಠದ ವೃತ್ತಿ, ಧರ್ಮಾದಾಯ, ಮೊ. ನ್ನು ಕೊಳ್ಳುವ ಅಥವಾ ಮಾರುವ ಅಪರಾಧ; ಧರ್ಮಾಧಿಕಾರದ, ಮಠವೃತ್ತಿಗಳ, —ಮಾರಾಟ, ವ್ಯಾಪಾರ. **Simóniac** ಸಿಮೋನಿಆ್ಯಕ್ (ನಾ.) ಮಠಮಾನ್ಯದ ಮಾರಾಟಗಾರ, ಧರ್ಮಾಧಿಕಾರದ ವ್ಯಾಪಾರಗಾರ. **Simoníacal** ಸಿಮೊನೈಅಕಲ್ (ಗು.) ಮಠಮಾನ್ಯದ ಮಾರಾಟದ, ಧರ್ಮಾಧಿಕಾರ ವ್ಯಾಪಾರದ (ಪಾತಕದ). **Simoníacally** (ಕ್ರಿ. ವಿ.)

Simoóm ಸಿಮೂಮ್, **Simoón** ಸಿಮೂನ್ (ನಾ.) ಅರಬ್ಬೀ ಮರಳು ಕಾಡಿನಲ್ಲಿ ಕೆಲವು ನಿಮಿಷಗಳು ಮಾತ್ರ ಬೀಸುವ, ದೂಳು ತುಂಬಿದ, ಉಸಿರು ಕಟ್ಟಿಸುವ, ಒಂದು ಒಣ ಬಿಸಿಗಾಳಿ: ಸೈಮೂಮ್(ನ್) ಬಿರುಗಾಳಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Símper ಸಿಂಪರ್ (ಕ್ರಿ., ನಾ.) ಹುಸಿ ನಗೆ, ಕೃತಕ ನಗೆ (—ತೋರು, ನಗು) ; ಹುಸಿ ನಗೆಯಿಂದ ವ್ಯಕ್ತಪಡಿಸು, ಸೂಚಿಸು, ಹೇಳು (Simpered consent). **Símperer** (ನಾ.) ; **Símperingly** (ಕ್ರಿ. ವಿ.)

Símple ಸಿಂಪ್‌ಲ್ (ಗು.) ಸಂಯುಕ್ತವಲ್ಲದ, ಅಮಿಶ್ರ, ಒಂದೇ ಮೂಲ ಧಾತುವುಳ್ಳ, ಏಕಘಾತದ, ಏಕ ಪ್ರಕ್ರಿಯೆಯ, ವಿಭಜಿಸಲಾಗದ, ಅವಿಭಾಜ್ಯ : ಸರಳ [**S. addition** (ಒಂದೇ ಬಗೆಯ ಸಂಖ್ಯೆಗಳ) ಸರಳ ಸಂಕಲನ. **S. equation** (ಅವ್ಯಕ್ತ ಪರಿಮಾಣದ ಘಾತ ಒಂದಕ್ಕೆ ಮೀರಿಲ್ಲದ) ಸರಳ ಸಮೀಕರಣ (Quadratic ಪದ ನೋಡಿ). **S. eye** (ಕೀಟಗಳಲ್ಲಿ, ಒಂದೇ ಲೆನ್ಸುಳ್ಳ) ಸರಳ ನೇತ್ರ (=Ocellus). **S. fracture** (ಇತರ ಅಂಗ ಭಾಗಗಳು ಗಾಯವಾಗದೆ) ಎಲುಬು ಮಾತ್ರ ಮುರಿದಿರುವುದು ; ಸರಳ ಅಸ್ಥಿಭಂಗ. **S. idea** (ಮೂಲಾಂಶಗಳಾಗಿ ವಿಭಜಿಸಲಾಗದ) ಸರಳ, ಅವಿಭಾಜ್ಯ, —ಭಾವ. **S. interest** (Interest ನೋಡಿ). A s. quantity ಒಂದೇ ಸಂಖ್ಯೆಯಿಂದ ಸೂಚಿಸಬಹುದಾದ ಪರಿಮಾಣ: ಸರಳ ಪರಿಮಾಣ. Induction by s. enumeration (ಆಯ್ಕೆಮಾಡದೆ ಅಥವಾ ಪರೀಕ್ಷೆ ನಡಸದೆ) ಕೈಗೆ ಸಿಕ್ಕಿದ ನಿದರ್ಶನಗಳ ಆಧಾರದಮೇಲೆ ಮಾಡಿದ ಅನುಮಿತಿ : ಸರಳ ಗಣನೆಯ ಅನುಮಿತಿ. **S. leaf** ಒಂದೆಸಳಿನ ಎಲೆ ; ಏಕದಳ ಪರ್ಣ ; ಸರಳ ಪರ್ಣ. **S. machine** (ಸನ್ನೆ, ಗಾಲಿ, ಬೆಣೆ, ತಿರುಪು, ಮೊ.) ಸರಳ ಯಂತ್ರ(ಸಾಧನ). **S. pistil** ಏಕ, ಸರಳ—(ಪುಷ್ಪ) ಶಲಾಕೆ. **S. sentence** (Sentence ನೋಡಿ)] . ತೊಡಕಿಲ್ಲದ, ಜಟಿಲತೆಯಿಲ್ಲದ, ಅಲಂಕಾರ ರಹಿತ, ನಿರಾಡಂಬರ(ದ), ಹೆಚ್ಚು ಅಭಿವೃದ್ಧಿ ಹೊಂದಿರದ; ಸಾಧಾರಣ, ಸಾಮಾನ್ಯ, ಸರಳ, ಸಾದಾ [The style is s. and devoid of ornament ಶೈಲಿ ಸರಳವಾಗಿ ಅಲಂಕಾರ ರಹಿತವಾಗಿದೆ. S. diet ಸಾಧಾರಣ ಆಹಾರ. The s. life (ಭೋಗಾಡಂಬರಗಳಿಲ್ಲದ) ಸರಳ, ಸಾಮಾನ್ಯ, —ಜೀವನ ; ಪ್ರಾಕೃತ ಜೀವನ. S. beauty ನಿರಲಂಕೃತ, ಸಹಜ, —ಸೌಂದರ್ಯ. A s. form of pump (ಜಟಿಲ ಭಾಗಗಳಿಲ್ಲದ) ಸಾದಾ —ಎತ್ತಿಗೆ, ಪಂಪು. S. forms of life (ವಿಕಾಸ ಶ್ರೇಣಿಯಲ್ಲಿ) ಕೆಳವರ್ಗದ ಜೀವಿಗಳು, ಸರಳರೂಪ ಜೀವಿಗಳು] . ಕೇವಲ, ಶುದ್ಧ, ಬರಿಯ [To give an infant alcohol is s. murder *or* madness ಮಗುವಿಗೆ ಮದ್ಯಸಾರ ಕೊಡುವುದು ಕೇವಲ ಪ್ರಾಣಹತ್ಯ, ಇಲ್ಲವೆ ಹುಚ್ಚುತನ. His s. word is as good as an oath ಅವನ ಬರಿಯ ಮಾತೇ ಆಣೆ ಇದ್ದಹಾಗೆ. Fee s. (Fee ನೋಡಿ)] . ಅಕೃತಕ, ನಿಷ್ಕಪಟ, ಅಕೃತ್ರಿಮ, ಸ್ವಾಭಾವಿಕ, ಸಾಧಾರಣ, ಸಾದಾ, ಸರಳ [A s. person ನಿಷ್ಕಪಟ ಮನುಷ್ಯ, ಸರಳ ವ್ಯಕ್ತಿ. S. attire ಸಾದಾ ಉಡುಪು. A s. heart ಸರಳ ಹೃದಯ(ವುಳ್ಳವನು)] . ತಿಳಿವಳಿಕೆಯಿಲ್ಲದ, ಅನುಭವವಿಲ್ಲದ, ದಡ್ಡ, ಅಜ್ಞಾನಿ, ಮೂಢ (Am not so s. as to suppose —ಎಂದು ಊಹಿಸುವಷ್ಟು, ಊಹಿಸಲು, ನಾನು ದಡ್ಡನಲ್ಲ). ಕ್ಲಿಷ್ಟವಲ್ಲದ, ಕಷ್ಟವಲ್ಲದ, ಸುಲಭ, ಸಲೀಸಾದ (The problem is very s. ಸಮಸ್ಯೆ ಬಹು ಸುಲಭವಾದುದು). ಕೀಳು(ದರ್ಜೆಯ), ಅಲ್ಪ, ಕ್ಷುದ್ರ, ಸಾಮಾನ್ಯ, ಬಡ (Gentle & s. ಕುಲೀನರೂ ಕೆಳವರ್ಗದವರೂ ; ವಂಶಲಾಂಛನಧಾರಿಗಳೂ ಸಾಮಾನ್ಯರೂ. Her s. efforts to please ಸಂತೋಷಪಡಿಸಲು ಮಾಡಿದ ಅವಳ ಬಡ ಪ್ರಯತ್ನಗಳು). **S.-hearted** ಸರಳ ಹೃದಯದ. **S.-minded** ಸರಳ ಮನಸ್ಸಿನ. **S.-míndedness** ಸರಳ ಮನಸ್ಕತೆ. **Símpleness** (ನಾ.) (ವಿರ. ಪ್ರ.) ; **Símpleton** (ನಾ.) ದಡ್ಡ, ಪೆದ್ದ, ಪೆದ್ದು, ಮೂಢ. **Simplíciter** (L) ಸಿಂಪ್ಲಿಸಿಟರ್ (ಕ್ರಿ. ವಿ.) ಶುದ್ಧಾಂಗವಾಗಿ, ಕೇವಲವಾಗಿ, ನಿರುಪಾಧಿಕವಾಗಿ. **Simplícity** (ನಾ.) ಅಸಂಯುಕ್ತತೆ, ಅಮಿಶ್ರತೆ (The s. of metals, of earth) ; ಅಜಟಿಲತೆ, ಅಕ್ಲಿಷ್ಟತೆ (The s. of a machine) ; ಸುಲಭತೆ, ಸೌಲಭ್ಯ, ಸರಳತೆ (The s. of a doctrine); ಅಕೃತಕತೆ, ಸಾದಾತನ (S. of dress) ; ಅಕೃತ್ರಿಮತೆ, ನಿಷ್ಕಾಪಟ್ಯ (In wit a man ; simplicity a child); ದಡ್ಡತನ, ಮೌಢ್ಯ, ಮಂಕು, ಅಜ್ಞಾನ (That other s. which is only a euphemism for folly) ; (ವಿರ. ಪ್ರ.) ದಡ್ಡ, ಮಂಕ, ಮೂಢ, ಅಜ್ಞಾನಿ; (ಶೈಲಿ, ಮೊ. ಗಳಲ್ಲಿ) ನಿರಲಂಕಾರ, ನಿರಾಡಂಬರ(ತೆ) (S. is become a very rare quality in a writer). **Simplify** (ಕ್ರಿ. ಸಕ.) ಸುಲಭ, ಸರಳ, ಸುಗಮ —ಮಾಡು ; ಸುಲಭ ರೂಪಕ್ಕೆ ತರು. **Simplificátion** (ನಾ.) ಸುಲಭ ರೂಪ(ಕ್ಕೆ ತರುವುದು). **Símplism** (ನಾ.) ಕೃತಕ ಸರಳತೆ; ಸರಳತೆಯ ಸೋಗು. **Símply** (ಕ್ರಿ. ವಿ.) ಸರಳವಾಗಿ, ಸುಲಭವಾಗಿ, ಸುಮ್ಮನೆ, ಕೇವಲ.

Símple (ನಾ.) ಸಾಮಾನ್ಯ ವರ್ಗದವನು ; (ಬ. ವ.) ಸಾಮಾನ್ಯ ಜನ (Gentle or s. shall not darken my doors). ದಡ್ಡ, ಎಗ್ಗ, ಮೂಢ, ಅವಿವೇಕಿ, ಏನೂ ತಿಳಿಯದವನು. (ಬ. ವ.) ದಡ್ಡರು, ಮೂಢರು (A snare to the s.). ಸುಲಭ, ಸರಳ, —ಭಾವ, ಪರಿಮಾಣ ; ಅಸಂಯುಕ್ತ, ಅಮಿಶ್ರ, —ವಸ್ತು. ಒಂದು ಓಷಧಿ, ಮೂಲಿಕೆ ; ಇದರಿಂದ ಮಾಡಿದ ಔಷಧ. Be cut for the simples ಅವಿವೇಕ ಪರಿಹಾರಕ್ಕಾಗಿ, ಅಜ್ಞಾನ ನಿವಾರಣೆಗಾಗಿ, —ಶಸ್ತ್ರ ಚಿಕಿತ್ಸೆ ಹೊಂದು.

Símpleton, Simplíciter, Simplícity, Símplify, etc. Simple ನೋಡಿ.

Simulácrum ಸಿಮ್ಯುಲೇಕ್ರಂ (ನಾ. ; ಬ. ವ. -cra —ಕ್ರ) (ದೇವತೆ, ಮನುಷ್ಯ, ವಸ್ತು, ಮೊ. ರ) ಬೊಂಬೆ, ಪ್ರತಿಮೆ, ವಿಗ್ರಹ ; (ಒಂದರ) ಬರಿಯ ತೋರ್ಕೆ, ಛಾಯಾರೂಪ ; ಕೃತ್ರಿಮ ಪ್ರತಿ, ಛದ್ಮವೇಷ, ಸಾದೃಶ್ಯದ ಆಭಾಸ.

Símulant. Simulate ನೋಡಿ.

Símulate ಸಿಮ್ಯುಲೇಟ್ (ಕ್ರಿ. ಸಕ.) ನಟನೆ ಮಾಡು, ನಟಿಸು ; ವೇಷ —ತಾಳು, ಹಾಕು, ತೆಗೆ ; ಸೋಗು ಹಾಕು ; ಅನುಕರಿಸು; (ಮಾತಿನ ವಿಷಯದಲ್ಲಿ) (ಮೂಲಪದವೆಂದು ತಪ್ಪಾಗಿ ಗ್ರಹಿಸಿದ ಪದದಿಂದ ಸೂಚಿತವಾದ ಮೇರೆಗೆ) ರೂಪಾಂತರ ಹೊಂದು, ರೂಪ ತಾಳು (S. virtue, indignation, etc. ಶೀಲ, ಸೌಜನ್ಯ, ಆಗ್ರಹ, ಮೊ. ನ್ನು ನಟಿಸು. Actor simulates king ನಟನು ರಾಜನ ವೇಷ ಹಾಕುತ್ತಾನೆ, —ರಾಜನಾಗಿ ನಟಿಸುತ್ತಾನೆ. Chameleon simulates its surroundings. *Amuck*, for *amok*, simulates the English muck ='Amok' ಪದಕ್ಕೆ ಬದಲಾಗಿ ಉಪಯೋಗಿಸುವ 'amuck' ಎಂಬ ಪದ ಇಂಗ್ಲಿಷಿನ 'muck' ಪದದಮೇಲೆ ರೂಪಾಂತರ ಹೊಂದಿದೆ). **Simulátion** (ನಾ.) ; **Símulant** (ಗು.) ತೋರ್ಕೆಯುಳ್ಳ, ಹಾಗಿರುವ, ಅನುಕಾರಿ (*Of* ಉಪ. ದೊಡನೆ) (Stamens s. of petals ದಳಗಳ ಹಾಗಿರುವ ಕೇಸರಗಳು)

Simultáneous ಸಿ(ಸೈ)ಮಲ್ಟೇನಿಯಸ್ (ಗು.) ಒಂದೇ ಕಾಲದಲ್ಲಿ ನಡೆಯುವ, ಆಗುವ ; ಒಡನೆಯ ; ಏಕ, ಸಹ, —ಕಾಲಿಕ. **Simultáneously** (ಕ್ರಿ. ವಿ.) ; **Simultáneousness** (ನಾ.) ; **Simúltanéity** —ಟನೀಇಟಿ (ನಾ.) ಏಕ, ಸಹ, —ಕಾಲಿಕತೆ ; ಒಂದೇ ಕಾಲದಲ್ಲಿ ಸಂಭವಿಸುವುದು, ಘಟಿಸುವುದು.

Simúrg ಸಿಮರ್ಗ್ (ನಾ.) (ಪರ್ಷಿಯನ್ ಪುರಾಣದಲ್ಲಿ ಬರುವ) ಒಂದು ರಾಕ್ಷಸ ಪಕ್ಷಿ ; ಸೈಮುರ್ಗ್ ಹಕ್ಕಿ.

Sin ಸಿನ್ (ನಾ., ಕ್ರಿ. ಅಕ.) ಪಾಪ (ಕಾರ್ಯ), ದುಷ್ಕರ್ಮ, ದುರಿತ, ಪಾತಕ [Original s. (Origin ಕೆಳಗೆ Original ನೋಡಿ). Living in open s. ಮುಚ್ಚುಮರೆಯಿಲ್ಲದೆ, ನಿರ್ಭಯವಾಗಿ, —ಪಾಪಜೀವನ ನಡಸುತ್ತ, ವ್ಯಭಿಚಾರಮಾಡುತ್ತ. Deadly *or* mortal s. ಮಹಾ, ಘೋರ, —ಪಾತಕ. The seven deadly sins (ಮದ, ಲೋಭ, ಕಾಮ, ಕ್ರೋಧ, ಹೊಟ್ಟೆಬಾಕತನ, ಮಾತ್ಸರ್ಯ, ಆಲಸ್ಯ ಎಂಬ) ಸಪ್ತ ಮಹಾಪಾತಕಗಳು. One's besetting s. ಪದೇ ಪದೇ ಮನಸ್ಸನ್ನು ಎಳೆಯುವ ಪಾಪ ; ಜನ್ಮಕ್ಕೆ ಅಂಟಿದ ಪಾಪ. For my sins (ಹಾಸ್ಯ ಪ್ರ.) (ನನ್ನ ಪಾಪಗಳಿಗೆ) ದೈವಶಿಕ್ಷೆಯಾಗಿ. The unpardonable s.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಕ್ಷಮ್ಯ ಪಾಪ. Man of s. (ಪ್ರಾಚೀ. ಪ್ರ., ಹಾಸ್ಯ ಪ್ರ.) ಪರಮ ಪಾಪಿ, ಭ್ರಷ್ಟ; ಕ್ರಿಸ್ತ ವಿರೋಧಿ. Like s. (ಕ್ರಿ. ವಿ.) (ಅಸಂ.) ಜೋರಾಗಿ, ಬಿರುಸಾಗಿ, ಪ್ರಚಂಡವಾಗಿ. S.-offering ಪಾಪ ಪ್ರಾಯಶ್ಚಿತ್ತಾರ್ಥಕ —ಬಲ, ಯಜ್ಞ]. (ಒಳ್ಳೆಯ ಅಭಿರುಚಿ, ಔಚಿತ್ಯ, ಮೊ. ಗಳಿಗೆ) ಅಪಚಾರ, ಅಪರಾಧ, ದೋಷ, ತಪ್ಪು (The many literary sins I know). (ಕ್ರಿ.) ಪಾಪ ಮಾಡು; ಅಪಚಾರ, ಅಪರಾಧ, ತಪ್ಪು, —ಮಾಡು [Sinned against ಇತರರ ಪಾಪದಿಂದ ಕೇಡಿಗೆ ಒಳಗಾದ. More sinned against than sinning ತಾನು ಅಪರಾಧ ಮಾಡಿದ್ದಕ್ಕಿಂತ ಹೆಚ್ಚಾಗಿ ಇತರರಿಂದ ಅಪರಾಧಕ್ಕೆ ಬಲಿಯಾದವನು. S. one's mercies (ತನಗೆ ಲಭಿಸಿದ ಒಳ್ಳೆಯ ಅದೃಷ್ಟಕ್ಕೆ) ಕೃತಘ್ನನಾಗು]. **Sínful** (ಗು.); **Sínfully** (ಕ್ರಿ. ವಿ.); **Sínfulness** (ನಾ.); **Sínless** (ಗು.); **Sínlessly** (ಕ್ರಿ. ವಿ.); **Sínlessness** (ನಾ.); **Sínner** (ನಾ.) ಪಾಪಿ, ಪಾತಕಿ, ಅಪರಾಧಿ [(ಅನೇಕ ವೇಳೆ ಹಾಸ್ಯ ಪ್ರ.) You young s. As I am a s. (ಆಣೆಯ ವಾಕ್ಯ)]

Sínapism ಸಿನಪಿಸ್ಮ್ (ನಾ.) ಸಾಸವೆಪಟ್ಟು.

Sínanthrópus ಸಿ(ಸೈ)ನ್ಯಾಂತ್ರೋಪಸ್ (ನಾ.) ಪೀಕಿಂಗ್ ಬಳಿ ದೊರೆತ ಪಳೆಯುಳಿಕೆಗಳಿಂದ ಸೂಚಿತವಾಗುವ ವಾನರ ಮನುಷ್ಯ: ಚೀನೀ ಮಾನವ.

Since ಸಿನ್ಸ್ (ಕ್ರಿ. ವಿ., ಉಪ., ಸಂ. ಅವ್ಯ.) ಅಲ್ಲಿಂದೀಚೆಗೆ; ತರುವಾಯ; ಎಂದಿನಿಂದಲೂ, ಉದ್ದಕ್ಕೂ (=Ever s.); —ಇಂದ, ಮೇಲೆ, ಈಚೆಗೆ, ಆರಭ್ಯ (Has been healthy ever s. Then more flourishing than ever before or s. Has s. been cut down. Has happened s. 1900. Have eaten nothing s. yesterday. What have you done s. we met?). ಹಿಂದೆ, ಪೂರ್ವದಲ್ಲಿ (Happened many years s. Saw him not long s.); —ಇರುವುದರಿಂದ, ಕಾರಣದಿಂದ, ಆದ್ದರಿಂದ (S. that is so, there is no more to be said. A more dangerous, s. unknown, foe)

Sincére ಸಿನ್ಸಿಯರ್ (ಗು.) ಸತ್ಯವಾದ, ಸಾಚ, ಕೃತ್ರಿಮವಿಲ್ಲದ, ನಿಷ್ಕಪಟ, ನಿರ್ವಂಚನೆಯ, ಪ್ರಾಮಾಣಿಕ, ಯಥಾರ್ಥ, ನಿರ್ವ್ಯಾಜ, ಮನಃಪೂರ್ವಕ, ಹೃತ್ಪೂರ್ವಕ. **Sincérely** (ಕ್ರಿ. ವಿ.) Yours s. (ಮು., ಪತ್ರವ್ಯವಹಾರದಲ್ಲಿ ರುಜುವಿನ ಮೇಲ್ಗಡೆ ಬರೆಯುವ ಒಕ್ಕಣೆ): ತಮ್ಮ ವಿಶ್ವಾಸಿ. **Sincérity** ಸಿನ್ಸೆರಿಟಿ (ನಾ.)

Sínciput ಸಿನ್ಸಿಪಟ್ (ನಾ.) ಹಣೆಯಿಂದ ನೆತ್ತಿಯ ವರೆಗಿನ ತಲೆಯ ಭಾಗ: ಮುಂದಲೆ (Occiput ನೋಡಿ). **Sincípital** (ಗು.) ಮುಂದಲೆಯ.

Sine[1] ಸೈನ್ (ನಾ.) (ತ್ರಿಕೋನಮಿತಿ) ಚಾಪದ ಒಂದು ಕೊನೆಯಿಂದ ಮತ್ತೊಂದು ಕೊನೆಯ ತ್ರಿಜ್ಯಕ್ಕೆ ಲಂಬವಾಗಿ ಎಳೆದ ರೇಖೆ: ಜ್ಯಾ (=S. of arc); ಆ ಲಂಬ ರೇಖೆಗೂ ತ್ರಿಜ್ಯಕ್ಕೂ ಇರುವ ಪ್ರಮಾಣ: ಜ್ಯಾ (=S. of angle) (ಸಂಕ್ಷಿಪ್ತ: Sin). Versed s. (ಸಂಕ್ಷಿಪ್ತ: Vers) ೧-ಕೋಟಿ ಜ್ಯಾ.

Síne[2] (L) ಸಿ(ಸೈ)ನೆ(ನಿ) (ಉಪ.) ಇಲ್ಲದೆ. S. die (—ಡೈಈ) ತಾರೀಕು, ದಿನ,—ಗೊತ್ತುಪಡಿಸದೆ, ಅನಿರ್ದಿಷ್ಟವಾಗಿ (The meeting was adjourned s.d.). S. qua non (—ಕ್ವೇ ನಾನ್) ಆವಶ್ಯಕ, ಅನಿವಾರ್ಯ, —ಆದದ್ದು; ಅತ್ಯಾವಶ್ಯಕ, ಅತ್ಯಗತ್ಯ.

Sínecure ಸಿ(ಸೈ)ನೆ(ನಿ)ಕ್ಯೂ(ಅ)ರ್ (ನಾ.) ಹೆಚ್ಚು ಕಾರ್ಯ ಕರ್ತವ್ಯಗಳಿಲ್ಲದೆ ಲಾಭದಾಯಕವಾದ ಅಥವಾ ಗೌರವದಾಯಕವಾದ ಸ್ಥಾನ, ಅಧಿಕಾರ: ಲಾಭದ —ಸ್ಥಾನ, ಅಧಿಕಾರ; ಕ್ರೈಸ್ತ ಸಮುದಾಯದ ಆಧ್ಯಾತ್ಮಿಕ ರಕ್ಷಣೆಯ ಜವಾಬ್ದಾರಿಯಿಲ್ಲದ ಮಠ ಮಾನ್ಯ: ಬಿಟ್ಟಿ ಮಾನ್ಯ. **Sínecurism** (ನಾ.) ಲಾಭಸ್ಥಾನ; ಲಾಭಾಧಿಕಾರ (ಪದ್ಧತಿ). **Sínecurist** (ನಾ.) ಲಾಭಸ್ಥಾನಾಪೇಕ್ಷಿ; ಲಾಭಾಧಿಕಾರಾನ್ವೇಷಿ.

Sínew ಸಿನ್ಯು (ನಾ, ಕ್ರಿ. ಸಕ.) ಸ್ನಾಯುವನ್ನು ಎಲುಬಿಗೆ ಸೇರಿಸುವ ಗಟ್ಟಿಯಾದ, ನಾರು ನಾರಾದ, ಅಂಗಾಂಶ: ಸ್ನಾಯು —ರಜ್ಜು, ಬಂಧಿ; (ಶಿಥಿಲ ಪ್ರ., ಬ. ವ. ದಲ್ಲಿ) ಮಾಂಸಖಂಡಗಳು, ಸ್ನಾಯುಗಳು; ದೈಹಿಕ ಬಲ, ದೇಹಶಕ್ತಿ, ಮೈಕಟ್ಟು; (ರೂಪ.) ಆಧಾರ, ಮುಖ್ಯ ಸಾಧನ [The sinews of war (ಯುದ್ಧಕ್ಕೆ ಅವಶ್ಯ ಸಾಧನವಾದ) ಹಣ]. (ಕ್ರಿ.) (ಕಾವ್ಯ) ಆಧಾರ, ಸಾಧನ, —ಆಗಿರು; ಬಲ, ದೃಢ, —ಪಡಿಸು, ಗೊಳಿಸು. **Sínewless** (ಗು.); **Sínewy** (ಗು.) ಪುಷ್ಟ ಸ್ನಾಯುಗಳುಳ್ಳ; ಬಲವಾದ, ಬಿಗಿಯಾದ, ಗಟ್ಟಿಯಾದ; ಕಸುವುಳ್ಳ, ಶಕ್ತಿಯುತ, ಅಪುಳ್ಳ (S. Ajax). **Sínewiness** (ನಾ.)

Sing ಸಿಂಗ್ (ಕ್ರಿ., ಭೂತ. Sang ಸ್ಯಾಂಗ್, ವಿರ. ಪ್ರ. Sung ಸಂಗ್; ಭೂ. ಕೃ. Sung) ಹಾಡು; ಗಾಯನ, ಗಾನ, —ಮಾಡು (S. one's praises ಯಾವಾಗಲೂ ಒಬ್ಬನ ಗುಣಗಾನ ಮಾಡು. S. another song *or* tune ಬೇರೆ ರಾಗ ಎತ್ತು; ವರ್ತನೆ ಬದಲಾಯಿಸು. S. small ನಮ್ರನಾಗು, ಗರ್ವಭಂಗ ಹೊಂದು). ಗುಂಯ್ ಎನ್ನು, ಕಲರವಮಾಡು, ಝೇಂಕರಿಸು, ಮೊರೆ (Wind, kettle, bee, sings); (ಕಿವಿ) ಗುಂಯ್‌ಗುಟ್ಟು (Have a singing in one's ears). (ವೀರ, ಸೌಂದರ್ಯ, ಮಹದ್ಘಟನೆ, ಮೊ. ನ್ನು ಕುರಿತು) ಹಾಡು, ಕವಿತೆ, —ಕಟ್ಟು, ರಚಿಸು; ಕೊಂಡಾಡು, ಕೀರ್ತನೆಮಾಡು S. in (ಹೊಸ ವರ್ಷವನ್ನು) ಹಾಡಿ ಬರಮಾಡಿಕೊ, ಸ್ವಾಗತಿಸು S. out (ಹಳೆಯ ವರ್ಷವನ್ನು) ಹಾಡಿ ಬೀಳ್ಕೊಡು, ಸಾಗಕಳಿಸು. ಗಟ್ಟಿಯಾಗಿ ಕೂಗು, ಒದರು. S. to sleep (ಮಗುವನ್ನು) ಹಾಡಿ ನಿದ್ರೆ ಮಾಡಿಸು. S. into good humour (ಒಬ್ಬನನ್ನು) ಹಾಡಿ ಸುಮುಖಿಗೊಳಿಸು, ಪ್ರಸನ್ನನಾಗಿಸು. Singing-man ಸಂಬಳದ ಹಾಡುಗಾರ. Singing-master ಹಾಡಿನ ಮೇಷ್ಟ್ರು, ಗಾನ ಶಿಕ್ಷಕ. Singing-voice ಪಲುಕು ಶಾರೀರ. **Síngable** (ಗು.) ಹಾಡಬಹುದಾದ, ಗಾಯನ ಸಾಧ್ಯ. **Sínger** (ನಾ.) ಹಾಡುಗಾರ ಗಾಯಕ; ಹಾಡುಗಾತಿ, ಗಾಯಕಿ. ಪದ್ಯಕಾರ, ಕವಿ.

Singe ಸಿಂಜ್ (ಕ್ರಿ., ವರ್ತಮಾನ ಕೃ. Singeing; ನಾ.) ಮೇರೆ ಮೇರೆ —ಸುಡು, ಸುಟ್ಟುಹೋಗು; ಕಮರು, ಕಮರಿಸು; ಸೀಯು, ಸೀಯಿಸು [S. person's hair (ಕೇಶ ಸಂಸ್ಕರಣಕ್ಕಾಗಿ) ಕೂದಲು ತುದಿಯನ್ನು ಸುಟ್ಟುಹಾಕು. S. pig, fowl (ಮುಳ್ಳು, ತುಪ್ಪಳು, ಸುಟ್ಟುಹೋಗುವಂತೆ) ಹಂದಿಯನ್ನು, ಕೋಳಿಯನ್ನು, —ಹುರುಪಳಿಸು, ಬಾಡಿಸು. S. King of Spain's beard ಸ್ಪೈಯ್ನ್ ರಾಜ್ಯದ ತೀರ ಪ್ರದೇಶವನ್ನು ಹಾಳು ಮಾಡು, ಹಾವಳಿ ಎಬ್ಬಿಸು (ಸ್ಪೈಯ್ನ್ ದೊರೆಯ ಗಡ್ಡ ಕಮರಿಸು). His reputation is a little singed ಅವನ ಕೀರ್ತಿ ಕೊಂಚ ಕರಿಕಾಗಿದೆ. S. one's feathers *or* wings (ಸಾಹಸಕ್ಕೆ ಕೈಹಾಕಿ) ಗಡ್ಡ ಸುಟ್ಟುಕೊ, ಕೈ ಸುಟ್ಟುಕೊ]. (ನಾ.) (ವಿರ. ಪ್ರ.) ಸೀಯುವುದು, ಕಮರಿಕೆ, ಸೂಡು.

Singhalése ಸಿಂಗಲೀಸ್ (ಗು., ನಾ.) = Cingalese.

Single ಸಿಂಗ್‌ಲ್ (ಗು.) ಒಂದು, ಒಂದೇ, ಏಕ (ಮಾತ್ರ), ಪ್ರತ್ಯೇಕ, ತನಿ, ಬಿಡಿ, ಒಂಟಿ(ಗನಾದ), ಒಬ್ಬೊಂಟಿಗನಾದ, ಏಕಾಕಿ [S. combat, entry, file[3] (ಆಯಾ ಪದ ನೋಡಿ). S. flower (ಒಂದು ಕಾಂಡದಲ್ಲಿ ಒಂದೇ ಬಿಡುವ) ಒಂಟಿ, ತನಿ, —ಹೂವು; ಒಂದು ಸುತ್ತಿನ ಹೂವು. S. game (ಒಂದೊಂದು ಕಡೆ ಒಬ್ಬೊಬ್ಬ ಆಟಗಾರ ಇದ್ದು ಆಡುವ) ತನಿ, ಬಿಡಿ, —ಆಟ. S. wicket (ಕ್ರಿಕೆಟ್ ಆಟದ ಪ್ರಾರಂಭಾವಸ್ಥೆಯಲ್ಲಿ ಒಂದೇ ಗುರಿಕೋಲುದ್ದು, ಒಬ್ಬನೇ ದಾಂಡುಗಾರನಿದ್ದ) ಒಂಟಿ ಗುರಿ ಕ್ರಿಕೆಟ್. S. court (ಟೆನಿಸ್, ಮೊ. ಆಟಗಳಲ್ಲಿ) ತನಿ (ಆಟದ) ಅಂಗಳ. S. bed, room (ಒಬ್ಬನ ಉಪಯೋಗಕ್ಕೆ ಮಾತ್ರ ಆದ) ಒಂಟಿ —ಹಾಸಿಗೆ, ಕೋಣೆ. S. eye-glass ಒಕ್ಕಣ್ಣದಕ (=Monocle). A multitude inspired with a s. purpose ಏಕೋದ್ದೇಶದಿಂದ ಪ್ರೇರಿತವಾದ ಜನಸಮೂಹ. Paid either by instalments or in a s. sum ಕಂತುಗಳಲ್ಲಾಗಲಿ ಒಂದೇ ಮೊತ್ತದಲ್ಲಾಗಲಿ ಕೊಟ್ಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

S. life, state ಒಂಟಿ ಬಾಳು; ಅವಿವಾಹಿತ—ಜೀವನ, ಸ್ಥಿತಿ. S. man, woman ಮದುವೆಯಿಲ್ಲದವನು, —ಯಿಲ್ಲದವಳು ; ಅವಿವಾಹಿತ(ತೆ). S. blessedness (ಹಾಸ್ಯ ಪ್ರ.) ಅವಿವಾಹಿತ ಸ್ಥಿತಿ. Did not see a s. one ಒಬ್ಬನನ್ನೂ, ಒಂದನ್ನೂ ನೋಡಲಿಲ್ಲ]. ಕೃತ್ರಿಮವಿಲ್ಲದ, ನಿಷ್ಕಪಟ, ನಿರ್ವಂಚನೆಯ, ಸರಳ, ಏಕ ರೀತಿಯ ; [A s. eye ಏಕ ನಿಷ್ಠೆ (**Single-eyed** ಗು.). S. heart *or* mind ಸರಳ—ಹೃದಯ, ಮನಸ್ಸು, ಸ್ವಭಾವ (**Single-hearted,** ಗು., **Single-minded,** ಗು., ಏಕ ನಿಷ್ಠೆಯ, ಚಿತ್ತೈಕಾಗ್ರತೆಯುಳ್ಳ. **Single-mindedness,** ನಾ.)]. **S.-acting** (ಎಂಜಿನು, ಮೊ. ಗಳ ವಿಷಯದಲ್ಲಿ) ಆಡು ಬೆಣೆಯ ಒಂದು ಕಡೆ ಮಾತ್ರ ಆವಿ ಹೋಗಲು ಅವಕಾಶವಿರುವ ; ಏಕಮಾರ್ಗ ಕ್ರಿಯೆಯ. **S.-breasted** (ಅಂಗಿ, ಮೊ. ಗಳ ವಿಷಯ ದಲ್ಲಿ) ಒಂದೇ ಗುಂಡಿ ಸಾಲುಳ್ಳ. **S.-cut** (ಅರದ ವಿಷಯದಲ್ಲಿ) ಒಮ್ಮುಖವಾಗಿ ಕೊರೆದ ಹಲ್ಲು ಸಾಲುಗಳುಳ್ಳ. **S.-fire** (ತೋಟಾದ ವಿಷಯದಲ್ಲಿ; ಮತ್ತೊಂದು ಸಲ ಉಪಯೋಗಿಸದೆ) ಒಂದು ಸಲ (ಮಾತ್ರ) ಹಾರಿಸುವ. **S.-handed** (ಗು., ಕ್ರಿ. ವಿ.) ಒಬ್ಬೊಂಟಿಗನಾದ (—ನಾಗಿ), ಏಕಾಕಿಯಾದ (—ಯಾಗಿ), ಅಸಹಾಯ(ನಾಗಿ) (By his s.-handed efforts ತನ್ನೊಬ್ಬನದೇ ಪ್ರಯತ್ನಗಳಿಂದ. Cannot be done s.-handed ಒಂಟಿಯಾಗಿ, ಇತರರ ಸಹಾಯ ವಿಲ್ಲದೆ, —ಮಾಡಲಾಗುವುದಿಲ್ಲ). ಒಂದು ಕೈಯಿಂದ (ಮಾಡಿದ), ಒಕ್ಕೈಯ. (The men played s.-handed against the women with both hands. Two-handed & s.-handed swords ಇಕ್ಕೈಯ ಮತ್ತು ಒಕ್ಕೈಯ ಕತ್ತಿಗಳು). **S.-loader** ಮದ್ದು ಗುಂಡುಗಳ ಕೋಶವಿಲ್ಲದೆ ಸಲ ಸಲಕ್ಕೂ ಹಿಂಭಾಗದಿಂದ ತುಂಬುವ ಬಂದೂಕು : ಒಂಟಿ ತುಂಬು, ಒತ್ತುಂಬು, —ಬಂದೂಕು. **Single-stick** ಸುಮಾರು ಒಂದು ಕತ್ತಿಯುದ್ಧದ, ಬುಟ್ಟಿ ಹಣಿಗೆಯ ಕೈಕಾಪು ಹಿಡಿಯುಳ್ಳ ಕೋಲು; ಈ ಕೋಲಿನ ವರಿಸೆ ; ವರಿಸೆ ಕೋಲು ತಿರುಗಿಸು (ವುದು). **Singleness** (ನಾ.) ; **Singly** (ಕ್ರಿ. ವಿ.)

Single (ನಾ.) ಒಂಟಿ, ಬಿಡಿ, ತನಿ, —ಆಟ ; (ಕ್ರಿಕೆಟ್ಟನಲ್ಲಿ) ಒಂದು ಓಟದ ಹೊಡೆತ. (ಬ. ವ. ದಲ್ಲಿ ; ಟೆನಿಸ್) ತನಿ ಆಟ. (ಬ. ವ.) ಒಂಟಿಹುರಿ ರೇಷ್ಮೆದಾರ.

Single (ಕ್ರಿ. ಸಕ.) (ಒಂದು ಉದ್ದೇಶ ಸಾಧನೆಗಾಗಿ, ವಿಶೇಷ ವಾದ್ದೆಂದು, ಉದಾಹರಣೆಗಾಗಿ) ಪ್ರತ್ಯೇಕಿಸಿ, ಎತ್ತಿ, —ತೋರಿಸು, ಹೇಳು (*Out* ಉಪ. ದೊಡನೆ) ; ಆಯ್ದು ತೆಗೆ (*Out* ಉಪ. ದೊಡನೆ)

Singlet ಸಿಂಗ್ಲೆಟ್ (ನಾ.) ಷರಟಿನ ಒಳಗೆ ತೊಡುವ ಜುಬ್ಬ : ಒಳಜುಬ್ಬ.

Síngleton ಸಿಂಗ್‌ಲ್‌ಟನ್ (ನಾ.) (ವ್ಹಿಸ್ಟ್, ಮೊ. ಕೆಲವು ಬಗೆಯ ಇಸ್ಪೀಟು ಆಟಗಳಲ್ಲಿ) ಒಂದು ಕೈಯಲ್ಲಿರುವ ಒಂದು ರಂಗಿನ ಒಂಟಿಯೆಲೆ; (ವಿಸ್ತೃತಾರ್ಥದಲ್ಲಿ) ತಂಡದಿಂದ ಬೇರ್ಪಟ್ಟ ಒಂಟಿ (A quatrain consisting of a triplet and a s.)

Síngsong ಸಿಂಗ್‌ಸಾಂಗ್ (ಗು., ನಾ., ಕ್ರಿ.) ವೈವಿಧ್ಯವಿಲ್ಲದ, ಏಕ ರೀತಿಯ, —ಲಯ(ವುಳ್ಳ), ರಾಗ(ದ) ; ಏಕನಾದ(ದ) ; (ಮಾತಾಟ, ಮೊ. ಗಳಲ್ಲಿ) ಬೇಸರ ಹಿಡಿಸುವ ಏಕ —ರೀತಿ, ರಾಗ. ಆಶು ಗಾಯನ ಗೋಷ್ಠಿ ; ಕಲಾವಿಲಾಸಿಗಳ ಗಾನ ಗೋಷ್ಠಿ. (ಕ್ರಿ.) ಏಕ ಲಯದಲ್ಲಿ, ಏಕ ರಾಗದಲ್ಲಿ, —ಹಾಡು, ಮಾತಾಡು.

Síngular ಸಿಂಗ್ಯುಲರ್ (ಗು., ನಾ.) ಏಕವಚನ(ದ), ಏಕ(ವಚನ) ; ಬೇರೆ ಬೇರೆ, ಪ್ರತ್ಯೇಕ, ತನಿ, ವ್ಯಕ್ತಿಶಃ, ವೈಯಕ್ತಿಕ (All & s. ಒಟ್ಟಾಗಿಯಾಗಲಿ ಪ್ರತ್ಯೇಕವಾಗಿಯಾಗಲಿ ಎಲ್ಲವೂ ; ಸಮಷ್ಟಿಯಾಗಿ ಅಥವಾ ವ್ಯಷ್ಟಿಯಾಗಿ ಎಲ್ಲವೂ); (ಈಗ ವಿರ. ಪ್ರ.) ವಿಶಿಷ್ಟ, ಅನ್ಯಾದೃಶ, ಅಸದೃಶ, ಅನುಪಮ, ಅದ್ವಿತೀಯ; ಅಪೂರ್ವ, ಅಸಾಮಾನ್ಯ, ಅಸಾಧಾರಣ, ಅದ್ಭುತ, ಆಶ್ಚರ್ಯಕರ ; ವಿಚಿತ್ರ, ವಿಲಕ್ಷಣ, ವಿಜಾತೀಯ. **Síngu-larly** (ಕ್ರಿ. ವಿ.) ; **Singulárity** —ಲ್ಯಾರಿಟಿ (ನಾ.) (ಗುಣ ವಾಚಕಾರ್ಥಗಳಲ್ಲಿ) ; ಅಸಾಧಾರಣತೆ, ಅಸಾಮಾನ್ಯತೆ, ಅಪೂರ್ವತೆ, ವೈಚಿತ್ರ್ಯ, ವೈಲಕ್ಷಣ್ಯ, ವೈಶಿಷ್ಟ್ಯ. **Síngularize** —ಲರೈಸ್ (ಕ್ರಿ. ಸಕ.) ಎತ್ತಿ, ಪ್ರಮುಖವಾಗಿ, —ತೋರಿಸು ; ವಿಶಿಷ್ಟಮಾಡು, ವಿಶೇಷಿಸು ; ಏಕವಚನ ರೂಪಕ್ಕೆ ತಿರುಗಿಸು; (ಬ. ವ. ಪ್ರತ್ಯಯವೆಂದು ತಪ್ಪಾಗಿ ತಿಳಿದುಕೊಂಡ ಪ್ರತ್ಯಯವನ್ನು ತೆಗೆದುಹಾಕಿ) ಏಕವಚನ ಮಾಡು (*Pease* & *Chinese* are singularized into *pea*, *Chince*). **Singularizátion** (ನಾ.)

Sinhalése ಸಿನ್ಹಲೀಸ್ (ಗು., ನಾ.) = Cingalese.

Sínister ಸಿನಿಸ್ಟರ್ (ಗು.) (ವಂಶಲಾಂಛನ ವಿದ್ಯೆ ; ಗುರಾಣಿ, ಮೊ. ಗಳ) ಎಡಗಡೆಯ (Dexter ನೋಡಿ) (Bar s., Bend s. ಜಾರಜ ಚಿಹ್ನೆ); (ಹಾಸ್ಯ ಪ್ರ.) ಎಡ, ವಾಮ; ಅಪಶಕುನದ, ಅಮಂಗಳ ಸೂಚಕ ; (ಸಾ., ವ್ಯಕ್ತಿಯ ಮುಖಭಾವ, ದೃಷ್ಟಿ, ಮೊ. ಗಳ ವಿಷಯದಲ್ಲಿ) ದುರ್ಲಕ್ಷಣದ, ದೌಷ್ಟ್ಯದ, ದುರ್ಭಾವನೆಯ ; ದುಷ್ಟ, ಕುಟಿಲ (A s. design). **Sínisterly** (ಕ್ರಿ. ವಿ.) ; **Sinístral** (ಗು.) (ವಿರ. ಪ್ರ.) ಎಡ(ಗಡೆಯ), ವಾಮ (ಪಾರ್ಶ್ವದ) ; (ಸುತ್ತುಗಳುಳ್ಳ ಶಂಖುಗಳ ವಿಷಯದಲ್ಲಿ) ಎಡಸುತ್ತಿನ, ಎಡಮುರಿಯ. **Sinístrally** (ಕ್ರಿ. ವಿ.); **Sinístro-** (ಸ. ಪೂ. ಪ.) ಎಡ —, ವಾಮ —. **-cérebral** ಮಿದುಳಿನ ಎಡ ಗೋಳಾರ್ಧದ ; ಎಡ ಮಿದುಳಿನ. **Sínistrorse** ವಾಮ ಚಲನೆಯ, ಎಡ ಸುತ್ತಿನ (ಮು., ಸ. ವಿ. : ಅಡರು ಬಳ್ಳಿಗಳು, ಮೊ. ಗಳ ವಿಷಯದಲ್ಲಿ)

Sinístral, etc., Sinístro-. **Sinister** ನೋಡಿ.

Sink ಸಿಂಕ್ [ಕ್ರಿ. ; ಭೂತ. Sank ಸ್ಯಾಂಕ್, (ವಿರ. ಪ್ರ.) Sunk ಸಂಕ್ ; ಭೂ. ಕೃ. Sunk, ವಿಶೇಷಣ ಪ್ರ. Sunken] (ನಿಧಾನವಾಗಿ) ಕೆಳಕ್ಕೆ —ಹೋಗು, ಇಳಿ ; ತಳದಲ್ಲಿ ನಿಲ್ಲು ; ಮುಳುಗು, ಮುಳುಗಿ ಹೋಗು, ಅಸ್ತಮಿಸು, ಜೋಲು, ಕುಂದು, ಕುಗ್ಗು, ತಗ್ಗು, ಕುಸಿ(ದು ಹೋಗು), ಮಟ್ಟಾಗು, ಕಡಮೆಯಾಗು, ಕ್ಷಯಿಸು, ಉಡುಗು, ಅವಸಾನ ಹೊಂದು [Sun is sinking ಸೂರ್ಯ ಮುಳುಗುತ್ತಿದೆ. My heart sank ನನ್ನ ಎದೆ, ಧೈರ್ಯ, ಕುಗ್ಗಿತು. Ship sinks ಹಡಗು ಮುಳುಗು ತ್ತದೆ. Her eyes sank ಅವಳ ಕಣ್ಣುಗಳು ಕುಸಿದುವು, ಕೆಳ ಮುಖವಾದುವು. His head sank on his shoulders ಅವನ ತಲೆ ಹೆಗಲಮೇಲೆ ಜೋತುಬಿದ್ದಿತು. Voice sinks ಧ್ವನಿ ಕುಗ್ಗುತ್ತದೆ, ಉಡುಗುತ್ತದೆ. Sick man is sinking ರೋಗಿ ನಿಶ್ಶಕ್ತನಾಗುತ್ತಿದ್ದಾನೆ. Life is sinking ಪ್ರಾಣ ಉಡುಗಿ ಹೋಗುತ್ತಿದೆ, ಅವಸಾನ ಸಮೀಪಿಸುತ್ತಿದೆ. Prices s. ಬೆಲೆಗಳು ಇಳಿಯುತ್ತವೆ. Storm sinks ಬಿರುಗಾಳಿ (ಮಳೆ) ಮಟ್ಟುಬೀಳುತ್ತದೆ. River sinks ನದೀಪ್ರವಾಹ ಇಳಿಯುತ್ತದೆ. Ground sinks ನೆಲ—ಇಳಿಮೋರೆಯಾಗುತ್ತದೆ, ಕುಸಿಯುತ್ತದೆ. Darkness sank upon the scene ದೃಶ್ಯದ ಮೇಲೆ ಕತ್ತಲೆ ಕವಿಯಿತು. Sank into the grave ಗೋರಿಯಾದನು. Sank into degradation ಅವನತಿಗೆ ಇಳಿದನು ; ನೀತಿಭ್ರಷ್ಟನಾದನು. S. in one's estimation ಒಬ್ಬನ ಗಣನೆಯಲ್ಲಿ ಬಿದ್ದುಹೋಗು; ಗಣ್ಯತೆ, ಗೌರವ, —ಕಳೆದುಕೊ. His eyes, cheeks, have sunk (in) ಅವನ ಕಣ್ಣುಗಳು, ಕೆನ್ನೆಗಳು ಕುಳಿಬಿದ್ದುಹೋಗಿವೆ (Sunken cheeks, eyes ಕುಳಿಬಿದ್ದ—). Here goes, s. or swim (ಗಂಡಾಂತರಗಳನ್ನು, ನಷ್ಟಸಂಭವಗಳನ್ನು ಸಾಹಸ ದಿಂದ ಎದುರಿಸುವಲ್ಲಿ ಹೇಳುವ ಮಾತು) : ಇಗೋ ! ಮುಳುಗು, ಇಲ್ಲ ತೇಲು. ಎದೆಗುಂದದೆ ಮುನ್ನುಗ್ಗು]. ಒಳಹೊಗು, ಒಳಕ್ಕೆ ಇಳಿ ; ನಾಟು (Bayonet sank into the hilt ಸನೀನು ಹಿಡಿಯೊಳಕ್ಕೆ ಇಳಿಯಿತು. Lesson sinks into the mind ಪಾಠ ಮನಸ್ಸಿಗೆ ಇಳಿಯುತ್ತದೆ, ನಾಟುತ್ತದೆ. Dye sinks in ಬಣ್ಣ ಇಳಿಯು ತ್ತದೆ). ತಳಕ್ಕೆ, ನೆಲದೊಳಕ್ಕೆ, —ಇಳಿಸು ; ಮುಳುಗಿಸು ; ಜೋಲಬಿಡು, (ಮಟ್ಟ) ಇಳಿಸು, ತಗ್ಗಿಸು ; ಕುಗ್ಗಿಸು, ಕುಂದಿಸು ; ಮರಸು, ಕಣ್ಮರೆಮಾಡು ; ಪ್ರಸ್ತಾಪ ಎತ್ತದಿರು ; ತೋಡು, ಅಗೆ ; ಕೆತ್ತು, ಕೊರೆ [S. well ಬಾವಿ ತೋಡು. S. one's title, name ತನ್ನ ಬಿರುದನ್ನು, ಹೆಸರನ್ನು, —ತಾತ್ಕಾಲಿಕವಾಗಿ ಮರಸಿಡು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಾಶಪಡಿಸದಿರು. S. the shop (Shop ನೋಡಿ). S. a fact ನಿಜಾಂಶವನ್ನು ಅಡಗಿಸಿಡು. S. oneself *or* one's own interest ಸ್ವಾರ್ಥವನ್ನು, ಸ್ವಹಿತವನ್ನು, —ಅಡಗಿಸು, ಬಗೆಯದಿರು; ಪರೋಪಕಾರ ಬುದ್ಧಿಯುಳ್ಳವನಾಗಿರು. To s. differences ಭೇದಗಳನ್ನು ಮರೆತುಬಿಡುವುದು, ಎಣಿಸದಿರುವುದು. S. a die ಮುದ್ರೆ —ಕೆತ್ತು, ಕೊರೆ. S. money (ಸುಲಭವಾಗಿ ಹಿಂತೆಗೆಯಲಾಗದಂತೆ ಒಂದು ವ್ಯಾಪಾರೋದ್ಯಮದಲ್ಲಿ) ಹಣ —ಹಾಕು, ಸುರಿ; (ಹಾಗೆ ಹಾಕಿ) ಹಣ ಕಳೆದುಕೊ, ಮುಳುಗಿಸಿಕೊ. Sunk fence (Fence ನೋಡಿ)].

Sínkable (ಗು.); **Sínker** (ನಾ.) (ಕ್ರಿಯಾರ್ಥಗಳಲ್ಲಿ); ಗಾಳವನ್ನು, ಗಾಧಮಾಪಕವನ್ನು, ನೀರಿನಲ್ಲಿ ಮುಳುಗಿಸಲು ಉಪಯೋಗಿಸುವ ಭಾರ: ನಿಮಜ್ಜಕ; ಮುಳುಗು ಗುಂಡು. =Die-s. (Die[1] ನೋಡಿ). **Sínking** (ನಾ.) (ಕ್ರಿಯಾರ್ಥಗಳಲ್ಲಿ); (ಹಸಿವು, ಭಯ, ಮೊ. ಗಳಿಂದ) ಸತ್ತ್ವದ ಕುಗ್ಗು, ಶಕ್ತಿಗುಂದುವುದು, ಕುಸಿತ. S.-fund ರಾಜ್ಯ ಅಥವಾ ಸಂಸ್ಥೆ ತನ್ನ ಸಾಲವನ್ನು ಕ್ರಮ ಕ್ರಮವಾಗಿ ತೀರಿಸುತ್ತ ಬರಲು ಕೂಡಹಾಕುವ ಹಣ: ಕಡ ತೀರಿಕೆ ನಿಧಿ; ಇಳಿಕೆ ನಿಧಿ [The s.-f. ರಾಜ್ಯದ ಸಾಲವನ್ನು ತೀರಿಸಲು ವಿಾಸಲಾಗಿಟ್ಟ, ವೆಚ್ಚ ಕಳೆದುಳಿದ ಆಯಾಂಶ (Raid the s.-f. ಇತರ ಉದ್ದೇಶಗಳಿಗಾಗಿ ಈ ಆಯಾಂಶ ಹಣವನ್ನು ಬಳಸು; ಕಡ ತೀರಿಕೆ ನಿಧಿಯಮೇಲೆ ಕೈಹಾಕು)]

Sink (ನಾ.) ಕೊಳೆ ನೀರು ಕೂಡುವ ಸ್ಥಳ; ಬಚ್ಚಲಗುಂಡಿ, ರೊಚ್ಚುಗುಂಡಿ [(ಸಾ., ರೂಪ.) The Chinese quarter is a s. of iniquity]. (ಅಡಿಗೆಯ ಮನೆ, ಮೊ. ಗಳಲ್ಲಿಟ್ಟಿರುವ, ಹಾಕಿದ ಕಸ ಮುಸುರೆ ನೀರು, ಮೊ. ವು ಹೊರಕ್ಕೆ ಇಳಿದುಹೋಗುವಂತೆ ತಳದಲ್ಲಿ ಕೊಳವೆಯಿರುವ, ಸೀಸ, ಪಿಂಗಾಣಿ, ಮೊ. ಗಳಿಂದ ಮಾಡಿದ) ಸಾಗಣೆ ತೊಟ್ಟಿ. ನದಿಯ ನೀರು ಮಡುಗಟ್ಟಿ ನಿಲ್ಲುವ, ನೆಲದಲ್ಲಿ ಊರಿ ಅಥವಾ ಇಮರಿ ಹೋಗುವುದರಿಂದ ಬುತ್ತಿಹೋಗವ, ಸ್ಥಳ: ನದಿಯ ತಂಗು, ಮಡು. ರಂಗಭೂಮಿಗೆ ದೃಶ್ಯ ಸಲಕರಣೆಗಳನ್ನು ಎತ್ತಿ ಕೊಡುವುದಕ್ಕೂ ಅಲ್ಲಿಂದ ಇಳಿಸುವುದಕ್ಕೂ ಮಾಡಿರುವ ತೆರಪು: ರಂಗಭೂಮಿಯ ಕುಳಿ.

Sínnet. **Sennit** ನೋಡಿ.

Sinn Fein (ಐರಿಷ್ ಭಾಷೆ) ಷಿನ್ ಫ್ಲೆಯ್ನ್ (ನಾ.) ರಾಜಕೀಯ ಸ್ವಾತಂತ್ರ್ಯ, ಐರಿಷ್ ಭಾಷೆಯ ಪುನರುಜ್ಜೀವನ, ಮೊ. ಗಳ ಉದ್ದೇಶ ಸಾಧನೆಗಾಗಿ ೨೦ನೆಯ ಶತಮಾನದಲ್ಲಿ ಐರ್ಲೆಂಡಿನಲ್ಲಿ ಆರಂಭವಾದ ಒಂದು ರಾಷ್ಟ್ರೀಯ ಚಳವಳಿ ಮತ್ತು ಪಕ್ಷ; ಷಿನ್ ಫ್ಲೇನ್ —ಚಳವಳಿ, ಪಕ್ಷ. [ಐರಿಷ್: ನಾವು (ನಮಗೆ) ನಾವೆ]

Síno- ಸಿ(ಸೈ)ನೊ— (ಸ. ಪೂ. ಪ.) ಚೀನೀ—, ಚೀನಾ—. **Sinólogy** —ಲೊಜಿ (ನಾ.) ಚೀನಾ ಭಾಷೆ, ಚರಿತ್ರೆ, ಪದ್ಧತಿಗಳು, ಮೊ. ನ್ನು ಕುರಿತ ಶಾಸ್ತ್ರ: ಚೀನಾ ಶಾಸ್ತ್ರ. **Sinólogue** —ಲೋ(ಲಾ)ಗ್ (ನಾ.), **Sinólogist** (ನಾ.) ಚೀನಾ ಶಾಸ್ತ್ರಜ್ಞ.

Sínter ಸಿಂಟರ್ (ನಾ.) ಊಟೆ ನೀರುಗಳ ಇಮರಿಕೆಯಿಂದ ಬಂಡೆ, ಮೊ. ಗಳ ಮೇಲೆ ಕಟ್ಟುವ ಹೆಪ್ಪು ಮರಳುಗಲ್ಲು, ಸುಣ್ಣಗಲ್ಲು.

Sínuate ಸಿನ್ಯುಏಟ್ (ಗು.) (ಮು., ಸ. ವಿ.) ಅಲೆಯಾಕಾರದ ಅಂಚಿನ; ಅಂಚಿನಲ್ಲಿ ಸ್ಪಷ್ಟವಾಗಿ ಒಳಬಾಗು ಹೊರಬಾಗುಗಳುಳ್ಳ; ವಂಕಿ ಯೋಣಿನ. **Sínuately** (ಕ್ರಿ. ವಿ.); **Sinuátion** (ನಾ.) ಅಲೆಯಂಚಿನ ರಚನೆ; ವಂಕಿ ರಚನೆ.

Sinuósity. **Sinuous** ನೋಡಿ.

Sínuous ಸಿನ್ಯುಅಸ್ (ಗು.) ಬಾಗುಗಳು, ತಿರುವುಗಳು, —ಉಳ್ಳ, ಇರುವ; ತಿರುವು ಮುರುವಾದ, ತಿರುಚು ಮುರುಚಾದ, ಡೊಂಕು ಡೊಂಕಾದ, ಅಲೆಯಾಕಾರದ. **Sínuously** (ಕ್ರಿ. ವಿ.); **Sinuósity** —ಆಸಿಟಿ (ನಾ.) (ಗುಣವಾಚಕಾರ್ಥದಲ್ಲಿ); ತಿರುವು, ಮುರುವು, ಬಾಗು (ಮು., ನದಿಯದು ಅಥವಾ ರಸ್ತೆಯದು)

Sínus ಸೈನಸ್ (ನಾ., ಬ. ವ. Sinus ಸೈನ್ಯೂಸ್, Sinuses ಸೈನಸೆಸ್) (ಅಂ. ರ. ಶಾ., ಪ್ರಾ. ವಿ.) (ಎಲುಬಿನ ಅಥವಾ ಅಂಗಾಂಶದ) ಕುಳಿ, ಕುಹರ, ಕಂಡಿ, ಕೋಶಾಕಾರದ ಪೊಳ್ಳು. (ರೋಗ ನಿದಾನ) ನಾಳಿವ್ರಣ, ಭಗಂದರ. (ಸ. ವಿ.) (ಎಲೆಯ ಹಾಲೆಗಳ ನಡುವಣ) ಮುರುವು, ಬಾಗು.

Sip ಸಿಪ್ (ಕ್ರಿ., ನಾ.) ಚಮಚದಲ್ಲಿ ಕೊಂಚ ಕೊಂಚವಾಗಿ, ಸಣ್ಣ ಸಣ್ಣ ಗುಟುಕಾಗಿ, ಹೀರಿ ಕುಡಿ; ಚಪ್ಪರಿಸಿ ಕುಡಿ; ಚೀಪು (S. a flower). (ನಾ.) ಸಣ್ಣ ಹೀರು ಗುಟುಕು (A s. of brandy)

Sípahee ಸೀಪಾಇ (ನಾ.) =Sepoy.

Síphon ಸೈಫನ್ (ನಾ.) ವಾಯುಮಂಡಲದ ಒತ್ತಡವನ್ನು ಉಪಯೋಗಿಸಿಕೊಂಡು ದ್ರವವನ್ನು ಪಾತ್ರೆಯ ಅರುಗಿನಮೇಲಿಸಿಂದ ಹಾಯಿಸಿ ಕೆಳಮಟ್ಟಕ್ಕೆ ಸಾಗಿಸಲು ಅನುಕೂಲಿಸುವ, ಒಂದು ಕಾಲು ಮತ್ತೊಂದು ಕಾಲಿಗಿಂತ ಉದ್ದವಾಗಿದ್ದು ಕೆಳಮಟ್ಟಕ್ಕೆ ಚಾಚಿರುವ, ವಕ್ರನಾಳ: ಇಳಿಗೊಳವೆ; ಸೈಫನ್. ಅನಿಲದ ಒತ್ತಡದಿಂದ ದ್ರವವನ್ನು ಇಳಿಗೊಳವೆಯ ಮೂಲಕ ಹೊರದೂಡುವ, ಇಂಗಾರಾಮ್ಲ ವಾಯು ಹುದುಗಿಸಿದ ಪಾನೀಯದ ಸೀಸೆ: ಇಳಿಗೊಳವೆ ಸೀಸೆ (=S.-bottle). (ಪ್ರಾ. ವಿ.) (ಮು., ಚಿಪ್ಪುಪ್ರಾಣಿಗಳಲ್ಲಿ ಅಥವಾ ಚಿಪ್ಪುಗಳಲ್ಲಿ ಇರುವ) ಕಾಲುವೆ, ನಾಳ, ನಳಿಕೆ, (ಕೀಟ, ಮೊ. ಗಳಲ್ಲಿಯ) ಹೀರುಗೊಳವೆ [=**Síphuncle** (ನಾ.)]. **S.-barometer** ಕೆಳಗಡೆ ತಿರುಗು ಮುರುಗಾದ S ಆಕಾರದಲ್ಲಿ ಬಾಗಿರುವ ಕೊಳವೆಯುಳ್ಳ ವಾಯುಭಾರಮಾಪಕ: ಇಳಿಗೊಳವೆ ವಾಯುಭಾರ ಮಾಪಕ. **S.-cup** ಎಣ್ಣೆಯನ್ನು ಇಳಿಗೊಳವೆಯ ರೀತಿಯಲ್ಲಿ (ಅಂಚಿನ ಮೇಲೆ ಆಳವಡಿಸಿರುವ ಬತ್ತಿಯ ಮೂಲಕ) ಎರೆಯಬೇಕಾದ ಸ್ಥಳಕ್ಕೆ ಸಾಗಿಸಲು ಏರ್ಪಾಡುಳ್ಳ ಬಟ್ಟಲು: ಇಳಿಗೊಳವೆ (ಎಣ್ಣೆ) ಬಟ್ಟಲು. **S. gauge** ದ್ರವಾಶಯದಲ್ಲಿಯ ಒತ್ತಡ, ಮೊ. ನ್ನು ಸೂಚಿಸಲು ಅನುಕೂಲಿಸುವ, ಪಾದರಸವುಳ್ಳ ಗಾಜಿನ ಇಳಿಗೊಳವೆ: ಇಳಿಗೊಳವೆ ಮಾಪಕ. **Síphonage** (ನಾ.) ಇಳಿಗೊಳವೆಯ ಮೂಲಕ ದ್ರವ ಸಾಗಣೆ; ಇಳಿಗೊಳವೆಯನ್ನು ಉಪಯೋಗಿಸುವುದು; ಇಳಿಗೊಳವೆ ಪ್ರಯೋಗ. **Síphonal** (ಗು.) ಇಳಿಗೊಳವೆಯ(ಂಥ). **Siphónic** —ಫಾನಿಕ್ (ಗು.) ಇಳಿಗೊಳವೆಯ (ಕ್ರಮದ, ತತ್ತ್ವದ)

Síphon (ಕ್ರಿ.) ಇಳಿಗೊಳವೆಯ ಮೂಲಕ (ಹೇಗೊ ಹಾಗೆ) ಹರಿ, ಸಾಗಿಸು (Water is siphoning from the vase on to the tablecloth)

Síphonet ಸೈಫನೆಟ್ (ನಾ.) ಗಿಡಹೇನುಗಳು ಮಕರಂದವನ್ನು ಹೊರಸೂಸುವ (ಎರಡು) ನಾಳ(ಗಳಲ್ಲೊಂದು): ಸ್ರವನಾಳ.

Síphuncle ಸೈಫಂಕ್‌ಲ್ (ನಾ.). **Siphon** ನೋಡಿ.

Síppet ಸಿಪೆಟ್ (ನಾ.) (ಹಾಲು, ಸಾರು, ಮೊ. ಗಳಲ್ಲಿ ಅದ್ದಿ) ನೆನಸಿದ ರೊಟ್ಟಿ, ಮೊ. ಗಳ ಚೂರು; ಮಾಂಸ, ಮೊ. ಗಳೊಡನೆ ಬಡಿಸುವ ಸುಟ್ಟ ಅಥವಾ ಕರಿದ ರೊಟ್ಟಿಯ ಚೂರು. (ರೂಪ.) ಚೂರು, ತುಂಡು.

Si quis (L) ಸೈ ಕ್ವಿಸ್ (ನಾ.) ಕ್ರೈಸ್ತ ಪುರೋಹಿತ ದೀಕ್ಷೆಗೆ ಒಬ್ಬನು ಅಭ್ಯರ್ಥಿಯಾಗಿ ನಿಂತಿರುವ ವಿಷಯವನ್ನು ತಿಳಿಸಿ, ಯಾರಿಗಾದರೂ ಆಕ್ಷೇಪಣೆ ಇದೆಯೆ ಎಂದು ಕೇಳುವ, ಅಭ್ಯರ್ಥಿಯ ವಾಸ ಪ್ರಾಂತದಲ್ಲಿ ಪ್ರಕಟಿಸುವ —ತಿಳಿವಳಿಕೆ: ದೀಕ್ಷೆಯ —ತಿಳಿವಳಿಕೆ ಪತ್ರ, ಪ್ರಕಟನೆ [ಲ್ಯಾಟಿನ್: ಯಾರಾದರೂ (ಆಕ್ಷೇಪಣೆ, ಅಡ್ಡಿ) ಬಲ್ಲವರಾದರೆ]

Sir ಸರ್ (ನಾ., ಕ್ರಿ. ಸಕ.) ಯಜಮಾನ, ಮೇಲ್ಪಟ್ಟವನು, ಶಾಸನ ಸಭಾಧ್ಯಕ್ಷ, ಹೆಸರು ತಿಳಿದಿಲ್ಲದಿರುವ ಗಂಡಸು, ಮೊ. ರನ್ನು ಸಂಬೋಧಿಸುವ ಗೌರವ ಪದ. (ಆಳಿಗೆ, ಹುಡುಗನಿಗೆ, ವಾಗ್ದಂಡನೆ ಮಾಡುವಲ್ಲ ಸಹ): ಅಯ್ಯ, ಸ್ವಾಮಿ, ಒಡೆಯ, ಬುದ್ಧಿ [(ಬ. ವ.) Sirs (ಈಗ ಇದಕ್ಕೆ ಬದಲು Gentlemen ಪದ ಪ್ರಯೋಗವಾಗುತ್ತದೆ)]. ನೈಟ್ ಅಥವಾ ಬ್ಯಾರೊನೆಟ್ ಬಿರುದಾಂಕಿತರ ಹೆಸರಿನ ಹಿಂದೆ ಉಪಯೋಗಿಸುವ ಗೌರವ ಪದ: ಸರ್ [Sir John Moore, Sir J. Moore, (ಸಲಿಗೆಯಲ್ಲಿ ಅಥವಾ ಸಂಬೋಧನೆಯಲ್ಲಿ) Sir John]. (ಕ್ರಿ.) ಸರ್ (ಅಯ್ಯ) ಎಂದು ಕರೆ, ಸಂಬೋಧಿಸು (Don't s. me)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sírcar ಸರ್ಕಾರ್ (ನಾ.) (ಆಂ. ಇಂ.) (ಇಂಡಿಯಾ) ಸರ್ಕಾರ; ಸರ್ಕಾರದ ಮುಖ್ಯಾಧಿಕಾರಿ; ಮನೆಯ ಯಜಮಾನ; ಮನೆಯ ಪಾರುಪತ್ಯಗಾರ; ದೇಶೀಯ ಕರಣಿಕ, ಲೆಕ್ಕಿಗ, ಕಾರಭಾರಿ.

Sírdar ಸರ್ಡಾರ್ (ನಾ.) (ಇಂಡಿಯ, ಮೊ. ದೇಶಗಳಲ್ಲಿ) ದಳವಾಯಿ, ಸರದಾರ. (ಈಜಿಪ್ಟಿನಲ್ಲಿ) ಮುಖ್ಯ ಸೇನಾಪತಿ, ಸೈನ್ಯಾಧಿಪತಿ (೧೮೮೨ ರಿಂದ ಬ್ರಿಟಿಷರವನು)

Sire ಸೈ(ಅ)ರ್ (ನಾ., ಕ್ರಿ. ಸಕ.) (ಕಾವ್ಯ) ತಂದೆ, ಪಿತೃ, ಪೂರ್ವಜ. ಪಶುವಿನ ಜನಕ (ಮು., ಬೀಜದ ಕುದುರೆ). ಹಿರಿಯ, ವೃದ್ಧ. (ರಾಜನನ್ನು ಸಂಬೋಧಿಸುವಲ್ಲಿ) ಮಹಾಸ್ವಾಮಿ, ಪ್ರಭು. (ಕ್ರಿ.) (ಮು., ಬೀಜದ ಕುದುರೆಯ ವಿಷಯದಲ್ಲಿ) ಜನಕನಾಗು, ಸಂತಾನೋತ್ಪತ್ತಿ ಮಾಡು.

Síren ಸೈ(ಅ)ರನ್ (ನಾ.) (ಗ್ರೀಕ್ ಪುರಾಣ) (ಬ. ವ.) ಅಜಾಗರೂಕ ನಾವಿಕರನ್ನು ಮೋಹಕ ಗೀತದಿಂದ ಆಕರ್ಷಿಸಿ ತಮ್ಮ ವಾಸಸ್ಥಾನವಾದ ಕಗ್ಗಲ್ಲು ದ್ವೀಪಕ್ಕೆ ಕೊಂಡೊಯ್ಯುತ್ತಿದ್ದ ಸ್ತ್ರೀಯರು ಅಥವಾ ಅರ್ಧ ಸ್ತ್ರೀ ಅರ್ಧ ಪಕ್ಷಿ ಆಕಾರದ ಅಮಾನುಷ ವ್ಯಕ್ತಿಗಳು. ಮಧುರ ಗಾಯಕಿ, ಕಲಕಂಠೆ. ಮೋಹಿನಿ, ಮಾಯಾಂಗನೆ. ಮೋಹಕ —ವಿಷಯ, ಉದ್ಯಮ. (ವಿಶೇಷಣವಾಗಿ) ದುರ್ಧರ ಮೋಹಕವಾದ, ಅತ್ಯಾಕರ್ಷಕವಾದ. =Sirenian. ಒತ್ತಡದ ಗಾಳಿಯ ಅಥವಾ ಆವಿಯ ಚಿಮ್ಮಲಿಗೆ ಎದುರಾಗಿ ಗಿರ್ರನೆ ತಿರುಗಿಸುವುದರಿಂದ ಧ್ವನಿ ಮಾಡುವ, ಎಚ್ಚರಿಕೆ ಕೊಡುವುದಕ್ಕೂ ಧ್ವನಿಶಾಸ್ತ್ರ ಪ್ರಯೋಗಗಳಲ್ಲಿಯೂ ಉಪಯೋಗಿಸುವ, ಸರಂಧ್ರ ಫಲಕ ಸಲಕರಣೆ: ಕೂಗು, ತಿರುಗು, —ಜಾಗಟೆ; ಸೈರನ್. **Sirénian** —ರೀನಿಯನ್ (ಗು., ನಾ.) ತಿಮಿ ವರ್ಗದ ಪ್ರಾಣಿಗಳನ್ನು ಹೋಲುವ, ಮಾನಿನಂಥ ಸಸ್ತನಿ ವರ್ಗದ (ಪ್ರಾಣಿ). **Sirénia** (ನಾ., ಬ. ವ.) ಈ ಪ್ರಾಣಿ ವರ್ಗ.

Sirénian. **Siren** ನೋಡಿ.

Siríasis ಸಿರೈಅಸಿಸ್ (ನಾ.) ಬಿಸಿಲ ಹೊಡೆತ; ಸೂರ್ಯ ತಾಪ—ಮೂರ್ಛೆ, ಜ್ವರ. (ಚಿಕಿತ್ಸೆಗಾಗಿ) ಸೂರ್ಯಸ್ನಾನ, ಬಿಸಿಲು ಸ್ನಾನ.

Sírius ಸಿರಿಯಸ್ (ನಾ.) ಮಹಾಶ್ವಾನ ನಕ್ಷತ್ರಪುಂಜದ, ಉಜ್ಜ್ವಲವಾದ, ಒಂದು ನಕ್ಷತ್ರ; ಲುಬ್ಧಕ.

Sírkar =Sircar.

Sírloin ಸರ್ಲಾಯ್ನ್ (ನಾ.) ಮೂಳೆಯಮೇಲೂ ಕೆಳಗೂ ಮಾಂಸವುಳ್ಳ, ಗೋಮಾಂಸದ ಮೇಲು ಕಟಿಭಾಗ; ದನದ ಪಕ್ಕೆ ಮಾಂಸ, ಕಟಿಮಾಂಸ.

Sirócco, Sci- ಸಿರಾಕೊ (ನಾ.) (ಇಟಲಿಯಲ್ಲಿ ಬೀಸುವ) ಸೈಮೂಮ್ ಬಿರುಗಾಳಿ; (ಚಳಿಗಾಲದಲ್ಲಿ ಬೀಸುವ) ಬಿಸಿ ಮಳೆಗಾಳಿ.

Sírrah ಸಿರ (ನಾ.) (ಪ್ರಾಚೀ. ಪ್ರ.), **Sir(r)eé** ಸರೀ (ನಾ.) (ಅಮೆ. ಸಂ.) (ಅತಿಸಲಿಗೆ, ಕೋಪ, ಮೊ. ನ್ನು ಸೂಚಿಸುವ, ದರ್ಪದ ಅಥವಾ ತಿರಸ್ಕಾರದ ಪ್ರ.) ರೋ, ಎಲೋ, ಎಲವೋ.

Sírup =Syrup.

Sísal-grass, -hemp ಸಿಸಲ್‌ಗ್ರಾಸ್, ಹೆಂಪ್; ಸಿಸಾಲ್— (ನಾ.) (ಹಗ್ಗ ಹುರಿಗಳನ್ನು ಮಾಡಲು ಉಪಯೋಗಿಸುವ, ಅಣಿಮಾಡಿದ) ಅಮೆರಿಕದ ಕತ್ತಾಳೆ ನಾರು.

Sískin ಸಿಸ್ಕಿನ್ (ನಾ.) (ಅನೇಕ ವೇಳೆ ಪಂಜರದಲ್ಲಿಟ್ಟು ಸಾಕುವ) ಒಂದು ಬಗೆಯ ಹಸುರು ಹಾಡುಹಕ್ಕಿ.

Síssoo ಸಿಸೂ (ನಾ.) ಅಮೂಲ್ಯವಾದ ದಾರುವುಳ್ಳ, ಇಂಡಿಯದ ಒಂದು ಮರ: ಬಿರಿಡಿ ಮರ, ಸಿಸಿವೆ ಮರ.

Síster ಸಿಸ್ಟರ್ (ನಾ.) ಒಡಹುಟ್ಟಿದವಳು, ಸೋದರಿ, ಸಹೋದರಿ, ಭಗಿನಿ (Elder, younger, s. ಅಕ್ಕ, ತಂಗಿ) [S.-german, whole-s. ಸ್ವಂತ ಸೋದರಿ. Half-s. ಮಲಸೋದರಿ. The Fatal Sisters, the Sisters three, the three Sisters (ಗ್ರೀಕ್ ಪುರಾಣ) ಮೂವರು ವಿಧಿದೇವಿಯರು. S. Anne ಒಬ್ಬರ ಆಗಮನವನ್ನು ಮತ್ತೊಬ್ಬರ ಪರವಾಗಿ ನಿರೀಕ್ಷಿಸುತ್ತಿರುವ ವ್ಯಕ್ತಿ (Bluebeard ಎಂಬ ಕಥೆಯಲ್ಲಿ ನಾಯಕನ ಕೊನೆಯ ಹೆಂಡತಿಯಾದ Fatima ಎಂಬಾಕೆಯ ತಂಗಿ Anne ಎಂಬವಳು ಗೋಪುರ ಹತ್ತಿ ಸೋದರರ ಬರವಿಗಾಗಿ ನಿರೀಕ್ಷಿಸುತ್ತಿರುವ ಪ್ರಸಂಗದಿಂದ)]. ಅತ್ತಿಗೆ, ನಾದಿನಿ (=S.-in-law); ಆಪ್ತ ಸಖಿ, ಗೆಳತಿ, ಜೊತೆಗಾತಿ; ತನ್ನ ಪಂಗಡದವಳು; ಮನುಷ್ಯ ಜಾತಿಯಲ್ಲಿ ತನ್ನೊಡನೆ ಹುಟ್ಟಿದವಳು: ಸೋದರಿ (ಸಾ., ಸ್ತ್ರೀಯರನ್ನು ಕುರಿತು ಹೇಳುವಲ್ಲಿ). ಧಾರ್ಮಿಕ ಸ್ತ್ರೀ ಸಮಾಜದ ಸದಸ್ಯೆ: ಸಂನ್ಯಾಸಿನಿ, ಭಿಕ್ಷುಣಿ [S. of charity (Charity ನೋಡಿ). S. of mercy (ಮು., ೧೮೨೭ರಲ್ಲಿ ಡಬ್ಲಿನ್ ಪಟ್ಟಣದಲ್ಲಿ ಸ್ಥಾಪಿತವಾದ, ಬಡಬಗ್ಗರು, ಮೊ. ರ ಸೇವಾದೀಕ್ಷೆ ಹೊಂದಿದ ರೋ. ಕ್ಯಾ. ಸೋದರೀ ವರ್ಗದ ಸದಸ್ಯೆ: ಸೇವಾ ಸೋದರಿ, ಕರುಣಾ ಸೋದರಿ. Little Sisters of the poor ಫ್ರೆಂಚ್ ರೋ. ಕ್ಯಾ. ಸೇವಿಕಾ ದಳ. Lay s. (Lay² ನೋಡಿ)]. (ಆಸ್ಪತ್ರೆಯಲ್ಲಿ) (ಮುಖ್ಯ) ದಾದಿ. ಹತ್ತಿರ ಹೋಲಿಕೆಯ ಅಥವಾ ಸಂಬಂಧದ ವ್ಯಕ್ತಿ, ವಸ್ತು, ಗುಣ [Science and her s poesy ವಿಜ್ಞಾನ ಮತ್ತು ಅದರ ಸೋದರಿ ಕಾವ್ಯ. S. ships (Ship ನೋಡಿ). S.-hook ಹಗ್ಗ, ಮೊ. ವು ತೂರಲು ತೆರೆದುಕೊಳ್ಳುವ ಮತ್ತು '8' ಆಕೃತಿಯಲ್ಲಿ ಮುಚ್ಚಿಕೊಳ್ಳುವ ಜೋಡಿ ಕೊಕ್ಕೆ]. **Sísterhood** (ನಾ.) ಅಕ್ಕತನ, ತಂಗಿತನ, ಸೋದರಿತನ, ಸೋದರೀ ಸಂಬಂಧ, ಅಕ್ಕ ತಂಗಿ ಸಂಬಂಧ; ಅಕ್ಕ ತಂಗಿಯರು, ಸೋದರೀ ವರ್ಗ; ಸಂನ್ಯಾಸಿನಿಗಳ ವ್ರತವನ್ನು ಹಿಡಿದಿರುವ ಅಥವಾ ಧಾರ್ಮಿಕ ಕಾರ್ಯಗಳಲ್ಲಿ ನಿರತರಾಗಿರುವ ಸ್ತ್ರೀಯರ ಸಂಘ: ಸೇವಿಕಾ ದಳ; ಸೇವಾ ಸೋದರೀ ಸಮಾಜ. **Sísterless** (ಗು.); **Sísterly** (ಗು.); **Sísterliness** (ನಾ.)

Sístine ಸಿಸ್‌ಟ(ಟೈ)ನ್ (ಗು.) ಪೋಪ್ ಗುರುಗಳಲ್ಲೊಬ್ಬನಾದ ಸಿಕ್ಸ್‌ಟಸ್ ಎಂಬಾತನ. S. chapel ರೋಮಿನ ವ್ಯಾಟಿಕನ್ ಮಠದಲ್ಲಿಯ, ಮೈಕೆಲ್ ಆ್ಯಂಜೆಲೊ ಎಂಬ ಕಲೆಗಾರನ ಮಂಡೋದಕ ಚಿತ್ರಗಳುಳ್ಳ ಆರಾಧನ ಮಂದಿರ. S. Madonna ರ್‍ಯಾಫೆಯಲ್ ಎಂಬ ಕಲೆಗಾರನು ಚಿತ್ರಿಸಿದ ಮೇರಿ ಕನ್ಯಯ ಚಿತ್ರ.

Sístrum ಸಿಸ್ಟ್ರಂ (ನಾ.; ಬ. ವ. -stra —ಸ್ಟ್ರ) ಪುರಾತನ ಈಜಿಪ್ಟಿನವರು ಮು., ಐಸಿಸ್ ದೇವತೆಯ ಆರಾಧನೆಯಲ್ಲಿ ಉಪಯೋಗಿಸುತ್ತಿದ್ದ ಒಂದು ಬಗೆಯ ಗಿಲಕೆ, ಗಿರುಗಟೆ.

Sisyphéan ಸಿಸಿಫೀಯನ್ (ಗು.) (ಅಧೋಲೋಕದಲ್ಲಿ ಒಂದು ಗುಡ್ಡದ ಮೇಲಕ್ಕೆ ಒಂದು ಭಾರಿ ಕಲ್ಲನ್ನು ತಳ್ಳಿಕೊಂಡು ಹೋಗುವುದು, ಅದು ತುದಿ ಮುಟ್ಟಿ ಕೆಳಗುರುಳಿದೊಡನೆ ಮತ್ತೆ ಮೇಲಕ್ಕೆ ತಳ್ಳಿಕೊಂಡು ಹೋಗುವುದು, ಹೀಗೆ ಪ್ರಯೋಜನವಿಲ್ಲದೆ ನಿರಂತರವಾಗಿ ತಳ್ಳಿಕೊಂಡು ಹೋಗುವ ಶಿಕ್ಷೆಗೊಳಗಾದ) ಸಿಸಿಫಸ್ ಎಂಬಾತನ(ಂಥ); ನಿರಂತರ ಕಷ್ಟದ, ನಿತ್ಯ ಶ್ರಮದ (S. labours)

Sit ಸಿಟ್ (ಕ್ರಿ.; ಭೂತ., ಭೂ. ಕೃ. Sat) ಕುಳಿತುಕೊ, ಕುಳ್ಳಿರು, ಕೂತುಕೊ, ಕೂರು, ಕೂಡು, (ಸ್ಥಿರವಾಗಿ) ಇರು [Sits well (ಸವಾರಿಯಲ್ಲಿ) ಒಪ್ಪಿತವಾಗಿ, ಚೆನ್ನಾಗಿ, —ಕುಳಿತುಕೊಳ್ಳುತ್ತಾನೆ. S. tight (ಬಳ. ಮಾ.) ಬಿಮ್ಮನೆ ಕುಳಿತುಕೊ; (ತನ್ನ ಸ್ಥಳದಲ್ಲಿ) ಸ್ಥಿರವಾಗಿ, ಭದ್ರವಾಗಿ,—ಇರು, ಕುಳಿತುಕೊ; ಅಳ್ಳಾಡದಿರು, ಕದಲದಿರು. S. in judgement ಇತರರ ಮೇಲೆ ವಿಮರ್ಶೆಗೆ ಕೂಡು; ತಪ್ಪು ಹುಡುಕು, ಟೀಕೆಮಾಡು. S. for one's portrait ಭಾವಚಿತ್ರ ಬರೆಯಿಸಿಕೊಳ್ಳುವುದಕ್ಕಾಗಿ (ಚಿತ್ರಗಾರನ ಮುಂದೆ) ಕುಳಿತುಕೊ. S. for examination ಪರೀಕ್ಷೆಗೆ—. S. for borough, etc. (ಶಾಸನ ಸಭೆಯಲ್ಲಿ) ಊರು, ಮೊ. ಗಳ ಪರವಾಗಿ ಸದಸ್ಯನಾಗಿರು, ಪ್ರತಿನಿಧಿಯಾಗಿರು. Parliament, court, is sitting ಶಾಸನ ಸಭೆ, ನ್ಯಾಯಸ್ಥಾನ,—ನಡೆಯುತ್ತಿದೆ, ಅಧಿವೇಶನ ನಡೆಸುತ್ತಿದೆ. S. at home ಮನೆಯಲ್ಲಿ ತೆಪ್ಪಗೆ, ಸುಮ್ಮನೆ, ಸೋಮಾರಿಯಾಗಿ, —ಕುಳಿತಿರು. Shoot bird, hare, sitting ಕುಳಿತಿರುವ ಹಕ್ಕಿಯನ್ನು, ಮೊಲವನ್ನು, ಹೊಡೆ. Sitting hen ಕಾವಿಗೆ ಕೂತಿರುವ ಹೇಂಟೆ. Wants to s. ಕಾವಿಗೆ ಕೂರುವ, ಹೊದಗುವ, ಇಚ್ಛಿಯಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sits the wind there? ಗಾಳಿ ಆ ಕಡೆ ಇದೆಯೊ? ಪರಿಸ್ಥಿತಿ ಹಾಗಿದೆಯೊ? Food sits heavy on the stomach ಆಹಾರ ಹೊಟ್ಟೆಯಲ್ಲಿ ಭಾರವಾಗಿ ಕುಳಿತಿದೆ, ಬೇಗ ಜೀರ್ಣವಾಗುವುದಿಲ್ಲ. Her dress, imperiousness, sits well on her ಆಕೆಯ ಉಡುಪು, ದರ್ಪ, ಆಕೆಗೆ ಚೆನ್ನಾಗಿ ಒಪ್ಪುತ್ತದೆ, ಶೋಭಿಸುತ್ತದೆ. Sitting tenant ಸದ್ಯದ, ಚಾಲ್ತಿ, —ಒಕ್ಕಲು, ಬಾಡಿಗೆದಾರ. His principles s. loosely on him ಅವನ ತತ್ತ್ವಗಳಿಗೆ ಅವನು ಅಷ್ಟಾಗಿ ಬದ್ಧನಾಗಿಲ್ಲ. He could not s. his horse ಅವನು ತನ್ನ ಕುದುರೆಯಮೇಲೆ ಕುಳಿತುಕೊಂಡಿರಲಾಗಲಿಲ್ಲ]. S. down (ನಿಂತಿದ್ದು) ಕುಳಿತುಕೊ [(ಸ್ವಾರ್ಥ ಪ್ರ., ಪ್ರಾಚೀ. ಪ್ರ.) Sat him down. Pray s. you down ದಯವಿಟ್ಟು ಕುಳಿತುಕೊಳ್ಳಿ]; (ಸೈನಿಕ) (ಮುತ್ತಿಗೆ ಹಾಕುವುದಕ್ಕಾಗಿ, ಸ್ಥಳದ ಮುಂದೆ) ಬೀಡು ಬಿಡು, ಠಾಣೆ ಹಾಕು; ಮುತ್ತಿಗೆ ಹಾಕಿ ಕುಳಿತುಬಿಡು. ತಳವೂರು, ನೆಲಸು. ತೃಪ್ತಿಪಟ್ಟುಕೊಂಡು ಕುಳಿತುಬಿಡು. S. down under (ಅವಮಾನ, ಮೊ. ನ್ನು) ಪ್ರತಿಭಟಿಸದೆ ತಾಳಿಕೊ, ನುಂಗಿಕೊ. S. down strike ಕೆಲಸಗಾರರು (ಕೆಲಸ ಮಾಡದೆ) ಕುಳಿತುಬಿಡುವ ಮುಷ್ಕರ. S. on, upon (ನ್ಯಾಯದರ್ಶಿಗಳು, ಮೊ. ರ ವಿಷಯದಲ್ಲಿ) —ಬಗ್ಗೆ ವಿಚಾರಣೆ ನಡಸು, ಅಧಿವೇಶನ ನಡಸು. S. on his head (ಕೆಳಕ್ಕೆ ಬಿದ್ದ ಕುದುರೆ ಎಗುರಾಡದೆ ಶಾಂತವಾಗಿರುವಂತೆ ಅದರ) ತಲೆಯಮೇಲೆ ಕುಳಿತುಕೊ. (ಅಸಂ.) ಅದುಮಿಡು, ಅಡಗಿಸು, ಜಬರಿಸು (He wants sitting upon ಅವನನ್ನು ಅದುಮಿಟ್ಟರಬೇಕು). S. out (ಒಂದು ಕಾರ್ಯದಲ್ಲಿ, ಮು., ನರ್ತನದಲ್ಲಿ) ಭಾಗ ವಹಿಸದಿರು, ಸೇರದಿರು, ಹೊರಚ್ಚಾಗಿರು (Sat out the next dance ಮುಂದಿನ ನರ್ತನದಲ್ಲಿ ಭಾಗ ವಹಿಸಲಿಲ್ಲ, ಸೇರಲಿಲ್ಲ). ಹೊರಗೆ, ಹೊರಗಡೆ, —ಕುಳಿತುಕೊ. ಇತರರು ಹೊರಟುಹೋದಮೇಲೆಯೂ, (ಪ್ರದರ್ಶನದ) ಕೊನೆಯವರೆಗೂ,—ಕುಳಿತಿರು. S. over ಮಗ್ನನಾಗಿ ಕುಳಿತಿರು; ಮಗ್ನನಾಗಿರು. S. under (ಪಾದ್ರಿಯ ಉಪದೇಶ, ಉಪಾಧ್ಯಾಯನ ಪಾಠ, ಮೊ. ನ್ನು ಅವರ) ಪದತಲದಲ್ಲಿ, ಕೈಕೆಳಗೆ, —ಕುಳಿತು ಕೇಳು. S. up (ಮಲಗಿರುವ ಸ್ಥಿತಿಯಿಂದ) ಎದ್ದು ಕುಳಿತುಕೊ; ಮಲಗದೆ ಎಚ್ಚತ್ತಿರು (S. up late, nursing ರಾತ್ರಿ ತುಂಬ ಹೊತ್ತು, ರೋಗಿಗೆ ಉಪಚಾರ ಮಾಡುತ್ತ, ಕುಳಿತಿರು, ಎದ್ದಿರು). (ಓಲಾಡದೆ) ನೆಟ್ಟಗೆ ಕುಳಿತುಕೊ [Make one s. up (ಬಳ. ಮಾ.) ಎದ್ದು ಕೂಡುವಂತೆ ಮಾಡು (ಎಂದರೆ, ಚಕಿತನನ್ನಾಗಿ ಮಾಡು, ಬೆರಗುಗೊಳಿಸು); ದುಡಿತಕ್ಕೆ, ನೋವಿಗೆ, —ಈಡುಮಾಡು. S. up & take notice (ಬಳ. ಮಾ.) ಇದ್ದಕ್ಕಿದ್ದಹಾಗೆ ಆಸಕ್ತಿ ವಹಿಸು, ಕೆರಳು]. **Sítfast** (ನಾ.) ಕುದುರೆಯ ಬೆನ್ನಿನ(ಮೇಲಿನ) ಜಡ್ಡು ಹುಣ್ಣು, ಗಂಟು. **Sitter** (ನಾ.) (ಕ್ರಿಯಾರ್ಥಗಳಲ್ಲಿ); ಭಾವಚಿತ್ರಕ್ಕಾಗಿ (ಚಿತ್ರಗಾರನ ಮುಂದೆ) ಕುಳಿತಿರುವವನು. ಕಾವಿಗೆ ಕೂರುವ ಹೇಂಟೆ (Good, bad, s.). (ಅಸಂ.) ಸುಲಭವಾಗಿ ಹೊಡೆಯಬಹುದಾದದ್ದು, ಸುಲಭವಾದ ಕೆಲಸ (ಕುಳಿತ ಹಕ್ಕಿಯನ್ನು ಹೊಡೆಯುವುದು ಸುಲಭವಾದದ್ದರಿಂದ). **Sítting** (ನಾ.) (ಕ್ರಿಯಾರ್ಥಗಳಲ್ಲಿ); ಒಂದೇ ಸಮನೆ ಕುಳಿತಿರುವ ಕಾಲ, ಕುಳಿತ ಪಟ್ಟು; ಅಧಿವೇಶನ [Wrote the whole poem at a s. ಇಡಿಯ ಕವನವನ್ನು ಒಂದೇ ಪಟ್ಟಿನಲ್ಲಿ ಬರೆದನು. All-night s. (ಶಾಸನ ಸಭೆ, ಮೊ. ಗಳ) ಇಡಿಯ ರಾತ್ರಿ ಕುಳಿತ, ಅಧಿವೇಶನ. Can you give me six sittings? (ಭಾವಚಿತ್ರಕ್ಕಾಗಿ) ಆರು ಬಾರಿ ನನ್ನ ಮುಂದೆ ಕುಳಿತುಕೊಳ್ಳ ಬಲ್ಲಿರಾ?]. (ಹೇಂಟೆಯ ಒಂದುಸಲದ ಕಾವಿಗೆ ಸಿಕ್ಕಿದ) ಮೊಟ್ಟೆ —ತಂಡ, ಒಡ್ಡು. (ಚರ್ಚಿನಲ್ಲಿ ಒಬ್ಬನಿಗಾಗಿ ಕುಳಿತುಕೊಳ್ಳಲು ಗೊತ್ತುಪಡಿಸಿದ) ಸ್ಥಳ, ಪೀಠ. S.-room ಕುಳಿತುಕೊಳ್ಳುವುದಕ್ಕೆ (ಸಾಕಷ್ಟು) ಸ್ಥಳ, ಜಾಗ. ಕುಳಿತುಕೊಳ್ಳುವ ಕೋಣೆ, ಬೈಠಕ್‌ಖಾನೆ (ಎದುರು ಪದ: Bedroom)

Site ಸೈಟ್ (ನಾ.) (ಪಟ್ಟಣ ಅಥವಾ ಕಟ್ಟಡ ಇದ್ದ, ಇರುವ, ಇರಲಿರುವ) ಪ್ರದೇಶ, ಸ್ಥಳ; ನಿವೇಶನ, ಮಂದಳ (ಮನೆದಳ)

Sith ಸಿತ್ (ನಂ. ಅವ್ಯ.) (ಪ್ರಾಚೀ. ಪ್ರ., ಬೈಬಲ್ ಪ್ರ.) =Since.

Sit(i)o- ಸಿಟಿಯೊ—, ಸೈಟೊ— (ಸ. ಪೂ. ಪ.) ಆಹಾರ—ಅನ್ನ—. **-logy** ಆಹಾರ—ಶಾಸ್ತ್ರ, ವಿಜ್ಞಾನ. **-phóbia** ಅನ್ನದ್ವೇಷ.

Situate[1] ಸಿಟ್ಯುಏಟ್ (ಕ್ರಿ. ಸಕ.) ಸ್ಥಾನದಲ್ಲಿ, ಸ್ಥಳದಲ್ಲಿ, —ಇಡು, ಇರಿಸು. **Situáted** ಸಿಟ್ಯುಏಟೆಡ್ (ಗು.), (ಪ್ರಾಚೀ. ಪ್ರ.) **Sítuate**[2] ಸಿಟ್ಯುಏಟ್ (ಗು.) (ಒಂದು ಸ್ಥಾನದಲ್ಲಿ, ಸಂಬಂಧದಲ್ಲಿ) ಇರುವ; ಸ್ಥಿತ (Situated on the top of the hill ಬೆಟ್ಟದ ನೆತ್ತಿಯಮೇಲಿರುವ. Awkwardly situated ಇಕ್ಕಟ್ಟಿನಲ್ಲಿ ಸಿಕ್ಕಿ). **Situátion** (ನಾ.) ಸ್ಥಳ, ಸ್ಥಾನ, ನೆಲೆ, ಎಡೆ, ಜಾಗ, ಸುತ್ತುಮುತ್ತು (House stands in a fine s. ಮನೆ ಒಳ್ಳೆಯ, ಸೊಗಸಾದ, ಸ್ಥಳದಲ್ಲಿದೆ); (ಪರಿ)ಸ್ಥಿತಿ, ಸನ್ನಿವೇಶ, ಸಂದರ್ಭ (A difficult s. ಕಷ್ಟದ ಪರಿಸ್ಥಿತಿ); (ನಾಟಕದಲ್ಲಿ) ವಿಷಮ, ತೊಡಕಿನ,—ಸನ್ನಿವೇಶ, ಸಂದರ್ಭ (Curtain falls on a strong s. ಪ್ರಬಲವಾದ ವಿಷಮ ಸನ್ನಿವೇಶದಲ್ಲಿ ತೆರೆ ಬೀಳುತ್ತದೆ); ನೌಕರಿ, ಚಾಕರಿ, ಕೆಲಸ (Cannot find a s. ಒಂದು ಚಾಕರಿ ಸಿಕ್ಕುವುದಿಲ್ಲ)

Sitz-bath ಸಿಟ್ಸ್‌ಬಾತ್ (ನಾ.) ಕುಳಿತು ಮಾಡುವ ಸ್ನಾನ(ಕ್ಕಾಗಿ ಉಪಯೋಗಿಸುವ ತೊಟ್ಟಿ)

Sívaism ಶಿವೈಇಸ್ಮ್ (ನಾ.) ಶೈವ —ಮತ, ಧರ್ಮ. **Sivaístic** (ಗು.) ಶೈವ (ಸಂಬಂಧವಾದ). **Sívaite** —ಐಟ್ (ನಾ.) ಶೈವ (ಮತೀಯ)

Six ಸಿಕ್ಸ್ (ಗು.) ಆರು (೬, 6, VI) (S. of them ಅವರಲ್ಲಿ ಆರು ಮಂದಿ. S. o'clock *or* s. ಆರು ಗಂಟೆ. S. to one ಹೆಚ್ಚು ಸಂಭವ. Two & s. ಅರ್ಧ ಕ್ರೌನ್ ನಾಣ್ಯ (ಎರಡೂವರೆ ಷಿಲಿಂಗ್). [S. & eight (pence) ಇಂಗ್ಲೆಂಡಿನಲ್ಲಿ ನ್ಯಾಯವಾದಿಗೆ ಸಾಂಪ್ರದಾಯಿಕವಾಗಿ ಕೊಡುತ್ತಿದ್ದ ಆರು ಷಿಲಿಂಗ್ ಎಂಟು ಪೆನಿ ರುಸುಮು; ಕೆಲಸಕ್ಕೆ ತಕ್ಕ ರುಸುಮು. S. & s. ಆರು ಷಿಲಿಂಗ್ ಆರು ಪೆನಿ. It is s. of one & half-a-dozen of the other ಎರಡಕ್ಕೂ ಏನೂ ವ್ಯತ್ಯಾಸವಿಲ್ಲ, ನಾಮ ಮಾತ್ರದ ವ್ಯತ್ಯಾಸ. Twenty-s. *or* s.-&-twenty ಇಪ್ಪತ್ತಾರು. Am not s. yet ನನಗೆ ಇನ್ನೂ ಆರು ವರ್ಷವಾಗಿಲ್ಲ]. **S.-footer** ಆರಡಿ (ಎತ್ತರದ) ಮನುಷ್ಯ; ಆರಡಿ ಉದ್ದದ ವಸ್ತು. **Síxpence** (ಬೆಳ್ಳಿಯ) ಆರು ಪೆನಿ ನಾಣ್ಯ. **Síx-penny** (ಗು.) ಆರು ಪೆನಿ ಬೆಲೆಯ [Sixpenny bit *or* six-penny (ನಾ.) ಆರು ಪೆನಿ ನಾಣ್ಯ. Seven-&-sixpenny ಏಳು ಷಿಲಿಂಗ್ ಆರು ಪೆನಿ ಬೆಲೆಯ]. **S.-shooter** ಆರು ಅರೆಯ, ಆರು ಬಾರಿನ, —ಸುತ್ತು ಪಿಸ್ತೂಲು. **Síxfold** (ಗು, ಕ್ರಿ. ವಿ.) ಆರು ಮಡಿ(ಯ), ಆರರಷ್ಟು, ಆರು ಪಾಲು.

Six (ನಾ.) ಆರು, (ಇಸ್ಪೀಟಿನಲ್ಲಿ) ಆರನೆಯ ಬಂದು, (ದಾಳದ) ಆರರ ಗರ. [At six(es) & seven(s) ಅವ್ಯವಸ್ಥೆಯಲ್ಲಿ. Double s. (ದಾಳದ) ಎರಡಾರು (ಗರ)]. (ಬ. ವ. ದಲ್ಲಿ) ಒಂದು ಪೌಂಡು ತೂಕಕ್ಕೆ ಆರರಂತೆ ಮಾಡಿದ ಮೋಂಬತ್ತಿಗಳು.

Síxain ಸಿಕ್ಸೆಯ್‌ನ್, ಸೀಸೆಯ್‌ನ್ (ನಾ.) ಆರು ಚರಣಗಳ ಪದ್ಯ: ಷಟ್ಪದಿ. **Síxer** ಸಿಕ್ಸರ್ (ನಾ.) (ಕ್ರಿಕೆಟ್ಟಿನಲ್ಲಿ) ಆರು ಓಟದ ಹೊಡೆತ.

Sixteén ಸಿಕ್ಸ್‌ಟೀನ್ (ಗು., ನಾ.) ಹದಿನಾರು (೧೬, 16, XVI). Sixteenmo *or* 16mo, =Sextodecimo (Sexto- ಪದದ ಕೆಳಗೆ ನೋಡಿ). **Sixteénth** (ಗು., ನಾ.) ಹದಿನಾರನೆಯ(ದು, —ವನು)

Sixth ಸಿಕ್ಸ್‌ತ್ (ಗು., ನಾ.) ಆರನೆಯ, ಷಷ್ಠ [The s. ಆರನೆಯ ತಾರೀಕು. S. form (ವಿದ್ಯಾಶಾಲೆಯಲ್ಲಿ) ಆರನೆಯ ತರಗತಿ, ವರ್ಗ. S. part ಆರನೆಯ (ಒಂದು) ಭಾಗ]. (ನಾ.) ಆರನೆಯ (ಒಂದು) ಭಾಗ; ಆರನೆಯ ತರಗತಿ. (ಸಂ.) ಒಂದು ನಿರ್ದಿಷ್ಟ ಸ್ವರಕ್ಕೆ ಮೇಲಿನ ಅಥವಾ ಕೆಳಗಿನ ಆರನೆಯ ಅಂತರದ ಸ್ವರ; ಈ ಅಂತರ; ಒಂದು ಸ್ವರದ ಮತ್ತು ಅದರ ಷಷ್ಠಾಂತರ ಸ್ವರದ ಸ್ವರಮೈತ್ರಿ. **Síxthly** (ಕ್ರಿ. ವಿ.) ಆರನೆಯದಾಗಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Síxty ಸಿಕ್ಸ್ಟಿ (ಗು., ನಾ.) ಅರುವತ್ತು, ಷಷ್ಟಿ (೬೦, 60, LX) (S.-one, -two, etc. ; S.-first, -second, etc.). S.-four-mo ಒಂದು ಹಾಳೆಯನ್ನು ಅರುಸಲ ಮಡಿಸುವುದರಿಂದ ಅಗುವ ೬೪ ಹಾಳೆಗಳರ್ಲ್ಲೊಂದು ; ಈ ಆಕಾರ(ದ ಪುಸ್ತಕ) ; ಚತುಷ್ಷಷ್ಟಿ ಆಕಾರ. The sixties (ಜೀವಮಾನದ ಅಥವಾ ಶತಮಾನದ) ೬೦ರಿಂದ ೭೦ ರೊಳಗಿನ ವರ್ಷಗಳು. **Síxtieth** (ಗು., ನಾ.)

Síxain, Síxer. **Six** ನೋಡಿ.

Sixte ಸಿಕ್ಸ್ಟ್ (ನಾ.) ಕತ್ತಿವರಿಸೆಯಲ್ಲಿ ಒಂದು ನಿಲವು, ಥಂಗಿ.

Sixteén, etc., Sixth, etc., Sixty, etc. **Six** ನೋಡಿ.

Sízable. **Size** ನೋಡಿ.

Sízar ಸೈಸರ್ (ನಾ.) (ಕೇಂಬ್ರಿಡ್ಜ್ ವಿ. ವಿ. ನಿ. ದಲ್ಲಾಗಲಿ ಡಬ್ಲಿನಿನ ಟ್ರನಿಟಿ ಕಾಲೇಜಿನಲ್ಲಾಗಲಿ) ರಿಯಾಯಿತಿ ತೆರದ (ಕಡಮೆ ಫೀಜಿನ) ಅಥವಾ ಭೃತ್ಯ ಪಡೆಯುವ ವಿದ್ಯಾರ್ಥಿ (ಹಿಂದಿನ ಕಾಲದಲ್ಲಿ ಇಂಥವನು ಕೆಲವು ಜವಾನ ಚಾಕರಿಗಳನ್ನು ಮಾಡಬೇಕಾಗಿತ್ತು) ; ಭೃತ್ಯದ ವಿದ್ಯಾರ್ಥಿ. **Sízarship** (ನಾ.) ಭೃತ್ಯ ವಿದ್ಯಾರ್ಥಿತನ.

Size ಸೈಸ್ (ನಾ., ಕ್ರಿ.) (ಚರಿತ್ರೆ) (ಮು., ಆಹಾರದ ಅಥವಾ ಪಾನದ) ತೂಕದ ಅಥವಾ ಅಳತೆಯ ಪ್ರಮಾಣ; (ಕೇಂಬ್ರಿಡ್ಜ್ ವಿ. ವಿ. ನಿ. ; ಉಗ್ರಾಣದಿಂದ ಕೊಡುವ) ಆಹಾರ ಪಾನೀಯಗಳ ಭೃತ್ಯ, ಪಡಿ [=**Sízing** (ನಾ.)]. ಅಳತೆ, ಗಾತ್ರ, ಆಕಾರ, ಪ್ರಮಾಣ [Is of vast, diminutive, s. ತುಂಬ ದೊಡ್ಡ, ಪುಟ್ಟ, ಅಳತೆಯದು. Are both of a s. ಎರಡೂ ಒಂದೇ ಅಳತೆ, ಗಾತ್ರ. Is the s. of an egg ಮೊಟ್ಟೆಯ ಗಾತ್ರವಿದೆ. That's about the s. of it (ಬಳ. ಮಾ.) ಅದು ವಿಷಯದ ಯಥಾವತ್ತಾದ —ವರ್ಣನೆ, ನಿರೂಪಣೆ. Is made in several sizes ಹಲವು ಅಳತೆಗಳಲ್ಲಿ, ಹಾಳತಗಳಲ್ಲಿ, ಮಾಡಿದೆ. Takes s. 7 in gloves ೭ನೆಯ ಅಳತೆಯ (ನಂಬರಿನ) ಕೈಗವುಸು ತೆಗೆದುಕೊಳ್ಳುತ್ತಾನೆ. Is quite a s. ಸರಿಯಾದ ಅಳತೆ. Outsize ಅಸಾಧಾರಣ ಗಾತ್ರ. S.-stick ಮೋಚಿಯವನು ಪಾದದ ಉದ್ದಳತೆ ತೆಗೆದುಕೊಳ್ಳುವ ಕೋಲು : ಅಳತೆ —ಕಡ್ಡಿ, ಕೋಲು]. ಮುತ್ತು ರತ್ನಗಳನ್ನು ಗಾತ್ರದ ಪ್ರಕಾರ ವಿಂಗಡಿಸುವ ಸಲಕರಣೆ, ಜರಡಿ : ಗಾತ್ರ ವಿಂಗಡಕ. (ಕ್ರಿ.) (ಕೇಂಬ್ರಿಡ್ಜ್ ವಿ. ವಿ. ನಿ.) ಭೃತ್ಯ, ಪಡಿ, —ಕೋರು. ಗಾತ್ರದ, ಅಳತೆಯ, —ಪ್ರಕಾರ ವಿಂಗಡಿಸು. S. up ಗಾತ್ರವನ್ನು, ಅಳತೆಯನ್ನು, —ಅಂದಾಜು ಮಾಡು. (ಬಳ. ಮಾ.) (ವ್ಯಕ್ತಿ, ಮೊ. ರ) ಯೋಗ್ಯತೆ ನಿರ್ಣಯಿಸು, ಬೆಲೆ ಕಟ್ಟು. **Sízable** (ಗು.) ದೊಡ್ಡಳತೆಯ, ದೊಡ್ಡ ಗಾತ್ರದ. **-sized** (ಗು.) —ಅಳತೆಯ, ಗಾತ್ರದ. **Sízer** (ನಾ.) ಗಾತ್ರ ವಿಂಗಡಕ ; ಗಾತ್ರ ಜರಡಿ.

Size[2] ಸೈಸ್ (ನಾ., ಕ್ರಿ. ಸಕ.) (ಕಾಗದಕ್ಕೆ ಹೊಳಪು ಕೊಡುವುದು, ಬಟ್ಟೆಗಳನ್ನು ಬಿರುಸು ಮಾಡುವುದು, ಹಲವು ತಯಾರಿಕೆ ಪ್ರಕ್ರಿಯೆಗಳು, ಮೊ. ಗಳಲ್ಲಿ ಉಪಯೋಗಿಸುವ) (ಜೆಲಟನ್, ಮೊ. ಗಳ) ಅಂಟು ; ವಜ್ರಸರಿ ; ಗಂಜಿ. (ಕ್ರಿ.) —ಹಾಕು ; —ಹಾಕಿ ಬಿರುಸು ಮಾಡು, ಹೊಳಪು ಕೊಡು. **Sízy** (ಗು.) ಅಂಟಂಟಾದ, ಸರಿಯಂತಿರುವ.

Sízzle ಸಿಸ್ಲ್ (ಕ್ರಿ. ಅಕ., ನಾ., ಬಳ. ಮಾ.) (ಮು., ಸುಡುವಾಗ, ಹುರಿಯುವಾಗ) ಹಿಸ್ ಶಬ್ದ (ಮಾಡು), ಹಿಸ್ (ಎನ್ನು); (ಒಗ್ಗರಣೆಯಲ್ಲಿ) ಚಟಪಟ(ಗುಟ್ಟು)

Sjámbok ಷ್ಯಾ(ಷ್ಯಾ)ಂಬಾಕ್ (ನಾ.) (ಖಡ್ಗಮೃಗದ ಅಥವಾ ನೀರಾನೆಯ ಚರ್ಮದಿಂದ ಮಾಡಿದ) ಬಲವಾದ ಚಾವಟಿ, ಚಬುಕು.

Skald. **Scald**[2] ನೋಡಿ.

Skat ಸ್ಕಾಟ್ (ನಾ.) ಜರ್ಮನಿಯಲ್ಲಿ ಬಹಳ ಬಳಕೆಯಲ್ಲಿರುವ, ಮೂರು ಮಂದಿ ಆಡುವ ಒಂದು ಇಸ್ಪೀಟಾಟ.

Skate ಸ್ಕೇಟ್ (ನಾ., ಕ್ರಿ.) ನೀರ್ಗಲ್ಲಿನಮೇಲೆ ಅಥವಾ ನುಣುಪು ಗಟ್ಟಿ ನೆಲದಮೇಲೆ ತಿರುವು ಮುರುವಾಗಿ ಜಾರಲು ಅನುಕೂಲಿಸುವಂತೆ ಮೆಟ್ಟಿನ ತಳಕ್ಕೆ ಬಿಗಿಸಿರುವ, ಉಕ್ಕಿನ ಅಲಗಿನ ಅಥವಾ ಉರುಳೆ ತಂಡದ (ಜೋಡಿ) ಸಲಕರಣೆ(ಗಳಲ್ಲೊಂದು) : ಜಾರು ಮೆಟ್ಟು [Roller-s. (ನುಣ್ಣನೆಯ ಗಟ್ಟಿ ನೆಲದಮೇಲೆ ಜಾರಲು ಅನುಕೂಲಿಸುವ) ಗುರುಳು ಮೆಟ್ಟು]. (ಕ್ರಿ.) ಜಾರು ಮೆಟ್ಟು ಹಾಕಿಕೊಂಡು ಜಾರು, ನೀರ್ಗಲ್ಲ ಜಾರಾಟವಾಡು [S. over *or* on thin ice ಬಹಳ ಔಚಿತ್ಯ ಜ್ಞಾನ ಬೇಕಾದ, ಬಹಳ ಎಚ್ಚರಿಕೆ ಬೇಕಾದ, ಸೂಕ್ಷ್ಮ ವಿಷಯವನ್ನು ಮಾತಿಗೆ ತೆಗೆದುಕೊ. ತನ್ನ ಜಾಣ್ಮೆಯಿಂದಲೊ ಅದೃಷ್ಟದಿಂದಲೊ ಪಾರಾಗುವೆನೆಂದು ನಂಬಿಕೊಂಡು ಅತಿಧೈರ್ಯದಿಂದ ಅಪಾಯ ಸನ್ನಿವೇಶಗಳಲ್ಲಿ ಕಾಲಿಡು]. Skating-rink ಜಾರಾಟದ (ನೀರ್ಗಲ್ಲ) ನೆಲಗಟ್ಟು. **Skáter** (ನಾ.)

Skean, Skene ಸ್ಕೀನ್, **Skain** ಸ್ಕೆಯ್ನ್ (ನಾ.) (ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್ ದೇಶಗಳಲ್ಲಿ ಉಪಯೋಗಿಸುವ) ಬಾಕು, ಸುರಗಿ, ಕಠಾರಿ. S.-dhu (—ಡೂ) ಸ್ಕಾಟ್ಲೆಂಡಿನ ಮಲೆನಾಡಿಗರು (ಹೈಲೆಂಡಿನವರು) ತಮ್ಮ ಉಡುಪಿನ ಭಾಗವಾಗಿ ಕಾಲುಚೀಲದಲ್ಲಿ ಸಿಕ್ಕಿಸಿಕೊಳ್ಳುವ ಬಾಕು.

Skedáddle ಸ್ಕಿಡ್ಯಾಡ್ಲ್ (ಕ್ರಿ. ಅಕ., ನಾ.; ಬಳ. ಮಾ.) ಓಡಿಹೋಗು, (ದಿಕ್ಕುಪಾಲಾಗಿ) ಪಲಾಯನಮಾಡು, ಓಟ ಕೀಳು. (ನಾ.) (ದಿಕ್ಕು ಪಾಲಾಗಿ) ಪಲಾಯನ, ಓಟ.

Skee =Ski.

Skein ಸ್ಕೆಯ್ನ್ (ನಾ.) (ನೂಲು, ಹುರಿ, ರೇಷ್ಮೆ, ಮೊ. ಗಳ) ಲಡಿ, ಪಿಂಜಿ. ಓಡಿಹೋಗುತ್ತಿರುವ ಕಾಡು ಬಾತು, ಮೊ. ಗಳ ಹಿಂಡು. (ರೂಪ.) ಗೋಜು, ಸಿಕ್ಕು, ತೊಡಕು.

Skéleton ಸ್ಕೆಲಟನ್ (ನಾ.) ಪ್ರಾಣಿಯ ಅಥವಾ ಸಸ್ಯದ ಶರೀರವನ್ನು ಒಳಕೊಂಡ ಅಥವಾ ಅದಕ್ಕೆ ಆಧಾರವಾಗಿರುವ ಮೂಳೆಗಳು, ಮೃಲ್ಲೆಲುಬು, ಚಿಪ್ಪು, ಮರದ ನಾರು, ಮೊ. ಗಳ ಕಠಿನ ಚೌಕಟ್ಟು. ಅಸ್ಥಿಪಂಜರ, ಮೂಳೆಗಟ್ಟು, ಎಲುಬಿನ ಗೂಡು, ಕಂಕಾಲ (S. at the feast ಸಂತೋಷದ ಅಥವಾ ಭೋಗದ ಕಾಲದಲ್ಲಿ ದುಃಖದ ನೆನಪುಕೊಟ್ಟು ಹರ್ಷಕ್ಕೆ ಅಡ್ಡ ಬರುವ ವ್ಯಕ್ತಿ, ವಸ್ತು, ವಿಷಯ ; ಸಂತೋಷವನ್ನು ಕೆಡಿಸುವ ಚಿಂತೆ ; ಹರ್ಷ ವಿನಾಶಕ. S. in the cupboard, family s. ಹೊರಗಿನವರಿಗೆ ತಿಳಿಯದಂತೆ ಮರೆಸಿಟ್ಟ ಅವಮಾನಕರವಾದ, ದುಃಖಕರವಾದ, ಅಥವಾ ಹೀನಾಯವಾದ ಸಂಗತಿ ; ಸಂಸಾರದ, ಗೃಹಕೃತ್ಯದ, —ಗುಟ್ಟು, ರಹಸ್ಯ). (ಒಂದರ ಜೀವ ಅಥವಾ ಪ್ರಯೋಜನ ಮುಗಿದು ಹೋದಮೇಲೆ ಉಳಿಯುವ) ನಿರ್ಜೀವಾವಶೇಷ. (ಒಂದರ) ಚೌಕಟ್ಟು, ಆಧಾರ, ಮುಖ್ಯ ಭಾಗ [S. crew, regiment (ಅವಶ್ಯಕವಾದಾಗ ವೃದ್ಧಿಮಾಡಿಕೊಳ್ಳಬಹುದಾದ) ಆಧಾರ ನಾವಿಕ ತಂಡ, ಮೂಲ ಸೈನಿಕ ದಳ. S. drill ಪೂರ್ತಿ ದಳಗಳಿಲ್ಲದೆ ಇಬ್ಬರು ಪ್ರತಿನಿಧಿಗಳಿಂದ ಮಾತ್ರ, ಉದ್ದನೆಯ ಹಗ್ಗ ಹಿಡಿಸಿ, ಮಾಡಿಸುವ ಕವಾಯಿತು. S. key (ಬೀಗದ ಕೈಯಿನ ಹಲ್ಲುಗಳನ್ನು ಉಜ್ಜಿಹಾಕಿ, ಹಲವು ಬೀಗಗಳನ್ನು ತೆಗೆಯುವಂತೆ ಮಾಡಿರುವ) ನಾಯಕ ಬೀಗದ ಕೈ. S. *or* s.-face type ತೆಳು ಗೆರೆಯ ಅಚ್ಚಿನ ಮೊಳೆ]. ಸ್ಥೂಲರೂಪ ರೇಖೆ, ಸ್ಥೂಲ ಸ್ವರೂಪ, ಸಾರ, ಸಾರಾಂಶ. (ಅತಿಶಯೋಕ್ತಿ ಪ್ರ.) ಮಾಂಸಖಂಡಗಳಿಲ್ಲದೆ ಬರಿಯ ಎಲುಬುಗೂಡಾಗಿ ಕಾಣುವವನು; ಸಣಕಲ, ನರಪೇತ. **Skéletal** (ಗು.) ಅಸ್ಥಿಪಂಜರದ(ಂಥ), ಎಲುಬುಗೂಡಿನ(ಂಥ). **Skéleto-** (ಸ. ಪೂ. ಪ.) ; **Skeletógraphy** (ನಾ.) ಅಸ್ಥಿಪಂಜರ ವಿವರಣೆ. **Skéletonize** (ಕ್ರಿ. ಸಕ.) (ಮಾಂಸ, ಅಂಗಾಂಶ, ಮೊ. ನ್ನು ಕಳೆದು) ಅಸ್ಥಿಪಂಜರವಾಗಿ ಮಾಡು ; (ವಿವರಗಳನ್ನು ಬಿಟ್ಟು) ಸಾರಾಂಶಕ್ಕೆ, ಸ್ಥೂಲರೂಪಕ್ಕೆ, —ಇಳಿಸು.

Skene. **Skean** ನೋಡಿ.

Skep ಸ್ಕೆಪ್ (ನಾ.) ಮಂಕರಿ, ಕುಕ್ಕೆ, ಗೂಡೆ, ಬುಟ್ಟಿ. ಹುಲ್ಲು, ಅಪು, ಮೊ. ಗಳಿಂದ ಮಾಡಿದ ಜೇನುಹುಟ್ಟಿ.

Sképsis, Sképtic, etc. **Sceptic** ನೋಡಿ.

Sketch ಸ್ಕೆಚ್ (ನಾ., ಕ್ರಿ.) ಕ್ರಮವಾಗಿ ಚಿತ್ರ ಬರೆಯುವ ಮೊದಲು ಆಕೃತಿ ಸೂಚಕವಾಗಿಯಾಗಲಿ ಪ್ರಯೋಗಾರ್ಥವಾಗಿಯಾಗಲಿ ಗುರುತಿಸುವ, ಬರಿಯ ರೂಪ ರೇಖೆಯ, ಅಪರಿಷ್ಕೃತ, ಅಥವಾ ಸ್ಥೂಲರೂಪದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೇಖನ ಅಥವಾ ವರ್ಣಚಿತ್ರ : ಮುಂಗುರಿತಿನ, ಸ್ಥೂಲ, —ನಕ್ಷೆ, ಚಿತ್ರ; ಕಚ್ಚಾ ನಕಾಸೆ ; ಕರಡು ಚಿತ್ರ. (ಹೆಚ್ಚು ವಿವರಗಳನ್ನು ಕೊಡದೆ ಸಾಮಾನ್ಯ ಭಾವವನ್ನು ತಿಳಿಸುವ) ಸ್ಥೂಲ —ಸ್ವರೂಪ, ನಿರೂಪಣೆ ; ಕರಡು (ಪ್ರತಿ) ; ಹೊರ ಗೆರೆ ; ರೂಪ ರೇಖೆ. ಲಘು ರೂಪಕ, ದೃಶ್ಯ (ಅನೇಕ ವೇಳೆ ಸಂಗೀತ ಜಾತಿಯದು); ವರ್ಣನಾತ್ಮಕ ಲಘು ಪ್ರಬಂಧ, ಶಬ್ದ ಚಿತ್ರ ; ಏಕ ಗತಿಯ ಲಘು ಸಂಗೀತ ಕೃತಿ. [S.-block, -book ಸ್ಥೂಲ ನಕ್ಷೆಯ (ಹಾಳೆಗಳ) ಪುಸ್ತಕ. S.-map (ಹೆಚ್ಚು ವಿವರಗಳಿಲ್ಲದ) ರೂಪ ರೇಖೆಯ ಭೂಪಟ]. (ಕ್ರಿ.) (ಮು., ಭೂ ದೃಶ್ಯಗಳ) ಸ್ಥೂಲ ನಕ್ಷೆ, ಸ್ಥೂಲ ಚಿತ್ರ, —ಬರೆ (Went out sketching ಭೂ ದೃಶ್ಯಗಳ ಸ್ಥೂಲ ಚಿತ್ರಗಳನ್ನು ಚಿತ್ರಿಸಲು ಹೋದನು); ರೂಪ ರೇಖೆ ತೋರಿಸು, ಬರೆ, ಚಿತ್ರಿಸು ; ಸ್ಥೂಲವಾಗಿ ನಿರೂಪಿಸು. **Skétcher** (ನಾ.) ; **Skétchy** (ಗು.) ಸ್ಥೂಲ ರೂಪದ, ರೂಪ ರೇಖೆಯ, ಸ್ಥೂಲ ನಿರೂಪಣಾತ್ಮಕ ; (ಬಳ. ಮಾ.) ಹರುಕು ಮುರುಕಾದ, ಅರೆ ಕೊರೆಯ, ಜಾಳು ಜಾಳಾದ, ಕಾಟಾಚಾರದ (A house with only very s. wooden window-shutters. Concluding some s. ablutions). **Skétchily** (ಕ್ರಿ. ವಿ.) ; **Skétchiness** (ನಾ.)

Skew ಸ್ಕ್ಯೂ (ಗು., ನಾ.) ಓರೆಯಾಗಿರುವ, ಓಲಿ(ಕೊಂಡಿ)ರುವ, ಮಾಲ(ಕೊಂಡಿ)ರುವ, ಪಕ್ಕಕ್ಕೆ ತಿರುಗಿ(ಕೊಂಡಿ)ರುವ, ತಿರುಚಿ(ಕೊಂಡಿ)ರುವ, ಕೊಂಕಿದ, ವಕ್ರ [(ಈಗ ಸಾ., ವಾ. ಶಾ., ಯಂತ್ರಶಿಲ್ಪ, ಗಣಿತಗಳಲ್ಲಿ ಪ್ರ.) : S. bridge (ಕಮಾನು ಪಂಕ್ತಿ, ಗುದ್ದುಗಂಬಕ್ಕೆ ನಮಕೋನದಲ್ಲಿಲ್ಲದ, ದಡದಿಂದ ದಡಕ್ಕೆ ಮಾಲಿರುವಂತೆ ಕಟ್ಟಿದ) ಮಾಲು, ವಕ್ರ,—ಸೇತುವೆ. S. chisel ಓರೆ ಉಳಿ. S. wheel ಮಾಲುಹಲ್ಲುಗಳ, ಓಟವಾದ ಚಕ್ರ. S. curve (ಒಂದೇ ಸಮತಲದಲ್ಲಿಲ್ಲದ) ತಿರುಚು ವಕ್ರ ರೇಖೆ, ಕುಟಿಲ ವಕ್ರ (ಬರಡೆ ತಿರುಪಿನಂತಹದು)]. (ಗಣಿತ) ಎದುರು ಬದುರು ಪಾರ್ಶ್ವಗಳ ಜವಾಬಾದ ಅಂಶಗಳಲ್ಲಿ ಹೊಂದಿಕೆ ತಪ್ಪಿದ : ಅಸಮ ರೂಪದ, ವಿಷಮ ಪ್ರಮಾಣದ. [Skewbald (ಕುದುರೆಗಳ ವಿಷಯದಲ್ಲಿ) ಬಿಳಿಯ ಮತ್ತು (ಕಪ್ಪು ಬಿಟ್ಟು) ಇತರ ಬಣ್ಣದ ಮಚ್ಚೆಗಳುಳ್ಳ (ಬಿಳಿಯ ಮತ್ತು ಕರಿಯ ಮಚ್ಚೆಗಳಾದರೆ piebald ಪದ ಪ್ರ.) S.-eyed ಮಾಲುಗಣ್ಣಿನ]. (ನಾ.) ಒತ್ತುಗೋಡೆಯ ಓಟದ ನೆತ್ತಿ ; ಇಪ್ಪಾರುಮೂಲೆಯ (ಗೇಬಲ್ಲಿನ) ತಲೆಕಟ್ಟಡ, ಕುಂಬೆ. ಕುಂಬೆಗೆ ಆಧಾರವಾಗಿ ಗೇಬಲ್ಲಿನ ತಳದಲ್ಲಿ ಹಾಕಿದ ಕಲ್ಲು : ಕುಂಬೆಯ ಆಸರೆಗಲ್ಲು.

Skewer ಸ್ಕ್ಯೂಅರ್ (ನಾ., ಕ್ರಿ. ಸಕ.) ಮಾಂಸವನ್ನು ಬೇಯಿಸುವಾಗ ಅದನ್ನು ಸರಿಯಾಗಿ ಹಿಡಿದಿಟ್ಟುಕೊಳ್ಳುವ ಮರದ ಅಥವಾ ಲೋಹದ ಕೋಲು, ಕಂಬಿ, ಸಲಾಕಿ ; ಮೇಕು ; (ಹಾಸ್ಯ ಪ್ರ.) ಕತ್ತಿ, ಮೊ. ಆಯುಧ. (ಕ್ರಿ.) ಸಲಾಕಿಯಿಂದ (ಹೇಗೊ ಹಾಗೆ) ಚುಚ್ಚಿ—ಬಂಧಿಸು, ಜೋಡಿಸು ; (ಆಯುಧದಿಂದ) ತಿವಿ, ಚುಚ್ಚು.

Ski ಷೀ, ಸ್ಕೀ (ನಾ., ಬ. ವ. Ski, Skis —ಸ್; ಕ್ರಿ. ಅಕ. ; ಭೂತ. Skied, Skid ಷೀಡ್, ಸ್ಕೀಡ್ ; ಭೂ. ಕೃ. Skiing —ಇಂಗ್) ಮು., ಸ್ಕಾಂಡಿನೇವಿಯದಲ್ಲಿ, ನೀರ್ಗಲ್ಲಮೇಲೆ ಓಡಾಡುವುದಕ್ಕೆ ಅಂಗಾಲಿಗೆ ಬಿಗಿದುಕೊಳ್ಳುವ, ಸು., ೮ ಅಡಿ ಉದ್ದ ೪ ಅಂಗುಲ ಅಗಲವಿರುವ, ಮರದ ತುಂಡು : ಜಾರು —ತುಂಡು, ಮರ, (ನೀರ್ಗಲ್ಲ) ಹಾವುಗೆ. (ಕ್ರಿ.)—ಹಾಕಿಕೊಂಡು ಪ್ರಯಾಣಮಾಡು, ಜಾರಾಟವಾಡು: **Skiér** ಷೀ(ಸ್ಕೀ)ಅರ್ (ನಾ.) ಜಾರುಮರ ಹಾಕಿಕೊಂಡು ಜಾರುವವನು.

Skiágraphy. **Sciagraphy** ನೋಡಿ.

Skid ಸ್ಕಿಡ್ (ನಾ., ಕ್ರಿ.) ಕಾಪು ತಡೆ, ಆಸರೆ, ಇಳುಕಲು, ಮೊ. ರೀತಿಯಲ್ಲಿ ಉಪಯೋಗಿಸಿರುವ ಮರದ ದಿಮ್ಮಿ, ಹಲಗೆ, ಚೌಕಟ್ಟು : ಕಾಪು, ಊರೆ, ಇಳುಕಲು—ದಿಮ್ಮಿ, ಮರ, ಚೌಕಟ್ಟು. ಚಕ್ರ ಸುತ್ತದಂತೆ ತಡೆಯುವ ಮರದ ಅಥವಾ ಲೋಹದ ಬಾಗು ತುಂಡು : ತಡೆ—ಮರ ತುಂಡು (=S.-pan) ; ಚಕ್ರ ರೋಧಕ ; ತಡೆ, ಪ್ರತಿಬಂಧಕ. ಕೆಸರು ನೆಲದಲ್ಲಿ ಚಕ್ರ ಎತ್ತಿಹಾಕುವುದು, ಜಾರುವುದು ; ಚಕ್ರದ—ಜಾರಿಕೆ, ಹೊರಳಿಕೆ. (ಕ್ರಿ.) (ಆಸರೆ ಮರದಿಂದ, ಊರೆಯಿಂದ) ಆಸರೆ, ಊರೆ,—ಕೊಡು ; (ಇಳುಕಲು ಮರದಿಂದ) ಜಾರಿಸು, ಚಲಿಸು ; (ತಡೆ ಮರದಿಂದ) ತಡೆ, ತಡೆ ಕೊಡು, ರೋಧಿಸು. (ಚಕ್ರ, ಬಂಡಿ) ಜಾರು.

Skiff ಸ್ಕಿಫ್ (ನಾ.) (ಹುಟ್ಟುಹಾಕಿ ನಡಸುವ) ಸಣ್ಣ ಹಗುರ ದೋಣಿ.

Skill ಸ್ಕಿಲ್ (ನಾ.) ಜಾಣ್ಮೆ, ಜಾಣತನ, ಕೈಚಳಕ, ಬುದ್ಧಿವಂತಿಕೆ, ಚಾತುರ್ಯ, ಕೌಶಲ, ನೈಪುಣ್ಯ. **Skílful** (ಗು.) ; **Skílfully** (ಕ್ರಿ. ವಿ.) ; **Skilled** (ಗು.) ಜಾಣತನದ, ಬುದ್ಧಿವಂತಿಕೆಯ, ಕೌಶಲವುಳ್ಳ, ನಿಪುಣ, ನುರಿತ [(ಕೆಲವು ಪ್ರ. ಗಳಲ್ಲಿ ಹೊರತು ವಿರ. ಪ್ರ.) : S. labour, workmen ಅನುಭವ ಬೇಕಾದ ಕೆಲಸ, ಅನುಭವ ಪಡೆದ ಕೆಲಸಗಾರರು ; ತರಪೇತು ಬೇಕಾದ ಕೆಲಸ, ತರಪೇತಾದ ಕೆಲಸಗಾರರು. S. in —ಲ್ಲಿ ತರಪೇತಾದ, ಅನುಭವವುಳ್ಳ]. **Skílless** (ಗು.) (ವಿರ. ಪ್ರ.) ಜಾಣ್ಮೆಯಿಲ್ಲದ ; ಅಚತುರ ; ಏನೂ ಅರಿಯದ (*Of* ಉಪ. ಜೊಡನೆ)

Skíllet ಸ್ಕಿಲೆಟ್ (ನಾ.) ಅಡಿಗೆಗೆ ಉಪಯೋಗಿಸುವ, ಉದ್ದ ಹಿಡಿಯುಳ್ಳ, ಸಾ., ಕಾಲುಗಳುಳ್ಳ, ಸಣ್ಣ ಲೋಹದ ಪಾತ್ರೆ : ಹಿಡಿದಪ್ಪಲೆ, ಹಿಡಿ ಬೋಗುಣಿ.

Skills ಸ್ಕಿಲ್ಸ್ (ಕ್ರಿ. ಅಕ., ಪ್ರಥಮ ಪುರುಷ ಏ. ವ. ಅಕರ್ತೃಕ) (ವಿರ. ಪ್ರ.) It s. not ಅದರಿಂದ ಏನೂ ವ್ಯತ್ಯಾಸವಾಗುವುದಿಲ್ಲ, ಪ್ರಯೋಜನವಾಗುವುದಿಲ್ಲ (ಸಾ., *to* ಉಪ. ಜೊಡನೆ)

Skílly ಸ್ಕಿಲಿ (ನಾ.) (ಸೆರೆಮನೆ, ಅನಾಥಾಲಯ, ಮೊ. ಗಳಲ್ಲಿ ಸಾ., ಕೊಡುವ, ಮಾಂಸಹಾಕಿ ರುಚಿಗೊಳಿಸಿದ) ಓಟ್ಸ್ ಹಿಟ್ಟಿನ ಅಂಬಲಿ, ಗಂಜಿ.

Skim ಸ್ಕಿಮ್ (ಕ್ರಿ., ಗು.) (ಕರಗಿದ ಲೋಹ, ಮೊ. ಗಳ ಮೇಲೆ ತೇಲುವ) ಕಿಟ್ಟ, (ಹಾಲು, ಮೊ. ದ್ರವಗಳ ಮೇಲೆ ತೇಲುತ್ತಿರುವ) ಪೊರೆ, ಕೆನೆ, —ತೆಗೆ(ದು ಹಾಕು) [S. the cream off ಕೆನೆ ತೆಗೆದುಬಿಡು ; (ರೂಪ.) ಉತ್ತಮಾಂಶವನ್ನು, ಸಾರ ಭಾಗವನ್ನು, ತೆಗೆದುಕೊ. Skimming-dish (ಅನಂ.) ಚಪ್ಪಟೆ ತಳದ ಜೂಜು ದೋಣಿ]. (ಮೇಲ್ಮೈತ್ತಿಯನ್ನು) ಹಗುರವಾಗಿ ಸೋಕಿಕೊಂಡು, ಸವರಿಕೊಂಡು, —ಹೋಗು ; (ಮೇಲ್ಮೈಯ ಮೇಲೆ) ಸೋಕಿ ಸೋಕದಂತೆ ಚಿಮ್ಮಿಕೊಂಡು (*Over, along* ಉಪ. ಜೊಡನೆ), (ಆಕಾಶದಲ್ಲಿ) ತೇಲಿಕೊಂಡು, —ಹೋಗು ; ಮೇಲೆ ಮೇಲೆ ಓದಿಕೊಂಡು, ಕಣ್ಣೋಡಿಸುತ್ತ, —ಹೋಗು ; ಮುಖ್ಯಾಂಶಗಳನ್ನು, ಸಾರಾಂಶವನ್ನು, —ಗ್ರಹಿಸುತ್ತ ಹೋಗು. (ಗು.) ಕೆನೆ ತೆಗೆದ [S. milk ಕೆನೆ ತೆಗೆದ ಹಾಲು (=Skimmed milk)]. **Skímmer** (ನಾ.) (ಕ್ರಿಯಾರ್ಥಗಳಲ್ಲ) ; ಕೆನೆ, ಮೊ. ನ್ನು ಬಾಚಿ ತೆಗೆಯುವ ಸೌಟು) : ಗೋರು ಸೌಟು, ಜಾಲರಿ ಸೌಟು. ಹಲವು ಬಗೆಯ ನೀರು ಹಕ್ಕಿ [(ಮು.) Black S. ಕೊಕ್ಕಿನ ಬುಡ ಚಪ್ಪಟೆಯಾಗಿರುವ ನೀರು ಹಕ್ಕಿ]

Skimp ಸ್ಕಿಂಪ್ (ಕ್ರಿ.) (ಆಹಾರ, ದುಡ್ಡು, ಮೊ. ನ್ನು ಕೊಡುವಲ್ಲಿ) ಕಾರ್ಪಣ್ಯದಿಂದ, ಕೈಹಿಡಿದು, —ಒದಗಿಸು, ಕೊಡು (*In* ಉಪ. ಜೊಡನೆ) ; ಜಿಪುಣತನಮಾಡು, ಬಿಗಿಹಿಡಿ. **Skímpingly** (ಕ್ರಿ. ವಿ.) ; **Skímpy** (ಗು.)

Skin ಸ್ಕಿನ್ (ನಾ.) ಚರ್ಮ, ತ್ವಕ್ಕು, ತೊಗಲು, ಚಕ್ಕಳ ; ಬಾರ್ (ಗ್ರಾಂ.) [With a whole s. ಗಾಯ, ಘಾಸಿ, —ಗೊಳ್ಳದೆ ; ಅಕ್ಷತವಾಗಿ. Save one's s. ಸುರಕ್ಷಿತವಾಗಿ ಪಾರಾಗು ; ಅಪಾಯ, ನಷ್ಟ, —ತಪ್ಪಿಸಿಕೊ ; ತಲೆ ಉಳಿಸಿಕೊ. Change one's s. (ಶೀಲ ಸ್ವಭಾವ, ಮೊ. ಗಳಲ್ಲಿ) ಅಸಾಧ್ಯವಾದ ಬದಲಾವಣೆಗಳನ್ನು ಹೊಂದು, ಬಣ್ಣ ಬದಲಾಯಿಸು. Would not be in his s. ನಾನು ಅವನ ಸ್ಥಿತಿಯಲ್ಲಿರಲು, ಅವನ ಸ್ವಭಾವ ಪಡೆಯಲು, —ಇಷ್ಟಪಡುವುದಿಲ್ಲ. Is only s. & bone ಬರಿಯ ಮೂಳೆ ಚರ್ಮ ಆಗಿದ್ದಾನೆ ; ನರಪೇತಲನಾಗಿದ್ದಾನೆ. Escaped with the s. of one's teeth ಬಹಳ ಕೊಂಚದಲ್ಲಿ, ಬಹಳ ಕಷ್ಟದಿಂದ,—ತಪ್ಪಿಸಿಕೊಂಡನು. Thick s. (ಅವಮಾನ, ಟೀಕೆ, ಮೊ. ಗಳು ಮನಸ್ಸಿಗೆ ತಟ್ಟದ) ಜಡ್ಡು, ಮಾಂದ್ಯ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಮ್ಮೆ ಚರ್ಮ(ದ ಹಾಗೆ). Thin s. ಬೇಗ ನಾಟುವ ಮನಸ್ಸು; ಸೂಕ್ಷ್ಮತೆ; ಮೃದು ಮನಸ್ಸು. Fair s. ಗೌರವರ್ಣ, —ಮೈಬಣ್ಣ. Dark s. ಕೃಷ್ಣ ವರ್ಣ; ಕಪ್ಪು ಮೈಬಣ್ಣ. Near is my shirt, nearer my s. (Shirt ನೋಡಿ). True *or* inner s. ನಿಜ ಚರ್ಮ, ಒಳ ಚರ್ಮ. Outer s. ಹೊರ ಚರ್ಮ]. ಪ್ರಾಣಿಯ ಪೂರ್ತಿ ಚರ್ಮದಿಂದ ಮಾಡಿದ ನೀರಿನ ಅಥವಾ ಹೆಂಡದ ಪಾತ್ರೆ: ಬುದ್ದಲಿ. (ಮರ, ಹಣ್ಣು, ಮೊ. ಗಳ) ತೊಗಟೆ, ಸಿಪ್ಪೆ, ಹೊಟ್ಟು. (ಒಂದು ಪದಾರ್ಥದ, ಚರ್ಮದಂಥ) ಹೊರ ಪದರ, ಪೊರೆ. (ಹಡಗಿನ ಅಥವಾ ದೋಣಿಯ ಚೌಕಟ್ಟಿಗೆ ಹೊದ್ದಿಸಿದ) ಹಲಗೆ ಹೊದಿಕೆ, ತಗಡು ಹೊದಿಕೆ. Gold-beaters' s. (Gold ನೋಡಿ). **S.-bound** ಮಾಂಸದಮೇಲೆ ಚರ್ಮ ಬಿಗಿಯಾಗಿ ಹತ್ತಿಕೊಂಡಿರುವ: ಬಿಗಿ ಚರ್ಮದ. **S.-deep** (ಗಾಯ, ರೂಪಕವಾಗಿ ಮನೋಭಾವ, ಸೌಂದರ್ಯ, ಮೊ. ಗಳ ವಿಷಯದಲ್ಲಿ) ಮೇಲು ಮೇಲಿನ, ಆಳವಿಲ್ಲದ, ಅಸ್ಥಿರ. **S.-friction** (ನೀರಿನಲ್ಲಿ ಹಾದುಹೋಗುತ್ತಿರುವ ಹಡಗು, ಮೊ. ಗಳಿಗೆ ಒದಗುವ) ಪಾರ್ಶ್ವ ಘರ್ಷಣೆ; ಪಕ್ಕ —ತೀಟ, ಉಜ್ಜು, ತಡೆತ. **S.-game** (ಅಮೆ. ನಂ., ಅಸಂ.) ಮೋಸ, ತಂತ್ರ. **S.-grafting** ಮತ್ತೊಂದು ಅಂಗದಿಂದಾಗಲಿ ದೇಹದಿಂದಾಗಲಿ ಕತ್ತರಿಸಿ ತೆಗೆದ ಒಳ್ಳೆಯ ಚರ್ಮವನ್ನು ಗಾಯಪಟ್ಟ ಚರ್ಮಕ್ಕೆ ಬದಲಾಗಿ ಸೇರಿಸುವುದು: ಚರ್ಮ ಸಂಯೋಜನೆ, ಚರ್ಮ ಸ್ಥಾಪನೆ. **Skínful** (ನಾ.) (ಮದ್ಯ, ಮೊ. ಗಳ ವಿಷಯದಲ್ಲಿ) ಬುದ್ದಲಿ ತುಂಬು. **Skínless** (ಗು.); **-skinned** (ಗು.); **Skínny** (ಗು.) ಮೂಳೆ ಬಿಟ್ಟುಕೊಂಡಿರುವ, ಸಣಕಲಾದ, ಬಡಕಲಾದ. ಚರ್ಮದ(ಂಥ), ಪೊರೆಯ(ಂಥ). ಜಿಪುಣತನದ, ಕಾರ್ಪಣ್ಯದ. **Skínniness** (ನಾ.)

Skin (ಕ್ರಿ.) (ಹುಣ್ಣು, ಮೊ. ಗಳ ಮೇಲೆ) ಚರ್ಮ—ಮುಚ್ಚು, ಹೊಚ್ಚು, ಹಾಕು (ಸಾ., *Over* ಉಪ. ದೊಡನೆ); (ಗಾಯ, ಮೊ. ಗಳ ವಿಷಯದಲ್ಲಿ) ಹೊಸ ಚರ್ಮ ಬೆಳೆ(ದುಕೊ), ಪೊರೆಗಟ್ಟು (ಸಾ., *Over* ಉಪ. ದೊಡನೆ); ಮಾಯಿ; ಚರ್ಮ, ತೊಗಟೆ, ಸಿಪ್ಪೆ, ಹೊಟ್ಟು, —ಸುಲಿ, ಕಳಚು, ಕಳೆ, ಉರ್ಚು [Keep your eyes skinned (ಅಸಂ.) ಕಣ್ಣು ಬಿಟ್ಟುಕೊಂಡು ನೋಡುತ್ತಿರು, ಎಚ್ಚರಿಕೆಯಿಂದಿರು]. (ಬಳ. ಮಾ.) (ಬಿಗಿಯಾದ ಕವಚವನ್ನು) ಕಳಚಿಹಾಕು, ತೆಗೆದುಹಾಕು. (ಅಸಂ.) ಸುಲಿ, ಕಸಿ; ಮೋಸಮಾಡು. S. a flint ಕಲ್ಲಿನಲ್ಲಿ ನಾರು ಎತ್ತು; ಕಲ್ಲು ಸುಲಿ; ತುಂಬ ಜುಗ್ಗಾಗು. **Skínflint** (ನಾ.) ಜುಗ್ಗ, ಜಿಪುಣ; ಪಿಶನಾರಿ. **Skínner** (ನಾ.) (ಕ್ರಿಯಾರ್ಥಗಳಲ್ಲಿ); ಚಕ್ಕಳ, ಚರ್ಮ, —ವ್ಯಾಪಾರಿ; ಚರ್ಮ, ಚಕ್ಕಳ, —ಹದ ಮಾಡುವವನು.

Skink ಸ್ಕಿಂಕ್ (ನಾ.) ಸಣ್ಣ ಕಾಲಿನ ಹಲವು ಬಗೆಯ ಹಾವಿನಾಕಾರದ ಹಲ್ಲಿ.

Skip[1] ಸ್ಕಿಪ್ (ಕ್ರಿ., ನಾ.) ಹಗುರವಾಗಿ ತಗ್ಗಿನಲ್ಲಿ—ಹಾರು, ಎಗುರು; ಜಿಗಿ(ದಾಡು); ಕುಣಿ(ದಾಡು); ಕಾಲು ಕಾಲು ಬದಲಾಯಿಸಿಕೊಂಡು ಹಗುರವಾಗಿ ನೆಗೆ(ದಾಡು); (ಮಕ್ಕಳ, ಮು., ಹೆಣ್ಣುಮಕ್ಕಳ ವಿಷಯದಲ್ಲಿ) ಹಗ್ಗದ ಕುಣಿತವಾಡು, ಜಿಗಿ ಹಗ್ಗದಾಟವಾಡು. (ಒಂದು ವಿಷಯದಿಂದ ಮತ್ತೊಂದಕ್ಕೆ, ಒಂದು ಉದ್ಯೋಗದಿಂದ ಮತ್ತೊಂದಕ್ಕೆ) ಬೇಗ ಬದಲಾಯಿಸು, ಹಾರು (ಸಾ., *Off, from* ಉಪ. ದೊಡನೆ); (ಅಸಂ.) ಕಣ್ಮರೆಯಾಗು, ಓಡಿಹೋಗು, ಪಲಾಯನ ಮಾಡು; (ಒಂದು ನರಣಿಯಲ್ಲಿ ಹೋಗುತ್ತಿರುವಾಗ, ಓದುವಾಗ) ಮಧ್ಯೆ ಬಿಟ್ಟು ಬಿಡು, ಹಾರಿಸಿಬಿಡು (Always skips the descriptions ಓದುವುದರಲ್ಲಿ ಯಾವಾಗಲೂ ವರ್ಣನೆಗಳನ್ನು ಬಿಟ್ಟುಬಿಡುತ್ತಾನೆ, ಹಾರಿಸಿಕೊಂಡು ಹೋಗುತ್ತಾನೆ. S. every tenth row ಪ್ರತಿ ಹತ್ತನೆಯ ಸಾಲನ್ನೂ ಬಿಟ್ಟುಬಿಡು). (ನಾ.) (ಮು., ಕಾಲಿಂದ ಕಾಲಿಗೆ ಬದಲಾಯಿಸಿ) ನೆಗೆತ, ಜಿಗಿತ; ಜಿಗಿಯಾಟ [Hop, s. & jump (Hop[2] ನೋಡಿ)]. **Skípjack** (ನಾ.) ಒಂದು ಜಿಗಿ ಗೊಂದೆ; ಜಿಗಿದಾಡುವ ಹಲವು ಬಗೆಯ ಮೀನು, ಚಿಟ್ಟೆ, ಜೀರುಂಡೆ. **Skípper**[1] (ನಾ.) (ಕ್ರಿಯಾರ್ಥಗಳಲ್ಲಿ); (ಪ್ರಾ. ವಿ.) ಜಿಗಿ—ಮೀನು, ಚಿಟ್ಟೆ, ಜೀರುಂಡೆ. **Skipping-rope** (ಹೆಣ್ಣುಮಕ್ಕಳು ಜಿಗಿಯಾಟದಲ್ಲಿ ಉಪಯೋಗಿಸುವ, ಎರಡು ಕೊನೆಗಳಲ್ಲೂ ಮರದ ಹಿಡಿ ಹಾಕಿರುವ) ಜಿಗಿ ಹಗ್ಗ. **Skíppingly** (ಕ್ರಿ. ವಿ.)

Skip[2] ಸ್ಕಿಪ್ (ನಾ.) ಪ್ರೌಢ ವಿದ್ಯಾಶಾಲೆಯ ಆಳು, ಜವಾನ (ಮು., ಡಬ್ಲಿನಿನಲ್ಲಿ)

Skip[3] ಸ್ಕಿಪ್ (ನಾ.) (ಬೌಲ್ಸ್ ಮತ್ತು ಕರ್ಲಿಂಗ್ ಆಟಗಳಲ್ಲಿ) ಪಕ್ಷದ—ನಾಯಕ, ಮುಖಂಡ.

Skip[4] ಸ್ಕಿಪ್ (ನಾ.) ಕಲ್ಲುಗಣಿ, ಲೋಹಗಣಿ, ಮೊ. ಗಳಲ್ಲಿ ಮನುಷ್ಯರು, ಸಾಮಾನು, ಮೊ. ಗಳನ್ನು ಎತ್ತಿ ಇಳಿಸುವ ಗೂಡು ಚೌಕಟ್ಟು, ತೊಟ್ಟಿ.

Skípper[1]. **Skip**[1] ನೋಡಿ.

Skípper[2] ಸ್ಕಿಪರ್ (ನಾ.) (ಮು., ವ್ಯಾಪಾರದ) ಸಣ್ಣ ಹಡಗಿನ ಯಜಮಾನ, ನೌಕಾಧಿಪತಿ; (ಆಟಗಳಲ್ಲಿ) ಪಕ್ಷದ—ನಾಯಕ, ಮುಖಂಡ. S.'s daughters ಎತ್ತರದ ನೊರೆನೆತ್ತಿಯುಳ್ಳ ಅಲೆಗಳು.

Skíppet ಸ್ಕಿಪೆಟ್ (ನಾ.) ದಸ್ತೈವಜಿಗೆ ಹಾಕಿರುವ ಮುದ್ರೆ ಸುರಕ್ಷಿತವಾಗಿರುವಂತೆ ಅದನ್ನು ಮುಚ್ಚಿಡುವ ಮರದ ಕೊಳವೆ ಸಂಪುಟ.

Skirl ಸ್ಕರ್ಲ್ (ಕ್ರಿ. ಅಕ., ನಾ.) ತಿದಿಗೊಳಲ ನಾದ (ಮಾಡು)

Skírmish ಸ್ಕರ್ಮಿಷ್ (ನಾ., ಕ್ರಿ. ಅಕ.) ಸಣ್ಣ ಸಣ್ಣ ಅಥವಾ ಹೊರವಲಯದಲ್ಲಿರುವ ಸೈನಿಕ ಪಂಗಡಗಳಿಗೆ ಅನಿಯತವಾಗಿ, ಮುನ್ನಿರೀಕ್ಷೆಯಿಲ್ಲದೆ, ನಡೆಯುವ ಹೋರಾಟ: ಡಿಂಬ ಯುದ್ಧ; ಸಣ್ಣ ಕಾದಾಟ, ಅಲ್ಪ ಕದನ, ಹೊಡೆದಾಟ; (ಬುದ್ಧಿವಂತಿಕೆ, ತರ್ಕ, ಮೊ. ಗಳ) ವಾಗ್ಯುದ್ಧ. (ಕ್ರಿ.) ಸಣ್ಣ ತಂಡಗಳಲ್ಲಿ ಹೋರಾಡು, ಕಾದಾಡು, ಹೊಡೆದಾಡು, ಲಟಾಪಟಿ ಮಾಡು. **Skírmisher** (ನಾ.)

Skírret ಸ್ಕಿರಿ(ರೆ)ಟ್ (ನಾ.) ಒಂದು ಬಗೆಯ ಪಾರ್ಸ್ನಿಪ್ ಗೆಡ್ಡೆ.

Skirt ಸ್ಕರ್ಟ್ (ನಾ., ಕ್ರಿ.) ಅಂಗಿಯ ಅಥವಾ ಜುಬ್ಬದ ಸೊಂಟದ ಕೆಳ ಭಾಗ; (ಹೆಂಗಸಿನ) ಲಂಗ, ಪಾವುಡೆ (Divided s. ಲಂಗದಂತೆ ಕಾಣುವ ದಗಲೆ, ಷರಾಯಿ: ಸೀಳು ಲಂಗ). ಅಂಚು, ಅರುಗು, ಕರೆ, ಸೆರಗು; ಗಡಿ, ಸರಹದ್ದು (ಅನೇಕ ವೇಳೆ ಬ. ವ. ದಲ್ಲಿ). [On the skirts of London ಲಂಡನಿನ ಸರಹದ್ದಿನಲ್ಲಿ, ಎಲ್ಲೆಯಲ್ಲಿ. S. of beef (ಅಗ್ಗದ ಆಹಾರವಾದ) ಗೋಮಾಂಸದ ವಪೆ, ಮೊ. ಪೊರೆಗಳು. S. dance ನೀಳ ನಿರಿಗೆಯ ಲಂಗದ ನಾನಾ ವಿನ್ಯಾಸಗಳಿಂದ ಕುಣಿಯುವ ನೃತ್ಯ: ಲಂಗ ಕುಣಿತ. S.-dancer (ನಾ.); S.-dancing (ನಾ.)]. (ಗ್ರಾಮ್ಯ, ಅಸಂ.) ಹೆಣ್ಣು, ಹೆಂಗಸು (Bit of s.). (ಕ್ರಿ.) ಅಂಚು, ಸೆರಗು, ಎಲ್ಲೆ, ಗಡಿ, —ಆಗಿರು; —ಲ್ಲಿ ಇರು; (ಕರೆ, ಗೋಡೆ, ಮೊ. ರ) ಉದ್ದಕ್ಕೂ, ಸುತ್ತಲೂ, —ಹೋಗು (*Along, round* ಪದದೊಡನೆ); ಬಳಸು, ಸುತ್ತುವರಿ. **-skirted** (ಗು.); **Skírting** (ನಾ.) ಅಂಚು, ಅರುಗು, ಕರೆ, ಸೆರಗು. ಲಂಗದ ಬಟ್ಟೆ. (ಗೋಡೆಯ ಕೆಳ ಭಾಗದಲ್ಲಿ ಉದ್ದಕ್ಕೂ ಹದ್ದಿಸಿದ) ಕಾರಣೆ, —ಹಲಗೆ, ಪಟ್ಟಿ (=Skirting-board). **Skírtless** (ಗು.)

Skit ಸ್ಕಿಟ್ (ನಾ.) ಲಘು ವಿಡಂಬನ ಕಾವ್ಯ, ಅಣಕ ಬರಹ, ಪ್ರಹಸನ, ವಿಕಟ ಚಿತ್ರ, ಚೇಷ್ಟೆ ಬರೆವಣಿಗೆ, ತಮಾಷೆ (ಮಾಡುವ) ಚಿತ್ರ (*Upon* ಉಪ. ದೊಡನೆ)

Skítter ಸ್ಕಿಟರ್ (ಕ್ರಿ. ಅಕ.) (ಕಾಡುಕೋಳಿ: ಏಳುವಾಗ, ತಂಗುವಾಗ) ನೀರು ಸಿಡಿಸಿಕೊಂಡು ಹೋಗು; ನೀರಿನ ಮೇಲ್ಮೈಯಲ್ಲಿ ಎರೆ ಎಳೆಯುತ್ತ ಮೀನು ಹಿಡಿ; (ಹಗುರವಾಗಿ, ಅವಸರವಾಗಿ) ತೇಲಿಕೊಂಡು, ಸೋಕಿಕೊಂಡು, —ಹೋಗು.

Skíttish ಸ್ಕಿಟಿಷ್ (ಗು.) (ಕುದುರೆ, ಮೊ. ಗಳ ವಿಷಯದಲ್ಲಿ) ಬೆದರುವ, ಗಾಬರಿ ಬೀಳುವ, ಹತ್ತೋಟಿಗೆ ಬರದ, ಚಡಪಡಿಸುವ, ಹುರುಪಿನ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅತ್ಯುತ್ಸಾಹದ. (ಮು., ಹೆಂಗಸರ ವಿಷಯದಲ್ಲಿ) ಚಂಚಲ, ಚಪಲ, ಒಯ್ಯಾರದ, ಬೆಡಗಿನ, ಚೆಲ್ಲಾಟದ, ನಲಿದಾಡುವ, ವಿನೋದಶೀಲ, ಹುಡುಗಾಟಿಕೆಯ ; (ವಯಸ್ಸಾಗಿದ್ದರೂ) ತರುಣಿಯಂತೆ —ನಟಿಸುವ, ವಿಹರಿಸುವ. **Skíttishly** (ಕ್ರಿ. ವಿ.) ; **Skíttishness** (ನಾ.)

Skíttle ಸ್ಕಿಟ್ಲ್ (ನಾ., ಕ್ರಿ.) (ಬ. ವ. ದಲ್ಲಿ) ಒಂಬತ್ತು ಗೂಟಗಳನ್ನು ಒಂದು ಕೊನೆಯಲ್ಲಿ ವಜ್ರಾಕಾರದಲ್ಲಿ ನಿಲ್ಲಿಸಿ, ಮತ್ತೊಂದು ಕೊನೆಯಿಂದ ಮರದ ಬಿಲ್ಲೆಯನ್ನು ಎಸೆದು ಅವುಗಳನ್ನು ಕೆಡವುವ ಒಂದು ಆಟ : ಸ್ಕಿಟಲ್ ಆಟ ; ಇದರಲ್ಲಿ ಉಪಯೋಗಿಸುವ ಗೂಟ(ಗಳು) (=S.-pins); [S.-alley, -ground ಸ್ಕಿಟಲ್ ಆಟದ ಓಣಿ, ನೆಲಗಟ್ಟು. S.-ball ಸ್ಕಿಟಲ್ (ದುಂಡು)ಬಿಲ್ಲೆ. Beer & skittles ತಮಾಷೆ, ವಿನೋದ, ಆಟ (Life is not all beer & skittles ಜೀವನ ಬರಿಯ ತಮಾಷೆಯಲ್ಲ, ಸರಸಾಟವಲ್ಲ)] ; (ಬ. ವ. ದಲ್ಲಿ ; ಅಸಂ., ಭಾವ. ಅವ್ಯ.) ಕೆಲಸಕ್ಕೆ ಬಾರದ್ದು ! ಅಸಂಬದ್ಧ ! ಅವಿವೇಕ ! (ಕ್ರಿ.) ಸ್ಕಿಟಲ್ ಆಟ ಆಡು ; ದುಂದುಮಾಡು. (ಕ್ರಿಕೆಟ್) ಸರಸರನೆ (ದಾಂಡುಗಾರರ) ಆಟ ಕಳೆ(ದುಕೊ)

Skiv ಸ್ಕಿವ್ (ನಾ.) (ಅಸಂ.) ಒಂದು ಪೌಂಡು ; ಸವರನ್ನು.

Skive ಸ್ಕೈವ್ (ಕ್ರಿ. ಸಕ.) (ಚರ್ಮ, ಚಕ್ಕಳ, ಮೊ. ನ್ನು) ತೆಳ್ಳಗೆ ಕತ್ತರಿಸು, ಸೀಳು ; ಹೆರೆ(ದು ಹಾಕು) ; (ರತ್ನದ) ಮೇಲ್ಮೈಯನ್ನು ಉಜ್ಜಿಹಾಕು. **Skíver** (ನಾ.) (ಚಕ್ಕಳವನ್ನು) ಹೆರೆಯುವ ಚಾಕು ; ಹೆರೆದು ತೆಗೆದ ತೆಳು ಚರ್ಮ.

Skúa ಸ್ಕ್ಯೂಅ (ನಾ.) ಹಲವು ಬಗೆಯ ಗಲ್ ಹಕ್ಕಿ (The Great S. ಮು., ಕಪ್ಪು ಬಣ್ಣದ, ಅತ್ಯಂತ ದೊಡ್ಡ ಜಾತಿಯ ಗಲ್ ಹಕ್ಕಿ)

Skulk ಸ್ಕಲ್ಕ್ (ಕ್ರಿ. ಅಕ., ನಾ.) (ಹೆದರಿಕೆಯಿಂದ ಅಥವಾ ದುರುದ್ದೇಶದಿಂದ) ಅವಿತುಕೊಂಡಿರು, ತಲೆಮರಸಿಕೊಂಡಿರು, ಅಡಗಿಕೊಂಡಿರು ; (ಕಷ್ಟಕಾಲದಲ್ಲಿ ಕರ್ತವ್ಯ ಮಾಡದೆ) ಕಳ್ಳ ತಪ್ಪಿಸಿಕೊ, ತಲೆ ತಪ್ಪಿಸಿಕೊಂಡಿರು, ದೃಷ್ಟಿಗೆ ಬೀಳದಿರು. (ನಾ.) =Skulker. **Skúlker** (ನಾ.) (ಕ್ರಿಯಾರ್ಥಗಳಲ್ಲಿ) ; ಕಳ್ಳತಪ್ಪಿಸಿಕೊಳ್ಳುವವನು ; ಕೆಲಸಗಳ್ಳ. **Skúlkingly** (ಕ್ರಿ. ವಿ.)

Skull ಸ್ಕಲ್ (ನಾ.) ತಲೆಬುರುಡೆ, ತಲೆಯೋಡು, ಕಪಾಲ (S. & cross-bones ತಲೆಬುರುಡೆ ಮತ್ತು ಅದರ ಕೆಳಗೆ ಕತ್ತರಿಯಾಕಾರದಲ್ಲಿ ಜೋಡಿಸಿದ ತೊಡೆಮೂಳೆಗಳ ಚಿತ್ರ : ಮೃತ್ಯು ಸಂಕೇತ ಚಿತ್ರ). **S.-cap** ಮುದುಕರು ಮನೆಯೊಳಗಿರುವಾಗ ಹಾಕಿಕೊಳ್ಳುವ, ಸಾ., ಮಖಮಲ್ಲಿನಿಂದ ಮಾಡಿದ, ಗುತ್ತನೆಯ ಟೋಪಿ. ಸೀಸಕದ ಆಕಾರದ ಹೂವು ಬಿಡುವ ಹಲವು ಬಗೆಯ ಸಸ್ಯ. **-skulled** (ಗು.)

Skunk ಸ್ಕಂಕ್ (ನಾ.) ಕಪ್ಪು ಬಣ್ಣದ, ಬಿಳಿಯ ಪಟ್ಟೆಗಳ, ಪೊದೆ ಬಾಲದ, ಮಾಂಸಾಹಾರಿಯಾದ, ಬೆಕ್ಕಿನ ಗಾತ್ರದ, ಗುದದ್ವಾರಸ್ಥ ಗ್ರಂಥಿಗಳಿಂದ ಆತ್ಮರಕ್ಷಣೆಗಾಗಿ ದುರ್ಗಂಧ ದ್ರವವನ್ನು ಸ್ರವಿಸಬಲ್ಲ ಒಂದು ಪ್ರಾಣಿ ; ಇದರ ತುಪ್ಪಳು. ಹೊಲಸು ನಾರುವವನು ; ಹಲ್ಕ, ತುಚ್ಛ, —ಮನುಷ್ಯ.

Sky ಸ್ಕೈ (ನಾ.) ಬಾನು, ಬಾಂದಳ, ಆಕಾಶ, ಗಗನ, ಅಂತರಿಕ್ಷ, ನಭೋಮಂಡಲ, ಅಂಬರತಲ, ಮುಗಿಲು (ರೂಪ.) ; ಊರ್ಧ್ವಲೋಕ ; ದಿವ್ಯ ಶಕ್ತಿ [Blue s. ನೀಲಾಕಾಶ. Overcast s. ಮೋಡ ಮುಸುಕಿದ ಬಾನು. If the s. fall we shall catch larks (Lark[1] ನೋಡಿ). Under the open s. ಬಾನಡಿಯಲ್ಲಿ, ಹೊರಗೆ, ಬಯಲಿನಲ್ಲಿ. Laud to the skies ಹೊಗಳಿ ಆಕಾಶಕ್ಕೇರಿಸು, ಮುಗಿಲಿಗೇರಿಸು ; ಅತಿಯಾಗಿ ಹೊಗಳು. Was raised to the skies ಅವನನ್ನು ಸ್ವರ್ಗಕ್ಕೆ ಒಯ್ದರು ; ಅವನಿಗೆ ಸ್ವರ್ಗಾರೋಹಣವಾಯಿತು]. ಹವಾ, ವಾಯುಗುಣ, ವಾತಾವರಣ (Warm s. *or* skies ಸೆಕೆಯ ಹವ, ಉಷ್ಣ ವಾತಾವರಣ). **S.-blue** (ಗು., ನಾ.) ಬಾನ್ನೀಲಿ (ಬಣ್ಣದ), ಆಕಾಶ ನೀಲ(ವರ್ಣದ). **S.-born** (ಕಾವ್ಯ) ದೇವಾಂಶ ಸಂಭೂತ. **S.-clad** (ಹಾಸ್ಯ ಪ್ರ.) ಬತ್ತಲೆಯಾದ, ದಿಗಂಬರ. **S.-high** (ಕ್ರಿ. ವಿ., ಗು.) ಬಾನೆತ್ತರ(ಕ್ಕೆ), ಗಗನಚುಂಬಿ(ತ), ಮುಗಿಲು ಮುಟ್ಟುವ(ಂತೆ). **Skýlark** (ನಾ., ಕ್ರಿ. ಅಕ.) ಬಾನಾಡಿ, ಭರದ್ವಾಜ ಪಕ್ಷಿ. (ಕ್ರಿ.) ನೆಗೆದಾಡು, ಜಿಗಿದಾಡು. ಹುಡುಗಾಟವಾಡು, ಚೇಷ್ಟೆ ಮಾಡು. **Skýlight** ಸೂರಿನಲ್ಲಾಗಲಿ ಮಾಳಿಗೆಯಲ್ಲಾಗಲಿ ಮಾಡಿದ ಕಿಟಕಿ : (ಮಾಳಿಗೆ) ಗವಾಕ್ಷಿ, ಬೆಳಕುಗಂಡಿ. **S.-line** ಆಕಾಶದ ಹಿನ್ನೆಲೆಯ ಮೇಲೆ ಎದ್ದುಕಾಣುವ (ಬೆಟ್ಟ, ಮೊ. ಗಳ) ರೂಪರೇಖೆ (Is on the s.-l. ಆಕಾಶದಲ್ಲಿ ಅದರ ರೂಪರೇಖೆ, ಛಾಯಾಪಂಕ್ತಿ, —ಕಾಣುತ್ತದೆ). ಭೂಮ್ಯಾಕಾಶಗಳು ಸೇರುವಂತೆ ಕಾಣುವ ರೇಖೆ : ದಿಗಂತ, ಕ್ಷಿತಿಜ, ಬಾನಂಚು, ಬಾಂಗರೆ. **S.-pilot** (ಅಸಂ.) ಕ್ರೈಸ್ತ ಪುರೋಹಿತ, ಪಾದ್ರಿ. **S.-rocket** ಆಕಾಶ ಬಾಣ. **Skýsail** ಹಡಗಿನ ತುದಿ ಹಾಯಿಯಮೇಲ್ಗಡೆ ಕಟ್ಟಿದ ಹಗುರ ಹಾಯಿ : ಬಾನ್, ಆಕಾಶ, —ಪಟ. **Skýscape** ಆಕಾಶ—ದೃಶ್ಯ, ಚಿತ್ರ. **S.-scraper** (ಹಾಸ್ಯ ಪ್ರ.) =Skysail ; ಹಲವು ಉಪ್ಪರಿಗೆಗಳ ಬಹು ಎತ್ತರದ ಮನೆ; ಬಹು ಎತ್ತರದ ಹೊಗೆಕೊಳವೆ, ಮೊ. ವು ; ಗಗನಚುಂಬಿ (ಭವನ). **S. writing** ವಿಮಾನಗಳು (ಜಾಹಿರಾತಿಗಾಗಿ) ಹೊಗೆಯ ಸುರುಳಿಗಳ ಮೂಲಕ ಆಕಾಶದಲ್ಲಿ ಬರೆಯುವುದು : ಬಾನ್ ಬರೆವಣಿಗೆ, ಆಕಾಶ ಲೇಖನ. **Skýer** (ನಾ.) (ಕ್ರಿಕೆಟ್ಟಿನಲ್ಲಿ) ಚೆಂಡನ್ನು ಬಹು ಎತ್ತರಕ್ಕೆ ಹೊಡೆದ ಹೊಡೆತ: ಬಾನ್ ಹೊಡೆತ. **Skýey** (ಗು.) ಆಕಾಶದ(ಂಥ), ಅಂತರಿಕ್ಷ ಸಂಬಂಧವಾದ; ಅಂತರಿಕ್ಷದಿಂದ ಸೂಸುವ ; ಬಹು ಎತ್ತರದ ; ಬಾನ್ನೀಲಿಯ, ಆಕಾಶ ವರ್ಣದ. **Skýless** (ಗು.) ಸ್ಪಷ್ಟಾಕಾಶವಿಲ್ಲದ, ಮೋಡ ಮುಸುಕಿದ. **Skýward** (ಕ್ರಿ. ವಿ., ಗು.) ಗಗನದ ಕಡೆಯ(ಗೆ), ಆಕಾಶಮುಖವಾದ(ಗಿ). **Skýwards** (ಕ್ರಿ. ವಿ.)

Sky (ಕ್ರಿ. ಸಕ.) (ಕ್ರಿಕೆಟ್ ಚೆಂಡನ್ನು) ಆಕಾಶಕ್ಕೆ ಹೊಡೆ. (ಚಿತ್ರವನ್ನು, ಮು., ಪ್ರದರ್ಶನದಲ್ಲಿ) ಬಲು ಎತ್ತರದಲ್ಲಿ, ಮೇಲುಸಾಲಿನಲ್ಲಿ,—ತೂಗಹಾಕು, ಪ್ರದರ್ಶಿಸು. (ಬಳ. ಮಾ.) (ಬೆಲೆ, ಮೊ. ನ್ನು) ಅತಿಯಾಗಿ ಏರಿಸು. ಆಕಾಶದಂತೆ ಕವಿ, ಆಚ್ಛಾದಿಸು.

Slab[1] ಸ್ಲ್ಯಾಬ್ (ನಾ., ಕ್ರಿ. ಸಕ.) (ಕಲ್ಲಿನ ಅಥವಾ ಇತರ ಗಡುಸು ಪದಾರ್ಥದ) ಹಲಗೆ, ಫಲಕ ; ಚಪ್ಪಡಿ ; ಹಾಸುಗಲ್ಲು ; ಪಾಸರೆ (ಗ್ರಾಂ.) ; (ಮರದ ದಿಮ್ಮಿಯಿಂದ ಕೊಯ್ದು ತೆಗೆದ) ಹೊರ ಪದರದ ಹಲಗೆ, ಮೇಲಿನ ಒರಟು ಹಲಗೆ ; ಪರೋಟ್ ; [S.-sided ಉದ್ದವಾಗಿಯೂ ತೆಳ್ಳಗೂ ಇರುವ. S.-stone (ಸುಲಭವಾಗಿ ಚಪ್ಪಡಿಗಳಾಗಿ ಸೀಳುವ) ಚಪ್ಪಡಿಗಲ್ಲು, ಪದರಗಲ್ಲು]. (ಕ್ರಿ.) (ಗರಗಸದಿಂದ ಹಲಗೆಗಳಾಗಿ ಕೊಯ್ಯಲು ಅನುಕೂಲನುವಂತೆ ದಿಮ್ಮಿಯ ಮರದ) ಒರಟು ಪದರವನ್ನು ಕೊಯ್ದುಹಾಕು; ಚಪ್ಪಡಿಗಳನ್ನಾಗಿ, ಫಲಕಗಳನ್ನಾಗಿ, —ಮಾಡು; ಚಪ್ಪಡಿ, ಹಲಗೆ, —(ಗಳನ್ನು) ಹಾಸು. Slabbing-gang ಹೊರ ಪದರ ಕೊಯ್ಯುವ ಗರಗಸ ತಂಡ.

Slab[2] ಸ್ಲ್ಯಾಬ್ (ಗು.) (ಪ್ರಾಚೀ. ಪ್ರ.) ಜಿಗುಟಾದ, ಅಂಟಾದ, (ದ್ರವ) ಮಂದವಾಗಿ ಅಂಟಂಟಾಗಿರುವ.

Slábber. =Slobber.

Slack ಸ್ಲ್ಯಾಕ್ (ಗು., ಕ್ರಿ. ವಿ., ನಾ., ಕ್ರಿ.) ತಡಮಾಡುವ, ನಿಧಾನದ, ತಾಮಸ (ಪ್ರಕೃತಿಯ), ಆಲಸ್ಯದ, ಮಂದ, ಜಡ, ಜೋರಿಲ್ಲದ, ತ್ರಾಣವಿಲ್ಲದ, ಚಟುವಟಿಕೆಯಿಲ್ಲದ, ಚುರುಕಿಲ್ಲದ, ಸೋಮಾರಿಯಾದ, ಅಸಡ್ಡೆಯ, ಬಿಗಿಯಿಲ್ಲದ, ಸಡಿಲವಾದ, ಡೀಲಬಿಟ್ಟ [S. water ಉಬ್ಬರ ಹರಿವಿಲ್ಲದ ನೀರು (ಇರುವ ಕಾಲ) ; ಇಳಿನೀರು (ಕಾಲ). S. in stays (ಹಡಗು : ಒಡಾಟದಲ್ಲಿ, ತಿರುಗುವಲ್ಲಿ) ನಿಧಾನದ, ಚುರುಕಿಲ್ಲದ. A s. rope ಸಡಿಲವಾದ ಹಗ್ಗ. Keep a s. hand *or* rein ಲಗಾಮು ಸಡಿಲಬಿಡು, ಅಲಕ್ಷ್ಯವಾಗಿ ಸವಾರಿಮಾಡು; (ರೂಪ.) ಸಡಿಲವಾಗಿ ಆಳು. S. trade, business, market ಗಿರಾಕಿ ಬಿದ್ದುಹೋಗಿರುವ, ಮಂಕಾದ, —ವ್ಯಾಪಾರ, ಪೇಟೆ. S. weather ಆಲಸ್ಯ ಹುಟ್ಟಿಸುವ ಹವ ; ಜಡ ಹವ. S. lime ನೀರು ಹೀರಿದ, ನೀರಲ್ಲಿ ಕುದಿದ, —ಸುಣ್ಣ ; ಚಂದ ಸುಣ್ಣ (=Slaked lime)]. (ಕ್ರಿ. ವಿ.) (Dry, bake ಮೊ. ಪದಗಳೊಡನೆ ಸಮಾಸದಲ್ಲಿ ಪ್ರ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಧಾನವಾಗಿ, ಅರೆಯಾಗಿ (S.-dried ನಿಧಾನವಾಗಿ ಒಣಗಿಸಿದ. S.-bake ಅರೆ ಬೇಯಿಸು, ಕಡಮೆಯಾಗಿ ಸುಡು). (ನಾ.) ಹಗ್ಗದ ಸಡಿಲ ಭಾಗ (Haul in the s. ಸಡಿಲ ಭಾಗವನ್ನು ಎಳೆ); (ವ್ಯಾಪಾರ, ಮೊ. ಗಳಲ್ಲಿ) ಗಿರಾಕಿ, ಚಟುವಟಿಕೆ, —ಇಲ್ಲದ ಕಾಲ, ಇಲ್ಲದಿರುವುದು; ಮಂಕು(ಕಾಲ); (ಬ. ವ. ದಲ್ಲಿ) ಷರಾಯಿ, ಇಜಾರ. (ಕಲ್ಲಿದ್ದಲಇಟ್ಟಿಗೆ, ಮೊ. ನ್ನು ಮಾಡುವುದಕ್ಕಾಗಿ ಉಪಯೋಗಿಸುವ) ಕಲ್ಲಿದ್ದಲ ಪುಡಿ. (ಬಳ. ಮಾ.) ಆಲಸ್ಯದ, ಸೋಮಾರಿತನದ, —ಪಟ್ಟು, ಕಾಲ (I am going to have a good s. this afternoon ಈ ಮಧ್ಯಾಹ್ನ ನಾನು ಏನೂ ಮಾಡದೆ ಸೋಮಾರಿಯಾಗಿದ್ದುಬಿಡುತ್ತೇನೆ). ಧಾರ್ಷ್ಟ್ಯ, ಔದ್ಧತ್ಯ, ತಲೆಹರಟೆ. (ಕ್ರಿ.) (ಹಗ್ಗ, ಮೊ. ನ್ನು) ಸಡಿಲ, ಅಳ್ಳಕ, —ಮಾಡು, ಬಿಡು; ಡೀಲಬಿಡು (ಅನೇಕ ವೇಳೆ *off*, *away* ಉಪ. ದೊಡನೆ). (ಕೆಲಸ, ಕರ್ತವ್ಯ, ಮೊ. ಗಳಲ್ಲಿ) ಆಲಸ್ಯಮಾಡು, ಉದಾಸೀನವಾಗಿರು, ಪಾಲುಮಾರು; (ಬಳ. ಮಾ.) ವಿಶ್ರಾಂತಿ ತೆಗೆದುಕೊ; ಜೋರು, ಬಿಗಿ, —ಕಡಮೆಮಾಡು, ಕಡಮೆಯಾಗು; ಜಡ—ಆಗು, ಮಾಡು. (ಸುಟ್ಟ ಸುಣ್ಣಕ್ಕೆ) ನೀರು ಕುಡಿಸು. S. off ಜೋರು—ತಗ್ಗಿಸು, ಕಡಮೆ ಮಾಡು. S. up (ರೈಲು, ಮೊ. ನ್ನು ನಿಲ್ಲಿಸುವುದಕ್ಕೆ ಮೊದಲು) ವೇಗ ಕಡಮೆಮಾಡು, ನಿಧಾನಮಾಡು. **Slácken** (ಕ್ರಿ.); **Slácker** (ನಾ.) ಅಲಸಿಗ, ಸೋಮಾರಿ. **Sláckly** (ಕ್ರಿ. ವಿ.); **Sláckness** (ನಾ.)

Slag ಸ್ಲ್ಯಾಗ್ (ನಾ., ಕ್ರಿ. ಅಕ.) (ಲೋಹದ ಅದುರನ್ನು ಕರಗಿಸಿದಾಗ ಬೇರ್ಪಡುವ) (ಲೋಹದ) ಕಿಟ್ಟ, ಗಾಜಿನಂಥ ಗಸಿ; ಜ್ವಾಲಾಮುಖಿಯ ಶಿಲಾರಸದ ಮುದ್ದೆ. [S.-wool = Mineral wool (Wool ನೋಡಿ)]. (ಕ್ರಿ.) ಕಿಟ್ಟವಾಗು; (ಕಿಟ್ಟದಂಥ) ಮುದ್ದೆಯಾಗು. **Slággy** (ಗು.) ಕಿಟ್ಟದಂಥ; ಕಿಟ್ಟವನ್ನು ಹೋಲುವ; ಕಿಟ್ಟ ಸಂಬಂಧವಾದ.

Slain. Slay ಧಾತುವಿನ ಭೂ. ಕೃ.

Slake ಸ್ಲೇಕ್ (ಕ್ರಿ. ಸಕ.) (ಬಾಯಾರಿಕೆಯನ್ನು, ರೂಪ. ಸೇಡು, ಮೊ. ನ್ನು) ತೀರಿಸು, ತಣಿಸು, ತೃಪ್ತಿಗೊಳಿಸು; (ವೇಗ, ಬಲ, ಮೊ. ನ್ನು) ಕಡಮೆ ಮಾಡು, ತಗ್ಗಿಸು, (ಉಪ)ಶಮನ ಮಾಡು; (ಬೆಂಕಿಯನ್ನು) ಆರಿಸು, ಅಡಗಿಸು; ಸುಣ್ಣವನ್ನು ನೀರೊಡನೆ ಸಂಯೋಗ ಮಾಡಿಸು, ನೀರು ಕುಡಿಸು (=Slack). **Slákeless** (ಗು.) (ಕಾವ್ಯ) ತೀರದ, ತಣಿಯದ, ಅಡಗಿಸಲಾಗದ.

Slam ಸ್ಲ್ಯಾಮ್ (ಕ್ರಿ., ನಾ.) (ಬಾಗಿಲು, ಮೊ. ಗಳ ವಿಷಯದಲ್ಲಿ) ರಪ್ಪನೆ, ಧಡಾರನೆ, —ಹಾಕು, ಹಾಕಿಕೊ, ಮುಚ್ಚು, ಮುಚ್ಚಿಕೊ (ಅನೇಕ ವೇಳೆ *to* ಕ್ರಿ. ವಿ. ದೊಡನೆ) (S. the door in one's face). ಧಡಾರನೆ, ದೊಪ್ಪನೆ, —ಕೆಳಗಿಡು, ಬಡಿ (*Down* ಉಪ. ದೊಡನೆ); (ಅಸಂ.) ರಭಸದಿಂದ ನೂಕು, ತಳ್ಳು (Slamming every available man into the firing line), ಚಚ್ಚು, ಅಪ್ಪಳಿಸು, ಸುಲಭವಾಗಿ ಸೋಲಿಸಿಬಿಡು. (ನಾ.) (ಜೋರಾಗಿ ಬಾಗಿಲು ಹಾಕಿದಂತೆ) ಧಡೀರು ಶಬ್ದ; (ವ್ವಿಸ್ಟ್ ಅಥವಾ ಯೂಕರ್ ಇಸ್ಪೀಟಾಟದಲ್ಲಿ) ಎಲ್ಲ ಪಟ್ಟುಗಳನ್ನೂ ಗೆಲ್ಲುವುದು [(ಮು., ಬ್ರಿಡ್ಜ್ ಇಸ್ಪೀಟಾಟದಲ್ಲಿ) Grand s. ಎಲ್ಲ ಪಟ್ಟುಗಳನ್ನೂ (೧೩ ಪಟ್ಟುಗಳನ್ನು) ಗೆಲ್ಲುವುದು. Little s. ಒಂದು ಪಟ್ಟು ಬಿಟ್ಟು ಉಳಿದೆಲ್ಲವನ್ನೂ (೧೩ರಲ್ಲಿ ೧೨ ಪಟ್ಟುಗಳನ್ನು) ಗೆಲ್ಲುವುದು]

Slánder ಸ್ಲ್ಯಾಂ(ಸ್ಲಾಂ)ಡರ್ (ನಾ., ಕ್ರಿ. ಸಕ.) ಒಬ್ಬನಿಗೆ ಕೆಡುಕು ಮಾಡಬೇಕೆಂಬ ದುರುದ್ದೇಶದಿಂದ ಅವನಮೇಲೆ ಹೇಳಿದ ಸುಳ್ಳುಸುದ್ದಿ: ಚಾಡಿ (ಹೇಳುವುದು); ಪಳಿ, ಪಿಸುಣು, ಕೊಂಡೆಯ, ಹಳಿವು, ಅಪವಾದ; (ನ್ಯಾ. ಶಾ.) (ಮಾನಹಾನಿಕರವಾದ, ಬಾಯಿಮಾತಿನ) ಮಿಥ್ಯಾಪವಾದ. (ಕ್ರಿ.) ಚಾಡಿ ಹೇಳು, ಹಳಿ; ಮಿಥ್ಯಾಪವಾದ ಹೊರಿಸಿ ಅವಮಾನಗೊಳಿಸು. **Slánderer** (ನಾ.); **Slánderous** (ಗು.); **Slánderously** (ಕ್ರಿ. ವಿ.); **Slánderousness** (ನಾ.)

Slang ಸ್ಲ್ಯಾಂಗ್ (ನಾ., ಕ್ರಿ. ಸಕ.) ಸಾಮಾನ್ಯ ಆಡು ಮಾತಿನಲ್ಲಿ ಬಳಕೆಯಿದ್ದು, ಅವುಗಳ ಕೆಲವು ಅಥವಾ ಎಲ್ಲ ಅರ್ಥಗಳು ಪ್ರಮಾಣಭೂತವಾದ ವ್ಯಾಕರಣ ಮತ್ತು ನಿಘಂಟುಗಳಿಗೆ ಬಾಹಿರವೆಂದು ಭಾವಿಸಲ್ಪಡುವ ಪದಗಳು, ಪದಪುಂಜಗಳು, ಅಥವಾ ಅವುಗಳ ವಿಶೇಷ ಪ್ರಯೋಗಗಳು: ಅಸಂಸ್ಕಾರಿ ಭಾಷೆ; ಒಂದು ಪಂಗಡದವರು ಅಥವಾ ಕಸಬಿನವರು ಮಾತ್ರ ಉಪಯೋಗಿಸುವ ಅಥವಾ ವಿಶೇಷಾರ್ಥದಲ್ಲಿ ಬಳಸುವ ಪದ(ಪ್ರಯೋಗ)ಗಳು: ಪರಿಭಾಷೆ, ಸಂಕೇತ ಭಾಷೆ (Racing, thieves', schoolboy, s.). (ಕ್ರಿ.) ಬಯ್ಯು, ದೂಷಣೆ ಮಾಡು, ನಿಂದಿಸು. **Slángy** (ಗು.) ಅಸಂಸ್ಕಾರಿ ಭಾಷೆಯ(ನ್ನುಪಯೋಗಿಸುವ); (ಭಾಷೆಯ ವಿಷಯದಲ್ಲಿ) ಅಸಂಸ್ಕಾರಿ; (ಉಡುಪಿನ ವಿಷಯದಲ್ಲಿ) ರಬಾರಬಿಯ, ಬಾಜಾರಿಯ, ಗ್ರಾಮ್ಯ, ಅಸಂಸ್ಕೃತ. **Slángily** (ಕ್ರಿ. ವಿ.); **Slánginess** (ನಾ.)

Slant ಸ್ಲಾಂಟ್ (ಕ್ರಿ., ಗು., ನಾ.) ಇಳಿಜಾರು, ಓಟ, ಓರೆ —ಆಗು, ಆಗಿರು, ಮಾಡು; ಓಲು, ಓಲಿಸು. (ಗು.) (ಮು., ಕಾವ್ಯ) ಇಳಿಜಾರಿನ, ಓಲಿರುವ. (ನಾ.) ಇಳಿಜಾರು, ಓಟ, ಓಲು (On the *or* a s. ಓರೆಯಾಗಿ, ಓಲಿಕೊಂಡು); (ಪ್ರಾಚೀ. ಪ್ರ.) ಕೊಂಕು ಟೀಕೆ, (ಹೀನಯಿಸುವ) ಓರೆ ಮಾತು; (ನಾವೆ) A s. of wind (ಅದರ ರೂಢಿಯ ದಿಕ್ಕು ತಾತ್ಕಾಲಿಕವಾಗಿ ಬದಲಾಯಿಸಿ ಬೀಸುವ) ಅನುಕೂಲವಾದ ಓರೆ ಗಾಳಿ. **Slántingly** (ಕ್ರಿ. ವಿ.); **Slantingdícular, Slantendícular** (ಗು.) ಇಳಿಜಾರಾದ, ಓಲಿರುವ (Perpendicular ಎಂಬ ಪದದ ಸಾಮ್ಯದಮೇಲೆ ಹಾಸ್ಯ ಪ್ರ.). **Slántwise** (ಕ್ರಿ. ವಿ.)

Slap ಸ್ಲ್ಯಾಪ್ (ಕ್ರಿ. ಸಕ., ನಾ., ಕ್ರಿ. ವಿ.) ಅಂಗೈಯಿಂದ ಹೊಡೆ, ತಟ್ಟು; ಅಪ್ಪಳಿಸು; ತಪರಾಕು ಹಾಕು, ಕಪಾಳಕ್ಕೆ ಕೊಡು. (ವರ್ತಮಾನ ಕೃ., ಗು. ಅಥವಾ ಕ್ರಿ. ವಿ. ಅರ್ಥದಲ್ಲಿ) ಬಲು ಜೋರಾದ, ಭಾರಿ (ಯಾದ), ಭೇಷಾದ, ಭರ್ಜರಿ(ಯಾದ) (A slapping pace, great girl, dinner). (ನಾ.) ಅಪ್ಪಳಿಕೆ, ತಪರಾಕು, ಅಂಗೈ ಹೊಡೆತ [S. in the face ಮುಖಕ್ಕೆ ಹೊಡೆತ; (ರೂಪ.) ಮುಖ —ಮುರಿತ, ಭಂಗ; ಅವಮಾನ]. (ಕ್ರಿ. ವಿ.) ಕುರಿತೇಟಾಗಿ, ತಟಕ್ಕನೆ, ನೇರವಾಗಿ, ಗುರಿಗೊಂಡು, ಪೂರ್ತ (Hit me s. in the eye ಕಣ್ಣಮೇಲೆ ಸರಿಯಾಗಿ ಹೊಡೆದನು). **S.-bang** ರಭಸವಾಗಿ; ಬಿಮ್ಮನೆ; ಧಡಾರೆಂದು (ಸದ್ದೊಡನೆ); ಒಡನೆಯೆ; ಹಿಂದು ಮುಂದು ನೋಡದೆ, ನಿರ್ಲಕ್ಷ್ಯವಾಗಿ. **Slápdash** (ಕ್ರಿ. ವಿ.) ಧುಡುಮ್ಮನೆ, ರಭಸದಿಂದ; ಸಾಕಷ್ಟು (ಆಲೋಚನೆ, ಮರ್ಯಾದೆ, ಮೊ. ವು ಇಲ್ಲದೆ) ಆತುರದಿಂದ. **Slápdash** (ಗು., ನಾ., ಕ್ರಿ. ಸಕ.) ರಭಸದ, ನಿರ್ಲಕ್ಷ್ಯದ, ಸಿಕ್ಕಾಬಟ್ಟೆಯ, ಆದದ್ದಾಗಲಿ ಹೋದದ್ದು ಹೋಗಲಿ ಎಂಬ ರೀತಿಯ. (ನಾ.) —ಕೆಲಸ; ಒರಟು ಗಾರೆಯ ಮೆತ್ತಡ. (ಕ್ರಿ.) ಒರಟು ಗಾರೆ ಮೆತ್ತಡ ಮಾಡು. **S.-up** (ಗು.) (ಗ್ರಾಮ್ಯ) ನವನಾಜೂಕಿನ, ಅತ್ಯಂತ ಆಧುನಿಕ (ರೀತಿಯ, ಸಲಕರಣೆಗಳುಳ್ಳ); ಭರ್ಜರಿಯ, ಸರ್ವೋತ್ಕೃಷ್ಟ.

Slash ಸ್ಲ್ಯಾಷ್ (ಕ್ರಿ., ನಾ.) (ಕತ್ತಿ, ಚಾವಟಿ, ಮೊ. ಗಳಿಂದ) ಸಿಕ್ಕಾಬಟ್ಟೆ ಹೊಡೆ, ಬಾರಿಸು (Slashing criticism ಸಿಗಿದುಹಾಕುವ ಖಂಡನೆ, ಉಗ್ರ ಟೀಕೆ). ಉದ್ದನೆಯ ಕಿರಿದಾದ ಕಂಡಿಗಳನ್ನು, ಸೀಳುಗಳನ್ನು, —ಮಾಡು [Slashed sleeve (ಒಳಗಡೆ ಇರುವ ಅಸ್ತರಿ ಅಥವಾ ಬೇರೆಯ ಬಟ್ಟೆ ಕಾಣುವಂತೆ) ಸೀಳಿದ ತೋಳು]. ಚಾವಟಿಯಿಂದ ಬಾರಿಸು, ತೀಡು; ಕಚೆ; (ಚಾವಟಿಯನ್ನು) ಚಟಗುಟ್ಟಿಸು, ಝಳಪಿಸು. (ಸೈನಿಕ: ಹೊರಮುಖವಾಗಿ ಕೊಂಬೆಗಳು ಹರಡಿ ರಕ್ಷಣೆಯಾಗಿರುವಂತೆ) ಮರಗಳನ್ನು ಕಡಿದುರುಳಿಸು. (ನಾ.) ಸೀಳ—ಕೊಯ್ತ, ಕಡಿತ; ಕಚ್ಚು (ಗಾಯ); (ಉಡುಪಿನಲ್ಲಿ) (ಉದ್ದ) ಸೀಳಿಕೆ.

Slat[1] ಸ್ಲ್ಯಾಟ್ (ನಾ.) (ಕಿಟಕಿಯ ಪಟ್ಟಿಕದ, ಮೊ. ಗಳಲ್ಲಿ ಉಪಯೋಗಿಸುವ) ಮರದ ದಬ್ಬೆ, ಪಟ್ಟಿ.

Slat[2] ಸ್ಲ್ಯಾಟ್ (ಕ್ರಿ.) (ಹಾಯಿಗಳು, ಹಗ್ಗ ಹುರಿಗಳು, ಮೊ. ಗಳ ವಿಷಯದಲ್ಲಿ; ಕೂವೆಮರ, ಮೊ. ಗಳಿಗೆ) ರಪ ರಪನೆ, ಪಟ ಪಟನೆ,—ಬಡಿ, ಹೊಡೆ(ದುಕೊ); ರಪಾರನೆ ಹೊಡೆ, ಅಪ್ಪಳಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Slate[1] ಸ್ಲೇಟ್ (ನಾ., ಗು., ಕ್ರಿ. ಸಕ.) ಸುಲಭವಾಗಿ ನುಣುಪಾದ ಹಲ್ಲೆಗಳಾಗಿ ಸೀಳಬರುವ, ಬೂದು, ಹಸುರು ಅಥವಾ ನೀಲಿ ನೇರಿಳೆಯ ಬಣ್ಣದ ಹಲವು ಬಗೆಯ ಕಲ್ಲು: ಪದರ, ಹಲಗೆ, ಸ್ಲೇಟು, —ಕಲ್ಲು; ಚಾವಣಿಗೆ ಹೊದಿಸಲು ಉಪಯೋಗಿಸುವ ಇದರ ಹಲಗೆ: ಚಾವಣಿಯ ಸ್ಲೇಟು ಹಲಗೆ; (ತೆಳು) ಸ್ಲೇಟು ಚಪ್ಪಡಿ. (ಪಾಠಶಾಲೆಯ ಬಾಲಕರು, ಮೊ. ರು ಬರೆಯಲು ಉಪಯೋಗಿಸುವ, ಚೌಕಟ್ಟು ಹಾಕಿದ) (ಕಲ್ಲು) ಹಲಗೆ, ಸ್ಲೇಟು [Clean the s. ಋಣ ತೊಳೆದುಕೊ. ಹೊಣೆಗಾರಿಕೆಗಳನ್ನೆಲ್ಲ ಒರಸಿ(ಕೊಂಡು) ಬಿಡು. A clean s. ನಿಷ್ಕಳಂಕವಾದ, ಎಲ್ಲವೂ ಬಗೆಹರಿದಿರುವ, —ಸ್ಥಿತಿ. **S.-black, -blue, -grey** ಸ್ಲೇಟು (ಕಲ್ಲುಗಳಲ್ಲಿ ಕಾಣಬರುವ) ಕಪ್ಪು, ನೀಲಿ, ಬೂದು. **S.-club** ವಾರ ವಾರ ವಂತಿಗೆ ಕೂಡಿಸುವ ಪರಸ್ಪರ ಪ್ರಯೋಜನ ಸಂಘ (ಇದರ ಲೆಕ್ಕಗಳನ್ನು ಸ್ಲೇಟಿನಮೇಲೆ ಬರೆದಿಡುತ್ತಿದ್ದುದರಿಂದ). **S.-colour(ed)** ದಟ್ಟವಾದ ಕಪ್ಪು ಛಾಯೆಯ ಅಥವಾ ಹಸುರು ಛಾಯೆಯ ಬೂದು (ಬಣ್ಣದ): ಸ್ಲೇಟು ಬಣ್ಣ(ದ). **S.-pencil** ಬಳಪ]. (ಕ್ರಿ.) (ಚಾವಣಿಗೆ) ಸ್ಲೇಟು (ಹಲಗೆ) ಹೊದಿಸು. **Sláter** (ನಾ.) ಸ್ಲೇಟು (ಹಲಗೆ) ಹೊದಿಸುವವನು, ಮಾಡುವವನು. **Sláty** (ಗು.) ಸ್ಲೇಟಿನ(ಂಥ); ಸ್ಲೇಟು ಬಣ್ಣದ.

Slate[2] ಸ್ಲೇಟ್ (ಕ್ರಿ. ಸಕ.) (ಬಳ. ಮಾ.) (ಮು., ಗ್ರಂಥ ವಿಮರ್ಶೆಯಲ್ಲಿ, ಗ್ರಂಥಕರ್ತನನ್ನು) ಉಗ್ರವಾಗಿ ಟೀಕಿಸು, ಖಂಡಿಸು; ಸದೆಬಡಿ; ಬಯ್ಯಿ. **Sláting** (ನಾ.)

Sláttern ಸ್ಲ್ಯಾಟರ್ನ್ (ನಾ.) ಕೊಳಕಿ, ಹೊಲಸಿತಿ. **Slátternly** (ಗು.); **Slátternliness** (ನಾ.)

Slaúghter ಸ್ಲಾಟರ್ (ನಾ., ಕ್ರಿ. ಸಕ.) (ಹಲವು ಮನುಷ್ಯರನ್ನು ಅಥವಾ ಪ್ರಾಣಿಗಳನ್ನು) ಒಟ್ಟಿಗೆ —ಕೊಲ್ಲುವುದು, ಕೊಲೆ; ಕಗ್ಗೊಲೆ; ಸಾಮೂಹಿಕ ಸಂಹಾರ [S. *or* massacre of the innocents (Innocent ನೋಡಿ). S.-house (ಪ್ರಾಣಿಗಳ) ಕೊಲೆಮನೆ, ಕಸಾಯಿಖಾನೆ; ವಧಸ್ಥಾನ; ಕಗ್ಗೊಲೆಯ ಸ್ಥಳ]. (ಕ್ರಿ.) (ಜನರನ್ನು ನಿರ್ದಯವಾಗಿ, ಸಾಮೂಹಿಕವಾಗಿ) ಕಡಿದುಹಾಕು, ಕೊಲೆಮಾಡು; (ಪ್ರಾಣಿಗಳನ್ನು, ಆಹಾರಕ್ಕಾಗಿ) ಕಡಿ, ವಧೆಮಾಡು. **Slaúghterer** (ನಾ.); **Slaúghterous** (ಗು.) (ಅಲಂ.) ಕಗ್ಗೊಲೆಯ, ಧ್ವಂಸಕ. **Slaúghterously** (ಕ್ರಿ. ವಿ.)

Slav ಸ್ಲಾವ್, ಸ್ಲ್ಯಾವ್ (ನಾ., ಗು.) ರಷ್ಯನರು, ಬಲ್ಗೇರಿಯನರು, ಇಲಿರಿಯನರು, ಪೋಲರು, ಸ್ಲೈಲೀಷಿಯನರು, ಪೊಮರೇನಿಯರು, ಬೊಹೀಮಿಯನರು, ಮೊ. ಜನಾಂಗಗಳನ್ನೊಳಕೊಂಡು ಪೂರ್ವ ಯೂರೋಪಿನ ಬಹು ಭಾಗವನ್ನು ವ್ಯಾಪಿಸಿರುವ ಒಂದು ಜನಕುಲದವನು: ಸ್ಲಾವ್ ಜನಕುಲದವನು. (ಗು.) ಸ್ಲಾವ್ ಜನಕುಲದ, ಸ್ಲಾವರ, ಸ್ಲಾವ್ ಭಾಷೆಯ. **Slávic** (ಗು., ನಾ.) ಸ್ಲಾವರ (ಭಾಷೆ), ಸ್ಲಾವ್ ಭಾಷೆ. **Slávism** (ನಾ.) ಸ್ಲಾವ್ ಜನರ ಲಕ್ಷಣ, ಸ್ಲಾವ್‌ತನ. **Slavónian** ಸ್ಲವೋನಿಯನ್ (ಗು., ನಾ.) ಸ್ಲಾವ್ ಜನದ(ವನು, ಭಾಷೆ); ಆಸ್ಟ್ರಿಯಾ ದೇಶದ ಸ್ಲವೋನಿಯಾ ಪ್ರಾಂತದ(ವನು). **Slavónic** ಸ್ಲವಾನಿಕ್ (ಗು., ನಾ.) ಸ್ಲಾವರ (ಭಾಷೆ). **Slavónicize** (ಕ್ರಿ. ಸಕ.) ಸ್ಲಾವೀಕರಿಸು. **Slávophil** ಸ್ಲಾ(ಸ್ಲ್ಯಾ)ವೊಫಿಲ್ (ನಾ., ಗು.) ಸ್ಲಾವ್ ಪ್ರಿಯ(ನಾದ), ಸ್ಲಾವ್ ಅಭಿಮಾನಿ(ಯಾದ). **Slávophobe** (ನಾ., ಗು.) ಸ್ಲಾವ್ ದ್ವೇಷಿ(ಯಾದ); ಸ್ಲಾವ್ ಭೀತ.

Slave ಸ್ಲೇವ್ (ನಾ.) ಕಾನೂನು ಪ್ರಕಾರ ಮತ್ತೊಬ್ಬರ ಸ್ವಾಧೀನನಾಗಿದ್ದು ಅವರಿಗೆ ಸಂಪೂರ್ಣ ವಿಧೇಯನಾಗಿರಬೇಕಾದವನು: ದಾಸ, ಅಡಿಯಾಳು, ಗುಲಾಮ, ತೊತ್ತು; ಒಂದರ ಪ್ರಭಾವಕ್ಕೆ ಕಟ್ಟುಬಿದ್ದವನು, ವಶವರ್ತಿ (*To, of* ಉಪ. ದೊಡನೆ) (Is a s. to drink ಕುಡಿತದ ಚಟಕ್ಕೆ ಬಲಬಿದ್ದಿದ್ದಾನೆ, ಗುಲಾಮನಾಗಿದ್ದಾನೆ. The slaves of fashion ನವನಾಜೂಕಿನ ಗುಲಾಮರು). ವಿರಾಮವಿಲ್ಲದೆ ದುಡಿಯುವ ತೊತ್ತು, ದುಡಿತದ ಕತ್ತೆ; ತುಚ್ಛ, ನೀಚ, ಕೀಳು ಮನುಷ್ಯ. **S.-bangle** (ಹೆಂಗಸರು ಮೊಣಕೈಯ ಮೇಲ್ಗಡೆ ತೊಡುವ, ಚಿನ್ನ, ಗಾಜು, ಮೊ. ಗಳಿಂದ ಮಾಡಿದ) ಮೊಣಕೈಮೇಲಿನ ಬಳೆ; ರಟ್ಟೆಬಳೆ. **S.-born** ಗುಲಾಮರಿಗೆ, ಗುಲಾಮನಾಗಿ, —ಹುಟ್ಟಿದ. **S.-driver** ಗುಲಾಮರ ಮೇಸ್ತ್ರಿ, ಮೇಲ್ವಿಚಾರಕ; (ರೂಪ.) ಕತ್ತೆಚಾಕರಿ ಮಾಡಿಸುವವನು, ನಿಷ್ಕರುಣೆಯ ಯಜಮಾನ. **S.-grown** ಗುಲಾಮರ ದುಡಿತದಿಂದ ಉತ್ಪತ್ತಿಯಾದ, ಗುಲಾಮರು ಬೆಳೆದ. **S.-holder** ಗುಲಾಮರನ್ನಿಟ್ಟುಕೊಂಡಿರುವವನು; ಗುಲಾಮರ ಒಡೆಯ, ಧಣಿ. **S.-hunter** ಗುಲಾಮರನ್ನಾಗಿ ಮಾರುವುದಕ್ಕೆ (ಮು., ನೀಗ್ರೋ) ಜನರನ್ನು ಹಿಡಿದುಕೊಂಡು ಹೋಗುವವನು; ಗುಲಾಮರ ಬೇಟೆಗಾರ. **S.-ship** ಗುಲಾಮ ವ್ಯಾಪಾರದ ಹಡಗು. **S. states** (ಅಮೆ. ಸಂ. ದಲ್ಲಿ ಒಳ ಯುದ್ಧಕ್ಕೆ ಮುಂಚೆ, ಗುಲಾಮ ಪದ್ಧತಿ ಇಟ್ಟುಕೊಂಡಿದ್ದ) ದಕ್ಷಿಣ ಸಂಸ್ಥಾನಗಳು. **S.-trade** (ಮು., ನೀಗ್ರೋ) ಜನರನ್ನು ಗುಲಾಮರನ್ನಾಗಿ ಮಾರಾಟ ಮಾಡುವುದು; ಗುಲಾಮ ವ್ಯಾಪಾರ; ದಾಸ ವಿಕ್ರಯ. **S.-trader** ಗುಲಾಮರ ವ್ಯಾಪಾರಿ. **Sláver**[1] (ನಾ.) ಗುಲಾಮ ವ್ಯಾಪಾರಗಾರ, ಗುಲಾಮ ವ್ಯಾಪಾರದ ಹಡಗು. **Slávery**[1] (ನಾ.) ಗುಲಾಮಗಿರಿ, ದಾಸ್ಯ, ಅಡಿಯಾಳುತನ, ಅಡಿಮೆ; ದಾಸ್ಯ ಪದ್ಧತಿ, ಗುಲಾಮ ಪದ್ಧತಿ; ಗುಲಾಮ ಚಾಕರಿ, ಕತ್ತೆದುಡಿತ. **Slávey** ಸ್ಲೇ(ಸ್ಲ್ಯಾ)ವಿ (ನಾ.) (ಅಸಂ.) ಮನೆಗೆಲಸದ ಹೆಣ್ಣು, ತೊತ್ತು, ದಾಸಿ. **Slávish** (ಗು.) ಗುಲಾಮರ(ಂಥ), ದಾಸ್ಯದ, ದಾಸ್ಯಭಾವದ, ಹೀನ, ತುಚ್ಛ, ಕೀಳು [S. imitation (ಸ್ವಂತ ವಿಚಾರವಿಲ್ಲದೆ) ದಾಸ್ಯಭಾವದಿಂದ ಅನುಕರಣ (ಮಾಡುವುದು); ಅಂಧಾನುಕರಣ, ದಾಸೇಯಾನುಕರಣ]. **Slávishly** (ಕ್ರಿ.ವಿ.); **Slávishness** (ನಾ.)

Slave (ಕ್ರಿ. ಅಕ.) ಗುಲಾಮನಂತೆ ದುಡಿ, ಕತ್ತೆಚಾಕರಿ ಮಾಡು.

Sláver[1], **Slávery**[1], **Slávey**, **Slávish**, **etc.** **Slave** ನೋಡಿ.

Sláver[2] ಸ್ಲ್ಯಾವರ್ (ಕ್ರಿ., ನಾ.) ಜೊಲ್ಲು ಸುರಿಸು, ಉಗುಳು ಹರಿಸು; (ಬಟ್ಟೆ, ಮೊ. ನ್ನು ಮುತ್ತಿಡುವಾಗ ಕೆನ್ನೆಯನ್ನು) ಜೊಲ್ಲುಮಾಡು. (ನಾ.) ಉಗುಳು, ಜೊಲ್ಲು; (ರೂಪ.) ವಿಪರೀತ —ಹೊಗಳಿಕೆ, ಮುಖಸ್ತೋತ್ರ. **Slávery**[2] (ಗು.) ಜೊಲ್ಲಿನಂಥ, ಉಗುಳಿನಂಥ; ಜೊಲ್ಲು ಸುರಿಸುವ, ಉಗುಳು ಹರಿಸುವ.

Slávic, Slavónian, Slavónic, Slávophil, etc. **Slav** ನೋಡಿ.

Slay ಸ್ಲೇ (ಕ್ರಿ. ಸಕ.; ಭೂತ. Slew ಸ್ಲೂ, ಭೂ. ಕೃ. Slain ಸ್ಲೇಯ್‌ನ್) (ಮು., ಕಾವ್ಯ, ಅಲಂ., ಅಥವಾ ಹಾಸ್ಯ ಪ್ರ.) ಕಡಿದುಹಾಕು, ವಧಿಸು, ಹೊಡೆದುಕೊಲ್ಲು, ಸಂಹಾರಮಾಡು. **(-)slayer** (ನಾ.) —ಕೊಲೆಗಾರ, —ಘಾತುಕ.

Sleázy ಸ್ಲೀಸಿ (ಗು.) (ಬಟ್ಟೆಗಳ ವಿಷಯದಲ್ಲಿ; ವಿರಳವಾಗಿ ರೂಪ.) ಜಾಳು ಜಾಳಾದ; ಪುಸುಕಲಾದ.

Sled ಸ್ಲೆಡ್, **Sledge**[1] ಸ್ಲೆಜ್, **Sleigh** ಸ್ಲೇ (ನಾ., ಕ್ರಿ.) ಮು., ಹಿಮದಮೇಲೆ ಕೈಯಿಂದ ನೂಕಿಕೊಂಡು ಅಥವಾ ಎಳೆದುಕೊಂಡು ಹೋಗುವ ಇಲ್ಲವೆ ನಾಯಿ, ಕುದುರೆ ಅಥವಾ ಹಿಮಸಾರಂಗ ಎಳೆದುಕೊಂಡುಹೋಗುವ, ಸಾಮಾನನ್ನೂ ಪ್ರಯಾಣಿಕರನ್ನೂ ಸಾಗಿಸಲು ಉಪಯೋಗಿಸುವ, ಗಾಲಿಗಳಿಗೆ ಬದಲು ಜಾರುಮರಗಳಮೇಲೆ ಚಲಿಸುವ ಬಂಡಿ: ಜಾರುಬಂಡಿ, ಸ್ಲೆಜ್ ಗಾಡಿ [ಬೇಸಾಯದಲ್ಲಿ ಜಾರುಮರಗಳಮೇಲೆ ಸಾಮಾನನ್ನು ಸಾಗಿಸುವ ಬಂಡಿಗಳ ವಿಷಯದಲ್ಲಿ ಹೊರತು ಮಿಕ್ಕ ಸಂದರ್ಭಗಳಲ್ಲಿ Sled ಪದ ಇಂಗ್ಲೆಂಡಿನಲ್ಲಿ ಅಷ್ಟಾಗಿ ಬಳಕೆಯಿಲ್ಲ; ಹಿಮದಮೇಲೆ ಹೋಗುವ ಜಾರುಬಂಡಿಗಳಿಗೆ ಮಾತ್ರ Sleigh ಪದ ಪ್ರಯೋಗ; ಎಲ್ಲ ಅರ್ಥಗಳಲ್ಲೂ Sledge ಪದ ಪ್ರಯೋಗ. Sleigh-bell ಜಾರುಬಂಡಿಯ ಕುದುರೆ, ಮೊ. ಗಳಿಗೆ (ಮೊ. ಗಳ ಸಜ್ಜಿಗೆ) ಕಟ್ಟಿರುವ ಗೆಜ್ಜೆ(ಗಳಲ್ಲೊಂದು): ಜಾರುಬಂಡಿ ಗೆಜ್ಜೆ]. (ಕ್ರಿ.) ಜಾರುಬಂಡಿಯಲ್ಲಿ, ಸ್ಲೆಜ್ ಗಾಡಿಯಲ್ಲಿ, —ಹೋಗು, ಪ್ರಯಾಣ ಮಾಡು, ಸಾಗಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Slédge²(-hammer) ಸ್ಲೆಜ್(ಹ್ಯಾಮರ್) (ನಾ.) ಕಮ್ಮಾರನ ದೊಡ್ಡ, ಭಾರವಾದ ಸುತ್ತಿಗೆ; ಚಮ್ಮಟಿಗೆ [S.-h. (ಅನೇಕ ವೇಳೆ ವಿಶೇಷಣ ಪ್ರ., ಮತ್ತು ರೂಪ.) ಬಲವಾದ, ಜೋರಾದ, ಭಾರಿ (S.-h. blows, arguments, style)]

Sleek ಸ್ಲೀಕ್ (ಗು., ಕ್ರಿ. ಸಕ.) (ಕೂದಲು, ತುಪ್ಪುಳು ಚರ್ಮ, ಚರ್ಮ—ಇವುಗಳ ವಿಷಯದಲ್ಲಿ ಅಥವಾ ಅಂಥ ಕೂದಲು, ಮೊ. ನ್ನು ಉಳ್ಳ ಮನುಷ್ಯ, ಪ್ರಾಣಿ, ಮೊ. ಗಳ ವಿಷಯದಲ್ಲಿ) ನಯವಾಗಿಯೂ ಮೃದುವಾಗಿಯೂ ಹೊಳಪಾಗಿಯೂ ಇರುವ: ನುಣ್ ಹೊಳಪಿನ, ನೇವರಿಸಿ ನುಣುಪು ಗೊಳಿಸಿದ, ಮೃದುನಯವುಳ್ಳ. ಮೈತುಂಬಿಕೊಂಡಿರುವ, ಮಿಣ ಮಿಣನೆ ಇರುವ; ಪುಸಲಾಯಿಕೆಯ, ಬೆಣ್ಣೆ ಹಚ್ಚುವ, ತಂತ್ರಗಾರಿಕೆಯ (S. knave). (ಕ್ರಿ.) (ಉಜ್ಜುವುದು, ಮೆರುಗು ಕೊಡುವುದು, ಕೂರ್ಚದಿಂದ ಪರಿಷ್ಕರಿಸುವುದು, ಮೊ. ಗಳಿಂದ) ಮೃದು ನಯಮಾಡು, ನುಣ್ ಹೊಳಪು ಕೊಡು. **Sleékly** (ಕ್ರಿ. ವಿ.); **Sleékness** (ನಾ.)

Sleep ಸ್ಲೀಪ್ (ನಾ.) ನಿದ್ರೆ, ನಿದ್ದೆ, ಸುಪ್ತಿ, ಶಯನ [Beauty s. (Beauty ನೋಡಿ). In one's s. ನಿದ್ದೆಯಲ್ಲಿ. The s. of the just (ಹಾಸ್ಯ ಪ್ರ.) (ಸತ್ಯವಂತರ ನಿದ್ರೆ): ಒಳ್ಳೆಯ, ಗಾಢ, —ನಿದ್ರೆ. S. that knows not breaking ನಿರಂತರ, ದೀರ್ಘ, —ನಿದ್ರೆ: ಸಾವು, ಮರಣ. Broken s. ನಡು ನಡುವೆ ಎಚ್ಚರವಾಗುವ ನಿದ್ದೆ; ಹರುಕು ಮುರುಕು ನಿದ್ದೆ, ಅರ್ಧಂಬರ್ಧ ನಿದ್ದೆ. Go to s. ನಿದ್ದೆ ಹೋಗು. Fall on s. (ಪ್ರಾಚೀ. ಪ್ರ.) ನಿದ್ದೆ ಹೋಗು; (ರೂಪ.) ಸಾಯಿ, ಮರಣ ಹೊಂದು]. ಒಂದು ನಣ್ಣ ನಿದ್ರೆ (Shall try to get a s. ಒಂದು ನಿದ್ದೆ ಮಾಡಲು ಪ್ರಯತ್ನಿಸುತ್ತೇನೆ, ನೋಡುತ್ತೇನೆ). (ರೂಪ.) ವಿಶ್ರಾಂತಿ, ಶಾಂತಿ, ಔದಾಸೀನ್ಯ, ನಿಷ್ಕ್ರಿಯೆ, ಜಡತೆ, ಮರಣ, ಮೊ. ವು. **S.-walker** ನಿದ್ರೆಯಲ್ಲಿ ಓಡಾಡುವವನು. **S.-walking** ನಿದ್ದೆ ನಡಗೆ. **Sleépless** (ಗು.); **Sleéplessly** (ಕ್ರಿ. ವಿ.); **Sleéplessness** (ನಾ.); **Sleépy** (ಗು.) ನಿದ್ದೆ ಬರುವ, ನಿದ್ದೆಯ, ಜೊಂಪಿನ, ಮಂಪರದ, ತೂಕಡಿಸುವ; ಚಟುವಟಿಕೆಯಿಲ್ಲದ, ಜಡ, ಮಂದ; ಗಲಾಟೆಯಿಲ್ಲದ, ಗದ್ದಲವಿಲ್ಲದ (A s. little town). (ಹಣ್ಣುಗಳ ವಿಷಯದಲ್ಲಿ) ಒಣಗಿ ಕೊಳೆತು ಸಪ್ಪೆಯಾದ. S. sickness (Sick¹ ಕೆಳಗೆ Sickness ನೋಡಿ). **Sleépyhead** (ಮು., ಸಂಬೋಧನೆಯಲ್ಲಿ) ತೂಕಡಿಕೆಯ, ಗಮನವಿಲ್ಲದ, —ಮನುಷ್ಯ; ಸೋಂಬೇರಿ; ನಿದ್ದೆಹೋಕ. **Sleépily** (ಕ್ರಿ. ವಿ.); **Sleépiness** (ನಾ.)

Sleep (ಕ್ರಿ.; ಭೂತ., ಭೂ. ಕೃ. Slept ಸ್ಲೆಪ್ಟ್) ನಿದ್ದೆ—ಮಾಡು, ಹೋಗು; ನಿದ್ರಿಸು; ಮಲಗು, ಪವಡಿಸು [Let sleeping dogs lie (Dog ನೋಡಿ). S. like a dog *or* top ಚೆನ್ನಾಗಿ ನಿದ್ದೆ ಹೋಗು, ಗಾಢನಿದ್ರೆ ಮಾಡು. S. on, upon, over, a question ಪ್ರಶ್ನೆಯನ್ನು ನಾಳೆಯವರೆಗೆ ಯೋಚನೆಮಾಡದೆ ಬಿಡು; ಪ್ರಶ್ನೆಯನ್ನು ನಾಳೆಗೆ ಬಿಟ್ಟು ನಿದ್ದೆಮಾಡು. S. the clock round (Round ಕ್ರಿ. ವಿ. ನೋಡಿ)]; ನಿದ್ದೆಮಾಡಿ —ಕಳೆ, ನಿವಾರಿಸಿಕೊ (S. the hours away ಘಂಟೆಗಳನ್ನು ನಿದ್ದೆಮಾಡಿ ಕಳೆದುಬಿಡು. Slept off his headache ತಲೆನೋವನ್ನು ನಿದ್ದೆಮಾಡಿ ನಿವಾರಿಸಿಕೊಂಡನು); ಜಡವಾಗಿ ಬಿದ್ದಿರು, ಸುಪ್ತವಾಗಿರು (Sword sleeps in the scabbard. Top sleeps ಬುಗುರಿ ನಿಶ್ಚಲವಾಗಿರುವಂತೆ ತೋರುವಷ್ಟು ಸ್ತಿಮಿತವಾಗಿ ಸುತ್ತುತ್ತದೆ: ಬುಗುರಿ ನಿದ್ದೆಮಾಡುತ್ತದೆ. Sleeping partner ಆಡಳಿತದಲ್ಲ ಭಾಗ ವಹಿಸದ ಪಾಲುಗಾರ); ಗೋರಿಯಲ್ಲಿರು, —ಯಾಗಿರು; ಸತ್ತಿರು; ರಾತ್ರಿ ತಂಗು (*At, in* ಮೊ. ಉಪ. ದೊಡನೆ); ಮಲಗುವುದಕ್ಕೆ ಸ್ಥಳ, —ಇರು, ಕೊಡು (Lodging-house sleeps 300 men ತಂಗುಮನೆಯಲ್ಲಿ ೩೦೦ ಜನಕ್ಕೆ ಮಲಗಲು ಸ್ಥಳವಿದೆ). **Sleeping-bag** ಹೊರಗೆ ಬಯಲಲ್ಲಿ ಮಲಗುವಾಗ ಹಾಸಿಗೆಯಾಗಿ ಉಪಯೋಗಿಸುವ, ಕುತ್ತಿಗೆಯವರೆಗೆ ಬರುವ ಉದ್ದನಾದ ಚೀಲ: ಮಲಗುವ ಚೀಲ. **Sleeping-car(riage)** ಮಲಗಲು ಹಾಸಿಗೆಗಳನ್ನು ಒದಗಿಸಿರುವ ರೈಲುಬಂಡಿ: ಮಲಗುವ (ರೈಲು)ಬಂಡಿ, ಸಜ್ಜೆಬಂಡಿ. **Sleeping-draught** ನಿದ್ದೆ ಬರಿಸುವ ಔಷಧ, ನಿದ್ರಾಜನಕ; ನಿದ್ರೌಷಧ, ನಿದ್ರಾಪಾನ. **Sleeping-sickness** (Sick ಕೆಳಗೆ Sickness ನೋಡಿ). **Sleeping-suit** ಪಾಯಿಜಾಮೆ; ಮಲಗುವ ಉಡುಪು. **Sleéper** (ನಾ.) (ಕ್ರಿಯಾರ್ಥಗಳಲ್ಲಿ); ಲೋಹದ ಕಂಬಿ, ಮೊ. ಗಳಿಗೆ ತಳ ಆಸರೆಯಾಗಿ ಉಪಯೋಗಿಸುವ ಮರದ ದಿಮ್ಮಿ, ಮೊ. ವು: ಅಡಿ—ಮರ, ದಿಮ್ಮಿ; =Sleeping-car.

Sleet ಸ್ಲೀಟ್ (ನಾ., ಕ್ರಿ. ಅಕ.) ಮಳೆಯೊಡನೆ ಮಿಶ್ರವಾಗಿ ಬೀಳುವ ಆಲಿಕಲ್ಲು ಅಥವಾ ಹಿಮ: ಆಲಿಕಲ್ಲು ಮಳೆ, ಮಂಜು ಮಳೆ. (ಕ್ರಿ.) It sleets —ಕರೆಯುತ್ತದೆ, ಬೀಳುತ್ತದೆ. **Sleéty** (ಗು.); **Sleétiness** (ನಾ.)

Sleeve ಸ್ಲೀವ್ (ನಾ.) (ಅಂಗಿ, ಮೊ. ಗಳ) ತೋಳು [Lawn sleeves ನಯವಾದ ಬಟ್ಟೆಯಿಂದ ಮಾಡಿದ (ಬಿಷಪ್ಪಿನ ಅಂಗಿಯ) ತೋಳು. Mandarin s. ಮೊಣಕೈಯ ಕೆಳಭಾಗ ಸಡಿಲವಾಗಿಯೂ ತೆರಪಾಗಿಯೂ ಇರುವ ತೋಳು. Laugh in one's s. (Laugh ನೋಡಿ). Card, plan, etc. up one's s. (Card² ನೋಡಿ). Turn, roll, up one's sleeves ಕೆಲಸಕ್ಕೆ, ಕಾದಾಟಕ್ಕೆ, —ಸಿದ್ಧನಾಗು, ತಯಾರಾಗು. Wear one's heart upon one's s. (Heart ನೋಡಿ)]. (ದಂಡವನ್ನೊ ಮತ್ತೊಂದು ಸಣ್ಣ ಕೊಳವೆಯನ್ನೊ ಒಳಕೊಳ್ಳುವ) ಗೂಡು, ಆವರಣ, —ಕೊಳವೆ. **S.-coupling** (ದಂಡ, ಕೊಳವೆ, ಮೊ. ನ್ನು) ಕೂಡಿಸುವ ಕೊಳವೆ ಸೇರಿಕೆ. **S.-fish** ಹಲವು ಬಗೆಯ ಕಟ್‌ಲ್ ಮೀನು. **S.-link** ತೋಳಿನ ಮಣಿಕಟ್ಟು ಪಟ್ಟಿಯನ್ನು ಕೂಡಿಸುವ, ಕೊಂಡಿಯ ಜೋಡಿಗುಂಡಿ: ತೋಳಿನ ಗುಂಡಿ. **S.-nut** ಎದುರುಬದುರು ಸುತ್ತುಗಳುಳ್ಳ ಕೊಳವೆಗಳನ್ನಾಗಲಿ ದಂಡಗಳನ್ನಾಗಲಿ ಒಟ್ಟಿಗೆ ಸೇರಿಸಲು ಎಳೆಯುವ, ಒಂದು ಕೊನೆಯಲ್ಲಿ ಎಡ ಸುತ್ತುಗಳೂ ಮತ್ತೊಂದು ಕೊನೆಯಲ್ಲಿ ಬಲ ಸುತ್ತುಗಳೂ ಒಂದರಲ್ಲೇ ಇರುವ ಉದ್ದ ತಿರುಪುಗಟ್ಟಿ: ಕೂಡು ತಿರುಪುಗಟ್ಟಿ. **-sleeved** (ಗು.); **Sleéveless** (ಗು.)

Sleigh. **Sled** ನೋಡಿ.

Sleight ಸ್ಲೈಟ್ (ನಾ., ಪ್ರಾಚೀ. ಪ್ರ.) ಚಳಕ, ಕೌಶಲ, ಚಮತ್ಕಾರ; ಮೋಸದ —ಯೋಜನೆ, ಚಲನೆ; ತಂತ್ರ. S. of hand (ಕತ್ತಿಯ ವರಿಸೆ, ಮೊ. ಗಳಲ್ಲಿ) ಕೈಚಳಕ, ಹಸ್ತಕೌಶಲ. ಇಂದ್ರಜಾಲ, ಕಣ್ಕಟ್ಟು; ಅಟಮಟಗತನ.

Slénder ಸ್ಲೆಂಡರ್ (ಗು.) ದಪ್ಪವಿಲ್ಲದ, ತೆಳ್ಳನೆಯ, ತೆಳುವಾದ, ಕೃಶ, ಅಸಿ (ಗ್ರಾಂ.) (S. stem, waist, pillar, girl, hand); ಅಲ್ಪಸ್ವಲ್ಪ, ಅತ್ಯಲ್ಪ, ತುಚ್ಛ, ದುರ್ಬಲ (S. hopes, means, income. S. acquaintance with subject ವಿಷಯದ ಅತ್ಯಲ್ಪ ಪರಿಚಯ. S. foundations for belief ನಂಬಿಕೆಗೆ ದುರ್ಬಲ ಆಧಾರಗಳು). **Slénderly** (ಕ್ರಿ. ವಿ.); **Slénderness** (ನಾ.)

Slept. Sleep ಧಾತುವಿನ ಭೂತ., ಭೂ. ಕೃ.

Sleúth-hound ಸ್ಲೂ(ಸ್ಲ್ಯೂ)ತ್‌ಹೌಂಡ್ (ನಾ.) ಬೇಟೆಯ ನೆತ್ತರು ನಾಯಿ (ರೂಪ. ಸಹ); (ಮು., ಅಮೆ. ಸಂ.) ಪತ್ತೇದಾರ (=**Sleuth**)

Slew¹, Slue ಸ್ಲೂ (ಕ್ರಿ., ನಾ.) (ಜೋರಾಗಿ, ಪ್ರಯತ್ನದಿಂದ ಅದರ ಅಕ್ಷದಮೇಲೆ) ತಿರುಗು, ತಿರುಗಿಸು, ಸುತ್ತಿಸು, ಸುತ್ತು (S. round, to the left ಸುತ್ತ, ಎಡಕ್ಕೆ, —ತಿರುಗಿಸು, ಸುತ್ತು). (ನಾ.) ತಿರುವು, ತಿರುಚಿಕೆ, ಸುತ್ತು.

Slew². Slay ಧಾತುವಿನ ಭೂತ ರೂಪ.

Slice ಸ್ಲೈಸ್ (ನಾ., ಕ್ರಿ.) (ಮಾಂಸ, ರೊಟ್ಟಿ, ದೋಸೆ, ಮೊ. ಗಳ) (ಅಗಲವಾದ) ತೆಳು ಚೂರು; (ಬೆಣೆಯಾಕಾರದ) ತುಂಡು, ತುಣುಕು; ಹೋಳು, ಬಿಲ್ಲೆ, ಹಲ್ಲೆ; ಭಾಗ, ಅಂಶ (A s. of territory, of the profits); ಹಲ್ಲೆ, ಮಗುಚುವ ಕೈ (Fish s. ಮೀನು ಬಡಿಸಿಕೊಳ್ಳುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಲ್ಲೆ. S.-bar ಕುಲುಮೆಯ ಕಂಬಿಗಳಿಂದ ಕಿಟ್ಟ ಕೆರೆದುಹಾಕುವ ಕೊಕ್ಕುಳ್ಳ ಹಲ್ಲೆ : ಕಂಬಿಹಲ್ಲೆ). (ಕ್ರಿ.) ಹೋಳು, ಬಿಲ್ಲೆ, —ಮಾಡು, ಕತ್ತರಿಸು, ಕತ್ತರಿಸಿ ತೆಗೆ (*Up, off* ಪದದೊಡನೆ); (ಗಾಳಿ, ಮೊ. ನ್ನು) ಕತ್ತರಿಸಿಕೊಂಡು, ಸೀಳಿಕೊಂಡು, —ಹೋಗು; (ದೋಣಿಯ ಹುಟ್ಟನ್ನು) ನೀರನ್ನು ಕತ್ತರಿಸುವಂತೆ ಆಡಿಸು, ಹೊಡೆ (S. the water). (ಗಾಲ್ಫ್‌ದಾಂಡನ್ನು ಬಲದಿಂದ ಎಡಕ್ಕೆ ಬೀಸಿ) ಚೆಂಡು ಬಲಕ್ಕೆ ತಿರುಗುವಂತೆ ಪಕ್ಕೇಟು ಹೊಡೆ (S. the ball)

Slick ಸ್ಲಿಕ್ (ಗು., ಕ್ರಿ. ವಿ.) (ಬಳ. ಮಾ.) ಜಾಣ್ಮೆಯಿಂದ ಮಾಡಿದ; ಚತುರ; ಬುದ್ಧಿವಂತಿಕೆಯ; ಹೊಲಬುಗೆಡಿಸದೆ, ಸರಾಗವಾಗಿ, ಸಲೀಸಾಗಿ —ಮಾಡಿದ, ಆದ; ಚಾಕಚಕ್ಯದ; ಕೇವಲ, ಬರಿಯ (Did it out of s. perversity ಬರಿಯ ವಕ್ರತೆಯಿಂದ, ಮೊಂಡುತನ ದಿಂದ, ಮಾಡಿದನು). (ಕ್ರಿ. ವಿ.) ಸರಿಯಾಗಿ, ನೇರವಾಗಿ, ಪೂರ್ತಿ ಯಾಗಿ (Came s. into the middle of them ಸರಿಯಾಗಿ ಅವರ ನಡುವೆ ಬಂದನು. Hit him s. in the eye ನೇರವಾಗಿ ಅವನ ಕಣ್ಣಿಗೆ ಹೊಡೆದನು)

Slide ಸ್ಲೈಡ್ (ಕ್ರಿ.; ಭೂತ., ಭೂ. ಕೃ. Slid) ಜಾರು, ಸರಿ, ಸರುಕು (Roll ಪದದೊಡನೆ ಹೋಲಿಸಿ) (Piston slides noiselessly up & down ಆಡುಬೆಣೆ ಮೇಲಕ್ಕೂ ಕೆಳಕ್ಕೂ ನಿಶ್ಶಬ್ದವಾಗಿ ಸರಿದಾಡು ತ್ತದೆ); ಜಾರಿಸು, ಸರಿಸು, ಸರುಕಿಸು (S. the drawer into its place ಸೆಳೆಖಾನೆಯನ್ನು ಅದರ ಸ್ಥಳಕ್ಕೆ ಸರಿಸು); (ನೀರ್ಗಲ್ಲ ಮೇಲೆ ಜಾರುಮೆಟ್ಟುಗಳಿಲ್ಲದೆ ಓಡಿಬಂದು ಎರಡೂ ಕಾಲುಗಳ ಮೇಲೆ) ಜಾರಿಕೊಂಡು ಹೋಗು (S. over delicate subject ಸೂಕ್ಷ್ಮ ವಿಷಯವನ್ನು ತೇಲಿಸಿಕೊಂಡು ಹೋಗು); ಸಲೀಸಾಗಿ, ಸರಾಗವಾಗಿ, ಅಡಚಣೆಯಿಲ್ಲದೆ, —ಹೋಗು (Let things s. ಅವುಗಳ ಪಾಡಿಗೆ ಅವು ಜಾರಿಹೋಗಲಿ; ಉದಾಸೀನವಾಗಿದ್ದುಬಿಡು); ಕ್ರಮ ಕ್ರಮ ವಾಗಿ, ಮೆಲ್ಲಗೆ, —ಸರಿ(ದುಕೊ), ಜಾರಿಕೊ [Slides into sin ಮೆತ್ತಗೆ ಪಾಪಕ್ಕೆ ಸರಿಯುತ್ತಾನೆ. S. from one note to another (ಸಂ.) ಒಂದು ಸ್ವರದಿಂದ ಇನ್ನೊಂದು ಸ್ವರಕ್ಕೆ ಕ್ರಮವಾಗಿ ಬದಲಾಯಿಸು, ಜಾರು; ಪಲುಕು]. Sliding door (ಕೀಲಮೇಲೆ ತಿರುಗದೆ) ಸರಿ ದಾಡುವ ಬಾಗಿಲು; ಜಾರು ಬಾಗಿಲು. Sliding keel ದೋಣಿಯ ತಳದಲ್ಲಿ ಮೇಲಕ್ಕೂ ಕೆಳಕ್ಕೂ ಸರಿಸಲಾಗುವಂತೆ ಅಳವಡಿಸಿರುವ ಹೆಚ್ಚಿಗೆಯ ಅಡಿಗಟ್ಟು; ಸರಿದಾಡುವ, ಜಾರು, —ಅಡಿಗಟ್ಟು. Sliding, s.-, rule ಕೆಲವು ಗಣಿತದ ಲೆಕ್ಕಾಚಾರಗಳನ್ನು ಸರಾಗವಾಗಿ ಮಾಡಲು ಅನುಕೂಲಿಸುವ, ಸರಿದಾಡುವ ಭಾಗವುಳ್ಳ, ಅಳತೆಪಟ್ಟಿ: ಸರುಕು, ಜರುಗು, —ಅಳತೆಪಟ್ಟಿ. Sliding scale (ತೆರಿಗೆ, ಕೂಲಿ, ಬೆಲೆ, ಮೊ. ಗಳಿಗೆ ಸಂಬಂಧಪಟ್ಟಂತೆ; ಒಂದರ ವ್ಯತ್ಯಾಸಗಳನ್ನು ಅನುಸರಿಸಿ ಮತ್ತೊಂದನ್ನು ನೇರ ಪ್ರಮಾಣದಲ್ಲಿ ಅಥವಾ ವಿಪರ್ಯಯ ಪ್ರಮಾಣದಲ್ಲಿ ಬದಲಾಯಿಸಲು ಅಳವಡಿಸಿರುವ) ಜಾರು, ಚಲ, —ಪ್ರಮಾಣಪಟ್ಟಿ. Sliding seat (ಮು., ಜೂಜು ದೋಣಿಗಳಲ್ಲಿ) ಮೀಟದ ಹುಟ್ಟಿನ ವರಿಸೆ ನೀಳವಾಗುವಂತೆ ಹಿಂದಕ್ಕೂ ಮುಂದಕ್ಕೂ ಸರಿದಾಡುವ, ಹುಟ್ಟುಹಾಕುವವನು ಕುಳಿತು ಕೊಳ್ಳುವ ಪೀಠ: ಜರುಗು ಪೀಠ. **Slíder** (ನಾ.); **Slídable** (ಗು.)

Slide (ನಾ.) ನೀರ್ಗಲ್ಲಮೇಲಿನ ಜಾರುಜಾಡು; ಬೆಟ್ಟದಿಂದ ಕೆಳಕ್ಕೆ ಜಾರು ಬಂಡಿಯಲ್ಲಿ ಜಾರಲು ನೀರ್ಗಲ್ಲಿಂದಾಗಲಿ ಹಿಮ ದಿಂದಾಗಲಿ ಮಾಡಿದ ಇಳುಕಲು: ಜಾರಿಳುಕಲು (ದಾರಿ); ಜಾರುವುದು, ಸರುಕಲು; (ಸಾಮಾನು, ಮೊ. ನ್ನು ಕೆಳ ಸಾಗಿಸುವ) ಜಾರಿಳುಕಲು, ಜಾರುಗುಪ್ಪೆ, ಇಳಿಗಾಲುವೆ; ಯಂತ್ರದ (ಸರಿದಾಡುವ ಭಾಗ ಕೆಲಸ ಮಾಡುವ) ಜಾರುದಾರಿ, ಜಾರುಗಾಡಿ (=S.-way); ಯಂತ್ರದ ಸರಿದಾಡುವ ಭಾಗ; ಅಡ್ಡಲಾಗಿ ಸರಿದು ಕಂಡಿಯನ್ನು ಮುಚ್ಚುವ ಅಥವಾ ತೆರೆಯುವ ಕವಾಟ: ಜಾರು ಕವಾಟ (=S.-valve); (ದೀಪಚಿತ್ರದಲ್ಲಿ ತೋರಿಸಬೇಕಾದ ಚಿತ್ರವನ್ನು ಹಚ್ಚಿರುವ, ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಬೇಕಾದ ವಸ್ತುವನ್ನು ಇಟ್ಟಿರುವ) ಜಾರುಗಾಜು; ವಸ್ತು, ಚಿತ್ರ, —ಫಲಕ.

Slight ಸ್ಲೈಟ್ (ಗು., ಕ್ರಿ. ಸಕ., ನಾ.) ತೆಳ್ಳನೆಯ, ಸಣಕಲಾದ, ಲಘು, ಕೃಶ (Saw a s. figure approaching ಒಂದು ಸಣಕಲು ವ್ಯಕ್ತಿ ಸಮೀಪಿಸುತ್ತಿರುವುದನ್ನು ಕಂಡೆನು. A s. frame-work ಸಣಕಲು ಚೌಕಟ್ಟು); ಕೊಂಚ, ಅಲ್ಪ ಸ್ವಲ್ಪ, ಅತ್ಯಲ್ಪ, ಸಣ್ಣ (ಪುಟ್ಟ), ಕ್ಷುದ್ರ, ಕ್ಷುಲ್ಲಕ (A s. cold ಕೊಂಚ —ನೆಗಡಿ, ಶೀತ. There is not the slightest excuse for it ಅದಕ್ಕೆ ಲೇಶ ಮಾತ್ರವೂ ನೆಪವಿಲ್ಲ, ಕಾರಣವಿಲ್ಲ. Paid him s. attention ಅವನ ಕಡೆ ಅತ್ಯಲ್ಪ ಗಮನ ಕೊಟ್ಟನು). (ಕ್ರಿ.) (ವ್ಯಕ್ತಿ, ವ್ಯಾಸಂಗ, ವಿಷಯ, ಮೊ. ನ್ನು; ಗಮನಾರ್ಹ ವಲ್ಲವೆಂದು) ಹಗುರವಾಗಿ, ಲಾಘವದಿಂದ, —ಕಾಣು; ಕಡೆಗಣಿಸು, ಅವಗಣಿಸು, ತಾತ್ಸಾರಮಾಡು. (ನಾ.) ಕಡೆಗಣಿಕೆ, ತಾತ್ಸಾರ, ಅವಗಣನೆ. **Slíghtingly** (ಕ್ರಿ. ವಿ.); **Slíghtish** (ಗು.); **Slíghtly** (ಕ್ರಿ. ವಿ.); **Slíghtness** (ನಾ.)

Slíly. Slyly ಪದದ ಮತ್ತೊಂದು ರೂಪ.

Slim ಸ್ಲಿಮ್ (ಗು., ಕ್ರಿ.) ಸಣಕಲಾದ, ತೆಳ್ಳನೆಯ, ತೆಳುವಾದ, ಲಘು ಮೈಕಟ್ಟಿನ; ತಂತ್ರದ(ಲ್ಲಿ ನಿಪುಣನಾದ), ಕುಟಿಲೋಪಾಯದ, ಯಾವುದಕ್ಕೂ ಹೇಸದ. (ಕ್ರಿ.) ತೆಳ್ಳಗೆ—ಮಾಡು, ಆಗು. **Slímly** (ಕ್ರಿ. ವಿ.); **Slímmish** (ಗು.); **Slímness** (ನಾ.)

Slime ಸ್ಲೈಮ್ (ನಾ., ಕ್ರಿ.) ಬಂಕೆ, ಲೋಳೆ, ಅಂಟು, ಚಿಕ್ಕಣ, —ಮಣ್ಣು, ಪದಾರ್ಥ; (ಸಸ್ಯ, ಪ್ರಾಣಿ, ಮೊ. ಗಳ ಸ್ರಾವದ) ಲೋಳೆ, ಬಂಕೆ; (ರೂಪ.) (ಮಣ್ಣಿನಿಂದಾದುದು ಎಂಬ ತಿರಸ್ಕಾರಭಾವ ಸೂಚಿಸುವಲ್ಲಿ) ಮನುಷ್ಯ ಶರೀರ, ಪಾರ್ಥಿವ ದೇಹ, ಮೃತ್ಪಿಂಡ. [S.-gland (ಮೃದ್ವಂಗಿಗಳು, ಮೊ. ಗಳಲ್ಲಿ; ಲೋಳೆಯನ್ನು ಸ್ರವಿಸುವ) ಲೋಳೆ ಗ್ರಂಥಿ; ಚಿಕ್ಕಣ ಗ್ರಂಥಿ. S.-pit ಬಿಟ್ಯುಮಿನ್ ದ್ರವದ ಕುಳಿ]. (ಕ್ರಿ.) ಲೋಳೆ, ಬಂಕೆ, ಮೊ. ಗಳಿಂದ ಮುಚ್ಚು, ಬಳಿ (ಮು., ತನ್ನ ಬೇಟೆ ಯನ್ನು ನುಂಗುವುದಕ್ಕಾಗಿ ಅಣಿಗೊಳಿಸುತ್ತಿರುವ ಹಾವಿನ ವಿಷಯದಲ್ಲಿ). ನುಣುಚಿಕೊಂಡು, ಜಾರಿಕೊಂಡು, —ಹೋಗು (*Through, away, past, out of* ಮೊ. ಉಪ. ದೊಡನೆ). **Slímy** (ಗು.) ಬಂಕೆ ಯಾದ, ಅಂಟಾದ, ಲೋಳೆಯಾದ; ಬಂಕೆ, ಲೋಳೆ, —ಬಳಿದ, ಮುಚ್ಚಿದ, ತುಂಬಿದ; ಜಾರಿಹೋಗುವ, ನುಣುಚಿಕೊಳ್ಳುವ; ತುಚ್ಛ, ಅಸಹ್ಯಕರ, ಹೇಯ; (ಅಸಹ್ಯ ಬರುವಷ್ಟು) ಅತಿ ಮುಖಸ್ತುತಿಯ, ಅತಿ ನಮ್ರ. **Slímily** (ಕ್ರಿ. ವಿ.); **Slíminess** (ನಾ.)

Sling[1] ಸ್ಲಿಂಗ್ (ಕ್ರಿ., ಭೂತ., ಭೂ. ಕೃ. Slung ಸ್ಲಂಗ್; ನಾ.) (ವಿರ. ಪ್ರ.) ಎಸೆ, ಒಗೆ [S. ink (ಅಸಂ.) ಸ್ವಲ್ಪ ಮಸಿ ಚೆಲ್ಲು (ಎಂದರೆ, ಗ್ರಂಥ ರಚನೆಮಾಡು, ಪತ್ರಿಕೋದ್ಯೋಗ ಮಾಡು, ಲೇಖನ ಬರೆ)]; ಕವಣೆ —ಹೊಡೆ, ಬೀರು [**Slínger** (ನಾ.)]; ತೂಗಾಸರೆಯಿಂದ, ಜೋಲ ಯಲ್ಲಿ, —ತೂಗಹಾಕು; ಜೋಲಹಾಕು; ಜೋಲಿಯಿಂದ —ಎತ್ತು, ಇಳಿಸು; [S.-cart ಹೇರನ್ನು (ದಿಮ್ಮಿಗಳನ್ನು) ಅಚ್ಚುಮರಕ್ಕೆ ತೂಗಹಾಕಿ ಸಾಗಿಸುವ ಬಂಡಿ: ಜೋತ, ಜೋಲ, —ಬಂಡಿ. Slung shot (ಮು., ಘಾತುಕರು ಆಯುಧವಾಗಿ ಉಪಯೋಗಿಸುವ) ಮಣಿಕಟ್ಟಿನ ಚಕ್ಕಳದ ಪಟ್ಟಿ, ಮೊ. ಕ್ಕೆ ಬಿಗಿದ ರೋಹದ ಗುಂಡು: ಜೋಲ ಗುಂಡು]. (ನಾ.) ಕವಣೆ; (ಪ್ರ)ಕ್ಷೇಪಕ. (ಮೂಳೆಮುರಿದ ತೋಳು, ಬಂದೂಕು, ದೋಣಿ, ಸಾಗಿಸಬೇಕಾದ ಸಾಮಾನು, ಮೊ. ನ್ನು ತೂಗಹಾಕುವ) ತೂಗಾಸರೆ, ಜೋಲಿ, ದೋಲಕ. S.-dog ಭಾರವನ್ನು ಎತ್ತಿಳಿಸುವಲ್ಲಿ ಅದನ್ನು ತೂಗಾಸರೆಯಾಗಿ ಇರುಕಿಕೊಳ್ಳುವ (ಜೋಡಿ) ಕೊಕ್ಕೆ(ಗಳಲ್ಲೊಂದು): ಜೋಲ ಕೊಕ್ಕೆ.

Sling[2] ಸ್ಲಿಂಗ್ (ನಾ.) (ಮು., ಅಮೆ. ಸಂ.) ಒಂದು ಬಗೆಯ ಹೆಂಡ (Gin-s.)

Slink[1] ಸ್ಲಿಂಕ್ (ಕ್ರಿ. ಅಕ.; ಭೂತ. Slunk ಸ್ಲಂಕ್, ವಿರ. ಪ್ರ. Slank ಸ್ಲ್ಯಾಂಕ್; ಭೂ. ಕೃ. Slunk ಸ್ಲಂಕ್) (ತಪ್ಪು ಮಾಡಿದವನಂತೆ, ನಾಚಿಕೆಪಟ್ಟವನಂತೆ) ಮೆಲ್ಲಗೆ ನುಸುಳಿಕೊಂಡು ಹೋಗು, ಜಾರಿಕೊ, ಕದ್ದುಹೋಗು (ಸಾ., *off, away, by* ಮೊ. ಉಪ. ದೊಡನೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Slink[2] ಸ್ಲಿಂಕ್ (ಕ್ರಿ., ನಾ.) (ಪ್ರಾಣಿಯ ವಿಷಯದಲ್ಲಿ) ಕಾಲಕ್ಕೆ ಮುಂಚೆಯೆ —ಮರಿಹಾಕು, ಕಂದುಹಾಕು; ಅಕಾಲ ಪ್ರಸವವಾಗು. (ನಾ.) ಅಕಾಲ ಪ್ರಸವದ —ಮರಿ, ಕಂದು (ಮು., ಕರು); ಈ ಕಂದಿನ ಮಾಂಸ. S.-butcher ಕಂದಿನ —ಕಟುಕ, ಮಾಂಸದ ವ್ಯಾಪಾರಿ.

Slip ಸ್ಲಿಪ್ (ಕ್ರಿ.) ಜಾರು, ಜಾರಿಕೊ, ಜಾರಿಹೋಗು, (ಜಾರಿ) ನೆಲೆ ತಪ್ಪು, ಪವಣು ತಪ್ಪು, ಸರುಕು [As the door closes the catch slips into place ಕದ ಮುಚ್ಚಿಕೊಂಡಂತೆಲ್ಲ ಹಿಡಿಕೆ ತನ್ನ ಸ್ಥಳಕ್ಕೆ ಜಾರಿಕೊಳ್ಳುತ್ತದೆ. S. along (ಅಸಂ.) ನರ್‍ರೆಂದು ಹೋಗು. S. into (ಅಸಂ.) ಚೆನ್ನಾಗಿ ಹೊಡೆ, ಗುದ್ದು, ಬಲ ಹಾಕು; (ತಿಂಡಿ, ಮೊ. ನ್ನು) ಕಂಠಪೂರ್ತಿ ಹೊಡೆ, ತಿನ್ನು]. ಹಿಡಿತಕ್ಕೆ ಸಿಕ್ಕದೆ ತಪ್ಪಿಸಿಕೊ, ತಪ್ಪಿಹೋಗು, ಜಾರಿಕೊ, ನುಣುಚಿಕೊ [Opportunity slipped through his fingers ಅನುಕೂಲ ಸಂದರ್ಭ ಅವನ ಕೈಜಾರಿ ಹೋಯಿತು. Let s. the dogs of war (ಕಾವ್ಯ) ಯುದ್ಧ ಪ್ರಾರಂಭಿಸು]. ಕಾಣದಂತೆ, ಸದ್ದಿಲ್ಲದಂತೆ, ಚಟ್ಟನೆ, —(ಹೊರಟು)ಹೋಗು, ಕಳೆದುಹೋಗು [S. out of the room. How time slips away! ಕಾಲ ಹೇಗೆ ಜಾರಿಹೋಗುತ್ತದೆ, ಕಳೆದು ಹೋಗುತ್ತದೆ! S. by, past ನುಸುಳಿಹೋಗು, ಕಳೆದುಹೋಗು. S. off, away ಹೇಳದೆ ಕೇಳದೆ ಹೊರಟುಹೋಗು; ಮೆಲ್ಲಗೆ ಜಾರಿಕೊ. Errors s. in ತಪ್ಪುಗಳು ಕೈತಪ್ಪಿ, ನುಸುಳಿಕೊಂಡು, ಬರುತ್ತವೆ]; ಅಜಾಗರೂಕತೆಯಿಂದ—ತಪ್ಪುಮಾಡು, ತಪ್ಪು, ಬಿಟ್ಟುಬಿಡು (Slips now & then in his grammar ಆಗಾಗ್ಗೆ ವ್ಯಾಕರಣದಲ್ಲಿ ತಪ್ಪಿ ಹೋಗುತ್ತಾನೆ, ಜಾರುತ್ತಾನೆ. S. a stitch ಕೈತಪ್ಪಿ ಒಂದು ಹೊಲಿಗೆ ಬಿಟ್ಟುಬಿಡು); (ಹಿಡಿತದಿಂದ) ಬಿಟ್ಟುಬಿಡು, ಕಳಚಿಬಿಡು, ಕಳಚು (S. greyhounds ಬೇಟೆನಾಯಿಗಳನ್ನು ಕೊರಳಪಟ್ಟಿ ಕಳಚಿಬಿಡು; ನಾಯಿ ಬಿಡು. S. anchor ಲಂಗರು ಕಳಚು. Cow slips its calf ಹಸು ಕಾಲಕ್ಕೆ ಮೊದಲೆ ಕರು ಹಾಕುತ್ತದೆ); (ಉಡುಪು, ಮೊ. ನ್ನು) ಆತುರವಾಗಿ ಹಾಕಿಕೊ, ತಗುಲಿಸಿಕೊ (*On* ಉಪ. ದೊಡನೆ), ಕಳಚಿಹಾಕು (*Off* ಉಪ. ದೊಡನೆ); (ಯಾರಿಗೂ ಕಾಣದಂತೆ) ಮೆತ್ತಗೆ ಇಳಿಯಬಿಡು, ಜಾರಬಿಡು (Slipped a coin into his hands, papers into his pocket). ಕಳಚಿಕೊ, ತಪ್ಪಿಸಿಕೊ, ನುಣುಚಿಕೊಂಡು ಹೋಗು, ಗಸ್ತು ಕೊಡು (Dog slips his collar ನಾಯಿ ಕೊರಳಪಟ್ಟಿಯಿಂದ ಕಳಚಿಕೊಳ್ಳುತ್ತದೆ. Prisoner slipped his guard ಕೈದಿ ಕಾವಲುಗಾರನಿಂದ ತಪ್ಪಿಸಿಕೊಂಡನು; ಕೈದಿ ಕಾವಲುಗಾರನಿಗೆ ಗಸ್ತು ಕೊಟ್ಟನು. The point had slipped my attention ಆ ಅಂಶ ನನ್ನ ಗಮನಕ್ಕೆ ತಪ್ಪಿಸಿಕೊಂಡಿತ್ತು). **Slípper** (ನಾ., ಕ್ರಿ. ಸಕ.) ಮನೆಯೊಳಗೆ ಹಾಕಿಕೊಳ್ಳುವ, ಸುಲಭವಾಗಿ ಹಾಕಿ ತೆಗೆಯಲಾಗುವ, ಒಂದು ಬಗೆಯ ಜೋಡು: ಮನೆಜೋಡು, ಮೆಟ್ಟು, ಮೊಚ್ಚೆ (Bed-s. ಜೋಡಿನ ಆಕಾರದ ಹಾಸಿಗೆಯ ಮಲಪಾತ್ರೆ. S.-bath ಜೋಡಿನಾಕಾರದ ಸ್ನಾನದ ತೊಟ್ಟಿ). ಇಳಿಜಾರಿನಲ್ಲಿ ವೇಗವನ್ನು ಕಡಮೆ ಮಾಡುವುದಕ್ಕಾಗಿ ಬಂಡಿಯ ಗಾಲಿಗೆ ಹಾಕುವ ತಡೆ, ಬಿರಿ: ಜಾರಿಕೆ —ತಡೆ, ಬಿರಿ; (ಬೇಟೆಯ ಪಂದ್ಯಗಳಲ್ಲಿ: ಬೇಟೆಯ ನಾಯಿಗಳ) ಕೊರಳಪಟ್ಟಿ ಕಳಚುವವನು. (ಕ್ರಿ.) ಜೋಡಿನಿಂದ ಹೊಡೆ. **Slíppered** (ಗು.) ಜೋಡು ಹಾಕಿದ; ಜಾರಿಕೆತಡೆ ಹಾಕಿದ. **Slíppering** (ನಾ.); **Slíppery** (ಗು.) (ನೆಲ) ಜಾರುವ, ಜಾರಿಕೆಯ; (ರೂಪ.) ಹಿಡಿತಕ್ಕೆ ಸಿಕ್ಕದ, ನುಣುಚಿಕೊಳ್ಳುವ; (ರೂಪ.) ನೆಚ್ಚಲಾಗದ, ಕೈಕೊಡುವ, ತಂತ್ರದ, ಕೃತ್ರಿಮದ. **Slípperily** (ಕ್ರಿ. ವಿ.); **Slípperiness** (ನಾ.); **Slíppy** (ಗು.) (ಗ್ರಾಮ್ಯ) =Slippery [Look *or* be s. (ಅಸಂ.) ಚುರುಕಾಗಿ ಮಾಡು, ಬೇಗಮಾಡು]

Slip (ನಾ.) ಜಾರುವುದು, ಜಾರಿಕೆ, ಸರುಕುವುದು; ತಪ್ಪು, ಕೈತಪ್ಪು, ಪ್ರಮಾದ, ಸ್ಖಾಲಿತ್ಯ; ಆಕಸ್ಮಿಕ—ತಪ್ಪು ನಡೆವಳಿ, ಅವಿವೇಕ [There's many a s. 'twixt the cup & the lip (Cup ನೋಡಿ). Give one the s. ಒಬ್ಬನಿಗೆ ಕೈಕೊಡು; ಕೈಗೆ ಸಿಕ್ಕದೆ—ತಪ್ಪಿಸಿಕೊ, ಪರಾರಿಯಾಗು. S. of the tongue, pen ಬಾಯಿ ತಪ್ಪು, ಕೈ ತಪ್ಪು. A few slips in youth are inevitable ಯೌವನದಲ್ಲಿ ಕೆಲವು ಅವಿವೇಕಗಳು, ತಪ್ಪು ನಡತೆ, ಅನಿವಾರ್ಯ]. ಸಡಿಲ, ಜಾರು,—ಗವುಸು, ಉಡುಪು (ದಿಂಬಿನ ಚೀಲ, ಒಳ ಕುಪ್ಪಸ, ಲಂಗ, ಮೊ. ವು); ನಾಯಿಗಳ ಕೊರಳಪಟ್ಟಿ ಕಳಚುವ ಬಾರು: ಕಳಚು—ಬಾರು, ಪಟ್ಟಿ; ಹಿಡಿಕೆಯನ್ನು ತಟಕ್ಕನೆ ಕಳಚುವ ಸಾಧನ: ಕಳಚಿಕೆ; (ಹಡಗಿನಿಂದ ಜನರು ಇಳಿಯಲು, ಸಾಮಾನನ್ನು ಇಳಿಸಲು ಅನುಕೂಲಿಸುವ, ಕಲ್ಲಿನಿಂದ ಕಟ್ಟಿದ) (ಇಳಿ)ಜಾರುಕಟ್ಟೆ; ಹಡಗನ್ನು ಕಟ್ಟುವುದಕ್ಕೂ ದುರಸ್ತು ಮಾಡುವುದಕ್ಕೂ ಅನುಕೂಲಿಸುವ ಇಳುಕಲು, ಇಳಿಜಾರು: (ಇಳಿ)ಜಾರು ಹಡಗು ಕಟ್ಟೆ. (ಮರ, ಕಾಗದ, ಮೊ. ಗಳ) ಕಿರಿಯಗಲದ ಹೆಚ್ಚು ಉದ್ದದ ತುಂಡು, ಚೂರು: ಪಟ್ಟಿ; (ಮುದ್ರಣ) ಉದ್ದಪಟ್ಟಿ (ಕಾಗದಗಳ ಮೇಲೆ ತೆಗೆದ) ಕರಡಚ್ಚು; (ಬರೆದಿರುವ, ಬರೆಯಲುಪಯೋಗಿಸುವ) ಕಾಗದದ ಚೀಟಿ; (ಹುಟ್ಟಹಾಕುವುದಕ್ಕಾಗಿ, ಕಸಿಕಟ್ಟುವುದಕ್ಕಾಗಿ, ಗಿಡದಿಂದ ಕತ್ತರಿಸಿ ತೆಗೆದ) ಅಂಟು; ವಂಶಜ, ವಂಶಿಕ, ಸಂತಾನ; (ತೆಳು) ಹುಡುಗ, ಹುಡುಗಿ (A s. of a boy ಚೋಟು ಹುಡುಗ). (ಕ್ರಿಕೆಟ್ಟಿನಲ್ಲಿ) ದಾಂಡುಗಾರನಿಗೆ ಬಲಹಿಮ್ಮೂಲೆಯಲ್ಲಿ ಚೆಂಡು ಕಾಯಲು ನಿಲ್ಲಿಸಿರುವವರಲ್ಲಿ ಒಬ್ಬ (Long, short, s. ಹೀಗೆ ದೂರದಲ್ಲಿ, ಹತ್ತಿರದಲ್ಲಿ, ನಿಂತು ಚೆಂಡು ಕಾಯುವವನು); (ಏ. ವ. ಅಥವಾ ಬ. ವ.) ಹಾಗೆ ನಿಂತಿರುವ ಪ್ರದೇಶ, ಸ್ಥಾನ (Was caught in the slips *or* at s.). (ಮಣ್ಣಿನ ಪಾತ್ರೆಗಳ ಮೇಲೆ ಬಳಿಯುವುದಕ್ಕಾಗಿ ಅಥವಾ ನಮೂನೆಗಳನ್ನು ಬಿಡಿಸುವುದಕ್ಕಾಗಿ ಉಪಯೋಗಿಸುವ) ನೀರು ಜೇಡಿ, ಮಿದು ಜೇಡಿ. (ನಾಟಕಶಾಲೆ; ಬ. ವ. ದಲ್ಲಿ) ದೃಶ್ಯ ಸಲಕರಣೆಗಳನ್ನು ತಂದು ಜಾರಿಸುವ, ನಟರು ರಂಗವನ್ನು ಪ್ರವೇಶಿಸುವುದಕ್ಕೆ ಮೊದಲು ಬಂದು ನಿಂತುಕೊಳ್ಳುವ, —ರಂಗಸ್ಥಳದ ಭಾಗ: ಪಕ್ಕ ರಂಗ.

Slip- (ಸ. ಪೂ. ಪ.): **S.-carriage** (ರೈಲು ನಿಲ್ಲದ ನಿಲ್ದಾಣಗಳಲ್ಲಿ ರೈಲು ಹೋಗುತ್ತಿರುವಾಗ ಕಳಚಿಬಿಡಲಾಗುವಂತೆ ಅಳವಡಿಸಿರುವ) ಕಳಚು —ಡಬ್ಬಿ, ಗಾಡಿ. **S.-cover** (ಉಪಯೋಗಿಸದೆ ಇಟ್ಟಿರುವ ಪೀಠೋಪಕರಣಗಳಿಗೆ ಹೊದಿಸಲೂ ಕಳಚಲೂ ಆಗುವ) ಕಳಚು ಗವುಸು. **S.-galley** ಜೋಡಿಸಿದ ಅಚ್ಚಿನ ಮೊಳೆಗಳನ್ನು ಕದಲದಂತೆ ಇಡುವ ಕಿರಿಯಗಲದ ಉದ್ದನೆಯ ತಟ್ಟೆ: ಸರಿಕೆಯ, ಜಾರು, —ಗ್ಯಾಲಿ (ತಟ್ಟೆ). **S.-hook** ಆವಶ್ಯಕವಾದಾಗ ಸುಲಭವಾಗಿ ಕಳಚುವ ಕೊಕ್ಕೆ: ಕಳಚುಕೊಕ್ಕೆ. **S.-knot** ಎಳೆಯುವುದರಿಂದ ಬಿಚ್ಚಲಾಗುವ ಗಂಟು: ಕಳಚು, ಜಾರು, —ಗಂಟು; ದಾರದಲ್ಲಿ ಮೇಲಕ್ಕೂ ಕೆಳಕ್ಕೂ ಸರಿದಾಡುತ್ತ ಕುಣಿಕೆಯನ್ನು ಸಡಿಲಿಸುವ ಅಥವಾ ಬಿಗಿಸುವ ಗಂಟು: ಸರಿ, ಜೀರು, —ಗಂಟು. **S.-rope** ಎರಡು ತುದಿಗಳೂ ಹಡಗಿಗೇ ಬಿಗಿದಿದ್ದು, ಯಾವ ತುದಿಯನ್ನು ಕಳಚಿದರೂ ಹಡಗನ್ನು ಲಂಗರು ಸರಪಣಿಯಿಂದ ಬಿಡಿಸುವ ಹಗ್ಗ: ಕಳಚು ಹಗ್ಗ. **Slíp-shod** ಜಜ್ಜಿಹೋದ ಹಿಮ್ಮಡಿಯ ಜೋಡು ಹಾಕಿ(ಕೊಂಡಿ)ರುವ; (ರೂಪ.) ಅಶ್ರದ್ಧೆಯಿಂದ ಮಾಡಿದ, ಅಚ್ಚುಕಟ್ಟಿಲ್ಲದ, ಅಡ್ಡಾದಿಡ್ಡಿಯ, ತಾತ್ಸಾರದ, ಪಡಪೋಸಿಯ. **Slípslop** (ಗು., ನಾ.) =Slip-shod (ರೂಪ.). (ನಾ.) ಅಚ್ಚುಕಟ್ಟಿಲ್ಲದ, ಪಡಪೋಸಿಯ, —ಬರೆವಣಿಗೆ; ನಿಸ್ಸಾರವಾದ, ಸಪ್ಪೆಯಾದ, —ಆಹಾರ, ಪಾನೀಯ; ಗೊಡ್ಡು, ಅಂತಃಕರಣ ಸುರಿಸುವ, —ಮಾತು, ಬರೆವಣಿಗೆ. **Slípway** (ಹಡಗು ಕಟ್ಟುವ, ಹಡಗಿನಿಂದ ಸಾಮಾನನ್ನೂ ಜನರನ್ನೂ ಇಳಿಸುವ) (ಇಳಿ) ಜಾರು ಕಟ್ಟೆ.

Slípper, Slíppery, Slíppy. Slip (ಕ್ರಿ.) ನೋಡಿ.

Slit ಸ್ಲಿಟ್ (ಕ್ರಿ.; ಭೂತ., ಭೂ. ಕೃ. Slit; ನಾ.) ಉದ್ದನಾಗಿ ಕತ್ತರಿಸು, ಹರಿ(ದುಹೋಗು); ಸೀಳು, ಗೀಳು; ಸೀಳಿ, ಗೀಳಿ,—ಹೋಗು (S. one's weasand ಗಂಟಲು ಕತ್ತರಿಸು, ಸೀಳು. S. sheet of metal into strips *or* rods ಲೋಹದ ತಗಡನ್ನು ಪಟ್ಟಿಗಳಾಗಿ, ಸರಳುಗಳಾಗಿ, ಸೀಳು. Slitting-rollers ತಗಡನ್ನು ಪಟ್ಟಿಗಳಾಗಿ ಕೊಯ್ಯುವ ಸಲಕರಣೆ: ಸೀಳುರುಳೆ, ಕೊಯ್ಯುರುಳೆ). (ನಾ.) ಉದ್ದನೆಯ ಕತ್ತರಿಕೆ, ಕೊಯ್ತ; ಸೀಳು, ಸೀಳಿಕೆ, ಗೀಳು, ಗೀಳಿಕೆ; ಸೀಳು ಗಂಡಿ (The windows are mere slits)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Slíther ಸ್ಲಿದರ್ (ಕ್ರಿ. ಅಕ.) (ಬಳ. ಮಾ.) (ವಕ್ರವಾಗಿ) ಜಾರು, ಸರಿ (ದಾಡು) ; ವಕ್ರವಾಗಿ ಜಾರಿಕೊಂಡು, ಜಾರಾಡಿಕೊಂಡು, —ನಡೆ, ಹೋಗು ; (ಸರೀಸೃಪಗಳ ವಿಷಯದಲ್ಲಿ) ಹರಿದಾಡು, ಹರಿದುಕೊಂಡು ಹೋಗು.

Slíver ಸ್ಲಿ(ಸ್ಲೈ)ವರ್ (ನಾ., ಕ್ರಿ.) ಚಕ್ಕೆ, ಸಿಬರು, ದಬ್ಬೆ (—ಏಳು, ಸೀಳು, ಮಾಡು) ; (ಮೀನು ಹಿಡಿಯುವಲ್ಲಿ ; ಎರೆಯಾಗಿ ಕತ್ತರಿಸಿದ) ಸಣ್ಣ ಮೀನಿನ ಪಕ್ಕೆಯ ಉದ್ದಹೋಳು; (ಮೀನನ್ನು) ಉದ್ದಹೋಳು ಮಾಡು, ಸೀಳು. (ಹತ್ತಿ, ಉಣ್ಣೆ, ಸಣಬು, ಮೊ. ಗಳ) ಹಂಜಿ (ಮಾಡು)

Slóbber ಸ್ಲಾಬರ್ (ಕ್ರಿ., ನಾ.) (ಮಗುವಿನಂತೆ, ಪೆದ್ದನಂತೆ ಅಥವಾ ಭಾವಾತಿರೇಕದಿಂದ ; ತಿನ್ನುವಾಗ, ಕುಡಿಯುವಾಗ) ಜೊಲ್ಲು ಸುರಿಸು ; (ಬಟ್ಟೆಯನ್ನು, ಮುತ್ತಿಡುವಾಗ ವ್ಯಕ್ತಿಯನ್ನು) ಜೊಲ್ಲುಮಾಡು ; (ಸಂಯಮ ವಿಲ್ಲದೆ ಮಗುವಿನಂತೆ) ರಾಗೋದ್ರೇಕಗೊಳ್ಳು, ಹುಚ್ಚು ಹುಚ್ಚು ಭಾವಾ ವೇಶಗೊಳ್ಳು ; ತೊದಲಿಕೊಂಡು ಒದರು ; (ಕೆಲಸವನ್ನು) ಅಡ್ಡಾದಿಡ್ಡಿ ಯಾಗಿ, ಒಡ್ಡೊಡ್ಡಾಗಿ,—ಮಾಡು; ಕುಲಗೆಡಿಸು. (ನಾ.) ಸುರಿಯುವ, ಹರಿಯುವ, —ಜೊಲ್ಲು ; ಅಸಹ್ಯವಾಗುವಂತೆ ಭಾವಾತಿರೇಕ ದಿಂದ, ರಸಾವೇಶದಿಂದ, —ಆಡಿದ ಮಾತು, ಕೊಟ್ಟ ಮುತ್ತು, ಮೊ. ವು; ಭಾವಾತಿರೇಕ, ರಾಗೋದ್ರೇಕ. **Slóbbery** (ಗು.) ; **Slóbberiness** (ನಾ.)

Sloe ಸ್ಲೊ (ನಾ.) ಕವಳೆ ಜಾತಿಯ ಹಣ್ಣು, ಗಿಡ (S. gin ಜಿನ್ ಮದ್ಯದಲ್ಲಿ ಈ ಹಣ್ಣನ್ನು ಊರಹಾಕಿ ಮಾಡಿದ ಮದ್ಯ)

Slóe-worm = Slow-worm.

Slog ಸ್ಲಾಗ್ (ಕ್ರಿ., ನಾ.) (ಮುಷ್ಟಿಯುದ್ಧ, ಕ್ರಿಕೆಟ್, ಮೊ. ಗಳಲ್ಲಿ) ಬಲ ವಾಗಿ, ಸಿಕ್ಕಾಬಟ್ಟೆ, —ಹೊಡೆ ; ಕುಟ್ಟಿ ಬಜಾಯಿಸು. ಕಷ್ಟಪಟ್ಟು ಕೊಂಡು, ಪಟ್ಟುಹಿಡಿದು, —ನಡೆ, ಹೋಗು, ಕೆಲಸಮಾಡು (ಸಾ., *on*, *away* ಉಪ. ದೊಡನೆ). (ನಾ.) ಬಲವಾದ ಅಡ್ಡಾದಿಡ್ಡಿ ಹೊಡೆತ. **Slógger** (ನಾ.) ಕುಟ್ಟಿ ಬಜಾಯಿಸುವವನು; ಜೋರಾದ, ಸಿಕ್ಕಾಬಟ್ಟೆಯ, —ಹೊಡೆತ ; (ರೂಪ.) ಪಟ್ಟುಹಿಡಿದು ಕೆಲಸಮಾಡುವವನು ; ಅವಿಶ್ರಾಂತವಾಗಿ ದುಡಿಯುವವನು.

Slógan ಸ್ಲೋಗನ್ (ನಾ.) (ಸ್ಕಾ. ಪ್ರ.) ಹೈಲೆಂಡಿನವರ ರಣಗರ್ಜನೆ; ಗುಂಪು ಕೂಗು ; (ಒಂದು ಪಕ್ಷದ) ಗುರಿನುಡಿ, ಧ್ಯೇಯ ಮಂತ್ರ, ಸೂತ್ರ.

Sloid, Sloyd ಸ್ಲಾಯ್ಡ್ (ನಾ.) (ವಿದ್ಯಾಶಾಲೆಗಳಲ್ಲಿ: ಮರದ ಕೊರೆ ಗೆಲಸದ ರೂಪದ) ಕೈಕೆಲಸದ ಶಿಕ್ಷಣ (ಪದ್ಧತಿ) ; ಹಸ್ತ (ಕೌಶಲ) ಶಿಕ್ಷಣ ; ಸ್ಲಾಯ್ಡ್ ಶಿಕ್ಷಣ.

Sloop ಸ್ಲೂಪ್ (ನಾ.) ಒಂದು ಬಗೆಯ ಸಣ್ಣ ಒಕ್ಕೂವೆಯ ಹಡಗು. S. of war ಫಿರಂಗಿಗಳಿಂದ ಸಜ್ಜಿತವಾದ ಇಂಥ ಯುದ್ಧದ ಹಡಗು. S.-rigged ಸ್ಲೂಪ್ ಹಡಗಿನಂತೆ (ಹಗ್ಗ, ಕೂವೆಮರ, ಮೊ. ಗಳಿಂದ) ಸಜ್ಜಾದ.

Slop[1] ಸ್ಲಾಪ್ (ನಾ., ಬ. ವ. ದಲ್ಲಿ ಮಾತ್ರ ; ಕ್ರಿ.) (ಬ. ವ. ದಲ್ಲಿ) ಕೊಳೆ ನೀರು, ಬಚ್ಚಲು ನೀರು ; ರೊಚ್ಚೆ ; (ಅಡಿಗೆ ಮನೆಯ) ಕಲಗಚ್ಚು, ಕಸಮುಸುರೆಯ ನೀರು, (ಮಲಗುವ ಮನೆಯ) ಮೂತ್ರಪಾತ್ರೆಗಳ ನೀರು [S.-basin ಕುಡಿದು ಮಿಕ್ಕದ್ದನ್ನು ಹಾಕುವ ತೊಟ್ಟಿ: ಎಂಜಲ ತೊಟ್ಟಿ. S.-pail (ಮಲಗುವ ಮನೆಯ) ಮೂತ್ರಪಾತ್ರೆ; ರೊಚ್ಚು ತೊಟ್ಟಿ]. (ಬ. ವ. ದಲ್ಲಿ) ಸಾರು, ರಸ, ಅಂಬಲಿ, ಗಂಜಿ, ಮದ್ಯಸಾರವಿಲ್ಲದ ಪಾನೀಯ, ಸಪ್ಪೆ ಕುಡಿತ. (ಕ್ರಿ.) ಚೆಲ್ಲು, ಚೆಲ್ಲಿಹೋಗು, ತುಳುಕು, ತುಳುಕಿಸು, ತುಂಬಿ ಹರಿ(ದುಹೋಗು) (ಅನೇಕ ವೇಳೆ *over*, *out* ಉಪ. ದೊಡನೆ) ; (ಹಂದಿಯಂತೆ) ಗಬಗಬನೆ ತಿನ್ನು ; ಅಂಬಲಿ, ಗಂಜಿ, —ಕುಡಿ ; (ಬಟ್ಟೆ, ನೆಲ, ಮೊ. ಗಳ ಮೇಲೆ) ಕೊಳೆನೀರು ಚೆಲ್ಲು, ಚೆಲ್ಲಿ ಹೊಲಸು ಮಾಡು. S. over (ರೂಪ.) ಭಾವೋದ್ರೇಕದ ಸೋಗುಹಾಕು, ಆವೇಶ ತಾಳು. **Slóppy** (ಗು.) (ರಸ್ತೆ) ಮಳೆಯಿಂದ ಕೆಸರಾದ, ಕೆಸರುಗುಂಡಿಗಳಿಂದ ತುಂಬಿದ ; ರೊಚ್ಚೆಯಾದ ; (ನೆಲ, ಮೇಜು, ಮೊ. ವು) ನೀರು, ಮೊ. ವು ಚೆಲ್ಲಿದ ; —ಚೆಲ್ಲಿ ಕೊಳಕಾದ, ಹೊಲಸಾದ ; (ಕೆಲಸ) ಕ್ರಮವಿಲ್ಲದ, ಪಡಪೋಸಿಯ, ಅಚ್ಚುಕಟ್ಟಿಲ್ಲದ ; (ಭಾವ, ಮಾತು) ಉಕ್ಕಿಬರುವ ಅಂತಃಕರಣದ, ಅಂತಃಕರಣ ಸುರಿಸುವ. **Slóppily** (ಕ್ರಿ. ವಿ.) ; **Slóppiness** (ನಾ.)

Slop[2] ಸ್ಲಾಪ್ (ನಾ., ಬ. ವ. ದಲ್ಲಿ ಮಾತ್ರ) (ಪ್ರಾಚೀ. ಪ್ರ.) ದಗಲೆ —ಚಲ್ಲಣ, ಚಡ್ಡಿ. ನೌಕಾ ಸೈನ್ಯದ ನಾವಿಕರಿಗೆ ಕೊಡುವ, ಸಿದ್ಧ ಮಾಡಿದ ಉಡುಪು, ಬಚ್ಚೆಬರೆ, ಹಾಸಿಗೆ, ಮೊ. ವು : ಸಿದ್ಧ ಉಡುಪು; ಅಗ್ಗವಾದ, ಕೀಳು ದರ್ಜೆಯ, —ಸಿದ್ಧ ಉಡುಪು, ಬಚ್ಚೆಬರೆ. S.-room (ಯುದ್ಧ ನೌಕೆಯಲ್ಲಿ) ಸಿದ್ಧ ಉಡುಪಿನ ಉಗ್ರಾಣ, ಸಿದ್ಧ ವಸ್ತ್ರಾ ಗಾರ. S.-seller, -shop ಸಿದ್ಧ ಉಡುಪಿನ ವ್ಯಾಪಾರಿ, ಅಂಗಡಿ.

Slop[3] ಸ್ಲಾಪ್ (ನಾ.) (ಅಸಂ.) ಪೊಲೀಸಿನವನು (Police ಪದದ ಹಿಂದು ಮುಂದು ಉಚ್ಚಾರಣೆಯ ವಿಕೃತರೂಪ)

Slope ಸ್ಲೋಪ್ (ನಾ., ಕ್ರಿ.) ಓರೆ, ಓಟ, ಇಳುಕಲು, ಪ್ರವಣತೆ (ಎರಡು ಕೊನೆಗಳ ಅಥವಾ ಬದಿಗಳ ಎತ್ತರದ ವ್ಯತ್ಯಾಸ) (The whole s. may amount to 2 ft. ಒಟ್ಟು ಓಟ ಎರಡು ಅಡಿಯಷ್ಟು ಆಗ ಬಹುದು) ; ಇಳಿಜಾರು (ನೆಲ), ಏರು (ನೆಲ). ಬಂದೂಕನ್ನು ಭುಜಕ್ಕೆ ಓಟವಾಗಿ ಹಿಡಿದು ನಿಂತಿರುವ ಸೈನಿಕನ ಭಂಗಿ (Come to the s. ಬಂದೂಕನ್ನು ಓಟವಾಗಿ ಹಿಡಿದುಕೊ). (ಕ್ರಿ.) ಏರು, ಇಳುಕಲು, —ಆಗಿರು, ಮಾಡು ; ಓಟ —ಕೊಡು, ಇಡು ; ಓಲಿಸಿ, ಓಟವಾಗಿ, —ಇಡು, ಹಿಡಿ (S. arms ಬಂದೂಕನ್ನು ಭುಜದಮೇಲೆ ಓಲಿಸಿ ಹಿಡಿ) ; (ಅಸಂ.) (ಹೇಳದೆ ಕೇಳದೆ) ಹೊರಟುಹೋಗು, ಪರಾರಿಯಾಗು ; ಸುತ್ತಾಡು, ತಿರುಗಾಡು. **Slópewise** (ಕ್ರಿ. ವಿ.) ; **Slópingly** (ಕ್ರಿ. ವಿ.)

Slóppy, etc. **Slop**[1] ನೋಡಿ.

Slosh ಸ್ಲಾಷ್ (ನಾ., ಕ್ರಿ.) ಕೆಸರು ; ಕರಗುತ್ತಿರುವ ಹಿಮ. (ಕ್ರಿ.) ಕೆಸರಿನಲ್ಲಿ, ಕೊಚ್ಚೆಯಲ್ಲಿ, —ಬಡಿದಾಡು, ಹೊರಳಾಡು. (ಅಮೆ. ಸಂ. ಅಸಂ.) ಗೊತ್ತುಗುರಿಯಿಲ್ಲದೆ ಸುತ್ತಾಡು, ಅಲೆ(ದಾಡು). 'ಸ್ಲಾಷ್' ಎಂದು —ಸದ್ದುಮಾಡು, ಸದ್ದಾಗು. (ಅಸಂ.) ಚಚ್ಚು, ಸದೆಬಡಿ.

Slot[1] ಸ್ಲಾಟ್ (ನಾ., ಕ್ರಿ. ಸಕ.) (ಯಂತ್ರ, ಮೊ. ಗಳಲ್ಲಿ ಮತ್ತೊಂದು ಭಾಗವನ್ನು ಹಿಡಿಸಿಕೊಳ್ಳುವಂತೆ ಮಾಡಿರುವ) ಗಾಡಿ, ಕೂರು, ಕಾಲುವೆ, (ಸೀಳು) ಕಂಡಿ (ಮು., ಸೀಳುಗಂಡಿ ಯಂತ್ರದಲ್ಲಿ ಪೆನಿ ನಾಣ್ಯವನ್ನೊ ಇತರ ನಾಣ್ಯವನ್ನೊ ತೂರಿಸಲು ಇರುವ ಕಂಡಿ) ; ರಂಗಸ್ಥಳದ —ನೆಲ ಬಾಗಿಲು, ತಳ ಕವಾಟ. (S.-machine ಅದರಲ್ಲಿ ಮಾಡಿರುವ ಸೀಳು ಗಂಡಿಯ ಮೂಲಕ ಗೊತ್ತಾದ ನಾಣ್ಯವನ್ನು ಹಾಕಿದರೆ, ಗೊತ್ತಾದ ಸಾಮಾನನ್ನು ಹೊರಕ್ಕೆ ಕೊಟ್ಟು ತಾನೇ ವಿಕ್ರಯಿಸುವ ಯಂತ್ರ : ಸೀಳು ಗಂಡಿ ಯಂತ್ರ). (ಕ್ರಿ.) ಗಾಡಿ, (ಸೀಳು) ಕಂಡಿ, —ಮಾಡು, ತೋಡು.

Slot[2] ಸ್ಲಾಟ್ (ನಾ.) (ಜಿಂಕೆ, ಮೊ. ಗಳ) ಹೆಜ್ಜೆಯ ಜಾಡು.

Sloth ಸ್ಲೋ(ಸ್ಲಾ)ತ್ (ನಾ.) ಸೋಮಾರಿತನ, ಆಲಸ್ಯ, ಪಾಲುಮಾರಿಕೆ, ಮೈಗಳ್ಳತನ [**Slóthful** (ಗು.) ; **Slóthfully** (ಕ್ರಿ. ವಿ.) ; **Slóthfulness** (ನಾ.)] ; ಪೂರ್ತಿ ಮರದಮೇಲೆಯೇ ವಾಸಿಸುವ, ನೆಲದ ಮೇಲೆ ಬಹಳ ನಿಧಾನವಾಗಿ ಮಾತ್ರ ಚಲಿಸಬಲ್ಲ, ನೀಳ ಬಾಗುಗುರಿನ ಕಾಲುಗಳುಳ್ಳ, ದ. ಅಮೆರಿಕದ ಒಂದು ಸಸ್ತನಿಪ್ರಾಣಿ. S.-bear ಅಗಲ ತುಟಿಯ, ಕಪ್ಪು ಬಣ್ಣದ, ಪೊದೆಗೂದಲಿನ, ಜೇನುತುಪ್ಪ ಕುಡಿಯುವ, ಇಂಡಿಯ ಮತ್ತು ಸಿಂಹಳದ್ವೀಪಗಳಲ್ಲಿರುವ, ಒಂದು ಕರಡಿ. S.-monkey ಒಂದು ಬಗೆಯ ಕಾಡುಪಾಪ.

Slouch ಸ್ಲೌಚ್ (ಕ್ರಿ., ನಾ.) ಜೋಲು, ಜೋಲಬೀಳು, ಜೋತಿರು, ಕುಸಿ(ದು ಬಾಗು) ; ಅವಲಕ್ಷಣವಾಗಿ ಜೋತುಕೊಂಡು, ಬಗ್ಗಿಕೊಂಡು, —ನಡೆ, ಹೋಗು, ಕುಳಿತುಕೊ ; (ಟೊಪ್ಪಿಗೆಯ ಅಂಚನ್ನು) ಕೆಳ ಬಾಗಿಸು, ಜೋಲಿಸು (ಎದುರು ಪದ : Cock). (ನಾ.) ಜೋಲು ನಡಗೆ ; ಜೋಲಿರುವುದು ; ಕುಸಿತ ; ಟೊಪ್ಪಿಗೆಯ ಅಂಚಿನ ಕೆಳ ಬಾಗು. (ಪ್ರಾಚೀ. ಪ್ರ.) ವಕ್ರ ಮನುಷ್ಯ, ಅವಲಕ್ಷಣದವನು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೋಮಾರಿ, ಒಡ್ಡ; ಅಸಮರ್ಥ; ಪಡಪೋಸಿ (ಕೆಲಸಗಾರ); ಕಳಪೆಯ, ಪಡಪೋಸಿ —ಕೆಲಸ (Is no s. at —ಲ್ಲಿ ಪಡಪೋಸಿಯಲ್ಲ; —ಲ್ಲಿ ಚತುರ, ದಕ್ಷ. This show is no s. ಈ ಪ್ರದರ್ಶನ ಕಳಪೆಯದೇನಲ್ಲ). S. hat ಕೆಳಬಾಗಿನ ಅಂಚಿನ, ಜೋಲಂಚಿನ, —ಟೊಪ್ಪಿಗೆ. **Sloúchingly** (ಕ್ರಿ. ವಿ.)

Slough[1] ಸ್ಲೌ (ನಾ.) ಜವುಗು, ಉಸುಬು, ಕೆಸರು, ಬದಿ (—ನೆಲ) [The S. of Despond (Despond ನೋಡಿ)]. **Sloúghy**[1] (ಗು.)

Slough[2] ಸ್ಲಫ್ (ನಾ., ಕ್ರಿ.) ಹಾವು ಬಿಟ್ಟ ಚರ್ಮ, ಹಾವಿನ ಪೊರೆ; ಪ್ರಾಣಿ ಕಳಚಿಬಿಟ್ಟ ಚರ್ಮ, ಪೊರೆ; (ಗಾಯ, ಹುಣ್ಣು, ಮೊ. ಗಳ ಮೇಲಿನ) ಸತ್ತ ಅಂಗಾಂಶ, ಸತ್ತ ಚರ್ಮ, ಹೆಪ್ಪು, ಹಕ್ಕಳಿಕೆ; (ರೂಪ.) ಬಿಟ್ಟುಬಿಟ್ಟ, ಪರಿತ್ಯಜಿಸಿದ, —ಅಭ್ಯಾಸ, ಗುಣ, ಮೊ. ಪು. (ಕ್ರಿ.) ಪೊರೆ —ಉದ್ದು, ಬಿಡು; (ಸಿಪ್ಪೆ, ಮೊ.) ಉದುರಿಹೋಗು, ಸುಲಿ, ಉದುರಿಸು, ಕಳಚು (ಅನೇಕ ವೇಳೆ *off*, *away* ಉಪ. ದೊಡನೆ). **Sloúghy**[2] (ಗು.) ಪೊರೆಯ; ಹಕ್ಕಳಿಕೆಗಟ್ಟಿದ; ಹಕ್ಕಳಿಕೆಯ.

Slovák ಸ್ಲಾವ್ಯಾಕ್, **Slóvak** ಸ್ಲೋವ್ಯಾಕ್ (ನಾ., ಗು.) ಉ. ಹಂಗರಿಯ ಸ್ಲಾವ್ ಬುಡಕಟ್ಟಿನ(ವನು)

Slóven ಸ್ಲವ್‌ನ್ (ನಾ.) ಕೊಳಕ, ಹೊಲಸಿಗ; ಎಚ್ಚರಗೇಡಿಯಾದ ಸೋಮಾರಿ, ಪಡಪೋಸಿ. **Slóvenly** (ಗು.; ಕ್ರಿ. ವಿ., ಪ್ರಾಚೀ. ಪ್ರ.); **Slóvenliness** (ನಾ.); **Slóvenry** (ನಾ.) (ವಿರ. ಪ್ರ.)

Slovéne ಸ್ಲೊವೀನ್ (ನಾ., ಗು.) ಸ್ಟಿರಿಯ, ಕಾರಿಂತಿಯ, ಮೊ. ಪ್ರದೇಶಗಳಲ್ಲಿಯ ಸ್ಲಾವ್ ಜನದ(ವನು). **Slovénian** ಸ್ಲೊವೀನಿಯನ್ (ಗು., ನಾ.) ಸ್ಲೊವೀನ್ ಜನರ (ಭಾಷೆ)

Slow ಸ್ಲೋ (ಗು., ಕ್ರಿ. ವಿ., ಕ್ರಿ.) ಮೆಲ್ಲನೆಯ, ನಿಧಾನದ, ಮಂದ; ತಾಮಸದ, ಧಾನಸದ, ವಿಲಂಬದ, ಸಾವಕಾಶದ, ತಡಮಾಡುವ [S. & steady wins the race ಮಂದಗತಿಯಾದರೂ ನಂತತವಾಗಿ ನಡೆದರೆ ಗೆಲವು ಸಿದ್ಧ. S. & sure (ಅವಸರಿಸಿದರೆ ಕೆಲಸ ಕೆಟ್ಟೀತು ಎಂಬ ಅರ್ಥದಲ್ಲಿ): ನಿಧಾನವಾದರೂ ಖಂಡಿತ. S. march (ಶ್ಮಶಾನಯಾತ್ರೆ, ಮೊ. ಸಂದರ್ಭಗಳಲ್ಲಿ ಸೈನಿಕ ದಳಗಳ) ನಿಧಾನ ನಡಗೆ, ಮಂದ ಗತಿ. S. music ಮಂದ (ಗತಿಯ), ವಿಲಂಬ (ಗತಿಯ),—ಸಂಗೀತ. S. growth, progress ನಿಧಾನದ —ಬೆಳವಣಿಗೆ, ಪ್ರಗತಿ. Was not s. to defend himself. Is s. to anger ಅವನಿಗೆ ಬೇಗ ಕೋಪ ಬರುವುದಿಲ್ಲ, ಕೋಪ ಬರುವುದು ತಡ; ಅವನು ಮಂದ ಕೋಪಿ]. ಜಡ, ಮೊದ್ದು; ಸ್ವಾರಸ್ಯವಿಲ್ಲದ, ನೀರಸ, ಬೇಸರ ಹುಟ್ಟಿಸುವ; ಲವಲವಿಕೆಯಿಲ್ಲದ, ಚಟುವಟಿಕೆಯಿಲ್ಲದ (A s. student. Is s. of wit ಅವನ ಬುದ್ಧಿ ಮಂದವಾಗಿದೆ; ಅವನು ಮೊದ್ದು. The play was voted s. ಆಟ ಸ್ವಾರಸ್ಯವಾಗಿರಲಿಲ್ಲ, ನೀರಸವಾಗಿತ್ತು, ಎಂದು ಅಭಿಪ್ರಾಯಪಟ್ಟರು). (ಗಡಿಯಾರ, ಮೊ.) (ಸರಿಯಾದ ಕಾಲ ತೋರಿಸದೆ) ಹಿಂದೆ ಹೋಗುತ್ತಿರುವ, ಹಿಂದಾಗಿರುವ, ಹಿಂದಿರುವ (Is 20′ s. ೨೦ ನಿಮಿಷ ಹಿಂದಿದೆ). [**Slowcoach** ಧಾನಸದವನು; ಮಂದ—ಮತಿ, ಬುದ್ಧಿ; ಜಡಭರತ; ಹಿಂದಿನ ಕಾಲದವನು, —ಕಾಲದ ಅಭಿಪ್ರಾಯವುಳ್ಳವನು. **S.-match** (ಸಿಡಿಮದ್ದುಗಳನ್ನು ಹೊತ್ತಿಸಲು ಉಪಯೋಗಿಸುವ) ನಿಧಾನವಾಗಿ ಉರಿಯುವ ಜಾವಿನ ಬತ್ತಿ. **Slow-witted** (ಗು.) ಮಂದಬುದ್ಧಿಯ, ಮೊದ್ದಾದ. **S.-worm** (ನಾ.) = Blind-worm (Blind ನೋಡಿ)]. (ಕ್ರಿ. ವಿ., ತರ ತಮ ರೂಪಗಳು, -er, -est) ನಿಧಾನವಾಗಿ, ಸಾವಕಾಶವಾಗಿ, ಮೆಲ್ಲನೆ, ಹಿಂದೆಬಿದ್ದು (ಈಗ Slowly ಪದ ಹೆಚ್ಚು ರೂಢಿ) (Watch goes s. ಗಡಿಯಾರ ನಿಧಾನವಾಗಿ ಹೋಗುತ್ತದೆ, ಹಿಂದಾಗಿದೆ. S.-going, -moving ನಿಧಾನವಾಗಿ ಹೋಗುವ; ಮಂದಗಾಮಿ). (ಕ್ರಿ.) (ರೈಲು ಗಾಡಿ, ಮೊ. ಗಳ) ವೇಗ ಕಡಮೆ —ಮಾಡು, ಆಗು; ನಿಧಾನ —ಮಾಡು, ಆಗು; ನಿಧಾನವಾಗಿ, ಮೆಲ್ಲಗೆ, —ಹೋಗು. **Slowly** (ಕ್ರಿ. ವಿ.); **Slowness** (ನಾ.)

Slow-worm. Slow ನೋಡಿ.

Sloyd. Sloid ನೋಡಿ.

Slub ಸ್ಲಬ್ (ನಾ., ಕ್ರಿ. ಸಕ.) (ನೂಲುವುದಕ್ಕೆ ಮೊದಲು ಸಿದ್ಧತೆಗಾಗಿ) ಕೊಂಚ ಹೊಸೆದ ಉಣ್ಣೆ(ಯ ಬತ್ತಿ). (ಕ್ರಿ.) (ಉಣ್ಣೆಯನ್ನು) ಕೊಂಚ ಬತ್ತಿ ಹೊಸೆ.

Slúbber ಸ್ಲಬರ್ (ಕ್ರಿ.) ಅಲಕ್ಷ್ಯವಾಗಿ, ಪಡಪೋಸಿಯಾಗಿ, —ಮಾಡು; ಜೊಲ್ಲು, ಹೊಲಸು, ಚಿತ್ತು, —ಮಾಡು.

Sludge ಸ್ಲಜ್ (ನಾ.) ಜಿಡ್ಡು, ಜಿಗುಟು, —ಮಣ್ಣು; (ಹೊಳೆ, ಮೊ. ಗಳ ತಳದಲ್ಲಿರುವ) ಗೋಡುಮಣ್ಣು; ಹೂಳು, ಬುರುದೆ; ಚರಂಡಿ ರೊಚ್ಚು. **Slúdgy** (ಗು.)

Slue. Slew[1] ನೋಡಿ.

Slug ಸ್ಲಗ್ (ನಾ., ಕ್ರಿ. ಅಕ.) (೧) ಸೋಮಾರಿ, ಸೋಂಬ, ಅಲಸ; (ಕ್ರಿ.) ಸೋಮಾರಿಯಾಗಿ —ಬಿದ್ದಿರು, ಕಾಲಹರಣ ಮಾಡು; ನಿಧಾನ ಮಾಡು, ಧಾನಸಮಾಡು. (೨) ಸಣ್ಣ ಸಸ್ಯಗಳನ್ನು ಹಾಳುಮಾಡುವ, ಚಿಪ್ಪಿಲ್ಲದ, ಒಂದು ಬಗೆಯ ಬಸವನ ಹುಳು; ಗೊಂಡೆಹುಳು, ಸುಂಬಳದ ಹುಳು; (ಕ್ರಿ.) (ತೋಟ, ಮೊ. ಗಳಲ್ಲಿ) ಗೊಂಡೆ ಹುಳುಗಳನ್ನು ಕೂಡಹಾಕಿ ನಾಶಮಾಡು. (೩) ನಿಯತಾಕಾರವಿಲ್ಲದ ಬಂದೂಕಿನ ಗುಂಡು; (ಸರಿಸುಮಾರು ಗುಂಡಗಿರುವ) ಲೋಹದ —ಮುದ್ದೆ, ಗಟ್ಟಿ; ಮುದ್ರಣದ ಪಂಕ್ತಿಯರಕದಲ್ಲಿ (ಲೈನೊಟೈಪ್‌ನಲ್ಲಿ) ಒಂದು ಗಟ್ಟಿ ಸಾಲು. **Slúg-a-bed** (ಪ್ರಾಚೀ. ಪ್ರ.) ಸೋಮಾರಿತನದಿಂದ ಬಹಳ ಹೊತ್ತು ಹಾಸಿಗೆಯಲ್ಲಿಯೇ ಮಲಗಿರುವವನು: ಹಾಸಿಗೆ ಸೋಮಾರಿ. **Slúggard** (ನಾ.) ಸೋಮಾರಿ, ಸೋಂಬೇರಿ, ಅಲಸ; ಜಡ ಮನುಷ್ಯ. **Slúggish** (ಗು.) ಚಟುವಟಿಕೆ, ಲವಲವಿಕೆ, ಚುರುಕು, —ಇಲ್ಲದ; ಸೋಮಾರಿಯಾದ, ತಾಮಸದ, ಧಾನಸದ, ನಿಧಾನ ಪ್ರಕೃತಿಯ (A s. stream ನಿಧಾನವಾಗಿ ಹರಿಯುವ ಹೊಳೆ; ಮಂದಗಾಮಿ ನದಿ. A s. temper ಬೇಗ ಕೆರಳದ ಮನೋವೃತ್ತಿ; ಜಡ ಪ್ರಕೃತಿ). **Slúggishly** (ಕ್ರಿ. ವಿ.); **Slúggishness** (ನಾ.)

Slúg-a-bed, Slúggard, Slúggish, etc. Slug ನೋಡಿ.

Sluice ಸ್ಲೂಸ್ (ನಾ., ಕ್ರಿ.) ನೀರಿನ ಒಳ ಹರಿವನ್ನು ಅಥವಾ ಹೊರ ಹರಿವನ್ನು ಹತೋಟಿಯಲ್ಲಿಡುವುದರ ಮೂಲಕ ಒಂದು ಜಲಾಶಯದ ನೀರಿನ ಮಟ್ಟವನ್ನು ಬದಲಾಯಿಸಲು ಅನುಕೂಲಿಸುವ ಜಾರು ಬಾಗಿಲು ಅಥವಾ ಇತರ ಸಾಧನ: ತೂಬು (=S.-gate, S.-valve); ತೂಬಿನ ಮೇಲುಗಡೆ ಅಥವಾ ಕೆಳಗಡೆ ನಿಂತಿರುವ, ಅಥವಾ ತೂಬಿನ ಮೂಲಕ ಹರಿಯುತ್ತಿರುವ, ನೀರು: ತೂಬಿನ ನೀರು; ತೂಬು—ಕಾಲುವೆ, ನಾಲೆ (=S.-way); ಹೊನಲು ಹರಿಸಿ ತೊಳೆಯುವುದು, ಹೊನಲು ತೊಳೆತ. (ಕ್ರಿ.) ತೂಬು(ಗಳನ್ನು) ಇಡು; ತೂಬು ಎತ್ತಿ ನೀರು ಬಿಡು, ಹರಿಸು; ತೂಬುಕಾಲುವೆಯ ಮೂಲಕ ನೀರು ಹರಿಸು; ಹೊನಲು ಹರಿಸಿ ತೊಳೆ; (ಒಟ್ಟಿನಮೇಲೆ, ಒಂದರಮೇಲೆ) ಯಥೇಚ್ಛವಾಗಿ ನೀರು ಎರಚು, ಹೊಯ್ಯಿ; (ನೀರಿನ ವಿಷಯದಲ್ಲಿ) ತೂಬಿನ ಮೂಲಕ (ಹೇಗೊ ಹಾಗೆ) ರಭಸದಿಂದ ಹೊರ ಹರಿ, ನುಗ್ಗು (*Out*, ಮೊ. ಉಪ. ದೊಡನೆ)

Slum ಸ್ಲಮ್ (ನಾ., ಕ್ರಿ. ಅಕ.) ದಟ್ಟದರಿದ್ರರು ಅಥವಾ ಅತಿ ಕೆಳ ದರ್ಜೆಯವರು ವಾಸಮಾಡುವ, ಬಹು ಒತ್ತಾದ, ಊರಿನ ಗಲೀಜು ಭಾಗ: ಗಲೀಜು ಗಲ್ಲಿ, ಹೊಲಸು ಕೇರಿ. (ಕ್ರಿ.) (ಜನರ ಸ್ಥಿತಿಗತಿಗಳನ್ನು ನೋಡುವುದಕ್ಕಾಗಿ) ಗಲೀಜು ಗಲ್ಲಿಯಲ್ಲಿ —ಹೋಗು, ಸುತ್ತಾಡು; (ದುರುದ್ದೇಶದಿಂದ) ಗಲೀಜು ಗಲ್ಲಿ ತಿರುಗು; (ತಲೆ ಮರಸಿಕೊಳ್ಳುವುದಕ್ಕಾಗಿ) ಗಲೀಜು ಗಲ್ಲಿ ಸೇರಿಕೊ. **Slúmmer** (ನಾ.) ಗಲೀಜು ಗಲ್ಲಿ —ತಿರುಕ, ನಿವಾಸಿ, ಪರೀಕ್ಷಕ.

Slúmber ಸ್ಲಂಬರ್ (ಕ್ರಿ., ನಾ.) (ಮು., ಕಾವ್ಯ ಪ್ರ.) ನಿದ್ರೆ (—ಹೋಗು, ಮಾಡು) (ಸಾ., ನಾಮಪದ, ಬ. ವ. ದಲ್ಲಿ ಪ್ರ: His slumbers were interrupted by a knock); (ರೂಪ.) ನಿದ್ರಾವಸ್ಥೆ(ಯಲ್ಲಿರು), ಸುಪ್ತಿ(ಯಲ್ಲಿರು), ಜಡವಾಗಿ ಬಿದ್ದಿರು. S. away

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕಾಲವನ್ನು) ನಿದ್ರೆಯಲ್ಲಿ ಕಳೆದುಬಿಡು ; ನಿದ್ರೆಮಾಡಿಬಿಡು. S.-suit (ಅಂಗಡಿಯ ಮಾತು) ನಿದ್ರೆಯುಡುಪು, ಪಾಯಿಜಾಮೆ. **Slúmberer** (ನಾ.) ; **Slúmb(e)rous** (ಗು.) ; **Slúmb(e)rously** (ಕ್ರಿ. ವಿ.)

Slúmmock ಸ್ಲಮಕ್ (ಕ್ರಿ.) (ಬಳ. ಮಾ.) ಗಬಗಬನೆ —ತಿನ್ನು, ನುಂಗಿ ಹಾಕು ; ಒಡ್ಡೊಡ್ಡಾಗಿ, ವಕ್ರವಾಗಿ, ವಿಕಾರವಾಗಿ, —ನಡೆ, ಮಾತಾಡು.

Slump ಸ್ಲಂಪ್ (ನಾ., ಕ್ರಿ. ಅಕ.) ಕುಸಿದುಬೀಳು ; (ಅಸಂ.) (ಇದ್ದಕ್ಕಿದ್ದ ಹಾಗೆ, ಸರ್‍ರನೆ ಅಥವಾ ವಿಪರೀತವಾಗಿ) ಬೆಲೆ, ಗಿರಾಕಿ, —ಬಿದ್ದು ಹೋಗು(ವುದು), ಇಳಿದುಹೋಗು(ವುದು) ; (ಒಂದು ವಿಷಯದಲ್ಲಿ, ಒಂದು ಉದ್ಯಮದಲ್ಲಿ) ಆಸಕ್ತಿ, ಉತ್ಸಾಹ, ಮೊ. ವು ಬಿದ್ದುಹೋಗು (ವುದು), ಕುಗ್ಗಿಹೋಗು(ವುದು)

Slung. Sling ಧಾತುವಿನ ಭೂತ., ಭೂ. ಕೃ.

Slunk. Slink[1] ಧಾತುವಿನ ಭೂತ., ಭೂ. ಕೃ.

Slur ಸ್ಲರ್ (ಕ್ರಿ., ವರ್ತಮಾನ ಕೃ. Slurring; ನಾ.) (ಅಕ್ಷರಗಳು ಅಥವಾ ಧ್ವನಿಗಳು) ಒಂದಕ್ಕೊಂದು ಬೆರೆತುಹೋಗುವಂತೆ ಅಸ್ಪಷ್ಟವಾಗಿ ಕೂಡಿಸಿ ಬರೆ, ಉಚ್ಚರಿಸು ; ತೇಲಿಸಿ— ಬರೆ, ಉಚ್ಚರಿಸು ; (ಸಂ.) (ಸ್ವರಗಳನ್ನು) ತೇಲಿಸಿ, ವಿಚ್ಛಿತ್ತಿ ಬಾರದಂತೆ —ಉಚ್ಚರಿಸು : ಪಲುಕು ; (ಎರಡು ಅಥವಾ ಹೆಚ್ಚು ಸ್ವರಗಳ ಮೇಲುಗಡೆ ಅಥವಾ ಕೆಳಗಡೆ) ಅವಿಚ್ಛಿತ್ತಿ ಚಿಹ್ನೆ ಹಾಕು, ತೇಲುಗೆರೆ ಹಾಕು. (ತಪ್ಪು, ಸಂಗತಿ, ಮೊ. ನ್ನು) ತೇಲಿಸಿ ಬಿಡು, ಮರಸಿಬಿಡು, ಜಾರಿಸಿಬಿಡು, ಅಲ್ಪವಾಗಿ ಗಣಿಸು (*Over* ಉಪ. ದೊಡನೆ). (ಪ್ರಾಚೀ. ಪ್ರ.) ನಿಂದೆ ಹೊರಿಸು, ಕಳಂಕ ಹಚ್ಚು, ಹಳಿ. (ನಾ.) ನಿಂದೆ, ಕಳಂಕ, ಅಪವಾದ, ಹಳಿವು (It is no s. upon his reputation ಅವನ ಖ್ಯಾತಿಗೆ ಅದು ಕಳಂಕವಲ್ಲ); ಧೋರಣಿ ಲಿಪಿ ; ತೇಲು ಉಚ್ಚಾರ ; ಶೈಥಿಲ್ಯ ; (ಸಂ.) ಅವಿಚ್ಛಿತ್ತಿ ಚಿಹ್ನೆ, ತೇಲುಗೆರೆ.

Slush ಸ್ಲಷ್ (ನಾ.) ಕೆಸರು, ಕೊಚ್ಚೆ, ಬುರುದೆ, ಕರಗುತ್ತಿರುವ ಮಂಜು; (ರೂಪ.) ಬರಿಯ ಅಂತಃಕರಣದ ಜಳ್ಳು, ಭಾವಸ್ರಾವ ; ಗೊಡ್ಡು, ಹೊಲಸು, —ಸಾಹಿತ್ಯ, ಬರೆವಣಿಗೆ; ಕಾಡುಹರಟೆ. **Slúshy** (ಗು.)

Slut ಸ್ಲಟ್ (ನಾ.) ಕೊಳಕಿ, ಹೊಲಸು ಹೆಂಗಸು ; ನಡತೆ ತಪ್ಪಿದವಳು. (ಹಾಸ್ಯ ಪ್ರ.) ಹುಡುಗಿ, ಪೋರಿ. **Slúttery** (ನಾ.) ರೋತೆ, ಕೊಳಕು, ಹೊಲಸು(ತನ). **Slúttish** (ಗು.) ; **Slúttishly** (ಕ್ರಿ. ವಿ.) ; **Slúttishness** (ನಾ.)

Sly ಸ್ಲೈ (ಗು.; ತರತಮ ರೂಪ : Slyer, Slyest) ಉಪಾಯದ, ತಂತ್ರದ, ಠಕ್ಕಿನ, ಕಪಟೋಪಾಯದ, ಕೃತ್ರಿಮದ ; ಮುಚ್ಚುಮರೆಯ, ಮರೆಮಾಚುವ (S. dog ಇತರರಿಗೆ ಕಾಣದಂತೆ, ಗುಟ್ಟಿನಲ್ಲಿಯೆ, —ಕೆಟ್ಟ ಕೆಲಸಗಳನ್ನು ಮಾಡುವವನು, ಭೋಗಗಳನ್ನು ಅನುಭವಿಸುವವನು ; ಕಳ್ಳ ಕೊರಮ). ಮರೆಯಲ್ಲಿ, ಗುಟ್ಟಿನಲ್ಲಿ, —ಮಾಡಿದ ; ಗುಟ್ಟಿನ, ಕಳ್ಳತನದ (On the s. ಗುಟ್ಟಾಗಿ, ಕಳ್ಳತನದಲ್ಲಿ). ಮರ್ಮಿಯಾದ, ಹುಷಾರಿನ ; ಕುಚೋದ್ಯ, ಲೇವಡಿ, ಗೇಲಿ, —ಮಾಡುವ ; ವ್ಯಂಗ್ಯದ, ಕೊಂಕಿನ. **Slýboots** (ನಾ.) ತಂತ್ರಿ, ಠಕ್ಕ (ಹುಡುಗಾಟದ ಪ್ರ.; ಮು., ಮಗುವನ್ನು ಅಥವಾ ಪ್ರಾಣಿಯನ್ನು ಕುರಿತು). **Slýly** (ಕ್ರಿ. ವಿ.) ; **Slýness** (ನಾ.)

Slype ಸ್ಲೈಪ್ (ನಾ.) ಕ್ರೈಸ್ತ ಆರಾಧನ ಮಂದಿರದಲ್ಲಿ ಪಾರ್ಶ್ವ ಭಾಗ ದಿಂದ ಸಭಾ ಮಂದಿರಕ್ಕೆ ಅಥವಾ ಮುಖ್ಯಾಧಿಕಾರಿಯ (Dean) ಭವನಕ್ಕೆ ಹೋಗುವ ಮೇಲುಮರೆಯ ದಾರಿ.

Smack[1] ಸ್ಮ್ಯಾಕ್ (ನಾ., ಕ್ರಿ. ಅಕ.) ವಾಸನೆ, ಗಂಧ, ರುಚಿ, ಛಾಯೆ, ಲಕ್ಷಣ, ಸೂಚನೆ (Has a s. of ginger in it ಅದರಲ್ಲಿ ಕೊಂಚ ಶುಂಠಿಯ ರುಚಿ ಇದೆ. Has a s. of recklessness in him). (ಕ್ರಿ.) ವಿಚಿತ್ರವಾದ, ಅನಿರೀಕ್ಷಿತವಾದ ಅಥವಾ ಗೌಣವಾದ ಬೇರೆ ವಾಸನೆ, ರುಚಿ, —ಸ್ವಲ್ಪ ಇರು, ಆಗಿರು (ವಿರ. ಪ್ರ.); (—ರ) ವಾಸನೆ, ರುಚಿ, —ಸ್ವಲ್ಪ ಉಳ್ಳದ್ದಾಗಿರು (Wine smacking of the cork ಸ್ವಲ್ಪ ಕಾರ್ಕ್ ವಾಸನೆಯಿರುವ ಮದ್ಯ) ; (—ರ) ಲಕ್ಷಣ, ಛಾಯೆ, —ಉಳ್ಳದ್ದಾಗಿರು (His manner smacked of superciliousness ಅವನ ವರ್ತನೆಯಲ್ಲಿ ಸ್ವಪ್ರತಿಷ್ಠೆಯ, ದರ್ಪದ, ಛಾಯೆಯಿತ್ತು)

Smack[2] ಸ್ಮ್ಯಾಕ್ (ನಾ., ಕ್ರಿ., ಕ್ರಿ. ವಿ.) (ಯಾವುದಾದರೂ ಮೇಲ್ಮೈ ಯನ್ನು ಅಂಗೈಯಿಂದ ಹೊಡೆದರೆ, ತುಟಿಗಳನ್ನು ತಟಕ್ಕನೆ ತೆರೆದರೆ, ಚಾವಟಿಯನ್ನು ಆಡಿಸಿದರೆ, ಉಂಟಾಗುವಂಥ) ಚಟ್, ಫಟ್, ಚಟಾರ್, ಪಟಾರ್, —ಶಬ್ದ ; ಲೊಚ್ಚೆ, ಲೊಟಿಕೆ, (ಬಾಯಿ) ಚಪ್ಪರಿಕೆ ; ಅಂಗೈ ಯಿಂದ ಕೊಟ್ಟ ಏಟು, ಅಪ್ಪಳಿಕೆ, ತಪರಾಕು ; (ಕ್ರಿಕೆಟ್ಟಿನಲ್ಲಿ) ಜೋರಿನ, ಘರ್ಜರಿ, —ಹೊಡೆತ ; ಸದ್ದಾಗುವಂತೆ ಚಪ್ಪರಿಸಿಕೊಟ್ಟ ಮುತ್ತು, ಲೊಟಿಕೆ ಮುತ್ತು (Gave her a hearty s.). [Have a s. at (ಬಳ. ಮಾ.) ಒಂದು ಕೈ ನೋಡು]. (ಕ್ರಿ.) (ಮುಖ, ಮೊ. ಗಳ ಮೇಲೆ) ಅಪ್ಪಳಿಸು, ತಪರಾಕು ಹಾಕು ; (ಸದ್ದಾಗುವಂತೆ) ತುಟಿ ಚಪ್ಪರಿಸು, ಲೊಟಿಕೆ ಹಾಕು, ಲೊಚ್ಚೆ ಹೊಡೆ ; (ಚಾವಟಿ) ಚಟಗುಟ್ಟು, ಚಟಗುಟ್ಟಿಸು, ಚಟೀರೆನ್ನು, ಚಟೀರೆನ್ನಿಸು. (ಕ್ರಿ. ವಿ.) ಪಟೀರನೆ, ಚಟ್ಟನೆ, ನೇರವಾಗಿ, ಸರಿಯಾಗಿ (Went s. through the window ನೇರವಾಗಿ ಕಿಟಕಿ ಹಾದುಹೋಯಿತು. Hit him s. on the nose ಸರಿಯಾಗಿ ಅವನ ಮೂಗಿನಮೇಲೆ ಹೊಡೆದನು). **Smácker** (ನಾ.) (ಅಸಂ.) ಲೊಟಿಕೆ ಮುತ್ತು ; ಅಪ್ಪಳಿಕೆ ; (ಒಂದರ) ಘರ್ಜರಿ ಮಾದರಿ.

Smack[3] ಸ್ಮ್ಯಾಕ್ (ನಾ.) ಮೀನು ಹಿಡಿಯುವ ಒಕ್ಕೂವೆಯ ಹಡಗು. **Smácksman** (ನಾ.) ಈ ಹಡಗಿನ ನಾವಿಕ.

Small ಸ್ಮಾಲ್ (ಗು., ನಾ., ಕ್ರಿ. ವಿ.) ಚಿಕ್ಕ, ಸಣ್ಣ, ಪುಟ್ಟ, ಕಿರಿಯ, ಅಲ್ಪ, ಸ್ವಲ್ಪ, ಕೊಂಚ, ಕ್ಷುದ್ರ (Look, feel, s. ತೇಜೋವಧೆ ಯಾದಂತೆ ಕಾಣು ; ಮುಖ ಚಿಕ್ಕದುಮಾಡಿಕೊ. Has s. Latin ಅವನಿಗೆ ಲ್ಯಾಟಿನ್ ಗೊತ್ತಿಲ್ಲ. The still s. voice ಆತ್ಮಸಾಕ್ಷಿ, ಅಂತರ್ವಾಣಿ. The s. worries of life ಬಾಳಿನ ಸಣ್ಣಪುಟ್ಟ ತೊಂದರೆಗಳು, ಕಿರುಕುಳಗಳು). [**S.-arms** (ಫಿರಂಗಿಯನ್ನು ಬಿಟ್ಟು ಉಳಿದ) ಸಣ್ಣ ಬಂದೂಕುಗಳು, ಪಿಸ್ತೂಲುಗಳು, ಮೊ. ವು (Arm[2] ನೋಡಿ). **S. beer** (ಪ್ರಾಚೀ. ಪ್ರ.) ನೀರು, ಕಳಪೆ, ಸಪ್ಪೆ, —ಬಿಯರ್ ಮದ್ಯ. Think no s. beer of oneself ಗರ್ವಿತನಾಗಿರು, ಪ್ರತಿಷ್ಠೆಯಿರು. Chronicle s. beer ಅಲ್ಪ ವಿಷಯಗಳನ್ನು ಮಹತ್ತಾಗಿ ಎಣಿಸಿ ಮಾತಾಡು. This beer is very s. ಈ ಬಿಯರ್ ಮದ್ಯ ತುಂಬ ನೀರಾಗಿದೆ, ಸಪ್ಪೆಯಾಗಿದೆ. **S. capitals** ಸಣ್ಣ ಆಕಾರದ ದೊಡ್ಡ ಅಕ್ಷರಗಳು. **S. change** (ಬೆಳ್ಳಿಯ ಮತ್ತು ತಾಮ್ರದ) ಚಿಲ್ಲರೆ ನಾಣ್ಯ ; (ರೂಪ.) ಸಣ್ಣ ಮಾತು, ಕ್ಷುದ್ರ ಟೀಕೆ. **S. clothes** (ಪ್ರಾಚೀ. ಪ್ರ.) ಮಂಡಿಯ ವರೆಗಿನ ಷರಾಯಿ, ಚಡ್ಡಿ, ಚಲ್ಲಣ. **S. craft** ದೋಣಿಗಳು. **S. debt** (ಕೌಂಟಿ ಕೋರ್ಟಿನಲ್ಲಿ ದಾವಹಾಕಿ ಪಡೆಯಬಹುದಾದ ಪರಮಾವಧಿ ಮೊತ್ತಕ್ಕಿಂತ ಮೀರಿರದ) ಚಿಲ್ಲರೆ ಸಾಲ. **S. & early** ರಾತ್ರಿ ಬೇಗ ಮುಗಿಯುವ, ಕೆಲವೇ ಅತಿಥಿಗಳ ಕೂಟ. **S. fry** (Fry[1] ನೋಡಿ). **S. gross** ಹತ್ತು ಡಜನ್. **S. hand** ಸಾಧಾರಣ ಕೈಬರೆವಣಿಗೆ (ಎದುರು ಪದ: Text-hand). **S. hours** (Hour ನೋಡಿ). **S. letters** ಸಣ್ಣ ಅಕ್ಷರಗಳು. **S. pica** (ಚಿಕ್ಕ ಪ್ರಮಾಣದ ಅಕ್ಷರದ ಅಚ್ಚಿನ ಮೊಳೆ) : ಸಣ್ಣ ಪೈಕ (ಅಚ್ಚಿನ ಮೊಳೆ). **Smállpox** (ನಾ.) ಸಿಡುಬು, ಮೈಲಿ, ದೇವಿ. **S. rain** ಸಣ್ಣ, ತುಂತುರು, —ಮಳೆ. **S. shopkeeper** ಚಿಲ್ಲರೆ ಅಂಗಡಿಯವನು ; ಸಣ್ಣ ವ್ಯಾಪಾರಿ. **S. sword** ಕಿರುಗತ್ತಿ, ಇರಿಗತ್ತಿ. **S. talk** ಚಿಲ್ಲರೆ —ಮಾತುಕತೆ, ಹರಟೆ. S. wonder (ನಡತೆ, ಮೊ. ನ್ನು ಟೀಕಿಸುವಲ್ಲಿ) ಆಶ್ಚರ್ಯವೇನಿಲ್ಲ]. ಕೆಳ ವರ್ಗದ, ಬಡ, ದೀನ, ಸಾಮಾನ್ಯ (Great & s. ದೊಡ್ಡವರೂ ಸಣ್ಣವರೂ, ಎಲ್ಲ ವರ್ಗದವರೂ. Lives in a s. way ಸಣ್ಣ ರೀತಿಯಲ್ಲಿ, ಬಡತನದ ರೀತಿಯಲ್ಲಿ, ಬಾಳುತ್ತಿದ್ದಾನೆ). ತುಚ್ಛ, ನೀಚ, ಅಲ್ಪತನದ (Only a s. man would think of that at such a time. I call it s. of him ಅದು ಅವನ ಅಲ್ಪತನ ಎಂದು ಹೇಳುತ್ತೇನೆ). (ನಾ.) (ಒಂದರ) ಅತ್ಯಂತ ತೆಳು, ಸಣ್ಣ, —ಭಾಗ (S. of the back ಸೊಂಟದ ಹಿಂಭಾಗ). (ಬ. ವ. ದಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಆಕ್ಸ್‌ಫರ್ಡ್ ಎ.ಎ.ಎ.) = Responsions (ಆ ಪದ ನೋಡಿ). (ಕ್ರಿ. ವಿ.) ಚಿಕ್ಕದಾಗಿ, ಸಣ್ಣದಾಗಿ; ಸಣ್ಣ—ರೀತಿಯಲ್ಲಿ, ದನಿಯಲ್ಲಿ [Sing s. (Sing ನೋಡಿ)]. **Small-minded** (ಗು.) ಸಣ್ಣತನದ, ಸಂಕುಚಿತ ಮನಸ್ಸಿನ. **Smállish** (ಗು.); **Smállness** (ನಾ.)

Smalt ಸ್ಮಾಲ್ಟ್ (ನಾ.) ಕೋಬಾಲ್ಟ್ (ಹಾಕಿ ನೀಲ ಬಣ್ಣ ಕೊಟ್ಟ) ಗಾಜು; ಈ ಗಾಜನ್ನು ಪುಡಿಮಾಡಿ ತಯಾರಿಸಿದ ನೀಲ ಬಣ್ಣ.

Smart ಸ್ಮಾರ್ಟ್ (ಕ್ರಿ., ನಾ.) ಏಟು ವೇದನೆ, ತೀವ್ರ ವೇದನೆ, ಯಾತನೆ, —ಪಡು, ಕೊಡು, ಆಗು, ಉಂಟುಮಾಡು; ಕುದಿ; ದುಡಿ; ಸಿಡಿ (My finger smarts ನನ್ನ ಬೆರಳು ದುಡಿಯುತ್ತದೆ. With the gibe yet smarting in his brain ಆದ ಅಪಹಾಸ್ಯ ಇನ್ನೂ ಅವನ ತಲೆಯಲ್ಲಿ ಕೊರೆಯುತ್ತ). ಸಂಕಟಪಡು, ಫಲ ಅನುಭವಿಸು (*For* ಉಪ. ಕೂಡನೆ) (You shall s. for this ಇದರ ಫಲ ನೀನು ಅನುಭವಿಸುತ್ತೀಯೆ). (ನಾ.) ತೀವ್ರ ವೇದನೆ, ಯಾತನೆ, ದುಡಿತ. S.-money ದಂಡ; ಪರಿಹಾರದ್ರವ್ಯ.

Smart (ಗು.) ತೀವ್ರ, ತೀಕ್ಷ್ಣ, ಬಿರುಸಾದ, ಜೋರಾದ, ಚುರುಕಾದ, ಹುರುಪಿನ, ಗೆಲವಿನ (Had a s. skirmish ಬಿರುಸು ಬಡಿದಾಟ ನಡೆಯಿತು. Went off at a s. pace ಚುರುಕು ಹೆಜ್ಜೆ ಹಾಕುತ್ತ ಹೊರಟುಹೋದನು). ಬುದ್ಧಿವಂತನಾದ, ಚತುರನಾದ, ಚಾಕಚಕ್ಯವುಳ್ಳ, ಚಾಲಾಕಾದ, ಸುಟಿಯಾದ (A s. talker ಚಾಲಾಕಿನ ಮಾತುಗಾರ. A s. retort, invention. A s. lad ಸುಟಿಯಾದ ಹುಡುಗ. S. dealing ಅಪ್ರಾಮಾಣಿಕವಾಗಿರುವಷ್ಟು ಮಟ್ಟಿಗೆ ಸ್ವಾರ್ಥದಿಂದ, ಚಾಣಕ್ಯೆಯಿಂದ, ಕೂಡಿದ ವ್ಯವಹಾರ: ಚಾಣಾಕ್ಷ ವ್ಯವಹಾರ; ಚಾಣಕ್ಯ ವ್ಯವಹಾರ). ಹೊಸ ಹೊಳಪಿನ, ಅಚ್ಚುಕಟ್ಟಾದ, ಒಪ್ಪವಾದ, ಹಸನಾದ, ಠೀಕಾದ, ಥರ್ಜರಿಯಾದ, ಡಿಕಾವಾದ, ರಮಾರಮಿ ರಂಗಿನ, ಹೊಸದಾಗಿ ಬಣ್ಣ ಬಳಿದ (S. clothes ಠೀಕು ಉಡುಪು. A s. garden ಸೊಗಸಾದ, ಕಳಕಳಿಸುವ, ತೋಟ. Look quite s. ಠೀಕಾಗಿ ಕಾಣು). ಸಮಾಜ ದಲ್ಲಿ ಪ್ರಮುಖವಾಗಿರುವ; ನವನಾಜೂಕಿನ, ನೀಟಾದ (S. people ನವನಾಜೂಕಿನ ಜನ, ನೀಟುಗಾರರು). **Smárten** (ಕ್ರಿ.); **Smártly** (ಕ್ರಿ. ವಿ.); **Smártness** (ನಾ.)

Smash ಸ್ಮ್ಯಾಷ್ (ಕ್ರಿ., ನಾ., ಕ್ರಿ. ವಿ.) ಪುಡಿ ಪುಡಿ, ಚೂರು ಚೂರು, ನುಚ್ಚುನೂರಿ, —ಮಾಡು, ಆಗು; ಜಜ್ಜಿ—ಹಾಕು, ಹೋಗು; ಅಪ್ಪಳಿಸು, ಜಜ್ಜುಬಡಿ (A smashing blow ಧ್ವಂಸದ ಹೊಡೆತ). (ಶತ್ರುವನ್ನು) ಛಿದ್ರ ಛಿದ್ರಮಾಡಿ ಪಲಾಯನಗೊಳಿಸು; ಧ್ವಂಸಮಾಡು; (ಟೆನಿಸ್ ಚೆಂಡನ್ನು) (ಹಿಂದಕ್ಕೆ ಕಳುಹರಾಗದಂತೆ) ಅಪ್ಪಳಿಸಿ ಹೊಡೆ; (ವ್ಯಾಪಾರ ನಂಸ್ಥೆ) ಹಾಳಾಗಿ ಹೋಗು, ದಿವಾಳಿ ಎದ್ದುಹೋಗು, ಮುಳುಗಿ ಹೋಗು; (ವಾಹನ, ವೊ. ವು ಇನ್ನೊಂದು ವಾಹನಕ್ಕೆ, ತಡೆಗೆ) ಬಲವಾಗಿ ಢಿಕ್ಕಿ ಹೊಡೆ (*Into* ಉಪ. ಕೂಡನೆ). (ಅಸಂ.) ಖೋಟಾ ನಾಣ್ಯ ತಯಾರಿಸು, ಚಲಾವಣೆಗೆ ತರು. (ನಾ.) ಚೂರು ಚೂರಾಗಿ ಒಡೆಯುವುದು; ರಭಸದ ಬೀಳು, ಬಲವಾದ ಢಿಕ್ಕಿ; ನಾಶ, ಧ್ವಂಸ (Go to s. ಹಾಳಾಗಿ ಹೋಗು); (ಟೆನಿಸ್ ಆಟದಲ್ಲಿ) ಅಪ್ಪಳಿಕೆಯ ಹೊಡೆತ; (ಮುಷ್ಟಿ, ವೊ. ಗಳಿಂದ ಹೊಡೆದ) ಬಲವಾದ —ಹೊಡೆತ, ಗುದ್ದು; (ವ್ಯಾಪಾರ) ನಷ್ಟ ಪರಂಪರೆ, ಮುಳುಗಿಹೋಗುವುದು, ದಿವಾಳಿ (ಏಳು ವುದು). ಮದ್ಯಸಾರವನ್ನೂ ನೀರನ್ನೂ ಬೆರಸಿ, ನೀರ್ಗಲ್ಲು ಹಾಕಿ, ರುಚಿ ಕಟ್ಟಿದ ಪಾನೀಯ (= Brandy-s.); (ಹಣ್ಣಿನ) ಪಾನಕ; (S. up ಸಂಪೂರ್ಣ ನಾಶ, ಧ್ವಂಸ). (ಕ್ರಿ. ವಿ.) (ಚಲನೆಯನ್ನು ಸೂಚಿಸುವ ಕ್ರಿಯಾಪದಗಳೊಡನೆ ಪ್ರ.): ಜೋರಾಗಿ, ರಭಸವಾಗಿ (Went s. into a goods train ಸಾಮಾನು ರೈಲು ಬಂಡಿಗೆ 'ಢಂ' ಎಂದು ಢಿಕ್ಕಿ ಹೊಡೆಯಿತು). **Smásher** (ನಾ.) (ಕ್ರಿಯಾರ್ಥಗಳಲ್ಲಿ); (ಅಸಂ.) ಥರ್ಜರಿ —ವಾದ, ಹೊಡೆತ, ಪತನ.

Smatch ಸ್ಮ್ಯಾಚ್ (ನಾ.) (ಈಗ ವಿರ. ಪ್ರ.) = Smack[1] (ನಾ.)

Smátter ಸ್ಮ್ಯಾಟರ್ (ಕ್ರಿ.) ಅಲ್ಪ ಸ್ವಲ್ಪ ತಿಳಿವಳಿಕೆ ಪಡೆದಿರು,—ಯಿಂದ ಮಾತಾಡು; ಮೇಲುಮೇಲಿನ ಪರಿಚಯವಿರು; ಹರುಕು ಮುರುಕು ಮಾತಾಡು, ಗಳಹು. **Smáttering** (ನಾ.) (ಒಂದು ಭಾಷೆಯ ಅಥವಾ ವಿಷಯದ) ಮೇಲುಮೇಲಿನ ಪರಿಚಯ, ಅಲ್ಪ ಸ್ವಲ್ಪ ತಿಳಿವಳಿಕೆ; ಆಳವಿಲ್ಲದ, ಅಲ್ಪ, —ಪಾಂಡಿತ್ಯ. **Smátterer** (ನಾ.)

Smear ಸ್ಮಿಯರ್ (ಕ್ರಿ., ನಾ.) (ಎಣ್ಣೆ, ಮುಲಾಮು, ಅಂಟು, ವೊ. ನ್ನು) ಬಳಿ, ತೊಡೆ, ಹಚ್ಚು, ಲೇಪಿಸು; (ಜಿಡ್ಡು, ವೊ.) ಕರೆ, ಕಲೆ, —ಮಾಡು; (ಮೇಲೆ ಏನನ್ನಾದರೂ ಬಳಿದು ಬರೆವಣಿಗೆ, ಚಿತ್ರ, ವೊ. ನ್ನು) ಚಿತ್ತು ಮಾಡು, ಅಸ್ಪಷ್ಟಮಾಡು. (ನಾ.) ಬಳಿತ, ಲೇಪ; ಕರೆ, ಕಲೆ, ಚಿತ್ತು; ಸೂಕ್ಷ್ಮದರ್ಶಕ ಯಂತ್ರದಲ್ಲಿ ಪರೀಕ್ಷೆಗಾಗಿ ಗಾಜಿನ ಫಲಕದಮೇಲೆ ಬಳಿದ ಜಿಬುರು, ವೊ. ವು. **Smeáry** (ಗು.); **Smeáriness** (ನಾ.)

Sméctite ಸ್ಮೆಕ್‌ಟೈಟ್ (ನಾ.) ಬಟ್ಟೆ, ವೊ. ಗಳಿಂದ ಜಿಡ್ಡು ತೆಗೆದು ಹಾಕಲು ಉಪಯೋಗಿಸುವ ಒಂದು ಬಿಳಿಯ ಛಾಯೆಯ ಜೇಡಿಮಣ್ಣು: ಚೌಳು ಜೇಡಿ.

Smeech ಸ್ಮೀಚ್, **Smitch** ಸ್ಮಿಚ್ (ನಾ.) (ಪ್ರಾಂ. ಪ್ರ.) ಹೊತ್ತಿಕೊಂಡ, ಸೀದ, —ವಾಸನೆ; ಸುಟ್ಟ ವಾಸನೆ.

Smégma ಸ್ಮೆಗ್ಮ (ನಾ.) ಚರ್ಮದ ಮಡಿಕೆಗಳಲ್ಲಿ, ಮು., ಶಿಶ್ನದ ಮುಂದೊವಲಿನಲ್ಲಿ, ಒಸರಿಕೊಳ್ಳುವ ಸಾಬೂನಿನಂಥ ಜಿಡ್ಡುಸ್ರಾವ: ಶಿಶ್ನಮಲ, ತೊಗಲ ಜಿಡ್ಡು. **Smegmátic** (ಗು.)

Smell ಸ್ಮೆಲ್ (ನಾ.; ಕ್ರಿ., ಭೂತ., ಭೂ. ಕೃ. Smelt ಸ್ಮೆಲ್ಟ್, ವಿರ. ಪ್ರ. Smelled ಸ್ಮೆಲ್ಡ್) ಘ್ರಾಣ(ಶಕ್ತಿ), ಘ್ರಾಣೇಂದ್ರಿಯ, ಮೂಗು (Is perceptible to s. as well as sight. Has a fine sense of s. ಅವನಿಗೆ ಸೂಕ್ಷ್ಮವಾದ ಘ್ರಾಣಶಕ್ತಿಯಿದೆ). ವಾಸನೆ, ಗಂಧ, ಕಂಪು (A sweet s. ಸುವಾಸನೆ, ನರುಗಂಪು); ದುರ್ಗಂಧ, ಕೆಟ್ಟ ನಾತ. ಮೂಸಿ ನೋಡುವುದು, ಆಘ್ರಾಣ (Take a s. at it). (ಕ್ರಿ.) ವಾಸನೆ —ಹಿಡಿ, ತಿಳಿ [Can fishes s.? S. a rat (ರೂಪ.) (Rat[1] ನೋಡಿ)]. ಮೂಸು, ವಾಸನೆ ನೋಡು, ಆಘ್ರಾಣಿಸು; (ನಾಯಿ) ವಾಸನೆಯಿಂದ —ಪತ್ತೆ ಹಚ್ಚು, ಕಂಡುಹಿಡಿ (*Out*); (ರೂಪ.) (ಸಂಚುಗಾರ, ಗುಟ್ಟು, ವೊ. ನ್ನು) ಶೋಧನೆಯಿಂದ ಪತ್ತೆಮಾಡು, ಕಂಡುಹಿಡಿ (*Out*); (ನಾಯಿ, ರೂಪ. ಮನುಷ್ಯ) ಮೂಸುತ್ತ ಹೋಗು, ಹುಡುಕಾಡು (*About* ಉಪ. ಕೂಡನೆ); ವಾಸನೆ —ಕೊಡು, ಬರು, ಬೀರು [Smells of garlic. S. sweet ನರುಗಂಪು ಕೊಡು. S. of the lamp (Lamp ನೋಡಿ). S. of the shop ಅತಿ ಲೆಕ್ಕಾಚಾರ, ಕಸಬುದಾರಿತನ, —ಇರು. S. of nepotism ಸ್ವಜನ ಪಕ್ಷಪಾತವಿರು]. ದುರ್ವಾಸನೆ, ನಾತ, —ಬಡಿ; ನಾರು; ವಾಸನೆಯಿಂದ ತೋರು, ಕಾಣು (Milk smells sour ಹಾಲು ಹುಳಿವಾಸನೆ ಬರುತ್ತದೆ). **Smelling-bottle** ಮೂಸುಪ್ಪಿನ, ಘ್ರಾಣ ಲವಣದ, —ಸೀಸೆ. **Smelling-salts** (ಮೂರ್ಛೆ, ವೊ. ಗಳ ನಿವಾರಕವಾಗಿ ಉಪಯೋಗಿಸುವ) ಪರಿಮಳ ಮಿಶ್ರಿತ ಅಮೋನಿಯಂ ಕಾರ್ಬೊನೇಟ್: ಮೂಸುಪ್ಪು, ಘ್ರಾಣ ಲವಣ. **Sméllable** (ಗು.); **Sméller** (ನಾ.) (ಕ್ರಿಯಾರ್ಥಗಳಲ್ಲಿ); (ಅಸಂ.) ಮೂಗು, ಘ್ರಾಣೇಂದ್ರಿಯ; (ಮೂಗಿನಮೇಲೆ ಕೊಟ್ಟ) ಬಲವಾದ ಏಟು. **Sméllless** (ಗು.); **Smélly** (ಗು.) ದುರ್ವಾಸನೆ ಬಡಿಯುವ, ನಾರುವ.

Smelt[1] ಸ್ಮೆಲ್ಟ್ (ಕ್ರಿ. ಸಕ.) ಅದುರನ್ನು ಕರಗಿಸು; ಅದುರು ಕರಗಿಸಿ ಲೋಹ ತೆಗೆ.

Smelt[2] ಸ್ಮೆಲ್ಟ್ (ನಾ.) ಆಹಾರಕ್ಕೆ ಶ್ರೇಷ್ಠವಾದುದೆಂದು ಪರಿಗಣಿಸಿರುವ, ಸಾಮನ್ ಜಾತಿಯ ಒಂದು ಸಣ್ಣ ಮೀನು.

Smelt[3]. Smell ಧಾತುವಿನ ಭೂತ., ಭೂ. ಕೃ.

Smew ಸ್ಮ್ಯೂ (ನಾ.) ಮೀನು ಹಿಡಿಯುವ ಒಂದು ಜಾತಿಯ ಬಾತು.

Smílax ಸ್ಮೈಲ್ಯಾಕ್ಸ್ (ನಾ.) ಒಂದು ಬಗೆಯ ಸೊಗದೆಬೇರಿನ ಬಳ್ಳಿ; (ಅಲಂಕಾರಗಳಲ್ಲಿ ಉಪಯೋಗಿಸುವ) ಒಂದು ಬಗೆಯ ಬಳ್ಳಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Smile ಸ್ಮೈಲ್ (ಕ್ರಿ., ನಾ.) ಕಿರುನಗೆ, ನಸುನಗೆ, ಮುಗುಳುನಗೆ (—ನಗು); ಮಂದಹಾಸ, ಮಂದಸ್ಮಿತ, ದರಹಾಸ (—ಬೀರು, ಸೂಸು) [(*Up*)*on*, *at* ಉಪ. ದೊಡನೆ. S. at the claims of —ರ ಹಕ್ಕುಗಳನ್ನು ಅಪಹಾಸ್ಯಮಾಡು, ಉದಾಸೀನತೆಯಿಂದ ಕಾಣು]. ಮುಗುಳುನಗೆಯಿಂದ, ಮಂದಹಾಸದಿಂದ,—ವ್ಯಕ್ತಪಡಿಸು, ಸೂಚಿಸು (S. welcome, consent, appreciation, etc. Smiled an ironical s.); (ಒಬ್ಬನ ಸಿಟ್ಟು, ಮೊ. ನ್ನು) ಮಂದಹಾಸ ಸೂಸಿ ಓಡಿಸು, ತೊಲಗಿಸು (*Away* ಉಪ. ದೊಡನೆ); ಮಂದಸ್ಮಿತದಿಂದ ಒಬ್ಬನನ್ನು ಒಂದು ಮನೋಭಾವಕ್ಕೆ ತರು, ಒಂದು ಮನೋಭಾವದಿಂದ ಬಿಡಿಸು (*Into*, *out of* ಪದಗಳೊಡನೆ). [Come up smiling ಹೊಸ ಕಷ್ಟಕ್ಕೆ ನಗುನಗುತ ಎದುರಾಗು (ಹೊಸ ವರಿಸೆಯನ್ನು ಆರಂಭಿಸಲಿರುವ ಮುಷ್ಟಿಮಲ್ಲನ ಉದಾಹರಣೆಯಿಂದ); ನಗು ನಗುತ್ತ ಬಾ]. ಸುಮುಖವಾಗಿ, ಪ್ರಸನ್ನವಾಗಿ, ಗೆಲವಾಗಿ, —ಇರು (ವಂತೆ ಕಾಣು); ನಗುಮುಖ, ಪ್ರಸನ್ನತೆ (—ತೋರು) (Fortune smiles on us ಅದೃಷ್ಟ ನಮ್ಮ ವಿಷಯದಲ್ಲಿ ಪ್ರಸನ್ನವಾಗಿದೆ. All nature is smiling and gay ಪ್ರಕೃತಿಯೆಲ್ಲ ನಗುಮುಖವಾಗಿ, ಗೆಲವಾಗಿ, ಇದೆ). **Smíleless** (ಗು.); **Smílingly** (ಕ್ರಿ. ವಿ.)

Smirch ಸ್ಮರ್ಚ್ (ಕ್ರಿ. ಸಕ., ನಾ.) ಕೊಳೆ, ಮಲಿನ, ಕಳಂಕ, ಚಿತ್ತು (—ಮಾಡು); ಬಣ್ಣಗೆಡಿಸು [(ರೂಪ. ಸಹ): A smirched reputation ಕಳಂಕಿತ ಕೀರ್ತಿ]

Smirk ಸ್ಮರ್ಕ್ (ಕ್ರಿ. ಅಕ., ನಾ.) ಹುಸಿನಗೆ (ನಗು); ಕೃತಕ, ಮುಗ್ಧ, —ಹಾಸ (ತಾಳು)

Smite ಸ್ಮೈಟ್ (ಕ್ರಿ.; ಭೂತ. Smote ಸ್ಮೋಟ್, ಪ್ರಾಚೀ. ಪ್ರ. Smit ಸ್ಮಿಟ್; ಭೂ. ಕೃ. Smitten ಸ್ಮಿಟನ್, ಪ್ರಾಚೀ. ಪ್ರ. Smit; ನಾ.) (ಮು., ಪ್ರಾಚೀ. ಪ್ರ. ಅಥವಾ ಹಾಸ್ಯ ಪ್ರ.) ಹೊಡೆ, ಬಡಿ (Whosoever shall s. thee on thy right cheek ಯಾರು ನಿನ್ನ ಬಲ ಕೆನ್ನೆಗೆ ಹೊಡೆದರೂ. An idea smote him ಅವನ ಮನಸ್ಸಿಗೆ ಒಂದು ಭಾವ ಹೊಡೆಯಿತು. S. off his head ಅವನ ತಲೆ ಹೊಡೆದುಹಾಕು); ಬಲವಾಗಿ ಸೋಲಿಸು, ಸದೆಬಡಿ (S. them hip & thigh ಅವರನ್ನು ಪೂರ್ತಿ ಸೋಲಿಸಿಹಾಕು, ಧೂಗತಮಾಡು); ದಂಡಿಸು, ಶಿಕ್ಷಿಸು (God shall s. thee ದೇವರು ನಿನಗೆ ಶಿಕ್ಷೆ ಮಾಡುತ್ತಾನೆ. His conscience smote him ಅವನ ಮನಸ್ಸಾಕ್ಷಿ ಅವನನ್ನು ತಾಟಿಸಿತು, ಹೊಡೆಯಿತು). (ಮು., ಭೂ. ಕೃ. ನಲ್ಲಿ) (ರೋಗ, ಆಶೆ, ಮೋಹ, ಮೊ. ಗಳಿಂದ) ಗ್ರಸ್ತ, ಪೀಡಿತ, ಹತ (City smitten with plague ಪ್ಲೇಗಿನಿಂದ ಪೀಡಿತವಾದ ಪಟ್ಟಣ. Am smitten with her charms. Smitten with a desire ಆಶಾಗ್ರಸ್ತನಾಗಿ); ತಟಕ್ಕನೆ, ಜೋರಾಗಿ, ರಭಸದಿಂದ,—ಬಡಿ, ಎರಗು, ಹೊಡೆ [(*On*, *upon* ಉಪ. ದೊಡನೆ). Wave smote upon the cliff ಅಲೆ ಬಂಡೆಯಮೇಲೆ ಅಪ್ಪಳಿಸಿತು, ಬಡಿಯಿತು. Sound smites upon the ear ಶಬ್ದ ಕಿವಿಗೆ ಹೊಡೆಯುತ್ತದೆ]. (ನಾ.) ಹೊಡೆತ, ಬಡಿತ, ಏಟು; (ಬಳ. ಮಾ.) ಪ್ರಯತ್ನ. **Smíter** (ನಾ.)

Smith ಸ್ಮಿತ್ (ನಾ.) ಲೋಹ ಕೆಲಸದವನು, ಲೋಹಕಾರ, (ಮು.) ಕಮ್ಮಾರ (Gold, silver, -s. ಚಿನ್ನದ, ಬೆಳ್ಳಿಯ, —ಕೆಲಸದವನು; ಅಕ್ಕಸಾಲಿಗ). **Smíthery** ಸ್ಮಿತರಿ (ನಾ.) ಲೋಹ ಕೆಲಸ, ಕಮ್ಮಾರ ಕೆಲಸ; ಕಮ್ಮಾರಸಾಲೆ (ಮು., ನೌಕಾ ಸೇನೆಯ ಹಡಗು ಕಟ್ಟೆಗಳಲ್ಲಿ). **Smíthy** ಸ್ಮಿತಿ (ನಾ.) ಕಮ್ಮಾರಸಾಲೆ, ಕುಲುಮೆ.

Smithereéns ಸ್ಮಿದರೀನ್ಸ್, **Smíthers** ಸ್ಮಿದರ್ಸ್ (ನಾ., ಬ. ವ.) ಚೂರು ಚೂರು, ತುಂಡು ತುಂಡು (Smash to *or* into s. ಪುಡಿ ಪುಡಿ ಮಾಡು)

Smíthery, Smíthy. **Smith** ನೋಡಿ.

Smíthfield ಸ್ಮಿತ್‌ಫೀಲ್ಡ್ (ನಾ.) ಲಂಡನ್ನಿನ ಮಾಂಸ ಮಾರುವ ಕಟ್ಟೆ(ಯ ಹೆಸರು)

Smítten. Smite ಧಾತುವಿನ ಭೂ. ಕೃ.

Smock ಸ್ಮಾಕ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) ಒಳ ಕುಪ್ಪಸ. ಮಗುವಿನ ಮೇಲು ಜುಬ್ಬ [S.-frock (ಹೊಲಗೆಲಸದವನು ಹಾಕಿಕೊಳ್ಳುವ) ಷರ್ಟನಾಕಾರದ ಮೇಲು ಜುಬ್ಬ. S.-mill ಒಡಲು ತಿರುಗದೆ ಮೇಲು ಭಾಗ ಮಾತ್ರ ತಿರುಗುವ ಗಾಳಿ ಯಂತ್ರ]. (ಕ್ರಿ.) (ಬಟ್ಟೆಯ ಮೇಲೆ) ಜೇನುಹುಟ್ಟಿಯ ಮಾದರಿಯ ಬಲೆಹೆಣಿಗೆಯಲಂಕಾರ ಮಾಡು. **Smócking** (ನಾ.) ಈ ಅಲಂಕಾರ.

Smoke ಸ್ಮೋಕ್ (ನಾ.) ಹೊಗೆ, ಧೂಮ [A cloud of s. ಹೊಗೆಯ ಮುಗಿಲು. A column of s. ಹೊಗೆಕಂಬ. End in s. ನಿಷ್ಫಲವಾಗು. No s. without fire (Fire ನೋಡಿ). From smoke into smother (ಒಂದು ಕೇಡಿನಿಂದ ಮತ್ತೊಂದು ಕೇಡಿಗೆ ಅಥವಾ ಹೆಚ್ಚಿನ ಕೇಡಿಗೆ, ಎಂಬ ಅರ್ಥದಲ್ಲಿ): ಹೊಗೆಯಿಂದ ಬೆಂಬೂದಿಗೆ. Like s. (ಅಸಂ.) ತಡೆಬಡೆಯಿಲ್ಲದೆ, ಬಲು ಬೇಗನೆ, ಸುಲಭವಾಗಿ]. ಹೊಗೆ(ಸೊಪ್ಪು) ಸೇದುವುದು, ಧೂಮಪಾನ (Must have a s.); (ಅಸಂ.) ಚುಟ್ಟ, ಸಿಗರೇಟು. **S.-ball** ಸೈನಿಕ ಕಾರ್ಯಾಚರಣೆ, ಮೊ. ಗಳಿಗೆ ಮರೆಯಾಗಿರುವಂತೆ ದಟ್ಟ ಹೊಗೆಯನ್ನುಂಟುಮಾಡುವ ಕ್ಷಿಪಣಿ: ಹೊಗೆಗುಂಡು, ಧೂಮಗೋಳ; (ಗುರಿಗಳಲ್ಲಿ) ಗುಂಡಿನೇಟು ಬಿದ್ದೊಡನೆ ಹೊಗೆ ಕಾರುವ ಹೊಗೆಗುಂಡು; (ಉಬ್ಬಸರೋಗ, ಮೊ. ಗಳಲ್ಲಿ) ಔಷಧ ಹೊಗೆ ಸೇದಲು ಉಪಯೋಗಿಸುವ ಸಲಕರಣೆ: ಧೂಮ ಪಾತ್ರೆ. **S.-bell** (ಚಾವಣಿಗೆ ಹೊಗೆ ಹಿಡಿಯದಂತೆ ತಡೆಯಲು ದೀಪ, ಮೊ. ಗಳ ಮೇಲೆ ಹಾಕಿರುವ) ಹೊಗೆಮುಚ್ಚಳ, ಕುರಾವಿ. **S.-consumer** ಕುಲುಮೆ, ಒಲೆ, ಮೊ. ಗಳಿಂದ ಹೊರಬೀಳುವ ಹೊಗೆಯನ್ನು ಹಾಗೆಯೇ ಬಿಟ್ಟುಬಿಡದೆ ಉಪಯೋಗಿಸಿಕೊಳ್ಳುವುದಕ್ಕಾಗಿರುವ ಸಲಕರಣೆ: ಧೂಮೋಪಯೋಗಿ [**S.-consuming** (ಗು.)]. **S.-dried** ಹೊಗೆಯಲ್ಲಿ ಒಣಗಿಸಿದ, ಹೊಗೆಯಾಡಿಸಿದ. **S.-jack** ಮಾಂಸ ಸುಡುವ ಕಂಬಿಯನ್ನು ಹೊಗೆ ಕೊಳವೆಯ ಬಿಸಿಗಾಳಿ ಹರಿವಿನಿಂದ ತಿರುಗಿಸುವ ಸಲಕರಣೆ: ಹೊಗೆ ಚರಕಿ. **S.-plant, -tree** ಹೊಗೆಯಹಾಗೆ ಕಾಣುವ ಪುಷ್ಪವಿನ್ಯಾಸವುಳ್ಳ ಒಂದು ಸಸ್ಯ: ಧೂಮ ಸಸ್ಯ, ಹೊಗೆಮರ. **S.-rocket** ಕೊಳವೆ ಚರಂಡಿಯ ಒಡಕನ್ನು ಕಂಡುಹಿಡಿಯುವುದಕ್ಕಾಗಿ ಒಳಗೆ ಹೊಗೆ ತೂರಿಸಲು ಉಪಯೋಗಿಸುವ ಸಲಕರಣೆ: ಹೊಗೆಬಾಣ. **S.-screen** (ಸೈನಿಕ ಕಾರ್ಯಾಚರಣೆಗಳನ್ನು ಮರಸಿಡಲು ಉಪಯೋಗಿಸುವ) ಹೊಗೆಯ ತೆರೆ, ಧೂಮ ಪಟ. **S.-stack** (ಹೊಗೆ ಜಹಜು, ಮೊ. ಗಳ) ಹೊಗೆಕೊಳವೆ, ಆವಿ ಕೊಳವೆ. **S.-stone** ಹಳದಿಯ ಅಥವಾ ದ್ರಾಕ್ಷಾಮದ್ಯ ವರ್ಣದ ಒಂದು ಪ್ರಶಸ್ತಶಿಲೆ. **Smókeless** (ಗು.); **Smókelessly** (ಕ್ರಿ. ವಿ.); **Smókelessness** (ನಾ.); **Smóky** (ಗು.) ಹೊಗೆ —ತುಂಬಿದ, ಕವಿದ, ಕಾರುವ, ಕಟ್ಟಿದ, ಬಣ್ಣದ, ವಾಸನೆಯ; ಧೂಮಮಯ; (ಹೊಗೆಯಿಂದ) ಕಪ್ಪುಗಟ್ಟಿದ, ಮಬ್ಬಾದ, ಮಸುಕಾದ. **Smókily** (ಕ್ರಿ. ವಿ.); **Smókiness** (ನಾ.)

Smoke (ಕ್ರಿ.) ಹೊಗೆ —ಆಡು, ಆಗು, ಬರು, ಬಿಡು, ಕಾರು, ಏಳು (Lamp is smoking ದೀಪ ಹೊಗೆ ಬಡುತ್ತಿದೆ, ಸರಿಯಾಗಿ ಉರಿಯುತ್ತಿಲ್ಲ); ಹಬೆ, ಆವಿ, —ಆಡು (His smoking steeds ಬೆವರಿ ಹಬೆಯಾಡುತ್ತಿರುವ ಅವನ ಕುದುರೆಗಳು); ಹೊಗೆ —ಮಾಡು, ಕಟ್ಟಿಸು, ಕವಿಸು; ಕಪ್ಪುಮಾಡು; (ಅಡುಗೆಯನ್ನು) ಹೊಗೆವಾಸನೆ ಮಾಡು (The porridge is smoked). (ಕೆಡದಂತೆ ಇಡಲು) ಹೊಗೆಯಾಡಿಸು (Smoked ham); (ಹುಳುಹುಪ್ಪಟೆಗಳನ್ನು ನಾಶಪಡಿಸಲು, ಓಡಿಸಲು) ಹೊಗೆ ಹಾಕು; —ಹಾಕಿ ಓಡಿಸು, ನಾಶಪಡಿಸು [S. insects, plants. Smoked wood ಹೊಗೆಯಾಡಿಸಿದ, ಕಪ್ಪು ಹಿಡಿಸಿದ, —ಮರ. Smoked glass (ಸೂರ್ಯ, ಮೊ. ನ್ನು ನೋಡುವುದಕ್ಕಾಗಿ) ಹೊಗೆಯಿಂದ ಕಪ್ಪು ಹಿಡಿಸಿದ ಗಾಜು: ಹೊಗೆ ಗಾಜು. S. out

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

wasps ಹೊಗೆ ಹಾಕಿ ಕಣಜಗಳನ್ನು ಓಡಿಸು, ನಾಶಮಾಡು]. ಹೊಗೆಯಿಂದ ಉಸಿರು ಕಟ್ಟಿಸು. ಚುಟ್ಟಾ, ಸಿಗರೇಟು, —ಕುಡಿ, ಸೇದು; [Put that in your pipe & s. it ಹೇಳಿದ ಬುದ್ಧಿವಾದವನ್ನು (ಚುಂಗಾಣಿ ಸೇದುವಂತೆ ಆಲೋಚನೆ ಮಾಡಿ) ಜೀರ್ಣಿಸಿಕೊ] [**Smókable** (ಗು.)]. ಹೊಗೆಬತ್ತಿ ಸೇದಿ ಸೇದಿ ಒಂದು ಸ್ಥಿತಿಗೆ ಬರು (Has smoked himself ill ಅವನು ಹೊಗೆ ಸೇದಿ ಸೇದಿ ಕಾಯಿಲೆ ತಂದುಕೊಂಡಿದ್ದಾನೆ. Has smoked himself into tranquility). (ಪಾಠಶಾಲೆಯ ಅನಂ.) ಮುಖ ಕೆಂಪೇರು. ಸುಳಿವು ತಿಳಿ(ದುಕೊ), ವಾಸನೆಹಿಡಿ, ಶಂಕಿಸು; (ಪ್ರಾಚೀ. ಪ್ರ.) ಲೇವಡಿಮಾಡು, ಗೇಲಿಮಾಡು. Smoking-cap, -jacket ಸಿಗರೇಟು ಸೇದುವಾಗ ಹಾಕಿಕೊಳ್ಳುವ, ಅಲಂಕಾರದ ಟೋಪಿ, ನಡುವಂಗಿ. Smoking car(riage), -compartment ರೈಲು ಬಂಡಿಯಲ್ಲಿ ಹೊಗೆಬತ್ತಿ ಸೇದುವವರಿಗಾಗಿ ಮಾಡಿರುವ ಡಬ್ಬಿ: ಹೊಗೆ(ಬತ್ತಿ) ಸೇದುವ ಡಬ್ಬಿ. Smoking concert ಹೊಗೆಬತ್ತಿ ಸೇದಲು ಅನುಮತಿ ಇರುವ ಗಾನಗೋಷ್ಠಿ. Smoking-mixture (ಚುಂಗಾಣಿಯಲ್ಲಿ) ಸೇದಲು ಹದವಾದ ಹೊಗೆಸೊಪ್ಪಿನ ಮಿಶ್ರಣ. Smoking-room (ಹೋಟಲು, ಮನೆ, ಮೊ. ಗಳಲ್ಲಿ) ಹೊಗೆಬತ್ತಿ ಸೇದುವ ಕೋಣೆ (S.-r. talk ಗಂಡಸರಿಗೆ ಮಾತ್ರ ತಕ್ಕ ಮಾತು; ಗಂಡ ಗಂಡಸರ ಮಾತು). Smoking-tobacco (ಮು., ಚುಂಗಾಣಿಯಲ್ಲಿ) ಸೇದಲು ತಕ್ಕ ಹೊಗೆಸೊಪ್ಪು. **Smóker** (ನಾ.) (ಕ್ರಿಯಾರ್ಥಗಳಲ್ಲಿ); ಹೊಗೆ(ಸೊಪ್ಪು) —ಸೇದುವವನು, ಕುಡಿಯುವವನು; ಹೊಗೆ ಕುಡುಕ; ಧೂಮಪಾಯಿ [S.'s heart, throat ಹೊಗೆಕುಡುಕನ (ರೋಗ ಹಿಡಿದ) ಹೃದಯ, ಗಂಟಲು]. ಹೊಗೆ ಸೇದುವ —ರೈಲುಡಬ್ಬಿ, ಗಾನಗೋಷ್ಠಿ.

Smooth ಸ್ಮೂದ್ (ಗು.) (ಹಳ್ಳತಿಟ್ಟುಗಳಿಲ್ಲದ, ಉಬ್ಬುತಗ್ಗುಗಳಿಲ್ಲದ) ಒಂದೇ ಸಮವಾಗಿರುವ, ಮಟ್ಟವಾಗಿರುವ; ಸಾಫಾಗಿರುವ; ಸರಾಗವಾದ, ಸಲೀಸಾದ, ಸುಗಮವಾದ; (ದ್ರವ) ಕಲಕಿಲ್ಲದ, ಮೃದುವಾಗಿ ಹರಿಯುವ; ಸುಕ್ಕುಗಟ್ಟಿಲ್ಲದ, ಕೂದಲು ಬೆಳೆದಿರದ; ನಯವಾದ, ನುಣುಪಾದ [S.-surface ನಯವಾದ ಮೇಲ್ಮೈ. S. chin ಕೂದಲು ಬೆಳೆದಿಲ್ಲದ, ನುಣುಪಾದ, ಗಲ್ಲ. Am now in s. waters ಈಗ ನಾನು ಕಷ್ಟಗಳನ್ನು ದಾಟಿ ನೆಮ್ಮದಿಗೆ ಬಂದಿದ್ದೇನೆ. Had a s. passage ಸಮುದ್ರ ಪ್ರಯಾಣ ಸುಗಮವಾಗಿತ್ತು. S. hair (ತಲೆಯ ಮೇಲೆ ಚಪ್ಪಟೆಯಾಗಿ ಕುಳಿತಿರುವ) ನಯವಾದ ಕೂದಲು. S. verse ಲಲಿತವಾಗಿ, ಸರಾಗವಾಗಿ, —ಓಡುವ ಪದ್ಯ. S. claret ಕಟುವಲ್ಲದ ಕ್ಲ್ಯಾರೆಟ್ ಮದ್ಯ. S. breathing (ಗ್ರೀಕ್ ವ್ಯಾಕರಣ) ಹಕಾರೋಚ್ಚಾರವಿಲ್ಲದ ಮೊದಲ ಸ್ವರ(ದ ಚಿಹ್ನೆ): ನಯೋಚ್ಚಾರ (ಚಿಹ್ನೆ)]. ಶಾಂತ, ಅಕ್ಷುಬ್ಧ, ಸ್ತಿಮಿತ, ವಿನಯದ, ಸಮಾಧಾನಕಾರಕ, ಪ್ರಸನ್ನ, ಬೆಣ್ಣೆಯಂಥ (ರೂಪ.), ಹೊಗಳಿಕೆಯ, ಪುಸಲಾಯಿಕೆಯ [S. temper ಸಮಾಧಾನದ, ನಯವಾದ, ಸ್ನೇಹಪರ —ಮನಸ್ಸಿನ ಪಾಕ. S. face ಕಪಟ ಸ್ನೇಹಸೂಚಕವಾದ ಪ್ರಸನ್ನ ಮುಖ: ಗೋಮುಖವ್ಯಾಘ್ರ. S. things ಮುಖಸ್ತುತಿ, ಬೆಣ್ಣೆಯಂಥ ಮಾತುಗಳು, ಕಪಟ ಪ್ರೋತ್ಸಾಹ]. S.-bore ತಿರುಪುಗಾಡಿ ಕೊರೆದಿಲ್ಲದ, ನಯ ನಳಿಕೆಯ, —ಬಂದೂಕು. **Smooth-faced** (ಗು.) ಗಡ್ಡ, ಕೂದಲು, —ಬೆಳೆದಿಲ್ಲದ ಗಲ್ಲವುಳ್ಳ; ನಯವಾದ, ನುಣುಪಾದ, —ಮುಖವುಳ್ಳ; (ಬಟ್ಟೆ) ನಯವಾದ ಮೇಲ್ಮೈಯುಳ್ಳ. ಮೇಲಕ್ಕೆ ನಯವಾಗಿ ಕಾಣುವ, ಗೋಮುಖವ್ಯಾಘ್ರದಂಥ. **Smooth-spoken** (ಗು.), **Smooth-tongued** (ಗು.) ನಯವಾಗಿ, ಬೆಣ್ಣೆಯಂಥ, —ಮಾತನಾಡುವ; ಮುಖಸ್ತುತಿ ಮಾಡುವ. **Smóothly** (ಕ್ರಿ. ವಿ.); **Smóothness** (ನಾ.)

Smooth (ಕ್ರಿ., ನಾ.) ನಯ, ನುಣುಪು, ಸಾಫು, ಸುಗಮ, ಸರಾಗ, ಶಾಂತ, ಸಮಾಧಾನ, ಸ್ತಿಮಿತ, —ಆಗು, ಮಾಡು [(ಅನೇಕ ವೇಳೆ *out*, *over*, *down*, *away* ಉಪ. ಜೊತೆ). S. over *or* away differences, difficulties ವೈಮನಸ್ಯವನ್ನು, ಕಷ್ಟಗಳನ್ನು, —ಕಡಮೆಮಾಡು, ಪರಿಹರಿಸು. S. the way ದಾರಿಯನ್ನು ಸರಾಗ, ನಿರ್ವಿಘ್ನ, ಮಾಡು. Sea smoothed down ಸಮುದ್ರ ಶಾಂತವಾಯಿತು. S. over a fault ತಪ್ಪನ್ನು ಸವರಿಸಿಬಿಡು, ತೇಲಿಸಿಬಿಡು]. (ನಾ.) ನಯ (ಮಾಡುವ) —ಸ್ಪರ್ಶ, ಸಂಮರ್ದ; ನೇವರಿಕೆ (Gave his hair a s. ಅವನ ಕೂದಲನ್ನು ನೇವರಿಸಿದನು). Smoothing-iron ಇಸ್ತ್ರಿ ಪೆಟ್ಟಿಗೆ. Smoothing-plane ನಯ—ತೋಪಡ, ಹತ್ತರಿ.

Smote. Smite ಧಾತುವಿನ ಭೂತ ರೂಪ.

Smóther ಸ್ಮದರ್ (ನಾ., ಕ್ರಿ.) (ಪ್ರಾಚೀ. ಪ್ರ.) ಬೆಂಬೂದಿ, ಕನಲು ಬೆಂಕಿ [From the smoke into the s. (Smoke ನೋಡಿ)]; ಧೂಳು, ತುಂತುರು, ಹೊಗೆ, ಮೊ. ಗಳ ಒಡ್ಡು, ಮುಗಿಲು; ಉಸಿರು ಕಟ್ಟಿಸುವ, ಅಡಚುವ, —ದಟ್ಟ ಹೊಗೆ; ಕಾವಳ. (ವಿರ. ಪ್ರ.) ಇದರಿಂದಾದ ಮಬ್ಬು, ಮಸುಕು. (ಕ್ರಿ.) ಉಸಿರು ಕಟ್ಟಿಸು, ಉಸಿರಡಚಿ ಕೊಲ್ಲು, ಶ್ವಾಸರೋಧಮಾಡು [Smothered mate (ಚದುರಂಗ) ಕುದುರೆಯಿಂದ ಅಡಚಣೆಯಾಗಿ, ದೊರೆಯ ಕದಲಲಾರದ ಸ್ಥಿತಿ: ಇಕ್ಕಟ್ಟಿನ ಶಹಾ; ಹೆಜ್ಜೆ ಕಟ್ಟು]. (ಮುತ್ತು, ದಾನ, ದಯೆ, ಮೊ. ಗಳ ಆಧಿಕ್ಯದಿಂದ) ಮುಳುಗಿಸಿಬಿಡು (With ಉಪ. ಜೊತೆ); (ಬೂದಿ, ಮೊ. ನ್ನು ಮುಚ್ಚಿ) ಬೆಂಕಿಯನ್ನು ಆಣಚು, ಅಡಗಿಸು. ಅದುಮು, ಅದುಮಿಡು, ನುಂಗಿಕೊ, ಅಡಗಿಸಿಡು, ಅಡಗಿಸಿಬಿಡು, ಮರಸಿಡು, ನಿಗ್ರಹಿಸು [(ಅನೇಕ ವೇಳೆ *up* ಉಪ. ಜೊತೆ). S. a yawn ಆಕಳಿಕೆಯನ್ನು ತಡೆದುಕೊ, ಅಡಗಿಸು. The facts were smothered up ನಿಜಾಂಶಗಳು ಮುಚ್ಚಿಡಲ್ಪಟ್ಟವು]; ಕವಿಸು, ಮುಚ್ಚಿಬಿಡು [(*In* ಉಪ. ಜೊತೆ). Strawberries smothered in cream]. (ವಿರ. ಪ್ರ.) ಉಸಿರು ಕಟ್ಟಿ(ಕೊಂಡು) ಸಾಯಿ, ಕಟ್ಟುಸಿರು ಬಿಡು, ಉಸಿರು ಕಟ್ಟಿಕೊ. **Smóthery** (ಗು.) ಉಸಿರು ಕಟ್ಟುವ.

Smoúlder ಸ್ಮೋಲ್ಡರ್ (ಕ್ರಿ., ನಾ.) ಜ್ವಾಲೆಯಿಲ್ಲದೆ, ಒಳಗೊಳಗೆ, ಅಡಗಿಕೊಂಡು, —ಉರಿ; ಕನಲು, ಕುಮುಲು; ಕೊಳ್ಳುದಿ; (ಭಾವೋದ್ರೇಕ, ಮೊ.) ಒಳಗೊಳಗೇ ಹೊಗೆಯಾಡು(ತ್ತಿರು), ಕುಮುಲು (Smouldering hatred ಕುಮುಲುತ್ತಿರುವ ದ್ವೇಷ). (ನಾ.) ಕನಲುರಿ, ಕುಮುಲಿಕೆ (The s. will soon be a flame ಕನಲುತ್ತಿರುವುದು ಶೀಘ್ರದಲ್ಲಿಯೆ ಭಗ್ಗೆಂದು ಉರಿಯೇಳುತ್ತದೆ)

Smudge[1] ಸ್ಮಡ್ಜ್, **Smutch** ಸ್ಮಚ್ (ಪ್ರಾಚೀ. ಪ್ರ.), (ಕ್ರಿ., ನಾ.) (ಬರೆವಣಿಗೆ, ಚಿತ್ರ, ಮೊ. ನ್ನು) ಮಸಿ ಬಳಿದು ಅಸ್ಪಷ್ಟ ಮಾಡು, ಚಿತ್ತುಮಾಡು; (ಮುಖ, ಕಾಗದ, ಮೇಲ್ಮೈ, ಮೊ. ಗಳ ಮೇಲೆ) ಕರೆ, ಕಲೆ, ಹೊಲಸು, —ಮಾಡು; (ಸಾ., -tch: ಒಬ್ಬನ ಕೀರ್ತಿ, ಮೊ. ನ್ನು) ಕಲುಷಿತ ಮಾಡು, ಕಳಂಕಗೊಳಿಸು, ಕೆಡಿಸು; (ಕೀರ್ತಿ, ಮೊ. ಕ್ಕೆ) ಮಸಿ —ಬಳಿ, ಹಚ್ಚು; (ಮಸಿ, ಬರೆವಣಿಗೆ, ಮೊ. ವು) ಕಲಸಿಕೊ, ಚಿತ್ತಾಗು (Smudges easily ಬೇಗನೆ ಕಲಸಿಹೋಗುತ್ತದೆ, ಚಿತ್ತಾಗುತ್ತದೆ). (ನಾ.) ಕರೆ, ಕಲೆ, ಚಿತ್ತು, ಕಳಂಕ (ರೂಪ. -tch). **Smúdgy** (ಗು.); **Smúdgily** (ಕ್ರಿ. ವಿ.); **Smúdginess** (ನಾ.)

Smudge[2] ಸ್ಮಡ್ಜ್ (ನಾ.) (ಹುಳು ಹುಪ್ಪಟೆಗಳನ್ನು ಓಡಿಸಲು ಹೊರಗಡೆ ಹಾಕಿದ) ದಟ್ಟಹೊಗೆ, ಹೊಗೆಬೆಂಕಿ.

Smug ಸ್ಮಗ್ (ಗು., ನಾ.) ಸ್ವಸಂತುಷ್ಟ, ಸ್ವಾಭಿಮಾನದ; ತನ್ನಷ್ಟಕ್ಕೆ ತಾನು ತೃಪ್ತಿಪಟ್ಟುಕೊಂಡಿರುವ; ಆತ್ಮತೃಪ್ತ. (ವ್ಯಕ್ತಿಗಳ ಅಥವಾ ವಸ್ತುಗಳ ವಿಷಯದಲ್ಲಿ) ಅಚ್ಚುಕಟ್ಟಾದ, ಸೊಗಸಾದ, ಠಾಕು ಠೀಕಾದ, ನೀಟಾದ; (ಮುಖ, ಮೊ. ಗಳ ವಿಷಯದಲ್ಲಿ) ನಯವಾದ, ನುಣುಪಾದ, ಮೃದುವಾದ, ಸೊಂಪಾದ. (ನಾ.) (ಮು., ವಿ. ವಿ. ನಿ. ಅನಂ.) ಗೋಷ್ಠಿಗೆ ಹೊಂದದ, ಮಂದಿಯೊಡನೆ ಬೆರೆಯದ, ಕ್ರೀಡಾದಿಗಳಲ್ಲಿ ಆಸಕ್ತಿಯಿಲ್ಲದ, ಕೇವಲ ವ್ಯಾಸಂಗಮಗ್ನನಾದ ವಿದ್ಯಾರ್ಥಿ: ಓದಾಳಿ, ಓದುಗುಳಿ. **Smúgness** (ನಾ.)

Smúggle ಸ್ಮಗ್ಲ್ (ಕ್ರಿ. ಸಕ.) (ಸುಂಕ, ಮೊ. ನ್ನು ಕೊಡದೆ, ಸರಕನ್ನು) ಕದ್ದು, ಕಳ್ಳತನದಿಂದ, —ಸಾಗಿಸು (ಅನೇಕ ವೇಳೆ *in*, *out*, *over* ಉಪ. ಜೊತೆ); ಗುಟ್ಟಾಗಿ, ಕಾಣದಂತೆ, —ತೆಗೆದುಕೊಂಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೋಗು, ಒಯ್ಯಿ (The books must be smuggled home). **Smúggler** (ನಾ.) ಕಳ್ಳತನದಿಂದ ಸಾಗಿಸುವವನು, ಸುಂಕಗಳ್ಳ. **Smúggling** (ನಾ.) ಕಳ್ಳಸಾಗಣೆ, ಸುಂಕಗಳ್ಳತನ.

Smut ಸ್ಮಟ್ (ನಾ., ಕ್ರಿ.) ಇಲ್ಲಣ, ಮಸಿ, ಕಾಡಿಗೆ; ಇಲ್ಲಣದ ಕಣ; (ಮಸಿಯಿಂದ ಆದ) ಕಪ್ಪು ಕಲೆ, ಕರೆ; (ಧಾನ್ಯಕ್ಕೆ ತಗುಲುವ) ಕಾಡಿಗೆ ರೋಗ; ಭಂಡ, ಅಶ್ಲೀಲ, —ಮಾತು, ಕಥೆ, ಭಾಷೆ. [Ditto, brother s. (ಮಕ್ಕಳ ಮಾತು: ಆಕ್ಷೇಪಣೆ, ಮೊ. ಕ್ಕೆ ಪ್ರತ್ಯುತ್ತರವಾಗಿ) ನೀನೂ ಹಾಗೆಯೇ; ನೀನೂ ನಮ್ಮಣ್ಣನೆ. S.-ball (ಕಾಡಿಗೆರೋಗ ಉಂಟುಮಾಡುವ) ಒಂದು ಜಾತಿಯ ಬೂಷ್ಟು, ಶಿಲೀಂಧ್ರ; ಕಾಡಿಗೆರೋಗ ತಗುಲಿದ ಕಾಳು; ನಾರುವ ಕಾಡಿಗೆ. S.-mill ಕಾಳಿನಿಂದ ಕಾಡಿಗೆ ತೆಗೆದು ಶುದ್ಧಮಾಡುವ ಯಂತ್ರ: ಕಾಡಿಗೆ ಯಂತ್ರ]. (ಕ್ರಿ.) (ಇಲ್ಲಣ, ಮೊ. ರಿಂದ) ಕರೆ, ಕಲೆ, —ಮಾಡು; ಕಪ್ಪು ಬಳಿ; ಕಾಡಿಗೆರೋಗ —ತಗುಲು, ಹಿಡಿ; ಅಶ್ಲೀಲಮಾಡು. **Smútty** (ಗು.); **Smúttily** (ಕ್ರಿ. ವಿ.); **Smúttiness** (ನಾ.)

Smutch. Smudge ನೋಡಿ.

Snack ಸ್ನ್ಯಾಕ್ (ನಾ.) ಅವಸರದ, ಸಣ್ಣ, —ಊಟ; ಒಂದು ತುತ್ತು; ಉಪಾಹಾರ. ಪಾಲು, ಅಂಶ (Go snacks ಹಂಚಿಕೊ, ಭಾಗ ಮಾಡಿಕೊ. Snacks ! ನನಗೆ ಪಾಲು !)

Snáffle ಸ್ನ್ಯಾಫ್ಲ್ (ನಾ.) (ದವಡೆಪಟ್ಟಿಯಿಲ್ಲದ) ಸಾದಾ ಲಗಾಮು (S. bit ಸಾದಾ ಕಡಿವಾಣ). To ride one in, on, with, the s. ಹಗುರವಾಗಿ, ನಯವಾಗಿ, ಹತೋಟಿಯಲ್ಲಿಟ್ಟುಕೊ. **Snáffled** (ಗು.)

Snag ಸ್ನ್ಯಾಗ್ (ನಾ., ಕ್ರಿ. ಸಕ.) ಒಡ್ಡೊಡ್ಡಾದ, ಕೋಚಾದ, —ಚಾಚು, ಕೊಂಟು (ಉದಾ., ವಕ್ರವಾದ, ಮುರಿದ, —ಹಲ್ಲು; ಮರದಲ್ಲಿ ಉಳಿದುಕೊಂಡಿರುವ ಮುರಿದ ಕೊಂಬೆಯ ಮೋಟು; ನೆಲದ ಮೇಲಕ್ಕೆ ಹೊರಟುಕೊಂಡಿರುವ ಚೂಪು ಬೇರು ಅಥವಾ ಮೋಟು; ನದಿಯಲ್ಲಾಗಲಿ ಸಮುದ್ರದಲ್ಲಾಗಲಿ ಹೂತುಕೊಂಡು ಸಂಚಾರಕ್ಕೆ ಅಡಚಣೆಯುಂಟುಮಾಡುವ ಮರದ ತುಂಡು, ಕೋಚು ಬಂಡೆ, ಮೊ. ವು); (ರೂಪ.) ಕೊಕ್ಕೆ, ಗುಟ್ಟು ತೊಡರು, ಆತಂಕ. (ಕ್ರಿ.) ಹಡಗನ್ನು ಬಂಡೆಗೆ ತಗುಲಿಸು, ಹೊಡೆ; (ನೆಲ, ಜಲಮಾರ್ಗ, ಮರದ ಕಾಂಡ, ಮೊ. ಗಳಿಂದ) ಚಾಚುಗಳನ್ನು, ಕೊಂಟುಗಳನ್ನು, —ತೆಗೆದುಹಾಕು; (ಕೊಂಟು ಉಳಿಯುವಂತೆ) ಕೋಚು ಕೋಚಾಗಿ, ಒಡ್ಡೊಡ್ಡಾಗಿ, —ಕಡಿ, ಕತ್ತರಿಸು. **Snágged** (ಗು.); **Snággy** (ಗು.)

Snail ಸ್ನೆಯ್ಲ್ (ನಾ., ಕ್ರಿ.) ಬಸವನ ಹುಳು, ಶಂಬುಕ (Roman s. ಆಹಾರವಾಗಿ ಉಪಯೋಗಿಸುವ ಒಂದು ಜಾತಿಯ ಬಸವನ ಹುಳು. S.'s gallop, pace ಅತಿ ನಿಧಾನದ ಚಲನೆ, ಮಂದಗತಿ); (ರೂಪ.) ಅತಿ ಧಾನಸದವನು, ಸೋಮಾರಿ, ಅಲಸಿಗ. ಗಂಟೆ ಹೊಡೆಯುವುದರಲ್ಲಿ ಹೊಡೆತದ ಸಂಖ್ಯೆಯನ್ನು ನಿರ್ಧರಿಸುವ, ಆಕಾರದಲ್ಲಿ ಬಸವನ ಹುಳುವಿನಂತೆ ಕಾಣುವ, ಗಡಿಯಾರದ ಹಲ್ಲುಚಕ್ರ: ಶಂಬುಕ ಚಕ್ರ (=S.-wheel); ಸುರುಳಿಯಾಕಾರದ ಬೀಜಕೋಶಗಳುಳ್ಳ ಹಲವು ಬಗೆಯ ದ್ವಿದಳಸಸ್ಯ (=S.-clover, s.-trefoil); [S.-fish (ಬಡದೆ ಹತ್ತಿಕೊಳ್ಳುವುದಕ್ಕಾಗಿ, ಹೊಟ್ಟೆಯಮೇಲೆ ಗಾಳಿ ಹೀರುವ ಅಂಗವುಳ್ಳ) ಶಂಬುಕ ಮೀನು. S.-slow (ಬಸವನ ಹುಳುವಿನಂತೆ) ಅತಿ ನಿಧಾನದ, ಧಾನಸದ]. (ಕ್ರಿ.) (ತೋಟದಿಂದ) ಬಸವನ ಹುಳುಗಳನ್ನು ತೆಗೆದು ಹಾಕು; ಅತಿ ನಿಧಾನವಾಗಿ, ಧಾನಸದಿಂದ, —ಹೋಗು, ಕೆಲಸ ಮಾಡು. **Snáilery** (ನಾ.) ಬಸವನ ಹುಳುಗಳನ್ನು ಸಾಕುವ ಸ್ಥಳ; ಶಂಬುಕ ಸಂವರ್ಧನಶಾಲೆ. **Snáillike** (ಗು.) ಬಸವನ ಹುಳುವಿನಂಥ; ಅತಿ ನಿಧಾನದ, ಧಾನಸದ.

Snake ಸ್ನೇಕ್ (ನಾ.) ಹಾವು, ಸರ್ಪ (ಶಿಥಿಲವಾಗಿ, ಓತಿ, ಮೊ. ಹಾವಿನಂಥ ಸರೀಸೃಪಗಳಿಗೂ, ಬ್ರಿಟನ್ನಿನಲ್ಲಿ ವಿಷವಿಲ್ಲದ ನಿರಪಾಯದ ಹಾವುಗಳಿಗೂ ಪ್ರ.); (ರೂಪ.) ಕ್ರೂರದ್ರೋಹಿ, ಘಾತುಕ ಮನುಷ್ಯ [S. in the grass ಗುಪ್ತವಾಗಿ ಅಡಗಿರುವ —ಅಪಾಯ, ಶತ್ರು. Warm, cherish, a s. in one's bosom ಕೃತಘ್ನನಾಗ ಬಹುದಾದವನನ್ನು ಸಾಕು; ಹಾವಿಗೆ —ಆಶ್ರಯಕೊಟ್ಟರು, ಹಾಲೆರೆ. Scotch the s. (Scotch[2] ನೋಡಿ). See snakes ಕುಡಿತದ ಸನ್ನಿಯಾಗಿರು, ಮದ್ಯೋನ್ಮಾದದಲ್ಲಿರು. Raise, wake, snakes ಹುಯಿಲು, ಜಗಳ, —ಎಬ್ಬಿಸು. Snakes ! (ಕೋಪದ ಉದ್ಗಾರ)]. **S.-charmer** ಹಾವಾಡಿಗ. **S.-charming** ಹಾವಾಡಿಸುವುದು. **S.-fence** ಹಾವುಹೆಣಿಗೆಯ ಬೇಲಿ. **S.-gourd** ಪಡವಲಕಾಯಿ (ಗಿಡ). **S. lizard** ಅಂಕುರಾವಸ್ಥೆಯ ಕಾಲುಗಳಿರುವ ಅಥವಾ ಕಾಲುಗಳೇ ಇಲ್ಲದ ಹಲವು ಬಗೆಯ ಸರೀಸೃಪ: ಹಾವುಹಲ್ಲಿ. **S.-locked** (ಕೂದಲಗೆ ಬದಲಾಗಿ) ಹಾವುಗಳ ಜುಟ್ಟಾಗುಳ್ಳ; ಹಾವು ಜುಟ್ಟಿನ. **Snákeshead** ಒಂದು ಜಾತಿಯ ಸಸ್ಯ. **S.-stone** ಸಾಲಗ್ರಾಮ ಜಾತಿಯ ಕಲ್ಲು; ಸರ್ಪಶಿಲೆ. **S.-weed** ಒಂದು ಜಾತಿಯ ಸಸ್ಯ. **Snáky** (ಗು.) ಹಾವಿನ ಕಾಟವುಳ್ಳ, ಹಾವುಗಳಿರುವ; ಹಾವಿನಂಥ, ಸರ್ಪಸದೃಶ (ವಿಷ, ಮೋಸ, ಕೃತಘ್ನತೆ, ಮೊ. ಲಕ್ಷಣಗಳಿಂದ; ರೂಪ. ಸಹ). S.-hair (ಗ್ರೀಕ್ ಪುರಾಣದಲ್ಲಿಯ ಉಗ್ರ ಕನ್ನಿಕೆಯರ) ಹಾವುಗೂದಲು. **Snákiness** (ನಾ.)

Snap ಸ್ನ್ಯಾಪ್ (ಕ್ರಿ., ನಾ.) ಫಕ್ಕನೆ, ತಟಕ್ಕನೆ, ಕಟಮ್ಮನೆ, —ಕಚ್ಚು, ಕಡಿ [S. at ಕಚ್ಚಹೋಗು; (ರೂಪ.) ರೇಗಿ ಮುರಿದಹಾಗೆ ಮಾತನಾಡು]; ಫಕ್ಕನೆ, ಅತ್ಯಾಶೆಯಿಂದ, —ಹಿಡಿ(ದುಕೊ), ತುಡುಕು (S. at bait, chance); (ರೂಪ.) ಸಿಡುಕು ಮಾತಾಡು, ಸಿಡಿಗುಟ್ಟು (S. out ಸಿಡಿಗುಟ್ಟಿಕೊಂಡು ಹೇಳು); ಕಚ್ಚಿ, ಕಡಿದು, —ಹಾಕು, ಬಿಡು (*Off* ಉಪ. ಜೊಡನೆ) [S. off one's nose (ಮು., ರೂಪ.) (ಒಬ್ಬನು ಮಾತಾಡುತ್ತಿರುವಾಗ) ಕೋಪದಿಂದ, ಒರಟೊರಟಾಗಿ, —ನಡುವೆ ಬಾಯಿಹಾಕು, ಮುಖಮುರಿ]. ಆತುರವಾಗಿ, ಫಕ್ಕನೆ, —ಎತ್ತಿಕೊ, ತೆಗೆದುಕೊ; ಲಪಟಾಯಿಸು (ವ್ಯಾಪಾರ, ಮೊ. ಗಳಲ್ಲಿ ರೂಪ.); (ಇನ್ನೊಬ್ಬನು ಮಾತು ಮುಗಿಸುವುದಕ್ಕೆ ಮೊದಲೆ) ತಟಕ್ಕನೆ ತಡೆ, ಬಾಯಿಹಾಕು; ಲಟ್ಟನೆ, ಚಟ್ಟನೆ, —ಕಡಿ(ದುಹೋಗು), ಮುರಿ(ದುಹೋಗು), ಒಡೆ(ದುಹೋಗು) (S. the string, stick. Oar, wire, snaps); ಡಬ್, ಚಟ್, —ಎನ್ನು, ಎನ್ನಿಸು; ಚಟಗುಟ್ಟು, —ಗುಟ್ಟಿಸು; ಚಿಟಿಕೆ ಹಾಕು, ಬೆರಳು ಮಿಡಿ [S. pistol ಪಿಸ್ತೂಲು —ಡಬ್ ಎನ್ನಿಸು, ಹಾರಿಸು. Pistol snaps ಪಿಸ್ತೂಲು ದುಬಾರೆನ್ನುತ್ತದೆ, ಡಬ್ ಎನ್ನುತ್ತದೆ. S. whip ಚಾವಟಿಯನ್ನು ಚಟಗುಟ್ಟಿಸು. S. one's finger (ಮು., ಒಬ್ಬನ ವಿಷಯದಲ್ಲಿ ತಿರಸ್ಕಾರ ಸೂಚಕವಾಗಿ) ಚಿಟಿಕೆ ಹಾಕು; ಕಡೆಗಣಿಸು, ಉಪೇಕ್ಷಿಸು]; ಡಬಾರನೆ, ದೊಪ್ಪನೆ, —ಮುಚ್ಚು, ಮುಚ್ಚಿಕೊ, ಹಾಕು, ಹಾಕಿಕೊ (The door snapped to); (ಮು., ಯಾವುದೋ ಜ್ಞಾನದಲ್ಲಿರುವವನ, ಇಷ್ಟವಿಲ್ಲದಿರುವವನ) ಚಿಟಿಕೆ ಛಾಯಾಚಿತ್ರ ತೆಗೆ(ದುಕೊ). [Snapping turtle ಅಮೆರಿಕದ, ಸಿಹಿನೀರುವಾಸಿಯಾದ, ಕ್ರೂರ ಸ್ವಭಾವದ, ಒಂದು ಆಮೆ ಜಾತಿಯ ಪ್ರಾಣಿ (ತನ್ನ ದವಡೆಯಿಂದ ತಟಕ್ಕನೆ ತನ್ನ ಎರೆಯನ್ನು ಹಿಡಿದುಕೊಳ್ಳುವುದರಿಂದ ಈ ಹೆಸರು ಬಂದಿದೆ)]. (ನಾ.) ಲಟ್ಟನೆ, ಚಟ್ಟನೆ, —ಕಡಿತ, ಒಡೆತ, ಮುರಿತ; ಸಿಡಿತ, ಚಿಟಿಕೆ, ಸ್ಫೋಟನ, ಚಟಗುಟ್ಟುವಿಕೆ [(ಕ್ರಿ. ವಿ. ಅರ್ಥದಲ್ಲಿಯೂ ಪ್ರ.): S. went an oar ಒಂದು ಹುಟ್ಟು ಲಟ್ಟನೆ ಮುರಿದುಹೋಯಿತು]; (ಕೈಬಳೆ, ಮೊ. ಗಳ) ತಟಕ್ಕನೆ ಹಾಕಿಕೊಳ್ಳುವ ಸ್ಪ್ರಿಂಗು ಕೊಕ್ಕೆ, ಕೊಂಡಿ; ಹಲವು ಬಗೆಯ ಸಣ್ಣ ಗರಿಗರಿ ರೊಟ್ಟಿ; ಒಂದು ಬಗೆಯ ಇಸ್ಪೀಟಾಟ. (ಇದ್ದಕ್ಕಿದ್ದ ಹಾಗೆ ಬರುವ) ಘನಹಿಮದ, ಚಳಿಯ, —ಹೊಡೆತ (ಸಾ., = Cold s.); (ತೈಲ, ಮೊ. ಗಳಲ್ಲಿ) ಚುರುಕು, ಗರಿಗು; ಕೆಚ್ಚು, ಹುರುಪು, ಜೋರು, ಲವಲವಿಕೆ, ನವಚೈತನ್ಯ; = Snapshot; (ನಾಟಕಶಾಲೆ; ನಟನಾಗಿ ಕೆಲಸಮಾಡಲು ಮಾಡಿಕೊಂಡ) ಕೊಂಚ ಕಾಲದ ಗೊತ್ತುಪಾಡು, ಚಿಟಿಕೆ ಒಪ್ಪಂದ. (ವಿಶೇಷಣವಾಗಿ ಪ್ರ.) (ಶಾಸನ ಸಭೆ, ಮೊ. ಗಳ ನಡೆವಳಿಕೆಯ ವಿಷಯದಲ್ಲಿ) ಪೂರ್ವ ಸೂಚನೆಯಿಲ್ಲದೆ, ಹಠಾತ್ತನೆ, ಆತುರವಾಗಿ, —ಮಾಡಿದ, ನಡೆದ, ತೆಗೆದುಕೊಂಡ (A s. vote, debate, crisis). **S.-bolt, -lock** (ಬಾಗಿಲು, ಮೊ. ವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಟ್ಟಿಕೊಂಡೊಡನೆ) ತನ್ನಷ್ಟಕ್ಕೆ ತಾನೇ ಹಾಕಿಕೊಳ್ಳುವ ಸ್ಪ್ರಿಂಗು —ಅಗುಳಿ, ಬೀಗ. **S.-hook, -link** (ಹುರಿ, ಕೊಂಡಿ, ಮೊ. ನ್ನು ಒಳಹೊಗಗೊಡುವ, ಆದರೆ ಹೊರಬರದಂತೆ ತಡೆಯುವ ಏರ್ಪಾಟುಳ್ಳ) ಸ್ಪ್ರಿಂಗು —ಕೊಕ್ಕೆ, ಕೊಂಡಿ. **Snap shot** (ಗುರಿಯಿಡಲು ಕಾಲ ಹರಣಮಾಡದೆ) ತಟಕ್ಕನೆ ಹೊಡೆದ ಗುಂಡು ಹೊಡೆತ ; ಚಿಟಿಕೆ ಹೊಡೆತ. **Snápshot** (ನಾ., ಕ್ರಿ. ಸಕ.) ಕೈ ಛಾಯಾಗ್ರಾಹಿಯಿಂದ ತಟ್ಟನೆ ತೆಗೆದ ಚಿತ್ರ ; ಚಿಟಿಕೆ (ಛಾಯಾ)ಚಿತ್ರ. (ಕ್ರಿ.) —ತೆಗೆ (=**S.-shoot**). **Snápper** (ನಾ.) (ಕ್ರಿಯಾರ್ಥಗಳಲ್ಲಿ); **Snápper-up** ಇತರರಿಗಿಂತ ಮೊದಲೆ ತಾನು ತುಡುಕಿ ವ್ಯಾಪಾರ ಗಿಟ್ಟಿಸಿಕೊಳ್ಳು ವವನು : ತುಡುಕು ಮುಷ್ಟಿ. **Snáppish** (ಗು.) (ನಾಯಿ) ಫಕ್ಕನೆ ಕಚ್ಚುವ ; (ಮನುಷ್ಯ) ಸಿಡಿಗುಟ್ಟುವ, ರೇಗಾಡುವ, ಗುರ್ರೆನ್ನುವ. **Snáppishly** (ಕ್ರಿ. ವಿ.) ; **Snáppishness** (ನಾ.) ; **Snáppy** (ಗು.) ಸಿಡಿಯುವ, ಚಟಗುಟ್ಟುವ (S. spark, fire) ; ಹುರುಪು, ಜೋರು, ಚುರುಕು, ಲವಲವಿಕೆ, ಸ್ವಾರಸ್ಯ —ಉಳ್ಳ (S. games, conversation)

Snare ಸ್ನೇ(ಅ)ರ್ (ನಾ., ಕ್ರಿ. ಸಕ.) (ಹಕ್ಕಿ, ಪ್ರಾಣಿ, ಮೊ. ನ್ನು ಹಿಡಿಯುವ, ಅದರ ಕಾಲು ಅಥವಾ ತಲೆ ಸಿಕ್ಕಿಕೊಳ್ಳುವಂತೆ ಸರಿಗುಣಿಕೆಯುಳ್ಳ) ಹುರಿಯ ಉರುಲು, ಕಣ್ಣಿ, ಪಾಶ (ರೂಪ. ಸಹ : ಶತ್ರುವಾಗಲಿ ಬೆಪ್ಪನಾಗಲಿ ಸಿಕ್ಕಿಕೊಳ್ಳುವಂತೆ, ಅಪಜಯ, ಅಪಮಾನ, ನಷ್ಟ, ಮೊ. ಕ್ಕೆ ಗುರಿಯಾಗುವಂತೆ ಪ್ರಲೋಭನಗೊಳಿಸುವ ಉಪಾಯ) ; ಬಲೆ. (ಶಸ್ತ್ರವೈದ್ಯ) (ಅರ್ಬುದ, ಮೊ. ನ್ನು ಸಿಕ್ಕಿಸಿಕೊಂಡು ಕತ್ತರಿಸಿ ಹಾಕಲು ಉಪಯೋಗಿಸುವ) ತಂತಿ ಕಣ್ಣಿ, ಜಾರು ಕುಣಿಕೆ. ಮೋಹ —ಜಾಲ, ಪಾಶ ; ಪ್ರಲೋಭನಕಾರಿ (Popularity is often a s.). (ಬ. ವ. ದಲ್ಲಿ) ಸೈನಿಕನ ಇತ್ತಲೆಯ ತಮಟೆಯಲ್ಲಿ ಕೆಳತಲೆಯ ಅಡ್ಡನಾಗಿ, ಹೆಚ್ಚು ಅನುರಣನವುಂಟುಮಾಡುವುದಕ್ಕಾಗಿ ಕಟ್ಟಿರುವ, ಹುರಿಮಾಡಿದ ನರಗಳು ಅಥವಾ ಬಾರುಗಳು. (ಕ್ರಿ.) (ಹಕ್ಕಿ, ಮೊ. ನ್ನು) ಪಾಶವನ್ನೊಡ್ಡಿ —ಹಿಡಿ, ಕೆಡವು ; (ಮನುಷ್ಯನನ್ನು) ಉಪಾಯದಿಂದ ಸಿಕ್ಕಿಸು, ಬಲೆಗೆ ಬೀಳಿಸು. **Snárer** (ನಾ.) ; **-snarer** (ನಾ.)

Snarl¹ ಸ್ನಾರ್ಲ್ (ಕ್ರಿ. ನಾ.) (ನಾಯಿ) ಹಲ್ಲು ಕಿಸಿಯುತ್ತ ಗುರ್ರೆನ್ನು, ಗುರುಕಾಯಿಸು ; (ಮನುಷ್ಯ) ಸಿಡಿಗುಟ್ಟು ; ಸಿಡುಕಿನಿಂದ —ದೂರು, ಟೀಕಿಸು ; ಜಗಳ ಕಾಯಿ ; (ಅತೃಪ್ತಿ, ಮೊ. ನ್ನು) ಗುರುಗುಟ್ಟುತ್ತ ಸೂಚಿಸು (S. out ಗುರುಗುಟ್ಟಿಕೊಂಡು ಹೇಳು). (ನಾ.) ಗುರುಗುಟ್ಟುವುದು ; ಸಿಡಿಗುಟ್ಟುವುದು ; ಗುರು ಗುರು ಶಬ್ದ. **Snárler** (ನಾ.) ; **Snárlingly** (ಕ್ರಿ. ವಿ.) ; **Snárly** (ಗು.)

Snarl² ಸ್ನಾರ್ಲ್ (ಕ್ರಿ., ನಾ.) (ಪ್ರಾಚೀ. ಪ್ರ.) ಸಿಕ್ಕು, ಗೋಜು, ತೊಡಕು (—ಮಾಡು, ಆಗು) (A snarled skein ತೊಡಕಿನ, ಗೋಜಿನ, —ಕೆಲಸ) ; (ಲೋಹಪಾತ್ರೆಗೆ ಅದರ ಒಳಗಡೆಯಿಂದ ಹೊಡೆದು) ಮೇಲೆ ಉಬ್ಬೆಬ್ಬಿಸು, ಉಬ್ಬುಲಂಕಾರಮಾಡು. Snarling-iron ಉಬ್ಬೆತ್ತುವ, ಉಬ್ಬುಲಂಕಾರದ, —ಸುತ್ತಿಗೆ, ಬಡಿಗೆ.

Snatch ಸ್ನ್ಯಾಚ್ (ಕ್ರಿ., ನಾ.) ಫಕ್ಕನೆ, ತಟಕ್ಕನೆ, ಆತುರದಿಂದ, —(ಕೈಚಾಚಿ) ಹಿಡಿದುಕೊ ; ಕಿತ್ತುಕೊ, ಕಸಿದುಕೊ, ಎಗುರಿಸು (The wind snatched my cap off ಗಾಳಿ ನನ್ನ ಟೋಪಿಯನ್ನು ಎಗುರಿಸಿಕೊಂಡು ಹೋಯಿತು. S. a kiss ಒಂದು ಮುತ್ತು ಕಸಿದುಕೊ) ; ಕಷ್ಟಪಟ್ಟು —ಬಿಡಿಸು, ಉಳಿಸು, ಕಾಪಾಡು (*From* ಉಪ. ದೊಡನೆ) (Was snatched from the jaws of death ಮೃತ್ಯುವಿನ ದವಡೆಯಿಂದ ಉಳಿಸಿದ್ದಾಯಿತು) ; ಕಷ್ಟದಿಂದ ಪಡೆ, ಸಂಪಾದಿಸು (S. victory out of defeat ಸೋಲಾಗುವುದರಲ್ಲಿದ್ದು ಕಷ್ಟದಿಂದ ಗೆಲವು ಪಡೆ) ; ಹಠಾತ್ತನೆ —ಒಯ್ಯು, ಕೊಂಡುಹೋಗು (*Away, from* ಉಪ. ದೊಡನೆ) (Was snatched away, from us, by premature death) ; (ಹಿಡಿದುಕೊಳ್ಳುವುದಕ್ಕೆ) ಕೈಚಾಚು ; ತುಡುಕು (*At* ಉಪ. ದೊಡನೆ) [(ರೂಪ.) S. at offer ನೀಡಿದ್ದನ್ನು ಆತುರದಿಂದ ತೆಗೆದುಕೊ]. (ನಾ.) (ಕ್ರಿಯಾರ್ಥಗಳಲ್ಲಿ) (Made a s. at it ಅದನ್ನು ತುಡುಕಹೋದನು, ಕಸಿಯಹೋದನು) ; (ನಾ., ಬ. ವ. ದಲ್ಲಿ) (ಹಾಡು, ಮಾತು, ಮೊ. ಗಳ) ತುಂಡು, ತುಣುಕು, ಚುಟಕ (*Of* ಉಪ. ದೊಡನೆ) ; (ಕೆಲಸದ) ಸಣ್ಣ ಪಟ್ಟು, ಕೆರಳು (Only works by snatches ಆಗಷ್ಟು ಈಗಷ್ಟು, ಹುಚ್ಚು ರೇಗಿದಾಗ, —ಕೆಲಸ ಮಾಡುತ್ತಾನೆ). **Snátchy** (ಗು.) ಆಗಷ್ಟು ಈಗಷ್ಟಿನ, ಕ್ರಮವಿಲ್ಲದ, ಮನ ಬಂದಾಗಿನ. **Snátchily** (ಕ್ರಿ. ವಿ.)

Sneak ಸ್ನೀಕ್ (ಕ್ರಿ., ನಾ.) ಕದ್ದು, ಕಳ್ಳತಪ್ಪಿಸಿಕೊಂಡು, ಗುಟ್ಟಾಗಿ, —ಹೋಗು, ನಡೆ, ತಿರುಗು (ಅನೇಕ ವೇಳೆ *in, out, past, round, about, off, away* ಮೊ. ಪದದೊಡನೆ) ; (ವರ್ತಮಾನ ಕೃ.) ಕಳ್ಳತನದ. ಗುಟ್ಟಿನ, ಮುಚ್ಚುಮರೆಯ, ಹೊರಗೆ ತೋರಿಸಿಕೊಳ್ಳದ (Have a sneaking kindness for him ಅವನ ವಿಷಯದಲ್ಲಿ ಒಳಗೊಳಗೇ ಅವ್ಯಾಜ ದಯೆ ಇರು) ; (ಪಾಠಶಾಲಾ ಅಸಂ.) ಚಾಡಿ ಹೇಳು ; (ಅಸಂ.) ಕದಿ, ಎಗುರಿಸು. (ನಾ.) ಕಳ್ಳಕೊರಮ ; ಗುರುಮ್ ಘಾತುಕ. (ಪಾಠಶಾಲಾ ಅಸಂ.) ಚಾಡಿಕೋರ ; (ಕ್ರಿಕೆಟ್) ಪುಟವೇಳದಂತೆ ನೆಲದಮೇಲೆ ಪುಸಕ್ಕನೆ ಎಸೆದ, ಹೋಗುವ, ಚೆಂಡು. S.-thief (ತೆರೆದ ಬಾಗಿಲು, ಕಿಟಕಿ, ಮೊ. ಗಳ ಮೂಲಕ) ಪತ್ತೆಯಿಲ್ಲದೆ ಕಳ್ಳತನ ಮಾಡುವವನು ; (ಬೀಗ, ಮೊ. ನ್ನು ಒಡೆಯದೆ, ಬಲಾತ್ಕಾರವಾಡದೆ) ಕೈಗೆ ಸಿಕ್ಕಿದ್ದನ್ನು ಎತ್ತಿಕೊಂಡು ಹೋಗುವ ಕಳ್ಳ ; ನುಸುಳುಗಳ್ಳ. **Sneákers** (ನಾ., ಬ. ವ.) ಸದ್ದು ಮಾಡದ ಜೋಡುಗಳು. **Sneákingly** (ಕ್ರಿ. ವಿ.) ಮುಚ್ಚುಮರೆಯಾಗಿ, ಕಳ್ಳತನದಿಂದ.

Sneck ಸ್ನೆಕ್ (ನಾ., ಕ್ರಿ. ಸಕ.) (ಮು., ಸ್ಕಾ. ಪ್ರ.) ಅಗುಳಿ, ತಾಪಾಳು (—ಹಾಕು)

Sneer ಸ್ನಿಯರ್ (ಕ್ರಿ., ನಾ.) ತಿರಸ್ಕಾರದ, ಅವಹೇಳನದ, —ಮುಗುಳು ನಗೆ ನಗು (*At* ಉಪ. ದೊಡನೆ) ; ಜರೆ ; ವ್ಯಂಗ್ಯವಾಗಿ, ತಿರಸ್ಕಾರವಾಗಿ, —ಮಾತಾಡು ; ಅಪಹಾಸ್ಯ ಮಾಡು, ಅಣಕಿಸು, ಹೀಯಾಳಿಸು (*At* ಉಪ. ದೊಡನೆ) ; ಹಾಸ್ಯಮಾಡಿ, ನಕ್ಕು, —ಪೆಚ್ಚು ಮಾಡು, ಮುಖ ಕೆಡಿಸು (*Down, out of countenance*), (ಕೀರ್ತಿ, ಸಂತೋಷ, ಮೊ. ನ್ನು) ಕಳೆ (*Away* ಉಪ. ದೊಡನೆ). (ನಾ.) ತಿರಸ್ಕಾರ ಸೂಚಕ —ಮುಖವಿಕಾರ, ಮುಗುಳು ನಗೆ, ಟೀಕೆ ; ಜರೆತ, ಕುಚೋದ್ಯ, ಹೀಯಾಳಿಕೆ. **Sneérer** (ನಾ.) ; **Sneéringly** (ಕ್ರಿ. ವಿ.)

Sneéze ಸ್ನೀಸ್ (ಕ್ರಿ. ಅಕ., ನಾ.) ಸೀನು(ವುದು, —ವ ಶಬ್ದ) (Not to be sneezed at ತಿರಸ್ಕಾರ ಯೋಗ್ಯವಲ್ಲದ, ತಕ್ಕಮಟ್ಟಿಗಿರುವ, ಪರವಾಯಿಲ್ಲದ. S. into a basket (ನಯ ನುಡಿ) ಶಿರಶ್ಛೇದನ ಯಂತ್ರಕ್ಕೆ ತುತ್ತಾಗು, ತಲೆ ಕಡಿಸಿಕೊ.

Snick ಸ್ನಿಕ್ (ಕ್ರಿ. ಸಕ., ನಾ.) ಸಣ್ಣ ಕೊಯ್ತ, ಕಡಿತ, ಕಚ್ಚು (—ಮಾಡು) ; (ಕ್ರಿಕೆಟ್) ಎಸೆಗಾರನು ಎಸೆದ ಚೆಂಡನ್ನು ದಾಂಡಿನಿಂದ ಸೋಕಿ (Slip ಅಥವಾ leg ಕಡೆಗೆ) ಓಡಿಸು(ವುದು) ; ಸೋಕು ಹೊಡೆತ (ಹೊಡೆ)

Snícker ಸ್ನಿಕರ್ (ಕ್ರಿ. ಅಕ., ನಾ.) ಕೆನೆ(ತ) ; =Snigger.

Sníckersneé ಸ್ನಿಕರ್‌ಸ್ನೀ (ನಾ.) (ಹಾಸ್ಯ ಪ್ರ.) (ಆಯುಧವಾಗಿ ಉಪಯೋಗಿಸಲಾಗುವ) ಚಾಕು, ಚೂರಿ.

Snide ಸ್ನೈಡ್ (ಗು., ನಾ.) (ಅಸಂ.) ಮೋಸದ, ಠಕ್ಕಿನ, ಖೋಟಾ (—ಒಡವೆ, ನಾಣ್ಯ). **Snídesman** ಖೋಟಾ ನಾಣ್ಯಗಾರ.

Snider ಸ್ನೈಡರ್ (ನಾ.) ಒಂದು ಹಳೆಯ ಬಂದೂಕಿನ ಮಾದರಿ (=S.-rifle) (ನಿರ್ಮಾಪಕನ ಹೆಸರಿನಿಂದ)

Sniff ಸ್ನಿಫ್ (ಕ್ರಿ., ನಾ.) (ಸಿಂಬಳ ಕೆಳಕ್ಕೆ ಜಾರದಂತೆ) ಗಟ್ಟಿಯಾಗಿ ಸೇದಿಕೊ ; ಸೊರಗುಟ್ಟು ; ಸೊರಗುಟ್ಟಿ ತಿರಸ್ಕಾರ —ಸೂಚಿಸು, ಮಾಡು. (ಗಾಳಿ, ನೀರು, ಮೊ. ನ್ನು ಶಬ್ದವಾಗುವಂತೆ) ಮೂಗಿನಲ್ಲಿ ಸೇದು, ಸೇದಿಕೊ (*Up* ಸಹ) ; (ಹೂವು, ಮೊ. ನ್ನು) ಮೂಸು, ಆಘ್ರಾಣಿಸು [S. at ಮೂಸಿ ನೋಡು ; ಅತೃಪ್ತಿ, ತಿರಸ್ಕಾರ, —ಸೂಚಿಸು, ತೋರಿಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ನಾಯಿ) ಮನುಷ್ಯನ ಮಾನಖಂಡವನ್ನು ಕಚ್ಚಹೋಗು, ಕಚ್ಚುವಂತೆ ತೋರು]. (ನಾ.) ಮೂಗಿನಲ್ಲಿ —ಸೇದುವುದು, ಸೇದಿಕೆ, ಸೇದುವ ಧ್ವನಿ; ಸೊರಗುಟ್ಟುವಿಕೆ; ಮೂಸುವುದು; ಒಂದುಸಲ ಸೇದಿದ ಮೊತ್ತ. **Sníffy** (ಗು.) (ಬಳ. ಮಾ.) ಧಿಕ್ಕಾರದ, ತಿರಸ್ಕಾರ ತೋರುವ, ಪ್ರತಿಷ್ಠೆಯ. (ನಿರ್ವಾಸನೆಯಾಗಿರಬೇಕಾದ ವಸ್ತುವಿನ ವಿಷಯದಲ್ಲಿ) ಕೊಂಚ ಕೆಟ್ಟ ವಾಸನೆಯ, ನಾತ ಬರುವ.

Snífting-valve ಸ್ನಿಫ್ಟಿಂಗ್‌ವ್ಯಾಲ್ವ್ (ನಾ.) (ಆವಿ ಎಂಜಿನಿನ ಉರುಳೆಯಲ್ಲಿ) ಗಾಳಿ ಹೊರಕ್ಕೆ ಹೋಗುವ ಕವಾಟ.

Snígger ಸ್ನಿಗರ್ (ಕ್ರಿ. ಅಕ., ನಾ.) ಒಳಗೊಳಗೇ ವ್ಯಂಗ್ಯವಾಗಿ ನಗು(ವುದು) (ಮು., ಜರೆಯುವಂಥದು ಅಥವಾ ಅಶ್ಲೀಲದ ಬಗ್ಗೆ ವಿಸ್ಮಯ ಸೂಚಿಸುವಂಥದು); ಕುಚೋದ್ಯದ ಒಳ ನಗು.

Sníggle ಸ್ನಿಗ್‌ಲ್ (ಕ್ರಿ. ಅಕ.) (ಎರೆ ಸಿಕ್ಕಿಸಿದ ಕೊಕ್ಕೆಯನ್ನು ಇಕ್ಕೆಗಳೊಳಗೆ ನೂಕಿ) ಹಾವುಮೀನುಗಳನ್ನು ಹಿಡಿ.

Snip ಸ್ನಿಪ್ (ಕ್ರಿ., ನಾ.) ಚಕ ಚಕನೆ ಕತ್ತರಿಸು (S. cloth, a hole. S. at ಚಕ ಚಕನೆ ಕತ್ತರಿಸುವಂತೆ ಕೈಯಾಡಿಸು). (ನಾ.) ಚಕ ಚಕನೆ ಕತ್ತರಿಸುವುದು; ಹೀಗೆ ಕತ್ತರಿಸಿದ ತುಂಡು. (ಬಳ. ಮಾ.) ದರ್ಜಿಯವನು, ಚಿಪ್ಪಿಗ. **Sníppet** (ನಾ.) ಕತ್ತರಿಸಿದ ಚೂರು, ತುಂಡು; ಕತ್ತರಿಕೆ; (ಬ. ವ. ದಲ್ಲಿ) (ಸಾಹಿತ್ಯ, ಸುದ್ದಿ, ಒಂದರ ತಿಳಿವಳಿಕೆ, ಮೊ. ರ) ತುಣುಕುಗಳು. **Sníppety** (ಗು.); **Sníppetiness** (ನಾ.); **Snípping** (ನಾ.)

Snipe ಸ್ನೈಪ್ (ನಾ.; ಬ. ವ. ಕ್ಕೆ ಬದಲಾಗಿ ಜಾತ್ಯೇಕ ವಚನ ಪ್ರ.; ಕ್ರಿ.) ನೇರ ನೀಳ ಕೊಕ್ಕಿನ, ವಕ್ರ ಹಾರಿಕೆಯ, ಜೌಗುನೆಲಗಳಿಗೆ ವಾಡಿಕೆಯಾಗಿ ಹೋಗುವ, ಹಲವು ಬಗೆಯ ಬೇಟೆಯ ಹಕ್ಕಿ: ಉಲ್ಲಂಗಿ (ಹಕ್ಕಿ); (S.-eel, -fish ತೆಳು ನಿಡುಮೂತಿಯ ಹಲವು ಬಗೆಯ ಮೀನು). (ಕ್ರಿ.) ಉಲ್ಲಂಗಿ ಷಿಕಾರಿ ಮಾಡು; (ಸೈನಿಕ) (ರಾತ್ರಿ, ಅವಿತುಕೊಂಡಿದ್ದು, ಶತ್ರುಪಾಳೆಯದೊಳಕ್ಕೆ) ಮರೆಯಿಂದ ಗುಂಡು ಹಾರಿಸು, —ಹಾರಿಸಿ ಕೊಲ್ಲು [**Sníper** (ನಾ.)]. **Snípy** (ಗು.) ನಿಡುಮೂತಿಯ, ನೀಳ ಮೂಗಿನ; ಉಲ್ಲಂಗಿಯಂಥ; ಉಲ್ಲಂಗಿಗಳು ವಾಡಿಕೆಯಾಗಿ ಬರುವ.

Sníppet. **Snip** ನೋಡಿ.

Snível ಸ್ನಿವ್‌ಲ್ (ಕ್ರಿ. ಅಕ., ನಾ.) ಸುರ್ರೆಂದು ಸಿಂಬಳ ಎಳೆದುಕೊ; ಸೊರಗುಟ್ಟು; ಸಿಂಬಳ ಸೀದು; ಕಣ್ಣೀರು ಸುರಿಸು; ಕುಂಯ್ ಎಂದು ಅಳು; ಗೋಳುಗರೆ; ಪಶ್ಚಾತ್ತಾಪವನ್ನು ನಟಿಸು; (ಕುಂಯ್ ಎಂದು ಅಳುತ್ತ, ಸುರ್ರೆಂದು ಸಿಂಬಳ ಎಳೆಯುತ್ತ, ಅಸಹ್ಯವಾಗುವಂತೆ) ಬೂಟಾಟಿಕೆಯ ರಾಗೋದ್ರೇಕ ತೋರು. (ನಾ.) ಗೊಣ್ಣೆ, ಸಿಂಬಳ; ಕುಂಯ್ ಎನ್ನುವ ಅಳು, ಗೋಳುಕರೆ; ಬೂಟಾಟಿಕೆ ಮಾತು; ಕಪಟ, ಸೋಗು. **Sníveller** (ನಾ.); **Snívelling** (ಗು.)

Snob ಸ್ನಾಬ್ (ನಾ.) (ಪ್ರಾಚೀ. ಪ್ರ.) ಕೀಳು ದರ್ಜೆಯ, ಕೆಳ ಜಾತಿಯ, —ಮನುಷ್ಯ; (ಪ್ರಾಚೀ. ಪ್ರ., ವಿ. ವಿ. ನಿ. ಮತ್ತು ವಿದ್ಯಾಶಾಲೆಗಳಲ್ಲಿ) ಪಟ್ಟಣಿಗ. ಸಮಾಜ ಸ್ಥಾನಕ್ಕೆ ಅಥವಾ ಐಶ್ವರ್ಯಕ್ಕೆ ಅತಿಮರ್ಯಾದೆ ಕೊಡುವ, ತನಗಿಂತ ಕೆಳ ದರ್ಜೆಯವರೊಡನೆ ಸಂಬಂಧ ಬೆಳಸಲು ಹಿಂದೆಗೆಯುವ, ತನಗಿಂತ ಮೇಲು ದರ್ಜೆಯವರಲ್ಲಿ ದಾಸನಂತೆ ನಡೆದುಕೊಳ್ಳುವ, ಹೊರ ತೋರ್ಕೆಗಳಿಂದ ಗುಣ ನಿಷ್ಕರ್ಷೆಗೆ ತೊಡಗುವ ಮನುಷ್ಯ: ದೊಡ್ಡಸ್ತಿಕೆ ದಾಸಯ್ಯ, ದೊಡ್ಡವರ ಬೆನ್ನಾಳು, ಪ್ರತಿಷ್ಠಾಪೂಜಕ. **Snóbbery** (ನಾ.) ಪ್ರತಿಷ್ಠಾ ಪೂಜೆ; ಪ್ರತಿಷ್ಠಾ ಪೂಜಕರು. **Snóbbish** (ಗು.); **Snóbbishly** (ಕ್ರಿ. ವಿ.); **Snóbbishness** (ನಾ.); **Snóbling** (ನಾ.) ಪ್ರತಿಷ್ಠಾ ಪೂಜಕ ಮರಿ. **Snobócracy** (ನಾ.) ಪ್ರತಿಷ್ಠಾ ಪೂಜಕ —ವರ್ಗ, ಪ್ರಭುತ್ವ.

Snood ಸ್ನೂಡ್ (ನಾ.) (ಸ್ಕಾ. ಪ್ರ. ಮತ್ತು ಸಾಹಿತ್ಯ ಪ್ರ.) ಸ್ಕಾಟ್ಲೆಂಡಿನ ಕನ್ಯೆಯರು ತಲೆ ಕೂದಲು ಕೆದರದಂತೆ ಕಟ್ಟಿಕೊಳ್ಳುವ ಪಟ್ಟಿ: ಕೂದಲ ಪಟ್ಟಿ. (ಕಡಲ ಮೀನು ಹಿಡಿಯುವುದರಲ್ಲಿ) ಗಾಳದ ಮುಖ್ಯ ಹುರಿಗೆ ಕ್ರಮ ದೂರಗಳಲ್ಲಿ ಕಟ್ಟಿರುವ ಕೊಕ್ಕೆಯುಳ್ಳ ಸಣ್ಣ ಹುರಿಗಳಲ್ಲೊಂದು: ಕೊಕ್ಕೆ ಹುರಿ. **Snóoded** (ಗು.) ಕೂದಲಪಟ್ಟಿ ಕಟ್ಟಿರುವ.

Snook[1] ಸ್ನೂಕ್ (ನಾ.) ಹಲವು ಬಗೆಯ ಮೀನು.

Snook[2] ಸ್ನುಕ್ (ನಾ.) (ಅಸಂ.) (ಮೂಗಿಗೆ ಹೆಬ್ಬೆಟ್ಟು ಇಟ್ಟು ಬೆರಳುಗಳನ್ನು ಹಿಗ್ಗಲಿಸಿ ಮಾಡುವ) ತಿರಸ್ಕಾರ ಸೂಚಕ ಚೇಷ್ಟೆ [Cock, cut, make, a s. *or* snooks. Snooks! (ತಿರಸ್ಕಾರ ಸೂಚಕ ಉದ್ಗಾರ)]

Snóoker ಸ್ನೂಕರ್ (ನಾ.) ಬಿಲಿಯರ್ಡ್ಸ್ ಆಟದ ಮೇಜಿನಮೇಲೆ ಆಡುವ ಒಂದು ಬಗೆಯ ಆಟ (Snookered ತನ್ನ ಗುರಿಚೆಂಡು ಎದುರಾಳಿಯ ಚೆಂಡಿನಿಂದ ಮರಸಿಹೋಗಿರುವ). (ಅಸಂ.) ಪುರ್‌ವಿಚಿನ ರಾಜಸೈನಿಕ ಶಾಲೆಗೆ ಹೊಸದಾಗಿ ಸೇರಿದ ವಿದ್ಯಾರ್ಥಿ.

Snooze ಸ್ನೂಜ಼್ (ಕ್ರಿ., ನಾ.) (ಮು., ಹಗಲು ಹೊತ್ತಿನ) ಲಘು ನಿದ್ರೆ, ಸಣ್ಣ ನಿದ್ರೆ (—ಮಾಡು); ಸೋಮಾರಿತನದ ಉಪೇಕ್ಷೆಯಿಂದ—ಕಾಲಹರಣಮಾಡು, ಕಾಲ ಕಳೆ (S. time away)

Snore ಸ್ನೋ(ಅ)ರ್ (ನಾ., ಕ್ರಿ.) ಗೊರಕೆ (ಹೊಡೆ); ಗೊರಕೆ ಹೊಡೆದು ಕಾಲ ಕಳೆದುಬಿಡು (*Away* ಉಪ. ಜೊಡನೆ); ಗೊರಕೆ ಹೊಡೆದು ಹೊಡೆದು ಒಂದು ಸ್ಥಿತಿಗೆ ಬರು (S. oneself awake ಗೊರಕೆ ಹೊಡೆದು ಹೊಡೆದು ಎಚ್ಚರಗೊಳ್ಳು. S. oneself into a nightmare ಗೊರಕೆ ಹೊಡೆಯುತ್ತ ಘೋರ ಸ್ವಪ್ನ ಕಾಣು). **Snórer** (ನಾ.)

Snort ಸ್ನಾರ್ಟ್ (ನಾ., ಕ್ರಿ.) (ಕೋಪ, ರೋಷ, ಅಪನಂಬಿಕೆ, ಮೊ. ನ್ನು ಸೂಚಿಸುವ, ಮೂಗಿನಿಂದ ಥಟ್ಟನೆ ಬಲಾತ್ಕಾರವಾಗಿ ಉಸಿರು ಹೊರಡಿಸುವುದರಿಂದ ಆಗುವ ಅಥವಾ ಆವಿ ಎಂಜಿನು, ಮೊ. ಗಳ) ಗುಟರಿಕೆ, ಘೂರ್ಣನ. (ಕ್ರಿ.) ಘೂಂಕರಿಸು, ಘೂರ್ಣಿಸು; (ಪ್ರತಿಭಟನೆ, ಮೊ. ನ್ನು) ಘೂಂಕರಿಸಿ ತೋರು, ಹೇಳು (*Out* ಉಪ. ಜೊಡನೆ). **Snórter** (ನಾ.) (ಕ್ರಿಯಾರ್ಥಗಳಲ್ಲಿ); (ಅಸಂ.) ಭೋರ್ಗರೆವ ಬಿರುಗಾಳಿ; (ಶಕ್ತಿ, ಜೋರು, ಮೊ. ಗಳಲ್ಲಿ) ಭಾರಿಯಾದುದು, ಪ್ರಚಂಡವಾದುದು (ಉದಾ., ಕಾದಾಟ, ಹೊರವಾದ ಬೆಳೆ, ಮೊ. ವು)

Snot ಸ್ನಾಟ್ (ನಾ.) (ಸಭ್ಯ ಪ್ರ. ವಲ್ಲ) ಸಿಂಬಳ, ಗೊಣ್ಣೆ (S.-rag ಮೂಗೊರಸುವ—ಬಟ್ಟೆ, ಕೈಚೌಕ). (ವ್ಯಕ್ತಿಯನ್ನು ಕುರಿತು ಕೀಳು ಬೈಗುಳದ ಮಾತಾಗಿ ಸಹ ಪ್ರ.) ಸಿಂಬಳಬುರುಕ. **Snótty** (ಗು., ನಾ.) (ಸಭ್ಯ ಪ್ರ. ವಲ್ಲ) ಸಿಂಬಳ ಸುರಿಯುತ್ತಿರುವ, ಸಿಂಬಳಬುರುಕನಾದ (ಕೀಳು ಬೈಗುಳದ ಮಾತಾಗಿ ಸಹ ಪ್ರ.). (ನಾ.) (ನಾವಿಕ ಅಸಂ.) ಹಡಗಿನ ಒಬ್ಬ ಅಧಿಕಾರಿ (=Midshipman). **Snóttily** (ಕ್ರಿ. ವಿ.); **Snóttiness** (ನಾ.)

Snout ಸ್ನೌಟ್ (ನಾ.) (ಪ್ರಾಣಿಯ, ತಿರಸ್ಕಾರವಾಗಿ ಮನುಷ್ಯನ) ಮೂಗು (ಮತ್ತು ಬಾಯಿ), ಮೂತಿ, ಮುಸುಡಿ; (ಒಂದರ) ಮೊನಚು ಮುಂಭಾಗ, ಮೂತಿ (S. of glacier, etc.). S.-beetle ಚಾಚು ಮೂತಿ ಜೀರುಂಡೆ. S.-ring (ಬೇರುಗಳನ್ನು ಬಗೆದುಹಾಕದಂತೆ ಹಂದಿಯ ಮುಸುಡಿಗೆ ಹಾಕುವ) ಮುಸುಡಿಯುಂಗುರ. **(-)snouted** (ಗು.)

Snow ಸ್ನೋ (ನಾ.) ವಾಯುಮಂಡಲದಲ್ಲಿಯ ಆವಿ ಘನೀಭೂತವಾಗಿ, ನೆಲದಮೇಲೆ ಬಿಳಿಯ ಹಲ್ಲೆಗಳಾಗಿ ಬೀಳುವ ಅಥವಾ ಪದರವಾಗಿ ಹರಡಿಕೊಳ್ಳುವ, ನೀರ್ಗಲ್ಲ ಹಳುಕು: (ಘನ) ಹಿಮ, ಹಳುಕು ಮಂಜು; ಐಕಿಲ್ (ಗ್ರಾಂ.) [Red s. ಮಂಜು ಪಾಚಿ, ಹಿಮ ಶೈವಲ (=S. plant)]; (ಬ.ವ.ದಲ್ಲಿ) ಹಿಮವರ್ಷ, ಮಂಜು ಸುರಿತ (Where are the snows of last year? ಹೋದ ವರ್ಷದ ಮಂಜು ಸುರಿತ ಈಗೆಲ್ಲಿ?); (ಮು., ಬಳುಪಿನಲ್ಲಿ) ಹಿಮವನ್ನು ಹೋಲುವ ವಸ್ತು (The snows of seventy years ಎಪ್ಪತ್ತು ವರ್ಷದ ಬಿಳಿಗೂದಲು, ನರೆಗೂದಲು. Apple, chestnut, etc. of s. ಹಲವು ಬಗೆಯ ಕಡುಬು ಭಕ್ಷ್ಯಗಳು). **Snówball** (ನಾ., ಕ್ರಿ.) (ಎಸೆಯುವುದಕ್ಕಾಗಿ, ಗಟ್ಟಿಯಾಗಿ ಒತ್ತಿಮಾಡಿದ) ಮಂಜಿನ, ಹಿಮದ, —ಚೆಂಡು. ಪ್ರತಿಯೊಬ್ಬ ಚಂದಾದಾರನೂ ಗೊತ್ತಾದ ಸಂಖ್ಯೆಯ ಹೊಸ ಚಂದಾದಾರರನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹುಡುಕಿ ಕೂಡಿಸುವ ನಿಧಿ: ಹೊಂಚಿಕೆ ನಿಧಿ, ತೆರಳೆ ನಿಧಿ. ಮಂಜಿನ ಚೆಂಡನ್ನು ಹೋಲುವ ಹಲವು ಬಗೆಯ ಭಕ್ಷ್ಯ (ಉದಾ., ಸೇಬನ್ನು ಅಕ್ಕಿಯ ಕಣಕದೊಳಗಿಟ್ಟು ಮಾಡಿದ ಭಕ್ಷ್ಯ). (ಕ್ರಿ.) (ಆಟಕ್ಕಾಗಿ) ಮಂಜಿನ ಚೆಂಡುಗಳಿಂದ ಹೊಡೆ(ದಾಡು); ಮಂಜಿನ ಚೆಂಡೆಸೆತದ ಪಂದ್ಯ ವಾಡು. **Snowberry** ಬಿಳಿಯ ಹಣ್ಣು ಬಿಡುವ ಒಂದು ತೋಟದ ಗುಲ್ಮ. **S.-bird** ಹಲವು ಬಗೆಯ (ಅರೆ) ಬಿಳುಪು ಫ್ಲಿನ್ಷ್ ಹಕ್ಕಿ. **S.-blind** (ಮಂಜು ಹರವಿನಲ್ಲಿ ಪ್ರತಿಫಲಿತವಾದ ಸೂರ್ಯಪ್ರಕಾಶದಿಂದ ಅಕ್ಷಿಪಟ ದುರ್ಬಲವಾಗಿ) ಮಂಜುಗುರುಡಾದ, ಹಿಮಾಂಧ. **S.-blindness** ಮಂಜುಗುರುಡು, ಹಿಮಾಂಧತೆ. **S.-blink** ಆಕಾಶದಲ್ಲಿ ತೋರುವ ಮಂಜು ಹರವಿನ ಅಥವಾ ನೀರ್ಗಲ್ಲ ಹರವಿನ ಪ್ರತಿಫಲನ: ಮಂಜು ಹೊಳಪು. **S.-boots** ರಬ್ಬರು ಮತ್ತು ಬಟ್ಟೆಗಳಿಂದ ಮಾಡಿದ ಮೇಲ್ಜೋಡು: ಮಂಜು ಜೋಡು. **S.-bound** (ಪ್ರಯಾಣ ಮಾಡದಂತೆ) ಮಂಜು ತಡೆಗಟ್ಟಿದ, ಹಿಮಬದ್ಧ. **S.-bunting** = S.-bird. **S.-cap** ಬಿಳಿಯ ನೆತ್ತಿಯ ಒಂದು ಹಾಡುಹಕ್ಕಿ. **S.-capped** (ಬೆಟ್ಟ) ಮಂಜು ನೆತ್ತಿಯ, ಹಿಮ ಮಕುಟವುಳ್ಳ. **S.-drift** ಗಾಳಿಯ ಹೊಡೆತಕ್ಕೆ ಸಿಕ್ಕಿ ಒಟ್ಟಿಲಾದ ಮಂಜುಗುಡ್ಡೆ; ಮಂಜುದಿಣ್ಣೆ. **Snowdrop** ಬಿಳಿಯ ಹೂವು ಬಿಡುವ ಒಂದು ಮುನ್‌ವಸಂತದ ಗಿಡ. **S.-fall** (ಒಂದು ಸ್ಥಳದಲ್ಲಿ ಒಂದು ಸಲಕ್ಕೆ ಬಿದ್ದ ಅಥವಾ ಒಂದು ವರ್ಷದಲ್ಲಿ ಬಿದ್ದ) ಮಂಜು ಸುರಿತ(ದ ಮೊತ್ತ), ಹಿಮಪಾತ. **S.-field** (ಬೆಟ್ಟದ, ಧ್ರುವದ,—ಪ್ರದೇಶಗಳಲ್ಲಿಯ) ಮಂಜು ಹರವು, ಹಿಮಭೂಮಿ. **S.-flake** ಮಂಜಿನ, ಹಿಮದ, —ಹಳುಕು, ಹಲ್ಲೆ. **S.-gauge** ಹಿಮವರ್ಷ ಮಾಪಕ. **S.-goggles** ಹಿಮಗುರುಡನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಹಾಕಿಕೊಳ್ಳುವ ಕನ್ನಡಕ: ಹಿಮ, ಮಂಜು, —ಕನ್ನಡಕ. **S.-goose** (ಕಪ್ಪು ತುದಿಯ ರೆಕ್ಕೆಗಳುಳ್ಳ, ಉತ್ತರ ಧ್ರುವಪ್ರದೇಶದ) ಹಿಮ ಬಾತು ಕೋಳಿ. **S.-grouse** ಒಂದು ಬಗೆಯ ಹಕ್ಕಿ. **S.-ice** ಕರಗು ಮಂಜಿನಿಂದ ಆದ, ಅಪಾರದರ್ಶಕವಾದ, ಬಿಳಿಯ ನೀರ್ಗಲ್ಲು: ಮಂಜು ನೀರ್ಗಲ್ಲು. **S.-leopard** ಒಂದು ತೆರದ ಸಣ್ಣ ಜಾತಿಯ ಚಿರತೆ. **S.-line** (ಒಂದು ಸ್ಥಳದಲ್ಲಿ) ಯಾವ ಮಟ್ಟಕ್ಕಿಂತ ಮೇಲೆ ಸದಾ ಕಾಲವೂ ಹಿಮ ಇರುವುದೋ ಆ ಮಟ್ಟ: ಮಂಜು ಮಟ್ಟ, ಹಿಮರೇಖೆ. **S.-man** ಮಕ್ಕಳು, ಮೊ. ರು ಮಂಜುಗಡ್ಡೆಯಿಂದ ಮಾಡಿ ನಿಲ್ಲಿಸಿದ ಮನುಷ್ಯಾಕೃತಿ: ಮಂಜು ಮನುಷ್ಯ. **S.-on-the-mountain** ಬಿಳಿಯ ಹೂವು ಬಿಡುವ ಹಲವು ಬಗೆಯ ತೋಟದ ಸಸ್ಯ. **S.-owl, Snowy owl** ಉತ್ತರ ಧ್ರುವಪ್ರದೇಶದ ಒಂದು ಗೂಬೆ: ಹಿಮ ಗೂಬೆ. **S.-plant, red s.** ಮಂಜಿನಲ್ಲಿ ಬೆಳೆದು ಅದಕ್ಕೆ ಕೆಂಬಣ್ಣ ಕೊಡುವ ಒಂದು ಸೂಕ್ಷ್ಮದರ್ಶಕೀಯ ಶೈವಲ: ಮಂಜು ಪಾಚಿ, ಹಿಮಶೈವಲ. **S.-plough** ಬಿದ್ದಿರುವ ಮಂಜನ್ನು ಬದಿಗೊತ್ತಿ ದಾರಿಯನ್ನು ಸುಗಮ ಮಾಡುವುದಕ್ಕಾಗಿ, ಕುದುರೆಗೆ ಕಟ್ಟಿ ಎಳೆಯುವ ಅಥವಾ ಸ್ವಯಂಚಲ ಎಂಜಿನಿನ ಮುಂದೆ ತಗುಲಿಸಿರುವ ಸಲಕರಣೆ: ಹಿಮನೇಗಿಲು. **S.-shoes** ಹಿಮದಮೇಲೆ ನಡೆಯುವಾಗ ಕಾಲು ಹೂತುಹೋಗದಂತೆ ಹಾಕಿಕೊಳ್ಳುವ, ಟೆನಿಸ್ ದಾಂಡಿನಾಕಾರದ ಅಥವಾ ಜಾರು ಮರದ ಜೋಡು: ಮಂಜು ಜೋಡು; ನೀರ್ಗಲ್ಲ ಹಾವುಗೆ. **S.-shovel** ಹಿಮವನ್ನು ಗೋರಿಹಾಕುವ ಮರದ ಸನಿಕೆ: ಮಂಜು ಸನಿಕೆ. **S.-slip** ಹಿಮ ಘನಪ್ರಪಾತ, ಮಂಜುರುಳು. **S.-storm** ಮಂಜು ಬಿರುಗಾಳಿ. **S.-white** ಮಂಜು ಬಿಳುಪಿನ, ಹಿಮಶ್ವೇತ. **Snowless** (ಗು.); **Snowy** (ಗು.); **Snowily** (ಕ್ರಿ. ವಿ.); **Snowiness** (ನಾ.)

Snow (ಕ್ರಿ.) ಮಂಜು, ಹಿಮ, —ಬೀಳು, ಸುರಿ (It snows ಮಂಜು ಬೀಳುತ್ತದೆ); ಮಂಜು, ಮಂಜಿನಂತೆ, —ಎರಚು, ಬರು, ಹರಡು (Snowed up, in ಹಿಮಬದ್ಧ, ಮಂಜಿನಿಂದ ತಡೆಗಟ್ಟಿದ). S. under (ಅಮೆ. ಸಂ.) ಹಿಮ(ದಿಂದ ಹೇಗೋ ಹಾಗೆ) ಕವಿಸು, ಮುಚ್ಚು; ಭಾರಿ ಸಂಖ್ಯೆ, ಮೊ. ಗಳಿಂದ ಮುಳುಗಿಸಿಬಿಡು, ಪೂರ್ತಿ ಸೋಲಿಸಿಹಾಕು (ಮು., ಕರ್ಮಣಿಯಲ್ಲಿ: ಉದಾ., ಚುನಾವಣೆಯಲ್ಲಿ ವಿಪರೀತ ಬಹು ಮತದಿಂದ ಸೋಲಿಸಲ್ಪಟ್ಟು)

Snub[1] ಸ್ನಬ್ (ಕ್ರಿ. ಸಕ., ನಾ.) (ತೀಕ್ಷ್ಣವಾದ ಮಾತುಗಳಿಂದ, ನಿರ್ದಾಕ್ಷಿಣ್ಯ ಒರಟುತನದಿಂದ) ಬಾಯಿ ಮುಚ್ಚಿಸಿ ಕೂರಿಸು, ದಬಾಯಿಸು, ಮುಖ ಮುರಿ, ಝಂಕಿಸು, ಅಡಗಿಸು, ಗದರಿಸಿ ಅವಮಾನಗೊಳಿಸು, ಛೀಮಾರಿ ಮಾಡು [**Snúbbing** (ನಾ.); **Snúbbingly** (ಕ್ರಿ. ವಿ.)]; (ಕಟ್ಟು ಕಂಬಕ್ಕೆ ಹಗ್ಗ ಸುತ್ತುಗಟ್ಟಿ) (ಹಡಗಿನ) ಚಲನೆಯನ್ನು ತಡೆ(ಗಟ್ಟು) [Snub(bing)-post = Bollard (ಆ ಪದ ನೋಡಿ)]. (ನಾ.) ಮುಖಭಂಗ (ಮಾಡುವುದು), ಗದರಿಕೆ, ದಬಾವಣೆ, ಛೀಮಾರಿ.

Snub[2] ಸ್ನಬ್ (ಗು., ನಾ.) ಗಿಡ್ಡ ಮತ್ತು ಕೊಂಟು (ಮೂಗು); ಗಿಡ್ಡ ಮತ್ತು ತುದಿ ಚಪ್ಪಟೆಯಾಗಿ ಮೇಲಕ್ಕೆತ್ತಿಕೊಂಡ (ಮೂಗು); ಗಂಟು ಮೂಗು. **S.-nosed** (ಗು.)

Snuff[1] ಸ್ನಫ್ (ಕ್ರಿ., ನಾ.) = (ಈಗ ಹೆಚ್ಚು ರೂಢಿಯ) Sniff (ಕ್ರಿ.); ನಸ್ಯ —ಹಾಕು, ಏರಿಸು [**Snúffer** (ನಾ.)]. (ನಾ.) = (ಈಗ ಹೆಚ್ಚು ರೂಢಿಯ) Sniff (ನಾ.); ನಸ್ಯ [Take thing in s. (ಪ್ರಾಚೀ. ಪ್ರ.) (ಒಂದರಿಂದ) ಅಸಮಾಧಾನಪಟ್ಟುಕೊ, (ಒಂದನ್ನು) ಅಪಚಾರವಾಗಿ ಭಾವಿಸು. Up to s. (ಅಸಂ.) ಚೆನ್ನಾಗಿ ಬಲ್ಲ, ಚಾಲಾಕಾದ; ಹಸುಗೂಸಲ್ಲದ, ಏನೂ ಅರಿಯದವನಲ್ಲದ]. ನಸ್ಯದಂತೆ ಮೂಗಿನಲ್ಲಿ ಸೇದಿ ತೆಗೆದು ಕೊಳ್ಳಬೇಕಾದ ಔಷಧ: ನಸ್ಯೌಷಧ. **S.-box** ನಸ್ಯದ —ಡಬ್ಬಿ, ಭರಣಿ. **S.-colour(ed)** ದಟ್ಟವಾದ ಹಳದಿ ಛಾಯೆಯ ಕಂದು ಬಣ್ಣ(ದ); ನಸ್ಯದ ಬಣ್ಣ(ದ). **S.-mill** ನಸ್ಯದ ಪುಡಿ ಮಾಡುವ ಯಂತ್ರ; ನಸ್ಯದ ಡಬ್ಬಿ. **S.-taker** ನಸ್ಯ ಹಾಕುವವನು. **S.-king** ನಸ್ಯದ ದೊರೆ; ನಸ್ಯಾಧೀಶ್ವರ. **Snúffy** (ಗು.) ನಸ್ಯದಂಥ; ನಸ್ಯ ಹಾಕುವ; ನಸ್ಯದ ಕರೆಯಾದ; ಬೇಗ ಅಸಮಾಧಾನಪಟ್ಟುಕೊಳ್ಳುವ, ತಪ್ಪು ತಿಳಿದುಕೊಳ್ಳುವ. **Snúffiness** (ನಾ.)

Snuff[2] ಸ್ನಫ್ (ಕ್ರಿ., ನಾ.) (ಮೋಂಬತ್ತಿಯನ್ನು, ಬತ್ತಿಯನ್ನು, ಬೆರಳಿನಿಂದ, ಕತ್ತರಿಯಿಂದ) ಕರಿಕು ತೆಗೆದು ಸರಿಮಾಡು; ಕರಿಕು ಕತ್ತರಿಸು, ಬತ್ತಿ ಸಮರು [S. out ಸಮರಿ, ಕತ್ತರಿಸಿ —ಆರಿಸಿಬಿಡು, ನಂದಿಸು; (ರೂಪ.) His hopes were snuffed out ಅವನ ಆಸೆಗಳೆಲ್ಲ ಕತ್ತರಿಸಿಹೋದುವು, ನಂದಿಹೋದುವು. S. out (ಅಸಂ.) ಸಾಯಿ. Can s. a candle with a pistol ಪಿಸ್ತೂಲು ಹಾರಿಸಿ ದೀಪ ನಂದದಂತೆ ಕರಿಕು ಕತ್ತರಿಸಬಲ್ಲನು]. (ನಾ.) (ಮೋಂಬತ್ತಿಯ, ಬತ್ತಿಯ) ಕರಿಕು, ಕಿಟ್ಟ. **Snúffers** (ನಾ.) (ಬ. ವ.) ಕರಿಕು, ಕಿಟ್ಟ, —ಕತ್ತರಿ. **Snuffer-dish, -tray** ಕರಿಕು, ಕಿಟ್ಟದ —ಬಟ್ಟಲು, ತಟ್ಟೆ.

Snúffle ಸ್ನಫ್‌ಲ್ (ಕ್ರಿ., ನಾ.) ಮೂಗಿನಲ್ಲಿ 'ಸ್ನಿಫ್' ಎಂದು ಗಾಳಿ ಎಳೆ(ದುಕೊ); —ಎಳೆಯುವ ಸದ್ದು ಮಾಡು; ಸೊರಗುಟ್ಟು; ತಿರಸ್ಕಾರ ಸೂಚಕವಾಗಿ ಸೊರಗುಟ್ಟು (*At* ಉಪ. ದೊಡನೆ); ಆಘ್ರಾಣಿಸು; ಮೂಗಿನಲ್ಲಿ ಗೊಂಯ್ ಗೊಂಯ್ ಎಂದು, ನೆಗಡಿ ಹಿಡಿದವನಂತೆ, —ಮಾತನಾಡು (S. out ಗೊಂಯ್ ಗೊಂಯ್ ಎಂದು ಉಚ್ಚರಿಸು, ಹೇಳು). (ನಾ.) ಮೂಗಿನಲ್ಲಿ 'ಸ್ನಿಫ್' ಎಂದು ಗಾಳಿ ಎಳೆತ; —ಎಳೆತದ ಸದ್ದು; ಸೊರಗುಟ್ಟುವಿಕೆ. ಗೊಂಯ್ ಗೊಂಯ್ —ಶಬ್ದ, ಮಾತು. **Snúffler** (ನಾ.) ಮೂಗಿನಲ್ಲಿ ಮಾತನಾಡುವವನು; ಮತನಿಷ್ಠೆಯ ನಟನೆಯಿಂದ (ಮೂಗಿನಲ್ಲಿ) ಮಾತಾಡುವವನು. **Snúfflingly** (ಕ್ರಿ. ವಿ.)

Snug ಸ್ನಗ್ (ಗು.) ಉಗ್ರ ವಾಯುಸ್ಥಿತಿಯಿಂದ, ಚಳಿಯಿಂದ, —ಮರೆಯಾದ, ರಕ್ಷಿತವಾದ; ಚೆನ್ನಾಗಿ ಮುಚ್ಚುಮರೆಯಿರುವ, ಒಳ ಸೇರಿರುವ; (ಸ್ಥಳದಲ್ಲಿ) ಚೆನ್ನಾಗಿ ಅಡಕವಾದ, ಭದ್ರವಾದ. ಬೆಚ್ಚಗೆ, ಸುಖವಾಗಿ, —ಸೇರಿಕೊಂಡಿರುವ; ಸುಖಕರವಾದ, ಬೆಚ್ಚನೆಯ (As s. as a bug in a rug ಕಂಬಳಿಯಲ್ಲಿಯ ತಿಗಣೆಯಂತೆ ಬೆಚ್ಚಗೆ ಸೇರಿಕೊಂಡಿರುವ). (ಆದಾಯ, ಔತಣದ ಊಟ, ಮೊ. ಗಳ ವಿಷಯದಲ್ಲಿ) ತಕ್ಕಮಟ್ಟಿನ, ತಕ್ಕಮಟ್ಟಿಗೆ ಒಳ್ಳೆಯದಾದ. **Snúgly** (ಕ್ರಿ. ವಿ.); **Snúgness** (ನಾ.); **Snúggery** ಸ್ನಗರಿ (ನಾ.) ಬೆಚ್ಚನೆಯ, ಸುಖಕರವಾದ, —ಸ್ಥಳ (ಮು., ಒಬ್ಬನ ಏಕಾಂತದ, ಸ್ವಂತ, ಕೊಠಡಿ) (ಪ್ರವಾಸಿ ಗೃಹದಲ್ಲಿ) ಪಾನಶಾಲೆಯ ನಡುಮನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Snúggle ಸ್ನಗ್‌ಲ್ (ಕ್ರಿ.) ಬೆಚ್ಚಗೆ ಹತ್ತಿರ, ಒಂದರಲ್ಲಿ, —ಸೇರಿಕೊ (*Up to*); (ಮಗು, ಮೊ. ನ್ನು) ಎದೆಗೆ ಅಪ್ಪಿಕೊ, ಅವಚಿಕೊ, ಅಪ್ಪಿಕೊಂಡು ಮುದ್ದಾಡು (*To* ಉಪ. ದೊಡನೆ)

So ಸೋ (ಕ್ರಿ. ವಿ., ಸಂ. ಅವ್ಯ., ಭಾವ. ಅವ್ಯ., ಸ. ನಾ.) ಅಷ್ಟು, ಅಷ್ಟೊಂದು, ಇಷ್ಟು, ಇಷ್ಟೊಂದು, ಅಂತೆ(ಯೆ), ಹಾಗೆ(ಯೆ), ಹೀಗೆ(ಯೆ), ಅಂತು, ಇಂತು, ಆ ಪ್ರಕಾರ, ಈ ಪ್ರಕಾರ, ವರೆಗೆ, ಮಟ್ಟಿಗೆ [I am not so eager as you ನಿನ್ನಷ್ಟು ನಾನು ಆತುರನಾಗಿಲ್ಲ. (ದ್ವಿರುಕ್ತಿ, ವಿರ. ಪ್ರ.) So many men so many minds ಎಷ್ಟು ಜನರೋ ಅಷ್ಟು ಮನಸ್ಸುಗಳು. So and so only can it be done ಹಾಗೆ ಮಾತ್ರವೇ ಅದನ್ನು ಮಾಡಲು ಸಾಧ್ಯ. Stand just so ಸ್ವಲ್ಪ ಹಾಗೆ(ಯೆ) ನಿಂತುಕೊ. So far ಅ, ಈ, ಅಲ್ಲಿಯ, ಇಲ್ಲಿಯ, —ವರೆಗೆ (So far it has not happened ಈ, ಇಲ್ಲಿಯ, —ವರೆಗೆ ಅದು ಸಂಭವಿಸಿಲ್ಲ); ಅ, ಈ, —ಮಟ್ಟಿಗೆ (So far you are right ಆ ಮಟ್ಟಿಗೆ ನೀನು ಸರಿ). So far as, In so far as, (ಪ್ರಾಚೀ. ಪ್ರ.) So far forth as ಅ, ಈ, —ಮಟ್ಟಿಗೆ, ವರೆಗೆ. And so forth and so on ಇನ್ನೂ ಹಾಗೆಯೆ, ಹೀಗೆಯೆ; ಇತ್ಯಾದಿ. So long as (ಕಾಲಾವಧಿ ಮತ್ತು ಅದನ್ನು ಹೋಲುವ ವಿಧಿ—ಇವುಗಳ ಸೂಚನೆಯ ಸಂದರ್ಭದಲ್ಲಿ) —ವರೆಗೂ, ವರೆಗೆ. So be it (ಅಂಗೀಕಾರ, ವಿಧಿಯಿಲ್ಲದೆ ಸಮ್ಮತಿಸುವುದು, ಮೊ. ಗಳಲ್ಲಿ) ಸರಿ, ಆಗಲಿ; ಹಾಗೆಯೆ ಆಗಲಿ; ತಥಾಸ್ತು. So long (ಮತ್ತೆ ನೋಡುವವರೆಗೆ) ನಮಸ್ಕಾರ. So much for ಅದರ ವಿಷಯದಲ್ಲಿ (ಹೇಳಬೇಕಾದುದು, ಮಾಡಬೇಕಾದುದು) ಅಷ್ಟೆ, ಅಷ್ಟು ಸಾಕು. Is only so much rubbish ಅಷ್ಟೂ ಬರಿಯ ಕಸವೇ, ಹೊಲಸೇ. At so much a week, a head ವಾರಕ್ಕಿಷ್ಟು, ತಲೆಗಿಷ್ಟು; —ಇಷ್ಟರಂತೆ, —ಅಷ್ಟರಂತೆ. So much of one ingredient & so much of another ಆ ಪರಿಕರ ಅಷ್ಟು ಈ ಪರಿಕರ ಇಷ್ಟು. Not so much as —ಕ್ಕಿಂತ ಕಡಮೆ; ಅಷ್ಟು ಇಲ್ಲ. So high that you cannot reach it ನಿನಗೆ ನಿಲುಕದಷ್ಟು ಎತ್ತರದಲ್ಲಿ. Warned him so that he might avoid the danger ಅವನು ಅಪಾಯವನ್ನು ತಪ್ಪಿಸಿಕೊಳ್ಳಲೆಂದು ಎಚ್ಚರಿಕೆ ಕೊಟ್ಟೆನು. All precautions have been taken, so that we expect to succeed ನಾವು ಎಲ್ಲ ಎಚ್ಚರಿಕೆಗಳನ್ನೂ ತೆಗೆದುಕೊಂಡಿದ್ದೇವೆ; ಆದ್ದರಿಂದ ನಾವು ಜಯ ಹೊಂದಬಹುದೆಂದು ನಿರೀಕ್ಷಿಸುತ್ತೇವೆ. Not so deaf but he can hear a cannon ಫಿರಂಗಿ ಹೊಡೆತ ಕೇಳದಿರುವಷ್ಟು ಅವನು ಕಿವುಡನಲ್ಲ. So many worlds! ಎಷ್ಟೊಂದು ಲೋಕಗಳು! I am so glad! ನನಗೆ ಎಷ್ಟೋ ಸಂತೋಷ! She is so beautiful! So kind of you! ಬಹಳ ದಯೆ ತೋರಿಸಿರುತ್ತೀರಿ! ನೀವು ಬಹಳ ಕೃಪಾಶಾಲಿಗಳು! (ಬಳ. ಮಾ. ಅಥವಾ ಗ್ರಾಮ್ಯ) That is ever so much better ಅದು ಎಷ್ಟೊಂದು ಮೇಲು! ಬಹಳ ಮೇಲು! So help me God! (Help ನೋಡಿ)]. ಅದರ ಪ್ರಕಾರ, ಅದರಂತೆ, ಆದ್ದರಿಂದ, ಅದಕಾರಣ [He says he was not there, so he doubtless was not. So, and so, I cannot come ಆದ್ದರಿಂದ ನಾನು ಬರಲಾರೆ. So that's that (ಬಳ. ಮಾ.) (ಹೇಳಿಕೆ, ವಾದ, ಮೊ. ನ್ನು ಮುಕ್ತಾಯಗೊಳಿಸುವಲ್ಲಿ) ವಿಷಯ ಅಷ್ಟು, ಹಾಗಿದೆ]. ಮತ್ತು, ಕೂಡ, ನಿಜವಾಗಿ [Yes, I denied it, but (*or* and) so did you ಹೌದು, ನಾನು ಇಲ್ಲವೆಂದೆ; ಆದರೆ (ಮತ್ತು) ನೀನೂ ಇಲ್ಲವೆಂದೆ. You said it was good, and so it is ನೀನು ಚೆನ್ನಾಗಿದೆ ಎಂದು ಹೇಳಿದೆ; ನಿಜ, ಹಾಗೆಯೆ ಇದೆ. Your birthday? Yes, so it is]. ಇದನ್ನು, ಅದನ್ನು, ಹೀಗೆಂದು, ಹಾಗೆಂದು [So he said. So spake Achilles —ಎಂದು ಅಕಿಲಸ್ ಹೇಳಿದನು, & Patroclus so ಮುಂದೆ ಹೇಳುವಂತೆ ಪೆಟ್ರೋಕ್ಲಸ್ ಹೇಳಿದನು. (ಕ್ರಿ. ಅಧ್ಯಾಹಾರವಾಗಿ) So Satan —ಎಂದು ಸೈತಾನ್ ಹೇಳಿದನು. I suppose so ನನಗೂ ಹಾಗೆಯೇ ತೋರುತ್ತದೆ. I told you so ಅದನ್ನು, ಹಾಗೆಂದು, ನಾನು ಮೊದಲೆ ನಿನಗೆ ಹೇಳಿದೆನು (ನಾನು ಎಚ್ಚರಿಕೆ ಹೇಳಿದ್ದು ವ್ಯರ್ಥವಾಯಿತು ಎಂಬ ಅರ್ಥದಲ್ಲಿ). So-called (ಒಂದರ ಯಾಥಾರ್ಥ್ಯದಲ್ಲಿ ಸಂದೇಹ ಸೂಚಿಸುವಾಗ) —ಎಂದು ಎನ್ನಿಸಿಕೊಂಡಿರುವ, ಕರೆಯುವ, ಹೇಳುವ. So to say *or* speak (ಅತ್ಯುಕ್ತಿ, ರೂಪಕ, ಹೊಸ ಪ್ರಯೋಗ, ಮೊ. ಸಂದರ್ಭದಲ್ಲಿ ವಿವರಣಾತ್ಮಕವಾಗಿ ಅಥವಾ ಸಮಾಧಾನಾತ್ಮಕವಾಗಿ) ಹಾಗೆ ಹೇಳುವುದಾದರೆ. You don't say so? (ಆಶ್ಚರ್ಯ ಸೂಚಿಸುವಲ್ಲಿ) ನೀನು ಹಾಗೆಂದು ಹೇಳುವೆಯೊ? ಹಾಗೆ ಹೇಳುವುದಿಲ್ಲವಷ್ಟೆ? Perhaps it is not so. Even if it were so. Though it was, things were, ever *or* never so bad (ಗ್ರಾಮ್ಯ) ಪರಿಸ್ಥಿತಿ ಎಷ್ಟೇ ಕೆಟ್ಟದ್ದರೂ, ಹಾಳಾಗಿದ್ದರೂ. (It is ಎಂಬ ಪದಗಳನ್ನು ಅಧ್ಯಾಹಾರ ಮಾಡಿ) If so = If it is so. (Is that ಎಂಬ ಪದಗಳನ್ನು ಅಧ್ಯಾಹಾರ ಮಾಡಿ): 'He went off yesterday' 'So?' = Is that so? Quite so, just so (ಸಮ್ಮತಿಯ ರೂಪಗಳು) ಸರಿ(ಯೆ), ಹಾಗೆಯೆ. (ಪ್ರಾಚೀ. ಪ್ರ.) And so ತರುವಾಯ, ಆಮೇಲೆ (And so to dinner ತರುವಾಯ ಊಟಕ್ಕೆ ಎದ್ದೆವು). (ಪ್ರಾಚೀ. ಪ್ರ.) So please you ತಮ್ಮ ಅನುಗ್ರಹದಿಂದ, ತಮ್ಮ ಕೃಪೆಯಿಂದ. (ಕೆಲವು ಅಧ್ಯಾಹಾರ ಪ್ರ. ಗಳಲ್ಲಿ): If you are content, so ನಿನಗೆ ತೃಪ್ತಿಯಾದರೆ, ಸಂತೋಷ, ಹಾಗೇ ಆಗಲಿ]. (ಭಾವ. ಅವ್ಯ.) ಅಷ್ಟು ಸಾಕು; ಇರಲಿ; ಹಾಗೆಯೆ, ಚಲಿಸದೆ, —ನಿಲ್ಲು; ಸುಮ್ಮನಿರು [= Soh ಪದದ ಎರಡನೆಯ ಅರ್ಥ (Soh ನೋಡಿ)]. [(ಸಂಬಂಧಸೂಚಕ ಶಬ್ದಗಳೊಡನೆ ಸಮಾಸದಲ್ಲಿ): Whoso, whosoever ಯಾರಾದರೂ, ಯಾರೇ ಆಗಲಿ. So-and-so (ಹೆಸರು ಹೇಳಬೇಕಾಗಿಲ್ಲದ ಸಂದರ್ಭದಲ್ಲಿ) ನದರಿ ಆಸಾಮಿ, ಅದು (Never mind what so-and-so says ಆ ಮನುಷ್ಯ ಹೇಳುವುದನ್ನು ಗಮನಿಸಬೇಡ. Tell me to do so-and-so ನನಗೆ ಇದನ್ನು, ಇಂಥದನ್ನು, ಮಾಡು ಎಂದು ಹೇಳು). So so ಹಾಗೆ ಹಾಗೆಯೇ, ಅಷ್ಟಷ್ಟೇ, ಸಾಮಾನ್ಯ [= **Só-so** (ಅಖ್ಯಾತಕ ಗು., ಕ್ರಿ.ವಿ.)]. Or so (ಮೊತ್ತ, ಸಂಖ್ಯೆ, ಮೊ. ಗಳ ತರುವಾಯ ಪ್ರ.) (—ರ) ಸುಮಾರು (Half-a-dozen *or* so. 1 lb *or* so will do)]

Soak ಸೋಕ್ (ಕ್ರಿ., ನಾ.) (ಹೀರಿಕೊಳ್ಳುವ ವಸ್ತುವಿನ ವಿಷಯದಲ್ಲಿ; ದ್ರವವನ್ನು) ಹೀರಿಕೊ (*Up* or *in* ಉಪ. ದೊಡನೆ); ನೆನೆ(ಯ, ಹಾಕು), ಊನಿ(ಸು), ನೆನಸು, ಊರಹಾಕು (*In* ಉಪ. ದೊಡನೆ); (ಮಳೆ, ಮೊ. ಗಳ ವಿಷಯದಲ್ಲಿ) ತೋಯಿಸು; (ಮಳೆ, ಮೊ. ರಿಂದ) ತೋಯಿ, ತೊಯ್ದುಹೋಗು; (ತೇವದ ವಿಷಯದಲ್ಲಿ) ಒಳಕ್ಕೆ ಇಳಿ, ಊರು, ಹೀರಿಹೋಗು (*In, into, through* ಉಪ. ದೊಡನೆ). ಒಂದೇ ಸಮನೆ ಕುಡಿ, ಮಿತಿಮೀರಿ ಕುಡಿ. (ನಾ.) ಹೀರಿಕೆ; ನೆನೆತ. ಮದ್ಯ ಕೇಳಿ; ಕುಡಿತದ ಆವೇಶ, ಪಟ್ಟು; ಅತಿ ಕುಡುಕ. **Soákage** (ನಾ.) ಹೀರಿಕೆ(ಯ ಮೊತ್ತ); ಒಳ ಇಳಿದ ದ್ರವ. **Soáker** (ನಾ.) (ಕ್ರಿಯಾರ್ಥಗಳಲ್ಲಿ); ಅತಿ ಕುಡುಕ; ತೊಯ್ ಮಳೆ. **Soáking** (ನಾ.)

Soap ಸೋಪ್ (ನಾ.) ಸಾಬೂನು, ಸಬಕಾರ, ಸಬ್ಬು [Insoluble soaps ನೀರಿನಲ್ಲಿ ಕರಗದ ಸಾಬೂನು (ಮೃತ್ತಿಕೆಯೊಡನಾಗಲಿ ಲೋಹದ ಆಕ್ಸೈಡಿನೊಡನಾಗಲಿ ಕೊಬ್ಬು ಬೆರಸಿ ತಯಾರಿಸಿದ್ದು). Soft s. ನೀರಿನಲ್ಲಿ ಕರಗುವ (ದ್ರವ ರೂಪದ) ಸಾಬೂನು (ಯವಕ್ಷಾರದಿಂದ ತಯಾರಿಸಿದ್ದು). (ರೂಪ.) ಮುಖಸ್ತುತಿ, ಬೆಣ್ಣೆ(ಯಂಥ) ಮಾತು]. **S.-berry, -nut, -plant, -pod, -root, -wort** ಸಾಬೂನಿನಂತೆ ಜಿಡ್ಡು ಕಳೆಯಲು ಉಪಯೋಗವಾಗುವ ವಸ್ತುಗಳನ್ನು ಕೊಡುವ ಹಲವು ಬಗೆಯ ಸಸ್ಯಗಳು (ಸೀಗೆಕಾಯಿ, ಅಂಟುವಾಳ, ಮೊ. ಗಿಡ). **S.-boiler** ಸಾಬೂನು ಮಾಡುವವನು, ಸಾಬೂನುಗಾರ; ಸಾಬೂನು ಮಾಡುವ ಕುದಿಪಾತ್ರೆ. **S.-boiling** ಸಾಬೂನು ಮಾಡುವುದು. **S.-bubble** (ಸಾಬೂನು ನೀರಿನಲ್ಲಿ ಕೊಳವಿಯನ್ನು ಅದ್ದಿ ಊದಿದರೆ ಬರುವ) ಸಾಬೂನು (ನೀರಿನ) ಗುಳ್ಳೆ. **S.-earth, S.-stone** = Steatite (ಆ ಪದ ನೋಡಿ). **S.-suds** ಸಾಬೂನು ನೊರೆ. **S.-works** ಸಾಬೂನು ಕಾರಖಾನೆ. **Soápless** (ಗು.); **Soápy** (ಗು.) ಸಾಬೂನಿನಂಥ; ಸಾಬೂನಿನ ಹಾಗಿರುವ; ಸಾಬೂನು ಹಾಕಿದ; ಜಾರಿಕೆಯ; (ವ್ಯಕ್ತಿ, ನಡತೆ, ಮಾತು, ಮೊ. ಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಯದಲ್ಲಿ) ಮುಖಸ್ತುತಿಯ, ಬೆಣ್ಣೆ ಹಚ್ಚುವ (ರೂಪ.). **Soápily** (ಕ್ರಿ. ವಿ.); **Soápiness** (ನಾ.)

Soap (ಕ್ರಿ.) ಸಾಬೂನು ಹಾಕು; —ಹಾಕಿ ಉಜ್ಜು, ಒಗೆ; ಸಾಬೂನು ಉಪಯೋಗಿಸು.

Soar ಸೋ(ಅ)ರ್ (ಕ್ರಿ. ಅಕ.) ಮೇಲಕ್ಕೆ, ಎತ್ತರವಾಗಿ, —ಹಾರು (ರೂಪ. ಸಹ) (Soaring eagle, ambition); ಬಹಳ ಎತ್ತರದಲ್ಲಿ, ಗಗನವನ್ನು ಮುಟ್ಟುವಂತೆ, —ಇರು (Soaring spire); ಬಹಳ ಎತ್ತರ ಎತ್ತರಕ್ಕೆ ಏರು; (ರೆಕ್ಕೆ ಬಡಿಯದೆ) ಆಕಾಶದಲ್ಲಿ ತೇಲು. **Soáringly** (ಕ್ರಿ. ವಿ.)

Soáve ಸೋಆವೆ, **Soaveménte** (It.) ಸೋಆವೆಮೆಂಟೆ (ಸಂ. ಸೂಚನೆ) ಮೃದುವಾಗಿ.

Sob ಸಾಬ್ (ಕ್ರಿ., ನಾ.) ಬಿಕ್ಕಿ ಬಿಕ್ಕಿ ಅಳು; ಬಿಕ್ಕು, ಗದ್ಗದಿಸು (S. out ಬಿಕ್ಕುತ್ತ, ಗದ್ಗದ ಸ್ವರದಿಂದ, —ಹೇಳು). (ನಾ.) (ಮು., ಅಳುವಿನಲ್ಲಿ) ಬಿಕ್ಕು(ವುದು), ಗದ್ಗದ. S.-stuff (ಅಮೆ. ಸಂ.) ಕರುಣಾತಿರೇಕದ ವಿಷಯ; ಬೇಗ ಕಣ್ಣೀರು ತರಿಸುವ ಬರಹ; ಗೋಳುಕರೆ. **Sóbbingly** (ಕ್ರಿ. ವಿ.)

Sóber ಸೋಬರ್ (ಗು., ಕ್ರಿ.) ಕುಡಿದಿಲ್ಲದ, ಕುಡಿಯದ, ಅಪ್ರಮತ್ತ, ಸಮ ಮನಸ್ಸಿನ [As s. as a judge. Appeal from Philip drunk to Philip sober (ಒಂದು ಕ್ಷಣದ ಮನೋಭಾವ ಇನ್ನೊಂದು ಕ್ಷಣದಲ್ಲಿ ಇರಲಾರದು ಎಂಬುದನ್ನು ಸೂಚಿಸುವಲ್ಲಿ ಪ್ರ.): ಅಮಲೇರಿದಾಗ ಪ್ರಭು ಆಡಿದ ಮಾತಿನ ವಿಷಯದಲ್ಲಿ ಆತನಿಗೆ ಅಮಲು ಇಳಿದಮೇಲೆ ಮನವಿ ಮಾಡಿಕೊ]. ಮಿತವಾಗಿ ಕುಡಿಯುವ (Is a s. man); ಅತಿಗೆ ಹೋಗದ, ಮಿತವಾದ, ಹಾಳಿತವಾದ; ಸ್ತಿಮಿತ, ಸಮತೂಕದ, ಶಾಂತ, ಸಮಾಧಾನವಾದ, ಸಂಯಮವುಳ್ಳ, ಗಂಭೀರ, ಕೆರಳದ, ಸಮಾಹಿತ ಮನಸ್ಸಿನ; (ಬಣ್ಣದ ವಿಷಯದಲ್ಲಿ) ಕಣ್ಣಿಗೆ ಹೊಡೆಯದ, ಸಾದಾ, ಹಿತ ಮಿತ; [In s. fact ವಾಸ್ತವವಾಗಿ. A s. estimate ಮಿತವಾದ ಅಂದಾಜು. S.-minded ಶಾಂತಚಿತ್ತದ, ಸ್ತಿಮಿತ ಬುದ್ಧಿಯ. S. sides ಸಮ ಮನಸ್ಕ, ಅಮತ್ತ. S.-suited (ಕಾವ್ಯ) ಶಾಂತವರ್ಣ ವಸ್ತ್ರಗಳನ್ನು, ಸಾದಾ ಉಡುಪನ್ನು, —ಧರಿಸಿದ]. (ಕ್ರಿ.) ಸ್ತಿಮಿತಕ್ಕೆ, ಶಾಂತಸ್ಥಿತಿಗೆ —ಬರು, ತರು; (ಅಮಲು, ಉದ್ರೇಕ, ಆವೇಶ, ಕೆರಳು, ಮೊ. ಗಳ ವಿಷಯದಲ್ಲಿ) ಇಳಿ(ಸು), ತಗ್ಗು, ತಗ್ಗಿಸು (ಅನೇಕ ವೇಳೆ *down* ಉಪ. ದೊಡನೆ). **Sóberly** (ಕ್ರಿ. ವಿ.); **Sobríety** ಸೊಬ್ರೈಎಟಿ (ನಾ.) ಮಿತಿಮೀರಿ ಕುಡಿಯದಿರುವುದು, ಮಿತ ಪಾನ; ಮಿತ, ಹಾಳಿತ; ಸ್ತಿಮಿತತೆ, ಶಾಂತತೆ, ಸಮತೂಕ, ಸಮಾಧಾನ, ಚಿತ್ತಸ್ವಾಸ್ಥ್ಯ, ಅನುದ್ವೇಗ.

Sobránje ಸೋಬ್ರಾನ್ಯೆ (ನಾ.) ಬಲ್ಗೇರಿಯದ ರಾಷ್ಟ್ರೀಯ ಶಾಸನ ಸಭೆ.

Sobriéty. **Sober** ನೋಡಿ.

Sóbriquet ಸೋಬ್ರಿಕೇ, **Soú-** ಸೂ— (ನಾ.) ಅಡ್ಡಹೆಸರು; ಉಪನಾಮ.

Sóc(c)age ಸಾ(ಸೋ)ಕೆ(ಕಿ)ಜ್ (ನಾ.) ಧಣಿಗೆ ಕಂದಾಯ ಕೊಡುವ ಅಥವಾ ಇತರ ಸೇವೆ ಸಲ್ಲಿಸುವ ಷರತ್ತಿನಮೇಲಿನ ಊಳಿಗಮಾನ್ಯ ಪದ್ಧತಿಯ ಜಮೀನು ಹಿಡುವಳಿ.

Sóccer, Sócker ಸಾಕರ್ (ನಾ.) ಕಾಲ್ಚೆಂಡಾಟ (ರಗ್ಬಿ ಚೆಂಡಾಟದಲ್ಲಿಯಂತೆ ಕೈಯಲ್ಲಿ ಚೆಂಡು ಮುಟ್ಟಲು ಅವಕಾಶವಿಲ್ಲದ, ದುಂಡನೆಯ ಚೆಂಡನ್ನು ಕಾಲಿನಿಂದ ಒದೆದು ಆಡುವ ಒಂದು ಆಟ)

Sóciable ಸೋಷಬ್‌ಲ್ (ಗು., ನಾ.) ಒಬ್ಬರ ಜೊತೆಯಲ್ಲಿ —ಸೇರುವ, ಬೆರೆಯುವ; (—ಒಡನೆ) ಮಾತುಕತೆ ಆಡುವ; ಸಂಗ, ಸಹವಾಸ, —ಶೀಲ, ಪರ, ಪ್ರಿಯ, ಯೋಗ್ಯ; (ಸಭೆ, ಮೊ. ಗಳ ವಿಷಯದಲ್ಲಿ) ಸ್ನೇಹ ಸೌಹಾರ್ದದ, ಮೈತ್ರೀಭಾವದ, ಹೆಚ್ಚು ಕಟ್ಟುನಿಟ್ಟಿಲ್ಲದ. (ನಾ.) ಎದುರುಬದುರಾಗಿ ಅಳವಡಿಸಿದ ಪಕ್ಕ ಪೀಠಗಳುಳ್ಳ, ಒಂದು ಬೋಳುಬಂಡಿ; ಪಕ್ಕ ಪಕ್ಕದಲ್ಲಿ ಇಬ್ಬರು ಕುಳಿತುಹೋಗಬಹುದಾದ ಮೂರು ಚಕ್ರದ ಸೈಕಲ್ಲು; ಪರಸ್ಪರ ಅಭಿಮುಖವಾಗಿ ಇಬ್ಬರು ಕುಳಿತುಕೊಳ್ಳಲು ಅನುಕೂಲಿಸುವ, ಒರಗುಬೆನ್ನುಳ್ಳ ಆರಾಮ ಪೀಠ. **Sociabílity** (ನಾ.); **Sóciably** (ಕ್ರಿ. ವಿ.); **Sócial** ಸೋಷ(ಷ್)ಲ್ (ಗು., ನಾ.) ಒಟ್ಟಾಗಿ, ಗುಂಪಾಗಿ, ಮಂದೆಗೂಡಿ, —ಇರುವ, ವಾಸಮಾಡುವ; ಸಂಘ, ಸಮಾಜ, ಸಮುದಾಯ, —ಜೀವಿ, ಪ್ರಿಯ, ಶೀಲ; ಸಾಂಘಿಕ, ಸಾಮಾಜಿಕ [Man is a s. animal ಮನುಷ್ಯ ಸಂಘಜೀವಿಯಾದ ಪ್ರಾಣಿ. S. bees, wasps ಒಂದೇ ಗೂಡಿನಲ್ಲಿ ವಾಸಮಾಡುವ ದುಂಬಿಗಳು, ಕಣಜಗಳು: ಸಹಜೀವಿ ದುಂಬಿಗಳು, ಕಣಜಗಳು. S. birds ಹತ್ತಿರ ಹತ್ತಿರ ಗುಂಪಾಗಿ ಗೂಡು ಕಟ್ಟಿಕೊಂಡು ವಾಸಿಸುವ ಹಕ್ಕಿಗಳು: ಸಮುದಾಯಜೀವಿ ಪಕ್ಷಿಗಳು. S. plants ಒಟ್ಟಾಗಿ ಬೆಳೆದು ಸುತ್ತಮುತ್ತಲ ನೆಲವನ್ನೆಲ್ಲಾ ತಾವೇ ಆಕ್ರಮಿಸಿಕೊಳ್ಳುವ ಸಸ್ಯಗಳು: ಸಾಮುದಾಯಿಕ ಸಸ್ಯಗಳು. S. polyp ಸಮುದಾಯ(ದಲ್ಲಿ ಬೆಳೆಯುವ) ಸಂಯುಕ್ತ ಜೀವಿ. S. problems ಸಾಮಾಜಿಕ ಸಮಸ್ಯೆಗಳು. S. science ಸಮಾಜ ವಿಜ್ಞಾನ. S. morality ಸಾಮಾಜಿಕ ನೀತಿ. S. student ಸಮಾಜ ಶಾಸ್ತ್ರಜ್ಞ; —ಶಾಸ್ತ್ರಾಭ್ಯಾಸಿ. S. philosopher ಸಮಾಜ ತತ್ತ್ವಶಾಸ್ತ್ರಜ್ಞ. The s. contract (ವಿರ. ಪ್ರ. compact) ಸಹಜ ಸ್ವಾತಂತ್ರ್ಯಕ್ಕೆ ಶಾಸನ ನಿಯಮಗಳ ಮಿತಿಯನ್ನು ಅಂಗೀಕರಿಸುವ ಒಡಂಬಡಿಕೆ: ಸಮಾಜ ಸಮಯ (ರಾಜಕೀಯ ಸಮಾಜಕ್ಕೆ ಇದು ತಳಹದಿ ಎಂದು ಯೂರೋಪಿನ ೧೮ನೆಯ ಶ. ಮಾ. ದ ಶಾಸ್ತ್ರಜ್ಞರು ಭಾವಿಸಿದ್ದರು). S. democrat ಕ್ರಮ ಕ್ರಮವಾಗಿ ಸಮಾಜ ಸ್ವಾಮ್ಯ ವಾದದ ಕಡೆಗೆ ಮುಂಬರಿಯುವುದರಿಂದ, ಕೆಳ ವರ್ಗದವರ ಸ್ಥಿತಿಯನ್ನು ಉತ್ತಮಪಡಿಸುವ ಗುರಿಯುಳ್ಳ ರಾಜ್ಯ ವ್ಯವಹಾರಿ: ಸಮಷ್ಟಿತತ್ತ್ವದ ಪ್ರಜಾ ವಾದಿ. The s. evil ಸೂಳೆಗಾರಿಕೆ, ವೇಶ್ಯಾವೃತ್ತಿ. S. intercourse ಸಾಮಾಜಿಕ—ಸಂಸರ್ಗ, ವ್ಯವಹಾರ. S. code ಸಾಮಾಜಿಕ ಸಮಯಾಚಾರ; ಸಮಾಜ ನಿಬಂಧನೆಗಳು. S. duties ಸಾಮಾಜಿಕ ಕರ್ತವ್ಯಗಳು. One's s. superiors and inferiors ಸಮಾಜದಲ್ಲಿ ತನಗಿಂತ ಮೇಲು ದರ್ಜೆಯವರು ಮತ್ತು ಕೆಳ ದರ್ಜೆಯವರು. S. rank, position ಸಮಾಜದಲ್ಲಿ ಅಂತಸ್ತು, ಸ್ಥಾನ. Has s. tastes ಅವನಿಗೆ ಸಮಾಜ ಸಂಪರ್ಕದಲ್ಲಿ ಇಷ್ಟವಿದೆ. S. evening ಸಾಯಂ ಗೋಷ್ಠಿ. S. gathering ಮಿತ್ರ ಗೋಷ್ಠಿ, ಸಂತೋಷ ಕೂಟ]. ಮಿತ್ರ ರಾಜ್ಯಗಳ, ಮಿತ್ರ ರಾಜ್ಯಗಳೊಡನೆಯ [The S. war (ರೋಮನ್ ಚರಿತ್ರೆ) ಮಿತ್ರ ರಾಜ್ಯಗಳೊಡನೆಯ ಯುದ್ಧ (ಕ್ರಿ. ಪೂ. ೯೦-೮೮)]. (ನಾ.) (ಸಂಘ, ಮೊ. ವು ಏರ್ಪಡಿಸಿದ) ಮಿತ್ರಗೋಷ್ಠಿ, ಸಂತೋಷ ಕೂಟ, ಸತ್ಕಾರ ಗೋಷ್ಠಿ. **Sócially** (ಕ್ರಿ.ವಿ.); **Sócialism** (ನಾ.) ವ್ಯಕ್ತಿ ಸ್ವಾತಂತ್ರ್ಯವು ಸಮಾಜದ ಹಿತಕ್ಕೆ ಸಂಪೂರ್ಣವಾಗಿ ಅಧೀನವಾಗಿರಬೇಕೆಂಬ ವಾದ ಮತ್ತು ಆ ವಾದದಿಂದ ಬಂದ ಸಿದ್ಧಾಂತಗಳು (ಉದಾ., ಕಾರ್ಖಾನೆ, ವ್ಯಾಪಾರ, ಮೊ. ಗಳಲ್ಲಿ ಸ್ಪರ್ಧೆಗೆ ಬದಲು ಸಹಕಾರ ಪದ್ಧತಿ, ಭೂಮಿ ಬಂಡವಾಳಗಳಲ್ಲಿ ರಾಷ್ಟ್ರಸ್ವಾಮ್ಯ, ಉತ್ಪನ್ನಗಳನ್ನು ರಾಷ್ಟ್ರವೇ ಹಂಚುವುದು, ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಮತ್ತು ಉಚಿತ ಭೋಜನ, ಪಿತ್ರಾರ್ಜಿತ ಹಕ್ಕನ್ನು ರದ್ದುಗೊಳಿಸುವುದು); ಉತ್ಪತ್ತಿ ಸಾಧನಗಳು, ಬಂಡವಾಳ, ಭೂಮಿ, ಆಸ್ತಿ, ಮೊ. ನ್ನು ಒಟ್ಟು ಸಮಾಜವಾಗಲಿ ಅದರ ಪರವಾಗಿ ಸರಕಾರವಾಗಲಿ ವಹಿಸಿಕೊಂಡು, ಅದು ಅವನ್ನು ಸಮಾಜದ ಎಲ್ಲರ ಹಿತಾರ್ಥವಾಗಿ ಹಂಚಿ ನಿರ್ವಹಿಸಬೇಕು ಎಂಬ ವಾದ: ಸಮಾಜ ಸ್ವಾಮ್ಯ ವಾದ; ಸಮಷ್ಟಿ (ಸ್ವಾಮ್ಯ)ವಾದ (Christian s. ಪರಿಣಾಮದಲ್ಲಿ ಸಮಷ್ಟಿ ವಾದದ ಉದ್ದೇಶಗಳನ್ನು ಕೆಲಮಟ್ಟಿಗೆ ಹೋಲುವ, ಕ್ರೈಸ್ತ ತತ್ತ್ವಗಳನ್ನು ಸಾಮಾನ್ಯ ಜೀವನಕ್ಕೆ ಅನ್ವಯಿಸಬೇಕೆಂಬ ಒಂದು ಪ್ರಯತ್ನ: ಕ್ರೈಸ್ತ ಸಮಷ್ಟಿ ವಾದ). **Sócialist** (ಗು., ನಾ.) ಸಮಾಜ ಸ್ವಾಮ್ಯ ವಾದದ; (ನಾ.) —ವಾದಿ. **Socialístic** (ಗು.); **Socialístically** (ಕ್ರಿ. ವಿ.); **Sociálity** ಸೋಷಿಆ್ಯಲಿಟಿ (ನಾ.) ಸಮಾಜ, ಸಹವಾಸ, ಸಂಗ, —ಪ್ರಿಯತೆ, ಶೀಲತೆ, ಪರತೆ; ಮಿತ್ರ ಗೋಷ್ಠಿ, ಸಂತೋಷ ಕೂಟ; ಸಾಮಾಜಿಕ ಸವ್ಯವಹಾರ; ಸಹವಾಸ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಹಕಾರ, ಮೈತ್ರಿ(*In* ಅಥವಾ *with* ಉಪ. ದೊಡನೆ) (To maintain s. with other countries). **Sócialize** ಸೋಷಲೈಸ್ (ಕ್ರಿ. ಸಕ.) ಸಾಮಾಜಿಕವಾಗಿ, ಸಮಾಜ ಯೋಗ್ಯವಾಗಿ, —ಮಾಡು ; ಸಮಷ್ಟಿವಾದದ ತತ್ತ್ವಗಳಿಗೆ ಅನುಸಾರವಾಗಿ ಏರ್ಪಡಿಸು ; ಸಮಾಜಾಧೀನ ಮಾಡು. **Socializátion** (ನಾ.) ; **Sociólogy** ಸೋಸಿ(ಷಿ)ಯಾಲೊಜಿ (ನಾ.) ಮನುಷ್ಯ ಸಮಾಜದ ಬೆಳೆವಣಿಗೆ, ಸ್ವಭಾವ, ನ್ಯಾಯ ಪದ್ಧತಿಗಳು, ಮೊ. ನ್ನು ಕುರಿತ ಶಾಸ್ತ್ರ: ಸಮಾಜ —ಶಾಸ್ತ್ರ, ವಿಜ್ಞಾನ. **Sociológical** ಸೋಸಿ(ಷಿ)ಯೊಲಾಜಿಕಲ್ (ಗು.) ; **Sociológically** (ಕ್ರಿ. ವಿ.); **Sociólogist** —ಯಾಲೊಜಿಸ್ಟ್ (ನಾ.) ಸಮಾಜ ವಿಜ್ಞಾನಿ ; ಸಮಾಜ ಶಾಸ್ತ್ರಜ್ಞ.

Socíety ಸೊಸೈಎಟಿ (ನಾ.) ಸಾಂಘಿಕ ಜೀವನ ; (ಮನುಷ್ಯ) ಸಮಾಜ (The progress of s. is an evolution ಸಮಾಜದ ಪ್ರಗತಿ ಕ್ರಮ ಕ್ರಮವಾಗಿ ಆಗುವ ಒಂದು ಸ್ವರೂಪ ವಿಕಸನ. Pests of s. ಸಮಾಜದ ಪೀಡೆಗಳು. No s. can retain members who flout its principles ತನ್ನ ತತ್ತ್ವಗಳನ್ನು ಧಿಕ್ಕರಿಸುವ ಜನರನ್ನು ಯಾವ ಸಮಾಜವೂ ಉಳಿಸಿಕೊಳ್ಳಲಾರದು) ; (ಎಲ್ಲರ ಕಣ್ಣಿಗೂ ಬೀಳುವಂಥ ಚಟುವಟಿಕೆಗಳು, ಗೋಷ್ಠಿಗಳು, ಮೊ. ನ್ನು ಉಳ್ಳ) ಸಮಾಜದ ಮೇಲು ವರ್ಗ ; ಸಮಾಜದಲ್ಲಿ ಗಣ್ಯರಾದ, ಸೊಗಸುಗಾರಿಕೆಯ, ಉಪಪನ್ನರಾದ, ಒಳ್ಳೆಯ ಕಡೆ ಸಂಬಂಧವುಳ್ಳ, ಸುಸಂಸ್ಕೃತ ವರ್ಗ : ಕುಲೀನ, ಶಿಷ್ಟ, —ಜನ, ವರ್ಗ, ಸಮಾಜ [The customs of polite s. ಶಿಷ್ಟ ಸಮಾಜದ ಪದ್ಧತಿಗಳು ; ಶಿಷ್ಟಜನ ಸಂಪ್ರದಾಯಗಳು. S. does not approve ಶಿಷ್ಟ ಸಮಾಜ ಒಪ್ಪುವುದಿಲ್ಲ. (ವಿಶೇಷಣವಾಗಿ) S. lady ಶಿಷ್ಟ (ಸಮಾಜದ) ಮಹಿಳೆ. S. gossip. S. journal ಶಿಷ್ಟ ಸಮಾಜದ ಪತ್ರಿಕೆ. S. verse ಶಿಷ್ಟ ಸಮಾಜದವರ ವಿನೋದಕ್ಕಾಗಿ, ಪ್ರಚಲಿತ ವಿಷಯಗಳನ್ನು ಕುರಿತು ಬರೆದ ಚಮತ್ಕಾರವಾದ ಲಘು ಪದ್ಯ : ಶಿಷ್ಟ ಸಮಾಜ ಪದ್ಯ] ; ಸತ್ಕಾರ ಸಮಾರಂಭ, ಸಮಾಜ ಕೂಟ, ಗೋಷ್ಠಿ (Avoids s. Is embarrassed in s. ಗೋಷ್ಠಿಯಲ್ಲಿ ಅವನು ಸಂಕೋಚಪಟ್ಟುಕೊಳ್ಳುತ್ತಾನೆ, ಮುಜುಗರಪಟ್ಟುಕೊಳ್ಳುತ್ತಾನೆ) ; ಸಹವಾಸ, ಸಂಸರ್ಗ, ಸಾಹಚರ್ಯ, ಸಂಗ, ಒಡನಾಟ [S. and solitude ಸಹವಾಸ ಮತ್ತು ಏಕಾಂತವಾಸ. Avoid the s. of (—ನ) ಸಹವಾಸ ಮಾಡದಿರು, (—ಒಡನೆ) ಸೇರದಿರು] ; (ಸಮಾನ ಉದ್ದೇಶ, ಹಿತ, ತತ್ತ್ವ, ಮೊ. ಗಳಿಂದ ಒಂದುಗೂಡಿರುವವರ) ಸಂಘ, ಮಂಡಲಿ [S. of Friends (Friend ನೋಡಿ). S. of Jesus (ಸಂಕ್ಷಿಪ್ತ : S.J.) (Jesuit ನೋಡಿ). Friendly s. (Friend ಕೆಳಗೆ Friendly ನೋಡಿ). Royal S. ೧೬೬೦ರಲ್ಲಿ ಪ್ರಕೃತಿ ಜ್ಞಾನಾಭಿವೃದ್ಧಿಗಾಗಿ ಲಂಡನಿನಲ್ಲಿ ಸ್ಥಾಪಿತವಾದ ರಾಜಪೋಷಿತ ಸಂಘ. S. for the Propagation of the Gospel (ಸಂಕ್ಷಿಪ್ತ : S.P.G.) ಬೈಬಲ್ ಪ್ರಚಾರ ಸಂಘ. Dorcas s. (Dorcas ನೋಡಿ). Co-operative s. ಸಹಕಾರ ಸಂಘ]

Sócial, Sócialism, Sociólogy, etc. Sociable ನೋಡಿ.

Sock[1] ಸಾಕ್ (ನಾ.; ವ್ಯಾಪಾರಗಾರರ ಬ. ವ. Sox ಸಾಕ್ಸ್) (ಮಂಡಿಯ ವರೆಗೂ ಬರದ) ಮೋಟು, ಗಿಡ್ಡ —ಕಾಲುಚೀಲ (Pull up your socks ಕೆಲಸಕ್ಕೆ, ಪ್ರಯತ್ನಕ್ಕೆ, —ಸಿದ್ಧನಾಗು; ಸೊಂಟ ಕಟ್ಟು). (ಶಾಖ, ಮೊ. ಗಳಿಗಾಗಿ ಜೋಡಿನ ಒಳಗಡೆ ಹಾಕಿರುವ) ಸಡಿಲವಾದ ಒಳ ಅಟ್ಟೆ ; ಬೆವರಟ್ಟೆ. ಪ್ರಾಚೀನ ಕಾಲದ ಹರ್ಷ ನಾಟಕ ನಟನು ಧರಿಸುತ್ತಿದ್ದ ಹಗುರ ಜೋಡು ; (ಇದರ ಸಂಬಂಧದಿಂದ, ಪ್ರಾಸಂಗಿಕವಾಗಿ) ಹರ್ಷ ನಾಟಕ [Buskin (ರುದ್ರ ನಾಟಕ) ಪದದೊಡನೆ ಹೋಲಿಸಿ]

Sock[2] ಸಾಕ್ (ಕ್ರಿ. ಸಕ., ನಾ., ಕ್ರಿ. ವಿ.) (ಅಸಂ.) (ಕಲ್ಲು, ಚೆಂಡು, ಮೊ. ನ್ನು) ಎಸೆ, ಒಗೆ, ಬೀರು (*At* ಉಪ. ದೊಡನೆ) ; (ಕ್ಷಿಪಣಿಯಿಂದ, ಒಬ್ಬನನ್ನು) ಹೊಡೆ, ಇಕ್ಕು. (ನಾ.) (ಕ್ಷಿಪಣಿಯಿಂದ) ಹೊಡೆತ ; ಗುದ್ದು, ಪ್ರಹಾರ (Give him socks !). (ಕ್ರಿ. ವಿ.) ಗುದ್ದಿ ; ಸರಿಯಾಗಿ, ನೇರವಾಗಿ (Hit him s. in the eye ಕಣ್ಣಿಗೆ ಸರಿಯಾಗಿ ಹೊಡೆದ)

Sock[3] ಸಾಕ್ (ನಾ., ಕ್ರಿ.) (ಪಾಠಶಾಲೆಯ ಅಸಂ.) (ಅವೇಳೆಯಲ್ಲಿ ತಿನ್ನುವ) ಮಿಠಾಯಿ, ಕಜ್ಜಾಯ, ಮೊ. ವು ; ತಿಂಡಿ, ತಿನಿಸು ; ಭಕ್ಷ್ಯ. (ಕ್ರಿ.) —ತಿನ್ನಿಸು, ತಿನ್ನು.

Sockdóloger ಸಾಕ್ಡಾಲಜರ್ (ನಾ.) (ಅಸಂ.) ತೀರ್ಮಾನಕಾರಿ (ಯಾದ ಏಟು, ವಾದ)

Sócker. Soccer ನೋಡಿ.

Sócket ಸಾಕೆಟ್ (ನಾ.) (ಮತ್ತೊಂದು ವಸ್ತು ಜೋಡಣೆಗೊಳ್ಳುವುದಕ್ಕಾಗಿ, ನೆರೆಯಾಗಿ ನಿಲ್ಲುವುದಕ್ಕಾಗಿ, ಅಥವಾ ತಿರುಗುವುದಕ್ಕಾಗಿ ಅದರ ಭಾಗ ಹಿಡಿಸುವಂತೆ ಒಂದರಲ್ಲಿರುವ ಸ್ವಾಭಾವಿಕವಾದ ಅಥವಾ ಕೃತಕವಾದ) ಗೂಡು, ಕುಳಿ [Eye-s. ಕಣ್ಣು—ಗೂಡು, ಕುಳಿ. Candle too large for s. ಮೋಂಬತ್ತಿ ಗೂಡಿಗಿಂತ ದೊಡ್ಡದಾಗಿದೆ. Ball & s. joint (Ball[1] ನೋಡಿ)] . S.-joint = Ball & s. joint. S.-pipe ಮತ್ತೊಂದು ಕೊಳವೆಯನ್ನು ಒಳಗೊಳ್ಳುವುದಕ್ಕಾಗಿ ಒಂದು ತುದಿಯನ್ನು ಹಿಗ್ಗಿಸಿದ ಕೊಳವೆ : ಗೂಡುಗೊಳವೆ. **Sócketed** (ಗು.) ಕುಳಿಯಲ್ಲಿ ಕೀಲಿಸಿದ.

Sócle ಸಾಕ್ಲ್, ಸೋಕ್ಲ್ (ನಾ.) (ವಾ. ಶಾ.) ಸುಣ್ಣಪಾದ, ಅಲಂಕಾರ ಕುಂಭ, ಪ್ರತಿಮೆ, ಮೊ. ಗಳಿಗೆ ಆಧಾರವಾದ, ಆಯದ ಆಕಾರದ ಪೀಠ : ಅಡಿ ಪೀಠ.

Socrátic ಸೊಕ್ರ್ಯಾಟಿಕ್ (ಗು., ನಾ.) ಗ್ರೀಕ್ ತಾತ್ತ್ವಿಕನಾದ ಸಾಕ್ರಟೀಸಿನ(ಂಥ) ; ಸಾಕ್ರಟೀಸಿನ, —ತತ್ತ್ವದ, ಪಂಥದ(ವನು). S. method ಪ್ರಶ್ನೋತ್ತರ ಪದ್ಧತಿ. S. irony ಮೌಢ್ಯ ನಟನೆ, ವ್ಯಂಗ್ಯ ಮೌಢ್ಯ (Irony ನೋಡಿ). **Socrátically** (ಕ್ರಿ. ವಿ.)

Sod[1] ಸಾಡ್ (ನಾ., ಕ್ರಿ. ಸಕ.) ಹುಲ್ಲುಗರಿಕೆ, ಬೇರು ಮತ್ತು ಮಣ್ಣು ಕೂಡಿರುವ ಮೇಲ್ ಪದರದ ನೆಲ : ಹುಲ್ಲುನೆಲ (Under the s. ಗೋರಿಯಲ್ಲಿ) ; (ಎಬ್ಬಿ ತೆಗೆದ) ಹುಲ್ಲು (ನೆಲದ) ಹೆಪ್ಪು. (ಕ್ರಿ.) ನೆಲಕ್ಕೆ ಹುಲ್ಲು ಹೆಪ್ಪು(ಗಳನ್ನು) ಹೊದಿಸು, ಹೊಚ್ಚು (Sodding mallet, spade —ಹೊಚ್ಚುವ ಕೊಡತಿ, ಗುದ್ದಲಿ). **Sóddy** (ಗು.)

Sod[2]. **Seethe** ನೋಡಿ.

Sod[3] ಸಾಡ್ (ನಾ.) (ಗ್ರಾಮ್ಯ) = Sodomite (ಎಂಬುದರ ಸಂಕ್ಷಿಪ್ತ)

Sóda ಸೋಡ (ನಾ.) ಸಾಮಾನ್ಯ ಬಳಕೆಯಲ್ಲಿರುವ ಸೋಡಿಯಂ (ಬೈ)ಕಾರ್ಬೊನೇಟು ; ಸೋಡ —ಪುಡಿ, ಉಪ್ಪು. ಇಂಗಾರಾಮ್ಲ ಅನಿಲವನ್ನು ಹುದುಗಿಸಿ, ನೊರೆಯುಕ್ಕುವಂತೆ ಮಾಡಿದ ಪಾನೀಯ: ಸೋಡಾ ಪಾನೀಯ (= S.-water). (S.-fountain ಬೇಕಾದಾಗ ಹೊರ ಸೇದಿಕೊಳ್ಳಲು ಬರುವಂತೆ, ಒತ್ತಡದಲ್ಲಿ ಶೇಖರಿಸಿಟ್ಟ ಸೋಡಾ ಪಾನೀಯ : ಸೋಡಾ ಬುಗ್ಗೆ)

Sodálity ಸೊಡ್ಯಾಲಟಿ (ನಾ.) (ಮು., ಮತ ಸಂಬಂಧವಾದ) ಭ್ರಾತೃ ವರ್ಗ, ಸಂಘ, ಮಂಡಲಿ, ಕೂಟ (ಮು., ರೋ. ಕ್ಯಾ. ಸಂಘಗಳ ಹೆಸರುಗಳಲ್ಲಿ ಪ್ರ.)

Sódden ಸಾಡ್ನ್ (ಗು., ಕ್ರಿ.) (ನೀರಿನಿಂದ) ಕೊಚ್ಚೆಯಾದ ; ದ್ರವ ಪೂರಿತ, ಸಿಕ್ತ; ಚೆನ್ನಾಗಿ ತೊಯ್ದು, ನೆನೆದ, ನೆನಸಿದ; (ರೊಟ್ಟಿ, ಮೊ.ವು: ಅತಿ ಬೇಯಿಸುವುದರಿಂದಾಗಲಿ ಅರೆ ಬೇಯಿಸುವುದರಿಂದಾಗಲಿ) ಮುದ್ದೆಯಾದ; ಅರೆಬೆಂದ; (ಕುಡಿತದ ಅಭ್ಯಾಸದಿಂದ) ಮೊದ್ದಾದ, ಮಂಕಾದ; ಕುಡಿದು ಅಮಲೇರಿದ, ಮದ್ಯೋನ್ಮತ್ತ. (ಕ್ರಿ.) ನೆನೆ, ನೆನಸು ; ಮುದ್ದೆ —ಆಗು, ಮಾಡು; ಮೊದ್ದು —ಆಗು, ಮಾಡು. **Sóddenness** (ನಾ.)

Sódium ಸೋಡಿಯಂ (ನಾ.) ವಿಶೇಷವಾಗಿ ಸೋಡಾ ಮತ್ತು ಇತರ ಸಂಯುಕ್ತಗಳಲ್ಲಿ ಇರುವ, ಪ್ರಕಾಶಮಾನವಾದ ಹಳದಿ ಜ್ವಾಲೆಯೊಡನೆ ಉರಿಯುವ, ಬಿಸಿನೀರಿನಲ್ಲಿ ಹೊತ್ತಿಕೊಳ್ಳುವ, ಬೆಳ್ಳಿ ಬಿಳುಪಿನ ಒಂದು ಲೋಹ ಮೂಲಧಾತು : ಸೋಡಿಯಂ. **Sódic** (ಗು.)

Sódomite ಸಾಡಮೈಟ್ (ನಾ.) ಪುರುಷ ಮೈಥುನಿ ; ಪುಂ ಮೈಥುನಿ. **Sódomy** (ನಾ.) ಪುರುಷ ಮೈಥುನ ; ಪುಂ ಮೈಥುನ.

74*

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Soéver ಸೋಎವರ್ (ಉ. ಪ್ರ. ಅಥವಾ ಕ್ರಿ. ವಿ.) ಸಂಬಂಧ ಸರ್ವನಾಮ, ಕ್ರಿಯಾವಿಶೇಷಣ ಮತ್ತು ಗುಣವಾಚಕಗಳಿಗೆ ಹತ್ತಿಸುವ ಅಥವಾ ಕೆಲವು ವೇಳೆ ಪ್ರತ್ಯೇಕವಾಗಿಯೂ ಪ್ರಯೋಗವಾಗುವ, ಅನಿರ್ದಿಷ್ಟಾರ್ಥ ಸೂಚಕ ಪ್ರತ್ಯಯ ಅಥವಾ ಪದ (Whosoever ಯಾರೇ --ಆಗಲಿ, ಆದರೂ. Howsoever ಹೇಗೇ ಆಗಲಿ. How great s. it may be ಅದು ಎಷ್ಟೇ ದೊಡ್ಡದಾಗಿರಲಿ. With what end s. he did it ಅವನು ಯಾವ ಉದ್ದೇಶದಿಂದಲೇ ಮಾಡಿರಲಿ)

Sófa ಸೋಫ (ನಾ.) ಎತ್ತರಿಸಿದ ಪಕ್ಕಗಳೂ ಒರಗುಬೆನ್ನೂ ಉಳ್ಳ, ಮೆತ್ತೆ ಹಾಕಿದ, ಹಲವರು ಕುಳಿತುಕೊಳ್ಳಬಹುದಾದ ಅಥವಾ ಒಬ್ಬನು ಮಲಗಿಕೊಳ್ಳಬಹುದಾದ ಸುಖಾಸನ: ಮೆತ್ತೆ ಮಂಚ, ಸೋಫ. S. bed(stead) (ಹಗಲು ಸೋಫ ಆಗಿಯೂ ರಾತ್ರಿ ಮಂಚವಾಗಿಯೂ ಉಪಯೋಗಿಸಲಾಗುವ) ಸೋಫ ಮಂಚ.

Sóffit ಸಾಫಿಟ್ (ನಾ.) (ಕಮಾನು, ಕಾರ್ನಿಸು, ಮೆಟ್ಟಿಲ ಸಾಲು, ಮೊ. ಗಳ) ಅಡಿ, ತಳ, —ಮೈ.

Sofi(sm)=Sufi(sm)

Soft ಸಾಫ್ಟ್ (ಗು., ನಾ., ಕ್ರಿ. ವಿ., ಭಾವ. ಅವ್ಯ.) ಮೃದು, ಮೆದು, ಮೆತು, ಮೆತ್ತನೆಯ, ಮೃದುಲ, ಕೋಮಲ [S. as butter ಬೆಣ್ಣೆಯಂತೆ ಮೃದು. S. iron (ಇಂಗಾಲಾದಿ ಕಲ್ಮಷಗಳಿಲ್ಲದ, ಚೊಕ್ಕ) ಮೃದು ಕಬ್ಬಿಣ. S. stone ಹಿಟ್ಟುಗಲ್ಲು, ಮೆತುಗಲ್ಲು. S. coal ಬಿಟ್ಯುಮೆನ್ ಕಲ್ಲಿದ್ದಲು; ಮೆತು—. S. corn ಕಾಲುಬೆರಳುಗಳ ಸಂದಿನಲ್ಲಿ, ತೇವದಿಂದಾದ ಚರ್ಮದ ಊತ: ಕೆಸರು ಹುಣ್ಣು. S. tissues (of body) (ಎಲುಬಿನದು ಅಥವಾ ಮೃದ್ವಸ್ಥಿಯದು ಅಲ್ಲದ) (ದೇಹದ) ಮೃದು ಅಂಗಾಂಶಗಳು. S. palate ಅಂಗುಳಿನ ಹಿಂಭಾಗ: ಮೆತು ಅಂಗುಳು, ಮೃದು ತಾಲು. S. wicket (ಕ್ರಿಕೆಟ್ಟಿನಲ್ಲಿ) ನೆನೆದ, ಮೃದು, —ಆಟದ ನೆಲ. S. goods ನೆಯ್ದ ಸನಗು; ಗಿರಣಿ ಬಟ್ಟೆ; ಜವಳಿ. S. money ಕಾಗದದ ನಾಣ್ಯ (ನೋಟು), ಹುಂಡಿ. S. solder (ಸುಲಭವಾಗಿ ಕರಗುವ ಲೋಹಗಳಿಗೆ ಹಾಕುವ) ಮೆತು ಬೆಸುಗೆ. S. sawder (Sawder ನೋಡಿ). S. soap (Soap ನೋಡಿ). S. tack (ನಾವೆ) ರೊಟ್ಟಿ (ವಿರುದ್ಧ ಪದ: Hard tack ಬಿಸ್ಕತ್ತು). S. roe ಗಂಡುಮೀನಿನ—ವೃಷಣ, ಶುಕ್ಲ]; ಮೃದುವಾದ, ನುಣುಪಾದ, ನಯವಾದ (S. skin, hair); ಬಹಳ ಸೆಕೆಯಾಗಲಿ ಚಳಿಯಾಗಲಿ ಅಲ್ಲದ: ಹಿತವಾದ, ಸೌಮ್ಯವಾದ (S. air. A s. winter); ಮಳೆ ಹಿಡಿದಿರುವ, ತೇವವಿರುವ, ನೀರ್ಗಲ್ಲು ಕರಗುತ್ತಿರುವ (S. weather. A s. day); (ನೀರು) ಖನಿಜಲವಣಗಳು ಕರಗಿರದೆ ಒಗೆಯುವುದಕ್ಕೂ ಅಡಿಗೆ ಮಾಡುವುದಕ್ಕೂ ಯೋಗ್ಯವಾದ: ಮೃದುವಾದ; ಕಟು, ಕಾರ, ಹುಳಿ, ಕಹಿ, —ಅಲ್ಲದ; ಹಿತವಾದ (S. claret); ಎಳಸಾದ, ತೀಕ್ಷ್ಣವಲ್ಲದ, ಕೋರೈಸದ, ಸ್ನಿಗ್ಧ, ಶಾಂತ (S. colours, light, eyes); ತೀಕ್ಷ್ಣರೂಪ ರೇಖೆಯಿಲ್ಲದ, ಮಂದ ಸ್ಪಷ್ಟ (S. outline); ಮೆಲುಪಾದ, ಮಂಜುಲ, ಕೋಮಲ, ತಗ್ಗು ದನಿಯ [A s. voice. S. music. S. pedal (Pedal ನೋಡಿ). S. murmurs]; (ಧ್ವನಿ ಶಾಸ್ತ್ರ) ಊಷ್ಮ, ತಾಲವ್ಯ [ಉದಾ., city ಪದದಲ್ಲಿ c, gem ಪದದಲ್ಲಿ g (can, go ಪದಗಳ c, g ಅಲ್ಲ)], ಮೃದು (ಉದಾ., ಗ, ದ, ಬ), ಹಕಾರೋಚ್ಚಾರಣೆಯಿಲ್ಲದ (S. *or* smooth breathing ಹಕಾರೋಚ್ಚಾರಣೆ ಸೇರದ, ಅಲ್ಪಪ್ರಾಣದ); ಸಾಧು, ಸರಳ, ಸೌಮ್ಯ, ಸಮಾಧಾನಕರ, ಅನುನಯದ, ಒಲುಮೆಯ [S. rain ಹಿತ ವೃಷ್ಟಿ, ಹೂಮಳೆ. S. drink (ಅಮೆ. ಸಂ., ಅಸಂ.) ಮದ್ಯಸಾರವಿಲ್ಲದ ಪಾನೀಯ; ಸೌಮ್ಯ ಸರಳ, —ಪಾನೀಯ. S. manners ವಿನಯದ, ನಯವಾದ, —ವರ್ತನೆ, ನಡತೆ. A s. answer (ಬೈಗುಳು, ನಿಂದೆ, ಮೊ. ಗಳಿಗೆ ಪ್ರತ್ಯುತ್ತರವಾಗಿ ಕೊಟ್ಟ) ನಯವಾದ, ಮೃದುವಾದ, —ಉತ್ತರ (A s. answer turneth away wrath: ಬೈಬಲ್ ಗಾದೆ). S.-spoken ಮೃದುವಾಗಿ ಆಡಿದ, ನಯ ಮಾತಿನ. S. nothings ಪ್ರಣಯಾಲಾಪ, ಪ್ರೇಮ ಸಲ್ಲಾಪ]. ದಯಾರ್ದ್ರ, ಸಹಾನುಭೂತಿಯುಳ್ಳ, ಅನುಕಂಪದ [Has a s. heart. **Soft-hearted** (ಗು.); **Soft-heártedness** (ನಾ.)]; ಪ್ರಶಾಂತ (S. slumbers); (ಅಸಂ.) ಕಷ್ಟತರದ್ದಲ್ಲದ, ಸುಲಭದ (Has a s. job. S. thing ಒಳ್ಳೆಯ ಸಂಬಳದ ಸುಲಭ ಕೆಲಸದ ಅಧಿಕಾರ, ಮೊ. ವು); ದುರ್ಬಲ, ನಿಸ್ಸತ್ತ್ವ, ಪೌರುಷವಿಲ್ಲದ; ಸಪ್ಪೆಯ, ಕ್ಲೀಬ, ಶಿಥಿಲ, ಹೆಣ್ಣಿಗ(ತನದ), ಮೆದುಗಲ [The national character has gone s. ಜನಾಂಗದ ಸ್ವಭಾವ ನಿರ್ವೀರ್ಯವಾಗಿ ಹೋಗಿದೆ. A s. luxurious people ಅತಿ ಭೋಗದ ನಿಸ್ಸತ್ತ್ವರಾದ ಜನ. S. muscles ದುರ್ಬಲ ಸ್ನಾಯುಗಳು. S.-headed, S.-witted ಅರೆಮರುಳಾದ, ಅರೆದಡ್ಡ, ಮದಡು ಬುದ್ಧಿಯ]. (ನಾ.) ಶುದ್ಧ ತೊವ್ವೆ ಮನುಷ್ಯ (ರೂಪ.), ಶುದ್ಧ ಮೆತ್ತಗ, ಮದಡ, ಹೆಣ್ಣಿಗ [=**Sófty** (ನಾ.)]. (ಕ್ರಿ. ವಿ.) ಮೃದುವಾಗಿ, ಮೆತ್ತಗೆ (Play s., softer). (ಭಾವ. ಅವ್ಯ., ಪ್ರಾಚೀ. ಪ್ರ.) ಒಂದು ಕ್ಷಣ, ಕೊಂಚ, —ತಾಳು! ಸದ್ದು! **Sóften** ಸಾಫ್ನ್ (ಕ್ರಿ.) (—ಇಂತ) ಮೃದು —ಆಗು, ಮಾಡು [Softening of the brain ಮಿದುಳಿನ ವಿಕಾರ, ಮಸ್ತಿಷ್ಕ ಶೈಥಿಲ್ಯ; (ಬಳ. ಮಾ.) ಬುದ್ಧಿ ಮಾಂದ್ಯ, ಮದಡು]. **Sóftener** (ನಾ.); **Sóftish** (ಗು.); **Sóftly** (ಕ್ರಿ. ವಿ.); **Sóftness** (ನಾ.)

Sóggy ಸಾಗಿ (ಗು.) (ನೆಲ) ಕೊಚ್ಚೆಯಾದ, ಜೌಗಾದ; ಚೆನ್ನಾಗಿ ನೆನೆದ; ಸಿಕ್ತ, ತೇವವಾದ, ಒದ್ದೆಯಾದ; (ರೊಟ್ಟಿ) ಅರೆಬೆಂದ, ಮುದ್ದೆಯಾದ. (ವ್ಯಕ್ತಿ) ಮೊದ್ದಾದ, ಮದಡಾದ, ನಿಸ್ಸತ್ತ್ವ, ನಿರ್ವೀರ್ಯ. **Sógginess** (ನಾ.)

Soh ಸೋ, **Soho**[1] ಸೋಹೊ (ಭಾವ. ಅವ್ಯ.) (ಕೋಪ, ತಿರಸ್ಕಾರ, ಮೊ. ನ್ನು ಸೂಚಿಸುವ ಉದ್ಗಾರ) ಓಹೋ! (ಬೆದರಿದ ಕುದುರೆಯನ್ನು ಹತೋಟಿಗೆ ತರುವಲ್ಲಿ ಪ್ರ.) ಮೆತ್ತಗೆ! ಹೋಪ್ಪ!

Sohó[2] ಸೋಹೊ (ನಾ.) ಪರದೇಶೀಯರ ಫಲಾಹಾರ ಮಂದಿರಗಳು, ಮೊ. ವು ಇರುವ ಲಂಡನ್ನಿನ ಭಾಗ.

Soi-disant (F) ಸ್ವಾಡೀಜ಼ಾನ್ (ಗು.) (—ಎಂದು) ತಾನೇ ಹೇಳಿಕೊಳ್ಳುವ, ಕರೆದುಕೊಳ್ಳುವ; ಸುಳ್ಳು ಯೋಗ್ಯತೆಯ.

Soil[1] ಸಾಯ್ಲ್ (ನಾ.) ಸಸ್ಯ, ಮೊ. ವು ಬೆಳೆಯುವ, ಶಿಥಿಲ ಶಿಲೆಗಳೂ ಜೈವಿಕ ಉಳಿಕೆಗಳೂ ಸೇರಿರುವ, ಭೂಮಿಯ ಮೇಲ್ಪದರ; ಕೃಷಿಯ ನೆಲ, ಮಣ್ಣು, ಭೂಮಿ [Good, poor, s. Rich s. ಸಾರವತ್ತಾದ ಮಣ್ಣು, ಭೂಮಿ. Night s. (Night ನೋಡಿ). One's native s. ತಾಯ್ನಾಡು, ಹುಟ್ಟು ನೆಲ]. **-soiled** (ಗು.)

Soil[2] ಸಾಯ್ಲ್ (ಕ್ರಿ., ನಾ.) ಕೊಳೆ, ಹೊಲಸು, ಮಲಿನ, ಕಳಂಕ, —ಮಾಡು, ಆಗು [Soiled linen ಮಾಸಿದ ಬಟ್ಟೆ. Soils easily ಬೇಗ, ಸುಲಭವಾಗಿ, —ಕೊಳೆಯಾಗುತ್ತದೆ. Would not s. my hands with it (ರೂಪ.) ನಾನು ಅದರಿಂದ ನನ್ನ ಕೈಗಳನ್ನು ಕಲುಷಿತ ಮಾಡುವುದಿಲ್ಲ]. (ನಾ.) ಕೊಳೆ, ಕಲೆ, ಕರೆ, ಕಳಂಕ, ಮಾಲಿನ್ಯ. S.-pipe ಕಕ್ಕಸಿನ ಚರಂಡಿ ಕೊಳವೆ. **Soilless** (ಗು.); **Soílure** (ನಾ.) (ಪ್ರಾಚೀ. ಪ್ರ.) ಕರೆ, ಕಳಂಕ.

Soil[3] ಸಾಯ್ಲ್ (ಕ್ರಿ. ಸಕ.) (ದನಕರುಗಳಿಗೆ) ಹಸಿ ಮೇವು —ತಿನ್ನಿಸು, ಕೊಡು (ಹಿಂದಿನ ಕಾಲದಲ್ಲಿ ಉಚ್ಚಿಸುವುದಕ್ಕಾಗಿ ಇದನ್ನು ಕೊಡುತ್ತಿದ್ದರು)

Soiree ಸ್ವಾರೇ (ನಾ.) ಸಾಯಂ(ಕಾಲದ) ಗೋಷ್ಠಿ.

Soixante-quinze (F) ಸ್ವಾಸಾಂಟ್‌ಕ್ಯಾನ್ಜ಼್ (ನಾ.) ೧೯೧೪-೧೮ರ ಮಹಾಯುದ್ಧದಲ್ಲಿ ಫ್ರೆಂಚರು ಉಪಯೋಗಿಸಿದ, ೭೫ ಮಿಲಿಮೀಟರು ವ್ಯಾಸದ ಫಿರಂಗಿ (ಫ್ರೆಂಚ್ ಅರ್ಥ=೭೫)

Sójourn ಸಾ(ಸ)ಜರ್ನ್ (ಕ್ರಿ. ಅಕ., ನಾ.) (ಒಂದು ಸ್ಥಳದಲ್ಲಿ, ಒಬ್ಬರಲ್ಲಿ, ಒಬ್ಬರೊಡನೆ) ತಾತ್ಕಾಲಿಕವಾಗಿ ತಂಗು, ಇಳಿದುಕೊಂಡಿರು, ವಸತಿ ಮಾಡು, ಬಿಡಾರ ಮಾಡು, ಉಳಿ (*In* place, *with* or *among* persons). (ನಾ.) ತಂಗುವುದು, ವಸತಿಮಾಡುವುದು. **Sójourner** (ನಾ.) ಇಳಿದುಕೊಂಡಿರುವವನು, ವಸತಿಗಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sol[1] ಸಾಲ್ (ನಾ.) (ಹಾಸ್ಯ ಪ್ರ.) ಸೂರ್ಯ.

Sol[2] ಸಾಲ್ (ನಾ.) (ಸಂ.) ಸ್ವರಾಷ್ಟಕದ ಐದನೆಯ ಸ್ವರ: ಪಂಚಮ (ಪ)

Sóla ಸೋಲ (ನಾ.) ಉಷ್ಣವಲಯದ ಜೌಗುಪ್ರದೇಶದಲ್ಲಿ ಬೆಳೆಯುವ, ಬೆಂಡು ತಾಳಿನ ಒಂದು ಬಗೆಯ ಸಸ್ಯ: ಟಣಕಲಿ ಗಿಡ (S.-topi ಇಂಡಿಯದ ಬೆಂಡು ಟೋಪಿ)

Sólace ಸಾಲೆಸ್ (ನಾ., ಕ್ರಿ. ಸಕ.) (ವ್ಯಸನ, ಆಶಾಭಂಗ, ಬೇಸರ, ಮೊ. ಸಂದರ್ಭಗಳಲ್ಲಿ) ಸಮಾಧಾನ (ಪಡಿಸು), ದುಃಖೋಪಶಮನ (ಮಾಡು), ನೆಮ್ಮದಿ(ಯುಂಟುಮಾಡು), ಸಂತೈಸು (S. oneself with —ಇಂದ ನೆಮ್ಮದಿ ಪಡೆ, ಸಮಾಧಾನಗೊಳ್ಳು. Found s. in religion ಮತಧರ್ಮದಲ್ಲಿ ಮನಸ್ಸಮಾಧಾನ ಪಡೆದನು, ಕಂಡುಕೊಂಡನು)

Sólan(-goose) ಸೋಲನ್(ಗೂಸ್) (ನಾ.) 'ಗ್ಯಾನೆಟ್' ಎಂಬ ಕಡಲ ಹಕ್ಕಿ.

Solánum ಸೋಲೇನಂ (ನಾ.) ಆಲೂಗೆಡ್ಡೆ, 'ನೈಟ್‌ಷೇಡ್' ಎಂಬ ಸಸ್ಯ, ಮೊ. ನ್ನೊಳಗೊಂಡ ಒಂದು ಸಸ್ಯವರ್ಗ (ಅಲಂಕಾರದ ಬಳ್ಳಿಗಳಿಗಾಗಿ, ಹೂವುಗಳಿಗಾಗಿ ಅಥವಾ ಎಲೆಗುಂಪಲಗಾಗಿ ಬೆಳಸುವರು)

Sólar ಸೋಲರ್ (ಗು.) ಸೂರ್ಯನ, ಸೂರ್ಯ ಸಂಬಂಧವಾದ, ಸೂರ್ಯನಿಂದ ನಿಶ್ಚಯಿಸುವ; ಸೌರ(ಮಾನ). **S. day** (Day ನೋಡಿ). **S. eclipse** ಸೂರ್ಯ ಗ್ರಹಣ. **S. month** ಸೌರಮಾಸ (ವರ್ಷದ $\frac{1}{12}$ ಭಾಗ). **S. spectrum** ಸೂರ್ಯ ವರ್ಣಪಟಲ. **S. time** ಸೌರ ಕಾಲ. **S. year** (Year ನೋಡಿ). **S. flowers** ಹಗಲು ಕೆಲವು ಗಂಟೆಗಳು ಮಾತ್ರ ಅರಳಿರುವ ಹೂವುಗಳು: ಸೌರ ಪುಷ್ಪಗಳು. **S. myth** ಸೂರ್ಯನ ಗತಿ, ಪ್ರಭಾವ, ಮೊ. ನ್ನು ಕುರಿತು ಮೊದಮೊದಲು ಜನರು ಹೇಳುತ್ತಿದ್ದ ಕಟ್ಟು ಕಥೆ: ಸೌರ ಕಥೆ; ಸೂರ್ಯ ಕಥಾವಳಿ. **S. plexus** ಹೊಟ್ಟೆಯ ಕುಳಿಯಲ್ಲಿಯ ನರಗಳ ಜಾಲ. **S. system** ಸೂರ್ಯ ಮತ್ತು ಸೂರ್ಯ ಪ್ರಭಾವಕ್ಕೆ ಒಳಗಾಗಿ ಅದರ ಸುತ್ತಲೂ ಸುತ್ತುವ ಗ್ರಹಗಳು: ಸೌರ ವ್ಯೂಹ. **Sólarism** (ನಾ.) ಪುರಾಣ ಸಾಹಿತ್ಯಕ್ಕೆ ಸೂರ್ಯ ಕಥಾವಳಿಯೇ ಮೂಲ ಎಂಬ ನಂಬಿಕೆ: ಸೌರ (ಕಥಾ) ವಾದ. **Sólarist** (ನಾ.) ಸೌರಕಥಾವಾದಿ. **Solárium** ಸೋಲೇರಿಯಂ (ನಾ.) ಸೂರ್ಯ ಕಿರಣಗಳನ್ನು ಅನುಭೋಗಿಸುವುದಕ್ಕಾಗಿ ಅಥವಾ ವೈದ್ಯಕೀಯ ಉಪಯೋಗ ಮಾಡಿಕೊಳ್ಳುವುದಕ್ಕಾಗಿ (ಗಾಜಿನ ಆವರಣ ಹಾಕಿ) ಏರ್ಪಡಿಸಿದ ಸ್ಥಳ: ಬಿಸಿಲುಮನೆ, ಸೂರ್ಯಶಾಲೆ. **Sólarize** ಸೋಲರೈಸ್ (ಕ್ರಿ.) (ಛಾಯಾಚಿತ್ರ) ಸೂರ್ಯ ಪ್ರಕಾಶಕ್ಕೆ ಹೆಚ್ಚಾಗಿ ಒಡ್ಡಿ ಕೆಡಿಸು, ಕೆಟ್ಟುಹೋಗು. **Solarizátion** (ನಾ.)

Solátium ಸೋಲೇಷಿಯಂ (ನಾ.; ಬ. ವ. -tia —ಷಿಯ) ನಷ್ಟ ಪರಿಹಾರವಾಗಿ ಅಥವಾ ಸಮಾಧಾನಾರ್ಥವಾಗಿ ಕೊಟ್ಟದ್ದು: ಪರಿಹಾರ, ಸಮಾಧಾನಾರ್ಥ. (ಮು., ನ್ಯಾ. ಶಾ.) (ವಾಸ್ತವಿಕ ನಷ್ಟಗಳನ್ನು ಕಟ್ಟಿಕೊಡುವುದಕ್ಕೆ ಕೊಟ್ಟದ್ದು ಮಾತ್ರವಲ್ಲದೆ ಮನಸ್ಸಮಾಧಾನಾರ್ಥವಾಗಿ ಕೊಟ್ಟ) ಹೆಚ್ಚಿಗೆಯ ಪರಿಹಾರದ್ರವ್ಯ.

Sold. Sell ಧಾತುವಿನ ಭೂತ. ಮತ್ತು ಭೂ. ಕೃ.

Sólder ಸಾಲ್ಡರ್, ಸೋಲ್ಡರ್, ಸಾಡರ್ (ನಾ., ಕ್ರಿ. ಸಕ.) ಟಂಕ, ಬೆಸುಗೆ (—ಹಾಕು); ಬೆಸೆ (ರೂಪ. ನಹ) (Hard, soft, s. ಹೆಚ್ಚು, ಕಡಮೆ, ಶಾಖದಲ್ಲಿ ಬೆಸೆಯುವ ಬೆಸುಗೆ: ಗಟ್ಟಿ, ಮೆತು, —ಬೆಸುಗೆ). Soldering-iron ಬೆಸೆಗಂಬಿ.

Sóldier ಸೋಲ್ಜರ್ (ನಾ.) ಸೈನ್ಯಕ್ಕೆ ಸೇರಿದವನು, ಸೈನಿಕ, ಭಟ, ಯೋಧ, ಸಿಪಾಯಿ, ಕಾದಾಳು, ಹೋರಾಳು (ರೂಪ. ನಹ) [Soldiers & sailors ಸೈನಿಕರೂ ನಾವಿಕರೂ. Go, enlist, for a s. ಸೈನ್ಯಕ್ಕೆ ಸೇರು, ಸೈನಿಕನಾಗು. Play at soldiers (ಮಕ್ಕಳು, ಸೇವಾದಳದವರು, ಮೊ. ರ ವಿಷಯದಲ್ಲಿ) ಸೈನಿಕರ ಆಟ ವಾಡು. Tin, toy, soldiers ತವರದ, ಗೊಂಬೆ(ಯಾಟದ), ಸಿಪಾಯಿಗಳು. S. of Christ ಹುರುಪಿನ, ಇತರರನ್ನು ತನ್ನ ಮತಕ್ಕೆ ಸೇರಿಸಿಕೊಳ್ಳುವುದರಲ್ಲಿ ಆಸಕ್ತನಾದ, —ಕ್ರೈಸ್ತ: ಕ್ರಿಸ್ತ ಬಂಟ. The unknown s. (Warrior ನೋಡಿ). Every inch a s. ಅಂಗುಲ ಅಂಗುಲವೂ ಸಿಪಾಯಿ; ಪಕ್ಕಾ ಯೋಧ. Old s. ಹಳೆಯ ಸಿಪಾಯಿ; (ರೂಪ.) ಅನುಭವಿ, ಪಳಗಿದವನು; ನುರಿತವನು. ಖಾಲಿ ಮದ್ಯದ ಸೀಸೆ; ಚುಟ್ಟದ ಉಳಿಕೆ ಕೊನೆ. Come the old s. over (ಹೆಚ್ಚು ಅನುಭವವುಳ್ಳವನೆಂಬ ಕಾರಣದಿಂದ) ಇತರರಿಗೆ ವಿಧಿಸಹೋಗು, ಇತರರಮೇಲೆ ಅಡಳಿತ ನಡಸಹೋಗು. S. of fortune ತನ್ನನ್ನು ನಂಬಳ ಕೊಟ್ಟು ಇಟ್ಟುಕೊಳ್ಳುವ ಯಾವುದೇ ರಾಜ್ಯಕ್ಕಾಗಲ ವ್ಯಕ್ತಿಗಾಗಲ ಕಾದಲು ಸಿದ್ಧನಾಗಿರುವವನು: ಕೂಲಿ ಸಿಪಾಯಿ (ರೂಪ. ನಹ). Red s. ಹಂದಿಗೆ ತಗುಲುವ ಒಂದು ಚರ್ಮದ ರೋಗ; ಹಂದಿ ಕಾಲರ. S.'s wind (ನಾವೆ) ಹೋಗಿಬರುವುದಕ್ಕೆ ಅನುಕೂಲವಾದ ಗಾಳಿ]; ಸೈನ್ಯದ ನಾಸನ್ನದು ಅಧಿಕಾರಿ, ಸಾಮಾನ್ಯ ಸಿಪಾಯಿ (Both officers & soldiers ಸೈನ್ಯಾಧಿಕಾರಿಗಳೂ ಸಾಮಾನ್ಯ ಸಿಪಾಯಿಗಳೂ). ದಳಪತಿ, ಸೇನಾನಿ, ಪಡೆವಳ (A great, poor, s. ದೊಡ್ಡ, ಕಳಪೆಯ, ಸೇನಾನಿ); (ನಾವಿಕ ಅಸಂ.) ಕೆಲಸಗಳ್ಳ (ನಾವಿಕ); (ಅಸಂ.) ಕೆಂಪು ಹೆರಿಂಗ್ ಮೀನು; ಇರುವೆಯ ಗುಂಪಿನಲ್ಲಿ ಅಥವಾ ಗೆದ್ದಲು ಹಿಂಡಿನಲ್ಲಿ ಕಾದಾಡುವ ಪಂಗಡಕ್ಕೆ ಸೇರಿದ ಇರುವೆ, ಗೆದ್ದಲು: ಬಂಟ —ಇರುವೆ, ಗೆದ್ದಲು (=S. ant); ಕೆಂಪು ಛಾಯೆಯ, ಹಲವು ಬಗೆಯ ಜೀರುಂಡೆ: ಸಿಪಾಯಿ ಜೀರುಂಡೆ (=S. beetle); ಇತರ ಚಿಪ್ಪುಪ್ರಾಣಿಗಳು ಕಳಚಿ ಹಾಕಿದ ಚಿಪ್ಪುಗಳಲ್ಲಿ ವಾಸಮಾಡುವ ಒಂದು ನಳ್ಳಿ (=S. crab). S. orchis ಸೀಸಕದಾಕಾರದ ದಳಗಳುಳ್ಳ ಒಂದು ಸೀತಾಳೆಗೆಡ್ಡೆ; ಸಿಪಾಯಿ ಸೀತಾಳೆಗೆಡ್ಡೆ. **Sóldierlike** (ಗು.); **Sóldierly** (ಕ್ರಿ. ವಿ.); **Sóldiership** (ನಾ.); **Sóldiery** (ನಾ.) (ಸಾಮೂಹಿಕವಾಗಿ ಒಂದು ರಾಜ್ಯ, ಪ್ರಾಂತ, ಮೊ. ಗಳ) ಸಿಪಾಯಿಗಳು, ಸೈನಿಕರು (The s.); ಸೈನಿಕ ದಳ (A wild, licentious, s. ಉಗ್ರ, ಸ್ವೇಚ್ಛಾಚಾರದ, ಸೈನಿಕ ದಳ); ಸೈನ್ಯ; ಸೈನಿಕ —ಶಿಕ್ಷಣ, ವಿದ್ಯೆ.

Sóldier (ಕ್ರಿ. ಅಕ.) ಸೈನಿಕನಾಗಿ ದುಡಿ; ಸಿಪಾಯಿ ಕೆಲಸ ಮಾಡು (Go, tired of, soldiering); (ನಾವಿಕ ಅಸಂ.) ಕೆಲಸ(ಕ್ಕೆ) ಕದಿ, ಕೆಲಸಗಳ್ಳನಾಗು.

Sóldo ಸಾಲ್ಡೊ (ನಾ.; ಬ. ವ. -di —ಡೀ) ಇಟಲಿ ದೇಶದ ಅರ್ಧ ಪೆನಿ ನಾಣ್ಯ.

Sole[1] ಸೋಲ್ (ನಾ., ಕ್ರಿ. ಸಕ.) ಅಂಗಾಲು, ಪಾದತಲ; (ಜೋಡಿನ) ಅಟ್ಟೆ; (ನೇಗಿಲು, ಹತ್ತರಿ, ಬಂಡಿ, ಗಾಲ್ಫ್ ದಾಂಡಿನ ತಲೆ, ಮೊ. ಗಳ) ಅಡಿ, ತಳ, ಬುಡ; [S.-channel ಹೊಲಿಗೆಯನ್ನು ಹುದುಗಿಸುವುದಕ್ಕಾಗಿ ಜೋಡಿನ ಅಟ್ಟೆಯಲ್ಲಿ ಮಾಡಿರುವ ಗಾಡಿ, ಕಾಲುವೆ: ಅಟ್ಟೆ ಕಾಲುವೆ. S.-leather ಅಟ್ಟೆಗಾಗಿ ದಟ್ಟಸಿ ಮಾಡಿದ ಗಟ್ಟಿ ಚರ್ಮ: ಅಟ್ಟೆ ಚರ್ಮ. S.-plate (ಎಂಜಿನು, ಮೊ. ಗಳ) ಪೀಠ ಫಲಕ]. (ಕ್ರಿ.) (ಜೋಡಿಗೆ) ಅಟ್ಟೆಹಾಕು. **-soled** (ಗು.)

Sole[2] ಸೋಲ್ (ನಾ.) (ಆಹಾರಕ್ಕೆ ಪ್ರಶಸ್ತವಾದುದೆಂದು ಎಣಿಸುವ) ಒಂದು ಬಗೆಯ ಚಪ್ಪಟೆ ಮೀನು.

Sole[3] ಸೋಲ್ (ಗು.) ಒಂದೇ (ಒಂದಾದ), ಒಬ್ಬನೇ (ಒಬ್ಬನಾದ), ಏಕಮಾತ್ರ (His s. reason is this. On my own s. responsibility ನನ್ನೊಬ್ಬನದೇ ಜವಾಬ್ದಾರಿಯ ಮೇಲೆ); (ನ್ಯಾ. ಶಾ.) ಮದುವೆಯಿಲ್ಲದ, ಅವಿವಾಹಿತ [Feme Sole (ಅವಿವಾಹಿತೆ) ಎಂಬಲ್ಲಿ ಮಾತ್ರ]; (ಪ್ರಾಚೀ. ಪ್ರ.) ಒಬ್ಬೊಂಟಿಗನಾದ, ಒಂಟಿಯಾದ, ಏಕಾಂಗಿಯಾದ (Went forth s. ಒಂಟಿಯಾಗಿ ಹೋದನು. Corporation s. ಏಕವ್ಯಕ್ತಿ ಸಂಸ್ಥೆ). **Sólely** (ಕ್ರಿ. ವಿ.)

Sólecism ಸಾಲೆಸಿಸ್ಮ್ (ನಾ.) ಮಾತಿನಲ್ಲಾಗಲಿ ಬರವಣಿಗೆಯಲ್ಲಾಗಲಿ ವ್ಯಾಕರಣ, ಭಾಷಾ ರೂಢಿ, ಮೊ. ಗಳ ಅಪಪ್ರಯೋಗ: ಶಬ್ದ, ವ್ಯಾಕರಣ, ಭಾಷಾ, —ದೋಷ; ತಪ್ಪು ನಡತೆ, ಅಸಭ್ಯ ವರ್ತನೆ (In those days, smoking in the streets was a s.); ತಪ್ಪು, ದೋಷ, ಅನೌಚಿತ್ಯ. **Sólecist** (ನಾ.); **Solecístic** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sólemn ಸಾಲಮ್ (ಗು.) ಮತ ಕರ್ಮಾಚರಣೆಗಳಿಂದ ಕೂಡಿದ, ವಿಧಿ ವಿಹಿತ, ಕ್ರಮಬದ್ಧ, ಶಾಸ್ತ್ರೋಕ್ತ(ವಾಗಿ ಮಾಡಿದ), ಪವಿತ್ರ ಗಂಭೀರ [S. feast-day ಪವಿತ್ರ ಹಬ್ಬದ ದಿನ. S. sacrifice ಶಾಸ್ತ್ರೋಕ್ತ(ವಾಗಿ ಮಾಡಿದ) ಯಜ್ಞ. The S. League & Covenant (Covenant ನೋಡಿ). Probate in s. form ವಿಹಿತ ಕ್ರಮದಲ್ಲಿ ಅಂತಿಮ ಇಷ್ಟಪತ್ರದ ಪ್ರಾಮಾಣ್ಯ ಸ್ಥಾಪನೆ]. ಗಂಭೀರ ಪ್ರಭಾವದ, ಭಯಭಕ್ತಿ ಹುಟ್ಟಿಸುವ (S. silence ಗಂಭೀರ ಮೌನ. A s. cathedral); ಪ್ರಮುಖವಾದ, ಮಹತ್ತ್ವಪೂರ್ಣ, ಘನವಾದ (A s. occasion, truth, warning); ಗಂಭೀರ(ವಾದ), ಧೀರ, ನಿಧಾನದ (S. music ಗಂಭೀರ ಸಂಗೀತ. A s. promise ಗಂಭೀರವಾಗಿ ಕೊಟ್ಟ ವಾಗ್ದಾನ. A s. pace ಗಂಭೀರವಾದ ನಡಗೆ); ವೈಭವದ, ಆಡಂಬರದ; ಗಾಂಭೀರ್ಯದ ಸೋಗಿನ (Put on a s. face ಗಂಭೀರ ಮುಖಮುದ್ರೆ ತಾಳು. A s. fool ಗಂಭೀರ ಮುಟ್ಠಾಳ). **Sólemnity** ಸಾಲೆಮ್ನಿಟಿ (ನಾ.) ಮತವಿಧಿ, ಕರ್ಮ, ಸಂಸ್ಕಾರ; ಕಟ್ಟಳೆ; ಹಬ್ಬ, ಉತ್ಸವ; ಗಂಭೀರತೆ, ಗಾಂಭೀರ್ಯ; ಮಹತ್ತ್ವ, ವೈಭವ, ಘನತೆ. **Sólemnize** ಸಾಲೆಮ್ನೈಸ್ (ಕ್ರಿ. ಸಕ.) (ಹಬ್ಬ, ಮೊ. ನ್ನು) ಶಾಸ್ತ್ರೋಕ್ತವಾಗಿ ಆಚರಿಸು; (ವಿವಾಹ ಕರ್ಮವನ್ನು) ವಿಧಿ ವಿಹಿತವಾಗಿ ನೆರವೇರಿಸು; ವಿವಾಹಕರ್ಮ ಮಾಡಿಸು; ಗಂಭೀರ, ಅರ್ಥಪೂರ್ಣ, —ಮಾಡು. **Solemnizátion** (ನಾ.); **Sólemnly** (ಕ್ರಿ. ವಿ.); **Sólemnness** (ನಾ.) (ವಿರ. ಪ್ರ.)

Sólen ಸೋಲೆನ್ (ನಾ.) ಒಂದು ಇಚ್ಚಿಪ್ಪಿನ ಪ್ರಾಣಿ.

Solénoid ಸೊಲೀನಾಯ್ಡ್, **Sólenoid** ಸೋಲೆ— (ನಾ.) ತಂತಿಯನ್ನು ಉರುಳೆಯಾಗಿ ನಿಡುಸುರುಳಿ ಸುತ್ತಿ, ವಿದ್ಯುತ್ಪ್ರವಾಹ ಹರಿಸಿ ಮಾಡಿದ ಅಯಸ್ಕಾಂತ: ತಂತಿಯುರುಳೆಯ ಕಾಂತ; ಸೊಲೀನಾಯ್ಡ್.

Solferíno ಸಾಲ್ಫೆರೀನೊ (ನಾ.) (ರೋಸ್ಯಾನಿಲೈನಿನಿಂದ ತಯಾರಿಸಿದ) ಒಂದು ಊದಾ ಛಾಯೆಯ ಕೆಂಪು ಬಣ್ಣ (ಇಟಲಿಯ Solferino ಎಂಬ ಸ್ಥಳದಲ್ಲಿ ೧೮೫೯ರಲ್ಲಿ ನಡೆದ ಯುದ್ಧದ ತರುವಾಯ ರಕ್ತಸಿಕ್ತವಾದ ಆ ರಣರಂಗದ ಮಣ್ಣಿನ ಬಣ್ಣದಿಂದ)

Solícit ಸೊಲಿಸಿಟ್ (ಕ್ರಿ.) ವಿನಯದಿಂದ—ಕೋರು, ಬಯಸು, ಅಪೇಕ್ಷಿಸು; ಪ್ರಾರ್ಥಿಸು, ಮನವಿಮಾಡಿಕೊ, ಬೇಡಿಕೊ (Marvels s. his attention ಅದ್ಭುತಗಳು ಅವನ ಗಮನವನ್ನು ಆಕರ್ಷಿಸುತ್ತವೆ. We s. you for your custom ನಿಮ್ಮ ಗಿರಾಕಿ ನಮಗೆ ಇರಬೇಕೆಂದು ಕೇಳಿಕೊಳ್ಳುತ್ತೇವೆ. He was known to have solicited the judges ಅವನು ನ್ಯಾಯಾಧೀಶರಲ್ಲಿ ಮನವಿ ಮಾಡಿಕೊಂಡಿದ್ದಂತೆ ತಿಳಿಯಿತು); (ಸೂಳೆಯ ವಿಷಯದಲ್ಲಿ: ಬಹಿರಂಗ ಸ್ಥಳದಲ್ಲಿ ಶೃಂಗಾರಚೇಷ್ಟೆಯಿಂದ) ಗಿರಾಕಿಗಳನ್ನು —ಕರೆ, ಸೆಳೆ, ಆಕರ್ಷಿಸು. ಒತ್ತಾಯದಿಂದ, ಮೇಲಿಂದಮೇಲೆ, —ಕೇಳು, ಕೇಳಿಕೊ (S. favours, office ಅನುಗ್ರಹವನ್ನು, ಅಧಿಕಾರವನ್ನು, ಕೇಳು). **Solicitátion** (ನಾ.); **Solícitor** (ನಾ.) (ಕ್ರಿಯಾರ್ಥಗಳಲ್ಲಿ) (ವಿರ. ಪ್ರ.); ಕಕ್ಷಿಗಾರರಿಗೆ ಸಲಹೆ ಕೊಡುವುದಕ್ಕೂ ಬ್ಯಾರಿಸ್ಟರುಗಳಿಗೆ ತಿಳುವಳಿಕೆ ಕೊಟ್ಟು ಅವರಿಗಾಗಿ ಮೊಕದ್ದಮೆಗಳನ್ನು ಸಿದ್ಧಗೊಳಿಸುವುದಕ್ಕೂ ಮಾತ್ರ ಸಮರ್ಥನಾದ, ಕೆಲವು ಕೆಳಗಿನ ಕೋರ್ಟುಗಳಲ್ಲಿ ಹೊರತು ನ್ಯಾಯಾಧೀಶರ ಮುಂದೆ ನ್ಯಾಯವಾದಿಯಾಗಿ ವಾದಿಸಲು ಅಧಿಕಾರವಿಲ್ಲದ ನ್ಯಾಯೋದ್ಯೋಗಿ: ಸಲಹೆ ವಕೀಲ; ಸಾಲಿಸಿಟರು (Attorney, Barrister, Lawyer ಪದಗಳೊಡನೆ ಹೋಲಿಸಿ). S. General ಅಟರ್ನಿ ಜನರಲ್ ಎಂಬ ಸರ್ಕಾರಿ ವಕೀಲನ ಕೆಳಗಿನ ದರ್ಜೆಯ ನ್ಯಾಯಾಧಿಕಾರಿ. **Solícitous** (ಗು.) (—ಕ್ಕೆ) ತವಕಿಸುವ, ಆತುರಪಡುವ, ಆಸಕ್ತನಾದ, ಉತ್ಸುಕನಾದ; ಬಯಸುವ, ಇಷ್ಟಪಡುವ; ಆತಂಕಪಡುವ, ಕಳವಳಗೊಂಡ (*About, concerning, for* ಮೊ. ಪದದೊಡನೆ ಸಹ). **Solícitously** (ಕ್ರಿ. ವಿ.); **Solícitude** (ನಾ.) ತವಕ, ಉತ್ಸುಕತೆ, ಆತಂಕ, ಕಳವಳ, ಚಿಂತೆ.

Solícitor, Solícitude. **Solicit** ನೋಡಿ.

Sólid ಸಾಲಿಡ್ (ಗು., ನಾ.) (ದ್ರವ ಅಥವಾ ಪ್ರವಾಹಿರೂಪದ್ದು ಅಲ್ಲದ) ಗಟ್ಟಿ(ಯಾಕಾರದ); ಘನ (ಸ್ಥಿತಿಯ) (S. food ಗಟ್ಟಿ ಆಹಾರ. Water becomes s. at 32° F. ನೀರು ೩೨° F. ಶಾಖದಲ್ಲಿ ಗಡ್ಡೆ ಕಟ್ಟುತ್ತದೆ, ಘನೀಭೂತವಾಗುತ್ತದೆ); (ಪೊಳ್ಳಲ್ಲದ, ಒಳಗೆ ಕುಹರಗಳಿಲ್ಲದ) ಪೂರ್ತ ಗಟ್ಟಿಯಾಗಿರುವ, ಅತ್ಯಂತ ಘನವಾದ; ಸಾಂದ್ರ, ದಟ್ಟ, ನಿಬಿಡ, ಇಡಿಯ, ಪೂರ್ತ [S.-hoofed ಸೀಳದ ಗೊರಸುಳ್ಳ, ಇಡಿಯ ಗೊರಸುಳ್ಳ. A s. hour, day ಇಡಿಯ, ಪೂರ್ತ, —ಘಂಟೆ, ದಿನ. S. printing (ಸಾಲುಗಳ ನಡುವೆ ಸ್ಥಳ ಭರ್ತಿ ಹಾಕದ) ಸಾಂದ್ರ, ನಿಬಿಡ, —ಮುದ್ರಣ; ಒತ್ತಾದ ಅಚ್ಚು. S. square (ಸೈನ್ಯ) ಉದ್ದದಷ್ಟೇ ಅಗಲವುಳ್ಳ ವ್ಯೂಹ: ಚದರ ವ್ಯೂಹ. S. sphere, ball ಗಟ್ಟಿ ಗೋಳ, ಗಟ್ಟಿ ಚೆಂಡು. S. tire (ಒಳಗೆ ಕೊಳವೆಯಿಲ್ಲದ) ಗಟ್ಟಿ ಚಕ್ರಪಟ್ಟಿ]. ದೃಢ(ವಾಗಿ ಕಟ್ಟಿದ, ರಚಿಸಿದ); ಭದ್ರವಾದ, ಮಜಬೂತಾದ (S. house, furniture. Man of s. build); ಎಲ್ಲ ಭಾಗವೂ ಒಂದೇ ರೀತಿಯಾಗಿರುವ, ಏಕ ಪ್ರಕಾರದ, ಅಖಂಡ [S. colour (ಬೇರೆ ಬೇರೆ ಮಾದರಿಗಳಿಲ್ಲದೆ) ಒಟ್ಟು ಒಂದೇ ಬಣ್ಣ; ಅಖಂಡ ಏಕವರ್ಣ. A s. vote ಸರ್ವಾನುಮತ, ಅಖಂಡ ಮತ. Go *or* be s. for —ಪರವಾಗಿ ಎಲ್ಲರೂ ಐಕಮತ್ಯದಿಂದ ಬೆಂಬಲಕೊಡಿ. The s. South (ಪ್ರಜಾ ಪ್ರಭುತ್ವ ಪಕ್ಷಕ್ಕೆ ಯಾವಾಗಲೂ ಅಭಿಮತ ಕೊಡುವ) ಅಮೆ. ಸಂ. ಗಳ ದಕ್ಷಿಣ ಸಂಸ್ಥಾನಗಳು]. ಬಲವಾದ, ನಿಜವಾದ, ವಾಸ್ತವವಾದ, ಸ್ಥಿರವಾದ, ಸಾಧಾರವಾದ, ಬುಡಭದ್ರವಾದ, ತಿರುಳುಳ್ಳ, ಸಾರವತ್ತಾದ [S. arguments ಬಲವಾದ, ಭದ್ರವಾದ, —ವಾದಗಳು. S. sense ಗಟ್ಟಿ ಬುದ್ಧಿ, ದೃಢ ವಿವೇಕ. S. comfort ಸಂತೃಪ್ತಿಕೊಡುವ —ಸುಖ, ಸೌಕರ್ಯ. A s. man (ಪ್ರತಿಭಾವಂತನಲ್ಲದಿದ್ದರೂ) ವಿವೇಕಶಾಲಿ, ತೂಕದ ಮನುಷ್ಯ; ಹಣವಂತ, ಧಡೂತಿಯ ಮನುಷ್ಯ; ಗಟ್ಟಿಕುಳ. S. consideration (ಒಪ್ಪಂದ, ಮೊ. ಗಳಲ್ಲಿ) ನಿಜವಾದ, ವಾಸ್ತವವಾದ —ಪ್ರಯೋಜನ, ಪ್ರತಿಫಲ]. ಉದ್ದ, ಅಗಲ, ಎತ್ತರ—ಈ ಮೂರೂ ಅಳತೆಗಳುಳ್ಳ: ಘನ (S. foot ಘನ ಅಡಿ. S. angle ಮೂರು ಅಥವಾ ಹೆಚ್ಚು ಸಮತಲ ಕೋನಗಳು ಒಂದು ಬಿಂದುವಿನಲ್ಲಿ ಸಂಧಿಸಿ ಆದ ಕೋನ: ಘನ ಕೋನ. S. number ಮೂರು ಮೂಲ ಅಪವರ್ತನಗಳುಳ್ಳ ಸಂಖ್ಯೆ: ಘನ ಸಂಖ್ಯೆ); ಘನಗಳ ಸಂಬಂಧವಾದ, ಘನಾಕೃತಿ ಸಂಬಂಧವಾದ [S. geometry ಘನ ಜ್ಯಾಮಿತಿ. S. problem (ಗಣಿತ) ಘನಾಕೃತಿಗಳ ಛೇದಗಳಾದ ವಕ್ರಗಳಿಗೆ ಸಂಬಂಧಿಸಿದ, ಘನ ಸಮೀಕರಣದಿಂದ ಬಿಡಿಸಬೇಕಾದ ಪ್ರಶ್ನೆ: ಘನಮಾನ ಪ್ರಶ್ನೆ]. (ನಾ.) ಘನವಸ್ತು; (ಜ್ಯಾ.) ಉದ್ದ, ಅಗಲ, ಎತ್ತರ—ಈ ಮೂರು ಅಳತೆಗಳುಳ್ಳ ಆಕೃತಿ, ಪರಿಮಾಣ: ಘನಾಕೃತಿ, ಘನ ಪರಿಮಾಣ [(ಬಿಂದು, ರೇಖೆ, ಮೇಲ್ಮೈ—ಇವುಗಳೊಡನೆ ಹೋಲಿಸಿ). Regular s. ಪರಸ್ಪರ ಸಮಾನ ಕೋನದಲ್ಲಿ ಇರುವ, ಸಮವಾದ ಮತ್ತು ಕ್ರಮವಾದ ಸಮತಲಗಳಿಂದ ಸುತ್ತುಗಟ್ಟಿದ ಘನಾಕೃತಿ: ಸಮ ಘನಾಕೃತಿ (Regular ನೋಡಿ)]. **Solidárity** ಸಾಲಿಡ್ಯಾರಿಟಿ (ನಾ.) ಒಕ್ಕಟ್ಟು, ಐಕಮತ್ಯ. **Sólidary** ಸಾಲಿಡರಿ (ಗು.) ಒಕ್ಕಟ್ಟಿನ, ಐಕಮತ್ಯದ, ಹುದುವಾದ. **Solídify** ಸೊಲಿಡಿಫೈ (ಕ್ರಿ.) ಗಟ್ಟಿ —ಆಗು, ಮಾಡು; ಘನೀ—ಕರಿಸು, ಭವಿಸು; ಘನಿಸು. **Solidificátion** (ನಾ.); **Solídifiable** (ಗು.); **Solídity** (ನಾ.) ಘನತ್ವ, ಘನತೆ, ದೃಢತೆ, ದಾರ್ಢ್ಯ, ಗಟ್ಟಿತನ (ರೂಪ. ಸಹ). **Sólidly** ಸಾಲಿಡ್ಲಿ (ಕ್ರಿ. ವಿ.)

Solidárity, Sólidary. **Solid** ನೋಡಿ.

Solidúngular ಸಾಲಿಡಂಗ್ಯುಲರ್, **-gulate** —ಗ್ಯುಲೇಟ್ (ಗು.) ಸೀಳದ ಗೊರಸುಳ್ಳ, ಇಡಿ ಗೊರಸಿನ; ಕುದುರೆ ಜಾತಿಯ.

Sólidus (L) ಸಾಲಿಡಸ್ (ನಾ.; ಬ. ವ. -di —ಡೈ) (ಚರಿತ್ರೆ) (ರೋಮನ್ ಚಕ್ರವರ್ತಿ ಕಾನ್ಸ್ಟಂಟೈನನು ಚಲಾವಣೆಗೆ ತಂದ) ಒಂದು ಚಿನ್ನದ ನಾಣ್ಯ; (ಸಂಕ್ಷಿಪ್ತದಲ್ಲಿ ಮಾತ್ರ: s.) ಷಿಲಿಂಗು (7s. 6d.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

೭ ಷಿ. ೬ ಪೆ.); ಷಿಲಿಂಗು ಸಂಖ್ಯೆಯನ್ನೂ ಪೆನಿ ಸಂಖ್ಯೆಯನ್ನೂ ಪ್ರತ್ಯೇಕಿಸಲು ಓರೆಯಾಗಿ ಹಾಕುವ ಗೆರೆ: ಷಿಲಿಂಗು ಗೆರೆ (7/6 ೭ ಷಿ. ೬ ಪೆ.)

Solifídian ಸೋಲಿಫಿಡಿಯನ್ (ಗು., ನಾ.) ಮುಕ್ತಿಗೆ ಕರ್ಮದ ಅವಶ್ಯಕತೆಯಿಲ್ಲದೆ ಶ್ರದ್ಧೆಯೊಂದೇ ಸಾಕೆಂಬ ವಾದದ(ವನು); ಶ್ರದ್ಧೈಕ ವಾದದ, —ವಾದಿ.

Solíloquy ಸೊಲಿಲೊಕ್ವಿ (ನಾ.) ಕೇಳುವವರು ಇಲ್ಲದೆ, ಕೇಳುವವರು ಇದ್ದಾರೆಂಬ ಭಾವನೆಯಿಲ್ಲದೆ, ತನಗೆ ತಾನೇ ಮಾತಾಡಿಕೊಳ್ಳುವುದು: ಆತ್ಮಗತ, ಸ್ವಗತ (—ಭಾಷಣ) [A s. (ನಾಟಕದಲ್ಲಿ) ಸ್ವಗತ ಭಾಷಣ]. **Solíloquize** (ಕ್ರಿ. ಅಕ.) ತನಗೆ ತಾನೇ ಮಾತನಾಡಿಕೊ. **Solíloquist** (ನಾ.)

Sóliped ಸಾಲಿಪೆಡ್ (ಗು., ನಾ.) ಸೀಳದ, ಇಡಿಯ, ಅಖಂಡ, —ಗೊರಸಿನ (ಪ್ರಾಣಿ)

Solípsism ಸಾಲಿಪ್ಸಿಸ್ಮ್ (ನಾ.) (ಅಧ್ಯಾತ್ಮ ಶಾಸ್ತ್ರ) ತನ್ನ ಆತ್ಮವೊಂದೇ ಜ್ಞೇಯವಾದುದು, ಇರುವುದು—ಎಂಬ ವಾದ: ಸ್ವಾತ್ಮೈಕ ವಾದ. **Solípsist** (ನಾ.) —ವಾದಿ.

Solitairé ಸಾಲಿಟೇ(ಅ)ರ್ (ನಾ.) ಒಂಟಿ ರತ್ನದ ಕಿವಿ ಕಡುಕು, ಷರಟಿನ ಗುಂಡಿ, ಮೊ. ವು; ಏಕರತ್ನಿ; ಒಂದೇ ತುಂಡಿನಲ್ಲಿ ಬಂಧಿಸುವ, ಷರಟಿನ ಮಣಿಕಟ್ಟು ಪಟ್ಟಿಯ ಬಂಧನಿ; ಒಕ್ಕೊಂಡಿ; ಏಕಬಂಧನಿ. ವಿಶೇಷ ರೀತಿಯ ಹಲಗೆಯಮೇಲೆ ಒಬ್ಬನೇ ಆಡುವ ಗೋಲಿಯಾಟ: ಒಬ್ಬನೇ ಆಡುವ ಹಲವು ಬಗೆಯ ಇಸ್ಪೀಟಾಟ (ಈಗ ಸಾ., patience ಆಟ): ಒಂಟಿಯಾಟ; ವೆಸ್ಟ್ ಇಂಡೀಸಿನ ಮತ್ತು ಅಮೆರಿಕದ 'ತ್ರಷ್' ಜಾತಿಯ ಹಕ್ಕಿ. (ವಿರ. ಪ್ರ.) ಏಕಾಂತವಾಸಿ.

Sólitary ಸಾಲಿಟರಿ (ಗು., ನಾ.) ಒಂಟಿಯಾಗಿ ವಾಸಮಾಡುವ, ಇರುವ; ಜೊತೆ—ಸೇರದ, ಇಲ್ಲದ; ಒಂಟಿ(ಗನಾದ), ಒಂದೇ (ಒಂದಾದ), ಏಕ ಮಾತ್ರ, ಏಕಾಕಿ(ನಿ), ಏಕಾಂತ(ವಾಸಿ); ಪ್ರಾಣಿಗಳ, ಜನಗಳ, ಸಂಚಾರವಿಲ್ಲದ; ವಿವಿಕ್ತ; ನಿರ್ಜನ [S. ants, bees (ಗುಂಪಿನಲ್ಲರದೆ) ಒಂಟಿ(ಯಾಗಿರುವ) ಇರುವೆಗಳು, ದುಂಬಿಗಳು. S. life ಏಕಾಂತ ಜೀವನ, ಒಂಟಿ ಬಾಳು. S. valley ನಿರ್ಜನವಾದ ಕಣಿವೆ. S. instance ಏಕಮಾತ್ರ, ಒಂದೇ ಒಂದಾದ —ದೃಷ್ಟಾಂತ, ಉದಾಹರಣೆ. S. confinement ಪ್ರತ್ಯೇಕ ಕೋಣೆಯಲ್ಲಿ ಒಬ್ಬನನ್ನೇ ಕೂಡಿಹಾಕುವುದು: ಏಕಾಂತ ಬಂಧನ, ಒಂಟಿ ಸೆರೆ]. (ನಾ.) ಏಕಾಂತವಾಸಿ, ವಿರಕ್ತ, ನಿಸ್ಸಂಗಿ. **Sólitarily** (ಕ್ರಿ. ವಿ.); **Sólitariness** (ನಾ.); **Sólitude** (ನಾ.) ಒಂಟಿಯಾಗಿರುವುದು; ಏಕಾಂತತೆ; ಏಕಾಂತ—ಸ್ಥಳ, ವಾಸ, ಜೀವನ; ನಿರ್ಜನ ಪ್ರದೇಶ.

Sólitude. Solitary ನೋಡಿ.

Sólo ಸೋಲೊ (ನಾ., ಬ. ವ. -os, -li —ಲೀ) ಯಾವ ಪಕ್ಕ ವಾದ್ಯವೂ ಇಲ್ಲದೆ, ಇದ್ದರೂ ಅದನ್ನು ಬಹಳ ಗೌಣವಾಗಿಟ್ಟು, ಒಬ್ಬನೇ ಹಾಡುವ ಹಾಡು, ನುಡಿಸುವ ಗೀತೆ: ತನಿ—ಹಾಡಿಕೆ, ನುಡಿಕೆ, ವಾದನ, ಕಚೇರಿ [(ವಿಶೇಷಣವಾಗಿಯೂ ಪ್ರ.): A s. passage ತನಿ ಸಂಗೀತ ಭಾಗ. S. organ ತನಿ (ಬಾಜನೆಗೆ ಯೋಗ್ಯವಾದ) ಆರ್ಗನ್ ವಾದ್ಯ. S. stops ತನಿ ಬಾಜನೆ ಪಿಳ್ಳಂಗೋವಿ ತಂಡಗಳು]; (ಇಸ್ಪೀಟಾಟ) ಜೊತೆಯಿಲ್ಲದೆ ಒಬ್ಬನೇ ಉಳಿದ ಮೂವರನ್ನೂ ಅಥವಾ ಇತರ ಎಲ್ಲರನ್ನೂ ಎದುರಿಸಿ ಆಡುವ ಹಲವು ಬಗೆಯ ಆಟ; ಇದೇ ರೀತಿಯಲ್ಲಿ ಆಡುವ ಇತರ ಆಟ; ಒಕ್ಕೈ ಆಟ. (ವಿಮಾನ ಪ್ರಯಾಣ: ಜೊತೆಗಾರರಿಲ್ಲದೆ) ಒಂಟಿ (ವಿಮಾನ) ಹಾರಿಕೆ [Flying s. (ಶಿಕ್ಷಕರಾಗಲಿ, ಸಹಾಯಕರಾಗಲಿ ಇಲ್ಲದೆ) ಒಬ್ಬನೇ ಹಾರುವ, ನಡಸುವ]. **Sóloist** (ನಾ.) ತನಿ—ಹಾಡುಗಾರ, ವಾದ್ಯಗಾರ.

Sólomon ಸಾಲೊಮನ್ (ನಾ.) ಅತ್ಯಂತ ವಿವೇಕಶಾಲಿಯೆಂದು ಪ್ರಸಿದ್ಧಿಯಿದ್ದ ಇಸ್ರೇಲ್ ದೊರೆ ಸಾಲೊಮನ್; (ಸಾಲೊಮನ್ನಿನಂಥ) ವಿವೇಕಶಾಲಿ, ಪ್ರಾಜ್ಞ [Is no S. (ನಮ್ಮಲ್ಲಿ 'ಅವನು ಬೃಹಸ್ಪತಿ ಅಲ್ಲ' ಎನ್ನುವಂತೆ) ಅವನು ಸಾಲೊಮನ್ ಅಲ್ಲ. Song of S. ಸಾಲೊಮನ್ ಗೀತೆ. S.'s seal ಒಂದು ಸಸ್ಯವಿಶೇಷ]. **Solomónic** —ಮಾನಿಕ್ (ಗು.)

Sólon ಸೋಲಾನ್ (ಗು.) ಪ್ರಾಜ್ಞ, ಜ್ಞಾನಿ; ಪ್ರಾಜ್ಞನಾದ ಶಾಸನಕಾರ (ಅಥೆನ್ಸಿನ ಶಾಸನಕಾರನ ಹೆಸರು)

Sólstice ಸಾಲ್ಸ್ಟಿಸ್ (ನಾ.) ಸೂರ್ಯನು ವಿಷುವದ್ವೃತ್ತದಿಂದ ಅತ್ಯಂತ ದೂರವಾಗಿದ್ದು, ಪಥದಲ್ಲಿ ಬಾಗಿ ತಿರುಗುವುದಕ್ಕೆ ಮೊದಲು ಕೊಂಚ ಚಲಿಸದೆ ನಿಂತುಕೊಳ್ಳುವಂತೆ ಭಾಸವಾಗುವ ಎರಡು ಕಾಲಗಳಲ್ಲೊಂದು: ಅಯನ ಸಂಕ್ರಾಂತಿ [Summer s. ಕರ್ಕಾಟಕ ಸಂಕ್ರಾಂತಿ (ಸು., ಜೂನ್ ೨೧). Winter s. ಮಕರ ಸಂಕ್ರಾಂತಿ (ಸು., ಡಿಸೆಂಬರ್ ೨೨)]; ಅಯನ ಸಂಕ್ರಮಣ ಕಾಲದಲ್ಲಿ ಸೂರ್ಯನು ಕ್ರಾಂತಿ ವೃತ್ತದಲ್ಲಿರುವ ಬಿಂದು: ಅಯನ ಸಂಕ್ರಮಣ ಬಿಂದು (=Solstitial point). **Solstítial** —ಷ್‌ಲ್ (ಗು.)

Sóluble ಸಾಲ್ಯುಬ್‌ಲ್ (ಗು.) (ಯಾವುದಾದರೂ ದ್ರವದಲ್ಲಿ) ಕರಗುವ(ಥ), (ವಿ)ಲೀನವಾಗುವ, (ವಿ)ದ್ರಾವ್ಯ; ಬಿಡಿಸಲಾಗುವ, ಹರಿಸಲಾಗುವ. S. glass (ಕೃತಕ ಶಿಲೆಯನ್ನು ಗಟ್ಟಿಯಾಗಿಸುವುದು, ಮೊಟ್ಟೆಯನ್ನು ಕೆಡದಂತಿಡುವುದು, ಮೊ. ಕ್ಕಾಗಿ ಉಪಯೋಗಿಸುವ ಸೋಡ ಸಿಲಿಕೇಟಿನಿಂದ ತಯಾರಿಸಿದ) ಒಂದು ದ್ರವರೂಪದ ಕಾಚ ಪದಾರ್ಥ. ನೀರ ಗಾಜು (=Water-glass). **Solubílity** (ನಾ.); **Solútion** ಸೊಲ್ಯೂಷನ್ (ನಾ., ಕ್ರಿ. ಸಕ.) ಬೇರ್ಪಾಟು, ವಿಯೋಜನೆ, ವಿಚ್ಛೇದ, ವಿಘಟನ [(ಮು.) S. of continuity (ಶಸ್ತ್ರಚಿಕಿತ್ಸೆಯಲ್ಲಿ: ಮುರಿತ, ಮೊ. ಗಳಿಂದ) ಅಂಗಾಂಶಗಳ ವಿಘಟನೆ (ರೂಪ. ಸಹ)]; ಘನವಸ್ತುವನ್ನಾಗಲಿ ಅನಿಲವನ್ನಾಗಲಿ ದ್ರಾವಕದಲ್ಲಿ ಲೀನಮಾಡಿ ದ್ರವರೂಪಕ್ಕೆ ತರುವುದು: ಕರಗುವುದು, ಕರಗಿಸುವುದು; ಲೀನಕರಣ; ಇದರಿಂದ ಲಭಿಸಿದ ವಸ್ತು ಅಥವಾ ಸ್ಥಿತಿ: ದ್ರಾವಣ [Chemical s. ಘಟಕಗಳ ರಾಸಾಯನಿಕ ಗುಣಗಳು ಪರಿವರ್ತನೆ ಹೊಂದುವ ದ್ರಾವಣ: ರಾಸಾಯನಿಕ ದ್ರಾವಣ. Mechanical s. (ರಾಸಾಯನಿಕ ಪರಿವರ್ತನೆಯಿಲ್ಲದ) ಭೌತ ದ್ರಾವಣ. Held in s. ದ್ರಾವಣದಲ್ಲಿ ಲೀನವಾಗಿ. His ideas are in s. ಅವನ ಭಾವನೆಗಳು ಒಂದು ನಿಶ್ಚಯಕ್ಕೆ ಬಂದಿಲ್ಲ, ದ್ರವಸ್ಥಿತಿಯಲ್ಲಿವೆ. A s. of alum ಪಟಿಕದ ದ್ರಾವಣ. Strong, weak, s. ತೀಕ್ಷ್ಣ, ದುರ್ಬಲ, ದ್ರಾವಣ]; (ಪ್ರಶ್ನೆ, ಸಮಸ್ಯೆ, ತೊಡಕು, ಮೊ. ನ್ನು) ಬಿಡಿಸುವುದು, ಬಗೆಹರಿಸುವುದು; (ಪ್ರಶ್ನೆ, ಮೊ. ಕ್ಕೆ) ಪರಿಹಾರ (ಮಾರ್ಗ), ಉತ್ತರ (*Of, for, to* ಉಪ. ದೊಡನೆ); ರಬ್ಬರಿನ ದ್ರಾವಣ (=Rubber s.) [(ಕ್ರಿ. ಸಕ.) ರಬ್ಬರ್ ದ್ರಾವಣ—ಹಚ್ಚು, ಲೇಪಿಸು]. **Solve** ಸಾಲ್ವ್ (ಕ್ರಿ. ಸಕ.) (ವಿರ. ಪ್ರ.) (ಪ್ರಶ್ನೆಗೆ) ಉತ್ತರ ಕಂಡುಹಿಡಿ, (ಸಮಸ್ಯೆಯನ್ನು) ಬಗೆಹರಿಸು, (ಕಷ್ಟಕ್ಕೆ) ಪರಿಹಾರ ಮಾರ್ಗ ತೋರು. (ಗಂಟು, ಸಿಕ್ಕು, ಮೊ. ಗಳನ್ನು) ಬಿಡಿಸು, ಬಿಚ್ಚು. **Sólvable** (ಗು.); **Solvabílity** (ನಾ.); **Sólvent** (ಗು., ನಾ.) ಕರಗಿಸುವ, ದ್ರಾವಕ, ಲೀನಕಾರಿ; (ರೂಪ.) (ಸಂಪ್ರದಾಯ, ನಂಬಿಕೆ, ಮೊ. ಗಳನ್ನು) ಸಡಿಲಿಸುವ, ದುರ್ಬಲಗೊಳಿಸುವ; ತೀರಿಸಬೇಕಾದ ಸಾಲಗಳನ್ನೆಲ್ಲ ತೀರಿಸಲು ಹಣವುಳ್ಳ; ಸಾಲ ತೀರಿಸಬಲ್ಲ; ಧನಾನುಕೂಲವುಳ್ಳ; ಧಡೂತಿಯಾದ. (ನಾ.) ದ್ರಾವಕ, ದ್ರಾವಣಿ, ಲೀನಕಾರಿ (Water is the commonest s. ನೀರು ಅತ್ಯಂತ ಸಾಮಾನ್ಯವಾದ ದ್ರಾವಕ. Alcohol is the s. of resinous substances ಮದ್ಯಸಾರ ರಾಳಪದಾರ್ಥಗಳ ಲೀನಕಾರಿ); ಸಡಿಲಿಸುವಂಥದು, ಕರಗಿಸುವಂಥದು, ದುರ್ಬಲಕಾರಿ (Science is a s. of religious belief ವಿಜ್ಞಾನ ಮತ ನಂಬಿಕೆಯ ಸಡಿಲಕಾರಿ). **Sólvency** (ನಾ.) ಸಾಲ ತೀರಿಸುವ ಶಕ್ತಿ, ಧಡೂತಿ.

Sólus ಸೋಲಸ್ (ಆಖ್ಯಾತಕ ಗು.; ಸ್ತ್ರೀ -la —ಲ) ಒಂಟಿಯಾದ, ಏಕಾಕಿಯಾದ, ಏಕಾಂಗಿಯಾದ [(ಮು., ರಂಗಸ್ಥಳದ ಸೂಚನೆಗಳಲ್ಲಿ): Enter king s. ರಾಜ ಒಬ್ಬನೇ ಪ್ರವೇಶಿಸುತ್ತಾನೆ. (ಹಾಸ್ಯ ಪ್ರ.) Found myself s. ನಾನು ಒಬ್ಬನೇ, ಏಕಾಂಗಿಯಾಗಿ, ಉಳಿದೆ]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Solútion, Solve, Sólvent, etc. **Soluble** ನೋಡಿ.

-som. **-some** ನೋಡಿ.

Somátic ಸೊಮ್ಯಾಟಿಕ್ (ಗು.) (Mental, spiritual, psychic ಪದಗಳಿಗೆ ವಿರುದ್ಧ ಪ್ರ.) ಮೈಯ, ದೈಹಿಕ, ಶಾರೀರಕ, ಭೌತ (S. death ಸಂಪೂರ್ಣ ದೈಹಿಕ ಮರಣ). **Sómato-** ಸೋಮಟೊ— (ಸ. ಪೂ. ಪ.) ದೈಹಿಕ—, ದೇಹ—, ಶಾರೀರಕ—. **-génic** ದೇಹಜ, ಶರೀರಜನ್ಯ. **-logy** ದೇಹಶಾಸ್ತ್ರ ; ಅಂಗರಚನಾ ಶಾಸ್ತ್ರ ಮತ್ತು ಶರೀರ ವಿಜ್ಞಾನ.

Sómbre ಸಾಂಬರ್ (ಗು.) ಮಬ್ಬಾದ, ಮಸುಕಾದ, ಮಂಕುಗವಿದ, ಕತ್ತಲುಕತ್ತಲಾಗಿರುವ, ನಿರುತ್ಸಾಹಕರ, ವಿಷಣ್ಣ, ಖಿನ್ನ (A s. sky ಕತ್ತಲೆ ಕವಿದ, ಕಪ್ಪಾದ, —ಆಕಾಶ. S. prospect ನಿರುತ್ಸಾಹಕರ ಭವಿಷ್ಯ. Man of s. character ಮಂಕು ಸ್ವಭಾವದ ಮನುಷ್ಯ, ವಿಷಣ್ಣ ಸ್ವಭಾವದ ಮನುಷ್ಯ, ಮೂದೇವಿ). **Sómbrely** (ಕ್ರಿ. ವಿ.) ; **Sómbreness** (ನಾ.) ; **Sómbrous** (ಗು.) (ಕಾವ್ಯ ಪ್ರ.)

Sombréro ಸಾಂಬ್ರೇರೋ (ನಾ.) ಅಗಲವಾದ ಚಾಚು ಇರುಳ್ಳ ಫೆಲ್ಟು ಟೊಪ್ಪಿಗೆ (ಅಮೆರಿಕದಲ್ಲಿ ಹೆಚ್ಚು ಬಳಕೆ)

Some ಸಮ್ (ಗು., ಸ. ನಾ., ಕ್ರಿ. ವಿ.) ಯಾವನೋ, ಯಾವಳೋ, ಯಾವುದೋ, ಯಾರೋ, ಒಂದಾನೊಂದು, ಒಬ್ಬಾನೊಬ್ಬ, (ಯಾವುದೋ) ಕೆಲವು, (ಯಾರೋ) ಕೆಲವರು (S. fool locked the door ಯಾವನೋ ಮುಟ್ಠಾಳ ಬಾಗಿಲಿಗೆ ಬೀಗ ಹಾಕಿದನು. Saw it in some book ಯಾವುದೋ ಪುಸ್ತಕದಲ್ಲಿ ನೋಡಿದೆ. S. say yes & s. say no ಕೆಲವರು ಹೌದು ಎನ್ನುತ್ತಾರೆ, ಕೆಲವರು ಇಲ್ಲ ಎನ್ನುತ್ತಾರೆ). ಕೊಂಚ, ತುಸ, ಸ್ವಲ್ಪ (Eat s. bread. Have some more ಇನ್ನು ಕೊಂಚ ತೆಗೆದುಕೊ). ಸಾಕಷ್ಟು, ತಕ್ಕಮಟ್ಟಿನ (Had some trouble in arranging it ಅದನ್ನು ಏರ್ಪಡಿಸುವುದರಲ್ಲಿ ತಕ್ಕಮಟ್ಟಿನ ತೊಂದರೆಯಾಯಿತು. That is s. help); ಕೊಂಚ ಮಟ್ಟಿನ, ಕೆಲವೊಂದು ರೀತಿಯ (That is s. guide) ; (ಅವಧಾರಣ ಪ್ರ., ವ್ಯಂಗ್ಯ ಪ್ರ., ಅಮೆ. ಸಂ., ಅಸಂ.) ನಿಜವಾಗಿ ಆ ಲಕ್ಷಣವಿರುವ, ಪೂರ್ಣ, ಪಕ್ಕಾ ; ಒಂದು ರೀತಿಯ (This is some war ! ಇದು ಪಕ್ಕಾ ಯುದ್ಧವೆ ! I call that s. poem ಅದನ್ನು ಒಂದು ರೀತಿಯ ಕವನವೆಂದು ಕರೆಯುತ್ತೇನೆ) ; (ಒತ್ತಿ ಹೇಳುವಲ್ಲಿ) ಕೊಂಚವಾದರೂ, ಕಿಂಚಿತ್ತಾದರೂ (Do have some mercy ಕೊಂಚವಾದರೂ ದಯೆ ತೋರಿಸು) ; ಸುಮಾರು (Waited s. 20 minutes ಸುಮಾರು ೨೦ ನಿಮಿಷ ಕಾದಿದ್ದೆ. We were s. 60 in all) ; [All & s. (ಪ್ರಾಚೀ. ಪ್ರ.) ಎಲ್ಲರೂ, ಪ್ರತಿಯೊಬ್ಬರೂ]. (ಕ್ರಿ. ವಿ.) (ಅಸಂ.) ಕೊಂಚ ಮಟ್ಟಿಗೆ (He seemed annoyed s. ಅವನು ಕೊಂಚ ಮಟ್ಟಿಗೆ ರೇಗಿದಂತೆ ತೋರಿದನು). **Sómebody** ಯಾರೋ ಒಬ್ಬ, ಯಾವನಾದರೂ ಒಬ್ಬ ; ಗಣ್ಯ ವ್ಯಕ್ತಿ (ಬ. ವ. -dies). **Sómehow** ಹೇಗೋ, ಎಂತೋ, ಏಕೋ, ಏನೋ [He somehow dropped behind ಅವನು ಹೇಗೋ ಹಿಂದೆ ಬಿದ್ದ. Somehow or other I never liked him ಏಕೋ ಏನೋ ಅವನನ್ನು ಕಂಡರೆ ನನಗೆ ಎಂದೂ ಆಗುತ್ತಿರಲಿಲ್ಲ. Must get it finished somehow (ಒತ್ತಿ ಹೇಳುವಲ್ಲಿ) ಹೇಗೋ ಅದನ್ನು ಪೂರೈಸಿಬಿಡಬೇಕು]. **Sómeone** (ಬ. ವ. ಇಲ್ಲ) ಯಾರೋ ಒಬ್ಬ, ಯಾರಾದರೂ ಒಬ್ಬ. Some one ಯಾವುದಾದರೂ ಗೊತ್ತಾದ ಒಂದು, ಯಾರಾದರೂ ಗೊತ್ತಾದ ಒಬ್ಬ (Choose s. one place as a centre. Take s. one as a type). **Something** ಗೊತ್ತಾದ, ಯಾವುದೋ, —ಒಂದು ; ಯಾವುದಾದರೊಂದು [Have something to tell you ನಿನಗೆ ಹೇಳಬೇಕಾದ ವಿಷಯ ಇದೆ. We hope to meet something of them ಅವರನ್ನು ಆಗಾಗ್ಗೆ ಕಾಣುತ್ತೇವೆಂದು ನಿರೀಕ್ಷಿಸುತ್ತೇವೆ. Take a drop of something ಒಂದು ತೊಟ್ಟು ಮದ್ಯ ತೆಗೆದುಕೊ. He is something in the record office ಅವನು ದಾಖಲೆ ಕಚೇರಿಯಲ್ಲಿ (ಯಾರೋ) ಒಬ್ಬ ನೌಕರ. He has something in the record office ಅವನಿಗೆ ದಾಖಲೆ ಕಚೇರಿಯಲ್ಲಿ (ಯಾವುದೋ) ನೌಕರಿ ಇದೆ. There is something in what you say ನೀನು ಹೇಳುವುದರಲ್ಲಿ ನಿಜಾಂಶ, ಹುರುಳು, ಗಮನಾರ್ಹವಾದ ವಿಷಯ, —ಇದೆ. Thinks himself something ತಾನು ಒಬ್ಬ ಗಣ್ಯ ವ್ಯಕ್ತಿಯೆಂದು ಭಾವಿಸುತ್ತಾನೆ. There is something of preciosity in his style ಅವನ ಶೈಲಿಯಲ್ಲಿ ಕೊಂಚ ಮಟ್ಟಿನ, ಒಂದು ರೀತಿಯ, ಕೃತಕ ನವುರು ಇದೆ. Am something of a carpenter ನಾನು ತಕ್ಕಮಟ್ಟಿನ ಬಡಗಿ. It is something to be safe home again ಮತ್ತೆ ಸುರಕ್ಷಿತವಾಗಿ ಮನೆಗೆ ಬಂದದ್ದು ಮನಸ್ಸಿಗೆ ಸ್ವಲ್ಪ ನೆಮ್ಮದಿ, ಸ್ವಲ್ಪ ಸಮಾಧಾನ. His fads are something awful ಅವನ ಖಯಾಲುಗಳು ಭಯಂಕರವಾಗಿವೆ. Has sprained his ankle or something ಅವನು ಕಾಲಹರಡನ್ನೋ ಇನ್ನು ಯಾವುದನ್ನೋ ಉಳುಕಿಸಿಕೊಂಡಿದ್ದಾನೆ. Lost his train or something ಅವನಿಗೆ ರೈಲು ತಪ್ಪಿತೋ ಇನ್ನು ಏನೋ ಆಯಿತು. Was something impatient ಅವನು ಕೊಂಚ ಮಟ್ಟಿಗೆ ತಾಳ್ಮೆಗೆಟ್ಟಿದ್ದನು. (ಬಳ. ಮಾ.; *like* ಪದವನ್ನು ಒತ್ತಿ ಪ್ರ.) This is something like a pudding ಇದು ಭರ್ಜರಿ ಕಡುಬು. That's something like ! (ಬಳ. ಮಾ.) ಅದು ಒಳ್ಳೆಯ ಭರ್ಜರಿ. **Sómetime** (ಕ್ರಿ. ವಿ., ಗು.) (ಪ್ರಾಚೀ. ಪ್ರ.) ಹಿಂದೆ, ಹಿಂದಿನ, ಮುಂಚೆ, ಮುಂಚಿನ [Was sometime mayor. (The) sometime sheriff]. S. time ಕೊಂಚ ಕಾಲ (Have been waiting s. time ಕೊಂಚ ಹೊತ್ತಿನಿಂದ ಕಾಯುತ್ತ ಇದ್ದೇನೆ) ; ಯಾವಾಗಲಾದರೂ (Must see him about it s. time ಆ ಬಗ್ಗೆ ಅವನನ್ನು ಯಾವಾಗಲಾದರೂ ನೋಡಬೇಕು). **Sómetimes** (ಕ್ರಿ. ವಿ.) ಕೆಲವು ವೇಳೆ, ಕೆಲವೊಮ್ಮೆ (Is sometimes hot and sometimes cold). **Sómeway** ಹೇಗೋ (ಒಂದು ರೀತಿಯಲ್ಲಿ), ಹೇಗಾದರೂ. **Sómewhat** (ಕ್ರಿ. ವಿ.) ಕೊಂಚ ಮಟ್ಟಿಗೆ (Is somewhat difficult) ; (ಸ. ನಾ.) (ಪ್ರಾಚೀ. ಪ್ರ.) [Loses somewhat of its force ಅದರ ಬಲದಲ್ಲಿ ರವಷ್ಟು ಕಳೆದುಕೊಳ್ಳುತ್ತದೆ. Loses somewhat in the telling ಹೇಳುವ ರೀತಿಯಲ್ಲಿ ಸ್ವಲ್ಪ (ಸ್ವಾರಸ್ಯ) ಕಳೆದುಹೋಗುತ್ತದೆ, ಕಳೆದುಕೊಳ್ಳುತ್ತದೆ]. **Sómewhen** (ವಿರ. ಪ್ರ. ಅಥವಾ ಕೃತಕ ಪ್ರ.) ಯಾವಾಗಲಾದರೂ, ಎಂದಾದರೂ. **Sómewhere** ಎಲ್ಲಾದರೂ, ಎಲ್ಲಿಗಾದರೂ, ಎಲ್ಲೋ, ಎಲ್ಲಿಗೋ [Lives somewhere near us. Sent him somewhere. We will see him somewhere first ಅದಕ್ಕೆ ಮುಂಚೆ ಅವನು ನರಕದಲ್ಲಿರುವುದನ್ನು, ಜೈಲಿನಲ್ಲಿರುವುದನ್ನು, (ಮೊ.) ನೋಡುತ್ತೇವೆ]. **Sómewhither** (ಪ್ರಾಚೀ. ಪ್ರ.) ಎಲ್ಲಿಗೋ (ಒಂದೆಡೆಗೆ), ಎಲ್ಲಿಗಾದರೂ.

-som(e) —ಸಮ್ (ಉ. ಪ್ರ.) —ಯೋಗ್ಯ,—ಕಾರಕ, ಮೊ. ಅರ್ಥಗಳಲ್ಲಿ ನಾಮವಾಚಕ, ಗುಣವಾಚಕ ಮತ್ತು ಸಕರ್ಮಕ ಕ್ರಿಯಾಪದಗಳಿಗೆ ಹತ್ತುವ ಉ. ಪ್ರ. (Quarrelsome, handsome. Blithesome, fulsome. Tiresome, winsome)

Sómersault, -set[1] ಸಮರ್‌ಸಾಲ್ಟ್, —ಸೆಟ್ (ನಾ., ಕ್ರಿ. ಅಕ.) ಅಂತರಾಳದಲ್ಲಿ ಲಾಗ, ಪಲ್ಟಿ (ಹಾಕು); ಅಂತರಪಲ್ಟಿ, ಡೊಂಬರಲಾಗ, ಹಿಂಗಣ್ ಮುಂಗಣ್ (—ಹಾಕು) (Double, treble, s. ಇಪ್ಪಟ್ಟು, ಮುಪ್ಪಟ್ಟು—. Turn a s. ಪಂಟಿಸು, ಡೊಂಬರಲಾಗ ಹಾಕು)

Sómerset[2] ಸಮರ್‌ಸೆಟ್ (ನಾ.) ಮು., ಒಂಟಿಕಾಲಿನ ಸವಾರನಿಗಾಗಿ ಮಾಡಿದ, ಮೆತ್ತೆ ತುಂಬಿದ ಜೀನು (ಇಂಥದನ್ನು ಉಪಯೋಗಿಸುತ್ತಿದ್ದ ಶ್ರೀಮಂತ F. Somerset ಎಂಬಾತನ ಹೆಸರಿನಿಂದ)

Sómerset House ಸಮರ್‌ಸೆಟ್ ಹೌಸ್ (ನಾ.) (ರುಜುವಾತಾದ ಅಂತಿಮ ಇಚ್ಛಾಪತ್ರಗಳನ್ನಿಟ್ಟಿರುವ ಮತ್ತು ಒಳದೇಶದ ಕಂದಾಯ ಕಚೇರಿ ಇರುವ) ಲಂಡನ್ನಿನಲ್ಲಿಯ ಒಂದು ಕಟ್ಟಡ (ಪ್ರಾಸ್ತಾವಿಕವಾಗಿ ಪ್ರ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sómite ಸೋಮೈಟ್ (ನಾ.) (ಕಶೇರುಕ ಅಥವಾ ಸಂಧಿದೇಹಿ ಪ್ರಾಣಿಗಳಲ್ಲಿ) ಎರಡು ಸಂಧಿಗಳ ನಡುವಣ ಒಂದು ಭಾಗ ; ಸಂಧ್ಯಂತರ ಖಂಡ. **Somític** ಸೊಮಿಟಿಕ್ (ಗು.)

Somnámbulism ಸಾಮ್ನಾಮ್ಬ್ಯುಲಿಸ್‌ಂ (ನಾ.) ನಿದ್ರೆಯಲ್ಲಿ ನಡೆದಾಡುವುದು ಅಥವಾ ಇತರ ಕೆಲಸಮಾಡುವುದು: ನಿದ್ರೆನಡಿಗೆ; ನಿದ್ರಾಸಂಚಾರ(ದ ವಿದುಳ ವಿಕಾರ) (Artificial s. ವಶ್ಯಸುಪ್ತಿ). **Somnámbulant** (ಗು., ನಾ.) (ವಿರ. ಪ್ರ.) ನಿದ್ರೆನಡಗೆಯ(ವನು), ನಿದ್ರಾಸಂಚಾರಿ. **Somnámbulate** —ಲೇಟ್ (ಕ್ರಿ. ಅಕ.) (ವಿರ. ಪ್ರ.) ನಿದ್ರೆಯಲ್ಲಿ ನಡೆದಾಡು. **Somnámbulist** (ನಾ.) ನಿದ್ರಾಸಂಚಾರಿ. **Somnambulístic** (ಗು.)

Somni- ಸಾಮ್ನಿ— (ಸ. ಪೂ. ಪ.) ನಿದ್ರೆ—, ನಿದ್ರಾ—. **-ferous** ನಿದ್ರೆ ಬರಿಸುವ, ನಿದ್ರಾಜನಕ. **-loquence, -loquism, -loquy** ನಿದ್ರೆಯಲ್ಲಿ ಮಾತಾಡಿಕೊಳ್ಳುವ ಅಭ್ಯಾಸ ; ನಿದ್ರಾಲಾಪ. **-loquist** ನಿದ್ರೆಯಲ್ಲಿ ಮಾತಾಡುವವನು. **-loquous** ನಿದ್ರೆಯಲ್ಲಿ ಮಾತಾಡುವ. **-pathist** ವಶ್ಯಸುಪ್ತ, ವಶ್ಯಸುಪ್ತಿ ವಶ. **-pathy** ವಶ್ಯಸುಪ್ತಿ.

Sómnolent ಸಾಮ್ನೊಲೆಂಟ್ (ಗು.) ನಿದ್ರೆ, ಮಂಪರ, —ಬರುವ, ಬರಿಸುವ; ನಿದ್ರೆಯ (ಜೊಂಪಿನ), ಮಂಪರದ, ತೂಕಡಿಕೆಯ ; (ರೋಗನಿದಾನ) ನಿದ್ರೆಗೂ ಎಚ್ಚರಕ್ಕೂ ನಡುವಣ ಸ್ಥಿತಿಯಲ್ಲಿಯ; ಅರೆನಿದ್ರೆಯ. **Sómnolence** (ನಾ.); **Sómnolency** (ನಾ.); **Sómnolently** (ಕ್ರಿ. ವಿ.); **Sómnolism** ಸಾಮ್ನೊಲಿಸ್‌ಂ (ನಾ.) ವಶ್ಯಸುಪ್ತಿ.

Son ಸನ್ (ನಾ.) ಗಂಡು ಮಗು, ಮಗ, ಪುತ್ರ [S. and heir (ಮು.) ಜ್ಯೇಷ್ಠ ಪುತ್ರ, ಉತ್ತರಾಧಿಕಾರಿ ಪುತ್ರ. S.-in-law ಅಳಿಯ. He is his father's s. ತಂದೆಯಂಥ, ತಂದೆಗೆ ತಕ್ಕ, ಮಗ. The S. of Man (ಬೈಬಲ್ಲಿನ ಹೊಸ ಒಡಂಬಡಿಕೆಯಲ್ಲಿ) ಯೇಸು ಕ್ರಿಸ್ತ; (ಹಳೆಯ ಒಡಂಬಡಿಕೆಯಲ್ಲಿ) ಆದಮನ ಸಂತತಿಯವನು, ಮನುಷ್ಯ (ಮು., ಸಂಬೋಧನೆಯಲ್ಲಿ). The sons of men ಮಾನವ ಜಾತಿ, ಮನುಷ್ಯರು. The Son (of God) ದೇವಪುತ್ರ, ಯೇಸು ಕ್ರಿಸ್ತ. S. of a gun (Gun ನೋಡಿ). Every mother's s. (Mother[1] ನೋಡಿ). S. of toil ದುಡಿತದ ಮಗ, ಶ್ರಮಜೀವಿ. S. of Mars ಯೋಧ, ಸಿಪಾಯಿ. S. of Belial ಪಾಪಕರ್ಮಿ, ಭ್ರಷ್ಟ. Sons of light ಜ್ಞಾನಿಗಳು. Sons of darkness ಅಜ್ಞಾನಿಗಳು. Sons of Liberty, of the (American) Revolution, etc. (ಅಮೆ. ಸಂ. ದ ದೇಶಾಭಿಮಾನಿ ಸಂಘಗಳು)]. ಸಂತತಿಯವನು, ವಂಶಿಕ (Sons of Abraham). (ತರುಣನನ್ನು ಮುದುಕ, ಪಾಪಿಯನ್ನು ಪಾಪನಿವೇದನೆ ಕೇಳುವ ಪುರೋಹಿತ,—ಸಂಬೋಧಿಸುವ ಸಂದರ್ಭದಲ್ಲಿ) ಮಗ, ಮಗನೆ (My s.). ಒಂದು ದೇಶದ ಪುತ್ರ, ನಾಡಿಗ (India's sons ಭಾರತದ —ಮಕ್ಕಳು, ಪ್ರಜೆಗಳು). Sons of the soil ಆ ಪ್ರಾಂತದಲ್ಲಿ ಹುಟ್ಟಿ ಬೆಳೆದವರು ; ನಾಡ ಮಕ್ಕಳು ; ನಾಡಿಗರು. ಬೇಸಾಯಗಾರರು, ರೈತರು. **Sónless** (ಗು.); **Sónship** (ನಾ.) ಮಗತನ, ಪುತ್ರತ್ವ. **Sónny, Sónnie** ಸನಿ (ನಾ.) (ಹುಡುಗನಿಗೆ, ಮಗನಿಗೆ, ಪ್ರೀತಿಸೂಚಕ ಸಂಬೋಧನಾ ರೂಪ): ಮಗು, ಮರಿ, ಸಣ್ಣ.

Sónant ಸೋನಂಟ್ (ಗು., ನಾ.) ಧ್ವನಿತಂತುಗಳ ಕಂಪನದಿಂದ ಜನಿಸಿ ಸತತವಾಗಿ ಉಚ್ಚರಿಸಲಾಗುವ (ಉಸಿರಿನಿಂದಲ್ಲ) ; ಮೃದು (ವರ್ಣ) (ಉದಾ., b, d, g, j, v, z, ಮೊ. ವು. f, s, ಮೊ. ವು ಉಸಿರಿನಿಂದ ಉಚ್ಚಾರವಾಗತಕ್ಕವು). **Sónancy** (ನಾ.)

Sonáta ಸೊನಾಟ (ನಾ.) ಮೂರು ಅಥವಾ ನಾಲ್ಕು ಗತಿಗಳಲ್ಲಿ (ಮು., ಪಿಯಾನೊ) ವಾದ್ಯಕ್ಕಾಗಿ ರಚಿಸಿದ ಸಂಗೀತಕೃತಿ ; ಒಂದು ಬಗೆಯ ವಾದ್ಯ ಕೃತಿ. S. form ಎರಡು ಸಂಗೀತ ವಸ್ತುಗಳನ್ನು ಕ್ರಮವಾಗಿ ಪ್ರತಿಪಾದಿಸಿ, ಪೋಷಿಸಿ, ಪುನರಾವರ್ತನೆಮಾಡಿ ಸಾಂಗಗೊಳಿಸುವ ಸಂಗೀತ ರಚನೆ. **Sonatína** ಸೋ(ಸಾ)ನಟೀನ (ನಾ.) ಸರಳ ರೂಪದ ವಾದ್ಯ ಕೃತಿ ; ಸರಳ ಸೊನಾಟ.

Sonatína. **Sonata** ನೋಡಿ.

Song ಸಾಂಗ್ (ನಾ.) ಹಾಡುವುದು, ಹಾಡಿಕೆ, ಪಾಟ, ಗಾಯನ, ಗಾನ; (ಹಕ್ಕಿಗಳ) ಹಾಡು (He burst forth into s. ತಡೆಯಲಾರದೆ ಅವನಿಂದ ಹಾಡು ಹೊರಹೊಮ್ಮಿತು. S.-birds ಹಾಡುಹಕ್ಕಿಗಳು) ; ಹಾಡು, ಪದ, ಕೃತಿ, ಕೀರ್ತನೆ, ಗೀತ, ಗೀತಿಕೆ ; (ಅಂತ್ಯಪ್ರಾಸಗಳಿರುವ) ಪದ್ಯ, ಕವನ, ಕವಿತೆ (Renowned in s. ಕವಿತೆಯಲ್ಲಿ ಕೊಂಡಾಡಲ್ಪಟ್ಟಿರುವ); [(ಸಂ.) S. form ಹಾಡನ್ನು ಮೂರು ಭಾಗವಾಗಿ ವಿಂಗಡಿಸಿ ಮೊದಲನೆಯ ಮತ್ತು ಮೂರನೆಯ ಭಾಗಗಳನ್ನು ಸರಿಸುಮಾರು ಒಂದೇ ರೀತಿ ಮಾಡಿ, ಎರಡನೆಯದನ್ನು ಬೇರೆ ರೀತಿ ಮಾಡಿ ಕಟ್ಟಿದ ಕೃತಿ ವಿಧಾನ : ಗೀತಿಕಾ ರೂಪ. Bought, sold, it for a s. *or* an old s. ಅತ್ಯಲ್ಪ ಬೆಲೆಗೆ, ಕುರುಡು ಕಾಸಿಗೆ, ಕೊಂಡನು, ಮಾರಿದನು. S. of degrees *or* ascents (ಬೈಬಲ್ಲಿನ ಹಳೆಯ ಒಡಂಬಡಿಕೆಯ ಕೆಲವು ಸ್ತೋತ್ರಗೀತ) : ಸೋಪಾನ, ಆರೋಹಣ, —ಗೀತ. S. of Songs, S. of Solomon ಸಾಲೊಮನ್ ಗೀತ. S.-thrush ಒಂದು ಹಕ್ಕಿ. S.-sparrow ಹಾಡುಗುಬ್ಬಿ]. **Sóngless** (ಗು.); **Sóngster** (ನಾ.) ಹಾಡುಗಾರ, ಗಾಯಕ ; ಹಾಡುಹಕ್ಕಿ ; ಕವಿ. **Sóngstress** (ನಾ., ಸ್ತ್ರೀ.)

Soníferous ಸೊನಿಫರಸ್ (ಗು.) ಧ್ವನಿ—ಜನಕ, ವಾಹಕ.

Sónnet ಸಾನೆಟ್ (ನಾ.) (ವಿವಿಧ ಅಂತ್ಯಪ್ರಾಸ ರಚನೆಗಳುಳ್ಳ) ೧೪ ಸಾಲಿನ ಕವನ; ಹದಿನಾಲ್ಕಡಿ, ಚತುರ್ದಶ ಪದಿ ; (ಈಗ ವಿರ. ಪ್ರ.) ಸಣ್ಣ ಭಾವಗೀತೆ, ಗೀತಿಕೆ. **Sonneteér** —ಟೀ(ಅ)ರ್ (ನಾ., ಕ್ರಿ. ಅಕ.) (ಸಾ., ತಿರಸ್ಕಾರ ಪ್ರ.) ಸಾನೆಟ್‌ಗಾರ ; ಸಾನೆಟ್‌ಗಳನ್ನು ಹೆಣೆ.

Sonómeter ಸೊನಾಮಿಟರ್ (ನಾ.) ಕಿವುಡರ ಶ್ರವಣಶಕ್ತಿಯನ್ನು ಪರೀಕ್ಷಿಸುವುದು, ಧ್ವನಿಗಳನ್ನು ಅಳತೆಮಾಡುವುದು, ಮೊ. ಕ್ಕೆ ಉಪಯೋಗಿಸುವ ಹಲವು ಬಗೆಯ ಸಲಕರಣೆ : ಶ್ರವಣ, ಧ್ವನಿ,—ಮಾಪಕ.

Sonoréscent ಸೋ(ಸಾ)ನೊರೆಸೆಂಟ್ (ಗು.) (ಗಟ್ಟಿ ರಬ್ಬರು, ಮೊ. ಗಳ ವಿಷಯದಲ್ಲಿ; ವಿಕಿರಣ ತಾಪಕ್ಕೆ ಅಥವಾ ಪ್ರಕಾಶಕ್ಕೆ ಒಳಪಟ್ಟಾಗ, ಅದರ ಮಿಡಿತಕ್ಕೆ ಸರಿಯಾಗಿ) ಧ್ವನಿಮಾಡುವ. **Sonoréscence** (ನಾ.)

Sonorífic ಸೋನೊ(ನಾ)ರಿಫಿಕ್ (ಗು.) (ಬಾಯಿಯದಲ್ಲದೆ ಬೇರೆಯ) ನಾದ ಕೊಡುವ, ನಾದಕಾರಕ. **Sonórous** ಸೊನೋ(ಅ)ರಸ್, **Sónorous** ಸಾನೊರಸ್ (ಗು.) ಅನುರಣನವಾಗುವ. (ಗಟ್ಟಿಯಾಗಿ) ಶಬ್ದ ಮಾಡುವ; ತುಂಬು ನಾದದ, ನಾದಕಟ್ಟಿನ, ಧ್ವನಿಗುಂಫನವುಳ್ಳ, ನಾದಪೂರ್ಣ; (ಮಾತು, ಶೈಲಿ, ಮೊ. ಗಳ ವಿಷಯದಲ್ಲಿ) ಶಬ್ದಾಡಂಬರದ, ವಾಗ್ವೈಖರಿಯ. S. figures ಧ್ವನಿಕಂಪನದಿಂದ ಮರಳು, ಮೊ. ಗಳ ಪದರದಲ್ಲಿ ಉಂಟಾದ ಆಕೃತಿ : ಧ್ವನ್ಯಾಕೃತಿ, ನಾದಾಕೃತಿ. S.-rale —ರಾಲ್ (ಕೆಲವು ವ್ಯಾಧಿಗಳಲ್ಲಿ ಕೇಳಬರುವ) ಎದೆಯಲ್ಲಿಯ ಗೊರ ಗೊರ ಸದ್ದು. **Sonórously** (ಕ್ರಿ. ವಿ.); **Sonórousness** (ನಾ.); **Sonórity** ಸೊನೋ(ನಾ)ರಿಟಿ (ನಾ.) ಅನುರಣನತ್ವ ; ನಾದ —ಕಟ್ಟು, ಪೂರ್ಣತೆ ; ಶಬ್ದ ಗಾಂಭೀರ್ಯ.

Sonórous, etc. **Sonorific** ನೋಡಿ.

Soojee ಸೂಜೀ (ನಾ.) (ಇಂಡಿಯದ) ಗೋಧಿಯ ಹಿಟ್ಟು, ರವೆ; ಸೋಜಿ.

Soon ಸೂನ್ (ಕ್ರಿ. ವಿ.) ಬೇಗ(ನೆ), ಲಘುವಾಗಿ, ಲಗೂನೆ, ಒಡನೆ(ಯೆ) (Shall s. know the result) ; (—ಆದ) ಕೂಡಲೆ (Arrived s. after four) ; ಅಷ್ಟರಲ್ಲೆ, ಇಷ್ಟರಲ್ಲೆ, ತತ್‌ಕ್ಷಣ(ವೆ), ಶೀಘ್ರವಾಗಿ, ತ್ವರೆಯಾಗಿ (Least said soonest mended ಮಾತು ಎಷ್ಟು ಕಡಮೆ ಆಡಿದರೆ ಅಷ್ಟು ಬೇಗ ಸರಿಹೋಗುತ್ತದೆ, ಸರಿಮಾಡಬಹುದು. As s. as, So s. as —ಕೂಡಲೆ, ಒಡನೆಯೆ, ತತ್‌ಕ್ಷಣ). ಸಂತೋಷದಿಂದ, ಇಷ್ಟಪಟ್ಟು [I would just as s. stay at home (as go)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೊರಗೆ ಹೋಗುವುದಕ್ಕಿಂತ ನನಗೆ ಮನೆಯಲ್ಲಿ ಇರುವುದು ಇಷ್ಟ; ಹೊರಗೆ ಹೋಗುವುದಕ್ಕಿಂತ ಮನೆಯಲ್ಲೇ ಇದ್ದೇನು. Would sooner die than let him find it out ಅದನ್ನು ಅವನು ಕಂಡುಹಿಡಿಯಲು ಅವಕಾಶಕೊಡುವುದಕ್ಕಿಂತ ನಾನು ಪ್ರಾಣ ಬಿಟ್ಟೇನು]; ಮುಂಚಿತವಾಗಿ (What makes you come so s. No sooner said than done ಹೇಳಿದೊಡನೆ ಕೆಲಸವಾಯಿತು; ಹೇಳಿದ್ದೇ ತಡ, ಕೆಲಸವಾಯಿತು. You will repent it sooner or later ಇಂದೊ ಮುಂದೊ, ಎಂದಾದರೂ, ನೀನು ಅದಕ್ಕೆ ಪಶ್ಚಾತ್ತಾಪಪಡುವೆ)

Soórkee ಸುರ್ಕಿ (ನಾ.) (ಆಂ. ಇಂ.) ಇಟ್ಟಿಗೆಪುಡಿ; ಸುರ್ಕಿಗಾರೆ.

Soot ಸುಟ್ (ನಾ., ಕ್ರಿ. ಸಕ.) ಹೊಗೆಮಸಿ, ಕಪ್ಪು, ಕಾಡಿಗೆ, ಇಲ್ಲಣ (—ಕಟ್ಟು); —ಇಂದ ಬಳಿ, ಕೊಳೆಮಾಡು (S.-cancer, -wart ಹೊಗೆಕೊಳವೆಗಳನ್ನು ಚೊಕ್ಕಟಮಾಡುವವರಿಗೆ ಬರುವ ಒಂದು ವೃಷಣ ರೋಗ). **Sóotily** (ಕ್ರಿ. ವಿ.); **Sóotiness** (ನಾ.); **Sóotless** (ಗು.); **Sóoty** (ಗು.)

Sóoterkin ಸು(ಸೂ)ಟರ್ಕಿನ್ (ನಾ.) (ಪ್ರಾಚೀ. ಪ್ರ.) (ಡಚ್ ಹೆಂಗಸರು ಅಗ್ಗಿಷ್ಟಿಕೆಗಳಮೇಲೆ ಕುಳಿತುಕೊಳ್ಳುವುದರಿಂದ ಆಗುತ್ತದೆಂದು ನಂಬಿಕೆ ಇದ್ದ) ಸುಳ್ಳು —ಹುಟ್ಟು, ಜನನ; (ರೂಪ.) ವ್ಯರ್ಥ, ಬರಡು, —ಯೋಜನೆ.

Sooth ಸೂತ್ (ನಾ.) (ಪ್ರಾಚೀ. ಪ್ರ.) ನಿಜ, ಸತ್ಯ, ದಿಟ [In (good) s. ನಿಜವಾಗಿ]. **Sóothfast** (ಗು.) (ಪ್ರಾಚೀ. ಪ್ರ.) ನಿಜವನ್ನಾಡುವ; ಸತ್ಯಸಂಧ; ಸ್ವಾಮಿನಿಷ್ಠೆಯುಳ್ಳ; ನೆಚ್ಚಿನ; ವಿಶ್ವಾಸಯೋಗ್ಯ. **Sóothsay** (ಕ್ರಿ. ಅಕ.) ಭವಿಷ್ಯ, ಕಣಿ, ಕಾಲಜ್ಞಾನ, —ಹೇಳು. **Sóothsayer** (ನಾ.) —ಹೇಳುವವನು; ಭವಿಷ್ಯಜ್ಞ; ಕಾಲಜ್ಞಾನಿ.

Soothe ಸೂದ್ (ಕ್ರಿ. ಸಕ.) (ವ್ಯಕ್ತಿ, ಭಾವೋದ್ರೇಕ, ಮೊ. ನ್ನು) ಉಪಶಮನಮಾಡು, ಶಾಂತಗೊಳಿಸು, ಸಮಾಧಾನಪಡಿಸು, ಸಂತೈಸು, ಸೈತಿಡು (ಗ್ರಾಂ.); (ನೋವು, ಮೊ. ನ್ನು) ಕಡಮೆ ಮಾಡು, ತಗ್ಗಿಸು; (ವ್ಯಕ್ತಿ, ಅತನ ಆತ್ಮಪ್ರೀತಿ, ಮೊ. ನ್ನು) ಆಪ್ಯಾಯನಗೊಳಿಸು. **Soóther** (ನಾ.) (ಕ್ರಿಯಾರ್ಥಗಳಲ್ಲಿ); (ಮಗುವನ್ನು ಸಂತೈಸಲು ಚೀಪುವುದಕ್ಕೆ ಕೊಡುವ) ರಬ್ಬರಿನ ಮೊಲೆತೊಟ್ಟು. **Sóothingly** (ಕ್ರಿ. ವಿ.)

Sóothfast, Sóothsay, etc. **Sooth** ನೋಡಿ.

Sop ಸಾಪ್ (ನಾ., ಕ್ರಿ.) ತಿನ್ನುವುದಕ್ಕೆ ಅಥವಾ ಅಡುಗೆ ಮಾಡುವುದಕ್ಕೆ ಮೊದಲು ಸಾರು, ಮದ್ಯ, ಮೊ. ಗಳಲ್ಲಿ ನೆನಸಿದ ರೊಟ್ಟಿಯ ಚೂರು, ಮೊ. ವು: ನೆನೆದ, ಊರಿಟ್ಟ, —ತಿಂಡಿ [S. in the pan ಹುರಿದ ರೊಟ್ಟಿ. Milksop (Milk ನೋಡಿ)]; (ಕಾಟಕೊಡುವ, ತೊಂದರೆ ಕೊಡುವ ಪ್ರಾಣಿ, ಮನುಷ್ಯ, ಮೊ. ರಿಗೆ) ಸಮಾಧಾನಪಡಿಸುವುದಕ್ಕಾಗಿ, ಒಲಿಸಿಕೊಳ್ಳುವುದಕ್ಕಾಗಿ, —ಬಾಯಿಗೆ ಹಾಕಿದ್ದು, ಕೈಗೆ ಕೊಟ್ಟದ್ದು: ಉಪಾಹಾರ, ಸುಮುಖೀಕಾರಕ [ಮು., S. to Cerberus (Cerberus ನೋಡಿ)]. (ಕ್ರಿ.) (ರೊಟ್ಟಿ, ಮೊ. ನ್ನು ಸಾರು, ಮೊ. ಲ್ಲಿ) ನೆನಸು, ನೆನೆಯಹಾಕು, ಊರಿಡು; (ನೀರು, ಮೊ. ನ್ನು ಬಟ್ಟೆ, ಮೊ. ಗಳಿಂದ) ಹೀರಿಹಾಕು, ಒತ್ತು (*Up* ಉಪ. ದೊಡನೆ); ತೊಯಿಸು, ತೊಯ್ದುಹೋಗು (Am sopping with rain. Clothes are sopping wet). **Sóppy** (ಗು.) ನೆನೆದ, ತೊಯ್ದ; ನೆನೆದು ಮೆತ್ತಗಿರುವ; ತೇವವಾದ, ಮಳೆ ಹಿಡಿದ; ಸೋಮಾರಿತನದ, ಜಡ; (ಅನಂ.) ಭಾವಾತಿರೇಕದ, ಉದ್ರೇಕಾತಿರೇಕದ.

Sóphism ಸಾಫಿಸ್ಸಂ (ನಾ.) (ಮೋಸಗೊಳಿಸುವುದಕ್ಕಾಗಿ ಹೂಡಿದ) ಕೂಟ ತರ್ಕ, ಕುತರ್ಕ, ತರ್ಕಾಭಾಸ, ಸತ್ಯಾಭಾಸ (Paralogism ನೋಡಿ). **Sóphist** (ನಾ.) ಹಣ ತೆಗೆದುಕೊಂಡು ತತ್ತ್ವಶಾಸ್ತ್ರ, ಅಲಂಕಾರಶಾಸ್ತ್ರ, ಮೊ. ನ್ನು ಹೇಳಿಕೊಡುತ್ತಿದ್ದ ಪುರಾತನ ಗ್ರೀಕ್ ಉಪಾಧ್ಯಾಯ: ಕೂಲಿ ಪಂಡಿತ; ಜ್ಞಾನವಿಕ್ರಯಿ. ಕೂಟವಾದಿ, ಕುತಾರ್ಕಿಕ. **Sophístic(al)** (ಗು.); **Sophístically** (ಕ್ರಿ. ವಿ.); **Sophísticate** (ಕ್ರಿ.) (ವಿಷಯವನ್ನು) ಕುತರ್ಕದಲ್ಲಿ ತೊಡಕಿಸು, ಕುವಾದದಿಂದ ಆಭಾಸಗೊಳಿಸು; (ವ್ಯಕ್ತಿಯನ್ನು) ಕೂಟ ತರ್ಕದಿಂದ—ಮೋಸಗೊಳಿಸು, ಭ್ರಾಂತಿಗೊಳಿಸು; (ವ್ಯಕ್ತಿಯ, ವಸ್ತುವಿನ) ಸರಳತೆಯನ್ನು ಹಾಳುಮಾಡು, ನೈಜತೆ ಕೆಡಿಸು; ಕೃತಕಮಾಡು; (ಗ್ರಂಥಪಾಠ, ಮೊ. ನ್ನು; ಸ್ವಾನುಕೂಲ ತರ್ಕಕ್ಕಾಗಿ) ಬದಲಾಯಿಸು, ತಿರುಚು; ಕುತರ್ಕ, ಆಭಾಸ ತರ್ಕ, —ಉಪಯೋಗಿಸು, ಮಾಡು. (ದ್ರಾಕ್ಷಾಮದ್ಯ, ಮೊ. ನ್ನು, ಕೀಳು ತೆರದ್ದರಿಂದ) ಬೆರಕೆಮಾಡಿ ಕೆಡಿಸು. **Sophisticátion** (ನಾ.); **Sóphistry** (ನಾ.) ಕೂಟವಾದ, ಕುತರ್ಕ, ತರ್ಕಾಭಾಸ.

Sóphist, Sophísticate, Sóphistry. **Sophism** ನೋಡಿ.

Sóphister ಸಾಫಿಸ್ಟರ್ (ನಾ.) (ಚರಿತ್ರೆ) ಕೇಂಬ್ರಿಡ್ಜ್ ವಿ. ವಿ. ನಿ. ದಲ್ಲಿ ಎರಡನೆಯ ಅಥವಾ ಮೂರನೆಯ ವರ್ಷದ ವಿದ್ಯಾರ್ಥಿ; ಡಬ್ಲಿನಿನ ಟ್ರಿನಿಟಿ ಕಾಲೇಜಿನಲ್ಲಿ ಮತ್ತು ಕೆಲವು ಅಮೆ. ಸಂ. ವಿ. ವಿ. ನಿ. ಗಳಲ್ಲಿ ಮೂರನೆಯ ಅಥವಾ ನಾಲ್ಕನೆಯ ವರ್ಷದ ವಿದ್ಯಾರ್ಥಿ; ಹಿರಿಯ ವಿದ್ಯಾರ್ಥಿ.

Sóphomore ಸಾಫೊಮೋ(ಅ)ರ್ (ನಾ.) (ಅಮೆ. ಸಂ. ವಿ. ವಿ. ನಿ. ಗಳಲ್ಲಿ) ಎರಡನೆಯ ವರ್ಷದ ವಿದ್ಯಾರ್ಥಿ.

Sóphy ಸೋಫಿ (ನಾ.) (ಚರಿತ್ರೆ) (೧೬, ೧೭ನೆಯ ಶ. ಮಾ. ಗಳಲ್ಲಿಯ) ಪರ್ಷಿಯದ —ರಾಜ, ಚಕ್ರವರ್ತಿ.

Soporífic ಸೋ(ಸಾ)ಪೊರಿಫಿಕ್ (ಗು., ನಾ.) ನಿದ್ದೆ ಬರಿಸುವ (ಔಷಧ), ನಿದ್ರಾಜನಕ; ನಿದ್ದೆಯ, ಮಂಪರದ. **Soporíferous** (ಗು.); **Sóporose** (ಗು.) ನಿದ್ರಾ ರೋಗದ. **Sóporous** (ಗು.)

Sopráno ಸೊಪ್ರಾನೊ (ನಾ.; ಬ. ವ. -nos, -ni —ನೀ) ಹೆಂಗಸಿನ ಅಥವಾ ಹುಡುಗನ ಅತ್ಯಂತ ಉಚ್ಚ ಕಂಠ(ಕ್ಕೆ ತಕ್ಕ ಸಂಗೀತ): ತಾರಸ್ವರ (ಸಂಗೀತ) [(ವಿಶೇಷಣವಾಗಿಯೂ ಪ್ರ.): A s. solo]. ತಾರಸ್ವರ ಗಾಯಕ [=**Soprànist** (ನಾ.)]

Sorb ಸಾರ್ಬ್ (ನಾ.) ಯೂರೋಪಿನ ಒಂದು ಮರ; ಇದರ ಹಣ್ಣು (=S.-apple). **Sórbate** (ನಾ.) (ರ. ವಿ.) ಸಾರ್ಬಿಕ್ ಆಮ್ಲದ ಲವಣ. **Sórbic** (ಗು.) (ರ. ವಿ.) S. acid ಮೌಂಟನ್ ಆ್ಯಷ್ ಎಂಬ ಮರದ ಕಾಯಿಗಳಿಂದ ತೆಗೆದ ಒಂದು ಆಮ್ಲ.

Sorbefácient ಸಾರ್ಬಿ(ಬೆ)ಫೆಷಿಯೆಂಟ್ (ಷೆಂಟ್, ಷ್ಂಟ್) (ಗು., ನಾ.) (ವೈದ್ಯ) ಹೀರುವಂತೆ ಮಾಡುವ (ಔಷಧ, ವಸ್ತು); ಶೋಷಣ ಸಹಾಯಕ; ವಿಶೋಷಕ.

Sórbet ಸಾರ್ಬೆಟ್ (ನಾ.) ಸುವಾಸಿತ ನೀರ್ಗಲ್ಲ ಮಿಠಾಯಿ; ಷರಬತ್ತು.

Sorbónne ಸಾರ್ಬಾನ್ (ನಾ.) ಪ್ಯಾರಿಸ್ ಪಟ್ಟಣದಲ್ಲಿ ೧೩ನೆಯ ಶ. ಮಾ. ದಲ್ಲಿ ರಾಬರ್ಟ್ ಡ ಸಾರ್ಬಾನ್ ಎಂಬಾತನಿಂದ ಸ್ಥಾಪಿತವಾದ ಒಂದು ಪ್ರೌಢ ವಿದ್ಯಾಪೀಠ; ಪ್ಯಾರಿಸ್ ವಿಶ್ವವಿದ್ಯಾನಿಲಯ.

Sórcerer ಸಾರ್ಸರರ್ (ನಾ.) ಮಾಂತ್ರಿಕ, ಮಂತ್ರವಾದಿ, ಶೂನ್ಯಕಾರ, ಮಾಟಗಾರ (ರೂಪ. ಸಹ). **Sórceress** (ನಾ., ಸ್ತ್ರೀ.); **Sórcery** (ನಾ.) ಮಂತ್ರ, ಮಾಟ, ಶೂನ್ಯ.

Sordaménte (It.) ಸೊರ್ಡಮೆಂಟೆ (ಕ್ರಿ. ವಿ.) ದನಿಗುಂದಿಸಿ, ಮಂದ ಧ್ವನಿಯಲ್ಲಿ.

Sördid ಸಾರ್ಡಿಡ್ (ಗು.) ಕ್ಷುದ್ರ, ತುಚ್ಛ, ನೀಚ, ಹಲ್ಕ, ಜೀನ; (ಪ್ರಾಚೀ. ಪ್ರ.) ಕೊಳಕಾದ, ಹೊಲಸಿನ; (ಪ್ರಾ. ವಿ., ಸ. ವಿ.; ಬಣ್ಣಗಳ ವಿಷಯದಲ್ಲಿ) ಮಣ್ಣುಬಣ್ಣದ, ಕೊಳೆಬಣ್ಣದ, ಮಲಿನ (A s. blue ಮಣ್ಣುನೀಲಿ). **Sördidly** (ಕ್ರಿ. ವಿ.); **Sórdidness** (ನಾ.)

Sórdine ಸಾರ್ಡೀನ್ (ನಾ.) (ಸಂ.) ತಂತಿವಾದ್ಯಗಳ ಧ್ವನಿ ಮಂದಕಾರಿ.

Sore ಸೋ(ಅ)ರ್ (ಗು., ನಾ., ಕ್ರಿ. ವಿ.) (ಅಂಗ, ವ್ಯಕ್ತಿ, ಮೊ. ಗಳ ವಿಷಯದಲ್ಲಿ) ಹಸಿಯಾದ, ಮುಟ್ಟಿದರೆ ನೋಯುವ, ಯಾತನೆ ಕೊಡುವ, ಬೇನೆ ತಗುಲಿದ, ಹುಣ್ಣಾದ [Has a s. arm. Foot-sore (Foot ನೋಡಿ). (Clergyman's) s, throat (Throat ನೋಡಿ). Touched him on a s. place (ರೂಪ.) ಅವನಿಗೆ ಯಾತನೆಯಾಗುವ ವಿಷಯವನ್ನು ಪ್ರಸ್ತಾಪಿಸಿದನು, ಕೆದಕಿದನು. A sight for s. eyes (Sight ನೋಡಿ). Like a bear with s.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

head ಮುಂಗೋಪದ, ಸಿಡುಕಿನ]. ರೇಗಿದ, ನೊಂದ, ವ್ಯಥೆಗೊಂಡ, ನೊಂದುಕೊಳ್ಳುವ (Is very s. about his defeat ತನ್ನ ಸೋಲಿನ ವಿಷಯದಲ್ಲಿ ಹುಣ್ಣುಹುಣ್ಣಾಗಿದ್ದಾನೆ); ರೇಗಿಸುವ, ನೋವುಂಟು ಮಾಡುವ, ವ್ಯಥೆಗೊಳಿಸುವ (A s. subject ಮನ ನೋಯಿಸುವ ವಿಷಯ); (ಪ್ರಾಚೀ. ಪ್ರ., ಕಾವ್ಯ) ಕ್ಲೇಶಕರ, ಸಂಕಟಕರ, ದಾರುಣ, ದುಸ್ಸಹ (In s. distress ಕಡು ಸಂಕಟದಲ್ಲಿ. A s. struggle ದಾರುಣವಾದ ಹೋರಾಟ). (ನಾ.) ಜಜ್ಜುಗಾಯ, ಉರಿಯೂತ, ಕುರು, ಹುಣ್ಣು [Bedsore (Bed ನೋಡಿ). Eyesore (Eye ನೋಡಿ)]; (ರೂಪ.) ಮನ ನೋಯಿಸುವ, ದುಃಖಕರವಾದ, —ವಿಷಯ, ನೆನಪು (Reopen old sores ಹಳೆಯ ನೋವುಗಳನ್ನು ಕೆರಳಿಸು, ಕೆದಕು). (ಕ್ರಿ. ವಿ.) ತೀವ್ರವಾಗಿ, ದಾರುಣವಾಗಿ, ಉಗ್ರವಾಗಿ (=**Sorély**) (S. oppressed, afflicted). **Sóreness** (ನಾ.)

Sorel. **Sorrel**[1] ನೋಡಿ.

Sórghum ಸಾರ್ಗಂ (ನಾ.) ಜೋಳದ ಜಾತಿಯ ಹುಲ್ಲು (ಸಸ್ಯಗಳು)

Sorítes ಸೊರೈಟೀಸ್ (ನಾ.) (ಪ್ರತಿಯೊಂದು ಪ್ರತಿಜ್ಞೆಯ ಆಖ್ಯಾತವನ್ನು ಅದರ ಮುಂದಿನ ಪ್ರತಿಜ್ಞೆಯ ಕರ್ತೃವನ್ನಾಗಿ ಅಳವಡಿಸಿ ಹೇಳಿದ) ವಾದ ಸರಣಿ, ಯುಕ್ತಿ ಪರಂಪರೆ (ಉದಾ., ನಾಯಿ ಒಂದು ಚತುಷ್ಪಾದಿ; ಚತುಷ್ಪಾದಿ ಒಂದು ಪ್ರಾಣಿ; ಪ್ರಾಣಿ ಒಂದು ದ್ರವ್ಯ; ಆದ್ದರಿಂದ ನಾಯಿ ಒಂದು ದ್ರವ್ಯ); (ಕ್ರಮ ಕ್ರಮವಾಗಿ ಸತ್ಯದಿಂದ ಅಸಂಬದ್ಧಕ್ಕೆ ಒಯ್ಯುವ) ತರ್ಕಾಭಾಸ (ಉದಾ., ಒಂದೇ ಒಂದು ಕೂದಲಿರುವವನು ಬಕ್ಕತಲೆಯವನು; ಆದ್ದರಿಂದ ೨, ೩, ೪.... ೧೦,೦೦೦ ಕೂದಲಿರುವವನು ಬಕ್ಕತಲೆಯವನು). ಸರಣಿ. **Soritical** ಸೊರಿಟಿಕಲ್ (ಗು.)

Sorn ಸಾರ್ನ್ (ಕ್ರಿ. ಅಕ.) (ಸ್ಕಾ. ಪ್ರ.) (ಊಟಕ್ಕೆ, ಮಲಗುವುದಕ್ಕೆ) ಒಬ್ಬನ ಮನೆಯಲ್ಲಿ ಠಿಕಾಣಿ ಹಾಕು; ಬಿಟ್ಟಿ ಊಟ ವಸತಿ ಗಿಟ್ಟಿಸು. **Sórner** (ನಾ.)

Soróral ಸೊರೋರಲ್ (ಗು.) ಸೋದರಿಯ ಕಡೆಯ, ಸೋದರಿಯ, ಸೋದರೀ ಲಕ್ಷಣದ. **Sorócide** (ನಾ.) ಸೋದರೀ —ಹತಕ, ಹನನ. **Sorórity** (ನಾ.) ಸೋದರೀ —ಸಮಾಜ, ಸಂಘ. (ಅಮೆ. ಸಂ. ದ ಪ್ರೌಢ ಪಾಠಶಾಲೆಗಳಲ್ಲಿ) ವಿದ್ಯಾರ್ಥಿನಿಯರ ಸಂಘ.

Sorósis ಸೊರೋಸಿಸ್ (ನಾ.) (ಸ. ವಿ.) ತಿರುಳುಳ್ಳ ಸಂಯುಕ್ತ ಫಲ (ಉದಾ., ಅನಾನಸ್, ಉಪ್ಪುನೇರಿಳೆ)

Sórra ಸಾರ (ಕ್ರಿ. ವಿ.) (ಐರ್ಲೆಂಡಿನ ಪ್ರ., ಅಸಂ.) ಇಲ್ಲ, ಅಲ್ಲ; ಎಂದಿಗೂ —ಇಲ್ಲ, ಅಲ್ಲ (S. a one, a bit ಒಂದೂ, ಕೊಂಚವೂ, —ಇಲ್ಲ, ಅಲ್ಲ)

Sórrel[1] ಸಾರೆಲ್ (ಗು., ನಾ.) ಕೆಂಗಂದು ಬಣ್ಣ(ದ); ಬಣ್ಣದ ಪ್ರಾಣಿ (ಮು., ಕೆಂಗಂದು ಕುದುರೆ); ಮೂರನೆಯ ವರ್ಷದ ಗಂಡು ಜಿಂಕೆ (=Sorel)

Sórrel[2] ಸಾರೆಲ್ (ನಾ.) ಪುಲ್ಲಂಪುರಚಿ (ಜಾತಿಯ ಸಸ್ಯಗಳು)

Sórrow ಸಾರೋ (ನಾ., ಕ್ರಿ. ಅಕ.) ದುಃಖ, ವ್ಯಥೆ, ಕೊರಗು, ಅಳಲು (ಗ್ರಾಂ.); ಶೋಕ, ವ್ಯಸನ, ಸಂತಾಪ, ಕ್ಲೇಶ, ಸಂಕಟ, ಗೋಳು (Has had many sorrows ಹಲವು ಸಂಕಟಗಳನ್ನು, ಗೋಳುಗಳನ್ನು, ಅನುಭವಿಸಿದ್ದಾನೆ. The Man of Sorrows ಯೇಸು ಕ್ರಿಸ್ತ. S.-stricken ವ್ಯಸನಾಕ್ರಾಂತ, ದುಃಖಪೀಡಿತ); ರೋದನ, ಪ್ರಲಾಪ, ಗೋಳಾಟ (His s. was loud and long). (ಕ್ರಿ.) ದುಃಖಿಸು, ಶೋಕಿಸು, ವ್ಯಥೆಪಡು, ಕೊರಗು, ಮರುಗು (*At*, *over*, *for* ಉಪ. ದೊಡನೆ); (ಗತಿಸಿದ ವ್ಯಕ್ತಿಗಾಗಿ, ಕಳೆದುಹೋದ ವಸ್ತುವಿಗಾಗಿ) ಅಳು, ಪ್ರಲಾಪಿಸು, ಗೋಳಾಡು, ಹಲುಬು (*After*, *for* ಉಪ. ದೊಡನೆ). **Sórrower** (ನಾ.); **Sórrowing** (ನಾ.); **Sórrowful** (ಗು.); **Sórrowfully** (ಕ್ರಿ. ವಿ.); **Sórrowfulness** (ನಾ.)

Sórry ಸಾರಿ (ಗು.) ವ್ಯಥೆ, ವ್ಯಸನ, ದುಃಖ, ಪಶ್ಚಾತ್ತಾಪ, —ಪಡುವ; ದುಃಖಿತ, ಮರುಗುವ [Will be s. for this some day ಎಂದಾದರೊಂದು ದಿನ ಇದಕ್ಕಾಗಿ ಅವನು ಪಶ್ಚಾತ್ತಾಪ ಪಡುತ್ತಾನೆ. Felt s. for him ಅವನಿಗಾಗಿ ಮರುಗಿದೆನು. S. for oneself (ಬಳ. ಮಾ.) ಖಿನ್ನನಾಗಿ, ಮನ ಕುಗ್ಗಿ. S.! ತಪ್ಪಾಯಿತು, ಕ್ಷಮಿಸಿ]. ತುಚ್ಛ, ನೀಚ, ಅಲ್ಪ, ದರಿದ್ರ, ಬಡ (A s. fellow ದರಿದ್ರ ಮನುಷ್ಯ. In s. clothes ಬಡ ಉಡುಗೆಯಲ್ಲಿ. A s. excuse ಅಲ್ಪ, ಕ್ಷುದ್ರ, —ನೆಪ). **Sórrily** (ಕ್ರಿ. ವಿ.); **Sórriness** (ನಾ.)

Sort ಸಾರ್ಟ್ (ನಾ.) ಬಗೆ, ತೆರ, ತರ(ಹ), ರಕಮು, ವಿಧ, ಪ್ರಕಾರ ಪ್ರಭೇದ, ಜಾತಿ, ವರ್ಗ [People of every s. and kind ಎಲ್ಲ ಬಗೆಯ ಜನರು, ಎಲ್ಲಾ ತೆರದ ಜನ. Of sorts (ಸರಕು, ಮೊ. ವು) ವಿಂಗಡಿಸಿರದ, ಬೆರಕೆಯ, ಮಿಶ್ರ. Nothing of the s. ಅಂತಹ ದೇನೂ ಅಲ್ಲ. Coffee of a s. ಏನೋ ಒಂದು ರೀತಿಯ ಕಾಫಿ. I s. of expected it ನಾನು ಸ್ವಲ್ಪ ಮಟ್ಟಿಗೆ, ಒಂದು ರೀತಿಯಲ್ಲಿ, ಹಾಗೆಯೇ ನಿರೀಕ್ಷಿಸಿದೆನು. A s. of war, a war of a s., (ಬಳ. ಮಾ.) a war of sorts ಏನೋ ಒಂದು ರೀತಿಯ, ಹೆಸರು ಮಾತ್ರದ, —ಯುದ್ಧ; ನೆಪ ಮಾತ್ರದ ಯುದ್ಧ. An awfully good s. (of person) (ಬಳ. ಮಾ.) ಬಹಳ ಒಳ್ಳೆಯ ತರಹದವನು, ಭರ್ಜರಿ ಮನುಷ್ಯ. That's your s. ಅದು ನಿನ್ನ ರೀತಿ]. (ಪ್ರಾಚೀ. ಪ್ರ.) ವಿಧಾನ, ರೀತಿ, ಮಾದರಿ [In courteous s. ವಿನಯದ ರೀತಿಯಲ್ಲಿ. After *or* in a s. ಒಂದು ಮಾದರಿಯಲ್ಲಿ In some s. (ಸಾಹಿತ್ಯ ಪ್ರ.) ಕೊಂಚ ಮಟ್ಟಿಗೆ]. (ಮುದ್ರಣ: ಹೆಚ್ಚಿಗೆ ಬೇಕಾಗುವ ಯಾವುದಾದರೂ) ಅಚ್ಚಿನ ಮೊಳೆ(ಗಳಲ್ಲೊಂದು) [Copy is hard (or runs) on sorts ಪ್ರತಿಯನ್ನು ಜೋಡಿಸುವುದಕ್ಕೆ ಕೆಲವು ಅಕ್ಷರದ ಮೊಳೆಗಳು ವಿಪರೀತ ಬೇಕಾಗುತ್ತವೆ]. Out of sorts ಸ್ವಸ್ಥವಾಗಿಲ್ಲದೆ, ಇರಿಸು ಮುರಿಸಾಗಿ, ಲವಲವಿಕೆಯಿಲ್ಲದೆ; ರೇಗಿ, ಕೆರಳಿ; (ಮುದ್ರಣ) (ಯಾವುದಾದರೂ) ಒಂದು ಅಕ್ಷರದ ಮೊಳೆಗಳು ಸಾಲದೆ.

Sort (ಕ್ರಿ.) ಜಾತಿವಾರಾಗಿ, ರಕಮುವಾರಾಗಿ, —ವಿಂಗಡಿಸು (*Over*, *out* ಉಪ. ದೊಡನೆ); (ಬೆರಕೆಯ ರಾಶಿಯಿಂದ ಒಂದು ತೆರದ ವನ್ನು) ಆಯ್ದು ತೆಗೆ, ಆರಿಸು (Sorted out those of the largest size); (ಪ್ರಾಚೀ. ಪ್ರ.) ಹೊಂದು, ಒಪ್ಪು (His actions s. ill, well, with his professions ಅವನ ನಡೆಗೂ ನುಡಿಗೂ ಹೊಂದುವುದಿಲ್ಲ, ಹೊಂದುತ್ತದೆ). **Sórtable** (ಗು.); **Sórter** (ನಾ.)

Sórtes (L) ಸಾರ್ಟೀಸ್ (ನಾ., ಬ. ವ.) S. Virgilianae, Biblicae *or* Sacrae, Homericae ವರ್ಜಿಲ್ ಕವಿಯ ಕಾವ್ಯ, ಬೈಬಲ್, ಹೋಮರ್ ಕವಿಯ ಕಾವ್ಯ—ಇವುಗಳಲ್ಲಿಯ ಯಾವುದಾದರೂ ವಾಕ್ಯಗಳನ್ನು ಅಕಸ್ಮಾತ್ ತೆಗೆದು ಆ ಆಧಾರದಮೇಲೆ ಶಕುನ ಹೇಳುವುದು: ಗ್ರಂಥ —ಪ್ರಶ್ನೆ, ಶಕುನ.

Sórtie ಸಾರ್ಟಿ (ನಾ.) (ಮುತ್ತಿಗೆಗೆ ಗುರಿಯಾದವರು) ಮುತ್ತಿಗೆ ಹಾಕಿದ ವರಮೇಲೆ ಹೊರ ನುಗ್ಗುವುದು; ಹೊರ ದಾಳಿ.

Sórtilege ಸಾರ್ಟಿಲೆ(ಲ)ಜ್ (ನಾ.) ಚೀಟಿ ಹಾಕಿ ಶಕುನ, ಕಣಿ, ಹೇಳುವುದು; ಚೀಟಿ ಶಕುನ. **Sortítion** ಸಾರ್ಟಿಷನ್ (ನಾ.) ಚೀಟಿ ಹಾಕುವುದು; ಚೀಟಿ ಹಾಕಿ—ಆಯುವುದು, ತೀರ್ಮಾನಿಸುವುದು.

Sórus ಸೋ(ಅ)ರಸ್ (ನಾ.; ಬ. ವ. -ri —ರೈ) (ಸ. ವಿ.) (ಮು., ಜರೀ ಗಿಡದ ಎಲೆಗಳ ತಳಭಾಗದಲ್ಲಿಯ) ಬೀಜಕೋಶದ ಗೊಂಚಲು.

S O S (ಎಸ್ ಓ ಎಸ್) (ಅತ್ಯಂತ ಕಷ್ಟದಲ್ಲಿ ಸಿಕ್ಕಿದಾಗ ಸಹಾಯ ಕೋರಿ ಕಳುಹಿಸಿದ ನಿಸ್ತಂತು ವಾರ್ತಾ ಸಂಜ್ಞೆ): ರಕ್ಷಿಸಿ! ಕಾಪಾಡಿ! (ಎಂಬ ಸಂಕೇತ)

Sostenúto (It.) ಸಾಸ್ಟೆನೂಟೊ (ಕ್ರಿ. ವಿ.) (ಸಂ.) ಲಂಬಿಸಿ, ಅವಿಶ್ರಾಂತವಾಗಿ.

Sot ಸಾಟ್ (ನಾ., ಕ್ರಿ. ಅಕ.) ಕುಡಿತಕೋರ, ಮದ್ಯಪಾಯಿ, ಹೆಂಡಪೋತ. (ಕ್ರಿ.) ವಿಪರೀತ, ಮಿತಿಮೀರಿ, —ಕುಡಿ. **Sóttish** (ಗು.); **Sóttishly** (ಕ್ರಿ. ವಿ.); **Sóttishness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sótheby's ಸದೆಬಿಸ್ (ನಾ.) ಲಂಡನಿನಲ್ಲಿ ಪುಸ್ತಕಗಳು, ಹಸ್ತಪ್ರತಿಗಳು, ಮೊ. ಗಳನ್ನು ಮಾರುವ ಒಂದು ಅಂಗಡಿ.

Sóthic ಸಾ(ಸೋ)ತಿಕ್ (ಗು.) ಲುಬ್ಧಕ ನಕ್ಷತ್ರದ. S. year ಲುಬ್ಧಕ ನಕ್ಷತ್ರದ ಸೌರೋದಯದಿಂದ ಆರಂಭವಾಗುವ, ೩೬೫¼ ದಿನಗಳ, ಈಜಿಪ್ಷಿನವರ ವರ್ಷ: ಲುಬ್ಧಕ ವರ್ಷ. S. cycle ೧೪೬೦ ಲುಬ್ಧಕ ವರ್ಷಗಳ (ಅಥವಾ ೧೪೬೧ ಸೌರ ವರ್ಷಗಳ) ಕಾಲ.

Sótto vóce (It.) ಸಾಟ್ಟೋ ವೋಚೆ(ಚಿ) (ಕ್ರಿ. ವಿ.) (ಸಂ.) ತಗ್ಗು, ಮೆಲು, —ದನಿಯಲ್ಲಿ; (ರೂಪ.) ಮೆತ್ತಗೆ, ಏಕಾಂತವಾಗಿ, ತನ್ನಷ್ಟಕ್ಕೆ ತಾನೆ.

Sou (F) ಸೂ (ನಾ., ಬ. ವ. -s —ಸ್) (ಚರಿತ್ರೆ) (ಹಲವು ಬೆಲೆಯ) ಒಂದು ಫ್ರೆಂಚ್ ನಾಣ್ಯ; (ಶಿಥಿಲವಾಗಿ) ಐದು ಫ್ರಾಂಕ್ ಶತಾಂಶದ ನಾಣ್ಯ. Hasn't a s. (ಬಳ. ಮಾ.) ಒಂದು ಕಾಸೂ ಇಲ್ಲ.

Soubrétte (F) ಸೂಬ್ರೆಟ್ (ನಾ.) (ಹರ್ಷ ನಾಟಕಗಳಲ್ಲಿ ಬರುವ, ದಿಟ್ಟತನ, ಒಯ್ಯಾರ, ಪಿತೂರಿ, ಮೊ. ಗುಣಗಳಿಗೆ ಪ್ರಸಿದ್ಧಳಾದ) ಚೆಡಗಿನ ಚೇಟಿ, ವಿಲಾಸಿನಿ.

Soúchong ಸೂಷಾಂಗ್ (ನಾ.) ಎಳೆಯ ಎಲೆಗಳಿಂದ ತಯಾರಿಸಿದ ಒಂದು ಬಗೆಯ —ಕರಿ ತೇಯೆಲೆ, 'ಟೀ' ಸೊಪ್ಪು.

Soudanése ಸೂಡನೀಸ್ (ಗು.; ನಾ., ಬ. ವ. ಅದೇ) (ಆಫ್ರಿಕಾ ಖಂಡದ ಒಂದು ಭಾಗವಾದ) ಸೂಡಾನ್ ಪ್ರಾಂತದ(ವನು)

Soúffle[1] ಸೂಫ್ಲ್ (ನಾ.) (ವೈ. ಶಾ.) (ಹಲವು ಅಂಗಗಳ ಆಕರ್ಣನದಲ್ಲಿ ಕೇಳಬರುವ) ಮೆಲ್ಲನೆಯ ಮರ್ಮರ ಶಬ್ದ.

Soúfflé[2] (F) ಸೂಫ್ಲೇ (ಗು., ನಾ.) ತೆಳ್ಳಗೂ ನೊರೆಗೂಡಿದ್ದಾಗಿಯೂ ಮಾಡಿದ (Omelet s. ಮೊಟ್ಟೆ ಲೋಳೆಯ ನೊರೆ). (ನಾ.) ಮೊಟ್ಟೆಯ ಬಿಳಿ ಲೋಳೆಯ ನೊರೆಯಿಂದ ಮಾಡಿದ ಭಕ್ಷ್ಯ.

Sough ಸಫ್, ಸೌ (ನಾ., ಕ್ರಿ. ಅಕ.) (ಮರಗಳನ್ನು ತೂರಿಬರುವ ಗಾಳಿಯ ಶಬ್ದದಂತೆ) ಘರೋ, ಮೊರೋ, —ಎಂಬ ಶಬ್ದ (ಮಾಡು); ಸುಯ್ (ಎನ್ನು), ಸೀತ್ಕಾರ (ಮಾಡು)

Sought. Seek ಧಾತುವಿನ ಭೂತ., ಭೂ. ಕೃ.

Soul ಸೋಲ್ (ನಾ.) ಆತ್ಮ [Immortality of the s. ಆತ್ಮದ ಅಮೃತತ್ವ. Cure of souls (Cure[1] ನೋಡಿ). Commend one's s. to God (ಮರಣೋನ್ಮುಖನಾದ ವ್ಯಕ್ತಿಯ ವಿಷಯದಲ್ಲಿ) ಆತ್ಮವನ್ನು ಭಗವತ್ಕೃಪೆಗೆ ಒಪ್ಪಿಸು. 'pon my s. (ಆಣೆಯ ಮಾತು): ನನ್ನಾಣೆಗೂ, ನನ್ನ ಆತ್ಮದ ಆಣೆಗೂ]; ಮನುಷ್ಯನ ಭಾವನಾಶಕ್ತಿ, ಧರ್ಮಶಕ್ತಿ, ಮನಸ್ಸು (His whole s. revolted from it ಅವನ ಸರ್ವಾತ್ಮವೂ ಅದಕ್ಕೆ ಪ್ರತಿಭಟಿಸಿತು, ಹೇಸಿತು). ಜೀವಾತ್ಮ, ಚೈತನ್ಯ, ಬುದ್ಧಿ, ಚೇತಸ್ಸು [Keep body & s. together (Body ನೋಡಿ). Cannot call his s. his own ಅವನು ತನ್ನ ಜೀವ ತನ್ನದು ಎನ್ನುವಹಾಗಿಲ್ಲ. (ಸಮಾಸಪದಗಳಲ್ಲಿ) S.-destroying, —stirring]. ಪ್ರಾಣ(ಸ್ವರೂಪಿ), ಜೀವ(ಸ್ವರೂಪಿ) [He was the (life &) s. of the party ಅವನು ಗೋಷ್ಠಿಯ ಜೀವ (ಸ್ವರೂಪ)ವಾಗಿದ್ದನು]; ವ್ಯಕ್ತಿ, ಆತ್ಮ (The greatest souls of antiquity ಪುರಾತನ ಕಾಲದ ಮಹಾ ಮಹಾತ್ಮರು. Left that to meaner souls ಅದನ್ನು ಅಲ್ಪಾತ್ಮರಿಗೆ, ನೀಚಾತ್ಮರಿಗೆ, ಬಿಟ್ಟನು); ಸತ್ತ್ವ, ಜೀವಾಳ, ಸಾರ (The fellow has no s. ಅವನಲ್ಲಿ ಸತ್ತ್ವವಿಲ್ಲ. His pictures lack s. ಅವನ ಚಿತ್ರಗಳಲ್ಲಿ ಜೀವಾಳವಿಲ್ಲ); ಮೂರ್ತಸ್ವರೂಪ, ಆದರ್ಶ [Is the s. of honour ಘನತೆಯ ಮೂರ್ತಿ, ಗೌರವ ಸ್ವರೂಪಿ (ಎಂದಿಗೂ ಅಗೌರವದಿಂದ ವರ್ತಿಸ ಲಾರ ಎಂಬರ್ಥದಲ್ಲಿ)]; ಸತ್ತವನ ಆತ್ಮ, ಪ್ರೇತ [All Souls' Day ಶುದ್ಧಿ ಲೋಕದಲ್ಲಿಯ ಎಲ್ಲ ಪ್ರೇತಗಳಿಗೂ ಮುಕ್ತಿ ಕೋರಿ ಪ್ರಾರ್ಥಿಸುವ ದಿನ: ಸರ್ವ ತರ್ಪಣ ದಿನ (ನೊವೆಂಬರ್ ೨)]; ಮನುಷ್ಯ, ಜನ (Not a s. to speak to for miles. Ship went down with 200 souls). (ಸಲಿಗೆ, ಅನುಗ್ರಹ, ಮರುಕ, ತಿರಸ್ಕಾರ, ಮೊ. ರ ಸೂಚಕವಾಗಿ) ಪ್ರಾಣಿ (The poor little s. had lost her way ಆ ಬಡ ಪ್ರಾಣಿ ದಾರಿ ತಪ್ಪಿ ಅಲೆಯುತ್ತಿತ್ತು. A simple s. ಸರಳ ಮನುಷ್ಯ). **(-)souled** (ಗು.) (High-s. ಮಹಾನುಭಾವನಾದ). **Soúlful** (ಗು.) ಭಾವ —ಮಯ, ಪೂರ್ಣ; ಭಾವೋದಾತ್ತತೆಯ. **Soúlfully** (ಕ್ರಿ. ವಿ.); **Soúlfulness** (ಗು.); **Soúlless** (ಗು.); **Soúllessly** (ಕ್ರಿ. ವಿ.); **Soúllessness** (ನಾ.)

Sound[1] ಸೌಂಡ್ (ಗು., ಕ್ರಿ. ವಿ.) ಆರೋಗ್ಯವಾದ, ಸ್ವಸ್ಥ, ಅರೋಗ ದೃಢ, ಒಳ್ಳೆಯ ಸ್ಥಿತಿಯಲ್ಲಿರುವ, ನೆಟ್ಟಗಿರುವ, ಗಟ್ಟಿಮುಟ್ಟಾಗಿರುವ (A s. mind in a s. body ಸ್ವಸ್ಥ ದೇಹದಲ್ಲಿ ಸ್ವಸ್ಥ ಮನಸ್ಸು. S. in life & limb ಗಟ್ಟಿಮುಟ್ಟಾಗಿ. S. fruit ಕೆಟ್ಟಿಲ್ಲದ, ಒಳ್ಳೆಯ, —ಹಣ್ಣು. S. ship ಭದ್ರವಾದ ಹಡಗು); ಸರಿಯಾದ, ದೃಢವಾದ, ನೆಚ್ಚಿಕೆಯಾದ, ಯುಕ್ತಿಯುಕ್ತವಾದ, ತರ್ಕಬದ್ಧವಾದ (S. doctrine, theologian, argument, views, policy. Is he s. on our side? ನಮ್ಮ ಕಡೆ ಅವನು ದೃಢವಾಗಿದ್ದಾನೆಯೋ?); (ವ್ಯಾಪಾರ ಸಂಸ್ಥೆ, ಮೊ. ಗಳ ವಿಷಯದಲ್ಲಿ) ಸಾಲ ತೀರಿಸಬಲ್ಲ, ಭದ್ರತೆಯುಳ್ಳ, ಧಡೂತಿಯಾದ. ಜೋರಾದ, ಶುದ್ಧ, ಪಕ್ಕಾ [A s. sleep(er) ಪಕ್ಕಾ ನಿದ್ದೆ (ಹೊಡೆಯುವವನು). S. flogging ಜೋರು ಹೊಡೆತ]. (ಕ್ರಿ. ವಿ.) ಚೆನ್ನಾಗಿ, ಜೋರಾಗಿ. S. asleep ಗಾಢವಾಗಿ ನಿದ್ರಿಸುತ್ತ, ಗಾಢನಿದ್ರೆಯಲ್ಲಿ. **Soúndly** (ಕ್ರಿ. ವಿ.); **Soúndness** (ನಾ.)

Sound[2] ಸೌಂಡ್ (ನಾ.) ಶಬ್ದ, ಧ್ವನಿ, ನಾದ, ದನಿ, ಸಪ್ಪಳ, ಉಲಿ [Musical s. (ನಿರಂತರ ನಿಯತ ಧ್ವನಿಕಂಪನದಿಂದಾದ) ಸಂಗೀತವಾಗಿ ಹೊಂದಿಕೊಳ್ಳುವ ಶಬ್ದ: ನಾದ (ಎದುರು ಪದ: Noise). Vowel sounds ಸ್ವರ ಶಬ್ದಗಳು. Consonant sounds ವ್ಯಂಜನ ಶಬ್ದಗಳು. S. & fury ಬರಿಯ ಕೂಗಾಟ ಮತ್ತು ರೇಗಾಟ. Don't like the s. of it ಅದರ ನಾದವೇ ನನಗೆ ಹಿಡಿಸುವುದಿಲ್ಲ, ಹಿತವಿಲ್ಲ]. **S.-board** =Sounding-board. **S.-bow** (ಘಂಟೆಯ ನಾಲಗೆ ಬಡಿಯುವ) ಘಂಟೆಯ ದಪ್ಪ ಅಂಚು. **S.-film** ಮಾತಾಡುವ ಚಲನಚಿತ್ರ: ವಾಕ್ಚಿತ್ರ. **S.-hole, -post** (ಕೆಲವು ವಾದ್ಯಗಳಲ್ಲಿ) ಹೊಟ್ಟೆಯಲ್ಲಿಯ ರಂಧ್ರ, ಹೊಟ್ಟೆಗೂ ಬೆನ್ನಿಗೂ ಮಧ್ಯೆ ಇರುವ ಆನಿಕೆ: ನಾದ ರಂಧ್ರ, ನಾದ ಸ್ತಂಭ. **S.-proof** ಶಬ್ದಾಭೇದ್ಯ. **S.-shadow** ಒಂದು ಶಬ್ದನಿರೋಧಕವನ್ನು ಅಡ್ಡಹಿಡಿಯುವುದರಿಂದ ಶಬ್ದಪ್ರಸಾರಕ್ಕೆ ತಡೆ ಯಾಗಿ, ಆ ನಿರೋಧಕದ ಹಿಂದೆ ಶಬ್ದ ಕೇಳಿಸದಿರುವ ಸ್ಥಳ: ಶಬ್ದದ ನೆರಳು, ನಿಶ್ಶಬ್ದ ಪ್ರದೇಶ. **S.-wave** ಧ್ವನಿ, ನಾದ, —ತರಂಗ. **Soúndless** (ಗು.)

Sound (ಕ್ರಿ.) ಶಬ್ದ, ಧ್ವನಿ, ನಾದ, ಸಪ್ಪಳ, —ಆಗು, ಕೊಡು, ಮಾಡು (The trumpets s.); ಉಲಿ(ಗುಡು); (ರೂಪ.) ಧ್ವನಿ, ಭಾವನೆ, —ಬರು, ಆಗು (Sounds as if he wanted to back out of it ಅವನು ಅದರಿಂದ ಹಿಮ್ಮೆಟ್ಟಬೇಕೆಂದು, ತಪ್ಪಿಸಿಕೊಳ್ಳ ಬೇಕೆಂದು, ಅಪೇಕ್ಷಿಸಿದಂತೆ ತೋರುತ್ತದೆ. That excuse sounds very hollow ಆ ನೆಪ ಬಲು ಟೊಳ್ಳಾಗಿ ಕಾಣುತ್ತದೆ. That report sounds all right ಆ ವರದಿ ಸರಿಯಾಗಿರುವಂತೆ ತೋರು ತ್ತದೆ). (ವರ್ತಮಾನ ಕೃ.) ಅರ್ಥಕ್ಕಿಂತ ಅಥವಾ ಸತ್ಯಾಂಶಕ್ಕಿಂತ ಶಬ್ದವೇ ಹೆಚ್ಚಾಗಿರುವ: ಬರಿಯ ಮಾತಿನ, ಗದ್ದಲದ, ಶಬ್ದಾಡಂಬರದ (Sounding promises ಭಾರಿ ಮಾತುಗಳ ಖಾಲಿ ವಾಗ್ದಾನಗಳು. Sounding titles ಶಬ್ದಾಡಂಬರದ ಬಿರುದುಗಳು). (ತುತೂರಿ, ಮೊ. ಗಳನ್ನು) ಊದು, ಬಾರಿಸು, ನುಡಿಸು; ಹೇಳು, ನುಡಿ (S. a note of alarm ಎಚ್ಚರಿಕೆಯ ಸ್ವರ, ಸೂಚನೆ, ಕೊಡು); ಉಚ್ಚರಿಸು (The h in hour is not sounded); ಘಂಟೆ, ಮೊ. ನ್ನು ಬಾರಿಸಿ ತಿಳಿವಳಿಕೆ ಕೊಡು (S. an alarm, the retreat); ಪ್ರತಿಧ್ವನಿಸುವಂತೆ, ಮೊಳಗುವಂತೆ, —ಮಾಡು; ಉದ್ಘೋಷಿಸು, ಸಾರು (S. his praises far & wide ಅವನ ಕೀರ್ತಿಯನ್ನು ಎಲ್ಲೆಡೆಯೂ, ದಿಕ್ಕು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಿಕ್ಕುಗಳಲ್ಲೂ ಮೊಳಗಿಸು, ಸಾರು); (ರೈಲುಗಾಡಿಯ ಗಾಲ, ಶ್ವಾಸಕೋಶ, ಮೊ. ನ್ನು ಹೊಡೆದು) ನಾದದಿಂದ, ಆಕರ್ಣನದಿಂದ, —ಪರೀಕ್ಷಿಸು. **Sounding-board** ಭಾಷಣ ವೇದಿಕೆ, ಮೊ. ಗಳ ಮೇಲೆ ಹಾಕಿರುವ, ಶ್ರೋತೃವೃಂದದ ಕಡೆಗೆ ಧ್ವನಿಯನ್ನು ತಿರುಗಿಸಲು ಸಹಾಯವಾಗುವ ಮೇಲ್ಕಟ್ಟು: ಶಬ್ದ, ಧ್ವನಿ, —(ಪ್ರತಿ)ಫಲಕ; ವಾದ್ಯಗಳಲ್ಲಿ ನಾದವನ್ನು ಹೆಚ್ಚಿಸುವುದಕ್ಕಾಗಿ ಹಾಕಿರುವ ಸಣ್ಣ ಮರದ ಪಟ್ಟಿ: ಧ್ವನಿ, ನಾದ, —ವರ್ಧಕ (ಫಲಕ). **Soúnder**[1] (ನಾ.) (ಕ್ರಿಯಾರ್ಥಗಳಲ್ಲಿ); (ದೂರಲೇಖಕದಲ್ಲಿ) ಧ್ವನಿಯ ಮೂಲಕ ವರ್ತಮಾನವನ್ನು ಗ್ರಹಿಸುವ, ಓದುವ, ಸಲಕರಣೆ: ನಾದಗ್ರಾಹಕ; ಶಬ್ದಕ.

Sound[3] ಸೌಂಡ್ (ಕ್ರಿ., ನಾ.) (ಆಳದ ಗುಂಡಿನ ಮೂಲಕ ಸಮುದ್ರ, ಕೊಳ, ನಾಲೆ, ಮೊ. ಗಳ) ಆಳವನ್ನು ಕಂಡುಹಿಡಿ, ತಳವನ್ನು ಪರೀಕ್ಷಿಸು [Sounding-line, -apparatus ಗಾಧಮಾಪಕ (ಸೂತ್ರ), ತಲ ಪರೀಕ್ಷಕ (ಸಲಕರಣೆ)]; (ಆಳದ ಕೋಲಿನಿಂದ ಹಡಗಿನ ನೀರಿನ ಕೊಳದ) ಆಳ —ಕಂಡುಹಿಡಿ, ಅಳೆ (Sounding-rod ಆಳದ ಕೋಲು, ಆಳ ಅಳೆಯುವ ಕೋಲು); (ವೈ. ಶಾ.) (ಮೂತ್ರಕೋಶ, ಮೊ. ನ್ನು) ಅನ್ವೇಷಕದಿಂದ ಪರೀಕ್ಷಿಸು; (ಮೀನು, ಮು., ತಿಮಿಂಗಿಲ) ನೀರಿನ ತಳಕ್ಕೆ ಹೋಗು, ಮುಳುಗು; (ಒಬ್ಬನ ಮನೋಗತ, ಇಂಗಿತ, ಭಾವ, ಮೊ. ನ್ನು ಬಹಳ ಎಚ್ಚರಿಕೆಯಿಂದ) ಉಪಾಯವಾಗಿ —ತಿಳಿ(ದುಕೊ), ಕಂಡುಕೊ (*About*, *on*, *as to* ಪದಗಳೊಡನೆ); ಮಿಡಿದು ನೋಡು. (ನಾ.) (ಶಸ್ತ್ರಚಿಕಿತ್ಸಕನ) ಅನ್ವೇಷಕ. **Soúnder**[2] (ನಾ.) (ಕ್ರಿಯಾರ್ಥಗಳಲ್ಲಿ); Flying s. (ಹಡಗಿನ ವೇಗವನ್ನು ಕಡಮೆ ಮಾಡದೆಯೇ ನೀರಿನ ಆಳವನ್ನು ಕಂಡುಹಿಡಿಯಲು ಅನುಕೂಲಿಸುವ) ಚಲ ಗಾಧಮಾಪಕ. **Soúnding** (ನಾ.) (ಕ್ರಿಯಾರ್ಥಗಳಲ್ಲಿ); ಸುಲಭವಾಗಿ ಆಳ ಕಂಡುಹಿಡಿಯಲಾಗುವ ತೀರದ ಹತ್ತಿರದ ಸ್ಥಳ (Be in, come into, soundings)

Sound[4] ಸೌಂಡ್ (ನಾ.) ಎರಡು ಸಮುದ್ರಗಳನ್ನಾಗಲಿ, ಸಮುದ್ರವನ್ನೂ ಸರೋವರ, ಮೊ. ವನ್ನೂ ಆಗಲಿ ಕೂಡಿಸುವ ಇಕ್ಕಟ್ಟಾದ ನೀರಭಾಗ: ಜಲಸಂಧಿ. ಮೀನಿನ ಗಾಳಿಯ ಚೀಲ; ಕಟ್‌ಲ್ ಮೀನು.

Soúnder[1], [2]. **Sound**[2], [3] ನೋಡಿ.

Soúnder[3] ಸೌಂಡರ್ (ನಾ.) (ಪ್ರಾಚೀ. ಪ್ರ.) ಕಾಡು ಹಂದಿಯ—ಮಂದೆ, ಹಿಂಡು; (ಕೃತಕ ಪ್ರಾಚೀ. ಪ್ರ.) ಕಾಡು ಹಂದಿಯ ಮರಿ.

Soúnding. **Sound**[3] ನೋಡಿ.

Soup ಸೂಪ್ (ನಾ.) (ಮಾಂಸಸಾರ, ಮೊ. ಗಳಿಂದ ಮಾಡಿದ) (ತಿಳಿ) ಸಾರು, ಎಸರು; ಮಾಂಸದ ಸಾರು [In the s. (ಅಸಂ.) ಕಷ್ಟದಲ್ಲಿ, ಫಜೀತಿಯಲ್ಲಿ, ಪೇಚಾಟದಲ್ಲಿ]. S.-kitchen (ಬಡವರಿಗೆ ಬಿಟ್ಟಿಯಾಗಿ ಹಂಚಲು ಏರ್ಪಡಿಸಿದ) (ತಿಳಿ) ಸಾರಿನ ಸತ್ರ. S.-ticket (ಸಾರಿನ ಸತ್ರದಲ್ಲಿ ತೋರಿಸಿದರೆ ಸಾರು ಕೊಡುವ) ಸಾರಿನ ಚೀಟಿ. S. maigre ಮು., ಕಾಯಿಪಲ್ಯ ಹಾ॰ ತೆಳ್ಳಗೆ ಮಾಡಿದ ಸಾರು. S.-plate (ಅಳವಾದ) ಸಾರಿನ ತಟ್ಟೆ. Pea s. (Pea ನೋಡಿ). **Soúpy** (ಗು.)

Soupcon (F) ಸೂಪ್ಸಾನ್ (ನಾ.) ಅತ್ಯಲ್ಪಾಂಶ, ಲವ, ಲೇಶ; (ಒಂದರ) ಛಾಯೆ, ಸೂಚನೆ, ಸುಳಿವು.

Sour ಸೌ(ಅ)ರ್ (ಗು., ಕ್ರಿ.) (ಮಾಗಿಲ್ಲದ, ಹುದುಗುವ, ಕಾರಣದಿಂದ) ಹುಳಿಯಾದ, ಆಮ್ಲ [S. grapes (Grape ನೋಡಿ). S. milk ಹುಳಿ ಹಿಡಿದ ಹಾಲು]; (ವಾಸನೆಯ ವಿಷಯದಲ್ಲಿ) ಹುಳಿ ಹಿಡಿದ, ಹುಳಿ ವಾಸನೆಯ; (ಭೂಮಿಯ ವಿಷಯದಲ್ಲಿ) ತೇವವಾದ, ಒದ್ದೆಯಾದ; (ವ್ಯಕ್ತಿಯ ಅಥವಾ ಮನೋವೃತ್ತಿಯ ವಿಷಯದಲ್ಲಿ) ಹುಳಿಮೋರೆಯ, ಹುಳಿಮನಸ್ಸಿನ; (S. dock ಒಂದು ಬಗೆಯ ಪುಲ್ಲಂಪುರಚಿ ಸೊಪ್ಪು). (ಕ್ರಿ.) ಹುಳಿ —ಆಗು, ಮಾಡು; ಹುಳಿಸು; (ಮು., ರೂಪ.) ಕಟು —ಆಗು, ಮಾಡು (Soured by misfortune ದುರದೃಷ್ಟದಿಂದ ಮನಸ್ಸು ಹುಳಿಯಾದ). **Soúrish** (ಗು.); **Soúrly** (ಕ್ರಿ. ವಿ.); **Soúrness** (ನಾ.)

Source ಸೋ(ಅ)ರ್ಸ್ (ನಾ.) (ನದೀ)ಮೂಲ; ಜನ್ಮಸ್ಥಾನ; ಆರಂಭ, ಉತ್ಪತ್ತಿಸ್ಥಾನ; ಆಕರ (The sources of the Nile ನೈಲ್ ನದಿಯ ಮೂಲಗಳು. The s. of all our woes ನಮ್ಮ ಎಲ್ಲ ದುಃಖಗಳ ಮೂಲ. Drawn from all sources ಎಲ್ಲ ಆಕರಗಳಿಂದ ತೆಗೆದುಕೊಂಡ). S.-book ಒಂದು ವಿಷಯವನ್ನು ಚಾರಿತ್ರಕ ದೃಷ್ಟಿಯಿಂದ ವ್ಯಾಸಂಗ ಮಾಡುವುದಕ್ಕೆ ಅನುಕೂಲಿಸುವಂತೆ ಮೂಲ ದಾಖಲೆಗಳನ್ನೆಲ್ಲ ಒಟ್ಟುಗೂಡಿಸಿರುವ ಪುಸ್ತಕ: ಆಕರ ಗ್ರಂಥ.

Sourdíne ಸೂರ್ಡೀನ್ (ನಾ.) (ಹಾರ್ಮೋನಿಯಂ ವಾದ್ಯದಲ್ಲಿ) ಮೃದು ನಾದಕ. =Sordine.

Soúr-sop ಸೌ(ಅ)ರ್‌ಸಾಪ್ (ನಾ.) ಮುಳ್ಳು ರಾಮಫಲ(ದ ಮರ)

Souse ಸೌಸ್ (ನಾ., ಕ್ರಿ., ಕ್ರಿ. ವಿ.) ಉಪ್ಪಿನಕಾಯಿ, ಊರುಗಾಯಿ, —ರಸ; ಉಪ್ಪಿನ ರಸದಲ್ಲಿ ಊರಿಟ್ಟ ಮಾಂಸ (ಮು., ಹಂದಿಯ ತಲೆ, ಕಿವಿ ಮತ್ತು ಕಾಲು): ಊರು(ಗಾಯಿ) ಮಾಂಸ. ನೀರಿನಲ್ಲಿ ಅದ್ದುವುದು, ಮುಳುಗಿಸುವುದು, ನೆನೆಸುವುದು; ನೆನೆತ, ಮುಳುಗು, ಅದ್ದು. (ಕ್ರಿ.) ಊರಿಡು, ಊರಹಾಕು (Soused mackerel); (ನೀರಿನಲ್ಲಿ) ಅದ್ದು, ಮುಳುಗು, ಮುಳುಗಿಸು (*Into* ಉಪ. ಪದೊಡನೆ), ನೆನೆ, ನೆನಸು (*In* ಉಪ. ದೊಡನೆ); ನೀರು —ಚಿಮುಕಿಸು, ಎರಚು, ಸುರಿ (*Over* ಉಪ. ದೊಡನೆ). (ಕ್ರಿ. ವಿ.) ರೊಯ್ಯನೆ, ಧಡಾರನೆ, ಇದ್ದಕ್ಕಿದ್ದ ಹಾಗೆ, ಧುಡುಮ್ಮನೆ (Came s. into our midst)

Soútache ಸೂಟಾಷ್ (ನಾ.) (ಬಟ್ಟೆಗಳ ಮೇಲೆ ಅಲಂಕಾರವಾಗಿ ಹೊಲಿಯಲು ಉಪಯೋಗಿಸುವ) ಹೆಣಿಗೆಪಟ್ಟಿ, ಜಡೆಪಟ್ಟಿ.

Soutáne ಸೂಟಾನ್ (ನಾ.) (ರೋ. ಕ್ಯಾ. ಮತ) ಪಾದ್ರಿಯ ನಿಲುವಂಗಿ.

Souteneúr (F) ಸೂಟೆನರ್ (ನಾ.) ಸೂಳೆಯ ಸಂಪಾದನೆಯಿಂದ ಜೀವಿಸುವವನು; ವೇಶ್ಯಾ (ಸಹ) ಜೀವಿ, ವೇಶ್ಯೋಪಜೀವಿ.

South ಸೌತ್ (ನಾ., ಗು., ಕ್ರಿ. ಅಕ.; ಸಂಕ್ಷಿಪ್ತ: S.) ದಕ್ಷಿಣ (ದಿಕ್ಕು), ದಕ್ಷಿಣದ, ದಕ್ಷಿಣಕ್ಕೆ, ದಕ್ಷಿಣದ ಕಡೆಗೆ, ದಕ್ಷಿಣಾಭಿಮುಖ(ವಾಗಿ), ತೆಂಕ(ಲು), ತೆಂಕಣ; ದಕ್ಷಿಣ —ಪ್ರದೇಶ, ಪ್ರಾಂತ, ಭಾಗ(ಗಳು) [Due s. ನೇರವಾಗಿ ತೆಂಕ ದೆಸೆಗೆ, ದಕ್ಷಿಣಾಭಿಮುಖವಾಗಿ. S. by east, west ದಕ್ಷಿಣದಿಂದ ಆಗ್ನೇಯಕ್ಕೆ, ನೈರುತ್ಯಕ್ಕೆ, $11\frac{1}{4}°$ ಒಲ. S. of —ರ ದಕ್ಷಿಣಕ್ಕೆ. S.-east ಆಗ್ನೇಯ. S.-west ನೈರುತ್ಯ. S.-s.-east ದಕ್ಷಿಣಕ್ಕೂ ಆಗ್ನೇಯಕ್ಕೂ ನಡುವಣ ದಿಕ್ಕು. S.-s.-west ದಕ್ಷಿಣಕ್ಕೂ ನೈರುತ್ಯಕ್ಕೂ ನಡುವಣ ದಿಕ್ಕು]. ಇಂಗ್ಲೆಂಡಿನ, ಸ್ಕಾಟ್ಲೆಂಡಿನ, ಐರ್ಲೆಂಡಿನ, ಯೂರೋಪಿನ, —ದಕ್ಷಿಣ ಭಾಗ; ಅಮೆ. ಸಂ. ದ ದಕ್ಷಿಣ ಸಂಸ್ಥಾನಗಳು; ತೆಂ(ಕಣ) ಗಾಳಿ, ದಕ್ಷಿಣಾನಿಲ (=S. wind). [**S.-east, S.-west** (ಸಂಕ್ಷಿಪ್ತ: S.E., S.W.) (ಲಂಡನ್ನಿನ ಅಂಚೆಯ ಪ್ರಾಂತಗಳು): ಲಂಡನ್ನಿನ ಆಗ್ನೇಯ, ನೈರುತ್ಯ, —ಪ್ರಾಂತ. **S. Downs** ಹ್ಯಾಂಪ್‌ಷರ್ ಮತ್ತು ಸಸೆಕ್ಸ್ ಕೌಂಟಿಗಳ ಹುಲ್ಲುಗಾವಲು. **Soúthdown** (ಗು., ನಾ.) ಈ ಹುಲ್ಲುಗಾವಲುಗಳಿಂದ ಮೊದಲು ಬಂದ, ಅದರ ಮಾಂಸ ಶ್ರೇಷ್ಠವೆಂದು ಪರಿಗಣಿಸುವ, ಒಂದು ಕುರಿಯ ತಳಿ; ಈ ತಳಿಯ (ಕುರಿ)]. [S. Kensington ದಕ್ಷಿಣ ಕೆನ್ಸಿಂಗ್‌ಟನ್‌ನಲ್ಲಿಯ ವಸ್ತುಸಂಗ್ರಹಶಾಲೆಗಳು; ಅಲ್ಲಿಯ ಸಂಸ್ಕೃತಿ, ಕಲೆ ಮತ್ತು ಶಿಕ್ಷಣಗಳ ವಾತಾವರಣ. S. Sea (ಚರಿತ್ರೆ) ಪೆಸಿಫಿಕ್ ಸಾಗರ. S. Sea Bubble ಸ್ಪ್ಯಾನಿಷ್ ಅಮೆರಿಕದೊಡನೆ ವ್ಯಾಪಾರಕ್ಕಾಗಿ ಇಂಗ್ಲೆಂಡಿನಲ್ಲಿ ಏರ್ಪಟ್ಟಿದ್ದ, ೧೭೨೦ರಲ್ಲಿ ಭಗ್ನವಾಗಿ ಹೋದ ಯೋಜನೆ]. (ಕ್ರಿ.) ದಕ್ಷಿಣಕ್ಕೆ ತಿರುಗು, ಹೋಗು; (ಚಂದ್ರ, ಮೊ. ಗಳ ವಿಷಯದಲ್ಲಿ) ಮಧ್ಯಾಹ್ನ ರೇಖೆಯನ್ನು ದಾಟು. **Southeáster** (ನಾ.) ಆಗ್ನೇಯ ಮಾರುತ, ತೆಮ್ಮೂಡಲ ಗಾಳಿ. **Soúther** (ನಾ.) ದಕ್ಷಿಣಾನಿಲ, ತೆಂ(ಕಣ) ಗಾಳಿ. **Soútherly** ಸದರ್ಲಿ (ಗು., ಕ್ರಿ. ವಿ.) (ಗಾಳಿಯ ವಿಷಯದಲ್ಲಿ) ದಕ್ಷಿಣದಿಂದ ಬೀಸುವ, ತೆಂಕಣ; (ಕ್ರಿ. ವಿ.) ದಕ್ಷಿಣಕ್ಕೆ, ತೆಂಕಲಾಗಿ. **Soúthern** (ಗು., ನಾ.) ದಕ್ಷಿಣದ(ಲ್ಲಿಯ) [S. confederacy ಅಮೆ. ಸಂ. ಗಳಿಂದ ಬೇರ್ಪಟ್ಟ ದಕ್ಷಿಣದ ಹನ್ನೊಂದು ಸಂಸ್ಥಾನಗಳಲ್ಲಿ ತಮ್ಮಲ್ಲೆ ಒಟ್ಟುಗೂಡಿಕೊಂಡು ಆಡಳಿತ ನಡಸುತ್ತಿದ್ದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರು ಸಂಸ್ಥಾನಗಳು : ದಕ್ಷಿಣ ಸಮಷ್ಟಿ ಸಂಸ್ಥಾನಗಳು. S. cross, hemisphere, states (ಆಯಾ ಪದ ನೋಡಿ)]; ತೆಂಕಲ ಕಡೆಯ, ದಕ್ಷಿಣಾಭಿಮುಖ (A s. aspect ದಕ್ಷಿಣದ ಕಡೆಯ ದೃಷ್ಟಿ, ದಕ್ಷಿಣ ಮುಖ). (ಗಾಳಿಯ ವಿಷಯದಲ್ಲಿ, ವಿರ. ಪ್ರ.) ದಕ್ಷಿಣದಿಂದ ಬೀಸುವ. (ನಾ.) ದಕ್ಷಿಣ (ಪ್ರದೇಶ) ವಾಸಿ, ದಾಕ್ಷಿಣಾತ್ಯ; (ಮು.) ಅಮೆ. ಸಂ. ದ ದಕ್ಷಿಣ ಸಂಸ್ಥಾನಗಳ ನಿವಾಸಿ. **Soútherner** (ನಾ.) ದಕ್ಷಿಣ ನಿವಾಸಿ, ದಾಕ್ಷಿಣಾತ್ಯ. **Soúthernmost** (ಗು.) ಅತ್ಯಂತ ದಕ್ಷಿಣದ. **Soúthernwood** (ನಾ.) ಸುವಾಸನೆಯ ಎಲೆಗಳುಳ್ಳ ಒಂದು ಗಿಡ: ದವನ. **Soúthing** ಸೌದಿ(ತಿ)ಂಗ್ (ನಾ.) ದಕ್ಷಿಣಕ್ಕೆ —ತಿರುಗುವುದು, ಹೋಗುವುದು; (ನಾವೆ) ದಕ್ಷಿಣಕ್ಕೆ ಪ್ರಯಾಣ ಮಾಡುವಲ್ಲ ಆದ ಅಕ್ಷಾಂಶ ವ್ಯತ್ಯಾಸ : ದಕ್ಷಿಣಾವರ್ತನ. **Soúthron** ಸದ್ರನ್ (ಗು., ನಾ.) (ಪ್ರಾಚೀ. ಪ್ರ., ಸ್ಕಾ. ಪ್ರ.) (ಸಾ., ತಿರಸ್ಕಾರ ಸೂಚಕವಾಗಿ) ಇಂಗ್ಲಿಷಿನ(ವನು) (Southern ಎಂಬುದರ ರೂಪಾಂತರ). **Soúthward** (ಗು., ನಾ.) ದಕ್ಷಿಣದ (ಕಡೆ). **Soúthward(s)** (ಕ್ರಿ. ವಿ.); **Soúthwester** (ನಾ.) ನೈರುತ್ಯ ಮಾರುತ; ಹಿಂಗತ್ತಿಗೆ ಮರೆಯಾಗುವಂತೆ ಹಿಂಭಾಗದ ಅಂಚು ಅಗಲವಾಗಿರುವ, ನೀರಿಳಿಯದ, ಒಂದು ಟೊಪ್ಪಿಗೆ (ಸಾ., Sou'wester)

Soúvenir ಸೂವನಿಯರ್ (ನಾ.) (ಸಂದರ್ಭ, ಸ್ಥಳ, ಮೊ. ಗಳ) ನೆನಪಿಗಾಗಿ ಕೊಟ್ಟದ್ದು, ಇಟ್ಟುಕೊಂಡದ್ದು; ಸ್ಮಾರಕ, ನೆನಪಿನ ಗುರುತು. ಸ್ಮರಣೆ(ಯ ವಸ್ತು); ಸವಿ ನೆನಪು.

Sóvereign ಸಾವ್‌ರೆ(ರಿ)ನ್ (ಗು., ನಾ.) ಪರಮ, ಶ್ರೇಷ್ಠ, ಉತ್ತಮೋತ್ತಮ [S. power ಪರಮಾಧಿಕಾರ; ಶ್ರೇಷ್ಠ —ಶಕ್ತಿ, ಬಲ. S. good = Summum Bonum (ಆ ಪದ ನೋಡಿ)]; ಮಹತ್ತಾದ, ಅತ್ಯಂತ (S. contempt ಮಹಾ ತಿರಸ್ಕಾರ); ಪರಮಾಧಿಕಾರವುಳ್ಳ, ಸರ್ವ ಸ್ವತಂತ್ರವಾದ (S. States ಸರ್ವ ಸ್ವತಂತ್ರ ರಾಜ್ಯಗಳು); ಅಧೀಶ್ವರನಾದ (S. Lord ಪರಮಪ್ರಭು; ಅಧೀಶ್ವರ); ಅತ್ಯುತ್ತಮ, ಸರ್ವೋತ್ಕೃಷ್ಟ (A s. remedy). (ನಾ.) ಪರಮ ಪ್ರಭು, ರಾಜಾಧಿರಾಜ, ಸಾರ್ವಭೌಮ. (ಬಳ. ಮಾ., ಸಂಕ್ಷಿಪ್ತ : Sov.) ಇಂಗ್ಲೆಂಡಿನ ಒಂದು ಪೌಂಡು ಚಿನ್ನದ ನಾಣ್ಯ, ಸವರನ್ನು (Half s. ೧೦ ಷಿಲಿಂಗಿನ ಚಿನ್ನದ ನಾಣ್ಯ; ಅರ್ಧ ಸವರನ್ನು). **Sóvereignly** (ಕ್ರಿ. ವಿ.) (ಪ್ರಾಚೀ. ಪ್ರ.); **Sóvereignty** (ನಾ.) (ಸರ್ವ) ಸ್ವಾಮ್ಯ, ಪಾರಮ್ಯ, ಪರಮಾಧಿಕಾರ; ಪ್ರಭುತ್ವ, ಶ್ರೇಷ್ಠತೆ.

Soviét ಸೋವಿಯಟ್ (ನಾ.) ೧೯೧೭ನೆಯ ಇಸವಿಯ ಕ್ರಾಂತಿಯ ಪರಿಣಾಮವಾಗಿ ರಷ್ಯದಲ್ಲಿ ಏರ್ಪಟ್ಟಿರುವ, ಕೆಲಸಗಾರರೂ ರೈತರೂ ಸಿಪಾಯಿಗಳೂ ಸೇರಿ ಆರಿಸುವ, ಆಯಾ ಪ್ರಾಂತದ ಆಡಳಿತದಲ್ಲಿ ಪರಮಾಧಿಕಾರವುಳ್ಳ, ಗ್ರಾಮದ ಅಥವಾ ನಗರದ ಆಡಳಿತ ಮಂಡಲಿ; ಪ್ರಾದೇಶಿಕ—ಸಮಷ್ಟಿ ರಾಜ್ಯ, ಸಂಸೃಷ್ಟಿ ರಾಜ್ಯ; ಸೋವಿಯೆಟ್. (ಈ ಮಂಡಲಿಗಳು ಒಟ್ಟುಸೇರಿ ಆರಿಸಿದ) ಇಡಿಯ ರಷ್ಯದ ಸೋವಿಯೆಟ್ ಪ್ರತಿನಿಧಿ ಮಂಡಲಿ. Union of Soviet Socialist Republics (ಸಂಕ್ಷಿಪ್ತ: U.S.S.R.) ರಷ್ಯದ ಮಹಾಕ್ರಾಂತಿಯ ತರುವಾಯದ ಸಂಸೃಷ್ಟಿ ಸರಕಾರ; ಸೋವಿಯೆಟ್ ರಷ್ಯ.

Sow[1] ಸೋ (ಕ್ರಿ. ಸಕ.; ಭೂತ. Sowed, ಭೂ. ಕೃ. Sown ಅಥವಾ Sowed) (ವೊಳೆತು ಬೆಳೆಯುವುದಕ್ಕಾಗಿ ನೆಲದಲ್ಲಿ) ಬೀಜ —ಎರಚು, ಚೆಲ್ಲು, ಬಿತ್ತು; ಬಿತ್ತು, ಬಿತ್ತನೆಮಾಡು [(ರೂಪ.): S. (the seeds of) dissension ವೈಮನಸ್ಯ(ದ ಬೀಜ) ಬಿತ್ತು; ಮನಸ್ತಾಪ ತಂದುಹಾಕು. Reap what you have sown ಬಿತ್ತಿದ್ದನ್ನು ಕೊಯ್ಯು; ಮಾಡಿದ್ದುಣ್ಣೋ ಮಹಾರಾಯ. S. wind and reap whirlwind (Whirl ನೋಡಿ)]. (ರೂಪ.) ದಟ್ಟವಾಗಿ, ಒತ್ತಾಗಿ,—ಹರಡು (*With* ಉಪ. ದೊಡನೆ) (ಮು., ಭೂ. ಕೃ. ಪ್ರ. Thick as the galaxy with stars is sown). **Sówer** (ನಾ.); **Sówing** (ನಾ.)

Sow[2] ಸೌ (ನಾ.) (ಪ್ರಾಯದ) ಹೆಣ್ಣು ಹಂದಿ; [Get the wrong s. by the ear ಒಬ್ಬನನ್ನು, ಒಂದನ್ನು, —ತಪ್ಪಾಗಿ ಹಿಡಿ; ತಪ್ಪು ವ್ಯಕ್ತಿಯನ್ನು, ತಪ್ಪು ವಸ್ತುವನ್ನು, —ಹಿಡಿ(ದು ತರು); ತಪ್ಪು ತೀರ್ಮಾನಕ್ಕೆ ಬರು. As drunk as a s. ಪೂರ್ತಿ ಕುಡಿದು]; ಮರ, ಗಿಡ, —ಹೇನು (=S.-bug); (ಕಬ್ಬಿಣದ ಕುಲುಮೆಯಲ್ಲಿ; ಕರಗಿದ ಕಬ್ಬಿಣವನ್ನು ಪಕ್ಕದ ಸಣ್ಣ ಕಾಲುವೆಗಳಿಗೆ ಸಾಗಿಸುವ) ಪ್ರಧಾನ ನಾಲೆ; ಈ ನಾಲೆಯಲ್ಲಿ ಘನೀಭವಿಸಿದ ದೊಡ್ಡ ಕಬ್ಬಿಣದ ಗಟ್ಟಿ: ನಾಲೆಗಟ್ಟಿ. **Sówback** (ಮರಳುದಿಬ್ಬ, ಬೆಟ್ಟ, ಮೊ. ಗಳ) ಗಿಡ್ಡನಾದ, ಮೋಟಾದ, —ಏಣು.

Soy ಸಾಯ್ (ನಾ.) (ಜಪಾನ್ ಮತ್ತು ಚೀನಾಗಳಲ್ಲಿ ಮಾಡುವ) ಸೋಯಾ ಅವರೆಯ ಸಾಂಬಾರು. S.-bean, -pea ಸೋಯಾ ಅವರೆ.

Spa ಸ್ಪಾ (ನಾ.) ಖನಿಜ ಜಲದ ಊಟೆ [ಇರುವ (ಬೆಲ್ಜಿಯಮ್ಮಿನಲ್ಲಿಯ) ಸ್ಥಳ]

Space ಸ್ಪೇಸ್ (ನಾ.) ಆಕಾಶ, ಪ್ರದೇಶ, ಸ್ಥಳ, ಅವಕಾಶ, ಎಡೆ, ಜಾಗ, ತಾವು, ಅಂತರ (Box occupies too much s. A s. of 10 ft. ೧೦ ಅಡಿ ಅಂತರ, ಅವಕಾಶ); (ಮುದ್ರಣ) (ಮಾತು, ಮೊ. ಗಳ ನಡುವಣ) ಬಿಡುವು, ತೆರಪು, ತೆರಪೆಡೆ; ಇದಕ್ಕಾಗಿ ಉಪಯೋಗಿಸುವ ಅಚ್ಚಿನ ಮೊಳೆ: ತೆರಪು, ತೆರಪೆಡೆ—ಮೊಳೆ. ಕಾಲಾವಕಾಶ, ಕಾಲ, ಹೊತ್ತು (In the s. of an hour ಒಂದು ಗಂಟೆಯ ಕಾಲಾವಕಾಶದಲ್ಲಿ. Let us rest a s. ಕೊಂಚ ಹೊತ್ತು ವಿಶ್ರಮಿಸಿಕೊಳ್ಳೋಣ). **S.-bar** (ಟೈಪ್‌ರೈಟರ್ ಯಂತ್ರದಲ್ಲಿ) ಮಾತುಗಳ ನಡುವೆ ತೆರಪು ಬಿಡಿಸುವ ಪಟ್ಟಿ: ತೆರಪು, ತೆರಪೆಡೆ, —ಪಟ್ಟಿ. **S.-time** (ತ. ಶಾ.) ಉದ್ದ, ಅಗಲ ಮತ್ತು ಎತ್ತರ —ಈ ಮೂರು ಪರಿಮಾಣಗಳ ಜೊತೆಗೆ ನಾಲ್ಕನೆಯ ಪರಿಮಾಣವಾಗಿಯೂ ಅಖಂಡದ್ರವ್ಯ, ಸ್ವರೂಪದ್ದೆಂದೂ ಪರಿಗಣಿತವಾಗಿರುವ ಆಕಾಶ ಭಾವನೆಯ ಮತ್ತು ಕಾಲಭಾವನೆಯ ಸಂಮಿಶ್ರ ಭಾವನೆ: ಆಕಾಶ-ಕಾಲ (ತತ್ತ್ವ), ದೇಶ-ಕಾಲ (ತತ್ತ್ವ). **S.-writer** ವೃತ್ತಪತ್ರಿಕೆಯಲ್ಲಿ ತನ್ನ ಬರೆವಣಿಗೆಗೆ ಆಗುವ ಅಳತೆಯ ಲೆಕ್ಕದಮೇಲೆ ದುಡ್ಡು ತೆಗೆದುಕೊಳ್ಳುವ ಲೇಖಕ: ಅಳತೆ ಲೆಕ್ಕದ ಲೇಖಕ. **S.-writing** ಅಳತೆ ಲೆಕ್ಕದ ಲೇಖನ. **Spáceless** (ಗು.); **Spácious** ಸ್ಪೇಷಸ್ (ಗು.) ಹೆಚ್ಚು ಸ್ಥಳಾವಕಾಶವುಳ್ಳ, ವಿಶಾಲವಾದ, ವಿಸ್ತಾರವಾದ, ಹರವಾದ. **Spáciously** (ಕ್ರಿ. ವಿ.); **Spáciousness** (ನಾ.)

Space (ಕ್ರಿ.) ದೂರ ದೂರವಾಗಿ, ಅಂತರಬಿಟ್ಟು, ತೆರಪು ಬಿಟ್ಟು, —ಇಡು; (ಮುದ್ರಣದಲ್ಲಿ; ಮಾತು, ಮೊ. ಗಳ ನಡುವೆ) ತೆರಪು ಮೊಳೆ ಹಾಕು, ತೆರಪು ಬಿಡು (S. out ಹೆಚ್ಚು ತೆರಪು ಬಿಡು, ವಿಸ್ತರಿಸು); (ಟೈಪ್‌ರೈಟರ್ ಯಂತ್ರ, ಮೊ. ಗಳಲ್ಲಿ; ತೆರಪು ಪಟ್ಟಿ ಒತ್ತಿ, ಮಾತುಗಳ ನಡುವೆ) ತೆರಪು ಬಿಡು (Don't forget to s.). **Spácer** (ನಾ.) ತೆರಪೆಡೆ ಪಟ್ಟಿ; ತೆರಪು ಪಟ್ಟಿ. **Spácing** (ನಾ.)

Spácious, etc. **Space** ನೋಡಿ.

Spade ಸ್ಪೇಡ್ (ನಾ., ಕ್ರಿ. ಸಕ.) (ನೆಲ ಅಗೆಯುವುದಕ್ಕೂ ಹುಲ್ಲು ಕೆತ್ತುವುದಕ್ಕೂ ಉಪಯೋಗಿಸುವ, ಆಯದಾಕಾರದ ಅಲಗೂ ನೇರ ಹಿಡಿಯೂ ಇರುವ ಆಯುಧ): ಎಲೆಗುದ್ದಲಿ, ಮೊಗೆಗುದ್ದಲಿ, ಸನಿಕೆ (Call a s a s. ಪದಾರ್ಥಗಳನ್ನು ಅವುಗಳ ನಿಜವಾದ ಹೆಸರಿನಿಂದ ಕರೆ; ಸ್ಪಷ್ಟವಾಗಿ, ನಿರ್ದಾಕ್ಷಿಣ್ಯವಾಗಿ, —ಹೇಳು, ಮಾತಾಡು); ಬಗೆ, ಮೊಗೆ, —ಸಲಕರಣೆ, ಆಯುಧ (ಉದಾ., ತಿಮಿಂಗಿಲದ ಕೊಬ್ಬನ್ನು ಬಗಿದು ತೆಗೆಯುವ ಸಲಕರಣೆ); [**S. bayonet** (ಮೊಗೆಯಾಯುಧವಾಗಿಯೂ ಸನೀನಾಗಿಯೂ ಉಪಯೋಗಿಸಲಾಗುವ) ಅಗಲ ಅಲಗಿನ ಸನೀನು; ಸನಿಕೆ ಸನೀನು. **S. husbandry** ನೇಗಿಲಿಂದ ಉಳದೆ, ಸನಿಕೆಯಿಂದ ಆಳವಾಗಿ ಅಗೆದು ಮಾಡುವ ಬೇಸಾಯ: ಸನಿಕೆ, ಗುದ್ದಲಿ, —ಬೇಸಾಯ. **S.-work** (ರೂಪ.) ವಿವರಗಳಿಗೆಲ್ಲ ಗಮನಕೊಟ್ಟು ಮಾಡುವ, ಅಷ್ಟಾಗಿ ಗಣನೆಗೆ ಬಂದು ಮನ್ನಣೆಪಡೆಯದ, ಪ್ರಾರಂಭದ ಒರಟು ಕೆಲಸ, ಕಷ್ಟದ ಕೆಲಸ: ಮಾರ್ಗ ಕಲ್ಪನೆಯ ಕೆಲಸ; ಗುದ್ದಲಿ ಕೆಲಸ; ಮೊದಲ ದುಡಿಮೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೀಠಿಕಾ ಕಾರ್ಯ, ಪಾಯದ ಕೆಲಸ (Continual s.-w. is necessary on the Insurance question)]. ಇಸ್ಪೀಟು (ರಂಗಿನ ಎಲೆ); (ಬ. ವ.) ಇಸ್ಪೀಟು ರಂಗಿನ ವರಿಸೆ; (S. guinea ಇಸ್ಪೀಟಿನಾಕಾರದ ಗುರಾಣಿಯ ಚಿತ್ರ ಕೆತ್ತಿರುತ್ತಿದ್ದ, ಮೂರನೆಯ ಜಾರ್ಜ್ ದೊರೆಯ ಕಾಲದ, ಇಂಗ್ಲೆಂಡಿನ ಗಿನಿ ನಾಣ್ಯ: ಇಸ್ಪೀಟು ಗಿನಿ). (ಕ್ರಿ.) ಸನಿಕೆಯಿಂದ (ನೆಲ) ಅಗೆ; ಮೊಗೆಯಾಯುಧದಿಂದ (ತಿಮಿಂಗಿಲದ) ಕೊಬ್ಬನ್ನು ತೆಗೆ(ದುಹಾಕು). **Spádeful** (ನಾ.) ಸನಿಕೆ ತುಂಬು. **Spadílle** ಸ್ಪಡಿಲ್ (ನಾ.) (ಕೆಲವು ತೆರನ ಇಸ್ಪೀಟಾಟಗಳಲ್ಲಿ) ಇಸ್ಪೀಟು ಹಾಸು, ಎಕ್ಕ.

Spádger ಸ್ಪ್ಯಾ(ಸ್ಪಾ)ಜ್ಜರ್ (ನಾ.) (ಅಸಂ.) =Sparrow (ಪದದ ಅಪಭ್ರಂಶ)

Spadíceous, Spádicose. **Spadix** ನೋಡಿ.

Spádille. **Spade** ನೋಡಿ.

Spádix ಸ್ಪೇಡಿಕ್ಸ್ (ನಾ.; ಬ. ವ. -dices —ಡೈಸೀಸ್, -dixes) (ಸ. ವಿ.) ತಿರುಳುಳ್ಳ ಅಕ್ಷಸ್ತಂಭದ ಸುತ್ತಲೂ ಹೂವುಗಳು ದಟ್ಟವಾಗಿ ಅಣಿಗೊಂಡಿರುವ, ಸಾ., ಆವರಣಪತ್ರದಿಂದ ಸುತ್ತುವರಿದ, ಒಂದು ಬಗೆಯ ಪುಷ್ಪಗುಚ್ಛ: ಹೂಗೊನೆ, ತಾಳಗುಚ್ಛ. **Spadíceous** (ಗು.) ತಾಳಗುಚ್ಛ —ರೂಪದ, ಸ್ವಭಾವದ; ಕೆಂಪು, ಕಂದು, —ಛಾಯೆಯ. **Spádicose** (ಗು.) ತಾಳಗುಚ್ಛ —ರೂಪದ, ಸ್ವಭಾವದ.

Spádo ಸ್ಪೇಡೊ (ನಾ.) (ನ್ಯಾ. ಶಾ.) ನಪುಂಸಕ, ಷಂಡ.

Spaghétti (It.) ಸ್ಪಾಗೆಟಿ (ನಾ.) ಒಂದು ಬಗೆಯ ದಪ್ಪ ಸೇವಿಗೆ.

Spáhi, -hee ಸ್ಪಾಹೀ (ನಾ.) ೧೯ನೆಯ ಶ. ಮಾ. ದ ತುರ್ಕಿಯ ಅನಿಯತ ಅಶ್ವದಳದ ರಾವುತ; (ಫ್ರೆಂಚ್ ಸರಕಾರದ ಕೈಕೆಳಗೆ ಕೆಲಸ ಮಾಡುವ) ಅಲ್ಜೀರಿಯದ —ರಾವುತ, ಕುದುರೆ ಸಿಪಾಯಿ.

Spake. Speak ಧಾತುವಿನ ಪ್ರಾಚೀ. ಪ್ರ. ಭೂತ ರೂಪ.

Spall ಸ್ಪಾಲ್ (ನಾ., ಕ್ರಿ.) (ಮು., ಕಲ್ಲಿನ) ಚೆಕ್ಕೆ (ಎಬ್ಬಿಸು), ಚೂರು (ಮಾಡು). (ಗಣಿ ಕೆಲಸ; ಅದುರನ್ನು ವಿಂಗಡಿಸುವುದಕ್ಕಾಗಿ) ಒಡೆದು ಚೂರು ಮಾಡು. **Spáller** (ನಾ.), **Spálder** (ನಾ.) ಖನಿಜ ಚೂರ್ಣಕ.

Spálpeen ಸ್ಪ್ಯಾಲ್ಪೀನ್ (ನಾ.) (ಐರ್ಲೆಂಡ್ ಪ್ರ.) ಹಲ್ಕ, ಕೀಳು, —ಮನುಷ್ಯ; ಅಯೋಗ್ಯ, ಪಟಿಂಗ.

Span ಸ್ಪ್ಯಾನ್ (ಕ್ರಿ., ನಾ.) (ಸೇತುವೆ, ಕಮಾನು, ಮೊ. ಗಳ ವಿಷಯದಲ್ಲಿ) ಪಕ್ಕದಿಂದ ಪಕ್ಕಕ್ಕೆ, ತುದಿಯಿಂದ ತುದಿಗೆ, —ಮುಟ್ಟು, ಚಾಚು, ಹಾಯ್ದಿರು; (ರೂಪಕವಾಗಿ ಜ್ಞಾಪಕಶಕ್ತಿ, ಮೊ. ಗಳ ವಿಷಯದಲ್ಲಿ) ವ್ಯಾಪಿಸು; (ನದಿ, ಮೊ. ಗಳಿಗೆ) ಸೇತುವೆ—ಕಟ್ಟು, ಹಾಕು; ಗೇಣಿನಿಂದ ಅಳತೆಮಾಡು, ವ್ಯಾಪಿಸು; ಗೇಣುಹಾಕು; (ನಾವೆ) (ಪಟದ ದಿಮ್ಮಿ, ಮೊ. ಕ್ಕೆ) ಹುರಿಹಾಕಿ ಕಟ್ಟು, ಹಗ್ಗ ಬಿಗಿ; (ಕಂಬಳಿ ಹುಳು, ಮೊ. ಗಳಂತೆ ಬೆನ್ನು ಬಗ್ಗಿಸಿ ಮತ್ತೆ ಚಾಚಿ) ಚಾಚು ನಡಗೆಯಲ್ಲಿ ಹೋಗು, ಚಲಿಸು. (ನಾ.) (ಸೇತುವೆ, ಕಮಾನು, ಮೊ. ಗಳ) ತುದಿಯಿಂದ ತುದಿಯ ವರೆಗಿನ ಉದ್ದ, ಚಾಚು, ಹರವು, ವಿಸ್ತಾರ, ವ್ಯಾಪ್ತಿ [S. of a bridge, of an arch. The whole s. of Roman History. Our brief s. (of life) ನಮ್ಮ ಗೇಣು ಜೀವನ]; ಸೇತುವೆ, ಮೊ. ಗಳ ಎರಡು ಆಧಾರಸ್ತಂಭಗಳ ನಡುವಣ ಭಾಗ: ಕಮಾನು, ಅಂಕಣ; (ಸಸ್ಯ ಬೆಳಸುವ ಗಾಜಿನ ಮನೆ, ಮೊ. ಗಳಂಥ) ಕಮಾನು ಚಾವಣಿ ಕಟ್ಟಡ. ಗೇಣು (=೯ ಅಂಗುಲ); ಸ್ವಲ್ಪ —ದೂರ, ಕಾಲ, ವ್ಯಾಪ್ತಿ. (ನಾವೆ) ಅದರ ಕೊಂಕು ಅಥವಾ ತೊಂಗು ಭಾಗದಲ್ಲಿ ಕಪ್ಪಿಯನ್ನು ಅಳವಡಿಸಲಾಗುವಂತೆ ಎರಡೂ ಕೊನೆಗಳನ್ನು ಬಿಗಿದು ಕಟ್ಟಿರುವ ಹಗ್ಗ; ಉಂಗುರಗಳಿಂದ ಸೇರಿಸಿದ ಜೋಡಿ ಹಗ್ಗ, ಇಮ್ಮಡಿಕೆ ಹಗ್ಗ; (ಅಮೆ. ನಂ.) ಜೋಡಿ —ಕುದುರೆ, ಹೇಸರ ಕತ್ತೆ, ಎತ್ತು. **S.-dogs** ಚೌಬೀನೆ ಮರವನ್ನು ಹಿಡಿದು ಕೊಂಡು ಎತ್ತುವುದಕ್ಕಾಗಿ, ಇಕ್ಕುಳವನ್ನು ಅಳವಡಿಸಿರುವ ಜೋಡಿ ಕಬ್ಬಿಣ ಕಂಬಿ: ಹಿಡಿಗಂಬಿ, ಇಕ್ಕುಳಗಂಬಿ. **S.-roof** ಇಪ್ಪಾರು ಚಾವಣಿ. **S.-worm** ಕಂಬಳಿ ಹುಳುವಿನ ಜಾತಿಯ ಹುಳುಮರಿ. **Spánless** (ಗು.) (ಕಾವ್ಯ) ಅಳೆಯಲಾಗದ, ಅಳತೆಗೆ ಮೀರಿದ, ಅಪರಿಮಿತ. **Spánner** (ನಾ.) (ಕ್ರಿಯಾರ್ಥಗಳಲ್ಲಿ); ತಿರುಪುಮೊಳೆ, ಮೊ. ಕ್ಕೆ ತಿರುಪುಗಟ್ಟಿ ತಿರುಗಿಸುವ ಸಲಕರಣೆ: ಬಿಲ್ಮುಡಿಕೆ. (ಸೇತುವೆ, ಮೊ. ಗಳ) ಅಡ್ಡ ಬಿಗಿಪಟ್ಟಿ; =Span-worm.

Spándrel ಸ್ಪ್ಯಾಂಡ್ರೆಲ್ (ನಾ.) ಕಮಾನಿನ ಭುಜಕ್ಕೂ ಅದರ ಸುತ್ತಲ ಆಯದಾಕಾರದ ಕಟ್ಟಡಕ್ಕೂ ನಡುವಣ ತ್ರಿಕೋನಾಕಾರದ ಸ್ಥಳ; ಪಕ್ಕ ಪಕ್ಕದ ಎರಡು ಕಮಾನುಗಳ ಕೂಡು ಭುಜಗಳಿಗೂ ಅವುಗಳ ಮೇಲಿನ ಕಟ್ಟಡಕ್ಕೂ ನಡುವಣ ಸ್ಥಳ; ಕಮಾನು ಮೂಲೆಕಟ್ಟು. S. wall ಕಮಾನು ಮೂಲೆಕಟ್ಟು ಗೋಡೆ.

Spángle ಸ್ಪ್ಯಾಂಗ್ಲ್ (ನಾ., ಕ್ರಿ. ಸಕ.) (ಉಡುಪು, ಮೊ. ಗಳಿಗೆ ಅಲಂಕಾರಕ್ಕಾಗಿ ಹಾಕುವ) ಹೊಳಪು ಬಟ್ಟು(ಗಳಲ್ಲೊಂದು); ಚಮಕಿ; ಥಳುಕು ಬಟ್ಟು; ಥಳಥಳಿಸುವ ಸಣ್ಣ ವಸ್ತು; ಓಕ್ ಎಲೆಗಳ ಮೇಲೆ ಹೊರ ಸ್ರವಿಸಿ ಕಟ್ಟುವ ಸ್ಪಂಜಿನಂಥ ಗಂತಿ: ಓಕ್ ಗಂತಿ. (ಕ್ರಿ.) ಮೇಲೆಲ್ಲ ಚಮಕಿ, ಥಳುಕುಬಟ್ಟು, —ಹಾಕು, ಅಲಂಕಾರ ಮಾಡು (ಮು., ಭೂ. ಕೃ. ನಲ್ಲಿ). **Spángly** (ಗು.) ಚಮಕಿಯಂಥ; ಚಮಕಿ —ಹಾಕಿದ, ಅಲಂಕಾರ ಮಾಡಿದ.

Spániard ಸ್ಪ್ಯಾನ್ಯರ್ಡ್ (ನಾ.) ಸ್ಪೆಯ್ನಿನವನು, ಸ್ಪೆಯ್ನ್ ದೇಶೀಯ.

Spániel ಸ್ಪ್ಯಾನ್ಯೆಲ್ (ನಾ.) ರೇಷ್ಮೆಯಂಥ ಮೃದುವಾದ ನಿಡುಗೂದಲೂ ಜೋಲುಕಿವಿಗಳೂ ಉಳ್ಳ, ಸಾಧುವೂ ಪ್ರೀತಿಶೀಲವೂ ಆದ, ಬೇಟೆಗಾಗಲಿ ಮುದ್ದಿಗಾಗಲಿ ಸಾಕುವ, ಹಲವು ಜಾತಿಯ ನಾಯಿ: ಸ್ಪ್ಯಾನಿಯೆಲ್ ನಾಯಿ (King Charles's s. ಇದರಲ್ಲಿ ಕಪ್ಪು ಮತ್ತು ಕಂದು ಹಳದಿಯ ಸಣ್ಣ ನಾಯಿಜಾತಿ). (ರೂಪ.) ಅತಿದೈನ್ಯ ವರ್ತನೆಯವನು, ಹಲ್ಲುಗಿಂಜುವವನು.

Spánish ಸ್ಪ್ಯಾನಿಷ್ (ಗು., ನಾ.) ಸ್ಪೆಯ್ನಿನ, ಸ್ಪೆಯ್ನ್ ಜನರ; ಸ್ಪೆಯ್ನಿನ ಭಾಷೆ(ಯ). **S. Armada** (Armada ನೋಡಿ). **S. black, brown, red, white** ಹಲವು ವರ್ಣದ್ರವ್ಯಗಳು. **S. chestnut** (Chestnut ನೋಡಿ). **S. fly** =Cantharides (ಆ ಪದ ನೋಡಿ). **S. fowl** ಹಸುರು ಛಾಯೆಯ ಕಪ್ಪು ಬಣ್ಣದ ನುಣುಪು ಪುಕ್ಕವುಳ್ಳ ಒಂದು ಸಾಕುಕೋಳಿ: ಸ್ಪ್ಯಾನಿಷ್ ಕೋಳಿ. **S. grass**= Esparto (ಆ ಪದ ನೋಡಿ). **S. main** (ಚರಿತ್ರೆ) ಓರಿನೋಕೋ ನದಿಗೂ ಪನಾಮ ಭೂಕಂಠಕ್ಕೂ ನಡುವೆ ಇರುವ, ದ. ಅಮೆರಿಕದ ಈಶಾನ್ಯ ಭಾಗದ ಸಮುದ್ರತೀರ ಮತ್ತು ಇದರ ಪಕ್ಕದ ಕ್ಯಾರಿಬಿಯನ್ ಸಮುದ್ರ ಭಾಗ. **S. windlass** ಹುರಿ, ಪಟ್ಟಿ, ಮೊ. ನ್ನು ಬಿಗಿಸುವುದಕ್ಕಾಗಿ ಸನ್ನೆಯಂತೆ ಉಪಯೋಗಿಸುವ ಮರದ ತುಂಡಿನ ಎತ್ತಿಗೆ (ಸಲಕರಣೆ): ಸ್ಪ್ಯಾನಿಷ್ ಸನ್ನೆಯೆತ್ತಿಗೆ.

Spank ಸ್ಪ್ಯಾಂಕ್ (ಕ್ರಿ., ನಾ.) (ಅಂಗೈ, ಜೋಡು, ಮೊ. ಗಳಿಂದ) ಪಿರ್ರೆಯ ಮೇಲೆ, ಅಂಡಿನಮೇಲೆ, —ಹೊಡೆ(ತ), ಏಟು(ಕೊಡು) [**Spánking**[1] (ನಾ.)]; (ಹೊಡೆದು) ಮುಂದೋಡಿಸು; (ಕುದುರೆ, ಮೊ. ಗಳ ವಿಷಯದಲ್ಲಿ) ಚುರುಕಾಗಿ ಓಡು. **Spánker** (ನಾ.) (ಕ್ರಿಯಾರ್ಥಗಳಲ್ಲಿ); ಚುರುಕು (ಓಟದ) ಕುದುರೆ; (ಬಳ. ಮಾ.) ಭಾರೀ ಗಾತ್ರದ, ಗಣ್ಯ, —ಮನುಷ್ಯ, ವಸ್ತು; ಭರ್ಜರಿಯಾದ್ದು, ಭೇಷಾದ್ದು; (ನಾವೆ) ಹಿಂಗೂವೆಯ ಹಿಂಭಾಗದಲ್ಲಿ ಕಟ್ಟಿದ ಉದ್ದಸಾಲನ ಪಟ.

Spánking[1]. **Spank** ನೋಡಿ.

Spánking[2] ಸ್ಪ್ಯಾಂಕಿಂಗ್ (ಗು., ಕ್ರಿ. ವಿ.) (ಬಳ. ಮಾ.) ಭರ್ಜರಿಯಾದ, ಭೇಷಾದ, ಭಾರಿಯಾದ, ಸೊಗಸಾದ, ಜೋರಾದ (Had a s. time ಒಳ್ಳೆಯ ಮಜಾ ಮಾಡಿದೆವು, ಭೇಷಾಗಿ ಕಾಲ ಕಳೆದೆವು. A s. breeze ಜೋರು ಗಾಳಿ). (ಕ್ರಿ. ವಿ.) A s. fine woman ಒಳ್ಳೆಯ ಸೊಗಸಾದ, ಭರ್ಜರಿ, —ಹೆಂಗಸು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Spánner. **Span** ನೋಡಿ.

Spar[1] ಸ್ಪಾರ್ (ನಾ., ಕ್ರಿ. ಸಕ.) (ಹಡಗಿನ ಕೂವೆ, ದಿಮ್ಮಿ, ಮೊ. ಗಳಾಗಿ ಉಪಯೋಗಿಸುವ) ದಪ್ಪ ಕಂಬ, ತೊಲೆ, ದೂಲ ; [S.-buoy (ಒಂದು ಕೊನೆಯನ್ನು ತಳಕ್ಕೆ ಕಟ್ಟಿಹಾಕಿ, ಮತ್ತೊಂದು ಕೊನೆ ಮೇಲಕ್ಕೆ ಎದ್ದು ಕಾಣುವಂತೆ ಮಾಡಿರುವ) ದೂಲ ತೇಲುವೆ. S.-deck (ಪ್ರಧಾನ ಅಟ್ಟದ ಮೇಲೆ ಹಡಗಿನ ಮೂತಿಯಿಂದ ಹಿಂಭಾಗದ ವರೆಗೂ ವ್ಯಾಪಿಸಿರುವ) ಮೇಲಟ್ಟ]. (ಕ್ರಿ.) ಕಂಬ, ತೊಲೆ, ದೂಲ, —ಹಾಕು, ಹವಣಿಸು. (ಹೆಚ್ಚು ಆಳದಲ್ಲಿಲ್ಲದ ಮರಳುದಿಬ್ಬ, ಮೊ. ಗಳ ಮೇಲೆ) ತೊಲೆಗಳ ಸಹಾಯದಿಂದ ಹಡಗನ್ನು ತಟಾಯಿಸು, ದಾಟಿಸು.

Spar[2] ಸ್ಪಾರ್ (ನಾ.) ಸುಲಭವಾಗಿ ಸೀಳಬಹುದಾದ, ಹೊಳಪಿಲ್ಲದ, ಹಲವು ಬಗೆಯ ಸ್ಫಟಿಕಾಕೃತಿ ಖನಿಜ : ಸ್ಪಾರು [Calcareous s. = Calcite (Calcium ನೋಡಿ). Derbyshire s. = Fluor-s. (Fluor ನೋಡಿ). Iceland s. (Iceland ನೋಡಿ)]. **Spárry** ಸ್ಪಾರಿ (ಗು.) ಸ್ಪಾರ್ ಖನಿಜ ಹೆಚ್ಚಾಗಿರುವ ; ಸ್ಪಾರ್ ಖನಿಜದ(ಂಥ)

Spar[3] ಸ್ಪಾರ್ (ಕ್ರಿ. ಅಕ., ನಾ.) (ಮುಷ್ಟಿಯುದ್ಧಕ್ಕೆ ಪೂರ್ವಭಾವಿಯಾಗಿ : ಮೇಲೆ ಬೀಳುವ ಮತ್ತು ಆತ್ಮರಕ್ಷಣೆಯ) ಮುಷ್ಟಿ —ವರಿಸೆ ತೋರಿಸು, ಆಡಿಸು ; ಮುಷ್ಟಿಯುದ್ಧ ಮಾಡು, ಗುದ್ದಾಡು ; (ರೂಪ.) ಕಾದಾಡು, ಕಚ್ಚಾಡು, ವಾಗ್ವಾದಮಾಡು (They are always sparring at each other); (ಕೋಳಿಗಳ ವಿಷಯದಲ್ಲಿ) ಕಾಲಿನಿಂದ, ಕಾಲಕೊಂಡಿ ಯಿಂದ, —ಹೊಡೆದಾಡು, ಕಾಳಗಮಾಡು. (ನಾ.) ಮುಷ್ಟಿ —ಆಡಿಸು ವುದು, ಪ್ರಯೋಗ, ಕಾಳಗ ; ಗುದ್ದಾಟ ; ಹುಂಜನ ಕಾಳಗ ; (ರೂಪ.) ವಾಗ್ವಾದ, ಮಾತಿನ ಕಾದಾಟ.

Spárable ಸ್ಪ್ಯಾರಬ್‌ಲ್ (ನಾ.) ಜೋಡಿನ ಅಟ್ಟೆ ಮತ್ತು ಹಿಮ್ಮಡಿ ಗಳಿಗೆ ಹೊಡೆಯುವ ತಲೆಯಿಲ್ಲದ ಮೊಳೆ.

Spare ಸ್ಪೇ(ಅ)ರ್ (ಗು., ನಾ.) ಅಲ್ಪ, ಮಿತ, ಹಾಳಿತವಾದ (S. diet ಮಿತಾಹಾರ) ; ಸಣಕಲಾದ, ತೆಳ್ಳನೆಯ, ಕೃಶ (Man of s. frame ನಣಕಲು, ತೆಳು, —ಮೈಯವನು) ; ಸಾಮಾನ್ಯವಾಗಿ, ಸದ್ಯದ, —ಉಪಯೋಗಕ್ಕೆ ಬೇಕಾಗಿಲ್ಲದ ; (ತನಗೆ ಅನನುಕೂಲವಿಲ್ಲದೆ, ಉಳಿಕೆಯಾಗಿದ್ದು) ಕೊಡಬಹುದಾದ, ಹೆಚ್ಚಿನ, ಮಿಕ್ಕ (S. time ಬಿಡುವುಹೊತ್ತು. Have no s. cash ಕೊಡಲು ಹೆಚ್ಚಿನ ನಗದು, ಹಣ, ಇಲ್ಲ). ಕೈಗಾವಲಾಗಿಟ್ಟುಕೊಂಡಿರುವ, ಹೆಚ್ಚಿನ ಉಪಯೋಗಕ್ಕೆಂದು ಇಟ್ಟುಕೊಂಡಿರುವ [Always takes a s. cap ಅವನು ಯಾವಾಗಲೂ ಒಂದು ಕೈಗಾವಲ ಟೋಪಿಯನ್ನು ತೆಗೆದುಕೊಳ್ಳುತ್ತಾನೆ. S. room (ಅತಿಥಿಗಳಿಗಾಗಿ ಇಟ್ಟುಕೊಂಡಿರುವ) ಹೆಚ್ಚಿನ ಕೊಟಡಿ, ಬಿಡುತಿ ಕೋಣೆ]. (ನಾ.) (ಯಂತ್ರದಲ್ಲಿ ಕೆಟ್ಟುಹೋದ ಭಾಗಕ್ಕೆ ಬದಲಾಗಿ ಉಪಯೋಗಿಸಿ ಕೊಳ್ಳಬರುವ) ಹೆಚ್ಚಿಗೆಯ ಬಿಡಿ ಭಾಗ. **Spareríb** (ಹಂದಿಯ ಮಾಂಸದ ವಿಷಯದಲ್ಲಿ) ಸ್ವಲ್ಪವೇ ಮಾಂಸ ಅಂಟಿಕೊಂಡಿರುವ, ಪಕ್ಕೆಲುಬುಸಾಲಿನ ಮೇಲುಭಾಗ. **Spárely** (ಕ್ರಿ. ವಿ.) ; **Spáreness** (ನಾ.)

Spare (ಕ್ರಿ.) ಹಾಳಿತವಾಗಿರು, ಮಿತವ್ಯಯಿಯಾಗಿರು, (ಕೈ) ಹಿಡಿತಮಾಡು, (ಕೈ) ಬಿಗಿಹಿಡಿ [Must not s. expense ವೆಚ್ಚದಲ್ಲಿ ಹಿಡಿತ ಮಾಡಬಾರದು. S. the rod and spoil the child (Rod ನೋಡಿ)]. ಇಲ್ಲದೆ ಕೆಲಸ ನಡಸು, ಬಿಟ್ಟುಕೊಡು, ಕೊಡು [Cannot s. him just now ಅವನನ್ನು ಈಗಲೆ ಬಿಟ್ಟುಕೊಡಲಾಗುವು ದಿಲ್ಲ. S. me a penny. Could have spared the explanation ವಿವರಣೆ, ಸಮಾಧಾನ, —ಕೊಡಬೇಕಾಗಿರಲಿಲ್ಲ ; —ಕೊಡುವ ತೊಂದರೆ ತೆಗೆದುಕೊಳ್ಳಬೇಕಾಗಿರಲಿಲ್ಲ). (ಪ್ರಾಚೀ. ಪ್ರ.) ಮಾಡದಿರು, ಬಿಡು (*To* do). —ಕೊಡದಿರು, —ಇಂದ ತಪ್ಪಿಸು, —ಇಂದ ಬೇಸರ ಗೊಳಿಸದಿರು (S. me these protestations). (ಕೊಲ್ಲದೆ, ಗಾಯ ಪಡಿಸದೆ, ನೋಯಿಸದೆ) ಕ್ಷಮೆ ತೋರು, ಉಳಿಸು, ಕಾಪಾಡು, ತಲೆ ಗಾಯು (S. me, s. my life ನನ್ನನ್ನು ಉಳಿಸು, ಜೀವದಿಂದ ಬಿಡು. S. his feelings ಅವನ ಮನಸ್ಸನ್ನು ನೋಯಿಸಬೇಡ. S. his blushes ಅವನು ನಾಚಿಕೆಪಟ್ಟುಕೊಳ್ಳುವಂತೆ, ಸಂಕೋಚಪಟ್ಟುಕೊಳ್ಳು ವಂತೆ, ಮಾಡಬೇಡ). **Spáring** (ಗು.) ; **Spáringly** (ಕ್ರಿ. ವಿ.); **Spáringness** (ನಾ.)

Spárger ಸ್ಪ್ಯಾರ್ಜರ್ (ನಾ.) (ಸಾರಾಯಿ ತಯಾರಿಕೆಯಲ್ಲಿ) ಸೇಚಕ, ಪ್ರೋಕ್ಷಕ (—ಸಲಕರಣೆ)

Spark[1] ಸ್ಪಾರ್ಕ್ (ನಾ.) (ಬೆಂಕಿಯ) ಕಿಡಿ, (ವಿ)ಸ್ಫುಲಿಂಗ [As the sparks fly upward (ಕಿಡಿಗಳು ಮೇಲಕ್ಕೆ ಹಾರುವಂತೆ) ಸ್ವಾಭಾವಿಕ ವಾಗಿ, ಖಂಡಿತವಾಗಿ]. ತೇಜಃಕಣ, ತೇಜೋಬಿಂದು (ಉದಾ., ರತ್ನದಲ್ಲಿ ಯದು) ; (ರೂಪ.; ಬುದ್ಧಿವಂತಿಕೆ, ಮೊ. ಗಳ) ಮಿರುಗು, ಸ್ಫುರಣ (Strike sparks out of person ಒಬ್ಬನನ್ನು ಕೆಣಕಿ ಸ್ಫೂರ್ತಿಯ ಮಾತುಗಳನ್ನು ಹೊರಡಿಸು). (ಸಾ., ನಿಷೇಧ ಪ್ರ.) ಬೆಂಕಿಯ ಕಣ ; (ರೂಪಕವಾಗಿ ; ಯಾವುದಾದರೂ ಗುಣದ) ಕಣ, ಲವ, ಲೇಶ (Not a s. of life remained ಜೀವ ಕಣ ಒಂದೂ ಇರಲಿಲ್ಲ. If you had a s. of generosity in you ನಿನ್ನಲ್ಲಿ ಒಂದು ಕಣವಾದರೂ ಔದಾರ್ಯ ವಿದ್ದಿದ್ದರೆ). (ವಿದ್ಯುಚ್ಛಕ್ತಿ) (ವಾಯುವಿನಿಂದ ಅಥವಾ ಅಂಥದೇ ಆದ ಯಾವುದಾದರೂ ಇತರ ದ್ರವ್ಯದಿಂದ ಪ್ರತ್ಯೇಕಿಸಲ್ಪಟ್ಟ ಎರಡು ವಿದ್ಯುದ್ವಾಹಕ ಗಳ ನಡುವೆ ಹಾರುವ, ಕೆದರುವ) ವಿದ್ಯುತ್ತಿನ —ಕಿಡಿ, ಸ್ಫುರಣ ; (ಮೋಟಾರು, ಮೊ. ಗಳ ಎಣ್ಣೆ ಎಂಜಿನಿನಲ್ಲಿ ಸ್ಫೋಟಕ ಮಿಶ್ರಣವನ್ನು ಹೊತ್ತಿಸುವುದಕ್ಕೆ ಉಪಯೋಗಿಸುವ) ವಿದ್ಯುತ್ತಿನ ಕಿಡಿ (Advance, retard, the s. ಕಿಡಿಯನ್ನು ಸ್ಫೋಟನ ಕಾಲಕ್ಕೆ ಮುಂದಾಗಿಸು, ಹಿಂದಾಗಿಸು). Sparks (ಅನಂ.) ನಿಸ್ತಂತು (ವಾರ್ತಾಯಂತ್ರ) ನಿರ್ವಾಹಕ. Fairy sparks (ಕೊಳೆತ ಸಸ್ಯಪದಾರ್ಥ, ಮೊ. ಗಳಿಂದ ಬರುವ) ರಂಜಕ ಪ್ರಕಾಶ, ಮಿನುಗು. S.-arrester (ವಿದ್ಯುದ್ಯಂತ್ರಗಳಲ್ಲಿ) ವಿದ್ಯುತ್ತಿನ ಕಿಡಿ ಹೊರಡದಂತೆ (ಅಥವಾ ಆ ಕಿಡಿಯಿಂದ ಅಪಾಯ ತಟ್ಟದಂತೆ) ತಡೆ ಯುವ ಸಾಧನ : ಕಿಡಿ ತಡೆ; ಸ್ಫುರಣರೋಧಕ. (ಆವಿಯೆಂಜಿನಿನಲ್ಲಿ) ಬೆಂಕಿಯ ಕಿಡಿಗಳನ್ನು ತಡೆಯಲು ಅಳವಡಿಸಿರುವ ಲೋಹದ ಬಲೆ, ಮೊ. ವು : ಕಿಡಿ ಬಲೆ. **Spárkless** (ಗು.) ; **Spárklet** (ನಾ.) ಸಣ್ಣ, ಕಿರು, —ಕಿಡಿ ; (ಕೆಲವು ಅನಿಲಪೂರಕ ಯಂತ್ರಗಳಲ್ಲಿ) ಇಂಗಾಲಾಮ್ಲ — ಶೇಖರಣೆ, ಸಂಚಯ.

Spark (ಕ್ರಿ.) (ಬೆಂಕಿಯ ಅಥವಾ ವಿದ್ಯುತ್ತಿನ) ಕಿಡಿ —ಕೆದರು, ಕಾರು ; (ಪ್ರವಾಹಮಾರ್ಗದ ವಿಚ್ಛಿತ್ತಿ ಸ್ಥಾನದಲ್ಲಿ) ವಿದ್ಯುತ್ತಿನ ಕಿಡಿ —ಹಾರು, ಹಾರಿಸು. Sparking-plug ಮೋಟಾರು ಎಂಜಿನಿನಲ್ಲಿ ಸ್ಫೋಟಕ ಮಿಶ್ರಣವನ್ನು ಹೊತ್ತಿಸುವ ಸಲಕರಣೆ : ಕಿಡಿ ಬಿರಡೆ. **Spárkle** (ಕ್ರಿ. ಅಕ., ನಾ.) ಕಿಡಿ —ಕೆದರು, ಕಾರು, ಹಾರು ; (ರತ್ನ, ಮೊ. ವು ; ರೂಪಕವಾಗಿ, ಬುದ್ಧಿ, ಮೊ. ವು) ಮಿನುಗು, ಮಿರುಗು, ನಿಗಿ ನಿಗಿ ಮಿಂಚು, ಥಳಥಳಿಸು [Sparkling wines (ಇಂಗಾಲಾಮ್ಲ ಅನಿಲ ಸಣ್ಣ ಗುಳ್ಳೆಗಳಾಗಿ ಏಳುತ್ತಿರುವ) ಮಿರುಗು ದ್ರಾಕ್ಷಾ ಮದ್ಯಗಳು]. (ನಾ.) ಕಿಡಿ, ಕಣ ; ಮಿನುಗು, ಹೊಳಪು, ಥಳಥಳ್ಯ, ಮಿಂಚು. **Spárkler** (ನಾ.); **Spárklingly** (ಕ್ರಿ. ವಿ.)

Spark[2] ಸ್ಪಾರ್ಕ್ (ನಾ., ಕ್ರಿ. ಅಕ.) ಸೊಗಸುಗಾರ, ಷೋಕೀಲಾಲ, ರಸಿಕ, ಪ್ರಣಯ ವಿಲಾಸಿ. (ಕ್ರಿ.) —ಆಗಿರು ; ಷೋಕು ಮಾಡು. **Spárkish** (ಗು.)

Spárkle. **Spark**[1] (ಕ್ರಿ.) ನೋಡಿ.

Spárrow ಸ್ಪ್ಯಾರೋ (ನಾ.) ಗುಬ್ಬಿ, ಗುಬ್ಬಚ್ಚಿ (House s. ಯೂರೋಪು ಮತ್ತು ಏಷ್ಯಾ ಖಂಡಗಳಲ್ಲಿ ಹೆಚ್ಚು ವಾಡಿಕೆಯಾಗಿರುವ, ಮನುಷ್ಯರ ವಾಸ ಸ್ಥಳಗಳಲ್ಲಿರಲು ಇಚ್ಛಿಸುವ, ಬಹು ಸಂತಾನಾಭಿವೃದ್ಧಿಯ, ಕಾದಾಟದ ಸ್ವಭಾವದ, ಒಂದು ಜಾತಿಯ ಗುಬ್ಬಚ್ಚಿ : ಮನೆಗುಬ್ಬಿ). **S.-bill** = Sparable (ಆ ಪದ ನೋಡಿ). **S.-grass** (ಗ್ರಾಮ್ಯ ಪ್ರ.) = Asparagus (ಆ ಪದ ನೋಡಿ). **S.-hawk** ಗುಬ್ಬಚ್ಚಿ, ಮೊ. ಗಳನ್ನು ಹಿಡಿದು ತಿನ್ನುವ ಗಿಡುಗ ; ಗುಬ್ಬಚ್ಚಿ ಗಿಡುಗ.

Spárry. **Spar**[2] ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sparse ಸ್ಪಾರ್ಸ್ (ಗು.) (ಜನವಸತಿ, ಮೊ. ಗಳ ವಿಷಯದಲ್ಲಿ) ದೂರ ದೂರವಾಗಿ ಚೆದರಿರುವ, ವಿರಳವಾದ, ಒತ್ತಾಗಿಲ್ಲದ, ನಿಬಿಡವಲ್ಲದ. (ಸ. ವಿ., ಪ್ರಾ. ವಿ.) ಅಲ್ಲೊಂದು ಇಲ್ಲೊಂದು —ಇರುವ, ಕಾಣ ಬರುವ; ವಿರಳವಾಗಿರುವ. **Spársely** (ಕ್ರಿ. ವಿ.); **Spárseness** (ನಾ.)

Spártacist ಸ್ಪಾರ್ಟಸಿಸ್ಟ್ (ಗು., ನಾ.) ಜರ್ಮನಿಯಲ್ಲಿ ೧೯೧೮ರಲ್ಲಿ ಸ್ಥಾಪನೆಯಾದ, ಉಗ್ರ ಸಮಾಜ ವಾದದ, ಸ್ಪಾರ್ಟಕಸ್ ಪಕ್ಷದ (ವನು)

Spártan ಸ್ಪಾರ್ಟನ್ (ಗು., ನಾ.) ಸ್ಪಾರ್ಟ ಪಟ್ಟಣದ(ವನು); ಕಷ್ಟ ಸಹಿಷ್ಣುವಾದ, ಕಡು ಸಾಹಸದ, ನಿರ್ಭಯದ, ಕಠೋರ ನಿಯಮದ, ಸರಳ ಜೀವನದ (S. bravery, discipline, endurance, simplicity, souls) (ಸ್ಪಾರ್ಟನ್ ಜನರ ಗುಣಾತಿಶಯಗಳಿಂದ)

Spásm ಸ್ಪ್ಯಾಸ್ಮ್ (ನಾ.) ಸ್ನಾಯುಗಳ ಅತಿಸಂಕೋಚನ, ಸೆಳವು, ಎಳವು, ಸೇದಿಕೆ, ಸೆಡೆತ [Clonic s. = Clonus (ಆ ಪದ ನೋಡಿ). Tonic s. (Tonic ನೋಡಿ)]; (ಯಾವುದಾದರೂ ಹಠಾತ್ತನೆಯ) ಕೆರಳು, ಉರುಬು [A s. of coughing. Spasms of grief ಉಕ್ಕಿ ಉಕ್ಕಿ ಬರುವ ದುಃಖೋದ್ರೇಕ. Functional s. ಕಸುಬಿನಿಂದ, ಉದ್ಯೋಗದಿಂದ, ಬರುವ ನರಗಳ ವಿಕಾರ: ಕಸಬು—ಸೇದಿಕೆ, ಸೆಡೆತ (ಉದಾ., Writer's cramp ಬರಹಗಾರನ ಕೈಸೆಡೆತ)]. **Spasmódic** ಸ್ಪ್ಯಾಸ್ಮಾಡಿಕ್ (ಗು.) ಸೆಳವಿನ, ಸೆಡೆತದ; —ಇಂದ ಆದ; ಸೆಡೆತಕ್ಕೆ ಈಡಾದ; ಉರುಬಿನ (A s. jerk, asthma). ಹುಚ್ಚು ಕೆರಳಿದಾಗ, ಬಿಟ್ಟು ಬಿಟ್ಟು, —ಬರುವ, ಮಾಡುವ, ಆಗುವ (S. efforts). **Spasmódically** (ಕ್ರಿ. ವಿ.); **Spasmólogy** (ನಾ.) ಸೆಳವು ಶಾಸ್ತ್ರ. **Spástic** (ಗು.) (ವೈ. ಶಾ.) = Spasmodic.

Spasmódic, Spástic. Spasm ನೋಡಿ.

Spat[1] ಸ್ಪ್ಯಾಟ್ (ನಾ., ಕ್ರಿ.) ಚಿಪ್ಪುಮೀನಿನ (ಮು., ಆಯ್ಸ್ಟರ್ ಮೀನಿನ) ಮೊಟ್ಟೆಗಳು, ತತ್ತಿಗಳು. (ಕ್ರಿ.) ಮೊಟ್ಟೆಯಿಡು, ತತ್ತಿಹಾಕು.

Spat[2] ಸ್ಪ್ಯಾಟ್ (ನಾ.) (ಸಾ., ಬ. ವ. ದಲ್ಲಿ) (ಕಣಕಾಲಿನಮೇಲೆ ಕೊಂಚ ದೂರ ಹೋಗಿರುವ) ಮೇಗಾಲ ಕಾಪು.

Spat[3]. Spit ಧಾತುವಿನ ಭೂತ., ಭೂ. ಕೃ.

Spat[4] ಸ್ಪ್ಯಾಟ್ (ನಾ.) ಅಲ್ಪ ಕಲಹ, ಸಣ್ಣ ಜಗಳ.

Spátchcock ಸ್ಪ್ಯಾಚ್‌ಕಾಕ್ (ನಾ., ಕ್ರಿ. ಸಕ.) ಅವಸರವಸರವಾಗಿ ಕೊಂದು ಅಟ್ಟ ಕೋಳಿ(ಯ ಮಾಂಸ). (ಕ್ರಿ.) (ಬಳ. ಮಾ.) (ತಂತೀ ವಾರ್ತೆ, ಮೊ. ಗಳಲ್ಲಿ: ಮಾತುಗಳನ್ನು) ಅವಸರದಲ್ಲಿ ನಡುವೆ ಸೇರಿಸು.

Spate ಸ್ಪೇಟ್ (ನಾ.) (ನದೀ)ಪ್ರವಾಹ, ನೆರೆ (River is in s.); (ರೂಪ.) ಹುಚ್ಚುಹೊಳೆ, ಉರುಬು (A s. of words ವಾಕ್ ಪ್ರವಾಹ)

Spathe ಸ್ಪೇದ್ (ನಾ.) (ಬ. ವ.) ತಾಳಗುಚ್ಛವನ್ನು ಆವರಿಸಿರುವ ಉಪಪತ್ರ (ಯುಗ್ಮ). **Spáthose** ಸ್ಪ್ಯಾತೋಸ್ (ಗು.), **Spáthous** —ದಸ್ (ಗು.) ಉಪಪತ್ರ (ಯುಗ್ಮ)ವುಳ್ಳ; ಉಪಪತ್ರದ(ಂಥ)

Spáthic ಸ್ಪ್ಯಾತಿಕ್ (ಗು.) (ಮು., ಸೀಳಿಕೆಯಲ್ಲಿ) ಸ್ಪಾರ್ ಖನಿಜದ(ಂಥ); **Spáthiform** (ನಾ.)

Spátial ಸ್ಪೇಷ್(ಷ)ಲ್ (ನಾ.) ಆಕಾಶದ, ಪ್ರದೇಶದ, ಪ್ರಾದೇಶಿಕ, ಸ್ಥಳ ಸಂಬಂಧವಾದ (S. relations, extent). **Spatiálity** (ನಾ.); **Spátially** (ಕ್ರಿ. ವಿ.)

Spátter ಸ್ಪ್ಯಾಟರ್ (ಕ್ರಿ., ನಾ.) (ನೀರು, ಕೆಸರು, ಮೊ. ನ್ನು) ಎರಚು, ಹಾರಿಸು, ಸಿಡಿಸು; (ಮನುಷ್ಯನ ಮೇಲೆ) ಕೆಸರೆರಚು, ದೂರು ಹೊರಿಸು, ಕಳಂಕ ಹಚ್ಚು (*With* mud, slander, etc.); (ನೀರು, ಮೊ. ಗಳ ವಿಷಯದಲ್ಲಿ) ಸಿಡಿ, ಹಾರು. (ನಾ.) ಎರಚಾಟ, ಸಿಡಿತ; ಚಟಪಟ, ಪಟಪಟ (—ಶಬ್ದ). **Spátterdashes** (ಸವಾರಿ ಮಾಡುವಾಗ ಷರಾಯಿ, ಕಾಲುಚೀಲ, ಮೊ. ವು ಕೆಸರಾಗದಂತೆ ಹಾಕಿಕೊಳ್ಳುವ ಬಟ್ಟೆಯ ಅಥವಾ ಇತರ) ಕೆಸರು ಕಾಪು, ಮಣ್ಣು ಕಾಪು.

Spátula ಸ್ಪ್ಯಾಟ್ಯುಲ (ನಾ.) ಬಣ್ಣ, ಮೊ. ನ್ನು ಕಲಸುವ, ಅಗಲವಾದ ಅಲಗಿನ ಸಲಕರಣೆ: ಕಲಸು ಚಾಕು, ಕಲಸಲಗು. ಶಸ್ತ್ರಚಿಕಿತ್ಸಕನು ನಾಲಗೆಯನ್ನು ಕೆಳಕ್ಕೆ ಅದುಮಿ ಹಿಡಿಯುವುದಕ್ಕಾಗಲಿ ಪಕ್ಕಕ್ಕೆ ತಿರುಗಿಸುವುದಕ್ಕಾಗಲಿ ಉಪಯೋಗಿಸುವ ಸಲಕರಣೆ: ಒತ್ತಲಗು. **Spátule** ಸ್ಪ್ಯಾಟ್ಯುಲ್ (ನಾ.) (ಪ್ರಾ. ವಿ.) ಜಾಲರಿದಾಂಡಿನಾಕಾರದ, ಚಮಚದಾಕಾರದ, —ಅಂಗ (ಭಾಗ) (ಮು., ಹಕ್ಕಿಯ ಬಾಲದ ತುದಿ). **Spátular** (ಗು.); **Spátulate** (ಗು.); **Spátuliform** (ಗು.)

Spávin ಸ್ಪ್ಯಾವಿನ್ (ನಾ.) ಕುದುರೆಯ ಚುಂಚು ಕಾಲಿನ ಕೀಲಿನ ಒಂದು ರೋಗ. Blood, bog, s. ಚುಂಚು ಕಾಲಿನ ಕೀಲಿನ ರಕ್ತಗಡ್ಡೆ, ಊತ. Bone s. (Bone[1] ನೋಡಿ). **Spávined** (ಗು.)

Spawn ಸ್ಪಾನ್ (ಕ್ರಿ., ನಾ.) (ಮೀನು, ಕಪ್ಪೆ, ಮೃದ್ವಂಗಿ, ವಲ್ಕವಂತ ಪ್ರಾಣಿ—ಇವುಗಳ ವಿಷಯದಲ್ಲಿ) ಮೊಟ್ಟೆಹಾಕು, ತತ್ತಿ ಇಡು; (ರೂಪಕ ವಾಗಿ ಮನುಷ್ಯ ಅಥವಾ ಇತರ ಪ್ರಾಣಿಗಳ ವಿಷಯದಲ್ಲಿ) ಮರಿ ಹಾಕು, ಹುಟ್ಟಿಸು, ಹೆರು, ಹಡೆ; (ಮೊಟ್ಟೆ ಅಥವಾ ಮರಿ) ಉತ್ಪತ್ತಿಯಾಗು, ಹುಟ್ಟು. (ನಾ.) (ಮೀನು, ಮೊ. ಗಳ) ಮೊಟ್ಟೆಗಳು, ತತ್ತಿಗಳು; ಮರಿಗಳು, ಮಕ್ಕಳು; ಸಂತಾನ (S. of the devil ಘಾತುಕರು, ಪಟಿಂಗರು. S. of Cobden ನಿರುಪಾಧಿಕ ವ್ಯಾಪಾರವಾದಿಗಳು). ಅಣಬೆ ಗಳು ಉತ್ಪತ್ತಿಯಾಗುವ ಬೆಳ್ಳನೆಯ ನಾರುಪದಾರ್ಥ; ಶಿಲೀಂಧ್ರಜನಕ (Mushroom s.)

Spay ಸ್ಪೇ (ಕ್ರಿ. ಸಕ.) ಬೀಜವೊಡೆ, ಹಿಡಮಾಡು; (ಹೆಣ್ಣು ಪ್ರಾಣಿಯ ವಿಷಯದಲ್ಲಿ) ಅಂಡಾಶಯ ತೆಗೆದುಹಾಕು.

Speak ಸ್ಪೀಕ್ (ಕ್ರಿ.; ಭೂತ. Spoke ಸ್ಪೋಕ್, ಪ್ರಾಚೀ. ಪ್ರ. Spake ಸ್ಪೇಕ್; ಭೂ. ಕೃ. Spoken ಸ್ಪೋಕ್‌ನ್) ಮಾತಾಡು, ನುಡಿ, ಉಸಿರು (Child is learning to s. S. distinctly ಸ್ಪಷ್ಟವಾಗಿ ಮಾತಾಡು). (ಭೂ. ಕೃ., ರಂಗಸ್ಥಳದ ಸೂಚನೆಯಾಗಿ) (ಹಾಡದೆ) ಮಾತಾಡಬೇಕಾದ [(ನಾ.) ಮಾತಾಡತಕ್ಕ ಭಾಗ]; —ಒಡನೆ ಮಾತಾಡು, ಸಂಭಾಷಣೆ ಮಾಡು (*With, to,* person; *of, about,* thing) (Portrait speaks ಚಿತ್ರ ಸಜೀವವಾಗಿ ಕಾಣುತ್ತದೆ, ಮಾತನಾಡುವಹಾಗೆ ಕಾಣುತ್ತದೆ. Speaking likeness ಬದುಕು ಹೋಲಿಕೆ, ಜೀವಂತ ಸಾದೃಶ್ಯ); ಭಾಷಣ, ಉಪನ್ಯಾಸ, —ಮಾಡು, ಕೊಡು. ಹೇಳು, ಆಡು, ಒರೆ, ಎನ್ನು, ಉಚ್ಚರಿಸು, ಉಸಿರು [S. one's mind ಮನಸ್ಸಿನ ಅಭಿಪ್ರಾಯವನ್ನು ಸ್ಪಷ್ಟವಾಗಿ, ನಿರ್ದಾಕ್ಷಿಣ್ಯ ವಾಗಿ, ಹೇಳು. Strictly, roughly, generally, speaking ನಿಷ್ಕೃಷ್ಟವಾಗಿ, ಸ್ಥೂಲವಾಗಿ, ಸಾಮಾನ್ಯವಾಗಿ (ಹೇಳುವುದಾದರೆ). Legally speaking ಕಾನೂನಿನ ದೃಷ್ಟಿಯಿಂದ (ಹೇಳುವುದಾದರೆ). So to s. (ಗಂಭೀರವಲ್ಲದ, ಕಠಿನವಾದ, ಅಥವಾ ಅಲಂಕಾರಿಕ ಪದ ಪ್ರಯೋಗದ ಸಂದರ್ಭದಲ್ಲಿ ಔಪಚಾರಿಕವಾಗಿ): ಹಾಗೆ ಹೇಳಬಹುದಾ ದರೆ]. (ಹಡಗಿಗೆ) ಗಮನ ಸೆಳೆದು ಸಂಕೇತಕೊಡು, ಸಮಾಚಾರ ತಿಳಿಸು; (ಪ್ರಾಚೀ. ಪ್ರ., ನಡತೆ, ಸಂದರ್ಭ, ಮೊ. ವು) —ಎಂದು ವ್ಯಕ್ತಪಡಿಸು, ಸೂಚಿಸು, ತಿಳಿಸು [His conduct speaks him generous ಅವನ ನಡತೆ ಅವನು ಉದಾರಿಯೆಂದು ತಿಳಿಸುತ್ತದೆ. S. volumes ಬಹಳ ಅರ್ಥಪೂರಿತವಾಗಿರು. S. volumes for —ಕ್ಕೆ ಯಥೇಷ್ಟ ನಿದರ್ಶನವಾಗಿರು (Speaks volumes for his forbearance). S. well for ಒಳ್ಳೆಯ ಅಭಿಪ್ರಾಯ—ಕೊಡು, ಬರಿಸು]. (ನಾಯಿಯ ವಿಷಯದಲ್ಲಿ; ಮು., ಆಜ್ಞೆ ಮಾಡಿದಾಗ) ಬಗುಳು; (ರೂಪ.; ವಾದ್ಯ, ಮೊ. ಗಳ ವಿಷಯದಲ್ಲಿ) ಧ್ವನಿ ಮಾಡು, ನಾದಕೊಡು; ನುಡಿ, ಉಲಿ. ಬರಹದಲ್ಲಿ ಹೇಳು, ಉಲ್ಲೇಖಿಸು (*Of* ಉಪ. ದೊಡನೆ); [S. like a book, by the book (Book ನೋಡಿ)]. S. (person) fair (ಒಬ್ಬನೊಡನೆ) ವಿನಯವಾಗಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಭ್ಯತೆಯಿಂದ, —ಮಾತನಾಡು. S. for ಪರವಾಗಿ ಮಾತನಾಡು ; (ಒಬ್ಬನ) ಇಂಗಿತವನ್ನು, ಭಾವವನ್ನು, —ಹೇಳು. S. of ಪ್ರಸ್ತಾವಿಸು, ಉಲ್ಲೇಖಿಸು ; ಹೇಳು (Nothing to s. of ಹೇಳುವಂಥದು, ಹೇಳಬೇಕಾದ್ದು, —ಏನೂ ಇಲ್ಲ ; ಸ್ವಾರಸ್ಯವಾದ್ದು ಏನೂ ಇಲ್ಲ). S. out (or up) ಧಾರಾಳವಾಗಿ, ಸ್ಪಷ್ಟವಾಗಿ, ಬಾಯಿಬಿಟ್ಟು, —ಮಾತಾಡು, ಹೇಳು; ಸಂಪೂರ್ಣಾಭಿಪ್ರಾಯ ತಿಳಿಸು. S. to ಒಬ್ಬನೊಡನೆ ಮಾತಾಡು; (ಸಹಾಯ, ಮೊ. ಕ್ಕೆ) ಒಬ್ಬನಲ್ಲಿ ಹೇಳಿಕೊ ; (—) ವಿಷಯವಾಗಿ, ಕುರಿತು, ಸಮರ್ಥಿಸಿ, ಸಾಕ್ಷಿಯಾಗಿ, —ಮಾತಾಡು (I can s. to his having been there. Will s. to that point later). S. up (or *out*) (ಇನ್ನೂ) ಗಟ್ಟಿಯಾಗಿ ಮಾತಾಡು. S. without book ಪುಸ್ತಕ ಎದುರಿಟ್ಟುಕೊಳ್ಳದೆ, ನೆನಪಿನಿಂದ, —ಮಾತಾಡು. Ill, well, -spoken ಕೆಟ್ಟ, ಒಳ್ಳೆಯ, —ಮಾತಾಡುವ, ಮಾತಿನ ; ದುರ್ಭಾಷೆಯ, ಸುಭಾಷೆಯ **S.-easy** (ಅಮೆ.ಸಂ. ಅಸಂ.) ಕಳ್ಳ (ವ್ಯಾಪಾರದ) ಮದ್ಯ ದಂಗಡಿ. **Speáker** (ನಾ.) ಮಾತುಗಾರ, ಭಾಷಣಕಾರ, ಉಪನ್ಯಾಸಕ ; (ಶಾಸನ ಸಭೆ, ಮೊ. ಗಳಲ್ಲಿ) ಅಧ್ಯಕ್ಷ. **Speáker-ship** (ನಾ.) ಅಧ್ಯಕ್ಷತೆ. **Speákies** (ನಾ., ಬ. ವ.) (ಅಸಂ.) (ಮೌನ ಚಲನಚಿತ್ರಕ್ಕೆ ವಿರುದ್ಧವಾಗಿ) ವಾಕ್ (ಚಲನ)ಚಿತ್ರಗಳು. **Speáking** (ನಾ.) (ಕ್ರಿಯಾರ್ಥಗಳಲ್ಲಿ) ; S. acquaintauce ಮಾತುಕತೆ ಆಡುವಷ್ಟು ಮಾತ್ರ ಪರಿಚಯ(ದವನು) ; ಮಾತು ಮಾತ್ರದ ಪರಿಚಯ(ದವನು). Not on s. terms *with* (—ಒಡನೆ) ಮಾತಾಡುವ ಪರಿಚಯವಿಲ್ಲದ, (ಮು.) ಮಾತು ಬಿಟ್ಟಿರುವ, ಮನಸ್ತಾಪ ವಿರುವ. S.-trumpet ದೂರಕ್ಕೆ ಕೇಳಿಸುವಂತೆ ಮಾತನಾಡಲು ಉಪ ಯೋಗಿಸುವ ತುತೂರಿ : ಮಾತು ತುತೂರಿ.

Spear ಸ್ಪಿಯರ್ (ನಾ., ಕ್ರಿ.) (ಬೇಟೆಗಾರನ, ಸಿಪಾಯಿಯ) ಉದ್ದಹಿಡಿಯ ಈಟಿ, ಭರ್ಜಿ, ಭಲ್ಲೆಯ, ಸಬಳ ; (ಕಾವ್ಯ) ಈಟಿಯವನು, ಭಲ್ಲೆಯದ ಸಿಪಾಯಿ (=**Speárman**) ; (ವೋಟುಹಿಡಿಯ) ಎಸೆ ಈಟಿ; (ಮೀನು, ಮೊ. ಗಳ ಬೇಟೆಯಲ್ಲಿ ಉಪಯೋಗಿಸುವ) ಕೊಕ್ಕು ಈಟಿ. (ಕ್ರಿ.) —ಇಂದ ಇರಿ, ತಿವಿ, ಹೊಡೆ ; ನಿಡು ಕಾಂಡವಾಗಿ —ಬೆಳೆ, ಹೋಗು. **Spearhead** ಈಟಿಯ ಮೊನೆ ; (ರೂಪ.) ಆಕ್ರಮಣಕ್ಕೆ ಮುಂದಾಗಿ ನುಗ್ಗುವ, ಅಥವಾ ನುಗ್ಗಲು ನೇಮಕವಾದ ವ್ಯಕ್ತಿ, ಪಡೆ : ಆಕ್ರಮಣದ ಮುಮ್ಮೊನೆ, ನುಗ್ಗುಮೊನೆ. **Speármint** ಯೂರೋಪಿನ, ಪುದೀನ ತೆರದ, ಒಂದು ಸುಗಂಧ ಸಸ್ಯ. **S. side** ಗಂಡು ಸಂತತಿ, ಪುರುಷ ಶಾಖೆ (Distaff ನೋಡಿ)

Spec ಸ್ಪೆಕ್ (ನಾ.) (ಬಳ. ಮಾ.) =Speculation (ಪದದ ಸಂಕ್ಷಿಪ್ತ) (It turned out a good s. Did it on good s.)

Spécial ಸ್ಪೆಷಲ್ (—ಷ್‌ಲ್) (ಗು., ನಾ.) ವಿಶೇಷ, ವಿಶಿಷ್ಟ, ಅಸಾಧಾರಣ, ಅಸಾಮಾನ್ಯ, ಹೆಚ್ಚಿನ, ಪ್ರತ್ಯೇಕ, ನಿರ್ದಿಷ್ಟ [Word used in a s. sense ವಿಶೇಷಾರ್ಥದಲ್ಲಿ ಪ್ರಯೋಗಿಸಿದ ಶಬ್ದ. **S. anatomy** ಮನುಷ್ಯ ಶರೀರದ ವಿಶೇಷ ಅಂಗಗಳ ರಚನಾ ಶಾಸ್ತ್ರ : ವಿಶೇಷ ಅಂಗರಚನಾ ಶಾಸ್ತ್ರ. **S. Jury** (Jury ನೋಡಿ). **S. hospital** ವಿಶೇಷ ರೋಗ ವೈದ್ಯಶಾಲೆ ; ವಿಶೇಷ ಚಿಕಿತ್ಸಾಲಯ. **S. agents** ವಿಶೇಷ ಕಾರ್ಯಭಾರಿಗಳು. **S. instructions. S. trouble** ವಿಶೇಷ ತೊಂದರೆ. **S. case** ಕಕ್ಷಿಗಾರರು ವಿಶೇಷ ಮೊಕದ್ದಮೆಯಲ್ಲಿ ಕೊಟ್ಟ ವಾಙ್ಮೂಲ ; ವಿಶೇಷ ಮೊಕದ್ದಮೆ ; —ವಿಷಯ, ಸಂದರ್ಭ. **S. constable** ಶಾಂತಿ ಭಂಗದ ದೊಂಬಿ, ಮೊ. ವಿಶೇಷ ಸಂದರ್ಭ ಗಳಲ್ಲಿ ಪ್ಯಾದೆಯಾಗಿ ನೇಮಿಸಲ್ಪಟ್ಟ ಅಥವಾ ಪ್ಯಾದೆಯಾಗಿ ಸಹಾಯ ಮಾಡಲು ಪ್ರಮಾಣವಚನ ಕೊಟ್ಟಿರುವ ಖಾಸಗಿ ಮನುಷ್ಯ : ವಿಶೇಷ ಪೊಲೀಸು ಪ್ಯಾದೆ (Constable ನೋಡಿ). **S. correspondent** ವಿಶೇಷಾಂಶಗಳನ್ನು ಕುರಿತು ವರದಿ ಮಾಡುವ ವರದಿ ಗಾರ, ಸುದ್ದಿಗಾರ : ವಿಶೇಷ —ವರದಿಗಾರ, ಸುದ್ದಿಗಾರ. **S. edition** (ಸಾಧಾರಣ ಮುದ್ರಣದಕ್ಕಿಂತ ಈಚಿನ ಸುದ್ದಿಯ ನ್ನೊಳಗೊಂಡ, ವೃತ್ತಪತ್ರಿಕೆಯ) ವಿಶೇಷ ಮುದ್ರಣ. **S. licence** ನಿಶ್ಚಿತಾರ್ಥ ಪ್ರಕಟನೆಯಿಲ್ಲದೆ ಅಥವಾ ಸಾಮಾನ್ಯವಾಗಿ ಮದುವೆ ನಡೆಯಬೇಕಾದ ಕಾಲವನ್ನಾಗಲಿ ಸ್ಥಳವನ್ನಾಗಲಿ ಬಿಟ್ಟು ಬೇರೆ ಕಾಲದಲ್ಲಾಗಲಿ ಸ್ಥಳದಲ್ಲಾಗಲಿ ಮದುವೆ ಮಾಡಿಸುವುದಕ್ಕೆ ಅಧಿಕಾರ ಕೊಡುವ ಸನ್ನದು : ವಿಶೇಷ ಸನ್ನದು. **S. logic** (ವಿಶೇಷ ವಿಷಯ ಗಳನ್ನು ಕುರಿತ) ವಿಶೇಷ ತರ್ಕ. **S. pleader** ತನಗೆ ಒಪ್ಪಿಸಿದ ವಿಚಾರಗಳಮೇಲೆ ಬಾಯಿಮಾತಿನ ಮೂಲಕ ಅಥವಾ ಬರಹದ ಮೂಲಕ ಅಭಿಪ್ರಾಯ ಕೊಡುವ, ಮತ್ತು ಸಾಮಾನ್ಯ ಕ್ರಮದಿಂದ ಹೊರಗಾದ ವ್ಯವಹಾರಗಳನ್ನು ನಡಸುವ, 'ಇನ್ಸ್ ಆಫ್ ಕೋರ್ಟ್' ಎಂಬ ನ್ಯಾಯವಾದಿ ಸಂಸ್ಥೆಯ ವಕೀಲ : ವಿಶೇಷ ವಕೀಲ. **S. pleading** (ಪ್ರತಿಕಕ್ಷಿಯ ಆಪಾದನೆಗಳನ್ನು ಸಾಮಾನ್ಯವಾಗಿ ಪ್ರತಿವಾದಿಸದೆ) ವಿಶೇಷ ವಾದಮಾಡುವುದು : ವಿಶೇಷ ವಾದ ; (ಬಳ. ಮಾ.) ಮೇಲೆ ಮಾತ್ರ ಸರಿಯಾಗಿ ತೋರುವ, ಆದರೆ ನ್ಯಾಯಸಮ್ಮತವಲ್ಲದ ವಾದ : ಕೂಟ ವಾದ, ಕುಯುಕ್ತಿ ವಾದ ; ಸತ್ಯಾನ್ವೇಷಣೆಗಿಂತ ಮಾತಾಡುವವನ ಪಕ್ಷ ಸಮರ್ಥನಾನುಕೂಲ ದೃಷ್ಟಿಯಿಂದ ಮಾಡಿದ ವಿಷಯ ಪ್ರತಿಪಾದನೆ : ಸ್ವಾನುಕೂಲ ವಾದ, ಸ್ವಪಕ್ಷ ಸಮರ್ಥನ ವಾದ. **S. train** ವಿಶೇಷ ಉದ್ದೇಶಕ್ಕಾಗಿ ಬಿಟ್ಟ ರೈಲು : ವಿಶೇಷ, ಪ್ರತ್ಯೇಕ, ಸ್ಪೆಷಲ್, —ರೈಲು. **S. verdict** (Verdict ನೋಡಿ)]. (ನಾ.)=S. constable, edition, train, etc. [Extra-s. edition (Extra ನೋಡಿ)]. **Spécially** (ಕ್ರಿ. ವಿ.) ; **Spécialist** (ನಾ.) ಒಂದು ಉದ್ಯೋಗ, ವಿಜ್ಞಾನ, ಮೊ. ಗಳ ನಿರ್ದಿಷ್ಟ ಶಾಖೆಯಲ್ಲಿ ವಿಶೇಷ ಪರಿಶ್ರಮ ಪಡೆದ ವನು : ವಿಶೇಷಜ್ಞ, ಪ್ರವೀಣ. **Specialístic** (ಗು.) ವಿಶೇಷ— ಜ್ಞಾನದ, ಪಾಂಡಿತ್ಯದ; ವಿಶೇಷಜ್ಞರ, ಪ್ರವೀಣರ. **Spécialism** (ನಾ.) ; **Speciálity** ಸ್ಪೆಷಿಆ್ಯಲಿಟಿ (ನಾ.) ವಿಶೇಷ —ಗುಣ, ಲಕ್ಷಣ ; ವಿಶೇಷತೆ, ವೈಶಿಷ್ಟ್ಯ ; ಹೆಚ್ಚುಗಾರಿಕೆ; ವಿಶೇಷ —ಉದ್ಯಮ, ತಯಾರಿಕೆ, ಕೆಲಸ, ಮೊ. ವು : ಪರಮಾಯಿಷಿ (=Specialty) [Jam(-making) is our s.]. **Spécialize** ಸ್ಪೆಷಲೈಸ್ (ಕ್ರಿ.) ವಿಶಿಷ್ಟ ಮಾಡು ; ವೈಶಿಷ್ಟ್ಯವುಳ್ಳದ್ದನ್ನಾಗಿ ಮಾಡು ; (ಭಾವನೆ, ಹೇಳಿಕೆ, ಮೊ. ನ್ನು) ವಿಶೇಷಿಸು, ಪರಿಮಿತಮಾಡು ; (ಜೀ. ವಿ.) (ಅಂಗ, ಮೊ. ನ್ನು) ವಿಶಿಷ್ಟ ಉಪಯೋಗಕ್ಕೆ —ರೂಢಿಸು, ಮೀಸಲುಮಾಡು. ವಿಶೇಷಜ್ಞನಾಗು, ಪ್ರವೀಣನಾಗಿರು, ವಿಶೇಷ ಜ್ಞಾನ ಪಡೆ(ದಿರು) ; ವಿಶೇಷ ಪರಿಶ್ರಮ —ಮಾಡು, ಮಾಡಿರು. **Specializátion** (ನಾ.) ; **Spécialty** (ನಾ.) (ನ್ಯಾ. ಶಾ.) ಮುದ್ರೆಪೊತ್ತಿದ —ದಸ್ತೈವಜು, ಕರಾರು ; ವಿಶೇಷ —ಉದ್ಯಮ, ತಯಾರಿಕೆ, ಕೆಲಸ, ಮೊ. ವು : ಪರಮಾಯಿಷಿ.

Spécie ಸ್ಪೀಷಿಯೀ, ಸ್ಪೀಷೀ (ನಾ., ಬ. ವ. ಇಲ್ಲ) (ಕಾಗದದ ಹಣಕ್ಕೆ ವ್ಯತಿರಿಕ್ತವಾಗಿ) ಲೋಹರೂಪದ ಹಣ : ನಾಣ್ಯ (S. payments. Paid in s. ; Shortness of s.)

Spécies ಸ್ಪೀಷಿಯೀಸ್, ಸ್ಪೀಷೀಸ್ (ನಾ.) (ಪ್ರಕೃತಿ ಚರಿತ್ರೆ) (ವರ್ಗೀ ಕರಣದಲ್ಲಿ) ಜಾತಿ (Genus) ವಿಭಾಗಕ್ಕಿಂತ ಕೆಳಗಿನದಾದ, ಸಣ್ಣ ಪುಟ್ಟ ವಿವರಗಳಲ್ಲಿ ಮಾತ್ರ ಭಿನ್ನವಾಗಿರುವ ವ್ಯಕ್ತಿಗಳನ್ನೊಳಕೊಂಡ ವಿಭಾಗ : ವಂಶ (Class ನೋಡಿ) (The *or* our s. ಮಾನವ ವಂಶ, ಮನುಷ್ಯಜಾತಿ); (ತರ್ಕ) ಸಾಮಾನ್ಯ ಲಕ್ಷಣಗಳುಳ್ಳವಾಗಿದ್ದು, ಸಾಮಾನ್ಯ ಹೆಸರಿನಿಂದ ವ್ಯವಹೃತವಾಗುವ ವ್ಯಕ್ತಿಗಳ (ಅಥವಾ ವಸ್ತುಗಳ) ಸಂಗಡ : (ಉಪ)ಜಾತಿ. ತೆರ, ರೀತಿ, ವಿಧ, ವಿಧಾನ (Has a s. of cunning. A s. of dogcart). (ನ್ಯಾ. ಶಾ.) (ಪದಾರ್ಥಗಳ) ಆಕಾರ, ರೂಪ.

Speciólogy ಸ್ಪೀಷಿಯಾಲೊಜಿ (ನಾ.) ಜೀವಿ ವಂಶಗಳ ಪ್ರಾರಂಭ, ಮೊ. ಗಳನ್ನು ಕುರಿತ ವಿಜ್ಞಾನ : ವಂಶ ವಿಜ್ಞಾನ. **Speciológical** (ಗು.)

Specífic ಸ್ಪೆಸಿಫಿಕ್ (ಗು., ನಾ.) ಗೊತ್ತಾದ, ಸ್ಪಷ್ಟ, ನಿಷ್ಕೃಷ್ಟ, ನಿರ್ದಿಷ್ಟ, ನಿಶ್ಚಿತ (A s. statement ನಿರ್ದಿಷ್ಟ ಹೇಳಿಕೆ. Has no s. aim ನಿಶ್ಚಿತ ಧ್ಯೇಯವಿಲ್ಲ ; ಗೊತ್ತಾದ ಗುರಿಯಿಲ್ಲ). ವಂಶದ ; ವಂಶ ವಿಶಿಷ್ಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಕ್ಷಣಗಳ(ನ್ನುಳ್ಳ), —ಗಳಿಗೆ ಸಂಬಂಧಪಟ್ಟ (The s. name of a plant ಸಸ್ಯದ ವಂಶನಾಮ. S. difference ವಂಶ ವಿಶೇಷಕ ಭೇದ. Draws a s. distinction between them ಅವುಗಳ ನಡುವೆ ವಂಶವಿಶಿಷ್ಟ ವಿಭೇದ ಮಾಡುತ್ತಾನೆ). ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟ; ವಿಲಕ್ಷಣ, ವಿಶಿಷ್ಟ (A s. style ವಿಶಿಷ್ಟ ಶೈಲಿ. A style s. to that school of painters ಆವರ್ಣ ಚಿತ್ರಕಾರರ ಸಂಪ್ರದಾಯಕ್ಕೆ ವಿಲಕ್ಷಣವಾದ ಶೈಲಿ); [S. cause ನಿರ್ದಿಷ್ಟ ರೋಗ ಕಾರಣ. S. centre ಸಮಾನ ಮೂಲದಿಂದ ಭೇದ ಒಡೆಯುವ ಕಾಲ ಅಥವಾ ಸ್ಥಳ: ನಿರ್ದಿಷ್ಟ ಭೇದ ಕೇಂದ್ರ. S. gravity, heat (ಆಯಾ ಪದವನ್ನು ನೋಡಿ). S. medicine ನಿರ್ದಿಷ್ಟ ರೋಗದ ಔಷಧ; ಸಿದ್ಧೌಷಧ]. (ನಾ.) ಸಿದ್ಧೌಷಧ. **Specífically** (ಕ್ರಿ. ವಿ.); **Specifícity** —ಸಿಟಿ (ನಾ.) (ಮು., ವೈ. ಶಾ.) ಸಿದ್ಧೌಷಧವಾಗಿರುವುದು. ವಿಶಿಷ್ಟತೆ. **Specíficness** —ಕ್‌ನೆಸ್ (ನಾ.); **Specificátion** (ನಾ.) ನಮೂದು (ಮಾಡುವುದು), ನಿರ್ದೇಶ(ನ); ನಮೂದಿಸಿದ ವಿವರ, ಅಂಶ; ವಿವರಣೆ; ತಪಸೀಲು; (ಮು., ಬ. ವ.; ವಾಸ್ತುಶಿಲ್ಪ, ಮೊ. ರು ತಾವು ಕೈಕೊಂಡ ಕೆಲಸದ ಬಗ್ಗೆ ರಚನೆ, ಸಾಮಗ್ರಿ, ಮೊ. ನ್ನು ಕುರಿತು ಕೊಡುವ) ತಪಸೀಲು ಪಟ್ಟಿ; ಹೊಸ ಸಂಶೋಧನೆಯ ಸ್ವಾಮ್ಯ ಸನ್ನದನ್ನು ಕೇಳುವಾಗ, ಅರ್ಜಿದಾರನು ಸಲ್ಲಿಸುವ, ತನ್ನ ಸಂಶೋಧನೆಯ ವಿಶಿಷ್ಟ ಉಪಯೋಗ, ರಚನೆ, ಮೊ. ಗಳನ್ನು ಕುರಿತ ವಿವರಣ ಪತ್ರ: ವಿಶಿಷ್ಟ ವಿವರಣ(ಪತ್ರ); (ನ್ಯಾ. ಶಾ.) ಮತ್ತೊಬ್ಬನಿಗೆ ಸೇರಿದ ಸಾಮಗ್ರಿಗಳನ್ನು ತೆಗೆದುಕೊಂಡು ಅವುಗಳ ಸ್ವರೂಪವನ್ನು ಬದಲಾಯಿಸಿ, ಆತನ ಒಡೆತನ ತಪ್ಪುವಂತೆ ಹೊಸ ಉತ್ಪನ್ನವನ್ನು ನಿರ್ಮಾಣ ಮಾಡುವುದು; ವಸ್ತ್ವಂತರ ನಿರ್ಮಾಣ (ವಿಧಾನ). **Spécify** (ಕ್ರಿ. ಸಕ.) ಸ್ಪಷ್ಟವಾಗಿ, ನಿರ್ದಿಷ್ಟವಾಗಿ, —ಹೇಳು; (ವಿವರ, ತಪಸೀಲು, ಮೊ. ನ್ನು) ನಮೂದಿಸು, ನಿರ್ದೇಶ ಮಾಡು; ತಪಸೀಲು ಪಟ್ಟಿಯಲ್ಲಿ —ಸೇರಿಸು, ಕಾಣಿಸು (A slate-course was not specified ಸ್ಲೇಟುಕಲ್ಲಿನ ವರಿಸೆಯನ್ನು ತಪಸೀಲು ಪಟ್ಟಿಯಲ್ಲಿ ಸೇರಿಸಿರಲಿಲ್ಲ, ನಮೂದಿಸಿರಲಿಲ್ಲ). **Spécifiable** (ಗು.)

Specificátion, Spécify, etc. **Specific** ನೋಡಿ.

Spécimen ಸ್ಪೆಸಿಮೆನ್ (ನಾ.) ಮಾದರಿ, ನಮೂನೆ, ಮೋಸ್ತ್ರ, ಪಡಿಕಟ್ಟು, ನಿದರ್ಶನ [Specimens of copper ore ತಾಮ್ರದ ಅದುರಿನ ಮಾದರಿಗಳು. A s. of his skill ಅವನ ಜಾಣತನದ ಮಾದರಿ, ನಿದರ್ಶನ. S. page (ಪುಸ್ತಕದ ಆಕಾರ, ಅಚ್ಚಿನ ಮಾಟ, ಮೊ. ನ್ನು ತೋರಿಸುವ) ಮಾದರಿ ಪುಟ]. (ಬಳ. ಮಾ., ತಿರಸ್ಕಾರ ಪ್ರ.) What a s.! ಏನು ನಮೂನೆ ಮನುಷ್ಯ!

Spécious ಸ್ಪೀಷಸ್ (ಗು.) ಮೇಲು ನೋಟಕ್ಕೆ ಒಳ್ಳೆಯದಾಗಿ, ಚೆನ್ನಾಗಿ, ಸಮಂಜಸವಾಗಿ, ನ್ಯಾಯವಾಗಿ, ಸರಿಯಾಗಿ, —ತೋರುವ, ಕಾಣುವ; ಆಪಾತ ರಮಣೀಯ, ಸತ್ಯಾಭಾಸದ (S. argument, person). **Spéciously** (ಕ್ರಿ. ವಿ.); **Spéciousness** (ನಾ.); **Speciósity** (ನಾ.)

Speck¹ ಸ್ಪೆಕ್ (ನಾ., ಕ್ರಿ. ಸಕ.) ಸಣ್ಣ —ಚುಕ್ಕೆ, ಮಚ್ಚೆ, ಕಲೆ, ಕರೆ; (ದೂಳು, ಮೊ. ಗಳ) ಕಣ; ಲವ, ಲೇಶ; (ಹಣ್ಣಿನಲ್ಲಿ) ಕೊಳೆತದ ಚುಕ್ಕೆ. (ಕ್ರಿ.) ಸಣ್ಣ ಸಣ್ಣ ಚುಕ್ಕೆಗಳನ್ನು, ಕಲೆಗಳನ್ನು, ಮಾಡು (ಮು., ಭೂ. ಕೃ. ನಲ್ಲಿ). **Spéckless** (ಗು.)

Speck² ಸ್ಪೆಕ್ (ನಾ.) (ಅಮೆ. ಸಂ., ದ. ಆಫ್ರಿಕ) ಕೊಬ್ಬು ಮಾಂಸ; (ಉಪ್ಪೂರಿಸಿ ಹೊಗೆಯಲ್ಲಿ ಒಣಗಿಸಿದ) ಹಂದಿಯ ಮಾಂಸ; ಸೀಲ್ ಪ್ರಾಣಿ, ತಿಮಿಂಗಿಲ, ಮೊ. ಗಳ ಕೊಬ್ಬು.

Spéckle ಸ್ಪೆಕ್‌ಲ್ (ನಾ., ಕ್ರಿ. ಸಕ.) ಸಣ್ಣ —ಮಚ್ಚೆ, ಕಲೆ, ಕರೆ(ಗಳನ್ನು ಮಾಡು); ಮಚ್ಚೆ ಮಚ್ಚೆ ಮಾಡು [(ಮು., ಭೂ. ಕೃ. ನಲ್ಲಿ) ಮಚ್ಚೆಗಳುಳ್ಳ]

Specktioneér, -si- ಸ್ಪೆಕ್‌ಷನಿಯರ್ (ನಾ.) (ತಿಮಿಂಗಿಲ ಬೇಟೆಯಲ್ಲಿ) ಈಟಿಗಾಳ ಎಸೆಯುವವರ ಮುಖಂಡ: ಮುನ್ನೀಟಿಗಾಳದವನು.

Specs ಸ್ಪೆಕ್ಸ್ (ನಾ., ಬ. ವ.) (ಬಳ. ಮಾ.) ಕನ್ನಡಕ (Spectacles ಎಂಬುದರ ಸಂಕ್ಷಿಪ್ತ)

Spéctacle ಸ್ಪೆಕ್ಟಕ್‌ಲ್ (ನಾ.) ಸಾರ್ವಜನಿಕ ಪ್ರದರ್ಶನ, ಪ್ರೇಕ್ಷಣ; ತಮಾಷೆ, ಕೌತುಕ; ನೋಟ, ದೃಶ್ಯ (A charming s. ಮನೋಹರ ದೃಶ್ಯ.. Sure to make a s. of himself ಅವನು ಖಂಡಿತ ತನ್ನ ಸ್ವರೂಪ ಪ್ರದರ್ಶನಮಾಡಿಕೊಳ್ಳುತ್ತಾನೆ). (ಬ. ವ. ದಲ್ಲಿ) ಕನ್ನಡಕ, ಸುಲೋಚನ (=Pair of spectacles; ಬಳ. ಮಾ. Specs) [(ರೂಪ.) Sees everything through rose-coloured or rosy spectacles ಅವನು ಎಲ್ಲವನ್ನೂ ಹರ್ಷದೃಷ್ಟಿಯಿಂದ, ಇಷ್ಟ ದೃಷ್ಟಿಯಿಂದ, ನೋಡುತ್ತಾನೆ]. (ಕ್ರಿಕೆಟ್ ಆಟ) Pair of spectacles ಎರಡು ಸರದಿಗಳಲ್ಲೂ ಸೊನ್ನೆ; ಜೋಡು ಸೊನ್ನೆ. **Spéctacled** (ಗು.) ಕನ್ನಡಕ ಹಾಕಿದ; (ಪ್ರಾಣಿಗಳ ವಿಷಯದಲ್ಲಿ) ಕನ್ನಡಕ ತೊಟ್ಟಂತೆ ಕಾಣುವ, ಕನ್ನಡಕದಂತೆ ಗುರುತು(ಗಳು)ಳ್ಳ (The s. bear ದ. ಅಮೆರಿಕದ ಇಂಥ ಕರಡಿ). **Spectácular** ಸ್ಪೆಕ್‌ಟ್ಯಾಕ್ಯುಲರ್ (ಗು.) ಪ್ರದರ್ಶನಾತ್ಮಕ, ಆಡಂಬರದ, ಪ್ರೇಕ್ಷಣೀಯ, ನಯನ ಮನೋಹರ. **Spectácularly** (ಕ್ರಿ. ವಿ.)

Spectátor ಸ್ಪೆಕ್ಟೇಟರ್ (ನಾ.) ನೋಟಕ, ಪ್ರೇಕ್ಷಕ (The spectators were moved to tears ಪ್ರೇಕ್ಷಕರು ಕಂಬನಿಗರೆಯುವಷ್ಟು ಮನಕರಗಿ ಹೋದರು. Was a mere s. ಬರಿಯ ನೋಟಕನಾಗಿದ್ದ). (ವೃತ್ತಪತ್ರಿಕೆಯ ಹೆಸರಾಗಿ) The S. ಇಂಗ್ಲೆಂಡಿನಲ್ಲಿ ಸ್ಟೀಲ್ ಮತ್ತು ಅಡಿಸನ್—ಅವರ ಸಂಪಾದಕತ್ವದಲ್ಲಿ ೧೭೧೧-೧೨ರಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆ. **Spectatórial** ಸ್ಪೆಕ್ಟಟೋರಿಯಲ್ (ಗು.) ಪ್ರೇಕ್ಷಕನ, ಪ್ರೇಕ್ಷಕ ದೃಷ್ಟಿಯ, ಪ್ರೇಕ್ಷಕೀಯ. **Spectátress, Spectátrix** (ನಾ., ಸ್ತ್ರೀ.) ಪ್ರೇಕ್ಷಕಿ.

Spéctre ಸ್ಪೆಕ್ಟರ್ (ನಾ.) ಪ್ರೇತ, ಭೂತ, ದೆವ್ವ; ಮನಸ್ಸಿನ ತೋರ್ಕೆ, ಭ್ರಾಂತಿ; (ಸರ್ವನಾಶ, ಯುದ್ಧ, ಹುಚ್ಚು, ಮೊ. ಗಳ) ಭಯಂಕರ, ಘೋರ, —ಕಲ್ಪನೆ (Firebreathing s. of democracy ಉರಿ ಕಾರುವ ಪ್ರಜಾಪ್ರಭುತ್ವ ಭೂತ). [S. of the Brocken ಪರ್ವತ ಶಿಖರದಮೇಲೆ ಪ್ರೇಕ್ಷಕನು ಇದ್ದು, ಒಂದು ಕಡೆ ಸೂರ್ಯನೂ ಮತ್ತೊಂದು ಕಡೆ ಮೋಡಗಳೂ ಇದ್ದು, ಆ ಮೋಡಗಳಮೇಲೆ ಬೀಳುವ ಪ್ರೇಕ್ಷಕನ ಮತ್ತು ಸುತ್ತುಮುತ್ತಲ ವಸ್ತುಗಳ ಬೃಹದಾಕಾರದ ಛಾಯೆ; ಬೃಹಚ್ಛಾಯಾ ಬಿಂಬ (ಇಂಥ ಬಿಂಬಗಳನ್ನು Brocken ಶಿಖರದಮೇಲೆ ಮೊದಲು ಕಂಡದ್ದರಿಂದ)]. (ತೆಳ್ಳನೆಯ ಒಡಲು, ಮೊ. ಗಳ ಕಾರಣದಿಂದ ಪ್ರೇತಕ್ಕೆ ಹೋಲಿಸಲ್ಪಟ್ಟ ಪ್ರಾಣಿಗಳ ಹೆಸರುಗಳಲ್ಲಿ): S.-bat, -crab, -insect, -lemur, -shrimp ಪ್ರೇತ—ಬಾವಲಿ, ಏಡಿ, ಕೀಟ, ಕಾಡುಪಾಪ, ಇಂಚಾಕ. **Spéctral¹** (ಗು.) ಪ್ರೇತದಂಥ; ಭೂತಗಳ, ದೆವ್ವಗಳ. **Spéctrally¹** (ಕ್ರಿ. ವಿ.)

Spéctro- ಸ್ಪೆಕ್ಟ್ರೊ— (ಸ. ಪೂ. ಪ.) ವರ್ಣಪಟಲ—. **-gram** ವರ್ಣಪಟಲ (ಛಾಯಾ) ಚಿತ್ರ. **-graph** ವರ್ಣಪಟಲ (ಛಾಯಾ) ಗ್ರಾಹಕ. **-gráphic** (ಗು.); **-graphy** ವರ್ಣಪಟಲ (ಛಾಯಾ)— ಗ್ರಹಣ, ಚಿತ್ರಣ. **-logy** ವರ್ಣಪಟಲ (ವಿಶ್ಲೇಷಣ) ವಿಜ್ಞಾನ. **-lógical** (ಗು.); **-lógically** (ಕ್ರಿ. ವಿ.); **-meter** ಪ್ರಿಸಮಿನ ಮೂಲಕ ಹಾಯ್ದುಹೋಗುವ ಬೆಳಕಿನ ಕಿರಣಗಳ ದಿಕ್ಚ್ಯುತಿಯನ್ನು ಅಳೆಯುವ ಸಲಕರಣೆ: ವರ್ಣ—ದಿಕ್ಚ್ಯುತಿಮಾಪಕ, ವಕ್ರೀಕರಣಮಾಪಕ. **-phone** ಕಣ್ಣುಗಳಿಂದ ನೋಡಿ ತಿಳಿಯುವುದಕ್ಕೆ ಬದಲು ಧ್ವನಿಗಳಿಂದ ಗ್ರಹಿಸುವಂತೆ ಅಳವಡಿಸಿರುವ ವರ್ಣಪಟಲ ದರ್ಶಕ: ನಾದರೂಪ ವರ್ಣ ದರ್ಶಕ. **-scope** ವರ್ಣಪಟಲ ದರ್ಶಕ. **-scopic(al)** (ಗು.) ವರ್ಣಪಟಲ ದರ್ಶಕೀಯ. **-scópically** (ಕ್ರಿ. ವಿ.); **-scopist** ವರ್ಣಪಟಲ ವಿಜ್ಞಾನಿ. **-scopy** ವರ್ಣಪಟಲ ವಿಜ್ಞಾನ; ವರ್ಣಪಟಲ ದರ್ಶಕದ ಪ್ರಯೋಗ ವಿಜ್ಞಾನ.

Spéctrum ಸ್ಪೆಕ್‌ಟ್ರಂ (ನಾ.; ಬ. ವ. -tra) ಹೊಳಪು ಬಣ್ಣದ ಪದಾರ್ಥವನ್ನು ದೃಷ್ಟಿಸಿ ನೋಡುತ್ತಿದ್ದು, ತರುವಾಯ ಕಣ್ಣುಗಳನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಚ್ಚಿಕೊಂಡರೂ ಬೇರೆ ಕಡೆ ತಿರುಗಿಸಿಕೊಂಡರೂ ಇನ್ನೂ ಗೋಚರ ವಾಗುತ್ತಲೇ ಇರುವ ಆ ಪದಾರ್ಥದ ಬಿಂಬ: ಅನುಬಿಂಬ (=Ocular s.); ತಮ್ಮ ತಮ್ಮ ವಕ್ರೀಕರಣ ಪ್ರಮಾಣಕ್ಕೆ ಅನುಸಾರವಾಗಿ ಒಂದು ಅನುಕ್ರಮ ಶ್ರೇಣಿಯಲ್ಲಿ ಅಳವಟ್ಟಿರುವ ಪ್ರಕಾಶದ ಅಥವಾ ಇತರ ವಿಕಿರಣಶಕ್ತಿಯ ಕಿರಣಗಳಿಂದ ಆದ ಬಿಂಬ: ವರ್ಣಪಟಲ. Diffraction s. ವಕ್ರವಿಯೋಗ ರೇಖಾಫಲಕದ ಮೂಲಕ ಆದ ವರ್ಣ ಪಟಲ: ವಕ್ರವಿಯೋಜನ ವರ್ಣಪಟಲ. Prismatic s. ಪ್ರಿಸಮಿನ (ಮೂಲಕ ಆದ) ವರ್ಣಪಟಲ. Solar s. ಸೌರ ವರ್ಣಪಟಲ. S. (*or* spectral) analysis ವರ್ಣಪಟಲ ದರ್ಶಕದ ಮೂಲಕ ರಾಸಾಯನಿಕ ವಿಶ್ಲೇಷಣ: ವರ್ಣಪಟಲ ವಿಶ್ಲೇಷಣ. **Spéctral**[2] (ಗು.) ವರ್ಣಪಟಲದ (S. colours, analysis). **Spéctrally**[2] (ಕ್ರಿ. ವಿ.)

Spécular. **Speculum** ನೋಡಿ.

Spéculate ಸ್ಪೆಕ್ಯುಲೇಟ್ (ಕ್ರಿ. ಅಕ.) (ಒಂದು ವಿಷಯವನ್ನು ಕುರಿತು, ಅಥವಾ ಒಂದರ ಕಾರಣ, ಸ್ವಭಾವ, ಮೊ. ನ್ನು ಕುರಿತು) ವಿಚಾರಮಾಡು, ಪರ್ಯಾಲೋಚಿಸು, ಚಿಂತನೆಮಾಡು, ಊಹೆಕಟ್ಟು, ಊಹಿಸು (*About, on, upon* ಉಪ. ದೊಡನೆ). ನಷ್ಟಸಂಭವವಿರುವ ವ್ಯಾಪಾರೋದ್ಯಮ ದಲ್ಲಿ ಹೆಚ್ಚಿನ ಲಾಭದ ನಿರೀಕ್ಷಣೆಯಿಂದ ಹಣ ಹಾಕು, ತೊಡಗು: ಸಟ್ಟಾ ವ್ಯಾಪಾರ, ಸಾಹಸ ವ್ಯಾಪಾರ, —ಮಾಡು (Has been speculating in stocks, in rubber. Is believed to s. a good deal ಅವನು ಅತಿಯಾಗಿ ಸಟ್ಟಾ ವ್ಯಾಪಾರ ಮಾಡುತ್ತಿರುವುದಾಗಿ ಜನರು ನಂಬಿದ್ದಾರೆ). **Speculátion** (ನಾ.) ವಿಚಾರ, ಪರ್ಯಾಲೋಚನೆ, ಚಿಂತನ; ಊಹಾಪೋಹೆ, ಊಹೆ (Much given to s. ಊಹಾಪೋಹ ನಿರತ. Sorry to disturb your speculations ನಿನ್ನ ಗಾಳಿಗೋಪುರಗಳನ್ನು, ಯೋಚನೆಗಳನ್ನು, ಭಂಗ ಮಾಡಿದ್ದಕ್ಕಾಗಿ ವಿಷಾದಿಸುತ್ತೇನೆ); ಸಟ್ಟಾ ವ್ಯಾಪಾರೋದ್ಯಮ, ಸಟ್ಟಾ ವ್ಯಾಪಾರ, ಸಟ್ಟೆ [Ruined by s.; Bought it as a s. *or* on spec (on speculation ವಿರ. ಪ್ರ.) ಸಟ್ಟೆಯಲ್ಲಿ ಕೊಂಡೆನು]. ತುರುಫು ಎಲೆಗಳನ್ನು ಕೊಂಡು ಮಾರುವ ಒಂದು ಬಗೆಯ ಇಸ್ಪೀಟಾಟ. **Spéculative** (ಗು.) ವಿಚಾರಪರ, ಚಿಂತನಾತ್ಮಕ, ಊಹಾಪೋಹದ; ಸಟ್ಟಾ ವ್ಯಾಪಾರದ. **Spéculatively** (ಕ್ರಿ. ವಿ.); **Spéculativeness** (ನಾ.); **Spéculator** (ನಾ.) ಊಹೆಗಾರ; ಸಟ್ಟಾ ವ್ಯಾಪಾರಿ. **Spéculatory** (ಗು.)

Spéculum ಸ್ಪೆಕ್ಯುಲಂ (ನಾ.; ಬ. ವ. -la) (ಶಸ್ತ್ರವೈದ್ಯ) ಪರೀಕ್ಷೆ ಗಾಗಿ ದೇಹದ ನಾಳ, ಕುಹರ, ಮೊ. ಗಳನ್ನು ಹಿಗ್ಗಿಸಲು ಉಪಯೋಗಿಸುವ ಸಲಕರಣೆ: ವಿಸ್ತಾರಕ; (ಸಾ., ಹೊಳಪು ಕೊಟ್ಟ ಲೋಹದ) ಕನ್ನಡಿ, ದರ್ಪಣ (ಮು., ಪ್ರತಿಫಲನ ದೂರದರ್ಶಕದಲ್ಲಿಯದು) (S.-metal ತಾಮ್ರ ಮತ್ತು ತವರಗಳ ಮಿಶ್ರ ಲೋಹ: ದರ್ಪಣ ಲೋಹ). (ಪಕ್ಷಿ ಶಾಸ್ತ್ರ) ಕೆಲವು ಪಕ್ಷಿಗಳ ರೆಕ್ಕೆಯಲ್ಲಿರುವ ವಿಶೇಷ ವರ್ಣದ ಕಲೆ, ಭಾಗ: ಹೊಳಪು ಕಲೆ, ಪ್ರಜ್ವಲ ವರ್ಣ ಪ್ರದೇಶ; (ಬೇರೆ ಬಣ್ಣದ ವಲಯ ಸುತ್ತುವರಿದಿರುವ) ಬಣ್ಣದ ಕಲೆ (=Ocellus). **Spécular** (ಗು.) ನುಣ್ ಹೊಳಪಿನ; ಕನ್ನಡಿಯ; ಪ್ರತಿಫಲಿಸುವ (S. surface). ವಿಸ್ತಾರಕದಿಂದ ಮಾಡುವ (S. examination)

Sped. Speed ಧಾತುವಿನ ಭೂತ., ಭೂ. ಕೃ.

Speech ಸ್ಪೀಚ್ (ನಾ.) ಮಾತಾಡುವ ಶಕ್ತಿ, ವಾಕ್ ಶಕ್ತಿ; ಮಾತು, ಹೇಳಿಕೆ, ವಾಕ್ಕು, ಉಕ್ತಿ, ವಚನ; ಭಾಷಣ, ಉಪನ್ಯಾಸ, ವ್ಯಾಖ್ಯಾನ [After-dinner s. ಭೋಜನಾನಂತರದ ಭಾಷಣ. Maiden s. (Maiden ನೋಡಿ). A set s. ಸಿದ್ಧ ಭಾಷಣ. Make a s. ಭಾಷಣ, ಉಪನ್ಯಾಸ, —ಮಾಡು. King's *or* Queen's s., S. from the throne ಪಾರ್ಲಿಮೆಂಟಿನ ಅಧಿವೇಶನದ ಪ್ರಾರಂಭದಲ್ಲಿ ಆ ಸಭೆಯ ಪರ್ಯಾಲೋಚನೆಗಾಗಿ ಮಂತ್ರಿ ಮಂಡಲ ಸಿದ್ಧಗೊಳಿಸಿ ರಾಜ ನಾಗಲಿ (ರಾಣಿಯಾಗಲಿ), ಅತನಿಂದ (ಆಕೆಯಿಂದ) ನಿಯುಕ್ತನಾದ ಅಧಿಕಾರಿಯಾಗಲಿ ಓದುವ ದೇಶದ ಹೊರ ಆಡಳಿತ ಮತ್ತು ಒಳ ಆಡಳಿತ ಗಳಿಗೆ ಸಂಬಂಧಪಟ್ಟ ಮುಖ್ಯ ಯೋಜನೆಗಳನ್ನು ಕುರಿತ ಭಾಷಣ: ರಾಜ ಭಾಷಣ]; (ಒಂದು ಜನದ) ಭಾಷೆ, ನುಡಿ; (ಆರ್ಗನ್ ವಾದ್ಯದ ಧ್ವನಿನಳಿಕೆ, ಮೊ. ಗಳ) ನಾದ ಗುಣ, ನುಡಿತ, ಉಲಿ. Figure of s., Parts of s. (ಆಯಾ ಪದವನ್ನು ನೋಡಿ). S.-reading ಮಾತಾಡುವವನ ತುಟಿಯ ಚಲನೆಯಿಂದ ಅವನು ಆಡಿದ್ದನ್ನು ಮೂಗನು ಗ್ರಹಿಸುವುದು: ನುಡಿಯೋದಿಕೆ, ಉಕ್ತಿವಾಚನ. S.-day ವಿದ್ಯಾಶಾಲೆಗಳಲ್ಲಿ ಬಹುಮಾನ ಹಂಚುವ, ವಾಚನ, ಕಂಠಪಾಠ ಮತ್ತು ಭಾಷಣಾದಿಗಳು ನಡೆಯುವ ದಿನ: ಶಾಲಾ —ವಾರ್ಷಿಕ ದಿನ, ಭಾಷಣ ದಿನ.. **Speéchify** (ಕ್ರಿ. ಅಕ.) (ತಿರಸ್ಕಾರ ಪ್ರ.) ಭಾಷಣ, ಉಪನ್ಯಾಸ, —ಮಾಡು; ವೇದಿಕೆಯಮೇಲೆ ನಿಂತು ಮಾತಾಡು. **Speechificátion** (ನಾ.); **Speéchifier** (ನಾ.); **Speéchless** (ಗು.) ಮೂಕನಾದ, ಮೌನ ವಾಗಿರುವ, ಮಾತಿಲ್ಲದ, ಮಾತು ಕಟ್ಟಿಹೋದ (S. with rage ರೋಷಾವೇಶದಿಂದ ಮಾತು ಕಟ್ಟಿಹೋಗಿ). (ಅಸಂ.) ವಿಪರೀತ ಕುಡಿದ, ಅಮಲೇರಿದ. **Speéchlessly** (ಕ್ರಿ. ವಿ.); **Speéchlessness** (ನಾ.)

Speed ಸ್ಪೀಡ್ [ನಾ.; ಕ್ರಿ., ಭೂತ. ಮತ್ತು ಭೂ. ಕೃ. Sped ಸ್ಪೆಡ್, (ಕೆಲವು ಸಂದರ್ಭಗಳಲ್ಲಿ) Speeded] (ಚಲನೆಯ) ತೀವ್ರತೆ, ಶೀಘ್ರತೆ, ಬಿರುಸು, ವೇಗ, ರಭಸ, ಜೋರು [More haste less s. (Haste ನೋಡಿ). At full s. ಪೂರ್ಣ ವೇಗದಲ್ಲಿ. Three-s. engine ಮೂರು (ವಿವಿಧ) ವೇಗಗಳಲ್ಲಿ ಹೋಗಲು ಅನುಕೂಲಿಸುವಂತೆ ಅಳವಡಿಸಿರುವ ಎಂಜಿನು: ತ್ರಿವೇಗದ ಯಂತ್ರ, ಎಂಜಿನು]. (ಪ್ರಾಚೀ. ಪ್ರ.) ಗೆಲವು, ಜಯ, ಅಭ್ಯುದಯ, ಶುಭೋದಯ [Send me good s. ನನ್ನ ಅಭ್ಯುದಯ ವನ್ನು ಕೋರು, ಬಯಸು. God-s. (God ನೋಡಿ)]. (S.-cone ಸಮಾನಾಂತರ ಚಾಲಕದಂಡಗಳ ಪರಸ್ಪರ ವೇಗ ಪ್ರಮಾಣವನ್ನು ಸುತ್ತು ಪಟ್ಟಿಯ ಮೂಲಕ ಹೊಂದಾವಣೆಮಾಡುವ ಶಂಕುವಿನಾಕಾರದ ಕಪ್ಪಿಯ ಸಲಕರಣೆ: ವೇಗಶಂಕು. Speedwell ಉಜ್ಜ್ವಲ ನೀಲಪುಷ್ಪದ, ಅದರುತಾಳಿನ ಒಂದು ಸಸ್ಯ). (ಕ್ರಿ.) ವೇಗವಾಗಿ, ಚುರುಕಾಗಿ, ಜೋರಾಗಿ, —ಹೋಗು, ನಡೆ (ಈಗ ಮು., ಸಾಹಿತ್ಯ ಪ್ರ.) (Sped down the street ಬೀದಿಯಲ್ಲಿ ಬಿರ್ರನೆ ಹೋದನು). (ಪ್ರಾಚೀ. ಪ್ರ.) ವೇಗವಾಗಿ —ಬಿಡು, ಕಳುಹಿಸು (S. an arrow from the bow); ಬೀಳ್ಕೊಡು, ಸಾಗಕಳುಹಿಸು (S. the parting guest). (ಪ್ರಾಚೀ. ಪ್ರ.) ಏಳಿಗೆ—ಪಡೆ, ಉಂಟುಮಾಡು; ವಿಜಯ, ಯಶಸ್ವಿ, —ಆಗು, ಆಗಿಸು; ಸಫಲ—ಆಗು, ಗೊಳಿಸು (How have you sped? ನೀನು ಹೇಗೆ ಏಳಿಗೆಯಾಗುತ್ತಿದ್ದೀಯೆ? God s. you! ದೇವರು ನಿನಗೆ ಒಳ್ಳೆಯದು ಮಾಡಲಿ!). (ಭೂತ., ಭೂ. ಕೃ. Speeded) ವೇಗವನ್ನು ಕ್ರಮಪಡಿಸು, ನಿರ್ದಿಷ್ಟ ವೇಗ ಕೊಡು (Similar automatic machines speeded alike); (ನಿರ್ದಿಷ್ಟ) ವೇಗದಲ್ಲಿ ಬಿಡು, ನಡಸು. S. up ವೇಗ ಹೆಚ್ಚಿಸು (The train service wants speeding up); ಚುರುಕು, ಜೋರು, —ಮಾಡು; ತ್ವರೆ, ಜಾಗ್ರತೆ, —ಗೊಳಿಸು. **Speéder** (ನಾ.) (ಯಂತ್ರದಲ್ಲಿ) ವೇಗ—ನಿಯಂತ್ರಕ, ವರ್ಧಕ. **Speedómeter** (ನಾ.) (ಮೋಟಾರು ಬಂಡಿ, ಮೊ. ಗಳಲ್ಲಿ) ವೇಗವನ್ನು ತೋರಿಸುವ ಸಲಕರಣೆ: ವೇಗ—ಮಾಪಕ, ಸೂಚಿ. **Speédy** (ಗು.) ವೇಗವಾದ, ಚುರುಕಾದ, ಜೋರಾದ; ಬೇಗನೆ ಮಾಡಿದ, ಜಾಗ್ರತೆಯಾದ, ತ್ವರಿತವಾದ (A s. answer ತ್ವರಿತ ಪ್ರತ್ಯುತ್ತರ. A s. vengeance ಶೀಘ್ರ ಪ್ರತೀಕಾರ). **Speédily** (ಕ್ರಿ. ವಿ.); **Speédiness** (ನಾ.)

Speiss ಸ್ಪೈಸ್ (ನಾ.) ಕೆಲವು ಸೀಸದ ಅದುರುಗಳನ್ನು ಕರಗಿಸು ವಾಗ ಬರುವ ಆರ್ಸೆನಿಕ್, ಕಬ್ಬಿಣ, ಮೊ. ಗಳ ಸಂಯುಕ್ತ: ಸ್ಪೈಸ್.

Spelaéan ಸ್ಪಿ(ಲ)ಲೀಯನ್ (ಗು.) ಗವಿಗಳ(ಲ್ಲಿ ವಾಸಮಾಡುವ); ಗುಹಾ ವಾಸಿ.

Spélicans ಸ್ಪೆಲಿಕನ್ಸ್ (ನಾ.). **Spill**[2] ನೋಡಿ.

Spell[1] ಸ್ಪೆಲ್ (ನಾ.) ವಶೀಕರಣ ಮಂತ್ರ, ಮಂತ್ರ(ಶಕ್ತಿ), ಮೋಡಿ (Under a s. ಮಂತ್ರಮುಗ್ಧನಾಗಿ); (ವ್ಯಕ್ತಿ, ಉದ್ಯೋಗ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗುಣ, ಮೊ. ಗಳ) ಆಕರ್ಷಣ, ಮೋಹಕತೆ, ವಶೀಕರಣ. **Spéllbinder** (ಅಮೆ. ಸಂ.) ಶ್ರೋತೃಗಳನ್ನು ಮುಗ್ಧಗೊಳಿಸುವ ರಾಜಕೀಯ ಭಾಷಣಕಾರ: ಮಂತ್ರಮೋಹಕ. **Spéllbound** ಮಂತ್ರಮುಗ್ಧ; ಮೋಹಪರವಶ; ವಶೀಕೃತ.

Spell[2] ಸ್ಪೆಲ್ (ಕ್ರಿ. ಸಕ.; ಭೂತ., ಭೂ. ಕೃ. Spelt *or* Spelled ಸ್ಪೆಲ್ಟ್) (ಮಾತಿನ) ಅಕ್ಷರ ಸಂಯೋಜನೆ —ಹೇಳು, ಬರೆ; ಕಾಗುಣಿತ —ಹೇಳು, ಬರೆ; ಮೂಲಾಕ್ಷರಗಳನ್ನು ಬಿಡಿಸಿ ಹೇಳು [How do you spell 'analyse'? It must not be spelt with a 'z'. S. out *or* over (ಮಾತುಗಳನ್ನು, ಬರೆವಣಿಗೆಯನ್ನು, ಕಷ್ಟಪಟ್ಟುಕೊಂಡು) ಅಕ್ಷರ ಅಕ್ಷರವಾಗಿ ಓದು, ತಡವರಿಸುತ್ತ ಓದು. S. backward (ಮಾತಿನ) ಅಕ್ಷರಗಳನ್ನು ಹಿಂದು ಮುಂದಾಗಿ, ವಿಲೋಮ ಕ್ರಮದಲ್ಲಿ, —ಹೇಳು, ಬರೆ; (ರೂಪ.) ಅರ್ಥವನ್ನು ತಿರುಚು, ವಿಪರೀತಾರ್ಥ ಮಾಡು]. (ಅಕ್ಷರಗಳ ವಿಷಯದಲ್ಲಿ) ಮಾತು, ಪದ, —ಆಗು (What does c a t spell? C a t ಅಕ್ಷರಗಳು ಸೇರಿ ಯಾವ ಪದವಾಗುತ್ತದೆ?); (ರೂಪ.) (ಪರಿಸ್ಥಿತಿ, ಯೋಜನೆ, ಮೊ. ಗಳ ವಿಷಯದಲ್ಲಿ) ಪರಿಣಾಮಗೊಳ್ಳು, ಪರ್ಯವಸಾನವಾಗು (These changes s. ruin to the farmer ಈ ಬದಲಾವಣೆಗಳಿಗೆ ರೈತನ ನಾಶವೆ ಪರ್ಯವಸಾನ). **Spéller** (ನಾ.) (ಕ್ರಿಯಾರ್ಥಗಳಲ್ಲಿ); ಅಕ್ಷರ ಸಂಯೋಜನೆಯ, ಕಾಗುಣಿತದ, —ಪುಸ್ತಕ. **Spélling** (ನಾ.) ಅಕ್ಷರ ಜೋಡಣೆ, ಅಕ್ಷರ ಸಂಯೋಜನೆ, ಕಾಗುಣಿತ (His s. is weak ಅವನ ಅಕ್ಷರ ಸಂಯೋಜನೆ ಐಬು. Another s. of the same word). S.-bee (ನಾ., ಬಹುಮಾನ ಕೊಡುವ) ಅಕ್ಷರ ಸಂಯೋಜನೆಯ, ಕಾಗುಣಿತದ, —ಸ್ಪರ್ಧೆ. S.-book ಅಕ್ಷರ ಸಂಯೋಜನೆ ಕಲಿಸುವ, ಕಾಗುಣಿತದ, —ಪುಸ್ತಕ.

Spell[3] ಸ್ಪೆಲ್ (ನಾ., ಕ್ರಿ. ಸಕ.) ಕೆಲಸದ ಪಟ್ಟು, ದಮ್ಮು (Did a s. of carpenting ಒಂದು ಪಟ್ಟು ಮರಗೆಲಸ ಮಾಡಿದೆ); ಸ್ವಲ್ಪ ಕಾಲ, ತುಸ ಹೊತ್ತು, ಒಂದು ಪಟ್ಟು [Wait (for) a s. ರವಷ್ಟು, ಒಂದು ಪಟ್ಟು, ಕಾದಿರು. A s. of cold weather]; ಸೂಳು, ಸರದಿ; ಬಿಡುವು, ವಿರಾಮ. (ಕ್ರಿ.) (ವಿರ. ಪ್ರ.) (ಕೆಲಸ, ಮೊ. ಗಳಲ್ಲಿ) ಸರದಿ ವಹಿಸಿಕೊ.

Spéller, Spélling. **Spell**[2] ನೋಡಿ.

Spelt[1]. Spell[2] ಧಾತುವಿನ ಭೂತ., ಭೂ. ಕೃ.

Spelt[2] ಸ್ಪೆಲ್ಟ್ (ನಾ.) (ಒಳ್ಳೆಯ ಹಿಟ್ಟು ಬರುವ) ಒಂದು ಬಗೆಯ ಗೋಧಿ; ಜರ್ಮನ್ ಗೋಧಿ.

Spélter ಸ್ಪೆಲ್ಟರ್ (ನಾ.) (ಈಗ ವಾಣಿಜ್ಯ ಪ್ರ.) ಸತುವು.

Spence, -se ಸ್ಪೆನ್ಸ್ (ನಾ.) (ಪ್ರಾಚೀ. ಪ್ರ.) ಉಗ್ರಾಣ; ತಿಂಡಿ ತೀರ್ಥದ —ಗೂಡು, ಅರೆ.

Spéncer[1] ಸ್ಪೆನ್ಸರ್ (ನಾ.) (ಚರಿತ್ರೆ) (ಗಂಡಸಿನ ಅಥವಾ ಹೆಂಗಸಿನ) ಗಿಡ್ಡ ಮೇಲಂಗಿ (Earl Spencer ಎಂಬಾತನಿಂದ)

Spéncer[2] ಸ್ಪೆನ್ಸರ್ (ನಾ.) (ನಾವೆ) =Trysail (Try ನೋಡಿ)

Spéncerism ಸ್ಪೆನ್ಸರಿಸ್ಮ್ (ನಾ.) ಸೃಷ್ಟಿಯ ವಿಕಾಸವು ಯಂತ್ರ ಚಲನೆ ಹೇಗೊ ಹಾಗೆ ಕೆಲಸಮಾಡುವ ಭೌತಶಕ್ತಿಗಳ ಮೂಲಕ ಕ್ರಮವಾಗಿ ಸರಳತೆಯಿಂದ ಜಟಿಲತೆಗೆ ಸಾಗುತ್ತದೆಯೆಂದೂ, ಈ ಭೌತಶಕ್ತಿಗಳು ಸಮತೋಲನ ಸ್ಥಿತಿಗೆ ಬಂದಾಗ ವಿಕಾಸವು ಪರಿಪೂರ್ಣವಾಗುತ್ತದೆಯೆಂದೂ, ತರುವಾಯ ವಿಲೋಮ ಕ್ರಮದಲ್ಲಿ ಸೃಷ್ಟಿ ತನ್ನ ಆದ್ಯ ಸ್ಥಿತಿಗೆ ಮರಳುತ್ತದೆಯೆಂದೂ ಹರ್ಬರ್ಟ್ ಸ್ಪೆನ್ಸರ್ ಎಂಬ ಪಾಶ್ಚಾತ್ಯ ದಾರ್ಶನಿಕನು ಪ್ರತಿಪಾದಿಸಿದ ವಾದ: ಸ್ಪೆನ್ಸರ್ ವಾದ. **Spencérian** (ಗು.); **Spencérianism** (ನಾ.) =Spencerism.

Spend ಸ್ಪೆಂಡ್ (ಕ್ರಿ.; ಭೂತ., ಭೂ. ಕೃ. Spent) ಖರ್ಚು, ವೆಚ್ಚ, ವ್ಯಯ, —ಮಾಡು, ಆಗು (S. profusely ಯಥೇಚ್ಛವಾಗಿ ಖರ್ಚುಮಾಡು. Make money s. well ಹಣ ಒಳ್ಳೆಯ ರೀತಿಯಲ್ಲಿ ಖರ್ಚಾಗುವಂತೆ ಮಾಡು); ಬಳಸು, ಉಪಯೋಗಿಸು, ವಿನಿಯೋಗಿಸು, ಮುಗಿಸಿಬಿಡು; ಕಳೆ (Shall s. no more breath, trouble, on him ಅವನ ವಿಷಯವಾಗಿ ಇನ್ನು ಹೆಚ್ಚು ಉಸಿರು ಹಾಳುಮಾಡಿಕೊಳ್ಳುವುದಿಲ್ಲ, ಶ್ರಮ ಪಡುವುದಿಲ್ಲ. S. time ಹೊತ್ತು ಕಳೆ. Spent a pleasant day ಒಂದು ದಿನ ಸಂತೋಷವಾಗಿ ಕಳೆದೆನು). ಮುಗಿದುಹೋಗು, ತೀರಿಹೋಗು, ಉಡುಗಿಹೋಗು (His anger will soon s. itself ಅವನ ಕೋಪ ಬೇಗ ಇಳಿದುಹೋಗುತ್ತದೆ. Spent cannonball ವೇಗ ಉಡುಗಿದ, ಶಕ್ತಿ ಉಡುಗಿದ, —ಫಿರಂಗಿ ಗುಂಡು); (ನಾವೆ) (ಕೂವೆ, ದೂಲ, ಹಾಯಿ, ಮೊ. ನ್ನು) ಕಳೆದುಕೊ, ಹಾಳುಮಾಡಿಕೊ; ಬಲಿಯಾಗು, ಬಲಿಕೊಡು, ಅರ್ಪಿಸು (S. blood and life itself in the service of the king). ಮೊಟ್ಟೆಗಳನ್ನು, ತತ್ತಿಗಳನ್ನು, —ಹಾಕು, ಹೊರಗೆಡವು (Spent herring ಮೊಟ್ಟೆಯೆಲ್ಲ ಹಾಕಿಬಿಟ್ಟಿರುವ ಹೆರಿಂಗ್ ಮೀನು). **Spéndthrift** (ನಾ.) ಹಣವನ್ನು ಲಕ್ಷ್ಯವಿಲ್ಲದೆ ಖರ್ಚು ಮಾಡುವವನು, —ಪೋಲು ಮಾಡುವವನು; ದುಂದುಗಾರ, ದಂದರಹಾಳ (ಅನೇಕ ವೇಳೆ ವಿಶೇಷಣ ಪ್ರ.). **Spéndable** (ಗು.); **Spénder** (ನಾ.)

Spense. **Spence** ನೋಡಿ.

Spensérian ಸ್ಪೆನ್ಸೀ(ಯ್)ರಿಯನ್ (ಗು.) ಎಡ್ಮಂಡ್ ಸ್ಪೆನ್ಸರ್ ಎಂಬ ಕವಿಯ (S. stanza ಈತ ಬರೆದಿರುವ Faerie Queen ಎಂಬ ಕಾವ್ಯದಲ್ಲಿಯ ವೃತ್ತಜಾತಿ: ಸ್ಪೆನ್ಸರ್ ವೃತ್ತ); (ನಾ., ಬ. ವ. ದಲ್ಲಿ) ಸ್ಪೆನ್ಸರ್ ವೃತ್ತಗಳು.

Spent. Spend ಧಾತುವಿನ ಭೂತ., ಭೂ. ಕೃ.

Sperm ಸ್ಪರ್ಮ್ (ನಾ.) ಶುಕ್ರ, ಶುಕ್ಲ, ವೀರ್ಯ, ರೇತಸ್ಸು, ಧಾತು. ತಿಮಿ ಮೇದಸ್ಸುಳ್ಳ ತಿಮಿಂಗಿಲ (=S.-whale); ತಿಮಿ ಮೇದಸ್ಸು, ತಿಮಿಗೊಬ್ಬು. **Spermacéti** ಸ್ಪರ್ಮಸೆ(ಸೀ)ಟಿ (ನಾ.) ಕೆಲವು ಜಾತಿಯ ತಿಮಿಂಗಿಲ, ಮೊ. ಗಳ ತಲೆಗಳಲ್ಲಿ, ದ್ರಾವಣದಲ್ಲಿ ಲೀನವಾಗಿ ದೊರೆಯುವ, ಮೋಂಬತ್ತಿಗಳನ್ನೂ ಮುಲಾಮುಗಳನ್ನೂ ಮಾಡಲು ಉಪಯೋಗವಾಗುವ, ಬಿಳಿಯ, ಪೆಡಸಾದ, ಕೊಬ್ಬು ಪದಾರ್ಥ: ತಿಮಿಗೊಬ್ಬು, ತಿಮಿ ಮೇದಸ್ಸು. **Spérmary** (ನಾ.) ಶುಕ್ರಪಿಂಡ, ವೀರ್ಯಗ್ರಂಥಿ, ರೇತ್ರಾಶಯ; ವೃಷಣ, ತರುಡುಬೀಜ. **Spermátic** ಸ್ಪರ್ಮ್ಯಾಟಿಕ್ (ಗು.) ಶುಕ್ರದ, ರೇತಸ್ಸಿನ; ಶುಕ್ರಪಿಂಡದ; ವೃಷಣದ, ತರುಡುಬೀಜದ.

Spérmato- ಸ್ಪರ್ಮಟೊ—, **Spermató-** ಸ್ಪರ್ಮಟಾ— (ಸ. ಪೂ. ಪ.) ಶುಕ್ರ—, ರೇತ್ರ—. **-blast** ರೇತ್ರಾಣು (ಜೀವಿ), ಶುಕ್ರ ಬೀಜ. **-génesis** ರೇತ್ರಾಣು ಜನನ, ರೇತ್ರೋತ್ಪತ್ತಿ. **-genous** (ಗು.); **-geny** (ನಾ.); **-logy** ಶುಕ್ರ, ರೇತ್ರ, —ವಿಜ್ಞಾನ, ಶಾಸ್ತ್ರ. **-lógical** (ಗು.); **-logist** (ನಾ.); **-phore** ರೇತ್ರಕೋಶ, ರೇತ್ರಾಣುಕೋಶ. **-rrhoéa** (ಅನ್ಯೆಚ್ಛಿಕ) ಧಾತು ನಷ್ಟ, ವೀರ್ಯಸ್ರಾವ; ಬಿಳುಪು ಹೋಗುವುದು. **-zóon** ಸ್ಟೋಆನ್ (ಬ. ವ. -zoa —ಝೋಅ) ಪ್ರಾಣಿಗಳ ರೇತ್ರಾಣು, ಬೀಜಾಣು; (ಕೆಳ ವರ್ಗದ ಸಸ್ಯಗಳಲ್ಲಿ) ಇಂಥ ಜನಕಾಂಶ.

Spérmo- ಸ್ಪರ್ಮೊ— (ಸ. ಪೂ. ಪ.) ಶುಕ್ರ—, ರೇತ್ರ—, ಬೀಜ—. **-blast** =Spermatoblast. **-logy** =Spermatology; (ಸ. ವಿ.) ಬೀಜ —ಶಾಸ್ತ್ರ, ವಿಜ್ಞಾನ. **-lógical** (ಗು.); **-logist** (ನಾ.)

Spew, Spue ಸ್ಪ್ಯೂ (ಕ್ರಿ.) ವಾಂತಿ— ಆಗು, ಮಾಡು; ಕಕ್ಕು, ಕಾರು; ಹೊರ ಚಿಮ್ಮು (Crater-crust which may crack and s. fire any day); (ದ್ರವಗಳ ವಿಷಯದಲ್ಲಿ) ಪ್ರವಾಹವಾಗಿ ಸೂಸು, ಹರಿ, ಚಿಮ್ಮು; (ಫಿರಂಗಿಯ ವಿಷಯದಲ್ಲಿ: ಗುಂಡುಗಳನ್ನು ಬೇಗ ಬೇಗ ಹಾರಿಸುವುದರಿಂದ) ಮೂತಿಯ ಹತ್ತಿರ ಜೋಲು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sphácelate ಸ್ಫ್ಯಾಸಿಲೇಟ್ (ಕ್ರಿ.) ಅರ್ಬುದದ ವ್ಯಾಧಿ, ಏಡಿ ಹುಣ್ಣು, —ಆಗು, ಬರು, ಉಂಟುಮಾಡು; (ಅಂಗಾಂಶ) ಕೊಳೆ(ಯಿಸು). **Sphacelátion** (ನಾ.)

Sphaér(o)- ಸ್ಫಿಯರ್(ರೊ)— (ಸ. ಪೂ. ಪ.) ಚೆಂಡಿನಂಥ—, ಚೆಂಡು—; ಗೋಳಾಕಾರದ—, ಗೋಳ— (ಮು., ಪ್ರಕೃತಿ ಚರಿತ್ರೆಯ ಪದಗಳಲ್ಲಿ ಪ್ರ.). **-blast** (ದಾರುವಿನ ನಡು ದಿಂಡಿನಿಂದ ಬೇರ್ಪಟ್ಟು, ತೊಗಟೆಯಲ್ಲಿ ಅಡಕವಾದ) ಚೆಂಡಿನಂಥ ಗಂತಿ.

Sphágnum ಸ್ಫ್ಯಾಗ್ನಂ (ನಾ.) (ಜೌಗು ಪ್ರದೇಶದಲ್ಲಿ ಬೆಳೆಯುವ, ಸಾಮಾನು ಅಡಕುವಲ್ಲಿ ಒತ್ತಿಗಾಗಿ ತುಂಬುವ) ಹಲವು ಬಗೆಯ ಪಾಚಿ, ಹಾವಸೆ.

Sphén(o)- ಸ್ಫೀನ್(ನೊ)— (ಸ. ಪೂ. ಪ.) ಬೆಣೆ(ಯಾಕಾರದ)—; (ತಲೆಬುರುಡೆಯ ಅಡಿಯಲ್ಲಿಯ) ಬೆಣೆಯೆಲುಬಿನ—. **-gram** ಬೆಣೆ ಯಾಕಾರದ ಅಕ್ಷರ, ಬೆಣೆ ಲಿಪಿ. **-gráphic** (ಗು.) ಬೆಣೆ ಲಿಪಿಯ. **Sphénoid** ಸ್ಫೀನಾಯ್ಡ್ (ಗು., ನಾ.) ಬೆಣೆಯಾಕಾರದ; (ತಲೆ ಬುರುಡೆಯ ಅಡಿಯಲ್ಲಿರುವ) ಬೆಣೆಯೆಲುಬು (=S. bone). **Sphenoídal** ಸ್ಫಿನಾ— (ಗು.); **Sphenoído-** (ಸ. ಪೂ. ಪ.)

Sphere ಸ್ಫಿಯರ್ (ನಾ., ಕ್ರಿ. ಸಕ.) ಅರ್ಧವೃತ್ತ ತನ್ನ ಅಕ್ಷದಮೇಲೆ ಪೂರ್ತಿ ಒಂದು ಸುತ್ತು ತಿರುಗುವುದರಿಂದ ಲಭಿಸುವ ಘನಾಕೃತಿ: ಗೋಳ, ಗೋಳಾಕೃತಿ; ಗುಂಡು; (ಕಾವ್ಯ) ನಭೋಮಂಡಲ, ಗಗನಮಂಡಲ, ಅಂತರಿಕ್ಷ, ಬಾನು; ಆಕಾಶಸ್ಥ ಕಾಯ, ಗ್ರಹ; ಭೂಗೋಳ, ಖಗೋಳ; ಆಕಾಶಸ್ಥ ಕಾಯಗಳನ್ನು ಒಳಕೊಂಡು ಸುತ್ತುತ್ತಿದೆಯೆಂದು ಹಿಂದೆ ನಂಬಿದ್ದ ಪಾರದರ್ಶಕ ಗೋಳಕೋಶ (ಗಳಲ್ಲೊಂದು) (Music, harmony, of the spheres ಈ ಗೋಳ ಕೋಶಗಳ ಭ್ರಮಣದಿಂದ ಆಗುತ್ತದೆಂದು ನಂಬಿದ್ದ ಸಂಗೀತ, ಗಾನ: ಗೋಳಕೋಶ ಸಂಗೀತ, ಗಾನ); (ಒಬ್ಬನ ಕಾರ್ಯ, ಪ್ರಭಾವ, ಇರುವಿಕೆ, ಮೊ. ಗಳ) ಕ್ಷೇತ್ರ, ರಂಗ (Has done much within his peculiar s.); (ಒಬ್ಬನ ಸ್ವಾಭಾವಿಕ) ಪರಿಸ್ಥಿತಿ, ಸನ್ನಿವೇಶ (Great mistake to take him out of his s.); [Celestial s. ನಭೋಮಂಡಲ, ಬಾಂದಳ. Doctrine of the s. ಗೋಳ ಜ್ಯಾಮಿತಿ ಮತ್ತು ತ್ರಿಕೋನ ಮಿತಿ: ಗೋಳ ಮಿತಿ. Great, small, circle of s. ಗೋಳದ ಕೇಂದ್ರದ ಮೂಲಕ ಹಾಯುವ, ಹಾಯದ, ಸಮತಲವು ಛೇದಿಸು ವುದರಿಂದಾದ ಛೇದಮುಖ: ಗೋಳ ಮಹಾವೃತ್ತ, ಗೋಳ ಲಘುವೃತ್ತ. Oblique, right, parallel, s. ಸಮಭಾಜಕ ವೃತ್ತಕ್ಕೂ ಕ್ಷಿತಿಜಕ್ಕೂ ನಡುವೆ ವಿಷಮ ಕೋನವಾಗುವ, ಸಮ ಕೋನವಾಗುವ, ಕೋನ ವಾಗದ, ಸ್ಥಳದಲ್ಲಿ ಕಾಣುವ ಆಕಾಶಮಂಡಲ: ವಿಷಮ, ಸಮ, ಸಮಾ ನಾಂತರ —ಗೋಳ, ಮಂಡಲ]. (ಕ್ರಿ.) ಗೋಳದಲ್ಲಿ(ಯಂತೆ) ಸೇರಿಸು, ಆವರಿಸು; ಗೋಳಾಕಾರ ಮಾಡು, ಗುಂಡಗೆ ಮಾಡು; (ಕಾವ್ಯ) ಆಕಾಶಕ್ಕೇರಿಸು, ಸ್ವರ್ಗಕ್ಕೊಯ್ಯು. **Sphéry** (ಗು.) (ಕಾವ್ಯ) ಗುಂಡಗಿರುವ, ಗೋಳದ, ಗೋಳಾಕಾರದ, ನಭೋಮಂಡಲದ. **Sphéric** ಸ್ಫೆರಿಕ್ (ಗು., ನಾ.) (ಕಾವ್ಯ) ಆಕಾಶದ, ನಭೋ ಮಂಡಲದ, ದಿವ್ಯ, ಸ್ವರ್ಗೀಯ; (ವಿರ. ಪ್ರ.) =Spherical. (ನಾ., ಬ. ವ. ದಲ್ಲಿ) ಗೋಳ ಮಿತಿ. **Sphérical** (ಗು.) ಗುಂಡ ಗಿರುವ, ಗೋಳಾಕಾರದ; ಗೋಳದ [S. geometry ಗೋಳ ಜ್ಯಾಮಿತಿ. S. lune, triangle, polygon (ಗೋಳ ಮಹಾವೃತ್ತ ಚಾಪಗಳಿಂದ ಪರಿಮಿತವಾದ ಆಕೃತಿಗಳು): ಗೋಳ—ಚಾಲಚಂದ್ರಾಕೃತಿ, ತ್ರಿಕೋನ, ಬಹುಭುಜ]. **Sphérically** (ಕ್ರಿ. ವಿ.); **Sphericity** ಸ್ಫೆರಿಸಿಟಿ (ನಾ.) ಗೋಳತ್ವ, ಗೋಳಾಕೃತಿತ್ವ. **Sphérograph** ಸ್ಫಿಯರೊಗ್ರಾಫ್ (ನಾ.) ಗೋಳಮಿತಿಯ ಲೆಕ್ಕಾಚಾರಗಳಿಗೆ ಸಹಾಯಕವಾಗುವಂತೆ, ಮಧ್ಯಾಹ್ನ ರೇಖೆಗಳನ್ನೂ ಅಕ್ಷಾಂಶ ರೇಖೆ ಗಳನ್ನೂ ಒಂದೊಂದು ಡಿಗ್ರಿಯ ಅಂತರಕ್ಕೆ ಘನ ಪ್ರಲಂಬ ರೇಖಾ ರಚನೆಯ ಮಾದರಿಯಲ್ಲಿ ಗುರುತಿಸಿರುವ ಬಿಲ್ಲೆ: ಗೋಳ ಪ್ರಲಂಬ ರೇಖಾಕೃತಿ. **Sphéroid** (ನಾ.) (ಸಂಪೂರ್ಣ ಗೋಳಾಕೃತಿಯಲ್ಲದ, ಧ್ರುವಗಳಲ್ಲಿ ಚಪ್ಪಟೆಯಾಗಿರುವ) ಗೋಳಕಲ್ಪ; ಅಂಡವೃತ್ತ ತನ್ನ ಅಕ್ಷದ ಮೇಲೆ ಒಂದು ಸುತ್ತು ಸುತ್ತುವುದರಿಂದ ಲಭಿಸುವ ಘನಾಕೃತಿ: ಅಂಡಗೋಳ [Oblate s. (ಅಂಡವೃತ್ತ ತನ್ನ ಲಘು ಅಕ್ಷದಮೇಲೆ ಸುತ್ತುವುದರಿಂದ ಆದ) ಲಘು ಗೋಳಕಲ್ಪ. Oblong *or* prolate s. (ಅಂಡವೃತ್ತ ತನ್ನ ಮಹಾ ಅಕ್ಷದಮೇಲೆ ಸುತ್ತುವುದರಿಂದ ಆದ) ಮಹಾ ಗೋಳಕಲ್ಪ]. **Spheroídal** (ಗು.); **Spheroídally** (ಕ್ರಿ. ವಿ.); **Spheroídical** (ಗು.); **Spheroidícity** (ನಾ.) ಗೋಳಕಲ್ಪತೆ, ಅಂಡಗೋಳತ್ವ. **Sphérometer** ಸ್ಫಿ(ಸ್ಫೆ)ರಾಮಿಟರ್ (ನಾ.) ಗೋಳದ ತ್ರಿಜ್ಯವನ್ನೂ ಸಣ್ಣ ಪದಾರ್ಥಗಳ ದಪ್ಪವನ್ನೂ ಅಳೆಯಲು ಅನುಕೂಲಿಸುವ ಒಂದು ಸಲಕರಣೆ: ಗೋಳಮಾಪಕ. **Sphérule** ಸ್ಫೆರ್ಯೂಲ್ (ನಾ.) ಸಣ್ಣ —ಗೋಳ, ಗುಂಡು; ಗೋಳಕ. **Sphérular** (ಗು.); **Sphérulate** —ಲೇಟ್ (ಗು.) (ಕೀಟ ವಿಜ್ಞಾನ) ಗೋಳಕಗಳುಳ್ಳ. **Sphérulite** ಸ್ಫೆರ್ಯುಲೈಟ್ (ನಾ.) (ಕೆಲವು ಶಿಲೆಗಳಲ್ಲಿ ಸೇರಿಕೊಂಡಿರುವ) (ಕಾಚ) ಗೋಳಕ. **Spherulític** (ಗು.); **Sphérulitize** (ಕ್ರಿ. ಸಕ.) (ಕಾಚ) ಗೋಳಕ ಮಾಡು.

Sphéric(al), etc., Sphérograph, Sphéroid, etc., Spherómeter, Sphérule, etc., Sphérulite, etc., Sphéry. Sphere ನೋಡಿ.

Sphíncter ಸ್ಫಿಂಕ್ಟರ್ (ನಾ.) ದೇಹದಲ್ಲಿಯ ಸ್ವಾಭಾವಿಕವಾದ ಕಂಡಿಯ ಅಥವಾ ನಾಳದ ಬಾಯಿಯ ಸುತ್ತ ಇದ್ದು ಅದನ್ನು ಮುಚ್ಚಲು ಅನುಕೂಲಿಸುವ, ಉಂಗುರದಾಕಾರದ, ಒಂದು ಸಂಕೋಚಕ ಸ್ನಾಯು: ನಿಮೀಲನ, ವಲಯ, —ಸ್ನಾಯು [ಉದಾ., ಗುದದ್ವಾರದ ಸ್ನಾಯು. (ವಿಶೇಷಣವಾಗಿಯೂ ಪ್ರ.) S.-fibre, -muscle, -power]. **Sphíncteral** (ಗು.); **Sphinctérial** (ಗು.); **Sphinctéric** (ಗು.) ಮುಚ್ಚುವ, ನಿಮೀಲಕ.

Sphinx ಸ್ಫಿಂಕ್ಸ್ (ನಾ.) (ಗ್ರೀಕ್ ಪುರಾಣ; S-) ಥೀಬ್ಸ್ ಜನರ ಮುಂದೆ ಒಗಟೆಯೊಂದನ್ನು ಒಡ್ಡಿ ಅದನ್ನು ಬಿಡಿಸಲಾರದವರನ್ನೆಲ್ಲ ಕೊಂದುಹಾಕುತ್ತ ಹಾವಳಿಮಾಡುತ್ತಿದ್ದು, ಕೊನೆಗೆ ಈಡಿಪಸ್ ಎಂಬಾ ತನು ಬಂದು ಒಗಟೆಯನ್ನು ಬಿಡಿಸಲು ತಾನು ನೆಲಸಿದ್ದ ಬಂಡೆಯಿಂದ ಕೆಳಕ್ಕುರುಳಿ ಸತ್ತುಹೋದ, ಹೆಂಗಸಿನ ತಲೆಯೂ ಸಿಂಹದ ಒಡಲೂ ರೆಕ್ಕೆಗಳೂ ಇದ್ದ ಒಂದು ಅದ್ಭುತ ಪ್ರಾಣಿ: ಸ್ಫಿಂಕ್ಸ್ ರಕ್ಕಸಿ ["ನಾಲ್ಕು ಕಾಲುಗಳಮೇಲೆ, ಎರಡು ಕಾಲುಗಳಮೇಲೆ ಮತ್ತು ಮೂರು ಕಾಲು ಗಳಮೇಲೆ ಚಲಿಸುವ ಒಂದು ಪ್ರಾಣಿ ಯಾವುದು?" ಎಂಬುದು ಆ ಸಮಸ್ಯೆ. ಉತ್ತರ: ಮನುಷ್ಯ (ಮಗುವಾಗಿದ್ದಾಗ ಅಂಬೆಗಾಲಿಡುತ್ತ ನಾಲ್ಕು ಕಾಲು, ಬೆಳೆದಾಗ ಎರಡು ಕಾಲು, ಮುದಿಯಾದಾಗ ಕೋಲೂರಿಕೊಂಡು ಮೂರು ಕಾಲು)]; (ಈಜಿಪ್ಟಿನ ಪ್ರಾಚೀನ ಅವಶೇಷಗಳ ವಿಷಯದಲ್ಲಿ) ಸಿಂಹದ ಒಡಲೂ ಮನುಷ್ಯನ ಅಥವಾ ಇತರ ಪ್ರಾಣಿಯ ತಲೆಯೂ ಉಳ್ಳ ಒಂದು ಪ್ರತಿಮೆ. ಗೂಢ ತಿಳಿಯಲಾಗದ, ಒಗಟೆಯಂಥ, —ವಿಷಯ, ವಸ್ತು, ವ್ಯಕ್ತಿ: ಒಗಟೆ, ಸಮಸ್ಯೆ. ಒಂದು ಬಗೆಯ ಚಿಟ್ಟೆ (=Hawk-moth); ಒಂದು ಬಗೆಯ ಬಬೂನ್ ಕೋತಿ.

Sphragìstics ಸ್ಫ್ರಜಿಸ್ಟಿಕ್ಸ್ (ನಾ., ಬ. ವ.; ಅನೇಕ ವೇಳೆ ಏ. ವ. ದಂತೆ ಪ್ರ.) ಮುದ್ರೆಗಳನ್ನು, ಮುದ್ರೆಯುಂಗುರಗಳನ್ನು, ಕುರಿತ ಶಾಸ್ತ್ರ: ಮುದ್ರಾ, ಮುದ್ರಾಂಗುಲೀ, —ಶಾಸ್ತ್ರ.

Sphýgmo- ಸ್ಫಿಗ್ಮೊ— (ಸ. ಪೂ. ಪ.) ನಾಡಿ—. **-graph** ನಾಡಿಯ ಲಕ್ಷಣವನ್ನು ವಕ್ರರೇಖೆಗಳ ಮೂಲಕ ತೋರಿಸುವ ಸಲಕರಣೆ: ನಾಡೀ ಲೇಖಕ. **-gráphic** (ಗು.); **-graphy** (ನಾ.); **-gram** ನಾಡೀ ಲೇಖನ. **-logy** ನಾಡೀ ಶಾಸ್ತ್ರ. **-phone** ನಾಡಿಯ ಕ್ರಿಯೆ ಕಿವಿಗೆ ಕೇಳಬರುವಂತೆ ಮಾಡುವ ಸಲಕರಣೆ: ನಾಡೀ ಶ್ರಾವಕ. **-scope** ನಾಡಿಯ ಕ್ರಿಯೆ ಕಣ್ಣಿಗೆ ಕಾಣುವಂತೆ ಮಾಡುವ ಸಲಕರಣೆ: ನಾಡೀ ದರ್ಶಕ. **Sphýgmus** (ನಾ.) (ಶ. ವಿ.) ನಾಡಿ; ನಾಡಿಯ —ತುಡಿತ, ಮಿಡಿತ; ನಾಡೀ ಸ್ಪಂದನ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Spíca ಸ್ಪೈಕ (ನಾ.) (ಸ. ವಿ.) ಹೂಗೊನೆ, ಕಾಂಡ ಪುಷ್ಪಗುಚ್ಛ; (ಧಾನ್ಯದ) ತೆನೆ [**Spícate** (ಗು.) —ಆಕಾರದ; —ಯಾಗಿ ಅಣಿಗೊಳಿಸಿದ. **Spícated** (ಗು.) —ಆಕಾರದ; —ಗಳನ್ನುಳ್ಳ]. (ಶಸ್ತ್ರವೈದ್ಯ) ಗೋಧಿ ತೆನೆಯಾಕಾರದ ಗಾಯಕಟ್ಟು, ಪಟ್ಟಿ; ತಿರುವು ಮುರುವು ಪಟ್ಟಿ.

Spíce ಸ್ಪೈಸ್ (ನಾ., ಕ್ರಿ. ಸಕ.) ಆಹಾರಪದಾರ್ಥಗಳನ್ನು ರುಚಿಗೊಳಿಸಲು ಉಪಯೋಗಿಸುವ, ಮೆಣಸು, ಲವಂಗ, ಜಾಯಿಪತ್ರೆ, ಮೊ. ಸುವಾಸನೆಯ ಅಥವಾ ಕಾರದ ಸಸ್ಯಪದಾರ್ಥ: ಸಂಬಾರ, ಮಸಾಲೆ; (ಸಾಮೂಹಿಕವಾಗಿ) ಸಂಬಾರ ಜಿನಸಿ (Dealer in s. ಸಂಬಾರ ಜಿನಸಿ ವ್ಯಾಪಾರಿ. Sugar and s. and all that is nice ಸಕ್ಕರೆ ಸಂಬಾರ ಮತ್ತು ರುಚಿಯಾದ್ದೆಲ್ಲ); (ರೂಪ.) (ಪ್ರಾಣಿಯಲ್ಲಿ, ಒಬ್ಬನ ಶೀಲ, ಬರೆವಣಿಗೆ, ಮೊ. ಗಳಲ್ಲಿ; ಕ್ರೋಧ, ಮತ್ಸರ, ಮೊ. ಗಳ) ಘಾಟು, ಮಸಾಲೆ, ಗಂಧ (*Of*, *in* ಉಪ. ದೊಡನೆ) (The horse had a considerable s. of devil in his composition); ಸ್ವಾರಸ್ಯ [Variety is the s. of life (ಅನುಭವದ) ವಿವಿಧತೆಯೇ ಜೀವನದ ಮಸಾಲೆ, ಸ್ವಾರಸ್ಯ]. (ಕ್ರಿ.) ಸಂಬಾರ ಹಾಕು, ಮಸಾಲೆ ಕಟ್ಟು (ರೂಪ. ಸಹ). **Spícebush** ಅಮೆರಿಕದ ಒಂದು ಸುವಾಸನಾ ಸಸ್ಯ. **Spícery** (ನಾ.) ಸಂಬಾರ ಜಿನಸಿ (ಇಡುವ) ಕೋಣೆ. **Spícy** (ಗು.) ಮಸಾಲೆಯ; ಮಸಾಲೆ, ಸಂಬಾರ, —ಹಾಕಿದ; —ಹಾಕಿ ರುಚಿಕಟ್ಟಿದ. (ರೂಪ.) ಮಸಾಲೆ ಕಟ್ಟಿದ, ತೀಕ್ಷ್ಣವಾದ, ಕಾರವಾದ, ಅಸಭ್ಯ (S. story); ಮೆರೆತದ, ಆಡಂಬರದ, ಠೀವಿಯ. **Spícily** (ಕ್ರಿ. ವಿ.); **Spíciness** (ನಾ.)

Spick ಸ್ಪಿಕ್ (ಗು.) S. and span ಠಾಕು ಠೀಕಾದ, ಹೊಚ್ಚ ಹೊಸ.

Spícule ಸ್ಪಿಕ್ಯೂಲ್ (ನಾ.) ಚೂಪುಮೊನೆಯ, ಸೂಜಿಯಂಥ,—ಅಂಗ (ಭಾಗ): ಸೂಚ್ಯಂಗ; ಚೂಪುಮೊನೆಯ, ಮೊನಚಾದ,—ಪದಾರ್ಥ; ಸೂಜಿ, ಮುಳ್ಳು (Spicules of ice); (ಪ್ರಾ. ವಿ.) (ಮು., ಸ್ಪಂಜಿನ ರಚನೆಯಲ್ಲಿಯ) ಸೂಜಿ(ಮೊನೆಯ ಸಣ್ಣ ಗಡಸು ಪದಾರ್ಥ); (ಸ. ವಿ.) ಸಣ್ಣ ಹೂಗೊನೆ; ಉಪಗುಚ್ಛ; ಸಣ್ಣ ಎರಡನೆಯ ತೆನೆ. **Spícular** (ಗು.); **Spículate** —ಲೆಟ್ (ಗು.) —ಗಳಿಂದ ತುಂಬಿದ.

Spícy, etc. **Spice** ನೋಡಿ.

Spíder ಸ್ಪೈಡರ್ (ನಾ.) ಜೇಡ(ರ ಹುಳು) [S. and fly (ರೂಪ.) ಜೇಡ ಮತ್ತು ನೊಣ (ಬಲೆಗಾರ ಮತ್ತು ಬಲ; ವಂಚಕ ಮತ್ತು ವಂಚಿತ)]; ಜೇಡಜಾತಿಯ ಹುಳು, ತಂತುವಾಯ ವರ್ಗದ ಹುಳು; ಚಾಚು ತೆಳು ಕಾಲುಗಳುಳ್ಳ, ಜೇಡರಗಾಲಿನ— ವಸ್ತು (ಉದಾ., ಮೂರು ಕಾಲಿನ ಚೌಕಟ್ಟು); ಒಬ್ಬ ಸವಾರನಿಗಾಗಿ ಮಾಡಿದ, ದೊಡ್ಡ ಹಗುರ ಚಕ್ರದ, ಒಂಟಿ ಕುದುರೆಯ ಬಂಡಿ: ಜೇಡಬಂಡಿ. **S.-catcher** (ಜೇಡರ ಹುಳುವನ್ನು ಹಿಡಿಯುವ, ತಿನ್ನುವ, ಹಲವು ಬಗೆಯ ಹಕ್ಕಿ): ಜೇಡ ಹಿಡುಕ. **S.-crab** ನೀಳ ತೆಳುಗಾಲಿನ ನಳ್ಳಿ; ಜೇಡ ನಳ್ಳಿ. **S.-line** (ಸೂಕ್ಷ್ಮ ಕಾರ್ಯಗಳಿಗಾಗಿ ಮಾಪಕ, ಮೊ. ಗಳಲ್ಲಿ ತಂತಿಗೆ ಬದಲಾಗಿ ಹಾಕಿರುವ) ಜೇಡನ —ನೂಲು, ಎಳೆ. **S.-monkey** ನೀಳಗಾಲಿನ, ನೀಳ ಬಾಲದ, ಒಂದು ಜಾತಿಯ ಕೋತಿ: ಜೇಡ ಕೋತಿ. **S.-wasp** ತನ್ನ ಮರಿಗಳಿಗಾಗಿ ಗೂಡಿನಲ್ಲಿ ಜೇಡರ ಹುಳುಗಳನ್ನು ಶೇಖರಿಸಿಡುವ ಕಣಜ: ಜೇಡ ಕಣಜ. **Spíderlike** (ಗು.); **Spídery** (ಗು.) (ಮು., ಬರೆವಣಿಗೆ, ಕಾಲುಗಳು, ನೇಮಿಗಳು, ಮೊ. ಗಳ ವಿಷಯದಲ್ಲಿ) ಉದ್ದವೂ ತುಂಬ ತೆಳುವೂ ಆದ, ಜೇಡನ ಕಾಲಿನಂಥ; ಜೇಡರ—ಹುಳುವಿನಂಥ, ಹುಳುಗಳಿಂದ ತುಂಬಿದ; (ಜೇಡನಂತೆ) ತಂತ್ರಿಯಾದ, ಮೋಸಗಾರಿಕೆಯ.

Spiégeleisen ಸ್ಪೀಗಲೈಸನ್ (ನಾ.) (ಬೆಸಿಮರ್ ವಿಧಾನದಿಂದ ಉಕ್ಕು ಮಾಡುವಲ್ಲಿ ವಿಶೇಷವಾಗಿ ಉಪಯೋಗಿಸುವ) ಮ್ಯಾಂಗನೀಸ್ ಲೋಹವನ್ನೊಳಕೊಂಡ ಒಂದು ಬಗೆಯ ತಾಂಡವಾಳ.

Spíf(f)licate ಸ್ಪಿಫ್ಲಿಕೇಟ್ (ಕ್ರಿ. ಸಕ.) (ಅಸಂ.) ಚಚ್ಚಿಹಾಕು, ಕೊಂದುಹಾಕು; ನಾಶ, ಧ್ವಂಸ, —ಮಾಡಿಬಿಡು. **Spif(f)licátion** (ನಾ.)

Spígot ಸ್ಪಿಗಟ್ (ನಾ.) ಸಣ್ಣ ಗೂಟ, ಬೆಣೆ, ಬಿರಡೆ (ಮು., ಪೀಪಾಯಿಯ ಬೈರಿಗೆ ರಂಧ್ರವನ್ನು ಮುಚ್ಚಲು ಹಾಕುವಂಥದು); (ಸೇರಿಕೆಗಳಲ್ಲಿ) ಮುಂದಿನ ನಳಿಕೆಯ ಗೂಡಿನಲ್ಲಿ ಅಡಕವಾಗಿ ಕುಳಿತುಕೊಳ್ಳುವ ನಳಿಕೆಯ ಸಾದಾ ತುದಿ: ಕೂರು ತುದಿ.

Spike ಸ್ಪೈಕ್ (ನಾ., ಕ್ರಿ. ಸಕ.) ಚೂಪು ತುದಿ, ಮೊನೆ; (ಕಬ್ಬಿಣದ ಕಟಕಟೆ, ಮೊ. ಗಳ ಮೇಲ್ಭಾಗದಲ್ಲಿರುವಂಥ ಅಥವಾ ಜಾರದಿರುವಂತೆ ಜೋಡುಗಳ ಅಟ್ಟೆಗೆ ಹೊಡೆದಿರುವಂಥ) ಮೊನಚು ಲೋಹದ ತುಂಡು; ಮೇಕು; ಗುಬ್ಬಿಮೊಳೆ, ದಪ್ಪ ಮೊಳೆ, ಹೆಮ್ಮೊಳೆ (ಮು., ರೈಲು ದಾರಿಗೆ ಉಪಯೋಗಿಸುವಂಥದು); (ಸ. ವಿ.) ಒಂದೇ ತಾಳಿನಮೇಲೆ ಒತ್ತಾಗಿ ಬಿಟ್ಟಿರುವ ತೊಟ್ಟಿಲ್ಲದ ಪುಷ್ಪಗಳ ಗುಚ್ಛ: ಹೂಗೊನೆ, ಹೊಡೆ, ಕದಿರು ಗೊಂಚಲು; ಕದಿರು ಗೊಂಚಲ ರೆಂಬೆ; ಒಂದು ಬಗೆಯ ಲ್ಯಾವೆಂಡರ್ ಗಿಡ; [S. disease (ಗಂಧದ ಮರ, ಮೊ. ಮರಗಳಿಗೆ ಬರುವ) ಹೊಡೆರೋಗ. S. oil ಲ್ಯಾವೆಂಡರ್ ಎಣ್ಣೆ. S. plank (ಉತ್ತರ ಧ್ರುವ ಸಾಗರದ ಸಂಚಾರದ ಹಡಗಿನಲ್ಲಿ) ಹಿಂಭಾಗದ ಕೂವೆಯ ಮುಂದಿನ ಅಟ್ಟಣೆ]. (ಕ್ರಿ.) ಮೇಕು, ಹೆಮ್ಮೊಳೆ, —ಹೊಡೆ, ಹಾಕು, ಹಾಕಿ ಭದ್ರಪಡಿಸು; ಮೊನೆಯಿಂದ ತಿವಿ, ಇರಿ; (ಫಿರಂಗಿಯ) ಬತ್ತಿ ಇಡುವ ಕಂಡಿಯನ್ನು ಮೇಕಿನಿಂದ ಮುಚ್ಚಿಬಿಡು. **Spíkelet** (ನಾ.) (ಸ. ವಿ.) ಸಣ್ಣ —ಹೂಗೊನೆ, ಕದಿರು ಗೊಂಚಲು. **Spíkewise** (ಕ್ರಿ. ವಿ.); **Spíky** (ಗು.)

Spíkenard ಸ್ಪೈಕ್‌ನ(ನಾ)ರ್ಡ್ (ನಾ.) ತಪಸ್ವಿನಿ ಗಿಡ(ದಿಂದ ಪ್ರಾಚೀನರು ತಯಾರಿಸುತ್ತಿದ್ದ ಒಂದು ಅಮೂಲ್ಯ ಸುಗಂಧ ಲೇಪ); ಹಲವು ಬಗೆಯ ಸುಗಂಧ ತೈಲ.

Spile ಸ್ಪೈಲ್ (ನಾ., ಕ್ರಿ. ಸಕ.) ಮರದ ಗೂಟ, ಬೆಣೆ, ಬಿರಡೆ; (ಅಸ್ತಿಭಾರದ ಹದಿಕಟ್ಟಿನ ಭಾಗವಾದ, ನೆಲದಲ್ಲಿ ನೆಡುವ) ಚೂಪು ತುದಿಯ ದೊಡ್ಡ ಮರದ ಕಂಬ; ದಸಿ. (ಕ್ರಿ.) (ದ್ರವವನ್ನು ತೆಗೆಯಲು ಪೀಪಾಯಿಯಲ್ಲಿ) ತೂತು ಮಾಡು; ತೂತು ಮುಚ್ಚಿಬಿಡು, ಬಿರಡೆ ಹಾಕು (*Up* ಸಹ). **Spíling** (ನಾ.) ದಸಿಗಳು, ಮರದ ಕಂಬಗಳು, ಗೂಟಗಳು; (ನಾವೆ) (ಹಡಗಿನ ಒಡಲಿನ ಹಲಗೆಯ) ಅರುಗಿನ ಬಾಗು, ವಕ್ರ ಪರಿಮಾಣ.

Spill[1] ಸ್ಪಿಲ್ (ಕ್ರಿ.; ಭೂತ., ಭೂ. ಕೃ. Spilt *or* Spilled; ನಾ.) (ದ್ರವ, ಹಿಟ್ಟು, ಮೊ. ಗಳ ವಿಷಯದಲ್ಲಿ) ಚೆಲ್ಲು, ಚೆಲ್ಲಿಹೋಗು, ಸುರಿ(ಸು), ಸುರಿದುಹೋಗು [Cry over spilt milk (Cry ನೋಡಿ). S. blood ರಕ್ತಪಾತ ಮಾಡು; ಕೊಲೆಮಾಡು. S. the blood of (—ನ್ನು) ಕೊಲ್ಲು. S. money (ಅಸಂ.) (ಜೂಜು, ಮೊ. ಗಳಲ್ಲಿ) ಹಣ —ಚೆಲ್ಲು, ಕಳೆದುಕೊ]. (ನಾವೆ) ಹಾಯಿಯ ಹೊಟ್ಟೆಯಿಂದ ಗಾಳಿ ತೆಗೆ, ಗಾಳಿಯೊತ್ತಡ ತಪ್ಪಿಸು. (ಜೀನಿನಿಂದ, ಬಂಡಿಯಿಂದ) ಹೊರಕ್ಕೆ ಎತ್ತಿಹಾಕು, ಎಸೆ, ಬೀಳಿಸು (Horse spilt him. Was spilt from a dog-cart). (ನಾ.) ಹೊರಕ್ಕೆ ಎತ್ತಿಹಾಕುವುದು, ಬೀಳು (Had a nasty s.); ಸುರಿತ, ಸುರಿದದ್ದು. **Spíllway** (ನಾ.) ಕಟ್ಟೆಯಲ್ಲಿಯ ಹೆಚ್ಚಿನ ನೀರು ಹೋಗಲು ಮಾಡಿರುವ ಮಾರ್ಗ: ಕೋಡಿ. **Spilth** (ನಾ.) (ಪ್ರಾಚೀ. ಪ್ರ.) ಚೆಲ್ಲಿದ್ದು; ಮಿಕ್ಕದ್ದು, ಹೆಚ್ಚಿಕೆ.

Spill[2] ಸ್ಪಿಲ್ (ನಾ.) ಮರದ ಚಕ್ಕೆ, ದೆಬ್ಬೆ, ಸಿಬುರು; (ಮೋಂಬತ್ತಿ, ಚುಂಗಾಣಿ, ಮೊ. ನ್ನು ಹೊತ್ತಿಸುವುದಕ್ಕಾಗಿ ಮಾಡಿರುವ) ಕಡ್ಡಿ, ಕಾಗದದ ಸುರುಳಿ. (ರಂಧ್ರ ಮುಚ್ಚುವ) ಸಣ್ಣ ಬೆಣೆ, ಬಿರಡೆ. **Spíllikin** (ನಾ.) (ಕೆಲವು ಆಟಗಳಲ್ಲಿ ಉಪಯೋಗಿಸುವ ಮರ, ಎಲುಬು, ಮೊ. ಗಳ) ಚಕ್ಕೆ, ಸಿಬುರು; (ಬ. ವ.) ಇವುಗಳಿಂದ ಆಡುವ ಆಟ (=Spelicans)

Spiller ಸ್ಪಿಲರ್ (ನಾ.) ದೊಡ್ಡ ಬಲೆಯಲ್ಲಿ ಮೀನು ಹೆಚ್ಚಾಗಿ, ಆ ಬಲೆಯನ್ನು ದಡಕ್ಕೆ ಎಳೆಯಲಾಗದೆ ಹೋದಾಗ, ಕೆಲವು ಮೀನುಗಳನ್ನು ತೆಗೆದುಬಿಡುವುದಕ್ಕಾಗಿ ಅದರೊಳಕ್ಕೆ ಹಾಕುವ ಬೇರೆ ಸಣ್ಣ ಬಲೆ: ಮೊಗೆ ಬಲೆ.

Spillikin. **Spill**[2] ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Spilt. Spill[1] ಧಾತುವಿನ ಭೂತ., ಭೂ. ಕೃ.

Spilth. **Spill**[1] ನೋಡಿ.

Spin ಸ್ಪಿನ್ (ಕ್ರಿ. ; ಭೂತ. Spun ಸ್ಪನ್, Span ಸ್ಪ್ಯಾನ್ ; ಭೂ. ಕೃ. Spun) (ದಾರ) ನೂಲು ; ನೂಲು—ಮಾಡು, ತೆಗೆ ; (ಜೇಡರ ಹುಳು, ರೇಷ್ಮೆ ಹುಳು, ಮೊ. ಗಳ ವಿಷಯದಲ್ಲಿ) ನೂತು ಬಲೆ ಹೆಣೆ, ಗೂಡು ಕಟ್ಟು. [ಕಡೆತದ ಯಂತ್ರ(ದಂಥ ಯಂತ್ರ)ದಲ್ಲಿ] (ಬಟ್ಟಲು, ಮೊ. ನ್ನು) ಕಡೆ. (ರೂಪ.) (ಕಥೆ, ಹೇಳಿಕೆ, ಲೇಖನ, ಮೊ. ನ್ನು) ಹೊಸೆ [S. out ಲಂಬಿಸು, ಉದ್ದ ಬೆಳಸು ; (ಕಾಲ, ಜೀವಮಾನ, ಮೊ. ನ್ನು ಚರ್ಚೆ, ಕೆಲಸ, ಮೊ. ಗಳಲ್ಲಿ) ಕಳೆ. S. a yarn (ಮೊದಲನಲ್ಲಿ ನಾವಿಕ ಪ್ರ.) ಕಥೆ ಹೇಳು]. (ಬುಗುರಿಯನ್ನು) ಆಡಿಸು, ತಿರುಗಿಸು, ಸುತ್ತಿಸು ; (ಬುಗುರಿ) ಆಡು, ಸುತ್ತು, ತಿರುಗು ; (ಮನುಷ್ಯ, ವಸ್ತು) ಗಿರಕಿ—ಹೊಡೆ, ಹೊಡಸು (Sent him spinning) ; (ತೊರೆ, ಹೊಂಡ, ಮೊ. ಗಳಲ್ಲಿ) ಗಿರಕಿ ಚಮಚದಿಂದ, ಚಮಚಗಾಳದಿಂದ, —ಮೀನು ಹಿಡಿ. (ಅಸಂ.) (ಉಮೇದುವಾರನನ್ನು) ಪರೀಕ್ಷೆಮಾಡಿ ನಿರಾಕರಿಸು, ಅಸಮರ್ಥನೆಂದು ಕಳುಹಿಸಿಬಿಡು. (ವಿಮಾನ) ಗಿರಕಿ ಹೊಡೆಯುತ್ತ ಕೆಳಕ್ಕಿಳಿ. (ಭೂ. ಕೃ. ನಲ್ಲಿ ; ಅಸಂ.) ಸುಸ್ತಾದ, ದಣಿದುಹೋದ. Spun glass ದ್ರವರೂಪದಲ್ಲಿದ್ದಾಗ ನೂಲಾಗಿ ಎಳೆದ, ಆರಿದಮೇಲೆ ನಮ್ಯ ಗುಣವುಳ್ಳ ಗಾಜು : ನೂತಗಾಜು, ಎಳೆಗಾಜು. Spun gold, silver (ನೆಯ್ಗೆಗೆ ಅನುಕೂಲಿಸುವಂತೆ ತಯಾರಿಸಿದ) ಚಿನ್ನದ, ಬೆಳ್ಳಿಯ, ಸರಿಗೆ. Spun silk ಸಣ್ಣ ಎಳೆಯ, ನೂಲು ಬೆರಕೆಯ, —ಕಳಪೆ ರೇಷ್ಮೆ; ಜೂಟು ರೇಷ್ಮೆ. Spun yarn (ನಾವೆ) ಹುರಿಗಳನ್ನು ಹೊಸೆದು ಮಾಡಿದ ಹಗ್ಗ ; ಹೊಸೆ ಹಗ್ಗ. **Spínner** (ನಾ.) (ಕ್ರಿಯಾರ್ಥಗಳಲ್ಲಿ); ನೂಲುವ ಯಂತ್ರ; ನೂಲುವವನು, ನೂಲುಕಾರ ; ಚರಕಿಯಂತ್ರದಲ್ಲಿ ಬಟ್ಟಲು, ಮೊ. ನ್ನು ಕಡೆಯುವವನು : ಕಡೆತಕಾರ, ಚರಕಿಯುವನು; (ಜೇಡರ ಹುಳು, ರೇಷ್ಮೆ ಹುಳು, ಮೊ. ಗಳಲ್ಲಿ) ನೂಲುವ ಅಂಗ; ತಂತುಕ (= **Spínneret**). **Spínning** (ನಾ.) (ಕ್ರಿಯಾರ್ಥಗಳಲ್ಲಿ) ; S.-house (ಮು., ಚರಿತ್ರೆ ಪ್ರ.) ಸೂಳೆಯರ ಸನ್ಮಾರ್ಗ ಶಿಕ್ಷಣಗೃಹ (ಅವರ ಜೀವನೋಪಾಯವಾಗಿ ಚರಕ ತಿರುಗಿಸುವುದನ್ನು ಕಲಿಸುತ್ತಿದ್ದುದರಿಂದ) ; ನೂಲುವ ಮನೆ. S.-jenny ಒಟ್ಟಿಗೆ ಅನೇಕ ಎಳೆಗಳನ್ನು ನೂಲುವ ಯಂತ್ರಸಲಕರಣೆ : ಹಲವು ನೂಲ, ಹಲವು ಕದಿರುಗಳ, —ರಾಟೆ. S.-machine ನೂಲುವ ಯಂತ್ರ. S.-wheel ನೂಲುವ ರಾಟೆ ; ಚರಕ.

Spin (ನಾ.) ಗಿರಕಿ (ಸುತ್ತುವುದು), ಸುತ್ತು, ತಿರುಗು, ಭ್ರಮಣ; (ಬಂಡಿ ನಡಸುವುದು, ಬೈಸಿಕಲ್ ಸವಾರಿ, ದೋಣಿ ನಡಸುವುದು, ಮೊ. ಗಳ) ಪಟ್ಟು, ಸಣ್ಣ ಚುರುಕು ಓಟ (Went for a s.) ; (ವಿಮಾನ) ಗಿರಕಿ ಹೊಡೆಯುತ್ತ ಕೆಳಕ್ಕಿಳಿಯುವುದು ; ಗಿರಕಿ ಇಳಿತ.

Spínach, -age ಸ್ಪಿನೆ(ನಿ)ಜ್ (ನಾ.) ಬೇಯಿಸಿ ಆಹಾರವಾಗಿ ಉಪಯೋಗಿಸುವ, ಮೆತು ತಿರುಳು ಎಲೆಗಳುಳ್ಳ, ಒಂದು ಕಾಯಿಪಲ್ಯ : ಬಚ್ಚಲೆ ಸೊಪ್ಪು, ಬಸಲೆ ಸೊಪ್ಪು ; ಬಚ್ಚಲೆ ಜಾತಿಯ ಸೊಪ್ಪು. **Spináceous** (ಗು.) ಬಚ್ಚಲೆ ಜಾತಿಯ.

Spínal. **Spine** ನೋಡಿ.

Spíndle ಸ್ಪಿಂಡ್‌ಲ್ (ನಾ., ಕ್ರಿ. ಅಕ.) (ಚರಕದಲ್ಲಿ) ನೂಲು ತಿರುಚುವ ಮತ್ತು ಸುತ್ತುವ ಸಲಕರಣೆ : ಕದಿರು, ಕದಿರಣಿಗೆ ; (ನೂಲುವ ಯಂತ್ರದಲ್ಲಿ) ದಾರ ಸುತ್ತುವ ಉರುಳೆಯ ಆಸರೆ ಕಂಬಿ : ಕದಿರು ಕಂಬಿ ; ತಿರುಗು ಅಚ್ಚು; (Live s. ತಿರುಗುವ —ಕದಿರು, ಅಚ್ಚು. Dead s. ತಿರುಗದ—) ; ತೆಳ್ಳನೆಯ ಮನುಷ್ಯ ಅಥವಾ ವಸ್ತು; ಕದಿರು ಕಡ್ಡಿ ; ನೂಲಿನ ಒಂದು ಅಳತೆ (ಹತ್ತಿಯ ನೂಲು ೧೫,೧೨೦ ಗಜ ; ನಾರು ನೂಲು ೧೪,೪೦೦ ಗಜ) ; [S.-shanked ನೀಳ ತೆಳುಗಾಲಿನ, ಕದಿರು ಕಡ್ಡಿಗಾಲಿನ. S.-shanks —ಮನುಷ್ಯ ; ಕದಿರು ಕಡ್ಡಿ. S.-shaped ಎರಡು ತುದಿಗಳ ಕಡೆಗೂ ಮೊನಚಾಗುತ್ತ ಹೋಗುವ ದಿಂಡಿನ ಆಕಾರದ : ಕದಿರಾಕಾರದ. S.-tree ಅದರ ಚೇಗಿನಿಂದ ಕದಿರುಗಳನ್ನು ಮಾಡುವ ಒಂದು ಗಿಡ : ಗಲಗು, ಕದಿರು ಗಿಡ]. (ಕ್ರಿ.) ತೆಳುವಾಗಿಯೂ ನೀಳವಾಗಿಯೂ ಬೆಳೆ(ದಿರು) ; ಕದಿರು ಕಡ್ಡಿ —ಆಗಿರು, ಆಗಿ ಬೆಳೆ. **Spíndly** (ಗು.) ಕದಿರು ಕಡ್ಡಿಯಾದ.

Spíndrift ಸ್ಪಿಂಡ್ರಿಫ್ಟ್ (ನಾ.) ಸಮುದ್ರದ, ಕಡಲ, —ತುಂತುರು. S. clouds ತುಂತುರು ಮೋಡ, ತುಪ್ಪುಳು ಮೋಡ.

Spine ಸ್ಪೈನ್ (ನಾ.) ಬೆನ್ನೆಲುಬು, ಬೆನ್ನುಮೂಳೆ, ಕಶೇರು(ಕ), ರೀಢಕ (Railway s. ರೈಲು ಆಕಸ್ಮಿಕದಿಂದ ಆದ ಬೆನ್ನುಮೂಳೆಯ ಜಜ್ಜು) ; (ಸ. ವಿ.) ಯಾವುದಾದರೂ ಅಂಗದ ಕ್ಷೀಣತೆಯಿಂದ ಅಥವಾ ಮಾರ್ಪಾಟಿನಿಂದ ಆದ, ಗಡುಸೂ ಮೊನಚೂ ಆದ ಚಾಚು : ಮುಳ್ಳು, ಕಂಟಕ ; (ಬೆನ್ನುಮೂಳೆಯಂತಿರುವ) ಚೂಪು—ಡುಬ್ಬ, ಚಾಚು; ಬೆಟ್ಟದ ಬೆನ್ನೇಣು ; (ರೂಪ.) ಕೆಚ್ಚು, ಸತ್ತ್ವ. **Spínal** (ಗು.) ಬೆನ್ನುಮೂಳೆಯ, ಕಶೇರುಕದ (S. curvature ಬೆನ್ನುಮೂಳೆಯ ಬಾಗು. S. cord ಬೆನ್ನುಹುರಿ, ಮಿದುಳುಬಳ್ಳಿ. S. column ಕಶೇರುಕ). **Spineback** ಈಜು ರೆಕ್ಕೆಯ ಹತ್ತಿರ ಮುಳ್ಳುಗಳಿರುವ ಮೀನು. **Spíned** (ಗು.) ; **Spínel** (ಗು.) ; **Spíneless** (ಗು.) ಬೆನ್ನೆಲುಬಿಲ್ಲದ, ಅಕಶೇರುಕ ; (ರೂಪ.) ಅದೃಢ, ದುರ್ಬಲ, ಆಪಿಲ್ಲದ, ಸತ್ತ್ವವಿಲ್ಲದ; (ಮೀನುಗಳ ವಿಷಯದಲ್ಲಿ) ಈಜು ರೆಕ್ಕೆಯ ಹತ್ತಿರ ಮುಳ್ಳುಗಳಿಲ್ಲದ. **Spínose** (ಗು.) ಮುಳ್ಳುಗಳಿರುವ, ಮುಳ್ಳು ಬಿಡುವ. **Spínous** (ಗು.) (ರೂಪ.) ಮುಳ್ಳಿನಂಥ, ಕುಟುಕುವ, ಶುಷ್ಕಜಟಿಲ, ಫಜೀತಿಯ ; ಮುಳ್ಳುಳ್ಳ ; ಮುಳ್ಳಿನಾಕಾರದ. **Spinosíty** (ನಾ.) ಅನಿಷ್ಟ ಟೀಕೆ ; ಶುಷ್ಕ ಜಟಿಲ—ತರ್ಕ, ವಾದ ; ಕಬ್ಬಿಣದ ಕಡಲೆ, ಕಗ್ಗಂಟು. **Spínule** (ನಾ.) (ಸ. ವಿ., ಪ್ರಾ. ವಿ.) ಸಣ್ಣ ಮುಳ್ಳು. **Spinulíferous** (ಗು.) ಸಣ್ಣ ಮುಳ್ಳುಗಳಿರುವ. **Spínulose** (ಗು.), **Spínulous** (ಗು.) ಸಣ್ಣ ಮುಳ್ಳುಗಳುಳ್ಳ ; ಮುಳ್ಳಿನಾಕಾರದ. **Spíny** (ಗು.) ಮುಳ್ಳುಗಳುಳ್ಳ, ಮುಳ್ಳಿಡಿದ (ಮು., ಪ್ರಾಣಿಗಳ ಹೆಸರಿನಲ್ಲಿ : S. crab, rat ಮುಳ್ಳು —ನಳ್ಳಿ, ಇಲಿ) ; (ರೂಪ.) ಜಟಿಲ, ಕಗ್ಗಂಟಾದ, ಮುಳ್ಳು ಸಹವಾಸದ, ತೊಡಕಿನ, ಫಜೀತಿಯ. **Spíniness** (ನಾ.)

Spíni- ಸ್ಪೈನಿ— (ಸ. ಪೂ. ಪ.) ಮುಳ್ಳು—, ಕಂಟಕ— ; ಬೆನ್ನುಮೂಳೆ—, ಕಶೇರು(ಕ)—. **-cérebrate** ಮಿದುಳೂ ಮಿದುಳುಬಳ್ಳಿಯೂ ಉಳ್ಳ; ಕಶೇರು ಮಸ್ತಿಷ್ಕ. **-ferous** ಮುಳ್ಳುಗಳಿರುವ, ಮುಳ್ಳುಬಿಡುವ, ಕಂಟಕಧಾರಿ. **-form** ಮುಳ್ಳಿನಾಕಾರದ

Spínel ಸ್ಪಿನೆಲ್ (ನಾ.) ನಿಯತ ಸ್ಫಟಿಕಾಕೃತಿಗಳಲ್ಲಿ ದೊರೆಯುವ, ನಾನಾ ಬಣ್ಣಗಳ, ಹಲವು ಬಗೆಯ ಖನಿಜ : ಸ್ಪಿನೆಲ್ ಖನಿಜ. S. ruby ಒಂದು ಬಗೆಯ ಕೆಂಪು, ಮಾಣಿಕ್ಯ.

Spíneless. **Spine** ನೋಡಿ.

Spinét, Spí- ಸ್ಪಿನೆಟ್ (ನಾ.) (ಚರಿತ್ರೆ) ಒಂದು ಬಗೆಯ ತಂತಿವಾದ್ಯ.

Spíni-. **Spine** ನೋಡಿ.

Spínnaker ಸ್ಪಿನಕರ್ (ನಾ.) (ಪಂದ್ಯದ ದೋಣಿ ಗಾಳಿಯ ದಿಕ್ಕಿನಲ್ಲಿ ಓಡುವಾಗ) ಮುಖ್ಯ ಕೂವೆಗೆ ಹಾಕಿದ ದೊಡ್ಡ ಮುಮ್ಮೂಲೆಯ ಪಟ.

Spínner, Spínneret, Spínning. **Spin** ನೋಡಿ.

Spínney ಸ್ಪಿನಿ (ನಾ.) ಕಿಗ್ಗಾಡು, ಕುರುಚಲು ಕಾಡು ; ತೋಪು.

Spinózism ಸ್ಪಿನೋಸಿಸ್‌ಂ (ನಾ.) ೧೭ನೆಯ ಶ. ಮಾ. ದಲ್ಲಿದ್ದ ಪಾಶ್ಚಾತ್ಯ ಯೆಹೂದ್ಯ ದಾರ್ಶನಿಕನಾದ B. de Spinoza ಎಂಬಾತನು ಪ್ರತಿಪಾದಿಸಿದ, ಇರುವುದು ಏಕಮಾತ್ರವೂ ಅನಂತವೂ ಆದ ಸತ್ತ್ವವೊಂದೇ, ಮನಸ್ಸೂ ಭೌತ ಪ್ರಪಂಚವೂ ಆ ಸತ್ತ್ವದ ವಿಶೇಷ ಗುಣಗಳು, ಮತ್ತು ಎಲ್ಲ ವ್ಯಕ್ತಿಗಳೂ ಅದರ ಬದಲಾಯಿಸುತ್ತಿರುವ ರೂಪಗಳು —ಎಂಬ ವಾದ; ಸ್ಪಿನೋಸನ ವಾದ, ತತ್ತ್ವ, ಮತ. **Spínozist** (ನಾ.) ; **Spinozístic** (ಗು.)

Spínster ಸ್ಪಿನ್‌ಸ್ಟರ್ (ನಾ.) ಮದುವೆಯಿಲ್ಲದ (ವಯಸ್ಸಾದ) ಹೆಂಗಸು ; ಅವಿವಾಹಿತ ಸ್ತ್ರೀ (ಮು., ಜನ ಬಳಕೆಯಲ್ಲಿ ಅವಿವಾಹಿತ ವೃದ್ಧ ಸ್ತ್ರೀ) ; ವೃದ್ಧ ಕನ್ಯೆ. **Spínsterhood** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Spinthárіscope ಸ್ಪಿಂತ್ಯಾರಿಸ್ಕೋಪ್ (ನಾ.) ರೇಡಿಯಂ ಎಂಬ ಲೋಹದ ವಿಕಿರಣವನ್ನು ಕಿಡಿ ಸೂಸುವುದರ ಮೂಲಕ ತೋರಿಸುವ ಸಲಕರಣೆ : ಸ್ಫುರಣ ದರ್ಶಕ.

Spínule, Spinulíferous, Spínulose, Spínulous, Spíny. **Spine** ನೋಡಿ.

Spíracle ಸ್ಪೈ(ಅ)ರಕ್‌ಲ್ (ನಾ.) (ಪ್ರಾ. ವಿ.) (ಪ್ರಾಣಿಗಳಲ್ಲಿಯ, ಹಲವು ಬಗೆಯ) ಉಸಿರು ಕಂಡಿ, ಶ್ವಾಸರಂಧ್ರ (ಉದಾ., ತಿಮಿವರ್ಗದ ಪ್ರಾಣಿಯ ಮೂಗಿನ ಹೊಳ್ಳೆ). **Spirácular** ಸ್ಪೈರ್ಯಾಕ್ಯುಲರ್ (ಗು.) ಶ್ವಾಸ ರಂಧ್ರದ, ಶ್ವಾಸ ರಂಧ್ರ ಸಂಬಂಧವಾದ. **Spirácu-late** —ಲೆಟ್ (ಗು.) ಶ್ವಾಸ ರಂಧ್ರವುಳ್ಳ.

Spiraéa ಸ್ಪೈರೀಯ (ನಾ.) ಗುಲಾಬಿ ಜಾತಿಯ ಹಲವು ಬಗೆಯ ಗಿಡ.

Spiral ಸ್ಪೈ(ಅ)ರಲ್ (ಗು., ನಾ., ಕ್ರಿ. ಸಕ.) ಸುರುಳಿ, ಸಿಂಬಿ—ಸುತ್ತಿಕೊಂಡಿರುವ, ಸುತ್ತಿದ, ಆಕಾರದ; ತಿರುಪು ಮೊಳೆಯಂಥ, ಮರ ಸುತ್ತಿನಂಥ, —ಸುತ್ತುಗಳುಳ್ಳ; ಆವರ್ತ; (S. balance ಸುರುಳಿ ಸುತ್ತಿದ ಎಗುರುಪಟ್ಟಿಯ ತಿರುಚಿನಿಂದ ತೂಕ ಮಾಡುವ ತಕ್ಕಡಿ : ಸುರುಳಿ ತಕ್ಕಡಿ. S. wheel ಅಕ್ಷಕ್ಕೆ ಕೋನವಾಗಿ ಕೊಯ್ದಿರುವ ಹಲ್ಲು ಗಳುಳ್ಳ ಚಕ್ರ : ಸುರುಳಿ ಹಲ್ಲುಚಕ್ರ). (ನಾ.) ಸುರುಳಿ, ಸಿಂಬಿ (—ಆಕಾರದ ವಕ್ರರೇಖೆ, ಎಗುರುಪಟ್ಟಿ, ರಚನೆ, ಮೊ. ವು); ಆವರ್ತ. (ಕ್ರಿ.) ಸುರುಳಿ —ಮಾಡು, ಸುತ್ತು. **Spirálity** (ನಾ.); **Spírally** (ಕ್ರಿ. ವಿ.); **Spire**[1] (ನಾ.) ಸುರುಳಿ, ಸಿಂಬಿ; (ಸುರುಳಿಯ ಒಂದು) ಸುತ್ತು. **Spíry**[1] (ಗು.)

Spírant ಸ್ಪೈ(ಅ)ರಂಟ್ (ಗು., ನಾ.) ಹೊರದೂಡಿದ ಉಸಿರು ಬಾಯಿಯ ದ್ವಾರದ ಯಾವುದಾದರೂ ಭಾಗವನ್ನು ಉಜ್ಜಿ, ಉಸಿರಿನ ವಿಚ್ಛಿತ್ತಿ ಯಿಲ್ಲದೆ ಉಚ್ಚಾರವಾಗುವ (ವ್ಯಂಜನ): ಘರ್ಷ (ವ್ಯಂಜನ) (ಉದಾ., ಫ, ಶ, ಷ, ಮೊ. ವು) (Explode ಕೆಳಗೆ Explosive ನೋಡಿ)

Spire[1], **Spíry**[1]. **Spiral** ನೋಡಿ.

Spire[2] ಸ್ಪೈ(ಅ)ರ್ (ನಾ., ಕ್ರಿ.) ಗೋಪುರ, ಮೊ. ಗಳ ಮೇಲಿನ ಎತ್ತರವಾದ ಶಂಕುವಿನಾಕಾರದ ಅಥವಾ ಪಿರಿಮಿಡ್ಡಿನಾಕಾರದ ಕಟ್ಟಡ : ಶೃಂಗ, ಶಿಖರ, ಮಿನಾರು. ಮರದಲ್ಲಿ ಕೊಂಬೆಯೊಡೆಯುವ ಸ್ಥಳದ ಮೇಲ್ಭಾಗದ ತಾಳು, ಕಾಂಡ : ಕಾಂಡಾಗ್ರ, ತಾಳು ಚೂಪು; ತುದಿಯ ಕಡೆಗೆ ಚೂಪಾಗುತ್ತ ಹೋಗುವ ವಸ್ತು (ಉದಾ., ಹುಲ್ಲುಕಡ್ಡಿ). (ಕ್ರಿ.) ಚೂಪಾಗಿ —ಮೇಲಕ್ಕೇಳು, ಮೊಳೆ; ಶೃಂಗ, ಮಿನಾರು, —ಇಡು, ಕಟ್ಟು. **Spíry**[2] (ಗು.)

Spírit ಸ್ಪಿರಿಟ್ (ನಾ.) ಆತ್ಮ, ಜೀವ, ಪ್ರಾಣ, ಚೇತನ, ಅಂತಃಕರಣ, ಮನಸ್ಸು [In (the) s. ಮನಸ್ಸಿನೊಳಗೆ, ಅಂತರ್ಯದಲ್ಲಿ (Groaned in s.). Shall be with you in (the) s. ಮನಸಾ ನಿನ್ನೊಡನೆ ಇರುತ್ತೇನೆ]; ವ್ಯಕ್ತಿ, ಆತ್ಮ (One of the most ardent spirits of his time ತನ್ನ ಕಾಲದ ಅತ್ಯಂತ ಉತ್ಸಾಹಶಾಲೀ ವ್ಯಕ್ತಿಗಳಲ್ಲೊಬ್ಬ. A master-s. ಪ್ರಚಂಡ; ಮಹಾ ಪ್ರಭಾವಶಾಲೀ ಚೈತನ್ಯ; ಮಹಿಮಾ ಪುರುಷ); ಭೌತ ದೇಹವಿಲ್ಲದ ಆದರೆ ವಿವೇಚನೆ, ಬುದ್ಧಿ, ಇರುವ ವ್ಯಕ್ತಿ : ಅಮೂರ್ತ ವ್ಯಕ್ತಿ, ಆತ್ಮ, ಯಕ್ಷ, ಪ್ರೇತ, ಭೂತ, ದೆವ್ವ, ಪಿಶಾಚಿ, ಗಾಳಿ [God is a s. ದೇವರು ಆತ್ಮಸ್ವರೂಪಿ, ಚಿನ್ಮಯ. The Holy S. (Holy ನೋಡಿ). Has seen a s. ದೆವ್ವವನ್ನು ನೋಡಿದ್ದಾನೆ. Spirits must have been at work ಪಿಶಾಚಿಗಳ ಕೆಲಸವಿರಬೇಕು. Peace to his departed s. ಅವನ ಆತ್ಮಕ್ಕೆ ಶಾಂತಿಯುಂಟಾಗಲಿ. Astral spirits (Astral ನೋಡಿ). Familiar s. (Familiar ನೋಡಿ)]; (ವ್ಯಕ್ತಿಯ) ಸ್ವಭಾವ, ಶೀಲ, ಪ್ರಕೃತಿ (A man of an unbending s. ಸಗ್ಗದ ಸ್ವಭಾವದ ಮನುಷ್ಯ. The poor in s. ನಿರುತ್ಸಾಹದ, ನಿಸ್ಸತ್ತ್ವದ, ನಮ್ರ, —ಜನ); ಧೈರ್ಯ, ಹುರುಪು, ಕೆಚ್ಚು, ಹುಮ್ಮಸ್ಸು, ಸತ್ತ್ವ, ಚೈತನ್ಯ, ಉತ್ಸಾಹ (Do show a little s.; Infused s. into his men ತನ್ನ ಜನರಿಗೆ ಧೈರ್ಯವನ್ನು, ಉತ್ಸಾಹವನ್ನು, —ತುಂಬಿದನು. People of s. ಸತ್ತ್ವ ಶಾಲಿಗಳು, ಕೆಚ್ಚಿನವರು, ಉತ್ಸಾಹವಂತರು); ಚೈತನ್ಯ ಸ್ವರೂಪಿ, ಆತ್ಮ ಸ್ವರೂಪಿ, ಪ್ರಾಣಪ್ರಾಯ (Was the animating s. of the rebellion ಅವನು ದಂಗೆಯ ಪ್ರೇರಕ ಚೈತನ್ಯವಾಗಿದ್ದನು); ಮನೋಭಾವ; ನಿಜವಾದ—ಅಭಿಪ್ರಾಯ, ಆಶಯ, ಅರ್ಥ (Took it in a wrong s. ಅದನ್ನು ತಪ್ಪಾದ ಭಾವದಲ್ಲಿ ಗ್ರಹಿಸಿದನು, ಅಪಾರ್ಥ ಮಾಡಿಕೊಂಡನು. Did it in a s. of mischief ಅದನ್ನು ಚೇಷ್ಟೆಯ ಮನೋಭಾವದಿಂದ ಮಾಡಿದನು. Must consider the s. of the law, not the letter ಕಾನೂನಿನ ಇಂಗಿತವನ್ನು ನೋಡಬೇಕು, ಬರಿಯ ಶಬ್ದಾರ್ಥವನ್ನಲ್ಲ); (ಒಂದು ಕಾಲದ) ಮುಖ್ಯ—ಮನೋವೃತ್ತಿ, ಪ್ರಭಾವ (The s. of the times ಕಾಲದ ಮುಖ್ಯ ಪ್ರಭಾವ); (ಹಿಂದಿನ ಅರ್ಥ) ಜೀವವ್ಯಾಪಾರಗಳಿಗೆ ಆಧಾರವಾದ ಅಭೌತ ತತ್ತ್ವ [(ಅದರಿಂದ ಈಗಿನ ಪ್ರ.) Animal spirits (Animal ನೋಡಿ). High spirits, great spirits ಉಲ್ಲಾಸ, ಹುಮ್ಮಸ್ಸು. Poor spirits, Low spirits ನಿರುತ್ಸಾಹ, ಮಂಕು, ಕುಗ್ಗು]; (ನಾ., ಬ. ವ. ದಲ್ಲಿ) ತೀಕ್ಷ್ಣ ಮದ್ಯ, ಮದ್ಯಸಾರ, ಸಾರಾಯಿ [ಉದಾ., ಬ್ರಾಂದಿ, ವಿಸ್ಕಿ, ಜಿನ್, ರಂ, ಮೊ. ಮದ್ಯ (Touches no s. but gin ಜಿನ್ ಮದ್ಯ ಹೊರತು ಬೇರೆ ಮದ್ಯವನ್ನು ಮುಟ್ಟುವುದಿಲ್ಲ). Ardent spirits ತೀಕ್ಷ್ಣ ಮದ್ಯ]; ಮದ್ಯಸಾರ ದ್ರಾವಣ, ಟಿಂಕ್ಚರ್ (*Of* ಉಪ. ದೊಡನೆ). S. *or* spirits of wine ಶುದ್ಧ ಮದ್ಯಸಾರ Spirits of salt ಹೈಡ್ರೊಕ್ಲೋರಿಕ್ ಆಮ್ಲ. Methylated s. (Methyl ಕೆಳಗೆ Methylate ನೋಡಿ). **S. blue** ಮದ್ಯಸಾರದಲ್ಲಿ ಕರಗುವ ನೀಲಿ. **S. duck** ಅಪಾಯ ಸೂಚನೆ ಕಂಡೊಡನೆಯೆ ತಟಕ್ಕನೆ ಮುಳುಗುವ ಬಾತು. **S.-gum** (ನಾಟಕಶಾಲೆಯಲ್ಲಿ) ವೇಷ ಧಾರಣೆಯಲ್ಲಿ ಉಪಯೋಗಿಸುವ, ಬೇಗ ಆರುವ ಅಂಟು : ಸ್ಪಿರಿಟ್ ಗೋಂದು. **S.-lamp** ಎಣ್ಣೆಗೆ ಬದಲು ಮದ್ಯಸಾರವನ್ನು ಉರಿಸುವ ದೀಪ : ಸ್ಪಿರಿಟ್ ದೀಪ. **S.-level** ರಸಮಟ್ಟ. **S.-rapper** ಮೇಜಿನಮೇಲೆ ತಟ್ಟುವುದು, ಮೊ. ಗಳ ಮೂಲಕ ಪ್ರೇತಗಳೊಡನೆ ವ್ಯವಹರಿಸುವವನು : ಪ್ರೇತ ಸವ್ಯವಹಾರಿ. **S.-rapping** ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ಪ್ರೇತಗಳು ಮಾಡುವುವೆಂದು ಹೇಳುವ ತಟ್ಟುಗಳು; ಪ್ರೇತದ ತಟ್ಟುಗಳು; ಪ್ರೇತ(ದೊಡನೆ) ಸವ್ಯವಹಾರ. **S.-room** (ನಾವೆ) ಸಂಬಳ ಬಟವಾಡೆಗಾರನ ಕೋಣೆ (ಹಿಂದೆ, ಮದ್ಯ ಶೇಖರಿಸಿಡಲು ಉಪಯೋಗಿಸುತ್ತಿದ್ದುದು). **Spírited** (ಗು.) ಧೈರ್ಯ, ಸತ್ತ್ವ, ಉತ್ಸಾಹ, —ಶಾಲಿಯಾದ; ಕೆಚ್ಚಿನ, ಹುರುಪಿನ, ಜೋರಾದ, ತೇಜಸ್ವಿಯಾದ, ಕಾವಿನ, ಆವೇಶದ (A s. translation ಸತ್ತ್ವಪೂರ್ಣ ಭಾಷಾಂತರ. A s. attack ಹುರುಪಿನ, ಜೋರಾದ, —ಆಕ್ರಮಣ, ಪ್ರತಿಭಟನೆ); (—) ಸ್ವಭಾವದ, ಪ್ರಕೃತಿಯ (High, mean, proud, jealous, -s. ಉದಾತ್ತ, ತುಚ್ಛ, ಗರ್ವ, ಈರ್ಷ್ಯಾ, —ಸ್ವಭಾವದ); (—) ಮನೋಧರ್ಮದ, ಪ್ರವೃತ್ತಿಯ (Low-s. ನಿರುತ್ಸಾಹದ, ಮಂಕು ಕವಿದ, ಖಿನ್ನ); **(-)spíritedly** (ಕ್ರಿ. ವಿ.); **-spíritedness** (ನಾ.); **Spíritless** (ಗು.) ಧೈರ್ಯ, ಸತ್ತ್ವ, ಉತ್ಸಾಹ, ಕೆಚ್ಚು, ಹುರುಪು, ಜೋರು, —ಇಲ್ಲದ, ಸಾಲದ; ಖಿನ್ನ, ಕುಗ್ಗಿದ. **Spíritlessly** (ಕ್ರಿ. ವಿ.); **Spiritóso** (It.) ಸ್ಪಿರಿಟೋಸೊ (ಕ್ರಿ. ವಿ.) (ಸಂ.) ಜೋರಾಗಿ, ಉತ್ಸಾಹದಿಂದ. **Spíritual** ಸ್ಪಿರಿಟ್ಯು(ಚು)ಅಲ್ (ಗು.) ಅಮೂರ್ತ, ಅಭೌತ; ಚಿನ್ಮಯ; ಆತ್ಮ ವಿಷಯಕ, ಆಧ್ಯಾತ್ಮಿಕ (S. life ಆಧ್ಯಾತ್ಮಿಕ ಜೀವನ); ದೈವಿಕ, ದೈವ ಪ್ರೇರಿತ, ದಿವ್ಯ, ಪವಿತ್ರ, ಪಾರಮಾರ್ಥಿಕ, ಧಾರ್ಮಿಕ [S. songs ದೇವತಾ —ಗೀತೆಗಳು, ಸಂಕೀರ್ತನೆಗಳು. The s. law ಪಾರಮಾರ್ಥಿಕ ನ್ಯಾಯ, ಧರ್ಮ. The s. man ಮನುಷ್ಯನ ಅಂತಸ್ಸ್ವಭಾವ, ಆಧ್ಯಾತ್ಮಿಕತೆ; (ಮು., ಬೈಬಲ್ಲಿನ ಹೊಸ ಒಡಂಬಡಿಕೆಯಲ್ಲಿ; ಪ್ರಾಕೃತ ಅಥವಾ ಪ್ರಾಪಂಚಿಕ ಮನುಷ್ಯನಿಗೆ ವಿರುದ್ಧವಾಗಿ) ಧಾರ್ಮಿಕ ಸಂಸ್ಕಾರ ಪಡೆದ ಮನುಷ್ಯ, ಸಂಸ್ಕಾರಿ (ಮನುಷ್ಯ). S. courts ಮತಧರ್ಮದ ನ್ಯಾಯಸ್ಥಾನಗಳು. S. corporations ಧಾರ್ಮಿಕ ಸಂಸ್ಥೆಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Lords s. ಧಾರ್ಮಿಕ ಪ್ರಭುಗಳು (ಇಂಗ್ಲೆಂಡಿನಲ್ಲಿ: ಪಾರ್ಲಿಮೆಂಟಿನ ಶ್ರೀಮಂತ ಸಭೆಯಲ್ಲಿಯ ಬಿಷಪ್ಪುಗಳು ಮತ್ತು ಆರ್ಚ್‌ಬಿಷಪ್ಪುಗಳು)]. ಉದಾತ್ತ —ಮನೋಭಾವದ, ಪ್ರಕೃತಿಯ. **Spíritualism** (ನಾ.) ಸತ್ತವರ ಪ್ರೇತಗಳು ಮನುಷ್ಯರಿಗೆ ಕಾಣಿಸಿಕೊಳ್ಳುತ್ತವೆ ಮತ್ತು ಮೇಜಿನಮೇಲೆ ತಟ್ಟುವುದು, ಬರೆವಣಿಗೆ, ಮೊ. ಗಳ ಮೂಲಕ ಮನುಷ್ಯರೊಡನೆ ವ್ಯವಹರಿಸುತ್ತವೆ ಎಂಬ ನಂಬಿಕೆ (= Modern s.): ಪ್ರೇತ (ಸವ್ಯವಹಾರ) ವಾದ [= **Spíritism** (ನಾ.); **Spíritist** (ನಾ.)]; (ತ. ಶಾ.) ಭೌತದಿಂದ ಭಿನ್ನವಾದ ಆತ್ಮವೊಂದು ಉಂಟೆಂಬ ಮತ್ತು ಅದೊಂದೇ ಸತ್ಯವಾದದ್ದೆಂಬ ವಾದ: ಆತ್ಮ ವಾದ, ಅಧ್ಯಾತ್ಮ ವಾದ (Materialism ನೋಡಿ). **Spíritualist** (ನಾ.); **Spiritualístic** (ಗು.); **Spirituálity** —ಆ್ಯಲಿಟಿ (ನಾ.) ಆಧ್ಯಾತ್ಮಿಕತೆ, ಪಾರಮಾರ್ಥಿಕತೆ, ಧಾರ್ಮಿಕತೆ; (ಸಾ., ಬ. ವ. ದಲ್ಲಿ) ಪಾದ್ರಿಗೆ, ಕ್ರೈಸ್ತ ಮಠಕ್ಕೆ, ಧಾರ್ಮಿಕ ಸಂಸ್ಥೆಗೆ, —ಸೇರಿದ್ದು, ಸೇರಬೇಕಾದದ್ದು (ಸಂಭಾವನೆ, ತೆರಿಗೆಯ ದಶಮಾಂಶ, ಮೊ. ವು): ಧರ್ಮಾದಾಯ, ದೇವಾದಾಯ, ಸಂಭಾವನೆಗಳು (The spiritualities of his office ಅವನ ಅಧಿಕಾರದ ಧರ್ಮಾದಾಯಗಳು, ಸಂಭಾವನೆಗಳು). **Spíritualize** —ಅಲೈಸ್ (ಕ್ರಿ. ಸಕ.) (ಶೀಲ, ವ್ಯಕ್ತಿ, ಭಾವ, ಮೊ. ನ್ನು) ಉದಾತ್ತ, ಪವಿತ್ರ, ಧಾರ್ಮಿಕ, ಆಧ್ಯಾತ್ಮಿಕ, —ಮಾಡು; (ಏರ. ಪ್ರ.) ಜೀವ, ಪ್ರಾಣ, —ತುಂಬು, ಎರೆ; ಉಜ್ಜೀವಿಸು; (ವಾಚ್ಯಾರ್ಥವನ್ನು ಬಿಟ್ಟು) ಭಾವಾರ್ಥವನ್ನು, ಆಧ್ಯಾತ್ಮಿಕ ಅರ್ಥವನ್ನು —ಗ್ರಹಿಸು. **Spiritualizátion** (ನಾ.); **Spíritually** (ಕ್ರಿ. ವಿ.); **Spíritualness** (ನಾ.); **Spirituél(le)** ಸ್ಪಿರೀಟ್ಯುಎಲ್ (ನಾ.) (ಮು., ಮಹಿಳೆಯರ ವಿಷಯದಲ್ಲಿ) ಸುಸಂಸ್ಕೃತ ಸೂಕ್ಷ್ಮ ಮನೋಭಾವದ, ಪರಿಷ್ಕೃತ, ಸ್ಫೂರ್ತಿಯ, ಮನೋಲ್ಲಾಸದ. **Spírituous** ಸ್ಪಿರಿಟ್ಯು(ಚು)ಅಸ್ (ಗು.) ಬಹಳ ಮದ್ಯಸಾರವುಳ್ಳ; ಬಟ್ಟಿಯಿಳಿಸಿದ (S. liquors ಮದ್ಯಸಾರ ಪಾನೀಯಗಳು). **Spírituousness** (ನಾ.)

Spirit (ಕ್ರಿ. ಸಕ.) [ಪ್ರೇತ ವ್ಯಾಪಾರಗಳಿಂದ (ಹೇಗೋ ಹಾಗೆ)] ಶೀಘ್ರವಾಗಿಯೂ ರಹಸ್ಯವಾಗಿಯೂ ಸಾಗಿಸಿಬಿಡು, ಹಾರಿಸಿಕೊಂಡು ಹೋಗು, ಮಾಯಮಾಡು, ಅಪಹರಿಸು (ಸಾ., *away*, *off*, ಮೊ ಉಪ. ಗಳೊಡನೆ). (ವ್ಯಕ್ತಿಯನ್ನು) ಉತ್ಸಾಹಗೊಳಿಸು, ಹುರಿದುಂಬಿಸು, ಉತ್ತೇಜಿಸು (*Up*); (ವ್ಯಕ್ತಿಗೆ) ಚೈತನ್ಯ, ಧೈರ್ಯ, —ತುಂಬು (ಸಾ., *up* ಉಪ. ದೊಡನೆ)

Spírited, Spíritism, Spíritless, Spiritóso, Spíritual, Spíritualism, Spirituálity, Spíritualize, Spirituél(le), Spírituous, etc. Spirit ನೋಡಿ.

Spíritus (L) ಸ್ಪೈ(ಅ)ರಿಟಸ್ (ನಾ.) (ಗ್ರೀಕ್ ವ್ಯಾಕರಣ) S. asper ಮಹಾಪ್ರಾಣೋಚ್ಚಾರ, ಹಕಾರೋಚ್ಚಾರ. S. lenis ಅಲ್ಪಪ್ರಾಣೋಚ್ಚಾರ, ಹಕಾರೋಚ್ಚಾರ ಇಲ್ಲದಿರುವುದು.

Spírivalve ಸ್ಪೈ(ಅ)ರಿವ್ಯಾಲ್ವ್ (ಗು.) ಸುರುಳಿ ಚಿಪ್ಪುಳ್ಳ; (ಚಿಪ್ಪಿನ ವಿಷಯದಲ್ಲಿ) ಸುರುಳಿ ಸುತ್ತಿದ, ಆವರ್ತ.

Spírket(t)ing ಸ್ಪರ್ಕೆಟಿಂಗ್ (ನಾ.) ಹಡಗಿನ ಅಟ್ಟದ ಅಂಚಿನಲ್ಲಿಯ ನೀರ ಕಾಲುವೆ ಮರದ ಮೇಲುಗಡೆ ಮಾಡಿರುವ ಹಲಗೆಕಟ್ಟು.

Spíro-[1] ಸ್ಪೈ(ಅ)ರೊ— (ಸ. ಪೂ. ಪ.) ಸುರುಳಿ—, ಸಿಂಬಿ—, ಆವರ್ತ—.

Spiro-[2] ಸ್ಪೈ(ಅ)ರೊ— (ಸ. ಪೂ. ಪ.) ಉಸಿರು—, ಶ್ವಾಸ—. **-graph** ಶ್ವಾಸ ಚಲನೆಯನ್ನು ಗುರುತಿಸುವ ಸಲಕರಣೆ: ಶ್ವಾಸ ಲೇಖಕ. **-meter** (ಸ್ಪೈರಾ—) ಶ್ವಾಸಕೋಶದಲ್ಲಿ ಹಿಡಿಸುವ, ಒಂದು ಉಸಿರಿಗೆ ತುಂಬುವ, —ಗಾಳಿಯ ಮೊತ್ತವನ್ನು ಅಳೆಯುವ ಸಲಕರಣೆ: ಶ್ವಾಸ(ಕೋಶ) ಮಾಪಕ. **-metry** ಶ್ವಾಸ(ಕೋಶ) ಮಾಪನ. **-métric** (ಗು.); **-phore** ಪ್ರಾಣವ್ಯಾಪಾರ ಸ್ತಬ್ಧವಾಗಿ ಹೋದಾಗ ಶ್ವಾಸಕ್ರಿಯಾಪ್ರೇರಣೆಗಾಗಿ ಉಪಯೋಗಿಸುವ ಸಲಕರಣೆ: ಶ್ವಾಸಚೋದಕ, ಶ್ವಾಸೋತ್ತೇಜಕ. **-scope** = -meter.

Spirt, Spurt ಸ್ಪರ್ಟ್ (ಕ್ರಿ., ನಾ.) (ಧಾರೆಯಾಗಿ) ರಭಸದಿಂದ ಹೊರ ಚಿಮ್ಮು; ಪಿಚಕ್ಕನೆ —ನುಗ್ಗು, ಹಾರು; ಚಿಮ್ಮಿಸು. (ನಾ.) ರಭಸದ ಧಾರೆ, ಚಿಮ್ಮುಲು; ಪಿಚಕ್ಕನೆಯ —ನುಗ್ಗಲು, ಹಾರಿಕೆ.

Spit[1] ಸ್ಪಿಟ್ (ನಾ., ಕ್ರಿ. ಸಕ.) ಮಾಂಸ ಸುಡುವ, ಬೇಯಿಸುವ,— ಕಂಬಿ, ಸಲಾಕಿ: ಸುಡು —ಕಂಬಿ, ಸಲಾಕಿ; ಅಡುಗಂಬಿ; ಸಮುದ್ರದೊಳಕ್ಕೆ ಚಾಚಿಹೋಗಿರುವ ಕಿರಿದಾದ ಭೂಭಾಗ: (ಕಿರು) ನೆಲ ಚಾಚು. (ಕ್ರಿ.) (ಮಾಂಸ, ಮೊ. ನ್ನು) ಅಡುಗಂಬಿಯಿಂದ ಚುಚ್ಚು, ಚುಚ್ಚಿ ಸಿಕ್ಕಿಸು; (ರೂಪ.) (ಕತ್ತಿ, ಮೊ. ರಿಂದ) ಇರಿ, ಚುಚ್ಚಿ ನಿಲ್ಲಿಸು.

Spit[2] ಸ್ಪಿಟ್ (ಕ್ರಿ., ಭೂತ, ಭೂ. ಕೃ. Spat ಸ್ಪ್ಯಾಟ್, ಪ್ರಾಚೀ. ಪ್ರ. Spit; ನಾ.) ಉಗುಳು ಉಗಿ; ಉಗುಳು [S. and polish (ಸೈನಿಕನ ಅಥವಾ ನಾವಿಕನ) ಮೆರುಗು ಕೊಡುವ, ಒಪ್ಪವಿಡುವ, ಕೆಲಸ]; (ರಕ್ತ, ಆಹಾರ, ಮೊ. ನ್ನು) ಕಾರು, ಉಗಿ(ದುಬಿಡು) (*Out* ಉಪ. ದೊಡನೆ); (ರೂಪ.) (ಆಣೆ, ಶಾಪ, ಬೆದರಿಕೆ, ಮೊ. ನ್ನು) ಜೋರಾಗಿ ಹೇಳು, ಕಾರು [S. it out (ಅಸಂ.) ಗಟ್ಟಿಯಾಗಿ —ಹೇಳು, ಹಾಡು; ಉಗುಳು, ಬಗುಳು (ರೂಪ.)]; (ಬೆಕ್ಕಿನ ವಿಷಯದಲ್ಲಿ, ರೂಪಕವಾಗಿ ಮನುಷ್ಯನ ವಿಷಯದಲ್ಲಿ; ಕೋಪ, ದ್ವೇಷ, ಮೊ. ನ್ನು ಸೂಚಿಸಲು) ಉಗುಳುವ ಶಬ್ದಮಾಡು, ಕೇಕರಿಸಿ ಉಗುಳು, ಥೂ ಎನ್ನು, ಥೂಕರಿಸು; (ಮಳೆಯ ವಿಷಯದಲ್ಲಿ) ಮೆಲ್ಲಗೆ —ಬೀಳು, ಸುರಿ; ತುಂತುರು ತುಂತುರಾಗಿ ಹನಿ; (ಬೆಂಕಿ, ಮೋಂಬತ್ತಿಗಳ ವಿಷಯದಲ್ಲಿ) ಕಿಡಿ ಕೆದರು; (ಲೇಖನಿ, ಮೊ. ಗಳ ವಿಷಯದಲ್ಲಿ) ಮಸಿ— ಸಿಡಿಸು, ಹಾರಿಸು; [S. at, upon (ರೂಪ.) (ತಿರಸ್ಕಾರಾರ್ಥಕ ಪ್ರ.): ಥೂ ಎನ್ನು. To s. in one's face, teeth ಮುಖಕ್ಕೆ —ಥೂ ಎನ್ನು, ಉಗಿ. **Spítfire** ಉರಿ ಕಾರುವವನು; ಮಹಾಕೋಪಿ(ಷ್ಠ); ಸಿಡುಕ. ಒಂದು ಆಧುನಿಕ ಯುದ್ಧ ವಿಮಾನ. ಬೆಂಕಿ, ಉರಿ, —ಕಾರುವ ಬಾಣ (= **Spít-devil**)]. (ನಾ.) ಉಗುಳುವುದು, ಉಗುಳುವ ಶಬ್ದ, ಥೂಕಾರ (ಮು., ಬೆಕ್ಕಿನದು). ಕೆಲವು ಕೀಟಗಳ ಮೊಟ್ಟೆ. (ಏರ. ಪ್ರ.) ಜೊಲ್ಲು, ಉಗುಳು. The (very) s. of ಪಡಿಯಚ್ಚು (He is the very s. of his father). **Spítter** (ನಾ.); **Spíttle** ಸ್ಪಿಟ್‌ಲ್ (ನಾ.) ಉಗುಳು. **Spittoón** ಸ್ಪಿಟೂನ್ (ನಾ.) ಉಗುಳು —ದಾನಿ, ಪಾತ್ರೆ; ಪೀಕದಾನಿ, ಪಡಿಗ.

Spit[3] ಸ್ಪಿಟ್ (ನಾ.) ಗುದ್ದಲಿಯುದ್ದ, ಗುದ್ದಲಿ ಆಳ (Dig it two spits *or* s. deep ಎರಡು ಗುದ್ದಲಿಯುದ್ದ ಅಗೆ)

Spítchcock ಸ್ಪಿಚ್‌ಕಾಕ್ (ನಾ., ಕ್ರಿ. ಸಕ.) ಸೀಳಿ ಬೇಯಿಸಿದ ಹಾವುಮೀನು. (ಕ್ರಿ.) (ಹಾವುಮೀನು, ಮೀನು, ಹಕ್ಕಿ, ಮೊ. ನ್ನು) ಸೀಳಿ ಬೇಯಿಸು.

Spite ಸ್ಪೈಟ್ (ನಾ., ಕ್ರಿ. ಸಕ.) ಹಗೆ, ವೈರ, ದ್ವೇಷ, ಸೇಡು, ಜಿದ್ದು, ಹೊಟ್ಟೆಕಿಚ್ಚು, ಮತ್ಸರ (Did it from pure s., in *or* out of s. Has a s. against me); [(In) s. of ಆದರೂ, ಹಾಗಾದರೂ]. (ಕ್ರಿ.) ಹಗೆ, ಸೇಡು, —ತೀರಿಸಿಕೊಳ್ಳು; ರೇಗಿಸು, ಛಂಗಿಸು, ರೋಷಗೊಳಿಸು [Cut off one's nose to s. one's face (Nose ನೋಡಿ)]. **Spíteful** (ಗು.); **Spítefully** (ಕ್ರಿ. ವಿ.); **Spítefulness** (ನಾ.)

Spíttle, Spittoón. Spit[2] ನೋಡಿ.

Spitz ಸ್ಪಿಟ್ಸ್ (ನಾ.) ಮೊನೆಮೂತಿಯ, ಸಣ್ಣ ಜಾತಿಯ ನಾಯಿ (= S.-dog)

Splánchnic ಸ್ಪ್ಲ್ಯಾಂಕ್ನಿಕ್ (ನಾ.) ಕರುಳಿನ, ಅಂತ್ರದ, ಅಂತ್ರ ಸಂಬಂಧವಾದ. **Splánchno-** (ಸ. ಪೂ. ಪ.) ಕರುಳು—, ಅಂತ್ರ—. **Splanchnólogy** ಅಂತ್ರ ಶಾಸ್ತ್ರ; ಅಂತ್ರ ವ್ಯೂಹ. **Splanchnótomy** ಕರುಳ ಕೊಯ್ತ, ಅಂತ್ರಚ್ಛೇದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Splash ಸ್ಪ್ಲಾಷ್ (ಕ್ರಿ., ನಾ.) (ಮನುಷ್ಯನನ್ನು, ಕೆಸರು, ನೀರು, ಮೊ. ರಿಂದ) ಅಪ್ಪಳಿಸು ; ಅಪ್ಪಳಿಸಿ ಕೊಳೆ, ಒಡ್ಡ, ಮಾಡು (*With* ಉಪ. ಜೊಡನೆ) ; (ಮನುಷ್ಯ, ಮೊ. ರ ಮೇಲೆ ಕೆಸರು, ನೀರು, ಮೊ. ನ್ನು) ಎರಚು, ಸಿಡಿಸು, ಹಾರಿಸು (*On, over, about* ಉಪ. ಜೊಡನೆ). (ದ್ರವ, ಮೊ.) ಸಿಡಿ, ಹಾರು. (ವ್ಯಕ್ತಿಯ ವಿಷಯದಲ್ಲಿ ; ದ್ರವವನ್ನು) ಹಾರಿಸು ; ಹಾರಿಸಿಕೊಂಡು, ಸಿಡಿಸಿಕೊಂಡು, —ಹೋಗು ; ದ್ರವ ಹಾರುವಂತೆ, ಸಿಡಿಯುವಂತೆ, —ಹೋಗು (*Across, along,* ಮೊ. ಉಪ. ಜೊಡನೆ) ; (ಬಚ್ಚೆ, ಗೋಡೆ, ಮೊ. ಗಳ ಮೇಲೆ) (ನೀರು ಸಿಡಿಯುವಂತೆ) ಧುಡುಮ್ಮನೆ, ಫಳೀರನೆ, —ಬೀಳು, ಇಳಿ, ಮುಳುಗು (*Into* ಉಪ. ಜೊಡನೆ). ಸಿಡಿಬಟ್ಟುಗಳ ಅಲಂಕಾರ, ಚಿಮ್ಮು ಅಲಂಕಾರ, —ಮಾಡು. (ನಾ.) ಎರಚಾಟ, ಸಿಡಿತ, ಹಾರಿಕೆ ; ಸಿಡಿದ ದ್ರವ(ದ ಮೊತ್ತ) ; ಸಿಡಿತದ ಶಬ್ದ, ಫಳೀರನೆಯ ಸದ್ದು, ಅಸ್ಫಾಲನ ಶಬ್ದ (We heard a s.) ; ಸಿಡಿತದ ಕೊಳೆ, ಕರೆ ; (ಮು., ಪ್ರಾಣಿಯ ಚರ್ಮದಮೇಲಿನ) ಬಣ್ಣದ ಮಚ್ಚೆ, ಕಲೆ ; (ನಾ., ಅಕ್ಕಿಯ ಹಿಟ್ಟಿನಿಂದ ಮಾಡಿದ) ಮುಖರಂಗು, ಬಣ್ಣ(ದ ಪುಡಿ). Make a s. (ರೂಪ.) (ಜನರನ್ನು ಆಕರ್ಷಿಸಲು, ಗಮನ ಸೆಳೆಯಲು) ಕೋಲಾಹಲ ವೆಬ್ಬಿಸು, ಗಲಾಟೆಮಾಡು, ಆಡಂಬರ(ಪ್ರದರ್ಶನ)ಮಾಡು (Was splashed in the newspapers ವೃತ್ತಪತ್ರಿಕೆಗಳಲ್ಲಿ ಆಡಂಬರದಿಂದ ಪ್ರದರ್ಶಿಸಲ್ಪಟ್ಟಿತು). S.-board ಕುಳಿತಿರುವವರಿಗೆ ಕೆಸರು ಸಿಡಿಯದಂತೆ ತಡೆಯಲು ಚಕ್ರವಾಹನಗಳ ಮುಂದುಗಡೆ ಹಾಕಿರುವ ಕಾಪು : ಕೆಸರು, ಸಿಡಿ—ಕಾಪು, ತಡೆ (ಹಲಗೆ). **Splásher** (ನಾ.) (ಕ್ರಿಯಾರ್ಥಗಳಲ್ಲಿ) ; ಕೆಸರು, ಸಿಡಿ —ಕಾಪು, ತಡೆ ; ಪ್ರಸಾಧನ ಸಜ್ಜಿನ ನಿಲುವಿನಿಂದ ಹಿಂದುಗಡೆ ಗೋಡೆಗೆ ನೀರು ಸಿಡಿಯದಂತೆ ಅಡ್ಡನಾಗಿ ಇಟ್ಟಿರುವ ತೆರೆ, ಮರೆ : ಸಿಡಿ ತೆರೆ. **Spláshy** (ಗು.) ಸಿಡಿಯುವ ; ಸಿಡಿದು, ಅಪ್ಪಳಿಸಿ, ಫಳೀರೆಂದು, —ಬೀಳುವ ; (ಧ್ವನಿ) ಅಪ್ಪಳಿಕೆಯ, ಫಳೀರನೆಯ; ಕೋಲಾಹಲದ, ಆಡಂಬರದ ; ಹರುಕು ಮುರುಕಾಗಿ ಮಾಡಿದ, ಕ್ರಮವಿಲ್ಲದ (Fine, but s. sketches)

Splátter ಸ್ಪ್ಲ್ಯಾಟರ್ (ಕ್ರಿ.) ಒಂದೇಸಮನೆ ಸಿಡಿ(ಸು) ; ಒಂದೇ ಸಮನೆ ಪಳಪಳ ಸದ್ದುಮಾಡು ; ಅಸ್ಪಷ್ಟವಾಗಿ ಮಾತಾಡು, ವಟವಟ ಎನ್ನು, ಚಟಪಟಿಸು. S.-dash ಗಲಾಟೆ, ಗಲಬಿಲ. S.-dashes = Spatter-dashes (Spatter ನೋಡಿ)

Splay ಸ್ಪ್ಲೇ (ಕ್ರಿ., ನಾ., ಗು.) (ದ್ವಾರ, ಕಂಡಿ, ಮೊ. ನ್ನು, ಅಗಲ ಹೆಚ್ಚುತ್ತ ಹೋಗುವಂತೆ) ಪಕ್ಕಗಳಿಗೆ ಓರೆಕೊಡು, ಓರಡಿ ಮಾಡು, ಓಟವಿಡು (Splayed doorway, window ಓರಡಿಯ ಬಾಗಿಲು, ಕಿಟಕಿ) ; (ದ್ವಾರ, ಅದರ ಪಕ್ಕ, ಮೊ. ಗಳ ವಿಷಯದಲ್ಲಿ) ಓರಡಿ, ಓಟ, —ಪಡೆದಿರು, ಅಗಿರು ; (ಮು., ಕುದುರೆಯ ಹೆಗಲನ್ನು) ಕೀಲು ತಪ್ಪಿಸು, ಹೊರಳಿಸು. (ನಾ.) ಓರಡಿ, ಓಟ (ಇರುವ ಪಕ್ಕ). (ಗು.) ಅಗಲವೂ ಚಪ್ಪಟೆಯೂ ಆದ, ಹಪ್ಪಳಿಕೆಯ, ಅಗ್ಗಲಿಸಿದ, ಕಿಸಿದುಕೊಂಡಿರುವ ; (ರೂಪ.) ವಕ್ರ, ಒಡ್ಡೊಡ್ಡಾದ. **S.-foot** (ನಾ., ಗು.) ಮೇಲ್ಭಾಗಿನ ಅಗಲವಾದ ಚಪ್ಪಟೆಯ ಅಡಿ(ಗಳುಳ್ಳ) : ಹಪ್ಪಳಿಕೆ —ಪಾದದ, ಅಡಿಯ. **S. mouth** ಕಿಸಿ(ದ) ಬಾಯಿ ; (ಹಲ್ಲು ಕಿರಿತದಲ್ಲಿ) ಅಗಲವಾಗಿ ಬಿಟ್ಟ ಬಾಯಿ.

Spleen ಸ್ಪ್ಲೀನ್ (ನಾ.) ಗುಲ್ಮ, ಪ್ಲೀಹ, ತೊರಳೆ. ನಿರುತ್ಸಾಹ, ವಿಷಣ್ಣತೆ ; ಅಸಮಾಧಾನ, ಈರ್ಷ್ಯೆ, ಸಿಟ್ಟು, ಸಿಡುಕು (A fit of s. ಕೋಪಾವೇಶ. Vented his s. ಕೋಪ ಕಾರಿದನು). **Spleénful** (ಗು.) ಸಿಡುಕಿನ, ರೇಗುವ, ರೋಷಾವೇಶದ. **Spleénfully** (ಕ್ರಿ. ವಿ.) ; **Spleénish** (ಗು.) ; **Spleénishly** (ಕ್ರಿ. ವಿ.) ; **Spleénless** (ಗು.) ಗುಲ್ಮವಿಲ್ಲದ, ಗುಲ್ಮ ತೆಗೆದುಹಾಕಿದ. **Spleény** (ಗು.) ನಿರುತ್ಸಾಹದ, ವಿಷಣ್ಣ ; ಸಿಡುಕಿನ, ರೇಗಾಡುವ. **Spleénwort** (ನಾ.) ಹಿಂದೆ ಗುಲ್ಮರೋಗಗಳಿಗೆ ಉಪಯೋಗಿಸುತ್ತಿದ್ದ ಹಲವು ಬಗೆಯ ಜರೀಗಿಡ. **Splenálgia** (ನಾ.) ಗುಲ್ಮದ, ಗುಲ್ಮದೆಡೆಯ, —ನೋವು ; ಪ್ಲೀಹ ಯಾತನೆ. **Splenálgic** (ಗು.) ; **Splenéctomy** (ನಾ.) ಗುಲ್ಮಚ್ಛೇದ. **Splenétic** ಸ್ಪ್ಲಿನೆಟಿಕ್ (ಗು., ನಾ.) ಗುಲ್ಮದ. = Spleeny. (ನಾ.) ಗುಲ್ಮರೋಗಿ ; ಗುಲ್ಮರೋಗದ ಔಷಧ, ಗುಲ್ಮೌಷಧ. **Splenétically** (ಕ್ರಿ. ವಿ.); **Splénic** ಸ್ಪ್ಲೆನಿಕ್ (ಗು.) ಗುಲ್ಮದ(ಲ್ಲಿಯ) (S. fever ಗುಲ್ಮಜ್ವರ ; ನೆರಡಿರೋಗ). **Splenític** ಸ್ಪ್ಲಿನಿಟಿಕ್ (ಗು.) ಗುಲ್ಮದಾಹದ. **Splenítis** ಸ್ಪ್ಲಿನೈಟಿಸ್ (ನಾ.) ಗುಲ್ಮದ ಉರಿಯೂತ; ಗುಲ್ಮ, ಪ್ಲೀಹ, —ದಾಹ. **Splenizátion** (ನಾ.) ಶ್ವಾಸಕೋಶವು ಗುಲ್ಮದಂಥ ಪದಾರ್ಥವಾಗಿ ಮಾರ್ಪಡುವುದು : ಗುಲ್ಮೀಭವನ, ಗುಲ್ಮ ವಿಕಾರ. **Splénoid** (ಗು.) ಗುಲ್ಮದಂಥ. **Splenólogy** ಸ್ಪ್ಲಿನಾಲೊಜಿ (ನಾ.) ಗುಲ್ಮ ಶಾಸ್ತ್ರ. **Splenológical** (ಗು.) ; **Splenótomy** (ನಾ.) ಗುಲ್ಮಚ್ಛೇದನ.

Spléndent ಸ್ಪ್ಲೆಂಡೆಂಟ್ (ಗು.) (ಖನಿಜ ಶಾಸ್ತ್ರ, ಕೀಟ ವಿಜ್ಞಾನ) ಉಜ್ಜ್ವಲ ಲೋಹಕಾಂತಿಯುಳ್ಳ ; ಮಿರುಗುವ, ಥಳಥಳಿಸುವ ; ದೇದೀಪ್ಯಮಾನ (S. planets)

Spléndid ಸ್ಪ್ಲೆಂಡಿಡ್ (ಗು.) ವೈಭವದ, ಭವ್ಯ, ದಿವ್ಯ, ಠೀವಿಯ ; ಅತ್ಯುತ್ಕೃಷ್ಟ, ತೇಜಸ್ವಿಯಾದ, ಉಜ್ಜ್ವಲ, ಪ್ರಕಾಶಮಾನ (A s. palace ಭವ್ಯವಾದ ಅರಮನೆ. A s. sun ಉಜ್ಜ್ವಲ ಸೂರ್ಯ. A s. victory ಅತ್ಯುತ್ಕೃಷ್ಟ ಜಯ) ; (ವ್ಯಕ್ತಿಯ ವಿಷಯದಲ್ಲಿ) ಅಟ್ಟಹಾಸದ, ವೈಭವದಿಂದ ಬಾಳುತ್ತಿರುವ, ದೊಡ್ಡಸ್ತಿಕೆಯ ; ಹೆಮ್ಮೆಯ, ಪ್ರತಿಷ್ಠೆಯ (Ambitious of s. acquaintance. A s. contempt for female intellect ಸ್ತ್ರೀ ಬುದ್ಧಿಗೆ ಜರ್ಬಿನ, ಹೆಮ್ಮೆಯ, ಧಿಕ್ಕಾರ) ; (ಬಳ. ಮಾ.) ಸೊಗಸಾದ, ಥರ್ಜರಿಯಾದ, ಅತ್ಯುತ್ತಮವಾದ (A s. chance). **Spléndidly** (ಕ್ರಿ. ವಿ.) ; **Splendíferous** (ಗು.) (ಬಳ. ಮಾ.) = Splendid. **Spléndour** (ನಾ.) ಉಜ್ಜ್ವಲ ಪ್ರಕಾಶ, ಕಾಂತಿ, ತೇಜಸ್ಸು, ಪ್ರಭೆ ; ವೈಭವ, ಭವ್ಯತೆ, ಅಟ್ಟಹಾಸ. Sun in s. (ವಂಶ ಲಾಂಛನದಲ್ಲಿ). ಮನುಷ್ಯ ಮುಖವೂ ಕಿರಣ ಪ್ರಸಾರವೂ ಉಳ್ಳ ಚಿತ್ರ : ಸುಪ್ರಭಾ ಸೂರ್ಯ.

Splendíferous, Spléndour. Splendid ನೋಡಿ.

Splenétic, Splénic, Splénoid, Splenizátion. Spleen ನೋಡಿ.

Splénial. Splenius ನೋಡಿ.

Splénius ಸ್ಪ್ಲೀನಿಯಸ್ (ನಾ. ; ಬ. ವ. -ii —ಐ) ತಲೆಯನ್ನು ಹಿಂದಕ್ಕೆ ಎಳೆಯುವುದರಲ್ಲಿ ಉಪಯೋಗವಾಗುವ, ಕತ್ತಿನ ಹಿಂಭಾಗದಲ್ಲೂ ಪಕ್ಕಗಳಲ್ಲೂ ಇರುವ ಸ್ನಾಯು(ಗಳಲ್ಲೊಂದು) : ಹಿಂಗತ್ತಿನ ಸ್ನಾಯು. **Splénial** ಸ್ಪ್ಲೀನಿಯಲ್ (ಗು.) ಹಿಂಗತ್ತಿನ ಸ್ನಾಯುವಿನ. (ಅಂ. ರ. ಶಾ.) (ಕುದುರೆ, ಮೊ. ಪ್ರಾಣಿಗಳಲ್ಲಿ : ಚುಂಗುಗಾಲಿಗೆ ಮೇಲುಗಡೆ ಹಿಂಭಾಗದಲ್ಲಿರುವ) ದಬ್ಬೆಯಂಥ ಎಲುಬಿನ, ದಬ್ಬೆಮೂಳೆಯ.

Splice ಸ್ಪ್ಲೈಸ್ (ಕ್ರಿ. ಸಕ., ನಾ.) (ಎರಡು ಹಗ್ಗದ ತುಂಡುಗಳನ್ನು ಕೂಡಿಸಿ ಒಂದಾಗಿ ಮಾಡುವಲ್ಲಿ) ಕೊನೆಗಳ ಎಳೆಗಳನ್ನು ಹೊಸೆದು ಕೂಡಿಸು; ಹೊಸೆದು ತುದಿ ಕೂಡಿಸು. (ಮರದ ತುಂಡು, ಮೊ. ನ್ನು) ಪಡ ಕೂಡಿಸು, ಮಲಕು ಹಾಕು ; (ಬಳ. ಮಾ.) ಮದುವೆ, ಲಗ್ನ, —ಮಾಡಿಸು ; ಗಂಟುಹಾಕು (When did he, they, get spliced ? ಅವನಿಗೆ, ಅವರಿಗೆ, ಯಾವಾಗ ಗಂಟುಬಿತ್ತು, ಮದುವೆ ಆಯಿತು ?) ; [S. the main brace (ಅನಂ.) ನಿರಾತಂಕವಾಗಿ, ತಡೆಬಡೆಯಿಲ್ಲದೆ, ಕುಡಿ]. (ನಾ.) ಎಳೆಗಳನ್ನು ಹೊಸೆದು ಕೂಡಿಸಿದ್ದು ; ಎಳೆ ಕೂಡಿಕೆ, ತುದಿ ಕೂಡಿಕೆ ; (ಮರದ ತುಂಡುಗಳ) ಪಡ ಜೋಡಣೆ, ಮಲಕು. Eye-s. (Eye ನೋಡಿ)

Spline ಸ್ಪ್ಲೈನ್ (ನಾ., ಕ್ರಿ. ಸಕ.) ಅಚ್ಚಿನ ಉದ್ದಕ್ಕೂ ಚಕ್ರ (ಅಥವಾ ಉರುಳಿ) ಸರಿದಾಡಲು ಅನುಕೂಲಿಸುವಂತೆ ಚಕ್ರದ ಗುಂಬದ (ಅಥವಾ ಉರುಳಿಯ) ತಳಗಾಡಿಯಲ್ಲಿ ಭದ್ರವಾಗಿ ಸಿಕ್ಕಿಸಿದ್ದು ಅಚ್ಚಿನ ಗಾಡಿಯಲ್ಲಿ ಸರಿದಾಡುವ, ಆಯದ ಆಕಾರದ ತುಂಡು : ಜಾರು ಕೀಲಕ ; (ದಾರು, ಲೋಹ, ಮೊ. ಗಳ) ತೆಳುಪಟ್ಟಿ, ದಬ್ಬೆ ; (ಮು., ರೈಲು ಕೆಲಸದ ನಕ್ಷೆಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೊಡ್ಡ ಬಾಗುಗೆರೆಗಳನ್ನು ಎಳೆಯಲು ಉಪಯೋಗಿಸುವ, ದಾರುವಿನ ಅಥವಾ ರಬ್ಬರಿನ) ಬಳುಕುಪಟ್ಟಿ, ಬಾಗುದಬ್ಬೆ. (ಕ್ರಿ.) ಜಾರು ಕೀಲಕ —ಹಾಕು, ಜೋಡಿಸು.

Splint ಸ್ಪ್ಲಿಂಟ್ (ನಾ., ಕ್ರಿ. ಸಕ.) (ಮುರಿದ ಮೂಳೆಗಳನ್ನು ಸರಿಗೂಡಿಸಿದ ಮೇಲೆ ಅವು ಕದಲದಂತಿಡಲು ಉಪಯೋಗಿಸುವ) ಗಡುಸು ಪಟ್ಟಿ, ದಬ್ಬೆ ; (ಬುಟ್ಟಿ, ಮೊ. ನ್ನು ಹೆಣೆಯಲು ಉಪಯೋಗಿಸುವ) ಸಿಬಿರು ದಬ್ಬೆ, ಚಕ್ಕೆ ; ಮದ್ದು ಹಚ್ಚಿಲ್ಲದ ದೀಪದ ಕಡ್ಡಿ ; (ಅಂ. ರ. ಶಾ.) (ಕುದುರೆ, ಮೊ. ಪ್ರಾಣಿಗಳ ಮುಂಗಾಲನಲ್ಲಿ) ಕೆಳಗಾಲಿನ ಹಿಂಭಾಗದ ದಬ್ಬೆಯಂಥ ಮೂಳೆ(ಗಳಲ್ಲೊಂದು) : ದಬ್ಬೆಮೂಳೆ ; (ಮನುಷ್ಯನ) ಕಣಕಾಲಿನಲ್ಲಿಯ ಹೊರಗಡೆಯ ಎಲುಬು (=S.-bone). (ಕುದುರೆಯ) ದಬ್ಬೆಮೂಳೆಯ ಮೇಲಿನ ರೋಗದ ಗಂಟು, ಗಂತಿ ; (S. coal ಸ್ಲೇಟು ಕಲ್ಲಿನಂಥ ರಚನೆಯುಳ್ಳ ಟಾರೆಣ್ಣೆ ಕಲ್ಲಿದ್ದಲು). (ಕ್ರಿ.) (ಮುರಿದ ಮೂಳೆ, ಮೊ. ಗಳಿಗೆ) ಗಡುಸು ಪಟ್ಟಿ, ದಬ್ಬೆ, —(ಹಾಕಿ) ಕಟ್ಟು. **Splínter** (ಕ್ರಿ., ನಾ.) ದಬ್ಬೆ, ಪಟ್ಟಿ, ಸಿಬಿರು, —ಸೀಳು, ಮಾಡು, ಆಗು. (ನಾ.) (ಮರ, ಕಲ್ಲು, ಮೊ. ಗಳ) ಚಕ್ಕೆ, ಸಿಬಿರು. S.-bar (ಬಂಡಿಯಲ್ಲಿ ಎಗುರು ಪಟ್ಟಿಗಳಿಗೆ ಆಧಾರವಾಗಿರುವ ಅಥವಾ ಎಳೆ ಪಟ್ಟಿಗಳನ್ನು ಕಟ್ಟುವ) ಅಡ್ಡ —ಪಟ್ಟಿ, ಕಂಬಿ. S.-proof (ಗುಂಡುಗಳ) ಸಿಡಿ ಚೂರು ತೂರಲಾರದ, ಸಿಡಿ ಚೂರಿಗೆ ಸಗ್ಗದ. **Splíntery** (ಗು.) ಚಕ್ಕೆಯ(ಂಥ), ಸಿಬಿರಿನ(ಂಥ) ; ಸಿಬಿರು, ಚಕ್ಕೆ, —ಏಳುವ, ಸೀಳಲಾಗುವ.

Split ಸ್ಪ್ಲಿಟ್ (ಕ್ರಿ.; ಭೂತ., ಭೂ. ಕೃ. Split) ಭಾಗಗಳಾಗಿ ತುಂಡಾಗು, ತುಂಡು ಮಾಡು ; ಒಡೆ, ಸಿಗಿ, ಸೀಳು, ಬಿರಿ(ಸು), ಭೇದಿಸು ; ಭಾಗಮಾಡು, ಪಾಲುಮಾಡು, ವಿಭಾಗಿಸು, ಹೋಳು ಮಾಡು [S. it into three layers ಮೂರು ಪದರಗಳಾಗಿ ಅದನ್ನು ಸೀಳು. The job was s. (up) among 6 of us ಆ ಕೆಲಸವನ್ನು ನಮ್ಮಲ್ಲಿ ಆರು ಜನಕ್ಕೆ ಭಾಗಮಾಡಿ ಕೊಡಲಾಯಿತು. S. one's vote ಸ್ಪರ್ಧಿಸಿರುವ ಉಮೇದುವಾರರಿಬ್ಬರಿಗೂ ತನ್ನ ಅಭಿಮತ ಹಂಚಿಬಿಡು. S. the difference (ವ್ಯಾಜ್ಯಕ್ಕೆ ಕಾರಣವಾಗಿರುವ) ವ್ಯತ್ಯಾಸದ ಮೊತ್ತವನ್ನು ಇಬ್ಬರಿಗೂ ಸಮವಾಗಿ ಹಂಚು. (ಸೂಚಿಸಿದ ಎರಡು ಮೊತ್ತ, ಮೊ. ಗಳ) ಸರಾಸರಿ ತೆಗೆದುಕೊ ; ಈ ಸರಾಸರಿ ತೆಗೆದುಕೊಂಡು, ಹೀಗೆ ಹಂಚಿಕೊಂಡು, ರಾಜಿಮಾಡಿಕೊ. S. hairs ಅತಿಸೂಕ್ಷ್ಮ ಭೇದಗಳನ್ನು ಮಾಡು ; ಕೂದಲು ಸೀಳು (Hair-splitting ಅತಿಸೂಕ್ಷ್ಮ ಭೇದನ, ಕೂದಲು ಸೀಳಿಕೆ)] ; ವಿರುದ್ಧ ಪಕ್ಷಗಳಾಗಿ, ಕಕ್ಷಿ ಪ್ರತಿಕಕ್ಷಿಗಳಾಗಿ, —ಒಡೆ ; ಕಕ್ಷಿಗಳಾಗು (*On* question, etc.). S. one's sides ಪಕ್ಕೆಬಿರಿಯ ನಗು, ನಗಿಸು; ವಿಪರೀತವಾಗಿ ನಗು, ನಗಿಸು [Side-splitting (ಗು., ನಾ.) ಪಕ್ಕೆ ಬಿರಿಯುವಂಥ, ವಿಪರೀತ ತಮಾಷೆಯ. ಪಕ್ಕೆಬಿರಿಯುವುದು. Side-splitter (ನಾ.) ವಿಪರೀತ ತಮಾಷೆ(ಗಾರ), ಅತಿಚೋದ್ಯ (ವ್ಯಕ್ತಿ, ವಸ್ತು)] . Head is splitting (ನೋವಿನಿಂದ) ತಲೆ ಒಡೆದುಹೋಗುತ್ತಿದೆ, ಸಿಡಿಯುತ್ತಿದೆ. A splitting headache ಸಿಡಿಯುವ ತಲೆನೋವು. S. on (ಅಸಂ.) (ಸಹಾಪರಾಧಿ, ಮೊ. ರ) ಗುಟ್ಟು —ಬಿಟ್ಟುಕೊಡು, ಹೊರಗೆಡಹು. **S. cloth** (ಶಸ್ತ್ರಚಿಕಿತ್ಸೆ) (ಮು., ತಲೆ ಮತ್ತು ಮುಖಗಳಿಗೆ ಕಟ್ಟುವ) ತುದಿ ಹಲವು ಸೀಳುಗಳಾಗಿ ಹರಿದ ಗಾಯಪಟ್ಟಿ: ಸೀಳುಪಟ್ಟಿ. **S. gear, wheel** (ಅಚ್ಚಿನಿಂದ ಕಳಚಲಾಗುವಂತೆ ಎರಡರ್ಧವಾಗಿ ಮಾಡಿರುವ) ಸೀಳು, ಇಪ್ಪಾಲು —ಚಾಲಕ, ಚಕ್ರ. **S. infinitive** ಕ್ರಿ. ವಿ., ಮೊ. ಗಳನ್ನು to ಪದಕ್ಕೂ ಕ್ರಿಯಾಪದಕ್ಕೂ ನಡುವೆ ಪ್ರಯೋಗಿಸಿ ಬೇರ್ಪಡಿಸಿದ ತುಮಂತ : ವಿಚ್ಛಿನ್ನ ತುಮಂತ (I request you kindly to grant ಎಂಬುದಕ್ಕೆ ಬದಲು I request you to kindly grant). **S. moss** ಬಲಿತಾಗ ಬಿರಿಯುವ ಬೀಜಕೋಶಗಳುಳ್ಳ ಹಾವಸೆ ; ಭಿನ್ನ ಶೈವಲ. **S. peas**(e) ಬೇಳೆ ಮಾಡಿದ ಬಟಾಣಿ, ಮೊ. ವು ; ಬಟಾಣಿ, ಮೊ. ರ ಬೇಳೆ. **S. pin** (Pin ನೋಡಿ). **S. ring** (ಬೀಗದಕ್ಕೈ ಗೊಂಚಲಿನ ಉಂಗುರದಂತೆ) ಸೀಳಿದ (ಉಕ್ಕಿನ) ಉಂಗುರ, ಸೀಳುಂಗುರ. **S. shot, stroke** (ಕ್ರೋಕೆ ಆಟದಲ್ಲಿ) ಸೋಕಿಕೊಂಡಿರುವ ಎರಡು ಚೆಂಡುಗಳನ್ನು ಬೇರೆ ಬೇರೆ ದಿಕ್ಕುಗಳಿಗೆ ಓಡಿಸುವಂಥ ಹೊಡೆತ : ವಿಂಗಡ ಹೊಡೆತ. **-splítter** (ನಾ.)

Split (ನಾ.) ಒಡೆತ, ಸೀಳಿಕೆ, ಸಿಗಿತ, ಬಿರಿತ, ಬಿರುಕು, ಸೀಳು, ಒಡಕು, ಛಿದ್ರ (ರೂಪ. ಸಹ) ; (ಬುಟ್ಟಿ, ಮೊ. ನ್ನು ಹೆಣೆಯುವುದಕ್ಕಾಗಿ ಸೀಳಿದ) ದಬ್ಬೆ, ಸಿಬಿರು ; ಮಗ್ಗದ ಹಾಸು ವಿಂಗಡಕದ ತೆಳುಪಟ್ಟಿ : ಹಣಿಗೆ ; (ಒಂದು ಗೊತ್ತಾದ ದಪ್ಪದಲ್ಲಿ ಸೀಳಿದ) ಚರ್ಮದ ಪದರ ; ಅರ್ಧ ಮದ್ಯ ಅರ್ಧ ಹುದುವಾಯು ಪಾನೀಯ ಸೇರಿದ ಮಿಶ್ರ ಪಾನೀಯ. (ಬ. ವ.) ಕಾಲುಗಳನ್ನು ಕಿಸಿದು ಕುಳಿತುಕೊಳ್ಳುವುದು (Do splits ಕಿಸಿದು ಕುಳಿತುಕೊಳ್ಳುವ ಕಸರತ್ತು ಮಾಡು)

Splotch ಸ್ಪ್ಲಾಚ್, **Splodge** ಸ್ಪ್ಲಾಜ್ (ನಾ.) ಲೊಪ್ಪೆ ಲೊಪ್ಪೆಯಾಗಿ, ಚಿತ್ತು ಚಿತ್ತಾಗಿ,—ಮೆತ್ತಿದ, ಬಳಿತ ; ಕರೆ, ಕಲೆ, ಚಿತ್ತು. **Splótchy** (ಗು.) ; **Splódgy** (ಗು.)

Splurge ಸ್ಪ್ಲರ್ಜ್ (ನಾ., ಕ್ರಿ. ಅಕ.) ಖಾಲಿ ಗಲಾಟೆ, ಆಡಂಬರ (—ಮಾಡು)

Splútter ಸ್ಪ್ಲಟರ್ (ಕ್ರಿ., ನಾ.) = Sputter. **Splútterer** (ನಾ.)

Spode ಸ್ಪೋಡ್ (ನಾ.) ಒಂದು ನಯವಾದ ಪಿಂಗಾಣಿ (ಸಾಮಾನು)

Spóffish ಸ್ಪಾಫಿಷ್ (ಗು.) (ಅಸಂ.) ಗಡಿಬಿಡಿಯ, ಸಡಗರದ, ಸಂಭ್ರಮದ.

Spoil ಸ್ಪಾಯ್‌ಲ್ (ನಾ. ; ಸಾ., ಬ. ವ. ದಲ್ಲಿ ಅಥವಾ ಜಾತ್ಯೇಕ ವಚನವಾಗಿ) (ಯುದ್ಧದಲ್ಲಿ ಹೊಡೆದ) ಕೊಳ್ಳೆ, ಸೂರೆ, ಲೂಟಿ ; (ರೂಪ. (ಸ್ಪರ್ಧೆಯಲ್ಲಿ ಜಯ, ಗ್ರಂಥ ರಚನೆ, ಅಧಿಕಾರ ಸ್ಥಾನ, ಮೊ. ಗಳಿಂದ ಬಂದ) ಲಾಭ, ವರಮಾನ, ಗಳಿಕೆ, ಆದಾಯ ; (ನೆಲ ತೋಡುವುದು, ಹೂಳು ತೆಗೆಯುವುದು, ಮೊ. ಗಳಲ್ಲಿ) ಮೇಲಕ್ಕೆತ್ತಿ ಹಾಕಿದ ಹೂಳು, ಮಣ್ಣು, ಮೊ. ವು; (ಇಸ್ಪೀಟಾಟ) ಒಟ್ಟು ಐದು ಪಟ್ಟುಗಳಲ್ಲಿ ಒಬ್ಬನು ಮೂರು ಪಟ್ಟುಗಳನ್ನು ಗೆಲ್ಲಲಾಗದಂತೆ ಅಡ್ಡಿಪಡಿಸಿ ಆಡುವ ಒಂದು ಬಗೆಯ ಆಟ (= Spoil-five) ದಲ್ಲಿ ಸಮ ಆಟ. Spoils system (ಅಮೆ. ಸಂ.) ಜಯಶೀಲ ಪಕ್ಷ ತನ್ನ ಅನುಯಾಯಿಗಳಿಗೆ ಸಾರ್ವಜನಿಕ ಅಧಿಕಾರಸ್ಥಾನಗಳನ್ನು ಕೊಡುವ ಪದ್ಧತಿ : ಅಧಿಕಾರ ಸೂರೆ ಪದ್ಧತಿ. **Spoílsman** (ನಾ.) ಅಧಿಕಾರ ಸೂರೆ ಪದ್ಧತಿಯವನು, ಅಧಿಕಾರ ಸೂರೆಗಾರ.

Spoil (ಕ್ರಿ., ಭೂತ., ಭೂ. ಕೃ. Spoilt ಅಥವಾ Spoiled) (ಪ್ರಾಚೀ. ಪ್ರ., ಸಾಹಿತ್ಯ ಪ್ರ. ; —lt ರೂಪ ಇಲ್ಲ) ಕೊಳ್ಳೆ, ಸೂರೆ, ಲೂಟಿ —ಹೊಡೆ, ಮಾಡು ; (ಬಲಾತ್ಕಾರವಾಗಿ ಅಥವಾ ಕದ್ದು) ಕಿತ್ತುಕೊ, ಕಸಿದುಕೊ, ಸುಲಿ(ದುಕೊ) (S. the Egyptians ತನ್ನ ಸಹಜ ವೈರಿಗಳನ್ನು ಸೂರೆಮಾಡು). ಕೆಡಿಸು, ಹಾಳುಮಾಡು, ನಾಶಪಡಿಸು [Will s. all the fun. The news spoilt his dinner ಆ ಸುದ್ದಿ ಅವನ ಊಟವನ್ನು ಕೆಡಿಸಿತು ; ಆ ಸುದ್ದಿಯಿಂದ ಅವನು ಊಟಮಾಡಲಾಗಲಿಲ್ಲ. S. one's beauty for him (ಕಣ್ಣು, ಮೊ. ನ್ನು ಗಾಯಗೊಳಿಸುವುದು, ಮೊ. ರಿಂದ ಒಬ್ಬನ) ಮುಖ, ಅಂದ, —ಕೆಡಿಸು. Are determined to s. me ನನ್ನನ್ನು ಹಾಳುಮಾಡಲು ನಿಶ್ಚಯಿಸಿದ್ದಾರೆ. Spare the rod & s. the child (Rod ನೋಡಿ). Is the spoilt child of fortune ಭಾಗ್ಯಲಕ್ಷ್ಮಿಯ ಅಶಿಕ್ಷಿತ ಪುತ್ರ; ಸಂಪತ್ತಿನಿಂದ ಕೆಟ್ಟುಹೋದವನು] ; (ಅಸಂ.) (ಒಬ್ಬನನ್ನು) ಊನಮಾಡು, ಕೊಲ್ಲು, ಕೊಂದುಹಾಕು. (ಹಣ್ಣು, ಮೀನು, ಮೊ. ಗಳ ವಿಷಯದಲ್ಲಿ ; ರೂಪಕವಾಗಿ ಹಾಸ್ಯ, ಮೊ. ಗಳ ವಿಷಯದಲ್ಲಿ) ಕೆಡು, ಕೆಟ್ಟುಹೋಗು, ಹಾಳಾಗು [Will not s. with keeping ಇಟ್ಟರೆ ಕೆಟ್ಟುಹೋಗುವುದಿಲ್ಲ. S. for, be spoiling for ತವಕಿಸು, ಹಾತೊರೆ (To s. for a fight ಜಗಳಕ್ಕೆ ಕಾಲು ಕೆರೆದು ನಿಂತಿರು. Be spoiling for music ಸಂಗೀತ ಕೇಳಲು ತವಕಿಸುತ್ತಿರು)] . S.-sport ವಿನೋದಗೇಡಿ, ಸಂತೋಷಮಾರಿ. **Spóilage** (ನಾ.) (ಮುದ್ರಣದಲ್ಲಿ) ಕೆಟ್ಟುಹೋದ ಕಾಗದ(ಗಳು). **Spoíler** (ನಾ.)

Spoke[1] ಸ್ಪೋಕ್ (ನಾ., ಕ್ರಿ. ಸಕ.) (ಚಕ್ರದ) ಅರೆ(ಯ ಕಾಲು), ಕಡ್ಡಿ, ಹಲ್ಲು ; ಏಣಿಯ ಮೆಟ್ಟಿಲು, ಕಾಲು, ಹಂತ ; (ಹಡಗಿನ ಚಾಲಕ ಚಕ್ರದ) ಅರೆಯ ಕಾಲಿನಂಥ ಹಿಡಿಗಂಬಿ; (ಮು., ಇಳಿಜಾರಿನಲ್ಲಿ ಹೋಗುತ್ತಿರುವಾಗ) ಗಾಲಿ ತಿರುಗದಂತೆ ತಡೆಯುವ ಕಂಬಿ : ತಡೆಗಂಬಿ [Put a s. in

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

person's wheel (ರೂಪ.) ಒಬ್ಬನ ಉದ್ದೇಶಗಳಿಗೆ ಅಡ್ಡಿಪಡಿಸು, ತಡೆ ಹಾಕು] ; [S.-bone ಮುಂದೋಳಿನ ರೇಡಿಯಸ್ ಮೂಳೆ. S.-shave ಚಕ್ರದ ಅರೆಗಳನ್ನೂ ಇತರ ಮು., ಬಾಗುಪದಾರ್ಥಗಳನ್ನೂ ಹತ್ತರಿ ಹಿಡಿಯಲು ಉಪಯೋಗಿಸುವ, ಎರಡು ಹಿಡಿಗಳ ನಡುವೆ ಅಲಗುಳ್ಳ, ಹತ್ತರಿ: ಅರೆ —ಹತ್ತರಿ, ತೋಪಡ]. (ಕ್ರಿ.) ಅರೆ(ಕಾಲು) ಹಾಕು ; (ಚಕ್ರಕ್ಕೆ) ತಡೆಗಂಬಿ ಹಾಕು. Spoking-machine ಚಕ್ರದ ಅರೆಗಳಿಗೆ ಒಂದೇ ಸಮನಾದ ಓಲನ್ನು ಕೊಡಲು ಉಪಯೋಗಿಸುವ ಯಂತ್ರ : ಅರಾ (ಯೋಜಕ) ಯಂತ್ರ. **Spókewise** (ಕ್ರಿ. ವಿ.) ಅರೇಕಾಲಿನ ರೀತಿಯಲ್ಲಿ (ಹರಡಿ) ; ತ್ರಿಜ್ಯರೇಖೆಗಳಲ್ಲಿ.

Spoke², Spóken. Speak ನೋಡಿ.

Spókesman ಸ್ಪೋಕ್ಸ್‌ಮ್ಯನ್ (ನಾ.) ಇತರರ ಪರವಾಗಿ ಮಾತಾಡುವವನು ; ಪ್ರತಿನಿಧಿ ; ವದನಕ ; ಪ್ರಮುಖ.

Spólia opíma (L) ಸ್ಪೋಲಿಯ ಒಪೈಮ (ನಾ.) (ರೋ. ಪ್ರಾ.) ದ್ವಂದ್ವ ಯುದ್ಧದಲ್ಲಿ ರೋಮನ್ ಸೇನಾನಿ ಶತ್ರು ಸೇನಾನಾಯಕನನ್ನು ಸೋಲಿಸಿ ಅವನಿಂದ ಕಸಿದುಕೊಂಡ ಶಸ್ತ್ರಗಳು ; (ರೂಪ.) ಶ್ರೇಷ್ಠ, ಪರಮ, —ಪ್ರಶಸ್ತಿ, ಗೌರವ (ಲ್ಯಾಟಿನ್ ಅರ್ಥ=ಅಮೂಲ್ಯ ಸೂರೆ)

Spoliátion ಸ್ಪೋಲಿಯೇಷನ್ (ನಾ.) (ಮು., ಯುದ್ಧ ರಾಜ್ಯಗಳು ತಟಸ್ಥ ರಾಜ್ಯಗಳ ಹಡಗುಗಳನ್ನು ಹಿಡಿದು ಮಾಡುವ) ಕೊಳ್ಳೆ, ಸೂರೆ, ಲೂಟಿ ; (ರೂಪ.) ಬಲಾತ್ಕಾರವಾಗಿ ಕಿತ್ತುಕೊಳ್ಳುವುದು, ಕಸಿದುಕೊಳ್ಳುವುದು, ಸುಲಿಗೆ. (ಕ್ರೈಸ್ತ ಮತ) ಇಲ್ಲದ ಹಕ್ಕನ್ನು ಹೂಡಿಕೊಂಡು ಮತವೃತ್ತಿಯ ಫಲವನ್ನು ತೆಗೆದುಕೊಳ್ಳುವುದು: ಆಸ್ತಿಯ ಕಸಿತ, ಅಪಹರಣ (Writ of s. ಅಪಹರಿಸಿದ ಮತವೃತ್ತಿಯನ್ನು ಹಿಂದಕ್ಕೆ ಪಡೆಯಲು ಹೊರಡಿಸಿದ ಆಜ್ಞೆ : ವೃತ್ತಿಯ ಪುನಃ ಸ್ವಾಧೀನಾಜ್ಞೆ); (ನ್ಯಾ. ಶಾ.) (ರುಜುವಾತಿಲ್ಲದಂತೆ ಮಾಡಲು) ದಸ್ತೈವಜನ್ನು ಹಾಳು ಮಾಡುವುದು, ಬದಲಾಯಿಸಿಬಿಡುವುದು ; ದಾಖಲೆ—ನಾಶ, ಕೆಡಿಕೆ, ತಿದ್ದಾಣಿಕೆ. **Spóliator** (ನಾ.) ; **Spóliatory** (ಗು.)

Spondáic. Spondee ನೋಡಿ.

Spóndee ಸ್ಪಾಂಡೀ (ನಾ.) ದ್ವಿಗುರು ಗಣ (— —). **Spondáic** ಸ್ಪಾಂಡೇಇಕ್ (ಗು.) ದ್ವಿಗುರು ಗಣಗಳ ; (ಷಡ್ಗಣ ಪಾದಗಳ ವಿಷಯದಲ್ಲಿ) ಐನೆಯ ಗಣ ದ್ವಿಗುರುವಾಗುಳ್ಳ.

Spóndyl(e) ಸ್ಪಾಂಡಿಲ್ (ನಾ.) ಬೆನ್ನೆಲುಬಿನ ಒಂದು ಖಂಡ, ಮಣಿ ; ಕಶೇರುಕಾಸ್ಥಿ. **Spóndyl(o)-** (ಸ. ಪೂ. ಪ.) ಬೆನ್ನೆಲುಬಿನ—, ಕಶೇರುಕ—.

Sponge ಸ್ಪಂಜ್, ಸ್ಪನ್ಜ್ (ನಾ.) ಸರಂಧ್ರವೂ ಸ್ಥಿತಿಸ್ಥಾಪಕ ಗುಣವುಳ್ಳದ್ದೂ ಆದ ಮೈಕಟ್ಟುಳ್ಳ, ಕೆಳ ವರ್ಗದ ಜಲಜಂತು: ಸ್ಪಂಜು (ಪ್ರಾಣಿ); (ಸ್ನಾನ, ತೊಳೆತ, ಮೊ. ಗಳಲ್ಲಿ ನೀರು ಹೀರುವ ಪದಾರ್ಥವಾಗಿ ಉಪಯೋಗಿಸುವ, ಈ ಪ್ರಾಣಿಯ ಮೈಕಟ್ಟಾದ) ಸ್ಪಂಜು; [Throw up the s. (ಮುಷ್ಟಿಮಲ್ಲನ ಅಥವಾ ಅವನ ಸಹಾಯಕನ ವಿಷಯದಲ್ಲಿ) ಸ್ಪಂಜನ್ನು (ಸೋಲಿನ ಒಪ್ಪಿಗೆಯಾಗಿ) ಮೇಲಕ್ಕೆಸೆ; (ರೂಪ.) ಹೋರಾಟ ಬಿಟ್ಟುಬಿಡು, ಸೋಲೊಪ್ಪಿಕೊ. Pass the s. over (ತಪ್ಪು, ಅಸಮಾಧಾನ, ಮೊ. ನ್ನು) ಮರೆತುಬಿಡು]. (ನೀರು ಹೀರಿಕೊಳ್ಳುವುದರಲ್ಲಿ, ರಚನೆಯಲ್ಲಿ) ಸ್ಪಂಜಿನಂಥ ಪದಾರ್ಥ [ಉದಾ., ಹುದುಗು ಕಣಕ(ದ ರೊಟ್ಟಿ) ; (ಶಸ್ತ್ರ ಚಿಕಿತ್ಸೆಯಲ್ಲಿ ಉಪಯೋಗಿಸುವ) ಹೀರುಕಟ್ಟು, ಶೋಷಕ ; ಫಿರಂಗಿಯ ನಳಿಕೆಯನ್ನು ಚೊಕ್ಕಟಮಾಡಲು ಉಪಯೋಗಿಸುವ ಬಟ್ಟೆಯ ಕುಚ್ಚು ; ಬಹಳ ಸೂಕ್ಷ್ಮ ರಂಧ್ರ ರಚನೆಯುಳ್ಳ ಕಬ್ಬಿಣ ಅಥವಾ ಇತರ ಲೋಹ] ; (ರೂಪ.) ಮತ್ತೊಬ್ಬರನ್ನು ಹೀರಿ ಜೀವಿಸುವವನು, ಪರೋಪಜೀವಿ. ಹೆಂಡ— ಕುಡುಕ, ಹೀರುಕ. **S.-bath** ಒದ್ದೆ ಸ್ಪಂಜು, ಒದ್ದೆ ಬಟ್ಟೆ, ಮೊ. ಗಳಿಂದ ಮೈಗೆ ನೀರೊತ್ತಿ ಮಾಡಿಸುವ ಸ್ನಾನ: ಸ್ಪಂಜು ಸ್ನಾನ. **S.-cake** ಸ್ಪಂಜಿನಂತಿರುವ ಲಘುವಾದ ರೊಟ್ಟಿ, ದೋಸೆ. **S. cucumber, S.-gourd, Vegetable s.** ಟರ್ಕಿಷ್ ಸ್ನಾನದಲ್ಲಿ (Turkish bath) ವಸ್ತ್ರದಂತೆ, ರಬ್ಬರಿನಂತೆ, ಉಪಯೋಗಿಸುವ, ಸೋರೆ ಜಾತಿಯ ಕಾಯಿಯ ಜುಂಗು. **S. tent** (ಗಾಯ, ಮೊ. ಗಳನ್ನು ತೆರೆದಿಟ್ಟಿರಲು ಉಪಯೋಗಿಸುವ) ದಟ್ಟಿಸಿದ ಸ್ಪಂಜು. **S.-tree** ಸುವಾಸನೆಯ ಹಳದಿ ಹೂವು ಬಿಡುವ, ಅವರೆ ಜಾತಿಯ, ಉಷ್ಣದೇಶದ ಒಂದು ಗಿಡ. **Spóngiform** (ಗು.) ಸ್ಪಂಜಿನಂಥ. **Spongiopíline** ಸ್ಪಂಜಿಯೊಪೈಲೈ(ಲಿ)ನ್ (ನಾ.) ಸ್ಪಂಜು ಮತ್ತು ಜುಂಗನ್ನು ಸೇರಿಸಿ ಹಿಂಭಾಗಕ್ಕೆ ರಬ್ಬರು ಹಾಕಿ ಮಾಡಿದ ಒಂದು ಬಗೆಯ ಒತ್ತುಕಟ್ಟು, ಪೋಲ್ಟೀಸು. **Spongólogy** ಸ್ಪಾಂಗಾಲೊಜಿ (ನಾ.) ಸ್ಪಂಜು—ಶಾಸ್ತ್ರ, ವಿಜ್ಞಾನ. **Spongólogist** (ನಾ.) ; **Spóngy** ಸ್ಪಂಜಿ (ಗು.) ಸ್ಪಂಜಿನಂಥ ; ಸ್ಪಂಜಿನಂತೆ —ರಂಧ್ರಮಯ, ಒತ್ತಿ ಅಡಕಮಾಡಲಾಗುವ, ಸ್ಥಿತಿಸ್ಥಾಪಕಗುಣವುಳ್ಳ, ಹೀರುವ ; (ಲೋಹದ ವಿಷಯದಲ್ಲಿ) ಸೂಕ್ಷ್ಮರಂಧ್ರ ರಚನೆಯುಳ್ಳ. (ರೂಪ.) ಸತ್ತ್ವವಿಲ್ಲದ, ತಿರುಳಿಲ್ಲದ. **Spónginess** (ನಾ.)

Sponge (ಕ್ರಿ., ನಾ.) ಸ್ಪಂಜಿನಿಂದ ಒತ್ತು, ಒರಸು, ಉಜ್ಜು ; (ದೇಹ ಭಾಗಗಳ ಮೇಲೆ) ಸ್ಪಂಜಿನಿಂದ ನೀರು ಒತ್ತು, ಹನಿಸು, ಹಿಂಡು (ಅನೇಕ ವೇಳೆ *down, over* ಉಪ. ಜೊತೆ) ; ಸ್ಪಂಜಿನಿಂದ ಒರಸಿ ಹಾಕು, ಅಳಿಸಿಬಿಡು (ನೆನಪು, ಮೊ. ಗಳ ವಿಷಯದಲ್ಲಿ ರೂಪ.) (ಸಾ., *out* ಉಪ. ಜೊತೆ); (ಸ್ಪಂಜಿನಿಂದ, ನೀರು, ಮೊ. ನ್ನು) ಹೀರು, ಹೀರಿಕೊ, ಹೀರಿಸು (*Up* ಉಪ. ಜೊತೆ) ; ಸ್ಪಂಜು (ಪ್ರಾಣಿಗಳನ್ನು) ಶೇಖರಿಸು ; ಹಲ್ಲುಕಿರಿದು, ಬಿನ್ನಾಣದ ವಿದ್ಯೆಗಳಿಂದ, —ಹುರಿ, ಗಿಟ್ಟಿಸು (S. a dinner ಹಲ್ಲುಕಿರಿದು ಊಟ ಗಿಟ್ಟಿಸು) ; [S. on ಪರೋಪಜೀವಿಯಾಗಿರು ; (ಸಹಾಯ, ಜೀವನ, ಮೊ. ನ್ನು ಗಿಟ್ಟಿಸುವುದಕ್ಕಾಗಿ ವ್ಯಕ್ತಿಯನ್ನು) ನೀಚತನದಿಂದ ಅವಲಂಬಿಸಿಕೊಂಡಿರು, ಆಶ್ರಯಿಸಿಕೊಂಡಿರು (Person *for* thing)]. (ನಾ.) (ಕ್ರಿಯಾರ್ಥಗಳಲ್ಲಿ) ; ಸ್ಪಂಜು ಸ್ನಾನ (Has a s. down). **Spónger** (ನಾ.) ; **Spónging** (ನಾ.) (ಕ್ರಿಯಾರ್ಥಗಳಲ್ಲಿ) ; S.-house ದಸ್ತಗಿರಿ ಮಾಡಿದ ಸಾಲಗಾರನನ್ನು ತಾತ್ಕಾಲಿಕವಾಗಿ ಇಟ್ಟಿರುವ ಬೇಲಿಫನ ಮನೆ.

Spongiopíline, Spóngy. Sponge (ನಾ.) ನೋಡಿ.

Spónsion ಸ್ಪಾನ್ಷನ್ (ನಾ.) ಮತ್ತೊಬ್ಬರಿಗೆ ಹೊಣೆಯಾಗಿರುವುದು, ಜಾಮೀನಾಗುವುದು ; (ಅಂತರ ರಾಷ್ಟ್ರೀಯ ನ್ಯಾ. ಶಾ.) ನಿರ್ದಿಷ್ಟಾಧಿಕಾರ ಪಡೆದಿಲ್ಲದ ಪ್ರತಿನಿಧಿ ತನ್ನ ರಾಜ್ಯದ ಪರವಾಗಿ ಮಾಡಿಕೊಂಡ ಒಡಂಬಡಿಕೆ : ಅನಿರ್ಬಂಧ ರೀತಿಯ ಒಡಂಬಡಿಕೆ.

Spónson ಸ್ಪಾನ್ಸನ್ (ನಾ.) ಫಿರಂಗಿಯನ್ನು ಗುರಿಯಿಡುವಲ್ಲಿ ಹಿಂದಕ್ಕಾಗಲಿ ಮುಂದಕ್ಕಾಗಲಿ ಅದು ಚಲಿಸಲು ಎಡೆಯಿರುವಂತೆ ಹಡಗಿನ ಪಕ್ಕದಲ್ಲಿ ಮಾಡಿರುವ ಚಾಚು : ಫಿರಂಗಿಯ ಚಾಚು —ಪೀಠ, ಜಗಲಿ ; ಹಡಗಿನ ಹುಟ್ಟುಗಾಲಿಯ (ಮುಚ್ಚಳದ ಹಿಂಗಡೆಯೂ ಮುಂಗಡೆಯೂ ಇರುವ) ತ್ರಿಕೋನಾಕಾರದ ವೇದಿಕೆ, ಪೀಠ.

Spónsor ಸ್ಪಾನ್ಸರ್ (ನಾ.) ಧರ್ಮಾಯ —ಪಿತ, ಮಾತೆ (=God-father, godmother) ; ಮತ್ತೊಬ್ಬನ ಜವಾಬ್ದಾರಿ ಹೊತ್ತವನು ; ಜವಾಬ್ದಾರ ; ಜಾಮೀನುದಾರ, ಹೊಣೆಗಾರ. **Sponsórial** (ಗು.) ; **Spónsorship** (ನಾ.)

Spontáneous ಸ್ಪಾಂಟೇನಿಯಸ್ (ಗು.) ಬಾಹ್ಯ ಕಾರಣವಿಲ್ಲದೆ, ತನ್ನಷ್ಟಕ್ಕೆ ತಾನೇ, —ನಡೆಯುವ, ಆದ ; ಸ್ವಂತ ಇಷ್ಟದಿಂದ, ಆತ್ಮ ಸಂತೋಷದಿಂದ, —ಮಾಡಿದ ; ಸ್ವಪ್ರೇರಣೆಯ, ಸ್ವತಃ ಪ್ರೇರಿತ (Made a s. offer of his services). (ಹಠಾತ್ತನೆಯ ಚಲನೆ, ಮೊ. ಗಳ ವಿಷಯದಲ್ಲಿ) ಸಂಕಲ್ಪವಿಲ್ಲದೆ ಆದ, ಅನೈಚ್ಛಿಕ, ಅಯತ್ನಪೂರ್ವಕ ; ಕೃಷಿಯಿಲ್ಲದೆ ತಾನಾಗಿಯೇ ಬೆಳೆಯುವ, ಪ್ರಕೃತಿ ಸಿದ್ಧ (When men lived on the s. fruits of the earth). (ಜೀ. ವಿ.) (ಸಸ್ಯಗಳಲ್ಲಿ ರಚನಾ ವ್ಯತ್ಯಾಸಗಳು, ಎಳೆಯ ಪ್ರಾಣಿಗಳಲ್ಲಿ ಸ್ನಾಯು ಚಟುವಟಿಕೆ, ಮೊ. ಗಳ ವಿಷಯದಲ್ಲಿ) ಸಹಜ ಪ್ರವೃತ್ತಿಯ, ನೈಸರ್ಗಿಕ, ಸ್ವಾಭಾವಿಕ, ಅನುದ್ದೇಶಪೂರ್ವಕ. (ಅಂಗಚಲನೆ, ಸಾಹಿತ್ಯ ಶೈಲಿ, ಮೊ. ಗಳ ವಿಷಯದಲ್ಲಿ) ಸಹಜ —ಲಲಿತ, ಸರಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

S. combustion ತೀವ್ರ ಆಮ್ಲಜನಕ ಸಂಯೋಗಕ್ರಿಯೆಯಿಂದ ಖನಿಜ ಅಥವಾ ಸಸ್ಯ ಪದಾರ್ಥಗಳು (ಉದಾ., ಎಣ್ಣೆಯಲ್ಲಿ ನೆನಸಿದ ಚಿಂದಿಗಳ ರಾಶಿ, ಒದ್ದೆ ಕಲ್ಲಿದ್ದಲ ಗುಡ್ಡೆ) ತಮ್ಮಷ್ಟಕ್ಕೆ ತಾವೇ ಹೊತ್ತಿಕೊಳ್ಳುವುದು, ಉರಿದುಹೋಗುವುದು: ಸಹಜ ಅಂತರ್ದಹನ, ಸ್ವಯಂ ದಹನ. S. generation (ಕೆಲವು ಕಷಾಯ ಇಳಿಕೆಗಳಲ್ಲಿ ಕಂಡುಬರುವ ಜೀವೋತ್ಪತ್ತಿಯಿಂದ ಊಹಿಸುವ) ಅಜೀವದಿಂದ ಜೀವೋತ್ಪತ್ತಿ ; ಸ್ವಯಂ ಜನನ. S. suggestion (ಬುದ್ಧಿಪೂರ್ವಕ ಸಂಕಲ್ಪವಿಲ್ಲದೆ, ಭಾವ ಸಾಹಚರ್ಯದಿಂದಾಗುವ) ಅಂತಃಸ್ಫುರಣ, ಸ್ವಯಂ— ಪ್ರೇರಣೆ, ಭಾಸ. **Spontáneously** (ಕ್ರಿ. ವಿ.) ; **Spontáneousness** (ನಾ.) ; **Spontanéity** ಸ್ಪಾಂಟನೀಇಟಿ (ನಾ.) ಸ್ವಯಂ ಪ್ರೇರಿತ, ಅಂತಃಪ್ರವೃತ್ತ, ಅನೈಚ್ಛಿಕ, —ಕ್ರಿಯೆ, ಚಲನೆ, ವ್ಯಾಪಾರ ; ಸ್ವಾಭಾವಿಕತೆ; ಸಹಜತೆ.

Spontoón ಸ್ಪಾಂಟೂನ್ (ನಾ.) (ಚರಿತ್ರೆ) (ಕೆಲವು ಬ್ರಿಟಿಷ್ ಪದಾತಿದಳದ ಅಧಿಕಾರಿಗಳು ಉಪಯೋಗಿಸುತ್ತಿದ್ದ) ಒಂದು ಬಗೆಯ ಈಟಿಗೊಡಲಿ.

Spoof ಸ್ಪೂಫ್ (ಕ್ರಿ. ಸಕ., ನಾ.) (ಅಸಂ.) ಮೋಸ(ಮಾಡು), ಠಕ್ಕು (ನಡಸು), ಕಣ್ಣಿಗೆ ಮಣ್ಣೆರಚು(ವುದು), ಮಂಕುಬೂದಿ (ಹಾಕು). **Spoófer** (ನಾ.)

Spook ಸ್ಪೂಕ್ (ನಾ.) ದೆವ್ವ, ಭೂತ, ಪ್ರೇತ. **Spoókish** (ಗು.) ; **Spoóky** (ಗು.)

Spool ಸ್ಪೂಲ್ (ನಾ., ಕ್ರಿ. ಸಕ.) (ದಾರ, ಛಾಯಾಚಿತ್ರಪಟಲ, ಮೊ. ನ್ನು ಸುತ್ತುವ) ಗಾಲಿ, ಉರುಳೆ ; ಗಾಳಿಗನ ಗಾಳದ ಚಕ್ರದ ತಿರುಗು ಅಚ್ಚು, ಉರುಳೆ. (ಕ್ರಿ.) —ಗೆ ಸುತ್ತು, ಮೇಲೆ ಸುತ್ತು.

Spoon[1] ಸ್ಪೂನ್ (ನಾ., ಕ್ರಿ.) ಚಮಚ, ಮಿಳ್ಳೆ, ಸಣ್ಣ ಸೌಟು, ಉದ್ಧರಣೆ [Tea, dessert, table, -s. (ಮು., ಔಷಧದ ಅಳತೆಯಾಗಿ ಉಪಯೋಗಿಸುವ) ಸಣ್ಣ, ನಡುತರದ, ದೊಡ್ಡ, —ಚಮಚ. Apostle s. ಸಂತನ ಚಿತ್ರ ಕೆತ್ತಿದ ಚಮಚ. Egg-s. (Egg[1] ನೋಡಿ). Salt-s. ಉಪ್ಪು (ಬಡಿಸುವ) ಚಮಚ. Mustard-s. ಸಾಸವೆ ಪುಡಿ (ಬಡಿಸುವ) ಚಮಚ. Marrow-s. (Marrow ನೋಡಿ). Born with silver s. in the mouth (Born ನೋಡಿ). Long s. & the devil (Sup ನೋಡಿ). Wooden s. (ಚರಿತ್ರೆ) ಕೇಂಬ್ರಿಡ್ಜ್ ವಿ.ವಿ.ನಿ. ದಲ್ಲಿ ಗಣಿತದ ಉಚ್ಚ ಪ್ರಶಸ್ತಿ (Tripos) ಪಡೆದವರಲ್ಲಿ ಕಡೆಯವನು (—ಯವನಿಗೆ ಕೊಡುತ್ತಿದ್ದ ಮರದ ಚಮಚ). Egg-&-s. race (Egg[1] ನೋಡಿ)]. ಚಮಚದಾಕಾರದ ವಸ್ತು (ಮು., ಅಗಲವಾದ ಬಾಗು ಅಲಗಿನ ಹುಟ್ಟು, ಹಳ್ಳಮಾಡಿದ ಮುಖವುಳ್ಳ ಗಾಲ್ಫ್ ದಾಂಡು). [S.(-bait) ಮೀನು ಹಿಡಿಯುವುದರಲ್ಲಿ ಸೆಳೆಯಾಗಿ ಉಪಯೋಗಿಸುವ, ಗಿರ್ರನೆ ತಿರುಗುವ, ಚಮಚದಾಕಾರದ, ಹೊಳೆಯುವ ಲೋಹದ ತುಂಡು : ಚಮಚ ಗಾಳ. **Spoónbeak, S.-bill** ಹಲವು ಬಗೆಯ ಹಕ್ಕಿ. **S.-drift**=Spindrift (ಆ ಪದ ನೋಡಿ). **S.-fed** ಅತಿಯಾಗಿ ಮುದ್ದಿಸಿದ; ಉಣ್ಣಿಸಿ ಬೆಳೆಸಿದ, ಸಹಜ ಪೋಷಣೆಯಿಲ್ಲದ; ಸ್ವತಂತ್ರ ಸ್ಫೂರ್ತಿಯಿಲ್ಲದ (S.-fed students) ; (ಕೈಗಾರಿಕೆ, ಮೊ. ಗಳ ವಿಷಯದಲ್ಲಿ ರೂಪ.) (ಸಹಾಯದ್ರವ್ಯ, ಆಮದು ಸುಂಕ, ಮೊ. ಗಳ ಮೂಲಕ) ಕೃತಕ ಪೋಷಣೆ, ಪ್ರೋತ್ಸಾಹ, —ಪಡೆದ ; ಪಾಲಿತ. **S.-meat** ದ್ರವಾಹಾರ, ಮಕ್ಕಳ ಆಹಾರ (ರೂಪ. ಸಹ). **S.-net** ಹಿಡಿದ ಮೀನನ್ನು ಎತ್ತಿ ಹಾಕಿಕೊಳ್ಳುವ ಕೈಬಲೆ : ಚಮಚ ಬಲೆ]. (ಕ್ರಿ.) ಚಮಚದಿಂದ ತೆಗೆ(ದುಕೊ), ಎತ್ತಿಕೊ (ಸಾ., *up, out* ಉಪ. ದೊಡನೆ) ; ಚಮಚ ಗಾಳದಿಂದ ಮೀನು ಹಿಡಿ ; (ಕ್ರೋಕೇ ಆಟದಲ್ಲಿ) ತಳ್ಳುಹೊಡೆತ ಹೊಡೆ ; (ಕ್ರಿಕೆಟ್) (ಚೆಂಡನ್ನು) ಮೆತ್ತಗೆ ಹೊಡೆ(ದು ಬುತ್ತಿ ಕಳುಹಿಸು). (-)**spoónful** (ನಾ.) (—) ಚಮಚ ತುಂಬು.

Spoon[2] ಸ್ಪೂನ್ (ನಾ., ಕ್ರಿ. ಅಕ.) ದಡ್ಡ, ಪೆದ್ದ, ಗುಗ್ಗು. ಅತಿರೇಕ, ಭ್ರಾಂತ, ಹುಚ್ಚು, —ಪ್ರಣಯಿ ; ಪ್ರೇಮದ ಪೆದ್ದ (Be spoons on ಹುಚ್ಚು ಪ್ರೇಮವಿಟ್ಟಿರು, ಮೂರ್ಖ ಪ್ರಣಯ ತೋರು). (ಕ್ರಿ.) ಪೆದ್ದು ಪೆದ್ದಾಗಿ ಪ್ರಣಯ ; ತೋರು (ಹುಡುಗಿ, ಮೊ. ವರೊಡನೆ) ಪ್ರಣಯ ಲೀಲೆಯಾಡು. **Spoóny** (ಗು., ನಾ.) ಪ್ರೇಮದ ಪೆದ್ದನಾದ ; ಐಲುಪೈಲಾದ (*Upon, on* ಉಪ. ದೊಡನೆ). (ನಾ.) ಪೆದ್ದು, ಐಲು. **Spoónily** (ಕ್ರಿ. ವಿ.) ; **Spoóniness** (ನಾ.)

Spoóner(ism) ಸ್ಪೂನರ್(ಇಸ್ಂ) (ನಾ.) ಎರಡು ಅಥವಾ ಹೆಚ್ಚು ಪದಗಳ ಮೊದಲ ಅಕ್ಷರಗಳು, ಮೊ. ನ್ನು ಆಕಸ್ಮಿಕವಾಗಿ ವಿನಿಮಯ ಮಾಡಿ ಹೇಳುವುದು : ವರ್ಣವ್ಯತ್ಯಯ, ಅಕ್ಷರ ಪಲ್ಲಟ (ಉದಾ., Crushing blow ಎನ್ನುವುದಕ್ಕೆ blushing crow ; well-oiled bicycle ಎನ್ನುವುದಕ್ಕೆ well-boiled icycle) (ಇಂಥ ಅಕ್ಷರ ಪಲ್ಲಟಗಳಿಗೆ ಹೆಸರಾಗಿದ್ದ Rev. W. A. Spooner ಎಂಬಾತನಿಂದ)

Spoóny, etc. **Spoon**[2] ನೋಡಿ.

Spoor ಸ್ಪೂ(ಅ)ರ್ (ನಾ., ಕ್ರಿ.) (ಬೇಟೆಯಲ್ಲಿ) ಪ್ರಾಣಿಯ ಹೆಜ್ಜೆ, ಜಾಡು. (ಕ್ರಿ.) ಹೆಜ್ಜೆಯನ್ನು, ಜಾಡನ್ನು,—ಹಿಡಿದುಹೋಗು. **Spoórer** (ಗು.)

Sporádic ಸ್ಪೊರ್ಯಾಡಿಕ್ (ಗು.) (ಜಾಡ್ಯಗಳ ವಿಷಯದಲ್ಲಿ) ಅಲ್ಲೊಂದು ಇಲ್ಲೊಂದು ಇರುವ, ಎಲ್ಲೋ ಒಮ್ಮೊಮ್ಮೆಯ, ಆಕಸ್ಮಿಕ ; ವಿರಳ ; ಬಿಡಿಯಾದ ; ಕ್ವಚಿತ್ತಾದ. **Sporádical** (ಗು.) (ವಿರ. ಪ್ರ.); **Sporádically** (ಕ್ರಿ. ವಿ.) ; **Sporádicalness** (ನಾ.)

Spore ಸ್ಪೋ(ಅ)ರ್ (ನಾ.) (ಸ. ವಿ.) (ಗುಪ್ತ ಪುಷ್ಪಿಯ ಸಸ್ಯಗಳಲ್ಲಿ) ಪ್ರತ್ಯೇಕ ಹೊಂದಿ ಸ್ವತಂತ್ರವಾಗಿ ಬೆಳೆಯಬಲ್ಲ ಒಂದು ಕಣ : ಬೀಜಕಣ [**Sporángium** ಸ್ಪೊರ್ಯಾಂಜಿಯಂ (ನಾ.) ಬೀಜಕಣ ಕೋಶ] ; (ಜೀ. ವಿ.) ಹೊಸ ವ್ಯಕ್ತಿಯಾಗಿ ಬೆಳೆಯುವ ಅತ್ಯಂತ ಸೂಕ್ಷ್ಮ ಜೈವಿಕಾಂಗ : ಜೀವಕಣ. (ರೂಪ.) ಬೀಜ, ಅಂಕುರ. **Sporo-** (ಸ. ಪೂ. ಪ.) ಬೀಜಕಣ—, ಜೀವಕಣ—. **-génesis** —ರಚನೆ, —ಉತ್ಪತ್ತಿ. **-genous** —ಜನಕ, —ಉತ್ಪಾದಕ. **Sporúle** ಸ್ಪಾರ್ಯುಲ್ (ನಾ.) (ಸಣ್ಣ) ಬೀಜಕಣ. **Spórular** (ಗು.)

Spórran ಸ್ಪಾರನ್ (ನಾ.) ಸ್ಕಾಟ್ಲೆಂಡಿನ ಮಲೆನಾಡಿಗರು ತಮ್ಮ ಗಿಡ್ಡ ಲಂಗದ ಮುಂಭಾಗದಲ್ಲಿ ಧರಿಸುವ, ತುಪ್ಪುಳು ಚರ್ಮದ ಸಂಚಿ, ದುಡ್ಡಿನ ಚೀಲ.

Sport ಸ್ಪೋ(ಅ)ರ್ಟ್ (ನಾ., ಕ್ರಿ.) ಆಟ, ಕ್ರೀಡೆ, ವಿನೋದ, ಕೇಳಿ, ಲೀಲೆ, ವಿಹಾರ, ತಮಾಷೆ [In s. ಹುಡುಗಾಟಕ್ಕೆ, ಕುಚೋದ್ಯವಾಗಿ, ತಮಾಷೆಗಾಗಿ. Make s. of ಗೇಲಿ, ಪರಿಹಾಸ್ಯ, ತಮಾಷೆ, —ಮಾಡು. Be the s. of Fortune ಅದೃಷ್ಟದ ಕೈಗೊಂಬೆಯಾಗಿರು, ವಿಧಿವಿಲಾಸದ ಸೂತ್ರಕ್ಕೆ ಸಿಕ್ಕಿರು. Have good s. (ಬೇಟೆಯಲ್ಲಿ) ಒಳ್ಳೆಯ ಶಿಕಾರಿ ಹೊಡೆ, ಬೇಟೆ ಕೆಡವು. Athletic sports (ಹಾರುವುದು, ಓಡುವುದು, ಭಾರವೆಸೆಯುವುದು, ಮೊ.) ವ್ಯಾಯಾಮ ಕ್ರೀಡೆಗಳು. School sports ಶಾಲಾ (ವ್ಯಾಯಾಮ) ಕ್ರೀಡೆಗಳು. Inter-university sports ಅಂತರ ವಿ. ವಿ. ನಿ. ಗಳ (ವ್ಯಾಯಾಮ) ಕ್ರೀಡೆಗಳು. Sports coat, jacket (ಗಾಲ್ಫ್ ಆಟ, ಮೊ. ನ್ನು ಆಡುವಾಗ ತೊಡುವ) ಆಟದ —ಅಂಗಿ, ಜಾಕೆಟ್ಟು] ; ಸಾಮಾನ್ಯ ಮಾದರಿಯಿಂದ ಹಠಾತ್ತಾಗಿ ಅಥವಾ ಮನಸ್ಸಿಗೆ ಹೊಡೆಯುವ ರೀತಿಯಲ್ಲಿ ಬೇರೆ ಜಾತಿಯಾದ ಸಸ್ಯ, ಪ್ರಾಣಿ : ಜಾತ್ಯಂತರ ಹೊಂದಿದ, ವಿಲಕ್ಷಣ, —ಸಸ್ಯ, ಪ್ರಾಣಿ. (ಅಸಂ.) ಒಳ್ಳೆಯ —ಸರಸಿ, ಸ್ನೇಹಪರ; =Sportsman. [**Spórtsman** ಆಟಗಾರ, ಕ್ರೀಡಾಸಕ್ತ ; ಕ್ರೀಡಕ ; ಮೃಗಯಾ ವಿಹಾರಿ, ಶಿಕಾರಿ ; (ರೂಪ.) ಜೀವನ ಒಂದು ಆಟ ಎಂದು ಭಾವಿಸಿ ತನ್ನ ಎದುರಾಳಿಗಳಿಗೆ ನ್ಯಾಯವಾದ ಅವಕಾಶ ಕೊಡುವವನು : ಉದಾರ ಸ್ಪರ್ಧಿ ; (ಜೀವನ) ಕ್ರೀಡಾ ಸರಸಿ ; ಧೈರ್ಯವಾಗಿ ಆಟವಾಡುವವನು. **Spórtsmanship** (ನಾ.) ; **Spórtsmanlike** (ಗು.) ಆಟಗಾರನಿಗೆ ತಕ್ಕ, ಕ್ರೀಡಾಭಿಮಾನಿ ಯೋಗ್ಯ ; ಕ್ರೀಡೋದಾರ. **Spórtswoman** (ನಾ., ಸ್ತ್ರೀ.)]. (ಕ್ರಿ.) ಆಟದಲ್ಲಿ, ಕ್ರೀಡೆಯಲ್ಲಿ, ವಿನೋದವಾಗಿ, —ಕಾಲ ಕಳೆ ; ಆಟವಾಡು, ಕ್ರೀಡಾಸಕ್ತನಾಗಿರು ; ಮೃಗಯಾವಿಹಾರಮಾಡು, ಬೇಟೆಯಾಡು ; ತಮಾಷೆ, ಹಾಸ್ಯ, ವಿನೋದ, —ಮಾಡು ; (ವರ್ತಮಾನ ಕೃ.) ಕ್ರೀಡಾಸಕ್ತ (A sporting man ಕ್ರೀಡಾಭಿಮಾನಿ) ; ಕ್ರೀಡೋದಾರ (Sporting

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

conduct. Sporting offer ಸರಸದ—ಸವಾಲು, ನೀಡಿಕೆ). (ಸ. ವಿ., ಪ್ರಾ. ವಿ.) ವಿಲಕ್ಷಣವಾದುದು ಆಗು, ಹುಟ್ಟು ; —ದನ್ನು ಹುಟ್ಟಿಸು ; ಆಡಂಬರವಾಗಿ ಧರಿಸು, ತೋರಿಸಿಕೊ, ಪ್ರದರ್ಶಿಸು (Sported a gold tie pin); S. one's oak (Oak ನೋಡಿ). **Spórtingly** (ಕ್ರಿ. ವಿ.) ಆಟದ ರೀತಿಯಲ್ಲಿ ; ಕ್ರೀಡಾ ಸುಲಭತೆಯಿಂದ, ಕ್ರೀಡೋದಾರತೆಯಿಂದ. **Spórtive** (ಗು.) ಆಟದ, ಆಟಾಳಿಯಾದ, ವಿನೋದಪರ, ಕ್ರೀಡಾಸಕ್ತ, ಸರಸದ. **Spórtively** (ಕ್ರಿ. ವಿ.) ; **Spórtiveness** (ನಾ.)

Spórule. **Spore** ನೋಡಿ.

Spot ಸ್ಪಾಟ್ (ನಾ.) (ಗೊತ್ತಾದ, ನಿರ್ದಿಷ್ಟವಾದ) ಎಡೆ, ತಾವು, ತಾಣ, ಜಾಗ, ಸ್ಥಳ, ಸ್ಥಾನ, ಪ್ರದೇಶ [Dropped it on this precise s. ಇದೇ ಸ್ಥಳದಲ್ಲೇ ಕೆಡವಿತು. A tender s. ಹಸಿಗಾಯ ; (ರೂಪ.) ಮರ್ಮವೇಧಕ —ವಿಷಯ, ಅಂಶ]. ಚುಕ್ಕೆ, ಕಲೆ, ಮಚ್ಚೆ, ಬಟ್ಟು, ಕರೆ, ಮೊಡವೆ [A blue tie with pink spots. Sun-s. (Sun ನೋಡಿ). Can the leopard change his spots ? (Leopard ನೋಡಿ)]. (ರೂಪ.) ಕಳಂಕ, ದೋಷ, ಕುಂದು (Without a s. on his reputation ನಿಷ್ಕಳಂಕ ಕೀರ್ತಿ ಪಡೆದು). ಹಲವು ಬಗೆಯ ಮೀನು, ಮನೆ ಪಾರಿವಾಳ ; (ಅಸಂ.) (ಜೂಜಿನಲ್ಲಿ ಜಯ ಸಂಭವವಿರುವ ಕುದುರೆ, ಮೊ. ನ್ನು) ಮುಂಗುರುತಿಸುವುದು ; ಹಾಗೆ ಮುಂಗುರುತಿಸಿದ ಕುದುರೆ, ಮೊ. ವು ; (ಬಿಲ್ಯರ್ಡ್ಸ್ ಆಟ) ಮೇಜಿನ ಪ್ರತಿ ಕೊನೆಯಲ್ಲೂ ಪಕ್ಕಗಳಿಂದ ಸಮಾನ ದೂರದಲ್ಲಿರುವ ಸಣ್ಣ, ಗುಂಡನೆಯ, ಕಪ್ಪು ಗುರುತು : ಕಪ್ಪು ಬಟ್ಟು [S.-stroke ಈ ಬಟ್ಟಿನ ಎಡೆಯಲ್ಲಿಟ್ಟ ಕೆಂಪು ಚೆಂಡನ್ನು ಚೀಲಕ್ಕೆ ತುಂಬುವ ಹೊಡೆತ : ನೆರೆ ಹೊಡೆತ. S.-barred game ಒಂದು ಸಲಕ್ಕೆ ಎರಡಕ್ಕಿಂತ ಹೆಚ್ಚಾದ ನೆರೆ ಹೊಡೆತಗಳಿಗೆ ಅವಕಾಶವಿಲ್ಲದ ಆಟ. S.(-ball) (ಒಂದೇ ನಮೂನಾದ ಎರಡು ಬಿಳಿಯ ಚೆಂಡುಗಳಲ್ಲಿ ಒಂದನ್ನು ಮತ್ತೊಂದರಿಂದ ಗುರುತಿಸುವುದಕ್ಕಾಗಿ) : ಕಪ್ಪು ಚುಕ್ಕೆ ಹಾಕಿರುವ ಚೆಂಡು ; ಚುಕ್ಕೆ ಚೆಂಡು]. Spotlight ರಂಗಸ್ಥಳದಲ್ಲಿ ನಟನಮೇಲೆ ಬೀಳುವಂತೆ ಬಿಟ್ಟ ಉಜ್ವಲ ಪ್ರಕಾಶ, ಬಣ್ಣದ ಬೆಳಕು : ನೆರೆ ಬೆಳಕು ; ರಂಗದ ಬೆಳಕು (ರೂಪ. ನಹ). (ಇದಕ್ಕೆ ಉಪಯೋಗಿಸುವ) ಪ್ರಕಾಶ ಪ್ರಕ್ಷೇಪಕ. On the s. ನಿಂತಲ್ಲಿಯೆ, ಅಲ್ಲೆ, ಆಗಲೆ ; ಅಲ್ಲೆ ಮತ್ತು ಆ ಕೂಡಲೆ ; (ವ್ಯಕ್ತಿಯ ವಿಷಯದಲ್ಲಿ) ಎಚ್ಚರಿಕೆಯುಳ್ಳ, ಹುಷಾರಾದ, ಸಂದರ್ಭಕ್ಕೆ ಸಮರ್ಥನಾದ ; (ಆಟ, ಮೊ. ಗಳಲ್ಲಿ) ಒಳ್ಳೆಯ ಹುರುಪಿನಲ್ಲಿರುವ. (ವಾಣಿಜ್ಯ) S. cash, prices, cotton, wheat (ವ್ಯಾಪಾರವಾದೊಡನೆ) ಅಲ್ಲೆ ಕೈಮೇಲೆ ಕೊಡಬೇಕಾದ ನಗದು, ಬೆಲೆ, ಹತ್ತಿ, ಗೋಧಿ. Spots ಕೈಮೇಲೆ ಹಾಕಿದ ನಗದಿಗೆ ಅಲ್ಲೆ ಮಾರಿದ ಸರಕು : ನೆರೆ ಮಾರಾಟದ, ಕೈಮೇಲಿನ ಮಾರಾಟದ, —ಸರಕು. **Spótless** (ಗು.) ನಿಷ್ಕಳಂಕ, ದೋಷರಹಿತ, ನಿರ್ದುಷ್ಟ. **Spótlessly** (ಕ್ರಿ. ವಿ.) ; **Spótlessness** (ನಾ.) ; **Spótty** (ಗು.) ಮಚ್ಚೆ ಮಚ್ಚೆಯಾದ ; ಕಲೆ, ಕರೆ, ಚುಕ್ಕೆ, —ಗಳುಳ್ಳ ; ತೇಪೆ ತೇಪೆಯಾದ, ಏಕರೂಪತೆಯಿಲ್ಲದ. **Spóttiness** (ನಾ.)

Spot (ಕ್ರಿ. ಸಕ.) ಕಲೆ, ಕರೆ, —ಮಾಡು, ಆಗಿರು ; ಕಳಂಕ —ಹಚ್ಚು, ಹತ್ತು (ರೂಪ. ನಹ) ; ಚುಕ್ಕೆ, ಬಟ್ಟು, ಮಚ್ಚೆ, —ಗಳಿಂದ ಗುರುತುಮಾಡು, ಹೊಯ್ಯಿ ; ಸುಲಭವಾಗಿ, ಬೇಗ, —ಕಲೆಯಾಗು, ಕರೆಗೊಳ್ಳು. (ಬಳ. ಮಾ.) (ಜೂಜಿನಲ್ಲಿ ಜಯ ಸಂಭವವಿರುವ ಕುದುರೆ, ಮೊ. ನ್ನು) ಮುಂಗುರುತಿಸು (*For* ಉಪ. ದೊಡನೆ) ; (ಬಳ. ಮಾ.) (ಒಬ್ಬನ ರಾಷ್ಟ್ರೀಯತೆ, ಯೋಗ್ಯತೆ, ಮೊ. ನ್ನು) ಗುರುತು ಹಿಡಿ, ಪತ್ತೆಮಾಡು (Spotted him at once as an American ಅವನನ್ನು ಅಮೆರಿಕದವನೆಂದು ತತ್ಕ್ಷಣ ಗುರುತಿಸಿದನು. Can always s. a dun ಸಾಲವಸೂಲಿಗಾರನನ್ನು ಎಲ್ಲಿದ್ದರೂ ಗುರುತಿಸಬಲ್ಲೆ) ; (ವಿಮಾನದಲ್ಲಿ ಹಾರುತ್ತ) ಶತ್ರು ಸ್ಥಾನವನ್ನು ಗುರುತಿಸು. (ಭೂ. ಕೃ. ನಲ್ಲಿ) ಕಲೆಗಳುಳ್ಳ, ಚುಕ್ಕೆಗಳಿರುವ, ಮಚ್ಚೆಗಳುಳ್ಳ (ಮು., ಪ್ರಾಣಿಗಳ ಹೆಸರಿನಲ್ಲಿ). Spotted dog (ಅಸಂ.) ದ್ರಾಕ್ಷಿ ಹಾಕಿದ ಒಂದು ಪಿಷ್ಟ ಭಕ್ಷ್ಯ. Spotted fever ಮಿದುಳು ಮತ್ತು ಮಿದುಳುಬಳ್ಳಿಯ ಉರಿಯೂತ : ಮಸ್ತಿಷ್ಕ ದಾಹ.

Spóttedness (ನಾ.) ; **Spótter** (ನಾ.) (ಮು., ಆಕಾಶಯಾನದಲ್ಲಿ) ಶತ್ರು ಸ್ಥಾನಗಳನ್ನು ಗುರುತಿಸುವ ಕೆಲಸದ ವಿಮಾನ ಚಾಲಕ : ನೆರೆ ಪತ್ತೇದಾರ.

Spouse ಸ್ಪೌಸ್ (ನಾ.) ಗಂಡ, ಹೆಂಡತಿ ; ಪತಿ, ಪತ್ನಿ.

Spout ಸ್ಪೌಟ್ (ಕ್ರಿ., ನಾ.) (ನಳಿಕೆಯ ಬಾಯಿಂದ ಅಥವಾ ಕಂಡಿಯಿಂದ) ಜೋರಾಗಿ, ಹೇರಳವಾಗಿ, ಧಾರೆಯಾಗಿ, —ನುಗ್ಗಿ ಬರು, ಹೊರಬಿಡು, ಸೂಸು ; ಚಿಮ್ಮು, ಚಿಮ್ಮಿಸು ; ಚುರುಕಿ —ಬಿಡು, ಬರು (Blood spouts from wound ರಕ್ತ ಗಾಯದಿಂದ ಚಿಮ್ಮುತ್ತದೆ. Wound spouts blood ಗಾಯ ರಕ್ತವನ್ನು ಚಿಮ್ಮುತ್ತದೆ). (ಪದ್ಯ, ಮೊ. ನ್ನು) ಧೋರಣೆಯಿಂದ, ನಿರರ್ಗಳವಾಗಿ, —ಹೇಳು ; ಭಾಷಣ, ಉಪನ್ಯಾಸ, —ಮಾಡು. (ಅಸಂ.) ಒತ್ತೆಯಿಡು, ಅಡವು ಹಾಕು. (ನಾ.) (ಗಿಂಡಿ, ಕೆಟಲ್, ಮೊ. ಪಾತ್ರೆಗಳ, ಚಾವಣಿಯ ಕಾಲುವೆ, ಮೊ. ಗಳ) ಮೂತಿ, ಬಾಯ್‌ಕೊಳವೆ, ಮುಖನಾಳ ; ಕಣಜ, ಯಂತ್ರ, ಮೊ. ರಲ್ಲಿ ಹಿಟ್ಟು, ಧಾನ್ಯ, ಮೊ. ನ್ನು (ಹೊರ ಅಥವಾ ಒಳ) ಸುರಿಯುವುದಕ್ಕೆ ಅಥವಾ ಪಾತ್ರೆಯೊಳಕ್ಕೆ ಸಾಮಾನನ್ನು ಜೋರಾಗಿ ಸರಿಸುವುದಕ್ಕೆ, ಅನುಕೂಲಿಸುವ ಇಳಿಜಾರು ದೋಣಿ, ನಳಿಕೆ : ಜಾರುದೋಣಿ, ಹರಿನಳಿಕೆ, ಸುರಿನಳಿಕೆ (ಮು., ಒತ್ತೆಗಾರನ ಅಂಗಡಿಯಲ್ಲಿಯದು) (His watch is up the s. ಅವನ ಗಡಿಯಾರ ಅಡವಾಗಿದೆ) ; (ದ್ರವ, ಧಾನ್ಯ, ಮೊ. ಗಳ) ಧಾರೆ, ಚಿಮ್ಮಲು [Water-s. (Water ನೋಡಿ)]. ತಿಮಿಂಗಿಲದ ಉಸಿರು ಕಂಡಿ, ಶ್ವಾಸರಂಧ್ರ (=S.-hole). **Spoúter** (ನಾ.) ; **Spoútless** (ಗು.)

Sprag ಸ್ಪ್ರ್ಯಾಗ್ (ನಾ.) (ಅರೇಕಾಲುಗಳ ಮಧ್ಯೆ ತೂರಿಸಿ ಬಂಡಿ, ಮೊ. ಗಳ) ಚಕ್ರದ ಉರುಳನ್ನು ತಡೆಯುವ ಮರದ ತುಂಡು, ಕೊರಡು : ತಡೆಮರ.

Sprain ಸ್ಪ್ರೇಯ್ನ್ (ಕ್ರಿ. ಸಕ., ನಾ.) ಉಳುಕಿಸು, ಉಳುಕಿಸಿಕೊ. (ನಾ.) ಉಳುಕು ; ಉಳುಕಿನ ಬಾವು.

Spraints ಸ್ಪ್ರೆಯ್‌ಂಟ್ಸ್ (ನಾ., ಬ. ವ) ನೀರುನಾಯಿಯ ಮಲ.

Sprang. Spring ಧಾತುವಿನ ಭೂತ ರೂಪ.

Sprat ಸ್ಪ್ರ್ಯಾಟ್ (ನಾ., ಕ್ರಿ. ಅಕ.) (ಆಹಾರವಾಗಿ ಬಹಳ ಉಪಯೋಗಿಸುವ, ಯೂರೋಪು ದೇಶದ) ಹೆರಿಂಗ್ ಮೀನಿನಂಥ ಮೀನು ; ಈ ಜಾತಿಯ ಇತರ ಬಗೆಯ ಮೀನು (S.-day ಇಂಗ್ಲೆಂಡಿನಲ್ಲಿ ಸ್ಪ್ರ್ಯಾಟ್ ಮೀನಿನ ಸುಗ್ಗಿ ಆರಂಭವಾಗುವ ನೋವೆಂಬರ್ ೯ನೆಯ ತಾರೀಕು). (Throw a s. to catch a herring *or* mackerel *or* whale ಸ್ವಲ್ಪವನ್ನು ಕೊಟ್ಟು ಅಧಿಕ ಲಾಭ ಪಡೆ ; ಸ್ವಲ್ಪ ಅಕ್ಕಿ ಎಸೆದು ಆನೆ ಹಿಡಿ). (ಹಾಸ್ಯ ಪ್ರ.) ಸಣಕಲು ಮಗು. (ಕ್ರಿ.) ಸ್ಪ್ರ್ಯಾಟ್ ಮೀನು ಹಿಡಿ. **Sprátter** (ನಾ.) ಸ್ಪ್ರ್ಯಾಟ್ ಮೀನು ಹಿಡಿಯುವವನು. **Sprátting** (ನಾ.)

Sprawl ಸ್ಪ್ರಾಲ್ (ಕ್ರಿ., ನಾ.) (ಹುಚ್ಚಾಬಟ್ಟೆ, ಒಡ್ಡೊಡ್ಡಾಗಿ) ಕೈಕಾಲು —ಚಾಚು, ಚಾಚಿಕೊ(ಂಡು ಬಿದ್ದುಕೊ) ; ಒಡ್ಡೊಡ್ಡಾಗಿ ದೇಕು ; (ಬರವಣಿಗೆ, ಸಸ್ಯ, ಮೊ. ಗಳ ವಿಷಯದಲ್ಲಿ) ಕೋಡು ಕೋಡಾಗಿರು, ವಕ್ರ ವಕ್ರವಾಗಿರು ; —ಹರಡಿರು. (ಸೈನ್ಯವನ್ನು) ಸಿಕ್ಕಾಬಟ್ಟೆ ಹರಡು. (ನಾ.) ಒಡ್ಡೊಡ್ಡಾಗಿ ಕೈಕಾಲು —ಚಾಚುವುದು, ಚಾಚಿರುವುದು ; (ಸಿಕ್ಕಾಬಟ್ಟೆ) ಪರದಾಟ.

Spray[1] ಸ್ಪ್ರೇ (ನಾ.) ಸಣ್ಣ ಕವಲು ರೆಂಬೆಗಳು ಅಥವಾ ಹೂವುಗಳು ಇರುವ ಮರದ ಕೊಂಬೆ : ಎಲೆಗೊಂಚಲ, ಹೂಗೊಂಚಲ, —ಸೆಳೆ ರೆಂಬೆ ; ಸಣ್ಣ ಚೂಂಗೆ, ಹೂರೆಂಬೆ (ಅಲಂಕಾರಕ್ಕಾಗಿ ಮೇಜಿನಮೇಲಿಡುವದು) ; ಈ ಆಕಾರದ ಒಡವೆ (A s. of diamonds ವಜ್ರ ಪರ್ಣಾಭರಣ). S.-drain ಕೊಂಬೆ(ಗಳಿಂದ ಹದ್ದಿಸಿ ಮಾಡಿದ)—ಚರಂಡಿ, ಮೋರಿ. **Spraýey**[1] (ಗು.)

Spray[2] ಸ್ಪ್ರೇ (ನಾ., ಕ್ರಿ. ಸಕ.) (ನೀರು, ಮೊ. ದ್ರವಗಳ) ತುಂತುರು, ಸೀರ್ಪನಿ, ಸೀಕರ ; (ತುಂತುರು ಯಂತ್ರದಿಂದ ಪ್ರಯೋಗಿಸಬೇಕಾದ) ತುಂತುರು —ಔಷಧ, ದ್ರವ. ತುಂತುರು ಯಂತ್ರ. (ಕ್ರಿ.) ತುಂತುರು —ಎರಚು, ಚಿಮುಕಿಸು. S.-board ಹಡಗಿನ ಪಕ್ಕದ ಮೇಲಂಚಿನಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತುಂತುರನ್ನು ತಡೆಯಲು ಹಾಕಿರುವ ಹಲಗೆ: ತುಂತುರು (ತಡೆ) ಹಲಗೆ. **Spráyer** (ನಾ.) ತುಂತುರು—ಎರಚುವವನು, ಯಂತ್ರ. **Spraý-ey**[2] (ಗು.)

Spread ಸ್ಪ್ರೆಡ್ (ಕ್ರಿ.; ಭೂತ., ಭೂ. ಕೃ. ಅದೇ) ಹರಡು, ಹರವು, ಹಾಸು, ಬಿಚ್ಚು; (ಬಟ್ಟೆ, ಮೊ. ನ್ನು) ಬಿಚ್ಚಿ, ತೆರೆದು, —ತೋರಿಸು [(ರೂಪ. ನಹ): Peacock spreads its tail ನವಿಲು ಪುಕ್ಕವನ್ನು ಕೆದರಿ, ಬಿಚ್ಚಿ, —ತೋರಿಸುತ್ತದೆ. S. oneself (ಅಸಂ.) ಬಡಾಯಿ ಮಾತಾಡು, ಸ್ವಪ್ರತಿಷ್ಠೆ ಕೊಚ್ಚು; (ಅಮೆ. ಸಂ. ಅಸಂ.) (ದಾನ, ಆತಿಥ್ಯ, ಮೊ. ಗಳಲ್ಲಿ) ಧಾರಾಳವಾಗಿರು. S. a banner ಬಾವುಟ ಬಿಚ್ಚು. S. out a rug on the grass ಕಂಬಳಿಯನ್ನು ಹುಲ್ಲಿನಮೇಲೆ ಹಾಸು, ಹರವು] [**Spreáder** (ನಾ.)]. ಹಬ್ಬು, ಹಬ್ಬಿಕೊ, ಹಬ್ಬಿರು, ಹರಡಿಕೊ, ಪ್ರಸರಿಸು, ವ್ಯಾಪಿಸು (River here spreads out to a width of half a mile ಇಲ್ಲಿ ನದಿ ಅರ್ಧ ಮೈಲಿಯಷ್ಟು ಅಗಲಕ್ಕೆ ಪ್ರಸರಿಸಿದೆ, ಹರಡಿಕೊಂಡಿದೆ. His name s. fear in every quarter ಅವನ ಹೆಸರು ಎಲ್ಲ ಮೂಲೆಗಳಲ್ಲೂ ಭಯವನ್ನು ಹರಡಿತು. Rumour s. from mouth to mouth ಸುದ್ದಿ, ವದಂತಿ, ಬಾಯಿಂದ ಬಾಯಿಗೆ ಹಬ್ಬಿತು); (ಮೇಲ್ಮೈಯನ್ನು): ಕವಿ, ಆಚ್ಛಾದಿಸು, ಪಸರಿಸು (Meadow s. with daisies. Bread s. with jam ಪಾಕ ರಸಾಯನ ಸವರಿದ ರೊಟ್ಟಿ. A table s. with every luxury ಔತಣದ ಪ್ರತಿಯೊಂದು ಪರುಠವಣೆಯಿಂದಲೂ ಅಣಿಗೊಳಿಸಿದ ಊಟದ ಮೇಜು); ಚಾಚು, ನೀಡು (S. one's arms, legs). [**S. eagle** (ನಾ.) (ನಾಣ್ಯ, ಮೊ. ಗಳ ಮೇಲೆ ಚಿತ್ರಿಸಿರುವ) ರೆಕ್ಕೆಗಳು ಕೆದರಿಕೊಂಡಿರುವ ಕಿಸಿಗಾಲ ಗರುಡ ಪಕ್ಷಿ; (ನೀರ್ಗಲ್ಲ ಜಾರಾಟದಲ್ಲಿ) ಕಾಲುಗಳನ್ನು ಅಗಲಿಸಿ ಜಾರಾಟ; ಕಿಸಿಗಾಲ ವರಿಸೆ. (ಬಳ. ಮಾ.) ಬೆನ್ನಮೇಲಿಂದ ಕೆಳಕ್ಕೆ ಸೀಳಿ ಸುಟ್ಟ ಕೋಳಿ; (ನಾವೆ; ಕಶಾ ಪ್ರಹಾರದ ಶಿಕ್ಷೆಗಾಗಿ) ಕೈಕಾಲುಗಳನ್ನು ಚಾಚಿ ಹಡಗಿನ ಹಗ್ಗಗಳಿಗೆ ಬಂಧಿಸಲ್ಪಟ್ಟವನು. **S.-eagle** (ಗು.) (ಮು., ಅಮೆ. ಸಂ. ವಿಷಯದಲ್ಲಿ) ಡಬಡ್ಡಾಳಿಕೆಯ ದೇಶಾಭಿಮಾನದ, ಬಡಾಯಿ ದೇಶಾಭಿಮಾನವುಳ್ಳ. **S.-eágleism** (ನಾ.). **S.-over (system)** ವಿಶೇಷ ಆವಶ್ಯಕತೆಗಳಿಗೆ ತಕ್ಕಂತೆ ಕೆಲಸದ ಪರಿಮಿತ ಕಾಲವನ್ನು ಹೊಂದಿಸಿಕೊಳ್ಳುವುದು; —ಕೊಳ್ಳುವ ಪದ್ಧತಿ; ಕಾಲ —ವ್ಯವಸ್ಥೆ, ವ್ಯವಸ್ಥಾ ಪದ್ಧತಿ.

Spread (ನಾ.) ಹಬ್ಬಿಗೆ, ಹರಡಿಕೆ, ಹರವು, ವಿಸ್ತಾರ, ವಿಸ್ತರಣ ಸಾಮರ್ಥ್ಯ (Inferior to the eagle in s. of wings); ಅಗಲ, ವಿಸ್ತೀರ್ಣ (Arches of equal s.); ಪ್ರಸಾರ, ಪ್ರಸರಣ (S. of education); (ಬಳ. ಮಾ.) ಹಬ್ಬದೂಟ, ಔತಣ, ಭೋಜನ (Had no end of a s. ಔತಣಕ್ಕೆ ಕೊನೆಯೇ ಇರಲಿಲ್ಲ); (ಅಮೆ. ಸಂ., ವಾಣಿಜ್ಯ) ತಯಾರಿಸಿದವನ ಬೆಲೆಗೂ ಗಿರಾಕಿ ಕೊಡುವ ಬೆಲೆಗೂ ಇರುವ ವ್ಯತ್ಯಾಸ; ಲಾಭವಿಸ್ತಾರ.

Spree ಸ್ಪ್ರೀ (ನಾ., ಕ್ರಿ. ಅಕ.) ನಲದಾಟ, ವಿನೋದ, ಕೇಳಿ; ಪಾನ ಕೇಳಿ; (ರೂಪ.) ಅತಿಲಾಲಸೆ, ಆವೇಶ (Is on the s. ಪಾನೋತ್ಸವ ಮಗ್ನನಾಗಿದ್ದಾನೆ; ಆವೇಶದಲ್ಲಿ ಇದ್ದಾನೆ). (ಕ್ರಿ.) ಕೇಳಿಯಲ್ಲಿರು; ನಲದಾಟದಲ್ಲಿರು.

Sprent ಸ್ಪ್ರೆಂಟ್ (ಗು.) (ಪ್ರಾಚೀ. ಪ್ರ.) ಚಿಮುಕಿಸಿದ, ಹನಿ ಹರವಿದ, ವ್ಯಾಪ್ತ (*With* ಉಪ. ಮೊದನೆ)

Sprig ಸ್ಪ್ರಿಗ್ (ನಾ., ಕ್ರಿ. ಸಕ.) ಸಣ್ಣ ಕೊಂಬೆ, ಸೆಳೆ ರೆಂಬೆ; ಕೊನೆ, ಕುಡಿ, ಪಲ್ಲವ; ಚಿಗುರಾಕಾರದ ಒಡವೆ, ಪಲ್ಲವಾಭರಣ; (ನೆಯ್ಗೆಯಲ್ಲಿ, ಕಸೂತಿಯಲ್ಲಿ) ಚಿಗುರಲಂಕಾರ, ಪಲ್ಲವಾಲಂಕಾರ; ತಲೆಯಿಲ್ಲದ ಸಣ್ಣ ಮೊಳೆ; (ಸಾ., ತಿರಸ್ಕಾರ ಪ್ರ.) ಚಿಳ್ಳೆ, ಪಿಳ್ಳೆ, ಹೈದ (Who is this s.? A s. of the nobility). (ಕ್ರಿ.) ಚಿಗುರಲಂಕಾರ ಮಾಡು (Sprigged muslin). **Sprígtail** (ಗು.) ಹಲವು ಬಗೆಯ ಚೂಪು ಪುಕ್ಕದ ಬಾತು ಕೋಳಿ. **Spríggy** (ಗು.) ಕುಡಿಯೊಡೆದ, ಪಲ್ಲವಿತ; ಚಿಗುರಿನಂಥ, ಪಲ್ಲವದಂಥ.

Spríghtly ಸ್ಪ್ರೈಟ್ಲಿ (ಗು.) ಚೈತನ್ಯ ಹೊಮ್ಮುತ್ತಿರುವ, ಉಲ್ಲಾಸದ, ನಗುಮುಖದ, ಚಟುವಟಿಕೆಯ, ಚುರುಕಾದ, ಕಳಕಳಿಸುವ. **Spríght-liness** (ನಾ.)

Spring ಸ್ಪ್ರಿಂಗ್ (ಕ್ರಿ.; ಭೂತ. Sprang ಸ್ಪ್ರ್ಯಾಂಗ್, ಭೂ. ಕೃ. Sprung ಸ್ಪ್ರಂಗ್) ನೆಗೆ, ಜಿಗಿ, ಎಗುರು, ಹಾರು, ಪುಟಿ, ಚಿಮ್ಮು, ಕುಪ್ಪಳಿಸು (ಅನೇಕ ವೇಳೆ *up*, *down*, *out*, *over*, *through*, *away*, *back*, ಮೊ. ಉಪ. ಮೊದನೆ) (Blood sprang to her cheeks ರಕ್ತ ಅವಳ ಕೆನ್ನೆಗಳಿಗೆ ಏರಿತು; ಅವಳ ಕೆನ್ನೆ ರಂಗೇರಿತು. Door sprang to ಕದ ಹಾರಬಡಿಯಿತು); ಆಗು, ಉಂಟಾಗು, ಉದ್ಭವಿಸು, ಹುಟ್ಟು, ಮೊಳೆ, ಕಾಣಿಸಿಕೊ, ತಲೆದೋರು, ಏಳು [A breeze sprang up ನಸುಗಾಳಿ, ಮೆಲ್ಲೆಲರು, —ಎದ್ದಿತು, ತಲೆದೋರಿತು. Is sprung from *or* of a royal stock ರಾಜವಂಶದಲ್ಲಿ ಹುಟ್ಟಿದ್ದಾನೆ. The buds are springing ಮೊಗ್ಗುಗಳು ಮೊಳೆಯುತ್ತಿವೆ, ಕಾಣಿಸಿಕೊಳ್ಳುತ್ತಿವೆ. S. an arch ಕಮಾನು ಎಬ್ಬಿಸು, ಕಟ್ಟು. The belief has sprung up ನಂಬಿಕೆ ತಲೆದೋರಿದೆ, ಹುಟ್ಟಿಕೊಂಡಿದೆ. Where do *or* did you s. from? (ತಟಕ್ಕನೆ ಅಥವಾ ಅನಿರೀಕ್ಷಿತವಾಗಿ ಕಾಣಿಸಿಕೊಂಡವನ ವಿಷಯದಲ್ಲಿ) ಎಲ್ಲಿಂದ ಹಾರಿಬಂದೆ? ಎಲ್ಲಿಂದ ಧುಮುಕಿದೆ?]. (ದಾರುವಿನ ವಿಷಯದಲ್ಲಿ) ಸೊಟ್ಟಾಗು, ವಕ್ರವಾಗು, ಒಡೆ, ಸೀಳು, ಸೀಳಿಸು, ಬಿರಿ(ದುಹೋಗು), ಮುರಿ (S. a mast ಕೂವೆ ಮುರಿ. Bat is *or* has sprung ದಾಂಡು ಒಡೆದುಹೋಗಿದೆ. Have sprung my racket ನನ್ನ ದಾಂಡನ್ನು ಸೀಳಿಕೊಂಡೆನು); (ಭೂ. ಕೃ. ನಲ್ಲಿ, ಬಳ. ಮಾ.) (ಕುಡಿದು) ಅಮಲೇರಿದ; (ಬಲದಿಂದ ಅಥವಾ ಮರೆಯಿಂದ ಬೇಟೆಯನ್ನು) ಎಬ್ಬಿಸು, ಹೊರಡಿಸು; ಎಗುರುಪಟ್ಟಿಯ ಅಥವಾ ಸ್ಪ್ರಿಂಗಿನ ಮೂಲಕ ತಟಕ್ಕನೆ ಮುಚ್ಚು (S. a trap ಸ್ಪ್ರಿಂಗೆಳೆದು ಬೋನನ್ನು ಮುಚ್ಚು); ಹಠಾತ್ತನೆ, ಅನಿರೀಕ್ಷಿತವಾಗಿ, —ಎತ್ತು, ತೆಗೆ, ಒಡ್ಡು (Has sprung a new theory ಇದ್ದಕ್ಕಿದ್ದಹಾಗೆ ಹೊಸ ವಾದವನ್ನು ಎತ್ತಿದ್ದಾನೆ. Loves to s. surprises on us ನಮ್ಮನ್ನು ಅನಿರೀಕ್ಷಿತ ಘಟನೆಗಳಿಂದ ಅಚ್ಚರಿಗೊಳಿಸಲು ಅವನಿಗೆ ಪ್ರೀತಿ); (ಸಿಡಿಮದ್ದು ಪಾತ್ರೆಯನ್ನು) ಸಿಡಿಸು, ಹಾರಿಸು; [(ನಾವೆ: ಹಡಗಿನ ವಿಷಯದಲ್ಲಿ) S. a butt ಬಿರುಗಡಲಲ್ಲಿ ಸಿಕ್ಕಿ ಹಲಗೆ(ಯ ಸೇರುವೆ) ಕಳಚಿಕೊ. S. a leak ತೂತು ಬೀಳು, ತೂತು ಬಿದ್ದು ನೀರು ತುಂಬಿಕೊ. S. the *or* her luff ಚುಕ್ಕಾಣಿಯನ್ನು ಸರಾಗವಾಗಿ, ನಲೀಸಾಗಿ, ಬಿಡು; ಗಾಳಿಯ ದಿಕ್ಕಿಗೆ ಸಮೀಪವಾಗಿ ಹೋಗು]. **Spríngеr** (ನಾ.) (ಕ್ರಿಯಾರ್ಥ ಗಳಲ್ಲಿ); (ವಾ. ಶಾ.) ಕಮಾನಿನ ಬಾಗು ಆರಂಭವಾಗುವ ಸ್ಥಳ: ಕಮಾನಿನ ಬುಡ(ದ ಕಲ್ಲು); ಚಂದಾಯದ ತುದಿಕಟ್ಟಡದ ಅಡಿಗಲ್ಲು; (ಕೂಡು ಕಮಾನು ಚಾವಣಿಯಲ್ಲಿಯ) ಕಮಾನುಗಳ ಕೂಡಂಚು. ಬೇಟೆ ಯೆಬ್ಬಿಸಲು ಸಾಕಿಕೊಂಡಿರುವ ಒಂದು ಜಾತಿಯ ಬೇಟೆನಾಯಿ; =Grampus; =Springbok.

Spring (ನಾ.) ನೆಗೆತ, ಹಾರಿಕೆ, ಕುಪ್ಪಳಿಕೆ, ಎಗುರಿಕೆ, ಚಿಮ್ಮು(ವುದು), ಪುಟಿ(ತ). ವಸಂತ—ಕಾಲ, ಋತು. ಊಟೆ, ಬುಗ್ಗೆ, ಒರತೆ, ಚಿಲುಮೆ (Hot s. ಬಿಸಿನೀರ ಬುಗ್ಗೆ. Mineral s. ಖನಿಜ ಜಲದ ಚಿಲುಮೆ); (ನದಿ, ಬಾವಿ, ಮೊ. ಗಳ) ಮೂಲ, ಉದ್ಗಮ (ಸ್ಥಾನ), ನೀರಕಣ್ಣು. (ನಿರ್ಬಂಧ ಸ್ಥಿತಿಯಿಂದ) ಹಿಂಚಲನೆ, ಹಿಂಪುಟಿತ; ಸ್ಥಿತಿಸ್ಥಾಪಕತೆ, ಎಗುರುಶಕ್ತಿ, ಚೈತನ್ಯ (His muscles have no s. in them ಅವನ ಸ್ನಾಯುಗಳಲ್ಲಿ ಸ್ಥಿತಿಸ್ಥಾಪಕತೆ ಇಲ್ಲ). (ಗಡಿಯಾರ, ಮೊ. ಹಲವು ಯಂತ್ರಗಳಲ್ಲಿ ಉಪಯೋಗಿಸುವ, ಬಗ್ಗಿಸಿದ ಅಥವಾ ಸುರುಳಿ ಸುತ್ತಿದ ಲೋಹದ, ಸ್ಥಿತಿಸ್ಥಾಪಕತೆಯುಳ್ಳ) ಎಗುರುಪಟ್ಟಿ, ಲಂಫಕ, ಸ್ಪ್ರಿಂಗು [Bow s. ಬಿಲ್ಲಿನಾಕಾರದ ಎಗುರುಪಟ್ಟಿ. Cee s. (Cee ನೋಡಿ). Air *or* pneumatic s. ಗಾಳಿಯೊತ್ತಡದಿಂದ ಕೆಲಸ ಮಾಡುವ ಎಗುರುಪಟ್ಟಿ: ಗಾಳಿಯ ಎಗುರುಪಟ್ಟಿ. Hair-s. (Hair ನೋಡಿ). Mainspring (Main[1] ಗು. ನೋಡಿ)]. (ರೂಪ.) ಉದ್ದೇಶ, ಪ್ರೇರಣ, ಕಾರಣ, ಮೂಲ, ಉತ್ಪತ್ತಿ (The springs of human

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

action ಮನುಷ್ಯನ ಕಾರ್ಯದ, ಮಾನವ ವ್ಯಾಪಾರದ, —ಅಭಿನಿವೇಶಗಳು, ಪ್ರೇರಕಗಳು. The custom had its s. in another country ಈ ಪದ್ಧತಿ ಬೇರೆ ದೇಶದಲ್ಲಿ ಹುಟ್ಟಿತು ; ಈ ಪದ್ಧತಿಯು ಹುಟ್ಟು ಬೇರೆ ದೇಶದಲ್ಲಿ ಆಯಿತು); (ತೊಲೆ, ಮೊ. ಗಳ) ಮೇಲು ಬಾಗು ; (ಹಡಗಿನಲ್ಲಿ) ಹಲಗೆ ಕಳಚಿಕೊಳ್ಳುವುದು, ಸೇರುವೆ ಸಡಿಲುವುದು, ತೂತು (ಬೀಳುವುದು). Day-s. (Day ನೋಡಿ). **S.-balance** (ಉಕ್ಕಿನ ಸುರುಳಿಯ ಎಳೆತದಿಂದ ತೂಕಮಾಡುವ) ಜಿಗಿ ತಕ್ಕಡಿ, ಸ್ಪ್ರಿಂಗು ತಕ್ಕಡಿ. **S.-beam** ನಡುವೆ ಯಾವ ಆಧಾರವೂ ಇಲ್ಲದೆ ತುಂಬ ಅಗಲಕ್ಕೆ ಹಾಯ್ದಿರುವ ತೊಲೆ ; ಸ್ಪ್ರಿಂಗು ತೊಲೆ. ಯಂತ್ರದ ದೊಡ್ಡ ಚಮ್ಮಟಿಗೆ, ಮೊ. ಸಲಕರಣೆಗಳಲ್ಲಿ ಎಗುರುಪಟ್ಟಿಯಾಗಿ ಉಪಯೋಗಿಸುವ, ಸ್ಥಿತಿಸ್ಥಾಪಕಶಕ್ತಿಯುಳ್ಳ ಕಂಬಿ; ಸ್ಪ್ರಿಂಗು, ಎಗುರು, —ಕಂಬಿ. **S. bed, mattress** ಮರದ ಚೌಕಟ್ಟಿನಲ್ಲಿ ಸುರುಳಿಯಾಕಾರದ ಎಗುರುಪಟ್ಟಿಗಳನ್ನು ಅಳವಡಿಸಿ ಸುಖಕರವಾಗಿರುವಂತೆ ಮಾಡಿರುವ ಸುಪ್ಪತ್ತಿಗೆ : ಸ್ಪ್ರಿಂಗು —ಸುಪ್ಪತ್ತಿಗೆ, ಮಂಚ. **S.-board** (ಹಾರುವುದು, ನೀರಿನಲ್ಲಿ ಧುಮುಕುವುದು, ಮೊ. ಕ್ಕೆ ಚಾಲಕಶಕ್ತಿ ಕೊಡುವ) ಜಿಗಿ ಹಲಗೆ, ಎಗುರು ಹಲಗೆ. **S.-carriage, -cart** (ಎಗುರುಪಟ್ಟಿಗಳ ಮೇಲೆ ಕೂರಿಸಿರುವ) ಸ್ಪ್ರಿಂಗು ಬಂಡಿ. **S. gun** (ಹದ್ದುಮೀರಿ ಬರುವ ಮನುಷ್ಯನಾಗಲಿ ಪ್ರಾಣಿಯಾಗಲಿ ಅದನ್ನು ಎಡವಿದೊಡನೆ ಹಾರುವ) ಸ್ಪ್ರಿಂಗು ಬಂದೂಕು. **S.-halt** ನಡಗೆಯಲ್ಲಿ ಕುದುರೆಯ ಹಿಂಗಾಲಿನ ಒಂದು ಬಗೆಯ ಎಗುರು ಕುಂಟು ಚಲನೆ : ಎಗುರು ಕುಂಟು. **S. tide** ಪ್ರತಿ ಅಮಾವಾಸ್ಯೆಯ ಮತ್ತು ಪೂರ್ಣಿಮೆಯ ತರುವಾಯ ಕೆಲವು ದಿನಗಳಲ್ಲೇ ಬರುವ ಸಮುದ್ರದ ಉಬ್ಬರ : ಉಕ್ಕುಭರತ. **Spríngtide, Spríngtime** ವಸಂತ—ಕಾಲ, ಋತು. **S. water** ಚಿಲುಮೆಯ, ಊಟೆಯ, —ನೀರು. **Spríngless** (ಗು.) ; **Sprínglet** (ನಾ.) ಸಣ್ಣ ಊಟೆ. **Sprínglike** (ಗು.) ; **Spríngy** (ಗು.) (ಚಲನೆ, ವಸ್ತು, ಮೊ. ಗಳ ವಿಷಯದಲ್ಲಿ) ಸ್ಥಿತಿಸ್ಥಾಪಕ, ಎಗುರುವ, ಜಿಗಿಯುವ, ಪುಟಿಯುವ ; ಬುಗ್ಗೆಗಳಿರುವ, ಚಿಲುಮೆಗಳಿರುವ. **Sprínginess** (ನಾ.)

Sprìngal(d) ಸ್ಪ್ರಿಂಗಲ್(ಡ್) (ನಾ.) (ಪ್ರಾಚೀ. ಪ್ರ.) ಹುಡುಗ, ಹೈದ, ಪಿಳ್ಳೆ, ಕಿರಿಯ.

Spríngbok ಸ್ಪ್ರಿಂಗ್‌ಬಾಕ್ (ನಾ.) ಆಟವಾಡುವಾಗ ಅಥವಾ ಬೆದರಿದಾಗ ಚಿಮ್ಮಿ ನೆಗೆಯುವ, ದ. ಆಫ್ರಿಕದ ಒಂದು ಜಾತಿಯ ಜಿಂಕೆ : ಜಿಗಿ ಜಿಂಕೆ ; (ಬ. ವ. ದಲ್ಲಿ) ದ. ಆಫ್ರಿಕದವರು (—ರಿಗೆ ಅಡ್ಡ ಹೆಸರು) ; ದ. ಆಫ್ರಿಕದ ಕಾಲ್ಚೆಂಡಾಟಗಾರರ ತಂಡ, ಮೊ. ವು.

Springe ಸ್ಪ್ರಿಂಜ್ (ನಾ.) (ಸಣ್ಣ ಬೇಟೆಗಳನ್ನು ಹಿಡಿಯುವ ಸಲುವಾಗಿ) ಉರುಲು, ಕಣ್ಣಿ, ಬಲೆ, ಪಾಶ.

Springer, Springy. **Spring** ನೋಡಿ.

Sprínkle ಸ್ಪ್ರಿಂಕ್‌ಲ್ (ಕ್ರಿ., ನಾ.) (ದ್ರವ, ಬೂದಿ, ಚೂರುಪಾರು, ಮೊ. ನ್ನು) ಹಗುರವಾಗಿ ಎರಚು, ಚಿಮುಕಿಸು, ಸಿಂಪಿಸು, ಪ್ರೋಕ್ಷಿಸು ; (ದ್ರವ, ಮೊ. ಗಳ ವಿಷಯದಲ್ಲಿ) ಹನಿ, ಸೇಚನೆಯಾಗು. (ನಾ.) (ಮಳೆ, ಮೊ. ಗಳ) ಹನಿಕೆ, ಚಿಮುಕುಲು, ತುಂತುರು. **Sprínkler** (ನಾ.) (ನೀರು, ಮೊ. ನ್ನು) ಚಿಮುಕಿಸುವವನು ; ಚಿಮುಕಿಸುವ—ಪಾತ್ರೆ, ಸಲಕರಣೆ, ಯಂತ್ರ, ಗಾಡಿ ; ಸೇಚಕ. **Sprínkling** (ನಾ.) (ಕ್ರಿಯಾರ್ಥಗಳಲ್ಲಿ) ; (ರೂಪ.) ಅಲ್ಪಸ್ವಲ್ಪ, ಅಲ್ಲಿಷ್ಟು ಇಲ್ಲಿಷ್ಟು (*Of* ಉಪ. ದೊಡನೆ) (A s. of ladies)

Sprint ಸ್ಪ್ರಿಂಟ್ (ಕ್ರಿ., ನಾ.) (ಸ್ವಲ್ಪ ದೂರ ಅಥವಾ ಗೊತ್ತಾದ ದೂರ) ಪೂರ್ಣ ವೇಗದಲ್ಲಿ, ಬಹಳ ಜೋರಾಗಿ, —ಓಡು. (ನಾ.) ಪೂರ್ಣ ವೇಗದ ಓಟ. **Sprínter** (ನಾ.)

Sprit ಸ್ಪ್ರಿಟ್ (ನಾ.) ಕೂವೆಯಿಂದ ಹಾಯಿಯ ಹೊರ ಮೇಲು ಮೂಲೆಗೆ ಹಾಯ್ದಿರುವ ದಿಮ್ಮಿ : ಅಡ್ಡ—ದಿಮ್ಮಿ, ಗಣೆ. Spritsail (—ಸಯ್‌ಲ್, —ಸ್‌ಲ್) ಅಡ್ಡದಿಮ್ಮಿ(ಯಿಂದ ಹರವಿದ)ಪಟ ; (ಹಿಂದಿನ ಪ್ರ. ; ದೊಡ್ಡ ಹಡಗುಗಳಲ್ಲಿ) ಮುಂಭಾಗದ ಮೂಕಿಮರದ ಕೆಳಗೆ ತೂಗ ಹಾಕಿರುವ ದಿಮ್ಮಿಗೆ ಕಟ್ಟಿದ ಪಟ.

Sprite ಸ್ಪ್ರೈಟ್ (ನಾ.) ಯಕ್ಷ, ಯಕ್ಷಿಣಿ, ಮೋಹಿನಿ; ದೆವ್ವ, ಪ್ರೇತಾತ್ಮ.

Sprócket ಸ್ಪ್ರಾಕೆಟ್ (ನಾ.) ಸರಪಣಿಯ ಕೊಂಡಿಗಳಲ್ಲಿ ಕೂರುವ ಚಕ್ರದ ಹಲ್ಲು(ಗಳಲ್ಲೊಂದು) : (ಸರಪಣಿ ಚಕ್ರದ) ಹಲ್ಲು. S.-wheel ಸರಪಣಿ ಹಲ್ಲುಚಕ್ರ (ಉದಾ., ಬೈಸಿಕಲ್ಲಿನದು)

Sprout ಸ್ಪ್ರೌಟ್ (ಕ್ರಿ., ನಾ.) ಮೊಳೆ, ಮೊಳೆಯಿಸು, ಚಿಗುರು, ಕೊನರು, ಕುಡಿಯೊಡೆ, ಕುಡಿಯೊಡಸು ; ಮೇಲಕ್ಕೆ, ಎತ್ತರಕ್ಕೆ, —ಬೆಳೆ, ಹೋಗು (Has sprouted horns ಕೊಂಬು ಹುಟ್ಟಿದೆ. Has sprouted a moustache ಮೀಸೆ ಹುಟ್ಟಿದೆ, ಚಿಗುರಿದೆ). (ನಾ.) ಮೊಳಕೆ, ಚಿಗುರು ಕೊನರು, ಕುಡಿ.

Spruce[1] ಸ್ಪ್ರೂಸ್ (ಗು., ಕ್ರಿ. ಸಕ.) (ಉಡುಪಿನಲ್ಲೂ, ನೋಟಕ್ಕೂ) ನೀಟಾದ, ಠೀಕಾದ. (ಕ್ರಿ.) ನೀಟು, ಠೀಕು, —ಮಾಡು, ಮಾಡಿಕೊ (S. oneself up ಠೀಕುಮಾಡಿಕೊ). **Sprúcely** (ಕ್ರಿ. ವಿ.) ; **Sprúceness** (ನಾ.)

Spruce[2] ಸ್ಪ್ರೂಸ್ (ನಾ.) ಹಲವು ಬಗೆಯ ಫರ್ ಮರ (=S. fir). S.-beer (ಸ್ಪ್ರೂಸ್ ಮರದ ಎಲೆಗಳಿಂದಲೂ ರೆಂಬೆಗಳಿಂದಲೂ ಮಾಡಿದ, ರಕ್ತಪಿತ್ತಾಪಹಾರಕವಾಗಿ ಉಪಯೋಗಿಸುವ) ಸ್ಪ್ರೂಸ್ ಮದ್ಯ.

Sprue[1] ಸ್ಪ್ರೂ (ನಾ.) ಲೋಹವನ್ನು ಅಚ್ಚಿಗೆ ಎರಕ ಹೊಯ್ಯುವ ಕಂಡಿ : ಎರಕ, ಹೊಯ್, —ಗಂಡಿ ; ಈ ಕಂಡಿಯಲ್ಲಿ ತುಂಬಿಕೊಂಡ ಲೋಹ.

Sprue[2] ಸ್ಪ್ರೂ (ನಾ.) (ಬಾಯಿ ಹುಣ್ಣಾಗಿ, ಕರುಳು ಸದಾ ಊದಿಕೊಂಡು, ಆಗಾಗ್ಗೆ ಭೇದಿಯಾಗುವ ಮತ್ತು ಇತರ ಅಜೀರ್ಣ ರೋಗಗಳ ಲಕ್ಷಣವಿರುವ, ಉಷ್ಣದೇಶಗಳ) ಒಂದು ಬಗೆಯ ಅತಿಸಾರ ರೋಗ ; ಸ್ಪ್ರೂ ರೋಗ.

Sprung. Spring ಧಾತುವಿನ ಭೂ. ಕೃ.

Spry ಸ್ಪ್ರೈ (ಗು. ; ತರತಮ ರೂಪಗಳು : Spryer, Spryest) ಆರೋಗ್ಯ ಉತ್ಸಾಹಗಳುಳ್ಳ, ಚಟುವಟಿಕೆಯುಳ್ಳ, ಗೆಲುವಾದ, ಹುರುಪಿನ ; (ಪ್ರಾಂ. ಪ್ರ.) ಠೀಕಾದ ಉಡುಪು ಧರಿಸಿದ.

Spud ಸ್ಪಡ್ (ನಾ., ಕ್ರಿ. ಸಕ.) ಕಳೆ, ಮೊ. ಗಳನ್ನು ಬೇರು ಸಹಿತ ಕಿತ್ತು ಹಾಕುವ, ಕಿರಿಯಲಗಿನ ಅಥವಾ ಕವಲು ತುದಿಯ ಗುದ್ದಲಿ : ಕಳೆ ಗುದ್ದಲಿ; ಕುರ್ಚಿಗೆ. ದಪ್ಪ ಮೋಟು —ಮನುಷ್ಯ, ಪದಾರ್ಥ ; ಗುಜ್ಜಾರಿ, ಶೊಣಪ ; (ಬಳ. ಮಾ.) ಆಲೂಗಡ್ಡೆ, ಉರುಳುಗಡ್ಡೆ. (ಕ್ರಿ.) ಕಳೆಗುದ್ದಲಿಯಿಂದ, ಕುರ್ಚಿಗೆಯಿಂದ, —ಕಳೆ ಕೀಳು (ಅನೇಕ ವೇಳೆ *up, out* ಉಪ. ದೊಡನೆ). **Spúddy** (ಗು.) ಶೊಣಪನಾದ ; ಗಿಡ್ಡ ಮತ್ತು ಸ್ಥೂಲವಾದ.

Spúddle ಸ್ಪಡ್‌ಲ್ (ಕ್ರಿ. ಅಕ.) (ಪ್ರಾಂ. ಪ್ರ.) (ಅನುಭವವಿಲ್ಲದ ತೋಟಗಾರ, ಮೊ. ರ ವಿಷಯದಲ್ಲಿ) ಮೇಲೆ ಮೇಲೆ ಅಗೆ ; ಕೆದಕು, ಕೆರೆ.

Spue. **Spew** ನೋಡಿ.

Spume ಸ್ಪ್ಯೂಮ್ (ನಾ., ಕ್ರಿ. ಅಕ.) ನೊರೆ, ಬುರುಗು (—ಏಳು, ಬರು). **Spumèscence** ಸ್ಪ್ಯೂಮೆಸೆನ್ಸ್ (ನಾ.) ನೊರೆ ನೊರೆಯಾಗಿರುವುದು, ನೊರೆಯೇಳುವುದು, ನೊರೆಗರೆತ. **Spúmescent** (ಗು.) ನೊರೆಯಂಥ. **Spúminess** (ನಾ.) ; **Spúmous** (ಗು.) ನೊರೆಯಂಥ, ನೊರೆಯ ಸ್ವಭಾವದ, ನೊರೆಯೇಳುವ. **Spúmy** (ಗು.) ನೊರೆಗರೆಯುವ ; ನೊರೆಗೂಡಿದ ; ನೊರೆಯಂಥ.

Spun. Spin ಧಾತುವಿನ ಭೂತ. ಮತ್ತು ಭೂ. ಕೃ.

Spunge ಸ್ಪಂಜ್ (ಕ್ರಿ., ನಾ.) =Sponge (ಎನ್ನುವುದಕ್ಕೆ ಪ್ರಾಚೀ. ಪ್ರ.)

Spunk ಸ್ಪಂಕ್ (ನಾ.) ಧೈರ್ಯ, ಕೆಚ್ಚು, ಸತ್ತ್ವ ; ಮಿಡುಕು ; ಸಿಟ್ಟು, ಕ್ರೋಧ. **Spúnky** (ಗು.)

Spur ಸ್ಪರ್ (ನಾ., ಕ್ರಿ.) (ಕುದುರೆಯನ್ನು ದೌಡಾಯಿಸಲು ಚುಚ್ಚುವುದಕ್ಕಾಗಿ) ಸವಾರನ ಹಿಮ್ಮಡಿಗೆ ತೊಡಿಸಿದ ಚುಚ್ಚು ಸಲಕರಣೆ : ಚುಚ್ಚು—ಗಾಲಿ, ಮುಳ್ಳು ; ಹಿಮ್ಮಡಿ ಮುಳ್ಳು ; ತಿವಿಮೊನೆ, ಚೋದಕ [Put *or* set spurs to ಚುಚ್ಚು, ಚೋದಿಸು. Need the s. ಚುಚ್ಚಿ ಎಬ್ಬಿಸಬೇಕಾಗಿರು ; ಸೋಮಾರಿಯಾಗಿರು, ಜಡವಾಗಿರು (ವ್ಯಕ್ತಿಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಯದಲ್ಲ ನಹ). Win one's spurs (ಚರಿತ್ರೆ) ನೈಟ್ ಪದವಿ ಪಡೆ; (ರೂಪ.) ಖ್ಯಾತಿ, ಹೆಸರು, —ಪಡೆ, ಗಳಿಸು]; (ರೂಪ.) ಪ್ರಚೋದನೆ, ಉತ್ತೇಜನ; (On the s. of the moment ಇದ್ದಕ್ಕಿದ್ದಹಾಗೆಯೆ; ತಟಕ್ಕನೆ; ಪೂರ್ವಾಲೋಚನೆಯಿಲ್ಲದೆ; ತತ್‌ಕ್ಷಣ ದಲ್ಲಿ); ಚುಚ್ಚುಮುಳ್ಳಿನಾಕಾರದ, ಮೊನೆಯಾಕಾರದ, —ವಸ್ತು (ಉದಾ., ಹುಂಜದ ಕಾಲಿನಲ್ಲಿಯ ಗಡುಸು ಚಾಚು; ಹುಂಜದ ಕಾಳಗದಲ್ಲಿ ಈ ಚಾಚಿಗೆ ತೊಡಿಸುವ ಉಕ್ಕಿನ ಮೊನೆ; ಬೆಟ್ಟದ ಚಾಚು; ಪಾದರಕ್ಷೆಗಳಿಗೆ ತೊಡಿಸಿದ ಏರುಮೊಳೆ; ಕೋಟೆಯ ಆಳುವೇರಿಯ ಒಂದು ಭಾಗದಲ್ಲಿ ಅಡ್ಡಹಾಯ್ದು ಅದನ್ನು ಕೋಟೆಯ ಒಳಕಟ್ಟಡಕ್ಕೆ ಸಂಬಂಧಿಸುವ ಗೋಡೆ; ಹೂವಿನ ಪೊಳ್ಳು ಚಾಚು); [S. royal ಚುಚ್ಚುಗಾಲಿಯಾಕಾರದಲ್ಲಿ ಕಿರಣ ಕೆದರಿದ ಸೂರ್ಯನ ಚಿತ್ರ ಬಿಡಿಸಿದ, ಒಂದನೆಯ ಜೇಮ್ಸ್ ದೊರೆಯ ಒಂದು ನಾಣ್ಯ. S.-wheel (ಪರಿಧಿಯ ಸುತ್ತಲೂ ತ್ರಿಜ್ಯದ ದಿಕ್ಕುಗಳಲ್ಲಿ ಹಲ್ಲು ಕೊಯ್ದಿರುವ) ಹಲ್ಲುಚಕ್ರ]. (ಕ್ರಿ.) (ಕುದುರೆಯನ್ನು) ಚುಚ್ಚುಗಾಲಿ ಯಿಂದ, ಚುಚ್ಚುಮುಳ್ಳಿನಿಂದ, —ಚುಚ್ಚು, ತಿವಿ [S. a willing horse (ರೂಪ.) ತಾನಾಗಿಯೇ ಮಾಡುವವನನ್ನು ತಿವಿದು ಮಾಡಿಸು; ಅನಾವಶ್ಯಕವಾಗಿ ಚುಚ್ಚು]. (ಒಬ್ಬನನ್ನು) (ಪ್ರ)ಚೋದಿಸು, ಪ್ರೇರಿಸು, ಮಿಾಟು (*On to* effort, *to* do, etc.). (ವ್ಯಕ್ತಿ, ಪಾದರಕ್ಷೆ, ಕಾಳಗದ ಹುಂಜ, ಮೊ. ಕ್ಕೆ) ಚುಚ್ಚು ಮುಳ್ಳು, ಮೊನೆ, —ತೊಡಿಸು, ಹಾಕು; ಜೋರಾಗಿ, ವೇಗವಾಗಿ, —ಸವಾರಿಮಾಡು, ಮುನ್ನುಗ್ಗು, ದೌಡಾಯಿಸು (*On*, *forward*, ಮೊ. ಉಪ. ದೊಡನೆ). **Spúrless** (ಗು.); **Spúrrier** (ನಾ.) ಚುಚ್ಚು ಮುಳ್ಳುಗಾರ. **Spúrwort** ಚುಚ್ಚುಗಾಲಿಯಾಕಾರದ ಎಲೆಸುತ್ತುಗಳುಳ್ಳ ಒಂದು ಸಸ್ಯ.

Spurge ಸ್ಪರ್ಜ್ (ನಾ.) ಹಲವು ಬಗೆಯ ಕಳ್ಳಿ (ಜಾತಿಯ ಗಿಡ)

Spúrious ಸ್ಪ್ಯೂ(ಅ)ರಿಯಸ್ (ಗು.) ನಿಜ, ಸಾಚಾ, ಅಪ್ಪಟ, —ಅಲ್ಲದ; ಸುಳ್ಳಿನ, ಕಪಟದ, ಮೋಸದ, ಖೋಟಾ, ಹುಸಿಯ, ಭ್ರಾಂತಿಯ [S. coin ಖೋಟಾ ನಾಣ್ಯ. S. (reading in) MS. ಕೃತ್ರಿಮ, ನೃಷ್ಟನೆಯ, —ಹಸ್ತಪ್ರತಿ; ಹಸ್ತಪ್ರತಿಯಲ್ಲಿಯ ಸುಳ್ಳು ಪಾಠಾಂತರ. S. affection ಕಪಟ ಪ್ರೀತಿ, ಹುಸಿ ಒಲುಮೆ]. (ಪ್ರಾ. ವಿ.) ರಚನೆಯಲ್ಲಿ ಒಂದು ಅಂಗವನ್ನು ಹೋಲುತ್ತಿದ್ದು ಅದಕ್ಕೆ ಉಚಿತ ವ್ಯಾಪಾರವಿಲ್ಲದ, ಅಥವಾ ವ್ಯಾಪಾರದಲ್ಲಿ ಒಂದು ಅಂಗವನ್ನು ಹೋಲುತ್ತಿದ್ದು ಅದಕ್ಕೆ ಉಚಿತವಾದ ಅಂಗರಚನೆಯಿಲ್ಲದ: ಹುಸಿ (S. eyes, legs ಹುಸಿ —ಕಣ್ಣುಗಳು, ಕಾಲುಗಳು). **Spúriously** (ಕ್ರಿ. ವಿ.); **Spúriousness** (ನಾ.)

Spúrling-line ಸ್ಪರ್ಲಿಂಗ್‌ಲೈನ್ (ನಾ.) ಚುಕ್ಕಾಣಿ ಯಾವ ದಿಕ್ಕಿಗೆ ತಿರುಗಿದೆ ಎಂದು ಸೂಚಿಸುವ, ಚಾಲಕ ಚಕ್ರಕ್ಕೂ ನಿಯಂತ್ರಕನ ಕೋಣೆಯಲ್ಲಿಯ ಗತಿ ದರ್ಶಕಕ್ಕೂ ಸಂಬಂಧಿಸಿರುವ ಹುರಿ: ದಿಕ್ಸೂಚಕದ ಹುರಿ; ಗತಿರಜ್ಜು.

Spurn ಸ್ಪರ್ನ್ (ಕ್ರಿ., ನಾ.) ಕಾಲಿನಿಂದ—ನೂಕಿಬಿಡು, ತಳ್ಳಿಹಾಕು, ಒದ್ದುಬಿಡು; ತಿರಸ್ಕರಿಸು, ಧಿಕ್ಕರಿಸು, ನಿರಾಕರಿಸು (ಪ್ರಾಚೀ. ಪ್ರ.: S. at). (ನಾ.) —ತಳ್ಳಿಬಿಡುವುದು, ಒದ್ದುಬಿಡುವುದು; ತಿರಸ್ಕಾರ, ಧಿಕ್ಕಾರ.

Spúrrier. **Spur** ನೋಡಿ.

Spurt[1] ಸ್ಪರ್ಟ್ (ಕ್ರಿ. ಅಕ., ನಾ.) (ಮು., ಓಟದ ಪಂದ್ಯದಲ್ಲಿ) ಥಟ್ಟನೆಯ ಕ್ಷಣದ ಮಹಾಪ್ರಯತ್ನ (ಮಾಡು)

Spurt[2]. **Spirt** ನೋಡಿ.

Spútter ಸ್ಪಟರ್ (ಕ್ರಿ., ನಾ.) ಪಿಚಕ್ ಪಿಚಕ್ ಎಂದು ಉಗುಳು, —ಹಾರಿಸು, ಸಿಡಿಸು; ಉಗುಳು ಸೂಸುತ್ತ ಅವಸರವಸರವಾಗಿ, ಅಸ್ಪಷ್ಟವಾಗಿ, ಆವೇಶದಿಂದ, —ಮಾತಾಡು; ಒದರಾಡು, ಕೂಗಾಡು (ಅನೇಕ ವೇಳೆ *at* ಉಪ. ದೊಡನೆ). (ನಾ.) ಒದರಾಟ, ಕೂಗಾಟ, ಹಾರಾಟ. **Spútterer** (ನಾ.); **Spútteringly** (ಕ್ರಿ. ವಿ.)

Spútum ಸ್ಪ್ಯೂಟಂ (ನಾ.; ಬ. ವ. -ta —ಟ) ಜೊಲ್ಲು, ಉಗುಳು; (ರೋಗದಿಂದ) ಹೊರ ಉಗುಳಿದ್ದು (ಶ್ಲೇಷ್ಮ, ಮೊ. ವು)

Spy ಸ್ಪೈ (ನಾ., ಕ್ರಿ.) ಶತ್ರುಶಿಬಿರದೊಳಗೆ ಅಥವಾ ಶತ್ರುದೇಶದೊಳಗೆ ರಕ್ಷಣ ವ್ಯವಸ್ಥೆಗಳು, ಶತ್ರುಗಳ ಚಲನ ವಲನಗಳು, ಮೊ. ನ್ನು ತಿಳಿಯಲು ಅಲ್ಲಿಗೆ ವೇಷ ಮರಸಿಕೊಂಡು ಹೋಗುವವನು: ಬೇಹುಕಾರ, ಬೇಹಿನವನು; ಗೂಢ, ಗುಪ್ತ, —ಚಾರ; ಇತರರ ಚಲನ ವಲನ ಗಳನ್ನು ಹೊಂಚಿ ನೋಡುವವನು: ಹೊಂಚುಕಾರ, ಹೊಂಚಿಗ (Refuse to be a s. on his conduct). (ಕ್ರಿ.) (ಸೂಕ್ಷ್ಮ ವೀಕ್ಷಣದಿಂದ) ಕಂಡುಕೊ, ಕಾಣು, ಕಂಡುಹಿಡಿ, ಗ್ರಹಿಸು (Spied a horseman approaching ಕುದುರೆಸವಾರನು ಸಮೀಪಿಸುತ್ತಿರು ವುದನ್ನು ಕಂಡುಕೊಂಡನು. Is quick at spying his neighbours' faults ನೆರೆಯವರ ತಪ್ಪನ್ನು ಕಂಡುಹಿಡಿಯುವುದರಲ್ಲಿ ಚುರು ಕಾಗಿದ್ದಾನೆ. S. out ಗುಟ್ಟಿನಲ್ಲಿ —ಶೋಧನೆಮಾಡು, ಕಂಡುಹಿಡಿ; ರಹಸ್ಯಾನ್ವೇಷಣ ಮಾಡು); ಗೂಢಚಾರನ ಕೆಲಸಮಾಡು, ಬೇಹು ನೋಡು; ಹೊಂಚು ನೋಡು; ರಹಸ್ಯವಾಗಿ ನೋಡುತ್ತಿರು, ಕಣ್ಣಿಟ್ಟಿರು, ಭೇದಿಸು (*Upon* person, *into* secret). Spyglass ಲಘು ದೂರದರ್ಶಕ. S.-hole ಇಣಿಕುಗಂಡಿ, ಹೊಂಚುಗಂಡಿ.

Squab ಸ್ಕ್ವಾಬ್ (ಗು., ಕ್ರಿ. ವಿ., ನಾ.) ಗಿಡ್ಡಾಗಿಯೂ ದಪ್ಪನಾಗಿಯೂ ಇರುವ, ಗುಜ್ಜಾರಿಯಾದ, ಬೊಜ್ಜು ಬೆಳೆದ, ಕೊಣಪ [=**Squábby** (ಗು.)]. (ಕ್ರಿ. ವಿ.) ಧೊಪ್ಪನೆ, ಧಡಾರನೆ (Come down s. on the floor). (ನಾ.) ಗುಜ್ಜಾರಿ, ಕೊಣೆಯ; (ಇನ್ನೂ ಗರಿ ಬೆಳೆದಿಲ್ಲದ) ಪಾರಿವಾಳದ ಮರಿ; ತುಪ್ಪುಳು ತುಂಬಿದ ಮೆತ್ತೆ; ಮೆತ್ತೆಯ ಮಂಚ. S.-chick ಗರಿಮೂಡಿಲ್ಲದ ಹಕ್ಕಿ. S.-pie ಪಾರಿವಾಳದ ಮಾಂಸದ ಕಡುಬು; ಕುರಿಯ ಮಾಂಸ, ಈರುಳ್ಳಿ, ಸೇಬು—ಇವನ್ನು ಹಾಕಿ ಮಾಡಿದ ಕಡುಬು.

Squábble ಸ್ಕ್ವಾಬಲ್ (ಕ್ರಿ., ನಾ.) ಕಾದಾಡು, ಕಚ್ಚಾಡು (*With* person, *about* thing). (ಮುದ್ರಣ) ಜೋಡಿಸಿದ ಮೊಳೆಗಳನ್ನು ಕೆದರಿಹಾಕು, ಅಸ್ತವ್ಯಸ್ತ ಮಾಡು. (ನಾ.) ಕಾದಾಟ, ಕಚ್ಚಾಟ, ಜಗಳ. **Squábbler** (ನಾ.)

Squácco ಸ್ಕ್ವಾಕ್ಕೊ (ನಾ.) ದ. ಯೂರೋಪು, ಆಫ್ರಿಕ ಮತ್ತು ಏಷ್ಯಾ ಖಂಡಗಳಲ್ಲಿರುವ, ಜುಟ್ಟುಳ್ಳ, ಹೆರನ್ ಜಾತಿಯ ಒಂದು ಸಣ್ಣ ಹಕ್ಕಿ.

Squad ಸ್ಕ್ವಾಡ್ (ನಾ.) (ಸೈನಿಕ) ಕವಾಯತು, ಮೊ. ಕ್ಕಾಗಿ ಒಟ್ಟು ಕೂಡಿಸಿದ ಸಣ್ಣ ತಂಡ; ಸಣ್ಣ—ದಳ, ತುಕಡಿ [S. drill ಪ್ರಾಥಮಿಕ ಕವಾಯತು. Awkward s. ಸೈನಿಕದಳ ಪಂಕ್ತಿಯಲ್ಲಿ ಸ್ಥಾನ ಪಡೆಯಲು ಇನ್ನೂ ಸರಿಯಾಗಿ ತರಬೇತಾಗಿಲ್ಲದ, ಉಮೇದುವಾರಿ ಸೈನಿಕರ, —ತಂಡ: ಅಪಕ್ವ ದಳ; ಕಚ್ಚಾ ದಳ (ರೂಪ. ಸಹ). Flying s. (ಮೋಟಾರು ಬಂಡಿ, ಮೋಟಾರು ಬೈಸಿಕಲ್, ಮೊ. ಗಳಿಂದ ಸಜ್ಜಿತವಾದ) ವೇಗದಿಂದ ಬೆಂಬತ್ತುವ ಪೋಲೀಸು ತುಕಡಿ; ಹಾರು ತುಕಡಿ]. ಸಣ್ಣ—ಕೂಟ, ಗುಂಪು, ಪಂಗಡ. **Squádron** ಸ್ಕ್ವಾಡ್ರನ್ (ನಾ., ಕ್ರಿ. ಸಕ.) ೧೨೦ರಿಂದ ೨೦೦ರ ವರೆಗೆ ಸೈನಿಕರಿರುವ ರಾವುತ ದಳ: ರಾವುತ ತುಕಡಿ. ವ್ಯವಸ್ಥಿತ ಗುಂಪು; ದಳ; (ನಿರ್ದಿಷ್ಟ ಕಾರ್ಯಕ್ಕಾಗಿ ನಿಯೋಜಿಸಿದ) ಯುದ್ಧ ನೌಕಾ ತಂಡ (Flying s. ಶೀಘ್ರ, ವೇಗ, —ನೌಕಾ ತಂಡ). S.-Commander ಯುದ್ಧ ವಿಮಾನ ದಳಾಧಿಕಾರಿ). (ಕ್ರಿ.) ಸಣ್ಣ ದಳಗಳನ್ನಾಗಿ, ತುಕಡಿ ಗಳನ್ನಾಗಿ, —ಮಾಡು, ವಿಂಗಡಿಸು.

Squádron. **Squad** ನೋಡಿ.

Squail ಸ್ಕ್ವೆಯ್‌ಲ್ (ನಾ.) (ಬ. ವ. ದಲ್ಲಿ) ದುಂಡು ಹಲಗೆಯ ಮೇಲೆ ಅಥವಾ ದುಂಡು ಮೇಜಿನಮೇಲೆ, ಅಂಚಿನಿಂದ ಮಧ್ಯದ ಗುರಿಗೆ ಬಿಲ್ಲೆಗಳನ್ನು ಮಿಡಿದು ಆಡುವ ಒಂದು ಆಟ; ಈ ಆಟದ ಬಿಲ್ಲೆಗಳು. **S.-board** ಈ ಆಟದ ಹಲಗೆ.

Squaíler ಸ್ಕ್ವೆಯ್ಲರ್ (ನಾ.) ಅಳಿಲು, ಮೊ. ಗಳ ಮೇಲೆ ಎಸೆಯಲು ಉಪಯೋಗಿಸುವ, ಸೀಸದ ಗುಬಟು ಹಾಕಿದ ಕೋಲು: ಸೀಸದ ಗುಬಟು ದೊಣ್ಣೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Squálid ಸ್ಕ್ವಾಲಿಡ್ (ಗು.) ಕೊಳಕಿನ, ಹೊಲಸಾದ, ಅಸಹ್ಯವಾದ; ತುಚ್ಛ, ದರಿದ್ರ. **Squálidly** (ಕ್ರಿ. ವಿ.); **Squálidness** (ನಾ.); **Squalídity** (ನಾ.); **Squálor** (ನಾ.) ಕೊಳೆ, ಹೊಲಸು, ದಾರಿದ್ರ್ಯ.

Squall ಸ್ಕ್ವಾಲ್ (ಕ್ರಿ., ನಾ.) (ಭಯ, ನೋವು, ಮೊ. ಗಳಿಂದ ಎಂಬಂತೆ) ಕಿರಿಚು, ಅರಚು, ಚೀರು, ಚೀತ್ಕರಿಸು; ಕೀರು ದನಿಯಲ್ಲಿ, ಕರ್ಕಶವಾಗಿ, ಹೇಳು; ಕಿರಿಚಿಕೊ, ಅರಚಿಕೊ. (ನಾ.) ಅರಚಿಕೆ, ಕಿರಿಚಾಟ, ಚೀತ್ಕಾರ; (ರೂಪ.) ಹುಯಿಲು, ಜಗಳ, ಗೊಂದಲ. ಮು., ಮಳೆ, ಮಂಜು, ಮೊ. ಗಳಿಂದ ಕೂಡಿದ ಬಿರುಗಾಳಿ: ಝಂಝಾ ಮಾರುತ [Arched s. ಸಮಭಾಜಕ ವೃತ್ತದ ಬಳಿ ಇದ್ದಕ್ಕಿದ್ದಂತೆ ಕರಿಯ ಮೋಡಗಳು ಕಮಾನಿನಾಕಾರದಲ್ಲಿ ಕವಿದುಕೊಂಡು, ಗುಡುಗು ಸಿಡಿಲುಗಳಿಂದ ಕೂಡಿ, ಬೀಸುವ ಬಿರುಗಾಳಿ: ಕಮಾನು ಬಿರುಗಾಳಿ. Black s. ಕರಿಯ ಮೋಡದ ಬಿರುಗಾಳಿ. White s. (ಒಳ್ಳೆಯ ಹವಾಮಾನದಲ್ಲಿಯೇ ಬರುವ) ಮೋಡವಿಲ್ಲದ ಬಿರುಗಾಳಿ, ಶುದ್ಧ ಬಿರುಗಾಳಿ. Look out for squalls (ರೂಪ.) ಅಪಾಯಗಳು, ತೊಂದರೆಗಳು, ಸಂಭವಿಸಿಯಾವೆಂದು ಎಚ್ಚರಿಕೆಯಾಗಿ, ಹುಷಾರಾಗಿ ಇರು]. **Squáller** (ನಾ.) ಕಿರಿಚುವವನು. **Squálly** (ಗು.) ಬಿರುಗಾಳಿ ಮಳೆಯ.

Squáloid ಸ್ಕ್ವೇಲಾಯ್ಡ್ (ಗು.) ಷಾರ್ಕ್ ಮೀನಿನಂಥ.

Squálor. **Squalid** ನೋಡಿ.

Squáma ಸ್ಕ್ವೇಮ (ನಾ.; ಬ. ವ. -ae —ಮೀ) (ಸ. ವಿ., ಪ್ರಾ. ವಿ.) ಪೊರೆ, ಶಲ್ಕ, ಸಿಪ್ಪೆ; ಶಲ್ಕದಂಥ ಗರಿ ಅಥವಾ ಎಲುಬು. **Squámi-**, **Squámo-** (ಸ. ಪೂ. ಪ.) ಶಲ್ಕ—. **Squámose** ಸ್ಕ್ವೇಮೋಸ್ (ಗು.); **Squámule** ಸ್ಕ್ವೇಮ್ಯೂಲ್ (ನಾ.) ಸಣ್ಣ ಪೊರೆ; ಶಲ್ಕಕ.

Squánder ಸ್ಕ್ವಾಂಡರ್ (ಕ್ರಿ. ಸಕ.) (ಹಣ, ಕಾಲ, ಮೊ. ನ್ನು) ಪೋಲು ಮಾಡು, ದುಂದುಮಾಡು; (ಐಶ್ವರ್ಯ, ಮೊ. ನ್ನು) ದುಂದು ವೆಚ್ಚದಿಂದ ಹಾಳುಮಾಡು. **Squánderer** (ನಾ.); **Squánderingly** (ಕ್ರಿ. ವಿ.); **Squándermania** (ನಾ.) ದುಂದು ವೆಚ್ಚದ ಗೀಳು.

Square ಸ್ಕ್ವೇ(ಅ)ರ್ (ನಾ., ಗು., ಕ್ರಿ. ವಿ., ಕ್ರಿ.) ಸಮಭುಜ ಸಮ ಚತುಷ್ಕೋನ; ಸಮ—ಚತುರ್ಭುಜ, ಚತುರಸ್ರ; ಚಚ್ಚೌಕ, ಚದರ; (ಸರಿಸುಮಾರು) ಚೌಕನೆಯ, ಚದರಾಕಾರದ —ವಸ್ತು; (ಊರಿನ) ಚೌಕ, ಚೌವಟ್ಟ [Lives in the next s. ಮುಂದಿನ ಚೌಕದಲ್ಲಿ ವಾಸಮಾಡುತ್ತಾನೆ. Trafalgar S. (ಲಂಡನ್ ಪಟ್ಟಣದಲ್ಲಿ ಒಂದು ಪ್ರಸಿದ್ಧ ಚೌಕ)]; ನಾಲ್ಕು ಬೀದಿಗಳಿಂದ ಸುತ್ತುವರಿಯಲ್ಪಟ್ಟ ಕಟ್ಟಡಗಳ ತಂಡ: ಚೌವಠಾರ, ಚೌಕಟ್ಟಡ. ಸಮಕೋನಗಳನ್ನು ನಿರ್ಮಿಸಲು ಅಥವಾ ಪರೀಕ್ಷಿಸಲು ಅನುಕೂಲಿಸುವ L ಅಥವಾ T (=T.-s.) ಆಕಾರದ ಸಲಕರಣೆ: ಚೌಪಟ್ಟಿ, ಚೌಫಲಕ; ಮೂಲೆಪಟ್ಟಿ (Out of s. ಸಮಕೋನದಲ್ಲಿಲ್ಲದ). ಪ್ರಮಾಣ, ಮಾದರಿ, ನಮೂನೆ [(ಸಾ., ರೂಪ. ಮತ್ತು ಮುಂದಿನ ಪ್ರ. ಗಳಲ್ಲಿ ಹೊರತು ಪ್ರಾಚೀ.ಪ್ರ.) On the s. ಯೋಗ್ಯವಾಗಿ, ಪ್ರಾಮಾಣಿಕವಾಗಿ, ನ್ಯಾಯರೀತಿಯಲ್ಲಿ (Can be trusted to act on the s.). By the s. ಸರಿಯಾಗಿ, ನಿಷ್ಕೃಷ್ಟವಾಗಿ, ಕರಾರುವಾಕಾಗಿ]. ಒಂದು ಸಂಖ್ಯೆಯನ್ನು ಅದರಿಂದಲೇ ಗುಣಿಸಿಬಂದ ಲಬ್ಧ: ವರ್ಗ [The s. of 9 is 81 ೯ರ ವರ್ಗ ೮೧. 9 is a perfect s. ೯ ಪೂರ್ಣವರ್ಗ ಸಂಖ್ಯೆ (ಎಂದರೆ, ೯ಕ್ಕೆ ಪೂರ್ಣ ಸಂಖ್ಯೆಯ ವರ್ಗಮೂಲವಿದೆ)]. ಚೌಕಾಕಾರವಾಗಿ ಅಳವಡಿಸಿದ ಪದಾತಿ ದಳ: ಚೌಕ, ಚದರ, —ವ್ಯೂಹ (Hollow s. ಮಧ್ಯದಲ್ಲಿ ಸಾಮಾನು ಹಾಕಲು ಅವಕಾಶಬಿಟ್ಟು ನಿಲ್ಲಿಸಿದ ಅಥವಾ ಮಧ್ಯದಲ್ಲಿ ನಿಂತ ಅಧಿಕಾರಿಯ ಆಜ್ಞೆಗಳನ್ನು ಎಲ್ಲರೂ ಕೇಳುವಂತೆ ಒಳಮುಖನಾಗಿ ಚೌಕನೆ ಅಳವಡಿಸಿದ ಸೈನಿಕ ವ್ಯೂಹ: ಪೊಳ್ಳು—ಚೌಕ, ಚದರ); ಅಡ್ಡನಾಗಿ ಓದಿದರೂ, ಮೇಲಿಂದ ಕೆಳಕ್ಕೆ ಓದಿದರೂ ಒಂದೇ ರೀತಿ ಇರುವಂತೆ ಅಳವಡಿಸಿದ ಶಬ್ದಗಳ ಚೌಕ: ಚೌಕಬಂಧ (=Word-s.)

ಚಮಚ
(ಉದಾ., ಮಕರ); [Magic s. (Magic ನೋಡಿ)]. (ಅಳತೆಯ
ಚರಕ

ಪ್ರಮಾಣವಾಗಿ) ೧೦೦ ಚದರಡಿ ವಿಸ್ತಾರ; ಚದರ. (ಗು.) ಚೌಕನೆಯ, ಚದರಾಕಾರದ, ಚದರಳತೆಯ [S. foot, inch ಚದರ ಅಡಿ (ಒಂದು ಅಡಿ ಉದ್ದ ಒಂದು ಅಡಿ ಅಗಲ), ಚದರ ಅಂಗುಲ (ಒಂದು ಅಂಗುಲ ಉದ್ದ ಒಂದು ಅಂಗುಲ ಅಗಲ). S. measure ಚದರಳತೆ, ಚದರ ಲೆಕ್ಕ, ಕ್ಷೇತ್ರಫಲ. 4 ft s. ಬಾಹುಗಳು ೪, ೪ ಅಡಿಗಳಿರುವ (೧೬ ಚದರಡಿಯ) ಚೌಕ]; ಸಮಕೋನಗಳುಳ್ಳ (A table with s. angles); ಸಮಕೋನದಲ್ಲಿರುವ, ಸಮಕೋನವಾಗಿರುವ (*To* ಉಪ. ಜೊಡನೆ). [S. number (ಪೂರ್ಣಾಂಕದ) ವರ್ಗಸಂಖ್ಯೆ (ಉದಾ., ೧, ೪, ೯, ೧೬, ೨೫, ಮೊ. ವು). S. root ವರ್ಗಮೂಲ (S. root of 9 is 3). S. dance ನಾಲ್ಕು ಜತೆಯವರು ಎದುರುಬದುರಾಗಿ ಚೌಕನೆ ನಿಂತು ಕುಣಿಯುವ ಕುಣಿತ: ಚೌಕ ಕುಣಿತ. S. game ನಾಲ್ವರು ಆಟಗಾರರು ಹೀಗೆ ಕುಳಿತು ಆಡುವ ಆಟ: ಚೌಕ ಆಟ]. ಸರಿಸುಮಾರು—ಚೌಕಾಕಾರದ, ಚಚ್ಚೌಕವಾದ [A man of s. frame ಚೌಕನೆಯ ಮೈಕಟ್ಟಿನ ಆಳು. A s. jaw ಚಚ್ಚೌಕವಾದ ದವಡೆ. A s. peg in a round hole (Hole ನೋಡಿ)]. ವ್ಯವಸ್ಥಿತ, ಅಣಿಯಾದ (Must tidy up and get things s.); ಪೂರ್ಣ, ಧರ್ತಿಯಾದ; ಶುದ್ಧಾಂಗ, ಕಡಾಖಂಡಿತವಾದ, ಸ್ಪಷ್ಟ (Made a s. meal ಅಚ್ಚುಕಟ್ಟಾಗಿ ಊಟ ಮಾಡಿದನು. A s. refusal ಕಡಾಖಂಡಿತ ನಿರಾಕರಣೆ); ಯೋಗ್ಯವಾದ, ನ್ಯಾಯವಾದ, ಪ್ರಾಮಾಣಿಕವಾದ (His play is not always s. ಅವನ ಆಟ ಎಲ್ಲ ಕಾಲದಲ್ಲೂ ನ್ಯಾಯವಾಗಿರುವುದಿಲ್ಲ. A s. deal ನ್ಯಾಯವಾದ, ಯೋಗ್ಯವಾದ, —ವ್ಯಾಪಾರ, ವ್ಯವಹಾರ); ಸರಿಯಾದ ಸ್ಥಾನಮಾನ ಪಡೆದಿರುವ, ನಿರುಪಾಧಿಕವಾದ, ಒಬ್ಬರ ಹಂಗಿಲ್ಲದ, ಲೆಕ್ಕಾಚಾರ ತೀರಿಸಿಕೊಂಡಿರುವ, ಋಣಮುಕ್ತ (Am now s. with all the world ಈಗ ನನಗೂ ಪ್ರಪಂಚಕ್ಕೂ ಯಾವ ಹಂಗೂ ಇಲ್ಲ. Get s. with the creditors ಸಾಲಗಾರರ ಸಾಲ ಬಗೆಹರಿಸಿಕೊ); [S.-built ಅಗಲವಾದ, ಚಚ್ಚೌಕನೆಯ. Squarehead (ಅಮೆ. ಸಂ.) (ಅಮೆ. ಸಂ. ದಲ್ಲಿಯ ಅಥವಾ ಕೆನಡಾ ದೇಶದಲ್ಲಿಯ) ಸ್ಕಾಂಡಿನೇವಿಯದವನು (Dago ಪದ ನೋಡಿ). S. leg (ಕ್ರಿಕೆಟ್) ದಾಂಡುಗಾರನ ಎಡಕ್ಕೆ, ಗುರಿಕೋಲಿಗೆ ಹೆಚ್ಚು ಕಡಮೆ ಎದುರಾಗಿ, ಸ್ವಲ್ಪ ದೂರದಲ್ಲಿ ನಿಂತು ಆಟ ತೋರಿಸುವವನು; ಇವನು ನಿಲ್ಲುವ ಸ್ಥಳ (Was put at s. leg). S.-rigged ಕೂವೆಯ ನಡುಮಟ್ಟದಲ್ಲಿ ಹಾಕಿರುವ ಅಡ್ಡದಿಮ್ಮಿಗಳಿಗೆ ಏರಿಸಿದ ಮುಖ್ಯ ಪಟಗಳುಳ್ಳ: ಅಡ್ಡಸಾಲು ಪಟಗಳುಳ್ಳ (Fore ಪದದ ಕೆಳಗೆ Fore-and-aft rigged ಪದ ನೋಡಿ). S. sail (ಅಡ್ಡಸಾಲಿನ) ಚೌಕ—ಪಟ, ಹಾಯಿ. S.-shouldered ಅಗಲವಾದ, ಚಪ್ಪಟೆಯ—ಹೆಗಲುಳ್ಳ (ಎದುರು ಪದ: Round shouldered ದುಂಡು ಹೆಗಲುಳ್ಳ). S.-toed ಚೌಕನೆಯ ಕಾಲ್ಬೆರಳುಳ್ಳ (S.-toes —ಮನುಷ್ಯ); (ಪಾದರಕ್ಷೆಯ ವಿಷಯದಲ್ಲಿ) ಚೌಕನೆಯ ಮುಂತುದಿಯುಳ್ಳ; (ರೂಪ.) ಹಳೆಯ ಸಂಪ್ರದಾಯದ, ಕಟ್ಟುನಿಟ್ಟಿನ, ಶ್ರೀಮದ್ಗಾಂಭೀರ್ಯದ]. (ಕ್ರಿ. ವಿ.) ಚೆನ್ನಾಗಿ, ಚಚ್ಚೌಕವಾಗಿ, ಚೌಕನಾಗಿ; ಯೋಗ್ಯವಾಗಿ, ನ್ಯಾಯವಾಗಿ [Sat s. on his seat ತನ್ನ ಪೀಠದಮೇಲೆ ಚಚ್ಚೌಕನಾಗಿ ಕುಳಿತುಕೊಂಡನು. Hit him s. on the jaw ದವಡೆಯಮೇಲೆ ಚೆನ್ನಾಗಿ ಹೊಡೆದನು. Do you think he plays s.? ಅವನು ನ್ಯಾಯವಾಗಿ ವರ್ತಿಸುತ್ತಾನೆಂದು ಎಣಿಸುತ್ತೀಯಾ? Fair & s. (Fair[2] ನೋಡಿ)]. (ಕ್ರಿ.) ಚೌಕನಾಗಿ, ಸಮಕೋನಿಕ ಅಂಚುಗಳುಳ್ಳದ್ದಾಗಿ, —ಮಾಡು; (ದಿಮ್ಮಿಯನ್ನು) ಚದರವಾಗಿ ಕೆತ್ತು. ಸಂಖ್ಯೆಯನ್ನು ಅದರಿಂದಲೇ ಗುಣಿಸು, ವರ್ಗ ಮಾಡು, ವರ್ಗಿಸು (3 squared is 9 ೩ ರ ವರ್ಗ ೯); ಸರಿಹೊಂದು, ಸರಿಹೊಂದಿಸು, ಹೊಂದಿಕೊ (*To, with* ಉಪ. ಜೊಡನೆ) (His practice does not s. with his principles. ಅವನ ನಡೆವಳಿಕೆ ಅವನ ತತ್ತ್ವಗಳಿಗೆ ಹೊಂದಿಕೆಯಾಗಿಲ್ಲ); (ಲೆಕ್ಕಾಚಾರವನ್ನು) ಬಗೆಹರಿಸು, ತೀರಿಸು [S. accounts with (ರೂಪ.) ಸೇಡು ತೀರಿಸಿಕೊ. S. up ಫೈಸಲು —ಮಾಡು, ಮಾಡಿಕೊ]; ದುಡ್ಡು (ಮು., ಲಂಚ) ಕೊಡು, ಕೊಟ್ಟು ಸರಿಮಾಡಿಕೊ (Has been squared to hold his tongue); ಮುಷ್ಟಿಮಲ್ಲನ ನಿಲುವು ತಾಳು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಷ್ಟಿಕಾಳಗದ ನಿಲವಿನಲ್ಲಿ ಒಬ್ಬನ ಬಳಿ ಸಾರು ; ಆತ್ಮರಕ್ಷಣೆಯ ನಿಲವು ವಹಿಸು (He squared up to his adversary) ; [S. the circle ನಿರ್ದಿಷ್ಟ ವೃತ್ತದ ಚದರಳತೆಯಷ್ಟೆ ಇರುವ ಸಮಚತುರಸ್ರವನ್ನು ನಿರ್ಮಿಸು ; ವೃತ್ತದ ವಿಸ್ತೀರ್ಣವನ್ನು ಚದರ ಲೆಕ್ಕದಲ್ಲಿ ಹೇಳು ; ವೃತ್ತದ ಚದರಳತೆ ತಿಳಿಸು ; (ರೂಪ.) ಅಸಾಧ್ಯವಾದ್ದನ್ನು ಮಾಡು, ಅಸಾಧ್ಯವನ್ನು ಸಾಧಿಸು]. (ನಾವಿಕ : ದಿಮ್ಮಿಗಳನ್ನು ಹಡಗಿನ ಅಡಿಗಟ್ಟಿಗೆ) ಸಮಕೋನವಾಗಿ ಮತ್ತು ಸಮಮಟ್ಟದಲ್ಲಿ ಇರಿಸು, ಅಳವಡಿಸು ; (ಮುಕ್ಕಣ್ಣಿನ ಮರದ ತುಂಡುಗಳನ್ನು) ಸಮಮಟ್ಟದಲ್ಲಿರಿಸು ; (ಕೂವೆಯ ಮೆಟ್ಟಲು ಹಗ್ಗಗಳನ್ನು) ಪರಸ್ಪರ ಸಮಾನಾಂತರವೂ ಸಮಮಟ್ಟವೂ ಆಗಿರುವಂತೆ ಮಾಡು. **Squárely** (ಕ್ರಿ. ವಿ.); **Squáreness** (ನಾ.) ; **Squárish** (ಗು.)

Squárrose ಸ್ಕ್ವಾ(ಸ್ಕ್ವಾ)ರೋಸ್, **-ous** —ರಸ್ (ಗು.) (ಸ. ವಿ., ಪ್ರಾ. ವಿ.) ಶಲ್ಕಗಳಿಂದ ಒರಟೊರಟಾದ, ಹರಕಲಾಗಿರುವ.

Squárson ಸ್ಕ್ವಾರ್ಸನ್ (ನಾ.) (ಹಾಸ್ಯ ಪ್ರ.) ಪ್ರಾಂತದ ಮುಖ್ಯ ಜಮೀನುದಾರನಾಗಿಯೂ ಪಾದ್ರಿಯಾಗಿಯೂ ಇರುವವನು: ಜಮೀನುದಾರ ಪಾದ್ರಿ, (Squire ಮತ್ತು Parson ಪದಗಳು ಸೇರಿ ಆದ ಪದ)

Squash[1] ಸ್ಕ್ವಾಷ್ (ಕ್ರಿ., ನಾ.) ಜಜ್ಜು, ನೆಗ್ಗು, ಹಿಂಡು, ಅಜ್ಜಿಬಜ್ಜಿ ಮಾಡು; ಅಡಕು, ಗಿಡಿ(ದು ತುಂಬು), ಇಡಿಕಿರಿ ; (ರೂಪ.) (ತಲೆಯೆತ್ತದಂತೆ ಪ್ರತ್ಯುತ್ತರಕೊಟ್ಟು) ದಬಾಯಿಸಿ ಕೂರಿಸು, ಬಾಯಿ ಮುಚ್ಚಿಸು ; (ದಾರಿ ಮಾಡಿಕೊಂಡು) ಇರುಕಿನಲ್ಲಿ ನುಗ್ಗು (*Into* ಮೊ. ಉಪ. ದೊಡನೆ) (ನಾ.) ಜಜ್ಜಿದ್ದು, ಹಿಂಡಿದ್ದು ; ಬಜ್ಜಿ, ಹಿಂಡಿ, ಅಪ್ಪಚ್ಚಿ. ಗುಂಪು, ಒಗ್ಗು, ಜನಸಂಪರ್ದ ; ಮೆತ್ತನೆಯ ವಸ್ತುವಿನ ಬೀಳು(ವ ಶಬ್ದ) ; ತೊಸಕ್ ಎಂಬ ಶಬ್ದ ; ಒಂದೊಂದು ಕಡೆ ಐದೈದು ಮಂದಿಯಂತೆ ಇರುವ, ಚಪ್ಪಟೆ ದಾಂಡಿನಿಂದ ಮೆತ್ತನೆಯ ರಬ್ಬರು ಚೆಂಡು ಹೊಡೆದು ಆಡುವ ಒಂದು ಆಟ (=S. rackets). Lemon s. (Lemon ನೋಡಿ). S. hat (ಫೆಲ್ಟು, ಮೊ. ಗಳಿಂದ ಮಾಡಿದ) ಮೃದುವಾದ ಟೊಪ್ಪಿಗೆ. **Squáshy** (ಗು.) (ಹಣ್ಣಿನ ವಿಷಯದಲ್ಲಿ) (ಅತಿಯಾಗಿ ಕಳಿತು) ಮೆದುವಾದ, ಕೊಳ ಕೊಳ ಎಂದು ಇರುವ, ಪಿಚಕಲಾದ ; (ನೆಲದ ವಿಷಯದಲ್ಲಿ) ಜೌಗಾದ, ಬದಿಯಾದ, ತೊಸಕ್ ಎಂದು ಕಾಲು ಇಳಿದುಹೋಗುವ. **Squáshiness** (ನಾ.)

Squash[2] ಸ್ಕ್ವಾಷ್ (ನಾ.) ಹಲವು ಬಗೆಯ ಕುಂಬಳಕಾಯಿ (ಗಿಡ)

Squat ಸ್ಕ್ವಾಟ್ (ಕ್ರಿ., ಗು., ನಾ.) ಪದ್ಮಾಸನ, ಚಕ್ಕಂಬಟ್ಟಲು, ಚಕ್ಕನಕಾಲು, ಚಕ್ಕಳಬಕ್ಕಳ,—ಹಾಕಿ ಕುಳಿತುಕೊ, ಕುಳ್ಳಿರಿಸು; (ಪ್ರಾಣಿಗಳ ವಿಷಯದಲ್ಲಿ) ನೆಲ ಕಚ್ಚಿಕೊಂಡು, ಮುದುರಿಕೊಂಡು, —ಕುಳಿತುಕೊ ; (ಬಳ. ಮಾ.) ಮಂಡಿಯೂರು, ಕುಳಿತುಕೊ (*Down*, *on*, ಮೊ. ಉಪ. ದೊಡನೆ). (ಗು.) ಚಕ್ಕಂಬಟ್ಟಲು ಹಾಕಿ ಕುಳಿತ, ಪದ್ಮಾಸನಸ್ಥ ; (ಮನುಷ್ಯ, ಮೊ. ರ ವಿಷಯದಲ್ಲಿ) ಗಿಡ್ಡೂ ದಪ್ಪನೂ ಆದ, ಠೊಣೆಯನಾದ. (ನಾ.) ಪದ್ಮಾಸನ ; ಗುಜ್ಜಾರಿ, ಠೊಣಪ. **Squátter** (ನಾ.) (ಕ್ರಿಯಾರ್ಥಗಳಲ್ಲಿ) ; (ಆಸ್ಟ್ರೇಲಿಯದಲ್ಲಿ) ಸರಕಾರದಿಂದ ಸುಲಭ ಕರಾರಿನ ಮೇರೆ ಹುಲ್ಲುಗಾವಲಿನ ಹಕ್ಕು ಪಡೆದವನು ; (ಹಕ್ಕಿಲ್ಲದೆ) ಸರಕಾರಿ ಜಮೀನನ್ನು ಆಕ್ರಮಿಸಿಕೊಂಡವನು. ದೊಡ್ಡ ಕುರಿಮಂದೆಯುಳ್ಳವನು.

Squaw ಸ್ಕ್ವಾ (ನಾ.) ಉ. ಅಮೆರಿಕದ ಇಂಡಿಯನ್ ಹೆಂಗಸು, ಹೆಂಡತಿ ; (ರೂಪ.) ಹೆಣ್ಣಿಗ. S. man ಇಂಡಿಯನ್ ಹೆಂಡತಿಯನ್ನು ಮದುವೆಯಾದ ಬಿಳಿಯ.

Squawk ಸ್ಕ್ವಾಕ್ (ಕ್ರಿ. ಅಕ., ನಾ.) (ಮು., ಹಕ್ಕಿಗಳ ವಿಷಯದಲ್ಲಿ) (ನೋವಿನಿಂದ ಅಥವಾ ಹೆದರಿಕೆಯಿಂದ) ಚೀರು, ಕೀರು. (ನಾ.) ಚೀರಲು.

Squeak ಸ್ಕ್ವೀಕ್ (ಕ್ರಿ., ನಾ.) (ಇಲಿ, ಎಣ್ಣೆಯಿಲ್ಲದ ಕೀಲು, ಮೊ. ಗಳಂತೆ) ಕಿರು, ಕೀಚು, —ಗುಟ್ಟು ; ಕೀಚು ದನಿಯಲ್ಲಿ ಹೇಳು ; (ಅಸಂ.) ಒಬ್ಬನ ಅಪರಾಧವನ್ನು ತಿಳಿಸು, ದೋಷಾಪಾದಕನಾಗು. (ನಾ.) ಕೀಚು ದನಿ ; ಸ್ವಲ್ಪದಲ್ಲಿ, ಕೂಂಚದಲ್ಲಿ, —ತಪ್ಪಿಸಿಕೊಳ್ಳುವುದು, ಪಾರಾಗುವುದು (=Narrow, close or near, s.). Bubble-&-s. ತರಕಾರಿಯ ಹೋಳುಗಳೊಡನೆ ಬಾಳಿಸಿದ ಹಸಿ ಮಾಂಸ. **Squeáker** (ನಾ.) (ಕ್ರಿಯಾರ್ಥಗಳಲ್ಲಿ) ; ಹಕ್ಕಿಯ ಮರಿ (ಮು., ಪಾರಿವಾಳದ್ದು). **Squeáky** (ಗು.); **Squeákily** (ಕ್ರಿ. ವಿ.)

Squeal ಸ್ಕ್ವೀಲ್ (ಕ್ರಿ., ನಾ.) (ನೋವು, ಹೆದರಿಕೆ, ಕೋಪ, ಸಂತೋಷ, ಮೊ. ಗಳಿಂದ ಮಗು ಕೂಗಿಕೊಳ್ಳುವಂತೆ) ಚೀರು ; ಚೀರಿ ಹೇಳು ; ಕಿರಿಚು ; (ಅಸಂ.) (ಕಂದಾಯ, ಮೊ. ಗಳನ್ನು ಕುರಿತು) ಉದ್ರೇಕದಿಂದ ಪ್ರತಿಭಟಿಸು, ಕೂಗಾಡು ; (ಅಸಂ.) ಒಬ್ಬನ ಅಪರಾಧವನ್ನು ತಿಳಿಸು, ದೋಷಾಪಾದಕನಾಗು ; ಗುಟ್ಟು ಬಿಟ್ಟುಕೊಡು ; [Make one s. (ಅಸಂ.) (ಒಬ್ಬನನ್ನು) ಬೆದರಿಸಿ ದುಡ್ಡು ಕೀಳು, ಸುಲಿಗೆ ಮಾಡು]. (ನಾ.) (ಮಗು, ಹಂದಿ, ಮೊ. ಗಳ) ಚೀರು, ಕೀಚು. **Squeáler** (ನಾ.) = Squeaker (Squeak ನೋಡಿ)

Squeámish ಸ್ಕ್ವೀಮಿಷ್ (ಗು.) ಬೇಗ, ಸುಲಭವಾಗಿ, —ವೆಗಟುಗೊಳ್ಳುವ, ಓಕರಿಕೆಗೊಳ್ಳುವ ; (ಮರ್ಯಾದೆ, ಪ್ರಾಮಾಣಿಕತೆ, ಮೊ. ಗಳ ವಿಷಯದಲ್ಲಿ) ವಿಪರೀತ ಸೂಕ್ಷ್ಮದ, ಕುಶಪಿಷ್ಟೆಯ, ಗೊಣಗುತ್ತಲೇ ಇರುವ, ಸ್ವಲ್ಪಕ್ಕೂ ಒಪ್ಪದ. **Squeámishly** (ಕ್ರಿ. ವಿ.) ; **Squeámishness** (ನಾ.)

Squeégee ಸ್ಕ್ವೀಜೀ, **Squílgee** ಸ್ಕ್ವಿಲ್ಜೀ (ನಾ., ಕ್ರಿ. ಸಕ.) ತೇವವಾದ ಹಡಗಿನ ಅಟ್ಟವನ್ನು ಅಥವಾ ಬೀದಿಯನ್ನು ಗುಡಿಸಲು ಉಪಯೋಗಿಸುವ, ರಬ್ಬರಿನ ಅಲಗನ್ನು ಉದ್ದವಾದ ಹಿಡಿಗೆ ಅಳವಡಿಸಿ ಮಾಡಿದ ಸಲಕರಣೆ : ರಬ್ಬರು—ಪೊರಕೆ, ತೊಡಪ ; (ಛಾಯಾಚಿತ್ರ ಕೆಲಸದಲ್ಲಿ ಉಪಯೋಗಿಸುವ ಇಂತಹ) ಸಣ್ಣ ರಬ್ಬರು—ಉರುಳೆ, ಒತ್ತಿಗೆ. (ಕ್ರಿ.) ರಬ್ಬರು ತೊಡಪದಿಂದ ಗುಡಿಸು, ಒರಸು ; ರಬ್ಬರು ಉರುಳೆಯಿಂದ ಒತ್ತು.

Squeeze ಸ್ಕ್ವೀಸ್ (ಕ್ರಿ., ನಾ.) ಹಿಂಡು, ಹಿಸುಕು, ಹಿಚುಕು, ಕಿವಿಚು, ಒತ್ತು, ಇರುಕು [S. person's hand (ಸಹಾನುಭೂತಿ, ಪ್ರೀತಿ, ಮೊ. ಗಳ ಸೂಚನೆಯಾಗಿ) ಒಬ್ಬನ ಕೈ ಹಿಸುಕು. Squeezed orange (ರೂಪ.) ಹಿಂಡಿ ಹಿಪ್ಪೆಯಾದವನು, —ದದ್ದು ; ನಿಸ್ಸಾರವಾಗಿ ಹೋದ ವ್ಯಕ್ತಿ, ವಸ್ತು. Was squeezed to death in the crowd ಗುಂಪಿನಲ್ಲಿ ಇರುಕಿ ಸಾಯುವಂತಾದನು] ; (ವ್ಯಕ್ತಿಯನ್ನು ಅಥವಾ ವಸ್ತುವನ್ನು ಗಾಡಿ, ಕೋಣೆ, ಮೊ. ಗಳ ಒಳಕ್ಕೆ ಅಥವಾ ಹೊರಕ್ಕೆ) ಬಲವಂತದಿಂದ ಇರುಕು, ನೂಕು (S. into ಒಳಕ್ಕೆ ಇರುಕು, ತುರುಕು. S. out of ಹೊರಕ್ಕೆ ಇರುಕು, ದಬ್ಬು) ; ಬಲಾತ್ಕಾರದಿಂದ, ಒತ್ತಾಯದ ಬೇಡಿಕೆಯಿಂದ, —ಕೀಳು, ಸುಲಿ, ಹಣ ಹಿಂಡು ; ಬಲಾತ್ಕಾರದಿಂದ, ಇರುಕಿಕೊಂಡು ದಾರಿಮಾಡಿಕೊ (*Into* ಉಪ. ದೊಡನೆ) ; ಬಲಾತ್ಕಾರ, ನಿರ್ಬಂಧ, ಒತ್ತಾಯ—ಪಡಿಸು (We could s. the government to any extent ಸರ್ಕಾರವನ್ನು ಎಷ್ಟು ಬೇಕಾದರೂ ಒತ್ತಾಯಪಡಿಸಬಲ್ಲೆವು) ; ಕಷ್ಟಪಟ್ಟು, ಪ್ರಯತ್ನದಿಂದ, —ಹೊರಡಿಸು (S. a tear) ; ಒದ್ದೆ ಕಾಗದದಿಂದ (ನಾಣ್ಯ, ಮೊ. ಗಳ) ಮುದ್ರಣ ತೆಗೆ, ಅಚ್ಚೊತ್ತು. (ನಾ.) ಹಿಂಡಿಕೆ, ಹಿಸುಕು(ವುದು) [Gave him a s. (of the hand)] ; ಒತ್ತುಗುಂಪು, ಇರುಕಲು, ಕಿಕ್ಕಿರಿತ (It was a tight s.) ; ಒದ್ದೆ ಕಾಗದದಮೇಲೆ ತೆಗೆದ ಮುದ್ರಣ, ಅಚ್ಚೊತ್ತಿಗೆ. **Squeézable** (ಗು.) ; **Squeezabílity** (ನಾ.) ; **Squeézer** (ನಾ.) (ಕ್ರಿಯಾರ್ಥಗಳಲ್ಲಿ) ; ಕರಗಿಸಿದ ಕಬ್ಬಿಣದಿಂದ ಗಾಳಿಯ ಗುಳ್ಳೆಗಳನ್ನು ಹೊರ ಹೊರಡಿಸುವ ಸಲಕರಣೆ : ಗಾಳಿಯೊತ್ತಿಗೆ, ವಾಯುಪೀಡಕ ; (ಬ. ವ.) (ಎಲೆಗಳನ್ನು ಹರಡಿ ನೋಡಬೇಕಾದ ಆವಶ್ಯಕತೆಯಿಲ್ಲದಂತೆ) ಮೇಲು ಮೂಲೆಯಲ್ಲಿ ಎಲೆಯ ಬಂದನ್ನು (ಬೆಲೆಯನ್ನೂ ಬಣ್ಣವನ್ನೂ) ಗುರುತಿಸಿರುವ ಇಸ್ಪೀಟೆಲೆಗಳು.

Squelch ಸ್ಕ್ವೆಲ್ಚ್ (ಕ್ರಿ., ನಾ.) (ಬಳ. ಮಾ.) ತುಳಿದುಹಾಕು, ಅಪ್ಪಚ್ಚಿ ಮಾಡು, ಕೊನೆಗಾಣಿಸು, ನಿರ್ನಾಮಮಾಡು ; ತಲೆಯೆತ್ತದಂತೆ —ಅಡಗಿಸಿಬಿಡು, ಬಾಯಿ ಮುಚ್ಚಿಸು ; ಗಾಬರಿ, ತಬ್ಬಿಬ್ಬು,—ಹಿಡಿಸು ; (ನೀರಿನಲ್ಲಿ, ಕೆಸರಿನಲ್ಲಿ) ಕೊಚ ಕೊಚ ಶಬ್ದ —ಮಾಡು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗು(ವಂತೆ ನಡೆ). (ನಾ.) ಕೊಚ ಕೊಚ, ತೊಸಕ್ ಪಸಕ್, —ಶಬ್ದ (ಮಾಡುವುದು) ; (ಬಳ. ಮಾ.) ತೊಸಕ್ಕನೆ ಬೀಳುವುದು ; ಬಾಯಿ ಮುಚ್ಚಿಸುವ ಉತ್ತರ.

Squib ಸ್ಕ್ವಿಬ್ (ನಾ., ಕ್ರಿ.) (ಒಂದು ಬಗೆಯ) ಸುರ್ ಸುರ್ ಬಾಣ, ಬಿರುಸು, ಪಟಾಕಿ ; (ಸಿಡಿಮದ್ದು ಪಾತ್ರೆ ಹೊತ್ತಿಸಲು ಉಪಯೋಗಿಸುವ) ಸಿಡಿಮದ್ದುಗೊಳವೆ. ವಿಡಂಬನ ಲೇಖನ, ಲೇವಡಿ ಬರಹ. (ಕ್ರಿ.) ವಿಡಂಬನ ಲೇಖನ ಬರೆ, ಲೇವಡಿಮಾಡು.

Squid ಸ್ಕ್ವಿಡ್ (ನಾ., ಕ್ರಿ. ಅಕ.) ಎರೆಯಾಗಿ ಉಪಯೋಗಿಸುವ ಒಂದು ಬಗೆಯ ಕಟ್‌ಲ್ ಮೀನು ; ಹಲವು ಬಗೆಯ ಕೃತಕ ಎರೆ. (ಕ್ರಿ.) —ಇಂದ ಮೀನು ಹಿಡಿ.

Squíffer ಸ್ಕ್ವಿಫರ್ (ನಾ.) (ಅಸಂ.) ಒಂದು ಬಗೆಯ ರಾಗಮಾಲಿಕೆ.

Squíffy ಸ್ಕ್ವಿಫಿ (ಗು.) ಕುಡಿದು ಕೊಂಚ ಅಮಲೇರಿದ.

Squílgee. **Squeegee** ನೋಡಿ.

Squill ಸ್ಕ್ವಿಲ್ (ನಾ.) ಲಿಲಿ ವರ್ಗದ ಒಂದು ಸಸ್ಯ ; (ಮೂತ್ರೋತ್ತೇಜಕ, ವಿರೇಚಕ, ಮೊ.=ಉಪಯೋಗವಾಗುವ) ಇದರ ಗೆಡ್ಡೆ. ಒಂದು ಚಿಪ್ಪುಪ್ರಾಣಿ (=S.-fish)

Squinch ಸ್ಕ್ವಿನ್ಷ್ (ನಾ.) (ಚೌಕ ಕಟ್ಟಡದ ಮೇಲೆ ಎಂಟು ಮೂಲೆಯ ಗೋಪುರ ಕಟ್ಟುವಂಥ ಸಂದರ್ಭದಲ್ಲಿ) (ಚೌಕದ) ಮೂಲೆಯ ಅಡ್ಡ— ಕಟ್ಟಡ, ಕಮಾನು ; ಮೂಲೆ—ಕಟ್ಟಡ, ಕಮಾನು.

Squint ಸ್ಕ್ವಿಂಟ್ (ಕ್ರಿ., ನಾ., ಗು.) ಮೆಳ್ಳೆ, ಮಾಲು, —ಗಣ್ಣಾಗಿರು ; ವಕ್ರವಾಗಿ, ಓರೆಯಾಗಿ, —ನೋಡು (*At* ಉಪ. ದೊಡನೆ) ; (ಕಣ್ಣುಗಳನ್ನು) ಮೆಳ್ಳೆಮಾಡು, ಮಾಲಿಸು [**Squínter** (ನಾ.)]. (ನಾ.) ಮೆಳ್ಳೆಗಣ್ಣು, ಮಾಲುಗಣ್ಣು (Has a fearful s.); ವಕ್ರ. ಕಾಕ, —ದೃಷ್ಟಿ ; ಓರೆನೋಟ ; ಕಳ್ಳನೋಟ ; (ಬಳ. ಮಾ.) ನಸು ನೋಟ, ಕ್ಷಣ ವೀಕ್ಷಣ (Let's have a s. at it); ಒಲವು, ಪ್ರವೃತ್ತಿ (*To, towards* ಉಪ. ದೊಡನೆ) (A s. towards radicalism) ; (ಕ್ರೈಸ್ತ ದೇವಾಲಯದಲ್ಲಿ ಅದರ ಇಕ್ಕೆಲದ ಹಜಾರಗಳಿಂದ ಬಲಿಪೀಠ ಕಾಣುವಂತೆ ಗೋಡೆಯಲ್ಲಿ ಮಾಡಿರುವ) ಓರೆಗಿಂಡಿ. (ಗು.) ಮೆಳ್ಳೆಯಾದ, ಮಾಲಿರುವ ; ವಕ್ರದೃಷ್ಟಿಯ, ಓರೆ ನೋಟದ. S.-eyed (ರೂಪ.) ವಕ್ರದೃಷ್ಟಿಯ, ಮಾತ್ಸರ್ಯದ, ದ್ವೇಷ ಕಾರುವ.

Squire ಸ್ಕ್ವೈ(ಅ)ರ್ (ನಾ., ಕ್ರಿ. ಸಕ.) ಹಳ್ಳಿಯ —ನಾಯಕ, ದೊಡ್ಡ ಮನುಷ್ಯ; ಪ್ರಾಂತದ ಮುಖ್ಯ ಜಮೀನುದಾರ (The s.) ; ಹೆಂಗಸಿನ —ಅನುಚರ, ಪಾಲಕ, ಬೆಂಗಾವಲು; ಸ್ತ್ರೀಪರಾಯಣ (S. of dames ಸ್ತ್ರೀ —ಸಹಚರ, ಸಹವಾಸಪ್ರಿಯ). (ಚರಿತ್ರೆ) ನೈಟ್ (Knight) ವೀರನ ಅನುಚರ. (ಕ್ರಿ.) (ಗಂಡಸಿನ ವಿಷಯದಲ್ಲಿ ; ಹೆಂಗಸಿಗೆ) ಅನುಚರನಾಗಿರು, ಓಲೈಸು. **Squírehood** (ನಾ.) ; **Squírelet** (ನಾ.); **Squíreling** (ನಾ.) ಚಿಕ್ಕ ಜಮೀನುದಾರ, ಸ್ತ್ರೀ ಅನುಚರ, ಮೊ. ದವರು. **Squírely** (ಕ್ರಿ. ವಿ.) ; **Squíreship** (ನಾ.) ; **Squírearchy** ಸ್ಕ್ವೈರಾರ್ಕಿ (ನಾ.) ಜಮೀನುದಾರ—ವರ್ಗದವರು, ಪ್ರಭುತ್ವ. **Squiréarch** (ನಾ.) ಜಮೀನುದಾರ ಪ್ರಭು. **Squiréarchal** (ಗು.) ; **Squireárchical** (ಗು.) ; **Squireén** (ನಾ.) (ಮು.. ಐರ್ಲೆಂಡಿನ) ಸಣ್ಣ ಜಮೀನುದಾರ.

Squírearch, etc. **Squire** ನೋಡಿ.

Squireén. **Squire** ನೋಡಿ.

Squirm ಸ್ಕ್ವರ್ಮ್ (ಕ್ರಿ. ಅಕ., ನಾ.) ಮಿಲಿಮಿಲಿ ಒದ್ದಾಡು, ಮಿಲುಗುಟ್ಟು (ರೂಪ. ನಹ) ; ತೀವ್ರವಾಗಿ ಕ್ಲೇಶಪಡು. (ನಾ.) ಮಿಲಿಮಿಲಿ ಒದ್ದಾಟ (ರೂಪ. ನಹ). (ನಾವಿಕ) ಹಗ್ಗದಲ್ಲಿ ತಿರಿಚು, ನುಲಿ.

Squírrel ಸ್ಕ್ವಿರೆಲ್ (ನಾ.) ಅಳಿಲು, ಇಣಚಿ. Barking s. = Prairie-dog (Prairie ನೋಡಿ). S.-fish ಮುಳ್ಳುಗಳುಳ್ಳ ಹಲವು ಬಗೆಯ ಮೀನು. S.-hawk ಅಳಿಲು ತಿನ್ನುವ ಡೇಗೆ. S.-monkey ಕೆಲವು ಬಗೆಯ ಕೋತಿ. S.-tail ಜವೆ ಜಾತಿಯ ಹುಲ್ಲು.

Squirt ಸ್ಕ್ವರ್ಟ್ (ಕ್ರಿ., ನಾ.) (ದ್ರವ, ಪುಡಿ, ಮೊ. ನ್ನು) ಪಿಚಕಾರಿಯಿಂದ (ಹೇಗೊ ಹಾಗೆ) ಹೊಡೆ, ಚಿಮ್ಮು ; ಚುರುಕಿಬಿಡು ; (ದ್ರವ, ಮೊ. ಗಳ ವಿಷಯದಲ್ಲಿ) ಚಿಮ್ಮಿ, ಚುರುಕಿಯಾಗಿ, —ಬರು, ಹೊರಸೂಸು. (ನಾ.) ಪಿಚಕಾರಿ, ಜೀರ್ಕೊಳವೆ ; ಧಾರೆ, ಚಿಮ್ಮಲು ; ಆಟದ ಪಿಚಕಾರಿ (=S.-gun) ; (ಬಳ. ಮಾ.) ಲೆಕ್ಕಕ್ಕೆ ಬಾರದ ಸ್ವಪ್ರತಿಷ್ಠೆಯವನು.

St. **Saint** ನೋಡಿ.

Stab ಸ್ಟ್ಯಾಬ್ (ಕ್ರಿ., ನಾ.) (ಚಾಕು, ಬಾಕು, ಮೊ. ಮೊನೆಯಾಯುಧದಿಂದ) ತಿವಿ, ಇರಿ (—ದು ಗಾಯಗೊಳಿಸು, ಕೊಲ್ಲು); ಗುರಿಯಿಟ್ಟು ತಿವಿ (*At* ಉಪ. ದೊಡನೆ) ; (ರೂಪ.) (ವ್ಯಕ್ತಿ, ಆತನ ಮನಸ್ಸು, ಮೊ. ನ್ನು) ತೀವ್ರವಾಗಿ ನೋಯಿಸು, ಇರಿ, ವೇಧಿಸು ; (ಹೆಸರು, ಮೊ. ನ್ನು) ಗಾಯಗೊಳಿಸು, ಘಾತಮಾಡು (*At* ಉಪ. ದೊಡನೆ) ; (ಇಟ್ಟಿಗೆ ಗೋಡೆಯನ್ನು ಗಾರೆ ಮೆತ್ತುವುದಕ್ಕೆ ಮೊದಲು) ಕುಕ್ಕು, ಕಚ್ಚುಮಾಡು. (ನಾ.) ಇರಿತ, ತಿವಿತ (ರೂಪ. ಸಹ). S. in the back (ಕ್ರಿ., ನಾ.) ಹಿಂದೆ —ಆಡು, ನಿಂದಿಸು (—ವುದು) ; ದ್ರೋಹ(ಮಾಡು). **Stábber** (ನಾ.) ಇರಿಯುವವನು, ಕೊಲೆಗಾರ ; ಇರಿಗೆ, ಬಾಕು.

Stábat Máter (L) ಸ್ಟೇ(ಸ್ಟಾ)ಬ್ಯಾಟ್ ಮೇ(ಮಾ)ಟರ್ (ನಾ.) ಯೇಸುವನ್ನು ಶಿಲುಬೆಗೇರಿಸಿದಾಗ ಮೇರಿ ಕನ್ಯೆ ಪಟ್ಟ ಯಾತನೆಯನ್ನು ಕುರಿತ ಲ್ಯಾಟಿನ್ ಗೀತ(ಕ್ಕೆ ಅಳವಡಿಸಿದ ಸಂಗೀತ) (ಈ ಗೀತದ ಮೊದಲ ಮಾತುಗಳು : ನಿಂತಿದ್ದಳು ತಾಯಿ)

Stáble[1] ಸ್ಟೇಬ್‌ಲ್ (ಗು.) ಅಲುಗಾಡದ, ಭದ್ರವಾದ, ಸ್ಥಿರವಾದ, ದೃಢವಾದ, ಸ್ಥಿರ ಮನಸ್ಸಿನ [I doubt whether the structure is s. ಕಟ್ಟಡ ಭದ್ರವಾಗಿದೆಯೋ ಎಂದು ನನಗೆ ಸಂದೇಹ. The only s. politician of his day. S. equilibrium (Equilibrium ನೋಡಿ)]. **Stábleness** (ನಾ.) ; **Stabílity** ಸ್ಟಬಿಲಿಟಿ (ನಾ.) ದೃಢತೆ, ಸ್ಥಿರತೆ, ಭದ್ರತೆ. **Stábilize** ಸ್ಟೇ(ಸ್ಟ್ಯಾ) ಬಿಲೈಜ಼್ (ಕ್ರಿ. ಸಕ.) ಸ್ಥಿರ, ದೃಢ, ಭದ್ರ—ಮಾಡು ; ನೆಲೆಯಾಗಿಸು. **Stabilizátion** (ನಾ.) (ಕ್ರಿಯಾರ್ಥಗಳಲ್ಲಿ) ; ಒಂದು ದೇಶದ ಚರಾವಣೆಯ ಬೆಲೆಯನ್ನು ಚಿನ್ನದಲ್ಲಿ ನಿಖರಮಾಡುವುದು : (ನಾಣ್ಯಮೌಲ್ಯ) ಸ್ಥಿರೀಕರಣ. **Stábilizer** (ನಾ.) (ಕ್ರಿಯಾರ್ಥಗಳಲ್ಲಿ) ; ವಿಮಾನವನ್ನು ಸಮಸ್ಥಿತಿಯಲ್ಲಿಡಲು ಅನುಕೂಲಿಸುವ, ಬಾಲದಲ್ಲಿ ಸಮಮಟ್ಟದಲ್ಲಿ ಅಳವಡಿಸಿದ, ಸ್ಥಾಯಿ ಫಲಕ : ಸಮಸ್ಥಿತಿ ಸ್ಥಾಪಕ. **Stábly** (ಕ್ರಿ. ವಿ.)

Stáble[2] ಸ್ಟೇಬ್‌ಲ್ (ನಾ., ಕ್ರಿ.) (ಕುದುರೆ, ದನಕರು, ಮೊ. ನ್ನು ಕಟ್ಟುವ) ಕೊಟ್ಟಿಗೆ, ಲಾಯ ; ಅಶ್ವ, ಗೋ, —ಶಾಲೆ ; ತವೇಲಿ ; ಕರುಹಟ್ಟಿ ; (ನಿರ್ದಿಷ್ಟ ಅಶ್ವಶಾಲೆಯ) ಜೂಜು ಕುದುರೆಗಳು ; [Augean stables (Augean ನೋಡಿ). S.-boy, -man ಲಾಯದ—ಹುಡುಗ, ಆಳು ; ಕಾಸ್ತಾರ, ಕುದುರೆ ಚಾಕರ. S.-call ಕುದುರೆಗಳಿಗೆ ಮಾಲೀಸು ಮಾಡಿ ನೀರು ಕುಡಿಸಲು ಅಶ್ವದಳದಲ್ಲಿ ಕೊಡುವ ಸಂಜ್ಞೆ : ಮಾಲೀಸು ಕರೆ, ಲಾಯದ ಕರೆ. S.-companion (ಒಂದೇ ಲಾಯದಲ್ಲಿಯ) ಜೊತೆ, ಸಂಗಾತಿ, —ಕುದುರೆ ; (ಬಳ. ಮಾ.) (ಅದೇ ಶಾಲೆಯ, ಸಂಘದ) ಜೊತೆಯವನು, ಸಂಗಾತಿ, ಒಡನಾಡಿ]. (ಕ್ರಿ.) (ಕುದುರೆಯನ್ನು) ಲಾಯದಲ್ಲಿ ಕಟ್ಟು, ಕೂಡು (Where can we s. our horses ?) ; (ಕುದುರೆಯ ವಿಷಯದಲ್ಲಿ ; ರೂಪಕವಾಗಿ ಮನುಷ್ಯನ ವಿಷಯದಲ್ಲಿ) ಲಾಯದಲ್ಲಿ —ಕಟ್ಟಿರು, ಇರು (Must s. where they can). **Stábling** (ನಾ.) (ಕ್ರಿಯಾರ್ಥಗಳಲ್ಲಿ) ; (ಕುದುರೆ, ಮೊ. ಗಳಿಗೆ) ಸ್ಥಳಾವಕಾಶ, ಲಾಯದ ಅವಕಾಶ.

Stáblish ಸ್ಟ್ಯಾಬ್ಲಿಷ್ (ಕ್ರಿ. ಸಕ.) (ಪ್ರಾಚೀ. ಪ್ರ.) =Establish.

Staccáto (It.) ಸ್ಟಕಾಟೊ (ಗು., ಕ್ರಿ. ವಿ.) ಬಿಟ್ಟು ಬಿಟ್ಟು ತಟಕ್ಕನೆ (ಬಾರಿಸಬೇಕಾದ, ಹಾಡಬೇಕಾದ) (Legato ಪದ ನೋಡಿ). S. mark (ಸ್ವರದ ಮೇಲುಗಡೆಯಾಗಲ ಕೆಳಗಡೆಯಾಗಲ ಹಾಕಿರುವ) ಸ್ವರ ವಿಚ್ಛೇದ ಚಿಹ್ನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Stack ಸ್ಟ್ಯಾಕ್ (ನಾ., ಕ್ರಿ. ಸಕ.) (ಧಾನ್ಯದ ಕಂತೆ, ಹುಲ್ಲು, ಮೊ. ಗಳ) ಮೆದೆ, ಕುತ್ತರಿ, ಬಣವೆ [S.-funnel ಮೆದೆಯ(ಲ್ಲಿ ಗಾಳಿಯಾಡಲು ಅವಕಾಶವಿರುವಂತೆ ಮಧ್ಯದಲ್ಲಿ ಮಾಡಿರುವ) ಲಾಳಿಕೆಯಾಕಾರದ ಕಂಡಿ ; ಮೆದೆ ಲಾಳಿಕೆ. S.-stand ತೇವ ಹತ್ತದಂತೆ, ಹುಳು ಹೊಡೆಯದಂತೆ, ಬಣಬೆಗೆ ಹಾಕುವ ಅಡಿಗಟ್ಟು : ಬಣಬೆಯಟ್ಟಣೆ]. (ಚೌಬೀನೆಯ ಅಳತೆಯಾಗಿ) ೧೦೮ ಘನ ಅಡಿ ಒಟ್ಟಿಲು ; ಒಟ್ಟಿಲು, ಗುಡ್ಡೆ, ರಾಶಿ ; (ಬಳ. ಮಾ.) ದೊಡ್ಡ ಮೊತ್ತ (Have stacks, a whole s., of work to get through first ಮೊದಲು ಮಾಡಿ ಮುಗಿಸಬೇಕಾದ ಕೆಲಸ ರಾಶಿಗಟ್ಟಳೆ ಇದೆ); ಬಂದೂಕುಗಳ ಸ್ತೂಪಾಕೃತಿಯ ಒಟ್ಟಿಲು ; ಒಟ್ಟಿಗೆ ನಿಂತಿರುವ ಹೊಗೆಕೊಳವೆಗಳ ತಂಡ ; (ಆವಿ ಎಂಜಿನಿನ ಅಥವಾ ಹೊಗೆ ಜಹಜಿನ) ಹೊಗೆಕೊಳವೆ (=Smoke.-s.) ; (ಮು., ಸ್ಕಾಟ್ಲೆಂಡಿನ ಮತ್ತು ಆರ್ಕ್ನಿ ದ್ವೀಪಗಳ ತೀರದ ಆಚೆಯ) ಸ್ತಂಭಾಕೃತಿಯ, ಎತ್ತರವಾದ, ಬಿಡಿ ಬಂಡೆ. (ಕ್ರಿ.) ಮೆದೆ, ಬಣಬೆ, ಒಟ್ಟಿಲು, ರಾಶಿ, —ಹಾಕು, ಒಟ್ಟು; (ಬಂದೂಕುಗಳನ್ನು) ಗೋಪುರವಾಗಿ ಒಟ್ಟು, ಒಡ್ಡು.

Stácte ಸ್ಟ್ಯಾಕ್ಟೀ (ನಾ.) (ಪುರಾತನ ಯೆಹೂದ್ಯರು ಧೂಪಹಾಕಲು ಉಪಯೋಗಿಸುತ್ತಿದ್ದ) ಒಂದು ಸುಗಂಧದ್ರವ್ಯ.

Stactómeter ಸ್ಟ್ಯಾಕ್ಟಾಮಿಟರ್ (ನಾ.) ದ್ರವವನ್ನು ಹನಿಗಳಾಗಿ ಅಳತೆಮಾಡುವ, ಮಧ್ಯದಲ್ಲಿ ಟೊಳ್ಳು ಬುರುಡೆಯಿರುವ ಗಾಜಿನ ಕೊಳವೆ ಸಲಕರಣೆ : ಹನಿಯಳತೆಗೊಳವೆ ; ಬಿಂದುಮಾಪಕ.

Stádium ಸ್ಟೇಡಿಯಂ (ನಾ. ; ಬ. ವ. -dia —ಡಿಯ) (ಗ್ರೀಕ್ ಪ್ರಾಚೀನ) ಒಂದು ಉದ್ದ ಅಳತೆ (ಸು., ೨೦೨ ಗಜ ; ಒಲಿಂಪಿಯದಲ್ಲಿಯ ಕಾರೋಟದ ಪಂದ್ಯದ ಪ್ರಾಕಾರದ ಅಳತೆ) ; (ಆಧುನಿಕ) ವ್ಯಾಯಾಮ, ಕ್ರೀಡಾ, —ರಂಗ ; (ವೈ. ಶಾ.) (ರೋಗದ) ಹಂತ, ಮಜಲು, ದಶೆ.

Staff[1] ಸ್ಟ್ಯಾಫ್ (ನಾ. ; ಈಗ ಬ. ವ. Staffs, ಸಂಗೀತದಲ್ಲಿ ಮಾತ್ರ Staves ಸ್ಟೇವ್ಸ್, ಸ್ಟಾವ್ಸ್) (ನಡೆಯುವಾಗ, ಹತ್ತುವಾಗ, ಅಥವಾ ಆಯುಧವಾಗಿ ಉಪಯೋಗಿಸುವ) ಕೋಲು, ದೊಣ್ಣೆ, ಲಾಠಿ, ದಂಡ, ಯಷ್ಟಿ ; (ರೂಪ.) ಆಧಾರ, ಅವಲಂಬ, ಊರೆಗೋಲು [Bread is the s. of life ಅನ್ನವೇ ಜೀವನಾಧಾರ. You are the s. of his old age ಅವನ ಮುಪ್ಪಿನಲ್ಲಿ ನೀನು ಅವನಿಗೆ ಆಧಾರ. Quarter-s. (Quarter ನೋಡಿ)]. ಅಧಿಕಾರ ದಂಡ (Pastoral s. ಬಿಷಪ್, ಮೊ. ರು ಹಿಡಿದುಕೊಳ್ಳುವ ಅಥವಾ ಅವರ ಮುಂದೆ ಹಿಡಿದುಕೊಂಡುಹೋಗುವ ಅಧಿಕಾರ ದಂಡ : ಧರ್ಮಾಧಿಕಾರ ದಂಡ) ; (ಹಿಡಿಯಾಗಿ, ಆಧಾರವಾಗಿ, ಉಪಯೋಗಿಸುವ) ಗಣೆ, ಕಂಬ, ಸ್ತಂಭ [Flagstaff (Flag[4] ನೋಡಿ)] ; ಮೋಜಣಿ, ಮೊ. ಗಳಲ್ಲಿ ಉಪಯೋಗಿಸುವ ಅಳತೆಕೋಲು: ಮೋಜಣಿ ಕೋಲು [Jacob's s. (Jacob ನೋಡಿ)]. ಸಮುದ್ರದ ಮೇಲೆ ಆಕಾಶಸ್ಥ ಕಾಯಗಳ ಕೋನೋನ್ನತಿಯನ್ನು ಕಂಡುಹಿಡಿಯಲು ಉಪಯೋಗಿಸುತ್ತಿದ್ದ ಹಲವು ಬಗೆಯ ಸಲಕರಣೆ : ಕೋನೋನ್ನತಿಮಾಪಕ. ಮೂತ್ರಕೋಶದೊಳಕ್ಕೆ ಚೂರಿಯನ್ನು ಸರಿಯಾಗಿ ಹೊಗಿಸಲು ಅನುಕೂಲಿಸುವ, ಗಾಡಿಯಿರುವ ಶಸ್ತ್ರಚಿಕಿತ್ಸಾ ಸಲಕರಣೆ : ನಿರ್ದೇಶಕ. (ಸೈನಿಕ) ಮುಖ್ಯ ಸೇನಾಪತಿಗೆ ಸಹಾಯಕವಾಗಿ ಆಡಳಿತ, ಮೊ. ಕೆಲಸಗಳನ್ನು ನಿರ್ವಹಿಸಲು ನೇಮಕವಾಗಿರುವ ಅಧಿಕಾರಿ ವರ್ಗ : ಸೈನಿಕಾಡಳಿತ ವರ್ಗ ; ಸಹಾಯಕ ಅಧಿಕಾರಿ ವರ್ಗ [Regimental s. ರೆಜಿಮೆಂಟಿನ ಸಹಾಯಾಧಿಕಾರಿ ವರ್ಗ. General s. (ಸೇನಾಧಿಕಾರ ಕೇಂದ್ರದಲ್ಲಿದ್ದುಕೊಂಡು ಮುಖ್ಯ ಸೇನಾಪತಿಗೆ ಸಹಾಯಕವಾಗಿರುವ) ಕೇಂದ್ರ ಸಹಾಯಾಧಿಕಾರಿ ವರ್ಗ. S. officer, -sergeant ಸಹಾಯಾಧಿಕಾರಿ ವರ್ಗದ ಅಧಿಕಾರಿ, ಸಾರ್ಜೆಂಟು. S. college ಸಹಾಯಾಧಿಕಾರಿಗಳನ್ನಾಗಿ ತರಪೇತುಮಾಡುವ ಶಿಕ್ಷಣ ಶಾಲೆ : ಸಹಾಯಾಧಿಕಾರಿ ಶಿಕ್ಷಣಶಾಲೆ]. (ಒಬ್ಬ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡುವ) ಉದ್ಯೋಗೀ ವರ್ಗ, ನೌಕರರ ವರ್ಗ, ಸಿಬ್ಬಂದಿ (Editorial s. of newspaper ವೃತ್ತಪತ್ರಿಕೆಯ ಸಂಪಾದಕ ಸಿಬ್ಬಂದಿ. Diplomatic s. ರಾಜ್ಯತಂತ್ರ ಶಾಖೆಯ ಸಿಬ್ಬಂದಿ). (ಸಂ.) ಅದರ ಯಾವುದಾದರೂ ಗೆರೆಯ ಮೇಲಾಗಲಿ ಎರಡು ಗೆರೆಗಳ ನಡುವೆಯಾಗಲಿ ಸ್ವರದ ಸ್ಥಾಯಿಯನ್ನು ಸೂಚಿಸಲು ಸಂಕೇತವನ್ನು ಗುರುತಿಸಿರುವ ಐದು ಸಮಾನಾಂತರ ಅಡ್ಡರೇಖೆಗಳ ತಂಡ : ಸ್ಥಾಯಿ ರೇಖಾವಳಿ (S. notation ಸ್ಥಾಯಿ ರೇಖಾವಳಿ ವಿನ್ಯಾಸ ಕ್ರಮ)

Staff (ಕ್ರಿ. ಸಕ.) ಸಿಬ್ಬಂದಿಯನ್ನು, ನೌಕರರನ್ನು, ಅಧಿಕಾರಿಗಳನ್ನು, —ಒದಗಿಸು, ನೇಮಿಸು.

Staff[2] ಸ್ಟ್ಯಾಫ್ (ನಾ.) (ಕಟ್ಟಡದ ಸಾಮಗ್ರಿಯಾಗಿ ಉಪಯೋಗಿಸುವ) ನಾರು, ಸಿಮೆಂಟು, ಪ್ಲಾಸ್ಟರ್ ಆಫ್ ಪ್ಯಾರಿಸ್, ಮೊ. ಗಳ ಮಿಶ್ರಣ.

Stag ಸ್ಟ್ಯಾಗ್ (ನಾ.) (ಕೆಂಬಣ್ಣದ ಅಥವಾ ಇತರ ದೊಡ್ಡ ಜಾತಿಯ) ಗಂಡು ಜಿಂಕೆ, ಕಡವೆ, ಸಾರಂಗ, ಹರಿಣ ; (ಪೂರ್ತಿಯಾಗಿ ಬೆಳೆದ ಮೇಲೆ) ಹಿಡಮಾಡಿದ—ಗೂಳಿ, ಹೋರಿ, ಗಂಡುಪ್ರಾಣಿ. (ಬಂಡವಾಳ ಪತ್ರವ್ಯಾಪಾರ) ಲಾಭಕ್ಕಾಗಿ ಒಡನೆಯೆ ಮಾರಿಹಾಕುವ ಉದ್ದೇಶದಿಂದ (ಹೊಸ ವಾಣಿಜ್ಯ ಅಥವಾ ಕೈಗಾರಿಕೆ ಸಂಸ್ಥೆಗಳಲ್ಲಿ) ಬಂಡವಾಳ ಪಾಲುಗಳಿಗೆ ಅರ್ಜಿ ಹಾಕುವವನು : ಲಾಭಾತುರ ಪತ್ರವ್ಯಾಪಾರಿ ; (ಅಸಂ.) (ಪತ್ರವ್ಯಾಪಾರಕಟ್ಟೆಯ ಸದಸ್ಯನಲ್ಲದ) ಅನಿಯತ ಬಂಡವಾಳ ಪತ್ರ ವ್ಯಾಪಾರಿ. **S.-beetle** ಸಾರಂಗದ ಕವಲುಗೊಂಬಿನಂತೆ ಕವಲೊಡೆದಿರುವ ದವಡೆ ಭಾಗಗಳುಳ್ಳ ಜೀರುಂಡೆ : ಕವಲು ದವಡೆ ಜೀರುಂಡೆ. **S.-evil** (ಕುದುರೆಗಳಿಗೆ ಬರುವ) ದವಡೆ ಸೆಳವು. **S.-horn** ಹಲವು ಬಗೆಯ ಪಾಚಿ ಮತ್ತು ಹವಳ. **Stághound** ಕಡವೆ ಬೇಟೆನಾಯಿ.

Stage ಸ್ಟೇಜ್ (ನಾ.) ಎತ್ತರಿಸಿದ ನೆಲ, ಜಗಲಿ, ಅಟ್ಟ(ಣೆ), ಮಂಚಿಗೆ, ವೇದಿಕೆ; (ಕಟ್ಟಡ ಕಟ್ಟುವಲ್ಲಿ ಕೆಲಸಗಾರರು ಉಪಯೋಗಿಸುವ) ಸಾರುವೆ, ಕಾಲಾವದಿ (Hanging s. ವರ್ಣಚಿತ್ರಕಾರರು ಉಪಯೋಗಿಸುವ, ಹಗ್ಗಗಳಿಂದ ತೂಗಬಿಟ್ಟಿರುವ ಸಾರುವೆ : ತೂಗು—ಸಾರುವೆ, ಮಂಚಿಗೆ. Landing-s. ಬಂದರುಕಟ್ಟೆ, ಮೊ. ಗಳಲ್ಲಿ ಹಡಗು, ಮೊ. ಗಳಿಂದ ಇಳಿಯಲು ಮಾಡಿರುವ ಅಟ್ಟ : ಇಳಿಯಟ್ಟ) ; ಸೂಕ್ಷ್ಮದರ್ಶಕ, ಮೊ. ಗಳಿಂದ ಪರೀಕ್ಷಿಸುವುದಕ್ಕಾಗಿ ವಸ್ತುವನ್ನು ಇಡುವ ಫಲಕ, ಮೊ. ವು: ವಸ್ತುವೇದಿಕೆ. ರಂಗಸ್ಥಳ, ರಂಗಭೂಮಿ ; (ರೂಪ.) ನಾಟಕ —ಕಲೆ, ಸಾಹಿತ್ಯ, ಕಸಬು, ವೃತ್ತಿ (Went on the s. ನಟವೃತ್ತಿಯನ್ನು ಅವಲಂಬಿಸಿದನು ; ನಾಟಕವೃತ್ತಿಗೆ ಹೋದನು) ; (ರೂಪ.) (ಕಾರ್ಯ) ಕ್ಷೇತ್ರ, (ಕಾರ್ಯ)ರಂಗ (Quitted the s. of politics ರಾಜಕೀಯ ಕ್ಷೇತ್ರವನ್ನು, ರಂಗವನ್ನು, —ಬಿಟ್ಟುಹೋದನು) ; (ಬೆಳವಣಿಗೆ, ಮೊ. ಗಳಲ್ಲಿ) ಹಂತ, ಮೆಟ್ಟಿಲು, ಘಟ್ಟ, ಸಮಯ, ಸ್ಥಿತಿ, ಅವಸ್ಥೆ (At this s. an interruption occurred. Reached a critical s. ವಿಷಮ, ಸಂಧಿ,—ಸ್ಥಿತಿ ಮುಟ್ಟಿತು. Larval s. ಮರಿಹುಳುವಿನ—ಹಂತ, ಅವಸ್ಥೆ). (ದಾರಿಯಲ್ಲಿ) ನಿಲ್ಲೆಡೆ, ನಿಲ್ದಾಣ, ಮಜಲು, ಟಪ್ಪಾ ; ಎರಡು ಮಜಲುಗಳ ನಡುವಣ ದೂರ, ಮಜಲ ದೂರ (Travel by easy stages ಸುಲಭವಾದ ಮಜಲುಗಳಲ್ಲಿ ಪ್ರಯಾಣ ಮಾಡು. Got down at the next s. ಮುಂದಿನ ನಿಲ್ಲೆಡೆಯಲ್ಲಿ ಇಳಿದನು). **S.-coach** ಮಜಲು ಗಾಡಿ, ಟಪ್ಪಾ ಬಂಡಿ. **S.-coachman** ಮಜಲು ಗಾಡಿ ಹೊಡೆಯುವವನು, ಟಪ್ಪಾ ಬಂಡಿಕಾರ. **S.-craft** ರಂಗಸ್ಥಳದ ನಾಟಕಗಳನ್ನು ಬರೆಯುವ, ಪ್ರದರ್ಶಿಸುವ, ಕುಶಲತೆ : ನಾಟಕ ವಿದ್ಯೆ, ನಟ(ನ) ಕಲೆ, ರಂಗಕೌಶಲ. **S. direction** ರಂಗಸ್ಥಳದಲ್ಲಿ ನಟನು ಅನುಸರಿಸಬೇಕಾದ ನಡೆವಳಿಯನ್ನು ಕುರಿತು ನಾಟಕದಲ್ಲಿ ಬರೆಯುವ ಸೂಚನೆ : ರಂಗ ಸೂಚನೆ. **S. door** ನಟರೂ ಕೆಲಸಗಾರರೂ ಹೋಗಿಬರುವುದಕ್ಕಾಗಿ ರಂಗಸ್ಥಳದ ಹಿಂಗಡೆ ಮಾಡಿರುವ ಬಾಗಿಲು : ರಂಗದ್ವಾರ. **S. effect** ರಂಗಸ್ಥಳದ(ಲ್ಲಿ ಅಭಿನಯದ) —ಪ್ರಭಾವ, ಪರಿಣಾಮ ; ರಂಗಶೋಭೆ. (ವಾಸ್ತವಿಕ ಜೀವನದಲ್ಲಿ) ಕೃತಕ, ನಾಟಕೀಯ, —ಪರಿಣಾಮ, ಪ್ರಭಾವ, ಅಭಿನಯ. **S. fever** ರಂಗದಮೇಲೆ ಕಾಣಿಸಿಕೊಳ್ಳಲು, ನಟನಾಗಲು, ಹೆಬ್ಬಯಕೆ : ರಂಗದ —ಗೀಳು, ಹುಚ್ಚು. **S. fright** ರಂಗಸ್ಥಳದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೇಲೆ ಮೊದಲಸಲ ಹೋದಾಗ ಪ್ರೇಕ್ಷಕರನ್ನು ನೋಡಿ ಆಗುವ ನಡುಕ: ರಂಗ, ಸಭಾ, —ಕಂಪ. **S. manager** ರಂಗ ವ್ಯವಸ್ಥಾಪಕ; ಸೂತ್ರಧಾರ. **Stage-manage** ಕಳೆಕಟ್ಟುವ ರೀತಿಯಲ್ಲಿ, ಸೂತ್ರಧಾರನಾಗಿ, —ನಿರ್ವಹಿಸು; ನಾಟಕ ಕಟ್ಟು. **S. right** ಒಂದು ನಾಟಕವನ್ನು ಆಡಲು ಒಬ್ಬನಿಗೆ ಮಾತ್ರ ಅಥವಾ ಒಂದು ಸಂಸ್ಥೆಗೆ ಮಾತ್ರ, ಇರುವ ಹಕ್ಕು: ಆಡುವ ಹಕ್ಕು; ಪ್ರದರ್ಶನ ಪೂರ್ಣಾಧಿಕಾರ, ಅಭಿನಯಾಧಿಕಾರ. **S.-struck** ರಂಗಸ್ಥಳದ, ಅಭಿನಯದ, —ಗೀಳು ಹಿಡಿದ. **S. whisper** ಉದ್ದೇಶಿಸಿದವನನ್ನು ಬಿಟ್ಟು ಇತರರು ಕೇಳಬೇಕೆಂದು ಆಡಿದ ಮಾತು: ರಂಗದ ಪಿಸು ಮಾತು, ಜನಾಂತಿಕ, ಅಪವಾರಿತ. **Stáger** (ನಾ.); Old s. ಅನುಭವಸ್ಥ, ಪಳಗಿದ ಕೈ, ಹಳಬ. **Stágy** (ಗು.) (ನಡತೆ, ಶೈಲಿ, ತೋರಿಕೆ, ಮೊ. ಗಳಲ್ಲಿ) ರಂಗ ರೀತಿಯ, ಅಭಿನಯದ. **Stáginess** (ನಾ.)

Stage (ಕ್ರಿ.) (ನಾಟಕವನ್ನು) ರಂಗಸ್ಥಳದ ಮೇಲೆ ಅಭಿನಯಿಸು, ಪ್ರದರ್ಶಿಸು, ಆಡು; (ನಾಟಕದ ವಿಷಯದಲ್ಲಿ) ಆಡಲು ಬರು, ಪ್ರದರ್ಶನ ಸಾಧ್ಯವಾಗಿರು (Does not s. well ರಂಗದಮೇಲೆ ಶೋಭಿಸುವುದಿಲ್ಲ). **Stáging** (ನಾ.) ನಾಟಕ —ಆಡುವುದು, ಪ್ರದರ್ಶನ. ಮಜಲು ಗಾಡಿ ನಡಸುವುದು. ಸಾರು:ವೆ, ಕಾಲಾವದಿ (—ಕಟ್ಟುವುದು)

Stáger. Stage ನೋಡಿ.

Stággard ಸ್ಟ್ಯಾಗರ್ಡ್, **-rt** —ಟ್ (ನಾ.) ನಾಲ್ಕು ವರ್ಷದ —ಕಡವೆ, ಸಾರಂಗ.

Stágger ಸ್ಟ್ಯಾಗರ್ (ಕ್ರಿ., ನಾ.) ತತ್ತರಿಸು(ವಂತೆ ಮಾಡು), ತೂರಾಡು (ವಂತೆ ಮಾಡು) (Received a staggering blow ತತ್ತರಗೊಳಿಸುವ ಏಟು ತಿಂದನು); (ನಿಶ್ಚಯಕ್ಕೆ ಬರದೆ) ಹಿಂದು ಮುಂದು ನೋಡು, ತೂಗಾಡು; ಸ್ಥೈರ್ಯಗೆಡು, ತಡಬಡಾಯಿಸು(—ವಂತೆ ಮಾಡು); ಸ್ಥೈರ್ಯಗೆಡಿಸು, ತತ್ತರಗುಟ್ಟಿಸು (The question staggered him ಪ್ರಶ್ನೆ ಅವನನ್ನು ತತ್ತರಗೊಳಿಸಿತು); ಡೊಂಕು ಬಂಕಾಗಿ, ವಕ್ರ ವಕ್ರವಾಗಿ,—ಇಡು; ಪರ್ಯಾಯ ಕ್ರಮದಲ್ಲಿ ಎಡಕ್ಕೂ ಬಲಕ್ಕೂ ಓಲಿಸಿ ಇಡು (ಉದಾ., ಬೈಸಿಕಲ್ ಚಕ್ರದ ಆರೆಯ ಕಡ್ಡಿಗಳಂತೆ). (ನಾ.) ತತ್ತರಿಕೆ, ತೂರಾಟ; (ಯಂತ್ರಶಿಲ್ಪ) (ಬೈಸಿಕಲ್ ಚಕ್ರದ ಆರೆಕಡ್ಡಿಗಳಂತೆ) ಅಡ್ಡಡ್ಡಲಾದ ಓಲು ರಚನೆ. (ಬ. ವ. ದಲ್ಲಿ) (ಮು., ಕುದುರೆಗಳಿಗೂ ದನಕರುಗಳಿಗೂ ಬರುವ) ಒಂದು ಮಿದುಳು ರೋಗ, ಗಿರಕಿ ರೋಗ (=Blind staggers); (ಬ. ವ.) ತಲೆ—ಸುತ್ತು, ತಿರುಗು. **Stággerer** (ನಾ.) (ಕ್ರಿಯಾರ್ಥಗಳಲ್ಲಿ); ತತ್ತರಗುಟ್ಟಿಸುವ —ವಾದ, ಪ್ರತಿಭಟನೆ, ಘಟನೆ: ಸ್ತಂಭಕ, ಬೆರಗುಬಡಿಕ. **Stággeringly** (ಕ್ರಿ. ವಿ.)

Stáging. Stage ನೋಡಿ.

Stágirite ಸ್ಟ್ಯಾಜಿರೈಟ್ (ನಾ.) The S. (ಮೆಸಿಡೋನಿಯದ ಸ್ಟಜಿರ ಪಟ್ಟಣದಲ್ಲಿ ಹುಟ್ಟಿದ ತತ್ತ್ವಜ್ಞಾನಿಯಾದ) ಅರಿಸ್ಟಾಟಲ್.

Stágnate ಸ್ಟ್ಯಾಗ್ನೇಟ್ (ಕ್ರಿ. ಸಕ.) (ದ್ರವದ ವಿಷಯದಲ್ಲಿ) ಹರಿಯದೆ ನಿಂತಿರು; ನಿಂತಲ್ಲೆ ನಿಂತಿರು; (ಜೀವನ, ಕಾರ್ಯ, ಮನಸ್ಸು, ವ್ಯಕ್ತಿ, ಮೊ.) ಜಡವಾಗು, ಮಂದವಾಗು, ಮುಂದುವರಿಯದೆ ನಿಂತುಬಿಡು, ನಿಂತು ನಾರು. **Stagnátion** (ನಾ.); **Stágnancy** (ನಾ.) ನಿಂತು ನಾರುವುದು, ಜಡತೆ. **Stágnant** (ಗು.); **Stágnantly** (ಕ್ರಿ. ವಿ.); **Stagnícolous** (ಗು.) ಜೌಗಿನಲ್ಲಿ, ಕುಂಟೆಯಲ್ಲಿ, —ವಾಸಿಸುವ.

Stagnícolous. Stagnate ನೋಡಿ.

Stágy. Stage ನೋಡಿ.

Staid ಸ್ಟೈಯ್ಡ್ (ಗು.) ಸ್ಥಿರ ಶಾಂತ ಸ್ವಭಾವದ; ಸ್ತಿಮಿತ, ಸ್ಥಿರ (His s. opinion); ಸ್ಥಿರಚಿತ್ತದ (S. persons). **Staídly** (ಕ್ರಿ. ವಿ.); **Staídness** (ನಾ.)

Stain ಸ್ಟೈಯ್ನ್ (ಕ್ರಿ., ನಾ.) ಕಲೆ, ಕರೆ, ಕೊಳೆ, ಮಲಿನ, ಬಣ್ಣ, —ಮಾಡು (Cigarettes s. the fingers ಸಿಗರೇಟುಗಳು ಬೆರಳುಗಳನ್ನು ಕರೆಗೊಳಿಸುತ್ತವೆ. Warranted not to s. clothes ಬಟ್ಟೆಗಳಿಗೆ ಬಣ್ಣ ಹತ್ತುವುದಿಲ್ಲವೆಂದು, ಕರೆಯಾಗುವುದಿಲ್ಲವೆಂದು,—ಖಾತರಿಕೊಟ್ಟ); (ರೂಪ.) (ಹೆಸರು, ಕೀರ್ತಿ, ಮೊ. ನ್ನು) ಕಳಂಕಿತ ಮಾಡು, ಕಲುಷಿತಮಾಡು, ಕೆಡಿಸು (Sin-stained ಪಾಪ—ಕಲುಷಿತ, ದೂಷಿತ); (ಮರ, ಗಾಜು, ಕಾಗದ, ಮೊ. ಕ್ಕೆ ಬಣ್ಣ ಕೊಡುವಲ್ಲಿ; ಬಣ್ಣವನ್ನು ಮೇಲುಗಡೆ ಬಳಿಯದೆ, ಬೇರೆ ರೀತಿಯಲ್ಲಿ ಆದ್ಯಂತವೂ ವ್ಯಾಪಿಸುವಂತೆ) ಬಣ್ಣವೂರಿಸು, ಬಣ್ಣ ಕಟ್ಟು, ರಂಗಿಸು; (ವಸ್ತುವನ್ನು ಸೂಕ್ಷ್ಮದರ್ಶಕದಿಂದ ಪರೀಕ್ಷಿಸುವಲ್ಲಿ; ರಚನೆ ಸ್ಪಷ್ಟವಾಗಿ ಕಾಣುವಂತೆ, ಆ ಭಾಗವನ್ನು) ಬಣ್ಣಗೂಡಿಸು, ವರ್ಣಸಿಕ್ತಮಾಡು; (ಗೋಡೆಗೆ ಹಚ್ಚುವ ಕಾಗದ, ಮೊ. ಗಳ ಮೇಲೆ) ಬಣ್ಣವೊತ್ತು. (ನಾ.) ಕರೆ, ಕಲೆ, ಗುರುತು, ಮಾಲಿನ್ಯ, ಕಳಂಕ (ರೂಪ. ಸಹ) (Cloth is covered with ink-stains. Without a s. on his character ನಿಷ್ಕಳಂಕ ಚಾರಿತ್ರ); ವರ್ಣದ್ರವ್ಯ, ರಂಗು. **Staínable** (ಗು.); **Staíner** (ನಾ.); **Staínless** (ಗು.) ಕರೆಯಿಲ್ಲದ; (ರೂಪ.) ನಿಷ್ಕಳಂಕ; (ಉಕ್ಕಿನ ವಿಷಯದಲ್ಲಿ) ತುಕ್ಕು ಹಿಡಿಯದ. **Staínlessly** (ಕ್ರಿ. ವಿ.)

Stair ಸ್ಟೇ(ಅ)ರ್ (ನಾ.) (ಸಾ., ಕಟ್ಟಡದ ಒಳಭಾಗದಲ್ಲಿರುವ ಸೋಪಾನ ಪಂಕ್ತಿಯ ಒಂದು) ಪಾವಟಿಗೆ, ಮೆಟ್ಟಿಲು, ಸೋಪಾನ, ಹಂತ (The top s. but one ಒಂದು ಬಿಟ್ಟು ಕಡೆಯ ಮೆಟ್ಟಿಲು; ಉಪಾಂತ ಸೋಪಾನ); (ಈಗ ಸಾ., ಬ. ವ. ದಲ್ಲಿ) ಮೆಟ್ಟಿಲಸಾಲು [On the stairs ಮೆಟ್ಟಿಲಸಾಲಿನಲ್ಲಿ. Winding s. ಬಳಸು ಮೆಟ್ಟಿಲಸಾಲು, ಸುತ್ತು ಮೆಟ್ಟಿಲಸಾಲು. Flight, pair, of stairs ಒಂದೇ ಸಾಲಿನಲ್ಲಿರುವ ಅಥವಾ ಒಂದು ನೆಲೆಯಿಂದ ಮತ್ತೊಂದು ನೆಲೆಯವರೆಗೆ ಹಾಯ್ದಿರುವ ಮೆಟ್ಟಿಲಸಾಲು: ನೇರ (ಓಟದ) ಮೆಟ್ಟಿಲಸಾಲು. Below stairs (ಸಾ., ಆಳುಕಾಳುಗಳು ವಾಸಮಾಡುವ) ಮನೆಯ ತಳಭಾಗದಲ್ಲಿ, ಕೆಳಗಡೆ (Was coolly discussed below stairs ಆಳುಗಳು ನಿಶ್ಚಿಂತೆಯಾಗಿ ಅದನ್ನು ಚರ್ಚೆಮಾಡುತ್ತಿದ್ದರು)]. Downstairs ಕೆಳ ಮನೆಯಲ್ಲಿ, ಮಹಡಿಯ ಕೆಳಗೆ. Upstairs ಮಹಡಿಯ ಮೇಲೆ, ಉಪ್ಪರಿಗೆಯಲ್ಲಿ. Backstair(s) (Back[1] ನೋಡಿ). **Staírcase** ಮೆಟ್ಟಿಲ ಸಾಲು(ಳ್ಳ ಕಟ್ಟಡದ ಭಾಗ), ಸೋಪಾನ ಪಂಕ್ತಿ (Corkscrew s.-c. ನಡುಗಂಬದ ಸುತ್ತ ಸುತ್ತಿಕೊಂಡು ಹೋಗುವ ಮೆಟ್ಟಿಲು: ಮರಸುತ್ತು ಮೆಟ್ಟಿಲಸಾಲು). **S.-rod** ಮೆಟ್ಟಿಲುಗಳ ಕೋನದಲ್ಲಿ ಜಮಖಾನೆ ಸರಿಯಾಗಿ ಕೂರುವಂತೆ ಹಾಕುವ ಕಂಬಿ: ಮೆಟ್ಟಿಲ ಕಂಬಿ.

Stake ಸ್ಟೇಕ್ (ನಾ., ಕ್ರಿ. ಸಕ.) (ನೆಲದೊಳಕ್ಕೆ ಹೊಡೆಯಲು, ಒಂದು ತುದಿಯನ್ನು ಚೂಪು ಮಾಡಿರುವ) ಕಂಬ, ದಸಿ; ಜೀವ ಸಹಿತ ಸುಟ್ಟು ಹಾಕುವುದಕ್ಕಾಗಿ ಮನುಷ್ಯನನ್ನು ಕಟ್ಟಿಹಾಕುತ್ತಿದ್ದ ಕಂಬ: ಸುಡುಗಂಬ; (ರೂಪ.) ಸುಟ್ಟು ಸಾಯಿಸುವುದು, ಸುಡುಸಾವು (Suffered at the s. ಸುಡುಸಾವಿಗೆ ಸಿಕ್ಕಿದನು); (ಮಂಚಿಗೆಯ ಮೇಲೆ ಎತ್ತರಿಸಿ ಅಳವಡಿಸಿದ) ತವಗದ ಕೆಲಸಗಾರರ ಅಡಿಗಲ್ಲು, ಸ್ಥೂಣ. ಪಂದ್ಯ ಕಟ್ಟಿದವರು ಒಡ್ಡಿದ, ಮು., ಮಧ್ಯಸ್ಥಗಾರನ ಬಳಿ ಇಟ್ಟ, ಹಣ, ಮೊ. ವು: ಪಣ, ಪಂತ, ಬಾಜಿ; (ಬ. ವ. ದಲ್ಲಿ) (ಮು., ಕುದುರೆ ಜೂಜಿನಲ್ಲಿಯ) ಪಣ, ಬಾಜಿ; (ಬ. ವ. ದಲ್ಲಿ) ಬಾಜಿ ಪಂದ್ಯ, ಪಣ ಪಂದ್ಯ (Trial stakes ಪರೀಕ್ಷಾಪಂದ್ಯಗಳು); [Have a s. in the country (ಮು., ಸ್ವತ್ತು, ಬಂಡವಾಳ, ಲಾಭ, ಮೊ. ಕಾರಣಗಳಿಂದ) ನಾಡಿನಲ್ಲಿ ಬಾಧ್ಯತೆ, ಹೊಣೆ, ಆಸ್ಥೆ, ಈಡು, —ಉಳ್ಳವನಾಗಿರು]; (ರೂಪ.) ಯಾವುದಕ್ಕಾಗಿ ಸ್ಪರ್ಧೆ ಅಥವಾ ಹೋರಾಟ ನಡೆಯುತ್ತದೆಯೊ ಅಂತಹ ಆಸ್ತಿ, ತತ್ತ್ವ, ಮೊ. ವು: ಈಡು (Consider the immensity of the s. ಈಡಿನ ಮಹತ್ತ್ವವನ್ನು ಆಲೋಚಿಸು); [At s. ಈಡಿನಲ್ಲಿ, ನಷ್ಟ ಶಂಕೆಯಲ್ಲಿ (Life itself is at s. ಪ್ರಾಣವೇ ಈಡಾಗಿದೆ, ಪ್ರಾಣಕ್ಕೇ ಅಪಾಯ ಶಂಕೆ ಇದೆ). S.-boat (ದೋಣಿ ಪಂದ್ಯ, ಮೊ. ಗಳ ಪಥವನ್ನು ನಿರ್ದಿಷ್ಟಮಾಡುವುದಕ್ಕಾಗಿ) ಲಂಗರು ಹಾಕಿ ನಿಲ್ಲಿಸಿದ ದೋಣಿ: ದಾರಿ ಗುರುತಿನ ದೋಣಿ. Stakeholder ಬಾಜಿ ಪಣವನ್ನು ಮಧ್ಯಸ್ಥಗಾರನಾಗಿ ಇಟ್ಟುಕೊಂಡಿರುವವನು: ಪಣಧಾರಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

S.-net ದನಿಗಳಿಗೆ ತೂಗಕಟ್ಟಿದ ಮಿಾನುಬಲೆ: ದನಿಬಲೆ]. (ಕ್ರಿ.) ಗೂಟ, ಕಂಬ, ದನಿ —ಹೊಡೆ(ದು ಭದ್ರಪಡಿಸು, ಆಧಾರಕೊಡು); —ಹೊಡೆದು ಎಲ್ಲೆ ಗುರುತಿಸು, (ಪ್ರದೇಶವನ್ನು) ವಿಂಗಡಿಸು (*Off*, *out* ಉಪ. ದೊಡನೆ); (ಹಣ, ಮೊ. ನ್ನು) ಪಣವೊಡ್ಡು, ಬಾಜಿ ಕಟ್ಟು (*On* ಉಪ. ದೊಡನೆ)

Staláctite ಸ್ಟಲ್ಯಾಕ್ಟೈಟ್, **Stá-** ಸ್ಟ್ಯಾಲ್ಯ— (ನಾ.) ಗುಹೆ, ಮೊ. ಗಳ ಚಾವಣಿಯಿಂದ ತೂಂಗುವ, ನೀರು ತೊಟ್ಟಿಕ್ಕುತ್ತಿರುವುದರಿಂದ ಉಂಟಾಗುವ, ಸಣ್ಣ ನೀರ್ಗಲ್ಲುಗಡ್ಡೆಯಾಕಾರದ, ಸುಣ್ಣಕಲ್ಲು: ಸುಣ್ಣ ಕಲ್ಲು ತೊಂಗಲು. **Staláctic** (ಗು.) ತೊಟ್ಟಿಕ್ಕುವ ನೀರಿನಿಂದ ಶೇಖರವಾದ; ಸುಣ್ಣಕಲ್ಲು ತೊಂಗಲಿನ. **Staláctiform** (ಗು.) ಸುಣ್ಣಕಲ್ಲು ತೊಂಗಲಾಕಾರದ. **Stalactític** (ಗು.) ಸುಣ್ಣಕಲ್ಲು— ತೊಂಗಲಿನ (ಆಕಾರದ), ತೊಂಗಲುಗಳುಳ್ಳ.

Stalágmite ಸ್ಟಲ್ಯಾಗ್ಮೈಟ್, **Stá-** ಸ್ಟ್ಯಾಲ್ಯ— (ನಾ.) (ಗುಹೆ, ಮೊ. ಗಳ,ನೆಲದಲ್ಲಿ ಕಟ್ಟುವ, ತೊಟ್ಟಿಕ್ಕುವ ನೀರಿನಿಂದುಂಟಾದ) ಸುಣ್ಣ ಕಲ್ಲ ಹೆಪ್ಪು. **Stalagmític** (ಗು.); **Stalagmítically** (ಕ್ರಿ. ವಿ.)

Stale[1] ಸ್ಟೇಲ್ (ಗು., ನಾ., ಕ್ರಿ.) ಹಳಸಿದ, ಹಳಸಲಾದ, ಮುಗ್ಗಿದ, ತಂಗುಳಾದ, ನಿಸ್ಸಾರ, ನೀರಸ (S. bread ಮುಗ್ಗಿದ ರೊಟ್ಟಿ; ತಂಗುಳು ರೊಟ್ಟಿ); (ರೂಪ.) ಹಳೆಯ, ಹಳಸಲಾದ, ಚರ್ವಿತ ಚರ್ವಣ ವಾದ (S. joke, news). (ಜಟ್ಟಿಯ ವಿಷಯದಲ್ಲಿ) ವಿಪರೀತ ಕಸರತ್ತು ಮಾಡಿದ, ಅತಿಶಿಕ್ಷಿತ. (ನಾ.) (ಕುದುರೆ, ದನಕರು, ಮೊ. ಗಳ) ಗಂಜಲ, ಉಚ್ಚೆ. (ಕ್ರಿ.) ಹಳಸಲು —ಮಾಡು, ಆಗು; (ದನ ಕರುಗಳ ವಿಷಯದಲ್ಲಿ) ಉಚ್ಚೆ, ಗಂಜಲ, —ಹೊಯ್ಯಿ. **Stálely** (ಕ್ರಿ. ವಿ.); **Stáleness** (ನಾ.); **Stalemáte** (ನಾ., ಕ್ರಿ. ಸಕ.) (ಚದುರಂಗದ ಆಟದಲ್ಲಿ) ದೊರೆಯನ್ನು ನಡೆಸಿದರೆ ಶಹಾ ಬರುವ, ಬೇರೆ ಯಾವ ಕಾಯನ್ನೂ ನಡಸಲಾಗದ ಇಕ್ಕಟ್ಟಿನ ಸ್ಥಿತಿ (ಉಂಟು ಮಾಡು): ಕಟ್ಟರಸು (ಮಾಡು), ಕಾಯಿಕಟ್ಟು (ಮಾಡು); (ರೂಪ.) ಇಕ್ಕಟ್ಟಿನ ಸ್ಥಿತಿ(ಗೆ ತರು), ಚಲಿಸಲಾಗದಂತೆ ಮಾಡು.

Stale[2] ಸ್ಟೇಲ್ (ನಾ.) (ಪ್ರಾಚೀ. ಪ್ರ.) (ಇತರ ಹಕ್ಕಿಗಳನ್ನು ಬಲೆಗೆ ಬೀಳಿಸಲು ತರಬೇತು ಮಾಡಿದ) ದೀಹದ ಹಕ್ಕಿ. ಮೋಸಕ್ಕೆ ಒಳಗಾದ ವನು, ಬೆಪ್ಪ; ನಗೆಗೀಡಾದವನು.

Stalk[1] ಸ್ಟಾಕ್ (ಕ್ರಿ., ನಾ.) ಗಂಭೀರವಾಗಿ, ಠೀವಿಯಿಂದ, ಗತ್ತಿನಿಂದ, —ನಡೆ, ಹೆಜ್ಜೆಹಾಕು (ಅನೇಕ ವೇಳೆ *along*, ಮೊ. ಉಪ. ದೊಡನೆ); (ಬೇಟೆಯ ಬಳಿಗೆ) ಮರೆಯಲ್ಲಿ ಕದ್ದುಹೋಗು; ಸುಳಿವು ಕೊಡದೆ ಬೇಟೆ ಯನ್ನು ಬೆನ್ನಟ್ಟಿಹೋಗು; [Stalking-horse (ಬೇಟೆಯಲ್ಲಿ: ಮೃಗ ವನ್ನು ವಂಚಿಸುವುದಕ್ಕಾಗಿ ಬೇಟೆಗಾರನು ಮರಸಾಗಿ ಉಪಯೋಗಿಸುವ) (ಬೊಂಬೆ) ಕುದುರೆ; (ರೂಪ.) (ದುರುದ್ದೇಶ ಸಾಧನೆಗೆ ಹೂಡಿದ) ನೆಪ, ವ್ಯಾಜ]. (ನಾ.) ಮರೆಯಲ್ಲಿ, ಸುಳಿವು ಕೊಡದೆ, —ಬೆನ್ನಟ್ಟಿ ಹೋಗುವುದು; ಠೀವಿಯ, ಗತ್ತಿನ, —ನಡಿಗೆ. (-)**stalker** (ನಾ.)

Stalk[2] ಸ್ಟಾಕ್ (ನಾ.) (ಸ. ವಿ.) (ಸಸ್ಯದ) ಕಾಂಡ, ತಾಳು; (ಎಲೆ, ಹೂವು, ಹಣ್ಣು, ಮೊ. ಗಳ) ಕಾವು, ತೊಟ್ಟು, ವೃಂತ; (ಅಂಗದ) ಆಧಾರ ಭಾಗ; ದಂಟು, ದಿಂಡು; (ಪ್ರಾಣಿಗಳ ಅಂಗಗಳಲ್ಲಿ) ಕಾಂಡ ಭಾಗ; (ಮದ್ಯ ಪಾತ್ರೆ, ಮೊ. ಗಳ) ದಿಂಡು; (ವಾ. ಶಾ.) ದಿಂಡಿನ(ಂಥ) ಅಲಂಕಾರ; (ಕಾರಖಾನೆ, ಮೊ. ಗಳ) ಎತ್ತರದ ಹೊಗೆಕೊಳವೆ. S.-eyed (ನಳ್ಳಿ, ಮೊ. ಗಳ ವಿಷಯದಲ್ಲಿ) ಕಾವಿನಮೇಲೆ ಕೂತಂತೆ ಕಾಣುವ ಕಣ್ಣುಗಳುಳ್ಳ; ತೊಟ್ಟುಗಣ್ಣಿನ. (-)**stalked** (ಗು.); **Stálkless** (ಗು.); **Stálklet** (ನಾ.) ಸಣ್ಣ—ತಾಳು, ಕಾವು.

Stall[1] ಸ್ಟಾಲ್ (ನಾ., ಕ್ರಿ.) ಲಾಯ, ಕೊಟ್ಟಿಗೆ, ತಬೇಲ (—ಯಲ್ಲಿಯ ಒಂದು ಅಂಕಣ, ಗೊಂತು) [S.-feed (ದನಗಳನ್ನು) ಕೊಟ್ಟಿಗೆಯಲ್ಲಿ (ಮೇವು ತಿನ್ನಿಸಿ) ಕೊಬ್ಬಿಸು. S.-fed (ಗು.)]; [Finger-s. (Finger ನೋಡಿ)]. (ಮಾರುವ ಕಟ್ಟೆ, ಕಟ್ಟಡ, ಮೊ. ಗಳಲ್ಲಿ) ಗುಡಾರದಂಗಡಿ, ಚಪ್ಪರದಂಗಡಿ, ಅಂಕಣದಂಗಡಿ, ಅಂಗಡಿಖಾನೆ, ಮಳಿಗೆ. (ಅಂಗಡಿಖಾನೆ ಯಲ್ಲಿ) ಸರಕು ಇಟ್ಟಿರುವ ಮಂಚಿಗೆ, ಗಡಗಂಚಿ (Picked it up in, on, a book-s. ಅದನ್ನು ಪುಸ್ತಕದ ಅಂಗಡಿಯಲ್ಲಿ, ಅಂಗಡಿಯ ಗಡಗಂಚಿಯಲ್ಲಿ, ತೆಗೆದುಕೊಂಡೆನು); (ಕ್ರೈಸ್ತ ಆರಾಧನ ಮಂದಿರದಲ್ಲಿ) ಪೂರ್ವ ದಿಕ್ಕಿನ ಭಾಗದಲ್ಲಿ, ಮು., ಪುರೋಹಿತರಿಗೆ ಮಿಾಸಲಾಗಿಟ್ಟಿರುವ, ಪಕ್ಕಗಳಲ್ಲೂ ಹಿಂಭಾಗದಲ್ಲೂ ಆವರಣ ಹಾಕಿ ಮೇಲ್ಕಟ್ಟುಳ್ಳ, ಸ್ಥಿರ ಆಸನ: ಪುರೋಹಿತ ಪೀಠ [Dean's s. ಡೀನಿನ ಪೀಠ; (ರೂಪ.) —ಪದವಿ, ಅಧಿಕಾರ (How long has he had his s.? ಅವನ ಅಧಿಕಾರ ಎಷ್ಟು ಕಾಲ ನಡೆಯಿತು?)]; (ನಾಟಕಶಾಲೆಯಲ್ಲಿ ಸಾ., ಕುಳಿಯ) ಮುನ್ಸಾಲಿನ —ಕುರ್ಚಿ, ಪೀಠ; (ಕಲ್ಲಿದ್ದಲ ಗಣಿಯಲ್ಲಿ) ಕೆಲಸದ ಅಂಕಣ. (ಕ್ರಿ.) (ದನಗಳನ್ನು, ಮು., ಪುಷ್ಟಿಯಾಗಿ ಬೆಳಸುವುದಕ್ಕಾಗಿ) ಕೊಟ್ಟಿಗೆಗೆ ಹಾಕು (Stalled ox ಕೊಟ್ಟಿಗೆಯಲ್ಲಿ ಕೊಬ್ಬಿಸಿದ ಎತ್ತು); (ಲಾಯದಲ್ಲಿ) ಅಂಕಣಗಳನ್ನು, ಗೊಂತುಗಳನ್ನು, —ಏರ್ಪಡಿಸು; (ಕುದುರೆಯ ಅಥವಾ ಬಂಡಿಯ ವಿಷಯದಲ್ಲಿ; ಬದಿಯಲ್ಲಿಯಂತೆ ಅಥವಾ ಮಂಜಿನಲ್ಲಿಯಂತೆ) ಹೂತುಕೊ, ಹೂತುಹೋಗು; (ಮೋಟಾರಿನ ಎಂಜಿನು) ಕೆಲಸಮಾಡದೆ ನಿಂತುಹೋಗು; (ವಿಮಾನದ ಅಥವಾ ವಿಮಾನ ಚಾಲಕನ ವಿಷಯದಲ್ಲಿ; ವೇಗ ನಷ್ಟದಿಂದ) ಅಸ್ಥಿರವಾಗು, ಬಿದ್ದುಹೋಗುವಂತಾಗು, (ಅಸ್ಥಿರವಾಗುವಷ್ಟು) ವೇಗ ಕಡಮೆಯಾಗಿ ಬಿಡು. **Stállage** ಸ್ಟಾಲೆ(ಲ)ಜ್ (ಗು.) ಅಂಗಡಿಖಾನೆಯ, ಮಳಿಗೆಯ, —ಬಾಡಿಗೆ, ಜಾಗ; ಮಳಿಗೆ ಕಟ್ಟಿಕೊಳ್ಳುವ ಹಕ್ಕು.

Stall[2] ಸ್ಟಾಲ್ (ನಾ.) ಜೇಬುಗಳ್ಳನು ಗಂಟು ಹಾರಿಸುವುದಕ್ಕೂ ಆಮೇಲೆ ತಪ್ಪಿಸಿಕೊಳ್ಳುವುದಕ್ಕೂ ಅನುಕೂಲವಾಗುವಂತೆ ಕಳವಿಗೆ ಗುರಿಯಾದವನ ಗಮನವನ್ನು ಬೇರೆ ಕಡೆ ಸೆಳೆದು ಸಹಕಾರಿಯಾದವನು: ಜೇಬುಗಳ್ಳನ —ಸಹಾಯಕ, ಪಾಮಿಾಲು.

Stállage. **Stall**[1] ನೋಡಿ.

Stállion ಸ್ಟ್ಯಾಲ್ಯನ್ (ನಾ.) (ಮು., ತಳಿಯೆಬ್ಬಿಸಲು ಇಟ್ಟುಕೊಂಡಿರುವ) ಬೀಜದ ಕುದುರೆ.

Stálwart ಸ್ಟಾಲ್‌ವರ್ಟ್ (ಗು., ನಾ.) ಬಲವಾದ ಮೈಕಟ್ಟಿನ, ಗಟ್ಟಿ ಮುಟ್ಟಾದ, ಕಟ್ಟುಮಸ್ತಾದ, ಬಲಿಷ್ಠ; ಧೈರ್ಯದ, ಸ್ಥೈರ್ಯದ, ಸ್ಥಿರ (S. supporters ಪ್ರಬಲ ಬೆಂಬಲಕಾರರು). (ನಾ.) ಕಟ್ಟಾಳು, ಜಟ್ಟಿ, ಬಲಿಷ್ಠ, ಧೀರ; (ರಾಜಕೀಯ) ಬಲಿಷ್ಠನಾದ ಪಕ್ಷ ಪ್ರವರ್ತಕ, ಪಕ್ಷದ ಜಟ್ಟಿ. **Stálwartly** (ಕ್ರಿ. ವಿ.); **Stálwartness** (ನಾ.)

Stámen ಸ್ಟೇಮೆನ್ (ನಾ.) ಹೂವುಗಿಡದ ಪುರುಷಾಂಗ; (ಪುಷ್ಪ) ಕೇಸರ. (-)**stamened** (ಗು.); **Stáminal**[1] ಸ್ಟ್ಯಾಮಿನಲ್ (ಗು.) ಕೇಸರಗಳ. **Stáminate** —ನೆಟ್ (ಗು.) (ಶಲಾಕೆಗಳಿಲ್ಲದೆ) ಕೇಸರಗಳು ಮಾತ್ರವಿರುವ. **Stamíneal** ಸ್ಟಮಿನಿಯಲ್ (ಗು.); **Stamíneous** ಸ್ಟಮಿನಿಯಸ್ (ಗು.) ಕೇಸರಗಳ, ಕೇಸರಗಳುಳ್ಳ. **Staminíferous** ಸ್ಟ್ಯಾ— (ಗು.) ಕೇಸರವುಳ್ಳ, ಕೇಸರಧಾರಿ.

Stámina ಸ್ಟ್ಯಾಮಿನ (ನಾ.) (ಕಷ್ಟವನ್ನು, ಏಟನ್ನು) ತಡೆದುಕೊಳ್ಳುವ ಶಕ್ತಿ, ದಾರ್ಢ್ಯ, ಸತ್ತ್ವ, ತಾಕತ್ತು. **Stáminal**[2] (ಗು.) ಸತ್ತ್ವದ.

Stáminal[1]. **Stamen** ನೋಡಿ.

Stáminal[2]. **Stamina** ನೋಡಿ.

Stámmer ಸ್ಟ್ಯಾಮರ್ (ಕ್ರಿ., ನಾ.) (ಸ್ವಾಭಾವಿಕವಾಗಿ ಅಥವಾ ಉದ್ರೇಕ ದಿಂದ) ಬಿಕ್ಕುತ್ತ, ಉಗ್ಗುತ್ತ, ನತ್ತಿ, —ಮಾತಾಡು, ಹೇಳು (Stammered out an excuse). (ನಾ.) ಉಗ್ಗು, ಬಿಕ್ಕಲು, ನತ್ತು. **Stámmerer** (ನಾ.); **Stámmeringly** (ಕ್ರಿ. ವಿ.)

Stamp ಸ್ಟ್ಯಾಂಪ್ (ಕ್ರಿ., ನಾ.) (ಲೋಹ, ಕಾಗದ, ಬೆಣ್ಣೆ, ಮೊ. ಗಳ ಮೇಲೆ ಹೆಸರು, ಗುರುತು, ಮೊ. ನ್ನು) ಮುದ್ರೆಯೊತ್ತು, ಠಸ್ಸೆಹಾಕು, ಅಚ್ಚೊತ್ತು, ಛಾಪಿಸು; (ಲಕೋಟೆಗೆ, ದಸ್ತಾವೇಜಿಗೆ) ಅಂಚೆಚೀಟಿ, ತಲೆಚೀಟಿ, ಸ್ಟಾಂಪು—ಹಚ್ಚು, ಅಂಟಿಸು; (ಅದುರು, ಮೊ. ನ್ನು) ಪುಡಿ ಮಾಡು, ಜಜ್ಜು; (ನೆಲದಮೇಲೆ) ಪಾದದಿಂದ ಕುಟ್ಟು, ಅಜ್ಜಿ ಬಜ್ಜಿಯಾಗು ವಂತೆ ತುಳಿ [S. out (ದಂಗೆ ಮೊ. ನ್ನು) ತುಳಿದುಹಾಕು, ಹುಟ್ಟಡಗಿಸು, ನಿರ್ನಾಮಮಾಡು]; ವೈಶಿಷ್ಟ್ಯ, ವಿಶೇಷ ಲಕ್ಷಣ, —ಕೊಡು [This

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

alone stamps the story (as) a slander ಇದೊಂದೇ ಆ ಕಥೆಗೆ ಅಪನಿಂದೆಯ ಲಕ್ಷಣವನ್ನು ಕೊಡುತ್ತದೆ]. ನೆನಪಿನಮೇಲೆ ಅಚ್ಚೊತ್ತು, ನಾಟಿಸು (*On* ಉಪ. ದೊಡನೆ). (ನಾ.) ಹೆಸರು, ಗುರುತು, ಮೊ. ನ್ನು ಮುದ್ರೆಯೊತ್ತುವ ಸಲಕರಣೆ; ಇದರಿಂದ ಒತ್ತಿ ಆದ ಗುರುತು, ಮೊ.ವು; ಸರಕಿನ ಖಾತರಿ ಬಗ್ಗೆ ಒತ್ತುವ ಗುರುತು, ಹಚ್ಚುವ ಚೀಟಿ: ಮುದ್ರೆ, ಠಸ್ಸೆ, ಥಾಪೆ; (ತೆರ ಪಾವತಿಯಾಗಿರುವ ಬಗ್ಗೆ ಅಂಚೆಯ ಕಾಗದ, ದಸ್ತಾವೇಜು, ರಸೀತಿ, ಮೊ. ಗಳಿಗೆ ಹಚ್ಚುವ) ಅಂಚೆ, ತಲೆ, —ಚೀಟಿ; ಸ್ಟಾಂಪು. (ರೂಪ.) ವಿಶಿಷ್ಟ ಚಿಹ್ನೆ, ಗುರುತು, ಮುದ್ರೆ (Bears the s. of genius ಪ್ರತಿಭಾವಂತನ ಚಿಹ್ನೆ, ಮುದ್ರೆ, ಇದೆ); ಸ್ವಭಾವ, ಲಕ್ಷಣ, ಬಗೆ (Avoid men of that *or* his s.). (ಅದುರು ಪುಡಿಮಾಡುವ ಯಂತ್ರದಲ್ಲಿ) ಒನಕೆ, ಮುಸಲ, ಕುಟ್ಟಣಿಗೆ; (ನೆಲದಮೇಲೆ) ಪಾದದಿಂದ ಕುಟ್ಟುವುದು, ಕಾಲ ತುಳಿತ; ಪಾದಾಘಾತ. **S. act** ಸ್ಟಾಂಪು ತೆರಿಗೆಯ—ಕಾನೂನು, ಶಾಸನ (ಮು., ಅಮೆರಿಕದ ನೆಲಸು ನಾಡುಗಳ ಮೇಲೆ ಇಂಗ್ಲೆಂಡು ೧೭೬೫ರಲ್ಲಿ ಹಾಕಿದ ಮತ್ತು ೧೭೬೬ರಲ್ಲಿ ತೆಗೆದುಬಿಟ್ಟ ಸ್ಟಾಂಪು ತೆರಿಗೆಯ ಕಾನೂನು). **S.-collector** (ಅಪೂರ್ವ ವಸ್ತು ಸಂಗ್ರಹಣದ ಉದ್ದೇಶದಿಂದ) ಅಂಚೆಚೀಟಿಗಳನ್ನು ಕೂಡಹಾಕುವವನು: ಸ್ಟಾಂಪು ಸಂಗ್ರಾಹಕ. **S.-duty** (ದಸ್ತಾವೇಜುಗಳಿಗೆ ಕಾನೂನು ಮೇರೆಗೆ ಹಾಕಿದ) ಸ್ಟಾಂಪು ತೆರಿಗೆ. **S.-machine** ಕಾಗದ ತಯಾರಿಸುವುದಕ್ಕಾಗಿ ಚಿಂದಿ, ಮೊ. ನ್ನು ತಿಳ್ಳುಮಾಡುವ ಯಂತ್ರ: ತಿಳ್ಳು ಕುಟ್ಟಣಿಗೆ. **S.-mill** (ಅದುರು, ಮೊ. ನ್ನು) ಪುಡಿಮಾಡುವ ಯಂತ್ರ, ಕುಟ್ಟು ಯಂತ್ರ, ಚೂರ್ಣಕ. **S.-office** ಸರ್ಕಾರದ ಸ್ಟಾಂಪುಗಳನ್ನು ಚಲಾವಣೆ ಮಾಡುವುದು, ಸ್ಟಾಂಪು ತೆರಿಗೆಗಳನ್ನು ವಸೂಲು ಮಾಡುವುದು, ಮೊ. ಕೆಲಸಗಳುಳ್ಳ ಕಚೇರಿ: ಸ್ಟಾಂಪು ಕಚೇರಿ. (-)**stámper** (ನಾ.)

Stampéde ಸ್ಟ್ಯಾಂಪೀಡ್ (ನಾ., ಕ್ರಿ.) (ಕುದುರೆ, ದನಕರು, ಮೊ. ಗಳ ತಂಡ) ಇದ್ದಕ್ಕಿದ್ದಹಾಗೆ ಬೆದರಿ ದಿಕ್ಕುಪಾಲಾಗಿ ಓಡುವುದು; ತಟ್ಟನೆಯ ಬೆದರೋಟ; (ಸೈನ್ಯ, ಜನರ ಗುಂಪು, ಮೊ. ವು) ಗಾಬರಿಯಾಗಿ ಚೆಲ್ಲಾಪಿಲ್ಲಿ ಓಡುವುದು; ದಿಕ್ಕೆಟ್ಟ —ಓಟ, ಪಲಾಯನ; ಚೆದರೋಟ; (ಅಮೆ. ಸಂ. ರಾಜಕೀಯ) ಮುನ್ ಗೊತ್ತುಪಾಡಿಲ್ಲದೆ ಸಾಮಾನ್ಯ ಪ್ರೇರಣೆಯಿಂದ ಒಬ್ಬ ಉಮೇದುವಾರನಿಗೆ ಮತಗಳನ್ನು (ವೋಟುಗಳನ್ನು) ಕೊಡಲು ಒಂದು ಸಂಘದವರು ಗುಂಪು ಕಟ್ಟಿಕೊಂಡು ನುಗ್ಗುವುದು: ವೋಟುದಾರರ ಧರಾಟಿ ನುಗ್ಗು; ಹೀಗೆ ಗುಂಪು ಕಟ್ಟಿಕೊಂಡು ಕಾರ್ಯ ಕೈಕೊಳ್ಳುವುದು, ನುಗ್ಗುವುದು: ಧರಾಟಿಯ ನುಗ್ಗು (S. to the gold regions). (ಕ್ರಿ.) ಚೆದರೋಡಿಸು, ದಿಕ್ಕೆಟ್ಟು ಪಲಾಯನ ಮಾಡಿಸು; ಚೆದರೋಡು, ದಿಕ್ಕೆಟ್ಟು ಪಲಾಯನ ಮಾಡು; ಧರಾಟಿಯ ನುಗ್ಗುಂಟುಮಾಡು.

Stance ಸ್ಟ್ಯಾನ್ಸ್ (ನಾ.) (ಗಾಲ್ಫ್, ಕ್ರಿಕೆಟ್) ಚೆಂಡು ಹೊಡೆಯುವುದಕ್ಕೆ ನಿಂತ ನಿಲುವು.

Stanch[1], **Staunch**[1] ಸ್ಟಾಂಚ್(ಷ್) (ಕ್ರಿ. ಸಕ.) (ದೇಹದಿಂದ, ಗಾಯದಿಂದ, ಮು., ರಕ್ತದ) ಹರಿವನ್ನು, ಪ್ರವಾಹವನ್ನು, —ತಡೆ, ರೋಧಿಸು.

Stanch[2]. **Staunch**[2] ನೋಡಿ.

Stánchion ಸ್ಟಾನ್ಷನ್ (ನಾ., ಕ್ರಿ. ಸಕ.) (ಹಡಗಿನ ಅಟ್ಟ, ರಟ್ಟು ಚಾವಣಿ, ಮೊ. ಗಳಿಗೆ ಆಧಾರವಾಗಿ ಉಪಯೋಗಿಸುವಂಥ) ಕಂಬ, ಊರೆ(ಗಂಬ), ಆಧಾರ(ಸ್ತಂಭ); ಗೊಂತಿನಲ್ಲಿ ದನ ಕಟ್ಟಲು ಹಾಕಿರುವ (ಜೋಡಿ) ನಿಲುಗಂಬಿ: ಗೊಂತುಕಂಬಿ. (ಕ್ರಿ.) ಕಂಬ, ಊರೆ, —ಒದಗಿಸು, ಕೊಡು; (ದನವನ್ನು) ಗೊಂತುಕಂಬಿಗೆ ಕಟ್ಟು.

Stand ಸ್ಟ್ಯಾಂಡ್ (ಕ್ರಿ.; ಭೂತ., ಭೂ. ಕೃ. Stood) (ನೆಟ್ಟಗೆ) ನಿಲ್ಲು, ನಿಂತುಕೊ, ನಿಂತಿರು [S. at ease (Ease ನೋಡಿ). S. easy (Ease ಕೆಳಗೆ Easy ನೋಡಿ). S. in person's light (Light[2] ನೋಡಿ). S. in the breach (Breach ನೋಡಿ). Hair stands on end (Hair ನೋಡಿ)]; (ಗೊತ್ತಾದ) ಎತ್ತರವಾಗಿರು (Stands six foot three ೬ ಅಡಿ ೩ ಅಂಗುಲ ಎತ್ತರವಾಗಿ ಇದೆ); ಇರು (The cups s. on the top shelf); ಕದಲದಿರು, ಇದ್ದಲ್ಲಿ ಇರು, ಉಳಿ [S. still ಕದಲದೆ ನಿಂತಿರು. S. (and deliver)! (ದಾರಿಗಳ್ಳನ ಆಜ್ಞೆ): ನಿಲ್ಲು, ಸುಮ್ಮನೆ ಒಪ್ಪಿಸಿಬಿಡು!]. ಭದ್ರವಾಗಿ, ಬೀಳದೆ, —ಇರು, ನಿಂತಿರು; ನಿಂತಿರು, ನೆಲಸಿರು [Don't s. there arguing ವಾದಿಸುತ್ತ ಅಲ್ಲಿ ನಿಂತುಕೊಳ್ಳಬೇಡ. House will s. another century ಮನೆ ಇನ್ನು ನೂರು ವರ್ಷ ಭದ್ರವಾಗಿ ನಿಂತಿರುತ್ತದೆ. S. or fall (ಅನೇಕ ವೇಳೆ ರೂಪ.; ಒಬ್ಬನ ಅಥವಾ ಒಂದರ ಆಗು ಹೋಗುಗಳು ಮತ್ತೊಬ್ಬನ ಅಥವಾ ಮತ್ತೊಂದರ ಆಗು ಹೋಗುಗಳನ್ನು ಅವಲಂಬಿಸಿವೆ ಎಂದು ಸೂಚಿಸುವಲ್ಲಿ): —ಒಡನೆ ಉದ್ಧಾರವಾಗು ಇಲ್ಲ ಪತನವಾಗು (*With* person, *together*, *by* a rule, etc.). S. on one's own bottom (Bottom ನೋಡಿ). S. fast, firm ಗಟ್ಟಿಯಾಗಿ, ದೃಢವಾಗಿ, —ನಿಂತಿರು. All standing (ನಾವೆ ಮತ್ತು ರೂಪ.) ಪಟಗಳನ್ನು ಇಳಿಸುವುದಕ್ಕೆ ಅಥವಾ ಸಿದ್ಧಮಾಡಿಕೊಳ್ಳುವುದಕ್ಕೆ ಕಾಲವಿಲ್ಲದೆ, ಅವಕಾಶವಿಲ್ಲದೆ; ಪಟಗಳು ನಿಂತಹಾಗೆಯೆ; (ರೂಪ.) ಉಡುಪುಹಾಕಿಕೊಂಡೆ, ಪೋಷಾಕಿನಲ್ಲೆ. It stands to reason ಅದು ನ್ಯಾಯಸಮ್ಮತವಾಗಿದೆ, ನ್ಯಾಯ ಪರೀಕ್ಷೆಗೆ ನಿಲ್ಲುತ್ತದೆ]. ಅನ್ವಯಿಸು, (ಬದಲಾವಣೆಯಾಗದೆ) ಇರು, ಊರ್ಜಿತವಾಗು [The former conditions may s. ಹಿಂದಿನ ಷರತ್ತುಗಳು ಹಾಗೆಯೆ ಇರಬಹುದು. The passage must s. ಆ ವಾಕ್ಯ(ವೃಂದ) ಇದ್ದೇ ಇರಬೇಕು. The same remark stands good ಅದೇ ಟೀಕೆ ಈಗಲೂ ಅನ್ವಯಿಸುತ್ತದೆ]; (ಒಂದು ಸ್ಥಿತಿ, ಮೊ. ರಲ್ಲಿ) ಇರು [S. in need of help ಸಹಾಯ ಬೇಕಾಗಿರು. I s. corrected ತಿದ್ದುಗೆಯನ್ನು, ತಿದ್ದುಪಾಟನ್ನು, —ಒಪ್ಪಿಕೊಳ್ಳುತ್ತೇನೆ. Thermometer stood at 90° ಶಾಖಮಾಪಕ ೯೦° ತೋರಿಸಿತು. Corn stands higher than ever ಧಾನ್ಯ ಎಂದಿಗಿಂತಲೂ ತುಟ್ಟಿಯಾಗಿದೆ. Stands first on the list ಪಟ್ಟಿಯಲ್ಲಿ ಮೊದಲನೆಯದಾಗಿದೆ. Stands well with the authorities ಅಧಿಕಾರಿಗಳೊಡನೆ ಸೌಹಾರ್ದವಾಗಿದ್ದಾನೆ, ಅಧಿಕಾರಿಗಳಿಗೆ ಬೇಕಾದವನಾಗಿದ್ದಾನೆ. How do we s. in the matter of horses? ನಮಗೆ ಬೇಕಾದಷ್ಟು, ತಕ್ಕ, ಕುದುರೆಗಳು ಇವೆಯೊ? Have often stood his friend ಅನೇಕ ವೇಳೆ ಅವನಿಗೆ ಸ್ನೇಹಿತನಾಗಿ ನಡೆದುಕೊಂಡಿದ್ದೇನೆ. S. at bay (Bay[3] ನೋಡಿ)]; ಸರಿ(ದು ನಿಲ್ಲು) [S. back, clear, aside, aloof, away ಹಿಂದಕ್ಕೆ, ದಾರಿಬಿಟ್ಟು, ಪಕ್ಕಕ್ಕೆ, ದೂರ, —ಸರಿ(ದು ನಿಲ್ಲು)]; (ನಾವೆ) (ಗೊತ್ತಾದ) ಮಾರ್ಗ ಹಿಡಿ (S. in for the shore ತೀರದ ಕಡೆಗೆ ಹೊರಟಿರು); (ನಾಯಿಯ ವಿಷಯದಲ್ಲಿ) ಬೇಟೆಯನ್ನು ತೋರಿಸು(ತ್ತ ನಿಂತುಕೊ); (ಗೊತ್ತಾದ ರೀತಿ) ನಿಲ್ಲಿಸು, ಇಡು, ಇರಿಸು [S. it against the wall ಗೋಡೆಗೆ ಒರಗಿಸಿ ನಿಲ್ಲಿಸು, ಇಡು. Shall s. you in the corner (ಶಿಕ್ಷೆಯಾಗಿ) ನಿನ್ನನ್ನು ಮೂಲೆಯಲ್ಲಿ ನಿಲ್ಲಿಸುತ್ತೇನೆ]; ತಡೆ, ತಾಳು, ತಾಳಿಕೊ, ಸಹಿಸು, ಅನುಭವಿಸು [How does he s. pain? ಅವನು ನೋವನ್ನು ಹೇಗೆ ತಡೆಯುತ್ತಾನೆ? Can never s. the fellow ಅವನನ್ನು ಎಂದೂ ಸಹಿಸಲಾರೆ. S. fire (ಹಿಮ್ಮೆಟ್ಟದೆ, ಶತ್ರು ಪಕ್ಷದ) ಗುಂಡಿನ ಹೊಡೆತವನ್ನು ತಾಳಿಕೊ, ಸಹಿಸು. Failed to stand the test ಪರೀಕ್ಷೆಯಲ್ಲಿ —ನಿಲ್ಲಲಿಲ್ಲ, ಬಿದ್ದುಹೋಯಿತು. S. one's ground (Ground[1] ನೋಡಿ). S. one's trial (ನ್ಯಾಯಸ್ಥಾನದಲ್ಲಿ) ವಿಚಾರಣೆಗೆ ಗುರಿಯಾಗಿರು. S. a good chance (Chance ನೋಡಿ)]; ತನ್ನ ವೆಚ್ಚದಲ್ಲಿ —ಕೊಡಿಸು, ಒದಗಿಸು (Stood him a drink ತನ್ನ ವೆಚ್ಚದಲ್ಲಿ ಅವನಿಗೆ ಮದ್ಯಪಾನ ಕೊಡಿಸಿದನು. Who is going to s. treat?). **Stánding** (ನಾ., ಗು.) (ಕ್ರಿಯಾರ್ಥಗಳಲ್ಲಿ); ಗಣನೆ, ಗಣ್ಯತೆ, ಪದವಿ, ಸ್ಥಾನ(ಮಾನ) (Men of high s. ಗಣ್ಯ ಮನುಷ್ಯರು. Is of no s. ಗಣ್ಯನಲ್ಲ); ಕಾಲಾವಧಿ, ಕಾಲ (A dispute of long s. ಬಹಳ ಕಾಲದ ವ್ಯಾಜ್ಯ); (S.-room ನಿಂತುಕೊಳ್ಳಲು, ನಿಲ್ಲಲು, —ಸ್ಥಳ, ಅವಕಾಶ; ನಿಲ್ಲೆಡೆ). (ಗು.) (ಕ್ರಿಯಾರ್ಥಗಳಲ್ಲಿ); ತತ್ಕಾಲಕ್ಕೆ ಮಾಡಿದ್ದು, ಏರ್ಪಡಿಸಿದ್ದು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

—ಅಲ್ಲದ : ನೆಲೆಯಾದ, ಸ್ಥಾಪಿತ, ಸ್ಥಿರ, ಸ್ಥಾಯಿ, ಕಾಯಂ [A s. rule ಸ್ಥಾಯೀ ನಿಯಮ. A s. jest ನಿತ್ಯ ಪರಿಹಾಸ ವಿಷಯ, ದಿನ ಬಳಕೆಯ ಹಾಸ್ಯ. S. army ಕಾಯಂ ಸೈನ್ಯ. S. orders (ಮು., ಪಾರ್ಲಿಮೆಂಟಿನಲ್ಲಿ ಕಾರ್ಯ ನಡೆಯಬೇಕಾದ ವಿಧಾನವನ್ನು ಕುರಿತ) ಕಾಯಂ ಆಜ್ಞೆಗಳು, ಸ್ಥಾಯೀ ವಿಧಿಗಳು]. S. rigging ಯಾವಾಗಲೂ ಕಟ್ಟಿರುವ ಕೂವೆಯ ಹಗ್ಗಗಳು : ನೆಲೆ, ಕಾಯಂ, —ಹಗ್ಗಹೊರಜಿಗಳು. S. corn (ಹೊಲದಲ್ಲಿ) ನಿಂತ—ಬೆಳೆ, ಪೈರು. S. jump (ಓಡಿಬಂದು ಜೋಕು ತೆಗೆದುಕೊಳ್ಳದೆ) ನಿಂತೆಡೆಯಿಂದಲೆ ಹಾರುವುದು, ನಿಂತ ನೆಗೆತ. S. water ನಿಂತ ನೀರು.

S. by ಸಮರ್ಥಿಸು, ಪಕ್ಷ ವಹಿಸು, ಅವಲಂಬನೆ ಕೊಡು, ಸಹಾಯ ವಾಗಿರು; (ಷರತ್ತು, ವಾಗ್ದಾನ, ಮೊ. ನ್ನು) ಬಿಡದೆ ನಡೆಸು, ಪಾಲಿಸು ; (ನಾವೆ) (ಲಂಗರು, ಮೊ. ನ್ನು) ಹಿಡಿದುಕೊ(ಳ್ಳಲು ಸಿದ್ಧವಾಗಿರು). ಹತ್ತಿರ—ನಿಲ್ಲು, ನಿಂತುಕೊ; ನಿಂತು ನೋಡುತ್ತಿರು (Will not s. by and see him ill-treated); (ಹಿಂದೆ ನಾವಿಕ ಪ್ರ.) ಸಿದ್ಧ ವಾಗಿರು, ಹುಷಾರಾಗಿರು. S.-by (ಕಷ್ಟಕ್ಕೆ, ಸಮಯಕ್ಕೆ, —ಆದಾನು, ಆದೀತು ಎಂದು) ಒಬ್ಬನು ನೆಚ್ಚಿರುವ ವ್ಯಕ್ತಿ, ವಸ್ತು: ಅವಲಂಬ, ಕೈಗಾವಲು ; ಸಹಾಯಕ, ಪಕ್ಷೀಯ. S. down (ನ್ಯಾಯಸ್ಥಾನದ ಸಾಕ್ಷಿಕಟ್ಟೆಯಿಂದ : ಸಾಕ್ಷ್ಯ ನುಡಿದು) ಕೆಳಕ್ಕಿಳಿ(ದುಹೋಗು); (ವ್ಯಾಯಾಮ ಕ್ರೀಡೆ: ಆಟದಿಂದ, ಪಂದ್ಯದಿಂದ) ಬಿಟ್ಟು ವಾಪಸಾಗು ; (ತಾನು ಸೇರಿರುವ ಆಟಗಾರರ ತಂಡ, ಮೊ. ರಲ್ಲಿ, ಪಕ್ಷದಲ್ಲಿ) ಸ್ಥಾನವನ್ನು ಬಿಟ್ಟುಕೊಡು. S. for ಸೂಚಿಸು, ಸಂಕೇತವಾಗಿರು, ಅರ್ಥವುಳ್ಳದ್ದಾಗಿರು (P. O. stands for postal order); ಪ್ರತಿನಿಧಿಯಾಗಿರು, (ಒಂದರ) ಸ್ಥಾನದಲ್ಲಿರು ; (ಅಧಿಕಾರಸ್ಥಾನ, ಶಾಸನ ಸಭೆಯ ಸದಸ್ಯತ್ವ, ಮೊ. ಕ್ಕೆ) ಅಭ್ಯರ್ಥಿಯಾಗು, ಉಮೇದುವಾರನಾಗಿರು, ಚುನಾವಣೆಗೆ ನಿಲ್ಲು ; ಪಕ್ಷ ವಹಿಸು, ಸಮರ್ಥಿಸು (S. for free trade). S. in ಬೆಲೆಯಾಗು, ಖರ್ಚು ಬೀಳು, ಹಿಡಿ (The coat stood me in £4 ಅಂಗಿಗೆ ೪ ಪೌಂಡು ನನಗೆ ಹಿಡಿಯಿತು, ಬಿತ್ತು. Wife stands him in £ 50 yearly for motor tires ಅವನ ಹೆಂಡತಿಯಿಂದ ಅವನಿಗೆ ಪ್ರತಿವರ್ಷ ಮೋಟಾರು ಚಕ್ರದ ಪಟ್ಟೆಗಳಿಗೆ ೫೦ ಪೌಂಡು ಖರ್ಚಾಗುತ್ತದೆ). S. in good stead (Stead ನೋಡಿ). S. in with (ಒಡನೆ) ಸಹಭಾಗಿಯಾಗಿರು, ಸಂಚಿನಲ್ಲಿ ಸೇರಿರು; ಸೌಹಾರ್ದದಿಂದಿರು. S. off ದೂರ—ಸರಿ, ನಿಲ್ಲು. S. off and on (ನಾವೆ) (ಒಂದು ಸ್ಥಳವನ್ನು ದೃಷ್ಟಿಯಲ್ಲಿಟ್ಟಿರು ವುದಕ್ಕಾಗಿ) ತೀರದಿಂದ ದೂರಕ್ಕೂ ಹತ್ತಿರಕ್ಕೂ ಎಡೆಯಾಡುತ್ತಿರು. S. on ಚಾಚೂ ತಪ್ಪದೆ ಅನುಸರಿಸು; —ಅನುಸರಿಸಬೇಕೆಂದು ಒತ್ತಾಯ ಮಾಡು, ಹಟ ಹಿಡಿ [S. on ceremony (Ceremony ನೋಡಿ)] ; (ನಾವೆ) ಅದೇ ಮಾರ್ಗದಲ್ಲಿ—ಮುಂದುವರಿ, ಹೋಗು. S. out (ಗೋಷ್ಠಿ, ಆಟ, ಒಟ್ಟಿನ ಕೆಲಸ, ಮೊ. ಗಳಲ್ಲಿ ಬೆರೆಯದೆ) ಬೇರೆ ನಿಲ್ಲು. ಪಟ್ಟಾಗಿ —ಎದುರಿಸು, ಹಿಡಿದಿರು, ನಿಂತುಬಿಡು (*Against* ಉಪ. ದೊಡನೆ); ಪ್ರಮುಖವಾಗಿರು, ಎದ್ದುಕಾಣು, ಸ್ಪಷ್ಟವಾಗಿ ತೋರು. S. over ಮುಂದಕ್ಕೆ ಹಾಕಲ್ಪಟ್ಟಿರು, ತಳ್ಳಿಡಲ್ಪಟ್ಟಿರು. S. to (ವಾಗ್ದಾನ, ಮೊ. ನ್ನು) ಬಿಡದೆ ನಡೆಸು, ಪಾಲಿಸು ; (ಸ್ಥಾನ, ಮೊ. ನ್ನು) ಬಿಟ್ಟು ಕದಲದಿರು, ಪಟ್ಟಾಗಿ ಹಿಡಿದಿರು [S. to it ದೃಢವಾಗಿ, ಪಟ್ಟಾಗಿ, —ಹಿಡಿದಿರು, ಹೋರಾಡು, ಸಮರ್ಥಿಸು. S. to sea (ನಾವೆ) ಸಮುದ್ರದಮೇಲೆ ಸಂಚಾರ ಹೊರಡು] ; S. to (ಪ್ರಾಚೀ. ಪ್ರ.) ಕೆಲಸಕ್ಕೆ —ತೊಡಗು, ಕೈ ಹಚ್ಚು. S. to win, lose (ಖಂಡಿತವಾಗಿ) ಲಾಭ ಬರುವಂತೆ, ನಷ್ಟವಾಗುವಂತೆ, ಇರು ; ಗೆಲ್ಲಲಿರು, ಸೋಲಲಿರು. S. up ಎದ್ದು ನಿಂತುಕೊ, ನೆಟ್ಟಗೆ ನಿಲ್ಲು. S. up for (ವ್ಯಕ್ತಿ, ಮೊ. ಗಳ) ಪಕ್ಷ ವಹಿಸು, ಪರವಾಗಿ ಹೋರಾಡು ; ಸಮರ್ಥನೆ ಮಾಡು. S. upon =S. on. S. up to (ಪ್ರತಿ ಪಕ್ಷದವನನ್ನು) ಧೈರ್ಯವಾಗಿ, ಸರಿಸಮ ನಾಗಿ, —ಎದುರಿಸು, ಎದುರಿಸಿ ನಿಲ್ಲು. S. up with (ಒಡನೆ) ಜೊತೆ ಗಾರನಾಗಿ ಕುಣಿ, ನರ್ತನಮಾಡು. **S.-óffish** (ಗು.) ದೂರ ದೂರ ವಿರುವ, ಸಲಿಗೆ ಕೊಡದ, ಜನರೊಡನೆ ಬೆರೆಯದ. **S.-óffishly** (ಕ್ರಿ. ವಿ.) ; **S.-óffishness** (ನಾ.) ; **S.-up** (ಗು.) (ಕೊರಲ ಪಟ್ಟಿಯ ವಿಷಯದಲ್ಲಿ) ಎತ್ತರವಾದ, ನೆಟ್ಟಗೆ ನಿಲ್ಲುವ (ಎದುರು ಪದ : Turn-down); (ಮುಷ್ಟಿಕಾಳಗದ ವಿಷಯದಲ್ಲಿ) ಸಮದಂಡಿಯ, ಏಟಿಗೇಟಿನ, ಮಾರಾಮಾರಿಯ.

Stand (ನಾ.) ಚಲಿಸದೆ ನಿಂತುಬಿಡುವುದು, ನಿಂತುಹೋಗುವುದು, ನಿಲುಗಡೆ, ಸ್ತಂಭನ, ತಾಟಸ್ಥ್ಯ [Came, was brought, to a s. ನಿಲುಗಡೆಗೆ —ಬಂದಿತು, ತರಲಾಯಿತು ; ನಿಂತುಹೋಯಿತು, ನಿಲ್ಲಿಸಿಬಿಡಲಾಯಿತು. Be at a s. (ಪ್ರಾಚೀ. ಪ್ರ.) ಮುಂದುವರಿಯ ಲಾರದಿರು, ದಿಕ್ಕು ತೋಚದಿರು] ; ಕದಲದೆ, ಎದುರಿಸಿ, ಪಕ್ಷ ವಹಿಸಿ, —ನಿಲ್ಲುವುದು [Make a s. (ಶತ್ರುವನ್ನು, ತತ್ತ್ವ, ಮೊ. ನ್ನು) ಎದುರಿಸಿ ನಿಲ್ಲು (*Against* ಉಪ. ದೊಡನೆ) ; (ತತ್ತ್ವ, ಮೊ. ಗಳ) ಪರವಾಗಿ ನಿಲ್ಲು, ಪಕ್ಷ ವಹಿಸು (*For* ಉಪ. ದೊಡನೆ)] ; ನೆಲೆ, ಸ್ಥಾನ [Took his s. near the door ಅವನು ಬಾಗಿಲ ಹತ್ತಿರ ನಿಂತು ಕೊಂಡನು. I take my s. on the wording of the act ಶಾಸನದ(ಲ್ಲಿರುವ) ಪದಪ್ರಯೋಗವೇ ನನಗೆ ಆಧಾರ] ; ಸಾಮಾನು ಇಡುವ —ಮೇಜು, (ಅಂತಸ್ತುಗಳುಳ್ಳ) ನಿಲುವು, ಬಡು, ಅಡ್ಡಣಿಗೆ [Music, hat, umbrella, -s. ಸಂಗೀತದ ಹಾಳೆಯ, ಟೊಪ್ಪಿಗೆಯ, ಕೊಡೆಯ, —ನಿಲುವು. Inks. (Ink ನೋಡಿ). Wash-(hand-)s. (Wash ನೋಡಿ)] ; ಮಳಿಗೆ (Fruit-s. ಹಣ್ಣುಹಂಪಲ ಮಳಿಗೆ); (ವಾಹನ, ಮೊ. ಗಳು) ನಿಲ್ಲುವ ಸ್ಥಳ, ನಿಲ್ದಾಣ [Cab-s. (Cab ನೋಡಿ)] ; (ಜನರು ಕುಳಿತುಕೊಳ್ಳುವುದಕ್ಕೆ ಅಥವಾ ನಿಂತುಕೊಳ್ಳುವುದಕ್ಕೆ ಎತ್ತರವಾಗಿ ಮಾಡಿರುವ) ಅಟ್ಟಣೆ, ಮಂಚಿಕೆ, ಜಗುಲಿ, ವೇದಿಕೆ [Band-s., Grand-s. (Band, Grand ನೋಡಿ)] ; ಬೆಳೆದು ನಿಂತಿರುವ —ಪೈರು, ಫಸಲು (*Of* ಉಪ. ದೊಡನೆ). S. of arms ಒಬ್ಬನಿಗೆ ಬೇಕಾಗುವ ಸಂಪೂರ್ಣ ಶಸ್ತ್ರತಂಡ : ಆಯುಧ—ತಂಡ, ಸಜ್ಜು. S. of colours ಸೈನ್ಯದಳದ ಬಾವುಟಗಳು. **S.-pipe** ನಿಲುಗೊಳವೆ, ಲಂಬನಾಳ. **Stándpoint** ದೃಷ್ಟಿ(ಕೋನ). **S.-rest** ಚಿತ್ರಾಧಾರ, ಮೊ. ಗಳ ಮುಂದುಗಡೆಯಲ್ಲಿ, ನಿಂತು ನೋಡುವ ಮನುಷ್ಯನಿಗೆ ಆಧಾರವಾಗಿ, ಇಳಿಜಾರಾದ ಮೇಲುಭಾಗವುಳ್ಳ, ಎತ್ತರ ವಾದ ನಿಲುವು : ಊರೆ—ನೆಲೆ, ನಿಲುವು. **Stándstill** ನಿಲುಗಡೆ, ತಾಟಸ್ಥ್ಯ, ಸ್ತಂಭನ (Am brought to a s.-s. ನಾನು ಮುಂದು ವರಿಯಲಾರದವನಾಗಿದ್ದೇನೆ, ನಿಲುಗಡೆಗೆ ಬಂದಿದ್ದೇನೆ)

Stándard ಸ್ಟ್ಯಾಂಡರ್ಡ್ (ನಾ.) (ಮು., ರಾವುತ ದಳದ) ಬಾವುಟ, ಧ್ವಜ, ಪತಾಕೆ [ಎದುರು ಪದ : Colours (ಪದಾತಿ ದಳದ ಬಾವುಟ). The (English) royal s. (ಇಂಗ್ಲೆಂಡಿನ) ರಾಜ ಲಾಂಛನವುಳ್ಳ ಚೌಕನೆಯ ಬಾವುಟ : (ಇಂಗ್ಲಿಷ್) ರಾಜ ಧ್ವಜ] ; (ರೂಪ.) ಎಲ್ಲರನ್ನೂ ಒಗ್ಗೂಡಿಸುವ ತತ್ತ್ವ [Raise the s. of revolt ಕ್ರಾಂತಿ ಧ್ವಜವನ್ನು ಎತ್ತಿಹಿಡಿ. S.-bearer ಬಾವುಟ ಹಿಡಿದ ಸೈನಿಕ: ಧ್ವಜಧಾರಿ ; (ರೂಪ.) (ಒಂದು ಚಳವಳಿ, ಮೊ. ರ) ಚೂಣಿಯ ಮುಂದಾಳು, ಪ್ರಮುಖ ನಾಯಕ]. (ತೂಕದ, ಅಳತೆಯ) ಪ್ರಮಾಣ [(ಅನೇಕ ವೇಳೆ ವಿಶೇಷಣ ಪ್ರ.) : S. pound, yard ಪ್ರಮಾಣಾನುಸಾರವಾದ ಪೌಂಡು, ಗಜ. S. bread ಕಡಮೆಯ ಪಕ್ಷ ೬೦% ರಷ್ಟಾದರೂ ಗೋಧಿಯ ರವೆ ಸೇರಿಸಿ ಮಾಡಿದ ರವೆ ರೊಟ್ಟಿ: ನಿಗದಿ ರೊಟ್ಟಿ. Multiple, tabular, s. ಹಲವು ಅಂಶಗಳ ಬೆಲೆಗಳ ಸರಾಸರಿ ಕಂಡುಹಿಡಿದು ನಿರ್ಧರಿಸಿದ ಮೌಲ್ಯ ಪ್ರಮಾಣ: ಸರಾಸರಿ ಮೌಲ್ಯ ಪ್ರಮಾಣ] ; ಹೋಲಿಕೆಗೆ ಆಧಾರವಾದುದು: ಪ್ರಮಾಣ, ಮಾನ (ದಂಡ) ; (ಉತ್ಕೃಷ್ಟತೆ, ಮೊ. ಗಳ) (ಇರಬೇಕಾದ) ಮಟ್ಟ, ದರ್ಜೆ (Does not come up to the s. ಇರಬೇಕಾದ ಮಟ್ಟಕ್ಕೆ ಬರುವುದಿಲ್ಲ) ; ಪ್ರಮಾಣ ಭೂತವಾದುದು, ಆದರ್ಶ (The s. work on the subject ಆ ವಿಷಯದಲ್ಲಿ ಪ್ರಮಾಣ ಗ್ರಂಥ. S. novels ಉತ್ಕೃಷ್ಟ ದರ್ಜೆಯ ಕಾದಂಬರಿಗಳು. Low s. ಕೆಳ ಮಟ್ಟ); (ಕೆಲವು ಶಾಲೆಗಳಲ್ಲಿ) ಇಯತ್ತೆ, ತರಗತಿ ; (ನಾಣ್ಯ ತಯಾರಿಕೆ) ನಾಣ್ಯದಲ್ಲಿ ಉಪಯೋಗಿಸಿರುವ ಲೋಹದ ಚೊಕ್ಕತನ, ಟಂಕಿಸಿದಾಗ ನಾಣ್ಯ ತೂಗಬೇಕಾದ ತೂಕ, ಒಂದು ನಾಣ್ಯಪದ್ಧತಿಯ ಮೌಲ್ಯದ ಆಧಾರ : ಪ್ರಮಾಣ [The gold, silver, s. ಸುವರ್ಣ, ರೌಪ್ಯ, —ಆಧಾರದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಣ್ಯಪದ್ಧತಿ. Monetary s. ಚಿನ್ನದ ಅಥವಾ ಬೆಳ್ಳಿಯ ನಾಣ್ಯದಲ್ಲಿ ಚೊಕ್ಕ ಲೋಹಕ್ಕೂ ಬೆರಕೆಗೂ ಇರಬೇಕಾದ ಪ್ರಮಾಣ: ನಾಣ್ಯಲೋಹ ಪ್ರಮಾಣ. Double s. (ಚಿನ್ನ ಮತ್ತು ಬೆಳ್ಳಿ ಎರಡೂ ನಡೆಯುವ) ದ್ವಿಪ್ರಮಾಣ ನಾಣ್ಯಪದ್ಧತಿ]; ನಿಲುಗಂಬ [(ಅನೇಕ ವೇಳೆ ವಿಶೇಷಣ ಪ್ರ.): S. lamp ನಿಲುಗಂಬದ ದೀಪ]; ನೆಟ್ಟಗೆ ನಿಂತಿರುವ ಅನಿಲದ ಅಥವಾ ನೀರಿನ ಕೊಳವೆ: ನಿಲುಗೊಳವೆ; (ಊರೆಯಿಲ್ಲದೆ) ಸ್ವತಂತ್ರವಾಗಿ ಬೆಳೆದು ನಿಂತಿರುವ ಗಿಡ, ಮರ; ನೆಟ್ಟನೆಯ (ತಾಳಿನಮೇಲೆ ಕಸಿಮಾಡಿ, ಗಿಡದ ಆಕಾರದಲ್ಲಿ ಬೆಳೆಸಿದ) ಕುರುಚಲು. **Stándardize** (ಕ್ರಿ. ಸಕ.) ಒಂದು ಪ್ರಮಾಣಕ್ಕೆ, ಮಟ್ಟಕ್ಕೆ, ದರ್ಜೆಗೆ, —ತರು; ಪ್ರಮಾಣಾನುಸಾರ, ಪ್ರಮಾಣಭೂತ, —ಮಾಡು; (ರ. ವಿ.) ಪರಸ್ಪರ ಹೋಲಿಕೆಗಾಗಿ (ದ್ರಾವಣ, ಮೊ. ಗಳ) ನಿರ್ದಿಷ್ಟ ಪ್ರಮಾಣವನ್ನು ವಿಶ್ಲೇಷಣದ ಮೂಲಕ ಕಂಡುಹಿಡಿ: ಪ್ರಮಾಣ ನಿಷ್ಕರ್ಷೆಮಾಡು. **Standardizátion** (ನಾ.)

Stándardize. **Standard** ನೋಡಿ.

Stánding. **Stand** ನೋಡಿ.

Stándish ಸ್ಟ್ಯಾಂಡಿಷ್ (ನಾ.) (ಪ್ರಾಚೀ. ಪ್ರ.) ದೌತಿ ಮಣೆ.

Stándpatter ಸ್ಟ್ಯಾಂಡ್‌ಪ್ಯಾಟರ್ (ನಾ.) (ಅಮೆ. ಸಂ.) (ಮು., ಸುಂಕದ ವಿಚಾರದಲ್ಲಿ) ಪಕ್ಷನೀತಿಯನ್ನು ಚಾಚೂತಪ್ಪದೆ ಅನುಸರಿಸಬೇಕೆನ್ನುವ ರಾಜ್ಯತಂತ್ರಜ್ಞ: ಪಕ್ಷನೀತಿ (ಹಟ)ವಾದಿ.

Stánhope ಸ್ಟ್ಯಾನಪ್ (ನಾ.) ಮುಚ್ಚಿಗೆಯಿಲ್ಲದ, ಹಗುರವಾದ, ಎರಡು ಅಥವಾ ನಾಲ್ಕು ಚಕ್ರದ ಬಂಡಿ. ಲಾರ್ಡ್ ಸ್ಟ್ಯಾನಪ್ ಎಂಬಾತನು ಕಂಡುಹಿಡಿದ, ಕಬ್ಬಿಣದ, ಮುದ್ರಣ ಯಂತ್ರ: ಕೈಯಚ್ಚಿನ ಯಂತ್ರ (=S.-press). S. lens ಬೇರೆ ಬೇರೆ ಬಾಗಿನ ಹೊರ ಉಬ್ಬುಗಳುಳ್ಳ ಲೆನ್ಸು: ಬೆನ ಲೆನ್ಸು.

Stániel ಸ್ಟ್ಯಾನ್ಯೆಲ್ (ನಾ.) ಒಂದು ಜಾತಿಯ ಸಣ್ಣ ಡೇಗೆ (=Kestrel)

Stank. Stink ಧಾತುವಿನ ಭೂತ.

Stánnary ಸ್ಟ್ಯಾನರಿ (ನಾ., ಗು.) ತವರದ ಗಣಿ(ಯ ಪ್ರಾಂತ); ತವರ(ದ ಸಾಮಾನು). S. court ಕಾರ್ನ್‌ವಾಲ್ ಮತ್ತು ಡೆವನ್ ಪ್ರಾಂತಗಳಲ್ಲಿ ತವರದ ಗಣಿ ಕೆಲಸಕ್ಕೆ ಸಂಬಂಧಿಸಿದ ನ್ಯಾಯಸ್ಥಾನ: ತವರ ಪ್ರಾಂತದ ನ್ಯಾಯಸ್ಥಾನ. **Stánnic** (ಗು.) (ರ. ವಿ.) ತವರದ (ಸಂಯುಕ್ತದಲ್ಲಿ ತವರ ಚತುರ್ಯೋಗ ಶಕ್ತವಾಗಿರುವಾಗ ಪ್ರ.: S. acid ತ್ರಪ್ವಿಕ ಆಮ್ಲ; ಸ್ಟ್ಯಾನಿಕ್ ಆಮ್ಲ). **Stánnate** (ನಾ.) ಸ್ಟ್ಯಾನಿಕ್ ಆಮ್ಲದ ಲವಣ. **Stánniferous** (ಗು.) ತವರವುಳ್ಳ. **Stánnous** (ಗು.) ತವರದ (ಸಂಯುಕ್ತದಲ್ಲಿ ತವರ ದ್ವಿಯೋಗ ಶಕ್ತವಾಗಿರುವಾಗ ಪ್ರ.: S. acid ತ್ರಪ್ಯ ಆಮ್ಲ; ಸ್ಟ್ಯಾನಸ್ ಆಮ್ಲ). **Stánnite** (ನಾ.) ಸ್ಟ್ಯಾನಸ್ ಆಮ್ಲದ ಲವಣ.

Stánnic, etc. **Stannary** ನೋಡಿ.

Stánza ಸ್ಟ್ಯಾನ್ಸ (ನಾ.) (ಸಾ., ನಾಲ್ಕು ಅಥವಾ ಹೆಚ್ಚು ಸಾಲಿನ ಪ್ರಾಸಯುಕ್ತ) ಪದ್ಯ, ವೃತ್ತ, ಶ್ಲೋಕ [Spenserian s. (Spenserian ನೋಡಿ)]; ಕೆಲವು ಗ್ರೀಕ್ ಮತ್ತು ಲ್ಯಾಟಿನ್ ಛಂದಸ್ಸುಗಳಲ್ಲಿ ನಾಲ್ಕು ಸಾಲುಗಳ ಪದ್ಯಜಾತಿ: ಚೌಪದಿ [Alcaic, Sapphic, s. (ಆಯಾ ಪದ ನೋಡಿ)]. **(-)stanza'd, (-)stanzaed** (ಗು.) (—) ಪದ್ಯಗಳುಳ್ಳ. **Stanzáic** ಸ್ಟ್ಯಾನ್ಸೇಇಕ್ (ಗು.) ಪದ್ಯ—ರೂಪದ, ಜಾತಿಯ; ಪದ್ಯ ಕವನಗಳ, ಪದ್ಯಗಳುಳ್ಳ.

Stáple[1] ಸ್ಟೇಪ್‌ಲ್ (ನಾ., ಕ್ರಿ. ಸಕ.) ಕೊಕ್ಕೆ, ಚಿಲಕ, ಮೊ. ನ್ನು ತಗುಲಿಸಲು ಅನುಕೂಲಿಸುವಂತೆ, ಕಂಬ, ಮೊ. ಕ್ಕೆ ಹೊಡೆಯುವುದಕ್ಕಾಗಿ ತುದಿಗಳನ್ನು ಮೊನಚು ಮಾಡಿದ ಸಾ., U ಅಥವಾ ⊔ ಆಕಾರದ ಸಲಾಕಿ ಅಥವಾ ಕಂಬಿ: ನಾಗವಾಸ; ಕೊಂಡಿ; ಬಾಗಿಲು, ಮೊ. ಗಳ ತಾಪಾಳು ಹೋಗಿ ಕುಳಿತುಕೊಳ್ಳುವ ಪೆಟ್ಟಿಗೆಯ ಆಕಾರದ ಭಾಗ: ತಾಪಾಳು ಗೂಡು; (ತಂತಿ ಹೊಲಗೆಯಲ್ಲಿ ಉಪಯೋಗಿಸುವ) ಹೊಲಿಗೆಯ ಬಾಗುತಂತಿ. ಓಬಾಯ್, ಮೊ. ಗಾಳಿ ವಾದ್ಯಗಳಲ್ಲಿ ಜೀವಾಳ ಸೆಕ್ಕಿಸುವ ಲೋಹನಾಳಿ: ವಾದ್ಯದ ಬಾಯಿ. (ಕ್ರಿ.) ನಾಗವಾಸ, ಕೊಂಡಿ, —ಹೊಡೆ, ಹಾಕು; ತಾಪಾಳು ಗೂಡು ಇಡು; ಹೊಲಿಗೆ ತಂತಿ ಹಾಕು. Stapling-machine (ಪುಸ್ತಕ ರಟ್ಟುಗಾರನು ಉಪಯೋಗಿಸುವ) ತಂತಿ ಹೊಲಿಗೆಯ ಯಂತ್ರ [=**Stápler[1]** (ನಾ.)]

Stáple[2] ಸ್ಟೇಪ್‌ಲ್ (ನಾ., ಗು., ಕ್ರಿ. ಸಕ.) ವ್ಯಾಪಾರದ ಮುಖ್ಯ ಸರಕು (The staples of Mysore ಮೈಸೂರು ದೇಶದ ಮುಖ್ಯ ಸರಕುಗಳು. The staples of British industry). ಕಚ್ಚಾ, ಹಸಿ, —ಪದಾರ್ಥ; ಅಸಿದ್ಧವಸ್ತು; (ರೂಪ.) ಮುಖ್ಯಾಂಶ, ಪ್ರಧಾನ ವಿಷಯ (Formed the s. of conversation). (ಹತ್ತಿ, ಉಣ್ಣೆ, ಮೊ. ಗಳ ಗುಣದ, ಉತ್ಕೃಷ್ಟತೆಯ, ನಿರ್ಧಾರಕವಾದ) ಎಳೆ, ತಂತು (Cotton of fine s. ಸೂಕ್ಷ್ಮ ಎಳೆಯ ಹತ್ತಿ). (ಗು.) ಮುಖ್ಯ, ಪ್ರಧಾನ (S. commodities). (ಕ್ರಿ.) (ಉಣ್ಣೆ, ಮೊ. ನ್ನು) ಎಳೆಗೆ ಅನುಗುಣವಾಗಿ ವಿಂಗಡಿಸು; ತಂತು ಪ್ರಕಾರ ವರ್ಗೀಕರಣ ಮಾಡು. **Stápler[2]** (ನಾ.) ಮುಖ್ಯ ಸರಕಿನ ವ್ಯಾಪಾರಿ. ಎಳೆ ವಿಂಗಡಕ.

Star ಸ್ಟಾರ್ (ನಾ.) ನಕ್ಷತ್ರ, ತಾರೆ, ಚುಕ್ಕಿ, ಅರಿಲ್ (ಗ್ರಾಂ.), ವಿಾನ್ (ಗ್ರಾಂ.) [Binary, Day-, Double, Evening, Fixed, Lode-, Morning, North, Pole[2]-, s. (ಆಯಾ ಪದ ನೋಡಿ). Multiple s. (ಬರಿಯ ಕಣ್ಣಿಗೆ ಒಂದೇ ನಕ್ಷತ್ರದಹಾಗೆ ಕಾಣುವ) ಮೂರರಿಂದ ಆರರವರೆಗೆ ಇರುವ ನಕ್ಷತ್ರಗಳ ಗುಂಪು: ಗಣ ನಕ್ಷತ್ರ. Polar-s.=Pole-s. (Pole[2] ನೋಡಿ). Shooting s. ಶೀಘ್ರವಾಗಿ ಚಲಿಸಿ ಅದೃಶ್ಯವಾಗುವ ನಕ್ಷತ್ರದಂಥ ಉಲ್ಕಾಪಾತ: ಉಲ್ಕಾ ನಕ್ಷತ್ರ]; ನಕ್ಷತ್ರಾಕಾರದ ವಸ್ತು, ನಕ್ಷತ್ರಾಕೃತಿ (Stars & stripes ಅಮೆ. ಸಂ. ದ ರಾಷ್ಟ್ರಧ್ವಜ); ನಕ್ಷತ್ರ ಚಿಹ್ನೆ (=Asterisk); ಕುದುರೆ, ಮೊ. ಗಳ ಮುಖದಮೇಲಿನ ಬಿಳಿಯ ಮಚ್ಚೆ: ತಾರೆ ಮಚ್ಚೆ; (ಪೂಲ್ ಎಂಬ ಬಿಲ್ಯರ್ಡ್ಸ್ ಆಟದಲ್ಲಿ: ಆಟದ ಅವಕಾಶಗಳನ್ನೆಲ್ಲಾ ಕಳೆದುಕೊಂಡವನು ಮತ್ತೆ ಮೊದಲನಷ್ಟೆ ಪಣ ಕೊಟ್ಟು ಕೊಂಡುಕೊಂಡ) ಮತ್ತೆ ಆಡುವ ಅವಕಾಶ. (ಒಂದು ನಾಟಕ ಮಂಡಲಿಯ ಅಥವಾ ಚಲನಚಿತ್ರ ಮಂಡಲಿಯ) ಪ್ರಸಿದ್ಧ —ನಟ, ನಟಿ; ತಾರೆ (The s. system ಕಳಪೆಯ ನಟರಿರುವ ಮಂಡಲಿಯಲ್ಲಿ ಕಳೆ ಕಟ್ಟಿಸುವುದಕ್ಕಾಗಿ ಒಬ್ಬಿಬ್ಬರು ತಾರೆಗಳನ್ನವಲಂಬಿಸಿ ಪ್ರದರ್ಶನ ನಡೆಸುವ ಪದ್ಧತಿ: ತಾರೆ ಪದ್ಧತಿ); ಪ್ರಸಿದ್ಧ, ತೇಜೋವಂತ, —ಪುರುಷ, ವ್ಯಕ್ತಿ (Literary s. ಪ್ರಸಿದ್ಧ ಸಾಹಿತಿ; ಸಾಹಿತ್ಯರತ್ನ. Bright particular s. ಒಬ್ಬನ ಭಕ್ತಿ ವಿಶ್ವಾಸಗಳಿಗೆ ಪಾತ್ರವಾದವನು, —ವಾದದ್ದು; ಒಬ್ಬನ ಆರಾಧ್ಯ ತಾರೆ); ವ್ಯಕ್ತಿಯ ಅದೃಷ್ಟದಮೇಲೆ ಪ್ರಭಾವವುಳ್ಳದ್ದೆಂದು ನಂಬಿರುವ ಆಕಾಶಸ್ಥ ಕಾಯ: ಭಾಗ್ಯತಾರೆ, ನಕ್ಷತ್ರ [Born under an unlucky s. ಕೆಟ್ಟ ನಕ್ಷತ್ರದಲ್ಲಿ ಹುಟ್ಟಿ(ದ). His s. was in the ascendant ಅವನ ತಾರಾಬಲ ಉಚ್ಛ್ರಾಯದಲ್ಲಿತ್ತು. You may thank your stars, you were not there ನಿನ್ನ ಅದೃಷ್ಟ ಚೆನ್ನಾಗಿತ್ತು, ನೀನು ಅಲ್ಲಿ ಇರಲಿಲ್ಲ. The stars were against it ಗ್ರಹಗತಿ ಅದಕ್ಕೆ ಪ್ರತಿಕೂಲವಾಗಿತ್ತು (Ill ಪದದ ಕೆಳಗೆ Ill-starred ನೋಡಿ)]. **S.-chamber** (ಇಂಗ್ಲೆಂಡಿನ ಚರಿತ್ರೆ) ಮು., ರಾಜನ ಹಿತಾರ್ಥಗಳಿಗೆ ಕುಂದು ತಂದ ಅಪರಾಧಗಳನ್ನು ಕ್ಷಿಪ್ರದಲ್ಲಿ ಮನಬಂದಂತೆ ವಿಚಾರಣೆ ನಡಸಿ ತೀರ್ಪುಕೊಡುವುದರಲ್ಲಿ ಹೆಸರುವಾಸಿಯಾಗಿದ್ದ, ೧೬೪೧ರಲ್ಲಿ ರದ್ದುಗೊಳಿಸಿದ, ನ್ಯಾಯಸ್ಥಾನ (ಚಿನ್ನದ ತಾರೆಗಳಿಂದ ಅಲಂಕೃತವಾಗಿದ್ದ ಒಳಮಾಳಿಗೆಯುಳ್ಳ ಕೋಣೆಯೊಂದರಲ್ಲಿ ಈ ನ್ಯಾಯಸ್ಥಾನ ನೇರುತ್ತಿದ್ದುದರಿಂದ ಈ ಹೆಸರು ಬಂದಿತು); (ರೂಪ.) ರಹಸ್ಯ ಪೀಡಕ ನ್ಯಾಯಸ್ಥಾನ. **S.-drift** ಒಂದು ಪ್ರದೇಶದಲ್ಲಿಯ ಹಲವು ಸ್ಥಿರ ನಕ್ಷತ್ರಗಳ ಒಂದೇ ಸಮನಾದ ಕ್ರಮಚಲನೆ: ನಕ್ಷತ್ರ ಪ್ರವಾಹ. **Star-finch**=Redstart (Red ನೋಡಿ). **Stár-fish** ಐದು (ಅಥವಾ ಹೆಚ್ಚು) ತ್ರಿಜ್ಯಾಕಾರದ ಚಾಚುಗಳನ್ನುಳ್ಳ ಒಂದು ಕಂಟಕ ಚರ್ಮಿ ಸಮುದ್ರ ಪ್ರಾಣಿ: ನಕ್ಷತ್ರವಿಾನು. **S.-gazer** (ಹಾಸ್ಯ ಪ್ರ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಕ್ಷತ್ರ ವೀಕ್ಷಕ, ಜ್ಯೋತಿಷಿ. **Stárlight** ನಕ್ಷತ್ರ ಪ್ರಕಾಶ, ಚುಕ್ಕಿಯ ಬೆಳಕು (Walked home by s.-l.). (ಗು.) ನಕ್ಷತ್ರ ಪ್ರಕಾಶದ; ನಕ್ಷತ್ರಗಳಿಂದ ಪ್ರಕಾಶಿತವಾದ [(=**Stárlit**); A s.-l. night ನಕ್ಷತ್ರ ಪ್ರಕಾಶಿತ, ನಕ್ಷತ್ರ ರಂಜಿತ, —ರಾತ್ರಿ]. S. of Bethlehem ಹೊರ ಭಾಗದಲ್ಲಿ ಹಸುರು ಪಟ್ಟೆಗಳುಳ್ಳ, ನಕ್ಷತ್ರಾಕಾರದ ಬಿಳಿಯ ಹೂವು ಬಿಡುವ, ಲಿಲಿ ಜಾತಿಯ ಒಂದು ಹೂವಿನ ಗಿಡ. S. of India ಇಂಡಿಯಾ ದೇಶದ ಆಡಳಿತವನ್ನು ನೇರವಾಗಿ ಬ್ರಿಟಿಷ್ ಸರ್ಕಾರವೇ ವಹಿಸಿಕೊಂಡದ್ದರ ನೆನಪಿಗಾಗಿ ೧೮೬೧ರಲ್ಲಿ ಸ್ಥಾಪಿಸಿದ ಒಂದು ನೈಟ್ ಪ್ರಶಸ್ತಿವರ್ಗ. **S. shell** (ಆಕಾಶದಲ್ಲಿ ಸಿಡಿದು ಶತ್ರುಸ್ಥಾನವನ್ನು ಬೆಳಗಿ ತೋರಿಸುವ) ನಕ್ಷತ್ರ (ಸಿಡಿ)ಗುಂಡು. **S.-spangled** ಚುಕ್ಕಿ ಹೊಯ್ದ, ನಕ್ಷತ್ರಖಚಿತ (ಮು., ಅಮೆ. ಸಂ. ಸಂ. ದ ರಾಷ್ಟ್ರಧ್ವಜದ ವಿಶೇಷಣವಾಗಿ). **S.-stone** ನಕ್ಷತ್ರ ನೀಲಮಣಿ. **Stárlet** (ನಾ.) ಕಿರುತಾರಗೆ. **Stárless** (ಗು.); **Stárlike** (ಗು.); **Stárry** (ಗು.)

Star (ಕ್ರಿ.) ನಕ್ಷತ್ರಗಳಿಂದ (ಹೇಗೊ ಹಾಗೆ) ಅಲಂಕರಿಸು, ನಕ್ಷತ್ರಾಲಂಕಾರ ಮಾಡು, ನಕ್ಷತ್ರ ಖಚಿತಮಾಡು (ಮು., ಭೂ. ಕೃ. ನಲ್ಲಿ); (ಪಟ್ಟಿಯಲ್ಲಿ ಹೆಸರು, ಮೊ. ಕ್ಕೆ) ನಕ್ಷತ್ರ ಚಿಹ್ನೆ ಹಾಕು, ಚುಕ್ಕಿ ಗುರುತು ಹಾಕು; ಮುಖ್ಯ ನಟನಾಗಿ ಪಾತ್ರ ವಹಿಸು, ತಾರೆ ಯಾಗಿರು; (ಪೂಲ್ ಎಂಬ ಬಿಲ್ಯರ್ಡ್ಸ್ ಆಟದಲ್ಲಿ) ಮತ್ತೆ ಆಡುವ ಅವಕಾಶ ಕೊಂಡುಕೊ.

Stárboard ಸ್ಟಾರ್‌ಬರ್ಡ್, —ಬೋ(ಅ)ರ್ಡ್ (ನಾ., ಕ್ರಿ. ಸಕ.) (ಹಡಗಿನ) ಬಲಪಕ್ಕ, ಬಲಗಡೆ (ಅನೇಕ ವೇಳೆ ವಿಶೇಷಣವಾಗಿ ಪ್ರ.). (ಕ್ರಿ.) (ಚುಕ್ಕಾಣಿಯನ್ನು) ಬಲಕ್ಕೆ—ಹಾಕು, ತಿರುಗಿಸು.

Starch ಸ್ಟಾರ್ಚ್ (ಗು., ನಾ., ಕ್ರಿ. ಸಕ.) (ಈಗ ವಿರ. ಪ್ರ.) (ವ್ಯಕ್ತಿ, ನಡತೆ, ಮೊ. ವು) ಬಿಂಕದ, ಗಡುಸಾದ, ಕಟ್ಟುನಿಟ್ಟಿನ [**Stárchly** (ಕ್ರಿ. ವಿ.) ಗಡುಸಾಗಿ, ಬಿಂಕದಮೇಲೆ. **Stárchness** (ನಾ.) ಬಿಂಕ, ಗಡುಸು, ಕಟ್ಟುನಿಟ್ಟು]. (ನಾ.) ಮು., ಅಕ್ಕಿ, ಮೊ. ಧಾನ್ಯಗಳಲ್ಲೂ ಆಲೂಗಡ್ಡೆಯಲ್ಲೂ ದೊರೆಯುವ, ಅಣಬೆಯ ಹೊರತು ಮಿಕ್ಕ ಎಲ್ಲಾ ಸಸ್ಯಗಳಲ್ಲೂ ಇರುವ, ಆಹಾರ ಜೀರ್ಣವಾಗುವುದಕ್ಕೆ ಪ್ರಯೋಜನ ಕಾರಿಯಾದ, ರುಚಿಯೂ ವಾಸನೆಯೂ ಇಲ್ಲದ ಬಿಳಿಯ ಪುಡಿ: ಪಿಷ್ಟ, ಹಿಟ್ಟು; (ಬಟ್ಟೆಯನ್ನು ಗಡುಸು ಮಾಡಲು ಇಸ್ತ್ರಿ ಮಾಡುವುದಕ್ಕೆ ಮುಂಚೆ ಹಾಕುವ) ಗಂಜಿ; (ರೂಪ.) (ನಡತೆಯಲ್ಲಿ) ಬಿಂಕ, ಗಡುಸು, ಕಟ್ಟುನಿಟ್ಟು. (ಕ್ರಿ.) ಗಂಜಿ ಹಾಕಿ ಗಡುಸುಮಾಡು, ಗರಿಮುರಿಮಾಡು; ಗಂಜಿ ಹಾಕು; (ಅನೇಕ ವೇಳೆ ರೂಪ.) ಗಡುಸು, ಕಟ್ಟುನಿಟ್ಟು, —ಮಾಡು. Clear-s. ಶುಭ್ರವಾದ ಗಂಜಿ ಹಾಕಿ ಇಸ್ತ್ರಿಮಾಡು. **Stárched** (ಗು.); **Stárchedly** (ಕ್ರಿ. ವಿ.); **Stárchedness** (ನಾ.); (-)**stárcher.** **Starcher** (ನಾ.) (ಬಟ್ಟೆಗೆ) ಗಂಜಿ ಇಸ್ತ್ರಿ ಮಾಡುವವನು,—ಮಾಡುವ ಯಂತ್ರ; (ಗಂಜಿ ಹಾಕಿ) ಗಡುಸು ಮಾಡಿದ ಬಟ್ಟೆ (ಉದಾ., ಕೊರಲಪಟ್ಟಿ, ಮೊ. ವು). **Stárchy** (ಗು.) ಪಿಷ್ಟದ, ಹಿಟ್ಟಿನ; (ರೂಪ.) ಬಿಂಕದ, ಕಟ್ಟುನಿಟ್ಟಿನ. **Stárchily** (ಕ್ರಿ. ವಿ.); **Stárchiness** (ನಾ.)

Stare ಸ್ಟೇ(ಅ)ರ್ (ಕ್ರಿ., ನಾ.) (ಆಶ್ಚರ್ಯ, ಮೆಚ್ಚಿಕೆ, ದಿಗ್ಭ್ರಾಂತಿ, ದಡ್ಡತನ, ಗಾಬರಿ, ಮೊ. ಗಳಿಂದ) ಎವೆಯಿಕ್ಕದೆ, ಬಿರುಗಣ್ಣಿನಿಂದ, ನಟ್ಟ ನೋಟದಿಂದ, ದಿಟ್ಟಿಸಿ, —ನೋಡು (*At, upon*, ಮೊ. ಉಪ. ದೊಡನೆ ಸಹ); (ಮು., ವರ್ತಮಾನ ಕೃ.) ಕಣ್ಣಿಗೆ ಹೊಡೆಯುವಂತಿರು, ಕಣ್ಣು ಕುಕ್ಕುವಂತಿರು [A staring waistcoat ರಾವು ಬಡಿಯುವಂತಿರುವ ನಡುವಂಗಿ. (ಕ್ರಿ. ವಿ. ಪ್ರ.) Stark staring mad ಸ್ಪಷ್ಟವಾಗಿ ಪೂರ್ತಿ ಹುಚ್ಚುಹಿಡಿದ]; (ವ್ಯಕ್ತಿಯನ್ನು) ದುರುಗುಟ್ಟಿ, ದುರದುರನೆ, —ನೋಡು; —ನೋಡಿ ನಿರ್ದಿಷ್ಟ ಸ್ಥಿತಿಗೆ ತರು (Stared him into silence, dumb ಅವನನ್ನು ದುರುಗುಟ್ಟಿ ನೋಡಿ ಬಾಯೆತ್ತದಂತೆ ಮಾಡಿದನು,ಮೂಕನನ್ನಾಗಿ ಮಾಡಿಬಿಟ್ಟನು); [S. down ಇನ್ನೊಬ್ಬನನ್ನು ಅವನಿಗಿಂತಲೂ ಹೆಚ್ಚಾಗಿ ದುರುಗುಟ್ಟಿ ದಬಾಯಿಸು; ದುರುಗುಟ್ಟುವುದರಲ್ಲಿ ಮೀರಿಸು. S. in the face ಸ್ಪಷ್ಟವಾಗಿರು, ಎದುರಿಗೆ ಇರು, ಆಸನ್ನ ವಾಗಿರು, ಮುಖಕ್ಕೆ ಹೊಡೆಯುವಂತೆ ಇರು (The facts s. us in the face)]. (ನಾ.) ದುರದುರ ನೋಟ; ಎವೆಯಿಕ್ಕದ, ನೆಟ್ಟ, —ನೋಟ; ಸ್ಥಿರ, ಶೂನ್ಯ, —ದೃಷ್ಟಿ. **Stáringly** (ಕ್ರಿ. ವಿ.)

Stark ಸ್ಟಾರ್ಕ್ (ಗು., ಕ್ರಿ. ವಿ.) ಸೆಡೆತು —ಹೋದ, ಪೆಡಸಾದ (S. & stiff ಸೆಡೆತು ಕಟ್ಟಿಗೆಯಂತಾದ. Lies s. in death ಸತ್ತು ಸೆಡೆತು ಬಿದ್ದಿದ್ದಾನೆ, ಮಲಗಿದ್ದಾನೆ); (ಕಾವ್ಯ) ಬಲವಾದ, ಗಟ್ಟಿ ಮುಟ್ಟಾದ; (ಕಾವ್ಯ) ದೃಢ, ಹಠದ, ಸಗ್ಗದ; ಶುದ್ಧ, ಪೂರ್ತ, ಪಕ್ಕಾ (S. madness ಶುದ್ಧ ಹುಚ್ಚುತನ). (ಕ್ರಿ. ವಿ.) ಪೂರ್ತಿ, ತೀರ (ಮು., S. mad, naked ಪೂರ್ತಿ ಹುಚ್ಚು ಹಿಡಿದ, ಬತ್ತಲೆಯಾದ)

Stárling[1] ಸ್ಟಾರ್ಲಿಂಗ್ (ನಾ.) ಸಣ್ಣ ಸಣ್ಣ ಮಚ್ಚೆಗಳೂ ಲೋಹದಂತೆ ಥಳಥಳಿಸುವ ಊದಾ ಮತ್ತು ಹಸುರು ಬಣ್ಣಗಳ ಮಾರ್ಪೊಳಪುಗಳೂ ಉಳ್ಳ, ಕಪ್ಪು ಛಾಯೆಯ ಕಂದು ಬಣ್ಣದ ಗರಿಗಳಿರುವ, ಅನುಕರಣ ಶಕ್ತಿ ಹೆಚ್ಚಾಗಿರುವ, ಸುಲಭವಾಗಿ ಪಳಗಿಸಬಹುದಾದ ಒಂದು ಹಕ್ಕಿ: ಮೈನಾ ಜಾತಿಯ ಹಕ್ಕಿ.

Stárling[2] ಸ್ಟಾರ್ಲಿಂಗ್ (ನಾ.) (ಸೇತುವೆಯ ಆಸರೆಗಂಬದ ಸುತ್ತ ರಕ್ಷಣಾರ್ಥವಾಗಿ ಹಾಕಿರುವ) ದಸಿಕಾಪು.

Start ಸ್ಟಾರ್ಟ್ (ಕ್ರಿ.) (ನೋವು, ಆಶ್ಚರ್ಯ, ಮೊ. ಗಳಿಂದ) ಬೆಚ್ಚು, ಬೆದರು, ಬೆಚ್ಚಿಬೀಳು, ಚಕಿತನಾಗು (Started in his seat ಕುಳಿತ ಸ್ಥಳದಲ್ಲೆ ಬೆಚ್ಚಿಬಿದ್ದನು); (ಗಾಬರಿ, ಧಕ್ಕೆ, ಮೊ. ಗಳಿಂದ) ತಟಕ್ಕನೆ, ಚಂಗನೆ, —ಹಾರು, ಸರಿ (S. aside ಪಕ್ಕಕ್ಕೆ ಹಾರು. S. from one's chair ಕುರ್ಚಿಯಿಂದ ಚಂಗನೆ ಜಿಗಿ); (ಮರದ ಹಲಗೆ, ಮೊ. ಗಳ ವಿಷಯದಲ್ಲಿ; ನೆರೆಬಿಟ್ಟು) ಎದ್ದುಕೊ, ಹೊರಟುಕೊ, ಬಿಚ್ಚಿಕೊ, ಅಳ್ಳಕ ವಾಗು (A nail has started ಮೊಳೆ ಹೊರಟುಕೊಂಡಿದೆ. A seam has started ಹೊಲಿಗೆ ಬಿಚ್ಚಿಕೊಂಡಿದೆ); (ಪ್ರಯಾಣ) ಹೊರಡು (We s. at six ಆರಕ್ಕೆ, ಆರು ಗಂಟೆಗೆ, —ಹೊರಡುತ್ತೇವೆ); (ಪ್ರಯಾಣ, ಕೆಲಸ, ಮೊ. ಕ್ಕೆ) ತೊಡಗು, ಮೊದಲು ಮಾಡು, ಉಪಕ್ರಮಿಸು (*On* ಉಪ. ದೊಡನೆ) [S. work, S. doing, (ಬಳ. ಮಾ. ಅಥವಾ ಗ್ರಾಮ್ಯ) S. to do]; (ಇಕ್ಕೆ, ಮೊ. ಗಳಿಂದ ಬೇಟೆಯನ್ನು) ಎಬ್ಬಿಸು, ಹೊರ ಹೊರಡಿಸು; (ಕೆಲಸ, ವ್ಯಾಪಾರ, ಮೊ. ನ್ನು) ಪ್ರಾರಂಭಿಸು; (ವೃತ್ತಪತ್ರಿಕೆಯನ್ನು) ಹೊರಡಿಸು; (ಗಡಿಯಾರವನ್ನು) ಕೀಲುಕೊಟ್ಟು ನಡೆಯುವಂತೆ ಮಾಡು; ತೊಡಗಿಸು, ಶುರು ಹಚ್ಚಿಸು (This started me coughing); (ಒಬ್ಬನನ್ನು, ವ್ಯಾಪಾರ, ಮೊ. ರಲ್ಲಿ) ತೊಡಗಿಸು, ಪ್ರಾರಂಭಿಸಲು ಸಹಾಯ ಮಾಡು; (ಓಟದ ಪಂದ್ಯದಲ್ಲಿ) ಹೊರಡಲು, ಓಡಲು, —ಬಿಡು, ಸಂಕೇತ ಕೊಡು; (ಹಲಗೆ, ಹಲ್ಲು, ಮೊ. ನ್ನು) ಹೊರಟುಕೊಳ್ಳುವಂತೆ ಮಾಡು, ಎದ್ದು ಕೊಳ್ಳುವಂತೆ ಮಾಡು; (ಹಲ್ಲು, ಮೊ.) ಹೊರಟುಕೊ(ಂಡಿರು), ಸಡಿಲ ಗೊಳ್ಳು; (ನಾವೆ) (ಮದ್ಯವನ್ನು) ಪೀಪಾಯಿಯಿಂದ ಹೊರಕ್ಕೆ ಸುರಿ. To s. with ಮೊದಲನೆಯದಾಗಿ, ಎಲ್ಲಕ್ಕಿಂತ ಮೊದಲು, ಪ್ರಥಮತಃ, ಪ್ರಾರಂಭದಲ್ಲಿ (You have no right to be here, to s. with ಮೊದಲನೆಯದಾಗಿ, ನಿನಗೆ ಇಲ್ಲಿ ಇರುವ ಅಧಿಕಾರವಿಲ್ಲ. Had six members to s. with ಪ್ರಾರಂಭದಲ್ಲಿ ಆರು ಸದಸ್ಯರಿದ್ದರು). S. in (ಬಳ. ಮಾ.) (ಮಾಡುವುದಕ್ಕೆ) ಮೊದಲು ಮಾಡು, ಉಪಕ್ರಮಿಸು. S. out (ಬಳ. ಮಾ.) (ಮಾಡಲು) ಹೊರಟಿರು, ತೊಡಗಿರು. S. up (ಕುಳಿತೆಡೆಯಿಂದ) ತಟಕ್ಕನೆ, ಚಂಗನೆ, —ಏಳು, ಎದ್ದೇಳು. ಕಾಣಿಸಿಕೊ, ತಲೆದೋರು, ಹುಟ್ಟಿಕೊ; ಮನಸ್ಸಿಗೆ ಹೊಳೆ (Many difficulties, rivals, have started up ಹಲವು ತೊಂದರೆಗಳು ಎದ್ದುಕೊಂಡಿವೆ, ಹಲವರು ಪ್ರತಿಸ್ಪರ್ಧಿಗಳು ಹುಟ್ಟಿಕೊಂಡಿದ್ದಾರೆ); (ಮೋಟಾರು ಎಂಜಿನನ್ನು) ಹೊರಡಿಸು, ಚಲನಗೊಳಿಸು. **Stárter** (ನಾ.) (ಕ್ರಿಯಾರ್ಥಗಳಲ್ಲಿ); (ಓಟದ ಪಂದ್ಯದಲ್ಲಿ) ಓಡಲು —ಬಿಡುವವನು, ಸಂಕೇತ ಕೊಡುವವನು: ಪ್ರಾರಂಭಕ; (ಪಂದ್ಯದಲ್ಲಿ) ಓಡುವ—ಕುದುರೆ, ಮನುಷ್ಯ: ಸ್ಪರ್ಧಿ (A list of probable starters); (ಅನಂ.) ಒಣಗಿದ ಅಂಜೂರ (ಭೇದಿಕಾರಕವಾದ್ದರಿಂದ). **Stárting** (ನಾ.) (ಕ್ರಿಯಾರ್ಥಗಳಲ್ಲಿ); S.-gate ಕುದುರೆ ಜೂಜಿನಲ್ಲಿ ಎಲ್ಲ ಕುದುರೆಗಳಿಗೂ ಒಂದೇ ಪ್ರಾರಂಭಾವಕಾಶ ಕೊಡಲು ಅನುಕೂಲನುವಂತೆ ಹಾಕಿರುವ, ಕಳಚಲಾಗುವ ತಡೆಕಟ್ಟು:

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೊರಡುಕಟ್ಟೆ. S.-post ಪಂದ್ಯದಲ್ಲಿ ಸ್ಪರ್ಧಿಗಳು ನಿಂತು ಓಟಕ್ಕೆ ಆರಂಭಿಸುವ ಸ್ಥಳ: ಹೊರಡುಗಂಬ, ಉಪಕ್ರಮಸ್ಥಾನ. S. prices (ಕುದುರೆ ಜೂಜಿನಲ್ಲಿ) ಓಟಕ್ಕೆ ತೊಡಗಿದೊಡನೆ ಒಡ್ಡಿದ, ಕಟ್ಟಕಡೆಯ ಪಣ: ಹೊರಡುಪಣ. **Stártle** ಸ್ಟಾರ್ಟ್‌ಲ್ (ಕ್ರಿ. ಸಕ.) ಬೆಚ್ಚಿಸು, ಬೆಚ್ಚಿ ಬೀಳಿಸು, ಚಕಿತ ಮಾಡು; (ವರ್ತಮಾನ ಕೃ.) ಆಶ್ಚರ್ಯಕರ, ಚಕಿತ ಗೊಳಿಸುವ, ಗಾಬರಿ ಹುಟ್ಟಿಸುವ (Startling news). **Stártler** (ನಾ.) (ವ್ಯಕ್ತಿ, ಸುದ್ದಿ, ಮೊ. ಗಳ ವಿಷಯದಲ್ಲಿ) ಆಶ್ಚರ್ಯಕಾರಿ; ಗಾಬರಿಕಿಡಿಸುವಂಥವನು, —ವಂಥದು; ಗಾಬರಿಬಡಿಕ. **Stártlingly** (ಕ್ರಿ. ವಿ.)

Start (ನಾ.) ತಟಕ್ಕನೆ, ಚಂಗನೆ, —ಹಾರುವುದು; ಬೆಚ್ಚು(ವುದು); ಬೆದರು(ವುದು). (ಬ. ವ. ದಲ್ಲಿ) ಕ್ಷಣ ಹೊತ್ತಿನ—ಪ್ರಯತ್ನಗಳು, ಚಲನೆಗಳು, ಹುರುಪು, ಉದ್ರೇಕಗಳು [By fits & starts (Fit[2] ನೋಡಿ)]; (ಪ್ರಯಾಣ, ಕಾರ್ಯ, ಪಂದ್ಯ, ಮೊ. ಗಳ) ಮೊದಲು, ಪ್ರಾರಂಭ, ಉಪಕ್ರಮ (Shall make an early s. for town ಊರಿಗೆ ಹೊತ್ತಿಗೆ ಮುಂಚೆಯೆ ಹೊರಡುತ್ತೇನೆ. Is difficult work at the start ಪ್ರಾರಂಭದಲ್ಲಿ ಕಷ್ಟದ ಕೆಲಸ. The s. is fixed for 3 p.m. ಪಂದ್ಯದ ಪ್ರಾರಂಭ ಅಪರಾಹ್ಣ ೩ಕ್ಕೊಂದು ಗೊತ್ತಾಗಿದೆ); (ಪಂದ್ಯದ) ಉಪಕ್ರಮ, ಪ್ರಾರಂಭ, —ಸ್ಥಾನ; (ಪಂದ್ಯದಲ್ಲಿ: ಸ್ವಲ್ಪ ಮುಂದೆ ನಿಲ್ಲಿಸುವುದು, ಸ್ವಲ್ಪ ಮುಂದಾಗಿ ಓಟಕ್ಕೆ ಬಿಡುವುದು, ಮೊ. ಗಳ ಮೂಲಕ ಒಬ್ಬನಿಗೆ ಕೊಟ್ಟ) ರಿಯಾಯಿತಿ, ಅವಕಾಶ, ಪ್ರಾರಂಭಾನುಕೂಲ (Will give you 60 yards s., 15 seconds s. ನಿನಗೆ ೬೦ ಗಜಗಳ, ೧೫ ಸೆಕಂಡುಗಳ, ರಿಯಾಯಿತಿ ಕೊಡುವೆನು); (ವ್ಯಾಪಾರ, ಮೊ. ಗಳಲ್ಲಿ ದೊರೆತ) ಪ್ರಾರಂಭಾನುಕೂಲ, ಸೌಕರ್ಯ (Got a good s. in life ಜೀವನದಲ್ಲಿ ಒಳ್ಳೆಯ ಪ್ರಾರಂಭ ಸೌಕರ್ಯ ಸಿಕ್ಕಿತು. Got the s. of his rivals ಪ್ರತಿಸ್ಪರ್ಧಿಗಳಿಗಿಂತ ಹೆಚ್ಚಿನ ಪ್ರಾರಂಭ ಸೌಕರ್ಯ ಸಿಕ್ಕಿತು). A rum s. (ಬಳ. ಮಾ.) ಆಶ್ಚರ್ಯಕರ, ವಿಸ್ಮಯಕರ, —ಘಟನೆ, ಸಂಗತಿ.

Stárter, Stárting, Stártle. Start ನೋಡಿ.

Starve ಸ್ಟಾರ್ವ್ (ಕ್ರಿ.) ಹೊಟ್ಟೆಗಿಲ್ಲದೆ, ಹಸಿವಿನಿಂದ, —ಸಾಯಿ(ಸು); ಹೊಟ್ಟೆಗಿಲ್ಲದಿರು, ಉಪವಾಸವಿರು; ಕಡು ಬಡತನದಲ್ಲಿರು, ಬರಗೆಡು; ಉಪವಾಸ ಕೆಡವು; ಉಪವಾಸ ಕೆಡವಿ—ವಶಪಡಿಸಿಕೊ, ಬಲಾತ್ಕರಿಸು (S. garrison into surrender); (ಬಳ. ಮಾ.) ಹಸಿದಿರು (Am simply starving ನನಗೆ ವಿಪರೀತ ಹಸಿವಾಗಿದೆ); (ಈಗ ವಿರ. ಪ್ರ.) ಚಳಿಯಿಂದ —ಸಾಯಿ(ಸು), ನರಳು(ಳಿಸು). (ರೂಪ.) (ಸಹಾನುಭೂತಿ, ವಿನೋದ, ಜ್ಞಾನ, ಮೊ. ಕ್ಕಾಗಿ) ಹಂಬಲಿಸು, ಹಾತೊರೆ (*For* ಉಪ. ದೊಡನೆ). (ಮನಸ್ಸಿಗೆ, ಆತ್ಮಕ್ಕೆ, ಶಾಂತಿ, ಮೊ. ಗಳ) ಅಭಾವದಿಂದ ನರಳು. **Starvátion** (ನಾ.); **Stárveling** (ನಾ., ಗು.) ಹೊಟ್ಟೆಗಿಲ್ಲದ, ಹಸಿದು ಕಂಗಾಲಾಗಿರುವ (—ಮನುಷ್ಯ, ಪ್ರಾಣಿ); ಕಂಗಾಲು, ಬರಗೆಟ್ಟ(ವನು)

Stásis ಸ್ಟೇಸಿಸ್ (ನಾ.) (ವೈ. ಶಾ.) ಶರೀರದಲ್ಲಿ ಯಾವುದಾದರೂ ದ್ರವದ ಪರಿಚಲನೆ ನಿಂತುಹೋಗುವುದು: (ಪರಿಚಲನ) ಸ್ತಂಭನ.

State[1] ಸ್ಟೇಟ್ (ನಾ., ಗು.) ಇರವು, ಸ್ಥಿತಿ, ಅವಸ್ಥೆ, ದೆಸೆ [S. of life (ಒಬ್ಬನ) ಪದವಿ ಮತ್ತು ಉದ್ಯೋಗ, ಜೀವನದ ಸ್ಥಿತಿ. He was in the same s. ಅವನು ಅದೇ ಸ್ಥಿತಿಯಲ್ಲಿದ್ದನು. Things were in an untidy s. ಎಲ್ಲವೂ ಹೊಲಸಾಗಿದ್ದವು. In a bad s. of repair ದುರಸ್ತಿಲ್ಲದೆ ತುಂಬ ಶಿಥಿಲವಾಗಿ. What a s. you are in! ಏನು ನಿನ್ನ ಅವಸ್ಥೆ! He was in quite a s. about it (ಬಳ. ಮಾ.) ಆ ವಿಷಯದಲ್ಲಿ ಅವನು ತುಂಬ ಉದ್ರೇಕದಲ್ಲಿದ್ದನು, ತಲ್ಲಣದಲ್ಲಿದ್ದನು]

State[2] (ನಾ., ಗು.) ರಾಜ್ಯ, ರಾಷ್ಟ್ರ, ಸರಕಾರ; ಜನಾಂಗ, ಜನಪದ; ದೇಶ; ಸಂಸ್ಥಾನ [The United States (of America) (ಅಮೆರಿಕದ) ಸಂಯುಕ್ತ ಸಂಸ್ಥಾನಗಳು. Free, slave, S. (ಅಮೆ. ಸಂ.) ಗುಲಾಮ ಪದ್ಧತಿ ಇಲ್ಲದ, ಇದ್ದ, —ಸಂಸ್ಥಾನ; ಸ್ವತಂತ್ರ, ದಾಸ್ಯ ಪದ್ಧತಿಯ, —ಸಂಸ್ಥಾನ. Southern States (ಅಮೆ. ಸಂ. ದ) ದಕ್ಷಿಣ ಸಂಸ್ಥಾನಗಳು. States of the Church, Papal States ಹಿಂದೆ ಪೋಪ್ ಗುರುವಿನ ಅಧಿಕಾರದಲ್ಲಿದ್ದ ಮಧ್ಯ ಇಟಲಿಯಲ್ಲಿಯ ಸಂಸ್ಥಾನಗಳು: ಮಠಾಧಿಪತ್ಯದ, ಪೋಪ್ ಗುರುವಿನ,— ಸಂಸ್ಥಾನಗಳು]. (ಬ. ವ. ದಲ್ಲಿ) (ಕೆಲವು ದೇಶಗಳಲ್ಲಿ) ಶಾಸನ ಸಭೆಗಳು (States General ನೆದರ್‌ಲೆಂಡ್ಸಿನ, ೧೭೮೯ಕ್ಕೆ ಹಿಂದೆ ಫ್ರಾನ್ಸಿನ, —ಶಾಸನ ಸಭೆಗಳು). ರಾಜ್ಯಾಧಿಕಾರ, ಪ್ರಜಾಪಾಲನಾಧಿಕಾರ (Church & S. ಮಠಾಧಿಕಾರ ಮತ್ತು ರಾಜ್ಯಾಧಿಕಾರ). ಪದವಿ, ದರ್ಜೆ, ಘನತೆ, ಗೌರವ (In a style of befitting s. ಅವನ ಘನತೆಗೆ ತಕ್ಕ ರೀತಿಯಲ್ಲಿ); ವೈಭವ, ಅಟ್ಟಹಾಸ [Arrived in great s. ಮಹಾ ವೈಭವದಿಂದ ಆಗಮಿಸಿದನು. Keep s. ಘನತೆಯಿಂದಿರು, ದೊಡ್ಡಸ್ತಿಕೆಯಲ್ಲಿರು; ಸಲಿಗೆ ಕೊಡದಿರು. In s. ಉಚಿತ ಮರ್ಯಾದೆಗಳೊಡನೆ, ವೈಭವದಿಂದ. Lie in s. (ಸತ್ತವನ ವಿಷಯದಲ್ಲಿ: ಕಳೇಬರ) ಉಚಿತ ಮರ್ಯಾದೆಗಳಿಂದ ಪ್ರದರ್ಶಿತವಾಗಿರು]. (ಪ್ರಾಚೀ. ಪ್ರ.) ಗಾದಿ, ಸಿಂಹಾಸನ (=Chair of s.); ಸಿಂಹಾಸನದ ಮೇಲ್ಕಟ್ಟು. (ಗು.) ರಾಜ್ಯದ, ಸರಕಾರದ, ರಾಷ್ಟ್ರದ, ಸಂಸ್ಥಾನದ [S. criminal ರಾಜಕೀಯ ಅಪರಾಧಿ. S. document ರಾಷ್ಟ್ರದ, ಸರಕಾರದ, —ಕಾಗದಪತ್ರ, ದಾಖಲೆ. S. prisoner ರಾಷ್ಟ್ರದಮೇಲಿನ ಘೋರಾಪರಾಧಕ್ಕಾಗಿ ದಸ್ತಗಿರಿಯಾದವನು: ರಾಜಕೀಯ ಖೈದಿ. S. trial (ಮು., ಸರಕಾರ ಹೊರಿಸಿದ) ರಾಜಕೀಯ ಅಪರಾಧದ ವಿಚಾರಣೆ. S. rights (ಅಮೆ. ಸಂ.) ಸಂಯುಕ್ತ ಸರಕಾರಕ್ಕೆ ವಹಿಸದೆ ಸಂಸ್ಥಾನಗಳು ತಾವೇ ಇಟ್ಟುಕೊಂಡಿರುವ ಹಕ್ಕುಗಳು: ಸಂಸ್ಥಾನದ ಹಕ್ಕುಗಳು. S. socialism, socialist ಒಟ್ಟು ಪ್ರಜೆಗಳ ಪ್ರಯೋಜನಕ್ಕಾಗಿ ಕೈಗಾರಿಕೆಗಳು, ರೈಲು ಏರ್ಪಾಟು, ಮೊ. ಗಳ ಆಡಳಿತವನ್ನು ಸರಕಾರವೇ ವಹಿಸಿಕೊಳ್ಳಬೇಕೆಂಬ ವಾದ(ದವನು): ರಾಜ್ಯ, ರಾಷ್ಟ್ರ, ಸರಕಾರ, —ಸಮಷ್ಟಿವಾದ, ಸಮಷ್ಟಿ ವಾದಿ]; ಉತ್ಸವಾದಿ ವಿಶೇಷ ಸಂದರ್ಭಗಳಿಗಾಗಿ —ಮೀಸಲಿಟ್ಟ, ಮಾಡಿದ [S. apartments, carriage ಉತ್ಸವ —ಮಂದಿರಗಳು, ವಾಹನ. S. call (ಬಳ. ಮಾ.) ಔಪಚಾರಿಕ, ಮರ್ಯಾದೆಯ, —ಭೇಟಿ. S. room ಉತ್ಸವ ಕೋಣೆ; (ಹಡಗಿನಲ್ಲಿ) ಮಲಗಿಕೊಳ್ಳುವ ಏಕಾಂತ ಕೋಣೆ]. **Státely** (ಗು.) (ನಡತೆ, ಭಾಷೆ, ವ್ಯಕ್ತಿ, ಸಾಹಿತ್ಯ ಶೈಲಿ, ಪದ್ಯದ ಓಟ, ಕಟ್ಟಡ, ಪ್ರಮಾಣಗಳು, ಮೊ. ಗಳ ವಿಷಯದಲ್ಲಿ) ಭವ್ಯವಾದ, ಗಂಭೀರವಾದ, ಘನವಾದ. **Státeliness** (ನಾ.); **Státecraft** (ನಾ.) ರಾಜ್ಯತಂತ್ರ. **Státesman** —ಮನ್ (ನಾ.) ರಾಜ್ಯ ವ್ಯವಹಾರಗಳಲ್ಲಿ ಪ್ರಮುಖ ಪಾತ್ರ ವಹಿಸುವವನು, ಕುಶಲನಾದವನು: ರಾಜ್ಯ ನೀತಿಜ್ಞ; (ಬುದ್ಧಿವಂತನೂ ದೂರದೃಷ್ಟಿಯುಳ್ಳವನೂ ಕಾರ್ಯಶೀಲನೂ ಆದ) ರಾಜಕೀಯ, —ಪ್ರಮುಖ, ನಿಪುಣ. The Elder Statesmen [ಜಪಾನಿನ ಚಕ್ರವರ್ತಿಯ ಪುನಃಪ್ರತಿಷ್ಠಾಪನೆಯ ಕಾಲದಿಂದ (೧೮೬೭ರಿಂದ) ೧೯ನೆಯ ಶ. ಮಾ. ದ ಕೊನೆಯವರೆಗೆ ಜಪಾನ್ ದೇಶದ ಪುರೋಭಿವೃದ್ಧಿಗೆ ಮುಖ್ಯ ಕಾರಣರಾಗಿ ಚಕ್ರವರ್ತಿಯ ಅಂತರಂಗ ಸಲಹೆಗಾರರಾಗಿದ್ದ] ಹಿರಿಯ ರಾಜ್ಯತಂತ್ರಜ್ಞರು. (ಇಂಗ್ಲೆಂಡಿನ ಉತ್ತರ ಪ್ರಾಂ. ಪ್ರ.) (ಸ್ವಂತ ಬೇಸಾಯಮಾಡುವ) ಸಣ್ಣ ಜಮೀನುದಾರ. **Statesmanlike** (ಗು.); **Státesmanly** (ಕ್ರಿ. ವಿ.); **Státesmanship** (ನಾ.) ರಾಜ್ಯತಂತ್ರಜ್ಞತೆ; ವ್ಯವಹಾರ ಕೌಶಲ

State[3] (ಕ್ರಿ. ಸಕ.) (ಮಾತಿನಲ್ಲಿ ಅಥವಾ ಬರಹದಲ್ಲಿ ಪೂರ್ತಿಯಾಗಿ, ಸ್ಪಷ್ಟವಾಗಿ) ಹೇಳು, ತಿಳಿಸು, ವ್ಯಕ್ತಪಡಿಸು, ನಮೂದಿಸು (I have stated my opinion. Must s. full particulars ಪೂರ್ತಿ ವಿವರಗಳನ್ನು ಹೇಳಬೇಕು, ನಮೂದಿಸಬೇಕು. States that arrangements are complete ಏರ್ಪಾಡುಗಳೆಲ್ಲ ಮುಗಿದಿವೆ ಎಂದು ತಿಳಿಸುತ್ತಾನೆ); (ತಾರೀಖು, ಮೊ. ನ್ನು) ಗೊತ್ತುಪಡಿಸು, ನಿರ್ದೇಶಿಸು (At stated intervals ನಿರ್ದಿಷ್ಟ ಕಾಲಾವಧಿಗಳಲ್ಲಿ); (ಬೀಜಗಣಿತ) (ಲೆಕ್ಕ, ಸಂಬಂಧ, ಮೊ. ಗಳ ನಿಯಮಗಳನ್ನು) ಸಂಕೇತಗಳಲ್ಲಿ—ಹೇಳು, ನಿರ್ದೇಶ ಮಾಡು; (ಪ್ರಶ್ನೆ, ಸಮಸ್ಯೆ, ಮೊ. ನ್ನು) ಕ್ರಮವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿರೂಪಿಸು. **Státable** (ಗು.) ; **Státedly** (ಕ್ರಿ. ವಿ.) ಕ್ರಮವಾಗಿ, ನಿಯತವಾಗಿ, ತಪ್ಪದೆ. **Státement** (ನಾ.) (ಮಾತಿನಲ್ಲಿ) ಹೇಳುವುದು (Requires clear s. ಸ್ಪಷ್ಟವಾಗಿ ಹೇಳುವುದು ಬೇಕಾಗಿದೆ) ; ಹೇಳಿಕೆ, ನಿರೂಪಣೆ (The s. is unfounded ಆ ಹೇಳಿಕೆ ನಿರಾಧಾರವಾದದ್ದು) ; (ಅಂಕಿ ಅಂಶಗಳು, ಲೇಣೆ ದೇಣೆ ಲೆಕ್ಕ, ಮೊ. ಗಳ) ತಃಖ್ತೆ, ವರ್ಗಪಟ್ಟಿ (Bank issues monthly statements ಬ್ಯಾಂಕು ತಿಂಗಳು ತಿಂಗಳಿನ ಲೆಕ್ಕಪಟ್ಟಿಯನ್ನು ಹೊರಡಿಸುತ್ತದೆ, ಕೊಡುತ್ತದೆ)

Státer ಸ್ಟೇಟರ್ (ನಾ.) ಬೇರೆ ಬೇರೆ ಬೆಲೆಗಳಿದ್ದ, ಒಂದು ಪುರಾತನ ಗ್ರೀಕ್ ನಾಣ್ಯ (ಮು., ೨೦ ಡ್ರ್ಯಾಕ್ಮ ಬೆಲೆಯ ಒಂದು ಚಿನ್ನದ ನಾಣ್ಯ)

Státely, Státesman. State[2] ನೋಡಿ.

Státic(al) ಸ್ಟ್ಯಾಟಿಕ್(ಕಲ್) (ಗು.) ನಿಂತಂತೆ ನಿಂತಿರುವ ; ಸ್ಥಾಯಿಯಾ ಸ್ವಭಾವದ : ಸ್ಥಾಯಿಯಾ ಪದಾರ್ಥಗಳಿಗೆ ಅಥವಾ ಸಮತೂಕಸ್ಥಿತಿಯಲ್ಲಿರುವ ಬಲಗಳಿಗೆ ಸಂಬಂಧಪಟ್ಟ : ಸ್ಥಿತಿ ಸಂಬಂಧದ ; (ರೂಪ.) (ಪ್ರಗತಿ ಅಥವಾ ಬದಲಾವಣೆ ಹೊಂದುವ ಸ್ಥಿತಿಗೆ ವಿರುದ್ಧವಾಗಿ) ಜಡ, ನಿಶ್ಚಲ. (ಚಲನೆಯಿಲ್ಲದೆ) ಭಾರವೊತ್ತುವ (S. pressure ನಿಶ್ಚಲ ಒತ್ತಡ). S. electricity ಸ್ಥಿರ ವಿದ್ಯುಚ್ಛಕ್ತಿ. Static ataxia ವ್ಯಕ್ತಿ ಸ್ಥಿರವಾಗಿ ನಿಂತುಕೊಳ್ಳಲಾಗದ (ನರಗಳ) ಒಂದು ವ್ಯಾಧಿ. **Státically** (ಕ್ರಿ. ವಿ.); **Státics** (ನಾ., ಬ. ವ. ; ಏ. ವ. ದಂತೆಯೂ ಪ್ರ.) ಸ್ಥಿತಿ ವಿಜ್ಞಾನ ; ಸಮಸ್ಥಿತಿ ಶಾಸ್ತ್ರ (Dynamics ಪದ ನೋಡಿ) ; ವಾಯುಕ್ಷೋಭೆ (=Atmospherics)

Státion ಸ್ಟೇಷನ್ (ನಾ., ಕ್ರಿ. ಸಕ.) (ಈಗ ವಿರ. ಪ್ರ.) ನಿಂತಿರುವುದು, ನಿಂತಿರುವ ರೀತಿ, ನಿಲುವು ; ಸ್ತಬ್ಧತೆ, ನಿಶ್ಚಲತೆ [(ಎದುರು ಪದ : Motion). A s. like the herald Mercury ದೇವದೂತನಾದ ಮರ್ಕ್ಯುರಿಯಂತೆ ನಿಲುವು. His life is a progress & not a s. ಅವನ ಜೀವನ ಪ್ರಗತ್ಯಾತ್ಮಕವಾದುದು, ಸ್ತಬ್ಧವಾದುದಲ್ಲ]. ರೂಢಿಯಾಗಿ ಅಥವಾ ನಿರ್ದಿಷ್ಟ ಉದ್ದೇಶಕ್ಕಾಗಿ ವ್ಯಕ್ತಿಯಾಗಲಿ ವಸ್ತುವಾಗಲಿ ನಿಂತಿರುವ, ನಿಲ್ಲಿಸಲ್ಪಟ್ಟಿರುವ, ಅಥವಾ ಇರುವ ಸ್ಥಳ, ಕಟ್ಟಡ, ಮೊ. ವು : ಸ್ಥಳ, ಸ್ಥಾನ, ನಿಲ್ದಾಣ, ನೆಲೆ, ಠಾಣ್ಯ, ಠಾಣೆ [Returned to their several stations ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು. Took up a convenient s. ಅನುಕೂಲವಾದ ಸ್ಥಾನದಲ್ಲಿ ನಿಂತನು. Coast-guard s. ಕರೆಯ ಕಾವಲುಗಾರನ ಠಾಣೆ. Police s. (Police ನೋಡಿ). Life-boat s. ಪ್ರಾಣರಕ್ಷಕ ದೋಣಿಯ ನೆರೆ. Naval s. ಹಡಗುಕಟ್ಟೆ, ಮೊ. ಸೌಕರ್ಯಗಳಿದ್ದು, ಹಡಗುಗಳಿಗೆ ಆಶ್ರಯಕೊಡುವ ಸ್ಥಳ : ಹಡಗುದಾಣ, ನೌಕಾಸ್ಥಾನ. Naval stations (ಯುದ್ಧ ಸಮಯದಲ್ಲಿ) ಹಡಗು ಪಡೆಯವರಿಗೆ ನಿಯಮಿಸಿದ ಸ್ಥಾನಗಳು] ; (ಸ್ಥಳೀಯ ಆವಶ್ಯಕತೆಗಳನ್ನು ಪೂರೈಸುವುದಕ್ಕಾಗಿರುವ) ಶಾಖಾ—ಕೋಠಿ, ಕಚೇರಿ ; ಪ್ರಯಾಣಿಕರು ತಂಗುವುದಕ್ಕೂ ಸಾಮಾನು ಇಡುವುದಕ್ಕೂ ಅವಕಾಶವಿರುವಂತೆ ಕಟ್ಟಡವುಳ್ಳ, ರೈಲು ನಿಲ್ಲುವ ಸ್ಥಳ : ರೈಲು ನಿಲ್ದಾಣ (Goods-s. ಸಾಮಾನು ರೈಲುಗಾಡಿ ಮಾತ್ರ ನಿಲ್ಲುವ ನಿಲ್ದಾಣ: ಸರಕು ರೈಲು ನಿಲ್ದಾಣ); (ಜೀವನದಲ್ಲಿ) ಸ್ಥಾನ, (ಮೇಲು) ದರ್ಜೆ, ಪದವಿ, ಅಧಿಕಾರ, ನೌಕರಿ, ಹುದ್ದೆ [Occupied a humble s. ಕೀಳು ದರ್ಜೆಯಲ್ಲಿದ್ದನು. Men of (exalted) s. (ದೊಡ್ಡ) ಪದವಿಯಲ್ಲಿರುವ ಜನರು, (ಉನ್ನತ) ಸ್ಥಾನಮಾನ ಪಡೆದ ಜನರು. The duties of his s. ಅವನ ಅಧಿಕಾರದ ಕರ್ತವ್ಯಗಳು] ; (ಮೋಜಣಿ) ಎಲ್ಲಿಂದ ಅಳತೆಗಳನ್ನು ತೆಗೆದುಕೊಳ್ಳುವರೊ ಅಂತಹ ಸ್ಥಳ(ಗಳಲ್ಲೊಂದು) : ಅಳತೆಯ ನೆಲೆ, ಸಮೀಕ್ಷಣ ಸ್ಥಾನ ; ಪ್ರಮಾಣ ದೂರ (ಸಾ., ೧೦೦ ಅಡಿ ಅಥವಾ ೬೬ ಅಡಿ). (ಮು., ಇಂಡಿಯದಲ್ಲಿ) ಸೈನಿಕ ಠಾಣೆ(ಯ —ಅಧಿಕಾರಿಗಳು, ಸಮಾಜ) ; (ಆಸ್ಟ್ರೇಲಿಯದಲ್ಲಿ) ಕುರಿ ಮೇಯಿಸುವ ಕಾವಲು, ಕಾವಲಿನಲ್ಲಿಯ ಕಟ್ಟಡಗಳು; ಕುರಿಗಾವಲು. (ಕ್ರೈಸ್ತ ಮತ) (ಚರಿತ್ರೆ) ಬುಧವಾರ ಮತ್ತು ಶುಕ್ರವಾರಗಳಲ್ಲಿ ಆಚರಿಸುತ್ತಿದ್ದ ಉಪವಾಸ ವ್ರತ ; (ಕ್ರೈಸ್ತ ಮತ) ಕೆಲವು ಕ್ರೈಸ್ತ ಆರಾಧನ ಮಂದಿರಗಳಲ್ಲಿ ಭಕ್ತರು ಮುಂದೆ ನಿಂತು ಪ್ರಾರ್ಥನೆ ಮಾಡುವ, ಯೇಸು ಕ್ರಿಸ್ತನು ಶಿಲುಬೆಯಮೇಲೆ ಪಟ್ಟ ಯಾತನೆಗಳನ್ನು ಚಿತ್ರಿಸುವ ೧೪ ಪ್ರತಿಮೆಗಳಲ್ಲಿ ಅಥವಾ ಚಿತ್ರಗಳಲ್ಲಿ ಯಾವುದಾದರೂ ಪ್ರತಿಮೆ ಅಥವಾ ಚಿತ್ರ : (ಕ್ರಿಸ್ತನ) ಶಿಲುಬೆಭಂಗಿಯ ಚಿತ್ರ, ಪ್ರತಿಮೆ (=S. of the cross) ; ಯಾತ್ರಿಕರು, ಮೊ. ರು ಪ್ರಾರ್ಥನೆಗಾಗಿ ಹೋಗುವ (ಮು., ರೋಮಿನಲ್ಲಿಯ) ಕ್ರೈಸ್ತ ಆರಾಧನ ಮಂದಿರ. (ಸ. ವಿ., ಪ್ರಾ. ವಿ.) (ಹವ, ಭೂಗುಣ, ಮೊ. ಕ್ಕೆ ಸಂಬಂಧಪಟ್ಟಂತೆ ಸಸ್ಯ ಅಥವಾ ಪ್ರಾಣಿಯ) ತವರಿನ ಸ್ವರೂಪ. **S.-bill** (ನಾವೆ) (ಹಡಗು ನಡಸುವಲ್ಲಿ) ಹಡಗು ಪಡೆಯವರಿಗೆ ವಹಿಸಿದ ಸ್ಥಾನಗಳ ಪಟ್ಟಿ : ನಾವಿಕಸ್ಥಾನ ಪಟ್ಟಿ. **S.-calendar** ನಿಲ್ದಾಣದ ಬೇರೆ ಬೇರೆ ಜಗಲಿಗಳಿಂದ ಆಯಾ ರೈಲುಗಳು ಹೊರಡುವ ಹೊತ್ತುಗಳನ್ನು ಪ್ರಕಟಿಸಿರುವ ಹಲಗೆ : ನಿಲ್ದಾಣದ ವೇಳಾ ಪಟ್ಟಿ. **S.-house** ಪೋಲೀಸು—ಠಾಣೆ, ಚಾವಡಿ. **S.-master** ರೈಲು ನಿಲ್ದಾಣದ —ಯಜಮಾನ, ಆಡಳಿತಾಧಿಕಾರಿ; ಸ್ಟೇಷನ್ ಮೇಷ್ಟ್ರು. **S.-pointer** (ಮೋಜಣಿ ಮತ್ತು ನಾವೆ) ಕೆಲವು ಗೊತ್ತಾದ ಅಂಶಗಳ ಆಧಾರದಿಂದ, ನಕ್ಷೆಯ (ರೇಖಾಪಟದ) ಮೇಲೆ ಸ್ಥಳಗಳನ್ನು ನಿರ್ದೇಶಿಸಲು ಅನುಕೂಲಿಸುವ ಮೂರು ತೋಳುಗಳುಳ್ಳ ಒಂದು ಕೋನಮಾಪಕ : ಸ್ಥಾನ ನಿರ್ದೇಶಕ. **Státionary** (ಗು., ನಾ.) ಒಂದೇ ಕಡೆ ನಿಂತಿರುವ, ನೆಲೆಯಾದ, ನಿಶ್ಚಲ ; ಕದಲಿಸಬಾರದ, ಸ್ಥಳಾಂತರಿಸಬಾರದ ; ಸ್ತಬ್ಧ, ಸ್ಥಿರ, ಸ್ಥಾಯಿ [Balloon was now s. ಆಕಾಶಬುಟ್ಟಿ ನೆಲೆಯಾಗಿ ನಿಂತಿತ್ತು. S. engine (ಒಂದೇ ಕಡೆ ನೆಲೆಯಾಗಿದ್ದು ಕೆಲಸಮಾಡುವ) ಸ್ಥಿರ ಎಂಜಿನು. S. troops (ಸ್ಥಳಾಂತರಿಸಬಾರದ) ಸ್ಥಿರ ಸೈನ್ಯದಳಗಳು]. (ಗ್ರಹಗಳ ವಿಷಯದಲ್ಲಿ) ರೇಖಾಂಶದಲ್ಲಿ ಆಪಾತ ಚಲನೆಯಿಲ್ಲದ, ನಿಶ್ಚಲ ; (ಅಳತೆ, ಸಂಖ್ಯೆ, ಗುಣ, ಶಕ್ತಿ, ಮೊ. ಗಳಲ್ಲಿ) ಬದಲಾಯಿಸದ, ಇದ್ದಹಾಗೆ ಇರುವ, ಸ್ಥಿರ (S. temperature ಸ್ಥಿರಶಾಖ. S. population ಬದಲಾಯಿಸದೆ ಒಂದೇ ಸಮನೆ ಇರುವ ಜನಸಂಖ್ಯೆ ; ಕಾಯಂ ಜನಸಂಖ್ಯೆ. S. intelligence ಒಂದೇ ಮಟ್ಟದಲ್ಲಿರುವ, ತಟಸ್ಥ, ಅವ್ಯತ್ಯಸ್ತ, —ಬುದ್ಧಿಶಕ್ತಿ. S. air ಸಾಮಾನ್ಯ ಶ್ವಾಸೋಚ್ಛ್ವಾಸದಲ್ಲಿ ಶ್ವಾಸಕೋಶದಿಂದ ಹೊರಹೋಗದೆ ನಿಂತಿರುವ ಗಾಳಿ : ಸ್ಥಾಯಿಯಾ ವಾಯು. S. diseases (ಹವಾಮಾನದ ಪರಿಸ್ಥಿತಿಯಿಂದ ತಲೆದೋರಿ ಕೆಲವು ಕಾಲವಾದಮೇಲೆ ತೊಲಗಿಹೋಗುವ) ಸ್ಥಳೀಯ ವ್ಯಾಧಿಗಳು. (ನಾ.) ಕಾಯಂ, ಸ್ಥಾಯಿಯಾ, —ಮನುಷ್ಯ ; (ಬ. ವ. ದಲ್ಲಿ) ಸ್ಥಿರ, ಸ್ಥಾಯಿಯಾ, —ಸೈನ್ಯದಳಗಳು. **Státionariness** (ನಾ.)

Státion (ಕ್ರಿ. ಸಕ.) (ಒಬ್ಬನನ್ನು) ಒಂದು ಸ್ಥಾನದಲ್ಲಿ, ಸ್ಥಳದಲ್ಲಿ, —ನಿಲ್ಲಿಸು, ನೇಮಿಸು, ಇರಿಸು (S. oneself ಸ್ಥಾನದಲ್ಲಿ ನಿಂತುಕೊ, ಸ್ಥಳ ವಹಿಸು)

Státionary. Station ನೋಡಿ.

Státioner ಸ್ಟೇಷನರ್ (ನಾ.) ಬರೆವಣಿಗೆ ಸಾಮಗ್ರಿ, ಮೊ. ನ್ನು ಮಾರುವವನು : ಲೇಖನ ಸಾಮಗ್ರಿ ವ್ಯಾಪಾರಿ. Stationers' Hall ಹಕ್ಕುಗಳನ್ನು ಕಾದಿಡುವುದಕ್ಕಾಗಿ ಗ್ರಂಥವನ್ನು ದಾಖಲೆಮಾಡಿಸುವ, ಲಂಡನಿನಲ್ಲಿಯ ಪುಸ್ತಕ ವ್ಯಾಪಾರಿ ಸಂಘದ ಮಂದಿರ. **Státionery** (ನಾ.) ಬರೆವಣಿಗೆ, ಲೇಖನ, —ಸಾಮಗ್ರಿ [(ವಿಶೇಷಣವಾಗಿಯೂ ಪ್ರ.) S. business, trade ಲೇಖನ ಸಾಮಗ್ರಿ ವ್ಯಾಪಾರ]

Státist ಸ್ಟೇಟಿಸ್ಟ್ (ನಾ.) (ಈಗ ವಿರ. ಪ್ರ.) ರಾಜ್ಯ—ತಂತ್ರಜ್ಞ, ನೀತಿಜ್ಞ. ಅಂಕಿ ಅಂಶಗಳ ಸಂಗ್ರಾಹಕ ; ಸಂಖ್ಯಾ ಸಂಗ್ರಹಣ ಶಾಸ್ತ್ರಜ್ಞ.

Statístics ಸ್ಟಟಿಸ್ಟಿಕ್ಸ್ (ನಾ., ಬ. ವ.) (ಕ್ರಮಬದ್ಧವಾಗಿ ಸಂಗ್ರಹಿಸಿದ) ಅಂಕಿ ಅಂಶಗಳು ; ಸಂಖ್ಯಾ ಸಂಗ್ರಹಣ (S. of population, crime ಜನಸಮುದಾಯದ, ಅಪರಾಧದ, —ಸಂಖ್ಯಾ ಸಂಗ್ರಹಣ). ಅಂಕಿ ಅಂಶಗಳನ್ನು ಸಂಗ್ರಹಿಸಿ, ವಿಂಗಡಿಸಿ, ಉಪಯೋಗಿಸುವ ಶಾಸ್ತ್ರ: ಸಂಖ್ಯಾ ಪರಿಶೀಲನ ಶಾಸ್ತ್ರ. **Statístic(al)** (ಗು.) ಸಂಖ್ಯಾ—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಗ್ರಹಣದ, ಪರಿಶೀಲನದ. **Statístically** (ಕ್ರಿ. ವಿ.); **Statístician** ಸ್ಟ್ಯಾಟಿಸ್ಟಿಷನ್ (ನಾ.) ಸಂಖ್ಯಾ ಸಂಗ್ರಹಣ ಶಾಸ್ತ್ರಜ್ಞ; ಸಂಖ್ಯಾ ಪರಿಶೀಲಕ. **Statistólogy** ಸ್ಟ್ಯಾಟಿಸ್ಟಾಲೊಜಿ (ನಾ.) ಸಂಖ್ಯಾ ಸಂಗ್ರಹಣ ಶಾಸ್ತ್ರ.

Státor ಸ್ಟೇಟರ್ (ನಾ.) (ವಿದ್ಯುದುತ್ಪಾದಕದಲ್ಲಿಯ ಅಥವಾ ವಿದ್ಯುಚ್ಚಾಲಕದಲ್ಲಿಯ ಯಾವುದಾದರೂ) ಸ್ಥಿರ ಭಾಗ (S. armature ಸ್ಥಿರವಾದ, ತಿರುಗದ—ತಂತಿದಂಡ)

Státoscope ಸ್ಟ್ಯಾಟೊಸ್ಕೋಪ್ (ನಾ.) ವಾಯುಮಂಡಲದ ಒತ್ತಡದಲ್ಲಿ ಸೂಕ್ಷ್ಮ ವ್ಯತ್ಯಾಸಗಳನ್ನು ತೋರಿಸುವ ನಿರ್ದ್ರವ ವಾಯುಭಾರ ಮಾಪಕ: ಸೂಕ್ಷ್ಮ ನಿರ್ದ್ರವ ವಾಯುಭಾರದರ್ಶಕ.

Státue ಸ್ಟ್ಯಾಟ್ಯು(ಚು) (ನಾ.) (ಕೆತ್ತಿದ, ಎರಕಹೊಯ್ದ, ಅಥವಾ ರೂಪಿಸಿದ ಪ್ರಾಣಿಯ ಅಥವಾ ಮನುಷ್ಯನ, ಸಾ., ವ್ಯಕ್ತಿ ಪ್ರಮಾಣಕ್ಕೆ ಕಡಮೆಯದಲ್ಲದ) ಪ್ರತಿಮೆ, ವಿಗ್ರಹ, ಮೂರ್ತಿ [Equestrian s. (Equestrian ನೋಡಿ)]. **Státuary** (ಗು., ನಾ.) ಪ್ರತಿಮೆಗಳ, ವಿಗ್ರಹದ; —ಗಳಿಗೆ ಆಗುವ, ಅನುಕೂಲವಾದ (S. art ಪ್ರತಿಮಾ, ವಿಗ್ರಹ, —ಕಲೆ, ಶಿಲ್ಪ. S. marble ಬಹು ಸೂಕ್ಷ್ಮಕಣಗಳ ಬಿಳಿಯ ಅಮೃತಶಿಲೆ: ವಿಗ್ರಹಶಿಲೆ). (ನಾ.) ಪ್ರತಿಮಾ, ವಿಗ್ರಹ, —ಶಿಲ್ಪಿ, ಶಿಲ್ಪ, ಕಲೆ; ಮೂರ್ತಿಗಳು, ವಿಗ್ರಹಗಳು. **Státued** (ಗು.) ವಿಗ್ರಹವಾಗಿ —ಕೆತ್ತಿದ, ನಿರೂಪಿಸಿದ; ಪ್ರತಿಮಾರ್ಪಿತ; ಪ್ರತಿಮೆಗಳಿಂದ ಅಲಂಕರಿಸಿದ. **Statuésque** —ಎಸ್ಕ್ (ಗು.) ಪ್ರತಿಮೆಯಂಥ, ಪ್ರತಿಮೋಪಮ; ಪ್ರತಿಮಾ—ಗಾಂಭೀರ್ಯವುಳ್ಳ, ಸೌಂದರ್ಯವುಳ್ಳ; ಪ್ರತಿಮೆಯಂತೆ —ಕಡೆದ, ಕೆತ್ತಿದ (A s. attitude. S. limbs). **Statuésquely** (ಕ್ರಿ. ವಿ.); **Statuésqueness** (ನಾ.); **Statuétte** (ನಾ.) ಸಣ್ಣ ಪ್ರತಿಮೆ.

Státure ಸ್ಟ್ಯಾಟ್ಯು(ಚ)ರ್ (ನಾ.) (ಸಾ., ಮನುಷ್ಯದೇಹದ) ಎತ್ತರ, ಉನ್ನತಿ [Increased in s ಎತ್ತರದಲ್ಲಿ ಹೆಚ್ಚಿ. Of mean s. ಗಿಡ್ಡಾದ, ಅಲ್ಪೋನ್ನತಿಯ. (ರೂಪ.) Moral s. ಶೀಲೋನ್ನತಿ, ಗುಣೋನ್ನತಿ]. (-)**statured** (ಗು.)

Státus ಸ್ಟೇಟಸ್ (ನಾ., ಬ. ವ. ಪ್ರ. ಬಹುಶಃ ಇಲ್ಲ) (ಸಮಾಜದಲ್ಲಿ ಒಬ್ಬನ) ದರ್ಜೆ, ಅಂತಸ್ತು, ಸ್ಥಾನ(ಮಾನ), ಗಣ್ಯತೆ, ಮಾನ್ಯತೆ (His s. is a matter of doubt ಅವನ ಸ್ಥಾನಮಾನ ಸಂದೇಹಾಸ್ಪದವಾಗಿದೆ. His s. among novelists ಕಾದಂಬರಿಕಾರರಲ್ಲಿ ಅವನ ಸ್ಥಾನ). (ನ್ಯಾ. ಶಾ.) ಕಾನೂನಿನ ಪ್ರಕಾರ ಇತರರೊಡನೆ ಒಬ್ಬನಿಗಿರುವ ಸಂಬಂಧ; ವ್ಯಕ್ತಿಗೆ ಸಮಾಜದೊಡನೆ ಇರುವ ಬಾಧ್ಯಸ್ಥಿತಿ: ಸ್ಥಾನ, ಸ್ಥಿತಿ (The legal s. of the Gipsies. The s. of enemy merchant vessels ಶತ್ರುಪಕ್ಷದ ವ್ಯಾಪಾರದ ಹಡಗುಗಳ ಸ್ಥಾನ); ಸ್ಥಿತಿ, ವಿದ್ಯಮಾನ [S. (in) quo ಸ್ಥಿತಿ ಬದಲಾಯಿಸದೆ; ಯಥಾಸ್ಥಿತಿ(ಯಲ್ಲಿ); ಹಿಂದಿನ ಸ್ಥಿತಿ, ಯಥಾಪೂರ್ವ(=S. quo ante)]

Státute ಸ್ಟ್ಯಾಟ್ಯೂ(ಚೂ)ಟ್ (ನಾ.) (ಶಾಸನ ಸಭೆ ವಿಹಿತಮಾಡಿದ) ಲಿಖಿತ ಶಾಸನ; ಕಾನೂನು [S. law ಲಿಖಿತ ನ್ಯಾಯಸೂತ್ರ(ಗಳು), ಶಾಸನ(ಗಳು) (ಎದುರು ಪದ: Common law ಸಂಪ್ರದಾಯ ನ್ಯಾಯ)]; (ಶಾಶ್ವತವಾಗಿ ನಡೆದುಬರಬೇಕೆಂದು ಸಂಸ್ಥೆ, ಸ್ಥಾಪಕ, ಮೊ.ರು ಗೊತ್ತುಪಡಿಸಿದ) ಕಟ್ಟಳೆ, ಕಟ್ಟುಪಾಡು, ನಿಬಂಧನೆ (University statutes ವಿಶ್ವವಿದ್ಯಾನಿಲಯದ ನಿಬಂಧನೆಗಳು); (ಬೈಬಲ್) ದೈವಶಾಸನ, ದೇವರ ಕಟ್ಟಳೆ (Kept thy statutes ನಿನ್ನ ಕಟ್ಟಳೆಗಳನ್ನು ಪಾಲಿಸಿದ್ದೇನೆ). Declaratory s. ಈಗ ಇರುವ ನ್ಯಾಯಸೂತ್ರಗಳ ಅರ್ಥ ವಿವರಣೆಯನ್ನು ನಿರ್ಧರಿಸುವ ಶಾಸನ: ಅರ್ಥ ನಿರ್ಧಾರಕ ಶಾಸನ. Private s. (ಸಾರ್ವಜನಿಕರಿಗಲ್ಲದೆ ನಿರ್ದಿಷ್ಟ ವ್ಯಕ್ತಿಗಳಿಗೆ ಮಾತ್ರ ಅನ್ವಯಿಸುವ) ಖಾಸಗಿ—ಶಾಸನ, ಕಾನೂನು. S.-book ಶಾಸನ(ಗಳ)—ಸಂಗ್ರಹ, ಪುಸ್ತಕ(ಗಳು); ಕಾಯಿದೆ ಕಡತ. S. roll ಕಾಯಿದೆಗಳನ್ನು ಬರೆದಿರುವ ಕಾಗದದ ಸುರುಳಿ: ಕಾಯಿದೆ ಸುರುಳಿ; ಶಾಸನ ಪುಸ್ತಕ. Statutes at large (ಮೊದಲು ಶಾಸನಮಾಡಿದಾಗ ಹೇಗೆ ಇದ್ದಿತೋ ಹಾಗೆಯೇ ಇರುವ) ಸಮಗ್ರ, ಮೂಲರೂಪದ —ಶಾಸನಗಳು. **Státutable** (ಗು.) =Statutory. **Státutably** (ಕ್ರಿ. ವಿ.); **Státutory** (ಗು.) ಶಾಸನ ವಿಧಿಸಿದ, ಶಾಸನ ಬದ್ಧ, ನಿಬಂಧನೆಯ ಪ್ರಕಾರದ, ಕಾಯಿದೆಯ ಮೇರೆಯ (S. provisions, minimum)

Staunch, Stanch ಸ್ಟಾನ್ಷ್ (ಗು.) ನಂಬಿಕೆಯ, ವಿಶ್ವಾಸಾರ್ಹ (S. friend, supporter ವಿಶ್ವಾಸಾರ್ಹನಾದ ಸ್ನೇಹಿತ, ನಂಬಿಕೆಯ ಬೆಂಬಲಕಾರ); ನಿಷ್ಠೆಯ, ದೃಢ (ನಿಶ್ಚಯದ) (A s. churchman, Tory); (ಹಡಗು, ಜೋಡಣೆ, ಮೊ. ಗಳ ವಿಷಯದಲ್ಲಿ) ನೀರು, ಗಾಳಿ, —ತೂರದ; ತೂರುಗಂಡಿಗಳಿಲ್ಲದ; ಭದ್ರವಾದ, ಬಲವಾದ (The wall of the tower is still s. & strong). **Staúnchly** (ಕ್ರಿ. ವಿ.); **Staúnchness** (ನಾ.)

Staúroscope ಸ್ಟಾರೊಸ್ಕೋಪ್ (ನಾ.) ಸ್ಫಟಿಕಗಳಮೇಲೆ ಧ್ರುವೀಕೃತ ಪ್ರಕಾಶದ ಪರಿಣಾಮವನ್ನು ಪರೀಕ್ಷಿಸಲು ಉಪಯೋಗಿಸುವ ಸಲಕರಣೆ: ಸ್ಫಟಿಕ ಪ್ರಕಾಶ ದರ್ಶಕ.

Stave ಸ್ಟೇವ್ (ನಾ., ಕ್ರಿ. ಸಕ.; ಭೂತ., ಭೂ. ಕೃ. Staved ಅಥವಾ Stove) (ಪೀಪಾಯಿ, ಮೊ. ಗಳ) (ಬಾಗು) ಹಲಗೆ, ಪಟ್ಟಿ(ಗಳಲ್ಲೊಂದು); (ಬಾವಿಕಟ್ಟೆಯ ಅಥವಾ ಕೊಳವೆಯ ಒಳಪಕ್ಕಕ್ಕೆ ಹಾಕಿರುವ) ಬದಿ ಹಲಗೆ; ಏಣಿಯ ಮೆಟ್ಟಲು; ಪದ್ಯ, ವೃತ್ತ, ಶ್ಲೋಕ; (ಸಂ.) =Staff (ಆ ಪದ ನೋಡಿ). [S.-rhyme (ಮು., ಪ್ರಾಚೀನ, ಟ್ಯೂಟಾನಿಕ್ ಕಾವ್ಯದಲ್ಲಿ ಬರುವ) ಅನುಪ್ರಾಸ]. (ಕ್ರಿ.) (ಪೀಪಾಯಿ, ದೋಣಿ, ಮೊ. ಗಳಲ್ಲಿ) ತೂತು, ರಂಧ್ರ, —ಕೊರೆ, ಮಾಡು (ಅನೇಕ ವೇಳೆ *in* ಕ್ರಿ. ವಿ. ದೊಡನೆ); (ಚೊಪ್ಪಿಗೆ, ಪೆಟ್ಟಿಗೆ, ಮೊ. ನ್ನು ರೂಪುಗೆಡುವಂತೆ) ಜಜ್ಜಿಹಾಕು, ಅಪ್ಪಚ್ಚಿಮಾಡು; ಚೂರು ಚೂರು —ಮಾಡು, ಆಗು; ಒಡೆ(ದು ಹೋಗು) (Like a vessel of glass she stove & sank); ಪೀಪಾಯಿ, ಮೊ. ಗಳಿಗೆ) ಹಲಗೆ, ಪಟ್ಟಿ, —ಹಾಕು, ಜೋಡಿಸು; (ಲೋಹ, ಮೊ. ನ್ನು ಒತ್ತಡಕೊಟ್ಟು) ದೃಢಮಾಡು, ಗಡುಚುಮಾಡು. S. off (ವಿನಾಶ, ಮೊ. ನ್ನು) ತಪ್ಪಿಸು, ನಿವಾರಿಸು, ತಡೆದಿರು; ಬೀಸುವ ದೊಣ್ಣೆ ತಪ್ಪಿಸಿಕೊ.

Stávesacre ಸ್ಟೇವ್ಸೇಕರ್ (ನಾ.) ಕ್ರಿಮಿಗಳಿಗೆ ವಿಷವಾಗಿ ಉಪಯೋಗಿಸುವ ಬೀಜಗಳನ್ನು ಬಿಡುವ, ಒಂದು ಬಗೆಯ ಲಾರ್ಕ್‌ಸ್ಪರ್ ಎಂಬ ಸಸ್ಯ.

Stay[1] ಸ್ಟೇ (ಕ್ರಿ., ನಾ.) (ಈಗ ಮು., ಸಾಹಿತ್ಯ ಪ್ರ.) (ಪ್ರಗತಿ, ರೋಗದ ಹಾವಳಿ, ಮೊ. ನ್ನು) ತಡೆ(ಗಟ್ಟು), ನಿಲ್ಲಿಸು, ನಿರೋಧಿಸು [S. one's stomach (ಮು., ತಾತ್ಕಾಲಿಕವಾಗಿ) ಹಸಿವು ಅಡಗಿಸು, ಹಿಂಗಿಸು; ಹೊಟ್ಟೆಗೆ ಆಧಾರ ಮಾಡಿಕೊ]; (ತೀರ್ಪು, ನಿರ್ಣಯ, —ಕೊಡುವುದನ್ನು) ತಡೆದಿಡು, ಮುಂದಕ್ಕೆ ಹಾಕು. ಊರೆ, ಆಸರೆ, ಆಧಾರ, —ಕೊಡು (ಅನೇಕ ವೇಳೆ *up* ಉಪ. ದೊಡನೆ); ಇರು, ನಿಲ್ಲು [S. here till I return ನಾನು ಹಿಂದಿರುಗುವವರೆಗೆ ಇಲ್ಲಿಯೇ ಇರು. Will not s. where it is put, (ಅಮೆ. ಸಂ.) Will not s. put ಇಟ್ಟ ಕಡೆ ಇರುವುದಿಲ್ಲ. Has come to s. (ಬಳ. ಮಾ.) ಅದು ನೆಲಸಿಬಿಟ್ಟಿದೆ, ಬಳಕೆಗೆ ಬಂದುಹೋಗಿದೆ. **S.-at-home** (ಗು., ನಾ.) ಮನೆಯಲ್ಲೇ ಮೂರು ಹೊತ್ತೂ ಇರುವ (ಅಭ್ಯಾಸದ ಮನುಷ್ಯ); ಮನೆಮೂಳ(ಳಿ). S. away (ಬರಬೇಕಾದ ಸ್ಥಳ, ಮೊ. ಕ್ಕೆ) ಬರದೆ ನಿಂತುಹೋಗು (He stayed away from school). S. on ಹೆಚ್ಚು ಕಾಲ ನಿಂತುಬಿಡು, ಉಳಿ. S. out (ಮನೆಗೆ ಬರದೆ) ಹೊರಗೆ ನಿಂತುಬಿಡು, ಉಳಿದುಕೊ]; (ಬಳ. ಮಾ.) (—ಕ್ಕಾಗಿ) ಕಾಯಿ, ಕಾದಿರು (Can you s. supper? ರಾತ್ರಿ ಊಟಕ್ಕೆ ಇರಬಲ್ಲೆಯಾ?). ಸ್ವಲ್ಪ ಕಾಲ ಉಳಿ(ದುಕೊ), ತಂಗು (S. *at* hotel, *in* town, *with* person); (ಚಲನೆ, ಕೆಲಸ, ಮಾತು, ಮೊ. ಗಳಲ್ಲಿ; ಮು., ವಿಧ್ಯರ್ಥದಲ್ಲಿ) ತಡೆ, ನಿಲ್ಲು (Get him to s. a minute ಅವನನ್ನು ಒಂದು ನಿಮಿಷ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿಲ್ಲುವಂತೆ ಮಾಡು. S! —you forget one thing ತಾಳು, ಒಂದು ವಿಷಯ ನೀನು ಮರೆತೆ); (ಮು., ಪಂದ್ಯದಲ್ಲಿ) ಸಹಿಸುವ ಶಕ್ತಿ ತೋರಿಸು, ತಡೆದುಕೊ, ಸಹಿಸಿಕೊ (Does not seem able to s. ತಡೆದುಕೊಳ್ಳುವಂತೆ ತೋರುವುದಿಲ್ಲ, ಸಹನ ಸಾಮರ್ಥ್ಯವಿರುವಂತೆ ತೋರುವುದಿಲ್ಲ). (ನಾ.) ಇರುವುದು, ನಿಲ್ಲುವುದು, (ಮು., ಒಂದು ಸ್ಥಳದಲ್ಲಿ) ವಾಸ, ತಂಗುವುದು, ತಂಗಿರುವ ಕಾಲ, ಮೊಕ್ಕಾಮು (Made a long s. ದೀರ್ಘಕಾಲ ನಿಂತನು, ತಂಗಿದನು); (ನ್ಯಾಯಸ್ಥಾನದಲ್ಲಿ ಕ್ರಮ ಜರುಗಿಸುವುದನ್ನು) ತಡೆದಿಡುವುದು (S. of execution ತೀರ್ಪು ಜಾರಿಯನ್ನು ತಡೆದಿಡುವುದು); (ಮು., ಸಾಹಿತ್ಯ ಪ್ರ.) ತಡೆ, ನಿರೋಧ, ಪ್ರತಿಬಂಧ (A s. upon his activity ಅವನ ಚಟುವಟಿಕೆಗಳಿಗೆ ಒಂದು ತಡೆ); ತಾಳಿಕೆ, ತಡೆತ, ಸಹನಶಕ್ತಿ, ಸಹಿಷ್ಣುತೆ; ಊರೆ, ಆಸರೆ, ಆಧಾರ (You are the s. of my old age ನನ್ನ ಮುಪ್ಪಿನಲ್ಲಿ ನೀನೇ ನನ್ನ ಊರೆ, ಆಧಾರ); (ಬ. ವ.) (ಹೆಂಗಸಿನ) ಒಳ ಕುಪ್ಪಸ (=Corset). S.-bar, -rod (ಕಟ್ಟಡ, ಯಂತ್ರ, ಮೊ. ಗಳಲ್ಲಿ) ಆಸರೆ, ಆಧಾರ—ಕಂಬಿ, ಸಲಾಕಿ. S.-lace ಒಳ ಕುಪ್ಪಸದ ಲಾಡಿ, ಕಸೆ. S.-maker ಒಳ ಕುಪ್ಪಸ ಮಾಡುವವನು. **Stáyer** (ನಾ.) (ಕ್ರಿಯಾರ್ಥಗಳಲ್ಲಿ); ಓಟದಲ್ಲಿ ಸಹನಶಕ್ತಿಯುಳ್ಳ—ಮನುಷ್ಯ, ಪ್ರಾಣಿ; ಸಹಿಷ್ಣು. **Stáyless** (ಗು.) ಆಧಾರ, ಆಸರೆ, —ಇಲ್ಲದ; ಒಳ ಕುಪ್ಪಸವಿಲ್ಲದ.

Stay[2] ಸ್ಟೇ (ನಾ., ಕ್ರಿ. ಸಕ.) (ನಾವೆ) (ಕೂವೆಯನ್ನು, ದಿಮ್ಮಿಯನ್ನು, ಭದ್ರವಾಗಿ ನಿಲ್ಲಿಸುವ) ಬಿಗಿಹಗ್ಗ, ಕೂವೆಹಗ್ಗ [Ship is (hove) in stays ಹಡಗು (ಗಾಳಿಯ ಅನುಕೂಲ ಪಡೆಯುವುದಕ್ಕಾಗಿ) ದಿಕ್ಕು ಬದಲಾಯಿಸುವುದರಲ್ಲಿರು. Miss stays (ಗಾಳಿಯ ಅನುಕೂಲಕ್ಕಾಗಿ) ದಿಕ್ಕು ಬದಲಾಯಿಸಲಾರದೆ ಹೋಗು. Staysail (—ಸೆಯ್ಲ್; ನಾವೆ, —ಸ್‌ಲ್) ಕೂವೆಹಗ್ಗದ ಪಟ, ಹಾಯಿ]. (ಕ್ರಿ.) (ಕೂವೆ, ಮೊ. ಕ್ಕೆ) ಹಗ್ಗ(ಗಳನ್ನು) —ಕಟ್ಟು, ಬಿಗಿ; ಹಡಗನ್ನು (ಗಾಳಿಯ ಅನುಕೂಲಕ್ಕಾಗಿ) ಬೇರೆ ದಿಕ್ಕಿಗೆ ತಿರುಗಿಸು.

Stead ಸ್ಟೆಡ್ (ನಾ.) (ಈಗ ಮು., ಸಾಹಿತ್ಯ ಪ್ರ.) ಸ್ಥಳ, ಸ್ಥಾನ, ಎಡೆ. Stand (one) in good s. (ಒಬ್ಬನಿಗೆ) ಪ್ರಯೋಜನಕಾರಿಯಾಗಿ, ಸಹಾಯವಾಗಿ,—ಇರು; ಸಮಯಕ್ಕಾಗು, ನೆರವಾಗು. In one's s. ಒಬ್ಬನ —ಸ್ಥಳದಲ್ಲಿ, ಬದಲು. In the s. of —ರ ಬದಲು.

Steádfast ಸ್ಟೆಡ್‌ಫಸ್ಟ್ (ಗು.) (ಯುದ್ಧದಲ್ಲಿ ಸಿಪಾಯಿ) ಸ್ಥಳಬಿಟ್ಟು ಕದಲದ; ಸ್ಥಿರ, ದೃಢ, ನಿಶ್ಚಲ, ಬದಲಾಯಿಸದ (S. eye, purpose); (ವ್ಯಕ್ತಿಗಳ ವಿಷಯದಲ್ಲಿ) ದೃಢ ನಿಷ್ಠೆಯ (A s. woman is a crown unto her husband). **Steádfastly** (ಕ್ರಿ. ವಿ.); **Steádfastness** (ನಾ.)

Steáding ಸ್ಟೆಡಿಂಗ್ (ನಾ.) ಗದ್ದೆ ಮನೆ(ಯ ಜಮೀನು); ತೋಟದ ಮನೆ.

Steády ಸ್ಟೆಡಿ (ಗು., ನಾ., ಕ್ರಿ.) (ನೆಟ್ಟು, ಆಧಾರಗೊಂಡು) ಭದ್ರವಾಗಿ ನಿಂತಿರುವ; ಅಲ್ಲಾಡದ, ಸ್ಥಿರವಾದ, ತತ್ತರಿಸದ; ಸಮತೂಕವಾಗಿ ನಿಂತಿರುವ, ನಿಶ್ಚಲವಾದ (Not s. on his legs. S. as a rock ಕಲ್ಲುಬಂಡೆಯಂತೆ ಸ್ಥಿರವಾದ); ಎಡೆಬಿಡದೆ ಒಂದೇ ಸಮನೆ ಮಾಡಿದ, ಚಲಿಸುತ್ತಿರುವ, ವರ್ತಿಸುತ್ತಿರುವ, ನಡೆಯುತ್ತಿರುವ: ಒಂದೇ ಸಮನೆಯ, ಏಕಪ್ರಕಾರದ (Went off at a s. pace ಒಂದೇಸಮನೆ ಹೆಜ್ಜೆ ಹಾಕುತ್ತ ಹೋದನು. Requires a s. light ಏಕಪ್ರಕಾರದ ಪ್ರಕಾಶ ಬೇಕು. A s. increase ಒಂದೇ ಸಮನಾದ, ಸಮರೀತಿಯ,—ಹೆಚ್ಚಿಗೆ); (ಆಜ್ಞೆಯಾಗಿ ಅಥವಾ ಎಚ್ಚರಿಕೆಯಾಗಿ) S.! (ಹುಚ್ಚಾಟ ಬೇಡ, ದುಡುಕಬೇಡ, ಮೊ. ಅರ್ಥಗಳಲ್ಲಿ): ಭದ್ರ! ನಿಧಾನ!; (ನಾವೆ) ದಿಕ್ಕು ಬದಲಾಯಿಸಬೇಡ, ಒಂದೇಸಮ ಇಟ್ಟಿರು (=Keep her s.). ಸ್ಥಿರ—ಮನಸ್ಸಿನ, ನಡತೆಯ; ಚಂಚಲವಲ್ಲದ (S. in his principles, allegiance ತನ್ನ ತತ್ತ್ವಗಳಲ್ಲಿ, ನಿಷ್ಠೆಯಲ್ಲಿ, ಅಚಲನಾದ); ಉದ್ಯೋಗಶೀಲವಾದ ಮತ್ತು ಸಮಾಧಾನಸ್ಥಿತಿಯ ಅಭ್ಯಾಸಗಳುಳ್ಳ: ಸ್ತಿಮಿತ, ಒಂದೇ ಸಮನೆ ಕೆಲಸ ಮಾಡುವ; ಸಮ, ಸ್ತಿಮಿತ, —ರೀತಿಯ. (ನಾ.) ಕೈಯ, ಆಯುಧದ, —ಊರೆ, ಆಧಾರ; ಸ್ತಿಮಿತಕಾರಿ. (ಕ್ರಿ.) ಅಲ್ಲಾಡದಂತೆ—ಮಾಡು, ಆಗು; ಭದ್ರ, ಸ್ಥಿರ, ಸ್ತಿಮಿತ—ಮಾಡು, ಆಗು [Adversity will s. him ಕಷ್ಟಸ್ಥಿತಿ ಅವನನ್ನು ಸ್ತಿಮಿತಕ್ಕೆ ತರುತ್ತದೆ. He will soon s. (down) ಅವನು ಬೇಗ ಸ್ತಿಮಿತಕ್ಕೆ ಬರುತ್ತಾನೆ]. **Steádily** (ಕ್ರಿ. ವಿ.); **Steádiness** (ನಾ.)

Steak ಸ್ಟೇಕ್ (ನಾ.) (ಸುಡುವುದು, ಬೇಯಿಸುವುದು, ಕರಿಯುವುದು, ಮೊ. ಕ್ಕಾಗಿ ಮಾಡಿದ) ಮಾಂಸದ ಅಥವಾ ಮೀನಿನ ತುಂಡು, ಸೀಳು, ಹೋಳು [Beefs. (Beef ನೋಡಿ). Rump-s. (Rump ನೋಡಿ). Fillet s. ಕಟಿಮಾಂಸದ ಕೆಳಪಕ್ಕದ ಹೋಳು. Hamburg s. ಮುಚ್ಚಿದ ಬಾಣಲೆಯಲ್ಲಿ ಮಾಡಿದ, ಮಸಾಲೆ ಹಾಕಿದ ಗೋಮಾಂಸದ ಸೀಳುಗಳ ರೊಟ್ಟಿ]

Steal ಸ್ಟೀಲ್ (ಕ್ರಿ.; ಭೂತ. Stole, ಭೂ. ಕೃ. Stolen ಸ್ಟೋಲನ್; ನಾ.) ಕದಿ, ಕಳವು ಮಾಡು; ಅಪಹರಿಸು, ಚೋರಿ ಮಾಡು; ಕಳ್ಳತನದಿಂದ, ಗುಟ್ಟಾಗಿ, ಮುಂದಾಗಿ ತಿಳಿಸದೆ, ತಟಕ್ಕನೆ, —ಗಿಟ್ಟಿಸು, ಕಸಿ(ದುಕೊ) [Stole a kiss ಒಂದು ಮುತ್ತು ಕಸಿದುಕೊಂಡನು. A stolen interview ಮುಂತಿಳಿಸದೆ ಗಿಟ್ಟಿಸಿದ ಭೇಟಿ. S. a march on (ಇನ್ನೊಬ್ಬನಿಗಿಂತ) ತಾನೇ ಮುಂಚೆ ಮಾಡು, ಆರಂಭಿಸು, ಮೊದಲನುಕೂಲ ಪಡೆ]. (ತಂತ್ರೋಪಾಯ, ಆಕರ್ಷಣೆ, ಮೊ. ಗಳಿಂದ ಮು., ಒಬ್ಬನ ಪ್ರೀತಿ ವಿಶ್ವಾಸಗಳನ್ನು) ಸಂಪಾದಿಸು, ವಶಮಾಡಿಕೊ (=S. away) (S. one's heart ಒಬ್ಬನ ಹೃದಯವನ್ನು ಅಪಹರಿಸು, ಮನಸ್ಸನ್ನು ಮೆಚ್ಚಿಸಿರು). ಸದ್ದಿಲ್ಲದೆ, ಕದ್ದು, ನುಸುಳಿ, —ಹೋಗು, ಬರು (*In*, *out*, *away*, *up*, *by*, ಮೊ. ಉಪ. ದೊಡನೆ) (Stole out of the room ಕೋಣೆಯಿಂದ ಪತ್ತೆಯಾಗದಂತೆ ಜಾರಿಕೊಂಡನು. Mist stole over the valley ಇಬ್ಬನಿ ಕಣಿವೆಯ ಮೇಲೆ ಪತ್ತೆಕೊಡದೆ, ಮೆಲ್ಲನೆ, ಕವಿಯಿತು). (ನಾ.) (ಗಾಲ್ಫ್ ಆಟದಲ್ಲಿ) ಅನಿರೀಕ್ಷಿತವಾಗಿ ಬದ್ದು ತುಂಬಿದ ದೂರದ ಹೊಡೆತ: ಕಳ್ಳ ಹೊಡೆತ; (ಅಮೆ. ಸಂ.) ಕಳವು, ಕಳ್ಳತನ, ಕದ್ದದ್ದು. **(-)stealer** (ನಾ.); **Stealth** ಸ್ಟೆಲ್ತ್ (ನಾ.) ಗುಟ್ಟು, ರಹಸ್ಯ (ಮು., By s. ಗುಟ್ಟಾಗಿ, ರಹಸ್ಯವಾಗಿ). **Steálthy** (ಗು.); **Steálthily** (ಕ್ರಿ. ವಿ.); **Steálthiness** (ನಾ.)

Steam ಸ್ಟೀಮ್ (ನಾ.) ನೀರಿನ ಆವಿ; ಹಬೆ, ಉಗಿ, ಬಾಷ್ಪ [Saturated s. ಕುದಿನೀರಿನ ಸಂಪರ್ಕವಿದ್ದು ಅದರಷ್ಟೇ ಶಾಖವುಳ್ಳ, ಮತ್ತು ಸ್ವಲ್ಪ ಒತ್ತಡ ಹೆಚ್ಚಿಸಿದರೂ ತಂಪಿಸಿದರೂ ನೀರಾಗಿ ತಿರುಗುವ ಆವಿ: ಸಂಪೂರಿತ—ಆವಿ, ಬಾಷ್ಪ. Superheated s. ಸಂಪೂರಿತ ಆವಿಗಿಂತ ಒಂದು ಗೊತ್ತಾದ ಒತ್ತಡದಲ್ಲಿ ಹೆಚ್ಚು ಶಾಖವುಳ್ಳ ಮತ್ತು ಒಂದು ಗೊತ್ತಾದ ತೂಕಕ್ಕೆ ಹೆಚ್ಚು ಗಾತ್ರವುಳ್ಳ ಆವಿ: ಅಧಿಕೋಷ್ಣ ಆವಿ; ಅತಿತಪ್ತ ಬಾಷ್ಪ. Dry, wet, s. ನೀರ ಕಣಗಳು ತೇಲಾಡುತ್ತಿಲ್ಲದ, ತೇಲಾಡುತ್ತಿರುವ, —ಆವಿ: ಒಣ ಆವಿ, ತೇವದ ಆವಿ]. ಆವಿಯನ್ನು ತಂಪಿಸುವುದರಿಂದ ಆಗುವ, ಕಣ್ಣಿಗೆ ಕಾಣುವ ನೀರಿನ ತುಂತುರು ಕಣಗಳು: ಆವಿಯ —ಬಿಳಿಯ ಮೋಡ, ತುಂತುರು; ಆವಿ ರೂಪದ ಯಾವುದಾದರೂ ಉದ್ಗಮ. (ಬಳ. ಮಾ.) ಶಕ್ತಿ, ಉಸಿರು [Get up s. (ವಿಶೇಷ ಪ್ರಯತ್ನಕ್ಕಾಗಿ) ದಮ್ಮು ತೆಗೆದುಕೊ, ಶಕ್ತಿಗೊಳ್ಳು. Let off s. ದಮ್ಮು ಕಳೆದುಕೊ, ಶಕ್ತಿ ವ್ಯಯಮಾಡು; ಅಡಗಿರುವ ಭಾವೋದ್ರೇಕ, ಮೊ. ನ್ನು ಹೊರಹಾಕು, ತೀರಿಸಿಕೊ; ರೇಗಾಡು, ಒದರು. Put on s. =Get up s. Work off s. ಹೆಚ್ಚು ಶಕ್ತಿಯನ್ನು ಪ್ರಯೋಗಿಸು]. **Steámboat** ಆವಿಯಿಂದ ನಡೆಯುವ ದೋಣಿ: ಆವಿ, ಉಗಿ, —ದೋಣಿ. **S.-boiler** (ಎಂಜಿನ್ನಿನ ನೀರು ಕುದಿಸುವ) ಕುದಿಪಾತ್ರೆ, ಆವಿ ಕಡಾಯಿ. **S.-box, chest** (ಎಂಜಿನಿನಲ್ಲಿ) ಕುದಿಪಾತ್ರೆಯಿಂದ ಬರುವ ಆವಿಯನ್ನು ಆಡುಬೆಣೆಯ ಉರುಳೆಕೋಶಕ್ಕೆ ಜಾರು ಕವಾಟದ ಮೂಲಕ ಒದಗಿಸುವ ಪೆಟ್ಟಿಗೆ: ಆವಿಯ —ಪೆಟ್ಟಿಗೆ, ಕೋಷ್ಠ. **S. brake, crane, gun, hammer, plough, whistle, etc.** (ಆವಿಯ ಶಕ್ತಿಯಿಂದ ಕೆಲಸ ಮಾಡುವ) ಆವಿ—ಬಿರಿ (ತಡೆ), ಎತ್ತುಯಂತ್ರ, ಫಿರಂಗಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುತ್ತಿಗೆ, ನೇಗಿಲು, ಶಿಲ್ಪಿ, ಮೊ. ವು. **S.-coal** ಕುದಿಪಾತ್ರೆಗೆ ಉಪಯೋಗಿಸುವ ಕಲ್ಲಿದ್ದಲು : ಆವಿ ಕಲ್ಲಿದ್ದಲು. **S.-colour** ಮುದ್ರಿಸಿದ ಬಟ್ಟೆಯಮೇಲೆ ಆವಿಯಿಂದ ಕಚ್ಚಿಸಿದ ಬಣ್ಣ : ಆವಿಯಚ್ಚಿನ ಬಣ್ಣ. **S.-cylinder** (ಆವಿಯೆಂಜಿನಿನ ಆಡುಬೆಣೆ ಆಡುವ) ಆವಿಯುರುಳೆ ಕೋಶ. **S.-engine** ಆವಿಯ ಸ್ಥಿತಿಸ್ಥಾಪಕಶಕ್ತಿಯನ್ನೂ ಅದರ ವಿಸ್ತರಣ ಅಥವಾ ಶೀಘ್ರ ದ್ರವೀಭವನ ಶಕ್ತಿಯನ್ನೂ ಅವಲಂಬಿಸಿ ಕೆಲಸಮಾಡುವ ಸ್ವಯಂ ಚಲಿಯಾದ ಅಥವಾ ಸ್ಥಾಯಿಯಾದ ಎಂಜಿನು: ಆವಿಯೆಂಜಿನು. **S.-gas** ಅತಿಕಾವಿನ ಆವಿ, ಅತಿತಪ್ತ ಬಾಷ್ಪ. **S.-gauge** (ಆವಿಯ ಒತ್ತಡವನ್ನು ತೋರಿಸುವುದಕ್ಕಾಗಿ ಕುದಿಪಾತ್ರೆಗೆ ಅಳವಡಿಸಿರುವ) ಆವಿ ಮಾಪಕ. **S.-heat** ನೀರು ನೀರ್ಗಲ್ಲ ಶಾಖದಿಂದ ಆವಿಯಾಗುವುದಕ್ಕೆ ಬೇಕಾದ ಉಷ್ಣ : ಆವಿಯುಷ್ಣ. ಕಟ್ಟಡ, ಮೊ. ನ್ನು ಶಾಖವಾಗಿಟ್ಟಿರುವುದಕ್ಕಾಗಿ ಅಳವಡಿಸಿರುವ ಆವಿಯುಷ್ಣ ಪ್ರಸಾರಕ, ಮೊ. ಗಳಿಂದ ಬರುವ ಕಾವು: ಆವಿ —ಕಾವು, ಬಿಸುಪು. **S.-jacket** ಆವಿಯಿಂದ ಕಾಯಿಸಬೇಕಾದ ಉರುಳೆ, ಮೊ. ಕ್ಕೆ ಆವಿ ತುಂಬಿಕೊಳ್ಳಲು ಅವಕಾಶಕೊಟ್ಟು ತೊಡಿಸಿರುವ ಕವಚ : ಆವಿ ಕವಚ. **S. navvy** ಆವಿ(ಯಿಂದ ಕೆಲಸ ಮಾಡುವ) ತೋಡು ಯಂತ್ರ. **S.-port** ಆವಿ ಪೆಟ್ಟಿಗೆಯಿಂದ ಉರುಳೆಕೋಶಕ್ಕೆ ಆವಿ ಹೋಗಲು ಇರುವ (ಜಾರು ಕವಾಟದಿಂದ ಮುಚ್ಚಿದ) ಆಯದಾಕಾರದ ಎರಡು ಮಾರ್ಗಗಳಲ್ಲೊಂದು : ಆವಿ ಕಂಡಿ. **S.-power** (ಯಂತ್ರ, ಮೊ. ಗಳಲ್ಲಿ ಉಪಯೋಗಿಸುವ) ಆವಿ ಬಲ. **S.-roller** (ನಾ., ಕ್ರಿ. ಸಕ.) ದಾರಿಗಟ್ಟಣೆಯಲ್ಲಿ ಉಪಯೋಗಿಸುವ, ಆವಿ ಬಲದಿಂದ ನಡೆಯುವ ಉರುಳೆಯಂತ್ರ: ಆವಿಯುರುಳೆ (ಯಂತ್ರ). (ರೂಪ.) ಅಜ್ಜಿಬಜ್ಜಿ ಮಾಡಿಬಿಡುವ ಶಕ್ತಿ ; ನಿರ್ದಾಕ್ಷಿಣ್ಯವಾಗಿ, ನಿಷ್ಕರುಣೆಯಿಂದ, —ತುಳಿದುಹಾಕುವ ಶಕ್ತಿ ; ಜಜ್ಜುಬಡಕ, ಮರ್ದಕ. (ಕ್ರಿ.) (ಆವಿಯುರುಳೆಯಿಂದ ಹೇಗೋ ಹಾಗೆ) ಜಜ್ಜಿಹಾಕು, ತುಳಿದುಹಾಕು. **Steámship** ಆವಿ, ಉಗಿ,—ಹಡಗು ; ಜಹಜು. **S.-tight** (ಒತ್ತಡವಿದ್ದರೂ) ಆವಿ ತೂರದ. **S. tug** (ಹಡಗು, ಮೊ. ನ್ನು ಎಳೆದುಕೊಂಡುಹೋಗುವ) ಆವಿಯ ಜಗ್ಗು ಹಡಗು. **Steámy** (ಗು.) ; **Steáminess** (ನಾ.)

Steam (ಕ್ರಿ.) (ಆಹಾರವನ್ನು) ಆವಿಯಿಂದ, ಆವಿಯಲ್ಲಿ,—ಬೇಯಿಸು; ಆವಿ ಸಂಸ್ಕಾರ ಕೊಡು ; (ಮರವನ್ನು ಬಗ್ಗಿಸಲು ಮೆತುಮಾಡುವುದಕ್ಕಾಗಿ) ಆವಿಗೆ ಒಡ್ಡು ; ಆವಿಯಾಡು, ಹಬೆಯಾಡು (Water steaming hot ಹಬೆಯಾಡುವ ಬಿಸಿನೀರು) ; ಹಬೆ(ಯಾಗಿ) ಏಳು ; ಆವಿಯಿಂದ —ನಡೆ, ಚಲಿಸು (We, the vessel, steamed down the river). (ಬಳ. ಮಾ.) ಚುರುಕಾಗಿ, ಹುರುಪಿನಿಂದ, —ಕೆಲಸ ಮಾಡು ; ವೇಗವಾಗಿ ತುಂಬ ಮುಂದುವರಿ (S. ahead, away). **Steámer** (ನಾ.) (ಕ್ರಿಯಾರ್ಥಗಳಲ್ಲಿ) ; ಆವಿಯ —ದೋಣಿ, ಹಡಗು; ಜಹಜು ; ಆವಿಯಿಂದ ಕೆಲಸಮಾಡುವ ಬೆಂಕಿಯಾರಿಸುವ ಎಂಜಿನು ; ಆವಿಯೆಂಜಿನು ; ಆವಿಯಲ್ಲಿ ಬೇಯಿಸುವ ಪಾತ್ರೆ, ಉಕ್ಕಲು ಪಾತ್ರೆ ; ಆವಿಪಾತ್ರೆ (Boiler is a bad s. ಕುದಿಪಾತ್ರೆ ಬೇಯಿಸುವುದಕ್ಕೆ ತಕ್ಕ ಉಕ್ಕಲು ಪಾತ್ರೆಯಲ್ಲ)

Steámer. **Steam** ನೋಡಿ.

Stéarin ಸ್ಟೀಅರಿನ್ (ನಾ.) ಹಲವು ಪ್ರಾಣಿಮೇದಸ್ಸು ಮತ್ತು ಸಸ್ಯ ಮೇದಸ್ಸುಗಳಲ್ಲಿರುವ ಬಿಳಿಯ ಬಣ್ಣದ ಸ್ಫಟಿಕಾಕೃತಿಯ ಘನ ಭಾಗ : ಗಟ್ಟಿ ಕೊಬ್ಬು, ಮೇದೋಘನ ; (ಬಳ. ಮಾ.) (ಆವಿಯ ಮೂಲಕ ಗಟ್ಟಿ ಕೊಬ್ಬಿನಿಂದ ಪ್ರಥಕ್ಕರಿಸಿದ, ಮೋಂಬತ್ತಿ ತಯಾರಿಕೆಯಲ್ಲಿ ಉಪಯೋಗಿಸುವ) ಮೇದೋಘನಾಮ್ಲ, ಸ್ಟಿಯರಿಕ್ ಆಮ್ಲ. **Stéarate** ಸ್ಟೀಅರೇಟ್ (ನಾ.) ಸ್ಟಿಯರಿಕ್ (ಆಮ್ಲದ) ಲವಣ. **Steáric** ಸ್ಟಿಆ್ಯರಿಕ್ (ಗು.); S. acid ಸ್ಟಿಯರಿಕ್ ಆಮ್ಲ. **Stéarinery** (ನಾ.) ಸ್ಟಿಯರಿನ್ (ಪದಾರ್ಥಗಳ) ತಯಾರಿಕೆ.

Stéatite ಸ್ಟೀಅಟೈಟ್ (ನಾ.) ಬೂದು ಅಥವಾ ಬೂದು ಹಸುರು ಬಣ್ಣದ, ಸಾಬೂನಿನಂತೆ ಜಿಡ್ಡು ಮೈಯುಳ್ಳ, ಒಂದು ಬಗೆಯ 'ಟಾಲ್ಕ್' ಖನಿಜ ; ಸಾಬೂನುಗಲ್ಲು, ಮೇದಶ್ಶಿಲೆ. **Steatític** (ಗು.) ಸಾಬೂನು ಗಲ್ಲಿನ(ಂಥ)

Steat(o)- ಸ್ಟೀಅಟ್(ಟೊ)— (ಸ. ಪೂ. ಪ.) ಕೊಬ್ಬು—, ಮೇದಸ್—. **Steatósis** ಸ್ಟೀಅಟೋಸಿಸ್ (ನಾ.) (ವೈ. ಶಾ.) ವಿಪರೀತ ಕೊಬ್ಬು, ಬೊಜ್ಜು ; ಮೇದೋವಿಕಾರ.

Steed ಸ್ಟೀಡ್ (ನಾ.) (ಕಾವ್ಯ, ಅಲಂ. ಅಥವಾ ಹಾಸ್ಯ ಪ್ರ.) ಕುದುರೆ, (ಮು.) ಯುದ್ಧದ ಕುದುರೆ, ಯುದ್ಧಾಶ್ವ. **Steédless** (ಗು.)

Steel ಸ್ಟೀಲ್ (ನಾ., ಕ್ರಿ. ಸಕ.) ಉಕ್ಕು [(ಅನೇಕ ವೇಳೆ ವಿಶೇಷಣ ಪ್ರ.) : S. pen ಉಕ್ಕಿನ—ಲೇಖನಿ, ಟಾಕು. Bessemer s. (Bessemer ನೋಡಿ). Cold s. (Cold ನೋಡಿ). A grip, muscles, a heart, of s. ಬಿಗಿಹಿಡಿತ, ಬಲವಾದ ಸ್ನಾಯುಗಳು, ಕಠಿನ ಹೃದಯ]. (ಚಾಕುಗಳನ್ನು ಹರಿತಮಾಡಲು ಉಪಯೋಗಿಸುವ, ಸಾ., ಮೊನಚೂ ತರಕಲೂ ಆದ) ಉಕ್ಕಿನ ಸಾಣೆ ಕಂಬಿ ; (ಹೆಂಗಸಿನ ಒಳಕುಪ್ಪಸವನ್ನು ಗಡುಸಾಗಿ ನಿಲ್ಲಿಸುವುದಕ್ಕೆ ಅಥವಾ ಲಂಗವನ್ನು ವಿಸ್ತರಿಸುವುದಕ್ಕೆ ಹಾಕುವ) ಉಕ್ಕಿನ —ರೇಕು, ಪಟ್ಟಿ; (ಕಾವ್ಯ, ಅಲಂ. ; ಬ. ವ. ಇಲ್ಲ) ಕತ್ತಿ, ಖಡ್ಗ (A foe worthy of one's s.); [**S. cap** ಉಕ್ಕಿನ ಟೋಪಿ, ಸೀಸಕ. **S.-clad** ಉಕ್ಕಿನ ಕವಚ ತೊಟ್ಟ. **S. engraving** ಉಕ್ಕಿನ ಫಲಕದಮೇಲೆ ಕೊರೆಯುವುದು ; ಇಂಥ ಕೊರೆದ ಫಲಕದಿಂದ ತೆಗೆದ ಮುದ್ರಣ : ಉಕ್ಕು—ಕೆತ್ತನೆ, ಮುದ್ರಣ. **Steélwork** ಉಕ್ಕಿನ ಸಾಮಾನು(ಗಳಿಗೆ ಉಪಯೋಗಿಸುವ ಉಕ್ಕು)]. (ಕ್ರಿ.) (ಮನಸ್ಸು, ಮೊ. ನ್ನು) ಗಟ್ಟಿ, ಕಠಿನ, —ಮಾಡು, ಮಾಡಿಕೊ (S. oneself, one's heart, etc. *to* do, *to* action, *against* compassion, etc.). **Steélify** (ಕ್ರಿ. ಸಕ.) ಉಕ್ಕಾಗಿ—ಮಾಡು, ತಿರುಗಿಸು. **Steély** (ಗು.) ಉಕ್ಕಿನ(ಂತೆ ಗಟ್ಟಿಯಾದ) ; ಕಠಿನ, ಕಠೋರ (S. glance ಕಠೋರ ದೃಷ್ಟಿ). **Steéliness** (ನಾ.) ; **Steélyard** ಸ್ಟೀಲ್‌ಯಾರ್ಡ್ (ನಾ.) ಮೋಟು ತೋಳಿಗೆ ಸಾಮಾನನ್ನು ತೂಗಹಾಕಿ, ತೂಕಗಳನ್ನು ಗುರುತಿಸಿರುವ ಉದ್ದ ತೋಳಿನಮೇಲೆ ಒಂದು ತೂಕವನ್ನು ಸರಿದಾಡಿಸಿ, ಎರಡು ತೋಳುಗಳನ್ನೂ ಸಮಸ್ಥಿತಿಗೆ ತಂದು ಸಾಮಾನನ್ನು ತೂಕಮಾಡುವ ಒಂದು ತಕ್ಕಡಿ : ದಂಡಿಗೆ ತಕ್ಕಡಿ, ತೋಲನ ದಂಡ.

Steélyard. **Steel** ನೋಡಿ.

Steénbok ಸ್ಟೇ(ಸ್ಟೀ)ನ್‌ಬಾಕ್ (ನಾ.) ಆಫ್ರಿಕದ ಹಲವು ಬಗೆಯ ಸಣ್ಣ ಜಾತಿಯ ಜಿಂಕೆ, ಚಿಗರಿ.

Steéning ಸ್ಟೀನಿಂಗ್ (ನಾ.) ಬಾವಿಯ ಕಲ್ಲು ಕಟ್ಟಡ.

Steep[1] ಸ್ಟೀಪ್ (ಗು., ನಾ.) ಕಡಿದಾದ (S. hills ಕಡಿದಾದ ಬೆಟ್ಟಗಳು) ; (ಬಳ. ಮಾ.) (ಬೆಲೆ, ಮೊ. ಗಳ ವಿಷಯದಲ್ಲಿ) ವಿಪರೀತವಾದ, ದುಬಾರಿಯಾದ, ಅನ್ಯಾಯವಾದ (Seems a bit s. that we should have both the trouble & the expense ನಮಗೆ ತೊಂದರೆಯೂ ಜೊತೆಗೆ ವೆಚ್ಚವೂ ಆಗುವುದು ಕೊಂಚ ಅನ್ಯಾಯವೆಂದು ತೋರುತ್ತದೆ) ; (ಕಥೆ, ಮೊ. ಗಳ ವಿಷಯದಲ್ಲಿ) ಅತಿಶಯೋಕ್ತಿಯ, ನಂಬಲಾಗದ. (ನಾ.) ಕಡಿದು ; ಪ್ರಪಾತ. **Steépen** (ಕ್ರಿ.) ; **Steéply** (ಕ್ರಿ. ವಿ.); **Steépness** (ನಾ.) ; **Steépy** (ಗು.) (ಕಾವ್ಯ)

Steep[2] ಸ್ಟೀಪ್ (ಕ್ರಿ. ಸಕ., ನಾ.) (ದ್ರವದಲ್ಲಿ) ನೆನಸು, ಊರಹಾಕು ; (ದ್ರವದಲ್ಲಿ) ಅದ್ದು, ತೊಳೆ ; [S. in (ರೂಪ.) ತುಂಬು, ಮಗ್ನಮಾಡು (Steeped in Greek & Latin ಗ್ರೀಕ್ ಮತ್ತು ಲ್ಯಾಟಿನ್ ಭಾಷಾ ಸಾಹಿತ್ಯಗಳಲ್ಲಿ ತುಂಬಿದ, ಮಗ್ನನಾದ. Steeped in misery ದುರವಸ್ಥೆಯಲ್ಲಿ, ದಾರಿದ್ರ್ಯದಲ್ಲಿ,—ಮುಳುಗಿದ)]. (ನಾ.) ನೆನಸುವುದು (In s. ನೆನೆಯಹಾಕಿ) ; ನೆನೆಯಹಾಕುವ ದ್ರವ. **Steéper** (ನಾ.) ನೆನೆ(ಯಹಾಕುವ) ಪಾತ್ರೆ.

Steéple ಸ್ಟೀಪ್‌ಲ್ (ನಾ.) (ಚರ್ಚು, ದೇವಾಲಯ, ಮೊ. ಗಳ ಮು., ಶಿಖರ ಸಮೇತವಾದ) ಗೋಪುರ (ಅನೇಕ ವೇಳೆ ಗಂಟೆಗಳನ್ನೂ ಉಳ್ಳದ್ದು); ಚೂಪುಗೋಪುರ. **Steéplechase** (ಹಳ್ಳಗಳು, ಬೇಲಿಗಳು, ಮೊ. ನ್ನು ದಾಟಿಕೊಂಡು ಓಡುವ) ಹಳ್ಳಿಗಾಡು —ಕುದುರೆ ಪಂದ್ಯ, ಕಾಲನಡಗೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಂದ್ಯ (ಆದಿಯಲ್ಲಿ ಗೋಪುರ ಗುರಿಯಾಗಿ ಇದ್ದಿರಬಹುದು). **Steéple-chaser** ಹಳ್ಳಿಗಾಡು ಪಂದ್ಯದ —ಓಟಗಾರ, ಸವಾರ, ಕುದುರೆ. **Steéple-chasing** ಹಳ್ಳಿಗಾಡು ಪಂದ್ಯ(ದ ವಿನೋದ). **Steéple-crowned hat** ಎತ್ತರವಾದ ಚೂಪು ತುದಿಯ ಟೊಪ್ಪಿಗೆ. **Steéple-jack** (ದುರಸ್ತುಮಾಡುವುದು, ಮೊ. ಕ್ಕಾಗಿ, ತತ್ತರಿಸದೆ) ಗೋಪುರ ಹತ್ತುವವನು. **Steéple-top** ಶಂಕುವಿನಾಕಾರದ ತುದಿಯ ಶ್ವಾಸ ರಂಧ್ರಗಳುಳ್ಳ ಧ್ರುವ ಪ್ರಾಂತದ ತಿಮಿಂಗಿಲ. **Steépled** (ಗು.); **Steéplewise** (ಕ್ರಿ. ವಿ.) (ಚೂಪು) ಗೋಪುರಾಕಾರದಲ್ಲಿ.

Steer[1] ಸ್ಟಿಯರ್ (ಕ್ರಿ.) (ಹಡಗನ್ನು ಚುಕ್ಕಾಣಿಯಿಂದ, ಮೋಟಾರು, ವಿಮಾನ, ಮೊ. ನ್ನು ಹಿಡಿ ತಿರುಗಿಸುವುದು, ಮೊ. ಗಳಿಂದ) ನಡಸು (Steering-wheel ಚುಕ್ಕಾಣಿ ಚಕ್ರ; ಚಾಲಕ ಚಕ್ರ); (ಮು., ಬಳ. ಮಾ. ಅಥವಾ ಕಾವ್ಯ) ಗಮಿಸು, ಮಾರ್ಗಹಿಡಿ, ತಿರುಗಿಸು [Steered his flight heavenwards ಗಗನಾಭಿಮುಖವಾಗಿ ಹಾರಿದನು, ತಿರುಗಿ(ಸಿ) ದನು. We steered (our course) for the railway station ರೈಲು ನಿಲ್ದಾಣದ ಮಾರ್ಗ ಹಿಡಿದೆವು. S. clear of ತಪ್ಪಿಸಿ(ಕೊಂಡು) ಹೋಗು, ನಿವಾರಿಸಿಕೊ]. **Steérable** (ಗು.); **Steérage** (ನಾ.) (ವಿರ. ಪ್ರ.) (ಹಡಗು) ನಡಸುವುದು, ಚಾಲನ; (ನಾವೆ) ಹಡಗಿನಮೇಲೆ ಚುಕ್ಕಾಣಿಯ ಪರಿಣಾಮ (Ship went with easy s. ಹಡಗು ಸಲೀಸು ಚುಕ್ಕಾಣಿಯಿಂದ ಹೋಯಿತು); ಅಗ್ಗದ ಪ್ರಯಾಣಿಕರು ಕುಳಿತು ಕೊಳ್ಳುವ ಹಡಗಿನ ಭಾಗ (S. passengers ಅಗ್ಗದ ಪ್ರಯಾಣಿಕರು); (ಯುದ್ಧದ ಹಡಗಿನಲ್ಲಿ) ಸನ್ನದು ಪಡೆದ ಅಧಿಕಾರಿಗಳ ಕೋಣೆಯ ಮುಂದುಗಡೆ ಇರುವ, ಕಿರಿಯ ಅಧಿಕಾರಿಗಳು, ಗುಮಾಸ್ತರು, ಮೊ. ರು ಉಪಯೋಗಿಸುವ, ಅಟ್ಟದ ಭಾಗ: ಎರಡನೆಯ ಕೋಣೆ. S.-way ಚುಕ್ಕಾಣಿಯಿಂದ ಸರಾಗವಾಗಿ ಹಡಗನ್ನು ತಿರುಗಿಸಲು ಅವಕಾಶ ಕೊಡುವ ಹಡಗಿನ ವೇಗ: ಚುಕ್ಕಾಣಿಯಾಡಲು ಬೇಕಾದ ವೇಗ. **Steérer** (ನಾ.); **Steérsman** (ನಾ.) ಹಡಗು ನಡಸುವವನು, ಚಾಲಕ. **Steérsmanship** (ನಾ.) ಹಡಗು ನಡಸುವ ಜಾಣ್ಮೆ, ಚಾಲಕ ಚಾತುರ್ಯ.

Steer[2] ಸ್ಟಿಯರ್ (ನಾ.) (ಮಾಂಸಕ್ಕಾಗಿ ಬೆಳಸಿದ) ಬೀಜವೊಡೆದ ಹೋರಿ, ಸಣ್ಣ ಎತ್ತು.

Steérage, Steérsman. **Steer**[1] ನೋಡಿ.

Steeve[1] ಸ್ಟೀವ್ (ಕ್ರಿ., ನಾ.) (ನಾವೆ) (ಹಡಗಿನ ಮೂಕಿಮರದ ವಿಷಯದಲ್ಲಿ) ಕ್ಷಿತಿಜಕ್ಕೆ ಕೋನವಾಗುವಂತಿರು, ಮೇಲೋರೆಯಾಗಿರು(—ವುದು); (ಮೂಕಿಮರವನ್ನು) ಮೇಲೋರೆಮಾಡು. (ನಾ.) ಮೇಲೋರೆ(ಯ ಕೋನ)

Steeve[2] ಸ್ಟೀವ್ (ನಾ., ಕ್ರಿ.) (ನಾವೆ) ಹಡಗಿಗೆ ಸರಕು ತುಂಬುವಲ್ಲಿ ಉಪಯೋಗಿಸುವ ಉದ್ದನೆಯ ದಿಮ್ಮಿ: ಗಿಡುಗು ದಿಮ್ಮಿ. (ಕ್ರಿ.) —ಯಿಂದ ಗಿಡಿ, ಅಡಕು.

Steínbock ಸ್ಟೈನ್‌ಬಾಕ್ (ನಾ.) ಒಂದು ಜಾತಿಯ ಕಾಡುಮೇಕೆ.

Stéle ಸ್ಟೀಲಿ (ನಾ., ಬ. ವ. -ae) (ಗ್ರೀಕ್ ಪ್ರಾಚೀ. ಶಾ.) ಸಾ., ಶಿಲ್ಪ ಕೆತ್ತಿ. ಶಾಸನ ಕೊರೆದು ನೆಟ್ಟಗೆ ನಿಲ್ಲಿಸಿರುವ ಚಪ್ಪಡಿ ಅಥವಾ ಕಂಬ (ಮು., ಗೋರಿಕಲ್ಲು): ಸ್ಮಾರಕಸ್ತಂಭ.

Stéllar ಸ್ಟೆಲರ್ (ಗು.) ನಕ್ಷತ್ರಗಳ. **Stéllate(d)** ಸ್ಟೆಲೆಟ್ (—ಲೇಟೆಡ್) (ಗು.) (ಆಕಾಶ) ನಕ್ಷತ್ರ ಖಚಿತ; ನಕ್ಷತ್ರದಂತೆ ಅಳ ವಡಿಸಿದ, ನಕ್ಷತ್ರದಂಥ, ನಕ್ಷತ್ರಾಕಾರದ [(ಸ. ವಿ.) S. leaves ಕಾವಿನ ಸುತ್ತ ತ್ರಿಜ್ಯಾಕಾರದಲ್ಲಿ ಅಳವಟ್ಟ ಎಲೆಗಳು: ನಕ್ಷತ್ರ ವಿನ್ಯಾಸದ ಎಲೆಗಳು]. **Stéllately** (ಕ್ರಿ. ವಿ.); **Stellíferous** ಸ್ಟೆಲಿಫರಸ್ (ಗು.) ನಕ್ಷತ್ರ ಖಚಿತ; (ಜೀ. ವಿ.) ನಕ್ಷತ್ರ ಚಿಹ್ನೆಗಳುಳ್ಳ. **Stélliform** (ಗು.) ನಕ್ಷತ್ರಾಕಾರದ. **Stéllular** ಸ್ಟೆಲ್ಯುಲರ್ (ಗು.) ಸಣ್ಣ ನಕ್ಷತ್ರಾ ಕಾರದ, ಕಿರು ತಾರಗೆಗಳುಳ್ಳ, ನಕ್ಷತ್ರ ಖಚಿತ. **Stéllulate** (ಗು.)

Stéllate. **Stellar** ನೋಡಿ.

Stéllenbosch ಸ್ಟೆಲನ್‌ಬಾಷ್ (ಕ್ರಿ. ಸಕ.) (ಸೈನಿಕ ಅಸಂ.) (ಪ್ರಕಾಶವಾಗಿ ಅಪಮಾನಪಡಿಸದೆ, ಅಮುಖ್ಯವಾದ ನಾಯಕತ್ವಕ್ಕೆ ನೇಮಿಸಿ) ಮೂಲೆಗೆ ಕೂರಿಸು (ದ. ಆಫ್ರಿಕದಲ್ಲಿಯ S- ಎಂಬ ಸೈನಿಕಸ್ಥಾನದ ಹೆಸರಿನಿಂದ)

Stellíferous, Stéllular, Stéllulate. **Stellar** ನೋಡಿ.

Stem[1] ಸ್ಟೆಂ (ನಾ., ಕ್ರಿ. ಸಕ.) (ಮರ, ಗಿಡ, ಸಸ್ಯ, ಮೊ. ಗಳ) ತಾಳು, ಕಾಂಡ, ದಂಟು; (ಹೂವು, ಹಣ್ಣು, ಎಲೆ, ಮೊ. ಗಳ) ಕಾವು, ತೊಟ್ಟು, ವೃಂತ; (ವಸ್ತುವಿನ) ಕಾಂಡದಂಥ ಭಾಗ, ದಿಂಡು [(ಉದಾ., ಮದ್ಯದ ಬಟ್ಟಲಿನ ದಿಂಡು, ಸಂಗೀತ ರೇಖೆಯಲ್ಲಿಯ ಲಂಬಗೆರೆ, ಚುಂಗಾಣಿಯ ಕೊಳವೆಯ ಭಾಗ, ಗಡಿಯಾರದ ಕೀಲಭಾಗ). S.-winder ದಿಂಡು ಕೀಲಗಡಿಯಾರ]; (ವ್ಯಾ.) ವಿಭಕ್ತಿ ಪ್ರತ್ಯಯ, ಆಖ್ಯಾತ ಪ್ರತ್ಯಯ, ಮೊ. ವು ಹತ್ತುವ, ಮೂಲಧಾತುವಿನಿಂದ ಅಥವಾ ಪ್ರಾತಿಪದಿಕದಿಂದ ನಿಷ್ಪನ್ನವಾದ, ವಿಭಕ್ತಿರೂಪಗಳಲ್ಲಾಗಲಿ ಆಖ್ಯಾತರೂಪಗಳಲ್ಲಾಗಲಿ ಸಾ., ವ್ಯತ್ಯಾಸ ಹೊಂದದೆ ಒಂದೇ ರೂಪದಲ್ಲಿ ಉಳಿದುಕೊಂಡಿರುವ, ಶಬ್ದ ಭಾಗ: ಶಬ್ದ ಕಾಂಡ; ಅಂಗ. ವಂಶ ಶಾಖೆ, ಸಂತತಿ, ಗೋತ್ರ (Descended from an ancient s. ಪುರಾತನ ಸಂತತಿಯಿಂದ ಬಂದ, ಹಳೆಯ ಮನೆತನದ); ಹಡಗಿನ ಪಕ್ಕ ಹಲಗೆಗಳನ್ನು ಸೇರಿಸಿರುವ, ಹಡಗಿನ ಮುಂಭಾಗದ, ಚಿತ್ರಕೊರೆದ ಮರ ಅಥವಾ ಲೋಹದ ಪಟ್ಟಿ; ಹಡಗಿನ ಅಡಿಗಟ್ಟಿಗೆ ಮುಂತುದಿಯಲ್ಲಿ ಸೇರಿಸಿದ್ದು ಅಲ್ಲಿಂದ ಮೇಲಕ್ಕೆ ಎದ್ದುಕೊಂಡಿರುವ ಭಾಗ: ಹಡಗಿನ ಮುಂತುದಿ, ಚೂಣಿ (From s. to stern ಹಡಗಿನ—ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೆ, ಆದ್ಯಂತವೂ. False s. ನೀರನ್ನು ಸೀಳಿಕೊಂಡು ಹೋಗಲು ಅನುಕೂಲಿಸುವಂತೆ ಹಡಗಿನ ಮುಂತುದಿಗೆ ತೊಡಿಸಿರುವ ಹರಿತ ವಾದ ಏಣಿನ ತುಂಡು: ಹುಸಿ ಚೂಣಿ). (ಕ್ರಿ. ಸಕ.) ಕಾಂಡ, ಕಾವು, —ತೆಗೆದುಹಾಕು, ಕಿತ್ತುಹಾಕು; (ಮು., ಹೊಗೆಯಸೊಪ್ಪಿನ) ದಿಂಡು ತೆಗೆದುಹಾಕು. **Stémless** (ಗು.); **Stémlet** (ನಾ.) ಸಣ್ಣ ಕಾವು; ವೃಂತಕ. **(-)stémmed** (ಗು.); **Stémmer** (ನಾ.) ದಿಂಡು ತೆಗೆಯುವವನು.

Stem[2] ಸ್ಟೆಂ (ಕ್ರಿ. ಸಕ.) (ಹೊಳೆ, ಮೊ. ಕ್ಕೆ) ಅಡ್ಡ ಕಟ್ಟೆ ಹಾಕಿ ತಡೆ(ದುಬಿಡು); ಅಣೆ(ಕಟ್ಟು), ಕಟ್ಟೆ, ಒಡ್ಡು, ಅಡ್ಡಗಟ್ಟು, —ಹಾಕು; (ರೂಪ.) ತಡೆಗಟ್ಟು, ಪ್ರತಿಬಂಧಿಸು; (ಪ್ರವಾಹ, ಮೊ. ನ್ನು) ಎದುರಿಸಿಕೊಂಡು, ಅಟಕಾಯಿಸಿಕೊಂಡು, —ಹೋಗು; ಎದುರುಹಾಯಿ (ರೂಪ. ಸಹ)

Stémma ಸ್ಟೆಮ (ನಾ., ಬ. ವ. -ta —ಟ) ವಂಶವೃಕ್ಷ, ವಂಶಾವಳಿ; ನೇರ ಸಂತತಿಯಲ್ಲಿ ಬಂದಿರುವ ಕ್ರಮ; ವಂಶ ಕ್ರಮ. (ಪ್ರಾ. ವಿ.) (ಹುಳುವಿನ) ಸಂಯುಕ್ತ ನೇತ್ರದ ಒಂದು ಭಾಗ: ಬಿಡಿಕಣ್ಣು, ಸರಳ ನೇತ್ರ.

Stémple ಸ್ಟೆಂಪ್ಲ್ (ನಾ.) ಗಣಿಯ ಸುರಂಗಗಳಲ್ಲಿ ಆಸರೆಗಳಾಗಿ ಅಥವಾ ಮೆಟ್ಟಿಲುಗಳಾಗಿ ಉಪಯೋಗವಾಗುವ ಅಡ್ಡಮರ (ಗಳಲ್ಲೊಂದು): ಮೆಟ್ಟಿಲು ಮರ, ಕೆಳಮರ.

Stench ಸ್ಟೆನ್ಷ್, ಸ್ಟೆಂಚ್ (ನಾ., ಕ್ರಿ.) ಹೊಲಸು ನಾತ, ದುರ್ವಾಸನೆ (—ಹೊಡೆ). S.-trap ಚರಂಡಿ, ಮೊ. ಗಳಲ್ಲಿ ದುರ್ವಾಯು ಮೇಲಕ್ಕೆ ಹೊರಡದಂತೆ ಹಾಕಿರುವ ತಡೆ: ದುರ್ವಾಯು—ತಡೆ, ರೋಧಕ.

Sténcil ಸ್ಟೆನ್ಸಿಲ್ (ನಾ., ಕ್ರಿ. ಸಕ.) ಅಕ್ಷರ, ಆಕೃತಿ, ಮೊ. ನ್ನು ಕತ್ತರಿಸಿ ಬಿಡಿಸಿರುವ ತೆಳು ತಗಡು, ರಟ್ಟು (ಈ ತಗಡನ್ನು ಒಂದು ಮೇಲ್ಮೈಯ ಮೇಲಿಟ್ಟು ಆ ತಗಡಿನಮೇಲೆ ಬಣ್ಣ ಬಳಿದರೆ ತೆರಪು ಭಾಗಗಳಿಂದ ಮೇಲ್ಮೈಗೆ ಬಣ್ಣ ಇಳಿದು ಅದರಮೇಲೆ ಅಕ್ಷರ ಅಥವಾ ಆಕೃತಿ ಮೂಡುತ್ತದೆ): ಕೆತ್ತು ತಗಡು, ಕೊರೆಯಚ್ಚು, ತಗಡಚ್ಚು (=S.-plate); ಕೆತ್ತು ತಗಡಿನಿಂದ ಮೂಡಿಸಿದ ಅಕ್ಷರ, ಆಕೃತಿ, ಮೊ. ವು; ತಗಡಚ್ಚಿನ —ಅಕ್ಷರ, ಆಕೃತಿ. (ಕ್ರಿ.) ಕೊರೆಯಚ್ಚಿನಿಂದ (ಅಕ್ಷರ, ಆಕೃತಿ) ಮೂಡಿಸು. **Sténciller** (ನಾ.)

Steno- ಸ್ಟೆನೊ— (ಸ. ಪೂ. ಪ.) ಲಘು—, ಹ್ರಸ್ವ—, ಸಂಕುಚಿತ—. **-cephalic** ಸಂಕುಚಿತ ಕಪಾಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Stenóchromy ಸ್ಟೆನಾಕ್ರೊಮಿ (ನಾ.) ಒಂದೇ ಒತ್ತಿನಲ್ಲಿ ಹಲವು ಬಣ್ಣಗಳಿಂದ ಮುದ್ರಿಸುವುದು: ಬಹುವರ್ಣ ಮುದ್ರಣ.

Sténograph ಸ್ಟೆನೊಗ್ರಾಫ್ (ನಾ.) ಸಂಕ್ಷಿಪ್ತ ಲಿಪಿ(ಯ ಬರೆವಣಿಗೆ), ಲಘು ಲಿಪಿ(ಯ ಲೇಖನ); ಲಘು ಲೇಖಕ (ಯಂತ್ರ). **Stenógrapher** ಸ್ಟೆನಾಗ್ರಫರ್, **Stenógraphist** (ನಾ.) ಲಘು ಲೇಖಕ, ಲಘು ಲಿಪಿಕಾರ. **Stenógraphy** (ನಾ.) ಲಘು ಲಿಪಿಕಲೆ, ಸಂಕ್ಷಿಪ್ತ ಲೇಖನ. **Stenográphic** ಸ್ಟೆನೊಗ್ರ್ಯಾಫಿಕ್ (ಗು.); **Stenográphically** (ಕ್ರಿ. ವಿ.)

Sténtor ಸ್ಟೆಂಟಾರ್ (ನಾ.) ಬಲವಾದ ಧ್ವನಿಯುಳ್ಳ, ದೊಡ್ಡ ಗಂಟಲಿನ, —ಮನುಷ್ಯ; ಸಿಂಹಕಂಠ. **Stentórian** (ಗು.); (ಟ್ರೋಜನ್ ಯುದ್ಧದಲ್ಲಿಯ ರಾಜಘೋಷಕನ ಹೆಸರಿನಿಂದ)

Step ಸ್ಟೆಪ್ (ಕ್ರಿ.) ಕಾಲನ್ನು —ಎತ್ತಿಡು, ಊರು; ಹೆಜ್ಜೆ —ಹಾಕು, ಇಡು; ಅಡಿಯಿಡು [S. out[1] ದೊಡ್ಡ ಹೆಜ್ಜೆ ಹಾಕು. S. short ಸಣ್ಣ ಹೆಜ್ಜೆ ಹಾಕು. S. through a dance ಕುಣಿತದ(ಲ್ಲಿ) ಹೆಜ್ಜೆಗಳನ್ನು ಹಾಕು. S. high (ಕುಕ್ಕೋಟದ ಕುದುರೆಯ ವಿಷಯದಲ್ಲಿ) ಎತ್ತಿ ಕಾಲು ಹಾಕು. High-stepper (High ನೋಡಿ)]. [Step back ಹಿಂದಕ್ಕೆ ಸರಿ. S. forward ಮುಂದಕ್ಕೆ—ಹೋಗು, ಬಾ; ಮುನ್ನಡಿಯಿಡು. S. into the boat ದೋಣಿಯೊಳಕ್ಕೆ —ಹೋಗು, ಕಾಲಿಡು. S. this way (ಉಪಚಾರದ ಮಾತು): ಇತ್ತ —ದಯಮಾಡಿಸಿ, ಪಾದ ಬೆಳಸಿ. S. in (ಕೋಣೆಯ, ಮನೆಯ) ಒಳಕ್ಕೆ —ಹೋಗು, ಬಾ; (ರೂಪ.) (ನೆರವಾಗಿ ಅಥವಾ ಅಡಚಣೆಯಾಗಿ) ನಡುವೆ ಬರು, ಮಧ್ಯೆ ಪ್ರವೇಶಿಸು. S. out[2] ಹೊರಕ್ಕೆ—ಹೋಗು, ಬಾ. S. down ಕೆಳಕ್ಕೆ ಇಳಿ. S. up ಮೇಲಕ್ಕೇರು, ಮೇಲಕ್ಕೆ ಹತ್ತು. S. aside ಪಕ್ಕಕ್ಕೆ ಸರಿ; (ರೂಪ.) ದಾರಿ ಬಿಟ್ಟುಹೋಗು, ಅಪ್ರಸಕ್ತ ವಿಷಯಕ್ಕೆ ಹೋಗು]; ಹೆಜ್ಜೆಹಾಕಿ ಕುಣಿ (S. it ಕುಣಿ); ಹೆಜ್ಜೆಹಾಕಿ ಅಳೆ; (ನಾವೆ) (ಕೂವೆಯನ್ನು) ಕುಳಿಯಲ್ಲಿ, ಜಗಲಿಯಮೇಲೆ, —ನಿಲ್ಲಿಸು. Stepping-stone ಹೊಳೆ, ಕೆಸರು, ಮೊ. ನ್ನು ಕಾಲು ಒದ್ದೆಯಾಗದಂತೆ ದಾಟುವುದಕ್ಕಾಗಿ ಹಾಕಿರುವ ಕಲ್ಲು(ಗಳಲ್ಲೊಂದು): ಮೆಟ್ಟುಗಲ್ಲು, ಮೆಟ್ಟಲು (ರೂಪ. ಸಹ: ಸಾಧನೋಪಾಯ)

Step (ನಾ.) (ನಡಗೆಯ, ಓಟದ ಅಥವಾ ಕುಣಿತದ) ಹೆಜ್ಜೆ; ಅಡಿ; ಹೆಜ್ಜೆಯ—ಗುರುತು, ಸದ್ದು, ಜಾಡು, ದೂರ; ಹೆಜ್ಜೆಯಿಡುವ ರೀತಿ, ನಡಗೆ; (ಅನೇಕ ವ್ಯಕ್ತಿಗಳು ಅಥವಾ ಪ್ರಾಣಿಗಳು) ಹೆಜ್ಜೆಗೆ ಹೆಜ್ಜೆ ಹಾಕಿ ನಡೆಯುವುದು, ಸರಿಹೆಜ್ಜೆ ಹಾಕುವುದು; (ರೂಪ.) (ಕಾರ್ಯಕ್ರಮದಲ್ಲಿ) ಒಂದು ಹೆಜ್ಜೆ; ಸೂಕ್ತ ಕಾರ್ಯ(ಕ್ರಮ) [Took a s. backward, forward ಒಂದು ಹೆಜ್ಜೆ ಹಿಂದಿಟ್ಟನು, ಮುಂದಿಟ್ಟನು. S. by s. ಹೆಜ್ಜೆ ಹೆಜ್ಜೆಯಾಗಿ, ಕ್ರಮ ಕ್ರಮವಾಗಿ, ಎಚ್ಚರಿಕೆಯಿಂದ. That is a long s. towards success ಜಯದ ಕಡೆಗೆ ಅದು ದೊಡ್ಡ ಹೆಜ್ಜೆ. It is a s. from life to death ಬಾಳಿನಿಂದ ಸಾವಿಗೆ ಒಂದೇ ಹೆಜ್ಜೆ, ಬಹು ದೂರವಿಲ್ಲ. Turn one's steps ನಿರ್ದಿಷ್ಟ ಮಾರ್ಗದಲ್ಲಿ —ಹೋಗು, ಹೆಜ್ಜೆ ಹಾಕು. Found his steps, footsteps, in the soil ನೆಲದಮೇಲೆ ಅವನ ಹೆಜ್ಜೆಯ ಗುರುತು ಸಿಕ್ಕಿತು. In his steps ಅವನ ದಾರಿಯಲ್ಲಿ; ಅವನು ಇಟ್ಟ ಹೆಜ್ಜೆಯಲ್ಲಿ; ಅವನ ಉದಾಹರಣೆಯನ್ನು ಅನುಸರಿಸಿ. One-s., Two-s. (ನೃತ್ಯದ ಹೆಸರುಗಳು): ಒಂದು ಹೆಜ್ಜೆಯ ಕುಣಿತ, ಎರಡು ಹೆಜ್ಜೆಯ ಕುಣಿತ. In, out of, s. (ಮಿಕ್ಕವರೊಡನೆ, ತಾಳಕ್ಕೆ) ಸರಿಹೆಜ್ಜೆಯಾಗಿ, ಹೆಜ್ಜೆ ತಪ್ಪಿ. Keep, break, s. ಸರಿಹೆಜ್ಜೆ ಹಾಕು, ತಪ್ಪು. Keep s. with person, to band ವ್ಯಕ್ತಿಯೊಡನೆ, ವಾದ್ಯಕ್ಕೆ ಸರಿಯಾಗಿ, (ಸಮ)ಹೆಜ್ಜೆ ಹಾಕು. False s. (False ನೋಡಿ). Must take steps to prevent it ಅದನ್ನು ತಪ್ಪಿಸುವುದಕ್ಕೆ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕು. A rash, prudent, s. ಅವಿಚಾರದ, ವಿವೇಚನೆಯ, ಕಾರ್ಯ(ಕ್ರಮ)]. ಮೆಟ್ಟಲು, ಹಂತ, ಪಾವಟಿಗೆ (Staircase of 50 steps ೫೦ ಹಂತಗಳ ಮೆಟ್ಟಲಸಾಲು. Stone steps ಕಲ್ಲಮೆಟ್ಟಲುಗಳು. Door-s. ಬಾಗಿಲ, ಹೊಸ್ತಿಲ, —ಮೆಟ್ಟಲು. On the top s. of the ladder ಏಣಿಯ ಮೇಲಹಂತದಲ್ಲಿ. Cutting steps with ice-axe ನೀರ್ಗಲ್ಲ ಕೊಡಲಿಯಿಂದ ಮೆಟ್ಟಲುಗಳನ್ನು ಕಡಿಯುತ್ತ); (ಬ. ವ. ದಲ್ಲಿ) ಗೋಡೆ, ಮೊ. ಗಳಿಗೆ ಒರಗಿಸಿಡಬೇಕಾದ ಅವಶ್ಯಕತೆಯಿಲ್ಲದೆ, ಊರೆಗಳಿಂದ ನಿಲ್ಲಿಸಲಾಗುವ, ಚಪ್ಪಟೆಯ ಮೆಟ್ಟಲುಗಳುಳ್ಳ ಮೋಚೇಣಿ: ಅಟ್ಟಣಿಯೇಣಿ (=S.-ladder, pair *or* set of steps). (ರೂಪ.) (ಶ್ರೇಣಿಯಲ್ಲಿ, ಮುಂಬರಿವಿನಲ್ಲಿ) ಹಂತ, ಅಂತಸ್ತು, ಸ್ಥಾನ, ಬಡತಿ [(ಮು., ಸೈನಿಕ ಪ್ರ.) When did you get your s.? ನಿನಗೆ ಯಾವಾಗ ಬಡತಿ ದೊರೆಯಿತು? Give him a s. in the peerage ಶ್ರೀಮಂತ ಶ್ರೇಣಿಯಲ್ಲಿ ಅವನಿಗೆ ಒಂದು ಸ್ಥಾನ ಕೊಡು]. (ನಾವೆ) ಕೂವೆ (ನಿಲ್ಲಿಸುವ) —ಕುಳಿ, ಜಗಲಿ, ಪೀಠ; (ಮರಗೆಲಸದಲ್ಲಿ) (ಬೇರೆ ಒಂದು ಮರದ ತುಂಡನ್ನು ನೆಟ್ಟಗೆ ನಿಲ್ಲಿಸಲು ಆಸರೆಯಾದ, ವೆಜ್ಜ ವಿರುವ) ತಳದ ತುಂಡು; (ಯಂತ್ರಶಿಲ್ಪ) ಅಚ್ಚು ತಿರುಗುವ—ಕುಳಿ, ಪೀಠ. S.-dance ಹೆಜ್ಜೆಯ ಕ್ರಮ ವಿಲಕ್ಷಣವಾಗಿರುವ ಅಥವಾ ಕಷ್ಟವಾಗಿರುವ, ಇಲ್ಲವೆ ಪದವಿನ್ಯಾಸವೇ ಮುಖ್ಯವಾದ, ಸಾ., ಒಬ್ಬನೇ ಕುಣಿದು ತೋರಿಸುವ ಕುಣಿತ: ಹೆಜ್ಜೆ ಕುಣಿತ; ಪದವಿನ್ಯಾಸ ನರ್ತನ. **Stepped** (ಗು.) ಮೆಟ್ಟಲು ಮೆಟ್ಟಲಾಗಿ ಮಾಡಿದ, ಮೆಟ್ಟಲ ರಚನೆಯ, ಮೆಟ್ಟಲುಗಳುಳ್ಳ. **Stépwise** (ಕ್ರಿ. ವಿ.) ಮೆಟ್ಟಲಸಾಲಿನಂತೆ.

Step- ಸ್ಟೆಪ್— (ಸ. ಪೂ. ಪ.) ಗಂಡ ಹೆಂಡಿರಲ್ಲಿ ಇನ್ನೊಬ್ಬರು ಮತ್ತೆ ಮದುವೆಯಾದರೆ ಆ ಮೂಲಕ ಮನೆಯ ಮಕ್ಕಳು, ಮೊ. ರಿಗೆ ಏರ್ಪಡುವ ಸಂಬಂಧವನ್ನು ಸೂಚಿಸುವ ಪೂರ್ವಪ್ರತ್ಯಯ: ಬಲ—, ಮಲ—. **Stép-brother** ಬಲ, ಮಲ, —ಅಣ್ಣ, ತಮ್ಮ. **Stépchild** ಬಲ, ಮಲ, —ಮಗು. **Stépdame** (ಪ್ರಾಚೀ. ಪ್ರ.) =Stepmother. **Stépdaughter** ಬಲ, ಮಲ, —ಮಗಳು. **Stépfather** ಬಲ, ಮಲ, —ತಂದೆ. **Stépmother** ಬಲ, ಮಲ,—ತಾಯಿ; (ರೂಪ.) ಅಕ್ಕರೆಯಿಲ್ಲದ, ನಿಷ್ಕರುಣೆಯ, —ತಾಯಿ. **Stépmotherly** (ಗು.) ಮಲತಾಯಿಯ(ಂಥ); ನಿಷ್ಕರುಣೆಯ; ಉಪೇಕ್ಷೆಯ. **Step-parent** ಬಲ, ಮಲ, —ತಂದೆ ಅಥವಾ ತಾಯಿ. **Stépsister** ಬಲ, ಮಲ, —ಅಕ್ಕ, ತಂಗಿ. **Stépson** ಬಲ, ಮಲ, —ಮಗ.

Stépney ಸ್ಟೆಪ್ನಿ (ನಾ.) (ಆಪತ್ಕಾಲಕ್ಕಾಗಿ ಮೋಟಾರು ಗಾಡಿಗಳಲ್ಲಿ) ಗಾಳಿ ತುಂಬಿ ಸಿದ್ಧವಾಗಿಟ್ಟುಕೊಂಡಿರುವ, ಆರೆಕಾಲುಗಳಿಲ್ಲದ, ಹೆಚ್ಚಿನ ಚಕ್ರ: ಕೈಗಾವಲು ಚಕ್ರ.

Steppe ಸ್ಟೆಪ್ (ನಾ.) (ಮು., ರಷ್ಯ ಮತ್ತು ಸೈಬೀರಿಯಾಗಳಲ್ಲಿಯ) ಮರಗಿಡಗಳೇನೂ ಬೆಳೆಯದ ಬಯಲುಪ್ರದೇಶ; ಬೆಂಗಾಡು—ಬಯಲು, ಮೈದಾನ.

Stercoráceous ಸ್ಟರ್ಕೊರೇಷಸ್ (ಗು.), **Stércoral** ಸ್ಟರ್ಕೊರಲ್ (ಗು.) ಸಗಣಿಯ, ಮಲದ, ಪುರೀಷದ (—ಸಂಬಂಧವಾದ)

Stere ಸ್ಟಿಯರ್, ಸ್ಟೇರ್ (ನಾ.) ಒಂದು ಘನ ಮೀಟರು (=ಸು. ೩೫.೩ ಘನ ಅಡಿ)

Stereo ಸ್ಟಿಯರಿಯೊ, ಸ್ಟೆರಿಯೊ (ನಾ., ಬಳ. ಮಾ.; ಬ. ವ. -os) =Stereotype (ಎಂಬುದರ ಸಂಕ್ಷಿಪ್ತ) (ಅನೇಕ ವೇಳೆ ವಿಶೇಷಣ ಪ್ರ.: S. plate ಪಡಿಯಚ್ಚು ಫಲಕ, ಸ್ಟೀರಿಯೊ ಮುದ್ರಣಫಲಕ). =Stereoscope, Stereoscopic (ಪದಗಳ ಸಂಕ್ಷಿಪ್ತ). S. camera, plate ಘನರೂಪ ಛಾಯಾಗ್ರಾಹಕ, ಫಲಕ.

Stereo- ಸ್ಟಿಯರಿಯೊ—, ಸ್ಟೆರಿಯೊ— (ಸ. ಪೂ. ಪ.) ಗಟ್ಟಿ—, ಗಡುಸು—, ಘನ—, ದೃಢ—. **-bate** (ಗೋಡೆ, ಕಂಬ, ಮೊ. ಕ್ಕೆ ಆಧಾರವಾದ) ಗಟ್ಟಿ ತಳಹದಿ, ದೃಢವಾದ ಪಾಯ. **-chémistry** ಸಂಯುಕ್ತದ ಅಣು ಪರಮಾಣುಗಳ ವಿನ್ಯಾಸಕ್ಕೆ ಸಂಬಂಧಿಸಿದ ರಸಾಯನ ವಿಜ್ಞಾನ: ಪರಮಾಣು ವಿನ್ಯಾಸ ರಸಾಯನ ವಿಜ್ಞಾನ; ಘನ ರಸಾಯನ ವಿಜ್ಞಾನ. **-chromy** ಬಣ್ಣಗಳು ಗಟ್ಟಿಯಾಗಿ ಕಚ್ಚುವಂತೆ ಸೋಡಿಯಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಿಲಿಕೇಟಿನ ದ್ರಾವಣದಲ್ಲಿ ಮಿಶ್ರಮಾಡಿ ಬಣ್ಣ ಹಾಕುವುದು ; ದೃಢವರ್ಣ ಚಿತ್ರ. **-graphy** ಸಮತಲದಮೇಲೆ ಘನಾಕೃತಿಗಳನ್ನು ರೇಖಿಸುವ ಕಲೆ : ಘನ ರೇಖನ. **-graph, -gram** ಘನ ರೇಖನ ನಕ್ಷೆ. **-gráphic** ಘನ ರೇಖನದ. **-gráphically** (ಕ್ರಿ. ವಿ.) ; **-meter** ಘನ ಪರಿಮಾಣವನ್ನು ಅಳೆಯುವ ಸಲಕರಣೆ : ಘನಮಾಪಕ ; (ದ್ರವಗಳು, ಸಚ್ಛಿದ್ರ ವಸ್ತುಗಳು, ವೊ. ಗಳ ವಿಶಿಷ್ಟ ಗುರುತ್ವವನ್ನು ಕಂಡುಹಿಡಿಯಲು ಉಪಯೋಗಿಸುವ) ವಿಶಿಷ್ಟ ಗುರುತ್ವಮಾಪಕ. **-metry** —ಮಾಪನ. **-métric(al)** (ಗು.) ; **-métrically** (ಕ್ರಿ. ವಿ.) ; **-scope** ಬೇರೆ ಬೇರೆ ದೃಷ್ಟಿಗಳಿಂದ ತೆಗೆದ ಒಂದು ವಸ್ತುವಿನ ಎರಡು ನೋಟಗಳನ್ನು ಒಂದುಗೂಡಿಸಿ ಒಂದೇ ಘನಾಕೃತಿ ಮೂಡುವಂತೆ ಮಾಡುವ ಸಲಕರಣೆ : ಘನ (ರೂಪ) ದರ್ಶಕ. **-scopic** (ಗು.); **-scópically** (ಕ್ರಿ. ವಿ.) ; **-scopy** (ನಾ.); **-type** (ನಾ., ಕ್ರಿ. ಸಕ.) ಬಿಡಿ ಮೊಳೆಗಳನ್ನು ಜೋಡಿಸಿ ಮಾಡಿದ ಅಚ್ಚಿನ ಅಣಿಗೆಗಳಿಂದ ಕಾಗದದ ತಿಳ್ಳು, ಪ್ಲ್ಯಾಸ್ಟರ್ ಆಫ್ ಪ್ಯಾರಿಸ್, ವೊ. ಗಳಲ್ಲಿ ಎರಕ ಹೊಯ್ದು, ಆ ಮೂಲಕ ರಚಿಸಿದ ಮುದ್ರಣಫಲಕ : ಘನ ಮುದ್ರಣ (ಫಲಕ) ; ಇಡಿಯಚ್ಚು (ಹಲಗೆ) ; (S.-block ಘನ ಮುದ್ರಣಫಲಕವನ್ನು ಕೂರಿಸುವ ಮರದ ಅಥವಾ ಕಬ್ಬಿಣದ ತುಂಡು; ಘನ ಮುದ್ರಣಪೀಠ). (ಕ್ರಿ.) ಘನ ಮುದ್ರಣಫಲಕಗಳನ್ನು ಮಾಡು ; ಘನ ಮುದ್ರಣ ವಿಧಾನದಿಂದ ಮುದ್ರಿಸು ; (ರೂಪ.) (ಬದಲಾವಣೆಗಳಿಲ್ಲದಂತೆ) ಒಂದೇ ಮಾದರಿ, ಏಕ ಪ್ರಕಾರ, ಒಂದೇ ಪಡಿಯಚ್ಚು, —ಮಾಡು. **-typer, -typist** ಘನ ಮುದ್ರಣಫಲಕಕಾರ ; (ರೂಪ.) ಒಂದೇ ಪಡಿಯಚ್ಚು ಮಾಡುವವನು. **-typy** ಘನಮುದ್ರಣ ಫಲಕ ತಯಾರಿಕೆ ; ಏಕ ಪ್ರಕಾರತೆ, ಪಡಿಯಚ್ಚು ಕ್ರಮ. **-typography** ಘನ ಮುದ್ರಣ.

Stérile ಸ್ಟೆರಿ(ರೈ)ಲ್ (ಗು.) ಫಲಬಿಡದ, ಫಲವತ್ತಲ್ಲದ, ಗೊಡ್ಡಾದ, ಬಂಜರಾದ, ಬರಡಾದ, ಬಂಜೆಯಾದ, ನಿಷ್ಫಲ, ವ್ಯರ್ಥ (S. land ಬಂಜರುನೆಲ. S. cow ಗೊಡ್ಡುಹಸು. S. plant ಬರಡು ಗಿಡ. S. year ಬೆಳೆಯಿಲ್ಲದ, ವಿಶೇಷ ಘಟನೆಗಳಿಲ್ಲದ, —ವರ್ಷ; ಗೊಡ್ಡು ವರ್ಷ. S. effort ನಿಷ್ಫಲ ಪ್ರಯತ್ನ. S. discussion ವ್ಯರ್ಥ ಚರ್ಚೆ); ಜೀವಂತ ಸೂಕ್ಷ್ಮ (ವಿಷ)ಕ್ರಿಮಿಗಳಿಲ್ಲದಂತೆ ಸಂಸ್ಕರಿಸಿದ ; ಕ್ರಿಮಿ ಶುದ್ಧಿಮಾಡಿದ (=Sterilized); (ಶೈಲಿಯ ವಿಷಯದಲ್ಲಿ) ನೀರಸವಾದ, ಸಪ್ಪೆಯಾದ. **Stérilize** (ಕ್ರಿ. ಸಕ.) ಗರ್ಭಧಾರಣ ಶಕ್ತಿಯನ್ನು ಕಳೆ ; ಗೊಡ್ಡು, ಬಂಜೆ, —ಮಾಡು ; (ರೂಪ.) ನಿಷ್ಫಲ, ವ್ಯರ್ಥ —ಮಾಡು. ಕ್ರಿಮಿ ಶುದ್ಧಿಮಾಡು. **Sterilizátion** (ನಾ.) (ಕ್ರಿಯಾರ್ಥಗಳಲ್ಲಿ) ; S. of the unfit ಅನರ್ಹರ, ಅಯೋಗ್ಯರ, —ಸಂತಾನಶಕ್ತಿ ಹರಣ ; ಅನರ್ಹ ನಿರ್ವೀರ್ಯಕರಣ. **Stérilizer** (ನಾ.) (ಕ್ರಿಯಾರ್ಥಗಳಲ್ಲಿ) ; ಕ್ರಿಮಿ ಶುದ್ಧಿಕಾರಕ. **Sterílity** (ನಾ.)

Sterílity, Stérilize, etc. **Sterile** ನೋಡಿ.

Stérling ಸ್ಟರ್ಲಿಂಗ್ (ಗು., ನಾ.) (ನಾಣ್ಯಗಳ ಮತ್ತು ಪ್ರಶಸ್ತ ಲೋಹಗಳ ವಿಷಯದಲ್ಲಿ) ಚೊಕ್ಕ, ಅಚ್ಚ, ಅಪ್ಪಟ; ಪ್ರಮಾಣ —ಮೌಲ್ಯದ, ಶುದ್ಧತೆಯ [(ಸಂಕ್ಷಿಪ್ತ : Stg. ; ಮು., ಚಿಲ್ಲರೆ ಹೇಳದೆ ಇಡಿಯ ಪೌಂಡುಗಳನ್ನು ಹೇಳುವಲ್ಲಿ ಪ್ರ.) : £20 stg. ಚೊಕ್ಕ ೨೦ ಪೌಂಡು. Is of s. gold, silver ಚೊಕ್ಕ ಬಂಗಾರದ್ದು, ಬೆಳ್ಳಿಯದು] ; (ರೂಪ.) ಗಟ್ಟಿ ಬೆಲೆಯ, ಯಥಾರ್ಥವಾದ, ಪ್ರಾಮಾಣಿಕವಾದ (Is a s. fellow ನಾಣ್ಯವಾದ ಮನುಷ್ಯ. S. character ನಾಣ್ಯವಾದ ಶೀಲ, ಪ್ರಾಮಾಣಿಕವಾದ ನಡತೆ. S. sense ಗಟ್ಟಿ, ಅತ್ಯುತ್ತಮ, —ವಿವೇಕ). (ನಾ.) (ಮಧ್ಯಕಾಲದ ಇಂಗ್ಲೆಂಡಿನ) ಬೆಳ್ಳಿಯ ಪೆನ್ನಿ (ನಾಣ್ಯ); (ಪರದೇಶದ ಹಣಕ್ಕೆ ವ್ಯತಿರಿಕ್ತವಾಗಿ) ಇಂಗ್ಲೆಂಡಿನ—ಪೌಂಡು ನಾಣ್ಯ, ಹಣ.

Stern[1] ಸ್ಟರ್ನ್ (ಗು.) ಕಠಿನ, ಬಹಳ ಕಟ್ಟುನಿಟ್ಟಿನ, ನಿಷ್ಠುರ, ಕಠೋರ, ನಿರ್ದಯ, ನಿರ್ದಾಕ್ಷಿಣ್ಯದ, ಗಡುಸಿನ [S. countenance, father, rebuke, ruler, treatment, virtue. Sterner sex (Sex ನೋಡಿ)]. **Stérnly** (ಕ್ರಿ. ವಿ.) ; **Stérnness** (ನಾ.)

Stern[2] ಸ್ಟರ್ನ್ (ನಾ.) ಹಡಗಿನ, ದೋಣಿಯ, —ಹಿಂಭಾಗ, ಬೆನ್ನು [(ಎದುರು ಪದ : Bow, stem). From stem to s. (Stem[1] ನೋಡಿ). S. chase ಒಂದು ಹಡಗು ಇನ್ನೊಂದು ಹಡಗನ್ನು ನೇರವಾಗಿ ಅದರ ಹಿಂಭಾಗದಲ್ಲೇ ಅಟ್ಟಿಸಿಕೊಂಡು ಹೋಗುವುದು : ಬೆನ್ನಟ್ಟು(ವುದು). S.-chase(r) ಬೆನ್ನಟ್ಟಿ ಬರುತ್ತಿರುವ ಹಡಗನ್ನು ಹೊಡೆಯಲು ಹಿಂಭಾಗದಲ್ಲಿಟ್ಟಿರುವ ಫಿರಂಗಿ : ಹಿಂಭಾಗದ, ಬೆನ್ನು, —ಫಿರಂಗಿ. S. foremost ಬೆನ್ನು ಮುಂದಾಗಿ, ಹಿಂದಕ್ಕೆ, —ಹೋಗುತ್ತ. S. on ಬೆನ್ನು, ಹಿಂಭಾಗ, —ಮುಂದುಮಾಡಿ, ಒಡ್ಡಿ. By the s. (ಮುಂತುದಿಗಿಂತ) ಹಿಂಭಾಗ ನೀರಿನಲ್ಲಿ ಹೆಚ್ಚಾಗಿ ಮುಳುಗಿ]. ಅಂಡು, ಪಿರ್ರೆ, ಪೃಷ್ಠ ; (ಮು., ನರಿಬೇಟೆ ನಾಯಿಯ) ಬಾಲ. **S.-fast** ಹಡಗಿನ ಹಿಂಭಾಗವನ್ನು ಬಂದರು ಕಟ್ಟೆ, ವೊ. ಕ್ಕೆ ಬಿಗಿಯುವ ಹಗ್ಗ, ಸರಪಣಿ: ಹಿನ್‌ಕಟ್ಟು ; ಬೆಂಗಟ್ಟು. **S.-post** ಹಡಗಿನ ಹಿಂಭಾಗದ ಮಧ್ಯದಲ್ಲಿರುವ ಸಾ., ಚುಕ್ಕಾಣಿಗೆ ಆಧಾರವಾಗಿರುವ ಮರದ ಅಥವಾ ಕಬ್ಬಿಣದ ಕಂಬ : ಬೆನ್ನುಕಂಬ, ಹಿಂಗಂಬ ; ಚುಕ್ಕಾಣಿಗಂಬ. **S. sheets** ದೋಣಿ ನಡೆಸುವವರು ಕುಳಿತುಕೊಳ್ಳುವ ಅಡ್ಡಮಣೆಯ ಹಿಂದುಗಡೆಯಿರುವ, ಅನೇಕ ವೇಳೆ ಪ್ರಯಾಣಿಕರು ಕುಳಿತುಕೊಳ್ಳುವುದಕ್ಕೆ ಪೀಠಗಳಿರುವ, ಸ್ಥಳ : ಹಿಂದಳ. **S.-way** ಹಡಗಿನ ಹಿನ್—ಚಲನೆ, ನೂಕು. **S.-wheéler** ಹಿಂಭಾಗದಲ್ಲಿಯ ಒಂದೇ ಒಂದು ದೊಡ್ಡ ಹುಟ್ಟು ಚಕ್ರದಿಂದ ನಡೆಯುವ ಆವಿಹಡಗು: ಹಿನ್‌ಚಕ್ರದ ಹಡಗು. **(-)sterned** (ಗು.) ; **Stérnmost** (ಗು.) ಅತ್ಯಂತ ಹಿಂಭಾಗದ. **Stérnward** (ಗು., ಕ್ರಿ. ವಿ.) ; ಹಿಂಭಾಗದ ಕಡೆ(ಯ). **Stérnwards** (ಕ್ರಿ. ವಿ.)

Stern(o)- ಸ್ಟರ್ನ್(ಒ)— (ಸ. ಪೂ. ಪ.) ಎದೆಯೆಲುಬು (ಮು., ಎದೆಯೆಲುಬನ್ನು ಮಿಕ್ಕ ಭಾಗಗಳೊಂದಿಗೆ ಕೂಡಿಸುವ ಸ್ನಾಯು, ವೊ. ಗಳ ಹೆಸರುಗಳಲ್ಲಿ ಪ್ರ.). **Sternálgia** ಸ್ಟರ್ನ್ಯಾಲ್ಜಿಯ (ನಾ.) ಎದೆನೋವು ; (ಮು.) ಎದೆಸೆಳವು. **Sternoclavícular** ಎದೆಯೆಲುಬು ಕೊರಳೆಲುಬುಗಳ(ನ್ನು ಕೂಡಿಸುವ). **-fácial, -thýroid, -trácheal.**

Stérnum ಸ್ಟರ್ನಮ್ (ನಾ., ಬ. ವ. -na —ನ) (ಕೊರಲಿನಿಂದ ಹೊಟ್ಟೆಯವರೆಗೆ ವ್ಯಾಪಿಸಿರುವ ಮತ್ತು ಎರಡು ಕಡೆಯೂ ಪಕ್ಕೆಲುಬುಗಳು ಅದಕ್ಕೆ ಅಂಟಿಕೊಂಡಿರುವ) ಎದೆಯೆಲುಬು. **Stérnal** (ಗು.) ಎದೆಯೆಲುಬಿನ.

Sternutátion ಸ್ಟರ್ನ್ಯುಟೇಷನ್ (ನಾ.) ಸೀನು(ವುದು). **Sternútative** ಸ್ಟರ್ನ್ಯೂಟಟಿವ್ (ಗು.), **Sternútatory** —ಟೊರಿ (ಗು., ನಾ.) ಸೀನು ಬರಿಸುವ (ವಸ್ತು) (ಉದಾ., ನಸ್ಯ)

Stértorous ಸ್ಟೆರ್ಟೊರಸ್ (ಗು.) (ಉಸಿರಾಟದ ಅಥವಾ ಉಸಿರಾಡುವವನ ವಿಷಯದಲ್ಲಿ ; ಮು., ತೀಕ್ಷ್ಣವಾಯು, ವೊ. ಸಂದರ್ಭದಲ್ಲಿ) ಗೊರಕೆ ಸದ್ದುಮಾಡುವ. **Stértorously** (ಕ್ರಿ. ವಿ.) ; **Stértorousness** (ನಾ.)

Stet (L) ಸ್ಟೆಟ್ (ಅಚ್ಚಿನ ಕರಡು ತಿದ್ದುವಲ್ಲಿ ಸೂಚನೆ ; 'ಮಾಡಿದ್ದ ತಿದ್ದುಪಡಿಯನ್ನು ಹೊಡೆದುಹಾಕಿ, ಮೊದಲನಂತೆಯೇ ಇರಬೇಕೆಂದು ಸೂಚಿಸುವಲ್ಲಿ) ಇದ್ದಂತೆ ಇರಲಿ ; ಮೊದಲನದನ್ನೆ ಇರಿಸು. (ಕ್ರಿ. ಸಕ.) 'ಇದ್ದಂತೆ ಇರಲಿ' ಎಂದು ಬರೆ; ಮಾಡಿದ್ದ ತಿದ್ದುಪಡಿಯನ್ನು ಹೊಡೆದುಹಾಕು.

Stéthoscope ಸ್ಟೆತೊಸ್ಕೋಪ್ (ನಾ., ಕ್ರಿ. ಸಕ.) (ಮು., ಹೃದಯ, ವೊ. ಗಳ ತುಡಿತದ ಶಬ್ದಗಳನ್ನು ಆಲಿಸಿ ಕೇಳಲು ಉಪಯೋಗಿಸುವ) ಆಕರ್ಣಕ. (ಕ್ರಿ.) —ದಿಂದ ಪರೀಕ್ಷಿಸು. **Stethoscópic**—ಸ್ಕಾಪಿಕ್ (ಗು.) ಆಕರ್ಣಕದ (ಮೂಲಕ ಪರೀಕ್ಷಿಸಿದ). **Stethoscópically** (ಕ್ರಿ. ವಿ.) ; **Stethóscopist** ಸ್ಟೆತಾಸ್ಕೊಪಿಸ್ಟ್ (ಗು.) ಆಕರ್ಣಕವನ್ನು ಉಪಯೋಗಿಸುವವನು. **Stethóscopy** (ನಾ.) ಆಕರ್ಣಕ—ಪ್ರಯೋಗ, ಪರೀಕ್ಷೆ.

Stévedore ಸ್ಟೀವಿ(ವೆ)ಡೋ(ಅ)ರ್ (ನಾ.) ಹಡಗಿನ ಸರಕನ್ನು ಎತ್ತಿ ಇಳಿಸುವವನು : ಹಡಗಿನ ಕೂಲಿಯಾಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Stew[1] ಸ್ಟ್ಯೂ (ಕ್ರಿ., ನಾ.) (ಪ್ರಾಚೀ. ಪ್ರ.) ಗುಡಿಸೆಟ್ಟಿಗಳ ಮನೆ ; ವ್ಯಭಿಚಾರ ಗೃಹ (ಸಾ., the stews) ; ಸೂಳೆ, ಗುಡಿಸೆಟ್ಟಿ.

Stew[2] ಸ್ಟ್ಯೂ (ಕ್ರಿ., ನಾ.) (ಮುಚ್ಚಿದ ಪಾತ್ರೆಯಲ್ಲಿ ಸ್ವಲ್ಪ ದ್ರವದಲ್ಲಿ) ನಿಧಾನವಾಗಿ ಬೇಯಿ(ಸು), ಬಾಡಿಸು [S.-pan, -pot ಬೇಯಿಸುವ, ಬಾಡಿಸುವ, —ಬಾಣಲೆ, ಪಾತ್ರೆ. Let person s. in his own juice *or* grease (ಸಹಾಯ ಮಾಡದೆ ಸುಮ್ಮನಿದ್ದುಬಿಡು ಎಂಬರ್ಥದಲ್ಲಿ): ಅವನ ಬೆವರಿನಲ್ಲಿ ಅವನು ಬೆಂದುಕೊಳ್ಳಲಿ ; Stewing pears ಬೇಯಿಸಿ ತಿನ್ನತಕ್ಕ ಪೇರು ಹಣ್ಣುಗಳು. The tea is stewed ಟೀ ಕಷಾಯ ಬಹಳ ಹೊತ್ತು ಇಳಿದು ಕಹಿಯಾಗಿದೆ, ತೀಕ್ಷ್ಣವಾಗಿದೆ]; (ರೂಪ.) ಉಸಿರು ಕಟ್ಟುವ ವಾತಾವರಣದಲ್ಲಿ ಅಥವಾ ತೇವವಾದ ಸೆಕೆಗಾಳಿಯಲ್ಲಿ ಸಂಕಟಪಡು, ಬೆಂದುಹೋಗು ; ಉಬ್ಬಸಪಡು; (ಅಸಂ.) =Swot. (ನಾ.) ನಿಧಾನವಾಗಿ ಬೇಯಿಸಿ, ಬಾಡಿಸಿ, ಮಾಡಿದ ಪದಾರ್ಥ (Irish s. ಕುರಿಮಾಂಸ, ಆಲೂಗೆಡ್ಡೆ, ಈರುಳ್ಳಿ ಹಾಕಿ ಮಾಡಿದ ಒಂದು ಭಕ್ಷ್ಯ) ; (ರೂಪ., ಬಳ. ಮಾ.) In a s. (ಗಾಬರಿ, ಆತಂಕ, ಕೋಪ, ಮೊ. ಗಳಿಂದ) ತಳಮಳಿಸುತ್ತ, ಬೇಯುತ್ತ.

Stew[3] ಸ್ಟ್ಯೂ (ನಾ.) ಮೀನು (ಸಾಕಣೆಯ) ಕೊಳ ; (ಅಡಿಗೆಗೆ ತೆಗೆದುಕೊಳ್ಳುವವರೆಗೂ) ಜೀವಂತ ಮೀನುಗಳನ್ನು ಹಾಕಿಟ್ಟಿರುವ ಕೊಳ ; ಕೃತಕ ಸಿಂಪಿದಂಡೆ.

Stéward ಸ್ಟ್ಯೂಅರ್ಡ್ (ನಾ.) ಇನ್ನೊಬ್ಬರ ಆಸ್ತಿಯ ಆಡಳಿತ ನೋಡಿಕೊಳ್ಳುವವನು ; (ಮು.) ಶ್ರೀಮಂತರ ಮನೆವಾರ್ತೆಯನ್ನು, ಸ್ಥಿರಾಸ್ತಿಯನ್ನು, ನೋಡಿಕೊಳ್ಳಲು ಸಂಬಳಕ್ಕೆ ನಿಯಮಿತನಾದ ಆಡಳಿತಗಾರ: ಮನೆವಾರ್ತೆಗಾರ, ಪಾರುಪತ್ಯಗಾರ, ಕಾರಬಾರಿ. (ಕಾಲೇಜು, ವಿಹಾರ ಸಂಘ, ಹಡಗು, ಮೊ. ಗಳಲ್ಲಿ) ಉಗ್ರಾಣದಿಂದ ಆಹಾರ ಸಾಮಗ್ರಿಗಳನ್ನು ಒದಗಿಸುವುದು, ಊಟ ತಿಂಡಿಗಳ ಮೇಲ್ವಿಚಾರಣೆ ನೋಡಿಕೊಳ್ಳುವುದು, ಮೊ. ಕೆಲಸಗಳುಳ್ಳ ಅಧಿಕಾರಿ : ಉಗ್ರಾಣಿಕ ; (ಅಡುಗೆಯ) ಪಾರುಪತ್ಯಗಾರ. (ಹಡಗಿನಲ್ಲಿಯ) ಪ್ರಯಾಣಿಕರ ಸೇವಕ, ಪರಿಚಾರಕ. (ಕುದುರೆ ಜೂಜಿನ ಕೂಟ, ನರ್ತನ ಗೋಷ್ಠಿ, ಮೊ. ಗಳ) ವ್ಯವಸ್ಥಾಪಕ. Lord High S. of England ಕಿರೀಟ ಧಾರಣ ಮಹೋತ್ಸವದ ವ್ಯವಸ್ಥಾಪಕ, ಅಥವಾ ಶ್ರೀಮಂತನ ನ್ಯಾಯ ವಿಚಾರಣೆಯಲ್ಲಿ ಅಧ್ಯಕ್ಷ. Lord S. of the Household (ಇಂಗ್ಲೆಂಡಿನಲ್ಲಿ) ಅರಮನೆಯ—ಬಕ್ಷಿ, ಪ್ರಧಾನಾಧಿಕಾರಿ. **Stéwardess** (ನಾ., ಸ್ತ್ರೀ.) ; **Stéwardship** (ನಾ.)

Sthénic ಸ್ತೆನಿಕ್ (ಗು.) (ರೋಗ ನಿದಾನ) (ವ್ಯಾಧಿ, ಮೊ. ಗಳ ವಿಷಯದಲ್ಲಿ ; ಮು., ಹೃದಯದ ಮತ್ತು ಅಪಧಮನಿಗಳ) ಜೀವಕ್ರಿಯೆಗಳ ಅತಿ ಚಟುವಟಿಕೆಯ ಲಕ್ಷಣವುಳ್ಳ. ಶಕ್ತಿಯ, ಶಕ್ತಿಸೂಚಕ.

Stíchomyth ಸ್ಟಿಕೊಮಿತ್, **Stichomýthia** ಸ್ಟಿಕೊಮಿತಿಯ (ನಾ.) (ಒಬ್ಬನು ಒಂದು ಚರಣವನ್ನೂ ಮತ್ತೊಬ್ಬನು ಅದಕ್ಕೆ ಉತ್ತರವಾಗಿ ಮುಂದಿನ ಚರಣವನ್ನೂ ಹೇಳುತ್ತ ಮಾಡುವ, ಗ್ರೀಕ್ ನಾಟಕಗಳಲ್ಲಿ ಬರುವ) (ಪದ್ಯ)ಪಂಕ್ತಿ ಸಂಭಾಷಣೆ.

Stick ಸ್ಟಿಕ್ (ಕ್ರಿ. ; ಭೂತ., ಭೂ. ಕೃ. Stuck ಸ್ಟಕ್) (ಒಂದರ ಮೊನೆಯನ್ನು ಒಳಕ್ಕೆ) ಚುಚ್ಚು, ತಿವಿ, ಇರಿ (*In, into, through* ಉಪ. ದೊಡನೆ) [S. the spurs in ಚುಚ್ಚುಮುಳ್ಳಿಂದ (ಕುದುರೆಯನ್ನು) ತಿವಿ. S. pin into *or* through ಗುಂಡುಸೂಜಿಯನ್ನು ಒಳಕ್ಕೆ ಚುಚ್ಚು, ತೂರಿಸು. S. pigs (ಕಟುಕರವನ ಅಥವಾ ಬೇಟೆಗಾರನ ವಿಷಯದಲ್ಲಿ) ಹಂದಿಯನ್ನು ತಿವಿ, ಇರಿ. Will pull out a knife & s. you ಚೂರಿ ಹಿರಿದು ನಿನ್ನನ್ನು ಇರಿದುಬಿಡುತ್ತೇನೆ. Stuck over *or* stuck with almonds ಬಾದಾಮಿ ಪಪ್ಪುಗಳನ್ನು ಕಚ್ಚಿಸಿದ, ಚುಚ್ಚಿರುವ] ; ಮೊನೆಗೆ ಚುಚ್ಚಿ ಇಡು, ಸೆಕ್ಕಿಸು, ಚುಚ್ಚಿಕೊಂಡಿರು, ಸೆಕ್ಕಿಕೊಂಡಿರು [(*In, into, on, onto, upon* ಉಪ. ದೊಡನೆ). Heads were stuck on spikes of gateway ಹೆಬ್ಬಾಗಿಲ ಮೇಕುಗಳಿಗೆ ತಲೆ(ಬುರುಡೆ)ಗಳನ್ನು ಸೆಕ್ಕಿಸಿತ್ತು. S. feather in cap ಗರಿಯನ್ನು ಟೋಪಿಗೆ ಸೆಕ್ಕಿಸು. S. pen behind one's ear ಲೇಖನಿಯನ್ನು ಕಿವಿಯ ಹಿಂದೆ ಸೆಕ್ಕಿಸಿಕೊ] (ಬಳ. ಮಾ.) (ಒಂದು ಗೊತ್ತಾದ ಸ್ಥಳದಲ್ಲಿ, ರೀತಿಯಲ್ಲಿ) ಇಡು, ಹಾಕು, ಇರಿಸು (S. up a target ಗುರಿಹಲಗೆಯನ್ನು ನೆಟ್ಟಗೆ ಇಡು. S. your cap on ಟೋಪಿ ಹಾಕಿಕೊ, ಸೆಕ್ಕಿಸಿಕೊ. S. them in your pocket ಅವನ್ನು ನಿನ್ನ ಜೇಬಿನೊಳಗೆ ತೂರಿಸು, ಹಾಕಿಕೊ. S. a few commas in ಕೆಲವು ಅಲ್ಪವಿರಾಮ ಚಿಹ್ನೆಗಳನ್ನು ಹಾಕು. Just s. it on the table, or down anywhere ಅದನ್ನು ಮೇಜಿನಮೇಲಿಡು, ಇಲ್ಲವೆ ಕೆಳಗೆ ಎಲ್ಲಾದರೂ ಇಡು) ; ಹೊರಕ್ಕೆ ಹೊರಟುಕೊಂಡಿರು, ಚಾಚಿಕೊಂಡಿರು, ಹೊರ ಚಾಚು, ನಿಮಿರು, ನಿಮಿರಿಸು (*Out, up* ಉಪ. ದೊಡನೆ) [S. one's head out of window ತಲೆಯನ್ನು ಕಿಟಕಿಯಿಂದ ಹೊರಕ್ಕೆ ಚಾಚು. His hair sticks straight up ಅವನ ಕೂದಲು ನೆಟ್ಟಗೆ ನಿಂತುಕೊಳ್ಳುತ್ತದೆ, ನಿಮಿರಿಕೊಳ್ಳುತ್ತದೆ. S.-up collar ನಿಮಿರು ಕೊರಲಪಟ್ಟಿ. S. out one's chest ಎದೆಯನ್ನು ನೆಟ್ಟಗೆ ಮಾಡು, ಮುನ್ ಚಾಚು. Stuck-up ನಿಮಿರು ತಲೆಯ, ಅಹಂಕಾರದ, ಪ್ರತಿಷ್ಠೆಯ. S. up to ಬಗ್ಗದಿರು, ಎದುರಿಸಿ ನಿಲ್ಲು, ಪಟ್ಟುಹಿಡಿ(ದು ನಿಲ್ಲು). S. up for (ಮು., ಎದುರಿಗಿಲ್ಲದ ವ್ಯಕ್ತಿಯ) ನಡತೆಯನ್ನು, ಪಕ್ಷವನ್ನು, —ಎತ್ತಿಹಿಡಿ, ಸಮರ್ಥಿಸು] ; ಅಂಟುಹಾಕು, ಕಚ್ಚಿಸು, ಹಚ್ಚು, ಅಂಟಿಕೊ(ಂಡಿರು), ಹತ್ತಿಕೊ(ಂಡಿರು), ಕಚ್ಚಿಕೊ(ಂಡಿರು) [S. postage-stamp on ಅಂಚೆಚೀಟಿಯನ್ನು ಹಚ್ಚು. This envelope will not s. ಈ ಲಕೋಟೆ ಅಂಟಿಕೊಳ್ಳುವುದಿಲ್ಲ. If you throw mud enough, some of it will s. (ರೂಪ.) ಸಾಕಷ್ಟು ದೋಷಾರೋಪಣೆ ಮಾಡಿದರೆ, ಕೆಸರೆರಚಿದರೆ, ಕೊಂಚವಾದರೂ ಅಂಟಿಕೊಳ್ಳುತ್ತದೆ. S. to the point ವಿಷಯ ಹಿಡಿದು ಮಾತನಾಡು ; ವಿಷಯಬಿಟ್ಟು ಹೋಗದಿರು. S. to business ಕೆಲಸವೆಷ್ಟೋ ಅಷ್ಟಕ್ಕೆ ಗಮನಕೊಡು. The name stuck to him *or* stuck ಕೊಟ್ಟ ಹೆಸರು ಅವನಿಗೆ ನಿಂತುಹೋಯಿತು. Friend that sticketh closer than a brother ಸೋದರನಿಗಿಂತ ಆಪ್ತನಾದ, ಹೆಚ್ಚಾಗಿ ಅಂಟಿಕೊಂಡಿರುವ, ಸ್ನೇಹಿತ. Can you s. on a horse ಕುದುರೆಯ ಮೇಲೆ ಭದ್ರವಾಗಿ ಕುಳಿತಿರಬಲ್ಲೆಯೊ? Some of the money stuck in *or* to his fingers ಅದರಲ್ಲಿ ಕೊಂಚ ಹಣ ಅವನ ಕೈಗೆ ಮೆತ್ತಿಕೊಂಡಿತು (ತಿಂದುಹಾಕಿದನು, ದಸ್ತುಮಾಡಿದನು ಎಂಬರ್ಥದಲ್ಲಿ). S. to resolve ನಿರ್ಧಾರವನ್ನು—ಹಿಡಿದಿರು, ಬಿಡದಿರು. S. to promise ಕೊಟ್ಟ ಮಾತಿಗೆ ಬದ್ಧನಾಗಿರು. S. bills (ಗೋಡೆ, ಮೊ. ಗಳ ಮೇಲೆ) (ಪ್ರಕಟನೆ) ಚೀಟಿಗಳನ್ನು —ಅಂಟಿಸು, ಹಚ್ಚು. S. to it ಪಟ್ಟುಹಿಡಿ ; ಬಿಡದೆ ಪ್ರಯತ್ನಿಸು. S. in photographs (ಪುಸ್ತಕ, ಮೊ. ಗಳಲ್ಲಿ) ಛಾಯಾಚಿತ್ರಗಳನ್ನು ಅಂಟಿಸು. Sticks like a bur ಅಂಟುಪುರುಳೆಯಂತೆ ಅಂಟಿಕೊಳ್ಳುತ್ತದೆ. Are you going to s. in *or* indoors all day? ದಿನವೆಲ್ಲ ಮನೆಯಲ್ಲಿ ಕುಳಿತಿರುತ್ತೀಯೊ, ಮನೆಗೆ ಹತ್ತಿಕೊಂಡಿರುತ್ತೀಯೊ? S. out for higher price (ಕಡಮೆ ಬೆಲೆಯನ್ನು ಒಪ್ಪಿಕೊಳ್ಳದೆ) ಹೆಚ್ಚಿನ ಬೆಲೆ ಬೇಕೆಂದು ಪಟ್ಟು ಹಿಡಿ(ದಿರು). S. it out, (ಅಸಂ.) S. it (ಸ್ಥಿತಿಯನ್ನು) ಸಹಿಸಿಕೊ, ತಾಳಿಕೊ (Could not s. it any longer). S. it on (ಅಸಂ.) ಬಹಳ ಹೆಚ್ಚಿನ ಬೆಲೆ—ಕೇಳು, ಹಾಕು ; (ನಿರೂಪಣೆಯಲ್ಲಿ) ಅತಿಶಯೋಕ್ತಿ, ಅತ್ಯುಕ್ತಿ, —ಉಪಯೋಗಿಸು] ; (ಘರ್ಷಣೆ, ಅಡಚು, ಇರುಕು, ಹೀರಿಕೆ, ತೊಡಕು, ಅಡಚಣೆ, ಮೊ. ಗಳಿಂದ) ಚಲಿಸಲಾಗದೆ ಸಿಕ್ಕಿಕೊ, ಕಚ್ಚಿಕೊ, ಸಿಕ್ಕಿಸು, ಕಚ್ಚಿಸು [S. in the mud ಕೆಸರಿನಲ್ಲಿ ಸಿಕ್ಕಿಕೊ ; (ರೂಪ.) ಮುಂದುವರಿಯ(ಲಾಗ)ದಿರು ; ಇದ್ದಲ್ಲಿಯೇ—ಇರು, ತಟಸ್ಥನಾಗಿರು. S.-in-the-mud (ಗು., ನಾ.) ಮುಂದುವರಿಯದ, ಧಾನಸದ, ಜಡ (—ಮನುಷ್ಯ) ; ಹಳೆಯ ಕಂದಾಚಾರದ(ವನು). (ಅಸಂ.) Mrs. S.-in-the-mud ಸದರಿಯವಳು, ಅನಾಮಧೇಯಳು. Sticks in my throat ಗಂಟಲಿನಲ್ಲಿ ಸಿಕ್ಕಿಕೊಳ್ಳುತ್ತದೆ, ಅದನ್ನು ನುಂಗಲಾರೆ ; (ಮಾತು) ಗಂಟಲಿನಲ್ಲಿ ಸಿಕ್ಕಿಕೊಳ್ಳುತ್ತದೆ, ಕುತ್ತಿಗೆ ಹಿಡಿದುಕೊಳ್ಳುತ್ತದೆ ; (ರೂಪ.) ಅದನ್ನು ಒಪ್ಪಲಾರೆ, ಸಹಿಸಲಾರೆ. Sticks in one's gizzard (Gizzard ನೋಡಿ). S. fast (ಬದಿನೆಲ, ಮೊ.ಗಳಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಲವಾಗಿ ಹೂತುಹೋಗು, ಕಟ್ಟಿಕೊಂಡುಬಿಡು. Got up to the fourth form & there stuck ನಾಲ್ಕನೆಯ ತರಗತಿಯವರೆಗೆ ಹತ್ತಿ, ಅಲ್ಲಿ ನಿಂತುಬಿಟ್ಟನು. S. at nothing ಯಾವುದನ್ನೂ ಗಣಿಸದಿರು, ಯಾವುದಕ್ಕೂ ಹೇಸದಿರು. Stuck-up (ಅಸಂ.) ಏನೂ ದಿಕ್ಕು ತೋರದೆ, ದಾರಿ ಕಾಣದೆ. That will s. him up ಅದು ಅವನನ್ನು ದಿಗ್ಭ್ರಾಂತಿಗೊಳಿಸುತ್ತದೆ, ಕಕ್ಕಾಬಿಕ್ಕಿಮಾಡುತ್ತದೆ. S. up bank, mailcoach, etc. (ಅಸಂ.) (ಸುಲಿಗೆ ಮಾಡುವುದಕ್ಕಾಗಿ) ಬ್ಯಾಂಕಿನ ನೌಕರರು, ಟಪ್ಪಾಲು ಬಂಡಿಯ ಪ್ರಯಾಣಿಕರು, ಮೊ. ರನ್ನು ಹೆದರಿಸು, ಬೆದರಿಸು]; (ಸಸ್ಯಕ್ಕೆ ಆಧಾರವಾಗಿ) ಕೋಲನ್ನು ಊರೆಕೊಡು; (ಮುದ್ರಣ) ಹಿಡಿಕೆಯಲ್ಲಿ ಅಚ್ಚುಮೊಳೆಗಳನ್ನು ಜೋಡಿಸು [**Stíckful** (ನಾ.) ಒಂದು ಹಿಡಿಕೆ ತುಂಬು]. Sticking-place, -point ತಿರುಪುಮೊಳೆ ಇರುಕಿಕೊಳ್ಳುವ, ಕಟ್ಟಿಕೊಳ್ಳುವ, ಸ್ಥಳ (ಸಾ., ರೂಪ.). Sticking-plaster (ಗಾಯ, ಮೊ. ಕ್ಕೆ ಹಾಕುವ) ಅಂಟು ಪಳಾಸ್ತ್ರಿ. S.-jaw (ಅಸಂ.) (ಅಗಿಯುವುದಕ್ಕಾಗದೆ) ಅಂಟಿಕೊಳ್ಳುವ ತಿಂಡಿ. **Sticker** (ನಾ.) (ಕ್ರಿಯಾರ್ಥಗಳಲ್ಲಿ); (ಕ್ರಿಕೆಟ್ ಆಟ: ನಿಧಾನವಾಗಿ ಗೆಲ್ಲಂಕಗಳನ್ನು ಮಾಡುವ, ಔಟ ಕಳೆಯಲು ಕಷ್ಟವಾದ) ಆಟಕ್ಕೆ ಕಟ್ಟಿಕೊಂಡಿರುವ ದಾಂಡುಗಾರ. ಪ್ರವಾಸಕ್ಕೆ ಬಂದು ಬಹುಕಾಲ ನಿಂತುಬಿಡುವವನು; (ಆರ್ಗನ್ ವಾದ್ಯದಲ್ಲಿ) ಧ್ವನಿಕೀಲಿಗೂ ವಾಯು ಸಂಪುಟದ ಕವಾಟಕ್ಕೂ ಸಂಬಂಧ ಕಲ್ಪಿಸಿ ಮಿಡಿಯುವ ಮರದ ಕಡ್ಡಿ. Bill-s. (Bill[3] ನೋಡಿ). Pig-s. ಉದ್ದ ಅಲಗಿನ ಚೂಪುಮೊನೆಯ ಕತ್ತಿ: ತಿವಿ, ಇರಿ, —ಗತ್ತಿ. **Stícky** (ಗು.) ಅಂಟಿಕೊಳ್ಳುವ, ಮೆತ್ತಿಕೊಳ್ಳುವ, ಅಂಟಂಟಾದ. **Stíckily** (ಕ್ರಿ. ವಿ.); **Stíckiness** (ನಾ.)

Stick (ನಾ.) (ಮರದ) ಕಡ್ಡಿ, ಕೋಲು, ದೊಣ್ಣೆ, ದಂಡ, ಕಡ್ಡಿಪುಳ್ಳೆ [Cut a s. from the hedge ಬೇಲಿಯಿಂದ ಒಂದು ಕಡ್ಡಿ ಕತ್ತರಿಸಿಕೊ. Cannot walk without a s. ಕೋಲಿಲ್ಲದೆ ನಡೆಯಲಾರೆ. Gather sticks to make a fire ಬೆಂಕಿಗಾಗಿ ಕಡ್ಡಿಪುಳ್ಳೆ ಕೂಡಹಾಕು. Any s. to beat a dog (ದ್ವೇಷ ಸಾಧನೆಗೆ ಏನು ಬೇಕಾದರೂ ಮಾಡಬಹುದು ಎಂಬ ಅರ್ಥದಲ್ಲಿ): ನಾಯಿ ಹೊಡೆಯುವುದಕ್ಕೆ ಯಾವ ಕೋಲಾದರೂ ಆಯಿತು. The policy of the big s. ದೊಣ್ಣೆ, ಬೆದರಿಕೆ, —ತೋರಿಸುವುದು. Broom, Drum, Fiddle, Gold, Single, Sword, -s. (ಆಯಾ ಪದ ನೋಡಿ). Rocket-s. ಆಕಾಶಬಾಣದ ಕಡ್ಡಿ. Umbrella-s. ಕೊಡೆಯ ಕಾವು. Riding on broomstick (ಮಾಟಗಾತಿ ಆಕಾಶದಲ್ಲಿ ಹೋಗುವ ರೀತಿಯಲ್ಲಿ): ಪೊರಕೆಯ ಮೇಲೆ ಸವಾರಿಮಾಡುತ್ತ. House was pulled down & not a s. left standing ಒಂದು ಗಳುವನ್ನೂ ಬಿಡದೆ ಮನೆಯನ್ನೆಲ್ಲಾ ಕೆಡವಲಾಯಿತು. A few sticks of furniture ಕುರ್ಚಿ, ಮೊ. ಸಾದಾ ಪೀಠೋಪಕರಣಗಳು. Wants the s. ಬೆತ್ತದ ರುಚಿ ತೋರಿಸಬೇಕಾಗಿದೆ; ತೀಡಬೇಕಾಗಿದೆ. As cross as two sticks ರೇಗುತ್ತ, ಸಿಡಿಗುಟ್ಟುತ್ತ. Devil on two sticks (Devil ನೋಡಿ). In a cleft s. (Cleave[1] ನೋಡಿ). Cut one's s. (Cut ನೋಡಿ)]; (ನಾವೆ, ಹಾಸ್ಯ ಪ್ರ.) ಕೂವೆ (ಮರ), ದೂಲ; (ಸಂ.) (ಮೇಳ ನಿಯಂತ್ರಕನ) ತಾಳದಂಡ; (ರೂಪ.) (ಶಕ್ತಿ, ಸಾಮರ್ಥ್ಯ, ಬುದ್ಧಿ, ಸ್ನೇಹಪರತೆ, ಮೊ. ವು ಇಲ್ಲದ) ಶುಷ್ಕ ಮನುಷ್ಯ, ಕಾಷ್ಠ. ಕಲ್ಲುಸಕ್ಕರೆ, ಅರಗು, ಕ್ಷೌರದ ಸಾಬೂನು, ಮೊ. ಗಳ ಸರಿಸುಮಾರು ಉರುಳೆಯಾಕಾರದ ಕಡ್ಡಿ: ಸಕ್ಕರೆ ಕಡ್ಡಿ, ಅರಗು ಕಡ್ಡಿ, ಸಾಬೂನು ಕಡ್ಡಿ, ಮೊ. ವು; =Fiddle-s., drum-s., composing-s. (ಇವೇ ಮೊದಲಾದ ಆಯಾ ಸಂದರ್ಭ ಸೂಚಿತ ಸಂಯುಕ್ತಪದಗಳ ಸಂಕ್ಷಿಪ್ತವಾಗಿ ಪ್ರ.). S.-insect (ರೆಕ್ಕೆಯಿಲ್ಲದ, ಉದ್ದಕಾಲಿನ, ನಿಡುಮೆಯ್ಯ) ಕಡ್ಡಿ (ಯಂಥ) ಹುಳು.

Sticker. **Stick** ನೋಡಿ.

Stickleback ಸ್ಟಿಕ್‌ರ್‌ಬ್ಯಾಕ್ (ನಾ.) ಬೆನ್ನಿನಮೇಲೆ ಮೊನಚಾದ ಬೆನ್ನೆಲುಬುಗಳುಳ್ಳ ಸಣ್ಣ ಜಾತಿಯ ಮೀನು: ಮುಳ್ಳು ಮೀನು.

Stíckler ಸ್ಟಿಕ್ಲರ್ (ನಾ.) (ಪಕ್ಷ, ವ್ಯಕ್ತಿ, ನಿಯಮ, ಮೊ. ಗಳಿಗಾಗಿ) ಪಟ್ಟುಹಿಡಿದು ನಿಲ್ಲುವವನು, ಛಲದಿಂದ ವಾದಿಸುವವನು; ಛಲವಾದಿ, ಹಟಗಾರ, ಅತಿನಿಷ್ಠ (*For* ಉಪ. ಜೊಡನೆ) (Is a great, am no, s. for authority, precision)

Stícky. **Stick** ನೋಡಿ.

Stiff ಸ್ಟಿಫ್ (ಗು., ನಾ.) ಬಳುಕದ, ಬಗ್ಗದ, ಅನಮ್ಯ, ಪೆಡಸಾದ; ಜಗ್ಗದ, ಹಟುಹಿಡಿಯುವ, ಸೆಡೆತಿರುವ [S. shirt-front ಗರಿಮುರಿಯಾದ ಷರಟಿನ ಮುಂಭಾಗ. Lies s. in death ಸತ್ತು ಸೆಟೆದು ಬಿದ್ದಿದ್ದಾನೆ. Has a s. leg ಅವನ ಕಾಲು ಸೆಡೆತುಕೊಂಡಿದೆ, ಪೆಡಸಾಗಿದೆ. S.-necked ಹಟದ; ಅಹಂಕಾರಿ; ಉದ್ಧತ. Keep a s. upper lip ದೃಢ ಸ್ವಭಾವ, ಮನಸ್ಸ್ಥೈರ್ಯ, —ತೋರಿಸು. S. ship (ಪಟದ ಮೇಲೆ ಗಾಳಿಯ ಒತ್ತಡದಿಂದ) ಓಲದ, ದೃಢ ಚಲನೆಯ, —ಹಡಗು. S. market ಸ್ಥಿರ ಧಾರಣೆಯ, ಬಿಗಿಯಾದ, —ಪೇಟೆ]; ಸರಳತೆ, ಸೌಲಭ್ಯ, ಸಲಿಗೆ, ಲಾಲಿತ್ಯ, —ಇಲ್ಲದ; ಗಡುಸಾದ, ಬಿಂಕದ, ಬಿಗಿಯಾದ (S. manners ಗಡುಸಾದ ನಡತೆ. A s. reception ಸ್ನೇಹರಸವಿಲ್ಲದ, ಆದರವಿಲ್ಲದ, ಗಡುಸಾದ, —ಸ್ವಾಗತ. S. attitude ಬಿಂಕದ, ಗಡುಸಾದ, —ಭಾವ. S. style ಕ್ಲಿಷ್ಟ, ಪೆಡಸಾದ, —ಶೈಲಿ); ಕಟ್ಟಿಕೊಳ್ಳುವ, ತಡೆದುಕೊಳ್ಳುವ [A s. hinge ಕಟ್ಟಿಕೊಂಡಿರುವ ಕೀಲು. S. un ಕದೀಮ (ಆಟಗಾರ, ಮೊ. ರು). S. neck ಕತ್ತನ್ನು ಸರಾಗವಾಗಿ ಆಡಿಸಲಾಗದ ಒಂದು ವಾಯುರೋಗ: ಕುತ್ತಿಗೆ ಸೆಡೆತ]; (ಸ್ನಾಯು, ಕೈಕಾಲು, ವ್ಯಕ್ತಿ, ಮೊ. ಗಳ ವಿಷಯದಲ್ಲಿ) ದುಡಿತದಿಂದ ಬಳಲಿದ್ದು, ಉಪಯೋಗಿಸಿದರೆ ನೋಯುವ: ಸೆಡೆತುಕೊಂಡಿರುವ, ಸೇದಿಹೋಗಿರುವ. ಕಷ್ಟವಾದ, ಕಠಿನ (S. examination ಕಠಿನ ಪರೀಕ್ಷೆ. S. climb ಕಡಿದಾದ ಏರು. A s. price ತಗ್ಗು, ದುಬಾರಿ, —ಬೆಲೆ. A s. glass of grog ಒಂದು ಲೋಟ ತೀಕ್ಷ್ಣ ಗ್ರಾಗ್ ಮದ್ಯ. A s. subject ಕಷ್ಟವಾದ, ಕಠಿನವಾದ, —ವಿಷಯ); (ಹಸಿ ಜೇಡಿ, ಕಲಸಿದ ಹಿಟ್ಟು, ಮೊ. ಗಳ ವಿಷಯದಲ್ಲಿ) ಗಟ್ಟಿಯಾದ, ಬಿಗಿತುಕೊಂಡ; [S.-bit (ತುದಿಗಳಲ್ಲಿ ಉಂಗುರಗಳುಳ್ಳ, ಅಖಂಡ ಸಲಾಕಿಯ) ಬಿಗಿ ಕಡಿವಾಣ]. (ನಾ.) (ಅಸಂ.) ಚಲಾವಣೆ ಮಾಡಬಹುದಾದ ಪತ್ರ (ಉದಾ., ಸಾಲಪತ್ರ, ಹುಂಡಿ, ಮೊ. ವು); (ಅಸಂ.) ಹೆಣ. **Stíffen** (ಕ್ರಿ.); **Stíffener** (ನಾ.); **Stíffening** (ನಾ.); **Stíffish** (ಗು.); **Stíffly** (ಕ್ರಿ. ವಿ.); **Stíffness** (ನಾ.)

Stífle[1] ಸ್ಟೈಫ್‌ಲ್ (ಕ್ರಿ.), =Smother (ಕ್ರಿ.). **Stífling** (ಗು.); **Stíflingly** (ಕ್ರಿ. ವಿ.)

Stífle[2] ಸ್ಟೈಫ್‌ಲ್ (ನಾ.) (ಮು., ಕುದುರೆ, ನಾಯಿ, ಮೊ. ಕೆಲವು ಪ್ರಾಣಿಗಳ) ಹಿಂಗಾಲಿನ ಮಂಡಿಕೀಲು (=S.-joint); ಮಂಡಿಕೀಲಿನ ಅಥವಾ ಮಂಡಿಮೂಳೆಯ ರೋಗ. S.-bone (ಕುದುರೆ, ಮೊ. ಗಳ) ಹಿಂಗಾಲಿನ ಮಂಡಿಚಿಪ್ಪು. S.-shoe ಮಂಡಿ ರೋಗದಿಂದ ನರಳುತ್ತಿರುವ ಕುದುರೆ ತನ್ನ ದುರ್ಬಲವಾದ ಕಾಲಿನಮೇಲೆ ಭಾರಬಿಟ್ಟು ಅದನ್ನು ಪಳಗಿಸಿ ಬಲಗೊಳಿಸಿಕೊಳ್ಳಲಾಗುವಂತೆ, ಅದರ ಸ್ವಸ್ಥವಾದ ಕಾಲಿಗೆ ಹೊಡೆಯುವ ಲಾಳ: ಮಂಡಿ ರೋಗದ ಲಾಳ. **Stífled** (ಗು.) ಮಂಡಿ ರೋಗ ತಗುಲಿದ.

Stígma ಸ್ಟಿಗ್ಮ (ನಾ.; ಬ. ವ., ಸಂದರ್ಭಾನುಸಾರವಾಗಿ -s —ಮಸ್, -ta —ಮಟ) (ಪ್ರಾಚೀ. ಪ್ರ.) (ಗುಲಾಮ, ಅಪರಾಧಿ, ಮೊ. ರಿಗೆ ಹಾಕುತ್ತಿದ್ದ) ಬರೆ (ಗುರುತು), ಸುಡು ಮುದ್ರೆ(ಯ ಚಿಹ್ನೆ); (ಒಬ್ಬನಿಗೆ, ಒಬ್ಬನ ಹೆಸರಿಗೆ, ಅಂಟಿಕೊಂಡ) ಕಳಂಕ, ಅಪವಾದ, ಹಳಿ(ವು); (ರೋಗ ನಿದಾನ) ವ್ಯಾಧಿಯ ನಿರ್ದಿಷ್ಟ ಲಕ್ಷಣ, ಚಿಹ್ನೆ (The s. of syphilis); (ಅಂ. ರ. ಶಾ., ಪ್ರಾ. ವಿ.) (ಚರ್ಮ, ಮೊ. ಗಳ ಮೇಲಿನ) ಕಲೆ, ಮಚ್ಚೆ; (ಕೀಟಗಳ ಮತ್ತು ಅಕಶೇರುಕಗಳ) (ಶ್ವಾಸ)ರಂಧ್ರ; ಅಗಿಂದಾಗ್ಗೆ ಅಥವಾ ಮಾನಸಿಕ ಪ್ರಚೋದನೆಗೆ ಒಳಗಾದಾಗ ರಕ್ತಸ್ರಾವ ಮಾಡುವ, ಮನುಷ್ಯನ ಚರ್ಮದಮೇಲಿನ ಕೆಂಪು ಕಲೆ: ಕೆಂಗಲೆ (ಬ. ವ. -ta); (ಸ. ವಿ.) ಗರ್ಭಾಧಾನದಲ್ಲಿ ಪರಾಗವನ್ನು ತೆಗೆದುಕೊಳ್ಳುವ ಪುಷ್ಪ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಲಾಕೆಯ ಅಥವಾ ಅಂಡಾಶಯದ ಭಾಗ: ಶಲಾಕಾಗ್ರ; (ಕ್ರೈಸ್ತ ವೈದಿಕ; ಸಾ., ಬ. ವ. -ta) ಕ್ರಿಸ್ತನನ್ನು ಶಿಲುಬೆಗೆ ಏರಿಸಿದಾಗ ಆತನ ಮೈಯಲ್ಲಿ ಮೊಳೆಗಳಿಂದಲೂ ಈಟಿಗಳಿಂದಲೂ ಆದ ಗಾಯ ಗಳಂತೆ, ದೈವಾನುಗ್ರಹದಿಂದ ಅಸಿಸಿ ಪಟ್ಟಣದ ಸಂತ ಫ್ರಾನ್ಸಿಸ್, ಮೊ. ಕೆಲವು ಸಂತರ ಮೈಮೇಲೆ ಕಾಣಿಸಿಕೊಂಡವೆಂದು ಹೇಳುವ ಕಲೆಗಳು: ಶಿಲುಬೆ —ಗಾಯದ ಕಲೆ, ಕ್ಷತಿ ಚಿಹ್ನೆ. **Stigmátic** ಸ್ಟಿಗ್ಮ್ಯಾಟಿಕ್, **Stígmatose** ಸ್ಟಿಗ್ಮಟೋಸ್ (ಗು.) ಕಲೆ, ಕಲೆ, —ಉಳ್ಳ; ಕಳಂಕಿತ; (ಶಲಾಕೆಯ ವಿಷಯದಲ್ಲಿ) ಶಲಾಕಾಗ್ರವನ್ನು ಪಕ್ಕದಲ್ಲುಳ್ಳ (-tose). **Stígmatist** (ನಾ.) ರೋಗದ ಕೆಂಗಲೆ ಗಳುಳ್ಳವನು; ಶಿಲುಬೆ ಗಾಯದ ಕಲೆಗಳುಳ್ಳವನು. **Stígmatize** (ಕ್ರಿ. ಸಕ.) ಬರೆ, ಗುರುತು, —ಹಾಕು; ಕೆಟ್ಟ ಹೆಸರು ಕೊಡು, ಕಳಂಕ ಹಚ್ಚು, ಹಳಿ (S. him, it, as a coward, cowardice ಅವನನ್ನು ಹೇಡಿಯೆಂದು, ಅದನ್ನು ಹೇಡಿತನವೆಂದು, ಹಳಿ); (ಸುಪ್ತಾತ್ಮ ವಾಹನ ಪ್ರೇರಣೆ, ಮೊ. ಗಳಿಂದ ವ್ಯಕ್ತಿಯ ಮೈಮೇಲೆ) ಕೆಂಗಲೆ ಗಳನ್ನುಂಟುಮಾಡು, ಶಿಲುಬೆ ಗಾಯದ ಕಲೆಗಳನ್ನುಂಟುಮಾಡು. **Stigmatizátion** (ನಾ.)

Stile[1] ಸ್ಟೈಲ್ (ನಾ.) (ಬೇಲಿ, ಗೋಡೆ, ಮೊ. ನ್ನು ಮನುಷ್ಯರು ಹತ್ತಿ ಹೋಗಲು ಅಥವಾ ಹಾದುಹೋಗಲು ಅನುಕೂಲಿಸುವ ಆದರೆ ದನಕರುಗಳ ಪ್ರವೇಶಕ್ಕೆ ಅವಕಾಶಕೊಡದ) ದಾಟುಮೆಟ್ಟು, ತಡಮೆ, ತಡೆ [Help lame dog over s. (Dog ನೋಡಿ)]

Stile[2] ಸ್ಟೈಲ್ (ನಾ.) (ಬಾಗಿಲ ಚೌಕಟ್ಟು, ಗೋಡೆಯ ಹಲಗೆ ಸೇರುವೆ, ಮೊ. ಗಳಲ್ಲಿ) ನಿಲು, ಲಂಬ, —ಪಟ್ಟಿ, ಮರ.

Stilétto ಸ್ಟಿಲೆಟೊ (ನಾ., ಬ. ವ. -os, -oes; ಕ್ರಿ. ಸಕ.) ಕಠಾರಿ, ಸಣ್ಣ ಬಾಕು(ವಿನಿಂದ ಇರಿ, ತಿವಿ); ಸಣ್ಣ ತೂತು, ಮೊ. ನ್ನು ಕೊರೆ ಯುವುದಕ್ಕೆ ಉಪಯೋಗಿಸುವ ಮೊನೆ ಸಲಕರಣೆ: ಕಂಡಿ, ಕಣ್ಣು, —ಕೊರಕ.

Still[1] ಸ್ಟಿಲ್ (ಗು., ನಾ., ಕ್ರಿ. ವಿ.) ಚಲಿಸದ, ಅಲುಗಾಡದ, ಸದ್ದಡಗಿದ, ತೆಪ್ಪಗಿರುವ, ನಿಶ್ಚಲ, ನಿಶ್ಶಬ್ದ, ಸ್ತಬ್ಧ, (ಪ್ರ)ಶಾಂತ, ಕಲಕಿಲ್ಲದ [A s. lake. Still waters run deep (Water ನೋಡಿ). As s. as the grave ಗೋರಿಯಂತೆ ನಿಶ್ಶಬ್ದವಾಗಿ. In s. meditation ನಿಶ್ಚಲ ಧ್ಯಾನದಲ್ಲಿ. S. small voice (Small ನೋಡಿ). All sounds are s. ಸದ್ದುಗಳೆಲ್ಲ ಅಡಗಿವೆ. **S. life** (ವರ್ಣಚಿತ್ರದಲ್ಲಿ) ಹಣ್ಣು, ಕುರ್ಚಿ, ಮೇಜು, ಮೊ. ನಿರ್ಜೀವ ವಸ್ತುಗಳ ನಿರೂಪಣೆ: ನಿರ್ಜೀವ ವಸ್ತು ಚಿತ್ರಣ. **S. hock** ಗುಳ್ಳೆಯೇಳದ ಹಾಕ್ ಮದ್ಯ. **S.-birth** ಸತ್ತ ಮಗು ಹುಟ್ಟುವುದು; ಮೃತ ಜನನ. **S.-born** ಹುಟ್ಟುವಾಗಲೇ ಸತ್ತಿದ್ದ, ಸತ್ತು ಹುಟ್ಟಿದ, ಮೃತ ಜಾತ; (ರೂಪ.) ಸತ್ತ, ನಿರ್ಜೀವ, ಬರಡು (S.-born writings). **S.-bugle** ಮತ್ತೊಮ್ಮೆ ಸಂಕೇತ ಧ್ವನಿ ಕೊಡುವವರೆಗೆ ಎಲ್ಲರೂ ನಿಸ್ತಬ್ಧರಾಗಿರ ಬೇಕೆಂದು ನಾವಿಕ ಪಡೆಗೆ ಕೊಡುವ ಕಹಳೆ ಕರೆ: ನಿಸ್ತಬ್ಧ ಕಹಳೆ. **S.-fish** (ಕ್ರಿ. ಅಕ.) ಲಂಗರು ಹಾಕಿರುವ ದೋಣಿಯಿಂದ ಮೀನು ಹಿಡಿ]. (ನಾ.) ನಿಶ್ಶಬ್ದತೆ, ನೀರವತೆ, ನಿಸ್ತಬ್ಧತೆ (In the s. of night). (ಚಲನಚಿತ್ರಕ್ಕೆ ವಿರುದ್ಧವಾಗಿ) ಸಾಮಾನ್ಯ ಛಾಯಾಚಿತ್ರ, ಛಾಯಾಚಿತ್ರ; ನಿಶ್ಚಲ ಚಿತ್ರ. (ಕ್ರಿ.) ಸುಮ್ಮನಾಗಿಸು, ಶಾಂತಮಾಡು, ಶಮನಗೊಳಿಸು, ಸದ್ದಡಗಿಸು, ನಿಶ್ಶಬ್ದಗೊಳಿಸು; (ವಿರ. ಪ್ರ.) ಶಾಂತವಾಗು (When the tempest stills ಬಿರುಗಾಳಿ ಮಳೆ ಶಾಂತವಾದಾಗ). (ಕ್ರಿ. ವಿ.) (ಪ್ರಾಚೀ. ಪ್ರ.) ಯಾವಾಗಲೂ, ಸದಾ, ಸರ್ವದಾ; ಆಗಲೂ, ಈಗಲೂ, ಇನ್ನೂ, ಆದರೂ, ಆದಾಗ್ಯೂ, ಇನ್ನೂ ಹೆಚ್ಚಾಗಿ (ಸಾ., ತರ ರೂಪದೊಂದಿಗೆ ಪ್ರ.: S. better). **Stilly** ಸ್ಟಿಲ್ಲಿ (ಕ್ರಿ. ವಿ.) (ವಿರ. ಪ್ರ.); (ಗು.) (ಕಾವ್ಯ) ನಿಶ್ಶಬ್ದ, ಶಾಂತ, ಸ್ತಬ್ಧ. **Stillness** (ನಾ.)

Still[2] ಸ್ಟಿಲ್ (ನಾ., ಕ್ರಿ.) ಬಟ್ಟಿಯಿಳಿಸುವ ಸಲಕರಣೆ, ಬಟ್ಟಿಯಂತ್ರ [S.-room ಬಟ್ಟಿಕೋಣೆ; (ದೊಡ್ಡ ಮನೆಗಳಲ್ಲಿ) ಮನೆವಾರ್ತೆಗಾರನ ಉಗ್ರಾಣ]. (ಕ್ರಿ.) (ಕಾವ್ಯ) ತೊಟ್ಟಿಕ್ಕು, ತೊಟ್ಟಿಕ್ಕಿಸು, ಹನಿ(ಸು) (To s. one's tears); (ಮದ್ಯವನ್ನು) ಬಟ್ಟಿಯಿಳಿಸು, ಬಟ್ಟಿಯಂತ್ರ ದಿಂದ ತಯಾರಿಸು.

Stíllage ಸ್ಟಿಲೆ(ಲಿ)ಜ್ (ನಾ.) (ನೀರು ಬಸಿಯುತ್ತಿರುವ ವಸ್ತು, ಮೂಟೆ ಕಟ್ಟಬೇಕಾದ ಪದಾರ್ಥ, ಮೊ. ನ್ನು ನೆಲ ಸೋಕದಂತೆ ಇಡಲು ಉಪ ಯೋಗಿಸುವ) (ಬಸಿ —) ಮಣೆ, ಬೆಂಚು, ಚೌಕಟ್ಟು; (ಮು., ಪೀಪಾಯಿಯ) ಪೀಠ.

Stílling ಸ್ಟಿಲಿಂಗ್ (ನಾ.), **Stíllion** ಸ್ಟಿಲ್ಯನ್ (ನಾ.) ಪೀಪಾಯಿ (ಇಡುವ) ಪೀಠ.

Stilly. **Still**[1] ನೋಡಿ.

Stilt ಸ್ಟಿಲ್ಟ್ (ನಾ.) ಪಾದಗಳನ್ನು ಊರಿಕೊಳ್ಳಲು ಆಸರೆಗಳುಳ್ಳ, ಸಾ., ಜೋಡಿಯಾಗಿ ಉಪಯೋಗಿಸುವ, ಮೇಲು ಭಾಗವನ್ನು ಕಾಲಿಗೆ ಕಟ್ಟಿಕೊಳ್ಳುವ ಅಥವಾ ಕೈಯಲ್ಲಿ ಹಿಡಿದುಕೊಳ್ಳುವ, ನೆಲ ಬಿಟ್ಟು ಎತ್ತರದಲ್ಲಿ ನಡೆಯಲನುಕೂಲಿಸುವ ಕೋಲು, ಗಣೆ: ಮೆಟ್ಟು —ಗೋಲು, ಗಣೆ [On stilts ಮೆಟ್ಟುಗೋಲನಮೇಲೆ; (ರೂಪ.) ಶ್ರೀಮದ್ಗಾಂಭೀರ್ಯದ; (ಶೈಲಿ, ಮೊ. ವು) ಕೃತಕ ಪಾಂಡಿತ್ಯದ ಆಡಂಬರದ]; ಮೂರು ಬೆರಳಿನ ಉದ್ದಗಾಲಿನ ಒಂದು ಹಕ್ಕಿ (=S.-bird, -plover, -walker); S.-petrel, -sandpiper ನಿಡು ಗಾಲಿನ —ಪೆಟ್ರೆಲ್ ಹಕ್ಕಿ, ಸ್ಯಾಂಡ್‌ಪೈಪರ್ ಹಕ್ಕಿ. **Stílted** (ಗು.) ಮೆಟ್ಟುಗೋಲಿನ ಮೇಲಿನ(ಂಥ); (ಸಾಹಿತ್ಯ ಶೈಲಿ, ಮೊ. ವಿಷಯದಲ್ಲಿ) ಅತಿಪಾಂಡಿತ್ಯದ, ಆಡಂಬರದ; (ಕಮಾನಿನ ವಿಷಯದಲ್ಲಿ: ನಿಜವಾದ ಕಮಾನಿನ ಅಡಿಗೂ ಕಮಾನಿಗೆ ಆಧಾರವಾದ ಕಂಬದ ಮೇಲುವರಿಸೆಗೂ ನಡುವೆ ನೆಟ್ಟನೆಯ ಕಟ್ಟಡ ಕಟ್ಟಿ) ಅಡಿ ಎತ್ತರಿಸಿದ. **Stíltedly** (ಕ್ರಿ. ವಿ.); **Stíltedness** (ನಾ.)

Stímulant ಸ್ಟಿಮ್ಯುಲಂಟ್ (ಗು., ನಾ.) ಹುರಿದುಂಬಿಸುವ, ಉತ್ತೇಜಕ (ಸಾಮಾನ್ಯಾರ್ಥಗಳಲ್ಲಿ ವಿರ. ಪ್ರ.); (ವೈ. ಶಾ.) ದೇಹದಲ್ಲಿ ಅಥವಾ ಅಂಗದಲ್ಲಿ ಚೈತನ್ಯವನ್ನು ತಾತ್ಕಾಲಿಕವಾಗಿ ಉದ್ರೇಕಿಸುವ: ಉತ್ತೇಜಕ. (ನಾ.) ಉತ್ತೇಜಕ, ಮಾದಕ(ವಸ್ತು, ವಿಷಯ) (ಉದಾ., ಶಾಖ, ವಿದ್ಯುಚ್ಛಕ್ತಿ, ಸಂತೋಷ, ಮದ್ಯ, ಮೊ. ವು. Never takes stimulants ಮದ್ಯ ಕುಡಿಯುವುದಿಲ್ಲ). **Stímulate** —ಲೇಟ್ (ಕ್ರಿ. ಸಕ.) ಉತ್ತೇಜನಗೊಳಿಸು, ಉದ್ದೀಪನಮಾಡು; (ಜೋರಾಗಿ ಕಾರ್ಯಮಾಡುವಂತೆ) ಉದ್ರೇಕಿಸು, ಪ್ರಚೋದಿಸು, ಹುರಿದುಂಬಿಸು. **Stímulating** (ಗು.); **Stimulátion** (ನಾ.); **Stímulative** (ಗು.); **Stímulator** (ನಾ.); **Stímulus** ಸ್ಟಿಮ್ಯು(ಮ್ಯೂ)ಲಸ್ (ನಾ.; ಬ. ವ. -li —ಲೈ) ಉದ್ದೀಪಕ, ಉತ್ತೇಜಕ, ಉದ್ದೀಪನ, ಉತ್ತೇಜನ, ಪ್ರಚೋದನೆ (So lethargic that no s. affects him ಯಾವ ಉತ್ತೇಜಕವೂ ತಟ್ಟದಷ್ಟು ಜಡನಾಗಿ. Under the s. of hunger ಹಸಿವಿನ ಆತುರದಿಂದ, ಹಸಿವು ಕೆರಳಿ); (ಶ. ವಿ.) ಅಂಗಾಂಶಗಳಲ್ಲಿ ಪ್ರತಿವರ್ತನೆಗಳನ್ನು ಅಥವಾ ಪ್ರತಿಕ್ರಿಯೆಗಳನ್ನು ಉಂಟುಮಾಡುವ: ಪ್ರಚೋದಕ, ಉತ್ತೇಜಕ. (ಸ. ವಿ.) ವಿಷಮುಳ್ಳು; (ಕ್ರೈಸ್ತ ವೈದಿಕ) (ಬಷಪ್ಪಿನ) ಧರ್ಮದಂಡದ ತುದಿಯ ಮೊನೆ. **Stímulose** (ಗು.) (ಸ. ವಿ.) ವಿಷಮುಳ್ಳುಗಳಿರುವ.

Stímulate, Stímulus, etc. **Stimulant** ನೋಡಿ.

Sting ಸ್ಟಿಂಗ್ (ಕ್ರಿ.; ಭೂತ., ಭೂ. ಕೃ. Stung ಸ್ಟಂಗ್; ನಾ.) (ಕೊಂಡಿ, ಮುಳ್ಳು, ಮೊ. ಗಳಿಂದ) ಕುಟುಕು, ಚುಚ್ಚು, ಊರು (A bee, nettle, stung him, his finger); (ಶಾರೀರಕವಾದ ಅಥವಾ ಮಾನಸಿಕವಾದ) ತೀವ್ರ ಯಾತನೆಯುಂಟುಮಾಡು, ನೋಯಿಸು, ಇರಿ, ಚುರುಗುಟ್ಟಿಸು, ಚುಮುಚುಮುಗುಟ್ಟಿಸು (Pepper stings one's tongue ಮೆಣಸು ನಾಲಗೆಯನ್ನು ಚುರುಗುಟ್ಟಿಸುತ್ತದೆ. Conscience stung him ಆತ್ಮಸಾಕ್ಷಿ ಅವನನ್ನು ಇರಿಯಿತು. Stung by envy, desire ಅಸೂಯೆಯಿಂದ, ಆಸೆಯಿಂದ, —ಇರಿಯಲ್ಪಟ್ಟು, ಕೆರಳಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

A stinging insult ಚುಚ್ಚುವ, ಮನೋವೇಧಕ, —ಅವಮಾನ); (ದೇಹ ಭಾಗದ ವಿಷಯದಲ್ಲಿ) ಪೋಟಾಗು, ಕುಟ್ಟು (My hand, tooth, stings). ಕುಟುಕಬಲ್ಲದ್ದಾಗಿರು, ಕೊಂಡಿ ಇರು, ವಿಷದ ಮುಳ್ಳು ಇರು [Some bees do not s. ಕೆಲವು ಜೇನುನೊಣಗಳು ಕುಟುಕುವುದಿಲ್ಲ; —ಗಳಿಗೆ ಮುಳ್ಳಿರುವುದಿಲ್ಲ. Stinging-nettle ಮುಳ್ಳು ತುರಚಿ ಗಿಡ (ಎದುರು ಪದ: Dead-nettle) (Dead ನೋಡಿ)]. (ನಾ.) (ಪ್ರಾಣಿಗಳ) (ಕುಟುಕು) ಕೊಂಡಿ, (ಚುಚ್ಚು)ಮುಳ್ಳು, (ಹಾವಿನ) ವಿಷದ ಹಲ್ಲು, (ಸಸ್ಯಗಳ) ವಿಷದ ಮುಳ್ಳು; (ಕೊಂಡಿಯಿಂದ, ವಿಷದ ಹಲ್ಲಿನಿಂದ, ವಿಷದ ಮುಳ್ಳಿನಿಂದ) ಕುಟುಕು(ವುದು); ಕುಟುಕಿದ ಗಾಯ; ಕುಟುಕು—ನೋವು, ಯಾತನೆ; ಇರಿತ, ಕೊರೆತ; ಚುರುಕು (Was hurt by a s. ಅವನಿಗೆ ಕುಟುಕಿನಿಂದ ಯಾತನೆಯಾಯಿತು. Face covered with stings ಕುಟುಕು ಗಾಯಗಳು ತುಂಬಿದ ಮುಖ. The s. of hunger ಹಸಿವಿನ—ಬಾಧೆ, ಇರಿತ. Stings of remorse ಪಶ್ಚಾತ್ತಾಪದ ಕೊರೆತ. A jest with a s. in it ಕುಟುಕು ಹಾಸ್ಯ. A criticism without a s. in it ನೋಯಿಸದ, ಚುಚ್ಚದ, —ವಿಮರ್ಶೆ. This air, bowling, has no s. in it ಈ ವಾಯುವಿನಲ್ಲಿ ಚುರುಕಿಲ್ಲ, ಈ ಚೆಂಡೆಸೆತದಲ್ಲಿ ಚುರುಕಿಲ್ಲ). **S.-bull, -fish** ವ್ರಣವಾಗುವಂತೆ ಚುಚ್ಚುವ ಮುಳ್ಳುಗಳುಳ್ಳ, ಹಲವು ಬಗೆಯ ಮೀನು: ಕುಟುಕು ಮೀನು; ಮುಳ್ಳು ಮೀನು. **S.-nettle** ಮುಳ್ಳು ತುರಚಿ ಗಿಡ. **S.-ray** ಚಾಟಿಯಂಥ ಬಳುಕು ಬಾಲದ ತುದಿಯಲ್ಲಿ ಗರಗಸದ ಹಲ್ಲುಗಳಂತೆ ಮೊನಚು ಬೆನ್ನೆಲುಬುಗಳುಳ್ಳ, ಅದರಿಂದ ಇತರ ಜಲಚರಗಳಿಗೆ ತೀವ್ರ ಗಾಯಗಳನ್ನುಂಟುಮಾಡಬಲ್ಲ ಒಂದು ಬಗೆಯ ಮೀನು: ಚುಚ್ಚು ಮೀನು; ಕೊಂಡಿ ಮೀನು. **S.-winkle** ಇತರ ಚಿಪ್ಪುಮೀನುಗಳಲ್ಲಿ ರಂಧ್ರ ಕೊರೆಯಬಲ್ಲ ಕೊಕ್ಕುಳ್ಳ ಒಂದು ಚಿಪ್ಪು ಮೀನು: ಕೊರೆ ಕೊಕ್ಕಿನ ಚಿಪ್ಪುಮೀನು. **Stíngaree** ಸ್ಟಿಂಗರೀ (ನಾ.) =Sting-ray (ಎಂಬುದರ ಅಪಭ್ರಂಶ). **Stínger** (ನಾ.) (ಕ್ರಿಯಾರ್ಥಗಳಲ್ಲಿ); ತೀಕ್ಷ್ಣಯಾತನೆ ಕೊಡುವ ಪೆಟ್ಟು, ಚುರುಕೇಟು; ಕಾರವಾದ, ಚುಚ್ಚು, —ಮಾತು, ನುಡಿ. **Stíngingly** (ಕ್ರಿ. ವಿ.); **Stíngless** (ಗು.); **Stíngo** (ನಾ.) (ಪ್ರಾಚೀ. ಪ್ರ.) ತೀಕ್ಷ್ಣವಾದ ಬಿಯರ್ ಮದ್ಯ.

Stíngaree, Stínger, Stíngo. **Sting** ನೋಡಿ.

Stíngy ಸ್ಟಿಂಜಿ (ಗು.) ಜೀನ, ಜಿಪುಣ, ಕೃಪಣ, ಲೋಭಿ. **Stíngily** (ಕ್ರಿ. ವಿ.); **Stínginess** (ನಾ.)

Stink ಸ್ಟಿಂಕ್ (ಕ್ರಿ.; ಭೂತ. Stank ಸ್ಟ್ಯಾಂಕ್ *or* Stunk ಸ್ಟಂಕ್, ಭೂ. ಕೃ. Stunk; ನಾ.) ದುರ್ವಾಸನೆ, (ಗಬ್ಬು) ನಾತ, —ಹೊಡೆ; ನಾರು [S. in one's nostrils (Nostril ನೋಡಿ). S. (one) out (ಕೋಣೆ, ಮೊ. ಗಳಿಂದ) ದುರ್ವಾಸನೆ ಹಾಕಿ ಓಡಿಸು. (ಅಸಂ.) S. of money ವಿಪರೀತ ಧನಿಕನಾಗಿರು, ಹಣ ಹುಳುತುಹೋಗುತ್ತಿರು]; (ಅಸಂ.) ದುರ್ವಾಸನೆ ಕಂಡುಹಿಡಿ (Can s. it a mile off ಅದರ ನಾತವನ್ನು ಒಂದು ಮೈಲಿ ದೂರದಲ್ಲೇ ತಿಳಿಯಬಲ್ಲ). (ವರ್ತಮಾನ ಕೃ.) (ಅಸಂ.) ಆಕ್ಷೇಪಣೀಯವಾದ, ಅಸಹ್ಯವಾದ; (ಕೆಲವು ಪ್ರಾಣಿಗಳ ಮತ್ತು ಸಸ್ಯಗಳ ವಿಶೇಷಣವಾಗಿ ಪ್ರ.) (ದುರ್)ವಾಸನೆಯ, ನಾತ ಹೊಡೆಯುವ [Stinking cedar, night-shade. Stinking-badger =Teledu (ಎಂಬ ಪ್ರಾಣಿ)]. (ನಾ.) (ಬ. ವ. ದಲ್ಲಿ; ಅಸಂ.) (ವ್ಯಾಸಂಗದ ವಿಷಯವಾಗಿ) ರಸಾಯನ ವಿಜ್ಞಾನ, ಪ್ರಕೃತಿ ವಿಜ್ಞಾನ. **S.-alive** (ನತ್ತೊಡನೆ ಕೊಳೆತು ನಾರುವ) ಬಿಬ್ ಮೀನು, ನಾರುವ ಮೀನು. **S.-ball** ಹಿಂದೆ ನೌಕಾ ಯುದ್ಧಗಳಲ್ಲಿ ಉಪಯೋಗಿಸುತ್ತಿದ್ದ, ಈಗಲೂ ಪೂರ್ವ ದೇಶಗಳ ಕಡಲುಗಳ್ಳರು ಉಪಯೋಗಿಸುವ, ಹಾನಿಕರವಾದ ಹಬೆಗಳನ್ನು ಉತ್ಪತ್ತಿಮಾಡುವ ಸಿಡಿಮದ್ದುಗಳು, ಮೊ. ವು ತುಂಬಿದ ಪಾತ್ರೆ: ದುರ್ವಾಯು ಸಿಡಿಗುಂಡು. **S.-bomb** ಗಬ್ಬು ಸಿಡಿಗುಂಡು. **S.-horn** ದುರ್ವಾಸನೆ ಹೊಡೆಯುವ ಹಲವು ಬಗೆಯ ಅಣಬೆ. **S.-pot** ದುರ್ವಾಸನೆಯ ಪದಾರ್ಥಗಳನ್ನು ಹಾಕುವ, ಹಾಕಿರುವ, ಪಾತ್ರೆ: ಗಬ್ಬು ಗಡಿಗೆ; =S.-ball; (ಬೈಗುಳದ ಮಾತು) ಗಬ್ಬು, ಹೊಲಸು—ಮನುಷ್ಯ, ವಸ್ತು. **S.-stone** ಕಡಿದು ತೆಗೆಯುವಾಗ ದುರ್ವಾಸನೆ ಹೊಡೆಯುವ ಸುಣ್ಣಕಲ್ಲು: ಗಬ್ಬು ಸುಣ್ಣಕಲ್ಲು. **S.-trap** ಚರಂಡಿಗಳನ್ನು ತೆರೆದಾಗ ಅವುಗಳೊಳಗಿಂದ ಗಬ್ಬು ಹಬೆಗಳು ಹೊರ ಹೋಗದಂತೆ ತಡೆಯಲು ಹಾಕಿರುವ ತಡೆ: ದುರ್ವಾಯು ತಡೆ. **Stínkard** ಸ್ಟಿಂಕರ್ಡ್ (ನಾ.) ಗಬ್ಬು ನಾತದ —ಮನುಷ್ಯ, ಪ್ರಾಣಿ (ಮು., Teledu ಎಂಬ ಪ್ರಾಣಿ). **Stínker** (ನಾ.) =Stinkard; Stink-pot. ಹಲವು ಬಗೆಯ ದೊಡ್ಡ ಗಾತ್ರದ ಪೆಟ್ರೆಲ್ ಹಕ್ಕಿ. **Stínkingly** (ಕ್ರಿ. ವಿ.)

Stint ಸ್ಟಿಂಟ್ (ಕ್ರಿ. ಸಕ., ನಾ.) (ಪ್ರಾಚೀ. ಪ್ರ.) (ಮಾಡುತ್ತಿರುವುದನ್ನು, ಮಾಡುವುದನ್ನು) ನಿಲ್ಲಿಸು, ಬಿಟ್ಟುಬಿಡು. ಜಿಪುಣತನ, ಕಾರ್ಪಣ್ಯ, —ಮಾಡು; ಅರೆಕೊರೆಯಾಗಿ, ಹಿಡಿದು ಹಿಡಿದು, —ಕೊಡು; ಕೈಹಿಡಿ(ತ ಮಾಡು). (S. oneself *or* person *or* animal *in* food, etc. S. food, money, etc.). (ನಾ.) (ಕೊಡುವುದರಲ್ಲಿ, ಪ್ರಯತ್ನದಲ್ಲಿ) (ಕೈ) ಹಿಡಿತ, ಕಾರ್ಪಣ್ಯ, ತಡೆ, ಮಿತಿ (Without, no, s. ಮಿತಿಯಿಲ್ಲದೆ, ತಡೆಯಿಲ್ಲದೆ. Laboured without s. ಮಿತಿಯಿಲ್ಲದೆ ದುಡಿದನು; ಸರ್ವ ಪ್ರಯತ್ನದಿಂದ ದುಡಿದನು). ತನ್ನ ಪಾಲಿಗೆ ಬಂದ, ನಿಗದಿಯಾದ, ಕೆಲಸ [Do one's daily s. ತನ್ನ ದಿನಗಟ್ಟಳೆಯ (ಪಾಲಿನ) ಕೆಲಸವನ್ನು ಮಾಡು]; ಹಲವು ಬಗೆಯ ಸಣ್ಣ ಜಾತಿಯ ಸ್ಯಾಂಡ್‌ಪೈಪರ್ ಹಕ್ಕಿ. **Stíntingly** (ಕ್ರಿ. ವಿ.); **Stíntless** (ಗು.) ಹಿಡಿತವಿಲ್ಲದ, ಮಿತಿಯಿಲ್ಲದ.

Stípate ಸ್ಟೈಪೇಟ್ (ಗು.) (ಸ. ವಿ.) ದಟ್ಟವಾಗಿರುವ, ಒತ್ತಾದ, ತುರುಗಿದ, ಗುಂಪಲಾಗಿರುವ.

Stipe ಸ್ಟೈಪ್, **Stípes** ಸ್ಟೈಪೀಸ್ (ನಾ.) (ಸ. ವಿ., ಪ್ರಾ. ವಿ.) ಕಾವು, ತೊಟ್ಟು, ವೃಂತ, ಕಾಂಡ (ಸ. ವಿ. ದಲ್ಲಿ ಮು., ಅಂಡಕೋಶದ ಅಥವಾ ಶಲಾಕಾಕೋಶದ ಆಧಾರ ಕಾಂಡ, ಪರ್ಣಾಂಗದ ತೊಟ್ಟು, ಅಣಬೆಯ ಕಾವು, ಮೊ. ವು). **Stípi(ti)form** ಸ್ಟೈಪಿ—, ಸ್ಟಿಪಿಟಿ— (ಗು.) ವೃಂತಾಕಾರದ. **Stípitate** ಸ್ಟಿಪಿಟೇಟ್ (ಗು.) ವೃಂತವುಳ್ಳ.

Stípel ಸ್ಟೈಪೆಲ್ (ನಾ.) (ಸ. ವಿ.) (ಸಂಯುಕ್ತ ಪರ್ಣದ ಉಪಪರ್ಣದ ಬುಡದಲ್ಲಿರುವ) ಕಿರು ತೊಟ್ಟೆಲೆ, ಉಪವೃಂತ ಪರ್ಣಕ. **Stípellate** (ಗು.) ಉಪವೃಂತ ಪರ್ಣಕವುಳ್ಳ.

Stípend ಸ್ಟೈಪೆಂಡ್ (ನಾ.) ಮಾಡಿದ ಕೆಲಸಕ್ಕಾಗಿ ಕಾಲ ಕಾಲಕ್ಕೆ ನಿಯತವಾಗಿ ಕೊಡುವ ಹಣ: ವೇತನ, ಸಂಬಳ (ಮು., ಪಾದ್ರಿಯ ಅಧಿಕಾರದ ಸಂಬಳ). **Stipéndiary** ಸ್ಟೈ(ಸ್ಟಿ)ಪೆಂಡಿಯರಿ (ಗು., ನಾ.) ವೇತನ, ಸಂಬಳ, —ಪಡೆಯುವ(ವನು); ಹಣ ತೆಗೆದುಕೊಂಡು ಕೆಲಸ ಮಾಡುವ(ವನು); ವೇತನಿ, ಸಂಬಳದವನು; ಸಂಬಳದ ದಂಡಾಧಿಕಾರಿ (=S. magistrate)

Stipes. **Stipe** ನೋಡಿ.

Stípple ಸ್ಟಿಪ್ಲ್ (ಕ್ರಿ., ನಾ.) ಬಿಂದುಗಳಿಂದ (ಫಲಕವನ್ನು, ನಕ್ಷೆಯನ್ನು) ಕೆತ್ತು, (ಚಿತ್ರವನ್ನು) ರೇಖಿಸು, ಬಣ್ಣದಲ್ಲಿ ಚಿತ್ರಿಸು; ಚುಕ್ಕಿ—ನಕಾಸೆ, ಚಿತ್ರಣ (ಮಾಡು). S.-graver ಕೆಳಮುಖನಾಗಿ ಬಗ್ಗಿದ ಕೊನೆಯುಳ್ಳ ಚುಕ್ಕಿ ಕೆತ್ತುವ ಸಲಕರಣೆ: ಚುಕ್ಕಿಯುಳಿ. **Stíppler** (ನಾ.) ಚುಕ್ಕಿ—ಕುಂಚ, ಉಳಿ; ಚುಕ್ಕಿ—ಕೊರಕ, ಚಿತ್ರಕ. **Stíppling** (ನಾ.)

Stípulate[1] ಸ್ಟಿಪ್ಯುಲೇಟ್ (ಕ್ರಿ.) (ಒಪ್ಪಂದದ ವಿಷಯದಲ್ಲಿ, ಉಭಯ ಪಕ್ಷಗಳ ವಿಷಯದಲ್ಲಿ) ಷರತ್ತು ಹಾಕಿರು, ಅಗತ್ಯವೆಂದು ನಮೂದಿಸು, ವಿಧಿಸು (*For* ಉಪ. ದೊಡನೆ); (ಒಂದು ಪಕ್ಷದ ಅಥವಾ ನೀಡುವವನ ವಿಷಯದಲ್ಲಿ: ಒಪ್ಪಂದಕ್ಕೆ ಮುಖ್ಯ ಭಾಗವಾಗಿ) (—ಎಂದು) ನಿರ್ಬಂಧ, ಷರತ್ತು, —ಹಾಕು (*That* ಪದದೊಡನೆ); (ಭೂ. ಕೃ. ನಲ್ಲಿ) ಗೊತ್ತು ಪಾಡಾದ, ನಿಗದಿ ಮಾಡಿದ, ಒಪ್ಪಂದದಲ್ಲಿ ಕಾಣಿಸಿದ (Is not of the stipulated quality). **Stipulátion**[1] (ನಾ.); **Stípulator** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Stípule ಸ್ಟಿಪ್ಯೂಲ್ (ನಾ.) ಎಲೆಯ ಕಾವಿನ ಬುಡದಲ್ಲಿಯ ಎಲೆಯಂಥ ಭಾಗ: ಕಾವಿನೆಲೆ, ವೃಂತಪರ್ಣ. **Stipuláceous** (ಗು.), **Stípular** (ಗು.), **Stípulary** (ಗು.) ವೃಂತಪರ್ಣದ(ಂಥ), **Stípulate**[2] ಸ್ಟಿಪ್ಯುಲೇಟ್ (ಗು.) ವೃಂತಪರ್ಣ ವೃಂತಪರ್ಣವುಳ್ಳ. **Stipulátion**[2] —ಲೇಷನ್ (ನಾ.) ವೃಂತಪರ್ಣ—ರಚನೆ, ಗಳುಳ್ಳ. ವಿನ್ಯಾಸ. **Stípuliform** (ಗು.) ವೃಂತಪರ್ಣಾಕಾರದ.

Stir ಸ್ಟರ್ (ಕ್ರಿ., ನಾ.) ಅಲುಗು, ಕದಲು, ಅಲುಗಿಸು, ಕದಲಿಸು, ಚಲಿಸು, ಚಲಿಸತೊಡಗು; ತೊಳಸು, ಕದಡು, ಕಲಕು, ಕೆದಕು [Not a breath stirs the lake, leaves ಒಂದಿಷ್ಟು ನಸುಗಾಳಿಯೂ ಸರೋವರವನ್ನು, ಎಲೆಗಳನ್ನು, ಅಲುಗಿಸುತ್ತಿಲ್ಲ. If you s., I shoot ಕದಲಿದರೆ, ಗುಂಡು ಹೊಡೆದು ಕೊಲ್ಲುತ್ತೇನೆ. Never stirred abroad *or* out of the house ದೇಶ ಬಿಟ್ಟು, ಮನೆ ಬಿಟ್ಟು, ಎಂದೂ ಕದಲಲಿಲ್ಲ. Is not stirring yet ಇನ್ನೂ (ಹಾಸಿಗೆ ಬಿಟ್ಟು) ಎದ್ದಿಲ್ಲ. S. the fire (ಕೆದಕುಗಂಬಿಯಿಂದ) ಬೆಂಕಿ ಕೆದಕು, ಕೆದಕಿ ಉರಿಯುವಂತೆ ಮಾಡು. S. your stumps (ಬಳ. ಮಾ.) ಜಾಗ್ರತೆ, ಬೇಗ, —ಮಾಡು, ನಡೆ. S. porridge ಗಂಜಿಯನ್ನು—ಕಲಕು, ತೊಳಸು. There is no news stirring ಯಾವ ಸುದ್ದಿಯ ಸುಳಿವೂ ಇಲ್ಲ. Lead stirring life ಚಟುವಟಿಕೆ ತುಂಬಿದ, ಅವಿಶ್ರಾಂತ, —ಜೀವನ ನಡಸು. S. up ಕಲಕು, ತೊಳಸು (—ವುದರಿಂದ ಚೆನ್ನಾಗಿ ಬೆರಸು). S. up the mud, sediment ಕೆಸರನ್ನು, ಗಷ್ಟನ್ನು, ಕಲಕಿ ಮೇಲೆ ಎಬ್ಬಿಸು]; ಎಬ್ಬಿಸು, ಕೆರಳಿಸು, ಪ್ರೇರಿಸು [S. up strife, mutiny ಕಲಹ, ದಂಗೆ, —ಎಬ್ಬಿಸು. S. up discontent, curiosity ಅತೃಪ್ತಿಯನ್ನು, ಕುತೂಹಲವನ್ನು, —ಕೆರಳಿಸು. He wants stirring up ಅವನನ್ನು ಚುಚ್ಚಿ ಎಬ್ಬಿಸ ಬೇಕಾಗಿದೆ; ಅವನು ಜಡನಾಗಿ ಇದ್ದಾನೆ. S. one's blood ಉತ್ಸಾಹ, ಆಸೆ, —ಕೆರಳಿಸು. S. one's wrath ಕೋಪ ಕೆರಳಿಸು. S. one's bile ಜುಗುಪ್ಸೆ ಹುಟ್ಟಿಸು, ಪಿತ್ತ ಕಲಕು. Stirring events, times, music ಚುರುಕುಗೊಳಿಸುವ, ಉತ್ಸಾಹಕರವಾದ, ಆವೇಶ ಗೊಳಿಸುವ, —ಘಟನೆಗಳು, ಕಾಲ, ಸಂಗೀತ. A stirring speech, picture, tale ಭಾವೋದ್ರೇಕವುಂಟುಮಾಡುವ ಭಾಷಣ, ಚಿತ್ರ, ಕಥೆ. **S.-about** (ನಾ.) ಗಂಜಿ, ಅಂಬಲಿ. (ಗು.) ಸಡಗರದ, ಗಡಿಬಿಡಿಯ]. (ನಾ.) ಸಡಗರ, ಗಡಿಬಿಡಿ, ಗಲಭೆ, ಕೋಲಾಹಲ, ಕಲಕ, ಕೆರಳು, ಉದ್ರೇಕ (Person, event, makes a great s. ಆ ವ್ಯಕ್ತಿ, ಸಂಗತಿ, ದೊಡ್ಡ ಕೋಲಾಹಲ ಎಬ್ಬಿಸುತ್ತದೆ); ಅಲುಗಾಟ, ಕದಲಾಟ, ನಸುಚಲನೆ (Not a s.); ಕೆದಕುವುದು, ಕಲಕುವುದು (Give the fire a s.). **Stírless** (ಗು.); **Stírringly** (ಕ್ರಿ. ವಿ.) ಭಾವೋದ್ರೇಕವಾಗುವಂತೆ. **Stírrer** (ನಾ.)

Stírpiculture ಸ್ಟರ್ಪಿಕಲ್ಚ್ಯುರ್, —ಚರ್ (ನಾ.) ವಿಶೇಷ ಜಾತಿಯ, ಶುದ್ಧ ಜಾತಿಯ, —ಸಂತಾನವರ್ಧನ.

Stirps ಸ್ಟರ್ಪ್ಸ್ (ನಾ., ಬ. ವ. -pes —ಪೀಸ್) (ವಂಶದ) ಮೂಲ ಪುರುಷ; (ಪ್ರಾ. ವಿ.) (ವರ್ಗೀಕರಣದಲ್ಲಿ) ವಂಶ, ಉಪಜಾತಿ, ಪಂಗಡ.

Stírrup ಸ್ಟಿರಪ್ (ನಾ.) ಕುದುರೆಯನ್ನು ಏರುವಾಗಲೂ ಏರಿ ಸವಾರಿ ಮಾಡುವಾಗಲೂ ಪಾದಗಳಿಗೆ ಆಧಾರವಾಗಿರುವ, ಪಟ್ಟಿಗಳ ಮೂಲಕ ಜೀನಿಗೆ ಅಳವಡಿಸಿರುವ, ಚಪ್ಪಟೆಯ ತಳಭಾಗವುಳ್ಳ, ಕಬ್ಬಿಣದ ಬಳೆ: ರಿಕಾಪು, ಅಂಕೋಣಿ, ಅಂಗವಡಿ [S.-bar ರಿಕಾಪು ಪಟ್ಟಿಯನ್ನು ತಗುಲಿಸುವ, ಜೀನಿನೊಳಕ್ಕೆ ಕೂಡಿಸಿರುವ, ಕಬ್ಬಿಣದ ತುಂಡು: ರಿಕಾಪು ಕಂಬಿ. S.-iron (ಪಟ್ಟಿಗಳಿಲ್ಲದ ಬರಿಯ) ರಿಕಾಪು ಬಳೆ. S.-leather ರಿಕಾಪಿನ (ಚರ್ಮದ) ಪಟ್ಟಿ]. ಪಟ್ಟಿ ಹಾಕಿದ ರಿಕಾಪು. (ನಾವೆ) ಸಣ್ಣ ಹಗ್ಗ ಹಾದುಹೋಗುವಂತೆ ಕೆಳ ಕೊನೆಯಲ್ಲಿ ಕಣ್ಣಿರುವ, ಪಟದ ದಿಮ್ಮಿ ಮರಕ್ಕೆ ರಿಕಾಪಿನಂತೆ ಕಟ್ಟಿರುವ ಮೋಟು ಹಗ್ಗ: ರಿಕಾಪು ಹಗ್ಗ. **S.-bone** (ಮನುಷ್ಯನ ಮತ್ತು ಇತರ ಸಸ್ತನಿಗಳ ಕಿವಿಯೊಳಗಣ) ರಿಕಾಪಿ ನಾಕಾರದ ಮೂಳೆ. **S.-cup** ಪ್ರಯಾಣ ಸನ್ನದ್ಧನಾಗಿ ಕುದುರೆ ಏರಿರುವ ಸವಾರನಿಗೆ ಕೊಡುವ (ಒಂದು ಬಟ್ಟಲು) ಮದ್ಯ. **S.-piece** (ಮರದ ಕೆಲಸ, ಮೊ. ಗಳಲ್ಲಿ) ತೂಗು—ಆಸರೆ, ತುಂಡು.

Stitch ಸ್ಟಿಚ್ (ನಾ., ಕ್ರಿ.) ಊಟಮಾಡಿದ ಕೂಡಲೆ ಓಡುವುದು, ಮೊ. ರಭಸ ಚಲನೆಯಿಂದ ಉಂಟಾಗುವ ಪಕ್ಕೆಯೊಳಗಡೆಯ ನೋವು: ಪಕ್ಕೆನೋವು, ಪಾರ್ಶ್ವಶೂಲೆ [Stitchwort ನೆಟ್ಟನೆಯ ಕಾವೂ ಬಿಳಿಯ ನಕ್ಷತ್ರಾಕಾರದ ಹೂವೂ ಉಳ್ಳ ಒಂದು ಸಸ್ಯ (ಪಕ್ಕೆನೋವಿಗೆ ಔಷಧವೆಂಬ ಕಾರಣದಿಂದ ಈ ಹೆಸರು ಬಂದಿದೆ)]. ಹೊಲಿಗೆ, ಟಾಕು [A s. in time saves nine (Save[1] ನೋಡಿ). If one s. gives the rest will ಒಂದು ಹೊಲಿಗೆ ಬಿಟ್ಟುಕೊಂಡರೆ ಮಿಕ್ಕವೆಲ್ಲ ಬಿಟ್ಟುಕೊಳ್ಳುತ್ತವೆ. What long stitches! ಎಷ್ಟು ಉದ್ದ ಟಾಕು ಗಳು! Has not a dry s. on him ಅವನಮೇಲೆ ಒಂದು ಒಣ ಹೊಲಿಗೆಯೂ ಇಲ್ಲ; ಅವನು ಪೂರ್ತಿ ನೆನೆದುಹೋಗಿದ್ದಾನೆ. Drop a s. (ಕಸೂತಿಯಲ್ಲಿ) ಹಾಕಬೇಕಾದ ಹೊಲಿಗೆಯನ್ನು, ಕುಣಿಕೆಯನ್ನು, ಕೈಜಾರಿ ತಪ್ಪಿಬಿಡು: ಹೊಲಿಗೆ, ಕುಣಿಕೆ, —ತಪ್ಪು. Put a s. *or* stitches in (ಶಸ್ತ್ರವೈದ್ಯ: ಗಾಯಕ್ಕೆ) ಹೊಲಿಗೆ ಹಾಕು. Am learning a new s. ಹೊಸ ಮಾದರಿಯ ಹೊಲಿಗೆ ಕಲಿಯುತ್ತಿದ್ದೇನೆ. Buttonhole-s. ಕಾಜಾ ಹೊಲಿಗೆ. Cross-s. (Cross- ನೋಡಿ). Herring-bone-s. =Herring-bone (Herring ನೋಡಿ). Lock-s. (Lock[2] ನೋಡಿ). S.-wheel ಹೊಲಿಗೆ ಹೋಗಬೇಕಾದ ಎಡೆಗಳಲ್ಲಿ ತೂತು ಬೀಳುವಂತೆ ಚುಚ್ಚುವ ಜೀನುಗಾರನ ಹಲ್ಲುಚಕ್ರ: ಹೊಲಿಗೆ ಚಕ್ರ]. (ಕ್ರಿ.) ಹೊಲಿ(ಗೆ ಹಾಕು) (S. up ಹೊಲಿದು ಸರಿಮಾಡು). Stitching-horse ಜೀನನ್ನು ಹೊಲಿಯುವಾಗ ಅದನ್ನು ಹಿಡಿದುಕೊಳ್ಳುವ ಹಿಡಿಕೆ: ಹೊಲಿಗೆ ಹಿಡಿಕೆ.

Stíthy ಸ್ಟಿದಿ (ನಾ.) (ಪ್ರಾಚೀ. ಪ್ರ., ಕಾವ್ಯ) ಕಮ್ಮಾರಸಾಲೆ; ಕಮ್ಮಾರನ ಅಡಿಗಲ್ಲು.

Stíver ಸ್ಟೈವರ್ (ನಾ.) ಅತ್ಯಂತ ಸಣ್ಣ ನಾಣ್ಯ; ಚಿಕ್ಕ, ಬಿಡಿ, —ಕಾಸು (Don't care a s. ಚಿಕ್ಕ ಕಾಸಿನಷ್ಟೂ ಲಕ್ಷ್ಯಮಾಡುವುದಿಲ್ಲ. Has not a s. ಒಂದು ಬಿಡಿ ಕಾಸೂ ಇಲ್ಲ)

Stóa ಸ್ಟೋಅ (ನಾ.; ಬ. ವ. -as —ಅಸ್, -ae —ಈ, -ai —ಐ) (ಗ್ರೀಕ್ ವಾ. ಶಾ.) ಮುಖಮಂಟಪ [The s. =The porch (Porch ನೋಡಿ)]

Stoat[1] ಸ್ಟೋಟ್ (ನಾ.) (ಬೇಸಗೆ ಕಾಲದ ಕಂದು ತುಪ್ಪಳು ಬೆಳೆದಿರುವ) ಅರ್ಮಿನ್ ಪ್ರಾಣಿ (ಅರ್ಮಿನ್, ಫೆರೆಟ್, ವೀಸ್ಲ್, ಮೊ. ಪ್ರಾಣಿಗಳ ಸಾಮಾನ್ಯ ವಾಚಕವಾಗಿಯೂ ಪ್ರ.)

Stoat[2] ಸ್ಟೋಟ್ (ಕ್ರಿ. ಸಕ.) (ಹರುಕು, ಅಂಚು, ಮೊ. ನ್ನು) ಕಾಣದ ಹೊಲಿಗೆಗಳಿಂದ ಹೊಲಿ.

Stock ಸ್ಟಾಕ್ (ನಾ.) (ಕೊಂಬೆ ಸವರಿದ) ಬೊಡ್ಡೆ; ತಾಳು, ಕಾಂಡ; ಬುಡ; ಮೋಟು; ಕೊರಡು; ಕಸಿ ಸೇರಿಸುವ ಸಸ್ಯ(ದ ಕಾಂಡ); (ಯಂತ್ರದ ಅಥವಾ ಆಯುಧದ) ಆಧಾರ ಭಾಗ, ಹಿಡಿ(ಕೆ), ಪೀಠ ಭಾಗ; ಕಾವು; ವಂಶ (ಮೂಲ), ಬುಡಕಟ್ಟು; (ಕೈಗಾರಿಕೆಯಲ್ಲಿ ಉಪ ಯೋಗಿಸುವ) ಕಚ್ಚಾ, ಹಸಿ, —ಪದಾರ್ಥ; ಮೂಲ ಸಾಮಗ್ರಿ; (ಬಳಸಲು ಇಟ್ಟುಕೊಂಡಿರುವ ಸರಕಿನ, ಪದಾರ್ಥಗಳ) ಸಂಗ್ರಹ, ದಾಸ್ತಾನು; ವ್ಯಾಪಾರ, ಮೊ. ಕ್ಕೆ ಬೇಕಾದ ಸಜ್ಜು: ಸರಕು ಸಜ್ಜು, ಬಂಡವಾಳ; [They nest in the stocks of trees (ಪ್ರಾಚೀ. ಪ್ರ.) ಅವು ಮರಗಳ ಕಾಂಡಗಳಲ್ಲಿ ಗೂಡು ಕಟ್ಟುತ್ತವೆ. Stocks and stones (ಮರದ ಮತ್ತು ಕಲ್ಲಿನ ದೇವರುಗಳನ್ನು ಕುರಿತು): ಕೊರಡುಗಳು ಮತ್ತು ಕಲ್ಲುಗಳು. ಸೋಮಾರಿಗಳು, ಜಡ ವ್ಯಕ್ತಿಗಳು. Laughing, gazing, -s. ಹಾಸ್ಯಕ್ಕೆ, ನೋಟಕ್ಕೆ, —ಗುರಿಯಾದವನು, ಗುರಿಯಾದದ್ದು. Must be grafted on a sound s. ಚೆನ್ನಾಗಿರುವ ತಾಳಿಗೆ ಕಸಿ ಕಟ್ಟಬೇಕು. S. of rifle, plane, plough ಬಂದೂಕಿನ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೋಪಡದ, ನೇಗಿಲನ,—(ಸಾ., ಮರದ) ಕಾವು, ಬುಡ. S. of bit ಬೈರಿಗೆ(ಯ ಹಿಡಿ). S. of anvil ಅಡಿಗಲ್ಲ ಮರ. S. of anchor ಲಂಗರಿನ ಅಡ್ಡಗಂಬಿ. Lock, stock and barrel (Lock² ನೋಡಿ). Comes of a good s. ಒಳ್ಳೆಯ ಮನೆತನದವನು, ಸತ್ಕುಲ ಪ್ರಸೂತ. Polyp-s. (ಪ್ರಾ. ವಿ.) ಸಂಯುಕ್ತ ಜೀವಿಗಳ ಕೂಡುಮೈ. Paper s. ಕಾಗದ (ತಯಾರಿಸುವ ಚಿಂದಿ, ಮೊ.) ಕಚ್ಚಾ ಪದಾರ್ಥ. Soup-s. *or* s. ಯಾವ ತೆರದ ಸಾರು ಮಾಡುವುದಕ್ಕಾಗಲಿ ಉಪಯೋಗವಾಗುವ, ಎಲುಬುಗಳು, ಮೊ. ನ್ನು ಬೇಯಿಸಿ ತಯಾರಿಸಿದ, ಮೂಲ ರಸ : ಸಾರಿನ ರಸ. Has a great s. of information ಅವನಲ್ಲಿ ಸಮಾಚಾರದ, ಸುದ್ದಿಗಳ, ಭಾರಿ ಸಂಗ್ರಹ, ಸರಕು, ಇದೆ. Rolling-s. (Roll ಕ್ರಿ. ನೋಡಿ). Take over a farm with the s. ಜಮೀನನ್ನು ಅದರಲ್ಲಿಯ ಜಾನುವಾರು (=Live s.) ಮತ್ತು ಮರಮುಟ್ಟುಗಳು (=Dead s.) ಸಹಿತ ತೆಗೆದುಕೊ. S.-in-trade ಮಾರಾಟಕ್ಕಿಟ್ಟಿರುವ ಸರಕು ; ಕಸಬಿಗೆ, ವ್ಯಾಪಾರಕ್ಕೆ, —ಬೇಕಾದ ಸಾಮಗ್ರಿ ; ಕಸಬಿನ, ವ್ಯಾಪಾರದ, —ಬಂಡವಾಳ. (ರೂಪ.) ಬಂಡವಾಳ (The politician's s.-in-trade of a dozen catch-words ರಾಜ್ಯತಂತ್ರಿಯ ಹತ್ತು ಹನ್ನೆರಡು ಆಕರ್ಷಕ ಪದಗಳ ಬಂಡವಾಳ. . Renew one's s. (ಮುಗಿದುಹೋಗಿರುವ) ಸರಕನ್ನು ಮತ್ತೆ ತರಿಸು, ತುಂಬಿಕೊ. Lay in a s. of ಸಂಗ್ರಹಿಸಿಡು ; ದಾಸ್ತಾನು ಮಾಡು. Have in s. (ಸಂದರ್ಭ ಬಿದ್ದಾಗ ತಂದುಕೊಳ್ಳುವ ಪ್ರಮೇಯವಿಲ್ಲದೆ) ದಾಸ್ತಾನು ಇಟ್ಟಿರು. Take s. ಇರುವ ಸರಕಿನ, ದಾಸ್ತಾನಿನ, —ಲೆಕ್ಕ ತೆಗೆದುಕೊ, ಜಡತಿ ಮಾಡು. S.-taking ಸರಕು, ದಾಸ್ತಾನು, —ಜಡತಿ. Take s. of (ರೂಪ.) (ಪರಿಸ್ಥಿತಿ, ಮೊ. ನ್ನು ಗೊತ್ತುಮಾಡಿಕೊಳ್ಳುವುದಕ್ಕಾಗಿ) ಸಂದರ್ಭಗಳನ್ನು ಪರೀಕ್ಷಿಸು, ವಿಮರ್ಶಿಸು. S. argument, comparison, remark, joke ಹೊಸದಾಗಿ ಆಲೋಚಿಸಬೇಕಾದ ಅವಶ್ಯಕತೆಯಿಲ್ಲದೆ ಒಬ್ಬ ವ್ಯಕ್ತಿಯಾಗಲಿ ಜನಸಾಮಾನ್ಯವಾಗಲಿ ಮೇಲಿಂದಮೇಲೆ ಬಳಸುವ ವಾದ, ಹೋಲಿಕೆ, ಹೇಳಿಕೆ, ಹಾಸ್ಯ : ದಿನಬಳಕೆಯ, ನಿತ್ಯಸಿದ್ಧ, ಹಳಸಲು, —ವಾದ, ಹೋಲಿಕೆ, ಟೀಕೆ, ಹಾಸ್ಯ]. ಸುವಾಸನೆಯ ಹೂವು ಬಿಡುವ ಒಂದು ತೋಟದ ಸಸ್ಯ ; (ಬ. ವ. ದಲ್ಲಿ) (ಚರಿತ್ರೆ) ಸಣ್ಣ ಪುಟ್ಟ ಅಪರಾಧ ಮಾಡಿದವರನ್ನು ದಂಡಿಸುವುದಕ್ಕಾಗಿ ಅವರನ್ನು ಕುಳ್ಳಿರಿಸಿ ಬಂಧಿಸಲು ಉಪಯೋಗಿಸುತ್ತಿದ್ದ, ಪಾದಗಳನ್ನು ಮತ್ತು ಕೆಲವು ವೇಳೆ ಕೈಗಳನ್ನು ತೂರಿಸಲು ಕಂಡಿಗಳು ಇರುತ್ತಿದ್ದ, ಒಂದು ಮರದ ಚೌಕಟ್ಟು, ಬೇಡಿ—ಮರ, ಚೌಕಟ್ಟು. (ಬ. ವ. ದಲ್ಲಿ) ಕಟ್ಟುತ್ತಿರುವ ಹಡಗಿಗೆ ಆಸರೆಯಾದ ದಿಮ್ಮಿ ಚೌಕಟ್ಟು ; ಹಡಗಿನ—ಆಸರೆ ಚೌಕಟ್ಟು, ಹದಿಕಟ್ಟು [On the stocks ಸಿದ್ಧವಾಗುತ್ತ, ತಯಾರಿಕೆಯಲ್ಲಿ (ಅನೇಕ ವೇಳೆ ರೂಪ.: The dramatist has a play on the stocks)]. ಈಗ ಬಳಕೆಯಲ್ಲಿರುವ ಕೊರಳಪಟ್ಟಿಯ ಮತ್ತು ಕಂಠಬಂಧದ ಸ್ಥಾನದಲ್ಲಿ ಹಿಂದೆ ಉಪಯೋಗಿಸುತ್ತಿದ್ದ, ಈಗಲೂ ಕೆಲವು ಸೈನಿಕ ಉಡುಪುಗಳಲ್ಲಿ ಉಳಿದುಕೊಂಡುಬಂದಿರುವ, ಮಾರ್ಪಟ್ಟ ರೂಪಗಳಲ್ಲಿ ಕೆಲವೊಮ್ಮೆ ಮತ್ತೆ ಬಳಕೆಗೆ ಬರುತ್ತಿರುವ, ಚಕ್ಕಳದ ಅಥವಾ ಇತರ ಪದಾರ್ಥದ ಗಡುಸಾದ ಮತ್ತು ಅಗಲವಾದ ಕೊರಳಪಟ್ಟಿ : ಕೊರಳ ಬಂದಿ; (ಆಯವ್ಯಯ ಶಾಸ್ತ್ರ) ಸಾಲ ಕೊಟ್ಟವರಿಗಾಗಲಿ ಅವರಿಂದ ಕ್ರಯ, ಮೊ. ರೀತಿಯಲ್ಲಿ ಹಕ್ಕು ಪಡೆದವರಿಗಾಗಲಿ ನಿಗದಿಯಾದ ದರದಂತೆ ಬಡ್ಡಿ ಕೊಡಬೇಕಾದ ಷರತ್ತಿನಮೇಲೆ ಸರಕಾರಕ್ಕೆ ಸಾಲ ಕೊಟ್ಟ ಹಣ : ಸರಕಾರದ ಸಾಲಪತ್ರ, ಋಣಸಂಚಯ [Buy, hold, s. ಸರಕಾರದ ಸಾಲಪತ್ರ ಕೊಳ್ಳು, ಹೊಂದಿರು. The stocks ರಾಜ್ಯದ ಋಣಸಂಚಯ. Take s. in (ರೂಪ.) —ದಲ್ಲಿ ಆಸಕ್ತಿ ತೆಗೆದುಕೊ ; —ನ್ನು ಲೆಕ್ಕದಲ್ಲಿಡು, ನಂಬು (I take no s. in what he says)]. (ಒಂದು ಉದ್ಯಮಕ್ಕಾಗಿ ಹಲವು ವ್ಯಕ್ತಿಗಳು ಒದಗಿಸಿದ, ಪಾಲುಗಳಾಗಿ ವಿಭಾಗವಾಗಿರುವ, ಪಾಲುದಾರರಿಗೆ ಪ್ರಮಾಣಾನುಸಾರ ಲಾಭಕೊಡುವ, ಸಂಸ್ಥೆಯ ಅಥವಾ ಸಂಘದ) ಬಂಡವಾಳ, ಮೂಲಧನ [=Joint-s. (Joint ನೋಡಿ). Preference *or* Preferred s. (Prefer ಕೆಳಗೆ Preference ನೋಡಿ). Bank, Railway, s. ಬ್ಯಾಂಕಿನ, ರೈಲ್ವೆ ಸಂಸ್ಥೆಯ, —ಬಂಡವಾಳ. S. certificate ಬಂಡವಾಳಪತ್ರ. Water stock (Water² ಪದದಲ್ಲಿ ಆಯವ್ಯಯ ಶಾಸ್ತ್ರದ ಅರ್ಥವನ್ನು ನೋಡಿ)]. **S.-account, -book** ಸಂಗ್ರಹಿಸಿದ ಮತ್ತು ವಿಲೇವಾರಿಯಾದ ಸರಕುಗಳ ಲೆಕ್ಕ (ಪುಸ್ತಕ) : ಸರಕು, ದಾಸ್ತಾನು, —ಲೆಕ್ಕ (ಪುಸ್ತಕ), ವರ್ಗ ಪುಸ್ತಕ ; ಬಂಡವಾಳದ ವರ್ಗ ಪುಸ್ತಕ. **S.-breeder** ಜಾನುವಾರುಗಳ ಹೊಸಹೊಸ ತಳಿ ಎಬ್ಬಿಸುವವನು, ಬೆಳಸುವವನು ; ತಳಿಗಾರ ; ಪಶುವರ್ಧಕ. **S.-broker, -broking** (ಬಂಡವಾಳ ವ್ಯಾಪಾರಿಗಳಿಗೂ ಗಿರಾಕಿಗಳಿಗೂ ಮಧ್ಯವರ್ತಿಯಾಗಿ ಕೆಲಸ ಮಾಡುವ) ಬಂಡವಾಳ (ಪತ್ರ) ದಳ್ಳಾಳಿ, —ದಳ್ಳಾಳಿ ವ್ಯಾಪಾರ. **S.-car** (ರೈಲಿನಲ್ಲಿ) ಜಾನುವಾರು(ಗಳನ್ನು ಸಾಗಿಸುವ) ಡಬ್ಬಿ. **Stóckdove** ಯೂರೋಪಿನ ಒಂದು ಕಾಡು ಪಾರಿವಾಳ (ವೃಕ್ಷ ಕಾಂಡಗಳಲ್ಲಿ ಸಂತಾನವೃದ್ಧಿ ಮಾಡುವ ಕಾರಣದಿಂದ ಇರಬಹುದು). **S.-exchange** (ಬಂಡವಾಳ) ಪತ್ರವ್ಯಾಪಾರ ಕಟ್ಟೆ (The S.E. ಲಂಡನ್ನಿನಲ್ಲಿಯ ಪತ್ರವ್ಯಾಪಾರಿಗಳ ಸಂಘ, ಸಂಘ ಮಂದಿರ. Is on the S.E. ಅವನು ಪತ್ರವ್ಯಾಪಾರಿಗಳ ಸಂಘದ ಸದಸ್ಯನಾಗಿದ್ದಾನೆ). **S.-farm** ಪಶುವರ್ಧನಶಾಲೆ. **-farmer** ಗೊಲ್ಲ(ರವನು) ; ಪಶುವರ್ಧಕ. **Stóckfish** ಸೀಳಿ ಉಪ್ಪು ಹಾಕದೆ ಬಿಸಿಲಿನಲ್ಲಿ ಒಣಗಿಸಿದ ಕಾಡ್ (ಜಾತಿಯ) ಮೀನು. **S.-gang** ಒಂದೇ ಕೊಯ್ತಕ್ಕೆ ದಿಮ್ಮಿಯನ್ನು ಹಲವು ಹಲಗೆಗಳನ್ನಾಗಿ ಕೊಯ್ದುಹಾಕುವಂತೆ ಚೌಕಟ್ಟಿನಲ್ಲಿ ಅಳವಡಿಸಿರುವ ಗರಗಸಗಳ ತಂಡ : ದಿಮ್ಮಿ ಗರಗಸ ತಂಡ. **S.-jobber** (ಸಾರ್ವಜನಿಕರೊಡನೆ ನೇರವಾದ ಸಂಬಂಧವಿಲ್ಲದೆ, ದಳ್ಳಾಳಿಗಳೊಡನೆ ಮಾತ್ರ ವ್ಯವಹಾರ ನಡಸುವ) ಬಂಡವಾಳಪತ್ರ ವ್ಯಾಪಾರಿ ; ಬಂಡವಾಳ ಸಟ್ಟಾ ವ್ಯಾಪಾರಿ (S.-broker ಪದ ನೋಡಿ). **S.-jobbery, -jobbing** ಬಂಡವಾಳ ಸಟ್ಟಾ ವ್ಯಾಪಾರ. **S.-list** (ಪ್ರತಿದಿನ ಅಥವಾ ನಿಯತ ಕಾಲಕ್ಕೆ ಪತ್ರವ್ಯಾಪಾರಿ ಸಂಘದವರು ಹೊರಡಿಸುವ) ಬಂಡವಾಳಪತ್ರಗಳ ಧಾರಣೆ ಪಟ್ಟಿ. **S.-man** (ಆಸ್ಟ್ರೇಲಿಯ) ಜಾನುವಾರುಗಳನ್ನು ನೋಡಿಕೊಳ್ಳುವವನು ; ಗೊಲ್ಲ, ಪಶುವರ್ಧಕ. **S.-market** ಬಂಡವಾಳಪತ್ರದ ಪೇಟೆ. **S.-owl** ಅತ್ಯಂತ ದೊಡ್ಡ ಜಾತಿಯ ಗೂಬೆ; ಹೆಗ್ಗೂಬೆ. **S.-pot** ಸಾರಿನ ರಸ ಇಡುವ, ಮಾಡುವ, ಪಾತ್ರೆ : ಸಾರಿನ ರಸದ ಪಾತ್ರೆ. **S.-rider** (ಆಸ್ಟ್ರೇಲಿಯ) (ಬೇಲಿ ಹಾಕಿಲ್ಲದ ಮೇವುಗಾವಲಿನಲ್ಲಿ ಕುದುರೆಯ ಮೇಲಿದ್ದು ದನಕರುಗಳನ್ನು ಮೇಯಿಸುವ) ರಾವುತ ಗೋವಳ. **S.-still** (ಮರದ ಕೊರಡಿನಂತೆ) ಅಚಲ, ನಿಶ್ಚಲ, ಸ್ತಬ್ಧ. **S.-whip** ದನ ಮೇಯಿಸುವವನ, ಗಿಡ್ಡ ಹಿಡಿಯ ಉದ್ದ ಬಾರಿನ, ಚಾವಟಿ : (ರಾವುತ) ಗೋವಳನ ಚಾವಟಿ. **S.-yard** ದನಕರುಗಳನ್ನು ವಿಂಗಡಿಸುವುದಕ್ಕಾಗಿ ಅಥವಾ ತಾತ್ಕಾಲಿಕವಾಗಿ ಇರಿಸಿಕೊಂಡಿರುವುದಕ್ಕಾಗಿ, ಕೊಟ್ಟಿಗೆ, ಮೊ. ಗಳನ್ನು ಹಾಕಿರುವ ಆವರಣ : ದನಕರುಗಳ, ಜಾನುವಾರು, —ಅಂಗಳ ; ಗೊಲ್ಲದೊಡ್ಡಿ. **Stóckist** (ನಾ.) ಮಾರಾಟಕ್ಕಾಗಿ ಸರಕು ತುಂಬಿಟ್ಟುಕೊಂಡಿರುವವನು : ದಾಸ್ತಾನುಗಾರ. **Stóckless** (ಗು.)

Stock (ಕ್ರಿ.) (ಬಂದೂಕು, ಮೊ. ಗಳಿಗೆ) ಹಿಡಿ, ಕಾವು, ಅಡಿ ಕಟ್ಟು, —ಹಾಕು ; (ಚರಿತ್ರೆ) ಬೇಡಿಮರದಲ್ಲಿ ಬಂಧಿಸು ; (ಅಂಗಡಿ, ಮೊ. ಕ್ಕೆ) ಸರಕು, ದಾಸ್ತಾನು, —ಒದಗಿಸಿಡು, ತುಂಬಿಡು (A well-stocked larder, library ಆಹಾರ ಸಾಮಗ್ರಿ ಸಮೃದ್ಧಿಯಾಗಿರುವ ಉಗ್ರಾಣ, ಒಳ್ಳೆಯ ಪುಸ್ತಕಗಳು ತುಂಬಿರುವ ಪುಸ್ತಕಭಂಡಾರ) ; (ಗೋಶಾಲೆಗೆ) ಜಾನುವಾರನ್ನು ಸಂಗ್ರಹಿಸು ; (ಸರಕನ್ನು) ದಾಸ್ತಾನು ಇಡು (We do not s. the out sizes ಅಸಾಧಾರಣ ಗಾತ್ರದವನ್ನು ನಾವು ಇಟ್ಟಿಲ್ಲ); (ನೆಲವನ್ನು) ಮೇವುಗಾವಲಾಗಿ ಬೆಳಸು, ಹುಲ್ಲು ಬೆಳೆಯಿಂದ ತುಂಬು ; (ಸಸ್ಯದ ವಿಷಯದಲ್ಲಿ) ಬುಡದಲ್ಲಿ—ಕುಡಿಯೊಡೆ, ಚಿಗುರು.

Stockáde ಸ್ಟಾಕೇಡ್ (ನಾ., ಕ್ರಿ. ಸಕ.) ಭಾರಿ ದಸಿಗಳನ್ನು ಕೋವಿಗಳಿಗೆ ಕಂಡಿಗಳನ್ನು ಬಿಟ್ಟು ಪಕ್ಕ ಪಕ್ಕದಲ್ಲಿ ಆಳವಾಗಿ ಹೂತು ಮಾಡಿದ, ಎದೆಮಟ್ಟದ, ಕಾವು ಗೋಡೆ : ದಸಿ ಗೋಡೆ ; ಮುಂಡಿಗೆ ಕೋಟೆ. (ಕ್ರಿ.) —ಹಾಕು, ಕಟ್ಟು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Stóckinet(te) ಸ್ಟಾಕಿನೆಟ್ (ನಾ.) (ಒಳಗವಚಗಳಿಗೆ ಉಪಯೋಗಿಸುವ) ಹಿಗ್ಗುಹೆಣಿಗೆ ಬಟ್ಟೆ.

Stócking ಸ್ಟಾಕಿಂಗ್ (ನಾ.) (ಸಾ., ಬ. ವ. ದಲ್ಲಿ) ಮಂಡಿಯವರೆಗೆ ಅಥವಾ ಕೊಂಚ ಮಂಡಿಯ ಮೇಲಕ್ಕೆ ಬರುವ, ಹೆಣೆದ ಅಥವಾ ನೆಯ್ದು, ಉಣ್ಣೆಯ ಅಥವಾ ರೇಷ್ಮೆಯ ಅಥವಾ ನೂಲಿನ, ಬಿಗಿಯಾದ ಕಾಲುಮುಚ್ಚಿಗೆ: ಕಾಲುಚೀಲ [Pair of stockings ಒಂದು ಜೊತೆ ಕಾಲುಚೀಲ. Is *or* stands six feet in his stockings *or* stocking-feet ಕಾಲುಚೀಲ ಹಾಕಿಕೊಂಡು (ಜೋಡಿಲ್ಲದೆ) ಅವನು ೬ ಅಡಿ ಎತ್ತರವಿದ್ದಾನೆ. Elastic s. ಅಭಿಧಮನಿಗಳ ಊತ, ಸ್ನಾಯುಗಳ ಅಲಸಿಕೆ, ಮೊ. ಸಂದರ್ಭಗಳಲ್ಲಿ ಹಾಕುವ, ಶಸ್ತ್ರಚಿಕಿತ್ಸೆಯಲ್ಲಿ ಉಪಯೋಗಿಸುವ, ಕಾಲುಚೀಲದಂತೆ ಅಥವಾ ಅದರ ಭಾಗದಂತೆ ಇರುವ, ಹಿಗ್ಗುಹೆಣಿಗೆ ಬಟ್ಟೆ: ಹಿಗ್ಗುಹೆಣಿಗೆ ಚೀಲ. White, etc. s. (ಕುದುರೆ, ಮೊ. ಪ್ರಾಣಿಗಳಲ್ಲಿ; ಕಾಲುಚೀಲ ತೊಟ್ಟಂತೆ) ಉಳಿದ ಭಾಗದ ಬಣ್ಣದಿಂದ ಬೇರೆಯಾದ ಬಿಳಿಪು, ಮೊ. ಬಣ್ಣದ ಕಾಲ ಕೆಳಭಾಗ]. S.-frame, -loom, -machine ಕಾಲುಚೀಲದ ಬಟ್ಟೆ ಹೆಣೆಯುವ, —ಚೌಕಟ್ಟು, ಮಗ್ಗ, ಯಂತ್ರ: ಹೆಣಿಗೆಯಂತ್ರ. **Stóckingless** (ಗು.)

Stócky ಸ್ಟಾಕಿ (ಗು.), **Stúggy** ಸ್ಟಗಿ (ಗು.) (ಬಳ. ಮಾ.) (ವ್ಯಕ್ತಿಯ ವಿಷಯದಲ್ಲಿ; ಸ. ವಿ., ಪ್ರಾ. ವಿ. ಸಹ) ಗುಜ್ಜಾರಿಯಾದ, ಗಿಡ್ಡ ಬಲವಾದುದೂ ಆದ, ತೊಣಪನಾದ. **Stóckily** (ಕ್ರಿ. ವಿ.); **Stóckiness** (ನಾ.); **Stúggily** (ಕ್ರಿ. ವಿ.); **Stúgginess** (ನಾ.)

Stodge ಸ್ಟಾಡ್ಜ್ (ನಾ., ಕ್ರಿ. ಅಕ.) (ಪಾಠಶಾಲಾ ಅಸಂ.) ಬಲವಾದ, ಮೇಪಾದ, —ಊಟ, ಆಹಾರ; ಹಬ್ಬದೂಟ, ಪುಷ್ಕಳ ಭೋಜನ; ಹೊಟ್ಟೆಬಾಕ. (ಕ್ರಿ.) ಹೊಟ್ಟೆಬಾಕನಂತೆ, ಬರಗೆಟ್ಟಂತೆ, —ತಿನ್ನು. **Stódgy** (ಗು.) (ಆಹಾರದ ವಿಷಯದಲ್ಲಿ) ಪಿಷ್ಟ ತುಂಬಿದ, ಹೊಟ್ಟೆಯನ್ನು ತುಂಬಿಬಿಡುವ, ಭಾರವಾದ, ಜೀರ್ಣವಾಗದ, ಹೊಟ್ಟೆಯಲ್ಲಿ ಕುಳಿತುಬಿಡುವ; (ಚೀಲದ ವಿಷಯದಲ್ಲಿ) ಗಿಡಿದು ತುಂಬಿದ, ಉಬ್ಬಿಕೊಂಡ; (ಗ್ರಂಥ, ಶೈಲಿ, ಮೊ. ಗಳ ವಿಷಯದಲ್ಲಿ) ಬರಿಯ ಸಂಗತಿಗಳು, ವಿವರಗಳು, —ಗಿಡಿದಿರುವ; ಭಾರವಾದ, ರಸವತ್ತಲ್ಲದ, ಬೆಡಗಿಲ್ಲದ, ಸ್ವಾರಸ್ಯವಿಲ್ಲದ. **Stódginess** (ನಾ.)

Stóic ಸ್ಟೋಇಕ್ (ನಾ.) (ಮೂಲಾರ್ಥ: ಕಂಬಸಾಲಿನ ಕೈಸಾಲೆ) ಜೀನೋ ಸು. ಕ್ರಿ. ಪೂ. ೩೦೮ರಲ್ಲಿ ಸ್ಥಾಪಿಸಿದ, ಸೌಶೀಲ್ಯವೇ ಪರಮ ಹಿತವೆಂದು ಗಣಿಸುವ, ನೀತಿ ತತ್ತ್ವಗಳನ್ನು ಸರ್ವ ಶ್ರೇಷ್ಠವೆಂದು ಎಣಿಸಿ ಇಂದ್ರಿಯಗಳನ್ನು ಸಂಯಮಗೊಳಿಸಿ ಸುಖದುಃಖಗಳಿಗೆ ಉದಾಸೀನನಾಗಿರಬೇಕೆಂಬ ಪಂಥದ ತತ್ತ್ವಜ್ಞಾನಿ: ಸ್ಟೋಯಿಕ್ (ಪಂಥದವನು) (ಅಥೆನ್ಸಿನಲ್ಲಿಯ ಕಂಬಸಾಲಿನ ಕೈಸಾಲೆಯಲ್ಲಿ ಜೀನೋ ತನ್ನ ಶಿಷ್ಯರಿಗೆ ಪಾಠ ಹೇಳುತ್ತಿದ್ದುದರಿಂದ); [(ಅನೇಕ ವೇಳೆ ವಿಶೇಷಣವಾಗಿ ಪ್ರ.) S. philosopher, doctrines, indifference]; ವೀತರಾಗಿ, ಅನುದ್ವೇಗಿ, ಸಂಯಮಿ, ಜಿತೇಂದ್ರಿಯ, ವ್ರತಿ. **Stóical** (ಗು.); **Stóically** (ಕ್ರಿ. ವಿ.); **Stóicism** —ಸಿಸ್ಮ್ (ನಾ.)

Stoke ಸ್ಟೋಕ್ (ಕ್ರಿ. ವಿ.) (ಕುಲುಮೆಗೆ ಉರುವಲು ಹಾಕುತ್ತ ಕೆದಕುತ್ತ) ಉರಿ—ನೋಡಿಕೊ, ಕಾಯಿ; (ಎಂಜಿನು, ಮೊ. ಗಳ) ಒಲೆಗೆ ಉರುವಲು ಹಾಕು, ಒಲೆ ನೋಡಿಕೊ; (ರೂಪ., ಬಳ. ಮಾ.) (ಆತುರಾತುರವಾಗಿ ಆಹಾರವನ್ನು) ಬಾಯಿಗೆ, ಹೊಟ್ಟೆಗೆ, —ತುಂಬಿಕೊ, ತುರುಕು. S.-hole (ಆವಿ ಹಡಗಿನ) ಒಲೆ ಕೋಣೆ, ಕುಲುಮೆ ಕೋಣೆ; ಕುಲುಮೆಯ ಉರಿ ನೋಡಿಕೊಳ್ಳುವವರು ನಿಂತುಕೊಳ್ಳಲು) ಕುಲುಮೆಯ ಮುಂದೆ ಮಾಡಿರುವ ಸ್ಥಳ: ಉರಿಗಾಹಿಯ ಸ್ಥಳ; ಕುಲುಮೆಗೆ ಉರುವಲು ಹಾಕಿ ಉರಿ ಸರಿಮಾಡಲು ಮಾಡಿರುವ ಕಂಡಿ: ಉರುವಲು ಕಂಡಿ. **Stóker** (ನಾ.) (ಮು., ಆವಿಹಡಗಿನ ಅಥವಾ ಆವಿಯೆಂಜಿನಿನ) ಕುಲುಮೆಯ ಉರಿಯನ್ನು ನೋಡಿಕೊಳ್ಳುವವನು: ಉರಿಗಾಹಿ (Mechanical s. ಕುಲುಮೆಗೆ ತನ್ನಷ್ಟಕ್ಕೆ ತಾನೇ ಉರುವಲು ಒಟ್ಟುವ ಸಾಧನ: ಉರಿಗಾಹಿ ಯಂತ್ರ)

Stole[1] ಸ್ಟೋಲ್ (ನಾ.) [ರೋ. ಪ್ರಾ. Stola (L) ಬ. ವ. -ae, —ಲೀ] ಪ್ರಾಚೀನ ರೋಮನ್ ವಿವಾಹಿತ ಮಹಿಳೆಯರು ಧರಿಸುತ್ತಿದ್ದ ಮೇಲುಡುಪು. ಕೊರಳ ಹಿಂಭಾಗದಿಂದ ಭುಜಗಳಮೇಲೆ ಬಂದು ಮಂಡಿಯವರೆಗೂ ಇಳಿಯಬೀಳುವಂತೆ ಕ್ರೈಸ್ತ ವೈದಿಕರು ಧರಿಸುವ ರೇಷ್ಮೆಯ ಅಥವಾ ಜರತಾರಿ ಅಲಂಕರಿಸಿದ ಪಟ್ಟಿ: (ಉತ್ತರೀಯದಂಥ) ಇಳಿಪಟ್ಟಿ; (ಹೆಂಗಸಿನ) ತುಪ್ಪುಳು ಚರ್ಮದ ಅಥವಾ ಗರಿಗಳ ಅಗಲ ಇಳಿಪಟ್ಟಿ, ಕಂಠವಸ್ತ್ರ. Groom of the s. =First Lord of the Bedchamber (Lord ನೋಡಿ). **(-)stoled** (ಗು.)

Stole[2]. =Stolon.

Stole[3]. Steal ಧಾತುವಿನ ಭೂತ.

Stólen. Steal ಧಾತುವಿನ ಭೂ. ಕೃ.

Stólid ಸ್ಟಾಲಿಡ್ (ಗು.) ಚಟುವಟಿಕೆಯಿಲ್ಲದ, ಭಾವೋದ್ರೇಕ ಶೂನ್ಯ, ಅನುದ್ವೇಗದ, ಮನಸ್ಸಿಗೆ ಏನೂ ನಾಟದ, ಜಡ, ಮಂದ, ಮೊಂಡಾದ, ಶಠ, ಮದಡಾದ. **Stolídity** ಸ್ಟೊಲಿಡಿಟಿ (ನಾ.); **Stólidly** ಸ್ಟಾ— (ಕ್ರಿ. ವಿ.)

Stólon ಸ್ಟೋಲನ್ (ನಾ.), **Stole**[2] ಸ್ಟೋಲ್ (ನಾ.) ಬಿದಿರು, ಒಂದೆಲಗ, ಮೊ. ಗಳಲ್ಲಿ ಕಾಣುವಂತೆ ತಾಯಿಗಿಡದ ಬುಡವನ್ನು ಅನಿಕೊಂಡು ನೆಲಮಟ್ಟದಿಂದ ಹೊರಟಿರುವ, ಪ್ರತ್ಯೇಕವಾದ ಗಿಡವಾಗುವ ಶಕ್ತಿಯಿರುವ, ಮೋಸು, ಅಂಟು ಅಥವಾ ಬೇರು: ಅಂಟು, ಬೇರು, —ಕೊಂಬೆ; ನೆಲ ಪಾಚಿ ಗಿಡದ ಬುಡ ಕವಲು: ನೆಲ ರೆಂಬೆ; (ಪ್ರಾ. ವಿ.) ಬೇರಿನಂಥ ಬಳ್ಳಿವರಿಯುವ ಅಂಗವೃದ್ಧಿ. **Stólonate** —ನೆಟ್ (ಗು.) —ಉಳ್ಳ; —ಇಂದ ಬೆಳೆದ. **Stolo-níferous** (ಗು.) —ಉಳ್ಳ, ಬೆಳೆಯುವ.

Stómach ಸ್ಟಮಕ್ (ನಾ.) ಹೊಟ್ಟೆ, ಅನ್ನಾಶಯ, ಅನ್ನಕೋಶ, ಜಠರ [Coat of the s. ಜಠರದ ಅತ್ಯಂತ ಒಳ ಭಾಗದ ಲೋಳೆಯ ಪದರ: ಜಠರದ ಒಳ ಪೊರೆ. Coats of the s. ಜಠರವನ್ನು ಆವರಿಸಿರುವ ವಸೆಯ ಪೊರೆ, ಸ್ನಾಯು ಪೊರೆ, ಲೋಳೆ ಪೊರೆಯ ಒಳ ಪೊರೆ ಮತ್ತು ಲೋಳೆಯ ಪೊರೆ: ಜಠರದ ಪೊರೆಗಳು, ಜಠರಾವರಣಗಳು. Ruminant's stomachs ಮೆಲುಕು ಪ್ರಾಣಿಯ (ನಾಲ್ಕು) ಜಠರಗಳು. Muscular s. (ಅರೆಯುವುದರಿಂದ ಅಥವಾ ಕಿವಿಚುವುದರಿಂದ ಜೀರ್ಣ ಕಾರ್ಯ ನಡೆಯುವ) ಸ್ನಾಯು ಜಠರ (ಉದಾ., ಹಕ್ಕಿಯ ಎರಡನೆಯ ಜಠರ). Glandular s. (ಮು., ಜಠರರಸಗಳಿಂದ ಜೀರ್ಣಕಾರ್ಯ ನಡೆಯುವ) ಗ್ರಂಥಿ ಜಠರ]; (ಶಿಥಿಲ ಪ್ರ.) ಹೊಟ್ಟೆ, ಬಸಿರು, ಉದರ [Pit of the s. (Pit ನೋಡಿ). What a s. he has got! ಅವನಿಗೆ ಎಂಥ ಬೊಜ್ಜು ಇದೆ!]. ಅನ್ನೇಚ್ಛೆ, ಹಸಿವು; ಇಚ್ಛೆ (*For* ಉಪ. ದೊಡನೆ) [Stay one's s. (Stay[1] ನೋಡಿ)]; (ವಾಗ್ವಾದ, ಹೋರಾಟ, ಅಪಾಯದ ಕೆಲಸ, ಸಾಹಸೋದ್ಯಮ, ಮೊ. ಕ್ಕೆ) ಪ್ರವೃತ್ತಿ, ಅಭಿರುಚಿ, ಸಿದ್ಧತೆ, ಉತ್ಸಾಹ; ಹುಮ್ಮಸ್ಸು [*For*, (ಪ್ರಾಚೀ. ಪ್ರ.) *to* ಉಪ. ದೊಡನೆ. Had no s. for the fight. Proud *or* high s. ಅಹಂಕಾರ, ಗರ್ವ]. **S.-ache** ಹೊಟ್ಟೆನೋವು. **S.-cough** ಹೊಟ್ಟೆಯ ಅಥವಾ ಸಣ್ಣ ಕರುಳಿನ ಉದ್ರೇಕದಿಂದ ಉಂಟಾದ ಕೆಮ್ಮು: ಹೊಟ್ಟೆಗೆಮ್ಮು. **S.-pump** ಹೊಟ್ಟೆಯನ್ನು ಬರಿದುಮಾಡುವುದಕ್ಕಾಗಲಿ ದ್ರವದಿಂದ ತುಂಬುವುದಕ್ಕಾಗಲಿ ಉಪಯೋಗಿಸುವ ಪಿಚಕಾರಿ: ಹೊಟ್ಟೆ ಪಿಚಕಾರಿ. **S.-staggers** ಕುದುರೆಗಳಿಗೆ (ಹೊಟ್ಟೆಯ ಪಾರ್ಶ್ವವಾಯುವಿಂದ) ಬರುವ ತೀಕ್ಷ್ಣ ವಾಯು: ಉದರವಾಯು. **S.-tooth** (ಮಕ್ಕಳಲ್ಲಿ ಮೊದಲಸಲ ಹುಟ್ಟುವ) ಕೆಳಗಿನ ಕೋರೆ ಹಾಲು ಹಲ್ಲು (ಇದು ಹುಟ್ಟುವಾಗ ಸಾ., ಹೊಟ್ಟೆ ಕೆಡುತ್ತದೆ). **S.-tube** ಸೈಫನ್ (ಇಳಿಗೊಳವೆ) ಕ್ರಿಯೆಯ ಮೂಲಕ ಹೊಟ್ಟೆಯನ್ನು ತೊಳೆಯುವುದಕ್ಕಾಗಲಿ ಬರಿದುಮಾಡುವುದಕ್ಕಾಗಲಿ ಗಂಟಲಮಾರ್ಗವಾಗಿ ಒಳಕ್ಕೆ ಇಳಿಯಬಿಡುವ ಕೊಳವೆ: ಹೊಟ್ಟೆಗೊಳವೆ. **Stómachal** ಸ್ಟಾಮಕಲ್ (ಗು.), **Stomáchic** ಸ್ಟೊಮ್ಯಾಕಿಕ್ (ಗು., ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಠರದ, ಜಠರ ಸಂಬಂಧವಾದ ; ಜಠರೋತ್ತೇಜಕ, ಅಗ್ನಿವರ್ಧಕ, ಜೀರ್ಣಕಾರಿ, ಪಾಚಕ, ರೋಚಕ. (ನಾ.) —ಔಷಧ. **Stómachful** (ನಾ.) ; **Stómachless** (ಗು.)

Stómach (ಕ್ರಿ. ಸಕ.) ರುಚಿಯಿಂದ, ಸವಿದು, ಸಹನೆಯಿಂದ, ಅಸಹ್ಯಪಡದೆ, —ತಿನ್ನು ; ಹೇಗಾದರೂ ನುಂಗು ; (ರೂಪ.) (ಅಪಮಾನ, ಮೊ. ನ್ನು) ಸಹಿಸಿಕೊ, ನುಂಗಿಕೊ (ಸಾ., ನಿಷೇಧಾರ್ಥಕ ಪ್ರ.: Can't s. it ಅದನ್ನು ಸಹಿಸಲಾರೆ, ನುಂಗಿಕೊಂಡಿರಲಾರೆ)

Stomáchic. **Stomach** ನೋಡಿ.

Stomato- ಸ್ಟಾಮಟೊ— (ಸ. ಪೂ. ಪ.) ಬಾಯಿ—. **-gástric** ಬಾಯಿಯ ಮತ್ತು ಜಠರದ. **Stomatítis** (—ಟೈಟಿಸ್) ಬಾಯಿಯ ಲೋಳೆಚರ್ಮದ ಉರಿಯೂತ : ಬಾಯಿ ಹುಣ್ಣು.

Stone ಸ್ಟೋನ್ (ನಾ., ಗು.) ಕಲ್ಲು, ಶಿಲೆ, ಅಶ್ಮ, ಪಾಷಾಣ [Stocks & stones (Stock ನೋಡಿ). As hard as a s. ಕಲ್ಲಿನಷ್ಟು ಗಟ್ಟಿಯಾದ, ಪಾಷಾಣ ಕಠಿನ. Rolling s. gathers no moss (Gather ನೋಡಿ). Rocking-s. (Rock³ ನೋಡಿ). Sermons in stones (Sermon ನೋಡಿ). Stones will cry out (ದೊಡ್ಡ ಅನ್ಯಾಯವೆಂದು) ನಿರ್ಜೀವ ವಸ್ತುಗಳೂ ಗಟ್ಟಿಯಾಗಿ ಒರಲುತ್ತವೆ, ಮರುಕಪಡುತ್ತವೆ. Give a s. for bread ರೊಟ್ಟಿ ಕೇಳಿದರೆ ಕಲ್ಲು ಕೊಡು ; ಸಹಾಯದ ಅಣಕಮಾಡು. Mark with a white s. ಸಂತೋಷದ ದಿನವೆಂದು ಗುರುತುಮಾಡು (ಪ್ರಾಚೀನ ರೋಮನರು ಪಂಚಾಂಗದಲ್ಲಿ ಇಂಥ ದಿನಗಳನ್ನು ಸೀಮೆ ಸುಣ್ಣದಿಂದ ಗುರುತಿಸುತ್ತಿದ್ದ ಕಾರಣದಿಂದ). Meteoric s. ಉಲ್ಕಾಶಿಲೆ. Leave no s. unturned ಸರ್ವ ಪ್ರಯತ್ನಗಳನ್ನೂ ಮಾಡು, ಯಾವ ಪ್ರಯತ್ನವನ್ನೂ ಬಿಡದಿರು (*To* do). Break stones ಜಲ್ಲಿ ಒಡೆದು ಹೊಟ್ಟೆಹೊರೆ (ಬಹಳ ಬಡತನದಲ್ಲಿರುವ ಸೂಚನೆಯಾಗಿ). Cast, throw, stones *or* a s. at ಕಲ್ಲೆಸೆ; ಒಬ್ಬನಮೇಲೆ ನಿಂದೆ ಹಾಕು, ದೋಷಾರೋಪಣೆ ಮಾಡು. Those who live in glass houses should not throw stones ಗಾಜಿನ ಮನೆಯಲ್ಲಿರುವವರು ಇತರರಮೇಲೆ ಕಲ್ಲೆಸೆಯಬಾರದು ; ತನ್ನಲ್ಲಿ ಹುಳುಕಿರುವವನು ಮತ್ತೊಬ್ಬರ ಹುಳುಕೆತ್ತಿ ಆಡಬಾರದು. Shower of stones ಕಲ್ಲುಮಳೆ; ಶಿಲಾವೃಷ್ಟಿ. Kill two birds with one s. (Bird ನೋಡಿ). S.'s cast *or* throw ಕಲ್ಲೆಸತ(ದ ದೂರ)]. ಪ್ರಶಸ್ತಶಿಲೆ, ರತ್ನ, ಮಣಿ, ಹರಳು (=Precious s.) ; [No s. in it worth less than £100. Bristol s. ಒಂದು ಬಗೆಯ ಶಿಲಾಸ್ಫಟಿಕ. Cairngorm s. ಒಂದು ಹಳದಿ ಪ್ರಶಸ್ತಶಿಲೆ. Sand, Lime, -s. (ಆಯಾ ಪದ ನೋಡಿ). Bath, Caen, Portland, s. (ಕಟ್ಟಡದ ಕಲ್ಲುಜಾತಿಗಳು). S. jar ಕಲ್ಲು ಹೂಜಿ. S. jug (ಅಸಂ.) ಸೆರೆಮನೆ. Holystone (ಆ ಪದ ನೋಡಿ). Artificial s. ಜಲ್ಲಿಗಾರೆ ಜಾತಿ. Cornish s. ಬಿಳಿಯ ಜೇಡಿ. A heart of s. ಕಲ್ಲೆದೆ, ಪಾಷಾಣ ಹೃದಯ. Harden into s. ಕಲ್ಲಾಗು, ಶಿಲೆಯಾಗು (ರೂಪ. ಸಹ). The s. age ಶಿಲೆಯ ಉಪಕರಣಗಳೂ ಆಯುಧಗಳೂ ಬಳಕೆಯಲ್ಲಿದ್ದ ನಾಗರಿಕತೆಯ ಯುಗ : ಶಿಲಾ(ಯುಧಗಳ) ಯುಗ. Philosophers' s. (Philosophy ಕೆಳಗೆ Philosopher ನೋಡಿ). Grind, Grave¹, Hearth, Mill¹, Whet, -s. (ಆಯಾ ಪದ ನೋಡಿ). Moabite, Rosetta, s. (ಚಾರಿತ್ರಕ ದೃಷ್ಟಿಯಿಂದ ಮುಖ್ಯವಾದ) ಶಾಸನ ಸ್ತಂಭ (Stele ನೋಡಿ)]. ಗಟ್ಟಿಯಲ್ಲಿ ಕಲ್ಲನ್ನು ಹೋಲುವ, ಆಕಾರದಲ್ಲಿ ಸಣ್ಣ ಉರುಟುಕಲ್ಲನ್ನು ಹೋಲುವ, —ಪದಾರ್ಥ ; (ರೋಗ ನಿದಾನ) ಮೂತ್ರಕೋಶದ ಕಲ್ಲು, ಅಶ್ಮರಿ (ರೋಗ) ; ಓಟೆ, ಗೊರಟೆ, ಗೊಟ್ಟೆ ; ದ್ರಾಕ್ಷಿಯ ಬೀಜ ; ತರುಡು, ವೃಷಣ ; ಆಲಿಕಲ್ಲು [Gall-s. (Gall¹ ನೋಡಿ). Underwent an operation for s. *or* the s. ಅಶ್ಮರಿಗಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡನು. Remove the stones from plums, grapes. Hail-storm with stones as big as marbles]. ೧೪ ಪೌಂಡುಗಳ ತೂಕ (ಆಯಾ ಸರಕಿಗೆ ಅನುಸಾರವಾಗಿ ೮ರಿಂದ ೨೪ ಪೌಂಡು ತೂಕ) [Rides 12 st. ಸವಾರಿಯುಡುಪಿನಲ್ಲಿ ೧೨ ಸ್ಟೋನ್ ತೂಕ ತೂಗುತ್ತಾನೆ. S. of meat *or* fish (೮ ಪೌಂಡು) ಸ್ಟೋನ್ ತೂಕದ ಮಾಂಸ, ಮೀನು. S. of cheese (೧೬ ಪೌಂಡು) ಸ್ಟೋನ್ ತೂಕದ ಚೀಸ್]. **S.-axe** (ಎರಡು ಕಡೆಯೂ ಮೊಂಡು ಏಣುಳ್ಳ) ಕಲ್ಲು ಕಡಿಯುವ ಕೊಡಲಿ ; ಕಲ್ಲು ಕೊಡಲಿ. **S.-blind** ಪೂರ್ತಿ ಕುರುಡು. **S.-blue** ನೀಲಿಗೆ ಗಂಜಿಪುಡಿಯನ್ನು ಅಥವಾ ಸೀಮೆ ಸುಣ್ಣವನ್ನು ಬೆರಸಿ ಮಾಡಿದ ಸಂಯುಕ್ತ : ಕಲ್ಲುನೀಲಿ. **S.-boiling** ಕಾದ ಕಲ್ಲುಗಳನ್ನು ನೀರಿಗೆಹಾಕಿ ನೀರು ಕುದಿಸುವುದು (ಆದಿ ಕಾಲದ ವಿಧಾನ). **S.-borer** ಬಂಡೆಯನ್ನು ಅಥವಾ ಶಿಲೆಯನ್ನು ಕೊರೆಯುವ ಒಂದು ಚಿಪ್ಪು ಪ್ರಾಣಿ : ಕಲ್ಲು ಕೊರಕ. **S.-break** ಒಂದು ಬಗೆಯ ಸಸ್ಯ. **S.-buck** ಆಫ್ರಿಕದ ಸಣ್ಣ ಜಿಂಕೆ (=Steenbok). **S.-butter** ಪಟಿಕದ ಒಂದು ಜಾತಿ. **S.-cast** ಕಲ್ಲೆಸತ(ದ ದೂರ). **Stone-chat** ಒಂದು ಹಕ್ಕಿ ಜಾತಿ. **S.-coal**=Anthracite (ಆ ಪದ ನೋಡಿ). **S.-cold** ಕಲ್ಲಿನಂತೆ ತಣ್ಣಗಿರುವ; ಪೂರ್ತಿ ತಣ್ಣಗಿರುವ. **Stónecrop** ಗೋಡೆಗಳಮೇಲೂ ಬಂಡೆಗಳಮೇಲೂ ಬೆಳೆಯುವ ಬಳ್ಳಿ ಜಾತಿಯ ಸಸ್ಯ : ಕಲ್ಲು ಬಳ್ಳಿ. **S.-curlew** ದೊಡ್ಡ ಜಾತಿಯ ಪ್ಲವರ್ ಹಕ್ಕಿ. **S.-dead** ಪೂರ್ತಿ ಸತ್ತಿರುವ. **S.-deaf** ಪೂರ್ತಿ ಕಿವುಡಾದ. **S.-eater**=S.-borer. **S.-fence** (ಅಮೆ. ಸಂ. ಅಸಂ.) ವಿಸ್ಕಿ ಮತ್ತು ಸೇಬು ಮದ್ಯಗಳ ಅಥವಾ ಅಂಥ ಬೆರಕೆಯ ಪಾನೀಯ. **S.-fern** ಒಂದು ಬಗೆಯ ಜರೀ ಗಿಡ. **S.-fly** ಟ್ರೌಟ್ ಮೀನನ್ನು ಹಿಡಿಯಲು ಎರೆಯಾಗಿ ಉಪಯೋಗಿಸುವ, ನೀರಿನಲ್ಲಿ ಕಲ್ಲುಗಳ ಕೆಳಗೆ ಮರಿಹುಳುಗಳನ್ನು ಇಡುವ ಒಂದು ಕೀಟ : ಕಲ್ನೊಣ. **S.-fruit** ಬೀಜದ ಸುತ್ತ ಗಟ್ಟಿ ಚಿಪ್ಪೂ ಅದರ ಸುತ್ತ ತಿರುಳೂ ಇರುವ ಹಣ್ಣು : ಓಟೆ(ಯುಳ್ಳ) ಹಣ್ಣು. **S.-gall** ಮರಳುಗಲ್ಲಿನಲ್ಲಿ ಕಂಡುಬರುವ ಜೇಡಿಯ ಗಂಟು. **S.-horse** (ಪ್ರಾಚೀ. ಪ್ರ.) ಗಂಡು ಕುದುರೆ ; ಬೀಜದ ಕುದುರೆ. **S.-man** (ಎಲ್ಲೆಯ ಗುರುತಾಗಿ ಒಡ್ಡಿರುವ) ಕಲ್ಲು ಗುಡ್ಡೆ. **S.-mason** ಕಲ್ಲು ಕೆಲಸಗಾರ, ಕಲ್ಕುಟಿಗ, ಕಲ್ಲು ಕಟ್ಟಡ ಕಟ್ಟುವವನು. **S.-parsley** ಒಂದು ಬೇಲಿಯ ಗಿಡ. **S.-pit** ಕಲ್ಲುಗಣಿ, ಕಲ್ಲುಪಣೆ. **S. pitch** ಕಲ್ಲಿನಂತೆ ಗಟ್ಟಿಯಾದ ರಾಳ ; ಕಲ್ಲು ರಾಳ. **S.-plover**=S.-curlew. **S.-race** ಅಂತರಬಿಟ್ಟು ಇಟ್ಟಿರುವ ಕಲ್ಲುಗಳನ್ನು ಕೈಯಿಂದ ಎತ್ತಿಕೊಂಡು ಓಡಬೇಕಾದ ಪಂದ್ಯ ; ಕಲ್ಲು (ಓಟದ) ಪಂದ್ಯ. **S.-rag** ಒಂದು ಜಾತಿಯ ಕಲ್ಲುಹೂವು. **S.-rue** ಒಂದು ಜಾತಿಯ ಜರೀ ಗಿಡ. **S.-saw** ಮರಳಿನ ಸಹಾಯದಿಂದ ಕಲ್ಲನ್ನು ಕೊಯ್ಯುವ, ಗರಗಸದ ಚೌಕಟ್ಟಿನಲ್ಲಿ ಜೋಡಿಸಿರುವ, ಹಲ್ಲಿಲ್ಲದ ಗರಗಸ : ಕಲ್ಲು (ಕೊಯ್ಯುವ) ಗರಗಸ. **S-snipe** ಉ. ಅಮೆರಿಕದ ದೊಡ್ಡ ಜಾತಿಯ ಸ್ನೈಪ್ ಹಕ್ಕಿ. **Stonewáll** (ಕ್ರಿ.) (ಕ್ರಿಕೆಟ್) ಚೆಂಡನ್ನು ದಾಂಡಿನಿಂದ ಸುಮ್ಮನೆ ತಡೆಯುತ್ತಿರು ; ಅತಿ ಎಚ್ಚರಿಕೆಯ, ರಕ್ಷಣೆಯ ಆಟವಾಡು. (ರಾಜಕೀಯ, ಮು., ಆಸ್ಟ್ರೇಲಿಯದ ಪ್ರ. ; ಶಾಸನ ಸಭೆಯಲ್ಲಿ) ದೀರ್ಘ ಭಾಷಣಾದಿಗಳಿಂದ ಅಡಚಣೆಮಾಡು, ತಡೆಯೊಡ್ಡು. **S.-wálling** (ನಾ.). **S.-ware** ಸಿಲಿಕ ಬೆರಸಿದ ಜೇಡಿಮಣ್ಣಿನ ಅಥವಾ ಜೇಡಿ ಮತ್ತು ಬೆಣಚುಪುಡಿ ಬೆರಕೆಯ ಕುಡಿಕೆ ಮಡಕೆಗಳು ; ಕಲ್ಲು ಗಡಿಗೆ ಮಡಕೆಗಳು. **S.-work** ಕಲ್ಲು ಕೆಲಸ ; ಕಲ್ಲು ಕಟ್ಟಡ. **Stónewort** ಹಲವು ಜಾತಿಯ ಬೇಲಿ ಗಿಡ. **(-)stoned** (ಗು.) ; **Stóneless** (ಗು.) ; **Stóny** (ಗು., ಕ್ರಿ. ವಿ.) ಕಲ್ಲುಗಳು ತುಂಬಿದ, ಕಲ್ಲುಗಳಿಂದ ಮುಚ್ಚಿದ, ಹಲವು ಕಲ್ಲುಗಳಿರುವ; ಕಲ್ಲಿನಂತೆ—ಗಟ್ಟಿಯಾದ, ದೃಢವಾದ, ಭದ್ರವಾದ ; ಕಲ್ಲಿನಂಥ [A s. stare ಗುರುತಿಸಲು, ಉತ್ತರ ಹೇಳಲು, —ನಿರಾಕರಣೆ ತೋರುವ ದೃಷ್ಟಿ : ಕಲ್ಲುನೋಟ, ಬಿರುನೋಟ, ಶಿಲಾದೃಷ್ಟಿ. S. heart ಕಲ್ಲೆದೆ, ಕಠಿನ ಹೃದಯ ; ಗಟ್ಟಿ ಮಧ್ಯ ಭಾಗ, ಕಠಿನ ಗರ್ಭ. **Stony-hearted** (ಗು.)]. (ಕ್ರಿ. ವಿ.) ಪೂರ್ತಿಯಾಗಿ, ಚೇತರಿಸಿಕೊಳ್ಳದಂತೆ [S. broke (ಪೂರ್ತಿಯಾಗಿ ನಾಶವಾದ, ಹಾಳಾಗಿ ಹೋದ) ಎಂಬಲ್ಲಿ ಮಾತ್ರ ಪ್ರ.]. **Stónily** (ಕ್ರಿ. ವಿ.) ; **Stóniness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Stone (ಕ್ರಿ.) ಕಲ್ಲುಗಳಿಂದ ಹೊಡೆ, ಕಲ್ಲು ಬೀರು (S. to death ಕಲ್ಲು ಹೊಡೆದು ಸಾಯಿಸು). (ಹಣ್ಣನ್ನು) ಓಟೆಯಿಂದ ಬಿಡಿಸು; ಓಟೆ ತೆಗೆದುಹಾಕು. ಕಲ್ಲು ಹಾಸು; ಕಲ್ಲು ಮುಖ ಕೊಡು.

Stood. Stand ಧಾತುವಿನ ಭೂತ., ಮತ್ತು ಭೂ. ಕೃ.

Stook ಸ್ಟುಕ್ (ನಾ., ಕ್ರಿ. ಸಕ.) (ಮು., ಸ್ಕಾ. ಪ್ರ., ಉ. ಇಂಗ್ಲೆಂಡ್ ಪ್ರ.) =Shock³ (ಆ ಪದ ನೋಡಿ)

Stool ಸ್ಟೂಲ್ (ನಾ., ಕ್ರಿ. ಅಕ.) ಸಾ., ಮೂರು ಅಥವಾ ನಾಲ್ಕು ಕಾಲುಗಳೂ ಮೇಲೆ ಮಣೆಯೂ ಇರುವ, ಒಬ್ಬನು ಕುಳಿತುಕೊಳ್ಳುವ, ಬೆನ್ನಿಲ್ಲದ ಪೀಠ: ಮುಕ್ಕಾಲುಮಣೆ; ನಾಗಾಲಿ; ಕಾಲುಮಣೆ; ಸ್ಟೂಲು [Camp-s. (ಮಡಿಚಲಾಗುವ) ಬಿಡಾರದ ಸ್ಟೂಲು. Office s. ಗುಮಾಸ್ತರು, ಮೊ. ರು ಉಪಯೋಗಿಸುವ ಎತ್ತರದ ಸ್ಟೂಲು: ಕಚೇರಿ ಸ್ಟೂಲು. Music-s. (Music ನೋಡಿ). Three-legged s.; Folding s. ಮಡಿಚು ಸ್ಟೂಲು. S. of repentance (ಹಿಂದೆ) ಸ್ಕಾಟ್ಲೆಂಡಿನ ಚರ್ಚುಗಳಲ್ಲಿ, ವ್ಯಭಿಚಾರ ಮಾಡಿದವರು, ಮೊ. ರನ್ನು ಛೀಮಾರಿಮಾಡಲು ಕೂರಿಸುತ್ತಿದ್ದ ಕಾಲುಮಣೆ: ಪಶ್ಚಾತ್ತಾಪದ ಕಾಲುಮಣೆ (ರೂಪ. ಸಹ). Fall between two stools ಮನಸ್ಸು ನಿರ್ಧರವಿಲ್ಲದೆ, ಎರಡರ ಮಧ್ಯೆ ತೂಗಾಡಿ, —ವಿಫಲವಾಗು, ಕೆಟ್ಟುಹೋಗು; ಅತೋಭ್ರಷ್ಟಸ್ತತೋಭ್ರಷ್ಟನಾಗು]. ಮಂಡಿಯೂರಲು ಉಪಯೋಗಿಸುವ ತಗ್ಗು ಬೆಂಚು: ಮಂಡಿ ಪೀಠ; =Foot-s. (Foot ನೋಡಿ). (ವಾ. ಶಾ.) ಕಿಟಕಿಯ ಹೊಸ್ತಿಲು. ಮಲವಿಸರ್ಜನೆ(ಯ ಸ್ಥಳ); ಮಲ(ಪಾತ್ರೆಯುಳ್ಳ ನಾಗಾಲಿ) [Go to s. ಮಲವಿಸರ್ಜನೆಗೆ ಹೋಗು. Close, night, -s. (ಆಯಾ ಪದ ನೋಡಿ)]. ಕುಡಿ ಒಡೆಯುವ ಗಿಡದ ಬೇರು, ಬುಡ. ದೀಹದ ಹಕ್ಕಿಯನ್ನು ಬಂಧಿಸುವ ಮರದ ತುಂಡು, ಕೋಲು. [S.-ball ಸಸೆಕ್ಸ್ ಪ್ರಾಂತದಲ್ಲಿ, ಮು., ಹುಡುಗಿಯರು ಈಗಲೂ ಆಡುವ ಕ್ರಿಕೆಟ್ಟಿನಂಥ, ಒಂದು ಹಳೆಯ ಆಟ. S.-pigeon ದೀಹದ ಪಾರಿವಾಳ; ಜೂಜುಗಾರರು ತಮ್ಮ ಮೋಸಕ್ಕೆ ಸಹಾಯಕನನ್ನಾಗಿ ಉಪಯೋಗಿಸುವ ಮನುಷ್ಯ: ದೀಹದ ಮನುಷ್ಯ; ಜೂಜುಗಾರರ ಸಹಾಯಕ]. (ಕ್ರಿ.) ಬೇರಿನಿಂದ ಕೊಂಬೆ ಒಡೆ, ಚಿಗುರು ಬಿಡು. ಹಿತ್ತಿಲಗೆ ಹೋಗು, ಮಲವಿಸರ್ಜನೆ ಮಾಡು.

Stoop¹ ಸ್ಟೂಪ್ (ಕ್ರಿ., ನಾ.) ನೆಲ ಮುಟ್ಟುವಂತೆ ಬಗ್ಗು; ಡೊಗ್ಗು; ತಗ್ಗು. (ರೂಪ.) (—ಮಾಡಲು) ಅನುಗ್ರಹ ತೋರು, ದೊಡ್ಡ ಮನಸ್ಸು ಮಾಡು (*To* do), (ಯಾವುದಾದರೂ ನೀಚ ವರ್ತನೆಗೆ) ಇಳಿ, ಕೀಳು ತನಕ್ಕೆ ಇಳಿ (*To* ಉಪ. ಜೊಡನೆ) (S. to conquer ಗೆಲ್ಲಲು ತಗ್ಗು); ಬಗ್ಗಿ(ಕೊಂಡು) ನಡೆ, ಬಗ್ಗಿ(ಕೊಂಡಿ)ರು [**Stoópingly** (ಕ್ರಿ. ವಿ.)]. (ಗಿಡುಗ, ಮೊ. ಗಳ ವಿಷಯದಲ್ಲಿ, ಮತ್ತು ರೂಪ. ಸಹ; ಪ್ರಾಚೀ. ಪ್ರ., ಕಾವ್ಯ) (ಮೇಲೆ) ಎರಗು, ಸರ್ರೆಂದು ಇಳಿ. (ತಲೆ, ಕುತ್ತಿಗೆ, ಭುಜ, ಬೆನ್ನು) ಮುಂದಕ್ಕೆ ಬಗ್ಗಿಸು, ತಗ್ಗಿಸು; (ಪೀಪಾಯಿಯನ್ನು) ಮುಂದಕ್ಕೆ ಬಗ್ಗಿಸು. (ನಾ.) ದೇಹದ ಬಗ್ಗಿದ ನಿಲುವು; ಬಗ್ಗಿರುವುದು; (ಪ್ರಾಚೀ. ಪ್ರ.) (ಗಿಡುಗ, ಮೊ. ಗಳ) ಎರಗು, ಸರ್ರನೆ ಇಳಿತ.

Stoop² (ನಾ.) =Stoup (ಆ ಪದ ನೋಡಿ)

Stoop³ ಸ್ಟೂಪ್ (ನಾ.) (ಅಮೆ. ಸಂ., ಕೆನಡ) ಮನೆಯ ಮುಂದಣ (ಚಾವಣಿಯಿಲ್ಲದ) ಜಗಲಿ.

Stop ಸ್ಟಾಪ್ (ಕ್ರಿ.) (ಕಂಡಿಯನ್ನು ಬೆಣೆಯಿಂದ, ಏನನ್ನಾದರೂ ತುರುಕಿ) ಮುಚ್ಚು, ಮುಚ್ಚಿಬಿಡು (*Up* ಸಹ); (ಹೋಗದಂತೆ, ಓಡಾಟ, ಹರಿದಾಟ) ತಡೆ(ಗಟ್ಟು), ಅಡ್ಡಗಟ್ಟು; ಬಂಧಿಸು; ಬಂದುಮಾಡು; (ರಕ್ತಸ್ರಾವವನ್ನು ನಿಲ್ಲಿಸು, ತಡೆ; (ಚಲನೆ, ಕೊಡುವುದು, ಮೊ. ನ್ನು) ನಿಲ್ಲಿಸು, ನಿಲ್ಲಿಸಿಬಿಡು [S. a leak, hole. Stopped pipe (ಆರ್ಗನ್ ವಾದ್ಯದಲ್ಲಿ) ಕೆಳಗಿನ ಅಷ್ಟಮ ಸ್ವರ ಕೊಡುವಂತೆ ಮೇಲಿನ ಬಾಯಿಯನ್ನು ಗಿಡಿದು ಮುಚ್ಚಿರುವ ನಾದಕೊಳವೆ: ಬಾಯಿಮುಚ್ಚಿದ ನಾದಕೊಳವೆ. S. one's ears (ಬೆರಳುಗಳಿಂದ) ಕಿವಿ ಮುಚ್ಚಿಕೊ; (ರೂಪ.) ಕಿವಿಗೊಡದಿರು, ಕೇಳಲು ನಿರಾಕರಿಸು. S. a tooth (ಚಿನ್ನ, ಸಿಮೆಂಟು, ಮೊ. ಗಳಿಂದ) ಹಲ್ಲಿನ ಕುಳಿ ತುಂಬು, ಹಲ್ಲು ತುಂಬು. S. a wound (ಗಾಯದ) ರಕ್ತಸ್ರಾವ ನಿಲ್ಲಿಸು. S. one's mouth (ರೂಪ.) (ವಿಷಯವೆತ್ತದಂತೆ, ಲಂಚ, ಮೊ. ಗಳಿಂದ) ಬಾಯಿ ಮುಚ್ಚಿಸು. S. a gap (Gap ನೋಡಿ). S. the way ದಾರಿ ಕಟ್ಟು, ಅಡ್ಡಗಟ್ಟು. S. horse (ಓಡಿಹೋಗುತ್ತಿರುವ) ಕುದುರೆಯನ್ನು ಹಿಡಿದು ನಿಲ್ಲಿಸು. S. ball (ಕ್ರಿಕೆಟ್) ದಾಂಡಿನಿಂದ, ಆಟ ಕಾಯುತ್ತ, —ಚೆಂಡು ತಡೆ, ನಿಲ್ಲಿಸು. S. thief! (ಕಳ್ಳನನ್ನು ಅಟ್ಟಿಕೊಂಡು ಹೋಗುವವನ ಕೂಗು): ಕಳ್ಳನನ್ನು ತಡೆಯಿರಿ, ನಿಲ್ಲಿಸಿರಿ! S. blow (ಮುಷ್ಟಿ ಕಾಳಗದಲ್ಲಿ) ಏಟು ತಪ್ಪಿಸಿಕೊ, ತಡೆ. S. blow with one's head (ಹಾಸ್ಯ ಪ್ರ.) ಏಟಿಗೆ ತಲೆ ಕೊಡು. S. a bullet ಗುಂಡಿನೇಟು ತಿನ್ನು. S. one's breath ಒಬ್ಬನ ಉಸಿರಡಗಿಸು; ಉಸಿರು ಕಟ್ಟಿಸಿ ಕೊಲ್ಲು. S. clock, factory ಗಡಿಯಾರ, ಕಾರಖಾನೆ, —ನಿಲ್ಲಿಸು. S. person's do*ing*, person *from doing* (—ಮಾಡುವುದನ್ನು, ಮಾಡದಂತೆ) ತಡೆ, ನಿಲ್ಲಿಸು. Shall s. that nonsense ಆ ಅವಿವೇಕವನ್ನು ನಿಲ್ಲಿಸುತ್ತೇನೆ, ತಡೆದುಬಿಡುತ್ತೇನೆ. Shall s. your wages, meetings. The cost must be stopped out of his salary ಬೆಲೆಯನ್ನು ಅವನ ಸಂಬಳದಲ್ಲಿ ಹಿಡಿಯಬೇಕು. S. payment of a cheque (ಬ್ಯಾಂಕಿಗೆ ನಿರ್ದೇಶ): ಚೆಕ್ಕಿಗೆ ಹಣ ಕೊಡದೆ ನಿಲ್ಲಿಸಿ. S. payment (ಗಿರಾಕಿಗಳಿಗೆ) ಪಾವತಿ ನಿಲ್ಲಿಸಿಬಿಡು; ದಿವಾಳಿಯಾಗು. Why has our water been stopped? ನಮ್ಮ ನೀರು ಸರಬರಾಯಿಯನ್ನು ಏಕೆ ನಿಲ್ಲಿಸಿದ್ದಾರೆ, ತಡೆದಿದ್ದಾರೆ?]. (ಸಂ.) ಸ್ವರ ಸ್ಥಾಯಿ ಬದಲಾಯಿಸುವಂತೆ (ವಾದ್ಯದ ತಂತಿಯನ್ನು) ಒತ್ತು, ಒತ್ತಿಹಿಡಿ, (ಗಾಳಿವಾದ್ಯದ ರಂಧ್ರವನ್ನು) ಮುಚ್ಚು, ಗಿಡುಗು; ಹೀಗೆ ಒತ್ತಿ, ಮುಚ್ಚಿ, —ಸ್ವರ ಸ್ಥಾಯಿ ಬದಲಾಯಿಸು. ನಿಲ್ಲು, ನಿಂತುಹೋಗು; ಮಾಡದೆ, ಆಡದೆ, —ಬಿಡು, ತಡೆ (Noise, annuity, stops. Do not s. ನಿಲ್ಲಿಸಬೇಡ, ನಿಲ್ಲಬೇಡ, ಮುಂದುವರಿ. S. dead *or* short ಥಟ್ಟನೆ ನಿಂತುಬಿಡು, ನಿಂತುಹೋಗು). (ಬಳ. ಮಾ.) ಇರು, ಉಳಿ, ತಂಗು, ಇಳಿದುಕೊಂಡಿರು (Have been stopping in Bangalore with friends. Shall s. in bed ಹಾಸಿಗೆಯಲ್ಲಿರುತ್ತೇನೆ. S. up ಎದ್ದು ಕುಳಿತಿರು; ಮಲಗಲು ಹೋಗದಿರು). ವಿರಾಮ ಚಿಹ್ನೆಗಳನ್ನು ಹಾಕು (A badly spelt & stopped letter). (ನಾವೆ) (ಹೊರಜಿ, ಮೊ. ನ್ನು) ತಡೆಕಟ್ಟಿನಿಂದ ಬಂಧಿಸು, ಬಿಗಿದು ಕಟ್ಟು; (ಹಡಗನ್ನು) ಲಂಗರು ಹಾಕಿ ನಿಲ್ಲಿಸು. S. out (ಕೊರೆತ: ಆಮ್ಲದಿಂದ ರಕ್ಷಿಸಬೇಕಾದ ಭಾಗಗಳನ್ನು) ರಕ್ಷಕ ತೊಡೆದು ಮುಚ್ಚು (Stopping brush ರಕ್ಷಕತೊಡೆಯುವ ಕುಂಚ). S. down (ಛಾಯಾಚಿತ್ರ: ಲೆನ್ಸಿನ ಬೇಡವಾದ ಭಾಗವನ್ನು) ಕಂಡಿಬಿಲ್ಲೆಯಿಂದ ಮುಚ್ಚು, ಮರೆಮಾಡು. (ಎರಕ ಹೊಯ್ಯುವುದು: ಅಚ್ಚಿನ ಬೇಡವಾದ ಭಾಗವನ್ನು) ಮರಳಿನಿಂದ ತುಂಬು, ಮುಚ್ಚು. **Stóppage** (ನಾ.); **Stópper** (ನಾ., ಕ್ರಿ. ಸಕ.) (ಕ್ರಿಯಾರ್ಥಗಳಲ್ಲಿ); (ಸೀಸೆಯನ್ನು ಮುಚ್ಚುವ) ಬಿರಡೆ [Put a s. on (something) (—ನ್ನು) ನಿಲ್ಲಿಸು, ಕೊನೆಗಾಣಿಸು; ಬಿರಡೆ ಹಾಕು. Tobacco-s. ಚುಂಗಾಣಿಯ ಬಾಯಿಯಲ್ಲಿ ತಂಬಾಕನ್ನು ಗಿಡಿಯುವ ಸಲಕರಣೆ: ತಂಬಾಕು ಗಿಡುಕ]; (ನಾವೆ) ಹೊರಜಿಯನ್ನು ತಡೆಯುವುದಕ್ಕೂ ಹಿಡಿದುಕೊಳ್ಳುವುದಕ್ಕೂ ಸಾಧನವಾದ ಹಗ್ಗ, ಹಿಡಿಕೆ: ತಡೆ—ಕಟ್ಟು, ಹಿಡಿಕೆ [S.-bolt (ಹಡಗಿನ ಅಟ್ಟದಲ್ಲಿ) ತಡೆಹಿಡಿಕೆಗಳನ್ನು ಕಟ್ಟುವ ಉಂಗುರಮೊಳೆ. S.-knot ತಡೆಹಿಡಿಕೆ ಹಗ್ಗದ (ತುದಿಯ ಎಳೆಗಳನ್ನು ಹೆಣೆದು ಮಾಡಿದ) ಜಡೆಕಟ್ಟು]. (ಕ್ರಿ.) ಬಿರಡೆಯಿಂದ —ಮುಚ್ಚು, ಭದ್ರಪಡಿಸು. **Stópping** (ನಾ.) (ಕ್ರಿಯಾರ್ಥಗಳಲ್ಲಿ); ಹಲ್ಲುಕುಳಿ ತುಂಬಲು ಉಪಯೋಗಿಸುವ, (ಚಿನ್ನ, ಅಮ್ಯಾಲ್ಗಂ ಲೋಹ, ಸಿಮೆಂಟು, ಮೊ. ಗಳ) ಪದಾರ್ಥ. **Stópple** ಸ್ಟಾಪ್ಲ್ (ನಾ., ಕ್ರಿ. ಸಕ.) (ಸೀಸೆಯ ಅಥವಾ ಇತರ ಪಾತ್ರೆಯ) ಬಿರಡೆ. (ಕ್ರಿ.) —ಇಂದ ಮುಚ್ಚು.

Stop (ನಾ.) ನಿಲ್ಲುವುದು, ನಿಲ್ಲಿಸುವುದು, ನಿಲುಗಡೆ; ತಡೆ(ತ); ತಡೆಗಟ್ಟು; ಅಡ್ಡಿ, ಪ್ರತಿಬಂಧಕ; ಭಂಗ, ವಿಚ್ಛೇದ; ನಿಲ್ಲಡೆ (Put a s. to ಕೊನೆಗಾಣಿಸು, ನಿಲ್ಲಿಸು, ನಿಲ್ಲಿಸಿಬಿಡು. Bring to a s.;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Is at a s. ಮುಂದುವರಿಯುತ್ತಿಲ್ಲ; ನಿಂತುಹೋಗಿದೆ. Train runs from London to Crewe without a s.); ವಿರಾಮ ಚಿಹ್ನೆ [ಮು., ಅಲ್ಪ ವಿರಾಮ, ಅರ್ಧ ವಿರಾಮ, ವಿವರಣ ವಿರಾಮ, ಮತ್ತು ಪೂರ್ಣ ವಿರಾಮ. Full s. ಪೂರ್ಣ ವಿರಾಮ. Come to a full s. (ರೂಪ.) ಪೂರ್ತಿಯಾಗಿ ನಿಂತುಹೋಗು]. (ಸಂ.) ವಾದ್ಯದಲ್ಲಿ ರಂಧ್ರ ಮುಚ್ಚುವುದು, ತಂತಿ ಒತ್ತುವುದು, ಮೊ. ಗಳಿಂದ ಉಂಟಾದ ಸ್ಥಾಯಿಯ (ಅಥವಾ ಸ್ವರದ, ಅಥವಾ ಶ್ರುತಿಯ) ಬದಲಾವಣೆ: ಸ್ಥಾಯಿ ವ್ಯತ್ಯಾಸ; (ಇದಕ್ಕಾಗಿ ವಾದ್ಯದಲ್ಲಿರುವ) ಮೆಟ್ಟಿಲು, ಕೀಲಿ (ಬಿರಡೆ), ಸನ್ನೆ ಸಲಕರಣೆ; (ಆರ್ಗನ್ ವಾದ್ಯದಲ್ಲಿ) ವಿಶೇಷ ಧ್ವನಿಯ ಕೊಳವೆಗಳ ತಂಡ; ಇವುಗಳನ್ನು ನುಡಿಸುವ, ನಿಲ್ಲಿಸುವ, —ಕೀಲಿ, ಹಿಡಿ (ಗುಬಟು); (ರೂಪ.) ನಿರ್ದಿಷ್ಟ ಪ್ರಭಾವಕ್ಕಾಗಿ ಅನುಸರಿಸುವ ಭಾಷಣ ರೀತಿ: ಸ್ವರ (He can put on or pull out the pathetic, blustering, s. at will ತನಗೆ ಇಷ್ಟಬಂದಂತೆ ಕರುಣೆಯ, ಅಬ್ಬರದ, —ಸ್ವರವನ್ನು ಎಳೆಯಬಲ್ಲನು); ಗೊತ್ತಾದ ಸ್ಥಾನದಲ್ಲಿ ಒಂದರ ಚಲನೆಯನ್ನು ನಿಲ್ಲಿಸಲು ಉಪಯೋಗಿಸುವ ಮರದ ಪಟ್ಟಿ, ಗೂಟ, ಮೊ. ವು: ತಡೆ—ಪಟ್ಟಿ, ಗೂಟ. (ದೃ. ವಿ., ಛಾಯಾಚಿತ್ರ) ಕಂಡಿ ಬಿಲ್ಲೆ; (ಭಾಷಾ ಧ್ವನಿಶಾಸ್ತ್ರ) ಸಂಪೂರ್ಣ ಶ್ವಾಸ ನಿರೋಧದಿಂದ ಉಚ್ಚರಿಸುವ ವ್ಯಂಜನ (ಶಬ್ದ): ಮೂಕ ವ್ಯಂಜನ (ಉದಾ., k, t, p). (ನಾವೆ) ಕಟ್ಟುವ ಸಣ್ಣ ಹುರಿ; (ಕೆಳ) ಪಟಸ್ತಂಭದ ಮೇಲಿರುವ, ಮತ್ತೊಂದು ಸಲಕರಣೆಗೆ ಆಧಾರವಾಗಿರುವ ಅಥವಾ ಅದು ಜಾರದಂತೆ ತಡೆಯುವ ಹುರಿಯ ಸುತ್ತುಕಟ್ಟು ಅಥವಾ ಚಾಚು: ತಡೆ—ಸುತ್ತು ಕಟ್ಟು, ಚಾಚು. **Stópless** (ಗು.)

Stop- (ಸ. ಪೂ. ಪ.) ತಡೆ—. **Stópcock** ಹೊರಗಡೆಯಿಂದ ತಿರುಗಿಸಿ ಒಳಗಿನ ಹರಿವನ್ನು ನಿಯಂತ್ರಿಸಲು ಅನುಕೂಲವಿರುವಂತೆ ಕೊಳವೆಯ ಒಳಗಡೆ ಅಳವಡಿಸಿರುವ ಕವಾಟ: ನಿಲುಬಿರಡೆ. **S.-collar** ಚಾಲಕ ದಂಡದ ಚಲನೆಯನ್ನು ತಡೆಯುವ ಬಳೆ: ತಡೆ ಬಳೆ. **S.-cylinder** ಒಂದು ಬಗೆಯ ಮುದ್ರಣ ಯಂತ್ರ. **S.-drill** ಇಳಿಯುವ ಆಳವನ್ನು ಪರಿಮಿತಿಗೊಳಿಸುವ ಬಳೆಯುಳ್ಳ ಬೈರಿಗೆ: ತಡೆ ಬೈರಿಗೆ. **Stópgap** ತಾತ್ಕಾಲಿಕ ಬದಲಿ (ಏರ್ಪಾಟು, ಸಾಧನ). **S.-knob** (ಆರ್ಗನ್ ವಾದ್ಯದಲ್ಲಿ) ನಾದಕೊಳವೆ ತಂಡವನ್ನು ನುಡಿಸುವ, ನಿಲ್ಲಿಸುವ, ಹಿಡಿ(ಗುಬಟು). **S.-order** (ಪತ್ರವ್ಯಾಪಾರ) ಗೊತ್ತು ಮಾಡಿದ ಬೆಲೆ ಮುಟ್ಟುವವರೆಗೂ ತಡೆದಿದ್ದು, ಮುಟ್ಟಿದಾಗ ಕೊಳ್ಳುವಂತೆ ಅಥವಾ ಮಾರುವಂತೆ ದಳ್ಳಾಳಿಗೆ ಕೊಟ್ಟ ನಿರೂಪ: ಪತ್ರ ಮಾರಾಟದ ತಡೆನಿರೂಪ. **S.-plate** ಅಕ್ಷದ ಚಲನೆ ಅದನ್ನು ದಾಟಿಹೋಗದಂತೆ ಪರಿಮಿತಿಗೊಳಿಸುವ ಫಲಕ: ತಡೆಫಲಕ. **S.-press** ಪತ್ರಿಕೆಯ ಮುದ್ರಣಕ್ಕೆ ಪ್ರಾರಂಭವಾದಮೇಲೆ ಯಂತ್ರವನ್ನು ನಿಲ್ಲಿಸಿ ಸೇರಿಸಿದ (ಸುದ್ದಿ): ಅಚ್ಚುಹೊತ್ತಿನ, ತಡೆಯಚ್ಚಿನ, (—ಸುದ್ದಿ). **S.-valve** ನಳಿಕೆಯಲ್ಲಿ ದ್ರವದ ಹರಿವನ್ನು ನಿಲ್ಲಿಸಿಬಿಡುವ ಕವಾಟ: ತಡೆಕವಾಟ. **S.-watch** ತತ್‌ಕ್ಷಣದಲ್ಲಿ ನಡೆಯುವಂತೆ ಅಥವಾ ನಿಲ್ಲುವಂತೆ ಮಾಡುವ ಯಂತ್ರಸಾಧನವುಳ್ಳ ಗಡಿಯಾರ: ನಿಲ್ಗಡಿಯಾರ (ಕುದುರೆ ಪಂದ್ಯ, ಮೊ. ಗಳಲ್ಲಿಯೂ, ವೈಜ್ಞಾನಿಕ ಪ್ರಯೋಗಗಳಲ್ಲಿಯೂ ಉಪಯೋಗಿಸುವರು)

Stópper, Stópple. Stop (ಕ್ರಿ.) ನೋಡಿ.

Stórage. Store ನೋಡಿ.

Stórax ಸ್ಟೋರ್ಯಾಕ್ಸ್ (ನಾ.) ಔಷಧಗಳಲ್ಲಿಯೂ ಪರಿಮಳದ್ರವ್ಯಗಳಲ್ಲಿಯೂ ಉಪಯೋಗಿಸುತ್ತಿದ್ದ ಒಂದು ಸುವಾಸನೆಯ ಗೋಂದು: ಗುಗ್ಗುಲ; —ದ ಮರ. Liquid s. ಪೂರ್ವ ದೇಶಗಳ ಸುವಾಸನೆಯ ಗೋಂದು ಮರದಿಂದ ದೊರೆಯುವ ಒಂದು ಗುಗ್ಗುಲ.

Store ಸ್ಟೋರ್ (ನಾ., ಕ್ರಿ.) (ಬಳಸುವುದಕ್ಕೆ ಇಟ್ಟುಕೊಂಡಿರುವ) ದಾಸ್ತಾನು, ಸಂಗ್ರಹ, ಸಂಚಯ, ಭಂಡಾರ, ಕಣಜ, ಉಗ್ರಾಣ; ಸಮೃದ್ಧಿ, ಪುಷ್ಕಳತೆ [Starving in the midst of s. ಸಮೃದ್ಧಿಯ ಮಧ್ಯದಲ್ಲಿ ಉಪವಾಸ ಸಾಯುತ್ತ. Has s., good s., a s., *or* stores of wine, wit. In s. ಸಿದ್ಧವಾಗಿಟ್ಟಿರುವ, ಕಾದಿಟ್ಟಿರುವ, ಬರಲಿರು(ವ), ಆಗಲಿರು(ವ) (I have, tomorrow has, a surprise in s. for you ನಿನಗಾಗಿ ಒಂದು ಆಶ್ಚರ್ಯಕರ ಸಂಗತಿ ಕಾದಿರಿಸಿದ್ದೇನೆ; ನಾಳೆ ಒಂದು ಆಶ್ಚರ್ಯಕರ ಸಂಗತಿ ನಿನಗೆ ಕಾದಿದೆ)]. ಪದಾರ್ಥಗಳನ್ನು ಮಾರಾಟಕ್ಕೆ ಇಟ್ಟಿರುವ ಸ್ಥಳ: ಅಂಗಡಿ, ಭಂಡಾರ (Khadder s. ಖಾದಿ ಭಂಡಾರ); (ಮು., ಅಮೆ. ಸಂ.) ಸಾಮಾನ್ಯ ಅಂಗಡಿ (S. cloth ಹೊಲದಿಟ್ಟಿರುವ, ಸಿದ್ಧ, —ಉಡುಪುಗಳು. Book-s. ಪುಸ್ತಕದ—ಅಂಗಡಿ, ಮಳಿಗೆ). (ಬ್ರಿಟನ್) ಬಗೆಬಗೆಯ ಸರಕುಗಳನ್ನು (ಸಾ., ನಗದಾಗಿ, ಕಡಮೆ ಬೆಲೆಗೆ) ಮಾರುವ ದೊಡ್ಡ ವ್ಯಾಪಾರ ಸಂಸ್ಥೆ [The stores (ಸಾಮಾನ್ಯ ಅಂಗಡಿಗಳಿಗೆ ವಿರುದ್ಧವಾಗಿ) ಗಡಂಗು, ಮಳಿಗೆ (I get most things at the stores. Co-operative s. *or* stores ಸಹಕಾರದ ಮಳಿಗೆ). Army & Navy stores (ನಿರ್ದಿಷ್ಟ ಅರ್ಹತೆಯುಳ್ಳ ಸದಸ್ಯರಿಗೆ ಮಾತ್ರ ಸರಕುಗಳನ್ನು ಮಾರುವ) ಸೈನಿಕ ಮತ್ತು ನಾವಿಕ ವ್ಯಾಪಾರ ಸಂಸ್ಥೆ]. ಒಂದು ಗೊತ್ತಾದ ಬಗೆಯ ಅಥವಾ ಒಂದು ವಿಶೇಷ ಉಪಯೋಗದ ಸರಕುಗಳು, ಸರಕುಗಳ ದಾಸ್ತಾನು; ಬೇಕಾದ ಸರಕುಗಳ ಸರಬರಾಯಿ [Military, naval, stores ಸೈನ್ಯ, ನೌಕಾ, —ಸಾಮಗ್ರಿ. Marine stores (Marine ನೋಡಿ)]. ಮುಂದಿನ ಉಪಯೋಗಕ್ಕಾಗಿಟ್ಟಿರುವ, ಕೈಗಾವಲಿನ (S. cattle ಕೊಬ್ಬಿಸಲು ಇಟ್ಟಿರುವ ದನ). Set s. by ಅಮೂಲ್ಯವಾದುದೆಂದು, ಮುಖ್ಯವಾದುದೆಂದು, —ಎಣಿಸು (Set no great s. by). [**Stórehouse** ಉಗ್ರಾಣ, ಕೋಠಿ, ಭಂಡಾರ (ರೂಪ. ಸಹ: Person, book, is a s.-h, of information). **S.-keeper** ಉಗ್ರಾಣಿಕ; (ಅಮೆ. ಸಂ.) ಅಂಗಡಿಯವನು. **S.-room** (ಮನೆಯ) ಉಗ್ರಾಣ. **S.-ship** ಹಡಗು ಪಡೆ, ದುರ್ಗ ರಕ್ಷಕ ಸೈನ್ಯ, ಮೊ. ಗಳಿಗೆ ಸಾಮಾನು ಸರಬರಾಯಿ ಕೊಂಡೊಯ್ಯುವ ಹಡಗು: ಸರಬರಾಯಿ ಹಡಗು]. (ಕ್ರಿ.) ತುಂಬು, ತುಂಬಿಕೊ, ಒದಗಿಸು, ಒದಗಿಸಿಕೊ, ಶೇಖರಿಸು, ಶೇಖರಿಸಿಕೊ (*With* ಉಪ. ಜೊಡನೆ ಸಹ) (S. your mind with facts. A well-stored memory ಚೆನ್ನಾಗಿ ತುಂಬಿದ ಜ್ಞಾಪಕ); (ಮುಂದಿನ ಉಪಯೋಗಕ್ಕೆ) ಕೂಡಿಡು, ಸಂಗ್ರಹಿಸಿಡು, ತುಂಬಿಡು, ದಾಸ್ತಾನಿಡು (*Up* ಉಪ. ಜೊಡನೆ ಸಹ) (Harvest has been stored ಬೆಳೆಯನ್ನು ಕಣಜದಲ್ಲಿ ತುಂಬಿಟ್ಟಿದೆ. S. up a saying in one's heart ಸೂಕ್ತಿಯನ್ನು ಹೃದಯದಲ್ಲಿ ಕೂಡಿಟ್ಟುಕೊ). (ಪೀಠೋಪಸ್ಕರ, ಮೊ. ನ್ನು) ತಾತ್ಕಾಲಿಕವಾಗಿ ಗಡಂಗಿನಲ್ಲಿ, ಮಳಿಗೆಯಲ್ಲಿ, —ಹಾಕಿಡು; (ಪಾತ್ರೆ, ಮೊ. ವು) ಒಳಕೊಳ್ಳು, ಹಿಡಿ, ಸಂಗ್ರಹಾವಕಾಶವಿರು (A single cell can s. 2,000,000 foot-pounds of energy). **Stórable** (ಗು.); **Stórage** ಸ್ಟೋರೇಜ್ (ನಾ.) (ಸರಕನ್ನು) ಕೂಡಿಡುವುದು; ಶೇಖರಣೆ; ಸಂಗ್ರಹಣ (ವಿಧಾನ) (Cold s. ಶೀತಕ ಯಂತ್ರ, ಮೊ. ಗಳಲ್ಲಿಯ ಶೇಖರಣೆ: ತಂಪುಗೂಡು, ಶೀತ ಶೇಖರಣೆ). ಕೂಡಿಡಲು ಇರುವ ಸ್ಥಳ, ಅವಕಾಶ; ಉಗ್ರಾಣಸ್ಥಳ, ಶೇಖರಸ್ಥಳ; ಕೋಠಿಯ, ಉಗ್ರಾಣದ, —ಬಾಡಿಗೆ, ವೆಚ್ಚ. S. battery ಹೊರಗಿನ ಮೂಲದಿಂದ ಒದಗಿಸಿದ ವಿದ್ಯುತ್ತಿನಿಂದ ರಾಸಾಯನಿಕ ಕ್ರಮದಲ್ಲಿ ವಿದ್ಯುದ್‌ಬಲವನ್ನು ಶೇಖರಿಸಿಕೊಂಡು ಅದನ್ನು ಹೊರ ಹರಿಸುವ ಸಾಮರ್ಥ್ಯವುಳ್ಳ ವಿದ್ಯುತ್ ಸಂಗ್ರಹಣ: ವಿದ್ಯುತ್ ಸಂಚಯನ ಕೋಶ.

Stórey ಸ್ಟೋರಿ (ಬ. ವ. -eys), **Story**[1] (ನಾ.) (ಮನೆಯ) ಅಂತಸ್ತು, ಮಹಡಿ, ಉಪ್ಪರಿಗೆ [A house of seven storeys. Upper s. *or* storeys (ರೂಪ.) ಮಿದುಳು, ತಲೆ (Is a little wrong in the upper s. ಮಿದುಳು, ತಲೆ, —ಸ್ವಲ್ಪ ಕೆಟ್ಟಿದೆ)]. S.-post ಮಹಡಿ ಅಥವಾ ಗೋಡೆ ಯಾವ ದೂಲದಮೇಲೆ ನಿಂತಿರುವುದೋ ಆ ದೂಲಕ್ಕೆ ಆಧಾರವಾದ ನಿಲುಗಂಬ: ಮಹಡಿಯ ಆಧಾರ ಕಂಬ **(-)storeyed, storied**[1] (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Stóriated ಸ್ಟೋರಿಯೇಟೆಡ್ (ಗು.) (ಹೆಸರು, ಪುಟ, ಮೊ. ಗಳ ವಿಷಯದಲ್ಲಿ) (ಚರಿತ್ರ) ಚಿತ್ರಾಲಂಕೃತ.

Stóried[1]. **Storey** ನೋಡಿ.

Stóried[2]. **Story**[2] ನೋಡಿ.

Stork ಸ್ಟಾರ್ಕ್ (ನಾ.) ಕೊಕ್ಕರೆ, ಬಕ (ಪಕ್ಷಿ), ಬೆಳ್ಳಕ್ಕಿ (ಹೆರನ್ ಜಾತಿಗೆ ಸೇರಿದ, ಎತ್ತರವೂ ಗಂಭೀರವೂ ಜಲಸಂಚಾರಿಯೂ ಆದ, ಅವುಗಳಲ್ಲಿ ಪ್ರಸಿದ್ಧ ವಂಶದವು ರೆಕ್ಕೆಯ ಕಪ್ಪು ತುದಿಗಳು, ಕೊಕ್ಕು ಮತ್ತು ಕಾಲುಗಳ ಕೆಂಪು—ಇವುಗಳ ಹೊರತು ಉಳಿದ ಭಾಗವೆಲ್ಲ ಶುದ್ಧ ಬಿಳುಪಾಗಿರುವ, ಅರ್ಧಪಳಗಿದ, ಮತ್ತು ಕಟ್ಟಡಗಳಮೇಲೆ ಗೂಡುಗಳನ್ನು ಕಟ್ಟಿಕೊಂಡು ವಾಸಿಸುವ, ತನ್ನ ಮರಿಗಳಲ್ಲಿ ಮತ್ತು ತಂದೆತಾಯಿಗಳಲ್ಲಿ ವಿಶೇಷ ಪ್ರೀತಿಯನ್ನಿಟ್ಟಿರುವುದೆಂದು ಪ್ರತೀತಿಯಿರುವ ಒಂದು ಬಗೆಯ ಹಕ್ಕಿ) [King s. (King ನೋಡಿ. ಅದರ ಕೆಳಗೆ King Log ಸಹ ನೋಡಿ). S.'s-bill ಹಲವು ನನ್ಯಜಾತಿ]

Storm ಸ್ಟಾರ್ಮ್ (ನಾ.) ಗುಡುಗು ಮತ್ತು ಬಲವಾದ ಗಾಳಿ ಅಥವಾ ಭಾರಿ ಮಳೆ ಅಥವಾ ಹಿಮ ಅಥವಾ ಆಲಿಕಲ್ಲುಗಳಿಂದ ಕೂಡಿದ ವಾಯುಮಂಡಲದ ಕ್ಷೋಭೆ: ಬಿರುಗಾಳಿ (ಮಳೆ); ಚಂಡ ಮಾರುತ; ಝುಂಝಾಮಾರುತ (Cyclonic s. ಸುಂಟರ ಬಿರುಗಾಳಿ; ಆವರ್ತ ಚಂಡ ಮಾರುತ. Thunder, rain, snow, wind, s. ಸಿಡಿಲ ಬಿರುಗಾಳಿ, ಮಳೆ ಬಿರುಗಾಳಿ, ಮಂಜು ಬಿರುಗಾಳಿ, ಬೀರು ಬಿರುಗಾಳಿ. S. in a tea-cup ಅಲ್ಪ ವಿಚಾರಕ್ಕೆ ಕೋಲಾಹಲ; ನಣ್ಣ ಸಂಗತಿಗೆ ದೊಡ್ಡ ರೇಗಾಟ). ಮನುಷ್ಯ ವಿಚಾರಗಳ ಸ್ಥಿರ ವ್ಯವಸ್ಥೆಯಲ್ಲಿ ಬಲವಾದ ಸಂಕ್ಷೋಭೆ; ಅಲ್ಲಕಲ್ಲೋಲ; ಕೋಲಾಹಲ; ಚಳವಳಿ; ಯುದ್ಧ, (ಶತ್ರುಗಳ) ದಂಡಯಾತ್ರೆ; ವ್ಯಾಜ್ಯ [S. & stress (ಒಬ್ಬ ಮನುಷ್ಯನ ಅಥವಾ ಜನಾಂಗದ ಜೀವನದಲ್ಲಿ) ಕಳವಳ ಗಲಬಿಲಗಳ ಕಾಲ; ಮಹಾ ಕ್ಷೋಭೆಯ ಅಶಾಂತಿಯ ಕಾಲ]. ಕ್ಷಿಪಣಿಗಳ, 'ಹಿಸ್' ಎಂಬ (ತಿರಸ್ಕಾರ) ಧ್ವನಿಗಳ, ಮೆಚ್ಚಿಕೆಯ, ರೇಗಾಟದ, —ಬಿರುಮಳೆ. (ಕೋಟೆಯಮೇಲೆ) ಪದಾತಿ ಸೈನ್ಯದ ನೇರ ಲಗ್ಗೆ; ನೇರ ಲಗ್ಗೆಯಿಂದ —ಕೋಟೆ ಹಿಡಿಯುವುದು, ದುರ್ಗದ ಸಾಧನೆ [Take by s. ಲಗ್ಗೆ ಹತ್ತಿ ಸಾಧಿಸು. (ರೂಪ.) ಕ್ಷಿಪ್ರದಲ್ಲಿ (ವ್ಯಕ್ತಿಯನ್ನು, ಶ್ರೋತೃಗಳನ್ನು) ಮುಗ್ಧಗೊಳಿಸು, ಮರುಳುಮಾಡು]. **S.-beaten** ಬಿರುಗಾಳಿ (ಮಳೆ) ಯಿಂದ ಛಿದ್ರವಾಗಿಹೋದ (ರೂಪ. ಸಹ). **S.-belt** ಬಿರುಗಾಳಿಯ—ಪ್ರಾಂತ, ವಲಯ. **S.-bird** = Stormy petrel (Stormy ನೋಡಿ). **S.-bound** ಬಿರುಗಾಳಿ ಮಳೆಯ ದೆಸೆಯಿಂದ ಬಂದರು ಬಿಡಲಾಗದ, ಪ್ರಯಾಣ ಮುಂದುವರಿಸಲಾಗದ: ಬಿರುಗಾಳಿ ಮಳೆಯಿಂದ ತಡೆದಿರುವ. **S.-card** ಬಿರುಗಾಳಿಗೆ ಸಿಕ್ಕಿರುವ ಹಡಗಿನ ನಾವಿಕನು, ಆ ಬಿರುಗಾಳಿಯ ಕೇಂದ್ರವನ್ನು ತಿಳಿದುಕೊಂಡು ಅದರ ಳಿವಳಿಕೆಯಿಂದ ಹಡಗಿನ ಮಾರ್ಗವನ್ನು ಬದಲಾಯಿಸಿಕೊಳ್ಳಲು ಸಹಾಯಕವಾದ ನಕ್ಷೆ, ರೇಖಾಪಟ: ಬಿರುಗಾಳಿಯ—ನಕ್ಷೆ, (ರೇಖಾ)ಪಟ. **S.-centre** ಸುಂಟರ ಬಿರುಗಾಳಿಯಲ್ಲಿ ಗಾಳಿ ಯಾವುದರ ಕಡೆಗೆ ಆವರ್ತವಾಗಿ ಒಳ ಮುಖಕ್ಕೆ ಬೀಸುವುದೊ ಆ ಕೇಂದ್ರ: ಬಿರುಗಾಳಿಯ ಕೇಂದ್ರ; (ರೂಪ.) ಚಳವಳಿಯ, ಕ್ಷೋಭೆಯ, —ಕೇಂದ್ರ, ಸ್ಥಾನ. **S.-cloud** (ಬಿರುಮಳೆಯ ಬೆದರಿಕೆ ಸೂಚಿಸುವ) ಭಾರಿ ಮಳೆಮೋಡ; (ರೂಪ.) ಗಲಭೆ ಗೊಂದಲಗಳ —ಸಂಭವ ಸೂಚಕ ಸ್ಥಿತಿ, ಕಾರ್ಮೋಡ. **S.-cock** ಕೆಲವು ಹಕ್ಕಿ ಜಾತಿಗಳು. **S.-cone** ಬಿರುಗಾಳಿಯ ಎಚ್ಚರಿಕೆಯಾಗಿ ಏರಿಸುವ, ಟಾರೆಣ್ಣೆ ಬಳಿದ ರಟ್ಟುಬಟ್ಟೆಯ ಶಂಕು: ಬಿರುಗಾಳಿ (ಸೂಚಕ) ಶಂಕು (ಉತ್ತರದ ಕಡೆ ಎಂಬುದಕ್ಕೆ ಮೇಲ್ಮುಖವಾಗಿಯೂ, ದಕ್ಷಿಣದ ಕಡೆ ಎಂಬುದಕ್ಕೆ ಕೆಳ ಮುಖವಾಗಿಯೂ ಏರಿಸುವರು). **S.-door** ವಿಷಮ ವಾಯುಸ್ಥಿತಿಯಲ್ಲಿಯೂ ಚಳಿಗಾಲದಲ್ಲಿಯೂ ಗಾಳಿ, ಚಳಿ, ಮಳೆ, ಮೊ. ನ್ನು ತಡೆಯಲು ಇಟ್ಟಿರುವ ಹೆಚ್ಚಿನ ಹೊರ ಬಾಗಿಲು: ಬಿರುಗಾಳಿ (ಮಳೆ) ಬಾಗಿಲು. **S.-drum** ಬಹು ರಭಸದ ಬಿರುಗಾಳಿ ಮಳೆಯ ನಿರೀಕ್ಷಣೆಯ ಸೂಚಕವಾಗಿ ಬಿರುಗಾಳಿ ಶಂಕುವಿಗೆ ಸೇರಿಸುವ ರಟ್ಟುಬಟ್ಟೆಯ ಉರುಳೆ: ಬಿರುಗಾಳಿಯುರುಳೆ. **S.-finch** = Stormy petrel. **S.-glass** ಶಾಖ ವ್ಯತ್ಯಾಸಕ್ಕೆ ಅನುಗುಣವಾಗಿ ತನ್ನ ಸ್ವಚ್ಛತೆಯಲ್ಲಿ ವ್ಯತ್ಯಾಸ ಹೊಂದಿ ಆ ಮೂಲಕ ವಾಯುಸ್ಥಿತಿಯನ್ನು ಸೂಚಿಸುವಂತಹ ದ್ರಾವಣವನ್ನು ಒಳಕೊಂಡ, ಬಾಯಿ ಬೆಸೆದ, ಗಾಜಿನ ಕೊಳವೆ: ಬಿರುಗಾಳಿ (ಸೂಚಕ) ಕೊಳವೆ. **S.-petrel** = Stormy petrel. **S.-sail** ಸಾಧಾರಣ ವಾಯುಸ್ಥಿತಿಯಲ್ಲಿ ಉಪಯೋಗಿಸುವಂಥದಕ್ಕಿಂತ ಸಣ್ಣ ಆಕಾರದ, ಹೆಚ್ಚು ಗಡುಸು ಬಟ್ಟೆಯ ಪಟ: ಬಿರುಗಾಳಿ—ಪಟ, ಹಾಯಿ. **S.-signal** ಬಿರುಗಾಳಿ ಸೂಚಕ (ಬಿರುಗಾಳಿ ಶಂಕು, ಬಿರುಗಾಳಿಯುರುಳೆ, ಮೊ. ವು). **S.-tossed** ಬಿರುಗಾಳಿಯಿಂದ ಹೊಡೆದಾಡಲ್ಪಟ್ಟ (ರೂಪ. ಸಹ). **S.-troops** = Shock-troops (Shock[1] ನೋಡಿ). **S.-wind** ಬಿರು(ಮಳೆಯ) ಗಾಳಿ. **S.-window** ಬಿರುಗಾಳಿ (ಮಳೆಯ) ಕಿಟಕಿ (S.-door ನೋಡಿ). **S.-zone** = S.-belt. **Stórmless** (ಗು.); **Stórm-proof** (ಗು.) ಬಿರುಗಾಳಿ ಮಳೆಗೆ ತಡೆಯುವ. **Stórmy** (ಗು.) ಬಿರುಸಾದ, ರಭಸದ, ಉಗ್ರ, ಉರುಬಿನ, ಕ್ಷುಬ್ಧ (S. wind, sea, waves, passions, temper, abuse); ಬಿರುಗಾಳಿ ಮಳೆಯ ಹೊಡೆತಕ್ಕೆ ಸಿಕ್ಕಿದ, ಬಿರುಗಾಳಿಯಿಂದ ಕೂಡಿದ (A s. sea, coast, night); (ರೂಪ.) ಸಂಕ್ಷೋಭೆಯ, ಬಹಳ ಕೋಲಾಹಲದ, ಉರುಬಿನ (A s. debate, life); ಬಿರುಗಾಳಿ ಮಳೆಯ ಸಂಬಂಧವಾದ, ಬಿರುಗಾಳಿಯನ್ನು ಸೂಚಿಸುವ [S. petrel ಒಂದು ಬಗೆಯ ಕಡಲಹಕ್ಕಿ (ಅದರ ಹಾರಾಟ ಬಿರುಗಾಳಿ ಮಳೆಯ ಸೂಚಕವೆಂದು ಪ್ರತೀತಿ). (ರೂಪ.) ಕ್ಷೋಭಕಾರಿ, ಕ್ಷೋಭ ದೂತ. A s. sunset]. **Stórmily** (ಕ್ರಿ. ವಿ.); **Stórminess** (ನಾ.)

Storm (ಕ್ರಿ.) (ಗಾಳಿ, ಮಳೆ, ಮೊ. ಗಳ ವಿಷಯದಲ್ಲಿ) ಜೋರಾಗಿ, ಬಿರುಸಾಗಿ, —ಬೀಸು, ಹೊಡೆ; ಅಬ್ಬರಿಸು, ಭೋರ್ಗರೆ; ಆವೇಶಗೊಳ್ಳು; ಕೆರಳಿ ಮಾತಾಡು, ರೇಗಾಡು, ಅರ್ಭಟಿಸು, ಚಡಪಡಿಸು (*At* ಉಪ. ದೊಡನೆ); ಲಗ್ಗೆ ಹತ್ತಿ ಹಿಡಿ, ಲಗ್ಗೆ ಹತ್ತು (Storming party ಲಗ್ಗೆ ದಳ). **Stórmer** (ನಾ.) (ಕ್ರಿಯಾರ್ಥಗಳಲ್ಲಿ); ಲಗ್ಗೆ ದಳದವನು, ಲಗ್ಗೆಕಾರ.

Stórt(h)ing ಸ್ಟೋ(ಅ)ರ್ಟಿಂಗ್ (ನಾ.) ನಾರ್ವೆ ದೇಶದ ಶಾಸನ ಸಭೆ.

Story[1]. **Storey** ನೋಡಿ.

Stóry[2] ಸ್ಟೋ(ಅ)ರಿ (ನಾ.; ಬ. ವ., -ies —ರಿಸ್) (ಪ್ರಾಚೀ. ಪ್ರ.) ಇತಿಹಾಸ, ಚರಿತ್ರೆ (Versed in classic s. ಪುರಾತನ ಇತಿಹಾಸದಲ್ಲಿ ಪ್ರವೀಣನಾದ); (ವ್ಯಕ್ತಿಯ ಅಥವಾ ಸಂಸ್ಥೆಯ) (ಪೂರ್ವ) ಕಥೆ (His s. is an eventful one ಅವನ ಕಥೆ ವಿಶೇಷ ಘಟನೆಗಳಿಂದ ಕೂಡಿದ್ದು. In our rough island-s. ನಮ್ಮ ಒರಟು ದ್ವೀಪ ಕಥೆಯಲ್ಲಿ); (ಒಂದು ಘಟನೆ, ಮೊ. ಗಳ) ಕಥನ, ವಿವರಣೆ, ವೃತ್ತಾಂತ, ಹೇಳಿಕೆ [They all tell the same s. ಅವರೆಲ್ಲರೂ ಒಂದೇ ಕಥೆಯನ್ನೇ ಹೇಳುತ್ತಾರೆ. According to his own s. (ನತ್ಯತೆಯ ಬಗ್ಗೆ ಸಂದೇಹ ಸೂಚಿಸುವಲ್ಲಿ): ಅವನ ಹೇಳಿಕೆಯ ಪ್ರಕಾರವೆ. To make a long s. short (ವಿವರಗಳನ್ನು ಬಿಟ್ಟು ಹೇಳುವುದಕ್ಕೆ ಪೀಠಿಕೆ): ಮೊಟಕಾಗಿ, ಸಾರಾಂಶ, —ಹೇಳುವುದಾದರೆ. It is quite another s. now ಈಗ ಅದರ ಕಥೆ ಬೇರೆ; ಸ್ಥಿತಿ ಬದಲಾಯಿಸಿದೆ. The s. goes —ಎಂದು ಹೇಳುತ್ತಾರೆ; —ಎಂದು ಕಥೆ]; (ಕಲ್ಪಿತ) ಕಥೆ, ಕಥಾನಕ, ಆಖ್ಯಾನ, ಆಖ್ಯಾಯಿಕೆ, ಕಾದಂಬರಿ, ದಂತ ಕಥೆ [But is the s. true? ಆದರೆ, ಆ ಕಥೆ ನಿಜವೊ? Short s. ಸಣ್ಣ ಕಥೆ. Good, funny, s. ಸ್ವಾರಸ್ಯವಾದ, ವಿಚಿತ್ರವಾದ, ಕಥೆ. But that is another s. (ಕಥಾ ಸರಣಿಯನ್ನು ಬಿಟ್ಟು ಪ್ರಾಸಂಗಿಕ ವಿಷಯವೊಂದನ್ನು ಸೂಚಿಸಿ, ಅದನ್ನು ಪೂರ್ತಿಯಾಗಿ ತಿಳಿಸದೆ ವಾಚಕನ ಕುತೂಹಲವನ್ನು ಕೆರಳಿಸುವಲ್ಲಿ): ಅದು ಬೇರೆಯ ಕಥೆ]; (ಕಾದಂಬರಿ, ಕಾವ್ಯ, ನಾಟಕ, ಮೊ. ಗಳ) ಕಥಾವಸ್ತು, ವಸ್ತು (Reads only for the s. ಕಥೆಗಾಗಿ ಮಾತ್ರ ಓದುತ್ತಾನೆ. The s. is the least part of the book

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಥಾಂಶ ಆ ಗ್ರಂಥದಲ್ಲಿ ಬಹಳ ಅಮುಖ್ಯ ಭಾಗ); ಹೇಳತಕ್ಕ—ಅನುಭವ, ಅಂಶ, ಪ್ರಸಂಗ; ಕಥೆ (That face must have a s. belonging to it ಆ ಮು ಕ್ಕೆ ಸಂಬಂಧಪಟ್ಟ ಕಥೆ, ಪ್ರಸಂಗ, ಒಂದಿರಬೇಕು); (ಮಕ್ಕಳ ಮಾತು) ಸುಳ್ಳು(ಗಾರ), ಬುರುಡೆ (Oh you s. !). S.-book ಕಥೆ ಪುಸ್ತಕ. S.-teller ಕಥೆ—ಹೇಳುವವನು, ಬರೆಯುವವನು; (ಪೂರ್ವ ದೇಶಗಳಲ್ಲಿ) ಕಥೆ ಹೇಳಿಕೊಂಡು ಜೀವನಮಾಡುವವನು; ಗೋಷ್ಠಿಯಲ್ಲಿ ಸ್ವಾರಸ್ಯವಾದ ಕಥೆಗಳನ್ನು ಹೇಳುವವನು; ಕಥೆಗಾರ. (ಮಕ್ಕಳ ಮಾತು) ಸುಳ್ಳುಗಾರ, ಬುರುಡೆ. **Stóried**[2] (ಗು.) ಕಥೆಯಲ್ಲಿ ಪ್ರಸಿದ್ಧವಾಗಿರುವ, ಪ್ರಸಿದ್ಧಿ ಹೊಂದಿರುವ; (ಐತಿಹಾಸಿಕ) ಕಥೆಗಳ ಸಂಬಂಧಪಡೆದಿರುವ; ಐತಿಹಾಸಿಕ ಚಿತ್ರಾಲಂಕಾರಗಳಿಂದ ಕೂಡಿದ.

Stoup ಸ್ಟೂಪ್ (ನಾ.) (ಪ್ರಾಚೀ. ಪ್ರ.) ಕುಡಿಯುವ ಪಾತ್ರೆ, ಬಟ್ಟಲು, ಲೋಟ; ತೀರ್ಥಪಾತ್ರೆ, ಪವಿತ್ರೋದಕದ (ಶಿಲಾ)ಪಾತ್ರೆ.

Stout ಸ್ಟೌಟ್ (ಗು., ನಾ.) ಗಟ್ಟಿಗನಾದ, ಕೆಚ್ಚಿನ, ಶೂರ, ವೀರ, ಧೀರ, ಸಾಹಸಿ, ಬಲಿಷ್ಠ, ದಾರ್ಢ್ಯದ, ಪಟ್ಟಿನ, ಹಟದ, ಬಲವಾದ ಮೈಕಟ್ಟಿನ, ದೃಢಕಾಯದ, ಮಜಬೂತಾದ, ಗಡುತರವಾದ [S. fellow (ಪ್ರಾಚೀ. ಪ್ರ.) (ಕಾದಾಟ, ಮೊ. ಗಳಲ್ಲಿ) ಗಟ್ಟಿಗ. A s. heart ಕೆಚ್ಚೆದೆ, ಧೈರ್ಯ. **Stouthéarted** (ಗು.) ಕೆಚ್ಚೆದೆಯ, ಧೈರ್ಯದ. **Stout-héartedly** (ಕ್ರಿ. ವಿ.); **Stout-héartedness** (ನಾ.). Made a s. resistance ಬಲವಾಗಿ ಪ್ರತಿಭಟಿಸಿದನು, ತಡೆಗಟ್ಟಿದನು. A s. opponent ಬಲಿಷ್ಠನಾದ ಎದುರಾಳಿ. A s. ship ಮಜಬೂತಾದ ಹಡಗು. A s. stick ಬಲವಾದ, ಗಡುತರವಾದ, —ದೊಣ್ಣೆ]. ದೊಜ್ಜು ಬೆಳೆದ, ದಪ್ಪ, ದಾಂಡಿಗ, ದುಡುಮ, ಸ್ಥೂಲ(ಕಾಯದ). (ನಾ.) ಅತ್ಯಂತ ತೀಕ್ಷ್ಣವಾದ ಪೋರ್ಟರ್ ಮದ್ಯ. **Stoútish** (ಗು.); **Stoútly** (ಕ್ರಿ. ವಿ.); **Stoútness** (ನಾ.)

Stove[1] ಸ್ಟೋವ್ (ನಾ., ಕ್ರಿ. ಸಕ.) ಕಟ್ಟಿಗೆ, ಇದ್ದಲು, ಕಲ್ಲಿದ್ದಲು, ಎಣ್ಣೆ, ಅನಿಲ, ಮೊ. ಉರುವಲನ್ನು ಬಳಸುವ, ಕೋಣೆಗಳನ್ನು ಶಾಖವಾಗಿ ಇಟ್ಟಿರುವುದು, ಅಡಿಗೆ ಮಾಡುವುದು, ಮೊ. ಕೆಲಸಗಳಿಗೆ ಉಪಯೋಗಿಸುವ ಮುಚ್ಚಿದ ಒಲೆ: ಮುಚ್ಚೊಲೆ, ಅಗ್ಗಿಷ್ಟಿಕೆ, ಸ್ಟೌವ್. (ತೋಟಗಾರಿಕೆ) (ಕೃತಕ ಶಾಖದ ಏರ್ಪಾಡಿನ) ಕಾವುಮನೆ [(ಕ್ರಿ.) ಕಾವುಮನೆಯಲ್ಲಿ ಬೆಳಸು, ಬಲವಂತದಿಂದ ಬೆಳಸು]. S.-pipe ಮುಚ್ಚೊಲೆಯಿಂದ ಹೊಗೆಕೊಳವೆಗೆ ಹೊಗೆಯನ್ನೂ ಅನಿಲಗಳನ್ನೂ ಸಾಗಿಸುವ ನಳಿಕೆ: ಮುಚ್ಚೊಲೆಯ ನಳಿಕೆ. S.-pipe hat (ಅಮೆ. ಸಂ.) ಎತ್ತರದ ರೇಷ್ಮೆ ಟೊಪ್ಪಿಗೆ.

Stove[2]. Stave ಧಾತುವಿನ ಭೂತ., ಮತ್ತು ಭೂ. ಕೃ.

Stow ಸ್ಟೋ (ಕ್ರಿ. ಸಕ.) (ಸಾಮಾನು, ಮೊ. ನ್ನು) ಸರಿಯಾದ ಸ್ಥಳದಲ್ಲಿ ಅಣಿಯಾಗಿ, ಅಡಕವಾಗಿ, —ಇಡು, ತುಂಬು; ಅಡಕು, ಅಡಚು (S. thing away ಪದಾರ್ಥವನ್ನು ಅಡಚಣೆಯಾಗದ ಕಡೆ ಇಡು, ಒಂದು ಕಡೆ ಅಡಕು); (ಅಸಂ.) (ಸಾ., ವಿಧ್ಯರ್ಥದಲ್ಲಿ) ನಿಲ್ಲಿಸು, ಸಾಕುಮಾಡು (S. that nonsense). S.-wood ಹಡಗಿನ ಸಾಮಾನುಕುಳಿಯಲ್ಲಿ ಪೀಪಾಯಿಗಳನ್ನು ಭದ್ರವಾಗಿ ಅಡಕಲು ಉಪಯೋಗಿಸುವ ಮರದ ತುಂಡು, ಬೆಣೆ: ಅಡಕು—ಮರ, ಬೆಣೆ. **Stowage** (ನಾ.) ಅಡಕು(ವುದು), ಅಡಕಿರುವುದು; ಅಡಕುವ ಸ್ಥಳ; ಅಡಕು—ರುಸುಮು, ಬಾಡಿಗೆ. **Stowaway** (ನಾ., ಕ್ರಿ. ಅಕ.) ಹಡಗು ಹೊರಡುವವರೆಗೆ ಅದರಲ್ಲಿ ಎಲ್ಲಿಯೋ ಅವಿತುಕೊಂಡಿದ್ದು ಬಿಟ್ಟಿ ಪ್ರಯಾಣ ಮಾಡುವವನು: ಕಳ್ಳ ಪ್ರಯಾಣಿಕ. (ಕ್ರಿ.) ಕಳ್ಳ ಪ್ರಯಾಣ ಮಾಡು.

Strabísmus ಸ್ಟ್ರಬಿಸ್'ಮಸ್ (ನಾ.) ಮೆಳ್ಳೆ, ಮಾಲು, —ಗಣ್ಣು (Cross-eyed s. ಒಳ—ಮಾಲು, ಮೆಳ್ಳೆ. Wall-eyed s. ಹೊರ—ಮಾಲು, ಮೆಳ್ಳೆ). **Strabísmal** (ಗು.); **Strabísmic** (ಗು.); **Strabótomy** ಸ್ಟ್ರಬಾಟೊಮಿ (ನಾ.) ಮೆಳ್ಳೆಗಣ್ಣಿಗೆ ಚಿಕಿತ್ಸೆಯಾಗಿ ಕಣ್ಣುಗುಡ್ಡೆಯ ಸ್ನಾಯುವನ್ನು ಕತ್ತರಿಸುವುದು: ಮೆಳ್ಳೆಗಣ್ಣ ಶಸ್ತ್ರಚಿಕಿತ್ಸೆ.

Strabótomy. **Strabismus** ನೋಡಿ.

Stráddle ಸ್ಟ್ರ್ಯಾಡ್'ಲ್ (ಕ್ರಿ., ನಾ.) ಕಿಸಿಗಾಲು ಹಾಕು, ಕಾಲು ಕಿಸಿ (ದುಕೊಂಡಿರು); ಕಿಸಿಗಾಲು ಹಾಕಿ—ನಿಂತುಕೊ, ಕುಳಿತುಕೊ; ಸವಾರಿ ರೀತಿ ಕುಳಿತುಕೊ (Cannot s. his horse. Stood straddling the ditch); (ಕಾಲುಗಳನ್ನು) ಅಗಲಿಸು, ಕಿಸಿ; (ನಾವಿಕ) (ಮು., ಗುರಿಯ ವ್ಯಾಪ್ತಿಯನ್ನು ಕಂಡುಹಿಡಿಯುವುದಕ್ಕಾಗಿ: ಗುರಿಯ, ಶತ್ರುವಿನ) ಕೊಂಚ ಈಚೆಗೂ ಆಚೆಗೂ ಗುಂಡು ಹಾರಿಸು: ಕಿಸಿಗುಂಡು ಹಾರಿಸು. (ರೂಪ.) ಎರಡು ಕಾರ್ಯನೀತಿಗಳ ನಡುವೆ ಹೀಗೂ ಹಾಗೂ ತುಯ್ದಾಡು; ಎರಡು ಕಡೆಗೂ ಒಲವು ತೋರು; ಉಭಯ ಪಕ್ಷ ವಿಶ್ವಾಸ ತೋರು. (ನಾ.) (ಕ್ರಿಯಾರ್ಥಗಳಲ್ಲಿ) (ರೂಪ. ಸಹ); (ಬಂಡವಾಳಪತ್ರ ವ್ಯಾಪಾರ) ನಿಗದಿಯ ಬೆಲೆಗೆ ಬಂಡವಾಳ ಪತ್ರಗಳನ್ನು ತನಗೆ ಮಾರುವಂತೆ ಇಲ್ಲವೆ ತನ್ನಿಂದ ಕೊಂಡುಕೊಳ್ಳುವಂತೆ ಒತ್ತಾಯಪಡಿಸುವ ಹಕ್ಕಿನ ಒಪ್ಪಂದ: ಉಭಯಾನುಕೂಲ ಒಪ್ಪಂದ.

Stradivárius ಸ್ಟ್ರ್ಯಾಡಿವೇರಿಅಸ್, (ಬಳ. ಮಾ.) **Strad** (ನಾ.) ಪಿಟೀಲಿನಂಥ ಒಂದು ವಾದ್ಯ; (ರೂಪ.) ಒಂದು ಜಾತಿಯದರಲ್ಲಿ ಉತ್ತಮವಾದುದು.

Strafe ಸ್ಟ್ರಾಫ್, ಸ್ಟ್ರೇಫ್ (ಕ್ರಿ. ಸಕ., ನಾ.) (ಅಸಂ.) ಗುಂಡಿನ ಮಳೆ ಸುರಿಸು, ಫಿರಂಗಿದಾಳಿ ಮಾಡು; (ಮರೆಯಿಂದ ಗುಂಡು ಹಾರಿಸುವುದು, ಮೊ. ಗಳಿಂದ) ಕಾಡು, ಪೀಡಿಸು; ಛೀಮಾರಿಮಾಡು, ಬೆದರಿಸು, ಅಮರಿಸು. (ನಾ.) ಬಲವಾದ (ಫಿರಂಗಿ) ದಾಳಿ, ಗುಂಡು ಸುರಿತ [The morning s. (ಮೊದಲನ ಮಹಾ ಯುದ್ಧದಲ್ಲಿ) ಅರುಣೋದಯ ಕಾಲದ ಜರ್ಮನರ ಫಿರಂಗಿ ದಾಳಿ]

Strággle ಸ್ಟ್ರ್ಯಾಗ್'ಲ್ (ಕ್ರಿ.ಅಕ.) ದಾರಿ ತಪ್ಪಿ—ಹೋಗು, ಅಲೆ(ದಾಡು); ತೊಳಲು (ರೂಪ. ಸಹ) (Children cannot keep their minds from straggling); ಚೆದರು, ಚೆದರಿಹೋಗು (Crowd straggled along); ಗುಂಪು, ವ್ಯೂಹ, —ಬಿಟ್ಟು ಬೇರೆಯಾಗು; ಸಿಕ್ಕಾಬಟ್ಟೆ, ಅವ್ಯವಸ್ಥೆಯಲ್ಲಿ, —ಹೋಗು (Plant straggles ಗಿಡ ಹುಚ್ಚಾಬಟ್ಟೆ ಹೋಗುತ್ತದೆ, ಬೆಳೆದುಕೊಂಡಿದೆ); ಅಲ್ಲಿಷ್ಟು ಇಲ್ಲಿಷ್ಟು, ವಿರಳವಾಗಿ, —ಇರು, ಹರಡಿಕೊಂಡಿರು (Straggling village, houses). **Strággler** (ನಾ.); **Strágglingly** (ಕ್ರಿ. ವಿ.); **Strággly** (ಗು.) ಚೆದರಿಹೋಗಿರುವ; ವಿರಳವಾಗಿ, ಅಸ್ತವ್ಯಸ್ತವಾಗಿ, —ಇರುವ, ಹರಡಿಕೊಂಡಿರುವ (A s. hamlet)

Straight ಸ್ಟ್ರೇಟ್ (ಗು., ನಾ., ಕ್ರಿ. ವಿ.) ನೇರವಾದ, ನೆಟ್ಟಗಿರುವ, ನೀಟಾದ, ಋಜು, ಸರಳ [S. line (ಜ್ಯಾ.) ಋಜು, ಸರಳ, —ರೇಖೆ. S. arch ∧ ಆಕಾರದ ಕಮಾನು; ನೇರ ಕಮಾನು. A s. back ಗೂನಿಲ್ಲದ, ನೆಟ್ಟಗಿರುವ, —ಬೆನ್ನು. A s. knee ಬಾಗಿಲ್ಲದ, ನೀಟು, —ಮೊಣಕಾಲು. S. legs ನೆಟ್ಟಗಿರುವ, ನೀಟು, —ಕಾಲುಗಳು. S. hair (ಕೊಂಕಿಲ್ಲದ) ನೆಟ್ಟನೆಯ ಕೂದಲು; ನಿಮಿರು ಕೂದಲು]; (ಲಕ್ಷ್ಯ, ನೋಟ, ಏಟು, ಮಾರ್ಗ, ಮೊ. ಗಳ ವಿಷಯದಲ್ಲಿ) ಕುರಿತೇಟಿನ, ಗುರಿಮುಟ್ಟುವ, ಸರಿಯಾದ; ಮುಚ್ಚುಮರೆಯಿಲ್ಲದ, ನಿಷ್ಕಪಟ, ಪ್ರಾಮಾಣಿಕ, ಸಾಚಾ, ಸೀದಾ [S. dealings, speaking ಋಜುವಾದ, ಮುಚ್ಚುಮರೆಯಿಲ್ಲದ, —ವರ್ತನೆ, ಮಾತು. S. thinking (ಭಾವೋದ್ರೇಕವಿಲ್ಲದ) ತರ್ಕಬದ್ಧ ಆಲೋಚನೆ, ನೇರವಾದ ಆಲೋಚನೆ]; ಅಣಿಯಾಗಿ, ಸರಿಯಾದ ಸ್ಥಳದಲ್ಲಿ, ಮಟ್ಟದಲ್ಲಿ, ಹೊಂದಿಕೆಯಾಗಿ, —ಇರುವ: ಸರಿಯಾಗಿರುವ [Are the pictures s.? ಚಿತ್ರಗಳು ಸರಿಯಾಗಿ, ಮಟ್ಟದಲ್ಲಿ, ಇವೆಯೊ? Put things s. (ಸಾಮಾನುಗಳನ್ನು) ಸರಿಯಾಗಿ, ಅಣಿಯಾಗಿ, ಒಪ್ಪವಾಗಿ, —ಇಡು; ವ್ಯವಸ್ಥೆಗೆ ತರು. Accounts are s. ಲೆಕ್ಕಗಳು ಸರಿಯಾದ, ಕ್ರಮವಾದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೂಪದಲ್ಲಿವೆ. A s. race, fight ಸರಿಯಾದ (ಸ್ಪರ್ಧೆಯ) ಪಂದ್ಯ, ಹೋರಾಟ]; ಮೂಲದಿಂದ, ಸರಿಯಾದ ಸ್ಥಾನದಿಂದ, —ನೇರವಾಗಿ ಬಂದ [S. tip (Tip² ನಾ. ನೋಡಿ)]. [The s. ticket (ಅಮೆ. ನಂ.) ಯಾವ ಮಾರ್ಪಾಟೂ ಇಲ್ಲದ, (ರಾಜಕೀಯ) ಪಕ್ಷದ ಸಂಪೂರ್ಣ ಕಾರ್ಯಕ್ರಮ; (ಅಮೆ. ನಂ.) ಒಂದು (ರಾಜಕೀಯ) ಪಕ್ಷದ ಉಮೇದುವಾರರ ಸಂಪೂರ್ಣ ಪಟ್ಟಿ]. (ನಾ.) ನೇರವಾಗಿರುವುದು, ನೇರ್ಪು, ಋಜುತೆ, ಸರಳತೆ (Is out of the s. ವಕ್ರವಾಗಿದೆ); (ಒಂದರ) ನೇರ ಭಾಗ [(ಮು., ಪೈಹಾಳಿಪಥದ ಕೊನೆಯ ನೇರ ಭಾಗ): They were even as they reached the s.]; (ಪೋಕರ್ ಇಸ್ಪೀಟಾಟದಲ್ಲಿ) ಇಸ್ಪೀಟೆಲೆಗಳ ಅನುಕ್ರಮ. (ಕ್ರಿ. ವಿ.) ಸರಳ ರೇಖೆಯಲ್ಲಿ, ನೇರವಾಗಿ, ನೆಟ್ಟಗೆ, ಸೀದಾ [Go s. ನೇರವಾಗಿ, ಸೀದಾ, —ಹೋಗು. Hit s. from the shoulder (ಮುಷ್ಟಿ ಕಾಳಗದಲ್ಲಿ) ಭುಜದಿಂದ ನೇರವಾಗಿ ಹೊಡೆ. Ride s. (ಬೇಲಿ, ಮೊ. ನ್ನು ಬಳಸಿಕೊಂಡು ಹೋಗದೆ, ದಾಟಿಕೊಂಡು) ನೇರವಾಗಿ ಸವಾರಿ ಮಾಡು. Told him s. out (ಮುಚ್ಚುಮರೆಯಿಲ್ಲದೆ, ಬಳಸು ಮಾತಿಲ್ಲದೆ) ನೇರವಾಗಿ ಅವನಿಗೆ ಹೇಳಿಬಿಟ್ಟೆನು]; ಸರಿಯಾದ ದಿಕ್ಕಿನಲ್ಲಿ, ಕುರಿತೇಟಾಗಿ, ಗುರಿಗೆ (ಸರಿಯಾಗಿ) (Shoot s.); ಸರಿಯಾಗಿ, ಋಜುವಾಗಿ (Does not see s.); (ಪ್ರಾಚೀ. ಪ್ರ.) ಕೂಡಲೆ, ತತ್‌ಕ್ಷಣ [S. away (ಅಸಂ.) ಕೂಡಲೆ. S. off ಹಿಂದು ಮುಂದು ನೋಡದೆ, ತಟಕ್ಕನೆ, ಒಡನೆಯೆ, ಯೋಚನೆ ಮಾಡದೆ (Cannot tell you s. off)]. S.-cut (ಹೊಗೆಸೊಪ್ಪಿನ ವಿಷಯದಲ್ಲಿ: ರೇಷ್ಮೆಯೆಳೆಗಳಂತೆ ನಯವಾಗಿರಲು) ಉದ್ದುದ್ದವಾಗಿ, ನೀಳವಾಗಿ,—ಕತ್ತರಿಸಿದ. **Straíghtway** ಸ್ಟ್ರೇಟ್‌ವೇ (ಕ್ರಿ.ವಿ.) (ಪ್ರಾಚೀ. ಪ್ರ.) ಕೂಡಲೆ, ತತ್‌ಕ್ಷಣ. **Straíghten** (ಕ್ರಿ.) (ಸೊಟ್ಟಗಿರುವುದನ್ನು, ಬಾಗಿರುವುದನ್ನು) ನೆಟ್ಟಗೆ, ನೇರವಾಗಿ, —ಮಾಡು; (ತೊಡಕಾಗಿರುವುದನ್ನು) ಸರಿಮಾಡು, ಬಿಡಿಸು, ಸರಳಮಾಡು; ಅಣಿಯಾಗಿಡು; ವ್ಯವಸ್ಥೆಗೆ, ಕ್ರಮಕ್ಕೆ, —ತರು; ನೆಟ್ಟಗೆ, ನೇರವಾಗಿ, ಸರಿಯಾಗಿ, —ಆಗು. **Straightfórward** (ಗು.) ಮುಚ್ಚುಮರೆಯಿಲ್ಲದ, ಸೀದಾ, ಪ್ರಾಮಾಣಿಕ, ಋಜು, ಖಂಡಿತವಾದಿಯಾದ; (ಕೆಲಸ, ಮೊ. ಗಳ ವಿಷಯದಲ್ಲಿ) ತೊಡಕಿಲ್ಲದ, ಸಾಫಸೀದಾ. **Straightfórwardly** (ಕ್ರಿ. ವಿ.); **Straightfórwardness** (ನಾ.); **Straíghtness** (ನಾ.)

Straíghten, Straightfórward, etc. **Straight** ನೋಡಿ.

Strain ಸ್ಟ್ರೇಯ್ನ್ (ಕ್ರಿ.) ಬಿಗಿಯಾಗಿ—ಎಳೆ. ಚಾಚು; ಬಿಗಿಸು; ಅತಿಯಾಗಿ, ಮಿತಿಮೀರಿ,—ದುಡಿಸು, ದಣಿಸು, ಶ್ರಮಪಡಿಸು; ಅತಿಗೆ ಹೋಗು; ಬಲಾತ್ಕಾರದಿಂದ, ತಿಣುಕಿ, —ಹೊರಡಿಸು; ತಿಣುಕು; (ಉದ್ದೇಶವನ್ನು, ಅರ್ಥವನ್ನು) ಬಹಳ ಶ್ರಮದಿಂದ ಪ್ರತಿಪಾದಿಸು, ಕಷ್ಟದಿಂದ ಕಲ್ಪಿಸು, ತಿರಿಚು [S. the parchment across the aperture ಚರ್ಮಪತ್ರವನ್ನು ರಂಧ್ರಕ್ಕೆ ಅಡ್ಡನಾಗಿ ಎಳೆದು ಕಟ್ಟು. S. rope to breaking point ಹಗ್ಗವನ್ನು ಕಿತ್ತುಹೋಗುವಷ್ಟು ಎಳೆ. S. every nerve ನರ್ವ ಪ್ರಯತ್ನಪಡು; ಕೈಯಲ್ಲಾದುದನ್ನೆಲ್ಲ ಮಾಡು. S. one's ears, eyes, voice ಕಿವಿಯನ್ನು, ದೃಷ್ಟಿಯನ್ನು, ಧ್ವನಿಯನ್ನು, (ಪ್ರಯಾಸಪಟ್ಟು, ಬಲವಂತದಿಂದ) ಚಾಚು. S. one's authority, powers, rights ತನ್ನ ಅಧಿಕಾರವನ್ನು, ಬಲವನ್ನು, ಹಕ್ಕುಗಳನ್ನು, ಎಲ್ಲೆಮೀರಿ ಅಥವಾ ಉದ್ದೇಶಕ್ಕೆ ವ್ಯತಿರಿಕ್ತವಾಗಿ, ಚಲಾಯಿಸು. S. the law ನ್ಯಾಯಸೂತ್ರಗಳನ್ನು, ಕಾನೂನನ್ನು, (ನಿಜವಾದ ತಾತ್ಪರ್ಯವನ್ನು ಗಣಿಸದೆ) ಬಲವಂತ ವ್ಯಾಖ್ಯಾನ ಮಾಡು, ಬಲವಂತವಾಗಿ ಅನ್ವಯಿಸು. S. a point (ಉದ್ದೇಶ ಸಾಧನೆಗಾಗಿ ಮು., ರಿಯಾಯಿತಿ ತೋರಿಸುವಲ್ಲಿ) ನ್ಯಾಯವಾದುದಕ್ಕಿಂತ ಹೆಚ್ಚಾಗಿ ಹೋಗು, ಮಿತಿಮೀರಿ ಪ್ರವರ್ತಿಸು. A strained interpretation or sense (ಸೂತ್ರ, ಮೊ. ಗಳಿಂದ) ತಿಣುಕಿ ಹೊರಡಿಸಿದ ಅರ್ಥ; ತಿರಿಚು ಅರ್ಥ. Take care not to s. your eyes ನಿನ್ನ ಕಣ್ಣುಗಳಿಗೆ ಆಯಾಸವಾಗದಂತೆ ಎಚ್ಚರಿಕೆಯಿಂದಿರು. For fear of straining his followers' loyalty ತನ್ನ ಅನುಯಾಯಿಗಳ ನಿಷ್ಠೆಗೆ ಅತಿ ಪರೀಕ್ಷೆಯಾದೀತೆಂಬ ಶಂಕೆಯಿಂದ. Has strained a muscle, his leg ಸ್ನಾಯುವನ್ನು, ಕಾಲನ್ನು, —ಉಳುಕಿಸಿಕೊಂಡಿದ್ದಾನೆ, ಬಳಲಿಸಿದ್ದಾನೆ. Ship is strained ಹಡಗಿನ ಭಾಗಗಳು ತಿರಿಚಿಹೋಗಿವೆ, ಜಗ್ಗಿಹೋಗಿವೆ. Strained relations ವಿಷಮವಾದ ಸಂಬಂಧ, ಬಿಗಡಾಯಿಸಿಕೊಂಡಿರುವ ಸ್ಥಿತಿ, ಅಸಮಾಧಾನ ಪ್ರಬಲಿಸಿರುವ ಸ್ಥಿತಿ. Straining-beam, -piece ಅಡ್ಡತೊಲೆಯ: ಗುಜ್ಜುಗಂಬಗಳ ಮೇಲು ತುದಿಗಳನ್ನು ಕೂಡಿಸುವ ಜಂತೆ: ಬಿಗಿ—ಜಂತೆ, ಪಟ್ಟಿ]. (ವ್ಯಕ್ತಿಯನ್ನು ಎದೆಗೆ) ಬಿಗಿಯಾಗಿ ಅಪ್ಪಿಕೊ, ತಬ್ಬಿಕೊ; ಅವಚಿಕೊ; (ಭೂ. ಕೃ. ನಲ್ಲಿ) ಬಲಾತ್ಕಾರದಿಂದ, ತಿಣುಕಿ, —ಮಾಡಿದ, ಹೊರಡಿಸಿದ; ಬಲಾತ್ಕಾರದ, ತಿಣುಕಿದ, ಕೃತಕ, ಪ್ರಯತ್ನಪೂರ್ವಕವಾದ, ಪ್ರಯಾಸದ (The quality of mercy is not strained ದಯಾಗುಣ ಬಲಾತ್ಕಾರದಿಂದ ಬರತಕ್ಕದ್ದಲ್ಲ. Strained manner, laughter, cordiality ಕೃತಕ ವರ್ತನೆ, ಬಲವಂತದ ನಗು, ಪ್ರಯಾಸದ ಸೌಹಾರ್ದ). ಮಿತಿಮೀರಿ ಪ್ರಯತ್ನಿಸು, ಶ್ರಮಪಡು (*After* ಉಪ. ದೊಡನೆ); ಜೋರಾಗಿ ಎಳೆ, ತುಯ್ಯಿ (*At* ಉಪ. ದೊಡನೆ); ಶಕ್ತಿಮೀರಿ ತಾಳಿಕೊ, ಸಹಿಸು (*Under* ಉಪ. ದೊಡನೆ); ಹೆಣಗಾಡು, ಮುಕ್ಕಿರಿ [The straining horses ಜಗ್ಗಿ ಶ್ರಮಪಡುತ್ತಿರುವ ಕುದುರೆಗಳು. The straining masts (ಬಹು ಎಳೆತದಿಂದ) ತುಯ್ಯುತ್ತಿರುವ, ಜಗ್ಗುತ್ತಿರುವ, ಕೂವೆಮರಗಳು. Plants straining upwards to the light ಮೇಲಕ್ಕೆ ಬೆಳಕಿನ ಕಡೆಗೆ ಪ್ರಯಾಸದಿಂದ ಬೆಳೆಯುತ್ತಿರುವ ಗಿಡಗಳು. Horses s. at the collar ಕುದುರೆಗಳು ಕೊರಲಪಟ್ಟಿಯನ್ನು ತುಯ್ಯುತ್ತವೆ. Rowers s. at the oar ದೋಣಿ ನಡಸುವವರು ಹುಟ್ಟುಹಾಕಲು ತಿಣುಕುತ್ತಾರೆ. Porter straining under his load ಹೊರೆಯಿಂದ ಮುಕ್ಕಿರಿಯುತ್ತಿರುವ ಕೂಲಿಯಾಳು. Strains too much after effect ಪರಿಣಾಮವುಂಟುಮಾಡಲು, ಪ್ರಭಾವ ಬೀರಲು, —ಅತಿಯಾಗಿ ತಿಣುಕುತ್ತಾನೆ]. (ಬಟ್ಟೆ, ಜರಡಿ, ಮೊ. ಗಳ ಮೂಲಕ) ಸೋಸು, ಬಸಿ, ಗಾಳಿಸು; ಸೋಸಿ ತೆಗೆದುಹಾಕು (*Out* ಉಪ. ದೊಡನೆ); (ದ್ರವದ ವಿಷಯದಲ್ಲಿ) ಬಸಿದು ಹೋಗು, ಇಳಿ (Water straining through a sandy soil). S. at ಬಹು ಪ್ರಯಾಸಪಡು, ತಿಣುಕು; (ಯಾವುದನ್ನಾದರೂ ನಂಬಲು, ಒಪ್ಪಲು) ಹಿಂದು ಮುಂದು ನೋಡು, ಅಳುಕು. **Straínable** (ಗು.); **Straíner** (ನಾ.) (ಕ್ರಿಯಾರ್ಥಗಳಲ್ಲಿ); ಸೋಸು, ಬಸಿ, —ಪಾತ್ರೆ, ಬಟ್ಟೆ: ಸೋಸಿಗೆ, ಬಸಿಗೆ; ಜರಡಿ, ಸಾರಣಿಗೆ.

Strain (ನಾ.) ಎಳೆತ, ತುಯ್ತ, ಬಿಗಿತ; (ಸಂಸಕ್ತಿ, ಬಲ, ದಾರ್ಢ್ಯ, ಸಾಧನಸಂಪತ್ತು, ಮೊ. ಗಳ ಮೇಲೆ ಬಿದ್ದಿರುವ) ಹೊರೆ, ಒತ್ತಡ, ಭಾರ; ತ್ರಾಸ, ಪ್ರಯಾಸ, ಶ್ರಮ, ಯತ್ನ, ದುಡಿತ; (ಭಾರದಿಂದ, ಪೀಡನೆಯಿಂದ, ಆದ) ತಿರಿಚು, ರೂಪ ವ್ಯತ್ಯಾಸ; ಉಳುಕು, ನೋವು; [The s. on the rope was tremendous ಹಗ್ಗದ ಮೇಲಿನ ಜಗ್ಗು, ಎಳೆತ, ವಿಪರೀತವಾಗಿತ್ತು. Was a great s. on my attention ನನ್ನ ಗಮನಶಕ್ತಿಗೆ ಬಹು ಪ್ರಯಾಸವಾಯಿತು. The s. of modern life ಆಧುನಿಕ ಜೀವನದ ಜಂಜಾಟ, ಜಗ್ಗಾಟ. Is suffering from (over-)s. ಅವನು ಅತಿಶ್ರಮದಿಂದ, ಮಿತಿಮೀರಿದ ದುಡಿತದಿಂದ, ನರಳುತ್ತಿದ್ದಾನೆ. All his senses were on the s. ಅವನ ಇಂದ್ರಿಯಗಳೆಲ್ಲವೂ ಬಹು ಶ್ರಮಪಟ್ಟದ್ದುವು. Is epigrammatic without s. ಪ್ರಯಾಸಪಡದೆ ನಾಣ್ಣುಡಿಗಳನ್ನು ಹೇಳುತ್ತಾನೆ. Has a s. in the leg ಅವನ ಕಾಲು ಉಳುಕಿದೆ]. (ಭೌ. ವಿ., ಯಂತ್ರಶಾಸ್ತ್ರ) (ಒತ್ತಡಕ್ಕೆ ಒಳಪಟ್ಟ ವಸ್ತುವಿನಲ್ಲಿಯ) ರೂಪ ವ್ಯತ್ಯಾಸ, ವಿಕಾರ. (ಕಾವ್ಯ, ಅಲಂ.; ಸಾ., ಬ. ವ. ದಲ್ಲಿ) ಕವಿತೆಯ ಅಥವಾ ಸಂಗೀತದ—ಹೊಮ್ಮು, ಆವರ್ತ, ಪಟ್ಟು; ಕವನ, ರಾಗ (Inspiriting strains ಉತ್ಸಾಹಪೂರಕ —ಕವನ, ಸಂಗೀತ. The strains of the harp ಹಾರ್ಪ್ ವಾದ್ಯದ ಗೀತ). (ಮಾತಿನ ಅಥವಾ ಬರವಣಿಗೆಯ) ರೀತಿ, ಧಾಟಿ, ಧ್ವನಿ, ಧೋರಣೆ (He went on in another s. ಅವನು ಬೇರೆ ಧಾಟಿ ಹಿಡಿದನು, ಧೋರಣೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬದಲಾಯಿಸಿದನು. In the same s. ಅದೇ ಧಾಟಿಯಲ್ಲಿ, ರಾಗದಲ್ಲಿ). (ಶೀಲ ಸ್ವಭಾವದಲ್ಲಿ) ಪ್ರವೃತ್ತಿ, ಛಾಯೆ (There is a s. of weakness, ferocity, in him ಅವನಲ್ಲಿ ದೌರ್ಬಲ್ಯದ, ರೌದ್ರದ,—ಪ್ರವೃತ್ತಿ ಇದೆ). ತಳಿ, ವಂಶ (Comes of a good s.)

Strait ಸ್ಟ್ರೇಟ್ (ಗು., ನಾ.) (ಪ್ರಾಚೀ. ಪ್ರ.) ಕಿರಿದಾದ, ಇಕ್ಕಟ್ಟಾದ, ಸಂಕೋಚವಾದ, ಬಿಗಿಯಾದ, ಗುತ್ತನಾದ, ಬಂಧನಕ್ಕೊಳಗಾದ, ಬಂಧಿಸುವ [S. gate (ಬೈಬಲ್) ಇಕ್ಕಟ್ಟು ಬಾಗಿಲು (S. is the gate, and narrow is the way, which leadeth unto life and few there be that find it). S. jacket *or* waistcoat ಗುತ್ತನೆಯ, ಬಿಗಿ, —ಕವಚ (ಹುಚ್ಚರು, ಸನ್ನಿ ಹಿಡಿದವರು, ಮೊ. ರನ್ನು ಕೆಡಕು ಮಾಡದಂತೆ ಬಂಧಿಸುವುದಕ್ಕಾಗಿ ತೊಡಿಸುವ ಕವಚ). S.-laced (ರೂಪ.) ಅತಿ ಕಟ್ಟುನಿಟ್ಟಿನ (ಶೀಲವುಳ್ಳ), ನೀತಿವ್ರತ ನಿಷ್ಠೆಯ, ವೀರ ನಿಯಮಿಯಾದ]; (ಪ್ರಾಚೀ. ಪ್ರ.) ಕಟ್ಟುನಿಟ್ಟಿನ, ವೀರ ನಿಷ್ಠೆಯ (The straitest sect of our religion). (ನಾ.) ಎರಡು ಸಮುದ್ರಗಳನ್ನು ಅಥವಾ ವಿಶಾಲ ಜಲ ಭಾಗಗಳನ್ನು ಕೂಡಿಸುವ ಇಕ್ಕಟ್ಟಾದ ಜಲ ವಿಭಾಗ: ಜಲಸಂಧಿ, ಜಲಕಂಠ [(ಯಾವುದಾದರೂ ಜಲಸಂಧಿಯ ಅಂಕಿತನಾಮವಾಗಿ ಪ್ರಯೋಗಿಸುವಲ್ಲಿ ಸಾ., ಬ. ವ. ದಲ್ಲಿ) : The Straits of Dover. Straits Settlements ಮಲಕ್ಕ ಮತ್ತು ಸಿಂಗಪುರಗಳ ಜಲಸಂಧಿಗಳ ಬಳಿಯ, ಇಂಗ್ಲೆಂಡಿನ ಅಧಿಕಾರಕ್ಕೆ ಒಳಪಟ್ಟ, ಬ್ರಿಟಿಷ್ ವಸಾಹತುಗಳು. The Straits (ಹಿಂದಿನ ಪ್ರ.) ಜಿಬ್ರಾಲ್ಟರ್ ಜಲಸಂಧಿ; (ಈಗಿನ ಪ್ರ.) ಮಲಕ್ಕ ಜಲಸಂಧಿ]. (ಸಾ., ಬ. ವ. ದಲ್ಲಿ) ಸಂಕಟಸ್ಥಿತಿ, ಬಿಕ್ಕಟ್ಟು, ಇಕ್ಕಟ್ಟು; ದಾರಿದ್ರ್ಯ, ರಿಕ್ತ ದಶೆ; ಕಷ್ಟ, ಪೇಚಾಟ (In straits ಕಷ್ಟದಲ್ಲಿ, ಪೇಚಾಟದಲ್ಲಿ). **Straíten** ಸ್ಟ್ರೇಟ್‌ನ್ (ಕ್ರಿ. ಸಕ.) (ರ. ಪ್ರ.) ಕಿರಿದು, ಇಕ್ಕಟ್ಟು, —ಮಾಡು, ಅಗಿಸು; (ವಿರ. ಪ್ರ.) (ಬಲ, ಹಕ್ಕು, ಮೊ. ನ್ನು) ಮೊಟಕು ಮಾಡು, ಬಂಧನಕ್ಕೊಳಪಡಿಸು; ಕಷ್ಟ, ತೊಂದರೆ,—ಪಡಿಸು; ಇಕ್ಕಟ್ಟಿಗೆಸಿಕ್ಕಿಸು; ದುಃಸ್ಥಿತಿಗೆ ತರು; (Straitened circumstances ದಾರಿದ್ರ್ಯ, ಬಡತನ. Is straitened for provisions ಅವನಿಗೆ ಆಹಾರಸಾಮಗ್ರಿ ಸಾಲದೆ ಪೇಚಾಟವಾಗಿದೆ). **Straítly** (ಕ್ರಿ. ವಿ.) (ಪ್ರಾಚೀ. ಪ್ರ.) ; **Straítness** (ನಾ.) (ವಿರ. ಪ್ರ.)

Strake ಸ್ಟ್ರೇಕ್ (ನಾ.) (ಹಡಗಿನ ಪಕ್ಕಗಳಲ್ಲಿ ಕೊನೆಯಿಂದ ಕೊನೆಗೆ ಎಡೆಬಿಡದೆ ಜೋಡಿಸಿರುವ) ಹಲಗೆಗಳ, ತಗಡುಗಳ, —ಸೇರುವೆ ಸಾಲು [Garboard s. (Garboard ನೋಡಿ)]

Stramíneous ಸ್ಟ್ರಮಿನಿಯಸ್ (ಗು.) ಒಣ ಹುಲ್ಲಿನ(ಷ್ಟು ಹಗುರವಾದ); ಕೆಲಸಕ್ಕೆ ಬಾರದ, ತೃಣಪ್ರಾಯ. ಒಣ ಹುಲ್ಲಿನ ಬಣ್ಣದ.

Stramónium ಸ್ಟ್ರಮೋನಿಯಂ (ನಾ.) ಒಂದು ಬಗೆಯ ಉಮ್ಮತ್ತ, ದತ್ತೂರ: (ಇದರ ಎಲೆಗಳಿಂದ ಅಥವಾ ಬೀಜಗಳಿಂದ ತಯಾರಿಸಿದ) ಉಬ್ಬಸರೋಗದ ಒಂದು ಔಷಧ.

Strand[1] ಸ್ಟ್ರ್ಯಾಂಡ್ (ನಾ., ಕ್ರಿ.) ಸಮುದ್ರತೀರ; ದಡ, ದಂಡೆ. (ಅಲಂ., ಕಾವ್ಯ) ಸರೋವರ, ನದಿ, ಮೊ. ಗಳ ಕರೆ, ಅಂಚು. (ಕ್ರಿ.) (ಹಡಗಿನ ವಿಷಯದಲ್ಲಿ) ನೆಲ—ಹತ್ತು, ಹತ್ತಿಸು; (ಭೂ. ಕೃ. ನಲ್ಲಿ) (ಮು., ಕೈಯಲ್ಲಿ ಹಣವಿಲ್ಲದ್ದರಿಂದ) ಇಕ್ಕಟ್ಟಿಗೆ, ಕಷ್ಟಕ್ಕೆ, ಪೇಚಾಟಕ್ಕೆ, —ಸಿಕ್ಕಿ; ಮುಂದುವರಿಯಲಾರದೆ, ಹಿಂಬಿದ್ದು.

Strand[2] ಸ್ಟ್ರ್ಯಾಂಡ್ (ನಾ., ಕ್ರಿ.) (ಹಗ್ಗದ) ಎಳೆ, ತಂತು, ತಿರಿ; (ರೂಪ.) (ಒಂದು ಅಖಂಡ ಸಂಯುಕ್ತ ವಸ್ತುವಿನ) ಅಂಗ, ಅವಯವ (ಉದಾ., ಹಗ್ಗದಲ್ಲಿ ಒಂದು ಎಳೆ). (ಕ್ರಿ.) ಎಳೆ—ಕಿತ್ತುಹಾಕು, ಕಿತ್ತುಹೋಗು; ಎಳೆಗಳನ್ನು ಹೊಸೆ(ದು ಹಗ್ಗಮಾಡು); ಹಗ್ಗ ಹೊಸೆ.

Strange ಸ್ಟ್ರೇಂಜ್ (ಗು.) ಹೆರ, ಪರ(ಕೀಯ), ಅನ್ಯ, ಅಪರಿಚಿತ, ಕಂಡು ಕೇಳಿಲ್ಲದ, ಕಾಣದ, ಹೊಸ, ನವೀನ, ವಿದೇಶೀಯ, ವಿಜಾತೀಯ, ವಿಲಕ್ಷಣದ, ವಿಚಿತ್ರ, ಅದ್ಭುತ, ಆಶ್ಚರ್ಯಕರ, ವಿಸ್ಮಯಕರ, ಸೋಜಿಗದ, ಚಮತ್ಕಾರದ, ಅಪೂರ್ವ, ಅನಿರೀಕ್ಷಿತ [In a s. land ಅಪರಿಚಿತ, ಪರ, —ದೇಶದಲ್ಲಿ; ಕಂಡು ಕೇಳದ ನಾಡಿನಲ್ಲಿ. Worship s. gods ಅಪರಿಚಿತ, ಹೊಸ, —ದೇವತೆಗಳನ್ನು ಪೂಜಿಸು. Cannot play on a s. ground ಪರಿಚಯವಿಲ್ಲದ, ಬೇರೆಯವರ, ಆಟದ ಬಯಲಲ್ಲಿ ಆಡಲಾರೆ. The place, work, handwriting, is s. to me ಸ್ಥಳ, ಕೆಲಸ, ಬರವಣಿಗೆ, —ನನಗೆ ಪರಿಚಯವಿಲ್ಲ, ಹೊಸದು. It is a s. story ಅದೊಂದು ವಿಚಿತ್ರ ಕಥೆ. How s. that you should not have heard! ನೀನು ಕೇಳಿಲ್ಲದಿರುವುದು ಎಷ್ಟು ಆಶ್ಚರ್ಯಕರವಾಗಿದೆ! Wears the strangest clothes ಅತ್ಯಂತ ವಿಲಕ್ಷಣ ಉಡುಪನ್ನು ಹಾಕುತ್ತಾನೆ. Is very s. in his manner ಅವನ ನಡತೆ ವಿಚಿತ್ರವಾಗಿದೆ, ಹುಚ್ಚು ಹುಚ್ಚಾಗಿದೆ. Truth is stranger than fiction ಕಟ್ಟುಕಥೆಗಿಂತ ನಿಜ ಅದ್ಭುತವಾದುದು, ವಿಸ್ಮಯಕರವಾದುದು. Feel s. ಹೇಗೆ ಹೇಗೊ ಆಗು, ಸ್ವಸ್ಥವಿಲ್ಲದಿರು (ಮು., ತಲೆ ಸುತ್ತು); ಮುಜಗರವಾಗು; ಸಂಕೋಚಪಡು. It feels s. ಅದೊಂದು ಹೊಸ ವಿಚಿತ್ರ, —ಅನುಭವ. Am s. to the work ಆ ಕೆಲಸಕ್ಕೆ ನಾನು ಹೊಸಬ; ಈ ಕೆಲಸ ನನಗೆ ಅಭ್ಯಾಸವಿಲ್ಲ. Am quite s. here ನಾನು ಇಲ್ಲಿಗೆ ತೀರ ಹೊಸಬ, ಅಪರಿಚಿತ; ನನಗೆ ಇಲ್ಲಿ ಎಲ್ಲಾ ಹೊಸದು, ಎಲ್ಲರೂ ಹೊಸಬರು]. **Strángely** (ಕ್ರಿ. ವಿ.); **Strángeness** (ನಾ.); **Stránger** (ನಾ.) (ಒಂದು ದೇಶ, ಪಟ್ಟಣ, ಸಂಸ್ಥೆ, ಮೊ. ಗಳಿಗೆ ಸೇರಿಲ್ಲದ) ಹೊರಗಿನವನು, ಪರಕೀಯ; ವಿದೇಶೀಯ, ಹೆರನಾಡಿಗ; ಹೊಸಬ, ಅಪರಿಚಿತ; ಆಗಂತುಕ, ಅನನುಭವಿ [Am a s. here ಇಲ್ಲಿಗೆ ನಾನು ಹೊಸಬ, ಅಪರಿಚಿತ; ಇಲ್ಲಿನ ವಿಷಯ ನನಗೆ ಏನೂ ತಿಳಿಯದು. Spy *or* see strangers (ಬ್ರಿಟಿಷ್ ಪಾರ್ಲಿಮೆಂಟಿನ ಪ್ರಜಾ ಸಭೆಯಲ್ಲಿ) ಸದಸ್ಯರಾಗಲಿ ಅಧಿಕಾರಿಗಳಾಗಲಿ ಅಲ್ಲದ ಇತರರನ್ನು ಹೊರ ಕಳಿಸುವಂತೆ ಕೇಳು. Make a s. of ದೂರದವನಂತೆ, ಅಪರಿಚಿತನಂತೆ,—(ಸಂಕೋಚದಿಂದ) ಕಾಣು. Make no s. of ಮನೆಯವನಂತೆ, ಸಲಿಗೆಯಿಂದ, —ಕಾಣು. You are quite a s. here ನೀನು ಇಲ್ಲಿಗೆ ಬರುವುದೇ ಅಪರೂಪ. Is no s. to me ಅವನು ನನಗೇನೂ ಹೊಸಬನಲ್ಲ; ಅವನನ್ನು ನಾನು ಬಲ್ಲೆ. Is a s. to me ಅವನು ನನಗೆ ಅಪರಿಚಿತ, ಅವನನ್ನು ನಾನು ಕಾಣೆ. Is a, no, s. to fear ಅವನು ಭಯವೆಂಬುದನ್ನು ಕಾಣ, ಬಲ್ಲ. The little s. ಆಗತಾನೆ ಹುಟ್ಟಿದ ಮಗು, ಹೊಸ ಮಗು]

Strángle ಸ್ಟ್ರ್ಯಾಂಗ್‌ಲ್ (ಕ್ರಿ. ಸಕ.) ಕತ್ತು, ಕುತ್ತಿಗೆ, —ಹಿಸುಕು, ಹಿಸುಕಿ ಕೊಲ್ಲು; (ಕೊರಲಪಟ್ಟಿ, ಮೊ. ಗಳ ವಿಷಯದಲ್ಲಿ) ಕತ್ತು—ಬಿಗಿ, ಒತ್ತು; (ರೂಪ.) (ಚಳವಳಿ, ಮನಸ್ಸಿನ ಆವೇಗ, ಭಾವ, ಮೊ. ನ್ನು) ಅದುಮಿಹಾಕು, ಅಡಗಿಸಿಬಿಡು, ದಮನಮಾಡು. **Strángles** (ನಾ.) (ಬ. ವ. ದಲ್ಲಿ; ಸಾ., ಏ. ವ. ದಂತೆ ಪ್ರ.) (ಕುದುರೆ, ಕತ್ತೆ, ಮೊ. ಗಳಿಗೆ ಬರುವ) ಒಂದು ಸಾಂಕ್ರಾಮಿಕ ನೆಗಡಿ. **Stránglehold** (ನಾ.) (ಉಸಿರು ಕಟ್ಟಿಸುವ) ಬಿಗಿ ಹಿಡಿತ, ಯಮ ಹಿಡಿತ. **Strángulate** ಸ್ಟ್ರ್ಯಾಂಗ್ಯುಲೇಟ್ (ಕ್ರಿ. ಸಕ.) (ವಿರ. ಪ್ರ.) ಕತ್ತು—ಹಿಸುಕು, ಕಿವುಚು; (ರೋಗ ನಿದಾನ, ಶಸ್ತ್ರವೈದ್ಯ) (ಧಮನಿ, ಕರುಳು, ಮೊ. ನಾಳಗಳಲ್ಲಿ) ಅದುಮಿ ಪರಿಚಲನೆಯನ್ನು ತಡೆ, ಬಂಧಿಸು. **Strangulátion** (ನಾ.)

Strángles. **Strangle** ನೋಡಿ.

Strángury ಸ್ಟ್ರ್ಯಾಂಗ್ಯುರಿ (ನಾ.) ಕಷ್ಟದಿಂದ ತೊಟ್ಟು ತೊಟ್ಟಾಗಿ ಉಚ್ಚೆ ಹೋಗುವ ರೋಗ: ಉರಿಮೂತ್ರ, ಮೂತ್ರಕೃಚ್ಛ್ರ; ಗಿಡಗಳಿಗೆ ಕಟ್ಟುಹಾಕುವುದರಿಂದ ಬರುವ ಊತ, ಮೊ. ರೋಗ: ಕಟ್ಟುರೋಗ. **Strangúrious** (ಗು.)

Strap ಸ್ಟ್ರ್ಯಾಪ್ (ನಾ., ಕ್ರಿ. ಸಕ.) ಚಕ್ಕಳದ, ತೊಗಲಿನ, —ಪಟ್ಟಿ; ಬಾರು; ಮೂಟೆ, ಮೊ. ನ್ನು ಕಟ್ಟುವುದಕ್ಕೆ ಉಪಯೋಗಿಸುವ, ಕೊಕ್ಕೆ, ಹಿಡಿಕೆ, ಮೊ. ಸಲಕರಣೆಯುಳ್ಳ, ತೊಗಲಿನ ಅಥವಾ ಇತರ ಪದಾರ್ಥದ ಪಟ್ಟಿ: ಕಟ್ಟುಪಟ್ಟಿ [Shoulder-s. (Shoulder

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೋಡಿ). Rug, umbrella, etc. -s. ಕಂಬಳಿ, ಕೊಡೆ, ಮೊ. ನ್ನು ಕಟ್ಟುವುದಕ್ಕಾಗಿ ಒಂದು ಜೊತೆ ಪಟ್ಟಿಯನ್ನು ಅಡ್ಡಹಿಡಿಕೆಯಿಂದ ಕೂಡಿಸಿ ಮಾಡಿದ ಕಟ್ಟು : ಕಂಬಳಿಯ, ಕೊಡೆಗಳ, ಕಟ್ಟುಪಟ್ಟಿ]; ಲೋಹದ ಬಿಗಿ ಪಟ್ಟಿ, ಕೂಡುಪಟ್ಟಿ ; ಕೀಲು, ಮೊ. ಗಳ ಚಲಭಾಗ ; (ಸ. ವಿ.) ಪುಷ್ಪದಳ ವಲಯದಲ್ಲಿಯ ಪಟ್ಟಿಯಾಕಾರದ ಭಾಗ, ಹುಲ್ಲಿನ ಎಸಳು, ಗರಿಕೆ; [The s. ಪಟ್ಟಿಯಿಂದ ದಂಡಿಸುವುದು, ಬಾರು ಶಿಕ್ಷೆ. S.-hanger (ರೈಲನಲ್ಲಿ ಅಥವಾ ಬಸ್ಸಿನಲ್ಲಿ; ಕುಳಿತುಕೊಳ್ಳಲು ಸ್ಥಳವಿಲ್ಲದೆ) ಪಟ್ಟಿಯನ್ನು ಹಿಡಿದುಕೊಂಡು ನಿಂತಿರಬೇಕಾದ ಪ್ರಯಾಣಿಕ: ಪಟ್ಟಿ ಹಿಡುಕ. S.-laid (ಹಗ್ಗದ ವಿಷಯದಲ್ಲಿ) ಹಗ್ಗಗಳನ್ನು ಪಕ್ಕ ಪಕ್ಕದಲ್ಲಿಟ್ಟು ಚಪ್ಪಟೆಯಾಗಿ ಕೂಡಿಸಿದ: ಪಟ್ಟಿಯಾಗಿ ಜೋಡಿಸಿದ, ಚಪ್ಪಟೆ ಜೋಡಣೆಯ. S.-oil ಪಟ್ಟಿಯ ಹೊಡೆತ, ಬಾರೇಟು. S.-work ಪಟ್ಟಿ ಹೆಣಿಗೆಯಲಂಕಾರ, ಪಟ್ಟಿ ಕೆಲಸ. S.-wort ಬಿಳಿಯ ಹೂವು ಬಿಡುವ ಒಂದು ಸಸ್ಯ]. (ಕ್ರಿ.) ಪಟ್ಟಿ—ಬಿಗಿ, ಕಟ್ಟು [(ಅನೇಕ ವೇಳೆ *up, down* ಮೊ. ಉಪ. ದೊಡನೆ). Strapped trousers ಪಾದರಕ್ಷೆಯ ಮೇಗಾಲ ಪಟ್ಟಿಯ ಕೆಳಗೆ ಹಾಯ್ದಿರುವ ಪಟ್ಟಿಯಿಂದ ಕೆಳಕ್ಕೆಳೆದು ಹಿಡಿದಿರುವ ಷರಾಯಿ : ಪಟ್ಟಿ ಷರಾಯಿ (ಇದು ಕುದುರೆ ಸವಾರಿ, ಮೊ. ಕ್ಕೆ ಅನುಕೂಲ)]; (ಚಾಕು, ಕ್ಷೌರದ ಕತ್ತಿ, ಮೊ. ನ್ನು) ತೊಗಲಪಟ್ಟಿಯ ಮೇಲೆ, ಮಸೆಪಟ್ಟಿಯ ಮೇಲೆ, —ಮಸೆ; (ಶಸ್ತ್ರವೈದ್ಯ : ಗಾಯವನ್ನು, ಭಾಗವನ್ನು) ಮುಲಾಮುಪಟ್ಟಿಯಿಂದ, ಅಂಟು ಪಳಾಸ್ತ್ರಿಯಿಂದ, ಕಟ್ಟು. ಪಟ್ಟಿಯಿಂದ ಹೊಡೆ, ಬಾರೇಟು ಕೊಡು ; (ವರ್ತಮಾನ ಕೃ., ಗು. ವಾಗಿ ಪ್ರ.) ಭಾರಿ, ಎತ್ತರವಾದ, ಕಟ್ಟುಮಸ್ತಾದ (A strapping girl, fellow). **Strápper** (ನಾ.) ಭಾರಿ, ಎತ್ತರವಾದ, ಕಟ್ಟುಮಸ್ತಾದ —ಆಳು, ಆಸಾಮಿ; ಧಾಂಡಿಗ. **Strápping** (ನಾ.) ಸಣ್ಣ ಪಟ್ಟಿ ; ಪಟ್ಟಿಗಳು, ಕಟ್ಟುಗಳು ; ಮುಲಾಮು—ಕಟ್ಟು, ಪಟ್ಟಿ ; ಅಂಟುಪಟ್ಟಿ.

Strappádo ಸ್ಟ್ರಪೇ(ಪಾ)ಡೊ (ನಾ., ಕ್ರಿ. ಸಕ.) ಕೋದಂಡದಂಥ ಒಂದು ಶಿಕ್ಷೆ (ಇದರಲ್ಲಿ ಒಬ್ಬನ ಕೈಗಳನ್ನು ಬೆನ್ನಿಗೆ ಸೇರಿಸಿ ಹಗ್ಗದಿಂದ ಬಿಗಿದು, ಅವನನ್ನು ಕಪ್ಪಿಯ ಮೂಲಕ ಮೇಲಕ್ಕೆ ಏರಿಸಿ, ಬಳಿಕ ತಟ್ಟನೆ ಇಳಿಯಬಿಟ್ಟು, ಅವನು ನೇಲಾಡುವಂತೆ ಮಾಡಲಾಗುತ್ತದೆ). (ಕ್ರಿ.) ಈ ಶಿಕ್ಷೆ ಕೊಡು, ಈ ಶಿಕ್ಷೆಯಿಂದ ಹಿಂಸಿಸು.

Stráta. **Stratum** ನೋಡಿ.

Strátagem ಸ್ಟ್ರ್ಯಾಟಜೆಂ (ನಾ.) (ಶತ್ರುವನ್ನು ಮೋಸಗೊಳಿಸಲು ಹೂಡಿದ) ಹಂಚಿಕೆ, ತಂತ್ರ, ಉಪಾಯ, ಯುಕ್ತಿ (Devised a s. ಯುಕ್ತಿ ಕಲ್ಪಿಸಿದನು. Must be effected by s. ತಂತ್ರದಿಂದ ಸಾಧಿಸಬೇಕು). **Stratégic** ಸ್ಟ್ರಟೆ(ಟೀ)ಜಿಕ್ (ಗು.) ಯುದ್ಧ ತಂತ್ರದ, ಯುದ್ಧೋಪಾಯದ, ವ್ಯೂಹಯುಕ್ತಿಯ (S. skill, considerations, movements, position). **Stratégical** (ಗು.) (ವಿರ. ಪ್ರ.); **Stratégically** (ಕ್ರಿ. ವಿ.); **Stratégics** (ನಾ.) ಸೈನ್ಯ ಸಂಚಾಲನ ವಿವೇಕ. **Stratégus** ಸ್ಟ್ರಟೀಗಸ್ (ನಾ. ; ಬ. ವ. -gi —ಗೈ, ಜೈ) (ಗ್ರೀಕ್ ಪ್ರಾಚೀನ) ಯುದ್ಧನಾಯಕ, ಸೇನಾನಿ, ಸೇನಾಪತಿ, ಪಡೆವಳ (ಮು., ಅಥೆನ್ಸ್ ಪಟ್ಟಣದಲ್ಲಿ ಪ್ರತಿವರ್ಷ ನೇಮಕವಾಗುತ್ತಿದ್ದ ಹತ್ತು ಮಂದಿ ಸೇನಾನಾಯಕ ಮಂಡಲಿಯವರಲ್ಲೊಬ್ಬ). **Strátegy** ಸ್ಟ್ರ್ಯಾಟಿಜಿ (ನಾ.) ಯುದ್ಧದಲ್ಲಿ ಸೈನ್ಯ ನಿರ್ವಹಣ, ಸೇನಾ ವ್ಯವಸ್ಥೆ ; ತಾನು ಇಷ್ಟಪಡುವಂತಹ ಸ್ಥಳ, ಕಾಲ, ಸ್ಥಿತಿಗಳನ್ನು ಅನುಸರಿಸಿ ಕಾದಾಡಬೇಕಾದ ನಿರ್ಬಂಧಕ್ಕೆ ತನ್ನ ಶತ್ರುವನ್ನು ಕಟ್ಟಿಹಾಕುವಂತೆ ಸೈನ್ಯದಳಗಳನ್ನು ಅಥವಾ ಹಡಗು ಪಡೆಯನ್ನು ನಡಸುವ, ವ್ಯೂಹ ರಚಿಸುವ, ಉಪಾಯ : ಸೈನ್ಯ ಸಂಚಾಲನೋಪಾಯ, ವ್ಯೂಹ ನಿರ್ಮಾಣ ವಿವೇಕ ; ಸೇನಾನಾಯಕ ತಂತ್ರ; (ರೂಪ.) ಯುಕ್ತಿ, ತಂತ್ರ, ಉಪಾಯ. **Strátegist** (ನಾ.)

Stratégic, etc., Stratégus, Strátegy, etc. Stratagem ನೋಡಿ.

Strath ಸ್ಟ್ರ್ಯಾತ್ (ನಾ.) (ಸ್ಕಾ. ಪ್ರ.) ಅಗಲವಾದ ಬೆಟ್ಟದ ಕಣಿವೆ.

Strathspeý ಸ್ಟ್ರ್ಯಾತ್ಸ್ಪೀ (ನಾ.) ಒಂದು ಬಗೆಯ ಸ್ಕಾಚ್ ಕುಣಿತ.

Stratículate, Strátify, Strato-. Stratum ನೋಡಿ.

Stratócracy ಸ್ಟ್ರಟಾಕ್ರಸಿ (ನಾ.) ಸೈನಿಕ—ಪ್ರಭುತ್ವ, ಸರ್ಕಾರ ; ಸಿಪಾಯಿಗಳ ಆಡಳಿತ.

Strátosphere. Stratum ನೋಡಿ.

Strátum ಸ್ಟ್ರೇಟಂ (ನಾ., ಬ. ವ. -ta —ಟ) (ಭೂ. ವಿ.) (ಭೂಮಿಯಲ್ಲಿಯ ಮಣ್ಣು, ಕಲ್ಲು, ಮೊ. ಗಳ) ಸ್ತರ (ಶ್ರೇಣಿ), ಪದರ (ತಂಡ); (ರೂಪ.) (ಸಮಾಜದಲ್ಲಿಯ) ಹಂತ, ದರ್ಜೆ, ಮಟ್ಟ (The various strata of society ಸಮಾಜದ ನಾನಾ ದರ್ಜೆಗಳು). **Strátal** (ಗು.), **Strátiform** ಸ್ಟ್ರ್ಯಾಟಿಫಾರ್ಮ್ (ಗು.) ಪದರಗಳಾಗಿ ಏರ್ಪಟ್ಟ, ಸ್ತರರೂಪದ. **Stratículate** ಸ್ಟ್ರಟಿಕ್ಯುಲೇಟ್ (ಗು.) (ಭೂ. ವಿ.) ತೆಳು ಪದರಗಳಾಗಿರುವ ; ಸೂಕ್ಷ್ಮ ಸ್ತರಗಳಾಗಿ ಏರ್ಪಟ್ಟ. **Strátify** ಸ್ಟ್ರ್ಯಾಟಿಫೈ— (ಕ್ರಿ. ಸಕ.) ಸ್ತರಗಳಾಗಿ, ಪದರಗಳಾಗಿ, —ಏರ್ಪಡಿಸು, ರಚಿಸು (ಮು., ಭೂ. ಕೃ. ನಲ್ಲಿ). **Stratificátion** (ನಾ.); **Stratígraphy** ಸ್ಟ್ರಟಿಗ್ರಫಿ (ನಾ.) ಭೂವಿಜ್ಞಾನದಲ್ಲಿ ಸ್ತರಗಳನ್ನು ಕುರಿತ ಭಾಗ: ಸ್ತರ ವಿವರಣೆ, ಸ್ತರ (ವಿವರಣ) ಶಾಸ್ತ್ರ. **Stratigráphic** ಸ್ಟ್ರ್ಯಾಟಿಗ್ರ್ಯಾಫಿಕ್ (ಗು.) ; **Stratigráphically** (ಕ್ರಿ. ವಿ.) ; **Strato** ಸ್ಟ್ರೇಟೊ— (ಸ. ಪೂ. ಪ.) ಸ್ತರ—, ಪದರ—. **-círrus** (ನಾ.) ಪದರ ಪದರಗಳಾದ ಕುಂತಲ ಮೇಘ (Cirrus ನೋಡಿ). **-cúmulus** (ನಾ.) ಪದರವೊಡ್ಡು ಮೋಡ, ಸ್ತರಪುಂಜ ಮೇಘ. **-sphere** (ನಾ.) ಭೂಮಿಯ ಮೇಲ್ಮೈಯಿಂದ ಏಳು ಮೈಲಿಯಾಚೆ ಇರುವ, ಮೇಲೆ ಮೇಲಕ್ಕೆ ಹೋದಂತೆ ಶಾಖ ಕಡಮೆಯಾಗದೆ ಒಂದೇ ಸಮನಾಗಿ ಇರುವ, ವಾಯುಮಂಡಲ ಸ್ತರ: (ಅಂತರಿಕ್ಷದಲ್ಲಿ) ಊರ್ಧ್ವ ವಾಯುಮಂಡಲ. **Strátus** ಸ್ಟ್ರೇಟಸ್ (ನಾ., ಬ. ವ. -ti —ಟೈ) ಚಪ್ಪಟೆಯಾದ ಅಖಂಡ ಮೇಘ : ಸ್ತರ ಮೇಘ, ಪದರ ಮೋಡ.

Straw ಸ್ಟ್ರಾ (ನಾ., ಕ್ರಿ. ಸಕ.) ಒಣಹುಲ್ಲು [Made of, thatched with, s. (ಒಣ) ಹುಲ್ಲಿನಿಂದ ಮಾಡಿದ, ಹುಲ್ಲು ಹೊದಿಸಿದ. A load of s. ಹುಲ್ಲಿನ ಹೊರೆ. S. mattress, hat, rope ಹುಲ್ಲಿನ ಹಾಸಿಗೆ, ಟೊಪ್ಪಿಗೆ, ಹಗ್ಗ. In the s. (ಪ್ರಾಚೀ. ಪ್ರ.) ಮಗು ಹೆತ್ತು, ಹಡೆದು, ಪ್ರಸವಿಸಿ. Man of s. ಹುಲ್ಲು ತುಂಬಿದ ಮನುಷ್ಯಾಕೃತಿ ; ಕಾಲ್ಪನಿಕ—ವಿರೋಧಿ, ಶತ್ರು, ವ್ಯಕ್ತಿ ; ಹುಲುಮನುಜ, ತೃಣಪ್ರಾಯ ಮನುಷ್ಯ ; ಸತ್ತ್ವವಿಲ್ಲದವನು]. ಹುಲ್ಲು ಟೊಪ್ಪಿಗೆ; ಹುಲ್ಲುಕಡ್ಡಿ ; ಕೆಲಸಕ್ಕೆ ಬಾರದ್ದು ; ಅಲ್ಪ, ಕ್ಷುದ್ರ, —ವಸ್ತು, ವಿಷಯ [With a s. in his mouth ಬಾಯಲ್ಲಿ ಹುಲ್ಲು ಕಚ್ಚಿಕೊಂಡು. Lemonade sucked through straws ಹುಲ್ಲುಕೊಳವೆಗಳ ಮೂಲಕ ಹೀರಿ ಕುಡಿದ ಲೆಮೊನೆಡ್ ಪಾನೀಯ, ಗಜನಿಂಬೆ ಪಾನಕ. Draw straws (ಬೇರೆ ಬೇರೆ ಉದ್ದದ) ಹುಲ್ಲುಕಡ್ಡಿಗಳನ್ನು ಹಾಕಿ ಆಯ್ಕೆಯಿಂದ ಅದೃಷ್ಟ ನಿರ್ಧರಿಸು. Make bricks without s. (Brick ನೋಡಿ). Catch at a s. (ನೀರಿನಲ್ಲಿ ಮುಳುಗಿಹೋಗುತ್ತಿರುವ ಮನುಷ್ಯನಂತೆ) ಹುಲ್ಲುಕಡ್ಡಿ ಹಿಡಿದುಕೊ, ಅಪ್ರಯೋಜಕ ಸಾಧನವನ್ನು ಆಶ್ರಯಿಸು. The last s. ಹೊರೆಯನ್ನು ಇನ್ನು ಹೊರಲಾಗದಂತೆ ಮಾಡುವ ತುಸು ಹೆಚ್ಚಿಕೆ: ಕಡೆಕಡ್ಡಿ (It is the last s. that breaks the camel's neck) ; ಕೊನೆಯ ನಚ್ಚು, (ಉಳಿದಿರುವ) ಕಡೆಯ ಕಾಸು. A s. shows which way the wind blows ಸೂಕ್ಷ್ಮ ಸುಳಿವಿನಿಂದ ಬಹಳ ಸೂಚನೆಯಾಗುತ್ತದೆ ; ಅತ್ಯಲ್ಪ ವಿಷಯಗಳು ಬರಲಿರುವ ಮಹದ್ಘಟನೆಗಳನ್ನು ಸೂಚಿಸುತ್ತವೆ. Is not worth a s. ಹುಲ್ಲುಕಡ್ಡಿಯ ಬೆಲೆಯಿಲ್ಲ. Don't care a s. ಹುಲ್ಲುಕಡ್ಡಿಗಿಂತ ಕಡೆಯಾಗಿ ಕಾಣುತ್ತೇನೆ; ಸ್ವಲ್ಪವೂ ಲಕ್ಷ್ಯಮಾಡುವುದಿಲ್ಲ. S.-board ಹುಲ್ಲಿನಿಂದ ಮಾಡಿದ ಒರಟು ರಟ್ಟು : ಹುಲ್ಲುರಟ್ಟು. S.-colour(ed) ಒಣಹುಲ್ಲು ಬಣ್ಣ(ದ), ಮಾಸಲು ಹಳದಿ(ಯ). S.-stem ಬೇರೆಯಾಗಿ ಕಾವನ್ನು ಕೂಡಿಸಿರದೆ, ಬಟ್ಟಲ ಭಾಗವನ್ನೇ ಎಳೆದು ಮಾಡಿದ ಕಾವುಳ್ಳ, ಮದ್ಯದ ಬಟ್ಟಲು]. (ಕ್ರಿ.) (ಪ್ರಾಚೀ. ಪ್ರ.) = Strew. **Strawy** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Strawberry ಸ್ಟ್ರಾಬೆರಿ (ನಾ.) ಮೇಲ್ಭಾಗದಲ್ಲಿ ಹಳದಿ ಬೀಜಗಳು ತುಂಬಿರುವ, ಕೆಂಬಣ್ಣದ, ಒಂದು ಬಗೆಯ ತಿರುಳು ಹಣ್ಣು (ಬಿಡುವ, ಬಳ್ಳಿಗವಲುಗಳುಳ್ಳ, ಬಹು ವರ್ಷ ಇರುವ ಸಸ್ಯ): ನೆಲಮುಳ್ಳಿ ಹಣ್ಣು, —ಹಣ್ಣಿನ ಗಿಡ [Crushed s. ಒಂದು ಬಗೆಯ ಮಾಸಲು ಕಡುಗೆಂಪು. The s. leaves ಡ್ಯೂಕ್ ಶ್ರೀಮಂತ ಪದವಿ (ಡ್ಯೂಕಿನ ಕಿರೀಟದ ಮೇಲಣ ಸ್ಟ್ರಾಬೆರಿ ಎಲೆಯಲಂಕಾರದಿಂದ)]. **S.-mark** ಮೃದುವಾದ ಕೆಂಬಣ್ಣದ ಹುಟ್ಟುಮಚ್ಚೆ. **S.-pear** ವೆಸ್ಟ್ ಇಂಡೀಸ್ ದ್ವೀಪದ ಪಾಪಾಸುಕಳ್ಳಿ ಜಾತಿಯ ಒಂದು ಸಸ್ಯ(ದ ಹಣ್ಣು). **S.-roan** =Red roan (Roan[1] ನೋಡಿ). **S.-tree** ಸ್ಟ್ರಾಬೆರಿ ಹಣ್ಣಿನಂಥ ಹಣ್ಣು ಬಿಡುವ ಒಂದು ನಿತ್ಯ ಹಸುರು ಗಿಡ.

Stray ಸ್ಟ್ರೇ (ಕ್ರಿ. ಅಕ.; ಭೂತ., ಭೂ. ಕೃ. Strayed ಸ್ಟ್ರೇಡ್; ನಾ., ಗು.) ಅಲೆ(ದಾಡು), ತಿರಿ(ದಾಡು); ಗೊತ್ತುಗುರಿಯಿಲ್ಲದೆ ಸುತ್ತಾಡು; ದಾರಿ ತಪ್ಪು, ಮಾರ್ಗ ಬಿಟ್ಟುಹೋಗು, ಅಡ್ಡದಾರಿ ಹಿಡಿ, ದುರ್ನೀತಿಗೆ ಬೀಳು; ಮಂದೆ, ಜೊತೆ, —ಬಿಟ್ಟುಹೋಗು, ತಪ್ಪಿಸಿಕೊ; ತೊಂಡಲೆ; ಎಡೆ, ನೆಲೆ, —ತಪ್ಪು. (ನಾ.) ತಪ್ಪಿಸಿಕೊಂಡು ಹೋಗಿರುವ ಪ್ರಾಣಿ; ತೊಂಡು ದನ [Waifs & strays (Waif ನೋಡಿ)]; ಉತ್ತರಾಧಿಕಾರಿಗಳಿರದೆ ಸತ್ತದ್ದರಿಂದ ರಾಜ್ಯಕ್ಕೆ ಸೇರಿಹೋಗುವ ಮೃತನ ಸ್ವತ್ತು: ರಾಜ್ಯಕ್ಕೆ ಸೇರಿಹೋಗುವ ಬೇವಾರಸು ಸ್ವತ್ತು; ಆಗಂತುಕ ಸ್ವತ್ತು. (ನಿಸ್ತಂತು ವಾರ್ತೆ; ಸಾ., ಬ. ವ. ದಲ್ಲಿ) =Atmospherics (Atmosphere ನೋಡಿ). (ಗು.) ದಾರಿ ತಪ್ಪಿದ, ತಪ್ಪಿಸಿಕೊಂಡ, ಅಲೆದಾಡುವ, ತೊಂಡಲೆಯುವ; ಅಲ್ಲಿಷ್ಟು ಇಲ್ಲಿಷ್ಟು ಕಾಣಬರುವ, ಚೆದರಿರುವ, ಆಕಸ್ಮಾತ್ತಾದ, ಅಪರೂಪವಾದ, ವಿರಳ (A few s. instances ಕೆಲವು ಅಪರೂಪ ನಿದರ್ಶನಗಳು. A s. customer or two ಅಪರೂಪಕ್ಕೆ ಬರುವ ಒಬ್ಬಿಬ್ಬರು ಗಿರಾಕಿಗಳು. Hit by a s. bullet ಆಕಸ್ಮಿಕವಾಗಿ ಬಂದ ಗುಂಡು ತಗುಲು)

Streak ಸ್ಟ್ರೀಕ್ (ನಾ., ಕ್ರಿ. ಸಕ.) (ಒಂದು ಮೇಲ್ಮೈಮೇಲೆ ಬೇರೆಯ ಬಣ್ಣದ) ಗೀಟು, ಗೆರೆ, ಎಳೆ, ಪಟ್ಟೆ, ರೇಖೆ [Black with red streaks ಕೆಂಪು ಗೆರೆಗಳುಳ್ಳ ಕಪ್ಪುವೊಡಲು. A s. of light above the horizon ದಿಗಂತದಮೇಲೆ ಬೆಳಕಿನ ರೇಖೆಯೊಂದು. Bacon with streaks of fat & lean ಕೊಬ್ಬಿನ ಮತ್ತು ಸ್ನಾಯುವಿನ ಎಳೆಗಳುಳ್ಳ ಹಂದಿಯ ಮಾಂಸ. S. of lightning ಮಿಂಚಿನ ರೇಖೆ, ವಿದ್ಯುಲ್ಲೇಖೆ. Like a s. (of lightning) ಮಿಂಚು ಹೊಳೆದಂತೆ, ಮಿಂಚಿನ ವೇಗದಲ್ಲಿ. The silver s. ಇಂಗ್ಲಿಷ್ ಕಡಲ್ಗಾಲುವೆ. Has a s. of humour in him ಅವನಲ್ಲಿ ಹಾಸ್ಯದ ಎಳೆ ಇದೆ]. (ಕ್ರಿ.) ಗೆರೆ, ಪಟ್ಟೆ, —ಗಳಿಂದ ಗುರುತಿಸು; ಗೆರೆ, ಪಟ್ಟೆ, —ಎಳೆ (ಸಾ., ಭೂ. ಕೃ. ನಲ್ಲಿ). **Streáky** (ಗು.) ಗೆರೆಗಳೆಳೆದ, ಪಟ್ಟೆಪಟ್ಟೆಯಾದ; (ವ್ಯಕ್ತಿ, ಮನೋಭಾವ, ಮೊ. ಗಳ ವಿಷಯದಲ್ಲಿ) ಒಂದು ಸಮವಿಲ್ಲದ, ಬದಲಾಯಿಸುತ್ತಿರುವ, ನೆಚ್ಚಿಕೆಯಿಲ್ಲದ; (ಅಸಂ.) ಸಿಡುಕಿನ, ರೇಗುವ. **Streákily** (ಕ್ರಿ. ವಿ.); **Streákiness** (ನಾ.)

Stream ಸ್ಟ್ರೀಮ್ (ನಾ., ಕ್ರಿ.) ಪಾತ್ರದಲ್ಲಿ ಹರಿಯುವ ನೀರು: ಹೊಳೆ, ಹಳ್ಳ, ತೊರೆ, ನದಿ [On the banks of a s.; Up, down, s. ಹೊಳೆಯ ಮೇಲುಗಡೆ(ಗೆ), ಕೆಳಗಡೆ(ಗೆ)]; (ದ್ರವ, ಮೊ. ಗಳ) ಹರಿವು, ಹೊನಲು, ಪ್ರವಾಹ [Saw a s. of lava. Came out, went by, in a s. *or* streams ಪ್ರವಾಹರೂಪದಲ್ಲಿ, ಪ್ರವಾಹವಾಗಿ, —ಬಂದರು, ಹೋದರು. A s. *or* streams of blood, tears, people ರಕ್ತದ, ಕಣ್ಣೀರಿನ, ಜನದ, —ಪ್ರವಾಹ. Gulf-s. (Gulf ನೋಡಿ). With, against, the s. ಪ್ರವಾಹದೊಡನೆ, ಪ್ರವಾಹಕ್ಕೆ ಎದುರಾಗಿ. Go with the s. ಇತರರು ಮಾಡಿದಂತೆ ಮಾಡು, ಹತ್ತು ಜನದಂತೆ ನಡೆ; ಪ್ರವಾಹದೊಂದಿಗೆ ಹೋಗು. The s. of thought is the other way ವಿಚಾರದ ಪ್ರವಾಹ, ಓಟ, ಬೇರೆಯ ಕಡೆಗಿದೆ]; [S.-anchor ಮಧ್ಯಮ ಗಾತ್ರದ ಲಂಗರು. S.-line (ನೀರಿನ ಅಥವಾ ವಾಯುವಿನ) ಪ್ರವಾಹಮಾರ್ಗ. S.-line shape ಗಾಳಿಯ ಅಥವಾ ನೀರಿನ ತಡೆಯನ್ನು ಆದಷ್ಟು ತಗ್ಗಿಸುವಂತೆ ರಚಿಸಿದ ಆಕಾರ: ಮೀನಾಕೃತಿ]. (ಕ್ರಿ.) ಹೊನಲಾಗಿ, ಪ್ರವಾಹವಾಗಿ, —ಹರಿ; ಹೊನಲಿಡು, ಪ್ರವಹಿಸು (Streaming eyes ಕಂಬನಿಗರೆಯುತ್ತಿರುವ ಕಣ್ಣುಗಳು. Streaming windows ನೀರು ಹರಿಯುತ್ತಿರುವ ಕಿಟಕಿಗಳು); (ಬಾವುಟ, ಬಡುಗೂದಲು, ಮೊ. ಗಳ ವಿಷಯದಲ್ಲಿ) ಗಾಳಿಯಲ್ಲಿ ಆಡು, ತೇಲಾಡು, ಹಾರಾಡು; (ರಕ್ತ, ಮೊ. ನ್ನು) ಧಾರೆಯಾಗಿ ಸುರಿಸು, ಹರಿಸು. **Streámer** (ನಾ.) ಉದ್ದನೆಯ ಚೂಪಾದ ಬಾವುಟ; (ಬಾವುಟದಂತೆ) ಹಾರಾಡುತ್ತಿರುವ ಪಟ್ಟಿ, ಮೊ. ವು; (ಭೂಕಾಂತ ಧ್ರುವ ಪ್ರಭೆಯ) ಪ್ರಕಾಶ ಪ್ರವಾಹ, ಬೆಳಕಿನ ಹೊನಲು. **Streámless** (ಗು.); **Streámlet** (ನಾ.) ಸಣ್ಣ ಹೊಳೆ. **Streámy** (ಗು.) (ವಿರ. ಪ್ರ.) ಹೊನಲಾಗಿ ಹರಿಯುವ, ಪ್ರವಾಹರೂಪದ; (ಹರಿಯುವ) ಹೊಳೆಗಳಿರುವ.

Streámer. Stream ನೋಡಿ.

Street ಸ್ಟ್ರೀಟ್ (ನಾ.) ಒಂದು ಪಕ್ಕದಲ್ಲಿ ಅಥವಾ ಎರಡೂ ಪಕ್ಕಗಳಲ್ಲಿ ಮನೆಗಳಿರುವ ಊರಿನ ರಸ್ತೆ: ಬೀದಿ, ಕೇರಿ [Main, side, broad, s. ಮುಖ್ಯ, ಅಡ್ಡ, ದೊಡ್ಡ, ಬೀದಿ. Live in the s. ಮೂರು ಹೊತ್ತೂ (ಮನೆ ಬಿಟ್ಟು) ಹೊರಗೇ, ಬೀದಿಯಲ್ಲೇ, ಇರು. Lives in a fashionable s.; Man in the s. (Man ನೋಡಿ). Not in the same s. with (ಬಳ. ಮಾ.) (ಯೋಗ್ಯತೆ, ಮೊ. ಗಳಲ್ಲಿ) ತೀರ ಕೀಳಾದ, ಕಡಮೆ ದರ್ಜೆಯ. In the s. (ಪತ್ರವ್ಯಾಪಾರದ ವಿಷಯದಲ್ಲಿ) ವ್ಯಾಪಾರದ ಹೊತ್ತಾದಮೇಲೆ ನಡಸಿದ, ನಮೂದಿಸಿದ. On the streets ವೇಶ್ಯಾವೃತ್ತಿಯಲ್ಲಿ (Be on the streets ಬೀದಿ ಸೂಳೆಯಾಗಿರು). Key of the s. (Key[1] ನೋಡಿ). Grub, Lombard, Queer, s. (ಆಯಾ ಪದ ನೋಡಿ)]. **S. Arab** (Arab ನೋಡಿ). **S. cries** (ಬೀದಿ ವ್ಯಾಪಾರಿಗಳ) ಬೀದಿ ಕೂಗು. **S.-door** ಬೀದಿಯ ಬಾಗಿಲು. **S. orderly** ಬೀದಿ ಗುಡಿಸುವವನು, ಝಾಡಮಾಲಿ. **S.-sweeper** ಬೀದಿ ಗುಡಿಸುವ ಯಂತ್ರ. **Streét-walker** ಬೀದಿ ಸೂಳೆ, ಗುಡಿಸೆಟ್ಟಿ. **(-)streeted** (ಗು.); **Streét-ward** (ಕ್ರಿ. ವಿ., ಗು.) ಬೀದಿಯ ಕಡೆ(ಯ)

Stréngth ಸ್ಟ್ರೆಂಗ್ತ್ (ನಾ.) ಬಲ, ಶಕ್ತಿ, ಸಾಮರ್ಥ್ಯ, ಸತ್ತ್ವ, ತ್ರಾಣ, ತೀಕ್ಷ್ಣತೆ, ಜೋರು, ತಾಕತ್ತು, ತಡೆತ [The s. of wine, acid, tea ಮದ್ಯದ, ಆಮ್ಲದ, ಟೀ ಪಾನೀಯದ, —ಜೋರು, ತೀಕ್ಷ್ಣತೆ. S. of mind ಮನಸ್ಸಿನ ಬಲ. S. of judgement ವಿವೇಕ, ನಿರ್ಣಯ, —ಪಟುತ್ವ. Has the s. of a horse ಅವನಿಗೆ ಕುದುರೆಯಷ್ಟು ಬಲವಿದೆ. Is too much for my s. ನನ್ನ ಶಕ್ತಿಗೆ ಮೀರಿದೆ. Measure one's s. with (—ಒಡನೆ) ಹೋರಾಟಕ್ಕೆ ನಿಲ್ಲು, ಸ್ಪರ್ಧಿಸು. On the s. of —ರ ಆಧಾರದಮೇಲೆ, ಬಲದಮೇಲೆ; —ನ್ನು ನೆಚ್ಚಿಕೊಂಡು (I did it on the s. of your promise). God is our s. ದೇವರೇ ನಮ್ಮ ಬಲ. His s. is patience ತಾಳ್ಮೆಯೆ ಅವನ ಬಲ]. ಮೊತ್ತ, ಸಂಖ್ಯೆ, ಸಂಖ್ಯಾಬಲ (Were there in great, full, s.). On the s. (ಸೈನಿಕ) ದಾಖಲೆ, ಹಾಜರಿಪಟ್ಟಿ (Was taken, is, on the s. ಅವನನ್ನು ದಾಖಲೆಗೆ ತೆಗೆದುಕೊಂಡಿದೆ, ಅವನು ಹಾಜರಿಪಟ್ಟಿಯಲ್ಲಿದ್ದಾನೆ). **Stréngthen** ಸ್ಟ್ರೆಂಗ್ತ್‌ನ್ (ಕ್ರಿ.) ಬಲ—ಗೊಳ್ಳು, ಗೊಳಿಸು, ಪಡು, ಪಡಿಸು [S. one's hands (ರೂಪ.) (ಇನ್ನೂ ಜೋರಿನಿಂದ ಕೆಲಸಮಾಡುವಂತೆ) ಬೆಂಬಲಕೊಡು, ಪ್ರೋತ್ಸಾಹಿಸು]. **Stréngthless** (ಗು.)

Strénuous ಸ್ಟ್ರೆನ್ಯುಅಸ್ (ಗು.) ಚಟುವಟಿಕೆಯ, ಚುರುಕಿನ, ಹುರುಪಿನ; ಸತತೋತ್ಸಾಹದ; ಸತತ—ಶ್ರದ್ಧೆಯ, ಪ್ರಯತ್ನದ (A s. reformer); ಶ್ರಮಪಡಿಸುವ, ಕಷ್ಟ ಪರೀಕ್ಷೆಯ (S. days). **Strénuously** (ಕ್ರಿ. ವಿ.); **Strénuousness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Stréphon ಸ್ಟ್ರೆಫಾನ್ (ನಾ.) ಮುಗ್ಧಪ್ರಣಯಿ (S. & Chloe ಮುಗ್ಧಪ್ರಣಯಿ ಪ್ರಣಯಿನಿಯರು) (Sir Philip Sidney ಕವಿಯ 'Arcadia' ಎಂಬ ಕಾವ್ಯದಲ್ಲಿಯ ಒಂದು ಪಾತ್ರದ ಹೆಸರಿನಿಂದ)

Strepitóso (It.) ಸ್ಟ್ರೆ(ೕ)ಪಿಟೋಸೊ (ಸಂ. ಸೂಚನೆ) ರಭಸದಿಂದ, ಜೋರಾಗಿ.

Streptocóccus ಸ್ಟ್ರೆಪ್ಟೊಕಾಕಸ್ (ನಾ., ಬ. ವ. -cci —ಕ್‌ಸೈ) ಸರಪಣಿಯ ಅಥವಾ ಹಾರದ ಆಕಾರದ ಏಕಾಣು ಜೀವಿ.

Stress ಸ್ಟ್ರೆಸ್ (ನಾ., ಕ್ರಿ. ಸಕ.) ಒತ್ತಡ, ಒತ್ತರ, ಒತ್ತಾಯ, ಬಲಾತ್ಕಾರ, ನಿರ್ಬಂಧ, ಜೋರು (*Of* ಉಪ. ದೊಡನೆ) (Under, driven by, the s. of weather, poverty, etc. ಹವ, ಬಡತನ, ಮೊ. ಗಳ ಒತ್ತರಕ್ಕೆ, ಒತ್ತಾಯಕ್ಕೆ, ಸಿಕ್ಕಿ) ; ಶ್ರಮ, ಪ್ರಯಾಸ, ಪ್ರಯತ್ನ [Storm & s. (Storm ನೋಡಿ). Subjected to great s. ತುಂಬ ಪ್ರಯಾಸಕ್ಕೆ ಸಿಕ್ಕಿ. Times of slackness & times of s. ಬಿಡುವು ದಿವಸಗಳು ಮತ್ತು ಗಲಾಟೆಯ ದಿವಸಗಳು ; ಬಿಡುವು ಕಾಲ, ಅವಸರದ ಕಾಲ] ; ತೂಕ, ಮಹತ್ತ್ವ, ಪ್ರಾಮುಖ್ಯತೆ (Lay s. on —ಕ್ಕೆ ಮಹತ್ತ್ವ, ಪ್ರಾಮುಖ್ಯತೆ, ಕೊಡು) ; (ಅಕ್ಷರದ ಮೇಲೆ ಅಥವಾ ಮಾತಿನಮೇಲೆ ಹಾಕಿದ) ಸ್ವರಭಾರ, ಒತ್ತು (The s. is on the first syllable. S. & quantity are different metrical principles ಸ್ವರ ಭಾರವೂ ಸ್ವರ ಪ್ರಮಾಣವೂ ಭಿನ್ನ ಛಂದಸ್ ತತ್ತ್ವಗಳು); (ಯಂತ್ರಶಾಸ್ತ್ರ) (ಹೊದ್ದಿಕೊಂಡಿರುವ ಕಾಯಗಳ ಅಥವಾ ಕಾಯ ಭಾಗಗಳ ಪರಸ್ಪರ) ಒತ್ತು, ಒತ್ತಡ, ಪೀಡನೆ. (ಕ್ರಿ.) ಒತ್ತಡ, ಸ್ವರಭಾರ, —ಹಾಕು ; ಒತ್ತಿ, ಒತ್ತಿ ಹೇಳು. **Stréssless** (ಗು.)

Stretch ಸ್ಟ್ರೆಚ್ (ಕ್ರಿ., ನಾ.) ಬಿಗಿಯಾಗಿ ಎಳೆ(ದು ಕಟ್ಟು), ಬಿಗಿಮಾಡು, ನೆಟ್ಟಗೆ ಮಾಡು, ನೀಡು, ಚಾಚು, ಹಿಗ್ಗಿಸು, ಹರಹು, ವಿಸ್ತರಿಸು [The rope must be stretched tight ಹಗ್ಗವನ್ನು ಬಿಗಿಯಾಗಿ ಎಳೆಯಬೇಕು. S. a wire across the road ರಸ್ತೆಗೆ ಅಡ್ಡಲಾಗಿ ತಂತಿಯೆಳೆ(ದು ಕಟ್ಟು). S. trousers ಷರಾಯನ್ನು (ಚೌಕಟ್ಟಿನಲ್ಲಿ ಚಾಚಿ) ಸುಕ್ಕಿಲ್ಲದಂತೆ ಮಾಡು S. oneself *or* s. (ನಿದ್ರೆಮಾಡಿ ಏಳುವಾಗ, ಮೊ. ಸಂದರ್ಭದಲ್ಲಿ) ಕೈಕಾಲು ನೀಡು, ಮೈಮುರಿ. S. one's legs (ಕುಳಿತುಕೊಂಡಿರುವ ಸ್ಥಿತಿಯಿಂದ) ಕಾಲು ನೀಡು ; (ಬಹಳ ಹೊತ್ತು ಕುಳಿತದ್ದರಿಂದ ಹಿಡಿದುಕೊಂಡ ಕಾಲುಗಳನ್ನು ನೆಟ್ಟಗೆ ಮಾಡಲು) ಕಾಲುಗಳನ್ನು ಆಡಿಸು, ತಿರುಗಾಡು ; ವ್ಯಾಯಾಮಕ್ಕಾಗಿ ನಡೆ. S. one on the ground ನೆಲಕ್ಕೆ ಉರುಳಿಸು, ಚಾಚಗೆಡವು ; ಭೂಗತಮಾಡು. S. out hand, foot. S. out ಕೈಚಾಚು, ಹೆಜ್ಜೆ ದೊಡ್ಡದು ಮಾಡು. Stretched at full length ಉದ್ದಕ್ಕೆ ಬಿದ್ದುಕೊಂಡಿರುವ, ಚಾಚಿಕೊಂಡ] ; ನ್ಯಾಯವಾದುದಕ್ಕಿಂತ ಮೀರಿ —ಪ್ರಯೋಗಿಸು, ಅನ್ವಯಿಸು, ಚಲಾಯಿಸು, ಚಾಚು, ಹಿಗ್ಗಿಸು ; ಬಲಾತ್ಕರಿಸು, ಅತಿಮಾಡು [S. a point, a principle, one's powers, one's credit =Strain a point, etc. (Strain ಪದ ನೋಡಿ). S. the truth *or* s. ಅತ್ಯುಕ್ತಿಮಾಡಿ ಹೇಳು, ಸುಳ್ಳು ಹೇಳು] ; ಉದ್ದವಾಗಿರು, ಚಾಚಿರು, ಹಬ್ಬಿರು, ಹರಡಿರು, ವ್ಯಾಪಿಸಿರು (Stretches from end to end, to infinity ಆ ಕೊನೆಯಿಂದ ಈ ಕೊನೆಗೆ ಚಾಚಿದೆ ; ಅನಂತಕ್ಕೆ ಮುಟ್ಟಿದೆ, ವ್ಯಾಪಿಸಿದೆ. Stretches down from, to —ಇಂದ, —ಗೆ ವ್ಯಾಪಿಸುತ್ತದೆ) ; ನೀಳ, ದೊಡ್ಡದು, —ಆಗು, ಮಾಡು, ಆಗಿ ಎಳೆಯಬರು, ಮಾಡಬರು ; ಹಿಗ್ಗು, ಹಿಗ್ಗಿಸು (Gloves, boots, want stretching ಕೈಗವುಸುಗಳನ್ನು, ಮೋಜಗಳನ್ನು, ಹಿಗ್ಗಿಸಬೇಕಾಗಿದೆ. It stretches like elastic ಅದು ಹಿಗ್ಗುದಾರದಂತೆ ಹಿಗ್ಗುತ್ತದೆ) ; (ಅಸಂ.) ಗಲ್ಲಿಗೆ ಹಾಕು, ನೇಣು ಹಾಕು (To s. person, his neck). (ನಾ.) ಚಾಚು(ವುದು), ಹಿಗ್ಗು(ವುದು), ಅತಿವ್ಯಾಪ್ತಿ (With a s. & a yawn ಕೈಕಾಲು ಚಾಚಿ ಮತ್ತು ಆಕಳಿಸಿ. By a s. of authority, language ಅಧಿಕಾರದ ಅತಿಪ್ರಯೋಗದಿಂದ, ಭಾಷೆಯ ಬಲವಂತ ವ್ಯಾಖ್ಯಾನದಿಂದ. With every faculty on the s. ಪ್ರತಿಯೊಂದು ಶಕ್ತಿಯನ್ನೂ ದಣಿಸಿ); ಹರವು, ಪ್ರಸಾರ, ವಿಸ್ತಾರ, ವ್ಯಾಪ್ತಿ, ಪಟ್ಟು (A s. of road, open country. Works ten hours at a s. ಒಂದು ಪಟ್ಟಿಗೆ ೧೦ ಘಂಟೆ ಕೆಲಸ ಮಾಡುತ್ತಾನೆ) ; (ನಾವೆ) ಒಂದು ದಿಕ್ಕಿನಲ್ಲಿ ಹೋದ ದೂರ, ಮಾಡಿದ ಪ್ರಯಾಣ. **Strétcher** (ನಾ.) (ಕ್ರಿಯಾರ್ಥಗಳಲ್ಲಿ) ; (ಗೋಡೆಯಲ್ಲಿ) ಉದ್ದುದ್ದನಾಗಿ ಇಟ್ಟ, ಉದ್ದವರಿಸೆಯ, —ಇಟ್ಟಿಗೆ, ಕಲ್ಲು (Header ಪದದೊಡನೆ ಹೋಲಿಸಿ) ; ದೋಣಿಯಲ್ಲಿ ಹುಟ್ಟುಹಾಕುವವನು ಕಾಲನ್ನು ಒತ್ತಿಟ್ಟುಕೊಳ್ಳುವ ಹಲಗೆ: ಕಾಲಾಸರೆ, ಕಾಲೂರಿಗೆ (—ಹಲಗೆ) ; ಅಶಕ್ತರನ್ನು ಸಾಗಿಸಲು ಚೌಕಟ್ಟಿಗೆ ರಟ್ಟುಬಟ್ಟೆಯನ್ನು ಚಾಚಿ ಬಿಗಿದು ಮಾಡಿದ ಸಲಕರಣೆ : ಡೋಲಿ, ಕೈ(ಹಿಡಿ) ಮಂಚ ; (ಅಸಂ.) ಅತಿಶಯೋಕ್ತಿ, ಸುಳ್ಳು. **S.-bond** (ಒಂದು ವರಿಸೆಯ ಸೇರುವೆ ಸಂದುಗಳೂ ಅದರಮೇಲಿನ ಅಥವಾ ಕೆಳಗಿನ ವರಿಸೆಯ ಸೇರುವೆ ಸಂದುಗಳೂ ಒಂದೇ ಗೆರೆಯಲ್ಲಿರದಂತೆ ಕಟ್ಟಿದ) ಉದ್ದಿಟ್ಟಿಗೆ ಕಟ್ಟಡ, ಉದ್ದ ವರಿಸೆ ಕಟ್ಟಡ. **Strétchy** (ಗು.) ಚಾಚುವ, ಹಿಗ್ಗುವ ; ಕೈಕಾಲು ನೀಡುವ, ಮೈಮುರಿಯುವ. **Strétchiness** (ನಾ.)

Strétcher. Stretch ನೋಡಿ.

Strew ಸ್ಟ್ರೂ (ಕ್ರಿ. ಸಕ. ; ಭೂತ. Strewed ; ಭೂ. ಕೃ. Strewn *or* Strewed) ಚೆಲ್ಲಾಪಿಲ್ಲಿಯಾಗಿ ಹರಡು (The newspapers which were strewn upon the table) ; (ಮರಳು, ಹೂವು, ಮೊ. ನ್ನು) ಎರಚು, ಕೆದರು ; (ಮೇಲ್ಮೈಯನ್ನು, ವಸ್ತುವನ್ನು) (ತೆಳುವಾಗಿ, ವಿರಳವಾಗಿ) ಹರವು, ಕವಿಸು (They strewed the ground with leaves)

Stría ಸ್ಟ್ರೈಅ (ನಾ. ; ಬ. ವ. -ae —ಈ) (ಅಂ. ರ. ಶಾ., ಪ್ರಾ. ವಿ., ಸ. ವಿ., ಭೂ. ವಿ.) (ಮೇಲ್ಮೈಯ ಮೇಲಿನ) ಉದ್ದ ಗುರುತು, ಗೆರೆ, ರೇಖೆ ; ಸೂಕ್ಷ್ಮವಾದ ಉಬ್ಬುಸಾಲು, ಕಾಲುವೆ, ಏಣು, ಪಟ್ಟಿ. **Stríate** —ಅಟ್ (ಗು.) ; **Striáte** —ಏಟ್ (ಕ್ರಿ. ಸಕ.) ; **Stríately** (ಕ್ರಿ. ವಿ.); **Striátion** (ನಾ.); **Stríature** —ಚರ್ (ನಾ.)

Strícken. Strike ಧಾತುವಿನ ಒಂದು ಭೂ. ಕೃ. ರೂಪ

Stríckle ಸ್ಟ್ರಿಕ್‌ಲ್ (ನಾ.) ಅಳತೆಯಲ್ಲಿ ತಲೆಸವರಲು ಉಪಯೋಗಿಸುವ ಕೋಲು : ತಲೆಸವರುವ ಕೋಲು ; ತಲೆಸವರಿಗೆ.

Strict ಸ್ಟ್ರಿಕ್ಟ್ (ಗು.) ನಿಷ್ಕೃಷ್ಟ, ನಿರ್ದಿಷ್ಟ, ಯಥಾರ್ಥ, ನಿಶ್ಚಿತ, ಖಂಡಿತ, ನಿಯತ, ಕರಾರುವಾಕಾದ, ಬಿಗಿಯಾದ, ಕಟ್ಟುನಿಟ್ಟಿನ, ನಿಯಮ ನಿಷ್ಠೆಯ, ನೇಮದ, ಕಠಿನ [In the s. sense ನಿರ್ದಿಷ್ಟಾರ್ಥದಲ್ಲಿ. S. time (ಸಂ.) ಕಟ್ಟುನಿಟ್ಟಾದ, ಬಿಗಿಯಾದ, ತಾಳ. Keep a s. watch ಬಿಗಿಯಾಗಿ ಕಾವಲಿರು ; ಬಿಗಿಯಾದ ಕಾವಲಿಟ್ಟಿರು. Gave s. orders ಕಟ್ಟಪ್ಪಣೆ ಮಾಡಿದನು. A s. code of laws ನಿಷ್ಕೃಷ್ಟ, ಕಠಿನ, —ನ್ಯಾಯಸೂತ್ರಗಳು. S. morals ಕಟ್ಟುನಿಟ್ಟಿನ, ಕಠಿನ, —ನೀತಿ ನಡವಳಿ]. **Stríctly** (ಕ್ರಿ. ವಿ.) (S. speaking ನಿಷ್ಕೃಷ್ಟವಾಗಿ ಹೇಳುವುದಾದರೆ). **Stríctness** (ನಾ.)

Strícture ಸ್ಟ್ರಿಕ್‌ಟ್ಯು(ಚ)ರ್ (ನಾ.) (ಸಾ., ಬ. ವ. ದಲ್ಲಿ) ಖಂಡನೆ, ಆಕ್ಷೇಪಣೆ, ತಪ್ಪುಹಿಡಿದು ಟೀಕೆ (ಸಾ., *on*, *upon* ಉಪ. ದೊಡನೆ) ; (ರೋಗ ನಿದಾನ) ದೇಹದಲ್ಲಿಯ ಯಾವುದಾದರೂ ನಾಳ ರೋಗದಿಂದ ಸಂಕೋಚವಾಗುವುದು : ನಾಳ ಸಂಕೋಚನ. **Strictured** (ಗು.) ನಾಳ ಸಂಕೋಚ ಹೊಂದಿದ.

Stride ಸ್ಟ್ರೈಡ್ (ಕ್ರಿ. ; ಭೂತ. Strode ಸ್ಟ್ರೋಡ್ ; ಭೂ. ಕೃ. Stridden ಸ್ಟ್ರಿಡ್‌ನ್, ವಿರ. ಪ್ರ. Strid ; ನಾ.) ದೊಡ್ಡ ಹೆಜ್ಜೆ ಹಾಕು, —ಹಾಕಿ ನಡೆ ; ದಾಪುಗಾಲು ಹಾಕು ; ಮಾರುಗಾಲು ಹಾಕಿ ನಡೆ ; ಜಂಗೆ—ಇಡು, ಹಾಕು ; (ಕಾಲುವೆ, ಮೊ. ನ್ನು) (ಒಂದೇ ಹೆಜ್ಜೆಗೆ) ದಾಟು ; (ಒಂದರಮೇಲೆ) ಕಿಸಿಗಾಲು ಹಾಕು. (ನಾ.) ಹೆಜ್ಜೆ(ಯ ದೂರ), ದಾಪು(ಗಾಲು), ಮಾರುಗಾಲು [Walks with

पुस्तकालय

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

vigorous strides *or* a vigorous s. ಚುರುಕಾಗಿ ದೊಡ್ಡ ಹೆಜ್ಜೆ ಹಾಕುತ್ತಾನೆ. Get into one's s. (ರೂಪ.) (ಕಾರ್ಯದಲ್ಲಿ) ತನ್ನ ಸಹಜ ವೇಗಕ್ಕೆ—ಬರು, ಹೊಂದಿಕೊ. Take obstacle in one's s. (ಹಾರುವುದಕ್ಕಾಗಿ ಹೆಜ್ಜೆ ಬದಲಾಯಿಸದೆ) ಒಂದೇ ಹೆಜ್ಜೆಗೆ ಅಡಚಣೆಯನ್ನು ದಾಟು ; (ರೂಪ.) ಅಡ್ಡಿಯನ್ನು ಸರಾಗವಾಗಿ ದಾಟು]

Strídent ಸ್ಟ್ರೈಡೆಂಟ್ (ಗು.) (ಧ್ವನಿಯ ವಿಷಯದಲ್ಲಿ) ಗಟ್ಟಿಯಾಗಿಯೂ ಕರ್ಕಶವಾಗಿಯೂ ಇರುವ ; ಕರ್ಣಕಠೋರ, ಕರ್ಕಶ, ಕೀಚು. **Strídently** (ಕ್ರಿ. ವಿ.) ; **Strídulate** ಸ್ಟ್ರಿಡ್ಯುಲೇಟ್ (ಕ್ರಿ. ಅಕ.) (ಕೀಟ ವಿಜ್ಞಾನ) (ಅಂಗದ ಗಡುಸು ಭಾಗಗಳನ್ನು ಉಜ್ಜುವುದರಿಂದ) ಕರ್ಕಶ ಶಬ್ದ ಮಾಡು, ಕೀಚುಗುಟ್ಟು. **Strídulant** (ಗು.) ; **Stridulátion** (ನಾ.) ; **Strídulator** (ನಾ.) ಕೀಚು—ಕ್ರಿಮಿ, ಕೀಟ.

Strídulate, etc. **Strident** ನೋಡಿ.

Strife ಸ್ಟ್ರೈಫ್ (ನಾ.) ಜಗಳ, ಹೋರಾಟ, ಕಲಹ, ವ್ಯಾಜ್ಯ, ವಿವಾದ.

Strígil ಸ್ಟ್ರಿಜಿಲ್ (ನಾ.) (ಸ್ನಾನಮಾಡುವಾಗ ಪ್ರಾಚೀನರು ಉಪಯೋಗಿಸುತ್ತಿದ್ದ) ಚರ್ಮ ಕೆರೆಯುವ ಸಲಕರಣೆ ; ಮೈ ಹೆರೆಕ.

Strígose ಸ್ಟ್ರೈಗೋಸ್ (ಗು.), **Strígous** ಸ್ಟ್ರೈಗಸ್ (ಗು.) (ಸ. ವಿ.) ಬಿರುಗೂದಲುಳ್ಳ ; ಮುಳ್ಳುಗೂದಲಿನ ; ಶಲ್ಕಗಳುಳ್ಳ.

Strike ಸ್ಟ್ರೈಕ್ (ಕ್ರಿ.; ಭೂತ. Struck; ಭೂ. ಕೃ. Struck, Stricken ಸ್ಟ್ರಿಕನ್) ಹೊಡೆ, ಬಡಿ, ಏಟುಕೊಡು, ಪೆಟ್ಟುಹಾಕು; ತಾಕು, ತಾಕಿಸು, ತಗುಲು, ತಗುಲಿಸು ; ಎರಗು, ಬೀಳು [Struck me in the mouth, with his fist. S. weapon up *or* down *or* aside ಆಯುಧವನ್ನು ಏಟಿನಿಂದ ಮೇಲಕ್ಕೆ, ಕೆಳಕ್ಕೆ, ಪಕ್ಕಕ್ಕೆ, —ತಳ್ಳು. S. one's foot against a stone ಕಾಲನ್ನು ಕಲ್ಲಿಗೆ ತಾಕಿಸಿಕೊ ; ಕಲ್ಲನ್ನು ಎಡವು. S. while iron is hot (Iron ನೋಡಿ). Striking-force ಹೆಚ್ಚು ಕಾಲಾವಕಾಶವಿಲ್ಲದೆ ಅಪ್ಪಣೆ ಕೊಟ್ಟಕೂಡಲೆ ಮೇಲೆ ನುಗ್ಗಿ ಏಟು ಕೊಡಲು ಸಿದ್ಧವಾಗಿರುವ ಸೈನ್ಯ : ಸಿದ್ಧ ಸೈನ್ಯ. Within striking distance ಏಟು ಕೊಡುವಷ್ಟು ಹತ್ತಿರದಲ್ಲಿ. S. a blow, or s., for freedom ಸ್ವಾತಂತ್ರ್ಯಕ್ಕಾಗಿ ಒಂದು ಹೊಡೆತ ಹೊಡೆ. Ship strikes rock, *or* on rock, *or* strikes ಹಡಗು ಬಂಡೆಗೆ—ಹೊಡೆಯುತ್ತದೆ, ಹತ್ತುತ್ತದೆ. S. hands (ಪ್ರಾಚೀ. ಪ್ರ.) (ಒಪ್ಪಂದದ ಗುರುತಾಗಿ) ಪರಸ್ಪರ ಕೈ ಕೈ ಮುಟ್ಟು, ಕೈಯ ಮೇಲೆ ಕೈಹಾಕು; ಒಪ್ಪಂದ ಮಾಡಿಕೊ (*With* ಉಪ. ಜೊಡನೆ). A stricken heart ನೊಂದ ಹೃದಯ, ದುಃಖಹತ ಹೃದಯ. Stricken with fever, pestilence, paralysis ಜ್ವರ ತಗುಲಿ, ಉಪದ್ರವ ಎರಗಿ, ಪಾರ್ಶ್ವವಾಯು ಹೊಡೆದು. A stricken field ಥಲ ಯುದ್ಧ(ದ ರಣರಂಗ). Stricken in years ಮುಪ್ಪಿನಿಂದ ಜರ್ಜರಿತನಾಗಿ, ಕುಸಿದು. S. out ಹೆಗಲಿನಿಂದ ಹೊಡೆ ; (ಈಜುವುದರಲ್ಲಿ) ತೋಳುಗಳನ್ನೂ ಕಾಲುಗಳನ್ನೂ ಉಪಯೋಗಿಸು, ಕೈಕಾಲು ಬಡಿ ; (ನೀರ್ಗಲ್ಲಮೇಲೆ ಜಾರುವುದರಲ್ಲಿ) ಪಾದಗಳನ್ನು ಉಪಯೋಗಿಸು, ಕಾಲೂರು. S. upon an idea, plan (ಅಕಸ್ಮಾತ್ತಾಗಿ, ಅದೃಷ್ಟವಶಾತ್) ಭಾವ, ಯೋಜನೆ, ಹೊಳೆ. S. oil (Oil ನೋಡಿ). Light strikes upon object ಬೆಳಕು ವಸ್ತುವಿನ ಮೇಲೆ ಬೀಳುತ್ತದೆ, ವಸ್ತುವನ್ನು ಬೆಳಗುತ್ತದೆ. S. at ಏಟು ಗುರಿಯಿಡು (ರೂಪ. ಸಹ); ಹೊಡೆ; ಮೇಲೆ ಬೀಳು; ಸಹಿಸದಿರು, ಪ್ರತಿಭಟಿಸು. S. at the root of ಮೂಲಕ್ಕೆ ಏಟುಹಾಕು; ಬುಡಮಟ್ಟ ನಾಶಮಾಡಹೋಗು. S. back ಏಟಿಗೆ ಏಟುಹಾಕು, ಏಟು ಹಿಂದಿರುಗಿಸು. S. home ಮುಟ್ಟ ನೋಡಿ ಕೊಳ್ಳುವಂತೆ, ಚೆನ್ನಾಗಿ,—ಹೊಡೆ ; ಮನ ತಾಕಿಸು, ಗಾಢ ಪರಿಣಾಮ ವುಂಟುಮಾಡು. S. all of a heap (ಬಳ. ಮಾ.) ಆಶ್ಚರ್ಯದಿಂದ ಬೆರಗುಗೊಳಿಸು, ಸ್ತಂಭೀಭೂತಮಾಡು. S. fish *or* s. (ತಟ್ಟನೆ ಅಲುಗಿಸುವುದರಿಂದ) ಗಾಳದ ಕೊಕ್ಕೆಯನ್ನು ಮೀನಿನ ಬಾಯೊಳಕ್ಕೆ ಚುಚ್ಚು. S. the track ಜಾಡು—ಕಂಡುಕೊ, ಹಿಡಿ]. ಹೊಡೆದು, ಬಡಿದು, —(ಉಂಟು)ಮಾಡು, (ಸ್ಥಿತಿಗೆ) ತರು : (ಗಡಿಯಾರ : ಗಂಟೆ) ಹೊಡೆ [S. coin (ಮುದ್ರೆಯೊತ್ತಿ) ನಾಣ್ಯ ಟಂಕಿಸು. S. bargain (ಕೈಯ ಮೇಲೆ ಕೈಹಾಕಿ ಮಾಡಿಕೊಳ್ಳುವಂತೆ) ಒಪ್ಪಂದ ಮಾಡಿಕೊ, ಗೊತ್ತಿಗೆ ಬರು. S. sparks, fire, light, out of flint ಚಕಮುಕಿ ಕಲ್ಲು ಹೊಡೆದು ಕಿಡಿಗಳನ್ನು, ಬೆಂಕಿಯನ್ನು, ಬೆಳಕನ್ನು, —ಹೊರಡಿಸು. S. a match ಬೆಂಕಿಕಡ್ಡಿ—ಗೀಚು, ಗೀಚಿ ಹೊತ್ತಿಸು. S. a light (ಬೆಂಕಿಕಡ್ಡಿ ಗೀರಿ) ಬೆಳಕುಮಾಡು. Match will not s. ಬೆಂಕಿಕಡ್ಡಿ ಹೊತ್ತುವುದಿಲ್ಲ. Clock strikes the hour ಗಡಿಯಾರ ಗಂಟೆ ಹೊಡೆಯುತ್ತದೆ. The hour has struck ಗಂಟೆ ಹೊಡೆದಿದೆ ; (ರೂಪ.) ಸಂಧಿಕಾಲ—ಒದಗಿದೆ, ಕಳೆದುಹೋಯಿತು. S. one blind, deaf (ಒಂದೇ ಏಟಿಗೆ) ಕುರುಡಾಗಿಸು, ಮೂಕನನ್ನಾಗಿ ಮಾಡು. S. me dead ! (ಗ್ರಾಮ್ಯ ; ಆಣೆಯಿಡುವ ಮಾತು). S. down ಹೊಡೆದು ಕೆಡವು (ರೂಪ. ಸಹ). S. his head off ಅವನ ತಲೆ ಹೊಯ್ಯಿ, ಕಡಿ(ದುಹಾಕು). S. out plan, etc. ಯೋಜನೆ, ಮೊ. ನ್ನು ಕಲ್ಪಿಸು, ಹಂಚಿಕೆ ಹಾಕು. S. out a line for oneself ತನ್ನದೇ ದಾರಿ—ಮಾಡಿಕೊ, ಹಿಡಿ ; ಸ್ವತಂತ್ರ ಮಾರ್ಗ ಅವಲಂಬಿಸು. S. item *or* name out *or* off. S. word through ಬಾಬನ್ನು, ಹೆಸರನ್ನು, ಮಾತನ್ನು, —ಹೊಡೆದುಹಾಕು. S. up an acquaintance (ಅಕಸ್ಮಾತ್ತಾಗಿ, ಬಲು ಬೇಗನೆ) ಪರಿಚಯ—ಬೆಳಸು, ಮಾಡಿಕೊ. Band strikes up a tune *or* strikes up ವಾದ್ಯ ಮೇಳದವರು ರಾಗವನ್ನು ನುಡಿಸುತ್ತಾರೆ, ಬಾರಿಸುತ್ತಾರೆ. Printer strikes off 1,000 copies ಮುದ್ರಣಕಾರನು ೧,೦೦೦ ಪ್ರತಿಗಳನ್ನು ಅಚ್ಚುಹಾಕುತ್ತಾನೆ]. ಗಮನ ಸೆಳೆ(ದು ನಿಲ್ಲಿಸು) ; ಮನಸ್ಸಿಗೆ—ಹಿಡಿ, ತಾಕು ; ಮನಸ್ಸಿಗೆ —ತೋರು, ಹೊಳೆ, ಸ್ಫುರಿಸು, ಎನ್ನಿಸು ; ಮನಸ್ಸಿನಮೇಲೆ ಮುದ್ರಿಸು, ಅಚ್ಚೊತ್ತು (What struck me was the generosity of the offer ನನ್ನ ಮನಸ್ಸನ್ನು ಹಿಡಿದದ್ದು ಆ ನೀಡಿಕೆಯ ಔದಾರ್ಯ. An idea suddenly struck me ಒಂದು ಭಾವ, ಯೋಚನೆ, —ತಟಕ್ಕನೆ ನನಗೆ ಹೊಳೆಯಿತು. How does it s. you ? ಅದು ನಿನಗೆ ಹೇಗೆ ತೋರುತ್ತದೆ ? ಆ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು ?). (ವರ್ತಮಾನ ಕೃ.) ಗಮನ ಸೆಳೆಯುವ, ಆಕರ್ಷಕ, ಗಮನಾರ್ಹ, ಆಶ್ಚರ್ಯಕರ [**Strikingly** (ಕ್ರಿ. ವಿ.) ; **Strikingness** (ನಾ.)]. (ಬಾವುಟ, ಹಾಯಿ, ಡೇರೆ, ಮೊ. ನ್ನು) ಇಳಿಸು, ಕಳಚು ; ಬಾವುಟ ಇಳಿಸಿ ಶತ್ರುವಶವಾಗು, ಶರಣಾಗತನಾಗು (S. one's flag ಹಡಗನ್ನು, ಕೋಟೆಯನ್ನು, ಶತ್ರುವಿಗೆ ಒಪ್ಪಿಸು ; ನೌಕಾ ನಾಯಕತ್ವವನ್ನು ಬಿಟ್ಟುಬಿಡು. S. tents ಪಾಳೆಯ ಕೀಳು, ಬೀಡೆತ್ತು. Town, ship, strikes ಪಟ್ಟಣ, ಹಡಗು, —ಶರಣಾಗತವಾಗುತ್ತದೆ). (ಕೆಲಸ) ನಿಲ್ಲಿಸು, ನಿಲ್ಲಿಸಿಬಿಡು ; ಹರತಾಳ ಮಾಡು. (ಕೆಲಸಗಾರರ ವಿಷಯದಲ್ಲಿ) ಯಜಮಾನನು ತಮ್ಮ ಕೋರಿಕೆಯನ್ನು ಸಲ್ಲಿಸುವವರೆಗೆ ಕೆಲಸಕ್ಕೆ ಹೋಗದೆ ನಿಂತುಬಿಡು : ಮುಷ್ಕರ ಹಿಡಿ, ಸಂಪುಮಾಡು [(Lock[2] ಕ್ರಿ. ಕೆಳಗೆ Lock-out ಪದ ನೋಡಿ). S. for higher pay, against long hours ಹೆಚ್ಚು ಸಂಬಳಬೇಕೆಂದು, ಕೆಲಸದ ಹೊತ್ತು ಹೆಚ್ಚೆಂದು, —ಮುಷ್ಕರ ಹಿಡಿ]. ನಾಟು, ನಾಟಿಸು ; ಭೇದಿಸಿಕೊಂಡು—ಹೋಗು, ಬರು [Struck a knife, terror, into his heart ಅವನ ಹೃದಯಕ್ಕೆ ಚಾಕು ನಾಟಿದನು, ಭೀತಿ ಹುಟ್ಟಿಸಿದನು. Cold strikes through his clothes, into his marrow ಚಳಿ ಅವನ ಬಟ್ಟೆಯನ್ನು ತೂರಿಕೊಂಡು, ಮಜ್ಜೆಯೊಳಗೆ, —ಕೊರೆಯುತ್ತದೆ. The wind strikes cold ಗಾಳಿ ತಣ್ಣಗೆ ಕೊರೆಯುತ್ತದೆ. Strikes root *or* strikes ಬೇರು ಬಿಡುತ್ತದೆ, ಬೇರೂರುತ್ತದೆ. Oysters s. ಚಿಪ್ಪುಮೀನುಗಳು ತಳವೂರುತ್ತವೆ, ಸಿಂಪಿದಂಡೆಗೆ ಹತ್ತಿಕೊಳ್ಳುತ್ತವೆ. Rays s. through fog ಕಿರಣಗಳು ಕಾವಳವನ್ನು ಭೇದಿಸಿಕೊಂಡು ಬರುತ್ತವೆ. Struck with terror, dizziness ಭಯ, ತಲೆಸುತ್ತು,—ಹಿಡಿದು]. ದಾರಿ, ದಿಕ್ಕು, —ಹಿಡಿ, ಅನುಸರಿಸು ; ಕಡೆಗೆ, ದಿಕ್ಕಿಗೆ, —ತಿರುಗು, ಹೋಗು [Then s. to the right ತರುವಾಯ ಬಲಕ್ಕೆ ಹೋಗು, ತಿರುಗು. S. into *or* out of

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

a track, subject ಜಾಡು, ವಿಷಯ, —ಹಿಡಿದುಹೋಗು, ಬಿಟ್ಟು ಹೋಗು. S. in (ಇತರರು ಮಾತನಾಡುತ್ತಿರುವಾಗ ಸಲಹೆ, ಮೊ. ನ್ನು ಕೊಡುವ ಬಗ್ಗೆ) ಮಧ್ಯೆ ಪ್ರವೇಶಿಸು, ನಡುವೆ ಬಾಯಿಹಾಕು (ಅನೇಕ ವೇಳೆ *with* ಉಪ. ದೊಡನೆ). Gout strikes in ಸಂಧಿವಾತ (ಕೈಕಾಲುಗಳಿಗಲ್ಲದೆ) ಒಳಕ್ಕೆ ಇಳಿಯುತ್ತದೆ, ವ್ಯಾಪಿಸುತ್ತದೆ. S. into a gallop ನಾಗಾಲೋಟಕ್ಕೆ ತೊಡಗು]. (ಅಳತೆಯಲ್ಲಿ) ತಲೆ—ಸವರು, ಹೊಡೆ; (ಲೇಣಿಯನ್ನು ಅಥವಾ ದೇಣಿಯನ್ನು ಒಂದರಿಂದ ಒಂದನ್ನು ಕಳೆದು) (ಎಲ್ಲ ಬಾಬುಗಳನ್ನೂ ಸಮೀಕರಿಸಿ) ಸರಾಸರಿ ಉಳಿಕೆ ಕಂಡುಹಿಡಿ; (ಜಮಾ ಖರ್ಚನ್ನು) ಸರಿತೂಗಿಸು, ಸರಿಪಡಿಸು. ಎರಡು ಕಂಡುಹಿಡಿ; ಪಕ್ಷದವರೂ ತಮಗೆ ಬೇಡವಾದ ನ್ಯಾಯದರ್ಶಿಗಳನ್ನು ಸಮ ಸಂಖ್ಯೆಯಲ್ಲಿ ನಿರಾಕರಿಸಿದಮೇಲೆ ಉಳಿದವರಿಂದ ನ್ಯಾಯದರ್ಶಿ ಮಂಡಲಿಯನ್ನು ಏರ್ಪಡಿಸು. ತಟ್ಟನೆ ನಾಟಕೀಯವಾಗಿ (ಒಂದು ಭಂಗಿಯನ್ನು) ತಾಳು (S. an attitude). S.-a-light ಚಕಮುಕಿಯಿಂದ ಬೆಳಕುಂಟುಮಾಡುವ ಸಲಕರಣೆ. **Stríker** (ನಾ.)

Strike (ನಾ.) (ಕೆಲಸಗಾರರ) ಮುಷ್ಕರ, ಸಂಪು (On s. ಮುಷ್ಕರ ಹಿಡಿದು. S.-breakers ಮುಷ್ಕರ ಹಿಡಿದವರ ಬದಲು ಕೆಲಸಕ್ಕೆ ತಂದ ಕೆಲಸಗಾರರು: ಮುಷ್ಕರ ಮುರುಕರು. S. pay ಮುಷ್ಕರ ಹಿಡಿದ ಕೆಲಸಗಾರರಿಗೆ ಕೆಲಸಗಾರರ ಸಂಸ್ಥೆ ಜೀವನಾಧಾರಕ್ಕಾಗಿ ಕೊಡುವ ಸಂಬಳ: ಮುಷ್ಕರ ಕಾಲದ ಸಂಬಳ. General s. ವ್ಯವಹಾರವನ್ನೆಲ್ಲ ತಡೆಗಟ್ಟಿ ಸಮಾನೋದ್ದೇಶವನ್ನು ಸಾಧಿಸಿಕೊಳ್ಳುವುದಕ್ಕಾಗಿ ಪ್ರಾಯಶಃ ಎಲ್ಲ ಕಸಬಿನವರೂ ಹಿಡಿದ ಮುಷ್ಕರ: ಸರ್ವ ಮುಷ್ಕರ. Sympathetic s. ತಮಗೆ ಅಸಮಾಧಾನಕ್ಕೇನೂ ಕಾರಣವಿಲ್ಲದಿದ್ದರೂ ಮುಷ್ಕರ ಹಿಡಿದಿರುವ ಮತ್ತೊಂದು ಕಸಬಿನವರಿಗೆ ನೈತಿಕ ಬೆಂಬಲ ಕೊಡುವುದಕ್ಕಾಗಿ ಸಹಾನುಭೂತಿಯಿಂದ ಹಿಡಿದ ಮುಷ್ಕರ: ಸಹಾನುಭೂತಿಯ ಮುಷ್ಕರ). (ಅಳತೆಯಲ್ಲಿ) ತಲೆಸವರುವ ಕೋಲು (S. measure ತಲೆಸವರಿದ ಅಳತೆ). (ಮು., ಅಮೆ. ಸಂ.) (ಕಲ್ಲಿದ್ದಲು, ಚಿನ್ನ, ಮೊ. ನ್ನು ಕಂಡು ಹಿಡಿಯುವುದರಲ್ಲಿ ಅಥವಾ ಹಣಕಾಸಿನ ವ್ಯವಹಾರದಲ್ಲಿ) ಇದ್ದಕ್ಕಿದ್ದ ಹಾಗೆ ಲಭಿಸಿದ ಜಯ, ಲಾಭ; (ಒಳ್ಳೆಯ, ಅದೃಷ್ಟದ) ಹೊಡೆತ; ಲಾಭದ ಹೊಡೆತ.

String ಸ್ಟ್ರಿಂಗ್ (ನಾ.) ಹುರಿ, ದಾರ, ನೂಲು, ಸೂತ್ರ, ತಂತು; (ಚರ್ಮ, ಮೊ. ರ) ಪಟ್ಟಿ, ಕಸೆ, ಬಾರು; (ವಾದ್ಯದ) ತಂತಿ, ನರ, ಸ್ನಾಯುರಜ್ಜು; (ಬಿಲ್ಲಿನ) ಹಗ್ಗ, ಹೆದೆ; (ಹುರುಳಿಕಾಯಿ, ಅವರೆಕಾಯಿ, ಮೊ. ಗಳ ಸಿಪ್ಪೆಯ ಎರಡರ್ಧಗಳನ್ನು ಕೂಡಿಸುವ) ಎಳೆ, ನಾರು [Apron, Bow[1], -s. (ಆಯಾ ಪದ ನೋಡಿ). Bonnet, kite, -s. ಟೋಪಿ (ಕಟ್ಟುವ), ಪಟದ, —ದಾರ. Two strings to one's bow (Bow[1] ನೋಡಿ). First, second, s. (ಮುಖ್ಯವಾಗಿ, ಅದು ತಪ್ಪಿದರೆ ಎರಡನೆಯದಾಗಿ, ನಂಬಿಕೊಂಡಿರುವ) ಮೊದಲ, ಎರಡನೆಯ, —ಸಾಧನ, ಆಸರೆ. Pull the strings ಇನ್ನೊಬ್ಬನು ಮಾಡುವ ಕೆಲಸದ ಹಿಂದೆ ತಾನು ಇದ್ದು ನಿಜವಾದ ಚಾಲಕನಾಗಿರು: ಸೂತ್ರ ಎಳೆ(ದು ಆಡಿಸು). Heart-strings (Heart ನೋಡಿ). Harp-, fiddle-, bass, soprano, s. ಹಾರ್ಪ್ ವಾದ್ಯದ, ಪಿಟೀಲಿನ, ಮಂದ್ರ ಸ್ವರದ, ತಾರ ಸ್ವರದ, —ತಂತಿ. Touch the strings ತಂತಿ ಮೀಟು, ನುಡಿಸು. Harp on one s. ಒಂದೇ ರಾಗ ನುಡಿಸುತ್ತಿರು; ಒಂದೇ ವಿಷಯ ಆಡುತ್ತಿರು; ಹಾಡಿದ್ದನ್ನೇ ಹಾಡುತ್ತಿರು. Touch a s. (ರೂಪ.; ಒಬ್ಬನ ಹೃದಯದಲ್ಲಿ) ನಿರ್ದಿಷ್ಟ ಭಾವವನ್ನು ಮಿಡಿ; ಹೃದಯ ತಂತಿಯನ್ನು ಮೀಟು. The strings (ಸಂಗೀತ ಮೇಳದಲ್ಲಿ) ತಂತಿವಾದ್ಯಗಳು, ತಂತಿವಾದ್ಯ ಭಾಗ, ತಂತಿವಾದ್ಯಗಾರರು (The wind[1] ಪದದೊಡನೆ ಹೋಲಿಸಿ)]. (ಒಟ್ಟಿಗೆ ಪೋಣಿಸಿದ) ಸರ, ಮಾಲೆ; (ಒಂದೇ ತೆರನ ವ್ಯಕ್ತಿಗಳ, ವಸ್ತುಗಳ, ಅಥವಾ ವಿಷಯಗಳ) ಸಾಲು, ಪಂಕ್ತಿ (A s. of beads, pearls ಮಣಿಸರ, ಮುತ್ತಿನ ಸರ. Filed past in a long s. ಉದ್ದ ಸಾಲನಲ್ಲಿ ಸಾಗಿದರು. A s. of carriages ಬಂಡಿ ಸಾಲು. A s. of lies ಸುಳ್ಳಿನ—ಪರಂಪರೆ, ಮಾಲೆ). (ಬಿಲಿಯರ್ಡ್ಸ್ ಆಟ) ಗುಂಡಿಗಳನ್ನು ಪೋಣಿಸಿದ ತಂತಿಗಳನ್ನು ಕಟ್ಟಿರುವ ಎಣಿಕೆ ಹಲಗೆ; (ಇದರಲ್ಲಿ ಎಣಿಸಿದ) ಗೆಲ್ಲಂಕಗಳು; (ಯಾರು ಮೊದಲು ಆಡಬೇಕೆಂಬುದನ್ನು ನಿರ್ಧರಿಸಲು ಹೊಡೆದ) ಪೂರ್ವಭಾವಿ ಹೊಡೆತ, ಮುನ್ ಹೊಡೆತ. **S. alphabet** ದಾರದಲ್ಲಿ ಬೇರೆ ಬೇರೆ ಅಕ್ಷರಗಳಿಗೆ ಬೇರೆ ಬೇರೆ ಬಗೆಯ ಗಂಟುಹಾಕಿ ಕುರುಡರು ಓದಲು ಅಳವಡಿಸಿರುವ ವರ್ಣಮಾಲೆ: ನೂಲಿನ ವರ್ಣಮಾಲೆ. **S. band** ತಂತಿವಾದ್ಯ ಮೇಳ. **S.-bark** = Stringy-bark (ಮುಂದೆ ನೋಡಿ). **S.-board** ಮೆಟ್ಟಲ ಕೊನೆಗಳನ್ನು ಕೂರಿಸಿರುವ ಆಸರೆಹಲಗೆ, ಮರ. **S.-course** ಕಟ್ಟಡದ ಉದ್ದಕ್ಕೂ, ಸುತ್ತ, ಎತ್ತರಿಸಿ ಕಟ್ಟಿರುವ ವರಿಸೆ: ಸೂತ್ರ ವರಿಸೆ. **S.-halt** = Spring-halt (Spring ನೋಡಿ). **S.-piece** ಚೌಕಟ್ಟಿನ ಭಾಗಗಳಿಗೆ ಆಸರೆಯಾಗಿದ್ದು ಅವನ್ನು ಒಟ್ಟು ಕೂಡಿಸುವ ಉದ್ದ—ಮರ, ತುಂಡು: ಕೂಡು—ಮರ, ತುಂಡು. **(-)stringed** (ಗು.); **Stríngless** (ಗು.); **Stríngy** ಸ್ಟ್ರಿಂಗಿ (ಗು.) ನಾರಾದ, ನಾರಿನ; ಹುರಿಯಂಥ (S.-bark ಹಲವು ಬಗೆಯ ಗೋಂದು ಮರ); (ದ್ರವಗಳ ವಿಷಯದಲ್ಲಿ) ನೂಲಿನಂತೆ ಏಳುವ, ಲೋಳೆಯಾದ. **Strínginess** (ನಾ.)

String (ಕ್ರಿ.; ಭೂತ., ಭೂ. ಕೃ. Strung) ದಾರ, ಹುರಿ, ತಂತಿ, —ಹಾಕು, ಕಟ್ಟು; (ಬಿಲ್ಲಿಗೆ) ಹೆದೆಯೇರಿಸು; (ರೂಪ.; ಮು., ಭೂ. ಕೃ. ನಲ್ಲಿ) (ಇಂದ್ರಿಯಗಳು, ನರಗಳು, ನಿರ್ಧಾರ, ವ್ಯಕ್ತಿ, ಮೊ. ನ್ನು) ಬಿಗಿಮಾಡು, ಹುರಿಗೊಳಿಸು, ಸಿದ್ಧಗೊಳಿಸು, ಸೂಕ್ಷ್ಮ ಮಾಡು, ಉದ್ರೇಕಿಸು [Was strung up to do the deed ಆ ಕೆಲಸವನ್ನು ಮಾಡುವಂತೆ ಅವನನ್ನು ಹುರಿಗೊಳಿಸಿತ್ತು. High-strung *or* highly strung nerves, person ಅತಿ ಸೂಕ್ಷ್ಮದ, ಬೇಗ ಉದ್ರೇಕಗೊಳ್ಳುವ, ತುಂಬ ಮಿಡಿಯುವ, —ನರಗಳು, ವ್ಯಕ್ತಿ]; (ಮಣಿ, ಮೊ. ನ್ನು) ಸರ ಕಟ್ಟು, ಪೋಣಿಸು; (ಹುರುಳಿಕಾಯಿ, ಅವರೆಕಾಯಿ, ಮೊ. ಗಳ) ನಾರು ಬಿಡಿಸು; (ಗೋಂದು, ಮೊ. ಗಳ ವಿಷಯದಲ್ಲಿ) ನೂಲಿನಂತೆ ಏಳು, ಲೋಳೆಗಟ್ಟು; (ಬಿಲಿಯರ್ಡ್ಸ್ ಆಟ: ಯಾರು ಮೊದಲು ಆಡಬೇಕೆಂದು ನಿರ್ಧರಿಸಲು) ಪೂರ್ವಭಾವಿಯ ಹೊಡೆತಗಳನ್ನು ಹೊಡೆ. S. up (ಬಳ. ಮಾ.) ನೇಣುಹಾಕಿ ಕೊಲ್ಲು, ಗಲ್ಲಿಗೆ ಹಾಕು (They strung him up after a fair trial before Judge Lynch). **Strínger** (ನಾ.) (ಕ್ರಿಯಾರ್ಥಗಳಲ್ಲಿ); = String-board (ಮೇಲೆ ನೋಡಿ)

Stringéndo (It.) ಸ್ಟ್ರಿಂಜೆಂಡೊ (ಸಂ. ಸೂಚನೆ) ಇನ್ನೂ ಗಟ್ಟಿಯಾಗಿ ಮತ್ತು ವೇಗವಾಗಿ; ರಭಸದಿಂದ.

Stríngent ಸ್ಟ್ರಿಂಜೆಂಟ್ (ಗು.) (ನಿಯಮ, ಷರತ್ತು, ಮೊ. ಗಳ ವಿಷಯದಲ್ಲಿ) ಬಿಗಿಯಾದ, ಕಟ್ಟುನಿಟ್ಟಾದ, ಚಚು ತಪ್ಪದೆ ನಡೆಸಬೇಕಾದ; ತಪ್ಪಿಸಿಕೊಳ್ಳಲು ಉಪಾಯ, ಸ್ವಂತ ವಿವೇಚನೆ, ಮೊ. ಕ್ಕೆ ಅವಕಾಶವಿಲ್ಲದ; ಅನುಲ್ಲಂಘನೀಯ, ಕಠಿನ; (ಹಣದ ಪೇಟೆ, ಮೊ. ಗಳ ವಿಷಯದಲ್ಲಿ) ಬಿಕ್ಕಟ್ಟಿನ (ಮೇಲಿರುವ), ಬಿಗಡಾಯಿಸಿಕೊಂಡಿರುವ, ಮುಗ್ಗಟ್ಟಾಗಿರುವ. **Stríngently** (ಕ್ರಿ. ವಿ.); **Stríngency** (ನಾ.)

Strínger, Stríngy. **String** ನೋಡಿ.

Strip[1] ಸ್ಟ್ರಿಪ್ (ಕ್ರಿ.) ಬಟ್ಟೆ—ಕಳಚು, ತೆಗೆದುಹಾಕು; ಬತ್ತಲೆ, ನಗ್ನ, —ಮಾಡು; (ಹೊದಿಕೆ, ಉಪಬಂಧ, ಸ್ವತ್ತು, ಮೊ. ನ್ನು) ಕಸಿ(ದುಕೊ), ಸುಲಿ(ಗೆ ಮಾಡು) (*Of* ಉಪ. ದೊಡನೆ) [S. one to the skin ಒಬ್ಬನನ್ನು ಬತ್ತಲೆಮಾಡು. Stripped ಬತ್ತಲೆಯಾದ, ನಗ್ನ. Stripped of fine names, it is a swindle ಬೆಡಗಿನ ಮಾತು ಬಿಟ್ಟು ಹೇಳಿದರೆ, ಅದರ ಹೆಸರು ಮೋಸ. S. house, ship, tree ಮನೆಯ ಪೀಠೋಪಸ್ಕರಗಳನ್ನು, ಹಡಗಿನ ಹಗ್ಗ ಸಜ್ಜುಗಳನ್ನು, ಮರದ ತೊಗಟೆ ಮತ್ತು ರೆಂಬೆಗಳನ್ನು, —ತೆಗೆದುಹಾಕು; (ಹೀಗೆ) ಮನೆಯನ್ನು, ಹಡಗನ್ನು, ಮರವನ್ನು, ಬರಿದುಮಾಡು. S. cow ಒಂದು ತೊಟ್ಟೂ ಬಿಡದೆ ಹಸುವನ್ನು, ಹಾಲನ್ನು, ಹಿಂಡು. S. tobacco ಹೊಗೆ ಸೊಪ್ಪಿನ ತೊಟ್ಟನ್ನು ತೆಗೆದುಹಾಕು. S. screw ತಿರುಪುಮೊಳೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುತ್ತನ್ನು ಕಿತ್ತುಹಾಕು, ಕೆಡಿಸಿಹಾಕು] ; (ಹೊದಿಕೆ, ಮೊ. ನ್ನು) ಕಿತ್ತು ಹಾಕು, ಎಳೆದುಹಾಕು (*Off, from* ಉಪ. ದೊಡನೆ) ; ಉಡುಪು, ಬಟ್ಟೆ, —ಬಿಚ್ಚಿಹಾಕು ; (ತಿರುಪುಮೊಳೆಯ ವಿಷಯದಲ್ಲಿ) ಸುತ್ತು—ಕಿತ್ತು ಹೋಗು, ಕಟ್ಟುಹೋಗು ; (ಕ್ಷಿಪಣಿಯ ವಿಷಯದಲ್ಲಿ ; ಸುರುಳಿ ಗಾಡಿಯ ಕೋವಿಯಿಂದ) ಸುತ್ತು ಚಲನೆಯಿಲ್ಲದೆ ಹೊರಡು. S.-leaf ತೊಟ್ಟು ತೆಗೆದ ಹೊಗೆಸೊಪ್ಪು. **Strípper** (ನಾ.)

Strip² ಸ್ಟ್ರಿಪ್ (ನಾ.) (ಉದ್ದವಾದ ಕಿರಿದಗಲದ) ತುಂಡು, ತುಕಡಿ, ಪಟ್ಟಿ, ಪಟ್ಟೆ (A s. of card, paper, cloth, garden, territory, board)

Stripe ಸ್ಟ್ರೈಪ್ (ನಾ.) ಪಟ್ಟೆ [Black with a red s. ಕೆಂಪು ಪಟ್ಟೆಯುಳ್ಳ ಕಪ್ಪು ಒಡಲು. Stars & stripes (Star ನೋಡಿ). Sergeant's, corporal's, stripes ಸಾರ್ಜೆಂಟಿನ, ಕಾರ್ಪೊರಲನ, (ಅಂಗಿಯ ತೋಳಮೇಲೆ ಹಾಕಿರುವ) Λ ಆಕಾರದ ೩, ೨ ಪಟ್ಟೆಗಳು. Get, lose, one's stripes (ಅಧಿಕಾರದಲ್ಲಿ) ಬಡತಿ ಹೊಂದು, ಕೆಳ ದರ್ಜೆಗೆ ಇಳಿ(ಸಲ್ಪಡು). Zebra's stripes ಜೀಬ್ರ ಪ್ರಾಣಿಯ ಮೈಯ ಪಟ್ಟೆಗಳು]. (ಪ್ರಾಚೀ. ಪ್ರ.) ಬಾರೇಟು, ಕಶಾಪ್ರಹಾರ (ಸಾ., ಬ. ವ. ದಲ್ಲಿ) ; (ಬ. ವ. ದಲ್ಲಿ) ಚೆಡಿ ಶಿಕ್ಷೆ ; ಬಾಸುಂಡೆ. **(-)striped** (ಗು.) (—) ಪಟ್ಟೆಗಳುಳ್ಳ, ಪಟ್ಟೆಯ. **Strípy** (ಗು.) ಪಟ್ಟೆ ಪಟ್ಟೆಯಾದ. **Strípiness** (ನಾ.)

Strípling ಸ್ಟ್ರಿಪ್ಲಿಂಗ್ (ನಾ.) ಹುಡುಗ, ಎಳೆಯ, ಚಿಣ್ಣ, ಹೈದ.

Strive ಸ್ಟ್ರೈವ್ (ಕ್ರಿ. ಅಕ. ; ಭೂತ. Strove ಸ್ಟ್ರೋವ್, ಭೂ. ಕೃ. Striven ಸ್ಟ್ರಿವನ್) ಹೆಣಗು, ಹೋರಾಡು, ಪೊಣರ್ (ಗ್ರಾಂ.) ; ಕಷ್ಟ, ಪ್ರಯತ್ನ, —ಪಡು ; ಶ್ರಮಿಸು, ಉಜ್ಜುಗಿಸು ; ಸ್ಪರ್ಧಿಸು (*To, for, after, with, against* ಉಪ. ದೊಡನೆ) (S. together, with each other ಪರಸ್ಪರ ಹೋರಾಡು, ಸ್ಪರ್ಧಿಸು)

Stróbile ಸ್ಟ್ರಾ(ಸ್ಟ್ರೋ)ಬೈ(ಬಿ)ಲ್ (ನಾ.) (ಪೈನ್ ಮರದ) ಶಂಕು ವಿನಾಕಾರದ ಕಾಯಿ, ಮೋಕಿನಾಕಾರದ ಗೊಂಚಲು.

Strode. Stride ಧಾತುವಿನ ಭೂತ.

Stroke¹ ಸ್ಟ್ರೋಕ್ (ನಾ., ಕ್ರಿ.) ಏಟು, ಪೆಟ್ಟು, ಹೊಡೆತ, ಪ್ರಹಾರ, ಧಕ್ಕೆ [20 strokes of the birch ಬರ್ಚ್ ಚೆಡಿಯಿಂದ ೨೦ ಏಟು. Finishing s. ತೀರಿಸಿಬಿಡುವ, ಕೊನೆಗಾಣಿಸುವ, —ಹೊಡೆತ. S. of paralysis *or* apoplexy, *or* s. ಪಾರ್ಶ್ವವಾಯುವಿನ ಅಥವಾ ತೀಕ್ಷ್ಣವಾಯುವಿನ ಹೊಡೆತ. Sun-s. (Sun ನೋಡಿ)] ; ಮಾಡಿದ ಒಂದು ಪ್ರಯತ್ನ, ಪಟ್ಟು ; (ಆವರ್ತಕ ಕ್ರಿಯೆಯಲ್ಲಿ ಅಥವಾ ಚಲನೆಯಲ್ಲಿ) ನಿರ್ದಿಷ್ಟ ಸ್ಥಾನದಿಂದ ಒಂದು ಪೂರ್ತಿ ಎಡೆಯಾಟ, ಆಂದೋಲನ (ಉದಾ., ಲೋಲಕದ್ದು, ಆಡುಬೆಣೆಯದು) ; ಎಡೆಯಾಟಕ್ಕೆ ತೆಗೆದುಕೊಳ್ಳುವ ಕಾಲ ; ಆಂದೋಲನ ಕಾಲ [Has not done a s. of work ಒಂದು ಪಟ್ಟು ಕೆಲಸವನ್ನೂ ಮಾಡಿಲ್ಲ. S. of wing, oar ರೆಕ್ಕೆಯ, ಹುಟ್ಟಿನ, ಒಂದು ಪೂರ್ತಿ ಬೀಸು, ಹೊಡೆತ. S. of piston ಆಡುಬೆಣೆಯ ಒಂದು ಎಡೆಯಾಟ. Golfer does hole in five strokes ಗಾಲ್ಫ್ ಆಟಗಾರನು ಐದು ಹೊಡೆತಗಳಿಂದ ಬದ್ದು ತುಂಬುತ್ತಾನೆ. Row a fast, slow, long, s. ವೇಗವಾಗಿ, ನಿಧಾನವಾಗಿ, ಉದ್ದವಾಗಿ, —ಹುಟ್ಟು ಹೊಡೆ. Vary the s. ಹೊಡೆತ(ದ ರೀತಿಯನ್ನು) ಬದಲಾಯಿಸು. At one s., at a s. ಒಂದೇ ಏಟಿಗೆ, ಒಂದೇ ಸಲಕ್ಕೆ, ಏಕದಂ. At every s., s. by s. ಏಟು ಏಟಿಗೂ, ಕ್ರಮೇಣ] ; (ಆಟ, ಮೊ. ಗಳಲ್ಲಿ) ಹೊಡೆಯುವ —ರೀತಿ, ವರಿಸೆ ; ಧರ್ಜರಿ—ಹೊಡೆತ, ಸಾಧನೆ [Invented a new s. in cricket ಕ್ರಿಕೆಟ್ಟಿನಲ್ಲಿ ಒಂದು ಹೊಸ ಹೊಡೆತವನ್ನು, ವರಿಸೆಯನ್ನು, ಕಂಡುಹಿಡಿದನು. S. of genius ಪ್ರತಿಭೆಯ ಹೊಡೆತ ; ಅಪೂರ್ವ—ಭಾವ, ಕಲ್ಪನೆ. S. of wit, diplomacy ಬುದ್ಧಿ ಚಮತ್ಕಾರದ, ರಾಯಭಾರ ತಂತ್ರದ, ಹೊಡೆತ. S. of business ಲಾಭಕರ ವ್ಯಾಪಾರ(ದ ಹೊಡೆತ). A clever s. ಜಾಣತನದ, ಬುದ್ಧಿವಂತಿಕೆಯ, —ಹೊಡೆತ, ವರಿಸೆ. Master-s. (Master ನೋಡಿ). S. of luck ಅದೃಷ್ಟದ ಹೊಡೆತ]. (ಲೇಖನಿ, ಸೀಸದಕಡ್ಡಿ, ಬಣ್ಣದ ಕುಂಚಿಗೆ, ಮೊ. ಗಳಿಂದ ಎಳೆದ) ಗೆರೆ, ರೇಖೆ, ಎಳೆತ ; (ವರ್ಣನೆಯಲ್ಲಿ ಒಟ್ಟು ಪರಿಣಾಮಕ್ಕೆ ಕಳೆಕೊಡುವ) ಸೂಕ್ಷ್ಮಾಂಶ, ವಿವರ [Up, down, -s. (ಅಕ್ಷರದ) ಮೇಲು, ಕೆಳ, —ಗೀಟು. Hair-s. (Hair ನೋಡಿ). Dash off picture with a few strokes ನಾಲ್ಕು ಗೆರೆಗಳಿಂದ ಸರ್ರನೆ ಚಿತ್ರವನ್ನು ಬರೆದುಹಾಕು. Could do it with a s. of the pen (ಅತ್ಯುಕ್ತಿ) ಒಂದು ಗೀಟು ಎಳೆದು (ಎಂದರೆ, ಒಂದು ರುಜುಹಾಕಿ) ಮಾಡಿಬಿಡಬಹುದು. Finishing strokes ಕೊನೆಯ—ನಯಗೆಲಸ, ಪರಿಷ್ಕಾರ. Description is full of strokes from the life ವರ್ಣನೆ ಜೀವನದ ಯಥಾವತ್ತಾದ ಅಂಶಗಳಿಂದ ತುಂಬಿದೆ]. ಗಡಿಯಾರದ ಗಂಟೆ—ಹೊಡೆಯುವುದು, ಹೊಡೆಯುವ ಶಬ್ದ ; ಗಂಟೆಯ ಹೊಡೆತ (It is on the s. of nine ಒಂಬತ್ತು ಹೊಡೆಯುವುದರಲ್ಲಿದೆ. Was there on the s. ಹೊತ್ತಿಗೆ ಸರಿಯಾಗಿ, ಗಂಟೆ ಹೊಡೆತಕ್ಕೆ ಸರಿಯಾಗಿ, ಅಲ್ಲಿದ್ದನು). ದೋಣಿಯ ತೀರ ಹಿಂಭಾಗದಲ್ಲಿ ಕುಳಿತು, ಮಿಕ್ಕವರಿಗೆ ಹುಟ್ಟುಹಾಕುವ ವೇಗ ತೋರಿಸಿ ಹುಟ್ಟುಹಾಕುವವನು : ವರಿಸೆ ಹುಟ್ಟುಗಾರ [=S. oar (ವಿರ. ಪ್ರ.). Row, pull, s. ವರಿಸೆ ಹುಟ್ಟುಹಾಕು]. (ಕ್ರಿ.) (ದೋಣಿಯ ಪಡೆಗೆ) ಹುಟ್ಟಿನ ವೇಗ ತೋರಿಸಿಕೊಡು, ವರಿಸೆ ಹುಟ್ಟುಗಾರನಾಗಿರು.

Stroke² ಸ್ಟ್ರೋಕ್ (ಕ್ರಿ. ಸಕ., ನಾ.) (ಮೇಲ್ಮೈಯ ಮೇಲೆ) ಕೈಯಾಡಿಸು, ಸವರು, ತಡವು, ನೀವು, ನೇವರಿಸು (S. one *or* one's hair the wrong way ಒಬ್ಬನನ್ನು ರೇಗಿಸು, ಕೆರಳಿಸು. S. one down ಕೋಪವಿಳಿಸು, ಒಬ್ಬನನ್ನು ಸಮಾಧಾನಪಡಿಸು). (ನಾ.) ಸವರುವುದು, ನೇವರಿಕೆ. **Strókingly** (ಕ್ರಿ. ವಿ.)

Stroll ಸ್ಟ್ರೋಲ್ (ಕ್ರಿ., ನಾ.) (ಸಾವಕಾಶವಾಗಿ, ಬಿಡುವಿನಾಗಿ) ತಿರುಗಾಡು, ಸುತ್ತಾಡು, ಅಡ್ಡಾಡು, ಠಳಾಯಿಸು ; (ಪ್ರದರ್ಶನ, ಮೊ. ನ್ನು ಕೊಡುತ್ತ) ಸ್ಥಳದಿಂದ ಸ್ಥಳಕ್ಕೆ ಸಂಚರಿಸು, ಪರ್ಯಟನಮಾಡು (A strolling company ಪರ್ಯಟನ ಮಂಡಲ, ಸಂಚಾರಿ ಮಂಡಲ). (ನಾ.) ತಿರುಗಾಟ, ಅಡ್ಡಾಟ, ವಿಹಾರ (Go for, take, a s. ತಿರುಗಾಟಕ್ಕೆ ಹೋಗು). **Stróller** (ನಾ.)

Stróma ಸ್ಟ್ರೋಮ (ನಾ., ಬ. ವ. -mata —ಮಟ) (ಜೀ. ವಿ.) (ಅಂಗದ ಅಥವಾ ಜೀವಕಣದ) ಚೌಕಟ್ಟು, ತಡಕೆ. **Stromátic** ಸ್ಟ್ರೊಮ್ಯಾಟಿಕ್ (ಗು.)

Strong ಸ್ಟ್ರಾಂಗ್ (ಗು.) ತಡೆಯುವ (ಸಾಮರ್ಥ್ಯವುಳ್ಳ), ತಡೆತವುಳ್ಳ, ಗಟ್ಟಿಯಾದ, ಗಡುಸಾದ, ಬಲ, ಭದ್ರ, ದೃಢ, ಗಾಢ, ಆರೋಗ್ಯದ, ಗಟ್ಟಿಮುಟ್ಟಾಗಿರುವ, ಕಸುವುಳ್ಳ, ಜೋರಾದ, ಶಕ್ತ, ಪ್ರಬಲ, ಸಮರ್ಥ, ತೀವ್ರ, ತೀಕ್ಷ್ಣ [S. cloth ಗಟ್ಟಿಯಾದ ಬಟ್ಟೆ. A s. constitution ರೋಗಕ್ಕೀಡಾಗದ, ರೋಗವನ್ನು ಗೆಲ್ಲಬಲ್ಲ, —ಮೈಗುಣ : ಗಟ್ಟಿ ಮೈಗುಣ, ದೃಢಕಾಯ. S. nerves (ಭಯ, ಉದ್ರೇಕ, ಮೊ. ಕ್ಕೆ ಒಳಗಾಗದ) ಗಟ್ಟಿ ನರಗಳು, ಸಹನಶಕ್ತಿ. S. fortress, town ಭದ್ರವಾದ ಕೋಟೆ, ಪಟ್ಟಣ. S.-box, -room ಕಳ್ಳರು ಭೇದಿಸಲಾಗದಷ್ಟು ಭದ್ರವಾದ, ಬೆಲೆ ಬಾಳುವ ವಸ್ತುಗಳನ್ನಿಡುವ, ಪೆಟ್ಟಿಗೆ, ಕೋಣೆ : ಭದ್ರ—ಪೆಟ್ಟಿಗೆ, ಕೋಣೆ. S. faith ದೃಢವಾದ ನಂಬಿಕೆ. The s. ಆರೋಗ್ಯದೃಢಕಾಯರು, ಬಲಿಷ್ಠರು, ತಮ್ಮ ಕಡೆ ಬಲವುಳ್ಳವರು. Are you quite s. again? ನೀನು ಮತ್ತೆ ಆರೋಗ್ಯವಾಗಿದ್ದೀಯೊ ? A s. market ಮೇಲುಮಟ್ಟದಲ್ಲಿರುವ, ಏರುತ್ತಿರುವ, ಧಾರಣೆವಾಸಿ. S. meat (ಬೈಬಲ್) ಗಟ್ಟಿ, ಗಡುಸು, —ಆಹಾರ ; (ರೂಪ.) ತೀಕ್ಷ್ಣ ಬುದ್ಧಿಯವರಿಗೆ ಅಥವಾ ಸುಶಿಕ್ಷಿತರಿಗೆ ಮಾತ್ರ ಹಿಡಿಯುವ ತತ್ತ್ವವಿಚಾರ : ದುರ್ಗ್ರಾಹ್ಯ, ಗಹನ,—ವಿಚಾರ, ತತ್ತ್ವ ; ಕಬ್ಬಿಣದ ಕಡಲೆ. Is s. enough to (—ಮಾಡಲು, ತಾಳಲು) ಶಕ್ತನಾಗಿದ್ದಾನೆ. S. in judgement ವಿವೇಚನಾ ದಕ್ಷ. S. in numbers ಸಂಖ್ಯಾಬಲವುಳ್ಳ. S. in health ಒಳ್ಳೆಯ ಆರೋಗ್ಯವುಳ್ಳ. By the s. arm *or*

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

hand ಬಲಪ್ರಯೋಗದಿಂದ. Is as s. as a horse ಕುದುರೆಯಷ್ಟು ಶಕ್ತನಾಗಿದ್ದಾನೆ, ತುಂಬ ಕೆಲಸ ಮಾಡಬಲ್ಲನು. A s. detachment ಬಲವಾದ ತಂಡ. A company 200 s. ೨೦೦ ಮಂದಿ(ಯ ತಂಡ). How many s. are you? ನಿಮ್ಮ ಬಲ ಎಷ್ಟಿದೆ? ನೀವು ಎಷ್ಟು ಮಂದಿ ಇದ್ದೀರಿ? A s. combination ಬಲವಾದ ಸೇರ್ಪಡೆ. A s. candidate ಪ್ರಬಲನಾದ, ಗೆಲ್ಲುವ ಸಂಭವವಿರುವ, ಉಮೇದುವಾರ. S. drink, waters ಮದ್ಯಸಾರವುಳ್ಳ ಪಾನೀಯಗಳು. S. tea, toddy ಜೋರಾದ, ತೀಕ್ಷ್ಣವಾದ, —ಟೀ, ಹೆಂಡ. S. situation (ನಾಟಕದಲ್ಲಿ ಅಥವಾ ಕಥೆಯಲ್ಲಿ: ಓದುಗರ ಅಥವಾ ಪ್ರೇಕ್ಷಕರ ಮನಸ್ಸನ್ನು ಕಲಕುವ) ಬಿಗಿಯಾದ, ಬಿಕ್ಕಟ್ಟಾದ, —ಸನ್ನಿವೇಶ, ಸಂದರ್ಭ. S. voice ಗಟ್ಟಿಯಾದ, ಬಲವಾದ, —ಕಂಠ, ಗಂಟಲು. S. mind ದೃಢ ವಿವೇಚನೆಯ, ವೀರ್ಯವತ್ತಾದ, —ಮನಸ್ಸು; ದೃಢ ಮನಸ್ಸು. S.-minded ದೃಢ ಮನಸ್ಸಿನ, ವಿವೇಚನಶಕ್ತಿಯುಳ್ಳ; (ಹೆಂಗಸಿನ ವಿಷಯದಲ್ಲಿ: ಮಾನಸಶಕ್ತಿಯಲ್ಲಿಯೂ ಕಾನೂನು ವ್ಯವಹಾರಗಳಲ್ಲಿಯೂ) ಗಂಡಸಿಗೆ ಸರಿಸಮನಾದ ಹಕ್ಕು ಹೂಡುವ; ಗಡುಸು ಮನಸ್ಸಿನ. S. evidence, argument, case ಬಲವಾದ ಸಾಕ್ಷ್ಯ, ವಾದ, ಮೊಕದ್ದಮೆ. S. cheese, onion ಕಟುವಾದ ಚೀಸ್, ಈರುಳ್ಳಿ. S. butter ನಾತ ಹೊಡೆಯುವ, ಗಬ್ಬು, —ಬೆಣ್ಣೆ. S. breath ದುರ್ವಾಸನೆಯ ಉಸಿರು. Have a s. hold upon *or* over (—ಮೇಲೆ) ಬಲವಾದ ಹಿಡಿತವಿ(ಟ್ಟುಕೊಂಡಿ)ರು. A s. literary style ವಿಶದವೂ ಬಿಗಿಯೂ ಆದ, ವೀರ್ಯವತ್ತಾದ, —ಸಾಹಿತ್ಯ ಶೈಲಿ. S. language ಕಠಿನ ಮಾತು; ಬೈಗುಳು, ದುರ್ಭಾಷೆ. Give s. support to ಬಲವಾದ ಬೆಂಬಲ, ಪುಷ್ಟಿ, —ಕೊಡು. A s. advocate ಪ್ರಬಲ ವಾದಿ. S. man ದೃಢ ಮನಸ್ಸಿನಿಂದ ಆಡಳಿತ ನಡಸುವವನು: ಕೆಚ್ಚಿನ ಆಡಳಿತಗಾರ, ದರ್ಪದ ಮನುಷ್ಯ, ದೃಢವಾದ ನಿರ್ವಾಹಶಾಲಿ. S. measures ತೀವ್ರವಾದ, ಕಠಿನವಾದ, —ಕಾರ್ಯಕ್ರಮ, ನಡೆವಳಿ. Is s. against compromise ಒಪ್ಪಂದ ಕೂಡದೆಂದು ಬಲವಾಗಿದ್ದಾನೆ, ಹಟಹಿಡಿದಿದ್ದಾನೆ. Going s. (ಅಸಂ.) (ಕುದುರೆ ಪಂದ್ಯವನ್ನು ಅಥವಾ ಇತರ ಉದ್ಯಮವನ್ನು) ಉತ್ಸಾಹದಿಂದ, ಹುರುಪಿನಿಂದ, —ಮುಂದುವರಿಸುತ್ತ; ಆರೋಗ್ಯವಾಗಿ, ಹುರುಪಿನಮೇಲೆ; ಭರ್ಜರಿಯಾಗಿ. Come *or* go it s. (ಅಸಂ.) (ಯಾವುದರಲ್ಲಾದರೂ) ಅತಿಗೆ ಹೋಗು]. (ವ್ಯಾ.) (ಕ್ರಿಯಾಪದಗಳ ವಿಷಯದಲ್ಲಿ) ಪ್ರತ್ಯಯ ಸೇರದೆ ಮೂಲರೂಪದಲ್ಲಿಯೆ ಸ್ವರ ವ್ಯತ್ಯಾಸಹೊಂದಿ ಆಖ್ಯಾತರೂಪ ತಾಳುವ: ಸಬಲ [ಉದಾ., Break, broke; Swim, swam (Float, floated; Grant, granted ಎಂಬಂತೆ ಅಲ್ಲ)]. **Strónghold** (ನಾ.) ಕೋಟೆ, ಕಿಲ್ಲೆ, ದುರ್ಗ; (ಯಾವುದಾದರೂ ಚಳವಳಿಯ ಅಥವಾ ಪ್ರವೃತ್ತಿಯ) ಪ್ರಬಲ ಸ್ಥಾನ, ಭದ್ರವಾದ ನೆಲೆ, ಆಶ್ರಯ (Liverpool is a s.-h. of protestantism). **Stróngish** (ಗು.); **Stróngly** (ಕ್ರಿ. ವಿ.)

Strόntia, Stróntian. **Strontium** ನೋಡಿ.

Stróntium ಸ್ಟ್ರಾನ್‌ಷಿಯಮ್, —ಷಮ್ (ನಾ.) ಒಂದು ದಟ್ಟ ಹಳದಿ ಬಣ್ಣದ ಲೋಹ. S. nitrate (ಬಾಣ ಬಿರುಸುಗಳಲ್ಲಿ ಜ್ವಾಲೆಗೆ ಕೆಂಪು ಬಣ್ಣ ಕೊಡಲು ಉಪಯೋಗಿಸುವ) ಸ್ಟ್ರಾನ್ಷಿಯಂ ನೈಟ್ರೇಟು. **Stróntia** ಸ್ಟ್ರಾನ್‌ಷಿಯ, —ಷ (ಗು.), **Stróntian** ಸ್ಟ್ರಾನ್‌ಷಿಯನ್, —ಷನ್ (ನಾ., ಗು.) ಸ್ಟ್ರಾನ್ಷಿಯಂ ಲೋಹದ ಆಕ್ಸೈಡು. (ಗು.) ಸ್ಟ್ರಾನ್ಷಿಯಂ ಲೋಹದ (ಆಕ್ಸೈಡಿನ)

Strop ಸ್ಟ್ರಾಪ್ (ನಾ., ಕ್ರಿ. ಸಕ.) ಕ್ಷೌರದ ಕತ್ತಿಯನ್ನು, ಅಲಗನ್ನು, —ಮಸೆಯುವ ಚರ್ಮದ ಪಟ್ಟಿ: ಮಸೆದೊಗಲು; (ಇದೇ ಕೆಲಸಕ್ಕೆ ಬರುವ ಇತರ) ಮಸೆ, ಸಾಣೆ, —ಸಲಕರಣೆ, ಯಂತ್ರ. (ಕಪ್ಪಿ, ಮೊ.ನ್ನು ತೂಗಹಾಕುವಲ್ಲಿ ಉಪಯೋಗಿಸುವ) ತೊಗಲ, ಹಗ್ಗದ, ಕಬ್ಬಿಣದ,—ಪಟ್ಟಿ. (ಕ್ರಿ.) ಮಸೆದೊಗಲಮೇಲೆ ಮಸೆ.

Strόphe ಸ್ಟ್ರೋ(ಸ್ಟ್ರಾ)ಫಿ(ಫೆ) (ನಾ.; ಬ. ವ. -phes —ಫಿಸ್, -phae ಫೀ) ಗ್ರೀಕ್ ನಾಟಕದಲ್ಲಿ ಮೇಳದವರು ರಂಗದಮೇಲೆ ಬಲದಿಂದ ಎಡಕ್ಕೆ ತಿರುಗುವುದು: ಬಲ—ಮುರಿ, ತಿರುಗು; ಹೀಗೆ ತಿರುಗುವಾಗ ಹೇಳುವ ಹಾಡಿನ ಚರಣಗಳು (Antistrophe ನೋಡಿ). **Strόphic** ಸ್ಟ್ರಾ— (ಗು.)

Strove. Strive ಧಾತುವಿನ ಭೂತ.

Strow ಸ್ಟ್ರೋ (ಕ್ರಿ. ಸಕ.; ಭೂ. ಕೃ. Strown *or* Strowed) (ಪ್ರಾಚೀ. ಪ್ರ.) =Strew.

Struck. Strike ಧಾತುವಿನ ಭೂತ. ಮತ್ತು ಭೂ. ಕೃ.

Strúcture ಸ್ಟ್ರಕ್ಚರ್ (ನಾ.) ಕಟ್ಟಿರುವ ರೀತಿ; ರಚನಾ—ಕ್ರಮ, ವಿನ್ಯಾಸ; ಕಟ್ಟು, ಕಟ್ಟಡ, ರಚನೆ, ಬಂಧ, ಘಟನೆ, ಸ್ವರೂಪ (The s. of a house ಮನೆ ಕಟ್ಟಿರುವ ರೀತಿ; ಮನೆಯ ಕಟ್ಟಡ. The s. of a machine ಯಂತ್ರದ ರಚನೆ. The s. of an organ ಅಂಗದ —ಘಟನೆ, ಸ್ವರೂಪ. A sentence of loose s. ಶಿಥಿಲ ಬಂಧದ ವಾಕ್ಯ. A fine marble s. ಸೊಗಸಾದ ಅಮೃತಶಿಲೆಯ ಕಟ್ಟಡ). **Strúctural** (ಗು.); **Strúcturally** (ಕ್ರಿ. ವಿ.); **Strúctureless** (ಗು.); **(-)strúctured** (ಗು.)

Strúggle ಸ್ಟ್ರಗ್‌ಲ್ (ಕ್ರಿ. ಅಕ., ನಾ.) (ಹಿಡಿತದಿಂದ ತಪ್ಪಿಸಿಕೊಳ್ಳುವುದಕ್ಕಾಗಿ) ಒದ್ದಾಡು (The child struggled & kicked); ಕಷ್ಟದಲ್ಲಿ ಬಲವಾಗಿ ಪ್ರಯತ್ನಪಡು; ಹೋರಾಡು, ಹಣಗು, ಹೆಣಗಾಡು, ಪ್ರಯಾಸಪಡು (*With, against* ಉಪ. ಜೊಡನೆ) [Struggled to express himself ತನ್ನ ಮನಸ್ಸಿನ ಭಾವವನ್ನು ವ್ಯಕ್ತಪಡಿಸಲು ಒದ್ದಾಡಿದನು, ಪ್ರಯಾಸಪಟ್ಟನು. Struggling against the forces of nature ಪ್ರಕೃತಿಯ ಶಕ್ತಿಗಳೊಡನೆ ಹೋರಾಡುತ್ತ. A struggling artist (ಜೀವನಕ್ಕಾಗಿ, ಹೆಸರಿಗಾಗಿ) ಕಷ್ಟಪಡುತ್ತಿರುವ ಕಲೆಗಾರ, ಚಿತ್ರಗಾರ]; ಕಷ್ಟಪಟ್ಟುಕೊಂಡು ಹೋಗು (*Through, up, along, in* ಮೊ. ಉಪ. ಜೊಡನೆ) (Light struggled in through dirty panes). (ನಾ.) ಹೋರಾಟ, ಹೆಣಗಾಟ, ಒದ್ದಾಟ, ಪ್ರಯಾಸ; ಹೊಡೆದಾಟ, ಜಗಳ. The s. for existence ಪ್ರಾಣಿವರ್ಗದಲ್ಲಿ ಜೀವನಕ್ಕಾಗಿ ಪರಸ್ಪರ ನಡೆಯುವ ಹೋರಾಟ: ಜೀವನದ ಹೋರಾಟ. **Strúggler** (ನಾ.); **Strúgglingly** (ಕ್ರಿ. ವಿ.)

Strum ಸ್ಟ್ರಂ (ಕ್ರಿ., ನಾ.) (ಪಿಯಾನೊ ಅಥವಾ ಇತರ ತಂತಿ ವಾದ್ಯಗಳನ್ನು) ಕೌಶಲವಿಲ್ಲದೆ, ಅಡ್ಡಾದಿಡ್ಡಿ, —ಮೀಟು, ನುಡಿಸು; ಟುಂಯ್ ಟುಂಯ್ ಅನಿಸು. (ನಾ.) ಟುಂಯ್ ಟುಂಯ್ (ಶಬ್ದ) (The s. of a guitar)

Strúma ಸ್ಟ್ರೂಮ (ನಾ.; ಬ. ವ. -mae —ಮೀ) ಗಂಡಮಾಲೆ; ಗಳಗಂಡ; (ಸ. ವಿ.) ಒಂದು ಅಂಗದ ಮೆತ್ತೆಯಂಥ ಊತ: ಮೃದು ಸ್ಫೋಟ, ಮೆದುವೂತ. **Strúmose** (ಗು.); **Strúmous** (ಗು.)

Strúmpet ಸ್ಟ್ರಂಪೆಟ್ (ನಾ.) ಗುಡಿಸೆಟ್ಟಿ, ಬೆಲೆವೆಣ್ಣು.

Strung. String ಧಾತುವಿನ ಭೂತ. ಮತ್ತು ಭೂ. ಕೃ.

Strut[1] ಸ್ಟ್ರಟ್ (ಕ್ರಿ. ಅಕ., ನಾ.) ಬಿಂಕದಿಂದ, ಸೆಡೆತುಕೊಂಡು, ಜಂಬದಿಂದ, —ನಡೆ. (ನಾ.) ಬಿಂಕದ, ಸೆಡೆತ, —ನಡಗೆ. **Strúttingly** (ಕ್ರಿ. ವಿ.)

Strut[2] ಸ್ಟ್ರಟ್ (ನಾ., ಕ್ರಿ. ಸಕ.) ಭಾರವನ್ನಾಗಲಿ ಒತ್ತಡವನ್ನಾಗಲಿ ತನ್ನ ಉದ್ದದಮೇಲೆ ತಡೆಯುವಂತೆ, ಒಂದು ಚೌಕಟ್ಟಿನಲ್ಲಿ ಅಳವಡಿಸಿದ ಮರದ ಅಥವಾ ಕಬ್ಬಿಣದ ತುಂಡು: ಒಡೆ—ಮರ, ಪಟ್ಟಿ; (ಮು., ತೊಲೆಕಟ್ಟಿಗೆ ಹಾಕಿರುವ) ಗುಜ್ಜು, ಮೂಲೆಮರ, ಮೂಲೆಪಟ್ಟಿ. (ಕ್ರಿ.) —ಹಾಕು; —ಇಂದ ಭದ್ರಮಾಡು.

Strúthious ಸ್ಟ್ರೂತಿಅಸ್ (ಗು.) ಉಷ್ಟ್ರಪಕ್ಷಿಯ(ಂಥ); —ಯ ಬುಡಕಟ್ಟಿನ.

Strýchnia ಸ್ಟ್ರಿಕ್ನಿಯ (ನಾ.), **Strýchnin(e)** ಸ್ಟ್ರಿಕ್‌ನಿ(ನೈ)ನ್ (ನಾ.) ನಂಜಿನ ಕೊರಡು ಜಾತಿಯ ಮರಗಳ ಬೀಜಗಳಿಂದ ತಯಾರಿಸಿದ, ಬಹಳ ವಿಷಮಯವಾದ, ಸೂಕ್ಷ್ಮ ಪ್ರಮಾಣಗಳಲ್ಲಿ ನರಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಉತ್ತೇಜಕವಾಗಿ ಉಪಯೋಗಿಸುವ, ಒಂದು ಸಸ್ಯಕ್ಷಾರ: ನಂಜಿನ ಕೊರಡಿನ ಕ್ಷಾರ. **Strýchnic** (ಗು.); **Strýchn(in)ism** (ನಾ.) ನಂಜಿನ ಕೊರಡಿನ ಕ್ಷಾರವನ್ನು ವಿಪರೀತವಾಗಿ ಉಪಯೋಗಿಸು ವುದರಿಂದ ಬರುವ ರೋಗಸ್ಥಿತಿ. **Strýchnos** ಸ್ಟ್ರಿಕ್ನಾಸ್ (ನಾ.) ನಂಜಿನ ಕೊರಡು, ಕಾಸರ್ಕ, ಮುಷ್ಟಿಮರ.

Stúart ಸ್ಟ್ಯೂಅರ್ಟ್ (ನಾ.) The Stuarts ಸ್ಟ್ಯೂಅರ್ಟ್ ಮನೆತನದ ಬ್ರಿಟಿಷ್ ರಾಜರು, ರಾಣಿಯರು.

Stub ಸ್ಟಬ್ (ನಾ., ಕ್ರಿ. ಸಕ.) (ಕಡಿದುಹಾಕಿದ ಮರ, ಮುರಿದ ಹಲ್ಲು, ಮೊ. ಗಳ ಉಳಿದ) ಮೋಟು; (ಸೀಸದಕಡ್ಡಿ, ಚುಟ್ಟ, ನಾಯಿಬಾಲ, ಮೊ. ಗಳ) ಉಳಿಕೆ, ತುಂಡು (*Of* ಉಪ. ದೊಡನೆ); ಮೋಟಾದ್ದು, ಮೊಂಡಾದ್ದು; [S.-iron ಹಳೆಯ ಕುದುರೆ ಲಾಳದ ಅಥವಾ ಇತರ ಮೊಳೆಗಳನ್ನು ಕರಗಿಸಿ ಮಾಡಿದ, ಫಿರಂಗಿ ನಳಿಕೆಗಳನ್ನು ತಯಾರಿಸಲು ಉಪಯೋಗಿಸುವ ಕಬ್ಬಿಣ: ಹಳೆಯ ಮೊಳೆ ಕರಗಿಸಿದ ಕಬ್ಬಿಣ. S.-mortise, -tenon (ಮರದ ಪೂರ್ತಿ ಹೋಗಿರದೆ ಕೊಂಚ ದೂರ ಮಾತ್ರ ಹೋಗಿರುವ) ಮೋಟು—ವೆಜ್ಜ, ಕೂರು]. (ಕ್ರಿ.) (ಮೋಟನ್ನು) ಬೇರು ಸಹಿತ—ಕಿತ್ತುಹಾಕು, ಅಗೆದುಹಾಕು; ಹೀಗೆ ಕಿತ್ತುಹಾಕಿ ನೆಲವನ್ನು ಚೊಕ್ಕಟಮಾಡು; (S. one's toe ಕಾಲಬೆರಳನ್ನು ತಾಕಿಸಿಕೊ). **Stúbby** (ಗು.)

Stúbble ಸ್ಟಬ್ಲ್ (ನಾ.) ಕೊಯ್ಲಾದಮೇಲೆ ಉಳಿದಿರುವ ಪೈರಿನ ಮೋಟುಗಳು: ಕೂಳೆ; (ಪುನಃ ಉತ್ತಿಲ್ಲದ) ಕೂಳೆ—ಹೊಲ, ಗದ್ದೆ; ಕತ್ತರಿಸಿ ಉಳಿದ, ಕೂಳೆಯ, —ಕೂದಲು, ಗಡ್ಡ. **Stúbbly** (ಗು.)

Stúbborn ಸ್ಟಬರ್ನ್ (ಗು.) ಜಗ್ಗದ, ಪಟ್ಟುಬಿಡದ, ಹಟಮಾರಿ(ತನದ), ಮೊಂಡು, ತಿದ್ದಲಾಗದ, ಮೂರ್ಖ (Facts are s. things ವಾಸ್ತವಾಂಶಗಳು ಸೂತ್ರಕ್ಕೆ ಹೊಂದಿಕೊಳ್ಳುವುದಿಲ್ಲ). **Stúbbornly** (ಕ್ರಿ. ವಿ.); **Stúbbornness** (ನಾ.)

Stúcco ಸ್ಟಕೋ (ನಾ., ಬ. ವ. -oes; ಕ್ರಿ. ಸಕ.) ಗೋಡೆಯ ಮೇಲ್ಮೈಗೆ ಬಳಿಯುವುದಕ್ಕೂ ಶಿಲ್ಪಾಲಂಕಾರ ಕೆಲಸಕ್ಕೂ ಉಪ ಯೋಗಿಸುವ ಹಲವು ಬಗೆಯ ಗಾರೆ ಅಥವಾ ಸಿಮೆಂಟು: ತಿಳಿಗಚ್ಚು. (ಕ್ರಿ.) ಕಚ್ಚುಗಾರೆ (ಕೆಲಸ) ಮಾಡು.

Stuck(-up). **Stick** ನೋಡಿ.

Stud[1] ಸ್ಟಡ್ (ನಾ., ಕ್ರಿ. ಸಕ.) (ಮು., ಅಲಂಕಾರಕ್ಕಾಗಿ ಮೇಲ್ಮೈ ಯಿಂದ ಎದ್ದುಕಾಣುವಂತೆ ಹೊಡೆದ) ದಪ್ಪ ತಲೆಯ, ಗುಬ್ಬಿ, ಗುಬಟು, —ಮೊಳೆ; ಗುಬಟು; ಕಟಿ ಮೊಳೆ, ರಿವೆಟ್ ಮೊಳೆ; (ಲಂಗರ್ ಸರಪಣಿಯ ಪ್ರತಿಯೊಂದು ಕೊಂಡಿಯಲ್ಲೂ ಹಾಕಿರುವ) ಅಡ್ಡಕಂಬಿ; (ಮು., ಷರ್ಟಿನ ಎದೆಯಲ್ಲಿ: ಎರಡು ಕಾಜಗಳೊಳಗೆ ತೂರಿಸಿಹಾಕುವ) ಇತ್ತರೆಗುಂಡಿ (Collar-s. ಕತ್ತುಪಟ್ಟಿಯದೂ ಸೇರಿ ನಾಲ್ಕು ಕಾಜ ಗಳೊಳಗೆ ತೂರಿಸಿ ಹಾಕುವ ಉದ್ದ ಕೊಳವೆಯ ಇತ್ತರೆಗುಂಡಿ; ಕತ್ತುಪಟ್ಟಿಯ ಇತ್ತರೆಗುಂಡಿ); (ಮರದ ಪಟ್ಟಿಗಳನ್ನೂ ಗಾರೆಯನ್ನೂ ಉಪಯೋಗಿಸಿ ತಡಕೆಗೋಡೆ ಕಟ್ಟುವಲ್ಲಿ, ಮರದ ಪಟ್ಟಿಗಳನ್ನು ಹೊಡೆಯುವ) ಚೌಕಟ್ಟಿನ ನಿಲುಮರ, ಕಂಬ; (ತಡಕೆ ಗೋಡೆಯ) ಮರಕಟ್ಟು, ಚೌಕಟ್ಟು. (ಕ್ರಿ.) (ಬಿಗಿಪಡಿಸುವುದಕ್ಕಾಗಿ, ಸಾ., ಅಲಂಕಾರಕ್ಕಾಗಿ) ಗುಬ್ಬಿ, ಗುಬಟು, —ಮೊಳೆ ಹೊಡೆ; (ಭೂ. ಕೃ.) ಒತ್ತಾಗಿ ಕೀಲಿಸಿದ, ತುರುಗಿದ, ಖಚಿತ (Door, sky, studded with nails, stars); (ಮೇಲ್ಮೈಯ ಮೇಲೆ) ಚೆದರಿರು, ಹರಡಿರು. **Stúdding** (ನಾ.) (ತಡಕೆ ಗೋಡೆಯ) ಮರಕಟ್ಟು, ಚೌಕಟ್ಟು.

Stud[2] ಸ್ಟಡ್ (ನಾ.) (ತಳಿಯೆಬ್ಬಿಸುವುದು, ಜೂಜು, ಬೇಟೆ, ಬಂಡಿಗೆ ಕಟ್ಟು ವುದು, ಮೊ. ಕೆಲಸಗಳಿಗಾಗಿ ಸಾಕಿಕೊಂಡಿರುವ) ಕುದುರೆ ತಂಡ; ಕುದುರೆ ಹಟ್ಟಿ, ಅಶ್ವಶಾಲೆ. **S.-book** ಕುದುರೆಗಳ ವಂಶಾವಳಿ ಪುಸ್ತಕ. **S. farm** ಕುದುರೆಯ ತಳಿಯೆಬ್ಬಿಸುವ ಸ್ಥಳ, ಅಶ್ವವರ್ಧನ ಶಾಲೆ; ಕುದುರೆಗಾವಲು. **S.-horse** ಬೀಜದ ಕುದುರೆ.

Studding-sail ಸ್ಟನ್‌ಸ್‌ಲ್ (ನಾ.) (ಸಸುಗಾಳಿಯಿರುವಲ್ಲಿ ವೇಗ ಹೆಚ್ಚಿಸುವುದಕ್ಕಾಗಿ ಕಟ್ಟಿ ಹಾರಿಸುವ) ಒಂದು ಹಗುರ ಹಾಯಿ.

Stúdent ಸ್ಟ್ಯೂಡೆಂಟ್ (ನಾ.) ಶಿಕ್ಷಣ ಪಡೆಯುತ್ತಿರುವವನು, ಕಲಿಯು ವವನು; ವಿದ್ಯಾರ್ಥಿ; ಅಭ್ಯಾಸಿ; ವ್ಯಾಸಂಗಿ; ಪರಿಶ್ರಮಿ, ಜಿಜ್ಞಾಸು (Medical, theological, historical, s; S. interpreter ಚೀಣ, ಪರ್ಷಿಯ, ಮೊ. ದೇಶಗಳಲ್ಲಿ ಬ್ರಿಟಿಷ್ ರಾಯಭಾರ ಕೆಲಸ ನಿರ್ವಹಿಸು ವುದಕ್ಕಾಗಿ ಆವಶ್ಯಕವಾದ ಭಾಷೆಯನ್ನು ಅಭ್ಯಾಸಮಾಡಿ ಯೋಗ್ಯತೆ ಪಡೆದ ಅಥವಾ ಪಡೆಯುತ್ತಿರುವ ಆಡಳಿತಾಧಿಕಾರಿ: ಭಾಷಾಭ್ಯಾಸಿ ಅಧಿಕಾರಿ. A s. of law ನ್ಯಾಯಶಾಸ್ತ್ರ ಪರಿಶ್ರಮಿ). (ಕೆಲವು ಪ್ರೌಢ ವಿದ್ಯಾಶಾಲೆ ಗಳಲ್ಲಿ) ವಿದ್ಯಾರ್ಥಿ ವೇತನಿ, ವೇತನ ವಿದ್ಯಾರ್ಥಿ. **Stúdentship** (ನಾ.) ವಿದ್ಯಾರ್ಥಿತನ; ವಿದ್ಯಾರ್ಥಿ ವೇತನ.

Stúdio ಸ್ಟ್ಯೂಡಿಯೊ (ನಾ.) ಚಿತ್ರಗಾರ, ಶಿಲ್ಪಿ, ಛಾಯಾಚಿತ್ರಗಾರ, ಮೊ. ರು ತಕ್ಕ ಬೆಳಕಿನ ಅನುಕೂಲವಿರುವಂತೆ ಏರ್ಪಡಿಸಿಕೊಂಡಿರುವ ಕೆಲಸದ ಕೋಣೆ: ಶಿಲ್ಪ, ಕಲಾ, —ಮಂದಿರ; ಕಾರ್ಯಶಾಲೆ. ಚಲನಚಿತ್ರ ನಿರ್ಮಾಣಶಾಲೆ; ನಿಸ್ತಂತು ಪ್ರಸಾರಣಶಾಲೆ.

Stúdious. **Study** ನೋಡಿ.

Stúdy ಸ್ಟಡಿ (ನಾ.) ಕಷ್ಟಪಟ್ಟು, ಗಮನಕೊಟ್ಟು, ಸಾಧಿಸಬೇಕಾ ದುದು; (ವಿಶೇಷ) ಪ್ರಯತ್ನ, ಧ್ಯೇಯ (It shall be my s. to please ಮೆಚ್ಚಿಸಲು ಪ್ರಯತ್ನಪಡುತ್ತೇನೆ. Your comfort was my s. ನಿನ್ನ ಸೌಕರ್ಯವೇ ನನ್ನ ಚಿಂತನೆಯಲ್ಲಿತ್ತು. Make a s. of ಪಡೆಯಲು, ಸಾಧಿಸಲು, —ಪ್ರಯತ್ನಿಸು). ಆಲೋಚನಾ ಮಗ್ನತೆ, ಅನ್ಯಮನಸ್ಕತೆ [ಈಗ ಸಾ., = Brown-s. (Brown ನೋಡಿ). There he stood for an hour in a s.]; ವ್ಯಾಸಂಗ, ಅಧ್ಯಯನ, ಪರಿಶ್ರಮ, ಪರಿಶೀಲನೆ. ಅಭ್ಯಾಸ, ಪಾಠ, ಓದು (Gives his hours to s. ತನ್ನ ಹೊತ್ತನ್ನು ವ್ಯಾಸಂಗಕ್ಕಾಗಿ ವಿನಿಯೋಗಿಸು ತ್ತಾನೆ. Make a s. of ಎಚ್ಚರಿಕೆಯಿಂದ ಪರಿಶೀಲಿಸು, ಚೆನ್ನಾಗಿ ವಿಚಾರಮಾಡು. My studies have convinced me that —ಎಂದು ನನ್ನ ಓದಾಣಿಕೆಯಿಂದ ನನಗೆ ಮನದಟ್ಟಾಗಿದೆ. The s. of mathematics ಗಣಿತದ ವ್ಯಾಸಂಗ. Continue your studies ನಿನ್ನ ಓದನ್ನು, ವಿದ್ಯಾಭ್ಯಾಸವನ್ನು, —ಮುಂದುವರಿಸು); ವ್ಯಾಸಂಗ, ಪರಿಶೀಲನ, —ವಿಷಯ (The proper s. of mankind is man ಮನುಷ್ಯನಿಗೆ ತಕ್ಕ ವ್ಯಾಸಂಗ ವಿಷಯ ಮನುಷ್ಯನೇ. His face was a s. ಅವನ ಮುಖ ನೋಡಬೇಕಾ ಗಿತ್ತು); (ವರ್ಣಚಿತ್ರಕಲೆ, ಮೊ. ಗಳಲ್ಲಿ) ಅಭ್ಯಾಸ, ಪ್ರಯೋಗ,—ಚಿತ್ರ (His studies are exquisite, but his finished work disappointing. A s. of a head ತಲೆಯ ಪ್ರಯೋಗ ಚಿತ್ರ); (ಸಂ.) ವಾದ್ಯಗಾರನ ಕೌಶಲವನ್ನು ಪರೀಕ್ಷಿಸುವುದಕ್ಕಾಗಿ ಅಥವಾ ಅಭಿವೃದ್ಧಿಗೊಳಿಸುವುದಕ್ಕಾಗಿ ರಚಿಸಿದ ಕೃತಿ: ಕೌಶಲಾಭ್ಯಾಸ, ಕೌಶಲ ಪರೀಕ್ಷಾ, —ಕೃತಿ; (ಸಾಹಿತ್ಯದಲ್ಲಿ) ಪರಿಶೀಲನಾತ್ಮಕ, ವಿವರಣಾತ್ಮಕ, ಪರಿಶೋಧನಾತ್ಮಕ, —ಲೇಖನ, ಪ್ರಬಂಧ; ವಿಶಿಷ್ಟ ಲಕ್ಷಣಗಳು ಎದ್ದು ತೋರುವ ಸೂಕ್ಷ್ಮ ಪರಿಶೀಲನೆಯ ಕಲಾಕೃತಿ: ಸೂಕ್ಷ್ಮ, ಗಾಢ, —ಚಿತ್ರ, ಕೃತಿ, ಶಿಲ್ಪ (A clever s. of a calf being fed); (ನಾಟಕಶಾಲೆ) (ವಾಡಿಕೆಯ ನಟನು ಗೈರುಹಾಜರಾದಾಗ ಸ್ವಲ್ಪ ಕಾಲಾವಕಾಶದಲ್ಲಿ ಬದಲಿಯಾಗಿ ನಟಿಸಲು) ಪಾತ್ರದ ವಾಕ್ಯ ಗಳನ್ನು ಗಟ್ಟಿಮಾಡುವವನು (= Understudy) (Good, slow, etc. s.); ವ್ಯಾಸಂಗದ, ಕೆಲಸದ, —ಕೋಣೆ, ಕೊಟಡಿ (You will find him in his, the, s.). **Stúdious** ಸ್ಟ್ಯೂಡಿಯಸ್ (ಗು.) ವ್ಯಾಸಂಗ, ಅಭ್ಯಾಸ, —ನಿಷ್ಠ, ನಿರತ; ಓದುವುದರಲ್ಲಿ ಆಸಕ್ತಿಯುಳ್ಳ; (ಮಾಡಲು, ಮಾಡುವುದರಲ್ಲಿ) ಗಮನಕೊಡುವ, ಉತ್ಸುಕ, ತವಕಿಸುವ, ಶ್ರದ್ಧಾನಿಷ್ಠೆಗಳುಳ್ಳ (*To* do, *of doing* ಉಪ. ದೊಡನೆ); ಉದ್ದೇಶಪೂರ್ವಕ, ಎಚ್ಚರಿಕೆಯಿಂದ ಯೋಜಿಸಿದ, ಕಷ್ಟ ಪಡುವ, ಪರಿಶ್ರಮ ಮಾಡುವ (With s. care, politeness. S. to please). **Stúdiously** (ಕ್ರಿ. ವಿ.); **Stúdiousness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Stúdy (ಕ್ರಿ.) ವ್ಯಾಸಂಗ, ಅಧ್ಯಾಸ, ಪಾಠ, —ಮಾಡು ; ಶ್ರಮಪಡು ; ಪರಿಶ್ರಮ ಮಾಡು ; (ಕಷ್ಟಪಟ್ಟು) ಓದು, ತಿಳಿದುಕೊ(ಳ್ಳು ತ್ತಿರು) ; (ಸೂಕ್ಷ್ಮವಾಗಿ) ಪರಿಶೀಲಿಸು, ಪರಾಮರ್ಶಿಸು, ವಿಚಾರ ಮಾಡು ; ಗಮನಕೊಡು [S. law, French ನ್ಯಾಯಶಾಸ್ತ್ರವನ್ನು, ಫ್ರೆಂಚ್ ಭಾಷೆಯನ್ನು, ವ್ಯಾಸಂಗಮಾಡು. S. book ಪುಸ್ತಕವನ್ನು— ಗಮನವಿಟ್ಟು ಓದು, ವ್ಯಾಸಂಗಮಾಡು. S. one's part ತನ್ನ ಪಾತ್ರದ ವಾಕ್ಯಗಳನ್ನು ಗಟ್ಟಿಮಾಡು. S. up (ಪರೀಕ್ಷೆ, ಮೊ. ಗಳಿಗಾಗಿ) ಕಷ್ಟಪಟ್ಟು ಓದು. S. out ಕಷ್ಟಪಟ್ಟು ಆಲೋಚಿಸಿ ಕಂಡುಹಿಡಿ, ತಿಳಿದುಕೊ. Studies others' convenience, his own interests ಇತರರ ಸೌಕರ್ಯವನ್ನು, ತನ್ನ ಸ್ವಂತ ಹಿತವನ್ನು, ಚೆನ್ನಾಗಿ ಗಮನಿಸುತ್ತಾನೆ. S. person's face *or* character ವ್ಯಕ್ತಿಯ ಮುಖವನ್ನು, ಶೀಲ ಸ್ವಭಾವವನ್ನು, ಪರಿಶೀಲಿಸು. S. map, the stars ಭೂಪಟವನ್ನು, ನಕ್ಷತ್ರಗಳನ್ನು, ಪರಿಶೀಲಿಸು. S. for the bar (ನ್ಯಾಯವಾದಿ ವೃತ್ತಿಗಾಗಿ) ನ್ಯಾಯಶಾಸ್ತ್ರ—ವ್ಯಾಸಂಗಮಾಡು, ಓದು]. (ಪ್ರಾಚೀ. ಪ್ರ.) ಚಿಂತನೆ ಮಾಡು ; (ಕಾರ್ಯ ಸಾಧಿಸಲು) ಎಚ್ಚರಿಕೆ ಯಿಂದಿರು, ಹವಣಿಸುತ್ತಿರು, ಸತತವಾಗಿ ಪ್ರಯತ್ನಪಡು (Studies to avoid disagreeable topics); (ಭೂ. ಕೃ. ನಲ್ಲಿ) ಬುದ್ಧಿ ಪೂರ್ವಕ, ಬೇಕೆಂದು ಮಾಡಿದ, ನಟನೆಯ, ಕೃತಕ (A studied insult ಉದ್ದೇಶಪೂರ್ವಕವಾಗಿ ಮಾಡಿದ ಅವಮಾನ. Studied politeness ಪ್ರಯತ್ನದಿಂದ ತೋರಿಸಿದ ವಿನಯ). **Stúdiedly** (ಕ್ರಿ. ವಿ.)

Stuff ಸ್ಟಫ್ (ನಾ., ಕ್ರಿ.) (ಯಾವುದರಿಂದ ಪದಾರ್ಥ ಆಗಿದೆಯೊ ಅಥವಾ ಆಗುವುದೊ ಅ) ಮೂಲದ್ರವ್ಯ ; ಕಚ್ಚಾ ಪದಾರ್ಥ ; ಸಾಮಗ್ರಿ, ಸಾಮಾನು, ಸರಕು ; ಹುರುಳು, ತಿರುಳು, ಸಾರ, ಸತ್ತ್ವ [The s. that dreams, heroes, are made of ಕನಸನ್ನು, ಕಲಿತನವನ್ನು, ಉಂಟುಮಾಡುವ ವಸ್ತು. Has good s. in him ಅವನಲ್ಲಿ ಸಾರ ಗುಣಗಳಿವೆ. Some s. they call petrol ಪೆಟ್ರೋಲ್ ಎಂದು ಕರೆಯುವ ಯಾವುದೋ ಪದಾರ್ಥ. This book is sorry s. ಈ ಪುಸ್ತಕ ಬರಿಯ ಕಸ, ಹಾಳು ಕಚಡ. Household s. (ಪ್ರಾಚೀ. ಪ್ರ.) ಮನೆ ಸಾಮಾನು, ಪೀಠೋಪಸ್ಕರಗಳು. Bread-stuffs ರೊಟ್ಟಿಯ ಸಾಮಗ್ರಿ. Food-stuffs ಆಹಾರ ಸಾಮಗ್ರಿ. Green, garden, s. ಕಾಯಿಪಲ್ಯ. Doctor's s. ಔಷಧ. Inch s. ಅಂಗುಲ ದಪ್ಪದ ಹಲಗೆಗಳು. Thick s. ೪ ಅಂಗುಲಕ್ಕಿಂತ ಹೆಚ್ಚು ದಪ್ಪದ ಹಲಗೆಗಳು. The s. (ಬಳ. ಮಾ.) (ಯಾವುದಾದರೂ) ಸಾಮಗ್ರಿ, ನರಕು, ಮಾಲು]. (ರೇಷ್ಮೆ, ಹತ್ತಿ, ನಾರು, —ಬಟ್ಟೆಗೆ ವ್ಯತಿರಿಕ್ತವಾಗಿ) ಉಣ್ಣೆಯ ಬಟ್ಟೆ [S. gown (ರಾಜನನ್ನದು ಪಡೆದಿಲ್ಲದ) ಕೆಳದರ್ಜೆಯ ನ್ಯಾಯವಾದಿಯ ಉಣ್ಣೆಯ ನಿಲುವಂಗಿ]; ಕೆಲಸಕ್ಕೆ ಬಾರದ್ದು, ನಿಷ್ಪ್ರಯೋಜಕ ವಸ್ತು, ಕಳಪೆ, ಕಸ, ಜಳ್ಳು; ಅವಿವೇಕ, ಅಧ್ವಾನ (ನಾ. ಮತ್ತು ಭಾವ. ಅವ್ಯ.) (Take that s. away. Smith a liar? s. & nonsense! What s. he writes!); [(ಅಸಂ.) Hot s. (Hot ನೋಡಿ). The s. to give 'em ಅವರಿಗೆ ಹೇಳತಕ್ಕ ರೀತಿ, ನಡೆದುಕೊಳ್ಳುವ ಮಾರ್ಗ ; ಅವರಿಗೆ ತಕ್ಕ ಪ್ರತೀಕಾರ, ಶಾಸ್ತಿ]. (ಕ್ರಿ.) ಒತ್ತಾಗಿ ತುಂಬು, ಗಿಡಿ, ಅಡಚು, ಅಡಕು; (ಒಳಗೆ ಗಿಡಿದು) ಉಬ್ಬಿಸು [S. one's ears with cotton ಕಿವಿಗಳಿಗೆ ಹತ್ತಿ ಅಡಚಿಕೊ. Stuffed birds, beasts (ಒಳಗಿನ ಮಾಂಸಾದಿ ಗಳನ್ನೆಲ್ಲ ತೆಗೆದುಹಾಕಿ) ಭರ್ತಿ ತುಂಬಿ ಮೊದಲಿನ ಆಕಾರಕೊಟ್ಟ ಹಕ್ಕಿ ಗಳು, ಮೃಗಗಳು: ಗಿಡುಗು—ಹಕ್ಕಿಗಳು, ಮೃಗಗಳು. Stuffed fowl (ಅಡುವ ಮೊದಲು) ಮಸಾಲೆ ತುಂಬಿದ ಕೋಳಿ. S. child ಮಗುವಿಗೆ ಅತಿಯಾಗಿ ತಿನ್ನಿಸು, ಹೊಟ್ಟೆಗೆ ಗಿಡಿ. A head stuffed with romance, facts, folly ಹುಚ್ಚುಭಾವನೆ, ಸಂಗತಿಗಳು, ಅವಿವೇಕ, —ಗಿಡಿದ ತಲೆ. Stuffed the food into his mouth ಆಹಾರವನ್ನು ಬಾಯೊಳಕ್ಕೆ ಅಡಚಿಕೊಂಡನು]. ಸುಳ್ಳು ಹೇಳಿ ನಂಬಿಸು, ವಂಚಿಸು; ಹೊಟ್ಟೆಗೆ ಅಡಚಿಕೊ, ಗಿಡಿದು ಊಟಮಾಡು, ಗಬಗಬನೆ ತಿನ್ನು. **(-)stuffer** (ನಾ.); **Stúffer** (ನಾ.) ತುಂಬುವವನು ; ಪೂರಕ (ಯಂತ್ರ, ಸಲಕರಣೆ). **Stúffing** (ನಾ.) (ಕ್ರಿಯಾರ್ಥಗಳಲ್ಲಿ) ; ಅಡಚಿಕೊಂಡಿರುವುದು ; ತುಂಬುವ ಪದಾರ್ಥ, ಹೂರಣ ; (ಬರಹಗಾರರ ಅಸಂ.) ಭರ್ತಿ, ಪದಪೂರಣ. S.-box (ಯಂತ್ರಗಳಲ್ಲಿ) ವಾಯು, ಮೊ. ಕ್ಕೆ ಎಡೆಗೊಡದೆ ಅಡುಬೆಣೆಯ ದಂಡ ಚಲನುವಂತೆ ಮಾತ್ರ ಅವಕಾಶಕೊಟ್ಟು ಖಾಲಿ ಜಾಗಗಳನ್ನೆಲ್ಲ ಸ್ಥಿತಿ ಸ್ಥಾಪಕ ಪದಾರ್ಥಗಳಿಂದ ತುಂಬಿರುವ ಕೋಷ್ಠ ; ಭರ್ತಿ—ಕೋಷ್ಠ, ಸಂಪುಟ. **Stúffy** (ಗು.) (ಕಣಿವೆ, ಕೋಣೆ, ಮೊ. ಗಳ ವಿಷಯದಲ್ಲಿ) ಗಾಳಿಯಾಡದ, ಶುದ್ಧ ಗಾಳಿಯ ಕೊರತೆಯಿರುವ ; (ಅವುಗಳಲ್ಲಿಯ ವಾಯುವಿನ ವಿಷಯದಲ್ಲಿ) ಉಸಿರು ಕಟ್ಟಿಸುವ ; (ವ್ಯಕ್ತಿಗಳ ವಿಷಯದಲ್ಲಿ) ಗಂಟಲು ಅಥವಾ ಮೂಗು ಅಡಚಿಕೊಂಡಿರುವ, ಉಸಿರು ಕಟ್ಟಿಕೊಂಡ; (ಅಮೆ. ಸಂ.) ಕೋಪಗೊಂಡ, ಸಿಡುಕಿನಿಂದ ಕೂಡಿದ, ಬಿಗಡಾಯಿಸಿ ಕೊಂಡಿರುವ. **Stúffiness** (ನಾ.)

Stuggy. Stock- ನೋಡಿ.

Stúltify ಸ್ಟಲ್ಟಿಫೈ (ಕ್ರಿ. ಸಕ.) (ಕಾರ್ಯ, ವಾಕ್ಯ, ಕರ್ತೃ, ವಕ್ತೃ, ಮೊ. ವಿಷಯದಲ್ಲಿ; ಹಿಂದಿನ ಕಾರ್ಯ, ಮೊ. ನ್ನು) ಅಸಂಬದ್ಧ, ಅಸಂಗತ, —ಮಾಡು (This witness, however, stultified himself by admitting that he was too far off to hear what Clement said); (ಕಾರ್ಯ, ಮೊ. ನ್ನು) ಅವಿವೇಕವೆಂದು, ಹಾಸ್ಯಾಸ್ಪದವೆಂದು, —ತೋರಿಸು ; (ತನ್ನನ್ನು) ಅವಿವೇಕಿಯೆಂದು, ಮೂರ್ಖನೆಂದು, —ತೋರಿಸಿಕೊ; (ಕಾರ್ಯ, ಮೊ. ನ್ನು) ನಿರರ್ಥಕ, ವ್ಯರ್ಥ, —ಮಾಡು (The blind folly of his servants had stultified his efforts). **Stultificátion** (ನಾ.)

Stum ಸ್ಟಂ (ನಾ., ಕ್ರಿ. ಸಕ.) ಹುಳಿತಿಲ್ಲದ ದ್ರಾಕ್ಷಾರಸ, ಹೊಸ ದ್ರಾಕ್ಷಾ ಮದ್ಯ. (ಕ್ರಿಮಿನಾಶಕ ಧೂಪದಿಂದ ಮದ್ಯವನ್ನು) (ಇನ್ನು ಹೆಚ್ಚು) ಹುಳಿಯದಂತೆ ಮಾಡು.

Stúmble ಸ್ಟಂಬ್ಲ್ (ಕ್ರಿ., ನಾ) ಕಾಲು ತಪ್ಪು, ಎಡವು, ಮುಗ್ಗರಿಸು (ರೂಪ. ಸಹ) (S. along ಎಡವುತ್ತ, ಮುಗ್ಗರಿಸಿಕೊಂಡು, —ಹೋಗು. Stumbles in his speech ಮಾತಿನಲ್ಲಿ ಮುಗ್ಗರಿಸುತ್ತಾನೆ. S. through a recitation ತಪ್ಪುತಪ್ಪಾಗಿ ವಾಚನಮಾಡು); ಅಸಮಾಧಾನಪಡು, ಶಂಕಿಸು, ಅಳುಕು (*At* ಉಪ. ದೊಡನೆ); ಅಕಸ್ಮಾತ್ತಾಗಿ ಸಂಧಿಸು (*On, upon, across* ಉಪ. ದೊಡನೆ); (ಪ್ರಾಚೀ. ಪ್ರ.) ಹಿಂದು ಮುಂದು ನೋಡುವಂತೆ ಮಾಡು, ಅಳುಕು ವಂತೆ ಮಾಡು, ಅಪಚಾರಮಾಡು ; [Stumbling-block ಅಡ್ಡಿ, ಅಡಚಣೆ, ಶಂಕೆ (—ಉಂಟುಮಾಡುವಂಥದು)]. (ನಾ.) ಎಡಹುವುದು, ಮುಗ್ಗರಿಕೆ (ರೂಪ. ಸಹ). **Stúmblingly** (ಕ್ರಿ. ವಿ.)

Stúmer ಸ್ಟ್ಯೂಮರ್ (ನಾ.) (ಅಸಂ.) ಕಳ್ಳ, ತಿರಸ್ಕೃತ, —ಹುಂಡಿ, ಚೆಕ್ಕು ; ಖೋಟಾ—ನಾಣ್ಯ, ನೋಟು ; ಖೋಟಾ.

Stump ಸ್ಟಂಪ್ (ನಾ., ಕ್ರಿ.) (ಕಡಿದ ಅಥವಾ ಬಿದ್ದ ಮರ ಅಥವಾ ರೆಂಬೆ, ಮುರಿದ ಹಲ್ಲು, ಕತ್ತರಿಸಿಹಾಕಿದ ಕೈಕಾಲು, ಉಪಯೋಗಿಸಿ ಬಿಸುಟ ಚುಟ್ಟ, ಸೀಸದಕಡ್ಡಿ, ಮೊ. ಗಳ) ಉಳಿಕೆ, ತುಂಡು, ಮೋಟು ; (ಬ. ವ. ದಲ್ಲಿ, ಹಾಸ್ಯ ಪ್ರ.) ಕಾಲುಗಳು [Stir your stumps (Stir ನೋಡಿ)]; ಭಾಷಣಕಾರನು ಕುಳಿತುಕೊಂಡು ಅಥವಾ ನಿಂತುಕೊಂಡು ಭಾಷಣಮಾಡಲು ಉಪಯೋಗಿಸುವ ಮರದ ಮೋಟು [On the s. (ಬಳ. ಮಾ.) ರಾಜಕೀಯ—ಭಾಷಣಮಾಡುತ್ತ, ಚಳವಳಿಯಲ್ಲಿ ತೊಡಗಿ. S. oratory ಚಳವಳಿಯ, ಬೀದಿಚೌಕದ, ದೊಂಬಿ ಭಾಷಣದ,—ವಾಗ್ಮಿತೆ]. (ಕ್ರಿಕೆಟ್) ಗುರಿಕೋಲು(ಗಳಲ್ಲೊಂದು) (Off, middle, leg, s. ಬಲ, ನಡುವಣ, ಎಡ, —ಗುರಿಕೋಲು). ಚಿತ್ರರೇಖನದಲ್ಲಿ ಸೀಸದ ಅಥವಾ ಬಣ್ಣದ ಕಡ್ಡಿಯ ಗುರುತುಗಳನ್ನು ಉಜ್ಜಿ ನಯಗೊಳಿಸುವುದು, ಮೊ. ಕೆಲಸಗಳಿಗೆ ಉಪಯೋಗಿಸುವ, ಕಾಗದ, ರಬ್ಬರು, ಮೊ. ಗಳಿಂದ ಮಾಡಿದ, ಎರಡು ಕಡೆಯೂ ಶಂಕುವಿನಾಕಾರದ ಮೊಂಡು ತುದಿಗಳುಳ್ಳ ಸುರುಳಿಯುರುಳೆ: ಉಜ್ಜು ಮೋಟು. (ಕ್ರಿ.) (ಮರದ ಕಾಲುಗಳಿಂದ ಹೇಗೋ ಹಾಗೆ ಸೆಡೆತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನದ್ದು ಮಾಡುತ್ತ) ಟೊಕ ಟೊಕನೆ, ಅಡ್ಡಾದಿಡ್ಡಿಯಾಗಿ, —ನಡೆ ; (ಬಳ. ಮಾ.) (ಪ್ರಶ್ನೆ, ಮೊ. ಗಳ ವಿಷಯದಲ್ಲಿ) ಕಷ್ಟವಾಗಿರು, ತೊಡಕಾಗಿರು, ಸಮಸ್ಯೆಯಾಗಿರು (Am stumped ನನಗೆ ದಿಕ್ಕು ತೋಚದಂತಾಗಿದೆ, ದಿಗ್ಭ್ರಮೆಯಾಗಿದೆ). (ಕ್ರಿಕೆಟ್) (ದಾಂಡುಗಾರನು ಎಲ್ಲೆಯಾಚೆ ಇರುವಾಗ; ಚೆಂಡಿನಿಂದ) ಗುರಿಕೋಲು ಕದಲಿಸಿ ಆಟ ಕಳೆ. ಮರದ ಮೋಟಿನಮೇಲಿಂದ ರಾಜಕೀಯ ಭಾಷಣಗಳನ್ನು ಮಾಡು, ಮಾಡುತ್ತ ದೇಶ ಸುತ್ತು. (ಚಿತ್ರರೇಖನದಲ್ಲಿ ಗೆರೆಗಳನ್ನು ನಯಮಾಡಲು) ಉಜ್ಜುಮೋಟು ಉಪಯೋಗಿಸು. S. up (ಅಸಂ.) ಹಣ ಕೊಟ್ಟುಬಿಡು, ಇಟ್ಟುಬಿಡು. (ಹಣವನ್ನು) ಹಾಜರುಮಾಡು, ತಂದಿಡು. **Stúmper** (ನಾ.) (ಕ್ರಿಯಾರ್ಥಗಳಲ್ಲಿ) ; (ಅಸಂ.) (ಕ್ರಿಕೆಟ್) ಗುರಿಕೋಲು ಕಾಯುವವನು. ಸಮಸ್ಯೆ, ದಿಗ್ಭ್ರಮೆ ಹಿಡಿಸುವಂಥದು ; ಬೀದಿಚೌಕದ, ದೊಂಬಿ, —ಭಾಷಣಕಾರ ; ರಾಜಕೀಯ ಚಳವಳಿಗಾರ. **Stúmpy** (ಗು.) ಗಿಡ್ಡ ಗೂ ದಪ್ಪಗೂ ಇರುವ, ತೋಣಪನಾದ (A s. man, book, tail, pencil). **Stúmpily** (ಕ್ರಿ. ವಿ.) ; **Stúmpiness** (ನಾ.)

Stun ಸ್ಟನ್ (ಕ್ರಿ. ಸಕ.) (ಧ್ವನಿಯ ವಿಷಯದಲ್ಲಿ) ತಾತ್ಕಾಲಿಕವಾಗಿ ಕಿವುಡುಮಾಡು, ದಿಗ್ಭ್ರಮೆ ಹಿಡಿಸು ; (ಏಟಿನ ವಿಷಯದಲ್ಲಿ; ರೂಪ. ಸಹ) ಎಚ್ಚರ ತಪ್ಪಿಸು, ಮೈಮರಸು, ಸ್ತಬ್ಧಮಾಡು, ಜಡವಾಗಿಸು, ಮಗ ಗಟ್ಟಿಸು ; (ವರ್ತಮಾನ ಕೃ., ವಿಶೇಷಣವಾಗಿ ಪ್ರ.) (ಅಸಂ.) ಭರ್ಜರಿಯಾದ, ದಿವ್ಯವಾದ, ಬಲು ಸೊಗಸಾದ, ಬೆರಗು ಹಿಡಿಸುವ, ಪಕ್ಕಾ. **Stúnningly** (ಕ್ರಿ. ವಿ.) ; **Stúnner** (ನಾ.)

Stung. Sting ಧಾತುವಿನ ಭೂತ. ಮತ್ತು ಭೂ. ಕೃ.

Stunk. Stink ಧಾತುವಿನ ಭೂತ. ಮತ್ತು ಭೂ. ಕೃ.

Stúnsail, Stuns'l. = Studding-sail.

Stunt[1] ಸ್ಟಂಟ್ (ಕ್ರಿ. ಸಕ.) ಬೆಳವಣಿಗೆಯನ್ನು—ತಡೆ, ಕುಗ್ಗಿಸು, ಕುಂಠಿತಮಾಡು ; ಕುರುಟುಬೀಳಿಸು (ಮು., ಭೂ. ಕೃ. ನಲ್ಲಿ)

Stunt[2] ಸ್ಟಂಟ್ (ನಾ.) (ಅಸಂ.) ಅದ್ಭುತ ಶಕ್ತಿ ಪ್ರದರ್ಶನ ; ಪ್ರಕಟನೋಪಾಯ ; ಉಠಾವಣೆ, ಆವುಟ.

Stupe[1] ಸ್ಟ್ಯೂ(ಸ್ಟೂ)ಪ್ (ನಾ., ಕ್ರಿ. ಸಕ.) ಬಿಸಿನೀರಿನಲ್ಲಿ ಅದ್ದಿ ಹಿಂಡಿದ, ಶಾಖ ಕೊಡುವ ಫ್ಲಾನೆಲ್, ಮೊ. ಬಟ್ಟೆ : ಶಾಖ ಕೊಡುವ ಬಟ್ಟೆ ; (ಶಸ್ತ್ರಚಿಕಿತ್ಸೆಯಲ್ಲಿ ಗಾಯದಮೇಲೆ ಕಟ್ಟುವ) ಮೆತುಬಟ್ಟೆಯ ಅಥವಾ ಹೀರುಹತ್ತಿಯ ಬಿಲ್ಲೆ.

Stupe[2] ಸ್ಟ್ಯೂಪ್ (ನಾ.) (ಅಸಂ.) ಮುಟ್ಠಾಳ, ಪೆದ್ದ.

Stúpefy ಸ್ಟ್ಯೂಪಿಫೈ (ಕ್ರಿ. ಸಕ.) ಮತ್ತು, ಮಂಕು, ಜಡ, —ಮಾಡು ; ಮರವಡಿಸು (Stupefied with drink, narcotics) ; ಬೆರಗುಗೊಳಿಸು, ಸ್ತಬ್ಧಮಾಡು (He was stupefied with shame & remorse). **Stupefácient** —ಫೇಷೆಂಟ್ (ಗು., ನಾ.) (ವೈ. ಶಾ.) ಜಡಗೊಳಿಸುವ, ಮತ್ತುಬರಿಸುವ (—ಔಷಧ, ವಸ್ತು). **Stupefáction** (ನಾ.); **Stúpefactive** (ಗು.) (ವಿರ. ಪ್ರ.) = Stupefacient. **Stúpefier** (ನಾ.)

Stupéndous ಸ್ಟ್ಯೂಪೆಂಡಸ್ (ಗು.) (ಮು., ಗಾತ್ರ, ಪ್ರಮಾಣ, ಮೊ. ಗಳಿಂದ) ಬೆರಗುಂಟುಮಾಡುವ, ಆಶ್ಚರ್ಯಕರ, ಅದ್ಭುತ, ಅಗಾಧ, ಭಾರಿ (A s. structure, error, achievement). **Stupéndously** (ಕ್ರಿ. ವಿ.) ; **Stupéndousness** (ನಾ.)

Stúpeous ಸ್ಟ್ಯೂಪಿಅಸ್ (ಗು.) (ಕ್ರಿಮಿಶಾಸ್ತ್ರ) ಒರಟು ಸಣಬಿನಂಥ, ಉದ್ದ ಸಡಿಲಹಣಿಗೆಯ ಪೊರೆಗಳುಳ್ಳ ; ಬೊಂತೆಕೂದಲಿನ ; ಜುಂಗುಳ್ಳ.

Stúpid ಸ್ಟ್ಯೂಪಿಡ್ (ಗು., ನಾ.) ಮಂಕು ಕವಿದ, ಜಡ, ಮಂದ ; ಪೆದ್ದ, ದಡ್ಡ, ಗುಗ್ಗು, ಮಂಕ, ಮಡ್ಡಿ, ಮೂಢ, ಅವಿವೇಕದ (A s. person, idea, book. What a s. place to put it in! ಅದನ್ನು ಇಡುವುದಕ್ಕೆ ಎಂಥ ಅವಿವೇಕದ ಸ್ಥಳ!) ; ನೀರಸ, ಸಪ್ಪೆ, ಬೇಸರ ಹಿಡಿಸುವ (A s. place, visit, time). **Stupídity** ಸ್ಟ್ಯೂ— (ನಾ.) ; **Stúpidly** ಸ್ಟ್ಯೂ— (ಕ್ರಿ. ವಿ.)

Stúpor ಸ್ಟ್ಯೂಪರ್ (ನಾ.) ಮಂಕು, ಮಂಪರ, ಮಾಂದ್ಯ, ಜಡತೆ ; ಬೆರಗು, ದಿಗ್ಭ್ರಮೆ. **Stúporous** (ಗು.) (ವೈ. ಶಾ.) ಮಂಪರ, —ಹಿಡಿದ, ಬರುವ, ಕವಿಯುವ.

Stupóse ಸ್ಟ್ಯೂಪೋಸ್ (ಗು.) (ಸ. ವಿ., ಪ್ರಾ. ವಿ.) (ಒರಟು ಸಣಬಿನಂಥ) ಕೂದಲ ಬೊಂತೆಯುಳ್ಳ, ಜುಂಗುಳ್ಳ.

Stúrdy ಸ್ಟರ್ಡಿ (ಗು., ನಾ.) ಅರೋಗ ದೃಢಕಾಯದ, ಗಟ್ಟಿಮುಟ್ಟಾದ, ಕಟ್ಟುಮಸ್ತಾದ, ಬಲವಾದ (ಮೈಕಟ್ಟಿನ), ದೃಢವಾದ, ಪ್ರಬಲವಾದ [S. child, frame, resistance. S. beggar (ಪ್ರಾಚೀ. ಪ್ರ.) ಮೈಗಳ್ಳನಾದ ಕಟ್ಟುಮಸ್ತು ಭಿಕ್ಷುಕ] . (ನಾ.) (ಮಿದುಳಿನಲ್ಲಿ ಲಾಡಿಹುಳುಗಳು ಸೇರಿಕೊಳ್ಳುವುದರಿಂದ ಉಂಟಾಗುವ) ಕುರಿಗಳ ತಲೆಸುತ್ತುರೋಗ, ಗಿರಕಿ ರೋಗ. **Stúrdily** (ಕ್ರಿ. ವಿ.); **Stúrdiness** (ನಾ.); **Stúrdied** (ಗು.) ತಲೆಸುತ್ತು ರೋಗ —ಬಂದ, ಹಿಡಿದಿರುವ.

Stúrgeon ಸ್ಟರ್ಜನ್ (ನಾ.) ಸಾ., ಷಾರ್ಕ್ ಮೀನನ್ನು ಹೋಲುವ, ಆಹಾರವಾಗಿ ಮೆಚ್ಚುವ, ಹಲವು ಬಗೆಯ ದೊಡ್ಡ ಮೀನು.

Stútter ಸ್ಟಟರ್ (ಕ್ರಿ., ನಾ.) ಉಗ್ಗು, ತೊದಲು, ಬಿಕ್ಕು ; ಉಗ್ಗುತ್ತ, ತೊದಲುತ್ತ, —ಹೇಳು (ಅನೇಕ ವೇಳೆ *out* ಉಪ. ದೊಡನೆ). (ನಾ.) ಉಗ್ಗು(ವುದು) ; ತೊದಲು(ವುದು) ; ಬಿಕ್ಕಲು. **Stútterer** (ನಾ.); **Stútteringly** (ಕ್ರಿ. ವಿ.)

Sty[1] ಸ್ಟೈ (ನಾ., ಬ. ವ. Sties ; ಕ್ರಿ.) ಹಂದಿಯ ರೊಪ್ಪ (= Pigsty) ; (ರೂಪ.) ರೋತೆಯ—ಕೋಣೆ, ಗುಡಿಸಿಲು ; ವ್ಯಭಿಚಾರಸ್ಥಳ. (ಕ್ರಿ.) ರೊಪ್ಪಕ್ಕೆ ಕೂಡು ; ರೊಪ್ಪದಲ್ಲಿರು ; ರೋತೆಯಲ್ಲಿ ವಾಸಮಾಡು.

Sty[2], **Stye** ಸ್ಟೈ (ನಾ.) ಕಣ್ಣಿವೆಯ ಅರುಗಿನ ಉರಿಯೂತ ; ಕಣ್ಣು (ರೆಪ್ಪೆಯ) ಕುಟಿಕೆ (ಸಾ., A s. in one's eye)

Stýgian ಸ್ಟಿಜಿಯನ್ (ಗು.) (ಗ್ರೀಕ್ ಪುರಾಣ) ಅಧೋಲೋಕದ ಸ್ಟಿಕ್ಸ್ (ಹಿಂದುಗಳ ನರಕದ ವೈತರಣಿ) ನದಿಯ(ಂಥ) ; ಅಧೋಲೋಕದ ; ನರಕದ ; ಅಂಧಕಾರ ಕವಿದ, ಕಗ್ಗಪ್ಪಿನ (Upon those roseate lips a s. hue)

Style[1] ಸ್ಟೈಲ್ (ನಾ.) ಮೇಣ ಸವರಿದ ಫಲಕದಮೇಲೆ ಅಕ್ಷರಗಳನ್ನು ಬರೆಯುವುದಕ್ಕಾಗಿ ಒಂದು ತುದಿ ಮೊನಚಾಗಿಯೂ ಬರೆದದ್ದನ್ನು ಅಳಿಸುವುದಕ್ಕಾಗಿ ಮತ್ತೊಂದು ತುದಿ ಮೊಂಡಾಗಿಯೂ ಇರುತ್ತಿದ್ದ, ಕಬ್ಬಿಣ, ಎಲುಬು, ಮೊ. ಗಳಿಂದ ಮಾಡಿದ ಲೇಖನ ಸಲಕರಣೆ : ಬರೆಯುವ ಸರಳು, ಕಂಠ ; (ಕಾವ್ಯ) ಲೇಖನಿ, ಸೀಸದಕಡ್ಡಿ ; (ರೂಪ.) (ಕಂಠದಂಥ) ಕೊರೆಯುವ ಸೂಜಿ, ಕೀಲ. ಕಪಾಲಾಸ್ಥಿಯ ಬುಡದಲ್ಲಿ ಚಾಚಿಕೊಂಡಿರುವ ಎಲುಬು : ಕಪಾಲ ಮೂಲಾಸ್ಥಿ. (ಬರೆಯುವ, ಮಾತಾಡುವ, ಮಾಡುವ) ವಿಧಾನ, ಸರಣಿ ; ಕವಿ, ಕಲೆಗಾರ, ಮೊ. ರ ಕೃತಿಯಲ್ಲಿ ಕಂಡುಬರುವ ಸಮಷ್ಟಿ ಲಕ್ಷಣ : ಶೈಲಿ, ರೀತಿ, ಸಂಪ್ರದಾಯ, ನಡೆ, ಧಾಟಿ [The s. is better than the matter ಶೈಲಿ ವಿಷಯಕ್ಕಿಂತ ಚೆನ್ನಾಗಿದೆ. Different styles of rowing ಹುಟ್ಟುಹಾಕುವ ವಿವಿಧ ರೀತಿಗಳು. Good, bad, s. = Good, bad, form (Form ನೋಡಿ). Perpendicular s. ಇಂಗ್ಲೆಂಡಿನ ಚರ್ಚು ಕಟ್ಟಡಗಳ ಒಂದು ಶೈಲಿ. The epic, dramatic, s. ಮಹಾಕಾವ್ಯದ, ನಾಟಕದ, —ಶೈಲಿ, ಸರಣಿ. Lapidary *or* monumental s. ಶಿಲಾಲಿಪಿಯ, ಶಿಲಾಶಾಸನಗಳಿಗೆ ತಕ್ಕ(ಂಥ), —ಶೈಲಿ] . ಒಕ್ಕಣೆ, ಬಿರುದು, ನಾಮಾಂಕಿತ [Is entitled to the s. of King, Esquire. My s. is plain John Smith ನನ್ನ ಒಕ್ಕಣೆ ಬರಿಯ ಜಾನ್ ಸ್ಮಿತ್. Old, new, s. (ಸಂಕ್ಷಿಪ್ತ : O.S., N.S.) (ಕಾಲಗಣನೆಯಲ್ಲಿ ತಾರೀಖಿನ ಜೊತೆಗೆ ಬರೆಯುವ ಪದಗಳು): (ಜೂಲಿಯಸ್ ಸೀಸರ್ ಕ್ರಿ. ಪೂ. ೪೬ರಲ್ಲಿ ರೂಢಿಗೆ ತಂದ) ಪುರಾತನ ಪದ್ಧತಿ, (ಪೋಪ್ ಗ್ರಿಗೋರಿ ಕ್ರಿ. ಶ. ೧೫೮೨ರಿಂದ ರೂಢಿಗೆ ತಂದ) ನೂತನ ಪದ್ಧತಿ] . ನೀಟುಗಾರಿಕೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೊಗಸುಗಾರಿಕೆ, ಠೀಕು, ಬೆಡಗು, ವೈಶಿಷ್ಟ್ಯ (Let us do the thing in s. if we do it at all ನಾವು ಕೆಲಸ ಮಾಡುವುದೇ ಆದರೆ, ನೀಟಾಗಿ, ಉತ್ತಮ ರೀತಿಯಲ್ಲಿ, ಮಾಡೋಣ). ತೆರ, ಬಗೆ, ಪ್ರಕಾರ, ವಿಧ (A gentleman of the old s. ಹಳೆಯ ಮಾದರಿಯವನು, ಸಂಪ್ರದಾಯ ರೀತಿಯವನು); ಮಾಟ, ಆಕಾರ, ನಮೂನೆ, ಮಾದರಿ (This s. 2/6 ಈ ಆಕಾರದ್ದಕ್ಕೆ ೨ ಶಿ. ೬ ಪೆ. In all sizes & styles ಎಲ್ಲ ಅಳತೆ ಎಲ್ಲ ನಮೂನೆಗಳಲ್ಲಿಯೂ). **Stýlet** ಸ್ಟೈಲೆಟ್ (ನಾ.) ತೆಳುವಾದ ಮೊನೆಸಲಕರಣೆ; ಕೊರೆಕಂಬಿ; ಸಣ್ಣ ಬಾಕು, ಕಠಾರಿ. (ಶಸ್ತ್ರಚಿಕಿತ್ಸೆ) (ಮೂತ್ರ ತೆಗೆಯುವ ನಳಿಕೆಯನ್ನು ಬಳುಕದಂತೆ ಇಟ್ಟಿರಲು ಹಾಕಿರುವ) ಪೆಡಸು ತಂತಿ; ವ್ರಣಾನ್ವೇಷಕ. **Stýliform** (ಗು.) (ಬರೆಯುವ) ಕಂಠದಾಕಾರದ, ಕಂಠದಂಥ. **Stýlish** (ಗು.) ನೀಟುಗಾರಿಕೆಯ, ಸೊಗಸುಗಾರಿಕೆಯ, ಠೀಕಿನ, ಬೆಡಗಿನ. **Stýlishly** (ಕ್ರಿ. ವಿ.); **Stýlishness** (ನಾ.); **Stýlist** (ನಾ.) (ಉತ್ತಮ ಸಾಹಿತ್ಯ) ಶೈಲಿಗಾರ, ಶೈಲಿ ಪ್ರೇಮಿ. **Stylístic** (ಗು.) (ಸಾಹಿತ್ಯ) ಶೈಲಿಯ. **Stylístically** (ಕ್ರಿ. ವಿ.); **Stýlo** (ನಾ., ಬ. ವ. -os) =Stylograph (ಎಂಬುದಕ್ಕೆ ಸಂಕ್ಷಿಪ್ತ). **Stylo-** (ಸ. ಪೂ. ಪ.) (ಬರೆಯುವ) ಕಂಠ—; ಕಪಾಲಾಸ್ಥಿಯ ಬುಡದಲ್ಲಿಯ ಚಾಚೆಲುಬು ಮತ್ತು—. **-graph** (ನಾ.) ಸೀಳಿದ ಮುಳ್ಳಿನ ಬದಲು ಮೊನೆಯಿಂದ ಬರೆಯುವ, ಮಸಿ ಬುಗ್ಗೆಯುಳ್ಳ ಒಂದು ಬಗೆಯ ಲೇಖನಿ: ಕಂಠ ಲೇಖನಿ. **-gráphic** (ಗು.); **-gráphically** (ಕ್ರಿ. ವಿ.); **-hýoid** ಕಪಾಲ ಮೂಲಾಸ್ಥಿ ಮತ್ತು ಜಿಹ್ವಾಸ್ಥಿ. **-maxíllary** ಕಪಾಲ ಮೂಲಾಸ್ಥಿ ಮತ್ತು ದಂಷ್ಟ್ರಾಸ್ಥಿ. **Stýloid** (ಗು., ನಾ.) S. (process) ಕಪಾಲಾಸ್ಥಿಯ ಬುಡದಲ್ಲಿ ಚಾಚಿಕೊಂಡಿರುವ ಎಲುಬು: ಕಪಾಲ ಮೂಲಾಸ್ಥಿ.

Style (ಕ್ರಿ. ಸಕ.) (—ಎಂದು) ಕರೆ, ಹೇಳು, ಒಕ್ಕಣಿಸು, ಹೆಸರಿಡು (Is styled king ದೊರೆ ಎಂದು ಕರೆಯುತ್ತಾರೆ)

Style[2] ಸ್ಟೈಲ್ (ನಾ.) ನೆರಳು ಗಡಿಯಾರದ ಸರಳು, ಸೂಚಿ. (ಸ. ವಿ.) ಅಂಡಾಶಯದ ಸಂಕುಚಿತ ಚಾಚು ಭಾಗ: (ಪುಷ್ಪ) ಶಲಾಕ.

Style[3] ಸ್ಟೈಲ್ (ನಾ.) =Stile (ಎಂಬುದಕ್ಕೆ ತಪ್ಪು ಅಕ್ಷರ ಸಂಯೋಜನೆ)

Stýlet. **Style**[1] ನೋಡಿ.

Stýlist, etc. **Style**[1] ನೋಡಿ.

Stýlite ಸ್ಟೈಲೈಟ್ (ನಾ.) ಕಂಬದಮೇಲೆ ವಾಸಮಾಡುತ್ತಿದ್ದ, ಮಧ್ಯಯುಗದ, ಸಂನ್ಯಾಸಿ: ಕಂಬದ ಸಂನ್ಯಾಸಿ.

Stýlo, Stylo-. **Style**[1] ನೋಡಿ.

Stýlobate ಸ್ಟೈಲೊಬೇಟ್ (ನಾ.) ಕಂಬಸಾಲಿನ ತಳಹದಿ.

Stýlograph, etc., Stýloid. **Style**[1] ನೋಡಿ.

Stýptic ಸ್ಟಿಪ್‌ಟಿಕ್ (ಗು., ನಾ) ರಕ್ತಸ್ರಾವ ತಡೆಯುವ (ಔಷಧ); ರಕ್ತಬಂಧಕ.

Stýrian ಸ್ಟಿರಿಯನ್ (ಗು., ನಾ.) (ಆಸ್ಟ್ರಿಯ ದೇಶದ) ಸ್ಟಿರಿಯ ಪ್ರಾಂತದ (ವನು)

Styx ಸ್ಟಿಕ್ಸ್ (ನಾ.) (ಗ್ರೀಕ್ ಪುರಾಣ) ಅಧೋಲೋಕವನ್ನು ಸುತ್ತುವರಿದಿರುವ ನದಿ (ಹಿಂದೂಗಳ ವೈತರಣಿ ಇದ್ದಂತೆ) (Cross the S. ಸಾಯು, ಮರಣ ಹೊಂದು. Black as S. ಸ್ಟಿಕ್ಸ್ ನದಿಯಂತೆ ಕಪ್ಪಾದ)

Súable, etc. **Sue** ನೋಡಿ.

Suásion ಸ್ವೇಷನ್ (ನಾ.) =Persuasion (Persuade ನೋಡಿ) (ಮು., Moral s. ನೈತಿಕ ಪ್ರೇರಣೆ)

Suave ಸ್ವೇವ್, ಸ್ವಾವ್ (ಗು.) ನಯವಾದ, ಹಿತವಾದ, ಮಧುರವಾದ, ಆಪ್ಯಾಯನಕರವಾದ, (ಉಪ) ಶಾಮಕ, ಸವಿಯಾದ (S. person, speech, manners, wine, medicine). **Suávely** (ಕ್ರಿ. ವಿ.); **Suávity** ಸ್ವೇ(ಸ್ವಾ)ವಿಟಿ (ನಾ.)

Suáviter (L) ಸ್ವೇವಿಟರ್: S. in modo, fortiter in re ನಯವಾಗಿ ಮತ್ತು ದೃಢವಾಗಿ; ಮೇಲೆ ನಯ, ಒಳಗೆ ಬಿಗಿ.

Sub[1] ಸಬ್ (ನಾ.) (ಬಳ. ಮಾ.) =Subaltern, Subscription, Substitute (ಎಂಬವುಗಳ ಸಂಕ್ಷಿಪ್ತ)

Sub[2] (L) ಸಬ್ (ಉಪ.) (ಕೆಲವು ಲ್ಯಾಟಿನ್ ವಾಕ್ಯಗಳಲ್ಲಿ ಪ್ರ.): ಕೆಳಗೆ. **S. fínem** (ಸಂಕ್ಷಿಪ್ತ: s.f.) (ಪ್ರಸಕ್ತ ಅಧ್ಯಾಯ, ಮೊ. ಗಳ) ಕೊನೆಗೆ, ಕಡೆಯಲ್ಲಿ. **S. júdice** (—ಜೂಡಿಸೀ) ನ್ಯಾಯಸ್ಥಾನದ, ನ್ಯಾಯಾಧೀಶನ, —ವಿಚಾರಣೆಯಲ್ಲಿ; ಇನ್ನೂ ತೀರ್ಮಾನವಾಗದೆ [Newspaper comment on cases s.j. is prohibited ನ್ಯಾಯಸ್ಥಾನದಲ್ಲಿ ಇನ್ನೂ ವಿಚಾರಣೆಯಾಗುತ್ತಿರುವ ವ್ಯಾಜ್ಯಗಳ ಬಗ್ಗೆ ವೃತ್ತಪತ್ರಿಕೆಗಳು ಟೀಕಿಸುವುದನ್ನು ನಿಷೇಧಿಸಿದೆ. The matter is still s.j. ಆ ವಿಷಯ ಇನ್ನೂ ತೀರ್ಮಾನವಾಗಬೇಕಾಗಿದೆ (Res ಕೆಳಗೆ Res judicata ಪದ ನೋಡಿ)]. **S. rósa** (—ರೋಸ, —ಸೇ) (ಸಮಾಚಾರ ತಿಳಿಸುವುದು, ನಲಹೆ ಕೇಳುವುದು, ಮೊ. ವಿಷಯಗಳಲ್ಲಿ) ಗುಟ್ಟಿನಲ್ಲಿ, ರಹಸ್ಯವಾಗಿ, ಏಕಾಂತದಲ್ಲಿ [ಶಬ್ದಾರ್ಥ: ಗುಲಾಬಿಯ ಕೆಳಗೆ (ಹಿಂದೆ ಗುಲಾಬಿ ಗುಟ್ಟಿನ ಸಂಕೇತವಾಗಿತ್ತು)]. **S. siléntio** (—ಸಿಲೆಂಟಿಯೋ, ಸಿಲೆನ್ಷಿಯೋ) ಏಕಾಂತದಲ್ಲಿ; ಮೌನವಾಗಿ, ಏನೊಂದೂ ಟೀಕಿಸದೆ, ನಿಶ್ಶಬ್ದವಾಗಿ. **S. vóce** (—ವೋಸೆ) (ಸಂಕ್ಷಿಪ್ತ: s.v.) (ನಿಘಂಟು, ಮೊ. ಗಳಲ್ಲಿ ಪ್ರಕರಣ ಸೂಚಿಸುವಲ್ಲಿ) ಪದದ, ಶಬ್ದದ, —ಕೆಳಗೆ.

Sub- (L) ಸಬ್— (ಸ. ಪೂ. ಪ.) ಕೆಳಗೆ—, ಕೆಳಗಡೆ—, ಅಧಸ್—.

I. ಲ್ಯಾಟಿನ್ ಸಮಾಸಗಳಿಂದ ಬಂದ ಹಲವು ಪದಗಳಲ್ಲಿ sub- (ಅಥವಾ ಉತ್ತರ ಪದದ ಮೊದಲ ಅಕ್ಷರಾನುಸಾರವಾಗಿ suc-, suf-, sug-, sum-, sup-, sur-, sus-) ಎಂಬುದು (೧) ಕೆಳಗೆ (Subjacent, subordinate, subscribe, subsist, substance, ಮೊ.); (೨) ಕೆಳಗಡೆಗೆ (Subject, subjugate, subjunctive, submerge, submit, subside, succumb, suppose, suppress, ಮೊ.); (೩) ಕೆಳಗಿಂದ (Subtract, succinct, suspect, suspend, suspire, ಮೊ.); (೪) ರಹಸ್ಯ, ಗುಟ್ಟು, ಮರೆ, ಧ್ವನಿತ (Subaudition, suborn, summon, surreptitious, ಮೊ.); (೫) ಸೇರ್ಪಡೆ (Subsume, ಮೊ.); (೬) ಹತ್ತಿರ, ಸಾಮೀಪ್ಯ (Subjoin, subjunctive, sublime, subsequent, suburb, succeed, ಮೊ.); (೭) ಕೀಳು, ನೀಚ, ಅಧಮ (Subaltern, subserve, succentor, ಮೊ.); (೮) ಸಹಾಯ, ಆಶ್ರಯ, ಆಧಾರ (Subsidy, subvention, succour, suffer, suffice, sustain, ಮೊ.); (೯) ಸೇರಿಕೆ, ಕೂಡಣೆ, ಸಂಕಲನ (Suffix, supplement, ಮೊ.); (೧೦) ಪ್ರತಿಯಾಗಿ, ಬದಲು (Substitute, supplant, surrogate, ಮೊ.) —ಎಂಬ ಅರ್ಥಗಳಲ್ಲಿ ಪ್ರಯೋಗವಾಗುತ್ತದೆ.

II. ಮೇಲೆ ಹೇಳಿದ Suc-, ಮೊ. ರೂಪಾಂತರಗಳನ್ನು ಹೊಂದದೆ, ಇನ್ನೂ ಕೆಲವು ಗೊತ್ತಾದ ಅರ್ಥಗಳಲ್ಲಿ ಈ ಕೆಳಗಿನಂತೆ ಪ್ರಯೋಗವಾಗುತ್ತದೆ:

(1) —ರ ಕೆಳಗಿರುವ, ಕೆಳಗಣ, ಕೆಳ ದರ್ಜೆಯ, ಮೊ. ಅರ್ಥದ ಗುಣವಾಚಕ ಪದಗಳಲ್ಲಿ (Substernal, subnormal, subhuman)

(2) ಸರಿಸುಮಾರು, ಸಮೀಪದ, ಸ್ವಲ್ಪ, ಉಪಾಂತ, ಎಲ್ಲೆಯಲ್ಲಿರುವ, ಮೊ. ಅರ್ಥದ ಗುಣವಾಚಕ ಮತ್ತು ವಿರಳವಾಗಿ ನಾಮವಾಚಕ ಪದಗಳಲ್ಲಿ (Subacid, subaquatic, subcylindrical, subdelirium, subconscious, suberect, subalpine)

(3) ಕೆಳಗಣ, ಎರಡನೆಯ, ಉಪ, ಇನ್ನೂ, ಒಳ, ಮೊ. ಅರ್ಥದ ನಾಮವಾಚಕ ಮತ್ತು ಕ್ರಿಯಾವಾಚಕ ಪದಗಳಲ್ಲಿ (Subprefect, subheading, subspecies, subdivide, sublet)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(4) ಕೆಳಗಡೆಯಿರುವ, ಮೊ. ಅರ್ಥದ ನಾಮವಾಚಕ ಪದಗಳಲ್ಲಿ (Subsoil, subway)

(5) ದ್ವಿಗುಣ, ತ್ರಿಗುಣ, ಮೊ. ನ್ನು ಸೂಚಿಸುವ ಸಂಖ್ಯಾಗುಣ ವಾಚಕ ಪದಗಳೊಡನೆ ಸೇರಿ ಅವುಗಳ ತಲೆಕೆಳಗು ಪ್ರಮಾಣವನ್ನು ಸೂಚಿಸುವಲ್ಲಿ (Subdouble, subtriple)

Subabdóminal (1) ಕಿಬ್ಬೊಟ್ಟೆಯ ಕೆಳಗಿನ. **Subácid** (2) ಅಲ್ಪಾಮ್ಲ, ಉಪಾಮ್ಲ; (ಮಾತು, ಮೊ. ಗಳ ವಿಷಯದಲ್ಲಿ ರೂಪ.) ಕೊಂಚ —ತೀಕ್ಷ್ಣವಾದ, ಕಟುವಾದ. **Subacídity** (ನಾ.); **Sub-**
Subágent (3) ಉಪ—ನಿಯೋಗಿ, ಕಾರ್ಯಭಾರಿ. **Sub-ágency** (ನಾ.); **Subálpine** (2) ಆಲ್ಪ್ಸ್ ಪರ್ವತದ ಎಲ್ಲೆಯಲ್ಲಿರುವ; ಆಲ್ಪ್ಸ್ ಪರ್ವತೋಪಾಂತದ. **Subánal** (1) ಗುದ ದ್ವಾರದ ಕೆಳಗಿನ; ಗುದೋಪಾಂತದ. **Subapostólic** (2) (ಕ್ರೈಸ್ತ) ಧರ್ಮಪ್ರವರ್ತಕರ ಕಾಲದ ತರುವಾಯದ. **Sub-aquátic** (2, 1) ಹೆಚ್ಚು ಕಡಮೆ ಜಲಚರ ಸ್ವಭಾವದ; ನೀರಿನ ಕೆಳಗಿನ. **Subáqueous** (1) ನೀರಿನ ಕೆಳಗಿನ. **Subárctic** (2) ಉತ್ತರ ಧ್ರುವ ಸಮೀಪದ. **Subástral** (1) ನಕ್ಷತ್ರಗಳ ಕೆಳಗಿನ, ಭೂಮಿಯ. **Subaúral** (1) ಕಿವಿಯ ಕೆಳಗಿನ. **Sub-áxillary** (1) ಕಂಕುಳ ಕೆಳಗಿನ; (ಸ. ವಿ.) ಪರ್ವಕೋನದ ಕೆಳಗಿನ. **Súb-branch** (3) ಉಪಶಾಖೆ, ಒಳಪಂಗಡ. **Súb-breed** (3) ಒಳಭೇದದ ತಳಿ, ಉಪಭೇದ. **Subcaúdal** (1) ಬಾಲದ ಕೆಳಗಡೆಯ. **Subcéntral** (1, 2) ಕೇಂದ್ರದ ಕೆಳಗಿನ; ಕೇಂದ್ರದ ಹತ್ತಿರದ, ಸರಿಸುಮಾರು ಮಧ್ಯದ. **Subcérebral** (1) (ಮಿದುಳಿಗೆ ಸಂಬಂಧ ಪಡದೆ ಕಶೇರುಕಕ್ಕೆ ಮಾತ್ರ ಸಂಬಂಧಪಟ್ಟ ನಿರಿಚ್ಛಾ ಪ್ರತಿಕ್ರಿಯೆಗಳ ವಿಷಯದಲ್ಲಿ): ಮಿದುಳ ಕೆಳಗಿನ. **Súbclass** (3) ಉಪವರ್ಗ, ಒಳಪಂಗಡ. **Subclávate** (2) ಕೊಂಚ ಮಟ್ಟಿಗೆ ಗದೆಯಾಕಾರದ. **Subclávian, Subclavícular** (ಗು.) (1) ಗ್ರೀವಾಸ್ಥಿಯ ಕೆಳಗಿನ. **Súb-commíssion(er)** (3) ಉಪನಿಯೋಗ ಮಂಡಲಿ, ಉಪನಿಯೋಗಿ. **Súbcommíttee** (3) ಉಪಸಮಿತಿ. **Subcóncave** (2); **Sub-cónical** (2); **Subcónscious** (2) ನಿಗೂಢ, ಉಪ, —ಪ್ರಜ್ಞೆಯ. **Subcónsciously** (ಕ್ರಿ. ವಿ.); **Subcónsciousness** (ನಾ.); **Subcóntinent** (2) ಒಂದು ಭೂಖಂಡದ ಭಾಗವಾಗಿದ್ದರೂ ತಾನೇ ಒಂದು ಸ್ವತಂತ್ರ ಖಂಡವಾಗಬಹುದಾದಷ್ಟು ವಿಶಾಲವಾದ ದೇಶ: ಉಪಖಂಡ (ಉದಾ., ಇಂಡಿಯ). **Súb-cóntract** (ನಾ.) (ಒಟ್ಟಿಗೆ ಗುತ್ತಿಗೆ ಪಡೆದವನು ಒಂದೊಂದು ಭಾಗವನ್ನು ಬೇರೊಬ್ಬನಿಗೆ ಗುತ್ತಿಗೆಗೆ ಕೊಡುವ) ಒಳ—ಒಪ್ಪಂದ, ಕರಾರು. **Subcontráct** (ಕ್ರಿ. ಅಕ.) (3); **Sub-contráctor** (ನಾ.) (3); **Subcóntrary** (ಗು., ನಾ.), **Subcontraríety** (ನಾ.) (2) ಕೊಂಚ—ವಿರುದ್ಧವಾದ, ವ್ಯತಿರಿಕ್ತವಾದ [ಉದಾ., (ತರ್ಕದಲ್ಲಿ); 'ಕೆಲವರು ಮರ್ತ್ಯರು', 'ಕೆಲವರು ಮರ್ತ್ಯರಲ್ಲ' ಎಂಬ ವಾಕ್ಯಗಳು ಕೊಂಚ ವಿರುದ್ಧಗಳು. 'ಎಲ್ಲ ಮನುಷ್ಯರೂ ಮರ್ತ್ಯರು,' 'ಯಾವ ಮನುಷ್ಯನೂ ಮರ್ತ್ಯನಲ್ಲ' ಎಂಬ ವಾಕ್ಯಗಳು ತೀರ ವಿರುದ್ಧಗಳು]. **Subcónvex** (2); **Subcórdate** (2) ಕೊಂಚ ಹೃದಯಾಕಾರದ. **Subcórneous** (2, 1) ಸ್ವಲ್ಪ ಕೊಂಬಿನಂಥ; ಕೊಂಬಿನ ಕೆಳಗಿನ, ಉಗುರ ಕೆಳಗಿನ. **Subcórtical** (1) ತೊಗಟೆಯ, (ಅಂಗದ) ಹೊದಕೆಯ, —ಕೆಳಗಿನ. **Subcóstal** (1) ಪಕ್ಕೆಲುಬಿನ ಕೆಳಗಿರುವ. **Subcránial** (1) ತಲೆಬುರುಡೆಯ ಕೆಳಗಿರುವ. **Subcrýstalline** (2) ಸ್ವಲ್ಪ ಸ್ಫಟಿಕಾಕಾರದ. **Subcutáneous(ly)** (1) ಚರ್ಮದ ಕೆಳಗಡೆಯ(ಲ್ಲಿ). **Subcutícular** (1) ಹೊರ ಚರ್ಮದ ಕೆಳಗಿನ. **Subcylíndrical** (2) ನಸು ಉರುಳೆಯಾಕಾರದ. **Súbdeácon, -deáconship, -dean, -deánery, -decánal** (3) ಉಪ ಡೀಕನ್, ಮೊ. **Subdécuple** (5) ಹತ್ತನೆಯೊಂದು ಮಡಿಯ. **Subdelírium** (2) ತೀವ್ರವಲ್ಲದ, ಬಿಟ್ಟು ಬಿಟ್ಟು ಬರುವ, —ಸನ್ನಿ. **Subdérmal** (1) (ಒಳ) ಚರ್ಮದ ಕೆಳಗಿನ. **Subdiáconate** (3) ಉಪ ಡೀಕನ್—ಪದವಿ, ಅಧಿಕಾರ.

Subdivíde (3) ಮತ್ತೆ, ಇನ್ನೂ, —ವಿಭಾಗಿಸು; ಪುನರ್ವಿಭಾಗ —ಆಗು, ಮಾಡು. **Subdivision** (ನಾ.) (3); **Subdóminant** (1) (ಸಂ.) ಐದನೆಯ ಸ್ವರದ ಕೆಳಗಿನ ಸ್ವರ, ನಾಲ್ಕನೆಯ ಸ್ವರ. **Subdórsal** (1) ಬೆನ್ನಹತ್ತಿರದ. **Subdoúble, -dúplicate** (5) ಅರ್ಧ ಪ್ರಮಾಣದ (೧: ೨); ವರ್ಗಮೂಲ ಪ್ರಮಾಣದ (2 : 3 is the subduplicate ratio of 4 : 9 ೪ : ೯ ರ ವರ್ಗಮೂಲ ಪ್ರಮಾಣ ೨ : ೩). **Sub-édit** (3) (ಕ್ರಿ. ಸಕ.) ಮುಖ್ಯ ಸಂಪಾದಕನ ಮೇಲ್ವಿಚಾರಣೆಯಲ್ಲಿ ಲೇಖನಗಳನ್ನು ಸಂಪಾದಿಸು: ಉಪ ಸಂಪಾದಿಸು. **Sub-éditor** (3) ಉಪಸಂಪಾದಕ. **Sub-epidérmal** (1) ಹೊರ ಚರ್ಮದ ಕೆಳಗಿನ. **Subéqual** (2) (ಸಂಖ್ಯೆಗಳ ತಂಡದಲ್ಲಿ ಯಾವ ಒಂದು ಸಂಖ್ಯೆಯೂ ಮಿಕ್ಕೆಲ್ಲ ಸಂಖ್ಯೆಗಳ ಮೊತ್ತದಷ್ಟು ದೊಡ್ಡದಾಗಿಲ್ಲದಿರುವ ಸಂದರ್ಭದಲ್ಲಿ) ಸರಿಸುಮಾರು ಸಮನಾದ, ಕೊಂಚ ಕಡಮೆಯಾದ. **Subequiláteral** (2) ಸರಿ ಸುಮಾರು ಸಮಭುಜದ. **Suberéct** (2) ಹೆಚ್ಚು ಕಡಮೆ ಲಂಬವಾಗಿರುವ. **Subfámily** (3) (ಪ್ರಾ. ವಿ., ವರ್ಗೀಕರಣದಲ್ಲಿ) ಉಪಕುಲ. **Subfébrile** (2) (ವೈ) ಕೊಂಚ ಬೆಚ್ಚಗಿರುವ (ಜ್ವರವೆಂದು ಹೇಳುವಷ್ಟು ಅಧಿಕವಾಗಿಲ್ಲದಿದ್ದರೂ ಸಾಮಾನ್ಯ ಶಾಖಕ್ಕಿಂತ ಕೊಂಚ ಹೆಚ್ಚಾಗಿರುವ ಶರೀರ ಶಾಖದ ವಿಷಯದಲ್ಲಿ). **Súbflavour** (4) ಉಪ, ಗೌಣ, —ರುಚಿ, ರಸ, ವಾಸನೆ. **Súbform** (3) ಉಪವಿಧ, ಪ್ರಭೇದ. **Súbfusc** (2) ಮಬ್ಬು, ಮಸುಕು, —ಬಣ್ಣದ. **Subgelátinous** (2) ಹೆಚ್ಚು ಕಡಮೆ ಜೆಲಟಿನ್ನಿನಂಥ. **Súb-genous** (3) ಉಪ ಜಾತಿ. **Sub-genéric** (3) ಉಪ ಜಾತಿಯ. **Subglácial** (1) ನೀರ್ಗಲ್ಲ ನದಿಯ ಕೆಳಗಿನ. **Subglóbular** (2) ಸರಿ ಸುಮಾರು ಗೋಳಾಕಾರದ. **Súb-group, -head, -heading** (3) ಒಳ—ಪಂಗಡ, ವಿಭಾಗ; ಉಪ ವಿಭಾಗ. **Subhepátic** (1, 2) ಯಕೃತ್ತಿನ ಕೆಳಗಿನ; ಹೆಚ್ಚು ಕಡಮೆ ಯಕೃತ್ತಿನ ವರ್ಣದ. **Sub-himálayan** (2) ಹಿಮಾಲಯ ತಪ್ಪಲಿನ. **Sub-húman** (1) ಮನುಷ್ಯ ಜಾತಿಗಿಂತ ಕೆಳಗಣ. **Subhúmeral** (1) ಮೇಲ್ತೋಳೆಲುಬಿನ ಕೆಳಗಿನ. **Subinfeudátion** (3) ಒಬ್ಬನು ತನ್ನ ಸ್ವಾಮಿಯಿಂದ ಪಡೆದ ಉಂಬಳಿಗಮಾನ್ಯವನ್ನು ತನ್ನ ಭೃತ್ಯನಿಗೆ ಅದೇ ಷರತ್ತಿನಮೇಲೆ ಕೊಡುವುದು: ಒಳ—ಮಾನ್ಯ, ಉಂಬಳಿ. **Subinspéctor** (3) ಇನ್‌ಸ್ಪೆಕ್ಟರ್ ದರ್ಜೆಗೆ ಕೆಳಗಿನ ಅಧಿಕಾರಿ. **Subintéstinal** (1) ಕರುಳ ಕೆಳಗಿನ. **Súbjoint** (3) (ಕೀಟ, ಮೊ. ಗಳ ಕಾಲು, ಮೊ. ಗಳಲ್ಲಿಯ) ಸಂಧಿ ವಿಭಾಗ(ಗಳಲ್ಲೊಂದು); ಉಪಸಂಧಿ, ಒಳಕೀಲು. **Súbkingdom** (3) ಪ್ರಾಣಿಕೋಟಿಯ ಅಥವಾ ಸಸ್ಯಕೋಟಿಯ ಪ್ರಧಾನ ವಿಭಾಗ: ಉಪರಾಜ್ಯ, ಉಪವರ್ಗ. **Sublánceolate** (2) ಸರಿಸುಮಾರು ಈಟಿತಲೆಯಾಕಾರದ. **Súblease** (3) (ನಾ., ಕ್ರಿ. ಸಕ.) ಒಳ—ಗುತ್ತಿಗೆ, ಭೋಗ್ಯ (ಕೊಡು, ಹಾಕು). **Sublesseé** (ನಾ.); **Subléssor** (ನಾ.); **Sublét** (3) ಒಳ ಗೇಣಿಗೆ, ಒಳ ಬಾಡಿಗೆಗೆ, —ಕೊಡು, ತೆಗೆದುಕೊ. **Súb-librárian, Súb-lieuténant** (3) ಉಪ—. **Sublíminal** (1) ಸಂವೇದನೆಯ ಹೊಸ್ತಿಲ ಕೆಳಗಣ (ಮಟ್ಟದ); ಅನುಭವಕ್ಕೆ ಬಾರದಷ್ಟು ಅಲ್ಪ (ಶಕ್ತಿಯ) ಸಂವೇದನೆಯ; ಗಮನ ಯೋಗ್ಯವಲ್ಲದ, ಅತ್ಯಲ್ಪ (S. difference). **Sublíngual** (1) ನಾಲಗೆಯ ಕೆಳಗಿನ. **Sublíttoral** (2) ತೀರದ ಕೆಳಗಿನ; ತೀರೋಪಾಂತದ. **Sublúnar** (ಕಾವ್ಯ), **-lúnary** (1) ಚಂದ್ರನ ಕೆಳಗಿನ; ಭೂಮಿಯ, ಪ್ರಾಪಂಚಿಕ (S. affairs ಪ್ರಾಪಂಚಿಕ ವ್ಯವಹಾರಗಳು). **Submámmary** (1) ಸ್ತನಗಳ ಕೆಳಗಿನ. **Submárine** (1) ಸಮುದ್ರದ ತಳದ (S. plant, cable, volcano). ಜಲಾಂತರ್ನೌಕೆ, ಸಮುದ್ರಾಂತರ್ಗಾಮಿ ನೌಕೆ (=S. boat). **Súbmaster** (2) ಸಹಾಯೋಪಾಧ್ಯಾಯ, ಉಪಾಧ್ಯಾಪಕ. **Submaxíllary** (2) ಕೆಳ ದವಡೆಯ (ಕೆಳಗಿರುವ). **Submémbranous** (2) ಸರಿಸುಮಾರು—ಸೂಕ್ಷ್ಮ ಚರ್ಮದ, ಪೊರೆಯಂಥ. **Sub-méntal** (1) ಗಲ್ಲದ ಕೆಳಗಿನ. **Submetállic** (2) ಸರಿಸುಮಾರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲೋಹದ. **Submóntane** (1) ಬೆಟ್ಟದ ತಪ್ಪಲಿನ (ಬಳಿಯ). **Submúcous** (2, 1) ಹೆಚ್ಚು ಕಡಮೆ (ದೇಹದ) ಲೋಳೆಯಂಥ; ಸ್ವಲ್ಪಮಟ್ಟಿಗೆ ಲೋಳೆಯಿಂದ ಕೂಡಿದ; ಲೋಳೆಯ ಚರ್ಮದ ಕೆಳಗಿನ. **Submúltiple** (5) (ಗು., ನಾ.) ನಿಶ್ಶೇಷ ಭಾಜಕ (ಸಂಖ್ಯೆ), ಅಪವರ್ತ್ಯ (8 is s. of 72). **Subnarcótic** (2) ಕೊಂಚ ಮಂಪರ ಬರಿಸುವ, ಈಷನ್ನಿದ್ರಾಜನಕ. **Subnásal** (1) ಮೂಗಿನ ಕೆಳಗಿನ. **Subnátural** (1) (ಎದುರು ಪದ: Supernatural) ಸ್ವಾಭಾವಿಕದ, ಪ್ರಕೃತಿಯ, —ಕೆಳಗಣ. **Subnórmal** (1) ಸಾಮಾನ್ಯ ಮಟ್ಟಕ್ಕಿಂತ ಕೆಳಗಣ. **Suboccípital** (1) ಹೆಡತಲೆಯ ಕೆಳಗಣ. **Suboceánic** (1) ಸಾಗರತಳದ, ಸಾಗರಾಂತಸ್ಥ. **Subocéllate** (2) ಹೆಚ್ಚು ಕಡಮೆ ಕೀಟವ ಸರಳ ನೇತ್ರದಂಥ. **Subóctuple** (5) ಎಂಟನೆಯೊಂದು ಮಡಿಯ. **Subócular** (1) ಕಣ್ಣ ಕೆಳಗಿನ. **Suboesophágeal** (1) ಅನ್ನನಾಳದ ಕೆಳಗಿನ. **Subórbital** (1) ಕಣ್ಣ ಕುಳಿಯ ಕೆಳಗಣ. **Súborder** (3) (ಸ. ವಿ., ಪ್ರಾ. ವಿ.; ವರ್ಗೀಕರಣದಲ್ಲಿ) ಉಪ ವರ್ಗ, ಒಳ ಪಂಗಡ. **Subórdinal** (3) ಒಳ ತರಗತಿಯ, ಒಳ ತರಗತಿಗೆ ಸಂಬಂಧಪಟ್ಟ. **Subóval** (2) ಹೆಚ್ಚು ಕಡಮೆ ಅಂಡಾಕಾರದ. **Subpariétal** (1) (ದೇಹದ) ಗೋಡೆಯ ಕೆಳಗಿನ. **Subpharýngeal** (1) ಗಂಟಲ ಕುಹರದ ಕೆಳಗಿನ. **Subphrénic** (1) ವಪೆಯ ಕೆಳಗಿನ. **Subpílose** (2) ಹೆಚ್ಚು ಕಡಮೆ ರೋಮಶವಾದ. **Subpleúral** (1) ದೇಹದ ಗೋಡೆಯ ಮತ್ತು ದ್ರವಸಿಕ್ತ ಪೊರೆಯ ನಡುವಣ. **Subpólar** (2, 1) ಹೆಚ್ಚು ಕಡಮೆ ಧ್ರುವ ಪ್ರದೇಶದ (ಸ್ವಭಾವದ); (ಖ. ವಿ.) ಖಮೇರುವಿನ ಕೆಳಗಿನ. **Subpréfecture** (3) ಉಪ—. **Subpríor** (3) ಉಪ, ಸಹಾಯ, —ಮಠಾಧಿಪತಿ. **Subpyrámidal, -quadrángular, -quádrate** (2) ಹೆಚ್ಚು ಕಡಮೆ, ಸರಿಸುಮಾರು—. **Subquádruple, -quíntuple** (5) ನಾಲ್ಕನೆಯೊಂದು, ಐದನೆಯೊಂದು, —ಮಡಿಯ. **Subrámose** (2) ಬಹುಮಟ್ಟಿಗೆ ಕವಲೊಡೆಯುವ. **Súbreader** (3) (ಇಂಗ್ಲೆಂಡಿನ ಇನ್ಸ್ ಆಫ್ ಕೋರ್ಟ್ ನ್ಯಾಯಸ್ಥಾನದಲ್ಲಿ) ಉಪ ಪಾಠಕ, ಉಪಾಧ್ಯಾಪಕ. **Subrectángular** (2) ಹೆಚ್ಚು ಕಡಮೆ —ಚತುಷ್ಕೋನಾಕಾರದ, ಆಯದಾಕಾರದ. **Súbrector** (3) ರೆಕ್ಟರಿನ ಪ್ರತಿನಿಧಿ. **Súbregion** (3) (ಪ್ರಾಣಿಗಳ ಹಂಚಿಕೆಗೆ ಸಂಬಂಧಪಟ್ಟಂತೆ) ಪ್ರಾಂತದ ಒಳ ವಿಭಾಗ, ಉಪಪ್ರಾಂತ. **Súbrent** (3) ಒಳ ಬಾಡಿಗೆಗೆ, ಒಳ ಗೇಣಿಗೆ, —ಕೊಡು, ತೆಗೆದುಕೊ. **Subrétinal** (1) ಅಕ್ಷಿಪಟದ ಕೆಳಗಿನ. **Subrhomboídal** (2) ಹೆಚ್ಚು ಕಡಮೆ ವಜ್ರಾಕೃತಿಯ. **Subsácral** (1) ತ್ರಿಕಾಸ್ಥಿಯ ಕೆಳಗಿನ. **Subsáturated** (2) ಬಹು ಮಟ್ಟಿಗೆ, ಸರಿಸುಮಾರು, —ಸಂಪೂರಿತ. **Subsaturátion** (2) (ನಾ.); **Subscápular** (1) ಹೆಗಲೆಲುಬಿನ, ಸ್ಕಂಧದ, —ಕೆಳಗಿನ. **Súbsection** (3) ಒಳ ವಿಭಾಗ, ಉಪ ವಿಭಾಗ. **Subsénsible** (1) ಇಂದ್ರಿಯಗೋಚರ ಮಟ್ಟಕ್ಕಿಂತ ಕೆಳಗಿನ. **Subséptuple** (5) ಏಳನೆಯೊಂದು ಮಡಿಯ. **Subsérous** (2, 1) ಹೆಚ್ಚು ಕಡಮೆ ರಕ್ತದ್ರವದಂಥ; ರಕ್ತದ್ರವ ಪೊರೆಯ ಕೆಳಗಿನ. **Subséssile** (2) ಹೆಚ್ಚು ಕಡಮೆ ನಿರ್ವೃಂತ ವಾದ. **Subséxtuple** (5) ಆರನೆಯೊಂದು ಮಡಿಯ. **Súbsoil** (4) ಭೂಮಿಯ ಮೇಲ್ಮೈಯ ಕೆಳಗಿನ ಪದರ: ಒಳ, ಕೆಳ, —ಪದರ, ಮಣ್ಣು. **Súbspecies** (3) (ಸ. ವಿ., ಪ್ರಾ. ವಿ.) ಉಪವಂಶ. **Subspecífic** (3) ಉಪವಂಶದ. **Subsphérical** (2) ಸರಿಸುಮಾರು ಗೋಳಾಕಾರದ. **Subspínous** (2) ಹೆಚ್ಚು ಕಡಮೆ ಮುಳ್ಳು ಮುಳ್ಳಾಗಿರುವ; ಕಶೇರುಕದ ಕೆಳಗಿನ. **Súbstation** (3) ಉಪನಿಲ್ದಾಣ. **Substérnal** (1) ಎದೆಯೆಲುಬಿನ ಕೆಳಗಿನ. **Substrátum** (4) (ಬ. ವ., ವಿರ. ಪ್ರ. -ta) ಕೆಳ—ಪದರ, ಸ್ತರ; ತಳಹದಿ, ಆಧಾರ [(ಅನೇಕ ವೇಳೆ ರೂಪ.) It has a s. of truth]. **Substrúction, -strúcture** (4) ಅಡಿಕಟ್ಟಡ, ಪಾಯ, ತಳಹದಿ. **Substrúctural** (4) (ಗು.); **Subtémperate** (2) (ಹವ, ಮೊ. ಗಳ ವಿಷಯದಲ್ಲಿ) ಹೆಚ್ಚು ಕಡಮೆ ಸಮಶೀತೋಷ್ಣದ. **Súbtenant** (3) ಒಳ—ಒಕ್ಕಲು, ಬಾಡಿಗೆಯವನು, ಗೇಣಿದಾರ. **Súbtenancy** (3) (ನಾ.); **Subtérminal** (2) ಹೆಚ್ಚು ಕಡಮೆ ಕೊನೆಯಲ್ಲಿರುವ, ಉಪಾಂತ. **Subterránean** (1) ನೆಲದೊಳಗಿನ, ಭೂಮ್ಯಂತರ್ಗತ (ರೂಪ. ಸಹ). **Subterráneously** (1) (ಕ್ರಿ. ವಿ.); **Subthorácic** (1) ಎದೆಯ ಕೆಳಗಿನ. **Súbtitle** (3) (ಗ್ರಂಥದ) ಉಪನಾಮ; = Half-title (Half ನೋಡಿ). **Subtónic** (1) (ಸಂ.) ಆಧಾರ ಸ್ವರದ ಕೆಳಗಿನ ಸ್ವರದ. **Subtranspárent** (2) ಹೆಚ್ಚು ಕಡಮೆ ಪಾರದರ್ಶಕವಾದ. **Subtriángular** (2) ಸರಿಸುಮಾರು ತ್ರಿಕೋನಾಕಾರದ. **Súbtribe** (1) (ಪ್ರಾ. ವಿ., ಸ. ವಿ.; ವರ್ಗೀಕರಣದಲ್ಲಿ) ಬುಡಕಟ್ಟಿನ ಕೆಳಗಿನ ಪಂಗಡ. **Subtríple, -tríplicate** (5) ಮೂರನೆಯೊಂದು ಮಡಿಯ; ಘನ ಮೂಲಪ್ರಮಾಣದ (2 : 3 is the subtriplicate ratio of 8 : 27). **Subtrópical** (2) (ಹವ, ಪ್ರಾಣಿಗಳ ಮತ್ತು ಸಸ್ಯಗಳ ಭೌಗೋಳಿಕ ಹಂಚಿಕೆ, ಮೊ. ಗಳ ವಿಷಯದಲ್ಲಿ) ಹೆಚ್ಚು ಕಡಮೆ—ಉಷ್ಣವಲಯದ, ಉಷ್ಣಪ್ರದೇಶಗಳ. **Subúngulate** (2) ಗೊರಸೂ ಹಲವು ಬೆರಳುಗಳೂ ಉಳ್ಳ: ಬೆರಳು ಗೊರಸುಳ್ಳ. **Subúrsine** (2) ಹೆಚ್ಚು ಕಡಮೆ ಕರಡಿಯಂಥ. **Súbvariety** (3) ಒಳ ಪ್ರಭೇದ, ಉಪಭೇದ. **Subvértebral** (1) ಬೆನ್ನೆಲುಬಿನ ಕೆಳಗಿನ. **Subvértical** (2) ಹೆಚ್ಚು ಕಡಮೆ ಲಂಬವಾದ. **Subvítreous** (2) ಸರಿಸುಮಾರು ಗಾಜಿನಂತಿರುವ. **Súbway** (4) ನೆಲದೊಳಗಿನ ದಾರಿ, ಸುರಂಗಮಾರ್ಗ; (ಅಮೆ. ಸಂ.) ನೆಲದೊಳಗಿನ ರೈಲುದಾರಿ.

Subahdár ಸೂಬಡಾರ್ (ನಾ.) (ಆಂ. ಇಂ.) ಸಿಪಾಯಿ ತುಕಡಿಯ ಮುಖ್ಯ ದೇಶೀಯ ಅಧಿಕಾರಿ; ಒಂದು ಪ್ರಾಂತದ ಆಡಳಿತಗಾರ; ಸುಬೇದಾರ.

Súbaltern ಸಬಲ್ಟರ್ನ್, **Subáltern** ಸಬಾ— (ಗು., ನಾ.) ಕೆಳ, ಕೀಳು, —ದರ್ಜೆಯ; (ತರ್ಕ; ಪ್ರತಿಜ್ಞೆಗಳ ವಿಷಯದಲ್ಲಿ) ಏಕದೇಶೀಯ. (ನಾ.) (ಸೈನಿಕ) ಕ್ಯಾಪ್ಟನ್ ದರ್ಜೆಯ ಕೆಳಗಿನ ಅಧಿಕಾರಿ.

Subaúdi. **Subaudition** ನೋಡಿ.

Subaudítion ಸಬಾಡಿಷನ್ (ನಾ.) ಬಿಟ್ಟುಹೋಗಿರುವ ಪದವನ್ನು (ಪದಗಳನ್ನು) ಮನಸ್ಸಿನಲ್ಲಿ ಭರ್ತಿಮಾಡಿಕೊಳ್ಳುವುದು: ಮಾನಸಿಕ (ಪದ) ಪೂರಣ; ವ್ಯಕ್ತಪಡಿಸದಿರುವುದನ್ನು ಗ್ರಹಿಸುವುದು; ಅವ್ಯಕ್ತ (ವಾದುದರ) ಗ್ರಹಣ; ಗೂಢಾರ್ಥ ಗ್ರಹಣ; ಅಧ್ಯಾಹಾರ (ಮಾಡಿಕೊಂಡ ಅರ್ಥ). **Subaúdi** (L) ಸಬಾಡೈ (ಕ್ರಿ., ವಿಧಿರೂಪ) (ಮಾತುಗಳನ್ನು) ಅಧ್ಯಾಹಾರಮಾಡಿಕೊ.

Subdúce ಸಬ್‌ಡ್ಯೂಸ್, **Subdúct** ಸಬ್‌ಡಕ್ಟ್ (ಕ್ರಿ. ಸಕ.) (ವಿರ. ಪ್ರ.) ಹಿಂದೆಗೆ(ದುಕೊ); (ಗಣಿತ) ಕಳೆ, ತೆಗೆದುಹಾಕು. **Subdúction** (ನಾ.)

Subdué ಸಬ್‌ಡ್ಯೂ (ಕ್ರಿ. ಸಕ.) ಜಯಿಸು, ಸೋಲಿಸು, ನಿಗ್ರಹಿಸು, ಬಗ್ಗಿಸು, ಅಡಗಿಸು, ದಮನಮಾಡು, ಶಮನಮಾಡು, ಸ್ವಾಧೀನಕ್ಕೆ ತಂದುಕೊ, ಅಂಕೆಗೆ ತರು, ಶಿಸ್ತಿನಲ್ಲಿಡು (S. enemy, nature, rough land, one's passions. Subdued by kindness ದಯೆಯಿಂದ ಶಮನ ಹೊಂದಿ, ದಯೆಗೆ ಮಾರುಹೋಗಿ); ಮೃದುಮಾಡು, ತೀಕ್ಷ್ಣತೆ ಕಡಮೆಮಾಡು, ತಗ್ಗಿಸು, ಮಟ್ಟುಮಾಡು (ಮು., ಭೂ. ಕೃ. ನಲ್ಲಿ; Subdued colour, light, tone, effect, mood, manners, satisfaction). **Subduáble** (ಗು.); **Subdúal** (ನಾ.); **Subduédness** (ನಾ.)

Subéreous ಸ್ಯುಬೀ(ಅ)ರಿಯಸ್, **Subéric** ಸ್ಯುಬೆರಿಕ್, **Súberose** ಸ್ಯೂಬೆರೋಸ್ (ಗು.) ಕಾರ್ಕ್ ಬೆಂಡಿನ(ಂಥ), ಕಾರ್ಕಿನ(ಂಥ)

Subjácent ಸಬ್‌ಜೇಸೆಂಟ್ (ಗು.) ತಳದಲ್ಲಿರುವ, ಕೆಳಗಿರುವ, ಕೆಳಗಣ.

Súbject ಸಬ್‌ಜೆಕ್ಟ್ (ಗು., ಕ್ರಿ. ವಿ.) (ಪ್ರಾಚೀ. ಪ್ರ., ಕಾವ್ಯ) ಕೆಳಗಿರುವ, ಕೆಳಗಣ (Survey the s. plains). (ಒಬ್ಬನ) ಪ್ರಭುತ್ವಕ್ಕೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಳಿಕೆಗೆ, —ಒಳಪಟ್ಟ; ಅಧೀನ (*To* ಉಪ. ದೊಡನೆ) (A s. province, tribe. Is held s. ಅಧೀನದಲ್ಲಿ—ಇದೆ, ಇದ್ದಾನೆ. States s. to foreign rule ಪರ ರಾಷ್ಟ್ರದ ಆಳಿಕೆಗೆ ಒಳಪಟ್ಟ, ಪರ ರಾಷ್ಟ್ರಕ್ಕೆ ಅಧೀನವಾದ, ಸಂಸ್ಥಾನಗಳು. We are all s. to the laws of nature ನಾವೆಲ್ಲರೂ ಪ್ರಕೃತಿ ನಿಯಮಗಳಿಗೆ ಅಧೀನರಾಗಿದ್ದೇವೆ); (—ಕ್ಕೆ) ಗುರಿಯಾದ, ಒಳಗಾಗಿರುವ, ಈಡಾದ, ವಶವಾದ (*To* ಉಪ. ದೊಡನೆ) (Persons s. to gout. Is very s. to damage, envy). S. to ಷರತ್ತಿನಮೇಲೆ, ಷರತ್ತಿಗೆ ಒಳಪಟ್ಟು (Treaty is s. to ratification ಕರಾರು ಸ್ಥಿರೀಕರಣಕ್ಕೆ ಒಳಪಟ್ಟದ್ದಾಗಿದೆ. The arrangement is made, *or* is, s. to your approval ನಿನ್ನ ಒಪ್ಪಿತಕ್ಕೆ ಒಳಪಟ್ಟು ಈ ಏರ್ಪಾಟು ಮಾಡಿದೆ. S. to your consent, I propose to try again ನೀನು ಸಮ್ಮತಿಸುವುದಾದರೆ, ನಾನು ಮತ್ತೆ ಪ್ರಯತ್ನಪಡಬೇಕೆಂದಿದ್ದೇನೆ. S. to correction, these are the facts ತಿದ್ದುಪಾಟಿಗೆ ಒಳಪಟ್ಟುವಾಗಿ ಇವು ಇರತಕ್ಕ ಸಂಗತಿಗಳು)

Súbject (ನಾ.) ರಾಜಕೀಯ ಆಳಿಕೆಗೆ, ಆಡಳಿತಕ್ಕೆ, —ಒಳಪಟ್ಟವನು, ಅಧೀನನಾದವನು; ಪ್ರಜೆ; ಪ್ರಜಾವ್ಯಕ್ತಿ [Rulers & subjects ಆಳುವವರೂ ಪ್ರಜೆಗಳೂ. The liberty of the s. (ರಾಜ್ಯವ್ಯವಸ್ಥೆಯಿಂದ ದತ್ತವಾದ) ಪ್ರಜಾ ಸ್ವಾತಂತ್ರ್ಯ. (ರೂಪ.) The subjects of King Shakspere ಷೇಕ್ಸ್‌ಪಿಯರ್ ದೊರೆಯ ಪ್ರಜೆಗಳು (ಎಂದರೆ, ಅವನು ಸೃಷ್ಟಿಸಿರುವ ಪಾತ್ರಗಳು)]; ಮತ್ತೊಬ್ಬನಿಗೆ ಅಧೀನವಾದದ್ದು, ಅಧೀನನಾದವನು; ಅಧೀನ ವ್ಯಕ್ತಿ (By nature woman was made man's s.); (ತರ್ಕ, ವ್ಯಾ.) ಉದ್ದೇಶ, ಕರ್ತೃ (S. & predicate are essential parts of a sentence); (ತ. ಶಾ.) ವಿಷಯಿ, ಜ್ಞಾತೃ, ಆತ್ಮ, ಅಹಂ (S. & object ವಿಷಯಿ ಮತ್ತು ವಿಷಯ; ಜ್ಞಾತೃ ಮತ್ತು ಜ್ಞೇಯ); ಗುಣಗಳಿಗೆ, ಸಹಜ ಧರ್ಮಗಳಿಗೆ, ಆಶ್ರಯವಾದದ್ದು: ವಸ್ತು, ಧರ್ಮಿ (Two contraries can never subsist in the same s.); (ಚರ್ಚೆ, ವರ್ಣನೆ, ಮೊ. ಗಳ) ವಿಷಯ, ವಿಚಾರ, ವಸ್ತು [Proposed a s. for the debate. On the s. of —ಕುರಿತು, ವಿಚಾರವಾಗಿ. The s. of the story, poem, picture ಕಥೆಯ, ಕವನದ, ಚಿತ್ರದ, —ವಿಷಯ, ವಸ್ತು. Pastoral, historical, s. (ವರ್ಣಚಿತ್ರಕಲೆ) ಗ್ರಾಮಜೀವನದ, ಐತಿಹಾಸಿಕ—ವಿಷಯ, ವಸ್ತು. S. of piece of music ಸಂಗೀತ ಕೃತಿಯ ಪ್ರಧಾನ ಸ್ವರ ಸಂಗತಿ. S. for dissection *or* s. (ಅಂಗರಚನೆ, ಮೊ. ನ್ನು ತೋರಿಸಲು ಕೊಯ್ಯುವುದಕ್ಕಾಗಿ ಉಪಯೋಗಿಸುವ) ಮೃತದೇಹ, ಹೆಣ. The s. of an experiment ಪ್ರಯೋಗಕ್ಕೆ ಒಂದು ವಿಷಯ. Change the s. (ಮು., ಇಕ್ಕಟ್ಟಿನ ಸಂದರ್ಭದಿಂದ ತಪ್ಪಿಸಿಕೊಳ್ಳುವುದಕ್ಕಾಗಿ) ಬೇರೆ ವಿಷಯ ಮಾತನಾಡು; ವಿಷಯ ಬದಲಾಯಿಸು]; ಸಂದರ್ಭ, ವಿಷಯ (Is a s. for ridicule, pity, rejoicing, congratulation); ನಿರ್ದಿಷ್ಟ ಮಾನಸಿಕ ಅಥವಾ ದೈಹಿಕ ವ್ಯಾಧಿ, ಮೊ. ಗಳಿಗೆ ಈಡಾದ ವ್ಯಕ್ತಿ: ರೋಗಿ (Bilious, hysterical, s. ಪಿತ್ತ ಪ್ರಕೃತಿಯ, ಗರ್ಭೋನ್ಮಾದದ, —ರೋಗಿ, ವ್ಯಕ್ತಿ. A good, bad, s. ಗುಣವಾಗುವ ನಿರೀಕ್ಷೆ ಇರುವ, ಇಲ್ಲದ, ರೋಗಿ). S.-heading (ಒಂದು ವಿಷಯವನ್ನು ಕುರಿತ ಉಲ್ಲೇಖಗಳನ್ನೆಲ್ಲ ಅಕಾರಾದಿಯಲ್ಲಿ ಸಂಗ್ರಹಿಸಿರುವ) ವಿಷಯಾನುಸಾರ ಶಿರನಾಮೆ. S.-matter (ಗ್ರಂಥ, ಮೊ. ಗಳ) ವಿಷಯ, ವಸ್ತು. S.-object ಜ್ಞಾನೇಂದ್ರಿಯಕ್ಕೆ ಗ್ರಹಿಕೆಯಾದ ರೀತಿಯ ವಸ್ತು: ಭಾವಿತ, ಗೃಹೀತ, —ವಿಷಯ (ಎದುರು ಪದ: object-object ವಾಸ್ತವ, ಯಥಾರ್ಥ, —ವಿಷಯ); ತಾನೇ ಜ್ಞಾತೃ ಮತ್ತು ಜ್ಞೇಯ ಆಗಿರುವ ವಸ್ತು: ವಿಷಯ ವಿಷಯಿ. **Súbjectless** (ಗು.); **Subjéctive** (ಗು., ನಾ.) (ತ. ಶಾ.) ವಿಷಯಿಯ, ಆತ್ಮದ, ಆತ್ಮಸಂಬಂಧವಾದ, ಆಂತರಿಕ, ಮನೋಗ್ರಾಹ್ಯವಾದ. (ಬಳ. ಮಾ.) ಕಾಲ್ಪನಿಕ, ಭಾವನೆಯ; (ಕಲೆಗಳ ಮತ್ತು ಕಲಾವಿದರ ವಿಷಯದಲ್ಲಿ) ಒಂದಾನೊಂದು ವಸ್ತುವಿನ ಅಥವಾ ಸಂದರ್ಭದ ವಾಸ್ತವ ಸ್ಥಿತಿಯನ್ನು ಅವಲಂಬಿಸದೆ ಅವನವನ ಮನೋಧರ್ಮಕ್ಕನುಸಾರವಾಗಿ ಆಗುವ, ನಿರೂಪಿಸುವ: ವೈಯಕ್ತಿಕ (ದೃಷ್ಟಿಯ), ಸ್ವನಿಷ್ಠವಾದ, ಸ್ವಾನುಭವದ, ವ್ಯಕ್ತಿ ಮನೋಗತ. (ವ್ಯಾ.) ಕರ್ತೃವಿನ, ಕರ್ತೃಸಂಬಂಧವಾದ [S. case *or* s. ಕರ್ತೃವಾಚಕ, ಕೃದ್ವಾಚಿ, ಪ್ರಥಮಾ ವಿಭಕ್ತಿ. S. genitive ಕರ್ತರಿ ಷಷ್ಠಿ (ಉದಾ., By the act of God) (Object ಕೆಳಗೆ objective genitive ನೋಡಿ)]. **Subjéctively** (ಕ್ರಿ. ವಿ.); **Subjéctiveness** (ನಾ.), **Subjectívity** (ನಾ.) ವೈಯಕ್ತಿಕತೆ, ವೈಯಕ್ತಿಕ ದೃಷ್ಟಿ. **Subjéctivism** (ನಾ.) ಸತ್ಯಕ್ಕೆ ಬಾಹ್ಯ ಪ್ರಮಾಣ ಯಾವುದೂ ಇಲ್ಲವೆಂದೂ ಜ್ಞಾನವು ಜ್ಞಾತೃನಿಷ್ಠ ಮಾತ್ರವೆಂದೂ ವಾದಿಸುವ ವಾದ: ವಿಷಯಿ ವಾದ, ಜ್ಞಾನ ಸ್ವನಿಷ್ಠತಾ ವಾದ. **Subjéctivist** (ನಾ.)

Subjéct (ಕ್ರಿ. ಸಕ.) (ಜನತೆ, ಮೊ. ನ್ನು) ಕೈಕೆಳಗೆ ತರು; ಸ್ವಾಧೀನ, ವಶ, —ಪಡಿಸಿಕೊ, ಮಾಡು; ಒಳಪಡಿಸು; ಈಡು, ಗುರಿ,—ಮಾಡು (Must be subjected to great heat ಹೆಚ್ಚು ಶಾಖಕ್ಕೆ ಒಳಪಡಿಸಬೇಕು. Let us s. it to criticism ಅದನ್ನು ವಿಮರ್ಶೆಗೆ ಗುರಿಮಾಡೋಣ). **Subjéction** (ನಾ.)

Subjoín ಸಬ್‌ಜಾಯ್‌ನ್ (ಕ್ರಿ. ಸಕ.) ಕೊನೆಯಲ್ಲಿ, ಅನುಬಂಧವಾಗಿ, —ಸೇರಿಸು.

Súbjugate ಸಬ್ಜುಗೇಟ್ (ಕ್ರಿ. ಸಕ.) ಸೋಲಿಸು, ನಿಗ್ರಹಿಸು, ಅಡಗಿಸು; ಸ್ವಾಧೀನಕ್ಕೆ, ಹತೋಟಿಗೆ, —ತರು; ಅಡಿಯಾಳುತನಕ್ಕೆ, ದಾಸ್ಯಕ್ಕೆ, —ಒಳಪಡಿಸು. **Súbjugable** (ಗು.); **Subjugátion** (ನಾ.); **Súbjugator** (ನಾ.)

Subjúnctive ಸಬ್‌ಜಂಕ್ಟಿವ್ (ಗು., ನಾ.) ಸಂಭಾವನಾ ರೂಪ, ಸಂಭಾವನಾರ್ಥಕ (= S. mood). **Subjúnctively** (ಕ್ರಿ. ವಿ.)

Súblimate ಸಬ್ಲಿಮೇಟ್ (ಕ್ರಿ. ಸಕ.), —ಮೆಟ್ (ಗು., ನಾ.) (ರ. ವಿ.) ಶಾಖದ ಮೂಲಕ ಘನಸ್ಥಿತಿಯಿಂದ ಅನಿಲಸ್ಥಿತಿಗೆ ತಂದು ಮತ್ತೆ ತಂಪಿಸಿ ಘನಸ್ಥಿತಿಗೆ ತರು: ಘನ ಭಟ್ಟಿ ಇಳಿಸು; ಊರ್ಧ್ವಪಾತ ಮಾಡು; (ಭೌ. ವಿ.) ಘನಸ್ಥಿತಿಯಿಂದ (ದ್ರವಸ್ಥಿತಿಗೆ ತರದೆ) ನೇರವಾಗಿ ಅನಿಲಸ್ಥಿತಿಗೆ ತರು: ಅನಿಲೀಕರಿಸು, ಬಾಷ್ಪೀಕರಿಸು. (ಮನೋವಿಶ್ಲೇಷಣ) ಒಂದು ಮನಃಪ್ರವೃತ್ತಿಯ ಶಕ್ತಿಯನ್ನು ಆ ಪ್ರವೃತ್ತಿಯ ಮೂಲೋದ್ದೇಶಕ್ಕಲ್ಲದೆ ಉನ್ನತವಾದ ಬೇರೆ ಉದ್ದೇಶಕ್ಕೆ ತಿರುಗಿಸು, ವಿನಿಯೋಗಿಸು: ಉತ್ತಮೀಕರಿಸು; ಉದಾತ್ತಮಾಡು. (ರೂಪ.) ಶುದ್ಧ, ಚೊಕ್ಕ,—ಮಾಡು; ಪುಟಕ್ಕೆ ಹಾಕು; ಉನ್ನತಿಗೊಳಿಸು, ಆದರ್ಶ ಮಾಡು (Moral ideas in a thousand forms have been sublimated). (ಗು.) ಘನ ಭಟ್ಟಿ ಇಳಿಸಿದ; ಬಾಷ್ಪೀಕೃತ; ಚೊಕ್ಕ, ಶುದ್ಧ, —ಮಾಡಿದ; ಉನ್ನತ, ಉಚ್ಚ. (ನಾ.) ಘನ ಭಟ್ಟಿ (ಇಳಿಸಿದ ವಸ್ತು). Corrosive s. (Corrode ಕೆಳಗೆ Corrosive ನೋಡಿ). Blue s. ಪಾದರಸ, ಗಂಧಕದ ಧೂಳಿ ಮತ್ತು ನವಾಸಾಗರಗಳಿಂದ ತಯಾರಿಸಿದ ಒಂದು ಬಣ್ಣ. **Sublimátion** (ನಾ.) ಘನ ಭಟ್ಟಿ ಇಳಿಸುವುದು, ಊರ್ಧ್ವಪಾತ; ಉತ್ತಮೀಕರಣ; ಶುದ್ಧೀಕರಣ.

Sublíme ಸಬ್ಲೈಮ್ (ಗು.) ಮಹೋನ್ನತ, ಅತ್ಯಂತ ಘನತೆಯ; ಭಯಭಕ್ತಿಯನ್ನೂ ಆಶ್ಚರ್ಯವನ್ನೂ ಹುಟ್ಟಿಸುವ; ಘನ ಗಂಭೀರ(ತೆಯ); ಅದ್ಭುತ(ರಸ)ದ; ಪರಮೋದಾತ್ತ, ಭವ್ಯ, (ಮಹಾ)ಮಹಿಮೆಯುಳ್ಳ, ಮೇಲುಮಟ್ಟದ, ಎತ್ತರವಾದ [S. mountain, scenery, ambition, heroism, love, thought, beauty, poet. S. indifference, impudence (ಪರಿಣಾಮವನ್ನು ಲೆಕ್ಕಿಸದಷ್ಟು) ಪರಮ ಔದಾಸೀನ್ಯ, ಔದ್ಧತ್ಯ. The S. Porte (Porte ನೋಡಿ). The s. ಘನವಾದುದು, ಉದಾತ್ತವಾದುದು; ಘನತ, ಭವ್ಯತೆ]. (ಅಂ. ರ. ಶಾ.) ಮೇಲ್ಮೈಯ ಹತ್ತಿರವಿರುವ, ಆಳವಾಗಿ ಹೋಗಿಲ್ಲದ. **Sublímely** (ಕ್ರಿ. ವಿ.); **Sublímity** (ನಾ.) ಉತ್ಕರ್ಷ, ಔನ್ನತ್ಯ, ಮಹೋನ್ನತಿ ಅದ್ಭುತತೆ, ಉದಾತ್ತತೆ, ಘನತೆ, ಭವ್ಯತೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sublíme (ಕ್ರಿ.) ಘನ ಘಟ್ಟಿ ಇಳಿ(ಸು); ಊರ್ಧ್ವಪಾತ—ಆಗು, ಮಾಡು; ಬಾಷ್ಪೀ—ಕರಿಸು, ಭವಿಸು; ಚೊಕ್ಕ, ಶುದ್ಧ, —ಆಗು, ಮಾಡು; ಉನ್ನತ, ಭವ್ಯ, ಉದಾತ್ತ, —ಮಾಡು. **Sublímer** (ನಾ.)

Submérge ಸಬ್‌ಮರ್ಜ್ (ಕ್ರಿ.) (ನೀರಿನಿಂದ) ಮುಚ್ಚಿ—ಹೋಗು, ಹೋಗಿಸು; (ನೀರಿನಲ್ಲಿ) ಮುಳುಗಡೆಯಾಗು, ಮುಳುಗಿಸು, ಮಗ್ನ ಮಾಡು; (ಪ್ರವಾಹದಲ್ಲಿ) ಕೊಚ್ಚಿಸು, ಕೊಚ್ಚಿಹಾಕು [(ರೂಪ. ಸಹ) The submerged tenth ಸಾಲದಲ್ಲಿ ಮುಳುಗಿರುವ, ದಾರಿದ್ರ್ಯದಲ್ಲಿ ಬಳಲುತ್ತಿರುವ,—ಪ್ರಜಾ ಭಾಗ; ಬಡತನದಲ್ಲಿ ಮುಳುಗಿದ ಜನವರ್ಗ]; (ಜಲಾಂತರ್ನೌಕೆ, ಅದರ ನಾವಿಕರು, ಯಜಮಾನ, ಮೊ. ವರ ವಿಷಯದಲ್ಲಿ) ನೀರೊಳಗೆ—ಹೋಗು, ಮುಳುಗು. **Submérgence** (ನಾ.); **Submérsion** (ನಾ.); **Submérse** (ಕ್ರಿ. ಸಕ., ಗು.)=Submerge [(ಸ. ವಿ.; ಸಸ್ಯ ಭಾಗಗಳು) ನೀರಿನ ಕೆಳಗೆ ಬೆಳೆಯುವ (ಎಂಬ ಭೂ. ಕೃ. ಅರ್ಥದಲ್ಲಿ ಹೊರತು ವಿರ. ಪ್ರ.)]. (ಗು.) (ವಿರ. ಪ್ರ.) (ಸ.ವಿ.) ನೀರೊಳಗೆ—ಬೆಳೆಯುವ, ಮುಳುಗಿರುವ. **Submérsible** (ಗು.)

Submíssion ಸಬ್‌ಮಿಷನ್ (ನಾ.) ವಶ, ಅಧೀನ, —ಆಗುವುದು, ಮಾಡುವುದು; (ಆಳಿಕೆ, ಮೊ. ಕ್ಕೆ) ಒಳಗಾಗುವುದು, ಒಳಪಡುವುದು; ಶರಣಾಗುವುದು, ಶರಣಾಗತಿ; (ಪರ್ಯಾಲೋಚನೆ, ತೀರ್ಮಾನ, ಮೊ. ಕ್ಕಾಗಿ) ಒಪ್ಪಿಸುವುದು, ಕಳಿಸುವುದು [Shall be satisfied with nothing short of complete s. ಪೂರ್ತಿ ಶರಣಾದ ಹೊರತು ತೃಪ್ತಿಯಾಗುವುದಿಲ್ಲ. Demands the s. of the signature to an expert ರುಜುವನ್ನು ಪ್ರವೀಣನಿಗೆ (ಪರೀಕ್ಷೆಗಾಗಿ) ಒಪ್ಪಿಸಬೇಕೆಂದು ಕೇಳುತ್ತಾನೆ]; (ನ್ಯಾ. ಶಾ.) (ನ್ಯಾಯಾಧೀಶನಿಗಾಗಲಿ ನ್ಯಾಯದರ್ಶಿಗಳಿಗಾಗಲಿ ನ್ಯಾಯವಾದಿ ಮಾಡುವ) ನಿವೇದನೆ, ಅರಿಕೆ, ಮನವಿ (My s. is that ನನ್ನ ಅರಿಕೆ ಏನೆಂದರೆ; —ಎಂದು ಅರಿಕೆ ಮಾಡುತ್ತೇನೆ); ನಮ್ರತೆ, (ಅಧಿಕಾರಕ್ಕೆ) ತಲೆಬಾಗುವಿಕೆ, ತಗ್ಗಿ ನಡೆಯುವುದು, ವಿಧೇಯತೆ. **Submíssive** (ಗು.); **Submíssively** (ಕ್ರಿ. ವಿ.); **Submíssiveness** (ನಾ.); **Submít** ಸಬ್‌ಮಿಟ್ (ಕ್ರಿ.) ವಶ, ಅಧೀನ—ಆಗು; ತಲೆಬಾಗು, ಬಗ್ಗು, ಮಣಿ, ವಿಧೇಯನಾಗಿರು; ಒಪ್ಪು, ಸಮ್ಮತಿಸು (To thy husband's will thine shall s. ನಿನ್ನ ಗಂಡನ ಇಚ್ಛೆಗೆ ನಿನ್ನ ಇಚ್ಛೆ ಅಧೀನವಾಗಿರಬೇಕು. Will never s. to indignity ಅವಮಾನ ಪ್ರಸಂಗಕ್ಕೆ ಎಂದೂ ಒಪ್ಪುವುದಿಲ್ಲ. Had to s. to God's will ದೇವರ ಇಚ್ಛೆಗೆ ತಲೆಬಾಗಬೇಕಾಯಿತು). (ಪರ್ಯಾಲೋಚನೆ, ತೀರ್ಮಾನ, ಮೊ. ಕ್ಕಾಗಿ) ಒಪ್ಪಿಸು; ನಿವೇದಿಸು, ಅರಿಕೆಮಾಡು (Should like to s. it to your inspection. S. a case to the court. That, I s., is a false inference ಅದು ತಪ್ಪು ಅನುಮಿತಿ ಎಂಬುದಾಗಿ ಅರಿಕೆಮಾಡುತ್ತೇನೆ)

Subórdinate ಸಬಾರ್ಡಿನೇಟ್ (ಗು., ನಾ.) ಕೆಳಗಣ (ದರ್ಜೆಯ), ಕೈಕೆಳಗಿನ; ಅಧೀನ, ಅಪ್ರಧಾನ, ಗೌಣ (*To* ಉಪ. ಮೊದನೆ) (S. clause ಅಧೀನ ವಾಕ್ಯ). (ನಾ.) ಕೈಕೆಳಗಿನವನು, ತಾಬೇದಾರ (Never trusts his subordinates). **Subórdinately** (ಕ್ರಿ. ವಿ.)

Subórdinate —ನೇಟ್ (ಕ್ರಿ. ಸಕ.) ಅಧೀನ ಮಾಡು; ಅಪ್ರಧಾನವಾಗಿ, ಗೌಣವಾಗಿ, —ಪರಿಗಣಿಸು (The teacher who subordinates prudence to virtue); ಕೆಳ ದರ್ಜೆಯಲ್ಲಿಡು; ಕೆಳ ಮಟ್ಟಕ್ಕೆ, ಕೆಳಗಿನ ಸ್ಥಾನಕ್ಕೆ,—ಹಾಕು **Subordinátion** (ನಾ.) (ಇನ್ನೊಬ್ಬನ) ಕೈಕೆಳಗಿರುವುದು; ಪರಾಧೀನತೆ, ಪಾರತಂತ್ರ್ಯ; ವಿಧೇಯತೆ, ಅಧೀನತೆ, ತಾಬೇದಾರಿ (S. must be preserved in the army); ಅಪ್ರಾಧಾನ್ಯ, ಅಮುಖ್ಯತೆ, ಗೌಣತೆ. **Subordinátionism** (ನಾ.) (ದೇವ. ಶಾ.) ಕ್ರೈಸ್ತ ತ್ರಿಮೂರ್ತಿಗಳಲ್ಲಿ ದೇವಪುತ್ರನೂ ದಿವ್ಯಾತ್ಮನೂ ದೇವರಿಗಿಂತ (ದರ್ಜೆಯಲ್ಲಿ, ಸತ್ತ್ವದಲ್ಲಿ) ಕಡಮೆ ಎಂಬ ವಾದ: ಕನಿಷ್ಠತಾ ವಾದ. **Subórdinative** (ಗು.) ಕೈಕೆಳಗಿನ, ಅಧೀನ, ವಿಧೇಯ.

Subórn ಸಬಾರ್ನ್ (ಕ್ರಿ. ಸಕ.) (ಲಂಚ, ಮೊ. ಗಳಿಂದ) ಸುಳ್ಳು ಸಾಕ್ಷ್ಯ ಹೇಳುವಂತೆ, ನ್ಯಾಯ ವಿರುದ್ಧ ಕಾರ್ಯಮಾಡುವಂತೆ, —ಪ್ರೇರಿಸು; (ಕೆಟ್ಟ ಕೆಲಸ ಮಾಡಲು) ದುಷ್ಪ್ರೇರಣೆಮಾಡು, ಚಿತಾಯಿಸು, ಎತ್ತಿಕಟ್ಟು. **Subornátion** (ನಾ.); **Subórner** (ನಾ.)

Subpoéna ಸಬ್‌ಪೀನ, ಸಪೀನ (ನಾ.; ಕ್ರಿ. ಸಕ., ಭೂತ., ಭೂ. ಕೃ. -naed —ನಡ್, ನಅಡ್) ನ್ಯಾಯಸ್ಥಾನಕ್ಕೆ ಹಾಜರಾಗಬೇಕೆಂದು ಲಿಖಿತ ಆಜ್ಞೆ(ಕೊಡು); ನ್ಯಾಯಸ್ಥಾನದ ಹಾಜರಿ ಕರೆ (ಕಳಿಸು)

Subréption ಸಬ್‌ರೆಪ್ಷನ್ (ನಾ.) (ಸತ್ಯಾಂಶಗಳನ್ನು ಮರೆಮಾಚಿ ಮಾಡಿದ) ಮಿಥ್ಯಾ, ಮೋಸದ, —ನಿರೂಪಣೆ; ಸಂಗತಿಗಳನ್ನು ಮರೆಮಾಚಿ ದಾನ, ಆಸ್ತಿ, ಮೊ. ನ್ನು (ಮು., ಮತವೃತ್ತಿಯಲ್ಲಿ ಬಡತಿಯನ್ನು) ಪಡೆಯುವುದು: ಮೋಸದ—ಸಂಪಾದನೆ, ಗಳಿಕೆ.

Subscríbe ಸಬ್‌ಸ್ಕ್ರೈಬ್ (ಕ್ರಿ.) (ದಸ್ತ್ರವಜು, ಮೊ. ಗಳ) ಕೆಳಗೆ ತನ್ನ ಹೆಸರು ಬರೆ, (ವಿರ. ಪ್ರ.; ಏನನ್ನಾದರೂ) ಬರೆ (The subscribed names carry weight ಕೆಳಗೆ ಬರೆದಿರುವ ಹೆಸರುಗಳಿಗೆ ತೂಕವಿದೆ, ಗೌರವವಿದೆ. Some one has subscribed a motto ಯಾರೋ ಆದರ್ಶ ವಾಕ್ಯವೊಂದನ್ನು ಕೆಳಗೆ ಬರೆದಿದ್ದಾರೆ); (ದಸ್ತ್ರವಜು, ಚಿತ್ರ, ಮೊ. ಗಳ) ಕೆಳಗೆ, ಅಡಿಯಲ್ಲಿ, —ರುಜುಹಾಕು, ಸಹಿಮಾಡು; (ಅಭಿಪ್ರಾಯ, ನಿರ್ಣಯ, ಮೊ. ನ್ನು) ಒಪ್ಪು, ಅನುಮೋದಿಸು (Cannot s. to that ಅದಕ್ಕೆ ಒಪ್ಪಲಾರೆ); ಚಂದಾ, ವಂತಿಗೆ, ವರ್ಗಣಿ, —ಕೊಡು; ಚಂದಾದಾರ, ವರ್ಗಣಿದಾರ, —ಆಗು, ಆಗಿ ಸೇರು; ಚಂದಾ—ಎತ್ತು, ಕೂಡಿಸು (S. to a charity ಧರ್ಮಕಾರ್ಯಕ್ಕೆ ಚಂದಾ ಕೊಡು. S. for a book ಪ್ರಕಟನೆಗೆ ಮೊದಲೆ ಹಣ ಕೊಟ್ಟು ಪುಸ್ತಕ ಕೊಳ್ಳಲು ಗೊತ್ತುಮಾಡಿಕೊ: ಪುಸ್ತಕಕ್ಕೆ ಚಂದಾದಾರನಾಗು. S. to a newspaper ವೃತ್ತಪತ್ರಿಕೆಗೆ ವರ್ಗಣಿದಾರನಾಗು); (ಬಂಡವಾಳ ಪಾಲುಗಳನ್ನು) ಕೊಳ್ಳಲು ಒಪ್ಪಿಕೊ, (ಸಾಲ ಪತ್ರಗಳಿಗೆ) ಅಪೇಕ್ಷೆ ಕೊಡು (The sum needed was subscribed several times over ಆವಶ್ಯಕವಾದ ಮೊತ್ತಕ್ಕಿಂತ ಹಲವು ಮಡಿ ಅಪೇಕ್ಷೆ ಬಂತು). **Subscríber** (ನಾ.) (ಕ್ರಿಯಾರ್ಥಗಳಲ್ಲಿ); ಚಂದಾ, ವರ್ಗಣಿ, —ದಾರ. **Súbscript** (ಗು., ನಾ.) ಕೆಳಗೆ ಬರೆದ. (ನಾ.) ಕೆಳ, ಅಡಿ, —ಬರಹ. **Subscríption** —ಸ್ಕ್ರಿಪ್ಷನ್ (ನಾ.) (ಕ್ರಿಯಾರ್ಥಗಳಲ್ಲಿ); ಚಂದಾ, ವಂತಿಗೆ, ವರ್ಗಣಿ.

Súbscript, Subscríption. Subscribe ನೋಡಿ.

Súbsequent ಸಬ್ಸಿಕ್ವೆಂಟ್ (ಗು.) ಆಮೇಲಿನ, ಮುಂದಿನ, ಅನಂತರದ, ತರುವಾಯದ (*To* ಉಪ. ಮೊದನೆ). **Súbsequently** (ಕ್ರಿ. ವಿ.); **Súbsequence** (ನಾ.) ತರುವಾಯದ ಘಟನೆ; ತರುವಾಯದ್ದಾಗಿರುವುದು.

Subsérve ಸಬ್‌ಸರ್ವ್ (ಕ್ರಿ. ಸಕ.) (ಉದ್ದೇಶ, ಮೊ. ಕ್ಕೆ) ಒದಗು, ಸಾಧಕವಾಗಿರು, ಉಪಯೋಗವಾಗು, ಉಪಕಾರಕವಾಗಿರು. **Súbservient** (ಗು.) ಸಾಧಕವಾದ, ಉಪಕಾರಕವಾದ, ಉಪಕರಣವಾದ (*To* ಉಪ. ಮೊದನೆ); ಅಧೀನವಾದ, ಕೈಕೆಳಗಿನ; ದಾಸನಂತೆ ಓಲೈಸುವ, ಅತಿನಮ್ರ, ಹಲ್ಲುಗಿರಿಯುವ. **Subsérviently** (ಕ್ರಿ. ವಿ.); **Subsérvience** (ನಾ.), **Subsérviency** (ನಾ.) ಸಾಧನತ್ವ, ಉಪಕರಣತ್ವ; ಪರಾಧೀನತೆ, ದಾಸ್ಯ, ಓಲೈಕೆ.

Subsíde ಸಬ್‌ಸೈಡ್ (ಕ್ರಿ. ಅಕ.) (ನೀರಿನ ಮಟ್ಟ, ನೆರೆ, ಮೊ. ಗಳ ವಿಷಯದಲ್ಲಿ) ಇಳಿ(ದುಹೋಗು), ತಗ್ಗು, ಮಟ್ಟಾಗು; (ನೆಲದ ವಿಷಯದಲ್ಲಿ) ಕುಸಿ, ಹೂತುಹೋಗು; (ಕಟ್ಟಡ, ಹಡಗು, ಮೊ. ಗಳ ವಿಷಯದಲ್ಲಿ) ಕೆಳಮಟ್ಟಕ್ಕೆ ಇಳಿ, ತಳಕ್ಕೆ ಕೂರು; (ದ್ರವ, ಮೊ. ಗಳಲ್ಲಿ ತೇಲುತ್ತಿರುವ ವಸ್ತುಗಳ ವಿಷಯದಲ್ಲಿ) ತಳಕ್ಕೆ ಇಳಿ, ತಳದಲ್ಲಿ ಕೂರು; (ವ್ಯಕ್ತಿಯ ವಿಷಯದಲ್ಲಿ; ಸಾ., ಹಾಸ್ಯ ಪ್ರ.) ಕುಸಿ(ದುಕೊ) (S. into an armchair); ಶಾಂತವಾಗು, ಶಮನಹೊಂದು, ಅಡಗು, ತಣ್ಣಗಾಗು (Storm, tumult, excitement, subsides). **Súbsidence** —ಸಿ—, **Subsídence** —ಸೈ— (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Subsídiary ಸಬ್ಸಿಡಿಯರಿ (ಗು., ನಾ.) ಸಹಾಯಕ, ಸಹಕಾರಿ; ಉಪಾಂಗವಾದ; ಪೂರಕ. (ಸೈನಿಕ ದಳಗಳ ವಿಷಯದಲ್ಲಿ) ಸಹಾಯ ದ್ರವ್ಯ ಕೊಟ್ಟು ಇಟ್ಟುಕೊಂಡಿರುವ, ಮತ್ತೊಂದು ರಾಷ್ಟ್ರ ಹಣ ಕೊಟ್ಟು ನಿಯೋಜಿಸಿಕೊಂಡಿರುವ : ಬಾಡಿಗೆಯ, ಪೊಗದಿಯ. (ನಾ.; ಸಾ., ಬ. ವ. ದಲ್ಲಿ) ಸಹಾಯಕ, ಸಹಕಾರಿ (—ವಸ್ತು, ವ್ಯಕ್ತಿ); ಉಪಕರಣ. **Subsídiarily** (ಕ್ರಿ. ವಿ.) ; **Súbsidize** ಸಬ್‌ಸಿಡೈಸ್ (ಕ್ರಿ. ಸಕ.) (ಸೇವೆ, ಒಲಿಸಿಕೊಳ್ಳುವುದು, ಮೊ. ಕ್ಕಾಗಿ) ಉತ್ತೇಜನ, ಸಹಾಯದ್ರವ್ಯ, —ಕೊಡು. **Súbsidy** ಸಬ್‌ಸಿಡಿ (ನಾ.) (ಇಂಗ್ಲಿಷ್ ಚರಿತ್ರೆ) ರಾಜ್ಯಾವಶ್ಯಕತೆಗಳಿಗಾಗಿ ಪಾರ್ಲಿಮೆಂಟು ರಾಜನಿಗೆ ಕೊಡುತ್ತಿದ್ದ, ಅದಕ್ಕಾಗಿ ವಿಶೇಷ ಸಂದರ್ಭಗಳಲ್ಲಿ ಎತ್ತುತ್ತಿದ್ದ, ತೆರಿಗೆ : ಸಹಾಯ —ದ್ರವ್ಯ, ತೆರಿಗೆ. ಸೈನಿಕ ಸಹಾಯಕ್ಕಾಗಿ ಒಂದು ರಾಜ್ಯ ಮತ್ತೊಂದು ರಾಜ್ಯಕ್ಕೆ ಕೊಡುವ ಹಣ ಅಥವಾ ಇತರ ಸಂದಾಯ : ಸೈನಿಕ ಸಹಾಯದ್ರವ್ಯ; ಜನೋಪಯುಕ್ತವಾದ ವಾಣಿಜ್ಯೋದ್ಯಮ, ಧರ್ಮ ಸಂಸ್ಥೆ, ಮೊ. ಗಳ ವೆಚ್ಚಕ್ಕಾಗಿ ಕೊಡುವ ಸರಕಾರದ ಹಣ : ಸರಕಾರದ ಸಹಾಯ (ದ್ರವ್ಯ)

Súbsidy. Subsidiary ನೋಡಿ.

Subsíst ಸಬ್‌ಸಿಸ್ಟ್ (ಕ್ರಿ.) ಇರು, ಇದ್ದುಕೊಂಡಿರು, ಬದುಕಿರು, ಜೀವಿಸಿರು, ಜೀವನಮಾಡು, ಹೊಟ್ಟೆಹೊರೆ (S. on vegetables, charity. S. by begging); ಹೊಟ್ಟೆಗೆ ಹಾಕು, ಪೋಷಿಸು (Undertook to clothe, arm, and s. 1000 men). **Subsístence** (ನಾ.) ಇರುವುದು, ಇರುವಿಕೆ, ಅಸ್ತಿತ್ವ (He believed the soul had a distinct s.); ಜೀವನಾಧಾರ, ಜೀವನೋಪಾಯ ; ಹೊಟ್ಟೆಪಾಡು. S. money ಸೈನಿಕರು, ಕೆಲಸಗಾರರು, ಮೊ. ರಿಗೆ ಅವರ ಆವಶ್ಯಕತೆಗಳಿಗಾಗಿ ಸಂಬಳದ ದಿನಕ್ಕಿಂತ ಮೊದಲೆ ಕೊಟ್ಟ ಮುಂಗಡ ಹಣ : ಜೀವನಾಧಾರದ ಹಣ ; ವಿಶೇಷ ಸಂದರ್ಭಗಳಲ್ಲಿ ಜೀವನಕ್ಕಾಗಿ ಕೊಟ್ಟ ಹಣ : ಜೀವನಾಂಶ.

Súbstance ಸಬ್‌ಸ್ಟನ್ಸ್ (ನಾ.) (ತ. ಶಾ.) ಪದಾರ್ಥಗಳ ಗೋಚರ ಗುಣಗಳು, ಧರ್ಮಗಳು, ಲಕ್ಷಣಗಳು, ಉಪಾಧಿಗಳು, ಮೊ. ವು ಯಾವುದರಲ್ಲಿ ನೆಲಸಿರುತ್ತವೆಯೋ ಅಥವಾ ಯಾವುದಕ್ಕೆ ಸಂಬಂಧಪಟ್ಟಿರುತ್ತವೆಯೋ ಆ ಆಧಾರ : ದ್ರವ್ಯ, ಸತ್, ವಸ್ತು (Being of one s. with the Father ದೇವರೊಂದಿಗೆ ಒಂದೇ ಸತ್, ದ್ರವ್ಯ, ಆಗಿ) ; ಸಾರ, ಸಾರಾಂಶ, ತಿರುಳು, ನಿಜವಾದ ಭಾವ, ತಾತ್ಪರ್ಯ (I agree with you in s. ವಸ್ತುತಃ, ಸಾರಾಂಶದಲ್ಲಿ, ನಾನು ನಿನ್ನ ಅಭಿಪ್ರಾಯವನ್ನು ಒಪ್ಪುತ್ತೇನೆ. Can give you the s. of his remarks ಅವನ ಟೀಕೆಯ ಸಾರಾಂಶವನ್ನು ನಿನಗೆ ಕೊಡಬಲ್ಲೆ. The s. of religion ಮತದ, ಧರ್ಮದ, —ಸಾರ, ತಿರುಳು) ; (ರೂಪದಿಂದ ಭಿನ್ನವಾದ, ನಿರ್ದಿಷ್ಟ ಬಗೆಯ) ಪದಾರ್ಥ, ವಸ್ತು (A heavy, porous, s. The s. is good, but the style repellent ವಿಷಯ ಚೆನ್ನಾಗಿದೆ, ಆದರೆ ರೀತಿ ಅಸಹ್ಯವಾಗಿದೆ ; ಪದಾರ್ಥ ಒಳ್ಳೆಯದು. ಮಾಟ ಅಸಹ್ಯ) ; ವಾಸ್ತವಾಂಶ, ಸತ್ತ್ವ, ಧಡೂತಿ, ಹುರುಳು, ಆಸ್ತಿ, ಸಂಪತ್ತು (Sacrifice the s. for the shadow ಹುರುಳು ಬಿಟ್ಟು ನೆರಳು ಹಿಡಿ. There is no s. in him ಅವನಲ್ಲಿ ಸತ್ತ್ವವೇನೂ ಇಲ್ಲ. An argument of little s. ಹುರುಳಿಲ್ಲದ ವಾದ. A man of s. ಗಟ್ಟಿ ಕುಳ, ಆಸ್ತಿವಂತ. Waste one's s. ಆಸ್ತಿಯನ್ನು—ದುಂದುಮಾಡು, ಹಾಳುಮಾಡು). **Substántial** ಸಬ್‌ಸ್ಟ್ಯಾನ್ಷಲ್ (ಗು.) ವಾಸ್ತವವಾದ, ನಿಜವಾಗಿ ಇರುವ, ವಾಸ್ತವಿಕ (The ghost proved s. after all); ತಿರುಳುಳ್ಳ, ಸತ್ತ್ವವುಳ್ಳ, ಸಾರಭೂತವಾದ, ಮುಖ್ಯವಾದ, ಗಣನೀಯ (ಪ್ರಮಾಣದ), ಬಹುಮಟ್ಟಿನ (A s. argument ಸಾರವುಳ್ಳ, ತಿರುಳುಳ್ಳ, —ವಾದ. Made s. concessions ಮುಖ್ಯವಾದ, ಬಹು ಮಟ್ಟಿನ, ರಿಯಾಯಿತಿಗಳನ್ನು ತೋರಿಸಿದನು) ; ಧಡೂತಿಯುಳ್ಳ, ಭದ್ರ, ದೃಢ (A s. house. A man of s. build ದೃಢಕಾಯದ, ಗಟ್ಟಿ ಮೈಕಟ್ಟಿನ, —ಮನುಷ್ಯ) ; ಆಸ್ತಿಯುಳ್ಳ, ಸ್ಥಿತಿವಂತನಾದ ; ಹಣಕಾಸಿನ ಭದ್ರತೆಯುಳ್ಳ, ದಾರ್ಢ್ಯದ (A s. yeoman ಸ್ಥಿತಿವಂತ ರೈತ. S. firms ಧಡೂತಿಯ ವ್ಯಾಪಾರ ಸಂಸ್ಥೆಗಳು) ; ಮುಖ್ಯಾಂಶಗಳಲ್ಲಿ ಹೆಸರಿಗೆ ತಕ್ಕಂತಿರುವ, ನಿಜವಾದ, ಸತ್ಯವಾದ, ಯಥಾರ್ಥವಾದ (S. agreement, success). **Substántially** (ಕ್ರಿ. ವಿ.) ; **Substántialism** (ನಾ.) (ತ. ಶಾ.) ಗೋಚರಾನುಭವಗಳಿಗೆ ಆಧಾರವಾಗಿ ವಾಸ್ತವಿಕ ಅಸ್ತಿತ್ವ ಉಂಟು ಎಂಬ ವಾದ : ದ್ರವ್ಯಾಸ್ತಿತ್ವ ವಾದ. **Substántialist** (ನಾ.) ; **Substantiálity** —ಷಿಆ್ಯಲಿಟಿ (ನಾ.) ; **Substántialize** —ಷಲೈಸ್ (ಕ್ರಿ.) ವಾಸ್ತವಿಕತೆ, ಅಸ್ತಿತ್ವ, —ಕೊಡು, ಪಡೆ. **Substántiate** —ಷಿಯೇಟ್ (ಕ್ರಿ. ಸಕ.) (ಆಪಾದನೆ, ಹೇಳಿಕೆ, ಹಕ್ಕು —ಇವುಗಳಿಗೆ) ಆಧಾರಕೊಡು, ರುಜುವಾತು ಮಾಡು, ಸಮರ್ಥಿಸು, (ಪ್ರಮಾಣಕೊಟ್ಟು) ದೃಢೀಕರಿಸು; ಬಲ, ಭದ್ರ, —ಪಡಿಸು. **Substantiátion** —ಸಿ(ಷಿ)— (ನಾ.) ; **Súbstantive** ಸಬ್‌ಸ್ಟಂಟಿವ್ (ಗು., ನಾ.) ಇರುವಿಕೆಯನ್ನು, ಅಸ್ತಿತ್ವವನ್ನು, —ಸೂಚಿಸುವ, ಹೇಳುವ: ಅಸ್ತಿತ್ವ, ಸತ್ತಾ, —ವಾಚಕ [The s. verb 'ಇರು' (Be) ಧಾತು] ; ಪ್ರತ್ಯೇಕವೂ ಸ್ವತಂತ್ರವೂ ಆದ ಅಸ್ತಿತ್ವವುಳ್ಳ ; (ಮತ್ತೊಂದರಿಂದ ಅನುಮಾನಿಸಿದ್ದು, ಪರಾವಲಂಬಿಯಾದದ್ದು, ಉಪಜೀವಿ, ಮೊ. ಅಲ್ಲದೆ) ಸ್ವತಂತ್ರ ; ವಾಸ್ತವಿಕ ; ಸಾರಭೂತ [S. enactment, motion ವಿಹಿತಕ್ರಮದಲ್ಲಿ ಮಾಡಿದ ಸ್ವತಂತ್ರ ಶಾಸನ, ಸೂಚನೆ. Noun s. ನಾಮವಾಚಕ (ಎಂಬುದಕ್ಕೆ ಹಿಂದಿನ ಪ್ರ. ; ಗುಣವಾಚಕಕ್ಕೆ ಹಿಂದೆ Noun adjective ಎಂದು ಪ್ರ. ಇತ್ತು)]. (ನಾ.) ನಾಮ—ವಾಚಕ, ಪದ ; ವಿಶೇಷ್ಯ. **Súbstantively** (ಕ್ರಿ. ವಿ.) (ಮು., ವ್ಯಾ.) =Substantivally. **Substantíval** —ಟೈವಲ್ (ಗು.) (ವ್ಯಾ.) ನಾಮವಾಚಕದ. **Substantívally** (ಕ್ರಿ. ವಿ.) ನಾಮವಾಚಕವಾಗಿ, ನಾಮವಾಚಕಾರ್ಥದಲ್ಲಿ.

Substántial, etc., Substántiate, etc., Súbstantive, etc. Substance ನೋಡಿ.

Súbstitute ಸಬ್‌ಸ್ಟಿಟ್ಯೂಟ್ (ನಾ., ಕ್ರಿ. ಸಕ.) ಬದಲಿಯವನು(ಳು), ಬದಲಿ, ಪ್ರತಿ, ಈಡು, ಆದೇಶ. (ಕ್ರಿ.) ಪ್ರತಿಯಾಗಿ, ಬದಲಿಯಾಗಿ, —ಹಾಕು, ಇಡು, ನೇಮಿಸು (*For* ಉಪ. ದೊಡನೆ) ; (ಗ್ರಾಮ್ಯ ಪ್ರ.) ಬದಲಾಗಿ ಇಡು, ಬದಲಿಸು (*By, with* ಉಪ. ದೊಡನೆ). **Substitútion** (ನಾ.) ಬದಲಿಕೆ ; ಆದೇಶ ; ಪ್ರತಿನಿಧಾನ. **Substitútional** (ಗು.) ; **Substitútionally** (ಕ್ರಿ. ವಿ.) ; **Substitútionary** (ಗು.) ; **Súbstitutive** (ಗು.) ಆದೇಶಾತ್ಮಕ ; ಪ್ರತಿನಿಧ್ಯಾತ್ಮಕ ; ಬದಲಿಯ.

Subsúme ಸಬ್‌ಸ್ಯೂಮ್ (ಕ್ರಿ. ಸಕ.) (ನಿದರ್ಶನ, ಮೊ. ನ್ನು ; ಸೂತ್ರ, ನಿಯಮ, ವರ್ಗ, ಮೊ. ಗಳ) ಕೆಳಗೆ ಸೇರಿಸು ; ಅಂತರ್ಗತಮಾಡು, ಸಮಾವೇಶ ಮಾಡು. **Subsúmption** (ನಾ.)

Subténd ಸಬ್‌ಟೆಂಡ್ (ಕ್ರಿ. ಸಕ.) (ಜ್ಯಾ.) (ವೃತ್ತದ ಜ್ಯಾ, ತ್ರಿಕೋನದ ಭುಜ—ಇವುಗಳ ವಿಷಯದಲ್ಲಿ; ಚಾಪ, ಕೋನ—ಇವುಗಳ) ಎದುರಿಗಿರು, ಅಭಿಮುಖವಾಗಿರು: **Subténse** (ನಾ.) (ವೃತ್ತಚಾಪದ, ಕೋನದ) ಎದುರು ಗೆರೆ, ಅಭಿಮುಖ ರೇಖೆ.

Subténse. Subtend ನೋಡಿ.

Subter- ಸಬ್ಟರ್— (ಸ. ಪೂ. ಪ.) ಕೆಳ—, ಕಡಮೆಯ—, ಅವ—. (ಮು., Super- ಸಮಾಸಪದಗಳಿಗೆ ವ್ಯತಿರಿಕ್ತವಾಗಿ ಕಲ್ಪಿಸಿದ ಪದಗಳಲ್ಲಿ): **-human** ಮನುಷ್ಯನಿಗಿಂತ ಕೀಳಾದ, ಕೆಳಗಣ. **-natural** ಪ್ರಕೃತಿಗಿಂತ ಕೆಳಗಣ. **-position** (ಮತ್ತೊಂದರ) ಕೆಳಗಿರುವುದು ; ಕೆಳಸ್ಥಾನ.

Súbterfuge ಸಬ್ಟರ್‌ಫ್ಯೂಜ್ (ನಾ.) (ಖಂಡನೆಯನ್ನಾಗಲಿ ವಾದದಲ್ಲಿ ಸೋಲನ್ನಾಗಲಿ ತಪ್ಪಿಸಿಕೊಳ್ಳಲು ಅಥವಾ ತನ್ನ ವರ್ತನೆಯನ್ನು ಸಮರ್ಥಿಸಲು) ಕುಯುಕ್ತಿ, ಕಪಟೋಪಾಯ (—ಹೂಡುವುದು) ; ನುಣುಚಿಕೊಳ್ಳುವುದು ; ಹೊರಳುಮಾತು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Súbtil(e) ಸಟಿಲ್, ಸಬ್ಟಿಲ್ (ಗು.) (ಪ್ರಾಚೀ. ಪ್ರ.) =Subtle. **Súbtilize** (ಕ್ರಿ.) ; **Subtilizátion** (ನಾ.) ; **Súbtility** (ನಾ. ; ಪ್ರಾಚೀ. ಪ್ರ.)

Subtle ಸಟ್‌ಲ್ (ಗು.), (ಪ್ರಾಚೀ. ರೂಪ.) **Súbtil(e)** (ಗು.) ತೆಳ್ಳನೆಯ, ತೆಳುವಾದ, ವಿರಳ (ಪ್ರಾಚೀ. ಪ್ರ.); (ಸೂಕ್ಷ್ಮವಾಗಿರುವುದರಿಂದ) ಹರಡಿಕೊಳ್ಳುವ, ವ್ಯಾಪಕ ; ಸೂಕ್ಷ್ಮ, ನವಿರಾದ (The s. air ತೆಳುವಾದ ಗಾಳಿ. A s. vapour. Of s. texture ನವಿರು ನೆಯ್ಗೆಯ. A s. perfume ಸೂಕ್ಷ್ಮ ಪರಿಮಳ) ; ಹಿಡಿತಕ್ಕೆ, ಬುದ್ಧಿಗೆ, —ಸಿಕ್ಕದ; ತಪ್ಪಿಸಿಕೊಳ್ಳುವ, ನುಣುಚಿಕೊಳ್ಳುವ ; ಗೂಢ, ಸೂಕ್ಷ್ಮ (S. magic ಗ್ರಹಿಸಲಾಗದ ಇಂದ್ರಜಾಲ. S. art ಗಹನ, ಸೂಕ್ಷ್ಮ, —ಕಲೆ. A s. distinction ಸೂಕ್ಷ್ಮ —ಭೇದ, ವ್ಯತ್ಯಾಸ) ; ಸೂಕ್ಷ್ಮ ವ್ಯತ್ಯಾಸಗಳನ್ನು ಮಾಡುವ; ಸೂಕ್ಷ್ಮಗ್ರಹಣಶಕ್ತಿಯುಳ್ಳ ; ಕುಶಾಗ್ರ, ತೀಕ್ಷ್ಣ, ಮಾರ್ಮಿಕ (S. senses, perception, insight. A s. intellect, mind ಕುಶಾಗ್ರಬುದ್ಧಿ, ಸೂಕ್ಷ್ಮ ಮನಸ್ಸು) ; ಜಾಣತನದ, ಅತಿಸೂಕ್ಷ್ಮದ, ಕೌಶಲವುಳ್ಳ, ಚಮತ್ಕಾರದ, ಕುಸುರಿ ಕೆಲಸದ [A s. device, fancy, workman, explanation, policy ಚತುರೋಪಾಯ, ಚಮತ್ಕಾರದ ಕಲ್ಪನೆ, ಕುಸುರಿ ಕೆಲಸಗಾರ, ಜಾಣತನದ ವಿವರಣೆ (ಅಥವಾ ಸಮಜಾಯಿಷಿ), ಸೂಕ್ಷ್ಮ ಕಾರ್ಯನೀತಿ. S. fingers ಚಳಕದ ಬೆರಳುಗಳು] ; (ಕು)ತಂತ್ರದ, (ಕು)ಯುಕ್ತಿಯ, ಕಪಟೋಪಾಯದ (A s. enemy). **Súbtly** (ಕ್ರಿ. ವಿ.); **Súbtlety** (ನಾ.) (ಗುಣವಾಚಕಾರ್ಥಗಳಲ್ಲಿ) ; ಅತಿಸೂಕ್ಷ್ಮ ತರ್ಕ, ನವಿರು ಭೇದ.

Subtráct ಸಬ್‌ಟ್ರ್ಯಾಕ್ಟ್ (ಕ್ರಿ. ಸಕ.) ಕಳೆ, ತೆಗೆ, ವ್ಯವಕಲನ ಮಾಡು (*From* ಉಪ. ದೊಡನೆ). **Subtráction** —ಕ್‌ಷನ್ (ನಾ.) ಕಳೆತ, ವ್ಯವಕಲನ. **Subtráctive** (ಗು.) ; **Súbtrahend** (ನಾ.) (ವ್ಯವಕಲನದ ಲೆಕ್ಕದಲ್ಲಿ) ಕಳೆಯಬೇಕಾದ ಸಂಖ್ಯೆ, ಋಣ ಸಂಖ್ಯೆ ; ಕಳೆಯಬೇಕಾದ್ದು.

Súbtrahend. Subtract ನೋಡಿ.

Súbulate ಸ್ಯೂಬ್ಯುಲೆಟ್ (ಗು.), **Súbuliform** ಸ್ಯೂಬ್ಯುಲಿಫಾರ್‌ಮ್ (ಗು.) (ಸ. ವಿ., ಪ್ರಾ. ವಿ.) ದಬ್ಬಳದಾಕಾರದ.

Súburb ಸಬರ್ಬ್ (ನಾ.) ನಗರದ ಹೊರ—ವಲಯ, ಪ್ರಾಂತ ; ಉಪನಗರ, ಶಾಖಾ ನಗರ [The suburbs ಹೊರಗೇರಿ(ಗಳು), ಹೊರವಲಯ] . **Subúrban** (ಗು.)

Subvéntion ಸಬ್‌ವೆನ್ಷನ್ (ನಾ.) ದ್ರವ್ಯ ಸಹಾಯ, ಸಹಾಯದ್ರವ್ಯ, ಕೊಡುಗೆ.

Subvért ಸಬ್‌ವರ್ಟ್ (ಕ್ರಿ. ಸಕ.) (ಧರ್ಮ, ದೊರೆತನ, ರಾಜ್ಯಾಂಗ, ತತ್ತ್ವ, ನೀತಿ, ಮೊ. ನ್ನು) ತಲೆಕೆಳಗು ಮಾಡು, ಬುಡಮೇಲು ಮಾಡು, ಉರುಳಿಸು. **Subvérsion** (ನಾ.) ; **Subvérsive** (ಗು.)

Suc-. Sub- ನೋಡಿ.

Succádes ಸಕೇಡ್ಸ್ (ನಾ., ಬ. ವ.) (ವ್ಯಾಪಾರದ ಮಾತು) ಹಣ್ಣಿನ ಮುರಬ್ಬ, ಮುರಬ್ಬ ಹಣ್ಣುಗಳು.

Succedáneum ಸಕ್ಸಿಡೇನಿ(ನೆ)ಯಂ (ನಾ. ; ಬ. ವ. -ea) ಪ್ರತಿ, ಬದಲಿ ; (ವಿರ. ಪ್ರ.) (ನೆಚ್ಚಿಕೊಂಡಿರುವ ವಸ್ತು, ಅಥವಾ ಮನುಷ್ಯ ಒದಗದಿದ್ದರೆ ಆಶ್ರಯಿಸುವ) ಬದಲಿ—ವಸ್ತು, ಮನುಷ್ಯ ; ಕೈಗಾವಲು—ವಸ್ತು, ಮನುಷ್ಯ. **Succedáneous** (ಗು.)

Succeéd ಸಕ್ಸೀಡ್ (ಕ್ರಿ.) (ಹಿಂದೆ ಇದ್ದ ಇನ್ನೊಂದರ, ಇನ್ನೊಬ್ಬರ) ಸ್ಥಳ ತೆಗೆದುಕೊ, ಸ್ಥಳಕ್ಕೆ ಬರು ; ತರುವಾಯ, ಆಮೇಲೆ, —ಬರು, ಸಂಭವಿಸು ; ಪರಿಣಾಮವಾಗಿ —ಬರು, ಆಗು ; ಹಿಂಬಾಲಿಸು ; (ಅಧಿಕಾರ, ಪದವಿ, ಆಸ್ತಿ, ಮೊ. ಗಳಿಗೆ) (ಕಾಲಕ್ರಮದಲ್ಲಿ) ಬರು, ಉತ್ತರಾಧಿಕಾರಿಯಾಗು (Day succeeds day *or* to day ದಿನಗಳು ಒಂದನ್ನೊಂದು ಹಿಂಬಾಲಿಸಿ ಬರುತ್ತವೆ. Succeeding ages will reverence his memory ಮುಂದಿನ ತಲೆಮಾರುಗಳವರು ಅವನನ್ನು ಗೌರವದಿಂದ ಸ್ಮರಿಸುತ್ತಾರೆ. Elizabeth succeeded Mary, succeeded to the throne, succeeded ಮೇರಿಯ ತರುವಾಯ ಎಲಿಸಬೆತ್ ಪಟ್ಟಕ್ಕೆ ಬಂದಳು). ಗೆಲ್ಲು, ಜಯ ಹೊಂದು, ಸಾಧಿಸು ; ವಿಜಯಿ, ಯಶಸ್ವಿ, —ಆಗು ; ತೇರ್ಗಡೆ—ಹೊಂದು, ಆಗು ; ಕೃತಕೃತ್ಯನಾಗು ; ಏಳಿಗೆಗೆ ಬರು ; ಅಭಿವೃದ್ಧಿ ಹೊಂದು ; (ಯೋಜನೆ, ಮೊ. ವು) ಕೈಗೂಡು, ನೆರವೇರು, ಫಲಿಸು, ಸಿದ್ಧಿಸು. **Succés d'estime** (F) ಸಕ್ಸೆ ಡೆಸ್ಟೀಮ್ (ನಾ.) ನಾಟಕ, ಕೃತಿ, ಮೊ. ಗಳಿಗೆ ಮೆಚ್ಚಿಕೆಗಿಂತ ಹೆಚ್ಚಾಗಿ ಮರ್ಯಾದೆಗೆ ಕೊಟ್ಟ ಸ್ವಾಗತ: ಗೌರವ ಸ್ವಾಗತ. **Succéss** ಸಕ್ಸೆಸ್ (ನಾ.) (ವಿರ. ಪ್ರ.) ಫಲ, ಪರಿಣಾಮ (With good *or* bad s.) ; ಅನುಕೂಲ ಫಲ ; ಉದ್ದೇಶ ಸಾಧನೆ ; ಫಲ, ಕಾರ್ಯ, —ಸಿದ್ಧಿ ; ಸಿದ್ಧಿ, ಸಾಫಲ್ಯ, ಕೃತಕೃತ್ಯತೆ, ಜಯ, ಗೆಲವು, ತೇರ್ಗಡೆ ; ಐಶ್ವರ್ಯ, ಕೀರ್ತಿ, ಪದವಿ, —ಸಂಪಾದನೆ ; ಅಭ್ಯುದಯ, ಏಳಿಗೆ ; ಕೈಗೂಡಿಕೆ, ನೆರವೇರಿಕೆ (Have inquired for it without s. ಅದಕ್ಕಾಗಿ ವಿಚಾರಿಸಿದ್ದು ನಿಷ್ಫಲವಾಯಿತು ; ಅದಕ್ಕೆ ನಿಷ್ಫಲವಾಗಿ ವಿಚಾರಿಸಿದೆನು. Nothing succeeds like s. ಜಯದಂಥ ಜಯ ಸಾಧಕ ಮತ್ತೊಂದಿಲ್ಲ ; ಒಂದು ಜಯ ಹೆಚ್ಚಿನ ಜಯಗಳನ್ನು ತಂದುಕೊಡುತ್ತದೆ). ಯಶಸ್ವಿ, ಜಯಶಾಲಿ(ಯಾದ ವ್ಯಕ್ತಿ, ವಿಷಯ) (Was a great s. as a politician. The experiment is a s. ಆ ಪ್ರಯೋಗ ಯಶಸ್ವಿಯಾಯಿತು, ಸಫಲವಾಗಿದೆ). **Succéssful** (ಗು.) ; **Succéssfully** (ಕ್ರಿ. ವಿ.) ; **Succéssion** (ನಾ.) ಅನುಕ್ರಮ, ಅನುಪೂರ್ವಿ, ಪರಿವಿಡಿ (ಮು., In s. ಅನುಕ್ರಮವಾಗಿ, ಒಂದಾದಮೇಲೊಂದರಂತೆ) ; ಶ್ರೇಣಿ, ಪರಂಪರೆ, ಸಾಲು (A s. of disasters) ; ಉತ್ತರಾಧಿಕಾರ, ಹಕ್ಕುದಾರಿ ; ಉತ್ತರಾಧಿಕಾರಿಗಳ, ಹಕ್ಕುದಾರರ, —ಅನುಕ್ರಮ ; ಅನುಕ್ರಮ ಉತ್ತರಾಧಿಕಾರಿಗಳು [Is second in s. ; Laws regulating s.; In s. to ಉತ್ತರಾಧಿಕಾರಿಯಾಗಿ. To him & his s. ಅವನಿಗೂ ಅವನ ಉತ್ತರಾಧಿಕಾರಿಗಳಿಗೂ. Apostolic s. (ಕ್ರೈಸ್ತ ಪ್ರವರ್ತನಾಚಾರ್ಯರಿಂದ ಮೊದಲಾಗಿ ಬಿಷಪ್ಪುಗಳ ಮೂಲಕ ಅವಿಚ್ಛಿನ್ನವಾಗಿ ನಡೆದು ಕೊಂಡುಬಂದಿರುವ) ಧರ್ಮಾಧಿಕಾರ ಪರಂಪರೆ. Law of s. ಉತ್ತರಾಧಿಕಾರದ ಕಾನೂನು. S. duties ಉತ್ತರಾಧಿಕಾರಿಗಳು ತಾವು ಪಡೆದ ಆಸ್ತಿಯ ಮೇಲೆ ಕೊಡಬೇಕಾದ ತೆರಿಗೆ: ಉತ್ತರಾಧಿಕಾರದ ತೆರಿಗೆ. The S. States ಪೂರ್ವದ ಆಸ್ಟ್ರಿಯ-ಹಂಗರಿ ರಾಜ್ಯ ಒಡೆದು ಏರ್ಪಟ್ಟ ಸಂಸ್ಥಾನಗಳು (ಜೆಕೊಸ್ಲೊವಾಕಿಯ, ಯೂಗೋಸ್ಲಾವಿಯ, ರುಮೇನಿಯ, ಪೋಲೆಂಡ್, ಆಸ್ಟ್ರಿಯ ಮತ್ತು ಹಂಗರಿ)] . (ಜೀ. ವಿ.) (ವಂಶಗಳ ಬೆಳವಣಿಗೆಯಲ್ಲಿ) ವಂಶಾನುಕ್ರಮ. **Succéssional** (ಗು.) ; **Succéssive** (ಗು.) ಅನುಕ್ರಮದ, ಒಂದರ ಹಿಂದೊಂದು ಬರುವ, ಅನುಗೂಡಿ ಬರುವ, ಪರಂಪರೆಯಾದ, ಎಡೆಬಿಡದ. **Succéssively** (ಕ್ರಿ. ವಿ.) ; **Succéssor** (ನಾ.) ತರುವಾಯದವನು, ತರುವಾಯದ್ದು ; ಮುಂದಿನವನು, ಮುಂದಿನದು ; ಉತ್ತರಾಧಿಕಾರಿ (*To, of* ಉಪ. ದೊಡನೆ)

Succéntor ಸಕ್ಸೆಂಟರ್ (ನಾ.) (ಕ್ರೈಸ್ತ ಆರಾಧನ ಮಂದಿರದ) ಗಾಯಕ ವೃಂದದ ಮುಖಂಡನ ಸಹಾಯಕ.

Succés d'estime, Succéss, etc., Succéssion, etc. Succeed ನೋಡಿ.

Succínct ಸಕ್ಸಿಂಕ್ಟ್ (ಗು.) ಸ್ವಲ್ಪ ಮಾತುಗಳಲ್ಲಿ, ಸಂಗ್ರಹವಾಗಿ, —ತಿಳಿಸಿದ ; ಅಡಕವಾದ, ಬಿಗಿಯಾದ, ಸಂಕ್ಷೇಪವಾದ. **Succínctly** (ಕ್ರಿ. ವಿ.) ; **Succínctness** (ನಾ.)

Súccory ಸಕರಿ (ನಾ.) =Chicory.

Súccour ಸಕರ್ (ಕ್ರಿ. ಸಕ., ನಾ.) (ಅಪಾಯದಲ್ಲಿ ಅಥವಾ ಕಷ್ಟದಲ್ಲಿ ಇರುವವನಿಗೆ) ಸಹಾಯ, ನೆರವು, ಒತ್ತಾಸೆ (—ಕೊಡು, ಆಗು) ; (ಬ. ವ., ಪ್ರಾಚೀ. ಪ್ರ.) ಸಹಾಯಸೈನ್ಯ ದಳಗಳು, ಸಹಾಯಕ ದಳಗಳು. **Súccourless** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Súccuba ಸಕ್ಯುಬ, **-bus** —ಬಸ್ (ನಾ., ಬ. ವ. -bae —ಬೀ, -bi —ಬೈ) ನಿದ್ರಿಸುತ್ತಿರುವ ಗಂಡಸರೊಡನೆ ಸಂಭೋಗಮಾಡುವ ಹೆಣ್ಣುದೆವ್ವ : ಸ್ವಪ್ನಮೋಹಿನಿ. ದೆವ್ವ, ಪಿಶಾಚಿ. ಹಾದರಗಿತ್ತಿ, ಕಚ್ಚೆ ಹರಕಿ.

Súcculent ಸಕ್ಯುಲೆಂಟ್ (ಗು.) ರಸವುಳ್ಳ, ರಸವತ್ತಾದ (ರೂಪ. ನಹ) ; (ಸ. ವಿ.) ದಪ್ಪ ಮೆತು ತಿರುಳಿನ (—ಎಲೆಗಳುಳ್ಳ, ಕಾಂಡವುಳ್ಳ) ; ಮಾಂಸಲ. **Súcculently** (ಕ್ರಿ. ವಿ.) ; **Súcculence** (ನಾ.)

Succúmb ಸಕಂ (ಕ್ರಿ. ಅಕ.) ಒಳಗಾಗು, ವಶವಾಗು ; ಸೋತು ಹೋಗು ; ತುತ್ತಾಗು ; ಸಾಯಿ, ಸತ್ತುಹೋಗು ; ಬಲಿ—ಬೀಳು, ಆಗು (S. to one's enemies, superior numbers, grief, temptation)

Succúrsal ಸಕರ್ಸಲ್ (ಗು.) (ದೂರದಲ್ಲಿರುವ ಭಕ್ತರ ಅನುಕೂಲಕ್ಕಾಗಿ ಮಾಡಿರುವ ಕ್ರೈಸ್ತ ಆರಾಧನ ಮಂದಿರದ ವಿಷಯದಲ್ಲಿ) ಅಧೀನ, ಶಾಖೆ ಯಾದ.

Such ಸಚ್ (ಗು., ಸ. ನಾ.) ಅಂಥ, ಇಂಥ, ಅಷ್ಟು, ಇಷ್ಟು, ಹಾಗೆ, ಹೀಗೆ [S. people, people s., as these ಇಂಥ ಇವರಂಥ, ಜನರು. S. beauty as yours ನಿನ್ನದರಂಥ ಚೆಲುವು. S. as ಅಂಥ. (S. a scarlet as makes the eyes ache ಕಣ್ಣಿಗೆ ಬೇನೆಯಾಗು ವಂಥ ಕಡುಗೆಂಪು). Is s. as to make one despair ನಿರಾಶೆ ಗೊಳಿಸುವಂಥದಾಗಿದೆ. Had s. a fright that she hardly survived it ಅವಳಿಗೆ ಮತ್ತೆ ಚೇತರಿಸಿಕೊಳ್ಳಲಾರದಷ್ಟು ಭೀತಿ ಕೊಡೆಯಿತು. Long may he continue s.! ಅವನು ಹಾಗೆಯೇ ದೀರ್ಘಕಾಲ ಬಾಳಲಿ! S. horrid language ಅಂಥ ಘೋರ ಭಾಷೆ. Was it s. long time ago? ಅಷ್ಟು ಹಿಂದೆಯೆ? S. master s. servant ಎಂಥ ಯಜಮಾನನೋ ಅಂಥ ಸೇವಕ ; ದಣಿಯಂಥ ಆಳು. (ನ್ಯಾ. ಶಾ. ದ ಅಥವಾ ಸಂಪ್ರದಾಯದ ಶೈಲಿಯಲ್ಲಿ) Whoever shall make s. return falsely ಯಾರು ಮೇಲೆ ಹೇಳಿದಂಥ ಸುಳ್ಳು ಲೆಕ್ಕವನ್ನು ಕೊಡುವರೊ ಅವರು. We have had s. a sport! ನಮಗೆ ಎಂಥ, ಎಷ್ಟು, ವಿನೋದವಾಯಿತು! ನಮಗೆ ಭಾರಿ ವಿನೋದವಾಯಿತು. There was s. a draught, it is no wonder he caught cold ಎಂಥ ಗಾಳಿ ಇತ್ತು (ಅಂದರೆ), ಅವನಿಗೆ ನೆಗಡಿ ಹಿಡಿದದ್ದು ಆಶ್ಚರ್ಯವೇನಲ್ಲ. S. an one, S. a one, (ಪ್ರಾಚೀ. ಪ್ರ.) S.-and-s. a person ಅಂಥವನು(ಳು) ; ಅಂಥ, ಆ, —ವ್ಯಕ್ತಿ. S.-&-s. results will follow s.-&-s. causes ಇಂಥಿಂಥ ಕಾರಣಗಳಿಂದ ಇಂಥಿಂಥ ಪರಿಣಾಮಗಳಾಗುತ್ತವೆ]. (ಸ. ನಾ.) (ಮಾಡಿದ ಕಾರ್ಯ, ಮೊ. ನ್ನು ಸೂಚಿಸುವಲ್ಲಿ) ಅದು, ಹೇಳಿದ್ದು (I may have offended, but s. was not my intention ನಾನು ಮನಸ್ಸು ನೋಯಿಸಿರಬಹುದು, ಆದರೆ ಹಾಗೆ ಮಾಡುವುದು ನನ್ನ ಉದ್ದೇಶವಾಗಿರಲಿಲ್ಲ) ; [S. as (ಮು., ಪ್ರಾಚೀ. ಪ್ರ., ಕಾವ್ಯ ಅಥವಾ ಅಲಂ.) ಅಂಥವರು, ಅಂಥದು (S. as sit in darkness ಕತ್ತಲೆಯಲ್ಲಿ ಕುಳಿತುಕೊಳ್ಳುವಂಥವರು). As s. ಹೇಳಿದಂಥ—ಸ್ಥಿತಿಯಲ್ಲಿ, ಅಧಿಕಾರದಲ್ಲಿ, ಸ್ವರೂಪದಲ್ಲಿ. All s. ಅಂಥವರು, ಅಂಥವರೆಲ್ಲ (So perish all s.!)]. ಅಂಥವು (=Suchlike ; ಮು., ಗ್ರಾಮ್ಯ) (Theatres, balls & s. *or* suchlike) ; (ಗ್ರಾಮ್ಯ, ವ್ಯಾಪಾರ ಪ್ರ.) ಮೇಲೆ ಹೇಳಿದುದು, ಮೇಲೆ ಹೇಳಿದುವು, ಅದು, ಅವು (Those who leave parcels in the train cannot expect to recover s. ರೈಲಿನಲ್ಲಿ ಸಾಮಾನುಗಳನ್ನು ಬಿಟ್ಟುಹೋಗುವವರು ಅವನ್ನು ಮತ್ತೆ ಪಡೆಯುವುದಾಗಿ ನಿರೀಕ್ಷಿಸರಾಗದು). **Súchlike** (ಗು., ಸ. ನಾ.) ಅಂಥ(ವು)

Suck ಸಕ್ (ಕ್ರಿ., ನಾ.) (ಹಾಲು, ಮೊ. ದ್ರವವನ್ನು) ಬಾಯೊಳಕ್ಕೆ ಎಳೆದುಕೊ, ಹೀರು, ಹೀರಿಕೊ, ಸೇದು, ಸೇದಿಕೊ (ರೂಪ. ನಹ) [S. in knowledge ಜ್ಞಾನ ಹೀರಿಕೊ. S. advantage out of —ಇಂದ ಪೂರ್ತಿ ಪ್ರಯೋಜನಪಡೆ. S. dry ಹೀರಿ—ಬರಿದುಮಾಡು, ಬತ್ತಿಸು. S. the breast of ಮೊಲೆ—ಕುಡಿ, ಉಣ್ಣು. The mother whom he sucked ಅವನು ಮೊಲೆ ಕುಡಿದ ತಾಯಿ. Sucked orange ಸಾರವನ್ನೆಲ್ಲ ತೆಗೆದ, ನಿಸ್ಸಾರ, —ವಸ್ತು. S. one's brains ಸ್ವಪ್ರಯೋಜನಕ್ಕಾಗಿ ಒಬ್ಬನ ಜ್ಞಾನಫಲವನ್ನು, ಬುದ್ಧಿಫಲವನ್ನು, ಹೀರಿಕೊ]. ಚೀಪು, ಚಪ್ಪರಿಸು (S. sweets, one's teeth). [S. in *or* up (ಹೀರು ಪದಾರ್ಥದ ವಿಷಯದಲ್ಲಿ) ಹೀರಿಕೊ. S. in (ನೀರ ಸುಳಿ, ಮೊ. ಗಳ ವಿಷಯದಲ್ಲಿ) ಒಳಕ್ಕೆ ಎಳೆದುಕೊ, ನುಂಗಿಹಾಕು. Sat sucking at his pipe ಚುಂಗಾಣಿ ಸೇದುತ್ತಾ ಕುಳಿತನು. Pump sucks ಪಂಪು ಹೀರುವ ಸದ್ದು (ಗುಳ ಗುಳ ಸದ್ದು) ಮಾಡುತ್ತದೆ. Sucking-disk =ಹೀರುತಟ್ಟೆ, ಚೋಷಕ (Sucker ನೋಡಿ). S. up to (ಪಾಠಶಾಲಾ ಅಸಂ.) ಒಲೈಸು, ಅನುನಯಿಸು, ಆಜೂಜು ವಾರಿ ಮಾಡು. S.-up (ನಾ.) ದಾಸನಂತೆ ಒಲೈಸುವವನು]. ಮೊಲೆ, ಕೆಚ್ಚಲು, —ಕುಡಿ, ಉಣ್ಣು ; (ವರ್ತಮಾನ ಕೃ.) ಮೊಲೆ, ಕೆಚ್ಚಲು, —ಕುಡಿಯುತ್ತಿರುವ; ಮೊಲೆ, ಎದೆಹಾಲು, —ಬಿಡಿಸಿಲ್ಲದ (Sucking child ಹಾಲುಹಸುಳೆ) ; (ರೂಪ.) ಅನನುಭವಿಯಾದ, ಹೊಸಬನಾದ, ಹಸುಗೂಸಾದ (A sucking barrister, saint). (ನಾ.) ಮೊಲೆ ಕುಡಿಯುವುದು, ಸ್ತನ್ಯಪಾನ (Give s. ಮೊಲೆ—ಕೊಡು, ಊಡಿಸು ; ಕೆಚ್ಚಲು ಉಣ್ಣಿಸು) ; ಹೀರಿಕೆ, ಸೇದಿಕೆ, ಚೀಪು(ವುದು), ಚಪ್ಪರಿಕೆ (Take a s. at it) ; ಮದ್ಯದ ಒಂದು ಹೀರಿಕೆ, ಗುಟುಕು (*Of* ಉಪ. ದೊಡನೆ) ; (ಪಾಠಶಾಲಾ ಅಸಂ., ಬ. ವ. ದಲ್ಲಿ) ಮಿಠಾಯಿ ; (ಪಾಠಶಾಲಾ ಅಸಂ.) ಗಸ್ತು, ನಗೆಗೇಡು, ಆಶಾಭಂಗ [What a s.!, sucks! (ಛಲವಿಸಿಯಲ್ಲಿದ್ದವನು ಸೋತುಹೋದಾಗ ಹಾಸ್ಯ ಮಾಡುವಲ್ಲಿ) ಎಂಥ ಗಸ್ತು! ಬೇಸ್ತು!]. **Súcker** (ನಾ., ಕ್ರಿ.) ಮೊಲೆ (ಕುಡಿಯುವ) ಮಗು ; ಹಾಲುಹಸುಳೆ ; ಕೆಚ್ಚಲು (ಉಣ್ಣುವ) —ಕರು, ಮರಿ (ಮು., ಹಂದಿ ಮರಿ, ತಿಮಿಂಗಿಲ ಮರಿ) ; ಆಹಾರವನ್ನು ಹೀರುವ, ಹೀರುತಟ್ಟೆಯಂಗವುಳ್ಳ, —ಹಲವು ಬಗೆಯ ಮೀನು : ಹೀರು ಮೀನು ; ಹೀರು ಪಂಪಿನ ಅದುಮಣೆ ; ಹೀರು, ಸೇದು, —ನಳಿಕೆ ; ಹೀರಿಗೆ, ಸೇದಿಗೆ ; ಕೆಲವು ಪ್ರಾಣಿಗಳಲ್ಲಿ ಅಂಗವಾಗಿ ಇರುವ ಅಥವಾ ಕೆಲವು ಯಂತ್ರೋಪಕರಣಗಳಲ್ಲಿ ರಬ್ಬರು, ಮೊ. ಗಳಿಂದ ಮಾಡಿ ಹೊಂದಿ ಸಿರುವ, ಇನ್ನೊಂದರಮೇಲೆ ಇಟ್ಟಾಗ ಹೀರಿಕೆಯಿಂದಲೂ ಗಾಳಿಯ ಒತ್ತಡದಿಂದಲೂ ಅದನ್ನು ಕಚ್ಚಿಕೊಳ್ಳುವ, ಚಪ್ಪಟೆಯಾದ ಅಥವಾ ಬಟ್ಟಲನಾಕಾರದ ಅಂಗ: ಹೀರು—ತಟ್ಟೆ, ಅಂಗ ; ಚೋಷಕ (=Sucking-disk); (ಸ. ವಿ.) ನೆಲದೊಳಗಿನ ಬುಡದಿಂದ ಅಥವಾ ಪ್ರಧಾನ ಕಾಂಡದಿಂದ ದೂರವಿರುವ ಬೇರಿನಿಂದ ಅಥವಾ ಪರ್ವ ಸ್ಥಾನದಿಂದ ಹೊರಟ, ಅಥವಾ ಬುಡದಿಂದಾಗಲಿ ಕೊಂಬೆಯಿಂದಾಗಲಿ ಸ್ವಭಾವ ವ್ಯತಿರಿಕ್ತವಾಗಿ ಹೊರಟ ಕುಡಿ : ಬೇರು ಸೊಸಿ, ಕಂದು. (ಕ್ರಿ.) ಬೇರು ಸೊಸಿಗಳನ್ನು ತೆಗೆದುಹಾಕು ; ಬೇರು ಸೊಸಿಗಳೊಡೆ. **-súcker** (ನಾ.) [Blood-s., Goat-s. (ಆಯಾ ಪದ ನೋಡಿ)].

Súckle (ಕ್ರಿ. ಸಕ.) ಮೊಲೆ —ಕೊಡು, ಊಡಿಸು, ಉಣ್ಣಿಸು.

Súckling (ನಾ.) ಮೊಲೆ (ಕುಡಿಯುವ) ಮಗು ; ಹಾಲುಹಸುಳೆ ; ಕೆಚ್ಚಲು—ಕರು, ಮರಿ (Babes & sucklings ಹಸುಗೂಸುಗಳು, ಅನನುಭವಿಗಳು).

Súction ಸಕ್‌ಷನ್ (ನಾ.) ಹೀರಿಕೆ ; ಸೇದಿಕೆ ; ಹೊರಗಣ ವಾಯುವಿನ ಒತ್ತಡದಿಂದ ದ್ರವ, ಮೊ. ನ್ನು ತೆರಪಾದ ಸ್ಥಳಕ್ಕೆ ಒಳನುಗ್ಗಿಸುವುದಕ್ಕಾಗಲಿ ಮೇಲ್ಮೈಗಳನ್ನು ಹೀರಿಕೆಯಿಂದ ಪರಸ್ಪರ ಕಚ್ಚಿಸುವುದಕ್ಕಾಗಲಿ ಒಳಗಿನ ವಾಯು, ಮೊ. ನ್ನು ತೆಗೆದು ಹಾಕುವುದು : ಚೋಷಣ. S.-chamber, -pipe (ಹೀರು ಪಂಪಿನಲ್ಲಿಯ) ಚೋಷಣ—ಕೋಷ್ಠ, ನಾಳ. S.-fan ಧಾನ್ಯದಿಂದ ಹೊಟ್ಟು, ಮೊ. ನ್ನು ಹೀರಿ ತೆಗೆಯುವ ತೂರು ಯಂತ್ರ : ಹೀರು ತೂರಿಗೆ. S.-plate (ಕೃತಕ ಹಲ್ಲುಕಟ್ಟಡದ ಮೇಲುವರಿಸೆಯನ್ನು ಅಂಗುಳಿಗೆ ಒತ್ತಿ ಹಿಡಿಯುವ) ಹೀರು ಬಿಲ್ಲೆ, ಚೋಷಣಫಲಕ. S.-pump ಹೀರು, ಸೇದು, —ಪಂಪು.

Suctórial ಸಕ್ಟೋ(ಅ)ರಿಯಲ್ (ಗು.) (ಪ್ರಾ. ವಿ.) ಹೀರುವ(ದಕ್ಕೆ ತಕ್ಕ), ಚೋಷಕ ; (ಊಡಿಸುವುದಕ್ಕೆ ಅಥವಾ ಕಚ್ಚಿಸು ವುದಕ್ಕೆ) ಹೀರುತಟ್ಟೆಯುಳ್ಳ, ಚೋಷಕವುಳ್ಳ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Súcker, Súckle, etc. **Suck** ನೋಡಿ.

Súcrose ಸ್ಯೂಕ್ರೋಸ್ (ನಾ.) ಕಬ್ಬಿನ ಸಕ್ಕರೆ(ಯಂಥ ಸಕ್ಕರೆ)

Súction, Suctórial. **Suck** ನೋಡಿ.

Sudanése = Soudanese.

Sudárium ಸ್ಯುಡೇ(ಅ)ರಿಯಂ (ನಾ. ; ಬ. ವ. -ria —ರಿಯ) ಶಿಲುಬೆಯನ್ನು ಹೊತ್ತುಕೊಂಡು ಬೆವರು ಬಸಿಯುತ್ತಿದ್ದ ಕ್ರಿಸ್ತನ ಮುಖವನ್ನು ಸಂತ ವೆರಾನಿಕಳು ಕೈಚೌಕದಿಂದ ಒರಸಿದಾಗ ಕ್ರಿಸ್ತನ ಮುಖವು ಅಲೌಕಿಕ ರೀತಿಯಲ್ಲಿ ಮುದ್ರಿತವಾಯಿತೆಂದು ನಂಬಿರುವ ಸಂತ ವೆರಾನಿಕಳ ಚೌಕ : ಕ್ರಿಸ್ತಮುಖಾಂಕಿತ ಚೌಕ ; ಕ್ರಿಸ್ತನ ಅಲೌಕಿಕ ಚಿತ್ರ ; ಕ್ರಿಸ್ತನ ತಲೆಯಮೇಲಿನ ಚೌಕ. ಕೈಚೌಕ ; ಬೆವರು ಒರಸಿಕೊಳ್ಳುವ ಚೌಕ. = Sudatorium.

Sudatórium ಸ್ಯೂಡಟೋ(ಅ)ರಿಯಂ (ನಾ.) (ಬೆವರು ಬರಿಸುವುದಕ್ಕಾಗಿ ಮಾಡಿರುವ) ಬಿಸಿ ಗಾಳಿಯ ಸ್ನಾನಗೃಹ, ಬೆವರುಮನೆ, ಸ್ವೇದಗೃಹ. **Súdatory** ಸ್ಯೂಡಟರಿ (ಗು., ನಾ.) ಬೆವರು ಬರಿಸುವ (ಔಷಧ), ಸ್ವೇದಕ, ಸ್ವೇದಕಾರಿ. ಬೆವರುಮನೆ, ಸ್ವೇದಗೃಹ.

Sudd ಸಡ್ (ನಾ.) ಬಿಳಿಯ ನೈಲ್ ನದಿಯಲ್ಲಿ (ನೌಕಾ ಸಂಚಾರಕ್ಕೆ ತಡೆಯಾಗಿ) ತೇಲಾಡುತ್ತಿರುವ ಸಸ್ಯ, ಮರ, ಹುಲ್ಲು, ಮೊ. ವು.

Súdden ಸಡನ್ (ಗು., ನಾ.) ಇದ್ದಕ್ಕಿದ್ದಹಾಗೆ, ಥಟ್ಟನೆ, —ನಡೆದ, ಸಂಭವಿಸಿದ; ಅಕಸ್ಮಾತ್ತಾದ, ಅಪರೀಕ್ಷಿತ, ಥಟ್ಟನೆಯ, ಹಠಾತ್ತಾದ, ಏಕಾಏಕಿಯ, ತರಾತುರಿಯ, ಅತಿ ತೀವ್ರವಾದ (S. death, need, fear ಆಕಸ್ಮಿಕ ಮರಣ, ಇದ್ದಕ್ಕಿದ್ದಹಾಗೆ ಒದಗಿದ ಆವಶ್ಯಕತೆ, ಥಟ್ಟನೆಯ ಭಯ. A s. bend in the road. Is very s. in his movements ಅವನ ಚಲನ ವಲನಗಳು ಹಠಾತ್ತಾಗಿ ನಡೆಯುತ್ತವೆ). (ನಾ.) Of a s., On a s., (ವಿರ. ಪ್ರ.) On the s. ಇದ್ದಕ್ಕಿದ್ದಹಾಗೆ, ಹಠಾತ್ತಾಗಿ. **Súddenly** (ಕ್ರಿ. ವಿ.) ; **Súddenness** (ನಾ.)

Sudoríferous ಸ್ಯೂಡೊರಿಫೆರಸ್ (ಗು.) (ಗ್ರಂಥಿಗಳ ವಿಷಯದಲ್ಲಿ) ಬೆವರನ್ನು ಉತ್ಪತ್ತಿಮಾಡುವ, ಸ್ವೇದಕ (The s. glands & vessels ಸ್ವೇದಗ್ರಂಥಿಗಳು ಮತ್ತು ನಾಳಗಳು). **Sudorífic** (ಗು., ನಾ.) ಬೆವರು ಬರಿಸುವ (ಔಷಧ) ; ಸ್ವೇದಕ.

Suds ಸಡ್ಸ್ (ನಾ. ; ಬ. ವ.) ಸಾಬೂನು (ನೀರಿನ) ನೊರೆ (ಸಾ., = Soap-s.)

Sue ಸ್ಯೂ (ಕ್ರಿ.) (ನ್ಯಾಯಸ್ಥಾನದಲ್ಲಿ) ದಾವಾ, ಮೊಕದ್ದಮೆ, ಕಟ್ಟಳೆ, —ಹಾಕು, ಮಾಡು ; (ಪರಿಹಾರಕ್ಕಾಗಿ, ಶಾಂತಿಗಾಗಿ ಅಥವಾ ಅನುಗ್ರಹಕ್ಕಾಗಿ) ಬೇಡು, ಕೇಳಿಕೊ, ಪ್ರಾರ್ಥಿಸು, ಅರ್ಜಿಹಾಕು, ಮನವಿಮಾಡಿಕೊ (*For* ಉಪ. ದೊಡನೆ); (ಹೆಣ್ಣನ್ನು) ಮದುವೆಯಾಗಲು ಕೇಳು, ಅನುನಯಿಸು (S. me & woo me ನನ್ನನ್ನು ಅನುನಯಿಸು ಮತ್ತು ಒಲಿಸಿಕೊ). S. out ನ್ಯಾಯಸ್ಥಾನಕ್ಕೆ ಮನವಿಮಾಡಿಕೊಂಡು (ಆಜ್ಞೆ, ಕ್ಷಮೆ, ಮೊ. ನ್ನು) ಪಡೆ. **Súable** (ಗು.) ; **Suabílity** (ನಾ.)

Suede ಸ್ವೇಡ್ (ನಾ.) ಹದಮಾಡಿಲ್ಲದ ಕುರಿಯ ಚರ್ಮ(ದಿಂದ ಮಾಡಿದ ಕೈಗವುಸು, ಜೋಡು, ಮೊ. ವು) (ಸಾ., ವಿಶೇಷಣ ಪ್ರ.)

Súet ಸ್ಯೂಇಟ್ (ನಾ.) (ದನ, ಕುರಿ, ಮೊ. ಗಳ ಸೊಂಟ ಭಾಗದ ಮತ್ತು ಮೂತ್ರಪಿಂಡಗಳ) ಗಟ್ಟಿ ಕೊಬ್ಬು, ಚರಬಿ, ನೆಣ. **Súety** (ಗು.)

Suf-. **Sub-** ನೋಡಿ.

Súffer ಸಫರ್ (ಕ್ರಿ.) (ನೋವು, ನಷ್ಟ, ದುಃಖ, ಸೋಲು, ಶಿಕ್ಷೆ, ಮೊ. ನ್ನು) ಪಡು, ಅನುಭವಿಸು ; (—ಗೆ) ಗುರಿಯಾಗು, ಈಡಾಗು, ಸಿಕ್ಕು ; (ನೋವಿನಿಂದ, ದುಃಖದಿಂದ) ನರಳು, ವ್ಯಥೆಪಡು, ಸಂತಪಿಸು ; ಗಾಸಿಗೊಳ್ಳು, ಹಾನಿಹೊಂದು (Was suffering from fever. Suffering mortals ನರಳುವ ಮರ್ತ್ಯರು, ದುಃಖಿಗಳಾದ ಮಾನವರು. Your reputation will s. ನಿನ್ನ ಕೀರ್ತಿಗೆ ಹಾನಿ ಬರುತ್ತದೆ. Trade is suffering from the war ಯುದ್ಧದಿಂದ ವ್ಯಾಪಾರಕ್ಕೆ ಹಾನಿ ತಟ್ಟಿದೆ) ; (ಮರಣ ದಂಡನೆಗೆ ಗುರಿಯಾದವನ ವಿಷಯದಲ್ಲಿ) ಗಲ್ಲಿಗೆ ಹಾಕಲ್ಪಡು, ಶಿರಚ್ಛೇದನ ಹೊಂದು (Was to suffer the next morning) ; ಅನುಮತಿಸು, ಅವಕಾಶಕೊಡು, ತಾಳಿಕೊ, ಸಹಿಸು (S. them to come ಅವರಿಗೆ ಬರಲು ಅನುಮತಿಕೊಡು, ಅವಕಾಶಕೊಡು). How can you s. him ? ಅವನನ್ನು ನೀನು ಹೇಗೆ ಸಹಿಸಬಲ್ಲೆ ?). **Súfferable** (ಗು.) ; **Súfferance** (ನಾ.) (ಪ್ರಾಚೀ. ಪ್ರ.) ನೋವು ಪಡುವುದು, ಕ್ರೌರ್ಯವನ್ನು ಸಹಿಸುವುದು ; ಕಷ್ಟ ಅನುಭವಿಸುವುದು (For s. is the badge of all our tribe). (ಆಕ್ಷೇಪಣೆಯೆತ್ತದಿರುವುದರಿಂದ ಸೂಚಿತವಾಗುವ) ಮೌನ ಸಮ್ಮತಿ, ಮೂಗೊಪ್ಪಿಗೆ, ಸ್ವೈರಣೆ (On s. ಮೌನಸಮ್ಮತಿಯ ಬಲದಮೇಲೆ ; ಸ್ವೈರಿಸಿಕೊಂಡಿರುವುದರಿಂದ). **Súfferer** (ನಾ.) ; **Súffering** (ನಾ.) ನೋವು, ಕಷ್ಟ (—ಪಡುವುದು); (ಅನೇಕ ವೇಳೆ ಬ. ವ. ದಲ್ಲಿ) ಪಾಡು, ಪೇಚಾಟ, ನರಳಾಟ.

Súfferance, Súffering. **Suffer** ನೋಡಿ.

Súffete ಸಫೀಟ್ (ನಾ.) ಪುರಾತನ ಕಾರ್ತೇಜಿನ (ಇಬ್ಬರು) ಮುಖ್ಯ ದಂಡಾಧಿಕಾರಿ(ಗಳಲ್ಲೊಬ್ಬ)

Suffíce ಸಫೈಸ್ (ಕ್ರಿ.) ಸಾಲು, ಸಾಕಾಗು (*To* do, *for* person or purpose) (Your word will s. ನಿನ್ನ ಮಾತೇ ಸಾಕು. S. it to say that —ಎಂದು ಹೇಳಿದರೆ ಸಾಕಾಗಿದೆ) ; ತೃಪ್ತಿಪಡಿಸು (Half-a-dozen sufficed him ಅರ್ಧ ಡಜನ್ ಅವನಿಗೆ ತೃಪ್ತಿಯಾಯಿತು, ಸಾಕಾಯಿತು). **Sufficingly** (ಕ್ರಿ. ವಿ.) ; **Sufficient** ಸಫಿಷೆಂಟ್ (ಗು., ನಾ.) ಸಾಲುವ, ಸಾಕಾಗುವ, ತಕ್ಕಷ್ಟು, ಸಾಕಷ್ಟು. (ಪ್ರಾಚೀ. ಪ್ರ.) ತಕ್ಕ, ಯೋಗ್ಯ, ಸಮರ್ಥ; = Self-s. (Self- ನೋಡಿ). (ನಾ.) ತೃಪ್ತಿಯಾಗುವಷ್ಟು, ಸಾಕಷ್ಟು,—ಮೊತ್ತ, ಪ್ರಮಾಣ (ಮು., enough ಎಂಬುದಕ್ಕೆ ಗ್ರಾಮ್ಯ ಪ್ರ.) (Have you had s. ?). **Sufficiently** (ಕ್ರಿ. ವಿ.) ; **Sufficience** ಸಫಿಷೆನ್ಸ್ (ನಾ.) (ಪ್ರಾಚೀ. ಪ್ರ.), **Sufficiency** —ಷೆನ್ಸಿ (ನಾ.) ಯೋಗ್ಯತೆ, ದಕ್ಷತೆ, ಸಾಮರ್ಥ್ಯ, ಅರ್ಹತೆ (ಪ್ರಾಚೀ. ಪ್ರ.) ; ಸಾಕಷ್ಟು, ತಕ್ಕಷ್ಟು, —ಪ್ರಮಾಣ, ಮೊತ್ತ (*Of* ಉಪ. ದೊಡನೆ ಸಹ) ; ತಕ್ಕ ಸಾಧನ ಸಂಪತ್ತಿ ; ಪರ್ಯಾಪ್ತಿ.

Suffícience, -cy, Suffícient. **Suffice** ನೋಡಿ.

Suffíx ಸಫಿಕ್ಸ್ (ಕ್ರಿ. ಸಕ.), **Súffix** (ನಾ.) ಪ್ರತ್ಯಯ (ಸೇರಿಸು, ಹಚ್ಚು)

Súffocate ಸಫೊಕೇಟ್ (ಕ್ರಿ.) ಉಸಿರು, ಶ್ವಾಸ, —ಸಿಕ್ಕಿಕೊ, ಕಟ್ಟಿಹೋಗು, ಕಟ್ಟಿಸು, ಕಟ್ಟಿಸಿ ಕೊಲ್ಲು ; ಶ್ವಾಸರೋಧಮಾಡು ; ಕೊರಲು ಬಿಗಿ(ಸು) (Suffocated by *or* with grief, excitement ದುಃಖದಿಂದ, ಉದ್ರೇಕದಿಂದ, —ಕೊರಲು ಬಿಗಿದು). **Súffocatingly** (ಕ್ರಿ. ವಿ.) ; **Suffocátion** (ನಾ.) ಉಸಿರು ಕಟ್ಟು(ವುದು), ಉಸಿರಡಚು, ಶ್ವಾಸರೋಧ.

Súffragan ಸಫ್ರಗನ್ (ಗು., ನಾ.) ಮುಖ್ಯ ಬಿಷಪ್ಪಿಗೆ ಸಹಾಯಕನಾಗಿದ್ದುಕೊಂಡು ಆತನ ಆಡಳಿತ ಪ್ರಾಂತದ ಒಂದು ಭಾಗದ ಮೇಲ್ವಿಚಾರಣೆ ನೋಡಿಕೊಳ್ಳುವ ದೀಕ್ಷಿತನಾದ ಬಿಷಪ್ಪು: ಸಹಾಯಕ ಬಿಷಪ್ಪು (= S. bishop) (S. see ಸಹಾಯಕ ಬಿಷಪ್ಪಿನ ಅಧಿಕಾರ —ಪ್ರಾಂತ, ಪೀಠ). **Súffraganship** (ನಾ.)

Súffrage ಸಫ್‌ರೆ(ರಿ)ಜ್ (ನಾ.) (ಅಭಿ)ಮತ, ವೋಟು ; (ಅಭಿ)ಮತದ ಮೂಲಕ ವ್ಯಕ್ತಪಡಿಸಿದ ಒಪ್ಪಿಗೆ, ಸಮ್ಮತಿ [The electors gave their suffrages for free trade ಚುನಾಯಕರು ನಿರುಪಾಧಿಕ ವ್ಯಾಪಾರಕ್ಕೆ ತಮ್ಮ ಮತ ಕೊಟ್ಟರು. (ರೂಪ.) The biplane has my s. ದ್ವಿಫಲಕ ವಿಮಾನಕ್ಕೆ ನನ್ನ ಒಪ್ಪಿಗೆಯಿದೆ] . (ರಾಜಕೀಯ ಚುನಾವಣೆಗಳಲ್ಲಿ) ಅಭಿಮತಾಧಿಕಾರ ; ವೋಟಿನ, ಚುನಾಯಿಸುವ, —ಹಕ್ಕು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[Manhood s. ಆಸ್ತಿ, ವೊ. ವು ಇರಬೇಕೆಂಬ ನಿರ್ಬಂಧವಿಲ್ಲದೆ ವಯಸ್ಕರಾದ ಎಲ್ಲ ಗಂಡಸರಿಗೂ ನೀಡಿದ ಅಭಿಮತಾಧಿಕಾರ : ವಯಸ್ಕ ಮತಾಧಿಕಾರ. Woman s. ವಯಸ್ಕರಾದ ಎಲ್ಲ ಹೆಂಗಸರಿಗೆ ಸಹ ಕೊಟ್ಟ ಅಭಿಮತಾಧಿಕಾರ : ಸ್ತ್ರೀ ಮತಾಧಿಕಾರ. Universal s. (ಗಂಡಸು, ಹೆಂಗಸು ಎಂಬ ಭೇದವಿಲ್ಲದೆ) ಎಲ್ಲ ವಯಸ್ಕರಿಗೂ ಕೊಟ್ಟ ಮತಾಧಿಕಾರ: ಸರ್ವಜನ ಮತಾಧಿಕಾರ]. (ಕ್ರೈಸ್ತ ವೈದಿಕ) (ಪ್ರಾರ್ಥನೆಯಲ್ಲಿ) ಪುರೋಹಿತನು ಹೇಳಿದ ಚರಣಕ್ಕೆ ಪ್ರತಿಯಾಗಿ ಭಕ್ತರು ಹೇಳುವ ಬಿನ್ನಹದ ಚರಣ: ಪ್ರತ್ಯುತ್ತರ ಸ್ತೋತ್ರ ಗೀತ. (ಪ್ರಾಚೀ. ಪ್ರ.) ಮತ್ತೊಬ್ಬರ ಪರವಾಗಿ (ಮು., ಮೃತರ ಆತ್ಮಗಳಿಗಾಗಿ) ಮಾಡಿದ ಪ್ರಾರ್ಥನೆ. **Suffragétte** ಸಫ್ರಜೆಟ್ (ನಾ.) (ಹಾಸ್ಯ ಪ್ರ.) ಸ್ತ್ರೀ ಮತಾಧಿಕಾರ ವಾದಿನಿ. **Súffragist** (ನಾ.) (ಮು., ಹೆಂಗಸರಿಗೂ ಚುನಾಯಿಸುವ ಹಕ್ಕು ಇರುವಂತೆ) ಅಭಿಮತಾಧಿಕಾರವನ್ನು ವಿಸ್ತರಿಸಬೇಕೆಂದು ವಾದಿಸುವವನು : (ಸ್ತ್ರೀಜನ) ಅಭಿಮತ ವಿಸ್ತಾರ ವಾದಿ.

Suffúse ಸಫ್ಯೂಸ್ (ಕ್ರಿ. ಸಕ.) (ಬಣ್ಣ, ತೇವ, ವೊ. ಗಳ ವಿಷಯದಲ್ಲಿ) (ಒಳಗಿಂದ ಉಕ್ಕಿಬಂದು) ಮೇಲೆಲ್ಲ ಹರಡು, ತುಂಬು ; ವ್ಯಾಪಿಸು (A blush suffused her cheeks). **Suffúsion** (ನಾ.)

Súfi ಸೂಫಿ, **Sófi** ಸೋಫಿ (ನಾ.) ಮುಸಲ್ಮಾನ ಅತೀಂದ್ರಿಯ ವಾದಿ, ಅನುಭವಿ: ಸೂಫಿ. **Súfic** (ಗು.) ; **Súfism** (ನಾ.)

Sug-. **Sub-** ನೋಡಿ.

Súgar ಷುಗರ್ (ನಾ.) ಸಕ್ಕರೆ [Cane, beet, maple, s. ಕಬ್ಬಿನ, ಬೀಟ್ ಸಸ್ಯದ, ಮೇಪಲ್ ಸಸ್ಯದ, —ಸಕ್ಕರೆ. Brown, white, powdered, s.; Castor[2], Loaf[1], Lump[1], s. (ಆಯಾ ಪದ ನೋಡಿ)] ; ಸಿಹಿ, ಸವಿ ; ಅಹಿತವಾದುದನ್ನು ಹಿತವಾಗುವಂತೆ ಮಾಡುವ ಉಪಾಯ ; ಸವಿನುಡಿ, ಮುಖಸ್ತುತಿ; (ರ. ವಿ.) [ಕರಗುವ, ಸಿಹಿ ರುಚಿಯ, ಹುಳಿ ಹಿಡಿಯುವ, ಅವುಗಳ ಸಂಯೋಜನಕ್ಕೆ ಅನುಗುಣವಾಗಿ ಗ್ಲೂಕೋಸ್ (ದ್ರಾಕ್ಷಿಯ ಸಕ್ಕರೆ)ಗಳೆಂದೂ ಸ್ಯಾಕರೋಸ್ (ಕಬ್ಬಿನ ಸಕ್ಕರೆ) ಗಳೆಂದೂ ವಿಂಗಡವಾಗುವ] ಹಲವು ಬಗೆಯ ಸಕ್ಕರೆ ಹಿಟ್ಟು, ಶರ್ಕರಪಿಷ್ಟ. **S.-basin** (ಬಡಿಸಿಕೊಳ್ಳುವುದಕ್ಕಾಗಿ ಮೇಜಿನಮೇಲೆ ಇಟ್ಟಿರುವ) ಸಕ್ಕರೆ —ಪಾತ್ರೆ, ಬಟ್ಟಲು. **S.-bean** ತಿಂಗಳು ಹುರುಳಿ, ವೊ. ಹಲವು ಬಗೆಯ ದ್ವಿದಳಧಾನ್ಯ : ಸಕ್ಕರೆ ಬೀನ್ಸು. **S.-beet** ಸಕ್ಕರೆ ತಯಾರಿಸುವ ಬೀಟ್ ಸಸ್ಯ : ಸಕ್ಕರೆ ಬೀಟು. **S.-bird** ಹೂವಿನ ಮಕರಂದ ಚೀಪುವ ಹಲವು ಬಗೆಯ ಹಕ್ಕಿ. **S.-candy** ಕಲ್ಲುಸಕ್ಕರೆ. **S.-cane** ಕಬ್ಬು. **S.-gum** ಸಿಹಿ ಎಲೆಗಳುಳ್ಳ, ಆಸ್ಟ್ರೇಲಿಯದ ಒಂದು ಗೋಂದು ಮರ; ಸಿಹಿ ಗೋಂದು ಮರ. **S.-house** ಕಚ್ಚಾ ಸಕ್ಕರೆ ತಯಾರಿಸುವ ಸ್ಥಳ ; ಸಕ್ಕರೆ ಕಾರಖಾನೆ. **S.-loaf** (Loaf[1] ನೋಡಿ). **S.-maple** ಸಕ್ಕರೆ ತಯಾರಿಸುವ ಮೇಪ್‌ಲ್ ಸಸ್ಯ : ಸಕ್ಕರೆ ಮೇಪ್‌ಲ್. **S.-mill** ಕಬ್ಬಿನ ಗಾಣ, ಆಲೆ. **S.-mite** ಕಚ್ಚಾ ಸಕ್ಕರೆಗೆ ಹತ್ತಿಕೊಳ್ಳುವ ಹುಳು : ಸಕ್ಕರೆ ಹುಳು. **S.-orchard** ಸಕ್ಕರೆ ಮೇಪ್‌ಲ್ ತೋಟ. **Súgarplum** ಸಕ್ಕರೆ ಮಿಠಾಯಿ, ಸಕ್ಕರೆ ಪಾಕದ ಗೋಲಿ (ಕಲ್ಯಾಣಸೇವೆ, ವೊ. ವು). **S.-refiner** ಕಚ್ಚಾ ಸಕ್ಕರೆಯನ್ನು ಚೊಕ್ಕ ಮಾಡುವವನು : ಚೊಕ್ಕ ಸಕ್ಕರೆಗಾರ. **S.-refinery** ಚೊಕ್ಕ ಸಕ್ಕರೆ ಕಾರಖಾನೆ. **S.-tongs** ಊಟಮಾಡುವಾಗ ಸಕ್ಕರೆ ಬಟ್ಟಲಿನಿಂದ ಸಕ್ಕರೆ ಗಟ್ಟಿಗಳನ್ನು ಎತ್ತಿಕೊಳ್ಳುವ ಚಿಮುಟ : ಸಕ್ಕರೆ ಚಿಮುಟ. **Súgarless** (ಗು.) ; **Súgary** (ಗು.) ; **Súgariness** (ನಾ.)

Súgar (ಕ್ರಿ.) ಸಕ್ಕರೆ—ಹಾಕು, ಸವರು (—ವುದರಿಂದ ಸಿಹಿ ಮಾಡು) ; (ರೂಪ.) ಸವಿ, ಸಿಹಿ, —ಮಾಡು. (ಅಸಂ.) ಸೋಮಾರಿತನದಿಂದ ಕೆಲಸಮಾಡು, ಮೈಗಳ್ಳತನಮಾಡು, ಕೆಲಸ ಕದಿ. **Súgarer** (ನಾ.)

Suggést ಸಜೆಸ್ಟ್ (ಕ್ರಿ. ಸಕ.) (ಭಾವವನ್ನು) ಮನಸ್ಸಿಗೆ ಬರಿಸು, ತರಿಸು; ಭಾವಪ್ರೇರಣೆ ಮಾಡು ; (ಭಾವ) ಹೊಳೆಯುವಂತೆ, ಸ್ಫುರಿಸುವಂತೆ, —ಮಾಡು ; ಧ್ವನಿಕೊಡು, ಸೂಚಿತವಾಗು, ಸೂಚಿಸು (Thing suggests itself ವಿಷಯ ತಾನಾಗಿ ಸ್ಫುರಿಸುತ್ತದೆ). (ಯೋಜನೆಯನ್ನು ಅಂಗೀಕಾರಾರ್ಹವೆಂದು ಅಥವಾ ವಾದವನ್ನು ತಥ್ಯಾಂಶದ ಊಹೆಯಾಗಿ) ಸೂಚನೆ ಮಾಡು, ಸಲಹೆಮಾಡು (ಅನೇಕ ವೇಳೆ that ಪದದೊಡನೆ) [Suggested a retreat, that they should retreat ಹಿಮ್ಮೆಟ್ಟಬೇಕೆಂದು ಸೂಚಿಸಿದನು, ಸಲಹೆ ಕೊಟ್ಟನು. I s. that (ವಿಚಾರಣೆ ಮಾಡುವಲ್ಲಿ : ಉದ್ದೇಶವನ್ನು, ಘಟನೆ ನಡೆದ ಬಗೆಯನ್ನು, ಆರೋಪಣೆ ಮಾಡುವಾಗ ನ್ಯಾಯವಾದಿ ಪ್ರಯೋಗಿಸುವ ವಾಕ್ಸರಣಿ) (—ಎಂದು) ಸೂಚಿಸುತ್ತೇನೆ, ಭಾವಿಸುತ್ತೇನೆ (I s. that you had a secret understanding with them). **Suggéstible** (ಗು.) ಸಲಹೆ ಮಾಡಲಾಗುವ, ಸೂಚ್ಯ ; (ವಶ್ಯಸುಪ್ತಿಯಲ್ಲಿ) ಭಾವಪ್ರೇರಣ ಸಾಧ್ಯ. **Suggestibílity** (ನಾ.); **Suggéstio fálsi** (L) ಸಜೆಸ್ಟಿ(ಸ್ಚಿ)ಯೋ ಫಾಲ್ಸೈ (ನಾ.) ಪ್ರತ್ಯಕ್ಷವಾಗಿ ಸುಳ್ಳು ಹೇಳದಿದ್ದರೂ ನಿಜವನ್ನು ಮರೆಮಾಚುವುದಕ್ಕಿಂತಲೂ ಹೆಚ್ಚಿನದಾದ ಅಪನಿರೂಪಣ : ಅಸತ್ಯ ಸೂಚನೆ. **Suggéstion** ಸಜೆಸ್‌ಟ್ಯ(ಚ್ಯ)ನ್ (ನಾ.) ಭಾವ ಸ್ಫುರಣೆ ; ಸೂಚನೆ, ಸಲಹೆ ; ವ್ಯಂಗ್ಯ, ಧ್ವನಿ ; ಅಶ್ಲೀಲಭಾವ ಸೂಚನೆ ; (ವಶ್ಯಸುಪ್ತಿಯಲ್ಲಿ) ಭಾವಪ್ರೇರಣೆ (ಮಾಡುವುದು) (Full of s. ಹಲವು ಭಾವಗಳನ್ನು ಮನಸ್ಸಿಗೆ ತರುವ ; ಭಾವಗರ್ಭಿತ, ಧ್ವನಿಪೂರ್ಣ). **Suggéstive** (ಗು.) ಸೂಚಕ (ವಾಚಕವಲ್ಲ) ; ಧ್ವನ್ಯಾತ್ಮಕ (*Of* ಉಪ. ದೊಡನೆ). **Suggéstively** (ಕ್ರಿ. ವಿ.) ; **Suggéstiveness** (ನಾ.)

Suggéstible, etc., Suggéstio fálsi, Suggéstion, etc. Suggest ನೋಡಿ.

Súi (L) ಸ್ಯೂಐ (ಸ. ನಾ., ಷಷ್ಠೀ) ಅವನ, ಅವಳ, ಅದರ, ಅವರ, ಅವುಗಳ, —ಸ್ವಂತ ; ಸ್ವ. **S. géneris** (—ಜೆನೆರಿಸ್) (ಗು.) ಮಿಕ್ಕವೊಡನೆ ವರ್ಗೀಕರಣವಾಗದ ; ತಾನೇ ಒಂದು ಜಾತಿಯಾದ ; ತನ್ನದೇ, ತಮ್ಮದೇ, —ಆದ; ಅನನ್ಯ ಸಾಮಾನ್ಯ. **S. juris** [—ಜೂ(ಅ)ರಿಸ್] (ಗು.) ಪ್ರಾಪ್ತವಯಸ್ಕನೂ ಸಮರ್ಥನೂ ಆದ ; (ಕಾನೂನು ರೀತ್ಯಾ) ತನ್ನ ವ್ಯವಹಾರಗಳನ್ನು ನಿರ್ವಹಿಸಿಕೊಳ್ಳಬಲ್ಲ ; ಸ್ವತಂತ್ರನಾಗಿರಬಲ್ಲ.

Súicide ಸ್ಯೂಇಸೈಡ್ (ನಾ.) (ವಿವೇಚನೆಯ ವಯಸ್ಸಿನಲ್ಲಿದ್ದು ಮತ್ತು ಬುದ್ಧಿ ನೆಟ್ಟಗಿದ್ದು) ಬೇಕೆಂದು ಪ್ರಾಣ—ಕಳೆದುಕೊಳ್ಳುವವನು, ಕಳೆದುಕೊಳ್ಳುವುದು ; ಆತ್ಮಹತ್ಯ(ಕಾರ) (Commit s. ಆತ್ಮಹತ್ಯಮಾಡಿಕೊ, ಪ್ರಾಣ ಕಳೆದುಕೊ) ; ತನ್ನ ಹಿತಗಳಿಗೇನೆ, ತನ್ನ ಸ್ಥಾನಕ್ಕೇನೆ, ಘಾತುಕವಾದ ಕಾರ್ಯ : ಆತ್ಮಘಾತ (Commit political s. ತನ್ನ ರಾಜಕೀಯ ಭವಿಷ್ಯವನ್ನು, ಅಭಿವೃದ್ಧಿಯನ್ನು, —ನಾಶಮಾಡಿಕೊ, ಹಾಳುಮಾಡಿಕೊ : ರಾಜಕೀಯ ಆತ್ಮಘಾತ ಮಾಡಿಕೊ. Race-s. ಒಂದು ಜನಾಂಗ ತನ್ನ ಸಂಖ್ಯಾಬಲವನ್ನು ಕಾಪಾಡಿಕೊಂಡು ಬರದೆ ನಾಶವಾಗುವುದು : ಜನಾಂಗದ ಸ್ವನಾಶ). **Suicídal** (ಗು.) ; **Suicídally** (ಕ್ರಿ. ವಿ.)

Súilline ಸ್ಯೂಇಲೈನ್ (ಗು.) ಹಂದಿಯ ಜಾತಿಯ.

Suit ಸ್ಯೂಟ್ (ನಾ.) ಅರಿಕೆ, ಮನವಿ, ಅರ್ಜಿ, ಬೇಡಿಕೆ (Make s. ಮನವಿ ಮಾಡಿಕೊ. Has a s. to the king) ; (ತನ್ನನ್ನು ಮದುವೆಯಾಗೆಂದು) ಹೆಣ್ಣನ್ನು ಅನುನಯಿಸುವುದು, ಹೆಣ್ಣೋಲೈಕೆ, ವಿವಾಹ ಪ್ರಾರ್ಥನೆ ; ದಾವಾ, ಮೊಕದ್ದಮೆ, ವ್ಯಾಜ್ಯ, ವ್ಯವಹಾರ, ಕಟ್ಟಳೆ (=Law-s., S. at law) (Civil, criminal, s. ವ್ಯಾವಹಾರಿಕ ದಾವೆ, ತಕ್ಸೀರಿನ ದಾವೆ). ಇಸ್ಪೀಟು ಎಲೆಗಳ ನಾಲ್ಕು ಬಗೆಗಳಲ್ಲಿ (ಆಟೀನು, ಡೈಮಂಡು, ಇಸ್ಪೀಟು, ಕಳಾವರುಗಳಲ್ಲಿ) ಒಂದು ಬಗೆ : ಬಣ್ಣ, ರಂಗು [Follow s. ರಂಗಿಗೆ ರಂಗು ಹಾಕು. (ರೂಪ.) ಮತ್ತೊಬ್ಬನು ನಡೆದಂತೆ ನಡೆ] ; ಆಟಗಾರನ ಕೈಯಲ್ಲಿರುವ ಒಂದು ರಂಗಿನ ಎಲೆಗಳು [Long, short, s. (ವ್ಹಿಸ್ಟ್ ಆಟದಲ್ಲಿ) ಕೈಯಲ್ಲಿರುವ ಮೂರಕ್ಕಿಂತ ಹೆಚ್ಚಿನ, ನಾಲ್ಕಕ್ಕಿಂತ ಕಡಮೆಯ, ಒಂದು ರಂಗಿನ ಎಲೆಗಳು] ; (ಗಂಡಸಿನ) ಅಂಗಿ ಷರಾಯಿ ಜೊತೆ, ಉಡುಪು ಜೊತೆ (ಸಾ., ಒಂದೇ ಬಗೆಯ ಬಟ್ಟೆಯಿಂದ ಮಾಡಿರುವ ಅಂಗಿ, ನಡುವಂಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ಷರಾಯಿ ಅಥವಾ ಚಡ್ಡಿ); ಸೂಟು [(ಅನೇಕ ಪೇಳಿ) S. of clothes. Dress s. ಸಂಜೆ—ಉಡುಪು, ಸೂಟು. S. of dittos (Ditto ನೋಡಿ). S.-case ಉಡುಪು ಕೈಪೆಟ್ಟಿಗೆ]. (ಆಧುನಿಕ ಪ್ರ.) ಹೆಂಗಸಿನ ಉಡುಪು [(ಸಾ.) 2, 3, 4, -piece s.]; (ಒಟ್ಟಿಗೆ ಉಪಯೋಗಿಸುವ) ಹಾಯಿಗಳ ತಂಡ, (ಯುದ್ಧ) ಕವಚಗಳ ತಂಡ. **Suíting** (ನಾ.) ಸೂಟು ಬಟ್ಟೆ.

Suit (ಕ್ರಿ.) (ಸರಿ)ಹೊಂದಿಸು, ಹೊಂದಾವಣೆಮಾಡು, ಅನುಗೊಳಿಸು, ಯೋಜಿಸು; ತಕ್ಕಂತೆ, ಯಥೋಚಿತ, ಒಪ್ಪುವಂತೆ, —ಮಾಡು (S. the action to the word ಕೆಲಸವನ್ನು ಮಾತಿಗೆ ಹೊಂದಿಸು; ಆಡಿದಂತೆ ನಡಸಿಬಿಡು; ನುಡಿಗೆ ನಡೆಯನ್ನು ಜೋಡಿಸು. S. one's style to one's audience ಶ್ರೋತೃಗಳಿಗೆ ತಕ್ಕಂತೆ ಶೈಲಿಯನ್ನು ಹೊಂದಿಸು, ಅನುಗೊಳಿಸು); (ಭೂ. ಕೃ.) ತಕ್ಕ, ಹೊಂದುವ, ಯುಕ್ತ, ಯೋಗ್ಯ (*To, for* ಉಪ. ದೊಡನೆ) (Democracy is not suited to *or* for Negroes. Is not suited to be *or* for an engineer); ಒಪ್ಪಿಗೆಯಾಗು, ಅನುಕೂಲವಾಗಿರು, ತಕ್ಕದ್ದಾಗಿರು, (ಸರಿ)ಹೊಂದು, ಹೊಂದಿಕೊ, ಯೋಗ್ಯವಾಗಿರು, ಸರಿಬೀಳು, ಒಗ್ಗು [Does not s. all tastes ಎಲ್ಲ ಅಭಿರುಚಿಗಳಿಗೂ ಒಪ್ಪಿಗೆಯಾಗುವುದಿಲ್ಲ, ಒಗ್ಗುವುದಿಲ್ಲ. It suits me *or* (ಬಹುಶಃ ಪಂಥ ಕಟ್ಟುವಲ್ಲಿನ ಪ್ರಯೋಗದ ಸಂಬಂಧದಿಂದ) my book to put up with him ಅವನೊಡನೆ ಸಹಿಸಿಕೊಂಡು ಹೋಗುವುದು ನನಗೆ, ನನ್ನ ಉದ್ದೇಶಕ್ಕೆ, ಅನುಕೂಲ. S. yourself ಇಷ್ಟಬಂದಂತೆ ಮಾಡಿ, ನಿಮಗೆ ಒಗ್ಗುವುದನ್ನು ನೋಡಿಕೊಳ್ಳಿ (ಮು., ಕೆಲಸ ಬಿಡುವೆನೆಂಬ ಸೇವಕನ ಎಚ್ಚರಿಕೆ ಮಾತು). Wheat does not s. me ಗೋಧಿ ನನಗೆ ಒಗ್ಗುವುದಿಲ್ಲ. Red does not s. (with) her complexion ಅವಳ ಬಣ್ಣಕ್ಕೆ ಕೆಂಪು ಒಪ್ಪುವುದಿಲ್ಲ, ಹೊಂದುವುದಿಲ್ಲ. The part suits him admirably ಆ ಪಾತ್ರ ಅವನಿಗೆ ಭರ್ಜರಿಯಾಗಿ ಒಪ್ಪುತ್ತದೆ. That date will s. ಆ ತಾರೀಖು ನನಗೆ ಅನುಕೂಲವಾಗಿದೆ]. **Suítable** (ಗು.) ತಕ್ಕ, (ಸರಿ)ಹೊಂದುವ, ಸರಿಬೀಳುವ, ಯುಕ್ತ, ಯೋಗ್ಯ, ಉಚಿತ, ಅನುಕೂಲವಾದ (*To, for* ಉಪ. ದೊಡನೆ). **Suitabílity** (ನಾ.); **Suítableness** (ನಾ.); **Suítably** (ಕ್ರಿ. ವಿ.); **Suítor** (ನಾ.) (ದಾವೆಯ) ಕಕ್ಷಿಗಾರ; ಅರ್ಜಿದಾರ, ವಾದಿ, ಫಿರ್ಯಾದಿ; ಪ್ರಾರ್ಥಿ, ಮನವಿಗಾರ; ಹೆಣ್ಣೋಲೈಕೆಗಾರ; ವಿವಾಹಾರ್ಥಿ, ವರ.

Suítable, etc. **Suit** ನೋಡಿ.

Suite ಸ್ವೀಟ್ (ನಾ.) ಪರಿವಾರ; (ಪರಸ್ಪರ ಹೊಂದಿಕೆಯಾಗಿ ಒಟ್ಟಿಗಿರುವ ವಸ್ತು, ಮೊ. ಗಳ) ತಂಡ (S. of rooms, furniture); (ಸಂ.) ನೃತ್ಯ ರಾಗಮಾಲೆ.

Súkey ಸೂಕಿ (ನಾ.) (ಬಳ. ಮಾ.) ಕೆಟಲ್ (ಪಾತ್ರೆ) (=Black S.)

Súlcate ಸಲ್ಕೇಟ್ (ಗು.) (ಸ. ವಿ., ಅಂ. ರ. ಶಾ.) ಗಾಡಿಗಳು, ಹಳ್ಳಗೆರೆಗಳು, ಕಾಲುವೆಗಳು, —ಉಳ್ಳ, ಇರುವ.

Sulk ಸಲ್ಕ್ (ನಾ., ಕ್ರಿ. ಅಕ.) (ಪಟ್ಟಾಗಿ ಮೌನ ಧರಿಸಿರುವ ಮತ್ತು ಗೋಷ್ಠಿಯಲ್ಲಿ ಬೆರೆಯದ ಲಕ್ಷಣಗಳುಳ್ಳ) ಮುನಿಸು; ಮುನಿಸಿನ ಮೌನ; ದುಮ್ಮಾನ, ವಿಷಣ್ಣತೆ (ಸಾ., ಬ. ವ. ದಲ್ಲಿ: In the sulks ದುಮ್ಮಾನದಲ್ಲಿ; ಮುನಿಸಿಕೊಂಡು). (ಕ್ರಿ.) ಮುನಿಸಿಕೊಂಡಿರು, ಬಿಗಡಾಯಿಸಿಕೊಂಡಿರು, ವಿಷಣ್ಣನಾಗಿರು; ಮುನಿಸಿನಿಂದ—ಹಿಮ್ಮೆಟ್ಟು, ಬೇರೆಯಾಗಿರು. **Súlky** (ಗು., ನಾ.) (Sulk ಪದದ ನಾಮ ಧಾಚಕಾರ್ಥಗಳಲ್ಲಿ), (ನಾ.) ಎರಡು ಚಕ್ರದ, ಒಂಟಿ ಕುದುರೆಯ, ಒಬ್ಬನು ಕುಳಿತುಕೊಳ್ಳುವ ಹಗುರವಾದ ಗಾಡಿ. **Súlkily** (ಕ್ರಿ. ವಿ.); **Súlkiness** (ನಾ.)

Súllage ಸಲೇಜ್ (ನಾ.) (ಮನೆಯ, ಬೀದಿಯ) ಚರಂಡಿ ಹೊಲಸು; ಕಶ್ಮಲ, ರೊಚ್ಚು; ಗ್ರಾಮಸಾರ.

Súllen ಸಲನ್ (ಗು., ನಾ.) ಒಳಗೇ—ಮುನಿಸಿಕೊಂಡಿರುವ, ಅಸಮಾಧಾನಗೊಂಡಿರುವ; ಮುಖ ಗಂಟುಹಾಕಿಕೊಂಡಿರುವ; ಬಿಗಡಾಯಿಸಿಕೊಂಡಿರುವ; ಮಂಕು ಕವಿದ, ವಿಷಣ್ಣ; ಸ್ನೇಹಕ್ಕೆ, ಪ್ರೋತ್ಸಾಹಕ್ಕೆ, —ಸಗ್ಗದ: ಅಪ್ರಸನ್ನ, ಮುನಿಸು ಮೌನದ, ಗುರುಗುಮ್ಮನೆಯ; ಮುಖ ಕಪ್ಪುಮಾಡಿಕೊಂಡಿರುವ. (ನಾ.) (ಬ. ವ. ದಲ್ಲಿ) ಅಸಮಾಧಾನಸ್ಥಿತಿ, ದುಮ್ಮಾನ, ಮುನಿಸು, ಮಂಕು, ಗ್ಲಾನಿ, ವಿಷಣ್ಣತೆ, ಖಿನ್ನತೆ (=The sullens). **Súllenly** (ಕ್ರಿ. ವಿ.); **Súllenness** (ನಾ.)

Súlly ಸಲಿ (ಕ್ರಿ. ಸಕ.) ಕೊಳೆ, ಮಲಿನ, —ಮಾಡು (ಮು., ಕಾವ್ಯ ಪ್ರ.); (ಕೀರ್ತಿ, ಶೀಲ, ಜಯ, ಮೊ. ಗಳ) ಪರಿಶುದ್ಧತೆಯನ್ನು, ತೇಜಸ್ಸನ್ನು, —ಕುಗ್ಗಿಸು; ಕಳಂಕಿಸು, ದೂಷಿತಮಾಡು; ಅಪಮಾನಗೊಳಿಸು; ಹೆಸರು ಕೆಡಿಸು.

Sulph(o)- ಸಲ್ಫ್(ಫೊ)— (ಸ. ಪೂ. ಪ.) ಗಂಧಕ—. **Sulphámic** (—ಆ್ಯಮಿಕ್) ಅಮೋನಿಯಾ ಸಂಬಂಧದ ಗಂಧಕಾಮ್ಲದಿಂದ ವ್ಯುತ್ಪನ್ನವಾದ: ಗಂಧಕಾಮೋನಿಯಾಮ್ಲದ. **Súlphamate** (—ಅಮೇಟ್) ಗಂಧಕಾಮೋನಿಯಾ ಲವಣ. **Súlphate** ಗಂಧಕಾಮ್ಲದ ಲವಣ; ಸಲ್ಫೇಟು (S. of copper ಮೈಲತುತ್ತ. S. of iron ಅನ್ನಭೇದಿ. S. of magnesium ಮ್ಯಾಗ್ನೀಷಿಯಂ ಸಲ್ಫೇಟ್ ಲವಣ; ಭೇದಿಯುಪ್ಪು. S. of sodium ಸೋಡಿಯಂ ಸಲ್ಫೇಟ್ ಲವಣ. S. of zinc ನತುಗಂಧಕ ಲವಣ; ಹಾಲುತ್ತ). **Súlphide** ಒಂದು ಮೂಲಧಾತುವಿನೊಡನೆ ಅಥವಾ ಘಟಕದೊಡನೆ ಗಂಧಕ ಸೇರಿ ಆದ ಸಂಯುಕ್ತ: ಸಲ್ಫೈಡು. **Súlphite** ಸಲ್ಫ್ಯೂರಸ್ ಆಮ್ಲದ ಲವಣ: ಸಲ್ಫೈಟು. **Sulphocyánic** ಗಂಧಕ ಮತ್ತು ಸೈಯಾನೊಜೆನ್ ಉಳ್ಳ. **Sulph(o)indigótic** ಗಂಧಕಾಮ್ಲ ಮತ್ತು ಇಂಡಿಗೊ (ನೀಲಿ) ಉಳ್ಳ. **Súlphonal** (—ನಲ್) ನಿದ್ರಾಜನಕವೂ ವೇದನ ಪ್ರತಿಬಂಧಿಯೂ ಆದ, ಮರಗಟ್ಟಿಸುವ ಒಂದು ಔಷಧ. **Sulphovínic** (—ವಿನಿಕ್) ಗಂಧಕಾಮ್ಲ ಮತ್ತು ಮದ್ಯಸಾರದ.

Súlphur ಸಲ್ಫರ್ (ನಾ., ಗು., ಕ್ರಿ. ಸಕ.) ಗಂಧಕ [Flowers, milk, of s. (ಗಂಧಕಕ್ಕೆ ಕೆಲವು ವಿಶಿಷ್ಟ ರೀತಿಯ ಸಂಸ್ಕಾರ ಕೊಡುವುದರಿಂದ ದೊರೆಯುವ) ಹಳದಿಯ, ಬಿಳಿಯ, —ಗಂಧಕದ ಧೂಳು. Roll, stick, -s. (ಚೊಕ್ಕಮಾಡಿ ಉರುಳೆಯಾಕಾರದಲ್ಲಿ ಎರಕ ಹೊಯ್ದ) ಉರುಳೆ, ಕೋಲು, —ಗಂಧಕ. S.-ore=Iron pyrites (Pyrites ನೋಡಿ). S.-spring ಗಂಧಕ (ಸಂಯುಕ್ತ) ಗರ್ಭಿತ ನೀರಿನ ಚಿಲುಮೆ: ಗಂಧಕ ಚಿಲುಮೆ. S.-wort ಹಿಂದೆ ವೈದ್ಯದಲ್ಲಿ ಉಪಯೋಗಿಸುತ್ತಿದ್ದ ಹಳದಿ ಹೂವಿನ ಒಂದು ಮೂಲಿಕೆ: ಗಂಧಕ ಮೂಲಿಕೆ]. ಹಲವು ಬಗೆಯ ಹಳದಿ ಚಿಟ್ಟೆ. ನರಕದ ಉರಿಯಲ್ಲೂ ಮಿಂಚಿನಲ್ಲೂ ಇರುವುದಾಗಿ ನಂಬಿದ್ದ ಒಂದು ಮೂಲ ಪದಾರ್ಥ; (ರೂಪ.) ಸಿಡಿಲು, ಮಿಂಚು (The gods throw stones of s. on me). (ಗು.) ಗಂಧಕದ(ಂಥ); ಮಾಸಲು ಎಳಹಸುರು ಹಳದಿಯ. (ಕ್ರಿ.) (ಸಸ್ಯಗಳಿಗೆ ಬೂಷ್ಟು ರೋಗ ಹಿಡಿಯದಂತೆ) ಗಂಧಕದ ಹುಡಿ ಎರಚು; ಗಂಧಕ(ದ ಹೊಗೆ) ಹಾಕು. **Súlphurate** ಸಲ್ಫ್ಯುರೇಟ್ (ಕ್ರಿ. ಸಕ.) ಗಂಧಕ—ಗರ್ಭಿತಮಾಡು, ಸಂಸ್ಕಾರಕೊಡು, ಪ್ರಯೋಗಿಸು; ಗಂಧಕದ ಹೊಗೆ ಹಾಕು (ಮು., ಬಣ್ಣ ಕಳೆಯುವುದರಲ್ಲಿ). **Sulphurátion** (ನಾ.) ಗಂಧಕ—ಪ್ರಯೋಗ, ಸಂಸ್ಕಾರ, ಧೂಪ. **Sulphurátor** (ನಾ.) ಗಂಧಕ ಧೂಪಕ. **Sulphúreous** ಸಲ್ಫ್ಯು(ಅ)ರಿಯಸ್ (ಗು.) ಗಂಧಕದ(ಂಥ); (ಸ. ವಿ.) ಗಂಧಕ ವರ್ಣದ. **Sulphurétted** ಸಲ್ಫ್ಯುರೆಟೆಡ್ (ಗು.) ಗಂಧಕ ಸಂಯುಕ್ತ (ಮು., S. hydrogen ಹೈಡ್ರೊಜನ್ ಸಲ್ಫೈಡು ಎಂಬ ಪೂತಿಗಂಧದ ಅನಿಲ). **Sulphúric** ಸಲ್ಫ್ಯು(ಅ)ರಿಕ್ (ಗು.) (ರ. ವಿ.) ಗಂಧಕವನ್ನು ಅದರ ಹೆಚ್ಚಿನ ಸಂಯೋಗ ಪ್ರಮಾಣದಲ್ಲಿ ಉಳ್ಳ [S. acid ಗಂಧಕಾಮ್ಲ, ಸಲ್ಫ್ಯೂರಿಕ್ ಆಮ್ಲ. S. ether=Ether (ರ. ವಿ. ಅರ್ಥದಲ್ಲಿ)]. **Sulphúrize** ಸರ್‌ಫ(ಫ್ಯು)ರೈಸ್ (ಕ್ರಿ. ಸಕ.) =Sulphurate. **Sulphurizátion** (ನಾ.); **Súlphurous** ಸರ್‌ಫ(ಫ್ಯು)ರಸ್ (ಗು.) =Sulphureous; (ರ. ವಿ.) ಗಂಧಕವನ್ನು ಅದರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕನಿಷ್ಠ ಸಂಯೋಗಪ್ರಮಾಣದಲ್ಲಿ ಉಳ್ಳ (S. acid ಸಲ್ಫ್ಯುರಸ್ ಆಮ್ಲ). **Súlphury** (ಗು.)

Súltan ಸಲ್ಟ್ಯನ್, **Sultán** ಸುಲ್ಟಾನ್ (ನಾ.) ಮಹಮ್ಮದೀಯ ದೊರೆ, ಸುಲ್ತಾನ [The S. (ಚರಿತ್ರೆ) ತುರ್ಕಿಯ ಸುಲ್ತಾನ]. ಹಲವು ಜಾತಿಯ ಉಜ್ವಲ ವರ್ಣದ ಪಕ್ಷಿ : ಸುಲ್ತಾನ ಹಕ್ಕಿ ; ತುರ್ಕಿ ದೇಶದ ಒಂದು ಜಾತಿಯ ಬಿಳಿಯ ಕೋಳಿ : ಸುಲ್ತಾನ್ ಕೋಳಿ. (Sweet, yellow, s. ಹಲವು ಬಗೆಯ ತೋಟದ ಹೂವಿನ ಗಿಡ). **Sultána** ಸಲ್ಟಾನ (ನಾ., ಸ್ತ್ರೀ.) ಸುಲ್ತಾನನ ತಾಯಿ, ಹೆಂಡತಿ ಅಥವಾ ಮಗಳು : ಸುಲ್ತಾನಳು, ಸುಲ್ತಾನಾ. (ಮಹಮ್ಮದೀಯ ದೊರೆ, ಮೊ. ರ) ಉಪಪತ್ನಿ, ಸೂಳೆ. ಸುಲ್ತಾನ ಹಕ್ಕಿ. ರೊಟ್ಟಿ, ಮೊ. ಗಳಿಗೆ ಹಾಕುವ, ಸ್ಮರ್ನ ದೇಶದಲ್ಲಿ ಬೆಳೆಯುವ ಬೀಜವಿಲ್ಲದ ದ್ರಾಕ್ಷಿ : ಸುಲ್ತಾನ ದ್ರಾಕ್ಷಿ. **Súltanate** ಸಲ್ಟನೇಟ್ (ನಾ.) ಸುಲ್ತಾನನ—ರಾಜ್ಯ, ಪದವಿ, ಅಧಿಕಾರ. **Súltaness** ಸಲ್ಟನೆಸ್ (ನಾ., ಸ್ತ್ರೀ.) ಸುಲ್ತಾನಳು.

Súltry ಸಲ್ಟ್ರಿ (ಗು.) (ವಾಯುಮಂಡಲದ ಅಥವಾ ಹವದ ವಿಷಯದಲ್ಲಿ) ಬಿಸಿಯ ಮತ್ತು ಉಸಿರು ಕಟ್ಟಿಸುವ : ಸೆಕೆಯ, ಬೇಗೆಯ, ಧಗೆಯ. **Súltrily** (ಕ್ರಿ. ವಿ.) ; **Súltriness** (ನಾ.)

Sum ಸಂ (ನಾ., ಕ್ರಿ.) (ಹಲವು ಅಂಶಗಳನ್ನು ಕೂಡಿಬರುವ) ಒಟ್ಟು, ಮೊತ್ತ, ಬೇರೀಜು (= S. total) (The s. of two and three is five); ಗೊತ್ತಾದ ಮೊತ್ತದ ಹಣ, ಮೊಬಲಗು [A s. of fifteen rupees. Lump s. (Lump[1] ನೋಡಿ)] ; ಗೋಷ್ವಾರೆ, ಒಟ್ಟು ಅಭಿಪ್ರಾಯ, ತಾತ್ಪರ್ಯ, ಸಾರಾಂಶ (The s. of all my wishes is happiness ನನ್ನ ಎಲ್ಲ ಬಯಕೆಗಳ ಸಾರಾಂಶ ವೆಂದರೆ ಸೌಖ್ಯ. The s., the s. and substance, of his objections is this ಅವನ ಆಕ್ಷೇಪಣೆಗಳ ಸಾರಾಂಶ ಇದು. In s. ಒಟ್ಟನಲ್ಲಿ). (ಗಣಿತದ) ಲೆಕ್ಕ (ಮಾಡುವುದು) (Good at sums ಲೆಕ್ಕದಲ್ಲಿ ಗಟ್ಟಿಗ). (ಕ್ರಿ.) (ಒಟ್ಟು) ಕೂಡು, ಮೊತ್ತ ಕಂಡುಹಿಡಿ (ಅನೇಕ ವೇಳೆ *up* ಉಪ. ದೊಡನೆ) ; (ಹಿಂದೆ ವಿವರವಾಗಿ ಹೇಳಿದ ವಾದ, ಮೊ. ನ್ನು) ಸಂಗ್ರಹಾನುವಾದ ಮಾಡಿ, ಗೋಷ್ವಾರೆಯಾಗಿ, ಒಟ್ಟಾರೆ, ಮೊತ್ತವಾಗಿ, —ಹೇಳು ; (ಮು., ನ್ಯಾಯಾಧಿಪತಿಯ ವಿಷಯದಲ್ಲಿ : ಎರಡು ಪಕ್ಷಗಳನ್ನೂ ಆಲಿಸಿಯಾದಮೇಲೆ, ನ್ಯಾಯದರ್ಶಿಗಳಿಗೆ ಸಾಕ್ಷ್ಯದ ಅಥವಾ ವಾದದ ಅಂಶಗಳನ್ನು) ಸಂಗ್ರಹಿಸಿ ಹೇಳು, ಸಂಗ್ರಹಾನುವಾದ ಮಾಡು (*Up* ಉಪ. ದೊಡನೆ). [**Summing-up** (ನಾ.) ಮೊತ್ತವಾಗಿ—ಹೇಳುವುದು, ಹೇಳಿದ್ದು ; ಪುನರಾವರ್ತನ]. **Súmmary** ಸಮರಿ (ಗು., ನಾ.) ಅಡಕವಾದ, ಸಂಗ್ರಹವಾದ, ಗೋಷ್ವಾರೆಯ ; ಅನಾವಶ್ಯಕ ವಾದ ವಿವರ, ಔಪಚಾರಿಕ ಆಚರಣೆ, ಮೊ. ಗಳಿಗೆ ಗಮನ ಕೊಡದ : ಅವಸರದ, ಕ್ಷಿಪ್ರಕ್ರಮದ [A s. account ಅಡಕ ವರದಿ. S. methods ಕ್ಷಿಪ್ರಕ್ರಮದ ವಿಧಾನಗಳು. S. jurisdiction (ಸಂಪ್ರದಾಯ ನ್ಯಾಯನಿಬಂಧನೆಗಳನ್ನು ನುಸರಿಸದೆ ಮಾಡುವ) ಕ್ಷಿಪ್ರಕ್ರಮದ —ನ್ಯಾಯಾಡಳಿತ, ನ್ಯಾಯವಿತರಣೆ]. (ನಾ.) ಸಂಗ್ರಹ (ನಿರೂಪಣೆ), ಸಾರಾಂಶ, ಗೋಷ್ವಾರೆ. **Súmmarily** (ಕ್ರಿ. ವಿ.) ; **Súmmarize** (ಕ್ರಿ. ಸಕ.) ಸಂಗ್ರಹ, ಅಡಕ, —ಆಗು, ಮಾಡು ; ಸಾರಾಂಶ ಹೇಳು. **Súmmarist** (ನಾ.) ಸಂಗ್ರಹಕಾರ. **Súmmate** (ಕ್ರಿ. ಸಕ.) (ಒಟ್ಟಿಗೆ) ಕೂಡು, ಮೊತ್ತ ಕಂಡುಹಿಡಿ. **Summátion** (ನಾ.) ಮೊತ್ತ ಕಂಡುಹಿಡಿಯುವುದು, ಕೂಡುವುದು, ಸಂಕಲನ.

Súmac(h) ಸ್ಯೂ(ಷೂ)ಮ್ಯಾಕ್ (ನಾ.) ಹಲವು ಬಗೆಯ ಕುರುಚಲು ಗಿಡ ; ಇದರ ಒಣಗಿದ ಎಲೆಯ ಪುಡಿ; ಸುಮ್ಮಾಕು (ಎಲೆಯ ಪುಡಿ) (ಚರ್ಮ ಹದ ಮಾಡುವುದಕ್ಕೂ ಬಣ್ಣ ಮಾಡುವುದಕ್ಕೂ ಉಪಯೋಗಿಸುವರು)

Sumérian ಸ್ಯೂಮಿ(ಅ)ರಿಯನ್ (ಗು., ನಾ.) (ಪ್ರಾಚೀ. ಶಾ.) (ಬ್ಯಾಬಿಲೋನಿಯದ ನಾಗರಿಕತೆಯಲ್ಲಿ : ಸೆಮಿಟಿಕ್ ವರ್ಗಕ್ಕೆ ಸಂಬಂಧಪಡದ) ಸುಮೇರಿಯದ. (ನಾ.) ಸುಮೇರಿಯಾ ಭಾಷೆ, ಸುಮೇರಿಯದವನು.

Súmmarize, Súmmary, Summátion. Sum ನೋಡಿ.

Súmmer[1] ಸಮರ್ (ನಾ., ಕ್ರಿ.) ಬಿಸಿಲುಗಾಲ, ಬೇಸಗೆ (ಕಾಲ), ಗ್ರೀಷ್ಮ (ಕಾಲ, ಋತು) [Indian s. (Indian ನೋಡಿ). St Martin's s. ನೊವೆಂಬರ್ ತಿಂಗಳ (೧೧ರ ಸುಮಾರಿನ) ಬೇಸಗೆ. St Luke's s. ಅಕ್ಟೋಬರ್ ತಿಂಗಳ (೧೮ರ ಸುಮಾರಿನ) ಬೇಸಗೆ]. (ಸಾ., ಬ. ವ. ದಲ್ಲಿ ; ಸಂಖ್ಯೆಯೊಡನೆ ಪ್ರ.) ವರ್ಷ, ವಯಸ್ಸು (A child of ten summers). (ವಿಶೇಷಣವಾಗಿ) ಬೇಸಗೆಯ, ಬೇಸಗೆಗೆ ತಕ್ಕ [S.-house ಬೇಸಗೆ ಕಾಲದಲ್ಲಿ ಕುಳಿತುಕೊಳ್ಳುವುದಕ್ಕೆ ತೋಟ, ಮೊ. ಗಳಲ್ಲಿ ಮಾಡಿರುವ ಸಣ್ಣ ಮನೆ : ಬೇಸಗೆ ಮನೆ, ಗ್ರೀಷ್ಮ ಗೃಹ. S. lightning (Lightning ನೋಡಿ). S. school (ಮು., ವಿ. ವಿ. ನಿ. ಗಳಲ್ಲಿ ಏರ್ಪಡಿಸುವ) ಬೇಸಗೆ—ಪಾಠಶಾಲೆ, ಶಿಕ್ಷಣ. S.-time, Summertime ಬೇಸಗೆ ಕಾಲ, ಗ್ರೀಷ್ಮರ್ತು. S. time ಬೇಸಗೆಯಲ್ಲಿ ಹಗಲನ್ನು ಹೆಚ್ಚು ಹೊತ್ತು ಕೆಲಸಕ್ಕೆ ಉಪಯೋಗಿಸಿಕೊಳ್ಳಲು ಅನುಕೂಲವಾಗುವಂತೆ ಮುಂದಿಟ್ಟಿರುವ ಗಡಿಯಾರಗಳು ತೋರಿಸುವ ಹೊತ್ತು : ಬೇಸಗೆ ಗಂಟೆ]. (ಕ್ರಿ.) ಬೇಸಗೆಯನ್ನು ಕಳೆ, ಬೇಸಗೆಯಲ್ಲಿ ವಾಸಮಾಡು (*At, in* ಉಪ. ದೊಡನೆ). ಬೇಸಗೆಯಲ್ಲಿ ದನ ಮೇಯಿಸು, ಮೇವೊದಗಿಸು (*At, in* ಉಪ. ದೊಡನೆ). **Súmmerly** (ಗು.) ; **Súmmery** (ಗು.) ; **Súmmerless** (ಗು.)

Súmmer[2], Summer-tree ಸಮರ್(ಟ್ರೀ) (ನಾ.) (ತೀರು, ಜಂತೆ, ಮೊ. ಗಳಿಗೆ ಆಧಾರವಾದ) ಅಡ್ಡತೊಲೆ, ದೂಲ.

Súmmersault, -set = Somersault.

Súmmit ಸಮಿಟ್ (ನಾ.) ಅತ್ಯಂತ ಎತ್ತರದ ಭಾಗ, ನೆತ್ತಿ, ಕೋಡು, (ಅತ್ಯುನ್ನತ) ಶಿಖರ, ಪರಾಕಾಷ್ಠೆ (The icy summits of the Alps. At the s. of power ಅಧಿಕಾರದ ಶಿಖರದಲ್ಲಿ, ಪರಾಕಾಷ್ಠೆಯಲ್ಲಿ). **Súmmitless** (ಗು.)

Súmmon ಸಮನ್ (ಕ್ರಿ. ಸಕ.) (ಮು., ನ್ಯಾಯಸ್ಥಾನದಲ್ಲಿ ಪ್ರತಿವಾದಿಯಾಗಿ, ಸಾಕ್ಷಿಯಾಗಿ) ಹಾಜರಾಗಬೇಕೆಂದು ಆಜ್ಞೆಮಾಡು, ಕರೆಕೊಡು ; (ಗಂಟೆ, ತಟ್ಟೆಗೆ, ಮೊ. ನ್ನು ಬಾರಿಸಿ) ಬರುವಂತೆ ಅಪ್ಪಣೆಮಾಡು, ಬರ ಹೇಳು, ಕರೆ, ಆಹ್ವಾನಿಸು (They were soon summoned to table) ; (ಶಾಸನ ಸಭೆ, ಮೊ. ಗಳ ವಿಷಯದಲ್ಲಿ) ಸಭೆ ಕರೆ ; (ಪಟ್ಟಣ, ಮೊ. ನ್ನು) ಶರಣಾಗತವಾಗಬೇಕೆಂದು ಅಪ್ಪಣೆಮಾಡು. S. up courage, spirit (*to* do, *for*) (—ಮಾಡಲು) ಧೈರ್ಯ, ಎದೆ, ಉತ್ಸಾಹ, —ತಂದುಕೊ. **Súmmons** (ನಾ., ಬ. ವ. -ses ; ಕ್ರಿ. ಸಕ.) (ನ್ಯಾಯಸ್ಥಾನ) ಹಾಜರಿ—ಆಜ್ಞೆ, ಕರೆ (—ಕೊಡು, ಕಳಿಸು); ಆಹ್ವಾನ, ಕರೆ, ಅಪ್ಪಣೆ (The parliament met according to s.)

Súmmum bónum (L) ಸಮಂ ಬೋನಂ (ನಾ.) (ಮು., ಒಂದು ನೀತಿವಿಚಾರದಲ್ಲಿ ಸರ್ವನಿರ್ಧಾರಕ ತತ್ತ್ವವೆಂದು ಪರಿಗಣಿಸಿದ) ಪರಮ ಶ್ರೇಯಸ್ಸು, ಪುರುಷಾರ್ಥ.

Sump ಸಂಪ್ (ನಾ.) ಗಣಿ, ಯಂತ್ರ, ಮೊ. ಗಳಲ್ಲಿ (ಮು., ಹೆಚ್ಚಿನ) ನೀರು, ಎಣ್ಣೆ, ಮೊ. ದ್ರವಗಳನ್ನು ಒಳಕೊಳ್ಳುವುದಕ್ಕಾಗಿ ಮಾಡಿರುವ ಕುಳಿ, ಬಾವಿ : ದ್ರವದ ಕುಳಿ. ರೊಚ್ಚುಗುಂಡಿ.

Súmpter ಸಮ್ಟರ್, ಸಂಪ್ಟರ್ (ನಾ.) (ಪ್ರಾಚೀ. ಪ್ರ.) ಹೊರೆಗುದುರೆ, ಹೇರುಗುದುರೆ (—ಹೊಡೆಯುವವನು). S.-horse, -mule, -pony ಹೇರು—ಕುದುರೆ, ಹೇಸರಗತ್ತೆ, ತಟ್ಟು.

Súmption ಸಂಷನ್, ಸಂಪ್ಷನ್ (ನಾ.) (ತರ್ಕ) ಆಧಾರವಾಕ್ಯ.

Súmptuary ಸಮ್ಟ್ಯುಅರಿ, ಸಂಪ್ಟ್ಯು— (ಗು.) (ಅನ್ನವಸ್ತ್ರಗಳ) ವೆಚ್ಚವನ್ನು ಕ್ರಮಗೊಳಿಸುವ ; ವೆಚ್ಚ ಹಿಡಿತದ ; ವ್ಯಯ—ನಿಯಂತ್ರಕ, ನಿಯಾಮಕ (S. law, edict ರಾಜ್ಯದ ಹಿತಕ್ಕಾಗಿ ವ್ಯಕ್ತಿಯ ಖಾಸಗಿ ವೆಚ್ಚವನ್ನು ಕ್ರಮಗೊಳಿಸುವ ಕಾನೂನು, ಶಾಸನ : ವ್ಯಯ ನಿಯಂತ್ರಕ ಕಾನೂನು, ಶಾಸನ)

Súmptuous ಸಮ್ಟ್ಯುಅಸ್, ಸಂಪ್ಟ್ಯು— (ಗು.) (ಕಟ್ಟಡ, ಉಡುಪು, ಭೋಜನ, ಮೊ. ಗಳ ವಿಷಯದಲ್ಲಿ) ಬಹು ಬೆಲೆಯ ಮತ್ತು ದಿವ್ಯವಾದ, ಬಹು ವ್ಯಯ ಸೂಚಕವಾದ, ಘನವಾದ ; ಪುಷ್ಕಳ, ಯಥೇಚ್ಛ. **Súmptuously** (ಕ್ರಿ. ವಿ.) ; **Súmptuousness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sun ಸನ್ (ನಾ.) ಸೂರ್ಯ, ಹೊತ್ತು, ಸೂರ್ಯನ ಬೆಳಕು, ಬಿಸಿಲು [S. rises, sets ಹೊತ್ತು ಮೂಡುತ್ತದೆ, ಮುಳುಗುತ್ತದೆ. His, its, s. is set ಅವನ, ಅದರ, (ಉಚ್ಛ್ರಾಯದ, ಪ್ರಾಬಲ್ಯದ) ಕಾಲ ಮುಗಿಯಿತು. Rise with the s. ಹೊತ್ತು ಹುಟ್ಟುವ ಹೊತ್ತಿಗೆ, ಹೊತ್ತಿಗೆ ಮುಂಚೆ, —ಏಳು. Order of the Rising S. ಜಪಾನ್ ರಾಜ್ಯದಲ್ಲಿಯ ಒಂದು ಬಿರುದು. Hail *or* adore the rising s. ಹೊಸ ಅಥವಾ ಬರಲಿರುವ ಅಧಿಕಾರಿಯನ್ನು ಆಶ್ರಯಿಸು ; ಗೆದ್ದೆತ್ತಿನ ಬಾಲ ಹಿಡಿ. Empire on which the s. never sets ಸೂರ್ಯ ಮುಳುಗದ, ಜಗದ್ವ್ಯಾಪಕ, —ಸಾಮ್ರಾಜ್ಯ (ಹಿಂದೆ ಸ್ಪ್ಯಾನಿಷ್ ಸಾಮ್ರಾಜ್ಯ, ಈಗ ಬ್ರಿಟಿಷ್ ಸಾಮ್ರಾಜ್ಯ). Let not the s. go down upon your wrath ನಿನ್ನ ಕೋಪ ಸಂಜೆಯೊಳಗೆ ಶಮನವಾಗಲಿ. The midnight s. (ಉ. ಮತ್ತು ದ.) ಧ್ರುವಪ್ರದೇಶದಲ್ಲಿ ಕಾಣಬರುವ ನಡುರಾತ್ರಿಯ ಸೂರ್ಯ. Nothing new under the s. ಪ್ರಪಂಚದಲ್ಲಿ ಯಾವುದೂ ಹೊಸದಿಲ್ಲ. Mock s. = Parhelion (ಆ ಪದ ನೋಡಿ). S. of righteousness ಯೇಸು ಕ್ರಿಸ್ತ ; ಧರ್ಮ ಸೂರ್ಯ. See the s. ಬದುಕಿರು, ಜೀವಿಸಿರು. Make hay while the s. shines (Hay ನೋಡಿ). Hold a candle to the s. ಸೂರ್ಯನಿಗೆ ಸೊಡರು ಹಿಡಿ. Take (ಅನಂ. shoot) the s. (ನಾವೆ) (ಅಕ್ಷಾಂಶವನ್ನು ಗೊತ್ತುಹಚ್ಚುವುದಕ್ಕಾಗಿ) ಸೂರ್ಯನ ಕೋನೋನ್ನತಿಯನ್ನು ಕಂಡುಹಿಡಿ. With, against, the s. ಪ್ರದಕ್ಷಿಣವಾಗಿ, ಅಪ್ರದಕ್ಷಿಣವಾಗಿ. S.'s eyelashes, S.'s backstays (ನಾವೆ), S. drawing water (ಸೂರ್ಯಕಿರಣಗಳು ಮೋಡದ ಕಂಡಿಗಳಿಂದ ತೂರಿಕೊಂಡು ವಾಯು ಮಂಡಲದಲ್ಲಿ ತೇಲಾಡುತ್ತಿರುವ ಧೂಳಿನ ಕಣಗಳನ್ನು ಸಮಾನಾಂತರ ರೇಖೆ ಗಳಲ್ಲಿ ಪ್ರಕಾಶಗೊಳಿಸುವುದರಿಂದ ಕಾಣಬರುವ) ಬಿಸಿಲುಕೋಲುಗಳು. S. and planet ನಡುವೆ ಒಂದು ಹಲ್ಲುಚಕ್ರವೂ (=S. wheel ಸೂರ್ಯಚಕ್ರ) ಹೊರಗೆ ಒಂದು (ಅಥವಾ ಹೆಚ್ಚು) ಹಲ್ಲುಚಕ್ರವೂ (=Planet wheel ಗ್ರಹಚಕ್ರ) ಸಂಯೋಜಿತವಾಗಿದ್ದು ಸೌರವ್ಯೂಹದಲ್ಲಿ ಯಂತೆ, ಗ್ರಹಚಕ್ರ(ಗಳು) ಸೂರ್ಯಚಕ್ರದ ಸುತ್ತಲೂ ಮತ್ತು ತನ್ನ (ತಮ್ಮ) ಅಕ್ಷದಮೇಲೂ ತಿರುಗುತ್ತಿರುವಂತೆ ಅಳವಡಿಸಿರುವ ಚಕ್ರವ್ಯೂಹ: ಸೂರ್ಯ ಮತ್ತು ಗ್ರಹಚಕ್ರಗಳು. Exclude, let in, the s. ಸೂರ್ಯನ ಬೆಳಕನ್ನು, ಬರಗೊಡದಿರು, ಬರಗೊಡು. In the s. ಬಿಸಿಲಿನಲ್ಲಿ. A place in the s. (ರೂಪ.) ಪ್ರಪಂಚದಲ್ಲಿ ತನಗೂ ಒಂದು ಗಣ್ಯಸ್ಥಾನ, ಒಂದು ಮುಖ್ಯ ಭಾಗ. Take the s. ಬಿಸಿಲಿಗೆ ಮೈಯೊಡ್ಡು]. (ತನ್ನ ಸುತ್ತಲೂ ಉಪಗ್ರಹಗಳುಳ್ಳ ಯಾವುದಾದರೂ) ಸ್ಥಿರ ನಕ್ಷತ್ರ; (ಕಾವ್ಯ) ದಿನ, ವರ್ಷ. ಚಾವಣಿಯಲ್ಲಿ ಚಕ್ರಾಕಾರವಾಗಿ ಒಟ್ಟೈಸಿರುವ ಅನಿಲ ದೀಪಗಳು, ವಿದ್ಯುದ್ದೀಪಗಳು, ಮೊ. ಗಳ ತಂಡ: ಚಕ್ರ, ಮಂಡಲ, —ದೀಪ (=S. burner). **S.-bath** (ಬತ್ತಲೆಯಾಗಿ) ಬಿಸಿಲಿಗೆ ಮೈಯೊಡ್ಡುವುದು ; ಬಿಸಿಲು ಮೀಯುವುದು ; ಸೂರ್ಯ ಸ್ನಾನ. **Súnbeam** ಸೂರ್ಯ—ಕಿರಣ, ರಶ್ಮಿ. **S.-bird** ಉಜ್ಜ್ವಲ ವರ್ಣದ ಗರಿಗಳುಳ್ಳ ಹಲವು ಬಗೆಯ ಸಣ್ಣ ಹಕ್ಕಿ: ಕದಿರು ಗಿಣಿ. **S.-blind** (ಕಿಟಕಿಗೆ ಹಾಕುವ) ಬಿಸಿಲು ಮರೆ. **S.-bonnet** ಮುಖಕ್ಕೂ ಹಿಂಗತ್ತಿಗೂ ಬಿಸಿಲು ತಟ್ಟದಂತೆ ಮುಂಚಾಚು ಹಿಂಚಾಚುಗಳುಳ್ಳ ಟೋಪಿ: ಬಿಸಿಲು ಟೋಪಿ. **S.-bow** ನೀರ ತುಂತುರು, ಮೊ. ಗಳ ಮೂಲಕ ಹಾಯ್ದ ಸೂರ್ಯರಶ್ಮಿಗಳು ಏಳು ಬಣ್ಣಗಳಾಗಿ ಒಡೆದು ಕಾಣುವ ಬಿಲ್ಲು: ಸೂರ್ಯನ, ಕಾಮನ, —ಬಿಲ್ಲು. **Súnburn** ಬಿಸಿಲಿಗೆ (ಮುಖ, ಮೈಚರ್ಮ, ಮೊ. ವು) ಕಂದು ತಿರುಗುವುದು (**Súnburnt, -burned** ಬಿಸಿಲಲ್ಲಿ ಕಂದಿದ: ಬಿಸಿಲುಗಂದಿದ). **S.-dance** ಉ. ಅಮೆರಿಕದ ಇಂಡಿಯನರು ಸೂರ್ಯದೇವನ ಆರಾಧನೆಗಾಗಿ ಮಾಡುವ ನೃತ್ಯ: ಸೂರ್ಯನೃತ್ಯ. **Súndew** ಬಿಸಿಲಿನಲ್ಲಿ ಹಿಮದ ಹನಿಗಳ ಹಾಗೆ ಹೊಳೆಯುವ ದ್ರವದ ಹನಿಗಳನ್ನು ಸ್ರವಿಸುವ, ಜೌಗು ಪ್ರದೇಶ ಗಳಲ್ಲಿ ಬೆಳೆಯುವ, ಹಲವು ಬಗೆಯ ಸಸ್ಯ. **S.-dial** (Dial ನೋಡಿ). **S.-dog** (Dog ನೋಡಿ). **Súndown** ಹೊತ್ತಿಳಿತ, ಸೂರ್ಯಾಸ್ತ. **Súndowner** (ಆಸ್ಟ್ರೇಲಿಯದಲ್ಲಿ) ಸಂಜೆಗೆ ಸರಿಯಾಗಿ ಊಟಕ್ಕೆ ಬಂದು ಗಂಟುಬೀಳುವ ದಾರಿಹೋಕ: ಸಂಜೆಹೋಕ. **S.-dried** ಬಿಸಿಲಿನಲ್ಲಿ ಒಣಗಿ(ಸಿ)ದ. **Súnfish** ಸರಿಸುಮಾರು ಗೋಳಾಕಾರದ ದೊಡ್ಡ ಜಾತಿಯ ಮೀನು: ಸೂರ್ಯಮೀನು. **Súnflower** ಸೂರ್ಯಕಾಂತಿ (ಜಾತಿಯ ಹೂವಿನ ಗಿಡ). **S.-glow** ಕೆಲವು ವೇಳೆ ಸೂರ್ಯನ ಸುತ್ತಲೂ ಕಾಣುವ ನಸುಬಿಳಿಯ ಅಥವಾ ನಸುಬಣ್ಣದ ಕಾಂತಿ ಮಂಡಲ: ಸೂರ್ಯನ ಪ್ರಭಾವಲಯ. **S.-god** ಸೂರ್ಯದೇವ(ತೆ). **S.-hat, -helmet** ಬಿಸಿಲು(ಮರೆ) —ಟೊಪ್ಪಿಗೆ, ಶೀಸಕ. **Súnlight** ಸೂರ್ಯನ—ಬೆಳಕು, ಪ್ರಕಾಶ. **Súnlit** ಸೂರ್ಯನಿಂದ ಬೆಳಗಿದ ; ಬಿಸಿಲು ಬೆಳಗುವ. **S.-myth** = Solar myth (Solar ನೋಡಿ). **S.-picture** (ಸೂರ್ಯ ಪ್ರಕಾಶದ ಸಹಾಯದಿಂದ ತೆಗೆದ) ಛಾಯಾ ಚಿತ್ರ. **Súnrise** ಹೊತ್ತಾರೆ, ಹೊತ್ತು ಹುಟ್ಟು ; ಸೂರ್ಯೋದಯ (ಕಾಲ). **Súnset** ಸೂರ್ಯಾಸ್ತ(ದ ಕಾಲ) ; ಹೊತ್ತು ಮುಳುಗು (ವುದು) ; ಸಾಯಂಕಾಲ, ಬೈಗು ; ಸಂಧ್ಯಾರುಣದ ಪಶ್ಚಿಮಾಕಾಶ, ಸಂಧ್ಯಾರಾಗ [ವಿಶೇಷಣ ಪ್ರ.: ಸೂರ್ಯಾಸ್ತದ (S.-s. gun —ಕಾಲಕ್ಕೆ ಹಾರಿಸುವ ಫಿರಂಗಿ) ; ಸಂಧ್ಯಾರಾಗವನ್ನು, ಸೂರ್ಯಾಸ್ತವನ್ನು, —ಹೋಲುವ] ; (ರೂಪ.) ಜೀವನದ ಇಳಿಗಾಲ, ಕೊನೆಗಾಲ, ಅವಸಾನ. **Súnshade** ಬಿಸಿಲುಕೊಡೆ; (ಅಂಗಡಿ ಕಿಟಕಿಯ) ಬಿಸಿಲುಮರೆ. **Súnshine** ಸೂರ್ಯನ ಬೆಳಕು, ಬಿಸಿಲು (S.-s. recorder ಸೂರ್ಯನ ಬೆಳಕು ಇರುವ ಕಾಲಾವಧಿಯನ್ನು ಗುರುತಿಸುವ ಸಲಕರಣೆ: ಸೂರ್ಯಪ್ರಕಾಶ—ರೇಖಕ, ಮಾಪಕ) ; ಬಿಸಿಲು ಬಿದ್ದಿರುವ ಮೇಲ್ಮೈ ; ಒಳ್ಳೆಯ, ಅನುಕೂಲವಾದ, —ಹವ, ವಾಯುಸ್ಥಿತಿ ; (ರೂಪ.) ಪ್ರಸನ್ನತೆ, ಉಲ್ಲಾಸ, ನಲಿವು, ನಗುಮುಖ, ಕಳೆ [**Súnshiny** (ಗು.)]. **S.-snake** ಉ. ಯೂರೋಪಿನ ಪುರಾತನ ಕಲಾ ರಚನೆಯಲ್ಲಿ ಕಾಣಬರುವ, ನಡುವೆ ಸಣ್ಣದೊಂದು ವೃತ್ತವುಳ್ಳ S ಆಕಾರದ ಅಲಂಕಾರ: ಸೂರ್ಯನಾಗರಾಲಂಕಾರ. **S.-spot** ಸೂರ್ಯನ ಮೇಲ್ಮೈಯಮೇಲೆ ಕೆಲವು ವೇಳೆ ಕಾಣಬರುವ ಕಪ್ಪು ಕಲೆ: ಸೂರ್ಯನ—ಕಲೆ, ಕಳಂಕ. **S.-star** ಹಲವು ಕಿರಣ ಗಳುಳ್ಳ ಕೆಂಪನೆಯ ನಕ್ಷತ್ರಮೀನು. **S.-stone** ಸೂರ್ಯಕಾಂತಶಿಲೆ ; ಸೂರ್ಯಮಣಿ. **Súnstroke** ಅಧಿಕ ಸೂರ್ಯತಾಪದಿಂದ ಮೂರ್ಛಾವಸ್ಥೆ: ಬಿಸಿಲ ಹೊಡೆತ, ಸೂರ್ಯಾಘಾತ. **S.-worship** ಸೂರ್ಯ—ಪೂಜೆ, ಆರಾಧನೆ [**S.-worshipper** (ನಾ.)]. **Súnless** (ಗು.); **Súnlessness** (ನಾ.); **Súnlike** (ಗು.); **Súnny** (ಗು.) ಸೂರ್ಯ ಬೆಳಗುವ; ಬೆಳಕಿರುವ, ಪ್ರಕಾಶಮಾನ ; (ವಿರ. ಪ್ರ.) ಸೂರ್ಯನ ಬಿಸಿಲಿಗೊಡ್ಡಿದ, ಬಿಸಿಲಿನಲ್ಲಿ ಕಾದ, ಬಿಸಿಲು ಕಾಯುವ [The s. side (ಮನೆ, ಮೊ. ಗಳ) ಬಿಸಿಲ ಪಕ್ಕ; (ರೂಪ.) (ಪರಿಸ್ಥಿತಿ, ಮೊ. ಗಳ) ಪ್ರಸನ್ನ ಮುಖ, ಅನುಕೂಲ ದೃಷ್ಟಿ]. ನಗುಮುಖದ, ಪ್ರಸನ್ನ, ಉಲ್ಲಾಸದ, ನಲಿವಿನ. **Súnnily** (ಕ್ರಿ. ವಿ.) ; **Súnniness** (ನಾ.) ; **Súnproof** (ಗು.) ಬಿಸಿಲು ತೂರದ. **Súnward** (ಗು., ಕ್ರಿ. ವಿ.) ಸೂರ್ಯನ ಕಡೆ(ಗೆ), ಸೂರ್ಯಾಭಿಮುಖ(ವಾಗಿ). **Súnwards** (ಕ್ರಿ. ವಿ.) ; **Súnwise** (ಕ್ರಿ. ವಿ.) ಪ್ರದಕ್ಷಿಣವಾಗಿ.

Sun (ಕ್ರಿ.) ಬಿಸಿಲಿಗೆ—ಒಡ್ಡು, ಹಿಡಿ [S. oneself ಬಿಸಿಲು ಕಾಯಿ(ಸು)] ; ಬಿಸಿಲಿನಲ್ಲಿ—ಇಡು, ಒಣಗಿಸು ; ಬಿಸಿಲು ಕಾಯಿಸು.

Súnday ಸಂಡೇ (ನಾ.) ಆದಿತ್ಯ, ಭಾನು, —ವಾರ [Hospital S. (Hospital ನೋಡಿ). Low S. ಈಸ್ಟರ್ ದಿನದ ತರುವಾಯದ ಭಾನುವಾರ. Palm S. (Palm[1] ನೋಡಿ). Rogation S. ಯೇಸು ಕ್ರಿಸ್ತನ ಸ್ವರ್ಗಾರೋಹಣ ದಿನದ ಹಿಂದಿನ (ಈಸ್ಟರ್ ದಿನದ ತರುವಾಯದ ಐದನೆಯ) ಭಾನುವಾರ. Show S. (Show ನೋಡಿ). Month of Sundays ಗೊತ್ತುಮಾಡಲಾಗದ ಕಾಲ, ದೀರ್ಘಕಾಲ, ಅನಿಶ್ಚಿತ ಕಾಲ. S. letter = Dominical letter (Dominical ನೋಡಿ). S. best (Best ನೋಡಿ). S.-school ಮತಶಿಕ್ಷಣಕ್ಕಾಗಿ ಭಾನುವಾರಗಳಲ್ಲಿ ನಡಸುವ ಪಾಠಶಾಲೆ: ಭಾನುವಾರದ ಶಾಲೆ]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Súnder ಸಂಡರ್ (ಕ್ರಿ.) ಬೇರ್ಪಡು, ಬೇರ್ಪಡಿಸು, ಅಗಲು, ಅಗಲಿಸು ; ಪಾಲು, ಭಾಗ, —ಆಗು, ಮಾಡು ; ಒಡೆ(ದುಹೋಗು) ; ಕಡಿ(ದು—ಹಾಕು, ಹೋಗು). **Súnderance** (ನಾ.) (ವಿರ. ಪ್ರ.)

Súndry ಸಂಡ್ರಿ (ಗು., ನಾ.) (ಮು., ಪ್ರಾಚೀ. ಪ್ರ. ಮತ್ತು ಹಾಸ್ಯ ಪ್ರ.) ಬಗೆ ಬಗೆಯ, ವಿವಿಧ (All & s. ಎಲ್ಲರೂ, ಪ್ರತಿಯೊಬ್ಬರೂ, ಸಿಕ್ಕಿದವರೆಲ್ಲ). (ನಾ., ಬ. ವ. ದಲ್ಲಿ) ಚಿಲ್ಲರೆ—ಅಂಶಗಳು, ಪದಾರ್ಥಗಳು ; ಚಿಲ್ಲರೆ ಪಲ್ಲರೆ (ಬಾಬುಗಳು)

Sung. **Sing** ನೋಡಿ.

Sunk(en). **Sink** ನೋಡಿ.

Sunn(-hemp) ಸನ್(—ಹೆಂಪ್) (ನಾ.) ಸಣಬು.

Súnna(h) ಸ(ಸು)ನ (ನಾ.) ಷಿಯಾ ಪಂಗಡದವರಿಂದ ನಿರಾಕರಿಸಲ್ಪಟ್ಟಿರುವ ಆದರೆ ಸಂಪ್ರದಾಯಸ್ಥರಾದ ಸುನ್ನಿ ಪಂಗಡದವರಿಂದ ಸ್ವೀಕರಿಸಲ್ಪಟ್ಟಿರುವ, ಮಹಮ್ಮದನ ವಚನಗಳನ್ನು ಅಥವಾ ಕಾರ್ಯಗಳನ್ನು ಆಧಾರವಾಗುಳ್ಳ ಆದರೆ ಆತ ಬರೆದಿಟ್ಟಿಲ್ಲದ, ಮಹಮ್ಮದೀಯ ಧರ್ಮಶಾಸ್ತ್ರದ ಸಾಂಪ್ರದಾಯಿಕ ಭಾಗ: ಸುನ್ನ, ಸಂಪ್ರದಾಯ. **Súnni** ಸ(ಸು)ನಿ, **Súnnite** (ನಾ.) ಸುನ್ನಿ (ಪಂಗಡದವನು), ಸಂಪ್ರದಾಯಸ್ಥ.

Súnny. **Sun** ನೋಡಿ.

Sup ಸಪ್ (ಕ್ರಿ., ನಾ.) (ಸಾರು, ಟೀ, ಮೊ. ನ್ನು, ದ್ರವಾಹಾರವನ್ನು) ನಾಲಗೆಯಲ್ಲಿ ಮೊಗೆದು, ಸಣ್ಣ ಗುಟುಕುಗಳಲ್ಲಿ, ಚಮಚದಲ್ಲಿ ಎತ್ತಿಕೊಂಡು—ಕುಡಿ, ಚೀಪು (He must have a long spoon that sups with the devil ದುಷ್ಟರೊಡನೆ ವ್ಯವಹಾರ ಮಾಡುವವರು ತಮ್ಮ ಚಾತುರ್ಯವನ್ನೆಲ್ಲ ಉಪಯೋಗಿಸಬೇಕು, ಬಹಳ ಜಾಗರೂಕರಾಗಿರಬೇಕು). (ನಿರ್ದಿಷ್ಟ ಆಹಾರವನ್ನು) ರಾತ್ರಿಯೂಟಮಾಡು (*On, off* ಉಪ. ದೊಡನೆ) ; (ಆತಿಥ್ಯಕಾರಿಯ ವಿಷಯದಲ್ಲಿ) ರಾತ್ರಿಯೂಟ—ಹಾಕು, ಒದಗಿಸು ; (ಆಹಾರದ ವಿಷಯದಲ್ಲಿ) ರಾತ್ರಿಯೂಟಕ್ಕೆ—ಒದಗು, ಆಗು. (ನಾ.) ಗುಟುಕು (Neither bit *or* bite nor s. ತುಣುಕು ತಿಂಡಿಯೂ ಇಲ್ಲ, ಗುಟುಕು ತೀರ್ಥವೂ ಇಲ್ಲ). **Súpper** (ನಾ.) ರಾತ್ರಿಯೂಟ. **Súpperless** (ಗು.)

Sup-. **Sub-** ನೋಡಿ.

Súper ಸೂ(ಸ್ಯೂ)ಪರ್ (ನಾ., ಗು.) (ವ್ಯಾಪಾರದ ಬಳ. ಮಾ.) (ನಾಟಕಮಂಡಲಿಯಲ್ಲಿ ಕಾಯಂ ನಟನಲ್ಲದ ದೊಂಬಿ ದೃಶ್ಯ, ಪ್ರದರ್ಶನ ದೃಶ್ಯ, ಮೊ. ಗಳಲ್ಲಿ ರಂಗಸ್ಥಳದಮೇಲೆ ನಿಲ್ಲಿಸುವುದಕ್ಕಾಗಿ ನೇಮಿಸಿಕೊಳ್ಳುವ) ಹೆಚ್ಚಿಗೆಯ ನಟ; ಇಸಂಧರ್ಶಿ ನಟ. (ರೂಪ.) ಹೆಚ್ಚಿಗೆಯ, ಬೇಕಾಗಿಲ್ಲದ, ಅಮುಖ್ಯ,—ವ್ಯಕ್ತಿ, ವಸ್ತು. (ವ್ಯಾಪಾರ) ಅತ್ಯುತ್ಕೃಷ್ಟವಾದ—ಬಟ್ಟೆ, ತಯಾರಿಕೆ. (ಗು.) ಅತ್ಯುತ್ಕೃಷ್ಟವಾದ ; (ಅಳತೆಯ ವಿಷಯದಲ್ಲಿ) ಮೇಲ್ಮೈಯ ವಿಸ್ತೀರ್ಣದ, ಚದರ (120 s. ft ೧೨೦ ಚದರ ಅಡಿ). [Supernumerary, Superfine, Superficial ಪದಗಳ ಸಂಕ್ಷಿಪ್ತ]

Super- ಸೂ(ಸ್ಯೂ)ಪರ್— (ನ. ಪೂ. ಪ.) ಗುಣವಾಚಕ ಪದಗಳು ಮತ್ತು ಅವುಗಳ ವ್ಯುತ್ಪನ್ನ ಪದಗಳಲ್ಲಿ: (೧) —ರ ಮೇಲುಗಡೆಯಿರುವ, ಮೇಲಿರುವ (-columnar, -humeral) ; (೨) (ಒಳಗೆ ಅಥವಾ ಕೆಳಗೆ ಅಲ್ಲದೆ) ಮೇಲಿನ, ಅಧಿ, ಉಪರಿಷ್ಠ (-aqueous, -terrene) ; (೩) ಮೀರಿದ, ಅತೀತ, ಅತಿ (-natural, -sensible) ; ಕ್ರಿಯಾಪದಗಳು, ಗುಣವಾಚಕಗಳು ಮತ್ತು ಅವುಗಳ ವ್ಯುತ್ಪನ್ನ ಪದಗಳಲ್ಲಿ : (೪) ಮೇಲೆ, ಮೇಲುಗಡೆ, ಮೇಲಿನಿಂದ (ಮಾಡಿದ) (-impose, -intend); (೫) ಮೇಲೆ, ಜೊತೆಗೆ, ಹೆಚ್ಚಾಗಿ (-add, -erogation); (೬) (ಮಿತಿ)ಮೀರಿ, ಅತಿ(ಯಾಗಿ), ಅತ್ಯಂತ(ವಾಗಿ) (-eminent, -subtle). ನಾಮವಾಚಕಗಳು ಮತ್ತು ಅವುಗಳ ವ್ಯುತ್ಪನ್ನಗಳಲ್ಲಿ: (೭) ಮೇಲಿನ, ಹೊರ(ಗಣ) (-canopy, -cilious) ; (೮) (ಮು., ವರ್ಗ ವಿಭಾಗಗಳ ಹೆಸರುಗಳಲ್ಲಿ) ಮೇಲು ತೆರದ (-class) ; (೯) ಎರಡನೆಯ (-parasite, -tuberation). (೧೦) ಗಣಿತಶಾಸ್ತ್ರ ಪದಗಳಲ್ಲಿ ಪ್ರಮಾಣ ಸೂಚಕವಾಗಿ (-biquintal, -bitertial)

Superabóund (ಕ್ರಿ. ಅಕ.) (6) ತುಂಬಿ ತುಳುಕು, ಬಹು ಸಮೃದ್ಧಿಯಾಗಿರು. **-abúndance** (ನಾ.), **-abúndant** (ಗು.), **-abúndantly** (ಕ್ರಿ. ವಿ.) ; **Superádd** (ಕ್ರಿ. ಸಕ.) (5) ಜೊತೆಗೆ, ಹೆಚ್ಚಾಗಿ, ಮೇಲೆ, —ಸೇರಿಸು, ಕೂಡು. **-addítion** (ನಾ.) ; **Súperaltar** (ನಾ.) (7) ಪವಿತ್ರಗೊಳಿಸಿಲ್ಲದ ಬಲಿಪೀಠದ ಮೇಲೆ ಇಟ್ಟ ಪವಿತ್ರಗೊಳಿಸಿದ ಕಲ್ಲುಹಲಗೆ: ಬಲಿಪೀಠದ ಮೇಲಿನ ಪೀಠ. **Superánal** (ಗು.) (1) ಗುದದ್ವಾರದ ಮೇಲಿನ. **Superangélic** (ಗು.) (3) ಅತಿ ದಿವ್ಯ. **Superánnuate** (ಕ್ರಿ. ಸಕ.) (3) (ಕೆಲಸ ಮಾಡಲು, ಪ್ರಯೋಜನಕ್ಕೆ ಬರಲು, ಇನ್ನು ಮುಂದೆ ಕೆಲಸಕ್ಕೆ ಇರಲು) ವಯಸ್ಸಾಯಿತೆಂದು, ಅತಿ ವೃದ್ಧನೆಂದು, —ತೆಗೆದುಹಾಕು, ನಿವೃತ್ತ ಮಾಡು ; ವಿಶ್ರಾಂತಿವೇತನ ಕೊಟ್ಟು ಕಳಿಸಿಬಿಡು ; (ಭೂ. ಕೃ. ನಲ್ಲಿ) (ವಯಸ್ಸಾದ್ದರಿಂದ) ದುಡಿಯಲಾರದ, ಪ್ರಯೋಜನಕ್ಕೆ ಬರದ. **-annuátion** (ನಾ.) ; **Superáqueous** (ಗು.) (2) ನೀರಮೇಲಣ. **Superbipártient, -bitértial** (ಗು.) (10) ೫ : ೩ ಪ್ರಮಾಣದ. **Superbiquíntal** (ಗು.) (10) ೭: ೫ ಪ್ರಮಾಣದ. **Supercálendered** (ಗು.) (6) ಅತಿಯಾಗಿ ಇಸ್ತ್ರಿಮಾಡಿದ, ಬಹು ನುಣುಪುಮಾಡಿದ. **Supercánopy** (ನಾ.) (7) ಮೇಲಿನ ಮೇಲ್ಕಟ್ಟು ; ಮೇಲ್ವಿತಾನ. **Súpercargo** (ನಾ.) (1) ವ್ಯಾಪಾರದ ಹಡಗಿನಲ್ಲಿ ಸರಕಿನ ಮಾರಾಟ, ಮೊ. ಗಳನ್ನು ನೋಡಿಕೊಳ್ಳುವವನು: ಸರಕು ಮೇಲ್ವಿಚಾರಕ. **Superceléstial** (ಗು.) (2, 3) ಆಕಾಶದ, ಸ್ವರ್ಗದ, —ಮೇಲಿನ ; ಅತಿದಿವ್ಯ. **Súpercharger** (ನಾ.) (6) ಮೋಟಾರು ಬಂಡಿಗಳಲ್ಲೂ ವಿಮಾನಗಳಲ್ಲೂ ಎಂಜಿನಿನ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ಅದರ ಕೊಳವೆಯೊಳಕ್ಕೆ ಅಧಿಕ ಮೊತ್ತದ ಸ್ಫೋಟಕ ಮಿಶ್ರಣವನ್ನು ಹೊಗಿಸುವ ಪಂಪು: ಅತಿಪೂರಕ (ಪಂಪು). **Supercíliary** (ಗು.) (7) ಕಣ್ಣಮೇಲಿನ, ಹುಬ್ಬಿನ. **Supercílious** (ಗು.) (7) ದರ್ಪದ, ಪ್ರತಿಷ್ಠೆಯ ; ಉಪೇಕ್ಷೆಯ, ತಿರಸ್ಕಾರಭಾವದ ; ಕಟು ವಿಮರ್ಶೆಯ, ಕುಶಪಿಷ್ಟೆಯ. **-cíliously** (ಕ್ರಿ. ವಿ.), **-cíliousness** (ನಾ.) ; **Supercívilized** (ಗು.) (6) ಅತಿ ನಾಗರಿಕತೆಯ. **Súperclass** (ನಾ.) (8) (ಹಲವು ವರ್ಗಗಳನ್ನು ಒಳಗೊಂಡ) ಮೇಲಿನ ವರ್ಗ, ಉಪರಿ ವರ್ಗ. **Supercolúmnar** (ಗು.) (1) ಕಂಬ(ಸಾಲು)ಗಳ ಮೇಲಿನ. **Supercolumniátion** (ನಾ.) (ಸ್ತಂಭ ರಚನೆಯಲ್ಲಿ) ಒಂದು ಮಾದರಿಯ ಕಂಬಸಾಲನ್ನು ಮತ್ತೊಂದು ಮಾದರಿಯದರಮೇಲೆ ಕಟ್ಟುವುದು : ಸ್ತಂಭೋಪರಿಸ್ತಂಭ ರಚನೆ. **Superdreádnought** (ನಾ.) (3) ಡ್ರೆಡ್‌ನಾಟ್‌ಗಿಂತ ಬಲಿಷ್ಠವಾದ ಯುದ್ಧದ ಹಡಗು. **Super-elevátion** (ನಾ.) (8) (ರೈಲು ರಸ್ತೆಯಲ್ಲಿ) ತಿರುವಿನಲ್ಲಿ ಒಳಕಂಬಿಗಿಂತ ಹೊರ ಕಂಬಿಯನ್ನು ಎತ್ತರಿಸಿರುವ ಮೊತ್ತ : (ಹೊರ ಕಂಬಿಯ) ಮೇಲೆತ್ತರ, ಅಧಿಕೋನ್ನತಿ. **Superéminent** (ಗು.) (6) ಅತ್ಯುತ್ಕೃಷ್ಟ, ಅತ್ಯುತ್ತಮ. **-éminently** (ಕ್ರಿ. ವಿ.), **-éminence** (ನಾ.) ; **Supererogátion** (ನಾ.) (5) ಮಾಡಬೇಕಾದ್ದಕ್ಕಿಂತ, ಕರ್ತವ್ಯಕ್ಕಿಂತ, ಹೆಚ್ಚಾಗಿ ಮಾಡುವುದು : ಅಧಿಕಾಚರಣೆ [(ಮು., ದೇವ. ಶಾ.) Works of s. (ಸಾಧು ಸಂತರೂ ಸತ್ಪುರುಷರೂ ತಮ್ಮ ಮುಕ್ತಿ ಸಾಧನೆಗೆ ಬೇಕಾದ್ದಕ್ಕಿಂತ ಹೆಚ್ಚಾಗಿ ಮಾಡಿರುವ, ಪಾಪಿಗಳ ಉದ್ಧಾರಕ್ಕಾಗಿ ಪ್ರಯೋಜನವಾಗುವ) ಅಧಿಕ ಪುಣ್ಯಾಚರಣೆ] ; **-erógatory** (ಗು.) ; **Superéthical** (ಗು.) (3) ನೀತಿ ವಿಷಯಾತೀತ, ಅತಿನೈತಿಕ, ನೀತ್ಯತೀತ. **Superéxcellent** (ಗು.) (6) ಪರಮೋತ್ತಮ, ಪರಮೋತ್ಕೃಷ್ಟ. **-éxcellently** (ಕ್ರಿ. ವಿ.) ; **-éxcellence** (ನಾ.) ; **Superexcitátion** (ನಾ.) (6) ಅತ್ಯುದ್ರೇಕ. **Súperfamily** (ನಾ.) (8) (ಜೀ. ವಿ.) (ಹಲವು ವಂಶಗಳನ್ನೊಳಕೊಂಡ) ಮೇಲಿನ ವಂಶ. **Superfátted** (ಗು.) (6) (ಸಾಬೂನಿನ ವಿಷಯದಲ್ಲಿ) ಅತಿಯಾಗಿ ಕೊಬ್ಬು ಸೇರಿಸಿದ. **Superfecundátion, -fetátion** (ನಾ.) (5) ಒಂದು ಗರ್ಭ ಪೋಷಣೆಯ ಕಾಲದಲ್ಲಿ ಉಂಟಾಗುವ ಮತ್ತೊಂದು ಗರ್ಭಧಾರಣೆ : ಉಪರಿ ಗರ್ಭಧಾರಣ, ಬಸಿರಮೇಲೆ ಬಸಿರು. **Superfícial** (ಗು.) (7) ಮೇಲ್ಮೈಯ ; ಮೇಲು ಮೇಲಿನ ; ಆಳಕ್ಕೆ ಹೋಗಿಲ್ಲದ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಳವಿಲ್ಲದ; ಹೊರಗಣ, ಬಾಹ್ಯ; ತೋರ್ಕೆಯ (S. colour, resemblance, knowledge, wound. A s. person ಬರಿ ತೋರ್ಕೆಯವನು, ಆಳವಿಲ್ಲದವನು); (ಅಳತೆಯ ವಿಷಯದಲ್ಲಿ) ಚದರ. **Superfícially** (ಕ್ರಿ. ವಿ.); **Superficiálity** (ನಾ.); **Superfícies** (—ಫಿಷಿಈಸ್) (ನಾ.; ಬ. ವ. ಅದೇ) (7) ಮೇಲ್ಮೈ; ಹೊರ ನೋಟ, ತೋರ್ಕೆಮುಖ (Notwithstanding the s. of a material prosperity). **Súperfine** (ಗು.) (6) ಬಹಳ—ಸೊಗಸಾದ, ನಯವಾದ; ಅತ್ಯುತ್ಕೃಷ್ಟ; ಅತಿನಾಜೂಕಿನ, ಅತಿಸೂಕ್ಷ್ಮದ. **Superfíneness** (ನಾ.); **Superflúity** (ನಾ.) (6) ಬೇಕಾದ್ದಕ್ಕಿಂತ ಹೆಚ್ಚಾಗಿರುವ ಮೊತ್ತ, ಹೆಚ್ಚಿಗೆ (Give of one's s.); ಅನಾವಶ್ಯಕ ವಸ್ತು; ಅತಿಸಮೃದ್ಧಿ, ಅತ್ಯಾಧಿಕ್ಯ, ಯಥೇಚ್ಛ. **Supérfluous** (ಗು.); **-fluously** (ಕ್ರಿ. ವಿ.), **-fluousness** (ನಾ.) (6); **Superheát** (ಕ್ರಿ. ಸಕ.) (6) (ಮು., ಆವಿಯನ್ನು ಕುದಿನೀರಿನ ಶಾಖಕ್ಕಿಂತ) ಅತಿಯಾಗಿ, ಮಿತಿಮೀರಿ, —ಕಾಯಿಸು. **-heáter** (ನಾ.) (6) ಅತಿತಾಪಕ. **Súperhive** (ನಾ.) (7) ಜೇನುಗೂಡಿನ ಕಳಚಿ ತೆಗೆಯಲಾಗುವ ಮೇಲಿನ ಅರೆ: ಮೇಲು ಗೂಡು. **Superhúman** (ಗು.) (3) ಮನುಷ್ಯಾತೀತ, ಅತಿಮಾನುಷ; ದಿವ್ಯ; ಮನುಷ್ಯ ಶಕ್ತಿಗೆ ಮೀರಿದ (S. tasks). **-húmanly** (ಕ್ರಿ. ವಿ.); **Superhúmeral** (ನಾ.) (1) ಹೆಗಲಮೇಲೆ ಧರಿಸುವ ವಸ್ತ್ರ, ಉತ್ತರೀಯ; (ಪಾದ್ರಿಗಳು, ಮೊ. ರು ಧರಿಸುವ) ಕವುದಿ. **Superimpóse** (ಕ್ರಿ. ಸಕ.) (4) (ಮತ್ತೊಂದರ)ಮೇಲೆ—ಇಡು, ಹಾಕು (*On* ಉಪ. ದೊಡನೆ). **Superimpregnátion** (ಗು.) (5) =Superfecundation. **Superincúmbent** (ಗು.) (5) (ಮತ್ತೊಂದರ)ಮೇಲೆ—ಇರುವ, ಒರಗಿರುವ (The s. mass); ಒತ್ತುತ್ತಿರುವ, ಭಾರವಾಗಿರುವ. **Superindúce** (ಕ್ರಿ. ಸಕ.) (5) (ಆಗಲೆ ಇರುವುದರ ಜೊತೆಗೆ) ಹೆಚ್ಚಿನದಾಗಿ—ಉಂಟುಮಾಡು, ಪ್ರೇರಿಸು. **Superinstitútion** (ನಾ.) (5) ಆಗಲೆ ಒಬ್ಬನು ಅನುಭವಿಸುತ್ತಿರುವ ಮಠವೃತ್ತಿಗೆ ಮತ್ತೊಬ್ಬನನ್ನು ನೇಮಿಸುವುದು. **Superinténd** (ಕ್ರಿ.) (4) ಮೇಲ್ವಿಚಾರಣೆ—ನಡಸು, ನೋಡಿಕೊ; ಆಡಳಿತ ನಿರ್ವಹಿಸು. **-inténdence** (ನಾ.); **-inténdent** (ನಾ.) ಮೇಲ್ವಿಚಾರಕ, ನಿರ್ವಾಹಕ. **Superjácent** (ಗು.) (4) ಮೇಲಿರುವ. **Supérlative** (ಗು., ನಾ.) (6) ಅತ್ಯಂತ, ಅತ್ಯುತ್ತಮ, ಅತ್ಯುತ್ಕೃಷ್ಟ, ಪರಮ [S. wisdom, beauty. S. degree (ವ್ಯಾ.) ತಮ—ಭಾವ, ರೂಪ]. (ನಾ.) ತಮ—ಭಾವ, ರೂಪ(ದ ಪದ) (His talk is all superlatives ಅವನ ಮಾತೆಲ್ಲ ಬರಿಯ ಅತಿಶಯೋಕ್ತಿ). **-latively** (ಕ್ರಿ. ವಿ.), **-lativeness** (ನಾ.); **Superlúnar(y)** (ಗು.) (2) ಚಂದ್ರನಿಗಿಂತ—ಮೇಲಿರುವ, ಆಚೆಯಿರುವ; (ಮು.) ಭೂಲೋಕದ್ದಲ್ಲದ, ಅಲೌಕಿಕ. **Súperman** (ನಾ.) (8) ಲೋಕಾತೀತ ಪುರುಷ, ಲೋಕೋತ್ತರ ಪುರುಷ [=Overman (ಆ ಪದ ನೋಡಿ)]. **Supermédial** (ಗು.) (1) ಮಧ್ಯದ ಮೇಲಿನ. **Supermólecule** (ನಾ.) (8) (ಭೌ. ವಿ.) (ಏಕೀಭವಿಸಿ ವರ್ತಿಸುವ) ಸಂಯುಕ್ತಾಣು. **Supermúndane** (ಗು.) (3) ಪ್ರಾಪಂಚಿಕಕ್ಕಿಂತ ಉತ್ತಮವಾದ, ಲೋಕೋತ್ತರ. **Supernáculum** (ಕ್ರಿ. ವಿ., ನಾ.) ಒಂದು ತೊಟ್ಟೂ ಬಿಡದೆ [Drink s. ಒಂದು ತೊಟ್ಟೂ ಬಿಡದೆ ಕುಡಿದುಬಿಡು (ಕಡೆಯ ತೊಟ್ಟನ್ನು ಹೆಬ್ಬೆರಳಿನ ಉಗುರಿನಮೇಲೆ ಹಾಕಿಕೊಳ್ಳುವ ರೂಢಿಯಿಂದ)]. (ನಾ.) ಅತ್ಯುತ್ಕೃಷ್ಟ ಮದ್ಯ; (ರೂಪ.) ಅತ್ಯುತ್ತಮವಾದುದು, ಪರಮೋತ್ಕೃಷ್ಟವಾದುದು. **Supernátant** (ಗು.) (4) ಮೇಲೆ ತೇಲು(ತ್ತಿರು)ವ. **Supernátural** (ಗು.) (3) ಪ್ರಕೃತ್ಯತೀತ, ಅತಿಲೌಕಿಕ, ಅದ್ಭುತ. **-náturally** (ಕ್ರಿ. ವಿ.), **-náturalness** (ನಾ.); **-náturalism** (ನಾ.) —ದಲ್ಲಿ ನಂಬಿಕೆ. **-náturalist** (ನಾ.) —ನಂಬುವವನು. **-náturalize** (ಕ್ರಿ. ಸಕ.) ಪ್ರಕೃತ್ಯತೀತ, ಅಲೌಕಿಕ, —ಮಾಡು. **Supernórmal** (ಗು.) (3) ಸಾಧಾರಣಕ್ಕಿಂತ ಮೀರಿದ, ಅತೀತ ಸಾಮಾನ್ಯ. **Supernúmerary** (ಗು., ನಾ.) (3) (ಸಾಮಾನ್ಯವಾಗಿರಬೇಕಾದ ಸಂಖ್ಯೆಗಿಂತ) ಹೆಚ್ಚಿನ, ಅಧಿಕ (—ವಸ್ತು, ವ್ಯಕ್ತಿ); (ಮು., ಅನಿಯತ ಕಾರ್ಯಗಳಿಗಾಗಿ ನೇಮಿಸಿಕೊಂಡ) ಹೆಚ್ಚಿನ ಆಳು, ಅಧಿಕೋದ್ಯೋಗಿ. **Supernutrítion** (ನಾ.) (6) ಅತಿಪುಷ್ಟಿ. **Súperoctave** (ನಾ.) (9) (ಆರ್ಗನ್ ವಾದ್ಯದಲ್ಲಿ) ಪ್ರಧಾನ ಸ್ವರಾಷ್ಟಕಕ್ಕೆ ಎರಡು ಸ್ವರಾಷ್ಟಕಗಳು ಮೇಲಿರುವ ಕೀಲಿಕೈ. **Súperorder** (ನಾ.) (8) (ವರ್ಗೀಕರಣದಲ್ಲಿ: ಹಲವು ತರಗತಿಗಳನ್ನೊಳಗೊಂಡ) ಮೇಲಿನ ತರಗತಿ. **-órdinal** (ಗು.); **Superórdinary** (ಗು.) (3) ಅತೀತ ಸಾಮಾನ್ಯ; ಅಸಾಧಾರಣ. **Superorgánic** (ಗು.) (3, 8) ಅವಯವಾತೀತ, ಭೌತಾತೀತ, ಅತೀಂದ್ರಿಯ (The soul of man is s.); ಸುಸಂಘಟಿತ, ರಚನಾತಿಶಯವುಳ್ಳ, ಸರ್ವೋತ್ತಮ ವ್ಯವಸ್ಥೆಯ. **Superoxygenátion** (ನಾ.) (6) ಅತ್ಯಾಮ್ಲಜನಕ ಮಿಶ್ರಣ. **Superpárasite** (ನಾ.) (9) ಪರಸತ್ತ್ವೋಪಜೀವಿಯ ಸತ್ತ್ವೋಪಜೀವಿ; ಉಪಜೀವ್ಯುಪಜೀವಿ. **-parasític** (ಗು.); **Superphósphate** (ನಾ.) (6) ಪರಮಾಧಿಕ ಪ್ರಮಾಣದ ರಂಜಕಾಮ್ಲವುಳ್ಳ ರಂಜಕ ಲವಣ. **Superphýsical** (ಗು.) (3) ಭೌತಾತೀತ, ಅತಿಭೌತ. **Superpóse** (ಕ್ರಿ. ಸಕ.) (4) (ಮತ್ತೊಂದರ) ಮೇಲಿಡು (*On, upon* ಉಪ. ದೊಡನೆ). **-posítion** (ನಾ.); **Superquadripártient, -quadriquíntal** (ಗು.) (10) ೯ : ೫ ಪ್ರಮಾಣದ(ಲ್ಲಿರುವ). **Supersácral** (ಗು.) (1) ತ್ರಿಕಾಸ್ಥಿಯ ಮೇಲಿನ. **Supersáturate** (ಕ್ರಿ. ಸಕ.) (6) ಅತಿಪೂರಣ ಮಾಡು. **-saturátion** (ನಾ.); **Súperscribe** (ಕ್ರಿ. ಸಕ.) (4) (ಒಂದರ) ಮೇಲುಗಡೆ, ಮೇಲೆ, —ಬರೆ. **-script** (ಗು.) (ಪಂಕ್ತಿಯ) ಮೇಲುಗಡೆ, ಮೇಲೆ, —ಬರೆದ. **Superscríption** (ನಾ.) ಮೇಲು ಬರಹ; ಶಿರೋನಾಮೆ; ವಿಳಾಸ, ಮೇಲ್ವಿಳಾಸ. **Superséde** (ಕ್ರಿ. ಸಕ.) ತಳ್ಳಿಹಾಕು, ರದ್ದುಮಾಡು, ತೆಗೆದುಹಾಕು; ಮತ್ತೊಂದರ ಅಥವಾ ಮತ್ತೊಬ್ಬನ ಸ್ಥಳದಲ್ಲಿ—ತಂದು ಕೂರಿಸು, ನೇಮಿಸು, ಬರು, ನೇಮಕವಾಗು; ಇನ್ನೊಬ್ಬನ ತಲೆಯಮೇಲೆ—ತಂದು ಕೂರಿಸು, ಬರು, ಕುಳಿತುಕೊ. **-séssion** (ನಾ.); **Supersénsible** (ಗು.) (3) ಇಂದ್ರಿಯಾತೀತ, ಅತೀಂದ್ರಿಯ. **Supersénsitive** (ಗು.) (6) ಅತಿಸೂಕ್ಷ್ಮ. **Supersénsual** (ಗು.), **-sénsuous** (ಗು.) (3) =Supersensitive. **Supersesquiálteral** (ಗು.) (10) ೫ : ೨ ಪ್ರಮಾಣದ(ಲ್ಲಿರುವ). **-sesquitértial** (ಗು.) (10) ೭ : ೩ ಪ್ರಮಾಣದ. **Supersólar** (ಗು.) (2) ಸೂರ್ಯನಿಗಿಂತ ಮೇಲಿನ. **Súpersolid** (ನಾ.) (8) ಮೂರು ಪರಿಮಾಣಗಳಿಗಿಂತ ಹೆಚ್ಚುಳ್ಳ ಘನಾಕೃತಿ: ಅತಿಘನ (ನಾಲ್ಕು ಅಥವಾ ಹೆಚ್ಚು ಪರಿಮಾಣಗಳುಳ್ಳದ್ದು). **Superspíritual** (ಗು.) (6) ಅತ್ಯಂತಾಧ್ಯಾತ್ಮಿಕ, ಅತಿ ಪಾರಮಾರ್ಥಿಕ. **-spirituálity** (ನಾ.); **Superstítion** (ನಾ.) (4) ಮೂಢ—ಭಕ್ತಿ, ನಂಬಿಕೆ; ಮೂಢಾಚರಣೆ. **-stítious** (ಗು.), **-stítiously** (ಕ್ರಿ. ವಿ.), **-stítiousness** (ನಾ.); **Superstrátum** (ನಾ.) (4) ಮೇಲು—ಪದರ, ಸ್ತರ. **Superstrúction, Súperstructure** (ನಾ.) (4) ಮೇಲ್ ಕಟ್ಟಡ; (ತಳಹದಿಯ) ಮೇಲೆ ಕಟ್ಟಿದ ಕಟ್ಟಡ (ರೂಪ. ಸಹ). **-strúctural** (ಗು.); **Supersubstántial** (ಗು.) (3) ಭೌತಾತೀತ, ಅತಿಭೌತ, ಆಧ್ಯಾತ್ಮಿಕ. **Supersúbtle** (ಗು.) (6) ಅತಿಸೂಕ್ಷ್ಮ. **-súbtlety** (ನಾ.); **Súpertax** (ನಾ.) (8) (ಒಂದು ಗೊತ್ತಾದ ಮೊತ್ತಕ್ಕೆ ಮೇಲ್ಪಟ್ಟ ಆದಾಯದಮೇಲೆ, ಸಾಧಾರಣ ಆದಾಯ ತೆರಿಗೆಯ ಜೊತೆಗೆ ಹಾಕುವ) ಮೇಲು ತೆರಿಗೆ. **Supertellúric** (ಗು.) (2) ಭೂಮಿಯ ಮೇಲಿನ. **Supertémporal** (ಗು.) (1,3) ಕಣತಲೆಯ, ಕಪೋಲದ,—ಮೇಲಿನ. ಕಾಲಾತೀತ; ಶಾಶ್ವತ. **Supertérrene** (ಗು.), **-terréstrial** (ಗು.) (2) ಭೂಮಿಯ ಮೇಲಿನ. **Súpertonic** (ನಾ.) (3) ಆಧಾರ ಸ್ವರಕ್ಕೆ ಎರಡನೆಯ ಸ್ವರ. **Supertripártient** (ಗು.), **-triquártal** (ಗು.) (10) ೭ : ೪ ಪ್ರಮಾಣದ(ಲ್ಲಿರುವ). **Supertuberátion** (ನಾ.) (9) ಬೊಕ್ಕೆಯ ಮೇಲೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೊಕ್ಕೆ ಏಳುವುದು ; ಗೆಡ್ಡೆಗಳಮೇಲೆ ಗೆಡ್ಡೆಗಳಾಗುವುದು. **Supervacáneous** (ಗು.) (6) ಬೇಕಾದ್ದಕ್ಕಿಂತ ಹೆಚ್ಚಾದ, ಅನಾವಶ್ಯಕವಾದ. **Supervéne** (ಕ್ರಿ. ಅಕ.) (4) ಒಂದರಮೇಲೆ, ತರುವಾಯ, —ಬರು, ಸಂಭವಿಸು (After a cold, fever supervened ಚಳಿಯಮೇಲೆ ಜ್ವರ ಬಂದಿತು). **Supervéntion** (ನಾ.) (4); **Supervíse** —ವೈಸ್ (ಕ್ರಿ. ಸಕ.) (4) ಮೇಲ್ವಿಚಾರಣೆ, ಮೇಲ್ತನಿಖೆ, ಉಸ್ತುವಾರಿ, —ನಡಸು, ನೋಡು. **Supervísion** —ವಿಷನ್ (ನಾ.); **Súpervisor** —ವೈಸರ್ (ನಾ.) ಮೇಲ್ವಿಚಾರಕ.

Súperable ಸೂ(ಸ್ಯೂ)ಪರಬ್‌ಲ್ (ಗು.) ದಾಟಲು ಸಾಧ್ಯವಾದ, ನಿವಾರ್ಯ, ಸಾಧ್ಯ.

Supérb ಸು(ಸ್ಯು)ಪರ್ಬ್ (ಗು.) ಮಹಾ ವೈಭವದ, ಬಲು ಸೊಗಸಾದ, ಥರ್ಜರಿ, ಭವ್ಯ (S. beauty. A s. voice). **Supérbly** (ಕ್ರಿ. ವಿ.)

Supérior ಸು(ಸ್ಯು)ಪೀ(ಅ)ರಿಯರ್ (ಗು., ನಾ.) ಮೇಲುಗಡೆಯಿರುವ; ಮೇಲ್ಪಟ್ಟ, ಮೇಲಿನ (—ಸ್ಥಾನದ, ಪದವಿಯ, ದರ್ಜೆಯ) ; ಹಿರಿಯ, ಉತ್ಕೃಷ್ಟ, ಉಚ್ಚ [S. officer, rank, court. S. limit (Limit ನೋಡಿ). S. genus ವರ್ಗೀಕರಣ ಶ್ರೇಣಿಯಲ್ಲಿ ಮೇಲಿನದಾಗಿ, ಹೆಚ್ಚು ವ್ಯಾಪಕವಾದ ಜಾತಿ: ಮೇಲಿನ, ಉನ್ನತ, —ಜಾತಿ. S. wings (ಮಿಕ್ಕ ರೆಕ್ಕೆಗಳಮೇಲೆ ಮಡಿಚಿಕೊಳ್ಳುವ) ಮೇಲಿನ ರೆಕ್ಕೆಗಳು. S. figures, letters ಪಂಕ್ತಿಯ ಮೇಲುಗಡೆಯಿರುವ ಅಂಕಿಗಳು, ಅಕ್ಷರಗಳು: ಮೇಲ್—ಅಂಕಿಗಳು, ಅಕ್ಷರಗಳು. S. limb (of sun, etc.) (ಸೂರ್ಯ, ಮೊ. ಗಳ) ಮೇಲಂಚು. Ovary is s. ಅಂಡಾಶಯ ಪುಷ್ಪಪಾತ್ರದ ಮೇಲೆ ಅಥವಾ ಮೇಲುಗಡೆ ಬೆಳೆಯುತ್ತದೆ] ; ಮೇಲಾದ, ಉತ್ತಮವಾದ, ಉತ್ಕೃಷ್ಟ, ಶ್ರೇಷ್ಠ [By s. wisdom. S. numbers ಹೆಚ್ಚು ಸಂಖ್ಯೆ(ಯ ಜನ) (Was overcome by s. numbers). S. persons ಉತ್ತಮರು, ಸುಸಂಸ್ಕೃತರು, ಶ್ರೇಷ್ಠರು ; (ಸಾ., ವ್ಯಂಗ್ಯ ಪ್ರ.) ಸ್ವಪ್ರತಿಷ್ಠೆಯವರು, ದೊಡ್ಡಸ್ತಿಕೆ ಮೆರೆಯುವವರು (He remarked with a s. air ಠೇಂಕಾರದಿಂದ ಟೀಕಿಸಿದನು)]. ಸೋಲದ, ಒಳಗಾಗದ, ವಶವಾಗದ (*To* ಉಪ. ದೊಡನೆ) (S. to bribery, temptation. Rise s. to —ಕ್ಕೆ ಮೇಲ್ಪಟ್ಟಿರು, —ಇಂದ ಚಲಿತನಾಗದಿರು). (ನಾ.) ಮೇಲಿನವನು, ಮೇಲ್ಪಟ್ಟವನು, ಉತ್ತಮ(ನಾದವನು), ಹಿರಿಯ, ಶ್ರೇಷ್ಠ (Is deferential to his superiors. Has no s. in courage ಧೈರ್ಯದಲ್ಲಿ ಅವನಿಗೆ ಮೇಲಾದವನು, ಮಿಗಿಲಾದವನು, ಇಲ್ಲ). ಮಠ, ಮೊ. ಗಳ ಮುಖ್ಯಸ್ಥ; ಮಠ ಸಂಸ್ಥೆಯ ಯಜಮಾನ (Father S. ಮುಖ್ಯಸ್ಥ. Mother, Lady, S. ಮುಖ್ಯಸ್ಥೆ) [**Supérioress** (ನಾ., ಸ್ತ್ರೀ.) (ವಿರ. ಪ್ರ.)]. **Superiórity** (ನಾ.) ಮೇಲ್ಮೆ, ಹಿರಿಮೆ, ಹೆಚ್ಚುಗಾರಿಕೆ, ಆಧಿಕ್ಯ; ಶ್ರೇಷ್ಠತೆ. **Supériorly** (ಕ್ರಿ. ವಿ.) (ಮು., ಸ. ವಿ., ಅಂ. ರ. ಶಾ, ಮೊ. ಗಳಲ್ಲಿ ; ಸ್ಥಾನ ನಿರ್ದೇಶಮಾಡುವಲ್ಲಿ ಪ್ರ.)

Supérnal ಸು(ಸ್ಯು)ಪರ್ನಲ್ (ಗು.) (ಕಾವ್ಯ, ಅಲಂ.) ಆಕಾಶದ(ಲ್ಲಿರುವ), ಉನ್ನತ; ಉಚ್ಚ, ಉದಾತ್ತ; ಸ್ವರ್ಗದ, ಸ್ವರ್ಗೀಯ, ದಿವ್ಯ.

Supersédeas ಸೂ(ಸ್ಯೂ)ಪರ್‌ಸೀಡಿಅ್ಯಸ್ (ನಾ.) ನ್ಯಾಯ ವ್ಯವಹಾರವನ್ನು ಮುಂದುವರಿಯದಂತೆ ನಿಲ್ಲಿಸುವ ಆಜ್ಞಾಪತ್ರ: ತಡೆ ಆಜ್ಞೆ.

Súpinate ಸೂ(ಸ್ಯೂ)ಪಿನೇಟ್ (ಕ್ರಿ. ಸಕ.) ಅಂಗೈ, ಅಂಗಾಲು, —ಮೇಲ್ಮುಖಮಾಡು (Pronate ಪದದೊಡನೆ ಹೋಲಿಸಿ). **Supinátion** (ನಾ.); **Súpinator** (ನಾ.) (ಅಂಗೈಯನ್ನು, ಅಂಗಾಲನ್ನು) ಮೇಲ್ಮುಖನಾಗಿ ತಿರುಗಿಸುವ ಸ್ನಾಯು (ಉದಾ., S. radii brevis, S. radii longus)

Súpine ಸೂ(ಸ್ಯೂ)ಪೈನ್ (ಗು.) ಅಂಗತ್ತನಾಗಿ, ಬೆನ್ನಮೇಲೆ, —ಮಲಗಿರುವ ; ಮೇಲ್ಮುಖವಾದ, ಅಂಗತ್ತನಾದ (Prone ಪದ ನೋಡಿ). ಶ್ರಮಿಸಲು ಇಚ್ಛೆಯಿಲ್ಲದ, ಸೋಮಾರಿಯಾದ, ಆಲಸ್ಯದ, ಜಡ (S. rulers). **Supínely** (ಕ್ರಿ. ವಿ.); **Supíneness** (ನಾ.)

Súpper. Sup ನೋಡಿ.

Supplánt ಸಪ್ಲಾಂಟ್ (ಕ್ರಿ. ಸಕ.) (ಮು., ಮೋಸದಿಂದ ಒಬ್ಬನನ್ನು ಓಡಿಸಿ, ಅವನ) ಸ್ಥಳದಲ್ಲಿ—ಬರು, ಬಂದು ಕುಳಿತುಕೊ ; ಮೋಸದಿಂದ ಆಕ್ರಮಿಸು ; ದುರಾಕ್ರಮಣ ಮಾಡು. ಕಿತ್ತುಹಾಕು, ನಿರ್ಮೂಲಮಾಡು. **Supplánter** (ನಾ.)

Súpple ಸಪ್‌ಲ್ (ಗು., ಕ್ರಿ.) ಸುಲಭವಾಗಿ ಬಗ್ಗುವ, ಮಣಿಯುವ; ಮೆದುವಾದ, ನಮ್ಯ ; ಬಹಳ ನಯದ ; ಹೇಳಿದಂತೆ—ಕೇಳುವ, ನಡೆಯುವ ; ನಮ್ರ, ವಶ್ಯ ; ಬಹಿರಂಗ ಪ್ರತಿಭಟನೆಯಿಲ್ಲದ ; ದೃಢ ಸ್ವಭಾವವಿಲ್ಲದ ; ಚಾತುರ್ಯದ ವಿನಯ ತೋರುವ ; ನಯೋಪಾಯದ ; ಪರೇಂಗಿತವರಿತು ಹೊಂದಿಕೊಳ್ಳುವ ; ಮೆತ್ತಗ. [S.-jack ಹಲವು ಬಗೆಯ ಗಟ್ಟಿ ಬಳ್ಳಿ ; ಇದರಿಂದ ಮಾಡಿದ ಬೆತ್ತ, ದೊಣ್ಣೆ]. (ಕ್ರಿ.) ನಮ್ಯ, ಮೆತು, ವಶ್ಯ, ನಮ್ರ, —ಮಾಡು, ಆಗು (S. horse ಲಗಾಮನ್ನು ಮುಟ್ಟಿದ ಕೂಡಲೆ ವಿಧೇಯವಾಗಿ ನಡೆದುಕೊಳ್ಳುವಂತೆ ಕುದುರೆಯನ್ನು ತರಪೇತು ಮಾಡು : ಕುದುರೆಯನ್ನು—ಸೂಕ್ಷ್ಮವಾಗಿ ಪಳಗಿಸು, ತರಪೇತು ಮಾಡು). **Súpplely, Súpply**[1] ಸಪ್ಲಿ (ಕ್ರಿ. ವಿ.); **Súppleness** (ನಾ.)

Súpplement ಸಪ್ಲಿಮೆಂಟ್ (ನಾ., ಕ್ರಿ. ಸಕ.) ಸಾಲದುದನ್ನು ಸೇರಿಸಿದ್ದು : ಹೆಚ್ಚಿಗೆ, ಅನುಬಂಧ; (ಮು., ವೃತ್ತಪತ್ರಿಕೆ, ಮೊ. ಗಳ ನಿಯತ ಸಂಚಿಕೆಯ ಜೊತೆಗೆ ಕೊಡುವ, ಒಂದು ವಿಶೇಷ ವಿಷಯವನ್ನು ಕುರಿತು ಸಂಪೂರ್ಣವಾಗಿ ವಿವರಿಸಿರುವ) ಹೆಚ್ಚೋಲೆ, ಪುರವಣಿ. (ಗಣಿತ) ಮತ್ತೊಂದು ಕೋನದೊಡನೆ ಸೇರಿ ಒಟ್ಟು ಎರಡು ಸಮಕೋನವಾಗುವ ಕೋನ: ಸಂಪೂರಕ (ಕೋನ). (ಕ್ರಿ.) ಹೆಚ್ಚಿಕೆ ಸೇರಿಸು, ಅನುಬಂಧವಾಗಿ ಸೇರಿಸು ; ಅನುಬಂಧಿಸು ; ಸಾಲದ್ದನ್ನು ಭರ್ತಿ ಮಾಡು, ತುಂಬಿಕೊಡು. **Suppleméntal** (ಗು.); **Suppleméntary** (ಗು.); **Supplementátion** (ನಾ.)

Súppliant ಸಪ್ಲಿಅಂಟ್ (ಗು., ನಾ.) ದೈನ್ಯದಿಂದ ಬೇಡುವ(ವನು), ಪ್ರಾರ್ಥಿಸುವ(ವನು); ಯಾಚಕ. **Súppliantly** (ಕ್ರಿ. ವಿ.); **Súpplicate** ಸಪ್ಲಿಕೇಟ್ (ಕ್ರಿ.) ದೈನ್ಯದಿಂದ ಬೇಡು, ಯಾಚಿಸು; ಮೊರೆಯಿಡು (*To* person, *for* thing). **Súpplicatingly** (ಕ್ರಿ. ವಿ.); **Supplicátion** (ನಾ.); **Súpplicatory** (ಗು.)

Súpply[1]. **Supple** ನೋಡಿ.

Súpply[2] ಸಪ್ಲೈ (ಕ್ರಿ. ಸಕ., ನಾ.) ಒದಗಿಸು, ಸರಬರಾಯಿ ಮಾಡು (*With* ಉಪ. ದೊಡನೆ ಸಹ) ; (ಕೊರತೆ, ಆವಶ್ಯಕತೆ, ನಷ್ಟ, ಮೊ. ನ್ನು) ತುಂಬಿಕೊಡು, ಭರ್ತಿಮಾಡು, ಪೂರೈಸು ; (ಒಂದು ಸ್ಥಳದಲ್ಲಿ, ತೆರಪಿನಲ್ಲಿ) ಬದಲಿಯಾಗಿರು, ಭರ್ತಿಯಾಗಿರು. (ನಾ.) ಒದಗಣೆ, ಸರಬರಾಯಿ, ಪೂರೈಕೆ; ಶೇಖರಣೆ, ಸಂಗ್ರಹ, ದಾಸ್ತಾನು [Water-s. ನೀರು ಸರಬರಾಯಿ. Committee of S. ಸಾರ್ವಜನಿಕ ಕಾರ್ಯಭಾರಗಳ ಅಂದಾಜಿನ ವಿವರಗಳನ್ನು ಸಮಿತಿಯಾಗಿ ಪರಿಶೀಲಿಸುವ ಪಾರ್ಲಮೆಂಟು ಸಭೆ : ಸರಬರಾಯಿ ಸಮಿತಿ. S. department (ಮು., ಸೈನ್ಯ, ಮೊ. ಗಳಿಗೆ ಒದಗಿಸುವ) ಸರಬರಾಯಿ—ಖಾತೆ, ಇಲಾಖೆ. S. and demand (ಅರ್ಥಶಾಸ್ತ್ರದಲ್ಲಿ : ಪದಾರ್ಥಗಳ ಬೆಲೆಯನ್ನು ಕ್ರಮಗೊಳಿಸುವುದರಲ್ಲಿ ಪ್ರಧಾನ ಅಂಶಗಳಾದ) ಸರಬರಾಯಿ ಮತ್ತು ಗಿರಾಕಿ]. (ಬ. ವ. ದಲ್ಲಿ) (ಸೈನ್ಯ, ಮೊ. ಗಳಿಗೆ ಬೇಕಾದ) ಸಾಮಗ್ರಿ—ಸಂಗ್ರಹ, ದಾಸ್ತಾನು, ಸರಬರಾಯಿ ; (ಬ. ವ. ದಲ್ಲಿ) ಸರಕಾರದ ವೆಚ್ಚಕ್ಕೆ ಶಾಸನ ಸಭೆ ಒದಗಿಸುವ ಹಣ; ಹಣದ ಸರಬರಾಯಿ. (ವ್ಯಕ್ತಿಗೆ ಕೊಡುವ) ಹಣದ ಭತ್ಯ (His father cut off the supplies). **Supplíer** (ನಾ.) ಸರಬರಾಯಿ ಮಾಡುವವನು, ಸರಬರಾಯಿಗಾರ.

Suppórt ಸಪೋ(ಅ)ರ್ಟ್ (ಕ್ರಿ. ಸಕ., ನಾ.) ಭಾರ(ದ ಭಾಗವನ್ನು) —ಹೊರು, ಹೊತ್ತಿರು, ಹೊತ್ತುಕೊಂಡಿರು ; (ಬೀಳದಂತೆ, ಕುಸಿಯದಂತೆ, ಮುಳುಗದಂತೆ) ಎತ್ತಿಹಿಡಿ, ತಡೆ(ದುಕೊಂಡಿರು) ; ಆಧಾರ, ಅವಲಂಬ, ಉಪಷ್ಟಂಭ, ಆಸರೆ, ಆನಿಕೆ, ಊರೆ, —ಆಗಿರು, ಕೊಡು (Foundation supports house ತಳಹದಿ ಮನೆಯನ್ನು ಹೊತ್ತಿದೆ. Had

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

to be supported home ಅವನನ್ನು ಒರಗಿಸಿಕೊಂಡು, ಆಸರೆಕೊಟ್ಟು, ಮನೆಗೆ ಕರೆದೊಯ್ಯಬೇಕಾಯಿತು. What supported him was a good conscience ಅವನಿಗೆ ಆಧಾರವಾಗಿದ್ದದ್ದು ಅವನ ನಿರ್ಮಲವಾದ ಮನಸ್ಸಾಕ್ಷಿ); ತಾಳು, ತಾಳಿಕೊ, ಸಹಿಸು, ಸೈರಿಸು (Supports fatigue well. I can s. such insolence no longer); ಅನ್ನ ಬಟ್ಟೆ ಒದಗಿಸು, ಸಂರಕ್ಷಣೆ ಮಾಡು, ಕಾಪಾಡು (S. a family); ಉತ್ತೇಜನ, ಪುಷ್ಟಿ, ಸಹಾಯ, ಬೆಂಬಲ, ಒತ್ತಾಸೆ, —ಕೊಡು; ಸಮರ್ಥಿಸು [S. a cause, policy, leader, candidate ಚಳವಳಿಗೆ, ಕಾರ್ಯನೀತಿಗೆ, ಮುಂದಾಳಿಗೆ, ಉಮೇದುವಾರನಿಗೆ, —ಬೆಂಬಲಕೊಡು. S. actor ನಟನಿಗೆ ಸಹಾಯಕನಾಗಿ, ಜೊತೆ ನಟನಾಗಿ, —ಇರು. S. resolution ನಿರ್ಣಯಕ್ಕೆ ಬೆಂಬಲ ಕೊಡು. S. lecturer ಉಪನ್ಯಾಸಕನಿಗೆ ಬೆಂಬಲಕೊಟ್ಟು ಮಾತನಾಡು; ಉಪನ್ಯಾಸಕನನ್ನು ಸಮರ್ಥಿಸು. S. institution ಸಂಸ್ಥೆಗೆ (ದ್ರವ್ಯ) ಸಹಾಯಮಾಡು; ಸಂಸ್ಥೆಯನ್ನು ಪೋಷಿಸು. Evidence supporting a charge ಆಪಾದನೆಯನ್ನು ದೃಢಪಡಿಸುವ, ಸಮರ್ಥಿಸುವ, ಸಾಕ್ಷ್ಯ]; (ಭಾಗವನ್ನು, ಪಾತ್ರವನ್ನು) ವಹಿಸು, ನಿರ್ವಹಿಸು, ಅಭಿನಯಿಸು (To s. the character of King Lear). (ನಾ.) ಆಧಾರ, ಅವಲಂಬ, ಆಶ್ರಯ, ಆಸರೆ, ಆನಿಕೆ, ಊರೆ, ಉತ್ತೇಜನ, ಸಮರ್ಥನೆ, ಬೆಂಬಲ, ಒತ್ತಾಸೆ (Give s. to. Get no s. Troops stationed in s. ಕೈಗಾವಲಾಗಿ, ಬೆಂಬಲಕ್ಕೆ, —ಇರಿಸಿರುವ ಸೈನ್ಯದಳಗಳು. S. trench ಬಂದೂಕು ಹಾರಿಸುವ ಕಂದಕಕ್ಕೂ ಬೆಂಬಲ ದಳದ ಕಂದಕಕ್ಕೂ ನಡುವಣ ಕಂದಕ: ಬೆಂಬಲ ಕಂದಕ. Speak in s. of ಪರವಾಗಿ, ಸಮರ್ಥಿಸಿ, —ಮಾತಾಡು. Shelf must have another s. ಬಡುವಿಗೆ ಇನ್ನೊಂದು ಆಸರೆ ಬೇಕು. He is the chief s. of the cause ಆ ಚಳವಳಿಗೆ ಅವನೇ ಮುಖ್ಯ ಆಧಾರ, ಬೆಂಬಲ). **Suppórtable** (ಗು.); **Suppórtably** (ಕ್ರಿ. ವಿ.); **Suppórter** (ನಾ.) (ಕ್ರಿಯಾರ್ಥಗಳಲ್ಲಿ); (ಮು., ವಂಶಲಾಂಛನ ವಿದ್ಯೆಯಲ್ಲಿ) ವಂಶಲಾಂಛನ ಕೆತ್ತಿದ ಗುರಾಣಿಯ ಎರಡು ಪಕ್ಕಗಳಲ್ಲೂ ಅದನ್ನು ಎತ್ತಿ ಹಿಡಿದಿರುವಂತೆ ಚಿತ್ರಿಸಿರುವ (ಎರಡು) ಪ್ರಾಣಿ(ಗಳಲ್ಲೊಂದು): ಆಲಂಬ (ಪ್ರಾಣಿ). **Suppórtless** (ಗು.)

Suppóse ಸಪೋಸ್ (ಕ್ರಿ. ಸಕ.) (ವಾದ, ಮೊ. ಕ್ಕೆ ಆಧಾರವಾಗಿ) ಊಹಿಸು, ಕಲ್ಪಿಸಿಕೊ, ಇಟ್ಟುಕೊ, ಎಣಿಸು, ಭಾವಿಸು, ಭಾವಿಸಿಕೊ [(ವರ್ತಮಾನ ಕೃ. ಅಥವಾ ವಿಧ್ಯರ್ಥದಲ್ಲಿ): —ರೆ, ಪಕ್ಷದಲ್ಲಿ (Supposing white were black you would be right ಬಿಳುಪಾದದ್ದು ಕಪ್ಪಾಗಿದ್ದಿದ್ದರೆ ನೀನು ಹೇಳುವುದು ಸರಿಯಾಗುತ್ತಿತ್ತು. S. your father saw you what would he say? ನಿನ್ನ ತಂದೆ ನಿನ್ನನ್ನು ನೋಡಿದನು ಎಂದಿಟ್ಟುಕೊಳ್ಳೋಣ, ಏನು ಹೇಳಿಯಾನು? (ವಿಧ್ಯರ್ಥದಲ್ಲಿ; ಸೂಚನೆಯಾಗಿ) S. we went for a walk ತಿರುಗಾಟಕ್ಕೆ ಹೊರಡೋಣ]; (ವಾದ, ಫಲತಾಂಶ, ಮೊ. ಗಳ ವಿಷಯದಲ್ಲಿ) (ನಿಯಮವನ್ನಾಗಿ) ಅಪೇಕ್ಷಿಸು, (ಇರಬೇಕೆಂದು) ಸೂಚಿಸು, ಭಾವಿಸಲು ಅವಕಾಶಕೊಡು [That supposes mechanism without flaws ಅದಕ್ಕೆ ದೋಷವಿಲ್ಲದೆ ಕೆಲಸಮಾಡುವ ಯಂತ್ರ ನಲಕರಣೆ (ಇರ)ಬೇಕಾಗುತ್ತದೆ. Design in creation supposes a creator ಸೃಷ್ಟಿಯಲ್ಲಿ ವಿಧಾನ ಇರುವುದರಿಂದ ಕರ್ತನೊಬ್ಬನು ಇರಬೇಕೆಂದು ಸಿದ್ಧವಾಗುತ್ತದೆ]; (—ಎಂದು) ತಿಳಿ(ದುಕೊ), ಯೋಚಿಸು, ಊಹಿಸು [I s. we shall be back in an hour. You cannot s., it is not to be supposed, that —ಎಂದು ನೀನು ತಿಳಿಯಕೂಡದು, ಎಣಿಸಕೂಡದು. I s. so (ಅನಿಶ್ಚಯದಿಂದ ಒಪ್ಪಿಗೆ ಸೂಚಿಸುವಲ್ಲಿ ಪ್ರ.) ಹಾಗಿರಬೇಕೆಂದು ತೋರುತ್ತದೆ]; (ಭೂ. ಕೃ. ನಲ್ಲಿ) ಭಾವಿಸಿದ, ಊಹಿತ, ನಂಬಿರುವ, (ತಪ್ಪಾಗಿ) ತಿಳಿದುಕೊಂಡಿರುವ (The supposed music of the spheres ಜನ ನಂಬಿರುವ ಖಗೋಳ ಸಂಗೀತ. His supposed brother, generosity ಜನರು ಅಂದುಕೊಂಡಿರುವ ಅವನ ಸೋದರ, ಔದಾರ್ಯ; ಅವನ ಪ್ರತೀತ ಸೋದರ, ಔದಾರ್ಯ). **Suppósable** (ಗು.); **Suppósedly** (ಕ್ರಿ. ವಿ.) —ಎಂಬ ನಂಬಿಕೆಯಿಂದ, ತಿಳಿವಳಿಕೆಯಿಂದ, ಗ್ರಹಿಕೆಯಿಂದ. **Spposition** ಸಪೊಸಿಷನ್ (ನಾ.) (—ಎಂದು) ಇಟ್ಟುಕೊಳ್ಳುವುದು. ಭಾವಿಸುವುದು, ಎಣಿಕೆ, ಊಹೆ, ಗ್ರಹಿಕೆ; (ಆಧಾರವಿಲ್ಲದ) ನಂಬಿಕೆ, ಕಲ್ಪನೆ. **Suppositional** (ಗು.); **Suppositionally** (ಕ್ರಿ. ವಿ.); **Suppositious** —ಸಿಷಸ್ (ಗು.) ಭಾವಿಸಿದ, ಕಲ್ಪಿತ, ಊಹಾತ್ಮಕ.

Supposititious ಸಪಾಸಿಟಿಷಸ್ (ಗು.) ಮೋಸದಿಂದ ನಿಜವಾದುದರ ಸ್ಥಾನದಲ್ಲಿಟ್ಟ; ಸಾಚಾ ಅಲ್ಲದ, ಖೋಟ, ಕೃತಕ, ಕೃತ್ರಿಮದ (S. child, writings). **Supposititiously** (ಕ್ರಿ. ವಿ.); **Supposititiousness** (ನಾ.)

Suppósitory ಸಪಾಸಿಟೊರಿ (ನಾ.) (ವೈ. ಶಾ.) ಗುದ, ಯೋನಿ ಅಥವಾ ಗರ್ಭಕೋಶ—ಇವುಗಳಲ್ಲಿ ಇಟ್ಟು ಅಲ್ಲಿಯೇ ಕರಗಿ ಕಾರ್ಯ ಮಾಡಲು ಬಿಡುವ ಔಷಧದ ಶಂಕು ಅಥವಾ ಉರುಳೆ: ಔಷಧ—ನ್ಯಾಸ, ನಿಕ್ಷೇಪ.

Suppréss ಸಪ್ರೆಸ್ (ಕ್ರಿ. ಸಕ.) (ದಂಗೆ, ಚಳವಳಿಗಾರ, ಅಂತಸ್ಸಾಕ್ಷಿ, ಮೊ. ನ್ನು) ಅಡಗಿಸು, ನಿಗ್ರಹಿಸು, ದಮನಮಾಡು; (ನರಳಾಟ, ಆಕಳಿಕೆ, ಮೊ. ನ್ನು) ತಡೆ(ದುಕೊ), ನಿರೋಧಿಸು; (ಮನೋಭಾವ, ಹೆಸರು, ಸಾಕ್ಷ್ಯ, ಮೊ. ನ್ನು) ವ್ಯಕ್ತಪಡಿಸದಿರು, ಪ್ರಕಟಿಸದಿರು, ಮುಚ್ಚಿಡು, ಗುಟ್ಟಾಗಿಡು. **Suppréssible** (ಗು.); **Suppréssion** (ನಾ.); **Suppréssor** (ನಾ.)

Suppréssio véri (L) ಸಪ್ರೆಷಿಯೊ ವೀ(ಅ)ರೈ (ನಾ.) ತಿಳಿಸಬೇಕಾದ ಸಂಗತಿಗಳನ್ನು ತಿಳಿಸದೆ ಮರೆಸಿಟ್ಟು ತಪ್ಪು ತಿಳಿವಳಿಕೆ ಕೊಡುವುದು: ನಿಜವನ್ನು ಮರೆಮಾಚುವುದು; ಸಂಗತಿಯ—ಮುಚ್ಚಾಟ, ಹಜಂ; ಸತ್ಯಗೋಪನ.

Súppurate ಸಪ್ಯುರೇಟ್ (ಕ್ರಿ. ಅಕ.) ಕೀವಾಗು, ಕೀತುಕೊ; ಕೀವು—ಕಟ್ಟು, ತುಂಬಿಕೊ. **Suppurátion** (ನಾ.); **Súppurative** (ಗು.)

Súpra (L) ಸೂ(ಸ್ಯೂ)ಪ್ರ (ಕ್ರಿ. ವಿ.) ಮೇಲೆ; (ಪುಸ್ತಕ, ಲೇಖನ, ಮೊ. ಗಳಲ್ಲಿ) ಹಿಂದೆ(ಯೆ), ಮೊದಲೆ, ಮುಂಚೆ.

Supra- ಸೂ(ಸ್ಯೂ)ಪ್ರ—, (ಸ. ಪೂ. ಪ.) —ಮೇಲೆ,—ಮೇಲುಗಡೆ(ಯ) (ಅಂ. ರ. ಶಾ. ಪದಗಳನ್ನು ನಿರ್ಮಿಸುವಲ್ಲಿ 'Super-'ಗೆ ಬದಲಾಗಿ ಪ್ರ.): **-clavícular** ಗ್ರೀವಾಸ್ಥಿಯ, ಜತ್ರುವಿನ, —ಮೇಲಿನ. **-órbital** ಕಣ್ಣುಗುಳಿಯ ಮೇಲಿನ. **-rénal** ಮೂತ್ರಪಿಂಡದ ಮೇಲಿನ. **-maxíllary** (ಗು., ನಾ.) ಮೇಲು ದವಡೆ(ಯ). (ಇತರ ಅರ್ಥಗಳಲ್ಲಿ; ಅನೇಕ ವೇಳೆ 'Infra-', 'Sub-' ಸಮಾನ ಪದಗಳ ವ್ಯತಿರಿಕ್ತಾರ್ಥದ ಸಮಾನಪದಗಳಲ್ಲಿ ಪ್ರ.): ಅತೀತ, ಉತ್ತರ, ಆಮೇಲೆ, ಮುಂಚೆ. **-múndane** ಲೋಕಾತೀತ, ಲೋಕೋತ್ತರ. **-prótest** ಹುಂಡಿಯನ್ನು ತೆಗೆದುಕೊಂಡು ಹಣ ಕೊಡಬೇಕಾದವನು ಅದನ್ನು ತಿರಸ್ಕರಿಸಿದಾಗ, ಹುಂಡಿ ಬರೆದವನ ಮರ್ಯಾದೆ ಉಳಿಸುವುದಕ್ಕಾಗಿ ಮೂರನೆಯವನು ಆ ತಿರಸ್ಕೃತ ಹುಂಡಿಯನ್ನು ತೆಗೆದುಕೊಳ್ಳುವುದು: ತಿರಸ್ಕಾರಾನಂತರದ—ಅಂಗೀಕಾರ, ಪಾವತಿ.

Suprémacy. **Supreme** ನೋಡಿ.

Supréme ಸು(ಸ್ಯು)ಪ್ರೀಮ್ (ಗು., ನಾ.) (ಅಧಿಕಾರದಲ್ಲಿ ಅಥವಾ ದರ್ಜೆಯಲ್ಲಿ) ಅತ್ಯಂತ ಮೇಲಿನ, ಅತ್ಯುಚ್ಚ; ಶ್ರೇಷ್ಠ, ವರಿಷ್ಠ, ಅತ್ಯಂತ, ಪರಮ ಪ್ರಧಾನ, ಮಹತ್ತಮ [The S. Being, The S. ಪರಮ ಪುರುಷ, ದೇವರು. S. Council of the Allies (ಮೊದಲನೆಯ ಮಹಾ ಯುದ್ಧದಲ್ಲಿ) ಮಿತ್ರ ಮಂಡಲಿಯ ಪ್ರಧಾನ ರಾಷ್ಟ್ರಗಳ ಪ್ರತಿನಿಧಿಗಳು ಸೇರಿದ್ದ ಸಮಿತಿ; ಮಿತ್ರ ಮಂಡಲಿಯ ಪ್ರಧಾನ ಸಮಿತಿ (=The Big Four, Five). S. Court of Judicature (Judicature ನೋಡಿ). S. end *or* good ಪರಮಾರ್ಥ. S. Pontiff ಪೋಪ್ ಗುರು. S. wisdom, courage ಪರಮ, ಅತ್ಯಂತ, —ವಿವೇಕ, ಧೈರ್ಯ. A *or* the s. hour, moment ಮಹತ್ತ್ವದ ಘಳಿಗೆ].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Suprémely (ಕ್ರಿ. ವಿ.); **Suprémacy** ಸುಪ್ರೆಮಸಿ (ನಾ.) ಪಾರಮ್ಯ, ಶ್ರೇಷ್ಠತೆ, ಪರಮಾಧಿಕಾರ, ಪರಮಾಧಿಪತ್ಯ (Act, oath, of s. ಇಂಗ್ಲೆಂಡಿನ ಧರ್ಮಾಧಿಪತ್ಯದಲ್ಲಿ ಪೋಪ್ ಗುರುವಿನ ಅಧಿಕಾರವನ್ನು ತಪ್ಪಿಸಿ, ರಾಜನಿಗೇ ಲೌಕಿಕ ಧಾರ್ಮಿಕಗಳೆರಡರ ಪರಮಾಧಿಕಾರವನ್ನೂ ವಹಿಸಿಕೊಟ್ಟ ಪಾರ್ಲಿಮೆಂಟಿನ ಶಾಸನ, ಪ್ರತಿಜ್ಞೆ: ಪರಮಾಧಿಕಾರ—ಶಾಸನ, ಪ್ರತಿಜ್ಞೆ)

Sur-[1]. **Sub-** ನೋಡಿ.

Sur-[2] ಸರ್— (ಸ. ಪೂ. ಪ.) —ಮೇಲೆ, —ಮೇಲಿನ [(=Super-): Surcharge, surface, etc. (ಕೆಲವು ವೇಳೆ) (=Supra-): Surrenal=Suprarenal]

Súra(h[1]**)** ಸೂರ (ನಾ.) ಕೊರಾನಿನ ಅಧ್ಯಾಯ, ಸರ್ಗ.

Súrah[2] ಸ್ಯೂ(ಅ)ರ, ಸ್ಯೂ— (ನಾ.) ಮೂಲೆ ನೆಯ್ಗೆಯ, ನಯವಾದ, ರೇಷ್ಮೆ ಬಟ್ಟೆ (=S. silk) (ಇಂಡಿಯದ ಸೂರತ್ ಪಟ್ಟಣದ ಹೆಸರಿನಿಂದ)

Súral ಸೂ(ಅ)ರಲ್, ಸ್ಯೂ— (ಗು.) ಕಾಲಿನ ಮೀನಖಂಡದ (S. artery, etc.)

Surát ಸು(ಸ್ಯು)ರ್ಯಾಟ್ (ನಾ.) ಬೊಂಬಾಯಿ ಅಧಿಪತ್ಯದಲ್ಲಿ ಬೆಳೆಯುವ ಒಂದು ಬಗೆಯ ಹತ್ತಿ, ತಯಾರಾಗುವ ಹತ್ತಿಯ ಬಟ್ಟೆ: ಸೂರತ್ ಹತ್ತಿ (ಬಟ್ಟೆ)

Surceáse ಸರ್ಸೀಸ್ (ನಾ., ಕ್ರಿ. ಅಕ.) (ಪ್ರಾಚೀ. ಪ್ರ.) ನಿಂತು ಹೋಗು(ವುದು), ನಿಲುಗಡೆ, ಮುಕ್ತಾಯ.

Surchárge ಸರ್ಚಾರ್ಜ್ (ನಾ., ಕ್ರಿ. ಸಕ.) ಹೆಚ್ಚಿನ—ಹೊರೆ, ತೆರ, ಬೆಲೆ; (ಬಲ, ವಿದ್ಯುಚ್ಛಕ್ತಿ, ಮೊ. ಗಳ) ಬೇಕಾಗಿರುವುದಕ್ಕಿಂತ ಹೆಚ್ಚಿನ ಒದಗಣೆ, ಸರಬರಾಯಿ; (ತೆರಿಗೆ ಕೊಡಬೇಕಾದ ಆಸ್ತಿಯ ಸಂಬಂಧದಲ್ಲಿ) ಸುಳ್ಳು ಲೆಕ್ಕ ಒಪ್ಪಿಸಿದ್ದಕ್ಕಾಗಿ ದಂಡರೂಪವಾಗಿ ಕರ ನಿರ್ಧಾರಕರು ಹಾಕುವ ಹೆಚ್ಚಿನ ಮೂಲ್ಯ: ದಂಡ ತೆರಿಗೆ; ಅಂಚೆಯ ತಲೆ ಚೀಟಿಯ ಮೇಲೆ ಅದರ ಬೆಲೆಯನ್ನು ಬದಲಾಯಿಸುವುದಕ್ಕಾಗಿ ಒತ್ತಿದ ಹೆಚ್ಚಿನ ಗುರುತು: (ಬೆಲೆ) ಬದಲು ಗುರುತು; ಅಧಿಕೃತ ಲೆಕ್ಕದಲ್ಲಿ ಒಂದು ವೆಚ್ಚ ಅಕ್ರಮವೆಂಬ ಕಾರಣದಿಂದ ಲೆಕ್ಕ ಶೋಧಕನು ಒಪ್ಪಿಗೆ ಕೊಡದೆ ಆ ವೆಚ್ಚಕ್ಕೆ ಹೊಣೆಯಾದವನು ಹಿಂದಿರುಗಿಸಬೇಕಾದ ಮೊಬಲಗು: ಅಪವ್ಯಯ ಥರ್ತಿ; ಲೆಕ್ಕದಲ್ಲಿ ಜಮಾ ಆಗಬೇಕಾದ್ದು ಬಿಟ್ಟು ಹೋಗಿರುವುದನ್ನು ತೋರಿಸುವುದು: ಜಮಾ ಥರ್ತಿ (ತೋರಿಸುವುದು). (ಕ್ರಿ.) ಅತಿಯಾಗಿ—ಹೇರು, ತುಂಬು; ಅತಿ ಥರ್ತಿ, ಅತಿ ಪೂರಣ, —ಮಾಡು; (ಕರ ನಿರ್ಧಾರಕನ ವಿಷಯದಲ್ಲಿ) ದಂಡ ತೆರಿಗೆ, —ವಿಧಿಸು, ವಸೂಲು ಮಾಡು; (ಲೆಕ್ಕ ಶೋಧಕನ ವಿಷಯದಲ್ಲಿ) ಅಪವ್ಯಯ ಥರ್ತಿ ಮಾಡಿಸು, ಜಮಾ ಥರ್ತಿ ತೋರಿಸು.

Súrcingle ಸರ್ಸಿಂಗ್ಲ್ (ನಾ., ಕ್ರಿ. ಸಕ.) ಕುದುರೆಯ ಬೆನ್ನಿನ ಮೇಲೆ ಹಾಕಿದ ಕಂಬಳಿ, ಮೊ. ವು ಜಾರದಂತೆ, ಕುದುರೆಯ ಒಡಲ ಸುತ್ತ ಬಿಗಿದ ಪಟ್ಟಿ: ಬಿಗಿ, ಸುತ್ತು, —ಪಟ್ಟಿ; ಜೀನುಪಟ್ಟಿ. (ಪಾದ್ರಿಗಳ ನಿಲುವಂಗಿಯ) ನಡು, ಸೊಂಟ, —ಪಟ್ಟಿ, ಕಟ್ಟು. (ಕ್ರಿ.) ಕುದುರೆಗೆ ಬಿಗಿಪಟ್ಟಿ ಹಾಕು; ಬಿಗಿಪಟ್ಟಿ ಹಾಕಿ (ಕಂಬಳಿ, ಮೊ. ನ್ನು) ಬಿಗಿ(ಸು)

Súrcoat ಸರ್ಕೋಟ್ (ನಾ.) (ಚರಿತ್ರೆ) ಕವಚದಮೇಲೆ ತೊಡುತ್ತಿದ್ದ ದಗಲೆ, ಮೇಲಂಗಿ; (೧೫-೧೬ನೆಯ ಶತಮಾನಗಳಲ್ಲಿ ಇಂಗ್ಲೆಂಡಿನಲ್ಲಿ ಹೆಂಗಸರು ತೊಡುತ್ತಿದ್ದ) ತೋಳುಳ್ಳ ನಡುವಂಗಿ, ಜಾಕೆಟ್ಟು.

Súrculose, -lous ಸರ್ಕ್ಯುಲೋಸ್, —ಲಸ್ (ಗು.) (ಸ. ವಿ.) ಬೇರು ಸೊಸಿ, ಕಂದು, —ಒಡೆಯುವ.

Surd ಸರ್ಡ್ (ಗು., ನಾ.) (ಗಣಿತ) =Irrational (ಗು., ನಾ.); (ಶಿಕ್ಷಾ ಶಾಸ್ತ್ರ) ಕರ್ಕಶ, ಪರುಷ (—ವರ್ಣ, ಅಕ್ಷರ)

Sure ಷೂ(ಅ)ರ್ (ಗು., ಕ್ರಿ. ವಿ.) ನಿಶ್ಚಯವಾದ, ನಿಶ್ಚಿತ, ದೃಢ, ನಿಸ್ಸಂದೇಹವಾದ, ನಿಸ್ಸಂದಿಗ್ಧ, ಸಂಶಯವಿಲ್ಲದ, ಖಂಡಿತ, ಸುರಕ್ಷಿತ, ನೆಚ್ಚಿಗೆಯ, ನಂಬಿಕೆಯ, ಖಾತ್ರಿಯಾದ, ಗಟ್ಟಿಯಾದ, ತಪ್ಪದ [(*Of, that* ಪದದೊಡನೆ). He feels *or* is s. of success ಜಯವಾಗುವುದೆಂದು ದೃಢವಾಗಿದ್ದಾನೆ, ಖಂಡಿತವಾಗಿದ್ದಾನೆ. I am s. I didn't mean to hurt you ನಿನ್ನನ್ನು ನೋಯಿಸಬೇಕೆಂಬ ಉದ್ದೇಶ ನನಗೆ ಖಂಡಿತ ಇರಲಿಲ್ಲ. Well, I'm s.! (ಆಶ್ಚರ್ಯ ಸೂಚಕ ಪ್ರ.). Put it in a s. place ಅದನ್ನು ಸುರಕ್ಷಿತ ಸ್ಥಳದಲ್ಲಿಡು. A s. shot (ಗುರಿ) ತಪ್ಪದ ಗುರಿಕಾರ. A s. draw ಖಂಡಿತವಾಗಿ ನರಿ ಹುದುಗಿಕೊಂಡಿರುವ ಮರಸು: ಗಟ್ಟಿ ಬೇಟೆ; ವ್ಯಕ್ತಿ ತನ್ನ ಮನಸ್ಸಿನಲ್ಲಿರುವುದನ್ನು ಹೊರಹಾಕುವಂತೆ ಮಾಡುವ ಟೀಕೆ, ಮೊ. ವು: ಕುರಿತೇಟು. S. card ಖಂಡಿತ ಗೆಲ್ಲುವ ಹಂಚಿಕೆ, ಮೊ. ವು: ಸಿದ್ಧ ಜಯದ ಯೋಜನೆ. Slow and s. (Slow ನೋಡಿ). S.-footed ತಪ್ಪು ಹೆಜ್ಜೆ ಹಾಕದ, ಎಡವದ, ಮುಗ್ಗರಿಸದ, ದೃಢ ಹೆಜ್ಜೆಯ (ರೂಪ. ಸಹ). S. thing (ಅಮೆ. ಸಂ.) ನಿಶ್ಚಯ(ವಾದ್ದು), ಖಂಡಿತ(ವಾದ್ದು) (Shall you be at the dance? S. thing!). To be s. (ಅತ್ಯುಕ್ತಿ ದೋಷವಾಗದಂತೆ ಜಾಗರೂಕತೆಯಿಂದ ಹೇಳುವಲ್ಲಿ): ಭರವಸೆಯಿಂದ ಹೇಳುವುದಾದರೆ (To be s. she is pretty); (ಆಶ್ಚರ್ಯ ಸೂಚಕವಾಗಿ) So it is, to be s.! Well, to be s.! Make s. (of *or* that) ಭರವಸೆ ಮಾಡಿಕೊ, ಖಚಿತ ಮಾಡಿಕೊ, ದೃಢಪಡಿಸಿಕೊ]. (ಕ್ರಿ. ವಿ.) (ಪ್ರಾಚೀ. ಪ್ರ.) ನಾನೊಪ್ಪುತ್ತೇನೆ, ನೀನೊಪ್ಪುತ್ತೀಯೆ, ಯಾರಾದರೂ ಒಪ್ಪುತ್ತಾರೆ, ಒಪ್ಪತಕ್ಕದ್ದೆ ('Tis pleasant, s., to see one's name in print ತನ್ನ ಹೆಸರನ್ನು ಅಚ್ಚಿನಲ್ಲಿ ನೋಡಿದರೆ ಸಂತೋಷವಾಗುತ್ತದೆ ಎಂಬುದನ್ನು ಒಪ್ಪತಕ್ಕದ್ದೆ); ನಿಸ್ಸಂದೇಹವಾಗಿ, ಖಂಡಿತವಾಗಿ [As s. as eggs is eggs, As s. as a gun (ದೃಢವಚನದ ರೂಪಗಳು)]. S. enough ನಿಜವಾಗಿ, ತಪ್ಪದೆ (I said it would be, and s. enough it is. He will come s. enough). **Súrely** (ಕ್ರಿ. ವಿ.) ಖಂಡಿತವಾಗಿ, ನೆಚ್ಚಿಕೆಯಾಗಿ, ನಿಶ್ಚಯವಾಗಿ, ದೃಢವಾಗಿ, ತಪ್ಪದೆ, ಅವಶ್ಯವಾಗಿ, ಧ್ರುವವಾಗಿ, ಸುರಕ್ಷಿತವಾಗಿ (Will diminish slowly but s. ನಿಧಾನವಾಗಿ ಆದರೆ ಖಂಡಿತವಾಗಿ ಕಡಮೆಯಾಗುತ್ತದೆ. Mule plants its feet s. ಹೇಸರಗತ್ತೆ ದೃಢವಾಗಿ ಹೆಜ್ಜೆಯಿಡುತ್ತದೆ. S. I have met you before); (ಪ್ರಾಚೀ. ಪ್ರ.) (ಉತ್ತರಗಳಲ್ಲಿ) ನಿಸ್ಸಂದೇಹವಾಗಿ ('Should you be willing to try?' 'S.'). **Súreness** (ನಾ.); **Surety** ಷೂ(ಅ)ರ್ಟಿ, ಷೂರಿಟಿ (ನಾ.) (ಪ್ರಾಚೀ. ಪ್ರ.) ನಿಶ್ಚಯ, ಖಂಡಿತ (Of a s. ಖಂಡಿತವಾಗಿ). ಒತ್ತೆ, ಅಡವು, ಈಡು, ಓಲು (ಈಗ ವಿರ. ಪ್ರ.). ಹೊಣೆ(ಗಾರ), ಜಾಮೀನು(ದಾರ) (Stand s. for ಜಾಮೀನಾಗು. Find s. *or* sureties ಜಾಮೀನು—ಕೊಡು, ಒದಗಿಸು). **Surétyship** (ನಾ.) ಜಾಮೀನುದಾರಿಕೆ.

Surf ಸರ್ಫ್ (ನಾ.) ತೀರದಮೇಲೆ ಅಥವಾ ಬಂಡೆಗಳಮೇಲೆ ಅಲೆಗಳು ಬಡಿದು ಏಳುವ ನೊರೆ ಮತ್ತು ಕಲಕ: ತೆರೆನೊರೆ, ತರಂಗ ಭಂಗ. **S.-bird** ಕಡಲ ಕರೆಯ ಒಂದು ಹಕ್ಕಿ. **S.-boat** ತೆರೆನೊರೆಯಲ್ಲಿ ಸಂಚರಿಸಲು ಹೆಚ್ಚು ತೇಲುಶಕ್ತಿಯುಳ್ಳದ್ದಾಗಿ ಕಟ್ಟಿದ ದೋಣಿ: ತೆರೆನೊರೆ ದೋಣಿ. **S.-man** ತೆರೆನೊರೆ ದೋಣಿ ನಡಸುವವನು. **S.-riding** ವಿನೋದ ಕ್ರೀಡೆಯಾಗಿ ತೆರೆನೊರೆಯಲ್ಲಿ ಹಲಗೆಗಳಮೇಲೆ ಸವಾರಿ ಮಾಡುವುದು: ತೆರೆನೊರೆ ಸವಾರಿ. **Súrfy** (ಗು.)

Súrface ಸರ್ಫೆ(ಫಿ)ಸ್ (ನಾ., ಕ್ರಿ. ನಕ.) ಮೇಲ್, ಹೊರ, —ಮೈ, ಮುಖ, ರೂಪ, ನೋಟ, ತೋರ್ಕೆ (Has a smooth s. ನಯವಾದ ಮೇಲ್ಮೈ ಇದೆ. Looks only at the s. of men and things ಮನುಷ್ಯರ ಮತ್ತು ಪದಾರ್ಥಗಳ ಹೊರರೂಪವನ್ನು ಮಾತ್ರ ನೋಡುತ್ತಾನೆ. His politeness is only of *or* on the s. ಅವನ ಸೌಜನ್ಯ ಮೇಲು ಮೇಲನದು, ಬರಿಯ ತೋರ್ಕೆ); (ವಿಶೇಷಣವಾಗಿ) ಮೇಲ್ಭಾಗದ, ಹೊರಗಡೆಯ (S. impressions ಮೇಲ್ನೋಟದ ಭಾವನೆಗಳು, ತೋಚಿಕೆಗಳು; ಆಪಾತ ಭಾವನೆಗಳು). (ಜ್ಯಾ.) ಉದ್ದ ಅಗಲಗಳು ಇದ್ದು ದಪ್ಪವಿಲ್ಲದ್ದು; ಪಾತಳಿ, ಮೇಲ್ಮೈ, ಕ್ಷೇತ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[Plane s. ಸಮತಲದ ಮೇಲ್ಮೈ, ಸಮತಲ ಕ್ಷೇತ್ರ. Curved s. ಬಾಗಿದ, ಡೊಂಕು, —ಮೇಲ್ಮೈ; ವಕ್ರ ಕ್ಷೇತ್ರ. Developable s. ಮಡಿಚದೆ ಅಥವಾ ಭಾಗಗಳನ್ನು ಕಳಚದೆ ಹಾಗೆಯೆ ಸಮತಲದ ಮೇಲ್ಮೈಯಾಗಿ ಬಿಚ್ಚಿ ಹರವಲಾಗುವ ಮೇಲ್ಮೈ: ಸಾಧ್ಯ ಸಮತಲ ಕ್ಷೇತ್ರ (ಉದಾ., ಶಂಕುವಿನ ಅಥವಾ ಉರುಳೆಯ ಮೇಲ್ಮೈ)]. [S.-colour ಮೇಲ್ಮೈ ಮುದ್ರಣದಲ್ಲಿ ಬಳಸುವ ಬಣ್ಣ: ಮೇಲ್ಮೈ ಮುದ್ರಣ ಬಣ್ಣ. S.-man ರೈಲುಕಂಬಿ ಹಾದಿಯನ್ನು ದುರಸ್ತಿನಲ್ಲಿಟ್ಟಿರುವ ಕೆಲಸಗಾರ: ರೈಲು ದಾರಿ ದುರಸ್ತುಗಾರ. S.-printing ಕೊರೆದ ಪಂಕ್ತಿಗಳಿಂದಲ್ಲದೆ, ಸಾಮಾನ್ಯ ಮುದ್ರಣದ ಮೊಳೆಗಳಿಂದ ಅಥವಾ ಉಬ್ಬಚ್ಚುಗಳಿಂದ ಮಾಡುವ ಮುದ್ರಣ: ಮೇಲ್ಮೈ ಮುದ್ರಣ. S.-tension ಹನಿಯಲ್ಲಿ ಅಥವಾ ಗುಳ್ಳೆಯಲ್ಲಿ ಕಾಣಬರುವಂತೆ, ಸ್ಥಿತಿಸ್ಥಾಪಕಶಕ್ತಿಯುಳ್ಳ ಆವರಣ ಪೊರೆಯಂತೆ ದ್ರವವು ವರ್ತಿಸಲು ಕಾರಣವಾದ ಅದರ ಒಂದು ಶಕ್ತಿ: ಮೇಲ್ಮೈ ತುಯ್ತ, ಕ್ಷೇತ್ರ ಗಾಢತೆ. S.-water ನೆಲ, ಮೊ. ಗಳ ಮೇಲ್ಮೈಯಲ್ಲಿ ಸೇರಿ ಹರಿದು ಹೋಗುವ ನೀರು: ಮೇಲ್ಮೈ ನೀರು, ಮೇಲ್ನೀರು]. (ಕ್ರಿ.) (ಕಾಗದ, ಮೊ. ಕ್ಕೆ) (ಗೊತ್ತಾದ) ಮೇಲ್ಮೈ ಕೊಡು. **-surfaced** (ಗು.)

Súrfeit ಸರ್‌ಫಿ(ಫೆ)ಟ್ (ನಾ., ಕ್ರಿ.) (ಮು., ತಿನ್ನುವುದರಲ್ಲಿ ಕುಡಿಯುವುದರಲ್ಲಿ) ಅತಿ, ಕಟ್ಟರೆ, ವೆಗಟು, ಕಂಠಪೂರ್ತಿ; ಹೇರಳ, ಅತಿ ಸಮೃದ್ಧಿ, ಪುಷ್ಕಳತೆ (A s. of goods on the market). (ಕ್ರಿ.) ಅತಿಯಾಗಿ, ಕಟ್ಟರೆಯಾಗುವಂತೆ, —ತಿನ್ನು, ತಿನ್ನಿಸು; ಕಟ್ಟಡಚು, ವೆಗಟಾಗಿಸು, ಚಿಟ್ಟುಹಿಡಿಸು, ಕಟ್ಟರೆ(ಯುಂಟು)ಮಾಡು (*With* ಉಪ. ದೊಡನೆ)

Surge ಸರ್ಜ್ (ಕ್ರಿ. ಅಕ., ನಾ.) (ಸಮುದ್ರ, ಜನಸಂದಣಿ, ಬೆಳೆದು ನಿಂತಿರುವ ಪೈರು, ಭಾವೋದ್ರೇಕ, ಮೊ. ಗಳ ವಿಷಯದಲ್ಲಿ) ಅಲೆ ಅಲೆಯಾಗಿ, ತೆರೆ ತೆರೆಯಾಗಿ, —ತೊನೆದಾಡು, ಹೊಯ್ದಾಡು; ತೆರೆ—ಉಕ್ಕು, ಮುಸಗು; ಉಕ್ಕೇರು. (ನಾವೆ) (ರಾಟೆಯ ಮೇಲಿನ ಹಗ್ಗದ ಅಥವಾ ಸರಪಣಿಯ ವಿಷಯದಲ್ಲಿ) ಸರ್ರನೆ ಜಗ್ಗಿ ಹಿಂದಕ್ಕೆ ಸರಿ. (ಬಂಡಿಯ ಚಕ್ರದ ವಿಷಯದಲ್ಲಿ) ಮುಂದುವರಿಯದೆ ಸುಮ್ಮನೆ ಸುತ್ತು(ತ್ತಿರು). (ನಾ.) ಅಲೆ(ಗಳು), ತರಂಗ(ಗಳು), ಕಲ್ಲೋಲ; ಹೊಯ್ದಾಟ, ಮಸಕ, ಕ್ಷೋಭೆ.

Súrgeon ಸರ್ಜ(ರ್ಜ್)ನ್(ನಾ.) ಗಾಯಗಳನ್ನೂ, ಅಂಗವಿಕಾರಗಳನ್ನೂ, ರೋಗಗಳನ್ನೂ ಕೈಚಳಕದಿಂದಾಗಲಿ ಶಸ್ತ್ರದಿಂದಾಗಲಿ ಗುಣಪಡಿಸುವ ವೈದ್ಯ: ಶಸ್ತ್ರ—ವೈದ್ಯ, ಚಿಕಿತ್ಸಕ [House-s. (House ನೋಡಿ)]; ಶಸ್ತ್ರವೈದ್ಯ ಕುಶಲ; ಶಸ್ತ್ರವೈದ್ಯ ಸನ್ನದು ಪಡೆದವನು (S. dentist ಶಸ್ತ್ರವೈದ್ಯ ಸನ್ನದು ಪಡೆದ ದಂತವೈದ್ಯ: ದಂತ ಶಸ್ತ್ರವೈದ್ಯ). (ಹಿಂದೆ, Physician ಪದಕ್ಕೆ ಎದುರು ಪದವಾಗಿ ಪ್ರ.) ಸಲಹೆ ಕೊಡುವುದು ಮಾತ್ರವಲ್ಲದೆ ತಾನೇ ಔಷಧಕೊಟ್ಟು ರೋಗಿಗಳನ್ನು ನೋಡಿಕೊಳ್ಳುವ ವೈದ್ಯ: ಸಾಮಾನ್ಯ ವೈದ್ಯ, ಸರ್ವಾಂಶ ವೈದ್ಯ. ನಾವಿಕ ಅಥವಾ ಸೈನಿಕ (ಆಸ್ಪತ್ರೆಯಲ್ಲಿಯ) ವೈದ್ಯಾಧಿಕಾರಿ. (S.-fish ಬಾಲದ ಎರಡು ಕಡೆಯೂ ಈಟಿಶಸ್ತ್ರಾಕಾರದ ಮುಳ್ಳುಳ್ಳ ಒಂದು ಬಗೆಯ ಮೀನು: ಶಸ್ತ್ರಮೀನು). **Súrgery** (ನಾ.) ಶಸ್ತ್ರ—ವೈದ್ಯ, ಚಿಕಿತ್ಸೆ, ಕ್ರಿಯೆ, ಪ್ರಯೋಗ [Clinical s. ರೋಗ ಶಸ್ತ್ರಚಿಕಿತ್ಸೆ. Plastic s. (Plastic ನೋಡಿ). Conservative s. (ಅಂಗ ವಿಚ್ಛೇದನ, ಮೊ. ನ್ನು ವರ್ಜಿಸುವ) ಸಂಪ್ರದಾಯ ಮಾರ್ಗದ ಶಸ್ತ್ರಚಿಕಿತ್ಸೆ]; ಶಸ್ತ್ರಚಿಕಿತ್ಸಾಲಯ; (ವೈದ್ಯನ) ಶಸ್ತ್ರ, ಪ್ರಯೋಗ, —ಶಾಲೆ. **Súrgical** (ಗು.) ಶಸ್ತ್ರವೈದ್ಯರ, ಶಸ್ತ್ರಚಿಕಿತ್ಸೆಯ [S. skill, operations, instruments. S. fever ಶಸ್ತ್ರಚಿಕಿತ್ಸೆಯಾದಮೇಲೆ ಕೆಲವುವೇಳೆ ವಿಷಮಿಸುವುದರಿಂದ ಬರುವ ಜ್ವರ: ಶಸ್ತ್ರ(ಚಿಕಿತ್ಸಾ) ಜ್ವರ]. **Súrgically** (ಕ್ರಿ. ವಿ.)

Súricate ಸೂ(ಅ)ರಿಕೇಟ್, ಸ್ಯೂ— (ನಾ.) ದ. ಆಫ್ರಿಕದ, ಮುಂಗಸಿ ಜಾತಿಯ ಒಂದು ಪ್ರಾಣಿ.

Súrloin ಸರ್ಲಾಯ್‌ನ್ (ನಾ.) =Sirloin (ಎಂಬುದಕ್ಕೆ ಗ. ಪ್ರ.)

Súrly ಸರ್ಲಿ (ಗು.) ಸೌಜನ್ಯವಿಲ್ಲದ, ಅಸಭ್ಯ, ಒರಟುತನದ, ಒರಟು ಜವಾಬು ಕೊಡುವ; ವಕ್ರ; ಸಿಡಿಮೋರೆಯ; ಗುರುಗುಟ್ಟುವ; (ವಾಯುಸ್ಥಿತಿ, ಮೊ. ಗಳ ವಿಷಯದಲ್ಲಿ) ಮಂಕುಗವಿದ, ಬೆದರಿಸುವ, ಭಯಂಕರ. **Súrlily** (ಕ್ರಿ. ವಿ.); **Súrliness** (ನಾ.)

Surmíse ಸರ್ಮೈಸ್ (ನಾ., ಕ್ರಿ.) ಊಹೆ(ಮಾಡು), ಶಂಕೆ(ಪಡು), ಅಂದಾಜುಹಾಕು, ಅನುಮಾನ(ಮಾಡು); ಊಹಿಸು, ಅನುಮಾನಿಸು.

Surmoúnt ಸರ್ಮೌಂಟ್ (ಕ್ರಿ. ಸಕ.) (ನೆತ್ತಿಯ) ಮೇಲೆ, ಮೇಲ್ಭಾಗದಲ್ಲಿ, —ಇರು (ಸಾ., ಭೂ. ಕೃ. ನಲ್ಲಿ: Peaks surmounted with snow ಮಂಜು ಕವಿದ ಶಿಖರಗಳು); (ಕಷ್ಟ, ತೊಂದರೆ, ಮೊ. ನ್ನು) ಗೆಲ್ಲು, ದಾಟು, ತಡೆಹಾಯಿ. **Surmoúntable** (ಗು.)

Surmúllet ಸರ್ಮಲೆಟ್ (ನಾ.) ಒಂದು ಬಗೆಯ ಮೀನು.

Súrname ಸರ್ನೇಮ್ (ನಾ., ಕ್ರಿ. ಸಕ.) ಒಬ್ಬ ವ್ಯಕ್ತಿಯ ಇಟ್ಟ ಹೆಸರಿನ ಜೊತೆಗೆ ಸೇರಿಸುವ, ಕೆಲವು ವೇಳೆ ವಂಶಪಾರಂಪರ್ಯವಾಗಿ ಬರುವ, ಹುಟ್ಟಿದ ಊರು, ಕಸಬು, ಸಾಧಿಸಿದ ಕಾರ್ಯ, ಮೊ. ನ್ನು ತಿಳಿಸುವ ಹೆಚ್ಚಿನ ಹೆಸರು: ಉಪನಾಮ; ಒಂದು ಮನೆತನದವರಿಗೆಲ್ಲ ಸಾಮಾನ್ಯವಾದ ಹೆಸರು: ಮನೆ(ತನದ) ಹೆಸರು; ಕುಲ, ವಂಶ, —ನಾಮ (Christian name ಪದದೊಡನೆ ಹೋಲಿಸಿ). (ಕ್ರಿ.) ಉಪನಾಮ, ಕುಲನಾಮ, ಮನೆ(ತನದ) ಹೆಸರು, —ಇಡು, ಕೊಡು; (ಭೂ. ಕೃ. ನಲ್ಲಿ) (—ಎಂಬ) ಉಪನಾಮದ, ಮನೆ(ತನದ) ಹೆಸರಿನ.

Surpáss ಸರ್‌ಪಾ(ಪ್ಯಾ)ಸ್ (ಕ್ರಿ. ಸಕ.) ಮೀರು, ಮೀರಿಸು, ಅತಿಶಯಿಸು, ಮೇಲಾಗಿರು. **Surpássing** (ಗು.); **Surpássingly** (ಕ್ರಿ. ವಿ.)

Súrplice ಸರ್ಪ್ಲಿಸ್ (ನಾ.) ಕ್ರೈಸ್ತ ಪಾದ್ರಿಗಳೂ ಗಾಯಕವೃಂದದವರೂ ಆರಾಧನೆಯ ಕಾಲದಲ್ಲಿ ಸಾ., ತಮ್ಮ ನಿಲುವಂಗಿಯಮೇಲೆ ತೊಟ್ಟುಕೊಳ್ಳುವ, ಸಡಿಲವಾದ, ಪೂರ್ತಿ ತೋಳಿನ, ಬಿಳಿಯ ಬಟ್ಟೆಯ ಉಡುಪು: ಪಾದ್ರಿಯ ಕಪಣಿ. S. choir ಕಪಣಿ (ತೊಟ್ಟ) ಗಾಯಕವೃಂದ. S.-fee ಮದುವೆ, ಶವ ಸಂಸ್ಕಾರ, ಮೊ. ಗಳಲ್ಲಿ ಪಾದ್ರಿಗಳಿಗೆ ಕೊಡುವ ಸಂಭಾವನೆ: ಪೌರೋಹಿತ್ಯದ ಸಂಭಾವನೆ. **Súrpliced** ಸರ್ಪ್ಲಿಸ್ಟ್ (ಗು.)

Súrplus ಸರ್ಪ್ಲಸ್ (ನಾ.) (ಅವಶ್ಯಕತೆಗೆ ಸಾಕಾಗಿ ಅಥವಾ ಬೇಡವಾಗಿ) ಮಿಕ್ಕದ್ದು; ಹೆಚ್ಚಿನದು, ಮಿಗುತಾಯ; (ಮು., ಸರ್ಕಾರದ ವಾರ್ಷಿಕ ಆಯವ್ಯಯದಲ್ಲಿ) ವ್ಯಯಕ್ಕಿಂತ ಅಧಿಕವಾಗಿರುವ ಆಯಾಂಶ: ಉಳಿತಾಯ, ಆಯಾಧಿಕ್ಯ [(ಎದುರು ಪದ: Deficit). (ಅನೇಕ ವೇಳೆ ವಿಶೇಷಣವಾಗಿ ಪ್ರ.) S. population ಹೆಚ್ಚಿನ ಜನಸಂಖ್ಯೆ]. **Súrplusage** (ನಾ.) (ಮಾತು, ಮೊ. ಗಳ) ಆಧಿಕ್ಯ, ಅತಿರೇಕ (Say what you have to say with no s.); (ನ್ಯಾ. ಶಾ.) (ವಾದ, ದಸ್ತೈವಜು, ಮೊ. ಗಳಲ್ಲಿ) ಅನಾವಶ್ಯಕ—ವಾಕ್ಯ, ಪದ.

Surpríse ಸರ್‌ಪ್ರೈಸ್ (ನಾ., ಕ್ರಿ. ಸಕ.) ಮುನ್ನೆಚ್ಚರಿಕೆ ಕೊಡದೆ, ಅನಿರೀಕ್ಷಿತವಾಗಿ, ಹಠಾತ್ತನೆ, —ಹಿಡಿಯುವುದು, ಆಕ್ರಮಣ, ಬರುವುದು, ಸಂಭವಿಸುವುದು (The fort was taken by s.; Determined to attempt a s.; A s. visit ಅನಿರೀಕ್ಷಿತ ಭೇಟಿ). ಬೆರಗು, ಆಶ್ಚರ್ಯ, ಸಂಭ್ರಮ, ವಿಸ್ಮಯ; ಆಶ್ಚರ್ಯಕಾರಿ, ವಿಸ್ಮಯಕಾರಿ (—ಘಟನೆ) [To my great s. ತೀರ ಅನಿರೀಕ್ಷಿತವಾಗಿ; ನನಗೆ ತುಂಬ ಆಶ್ಚರ್ಯವಾಗುವಂತೆ. S. packet ಅನಿರೀಕ್ಷಿತ ವಸ್ತುಗಳುಳ್ಳ ಪೊಟ್ಟಣ, ಆಶ್ಚರ್ಯದ ಪೊಟ್ಟಣ (ಉದಾ., ನಾಣ್ಯವಿರುವ ಮಿಠಾಯಿ ಪೊಟ್ಟಣ) (ರೂಪ. ಸಹ). I have a s. for you ನಿನಗೆ ಆಶ್ಚರ್ಯ(ದ ಸುದ್ದಿ, ವಸ್ತು) ತಂದಿದ್ದೇನೆ. What a s.! ಏನು ಆಶ್ಚರ್ಯ!]. (ಕ್ರಿ.) (ಸ್ಥಳ, ವ್ಯಕ್ತಿ, ಮೊ. ನ್ನು) ಅನಿರೀಕ್ಷಿತವಾಗಿ, ಮುನ್ನೆಚ್ಚರಿಕೆ ಕೊಡದೆ, —ಹಿಡಿ, ವಶಪಡಿಸಿಕೊ; (ಒಬ್ಬನನ್ನು) ಸುಳಿವು ಕೊಡದೆ, ಬೇಹುಷಾರಾಗಿರುವಾಗ, —(ಕಂಡು)ಹಿಡಿ (Surprised him in the act ಅವನು ಕೃತ್ಯ ನಡಸುತ್ತಿದ್ದಾಗಲೆ ಪತ್ತೆಕೊಡದೆ ಅವನನ್ನು ಹಿಡಿದೆನು); ಬೆರಗು, ಆಶ್ಚರ್ಯ, —ಗೊಳಿಸು; ನಿರೀಕ್ಷಣೆಗೆ ವಿರುದ್ಧವಾಗು; (ಆಶ್ಚರ್ಯ)ಚಕಿತ ಮಾಡು; ಆಶ್ಚರ್ಯಕರವಾಗಿರು (I am surprised at you ನಿನ್ನನ್ನು ನೋಡಿ ನನಗೆ ಆಶ್ಚರ್ಯವಾಗಿದೆ); ಅನಿರೀಕ್ಷಿತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒತ್ತಾಯದಿಂದ, ದಿಗ್ಭ್ರಮೆ ಹಿಡಿಸಿ, — (ಒಂದು ಕೆಲಸ) ಥಟ್ಟನೆ ಮಾಡಿಸು (Surprised me into consent, dropping the reins). **Surprísal** (ನಾ.) = Surprise (ನಾ.). **Surprísing** (ಗು.); **Surprísingly** (ಕ್ರಿ. ವಿ.); **Surprísedly** (ಕ್ರಿ. ವಿ.)

Surrebút ಸರಿಬಟ್ (ಕ್ರಿ. ಅಕ.) (ವಾದಿಯ ವಿಷಯದಲ್ಲಿ) ಪ್ರತಿವಾದಿಯ ಮೂರನೆಯ ಸಲದ ಪ್ರತಿವಾದಕ್ಕೆ ಉತ್ತರಕೊಡು. **Surrebútter** (ನಾ.) ವಾದಿಯ ನಾಲ್ಕನೆಯ ಸಲದ ವಾದ; ಪ್ರತಿವಾದಿಯ ಮೂರನೆಯ ಸಲದ ವಾದಕ್ಕೆ ವಾದಿಯ ಪ್ರತ್ಯುತ್ತರ.

Surrejoín ಸರಿಜಾಯ್‌ನ್ (ಕ್ರಿ. ಅಕ.) (ವಾದಿಯ ವಿಷಯದಲ್ಲಿ) ಪ್ರತಿವಾದಿಯ ಎರಡನೆಯ ಸಲದ ಪ್ರತಿವಾದಕ್ಕೆ ಉತ್ತರಕೊಡು. **Surrejoínder** (ನಾ.) ವಾದಿಯ ಮೂರನೆಯ ಸಲದ ವಾದ; ಪ್ರತಿವಾದಿಯ ಎರಡನೆಯ ಸಲದ ವಾದಕ್ಕೆ ವಾದಿಯ ಪ್ರತ್ಯುತ್ತರ.

Surrénder ಸರೆಂಡರ್ (ಕ್ರಿ., ನಾ.) (ಮು., ತಗಾದೆ ಮಾಡಿದಾಗ, ಬಲಾತ್ಕಾರ ಬಂದಾಗ) ಬಿಟ್ಟುಕೊಡು, ಒಪ್ಪಿಸಿಬಿಡು, ವಶಮಾಡು, ಸ್ವಾಧೀನಪಡಿಸು [S. fortress, freedom, office. S. hopes ಆಸೆ ಬಿಟ್ಟುಬಿಡು. S. insurance policy (ವಿಮಾ ಸಂಸ್ಥೆಗೆ ಸಲ್ಲಿಸಿರುವ ಹಣದ ಒಂದು ಅಂಶವನ್ನು ಪಡೆದು) ವಿಮಾ ಪತ್ರದ ಮೇಲಿನ ಹಕ್ಕನ್ನು ಬಿಟ್ಟುಕೊಡು, ವಿಮಾ ತ್ಯಾಗಮಾಡು]; (ಅಭ್ಯಾಸ, ಮನೋಭಾವ, ಪ್ರಭಾವ, ಮೊ. ಕ್ಕೆ) ಒಳಗಾಗು, ಅಧೀನವಾಗು, ವಶವಾಗು (S. to one's bail ಜಾಮೀನಿನ ಪ್ರಕಾರ ನ್ಯಾಯಸ್ಥಾನದಲ್ಲಿ ಹಾಜರಾಗು); (ಸೈನ್ಯ, ನಾಯಕ, ಕೋಟೆ, ಹಡಗು, ಮೊ. ವಿಷಯದಲ್ಲಿ) (ಶತ್ರುವಿನ) ವಶವಾಗು, ಶರಣಾಗತವಾಗು. (ನಾ.) —ವುದು (S. value ವಿಮಾ ಪತ್ರದ ಹಕ್ಕನ್ನು ಬಿಟ್ಟುಕೊಟ್ಟವನಿಗೆ ಕೊಡುವ ಮೊಬಲಗು: ವಿಮಾ ತ್ಯಾಗದ ಬೆಲೆ)

Surreptítious ಸರೆಪ್ಟಿಷಸ್ (ಗು.) ಒಳಗೊಳಗಿನ, ಮುಚ್ಚುಮರೆಯ, ಗುಟ್ಟಿನ, ಕಳ್ಳತನದ. **Surreptítiously** (ಕ್ರಿ. ವಿ.)

Súrrogate ಸರೊಗೆಟ್ (ನಾ.) (ಮು., ಬಿಷಪ್ಪಿನ ಅಥವಾ ಅವನ ನ್ಯಾಯಾಧಿಕಾರಿಯ) ಪ್ರತಿನಿಧಿ, ಬದಲಿ. **Súrrogateship** (ನಾ.)

Surroúnd ಸರೌಂಡ್ (ಕ್ರಿ. ಸಕ., ನಾ.) ಸುತ್ತು—ವರಿ, ಗಟ್ಟು; ಮುತ್ತಿಕೊ, ಆವರಿಸು [The surrounding country ಸುತ್ತಲ, ಸುತ್ತಮುತ್ತಿನ, —ಪ್ರಾಂತ, ಪ್ರದೇಶ; ಸುತ್ತುನಾಡು. Surrounded with *or* by (—ಇಂದ) ಸುತ್ತುವರಿದ, ಪರಿವೇಷ್ಟಿತ]. (ನಾ.) ಗೋಡೆಗಳ ಅಂಚಿಗೂ ಜಮಖಾನಕ್ಕೂ ನಡುವೆ ಸುತ್ತಹಾಕಿರುವ ಹಾಸುಬಟ್ಟೆ, ಫೆಲ್ಟ್ ಬಟ್ಟೆ: ಸುತ್ತಂಚು. **Surroúndings** (ನಾ., ಬ. ವ.) ಸುತ್ತುಮುತ್ತು, ಪರಿಸರ, ಪರಿಸ್ಥಿತಿ, ಆವರಣ, ಸನ್ನಿವೇಶ (Picturesque, healthy, cultural, s.)

Súrtax ಸರ್‌ಟ್ಯಾಕ್ಸ್ (ನಾ., ಕ್ರಿ. ಸಕ.) ಹೆಚ್ಚಿನ ತೆರಿಗೆ, ಮೇಲ್ತೆರಿಗೆ (—ಹಾಕು)

Súrtout ಸರ್‌ಟೂ(ಟ್) (ನಾ.) (ಈಗ ವಿರ. ಪ್ರ.) (ಉದ್ದವೂ ಬಿಗಿಯೂ ಆದ) ಮೇಲಂಗಿ.

Surveíllance ಸರ್‌ವೇಲ(ಲ್ಯ)ನ್ಸ್ (ನಾ.) (ಗುಮಾನಿಯವನು, ಕೈದಿ, ಮೊ. ರ ಮೇಲಿನ) ಹುಷಾರಿನ ಕಾವಲು, ಕಣ್ಗಾವಲು, ನಿಗಾ(ವಣೆ) (Under s. ಕಣ್ಗಾವಲಿನಲ್ಲಿ)

Surveý ಸರ್ವೇ (ಕ್ರಿ. ಸಕ.) ದೃಷ್ಟಿ, ಕಣ್ಣು—ಹರಿಸು, ಓಡಿಸು; ಅವಲೋಕಿಸು, ಪರಿಶೀಲಿಸು, ಸಮೀಕ್ಷಿಸು; (ಕಟ್ಟಡ, ಮೊ. ಗಳ ಸ್ಥಿತಿಯನ್ನು) ಪರೀಕ್ಷಿಸು; (ಪ್ರದೇಶ, ಜಮೀನು, ಮೊ. ಗಳ ಎಲ್ಲೆ, ವಿಸ್ತಾರ, ಆಕಾರ, ಮೊ. ನ್ನು ನಿರ್ಧರಿಸಲು ಬೇಕಾದ ಸಂಗತಿಗಳನ್ನು) ಅಳತೆ, ಮೊ. ಗಳಿಂದ ಸಂಗ್ರಹಿಸು: (ಭೂಮಿಯನ್ನು) ಅಳತೆ, ಮೋಜಣಿ, ಪೈಮಾಷಿ, —ಮಾಡು. **Surveýing** (ನಾ.) ಮೋಜಣಿ, ಪೈಮಾಷಿ (—ಮಾಡುವುದು). **Surveýor** (ನಾ.) ಪರೀಕ್ಷಕ, ಪರೀಕ್ಷಾಧಿಕಾರಿ (S. of weights & measures ತೂಕ ಮತ್ತು ಅಳತೆಗಳ ಪರೀಕ್ಷಾಧಿಕಾರಿ); ಮೋಜಣಿದಾರ, ಪೈಮಾಷಿದಾರ. **Surveýorship** (ನಾ.)

Súrvey (ನಾ.) ಒಟ್ಟು ನೋಟ, ಅವಲೋಕನ, ಪರಿಶೀಲನೆ; (ಸ್ಥಿತಿ, ಮೊತ್ತ, ಮೊ. ಗಳ) ಪರೀಕ್ಷೆ, ಸಮೀಕ್ಷೆ; ಮೋಜಣಿ, ಪೈಮಾಷಿ (—ಕೆಲಸ, ಇಲಾಖೆ, ನಕ್ಷೆ) [Ordnance s. (Ordnance ನೋಡಿ)]

Survíve ಸರ್ವೈವ್ (ಕ್ರಿ.) (ಇನ್ನೊಬ್ಬನು ಅಥವಾ ಇನ್ನೊಂದು ಅಳಿದ ಮೇಲೆ) ಇನ್ನೂ ಬದುಕಿರು, ಹಿಂದೆ ಉಳಿದಿರು; (—ಇಂದ) ಪಾರಾಗು, ಪಾರಾಗಿ ಬದುಕಿರು, ಬದುಕಿ ಬರು (S. one's children ತನ್ನ ಮಕ್ಕಳು ಸತ್ತಮೇಲೆ ತಾನು ಇನ್ನೂ ಬದುಕಿರು. S. one's usefulness ತನ್ನ ಉಪಯುಕ್ತತೆ ತೀರಿದಮೇಲೂ ಇರು. S. all perils ಎಲ್ಲ ಅಪಾಯಗಳಿಂದಲೂ ಪಾರಾಗಿ ಬದುಕಿರು). **Survíval** (ನಾ.) (ಮತ್ತೊಬ್ಬ ಅಥವಾ ಮತ್ತೊಂದು ಅಳಿದಮೇಲೆ) ಇನ್ನೂ ಬದುಕಿರುವುದು, ಉಳಿದಿರುವುದು, ಇರುವುದು [S. of the fittest (ಜೀ. ವಿ.) ಸತ್ತ್ವವುಳ್ಳವು, ಯೋಗ್ಯತೆಯುಳ್ಳದ್ದು, —ಉಳಿಯುವುದು, ಬದುಕಿ ಬೆಳೆಯುವುದು]. ಮುಂಚಿನ ಕಾಲದ ಕುರುಹಾಗಿ ಉಳಿದಿರುವ ವ್ಯಕ್ತಿ, ವಸ್ತು: ಉಳಿಕೆ, ಅವಶೇಷ. **Survívor** (ನಾ.); **Survívorship** (ನಾ.) ಅವಿಭಕ್ತಾನುಭವದಲ್ಲಿ ಮಿಕ್ಕವರು ತೀರಿಕೊಂಡಮೇಲೆ ಉಳಿದವನೇ ಎಲ್ಲ ಆಸ್ತಿಯ ಹಕ್ಕುದಾರನಾಗುವುದು; ಇಂಥ ಹಕ್ಕುದಾರಿಕೆ.

Sus-. **Sub-** ನೋಡಿ.

Suscéptible ಸಸೆಪ್ಟಿಬ್‌ಲ್ (ಗು.) ಎಡೆಗೊಡುವ, ಅವಕಾಶವಿರುವ (Passage is s. of another interpretation ವಾಕ್ಯಕ್ಕೆ ಬೇರೆ ಅರ್ಥದ ಅವಕಾಶವಿದೆ. Facts are not s. of proof ವಾಸ್ತವಿಕ ಸಂಗತಿಗಳನ್ನು ರುಜುವಾತು ಮಾಡಲು ಶಕ್ಯವಲ್ಲ). (ಪ್ರಭಾವ, ಪ್ರೇರಣೆ, ಮೊ. ಕ್ಕೆ) ಒಳಪಡುವ, ಈಡಾಗುವ, ಪಕ್ಕಾಗುವ, (ಮನ) ಸೋಲುವ, ವಶವಾಗುವ (Very s. to pain, kindness, female charms); ಸುಲಭ ಪ್ರೇರ್ಯ; ಸೂಕ್ಷ್ಮ ಮನಸ್ಸಿನ, ಮನೋವಿಕಾರಕ್ಕೊಳಗಾಗುವ. **Susceptibílity** (ನಾ.) (ಅನೇಕ ವೇಳೆ ಬ. ವ. ದಲ್ಲಿ) (ವ್ಯಕ್ತಿಯ) ಸ್ವಭಾವದ ಸೂಕ್ಷ್ಮ(ತೆ)ಗಳು, ಸುಲಭ ವೇದನೀಯತೆಗಳು. **Suscéptibly** (ಕ್ರಿ. ವಿ.); **Suscéptive** (ಗು.) ಭಾವಗ್ರಹಣ ಸಂಬಂಧವಾದ, ಭಾವಗ್ರಾಹಕ (The s. faculties, nature)

Súsi ಸೂಸಿ (ನಾ.) ಬೇರೆಯ ಬಣ್ಣದ ರೇಷ್ಮೆಯ ಪಟ್ಟೆಗಳುಳ್ಳ ಒಂದು ಬಗೆಯ ಹತ್ತಿಯ ಬಟ್ಟೆ: ಸೂಸಿ ಬಟ್ಟೆ.

Suspéct ಸಸ್ಪೆಕ್ಟ್ (ಕ್ರಿ. ಸಕ., ಗು., ನಾ.) (ಇರುವುದಾಗಿ, ಸಾಧ್ಯವೆಂದು) ತಿಳಿ, ಎಣಿಸು, ಭಾವಿಸು (S. danger, a plot. I s. him to be my brother. You, I s., don't care); ಸಂದೇಹ, ಶಂಕೆ, ಸಂಶಯ, ಅನುಮಾನ, ಅಪನಂಬಿಕೆ, ಗುಮಾನಿ, —ಪಡು (The ignorant s. everybody. A suspected criminal ಗುಮಾನಿಯ ಅಪರಾಧಿ. S. the authenticity of the evidence ಸಾಕ್ಷ್ಯದ ಪ್ರಾಮಾಣ್ಯದಲ್ಲಿ ಸಂದೇಹಪಡು). (ಗು.) ಸಂದೇಹಿಸಬೇಕಾದ, ಸಂಶಯಾಸ್ಪದ, ಶಂಕಿತ (The statement of an interested party is naturally s.). (ನಾ.) ಸಂದೇಹಾಸ್ಪದ ವ್ಯಕ್ತಿ, ಗುಮಾನಿಯಲ್ಲಿರುವವನು (Political suspects are kept under surveillance). **Suspéctable** (ಗು.) (ವಿರ. ಪ್ರ.) ಸಂದೇಹಾಸ್ಪದ. **Suspícion** ಸಸ್ಪಿಷನ್ (ನಾ., ಕ್ರಿ. ಸಕ.) ಸಂದೇಹ, ಸಂಶಯ, ಅಳುಕು, ಶಂಕೆ, ಅಪನಂಬಿಕೆ, ಗುಮಾನಿ, ಅನುಮಾನ (Above s. ಸಂಶಯಕ್ಕೆ ಎಡೆಯಿಲ್ಲದ, ನಿಶ್ಶಂಕಿತ); (ರುಚಿ, ಗುಣ, ಮೊ. ಗಳ) ಸುಳಿವು, ಛಾಯೆ, ಸೂಚನೆ. (ಕ್ರಿ.) (ಅಮೆ. ಸಂ. ಅಸಂ.) ಸಂದೇಹಪಡು (*That* ಪದದೊಡನೆ). **Suspícionless** (ಗು.); **Suspícious** (ಗು.) ಸಂದೇಹಪಡುವ, ಸಂಶಯ ಸ್ವಭಾವದ; ಶಂಕಾಸ್ಪದ (The ignorant are s.; Under s. circumstances). **Suspíciously** (ಕ್ರಿ. ವಿ.); **Suspíciousness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Suspénd ಸಸ್ಪೆಂಡ್ (ಕ್ರಿ. ಸಕ.) ತೂಗ—ಹಾಕು, ಕಟ್ಟು ; ನೇಲ, ಜೋಲ, —ಬಿಡು ; (ಭೂ. ಕೃ. ನಲ್ಲಿ) (ಪ್ರವಾಹೀ ಪದಾರ್ಥದಲ್ಲಿ ಸುಳಿಯುತ್ತಿರುವ ಘನ ಕಣದ ಅಥವಾ ಕಾಯದ ವಿಷಯದಲ್ಲಿ) ತೇಲಾಡುತ್ತಿರುವ, ನೇಲುತ್ತಿರುವ (A balloon suspended in mid-air ವಾಯುಮಂಡಲದ ಮಧ್ಯದಲ್ಲಿ ನೇಲಬಿಟ್ಟ ಆಕಾಶಬುಟ್ಟಿ. Suspended particles of dust ತೇಲಾಡುತ್ತಿರುವ ಧೂಳು ಕಣಗಳು) ; ಸ್ವಲ್ಪ ಕಾಲ ಅನಿಶ್ಚಿತವಾಗಿಡು, ಮುಂದಕ್ಕೆ ಹಾಕು, ತಳ್ಳಿಡು, ತಡೆದಿಡು ; ತಾತ್ಕಾಲಿಕವಾಗಿ, ಹಂಗಾಮಿಯಾಗಿ, —ರದ್ದುಮಾಡು, ಜಾರಿಗೆ ತರದಿರು, (ಕೆಲಸದಿಂದ) ತೆಗೆದುಹಾಕು, (ಹಕ್ಕು) ತಪ್ಪಿಸು, ನಿಲ್ಲಿಸಿಬಿಡು, ತಡೆದಿಡು [S. judgement ತೀರ್ಪನ್ನು (ಕೊಡದೆ) ಕಾದಿಡು, ಸದ್ಯಕ್ಕೆ ತಡೆಹಿಡಿ. S. one's indignation ರೋಷವನ್ನು ತಡೆದುಕೊ. S. the rules ನಿಯಮಗಳನ್ನು ತಾತ್ಕಾಲಿಕವಾಗಿ ತಡೆದಿಡು. S. an officer ಅಧಿಕಾರಿಯನ್ನು ತಾತ್ಕಾಲಿಕವಾಗಿ ಕೆಲಸದಿಂದ ತೆಗೆದುಹಾಕು. S. payment ಹಣ ಪಾವತಿಮಾಡಲು ತಪ್ಪು, ದಿವಾಳಿಯೆಂದು ಒಪ್ಪಿಕೊ. Suspended animation (ಸಾಯದೆ) ನಿಶ್ಚೇಷ್ಟ ಸ್ಥಿತಿಯಲ್ಲಿರುವುದು, ಸ್ತಬ್ಧ ಪ್ರಾಣ]. **Suspénder** (ನಾ.) (ಕ್ರಿಯಾರ್ಥಗಳಲ್ಲಿ); (ಬ. ವ. ದಲ್ಲಿ) (ಮು., ಹೇಜೆಯ ಮಾತು) ಷರಾಯಿ, ಕಾಲುಚೀಲ, ಮೊ. ನ್ನು ಮೇಲೆತ್ತಿ ಹಿಡಿದುಕೊಳ್ಳುವ ಪಟ್ಟಿಗಳು : ಎತ್ತುಪಟ್ಟಿಗಳು, ತೂಗುಪಟ್ಟಿಗಳು. **Suspénse** ಸಸ್ಪೆನ್ಸ್ (ನಾ.) (ಸಮಾಚಾರ, ಮೊ. ಗಳ ವಿಷಯದಲ್ಲಿ) ಕಾತರಪೂರ್ವಕವಾದ ಅನಿಶ್ಚಯ(ತೆ), ನಿರೀಕ್ಷೆ, ಪ್ರತೀಕ್ಷೆ ; ಕಳವಳ [Keep one in s. (ಯಾವ ವಿಷಯವನ್ನು ತಿಳಿಯಲು ತವಕಗೊಂಡಿದ್ದಾನೆಯೊ ಆ ವಿಷಯವನ್ನು ತಿಳಿಸದೆ) ಸಂದಿಗ್ಧ ಸ್ಥಿತಿಯಲ್ಲಿ, ಕಳವಳದಲ್ಲಿ, —ಇಡು] ; (ನ್ಯಾ. ಶಾ.) ತಾತ್ಕಾಲಿಕವಾಗಿ —ರದ್ದು, ತಡೆದಿಡುವುದು, ಜಾರಿಮಾಡದಿರುವುದು. S. account (ಜಮಾ ಖರ್ಚಿನಲ್ಲಿ) ಅಮಾನತ್ತು ಲೆಕ್ಕ. **Suspénsible** (ಗು.) ತೂಗಹಾಕಬಹುದಾದ, ನೇಲಬಿಡಲಾಗುವ. **Suspensibílity** (ನಾ.) ಅಲಂಬ್ಯತೆ. **Suspénsion** (ನಾ.) (ಕ್ರಿಯಾರ್ಥಗಳಲ್ಲಿ). S.-bridge ತಳದಲ್ಲಿ ಆಧಾರವಿಲ್ಲದೆ ಎರಡು ಕೊನೆಗಳಲ್ಲೂ ಸ್ತಂಭ, ಮೊ. ಕ್ಕೆ ಬಿಗಿದುಕಟ್ಟಿ, ಹೊಳೆ, ಮೊ. ಗಳಿಗೆ ಅಡ್ಡವಾಗಿ ತಂತಿ ಹೊರಜಗಳಿಂದ ಜೋಲಹಾಕಿರುವ ಸೇತುವೆ : ತೂಗು ಸೇತುವೆ. **Suspénsive** (ಗು.) (S. veto ತಾತ್ಕಾಲಿಕವಾಗಿ, ನಿರ್ದಿಷ್ಟ ಕಾಲಾವಧಿ ಮಾತ್ರ, —ನಿಷೇಧಿಸುವ ಅಧಿಕಾರ : ತಾತ್ಕಾಲಿಕ ನಿಷೇಧಾಧಿಕಾರ). **Suspénsively** (ಕ್ರಿ. ವಿ.) ; **Suspénsory** (ಗು.) ತೂಗಹಾಕಿದ ; ತೂಗಹಾಕುವ, ಆಲಂಬಕ (S. muscle ಆಲಂಬಕ ಸ್ನಾಯು) ; ತಾತ್ಕಾಲಿಕವಾಗಿ—ನಿಲ್ಲಿಸುವ, ಮನ್ನಾಮಾಡುವ.

Sus. per coll. ಸಸ್ ಪರ್ ಕಾಲ್ (ನಾ.) ವ್ಯಕ್ತಿಯನ್ನು ಗಲ್ಲಿಗೆ ಹಾಕಲಾಯಿತು (ಎಂಬ ದಾಖಲೆ, ನಮೂದು) ; (ಅನೇಕ ವೇಳೆ ಹಾಸ್ಯ ಪ್ರ.) ಗಲ್ಲಿಗೆ—ಹಾಕಿದ, ಹಾಕುವ [Suspendatur per collum (ಕುತ್ತಿಗೆಗೆ ನೇಣುಹಾಕಿ ಕೊಲ್ಲಲ್ಪಡಲಿ) ಎಂಬ ಲ್ಯಾಟಿನ್ ವಾಕ್ಯದ ಸಂಕ್ಷಿಪ್ತ]

Suspícion, Suspícious, etc. **Suspect** ನೋಡಿ.

Suspíre ಸಸ್‌ಪೈ(ಅ)ರ್ (ಕ್ರಿ. ಅಕ.) (ಕಾವ್ಯ) ನಿಟ್ಟುಸಿರುಬಿಡು. **Suspirátion** —ಸ್ಪಿ— (ನಾ.)

Sustaín ಸಸ್ಟೇಯ್‌ನ್ (ಕ್ರಿ. ಸಕ.) (—ರ) ಭಾರವನ್ನು ಹೊರು, ಧರಿಸು, ವಹಿಸು; ಬೀಳದಂತೆ, ಕುಸಿಯದಂತೆ, —ಹಿಡಿ(ದಿರು), ತಡೆ(ದಿರು) ; ಆಧಾರ, ಆಸರೆ, —ಆಗಿರು ; ಪೋಷಕವಾಗಿರು ; ಪುಷ್ಟಿ, ಸಾಮರ್ಥ್ಯ, —ಕೊಡು (Sustaining food ಪುಷ್ಟಿಕರ ಆಹಾರ) ; ತಡೆ(ದುಕೊ), ತಾಳು, ತಾಳಿಕೊ (Sustained the shock of the enemy's attack ಶತ್ರುವಿನ ಆಕ್ರಮಣದ ಧಕ್ಕೆಯನ್ನು ತಾಳಿಕೊಂಡಿತು. Will not sustain comparison with —ಒಡನೆ ಹೋಲಿಕೆಗೆ ತಡೆಯುವುದಿಲ್ಲ, ನಿಲ್ಲುವುದಿಲ್ಲ) ; ಪಡು, ಪಡೆ, ಹೊಂದು, ಅನುಭವಿಸು, ಒಳಗಾಗು (S. a defeat, loss) ; (ನ್ಯಾಯಸ್ಥಾನದ ಅಥವಾ ಇತರ ಅಧಿಕಾರಸ್ಥಾನದ ವಿಷಯದಲ್ಲಿ) ಎತ್ತಿಹಿಡಿ, ಪರವಾಗಿ ತೀರ್ಪುಕೊಡು, ಒಪ್ಪು (S. the objection, the applicant in his claim) ; (ಹೇಳಿಕೆ, ಆಪಾದನೆ, ವಾದ, ಮೊ. ನ್ನು) ಸಮರ್ಥಿಸು, ದೃಢಪಡಿಸು ; (ಪಾತ್ರವನ್ನು) ಸರಿಯಾಗಿ ನಿರ್ವಹಿಸು; (ನಾದ, ಪ್ರಯತ್ನ, ಮೊ. ನ್ನು) ಬಿಡದೆ ನಡಸು (A sustained note, effort ಸಂತತ ಸ್ವರ, ಅವಿಶ್ರಾಂತ ಪ್ರಯತ್ನ). **Sustaínable** (ಗು.) ; **Sustaínment** (ನಾ.) (ವಿರ. ಪ್ರ.) ; **Sústenance** ಸಸ್ಟಿನನ್ಸ್ (ನಾ.) ಪುಷ್ಟಿ, ಪೋಷಣೆ (ಈಗ ವಿರ. ಪ್ರ.) (Given for the s. of our bodies) ; ಪೋಷಕ ಗುಣ, ಪೌಷ್ಟಿಕತೆ, ಜೀವನಾಧಾರ, ಆಹಾರ (ರೂಪ. ಸಹ) (There is no s. in it ಅದರಲ್ಲಿ ಪೌಷ್ಟಿಕತೆ ಇಲ್ಲ. How shall we get s. ? ನಮಗೆ ಜೀವನಾಧಾರ ಎಂತು ? Lived a week without s. of any kind ಯಾವ ಬಗೆಯ ಆಹಾರವೂ ಇಲ್ಲದೆ ಒಂದು ವಾರ ಬದುಕಿದ್ದನು. Lying is thy s., thy food). **Sustentátion** ಸಸ್ಟೆಂಟೇಷನ್ (ನಾ.) ಜೀವನಾಧಾರ (ವಿರ. ಪ್ರ.) (S. fund ಬಡಪಾದ್ರಿಗಳ ಜೀವನಾರ್ಥವಾಗಿ ಕೂಡಿಸಿದ ನಿಧಿ : ಜೀವನಾರ್ಥ ನಿಧಿ)

Sústenance, Sustentátion. **Sustain** ನೋಡಿ.

Susurrátion ಸು(ಸ್ಯು)ಸರೇಷನ್ (ನಾ.) (ವಿರ. ಪ್ರ.) ಪಿಸುಗುಟ್ಟುವುದು ; ಮರ ಮರ ಶಬ್ದ. **Susúrrous** ಸು(ಸ್ಯು)ಸರಸ್ (ಗು.)

Sútler ಸಟ್ಲರ್ (ನಾ.) ಸೈನ್ಯದ ಜೊತೆಯಲ್ಲಿ ಅಥವಾ ಪಾಳೆಯದಲ್ಲಿ ಇದ್ದುಕೊಂಡು ಸೈನಿಕರಿಗೆ ಆಹಾರ ಸಾಮಗ್ರಿ, ಮೊ. ನ್ನು ಮಾರುವವನು : ದಂಡಿನ ಹರದ ; ಶಿಬಿರ ವ್ಯಾಪಾರಿ.

Sútra ಸೂಟ್ರ (ನಾ.) ಸೂತ್ರ.

Sutteé, Sati ಸಟೀ (ನಾ.) ಸಹಗಮನವಾಚರಿಸುವ ಹಿಂದೂ ವಿಧವೆ : ಸತಿ ; ಸಹಗಮನ (ಪದ್ಧತಿ). **Sutteéism** (ನಾ.) ಸತೀ, ಸಹಗಮನ, —ಪದ್ಧತಿ.

Súture ಸ್ಯೂಟ್ಯು(ಚ)ರ್ (ನಾ., ಕ್ರಿ. ಸಕ.) ಎರಡು ಎಲುಬುಗಳ (ಮು., ತಲೆಚಿಪ್ಪಿನ ಎಲುಬುಗಳ) ಅಂಚುಗಳ ಹೊಲಿಗೆಯಂಥ ಸೇರಿಕೆ ; ಸಸ್ಯ, ಕ್ರಿಮಿ, ಮೊ. ಗಳಲ್ಲಿ ಇಂಥ ಸೇರುವೆ ; ಹೊಲಿಗೆ ಸೇರುವೆ ; (ಶಸ್ತ್ರವೈದ್ಯ) ಗಾಯದ ಅಂಚುಗಳನ್ನು ಸೇರಿಸಿ ಹೊಲಿಯುವುದು : ಗಾಯದ ಹೊಲಿಗೆ (ಹಾಕುವುದು) ; ಹೊಲಿಗೆ—ದಾರ, ನರ, ತಂತಿ. (ಕ್ರಿ.) ಹೊಲ(ಗೆ ಹಾಕು). **Sútural** (ಗು.) ; **Súturally** (ಕ್ರಿ. ವಿ.) ; **Suturátion** (ನಾ.); **Sútured** (ಗು.)

Súzerain ಸೂ(ಸ್ಯೂ)ಜರೇನ್ (ನಾ.) ಊಳಿಗಮಾನ್ಯದ ಧಣಿ ; ಅಧಿರಾಜ, ಪರಮಪ್ರಭು ; ಅರ್ಧಸ್ವತಂತ್ರ ಅಥವಾ ಒಳಸ್ವತಂತ್ರಾಧಿಕಾರವುಳ್ಳ ರಾಜ್ಯಗಳಮೇಲೆ ಸರ್ವಾಧಿಕಾರವಿರುವ ಪ್ರಭು ಅಥವಾ ರಾಜ್ಯ : ಸಾರ್ವಭೌಮ (ರಾಜ್ಯ) ; ಅಧಿ—ರಾಜ, ರಾಷ್ಟ್ರ. **Súzerainty** (ನಾ.) ಸಾರ್ವಭೌಮತ್ವ, ಆಧಿಪತ್ಯ.

Svelte (L) ಸ್ವೆಲ್ಟ್ (ಗು.) (ಮು., ಹೆಂಗಸಿನ ಮೈಯ ವಿಷಯದಲ್ಲಿ) ತೆಳು, ಬಳುಕುವ, ಕೋಮಲ.

Swab ಸ್ವಾಬ್ (ನಾ., ಕ್ರಿ. ಸಕ.) ಧೂಳು, ಜುಂಗು, —ತೊಡಪ [(ಕ್ರಿ.) (ನೀರುಹಾಕಿ ನೆಲ, ಹಡಗಿನ ಅಟ್ಟ, ಮೊ. ನ್ನು) ಜುಂಗು ತೊಡಪದಿಂದ —ತಿಕ್ಕು, ಸಾರಿಸು, ಚೊಕ್ಕಟಮಾಡು. S. up (ತೇವವನ್ನು ; ಒರಸಿಗೆಯಿಂದ, ಒತ್ತಿಗೆಯಿಂದ) ಒತ್ತು, ಒತ್ತಿಹಾಕು.] ; (ಶಸ್ತ್ರಚಿಕಿತ್ಸೆಯಲ್ಲಿ ಉಪಯೋಗಿಸುವ) ಹೀರೊತ್ತಿಗೆ, ಹೀರೊತ್ತು ; (ನಾವಿಕ ಅಸಂ.) ಅಧಿಕಾರದ ಭುಜಕೀರ್ತಿ ; (ನಾವಿಕ ಅಸಂ.) ಒಡ್ಡ (ಮನುಷ್ಯ). **Swábber** (ನಾ.) (ಹಡಗಿನಲ್ಲಿ) ಅಟ್ಟ —ತೊಳೆಯುವವನು, ಚೊಕ್ಕಟಮಾಡುವವನು ; ಒಡ್ಡ.

Swáddle ಸ್ವಾಡ್‌ಲ್ (ಕ್ರಿ. ಸಕ.) (ಪಟ್ಟಿಗಳಿಂದ ಅಥವಾ ದಪ್ಪ ಬಟ್ಟೆಗಳಿಂದ) ಸುತ್ತು [Swaddling-bands, -clothes ಹುಟ್ಟಿದ ಮಕ್ಕಳನ್ನು ಸುತ್ತುವ ಪಟ್ಟಿಗಳು, ಬಟ್ಟೆಗಳು : ಸುತ್ತು—ಪಟ್ಟಿ, ಬಟ್ಟೆ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ರೂಪ.) (ಭಾವ, ಕ್ರಿಯೆ, ಮೊ. ನ್ನು) ತಡೆಗಟ್ಟುವ, ನಿರೋಧಿಸುವ, —ಪ್ರಭಾವಗಳು : ಪ್ರತಿಬಂಧಕಗಳು, ನಿರ್ಬಂಧಗಳು]

Swadéshi ಸ್ವದೇಷಿ (ನಾ.) (ಇಂಡಿಯದ) ಸ್ವದೇಶಿ (ಚಳವಳಿ) (ಪರದೇಶದ, ಮು., ಬ್ರಿಟಿಷರ ಸರಕನ್ನು ಬಹಿಷ್ಕರಿಸುವುದು)

Swag ಸ್ವ್ಯಾಗ್ (ನಾ.) (ಅಸಂ.) (ಕಳ್ಳರು, ಮೊ. ರು ಹೊಡೆದುಕೊಂಡು ಹೋದ) ಕೊಳ್ಳೆ, ಲೂಟಿ; (ರೂಪ.) (ರಾಜಕೀಯ; ಅಥವಾ ಇತರ ಬಗೆಯ ಸ್ವಾರ್ಥಸಾಧನೆಯಿಂದ ಗಳಿಸಿದ) ಕಳ್ಳಗಳಿಕೆ, ಅನ್ಯಾಯಾರ್ಜಿತ; (ಆಸ್ಟ್ರೇಲಿಯ) (ದಾರಿಹೋಕನ, ಪೊದೆಗಾಡು ಪಯಣಿಗನ, ಸಿಡಿಮದ್ದು ಸ್ಥಾಪಕನ) ಗಂಟುಮೂಟೆ.

Swage ಸ್ವೇಜ್ (ನಾ, ಕ್ರಿ. ಸಕ.) (ಮೆತು ಕಬ್ಬಿಣ, ಮೊ. ಕ್ಕೆ ಬಡಿಯುವುದರಿಂದ ಅಥವಾ ಒತ್ತಡದಿಂದ ಆಕಾರಕೊಡಲು ಉಪಯೋಗಿಸುವ ಹಲವು ಬಗೆಯ) ಅಚ್ಚು (S.-block ವಿವಿಧ ರಂಧ್ರಗಳು, ಗಾಡಿಗಳು, ಮೊ. ನ್ನು ಕೊರೆದಿರುವ ಅಚ್ಚು ತುಂಡು). (ಕ್ರಿ.) ಅಚ್ಚೊತ್ತಿ ಆಕಾರಕೊಡು.

Swagger ಸ್ವ್ಯಾಗರ್ (ಕ್ರಿ., ನಾ., ಗು.) ಮೇಲುಮಟ್ಟದವನಂತೆ, ಜಂಬದಿಂದ ನಡೆ; (ನಡಗೆಯಿಂದ) ಆತ್ಮವಿಶ್ವಾಸ, ಆತ್ಮತೃಪ್ತಿ,—ತೋರು; ಜಬರುದಸ್ತಿನಿಂದ, ದರ್ಪದಿಂದ, ಆಟೋಪದಿಂದ, —ಅಡ್ಡಾಡು, ಬರು, ಹೋಗು (*About, in, out* ಮೊ. ಉಪ. ದೊಡನೆ); ಔದ್ಧತ್ಯದಿಂದ ವರ್ತಿಸು; ಸೊಕ್ಕಿನಿಂದ ಮೆರೆ; ಜಂಬ, ಪ್ರತಿಷ್ಠೆ, —ಕೊಚ್ಚು (*About* ಉಪ. ದೊಡನೆ); ಅಬ್ಬರಿಸು, ಬೆದರಿಸು; ಅಬ್ಬರಿಸಿ, ಬೆದರಿಸಿ, —(ಒಂದು ಕೆಲಸವನ್ನು) ಮಾಡಿಸು, ಬಿಡಿಸು (*Into, out of* ಮೊ. ಪದಗಳೊಡನೆ). (ನಾ.) ಆಟೋಪದ, ದರ್ಪದ, — ನಡಗೆ, ವರ್ತನೆ, ಮಾತು; ದರ್ಪ, ಜಬರದಸ್ತು, ಪ್ರತಿಷ್ಠೆ; ಠೀವಿ, ಜರ್ಬು, ಠಾಕುಠೀಕು; (S.-cane ಸಿಪಾಯಿಗಳು ಹೊರಗೆ ತಿರುಗಾಡಲು ಹೋಗುವಾಗ ಹಿಡಿಯುವ ಬೆತ್ತ, ಕೈಕೋಲು : ಸಿಪಾಯಿ ಬೆತ್ತ). (ಗು.) ಠೀವಿಯ, ಜರ್ಬಿನ, ಠಾಕುಠೀಕಿನ (S. clothes, society). **Swággerer** (ನಾ.); **Swággeringly** (ಕ್ರಿ. ವಿ.)

Swain ಸ್ವೇಯ್ನ್ (ನಾ.) ಹಳ್ಳಿಗ, ಹಳ್ಳಿಗಾಡು ಹೈದ; ಹಳ್ಳಿಗಾಡಿನ— ಪ್ರಣಯಿ, ನಲ್ಲ; (ಹಾಸ್ಯ ಪ್ರ.) ಪ್ರಣಯಿ, ನಲ್ಲ.

Swállet ಸ್ವಾಲೆಟ್ (ನಾ.) (ಪ್ರಾಂ. ಪ್ರ.) ನೆಲದೊಳಗಿನ ಪ್ರವಾಹ, ಗುಪ್ತ ಪ್ರವಾಹ; ಪ್ರವಾಹ ಕಣ್ಣಿಗೆ ಕಾಣದೆ ಇಳಿದುಹೋಗುವ ಹಳ್ಳ, ಕಂಡಿ; ಕಳ್ಳ ನೀರ್ಗಂಡಿ; =Swallow-hole (Swallow[1] ನೋಡಿ)

Swállow[1] ಸ್ವಾಲೊ (ಕ್ರಿ., ನಾ.) (ಆಹಾರ, ಮೊ. ನ್ನು) ನುಂಗು, ನೊಣೆ, ಕಬಳಿಸು, ಅಡಚಿಕೊ, ಕುಡಿ (S. a camel ನಂಬಲು ಅಥವಾ ಸಹಿಸಲು ಸಾಧ್ಯವಿಲ್ಲದ್ದನ್ನು ಸುಲಭವಾಗಿ ನಂಬು ಅಥವಾ ಸಹಿಸು); ನುಂಗಿಹಾಕು, ತಿಂದುಹಾಕು, ಹೀರಿಬಿಡು, ಪೂರೈಸಿಬಿಡು (The earth swallowed them up ನೆಲ ಅವರನ್ನು ನುಂಗಿಹಾಕಿತು. The expenses more than swallowed up the earnings ಸಂಪಾದನೆಯನ್ನೆಲ್ಲ ವೆಚ್ಚ ತಿಂದುಹಾಕಿಬಿಟ್ಟಿತು. Death is swallowed up in victory ಗೆಲುವು ಸಾವನ್ನು ಮರೆಯಿಸಿತು); (ಹೇಳಿಕೆ, ಮೊ. ನ್ನು) ಸುಲಭವಾಗಿ, ಬೇಗನೆ,—ನಂಬಿಬಿಡು, ಒಪ್ಪಿಬಿಡು (Wills. anything you tell him); (ಅಪಮಾನ, ಮೊ. ನ್ನು) ತಾಳಿಕೊ, ನುಂಗಿಕೊ; (ತನ್ನ ಮಾತನ್ನು) ಹಿಂದಕ್ಕೆ ತೆಗೆದುಕೊ; ಹೇಳಿದ್ದನ್ನು ಇಲ್ಲವೆನ್ನು (I have swallowed my words already) (ನಾ.) ಗಂಟಲು; ನುಂಗುವುದು; ಒಮ್ಮೆ ನುಂಗಿದ ಮೊತ್ತ, ನುಂಗು, ತುತ್ತು. ಸುಣ್ಣಕಲ್ಲುನೆಲದಲ್ಲಿ ಪ್ರವಾಹ ಗುಪ್ತವಾಗಿ ಇಳಿದುಹೋಗುವ, ಪನ್ನಾರೆಯಾಕಾರದ ಗುಂಡಿ : ಕಳ್ಳ ನೀರ್ಗಂಡಿ (=S.-hole). **Swállowable** (ಗು.)

Swállow[2] ಸ್ವಾರೋ (ನಾ.) ನಿಡು ರೆಕ್ಕೆಯ, ವೇಗಹಾರಿಕೆಯ, ಅಗಲ ತೆರಪಿನ ಕೊಕ್ಕಿನ, ದುರ್ಬಲವಾದ ಕಾಲುಗಳುಳ್ಳ, ಕವಲುತೋಕೆಯ, ಹುಳು ತಿನ್ನುವ, ಬೇಸಗೆಯ ಮುನ್ ಗುರುತೆಂದು ತಿಳಿದಿರುವ, ವಲಸೆ ಹೋಗುವ, ಒಂದು ಹಕ್ಕಿ : ಸ್ವಾರೋ ಹಕ್ಕಿ [One s. does not make a summer (ಸಾಕಷ್ಟು ನಿದರ್ಶನಗಳಿಲ್ಲದೆ ತೀರ್ಮಾನಿಸಬಾರದೆಂದು ಹೇಳುವಲ್ಲಿ) ಒಂದು ಕೋಗಿಲೆ ಕೂಗಿದರೆ ವಸಂತವಾಗುವುದಿಲ್ಲ]. **S. dive** ನೀರನ್ನು ಸೋಕುವವರೆಗೂ ತೋಳುಗಳನ್ನು ಹೊರಚಾಚಿ ನೀರಿನಲ್ಲಿ ಮುಳುಗುವುದು : ಚಾಚುಮುಳುಕು. **S.-fish** ಒಂದು ಬಗೆಯ ಮೀನು. **S.-hawk, -plover, -shrike, etc.** ಕವಲುತೋಕೆಯ ಗಿಡುಗ, ಮೊ. ವು. **S.-tail** ಕವಲುತೋಕೆ(ಯ ಹಕ್ಕಿ, ಚಿಟ್ಟೆ); (ಬ. ವ. ಅಥವಾ ಏ. ವ. ದಲ್ಲಿ) ಕವಲುತೋಕೆಯ ಅಂಗಿ. **S.-tailed** (ಚಿಟ್ಟೆ, ಹಕ್ಕಿ, ಮೊ. ಗಳ ವಿಷಯದಲ್ಲಿ) ಕವಲುತೋಕೆಯ. **S.-tailed coat** ಕವಲುತೋಕೆಯ ಅಂಗಿ. **S.-wort** ಹಾಲನಂಥ ರಸವುಳ್ಳ ಒಂದು ಸಸ್ಯ.

Swam. Swim ಧಾತುವಿನ ಭೂತ ರೂಪ.

Swamp ಸ್ವಾಂಪ್ (ನಾ., ಕ್ರಿ. ಸಕ.) ಜೌಗು, ಕೊಳಚೆ, ಬದಿ, —ನೆಲ; ಹೂಳು (ಜೌಗು ನೆಲದಲ್ಲಿ ಬೆಳೆಯುವ ಸಸ್ಯಗಳ ಮತ್ತು ಪ್ರಾಣಿಗಳ ಹೆಸರುಗಳಲ್ಲಿ ವಿಶೇಷಣ ಪ್ರ.). (ಕ್ರಿ.) ಜೌಗಿನಲ್ಲಿ, ಬದಿಯಲ್ಲಿ, —ಸಿಕ್ಕಿಸು, ಹೂಳು (ಸಾ., ಭೂ. ಕೃ. ನಲ್ಲಿ); (ನೀರಿನ ವಿಷಯದಲ್ಲಿ; ದೋಣಿ, ಮನೆ, ಪದಾರ್ಥ, ಮೊ. ನ್ನು) ಮುಳುಗಿಸು, ಕೊಚ್ಚಿಹಾಕು (ರೂಪ. ಸಹ) (Am swamped with letters, applications, work); (ಅಧಿಕ ಸಂಖ್ಯೆಯ ಅಥವಾ ಮೊತ್ತದ ವಿಷಯದಲ್ಲಿ; ಮತ್ತೊಂದು ಗಮನಕ್ಕೆ ಬಾರದಂತೆ, ಪರಿಣಾಮ ಮಾಡದಂತೆ) ನುಂಗಿಹಾಕು, ಮರೆಸಿಬಿಡು, ಮುಳುಗಿಸಿಬಿಡು (The Whig majority of the House of Lords was swamped by the creation of twelve Tory Peers). **Swámpy** (ಗು.)

Swan ಸ್ವಾನ್ (ನಾ.) ಹಂಸ(ಪಕ್ಷಿ) [Black s. ಕರಿಯ ಹಂಸ; (ಕಪ್ಪು ಜಾತಿಯ ಹಂಸಗಳು ಇವೆಯೆಂದು ತಿಳಿದುಬರುವುದಕ್ಕೆ ಮೊದಲು) ಅಪರೂಪವಸ್ತು(ವಿಗೆ ಸಂಕೇತನಾಮ). All his geese are swans (Goose ನೋಡಿ)]; ಕವಿ (ಹಾಡಿಗೆ ಪ್ರಸಿದ್ಧವಲ್ಲದ ಹಂಸ ಸಾಯುವ ಕಾಲಕ್ಕೆ ಮುಂಚೆ ಒಂದು ಸಲ ಮಾತ್ರ ಬಹು ಚೆನ್ನಾಗಿ ಹಾಡುತ್ತದೆಂಬ ಪ್ರತೀತಿಯಿಂದ) [(ಮು.) S. of Avon ಷೇಕ್ಸ್‌ಪಿಯರ್]; ಉತ್ತರ ದಿಕ್ಕಿನಲ್ಲಿ ಆಕಾಶಗಂಗೆಯಲ್ಲಿಯ ಒಂದು ನಕ್ಷತ್ರಪುಂಜ : ರಾಜಹಂಸ. **S.-flower** ಒಂದು ಬಗೆಯ ಸೀತಾಳೆ ಗೆಡ್ಡೆ. **S.-goose** ನಿಡುಗೊರಲಿನ ಚೀನಾ ಬಾತು. **S.-herd** ಹಂಸಗಳನ್ನು ಸಾಕುವ ಅಥವಾ ಅವುಗಳ ಒಡೆತನದ ಗುರುತುಗಳನ್ನು ದಾಖಲೆಯಿಟ್ಟಿರುವ ಅರಮನೆಯ ಅಧಿಕಾರಿ : ಹಂಸ ಪಾಲಕ. **S.-mark** ಒಡೆತನವನ್ನು ಸೂಚಿಸಲು ಹಂಸಗಳ ಕೊಕ್ಕಿನ ಚರ್ಮದಲ್ಲಿ ಮಾಡಿರುವ ಗುರುತು : ಹಂಸದ ಗುರುತು; ಹಂಸಾಂಕ. **S.-neck** ಹೊರಬಿಡುವ ನಳಿಕೆಯ ಕೊಂಕು ತುದಿ : ಹಂಸದ ಕತ್ತು. **S.'s-down** ಹಂಸದ ತುಪ್ಪುಳು; ಹಂಸತೂಲಿಕೆ; ಒಂದು ಮಗ್ಗುಲಲ್ಲಿ ಮೃದುವಾದ ಗುಂಜೆಬ್ಬಿಸಿ ಮಾಡಿದ ದಪ್ಪ ಹತ್ತಿಯಬಟ್ಟೆ : ತುಪ್ಪುಳು (ಹತ್ತಿ)ಬಟ್ಟೆ. **S.-shot** (ಕಾಡುಕೋಳಿ, ಮೊ. ಗಳ ಬೇಟೆಯಲ್ಲಿ ಉಪಯೋಗಿಸುವ) ದೊಡ್ಡ ಗಾತ್ರದ, ದಪ್ಪ, —ಗುಂಡು. **S.-skin** ಮೂಲೆ ನೆಯ್ಗೆಯ ನಯವಾದ ಫ್ಲಾನೆಲ್ ಬಟ್ಟೆ. **S.-song** ಹಂಸ ಪಕ್ಷಿ ತಾನು ಸಾಯುವಾಗ ಹಾಡುವುದೆಂದು ಜನರು ನಂಬಿದ್ದ ಗೀತೆ : ಅಂತಿಮ (ಹಂಸ) ಗೀತೆ; (ಒಬ್ಬನ) ಕೊನೆಯ, ಅಂತಿಮ, —ಕೃತಿ. **S.-upping** (ತೇಮ್ಸ್ ನದೀತೀರದಲ್ಲಿ ವರ್ಷಕ್ಕೊಮ್ಮೆ ಸೇರಿ) ಹಂಸಗಳಿಗೆ ಒಡೆತನದ ಗುರುತು ಹಾಕುವುದು : ಹಂಸಾಂಕನ. **Swánlike** (ಗು.); **Swánnery** ಸ್ವಾನರಿ (ನಾ.) ಹಂಸಗಳನ್ನು ಬೆಳೆಸುವ ಸ್ಥಳ : ಹಂಸ —ವರ್ಧನ ಶಾಲೆ, ಗೃಹ.

Swank ಸ್ವ್ಯಾಂಕ್ (ನಾ., ಕ್ರಿ. ಅಕ.) (ಅಸಂ.) ಸೊಕ್ಕು (ಮೆರೆತ), ಠೇಂಕಾರ(ದಿಂದ ನಡೆ), ದರ್ಪ(ದಿಂದ ವರ್ತಿಸು), ಜಂಬ (ಕೊಚ್ಚು), ಪ್ರತಿಷ್ಠೆ (ತೋರು)

Swap ಸ್ವಾಪ್ (ಕ್ರಿ., ನಾ.) =Swop.

Swaráj ಸ್ವರಾಜ್ (ನಾ.) (ಇಂಡಿಯದಲ್ಲಿ) ಸ್ವರಾಜ್ಯ. **Swarájist** (ನಾ., ಗು.) ಸ್ವರಾಜ್ಯ ವಾದಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Sward ಸ್ವಾರ್ಡ್ (ನಾ.) ಹುಲ್ಲು—ನೆಲ, ಮೈದಾನ; ಹಸಲೆ. **Swárded** (ಗು.) ಹುಲ್ಲು ಬೆಳೆ(ಯಿಸಿ)ದ.

Swáre. **Swear** ನೋಡಿ.

Swarm[1] ಸ್ವಾರ್ಮ್ (ನಾ., ಕ್ರಿ. ಅಕ.) (ಸಂಚರಿಸುತ್ತಿರುವ ಹುಳು, ಹಕ್ಕಿ, ಪ್ರಾಣಿ, ಬೇಟೆಗಾರರು, ಸಿಪಾಯಿಗಳು, ಮೊ. ರ) ಹಿಂಡು, ಗುಂಪು, ತಂಡ, ಪಡೆ, ಸಮೂಹ, ಸಮುದಾಯ [Swarms ಅಧಿಕ ಸಂಖ್ಯೆ, ಹಿಂಡು ಹಿಂಡು (Swarms of stars, people, bills)]; (ಹೊಸ ಬೀಡನ್ನು ಸ್ಥಾಪಿಸುವುದಕ್ಕಾಗಿ ಜೇನು ಹುಟ್ಟಿಯಿಂದ ತಾಯಿಜಾಚೆಲೊಡನೆ ಹೊರಡುವ) ಜೇನುನೊಣಗಳ ಹಿಂಡು, ದುಂಬಿವಿಂಡು. [S.-cell, -spore ಚಲ, ಚರ, —ಜೀವಕಣ]. (ಕ್ರಿ.) ಗುಂಪು ಗುಂಪಾಗಿ, ಹಿಂಡು ಹಿಂಡಾಗಿ, —ಚಲಿಸು, ಬರು; ಮುಸುರು, ಮುತ್ತಿಕೊ (*Round, about, over* ಉಪ. ದೊಡನೆ); (ಜೇನುನೊಣಗಳ ವಿಷಯದಲ್ಲಿ) ಹಿಂಡು, ಹಿಂಡಾಗಿ, —ಹೊರಡು; ಹಿಂಡು, ಗುಂಪು, —ಕೂಡು, ಸೇರು; ಅಸಂಖ್ಯಾತವಾಗಿರು, ಹೇರಳವಾಗಿರು; (ಸ್ಥಳಗಳ ವಿಷಯದಲ್ಲಿ) ತುಂಬಿರು, ಸಂದಣಿಗೊಂಡಿರು, ಗಿಜುಗುಟ್ಟು (Road, house, swarming with beggars, fleas)

Swarm[2] ಸ್ವಾರ್ಮ್ (ಕ್ರಿ.) (ಹಗ್ಗ, ಗಣೆ, ಮರ, ಮೊ. ಗಳನ್ನು) ಹತ್ತು, ಏರು (*Up* ಉಪ. ದೊಡನೆ); ಮೊಣಕಾಲ.ಗಳಿಂದಲೂ ಕೈಗಳಿಂದಲೂ ಅತುಕೊಂಡು ಹತ್ತು.

Swart ಸ್ವಾರ್ಟ್ (ಗು.) (ಪ್ರಾಚೀ. ಪ್ರ.) ಕಪ್ಪು (ಬಣ್ಣದ)

Swárthy ಸ್ವಾರ್ದಿ, ಸ್ವಾರ್ಥಿ (ಗು.) ಕಪ್ಪು (ಮೈಬಣ್ಣದ), ಶ್ಯಾಮ(ಲ). **Swárthily** (ಕ್ರಿ. ವಿ.); **Swárthiness** (ನಾ.)

Swash ಸ್ವಾಷ್ (ಕ್ರಿ., ನಾ.) (ಪ್ರಾಚೀ. ಪ್ರ.) ಬಲವಾಗಿ ಹೊಡೆ, ಬಡಿ, ಅಪ್ಪಳಿಸು [**Swáshbuckler** ಆಟೋಪದ—ದುಂಡಾವರ್ತಿ ಮನುಷ್ಯ, ಬಾಯಿಬಡುಕ. Swashing blow ಬಲವಾದ ಹೊಡೆತ, ಅಪ್ಪಳಿಕೆ]. (ನೀರು, ಮೊ. ಗಳ ವಿಷಯದಲ್ಲಿ; ಬಂಡೆ, ಮೊ. ಗಳಿಗೆ) ಫಳಾರನೆ ಹೊಡೆ, ರಭಸದಿಂದ ಬಡಿ, ಅಪ್ಪಳಿಸು. (ನಾ.) ಫಳಾರನೆ ಶಬ್ದ, ಅಪ್ಪಳಿಕೆ, ಅಲೆಗಳ ಬಡಿತ. S.-plate ತಾನು ಅಚ್ಚಿನ ಸುತ್ತ ತಿರುಗುತ್ತ ತನ್ನ ಮೇಲೆ ತುದಿಯಾನಿರುವ ಕಂಬಿಯನ್ನು ಮೇಲಕ್ಕೂ ಕೆಳಕ್ಕೂ ಆಡಿಸುವ ಒರಚಕ್ರ.

Swástika ಸ್ವಾಸ್ಟಿಕ (ನಾ.) ಸ್ವಸ್ತಿಕ (=Fylfot)

Swat ಸ್ವಾಟ್ (ಕ್ರಿ. ಸಕ.) (ನೊಣ, ಮೊ. ನ್ನು) ಜಜ್ಜುಬಡಿ, ಅಪ್ಪಳಿಸಿ ಹಾಕು (ಅಮೆ. ನಂ.)

Swath ಸ್ವಾತ್ (ನಾ.) ಕುಯ್ದು ಹಾಕಿರುವ ಹುಲ್ಲು, ಪಯಿರು, ಮೊ. ಗಳ ಸಾಲು: ಅರಿ; ಕುಯ್ದು ತೆರಪಾಗಿರುವ ದಾರಿ: ಕೊಯ್ಲು—ಪಟ್ಟಿ, ದಾರಿ.

Swathe ಸ್ವೇದ್ (ಕ್ರಿ. ಸಕ., ನಾ.) ಪಟ್ಟಿಗಳಿಂದ ಸುತ್ತು, ಕಟ್ಟು; (ಬಟ್ಟೆನೆಯ ಅಥವಾ ಹಲವು ಬಟ್ಟೆಗಳಿಂದ) ಸುತ್ತು. (ನಾ.) (ವಿರ. ಪ್ರ.) ಒಂದು ಸುತ್ತು, ಪಟ್ಟಿ.

Sway ಸ್ವೇ (ಕ್ರಿ., ನಾ.) ಓಲು, ಒಲೆ(ದಾಡು), ತೊನೆ(ದಾಡು), ತೂಗಾಡು; ಆಂದೋಲವಾಗು, ಡೋಲಾಯಮಾನವಾಗಿರು; ಓಲಿಸು, ಆಡಿಸು, ತೂಗಾಡಿಸು; ತಿರುಗಿಸು, ಬೀಸು, ಝಳಪಿಸು; ಪ್ರಭಾವ ಬೀರು; ಅಂಕೆಯಲ್ಲಿ, ಅಧೀನದಲ್ಲಿ, —ಇಟ್ಟುಕೊ; ಆಳು; ಪ್ರಭುತ್ವ, ಆಧಿಪತ್ಯ, —ನಡಸು (Wind sways trees ಗಾಳಿ ಮರಗಳನ್ನು ತೂಗಾಡಿಸುತ್ತದೆ. S. sword ಕತ್ತಿ ಬೀಸು. His speech swayed votes ಅವನ ಭಾಷಣ ಅಭಿಮತಗಳನ್ನು ತಿರುಗಿಸಿ ಬಿಟ್ಟಿತು. Sways a fifth of mankind ಮಾನವ ಜಾತಿಯ ಐದನೆಯ ಒಂದು ಪಾಲು ಜನವನ್ನು ಆಳುತ್ತಾನೆ). (ಭೂ. ಕೃ. ನಲ್ಲಿ) (ಕುದುರೆಯ ವಿಷಯದಲ್ಲಿ) ಅತಿಯಾಗಿ ಕುಸಿದ, ಡೊಗರು, —ಬೆನ್ನಿನ (=Sway-backed). (ನಾ.) ಓಲಾಟ, ತೂಗಾಟ; ಓಲು; ಅಧಿಕಾರ, ಪ್ರಭಾವ, ಹತೋಟಿ; ಆಳಿಕೆ, ಪ್ರಭುತ್ವ.

Swear ಸ್ವೇ(ಅ)ರ್ (ಕ್ರಿ.; ಭೂತ. Swore, ಪ್ರಾಚೀ. ಪ್ರ. Sware; ಭೂ. ಕೃ. Sworn; ನಾ.) ಆಣೆಯಿಟ್ಟು, ಪ್ರಮಾಣಮಾಡಿ, —ಹೇಳು (*To, that* ಪದದೊಡನೆ); ಆಣೆಯಿಟ್ಟುಕೊ; ಪ್ರಮಾಣ, ಪ್ರತಿಜ್ಞೆ, ಶಪಥ, —ಮಾಡು [S. on the Testament. S. to *or* by ಆಣೆಯಿಟ್ಟು ಹೇಳು, ಆಣೆಯಿಟ್ಟುಕೊ. S. by (ಬಳ. ಮಾ.) ಪಟ್ಟಾಗಿ ನಂಬಿರು, ಬಿಡದೆ ಹಿಡಿದಿರು (S. by one's doctor). S. off (drink, etc.) (ಕುಡಿತ, ಮೊ. ನ್ನು) ಬಿಟ್ಟುಬಿಡುವುದಾಗಿ, ಮಾಡುವುದಿಲ್ಲವೆಂದು, —ಆಣೆಯಿಟ್ಟುಕೊ, ಪ್ರಮಾಣಮಾಡು. S. treason against friend ಸ್ನೇಹಿತನಿಗೆ ದ್ರೋಹಮಾಡುವುದಾಗಿ ಶಪಥಮಾಡು. S. the peace against (ಮತ್ತೊಬ್ಬನಿಂದ) ಅಪಾಯವುಂಟೆಂದು ಶಪಥಮಾಡಿ ಹೇಳು]. (ಬಳ. ಮಾ.) ಒತ್ತಿ ಹೇಳು (I s. it is too bad for him). ಶಾಪ —ಹಾಕು, ಇಡು; ಶಪಿಸು (*At* ಉಪ. ದೊಡನೆ); ಪ್ರಮಾಣಮಾಡಿಸು (S. witness. S. person to secrecy. Sworn friends ಬದ್ಧ ಸ್ನೇಹಿತರು. Sworn enemies ಬದ್ಧ—ದ್ವೇಷಿಗಳು, ವೈರಿಗಳು. Sworn broker ಮೋಸ, ಮೊ. ನ್ನು ಮಾಡುವುದಿಲ್ಲವೆಂದು ಪ್ರಮಾಣ ಮಾಡಿಸಿಕೊಂಡು ಕಸಬಿಗೆ ಸೇರಿಸಿಕೊಂಡ ದಳ್ಳಾಳಿ: ಪ್ರಮಾಣ ಮಾಡಿರುವ ದಳ್ಳಾಳಿ. S. in ಪ್ರಮಾಣಮಾಡಿಸಿ ಅಧಿಕಾರ ವಹಿಸು, ಪ್ರತಿಷ್ಠಿಸು); (ಭೂ. ಕೃ. ನಲ್ಲಿ) (ಸಾಕ್ಷ್ಯ, ಮೊ. ಗಳ ವಿಷಯದಲ್ಲಿ) ಪ್ರಮಾಣಪೂರ್ವಕ (ವಾಗಿ ಹೇಳಿದ). (ನಾ.) ಶಾಪಹಾಕುವುದು, ಶಪನೆ (Relieved his feelings by a hearty s.); (ಬಳ. ಮಾ.) ಶಾಪ(ದ ಮಾತು) (=S.-word). **Sweárer** (ನಾ.)

Sweat ಸ್ವೆಟ್ (ನಾ.) ಬೆವರು, ಸ್ವೇದ [Running, dripping, with s. ಬೆವರು ಹರಿಯುತ್ತ, ಬಸಿಯುತ್ತ. In *or* by the s. of one's brow ಬೆವರು ಸುರಿಸಿ; ಶ್ರಮಪಟ್ಟು. Bloody s. ರಕ್ತ ಕೂಡಿದ ಬೆವರು, ರಕ್ತಸ್ವೇದ]; ಬೆವರುವುದು, ಬೆವರಿಕೆ, ಸ್ವೇದನ (ಸ್ಥಿತಿ); ಬೆವರಿಸುವ ವ್ಯಾಯಾಮ [In a s., (ಬಳ. ಮಾ.) All of a s. ಬೆವರು ಕಿತ್ತು(ಕೊಂಡು); ಬೆವತುಹೋಗಿ. A cold s. (ಮರಣ, ಮೂರ್ಛೆ, ಭಯ, ಮೊ. ಸ್ಥಿತಿಗಳಲ್ಲಿ ತೋರುವ) ತಂಬೆವರು, ತಂಬೆವರಿಕೆ. A s. will do him good ಒಂದು ಸಲ ಬೆವತರೆ ಅವನಿಗೆ ಒಳ್ಳೆಯ ದಾಗುತ್ತದೆ]. (ಬಳ. ಮಾ.) ಕಳವಳ, ತಲ್ಲಣ (In a s.); (ಮು., ಬಳ. ಮಾ.) ದುಡಿತ, ಶ್ರಮ, ಪ್ರಯಾಸ, ಪ್ರಯತ್ನ (Cannot stand the s. of it ಅದರ ಪ್ರಯಾಸವನ್ನು ಸಹಿಸಿಕೊಳ್ಳಲಾರ. Will not take the s. ಶ್ರಮಪಡುವುದಿಲ್ಲ). (ಯಾವುದಾದರೂ ಮೇಲ್ಮೈಯಿಂದ ಸ್ರವಿಸುವ, ಮೇಲ್ಮೈಮೇಲೆ ಕೂಡುವ) ಬೆವರಿನಂಥ ಹನಿಗಳು; ಜಿನುಗು. **S.-band** (ಟೋಪಿಗೆಯ ಒಳ ಅಂಚಿನಲ್ಲಿ ಹಾಕಿರುವ, ಚರ್ಮದ ಅಥವಾ ಉಣ್ಣೆಬಟ್ಟೆಯ) ಬೆವರುಪಟ್ಟಿ. **S.-cloth** ಮು., ಕುದುರೆಯ ತಡಿಯ ಅಥವಾ ಕೊರಲಪಟ್ಟಿಯ ಅಡಿಯಲ್ಲಿ ಹಾಕುವ ತೆಳ್ಳನೆಯ ಕಂಬಳಿ: ಬೆವರುಬಟ್ಟೆ. **S.-duct** ಸ್ವೇದನಾಳ. **S.-gland** ಸ್ವೇದಗ್ರಂಥಿ. **S.-shop** ಕಡಮೆ ಕೂಲಿಗೆ ಬೆವರು ಬಸಿಯ ದುಡಿಸುವ ಕೆಲಸದ ಮನೆ; ಬೆವರು ದುಡಿತದ ಮನೆ. **Sweátless** (ಗು.); **Sweáty** (ಗು.); **Sweátily** (ಕ್ರಿ. ವಿ.); **Sweátiness** (ನಾ.)

Sweat (ಕ್ರಿ.) ಬೆವರು (—ಸುರಿ, ಹರಿ, ಬಸಿ); (ರೂಪ.) ಭಯ ಗೊಂಡಿರು, ಕಳವಳಪಡು, ತಲ್ಲಣಗೊಳ್ಳು; ಪಶ್ಚಾತ್ತಾಪಪಡು, ಪರಿ ತಪಿಸು (He shall s. for it ಅದಕ್ಕಾಗಿ ಅವನು ಪಶ್ಚಾತ್ತಾಪ ಪಡುತ್ತಾನೆ); (ರಕ್ತ, ಗೋಂದು, ಮೊ. ನ್ನು) (ಬೆವರಿನಂತೆ) ಬಸಿ, ಸ್ರವಿಸು; (ಗೋಡೆ, ಮೊ. ಗಳ ವಿಷಯದಲ್ಲಿ: ಮೇಲ್ಮೈಯಲ್ಲಿ) ತೇವ ತೋರು, (ನೀರು) ಜಿನುಗು; (ಬೆವರು ಬಸಿದು) ದುಡಿ, ಕಷ್ಟಪಡು; (ಕುದುರೆ, ಜಟ್ಟಿ, ಮೊ. ನ್ನು) ವ್ಯಾಯಾಮದಿಂದ ಬೆವರುವಂತೆ ಮಾಡು, ಬೆವರಿಸು; (ಪೈಪೋಟಿಯನ್ನು ದುರುಪಯೋಗಪಡಿಸಿಕೊಂಡು) ಅತ್ಯಂತ ಕಡಮೆ ಕೂಲಿಗೆ, ದೀರ್ಘಕಾಲ ದುಡಿಸು: ಬೆವರು ಸುರಿಯ ದುಡಿಸು (Sweated clothes ಬೆವರು ದುಡಿಮೆಯವರು ತಯಾರಿಸಿದ ಬಟ್ಟೆಗಳು: ಬೆವರು ದುಡಿಮೆ ಬಟ್ಟೆಗಳು); (ಕೆಲಸಗಾರರ ವಿಷಯದಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆವರು ದುಡಿಮೆಮಾಡು, ಬೆವರು ಬಸಿದು ದುಡಿ. (ಚಕ್ಕಳ, ಹೊಗೆ ಸೊಪ್ಪು, ಮೊ. ನ್ನು) ಮಂಡ, ಕಿಣ್ವ, —ಗಟ್ಟಿಸು. (ಚೀಲದಲ್ಲ ಹಾಕಿ ಅಲ್ಲಾಡಿಸುವುದರಿಂದ ನಾಣ್ಯಗಳಲ್ಲಿಯ ಲೋಹವನ್ನು) ಸವೆಯಿಸಿ ಕಡಮೆ ಮಾಡು ; ಹೀಗೆ ಸವೆಯಿಸಿ ಹಗುರಮಾಡು. (ಕುದುರೆಯ) ಬೆವರು ಕೆರೆದುಹಾಕು ; (ಲೋಹದ ಭಾಗವನ್ನು) ಬೆಸೆ(ದು ಕಟ್ಟಿಸು) (*On*, *in* ಉಪ. ದೊಡನೆ). Sweating-bath ಬೆವರು (ಬರಿಸಲು) ಸ್ನಾನ. Sweating-iron (ಕುದುರೆಯ) ಬೆವರು ಕೆರೆಯುವ ಕಬ್ಬಿಣದ ತುಂಡು : ಬೆವರುಡ್ಡಿಗೆ. Sweating-room ಬೆವರು ಸ್ನಾನದ ಮನೆ; ಸ್ವೇದಾಗಾರ. Sweating-sickness ಇಂಗ್ಲೆಂಡಿನಲ್ಲಿ ೧೫ ಮತ್ತು ೧೬ನೆಯ ಶ. ಮಾ. ಗಳಲ್ಲಿ ತಲೆತೋರಿದ್ದ, ವಿಪರೀತ ಬೆವರಿ ಜ್ವರ ಬರುತ್ತಿದ್ದ ಒಂದು ಸಾಂಕ್ರಾಮಿಕ ರೋಗ: ಬೆವರು—ಜ್ವರ, ರೋಗ. **Sweáter** (ನಾ.) (ಕ್ರಿಯಾರ್ಥಗಳಲ್ಲಿ) ; ಬೆವರು ದುಡಿಮೆಯ ಧಣಿ ; ವ್ಯಾಯಾಮ ಮಾಡುವಾಗ ಅಥವಾ ಮಾಡಿದಮೇಲೆ ಶೀತವಾಗದಂತೆ ತೊಡುವ ಗುತ್ತನೆಯ ಉಣ್ಣೆಯ ಕವಚ : ಬೆವರು ಕವಚ.

Swede ಸ್ವೀಡ್ (ನಾ.) ಸ್ವೀಡನ್ ದೇಶದವನು ; ಸ್ವೀಡನ್ ದೇಶದ ಸಿಹಿ ಮೂಲಂಗಿ. **Swédish** (ಗು., ನಾ.) ಸ್ವೀಡನ್—ದೇಶದ, ಜನರ (ಭಾಷೆ)

Swedenbórgian ಸ್ವೀಡನ್‘ಬಾರ್ಜಿಯನ್ (ಗು., ನಾ.) (ಯೇಸು ಕ್ರಿಸ್ತನು ದೇವರ ಅವತಾರವೆಂದೂ, ಬೈಬಲ್ಲಿಗೆ ರಹಸ್ಯಾರ್ಥವಿದೆಯೆಂದೂ ಪ್ರತಿಪಾದಿಸಿದ) ಸ್ವೀಡನ್ನಿನ ರಹಸ್ಯಜ್ಞಾನ ವಾದಿಯಾದ ಇಮ್ಯಾನ್ಯುಅಲ್ ಸ್ವೀಡನ್‌ಬಾರ್ಗ್ ಎಂಬಾತನ (ಅನುಯಾಯಿ). **Swedenbórgianism** (ನಾ.)

Sweény ಸ್ವೀನಿ (ನಾ.) (ಅಮೆ. ಸಂ.) (ಕುದುರೆಯ, ಮು., ಭುಜದ) ಸ್ನಾಯು ಕ್ಷೀಣತೆ.

Sweep ಸ್ವೀಪ್ (ಕ್ರಿ. ; ಭೂತ., ಭೂ. ಕೃ. Swept ಸ್ವೆಪ್ಟ್) ಹಾರಿಕೊಂಡು, ಜಾರಿಕೊಂಡು, ತೇಲಿಕೊಂಡು, ರಭಸದಿಂದ, ಬಿರುಸಾಗಿ, ಬೀಸಿಕೊಂಡು, ಕೊಚ್ಚಿಕೊಂಡು, ಗಂಭೀರವಾಗಿ, ಠೀವಿಯಿಂದ,—ಹೋಗು ; (ಉದ್ದವಾಗಿ, ಇಳಿಜಾರಾಗಿ) ಪಸರಿಸಿರು, ಹಾಯ್ದಿರು, ಹಬ್ಬಿರು (Eagle sweeps past. Wind sweeps along ಗಾಳಿ ಬಿರುಸಾಗಿ ಬೀಸುತ್ತದೆ. Cavalry sweeps down on the enemy ರಾವುತದಳ ರಭಸದಿಂದ ಶತ್ರುವನ್ನು ಆಕ್ರಮಣ ಮಾಡುತ್ತದೆ. She swept out of the room ಅವಳು ಠೀವಿಯಿಂದ ಕೊಟಡಿಯನ್ನು ಬಿಟ್ಟುಹೋದಳು. His glance sweeps from right to left ಅವನ ನೋಟ ಬಲದಿಂದ ಎಡಕ್ಕೆ ಪಸರಿಸುತ್ತದೆ. Plain sweeps away to the sea); (ವರ್ತಮಾನ ಕೃ.) ಬಹು ವಿಸ್ತಾರವಾದ, ವ್ಯಾಪಕ, ಸರ್ವಗ್ರಾಹಕ ; ಎಲ್ಲೆಕಟ್ಟುಗಳಿಲ್ಲದ, ವಿನಾಯಿತಿಗಳಿಲ್ಲದ ; ಸಂಪೂರ್ಣ, ಹತ್ತ ; ತಡೆಬಡೆಯಿಲ್ಲದ, ಹುಚ್ಚಾಬಟ್ಟೆಯ [Sweeping generalization, remark. Sweeping victory ಸಂಪೂರ್ಣ ಜಯ. **Sweépingly** (ಕ್ರಿ. ವಿ.) ; **Sweépingness** (ನಾ.)]. ಬೀಸು, ಕೊಚ್ಚಿಹಾಕು ; ಕೊಚ್ಚಿಕೊಂಡು, ಹೊಡೆದುಕೊಂಡು, —ಹೋಗು ; ತೊಡೆದು, ಒರಸಿ, —ಹಾಕು ; ನಾಶ, ನಿರ್ಮೂಲ, —ಮಾಡು (*Along*, *away*, *down*, *from*, *off*, *out of* ಮೊ. ಉಪ. ದೊಡನೆ) [Swept his hands across ಅವನು ಕೈಗಳನ್ನು ಅಡ್ಡವಾಗಿ ಬೀಸಿದನು. River sweeps away bridge, sweeps logs down with it. The plague swept off thousands. S. all obstacles from one's path. S. away slavery ಗುಲಾಮಗಿರಿಯನ್ನು (ಒಮ್ಮೆಗೇ) ತೊಡೆದುಹಾಕು. He swept his audience along with him (ಅವನು ತನ್ನ ಮಾತಿನ ಪ್ರಭಾವದಿಂದ) ಶ್ರೋತೃಗಳ ತನ್ನೊಡನೆ ನುಗ್ಗುವಂತೆ ಮಾಡಿದನು; ತನ್ನ ವಾಕ್ಪ್ರವಾಹದಲ್ಲಿ ಶ್ರೋತೃಗಳನ್ನು ಸೆಳೆದುಕೊಂಡುಹೋದನು]. ವೇಗವಾಗಿ, ರಭಸದಿಂದ, —ಪ್ರಯಾಣಮಾಡು, ಸಂಚರಿಸು ; ಸೋಕಿಕೊಂಡು, ಗುಡಿಸಿಕೊಂಡು, —ಹೋಗು ; ವೇಗವಾಗಿ— (ಕೈ, ಕಣ್ಣು) ಆಡಿಸು, ಹಾಯಿಸು [S. the seas[1] ಸಮುದ್ರದ ಎಲ್ಲ ಕಡೆಗಳಲ್ಲೂ ರಭಸದಿಂದ ಸಂಚರಿಸು (ಮುಂದೆ ನೋಡಿ). S. the strings (ವಾದ್ಯದ) ತಂತಿಗಳ ಮೇಲೆ ಬೆರಳೋಡಿಸು. S. the horizon (ವ್ಯಕ್ತಿಯ ಅಥವಾ ಕಣ್ಣುಗಳ ವಿಷಯದಲ್ಲಿ) ದಿಗಂತದ ಉದ್ದಕ್ಕೂ ಕಣ್ಣೋಡಿಸು, ದೃಷ್ಟಿ ಹರಿಸು. S. river-bottom ನದಿಯ ತಳವನ್ನು ಸೆಳೆಬಲೆಯಿಂದ ಗುಡಿಸಿಹಾಕು. Dress sweeps the ground ಉಡುಪು ನೆಲವನ್ನು ಗುಡಿಸುತ್ತದೆ]. (ಫಿರಂಗಿದಳ, ಮೊ. ಗಳ ವಿಷಯದಲ್ಲಿ) ಗುಂಡಿನೇಟಿಗೆ ಒಳಪಡಿಸು, ಉದ್ದಕ್ಕೂ ಗುಂಡಿನಿಂದ ಕೊಚ್ಚು (Battery sweeps the apprcaches); ಕಸ—ಗುಡಿಸು, ಉಡುಗು, ಗುಡಿಸಿಹಾಕು, ಬಾಚು, ಬಾಚಿಹಾಕು, ಝಾಡಿಸು (*Away*, *up* ಮೊ. ಉಪ. ದೊಡನೆ) [S. the seas[2] ಸಮುದ್ರಗಳಿಂದ ಶತ್ರುಗಳನ್ನೆಲ್ಲಾ ತೊಡೆದುಹಾಕು, ಹೊಡೆದೋಡಿಸು (ಮೇಲೆ ನೋಡಿ). S. floor, carpet, chimney. Swept and garnished ಗುಡಿಸಿ ಚೊಕ್ಕಟಮಾಡಿದ, ಪರಿಷ್ಕರಿಸಿದ. S. the board ಜೂಜಿನಲ್ಲಿ ಒಡ್ಡಿದ ಪಣವನ್ನೆಲ್ಲಾ ಬಾಚಿಕೊ, ಗೆದ್ದುಬಿಡು; (ರೂಪ.) ಎಲ್ಲವನ್ನೂ ಗೆದ್ದುಬಿಡು. S. a constituency ಒಂದು ಚುನಾವಣೆಯ ಕ್ಷೇತ್ರದ ಬಹು ಮಟ್ಟಿಗೆ ಎಲ್ಲ ಅಭಿಮತಗಳನ್ನೂ ಪಡೆ ; ಚುನಾವಣೆಯ ಕ್ಷೇತ್ರದ ಅಭಿಮತಗಳನ್ನು ಬಾಚಿಕೊ. Sweeps everything into his net ಬಂದದ್ದನ್ನೆಲ್ಲಾ (ತನ್ನ ಬಲೆಗೆ) ಬಾಚಿಕೊಳ್ಳುತ್ತಾನೆ. **Sweéping** (ನಾ.) (ಸಾ., ಬ. ವ. ದಲ್ಲಿ) ಗುಡಿಸಿದ್ದು, ಬಾಚಿದ್ದು ; ಕಸ, ಕಳಪೆ]. (ದೋಣಿ, ಮೊ. ನ್ನು) ನಿಡುಹುಟ್ಟುಹಾಕಿ ನಡಸು. S.-net ಉದ್ದನೆಯ ಮೀನುಬಲೆ ; ಕೀಟಶಾಸ್ತ್ರಜ್ಞನ ಬಲೆ ; ಬಾಚು ಬಲೆ. S.-seine ದೊಡ್ಡ ಸೇನ್ ಬಲೆ. **Sweépstake(s)** ಜೂಜಿನಲ್ಲಿ ಭಾಗ ವಹಿಸಿದವರ ಪಣಗಳ ಒಟ್ಟು ಮೊತ್ತವನ್ನು, ಗೆದ್ದ ಕುದುರೆಯಮೇಲೆ ಪಣವೊಡ್ಡಿದ್ದವರಿಗೆಲ್ಲ ಅಥವಾ ಗೆದ್ದ ಮೊದಲನೆಯ ಮೂರು ಕುದುರೆಗಳ(ಲ್ಲಿ ಒಂದರ) ಮೇಲೆ ಪಣವೊಡ್ಡಿದ್ದವರಿಗೆಲ್ಲ ಹಂಚುವ ಪಂದ್ಯ: ಒಟ್ಟು ಪಣ ಹಂಚಿಕೆ ಪಂದ್ಯ. **Sweéper** (ನಾ.) ಕಸ ಗುಡಿಸುವವನು; ಝಾಡಮಾಲಿ; ಉಡುಗುಯಂತ್ರ. **(-)sweeper** (ನಾ.)

Sweep (ನಾ.) ಹಾರು, ತೇಲು, ಬೀಸು, ಜಾರು, —ಚಲನೆ ; ಹರವು, ವಿಸ್ತಾರ ; ಬೀಸು, ಝಳಪು, ಝಾಡಿಕೆ ; ಬಾಚು, ಚಾಚು ; (ರಸ್ತೆ, ಮೊ. ಗಳಲ್ಲಿ) ತಿರುವು, ಬಾಗು ; ಬಾಗುರಸ್ತೆ, ಮೊ. ವು (With a s. of his arm, eyes, scythe. A s. of mountain country ಮಲೆನಾಡ ಹರವು. River makes a great s. to the left ನದಿ ಎಡಕ್ಕೆ ದೊಡ್ಡದಾಗಿ ಬಾಗುತ್ತದೆ. House is approached by a fine s. ಸೊಗಸಾದ ಬಾಗುರಸ್ತೆ ಮನೆಗೆ ಸೇರುತ್ತದೆ); (ಬೀಸಿನ, ಚಾಚಿನ) ನಿಲುಕು, ವ್ಯಾಪ್ತಿ (Within, beyond, the s. of the scythe, net, telescope, eye, human intelligence); ಗುಡಿಸುವುದು, ಝಾಡಿಸುವುದು [Give it a thorough s. *or* s.-up *or* s.-out. Make a clean s. (ಹಳೆಯ ಸಾಮಾನು, ನೌಕರರು, ಮೊ. ನ್ನು) ಸಂಪೂರ್ಣವಾಗಿ ತೆಗೆದುಹಾಕು ; —ಹಾಕಿ ಚೊಕ್ಕಟಮಾಡು] ; (ಗಾಳಿಯಿಲ್ಲದೆ ನಿಂತುಬಿಟ್ಟ ಹಡಗು, ದೋಣಿ, ಮೊ. ಗಳ ಮೇಲೆ ನಿಂತುಕೊಂಡು ಹುಟ್ಟುಹಾಕುವವನು ಉಪಯೋಗಿಸುವ) ಉದ್ದನೆಯ, ನಿಡು, —ಹುಟ್ಟು (Had to get out the sweeps) ; (ಬಾವಿಯಿಂದ ನೀರೆತ್ತುವ) ಏತ, ಏತದ ಮರ ; ಹೊಗೆ ಕೊಳವೆ(ಗಳನ್ನು) —ಗುಡಿಸುವವನು, ಚೊಕ್ಕಟ ಮಾಡುವವನು [(ಅನೇಕ ವೇಳೆ) = Chimney-s.] ; (ಬಳ. ಮಾ.) = Sweepstake.

Sweet ಸ್ವೀಟ್ (ಗು.) ಇನಿದಾದ, ಸಿಹಿಯಾದ, ಸವಿಯಾದ, ಮಧುರ, ಸ್ವಾದು [S. apples ಸೀಸೇಬುಗಳು. S. stuff (ಸಕ್ಕರೆ) ಮಿಠಾಯಿ. She likes her tea s. ಅವಳಿಗೆ ಚಹ ಸಿಹಿಯಾಗಿದ್ದರೆ ಇಷ್ಟ. A s. tooth ಸಿಹಿ ಪದಾರ್ಥಗಳ ಆಸೆ, ಇಷ್ಟ. S. wine ಸೀಮದ್ಯ (ಎದುರು ಪದ : Dry wine). Tastes s. ಸೀಯಾಗಿದೆ, ಸವಿಯಾಗಿದೆ] ; ಸುವಾಸನೆಯ, ಘಮ ಘಮಿಸುವ, ನರುಗಂಪಿನ, ಪರಿಮಳದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[S. breath ನರುಸುಯ್. (**Sweet-scented** ಗು.)]; ಇಂಪಾದ, ಮಧುರ, ಮಂಜುಳ (Has a s. voice. S. song, singer); ಹೊಸ, ಕೆಟ್ಟಿಲ್ಲದ, ಹುಳಿಯಿಲ್ಲದ, ಕೊಳೆತಿಲ್ಲದ, ಉಪ್ಪಿಲ್ಲದ, ಉಪ್ಪು ಹಾಕಿಲ್ಲದ [S. water (ಕುಡಿಯತಕ್ಕ) ಸೀನೀರು. Is the meat, milk, butter, s. still? ಮಾಂಸ ಕೆಟ್ಟಿಲ್ಲದೆ, ಹಾಲು ಹುಳಿಯಾಗದೆ, ಬೆಣ್ಣೆ ಕೊಳೆಯದೆ, ಇನ್ನೂ ಇದೆಯೊ?]; ಹಿತವಾದ, ಇಷ್ಟವಾದ, ಪ್ರಿಯ, ಮೃದು, ಸುಖಕರ, ಆಪ್ಯಾಯಮಾನವಾದ; (ಬಳ. ಮಾ.) ಸೊಗಸಾದ, ಅಂದವಾದ, ಉಲ್ಲಾಸಕರ ['Tis s. to hear one's own praises. S. toil ಇಷ್ಟವಾದ—ಕೆಲಸ, ದುಡಿಮೆ. What a s. moustache! ಎಂಥ ಸೊಗಸಾದ ಮೀಸೆ! S. temper (ಸಂತೋಷ ಸಹನೆಗಳುಳ್ಳ) ಮಧುರ ಮನೋವೃತ್ತಿ; ಪ್ರಸನ್ನತೆ (**Sweet-tempered** ಗು.). A s. girl ಮುದ್ದು ಹುಡುಗಿ, ಇನಿವೆಣ್ಣು. S. one (ಸಂಬೋಧನೆಯಲ್ಲಿ) ಇನಿಯ(ಳೆ), ಪ್ರಿಯ(ಯೆ), ನಲ್ಲ(ಲ್ಲೆ). A s. one (ಅಸಂ.) (ಮುಷ್ಟಿಯ) ಗುದ್ದು, ಒಬ್ಬಟ್ಟು, ಕಜ್ಜಾಯ (ರೂಪ.). S. going ಒಳ್ಳೆಯ ರಸ್ತೆಯಲ್ಲಿ ಅಥವಾ ಒಳ್ಳೆಯ ಬಂಡಿಯಲ್ಲಿ ಪ್ರಯಾಣ: ಸುಖ ಪ್ರಯಾಣ. At one's own s. will ಇಷ್ಟ ಬಂದಾಗ, ಇಷ್ಟ ಬಂದಂತೆ; ತನ್ನ ಖುಷಿ ಬಂದಹಾಗೆ]. S. (up)on (ಬಳ. ಮಾ.) ಮೋಹಗೊಂಡು. **Sweétbread** (ಮು., ಆಹಾರವಾಗಿ ಉಪಯೋಗಿಸುವ, ಕರುವಿನ) ಮೇದೋ ಜೀರಕಾಂಗ (=Belly s.-b.), ಥೈಮಸ್ ಗ್ರಂಥಿ (=Throat *or* neck s.-b.). **S. brier** (Brier[1] ನೋಡಿ). **S. gale** (Gale[1] ನೋಡಿ). **Sweétheart** (ನಾ.) ಇನಿಯ(ಳು); ಪ್ರಿಯ(ಯೆ). (ಕ್ರಿ.) ಪ್ರಣಯ (ವ್ಯಾಪಾರ) ನಡಸು (Go sweethearting). **Sweétmeat** (ಸಕ್ಕರೆ) ಮಿಠಾಯಿ, ಮುರಬ್ಬ. **S. oil** (ಮು.) ಆಲಿವ್ ಎಣ್ಣೆ. **S. pea** ಬಣ್ಣ ಬಣ್ಣದ ಸುವಾಸನೆಯ ಹೂವು ಬಿಡುವ ಒಂದು ತೋಟದ ಸಸ್ಯ. **S. potato** (Potato ನೋಡಿ). **S.-root** = Liquorice. **S.-rush** ಮಿಠಾಯಿ ಮಾಡುವುದರಲ್ಲೂ ಔಷಧದಲ್ಲೂ ಉಪಯೋಗಿಸುವ, ಸುವಾಸನೆಯ ಬೇರುಕಾಂಡವುಳ್ಳ ಒಂದು ಸಸ್ಯ: ಕಾಚಿ, ಕಾಮಂಚ. **S.-sop** ಸೀತಾಫಲ(ದ ಹಣ್ಣು, ಗಿಡ), ದುರಂಜಿ (ಹಣ್ಣು, ಗಿಡ). **S. sultan** (Sultan ನೋಡಿ). **S.-water** ಕಾವುಮನೆಯಲ್ಲಿ ಬೆಳಸುವ ಒಂದು ಬಗೆಯ ಬಿಳಿಯ ದ್ರಾಕ್ಷಿ. **S. willow** ಒಂದು ಸುವಾಸನೆಯ ಸಸ್ಯ. **Sweéten** (ಕ್ರಿ.); **Sweétening** (ನಾ.) (ಕ್ರಿಯಾರ್ಥಗಳಲ್ಲಿ); ಸಿಹಿಕೊಡುವ ಪದಾರ್ಥ; ಸಕ್ಕರೆ, ಸಿಹಿ; (ಅಮೆ. ಸಂ.) ಕಾಕಂಬಿ, ಪಾಕ. **Sweétish** (ಗು.); **Sweétly** (ಕ್ರಿ. ವಿ.); **Swéetness** (ನಾ.)

Sweet (ನಾ.) ಸಕ್ಕರೆ, ಸಿಹಿ(ಯಾದ್ದು), ಮಧುರ(ವಾದ್ದು) (The s. & the bitter, *or* sweets & bitters, of life ಬಾಳಿನ ಸಿಹಿ ಕಹಿಗಳು); ಮಿಠಾಯಿ (=**Sweéty**, ನಾ.); (ಸಾ., ಬ. ವ. ದಲ್ಲಿ) ಸೀ—ತಿಂಡಿ, ಭಕ್ಷ್ಯ; (ಸಾ., ಬ. ವ. ದಲ್ಲಿ) ಸುವಾಸನೆ, ಪರಿಮಳ (Flowers diffusing their sweets on the air); (ಬ.ವ.ದಲ್ಲಿ) ಸುಖ ಸಂತೋಷಗಳು, ಸುಖೋಲ್ಲಾಸಗಳು, ಸವಿ (The sweets of office ಅಧಿಕಾರದ ಸವಿ); (ಮು., ಸಂಬೋಧನೆಯಲ್ಲಿ) ಪ್ರಿಯ(ಯೆ), ನಲ್ಲ(ಲ್ಲೆ), ಮುದ್ದು. **Sweéting** (ನಾ.) ಒಂದು ಬಗೆಯ ಸೀ ಸೇಬು.

Swell ಸ್ವೆಲ್ (ಕ್ರಿ.; ಭೂತ. Swelled ಸ್ವೆಲ್ಡ್; ಭೂ. ಕೃ. Swollen ಸ್ವೋಲೆನ್ ಅಥವಾ Swelled; ನಾ., ಗು.) ದೊಡ್ಡದಾಗು, ಏರು, ಹೆಚ್ಚು, ಉಬ್ಬು, ಉಕ್ಕು, ಊದು, ಬಾವೇರು, ಉಕ್ಕೇರು, ಹೊಮ್ಮು, ಬೀಗು, ಕೊಬ್ಬು; —ಇಸು; ಬಾತುಕೊ(ಳ್ಳುವಂತೆ ಮಾಡು) [River swollen with melted snow ಮಂಜುಗಡ್ಡೆ ಕರಗಿ ಉಕ್ಕೇರಿದ ನದಿ. The injured wrist began to s. (up) ಗಾಯಪಟ್ಟ ಮಣಿಕಟ್ಟು ಬಾವತೊಡಗಿತು. The swelling sails ಉಬ್ಬು ಹಾಯಿಗಳು. Swelling oratory ವಾಗಾಡಂಬರದ ವಾಗ್ಮಿತೆ. Murmur swelled into a roar ಮರ್ಮರಧ್ವನಿ ಆರ್ಭಟಕ್ಕೆ ಏರಿತು. Ground swells into an eminence ನೆಲ ದಿಣ್ಣೆಯಾಗಿ ಏರುತ್ತದೆ. Heart swells (ಭಾವೋದ್ರೇಕದಿಂದ) ಎದೆ ಬರಿಯುತ್ತದೆ, ಹೃದಯ ಉಕ್ಕುತ್ತದೆ. S. with pride ಗರ್ವದಿಂದ ಉಬ್ಬು, ಬೀಗು. S. with indignation ರೋಷದಿಂದ ಉಕ್ಕು. S. like a turkey-cock (ಟರ್ಕಿ ಹುಂಜದಂತೆ) ಬೀಗು, ಆಟೋಪಮಾಡು. Swollen estimates ವಿಪರೀತ ದುಬಾರಿ ಅಂದಾಜು ಪಟ್ಟಿ. Items s. the total ಬಾಬುಗಳು ಒಟ್ಟು ಮೊತ್ತವನ್ನು ಹೆಚ್ಚಿಸುತ್ತವೆ. S. note (ಸಂ.) (ಪರ್ಯಾಯ ಕ್ರಮದಲ್ಲಿ) ಆರೋಹಣ ಅವರೋಹಣಗಳಲ್ಲಿ ಹಾಡು, ಬಾಜಿಸು. Emotion swells & subsides ಭಾವೋದ್ರೇಕ ಉಕ್ಕುತ್ತದೆ ಮತ್ತೆ ಇಳಿಯುತ್ತದೆ. Swelled head ತಲೆ—ಕೊಬ್ಬು, ಕೊಬ್ಬಿದವನು; ಗರ್ವ]. (ನಾ.) ಉಬ್ಬು(ವುದು), ಊತ, ಬಾವು, ಏರು, ಏರಿಕೆ; (ಪ್ರವಾಹದ) ಉಕ್ಕು, (ಸಮುದ್ರದ) ಉಬ್ಬರ; ತಿಟ್ಟು, ದಿಣ್ಣೆ (The s. of the ground); (ಉರುಳೆ ಯಾಕಾರದ ವಸ್ತುವಿನ) ಉಬ್ಬು ಭಾಗ (The s. of the fore-arm); (ಸಂ.) ಆರೋಹಣ ಅವರೋಹಣ; ಆರ್ಗನ್ ವಾದ್ಯದಲ್ಲಿ ನಾದವನ್ನು ಏರಿಳಿಸಲು ಅನುಕೂಲಿಸುವ ಒಂದು ಸಲಕರಣೆ: ನಾದ ನಿಯಂತ್ರಕ. (ಬಳ. ಮಾ.) ಒಳ್ಳೆಯ ಸಮರ್ಥ, ಪ್ರತಿಷ್ಠಾವಂತ; ಮೆರೆತದವನು; ಸೊಗಸುಗಾರ, ನೀಟುಗಾರ (Is a s. in politics ರಾಜಕೀಯದಲ್ಲಿ ಒಳ್ಳೆಯ ಸಮರ್ಥ. What a s. you are! ಏನು ಸೊಗಸಾಗಿ ಉಡುಪು ಹಾಕಿದ್ದೀಯೆ! ಏನು ಠಾಕುಠೀಕಾಗಿದ್ದೀಯೆ! Has been asked to dinner by some swells ಕೆಲವರು ಗಣ್ಯ ವ್ಯಕ್ತಿಗಳು ಔತಣಕ್ಕೆ ಆಹ್ವಾನಿಸಿದ್ದಾರೆ); [**S.-blind** (ಆರ್ಗನ್ ವಾದ್ಯದಲ್ಲಿ) ನಾದನಿಯಂತ್ರಕ ಪೆಟ್ಟಿಗೆಯ ಮುಚ್ಚಳಪಟ್ಟಿ(ಗಳಲ್ಲೊಂದು). **S.-box** (ಆರ್ಗನ್ ವಾದ್ಯದಲ್ಲಿ) ನಾದನಿಯಂತ್ರಕ ಪೆಟ್ಟಿಗೆ. **S.-fish** ಗುಂಡಗೆ ಊದಿಕೊಳ್ಳುವಂಥ ಮೀನು: ಊದುಮೀನು. **S.-keyboard** ನಾದನಿಯಂತ್ರಕ ಪೆಟ್ಟಿಗೆಯುಳ್ಳ ಆರ್ಗನ್ ವಾದ್ಯದ ಕೀಲಕೈಮಣೆ. **S. mob(smen)** ಸಂಭಾವಿತರಂತೆ ಉಡುಪು ಧರಿಸಿರುವ ಜೇಬುಗಳ್ಳರು: ನೀಟುಗಾರ ಜೇಬುಗಳ್ಳರು. **S. organ** ನಾದನಳಿಕೆಗಳನ್ನು ನಾದನಿಯಂತ್ರಕ ಪೆಟ್ಟಿಗೆಯಲ್ಲಿ ಹುದುಗಿಸಿರುವ ಆರ್ಗನ್ ವಾದ್ಯ. **S.-pedal** ಆರ್ಗನ್ ವಾದ್ಯದ (ನಾದನಿಯಂತ್ರಕ ಪೆಟ್ಟಿಗೆಯ ಮುಚ್ಚಳ ಪಟ್ಟಿಗಳನ್ನು ಆಡಿಸುವ) ಕಾಲೊತ್ತು. **S.-rule** (ಮುದ್ರಣದಲ್ಲಿ) ಮಧ್ಯದಲ್ಲಿ ವಜ್ರಾಕಾರದಲ್ಲಿ ಹಿಗ್ಗಿ ಎರಡು ತುದಿಯೂ ಚೂಪಾಗಿರುವ ಅಡ್ಡಗೆರೆ: ನಡುವುಬ್ಬುಗೆರೆ]. (ಗು.) (ಬಳ. ಮಾ.) ಮೆರೆತದ, ಷೋಕಿಯ, ಘನವಾದ, ಪ್ರತಿಷ್ಠೆಯ (A s. pianist. S. parties, society); ಸೊಗಸುಗಾರಿಕೆಯ, ನೀಟುಗಾರಿಕೆಯ; ಒಳ್ಳೆಯ ಉಡುಪು ಧರಿಸಿದ, ಠೀವಿಯ (S. clothes. Looks very s.). **Swélldom** (ನಾ.) ಪ್ರತಿಷ್ಠಾವಂತ ಜನ; ನೀಟುಗಾರ ಲೋಕ. **Swélling** (ನಾ.) ಊದಿಕೊಳ್ಳುವುದು, ಊತ, ಬಾವು. **Swéllish** (ಗು.) ಸೊಗಸುಗಾರಿಕೆಯ, ನೀಟುಗಾರಿಕೆಯ, ಠೀವಿಯ.

Swélter ಸ್ವೆಲ್ಟರ್ (ಕ್ರಿ. ಅಕ., ನಾ.) ಸೆಕೆಯಿಂದ, ಧಗೆಯಿಂದ,—ಉಬ್ಬಸವಾಗು, ಉಬ್ಬಸಪಡು, ಬೆವರು, ಬಳಲು, ಬಳಲಿಸು, ಬಸವಳಿ(ಸು) (Under a sweltering sky. The sweltering horses). (ನಾ.) ಉಬ್ಬಸದ ವಾತಾವರಣ, ಸೆಕೆಯ ಉಬ್ಬಸ (In the s. of the Indian night)

Swept. Sweep ಧಾತುವಿನ ಭೂತ. ಮತ್ತು ಭೂ. ಕೃ.

Swerve ಸ್ವರ್ವ್ (ಕ್ರಿ., ನಾ.) ದಾರಿ ಬಿಟ್ಟು—ಹೋಗು(ವುದು), ತಿರುಗು(ವುದು); ಆರುಗಾಗು(ವುದು), ಸರಕ್ಕನೆ ವಿಚಲಿಸು(ವುದು), ಹೊರಳು(ವುದು); ವಿಚಲನೆ; ಪಥ, ಮಾರ್ಗ, —ಚ್ಯುತಿ; (ಚೆಂಡು) ಸರಕ್ಕನೆ—ತಿರುಚು, ತಿರುವು, ಪಥ ಚ್ಯುತವಾಗು (Never swerves an inch from his duty. Bird, ball, swerves in the air). **Swérveless** (ಗು.)

Swift ಸ್ವಿಫ್ಟ್ (ಗು., ಕ್ರಿ. ವಿ., ನಾ.) ವೇಗನೆ(ಯ), ವೇಗವಾದ, ಶೀಘ್ರ(ವಾದ), ಕ್ಷಿಪ್ರವಾದ, ತ್ವರಿತದ, ಬಿರ್ರನೆ(ಯ), ಚುರುಕಾದ, ತಟಕ್ಕನೆ(ಯ), ಕೂಡಲೆ, ತತ್‌ಕ್ಷಣ(ದ) [S. movement, feet, anger.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

A s. wit ಚುರುಕು ಬುದ್ಧಿ. Be s. to hear, slow to speak ಬೇಗ ಕಿವಿಗೊಡು, ಮಾತನಾಡಲು ನಿಧಾನಿಸು. (ಕ್ರಿ. ವಿ.) He answered s. ತಟಕ್ಕನೆ ಉತ್ತರಕೊಟ್ಟನು. S.-coming, -passing ಬೇಗನೆ ಬರುವ, ಹೋಗುವ]. (ನಾ.) ನೀಳರೆಕ್ಕೆಯ, ಬಿರು ಹಾರಿಕೆಯ, ಹುಳು ತಿನ್ನುವ ಹಲವು ಬಗೆಯ ಹಕ್ಕಿ [**Swíftlet** (ನಾ.) ಇದರ ಸಣ್ಣ ಜಾತಿ]; ಹಲವು ಬಗೆಯ ಸಣ್ಣ ಹಲ್ಲಿ; =Newt; ಒಂದು ಬಗೆಯ ಪಾರಿವಾಳ; ಹಲವು ಬಗೆಯ ಪತಂಗ; ನೂಲು, ಮೊ. ನ್ನು ಸುತ್ತುವ ಚೌಕಟ್ಟು: ತಿರುಗಟ್ಟು, ರಾಟೆ. **S.-footed** ಚುರುಕು ನಡಗೆಯ, ಕ್ಷಿಪ್ರ ಗತಿಯ. **S.-handed** ಕೈಚಳಕದ; ಚುರುಕು ಕೈಯ. **S.-winged** ಚುರುಕು ಹಾರಿಕೆಯ. **Swíftly** (ಕ್ರಿ. ವಿ.); **Swíftness** (ನಾ.)

Swig ಸ್ವಿಗ್ (ಕ್ರಿ., ನಾ.) (ಅಸಂ.) (ಮದ್ಯ, ಮೊ. ನ್ನು) ಗಟಗಟನೆ, ದೊಡ್ಡ ಗುಟುಕುಗಳಲ್ಲಿ, —ಕುಡಿ. (ನಾ.) ದೊಡ್ಡ ಗುಟುಕು (ಕುಡಿಯುವುದು)

Swill ಸ್ವಿಲ್ (ಕ್ರಿ., ನಾ.) ನೀರು ಹಾಕಿ ತೊಳೆ, ಗಲಬರಿಸು, ಜಾಲಿಸು (ವುದು); ನೀರಿನಿಂದ ಕೊಚ್ಚಿ ತೊಳೆ(ಯುವುದು) (ಅನೇಕ ವೇಳೆ *out* ಉಪ. ದೊಡನೆ) (Give it a s. *or* s. out); ಅತ್ಯಾಶೆಯಿಂದ, ಗಟಗಟನೆ, —ಕುಡಿ. (ವಿರ. ಪ್ರ.) ಕುಡಿತ; ಕೀಳು ತೆರನ ಮದ್ಯ, ಕಚ್ಚಾ ಮದ್ಯ; (ಹಂದಿಗಳಿಗೆ ಹಾಕುವ) ಕಲಗಚ್ಚು, ಮೊ. ವು.

Swim ಸ್ವಿಮ್ (ಕ್ರಿ.; ಭೂತ. Swam ಸ್ವ್ಯಾಮ್, ಭೂ. ಕೃ. Swum ಸ್ವಮ್; ನಾ.) (ಮೇಲೆ, ಮೇಲುಗಡೆ) ತೇಲು [Sink *or* s. (Sink ನೋಡಿ). Vegetables swimming in butter]; ಈಜು, ಈಜಿಕೊಂಡು ಹೋಗು, ಈಜುವ ಪಂದ್ಯದಲ್ಲಿ ಸ್ಪರ್ಧಿಸು, (ಕುದುರೆ, ನಾಯಿ, ಮೊ. ನ್ನು) ಈಜಿಸು; (ರೂಪ.) ತೇಲಿಕೊಂಡುಹೋಗು [S. on one's chest, back, side ಎದೆಯಾಜು, ಬೆನ್ನೀಜು, ಮಗ್ಗುಲೀಜು, —ಈಜು. S. with the tide *or* stream ಹತ್ತು ಜನದಂತೆ ನಡೆ. S. to the bottom *or* like a stone *or* tailor's goose (ಹಾಸ್ಯ ಪ್ರ.) ತಳ ಈಜು ಈಜು, ಪಾತಾಳ ಈಜು ಹೊಡೆ, ಮುಳುಗಿಹೋಗು. She swam into the room ಆಕೆ ಕೋಣೆಯೊಳಕ್ಕೆ ಠೀವಿಯಿಂದ, ಕೈಬೀಸಿಕೊಂಡು, ಬಂದಳು]. ತಲೆ—ತಿರುಗು, ಸುತ್ತು; ಗಿರಕಿ ಹೊಡೆ (My head swims. Has a swimming in the head); (ತೇವದಿಂದ, ದ್ರವದಿಂದ) ತುಂಬಿ ತುಳುಕು, ತುಂಬಿ ಹರಿ; (ತೇವದಲ್ಲಿ, ದ್ರವದಲ್ಲಿ) ಮುಳುಗಿರು, ತೇಲುತ್ತಿರು (Deck swimming with water ನೀರಿನಲ್ಲಿ ಮುಳುಗಾಡುತ್ತಿರುವ ಅಟ್ಟ. Floor swimming in blood. Swimming eyes ಕಣ್ಣೀರು ತುಳುಕುತ್ತಿರುವ ಕಣ್ಣುಗಳು). [Swimming-bath ಈಜುವ ಕೊಳ, ಈಜು ಕಟ್ಟೆ. Swimming bell ಕೆಲವು ಜಾತಿಯ ಮೀನು, ಮೊ. ಗಳಲ್ಲಿ ಇರುವ, ಘಂಟಾಕಾರದ, ಈಜುವ ಅಂಗ: ಈಜು ಗಂಟೆ. Swimming-belt (ಈಜು ಕಲಿಯುವವರು ಉಪಯೋಗಿಸುವ) ಈಜುಪಟ್ಟಿ. Swimming bladder ಮೀನಿನ ವಾಯುಚೀಲ; (ಈಜು ಕಲಿಯುವವರು ಉಪಯೋಗಿಸುವ, ಗಾಳಿ ತುಂಬಿದ) ಈಜು ಚೀಲ. Swimming-stone (ಒಂದು ಬಗೆಯ ಸ್ಪಂಜಿನಂಥ) ತೇಲುಗಲ್ಲು]. (ನಾ.) ಈಜು(ವುದು), ಈಜಿಕೆ; ಮೀನಿನ ವಾಯುಚೀಲ, ಈಜುಚೀಲ (ವಿರ. ಪ್ರ.); ನದಿಯಲ್ಲಿ ಮೀನುಗಳು ಸೇರುವ ಆಳವಾದ ಮಡು: ಮೀನು ಮಡು; (ರೂಪ.) ವ್ಯವಹಾರ ಪ್ರವಾಹ (In the s. ವಿದ್ಯಮಾನ ತಿಳಿದು, ವ್ಯವಹಾರದಲ್ಲಿ ಮಗ್ನನಾಗಿ) **Swímmer** (ನಾ.); **Swímmeret** (ನಾ.) (ವಲ್ಕವಂತ ಪ್ರಾಣಿಗಳ) ಈಜುಗಾಲು. **Swímmingly** (ಕ್ರಿ. ವಿ.) ಸುಲಭವಾಗಿ, ಸರಾಗವಾಗಿ, ತೇಲಿಕೊಂಡು (Go on s.)

Swíndle ಸ್ವಿಂಡ್‌ಲ್ (ಕ್ರಿ., ನಾ.) ಮೋಸಮಾಡು, ವಂಚಿಸು; ಟೋಪಿ ಹಾಕು; ಮೋಸದಿಂದ—ಪಡೆ, ಅಪಹರಿಸು (S. money *out of* person, person *out of* money). (ನಾ.) ಮೋಸ, ವಂಚನೆ, ಠಕ್ಕು, ಟೋಟ. **Swíndler** (ನಾ.); **Swíndlingly** (ಕ್ರಿ. ವಿ.)

Swine ಸ್ವೈನ್ (ನಾ.; ಬ. ವ., Swine) ಹಂದಿ (ಕಾವ್ಯ, ಅಲಂ., ಪ್ರಾ. ವಿ., ವ್ಯವಸಾಯ, ಅಮೆ. ಸಂ. ಪ್ರಯೋಗಗಳಲ್ಲಿ ಮಾತ್ರ; ಉಳಿದೆಡೆಗಳಲ್ಲಿ Pig ಪದ ಬಳಕೆಯಲ್ಲಿದೆ); (ರೂಪ.) ದುರಾಶೆಯ, ಪಾಶವೀ, —ಮನುಷ್ಯ. **S.-fever, -plague** ಹಂದಿಗಳಿಗೆ ಬರುವ ಒಂದು ಸಾಂಕ್ರಾಮಿಕ ಶ್ವಾಸಕೋಶ ರೋಗ: ಹಂದಿ ಪ್ಲೇಗು. **S.-herd** ಹಂದಿ ಕಾಯುವವನು, ಹಂದಿ ಕುರುಬ. **S.-pox** ಒಂದು ಬಗೆಯ ಸೀತಾಳೆ ಸಿಡುಬು (ರೋಗ). **S.'s-snout** =Dandelion. **Swínery** (ನಾ.) ಹಂದಿಗಳನ್ನಿಡುವ ಸ್ಥಳ, ಹಂದಿ ದೊಡ್ಡಿ; ಹಂದಿಗಳು. **Swínish** (ಗು.); **Swínishly** (ಕ್ರಿ. ವಿ.); **Swínishness** (ನಾ.)

Swing ಸ್ವಿಂಗ್ (ಕ್ರಿ., ಭೂತ. Swung ಸ್ವಂಗ್, ವಿರ. ಪ್ರ. Swang ಸ್ವ್ಯಾಂಗ್, ಭೂ. ಕೃ. Swung ಸ್ವಂಗ್; ನಾ.) ತೂಗಾಡು, ಜೋಲಾಡು, ನೇತಾಡು, ತೂಗು, ನೇಲು, ಜೋಲು, ತೊಂಗು, ತೊನೆ(ದಾಡು), ಉಯ್ಯಾಲಾಡು, ಆಂದೋಲವಾಗು, ಅಡು, ಸುತ್ತು, ತಿರುಗು; —ಇಸು; (ಆಯುಧ, ಮೊ. ನ್ನು) ಬೀಸು, ಝಳಪಿಸು [He shall s. for it ಅದಕ್ಕಾಗಿ ಅವನನ್ನು ನೇಣುಹಾಕಲಾಗುತ್ತದೆ, ಗಲ್ಲಿಗೇರಿಸಬೇಕಾಗುತ್ತದೆ. Door swung to ಬಾಗಿಲು ಮುಚ್ಚಿ(ಕೊಂಡಿ)ತು. Ship swings at anchor ಹಡಗು (ಒಂದೇ) ಲಂಗರು ಹಾಕಿದ್ದು (ಗಾಳಿ ಬೀಸಿದಂತೆ, ಉಬ್ಬರವಿಳಿತದಂತೆ) ತಿರುಗುತ್ತದೆ, ಉಯ್ಯಾಲಾಡುತ್ತದೆ. S. child ಮಗುವನ್ನು (ಉಯ್ಯಾಲೆಯಲ್ಲಿ) ತೂಗು. S. one's arms ತೋಳು ತೂಗು. S. bat ದಾಂಡು ಬೀಸು. S. a hammock ಜೋಗುಳೆಯನ್ನು ತೂಗಹಾಕು. No room to s. a cat (Cat ನೋಡಿ). Company swings into line ಸಾಲುಗೂಡುವಂತೆ ಸೈನ್ಯದಳ ತಿರುಗುತ್ತದೆ]. (ವರ್ತಮಾನ ಕೃ.) (ನಡಗೆ, ರಾಗ, ಮೊ. ಗಳ ವಿಷಯದಲ್ಲಿ) ದ್ರುತ ಗತಿಯ, ತೀವ್ರ ಧಾಟಿಯ, ತೂಗಿ ತೊನೆಯುವ (At a long swinging trot. A swinging chorus). ತೂಗಾಡುತ್ತ, ಜಗ್ಗುಹಾಕುತ್ತ, —ನಡೆ, ಹೋಗು [He swung out of the room. S. along, past, by. (**Swíngingly** ಕ್ರಿ. ವಿ.)]; [S. the lead (ನಾವಿಕ ಮತ್ತು ಸೈನಿಕ ಅಸಂ.) ಕೆಲಸ ತಪ್ಪಿಸಿಕೊಳ್ಳಲು ಕಾಯಿಲೆ ನಟಿಸು; ಕೆಲಸಕ್ಕೆ ಕಳ್ಳತಪ್ಪಿಸಿಕೊ]. (ನಾ.) ತೂಗಾಟ, ಓಲಾಟ, ಜೋಲಾಟ, ಅಲ್ಲಾಟ, ತೊನೆತ, ಆಂದೋಲನ [Work is in full s. ಕೆಲಸ ಪೂರ್ಣ ಭರದಿಂದ, —ನಡೆಯುತ್ತಿದೆ, ಸಾಗುತ್ತಿದೆ. The s. of the pendulum (ಗಡಿಯಾರದಲ್ಲಿ ಆಗುವಂತೆ ಒಂದು ಕೊನೆಯಿಂದ ಇನ್ನೊಂದು ಕೊನೆಗೆ) ಲೋಲಕದ ಬೀಸು, ತೂಗಾಟ (ರೂಪ. ಸಹ)]; ಜಗ್ಗು —ನಡಗೆ, ಓಟ, ಗತಿ (Goes with a s.); (ಕೆಲಸದ, ಚಟುವಟಿಕೆಯ) (ಸಾಧಾರಣ) ಅವಧಿ, ಭರ (Let it have its s. ಅದರ ಜೋರು ನಡೆದು ಮುಗಿಯಲಿ); ಉಯ್ಯಾಲೆ, ಜೋಗುಳೆ, ಜೋಲಿ [Swings & roundabouts (Round ಕ್ರಿ. ವಿ. ನೋಡಿ)]; (ಉಯ್ಯಾಲೆಯಲ್ಲಿ) ತೂಗಿಕೊಳ್ಳುವುದು; ತೂಗು ದೂರ, ಆಂದೋಲನ ವಿಸ್ತಾರ (Has a s. of 3 ft). **S.-boat** ಜೋತಾಡುವುದಕ್ಕಾಗಿ ಚೌಕಟ್ಟಿಗೆ ತೂಗಕಟ್ಟಿರುವ ದೋಣಿಯಾಕಾರದ ಉಯ್ಯಾಲೆ: ತೂಗುದೋಣಿ, ದೋಣಿಜೋಗಳೆ. **S.-bridge** ಹಡಗು, ಮೊ. ಗಳು ಹೋಗಲು ಅವಕಾಶಕೊಡುವಂತೆ ಅಖಂಡವಾಗಿ ಅಥವಾ ಭಾಗಗಳಾಗಿ ಒಂದು ಕೊನೆಯಲ್ಲಿ ಅಥವಾ ಮಧ್ಯದಲ್ಲಿ ಕೀಲಿಸಿರುವ, ತಿರುಗಣೆಯ ಮೇಲೆ ತಿರುಗಿಸಲಾಗುವ ಸೇತುವೆ: ತಿರುಗು ಸೇತುವೆ. **S.-plough** ಗಾಲಿಗಳಿಲ್ಲದ ನೇಗಿಲು.

Swinge ಸ್ವಿಂಜ್ (ಕ್ರಿ. ಸಕ.; ವರ್ತಮಾನ ಕೃ. Swingeing) ಬಲವಾಗಿ, ಜೋರಾಗಿ, —ಹೊಡೆ, ಬಡಿ; ಸದೆಬಡಿ ('Swingeing blow', ಮೊ. ಪ್ರಯೋಗಗಳಲ್ಲಿ ಹೊರತು ಪ್ರಾಚೀ. ಪ್ರ.); (ವರ್ತಮಾನ ಕೃ.) ಬಹು ದೊಡ್ಡ, ಭಾರಿ (Swingeing majority, lie, damages)

Swingle ಸ್ವಿಂಗ್‌ಲ್ (ನಾ., ಕ್ರಿ. ಸಕ.) ಅಗಸೆಯ ನಾರನ್ನು ಬಡಿದು ಅದರಿಂದ ದಾರು ಭಾಗವನ್ನು ತೆಗೆದುಹಾಕುವ ಸಲಕರಣೆ: ಬಡಿಗೋಲು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಡಿಗೆ ; (ಒಕ್ಕಗೋಲಿನ) ತೂಗು, ತೊಂಗು, —ಭಾಗ ; [**Swíngletree** (ಬಂಡಿ, ನೇಗಿಲು, ಮೊ. ಗಳಲ್ಲಿ ಮಧ್ಯದಲ್ಲಿ ತಿರುಗಣಿ ಹಾಕಿ ಕೀಲಿಸಿರುವ, ತುದಿಗಳಿಗೆ ಸೆಳೆಪಟ್ಟಿಗಳನ್ನು ಬಗಿಯುವ) ಅಡ್ಡ— ಕಂಬಿ, ಮರ]. (ಕ್ರಿ.) (ಅಗಸೆಯ ನಾರನ್ನು) ಬಡಿಗೋಲಿನಿಂದ ಬಡಿ (ದು ಬಿಡಿಸು). **Swingling-tow** ಅಗಸೆಯ ನಾರಿನ ಒರಟು ಭಾಗ ; ಒರಟು, ಕಚ್ಚಾ, —ಅಗಸೆಯ ನಾರು.

Swink ಸ್ವಿಂಕ್ (ಕ್ರಿ. ಅಕ., ನಾ.) (ಪ್ರಾಚೀ. ಪ್ರ.) ದುಡಿ(ತ)

Swipe ಸ್ವೈಪ್ (ಕ್ರಿ., ನಾ.) (ಕ್ರಿಕೆಟ್ ಚೆಂಡು, ಮೊ. ನ್ನು) ಬಲವಾಗಿ, ಜೋರಾಗಿ—ಹೊಡೆ ; ಕುಟ್ಟಿ ಬಜಾಯಿಸು ; ಹೇರು, ಹೇರಿಹಾಕು. (ನಾ.) ಸಿಕ್ಕಾಬಟ್ಟೆ, ಬಲವಾದ, —ಹೊಡೆತ ; ಕುಟ್ಟಿ ಬಜಾಯಿಸು ವುದು ; ಹೇರುವುದು. **Swíper** (ನಾ.)

Swipes ಸ್ವೈಪ್ಸ್ (ನಾ., ಬ. ವ.) ಸಪ್ಪೆಯ, ಬಗ್ಗಡದ, ಕಳಪೆಯ, ಕೀಳು, —ಬಿಯರ್ ಮದ್ಯ.

Swirl ಸ್ವರ್ಲ್ (ಕ್ರಿ., ನಾ.) ಸುಳಿ ಸುತ್ತು ; ಸುಳಿಯಲ್ಲಿ ಎಳೆದುಕೊಂಡು ಹೋಗು. (ನಾ.) (ನೀರು, ಗಾಳಿ, ಮೊ. ಗಳ) ಸುಳಿ ; (ನೀರಿನಲ್ಲಿ ಮೀನು, ಮೊ. ಗಳು ನುಗ್ಗುವುದರಿಂದಾಗುವ) ಕಲಕ, ಕಲಕಾಟ ; (ಕೂದಲ) ಕೊಂಕು, ತಿರಿಚು.

Swish ಸ್ವಿಷ್ (ಕ್ರಿ., ನಾ.) ಚಟೀರೆಂದು, ಫಳೀರೆಂದು, —ಹೊಡೆ, ತೀಡು ; ಚೆಡಿಯಿಂದ ಹೊಡೆ ; (ಬೆತ್ತ, ಮೊ. ನ್ನು ಗಾಳಿಯಲ್ಲಿ) ಸ್ವಿಷ್ ಎನ್ನುವಂತೆ ಬೀಸು, ಕೊಚ್ಚು ; ಬೆತ್ತವನ್ನು ಬೀಸಿ (ಹೂವು, ಮೊ. ನ್ನು) ಕೊಚ್ಚಿಹಾಕು (*Off* ಉಪ. ದೊಡನೆ) ; (ಬೆತ್ತ, ಚಾವಟಿ, ಗಾಳಿಯನ್ನು ಸೀಳಿಕೊಂಡು ಹಾರುವ ಹಕ್ಕಿ, ಹುಲ್ಲು ಕೊಯ್ಯುವ ಕುಡುಗೋಲು, ಮೊ. ಗಳಂತೆ) ಸ್ವಿಷ್ ಶಬ್ದ(ಮಾಡು). (ಬೆತ್ತದ, ಚಾವಟಿಯ) ಫಳೀರನೆಯ, ಚಟೀರನೆಯ, —ಏಟು.

Swiss ಸ್ವಿಸ್ (ಗು. ; ನಾ., ಬ. ವ. Swiss) ಸ್ವಿಟ್ಸರ್ಲೆಂಡಿನ(ವನು). S. French, German ಸ್ವಿಟ್ಸರ್ಲೆಂಡಿನಲ್ಲಿ ಮಾತನಾಡುವಂಥ ಫ್ರೆಂಚ್, ಜರ್ಮನ್, —ಭಾಷೆ. S. guards (ಹಿಂದೆ ಫ್ರಾನ್ಸು, ಮೊ. ಗಳಲ್ಲಿ ನೇಮಿಸಿಕೊಳ್ಳುತ್ತಿದ್ದ, ಈಗಲೂ ಪೋಪ್ ಜಗದ್ಗುರು ನೇಮಿಸಿಕೊಳ್ಳುವ) ಸ್ವಿಟ್ಸರ್ಲೆಂಡಿನ ಕೂಲಿ ಸೈನಿಕರು. S. roll ಸುರುಳಿಸುತ್ತಿ ಬೇಯಿಸಿದ ಒಂದು ಬಗೆಯ ಮುರಬ್ಬ ರೊಟ್ಟಿ : ಸುರುಳಿ ರೊಟ್ಟಿ.

Switch ಸ್ವಿಚ್ (ನಾ., ಕ್ರಿ.) ಮರದಿಂದ ಕತ್ತರಿಸಿದ ಬಳುಕುಕಡ್ಡಿ, ಸಣ್ಣ ರೆಂಬೆ : ಸೆಳೆ(ಗೊಂಬು) ; ಇದರಂತೆ ತುದಿ ಚೂಪಾಗುತ್ತ ಹೋಗುವ ತೆಳು ಕೋಲು, ಚಬುಕು : ಚೆಡಿ, ತೆಳು ಚಬುಕು ; (ಹೆಂಗಸರು ತಮ್ಮ ಸ್ವಾಭಾವಿಕವಾದ ತಲೆಕೂದಲಿನ ಜೊತೆಗೆ ಸೇರಿಸಿ ಕಟ್ಟುವ) ಕೃತಕ ಕೂದಲ ಕಟ್ಟು, ಚೌರಿಕಟ್ಟು ; ರೈಲುಬಂಡಿಯನ್ನು ಒಂದು ಕಂಬಿದಾರಿಯಿಂದ ಇನ್ನೊಂದು ಕಂಬಿದಾರಿಗೆ ತಿರುಗಿಸುವುದು, ವಿದ್ಯುತ್ ಪ್ರವಾಹ ಪಥ ವನ್ನು ಬಿಡಿಸುವುದು ಅಥವಾ ಪೂರ್ಣಗೊಳಿಸುವುದು, ಮೊ. ಸಂದರ್ಭ ಗಳಲ್ಲಿ ಆಯಾ ಭಾಗಗಳಿಗೆ ಸಂಬಂಧ ಕಲ್ಪಿಸಲು ಉಪಯೋಗಿಸುವ ಸಲಕರಣೆ : ಸಂಬಂಧಕ, ಕೀಲುಕಂಬಿ, ಕೀಲುಗುಂಡಿ ; ಸ್ವಿಚ್ಚು ; [**S.-back** (ಕಡಿದಾದ ಇಳಿಜಾರಿನಲ್ಲಿ ಏರಿಳಿಯುವುದಕ್ಕೆ ಹಾಕಿರುವ) ಅಂಕ ಡೊಂಕ ರೈಲುದಾರಿ ; ಇಳಿಜಾರಿನಲ್ಲಿ ಇಳಿದ ವೇಗದ ಚಲನೆಯನ್ನು ಉಪಯೋಗಿಸಿಕೊಂಡು ಮೇಲೇರಿನಲ್ಲಿ ಏರುವಂತೆ ಅಳವಡಿಸಿರುವ ರೈಲುದಾರಿ : ಏರುಬೀಳು ರೈಲುದಾರಿ (ಮು., ಪರಿಷೆ, ಮೊ. ಗಳಲ್ಲಿ ಇದನ್ನು ವಿನೋದಕ್ಕಾಗಿ ಹಾಕಿರುತ್ತಾರೆ). **S.-bar** ಸಂಬಂಧಕ ಕಂಬಿ. **S.-board** ಸಂಬಂಧಕ, ಕೀಲುಗುಂಡಿ, —ಹಲಗೆ, ಮಣೆ. **S.-lever** ಸಂಬಂಧಕ ಸನ್ನೆ. **S.-man** (ರೈಲು ದಾರಿಯ) ಸಂಬಂಧಕ ಕಂಬಿ ನೋಡಿಕೊಳ್ಳುವವನು ; ಕೀಲುಕಂಬಿಯವನು. **S.-signal** ರೈಲು ದಾರಿಯ ಕೀಲುಕಂಬಿಯ ಸ್ಥಳವನ್ನು ಸೂಚಿಸುವ ಬಾವುಟ, ಲಾಂದ್ರ ಅಥವಾ ಸಂಜ್ಞಾ ಸ್ತಂಭದ ಹಲಗೆ : ಕೀಲುಕಂಬಿ—ಸಂಕೇತ, ಸನ್ನೆ]. (ಕ್ರಿ.) ಚೆಡಿಯಿಂದ ಹೊಡೆ ; ತಟಕ್ಕನೆ—ತಿರುಗಿಸು, ಆಡಿಸು, ಬೀಸು, ಸೆಳೆದುಕೊ, ಕಿತ್ತುಕೊ (Cow switches her tail ಹಸು ತಟಕ್ಕನೆ ಬಾಲವಾಡಿಸುತ್ತದೆ. I switched my head round. He switched it out of my hand ಅವನು ನನ್ನ ಕೈಯಿಂದ ಅದನ್ನು ತಟಕ್ಕನೆ ಕಿತ್ತುಕೊಂಡನು) ; (ಕೀಲುಕಂಬಿಯ ಮೂಲಕ) ಬೇರೆ ದಾರಿಗೆ ತಿರುಗಿಸು ; (ಕೀಲುಗುಂಡಿಯ ಮೂಲಕ) ಸಂಬಂಧ ಕಲ್ಪಿಸು [S. off ಸಂಬಂಧಕ, ಕೀಲುಗುಂಡಿ, —ತೆಗೆ(ದುಬಿಡು) : ಸಂಬಂಧ ತಪ್ಪಿಸು, ಕಡಿದುಹಾಕು. S. on ಸಂಬಂಧಕ, ಕೀಲುಗುಂಡಿ, —ಹಾಕು ; ಸಂಬಂಧ ಕಲ್ಪಿಸು]. (ರೂಪ.) (ಆಲೋಚನೆ, ಮಾತು, ಮೊ. ನ್ನು) ಬೇರೆ ಕಡೆಗೆ, ಬೇರೆ ವಿಷಯಕ್ಕೆ, —ತಿರುಗಿಸು ; (ದೂರವಾಣಿಯ ಮೂಲಕ ಮಾತಾಡು ವವನಿಗೆ ಮತ್ತೊಂದು ದೂರವಾಣಿಯೊಡನೆ) ಸಂಬಂಧ ಕಲ್ಪಿಸು (*On* ಉಪ. ದೊಡನೆ), ಸಂಬಂಧ ತಪ್ಪಿಸು (*Off* ಉಪ. ದೊಡನೆ) (S. off ಸಂಬಂಧ—ತಪ್ಪಿಸಿಬಿಡು, ಕಡಿದುಹಾಕು)

Swítzer ಸ್ವಿಟ್ಸರ್ (ನಾ.) (ಪ್ರಾಚೀ. ಪ್ರ.) ಸ್ವಿಟ್ಸರ್ಲೆಂಡಿನವನು.

Swível ಸ್ವಿವ್ಲ್ (ನಾ., ಕ್ರಿ.) (ಅದರ ಎರಡು ಭಾಗಗಳಲ್ಲಿ ಒಂದು ಇನ್ನೊಂದನ್ನು ಬಿಟ್ಟು ತಿರುಗರಾಗುವಂತೆ ಅಳವಡಿಸಿರುವ) ಉಂಗುರ ತಿರುಗಣಿ (ಕೀಲು), ತಿರುಪುಕೊಂಡಿ (ಕೀಲು), ತಿರುಪುಂಗುರ (ಕೀಲು) (S. chain, gun, -hook, -joint) ; [S.-eye ಮೆಳ್ಳೆ, ವಾಲು, —ಗಣ್ಣು (S.-eyed ಗು.)]. (ಕ್ರಿ.) ಉಂಗುರ ತಿರುಗಣಿಯ ಮೇಲೆ —ತಿರುಗು, ತಿರುಗಿಸು.

Swob(ber) = Swab(ber)

Swóllen, Swoln (ಪ್ರಾಚೀ. ಪ್ರ.). Swell ಧಾತುವಿನ ಭೂ. ಕೃ.

Swoon ಸ್ವೂನ್ (ಕ್ರಿ. ಅಕ., ನಾ.) ಮೂರ್ಛೆ(ಹೋಗು) ; ಪ್ರಜ್ಞೆ ತಪ್ಪು (ವುದು) ; ಕವಳಿ(ಬರು) ; ಸೊರಗು, ಸೊರಗಿಬೀಳು ; ಮೈಮರೆ (Swooned for joy, with pain) ; (ಸಂಗೀತ, ಮೊ. ಗಳ ವಿಷಯ ದಲ್ಲಿ) ನಿಧಾನವಾಗಿ ಉಡುಗಿಹೋಗು, ಕುಗ್ಗಿಹೋಗು, ಮಾಯವಾಗು. **Swoóningly** (ಕ್ರಿ. ವಿ.)

Swoop ಸ್ವೂಪ್ (ಕ್ರಿ., ನಾ.) (ಹಿಂಸ್ರ ಪಕ್ಷಿಯಂತೆ) (ಮೇಲಿಂದ) ಎರಗು (*Down* ಉಪ. ದೊಡನೆ) ; (ದೂರದಿಂದ) ಫಕ್ಕನೆ ಮೇರೆಬೀಳು, ರಭಸದಿಂದ ಆಕ್ರಮಣಮಾಡು (*Upon* ಉಪ. ದೊಡನೆ) ; (ಬಳ. ಮಾ.) ಒಮ್ಮೆಗೇ ಮೇಲೆ ಬಿದ್ದು, ಎರಗಿ,—ಕಿತ್ತುಕೊ, ಹಿಡಿದುಕೊ. (ನಾ.) (ಕ್ರಿಯಾರ್ಥಗಳಲ್ಲಿ) ; ಒಟ್ಟಿಗೆ ಎತ್ತಿಕೊಂಡು, ದೋಚಿಕೊಂಡು,— ಹೋಗುವುದು ; ತಟ್ಟನೆಯ ದೋಚು (At one fell s. ಕಟ್ಟೆರಗಿಗೆ, ಒಂದೇ ಹೊಡೆತಕ್ಕೆ)

Swop, Swap ಸ್ವಾಪ್ (ಕ್ರಿ., ನಾ.) (ಅಸಂ.) ಅದಲುಬದಲು, ಮಾರುವೆ, ವಿನಿಮಯ (—ಮಾಡು, ಮಾಡಿಕೊ) (Never s. horses while crossing the stream ಕೆಲಸದ ನಡುವೆ ಆಳನ್ನು ಬದಲಾಯಿಸಬೇಡ ; ಹೊಳೆ ಹಾಯುತ್ತಿರುವಾಗ ಹರಿಗೋಲು ಬದಲಾಯಿಸಬೇಡ. Shall we try a s.? ಅದಲುಬದಲು ಮಾಡಿಕೊಳ್ಳೋಣವೊ? ಬದಲಾಯಿಸಿ ಕೊಳ್ಳೋಣವೊ?)

Sword ಸೋ(ಅ)ರ್ಡ್ (ನಾ.) ಕತ್ತಿ, ಖಡ್ಗ, ಕರವಾಳ, ಕೃಪಾಣ ; (ಸೈನಿಕ ಅಸಂ.) (ಬಂದೂಕಿನ) ಸನೀನು ; [Broadsword (Broad ನೋಡಿ). Cavalry s. ಕೊಂಕು ಕತ್ತಿ. Court, dress, s. ಆಸ್ಥಾನ ವಸ್ತ್ರದ ಉಡುಪಿನ ಜೊತೆಯಲ್ಲಿ ಧರಿಸುವ ಕತ್ತಿ : ಆಸ್ಥಾನ, ಪೋಷಾಕು, —ಖಡ್ಗ. Double-edged s. ಎರಡಲಗಿನ, ಇಬ್ಬಾಯ, —ಕತ್ತಿ. Two-handed s. ಎರಡು ಕೈಯಿಂದಲೂ ಉಪಯೋಗಿಸ ಬೇಕಾದ ಕತ್ತಿ ; ಎರಡು ಹಿಡಿಯ, ಇಪ್ಪಿಡಿಯ, —ಕತ್ತಿ. Duelling, Small-, s. ತಿವಿಯುವುದಕ್ಕೆ ಮಾತ್ರ ಉಪಯೋಗಿಸುವ, ಧಾರೆಯಿಲ್ಲದ ತ್ರಿಕೋನಾಕಾರದ ಅಲಗಿನ ಕತ್ತಿ : ಸುರಗಿ, ಇರಿಗತ್ತಿ, ಕಿರುಗತ್ತಿ. Scutching-s. (Scutch ನೋಡಿ). S. of State ಪಟ್ಟದ ಕತ್ತಿ. The s. of the spirit ದೇವವಾಕ್ಯ, ಭಗವದ್ವಚನ. Cross *or* measure swords (with) (Measure ನೋಡಿ). Draw, sheathe, the s. ಕತ್ತಿ ಹಿರಿ, ಒರೆಗೆ ಹಾಕು ; ಯುದ್ಧವನ್ನು ಮೊದಲು ಮಾಡು, ನಿಲ್ಲಿಸು. Throw

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

one's s. into the scale (Scale² ನೋಡಿ). Put to the s. (ಸೋತವರನ್ನು, ಸೆರೆ ಸಿಕ್ಕಿದವರನ್ನು) ಕತ್ತಿಯ ಬಾಯಿಗೆ ಕೊಡು, ಕಡಿದು ಹಾಕು. Fire & s. (Fire ನೋಡಿ). The s. of justice ನ್ಯಾಯಾಧಿಕಾರ. The s. ಯುದ್ಧ(ದ ಮೂಲಕ ವ್ಯಾಜ್ಯದ ತೀರ್ಮಾನ); ಸೈನಿಕ, ಶಸ್ತ್ರ, —ಬಲ; ಪ್ರಭುಶಕ್ತಿ. **S.-arm** ಬಲ ತೋಳು; (ರೂಪ.) ಶಸ್ತ್ರಬಲ, ಸೈನ್ಯ ಶಕ್ತಿ. **S.-bayonet** (ಮೋಟಾದ ಕತ್ತಿ ಯಲಗೂ ಹಿಡಿಯೂ ಉಳ್ಳ) ಖಡ್ಗ ಸನೀನು. **S.-bearer** ವಿಶೇಷ ಸಂದರ್ಭಗಳಲ್ಲಿ ರಾಜನ ಅಥವಾ ಇತರ ದೊಡ್ಡ ಮನುಷ್ಯನ ಕತ್ತಿಯನ್ನು ಹಿಡಿದುಕೊಂಡು ಹೋಗುವವನು: ಕತ್ತಿ ಹಿಡಿಯುವವನು; ಖಡ್ಗ—ಧಾರಿ, ವಾಹಕ. **S.-belt** (ಒರೆಯನ್ನು ತಗುಲಹಾಕುವ) ಕತ್ತಿಯ ನಡುಪಟ್ಟಿ. **S.-bill** ನೀಳಕೊಕ್ಕಿನ ಒಂದು ಹಾಡು ಹಕ್ಕಿ. **S.-cane** ಕತ್ತಿಯಲಗು ಹುದುಗಿರುವ ಪೊಳ್ಳು ಕೈಕೋಲು: ಕತ್ತಿ ಕೋಲು; ಗುಪ್ತಿ (ಕೋಲು). **S.-cut** ಕತ್ತಿಗಾಯ(ದ ಕಲೆ). **S.-dance** ಕತ್ತಿಗಳನ್ನು ತಿರುಗಿಸುವ ಕುಣಿತ, ಅಥವಾ ಗಂಡಸರು ಕತ್ತರಿಯಾಕಾರದಲ್ಲಿ ಹಿರಿದ ಕತ್ತಿಗಳ ನಡುವೆ ಹೆಂಗಸರು ಹಾಯುವ ಕುಣಿತ, ಅಥವಾ ನೆಲದಮೇಲೆ ಮೊನೆ ಮೇಲಾಗಿ ಇಟ್ಟ ಕತ್ತಿಗಳ ನಡುವೆ ಕುಣಿಯುವ ಕುಣಿತ: ಕತ್ತಿ ಕುಣಿತ. **S.-fish** ಇತರ ಮೀನನ್ನು ಅಥವಾ ಹಡಗಿನ ಮರವನ್ನು ಕೊರೆಯಬಲ್ಲ ಹರಿತವಾದ ಚಾಚು ಮೇಲ್ದವಡೆಯುಳ್ಳ, ಅಟ್ಲಾಂಟಿಕ್ ಸಾಗರದ ಮತ್ತು ಭೂಮಧ್ಯ ಸಮುದ್ರದ, ಒಂದು ಜಾತಿಯ ಮೀನು: ಕತ್ತಿಮೀನು. **S.-flag** (ಮು.) ಹಳದಿ ಐರಿಸ್ ಗಿಡ. **S.-flighted** (ಹಕ್ಕಿಗಳ ವಿಷಯದಲ್ಲಿ) ಮುಚ್ಚಿಕೊಂಡಿರುವಾಗ ಪಕ್ಕದಲ್ಲಿ ಧರಿಸಿದ ಕತ್ತಿಯಂತೆ ಕಾಣುವ, ಭಿನ್ನವರ್ಣದ ಹಾರುಗರಿಗಳುಳ್ಳ: ಕತ್ತಿಗರಿಗಳುಳ್ಳ. **S.-grass** ಕತ್ತಿಯಾಕಾರದ ಎಲೆಗಳುಳ್ಳ ಹಲವು ಬಗೆಯ ಜಂಬು. **S.-guard** ಕೈಗೆ ಅಪಾಯವಾಗದಂತೆ ರಕ್ಷಿಸುವ ಕತ್ತಿ ಹಿಡಿಯ ಭಾಗ: ಕತ್ತಿಗಾಪು. **S.-hand** ಬಲಗೈ. **S.-knot** ಕತ್ತಿ ಹಿಡಿಗೆ ಕಟ್ಟಿರುವ ಅಲಂಕಾರಪಟ್ಟಿ, ಗೊಂಡೆ, ಕುಚ್ಚು: ಕತ್ತಿ—ಗೊಂಡೆ, ಕುಚ್ಚು (ಹಿಂದೆ ಕತ್ತಿಹಿಡಿಯನ್ನು ಮಣಿಕಟ್ಟಿಗೆ ಬಿಗಿಯುವುದಕ್ಕಾಗಿ ಉಪಯೋಗಿಸುತ್ತಿದ್ದದ್ದು). **S.-law** ಸೈನಿಕ ಪ್ರಾಬಲ್ಯ; ಖಡ್ಗದ ತೀರ್ಮಾನ. **S.-lily** = Gladiolus. **S.-play** ಕತ್ತಿ ವರಿಸೆ; (ರೂಪ.) (ಎದುರಾಳಿಯನ್ನು ಇರಿಯುವ) ವಾದ ನೈಪುಣ್ಯ, ಉತ್ತರ ಪ್ರತ್ಯುತ್ತರ ನೈಪುಣ್ಯ. **Swórdsman** ಕತ್ತಿ ಸಿಪಾಯಿ, ಕತ್ತಿ ವರಿಸೆಗಾರ [**Swórdsmanship** (ನಾ.)]. **S.-stick** = S.-cane. **(-)sworded** (ಗು.); **Swórdless** (ಗು.); **Swórdlike** (ಗು.); **Swórdproof** (ಗು.) ಕತ್ತಿ ಭೇದಿಸಲಾಗದ, ಖಡ್ಗಾಭೇದ್ಯ.

Swore, Sworn. **Swear** ನೋಡಿ.

Swot ಸ್ವಾಟ್ (ಕ್ರಿ., ನಾ.) (ಪಾಠಶಾಲಾ ಅಸಂ.) ಕಷ್ಟಪಟ್ಟು—ಓದು, ವ್ಯಾಸಂಗಮಾಡು (S. up ಅವಸರವಸರವಾಗಿ ಗಟ್ಟಿಮಾಡು). (ನಾ.) ಕಷ್ಟಪಟ್ಟು ಓದುವುದು; ಶ್ರಮ(ದ ಕೆಲಸ), ಬೆವರು ಬರಿಸುವ ಕೆಲಸ [What a s.! ಎಂಥ ಶ್ರಮ(ದ ಕೆಲಸ)!]; ದುಡಿಯುವವನು; (ಮು.) ಕಷ್ಟಪಟ್ಟು ಓದುವವನು, ಪುಸ್ತಕ ಪಿಶಾಚಿ.

Swum. Swim ಧಾತುವಿನ ಭೂ. ಕೃ.

Swung. Swing ಧಾತುವಿನ ಭೂತ. ಮತ್ತು ಭೂ. ಕೃ.

Sýbarite ಸಿಬರೈಟ್ (ನಾ., ಗು.) ದ. ಇಟಲಿಯಲ್ಲಿ ಪ್ರಾಚೀನ ಗ್ರೀಕ್ ನೆಲಸುನಾಡಾಗಿದ್ದ, ಭೋಗವಿಲಾಸಕ್ಕೂ ಹೆಣ್ಣಿಗತನಕ್ಕೂ ಹೆಸರಾಗಿದ್ದ ಸಿಬರಿಸ್ ಪಟ್ಟಣದವನು; ಭೋಗನಿರತನಾದ; ಸುಕುಮಾರತನದ; ಹೆಣ್ಣಿಗ; ಸ್ತ್ರೈಣ. **Sybarític** —ರಿಟಿಕ್ (ಗು.); **Sybarítically** (ಕ್ರಿ. ವಿ.); **Sýbaritism** —ರೈಟಿಸ್ಮ್ (ನಾ.)

Sýbil ಸಿಬಿಲ್ (ನಾ.) = Sibyl (ಎಂಬುದಕ್ಕೆ ಅಪಪ್ರಯೋಗ)

Sýcamine ಸಿಕಮಿ(ಮೈ)ನ್ (ನಾ.) (ಬೈಬಲ್ ಪ್ರ.) ಕರಿ ಉಪ್ಪುನೇರಳೆ ಮರ, ಕೋರಿಹಣ್ಣಿನ ಮರ.

Sýcamore ಸಿಕಮೋ(ಅ)ರ್ (ನಾ.) (ಸಿರಿಯ ಮತ್ತು ಈಜಿಪ್ಟ್ ದೇಶಗಳಲ್ಲಿ ಬೆಳೆಯುವ) ಒಂದು ಬಗೆಯ ಅಂಜೂರ(ದ ಗಿಡ) (= S. fig, Egyptian *or* Oriental s.); ಮೇಪ್‌ಲ್ ಮತ್ತು ಪ್ಲೇನ್ ಮರಗಳ ಜಾತಿಯ ಒಂದು ಚೌಬೀನೆ ಮರ (= S. maple)

Syce. **Sice**² ನೋಡಿ.

Syceé (silver) ಸೈಸೀ (ಸಿಲ್ವರ್) (ಚೀನಾ ದೇಶದಲ್ಲಿ ತೂಕದ ಮೂಲಕ ಹಣ ಪಾವತಿಮಾಡುವಲ್ಲಿ ಉಪಯೋಗಿಸುವ, ಬ್ಯಾಂಕಿನವನ ಅಥವಾ ಲೋಹ ಪರೀಕ್ಷಕನ ಮುದ್ರೆಯುಳ್ಳ) ಚೊಕ್ಕ ಬೆಳ್ಳಿಯ ಗಟ್ಟಿ(ಗಳು)

Sychnocárpous ಸಿಕ್ನೊಕಾರ್ಪಸ್ (ಗು.) (ಸ. ವಿ.) ಹಲವು ಸಲ ಫಲ ಬಿಡುವ, ಸಾರ್ವಕಾಲಿಕ, ಸಾರ್ವರ್ತುಕ.

Sycónium ಸಿ(ಸೈ)ಕೋನಿಯಂ (ನಾ.; ಬ. ವ. -nia —ನಿಯ) (ಸ. ವಿ.) (ಅಂಜೂರದಲ್ಲಿಯಂತೆ ಮಾಂಸಲಕೋಶದೊಳಗೆ ಅನೇಕ ಅಂಡಾಶಯಗಳು ಹತ್ತಿಕೊಂಡು ಆದ) ಸಂಯುಕ್ತ ಫಲ.

Sýcophant ಸಿಕೊಫಂಟ್ (ನಾ.) ಮುಖಸ್ತುತಿಕಾರ, ಹೊಗಳುಭಟ್ಟ, ಭಟ್ಟಂಗಿ; ಪರೋಪಜೀವಿ. **Sýcophancy** (ನಾ.); **Sycophántic** —ಫ್ಯಾಂಟಿಕ್ (ಗು.)

Sycósis ಸಿ(ಸೈ)ಕೋಸಿಸ್ (ನಾ.) ಮುಖದ ಗಡ್ಡದ ಭಾಗದ ಅಥವಾ ತಲೆಯ ಮೇಲ್ಭಾಗದ ಚರ್ಮದ ರೋಗ: ಕ್ಷೌರದ ಕಜ್ಜಿ (= Barber's itch)

Sýenite ಸೈಎನೈಟ್ (ನಾ.) ಬೆಣಚುಕಲ್ಲು ಬೆರೆತಿರುವ ಅಥವಾ ಬೆರೆತಿಲ್ಲದ, ಫೆಲ್‌ಸ್ಪಾರ್ ಮತ್ತು ಹಾರ್ನ್‌ಬ್ಲೆಂಡ್ ಸೇರಿದ ಒಂದು ಬೂದು ಬಣ್ಣದ ಸ್ಫಟಿಕಾಕೃತಿ ಶಿಲೆ: ಸೈಎನೈಟ್. **Syenític** (ಗು.)

Sýllabary, Syllábic, Syllábicate, Syllábify, Sýllabize, etc. **Syllable** ನೋಡಿ.

Sýllable ಸಿಲಬ್‌ಲ್ (ನಾ., ಕ್ರಿ. ಸಕ.) ಒಂದುಸಲದ ಉಚ್ಚಾರಣೆಗೆ ಶಕ್ಯವಾಗುವಷ್ಟರ ಪದ ಭಾಗ; ಒಂದು ಸ್ವರಾಕ್ಷರವೂ ಅನೇಕ ವೇಳೆ ಒಂದು ಅಥವಾ ಹಲವು ವ್ಯಂಜನಾಕ್ಷರವೂ ಉಳ್ಳ, ಸ್ವತಂತ್ರ ಪದ ಅಥವಾ ಒಂದು ಪದ ಭಾಗ: ಉಚ್ಚಾರಾಂಶ; ಅಕ್ಷರ; (ರೂಪ.) ಒಂದು ಅಕ್ಷರ, ಶಬ್ದ (Not a s.! ಪಿಟಕ್ಕೆನ್ನಬೇಡ, ಉಸಿರೆತ್ತಬೇಡ). (ಕ್ರಿ.) ಅಂಶ ಅಂಶವಾಗಿ, ಬಿಡಿಸಿ, —ಉಚ್ಚರಿಸು; ಸ್ಪಷ್ಟವಾಗಿ ಉಚ್ಚರಿಸು; (ಕಾವ್ಯ) (ಹೆಸರು, ಮಾತು, ಮೊ. ನ್ನು) ಉಸುರು, ಉಚ್ಚರಿಸು. **(-)syllabled** (ಗು.); **Sýllabary** —ಬರಿ (ನಾ.) ಕೆಲವು ಭಾಷೆಗಳಲ್ಲಿ ಅಥವಾ ಒಂದೇ ಭಾಷೆಯ ಬೆಳೆವಣಿಗೆಯ ಕೆಲವು ಮಟ್ಟಗಳಲ್ಲಿ, ವರ್ಣಮಾಲೆಯ ಕಾರ್ಯವನ್ನು ನಿರ್ವಹಿಸುವ, ಉಚ್ಚಾರಾಂಶಗಳ ಲಿಪಿಮಾಲೆ: ಉಚ್ಚಾರಾಂಶ ಲಿಪಿಮಾಲೆ. **Syllábic** ಸಿಲ್ಯಾಬಿಕ್ (ಗು.) ಉಚ್ಚಾರಾಂಶದ (Mono, di, tri, quadri, -s. ಒಂದು, ಎರಡು, ಮೂರು, ನಾಲ್ಕು, —ಉಚ್ಚಾರಾಂಶಗಳುಳ್ಳ); (ಸಂಕೇತಗಳ ವಿಷಯಗಳಲ್ಲಿ) ಉಚ್ಚಾರಾಂಶ ಸೂಚಕ; ಬಿಡಿಸಿ ಉಚ್ಚರಿಸಿದ. **Syllábically** (ಕ್ರಿ. ವಿ.); **Syllábicate, Syllábify, Sýllabize** —ಬೈಸ್ (ಕ್ರಿ. ಸಕ.) ಉಚ್ಚಾರಾಂಶಗಳಾಗಿ—ಬಿಡಿಸು, ಉಚ್ಚರಿಸು. **Syllabicátion** —ಲ್ಯಾ— (ನಾ.); **Syllabificátion** —ಲಿ— (ನಾ.)

Sýllabub. **Sillabub** ನೋಡಿ.

Sýllabus ಸಿಲಬಸ್ (ನಾ.; ಬ. ವ. -bi —ಬೈ) ಉಪನ್ಯಾಸ, ಪಾಠಕ್ರಮ, ಮೊ. ಗಳ ಪ್ರಧಾನಾಂಶಗಳನ್ನು ಅಥವಾ ಪ್ರಕರಣಗಳನ್ನು ತಿಳಿಸುವ ಸೂಚಿ, ಸಂಗ್ರಹ: ವಿಷಯ, ಪಾಠ, —ಸೂಚಿಕೆ; (ಕೆಲಸದ ಗಂಟೆಗಳು, ಮೊ. ನ್ನು ತಿಳಿಸುವ) ಕಾರ್ಯಸೂಚಿಕೆ.

Syllépsis ಸಿಲೆ(ಲೀ)ಪ್ಸಿಸ್ (ನಾ.; ಬ. ವ. -pses —ಪ್ಸೀಸ್) (ವ್ಯಾ.) ಒಂದು ವಾಕ್ಯದಲ್ಲಿ ಒಂದು ಪದವು ಬೇರೆ ಬೇರೆ ಅರ್ಥದ ಎರಡು ಅಥವಾ ಹೆಚ್ಚು ಪದಗಳಿಗೆ, ಅಥವಾ ಎರಡು ಅಥವಾ ಹೆಚ್ಚು ಪದಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ಪದಕ್ಕೆ ಮಾತ್ರ ವ್ಯಾಕರಣದ ರೀತಿಯಲ್ಲಿ ಅನ್ವಯವಾಗುತ್ತಿದ್ದರೂ ಆ ಎಲ್ಲ ಪದಗಳಿಗೂ ಒಟ್ಟಾಗಿ ಅನ್ವಯಿಸುವಂತೆ ಅದನ್ನು ಪ್ರಯೋಗಿಸುವುದು: ಸಮಾನಾನ್ವಯ ಪ್ರಯೋಗ (ಇದು ಒಂದು ಬಗೆಯ ವಾಕ್ಯದೋಷ) (ಉದಾ., Miss Polo went home in a flood of tears and a sedan-chair. She was seen washing clothes with happiness and Pears Soap). **Sylléptic** (ಗು.); **Sylléptically** (ಕ್ರಿ. ವಿ.)

Sýllogism ಸಿಲೊಜಿಸ್ಮ್ (ನಾ.) ಸಮಾನ ಅಥವಾ ಮಧ್ಯ ಪದವುಳ್ಳ ಎರಡು ದತ್ತ ಅಥವಾ ಗೃಹೀತ ವಾಕ್ಯಗಳಿಂದ ಮಧ್ಯ ಪದ ರಹಿತವಾದ ಮೂರನೆಯ ಸಿದ್ಧಾಂತ ವಾಕ್ಯವನ್ನು ನಿಗಮನಮಾಡುವ ತರ್ಕ ವಿಧಾನ: ನ್ಯಾಯ(—ವಾಕ್ಯ, ಕ್ರಮ); ನ್ಯಾಯ (ಯುಕ್ತಿ) ಸರಣಿ [(ಉದಾ.) (Every virtue is laudable; kindness is a virtue; therefore kindness is laudable). False s. ಅಬದ್ಧ, ಆಭಾಸ, —ನ್ಯಾಯ, ತರ್ಕಸರಣಿ]; (ರೂಪ.) (ಅನುಗಮನ ತರ್ಕಕ್ಕೆ ವ್ಯತಿರಿಕ್ತವಾದ) ನಿಗಮನ ತರ್ಕ. **Syllogístic** (ಗು.); **Syllogístically** (ಕ್ರಿ. ವಿ.); **Sýllogize** (ಕ್ರಿ.) ತರ್ಕಸರಣಿ —ಉಪಯೋಗಿಸು, ಅನ್ವಯಿಸು; ತರ್ಕಸರಣಿಯಲ್ಲಿ —ಇಡು, ನಿರೂಪಿಸು.

Sylph ಸಿಲ್ಫ್ (ನಾ.) ವಾಯು ನಿವಾಸಿಗಳೆಂದು ನಂಬಿರುವ ಅಮಾನುಷ ವ್ಯಕ್ತಿಗಳಲ್ಲೊಂದು: ವಾಯು—ಭೂತ, ಯಕ್ಷ (Gnome², Nymph, Salamander ಪದಗಳನ್ನು ನೋಡಿ); (ರೂಪ.) ತೆಳುವೆಣ್ಣು, ಲತಾಂಗಿ, ತನ್ವೀ, ಅಸಿಯಳ್ (ಗ್ರಾಂ.). ಹಲವು ಬಗೆಯ ನೀಳಪುಕ್ಕದ ಹಾಡು ಹಕ್ಕಿ. **Sýlphlike** (ಗು.)

Sýlvan. **Silvan** ನೋಡಿ.

Sýlviculture. **Silviculture** ನೋಡಿ.

Sym- ಸಿಮ್— (ಸ. ಪೂ. ಪ.) ಉತ್ತರ ಪದ b, m ಅಥವಾ p ಗಳಲ್ಲಿ ಆರಂಭವಾಗುವ ಗ್ರೀಕ್ ಸಮಾಸಪದಗಳ ಪೂರ್ವಪದವಾದ Syn- ಎಂಬುದರ ರೂಪ: **-bion(t)** ಸಹಜೀವಿ, ಕೂಡುಜೀವಿ. **-biósis** (ಒಂದನ್ನೊಂದು ಆಶ್ರಯಿಸಿಕೊಂಡು ಬದುಕುವ ಹಲವು ಭಿನ್ನ ಜೀವಿಗಳ) ಸಹಜೀವನ, ಕೂಡುಜೀವನ (ಉದಾ., ಪಾಚಿಯೂ ಅಣಬೆಯೂ ಕೂಡಿದ ಕಲ್ಲುಹೂವು). **-biótic** ಸಹಜೀವಿಯಾದ, ಸಹಜೀವನದ. **-biótically** (ಕ್ರಿ. ವಿ.); **-pálmograph** ಲೇಖನಿಗೂಡಿದ ಲೋಲಕ ದ್ವಯದ ಮೂಲಕ ಧ್ವನಿ ವಕ್ರರೇಖೆಗಳನ್ನು ಗುರುತಿಸುವ ಸಲಕರಣೆ: ಸಹ ವಕ್ರರೇಖಕ. **-pélmous** (ಹಕ್ಕಿಯ ವಿಷಯದಲ್ಲಿ) ಕಾಲಬೆರಳಿನ ನಮಕ ಸ್ನಾಯುಗಳು ಒಟ್ಟುಗೂಡಿರುವ: ಸಂಯುಕ್ತ ನಮಕ ಸ್ನಾಯುವುಳ್ಳ. **-pétalous** ಸಂಯುಕ್ತ ದಳಗಳುಳ್ಳ; ಕೂಡೆಸಳಿನ. **-phýllous** ಸಂಯುಕ್ತ ಪರ್ಣಗಳುಳ್ಳ, ಕೂಡೆಲೆಯ. **-physis** (—ಫಿಸಿಸ್) ಕೂಡುಬೆಳವಿಗೆ, ಸಹವರ್ಧನ; ಎರಡು ಸಂವಾದಿ ಅಸ್ಥಿಗಳ ಅಥವಾ ಇತರ ಭಾಗಗಳ ಸೇರುವೆ(ಯ ಗೆರೆ, ಸ್ಥಳ): ಮಿಳನ, ಸಂಯೋಜನ (—ರೇಖೆ, ಸ್ಥಾನ) [**Symphýseal** (ಗು.)]. **-piesómeter** (—ಪಿಯೆಸೊಮಿಟರ್) ನೀರಿನ ಪ್ರವಾಹದ ಜೋರನ್ನು ಅಳೆಯುವ ಸಲಕರಣೆ: (ಜಲ) ಪ್ರವಾಹ ಬಲಮಾಪಕ. ವಾಯುವಿನ ಒತ್ತಡವನ್ನು ನಾಳದೊಳಗಿರುವ ದ್ರವದ ಒತ್ತಡವೂ ಆ ದ್ರವದಿಂದ ನಾಳದೊಳಗೆ ಬಂಧಿತವಾಗಿರುವ ಅನಿಲದ ಒತ್ತಡವೂ ಸೇರಿ ಸರಿತೂಗುವಂತೆ ಅಳವಡಿಸಿರುವ ಒಂದು ವಾಯುಭಾರಮಾಪಕ: ಕೂಡೊತ್ತಡ ವಾಯುಭಾರಮಾಪಕ. **-pódium** (—ಪೋಡಿಯಂ) ಅದರ ಪ್ರತಿ ಪರ್ವವೂ ಹಿಂದಿನ ಪರ್ವದ ಕವಲಾಗಿ ಬೆಳೆದು ಆದಂಥ ಕಾಂಡ: ಸಂಯುಕ್ತ ಕಾಂಡ (ಉದಾ., ದ್ರಾಕ್ಷಿಬಳ್ಳಿ)

Sýmbol ಸಿಂಬ(ಬ್)ಲ್ (ನಾ., ಕ್ರಿ. ಸಕ.) (ಒಂದು ಪದಾರ್ಥವನ್ನು, ಒಂದು ಗುಣವನ್ನು, ಅಥವಾ ಒಂದು ಸಂಗತಿಯನ್ನು ಜ್ಞಾಪಕಕ್ಕೆ ತರುವ, ಅದರ ಪ್ರತಿನಿಧಿರೂಪವಾದ) ಸಂಕೇತ, ಗುರುತು, ಕುರುಹು, ಚಿಹ್ನೆ, ಪ್ರತೀಕ, ಸಂಜ್ಞೆ, ಲಾಂಛನ (White, the lion, the thunderbolt, the cross, are symbols of purity, courage, Zeus, Christianity. Nitrogen has N for its symbol). (ಕ್ರಿ.) (ವಿರ. ಪ್ರ.) —ಆಗಿರು, —ಮೂಲಕ ತೋರಿಸು, —ಇಂದ ಹೇಳು, —ರೂಪವಾಗಿ ಹೇಳು (=Symbolize). **Symbólic(al)** —ಬಾ— (ಗು.); **Symbólically** (ಕ್ರಿ. ವಿ.); **Symbólics** (ನಾ., ಬ. ವ.) ಪ್ರಾಚೀನ ಸಂಕೇತಗಳ ವ್ಯಾಸಂಗ; ಕ್ರೈಸ್ತ ಮತ ಸೂತ್ರಸಂಗ್ರಹಗಳ ವ್ಯಾಸಂಗ. **Sýmbolism** —ಬೊಲಿಸಮ್ (ನಾ.) ಸಂಕೇತ(ಗಳ ಮೂಲಕ) ನಿರೂಪಣೆ; ಸಂಕೇತಗಳ ಪ್ರಯೋಗ; ಸಂಕೇತ ಪದ್ಧತಿ; ಸಂಕೇತಗಳು. (ವಾಸ್ತವಿಕ ವಸ್ತುಗಳಿಗೆ ಅಥವಾ ಸಂಗತಿಗಳಿಗೆ ಕೊಟ್ಟ) ಸಂಕೇತಾರ್ಥ; (ಸಾಹಿತ್ಯ, ಕಲೆ, ಮೊ. ಗಳಲ್ಲಿ) ಸಂಕೇತ—ಪದ್ಧತಿ, ಪ್ರಯೋಗ. **Sýmbolist** (ನಾ.); **Sýmbolize** (ಕ್ರಿ. ಸಕ.)=Symbol (ಕ್ರಿ.): (ಕಥೆ, ಮೊ. ಗಳನ್ನು) ಸಂಕೇತರೂಪವಾಗಿ—ನಿರೂಪಿಸು, ಪರಿಗಣಿಸು; ಸಂಕೇತ ಪದ್ಧತಿ ಪ್ರಯೋಗಿಸು. **Symbolizátion** (ನಾ.); **Symb(ol)ólogy** (ನಾ.) ಸಂಕೇತಗಳ ವ್ಯಾಸಂಗ, ಶಾಸ್ತ್ರ; ಸಂಕೇತ ಶಾಸ್ತ್ರ; (ಶಿಥಿಲ ಪ್ರ.)=Symbolism. **Symb(ol)ólatry** (ನಾ.) ಸಂಕೇತ(ಗಳ) ಪೂಜೆ; ಸಂಕೇತಗಳಿಗೆ ಅತಿಗೌರವ ಕೊಡುವುದು.

Sýmmetry ಸಿಮೆಟ್ರಿ (ನಾ.) (ಭಾಗಗಳ ಪರಸ್ಪರ) ಪರಿಮಾಣ ಔಚಿತ್ಯ, ಸಮತೆ, ಹೊಂದಿಕೆ, ಸಾಮಂಜಸ್ಯ; ಪರಸ್ಪರಾನುರೂಪತೆ; ಅಳತೆ, ಆಕಾರ ಮತ್ತು ಸ್ಥಾನಗಳಲ್ಲಿ ವಿಭಜಿಸಿದ ಭಾಗಗಳು ಪರಸ್ಪರ ಅನುರೂಪವಾಗಿರುವಂತೆ ಬಿಂದು, ರೇಖೆ ಅಥವಾ ಸಮತಲದಿಂದ ಭಾಗಮಾಡಲು ಸಾಧ್ಯವಿರುವ ವಸ್ತುವಿನ ರೂಪ: ಸಮಸೂತ್ರತೆ; ಒಂದಕ್ಕೊಂದು ಅಭಿಮುಖವಾಗಿರುವ ಅಥವಾ ಒಂದು ಕೇಂದ್ರಕ್ಕೆ ಅಭಿಮುಖವಾಗಿರುವ ಎರಡು ಭಾಗಗಳು ಪರಸ್ಪರ ಜವಾಬಾಗಿರುವುದು: ಸಮ ಪಾರ್ಶ್ವತೆ; ಪರಸ್ಪರ ಜವಾಬಾದ ಸ್ಥಾನಗಳಲ್ಲಿ ಅನುರೂಪ ಭಾಗಗಳ ಹೊಂದಿಕೆ: ಸಮರೂಪತೆ. (ಸ. ವಿ.) ಒಂದು ಹೂವಿನಲ್ಲಿ ಪುಷ್ಪಪಾತ್ರದ ಪತ್ರಗಳೂ, ದಳಗಳೂ, ಶಲಾಕೆಗಳೂ, ಕೇಸರಗಳೂ ಸಮಸಂಖ್ಯೆಯಲ್ಲಿ ಅಥವಾ ಒಂದೇ ಸಂಖ್ಯೆಯ ಅಪವರ್ತ್ಯಕ್ರಮದಲ್ಲಿ ಅಳವಟ್ಟಿರುವುದು: ಸಮಪ್ರಮಾಣ(ತೆ). **Symmétric(al)** (ಗು.); **Symmétrically** (ಕ್ರಿ. ವಿ.); **Sýmmetrize** (ಕ್ರಿ. ಸಕ.); **Symmetrizátion** (ನಾ.); **Symmetrophóbia** (ನಾ.) (ಕಲೆಯಲ್ಲಿ) ಸಮಸೂತ್ರತೆಯು, ಸಮರೂಪತೆಯು, —ಭೀತಿ, ವರ್ಜನೆ. **Symmétrian, Symmetrícian, Sýmmetrist** (ನಾ.) (ವಿರ. ಪ್ರ.) ಸಮಸೂತ್ರತಾ—ವಾದಿ, ಪ್ರಿಯ.

Sýmpathy ಸಿಂಪತಿ (ನಾ.) ಮತ್ತೊಬ್ಬನ ಕಷ್ಟ, ದುಃಖ, ನೋವು, ಮೊ. ನ್ನು ತನ್ನದರಂತೆ ಅನುಭವಿಸುವುದು: ಸಹಾನುಭೂತಿ, ಅನುಕಂಪ, ಅನುವೇದನೆ (*With* ಉಪ. ದೊಡನೆ); ಮರುಕ, ಕನಿಕರ (*For* ಉಪ. ದೊಡನೆ); (ಅಭಿಪ್ರಾಯ, ಆಸೆ, ಮೊ. ಗಳಲ್ಲಿ) ಅನುಮೋದನೆ, ಒಪ್ಪಿಗೆ, ಒಡಂಬಡಿಕೆ. **Sympathétic** —ತೆಟಿಕ್ (ಗು., ನಾ.) ಸಹಾನುಭೂತಿಯ, ಅನುಕಂಪದ, ಅನುವೇದನೆಯ [S. heart, person, conduct, words. S. landscape (ಭಾವ ಸಾಹಚರ್ಯ, ಮೊ. ಗಳಿಂದ) ಹೃದಯ ಸ್ಪರ್ಶಿಯಾದ ಭೂದೃಶ್ಯ (ಚಿತ್ರ): ಹೃದಯಂಗಮ ದೃಶ್ಯ. S. pain ಒಬ್ಬನಲ್ಲಿಯ ಅಥವಾ ದೇಹದ ಒಂದು ಭಾಗದಲ್ಲಿಯ ನೋವಿನಿಂದ ಮತ್ತೊಬ್ಬನಲ್ಲಿ ಅಥವಾ ದೇಹದ ಮತ್ತೊಂದು ಭಾಗದಲ್ಲಿ ಆಗುವ ನೋವು: ಮಾರ್ನೋವು, ಅನುಬಾಧೆ. S. sound, resonance, string ಕಂಪನ ವಸ್ತುವಿನ ಕಂಪನಗಳು ವಾಯುವಿನ ಅಥವಾ ಇತರ ವಾಹಕದ ಮೂಲಕವಾಗಿ ಬಂದು ಪ್ರತಿಧ್ವನಿತವಾಗುವ ಧ್ವನಿ, ಅನುರಣನ ತಂತಿ: ಅನುಕಂಪನ—ಧ್ವನಿ, ಅನುರಣನ, ತಂತಿ. S. nerve ಕರುಳನ್ನೂ ರಕ್ತನಾಳಗಳನ್ನೂ ಸಮಾನ ನರಕಾರ್ಯಗಳಲ್ಲಿ ಒಂದುಗೂಡಿಸುವ ಯಾವುದಾದರೂ ನರವ್ಯೂಹದ ನರ (ಮು., ಬೆನ್ನುಹುರಿಯ ಉದ್ದಕ್ಕೂ ಹಬ್ಬಿರುವ ಎರಡು ನರಗಳಲ್ಲೊಂದು): ಅನುಕಂಪನ ನರ, ಅನುವೇದನಾ ನರ. S. ink ಅದರಿಂದ ಬರೆದ ಬರಹ ಶಾಖದಿಂದ ಅಥವಾ ಇತರ ಸಂಸ್ಕಾರದಿಂದ ಕಾಣುವಂತಾಗುವವರೆಗೆ ಅಗೋಚರವಾಗಿರುವ ಮಸಿ:

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಳ್ಳಮಸಿ. S. strike (Strike ನಾ., ನೋಡಿ)]; (ಫ್ರೆಂಚ್ ಭಾಷಾ ಸಂಪ್ರದಾಯವಾಗಿ, ಮತ್ತು ವಿಮರ್ಶಕರ ಅಸಂ.) ಅನುಕಂಪ ಹುಟ್ಟಿಸುವ, ಸಹಾನುಭೂತಿಕಾರಕ, ಹೃದಯ ಸ್ಪರ್ಶಿಯಾದ (*To* ಉಪ. ದೊಡನೆ). (ನಾ.) ಅನುವೇದನಾ, ಅನುಕಂಪ, —ನರ, ವ್ಯೂಹ; ಸುಪ್ರಾಹ್ಯ ವಾಹನೆ, ಮೊ. ಗಳಿಗೆ ಸುಲಭವಾಗಿ ಒಳಗಾಗುವ ವ್ಯಕ್ತಿ: ಅವಾಹ್ಯ. **Sympathétically** (ಕ್ರಿ. ವಿ.); **Sýmpathize** (ಕ್ರಿ. ಅಕ.) ಅನುಕಂಪ, ಸಹಾನುಭೂತಿ, —ತೋರಿಸು; ಮರುಕಪಡು, ಮರುಗು; ಒಡನೋಯಿ; ಸಹಾನುಭೂತಿಯುಳ್ಳವನಾಗಿರು (*With* ಉಪ. ದೊಡನೆ); (ಭಾವ, ಮೊ. ನ್ನು) ಅನುಮೋದಿಸು, ಒಡಂಬಡು. **Sýmpathizer** (ನಾ.)

Sýmphony ಸಿಂಫೊನಿ (ನಾ.) (ಪ್ರಾಚೀ. ಪ್ರ.) ಸ್ವರ—ಮೇಳ, ಮೈತ್ರಿ; (ಸಂ.) ವೈದೃಶ್ಯವುಳ್ಳ ಆದರೆ ಸಮೀಪ ಸಂಬಂಧವುಳ್ಳ ಹಲವು ಸಂಗೀತ ಭಾಗಗಳನ್ನು ಒಳಕೊಂಡ, ವಾದ್ಯಮೇಳಕ್ಕಾಗಿ ರಚಿಸಿದ, ವಿಸ್ತಾರವಾದ ಸಂಗೀತ ಕೃತಿ: ವಾದ್ಯಮೇಳ ಕೃತಿ; ಹಾಡಿನ ಜೊತೆಯಲ್ಲಿ ವಾದ್ಯ ನುಡಿಸುವಾಗ ಹಾಡಿನ ಮೊದಲಲ್ಲಿ, ನಡುವೆ ಅಥವಾ ಕೊನೆಯಲ್ಲಿ ನುಡಿಸುವ ವಾದ್ಯ ಕೃತಿ. **Symphónic** ಸಿಂಫಾನಿಕ್ (ಗು.); **Symphónious** ಸಿಂಫೋನಿಯಸ್ (ಗು.) (ವಿರ. ಪ್ರ.) ಸ್ವರ—ಮೈತ್ರಿಯುಳ್ಳ, ಮೇಳವುಳ್ಳ. ಹೊಂದಿಕೆಯ, ಸಾಂಗತ್ಯದ, ಸಾಮರಸ್ಯದ.

Sympósiarch. Symposium ನೋಡಿ.

Sympósium ಸಿಂಪೋ(ಪಾ)ಸಿಯಂ (ನಾ.; ಬ. ವ. -in) (ಪ್ರಾಚೀನ ಗ್ರೀಸಿನಲ್ಲಿ: ಭೋಜನಾನಂತರ ಸಂಗೀತ, ನರ್ತನ, ಸಂಭಾಷಣೆ, ಮೊ. ಗಳಿಂದ ಕೂಡಿ ನಡೆಯುತ್ತಿದ್ದ) ಪಾನಗೋಷ್ಠಿ; ಯಾವುದಾದರೂ ಕುಡಿತದ ಕೂಟ; ಸಹಪಾನ. (ತತ್ತ್ವಶಾಸ್ತ್ರ, ಮೊ. ನ್ನು ಕುರಿತ) ಚರ್ಚೆ, ವಿಚಾರ, —ಗೋಷ್ಠಿ, ಕೂಟ; ಭಾಷಣಮಾಲೆ; ಪತ್ರಿಕೆ, ಮೊ. ಗಳಲ್ಲಿ ಒಂದು ವಿಷಯವನ್ನು ಕುರಿತು ಬೇರೆ ಬೇರೆ ದೃಷ್ಟಿಗಳಿಂದ, ಬೇರೆ ಬೇರೆ ಲೇಖಕರು ಬರೆದ, ಲೇಖನಗಳ ತಂಡ: ಲೇಖನಮಾಲೆ, ವಿಚಾರಮಾಲೆ. **Sympósial** (ಗು.); **Sympósiarch** ಸಿಂಪೋ(ಪಾ)ಸಿಯಾರ್ಕ್ (ನಾ.) ಪಾನಗೋಷ್ಠಿಯ ಅಧ್ಯಕ್ಷ; (ಭೋಜನ ಸಮಾರಂಭದಲ್ಲಿ) ಸ್ವಸ್ತಿವಾಚಕ, ಯಜಮಾನ.

Sýmptom ಸಿಂಪ್ಟಂ (ನಾ.) ದೇಹದಲ್ಲಿ ರೋಗ ಸೂಚಕ ಲಕ್ಷಣ: ರೋಗ—ಲಕ್ಷಣ, ಚಿಹ್ನೆ (Subjective symptoms ರೋಗಿಗೆ ಮಾತ್ರ ಗೋಚರವಾಗುವ ರೋಗಚಿಹ್ನೆಗಳು: ಸ್ವಾನುಭವದ ಚಿಹ್ನೆಗಳು. Objective symptoms ಇತರರಿಗೆ ಗೋಚರವಾಗುವ ರೋಗಚಿಹ್ನೆಗಳು: ಅನ್ಯಗೋಚರ ಚಿಹ್ನೆಗಳು). (ಯಾವುದಾದರೂ ಒಂದರ ಇರವಿನ) ಸೂಚನೆ, ಚಿಹ್ನೆ, ಕುರುಹು. **Symptomátic** ಸಿಂಪ್ಟೊಮ್ಯಾಟಿಕ್ (ಗು.); **Symptomátically** (ಕ್ರಿ. ವಿ.); **Symptomatólogy** ಸಿಂಪ್ಟೊಮಟಾಲೊಜಿ (ನಾ.) ರೋಗಲಕ್ಷಣ ಶಾಸ್ತ್ರ; (ವ್ಯಾಸಂಗದ ವಿಷಯವಾಗಿ) ರೋಗಲಕ್ಷಣಗಳು.

Syn- ಸಿನ್— (ಪೂ. ಪ್ರ.; ಉತ್ತರ ಪದದ ಮೊದಲ ಅಕ್ಷರಾನುಸಾರವಾಗಿ syl-, sym-, syr-, sys- ಎಂದು ಮಾರ್ಪಡುತ್ತದೆ); ಒಟ್ಟಿಗೆ, ಒಡನೆ, ಸಹ, ಸಂಯುಕ್ತ, ಸಮಾನ (ಮೊ. ಅರ್ಥಗಳಲ್ಲಿ ಪ್ರಯೋಗವಾಗುತ್ತದೆ). **-(a)éresis** (—ಇಯರಿಸಿಸ್) (ವ್ಯಾ.) ಎರಡು ಸಮಾನ ಸ್ವರಗಳು ಅಥವಾ ಉಚ್ಚಾರಾಂಶಗಳು ಒಂದು ಸ್ವರದಂತೆ ಅಥವಾ ಉಚ್ಚಾರಾಂಶದಂತೆ ಸಂಧಿಯಾಗುವುದು: ಸ್ವರಸಂಧಿ [ಉದಾ., ever ಎಂಬುದನ್ನು e'er ಎಂದು ಮಾಡುವುದು (ಎದುರು ಪದ: Diaresis)]. **-allagmátic** (ಕರಾರು, ಒಪ್ಪಂದ, ಮೊ. ಗಳ ವಿಷಯದಲ್ಲಿ) ಎರಡು ಪಕ್ಷವೂ ಪಾಲಿಸಬೇಕಾದ ನಿರ್ಬಂಧಗಳುಳ್ಳ; ಉಭಯತ್ರ, ಪರಸ್ಪರ, —ಬಂಧಕ. **-al(o)épha** (—ಅಲೀಫ) ಪೂರ್ವ ಸ್ವರ ಲೋಪ(ಸಂಧಿ). **-ántherous** ಪರಾಗಕೋಶಗಳಿಂದ ಸಂಯುಕ್ತವಾದ ಕೇಸರಗಳುಳ್ಳ: ಪರಾಗಕೋಶ ಸಂಯುಕ್ತ ಕೇಸರಿ. **-ánthous** ಹೂವೂ ಎಲೆಯೂ ಒಟ್ಟಿಗೆ ಬಿಡುವ: ಸಹಪರ್ಣಪುಷ್ಪಿ. **-arthrósis** (ಬ. ವ. -oses) (ತಲೆಬುರುಡೆಯ ಎಲುಬುಗಳ ಹೊಲಿಗೆ ಸೇರುವೆ, ಹಲ್ಲುಗಳು ಹಲ್ಲುಕುಳಿಗಳಲ್ಲಿ ಕೀಲಿಸಿರುವುದು, ಮೊ. ರಲ್ಲಿಯಂತೆ) ಚಲನೆಯಿಲ್ಲದ ಕೀಲುಗೂಡಿಕೆ; ಅಚಲಸಂಧಿ. **-carp** ಸಮಷ್ಟಿಫಲ, ಸಂಯುಕ್ತಫಲ (ಉದಾ., ಅಂಜೂರ). **-cárpous** (ಗು.); **-chondrósis** (ಕಶೇರುಕಾಸ್ಥಿಗಳಲ್ಲಿರುವಂತೆ) (ಬಹುಪಾಲು) ಚಲನೆಯಿಲ್ಲದ ಮೃದ್ವಸ್ಥಿಗಳಿಂದ ಕೂಡಿದ ಕೀಲುಗೂಡಿಕೆ; ಮೃದ್ವಸ್ಥಿ ಅಚಲಸಂಧಿ. **-clástic** ಪೂರ್ತ ಹೊರಬಾಗಿನ ಅಥವಾ ಒಳಬಾಗಿನ: ಒಂದೇ ಬಾಗಿನ, ಸಮಾನ ವಕ್ರ (ಉದಾ., ವೃತ್ತದ ಮೇಲ್ಮೈ) [ಎದುರು ಪದ: Anticlastic (ಕೊಂಚ ಭಾಗ ಹೊರಬಾಗೂ ಕೊಂಚ ಭಾಗ ಒಳಬಾಗೂ ಉಳ್ಳ)]. **-clínal** (ಭೂಸ್ತರದ ವಿಷಯದಲ್ಲಿ) ಸಮಾನ ರೇಖೆಯ ಅಥವಾ ಸಮಾನ ಬಿಂದುವಿನ ಕಡೆಗೆ ಇಳಿಪೋರೆಯಾಗಿರುವ: ಏಕಕೇಂದ್ರಾವನತ [ಎದುರು ಪದ: Anticlinal (ಆ ಪದ ನೋಡಿ)]. **-cotylédonous** ಸಂಯುಕ್ತ ಬೀಜದಳಗಳುಳ್ಳ. **-cretism** (ಮು., ವಿವಿಧ ಮತ ಪಂಗಡಗಳ, ವಿವಿಧ ದಾರ್ಶನಿಕ ಪದ್ಧತಿಗಳ) ಸಮನ್ವಯ, ಸಮೀಕರಣ. **-crétic** (ಗು.); **-cretist** (ನಾ.); **-cretístic** (ಗು.); **-cretize** (ಕ್ರಿ.); **-cýtium** [— ಸಿಟಿ(ಷಿ)ಯಂ; ಬ. ವ. -ia] ಹಲವು ಕಣ ಕೇಂದ್ರಗಳುಳ್ಳ, ಆದರೆ ಒಂದೇ ಜೀವಕಣವಾದ ಜೀವದ್ರವ್ಯ: ಸಂಯುಕ್ತ—ಜೀವಕಣ, ಜೀವದ್ರವ್ಯ. **-dáctyl(ous)** (ಜಾಲಪಾದ, ಮೊ. ಗಳಲ್ಲಿಯಂತೆ) ಕೂಡು ಬೆರಳುಗಳುಳ್ಳ, ಸಂಯುಕ್ತಾಂಗುಲಿ. **-dáctylism** ಸಂಯುಕ್ತಾಂಗುಲತೆ. **-desmósis** ಎಲುಬುಗಳು ಅಸ್ಥಿರಜ್ಜುಗಳ ಮೂಲಕ ಕೀಲುಗೊಂಡಿರುವುದು: ಅಸ್ಥಿರಜ್ಜು ಸಂಧಿ. **-desmótic** (ಗು.); **-desmólogy** ಅಸ್ಥಿರಜ್ಜುಗಳನ್ನು ಕುರಿತ ಅಂ. ರ. ಶಾ. ವಿಭಾಗ: ಅಸ್ಥಿರಜ್ಜು ಶಾಸ್ತ್ರ. **-desmógraphy** ಅಸ್ಥಿರಜ್ಜು ವಿವರಣೆ. **-détic** (—ಡೆಟಿಕ್) ಸಂಬಂಧಾವ್ಯಯಗಳ, ಸಮುಚ್ಚಯ, —ಪ್ರಯೋಗದ; ಸಂಬಂಧಕ, ಸಂಯೋಜಕ. **Sýndrome** (—ಡ್ರೊಮಿ) ಒಂದು ರೋಗದಲ್ಲಿ ಹಲವು ಲಕ್ಷಣಗಳು ಒಟ್ಟಿಗೆ ಕಾಣಿಸಿಕೊಳ್ಳುವುದು; ಹಾಗೆ ಕಾಣಿಸಿಕೊಳ್ಳುವ ಲಕ್ಷಣಗಳು; ಸಹಲಕ್ಷಣ(ಗಳು). **Synécdoche** (ಸಿನೆಕ್‌ಡೊಕಿ) ಪೂರ್ಣ ವಸ್ತುವಿಗೆ ಬದಲು ಅದರ ಒಂದು ಭಾಗವನ್ನಾಗಲಿ ಭಾಗಕ್ಕೆ ಬದಲು ಪೂರ್ಣ ವಸ್ತುವನ್ನಾಗಲಿ ಹೆಸರಿಸುವ ಅಲಂಕಾರ: ಉಪಲಕ್ಷಣ [ಉದಾ., Fifty sail ೫೦ ಪಟಗಳು (ಹಡಗುಗಳು); The smiling year ಹಸನ್ಮುಖಿಯಾದ ವರ್ಷ (ವಸಂತ ಋತು)]. **Sýnesis** ಅರ್ಥಪ್ರಭಾವದಿಂದ ಗಮನಕ್ಕೆ ಸಿಕ್ಕದ ವ್ಯಾಕರಣ ವಿರೋಧ: ಅರ್ಥಾನ್ವಯ (Neither of them are right). **-génesis** ಪುರುಷಾಂಶವೂ ಸ್ತ್ರೀ ಅಂಶವೂ ಸೇರಿ ಭ್ರೂಣ ರಚನೆಗೊಳ್ಳುವುದು: ಸಂಜನನ, ಸಂಯುಕ್ತೋತ್ಪತ್ತಿ. **-gnathous** (ಮೀನುಗಳ ವಿಷಯದಲ್ಲಿ) ಕೊಳವೆಯಾಕಾರದ ಮೂತಿಯಾಗಿ ಎರಡು ದವಡೆಗಳೂ ಸೇರಿಕೊಂಡಿರುವ: ಕೂಡುದವಡೆಯ. **-izésis** (—ಇಸೀಸಿಸ್; ಬ. ವ. -ses —ಸೀಸ್) ಎರಡು ಉಚ್ಚಾರಾಂಶಗಳನ್ನು ಸಂಧಿಮಾಡಿ ಒಂದೇ ಉಚ್ಚಾರಾಂಶವಾಗಿ ಉಚ್ಚರಿಸುವುದು; ಸಂಯುಕ್ತ ಸ್ವರವಾಗದ ಅಥವಾ ಸಂಧಿಯಾಗದ ಎರಡು ಸ್ವರಗಳನ್ನು ಒಂದೇ ಉಚ್ಚಾರಾಂಶವಾಗಿ ಉಚ್ಚರಿಸುವುದು: ಕೂಡುಚ್ಚಾರ(ಣೆ) (ಉದಾ., ಅಂಬಲ + ಅಟ್ಟು > ಅಂಬಲ್ಯಟ್ಟು). **Synoécious** (ಸಿನೀಷಸ್) (ಸಂಕೀರ್ಣ ಪುಷ್ಪಗಳು, ಪಾಚಿಗಳು, ಮೊ. ಗಳಲ್ಲಿಯಂತೆ) ಒಂದೇ ಪುಷ್ಪವಿನ್ಯಾಸದಲ್ಲಿ ಪುಂಪುಷ್ಪ ಸ್ತ್ರೀಪುಷ್ಪಗಳೆರಡೂ ಇರುವ ಅಥವಾ ಒಂದೇ ಪಾತ್ರದಲ್ಲಿ ಪುರುಷಾಂಗ ಸ್ತ್ರೀ ಅಂಗ ಎರಡನ್ನೂ ಉಳ್ಳ: ಉಭಯ ಪುಷ್ಪಿ, ಸಹಲಿಂಗಿ. **-osteólogy** ದೇಹದ ಕೀಲುಗಳ ಶಾಸ್ತ್ರ: ಸಂಧಿಶಾಸ್ತ್ರ. **-ost(e)ósis** ಅಕ್ಕಪಕ್ಕದ ಮೂಳೆಗಳು ಒಂದುಗೂಡಿ ಒಂದೇ ಮೂಳೆಯಾಗುವುದು: ಅಸ್ಥಿ ಸಂಯೋಗ. **-ostótic** (ಗು.); **-óvia** ದೇಹದ ಕೀಲುಗಳ ಒಳಭಾಗಗಳಲ್ಲಿಯೂ ಚಲನ ಸೌಲಭ್ಯ ಬೇಕಾದ ಇತರ ಸ್ಥಳಗಳಲ್ಲಿಯೂ ತೆಳು ಪೊರೆಗಳು ಸ್ರವಿಸುವ ಸಸಾರಜನಕ ದ್ರವ: ಸಂಧಿ—ದ್ರವ, ತೈಲ (=Joint-oil, joint-water). **-óvial** (ಗು.); **-ovítis** ಸಂಧಿದ್ರವ ಪೊರೆಯೂತ. **-tony** ನಿಸ್ತಂತು ದೂರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲೇಖನದ ಪ್ರೇಷಕ ಮತ್ತು ಗ್ರಾಹಕ ಸಲಕರಣೆಗಳನ್ನು ಪರಸ್ಪರ ಹೊಂದಿಸುವುದು : ಸಮಶ್ರುತಿ(ಮಾಡುವುದು) (ರೂಪ. ಸಹ). **-tónic** (ಗು.) ; **-tonize** (ಕ್ರಿ. ಸಕ.)

Sýnagogue ಸಿನಗಾಗ್ (ನಾ.) ಯೆಹೂದ್ಯರ ಆರಾಧನ—ಸಭೆ, ಮಂದಿರ. **Synagógical** ಸಿನಗಾ(ಗೋ)ಗಿ(ಜಿ)ಕಲ್ (ಗು.)

Sýnchronize ಸಿಂಕ್ರೊನೈಸ್ (ಕ್ರಿ.) ಏಕಕಾಲದಲ್ಲಿ —ನಡೆ, ಆಗು, ಸಂಭವಿಸು ; ಏಕ ಕಾಲಿಕ, ಸಮಕಾಲಿಕ, —ಆಗಿರು (*With* ಉಪ. ಜೊಡನೆ); (ಘಟನೆಗಳ) ಏಕಕಾಲಿಕತೆಯನ್ನು, ಕಾಲಸಮಾನತೆಯನ್ನು, —ನಿರ್ಣಯಿಸು, ಪ್ರತಿಪಾದಿಸು ; (ಗಡಿಯಾರಗಳನ್ನು) ಎಲ್ಲವೂ ಒಂದೇ ಹೊತ್ತನ್ನು, ಪ್ರಮಾಣ ಕಾಲವನ್ನು, —ತೋರಿಸುವಂತೆ ಇಡು ; (ಗಡಿಯಾರಗಳು) ಒಂದೇ ಕಾಲ, ಪ್ರಮಾಣ ಕಾಲ, —ತೋರಿಸು ; (ಚಲನಚಿತ್ರ, ದೂರದರ್ಶನ, ಮೊ. ಗಳಲ್ಲಿ) ದೃಶ್ಯ ಭಾಗಗಳನ್ನೂ ಶ್ರವ್ಯ ಭಾಗಗಳನ್ನೂ ಸರಿಹೊಂದಿಸು, ಮೇಳೈಸು, ಸುಸಂಘಟಿತ ಮಾಡು. **Sýnchronism** (ನಾ.) ; **Sýnchrony** (ನಾ.) (ವಿರ. ಪ್ರ.) ಏಕಕಾಲಿಕತೆ, ಸಮಕಾಲಿಕತೆ. **Synchronizátion** (ನಾ.) ; **Sýnchronous** (ಗು.) ; **Sýnchronously** (ಕ್ರಿ. ವಿ.)

Sýncopate ಸಿಂಕೊಪೇಟ್ (ಕ್ರಿ. ಸಕ.) (ನಡುವಣ ಅಕ್ಷರಗಳನ್ನು ಲೋಪ ಮಾಡಿ) (ಪದಗಳನ್ನು) ಮೊಟಕು, ಸಂಕ್ಷೇಪ, —ಮಾಡು (ಉದಾ., Symbolology ಎನ್ನುವುದಕ್ಕೆ Symbology); (ಸಂ.) (ತಾಳ ಬೀಳದ ಕಡೆ ಎತ್ತಿಕೊಂಡು ತಾಳ ಬೀಳುವ ಕಡೆಯವರೆಗೆ ಲಂಬಿಸಿ, ಸ್ವರದ ಅಥವಾ ರಾಗದ) ಲಯ ವಿನ್ಯಾಸವನ್ನು—ಹಿಂದು ಮುಂದು ಮಾಡು, ವಿಪರ್ಯಯಮಾಡು. **Syncopátion** (ನಾ.); **Sýncope** ಸಿಂಕೊಪಿ (ಪೆ) (ನಾ.) (ವ್ಯಾ.) ಮೊಟಕು ಮಾಡಿದ, ಸಂಕ್ಷೇಪಿತ, —ಪದ, ಉಚ್ಚಾರ ; (ವೈ. ಶಾ.) (ರಕ್ತದ ಒತ್ತಡ ಕಡಮೆಯಾಗುವುದರಿಂದ) ಪ್ರಜ್ಞೆ ತಪ್ಪುವುದು, ಕವಳಿ ; (ಸಂ.) ಲಯ ವಿನ್ಯಾಸದ ವಿಪರ್ಯಯ; ಮೂರ್ಛನ. **Syncóp(t)ic** (ಗು.)

Sýndic ಸಿಂಡಿಕ್ (ನಾ.) ಹಲವು ಬಗೆಯ ಸರ್ಕಾರದ ಅಧಿಕಾರಿ; (ಕೇಂಬ್ರಿಡ್ಜ್ ವಿ. ವಿ. ನಿ.) ಸೆನೆಟ್ ಸಭೆಯ ವಿಶೇಷ ಸಮಿತಿಯ ಸದಸ್ಯ ; (ವ್ಯಾಪಾರ ಸಂಸ್ಥೆ, ಮೊ. ಗಳ) ನಿಯೋಗಿ, ಪ್ರತಿನಿಧಿ. **Sýndicate** —ಕಟ್ (ನಾ.), —ಕೇಟ್ (ಕ್ರಿ. ಸಕ.) (ಮು., ಕೇಂಬ್ರಿಡ್ಜ್ ವಿ. ವಿ. ನಿ.) ಸೆನೆಟ್ ಸಭೆಯ ವಿಶೇಷ ಸಮಿತಿ; ಆಡಳಿತ, ಕಾರ್ಯಕಾರಿ,—ಮಂಡಲ, ಸಮಿತಿ ; (ಸಮಾನೋದ್ದೇಶಸಾಧನೆಗಾಗಿ ಏರ್ಪಡಿಸಿಕೊಂಡ) (ವಾಣಿಜ್ಯ ಸಂಸ್ಥೆಗಳು, ಮೊ. ಗಳ) ಕೂಟ, ಸಂಘ. (ಕ್ರಿ.) ಕೂಟ, ಸಂಘ— ಏರ್ಪಡಿಸು, ರಚಿಸು (ಮು., ಭೂ. ಕೃ. ನಲ್ಲಿ). **Syndicátion** (ನಾ.)

Sýndicalism ಸಿಂಡಿಕಲಿಸ್ಮ್ (ನಾ.) ಕಾರ್ಖಾನೆಗಳ ಸಮಸ್ತ ಆಡಳಿತಗಳನ್ನೂ ಅವುಗಳ ಮಾಲೀಕರ ಕೈತಪ್ಪಿಸಿ ಆಯಾ ಕಾರ್ಖಾನೆಗೆ ಸಂಬಂಧಪಟ್ಟ ಕಾರ್ಮಿಕ ಜನರ ಸಂಘಗಳಿಗೆ ವರ್ಗಾಯಿಸಿಕೊಡ ಬೇಕೆಂಬ ವಾದ, ಚಳವಳಿ : ಕಾರ್ಮಿಕ ಸಂಘ ಯಾಜಮಾನ್ಯ— ಪದ್ಧತಿ, ಚಳವಳಿ.

Sýndicate, etc. **Syndic** ನೋಡಿ.

Syne ಸೈನ್ (ಕ್ರಿ. ವಿ.) (ಸ್ಕಾ. ಪ್ರ.) —ಇಂದ, ಈಚೆಗೆ, ತರುವಾಯ [Auld lang s. (ಅಗಲುವಾಗ ಹೇಳುವ ಹಾಡಿನ ಪಲ್ಲವಿಯ ಹೆಸರಾಗಿ): ಬಲು ಕಾಲದ ಹಿಂದೆ. Soon *or* s. ಈಗಲೋ ಆಮೇಲೋ]

Sýnod ಸಿನಡ್ (ನಾ.) (ಕ್ರೈಸ್ತ ಮತೀಯ) ಪ್ರತಿನಿಧಿ ಮಂಡಲಿ, ಆಡಳಿತ ಸಭೆ ; ಧರ್ಮಾಧಿಕಾರಿಗಳ ಆಲೋಚನಾ ಸಭೆ (Oecumenical *or* general, national, provincial, diocesan, s. ವಿಶ್ವ ಕ್ರೈಸ್ತ ಅಥವಾ ಸಾರ್ವತ್ರಿಕ, ರಾಷ್ಟ್ರೀಯ, ಪ್ರಾಂತ, ಬಿಷಪ್ಪಿನ ಆಡಳಿತ ಪ್ರದೇಶದ, —ಆಲೋಚನಾ ಸಭೆ) ; (ಪ್ರೆಸ್ಬಿಟೇರಿಯನ್ ಕ್ರೈಸ್ತ ಪಂಗಡದವರಲ್ಲಿ) ಸಾರ್ವತ್ರಿಕ ಸಭೆಗೆ ಒಳಪಟ್ಟ ಮತ್ತು ಹಿರಿಯರ ಮಂಡಲಿಗೆ ಮೇಲ್ಪಟ್ಟ ಸಭೆ ; (ಚರ್ಚೆಗಾಗಿ ಏರ್ಪಡಿಸಿದ) ಸಭೆ, ಕೂಟ, ಸಮ್ಮೇಳನ ; (ಖ. ವಿ.) ಗ್ರಹಗಳ ಅಥವಾ ನಕ್ಷತ್ರಗಳ ಸಮಾಗಮ : ಯೋಗ, ಯುತಿ.

Sýnodal ಸಿನೊಡಲ್ (ಗು.) ; **Synódic(al)** ಸಿನಾ— (ಗು.) ; **Synódically** (ಕ್ರಿ. ವಿ.)

Sýnonym ಸಿನೊನಿಂ (ನಾ.) ಒಂದೇ ಭಾಷೆಯಲ್ಲಿ ಅರ್ಥದಲ್ಲೂ ಬಳಕೆಯಲ್ಲೂ ಮತ್ತೊಂದು ಪದದೊಡನೆ ಸಮವ್ಯಾಪಕವೂ ಆದರಿಂದ ಅಭಿನ್ನವೂ ಆಗಿರುವ (ಉದಾ., Caecitis, typhlitis), ಅಥವಾ ಮತ್ತೊಂದು ಪದ ಹೇಳುವ ವಸ್ತುವನ್ನೊ ಕ್ರಿಯೆಯನ್ನೊ ಗುಣವನ್ನೊ ಹೇಳುವ ಆದರೆ ಬೇರೆಯ ಸಂದರ್ಭಕ್ಕೆ ತಕ್ಕ (ಉದಾ., Leap, jump ; slay, kill), ಅಥವಾ ಬೇರೆಯ ಅರ್ಥಚ್ಛಾಯೆಯುಳ್ಳ (ಉದಾ., Blind-worm, Slow-worm), ಅಥವಾ ಮತ್ತೊಂದು ಪದದೊಡನೆ ಕೆಲವೊಂದು ಅಂಶಗಳಲ್ಲಿ ಮಾತ್ರ ಸಾಮ್ಯವಿರುವ (ಉದಾ., Ship, vessel), ಪದ : ಸಮಾನಾರ್ಥಕ, ಸಮಾನ, ಪರ್ಯಾಯ, —ಪದ, ಶಬ್ದ ; ಪಡಿ—ನುಡಿ, ಮಾತು. **Synonýmic** (ಗು.) ಪರ್ಯಾಯ ಪದಗಳ(ನ್ನು ಪಯೋಗಿಸುವ), ಸಮಾನಾರ್ಥಕ ಶಬ್ದಗಳ (ಪ್ರಯೋಗದ). **Synonýmity** (ನಾ.) ಸಮಾನಾರ್ಥಕತೆ. **Synónymous** ಸಿನಾನಿಮಸ್ (ಗು.) (*With* ಉಪ. ಜೊಡನೆ); **Synónymously** (ಕ್ರಿ. ವಿ.) ; **Synónymy** (ನಾ.) =Synonymity; ಒತ್ತಿ ಹೇಳುವುದಕ್ಕಾಗಿ ಸಮಾನಾರ್ಥಕ ಪದಗಳು ಹಲವನ್ನು ಉಪಯೋಗಿಸುವುದು : ಸಮಾನ ಪದಾಲಂಕಾರ (ಉದಾ., In any shape or form) ; ಸಮಾನಾರ್ಥಕ ಪದಗಳ, ಪರ್ಯಾಯ ಶಬ್ದಗಳ,— ಪದ್ಧತಿ, ಸಂಗ್ರಹ, ವ್ಯಾಸಂಗ; ಪರ್ಯಾಯ ಶಬ್ದ ದರ್ಪಣ.

Synópsis ಸಿನಾಪ್ಸಿಸ್ (ನಾ. ; ಬ. ವ. -ses —ಸೀಸ್) ಮುಖ್ಯಾಂಶ ಸೂಚಿ, ಸಾರಾಂಶ, ಸಂಗ್ರಹ, ಗೋಷ್ವಾರೆ ; ಒಟ್ಟು ನೋಟ, ಸಾಮಾನ್ಯಾವಲೋಕನ, ಸಮಷ್ಟಿ ದೃಷ್ಟಿ. **Synóptic** (ಗು., ನಾ.) ಗೋಷ್ವಾರೆಯ, ಒಟ್ಟು ನೋಟದ (S. gospels ಮ್ಯಾಥ್ಯು, ಮಾರ್ಕ್ ಮತ್ತು ಲ್ಯೂಕ್—ಇವರ ಸುವಾರ್ತೆಗಳು : ಸಮಾನ ದೃಷ್ಟಿಯ ಸುವಾರ್ತೆಗಳು) ; ಸಮಾನ ದೃಷ್ಟಿಯ ಸುವಾರ್ತೆಗಳ. (ನಾ.) ಸಮಾನ ದೃಷ್ಟಿ ಸುವಾರ್ತಾಕಾರ (=**Synóptist**). **Synóptical** (ಗು.) ; **Synóptically** (ಕ್ರಿ. ವಿ.)

Syntáctic, etc. **Syntax** ನೋಡಿ.

Sýntax ಸಿಂಟ್ಯಾಕ್ಸ್ (ನಾ.) ವಾಕ್ಯ—ರಚನೆ, ಪ್ರಕ್ರಿಯೆ ; (ವಾಕ್ಯದಲ್ಲಿ) ಪದ—ವಿನ್ಯಾಸ, ಜೋಡಣೆ ; (ವ್ಯಾ.) ಅನ್ವಯ, ಆಕಾಂಕ್ಷೆ ; (ವ್ಯಾ.) ಅನ್ವಯ—ನಿಯಮಗಳು, ಪ್ರಕರಣ. **Syntáctic** (ಗು., ನಾ.) ಅನ್ವಯದ, ಅನ್ವಯಾನುಸಾರವಾದ. (ನಾ., ಬ. ವ. ದಲ್ಲಿ) ದತ್ತ ಸಂಖ್ಯೆಯ ವಸ್ತುಗಳನ್ನು ದತ್ತ ನಿಯಮಗಳಿಗೊಳಪಟ್ಟು ಎಷ್ಟು ವಿಧಗಳಲ್ಲಿ ಸಂಯೋಗಮಾಡಬಹುದು ಎಂಬ ವಿಚಾರವನ್ನು ಕುರಿತ ಗಣಿತಶಾಸ್ತ್ರ ಭಾಗ : ಸಂಖ್ಯಾ ವಿನ್ಯಾಸ ಶಾಸ್ತ್ರ. **Syntáctically** (ಕ್ರಿ. ವಿ.)

Sýnthesis ಸಿಂತಿಸಿಸ್ (ನಾ., ಬ. ವ. -theses —ತಿಸೀಸ್) ಒಟ್ಟು ಕೂಡಿಸುವುದು, ಸಂಯೋಗ, ಸಂಯೋಜನೆ, ಸಂಶ್ಲೇಷಣ, ಸಂಘಟನೆ (ಎದುರು ಪದ : Analysis) ; (ಭಾವಗಳು, ವಾಸ್ತವಾಂಶಗಳು, ಮೊ. ಗಳ) ಪ್ರತ್ಯೇಕ ಭಾಗಗಳನ್ನು ಪರಸ್ಪರ ಸಂಬಂಧವುಳ್ಳ ಒಂದು ಸಮಗ್ರವನ್ನಾಗಿ ಅಳವಡಿಸುವುದು: ಸಿದ್ಧಾಂತ ಸಮನ್ವಯ ; (ರ. ವಿ.) ಸಸ್ಯ, ಮೊ. ಗಳಿಂದ ಸ್ವಾಭಾವಿಕವಾಗಿ ಪಡೆಯದೆ, ಘಟಕಾಂಶಗಳನ್ನು ಸೇರಿಸಿ ಸಂಯುಕ್ತಗಳನ್ನು ಕೃತಕವಾಗಿ ತಯಾರಿಸುವುದು : ಕೃತಕ, ಸಂಯೋಗ, —ತಯಾರಿಕೆ (ಉದಾ., Synthetic rubber, indigo, ಮೊ.) ; (ವ್ಯಾ.) ಪ್ರತ್ಯೇಕ ಉಪಸರ್ಗ ಪದ, ಮೊ. ಗಳನ್ನು ಉಪಯೋಗಿಸದೆ, ಪ್ರತ್ಯಯ, ಮೊ. ನ್ನು ಹಚ್ಚಿ ಸಮಾಸಪದಗಳನ್ನೂ ವ್ಯುತ್ಪನ್ನ ಪದಗಳನ್ನೂ ರಚಿಸುವುದು : ಸಂಶ್ಲೇಷ(ಣ) ; (ಶಸ್ತ್ರವೈದ್ಯ) ಬೇರ್ಪಟ್ಟ ಭಾಗಗಳನ್ನು ಒಟ್ಟುಕೂಡಿಸುವುದು : ಕೂಡಿ(ಸುವಿ)ಕೆ, ಸಂಯೋಜನ **Synthétic(al)** —ತೆ— (ಗು.) (ನಾಮವಾಚಕಾರ್ಥಗಳಲ್ಲಿ). S. rubber, indigo, etc. ಸಂಯೋಗ ತಯಾರಿಕೆಯ ರಬ್ಬರು, ನೀಲ, ಮೊ. ವು. S. philosophy = Spencerism

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಆ ಪದ ನೋಡಿ). **Synthétically** (ಕ್ರಿ. ವಿ.) ; **Sýnthesize, Sýnthetize** —ತಿ— (ಕ್ರಿ. ಸಕ.) ; **Sýnthetist, Sýnthesist** (ನಾ.)

Sýpher ಸೈಫರ್ (ಕ್ರಿ. ನಕ.) ಕೂಡುಮಟ್ಟ ಒಂದೇ ಸಮಕ್ಷೇತ್ರವಾಗಿರುವಂತೆ ಏಣುಗಳನ್ನು ಹೆರೆದು ಒಂದರಮೇಲೊಂದು ಕೂರಿಸು: ಪಡ ಕೂರಿಸು ; ಮಟ್ಟ ಸೇರುವೆ ಮಾಡು. S.-joint ಮಟ್ಟ, ಪಡ, —ಸೇರುವೆ.

Sýphilis ಸಿಫಿಲಿಸ್ (ನಾ.) ಒಂದು ತೆರದ ಮೇಹರೋಗ : ಉಪದಂಶ, ಪರಂಗಿ ಹುಣ್ಣು [Primary s. (ರೋಗ ತಗುಲಿದ ಭಾಗದಲ್ಲಿ ಮಾತ್ರ ವ್ರಣವಾಗುವ) ಪ್ರಥಮಾವಸ್ಥೆಯ ಉಪದಂಶ. Secondary s. (ಚರ್ಮಕ್ಕೂ ರೋಳೆಪೊರೆಗೂ ರೋಗ ಹರಡಿಕೊಂಡ) ಎರಡನೆಯ ಅವಸ್ಥೆಯ ಉಪದಂಶ. Tertiary s. (ಮೂಳೆಗಳು, ಸ್ನಾಯುಗಳು, ಮಿದುಳು—ಇವಕ್ಕೆಲ್ಲ ಹರಡಿಕೊಂಡ) ಮೂರನೆಯ ಅವಸ್ಥೆಯ ಉಪದಂಶ]. **Syphilític, Sýphilous** (ಗು.) ; **Sýphilize** (ಕ್ರಿ. ಸಕ.) ಪರಂಗಿ ರೋಗ—ಅಂಟಿಸು, ತಗುಲಿಸು ; (ಚಿಕಿತ್ಸೆಗಾಗಿ, ರೋಗ ನಿರೋಧಕವಾಗಿ) ಉಪದಂಶ ವಿಷವನ್ನು ಒಳಸೇರಿಸು. **Sýphiloid** (ಗು.) ಪರಂಗಿ ಹುಣ್ಣಿನಂಥ. **Syphilólogy** (ನಾ.) ಉಪದಂಶ ರೋಗ ಶಾಸ್ತ್ರ.

Syphon, Syren. = Si- (ಗಳಿಗೆ ಬದಲಾಗಿ ತಪ್ಪು ಪ್ರಯೋಗ)

Sýriac ಸಿರಿಆ್ಯಕ್ (ಗು., ನಾ.) ಪ್ರಾಚೀನ ಸಿರಿಯದ ಭಾಷೆ (ಯಲ್ಲಿಯ). **Sýriacism** ಸಿರಿಯಸಿಸ್ಮ್ (ನಾ.) ಪ್ರಾಚೀನ ಸಿರಿಯನ್ ಭಾಷಾ ಪ್ರಯೋಗ. **Sýrian** (ಗು., ನಾ.) ಸಿರಿಯ ದೇಶದ(ವನು)

Sýringe ಸಿರಿಂಜ್ (ನಾ., ಕ್ರಿ. ಸಕ.) ಶಸ್ತ್ರಚಿಕಿತ್ಸೆ, ತೋಟದ ಕೆಲಸ, ಮೊ. ಗಳಲ್ಲಿ ಉಪಯೋಗಿಸುವ, ಮೊದಲು ಸೇದಿಕೆಯ ಮೂಲಕ ದ್ರವವನ್ನು ಒಳಕ್ಕೆ ಎಳೆದುಕೊಂಡು ತರುವಾಯ ಅದನ್ನು ಸೂಕ್ಷ್ಮ ಧಾರೆಯಾಗಿ ಹೊರಬಿಡುವ, ಅಡುಬೆಣೆಯೂ ಮೂತಿಯೂ ಉಳ್ಳ, ಉರುಳೆಯಾಕಾರದ ಕೊಳವೆ : ಪಿಚಕಾರಿ, ಜೀರ್ಕೊಳವೆ, ಚಿಮ್ಮುಗೊವಿ (Hypodermic s. ಚರ್ಮದಿಂದೊಳಕ್ಕೆ ದ್ರವ ಸೇರಿಸಲು ಚೂಪುಸೂಜಿಯುಳ್ಳ ಪಿಚಕಾರಿ : ಚುಚ್ಚುಗೊಳವೆ, ಸೂಜಿಪಿಚಕಾರಿ). (ಕ್ರಿ.) ಪಿಚಕಾರಿ ಹೊಡೆ. **Sýringeful** (ನಾ.)

Syríngeal, Syringítis, Syringótomy. Syrinx ನೋಡಿ.

Sýrinx ಸಿರಿಂಕ್ಸ್ (ನಾ., ಬ. ವ. -xes, -inges —ಜೀಸ್) ಒಂದು ಬಗೆಯ ಪಿಳ್ಳಂಗೋವಿ ರಾಗಮಾಲಿಕೆ [=Pan-pipe (Pan² ಕೆಳಗೆ ಆ ಪದ ನೋಡಿ)]. (ಪ್ರಾಚೀ. ಶಾ.) ಪ್ರಾಚೀನ ಈಜಿಪ್ಟ್ ದೇಶದ ಗೋರಿಗಳಲ್ಲಿ ಬಂಡೆ ಕೊರೆದು ಮಾಡಿರುವ ಸುರಂಗ (ದಾರಿ): ಗೋರಿ ಸುರಂಗ ; (ಅಂ. ರ. ಶಾ.) ಗಂಟಲಿನಿಂದ ಕಿವಿಯ ಹರೆಯವರೆಗಿರುವ, ಹರೆಗೆ ಗಾಳಿಯೊದಗಿಸುವ ಯೂಸ್ಟೇಕಿಯಸ್ಸಿನ ನಾಳ : ಸಿರಿಂಕ್ಸ್ ನಾಳ [**Syringítis** ಸಿರಿಂಜೈಟಿಸ್ (ನಾ.) ಸಿರಿಂಕ್ಸ್ ನಾಳದ ಉರಿಯೂತ]; ಹಕ್ಕಿಗಳ—ದನಿಪೆಟ್ಟಿಗೆಯ ಕೆಳ ಭಾಗ, ಗಾನಾಂಗ, ಹಾಡು ನಳಿಕೆ [**Syríngeal** —ಜಿಯಲ್ (ಗು.) ಹಾಡು ನಳಿಕೆಯ]; (ಶಸ್ತ್ರಚಿಕಿತ್ಸೆ) ಭಗಂದರ [**Syringótomy** ಸಿರಿಂಗಾಟೊಮಿ (ನಾ.) ಭಗಂದರ ಛೇದನ]

Syro- ಸೈರೊ— (ಸ. ಪೂ. ಪ.) ಸಿರಿಯ(ನ್)—; ಸಿರಿಯದ (ರೀತಿಯ); ಸಿರಿಯನ್ ಮತ್ತು—. **-arábian** ಸಿರಿಯನ್ ಮತ್ತು ಅರೇಬಿಯದ.

Sýrtis (L) ಸರ್ಟಿಸ್ (ನಾ. ; ಬ. ವ. -tes —ಟೀಸ್) ಉಸುಬು, ಹೂಳುನೆಲ.

Sýrup, Si- ಸಿರಪ್ (ನಾ.) ಪಾನಕ, ಷರಬತ್ತು ; ಕಬ್ಬಿನ ಹಾಲಿನ ಪಾಕ, ಕಾಕಂಬಿ [Golden s. ಎಳೆ ಹಳದಿಯ ಕಾಕಂಬಿ(ಗೆ ವ್ಯಾಪಾರದ ಹೆಸರು)]. **Sýrupy** (ಗು.)

Syssarcósis ಸಿಸಾರ್ಕೋಸಿಸ್ (ನಾ.) ನಡುವೆಯಿರುವ ಸ್ನಾಯುಗಳ ಮೂಲಕ ಎಲುಬುಗಳ ಸೇರಿಕೆ : ಅಸ್ಥಿಸ್ನಾಯು—ಸೇರಿಕೆ, ಸಂಯೋಜನ.

Syssítia (Gk) ಸಿಸಿ(ಸ್ಸೆ)ಷಿ(ಟಿ)ಯ (ನಾ.) (ಗ್ರೀಕ್ ಪ್ರಾ.) ದೇಶಾಭಿಮಾನ, ಸೈನಿಕ ದಕ್ಷತೆ, ಶಿಸ್ತು, ಸರಳತೆ, ಮೊ. ನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಪ್ರಜೆಗಳೆಲ್ಲರೂ ಒಟ್ಟಿಗೆ ಸೇರಿ ನಡಸುತ್ತಿದ್ದ, ಸ್ಪಾರ್ಟನರ ಮತ್ತು ಇತರ ಕೆಲವು ಡೋರಿಯನರ, ಸಾರ್ವಜನಿಕ ಭೋಜನ (ಕೂಟ) : ಸಹಭೋಜನ.

Systáltic ಸಿಸ್ಟ್ಯಾಲ್ಟಿಕ್ (ನಾ.) ಪರ್ಯಾಯ ಕ್ರಮದಲ್ಲಿ—ಹಿಗ್ಗಿ ಕುಗ್ಗುವ, ಸಂಕೋಚನ ವ್ಯಾಕೋಚನಗಳುಳ್ಳ ; ತುಡಿಯುವ, ಸ್ಪಂದನದ.

Sýstem ಸಿಸ್ಟಂ (ನಾ.) ಪರಸ್ಪರ ಸಂಬಂಧವುಳ್ಳ ವಸ್ತುಗಳ ಅಥವಾ ಭಾಗಗಳ ಒಟ್ಟು ತಂಡ ; ಮೂರ್ತ ಅಥವಾ ಅಮೂರ್ತ ವಸ್ತುಗಳ ವ್ಯವಸ್ಥಿತ ಸಮುದಾಯ: ವ್ಯೂಹ, ಮಂಡಲ, ವ್ಯವಸ್ಥೆ, ಪದ್ಧತಿ, ಶಿಸ್ತು, ಪ್ರಕ್ರಮ, ಕಟ್ಟುಪಾಡು, ಏರ್ಪಾಟು [S. of pulleys ಪರಸ್ಪರ ಸಂಬಂಧ ಪಡೆದು ಒಟ್ಟಿಗೆ ಕೆಲಸಮಾಡುವಂತೆ ಅಳವಡಿಸಿದ ಹಲವು ಕಪ್ಪಿಗಳು : ಕಪ್ಪಿತಂಡ. S. of philosophy ಪರಸ್ಪರ ಹೊಂದಿಸಿದ ತತ್ತ್ವಗಳ ಸಮುದಾಯ : ದರ್ಶನ ಪದ್ಧತಿ. Mountain s. ಪರ್ವತ ವ್ಯೂಹ. River s. (ಉಪನದಿಗಳೊಡನೆ ಕೂಡಿದ) ನದಿಯ ವ್ಯೂಹ ; (ಒಂದು ದೇಶದ) ನದಿಗಳು, ನದೀಪ್ರಸಾರ, ನದೀವ್ಯೂಹ. Railway s. (ಶಾಖೆಗಳೊಡನೆ ಕೂಡಿದ) ರೈಲುಮಾರ್ಗದ ವ್ಯೂಹ ; (ಒಂದು ದೇಶದ) ರೈಲುಮಾರ್ಗಗಳು, ರೈಲುಮಾರ್ಗ ವ್ಯವಸ್ಥೆ, ರೈಲುಮಾರ್ಗ ವ್ಯೂಹ. Solar s. ಸೂರ್ಯ ಮತ್ತು ಅದರ ಗ್ರಹಗಳು: ಸೌರವ್ಯೂಹ. Nervous, muscular, s. ನರ, ಸ್ನಾಯು,—ವ್ಯೂಹ. Digestive s. ಜೀರ್ಣ ಕಾರ್ಯಕ್ಕೆ ಸಂಬಂಧಿಸಿದ ಅಂಗಗಳು ; ಜೀರ್ಣಾಂಗವ್ಯೂಹ, ಪಚನಾಂಗ ವ್ಯೂಹ. The s. ದೇಹ, ಮೈ, ಪ್ರಕೃತಿ (The poison has passed into the s.). Ptolemaic s. ಟಾಲಮಿಯ—ಪದ್ಧತಿ, ಸಿದ್ಧಾಂತ]; ಮಾರ್ಗ, ರೀತಿ, ವಿಧಾನ, ಪದ್ಧತಿ, ಕ್ರಮ, ಸರಣಿ, ವರ್ಗೀಕರಣ (ತತ್ತ್ವ) [S. of government ಸರ್ಕಾರದ ಪದ್ಧತಿ ; ರಾಜ್ಯಪದ್ಧತಿ. Lacks, works with, s. ಒಂದು ಕ್ರಮವಿಲ್ಲ, ಕ್ರಮ ಹಿಡಿದು ಕೆಲಸ ಮಾಡುತ್ತದೆ. Linnaean, natural, etc., s. (ಸಸ್ಯಗಳ ವಿವಿಧ ಮಾರ್ಗದ ವರ್ಗೀಕರಣ)]. **Systemátic** —ಮ್ಯಾಟಿಕ್ (ಗು.) ಕ್ರಮಬದ್ಧ, ವ್ಯವಸ್ಥಿತ, ಕಟ್ಟುಪಾಡುಳ್ಳ, ಪದ್ಧತಿಯ(ನುಸರಿಸುವ), ಯೋಜನೆ ಮಾಡಿದ, ಉದ್ದೇಶಪೂರ್ವಕ (S. worker, insolence). **Systemátically** (ಕ್ರಿ. ವಿ.) ; **Sýstematism** (ನಾ.) ಕ್ರಮಬದ್ಧತೆ, ವ್ಯವಸ್ಥಾನುಸರಣೆ. **Sýstematist** (ನಾ.) ; **Sýstematize** (ಕ್ರಿ. ಸಕ.) ಕ್ರಮಕ್ಕೆ, ಪದ್ಧತಿಗೆ, ವ್ಯವಸ್ಥೆಗೆ, —ತರು ; ಕ್ರಮಬದ್ಧ, ವ್ಯವಸ್ಥಿತ, —ಮಾಡು. **Systematizátion** (ನಾ.) ; **Sýstematizer** (ನಾ.) ; **Sýstemless** (ಗು.) ; **Systémic** (ಗು.) (ಶ. ವಿ.) (ಒಂದು ಭಾಗಕ್ಕಲ್ಲದೆ) ಒಟ್ಟು ದೇಹಕ್ಕೆ ಸಂಬಂಧಿಸಿದ. **Systémically** (ಕ್ರಿ. ವಿ.)

Sýstole ಸಿಸ್ಟೊಲೆ(ಲಿ) (ನಾ.) (ಶ. ವಿ.) (ಹೃದಯ, ಮೊ. ಗಳ ವ್ಯಾಕೋಚನಾನಂತರ ನಡೆಯುವ) ಸಂಕೋಚನ, ಕುಗ್ಗು. **Systólic** ಸಿಸ್ಟಾಲಿಕ್ (ಗು.)

Sýstyle ಸಿಸ್ಟೈಲ್ (ಗು.) ಒಂದಕ್ಕೊಂದು ಹತ್ತಿರವಿರುವ ಕಂಬಗಳುಳ್ಳ ; ದಟ್ಟಗಂಬಗಳ.

Sýstylous ಸಿಸ್ಟಿಲಸ್ (ಗು.) (ಸ. ವಿ.) ಒಟ್ಟುಗೂಡಿದ ಶಲಾಕೆಗಳುಳ್ಳ ; ಸಂಯುಕ್ತ ಶಲಾಕೆಯ.

Sýzygy ಸಿಸಿಜಿ (ನಾ.) (ಖ. ವಿ.) (ಆಕಾಶಸ್ಥ ಕಾಯಗಳ) ಯೋಗ, ಯುತಿ, ಸಮಾಗಮ, (ಅಥವಾ) ಪ್ರತಿಯೋಗ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

T

T ಟೀ. ಇಂಗ್ಲಿಷ್ ವರ್ಣಮಾಲೆಯ ಇಪ್ಪತ್ತನೆಯ ಅಕ್ಷರ. T ಆಕಾರದ ವಸ್ತು [(ಮು., ವಿಶೇಷಣ ಪ್ರ.): T.-bandage, -bar, -bolt, -joint, -pipe. T-square (Square ನೋಡಿ)]. Suits me to a T ನನಗೆ ಸರಿಯಾಗಿ, ಚಚ್ಚೌಕವಾಗಿ, ಹೊಂದುತ್ತದೆ. Hit it off to a T ಚಾಚೂ ತಪ್ಪದಂತೆ ಒಪ್ಪು, ನಡಸು, ನಿರ್ವಹಿಸು. Cross the T's (ಅನೇಕ ವೇಳೆ ಅವಸರದ ಬರವಣಿಗೆಯಲ್ಲಿ ಬಿಟ್ಟುಬಿಡುವ) t ಅಕ್ಷರದ ಅಡ್ಡಗೀಟು ಎಳೆ; (ರೂಪ.) ಸಣ್ಣ ಪುಟ್ಟ ಲೋಪಗಳನ್ನು ಸರಿಪಡಿಸು; ಸಣ್ಣ ಅಂಶವನ್ನೂ ಒತ್ತಿಹೇಳು.

ಸಂಕ್ಷಿಪ್ತಗಳು: **T.C.** (Tank Corps) (ಯುದ್ಧದ) ಟ್ಯಾಂಕು ದಳ. **T.F.** (Territorial Force) ಪ್ರಾಂತೀಯ ಸೇನಾಬಲ. **T.R.C.** (Thames Rowing Club). **T.R.H., T.S.H.** (Their Royal, Serene, Highnesses) (ದೊರೆಗಳ ಒಕ್ಕಣೆಗಳು). **T.B.** (Torpedo-boat), **T.B.D.** (Torpedo-boat destroyer) (Torpedo ನೋಡಿ). **T.U.C.** (Trade Union Congress). **T.C.D.** (Trinity College, Dublin). **T.O.** (Turn over) (ಹಿಂ)ತಿರುಗಿಸು. **t. & o.** (Taken & offered) (ಪಂಥದಲ್ಲಿ)

Temp. (ಆ ಪದ ನೋಡಿ). **Tim.**(othy), **Tit.**(us) ಬೈಬಲ್ಲಿನ ಹೊಸ ಒಡಂಬಡಿಕೆಯ ಪ್ರಕರಣಗಳು. **Thos** (Thomas). **TNT** (Trinitrotoluene) (ಆ ಪದ ನೋಡಿ). **trs.** (Transpose)

Ta ಟಾ (ವಾಕ್ಯ ಮತ್ತು ನಾ.) (ಮಕ್ಕಳ ಮಾತು; ಬಳ. ಮಾ.) = Thank you (Ta muchly. Must say ta)

Tab ಟ್ಯಾಬ್ (ನಾ.) (ಅಲಂಕಾರಕ್ಕಾಗಿ, ಹಿಡಿದುಕೊಳ್ಳುವುದಕ್ಕಾಗಿ ಅಥವಾ ತೂಗಹಾಕುವುದಕ್ಕಾಗಿ) ಒಂದರ ಭಾಗವಾಗಿ ಸೇರಿಸಿರುವ ಪಟ್ಟಿ; ಉಡುಪು, ಮೊ. ರ ಸಣ್ಣ ತೆರೆಪಟ್ಟಿ, (ಮುಚ್ಚಳ)ಪಟ್ಟಿ, ಬಿಗಿಪಟ್ಟಿ, ಜೋಲುಪಟ್ಟಿ (ಉದಾ., ಮೋಜಿನ ದಾರದ ತುದಿಯ ಲೋಹದ ಕಟ್ಟು); ಟೋಪಿಯ ಪಕ್ಕದಲ್ಲಿ ಕಿವಿಯನ್ನು ಮುಚ್ಚುವುದಕ್ಕಾಗಿರುವ ಜೋಲು ತುಂಡು: ಕಿವಿಮುಚ್ಚಿಗೆ (= Ear-t.); (ಸೈನ್ಯ; ಸಹಾಯಕ ಅಧಿಕಾರಿಯ ಲಾಂಛನವಾದ) ಕೊರಲಪಟ್ಟಿಯ ಮೇಲಣ ಗುರುತುಪಟ್ಟಿ. (ಅಮೆ. ಸಂ., ಬಳ. ಮಾ.) ಲೆಕ್ಕ, ಲೆಕ್ಕಾಚಾರ; (ಲೆಕ್ಕ) ತಾಳೆ (Keep t. *or* tabs on ಲೆಕ್ಕ ಇಡು. ಗಮನದಲ್ಲಿಟ್ಟುಕೊ; ಕಣ್ಣಿಟ್ಟಿರು)

Tábard ಟ್ಯಾಬರ್ಡ್ (ನಾ.) (ಚರಿತ್ರೆ) ಬಡವರು ತೊಡುತ್ತಿದ್ದ (ತೋಳಿಲ್ಲದ) ಒರಟು ಮೇಲುಡುಪು; ರಕ್ಷಕ ವೀರನು (Knight) ಮೈಜೋಡಿನ ಮೇಲೆ ತೊಡುತ್ತಿದ್ದ ಮೇಲುಡುಪು; (ದೊರೆಯ ವಂಶಲಾಂಛನಗಳನ್ನು ಚಿತ್ರಿಸಿರುವ) ದೂತನ ಅಂಗಿ, ಕವಚ.

Tábaret ಟ್ಯಾಬರೆಟ್ (ನಾ.) ಪೀಠೋಪಸ್ಕರಗಳಿಗೆ ಉಪಯೋಗಿಸುವ ಒಂದು ಬಗೆಯ ಬಟ್ಟೆ.

Tabasheér, -shir ಟ್ಯಾಬಷಿಯರ್, —ಷೀರ್ (ನಾ.) ಬಿದಿರಿನ ಗಿಣ್ಣುಗಳಲ್ಲಿ ದೊರೆಯುವ, ಪೌರಸ್ತ್ಯ ದೇಶಗಳಲ್ಲಿ ಔಷಧಕ್ಕೆ ಉಪಯೋಗಿಸುವ, ಒಂದು ಬಗೆಯ ಕ್ಷೀರಸ್ಫಟಿಕ: ತವಕ್ಷೀರ; ಬಿದಿರುಪ್ಪು (= Bamboo salt)

Tábby ಟ್ಯಾಬಿ (ನಾ., ಕ್ರಿ. ಸಕ.) ತರಂಗ ಗುರುತುಗಳುಳ್ಳ (ಮು., ರೇಷ್ಮೆಯ) ಬಟ್ಟೆ (ಅನೇಕ ವೇಳೆ ವಿಶೇಷಣವಾಗಿ ಪ್ರ.); (ಮು., ಬೂದು ಅಥವಾ ನಸುಗಂದು ಬಣ್ಣದ ಒಡಲನ ಮೇಲೆ) ಕಪ್ಪು ಬಣ್ಣದ ಪಟ್ಟೆಗಳುಳ್ಳ ಅಥವಾ ಚುಕ್ಕಿಗಳುಳ್ಳ ಬೆಕ್ಕು: ಕಪ್ಪುಪಟ್ಟೆ ಬೆಕ್ಕು, ಕಪ್ಪು ಚುಕ್ಕಿ ಬೆಕ್ಕು (= T. cat); (ಮು., ಹೆಣ್ಣು) ಬೆಕ್ಕು. ಗೊಡ್ಡು ಹರಟೆಯ (ಮುದಿ) ಹೆಂಗಸು (ಮು., ವೃದ್ಧಕನ್ಯೆ): ಹರಟೆಮಲ್ಲಿ; ಹಲವು ಬಗೆಯ ಪತಂಗ (= T. moth); ಒಂದು ಬಗೆಯ ಧದ್ರಗಾರೆ, ಜಲ್ಲಿಗಾರೆ. (ಕ್ರಿ.) (ಬಟ್ಟೆಗೆ) ತರಂಗ ರಚನೆ, ತರಂಗದ ತೋರ್ಕೆ, —ಕೊಡು.

Tabefáction ಟ್ಯಾಬೆಫ್ಯಾಕ್ಷನ್ (ನಾ.) ರೋಗ ಕಾರಣದಿಂದ ದೇಹ ನವೆಯುವುದು; ದೇಹ ಕ್ಷಯ.

Táberdar ಟ್ಯಾಬರ್ಡಾರ್ (ನಾ.) ಆಕ್ಸ್‌ಫರ್ಡ್ ವಿ.ವಿ.ನಿ.ದ ಕ್ವೀನ್ಸ್ ಕಾಲೇಜಿನ ವಿದ್ಯಾರ್ಥಿ.

Tábernacle ಟ್ಯಾಬರ್‌ನ್ಯಾಕ್‌ಲ್ (ನಾ., ಕ್ರಿ.) (ಬೈಬಲ್ ಪ್ರ.) ಸಾ., ಲಘುವಾಗಿ ಕಟ್ಟಿದ, ಕಾಯಮ್ಮಾದ ಅಥವಾ ತಾತ್ಕಾಲಿಕ ವಾಸಸ್ಥಳ, ವಸತಿ; ಪರ್ಣಶಾಲೆ, ಗುಡಿಸಲು, ಚಪ್ಪರ, ಡೇರೆ, ಗುಡಾರ; (ರೂಪ.) ಮನುಷ್ಯ ದೇಹ; [Feast of Tabernacles (ಯೆಹೂದ್ಯರು ದೇಶ ಭ್ರಷ್ಟರಾಗಿ ಕಾಡಿನಲ್ಲಿ ಗುಡಾರಗಳಲ್ಲಿ ವಾಸಮಾಡಿದ್ದರ ಸ್ಮಾರಕವಾಗಿ) ಶರತ್ಕಾಲದಲ್ಲಿ ನಡಸುವ ಯೆಹೂದ್ಯರ ಒಂದು ಹಬ್ಬ: ಗುಡಾರದ ಹಬ್ಬ]. (ಯೆಹೂದ್ಯ ಚರಿತ್ರೆ) ಯೆಹೂದ್ಯರು ಕಡೆಗೆ ಪ್ಯಾಲೆಸ್ಟೈನಿನಲ್ಲಿ ನೆಲಸುವ ಮೊದಲು ಆರಾಧನ ಮಂದಿರವಾಗಿ ಉಪಯೋಗಿಸಿದ ಗುಡಾರ: ಆರಾಧನ ಗುಡಾರ; (ಅನೇಕ ವೇಳೆ ತಿರಸ್ಕಾರ ಪ್ರ.) ಸಾರ್ವಜನಿಕ ಪೂಜಾಸ್ಥಾನ, ಪೂಜಾಮಂದಿರ. ಪವಿತ್ರಮಾಡಿದ ರೊಟ್ಟಿಯನ್ನಿಡುವ ಪಾತ್ರೆ ಅಥವಾ ಪವಿತ್ರ ಮಾಡಿದ ವಸ್ತುಗಳನ್ನಿಡುವ ಅಲಂಕಾರದ ಸಂಪುಟ: ಪವಿತ್ರ ಸಂಪುಟ. (ವಾ. ಶಾ.) ಚಿತ್ರಕೆಲಸದ ವಿತಾನವುಳ್ಳ, (ವಿಗ್ರಹವಿಡುವ) ಗೂಡು, ಗೋಪುರ [T.-work ಇಂಥ ಗೂಡುಗಳ ಪಂಕ್ತಿ; ಇಂಥ ಗೂಡುಗಳ ಅಲಂಕಾರ ರಚನೆ: ಗೂಡಲಂಕಾರ (ಕೆಲಸ), ಗೋಪುರಾಲಂಕಾರ (ಕೆಲಸ). (**Tábernacled,** ಗು.)]. ಸೇತುವೆಗಳ ಕೆಳಗೆ ಹೋಗುವಾಗ ದೋಣಿಯ ಕೀಲಿಸಿದ ಕೂವೆಯನ್ನು ತಗ್ಗಿಸಲು ಅನುಕೂಲಿಸುವ ಎತ್ತರಿಸಿದ ಕುಳಿ ಅಥವಾ ಮೋಟು ಕೀಲು ಹಲಗೆ ಜೋಡಿ: ಕೂವೆಯ ಕೀಲು ಪೀಠ. (ಕ್ರಿ.) (ರೂಪ.) ಆಶ್ರಯಕೊಡು; ತಾತ್ಕಾಲಿಕವಾಗಿ, ಹಂಗಾಮಿಯಾಗಿ, —ವಾಸಮಾಡು, ವಸತಿ ಮಾಡು. **Tabernácular** (ಗು.)

Tábes ಟೇಬೀಸ್ (L) (ನಾ.) (ವೈ. ಶಾ.) ಕ್ಷಯ(ರೋಗ) [Dorsal t. ಮಿದುಳುಬಳ್ಳಿಯ ಕ್ಷಯರೋಗ; = Locomotor Ataxy (Ataxy ನೋಡಿ)]. **Tabétic** ಟಬೆಟಿಕ್ (ಗು., ನಾ.) (ಮು., ಮಿದುಳುಬಳ್ಳಿಯ) ಕ್ಷಯದ, ಕ್ಷಯ ಹಿಡಿದ. (ನಾ.) ಕ್ಷಯರೋಗಿ. **Tabéscence** (ನಾ.); **Tabéscent** (ಗು.); **Tábic** ಟ್ಯಾಬಿಕ್ (ಗು.) = Tabetic. **Tábid** ಟ್ಯಾಬಿಡ್ (ಗು.) ಕ್ಷಯರೋಗ—ಹಿಡಿದ, ಉಂಟುಮಾಡುವ; ರೋಗದಿಂದ ಕೃಶವಾಗಿ ಹೋದ. **Tábidly** (ಕ್ರಿ. ವಿ.); **Tábitude** (ನಾ.) ಕ್ಷಯರೋಗ ಸ್ಥಿತಿ.

Tabétic, etc. Tabes ನೋಡಿ.

Tábinet ಟ್ಯಾಬಿನೆಟ್ (ನಾ.) ತೆರೆಯಿಡಿದ, ತರಂಗ ರಚನೆಯ, —ರೇಷ್ಮೆ ಮಿಶ್ರಣದ ಉಣ್ಣೆಯ ಬಟ್ಟೆ.

Táblature ಟ್ಯಾಬ್ಲಟ್ಯು(ಚ)ರ್ (ನಾ.) (ಪ್ರಾಚೀ. ಪ್ರ.) ಮಾನಸಿಕ ಚಿತ್ರ; ಕಣ್ಣಿಗೆ ಕಟ್ಟಿದಂತಿರುವ ವರ್ಣನೆ; ವಿಶದ ವರ್ಣನೆ.

Táble ಟೇಬ್‌ಲ್ (ನಾ., ಕ್ರಿ. ಸಕ.) ಮೇಜು [Breakfast, luncheon, dinner, tea, supper, -t. At t. ಊಟಮಾಡುತ್ತಿರುವಾಗ; ಭೋಜನದ ವೇಳೆಯಲ್ಲಿ (Refused to talk politics at t.). Under the t. (ಮು., ಊಟವಾದ ಮೇಲೆ) ಕುಡಿದು ಮೇಜಿನ ಕೆಳಗೆ ಬಿದ್ದು]. ಭೋಜನ ಗೋಷ್ಠಿ (Kept the t. amused); ಭೋಜನ, ಆಹಾರ, ಊಟ (Keeps a good t. ನಿತ್ಯವೂ ಅವನ ಮನೆಯಲ್ಲಿ ಸೊಗಸಾದ ಭೋಜನವಾಗುತ್ತದೆ. Expenses of his t. ಅವನ ಊಟದ ವೆಚ್ಚ). 'ಬ್ಯಾಕ್ ಗ್ಯಾಮನ್' ಆಟದ ಮಡಿಚು ಮೇಜಿನ ಪ್ರತಿ ಅರ್ಧ ಭಾಗ. [Billiard-t. ಬಿಲಿಯರ್ಡ್ಸ್ ಆಟದ ಮೇಜು (ಹಸುರು ಬನಾತು ಬಟ್ಟೆ ಮುಚ್ಚಿದ ಸ್ಲೇಟಿನ ಮೇಲ್ಭಾಗವುಳ್ಳದ್ದು). Lord's, Round[1], Toilet-, t. (ಆಯಾ ಪದ ನೋಡಿ); Dressing-t. (Dress[1] ನೋಡಿ); Knee-hole t. (Knee ನೋಡಿ)]. ಕೆಲಸ ಮಾಡಬೇಕಾದ ಪದಾರ್ಥವನ್ನು ಮೇಲೆ ಜೋಡಿಸಿ ಇಡುವ, ಅನೇಕ ವೇಳೆ ಚಲಿಸಲಾಗುವ ಮತ್ತು ಸಾ., ಮೇಲ್ಮೈಮೇಲೆ T ಆಕಾರದ ಕಂಡಿಗಳುಳ್ಳ, ಯಂತ್ರಸಲಕರಣೆಯ ಚಪ್ಪಟೆ ಭಾಗ: ಯಂತ್ರ ಸಲಕರಣೆಯ ಮೇಜು ಭಾಗ. (ಮರ, ಕಲ್ಲು, ಮೊ. ಗಳ) ಹಲಗೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಫಲಕ, ಚಪ್ಪಡಿ ; ಇದರಮೇಲಿರುವ ಲೇಖನ, ಲಿಖಿತ ವಿಷಯ : ಫಲಕ ಲೇಖನ, ಹಲಗೆ ಬರಹ [ಮು., The two tables *or* the tables of the law *or* covenant *or* testimony (ದೇವರು ಮೋಸೆಸ್ಸಿಗೆ ಕೊಟ್ಟ) ಹತ್ತು ಆಜ್ಞೆಗಳು, ಕಟ್ಟಳೆಗಳು. The twelve tables (ರೋಮನ್ ನ್ಯಾಯಶಾಸ್ತ್ರಕ್ಕೆ ಮೂಲಾಧಾರವಾದ, ಕ್ರಿ. ಪೂ. ೪೫೧-೦ರಲ್ಲಿ ರೋಮಿನಲ್ಲಿ ಜಾರಿಗೆ ತಂದ) ಹನ್ನೆರಡು ನ್ಯಾಯ ನಿಬಂಧನೆಗಳು]. ಮಟ್ಟಸ ಪ್ರದೇಶ, ಚಪ್ಪಟೆಯಾದ ಎತ್ತರ ಪ್ರದೇಶ ; ಪ್ರಸ್ಥಭೂಮಿ (=T.-land). (ವಾ. ಶಾ.) ಚಪ್ಪಟೆಯ, ಸಾ., ಆಯದಾಕಾರದ, ಮೇಲ್ಮೈ ; ಸಮತಲದ ಅಲಂಕಾರ ಭಾಗ; ಮು., 'ಕಾರ್ನಿಸು'. (ರತ್ನಗಳ) ಚಪ್ಪಟೆ ಮೇಲ್ಮೈ ; ಮುಖ ; ಪಟ್ಟೆ ; ಎರಡು ಚಪ್ಪಟೆ ಮುಖಗಳಿರುವ, ಎರಡು ಪಟ್ಟೆಯ, —(ಕಡೆದ) ರತ್ನ. (ಹಸ್ತ ಸಾಮುದ್ರಿಕ) ಅಂಗೈ, ಹಸ್ತ (ಮು., ವ್ಯಕ್ತಿಯ ಶೀಲಸ್ವಭಾವವನ್ನು ಅಥವಾ ಭಾಗ್ಯವನ್ನು ಸೂಚಿಸುವ ಭಾಗ) ; ತಲೆಬುರುಡೆಯ (ಎರಡು) ಎಲುಬಿನ ಪದರ(ಗಳಲ್ಲೊಂದು). ಮು., ಅಂಕಣಗಳಲ್ಲಿ ಅಣಿಗೊಳಿಸಿದ (ಅಂಕಿ ಅಂಶಗಳು, ಮಾತುಗಳು, ಮೊ. ಗಳ) ಪಟ್ಟಿ : ಕೋಷ್ಟಕ, ತಃಖ್ತೆ ; ತಃಖ್ತೆಯ(ಲ್ಲಿ ಅಡಕವಾಗಿರುವ) ವಿಷಯ [Mathematical tables (ಲಾಗರಿತಮ್ಮುಗಳು, ತ್ರಿಕೋನಮಿತಿ ಪ್ರಮಾಣಗಳು, ಮೊ. ಗಳ) ಗಣಿತದ ಕೋಷ್ಟಕಗಳು. Tables of weights & measures ತೂಕಗಳ ಮತ್ತು ಅಳತೆಗಳ ಕೋಷ್ಟಕಗಳು. Knows his multiplication tables up to 12 times 12 ಅವನಿಗೆ ೧೨×೧೨ ವರೆಗೂ ಮಗ್ಗಿ ಬರುತ್ತದೆ. T. of (prohibited) degrees (Degree ನೋಡಿ). T. of contents (Content[1] ನೋಡಿ). Lay, lie, on the t. (ಪಾರ್ಲಿಮೆಂಟು, ಮೊ. ಗಳಲ್ಲಿ ; ಯೋಜನೆ, ವರದಿ) ಅನಿರ್ದಿಷ್ಟ ಕಾಲದವರೆಗೆ—ಮುಂದೆ ಹಾಕು, ಮುಂದೆ ಹಾಕಲ್ಪಡು. Turn the tables (on person) (ಎದುರಾಳಿಯ ಅಥವಾ ಎದುರು ಪಕ್ಷದ) ಸ್ಥಿತಿಯನ್ನು ವಿಪರ್ಯಾಸಮಾಡು ; ಸಂದರ್ಭವನ್ನು ಎದುರಾಳಿಯ ಮೇಲೆಯೇ ತಿರುಗಿಸು ; (ಮು.) ಕೆಳಗೈಯಾಗಿದ್ದುದು ಹೋಗಿ ಮೇಲುಗೈ ಮಾಡಿಕೊ]. **T.-beer** ಊಟದ ಕಾಲದ ಬಿಯರ್ ಮದ್ಯ. **T.-book** ಅಲಂಕಾರಕ್ಕಾಗಿ ಮೇಜಿನಮೇಲಿರಿಸುವ ಸಾ., ಸಚಿತ್ರ ಪುಸ್ತಕ : ಮೇಜಲಂಕಾರದ ಪುಸ್ತಕ. **T.-clamp** ವಸ್ತುವನ್ನು ಮೇಜಿಗೆ ಬಿಗಿಸುವ ಹಿಡಿಕೆ : ಮೇಜು ಹಿಡಿಕೆ. **T.-cloth, -cover** ಮೇಜುಬಟ್ಟೆ (ಊಟದ ಹೊತ್ತಿನಲ್ಲಿ ಬಿಳಿಯದು, ಉಳಿದ ಕಾಲಗಳಲ್ಲಿ ಬಣ್ಣದ್ದು ಅಥವಾ ಚಿತ್ರದ್ದು). **T.-cut** (ರತ್ನ) ಚಪ್ಪಟೆ ಮೇಲ್ಮುಖ ಕೊಟ್ಟು ಕಡೆದ. **T.-flap** ಮೇಜಿಗೆ ಕೀಲಿಸಿದ, ಉಪಯೋಗಿಸದೆ ಇರುವಾಗ ಕೆಳಕ್ಕೆ ಇಳಿಯಬಿಡಲಾಗುವ, ಮಡಿಚು ಹಲಗೆ : ಮೇಜಿನ ಮಡಿಚು ಹಲಗೆ. **T.-knife** ಊಟಕ್ಕೆ ಉಪಯೋಗಿಸುವ ಚಾಕು ; ಮೇಜಿನ, ಊಟದ, —ಚಾಕು. **T.-land** ಮಟ್ಟಸವಾದ ಮೇಲ್ಮೈಯುಳ್ಳ, ಹರವಾದ ಮತ್ತು ಎತ್ತರವಾದ ಪ್ರದೇಶ : ಪ್ರಸ್ಥಭೂಮಿ. **T.-leaf** ಮೇಜಿನ ಉದ್ದವನ್ನು ಹೆಚ್ಚಿಸಲು ಮೇಜಿನ ಮೇಲ್ಭಾಗದಲ್ಲಿ ಒಳಜೋಡಿಸಬಹುದಾದ ಹಲಗೆ: ಮೇಜಿನ ಹೆಚ್ಚು ಹಲಗೆ; =T.-flap. **T.-lifting, -moving, -rapping, -tipping, -turning** (ಪ್ರೇತವ್ಯವಹಾರದ ಘಟನೆಯಾಗಿ) ಮೇಜು—ಎತ್ತುವುದು, ಚಲನೆ, ತಟ್ಟು(ವುದು), ಉರುಟಿಸುವುದು, ತಿರುಗಿಸುವುದು. **T.-linen** ಮೇಜು—ಬಟ್ಟೆ, ಚೌಕ. **T.-money** ಭೂ ಮತ್ತು ನೌಕಾ ಸೈನ್ಯಗಳ ಮೇಲಧಿಕಾರಿಗಳು ಅಧಿಕಾರ ಸಂಬಂಧದಿಂದ ಆತಿಥ್ಯ ನಡೆಸುವ ವೆಚ್ಚಕ್ಕಾಗಿ ಅವರಿಗೆ ಕೊಡುವ ಭತ್ಯ : ಆತಿಥ್ಯದ ಭತ್ಯ ; ಊಟದ ಮನೆಯ ಉಪಯೋಗಕ್ಕಾಗಿ ಸಂಘದ ಸದಸ್ಯರು (ಊಟದ ವೆಚ್ಚವಲ್ಲದೆ ಹೆಚ್ಚಿಗೆ) ಕೊಡಬೇಕಾದ ರುಸುಮು : ಊಟದ ಮನೆಯ ರುಸುಮು, ತೆರ. **T.-spoon** (Spoon[1] ನೋಡಿ). **T.-talk** ಊಟದ ಹರಟೆ, ಭೋಜನ (ಗೋಷ್ಠಿಯ) ಸಲ್ಲಾಪ (ಅನೇಕ ವೇಳೆ ಪುಸ್ತಕದ ಹೆಸರಾಗಿ ಪ್ರ.). **T.-tomb** (ರೋಮನ್ ಸಮಾಧಿ ಸುರಂಗಗಳಲ್ಲಿ) ಚಪ್ಪಟೆ ಮೇಲುಭಾಗದ, ಪೆಟ್ಟಿಗೆಯಂಥ ಗೋರಿ : ಮೇಜುಗೋರಿ. **T.-ware** (ತಟ್ಟೆ, ಬಟ್ಟಲು, ಚಮಚ, ಚಾಕು, ಮೊ.) ಊಟದ ಮೇಜಿನ ಪಾತ್ರೆ ಪರಿಕರ. **T.-water** ಊಟದ ವೇಳೆಯಲ್ಲಿ ಕುಡಿಯಲು ಉಪಯೋಗಿಸುವ, ಸೀಸೆಗಳಲ್ಲಿ ತುಂಬಿಟ್ಟ ಖನಿಜ ಜಲ : ಊಟದ ನೀರು. **Tábleful** (ನಾ.) ಮೇಜು ತುಂಬು.

Táble (ಕ್ರಿ.) (ಸೂಚನೆ, ಮಸೂದೆ, ಮೊ. ಗಳನ್ನು ಶಾಸನ ಸಭೆಯಲ್ಲಿ) ಚರ್ಚೆಗೆ, ಪರ್ಯಾಲೋಚನೆಗೆ, —ತರು, ಮುಂದಿಡು ; ಮೇಜಿನಮೇಲಿಡು ; ತಃಖ್ತೆಮಾಡು. (ಮರಗೆಲಸ) ಎರಡು ಮರದ ತುಂಡುಗಳು ಎಡೆ ಕದಲದೆ ಇರುವುದಕ್ಕಾಗಿ ಪರ್ಯಾಯವಾಗಿ ಒಂದರ ಉಬ್ಬುಗಳು ಮತ್ತೊಂದರ ಗಾಡಿಗಳಲ್ಲಿ ಜೋಡಣೆಗೊಳ್ಳುವಂತೆ ಒಟ್ಟು ಕೂಡಿಸು: ಉಬ್ಬು ಗಾಡಿ ಜೋಡಣೆಮಾಡು; ಅಗಲವಾದ ಮಡಿಕೆಯಂಚಿಟ್ಟು (ಹಾಯಿಯನ್ನು) ಬಲಪಡಿಸು. **Tábling** (ನಾ.)

Tábleau ಟ್ಯಾಬ್ಲೋ (ನಾ., ಬ. ವ. -eaux —ಬ್ಲೋಸ್) ಕಣ್ಣಿಗೆ ಕಟ್ಟುವಂಥ, ಯಥಾ ಚಿತ್ರ, —ಪ್ರದರ್ಶನ, ದೃಶ್ಯ, ನಿರೂಪಣ ; (ಮು.) ಒಂದು ದೃಶ್ಯವನ್ನು ಪ್ರದರ್ಶಿಸುವಂತೆ ಉಚಿತ ಭಂಗಿಗಳಲ್ಲಿರುವ ಮೌನವಾದ ಮತ್ತು ಚಲನೆಯಿಲ್ಲದ ನಟರ ತಂಡ : ನಿಶ್ಚಲ (ಮೂಕ) ದೃಶ್ಯ ; ಚಿತ್ರದ ವ್ಯಕ್ತಿಯಂತೆ ನಿಶ್ಚಲವಾಗಿ ಒಂದು ಭಂಗಿಯಲ್ಲಿರುವ ಜೀವಂತ ವ್ಯಕ್ತಿ : ಚಿತ್ರಪ್ರಾಯ ವ್ಯಕ್ತಿ [=T. vivant (F) ಜೀವಂತ ಚಿತ್ರ] ; ತಟ್ಟನೆ ತಂದುಹಾಕಿದ, ಸಂಘಟಿಸಿದ, ನಾಟಕೀಯ ಅಥವಾ ಪರಿಣಾಮಕಾರಿ ಸನ್ನಿವೇಶ ; (ಭಾವ. ಅವ್ಯ. ; ಘಟನೆಯ ವರ್ಣನಾನಂತರ ಪ್ರ.) ದೃಶ್ಯವನ್ನು ಚಿತ್ರಿಸಿಕೊ ! **T. curtains** (ನಾಟಕಶಾಲೆ) ಸಾಮಾನ್ಯವಾಗಿ ಉಪಯೋಗಿಸುವ ಬೀಳು ತೆರೆಗೆ ಬದಲಾಗಿ, ಎರಡು ಕಡೆಯಿಂದಲೂ ಅಡ್ಡನಾಗಿ ಎಳೆದು ರಂಗದ ಮಧ್ಯ ಭಾಗದಲ್ಲಿ ಕೂಡಿಸುವ ಜೋಡಿ ತೆರೆ : ಕೂಡು ತೆರೆ(ಗಳು)

Table d'hote ಟಾಬ್(ಬ್ಲ) ಡೋಟ್, ಟಾಬ್‌ಲ್ — (ನಾ.) (ಹೋಟೆಲಿನಲ್ಲಿ) ಗಿರಾಕಿಗಳು ಒಟ್ಟಾಗಿ ಊಟಮಾಡುವ ಸಾಮಾನ್ಯ ಮೇಜು : ಗಿರಾಕಿಗಳ ಕೂಡೂಟದ ಮೇಜು. **T. dinner** (ಹೋಟಲು, ಮೊ. ಗಳಲ್ಲಿ) ಗೊತ್ತಾದ ವೇಳೆಗೆ ಗೊತ್ತಾದ ಬೆಲೆಗೆ ಹಾಕುವ ಊಟ : ನಿಗದಿ ಊಟ.

Táblet ಟ್ಯಾಬ್ಲೆಟ್ (ನಾ.) (ಬರೆಯುವುದಕ್ಕೆ ಉಪಯೋಗಿಸುವ, ದಂತ, ಮರ, ಮೊ. ಗಳ) (ತೆಳು) ಹಲಗೆ, ಫಲಕ (ಮು., ಒಟ್ಟುಕೂಡಿಸಿರುವ ತಂಡದಲ್ಲಿನ ಒಂದು ಫಲಕ); (ಸಾ., ಬ. ವ.ದಲ್ಲಿ) ಇಂಥ ಫಲಕಗಳ ತಂಡ, ಫಲಕ ಕಟ್ಟು. ಶಾಸನ ಕೆತ್ತುವ, ಕೆತ್ತಿರುವ, —ಶಿಲಾಫಲಕ, ಕಲ್ಲು ; ಶಾಸನ ಫಲಕ (Votive t. ಹಡಗು ನಾಶದಿಂದ ಅಥವಾ ಇತರ ಮರಣ ಸಂಭವದಿಂದ ಪಾರಾದವರು ಹರಕೆ ಸಲ್ಲಿಸಲು ರೋ. ಕ್ಯಾ. ಕ್ರೈಸ್ತ ದೇವಾಲಯಗಳ ಗೋಡೆಗಳಲ್ಲಿ ಇಡುತ್ತಿದ್ದ, ಅವರು ಹಾಗೆ ಆಪತ್ತಿನಿಂದ ಪಾರಾದ ಅಂಶವನ್ನು ಉಲ್ಲೇಖಿಸುತ್ತಿದ್ದ ಶಾಸನ ಫಲಕ : ಹರಕೆಯ —ಫಲಕ, ಶಾಸನ). (ಔಷಧ, ಸಾಬೂನು, ಗಂಧ, ಮೊ. ಗಳ) ಬಿಲ್ಲೆ ; ಚಪ್ಪಟೆ ಮಾತ್ರೆ [=**Tábloid** ಟ್ಯಾಬ್ಲಾಯ್ಡ್ (ನಾ.) (ವ್ಯಾಪಾರ ಸ್ವಾಮ್ಯದ ಹೆಸರು) ; (ರೂಪ. ಸಹ) ಸುದ್ದಿಗಳನ್ನು ಬಹಳ ಸಂಗ್ರಹವಾಗಿ, ಸುಲಭ ಗ್ರಾಹ್ಯವಾಗಿ ಮತ್ತು ಸಾರವತ್ತಾಗಿ ಕೊಡುವ ವೃತ್ತಪತ್ರಿಕೆ: ಸುದ್ದಿಗುಳಿಗೆಗಳ ವೃತ್ತಪತ್ರಿಕೆ. (ವಿಶೇಷಣ ಪ್ರ.) ಸುದ್ದಿಗುಳಿಗೆ ಶೈಲಿಯ (T. journalism)]. ಗೋಡೆಯ ಮುಂಚಾಚಿದ ಮತ್ತು ಸಮಮಟ್ಟದ ತಲೆಕಟ್ಟಡ (=**Tablétte**)

Tabliér (F) ಟಾಬ್ಲ್ಯೇ (ನಾ.) ಹೆಂಗಸಿನ ಸಣ್ಣ ದೂಳು ಪಾವುಡ, ಮುಂಗವಚ(ದಂಥ ಉಡುಪಿನ ಭಾಗ)

Taboó ಟ(ಟಾ)ಬೂ (ನಾ., ಗು., ಕ್ರಿ. ಸಕ.) (ಪಾಲಿನೀಷಿಯನ್ನರು, ಮೊ. ರಲ್ಲಿ) ವ್ಯಕ್ತಿಯನ್ನು ಅಥವಾ ವಸ್ತುವನ್ನು ಪವಿತ್ರವೆಂದು ಅಥವಾ ಭ್ರಷ್ಟವೆಂದು ಪ್ರತ್ಯೇಕಿಸಿಡುವ ಪದ್ಧತಿ, ಕಾರ್ಯ : ನಿಷೇಧ, ಬಹಿಷ್ಕಾರ ; ಹಾಗೆ ಪ್ರತ್ಯೇಕಿಸಿಟ್ಟ ವ್ಯಕ್ತಿ ಅಥವಾ ವಸ್ತು: ಮುಟ್ಟಕೂಡದ್ದು ; ನಿಷಿದ್ಧ, ಬಹಿಷ್ಕೃತ—ವ್ಯಕ್ತಿ, ವಸ್ತು. (ಗು.) ನಿಷಿದ್ಧ, ಬಹಿಷ್ಕೃತ ; ಪವಿತ್ರ. (ಕ್ರಿ.) (ವಸ್ತು, ಪದ್ಧತಿ, ಮೊ. ನ್ನು) ನಿಷೇಧಿಸು; (ಅಧಿಕಾರಬಲದಿಂದ ಅಥವಾ ಸಾಮಾಜಿಕ ಪ್ರಭಾವದಿಂದ) ಹೊರಟ್ಟು ಮಾಡು, ಬಹಿಷ್ಕರಿಸು (The subject was tabooed ಆ ವಿಷಯವನ್ನು ನಿಷೇಧಿಸಲಾಯಿತು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tábor ಟೇಬರ್ (ನಾ.) (ಚರಿತ್ರ) (ಮು., ಒಬ್ಬನೇ ತಾನು ಊದುವ ಪಿಳ್ಳಂಗೋವಿಯ ಜೊತೆಯಲ್ಲಿ ಬಾಜಿಸುತ್ತಿದ್ದ) ಸಣ್ಣ ಡೋಲು, ತಮಟೆ.

Tábouret ಟ್ಯಾಬೊರೆಟ್, —ಬರಿಟ್ (ನಾ.) ಸಾ., ತೋಳುಗಳೂ ಬೆನ್ನೂ ಇಲ್ಲದ ಸಣ್ಣ ಪೀಠ: ಸ್ಟೂಲು. ಕಸೂತಿ ಚೌಕಟ್ಟು.

Tábula ಟ್ಯಾಬ್ಯುಲ (ನಾ., ಬ. ವ. -ae, —ಲೀ) (ಪ್ರಾಚೀನ) ಲೇಖನ ಫಲಕ, ಬರೆಯುವ ಹಲಗೆ [T. rasa (ಮತ್ತೆ ಬರೆಯಲು ಸಿದ್ಧವಾಗಿರುವ) ಅಳಿಸಿದ ಹಲಗೆ; ಸ್ವಚ್ಛ ಫಲಕ. (ರೂಪ.) ಹುಟ್ಟಿದ ಮಗುವಿನ ನಿರ್ಭಾವ ಮನಸ್ಸು, ಸ್ವಚ್ಛ ಮನಸ್ಸು]. (ಅಂ. ರ. ಶಾ.) ಎಲುಬು, ಮೊ. ಗಳ ಗಡುಸು ಚಪ್ಪಟೆ ಮೇಲ್ಮೈ, ಹಲಗೆಯಂಥ ಮೇಲ್ಮೈ. **Tábular** ಟ್ಯಾಬ್ಯುಲರ್ (ಗು.) (ಅಂಕಣ)ಪಟ್ಟಿಯ, ಕೋಷ್ಟಕದ, ತಃಖ್ತೆಯ (—ರೂಪದಲ್ಲಿ ಲೆಕ್ಕ ಮಾಡಿರುವ); (ಅಂಕಣ) ಪಟ್ಟಿ ರೂಪದ; ತಃಖ್ತೆವಾರು [A t. statement. T. values, results, computations. T. difference (ಗಣಿತದ ಕೋಷ್ಟಕಗಳಲ್ಲಿ) ಅನುಕ್ರಮ ಲಾಗರಿತಮ್ಮು ಸಂಖ್ಯೆ, ಮೊ. ಗಳ ಪರಸ್ಪರ ವ್ಯತ್ಯಾಸ: ಕೋಷ್ಟಕ ವ್ಯತ್ಯಾಸ]; (ಮುದ್ರಣ) ಪಟ್ಟಿಯ ರೂಪದಲ್ಲಿ (ಮೊಳೆ) ಜೋಡಿಸಿದ; (ಫಲಕದಂತೆ) ಅಗಲವೂ ಚಪ್ಪಟೆಯೂ ಆದ ಮೇಲ್ಮೈಯುಳ್ಳ, ಹಲಗೆಯಂಥ ಮೈಯ (T. surface); ತೆಳು ಫಲಕಗಳ ರೂಪದಲ್ಲಿರುವ, ಪದರ ಪದರವಾಗಿರುವ (T. structure). **Tábularly** (ಕ್ರಿ. ವಿ.); **Tábulate** ಟ್ಯಾಬ್ಯುಲೇಟ್ (ಕ್ರಿ. ಸಕ.), ಟ್ಯಾಬ್ಯುಲೆಟ್ (ಗು.) (ಅಂಕಿ, ಅಂಶಗಳನ್ನು) (ಅಂಕಣ) ಪಟ್ಟಿಯ ರೂಪದಲ್ಲಿ, ಕೋಷ್ಟಕವಾಗಿ,—ಇಡು, ಕಾಣಿಸು; ಪಟ್ಟಿ, ತಃಖ್ತೆ,—ಮಾಡು, ಬರೆ [**Tabulátion** (ನಾ.); **Tábulator** (ನಾ.) ಪಟ್ಟಿ —ಮಾಡುವವನು, ಮಾಡುವ ಯಂತ್ರ ಅಥವಾ ಸಲಕರಣೆ: ಪಟ್ಟಿ—ಕಾರ, ಕಾರಿ; (ಟೈಪ್‌ರೈಟರ್ ಯಂತ್ರದಲ್ಲಿ) ಅಂಕಿಗಳನ್ನು ಅಂಕಣಗಳಾಗಿ ಅಚ್ಚೊತ್ತಲು ಹಾಕಿರುವ ಜೋಡಣೆ: ಅಂಕಣಕಾರಿ]. ಚಪ್ಪಟೆ ಮೇಲ್ಮೈ ಕೊಡು, ಚಪ್ಪಟೆಮಾಡು. (ಗು.) ಚಪ್ಪಟೆ—ಮೇಲ್ಮೈಯುಳ್ಳ, ಮುಖವುಳ್ಳ; ತೆಳು ಫಲಕ ರಚನೆಯ.

Tábular, Tábulate, etc. **Tabula** ನೋಡಿ.

Táce (L) ಟೇಸೀ, ಟ್ಯಾಸೀ (ಕ್ರಿ. ಅಕ., ವಿಧಿರೂಪ) ಸುಮ್ಮನಿರು, ಗಪ್‌ಚಿಪ್ [T. is Latin for a candle (ಯಾವುದಾದರೂ ವಿಷಯವಾಗಿ ಮೌನವಾಗಿರಬೇಕೆಂದು ಹೇಳುವಲ್ಲಿ ಗುಪ್ತ ಸೂಚನೆ) = Mum[1] (ಆ ಪದ ನೋಡಿ)]

Tácet ಟೇ(ಟ್ಯಾ)ಸೆಟ್ (ಸಂ. ಸೂಚನೆ) ಮೌನವಾಗಿರಲಿ, ನುಡಿಸದಿರಲಿ (ಲ್ಯಾಟಿನ್ ಅರ್ಥ: 'ಮೌನವಾಗಿದೆ')

Tach(e) ಟ್ಯಾಚ್ (ನಾ.) (ಬೈಬಲ್ ಪ್ರ.) ಕೊಂಡಿ, ಕೊಕ್ಕೆ, ಬಂಧನಿ.

Tachómeter ಟ್ಯಾಕಾಮಿಟರ್ (ನಾ.) ವೇಗವನ್ನು ಅಳೆಯುವ ಸಲಕರಣೆ: ವೇಗಮಾಪಕ. **Tachómetry** (ನಾ.)

Tachycárdia ಟ್ಯಾಕಿಕಾರ್ಡಿಯ (ನಾ.) (ರೋಗ ನಿದಾನ) ಅತಿ ಹೃತ್ಕಂಪವೇಗ (ರೋಗ)

Tachýgraphy ಟ್ಯಾಕಿಗ್ರಫಿ (ನಾ.) (ಮು., ಪ್ರಾಚೀನ ಗ್ರೀಕರ ಮತ್ತು ರೋಮನರ) ಶೀಘ್ರಲಿಪಿ ಕಲೆ, ಸಂಕ್ಷಿಪ್ತ ಲಿಪಿ. **Tachýgrapher** (ನಾ.); **Tachygráphic(al)** (ಗು.)

Táchylyte ಟ್ಯಾಕಿಲೈಟ್ (ನಾ.) ಬಸಾಲ್ಟ್ ಅಗ್ನಿಶಿಲೆಯ ಗಾಜು ರೂಪ; ಬಸಾಲ್ಟ್ ಗಾಜು. **Tachylýtic** —ಲಿಟಿಕ್ (ಗು.)

Tachýmeter ಟ್ಯಾಕಿಮಿಟರ್ (ನಾ.) ಮೋಜಣಿಯಲ್ಲಿ ಬಾಂದುಗಳನ್ನು ಶೀಘ್ರವಾಗಿ ಗುರುತಿಸಲು ಮೋಜಣಿದಾರನು ಉಪಯೋಗಿಸುವ ಒಂದು ಮೋಜಣಿ ಸಲಕರಣೆ: ದೂರಲಕ್ಷಣ ಮಾಪಕ.

Tácit ಟ್ಯಾಸಿಟ್ (ಗು.) (ವ್ಯಕ್ತವಾಗಿ ಹೇಳದಿದ್ದರೂ) ಮೌನದಿಂದ ಸೂಚಿಸಿದ, ಅಭಿಪ್ರಾಯವಾಗುವ, ಇರುವ; ಅಧ್ಯಾಹೃತ; ಸೂಚಿತ, ಧ್ವನಿತ; ಪ್ರಕಟವಾಗಿ ಹೇಳದಿರುವ (T. consent, agreement, understanding). ಮಾತಾಡದ; ತೆಪ್ಪಗಿರುವ; ಮೌನ (T. spectator). **Tácitly** (ಕ್ರಿ. ವಿ.)

Táciturn ಟ್ಯಾಸಿಟರ್ನ್ (ಗು.) ಹೆಚ್ಚು ಮಾತನಾಡದ, ಅತಿಮೌನದ, ಮಿತಭಾಷಿ, ಗುಮ್ಮನಗುಸಕ. **Tacitúrnity** (ನಾ.)

Tack ಟ್ಯಾಕ್ (ನಾ., ಕ್ರಿ.) (ಕಬ್ಬಿಣ, ತಾಮ್ರ, ಮೊ. ಗಳಿಂದ ಮಾಡಿದ) ಚಪ್ಪಟೆ ತಲೆಯ ಸಣ್ಣ ಮೊನಚುಮೊಳೆ: ತಟ್ಟುಮೊಳೆ, ಟ್ಯಾಕ್ ಮೊಳೆ [Tin-t. ತವರದ (ಮುಲಾಮಿನ ಕಬ್ಬಿಣದ) ತಟ್ಟುಮೊಳೆ. Brass tacks (To get down to brass tacks: Brass ನೋಡಿ)]; (ಬ. ವ. ದಲ್ಲಿ) (ಹೊಲಿಗೆ ಕೆಲಸದಲ್ಲಿ ತಾತ್ಕಾಲಿಕವಾಗಿ ಕೂಡಿಸಲು ಹಾಕುವ) ದಾಟು ಹೊಲಿಗೆ(ಗಳು), (ಉದ್ದ) ಟಾಕು. (ನಾವೆ) ಕೆಲವು ಹಾಯಿಗಳ ಮೂಲೆಯನ್ನು ಬಿಗಿಯುವ ಹಗ್ಗ: (ಹಾಯಿಯ) ಮೂಲೆ ಹಗ್ಗ; ಇದು ಬಿಗಿದಿರುವ ಹಾಯಿಯ ಮೂಲೆ; (ಹಾಯಿಗಳ ಸ್ಥಾನವನ್ನವಲಂಬಿಸಿರುವ) ಹಡಗು ಚಲನೆಯ ದಿಕ್ಕು (Port, starboard, t. ಗಾಳಿ ಎಡ ಪಕ್ಕದಲ್ಲಿದ್ದಾಗ, ಬಲ ಪಕ್ಕದಲ್ಲಿದ್ದಾಗ, ಹಡಗು ಚಲಿಸುವ ದಿಕ್ಕು); (ಹಡಗು ಪ್ರಯಾಣಮಾಡುತ್ತಿರುವಾಗ ಪಕ್ಕ ಗಾಳಿ, ಮೊ. ಗಳ ಪ್ರಯೋಜನ ಪಡೆಯಲು ಮಾಡುವ ತಾತ್ಕಾಲಿಕ) ದಿಕ್ಕು ಬದಲಾವಣೆ (ಮು., ಪರ್ಯಾಯವಾಗಿ ಎಡಕ್ಕೂ ಬಲಕ್ಕೂ ಮಾಡುವ ಹಲವು ದಿಕ್ಕು ಬದಲಾವಣೆಗಳಲ್ಲೊಂದು) (T. & T. ಪರ್ಯಾಯವಾಗಿ ಎಡಕ್ಕೂ ಬಲಕ್ಕೂ ದಿಕ್ಕು ಬದಲಾವಣೆ ಮಾಡುತ್ತ, ತಿರುಗುತ್ತ). (ರೂಪ.) ಕಾರ್ಯ—ನೀತಿ, ರೀತಿ; ಧೋರಣೆ; ಮಾರ್ಗ (Must change our t. ನಮ್ಮ ಕಾರ್ಯನೀತಿಯನ್ನು, ಮಾರ್ಗವನ್ನು, —ಬದಲಾಯಿಸಬೇಕು. Am on the wrong t. ತಪ್ಪು ದಾರಿ ಹಿಡಿದಿದ್ದೇನೆ. Try another t.). = Tacking (ಶಾಸನ ಸಭೆಯ ಅರ್ಥದಲ್ಲಿ); (ಮೆರುಗೆಣ್ಣೆ, ಮೊ. ಗಳ) ಅಂಟುಸ್ಥಿತಿ, ಅಂಟಿಕೊಳ್ಳುವ ಗುಣ [**Táckiness** (ನಾ.); **Tácky** (ಗು.)]. ಆಹಾರ, ಊಟ, ತಿಂಡಿ [ಮು., Hard t. (Hard ನೋಡಿ), Soft t. ರೊಟ್ಟಿ, ಒಳ್ಳೆಯ ಊಟ]. [T.-driver ತಟ್ಟುಮೊಳೆಗಳನ್ನು ತಾನೇ ಇಟ್ಟು ಹೊಡೆಯುವ ಯಂತ್ರ: ತಟ್ಟುಮೊಳೆ ಹೊಡೆಯುವ ಯಂತ್ರ. T.-hammer (ಸಾ., ಹೊಡೆದ ಮೊಳೆಗಳನ್ನು ಕೀಳಲು ಕೊಕ್ಕೆಯಿರುವ) ತಟ್ಟುಮೊಳೆ ಸುತ್ತಿಗೆ]. (ಕ್ರಿ.) (ಜಮಖಾನೆ, ಹೆಸರುಪಟ್ಟಿ, ಮೊ. ಗಳನ್ನು) ತಟ್ಟುಮೊಳೆಗಳಿಂದ—ಬಂಧಿಸು, ಕಚ್ಚಿಸು (ಅನೇಕ ವೇಳೆ *down* ಉಪ. ದೊಡನೆ). (ಬಟ್ಟೆ, ಮೊ. ಗಳ ಭಾಗಗಳನ್ನು, ತುಂಡುಗಳನ್ನು) ಕೂಡಿಸಿ ಲಘುವಾಗಿ ಹೊಲಿ, ಟಾಕು ಹಾಕು; (ರೂಪ.) ಜೊತೆಗೆ, ಅನುಬಂಧವಾಗಿ,—ಸೇರಿಸು; ಅನುಬಂಧಿಸು (ಮು., ಶಾಸನ ಸಭೆಯಲ್ಲಿ ಹಣದ ಮಸೂದೆಗೆ ಒಳ ಪ್ರಕರಣವನ್ನು ಸೇರಿಸುವಲ್ಲಿ ಪ್ರ.) (Thing *to* or *on to* another); (ಚುಕ್ಕಾಣಿಯನ್ನು ಗಾಳಿಮರೆಯ ಪಕ್ಕಕ್ಕೆ ತಿರುಗಿಸಿ ಅಥವಾ ಹಾಯಿಗಳ ಸ್ಥಾನವನ್ನು ಬದಲಾಯಿಸಿ) (ಹಡಗಿನ) ದಿಕ್ಕು ಬದಲಾಯಿಸು (Wear[2] ನೋಡಿ); (ರೂಪ.) ವರ್ತನೆ, ಕಾರ್ಯನೀತಿ, ಮೊ. ನ್ನು ಬದಲಾಯಿಸು; ದಾರಿ ಬದಲಾಯಿಸು. **Tácker** (ನಾ.); **Tácking** (ನಾ.) (ಕ್ರಿಯಾರ್ಥಗಳಲ್ಲಿ); (ಮು.) (ನ್ಯಾ. ಶಾ.) ಮುನ್ತಿಳಿವಳಿಕೆಕೊಟ್ಟಿಲ್ಲದ ಎರಡನೆಯ ಅಡಮಾನದಮೇಲೆ ಮೂರನೆಯ ಅಥವಾ ಅದರ ತರುವಾಯದ ಅಡಮಾನಕ್ಕಿರುವ ಮುಂಚಿನ ಹಕ್ಕು: ಪೂರ್ವ ಬಾಧ್ಯತೆ; (ಶಾಸನ ಸಭೆ) (ಹಣದ ಮಸೂದೆಗಳನ್ನು ತಿದ್ದುಪಡಿ ಮಾಡುವ ಅಧಿಕಾರವಿಲ್ಲದ ಇಂಗ್ಲೆಂಡಿನ ಶ್ರೀಮಂತ ಸಭೆಯಲ್ಲಿ ಹಣದ ಮಸೂದೆಗೆ ಸಂಬಂಧಪಡದ ಒಂದು ಒಳಪ್ರಕರಣಕ್ಕೆ ಮಂಜೂರಾತಿ ಪಡೆಯುವುದಕ್ಕಾಗಿ) ಒಳ ಪ್ರಕರಣವನ್ನು ಹಣದ ಮಸೂದೆಗೆ ಅನುಬಂಧಿಸುವುದು.

Táckle ಟ್ಯಾಕ್‌ಲ್ (ನಾ., ಕ್ರಿ.) ಭಾರ ಎತ್ತುವುದು, ಹಡಗಿನ ಹಾಯಿಗಳನ್ನು ಅಥವಾ ದೂಲಗಳನ್ನು ಜೋಡಿಸುವುದು, ಮೊ. ಕ್ಕೆ ಉಪಯೋಗಿಸುವ, ಮು., ಹಗ್ಗಗಳು, ಕಪ್ಪಿತಂಡಗಳು, ಕೊಕ್ಕೆಗಳು, ಮೊ. ಗಳನ್ನುಳ್ಳ ಯಂತ್ರ ಸಲಕರಣೆ: ಕಪ್ಪಿಯೆತ್ತಿಗೆ, ಎತ್ತಿಗೆ ಸಜ್ಜು (ನಾವಿಕ ಉಚ್ಚಾರ: ಟೇಕ್‌ಲ್); ಹಗ್ಗ ಕೊಕ್ಕೆಗಳಿಂದ ಕೂಡಿದ ಉರುಳೆ ರಾಟೆ (= Windlass): ಎತ್ತಿಗೆ ಯಂತ್ರ; (ಯಾವುದಾದರೂ ಕೆಲಸಕ್ಕೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರೀಡೆಗೆ, ಬೇಕಾದ) ಸಾಧನ ಸಾಮಗ್ರಿ, ಸರಂಜಾಮು, ಸಜ್ಜು [Fishing-t. (ಗಾಳ, ದಾರ ಮತ್ತು ಕೋಲು ಕೂಡಿ) ಮೀನು ಹಿಡಿಯುವ ಸಜ್ಜು]; (ಮು., ಕಾಲ್ಚೆಂಡಾಟದಲ್ಲಿ: ಚೆಂಡು ಬಿಟ್ಟುಕೊಡುವಂತೆ ಎದುರಾಳಿಯನ್ನು) ನ್ಯಾಯಸಮ್ಮತವಾಗಿ ತಡೆದುಬಿಡುವುದು, ಹಿಡಿದು ನಿಲ್ಲಿಸುವುದು: ತಡೆಹಿಡಿತ; [T.-block (ಮೇಲೆ ಹಗ್ಗ ಹರಿಯುವ) ಕಪ್ಪಿ(ತಂಡ). T.-fall ಕಪ್ಪಿಗಳನ್ನು ಒಟ್ಟುಕೂಡಿಸುವ ಹಗ್ಗ]. (ಕ್ರಿ.) (ಕೆಲಸ, ಎಡವಟ್ಟು, ತೊಂದರೆ, ಸಮಸ್ಯೆ, ಮೊ. ನ್ನು) ನಿರ್ವಹಿಸಲು ಕೈಹಚ್ಚು, ಸಾಹಸಪಡು; ಎದುರಿಸು, ನಿಭಾಯಿಸು. (ಎದುರಾಳಿಯನ್ನು) ಹಿಡಿದುಕೊಳ್ಳಲು ಸಾಹಸಪಡು, (ಎದುರಾಳಿಯೊಡನೆ) ಹೋರಾಡು (A wrestler tackles his antagonist); (ಚರ್ಚೆಯಲ್ಲಿ, ವಾದದಲ್ಲಿ) ಮಲ್ಲಾಮಲ್ಲಿಯಾಗಿ —ಹೋರಾಡು, ಪ್ರತಿಭಟಿಸು; (ಕಾಲ್ಚೆಂಡಾಟ) (ಚೆಂಡಿನೊಡನೆ ಓಡುತ್ತಿರುವ ಆಟಗಾರನನ್ನು) ತಡೆಗಟ್ಟು; (ಕುದುರೆ, ಮೊ. ನ್ನು, ಕುದುರೆಯನ್ನು ಗಾಡಿ, ಮೊ. ಕ್ಕೆ) ಸಜ್ಜಿನಿಂದ—ಬಿಗಿ, ಕಟ್ಟು. T. to (ಬಳ. ಮಾ.) ಜೋರಾಗಿ, ಹುರುಪಿನಿಂದ, —ಕೆಲಸಕ್ಕೆ ತೊಡಗು, ಕೈಹಚ್ಚು. **Tàckling** (ನಾ.)

Tact ಟ್ಯಾಕ್ಟ್ (ನಾ.) ಸಮಯಕ್ಕೆ ಯುಕ್ತವಾದುದನ್ನು ಮಾಡುವ ಅಥವಾ ಆಡುವ ತಿಳಿವಳಿಕೆ, ಗ್ರಹಿಕೆ: ಔಚಿತ್ಯ ಜ್ಞಾನ; (ಇತರರೊಡನೆ ವ್ಯವಹರಿಸುವಲ್ಲಿ) ತಕ್ಕ ರೀತಿಯಲ್ಲಿ ನಡೆದುಕೊಳ್ಳುವ ಜಾಣ್ಮೆ: ಸಮಯೋಚಿತ ನಯ; ಸಮಯೋಪಾಯ. (ಸಂ.) ತಾಳ(ದ—ಏಟು, ಹೊಡೆತ). **Táctful** (ಗು.); **Táctfully** (ಕ್ರಿ. ವಿ.); **Táctless** (ಗು.); **Táctlessness** (ನಾ.)

Táctical. Tactics ನೋಡಿ.

Táctics ಟ್ಯಾಕ್ಟಿಕ್ಸ್ (ಏ. ವ. ಅಥವಾ ಬ. ವ.) (ಮು., ಶತ್ರುವನ್ನು ಸಂಧಿಸಿದಾಗ, ಯುದ್ಧಕ್ಕೆ ತೊಡಗಿದಾಗ) ಸೈನಿಕ ಅಥವಾ ನಾವಿಕ ಬಲವನ್ನು ತಕ್ಕ ರೀತಿಯಲ್ಲಿ ನಿಯೋಜಿಸುವ, ಸಂಚಾಲಿಸುವ, ಮತ್ತು ವ್ಯೂಹವಾಗಿ ನಿಲ್ಲಿಸುವ ಕಲೆ: ಯುದ್ಧತಂತ್ರ, ವ್ಯೂಹರಚನೆಯ ವಿದ್ಯೆ (Strategy, Logistics ಪದಗಳೊಡನೆ ಹೋಲಿಸಿ); (ಬ. ವ. ದಲ್ಲಿ) ಕಾರ್ಯಸಾಧನೋಪಾಯ, ಯುಕ್ತಿ, ತಂತ್ರ (Cannot approve these t.). **Táctical** (ಗು.) ಯುದ್ಧತಂತ್ರದ; ವ್ಯೂಹರಚನೆಯ; —ಗೆ ಸಂಬಂಧಪಟ್ಟ; ಚಮತ್ಕಾರದಿಂದ —ಯೋಜಿಸುವ, ಯೋಜಿಸಿದ; ಉಪಾಯದ, ತಂತ್ರದ. **Táctically** (ಕ್ರಿ. ವಿ.); **Táctician** ಟ್ಯಾಕ್ಟಿಷನ್ (ನಾ.) ವ್ಯೂಹ(ರಚನಾ) ನಿಪುಣ; ತಂತ್ರಜ್ಞ.

Táctile ಟ್ಯಾಕ್‌ಟೈಲ್, —ಟಿಲ್ (ಗು.) ಸ್ಪರ್ಶೇಂದ್ರಿಯದ; ಸ್ಪರ್ಶದ; ಸ್ಪರ್ಶದಿಂದ ಗ್ರಹಿಸಿದ; ಸ್ಪರ್ಶೇಂದ್ರಿಯಕ್ಕೆ ಸಂಬಂಧಪಟ್ಟ (T. impression ಸ್ಪರ್ಶಜ್ಞಾನ. T. organ ಸ್ಪರ್ಶಾಂಗ) [**Táctual** ಟ್ಯಾಕ್ಚುಅಲ್ (ಗು.); **Táctually** (ಕ್ರಿ. ವಿ.)]. ಸ್ಪರ್ಶ—ಗ್ರಾಹ್ಯ, ವೇದ್ಯ; ಸ್ಪೃಶ್ಯ; ಸ್ಪರ್ಶನೀಯ (T. qualities). (ವರ್ಣಚಿತ್ರಕಲೆ) ಘನರೂಪ—ಪರಿಣಾಮವುಂಟುಮಾಡುವ, ಪರಿಣಾಮಕ್ಕೆ ಸಂಬಂಧಪಟ್ಟ, ಪರಿಣಾಮದ (T. values). **Tactility** (ನಾ.)

Tádpole ಟ್ಯಾಡ್‌ಪೋಲ್ (ನಾ.) (ಮೊಟ್ಟೆಯನ್ನು ಬಿಟ್ಟು ಹೊರಬಂದ ಕಾಲದಿಂದ ಕಿವಿರುಗಳೂ ಬಾಲವೂ ಬಿದ್ದುಹೋಗುವವರೆಗಿನ ಅದ್ಯವಸ್ಥೆಯ) ಕಪ್ಪೆ(ಜಾತಿ)ಯ ಗೊದಮೊಟ್ಟೆ ಮರಿ; ಬಾಲದ ಕಪ್ಪೆಮರಿ. T.-fish ಯೂರೋಪಿನ ದೊಡ್ಡ ಚಪ್ಪಟೆ ತಲೆಯ ಒಂದು ಬಗೆಯ ಮೀನು.

Taédium vítae (L) ಟೀಡಿಯಮ್ ವೈಟೀ (ನಾ.) (ರೋಗ ನಿದಾನ) ಆತ್ಮಹತ್ಯದ ಪ್ರವೃತ್ತಿಯುಳ್ಳ—ಜೀವನದ ಜುಗುಪ್ಸೆ, ಬಾಳಿನ ಬೇಸರಿಕೆ.

Tael ಟೇಲ್ (ನಾ.) ನಾಣ್ಯದ ಏಕಮಾನವಾಗಿ ಬಳಸುವ, ಮು., ಬೆಳ್ಳಿಯ, ಚೀನಾ ಔನ್ಸು ತೂಕ (೧⅓ ಆ್ಯವರ್ಡಪಾಯ್ಸ್ ಔನ್ಸಿಗೆ ಸಮನಾದದ್ದು); ಈ ಬೆಳ್ಳಿಯ ನಾಣ್ಯ; ಟೇಲು (ತೂಕ, ನಾಣ್ಯ)

Taénia ಟೀನಿಯ (ನಾ., ಬ. ವ. -ae —ನೀ) (ಅಂ. ರ. ಶಾ.) ಮು., ಮಿದುಳಿನ ಪಟ್ಟಿಯಂಥ ಭಾಗ; =Roller bandage (Roll ನೋಡಿ); ಲಾಡಿಹುಳು. (ಗ್ರೀಕ್ ಮತ್ತು ರೋಮನ್ ಪ್ರಾಚೀನ) ತಲೆಪಟ್ಟಿ; ಕೂದಲು ಕಟ್ಟು. **Taénioid** —ಆಯ್ಡ್ (ಗು.) ಪಟ್ಟಿಯಾಕಾರದ; ಲಾಡಿಹುಳುಗಳ.

Táffrail ಟ್ಯಾಫ್ರೇಲ್, **Táfferel** ಟ್ಯಾಫರೆಲ್ (ನಾ.) ಹಡಗಿನ ಹಿಂಭಾಗದ ಸುತ್ತಣ ಹಳಿ, ಕಟಕಟೆ. (-erel) ಹಡಗಿನ ಹಿಂಭಾಗದ ಮೇಲ್ಭಾಗ.

Táffy[1] ಟ್ಯಾಫಿ (ನಾ.) (ಬಳ. ಮಾ.) ವೇಲ್ಸಿನವನು, ವೆಲ್ಷರವನು.

Táffy[2]. **Toffee** ನೋಡಿ.

Tag ಟ್ಯಾಗ್ (ನಾ., ಕ್ರಿ. ಸಕ.) (ಮೋಜದ) ದಾರದ ತುದಿಗೆ ಹಾಕಿರುವ ಲೋಹದ ಮೊನೆಕಟ್ಟು: (ಮೋಜದ)ದಾರದ—ಮುಳ್ಳು, ಲೋಹಕಟ್ಟು; ಮೋಜವನ್ನು ಹಾಕಿಕೊಳ್ಳುವಾಗ ಮೇಲಕ್ಕೆ ಎಳೆಯುವುದಕ್ಕಾಗಿ ಅದರ ಬೆನ್ನತುದಿಯಲ್ಲಿರುವ ಕುಣಿಕೆ: ಮೋಜದ ಎಳೆಕುಣಿಕೆ; (ಮು., ಮೇಲೆ ಸೇರಿಸಿ ಕಟ್ಟಲಾಗುವ) ವಿಳಾಸಪಟ್ಟಿ; (ಯಾವುದಾದರೂ ವಸ್ತುವಿನ) ಜೋಲು, ಜೂಲು, —ತುದಿ, ಅಂಚು; ಕುರಿಯ ಮೈಮೇಲಿನ ಉಣ್ಣೆಯ ಬೊಂತೆಗಂಟು; ತುಂಡು, ತುಣುಕು; (ಲೇಖನ, ಭಾಷಣ, ಮೊ. ಕ್ಕೆ) ಅಲಂಕಾರಾರ್ಥವಾಗಿ ಕೊನೆಯಲ್ಲಿ ಸೇರಿಸಿದ್ದು, ಅನುಬಂಧ (ಉದಾ., ಕಥೆಯ ನೀತಿ); (ರಂಗಭೂಮಿ) (ಶ್ರೋತೃಗಳನ್ನು ಕುರಿತು ಮಾಡಿದ) ಭರತವಾಕ್ಯ; ಚರ್ವಿತ ಚರ್ವಣವಾದ, ಹಳಸಲಾದ, —ಉದಾಹರಣೆ; ನಿತ್ಯ ಬಳಕೆಯ ಮಾತು; (ಹಾಡಿನ) ಪಲ್ಲವಿ; (ಪ್ರಾಣಿಯ, ಮು., ನರಿಯ) ಬಾಲದ (ಬಿಳಿಯ) ತುದಿ; (ಒಬ್ಬನು ಇತರರನ್ನು ಹಿಡಿಯುವ) ಮಕ್ಕಳ ಒಂದು ಆಟ (Cross-, long, etc., t. ಇದರ ಬಗೆಗಳು). [**T.-rag** = Ragtag (Rag[1] ನೋಡಿ). **T.-sore** ಕುರಿಯ ಬಾಲಕ್ಕೆ ತಗುಲುವ ಒಂದು ಗುಳ್ಳೆ ರೋಗ. **Tágtail** (ಮೀನಿನ ಎರೆಯಾಗಿ ಉಪಯೋಗಿಸುವ) ಒಂದು ಬಾಲದ ಹುಳು; ಹೊಗಳುಭಟ್ಟ, ಮುಖಸ್ತುತಿಗಾರ]. (ಕ್ರಿ.) (ಮೋಜದ) ದಾರಕ್ಕೆ ಲೋಹದ ಮೊನೆ ಹಾಕು; (ಸಾಹಿತ್ಯ ಕೃತಿಗೆ) ಅನುಬಂಧ(ವಾಗಿ) ಸೇರಿಸು; (ಒಂದನ್ನು, ಮು., ಲೇಖನ ಭಾಗವನ್ನು, ಇನ್ನೊಂದಕ್ಕೆ, ಪದಾರ್ಥಗಳನ್ನು ಒಟ್ಟಿಗೆ) ಸೇರಿಸು, ಕೂಡಿಸು (Thing *to* or *on to* another, things *together*); (ಪದ್ಯಗಳಿಗೆ) ಪ್ರಾಸ—ಕೂಡಿಸು, ಹೊಂದಿಸು; ಪ್ರಾಸಗಳನ್ನು ಹೆಣೆ; (ಕುರಿಯ) ತುಪ್ಪಟದ ಬೊಂತೆಗಳನ್ನು, ಗಂಟುಗಳನ್ನು, ಕತ್ತರಿಸಿಹಾಕು; (ಬಳ. ಮಾ.) ಬಾಲದಂತೆ ಹಿಂಬಾಲಿಸು; (ಮುಟ್ಟುವ ಆಟದಲ್ಲಿ) ಮುಟ್ಟು, ಹಿಡಿ. **Tágger** (ನಾ.) (ಕ್ರಿಯಾರ್ಥದಲ್ಲಿ); (ಹಿಡಿಯುವ ಆಟದಲ್ಲಿ) ಹಿಡಿಯುವವನು; (ಬ. ವ. ದಲ್ಲಿ) ತವರ ಬಳಿದ ಅಥವಾ ಬಳಿದಿಲ್ಲದ ಕಬ್ಬಿಣದ ತೆಳು ತಗಡು (Black taggers ತವರ ಬಳಿದಿಲ್ಲದ—)

Tail[1] ಟೇಯ್ಲ್, ಟೇಲ್ (ನಾ., ಕ್ರಿ.) (ಪ್ರಾಣಿಯ) ಬಾಲ, ಲಾಂಗೂಲ; (ಹಕ್ಕಿಯ) ತೋಕೆ, ಸೋಗೆ [T. wags dog (Wag[1] ನೋಡಿ). Dog has his t. between his legs (ಅಪಾಯ ಭೀತಿಯಿಂದ ಅಥವಾ ಖಿನ್ನತೆಯಿಂದ) ನಾಯಿ ತನ್ನ ಬಾಲವನ್ನು ಕಾಲುಗಳ ಸಂದಿನಲ್ಲಿ ಮುದುಡಿಕೊಂಡಿದೆ (ಅನೇಕ ವೇಳೆ ವ್ಯಕ್ತಿಯ ವಿಷಯದಲ್ಲಿ ರೂಪಕವಾಗಿ ಪ್ರ.). Turn t. ಬೆನ್ನು ತಿರುಗಿಸು, ಓಟ ಕೀಳು. Twist the lion's t. (Lion ನೋಡಿ). Drop pinch of salt on t. of (Salt ನೋಡಿ)]. (ಆಕಾರದಲ್ಲಾಗಲಿ ಸ್ಥಾನದಲ್ಲಾಗಲಿ) ಬಾಲದಂಥ, ಬಾಲವನ್ನು ಹೋಲುವ, —ಪದಾರ್ಥ; (ಯಾವುದಾದರೂ ಪದಾರ್ಥದ) ಹಿಂಭಾಗ, ಕಡೆಯ ಭಾಗ, ಅಧೀನ ಭಾಗ, ಕೀಳು ಭಾಗ, ತಳ್ಳನೆಯ ಉದ್ದ ಭಾಗ ಅಥವಾ ಚಾಚು [T. of comet ಧೂಮಕೇತುವಿನ ಬಾಲ. T. of the eye ಕಣ್ಣಿನ ಹೊರಮೂಲೆ; ಕಡೆಗಣ್ಣು. T. (end) of procession, etc. ಮೆರವಣಿಗೆ, ಮೊ. ಗಳ ಕೊನೆ(ಯ ಭಾಗ). T. of the XI ೧೧ ಆಟಗಾರರ ತಂಡದ ಕೊನೆಕೊನೆಯ ಸಾಮಾನ್ಯ ಆಟಗಾರರು. T. margin (ಪುಟದ) ಕೆಳ ಬದಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Followed by a t. of attendants ಅನುಚರರ ನಿಡುಸಾಲಿನಿಂದ ಹಿಂಬಾಲಿಸಲ್ಪಟ್ಟು. At the t. of a cart ಬಂಡಿಯ ಹಿಂಭಾಗದಲ್ಲಿ. T. of a kite ಗಾಳಿಪಟದ ಬಾಲಂಗಚ್ಚೆ. Cow's -t. (ಹಗ್ಗ, ಮೊ. ಗಳ) ಜೂಲು ತುದಿ, ಗುಂಜು ತುದಿ. T. of musical note (ಸಂಗೀತ ರೇಖಾವಳಿಯಲ್ಲಿ) ಸಂಗೀತ ಸ್ವರಸೂಚಕ ಚಿಹ್ನೆಯ ಲಂಬಗೆರೆ (Stem[1] ನೋಡಿ). T. of a g, etc. G ಮೊ. ಅಕ್ಷರಗಳ—ಗೆರೆಯ ಕೆಳಭಾಗ, ತೋಕೆ. T. of slate *or* tile (in roof) (ಚಾವಣಿಯಲ್ಲಿ) ಸ್ಲೇಟು ಹಲಗೆಯ ಅಥವಾ ಹೆಂಚಿನ ಹೊರ ಕಾಣುವ ತುದಿ. T. of brick *or* stone (in wall) (ಗೋಡೆಯಲ್ಲಿ) ಇಟ್ಟಿಗೆಯ ಅಥವಾ ಕಲ್ಲಿನ ಹೊರ ಕಾಣಿಸದ ತುದಿ, ಒಳ ತುದಿ. T. of butter-fly's wing ಚಿಟ್ಟೆಯ ರೆಕ್ಕೆಯ—ತೆಳು ಹಿಂಚಾಚು, ಬಾಲ. T. of gale ಬಿರುಗಾಳಿಯ ಕಡೆಯ(ಲ್ಲಿನ ತಕ್ಕಮಟ್ಟಿನ ಶಾಂತ) ಭಾಗ. T. of a stream ತೊರೆಯಲ್ಲಿ ಜೋರು ಹರಿವಿನ ಹಿಂಗಡೆಯ ಶಾಂತ ಭಾಗ: ತೊರೆಯ ಬಾಲ. T. of the trenches (ಕೋಟೆ ಕೊತ್ತಲ) ಮುಂಚೂಣಿಯ ದಳದವರು ಮೊದಲು ತೋಡಿ ಹಿಂಬಿಟ್ಟ ಕಂದಕದ ಭಾಗ: ಕಂದಕದ ಹಿಂಭಾಗ. Make head *or* t. of (Head, ನಾ. ನೋಡಿ). Pigtail (ಆ ಪದ ನೋಡಿ)]. ಅನುಚರರ ತಂಡ, ಅನುಚರರು, ಪರಿವಾರ (Beg from those of my t.). (ಬ. ವ. ದಲ್ಲಿ) = T.-coat (Boys go into tails at sixteen). (ನಾಣ್ಯ ಎಸೆಯುವುದು) T. *or* (ಸಾ.) tails ನಾಣ್ಯದ ತಲೆಯ ಚಿತ್ರವಿಲ್ಲದ ಭಾಗ: (ನಾಣ್ಯದ) ಕೆಳಮುಖ, ಹಿಮ್ಮುಖ (Head ನೋಡಿ). [**T.-bay** ಮಟ್ಟಬದಲಾವಣೆ ಕಟ್ಟೆಯಲ್ಲಿ ಕೆಳ ಬಾಗಿಲಿಗೂ ಕೆಳಗಣ ಕೊಳಕ್ಕೂ ನಡುವಣ ಭಾಗ. **T.-board** (ಸಾಮಾನು ತುಂಬುವುದಕ್ಕೆ ಅಥವಾ ಇಳಿಸುವುದಕ್ಕೆ ಅನುಕೂಲವಾಗುವಂತೆ, ಬೇಕಾದಾಗ ಇಳಿಯಬಿಡಲಾಗುವ ಅಥವಾ ಚಾಚಲಾಗುವ) ಬಂಡಿಯ ಹಿಂಭಾಗದ ಕೀಲಿಸಿದ ಹಲಗೆ. **T.-braid** ಲಂಗದ ಅಂಚಿನ ಜಡೆಪಟ್ಟಿ. **T.-gate** ಮಟ್ಟಬದಲಾವಣೆ ಕಟ್ಟೆಯ ಕೆಳ—ಬಾಗಿಲು, ತೂಬು. **T.-light** (ರೈಲುಬಂಡಿ, ಮೋಟಾರು ಕಾರು, ಬೈಸಿಕಲ್ಲು, ಮೊ. ಗಳ) (ಸಾ., ಕೆಂಪು) ಹಿಂದೀಪ. **T.-piece** (ಪುಸ್ತಕದಲ್ಲಿ) ಅಧ್ಯಾಯ, ಮೊ. ಗಳ ಕಡೆಯಲ್ಲಿ ಹಾಕುವ ಅಲಂಕಾರ ಚಿತ್ರ: (ಅಧ್ಯಾಯದ) ಅಡಿಚಿತ್ರ; (ಕೆಲವು ಸಂಗೀತ ವಾದ್ಯಗಳಲ್ಲಿ) ತಂತಿಗಳ ಕೆಳ ತುದಿಯನ್ನು ಬಿಗಿಸಿರುವ ತ್ರಿಕೋನಾಕೃತಿಯ ಮರದ ತುಂಡು: (ತಂತಿ ಬಿಗಿಯುವ) ಕೆಳ ತುಂಡು. **T.-pipe** (ನಾ., ಕ್ರಿ. ಸಕ.) ಪಂಪಿನ ಹೀರುನಲ್ಲಿ, ಚೋಷಕ ನಾಳ. (ಕ್ರಿ.) (ಡಬ್ಬ, ಮೊ. ನ್ನು ನಾಯಿಯ, ರೂಪ. ವ್ಯಕ್ತಿಯ) ಬಾಲಕ್ಕೆ ಕಟ್ಟು. **T.-race** ನೀರುಚಕ್ರದ ಕೆಳಗಣ ನೀರಹರಿವು]. ಬಾಲ—ಇಡು, ಕಟ್ಟು (T. a kite); ಬಾಲದಂತೆ ಹಿಂಬಾಲಿಸು, ಬಾಲವಾಗಿರು (A line of dogs tailing the procession). ಬಾಲ ಹಿಡಿ(ದು ಎಳೆ, ಜಗ್ಗಿಸು); (ಬಳ. ಮಾ.) (ಕುರಿಮರಿ, ಮೊ. ಗಳ) ಬಾಲವನ್ನು, (ಹಣ್ಣು, ಮೊ. ಗಳ) ಕೊನೆಯನ್ನು, —ತೆಗೆದುಹಾಕು; (ಕೊನೆಯಲ್ಲಿ, ಹಿಂದೆ) ಸೇರಿಸು, ಜೋಡಿಸು; ಹಿಂಗೂಡಿಸು (What is this but to t. one folly to another?). T. after ಬೆನ್ನುಹತ್ತಿ ಹೋಗು; ಬೆಂಬತ್ತು. T. away *or* off (ವ್ಯಕ್ತಿಗಳು, ನಾಯಿಗಳು, ಮೊ. ಗಳ ವಿಷಯದಲ್ಲಿ) ಚೆದರಿ ಹಿಂದೆಬೀಳು. T. in (ತೊಲೆ, ಮೊ. ಗಳ ವಿಷಯದಲ್ಲಿ) ಒಂದು ತುದಿಯನ್ನು ಗೋಡೆ, ಮೊ. ಗಳ ಒಳಕ್ಕೆ ಕೂರಿಸಿ ಭದ್ರಮಾಡು: ತುದಿ ಕೂರಿಸು. T. to the tide, t. up & down stream (ಲಂಗರು ಹಾಕಿದ ಹಡಗು) ಉಬ್ಬರವಿಳಿತದೊಡನೆ ಮೇಲಕ್ಕೂ ಕೆಳಕ್ಕೂ ಹೊಯ್ದಾಡು, ತೂಗಾಡು. **(-)tailed** (ಗು.); **Taílless** (ಗು.); **Taíling** (ನಾ.) (ಕ್ರಿಯಾರ್ಥಗಳಲ್ಲಿ); (ಮು., ಗೋಡೆಯಲ್ಲಿ ಒಳಸೇರಿಸಿದ ಇಟ್ಟಿಗೆಯ ಅಥವಾ ಕಲ್ಲಿನ ಅಥವಾ ತೊಲೆಯ) ಕೂರು ತುದಿ. (ಬ. ವ. ದಲ್ಲಿ) (ಧಾನ್ಯ, ಅದುರು, ಮೊ. ಗಳ) ಕಳಪೆ (ಭಾಗ), ಕಸ. (ಕ್ಯಾಲಿಕೊ ಮುದ್ರಣದಲ್ಲಿ) ಚಿತ್ತು, ಕಲಸಿಕೆ, ಅಥವಾ ಇತರ ದೋಷ.

Tail[2] ಟೆಯ್‌ಲ್, ಟೇಲ್ (ನಾ., ಗು.) (ನ್ಯಾ. ಶಾ.) ಪರಿಮಿತ—ಸ್ವಾಮ್ಯ, ಒಡೆತನ (In t. ಪರಿಮಿತ ಸ್ವಾಮ್ಯದ ಷರತ್ತಿನಮೇಲೆ); ಒಬ್ಬ ಮನುಷ್ಯನಿಗೂ ಆತನ ಔರಸ ಸಂತತಿಗೂ ಮಾತ್ರ ಹಕ್ಕಿರುವ ಆಸ್ತಿ: ಪರಿಮಿತ ಸ್ವಾಮ್ಯದ, ಸೋಪಾಧಿಕ, —ಆಸ್ತಿ. (ಗು.) ಪರಿಮಿತ—ಸ್ವಾಮ್ಯದ, ಒಡೆತನದ [Estate t.; Fee t. (Fee ನೋಡಿ)]

Taílor ಟೆಯ್ಲರ್, ಟೇಲರ್ (ನಾ., ಕ್ರಿ.) ಉಡುಪು ಹೊಲಿಯುವವನು, ದರ್ಜಿ, ಚಿಪ್ಪಿಗ [The t. makes the man ಮನುಷ್ಯನ ಸ್ವರೂಪ, ಮಾನ, ದರ್ಜಿಯ ಕೈಯಲ್ಲಿದೆ, ದರ್ಜಿ ಮಾಡಿದ್ದು. Nine tailors go to a man ಒಂಬತ್ತು ದರ್ಜಿಗಳು ಒಬ್ಬ ಆಳಿಗೆ ಸಮ (ದರ್ಜಿ ಇತರರಿಗಿಂತ ನಿಶ್ಶಕ್ತ ಎಂದು ತಿರಸ್ಕಾರವಾಗಿ ಹೇಳುವಲ್ಲಿ)]. Ride like a t. (ಚಿಪ್ಪಿಗನಂತೆ) ಒಡ್ಡೊಡ್ಡಾಗಿ ಸವಾರಿಮಾಡು. [T.-bird ಗೂಡು ಕಟ್ಟುವುದಕ್ಕಾಗಿ ಎಲೆಗಳನ್ನು ಒಂದಕ್ಕೊಂದಕ್ಕೆ ಸೇರಿಸಿ ಹೊಲಿಯುವ ಹಲವು ಬಗೆಯ ಸಣ್ಣ ಹಕ್ಕಿ: ಗೀಜಗ ಹಕ್ಕಿ, ಚಿಪ್ಪಿಗ ಹಕ್ಕಿ. T.-made (ಮು., ಹೆಂಗಸಿನ ಉಡುಪಿನ ವಿಷಯದಲ್ಲಿ; ಸಾ., ಹೆಚ್ಚು ಅಲಂಕಾರವಿಲ್ಲದೆ, ಹೊಂದಿಕೆಯಾಗಿರುವಂತೆ ಸಾದಾ ಶೈಲಿಯಲ್ಲಿ) ದರ್ಜಿ—ಹೊಲಿದ, ತಯಾರಿಸಿದ; (ರೂಪ.) ಚಿಪ್ಪಿಗನಿಂದ ಸ್ವರೂಪ ಪಡೆದ. Tailor's chair (ಕೆಲಸ ಮಾಡುವಾಗ ದರ್ಜಿ ಕುಳಿತುಕೊಳ್ಳುವಂತೆ) ಕಾಲುಮೇಲೆ ಕಾಲುಹಾಕಿಕೊಂಡು ಕುಳಿತುಕೊಳ್ಳುವುದಕ್ಕಾಗಿ ಮಾಡಿರುವ ಕಾಲಿಲ್ಲದ ಕುರ್ಚಿ: ಚಿಪ್ಪಿಗನ ಕುರ್ಚಿ. Tailor's cramp (ಅತಿ ದುಡಿತದಿಂದ) ಚಿಪ್ಪಿಗನ ಕೈ (ಬೆರಳುಗಳ) —ಸೆಡೆತ, ಸೇದು. Tailor's twist (ದರ್ಜಿಗಳು ಉಪಯೋಗಿಸುವ) ಒಂದು ಬಗೆಯ ಗಟ್ಟಿ ರೇಷ್ಮೆದಾರ]. (ಕ್ರಿ.) ದರ್ಜಿ, ಚಿಪ್ಪಿಗ, —ಆಗಿರು; ದರ್ಜಿಯ ಕೆಲಸ, ಕಸಬು, ಮಾಡು; ಉಡುಪು—ಹೊಲಿ, ತಯಾರಿಸು (ಮು., ಭೂ. ಕೃ. ನಲ್ಲಿ: Well-tailored ಚೆನ್ನಾಗಿ ಹೊಲಿದ ಉಡುಪು ಧರಿಸಿದ); (ಅಸಂ.) (ಹಕ್ಕಿಯನ್ನು) ತಪ್ಪು ತಪ್ಪಾಗಿ, ಗುರಿ ತಪ್ಪಿ, —ಹೊಡೆ. **Taílor-ing** (ನಾ.); **Taíloress** (ನಾ., ಸ್ತ್ರೀ.)

Tain ಟೇನ್ (ನಾ.) ತವರದ ತೆಳು ತಗಡು; ಕನ್ನಡಿಯ ಹಿಂದೆ ಹಾಕುವ ತವರದ ರೇಕು.

Taint ಟೆಯ್‌ಂಟ್, ಟೇಂಟ್ (ನಾ., ಕ್ರಿ.) ಕರೆ, ಕಲೆ, ಕಳಂಕ, ಮಾಲಿನ್ಯ, ದೋಷ (ರೂಪ. ಸಹ); ಕೊಳೆತ, ಕೆಟ್ಟಿರುವ ಸ್ಥಿತಿ, ಸೋಂಕು (There was a t. of insanity in the family ವಂಶದಲ್ಲಿ ಹುಚ್ಚಿನ ಸೋಂಕು ಇತ್ತು. The moral t. had spread among all classes ನೈತಿಕ ಕಳಂಕ ಎಲ್ಲ ವರ್ಗಗಳಲ್ಲೂ ಹಬ್ಬಿತ್ತು. Without t. of commercialism ವ್ಯಾಪಾರ ರೀತಿಯ ದೋಷವಿಲ್ಲದೆ). (ಕ್ರಿ.) ಕೊಳೆ(ಯಿಸು); ರೋಗ, ಸೋಂಕು, —ಹಿಡಿ(ಸು); ಕೆಟ್ಟುಹೋಗು, ಕಳಂಕ, ಮಲಿನ, —ಗೊಳಿಸು [Tainted meat ಕೆಟ್ಟುಹೋದ, ಕೊಳೆತ, —ಮಾಂಸ. Taints all he touches ಮುಟ್ಟಿದ್ದನ್ನೆಲ್ಲ ಹೊಲೆಗೆಡಿಸುತ್ತಾನೆ, ಕಳಂಕಿಸುತ್ತಾನೆ. His mind was tainted ಅವನ ಮನಸ್ಸು ಕಳಂಕಿತವಾಗಿತ್ತು. Tainted goods (ಕೂಲಿಗಾರರ ಸಂಘ ತತ್ತ್ವ) ನರಕು ತಯಾರಿಕೆಯಲ್ಲಿ ಸಂಘದವರಲ್ಲದ ಕೆಲಸಗಾರರನ್ನು ನೇಮಿಸಲಾಗಿದೆಯೆಂಬ ಅಥವಾ ಅಂಥ ಇತರ ಕಾರಣಕ್ಕಾಗಿ ಸಂಘದ ಸದಸ್ಯರು ಎತ್ತಿಗಿತ್ತಿ ಮಾಡಬಾರದ ಸರಕು: ಹೊಲೆ, ಭ್ರಷ್ಟ, —ಸರಕು. Tainted money ಅಪ್ರಾಮಾಣಿಕ ವ್ಯಾಪಾರದಿಂದ ಗಳಿಸಿದ ಹಣ: ಹೊಲೆ, ಕಳಂಕಿತ,—ದ್ರವ್ಯ, ಹಣ]. **Taíntless** (ಗು.); **Taíntlessly** (ಕ್ರಿ. ವಿ.)

Taj ಟಾಜ್ (ನಾ.) (ಮಹಮ್ಮದೀಯ ದರವೇಶಿಗಳು ಧರಿಸುವ) ಶಂಕುವಿನಾಕಾರದ ಎತ್ತರದ ಟೋಪಿ; ಚೊಪ್ಪರ, ತಾಜಮಹಲು (ಎಂಬುದರ ಸಂಕ್ಷಿಪ್ತ)

Take ಟೇಕ್ (ಕ್ರಿ; ಭೂತ. Took ಟುಕ್, ಭೂ. ಕೃ. Taken ಟೇಕ್‌ನ್) (ಕ್ರಿ, ಸಲಕರಣೆ, ಮೊ. ರಿಂದ) ತೆಗೆದುಕೊ, ಹಿಡಿದುಕೊ, (ಪರಿ)ಗ್ರಹಿಸು (ರೂಪ. ಸಹ), ಸೆರೆಹಿಡಿ, (ಬೆಂಬತ್ತಿ) ಹಿಡಿ, ವಶಪಡಿಸಿಕೊ, ಮರುಳುಗೊಳಿಸು, ಆಕರ್ಷಿಸು, ಗೆದ್ದುಕೊ, ಜಯಿಸು, ಪಡೆ(ದುಕೊ) [Took him by the throat ಅವನ ಕುತ್ತಿಗೆಗೆ ಕೈಹಾಕಿ ಹಿಡಿದುಕೊಂಡನು. T. the bull by the horns (Bull[1] ನೋಡಿ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Deuce t. it! (ಅದು) ಹಾಳಾಗಿ ಹೋಗಲಿ! T. bit between teeth ಕಡಿವಾಣಕ್ಕೆ ಬಗ್ಗದಿರು; ಹಠೋಟಿಗೆ ಬರಲು ನಿರಾಕರಿಸು. T. a fortress ಕೋಟೆಯನ್ನು ಹಿಡಿ. T. by storm (Storm ನೋಡಿ). Took his bishop (ಚದುರಂಗದಾಟದಲ್ಲಿ) ಅವನ ಬಿಷಪ್ ಕಾಯಿಯನ್ನು ಹೊಡೆದನು, ಹಿಡಿದನು. Takes £ 40 a week ವಾರಕ್ಕೆ ೪೦ ಪೌಂಡು ಗಳಿಸುತ್ತಾನೆ, ಪಡೆಯುತ್ತಾನೆ. Took little by this move ಈ ಪ್ರಯತ್ನದಿಂದ ಹೆಚ್ಚೇನೂ ಲಾಭವಾಗಲಿಲ್ಲ. T. the cake *or* biscuit (ಅನಂ.; Cake ನೋಡಿ). Took him in the act ಕೃತ್ಯ ನಡಸುತ್ತಿರುವಾಗಲೆ ಅವನನ್ನು ಹಿಡಿದನು. Took him at a disadvantage ಎದುರಾಳಿಯ ಅನನುಕೂಲ ಸ್ಥಿತಿಯಿಂದ ಪ್ರಯೋಜನಪಡೆದನು, ಲಾಭಪಡೆದನು. Was taken ill *or* (ಬಳ. ಮಾ.) bad ಕಾಯಿಲೆಬಿದ್ದನು; ರೋಗ ಹಿಡಿಯಿತು. Taken aback ಬೆರಗಾಗಿ, ಚಕಿತಗೊಂಡು. What takes my fancy ನನ್ನ ಮನಸ್ಸನ್ನು ಸೆಳೆದಿರುವುದು, ಹಿಡಿದಿರುವುದು. Was much taken with *or* by her manners ಅವಳ ನಡೆವಳಿಯಿಂದ ಬಹಳ ಮರುಳುಗೊಂಡನು, ಆಕರ್ಷಿತನಾದನು. Novel did not t. ಕಾದಂಬರಿ ಜನಪ್ರಿಯವಾಗಲಿಲ್ಲ. Vaccine did not t. ಸಿಡುಬಿನ ಹಾಲು—ಹಿಡಿಯಲಿಲ್ಲ, ಹೊಮ್ಮಲಿಲ್ಲ. T. precedence (ತನ್ನ ಹಕ್ಕಾಗಿ) ಅಗ್ರಸ್ಥಾನ, ಜ್ಯೇಷ್ಠಸ್ಥಾನ, —ಪಡೆ. Took his degree ಪಾಂಡಿತ್ಯ ಪದವಿ ಪಡೆದನು. T. orders ದೀಕ್ಷೆ ಪಡೆ. T. silk (Silk ನೋಡಿ). Do you t. the 'Hindu'? ನೀನು 'ಹಿಂದೂ' ಪತ್ರಿಕೆಯನ್ನು ತರಿಸುತ್ತೀಯೊ? —ಪತ್ರಿಕೆಗೆ ಚಂದಾದಾರನಾಗಿದ್ದೀಯೊ? Am not taking any (ಅನಂ.) (ಕೊಟ್ಟದ್ದನ್ನು ನಿರಾಕರಿಸುವಲ್ಲಿ) ನಾನು ಏನನ್ನೂ ತೆಗೆದುಕೊಳ್ಳುವುದಿಲ್ಲ. Took seats in advance ಮುಂದಾಗಿಯೇ ಸ್ಥಳಗಳನ್ನು ಗೊತ್ತು ಮಾಡಿಕೊಂಡನು. Must t. lodgings ಬಿಡದಿಯನ್ನು ಗೊತ್ತುಮಾಡಿಕೊಳ್ಳಬೇಕು. Must t. lessons ಪಾಠ ಹೇಳಿಸಿಕೊಳ್ಳಬೇಕು. Will t. 2 lb. ೨ ಪೌಂಡು ತೆಗೆದುಕೊಳ್ಳುತ್ತೇನೆ, ಕೊಂಡುಕೊಳ್ಳುತ್ತೇನೆ. T. the French Revolution (ಉದಾಹರಣೆಯಾಗಿ) ಫ್ರಾನ್ಸಿನ ಕ್ರಾಂತಿಯನ್ನು ತೆಗೆದುಕೊಳ್ಳಿ. Has taken a wife ಮದುವೆ ಮಾಡಿಕೊಂಡಿದ್ದಾನೆ. (ಪ್ರಾಚೀ. ಪ್ರ.) Took to wife Jane Smith ಜೇನ್ ಸ್ಮಿತ್‌ಳನ್ನು ಮದುವೆಯಾದನು, ಹೆಂಡತಿಯಾಗಿ ಮಾಡಿಕೊಂಡನು. T. a back seat (Back[1] ನೋಡಿ). Do not take advantage of his youth ಅವನ ತಾರುಣ್ಯವನ್ನು ನಿನ್ನ ಸ್ವಂತಕ್ಕೆ ದುರುಪಯೋಗಪಡಿಸಿಕೊಳ್ಳಬೇಡ; ಅವನ ತಾರುಣ್ಯದಿಂದ ಲಾಭ ಪಡೆಯಬೇಡ. T. the opportunity ಸಂದರ್ಭ ಉಪಯೋಗಿಸಿಕೊ. Will t. a cup of tea ಒಂದು ಬಟ್ಟಲು ಟೀಯನ್ನು ತೆಗೆದುಕೊಳ್ಳುವೆನು, ಕುಡಿಯುವೆನು. These things t. time ಇವಕ್ಕೆ ಕಾಲ—ಬೇಕು, ಹಿಡಿಯುತ್ತದೆ. T. your time ಆತುರಪಡಬೇಡ; ನಿನಗೆ ಬೇಕಾದಷ್ಟು ಕಾಲ ತೆಗೆದುಕೊ. It takes a lot of doing ಅದಕ್ಕೆ ಬೇಕಾದಷ್ಟು ಕೆಲಸ ಹಿಡಿಯುತ್ತದೆ; ಅದನ್ನು ಮಾಡುವುದು ಕಷ್ಟ. Takes a poet to translate Virgil ವರ್ಜಿಲನ ಕಾವ್ಯವನ್ನು ಭಾಷಾಂತರಿಸಲು ಕವಿಯೇ (ಆಗ)ಬೇಕು. Transitive verbs t. an object ಸಕರ್ಮಕ ಕ್ರಿಯಾಪದಗಳು ಕರ್ಮಪದವನ್ನು ಆಕಾಂಕ್ಷಿಸುತ್ತವೆ, ಬಯಸುತ್ತವೆ; —ಪದಗಳಿಗೆ ಕರ್ಮಪದ ಬೇಕು]. ಜೊತೆಯಲ್ಲಿ—ಕರೆದುಕೊಂಡು ಹೋಗು, ತೆಗೆದುಕೊಂಡು ಹೋಗು; ಕರೆದೊಯ್ಯಿ, ಕೊಂಡೊಯ್ಯಿ; ತೆಗೆ(ದುಬಿಡು); (ವ್ಯಕ್ತಿ, ಮೊ. ಕ್ಕೆ) ಇಲ್ಲದಂತೆ ಮಾಡು [T. the letters to the post, the children to the pantomime. T. the corkscrew from the shelf ಬಿರಡೆ ತಿರುಪನ್ನು ಬಡುವಿನಿಂದ ತೆಗೆದುಕೊಡು. Takes his readers with him ತನ್ನ ವಾಚಕರನ್ನು (ತನ್ನ ಅಭಿಪ್ರಾಯದಲ್ಲಿ) ಒಡಗೂಡಿಸಿಕೊಂಡು ಹೋಗುತ್ತಾನೆ. T. him through a book of Livy ಅವನು ಲಿವಿಯ ಒಂದು ಗ್ರಂಥವನ್ನು ಓದುವಂತೆ ಮಾಡು. Takes all the fun out of it ಅದರ ವಿನೋದವನ್ನೆಲ್ಲ ತೆಗೆದುಬಿಡುತ್ತದೆ. T. to task (Task ನೋಡಿ). T. in hand ಕೈಗೊಳ್ಳು, ಕೈಗೆ ತೆಗೆದುಕೊ; ಮಾಡಲು, ವ್ಯವಹರಿಸಲು, —ತೊಡಗು; ಹಠೋಟಿಯನ್ನು, ಸುಧಾರಣೆಯನ್ನು, —ವಹಿಸಿಕೊ (The boy wants taking in hand ಹುಡುಗನನ್ನು ತಿದ್ದಬೇಕಾಗಿದೆ, ಹದ್ದಿನಲ್ಲಿಟ್ಟುಕೊಳ್ಳಬೇಕಾಗಿದೆ); (ಕ್ರಿ. ವಿ. ಮತ್ತು ಉಪ. ಗಳೊಡನೆ ವಿಶೇಷ ಪ್ರಯೋಗಗಳನ್ನು ನೋಡಿ)]; (ನೆಗಡಿ, ಜ್ವರ, ಮೊ. ವು) ಹಿಡಿ, ಬರು, (—ನ್ನು) ತಂದುಕೊ; ಎಣಿಸು, ಭಾವಿಸು, ಪಡು, ಅನುಭವಿಸು, ತೋರಿಸು [T. offence, umbrage ಅಪಚಾರವಾಗಿ ಎಣಿಸು; ಅಸಮಾಧಾನಪಟ್ಟುಕೊ. T. a fancy to —ರ ಮೇಲೆ ಮನಸ್ಸಿಡು; ಖಾಯಿಷ್‌ಪಡು. Takes a pride in his work ತನ್ನ ಕೆಲಸದಲ್ಲಿ ಹೆಮ್ಮೆ ಪಟ್ಟುಕೊಳ್ಳುತ್ತಾನೆ. T. pity on him ಅವನಮೇಲೆ ಕನಿಕರ—ಪಡು, ತೋರಿಸು. T. no notice ಗಮನಕ್ಕೆ ತೆಗೆದುಕೊಳ್ಳದಿರು, ಗಮನಿಸದಿರು. T. heed, pains, trouble ಎಚ್ಚರಿಕೆ, ಶ್ರಮ, ತೊಂದರೆ, —ವಹಿಸು, ತೆಗೆದುಕೊ]. (ಅಳತೆ, ವಿಳಾಸ, ಮೊ. ನ್ನು) ತೆಗೆದುಕೊ, ತಿಳಿದಿಟ್ಟುಕೊ; (ಮನಸ್ಸಿನಲ್ಲಿ) ಗ್ರಹಿಸು, ಊಹಿಸು, ನಿರ್ಧರಿಸು, ಅರ್ಥಮಾಡಿಕೊ, ವಿವರಿಸು [I t. your meaning *or* (ಪ್ರಾಚೀ. ಪ್ರ.) you ನಿನ್ನ ಅಭಿಪ್ರಾಯವನ್ನು, ನಿನ್ನನ್ನು, ಗ್ರಹಿಸಿದೆ. I t. it that we are to wait ನಾವು ಕಾದಿರಬೇಕಾಗಿದೆಯೆಂದು ಊಹಿಸುತ್ತೇನೆ. T. person at his word (Word ನೋಡಿ). How would you t. this passage? ಈ ಭಾಗವನ್ನು ಹೇಗೆ ಭಾಷಾಂತರಿಸುತ್ತೀಯೆ, ಅರ್ಥಮಾಡುತ್ತೀಯೆ? T. it for granted (ಅದು ಉಂಟೆಂದು, ಸತ್ಯಾಂಶವೆಂದು) ಇಟ್ಟುಕೊ, ಭಾವಿಸಿಕೊ. Do you t. me for a fool? ನಾನು ದಡ್ಡನೆಂದು ಭಾವಿಸುತ್ತೀಯೊ? T. things coolly ಎಲ್ಲವನ್ನೂ ತಾಳ್ಮೆಯಿಂದ ಸಹಿಸು, ತೆಗೆದುಕೊ. T. it easy (Ease ಕೆಳಗೆ Easy ನೋಡಿ). Must not t. it ill of him ಅವನ (ನಡತೆಯ) ಬಗ್ಗೆ ಅಸಮಾಧಾನಪಡಕೂಡದು. T. to heart (Heart ನೋಡಿ). T. as read (ನಡೆಯ ವರದಿ, ಮೊ. ನ್ನು) ಓದಿದಂತೆ ಭಾವಿಸಿಕೊ]; ಒಪ್ಪಿಕೊ, ಅಂಗೀಕರಿಸು, ತಾಳಿಕೊ, ಇಟ್ಟುಕೊ, ಅನುಸರಿಸು, ಆಯ್ದುಕೊ, ಪಡೆ [The bet was taken ಪಣ ಒಪ್ಪಿಕೊಳ್ಳಲಾಯಿತು. Taken & offered (ಸಂಕ್ಷಿಪ್ತ: T. & O.; ಪಂಥದ ರಿಯಾಯಿತಿಗಳನ್ನು ಗುರುತಿಸುವಲ್ಲಿ ಉಪಯೋಗಿಸುವ ಮಾತು). I took him ಅವನ ಪಣ ಒಪ್ಪಿಕೊಂಡೆನು. Must t. us as you find us ನಾವು ಇರುವಂತೆ ನಮ್ಮನ್ನು ತಾವು ಅಂಗೀಕರಿಸಬೇಕು. Will t. no nonsense ಅವಿವೇಕವನ್ನು ಸಹಿಸುವುದಿಲ್ಲ. Took it like a lamb ಕುರಿಮರಿಯಂತೆ, ತಲೆ ಬಗ್ಗಿಸಿಕೊಂಡು, —ಅದನ್ನು ತೆಗೆದುಕೊಂಡನು, ಸಹಿಸಿಕೊಂಡನು. Will not t. a hint ಸೂಕ್ಷ್ಮ ಸೂಚನೆ ತೆಗೆದುಕೊಳ್ಳುವುದಿಲ್ಲ. T. advice ಆಲೋಚನೆ, ಸಲಹೆ, —ಕೇಳು, ತೆಗೆದುಕೊ; ಬುದ್ಧಿವಾದದಂತೆ ನಡೆ. You may t. it from me *or* t. my word for it ಆ ವಿಚಾರದಲ್ಲಿ ನನ್ನ ಮಾತು—ತೆಗೆದುಕೊಳ್ಳಬಹುದು, ನಂಬಬಹುದು. T. sides ಪಕ್ಷ ವಹಿಸು. T. a different view ಬೇರೆ ಅಭಿಪ್ರಾಯಪಡು. Takes its name from the inventor ನಿರ್ಮಾಪಕನಿಂದ ಹೆಸರು ಪಡೆದಿದೆ. T. a photograph ಛಾಯಾಚಿತ್ರ ತೆಗೆ(ದುಕೊ). Took a sudden leap ತಟ್ಟನೆ ಹಾರಿತು. Horse will not t. fence ಕುದುರೆ ಬೇಲಿಯನ್ನು ಹಾರುವುದಿಲ್ಲ. T. a walk ಕಾಲಾಡಿಸಲು, ಅಡ್ಡಾಡಲು, —ಹೋಗು. T. the mathematical tripos ಗಣಿತದ ಟ್ರೈಪಾಸ್ ಪರೀಕ್ಷೆಗೆ ಕುಳಿತುಕೊ. T. the evening service ಸಂಜೆಯ ಆರಾಧನೆ ನಡಸು. T. a glance round you ನಿನ್ನ ಸುತ್ತ ದೃಷ್ಟಿ ಹರಿಸು]. ಛಾಯಾಚಿತ್ರ ತೆಗೆ; —ತೆಗೆದಾಗ (ನಿರ್ದಿಷ್ಟ ರೀತಿಯಲ್ಲಿ) ಬರು, ಬೀಳು (*Well, badly* ಮೊ. ಪದಗಳೊಡನೆ) (T. him in cap & gown ಟೋಪಿ ಮತ್ತು ದಗಲೆ ನಿಲುವಂಗಿಯಲ್ಲಿ ಅವನ ಛಾಯಾಚಿತ್ರ ತೆಗೆ. Does not t. well ಛಾಯಾಚಿತ್ರದಲ್ಲಿ ಚೆನ್ನಾಗಿ ಬೀಳುವುದಿಲ್ಲ). T. account of ಲೆಕ್ಕಕ್ಕೆ, ಗಣನೆಗೆ, —ತೆಗೆದುಕೊ; ಅಲಕ್ಷಿಸದಿರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

T. aim (*at*) (—ಕಡೆಗೆ) ಗುರಿಯಿಡು. T. care ಎಚ್ಚರಿಕೆಯಿಂದಿರು, ಎಚ್ಚರಿಕೆ ತೆಗೆದುಕೊ, ಜಾಗರೂಕನಾಗಿರು (T. care! ಎಚ್ಚರಿಕೆ! ಜೋಕೆ! ಹುಷಾರ್ !). T. care of (—ರ ವಿಷಯದಲ್ಲಿ) ಎಚ್ಚರಿಕೆಯಿಂದಿರು ; ರಕ್ಷಣೆ, ಯೋಗಕ್ಷೇಮ, —ನೋಡಿಕೊ. T. one's chance (Chance ನೋಡಿ). T. charge ವಶಕ್ಕೆ, ಅಧೀನಕ್ಕೆ,—ತೆಗೆದುಕೊ; —ರ ಜವಾಬುದಾರಿ ವಹಿಸಿಕೊ. T. earth (ನರಿ, ಮೊ. ಗಳ ವಿಷಯದಲ್ಲಿ, ವ್ಯಕ್ತಿಯ ವಿಷಯದಲ್ಲಿ ರೂಪ.) ಬಿಲದೊಳಕ್ಕೆ ತಪ್ಪಿಸಿಕೊ. T. effect, exception, heart (of grace) (Effect, Except, Heart ನೋಡಿ). T. hold of (Hold[1] ನೋಡಿ). T. leave of (Leave[1] ನೋಡಿ). T. one's life in one's hand (ಉದ್ದೇಶಪೂರ್ವಕವಾಗಿ, ತಿಳಿದೂ ತಿಳಿದೂ) ಪ್ರಾಣವನ್ನು ಅಪಾಯಕ್ಕೆ ಒಡ್ಡು ; ಜೀವವನ್ನು ಕೈಯಲ್ಲಿ ಹಿಡಿದಿರು. T. God's name in vain ಲಘುವಾಗಿ, ವ್ಯಥಾ, ಅಗೌರವದಿಂದ, —ದೇವರ ಹೆಸರು ಉಪಯೋಗಿಸು. T. part (Part ನಾ., ನೋಡಿ). T. place ನಡೆ, ಸಂಭವಿಸು. T. root = Strike root (Strike ನೋಡಿ). T. stock (of, in) (Stock ನೋಡಿ). T. the wall (Wall ನೋಡಿ). T. wind (Wind ನೋಡಿ)

ಉಪ., ಕ್ರಿ. ವಿ. ಮತ್ತು ಕ್ರಿ. ವಿ. ಪದಪುಂಜಗಳೊಡನೆ : T. after (ಮು., ತಾಯಿತಂದೆಯನ್ನು ಅಥವಾ ಬಂಧುವನ್ನು) ಹೋಲು. T. back (ಬಳ. ಮಾ.) (ಮಾತು) ತಪ್ಪು, ಹಿಂದೆಗೆದುಕೊ. T. down ಬರೆದುಕೊ (T. down his name & address) ; ಜಂಬ ಇಳಿಸು, ಸೊಕ್ಕು ಮುರಿ [(ಮು.) T. person down a peg or two (Peg ನೋಡಿ)] ; (ಆಹಾರ, ಮೊ. ನ್ನು : ಕಷ್ಟದಿಂದ, ಮನಸ್ಸಿಲ್ಲದೆ) ನುಂಗು ; (ಕಟ್ಟಡ, ಮೊ. ನ್ನು) ಕೆಡವಿಹಾಕು, ನೆಲಸಮಮಾಡು. T. from ಕಡಮೆ ಮಾಡು, ತಗ್ಗಿಸು ; ಕೊರತೆ, ಕುಂದು, —ತರು ; ದುರ್ಬಲಗೊಳಿಸು (Such faults do not t. from his credit as a historian). T. in (ಬಾಡಿಗೆದಾರ, ಅತಿಥಿ, ಊಟದವನು, ಮೊ. ನ್ನು) ಬರಗೊಡು, ಸೇರಿಸಿಕೊ, ಸ್ವೀಕರಿಸು [T. (lady) in (to dinner) (ಮಹಿಳೆಯನ್ನು) ದಿವಾನಖಾನೆಯಿಂದ ಊಟದ ಮನೆಗೆ ಕರೆದುಕೊಂಡು ಹೋಗು ; —ಹೋಗಿ, ಜೊತೆಯಲ್ಲಿ ಕುಳಿತುಕೊ]. (ಒಗೆಯುವುದು, ಹೊಲಿಯುವುದು, ಟೈಪ್‌ಮಾಡುವುದು, ಮೊ. ನ್ನು ಕೂಲಿಗಾಗಿ) ಮನೆಯಲ್ಲಿ ಮಾಡಲು ತೆಗೆದುಕೊ ; ಒಳಕೊಳ್ಳು ; (ಉಡುಪು, ಮೊ. ನ್ನು) ಸಣ್ಣ ಅಳತೆಗೆ ತಗ್ಗಿಸು, ಚಿಕ್ಕದುಮಾಡು ; (ಹಾಯಿಯನ್ನು) ಸುತ್ತು. ತಿಳಿದುಕೊ, ಜೀರ್ಣಿಸಿಕೊ ; ಮನಸ್ಸಿನಲ್ಲಿ ಗ್ರಹಿಸು ; (ಸುಳ್ಳುಹೆ ೞಿಕೆಯನ್ನು) ನಂಬಿಬಿಡು ; ಮೋಸ ಮಾಡು, ವಂಚಿಸು (I was taken in ಮೋಸಹೋದೆನು) ; (ವೃತ್ತ ಪತ್ರಿಕೆ, ಮೊ. ನ್ನು) ಚಂದಾದಾರನಾಗಿ—ತೆಗೆದುಕೊ, ತರಿಸಿಕೊ. T.-in (ನಾ.) ಮೋಸ, ವಂಚನೆ, ಠಕ್ಕು. T. into : T. into one's confidence ನಂಬಿ ಅಂತರಂಗ ಹೇಳು ; ಅಂತರಂಗಕ್ಕೆ ತೆಗೆದುಕೊ. T. into one's head (ಭಾವನೆಯನ್ನು) ತಲೆಗೆ—ಹೊಗಿಸಿಕೊ, ಹಚ್ಚಿಸಿಕೊ ; (—ಎಂದು) ಭಾವಿಸು, ಕಲ್ಪಿಸಿಕೊ, ನಂಬಿಕೆ ಇಟ್ಟುಕೊ, ಮನಸ್ಸು ಮಾಡು, ನಿರ್ಧರಿಸು (He took it into his head to write an account of his experience). T. off (ಉಡುಪು, ಟೋಪಿ, ಮೊ. ನ್ನು) ತೆಗೆ(ದುಹಾಕು) [T. off one's hat to (ರೂಪ.) ನಲಾಮು ಹೊಡಿ, ಭೇಷ್ ಎಂದು ಶ್ಲಾಘಿಸು] ; ಕರೆದೊಯ್ಯು, ಸಾಗಕಳಿಸು (Took him off to the station. Took himself off ಹೊರಟುಹೋದನು) ; (ಬೆಲೆಯಲ್ಲಿ ಒಂದು ಭಾಗವನ್ನು) ಕಳೆದು ಹಾಕು, ಕಡಮೆ ಮಾಡು. (ಪೂರ್ತಿಯಾಗಿ, ಒಂದೇ ಗುಟುಕಿಗೆ) ಕುಡಿದು ಬಿಡು ; ಅಣಕಿಸಿ ಲೇವಡಿಮಾಡು, ಅಣಕಿಸು ; (ಸ್ಥಳದಿಂದ ಅಥವಾ ಸ್ಥಳಕ್ಕೆ) ಹಾರು, ನೆಗೆ (*From, at* ಉಪ. ದೊಡನೆ) ; (ಆಕಾಶಯಾನ) ನೆಲಬಿಟ್ಟು ಆಕಾಶಕ್ಕೆ ಹಾರು, ಆಕಾಶದಲ್ಲಿ ಹಾರಿಹೋಗು. T.-off (ನಾ.) (ವ್ಯಂಗ್ಯ, ಅಣಕ, —ಚಿತ್ರ; ಹಾರಿಕೆ, ನೆಗೆತ ; ನೆಗೆಯುವ ಸ್ಥಳ, ಹಾರಡೆ. T. on (ಕೆಲಸವನ್ನು, ಜವಾಬುದಾರಿಯನ್ನು) ಕೈಕೊಳ್ಳು, ವಹಿಸಿಕೊ ; (T. person on at golf ಒಬ್ಬನೊಡನೆ ಗಾಲ್ಫ್ ಆಟ ಆಡು). (ಬಳ. ಮಾ.) ಆವೇಶ ತೋರಿಸು ; ರಗಳೆ, ಗೊಂದಲ, —ಎಬ್ಬಿಸು. T. out ಹೊರಕ್ಕೆ—ಬರುವಂತೆ ಮಾಡು, ತೆಗೆದುಕೊಂಡುಹೋಗು, ಕರೆದುಕೊಂಡು ಹೋಗು (T. him out for a walk. Books must not be taken out of the library) ; (ಕಲೆ, ಮೊ. ನ್ನು) ತೆಗೆದುಹಾಕು, ಅಳಿಸಿಹಾಕು ; (T. the nonsense out of person ಒಬ್ಬನ ಅವಿವೇಕವನ್ನು ಬಿಡಿಸು, ತೊಲಗಿಸು ; ಒಬ್ಬನಿಗೆ ಬುದ್ಧಿ ಕಲಿಸು) ; (ಸಾಲ, ಮೊ. ಗಳ) ಪಾವತಿಯನ್ನು, (ನಷ್ಟ, ಮೊ. ಗಳಿಗೆ) ಪರಿಹಾರವನ್ನು, —ತೆಗೆದುಕೊ, ಪಡೆ (*In* ಉಪ. ದೊಡನೆ) (Took it out in cigars & drinks); (T. it out of —ಮೇಲೆ ಸೇಡು ತೀರಿಸಿಕೊ ; —ಇಂದ ನಷ್ಟಪರಿಹಾರ ಪಡೆ ; —ರ ಬಲಗುಂದಿಸು) ; (ಸ್ವಾಮ್ಯದ ಸನ್ನದು, ನ್ಯಾಯಸ್ಥಾನದ ಹಾಜರಿ ಕರೆ, ಮೊ. ನ್ನು) ತೆಗೆದುಕೊ, ದೊರಕಿಸಿಕೊ, ಪಡೆ(ದುಕೊ). (ಬ್ರಿಡ್ಜ್ ಆಟ) (ತನ್ನ ಜೊತೆಯವನು ಹೇಳಿದ ರಂಗು ಬಿಟ್ಟು ಹೊಸ ರಂಗು ಅಥವಾ ತುರುಫಿಲ್ಲದ ಆಟ ಹೇಳಿ, ಜೊತೆಯವನಿಂದ) ಆಟ ತೆಗೆದುಕೊ. T. over (ವ್ಯಾಪಾರ ಸಂಘ, ಮೊ. ಗಳ) ಆಡಳಿತ, ಒಡೆತನ, —ವಹಿಸಿಕೊ, ಕೈಗೆ ತೆಗೆದುಕೊ. T. to ತೊಡಗು, ಪ್ರಾರಂಭಿಸು ; —ರ ಅಭ್ಯಾಸಕ್ಕೆ, ಹವ್ಯಾಸಕ್ಕೆ, —ಬೀಳು ; —ಲ್ಲಿ ನಿರತನಾಗು (Took to humming a tune ರಾಗ ಅನ್ನತೊಡಗಿದನು. T. to bad habits ದುರಭ್ಯಾಸಗಳಿಗೆ ಬೀಳು. T. to literature ಸಾಹಿತ್ಯಾಭ್ಯಾಸಮಾಡು). (ಒಂದು ವ್ಯಕ್ತಿ, ಮೊ. ಕ್ಕೆ) ಇಷ್ಟ, ಮೆಚ್ಚಿಕೆ, —ತೋರು, ಪಡು. T. up ಮೇಲಕ್ಕೆ ಎತ್ತು ; ಹೀರಿಕೊ ; ಹಿಡಿ, ತೆಗೆದುಕೊ (Sponges t. up water. Takes up all my time ನನ್ನ ಕಾಲವನ್ನೆಲ್ಲ ತೆಗೆದುಕೊಳ್ಳುತ್ತದೆ. Train stops to t. up passengers ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ರೈಲುಬಂಡಿ ನಿಲ್ಲುತ್ತದೆ); ವಶಕ್ಕೆ ತೆಗೆದುಕೊ; ಆಶ್ರಿತನಾಗಿ, ಆಶ್ರಯಕ್ಕೆ, —ತೆಗೆದುಕೊ; (ಮಾತನಾಡುವವನನ್ನು) (ಅಸಮ್ಮತಿ ತೋರಿ) ತಡೆ, ಅಡ್ಡಿಪಡಿಸು, ತಿದ್ದು ; (ಕಸಬಿಗೆ, ವಿಷಯಕ್ಕೆ) ಪ್ರವೇಶಿಸು, ಕೈಹಚ್ಚು ; (ವಿಚಾರವನ್ನು, ವಿಚಾರಣೆಯನ್ನು) ಮುಂದುವರಿಸು ; (ಬಿಟ್ಟ ಹೊಲಿಗೆಯನ್ನು) ಎತ್ತಿಕೊ, ಎಳೆದು ಬಿಗಿ, (ಅಪಧಮನಿ, ಮೊ. ನ್ನು) ಬಿಗಿದು ಕಟ್ಟು ; (ಸಾಲಪತ್ರ, ಬಂಡವಾಳ ಪಾಲು, ಮೊ. ಕ್ಕೆ) ಕೋರಿಕೆ ಕೊಡು. T. up with (ಮು., ಮದುವೆಯಾಗುವ ಉದ್ದೇಶದಿಂದ) ಜೊತೆ ಸೇರು, ಸಹವಾಸಮಾಡು. T. up the cudgels, gauntlet, glove (ಆಯಾ ಪದ ನೋಡಿ). T.-up (ನಾ.) (ಯಂತ್ರಶಿಲ್ಪ) ಯಂತ್ರದಲ್ಲಿ ಪಟ್ಟಿ, ಮೊ. ನ್ನು ಬಿಗಿಮಾಡುವುದಕ್ಕೂ, (ಹೊಲಿಗೆ ಯಂತ್ರದಲ್ಲಿ) ಹೊಲಿಗೆ ಬಿಗಿಯಾಗುವಂತೆ ಸಡಿಲಬಿದ್ದ ದಾರವನ್ನು ಎಳೆದುಕೊಳ್ಳುವುದಕ್ಕೂ, (ಮಗ್ಗ ಅಥವಾ ಇತರ ಯಂತ್ರದಲ್ಲಿ) ಕೆಲಸ ಮುಗಿದ ಬಟ್ಟೆ, ಮೊ. ನ್ನು ಸುತ್ತುವುದಕ್ಕೂ ಉಪಯೋಗವಾಗುವ ಸಲಕರಣೆ : ಬಿಗಿ ಸಲಕರಣೆ. T. (it) upon *or* on one to (ಭಾರ, ಹೊಣೆ) ಹೊತ್ತುಕೊ, ವಹಿಸಿಕೊ ; (ಮಾಡಲು) ಸ್ವಾತಂತ್ರ್ಯ ವಹಿಸು, ಧೈರ್ಯಮಾಡು ; ಕೈಕೊಳ್ಳು. **Táker** (ನಾ.) (ಕ್ರಿಯಾರ್ಥಗಳಲ್ಲಿ) ; (ಮು.) ಪಣ ಒಪ್ಪಿಕೊಳ್ಳುವವನು, ಬಾಜಿ ಕಟ್ಟುವವನು (No takers. A few takers at 5 to 4). **Táking** (ನಾ., ಗು.) (ಕ್ರಿಯಾರ್ಥಗಳಲ್ಲಿ). (ಬ. ವ. ದಲ್ಲಿ) ಮಾರಾಟದಿಂದ ಬಂದ ಹಣ ; ಜಮಾ ಆದ ಹಣ, ಜಮಾವಟ್ಟು. (ಪ್ರಾಚೀ. ಪ್ರ.) (ಚಿತ್ತ)ಕ್ಷೋಭೆ, ತಳಮಳ (Was in a great t.). (ಗು.) ಮನ ಸೆಳೆಯುವ, ಆಕರ್ಷಕ, ಮೋಹಕ [**Tákingly** (ಕ್ರಿ. ವಿ.); **Tákingness** (ನಾ.)]

Take (ನಾ.) (ಮೀನು, ಬೇಟೆ, ಮೊ. ಗಳ) ಪಡೆದ, ಹಿಡಿದ, —ಮೊತ್ತ. (ಮುದ್ರಣ) ಮೊಳೆಜೋಡಿಸಲು ಒಂದು ಪಟ್ಟಿಗೆ ತೆಗೆದುಕೊಂಡ ಹಸ್ತಪ್ರತಿ : ತೆಕ್ಕೆ. ಆದಾಯ, ಉತ್ಪತ್ತಿ (ಮು., ನಾಟಕಶಾಲೆಯಲ್ಲಿ ಟಿಕೀಟು ಮಾರಿಕೆಯಿಂದ ಬಂದ ಹಣ). (ಚಲನಚಿತ್ರ) ಛಾಯಾಚಿತ್ರ ತೆಗೆದ ದೃಶ್ಯ.

Tákin ಟಾಕಿನ್ (ನಾ.) ಟಿಬೆಟ್ಟಿನ, ಕೊಂಬುಳ್ಳ ಒಂದು ಮೆಲುಕು ಹಾಕುವ ಪ್ರಾಣಿ.

Tálapoin ಟ್ಯಾಲಪಾಯ್‌ನ್ (ನಾ.) (ಸಿಂಹಳ ದ್ವೀಪ, ಸಯಾಂ, ಮೊ. ದೇಶಗಳಲ್ಲಿನ) ಬೌದ್ಧ—ಸಂನ್ಯಾಸಿ, ಭಿಕ್ಷು. ಒಂದು ಬಗೆಯ ಕಪಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Talária (L) ಟಲೇರಿಯ (ನಾ., ಬ. ವ.) (ಮರ್ಕ್ಯುರಿ, ಐರಿಸ್ ಮತ್ತು ಇತರ ದೇವತೆಗಳ ರಾಂಧನವಾದ) ರೆಕ್ಕೆ—ಮೋಜ, ಮೆಟ್ಟು.

Tálbotype ಟಾರ್‌ಬೊಟೈಪ್ (ನಾ.) (೧೮೪೦ರಲ್ಲಿ W. H. Fox Talbot ಎಂಬಾತನು ಕಂಡುಹಿಡಿದು ಈಗಲೂ ಬಳಕೆಯಲ್ಲಿ ಇರುವ) ಒಂದು ಛಾಯಾಚಿತ್ರ ವಿಧಾನ.

Talc ಟ್ಯಾಲ್ಕ್ (ನಾ., ಕ್ರಿ. ಸಕ.) (ನಾ., ಚಪ್ಪಟೆಯಾದ, ನುಣ್ಣನೆಯ, ಅನೇಕ ವೇಳೆ ಪಾರದರ್ಶಕವಾದ, ಫಲಕಗಳಾಗಿ ದೊರೆಯುವ, ಮೃದು ಚಾಲಕವಾಗಿ ಉಪಯೋಗಿಸುವ) ಒಂದು ಬಗೆಯ ಮ್ಯಾಗ್ನೀಸಿಯಂ ಸಿಲಿಕೇಟು : ಟಾರ್ಕ್ ; (ರೂಢಿಯ ಮತ್ತು ವ್ಯಾಪಾರ ಪ್ರ.) ಅಭ್ರಕ, ಕಾಗೆಬಂಗಾರ (ಮು., ಮೆರುಗುಕೊಡುವ ಪದಾರ್ಥವಾಗಿ ಉಪಯೋಗ). (ಕ್ರಿ.) (ಛಾಯಾಚಿತ್ರ ಫಲಕ, ಮೊ. ನ್ನು) ಟಾಲ್ಕಿನಿಂದ—ಉಜ್ಜು, ಸಂಸ್ಕರಿಸು. **Tálcite** ಟ್ಯಾಲ್‌ಸೈಟ್ (ನಾ.) ಸ್ಥೂಲವೂ ಭಾರವೂ ಆದ ಟಾಲ್ಕ್ ಪ್ರಭೇದ. **Tál(c)ky** (ಗು.) ; **Tálcoid** (ಗು.) ; **Tálcose** (ಗು.) ; **Tálcous** (ಗು.) ; **Tálcum** (ನಾ.) T. powder (ಮು., ಸುಗಂಧಗೊಳಿಸಿದ, ಪೂಸಿಕೊಳ್ಳುವುದಕ್ಕೆ ಉಪಯೋಗಿಸುವ) ಟಾಲ್ಕಂ ಚೂರ್ಣ.

Tálcite, Tálcose, Tálcum. Talc ನೋಡಿ.

Tale ಟೇಲ್ (ನಾ.) (ನಿಜವಾದ, ಅಥವಾ ಕಲ್ಪಿತವಾದ, ಮು., ಕಲ್ಪನಾ ಶಕ್ತಿಯಿಂದ ಒಕ್ಕಣಿಸಿದ) ಕಥೆ ; ಕಟ್ಟು, ಕಲ್ಪನಾ, ದಂತ, —ಕಥೆ (Old wives' tales ಅಡುಗೂಲಜ್ಜಿ ಕಥೆಗಳು. T. of a tub ಕ್ಷಾಗೆ ಗುಬ್ಬಿ ಕಥೆ, ನಂಬಲಾಗದ ಕಥೆ. Prefer to tell my own t. ನನಗೆ ತಿಳಿದ ಸಂಗತಿ, ಕಥೆ, —ಹೇಳುತ್ತೇನೆ ; ನನ್ನ ಒಕ್ಕಣೆ ಹೇಳುತ್ತೇನೆ. Thing tells its own t. ಅದಕ್ಕೆ ವಿವರಣೆ ಏನೂ ಬೇಕಿಲ್ಲ ; ವಿಷಯ ಸ್ಪಷ್ಟವಾಗಿಯೇ ಇದೆ) ; ದುರುದ್ದೇಶದಿಂದ ಹರಡಿದ (ನಿಜವಾದ ಅಥವಾ ಸುಳ್ಳಾದ) ಸುದ್ದಿ ; ಅಪಪ್ರಚಾರ, ಚಾಡಿ [All sorts of tales will get abroad ನಾನಾ ತೆರದ ಕಥೆಗಳು, ಸುದ್ದಿಗಳು, ಹರಡಿಬಿಡುತ್ತವೆ. If all tales be true (ಮು., ಅಪನಿಂದೆಯ ಪೀಠಿಕೆಯಾಗಿ) ಕೇಳಿದ ಕಥೆಗಳೆಲ್ಲ ನಿಜವಾಗಿದ್ದರೆ. Tell tales (out of school) (ಮು., ದುರುದ್ದೇಶದಿಂದ) ಗುಟ್ಟು ಸಂಗತಿಯನ್ನೆಲ್ಲ ಹೊರಗೆಡವು ; ಚಾಡಿ ಹೇಳು]. (ಪ್ರಾಚೀ. ಪ್ರ., ಅಲಂ., ಕಾವ್ಯ) ಸಂಖ್ಯೆ, ಮೊತ್ತ, ಒಟ್ಟು, ಎಣಿಕೆ [The t. is complete ಎಣಿಕೆ ಪೂರೈಸಿದೆ. The shepherd tells his t. ಕುರುಬ ಕುರಿಗಳ ಸಂಖ್ಯೆ ಎಣಿಸುತ್ತಾನೆ. By t. (ತೂಕಕ್ಕೆ ಅಥವಾ ಅಳತೆಗೆ ವ್ಯತಿರಿಕ್ತವಾಗಿ) ಎಣಿಕೆಯಲ್ಲಿ]. **Tálebearer** ಚಾಡಿಕೋರ. **Tálebearing** (ಗು., ನಾ.) ಚಾಡಿ ಹೇಳುವ ;—ಹೇಳುವುದು ; ಚಾಡಿಕೋರತನ(ದ). **Táleteller** ಕಥೆ ಹೇಳುವವನು, ಕಥಕ, ಕಥೆಗಾರ ; ಚಾಡಿಕೋರ.

Tálent ಟ್ಯಾಲೆಂಟ್ (ನಾ.) ಸಹಜ ಶಕ್ತಿ, ವಿಶೇಷ ಶಕ್ತಿ, ಹುಟ್ಟು ಸಾಮರ್ಥ್ಯ (*For* ಉಪ. ದೊಡನೆ) ; ಅತಿಶಯ ಬುದ್ಧಿಶಕ್ತಿ, ಮೇಧಾಶಕ್ತಿ, ಪ್ರಜ್ಞಾಶಕ್ತಿ [**Tálented** (ಗು.) ; **Tálentless** (ಗು.)] ; ಬುದ್ಧಿಶಾಲಿಗಳು, ಮೇಧಾವಿಗಳು (All the t. of the country. Looking out for local t.); ಪ್ರಾಚೀನ ಗ್ರೀಕರು, ರೋಮನರು, ಅಸ್ಸಿರಿಯನರು, ಮೊ. ರಲ್ಲಿ ಬಳಕೆಯಲ್ಲಿದ್ದ, ಒಂದು ತೂಕ ಮತ್ತು ಹಣದ ಮೊತ್ತ : ಟ್ಯಾಲೆಂಟು (Attic t. ಸು., ೨೪೩ ಪೌಂಡು, ೧೫ ಷಿ.). **T.-money** (ಕಸಬುದಾರ ಕ್ರಿಕೆಟ್ ಆಟಗಾರ, ಮೊ. ರಿಗೆ) ವಿಶೇಷ ಸಾಮರ್ಥ್ಯಕ್ಕಾಗಿ ಕೊಡುವ ಸಂಭಾವನೆ : ಸಾಮರ್ಥ್ಯ ಸಂಭಾವನೆ.

Táles (L) ಟೇಲೀಸ್ (ನಾ.) (ನ್ಯಾ. ಶಾ.) ಕ್ರಮವಾಗಿ ಆಜ್ಞೆಕೊಟ್ಟು ಕರಸಿದ ನ್ಯಾಯದರ್ಶಿಗಳ ಸಂಖ್ಯೆ ಯಾವುದೋ ಕಾರಣದಿಂದ ಕೊರೆ ಬಿದ್ದಾಗ, ನ್ಯಾಯಸ್ಥಾನದ ಬಳಿ ಇದ್ದವರಲ್ಲಿ ನ್ಯಾಯದರ್ಶಿಗಳಾಗಿ ಕೆಲಸಮಾಡಲು ಆಜ್ಞಪ್ತರಾದವರು : ಕಂಥರ್ತಿ, ಪೂರಕ, —ನ್ಯಾಯದರ್ಶಿಗಳು ; ಇವರಿಗೆ ಕಳುಹಿಸಿದ ಕರೆಯಪ್ಪಣೆ, ಆಜ್ಞೆ (Pray a t. ಕಂಥರ್ತಿ ನ್ಯಾಯದರ್ಶಿಗಳಿಗಾಗಿ ಪ್ರಾರ್ಥಿಸು) ; ಕಂಥರ್ತಿ ನ್ಯಾಯದರ್ಶಿಗಳ ಪಟ್ಟಿ. **Tálesman** ಟೇಲೀಸ್‌ಮ್ಯನ್, ಟೇಲ್ಸ್—(ನಾ.) ಕಂಥರ್ತಿ, ಪೂರಕ, —ನ್ಯಾಯದರ್ಶಿ.

Taliacótian ಟ್ಯಾಲಿಯಕೋಷ(ಷಿಯ)ನ್ (ಗು.) T. operation ತೋಳು, ಹಣೆ, ಮೊ. ಶರೀರದ ಇತರ ಭಾಗದಿಂದ ತೆಗೆದ ಅಂಗಾಂಶವನ್ನು ಸಂಯೋಜಿಸಿ ಹೊಸ ಮೂಗನ್ನು ನಿರ್ಮಿಸುವ ಶಸ್ತ್ರಚಿಕಿತ್ಸೆ: ಟ್ಯಾಲಿಯಕೋಷನ್ ನಾಸಾ ಚಿಕಿತ್ಸೆ (೧೬ನೆಯ ಶ. ಮಾ. ದಲ್ಲಿದ್ದ Tagliacozzi ಎಂಬ ಇಟಲಿಯ ಶಸ್ತ್ರವೈದ್ಯನ ಹೆಸರಿನಿಂದ)

Tálion ಟ್ಯಾಲಿಅನ್ (ನಾ.) ಮುಯ್ಯಿಗೆ ಮುಯ್ಯಿ, ಪ್ರತೀಕಾರ (ನ್ಯಾಯ) (ಉದಾ., Eye for eye, tooth for tooth). **Taliónic** —ಆನಿಕ್ (ಗು.)

Táliped ಟ್ಯಾಲಿಪೆಡ್ (ಗು., ನಾ.) (ಹುಟ್ಟಿನಿಂದಲೂ) ಸೊಟ್ಟಡಿಯ (ಪ್ರಾಣಿ, ಮನುಷ್ಯ) ; ವಕ್ರಪಾದಿ ; (ಪ್ರಾ. ವಿ.) ತಿರಿಚು ಪಾದಗಳುಳ್ಳ. **Tálipes** ಟ್ಯಾಲಿಪೀಸ್ (ನಾ.) ಸೊಟ್ಟಡಿ(ಯಾಗಿರುವುದು) ; ವಕ್ರಪಾದ (ರಚನೆ)

Tálipot ಟ್ಯಾಲಿಪಾ(ಪ)ಟ್, **-put** —ಪಟ್ (ನಾ.) (ಬೀಸಣಿಗೆಯಾಕಾರದ ಎಲೆಯ) ತಾಳೆ ಮರ ; ಓಲೆ ಮರ.

Tálisman ಟ್ಯಾಲಿಸ್ಮನ್ (ನಾ.) ಅದನ್ನು ಧರಿಸಿದವನಿಗೆ ಒಳ್ಳೆಯದಾಗುತ್ತದೆಂದು ನಂಬಿರುವ, ಮಂತ್ರಶಕ್ತಿಯ ಆಕೃತಿಗಳನ್ನು ಅಥವಾ ಅಕ್ಷರಗಳನ್ನು ಕೊರೆದಿರುವ, ಕಲ್ಲು, ಲೋಹ, ಉಂಗುರ, ಮೊ. ವು : ಯಂತ್ರ, ತಾಯಿತಿ, ರಕ್ಷೆ ; ಅದ್ಭುತ ಸಾಧಕ. **Talismánic** (ಗು.)

Talk ಟಾಕ್ (ಕ್ರಿ., ನಾ.) ಆಡು, ಮಾತಾಡು, ಸಂಭಾಷಿಸು, ಗಳಹು, ಹರಟು [T. big, tall (ಆಯಾ ಪದ ನೋಡಿ). People will t. ಜನ (ಮನ ಬಂದಂತೆ) ಆಡುತ್ತಾರೆ, ಆಡಿಕೊಳ್ಳುತ್ತಾರೆ, ಗುಲ್ಲು ಹರಡುತ್ತಾರೆ. Now you're talking (ಅಸಂ.) ಇದೀಗ ಮಾತು ; ನೀನು ಆಡುವುದನ್ನು ಒಪ್ಪಿದೆ. Is always talking ಯಾವಾಗಲೂ ಹರಟು(ತ್ತಿರು)ತ್ತಾನೆ. T. shop (Shop ನೋಡಿ). T. French ಫ್ರೆಂಚ್ ಭಾಷೆಯನ್ನು ಆಡು. Talked himself hoarse ಗಂಟಲು ಕೂತುಹೋಗುವವರೆಗೆ ಮಾತನಾಡಿದನು ; ಮಾತಾಡಿ ಮಾತಾಡಿ ಗಂಟಲೊಡೆದುಕೊಂಡನು. T. person round ಮಾತಾಡಿ—ಒಪ್ಪಿಸು, ಒಲಿಸು. Talked him out of his resolution ಮಾತಾಡಿ ಅವನು ತನ್ನ ನಿರ್ಧಾರವನ್ನು ಬಿಡುವಂತೆ ಮಾಡಿದನು. Talked him into his grave ಮಾತಾಡಿ ಮಾತಾಡಿ ಅವನನ್ನು ಗೋರಿ ಮಾಡಿದನು. Would t. a horse's hind leg off ಅವನು ತುಂಬ ಮಾತಾಳಿ, ಹರಟೆಯಮಲ್ಲ. T. (cold) turkey (ಅಮೆ. ಸಂ.) ಇದ್ದದ್ದು ಇದ್ದಹಾಗೆ ಹೇಳು. T. about ಕುರಿತು ಮಾತಾಡು, ಚರ್ಚಿಸು (Do not want to be talked about ಬೀದಿಮಾತಿಗೆ ಗುರಿಯಾಗಲು ಇಷ್ಟವಿಲ್ಲ; ಎಲ್ಲರ ಬಾಯಲ್ಲಿ ಅಲೆಯಲು ಇಷ್ಟವಿಲ್ಲ). T. at ಗೋಷ್ಠಿಯಲ್ಲಿ ಒಬ್ಬನೊಡನೆ ಮತ್ತೊಬ್ಬನನ್ನು ಕುರಿತು ಅವನ ಕಿವಿಗೆ ಬೀಳುವಂತೆ ಮಾತಾಡು : ಅಪ್ರತ್ಯಕ್ಷವಾಗಿ ಮಾತಾಡು. T. away (ಬರಿಯ) ಮಾತಿನಲ್ಲಿ ಹೊತ್ತು ಕಳೆ(ದುಬಿಡು). T. back ಹಿಂದಿರುಗಿಸಿ ಮಾತಾಡು, ಎದುರು ಜವಾಬು ಕೊಡು. T. down (ಒಬ್ಬನನ್ನು, ಅವನಿಗಿಂತ ಗಟ್ಟಿಯಾಗಿ, ಹೆಚ್ಚಾಗಿ, ಮಾತಾಡಿ) ಬಾಯಿ ಮುಚ್ಚಿಸು, ದಬಾಯಿಸಿ ಕೂರಿಸು. T. of ಚರ್ಚಿಸು, ಪ್ರಸ್ತಾಪಿಸು, ಉಲ್ಲೇಖಿಸು ; (—ನ್ನು ಮಾಡುವ) ಉದ್ದೇಶ—ಸೂಚಿಸು, ಹೇಳು. T. out (ಶಾಸನ ಸಭೆ, ಮೊ. ಗಳಲ್ಲಿ ಮಸೂದೆ, ಸೂಚನೆ, ಮೊ. ನ್ನು) ಅಧಿವೇಶನ ಮುಗಿಯುವವರೆಗೂ ಚರ್ಚೆಯನ್ನು ಲಂಬಿಸುತ್ತ, ನಿರ್ಣಯವಾಗದಂತೆ ಮಾಡು : ಮಾತು ಬೆಳಸಿ ನಿವಾರಿಸಿಬಿಡು. T. over ಸಾವಧಾನವಾಗಿ, ಸಾವಕಾಶವಾಗಿ, —ಮಾತನಾಡು, ವಿಚಾರ ಮಾಡು ; ಮಾತನಾಡಿ ಒಲಿಸು. T. round (ಯಾವ ತೀರ್ಮಾನಕ್ಕೂ ಬರದೆ) ವಿಷಯ ಬೆಳಸಿ, ದೀರ್ಘವಾಗಿ, —ಮಾತಾಡು. T. through one's hat (Hat ನೋಡಿ). T. to (ಒಬ್ಬನೊಡನೆ) ಮಾತಾಡು ; (ಬಳ. ಮಾ.) ಆಕ್ಷೇಪಿಸು, ವಾಗ್ದಂಡನೆಮಾಡು, ತರಾಟೆಗೆ ತೆಗೆದುಕೊ (Gave him a talking-to). T. up ಆಸಕ್ತಿ ಹುಟ್ಟಿಸುವುದಕ್ಕಾಗಿ ವಿಷಯವನ್ನು ಚರ್ಚಿಸು] ; (ಸಂಕೇತ, ದೂರಲೇಖನ, ನಿಸ್ತಂತು, ಮೊ. ಗಳ ಮೂಲಕ) ಸಮಾಚಾರ ಕಳಿಸು. (ನಾ.) ಮಾತು, ಸಂಭಾಷಣೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಲ್ಲಾಪ [Small t. (Small ನೋಡಿ). It will end in t. ಅದು ಬರಿಯ ಮಾತಿನಲ್ಲಿ ಮುಗಿಯುತ್ತದೆ (ಕೆಲಸವೇನೂ ಆಗುವುದಿಲ್ಲ ಎಂಬರ್ಥದಲ್ಲಿ)] ; ಬೀದಿ—ಮಾತು, ಸುದ್ದಿ (They, their quarrels, are the t. of the town) ; (ಸಂಭಾಷಣೆಯ ರೀತಿಯಲ್ಲಿ ಮಾಡಿದ) ಉಪನ್ಯಾಸ, ಭಾಷಣ. **Tálkative** (ಗು.) ಸುಮ್ಮನೆ ಮಾತಾಡುವ, ಹರಟುವ, ಮಾತಾಳಿಯಾದ. **Tálkativeness** (ನಾ.) ; **Tálkee-tálkee** (ನಾ.) ಬರಿ ವಟವಟ ಮಾತು, ಮಾತಿನ ಸುರಿಮಳೆ; (ನೀಗ್ರೋ ಜನ, ಮೊ. ರ) ಹರುಕು ಮುರುಕು ಇಂಗ್ಲಿಷು. **Tálker** (ನಾ.) ; **Tálkies** (ಸಾ., ಬ. ವ.) (ಅಸಂ.) ಮಾತಾಡುವ ಚಲನಚಿತ್ರಗಳು ; ವಾಕ್ಚಿತ್ರಗಳು. **Tálking** (ಗು.) (ಕ್ರಿಯಾರ್ಥಗಳಲ್ಲಿ) ; ಮಾತಾಡುವ (ಶಕ್ತಿಯುಳ್ಳ) (T. parrot) ; ಭಾವಗರ್ಭಿತ, ಅರ್ಥಪೂರ್ಣ (T. eyes)

Tall ಟಾಲ್ (ಗು., ಕ್ರಿ. ವಿ.) (ಸಾಮಾನ್ಯ ಮಟ್ಟಕ್ಕಿಂತ) ಎತ್ತರವಾದ, ಉನ್ನತ ; ಎತ್ತರವುಳ್ಳ [He is six feet t. (ಈಗ ಸಾ., high ಪದ ಪ್ರ.)] ; (ಅಸಂ.) ಅತಿಶಯೋಕ್ತಿಯಿಂದ ತುಂಬಿದ, ಉತ್ಪ್ರೇಕ್ಷೆಯ, ಅಳತೆಗೆಟ್ಟ, ಜಂಬದ, ಬಡಾಯಿಯ (A t. story, t. talk. A t. order ನ್ಯಾಯವಲ್ಲದ, ಮಿತಿಮೀರಿದ, ಕೇಳಿಕೆ). (ಕ್ರಿ. ವಿ.) Talk t. ಜಂಬ ಹೊಡೆ, ಬಡಾಯಿ ಕೊಚ್ಚು. **Tállboy** (ನಾ.) (ಐದಡಿ ಅಥವಾ ಹೆಚ್ಚು) ಎತ್ತರವಾದ ಸೆಳೆಖಾನೆ ಪೆಟ್ಟಿಗೆ; ಹೊಗೆಗೂಡಿನ ಮೇಲ್ಕೊಳವಿ, ತಲೆಗೊಳವಿ. **Tállness** (ನಾ.)

Tállow ಟ್ಯಾಲೊ (ನಾ., ಕ್ರಿ. ಸಕ.) ಹೆಚ್ಚು ಗಟ್ಟಿಯಾದ ಮತ್ತು ಕಡಮೆ ಮಿಶ್ರಣ ಶಕ್ತಿಯುಳ್ಳ (ಮು., ಪ್ರಾಣಿಗಳ) ಮೇದಸ್ಸನ್ನು ಕರಗಿಸುವುದರಿಂದ ಬರುವ, ಮೋಂಬತ್ತಿ, ಸಾಬೂನು, ಮೊ. ಗಳನ್ನು ಮಾಡಲು ಉಪಯೋಗಿಸುವ ಜಿಡ್ಡು ಪದಾರ್ಥ: ಗಟ್ಟಿ—ಕೊಬ್ಬು, ಚರಬಿ [Vegetable t. (ಪ್ರಾಣಿಯ ಕೊಬ್ಬಿನಂತೆ ಉಪಯೋಗಿಸಲಾಗುವ) ಸಸ್ಯದ ಕೊಬ್ಬು. T. chandler ಕೊಬ್ಬು ಮೋಂಬತ್ತಿಗಾರ. T.-drop ಒಂದು ಪಕ್ಕದಲ್ಲಿ ಅಥವಾ ಎರಡೂ ಪಕ್ಕಗಳಲ್ಲಿ ಗುಂಡುಬ್ಬು ಇರುವಂತೆ, ಗುಬುಟಿರುವಂತೆ, ಪ್ರಶಸ್ತಶಿಲೆಗಳನ್ನು ಕಡೆಯುವ ಒಂದು ರೀತಿ: ಗುಬುಟು ಕಡೆತ. T.-face ಬಿಳಿಚಿಕೊಂಡಿರುವವನು. T.-tree ಸಸ್ಯದ ಕೊಬ್ಬು ದೊರೆಯುವ ಹಲವು ಬಗೆಯ ಮರ: ಕೊಬ್ಬಿನ ಮರ]. (ಕ್ರಿ.) ಕೊಬ್ಬು, ಚರಬಿ, —ಹಾಕು ; (ಕುರಿಯನ್ನು) ಕೊಬ್ಬಿಸು. **Tállower** (ನಾ.) ಕೊಬ್ಬು ಮೋಂಬತ್ತಿಗಾರ. **Tállowish** (ಗು.) ಕೊಬ್ಬಿನಂಥ. **Tállowy** (ಗು.) ಕೊಬ್ಬಿನ—ಗುಣವುಳ್ಳ, ಸ್ವಭಾವದ ; (ಬಣ್ಣದಲ್ಲಿ) ಕೊಬ್ಬಿನಂಥ; (ಪ್ರಾಣಿಯ ವಿಷಯದಲ್ಲಿ) ಕೊಬ್ಬು ತುಂಬಿರುವ, ಕೊಬ್ಬಿದ.

Tálly ಟ್ಯಾಲಿ (ನಾ., ಕ್ರಿ.) ಲೆಕ್ಕದ ಬಾಬುಗಳಿಗೆ ತಕ್ಕ ಕಚ್ಚುಗಳನ್ನು ಗುರುತಿಸಿ, ಬಳಿಕ ಎರಡಾಗಿ ಉದ್ದಕ್ಕೆ ಸೀಳಿ ಒಂದು ಸೀಳನ್ನು ಸಾಲಿಗನೂ ಮತ್ತೊಂದು ಸೀಳನ್ನು ಸಾಲಗಾರನೂ ಇಟ್ಟುಕೊಳ್ಳುತ್ತಿದ್ದ ಲೆಕ್ಕದ ಕೋಲು, ಕಡ್ಡಿ: ತಾಳೆ (ಲೆಕ್ಕದ ಕೋಲು) ; ತಾಳೆ ಲೆಕ್ಕ ; ಲೆಕ್ಕ, ಎಣಿಕೆ, ಗಣನೆ. ಕೊಟ್ಟ ಅಥವಾ ತೆಗೆದುಕೊಂಡ ನಿರ್ದಿಷ್ಟ ಸಂಖ್ಯೆಯ (ಉದಾ., ೧೨ ; ೧೦೦) ವಸ್ತುಗಳನ್ನು ಸೂಚಿಸಲು ಮಾಡಿದ ಗುರುತು: ತಂಡ ಗುರುತು ; ಏಕಮಾನವಾಗಿ ಉಪಯೋಗಿಸುವ ಅಂಥ ಸಂಖ್ಯೆ: ತಂಡ ಸಂಖ್ಯೆ [Buy goods by the t. (ಡಜನ್, ನೂರು, ಹೀಗೆ) ತಂಡಗಟ್ಟಳೆಯಾಗಿ ಪದಾರ್ಥಗಳನ್ನು ಕೊಳ್ಳು] ; ಸರಕುಗಳ ಸಂಖ್ಯೆಯನ್ನು ಗಟ್ಟಿಯಾಗಿ ಎಣಿಸುವಾಗ ತಂಡ ಸಂಖ್ಯಾಸರಣಿಯ ಕೊನೆಯ ಸಂಖ್ಯೆಯನ್ನು ಮುಟ್ಟಿದಾಗ ಹೇಳುವ ಮಾತು: ಟಟು [16, 18, t. ೧೬, ೧೮, ಟಟು (ಎಂದರೆ ೨೦) ; 96, 98, t. ೯೬, ೯೮, ಟಟು (೧೦೦)]. ಪದಾರ್ಥವನ್ನು ಗುರುತಿಸುವುದಕ್ಕಾಗಿ ಅದರ ಹೆಸರು, ಮೊ. ಗಳನ್ನು ನಮೂದಿಸಿ ಹಚ್ಚಿರುವ ಮರ, ಲೋಹ, ರಟ್ಟು, ಮೊ. ಗಳ ಬಿಲ್ಲೆ: ಹೆಸರು, ಗುರುತು, —ಬಿಲ್ಲೆ, ಚೀಟಿ (Horticultural tallies ತೋಟದ ಸಸ್ಯಗಳ ಹೆಸರು ಬಿಲ್ಲೆಗಳು). ಜವಾಬಾದುದು, ಜೋಡಿ, ಜೊತೆ, ದುಪ್ರತಿ (*Of* ಉಪ. ದೊಡನೆ) ; (ರೂಪ.) ತಾಳೆ, ಹೊಂದಿಕೆ. [**Tállyman** (ಸರಕನ್ನು ಸಾಲವಾಗಿ ಕೊಟ್ಟು ಕಂತುಗಳಲ್ಲಿ ಹಣ ಪಡೆಯುವ) ತಾಳೆ ಲೆಕ್ಕದ ಅಂಗಡಿಯವನು ; ತಾಳೆ ಲೆಕ್ಕದವನು ; ಉಚ್ಚಾಪತಿ ಅಂಗಡಿಯವನು, ಕಂತುಸಾಲದ ಅಂಗಡಿಯವನು ; ಸರಕುಗಳನ್ನು ಮಾದರಿ ತೋರಿಸಿ ಮಾರಾಟ ಮಾಡುವವನು. **T.-sheet** ತಾಳೆ ಲೆಕ್ಕದ—ಹಾಳೆ, ಕಾಗದ. **T. shop** ತಾಳೆ ಲೆಕ್ಕದ ಅಂಗಡಿ ; ಕಂತುಸಾಲದ ಅಂಗಡಿ ; ಕೈಗಡದ ಅಂಗಡಿ. **T. system, trade** ತಾಳೆ ಲೆಕ್ಕ—ಪದ್ಧತಿ, ವ್ಯಾಪಾರ]. (ಕ್ರಿ.) ತಾಳೆಲೆಕ್ಕ —ಇಡು, ಎಣಿಸು ; (ನಾವೆ) (ಹಾಯಿಯನ್ನು) ಬಿಗಿಯಾಗಿ ಎಳೆ(ದು ಕಟ್ಟು) ; (ಸರಿ)ಹೊಂದು ; ತಾಳೆ—ಬರು, ಆಗು, ನೋಡು (*With* ಉಪ. ದೊಡನೆ) (Goods do not t. with invoice ಸರಕಿಗೂ ಸರಕುಪಟ್ಟಿಗೂ ತಾಳೆಯಾಗುವುದಿಲ್ಲ). **Tállier** (ನಾ.) ಲೆಕ್ಕ ಇಡುವವನು, ಎಣಿಕೆಗಾರ.

Tálly-hó ಟ್ಯಾಲಿಹೋ (ಭಾವ. ಅವ್ಯ., ನಾ., ಕ್ರಿ.) ಬೇಟೆಗಾರನು ಬೇಟೆನಾಯಿಗಳನ್ನು ಹುರಿದುಂಬಿಸುವ ಕೂಗು. (ಕ್ರಿ.) ಈ ಕೂಗನ್ನು ಕೂಗು ; —ಕೂಗಿ ಹುರಿದುಂಬಿಸು.

Tálmi-gold ಟಾ(ಟ್ಯಾ)ಲ್ಮಿಗೋಲ್ಡ್ (ನಾ.) ಚಿನ್ನದ ಮುಲಾಮಿನ ಹಿತ್ತಾಳೆ ; ಗಿಲೀಟು (ಮಾಡಿದ) ಹಿತ್ತಾಳೆ.

Tálmud ಟ್ಯಾಲ್ಮಡ್, **Talmúd** ಟಾಲ್ಮೂಡ್ (ನಾ.) ಯೆಹೂದ್ಯರ ಧರ್ಮಶಾಸ್ತ್ರ. **Talmúdic(al)** (ಗು.) ; **Talmúdist** (ನಾ.) ; **Talmudístic** (ಗು.) ಯೆಹೂದ್ಯ ಧರ್ಮಶಾಸ್ತ್ರದ—ಸಂಕಲನಕಾರ, ಅನುಯಾಯಿ, ಪಂಡಿತ.

Tálon ಟ್ಯಾಲನ್ (ನಾ.) (ಮು., ಹಿಂಸ್ರ ಪಕ್ಷಿಯ) ಮೊನೆಯುಗುರು, ನಖರ, ಪಂಜಾ ; ಹಂಚಿ ಉಳಿದ ಇಸ್ಪೀಟೆಲೆಗಳು, ಉಳಿಕೆಯೆಲೆ ; ಬೀಗದ ಅಗುಳಿಯನ್ನು ತಳ್ಳುವಾಗ ಬೀಗದಕೈ ಒತ್ತುವ ಅಗುಳಿಯ ಭಾಗ: ಅಗುಳಿಯ ಭುಜ. ಕತ್ತಿಯಲಗಿನ ಹಿಮ್ಮಡಿ. (-)**taloned** (ಗು.)

Talúk, -oók ಟಾಲೂ(ಲು)ಕ್ (ನಾ.) ಇಂಡಿಯದಲ್ಲಿ ಜಿಲ್ಲೆಯ ವಿಭಾಗ: ತಾಲೂಕು ; ಜಮೀನುದಾರಿ. **Talúkdar** (ನಾ.) ತಾಲೂಕುದಾರ, ಜಮೀನುದಾರ.

Tálus ಟೇಲಸ್ (ನಾ. ; ಬ. ವ. -li —ಲೈ) (ಅಂ. ರ. ಶಾ.) ಕಾಲಿನ ಹರಡು, ಹರಡೆಲುಬು ; ಒಂದು ಬಗೆಯ ಸೊಟ್ಟಡಿ, ವಕ್ರಪಾದ ; (ತುದಿ ಚೂಪಾಗುತ್ತ ಹೋಗುವ ಅಥವಾ ದಡಕ್ಕೆ ಆನಿಕೊಂಡಿರುವ) ಗೋಡೆಯ ಓರೆ ; (ಭೂ. ವಿ.) ಪ್ರಪಾತದ ಬುಡದಲ್ಲಿಯ ಕಲ್ಲುಚೂರುಗಳ ಓರೆ ರಾಶಿ: ಓರೆ ಕಲ್ಲುರಾಶಿ.

Tamándua ಟಮ್ಯಾಂಡುಅ, **Támanoir** ಟಾಮಾನ್ವಾರ್ (ನಾ.) ಹಲವು ಬಗೆಯ, ಇರುವೆ ತಿನ್ನುವ ಮೃಗ.

Támarind ಟ್ಯಾಮರಿಂಡ್ (ನಾ.) ಹುಣಿಸೆ—ಹಣ್ಣು, ಮರ. **T.-fish** ಮೀನುಗೊಜ್ಜು.

Tamásha ಟಮಾಷ (ನಾ.) (ಆಂ. ಇಂ.) ತಮಾಷೆ, ವಿನೋದ (ಪ್ರದರ್ಶನ)

Támbour ಟ್ಯಾಂಬೂ(ಅ)ರ್, --ಬರ್ (ನಾ., ಕ್ರಿ. ಸಕ.) ಒಂದು ಬಗೆಯ ತಮಟೆ, ಸಣ್ಣ ನಗಾರಿ, ಮದ್ದಲೆ. ಕಸೂತಿಯಲಂಕಾರ ಮಾಡುವುದಕ್ಕಾಗಿ ರೇಷ್ಮೆ ಬಟ್ಟೆ, ಮೊ. ನ್ನು ಹರಡಿ ಹಿಡಿದುಕೊಳ್ಳುವ ದುಂಡನೆಯ ಕಟ್ಟು: ಕಸೂತಿ ದುಂಡುಕಟ್ಟು ; ಅಲಂಕಾರಮಾಡಿದ ಕಸೂತಿ ಬಟ್ಟೆ. (ವಾ. ಶಾ.) ಕಂಬದ ದಿಂಡಿನಲ್ಲಿಯ ಉರುಳೆಯಾಕಾರದ ಕಲ್ಲು: ದಿಂಡು ಕಲ್ಲು ; ಯಾವುದಾದರೂ ರಚನೆಯಲ್ಲಿ ಉರುಳೆಯಾಕಾರದ ಭಾಗ: ವರ್ತುಲ, ದಿಂಡು. ಮದ್ದಲೆಯಾಕಾರದ ಅಥವಾ ಮದ್ದಲೆ ಶಬ್ದ ಮಾಡುವ ಹಲವು ಬಗೆಯ ಮೀನು: ಮದ್ದಲೆ ಮೀನು ; (ಕೋಟೆ ರಚನೆ) (ರಸ್ತೆ, ಹೆಬ್ಬಾಗಿಲು, ಮೊ. ಗಳಿಗೆ ಹಾಕಿದ) ದಸಿಬೇಲಿ(ಯ ಕಾಪು). (ಕ್ರಿ.) (ಕಸೂತಿ ಕಟ್ಟಿನಮೇಲೆ ಹರಡಿ) ಕಸೂತಿಯಲಂಕಾರ ಮಾಡು, ಕಸೂತಿ ಹಾಕು. **Támbourin** ಟ್ಯಾಂಬುರಿನ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ನಾ.) (ಫ್ರಾನ್ಸ್ ದೇಶದ ಹಳೆಯ ಪ್ರೊವೆನ್ಸ್ ಪ್ರಾಂತದಲ್ಲಿ ಬಳಕೆಯಲ್ಲಿದ್ದ) ನೀಳ ಸಣ್ಣ ಮದ್ದಲೆ; ಈ ಮದ್ದಲೆಯ ಕುಣಿತ(ಕ್ಕೆ ತಕ್ಕ ಸಂಗೀತ). **Tambouríne** ಟ್ಯಾಂಬುರೀನ್ (ನಾ.) ಮರದ ಅಥವಾ ಲೋಹದ ದುಂಡುಕಟ್ಟಿಗೆ ಚರ್ಮಕಾಗದವನ್ನು ಒಂದು ಮುಖಕ್ಕೆ ಬಿಗಿದು, ಘಣಘಣಿಸುವ ಲೋಹದ ಬಿಲ್ಲೆಗಳನ್ನು ಅಳವಡಿಸಿದ ಸಣ್ಣ ತಮಟೆ: ಖಂಜರಿ; ಪ್ರೊವೆನ್ಸ್ ಪ್ರಾಂತದ ಒಂದು ಬಗೆಯ ನೃತ್ಯ(ಕ್ಕೆ ತಕ್ಕ ಸಂಗೀತ). ಆಫ್ರಿಕದ ಒಂದು ಬಗೆಯ ಪಾರಿವಾಳ.

Tame ಟೇಂ (ಕ್ರಿ. ಸಕ., ಗು.) (ಕಾಡುಪ್ರಾಣಿ, ಹಕ್ಕಿ, ಮೊ. ನ್ನು) ಪಳಗಿಸು, ಸಾಧುಮಾಡು; (ಒಬ್ಬನನ್ನು, ಅವನ ಕೆಚ್ಚು, ಉತ್ಸಾಹ, ಮೊ. ನ್ನು) ಕುಗ್ಗಿಸು, ಇಳಿಸು, ಮುರಿ, ದಮನಮಾಡು. (ಗು.) ಪಳಗಿ(ಸಿ)ದ, ಸಾಧುವಾದ [T. cat (ರೂಪ.) ಕೆಲಸಕ್ಕೆ ಒದಗತಕ್ಕವನೆಂದು ಹತ್ತಿರ ಸೇರಿಸಿಕೊಂಡ ಆಶ್ರಿತ: ಮೆದುಗಲ ಬಂಟ]. (ಬಳ. ಮಾ.) (ನೆಲದ ಅಥವಾ ಗಿಡದ ವಿಷಯದಲ್ಲಿ) ಸಾಗುವಳಿ ಮಾಡಿದ, ಬೆಳೆದ, ಬೆಳಸಿದ; ತಗ್ಗಿ ನಡೆಯುವ, ನಮ್ರ, ಮೆದುಗಲ, ನಿಸ್ಸತ್ತ್ವದ, ನಿಸ್ಸಾರ, ಸಪ್ಪೆ (The tamest of slaves. T. scenery, description). **Támable** (ಗು.); **Támableness** (ನಾ.); **Tamabílity** (ನಾ.); **Támeless** (ಗು.); **Támely** (ಕ್ರಿ.ವಿ.); **Támeness** (ನಾ.); **(-)tamer** (ನಾ.)

Támil ಟ್ಯಾಮಿಲ್ (ನಾ.) ತಮಿಳು (ಭಾಷೆ), ತಮಿಳ (ಮನುಷ್ಯ). **Tamílian** (ಗು.)

Támmany ಟ್ಯಾಮನಿ (ನಾ.) ನ್ಯೂಯಾರ್ಕಿನ ಟ್ಯಾಮನಿ ಹಾಲ್ ಎಂಬ ಕಟ್ಟಡದಲ್ಲಿರುವ, ಪ್ರಜಾಪಕ್ಷದ (ಡೆಮೊಕ್ರ್ಯಾಟಿಕ್ ಪಾರ್ಟಿಯ) ಕೇಂದ್ರ ಸಂಸ್ಥೆ (ಅನೇಕ ವೇಳೆ ರಾಜಕೀಯ ದುರ್ವ್ಯಾಪಾರದ ಸೂಚಕವಾಗಿ ಪ್ರ.). **Támmanyism** (ನಾ.)

Tam-o'-shánter ಟ್ಯಾಮಷ್ಯಾಂಟರ್, **Támmy** ಟ್ಯಾಮಿ (ನಾ.) ಹುಬ್ಬುಗಳ ಸುತ್ತಲೂ ಬಿಗಿಯಾಗಿಯೂ, ಮೇಲುಗಡೆ ಸಡಿಲವಾಗಿಯೂ ಉಬ್ಬಿಯೂ ಇರುವ, ಹತ್ತಿಯ ಬಟ್ಟೆಯ ಅಥವಾ ಉಣ್ಣೆಯ ಬಟ್ಟೆಯ ಒಂದು ಟೋಪಿ.

Tamp ಟ್ಯಾಂಪ್ (ಕ್ರಿ. ಸಕ.) (ಸಿಡಿತದ ಪೂರ್ಣ ಶಕ್ತಿಯು ಉಪಯೋಗಕ್ಕೆ ಬರುವಂತೆ) ಸಿಡಿಗಂಡಿಯನ್ನು (ಜೇಡಿ, ಮೊ. ಗಳಿಂದ) ಮುಚ್ಚು, ಗಿಡಿ; (ರಸ್ತೆಯ ಜಲ್ಲಿ, ಮೊ. ನ್ನು) ದಮ್ಮಸು ಮಾಡು. **Támping** (ನಾ.)

Támpan ಟ್ಯಾಂಪ್ಯಾನ್ (ನಾ.) ದ. ಆಫ್ರಿಕದ ವಿಷದ ಉಣ್ಣಿ.

Támper ಟ್ಯಾಂಪರ್ (ಕ್ರಿ. ಅಕ.) ತಂಟೆಗೆ, ಗೊಡವೆಗೆ, —ಹೋಗು; (ಮಧ್ಯೇ) ಕೈಹಾಕು; (ಅಂತಿಮ ಇಷ್ಟಪತ್ರ, ಹಸ್ತಪ್ರತಿ, ಮೊ. ಗಳನ್ನು; ಅಕ್ರಮವಾಗಿ, ಅಧಿಕಾರವಿಲ್ಲದೆ) ತಿದ್ದು, ತಿದ್ದಿಬಿಡು (*With* ಉಪ. ದೊಡನೆ); ಗುಪ್ತ ಪ್ರಭಾವ ಬೀರು, ರಹಸ್ಯವಾಗಿ ಒಳಹಾಕಿಕೊ; ಲಂಚ—ತಿನ್ನಿಸು, ಕೊಡು. **Támperer** (ನಾ.)

Támpion ಟ್ಯಾಂಪಿಅನ್ (ನಾ.) (ಫಿರಂಗಿಯ ಬಾಯಿಗೆ ಗಿಡಿಯುವ) ಮರದ ಬಿರಡೆ; (ನಾದಕೊಳವೆಯ) ಬಿರಡೆ.

Támpon ಟ್ಯಾಂಪನ್ (ನಾ., ಕ್ರಿ. ಸಕ.) ರಕ್ತಸ್ರಾವವನ್ನು ತಡೆಯುವ ಗಿಡಿ; ರಕ್ತ—ಬಿರಡೆ, ಗಿಡಿ; (ಕೂದಲನ್ನು ಒತ್ತಿ ಹಿಡಿಯುವ) ಒತ್ತು—ಕಟ್ಟು, ಮೆತ್ತೆ. (ಕ್ರಿ.) (ಗಾಯ, ಕಂಡಿ, ಮೊ. ನ್ನು) ಗಿಡಿದು, ಬಿರಡೆ ಹಾಕಿ, —ಮುಚ್ಚು. **Tamponáde** (ನಾ.), **Támponage** (ನಾ.), **Támponment** (ನಾ.) ಗಿಡಿಯುವುದು, ಬಿರಡೆ ಪ್ರಯೋಗ.

Támtam. **Tomtom** ನೋಡಿ.

Tan[1] ಟ್ಯಾನ್ (ಕ್ರಿ., ನಾ., ಗು.) (ಟ್ಯಾನಿಕ್ ಆಮ್ಲದ ದ್ರಾವಣದಲ್ಲಿ ನೆನಸಿ ಅಥವಾ ಖನಿಜಲವಣಗಳನ್ನು ಉಪಯೋಗಿಸಿ) (ಚರ್ಮ) ಹದಮಾಡು; (ಬಿಸಿಲಿಗೆ ಒಡ್ಡಿ) ಕಂದು (ಬಣ್ಣಕ್ಕೆ)—ತಿರುಗು, ತಿರುಗಿಸು; ಕಂದಿಹೋಗು, ಕಂದಿಸು; (ಕೃತಕ ಅಮೃತಶಿಲೆ, ಮಿನುಬಲೆ, ಮೊ. ನ್ನು; ಸಂಸ್ಕಾರಕೊಟ್ಟು) ಗಡುಸುಮಾಡು; (—ಗಳಿಗೆ) ಗಟ್ಟಿ ಹದ ಕೊಡು; (ಅಸಂ.) ಚೆನ್ನಾಗಿ ಹೊಡೆ, ಸದೆಬಡಿ. (ನಾ.) ಚರ್ಮ ಹದಮಾಡುವ—ಜಜ್ಜಿದ ಚಕ್ಕೆ, ತೊಗಟೆ; ಇದರ ಹಳದಿಗೆಂದು ಬಣ್ಣ; (ಬಿಸಿಲ ತಾಪದಿಂದ ಆದ ಮೈ ಚರ್ಮದ) ಬಿಸಿಲುಗೆಂದು; (ಅಸಂ.) ಸರ್ಕಸ್ಸು (The t.); ಟ್ಯಾನಿಕ್ ಆಮ್ಲವನ್ನು ತೆಗೆದುಹಾಕಿರುವ ಚಕ್ಕೆ, ತೊಗಟೆ: ತೊಗಟೆ—ಹಿಂಡಿ, ಚರಟ (=Spent t.); [T.-balls (ಉರುವಲಾಗಿ ಉಪಯೋಗಿಸುವ) ತೊಗಟೆ ಹಿಂಡಿಯುಂಡೆಗಳು. T.-liquor, -ooze, -pickle ಚರ್ಮ ಹದಮಾಡುವ ಕಷಾಯ; ಚಕ್ಕೆ ಕಷಾಯ. T.-yard ಚರ್ಮ ಹದಮಾಡುವ ಅಂಗಳ]. (ಗು.) ಕಂದು ಬಣ್ಣದ. **Tánnable** (ಗು.); **Tánnage** (ನಾ.) ಚರ್ಮ ಹದಮಾಡುವುದು. **Tánner** (ನಾ.); **Tánnery** (ನಾ.) ಚರ್ಮ ಹದಮಾಡುವ—ಕಾರಖಾನೆ, ಸ್ಥಳ: ಚರ್ಮಶಾಲೆ. **Tánnic** (ಗು.) (ಓಕ್, ಮೊ. ರ) ತೊಗಟೆಯ, ಚಕ್ಕೆಯ [T. acid ಓಕ್ ಮತ್ತು ಇತರ ಮರಗಳ ತೊಗಟೆ, ಮೊ. ಗಳಿಂದ ತೆಗೆದ ಬಂಧಕ ವಸ್ತು: ಟ್ಯಾನಿಕ್ ಆಮ್ಲ (=**Tánnin** ನಾ.)]. **Tánnate** (ನಾ.) ಟ್ಯಾನಿಕ್ (ಆಮ್ಲದ) ಲವಣ. **Tanníferous** (ಗು.) ಟ್ಯಾನಿಕ್ ಆಮ್ಲವುಳ್ಳ. **Tánning** (ನಾ.)

Tan[2]. **Tangent** ನೋಡಿ.

Tana ಟಾನ, **Tánna** ಟ್ಯಾನ (ನಾ.) (ಇಂಡಿಯದಲ್ಲಿ) (ಸೈನಿಕ) ಠಾಣ್ಯ, (ಪೊಲೀಸು) ಠಾಣೆ. **Tán(n)adar** (ನಾ.) ಠಾಣೆಯ ಮುಖ್ಯಾಧಿಕಾರಿ; ಠಾಣೇದಾರ.

Tánager ಟ್ಯಾನಜರ್ (ನಾ.) ಉಜ್ಜ್ವಲ ವರ್ಣದ ಪುಕ್ಕವುಳ್ಳ, ಅಮೆರಿಕದ ಹಲವು ಬಗೆಯ ಹಕ್ಕಿ. **Tánagrine** —ಗ್ರಿ(ೖ)ನ್ (ಗು.) ಟ್ಯಾನಜರ್ ಹಕ್ಕಿಯ (ವರ್ಗದ). **Tánagroid** (ಗು.) ಟ್ಯಾನಜರ್ ಹಕ್ಕಿಯಂಥ.

Tándem ಟ್ಯಾಂಡೆಂ (ಕ್ರಿ. ವಿ., ನಾ., ಗು.) (ಹೂಡಿದ ಕುದುರೆಗಳ ವಿಷಯದಲ್ಲಿ) ಒಂದರ ಹಿಂದೆ ಒಂದರಂತೆ, ಏಕಸಾಲು, ಬೆನ್ಸಾಲು [Drive t. ಬೆನ್ಸಾಲು (ಕುದುರೆಗಳನ್ನು) ನಡಸು]. (ನಾ.) ಏಕಸಾಲು ಕುದುರೆಗಳು (ಹೂಡಿದ ಬಂಡಿ); ಬೆನ್ಸಾಲು—ಪೀಠಗಳ ಬೈಸಿಕಲ್ಲು, ಟ್ರೈಸಿಕಲ್ಲು. (ಗು.) (ಬೈಸಿಕಲ್ಲಿನ ವಿಷಯದಲ್ಲಿ) ಬೆನ್ಸಾಲು ಪೀಠಗಳ.

Tándstickor ಟ್ಯಾಂಡ್‌ಸ್ಟಿಕರ್ (ನಾ.) (ಸ್ವೀಡನಿನಲ್ಲಿ ತಯಾರಾಗುವ) ಗೀರು ಬೆಂಕಿಕಡ್ಡಿ [=Lucifer Match (Lucifer ನೋಡಿ)]

Tang[1] ಟ್ಯಾಂಗ್ (ನಾ., ಕ್ರಿ. ಸಕ.) ಹಿಡಿಕೆಯೊಳಕ್ಕೆ ಹೋಗುವ (ಉಳಿ, ಮೊ. ಗಳ) ಮೂಲ, ಬುಡ: ಕೊಟ್ಟು. ಜೋರು, ಕಟು,—ವಾಸನೆ, ರುಚಿ; ವಿಶಿಷ್ಟ—ಲಕ್ಷಣ, ಗುಣ. (ಕ್ರಿ.) ಕೊಟ್ಟು—ಇಡು, ಮಾಡು. **Tángy** ಟ್ಯಾಂಗಿ (ಗು.) ಕಟುವಾಸನೆಯ; (—ರ) ಲಕ್ಷಣದ, ಧಾಯೆಯುಳ್ಳ.

Tang[2] ಟ್ಯಾಂಗ್ (ನಾ.) ಹಲವು ಬಗೆಯ ಸಮುದ್ರದ ಕಳೆ.

Tang[3] ಟ್ಯಾಂಗ್ (ಕ್ರಿ., ನಾ.) ಠಣ್, ಟಂಗ್,—ಶಬ್ದ (ಆಗು, ಮಾಡು); ಠಂಕಾರ (ಮಾಡು); (ಲೋಹದ ತುಂಡುಗಳನ್ನು) ಠಣ್ ಠಣ್ ಎಂದು ಬಡಿದು (ಜೇನುಹುಳುಗಳನ್ನು) ಗೂಡು ಸೇರುವಂತೆ ಮಾಡು.

Tángent ಟ್ಯಾಂಜೆಂಟ್ (ಗು., ನಾ.) ಒಂದು (ವಕ್ರ) ರೇಖೆಯನ್ನಾಗಲಿ ಮೇಲ್ಮೈಯನ್ನಾಗಲಿ ಒಂದು ಬಿಂದುವಿನಲ್ಲಿ ಮುಟ್ಟುವ, (ಲಂಬಿಸಿದರೂ) ಅದನ್ನು ಕತ್ತರಿಸದ (ರೇಖೆ): ಸ್ಪರ್ಶಕ (ರೇಖೆ) [Fly, go, off at a t. (ಪ್ರಸಕ್ತ ವಿಷಯ, ಆಲೋಚನಾ ಸರಣಿ, ಮೊ. ನ್ನು ಬಿಟ್ಟು) ತಟಕ್ಕನೆ ಬೇರೆ ದಾರಿಯಲ್ಲಿ ಹೋಗು; ಪೂರ್ವಾಪರ ಸಂಬಂಧವಿಲ್ಲದೆ ಹೋಗು; ಎತ್ತಲೋ—ಹೋಗು, ತಿರುಗಿಬಿಡು]; (ತ್ರಿಕೋನಮಿತಿ; ಸಂಕ್ಷಿಪ್ತ: **Tan**) ಕಾಟಕೋನ ತ್ರಿಕೋನದಲ್ಲಿ ಲಂಬರೇಖೆಗೂ ಆಧಾರ ರೇಖೆಗೂ ಇರುವ ಪ್ರಮಾಣ: ಸ್ಪರ್ಶಕ (=T. of an angle). T.-balance ಸಾ., ಲಂಬಾಕಾರದಲ್ಲಿ ಅಳವಡಿಸಿದ, ಕೆಳ ತುದಿ ಚೂಪಾಗಿರುವ, ಮೇಲು ತುದಿ ತಕ್ಕಡಿ ತಟ್ಟೆಯನ್ನು ತೂಗಹಾಕಲು ಅನುಕೂಲಸುವಂತೆ ಕೊಂಚ ಬಾಗಿರುವ, ಮೇಲು ತುದಿಯ ಹತ್ತಿರ ಕೀಲಿಸಿರುವ ಸನ್ನೆ ನಲಕರಣೆಗೆ ಲಂಬವಾಗಿ ಹೊಂದಿಸಿರುವ ವೃತ್ತಚಾಪ ಫಲಕದ ಮೇಲೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೂಚಿ ತಿರುಗುವುದರಿಂದ ತೂಕವನ್ನು ಗೊತ್ತುಮಾಡುವ ಒಂದು ಬಗೆಯ ತಕ್ಕಡಿ : ಸ್ಪರ್ಶಕ ತಕ್ಕಡಿ. **Tángency** (ನಾ.) ; **Tangéntial** —ಜೆನ್ಷಲ್ (ಗು.) ; **Tangéntially** (ಕ್ರಿ. ವಿ.)

Tangeríne ಟ್ಯಾಂಜೆರೀನ್ (ಗು., ನಾ.) ಆಫ್ರಿಕದ ಟ್ಯಾಂಜಿಯರ್ಸ್ ಪ್ರಾಂತದ(ವನು). T. orange ಸಣ್ಣ ಚಪ್ಪಟೆ ಜಾತಿಯ ಕಿತ್ತಿಳೆ.

Tángible ಟ್ಯಾಂಜಿಬ್‌ಲ್ (ಗು.) ಮುಟ್ಟಲಾಗುವ, ಮುಟ್ಟಿ ತಿಳಿಯಲಾಗುವ, ಸ್ಪರ್ಶ್ಯ; ಹಿಡಿತಕ್ಕೆ ಸಿಕ್ಕುವ ; ನಿಷ್ಕೃಷ್ಟ, ಸ್ಪಷ್ಟ, ಸ್ಫುಟ, ವಾಸ್ತವ (T. advantages, scheme, distinction) ; (ನ್ಯಾ. ಶಾ.) ದೈಹಿಕ, ಶಾರೀರಕ. **Tangibílity** (ನಾ.) ; **Tángibleness** (ನಾ.) ; **Tángibly** (ಕ್ರಿ. ವಿ.)

Tángle[1] ಟ್ಯಾಂಗ್‌ಲ್ (ಕ್ರಿ., ನಾ.) (ಎಳೆಗಳು, ಕೂದಲು, ಮೊ. ಗಳ ವಿಷಯದಲ್ಲಿ) ಹೆಣೆ(ದುಕೊ) ; ಬೊಂತೆ, ಜಡೆ—ಗಟ್ಟು, ಗಟ್ಟಿಸು ; ಗೋಜು, ಸಿಕ್ಕು, —ಮಾಡು, ಆಗು ; ತೊಡಕಾಗು ; ತೊಡಕಿಗೆ, ಬಲೆಗೆ, —ಸಿಕ್ಕಿಸು ; ಅವ್ಯವಸ್ಥೆ, ಜಟಿಲ, —ಮಾಡು (A tangled affair). (ನಾ.) ಗೋಜು, ಸಿಕ್ಕು, ತೊಡಕು, ಬೊಂತೆ, ಜಡೆ, ಅವ್ಯವಸ್ಥೆ (Business is in a t.) ; (ಸೂಕ್ಷ್ಮ ಸಮುದ್ರ ಪ್ರಾಣಿಗಳನ್ನು ಹಿಡಿಯುವ ಒಂದು ಬಗೆಯ) ಪಾತಾಳಗರಡಿ ಬಲೆ. **Tánglefoot** (ನಾ.) (ಅಮೆ. ಸಂ. ಅಸಂ.) ವ್ಹಿಸ್ಕಿ ; ತೀಕ್ಷ್ಣಮದ್ಯ. **Tánglesome** (ಗು.) ; **Tángly** (ಗು.)

Tángle[2] =Tang[2].

Tángo ಟ್ಯಾಂಗೋ (ನಾ.) ಯೂರೋಪಿನಲ್ಲಿ ಈಚೆಗೆ ಬಳಕೆಗೆ ತಂದ, ದ. ಅಮೆರಿಕದ ಒಂದು ನೃತ್ಯ.

Tánagrine, Tánagroid. Tanager ನೋಡಿ.

Tank ಟ್ಯಾಂಕ್ (ನಾ.) ದ್ರವ, ಅನಿಲ, ಮೊ. ಗಳನ್ನು ಒಳಗೊಳ್ಳಲು ಲೋಹ, ಮರ, ಮೊ. ಗಳಿಂದ ಮಾಡಿದ ದೊಡ್ಡ ತೊಟ್ಟಿ : ಕಡಾಯ(ಯಿ), ಹಂಡೆ, ಕೊಪ್ಪರಿಗೆ ; (ಎಂಜಿನಿನಲ್ಲಿಯ) ನೀರು ತೊಟ್ಟಿ ; (ಇಂಡಿಯದಲ್ಲಿ) ಕೆರೆ, ಕಟ್ಟೆ, ಕೊಳ. (ಸೈನಿಕ) ಸಿಪಾಯಿಗಳನ್ನೂ ಫಿರಂಗಿಗಳನ್ನೂ ಒಳಕೊಂಡು ಯುದ್ಧದಲ್ಲಿ ನಡೆಕೋಟೆಯಂತೆ ಉಪಯೋಗಿಸಲಾಗುವ, ಮೋಟಾರು ಶಕ್ತಿಯಿಂದ ನಡೆಯುವ, ಒಂದು ಉಕ್ಕಿನ ರಥ : ಫಿರಂಗಿ ರಥ ; ಟ್ಯಾಂಕು (Male, female, t. ಪ್ರಬಲ, ಅಬಲ, ಟ್ಯಾಂಕು). **T. drama** (ನಾಟಕಶಾಲೆಯ ಅಸಂ.) (ನೀರಿನಲ್ಲಿ ಮುಳುಗುತ್ತಿರುವವರನ್ನು ರಕ್ಷಿಸುವುದು, ಮೊ. ದೃಶ್ಯಗಳನ್ನು ತೋರಿಸುವುದಕ್ಕಾಗಿ) ನೀರ ಕಟ್ಟೆಯನ್ನು ಉಪಯೋಗಿಸುವ ರೋಮಾಂಚ ನಾಟಕ ; (ಯಾವುದಾದರೂ) ರೋಮಾಂಚ ನಾಟಕ. **T. engine** ತನ್ನಲ್ಲೇ ನೀರು ತೊಟ್ಟಿ ಮತ್ತು ಕಲ್ಲಿದ್ದಲು ಉಳ್ಳ ಎಂಜಿನು : ನೀರು ತೊಟ್ಟಿ ಎಂಜಿನು. **Tánkage** (ನಾ.) ಕಡಾಯಗಳಲ್ಲಿ, ತೊಟ್ಟಿಗಳಲ್ಲಿ, —ತುಂಬಿಡುವುದು ; ಹೀಗೆ ತುಂಬಿಡುವುದಕ್ಕೆ ರುಸುಮು ; ಕಡಾಯದ, ತೊಟ್ಟಿಯ, —ಘನ ಅಳತೆ, ಒಳಪಿಡಿ. (ಕಳಪೆ ಕೊಬ್ಬು, ಮೊ. ಗಳಿಂದ ತಯಾರಿಸಿದ) ಒಂದು ಬಗೆಯ ಗೊಬ್ಬರ. **Tánker** (ನಾ.) ಖನಿಜದ ಎಣ್ಣೆಯನ್ನು ಸಾಗಿಸುವ, ಎಣ್ಣೆ ತೊಟ್ಟಿಯುಳ್ಳ, ಹಡಗು : ಎಣ್ಣೆ ತೊಟ್ಟಿ ಹಡಗು.

Tánkard ಟ್ಯಾಂಕರ್ಡ್ (ನಾ.) (ಬೆಳ್ಳಿ, ಮೊ. ಗಳಿಂದ ಮಾಡಿದ, ಸಾ., ಹಿಡಿಯೂ ಮುಚ್ಚಳವೂ ಉಳ್ಳ) ಜಾಡಿ(ಯಾಕಾರದ ಕುಡಿಯುವ) ಪಾತ್ರೆ; ಈ ಪಾತ್ರೆಯಲ್ಲಿಯ ಪಾನ ; ಈ ಪಾತ್ರೆತುಂಬು (T. of ale) ; [Cool t. (Cool ನೋಡಿ). T. Turnip ಉದ್ದ ಗಡ್ಡೆಯ ಸಿಹಿ ಮೂಲಂಗಿ]

Tánner[1]. **Tan**[1] ನೋಡಿ.

Tánner[2] ಟ್ಯಾನರ್ (ನಾ.) (ಅಸಂ.) ಆರು ಪೆನಿ (ನಾಣ್ಯ)

Tánnic, Tánnin, etc. **Tan**[1] ನೋಡಿ.

Tánsy ಟ್ಯಾನ್ಸಿ (ನಾ.) ಔಷಧದಲ್ಲಿಯೂ ಅಡಿಗೆಯಲ್ಲಿಯೂ ಉಪಯೋಗಿಸುವ ಕಹಿ ರುಚಿಯೂ ಸುವಾಸನೆಯೂ ಆದ, ಹಲ್ಲೇಣಿನ ಎಲೆಗಳುಳ್ಳ ಒಂದು ಸಸ್ಯ.

Tántalize. **Tantalus** ನೋಡಿ.

Tántalum ಟ್ಯಾಂಟಲಂ (ನಾ.) ವಿದ್ಯುದ್ದೀಪಗಳಲ್ಲಿ ಪ್ರಕಾಶ ತಂತುಗಳಿಗೆ ಉಪಯೋಗಿಸುವ ಒಂದು ಅಪೂರ್ವ ಲೋಹ : ಟ್ಯಾಂಟಲಂ.

Tántalus ಟ್ಯಾಂಟಲಸ್ (ನಾ.) (ಗ್ರೀಕ್ ಪುರಾಣ) ಜ್ಯೂಸ್ ದೇವನ ಒಬ್ಬ ಮಗ (ಅವನು ತನ್ನ ಮಗನಾದ ಪೀಲಪ್ಸ್‌ನನ್ನು ಅಡಿಗೆಮಾಡಿ ದೇವತೆಗಳಿಗೆ ಬಡಿಸಿದನೆಂಬ ಅಥವಾ ದೇವ ರಹಸ್ಯವನ್ನು ಬಯಲುಮಾಡಿದನೆಂಬ ಪಾಪಕ್ಕಾಗಿ, ಅಧೋಲೋಕದಲ್ಲಿ ಒಂದು ಸರೋವರದ ನಡುವೆ ನಿಲ್ಲಿಸಲ್ಪಟ್ಟು, ಅವನ ಗಲ್ಲದ ಮಟ್ಟಕ್ಕೆ ಇದ್ದ ನೀರು ಅವನು ಬಾಯಾರಿಕೆಯಿಂದ ಕುಡಿಯಬಯಸಿ ಬಾಯಿ ಚಾಚಿದಾಗ ಸಿಕ್ಕದೆ ಕೆಳಗಿಳಿದುಹೋಗುತ್ತಿದ್ದ, ಮತ್ತು ತಲೆಯ ಮೇಲುಗಡೆ ತೊಂಗುವ ಹಣ್ಣಿನಜೊಂಪಲು ಕೈಚಾಚಿದಾಗ ಸಿಕ್ಕದೆ ಮೇಲಕ್ಕೆ ಹೋಗಿಬಿಡುತ್ತಿದ್ದ ಒಂದು ವಿಚಿತ್ರ ಶಿಕ್ಷೆಗೆ ಗುರಿಯಾದವನು). ಹಲವು ಬಗೆಯ ಐಬಿಸ್ (ಕೊಕ್ಕರೆಯಂಥ) ಹಕ್ಕಿ. ಬಿಡಿಯಾಗಿ ತೆಗೆದುಕೊಳ್ಳಲಾಗುವಂತೆ ಕಂಡುಬಂದರೂ, ಕೀಲಿಕೈಯಿಲ್ಲದೆ ತೆಗೆಯಲಾಗದಂತೆ ಕೀಲಿಸಿದ ಮದ್ಯಪಾತ್ರೆಗಳ ನಿಲವು. **T.-cup** ಇಳಿಗೊಳವೆಯ (Siphon) ತತ್ತ್ವವನ್ನು ಪ್ರತಿಪಾದಿಸುವುದಕ್ಕಾಗಿ, ಒಳಗೆ ಮನುಷ್ಯಾಕಾರದ ಗೊಂಬೆಯನ್ನಿಟ್ಟು ಅಳವಡಿಸಿದ ಬಟ್ಟಲು (ಈ ಬಟ್ಟಲಿಗೆ ನೀರು ಹಾಕಿದರೆ ಅದರ ಮಟ್ಟ ಗೊಂಬೆಯ ಗಲ್ಲದವರೆಗೆ ಬಂದು, ತರುವಾಯ ಆ ಗೊಂಬೆಯ ಮೈಯೊಳಗಡೆ ಮರಸಿಟ್ಟಿರುವ ಸೈಫನ್ ಕೊಳವೆಯ ಮೂಲಕ ಹರಿದುಹೋಗಿ ಮಟ್ಟ ಇಳಿದುಹೋಗುತ್ತದೆ) : ಇಳಿಗೊಳವೆ ಬಟ್ಟಲು. **Tántalize** (ಕ್ರಿ. ಸಕ.) (ಇನ್ನೇನು ಕೈಗೂಡಿಬಿಡುವಂತಿದ್ದು ಎಂದೂ ಕೈಗೂಡದ ಆಸೆಗಳು, ಕೈಗೆ ಸಿಕ್ಕಿಬಿಡುವಂತಿದ್ದು ಎಂದೂ ಸಿಕ್ಕದ ಪದಾರ್ಥಗಳು, ಅರೆಬರೆ ಸಮಾಚಾರಗಳು, ಮೊ. ಗಳಿಂದ ವ್ಯಕ್ತಿ, ಮೊ. ನ್ನು) ಕಾಡು, ಗೋಳುಗುಟ್ಟಿಸು ; ಆಸೆ ತೋರಿಸಿ ಪೀಡಿಸು. **Tantalizátion** (ನಾ.) ; **Tántalizingly** (ಕ್ರಿ. ವಿ.)

Tántamount ಟ್ಯಾಂಟಮೌಂಟ್ (ಗು.) ಅಷ್ಟೇ ಆದ, ಸಮ(ನಾದ), ಸರಿ (His message was t. to a flat refusal. A t. service should be given in exchange for them)

Tantára ಟ್ಯಾಂಟ(ಟಾ)ರ (ನಾ.) (ಅನುಕರಣ ಪದ) ಕೊಂಬಿನ ಅಥವಾ ತುತೂರಿಯ ಕೂಗು, ಘೋಷ.

Tantívy ಟ್ಯಾಂಟಿವಿ (ನಾ., ಗು., ಕ್ರಿ. ವಿ., ಕ್ರಿ. ಅಕ.) (ಪ್ರಾಚೀ. ಪ್ರ.) ಬೇಟೆಯ ಕೂಗು ; ತ್ವರಿತ ಚಲನೆ, ನಾಗಾಲೋಟ, ದೌಡು. (ಗು.) ವೇಗವಾದ. (ಕ್ರಿ. ವಿ.) ವೇಗವಾಗಿ. (ಕ್ರಿ.) ವೇಗವಾಗಿ ಹೋಗು, ತ್ವರೆಮಾಡು, ನುಗ್ಗು.

Tántra ಟ್ಯಾಂಟ್ರ (ನಾ.) ತಂತ್ರ. **Tántrism** (ನಾ.); **Tántrist** (ನಾ.) ತಾಂತ್ರಿಕ.

Tántrum ಟ್ಯಾಂಟ್ರಂ (ನಾ.) ಸಿಡುಕು, ಮುನಿಸು, ರೇಗು, ಕೋಪೋದ್ರೇಕ (Is in, went into, her tantrums)

Táoism ಟಾಓ(ಟೌ)ಇಸ್ಮ್ (ನಾ.) ಸು., ಕ್ರಿ. ಪೂ. ೫೦೦ರಲ್ಲಿದ್ದ ಲಾಓಟ್ಸ್ (Lao-tsze) ಎಂಬ ಚೀನೀ ದಾರ್ಶನಿಕನ ಮತ ಪದ್ಧತಿ : ಟಾವೊ ಮತ (ಪದ್ಧತಿ)

Tap[1] ಟ್ಯಾಪ್ (ನಾ., ಕ್ರಿ. ಸಕ.) ನಲ್ಲಿ ; ಪೀಪಾಯಿಯ ತಿರುಪು ಬಿರಡೆ; (ಅದರ ಗುಣಕ್ಕೆ ಸಂಬಂಧಪಟ್ಟಂತೆ) ನಿರ್ದಿಷ್ಟ ಬಟ್ಟಿಯ ಮದ್ಯ (An excellent t. ; You know the t.) ; =T.-room (Found him in the t.) ; ಒಳ ತಿರುಪಿನ ಸುತ್ತುಗೆರೆಗಳನ್ನು ಕೊರೆಯುವ ಸಲಕರಣೆ : ಒಳ ತಿರುಪು ಕೊರಕ ; [On t. (ಪೀಪಾಯಿಯ ವಿಷಯದಲ್ಲಿ) ತಿರುಪು ಬಿರಡೆಯುಳ್ಳ; (ಮದ್ಯದ ವಿಷಯದಲ್ಲಿ) ತಿರುಪು ಬಿರಡೆ ಪೀಪಾಯಿಯಲ್ಲಿಯ ; ಹರಿಸಲು, ಎಳೆಯಲು, —ಸಿದ್ಧವಾಗಿರುವ. T.-borer ಪೀಪಾಯಿ ಕಂಡಿ ಕೊರೆಯುವ ಬೈರಿಗೆ ; ತಿರುಪು ಕಂಡಿ ಬೈರಿಗೆ. T.-room ಮದ್ಯ ಮಾರುವ ಮತ್ತು ಕುಡಿಯುವ ಕೋಣೆ: ಮದ್ಯದ ಕೋಣೆ] ; [T.-root (ಸಸ್ಯದ) ತಾಯಿಬೇರು]. (ಕ್ರಿ.) (ಪೀಪಾಯಿಗೆ) (ತಿರುಪು) ಬಿರಡೆ ಹಾಕು ; (ಪೀಪಾಯಿ, ಮೊ. ಕ್ಕೆ ಒಳಗಿನ ದ್ರವ ಎಳೆಯುವುದಕ್ಕಾಗಿ) ಕಂಡಿಮಾಡು, ತೂತುಮಾಡು ; ತೂತುಮಾಡಿ ಈಚೆಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಿಡು ; (ಶಸ್ತ್ರಚಿಕಿತ್ಸೆ) (ಶರೀರದೊಳಗೆ ಕೂಡಿಕೊಂಡಿರುವ ದ್ರವವನ್ನು) ಕಂಡಿಮಾಡಿ ಹೊರಬಿಡು, ಈಚೆಗೆ ತೆಗೆ ; ಹೀಗೆ ಹೊರಬಿಡಲು ದೇಹದಲ್ಲಿ ಕಂಡಿ ಮಾಡು, ತೂತು ಕೊರೆ; ಕೊರೆದು, ಕಚ್ಚುಮಾಡಿ, —ಮರದ ರಸವನ್ನು ತೆಗೆ, ಇಳಿಸು ; (ಒಂದು ಪ್ರಾಂತ, ಮೊ. ಗಳಲ್ಲಿ) ವ್ಯವಹಾರ ಬೆಳಸು, ವ್ಯಾಪಾರ ಹೂಡು, ಒಳಹೊಗು ; (ಒಂದು ವಿಷಯಕ್ಕಾಗಿ ಒಬ್ಬನನ್ನು) ಕೇಳು, ಕೋರು (*For* ಉಪ. ಮೊಡನೆ) ; (ವಿಷಯವನ್ನು) ಪ್ರಸ್ತಾಪಿಸು, ಎತ್ತು ; (ತಂತೀ ಸಮಾಚಾರ, ಮೊ. ನ್ನು ಮಧ್ಯದಲ್ಲಿ ಗ್ರಹಿಸುವುದಕ್ಕಾಗಿ, ವಾಹಕ ತಂತಿಗಳಿಂದ) ಪ್ರವಾಹವನ್ನು—ಅಡ್ಡ ತಿರುಗಿಸು, ತೆಗೆದುಕೊ. ಒಳತಿರುಪು ಸುತ್ತುಗಳನ್ನು ಮಾಡು ; ಒಳತಿರುಪು ಕೊರೆ.

Tap[2] ಟ್ಯಾಪ್ (ಕ್ರಿ., ನಾ.) 'ಟಪ್' ಎಂದು, ಟಪ ಟಪನೆ, —ಬಡಿ, ಕುಟ್ಟು, ತಟ್ಟು (T. the door. T. pavement with stick) ; ತಾಕಿಸು (Tapped his stick against the window) ; (ಪಾದರಕ್ಷೆಗೆ) ಹಿಮ್ಮಡಿಯಚ್ಚೆ ಹಾಕು. (ನಾ.) ತಟ್ಟು(ವುದು), ಕುಟ್ಟು(ವುದು), ಬಡಿತ ; ತಟ್ಟಿದ ಸದ್ದು (Heard a t. at the door) ; (ಬ. ವ. ದಲ್ಲಿ) (ದಂಡಿನ ಪಾಳೆಯದಲ್ಲಿ) ಸಿಪಾಯಿಗಳ ಊಟದ ಕರೆ ; (ಬ. ವ. ದಲ್ಲ ಅಮೆ. ನಂ.) (ಸಿಪಾಯಿಗಳ ಬೀಡಿನಲ್ಲಿ) ದೀಪ ಆರಿಸಬೇಕೆಂದು (ತುತೂರಿಯೂದಿ ಅಥವಾ ತಮಟೆ ಹೊಡೆದು ಕೊಟ್ಟ) ಸೂಚನೆ.

Tape ಟೇಪ್ (ನಾ., ಕ್ರಿ. ಸಕ.) (ಉಡುಪು ತಯಾರಿಕೆ, ಕಟ್ಟುಗಳನ್ನು ಕಟ್ಟುವುದು, ಮೊ. ಗಳಲ್ಲಿ ಉಪಯೋಗಿಸುವ, ಹತ್ತಿ, ನಾರು, ರೇಷ್ಮೆ, ಮೊ. ಗಳಿಂದ ಮಾಡಿದ ಕಿರಿಯಗಲದ) ಪಟ್ಟಿ, ಲಾಡಿ, ಟೇಪು [Red t. (Red ನೋಡಿ)] ; ಜೂಜೋಟದ ಪಥದಲ್ಲಿ ಗೆಲ್ಲುಗಂಬಗಳ ನಡುವೆ ಅಡ್ಡಲಾಗಿ ಕಟ್ಟಿರುವ ಪಟ್ಟಿ : ಗುರಿ, ಗೆಲ್ಲು,—ಪಟ್ಟಿ (Breast the t. ಪಂಥ ಗೆಲ್ಲು); ಯಂತ್ರಗಳಲ್ಲಿ ಕಪ್ಪಿ, ಮೊ. ಗಳ ಮೇಲೆ ಸುತ್ತುವ ಗಟ್ಟಿ ಪಟ್ಟಿ: ಉರುಳು, ಸುತ್ತು, —ಪಟ್ಟಿ ; (ತಂತೀ ವರ್ತಮಾನಗಳನ್ನು ಬರೆದಿಡುವ ಗ್ರಾಹಕ ಸಲಕರಣೆಗಳಲ್ಲಿಯ, ಎಳೆದಂತೆ ಉದ್ದಕ್ಕೂ ಬರುವ) ಸುದ್ದಿ—ಪಟ್ಟಿ, ಪಟ್ಟೆ; ಅಳತೆಗಳನ್ನು ಗುರುತುಮಾಡಿರುವ, ಸಾ., ಸುರುಳಿ ಸುತ್ತಿ ಉರುಳೆಕೋಶದಲ್ಲಿ ಅಡಗಿಸಿರುವ, ಬಟ್ಟೆ, ಲೋಹ, ಮೊ. ಗಳಿಂದ ಮಾಡಿದ ಪಟ್ಟಿ : ಅಳತೆಪಟ್ಟಿ, ಟೇಪು (T.-line, -measure); =Tapeworm ; (ಅಸಂ.) ಅಮಲು ಮದ್ಯ. (ಕ್ರಿ.) ಪಟ್ಟಿ, ಲಾಡಿ, —ಹಾಕು, ಕಟ್ಟು ; (ಪುಸ್ತಕದ ಭಾಗಗಳನ್ನು) ಪಟ್ಟಿಗಳಿಂದ ಕಟ್ಟು, ಸೇರಿಸು. **Tápeless** (ಗು.) ; **Tápeworm** (ನಾ.) ಮನುಷ್ಯನ ಮತ್ತು ಇತರ ಬಹು ಪಾಲು ಕಶೇರುಕಗಳ ಅನ್ನನಾಳದಲ್ಲಿ ಸೇರಿ ಕೆಡುಕುಮಾಡುವ ಲಾಡಿಯಾಕಾರದ ಹಲವು ಬಗೆಯ ಹುಳು : ಲಾಡಿಹುಳು.

Táper ಟೇಪರ್ (ನಾ., ಗು., ಕ್ರಿ.) (ತೆಳುವಾದ) ಮೋಂಬತ್ತಿ, ಮೇಣದ ಬತ್ತಿ. (ಗು. ; ಈಗ ಮು., ಕಾವ್ಯ, ಅಲಂ.) ಒಂದು ತುದಿ ಚೂಪಾಗುತ್ತ ಹೋಗುವ (T. fingers). (ಕ್ರಿ.) ಕ್ರಮೇಣ ತುದಿಚೂಪು—ಮಾಡು, ಆಗು ; ಕ್ರಮೇಣ ಸಣ್ಣದು—ಆಗು, ಮಾಡು (ಅನೇಕ ವೇಳೆ *off* ಉಪ. ಮೊಡನೆ : The upper part tapers *or* is tapered off to a point). **Táperingly** (ಕ್ರಿ. ವಿ.) ; **Táperness** (ನಾ.) ; **Táperwise** (ಕ್ರಿ. ವಿ.)

Tápestry ಟ್ಯಾಪೆಸ್ಟ್ರಿ (ನಾ.) (ಗೋಡೆ, ಪೀಠೋಪಸ್ಕರ, ಮೊ. ನ್ನು ಮುಚ್ಚುವುದಕ್ಕಾಗಿ ಉಪಯೋಗಿಸುವ) ಚಿತ್ರ ನೆಯ್ದ ಬಟ್ಟೆ ; ಚಿತ್ರ—ವಸ್ತ್ರ, ಜವನಿಕೆ ; ಗವುಸು, ತೆರೆ, —ಬಟ್ಟೆ. **(-)tapestried** (ಗು.)

Tápir ಟೇಪರ್ (ನಾ.) ಹೇಂಡಾ ಮೃಗದ ಜಾತಿಗೆ ಸೇರಿದ, ಗಿಡ್ಡ ಸೊಂಡಲಿನ, ಗೊರಸುಳ್ಳ, ಹಂದಿಯಂಥ ಸಸ್ತನಿಪ್ರಾಣಿ : ಟೇಪರ್ ಪ್ರಾಣಿ. **Tápiroid** (ಗು., ನಾ.) ಟೇಪರಿನಂಥ (ಪ್ರಾಣಿ)

Tápis ಟ್ಯಾಪಿಸ್, ಟಾಪೀ (ನಾ.) Be, come, on the t. (ವಿಷಯ) ಪರ್ಯಾಲೋಚನೆಗೆ, ಚರ್ಚೆಗೆ, —ಬಂದಿರು, ಇರು, ಬರು.

Tapótement ಟಪೋಟ್‌ಮೆಂಟ್ (ನಾ.) (ವೈ. ಶಾ.) (ಮ್ಯಾಸೀವುವುದರಲ್ಲಿ) ತಟ್ಟುವುದು.

Táppet ಟ್ಯಾಪೆಟ್ (ನಾ.) ಬಿಟ್ಟು ಬಿಟ್ಟು ಮತ್ತೊಂದಕ್ಕೆ ಚಲನೆ ಕೊಡುವಂತೆ ಅಥವಾ ಮತ್ತೊಂದರಿಂದ ಚಲನೆ ಪಡೆಯುವಂತೆ, ಒಂದು ಯಂತ್ರಕ್ಕೆ ಅಳವಡಿಸಿರುವ ಸನ್ನೆ, ಚಾಚು, ಪಟ್ಟಿ, ಮೊ. ವು: ವಿಚ್ಛಿನ್ನ ಚಾಲಕ. T. loom ಚಾಲಕ ದಂಡಕ್ಕೆ ಅಳವಡಿಸಿರುವ ಚಾಚುಗಳಿಂದ ಎಲ್ಲ ಚಲನಕಾರ್ಯಗಳೂ ನಡೆಯುವ ಮಗ್ಗ : ಚಾಚು ಮಗ್ಗ.

Tap rate ಟ್ಯಾಪ್ ರೇಟ್ (ನಾ.) (ಹಣಕಾಸಿನ ಆಡಳಿತ) ಖಜಾನೆಯ ಹುಂಡಿಗಳ ಚಾಲ್ತಿ ದರ [T.(reasury) A.(dditional) P.(aper) rate]

Tápster ಟ್ಯಾಪ್ಸ್ಟರ್ (ನಾ.) ಮದ್ಯದಂಗಡಿಯಲ್ಲಿ ಪೀಪಾಯಿನಿಂದ ಮದ್ಯ ತೆಗೆದು ಸರಬರಾಯಿ ಮಾಡುವವನು : ಮದ್ಯ ಪರಿಚಾರಕ.

Tar[1] ಟಾರ್ (ನಾ., ಕ್ರಿ. ಸಕ.) ಮರ, ಕಲ್ಲಿದ್ದಲು, ಮೊ. ನ್ನು ಒಣ ಬಟ್ಟಿ ಇಳಿಸುವುದರಿಂದ ದೊರೆಯುವ, ಮರ, ಕಬ್ಬಿಣ, ಮೊ. ನ್ನು ಕೆಡದಂತೆ ಇಡಲು ಉಪಯೋಗಿಸುವ, ಕಪ್ಪು ಬಣ್ಣದ ಅಂಟುದ್ರವ : ಡಾಂಬರೆಣ್ಣೆ, ಕೀಲೆಣ್ಣೆ, ಟಾರೆಣ್ಣೆ, ಟಾರು [A touch of the t.-brush (ಚರ್ಮದ ಬಣ್ಣದಿಂದ ವ್ಯಕ್ತವಾಗುವ) ನೀಗ್ರೋ (ರಕ್ತದ) ಬೆರಕೆ. **T.-board** ಟಾರು ಬಳಿದ ಹಗ್ಗ, ಮೊ. ಗಳಿಂದ ತಯಾರಿಸಿದ ಗಡುಸು ರಟ್ಟು : ಟಾರು ರಟ್ಟು. **T. macadam** (ವ್ಯಾಪಾರದ ಸ್ವಾಮ್ಯನಾಮವಾಗಿ ಸಂಕ್ಷಿಪ್ತ : **Tármac**) : ರಸ್ತೆಗೆ ಹಾಕುವ ಟಾರು ಜಲ್ಲಿ. **T.-water** (ಔಷಧವಾಗಿ ಉಪಯೋಗಿಸುವ) ತಂಪು ಟಾರು ಕಷಾಯ ; (ಕಲ್ಲಿದ್ದಲ ಅನಿಲ ತಯಾರಿಕೆಯಲ್ಲಿ ದೊರೆಯುವ ಅಮೋನಿಯ ಗುಣದ) ಟಾರು ನೀರು]. (ಕ್ರಿ.) ಟಾರು—ಹಾಕು, ಬಳಿ, ತೊಡೆ [T. and feather (ಶಿಕ್ಷೆಯಾಗಿ) ಟಾರು ಬಳಿದು ಹಕ್ಕಿಗರಿ ಅಂಟಿಸು. Tarred with the same brush *or* stick ಅದೇ, ಸಮಾನ, —ದೋಷಗಳುಳ್ಳ]. **Tárry**[1] (ಗು.) ಟಾರಿನ(ಂಥ) ; ಟಾರು—ಹಾಕಿದ, ಬಳಿದ.

Tar[2] ಟಾರ್ (ನಾ.) ನಾವಿಕ, ಕಲಾಸಿ (=Jack t.) (Tarpaulin ಎಂಬುದರ ಸಂಕ್ಷಿಪ್ತ)

Tar(r)adíddle ಟ್ಯಾರಡಿಡ್‌ಲ್ (ನಾ.) (ಬಳ. ಮಾ.) ಸುಳ್ಳು, ಢೋಂಗು, ಬುರುಡೆ.

Tarantáss ಟಾ(ಟ್ಯಾ)ರಂಟಾ(ಟ್ಯಾ)ಸ್ (ನಾ.) ರಷ್ಯದ ನಾಲ್ಕು ಚಕ್ರದ ಬಂಡಿ.

Tarantélla ಟ್ಯಾರಂಟೆಲ, **-télle** —ಟೆಲ್ (ನಾ.) ಒಂದು ಜೋಡಿಯವರು ಕುಣಿಯುವ, ಇಟಲಿಯ ಒಂದು ಬಗೆಯ ತೀವ್ರ ಭ್ರಮಣ ನರ್ತನ(ಕ್ಕೆ ಹೊಂದಿಸಿದ ಸಂಗೀತ) (ಇದು ನೃತ್ಯೋನ್ಮಾದಕ್ಕೆ ಚಿಕಿತ್ಸೆ ಎಂಬ ನಂಬಿಕೆ ಇತ್ತು). **Tárantism** (ನಾ.) (ಟರ್ಯಾಂಟ್ಯುಲ ಎಂಬ ಹೆಜ್ಜೇಡ ಕಚ್ಚಿದ್ದರಿಂದ ಬರುವುದೆಂದು ಜನ ನಂಬಿದ್ದ, ದ. ಇಟಲಿಯಲ್ಲಿ ಆರಂಭವಾಗಿ ೧೫-೧೭ನೆಯ ಶ. ಮಾ. ಗಳಲ್ಲಿ ಬಳಕೆಯಲ್ಲಿದ್ದ, ಒಂದು ಬಗೆಯ) ನೃತ್ಯೋನ್ಮಾದ. **Tarántula** ಟರ್ಯಾಂಟ್ಯುಲ (ನಾ.) ದ. ಯೂರೋಪಿನ, ಒಂದು ಬಗೆಯ ಹೆಜ್ಜೇಡ : ಟರ್ಯಾಂಟ್ಯುಲ ಹೆಜ್ಜೇಡ ; ಇತರ ಬಗೆಯ ಜೇಡ. **Tarántular** (ಗು.)

Tárantism, Tarántula. Tarantella ನೋಡಿ.

Taratántara ಟ್ಯಾ(ಟಾ)ರಟ್ಯಾಂಟರ, **-tantára** —ಟ್ಯಾಂಟಾರ (ನಾ.) (ಅನುಕರಣ ಪದ) ತುತೂರಿಯ ಅಥವಾ ಕಹಳೆಯ ಕೂಗು, ಮೊಳಗು.

Taráxacum ಟರ್ಯಾಕ್ಸಕಂ (ನಾ.) ಸೇವಂತಿಗೆ ಜಾತಿಯ ಹಲವು ಬಗೆಯ ಸಸ್ಯ(ದಿಂದ ತಯಾರಿಸಿದ ಔಷಧ)

Tarboósh ಟಾರ್‌ಬೂಷ್ (ನಾ.) ಒಂದು ಬಗೆಯ ತುರ್ಕಿ ಟೋಪಿ.

Tardaménte (It.) ಟಾರ್ಡಾಮೆಂಟೆ (ಕ್ರಿ. ವಿ.) (ಸಂ.) ಮೆತ್ತಗೆ, ನಿಧಾನವಾಗಿ.

Tárdigrade ಟಾರ್ಡಿಗ್ರೇಡ್ (ಗು., ನಾ.) (ಪ್ರಾ. ವಿ.) ನಿಧಾನ—ಚಲನೆಯ, ನಡಗೆಯ (ಪ್ರಾಣಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tárdo (It.) ಟಾರ್ಡೊ (ಗು., ಕ್ರಿ. ವಿ.) (ಸಂ.) ಮೆಲ್ಲನೆಯ, ನಿಧಾನದ ; ಮೆತ್ತಗೆ, ನಿಧಾನವಾಗಿ.

Tárdy ಟಾರ್ಡಿ (ಗು.) ಮೆಲ್ಲನೆಯ, ನಿಧಾನದ, ಮಂದ (ಗತಿಯ); ಜಡ, ಸೋಮಾರಿಯಾದ ; ತಡವಾದ, ವಿಳಂಬವಾದ, ಕಾಲಮೀರಿದ (T. amends, reform, retribution); (ವ್ಯಕ್ತಿ, ಮೊ. ವಿಷಯದಲ್ಲಿ) ಮನಸ್ಸಿಲ್ಲದ, ಹಿಂದೇಟು ಹಾಕುವ. **Tárdily** (ಕ್ರಿ. ವಿ.) ; **Tárdiness** (ನಾ.)

Tare[1] ಟೇ(ಅ)ರ್ (ನಾ.) ಊದರೆ, ಕಸ, ಕಳೆ (Wheat & tares. Sow tares)

Tare[2] ಟೇ(ಅ)ಅರ್ (ನಾ., ಕ್ರಿ. ಸಕ.) (ಸರಕು ತುಂಬಿರುವ ಪೆಟ್ಟಿಗೆ, ಮೊ. ಗಳ ಒಟ್ಟು ತೂಕದಲ್ಲಿ, ಸರಕು ತೂಕವನ್ನು ತಿಳಿಯುವುದಕ್ಕಾಗಿ ಮಾಡುವ) ಪೆಟ್ಟಿಗೆ ತೂಕದ ಕಳೆತ, ಸೋಡ್ತಿ (Real, customary, average, t.) ; (ಉರುವಲು, ಮೊ. ಗಳ ತೂಕವನ್ನು ಬಿಟ್ಟು) ಮೋಟಾರು ವಾಹನದ ತೂಕ; (ರ. ವಿ.) (ವಸ್ತುವನ್ನಿಟ್ಟು ತೂಗುವ) ಖಾಲಿ ಪಾತ್ರೆಯ ತೂಕ (T. & tret ತೂಕ ಕಳೆತದ ಗಣಿತಸೂತ್ರ). (ಕ್ರಿ.) ಪೆಟ್ಟಿಗೆ, ಮೊ. ಗಳ ತೂಕ ಕಂಡುಹಿಡಿ; ತೂಕ ಕಳೆತ—ಕಂಡುಹಿಡಿ, ಸೂಚಿಸು; (ತೂಕ ಕಳೆತಕ್ಕಾಗಿ) ಸೋಡ್ತಿ ಬಿಡು.

Targe. **Target** ನೋಡಿ.

Tárget ಟಾರ್ಗೆಟ್ (ನಾ.) (ಧನುರ್ವಿದ್ಯಾಭ್ಯಾಸದಲ್ಲಿ) ಬಾಣ ಹೊಡೆಯುವುದಕ್ಕಾಗಿ ಮೇಲ್ಮೈಯಮೇಲೆ ಸಮಾನ ಕೇಂದ್ರಕ ವೃತ್ತಗಳನ್ನು ಗುರುತಿಸಿದ, ಮೆತ್ತೆ ತುಂಬಿದ, ವರ್ತುಲಾಕಾರದ ಗುರಿ: ಗುರಿ (ಹಲಗೆ), ಲಕ್ಷ್ಯ ; (ಬಂದೂಕು, ಪಿಸ್ತೂಲು, ಮೊ. ನ್ನು ಹೊಡೆಯುವ ಅಭ್ಯಾಸದಲ್ಲಿ) ಇದೇ ತೆರದ ಸಾ., ಆಯುದ ಆಕಾರದ ಗುರಿಹಲಗೆ ; (ರೂಪ.) (ತಿರಸ್ಕಾರ, ಲೇವಡಿ, ಮೊ. ಕ್ಕೆ) ಗುರಿಯಾದವನು, ಗುರಿಯಾದುದು (*For* ಉಪ. ದೊಡನೆ) ; (ರೈಲ್ವೆಯ) ದುಂಡು—ಗುರುತು, ಸಂಕೇತ. ಕುರಿಮರಿಯ ಕುತ್ತಿಗೆಯ ಮತ್ತು ಎದೆಯ ಮಾಂಸದ ತುಂಡು. (ಮು., ದುಂಡನೆಯ ಕಿರಿಯ) ಗುರಾಣಿ [= **Targe** (ಪ್ರಾಚೀ. ಪ್ರ.)]. T.-card ಬಿಲ್ಲುಗಾರನು ಎಣಿಕೆಗಳನ್ನು ಗುರುತಿಸುವ, ಗುರಿಹಲಗೆಯಂತೆ ಬಣ್ಣ ಹಾಕಿರುವ, ರಟ್ಟು : ಗುರಿ ರಟ್ಟು. T. ship ಗುರಿಯಾಗಿ ಉಪಯೋಗಿಸುವ ಹಳೆಯ ಹಡಗು : ಗುರಿ ಹಡಗು. **Tárgeted** (ಗು.) (ದುಂಡು) ಗುರಾಣಿಯುಳ್ಳ.

Tárgum ಟಾರ್ಗಮ್ (ನಾ.) ಹೀಬ್ರೂ ಮತಗ್ರಂಥಗಳ ಅರಂ ಅಥವಾ ಕ್ಯಾಲ್ಡೀ ಭಾಷೆಯ ಸರಳಾನುವಾದ(ಗಳಲ್ಲೊಂದು). **Targúmic** ಟಾರ್ಗೂಮಿಕ್ (ಗು.) ; **Tárgumist** (ನಾ.) ; **Targumístic** (ಗು.)

Táriff ಟ್ಯಾರಿಫ್ (ನಾ., ಕ್ರಿ. ಸಕ.) ಆಮದು ರಫ್ತು ಸುಂಕ(ಪಟ್ಟಿ), ಜಕಾತಿ (ಪಟ್ಟಿ) ; ಸುಂಕ, ಜಕಾತಿ, —ಕಾನೂನು ; [Preferential t. ತಮಗೆ ಇಷ್ಟವಾದ ದೇಶದಿಂದ ಬಂದ ಸರಕಿನಮೇಲೆ ಹಾಕುವ ಕಡಮೆ ಸುಂಕ : ರಿಯಾಯಿತಿ ಸುಂಕ. Retaliatory t. ಒಂದು ದೇಶ ತನ್ನ ರಫ್ತುಗಳ ಮೇಲೆ ಹೊರ ದೇಶಗಳು ಹಾಕಿದ ಸುಂಕಕ್ಕೆ ಸಮತೂಕವಾಗಿ ಆ ದೇಶಗಳಿಂದ ಬರುವ ಆಮದುಗಳ ಮೇಲೆ ಹಾಕುವ ಸುಂಕ : ಮುಯ್ಯಿ, ಪ್ರತಿ,—ಸುಂಕ. T. reform ಸುಂಕ ಸುಧಾರಣೆ (ಮು., ಗ್ರೇಟ್ ಬ್ರಿಟನಿನಲ್ಲಿ ವ್ಯಾಪಾರದ ದೃಷ್ಟಿಯಿಂದ, ಸುಂಕಪದ್ಧತಿಯ ನ್ಯೂನತೆಗಳನ್ನು ಸರಿಪಡಿಸಲು ಮಾಡಿದ ಸುಧಾರಣೆ)] ; ಬೆಲೆ, ದರ, —ಪಟ್ಟಿ (Railway, Telegraph, Refreshment-room, t.). (ಕ್ರಿ.) (ಸರಕಿನಮೇಲೆ) ಸುಂಕ, ಜಕಾತಿ, —ಹಾಕು ; ಸುಂಕಪಟ್ಟಿ ಮಾಡು ; ಬೆಲೆ ಹಾಕು.

Tárlatan ಟಾರ್ಲಟನ್ (ನಾ.) ತೆಳು ಮಸ್ಲಿನ್ ಬಟ್ಟೆ.

Tarn[1] ಟಾರ್ನ್ (ನಾ.) ಬೆಟ್ಟದಮೇಲಣ ಸಣ್ಣ ಸರೋವರ, ಡೊಣೆ.

Tarn[2]. **Tern**[1] ನೋಡಿ.

Tárnal ಟಾರ್ನಲ್ (ಗು., ಕ್ರಿ. ವಿ.), **Tarnátion** ಟಾರ್ನೇಷನ್ (ಗು., ಕ್ರಿ. ವಿ., ನಾ.) (ಅಮೆ. ಸಂ. ಅಸಂ.) ಹಾಳು ; ಹಾಳಾದ, ಅನಿಷ್ಟ.

Tárnish ಟಾರ್ನಿಷ್ (ಕ್ರಿ., ನಾ.) ಕಳೆ, ಕಾಂತಿ, —ಕುಂದು, ಕುಂದಿಸು ; ಮಾಸು; ಮಾಸಲು, ಮಸುಕು, ಮಬ್ಬು, —ಆಗು, ಮಾಡು [(ರೂಪ.) A tarnished reputation ಕಳಂಕಿತ ಕೀರ್ತಿ]. (ನಾ.) ಕಾಂತಿಹೀನತೆ, ಮಾಸಲು, ಮಸುಕು, ಕರೆ, ಕಳಂಕ ; (ಖನಿಜ ವಿಷಯದಲ್ಲಿ) ಖನಿಜದ ಗಾಳಿಗೊಡ್ಡಿದ ಭಾಗದಲ್ಲಿ ಕಟ್ಟುವ ಬಣ್ಣದ ಪೊರೆ : ಕರೆ, ಕಿಲುಬು. **Tárnishable** (ಗು.)

Táro ಟಾ(ಟ್ಯಾ)ರೊ (ನಾ.) ಆಹಾರಕ್ಕೆ ಒದಗುವ, ಉಷ್ಣವಲಯದ ಹಲವು ಬಗೆಯ ಗಿಡ: ಕೆಸವು.

Tároc ಟ್ಯಾರೊಕ್, **Tárot** ಟ್ಯಾರೊ (ನಾ.) ಒಂದು ಕಟ್ಟಿನಲ್ಲಿ ೭೮ ಎಲೆಗಳಿರುವ ಇಸ್ಪೀಟಿನಿಂದ ಆಡುವ ಆಟ ; ಇಂಥ ಇಸ್ಪೀಟೆಲೆ.

Tárpan ಟಾರ್ಪ್ಯನ್ (ನಾ.) ಟಾರ್ಟರಿಯ ಕಾಡುಕುದುರೆ.

Tarpaúlin ಟಾರ್ಪಾಲಿನ್ (ನಾ.) ಮು., ಟಾರು ಬಳಿದ ನೀರಿಳಿಯದ ಬಟ್ಟೆ : ಟಾರುಗಪ್ಪಡ, ಟಾರು ತಟ್ಟು ; ಕಲಾಸಿಯ ಟಾರುಗಪ್ಪಡದ ಅಥವಾ ಮೇಣಗಪಟದ ಟೊಪ್ಪಿಗೆ ; (ಬಳ. ಮಾ.) ಕಲಾಸಿ, ನಾವಿಕ.

Tarpeían ಟಾರ್ಪೀಯನ್ (ಗು.) T. rock ಪ್ರಾಚೀನ ರೋಮಿನಲ್ಲಿ ಪಾತಕಿಗಳನ್ನು ಮೇಲಿಂದ ಕೆಳದೂಡುತ್ತಿದ್ದ ಕಡಿದುಬಂಡೆ.

Tárpon ಟಾರ್ಪಾನ್ (ನಾ.) ಅಮೆ. ಸಂ. ದಕ್ಷಿಣ ತೀರದಲ್ಲಿ ಸಾಮಾನ್ಯವಾಗಿ ದೊರೆಯುವ, ದೊಡ್ಡ ಬೇಟೆಮೀನು.

Tarradíddle. **Tara-** ನೋಡಿ.

Tárragon ಟ್ಯಾರಗನ್ (ನಾ.) ಪಚ್ಚಡಿ, ಮೊ. ಕ್ಕೆ ಉಪಯೋಗಿಸುವ ಒಂದು ಬಗೆಯ ಸಸ್ಯ : ಟ್ಯಾರಗನ್ ಸಸ್ಯ [T. vinegar ಟ್ಯಾರಗನ್ ಎಲೆಯಿಂದ ಅಥವಾ ಅದರ ಎಣ್ಣೆಯಿಂದ ರುಚಿ ಕಟ್ಟಿದ ದ್ರಾಕ್ಷಿ ಹುಳಿ]

Tarragóna ಟ್ಯಾರಗೋನ (ನಾ.) ಪೋರ್ಟ್ ಮದ್ಯದಂಥ (ಸ್ಪೇಯ್ನ್ ದೇಶದ) ಒಂದು ಮದ್ಯ.

Tárras. **Trass** ನೋಡಿ.

Tárrock ಟ್ಯಾರಕ್ (ನಾ.) ಹಲವು ಬಗೆಯ ಸಮುದ್ರ ಪಕ್ಷಿ.

Tárry[1]. **Tar** ನೋಡಿ.

Tárry[2] ಟ್ಯಾರಿ (ಕ್ರಿ.) (ಈಗ ಸಾಹಿತ್ಯ ಪ್ರ.) ಇರು, ಇಳಿ(ದುಕೊ), ಉಳಿ(ದುಕೊ), ತಂಗು (*At, in* ಮೊ. ಉಪ. ದೊಡನೆ) ; ಕಾಯಿ, ಕಾದಿರು (*For* ಉಪ. ದೊಡನೆ) ; ತಡ, ಸಾವಕಾಶ, ನಿಧಾನ, —ಆಗು, ಮಾಡು ; ಎದುರು ನೋಡು, ನಿರೀಕ್ಷಿಸು.

Társus ಟಾರ್ಸಸ್ (ನಾ.; ಬ. ವ. -si —ಸೈ) ಕಾಲಿನ ಹರಡು ; ಹಕ್ಕಿಯ ಕಾಲಿನ ಕಾಂಡ ; (ಕೀಟ ವಿಜ್ಞಾನ) ಕಾಲಿನ ಕೊನೆಯ ತುಂಡು, ತುದಿ ತುಂಡು ; ಕಣ್ಣು ರೆಪ್ಪೆಯಲ್ಲಿಯ ಸಂಯೋಜಕ ಫಲಕ. **Társal** (ಗು.) ; **Tarsi-**, **Tarso-** (ಸ. ಪೂ. ಪ.)

Tart[1] ಟಾರ್ಟ್ (ಗು.) ಕಟು ರುಚಿಯ, ಹುಳಿಯಾದ ; ತೀಕ್ಷ್ಣ, ಕಟು, ಚುಚ್ಚುವ (A t. rejoinder). **Tártly** (ಕ್ರಿ. ವಿ.); **Tártness** (ನಾ.)

Tart[2] ಟಾರ್ಟ್ (ನಾ.) ಹಣ್ಣು (ಹೂರಣ) ಕಡುಬು (Apple, cherry, -t. ; Jam t. ಮೇಲೆ ಹಣ್ಣುಪಾಕ ಹಾಕಿದ ಕಡುಬು) ; (ಅಸಂ.) ಹುಡುಗಿ, ಹೆಂಗಸು (ಮು., ಕೆಟ್ಟ ನಡತೆಯವಳು). **Tártlet** (ನಾ.)

Tártan[1] ಟಾರ್ಟನ್ (ನಾ., ಗು.) ಬಣ್ಣ ಬಣ್ಣದ ಪಟ್ಟೆಗಳು ಸಮಕೋನದಲ್ಲಿ ಅಡ್ಡ ಹಾಯ್ದಿರುವ ಒಂದು ಬಗೆಯ ಉಣ್ಣೆಯ ಬಟ್ಟೆ : ಪಪ್ಪಳಿಯ ಉಣ್ಣೆ ಬಟ್ಟೆ (ಮು., ಸ್ಕಾಟ್ಲೆಂಡಿನ ಮೇಲ್ನಾಡಿಗರು ಉಪಯೋಗಿಸುವಂಥದು ಮತ್ತು, ಒಂದು ಬಣಕ್ಕೆ ಗೊತ್ತಾದ ಮಾದರಿಯದು) ; ಇಂಥ ಪಟ್ಟೆಯ, ಪಪ್ಪಳಿಯ (ಇತರ ಬಟ್ಟೆ) (Silk t. ; T. velvet) ; ಸ್ಕಾಟ್ಲೆಂಡಿನ ಮೇಲ್ನಾಡಿಗ(ರ ದಳಗಳು)

Tártan[2] ಟಾರ್ಟನ್ (ನಾ.) ಮೆಡಿಟರೇನಿಯನ್ ಸಮುದ್ರದಲ್ಲಿ ಸಂಚರಿಸುವ ಒಂದು ಬಗೆಯ ಒಕ್ಕೂವೆಯ ಹಡಗು.

Tártar[1] ಟಾರ್ಟರ್ (ನಾ.) ಪೂರ್ಣವಾಗಿ ಕಿಣ್ವಗಟ್ಟಿದ ದ್ರಾಕ್ಷಾಮದ್ಯದಿಂದ, ಪೀಪಾಯಿಯ ಒಳಪಕ್ಕದಲ್ಲಿ ಕಟ್ಟಿದ (ಕಡು) ಕೆಂಪು ಬಣ್ಣದ ಗಡುಸು ಹೆಪ್ಪು: ಮದ್ಯದ—ಒಂಡು, ಹೆಪ್ಪು; ಹಲ್ಲಿನಮೇಲೆ ಜೊಲ್ಲು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ಯಾಲ್ಸಿಯಂ ಫಾಸ್ಫೇಟು, ಮೊ. ಗಳಿಂದ ಕಟ್ಟಿದ ಹೆಪ್ಪು: ಹಲ್ಲು —ಹೆಪ್ಪು, ಪಾಚಿ, ಪೊರೆ. T. emetic ವಾಂತಿಕಾರಕ, ಭೇದಿಕಾರಕ, ಮೊ. ಉಪಯೋಗಿಸುವ ಪೊಟಾಸಿಯಂ ಮತ್ತು ಆ್ಯಂಟಿಮನಿಗಳ ದ್ವಿಸಂಯುಕ್ತ ಟಾರ್ಟೇಟ್ ಲವಣ. **Tartáric** (ಗು.), **Tártarous** (ಗು.) (ರ. ವಿ.); **Tartarizátion** (ನಾ.); **Tártarize** (ಕ್ರಿ. ಸಕ.); **Tártrate** (ನಾ.) ಟಾರ್ಟಾರಿಕ್ ಆಮ್ಲದ ಲವಣ.

Tártar² ಟಾರ್ಟರ್, **Tátar** ಟಾಟರ್ (ಗು., ನಾ.) ಟಾರ್ಟರ ದೇಶದ(ವನು); ತುರ್ಕರು, ಕಾಸಕರು, ಮೊ. ವರನ್ನೊಳಕೊಂಡ ಟಾರ್ಟರ್ ಜನಾಂಗದ(ವನು); ಟಾರ್ಟರ. (Tar-) ಒಡ್ಡ, ಒರಟ, ಮೊಂಡ, ಕಾಡುಮನುಷ್ಯ, ಖೂಳ ಮನುಷ್ಯ [Catch a t. (Catch ನೋಡಿ)]. **Tartárian** ಟಾರ್ಟೇ(ಅ)ರಿಯನ್ (ಗು.)

Tártarus ಟಾರ್ಟರಸ್ (ನಾ.) (ಗ್ರೀಕ್ ಪುರಾಣ) ಅಧೋಲೋಕದ ಅತ್ಯಂತ ಕೆಳಭಾಗ: ನರಕ ಕೂಪ; ಯಮ ಲೋಕದಲ್ಲಿ ಶಿಕ್ಷೆಯ ಸ್ಥಳ, ನರಕ. **Tartárean** (ಗು.)

Tártrate. Tartar¹ ನೋಡಿ.

Tartúf(f)e ಟಾರ್ಟುಫ್, ತಾರ್ತುಫ್ (ನಾ.) ಆಷಾಢಭೂತಿ (ಫ್ರೆಂಚ್ ಕವಿ ಮೋಲ್ಯೇರಿನ ಇದೇ ಹೆಸರಿನ ನಾಟಕದ ಪಾತ್ರದಿಂದ). **Tartúf(f)ism** (ನಾ.)

Tasímeter ಟಸಿಮಿಟರ್ (ನಾ.) ಶಾಖ, ತೇವ, ಮೊ. ಗಳಲ್ಲಿಯ ಬದಲಾವಣೆಗಳನ್ನು ಅಳೆಯುವ ಒಂದು ವಿದ್ಯುತ್ ಸಾಧನ: ಸೂಕ್ಷ್ಮ ವ್ಯತ್ಯಾಸ ಮಾಪಕ. **Tasimétric** (ಗು.)

Task ಟಾಸ್ಕ್ (ನಾ., ಕ್ರಿ. ಸಕ.) ವಿಧಿಸಿದ ಕೆಲಸ, ಕಾರ್ಯ(ಭಾರ), (ಕೆಲಸದ) ಹೊರೆ; (ಪಾಠಶಾಲೆಯಲ್ಲಿ) ಗಟ್ಟಿಮಾಡಬೇಕಾದ ಪಾಠ (Has done his t.); (ಕೈಕೊಂಡ) ಕೆಲಸ (Undertook the t. of classification); (Take person to t. ಆಕ್ಷೇಪಿಸು, ತರಾಟೆಗೆ ತೆಗೆದುಕೊ). (ಕ್ರಿ.) ಕೆಲಸ—ವಹಿಸು, ವಿಧಿಸು, ತೆಗೆ; (ಶಕ್ತಿ, ಬುದ್ಧಿ, ಮೊ. ಗಳಿಗೆ) ಶ್ರಮಕೊಡು, (—ಮೊ. ನ್ನು) ದುಡಿಸು, (—ಮೊ. ಗಳ ಮೇಲೆ) ಹೇರು, ಹೊರೆ ಹಾಕು, ಹೊರಿಸು. **Táskmaster** (ನಾ.) ದುಡಿಸುವವನು, ಕೆಲಸ ತೆಗೆಯುವವನು. **Táskmistress** (ನಾ., ಸ್ತ್ರೀ.)

Tass ಟ್ಯಾಸ್ (ನಾ.) (ಸ್ಕಾ. ಪ್ರ.) (ಮದ್ಯ, ಮೊ. ಗಳ) ಸಣ್ಣ ಗುಟಕು.

Tássel ಟ್ಯಾಸ್‌ಲ್ (ನಾ., ಕ್ರಿ. ಸಕ.) (ಮೆತ್ತೆ, ಟೋಪಿ, ಮೊ. ಗಳಿಗೆ ಅಲಂಕಾರಕ್ಕಾಗಿ ಹಾಕಿರುವ) ಕುಚ್ಚು, ಗೊಂಡೆ; (ಮುಸುಕಿನ ಜೋಳ, ಮೊ. ಗಳ) ತೆನೆಯ ಕುಚ್ಚು; ಪುಟದ ಗುರುತಾಗಿ ಉಪಯೋಗಿಸಲು ಪುಸ್ತಕಕ್ಕೆ ಸೇರಿಸಿ ಹೊಲಿದಿರುವ ಪಟ್ಟಿ: ಗುರುತು ಪಟ್ಟಿ; =Torsel. (ಕ್ರಿ.) ಕುಚ್ಚು—ಹಾಕು, ಕಟ್ಟು; (ಗಿಡಕ್ಕೆ ಬಲ ಕೊಡಲು) (ಮುಸುಕಿನ ಜೋಳದ ತೆನೆಯ) ಕುಚ್ಚು ತೆಗೆದುಹಾಕು.

Taste ಟೇಸ್ಟ್ (ಕ್ರಿ.) ರುಚಿ ನೋಡು, ಸವಿ(ದು) ನೋಡು, ಆಸ್ವಾದಿಸು (He tastes teas for Smith & Co. ಅವನು ಸ್ಮಿತ್ ಸಂಘದವರಿಗಾಗಿ ಟೀಗಳ ರುಚಿ ಪರೀಕ್ಷಕನಾಗಿದ್ದಾನೆ, ರುಚಿ ಪರೀಕ್ಷಿಸುತ್ತಾನೆ); ಕೊಂಚ ತಿನ್ನು (ಪ್ರಾಚೀ. ಪ್ರ. *for* ಉಪ. ದೊಡನೆ; ಮು., ನಿಷೇಧ ಪ್ರಯೋಗಗಳಲ್ಲಿ) (Has not tasted food for three days); ರುಚಿ ಹಿಡಿ (Can t. nothing when you have a cold); (ಪ್ರಾಚೀ. ಪ್ರ.) ಇಷ್ಟವಾಗು, ರುಚಿಸು (Cannot t. a joke against himself); ಅನುಭವಿಸು, ಅನುಭವವಿರು [Shall not t. (of) death. Has never tasted (of) success]; (ಆಹಾರ, ಮೊ. ಗಳ ವಿಷಯದಲ್ಲಿ ಅಥವಾ ರೂಪ.) ರುಚಿ—ಇರು, ಕಾಣು, ತೋರು; ಛಾಯೆ, ಲಕ್ಷಣ, —ಇರು, ಕಾಣು (Tastes of mint. His writings t. of the schools ಅವನ ಲೇಖನಗಳು ಮಧ್ಯಯುಗದ ವಿಶ್ವವಿದ್ಯಾನಿಲಯಗಳ ಲಕ್ಷಣ ತೋರುತ್ತವೆ). **Tástable** (ಗು.); **Táster** (ನಾ.) (ಕ್ರಿಯಾರ್ಥಗಳಲ್ಲಿ); ಟೀಗಳು, ಮದ್ಯಗಳು, ಮೊ. ನ್ನು ರುಚಿ ನೋಡುವುದಕ್ಕಾಗಿ ನೇಮಕವಾದವನು: ರುಚಿ ಪರೀಕ್ಷಕ, ಆಸ್ವಾದಕ; (ರೂಪ.) ಪುಸ್ತಕ ಪ್ರಕಾಶಕನ ಹಸ್ತಪ್ರತಿ ವಾಚಕ: ಗ್ರಂಥ ಪರೀಕ್ಷಕ; (ಚರಿತ್ರೆ) ಯಜಮಾನನು ಆಹಾರ ಮುಟ್ಟುವುದಕ್ಕೆ ಮೊದಲು ಅದರ ರುಚಿ ನೋಡಿ ತಿನ್ನಬಹುದೆಂದು ಆಶ್ವಾಸನ ಕೊಡುವುದಕ್ಕಾಗಿ ನೇಮಕವಾದವನು; ಆಹಾರ ಪರೀಕ್ಷಕ; ಮದ್ಯ ಪರೀಕ್ಷಕನ ಸಣ್ಣ ಬಟ್ಟಲು: ರುಚಿ ಬಟ್ಟಲು; ಚೀಸಿನ ಗಟ್ಟಿಯಿಂದ ಮಾದರಿ ನೋಡಲು ಒಂದು ಉರುಳೆಯಾಕಾರದ ಭಾಗವನ್ನು ಕತ್ತರಿಸಲು ಉಪಯೋಗಿಸುವ ಸಲಕರಣೆ: ರುಚಿ, ಗೋರು, —ಚಮಚ.

Taste (ನಾ.) ರುಚಿ, ಸವಿ; ರಸನೇಂದ್ರಿಯ, ರಸನ; (ವಿರ. ಪ್ರ.) ರುಚಿ ನೋಡುವುದು; (ಆಹಾರ, ಮೊ. ಗಳ) ಮಾದರಿಗಾಗಿ, ರುಚಿ ನೋಡುವುದಕ್ಕಾಗಿ, ತೆಗೆದುಕೊಂಡ ಭಾಗ (Give him a t. of the whip ಅವನಿಗೆ ಚಾವಟಿಯ ರುಚಿ ತೋರಿಸು); ಇಷ್ಟ, ಒಲವು (Is not to my t. ಅದು ನನಗೆ ಹಿಡಿಸುವುದಿಲ್ಲ. Add sugar to t. ರುಚಿಗೆ ತಕ್ಕಷ್ಟು ಸಕ್ಕರೆ ಸೇರಿಸು); ಅಭಿರುಚಿ, ರಸಜ್ಞತೆ (A man of t. ಒಳ್ಳೆಯ ರಸಜ್ಞ); ರುಚಿ ವಿವೇಕ, ಔಚಿತ್ಯವಿವೇಕ (Composed in admirable t. The remark was in bad t. ಆ ಟೀಕೆ ಹೀನ ರುಚಿಯದಾಗಿತ್ತು). **Tásteful** (ಗು.) ಒಳ್ಳೆಯ ಅಭಿರುಚಿಯುಳ್ಳ, ಸುಸಂಸ್ಕೃತ, ರಸಿಕತೆಯ (T. man, drapery, decorations). **Tástefully** (ಕ್ರಿ. ವಿ.); **Tástefulness** (ನಾ.); **Tásteless** (ಗು.) ರುಚಿಯಿಲ್ಲದ, ಸಪ್ಪೆಯಾದ, ನೀರಸ; ರುಚಿಶಕ್ತಿಯಿಲ್ಲದ, ರಸನೇಂದ್ರಿಯ ಹೀನ; ಅರೋಚಿ, ಉತ್ತಮಾಭಿರುಚಿಯಿಲ್ಲದ; (ಭಾಷೆ, ವರ್ತನೆ, ಮೊ. ಗಳ ವಿಷಯದಲ್ಲಿ) ಸುಸಂಸ್ಕಾರ ಹೀನ, ಅರಸಿಕ. **Tástelessly** (ಕ್ರಿ. ವಿ.); **Tástelessness** (ನಾ.); **Tásty** (ಗು.) (ಬಳ. ಮಾ.) ಸವಿಯಾದ, ರುಚಿಯಾದ, ಸ್ವಾರಸ್ಯವಾದ; (ಈಗ ಗ್ರಾಮ್ಯ ಪ್ರ.; ಉಡುಪು, ಅಲಂಕಾರ, ಮೊ. ಗಳ ವಿಷಯದಲ್ಲಿ) ಉತ್ತಮಾಭಿರುಚಿಯ, ಸುಸಂಸ್ಕಾರದ. **Tástely** (ಕ್ರಿ. ವಿ.)

Tat¹ ಟ್ಯಾಟ್ (ಕ್ರಿ.) ಕುಣಿಕೆ ಹೆಣಿಗೆಯ ಕರೆ ಕಟ್ಟು; ಕುಣಿಕೆ ಹೆಣೆದು ಮಾಡು. **Tátting** (ನಾ.) ಒಂದು ಬಗೆಯ ಕುಣಿಕೆ ಹೆಣಿಗೆಯ ಕರೆ (ಪಟ್ಟಿ)

Tat² ಟ್ಯಾಟ್, **Táttoo** ಟ್ಯಾಟೂ (ನಾ.) (ಆಂ. ಇಂ.) (ಕುದುರೆ) ತಟ್ಟು.

Tatá ಟಾಟಾ (ಭಾವ. ಅವ್ಯ.) (ಬೀಳ್ಕೊಡುವಾಗ ಹೇಳುವ ಮಾತು): ನಮಸ್ಕಾರ, ಶುಭಮಸ್ತು, ಸ್ವಸ್ತಿ.

Tatar. Tartar² ನೋಡಿ.

Tátter ಟ್ಯಾಟರ್ (ನಾ.) (ಸಾ., ಬ. ವ. ದಲ್ಲಿ) (ಬಟ್ಟೆ, ಕಾಗದ, ಮೊ. ಗಳ) ಚೂರುಪಾರು, ಹರುಕಲು, ಚಿಂದಿ, ಜೂಲು. **Tatterdemálion** ಟ್ಯಾಟರ್‌ಡಿಮೇ(ಮ್ಯಾ)ಲಿಯನ್ (ನಾ.) ಚಿಂದಿ ಬಟ್ಟೆಯವನು, ತಿರುಪೆಹರುಕ. **Táttered** (ಗು.); **Táttery** (ನಾ.)

Táttersall's ಟ್ಯಾಟರ್‌ಸಾಲ್ಸ್ (ನಾ.) ಕುದುರೆ ವ್ಯಾಪಾರದಮೇಲೆ ಮತ್ತು ಕುದುರೆ ಜೂಜಿನಮೇಲೆ ಪಂದ್ಯ ಕಟ್ಟುವ ಕೇಂದ್ರ ಸ್ಥಳ: ಕುದುರೆ— ವ್ಯಾಪಾರಕಟ್ಟೆ, ಜೂಜುಕಟ್ಟೆ (Knows his T. better than his Greek Testament)

Tátting. Tat¹ ನೋಡಿ.

Táttle ಟ್ಯಾಟ್‌ಲ್ (ಕ್ರಿ., ನಾ.) ಹರಟೆ (—ಹೊಡೆ, ಬಡಿ); ಹರಟು, ಗಳಹು. **Táttler** (ನಾ.) ಹರಟೆ—ಮಲ್ಲ, ಕೋರ; ಒಂದು ಬಗೆಯ ಹಕ್ಕಿ. **Táttlingly** (ಗು.)

Táttoo¹. Tat² ನೋಡಿ.

Tattoó² ಟ್ಯಟೂ (ನಾ., ಕ್ರಿ. ಅಕ.) ಸಿಪಾಯಿಗಳು ತಮ್ಮ ಬೀಡಿಗೆ ಹಿಂದಿರುಗಬೇಕೆಂದು ಸೂಚಿಸಲು ರಾತ್ರಿ ೧೦ ಘಂಟೆಗೆ ಹೊಡೆಯುವ ಭೇರಿ ಅಥವಾ ಊದುವ ಕಹಳೆ: ಬೀಡು, ವಾಪಸು, —ಕರೆ; ಇದನ್ನೇ ವಿಸ್ತರಿಸಿ ಸಂಗೀತ ಕವಾಯತುಗಳನ್ನು ಸೇರಿಸಿ ನಡಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿನೋದ; [Beat the devil's t. ಕೆಲಸವಿಲ್ಲದೆ ಬೆರಳು, ಮೊ. ಗಳಿಂದ (ಏನನ್ನಾದರೂ) ಹೊಡೆ(ಯುತ್ತಿರು), ತಟ್ಟು(ತ್ತಿರು)]. (ಕ್ರಿ.) (ರಪರಪನೆ) ಹೊಡೆ, ತಟ್ಟು.

Tattoó[3] ಟ್ಯಾಟೂ (ಕ್ರಿ. ಸಕ., ನಾ.) ಹಚ್ಚೆ (—ಚುಚ್ಚು, ಹೊಯ್ಯಿ)

Tátty ಟ್ಯಾಟಿ (ನಾ.) (ಆಂ. ಇಂ.) (ಸಾ., ಲಾಮಂಚದ) ತಟ್ಟಿ.

Tau ಟಾ (ನಾ.) ಗ್ರೀಕ್ ವರ್ಣಮಾಲೆಯ ಒಂದು ಅಕ್ಷರ (T, τ) (ಇಂಗ್ಲಿಷ್ T); T ಗುರುತುಳ್ಳ, ಆಕಾರದ, ಹಲವು ಬಗೆಯ ಮೀನು, ಮೊ. ವು; (ವಿಶೇಷಣ ಪ್ರ.) T ಆಕಾರದ (T-cross)

Taube (G) ಟೌಬ (ನಾ.) ಒಂದು ಮಾದರಿಯ ಜರ್ಮನ್ ಫಲಕ ವಿಮಾನ.

Taught. Teach ಧಾತುವಿನ ಭೂತ. ಮತ್ತು ಭೂ. ಕೃ.

Taunt[1] ಟಾಂಟ್ (ಕ್ರಿ. ಸಕ., ನಾ.) ಹಂಗಿಸು, ಮೂದಲಿಸು, ಕಟಕಿಯಾಡು, ಕೆಣಕು (*With* ಉಪ. ದೊಡನೆ). (ನಾ.) ಹಂಗಿಸುವುದು, ಮೂದಲಿಕೆ, ಕೆಣಕು ನುಡಿ, ಕಟಕಿ (Endured the taunts of his neighbours); ಮೂದಲಿಕೆಗೆ ಗುರಿ(ಯಾದವನು) (Became a t. to his neighbours). **Taúntingly** (ಕ್ರಿ. ವಿ.)

Taunt[2] ಟಾಂಟ್ (ಗು.) (ನಾವೆ) (ಕೂವೆಯ ವಿಷಯದಲ್ಲಿ) ಎತ್ತರವಾದ.

Taúrine ಟಾರೈನ್ (ಗು.) ಗೂಳಿಯ(ಂಥ); ಗೋಜಾತಿಯ, ಗವ್ಯ; ವೃಷಭರಾಶಿಯ. **Taúriform** (ಗು.) ಗೂಳಿಯಾಕಾರದ, ವೃಷಭಾಕಾರದ. **Taurómachy** ಟಾರಾಮಕಿ (ನಾ.) ಗೂಳಿ ಕಾಳಗ. **Taúrus** ಟಾರಸ್ (ನಾ.) ವೃಷಭರಾಶಿ.

Taúriform, Taurómachy, Taúrus. **Taurine** ನೋಡಿ.

Taut ಟಾಟ್ (ಗು.) (ನಾವೆ) (ಹಗ್ಗದ ವಿಷಯದಲ್ಲಿ) ಬಿಗಿಯಾದ; (ಹಡಗು ಮೊ. ಗಳ ವಿಷಯದಲ್ಲಿ) ಒಳ್ಳೆಯ ಸ್ಥಿತಿಯಲ್ಲಿರುವ, ಗಟ್ಟಿಮುಟ್ಟಾದ. **Taúten** (ಕ್ರಿ.); **Taútly** (ಕ್ರಿ. ವಿ.); **Taútness** (ನಾ.)

Tauto- ಟಾಟೊ— (ಸ. ಪೂ. ಪ.) ಅದೇ—, ಒಂದೇ—, ಸಮ—. **-baryd** ಭೂಮ್ಯಾಕರ್ಷಣಶಕ್ತಿಗೊಳಪಟ್ಟು ಚಲಿಸುತ್ತಿರುವ ಕಾಯದ ಒತ್ತಡ ಎಲ್ಲೆಡೆಯೂ ಒಂದೇ ಸಮನಾಗಿರುವಂಥ ವಕ್ರ: ಸಮಪೊತ್ತಡ ವಕ್ರ, ಸಮಭಾರ ವಕ್ರ. **-chrone** ಸ್ಥಾಯೀ ಅವಸ್ಥೆಯಲ್ಲಿರುವ ಒಂದು ಕಾಯ ಒಂದು ನಿರ್ದಿಷ್ಟ ಬಲಕ್ಕೆ ಒಳಪಟ್ಟು ಚಲಿಸತೊಡಗಿದಾಗ, ಯಾವ ಬಿಂದುವಿನಿಂದ ಅದು ಹೊರಟರೂ ಅತ್ಯಂತ ಕೆಳ ಬಿಂದುವಿಗೆ ಬರುವುದಕ್ಕೆ ಒಂದೇ ಕಾಲ ಹಿಡಿಯುವಂಥ ವಕ್ರ: ಸಮಕಾಲ ವಕ್ರ. **-chronism** ಸಮಕಾಲತೆ. **-chronous** ಸಮಕಾಲಿಕ. **-phony** ಒಂದೇ ನಾದ ಪುನರಾವರ್ತನೆಯಾಗುವುದು; ನಾದ, ಧ್ವನಿ, —ಪುನರುಕ್ತಿ.

Tautólogy ಟಾಟಾಲೊಜಿ (ನಾ.) ಹೇಳಿದ್ದನ್ನೇ ಬೇರೆ ಬೇರೆ ಮಾತುಗಳಲ್ಲಿ ಹೇಳುವುದು: ತಲೆಶಿರೋಭಾರ ಪ್ರಯೋಗ (ಉದಾ., Arrived one after the other in succession). **Tautológic(al)** ಟಾಟೊಲಾ— (ಗು.); **Tautológically** (ಕ್ರಿ. ವಿ.); **Tautólogist** ಟಾಟಾಲೊ— (ನಾ.); **Tautólogize** (ಕ್ರಿ. ಸಕ.)

Távern ಟ್ಯಾವರ್ನ್ (ನಾ.) ತಿಂಡಿ ತೀರ್ಥದ ಅಂಗಡಿ, ಹೋಟಲು; (ಹಿಂದಿನ ಅರ್ಥ) ಮದ್ಯದಂಗಡಿ.

Taw[1] ಟಾ (ಕ್ರಿ. ಸಕ.) (ತೊಗಟೆಯ ಕಷಾಯದಲ್ಲಿ ಅದ್ದದೆ ಪಟಿಕ ಮತ್ತು ಉಪ್ಪಿನ ದ್ರಾವಣದಲ್ಲಿ ನೆನಸಿ) ಚರ್ಮವನ್ನು ಹದಮಾಡು. **Tawer** (ನಾ.); **Tawery** (ನಾ.)

Taw[2] ಟಾ (ನಾ.) ಗೋಲಿ(ಯಾಟ); ಗೋಲಿಯಾಟದ ಎಲ್ಲೆಗೆರೆ.

Tawdry ಟಾಡ್ರಿ (ಗು., ನಾ.) ಆಡಂಬರದ, ಡಬ್ಬಿನ, ಹೊರಡೌಲಿನ, ಅತ್ಯಲಂಕಾರದ. (ನಾ.) ಅಗ್ಗದ, ಅತಿ, ಅನುಚಿತ, —ಅಲಂಕಾರ; ಥಳುಕುಪಳುಕು. **Tawdrily** (ಕ್ರಿ. ವಿ.); **Tawdriness** (ನಾ.)

Tawny ಟಾನಿ (ಗು.) ಕಂದು ಹಳದಿಯ; ಕಂದು ಬಣ್ಣದ. **Tawniness** (ನಾ.)

Taws(e) ಟಾಸ್ (ನಾ.; ಏ. ವ. ಅಥವಾ ಬ. ವ.) (ಸ್ಕಾ. ಪ್ರ.) ಸೀಳು (ಚರ್ಮದ) ಚಾವಟಿ, ಕವಲು ಕೊರಡ.

Tax ಟ್ಯಾಕ್ಸ್ (ಕ್ರಿ. ಸಕ.) ತೆರಿಗೆ, ಕಂದಾಯ, ಕರ, —ಹಾಕು, ಹೊರಿಸು, ವಿಧಿಸು; (ಬೈಬಲ್ಲಿನ ಹೊಸ ಒಡಂಬಡಿಕೆ) ಕಪ್ಪ ವಿಧಿಸುವುದಕ್ಕಾಗಿ (ವ್ಯಕ್ತಿಯ ಹೆಸರನ್ನು) ಪಟ್ಟಿಯಲ್ಲಿ ದಾಖಲುಮಾಡು: ಕಪ್ಪಪಟ್ಟಿಯಲ್ಲಿ—ಬರೆ(ದುಕೊ), ದಾಖಲು ಮಾಡು. (ಒಬ್ಬನ ಶಕ್ತಿ, ಬುದ್ಧಿಕೌಶಲ, ಮೊ. ನ್ನು) ದುಡಿಸು; (—ಮೊ. ಗಳ ಮೇಲೆ) ಭಾರ, ಹೊರೆ, —ಹೇರು, ಹಾಕು; (—ಮೊ. ಕ್ಕೆ) ಶ್ರಮಕೊಡು (Cannot t. my memory ಸಂಗತಿ ಜ್ಞಾಪಿಸಿಕೊಳ್ಳುವುದಕ್ಕಾಗಿ ಶ್ರಮಪಡಲಾರೆ); (ನ್ಯಾ. ಶಾ.) (ಕೋರ್ಟಿನ ಖರ್ಚು, ಮೊ. ಗಳ ವಿಷಯದಲ್ಲಿ) ಬಾಬುಗಳನ್ನು ಪರೀಕ್ಷಿಸಿ ಒಪ್ಪು ಅಥವಾ ತಳ್ಳಿಹಾಕು: ಖರ್ಚು ಗೊತ್ತುಮಾಡು (To t. the costs of an action in court); (ಒಬ್ಬನಮೇಲೆ ತಪ್ಪು, ಕೃತ್ಯ, ಮೊ. ನ್ನು) ಹೊರಿಸು, ಆರೋಪಿಸು, ಆಪಾದಿಸು (*With* ಉಪ. ದೊಡನೆ) (To t. a man with crime). Taxed, tax-, cart ಕಡಮೆ ತೆರಿಗೆಯ ಅಥವಾ ತೆರಿಗೆಯೇ ಇಲ್ಲದ (ಎರಡು ಗಾಲಿಯ, ಬೇಸಾಯದ ಅಥವಾ ವ್ಯಾಪಾರದ) ಬಂಡಿ. Taxing-master ಬೆಲೆಪಟ್ಟಿಯನ್ನು ಪರೀಕ್ಷಿಸುವ ನ್ಯಾಯಸ್ಥಾನದ ಅಧಿಕಾರಿ: ಬೆಲೆಪಟ್ಟಿ ಪರೀಕ್ಷಕ. **Táxable** (ಗು.); **Táxableness** (ನಾ.); **Táxably** (ಕ್ರಿ. ವಿ.); **Taxability** (ನಾ.); **Taxátion** (ನಾ.)

Tax (ನಾ.) ಕಂದಾಯ, ತೆರಿಗೆ, ಕರ [Capitation t. ತಲೆಗಂದಾಯ. Direct t. (Direct ನೋಡಿ). Income t. (Income ನೋಡಿ). Indirect t. ಪರೋಕ್ಷ ತೆರಿಗೆ. Poll-t. (Poll[1] ನೋಡಿ). Single-t. (ಜಮೀನಿನ ಅಭಿವೃದ್ಧಿ ಸ್ಥಿತಿಯನ್ನು ಗಮನಿಸದೆ ಅದರ ಬೆಲೆಯಮೇಲೆ ಹಾಕಿದ) ಒಟ್ಟುಗಂದಾಯ]; (ವ್ಯಕ್ತಿ, ಆತನ ಶಕ್ತಿ, ಮೊ. ಗಳ ಮೇಲೆ) ಹೊರೆ, ಭಾರ (*On, upon* ಉಪ. ದೊಡನೆ). **T.-cart** (ಮೇಲೆ Taxed cart ನೋಡಿ). **T.-collector** ಕಂದಾಯ, ತೆರಿಗೆ, —ವಸೂಲಿಗಾರ. **T.-farmer** ಕೆಲವು ಕಂದಾಯ ತೆರಿಗೆಗಳನ್ನು ವಸೂಲು ಮಾಡಲು ಸರಕಾರದಿಂದ ಹಕ್ಕು ಕೊಂಡುಕೊಂಡವನು: ಕಂದಾಯ, ತೆರಿಗೆ, —ಹಕ್ಕುದಾರ. **T.-free** ಕಂದಾಯ, ತೆರಿಗೆ, —ಇಲ್ಲದ. **T.-gatherer**=T.-collector. **Táxpayer** ಕಂದಾಯದಾರ, ತೆರಿಗೆದಾರ. **Táxless** (ಗು.)

Táxi ಟ್ಯಾಕ್ಸಿ (ನಾ., ಕ್ರಿ.) ಬಾಡಿಗೆ—ಮೋಟಾರುಗಾಡಿ, ಹಗುರ ವಿಮಾನ (=**T.-cab, T. plane**). (ಕ್ರಿ.) ಬಾಡಿಗೆ ಮೋಟಾರು ಗಾಡಿಯಲ್ಲಿ (ಕರೆದುಕೊಂಡು)ಹೋಗು, ಸಾಗಿಸು; (ವಿಮಾನ ಹಾರಿಕೆಯಲ್ಲಿ) (ಹಾರುವುದಕ್ಕೆ ಮೊದಲು ಅಥವಾ ಹಾರಿ ಇಳಿಯುವಾಗ) ನೆಲದ ಮೇಲೆ, ನೀರಮೇಲೆ, —ಹೋಗು. **Táximan** (ನಾ.) ಬಾಡಿಗೆ ಮೋಟಾರು ನಡಸುವವನು. **Taxímeter** (ನಾ.) ಬಾಡಿಗೆ ಮೋಟಾರು ಗಾಡಿಗೆ ಅಳವಡಿಸಿರುವ, ಪ್ರಯಾಣ ಮಾಡಿದ ದೂರಕ್ಕೆ ಕೊಡಬೇಕಾದ ಬಾಡಿಗೆಯನ್ನು ಸೂಚಿಸುವ ಸಲಕರಣೆ: ಬಾಡಿಗೆ ಸೂಚಕ, ಕರಮಾಪಕ.

Táxidermy ಟ್ಯಾಕ್ಸಿಡರ್ಮಿ (ನಾ.) ಪ್ರಾಣಿಗಳ ಚರ್ಮಗಳನ್ನು ಒಳಗೆ ಮೆತ್ತೆ, ಮೊ. ನ್ನು ತುಂಬಿ, ಸಜೀವ ಪ್ರಾಣಿಯಂತೆ ಕಾಣುವಹಾಗೆ ಪರಿಷ್ಕರಿಸುವ ಕಲೆ: ಚರ್ಮಪ್ರಸಾಧನ. **Taxidérmal** (ಗು.); **Taxidérmic** (ಗು.); **Taxidérmist** (ನಾ.)

Taxímeter. **Taxi** ನೋಡಿ.

Táxin ಟ್ಯಾಕ್ಸಿನ್ (ನಾ.) ಯೂ (Yew) ಮರದ ಎಲೆಯಿಂದ ತಯಾರಿಸಿದ ಒಂದು ರಾಳಪದಾರ್ಥ: ಟ್ಯಾಕ್ಸಿನ್.

Táxis ಟ್ಯಾಕ್ಸಿಸ್ (ನಾ.) (ಶಸ್ತ್ರವೈದ್ಯ) (ಅಂಗಭಾಗಗಳನ್ನು ಮತ್ತೆ ಅವುಗಳ ಸ್ಥಾನದಲ್ಲಿ ಸರಿಯಾಗಿ ಕೂರಿಸುವುದಕ್ಕಾಗಿ) ಕೈಯಿಂದ ಒತ್ತುವುದು; (ಗ್ರೀಕ್ ಪ್ರಾ.) ಸೈನ್ಯದಳ; (ಪ್ರಾ. ವಿ.) ವರ್ಗೀಕರಣ; (ವ್ಯಾ., ಅಲಂ.) ವಿನ್ಯಾಸ, ರಚನೆ, ಕ್ರಮ. **Taxólogy** ಟ್ಯಾಕ್ಸಾಲೊಜಿ (ನಾ.) ವರ್ಗೀಕರಣ ಶಾಸ್ತ್ರ. **Taxónomy** (ನಾ.) (ಪ್ರಕೃತಿ ಚರಿತ್ರೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರ್ಗೀಕರಣ(ತತ್ತ್ವ). **Taxonómic(al)** ಟ್ಯಾಕ್ಸೊನಾ— (ಗು.); **Taxonómically** (ಕ್ರಿ.ವಿ.); **Taxónomist** ಟ್ಯಾಕ್ಸಾನೊ—(ನಾ.)

Taxólogy, Taxónomy, etc. **Taxis** ನೋಡಿ.

Tchick ಚಿಕ್ (ನಾ., ಕ್ರಿ. ಅಕ.) (ಮು., ಕುದುರೆಯನ್ನು ಓಡಿಸುವಲ್ಲಿ ಮಾಡುವಂತೆ) ಚಪ್ಪರಿಸು; 'ಚ್, ಚ್' ಎನ್ನು.

Tea ಟೀ (ನಾ.) ಟೀ, ತೇ, ಚಾ, ಚಹ, —ಗಿಡ (=T.-plant); —ಸೊಪ್ಪು, ಎಲೆ [Black, green, t. ಕಪ್ಪು, ಹಸುರು, —ಟೀಸೊಪ್ಪು. Bohea, congou, souchong, pekoe, etc., t. ಹಲವು ಬಗೆಯ ಕಪ್ಪು ಟೀಸೊಪ್ಪು. Hyson, gunpowder, etc., t. ಹಲವು ಬಗೆಯ ಹಸುರು ಟೀಸೊಪ್ಪು. Tile t. ಇಟ್ಟಿಗೆ(ಯಾಕಾರದಲ್ಲಿ ಗಟ್ಟಿಸಿದ) ಟೀಸೊಪ್ಪು]. ಟೀ ಕಷಾಯ, ಚಾ, ಚಹ; (ಇತರ ಪದಾರ್ಥಗಳ) ಕಷಾಯ [Beef t. (Beef ನೋಡಿ)]; ಚಹದೊಡನೆ ತೆಗೆದುಕೊಳ್ಳುವ ಮಧ್ಯಾಹ್ನದ ಮೇಲಿನ ಹಗುರ ಊಟ, ಉಪಾಹಾರ (Five-o'-clock t.); ಚಹದೊಡನೆ ತೆಗೆದುಕೊಳ್ಳುವ ಸಂಜೆಯ ತುಂಬು ಊಟ (=High t., meat t.). **T.-caddy** ಚಹ—ಪೆಟ್ಟಿಗೆ, ಡಬ್ಬಿ. **T.-cake** ಚಹದ ಜೊತೆಗೆ ತೆಗೆದುಕೊಳ್ಳುವ ರೊಟ್ಟಿ: ಚಹ ರೊಟ್ಟಿ. **T.-chest** (ಒಳಗಡೆ ಸೀಸದ ತಗಡು ಹಾಕಿರುವ) ತೇಯೆಲೆ ರವಾನೆ ಪೆಟ್ಟಿಗೆ. **T.-cloth** ಚಹ ಮೇಜಿನಮೇಲೆ ಅಥವಾ ಚಹ ತಟ್ಟೆಯ ಕೆಳಗಡೆ ಹಾಸುವ ಬಟ್ಟೆ; ಚಹ ಬಟ್ಟಲು ಒರಸುವ ಬಟ್ಟೆ; ಚಹ ಬಟ್ಟೆ. **T.-cup** ಚಹ (ಕುಡಿಯುವ) ಬಟ್ಟಲು [Storm in a t.-c. (Storm ನೋಡಿ)]; =Gill³ (=**Teácupful**). **T.-fight** (ಬಳ. ಮಾ.) =T. party. **T.-garden** ಟೀ ಉಪಾಹಾರದ ತೋಟ; ಟೀ (ಬೆಳೆಯುವ) ತೋಟ. **T.-gown** ಚಹ (ಕುಡಿಯುವಾಗ ಹೆಂಗಸು ಹಾಕಿಕೊಳ್ಳುವ) ಮೇಲುಡುಪು. **T.-house** (ಚೀನಾ ಜಪಾನುಗಳಲ್ಲಿ) ಚಹ ಅಂಗಡಿ. **T.-kettle** ಟೀ (ಮಾಡುವ) —ತಪ್ಪಲೆ, ಕೆಟಲು. **T.-leaf** ತೇಯೆಲೆ; ಟೀ ಸೊಪ್ಪು; (ಬ. ವ. ದಲ್ಲಿ) (ನೆಲ ತೊಳೆಯಲು ಉಪಯೋಗಿಸುವ) ಟೀ ಚರಟ. **T.-party** ಚಹ—ಗೋಷ್ಠಿ, ಕೂಟ. **T.-pot** ಚಹ (ಮಾಡುವ) ಪಾತ್ರೆ. **T.-rose** ಟೀ (ವಾಸನೆಯ) ಗುಲಾಬಿ. **T.-service, -set** ಚಹ (ಬಡಿಸುವ) ಪಾತ್ರೆಗಳು; ಟೀ ಪಾತ್ರಾವಳಿ. **T.-spoon** (Spoon¹ ನೋಡಿ). **T.-table** ಚಹ (ಕುಡಿಯುವ) ಮೇಜು (T.-t. conversation ಚಹ ಮೇಜಿನ, ಟೀ ಕುಡಿಯುವಾಗಿನ,—ಮಾತುಕತೆ). **T.-things** =T.-set. **T.-tray** ಟೀ ತಟ್ಟೆ. **T.-urn** ಚಹಕ್ಕೆ ನೀರನ್ನು ಕುದಿಸುವ ಅಥವಾ ನೀರಿಟ್ಟುಕೊಂಡಿರುವ ಪಾತ್ರೆ: ಟೀ —ಮಡಕೆ, ತಪ್ಪಲೆ.

Tea (ಕ್ರಿ.) ಟೀ, ಚಹ—ಕುಡಿ, ತೆಗೆದುಕೊ (We t. at 4); ಚಹ ಕೊಡು.

Teach ಟೀಚ್ (ಕ್ರಿ. ಸಕ.; ಭೂತ., ಭೂ. ಕೃ. Taught ಟಾಟ್) ಕಲಿಸು, ಕಲಿಸಿಕೊಡು; ಪಾಠ—ಹೇಳಿಕೊಡು, ಕಲಿಸು; ಹೇಳಿಕೊಡು; ಶಿಕ್ಷಣಕೊಡು, ಬೋಧಿಸು; ಬುದ್ಧಿ ಕಲಿಸು [Teaches the violin. This will t. you to speak the truth ಇದು ನಿನಗೆ ನಿಜ ಹೇಳುವಂತೆ ಬುದ್ಧಿ ಕಲಿಸುತ್ತದೆ. I will t. him to meddle in my affairs (ಬಳ. ಮಾ.) ನನ್ನ ವ್ಯವಹಾರದಲ್ಲಿ ಕೈಹಾಕದಂತೆ ಅವನಿಗೆ ಬುದ್ಧಿ ಕಲಿಸುತ್ತೇನೆ]; ವಿದ್ಯೆ ಕಲಿಸು, ಅಧ್ಯಾಪಕನಾಗಿರು; ತೋರಿಸಿಕೊಡು, ತಿಳಿಸಿಕೊಡು (Taught that we must forgive our enemies). **Teáchable** (ಗು.) ಕಲಿಯುವ, ಕಲಿಸಲಾಗುವ, ಕಲಿಯಬಲ್ಲ, ಶಿಕ್ಷಣ ಸಾಧ್ಯ, ವಿಧೇಯ; (ವಿಷಯ, ಮೊ. ವು) ಹೇಳಿಕೊಡಲಾಗುವ, ಬೋಧನ ಸಾಧ್ಯ. **Teachabílity** (ನಾ.); **Teáchableness** (ನಾ.); **Teácher** (ನಾ.) ಉಪಾಧ್ಯಾಯ, ಓಜ (ಗ್ರಾಂ.), ಅಧ್ಯಾಪಕ, ಶಿಕ್ಷಕ, ಬೋಧಕ, ಗುರು. **Teáchership** (ನಾ.); **Téaching** (ನಾ.) (ಕ್ರಿಯಾರ್ಥಗಳಲ್ಲಿ); ಬೋಧನೆ, ಉಪದೇಶ, ತತ್ತ್ವ (Teachings of the Church)

Teague ಟೀಗ್ (ನಾ.) (ತಿರಸ್ಕಾರ ಪ್ರ.) ಐರ್ಲೆಂಡಿನವನು.

Teak ಟೀಕ್ (ನಾ.) ತೇಗ(ದ ಮರ)

Teal ಟೀಲ್ (ನಾ.; ಬ. ವ. ಅದೇ) ಹಲವು ಬಗೆಯ ಸಣ್ಣ ಜಾತಿಯ ಸೀನೀರಿನ ಬಾತುಕೋಳಿ.

Team ಟೀಂ (ನಾ., ಕ್ರಿ. ಸಕ.) ಒಟ್ಟಿಗೆ ಹೂಡಿದ ಎರಡು ಅಥವಾ ಹೆಚ್ಚು (ಹೇರು) ಪ್ರಾಣಿಗಳು: ಜೊತೆ, ಜೋಡಿ, ತಂಡ; (ಆಟಗಳಲ್ಲಿ) ತಂಡ, ಪಕ್ಷ(—ದ ಆಟಗಾರರು); ಒಟ್ಟಿಗೆ ಕೆಲಸಮಾಡುವ ಜನರ ತಂಡ: ಕೆಲಸಗಾರರ ತಂಡ (T.-spirit ಸ್ವವರ್ಗದಲ್ಲಿ ಕೂಡಿಕೊಂಡು ನಡೆಯುವ ಬುದ್ಧಿ: ಕೂಡು ಬುದ್ಧಿ; ಸ್ವವರ್ಗಪರ ಬುದ್ಧಿ. T.-work ಒಕ್ಕೂಟದ ಕೆಲಸ, ವ್ಯವಸ್ಥಾಬದ್ಧವಾದ ಸಹಕಾರ). (ಕ್ರಿ.) (ಕುದುರೆ, ಮೊ. ನ್ನು) ಜೊತೆಯಾಗಿ, ತಂಡವಾಗಿ, —ಹೂಡು; ಕೆಲಸಗಾರರ ತಂಡದಿಂದ ಕೆಲಸಮಾಡಿಸು; ತಂಡ ಗುತ್ತಿಗೆದಾರನಿಗೆ ಕೆಲಸ ವಹಿಸು, ತಂಡ ಗುತ್ತಿಗೆ ಕೊಡು [**Teáming** (ನಾ.)]. **Teámwise** (ಕ್ರಿ. ವಿ.) ಜೊತೆಯಾಗಿ, ತಂಡವಾಗಿ. **Teámster** (ನಾ.) ಪ್ರಾಣಿ ಜೊತೆ, ಪ್ರಾಣಿ ತಂಡ, —ನಡಸುವವನು, ಹೊಡೆಯುವವನು.

Teápoy ಟೀಪಾಯ್ (ನಾ.) ಮು., ಚಹ ಕುಡಿಯುವುದಕ್ಕೆ ಉಪಯೋಗಿಸುವ (ಮೂರು ಕಾಲಿನ ಅಥವಾ ನಾಲ್ಕು ಕಾಲಿನ) ಸಣ್ಣ ಮೇಜು: ಟೀ ಮೇಜು.

Tear¹ ಟೇ(ಅ)ರ್ [ಕ್ರಿ.; ಭೂತ. Tore ಟೋ(ಅ)ರ್; ಭೂ. ಕೃ. Torn ಟೋರ್ನ್; ನಾ.] ಹರಿ(ದುಹಾಕು), ಬಗಿದುಹಾಕು, ಸೀಳು, ಸಿಗಿದುಹಾಕು, ಹರಿದು ತೂತುಮಾಡು, ಛಿದ್ರಮಾಡು; ಜೋರಾಗಿ, ಬಲಾತ್ಕಾರವಾಗಿ, —ಕಿತ್ತುಹಾಕು, ಎಳೆ(ದುಹಾಕು), ಅಗಲಿಸು (ರೂಪ. ಸಹ) [Tore up the letter. T. it in half, in two, in pieces. Torn to pieces by a tiger ಹುಲಿಯಿಂದ ಖಂಡ ಖಂಡವಾಗಿ ಛಿದ್ರಮಾಡಲ್ಪಟ್ಟ. (ರೂಪ.) Country was torn by factions ಪಕ್ಷ ಪ್ರತಿಪಕ್ಷಗಳಿಂದ ನಾಡು ಹರಿದು ಹಂಚಿ ಹೋಗಿತ್ತು, ಛಿದ್ರ ಛಿದ್ರವಾಗಿತ್ತು. Heart torn by conflicting emotions ಪರಸ್ಪರ ವಿರುದ್ಧ ರಸೋದ್ರೇಕಗಳಿಂದ ಬಿರಿದ ಹೃದಯ. Tore down the notice ತಿಳಿವಳಿಕೆ ಪತ್ರವನ್ನು ಕಿತ್ತುಹಾಕಿದನು, ಹರಿದು ಬಿಸಾಡಿದನು. Tree torn up by the roots. Was torn from her parents ಅವಳನ್ನು ತಾಯಿತಂದೆಗಳಿಂದ ಬಲಾತ್ಕಾರವಾಗಿ ಅಗಲಿಸಿದರು. Babe torn from the breast ಮೊಲೆಯೂಡಿಸುತ್ತಿದ್ದ ತಾಯಿಯಿಂದ ಬಲಾತ್ಕಾರವಾಗಿ ಸೆಳೆದುಕೊಂಡು ಹೋದ ಮಗು. Could not t. myself away ಹೊರಟುಹೋಗಲು ಮನಸ್ಸಾಗಲಿಲ್ಲ]. ಬಲಾತ್ಕಾರವಾಗಿ ಎಳೆ, ಕೀಳು, ಜಗ್ಗು (*At* ಉಪ. ದೊಡನೆ) (Tore at the cover of the parcel). [T. one's hair (ಕೋಪದಿಂದ, ದಿಗ್ಭ್ರಮೆಯಿಂದ, ಅಥವಾ ನಿರಾಶೆಯಿಂದ) ತಲೆಯ ಕೂದಲು ಹರಿದುಕೊ, ಕಿತ್ತುಕೊ]. ಹರಿ(ದುಹೋಗು), ಹರಿಯಲಾಗು (This cloth tears easily); ಅತಿವೇಗದಿಂದ, ರಭಸದಿಂದ, —ಓಡು; ಕತ್ತರಿಸಿಕೊಂಡು ನುಗ್ಗು (The river tore down the narrow valley). [**Teáraway** (ಗು.) ರಭಸದ, ಉರುವಣೆಯ. **Tear-off** (ಗು., ನಾ.) ಹರಿಯಲಾಗುವಂತೆ ಸೇರಿಸಿದ (ಹಾಳೆ, ಚೀಟಿ)]. (ನಾ.) (ಬಟ್ಟೆ, ಮೊ. ಗಳಲ್ಲಿಯ) ಹರುಕು, ಛಿದ್ರ. **Teáring** (ಗು.) (ಕ್ರಿಯಾರ್ಥಗಳಲ್ಲಿ); ರಭಸದ, ಬಿರುಸಾದ, ಜೋರಾದ, ತೀವ್ರ (T. pace, rage)

Tear² ಟಿಯರ್ (ನಾ.) ಕಣ್ಣೀರು (ತೊಟ್ಟು), ಕಂಬನಿ; ಅಶ್ರು, ಬಾಷ್ಪ (—ಬಿಂದು) (=T.-drop) (The tears fell down her cheeks. A t.-stained face ಕಣ್ಣೀರು ಕಲೆಯ, ಬಾಷ್ಪ ಕಲುಷಿತ, —ಮುಖ. She was in tears ಅವಳು—ಕಣ್ಣೀರು ಹಾಕುತ್ತಿದ್ದಳು, ಅಳುತ್ತಿದ್ದಳು). (ಕಂಬನಿಯಂಥ) ಹನಿ, ತೊಟ್ಟು (ಉದಾ., ಯಾವುದಾದರೂ ದ್ರವದ ತೊಟ್ಟು, ರಾಳದ ಗಟ್ಟಿ ಹನಿ, ಮೊ. ದು). Tears of strong wine ಪೋರ್ಟ್ ಮದ್ಯ, ಮೊ. ನ್ನು ಅರ್ಧಕ್ಕೆ ತುಂಬಿದ ಗಾಜಿನ ಲೋಟದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಳಭಾಗದಲ್ಲಿ ಕೂಡಿಕೊಳ್ಳುವ ಹನಿಗಳು : ಮದ್ಯಬಾಷ್ಪ. Crocodile tears (Crocodile ನೋಡಿ). **T.-gas** (ಯುದ್ಧದಲ್ಲಿ ಉಪಯೋಗಿಸುವ) ಕಣ್ಣೀರು ಬರಿಸುವ ವಿಷಾನಿಲ. **T.-shell** = Lachrymatory shell (Lachrymal ನೋಡಿ). **Teárful** (ಗು.) ಕಣ್ಣೀರು —ತುಂಬಿದ, ಸುರಿಸುವ ; ಅಳುತ್ತಿರುವ. (ಸಂಗತಿ, ಸುದ್ದಿ, ಮೊ. ವು) ಕಣ್ಣೀರು ಬರಿಸುವ, ಶೋಚನೀಯ, ಖೇದಕರ. **Teárfully** (ಕ್ರಿ. ವಿ.); **Teárfulness** (ನಾ.) ; **Téarless** (ಗು.)

Tease ಟೀಸ್ (ಕ್ರಿ. ಸಕ., ನಾ.) (ಹಾಸ್ಯಗಳು, ಪ್ರಶ್ನೆಗಳು, ಮೊ. ರಿಂದ) ಕಿರುಕುಳ ಕೊಡು, ಕೀಟಲೆಮಾಡು ; ಗೋಳು —ಹುಯ್ದುಕೊ, ಗುಟ್ಟಿಸು ; ಕಾಡು, ಪೀಡಿಸು (Person *for* thing, *to* do) ; ರೇಗಿಸು. (ಉಣ್ಣೆ, ನಣಬು, ಮೊ. ನ್ನು) ಹಿಂಜು, ಎಕ್ಕು, ಹಿಕ್ಕು, ಬಾಚು ; (ಬಟ್ಟೆ, ಮೊ. ನ್ನು ಗುಂಜೆಬ್ಬಿಸುವುದಕ್ಕಾಗಿ) 'ಟೀಸ್‌ಲ್' ಸಸ್ಯದ ಮುಳ್ಳು ಹೂತಲೆಗಳಿಂದ ಬಾಚು. (ನಾ.) ಕೀಟಲೆಕೋರ ; ಪೀಡಕ. **Teáser** (ನಾ.) (ಕ್ರಿಯಾರ್ಥಗಳಲ್ಲಿ) ; = Tease (ನಾ.) ; (ಬಳ. ಮಾ.) ಕಷ್ಟದ, ಕಿರುಕುಳ ಕೊಡುವ, —ಪ್ರಶ್ನೆ, ಸಮಸ್ಯೆ, ಕೆಲಸ ; ನಿರ್ವಹಿಸಲು ಕಠಿನವಾದುದು ; ಕಾಟ, ಪೀಡೆ. **Teásingly** (ಕ್ರಿ. ವಿ.)

Teásel, -zel, -zle ಟೀಸ್‌ಲ್ (ನಾ., ಕ್ರಿ. ಸಕ.) ಬಟ್ಟೆಯನ್ನು ಬಾಚಿ ಗುಂಜೆಬ್ಬಿಸುವುದಕ್ಕಾಗಿ ಉಪಯೋಗಿಸುತ್ತಿದ್ದ, ಮುಳ್ಳು ಮುಳ್ಳಾದ ದೊಡ್ಡ ಹೂತಲೆಗಳನ್ನುಳ್ಳ, ಹಲವು ಬಗೆಯ ಸಸ್ಯ ; ಇದರ ಮುಳ್ಳು ಹೂತಲೆ ; ಬಟ್ಟೆ ಕೆಲಸದಲ್ಲಿ ಈ ಹೂತಲೆಗಳಿಗೆ ಬದಲಾಗಿ ಉಪಯೋಗಿಸುವ ಯಂತ್ರ (ಸಲಕರಣೆ) : ಬಾಚಿಗೆ, ಬಾಚುಮುಳ್ಳು, —ಯಂತ್ರ. (ಕ್ರಿ.) 'ಟೀಸ್‌ಲ್' ಮುಳ್ಳು ಹೂತಲೆಗಳಿಂದ (ಬಟ್ಟೆಯನ್ನು) ಬಾಚು ; —ಬಾಚಿ ಗುಂಜೆಬ್ಬಿಸು. **Teásler, -zler** (ನಾ.) —ವವನು ; ಬಾಚಿಗೆ (ಯಂತ್ರ ಸಲಕರಣೆ)

Teáser. **Tease** ನೋಡಿ.

Teat ಟೀಟ್ (ನಾ.) (ಹೆಂಗಸಿನ) ಮೊಲೆ ತೊಟ್ಟು, ಚೂಚುಕ ; (ಪ್ರಾಣಿಯ) ಮೊಲೆ, ಕೆಚ್ಚಲು. **(-)teated** (ಗು.) ; **Teátlike** (ಗು.)

Tec ಟೆಕ್ (ನಾ.) (ಅಸಂ.) = Detective (ಎಂಬ ಪದದ ಸಂಕ್ಷಿಪ್ತ)

Téchnic ಟೆಕ್ನಿಕ್ (ಗು., ನಾ.) (ಗು. ; ವಿರ. ಪ್ರ.) = Technical. (ನಾ.) = Technique ; (ಸಾ., ಬ. ವ. ದಲ್ಲಿ) ಕಲಾ ತತ್ತ್ವ, ಶಾಸ್ತ್ರ ತಂತ್ರ, ಪ್ರಯೋಗ ತಂತ್ರ. (ಬ. ವ. ದಲ್ಲಿ) ಪಾರಿಭಾಷಿಕ ಪದಗಳು ; ಪಾರಿಭಾಷಿಕ, ಶಾಸ್ತ್ರೀಯ, —ವಿವರಗಳು, ವಿಧಾನಗಳು ; ಪರಿಭಾಷೆ, ಪ್ರಕ್ರಿಯೆ. **Téchnical** (ಗು.) ಯಾವುದಾದರೊಂದು ಕಲೆ, ವಿಜ್ಞಾನ, ಕೈಗಾರಿಕೆ, ಮೊ. ಕ್ಕೆ ಸಂಬಂಧಿಸಿದ : ಶಾಸ್ತ್ರತಂತ್ರೀಯ ; ಪಾರಿಭಾಷಿಕ (T. terms ಪಾರಿಭಾಷಿಕ ಪದಗಳು. T. skill ಶಾಸ್ತ್ರತಂತ್ರೀಯ ಚತುರತೆ) ; ಯಂತ್ರ ಕಲೆಗಳ(ಲ್ಲಿನ) ; ಔದ್ಯೋಗಿಕ ; ಪರಿಕರ್ಮದ [T. education, school ಯಂತ್ರಕಲಾ—ವಿದ್ಯಾಭ್ಯಾಸ, ಶಾಲೆ ; ಕೈಗಾರಿಕೆ ಕಲೆಗಳ ವಿದ್ಯಾಭ್ಯಾಸ, ಶಾಲೆ]. ಕೇವಲ ಕಾನೂನು—ದೃಷ್ಟಿಯ, ಪ್ರಕಾರದ (T. assault. T. difficulty). **Téchnically** (ಕ್ರಿ. ವಿ.); **Téchnicalness** (ನಾ.); **Technicálity** —ಕ್ಯಾಲಿಟಿ (ನಾ.) ಶಾಸ್ತ್ರ ತಂತ್ರೀಯತೆ, ಶಾಸ್ತ್ರ ತಂತ್ರವಿಚಾರ ; ಪಾರಿಭಾಷಿಕ ನಿರೂಪಣೆ, ವಿಭೇದ, ಶೈಲಿ, ಮೊ. ವು ; ಪರಿಭಾಷೆ, ಪ್ರಕ್ರಿಯೆ (To translate the technicalities of Kant into plain English ಕ್ಯಾಂಟನ ಪಾರಿಭಾಷಿಕ ವಿವರಗಳನ್ನು ಸಾಮಾನ್ಯ ಇಂಗ್ಲಿಷ್ ಭಾಷೆಯಲ್ಲಿ ಹೇಳುವುದಾದರೆ. Legal technicalities ಕಾನೂನಿನ ಶಾಸ್ತ್ರ ತಂತ್ರಗಳು). **Téchnician** (ನಾ.) ಒಂದು ವಿಷಯದ ಅಥವಾ ಕಲೆಯ ಶಾಸ್ತ್ರ ಸಂಬಂಧವಾದ ವಿವರಗಳಲ್ಲಿ, ಪ್ರಕ್ರಿಯೆಗಳಲ್ಲಿ, ಕುಶಲನಾದವನು: (ಶಾಸ್ತ್ರ) ತಂತ್ರಜ್ಞ; ಪ್ರಯೋಗಜ್ಞ. **Téchnicist** (ನಾ.) = Technician. **Techníque** ಟೆಕ್ನೀಕ್ (ನಾ.) (ಸಂಗೀತ, ವರ್ಣಚಿತ್ರಕಲೆ, ಮೊ. ಗಳಲ್ಲಿ) ಪ್ರಯೋಗ —ವಿಧಾನ, ಕೌಶಲ; ತಂತ್ರ (The t. of a master violinist).

Technócracy ಟೆಕ್ನಾಕ್ರಸಿ (ನಾ.) ಒಂದು ದೇಶದ ಔದ್ಯೋಗಿಕ ಸಂಪತ್ತಿಯನ್ನು ಒಟ್ಟು ಜನತೆಯ ಹಿತಕ್ಕಾಗಿ ಯಂತ್ರ ತಂತ್ರಜ್ಞರು ತಮ್ಮ ಅಧೀನದಲ್ಲಿಟ್ಟುಕೊಂಡು ವ್ಯವಸ್ಥೆಗೊಳಿಸುವುದು: ಯಂತ್ರ ತಂತ್ರಜ್ಞರ—ಆಡಳಿತ, ಪ್ರಭುತ್ವ. **Téchnocrat** (ನಾ.) —ವಾದಿ. **Technólogy** ಟೆಕ್ನಾಲೊಜಿ (ನಾ.) ಯಂತ್ರ ಕಲಾಶಾಸ್ತ್ರ, ಔದ್ಯೋಗಿಕ ವಿಜ್ಞಾನ. ಮಾನವಕುಲಶಾಸ್ತ್ರ ದೃಷ್ಟಿಯಿಂದ ಕಲೆಗಳ ಬೆಳವಣಿಗೆಯ ವ್ಯಾಸಂಗ : ಕಲಾತಂತ್ರ ಚರಿತ್ರೆ. **Technológical** (ಗು.) ; **Technólogist** (ನಾ.) ಯಂತ್ರ (ಕಲಾ) ತಂತ್ರಜ್ಞ.

Téchy. **Tetchy** ನೋಡಿ.

Tectólogy ಟೆಕ್ಟಾಲೊಜಿ (ನಾ.) (ಜೀವಿಯು ಅನೇಕ ಜೈವಿಕ ವ್ಯಕ್ತಿಗಳು ಸೇರಿ ಆಗಿದೆಯೆಂದು ನಿರೂಪಿಸುವ) ಜೀವಿ ಘಟನಾಶಾಸ್ತ್ರ. **Tectológical** (ಗು.)

Tectónic ಟೆಕ್ಟಾನಿಕ್ (ಗು., ನಾ.) ಕಟ್ಟಡದ, ರಚನೆಯ, ರಚನ ಸಂಬಂಧದ ; (ಭೂ. ವಿ.) (ಭೂಮಿಯ ಹೊರ ಪದರದ) ಸಾಕ್ಷಾತ್ ರಚನೆಗೆ ಸಂಬಂಧಿಸಿದ, ರಚನೆಯ ವ್ಯತ್ಯಾಸಗಳಿಂದ ಆದ, ರಚನೆಯ ವ್ಯತ್ಯಾಸಗಳಿಗೆ ಸಂಬಂಧಪಟ್ಟ. (ನಾ.; ಬ. ವ. ದಲ್ಲಿ) ಉಪಯುಕ್ತವಾದ ಮತ್ತು ಅಂದವಾದ ಕಟ್ಟಡಗಳು, ಪೀಠೋಪಕರಣಗಳು, ಪಾತ್ರೆಗಳು, ಮೊ. ನ್ನು ರಚಿಸುವ ಸಮಗ್ರ ಕಲೆ: ರಚನ ಕಲೆ ; ನಿರ್ಮಾಣ ಕಲೆ.

Tectórial ಟೆಕ್ಟೋ(ಅ)ರಿಯಲ್ (ಗು.) ಮೇಲು ಮುಚ್ಚಿಗೆಯಾಗಿರುವ, ಆಚ್ಛಾದಕ [(ಮು.) T. membrane (ಒಳ ಕಿವಿಯ) ಮುಚ್ಚು ಪೊರೆ, ಆಚ್ಛಾದಕ ಪಟಲ]. **Tectríces** ಟೆಕ್ಟ್ರೈಸೀಸ್ (ನಾ., ಬ. ವ.) (ಪಕ್ಷಿ ವಿಜ್ಞಾನ) (ರೆಕ್ಕೆಗಳ ಮತ್ತು ಪುಕ್ಕದ) ಮುಚ್ಚುಗರಿಗಳು.

Tectríces. **Tectorial** ನೋಡಿ.

Ted ಟೆಡ್ (ಕ್ರಿ. ಸಕ.) (ಹುಲ್ಲನ್ನು) ಒಣಗುವುದಕ್ಕಾಗಿ (ಬಿಸಿಲಲ್ಲಿ) ಹರವು ; ಆರಹಾಕು. **Tédder** (ನಾ.) —ಹರವುವವನು, ಹರವುವ ಯಂತ್ರ.

Téddy bear ಟೆಡಿ ಬೇರ್ (ನಾ.) ಮಗುವಿನ ಆಟದ ಕರಡಿ (ಬೊಂಬೆ). (ಅಮೆ. ಸಂ. ದ ಅಧ್ಯಕ್ಷ Theodore Roosevelt ಎಂಬಾತನ ಹೆಸರಿನಿಂದ)

Te Déum ಟೀ ಡೀಯಂ (ನಾ.) (ಪ್ರಾತಃಕಾಲದ ಆರಾಧನೆಯಲ್ಲಿ ಅಥವಾ ವಿಶೇಷ ಸಂದರ್ಭಗಳಲ್ಲಿ) ದೇವರಿಗೆ ವಂದನೆ ಸಮರ್ಪಣೆಯಾಗಿ ಹಾಡುವ, T.D. laudamus (= We praise thee, O God ಓ ದೇವರೇ, ನಿನ್ನನ್ನು ಸ್ತೋತ್ರಮಾಡುತ್ತೇವೆ) ಎಂದು ಮೊದಲಾಗುವ ಸ್ತೋತ್ರ ; ಇದಕ್ಕೆ ಹೊಂದಿಸಿದ ಸಂಗೀತ. Sing T.D. (ರೂಪ.) ವಿಜೃಂಭಿಸು, ಅತ್ಯಾನಂದಪಡು, ಜಯೋನ್ಮತ್ತನಾಗು.

Tédious ಟೀಡಿಯಸ್ (ಗು.) ಬೇಸರಗೊಳಿಸುವ, ಬಳಲಿಸುವ, ಆಯಾಸಕರ ; ಜುಗುಪ್ಸೆ ಹುಟ್ಟಿಸುವ (A t. life, speech, hour. A feeble and t. old man). **Tédiously** (ಕ್ರಿ. ವಿ.) ; **Tédiousness** (ನಾ.) ; **Tédium** (ನಾ.) ಬೇಸರ, ಬೇಜಾರು, ಬಳಲಿಕೆ, ಜುಗುಪ್ಸೆ.

Tee[1] ಟೀ (ನಾ.) T ಅಕ್ಷರ; T ಆಕಾರದ ವಸ್ತು (ಮು., ನಳಿಕೆ)

Tee[2] ಟೀ (ನಾ., ಕ್ರಿ.) (ಕ್ವಾಯ್ಟ್ಸ್, ಬೋಲ್ಸ್ ಮತ್ತು ಕರ್ಲಿಂಗ್ ಆಟಗಳಲ್ಲಿ) ಗುರಿ (ಗುರುತು). (ಗಾಲ್ಫ್ ಆಟ) (ಹೊಡೆಯಬೇಕಾದ ಚೆಂಡನ್ನು ಎತ್ತರಿಸಿ ಇಡುವ) ಸಣ್ಣ ಮರಳಗುಪ್ಪೆ ; ಇದೇ ಉದ್ದೇಶಕ್ಕಾಗಿ ಉಪಯೋಗಿಸುವ ರಬ್ಬರು, ಮೊ. ಗಳ ಸಣ್ಣ ಸಲಕರಣೆ ; ಚೆಂಡು ಇರಿಸುವ—ಗುಪ್ಪೆ, ಪೀಠ. (ಕ್ರಿ. ಸಕ.) ಗುಪ್ಪೆಯ ಮೇಲೆ, ಪೀಠದ ಮೇಲೆ,—ಇರಿಸು ; (ಕ್ರಿ. ಅಕ.) T. off ಗುಪ್ಪೆಯ ಚೆಂಡನ್ನು ಹೊಡೆ(ದು ಆಟ ಪ್ರಾರಂಭಿಸು) ; (ರೂಪ.) ಪ್ರಾರಂಭಿಸು.

Tee[3] ಟೀ (ನಾ.) ಬರ್ಮ ಮತ್ತು ನೆರೆ ನಾಡುಗಳಲ್ಲಿ ಪಗೋಡಗಳ ನೆತ್ತಿಯ ಮೇಲಿರುವ, ಸಾ., ಚಿನ್ನದ ಮುಲಾಮು ಮಾಡಿದ, ಛತ್ರಿಯಾಕಾರದ ಅಲಂಕಾರ ; ಪಗೋಡದ ಛತ್ರಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Teem[1] ಟೀಮ್ (ಕ್ರಿ.) (ಪ್ರಾಚೀ. ಪ್ರ.) (ಸಂತಾನ) ಹಡೆ, ಈಯಿ, ಹುಟ್ಟು, ಹುಟ್ಟಿಸು. (—ಇಂದ) ತುಂಬಿರು, ಭರಿತವಾಗಿರು (*With* ಉಪ. ದೊಡನೆ. Forests teeming with snakes); ಹೇರಳವಾಗಿರು, ಸಮೃದ್ಧವಾಗಿರು (Fish t. in these waters)

Teem[2] ಟೀಮ್ (ಕ್ರಿ. ಸಕ.) (ಪ್ರಾಂ. ಪ್ರ., ಪಾರಿಭಾಷಿಕ ಪ್ರ.) (ಒಳಗಿರುವುದನ್ನು ಹೊರಕ್ಕೆ ಸುರಿದು, ಪಾತ್ರೆ, ಬಂಡಿ, ಮೊ. ನ್ನು) ಬರಿದುಮಾಡು, ಖಾಲಿಮಾಡು; (ಕಲ್ಲಿದ್ದಲು, ಕರಗಿದ ಲೋಹ, ಮೊ. ನ್ನು) ಹೊರಕ್ಕೆ ಸುರಿ. **Teémer** (ನಾ.)

Teen ಟೀನ್ (ನಾ.) (ಪ್ರಾಚೀ. ಪ್ರ.) ದುಃಖ, ವ್ಯಸನ; ತೊಂದರೆ; ಹಾನಿ, ಕೇಡು.

Teens ಟೀನ್ಸ್ (ನಾ., ಬ. ವ.) ಒಬ್ಬನ ವಯಸ್ಸಿನ ೧೩ರಿಂದ ೧೯ರ ವರೆಗಿನ ವರ್ಷಗಳು (ಮು., In one's t.)

Teény. **Tiny** ನೋಡಿ.

Teeth. Tooth ಪದದ ಬ. ವ.

Teethe ಟೀದ್ (ಕ್ರಿ. ಅಕ.) ಹಲ್ಲು—ಹುಟ್ಟು, ಮೊಳೆ. **Teéthing** (ನಾ.)

Teetótal ಟೀಟೋಟಲ್ (ಗು.) ಮಾದಕವಸ್ತುಗಳ, ಮದ್ಯಪಾನದ,—ಸಂಪೂರ್ಣ ವರ್ಜನೆಯ, ವರ್ಜನವಾದಿಯಾದ; ಮದ್ಯವರ್ಜಕ (T. meeting ಮದ್ಯ ಪರಿತ್ಯಾಗದ ಸಭೆ. T. pledge ಮದ್ಯ ಪರಿತ್ಯಾಗ ಪ್ರತಿಜ್ಞೆ) [**Teetótalism** (ನಾ.)]; (ಬಳ. ಮಾ.) ಪೂರ್ತಿ(ಯಾದ), ಸಂಪೂರ್ಣ, ಪೂರಾ [**Teetótally** (ಕ್ರಿ. ವಿ.)]. **Teetótaller** (ನಾ.) ಮದ್ಯ—ಪರಿತ್ಯಾಗಿ, ವರ್ಜಕ.

Teetótum ಟೀಟೋಟಮ್ (ನಾ.) ಮಕ್ಕಳ ಒಂದು ಬಗೆಯ ಅದೃಷ್ಟದ ಆಟದ, ಬುಗುರಿಯಂತೆ ತಿರುಗುವ, ದಾಳ: ಬುಗುರಿದಾಳ [ಈ ಬುಗುರಿದಾಳದ ನಾಲ್ಕು ಪಕ್ಕಗಳಲ್ಲಿ ಒಂದೊಂದರಮೇಲೆ ಒಂದೊಂದು ಅಕ್ಷರವನ್ನು ಕೆತ್ತಿದ್ದು (ಉದಾ., T=take-all, H.=half, N.=nothing, P.=put down ಮೊದಲೊಡ್ಡಿದಷ್ಟು ಪಣ ಇಟ್ಟುಬಿಡು), ದಾಳವನ್ನು ತಿರುಗಿಸಿ ಅದು ಬಿದ್ದಾಗ ಯಾವ ಅಕ್ಷರ ಮೇಲ್ಮುಖವಾಗಿರುವುದೊ ಅದಕ್ಕೆ ಅನುಸಾರವಾಗಿ ಆಟಗಾರನ ಸೋಲು ಗೆಲುವುಗಳು ನಿರ್ಧಾರವಾಗುವವು]; ಇದರಿಂದ ಆಡುತ್ತಿದ್ದ ಅದೃಷ್ಟದ ಆಟ; (ಬೆರಳುಗಳಿಂದ ತಿರುಗಿಸುವ ಯಾವುದಾದರೂ) ಬುಗುರಿ (Like a t. ತಿರುಗುತ್ತ, ಸುತ್ತುತ್ತ)

Teg ಟೆಗ್ (ನಾ.) ಎರಡನೆಯ ವರ್ಷದಲ್ಲಿಯ ಕುರಿ.

Tégular ಟೆಗ್ಯುಲರ್ (ಗು.) ಹೆಂಚುಗಳ(ಂಥ); ಹೆಂಚು ಜೋಡಣೆಯಂಥ. **Tégularly** (ಕ್ರಿ. ವಿ.); **Tégulated** (ಗು.)

Tégument ಟೆಗ್ಯುಮೆಂಟ್ (ಗು.) (ಪ್ರಾಣಿಯ ಒಡಲಿನ ಅಥವಾ ಅಂಗದ) ಸ್ವಾಭಾವಿಕ ಹೊದಿಕೆ; ಚರ್ಮ, ತೊಗಲು, ಚಿಪ್ಪು. **Teguméntal** (ಗು.); **Teguméntary** (ಗು.)

Teheé ಟಿಹೀ (ನಾ., ಕ್ರಿ. ಅಕ.) ಒಳಗೊಳಗಿನ, ತಿರಸ್ಕಾರದ, —(ಮುಗುಳು) ನಗು; ಹಿಹೀ, ಕಿಲ ಕಿಲ ನಗು. (ಕ್ರಿ. ಅಕ.) ಹಿಹೀ ಎಂದು, ಕಿಲ ಕಿಲನೆ, —ನಗು.

Teind ಟೀಂಡ್ (ನಾ.)=Tithe (ಆ ಪದ ನೋಡಿ)

Teínoscope ಟೈನೊಸ್ಕೋಪ್ (ನಾ.) ಬೆಳಕಿನ ವರ್ಣಾಪಸರಣವನ್ನು (Chromatic aberration) ಸರಿಪಡಿಸಿ, ವಸ್ತುಗಳ (ಉದ್ದಗಲ) ಅಳತೆಗಳನ್ನು ಹೆಚ್ಚಿಸಲಾಗುವಂತೆ ಅಥವಾ ಕುಗ್ಗಿಸಲಾಗುವಂತೆ ಎರಡು ಮುಪ್ಪಟ್ಟೆಯ ಗಾಜುಗಳನ್ನು (ಪ್ರಿಸ್ಮಗಳನ್ನು) ಅಳವಡಿಸಿರುವ ಒಂದು ದೃಗ್ಯಂತ್ರ ಸಲಕರಣೆ: ಪ್ರಮಾಣ ವ್ಯತ್ಯಯಕಾರಕ; ಪ್ರಿಸ್ಮ್ ದೂರದರ್ಶಕ.

Teknónymy ಟೆಕ್ನಾನಿಮಿ (ನಾ.) (ಮಾನವಶಾಸ್ತ್ರ) ಮಗುವಿನಿಂದ ತಾಯಿತಂದೆಗಳಿಗೆ ಹೆಸರಿಡುವ ಪದ್ಧತಿ. **Teknónymous** (ಗು.)

Telaesthésia ಟಿಲಿಸ್ತೀಸಿ(ಸಿ)ಯ (ನಾ.) (ಮ. ಶಾ.) ದೂರದ ಸಂಗತಿಗಳನ್ನು ಅಥವಾ ವಸ್ತುಗಳನ್ನು ಇಂದ್ರಿಯಗಳ ಮೂಲಕವಲ್ಲದೆ ನೇರವಾಗಿ ಗ್ರಹಿಸುವುದು: ದೂರ—ಗ್ರಹಣ, ವೇದನ. **Telaesthétic** (ಗು.)

Télamon ಟೆಲಮನ್ (ನಾ., ಬ. ವ. Telamónes —ಮೋನೀಸ್) (ವಾ. ಶಾ.) ಪುರುಷಾಕಾರದ ಕಂಬ. (Caryatid ಪದದೊಡನೆ ಹೋಲಿಸಿ)

Telaútograph ಟೆಲಾಟೊಗ್ರಾಫ್ (ನಾ.) (ಪ್ರೇಷಕ ಸ್ಥಳದಲ್ಲಿ ಬರೆದ) ಲೇಖನ, ಮೊ. ನ್ನು (ಗ್ರಾಹಕ ಸ್ಥಳದಲ್ಲಿ) ಯಥಾ ಪ್ರತಿಮಾಡುವ ದೂರ ಲೇಖನ ಸಲಕರಣೆ: ದೂರ ಸ್ವಯಂಲೇಖಕ. **Telaútogram** (ನಾ.) ದೂರ ಸ್ವಯಂಲೇಖನ.

Tele- ಟೆಲಿ(ಲೆ)— (ಸ. ಪೂ. ಪ.) (ದೂರದಲ್ಲಿ ಫಲಗಳನ್ನು ಕಾಣಿಸುವ ಅಥವಾ ದೂರದ ಫಲಗಳನ್ನು ದಾಖಲಿಡುವ, ವೈಜ್ಞಾನಿಕ ಸಲಕರಣೆಗಳ ಹೆಸರುಗಳಲ್ಲಿ ಪ್ರ.) ದೂರ—. **-barómeter** ದೂರ ವಾಯುಭಾರ ಮಾಪಕ. **-meter** ದೂರದಲ್ಲಿರುವ ಯಂತ್ರಸಲಕರಣೆಯ ಅಳತೆ ಸಂಖ್ಯೆಗಳನ್ನು ವಿದ್ಯುತ್ಪ್ರವಾಹದ ಸಹಾಯದಿಂದ ದಾಖಲಿಡುವ ಸಲಕರಣೆ; (ಮೋಜಣಿ, ಫಿರಂಗಿ ಅಭ್ಯಾಸ, ಮೊ. ಗಳಲ್ಲಿ) ದೂರಗಳನ್ನು ಗೊತ್ತುಮಾಡಲು ಉಪಯೋಗಿಸುವ ಸಲಕರಣೆ; ದೂರಮಾಪಕ. **-métric** (ಗು.); **-metry** (ನಾ.); **-thermómeter** ದೂರ ಉಷ್ಣಮಾಪಕ.

Téledu ಟೆಲೆಡು (ನಾ.) ಜಾವ ಮತ್ತು ಸುಮಾತ್ರ ದ್ವೀಪಗಳ, ದುರ್ವಾಸನೆಯ ಬ್ಯಾಡ್ಜರ್ ಮೃಗ.

Telégony ಟಿಲೆಗೊನಿ (ನಾ.) (ಜೀ. ವಿ.) ಒಂದು ಹೆಣ್ಣು ಪ್ರಾಣಿ ಮುಂದೆ ಬೇರೆ ಜನಕಪ್ರಾಣಿಯಿಂದ ಹಡೆಯುವ ಸಂತತಿಯಲ್ಲಿ ಹಿಂದಿನ ಜನಕಪ್ರಾಣಿಯ ಪ್ರಭಾವ ಕಂಡುಬರುವುದು: ಪೂರ್ವಜನಕ ಪ್ರಭಾವ. **Telegónic** ಟೆಲಿಗಾನಿಕ್ (ಗು.)

Télegram ಟೆಲಿಗ್ರ್ಯಾಮ್ (ನಾ.) ದೂರಲೇಖಕದ ಮೂಲಕ ಬಂದ, ಕಳಿಸಿದ, ಸುದ್ದಿ: ತಂತಿ, ತಂತೀ ವರ್ತಮಾನ, ತಾರು, ದೂರ ಲೇಖನ, ಟೆಲಿಗ್ರಾಂ. **Télegraph** ಟೆಲಿಗ್ರಾಫ್ (ನಾ., ಕ್ರಿ.) ಮು., ವಿದ್ಯುಚ್ಛಕ್ತಿಯ ಮೂಲಕ ವರ್ತಮಾನಗಳನ್ನಾಗಲಿ ಸಂಕೇತಗಳನ್ನಾಗಲಿ ದೂರಕ್ಕೆ ತಿಳಿಸುವ ಸಲಕರಣೆ: ದೂರಲೇಖಕ, ತಂತಿ ಸುದ್ದಿಯ ಸಲಕರಣೆ; (ರೈಲುಮಾರ್ಗದ) ಸನ್ನೆಗಂಬ, ಕೈಗಂಬ; (ವೃತ್ತಪತ್ರಿಕೆಗಳ ಹೆಸರುಗಳಲ್ಲಿ ಪ್ರ.: Daily T., etc.); ಪಂದ್ಯಗಳಲ್ಲಿ ಓಡುವ ಕುದುರೆಗಳ ಕ್ರಮ ಸಂಖ್ಯೆ, ಕ್ರಿಕೆಟ್ ಆಟ, ಮೊ. ಗಳಲ್ಲಿಯ ಓಟ ಸಂಖ್ಯೆ, ಮೊ. ವು ದೂರಕ್ಕೆ ಕಾಣುವಂತೆ ಪ್ರದರ್ಶಿಸುವ ಹಲಗೆ: ದೂರ (ನೋಟದ) ಹಲಗೆ (=T.-board). [T.-key ದೂರ ಲೇಖಕದಲ್ಲಿ ವಿದ್ಯುತ್ಪ್ರವಾಹವನ್ನು ಕೂಡಿಸುವ ಅಥವಾ ತಪ್ಪಿಸುವ ಸನ್ನೆ ಸಲಕರಣೆ: ದೂರಲೇಖಕ (ಕೀಲ)ಕೈ. T.-line ದೂರಲೇಖಕ ಮಾರ್ಗ. T.-pole, -post ತಂತೀ ವರ್ತಮಾನದ ಕಂಬ; ಟೆಲಿಗ್ರಾಫ್ ಕಂಬ. T.-wire ಟೆಲಿಗ್ರ್ಯಾಫ್ ತಂತಿ. T.-plant ಚಿಮ್ಮು ಚಲನೆಯ ಎಲೆಗಳುಳ್ಳ ಈಸ್ಟ್ ಇಂಡಿಯದ ಒಂದು ಸಸ್ಯ]. (ಕ್ರಿ.) ತಾರು, ತಂತೀ (ವರ್ತಮಾನ), —ಕಳಿಸು (T. the news to your father). (—ಮಾಡೆಂದು, —ಎಂದು) ಸಂಕೇತ—ಮಾಡು, ಕಳಿಸು (*To* person, *to* do, *that*, etc.). **Telégrapher** —ಗ್ರಾಫರ್ (ನಾ.) ದೂರಲೇಖಕ—ನಿಪುಣ, ಉದ್ಯೋಗಿ; ಟೆಲಿಗ್ರಾಫ್ ಕೆಲಸಗಾರ; ತಂತೀ (ವರ್ತಮಾನ) ಕಳಿಸಿದವನು. **Telégraphist** ಟೆಲೆಗ್ರಫಿಸ್ಟ್ (ನಾ.)=Telegrapher (ಮೊದಲನೆಯ ಅರ್ಥ). **Telegraphése** ಟೆಲಿಗ್ರಾಫೀಸ್ (ನಾ., ಗು.) (ತಂತೀ ವರ್ತಮಾನಗಳಲ್ಲಿಯಂತೆ) ಅಧ್ಯಾಹಾರ ಶೈಲಿ(ಯ, —ಯಲ್ಲಿರುವ). **Telegráphic** —ಗ್ರ್ಯಾಫಿಕ್ (ಗು.) ದೂರಲೇಖಕದ, ತಂತೀ ವರ್ತಮಾನದ, ಟೆಲಿಗ್ರಾಫಿನ, ಟೆಲಿಗ್ರಾಮಿನ; ಅಡಕ ಶೈಲಿಯ, ಮಿತ ಪದಗಳ. T. address ತಂತೀ ವರ್ತಮಾನಗಳಲ್ಲಿ ಉಪಯೋಗಿಸಲು ಸಂಕ್ಷಿಪ್ತ ಮಾಡಿದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥವಾ ಸಂಕ್ಷಿಪ್ತಮಾಡಿ ದಾಖಲೆಯಿಡಿಸಿದ ಬೇರೆ ವಿಳಾಸ : ತಂತಿ, ಸಂಕೇತ, ಸಂಕ್ಷಿಪ್ತ, —ವಿಳಾಸ. **Telegráphically** (ಕ್ರಿ. ವಿ.) ; **Telégraphy** ಟಿ(ಟೆ)ಲೆಗ್ರಫಿ, **Téle-** ಟೆಲಿಗ್ರಾಫಿ (ನಾ.) ದೂರಲೇಖಕ —ವಿದ್ಯೆ, ಪದ್ಧತಿ. Wireless t. ತಂತಿಯಿಲ್ಲದೆ ವಿದ್ಯುತ್ತರಂಗಗಳ ಮೂಲಕ ಸಂಕೇತಗಳನ್ನು ಕಳಿಸುವುದು : ನಿಸ್ತಂತು ದೂರಲೇಖಕ.

Telekinésis ಟೆಲಿಕೈನೀಸಿಸ್ (ನಾ.) (ಮ. ಶಾ.) ಪ್ರೇರಕ ಮೂಲಕ್ಕೆ ಅಥವಾ ಕರ್ತೃವಿಗೆ ವಾಸ್ತವಿಕ ಸಂಬಂಧವಿಲ್ಲದೆ ದೂರದಿಂದ ಒಂದು ಕಾಯದ(ಲ್ಲಿಯ) ಚಲನೆ : ದೂರ ಚಲನೆ.

Télemark ಟೆಲೆಮಾರ್ಕ್ (ನಾ.) (ನೀರ್ಗಲ್ಲಮೇಲಿನ ಓಡಾಟದಲ್ಲಿ) ದಿಕ್ಕು ಬದಲಾಯಿಸುವ ಅಥವಾ ಥಟಕ್ಕನೆ ನಿಂತುಬಿಡುವ ಒಂದು ಚಾತುರ್ಯದ ತಿರುವು.

Telemechánics ಟೆಲಿ(ಲೆ)ಮಿಕ್ಯಾನಿಕ್ಸ್ (ನಾ., ಬ. ವ.) ರೇಡಿಯೊ ಮೂಲಕ ಶಕ್ತಿಯನ್ನು ಸಾಗಿಸುವ ಮತ್ತು ಅದರ ಮೂಲಕ ದೂರ ದಿಂದಲೆ ಯಂತ್ರವನ್ನು ಹಿಡಿತದಲ್ಲಿಟ್ಟುಕೊಳ್ಳುವ ವಿದ್ಯೆ : ದೂರ (ಯಂತ್ರ)ಚಲನ—ಶಾಸ್ತ್ರ, ವಿದ್ಯೆ ; ದೂರ ನಿಗ್ರಹಣ ಶಾಸ್ತ್ರ.

Teleólogy ಟೆಲಿಯಾಲೊಜಿ (ನಾ.) ಸೃಷ್ಟಿಯ ಪರಮೋದ್ದೇಶಕ್ಕೆ ಅನುಸಾರವಾಗಿ ಪ್ರಾಣಿಗಳ ರಚನೆ ಮತ್ತು ಬೆಳವಣಿಗೆಗಳು ಆಗುತ್ತವೆಂಬ ವಾದ : ಮೂಲ ಸಂಕಲ್ಪಾನುಸಾರ ಜಗದ್ವಿಕಾಸ ವಾದ ; ಮೂಲ ಸಂಕಲ್ಪ ವಾದ. **Teleológic(al)** (ಗು.) ; **Teleológically** (ಕ್ರಿ. ವಿ.) ; **Teleólogism** (ನಾ.) ; **Teleólogist** (ನಾ.)

Teleosaúrus ಟೆಲಿಯೊಸಾರಸ್ (ನಾ.) ಪಳೆಯುಳಿಕೆ ಮೊಸಳೆಗಳ ಒಂದು ಜಾತಿ.

Telépathy ಟಿ(ಟೆ)ಲೆಪತಿ, **Téle-** ಟೆಲಿಪ್ಯಾತಿ (ನಾ.) ದೂರದಲ್ಲಿರುವ ಒಬ್ಬನ ಮನಸ್ಸಿನಮೇಲೆ ಮತ್ತೊಬ್ಬನ ಮನಸ್ಸು ಭಾವಪ್ರಭಾವದ ಮೂಲಕ (ಇಂದ್ರಿಯಗಳ ಮೂಲಕವಲ್ಲ) ಕಾರ್ಯಮಾಡುವುದು : ಭಾವ ಪ್ರೇಷಣೆ ; ದೂರ ಮನಸ್ಸ್ಪರ್ಶನ. **Telepáthic** (ಗು.) ; **Telepáthically** (ಕ್ರಿ. ವಿ.); **Telépathist** (ನಾ.); **Telépathize** (ಕ್ರಿ.)

Télephone ಟೆಲಿಫೋನ್ (ನಾ., ಕ್ರಿ.) ಮು., ವಿದ್ಯುಚ್ಛಕ್ತಿಯ ಮೂಲಕ ಧ್ವನಿಯನ್ನು, ಮು., ಮಾತುಗಳನ್ನು ತಂತಿಯ ಅಥವಾ ಹುರಿಯ ಮೂಲಕ ಸಾಗಿಸುವ ಸಲಕರಣೆ : ದೂರವಾಣಿ (ಯಂತ್ರ) ; ಟೆಲಿಫೋನು [The t. ದೂರವಾಣಿ ವ್ಯೂಹ (ವ್ಯವಸ್ಥೆ). On the t. —ವ್ಯೂಹಕ್ಕೆ ಸಂಬಂಧಪಡೆದ (ಸಲಕರಣೆಯುಳ್ಳ) ; ದೂರವಾಣಿಯ ಮೂಲಕದ ; ದೂರವಾಣಿಯನ್ನು ಉಪಯೋಗಿಸುತ್ತ]. (ಕ್ರಿ.) (ಸುದ್ದಿ, ಮೊ. ನ್ನು) ದೂರವಾಣಿಯ ಮೂಲಕ ಕಳಿಸು ; (ಒಬ್ಬನೊಡನೆ) ದೂರವಾಣಿಯಲ್ಲಿ ಮಾತಾಡು (*To* person). **Telephónic** (ಗು.) ; **Telephónically** (ಕ್ರಿ. ವಿ.) ; **Teléphonist** (ನಾ.) ದೂರವಾಣಿಯ—ಕೆಲಸಗಾರ, ನಿರ್ವಾಹಕ. **Teléphony** (ನಾ.) ದೂರವಾಣಿ—ವಿದ್ಯೆ, ನಿರ್ವಾಹ.

Telephotógraphy ಟೆಲಿಫೊಟಾಗ್ರಫಿ (ನಾ.) ದೂರದರ್ಶಕ ಮತ್ತು ಛಾಯಾಗ್ರಾಹಕ ಲೆನ್ಸುಗಳ ಜೋಡಣೆಯಿಂದ ದೂರವಸ್ತುಗಳ ಛಾಯಾಚಿತ್ರ ತೆಗೆಯುವುದು : ದೂರಛಾಯಾಚಿತ್ರಣ. **Telephotográphic** —ಫೋಟೊಗ್ರ್ಯಾಫಿಕ್ (ಗು.)

Télergy ಟೆಲರ್ಜಿ (ನಾ.) (ಮ. ಶಾ.) ದೂರವೇದನದಲ್ಲಿ ಮಿದುಳಿನ ಮೇಲೆ ಕಾರ್ಯಮಾಡುವುದಾಗಿ ಭಾವಿಸಿರುವ ಬಲ : ದೂರ (ವೇದನ) ಬಲ.

Télescope ಟೆಲಿಸ್ಕೋಪ್ (ನಾ., ಕ್ರಿ.) ದೂರದ ವಸ್ತುಗಳು ಹತ್ತಿರದಲ್ಲೂ ಹೆಚ್ಚು ಗಾತ್ರದಲ್ಲೂ ಕಾಣುವಂತೆ ಮಾಡುವ ಸಲಕರಣೆ : ದೂರದರ್ಶಕ ; ದುರ್ಬೀನು. (ಕ್ರಿ.) (ಕೊಳವೆಗಳ ಪರ್ವಗಳು, ಢಿಕ್ಕಿ ಹೊಡೆದ ರೈಲುಬಂಡಿಗಳು, ಮೊ. ಗಳ ವಿಷಯದಲ್ಲಿ ; ದೂರದರ್ಶಕದ ಭಾಗಗಳಂತೆ) ಒಂದರೊಳಕ್ಕೊಂದು—ಸೇರಿಕೊ, ಅಡಕಮಾಡು, ಅಡಕವಾಗು. **Teléscopist** (ನಾ.) ದೂರದರ್ಶಕ—ನಿಪುಣ, ವೀಕ್ಷಕ. **Teléscopy** (ನಾ.) ದೂರದರ್ಶಕಗಳನ್ನು ಉಪಯೋಗಿಸುವ, ರಚಿಸುವ, ವಿದ್ಯೆ : ದೂರದರ್ಶಕ ವಿದ್ಯೆ. **Telescópic** —ಸ್ಕಾಪಿಕ್ (ಗು.) ದೂರದರ್ಶಕದ, —ದಿಂದ ಮಾಡಿದ ; ದುರ್ಬೀನಿನ ; ದೂರದರ್ಶಕೀಯ (T. observations). ದೂರದರ್ಶಕದ ಮೂಲಕ ಮಾತ್ರ ಕಾಣುವ (T. stars). ಒಂದರೊಳಕ್ಕೊಂದು ಸೇರುವ ಭಾಗಗಳುಳ್ಳ [T. chimney (ಜಹಜಿನ) ಇಂಥ ಹೊಗೆಕೊಳವೆ]. **Telescópically** (ಕ್ರಿ. ವಿ.) ; **Telescópiform** (ಗು.)

Téleseme ಟೆಲಿ(ಲೆ)ಸೀಮ್ (ನಾ.) ಹೋಟೆಲು, ಮೊ. ಕಡೆಗಳಲ್ಲಿರುವ, ಕೊಠಡಿಯಲ್ಲಿರುವ ಗಿರಾಕಿ ತನಗೆ ಬೇಕಾದ ಪದಾರ್ಥಗಳನ್ನು ತಿಳಿಸಲು ಅನುಕೂಲಿಸುವ, ಎಲ್ಲಿಂದ ಕರೆ ಬಂದಿತೆಂಬುದನ್ನು ಸಹ ತಿಳಿಸುವ ಗಮನಾಕರ್ಷಿಯೂ ಸೇರಿರುವ, ವಿದ್ಯುತ್ ಸಂಕೇತ ವ್ಯವಸ್ಥೆ : ದೂರ ಸಂಕೇತಕ.

Televísion ಟೆಲಿವಿಷನ್ (ನಾ.) ತಡೆಗಳಿಂದ ಅಥವಾ ದೂರದಿಂದ ನೋಟಕನಿಗೆ ಮರೆಯಾಗಿರುವ ವಸ್ತುಗಳನ್ನು ಅಥವಾ ಕಾಣದೆ ನಡೆಯುತ್ತಿರುವ ಸಂಗತಿಗಳನ್ನು ನಿಸ್ತಂತು ತರಂಗಗಳ ಅಥವಾ ಇತರ ಸಹಾಯದಿಂದ ನೋಡುವುದು : ದೂರ(ವಸ್ತು) ದರ್ಶನ ; ಪರೋಕ್ಷ ವೀಕ್ಷಣ. **Télevise** —ವೈಸ್ (ಕ್ರಿ. ಸಕ.) (—ನ್ನು) ದೂರದರ್ಶನದ ಮೂಲಕ ಕಳಿಸು. **Télevisor** (ನಾ.) ದೂರದರ್ಶನ ಸಲಕರಣೆ, ಪರೋಕ್ಷ ವೀಕ್ಷಕ.

Tell ಟೆಲ್ (ಕ್ರಿ.; ಭೂತ., ಭೂ. ಕೃ. Told ಟೋಲ್ಡ್) (ಬಾಯಲ್ಲಿ ಅಥವಾ ಲೇಖನದ ಮೂಲಕ) ಹೇಳು, ಕಥಿಸು, ಒಕ್ಕಣಿಸು (T. me a story); (ಮಾತಿನಲ್ಲಿ) ಹೇಳು, ತಿಳಿಸು, ಒರೆ (ಗ್ರಾಂ.), ಉಸುರು, ವಿವರಿಸು [T. it not in Gath ಈ ಸುದ್ದಿ ಶತ್ರುಗಳಿಗೆ ಗೊತ್ತಾಗಿ ಅವರಿಗೆ ಸಂತೋಷ ವಾಗದಿರಲಿ. (ಮಕ್ಕಳ ಮಾತು) Don't t. on me ನನ್ನಮೇಲೆ (ಚಾಡಿ) ಹೇಳಬೇಡ. T. that to the (horse-)marines (Horse ಕೆಳಗೆ Horse-marines ನೋಡಿ). T. tales (out of school) (Tale ನೋಡಿ). T. fortunes (Fortune ನೋಡಿ). That tells a tale ಅದಕ್ಕೊಂದು ಅರ್ಥವಿದೆ]. ನಿಶ್ಚಯಿಸು, ನಿರ್ಧರಿಸು, ಗೊತ್ತಾಗಿ ಹೇಳು, ತಿಳಿ [How do you t. which button to press ? You never can t. (ತೋರಿಕೆಗಳೂ ಸಂಭವನೀಯಗಳೂ ಮೋಸಗೊಳಿಸುತ್ತವೆ ಎಂಬರ್ಥದಲ್ಲಿ) : (ನಿಶ್ಚಯವಾಗಿ) ಹೇಳುವುದು ಸಾಧ್ಯವಿಲ್ಲ ; ಏನೂ ಹೇಳಲಿಕ್ಕಾಗದು]. ವ್ಯತ್ಯಾಸ ತಿಳಿ (Cannot t. him from his brother). ಖಂಡಿತವಾಗಿ, ದೃಢವಾಗಿ,—ಹೇಳು (I can t. you, it is not so easy ನಾನು ಖಂಡಿತವಾಗಿ ಹೇಳುತ್ತೇನೆ, ಅದು ಅಷ್ಟೊಂದು ಸುಲಭವಲ್ಲ). ಪರಿಣಾಮಕಾರಿಯಾಗು, ಕಾರ್ಯಮಾಡು (Every blow tells ಪ್ರತಿಯೊಂದು ಏಟೂ ಪರಿಣಾಮಕಾರಿಯಾಗುತ್ತದೆ. Strain begins to t. on him). (ವೋಟು, ಮೊ. ನ್ನು) ಎಣಿಸು, ಎಣಿಕೆಮಾಡು [T. one's beads (Bead ನೋಡಿ). T. a hundred. T. off (ಒಂದು ನಿರ್ದಿಷ್ಟ ಕೆಲಸಕ್ಕಾಗಿ) ವಿಂಗಡಿಸಿ ಕಳಿಸು, ನೇಮಿಸು (Six of us were told off to get fuel)]. (ಅಸಂ.) ತೀಕ್ಷ್ಣ ಸತ್ಯಾಂಶಗಳನ್ನು ಹೇಳು, ತಪ್ಪುಗಳನ್ನು ತಿಳಿಸು, ಛೀಮಾರಿಮಾಡು. **Téllable** (ಗು.) ಹೇಳಲಾಗುವ, ಹೇಳಲು ಅರ್ಹವಾದ. **Téller** (ನಾ.) (ಕ್ರಿಯಾರ್ಥಗಳಲ್ಲಿ) ; (ಮು.) ವೋಟುಗಳ ಎಣಿಕೆಗಾರ(ರಲ್ಲೊಬ್ಬ) ; ಮತಗಣಕ (ಬ್ಯಾಂಕು, ಮೊ. ಗಳಲ್ಲಿ) ಹಣ ಎಣಿಸಿ ತೆಗೆದುಕೊಳ್ಳುವ ಅಥವಾ ಕೊಡುವ ಮನುಷ್ಯ : ಸರಾಫ. **Téllership** (ನಾ.) ; **Télling** (ಗು.) (ಕ್ರಿಯಾರ್ಥಗಳಲ್ಲಿ) ; ಪರಿಣಾಮಕಾರಿಯಾದ, ಫಲಪ್ರದವಾದ, ಮುಟ್ಟಿ ನೋಡಿಕೊಳ್ಳುವ. **Téllingly** (ಕ್ರಿ. ವಿ.)

Télltale ಟೆಲ್‌ಟೇಲ್ (ನಾ.) ಮತ್ತೊಬ್ಬನ ಸ್ವಂತ ವಿಷಯಗಳನ್ನು ಎತ್ತಿ ಆಡುವವನು ; ಚಾಡಿಕೋರ, ಪಿಸುಣಿಗ ; ಪಿಸುಣಾಡಿ; ಸುದ್ದಿ ಕೋರ ; (ಒಬ್ಬನ ಆಲೋಚನೆಗಳು, ನಡವಳಿ, ಮೊ. ನ್ನು) ರಟ್ಟುಮಾಡುವ ವಸ್ತು, ಸಂಗತಿ (ಮು., ವಿಶೇಷಣವಾಗಿ ಪ್ರ. : T. blushes. The t.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

clay on his shoes). ಗೊತ್ತಾದ ಹೊತ್ತಿನಲ್ಲಿ ನಿಯಂತ್ರಕ, ಮೊ. ರ ಹಾಜರಿಯನ್ನು ಅಪೇಕ್ಷಿಸಿ, ಅವರು ಬಂದು ಕೆಲಸಮಾಡಿದುದರ ದಾಖಲೆಯನ್ನು ತಾನಾಗಿ ತೋರಿಸುವ ಹಲವು ಬಗೆಯ ಯಾಂತ್ರಿಕ ಸಲಕರಣೆ; ತೊಟ್ಟಿ ತುಂಬಿರುವುದು, ಮೊ. ನ್ನು ಸೂಚನೆ ಕೊಡುವ ಯಂತ್ರಸಲಕರಣೆ: ಚಾಡಿಕೋರ ಯಂತ್ರ; ಸ್ವಯಂ—ಸೂಚಕ, ದರ್ಶಕ. (ನಾವೆ) ಚುಕ್ಕಾಣಿಯ ಸನ್ನೆ (ಹಿಡಿಕೆ) ತಿರುಗಿರುವ ನೆಲೆಯನ್ನು ತೋರಿಸಲು ಚುಕ್ಕಾಣಿ ಚಕ್ರದ ಬಳಿ ಇರುವ ಸೂಚಿ: ಚುಕ್ಕಾಣಿ ಹಿಡಿಕೆ ಸೂಚಿ; ಹಡಗಿನ ಗತಿ ವ್ಯತ್ಯಾಸವನ್ನು ತಿಳಿಯುವುದಕ್ಕಾಗಿ (ಸಾ., ಹಡಗಿನ ನಾಯಕನ ಕೊಟಡಿಯಲ್ಲಿ) ತೂಗಹಾಕಿರುವ ದಿಕ್ಸೂಚಿ: ನೌಕಾ ಗತಿ (ಸ್ವಯಂ) ಸೂಚಿ (=T. compass)

Tellúrian ಟೆಲ್ಯೂರಿಯನ್ (ಗು., ನಾ.) ಭೂಮಿಯ, ಭೂಮಿಗೆ ಸೇರಿದ(—ವನು); ಭೂನಿವಾಸಿ. **Tellúral** (ಗು.)

Tellúrion ಟೆಲ್ಯೂರಿಯನ್ (ನಾ.) ಹಗಲು ರಾತ್ರಿಗಳಾಗುವುದನ್ನೂ ಋತುಗಳ ಬದಲಾವಣೆಯನ್ನೂ ನಿದರ್ಶಿಸುವ ಯಂತ್ರಸಲಕರಣೆ: ಭೂಗತಿ ದರ್ಶಕ.

Tellúrium ಟೆಲ್ಯೂರಿಯಂ (ನಾ.) (ರ. ವಿ.) ಗಂಧಕವನ್ನು ಹೋಲುವ, ಭಿದುರವಾದ, ಬೆಳ್ಳಿ ಬಣ್ಣದ, ಒಂದು ವಿರಳ ಮೂಲವಸ್ತು: ಟೆಲ್ಯೂರಿಯಂ. **Téllurate** (ನಾ.) ಟೆಲ್ಯೂರಿಕ್ ಆಮ್ಲದ ಲವಣ. **Télluret** (ನಾ.) ಟೆಲ್ಯೂರಿಯಂ ಮತ್ತು ಜಲಜನಕದ ಅಥವಾ ಒಂದು ಲೋಹದ ಸಂಯುಕ್ತ (ಈಗ ಸಾ., Telluride). **Téllu-retted** (ಗು.) ಟೆಲ್ಯೂರಿಯಮ್ಮಿನೊಡನೆ ಸಂಯುಕ್ತವಾದ. **Tel-lúric** (ಗು.) ಟೆಲ್ಯೂರಿಯಂ ಕಡಮೆ ಪ್ರಮಾಣದಲ್ಲಿರುವ (T. acid ಟೆಲ್ಯೂರಿಕ್ ಆಮ್ಲ: $H_2 Te O_4$). **Télluride** (ನಾ.); **Téllur-ous** (ಗು.) ಟೆಲ್ಯೂರಿಯಂ ಹೆಚ್ಚು ಪ್ರಮಾಣದಲ್ಲಿರುವ (T. acid ಟೆಲ್ಯೂರಸ್ ಆಮ್ಲ: $H_2 Te O_3$)

Télotype ಟೆಲೊಟೈಪ್ (ನಾ.) ಬಂದ ಸುದ್ದಿಗಳನ್ನು ಬಂದ ಬಂದಂತೆ ತಾನಾಗಿ ಮುದ್ರಣಮಾಡುವ ವಿದ್ಯುದ್ದೂರ ಲೇಖಕ: ದೂರಲೇಖನ (ಸ್ವಯಂ) ಮುದ್ರಕ; ಹೀಗೆ ಮುದ್ರಿಸಿದ ದೂರಲೇಖನ; ಸ್ವಯಂ ಮುದ್ರಿತ—ತಂತಿ, ತಾರು.

Télpher ಟೆಲ್‌ಫರ್ (ಗು.) (ಮು., ಸರಕನ್ನು) ವಿದ್ಯುಚ್ಚಾಲನದಿಂದ ಸಾಗಿಸುವ; ವಿದ್ಯುಚ್ಚಾಲನದ. T. line ವಿದ್ಯುಚ್ಚಾಲನ ಮಾರ್ಗ. **Télpherage** (ನಾ.) ವಿದ್ಯುಚ್ಚಾಲನ.

Télson ಟೆಲ್ಸನ್ (ನಾ.) (ವಲ್ಕವಂತಗಳಲ್ಲಿ, ಚೇಳಿನ ವರ್ಗದ ಜಂತುಗಳಲ್ಲಿ) ಉದರದ ಕೊನೆಯ—ಖಂಡ, ಪರ್ವ (ಉದಾ., ಚೇಳಿನ ಕೊಂಡಿ)

Témenos ಟೆಮೆನಾಸ್ (ನಾ.; ಬ. ವ. -ne —ನೀ) (ಗ್ರೀಕ್ ಪ್ರಾಚೀನ) ಪವಿತ್ರವಾದ ಆವರಣ; (ದೇವಸ್ಥಾನದ) ಪ್ರಾಕಾರ.

Temérity ಟಿಮೆರಿಟಿ (ನಾ.) ಹುಚ್ಚು, ದುಡುಕು, —ಸಾಹಸ, ಧೈರ್ಯ.

Temerárious ಟೆಮೆರೇರಿಯಸ್ (ಗು.) (ಗ್ರಾಂ.) ಹುಚ್ಚು ಸಾಹಸದ.

Temp. (L) ಟೆಂಪ್ (=Tempore ಎಂಬ ಲ್ಯಾಟಿನ್ ಪದದ ಸಂಕ್ಷಿಪ್ತ) (ವಿನೋದವಾಗಿ ಪಾಂಡಿತ್ಯ ಪ್ರ.) —ಕಾಲದಲ್ಲಿ (Temp. Henry I)

Tempéan ಟೆಂಪೀಯನ್ (ಗು.) (ಗ್ರೀಕ್ ಮತ್ತು ಲ್ಯಾಟಿನ್ ಕವಿಗಳಿಂದ ಕೀರ್ತಿತವಾದ, ತೆಸಲಿಯ) ಟೆಂಪಿ ಎಂಬ ಸುಂದರ ಕಣಿವೆಯ(ಂಥ)

Témper ಟೆಂಪರ್ (ಕ್ರಿ., ನಾ.) (ಜೇಡಿಮಣ್ಣು, ಮೊ. ನ್ನು) ನೆನಸಿ, ಬೆರಸಿ ಮತ್ತು ನಾದಿ ಸಿದ್ಧಗೊಳಿಸು; ಹದವಾಗಿ ಮಾಡು; ಅನುಕ್ರಮವಾಗಿ ಕಾಯಿಸಿ ತಂಪಿಸುವುದರಿಂದ (ಲೋಹಕ್ಕೆ, ಮು., ಉಕ್ಕಿಗೆ) ಗಡುಸನ್ನೂ ಸ್ಥಿತಿಸ್ಥಾಪಕತೆಯನ್ನೂ ತಕ್ಕ ಪ್ರಮಾಣದಲ್ಲಿ ಉಂಟುಮಾಡು: ಹದ ಕೊಡು. (ಲೋಹದ ವಿಷಯದಲ್ಲಿ) ಹದವಾಗು, ಹದಕ್ಕೆ ಬರು. (ನ್ಯಾಯದ ಉಗ್ರತೆ, ಮೊ. ನ್ನು ಕರುಣೆ, ಮೊ. ನ್ನು ಬೆರಸಿ) ಮೃದುಮಾಡು, ಮೆಲುಪುಮಾಡು, ತಗ್ಗಿಸು (*With* ಉಪ. ದೊಡನೆ); ಮಿತಮಾಡು, ಜೋರು ತಗ್ಗಿಸು, ತೀಕ್ಷ್ಣತೆ ಕಡಮೆ ಮಾಡು, ಕಾವು ತಗ್ಗಿಸು. (ಸಂ.) (ಪಿಯಾನೊ, ಮೊ. ವಾದ್ಯಗಳನ್ನು) ನಿರ್ದಿಷ್ಟ ಸ್ವರದಲ್ಲಿಡು, ಶ್ರುತಿಮಾ(ಡಿ)ಡು. (ನಾ.) ಪರಿಕರಗಳನ್ನು ಸಮಧಾತುವಾಗಿ ಸೇರಿಸಿ ಮಾಡಿದ (ಗಾರೆ, ಮೊ.) ಮಿಶ್ರಣ: ಹದ—ಬೆರಕೆ, ಮಿಶ್ರಣ (*Of* ಉಪ. ದೊಡನೆ); (ಹೀಗೆ ಮಿಶ್ರವಾಗಿ ಬಂದ) ಹದ. (ಲೋಹದ ವಿಷಯದಲ್ಲಿ) ತಕ್ಕ ಗಡುಸು ಮತ್ತು ಸ್ಥಿತಿಸ್ಥಾಪಕತೆಗಳ ಗುಣ: ಹದ. ಮನಸ್ಸಿನ ಹದ, ಮನಃಪಾಕ [Was of a frigid, placid, t. Found him in a good t. (ಸಿಡುಕು ಮತ್ತು ಕೋಪ ಇಲ್ಲದೆ) ಪ್ರಸನ್ನನಾಗಿದ್ದನು, ಒಳ್ಳೆಯ ಮನೋಧರ್ಮದಲ್ಲಿದ್ದನು. In a bad t. ಸಿಡುಕಿನಲ್ಲಿ, ಕೋಪದಲ್ಲಿ]. ರೇಗು, ಕೋಪ (A fit of t. ಕೋಪದ ಕೆರಳು. What a t. he is in! ಏನು ಕೋಪದಲ್ಲಿದ್ದಾನೆ! Show t. ಸಿಡುಕು ತೋರು, ಸಿಡುಕಾಗಿರು. Lose one's t. ಶಾಂತಿ ಕಳೆದುಕೊ, ಕೋಪಗೊಳ್ಳು. Keep, control, one's t. ಸಮಾಧಾನದಿಂದಿರು, ತಡೆದುಕೊಂಡಿರು, ರೇಗದಿರು. Out of t. ಕೋಪಗೊಂಡು, ರೇಗಿ). **Témperable** (ಗು.); **Témp-erative** (ಗು.); **Témperer** (ನಾ.) (ಜೇಡಿ, ಗಾರೆ, ಮೊ. ರ) ಹದ ಬೆರಕೆ ಮಾಡುವವನು; (ಉಕ್ಕಿಗೆ) ಹದ ಕೊಡುವವನು, ಹದಗಾರ. **-tempered** (ಗು.); **-témperedly** (ಕ್ರಿ. ವಿ.); **Témperament** ಟೆಂಪೆರಮೆಂಟ್ (ನಾ.) ಒಬ್ಬನ ನಡೆವಳಿ, ವೇದನಾನುಭವ, ಆಲೋಚನೆ ಮಾಡುವ ರೀತಿ—ಇವುಗಳಮೇಲೆ ಶಾಶ್ವತವಾಗಿ ಪರಿಣಾಮವುಂಟು ಮಾಡುವ, ದೇಹ ಪ್ರಕೃತಿಯ ವೈಯಕ್ತಿಕ ಸ್ವಭಾವ: ಮನೋಧರ್ಮ, ಮನಸ್ಸಿನ ಪ್ರಕೃತಿ [Nervous t. ಥಟ್ಟನೆ ಕೆರಳುವ, ಪುಕ್ಕಲ,—ಪ್ರಕೃತಿ. Artistic t. ಕಲೋಪಾಸನೆಯ, ಕಲಾಭಿರುಚಿಯ, —ಪ್ರಕೃತಿ. Sanguine t. (ರಕ್ತಬಲದ ಕಾರಣದಿಂದ) ಉತ್ಸಾಹ ಪ್ರಕೃತಿ; lymphatic *or* phlegmatic t. (ಶ್ಲೇಷ್ಮ ಕಾರಣದಿಂದ) ಮಂದ ಪ್ರಕೃತಿ; choleric *or* bilious t. (ಪಿತ್ತ ಕಾರಣದಿಂದ) ಕೋಪ ಪ್ರಕೃತಿ; melancholic *or* atrabilious t. (ಕೃಷ್ಣಪಿತ್ತ ಕಾರಣದಿಂದ) ವಿಷಣ್ಣ ಪ್ರಕೃತಿ (ಹಿಂದೆ ರಕ್ತ, ಶ್ಲೇಷ್ಮ, ಹಳದಿ ಪಿತ್ತ ಮತ್ತು ಕೃಷ್ಣ ಪಿತ್ತಗಳ ಆಧಿಕ್ಯದಿಂದ ಆಗುತ್ತಿದ್ದವೆಂದು ನಂಬಿಕೆಯಿತ್ತು)] [**Tempera-méntal** (ಗು.) ಗಳಿಗೆಗೊಂದು—ಚಿತ್ತವೃತ್ತಿಯ, ಸ್ವಭಾವದ; ವಿಚಿತ್ರ, —ಚಂಚಲ, ಪ್ರಕೃತಿಯ]. (ಸಂ.) (ಪಿಯಾನೊ, ಮೊ. ವಾದ್ಯಗಳ ವಿಷಯದಲ್ಲಿ) ಶ್ರುತಿ (ಮಾಡುವುದು) (Equal *or* even t. ಹನ್ನೆರಡು ಅರ್ಧ ಸ್ವರಗಳು ಸಮ ಅಂತರಗಳಲ್ಲಿರುವ ಶ್ರುತಿ: ಸಮಶ್ರುತಿ)

Témpera ಟೆಂಪೆರ (ನಾ.) =Distemper² (ಆ ಪದ ನೋಡಿ)

Témperance ಟೆಂಪರನ್ಸ್ (ನಾ.) (ಮಾತು, ನಡೆವಳಿ, ಮೊ. ಗಳಲ್ಲಿ) ಮಿತಾಚಾರ; (ಮು., ಊಟದಲ್ಲಿ, ಕುಡಿತದಲ್ಲಿ) ಮಿತವಾಗಿರುವುದು, ಹಾಳಿತ; ಮಿತ ಸೇವನೆ; (ಕೋಪ, ಆಸೆ, ಮೊ. ನ್ನು) ತಡೆದುಕೊಳ್ಳುವುದು; ಆತ್ಮಸಂಯಮ; ಮದ್ಯದ—ಮಿತಪಾನ, ಪೂರ್ತಿ ವರ್ಜನೆ. T. hotel ಮದ್ಯವಿಲ್ಲದ ಹೋಟೆಲು. T. movement, society, league (ಮಿತ ಮದ್ಯಪಾನಕ್ಕೆ ಅಥವಾ ಮದ್ಯ ನಿರೋಧಕ್ಕೆ ಏರ್ಪಟ್ಟ) ಮದ್ಯ ವರ್ಜನೆಯ ಚಳವಳಿ, ಸಂಘ. **Témperate** —ರೆಟ್ (ಗು.) ಮಿತದ, ಹಾಳಿತದ, ಮಿತಾಚಾರದ, ಆತ್ಮಸಂಯಮದ; ಮಿತ ಸೇವನೆಯ; ಸೌಮ್ಯ ವಾಯುಗುಣದ, ಸಮಧಾತುವಿನ, ಸಮ ಶೀತೋಷ್ಣದ (North, South, t. zone ಉ., ದ., ಸಮಶೀತೋಷ್ಣ ವಲಯ). **Témperately** (ಕ್ರಿ. ವಿ.); **Témperateness** (ನಾ.)

Témperature ಟೆಂಪೆ(ಪ)ರಟ್ಯೂರ್, —ಚರ್ (ನಾ.) (ಮು., ಶಾಖಮಾಪಕದಿಂದ ಕಂಡುಬರುವ) ಒಂದು ಪದಾರ್ಥದ ಅಥವಾ ವಾಯುಮಂಡಲದ ಶಾಖದ ಮಟ್ಟ ಅಥವಾ ತೀಕ್ಷ್ಣತೆ: ಕಾವು, ಉಷ್ಣ, ಶಾಖ (High, low, t.); (ವೈ. ಶಾ.) ದೇಹದ (ಒಳಗಿನ) ಶಾಖ; ಮೈಕಾವು [Normal t. (ಮನುಷ್ಯ ದೇಹದ) ಸಾಮಾನ್ಯ ಶಾಖ (೯೮.೪). Take one's t. (ಕಾಯಿಲೆಯಲ್ಲಿ ಸಾಮಾನ್ಯ ಶಾಖದಿಂದ ವ್ಯತ್ಯಾಸವಿರುವುದನ್ನು ತಿಳಿಯುವುದಕ್ಕಾಗಿ) ಶರೀರಶಾಖವನ್ನು—ಅಳೆ, ಪರೀಕ್ಷಿಸು. Absolute zero of t. (Zero ನೋಡಿ). T. curve ಶರೀರ ಶಾಖದ ವ್ಯತ್ಯಾಸಗಳನ್ನು ತೋರಿಸುವ ವಕ್ರರೇಖೆ: ಶಾಖರೇಖೆ]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Témpest ಟೆಂಪೆಸ್ಟ್ (ನಾ.) (ಅನೇಕ ವೇಳೆ ಮಳೆ, ಮಂಜು ಹೊಡೆತ, ಮೊ. ಗಳಿಂದ ಕೂಡಿದ) ಬಿರುಗಾಳಿ; ಚಂಡಮಾರುತ ; ಝುಂಝಾವಾತ. (ರೂಪ.) ಪ್ರಚಂಡ—ಕ್ಷೋಭೆ, ತಳಮಳ, ಗಲಭೆ, ಕೋಲಾಹಲ ; ಬಿರುಹೊಯ್ಲು. **Tempéstuous** ಟೆಂಪೆಸ್ಚ್ಯುಅಸ್ (ಗು.) (ವಾಯುಸ್ಥಿತಿ, ಕಾಲಸ್ಥಿತಿ, ಮೊ. ಗಳ ವಿಷಯದಲ್ಲಿ ; ರೂಪಕವಾಗಿ ಮನುಷ್ಯನ, ಅವನ ಚಿತ್ತವೃತ್ತಿಯ, ವಿಷಯದಲ್ಲಿ) ಬಿರುಗಾಳಿ ಮಳೆಯ, ಪ್ರಬಲವಾಗಿ ಕೆರಳಿದ, ಪ್ರಕ್ಷುಬ್ಧ, ಅಲ್ಲೋಲಕಲ್ಲೋಲದ, ಉಗ್ರಾವೇಶದ. **Tempéstuously** (ಕ್ರಿ. ವಿ.) ; **Tempéstuousness** (ನಾ.)

Témplar. **Temple** ನೋಡಿ.

Témplate. **Templet** ನೋಡಿ.

Témple[1] ಟೆಂಪ್‌ಲ್ (ನಾ.) ದೇವತಾರಾಧನ ಮಂದಿರ ; ಜೆರೂಸಲೆಮಿನಲ್ಲಿಯ ಯೆಹೂದ್ಯರ (ಮೂರು) ದೇವಾಲಯ(ಗಳಲ್ಲೊಂದು) ; ಕ್ರೈಸ್ತ (ಸಾರ್ವಜನಿಕ) ಆರಾಧನ ಮಂದಿರ, ಚರ್ಚು (ಮು., ಫ್ರಾನ್ಸಿನಲ್ಲಿಯ ಪ್ರಾಟೆಸ್ಟಂಟ್ ಚರ್ಚು) ; (ರೂಪ.) ದೇವರು ನೆಲಸಿರುವ ಸ್ಥಳ : ದೇವಾಲಯ, ದೇವಸ್ಥಾನ, ಗುಡಿ. [The T. ಹಿಂದೆ ಲಂಡನ್ನಿನಲ್ಲಿದ್ದ ಧರ್ಮ ಸೈನಿಕ ವರ್ಗದವರ ಮಂದಿರ. (ಈಗ ಇದರ ನಿವೇಶನದಲ್ಲಿರುವವು) : Inner, Middle, T. ಎರಡು ನ್ಯಾಯವಾದಿ ಸಂಸ್ಥೆಗಳು. T. Bar ಲಂಡನ್ನಿನ ಪಶ್ಚಿಮ ಸರಹದ್ದಿನಲ್ಲಿದ್ದ ಊರಬಾಗಿಲು ('ಫ್ಲೀಟ್ ಸ್ಟ್ರೀಟ್' ಮತ್ತು 'ಸ್ಟ್ರ್ಯಾಂಡು'ಗಳ ಕೂಡಿಕೆಯ ಸ್ಥಳದಲ್ಲಿತ್ತು ; ಕ್ರಿ. ಶ. ೧೮೭೮ರಲ್ಲಿ ತೆಗೆದುಹಾಕಿದರು)]. **Témplar** ಟೆಂಪ್ಲರ್ (ನಾ.) (T-) [ಕ್ರೈಸ್ತರ ಪುಣ್ಯಭೂಮಿಗೆ (ಪಶ್ಚಿಮ ಪ್ಯಾಲೆಸ್ಟೈನ್ ಪ್ರಾಂತಕ್ಕೆ) ಹೋಗುತ್ತಿದ್ದ ಯಾತ್ರಿಕರ ರಕ್ಷಣೆಗೆ ಏರ್ಪಟ್ಟಿದ್ದ] ಧರ್ಮ ಸೈನಿಕ (ವರ್ಗದವನು); ಧಾರ್ಮಿಕ ಯೋಧ (Knights Templars ಧರ್ಮ ಸೈನಿಕವರ್ಗ). (ಲಂಡನ್ನಿನ Inner Temple, Middle Temple ಎಂಬ ನ್ಯಾಯವಾದಿ ಸಂಸ್ಥೆಗಳಲ್ಲಿ ಕೋಣೆಗಳನ್ನುಳ್ಳ) ವಕೀಲ, ನ್ಯಾಯ ವಿದ್ಯಾರ್ಥಿ. Free, Good, Templars ಗುಪ್ತ ಮದ್ಯಪಾನವರ್ಜಕ ಸಂಘಗಳು.

Témple[2] ಟೆಂಪ್‌ಲ್ (ನಾ.) ಹಣೆಗೂ ಕಿವಿಗೂ ನಡುವೆ ತಲೆಯ ಎರಡೂ ಪಕ್ಕಗಳ ಚಪ್ಪಟೆಭಾಗ : ಕಣತಲೆ, ಕಪೋಲ, ಗಂಡ(ಸ್ಥಲ)

Témple[3] ಟೆಂಪ್‌ಲ್ (ನಾ.) ಮಗ್ಗದಲ್ಲಿ ಬಟ್ಟೆಯನ್ನು ಚಾಚಿ ಹಿಡಿದುಕೊಳ್ಳುವ ಸಾಧನ : ಚಾಚು ಹಿಡಿಕೆ.

Témplet, Témplate ಟೆಂಪ್ಲೆಟ್ (ನಾ.) ಲೋಹ, ಕಲ್ಲು, ಮರ, ಮೊ. ಗಳನ್ನು ಕತ್ತರಿಸುವಾಗ ಅಥವಾ ಅವುಗಳಲ್ಲಿ ತೂತು ಕೊರೆಯುವಾಗ ಬೇಕಾದ ಆಕೃತಿ ಅಥವಾ ಅಳತೆ ದೊರೆಯುವಂತೆ ಉಪಯೋಗಿಸುವ, ಮಾದರಿಯ (ಬಾಗುಗಳು ಅಥವಾ ರಂಧ್ರಗಳನ್ನುಳ್ಳ) ತೆಳ್ಳನೆಯ (ಲೋಹ) ಫಲಕ : ಮಾದರಿ (ಬಾಗು, ತೂತು,—) ತಗಡು ; ಪ್ರಮಾಣ ಫಲಕ. ದೂಲ, ತೀರು, ಮೊ. ಗಳ ಭಾರವನ್ನು ಹಂಚಿಹಾಕಲು ಗೋಡೆಯಲ್ಲಿ ಉಪಯೋಗಿಸುವ ಅಡ್ಡಮರ : ಪಟ್ಟಿಡಿ ಮರ. ಹಡಗಿನ ಅಡಿಗಟ್ಟಿನ ಕೆಳಗಿರುವ ಕಟ್ಟಣೆ ದಿಮ್ಮಿಯ ಬೆಣೆ ; =Temple[3].

Témpo ಟೆಂಪೊ (ನಾ. ; ಬ. ವ. -pi —ಪೀ, -pos —ಪೋಸ್) (ಸಂ.) ತಾಳ ; ನಡೆಯ—ವೇಗ, ವಿಶಿಷ್ಟ ಶೈಲಿ : ಗತಿ.

Témporal ಟೆಂಪೊರಲ್ (ಗು., ನಾ.) (ಮು., Spiritual ಎಂಬ ಪದಕ್ಕೆ ವಿರುದ್ಧವಾಗಿ) ಇಹ ಜೀವನದ ; ಐಹಿಕ ; ಲೌಕಿಕ ; ಪ್ರಾಪಂಚಿಕ (T. affairs, interests ಐಹಿಕ ವ್ಯವಹಾರಗಳು, ಹಿತಾರ್ಥಗಳು) [**Témporally** (ಕ್ರಿ. ವಿ.) ; **Témporalness** (ನಾ.)] ; [T. lords=Peers of the realm (Peer[1] ನೋಡಿ). T. power ಲೌಕಿಕ ವಿಚಾರಗಳಲ್ಲಿ ಪಾದ್ರಿಯ, ಮು., ಪೋಪಿನ, ಅಧಿಕಾರ, ಪ್ರಭುತ್ವ : ಲೌಕಿಕಾಧಿಕಾರ]. ಕಾಲದ ; ಕಾಲ—ಸಂಬಂಧವಾದ, ಸೂಚಕ (ವ್ಯಾಕರಣ ಪ್ರ. ಸಹ) [T. & spatial ಕಾಲಿಕ ಮತ್ತು ಪ್ರಾದೇಶಿಕ. T. conjunctions ಕಾಲವಾಚಕ ಸಂಬಂಧಾವ್ಯಯಗಳು (ಉದಾ., when ಮೊ. ವು)] ; ಕಣತಲೆಯ(ಗಳ), ಕಪೋಲದ(ಗಳ), ಗಂಡಸ್ಥಲದ (T. artery ಕಪೋಲಾಪಧಮನಿ. T. bone ಕಪೋಲಾಸ್ಥಿ). (ನಾ.) =T. bone. **Temporálity** —ರ್‍ಯಾಲಿಟಿ (ನಾ.) (ಸಾ., ಬ. ವ. ದಲ್ಲಿ) ಲೌಕಿಕ ಆಸ್ತಿ (ಮು., ಧರ್ಮ ಸಂಸ್ಥೆಯ ಅಥವಾ ಪಾದ್ರಿಯ ಆಸ್ತಿಗಳು ಮತ್ತು ಆದಾಯಗಳು) ; (ನ್ಯಾ. ಶಾ.) ತಾತ್ಕಾಲಿಕತೆ. **Témporalty** —ರಲ್ಟಿ (ನಾ.) ಲೌಕಿಕರು ; ಲೌಕಿಕ ಆಸ್ತಿ.

Temporálity, Témporalty. Temporal ನೋಡಿ.

Témporary ಟೆಂಪೊರರಿ (ಗು.) ಸ್ವಲ್ಪ ಕಾಲಕ್ಕೆ, ಆ ಕಾಲಕ್ಕೆ,—ಮಾತ್ರ ಇರುವ, ಉದ್ದೇಶಿಸಿದ ; ತಾತ್ಕಾಲಿಕ, ಅಲ್ಪಕಾಲಿಕ, ಹಂಗಾಮಿ (T. buildings, office). **Témporarily** (ಕ್ರಿ. ವಿ) ; **Témporariness** (ನಾ.)

Témporize ಟೆಂಪೊರೈಸ್ (ಕ್ರಿ. ಅಕ.) ಹೊತ್ತಿನ ಅನುಕೂಲದಂತೆ ಕಾರ್ಯನೀತಿ ಹಿಡಿ ; ಕಾಲಕ್ಕೆ ತಕ್ಕಂತೆ ನಡೆ ; ಸಮಯಾನುವರ್ತನೆ ಮಾಡು ; (ಯಾವ ತತ್ತ್ವಕ್ಕೂ ಸಿಕ್ಕಿಕೊಳ್ಳದೆ) ಕಾಲ—ಲಾಭವಾಗುವಂತೆ ವರ್ತಿಸು, ತಳ್ಳು ; ಹೊತ್ತಿಗೆ ಸಾಕಷ್ಟನ್ನು ಮಾತ್ರ ತಾತ್ಕಾಲಿಕವಾಗಿ ನಡಸು. **Temporizátion** (ನಾ.) ; **Témporizer** (ನಾ.); **Témporizingly** (ಕ್ರಿ. ವಿ.)

Témporo- ಟೆಂಪೊರೊ—(ಸ. ಪೂ. ಪ.) ಕಪೋಲ—, ಗಂಡ(ಸ್ಥಲ)—. **-fácial** ಕಪೋಲ ಮತ್ತು ಮುಖಪ್ರದೇಶಗಳ.

Tempt ಟೆಂಪ್ಟ್ (ಪ್ರಾಚೀ. ಪ್ರ., ಬೈಬಲ್) (ಆಶೆ, ಮೊ. ನ್ನು ತೋರಿಸುವುದರ ಮೂಲಕ ನಿಷ್ಠೆ, ಮೊ. ನ್ನು) ಪರೀಕ್ಷಿಸು ; ಸಂಕಲ್ಪ, ಸತ್ತ್ವ, —ಪರೀಕ್ಷೆಮಾಡು (God did t. Abraham) ; (ಮು., ಕೆಟ್ಟ ಕೆಲಸ ಮಾಡುವಂತೆ) ಮನಸ್ಸನ್ನು ಸೆಳೆ, ಪ್ರೇರೇಪಿಸು, ಚಪಲಗೊಳಿಸು (*To* do, *to* action) ; (I am tempted to question this ಈ ವಿಷಯದಲ್ಲಿ ಸಂದೇಹ ಸೂಚಿಸಬೇಕೆಂದು ಮನಸ್ಸಾಗುತ್ತದೆ) ; ಆಕರ್ಷಿಸು, ಪ್ರಲೋಭನಗೊಳಿಸು, ಆಳುಪಿಸು, ಮೋಹಗೊಳಿಸು, ಬಲೆಗೆ ಹಾಕಿಕೊ [**Témptingly** (ಕ್ರಿ. ವಿ.)] ; (ಪ್ರಾಚೀ. ಪ್ರ., ಬೈಬಲ್) ಕೆಣಕು, ರೇಗಿಸು, ಪ್ರತಿಭಟಿಸು (Shalt not t. the Lord). **Témptable** (ಗು.) ; **Temptabílity** (ನಾ.); **Temptátion** (ನಾ.) ಚಪಲ, ಪ್ರೇರಿಸುವುದು, ಪ್ರೇರಣೆ(ಗೊಳ್ಳುವುದು) ; ದುಷ್ಪ್ರೇರಣೆ (The T. ಮರಳುಗಾಡಿನಲ್ಲಿ ಯೇಸು ಕ್ರಿಸ್ತನಿಗಾದ ದುಷ್ಪ್ರೇರಣೆ). ಮೋಹಕ, ಆಕರ್ಷಕ, —ವಸ್ತು, ಮಾರ್ಗ ; ಆಕರ್ಷಣೆ, ಪ್ರಲೋಭನ. **Témpter** (ನಾ.) ಪ್ರೇರಣೆ, ದುಷ್ಪ್ರೇರಣೆ, —ಮಾಡುವವನು ; ಪ್ರಲೋಭನಕಾರ ; ಆಕರ್ಷಕ (—ವ್ಯಕ್ತಿ, ವಸ್ತು). The T. ಸೈತಾನ ; ಪಾಪಪುರುಷ. **Témptress** (ನಾ., ಸ್ತ್ರೀ.) ಮೋಹಿನಿ, ಮಾಯಗಾತಿ.

Ten ಟೆನ್ (ಗು., ನಾ.) ಹತ್ತು, ದಶ(ಮ) (೧೦, 10, X) [T. times as easy ಹತ್ತರಷ್ಟು ಸುಲಭ. T. to one he forgets it ಅವನು ಮರೆಯುವ ಸಂಭವ—ಹತ್ತರಲ್ಲೊಂಬತ್ತು ಇದೆ, ಹೆಚ್ಚು. Hart of t. (Hart ನೋಡಿ). Upper t. (Upper ನೋಡಿ). Tenpenny nail ೧೦೦ಕ್ಕೆ ೧೦ ಪೆನಿ ಬೆಲೆಯ ಮೊಳೆ ; ದೊಡ್ಡ ಮೊಳೆ]. **T.-pounder** (ಚರಿತ್ರೆ) ವರ್ಷಕ್ಕೆ ೧೦ ಪೌಂಡು ಕಂದಾಯದ ಆಸ್ತಿಯ ಹಿಡುವಳಿದಾರನಾಗಿ, ಪಾರ್ಲಿಮೆಂಟಿನ ಚುನಾವಣೆಗಳಲ್ಲಿ ವೋಟು ಕೊಡುವ ಹಕ್ಕುಳ್ಳವನು: ೧೦ ಪೌಂಡು (ಕಂದಾಯದ)—ವೋಟುದಾರ, ಮತದಾರ. **Ténfold** (ಗು., ಕ್ರಿ. ವಿ.) ಹತ್ತರಷ್ಟು ; ಹತ್ತು ಮಡಿ. **Ténner** (ನಾ. ; ಬಳ. ಮಾ.) ೧೦ ಪೌಂಡು ನೋಟು. **Tenth** (ಗು., ನಾ.) ಹತ್ತನೆಯ ; ದಶಮ. (ನಾ.) ದಶಮಾಂಶ ಕಂದಾಯ. **Ténthly** (ಕ್ರಿ. ವಿ.)

Ténable ಟೆನಬ್‌ಲ್ (ಗು.) (ಯುದ್ಧದಲ್ಲಿ, ವಾದದಲ್ಲಿ) ಕಾಪಾಡಿಕೊಳ್ಳಲಾಗುವ, ರಕ್ಷಣ ಸಾಧ್ಯ, ಸಮರ್ಥಿಸಬಹುದಾದ, ಸಮರ್ಥನೀಯ [A t. fortress ರಕ್ಷಿಸಿಕೊಳ್ಳಲಾಗುವ ಕೋಟೆ. A t. theory ಸಮರ್ಥನೀಯ ವಾದ]. (ಅಧಿಕಾರ, ಮೊ. ಗಳ ವಿಷಯದಲ್ಲಿ ; ನಿರ್ದಿಷ್ಟ ವ್ಯಕ್ತಿ, ನಿರ್ದಿಷ್ಟ ಕಾಲ) ಪಡೆಯಬಹುದಾದ, ಅನುಭೋಗಿಸಲಾಗುವ (*For* specified time, *by* person). **Tenabílity** (ನಾ.) ; **Ténableness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tenácious ಟಿನೇಷಸ್ (ಗು.) ಬಿಗಿಹಿಡಿತದ; ಹಿಡಿದ ಪಟ್ಟು ಬಿಡದ, ಜಗ್ಗದ, ಹಟದ (Quick in opposition and t. in defence); (ಆಸ್ತಿ, ಅಧಿಕಾರ, ತತ್ತ್ವ, ಮೊ. ನ್ನು) ಭದ್ರವಾಗಿ, ಪಟ್ಟಾಗಿ, —ಹಿಡಿದಿರುವ; (ಜ್ಞಾಪಕಶಕ್ತಿ) ಸ್ಥಿರವಾದ, ದೃಢವಾದ; ಅಂಟಿಕೊಳ್ಳುವ, ಬಲವಾದ ಸಂಸಕ್ತತೆಯುಳ್ಳ, ಕಿತ್ತುಹೋಗದ, ನಾರಾದ, ಜಿಗುಟಾದ (T. clay). **Tenáciously** (ಕ್ರಿ. ವಿ.); **Tenáciousness** (ನಾ.); **Tenácity** —ನ್ಯಾ— (ನಾ.) ಬಿಡದೆ, ಭದ್ರವಾಗಿ, —ಹಿಡಿದುಕೊಳ್ಳುವ ಗುಣ; ಪಟ್ಟು ಹಿಡಿಯುವುದು, ಹಟ (T. of purpose ಉದ್ದೇಶ ಸಾಧನೆಯ ಹಟ); ಕಿತ್ತುಹೋಗದ, ಅಂಟಿಕೊಳ್ಳುವ, —ಗುಣ; ಜಿಗುಟು.

Tenáculum ಟ್ಯಿನಾಕ್ಯುಲಂ (ನಾ.; ಬ. ವ. -la) ಅಪಧಮನಿ, ಮೊ. ನ್ನು ಎತ್ತಿಹಿಡಿಯುವುದಕ್ಕಾಗಿರುವ, ಶಸ್ತ್ರವೈದ್ಯನ ಮೊನಚು ಕೊಕ್ಕೆ: ಹಿಡಿ ಕೊಕ್ಕೆ.

Tenaíl, -aílle ಟಿ(ಟೆ)ನೇಲ್ (ನಾ.) (ಕೋಟೆ) ಎರಡು ಬುರುಜುಗಳ ನಡುವಣ ಅಡ್ಡಗೋಡೆಯ ಮುಂದೆ, ಮುಖ್ಯ ಕಂದಕದಲ್ಲಿನ ಹೊರ ಕಟ್ಟಡ.

Ténant ಟೆನಂಟ್ (ನಾ., ಕ್ರಿ. ಸಕ.) ಜಮೀನನ್ನು ಗುತ್ತಿಗೆಗೆ, ಮನೆಯನ್ನು ಬಾಡಿಗೆಗೆ, —ಪಡೆದು ಅನುಭವಿಸುತ್ತಿರುವವನು: ಒಕ್ಕಲು, ಗೇಣಿದಾರ, ಗುತ್ತಿಗೆದಾರ, ಬಾಡಿಗೆದಾರ; (ಸ್ಥಿರಸ್ವತ್ತಿಗೆ ಸಂಬಂಧಪಟ್ಟ ಮೊಕದ್ದಮೆಯಲ್ಲಿ) ಪ್ರತಿವಾದಿ; (ಯಾವುದಾದರೂ ಸ್ಥಳದ) ನಿವಾಸಿ (*Of* ಉಪ. ದೊಡನೆ). [T. farmer ಬೇರೆಯವನ ಜಮೀನಿನ ಬೇಸಾಯಗಾರ: ಗೇಣಿ, ಗುತ್ತಿಗೆ, —ಬೇಸಾಯಗಾರ; ರೈತ. T. right (ಗುತ್ತಿಗೆಯನ್ನು, ಬಾಡಿಗೆಯನ್ನು, ಕೊಡುತ್ತ ಯೋಗ್ಯ ರೀತಿಯಲ್ಲಿ ನಡೆದುಕೊಳ್ಳುತ್ತಿರುವವರೆಗೂ ಅನ್ಯಾಯವಾದ ಹೆಚ್ಚಿನ ಗುತ್ತಿಗೆ, ಬಾಡಿಗೆ, ಕೊಡಬೇಕಾಗಿಲ್ಲದೆ ಹಿಡುವಳಿಯನ್ನು ಅಥವಾ ಮನೆಯನ್ನು ಅನುಭೋಗಿಸಿಕೊಂಡು ಬರುವ, ಮತ್ತು ತಪ್ಪಿಸಿಬಿಟ್ಟರೆ ಜಮೀನುದಾರನಿಂದ, ಮಾಲೀಕನಿಂದ, ನಷ್ಟಪರಿಹಾರ ಪಡೆಯಬಹುದಾದ) ಗೇಣಿ(ದಾರನ), ಬಾಡಿಗೆ(ದಾರನ), —ಹಕ್ಕು]. (ಕ್ರಿ. ಸಕ.) (ಮು., ಭೂ. ಕೃ. ನಲ್ಲಿ) (ಜಮೀನು, ಮನೆ, ಮೊ. ಗಳ) ಗೇಣಿದಾರನಾಗಿ, ಬಾಡಿಗೆದಾರನಾಗಿ, ಒಕ್ಕಲಾಗಿ, —ಇರು, ಅನುಭೋಗಿಸು; ಒಕ್ಕಲಿಗೆ ಸ್ಥಳಾವಕಾಶವಿರು (An apartment that tenanted eight families). **Ténancy** (ನಾ.) ಗೇಣಿಗೆ, ಬಾಡಿಗೆಗೆ, —ಇರುವುದು. **Ténantless** (ಗು.); **Ténantable** (ಗು.) ಗೇಣಿದಾರನು ಪಡೆಯಲು, ಬಾಡಿಗೆದಾರನು ವಾಸವಾಗಿರಲು, —ಯೋಗ್ಯವಾದ; ಒಕ್ಕಲಿರಲು ತಕ್ಕ. **Ténantry** (ನಾ.) ಗೇಣಿದಾರರು, ಬಾಡಿಗೆದಾರರು, ಒಕ್ಕಲು(ಗಳು)

Tench ಟೆನ್ಷ್ (ನಾ.) ಯೂರೋಪಿನ ಒಂದು ಬಗೆಯ ಸೀನೀರ ಮೀನು.

Tend[1] ಟೆಂಡ್ (ಕ್ರಿ. ಅಕ.) (—ಕಡೆಗೆ) ಒಲೆ, ಚಲಿಸುತ್ತಿರು, ಹೋಗುತ್ತಿರು, ಬರುತ್ತಿರು; ಮಾರ್ಗಹಿಡಿದಿರು (ರೂಪ. ಸಹ) (Tends in our direction ನಮ್ಮ ಕಡೆಗೆ ಒಲೆಯುತ್ತದೆ. Tends to the same conclusion ಅದೇ ನಿರ್ಣಯಕ್ಕೆ ಓಲುತ್ತದೆ). ಪ್ರವೃತ್ತಿಯಿರು, ಒಲವಿರು, ಸಾಧಕವಾಗು, ತರು, ಉಂಟುಮಾಡು, ಅನುಕೂಲವಾಗು (*To* action, quality, etc., *to* do) (To live in a society of equals tends to make a man's spirit expand). **Téndency** ಟೆಂಡೆನ್ಸಿ (ಒಂದರ ಕಡೆಗೆ, ಒಂದನ್ನು ಮಾಡಲು) ಓಲು, ಒಲವು, ಪ್ರವೃತ್ತಿ, ಪ್ರವಣತೆ (*Towards, to,* thing; *to* do). **Tendéntious** ಟೆಂಡೆನ್ಷಸ್ (ಬರೆವಣಿಗೆ, ಮೊ. ವು) ಒಳಉದ್ದೇಶವುಳ್ಳ, ಏಕಪಕ್ಷೀಯ, ಪಕ್ಷಪಾತದ (A false & t. account of what had taken place)

Tend[2] ಟೆಂಡ್ (ಕ್ರಿ.) (ಮಂದೆ, ಮೊ. ನ್ನು) ರಕ್ಷಣೆ, ಕಾವಲು, ಉಸ್ತುವಾರಿ, —ನೋಡಿಕೊ; (ಕಾವಲು) ಕಾಯಿ; (ರೋಗಿ, ಮೊ. ನ್ನು) ಉಪಚರಿಸು, ಆರೈಕೆಮಾಡು (T. the sick); (ಯಂತ್ರ, ಮೊ. ನ್ನು) ನಡಸು(ತ್ತಿರು), ವಿಚಾರಣೆ ತೆಗೆದುಕೊ; ಆಡಳಿತ ನೋಡಿಕೊ (T. a store). (ಸೇವಕನಂತೆ) ಅಪ್ಪಣೆ ಕಾಯುತ್ತಿರು, ಸೇವಿಸು (*Upon* ಉಪ. ದೊಡನೆ). (ನಾವೆ) (ಸಮುದ್ರದ ಭರತ ಬಂದಾಗ ಅಥವಾ ಇಳಿದಾಗ) ಹಡಗಿನ ಹೊರಜಿ ಗೋಜುಬೀಳದಂತೆ (ಲಂಗರು ಹಾಕಿದ ಹಡಗನ್ನು) ನೋಡಿಕೊ. **Téndance** (ನಾ.) (ಪ್ರಾಚೀ. ಪ್ರ.); **Ténder**[1] ಟೆಂಡರ್ (ನಾ.) (ಕ್ರಿಯಾರ್ಥಗಳಲ್ಲಿ); ದೊಡ್ಡ ಹಡಗಿಗೆ (ಮು., ಯುದ್ಧದ ಹಡಗಿಗೆ) ಸರಬರಾಯಿ ಸಾಗಿಸುವುದಕ್ಕಾಗಿಯೂ, ಆಜ್ಞೆಗಳು, ಮೊ. ನ್ನು ತಲಪಿಸುವುದಕ್ಕಾಗಿಯೂ ಅದರ ಜೊತೆಯಲ್ಲಿರುವ ಹಡಗು: ಸೇವಕ ಹಡಗು; ಅನುಚರ, ಪರಿಚಾರಕ, —ನೌಕೆ. ಉರುವಲು, ನೀರು, ಮೊ. ನ್ನು ದಾಸ್ತಾನು ಇಟ್ಟುಕೊಂಡಿರುವ, ಸ್ವಯಂಚಲಿ ಯಂತ್ರಕ್ಕೆ ಜೋಡಿಸಿದ, ಬಂಡಿ: ಸರಬರಾಯಿ, ಪರಿಚಾರಕ, —ಬಂಡಿ. ದೂಳುತೊಡಪ, ಮೊ. ಕ್ಕೆ ಜೋಡಿಸಿರುವ ಸಣ್ಣ ನೀರು ತೊಟ್ಟಿ.

Téndency, Tendéntious. **Tend**[1] ನೋಡಿ.

Ténder[1]. **Tend**[2] ನೋಡಿ.

Ténder[2] ಟೆಂಡರ್ (ಕ್ರಿ., ನಾ.) (ಸೇವೆ, ರಾಜೀನಾಮೆ, ಮೊ. ನ್ನು) ಸಲ್ಲಿಸು, ಒಪ್ಪಿಸು, ಅರ್ಪಿಸು; (ಹಣ, ಮೊ. ನ್ನು) ಕೊಡು, ಪಾವತಿ ಮಾಡು, ಸಲ್ಲಿಸು; (ಸಾಮಾನು ಸರಬರಾಯಿ, ಮೊ. ಕ್ಕಾಗಿ, ಕಾಮಗಾರಿಗಾಗಿ) ದರವನ್ನು ತಿಳಿಸಿ, ಮಾಡಲು ಒಪ್ಪಿ, ದರಖಾಸ್ತು ಕೊಡು: ದರದ ದರಖಾಸ್ತು, ಟೆಂಡರು, —ಕೊಡು (*For* ಉಪ. ದೊಡನೆ). (ನಾ.) ಕೊಡುವುದು, ಒಪ್ಪಿಸುವುದು, ಸಲ್ಲಿಕೆ; ಮು., ದರವನ್ನು ತಿಳಿಸಿ, ಸರಬರಾಯಿಗೆ ಅಥವಾ ಕಾಮಗಾರಿಗೆ ಬರಹದ ಮೂಲಕ ಕೊಟ್ಟ ಒಪ್ಪಿಕೆ: ದರದ ದರಖಾಸ್ತು; ಟೆಂಡರು (The lowest tender was accepted). Plea of T. (ವಾದಿಯ ಹಕ್ಕು ಕೇಳಿಕೆಯನ್ನು ಸಲ್ಲಿಸಲು ತಾನು ಸದಾ ಸಿದ್ಧವಾಗಿರುವುದಾಗಿಯೂ ಈಗ ನ್ಯಾಯಸ್ಥಾನಕ್ಕೆ ಹಣ ತಂದಿರುವುದಾಗಿಯೂ ಪ್ರತಿವಾದಿ ಮಾಡುವ) ಹಣ ಸಲ್ಲಿಕೆಯ, ಪಾವತಿ ಸಿದ್ಧತೆಯ, —ವಾದ. Legal, lawful, common, t. (ಸಾಲ ತೀರಿಸುವುದು, ಮೊ. ಸಂದರ್ಭದಲ್ಲಿ) ನಿರಾಕರಿಸಲಾಗದ ಚಲಾವಣಿ ನಾಣ್ಯ: ಕಾನೂನು ಸಮ್ಮತ, ಸಲ್ಲಿಕೆ, —ಹಣ, ನಾಣ್ಯ (Silver is not l. t. above 40s.)

Ténder[3] ಟೆಂಡರ್ (ಗು.; ತರ ರೂಪ Tenderer, ತಮ ರೂಪ -est) ಮೃದು, ಕೋಮಲ, ಮೆಲುಪಾದ, ಎಳೆಯ, ಎಳಸಾದ, ಹಸಿಯಾದ; ಸುಲಭವಾಗಿ—ಮನಸ್ಸು ಕರಗುವ, ಗಾಯಗೊಳ್ಳುವ; ಮುಟ್ಟಿದರೆ ನೋಯುವ, ನೋವಿಗೂ ದುಃಖಕ್ಕೂ ಬೇಗ ಈಡಾಗುವ; ದಯಾರ್ದ್ರ [T. grass ಎಳೆಯ ಹುಲ್ಲು. T. heart, conscience ಮೃದು ಹೃದಯ, ಕೋಮಲ ಧರ್ಮೇಂದ್ರಿಯ. T. place (ದೇಹದ) ಹಸಿಯ —ಎಡೆ, ಭಾಗ]; ಸೂಕ್ಷ್ಮವಾದ, ನಾಜೂಕಾದ (ರೂಪ. ಸಹ); ಎಚ್ಚರಿಕೆಯಿಂದ—ನಿರ್ವಹಿಸಬೇಕಾದ, ಪ್ರಸ್ತಾಪಿಸಬೇಕಾದ (There is nothing of so t. a nature as the reputation of ladies. T. subject ಸೂಕ್ಷ್ಮ ವಿಷಯ. Of t. age ಎಳೆಯ ವಯಸ್ಸಿನ). ಕಟ್ಟೊಲುಮೆಯ, (ಅತಿ) ಪ್ರೀತಿಯ, ಅನುರಾಗದ, ಮಮತೆಯ, ಮೋಹದ (T. parents: Wrote t. verses); (ತನ್ನ ಹೆಸರು, ಗೌರವ, ಮೊ. ಗಳ ವಿಷಯದಲ್ಲಿ) ಮಮತಾಭಿಮಾನವುಳ್ಳ, ಗಮನಕೊಡುವ, ಎಚ್ಚರಿಕೆಯ; (ಅಪರಾಧ ಮಾಡಲು) ಹಿಂದೆಗೆಯುವ, ಅಳುಕುವ. **T.-eyed** ಮೃದು, ಸೌಮ್ಯ, —ದೃಷ್ಟಿಯ; ಬೇಗ ಆಯಾಸಗೊಳ್ಳುವ, ಚೆನ್ನಾಗಿ ಕಾಣದ, —ಕಣ್ಣುಳ್ಳ: ಎಳಗಣ್ಣಿನ. **Ténderfoot** (ಅಮೆ. ಸಂ. ಅಸಂ.) (ಪೊದೆಗಾಡು, ಹೊಸ ನೆಲಸುನಾಡು, ಮೊ. ಗಳಿಗೆ) ಹೊಸದಾಗಿ ಬಂದವನು, ಹೊಸಬ, ಅನನುಭವಿ. (ಸ್ಕೌಟುಗಳಲ್ಲಿ) ಎರಡನೆಯ ದರ್ಜೆಯ ಸ್ಕೌಟಿಗೆ ಕೆಳಗಿನ ದರ್ಜೆಯ, ೭-೧೧ ವರ್ಷ ವಯಸ್ಸಿನ, ಅನನುಭವಿ ಸ್ಕೌಟು: ಸ್ಕೌಟುಮರಿ. **T.-hearted** ಮೆಲ್ಲೆದೆಯ, ದಯಾರ್ದ್ರ ಹೃದಯವುಳ್ಳ. **T.-heártedly** (ಕ್ರಿ. ವಿ.); **T.-heártedness** (ನಾ.); **Ténderloin** (ಅಮೆ. ಸಂ.) ಎಳೆಯ ಪಕ್ಕೆ ಮಾಂಸ; (T-) (ನ್ಯೂಯಾರ್ಕ್ ಮತ್ತು ಇತರ ಪಟ್ಟಣಗಳ) ರಾತ್ರಿ ವಿಹಾರ, ರಾತ್ರಿ ವಿನೋದ, —ಪ್ರಾಂತ; ಅತ್ಯಾಚಾರ ಪ್ರಾಂತ. **Ténderly** (ಕ್ರಿ. ವಿ.); **Ténderness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Téndon ಟೆಂಡನ್ (ನಾ.) ಸ್ನಾಯುವಿನ ಮಾಂಸಲ ಭಾಗದ ಕೊನೆಯಾದ ಅಥವಾ ಸಂಬಂಧಕವಾದ ಗಟ್ಟಿ ತಂತು : ಸ್ನಾಯುರಜ್ಜು. Achilles t. ಹಿಮ್ಮಡಿಯನ್ನೂ ಮೀನಖಂಡವನ್ನೂ ಸಂಬಂಧಿಸುವ ಸ್ನಾಯುರಜ್ಜು (ಅಕಿಲೀಸ್ ಎಂಬ ಗ್ರೀಕ್ ವೀರನಿಗೆ ಆ ಭಾಗ ಮಾತ್ರ ಮರ್ಮಸ್ಥಾನವಾಗಿತ್ತೆಂಬ ಪ್ರತೀತಿಯಿಂದ). **Téndinous** (ಗು.)

Téndril ಟೆಂಡ್ರಿಲ್ (ನಾ.) ಆಶ್ರಯಕ್ಕೆ ಹತ್ತಿಕೊಂಡು ಸುತ್ತಿಕೊಳ್ಳುವ, ಎಲೆಯಿಲ್ಲದ, ಸಸ್ಯಾಂಗ : ಬಳ್ಳಿಯ, ಹಬ್ಬು, ಅಡರು, —ಕುಡಿ, ಎಳೆ ; ಲತಾತಂತು. **Téndrilled** (ಗು.)

Tenebrífic ಟೆನಿಬ್ರಿಫಿಕ್ (ಗು.) ಕತ್ತಲೆ ಮಾಡುವ, ಕತ್ತಲಿಸುವ, ಅಂಧಕಾರಕ [T. stars (ಸೂರ್ಯನು ಬೆಳಕನ್ನು ಸೂಸುವಂತೆ) ಕತ್ತಲೆಯನ್ನು ಸೂಸುವುವೆಂದು ಊಹಿಸಿದ್ದ ನಕ್ಷತ್ರಗಳು : ಅಂಧಕಾರಕ ನಕ್ಷತ್ರಗಳು]. **Ténebrous** (ಗು.) (ಪ್ರಾಚೀ. ಪ್ರ.) ಕತ್ತಲೆಯ, ಮಬ್ಬಾದ, ಮಸುಕಾದ.

Ténement ಟೆನೆ(ನಿ)ಮೆಂಟ್ (ನಾ.) (ಒಬ್ಬನ ಸ್ವಾಧೀನಾನುಭವದಲ್ಲಿರುವ) ಭೂಮಿ, ಜಮೀನು ; (ನ್ಯಾ. ಶಾ.) (ಧಣಿಗೆ ಅಧೀನನಾಗಿ ಪಡೆದಿರುವ) ಸ್ಥಿರ—ಸ್ವತ್ತು, ಆಸ್ತಿ (ಉದಾ., ಜಮೀನು, ಕಂದಾಯ, ಶ್ರೀಮಂತಿಕೆ, ಮೊ. ವು) ; (ವಾಸದ) ಮನೆ ; (ಒಂದು ಸಂಸಾರದವರ) ವಾಸದ ಕೊಟಡಿಗಳ ತಂಡ, ವಠಾರ (T. house ಇಂಥ ತಂಡಗಳುಳ್ಳ ಮನೆ ; ಕೂಡೊಕ್ಕಲು ಮನೆ). **Teneméntal** (ಗು.) ಹಿಡುವಳಿಯ ; ಗೇಣಿಗೆ, ಬಾಡಿಗೆಗೆ, —ಕೊಟ್ಟಿರುವ. **Teneméntary** (ಗು.) ಗೇಣಿಗೆ, ಬಾಡಿಗೆಗೆ, —ಕೊಟ್ಟಿರುವ; ವಾಸದ ಮನೆಗಳಿರುವ, ಕೂಡೊಕ್ಕಲಿನ.

Ténet ಟೀ(ಟೆ)ನೆಟ್ (ನಾ.) (ಒಬ್ಬ ವ್ಯಕ್ತಿಯ, ಒಂದು ಪಂಥದ) ತತ್ತ್ವ, ಸೂತ್ರ, ಸಿದ್ಧಾಂತ.

Ténner. **Ten** ನೋಡಿ.

Ténnis ಟೆನಿಸ್ (ನಾ.) ಸುತ್ತಲೂ ಆವರಣಹಾಕಿ ಗಟ್ಟಿಸಿದ ನೆಲದ ಮೇಲೆ ಮಧ್ಯೆ ಅಡ್ಡಲಾಗಿ ಎಳೆದು ಕಟ್ಟಿದ ಬಲೆಯ ಮೇಲ್ಗಡೆ ಹಾಯ್ದುಹೋಗುವಂತೆ ದಾಂಡಿನಿಂದ ಚೆಂಡನ್ನು ಹೊಡೆಯುವ, ಇಬ್ಬರು, ಮೂವರು ಅಥವಾ ನಾಲ್ವರು ಆಡುವ ಒಂದು ಆಟ : ಟೆನಿಸ್ (ಆಟ) ; =Lawn t. (Lawn[2] ನೋಡಿ). **T. arm, elbow** ಟೆನಿಸ್ ಆಟದಲ್ಲಿ ಉಳುಕಿದ ತೋಳು, ಮೊಳಕೈ. **T.-ball** ಟೆನಿಸ್ ಚೆಂಡು. **T.-court** ಟೆನಿಸ್ (ಆಟದ) ಅಂಗಳ.

Ténon ಟೆನನ್ (ನಾ., ಕ್ರಿ. ಸಕ.) ಮತ್ತೊಂದು ಮರದ ತುಂಡಿನಲ್ಲಿ ತೋಡಿರುವ ಕುಳಿಯೊಳಗೆ ಸರಿಯಾಗಿ ಕೂರಿಸಲಾಗುವಂತೆ ಒಂದು ಮರದ ತುಂಡಿನ ತುದಿಯಲ್ಲಿ ಮಾಡಿದ ಚಾಚು : ಕೂರು (ತುದಿ); [T.-saw ಹಿತ್ತಾಳೆಯ ಅಥವಾ ಉಕ್ಕಿನ ಗಟ್ಟಿ ಬೆನ್ನುಳ್ಳ, ನಯಗೆಲಸದ ಸಣ್ಣ ಗರಗಸ : ಕೂರುಗರಗಸ] . (ಕ್ರಿ.) ಕೂರು—ಮಾಡು, ಸೇರಿಸು ; ವೆಜ್ಜಕ್ಕೆ ಕೂರಿಸು. **Ténoner** (ನಾ.) ಕೂರು—ಮಾಡುವವನು, ಯಂತ್ರ.

Ténor ಟೆನರ್ (ನಾ.) (ಮು., ರೂಪ. ; ಒಬ್ಬನ ಜೀವನ, ನಡೆವಳಿ, ಮೊ. ಗಳ) (ಸ್ಥಿರಪಟ್ಟ) ರೀತಿ, ಗತಿ, ಮಾರ್ಗ (*Of* ಉಪ. ದೊಡನೆ) ; (ಮಾತು, ಬರೆವಣಿಗೆ, ಮೊ. ಗಳ) ಧೋರಣೆ, ಧಾಟಿ, ತಾತ್ಪರ್ಯ ; (ನ್ಯಾ. ಶಾ.) ನಿಜವಾದ ಆಶಯ, ಯಥಾಪ್ರತಿ ; (ಸಂ.) ಗಂಡಸಿನ ಸಾಧಾರಣ ಉಚ್ಚತಮ ಧ್ವನಿ; ತಾರಸ್ವರ (ವಿಶೇಷಣ ಪ್ರ.: T. voice); —ದ ಗಾಯಕ, ಸಂಗೀತ, ವಾದ್ಯ (ಮು., ತಾರಸ್ವರದ ಪೀಟೀಲು). T. bell ತಾರಸ್ವರದ—ಘಂಟೆ, ಘಂಟಾನಾದ. **Ténorist** (ನಾ.) ತಾರಸ್ವರದ—ಗಾಯಕ, ವಾದಕ.

Tenótomy ಟೆನಾಟೊಮಿ (ನಾ.) (ವಕ್ರಪಾದಕ್ಕೆ ಚಿಕಿತ್ಸೆಯಾಗಿ) ಸ್ನಾಯುರಜ್ಜು—ಕರ್ತನ, ಛೇದನ.

Tense[1] ಟೆನ್ಸ್ (ನಾ.) (ವ್ಯಾ.) ಕ್ರಿಯೆಯ ಕಾಲವನ್ನು ಸೂಚಿಸಲು ಧಾತು ತಳೆಯುವ ರೂಪ : ಕಾಲ (ರೂಪ) [Aorist, future, imperfect, past, perfect, pluperfect, present, t. (ಆಯಾ ಪದ ನೋಡಿ). Historic, primary, tenses (ಆಯಾ ಪದ ನೋಡಿ). Sequence of tenses (Sequence ನೋಡಿ)] . **Ténseless** (ಗು.)

Tense[2] ಟೆನ್ಸ್ (ಗು.) (ಹುರಿ, ತೆಳು ಚರ್ಮ, ನರ, ಮೊ. ಗಳ ವಿಷಯದಲ್ಲಿ ; ರೂಪಕವಾಗಿ ಮನಸ್ಸು, ಭಾವ, ಮೊ. ಗಳ ವಿಷಯದಲ್ಲಿ) ಬಿಗಿಯಾಗಿ ಎಳೆದ, ಬಿಗಿದುಕೊಂಡ, ಬಿಗುವಿನ, ಉದ್ವೇಗದ, ಬಿಕ್ಕಟ್ಟಿನ. **Ténsely** (ಕ್ರಿ. ವಿ.) ; **Ténseness** (ನಾ.) ; **Ténsible** (ಗು.) ಎಳೆಯಲಾಗುವ, ಹಿಗ್ಗಿಸಲಾಗುವ. **Tensibílity** (ನಾ.) ; **Ténsile** ಟೆನ್ಸೈ(ಸಿ)ಲ್ (ಗು.) ಎಳೆತದ, ಕರ್ಷಕ (T. force ಕರ್ಷಕ ಬಲ) ; ಎಳೆಯಲಾಗುವ, ಹಿಗ್ಗಿಸಲಾಗುವ. **Tensílity** (ನಾ.) ; **Ténsion** ಟೆನ್ಷನ್ (ನಾ., ಕ್ರಿ. ಸಕ.) ಎಳೆತ, ತುಯ್ತ, ಕರ್ಷಣ ; ಬಿಗಿ, ಬಿಗುಪು ; (ಮನಸ್ಸಿನ) ಉದ್ವೇಗ, ತುಡಿತ ; (ರಾಜಕೀಯ, ಸಾಮಾಜಿಕ, ಮೊ. ಗಳ) ಬಿಕ್ಕಟ್ಟು ; (ಯಂತ್ರಶಾಸ್ತ್ರ) (ಸಮತೂಕ ಸ್ಥಿತಿಯಲ್ಲಾಗಲಿ ಚಲನೆಯಲ್ಲಾಗಲಿ ಇರುವ ಒಂದು ವ್ಯೂಹದ ಅಂಗವಾದ ಕಂಬಿ, ಹುರಿ, ಮೊ. ಗಳ ಮೇಲಿನ) ಎಳೆತ, ಕರ್ಷಣಶಕ್ತಿ ; (ಅನಿಲದ ಅಥವಾ ಹಬೆಯ) ಹರಡಿಕೊಳ್ಳುವ ಶಕ್ತಿ, ಪ್ರಸಾರ ಶಕ್ತಿ. (ಕ್ರಿ.) (ಭೂ. ಕೃ. ನಲ್ಲ ಮಾತ್ರ) ಎಳೆದ, ಬಿಗಿದ, ಹಿಗ್ಗಿಸಿದ. **Ténsional** (ಗು.) ; **Ténsity** (ನಾ.) ಬಿಗಿ, ಬಿಗುವು ; ಉದ್ವೇಗ. **Ténsor** (ನಾ.) (ಅಂ. ರ. ಶಾ.) ಕರ್ಷಕ ಸ್ನಾಯು.

Ténsile, Ténsion, etc. **Tense[2]** ನೋಡಿ.

Ténson ಟೆನ್ಸನ್, **Ténzon** ಟೆನ್ಜನ್ (ನಾ.) ಪದ್ಯ ವಾಗ್ವಾದ ; ಇದಕ್ಕಾಗಿ ರಚಿಸಿದ ಪದ್ಯ ಭಾಗ ; ವಾಗ್ವಾದ ಪದ್ಯ.

Ténsor. **Tense[2]** ನೋಡಿ.

Tent[1] ಟೆಂಟ್ (ನಾ., ಕ್ರಿ.) ಗುಡಾರ, ಡೇರೆ (Bell t. ಮಧ್ಯದಲ್ಲಿ ಒಂದೇ ಕಂಬವಿರುವ ಡೇರೆ : ದುಂಡು ಡೇರೆ, ಗಂಟೆ ಡೇರೆ) ; (ಛಾಯಾಚಿತ್ರ) ಹೊರಗೆ ಬಯಲಿನಲ್ಲಿ ಉಪಯೋಗಿಸಲು ಸ್ಥಳದಿಂದ ಸ್ಥಳಕ್ಕೆ ಸಾಗಿಸಲಾಗುವ ಕತ್ತಲೆ ಕೋಣೆ : ಕತ್ತಲೆ ಗುಡಾರ (=Dark t.) ; [**T.-bed** ಡೇರೆಯಂಥ ಮೇಲ್ಕಟ್ಟುಳ್ಳ ಹಾಸಿಗೆ, ಡೇರೆಯಲ್ಲಿ ಉಪಯೋಗಿಸುವ ಹಾಸಿಗೆ ; ಡೇರಾ ಹಾಸಿಗೆ. **T.-fly** ಡೇರೆಯ ಅಡ್ಡ ತೊಲೆಯ ಮೇಲ್ಗಡೆ ಗಾಳಿ ಬೆಳಕು ಬರುವಂತೆ, ಆದರೆ, ಮಳೆ ಬಿಸಿಲುಗಳು ಹೊಡೆಯದಂತೆ ಹರವಿದ ರಟ್ಟು : ಡೇರೆಯ ಗವಾಕ್ಷಪಟ. **T.-pegs** ಡೇರೆಯ ಗೂಟಗಳು. **T.-pegging** ದೌಡು ಕುದುರೆ ಸವಾರಿಮಾಡುತ್ತ, ನೆಲಕ್ಕೆ ಹೊಡೆದಿರುವ ಡೇರಾ ಗೂಟವನ್ನು ಈಟಿ ಮೊನೆಯಿಂದ ಎಬ್ಬಿಸಿಕೊಂಡು ಹೋಗುವ ಒಂದು ಸೈನಿಕ ಆಟ : ಡೇರಾ ಗೂಟದ ಆಟ. **T.-stitch** ಸಮಾನಾಂತರದಲ್ಲಿ ಮೂಲೆಯ ಮೇಲೆ ಹಾಕಿದ ಒಂದು ಬಗೆಯ ಕಸೂತಿ ಹೊಲಿಗೆ : ಡೇರಾ ಹೊಲಿಗೆ] . (ಕ್ರಿ.) ಡೇರೆ ಹಾಕು, ಡೇರೆಯಂತೆ ಕವಿಸು ; ಡೇರೆಯಲ್ಲಿ—ತಂಗು, ಬಿಡಾರಮಾಡು.

Tent[2] ಟೆಂಟ್ (ನಾ., ಕ್ರಿ. ಸಕ.) ಹುಣ್ಣಿನ ಬಾಯಿ, ನಾಳದ ತೆರಪು, ಮೊ. ನ್ನು ತೆರೆದಿಟ್ಟಿರುವುದಕ್ಕಾಗಿ ಗಿಡುಗಿದ (ಬಟ್ಟೆ, ಸ್ಪಂಜು, ಮೊ. ಗಳ) ಚೆಂಡು, ಸುರುಳಿ, ಚೂರು : ಗಿಡಿ, ಗಿಡುಗು, —ಬತ್ತಿ. (ಕ್ರಿ.) ಬತ್ತಿ ಗಿಡುಗು ; —ಗಿಡಿದು ತೆರೆದಿಟ್ಟಿರು.

Tent[3] ಟೆಂಟ್ (ನಾ.) ವಿಶೇಷವಾಗಿ ಸ್ಪೆಯ್ನಿನಿಂದ ಬರುವ, ಮುಖ್ಯವಾಗಿ ಮತ ಸಂಸ್ಕಾರದಲ್ಲಿ ಉಪಯೋಗಿಸುವ, ಒಂದು ಕಡುಗೆಂಪು ದ್ರಾಕ್ಷಾ ಮದ್ಯ : ಟೆಂಟ್ ಮದ್ಯ.

Téntacle ಟೆಂಟಕ್‌ಲ್ (ನಾ.) ಹುಡುಕುವುದು, ಹಿಡಿದುಕೊಳ್ಳುವುದು, ಚಲಿಸುವುದು, ಮೊ. ಕ್ಕಾಗಿ ಪ್ರಾಣಿಗಳಿಗೆ ಇರುವ ಉದ್ದವಾದ ಬಳುಕುವ ಅಂಗ : ಗ್ರಹಣಾಂಗ, ಸ್ಪರ್ಶಾಂಗ ; (ಸ. ವಿ.) ಸೂಕ್ಷ್ಮ (ವೇದಿಯಾದ) —ರೋಮ, ತಂತು. **Téntacled** (ಗು.) ; **Tentácular** (ಗು.) ; **Tentáculate(d)** (ಗು.) ; **Tentáculiform** (ಗು.) ; **Tentaculígerous** (ಗು.) ಗ್ರಹಣಾಂಗವುಳ್ಳ, ಸ್ಪರ್ಶಾಂಗವುಳ್ಳ ; ಸೂಕ್ಷ್ಮತಂತುವುಳ್ಳ.

Téntative ಟೆಂಟಟಿವ್ (ಗು., ನಾ.) ತತ್ಕಾಲಕ್ಕೆ ಒಂದು ಪ್ರಯತ್ನವಾಗಿ ಮಾಡಿದ: ಪ್ರಾಯೋಗಿಕ, ಪರೀಕ್ಷಾರ್ಥಕ (—ಸೂತ್ರ, ತತ್ತ್ವ, ಸಲಹೆ); ಪರೀಕ್ಷಾ ಪ್ರಯತ್ನ. **Téntatively** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ténter[1] ಟೆಂಟರ್ (ನಾ.) (ಮು., ಕಾರಖಾನೆಯಲ್ಲಿ ಯಂತ್ರದ) ಉಸ್ತುವಾರಿಯವನು ; ನೋಡಿಕೊಳ್ಳುವವನು ; ವಿಚಾರಕ.

Ténter[2] ಟೆಂಟರ್ (ನಾ.) ಸುಕ್ಕು ಬೀಳದಿರುವುದಕ್ಕಾಗಿ ಅಥವಾ ಒಣಗಿಸುವುದಕ್ಕಾಗಿ ಬಟ್ಟೆಯನ್ನು ಹರವಿ ಎಳೆದು ಹಿಡಿದುಕೊಳ್ಳುವ ಚೌಕಟ್ಟು (ಸಲಕರಣೆ) : ಹರವುಕಟ್ಟು ; ಬಟ್ಟೆಯನ್ನು ಎಳೆದು ಹಿಡಿದು ಕೊಳ್ಳುವ ಕೊಕ್ಕೆ(ಗಳಲ್ಲೊಂದು) : ಹರವು—ಕೊಕ್ಕೆ, ಹಿಡಿಕೆ (=T.-hook). Be on t.-hooks, (ಪ್ರಾಚೀ. ಪ್ರ.) Be on tenters ಭಯಗೂಡಿದ ಸಂದೇಹದಿಂದ ತಲ್ಲಣಿಸುತ್ತಿರು, ಆತಂಕಗ್ರಸ್ತನಾಗಿರು.

Ténuis ಟೆನ್ಯುಇಸ್ (ನಾ., ಬ. ವ. -ues —ಈಸ್) ಕರ್ಕಶ ಅಲ್ಪಪ್ರಾಣ —ವರ್ಣ, ಅಕ್ಷರ (ಉದಾ., ಕ, ಚ, ಟ, ತ)

Tenúity ಟೆನ್ಯೂಇಟಿ (ನಾ.) ತೆಳುವು, ತನುತೆ, ಸೂಕ್ಷ್ಮತೆ ; (ವಾಯು, ದ್ರವ, ಮೊ. ಗಳ ವಿಷಯದಲ್ಲಿ) ವಿರಳತೆ, ಅಲ್ಪಕ ; (ಶೈಲಿಯ ವಿಷಯದಲ್ಲಿ) ಬಡಕಲು, ನಿಸ್ಸಾರ ಸರಳತೆ, ನಿರಾಡಂಬರತೆ ; (ರೂಪ.) ಬಡತನ, ದಾರಿದ್ರ್ಯ, ಕೊರತೆ. **Ténuous** (ಗು.) (ವಿರ. ಪ್ರ.) ತೆಳುವಾದ, ಸೂಕ್ಷ್ಮವಾದ, ಸಣ್ಣ, ನವುರಾದ ; (ಭೇದ, ಮೊ. ಗಳ ವಿಷಯದಲ್ಲಿ) ಅತಿಸೂಕ್ಷ್ಮವಾದ, ನವುರಾದ.

Ténure ಟೆನ್ಯರ್ (ನಾ.) (ಮು., ಸ್ಥಿರ ಆಸ್ತಿಯ) ಹಕ್ಕು, ಹಿಡುವಳಿ (Allodial t. ಸಂಪೂರ್ಣ ಸ್ವಾಮ್ಯದ —ಆಸ್ತಿ, ಹಿಡುವಳಿ. Feudal t. ಊಳಿಗಮಾನ್ಯದ—. Military t. ಸೈನಿಕ ಸೇವೆಯ ಕರಾರಿನಮೇಲೆ ಆಸ್ತಿಯ ಹಿಡುವಳಿ : ಸೈನಿಕ ಹಿಡುವಳಿ) ; ಅಧಿಕಾರ, ಅನುಭೋಗ (—ಕಾಲ, ಅವಧಿ) (During his t. of office). T.-horn, sword (ಚರಿತ್ರೆ) (ಆಸ್ತಿಯ) ಹಕ್ಕಿನ ಗುರುತಾಗಿ ತೋರಿಸುವ ಕೊಂಬು, ಕತ್ತಿ.

Tenúto (It.) ಟೆನೂಟೊ (ಗು.) (ಸಂ.) ಪೂರ್ತಿ ಕಾಲ ನುಡಿಸಿದ, ವಿಚ್ಛಿತ್ತಿಯಿಲ್ಲದ.

Tépefy. Tepid ನೋಡಿ.

Téphrite ಟೆಫ್ರೈಟ್ (ನಾ.) ಒಂದು ಬಗೆಯ ಜ್ವಾಲಾಮುಖಿ ಶಿಲೆ.

Tépid ಟೆಪಿಡ್ (ಗು.) ಕೊಂಚ ಬೆಚ್ಚಗಾದ, ಉಗುರುಬೆಚ್ಚನೆಯ ; (ರೂಪ.) ಅರೆಮನಸ್ಸಿನ, ಅಷ್ಟು ಉತ್ಸಾಹವಿಲ್ಲದ. **Tepídity** (ನಾ.); **Tépidly** (ಕ್ರಿ. ವಿ.) ; **Tépidness** (ನಾ.) ; **Tepidárium** ಟೆಪಿಡೇ(ಅ)ರಿಯಂ (ನಾ.) ಮಂದೋಷ್ಣ ತಾಪಕ ; (ರೋಮನರ) ಮಂದೋಷ್ಣ ಸ್ನಾನದ ಮನೆ. **Tépefy** ಟೆಪಿಫೈ (ಕ್ರಿ. ಸಕ.) ಉಗುರುಬೆಚ್ಚಗೆ—ಮಾಡು, ಆಗು. **Tepefáction** (ನಾ.)

Ter (L) ಟರ್ (ಕ್ರಿ. ವಿ.) (ಮು., ಸಂ.) ಮೂರುಸಲ, ಮೂರಾವರ್ತಿ.

Téraph ಟೆರಫ್ (ನಾ.; ಬ. ವ. **-phim** —ಫಿಂ ; ಏ. ವ. ದಂತೆ ಬಳಸುವ ಬ. ವ. ದಲ್ಲಿ ಮಾತ್ರ ಪ್ರ.) ಪುರಾತನ ಯೆಹೂದ್ಯರ ಮನೆ ದೇವರುಗಳ ವಿಗ್ರಹ, ಪ್ರತಿಮೆ.

Terato- ಟೆರಟೊ— (ಸ. ಪೂ. ಪ.) ಅದ್ಭುತ—, ವಿರೂಪ—, ವಿಕಾರ —. **-geny** ವಿರೂಪೋತ್ಪತ್ತಿ, ವಿಕಾರಜನನ. **-génic** (ಗು.) ; **-lite** ಸ್ಯಾಕ್ಸೊನಿಯಲ್ಲಿ ದೊರೆಯುವ, ಚಿಕಿತ್ಸಾ ಗುಣವುಳ್ಳದ್ದೆಂದು ಹಿಂದೆ ನಂಬಿದ್ದ ಒಂದು ಜೇಡಿಮಣ್ಣು : ಅದ್ಭುತ ಜೇಡಿ. **-logy** ಅದ್ಭುತ—ವೃತ್ತಾಂತ, ಕಥೆ ; (ಜೀ. ವಿ.) ವಿಕಟ, ವಿಕಾರ,— ಜೀವಿಶಾಸ್ತ್ರ. **-lógical** (ಗು.) ; **-logist** (ನಾ.)

Terce. Tierce ನೋಡಿ.

Tércel ಟರ್ಸ್‌ಲ್ (ನಾ.) ಗಂಡು ಡೇಗೆ.

Tercéntenary ಟರ್ಸೆಂಟಿನರಿ, **Tercenté-** ಟರ್ಸೆಂಟೀ—(ಗು., ನಾ.), **-ténnial** —ಟೆನಿಯಲ್ (ಗು., ನಾ.) ಮುನ್ನೂರು ವರ್ಷಗಳ, ತ್ರಿಶತಕ. (ನಾ.) ಮುನ್ನೂರನೆಯ ವಾರ್ಷಿಕೋತ್ಸವ, ತ್ರಿಶತ ಮಾನೋತ್ಸವ.

Tércet ಟರ್ಸೆಟ್ (ನಾ.) (ಸಂ., ಛಂ. Tiercet ನಹ) =Triplet.

Térebene ಟೆರೆಬೀನ್ (ನಾ.) ಸಲ್ಫ್ಯೂರಿಕ್ ಆಮ್ಲದಿಂದ ಟರ್ಪೆಂಟೈನ್ ತೈಲವನ್ನು ಸಂಸ್ಕರಿಸಿ ತಯಾರಿಸಿದ, ಸೋಂಕು ತಡೆಯಾಗಿ ಉಪಯೋಗಿಸುವ, ಒಂದು ಹೈಡ್ರೊಕಾರ್ಬನ್ : ಟೆರೆಬೀನ್.

Térebinth ಟೆರೆಬಿಂತ್ (ನಾ.) ದೇವದಾರು, ಕರ್ಪೂರ ತೈಲದ ಮರ, ಟರ್ಪೆಂಟೈನ್ ಮರ. Oil of t. ದೇವದಾರು ತೈಲ, ಕರ್ಪೂರ ತೈಲ, ಟರ್ಪೆಂಟೈನ್ ತೈಲ. **Terebínthine** (ಗು.) ಟರ್ಪೆಂಟೈನಿನ, ಟರ್ಪೆಂಟೈನ್ ಮರದ. **Terébic** (ಗು.)

Térebra ಟೆರಿಬ್ರ (ನಾ.; ಬ. ವ. -ae —ಬ್ರೀ) (ಕೆಲವು ಕೀಟಗಳಲ್ಲಿ) ಎಲೆ, ಹಣ್ಣು, ಮೊ. ನ್ನು ಕೊರೆದು ಮೊಟ್ಟೆಯಿಡುವ ನಾಳ : ವೇಧಕ, ರಂಧ್ರಕ, —ನಾಳ. **Térebrate** (ಗು.)

Terédo ಟೆರೀಡೊ (ನಾ.) ಹಡಗು ಕೊರೆಯುವ—ಮೃದ್ವಂಗಿ, ಹುಳು: ಹಡಗು ಕೊರಕ.

Térgal ಟರ್ಗಲ್ (ಗು.) ಬೆನ್ನಿನ.

Tergéminate ಟರ್ಜೆಮಿನೆಟ್ (ಗು.) (ಸ. ವಿ.) (ಎಲೆಯ ವಿಷಯದಲ್ಲಿ) ಬುಡದಲ್ಲಿ ಒಂದು ಜೋಡಿ ಪರ್ಣಕಗಳೂ, ಮೇಲೆ ಎರಡು ಕವಲಾಗಿ ಒಂದೊಂದು ಜೊತೆ ಪರ್ಣಕಗಳೂ ಉಳ್ಳ : ತ್ರಿಯುಗ್ಮ :

Térgiversate ಟರ್‌ಜಿ(ಗಿ)ವರ್ಸೇಟ್ (ಕ್ರಿ. ಅಕ.) (ಪಲಾಯನಕ್ಕಾಗಿ, ಹಿಮ್ಮೆಟ್ಟುವುದಕ್ಕಾಗಿ) ಬೆನ್ನು ತಿರುಗಿಸು, ಪರಾಙ್ಮುಖನಾಗು ; ಸ್ವಧರ್ಮವನ್ನು, ಸ್ವಪಕ್ಷವನ್ನು, —ತೊರೆ, ತ್ಯಜಿಸು ; (ಪಕ್ಷ, ತತ್ತ್ವ, ಮೊ. ನ್ನು) ಬದಲಾಯಿಸು ; ಪರಸ್ಪರ ವಿರುದ್ಧವಾಗಿ ಮಾತಾಡು ; ಹೊರಳಿಕೊ, ನುಣುಚಿಕೊ. **Tergiversátion** (ನಾ.) ; **Tergiversátor** (ನಾ.)

Term ಟರ್ಮ್ (ನಾ.) (ಕೊಂಚ ಮಟ್ಟಿಗೆ ಪ್ರಾಚೀ. ಪ್ರ.) ಎಲ್ಲೆ, ಮೇರೆ, ಮಿತಿ (Set a t. to his encroachments. Awaited the t. of his existence) [**Términless** (ಗು.) (ಕಾವ್ಯ. ಅಲಂ.) ಮಿತಿಯಿಲ್ಲದ, ಕೊನೆಯಿಲ್ಲದ]. ಕಾಲಾವಧಿ, ಅವಧಿ, ಗಡು, ವಾಯಿದೆ (For a t. of five years. His t. of office expired); (ವಿ. ವಿ. ನಿ., ಪಾಠಶಾಲೆ) ವ್ಯಾಸಂಗಾವಧಿ ; (ನ್ಯಾಯಸ್ಥಾನಗಳ) ಅಧಿವೇಶನ ಕಾಲ (ಈಗ Sittings ಪದ ರೂಢಿ) [Eat one's terms (Eat ನೋಡಿ)] ; ನಿಗದಿ, ಕ್ಲುಪ್ತ, ವಾಯಿದೆ, —ದಿನ (ಮು., ಕಂತುಪಾವತಿ, ಮೊ. ರ ತ್ರೈಮಾಸಿಕ ದಿನ); (ನ್ಯಾ. ಶಾ.) (ನಿರ್ದಿಷ್ಟ) ಕಾಲಾವಧಿಯ—ಅನುಭೋಗ, ಅನುಭವ (=T. of *or* for years); (ಗಣಿತ) ಒಂದು ಪ್ರಮಾಣದಲ್ಲಿ ಮೊದಲನೆಯ ಅಥವಾ ಎರಡನೆಯ ಪರಿಮಾಣ; ಭಿನ್ನರಾಶಿಯಲ್ಲಿ ಅಂಶ ಅಥವಾ ಛೇದ ; ಮಿಕ್ಕವುಗಳೊಡನೆ ಸಂಕಲನ ಅಥವಾ ವ್ಯವಕಲನ ಚಿಹ್ನೆಯಿಂದ ಸಂಬಂಧಿಸಿದ ಪರಿಮಾಣ : ಪದ (ಉದಾ., $3ax^2 - b + cz$; ಈ ರಾಶಿಯಲ್ಲಿ ಮೂರು ಪದಗಳಿವೆ) ; (ತರ್ಕ) ವಾಕ್ಯ ಭಾಗ, ಅವಯವ, ಪದ [Major, Middle, Minor, t. (ಆಯಾ ಪದ ನೋಡಿ)] ; ಮಾತು, ಶಬ್ದ, ಪದ [Law, scientific, technical, t. ನ್ಯಾಯಶಾಸ್ತ್ರದ, ವೈಜ್ಞಾನಿಕ, ಪಾರಿಭಾಷಿಕ, ಪದ. In terms of —ರ ವಿಶೇಷ ಭಾಷೆಯಲ್ಲಿ, ಪರಿಭಾಷೆಯಲ್ಲಿ. Contradiction in terms (Contradict ಕೆಳಗೆ ನೋಡಿ). Set terms ನಿರ್ದಿಷ್ಟ—ಪದಗಳು, ಭಾಷೆ. Terms of reference (ವರದಿ ಮಾಡಲು ಒಬ್ಬ ವ್ಯಕ್ತಿಗಾಗಲಿ ಒಂದು ಸಮಿತಿಗಾಗಲಿ ಒಪ್ಪಿಸಿದ) ಪರ್ಯಾಲೋಚನಾಂಶಗಳು, ಆಲೋಚ್ಯಾಂಶಗಳು ; ವಿಚಾರವ್ಯಾಪ್ತಿ]. (ಬ. ವ. ದಲ್ಲಿ) ಭಾಷೆ (In the most flattering terms) ; (ಬ. ವ. ದಲ್ಲಿ) ಷರತ್ತು(ಗಳು), ನಿಯಮ(ಗಳು), ಕರಾರು(ಗಳು) [Cannot accept his terms ಅವನ ಷರತ್ತುಗಳನ್ನು ಒಪ್ಪಲಾಗುವುದಿಲ್ಲ. Do it on your own terms ನಿನ್ನ ಷರತ್ತಿನಮೇಲೆಯೇ ಮಾಡು. Inclusive terms (Include ಕೆಳಗೆ Inclusive ನೋಡಿ). Come to terms (ಹೋರಾಟ, ಪಟ್ಟು, —ಬಿಟ್ಟು) ಒಪ್ಪಂದಕ್ಕೆ ಬರು, ರಾಜಿಮಾಡಿಕೊ (*With* ಉಪ. ದೊಡನೆ) ; Make terms with ಒಪ್ಪಂದ ಮಾಡಿಕೊ. Bring (person)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

to terms ಒಪ್ಪಂದಕ್ಕೆ, ಷರತ್ತಿಗೆ, —ಒಪ್ಪುವಂತೆ ಮಾಡು, ಒಪ್ಪಿಸು]. (ಬ. ವ. ದಲ್ಲಿ) ಬೆಲೆ, ರುಸುಮು (His terms are twenty rupees a lesson). (ಬ. ವ. ದಲ್ಲಿ) (ಇತರರೊಡನೆ ಇರುವ) ಸಂಬಂಧ, ಸ್ಥಾನಮಾನ (Am on good, bad, terms with him ನನಗೂ ಅವನಿಗೂ ಸೌಹಾರ್ದವಿದೆ, ಸೌಹಾರ್ದವಿಲ್ಲ. Are not on speaking terms ಪರಸ್ಪರ ಮಾತುಕತೆ ಇಲ್ಲ). **Térmly** (ಗು., ಕ್ರಿ. ವಿ.) (ವಿರ. ಪ್ರ.) ಕಾಲಾವಧಿಯ, ವಾಯಿದೆಯ,—ಪ್ರಕಾರ(ದ) ; =Terminal(ly). **Térmor** (ನಾ.) (ನ್ಯಾ.ಶಾ.) (ನಿರ್ದಿಷ್ಟ) ಕಾಲಾವಧಿಯ ವರೆಗೆ, ಜೀವಮಾನ ಪರ್ಯಂತ, —ಆಸ್ತಿಯ ಅನುಭೋಗ ವುಳ್ಳವನು : ಅನುಭವದಾರ, ಹಕ್ಕುದಾರ.

Term (ಕ್ರಿ. ಸಕ.) ಹೆಸರಿಡು, ಕರೆ, ಹೇಳು (This he termed sheer robbery)

Térmagant ಟರ್ಮಗಂಟ್ (ನಾ., ಗು.) (ಚರಿತ್ರೆ) (T.-) ನೀತಿ ನಾಟಕಗಳಲ್ಲಿ ಅನೇಕ ವೇಳೆ ಬರುವ, ಒಂದು ಕಾಲ್ಪನಿಕ, ಮಹಮ್ಮದೀಯ ಪುಂಡು ದೇವತೆ ; ಜಗಳಗಂಟಿ, ಚಂಡಿ, ತಾಟಕಿತ್ತಿ. (ಗು.) ಗಲಭೆಯ, ತಂಟೆಮಾರಿತನದ, ಚಂಡಿತನದ. **Térmagantly** (ಕ್ರಿ. ವಿ.); **Térmagancy** (ನಾ.)

Términable, Términal. Terminate ನೋಡಿ.

Términate ಟರ್ಮಿನೇಟ್ (ಕ್ರಿ.), —ನೆಟ್ (ಗು.) ಎಲ್ಲೆ, ಮೇರೆ, ಮಿತಿ—ಹಾಕು, ಅಗಿರು (T. a surface by a line) ; ಕೊನೆ, ತುದಿ, —ಆಗಿರು ; ಕೊನೆ—ಗೊಳ್ಳು, ಗಾಣಿಸು ; ಮುಗಿ(ಸು); (ಪದಗಳ ವಿಷಯದಲ್ಲಿ ; ಪ್ರತ್ಯಯ, ಮೊ. ಗಳಿಂದ) ಅಂತವಾಗು, ಅಂತವಾಗಿರು (*In* ಉಪ. ಯೊಡನೆ). (ಗು.) ಕೊನೆಗೊಳ್ಳುವ, ಪರಿಮಿತ, ಸಾಂತ, ಸಾವಧಿಕ (A t. decimal). **Terminátion** (ನಾ.) (ಕ್ರಿಯಾರ್ಥಗಳಲ್ಲಿ) ; (ಪದದ) ಅಂತ, ಕೊನೆ, ಪ್ರತ್ಯಯ. Put a t. to, Bring to a t. ಕೊನೆಗಾಣಿಸು, ಮುಗಿಸು. **Terminátional** (ಗು.) (ವ್ಯಾ.) ಪ್ರತ್ಯಯ ಹಚ್ಚಿ ಮಾಡಿದ, ಪ್ರತ್ಯಯಾಂತ [T. comparison (ಉದಾ., -er, -est ಪ್ರತ್ಯಯಾಂತ ತರ ತಮಗಳು)]. **Términative** (ಗು.) ಕೊನೆಗೊಳ್ಳುವ, ಮುಗಿಸುವ ; ತೀರ್ಮಾನದ, ಕಟ್ಟಕಡೆಯ, ನಿರ್ಣಾಯಕ. **Términatively** (ಕ್ರಿ. ವಿ.) ; **Términator** (ನಾ.) ಮುಗಿಸುವವನು, ಕೊನೆಮುಟ್ಟಿಸುವಂಥದು, ಅಂತಕಾರಿ ; (ಚಂದ್ರ, ಗ್ರಹ, ಮೊ. ಆಕಾಶಸ್ಥ ಕಾಯದ) ಪ್ರಕಾಶ ಭಾಗಕ್ಕೂ ಅಪ್ರಕಾಶ ಭಾಗಕ್ಕೂ ನಡುವಣ ರೇಖೆ : (ಅ)ಪ್ರಕಾಶದ ಎಲ್ಲೆಗೆರೆ, (ಅ)ಪ್ರಕಾಶಾಂತ ರೇಖೆ. **Términatory** (ಗು.) =Terminal. **Términable** ಟರ್ಮಿನಬ್‌ಲ್ (ಗು.) ಕೊನೆಗಾಣಿಸಬಹುದಾದ ; ಕ್ಲಪ್ತಕಾಲದ ಮೇಲೆ ಕೊನೆಗೊಳ್ಳುವ, ಸಾವಧಿಕ (T. annuity). **Términableness** (ನಾ.) ; **Términal** (ಗು., ನಾ.) ಕೊನೆಯ, ಸರಹದ್ದಿನ, ಎಲ್ಲೆಯ, ಅಂತ್ಯದಲ್ಲಿರುವ, ಅಂತಿಮ (T. station) ; ಕಟ್ಟಕಡೆಯ, ತೀರ್ಮಾನದ ; (ಗಣಿತ) ಅತ್ಯಂತ ಸಂಕ್ಷಿಪ್ತ ರೂಪದ (T. value ಅತ್ಯಂತ ಸಂಕ್ಷಿಪ್ತ ರೂಪ) ; (ಸ. ವಿ.) (ತಾಳು, ಮೊ. ಗಳ) ತುದಿಯ(ಲ್ಲಿಯ), ಅಗ್ರಸ್ಥ ; (ಪ್ರಾ. ವಿ., ಮೊ.) ಸರಣಿಯ ಕೊನೆಯಲ್ಲಿರುವ, ತುದಿಯ(ಲ್ಲಿರುವ) (T. joints ಕೊನೆ, ತುದಿ, —ಕೀಲುಗಳು) ; (ಪ್ರತಿ) ಕಾಲಾವಧಿಯ, (ಪ್ರತಿ) ಪರ್ವದ (T. fees, subscription) ; (T. figure ಗಡಿಯಲ್ಲಿ ನೆಟ್ಟಿರುವ, ಕೆಳಗಡೆ ಚೌಕ ಕಂಬವಾಗಿ ಕೊನೆಗೊಳ್ಳುವ, ಎದೆಮಟ್ಟದ ಮನುಷ್ಯ ವಿಗ್ರಹ : ಗಡಿ ಪ್ರತಿಮೆ). (ನಾ.) ಕೊನೆ, ತುದಿ ; (ವಿದ್ಯುತ್‌ಕೋಶವಾಲೆಯ ಎರಡು ತುದಿಗಳಲ್ಲಿಯ) ಸಂಬಂಧಕ (ತಿರುಪು)); (ಅಮೆ. ನಂ.) ರೈಲುಮಾರ್ಗದ ಕೊನೆ(ದಾಣ). **Términally** (ಕ್ರಿ. ವಿ.) ; **Términism** (ನಾ.) ಪಶ್ಚಾತ್ತಾಪಪಟ್ಟು ದೈವಾನುಗ್ರಹ ಸಂಪಾದಿಸಲು ಪ್ರತಿಯೊಬ್ಬನಿಗೂ ಒಂದು ಗೊತ್ತಾದ ಕಾಲಾವಧಿ ಇದೆಯೆಂಬ ಮತ್ತು ಆ ಅವಧಿ ಮುಗಿದ ಬಳಿಕ ಮೋಕ್ಷಕ್ಕೆ ಅವಕಾಶವಿರುವುದಿಲ್ಲವೆಂಬ ವಾದ: ಅವಧಿ ವಾದ ; =Nominalism (Nominal ನೋಡಿ). **Términist** (ನಾ.) ; **Terminólogy** —ನಾಲೊಜಿ (ನಾ.) ಉಚಿತ ಪದಪ್ರಯೋಗ(ವನ್ನು ಕುರಿತ) ಶಾಸ್ತ್ರ : ಪರಿಭಾಷಾ ಶಾಸ್ತ್ರ ; (ಒಂದು ಕಲೆ, ಶಾಸ್ತ್ರ, ಮೊ. ಗಳ) ಪರಿಭಾಷೆ. **Terminológical** —ನೊಲಾ— (ಗು.) T. inexactitude (ಹಾಸ್ಯ ಪ್ರ.) ಸುಳ್ಳು. **Terminológically** (ಕ್ರಿ. ವಿ.) ; **Términus** (ನಾ. ; ಬ. ವ. -uses, -ni —ನೈ) (ಈಗ ವಿರ. ಪ್ರ.) ಅಂತ್ಯ, ಗುರಿ ; (ಪ್ರಧಾನ ಅಥವಾ ಶಾಖಾ ರೈಲುಮಾರ್ಗದ) ಕೊನೆ (—ದಾಣ, ನಿಲ್ದಾಣ) ; (ರೋ. ಪ್ರಾ.) (T-) ಗಡಿದೇವತೆ. ಚೌಕ ಕಂಬದ ತುದಿಯಲ್ಲಿ ಕಡೆದ ಮನುಷ್ಯಾಕೃತಿ : ಗಡಿ ಪ್ರತಿಮೆ. T. ad quem (L) (ವಾದ, ಕಾಲಾವಧಿ, ಕಾರ್ಯನೀತಿ, ಮೊ. ಗಳ) ಅಂತ್ಯ (ಸ್ಥಾನ), ಕೊನೆ. T. a quo (L) ಪ್ರಾರಂಭ (ಸ್ಥಾನ), ಆದಿ, ಮೊದಲು.

Términer. Oyer ನೋಡಿ.

Términism, Terminólogy, etc., Términus. Terminate ನೋಡಿ.

Térmite ಟರ್ಮೈಟ್ (ನಾ.) ಗೆದ್ದಲು, ಗೆಜ್ಜಲು. **Termitárium** (ನಾ.) ; **Térmitary** (ನಾ.) ಗೆದ್ದಲಗೂಡು ; ಹುತ್ತ.

Térmly, Térmor. Term ನೋಡಿ.

Tern[1] ಟರ್ನ್, **Tarn[2]** ಟಾರ್ನ್ (ನಾ.) ಒಂದು ಸಮುದ್ರ ಪಕ್ಷಿ.

Tern[2] ಟರ್ನ್ (ನಾ., ಗು.) ಮೂರರ ತಂಡ, ಮುಕ್ಕೂಟ, ತ್ರಿತಯ ; ಒಟ್ಟಿಗೆ ಯಾವ ಮೂರನ್ನು ಎತ್ತಿದಾಗ ಭಾರಿ ಬಹುಮಾನ ಬರುವುದೊ ಆ ಮೂರು ಲಾಟರಿ ನಂಬರುಗಳು : ಮುಕ್ಕೂಟ (ಲಾಟರಿ) ನಂಬರು. (ಗು.) =Ternate. **Térnal** (ಗು.) ಮುಕ್ಕೂಟದ, ತ್ರಯಾತ್ಮಕ. **Térnary** (ಗು.) ಮೂರರ—ತಂಡದ, ತಂಡಗಳುಳ್ಳ ; ಮೂರರ, ತ್ರಯಾತ್ಮಕ ; (ಗಣಿತ) ಮೂರು ಚಲಪರಿಮಾಣಗಳುಳ್ಳ. **Térnate** (ಗು.) ಮೂರು ಮೂರರಂತೆ, ಮೂರರ ತಂಡಗಳಲ್ಲಿ, —ಆಳವಟ್ಟ ; ಮುಕ್ಕೂಟದ ; (ಸ. ವಿ. ; ಎಲೆಗಳ ವಿಷಯದಲ್ಲಿ) ತ್ರಿಪರ್ಣಕ, ಮೂರು ಸುತ್ತಿನ. **Térnately** (ಕ್ರಿ. ವಿ.)

Térnal, Térnary, Térnate. Tern[2] ನೋಡಿ.

Terne ಟರ್ನ್ (ನಾ.) (ಹೆಚ್ಚು ಸೀಸ ಬೆರಸಿದ) ಕೀಳು ತೆರದ ತವರದ ತಗಡು, ಕಚ್ಚಾ ತವರದ ತಗಡು (=T.-plate)

Térpsichoréan ಟರ್ಪ್ಸಿಕೊರೀಯನ್ (ಗು.) (ಟರ್ಪ್ಸಿಕೋರೀ ಎಂಬ) ನೃತ್ಯಾಧಿದೇವತೆಯ ; ನೃತ್ಯದ. The T. art ನೃತ್ಯಕಲೆ.

Térra (L) ಟೆರ (ನಾ.) ಭೂಮಿ, ನೆಲ, ಮಣ್ಣು. **T. cariósa** (—ಕ್ಯಾರಿಯೋಸ) =Rotten-stone (Rot ಕೆಳಗೆ Rotten ನೋಡಿ). **Terrae fílius** (ಟೆರೀ ಫಿಲಿಯಸ್) ನಾಡಿಗ; ಕೀಳು ಹುಟ್ಟಿನವನು, ಅಜ್ಞಾತ ಕುಲ ಗೋತ್ರದವನು. **Térra firma** (ನೀರಿಗೆ ವ್ಯತಿರಿಕ್ತವಾಗಿ) (ಗಟ್ಟಿ) ನೆಲ, ಸ್ಥಲ. **T. incógnita** ಅಪರಿಚಿತ, ಅಜ್ಞಾತ, —ಸ್ಥಳ ; (ರೂಪ.) ತಿಳಿಯದ, ಅಜ್ಞಾತ, —ವಿಷಯ. **T. Japónica** (ಎಲೆಯಡಕೆ ಹಾಕಿಕೊಳ್ಳುವುದರಲ್ಲಿ ಉಪಯೋಗಿಸುವ) ಹಳದಿಯ ಬಣ್ಣದ ಕಾಚು (ಜಪಾನಿನ ಒಂದು ಬಗೆಯ ಮಣ್ಣು ಎಂಬ ಭಾವನೆಯಿದ್ದದ್ದರಿಂದ). **T. nera** (—ನೇರ) ಪ್ರಾಚೀನ ಕಲೆಗಾರರು ಉಪಯೋಗಿಸುತ್ತಿದ್ದ ಒಂದು ವರ್ಣದ್ರವ್ಯ: ಕರಿಮಣ್ಣು. **T. verde** (ವರ್ಣದ್ರವ್ಯವಾಗಿ ಉಪಯೋಗಿಸುತ್ತಿದ್ದ) ಹಸುರು ಮಣ್ಣು.

Térrace ಟೆರ(ರ)ಸ್ (ನಾ., ಕ್ರಿ. ಸಕ.) (ವಿಹಾರಕ್ಕಾಗಿ, ಉಪವನಕ್ಕಾಗಿ, ಏರ್ಪಟ್ಟ ಸ್ವಾಭಾವಿಕವಾದ ಅಥವಾ ಕೃತಕವಾದ) ಎತ್ತರದ ಮಟ್ಟ— ನೆಲ, ಪ್ರದೇಶ ; (ಬೆಟ್ಟದ ಇಳಿಜಾರಿನಲ್ಲಿ ಕಡಿದು ಮಾಡಿದ) ಅಂತಸ್ತು (ಗಳಲ್ಲೊಂದು) ; ಮೆಟ್ಟಲು ದಿಬ್ಬ, ಜಗತಿ (ಕಟ್ಟೆ) (T.-gardne ಅಂತಸ್ತುಗಳ ಉಪವನ, ಜಗತಿ ತೋಟ). (ಭೂ. ವಿ.) (ನದಿ, ಸರೋವರ, ಸಮುದ್ರ, ಮೊ. ಗಳ) ಮಟ್ಟವಾದ ಎತ್ತರ—ತೀರ, ದಂಡೆ ; ಜಗಲಿ ದಂಡೆ. ಇಳಿಜಾರಿನ ನೆತ್ತಿಯಲ್ಲಿ ಅಥವಾ ಇಳುಕಲಿನಲ್ಲಿ ಕಟ್ಟಿದ ಮನೆ ಸಾಲು : ದಿಬ್ಬ ಮನೆಸಾಲು, ಸೋಪಾನ ಗೃಹಶ್ರೇಣಿ (ಬೀದಿ, ಮೊ. ಗಳ ಹೆಸರಾಗಿ ನಹ ಪ್ರ.) ; (ಕೆಲವು ಪೂರ್ವ ದೇಶಗಳಲ್ಲಿ) (ಮನೆಯ) ಚಪ್ಪಟೆ ಮಾಳಿಗೆ, ತಾರಸಿ. (ಕ್ರಿ.) ಜಗಲಿ, ಜಗತಿ, —(ಯಾಗಿ) ಮಾಡು ; ತಾರಸಿಮಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Terracótta ಟೆರಕಾಟ (ನಾ., ಗು.) (ಕಟ್ಟಡಗಳ ಅಲಂಕರಣ, ಪ್ರತಿಮಾ ನಿರ್ಮಾಣ, ಮೊ. ಗಳಲ್ಲಿ ಉಪಯೋಗಿಸುವ ಒಂದು ಬಗೆಯ) ಗಟ್ಟಿ, ಗಡುಸು, —ಜೇಡಿ(ಯ); ಗಟ್ಟಿಮಣ್ಣಿ ಬೊಂಬೆ, ಮೃಣ್ಮಯ ಪ್ರತಿಮೆ; ಮಣ್ಣುಗೆಂಪು ಬಣ್ಣ(ದ)

Terraín ಟೆರೇನ್ (ನಾ.) (ಸ್ವಾಭಾವಿಕ ಲಕ್ಷಣಗಳನ್ನು ವಿವರಿಸುವಲ್ಲಿ ಉದಾಹರಣೆಯಾಗಿ ತೆಗೆದುಕೊಂಡ, ಅಥವಾ ಯುದ್ಧತಂತ್ರಕ್ಕಾಗಿ ಪರಿಗಣಿಸಿದ) (ದೃಷ್ಟಿಯ ಮೇರೆಯೊಳಗಿನ) ಭೂಪ್ರದೇಶ; ಕ್ಷೇತ್ರ (ರೂಪ. ಸಹ)

Terramaré ಟೆರಮೇರ್ (ನಾ.) (ಗೊಬ್ಬರವಾಗಿ ಉಪಯೋಗಿಸುವ, ಎಲುಬು, ಫಾಸ್ಫೇಟು, ಮೊ. ವು ಸೇರಿರುವ) ಒಂದು ಬಗೆಯ ಮಣ್ಣುಕುಪ್ಪೆ. ಯೂರೋಪಿನ ಚರಿತ್ರಪೂರ್ವಕಾಲದ (ಚಿಪ್ಪುಗಳ ಮತ್ತು ಮೂಳೆಗಳ) ತಿಪ್ಪೆ.

Terráneous ಟೆರೇನಿಯಸ್ (ಗು.) (ಸ. ವಿ.) ನೆಲದಮೇಲೆ ಬೆಳೆಯುವ.

Térrapin ಟೆರಪಿನ್ (ನಾ.) ಹಲವು ಬಗೆಯ ಸೀನೀರು ಆಮೆ.

Terráqueous ಟೆರೇಕ್ವಿಯಸ್ (ಗು.) ನೆಲ ನೀರು ಎರಡೂ ಉಳ್ಳ (T. globe); ಸ್ಥಲಜಲದ(ಮೇಲೆ ವಾಸಿಸುವ); ಸ್ಥಲಜಲ ಚರ.

Terréne ಟೆರೀನ್ (ಗು.) ನೆಲದ, ಮಣ್ಣಿನ, ಭೂಮಿಯ, ಪಾರ್ಥಿವ.

Térreplein ಟೇ(ಅ)ರ್‌ಪ್ಲೇನ್ (ನಾ.) (ಕೋಟೆ) ಆಳುವೇರಿಯ ಮೇಲೆ ಕೈಪಿಡಿಯ ಹಿಂದೆ ಫಿರಂಗಿಗಳನ್ನು ಇಡಲು ಮಾಡಿರುವ ಸ್ಥಳ: ಫಿರಂಗಿ ಜಗಲಿ; ಹಂಗಾಮಿ ಕೋಟೆಕೊತ್ತಳಗಳಲ್ಲಿ ಫಿರಂಗಿಗಳನ್ನು ಇಡಲು ಮಾಡಿರುವ (ನೆಲಮಟ್ಟದ, ನೆಲಮಟ್ಟಕ್ಕಿಂತ ಮೇಲನ್ನಅಥವಾ ಕೆಳಗಿನ) ಕಟ್ಟೆ: ಫಿರಂಗಿ ಕಟ್ಟೆ.

Terréstrial ಟೆರೆಸ್ಟ್ರಿಯಲ್ (ಗು., ನಾ.) ಭೂಮಿಯ, ಭೂಮಂಡಲದ (ಎದುರು ಪದ: Celestial); [The t. globe (ಇತರ ಆಕಾಶಸ್ಥ ಕಾಯಗಳಿಗೆ ವ್ಯತಿರಿಕ್ತವಾಗಿ) ಭೂಗೋಳ, ಭೂಮಂಡಲ. A t. globe ಭೂಮಿಯ ಪಟವಿರುವ ಗೋಳ: ಗೋಳ ಭೂಪಟ. T. magnetism (Magnet ಕೆಳಗೆ Magnetism ನೋಡಿ)]; (ನೀರಿಗೆ ವ್ಯತಿರಿಕ್ತವಾಗಿ) ನೆಲದ, ಸ್ಥಲದ. ಪ್ರಾಪಂಚಿಕ, ಲೌಕಿಕ, ಐಹಿಕ (T. aims, interests). (ಪ್ರಾ. ವಿ.) ನೆಲದಮೇಲೆ ಜೀವಿಸುವ; ಸ್ಥಲಜೀವಿ; ಭೂ, ಸ್ಥಲ,—ಚರ. (ನಾ.) ಭೂನಿವಾಸಿ, ಮರ್ತ್ಯ, ಮನುಷ್ಯ. **Terréstrially** (ಕ್ರಿ. ವಿ.)

Térret ಟೆರೆ(ರಿ)ಟ್, **Térrit** ಟೆರಿಟ್ (ನಾ.) ಲಗಾಮುಪಟ್ಟಿಗಳನ್ನು ತೂರಿಸುವುದಕ್ಕಾಗಿ ಜೀನಿನ ಮೆತ್ತೆಗೆ ಹಾಕಿರುವ ಉಂಗುರ ಅಥವಾ ಬಳೆ(ಗಳಲ್ಲೊಂದು): ಲಗಾಮು—ಉಂಗುರ, ಬಳೆ.

Térrible ಟೆರಿಬ್‌ಲ್ (ಗು.) ಬಹಳ ದಿಗಿಲು ಹುಟ್ಟಿಸುವ, ಭಯಂಕರ, ಭೀಷಣ, ಭೀಕರ; (ಬಳ. ಮಾ.) ಭಾರಿ, ವಿಪರೀತ, ಅಸಾಧ್ಯ (A t. bore); ಬಹಳ ತ್ರಾಸದ, ದುಸ್ಸಾಧ್ಯ (A t. work). Enfant t. (F) (ಆ ಪದ ನೋಡಿ). **Térribleness** (ನಾ.); **Térribly** (ಕ್ರಿ. ವಿ.) (ಮು., ಅಸಂ.) ವಿಪರೀತವಾಗಿ, ಬಹಳವಾಗಿ.

Terrícolous ಟೆರಿಕೊಲಸ್ (ಗು.) (ಪ್ರಾ. ವಿ.) ನೆಲದಮೇಲೆ, ನೆಲದಲ್ಲಿ, —ವಾಸಿಸುವ, ಜೀವಿಸುವ: ಸ್ಥಲಜೀವಿ; ಮಣ್ಣು (ಎರೆ) ಹುಳುವಿನ (ವರ್ಗದ). **Terrícolae** (ನಾ.) ಎರೆಹುಳುವಿನ ವರ್ಗ.

Térrier[1] ಟೆರಿಯರ್ (ನಾ.) ಚುರುಕೂ ಶ್ರಮಸಹಿಷ್ಣುವೂ ಆದ, ನೆಲ ಬಗಿಯುವ ಪ್ರವೃತ್ತಿಯ, ಹಲವು ಬಗೆಯ ನಾಯಿ: ಟೆರಿಯರ್ ನಾಯಿ ಜಾತಿ (Black-&-tan, Bull, Fox, t. ಮೋಟುಗೂದಲ ಜಾತಿಯ ಟೆರಿಯರ್. Irish, Scotch, Skye, Yorkshire, t. ಬಿರುಗೂದಲ ಜಾತಿಯ ಟೆರಿಯರ್. Maltese, toy, t. ಮುದ್ದಿಗಾಗಿ ಸಾಕುವ ಸಣ್ಣ ಜಾತಿಯ ಟೆರಿಯರ್). (ಬಳ. ಮಾ.) ದೇಶರಕ್ಷಣ, ಪ್ರಾದೇಶಿಕ —ಸೈನಿಕ (= Territorial, ನಾ.)

Térrier[2] ಟೆರಿಯರ್ (ನಾ.) ಖಾಸಗಿ ವ್ಯಕ್ತಿಗಳ ಅಥವಾ ಸಂಸ್ಥೆಗಳ ಜಮೀನುಗಳ ನಿವೇಶನ, ವಿಸ್ತಾರ, ಚಕ್ಕುಬಂದಿ, ಮೊ. ವಿವರಗಳನ್ನು ಬರೆದಿಟ್ಟಿರುವ ಪುಸ್ತಕ: ಖಾತೆ ಪುಸ್ತಕ; ಖಾಸಗಿ ಜಮೀನು ದಾಖಲೆ. (ಚರಿತ್ರೆ) ಶ್ರೀಮಂತನ ಕೈಕೆಳಗಿನ ಹಿಡುವಳಿಗಳ, ಹಿಡುವಳಿದಾರರ ಮತ್ತು ಕಂದಾಯಗಳ, ದಾಖಲೆ ಪುಸ್ತಕ: ಒಕ್ಕಲು, ಹಿಡುವಳಿ,—ದಾಖಲೆ.

Terrífic ಟೆರಿಫಿಕ್ (ಗು.) ಭಯಂಕರ, ಭೀಕರ, ಉಗ್ರ; (ಬಳ. ಮಾ.) ವಿಪರೀತ, ಅಸಾಧ್ಯ. **Terrífically** (ಕ್ರಿ. ವಿ.); **Térrify** (ಕ್ರಿ. ಸಕ.) ದಿಗಿಲು, ಭಯ, —ಹುಟ್ಟಿಸು; ಗಾಬರಿಪಡಿಸು, ಹೆದರಿಸು.

Terrígenous ಟೆರಿಜಿನಸ್ (ಗು.) ಭೂಮಿಯಲ್ಲಿ, ನೆಲದಲ್ಲಿ, —ಉಂಟಾದ, ಹುಟ್ಟಿದ, ದೊರೆಯುವ (T. deposits ಪಕ್ಕದ ನೆಲದಿಂದ ಶೇಖರವಾದ ಸಮುದ್ರ ನಿಕ್ಷೇಪಗಳು: ಭೂ ನಿಕ್ಷೇಪಗಳು). T. metals ಕೆಲವು ಮಣ್ಣುಗಳಲ್ಲಿ ಕ್ಷಾರ ಸಂಯುಕ್ತ ರೂಪದಲ್ಲಿರುವ ಲೋಹಗಳು: ಮಣ್ಣು ಲೋಹಗಳು, ಮೃಲ್ಲೋಹಗಳು (ಉದಾ., ಅಲ್ಯೂಮಿನಿಯಂ)

Terríne (L) ಟೆರೀನ್ (ನಾ.) ಭಕ್ಷ್ಯ ಅಥವಾ ತಿಂಡಿ ತುಂಬಿ ಮಾರುವ ಕುಡಿಕೆ, ಮಡಕೆ: ತಿಂಡಿ ಕುಡಿಕೆ.

Térritory ಟೆರಿಟೊರಿ (ನಾ.) (ರಾಜನ ಅಥವಾ ರಾಷ್ಟ್ರದ ಆಡಳಿತಕ್ಕೆ ಸೇರಿರುವ, ಗೊತ್ತಾದ ಎಲ್ಲೆಗಳಿರುವ) ಸೀಮೆ, (ಪ್ರ)ದೇಶ; (ವಿಸ್ತಾರವಾದ) ಭೂಪ್ರದೇಶ, ನಾಡು; (ಅಮೆ. ಸಂ.) (T-) ಸಂಸ್ಥಾನದ ಹಕ್ಕುಗಳನ್ನು ಇನ್ನೂ ಪೂರ್ಣ ಪಡೆದಿಲ್ಲದ, ಆದರೆ ವ್ಯವಸ್ಥಿತವಾದ, ದೇಶ ಭಾಗ: ಅಧೀನ ಪ್ರಾಂತ. **Territórial** ಟೆರಿಟೋ(ಅ)ರಿಯಲ್ (ಗು., ನಾ.) ನಾಡಿನ, ಪ್ರದೇಶದ, ಭೂಮಿಯ, ಭೂಸ್ವತ್ತಿನ (T. possessions, acquisitions); ಪ್ರಾದೇಶಿಕ, ಸ್ಥಳಿಕ (The gods were local & t. divinities); (ಅಮೆ. ಸಂ.) (ಅಧೀನ) ಪ್ರಾಂತದ, ಪ್ರಾಂತಿಕ, ಪ್ರಾಂತೀಯ; [T. system (ಕ್ರೈಸ್ತ ಮತ) ಲೌಕಿಕಾಡಳಿತಕ್ಕೆ ಪರಮಾಧಿಕಾರ ಕೊಡುವ ಮತಾಡಳಿತ ಪದ್ಧತಿ: ಲೌಕಿಕಾಡಳಿತ (ಪಾರಮ್ಯ) ಪದ್ಧತಿ (= **Territórialism**). T. army ದೇಶರಕ್ಷಣೆಗೆ ಪ್ರಾಂತವಾರಾಗಿ ವ್ಯವಸ್ಥೆಮಾಡಿದ ಸೈನ್ಯ: ಪ್ರಾದೇಶಿಕ ಸೈನ್ಯ]. (ನಾ.) ಪ್ರಾದೇಶಿಕ ಸೈನಿಕ. **Territórialize** (ಕ್ರಿ. ಸಕ.) ಪ್ರಾದೇಶಿಕ, ಪ್ರಾಂತಿಕ, —ಮಾಡು; ಪ್ರದೇಶವಾಗಿ, ಪ್ರಾಂತವಾಗಿ, —ಸೇರಿಸು, ಮಾಡು. ಪ್ರಾಂತದ ಸ್ಥಿತಿಗೆ ಇಳಿಸು. **Territórially** (ಕ್ರಿ. ವಿ.)

Térror ಟೆರರ್ (ನಾ.) ವಿಪರೀತ ದಿಗಿಲು, ಭಯ, ಭೀತಿ, ಗಾಬರಿ (T.-stricken, -struck ದಿಗಿಲುಗೊಂಡ, ಭಯಾರ್ತ); ಭಯಂಕರ —ವ್ಯಕ್ತಿ, ವಸ್ತು: ಭಯಕಾರಿ [A t. to evildoers. Here comes this t. again (ಬಳ. ಮಾ.) ತುಂಟ ಮಗು ಮತ್ತೆ ಬಂತು. Reign of T., the T., Red T., White T. (ಮು., ಫ್ರಾನ್ಸಿನ) ಕ್ರಾಂತಿ ಪ್ರಭುತ್ವದ, ರಕ್ತಪಾತದ, —ಕಾಲ; ಭೀಕರ ಕಾಲ]. **Térrorist** (ನಾ.) ಆಳುವುದರಲ್ಲಾಗಲಿ, ಸರ್ಕಾರವನ್ನೂ ಸಮಾಜವನ್ನೂ ಬಲಾತ್ಕರಿಸುವುದರಲ್ಲಾಗಲಿ, ಭಯೋತ್ಪಾದಕ ವಿಧಾನಗಳನ್ನು ಅನುಸರಿಸುವವನು ಅಥವಾ ಅನುಮೋದಿಸುವವನು: ಭಯ ವಾದಿ, ಭಯೋತ್ಪಾದಕ; (ಮು., ಫ್ರಾನ್ಸಿನ ಅಥವಾ ರಷ್ಯದ) ಕ್ರಾಂತಿಕಾರಿ. **Terrorístic** (ಗು.); **Térrorism** (ನಾ.); **Térrorize** (ಕ್ರಿ. ಸಕ.) ದಿಗಿಲುಗೊಳಿಸು, ಭಯ ಹುಟ್ಟಿಸು; ಭಯೋತ್ಪಾದನೆಯಿಂದ ಅಧಿಕಾರ ನಡಸು. **Terrorizátion** (ನಾ.)

Térry ಟೆರಿ (ನಾ.) (ಮೇಲ್ಮೈ ಜುಂಗಿನ ಕುಣಿಕೆಗಳನ್ನು ಕತ್ತರಿಸಿಲ್ಲದ) ಕುಣಿಕೆ ಜುಂಗುಬಟ್ಟೆ.

Terse ಟರ್ಸ್ (ಗು.) (ಭಾಷಣ, ಶೈಲಿ, ಲೇಖನ, ಮೊ. ರ ವಿಷಯದಲ್ಲಿ) ಅಡಕವಾದ, ಬಿಗಿಯಾದ, ಹಿತಮಿತ, ಅಚ್ಚುಕಟ್ಟಿನ. **Tersely** (ಕ್ರಿ. ವಿ.); **Térseness** (ನಾ.)

Tértian ಟರ್ಷನ್ (ಗು., ನಾ.) ದಿನ ಬಿಟ್ಟು ದಿನ ಬರುವ, ಮೂರು ದಿನಕ್ಕೊಮ್ಮೆ ಬರುವ (—ಜ್ವರ, ರೋಗ) (T. ague ಮೂರರ ಚಳಿ)

Tértiary ಟರ್ಷರಿ (ಗು., ನಾ.) ಮೂರನೆಯ, ತೃತೀಯ (—ವರ್ಗದ, ದರ್ಜೆಯ, ಶ್ರೇಣಿಯ). (ನಾ.) (ಭೂ. ವಿ.) (T-) ಮೂರನೆಯ ಭೂಯುಗ; (ಪಕ್ಷಿಶಾಸ್ತ್ರ) ಮೂರನೆಯ ಪದರದ ಹಾರುಗರಿ [= **Tértial** (ಗು., ನಾ.)]. (T-) ಸಂನ್ಯಾಸಿ ಪಂಥದ ಮೂರನೆಯ ವರ್ಗದವನು.

Tértio (L) ಟರ್ಷಿಯೋ (ಕ್ರಿ. ವಿ.). **Primo** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tértium quid (L) ಟರ್ಷಿಯಂ ಕ್ವಿಡ್ (ನಾ.) ಮೂರನೆಯದು ಯಾವುದೋ ಒಂದು, (ಯಾವುದೋ) ಮೂರನೆಯದೊಂದು (ಮು., ಮನಸ್ಸು, ದ್ರವ್ಯ—ಇವೆರಡಕ್ಕೆ ಮಧ್ಯದ ಮೂರನೆಯದು; ಎರಡು ವಿರುದ್ಧಗಳಿಗೆ ಮಧ್ಯದ ಮೂರನೆಯದು)

Tértius ಟರ್ಷಸ್ (ಗು.) (ಪಾಠಶಾಲೆಯಲ್ಲಿ) ಆ ಹೆಸರಿನ(ವರಲ್ಲಿ) ಮೂರನೆಯ(ವನಾದ) (Jones T. ಮೂರನೆಯ ಜೋನ್ಸ್). **T. gaudens** (L) ಇಬ್ಬರ ಜಗಳದಿಂದ ಲಾಭ ನಿರೀಕ್ಷಣೆಯಲ್ಲಿರುವ, ಲಾಭಪಡೆಯುವ, —ಮೂರನೆಯವನು; ನಲಿಯುವ, ಹರ್ಷಿಸುವ, ಮೂರನೆಯವನು.

Terzétto (It.) ಟರ್ಟ್ಸೆಟ್ಟೊ (ನಾ.) (ಸಂ.) ಮೂವರು ಗಾಯಕರಿಗೆ ರಚಿಸಿದ ಕೃತಿ.

Téssellated ಟೆಸೆಲೇಟೆಡ್ (ಗು.) ಆಯದ ಆಕಾರದ ಬಣ್ಣದ ಬಿಲ್ಲೆಗಳನ್ನು ಖಚಿಸಿದ; ಬಣ್ಣದ ಪಪ್ಪಳಿಯ, ಶಬಲಖಚಿತ (T. pavement); (ಸ. ವಿ., ಪ್ರಾ. ವಿ.) ಚೌಕುಳಿಯ, ಪಪ್ಪಳಿಯ, ಮನೆ ಮನೆಯಾದ. **Téssellar** (ಗು.); **Tessellátion** (ನಾ.)

Téssera ಟೆಸೆರ (ನಾ.; ಬ. ವ. -ae —ರೀ) ಶಬಲಖಚಿತಾಲಂಕಾರದಲ್ಲಿ ಉಪಯೋಗಿಸುವ, ಸರಿಸುಮಾರು ಚೌಕನೆಯ ಬಣ್ಣದ ಗಾಜಿನ ಅಥವಾ ಅಮೃತಶಿಲೆಯ ತುಂಡು: ಪಪ್ಪಳಿ ತುಂಡು; (ರೋ. ಪ್ರಾ.) (ಸ್ಮಾರಕವಾಗಿ, ಪ್ರವೇಶ ಚೀಟಿ, ಮೊ. ಗ ಉಪಯೋಗಿಸುತ್ತಿದ್ದ) ಎಲುಬು, ದಂತ, ಮೊ. ಗಳ ಚೌಕನೆಯ ಫಲಕ, ತುಂಡು. **Tésseral** (ಗು.) ಶಬಲಖಚಿತ; ಪಪ್ಪಳಿ ತುಂಡುಗಳಿಂದ ಮಾಡಿದ.

Tessitúra (It.) ಟೆಸಿಟೂರ (ನಾ.) (ಸಂ.) ರಾಗದ ವಿಸ್ತಾರ, ವ್ಯಾಪ್ತಿ.

Test¹ ಟೆಸ್ಟ್ (ನಾ.) (ಒಬ್ಬನ ಅಥವಾ ಒಂದು ಪದಾರ್ಥದ ಗುಣಗಳ) ಶೋಧನೆ, ಸೂಕ್ಷ್ಮಪರೀಕ್ಷೆ, (ಪರೀಕ್ಷಾ) ಪ್ರಮಾಣ, ಒರೆ; [Has stood the successive tests of poverty and riches ಅವನು ಬಡತನ ಸಿರಿತನಗಳ ಪರೀಕ್ಷೆಗಳಲ್ಲಿ ತೇರಿಬಂದಿದ್ದಾನೆ. Put to the t. ಪರೀಕ್ಷೆಮಾಡಿ ನೋಡು, ಒರೆಹಚ್ಚಿ ನೋಡು. A t. case (ನ್ಯಾ. ಶಾ.) ಒಳಕೊಂಡಿರುವ ತತ್ತ್ವವನ್ನು ನಿದರ್ಶಿಸುವ, ಮತ್ತು ಆ ಮೊಕದ್ದಮೆಯ ತೀರ್ಮಾನ ಅಂತಹ ಇತರ ಮೊಕದ್ದಮೆಗಳ ತೀರ್ಪಿಗೆ ಮಾರ್ಗದರ್ಶಕವಾಗುವ ಮೊಕದ್ದಮೆ: ತತ್ತ್ವನಿರ್ಣಾಯಕ, ನಿರ್ಧಾರಕ—ಮೊಕದ್ದಮೆ, ವ್ಯವಹಾರ]. ಪರೀಕ್ಷಾ—ಸಾಧನ, ಪ್ರಮಾಣ; ಒರೆಗಲ್ಲು (Success is not a fair t. ಜಯ ಸರಿಯಾದ ಪರೀಕ್ಷಾ ಪ್ರಮಾಣವಲ್ಲ). (ರ. ವಿ.) ಒಂದು ಸಂಯುಕ್ತದಲ್ಲಿ ಸೇರಿರುವ ವಸ್ತುವನ್ನು ಪ್ರತಿಕ್ರಿಯೆಯಿಂದ ಗೊತ್ತುಹಚ್ಚಲು ಉಪಯೋಗಿಸುವ ವಸ್ತು: ಪರೀಕ್ಷಕ, ಶೋಧಕ (Galls are a t. of *or* for iron); (ಶಾಖ ಪ್ರತಿಫಲನ ಕುಲುಮೆಯಲ್ಲಿ ಸೀಸದಿಂದ ಬೆಳ್ಳಿಯನ್ನು ಬೇರ್ಪಡಿಸಲು ಉಪಯೋಗಿಸುವ) (ಚಲ) ಮೂಸೆ. **T. Act** ಇಂಗ್ಲೆಂಡಿನಲ್ಲಿ ಅಧಿಕಾರ ವಹಿಸಿಕೊಳ್ಳುವವರೆಲ್ಲರೂ ರಾಜನ ಸರ್ವ ಪಾರಮ್ಯವನ್ನು ಒಪ್ಪಿಕೊಂಡು, ಸತ್ತ್ವಪರಿವರ್ತನವಾದದಲ್ಲಿ (Transubstantiation) ಶಪಥಪೂರ್ವಕವಾಗಿ ನಂಬಿಕೆಯನ್ನು ತ್ಯಜಿಸಬೇಕೆಂದು ವಿಧಿಸಿ, ೧೬೭೩ರಲ್ಲಿ ಜಾರಿಗೆ ತಂದ (ಮತ್ತು ೧೮೨೮ರಲ್ಲಿ ರದ್ದುಪಡಿಸಿದ) ಒಂದು ಕಾನೂನು: (ಸ್ವಾಮಿ)ನಿಷ್ಠಾ ಪರೀಕ್ಷೆಯ ಕಾನೂನು. **T.-match** ಕ್ರಿಕೆಟ್, ಮೊ. ಪಂದ್ಯ ಪ್ರವಾಸಗಳಲ್ಲಿ ಆಡುವ, ಒಟ್ಟು ಫಲಿತಾಂಶದ ನಿರ್ಣಯದಲ್ಲಿ ಆ ಪಂದ್ಯದ ಫಲಿತಾಂಶ ಗಣನೆಯಾಗುವ, ಪಂದ್ಯ: ಪರೀಕ್ಷಾ ಪಂದ್ಯ. **T.-glass, -paper, -tube** (ರಾಸಾಯನಿಕ ಪರೀಕ್ಷಾ ಪ್ರಯೋಗಗಳಲ್ಲಿ ಉಪಯೋಗಿಸುವಂಥವು): ಪರೀಕ್ಷಾ—ಗಾಜು ಲೋಟ, ಕಾಗದ, ಪ್ರನಾಳ.

Test (ಕ್ರಿ. ಸಕ.) ಪರೀಕ್ಷೆ ಮಾಡು, ಪರೀಕ್ಷಿಸಿ ನೋಡು, ಒರೆಹಚ್ಚಿ ನೋಡು; (ಸಹನಶಕ್ತಿ, ಮೊ. ನ್ನು) ಕಟುವಾಗಿ ಪರೀಕ್ಷಿಸು, (—ಮೊ. ಕ್ಕೆ) ಶ್ರಮಕೊಡು; (ಲೋಹವನ್ನು) ಪುಟಕ್ಕೆ ಹಾಕು, ಶುದ್ಧಮಾಡು, ಶೋಧಿಸು; (ರ. ವಿ.) (ಪರೀಕ್ಷಕ ದ್ರವ್ಯದಿಂದ) ಪರೀಕ್ಷಿಸು. **Téstable** (ಗು.); **Téster¹** (ನಾ.) ಪರೀಕ್ಷಕ.

Test² ಟೆಸ್ಟ್ (ನಾ.) (ಪ್ರಾ. ವಿ.) ಕೆಲವು ಪ್ರಾಣಿಗಳ ಗಟ್ಟಿ ಹೊದಿಕೆ: ಚಿಪ್ಪು. **Testáceous** ಟೆಸ್ಟೇಷಸ್ (ಗು.) ಚಿಪ್ಪಿನ; ಚಿಪ್ಪುಮೀನಿನ; (ಸಂಧಿ ಬಂಧನವಿಲ್ಲದೆ) ಇಡಿಯ ಚಿಪ್ಪುಳ್ಳ; ವಲ್ಕವಂತ. (ಸ. ವಿ., ಪ್ರಾ. ವಿ.) ಕೆಂಪಿಟ್ಟಿಗೆ ಬಣ್ಣದ. **Testácean** (ಗು., ನಾ.) ಚಿಪ್ಪುಳ್ಳ (ಪ್ರಾಣಿ), ವಲ್ಕವಂತ (ಪ್ರಾಣಿ). **Testaceólogy** (ನಾ.) ವಲ್ಕ(ವಂತ) ಪ್ರಾಣಿಶಾಸ್ತ್ರ.

Téstacy. **Testate** ನೋಡಿ.

Téstament ಟೆಸ್ಟಮೆಂಟ್ (ನಾ.) ಒಬ್ಬನು ತನ್ನ ಮರಣಾನಂತರ ತನ್ನ ಆಸ್ತಿಗಳ ಹಂಚಿಕೆ ಹೇಗಾಗಬೇಕೆಂಬುದನ್ನು ಕುರಿತು ಮಾಡಿದ ಹೇಳಿಕೆ, ಪತ್ರ: ಅಂತಿಮ ಇಷ್ಟಪತ್ರ, ಮರಣಶಾಸನ, ಉಯಿಲು [Military t. (Military ನೋಡಿ)]; (ಬೈಬಲ್) ಒಪ್ಪಂದ, ಒಡಂಬಡಿಕೆ, ವಿಧಾಯಕ ವಾಕ್ಯ. Old, New, T. ಬೈಬಲ್ಲಿನ ಹಳೆಯ, ಹೊಸ, ಒಡಂಬಡಿಕೆ. **Testaméntary** (ಗು.); **Testaméntarily** (ಕ್ರಿ. ವಿ.)

Testámur ಟೆಸ್ಟೇಮರ್ (ನಾ.) (ವಿ. ವಿ. ನಿ.) ಪರೀಕ್ಷೆ ತೇರ್ಗಡೆ ಪತ್ರ, ಪ್ರಶಸ್ತಿಪತ್ರ.

Téstate ಟೆಸ್ಟೆ(ೕ)ಟ್ (ಗು., ನಾ.) ಅಂತಿಮ ಇಷ್ಟಪತ್ರ ಬರೆದಿರುವ(ವನು), —ಬರೆದು ಸತ್ತ(ವನು). **Testátor** (ನಾ.); **Testátrix** (ನಾ., ಸ್ತ್ರೀ.); **Téstacy** ಟೆಸ್ಟಸಿ (ನಾ.) —ಬರೆದಿಟ್ಟಿರುವುದು.

Téster¹. **Test¹** ನೋಡಿ.

Téster² ಟೆಸ್ಟರ್ (ನಾ.) (ಮು., ಮಂಚದ) ಮೇಲ್ಕಟ್ಟು, ವಿತಾನ.

Téster³ ಟೆಸ್ಟರ್ (ನಾ.) ೮ನೆಯ ಹೆನ್ರಿಯ ಕಾಲದ ಷಿಲಿಂಗು ನಾಣ್ಯ (ಇದರ ಬೆಲೆ ಕ್ರಮೇಣ ೯ ಪೆನಿಗೂ ತರುವಾಯ ೬ ಪೆನಿಗೂ ಇಳಿಯಿತು); (ಪ್ರಾಚೀ. ಪ್ರ., ಹಾಸ್ಯ ಪ್ರ.) ಆರು ಪೆನಿ.

Tésticle ಟೆಸ್ಟಿಕ್‌ಲ್ (ನಾ.) ತರುಡು(ಬೀಜ), ವೃಷಣ. **Testícular** —ಕ್ಯುಲರ್ (ಗು.), **Testículate** —ಲೆಟ್ (ಗು.) ವೃಷಣವುಳ್ಳ, ವೃಷಣಾಕಾರದ; (ಸ. ವಿ.) ತರುಡುಬೀಜಗಳಂಥ ಜೋಡಿ ಅಂಗವುಳ್ಳ.

Téstify ಟೆಸ್ಟಿಫೈ (ಕ್ರಿ.) (ವ್ಯಕ್ತಿ, ವಸ್ತು, ಮೊ. ಗಳ ವಿಷಯದಲ್ಲಿ) ಸಾಕ್ಷಿ, ಪ್ರಮಾಣ, —ಆಗಿರು [*To* fact; *against* person; (ಪ್ರಾಚೀ. ಪ್ರ.) *of* or *concerning* matter]; (ನ್ಯಾ. ಶಾ.) ಸಾಕ್ಷ್ಯ—ಕೊಡು, ಹೇಳು; ಒತ್ತಿ, ದೃಢವಾಗಿ—ಹೇಳು, ತಿಳಿಸು (T. one's regret. T. *that*, *how*, etc.). (ವಸ್ತುಗಳ ವಿಷಯದಲ್ಲಿ) ಸಾಕ್ಷ್ಯ, ರುಜುವಾತು, —ಆಗಿರು; ತೋರಿಸು.

Téstimony ಟೆಸ್ಟಿಮನಿ (ನಾ.) ಸಾಕ್ಷ್ಯ, ಪ್ರಮಾಣ, ರುಜುವಾತು [Called him in t. ಸಾಕ್ಷಿಯಾಗಿ ಅವನನ್ನು ಕರೆದರು. Produce t. (*to*, *of*)]. (ನ್ಯಾ. ಶಾ.) ಪ್ರಮಾಣ ಮಾಡಿಕೊಟ್ಟ ವಾಙ್ಮೂಲ, ಹೇಳಿಕೆ; ಕೈಫಿಯತ್ತು, ಪ್ರಮಾಣ, ದೃಢವಚನ, ಹೇಳಿಕೆ (We must rely on the t. of history, of historians). (ಬೈಬಲ್: ಕ್ರೈಸ್ತರ) ದಶ—ಶಾಸನಗಳು, ವಿಧಿಗಳು. (ಏ. ವ. ಅಥವಾ ಬ. ವ. ದಲ್ಲಿ) ಬೈಬಲ್ಲು. **Testimónial** —ಮೋನಿಯಲ್ (ನಾ.) (ಒಬ್ಬನ ಶೀಲ, ನಡತೆ, ಯೋಗ್ಯತೆ—ಇವನ್ನು ಕುರಿತು ಕೊಟ್ಟ) ಯೋಗ್ಯತಾ ಪತ್ರ, ಪ್ರಮಾಣಪತ್ರ; (ಗೌರವಾರ್ಥವಾಗಿ, ಸಾರ್ವಜನಿಕ ಸೇವೆಗಾಗಿ, ಕೃತಜ್ಞತಾ ಸೂಚಕವಾಗಿ, ಒಬ್ಬನಿಗೆ ಬಹಿರಂಗವಾಗಿ ಕೊಟ್ಟ) ಬಹುಮಾನ, ಪಾರಿತೋಷಿಕ, ಮೆಚ್ಚು. **Testimónialize** (ಕ್ರಿ. ಸಕ.) ಯೋಗ್ಯತಾ ಪತ್ರ, ಮೆಚ್ಚು,—ಕೊಡು.

Téstis ಟೆಸ್ಟಿಸ್ (ನಾ.; ಬ. ವ. -tes —ಟೀಸ್) = Testicle.

Testúdinal, Testudinárius, Testúdinate, etc. **Testudo** ನೋಡಿ.

Testúdo ಟೆಸ್ಟ್ಯೂಡೊ (ನಾ.) (ರೋ. ಪ್ರಾ.) ಸೈನಿಕರು ಒತ್ತಾಗಿ ನಿಂತು ಗುರಾಣಿಗಳನ್ನು ತಮ್ಮ ತಲೆಯಮೇಲೆ ಹೆಂಚು ಜೋಡಿಸಿದಂತೆ ಚಪ್ಪಟೆಯಾಗಿ ಹಿಡಿದು ರಚಿಸಿದ ಮರೆ: ಗುರಾಣಿ—ಕಾಪು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮರೆ ; ಗಣಿಗಳಲ್ಲಿ ನೆಲ ಕುಸಿಯುವಂತಿರುವಾಗ ರಕ್ಷಣೆಗಾಗಿ ಉಪಯೋಗಿಸುವ ಇದೇ ತೆರನ ಮರೆ. ಆಮೆ(ಯ ಜಾತಿ). **Testúdinal** (ಗು.) ಆಮೆಯ(ಂಥ) ; ಆಮೆಚಿಪ್ಪಿನ(ಂಥ). **Testudinárious** (ಗು.) ಆಮೆಯ ಸ್ವಭಾವದ ; ಆಮೆಚಿಪ್ಪಿನಂಥ—ಗುರುತುಳ್ಳ, ಬಣ್ಣಗಳುಳ್ಳ (ಕೆಂಪು, ಹಳದಿ ಮತ್ತು ಕಪ್ಪು ಬಣ್ಣಗಳುಳ್ಳ). **Testúdinate** (ಗು.) ಆಮೆಚಿಪ್ಪಿನಂತೆ—ಬಾಗಿರುವ, ಕಮಾನಾಗಿರುವ. **Testudíneous** (ಗು.) ಆಮೆಚಿಪ್ಪಿನಂಥ.

Tésty ಟೆಸ್ಟಿ (ಗು.) ಬೇಗ, ಸುಲಭವಾಗಿ, —ಕೆರಳುವ, ರೇಗುವ ; ಸಿಡುಕಿನ, ಮುಂಗೋಪದ. **Téstily** (ಕ್ರಿ. ವಿ.) ; **Téstiness** (ನಾ.)

Tétanus ಟೆಟನಸ್ (ನಾ.) ಸ್ನಾಯುಗಳ ಸೆಳವುರೋಗ; ಧನುರ್ವಾಯು [Artificial t. (ನಂಜಿನ ಕೊರಡಿನ ಸಾರ, ಮೊ. ನ್ನು ಪ್ರಯೋಗಿಸಿ ಉಂಟುಮಾಡಿದ) ಕೃತಕ ಧನುರ್ವಾಯು]. **Tetánic** (ಗು., ನಾ.) ಧನುರ್ವಾಯುವಿನ(ಲ್ಲಿ ಬರುವಂಥ) [T. spasm ಧನುರ್ವಾಯುವಿನ(ಥ) ಸೆಳವು]. (ನಾ.) ನರಗಳ ಮೂಲಕ ಸ್ನಾಯುಗಳಮೇಲೆ ಪರಿಣಾಮ ಮಾಡುವ ಔಷಧ : ಧನುರ್ವಾಯುಕಾರಿ (ಉದಾ., ನಂಜಿನ ಕೊರಡಿನ ಸಾರ). **Tétanize** (ಕ್ರಿ. ಸಕ.) ; **Tetanizátion** (ನಾ.) ; **Tétanoid** (ಗು.)

Té(t)chy ಟೆಚಿ (ಗು.) = Testy. **Té(t)chily** (ಕ್ರಿ. ವಿ.); **Té(t)chiness** (ನಾ.)

Téte-a-téte ಟೇಟಾಟೇಟ್ (ಕ್ರಿ. ವಿ., ಗು., ನಾ.) (ಇಬ್ಬರು ಸೇರಿದ) ಏಕಾಂತದ(ಲ್ಲಿ), ಗುಟ್ಟಿನ(ಲ್ಲಿ) ; ಸರಸವಾದ(ಗಿ) ; ಸರಸ ಸಂಲಾಪದ. (ನಾ.) (ಇಬ್ಬರ) ಏಕಾಂತದ ಮಾತುಕತೆ, ರಹಸ್ಯ ಸಂಲಾಪ, ಸರಸ ಸಂಲಾಪ ; (ಮು., ಪರಸ್ಪರ ಅಭಿಮುಖವಾಗಿ) ಇಬ್ಬರು ಕುಳಿತು ಮಾತಾಡಬಹುದಾದ ಪೀಠ, ಸೋಫ : ಸಂಲಾಪ ಸೋಫ.

Téther ಟೆದರ್ (ನಾ., ಕ್ರಿ. ಸಕ.) (ಮೇಯುವ ಪ್ರಾಣಿಗೆ ಕಟ್ಟಿರುವ) ಮಿಣಿ, ಹಗ್ಗ, ಸರಪಣಿ ; (ರೂಪ.) (ಒಬ್ಬನ ಜ್ಞಾನ, ಅಧಿಕಾರ, ಮೊ. ಗಳ) ವ್ಯಾಪ್ತಿ, ಅವಕಾಶ, ಮಿತಿ (Was beyond, at the end of, his t. ತನ್ನ ಶಕ್ತಿಯ, ಸಾಧನೋಪಾಯಗಳ, —ಎಲ್ಲೆ ಮೀರಿದ್ದನು, ಕೊನೆ ಮುಟ್ಟಿದ್ದನು) ; ಕಟ್ಟು, ಪಾಶ, ಬಂಧನ (When weary of the matrimonial t.). (ಕ್ರಿ.) (ಮೇಯುವ ಪ್ರಾಣಿಯನ್ನು) ಹಗ್ಗದಿಂದ ಕಟ್ಟಿಹಾಕು.

Tétra ಟೆಟ್ರ— (ಸ. ಪೂ. ಪ.) ನಾಲ್—, ನಾಲ್ಕು—, ಚತುರ್—. **-cýclic** (ಸ. ವಿ.) ನಾಲ್ಕು ಸುತ್ತಿನ. **-dáctyl** (ಗು., ನಾ.) ನಾಲ್ಕು ಕಾಲ್ಬೆರಳಿನ (ಪ್ರಾಣಿ) ; ಚತುರಂಗುಲಿ. **-dáctylous** (ಗು.) ; **-gon** ಚತುಷ್ಕೋಣ ; ಚತುರ್ಭುಜ. **-gonal** (ಗು.); **-gram** ನಾಲ್ಕಕ್ಷರದ ಮಾತು, ಚತುರಕ್ಷರಿ; ಚತುರಸ್ರ, ಚತುರ್ಭುಜ. **-grámmaton** ನಾಲ್ಕಕ್ಷರದಲ್ಲಿ ಬರೆದ ಯಾವುದಾದರೂ ಪವಿತ್ರ ಪದ [ಉದಾ., (ಯೆಹೂದ್ಯ ಪದವಾದ) J H V H (=Jehovah)]. **-gynous** ಚತುಶ್ಶಲಾಕಿ. **-hédron** ನಾಲ್ಕು ಮುಖಗಳುಳ್ಳ ಘನಾಕೃತಿ (ಮು., ನಾಲ್ಕು ತ್ರಿಕೋನ ಮುಖಗಳಿಂದಾದ ಗೋಪುರಾಕೃತಿ) : ಚತುರ್ಮುಖಿ. **-hédral** (ಗು.) ; **-logy** ನಾಲ್ಕು (ಸಂಗೀತ) ನಾಟಕಗಳ ಕೂಟ ; ನಾಲ್ ಕೂಟ ನಾಟಕ, ಚತುರ್ ನಾಟಕ ಚಕ್ರ (ಮು., ಗ್ರೀಕರ ಮುಕ್ಕೂಟ ರುದ್ರ ನಾಟಕವೂ ಕೊನೆಯ ಪ್ರಹಸನವೂ ಸೇರಿದ ನಾಟಕ ಕೂಟ). **-meral, -merous** ನಾಲ್ಕು ಭಾಗಗಳುಳ್ಳ : ಚತುರ್ಭಾಗಿ. **-meter** ಚತುಃಪ್ರಮಾಣದ ಪದ್ಯ (Dimeter ನೋಡಿ). **-morph** (ಕ್ರೈಸ್ತ ಕಲೆ) ನಾಲ್ಕು ಜನ ಮತಪ್ರವರ್ತಕರ ಚಿಹ್ನೆಗಳನ್ನೂ ರೆಕ್ಕೆಗೂಡಿದ ಒಂದೇ ಆಕೃತಿಯಲ್ಲಿ ಸೇರಿಸಿದ ಚಿತ್ರ : ಚತುರ್ ಲಾಂಛನ. **-pétalous** ನಾಲ್ಕು ದಳಗಳುಳ್ಳ ; ಚತುರ್ದಳೀಯ. **-phýllous** ನಾಲ್ಕೆಲೆಗಳುಳ್ಳ, ಚತುಷ್ಪರ್ಣಿ. **-pod** (ಗು., ನಾ.), **-podous** (ಗು.) ನಾಲ್ಕು ಪಾದಗಳ (ಚಿಟ್ಟೆ) : ಚತುಷ್ಪದಿ. **-pody** ನಾಲ್ಕು ಗಣಗಳ ಪದ್ಯ (ಭಾಗ). **-stich** (—ಸ್ಟಿಕ್) ಚೌಪದಿ, ಚತುಷ್ಪದಿ. **-style** (ಗು., ನಾ.) (ಮು., ಮುಖಮಂಟಪ, ಮೊ. ವು) ನಾಲ್ಕು ಕಂಬದ (ಕಟ್ಟಡ); ನಾಲ್ಗಂಬದ (ಕಟ್ಟಡ). **-sýllable** ನಾಲ್ಕು ಉಚ್ಚಾರಾಂಶದ ಪದ. **-syllábic** (ಗು.)

Tétrad ಟೆಟ್ರ್ಯಾಡ್ (ನಾ.) ನಾಲ್ಕರ ಸಂಖ್ಯೆ, ನಾಲ್ಕು ; ನಾಲ್ಕರ ತಂಡ ; ಚತುಷ್ಕ ; ಸಂಯೋಗಶಕ್ತಿ ನಾಲ್ಕು ಉಳ್ಳ ಮೂಲಧಾತು ಅಥವಾ ಘಟಕ : ಚತುಸ್ಸಂಯೋಗಿ.

Tetrándrous ಟೆಟ್ರ್ಯಾಂಡ್ರಸ್ (ಗು.) (ಸ. ವಿ.) ನಾಲ್ಕು ಕೇಸರಗಳುಳ್ಳ ; ಚತುಷ್ಕೇಸರಿ.

Tétrarch ಟೆ(ಟೀ)ಟ್ರಾರ್ಕ್ (ನಾ.) (ರೋಮನ್ ಚಕ್ರಾಧಿಪತ್ಯದಲ್ಲಿ) ದೇಶದ ಅಥವಾ ಪ್ರಾಂತದ ನಾಲ್ಕನೆಯೊಂದು ಭಾಗದ ಅಧಿಪತಿ; ಚತುರ್ಥಾಂಶಾಧಿಪತಿ; ಸಾಮಂತ, ಮಾಂಡಲಿಕ. ಪುರಾತನ ಗ್ರೀಕರ ಕಾಲ್ಬಲದ ತುಕಡಿಯ ನಾಯಕ. **Tétrarchate** (ನಾ.) ಚತುರ್ಥಾಂಶಾಧಿಪತ್ಯ. **Tétrarchy** (ನಾ.) ಚತುರ್ಥಾಂಶಾಧಿಪತಿಯ ಪ್ರಾಂತ. **Tetrárchical** (ಗು.)

Tétter ಟೆಟರ್ (ನಾ.) ಹಲವು ಬಗೆಯ ಚರ್ಮರೋಗ (ಕಜ್ಜಿ, ತುರಿ, ದದ್ದು, ಮೊ. ವು). **Tétterwort** (ನಾ.) (ಇದಕ್ಕೆ ಔಷಧವೆಂದು ನಂಬಿದ್ದ) ಒಂದು ಸಸ್ಯ.

Teúcrian ಟ್ಯೂಕ್ರಿಯನ್ (ಗು., ನಾ.) ಪುರಾತನ ಟ್ರಾಯ್ ಜನ(ರ)

Teuto- ಟ್ಯೂಟೊ— (ಸ. ಪೂ. ಪ.) ಟ್ಯೂಟನ್—. **Teutománia** ಟ್ಯೂಟನ್ ಪದ್ಧತಿಯ, ಟ್ಯೂಟನ್ನರ, ಜರ್ಮನರ, —ವ್ಯಾಮೋಹ, ಹುಚ್ಚು. **Teútophil(e)** ಟ್ಯೂಟನ್ನರ, ಜರ್ಮನಿಯ, ಜರ್ಮನರ, —ಪ್ರೇಮಿ. **-phobe** —ದ್ವೇಷಿ. **-phóbia** —ದ್ವೇಷ.

Teúton ಟ್ಯೂಟ(ಟ್)ನ್ (ನಾ.) (ಸ್ಕಾಂಡಿನೇವಿಯನರು, ಆ್ಯಂಗ್ಲೊ ಸ್ಯಾಕ್ಸನರು, ಜರ್ಮನರು—ಇವರನ್ನೊಳಗೊಂಡ) ಟ್ಯೂಟನ್ ಜನಾಂಗದವನು ; (ಚರಿತ್ರೆ) (ಕ್ರಿ. ಪೂ. ೪ನೆಯ ಶ. ಮಾ. ಕ್ಕೆ ಹಿಂದೆಯೇ ಬಹುಶಃ ಎಲ್ಬೆ ನದಿಯ ಮುಖದ ಹತ್ತಿರ ವಾಸಿಸುತ್ತಿದ್ದ) ಟ್ಯೂಟನ್ ಬುಡಕಟ್ಟಿನವನು. **Teutónic** —ಟಾನಿಕ್ (ಗು., ನಾ.) ಟ್ಯೂಟನರ; ಟ್ಯೂಟನ್ ಜನಾಂಗಗಳ [T. languages ಹೈ ಜರ್ಮನ್, ಲೋ ಜರ್ಮನ್ ಮತ್ತು ಸ್ಕ್ಯಾಂಡಿನೇವಿಯ ಭಾಷೆಗಳು (German[2] ನೋಡಿ)]. (ನಾ.) ಟ್ಯೂಟನರ ಭಾಷೆ. **Teutónicism** (ನಾ.) ಟ್ಯೂಟನ್—ಲಕ್ಷಣ, ಭಾಷಾರೂಢಿ, ಪದ್ಧತಿ, ಸ್ವಭಾವ. **Teútonism** (ನಾ.) ; **Teútonize** (ಕ್ರಿ. ಸಕ.) ; **Teútonizátion** (ನಾ.)

Text ಟೆಕ್ಸ್ಟ್ (ನಾ.) (ಗ್ರಂಥಕರ್ತನ) ಮೂಲಪಾಠ ; ಮೂಲ, ಗ್ರಂಥಪಾಠ (ತಾತ್ಪರ್ಯದಿಂದ ಅಥವಾ ವ್ಯಾಖ್ಯಾನದಿಂದ ಭಿನ್ನವಾದುದು) [The t. is hopelessly corrupt (ಲಿಪಿಕಾರರ ದೋಷದಿಂದ) ಮೂಲ, ಗ್ರಂಥಪಾಠ—ತೀರ ಕೆಟ್ಟುಹೋಗಿದೆ, ಹೊಲಸಾಗಿ ಹೋಗಿದೆ]; (ಪ್ರಮಾಣವಾಗಿ ಉದಾಹರಿಸಿದ, ಧರ್ಮ ಪ್ರವಚನದ ವಿಷಯವಾಗಿ ತೆಗೆದುಕೊಂಡ) ಬೈಬಲ್ಲಿನ—ವಾಕ್ಯ, ವಚನ ; (ಭಾಷಣ, ಮೊ. ರ) ವಿಷಯ, ಪ್ರಕರಣ (Stick to one's t. ವಿಷಯ ಬಿಟ್ಟುಹೋಗದಿರು ; ವಿಷಯವಷ್ಟೇ ಮಾತನಾಡು). (ಟಿಪ್ಪಣಿ, ಚಿತ್ರ, ಮೊ. ಗಳಿಂದ ಭಿನ್ನವಾದ) ಗ್ರಂಥ ಭಾಗ, ಮೂಲ (ಗ್ರಂಥ). ದೊಡ್ಡ ಆಕಾರದ ಕೈಬರೆವಣಿಗೆ, ದೊಡ್ಡಕ್ಷರ (=**T.-hand**) ; [Church, German, t. (ಆಯಾ ಪದ ನೋಡಿ)]. **T.-book** ಪಾಠ ಗ್ರಂಥ, ಪಠ್ಯಪುಸ್ತಕ ; (ಒಂದು ಶಾಸ್ತ್ರ ಭಾಗದ) ಪ್ರಮಾಣ ಗ್ರಂಥ. **Téxtual** (ಗು.) ಗ್ರಂಥ ಪಾಠದ, ಮೂಲ ಗ್ರಂಥದ, ಮೂಲದ(ಲ್ಲಿಯ) (T. criticism, errors). **Téxtualist** (ನಾ.) ಮೂಲಪಾಠಾವಲಂಬಿ ; ಬೈಬಲ್ ವಾಕ್ಯಗಳನ್ನು ಉಲ್ಲೇಖಿಸುವವನು. **Téxtualism** (ನಾ.) ; **Téxtually** (ಕ್ರಿ. ವಿ.)

Téxtile ಟೆಕ್ಸ್ಟೈ(ಟಿ)ಲ್ (ಗು., ನಾ.) ನೆಯ್ಗೆಯ (The t. art) ; ನೆಯ್ದ, ನೆಯ್ಯಲಾಗುವ (T. fabrics, materials). (ನಾ.) ನೆಯ್ದ—ಸಾಮಾನು, ಸರಕು ; (ನಾ., ಬ. ವ. ದಲ್ಲಿ) ಬಟ್ಟೆ, ಜವಳಿ, ಅರಿವೆ.

Téxture ಟೆಕ್ಸ್ಚ್ಯು(ಚ)ರ್ (ನಾ.) ನೆಯ್ದ ಬಟ್ಟೆಯಲ್ಲಿಯ ಎಳೆಗಳ ರಚನೆ : ನೆಯ್ಗೆ (Loose t. ಸಡಿಲ, ಜಾಳು,—ನೆಯ್ಗೆ) ; (ಚರ್ಮ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಲ್ಲು, ಸಾಹಿತ್ಯ ಕೃತಿ, ಮೊ. ಗಳ) ರಚನೆ, ಬಂಧ (*Of* ಉಪ. ಜೊಡನೆ) ; (ಕಲಾಕೃತಿಗಳಲ್ಲಿ) ವಸ್ತುಗಳ ವರ್ಣವಿನ್ಯಾಸವನ್ನಲ್ಲದೆ ಹೊರಮೈ ರಚನೆಯ ನಿರೂಪಣೆ : ತಲ ರಚನ ವಿನ್ಯಾಸ ; (ಜೀ. ವಿ.) ಅಂಗಾಂಶ (ರಚನೆ). **Téxtural** (ಗು.) ; **Téxtureless** (ಗು.) ಸ್ಪಷ್ಟ ರೂಪ ವಿಲ್ಲದ, ನಿರ್ದಿಷ್ಟ ರಚನೆಯಿಲ್ಲದ.

-th, -eth —ತ್, —ಎತ್ (ಉ. ಪ್ರ.) —ನೆಯ (Fourth, fortieth ನಾಲ್ಕನೆಯ, ನಲವತ್ತನೆಯ)

Thálamus ತ್ಯಾಲಮಸ್ (ನಾ. ; ಬ. ವ. -mi —ಮೈ) (ಗ್ರೀಕ್ ಪ್ರಾ.) ಒಳ ಕೋಣೆ, ಹೆಂಗಸರ ಕೊಟಡಿ ; (ಅಂ. ರ. ಶಾ.) ಮಿದುಳಿನಿಂದ ನರ ಹೊರಡುವ ಸ್ಥಳ (ಮು., optic t. ದೃಷ್ಟಿನರ ಹೊರಡುವ ಮಿದುಳಿನ ಸ್ಥಾನ) ; (ಸ. ವಿ.) ಪುಷ್ಪಪಾತ್ರ.

Tháler ಟಾಲರ್ (ನಾ.) ಜರ್ಮನಿಯ ಒಂದು ಬೆಳ್ಳಿಯ ನಾಣ್ಯ.

Thalía ತಲೈಯ (ನಾ.) ಹರ್ಷ ನಾಟಕದ ಮತ್ತು ಗ್ರಾಮ ಕವಿತೆಯ ಅಧಿದೇವತೆ. **Thalían** (ಗು.) ತಲೈಯಾ ದೇವತೆಯ ; ಹರ್ಷ ನಾಟಕದ (T. talents)

Thállium ತ್ಯಾಲಿಯಂ (ನಾ.) ಮಿಶ್ರ ಲೋಹಗಳ ಮತ್ತು ಗಾಜಿನ ತಯಾರಿಕೆಯಲ್ಲಿ ಉಪಯೋಗಿಸುವ, ಮೃದುವಾದ, ಬೆಳ್ಳನೆಯ, ಒಂದು ವಿರಳ ಲೋಹ; ತ್ಯಾಲಿಯಂ (ಲೋಹ). **Thállic** (ಗು.) (ಆಮ್ಲ ಜನಕದೊಡನೆ ಹೋಲಿಸಿದಾಗ ತ್ಯಾಲಿಯಂ ಕಡಮೆ ಪ್ರಮಾಣದಲ್ಲಿರುವ ಸಂಯುಕ್ತಗಳ ಹೆಸರುಗಳಲ್ಲಿ ಪ್ರ.), **Thállous** (ಗು.) (—ತ್ಯಾಲಿಯಂ ಹೆಚ್ಚು ಪ್ರಮಾಣದಲ್ಲಿರುವ ಸಂಯುಕ್ತಗಳ ಹೆಸರುಗಳಲ್ಲಿ ಪ್ರ.)

Thállus ತ್ಯಾಲಸ್ (ನಾ.) ಬೇರು, ತಾಳು, ಎಲೆ, ಮೊ. ಬೇರ್ಪಾಟು ಗಳಿಲ್ಲದ ಸಸ್ಯ : ಏಕಾಂಗ ಸಸ್ಯ. **Thálloid** (ಗು.) ಏಕಾಂಗ ಸಸ್ಯ ದಂಥ.

Than ದ್ಯಾನ್, ದನ್ (ಸಂ. ಅವ್ಯ., ಉಪ.) —ಇಂತ [You are taller t. he (is), (ಬಳ. ಮಾ.) taller t. him. Do anything rather than let him get off]

Thánage. **Thane** ನೋಡಿ.

Thanat(o)- ತ್ಯಾನಟ್(ಒ)— (ಸ. ಪೂ. ಪ.) ಮರಣ—, ಮೃತ್ಯು—. **Thanatophídia** (ನಾ., ಬ. ವ.) ಮೃತ್ಯುಕಾರಕ, ಮಾರಕ, —ಸರ್ಪಗಳು ; ವಿಷಸರ್ಪಗಳು. **Thánatoid** (ಗು.) ಮೃತ್ಯು ವಿನಂಥ ; ಮೃತಕಲ್ಪ, ಮೃತಪ್ರಾಯ ; ಮಾರಕ.

Thane ತೇನ್ (ನಾ.) (ಸ್ಕಾಟ್ಲೆಂಡಿನ ಚರಿತ್ರೆ) ಶ್ರೀಮಂತ ; (ಪ್ರಾರಂಭದ ಇಂಗ್ಲೆಂಡಿನ ಚರಿತ್ರೆಯಲ್ಲಿ) ಸಾಮಾನ್ಯ ಸ್ವತಂತ್ರ ಪ್ರಜೆಗೂ ವಂಶ ಪಾರಂಪರ್ಯದ ಶ್ರೀಮಂತನಿಗೂ ಮಧ್ಯವರ್ತಿ ವರ್ಗದವನು: ತೇನ್. **Thánage** ತೇನೆ(ನಿ)ಜ್ (ನಾ.) ತೇನಿನ—ದರ್ಜೆ, ಪದವಿ, ಜಮೀನು. **Thánedom** (ನಾ.) ; **Thánehood** (ನಾ.) ; **Tháneship** (ನಾ.)

Thank ತ್ಯಾಂಕ್ (ಕ್ರಿ. ಸಕ.) (ಒಬ್ಬನಿಗೆ, ಒಂದು ಉಪಕಾರಕ್ಕಾಗಿ) ಕೃತಜ್ಞತೆ—ಸೂಚಿಸು, ಹೇಳು ; ವಂದನೆ, ಧನ್ಯವಾದ, —ಅರ್ಪಿಸು ; ಉಪಕಾರ ಸ್ಮರಣೆಮಾಡು; ಆಭಾರಿಯಾಗಿರು, ಆಭಾರ ಮನ್ನಿಸು. T. you ವಂದನೆ, ನಮಸ್ಕಾರ (ದಾನ, ಉಪಕಾರ, ಮೊ. ನ್ನು ಒಪ್ಪಿಕೊಳ್ಳುವಲ್ಲಿ, ಬೇಡವೆಂದು ಹೇಳುವಲ್ಲಿ, ಬಳಸುವ ಶಿಷ್ಟ ಒಕ್ಕಣೆ). T. you for nothing (ತಿರಸ್ಕಾರದಿಂದ ನಿರಾಕರಿಸುವಲ್ಲಿ) : ನಮಸ್ಕಾರ, ಏನೂ ಬೇಕಾಗಿಲ್ಲ. T. you (for that ball) ! (ಮಾಡಲಿರುವ ಉಪಕಾರಕ್ಕಾಗಿ ಪೂರ್ವ ಭಾವಿಯಾಗಿ ಹೇಳುವ ಒಕ್ಕಣೆ) : ದಯವಿಟ್ಟು ಆ ಚೆಂಡನ್ನು ಇತ್ತ ಹಾಕಿ. I will t. you to leave my affairs alone (ವ್ಯಂಗ್ಯ ಪ್ರ.) ಸದ್ಯ ನನ್ನ ತಂಟೆಗೆ ನೀನು ಬರದಿದ್ದರೆ, ನನ್ನ ವ್ಯವಹಾರಕ್ಕೆ ನೀನು ಕೈ ಹಾಕದಿದ್ದರೆ,—ನಮಸ್ಕಾರ (ಮಾಡುತ್ತೇನೆ). He may t. himself, has only himself to t., for that ಅವನೇ ಮಾಡಿಕೊಂಡದ್ದು, ಅವನದೇ ತಪ್ಪು.

Thank (ನಾ. ; ಈಗ ಸಾ., ಬ. ವ. ದಲ್ಲಿ ಮಾತ್ರ ಪ್ರ.) ಉಪಕಾರ ಸ್ಮರಣೆ, ಕೃತಜ್ಞತೆ, ವಂದನೆ, ನಮಸ್ಕಾರ, ಧನ್ಯವಾದ, ಆಭಾರ [Expressed his heartfelt thanks. Small thanks (ವ್ಯಂಗ್ಯವಾಗಿ much thanks) I got for it ಅದಕ್ಕಾಗಿ ನನಗೆ ಕಿಂಚಿತ್ತೂ ಕೃತಜ್ಞತೆ ಸಲ್ಲಲಿಲ್ಲ ; (ವ್ಯಂಗ್ಯವಾಗಿ) ಬಹಳ ಬಹಳ ಕೃತಜ್ಞತೆ ಸಂದಿತು !]. T.-offering (ಬೈಬಲ್) ಯಹೂದ್ಯರು ದೇವರಿಗೆ ಕೃತಜ್ಞತಾ ಸೂಚಕವಾಗಿ ಮಾಡುತ್ತಿದ್ದ ಅರ್ಪಣೆ : ಕೃತಜ್ಞತಾ ನಿವೇದನ, ವಂದನಾರ್ಪಣ. Thanks (ಶಿಷ್ಟ ಒಕ್ಕಣೆ) : ನಮಸ್ಕಾರ, ವಂದನೆ, ಉಪಕಾರವಾಯಿತು. Thanks to my foresight, your obstinacy ನನ್ನ ಮುಂದಾಲೋಚನೆಯ ಫಲವಾಗಿ, ನಿನ್ನ ಮೊಂಡು ತನದ ಫಲವಾಗಿ. **Thánkful** (ಗು.) ಕೃತಜ್ಞತೆಯುಳ್ಳ, ಆಭಾರಿ ಯಾದ ; (ಮಾತು ಅಥವಾ ಕ್ರಿಯೆ) ಕೃತಜ್ಞತೆಯ, ಕೃತಜ್ಞತಾ ಸೂಚಕ. **Thánkfully** (ಕ್ರಿ. ವಿ.) ; **Thánkfulness** (ನಾ.) ; **Thánkless** (ಗು.) ಖ್ಯಾತಿ ಬಾರದ, ಕೃತಜ್ಞತೆಯಿಲ್ಲದ, ಉಪಕಾರ ಸ್ಮರಿಸದ. A t. task ಯಾರಿಂದಲೂ ಕೃತಜ್ಞತೆ ಪಡೆಯದ, ನಿಷ್ಪ್ರಯೋಜಕವಾದ, ಖ್ಯಾತಿ ಬಾರದ, —ಕೆಲಸ. **Thánklessly** (ಕ್ರಿ. ವಿ.) ; **Thánklessness** (ನಾ.) ; **Thánksgiving** (ನಾ.) ಕೃತಜ್ಞತಾ ನಿವೇದನೆ, ವಂದನಾರ್ಪಣೆ, ಧನ್ಯವಾದ ಸಮರ್ಪಣೆ (ಮು., ದೇವರಿಗೆ ಸಲ್ಲಿಸು ವಂಥದು); ಕೃತಜ್ಞತಾ ವಚನ [General T. (ಸಾಮಾನ್ಯ ಪ್ರಾರ್ಥನಾ ಪುಸ್ತಕದಲ್ಲಿಯದು)]. (ಬೈಬಲ್) ಕೃತಜ್ಞತಾ ಸೂಚಕವಾಗಿ ದೇವರಿಗೆ ಅರ್ಪಿಸಿದ್ದು. T. day (ಅಮೆ. ಸಂ. ದಲ್ಲಿ ನಿಗದಿಮಾಡಿರುವ) ವಂದನಾರ್ಪಣ ದಿನ (ಸಾ., ನೊವೆಂಬರ್ ಕಡೆಯ ಗುರುವಾರ). **Thánkworthy** (ಗು.) (ಪ್ರಾಚೀ. ಪ್ರ.) ವಂದನಾರ್ಹವಾದ.

Thar ಟಾರ್ (ನಾ.) ನೇಪಾಳದ ಒಂದು ಕಾಡು ಜಿಂಕೆ, ಮೇಕೆ (ಯಂಥ) ಜಿಂಕೆ.

That ದಟ್ (ಗು., ಸ. ನಾ., ಕ್ರಿ. ವಿ.) (ನಿರ್ದೇಶಕ ಗು., ಸ. ನಾ. ; ಬ. ವ. Those ದೋಸ್) (ನಿರ್ದೇಶಿಸಿದ, ಗಮನ ಸೆಳೆದ, ಹಿಂದೆ ಹೇಳಿದ ವಸ್ತು ಅಥವಾ ವ್ಯಕ್ತಿಯನ್ನು ಕುರಿತದ್ದು) : ಆ, ಅದು [Who is that woman in the garden ? ತೋಟದಲ್ಲಿರುವ ಆ ಹೆಂಗಸು ಯಾರು ? Don't roll your eyes like that (ಈಗ ನೀನು ಮಾಡುತ್ತಿರು ವಂತೆ) ನಿನ್ನ ಕಣ್ಣುಗಳನ್ನು ಹಾಗೆ ಹೊರಳಿಸಬೇಡ, ತೊಳಸಬೇಡ. Talked about responsibilities & all t. ಜವಾಬ್ದಾರಿ, ಮೊ. ಗಳನ್ನೆಲ್ಲ ಕುರಿತು ಮಾತನಾಡಿದನು. T. is not fair ಅದು (ನೀನು ಮಾಡಿದ್ದು, ನಿನ್ನ ಕಾರ್ಯ) ನ್ಯಾಯವಲ್ಲ. That's right ! (ಒಪ್ಪಿಕೆ, ಸಮ್ಮತಿ, ಸೂಚಿಸುವಲ್ಲಿ) : ಅದು ಸರಿ ! (ಗ್ರಾಮ್ಯ ಪ್ರ.) = Yes. That's (ಬಳ. ಮಾ. there's) a dear ! (ಕೋರಿಕೆ ಸಲ್ಲಿಸಿದಾಗ, ಸಲ್ಲಿಸುವೆನೆಂದು ಮಾತುಕೊಟ್ಟಾಗ, ಮೆಚ್ಚಿಕೆಯ ಉದ್ಗಾರ) ಅದೀಗ ನನ್ನ ಚಿನ್ನ ! ನನ್ನ ಮುದ್ದು ! So that's that (ಕಥನವನ್ನು, ಚರ್ಚೆಯನ್ನು, ಮುಗಿಸುವ ರೂಢಿಯ ಮಾತು) : ವಿಷಯ—ಹಾಗಿದೆ, ಅಷ್ಟು. Come out of t. (ಅಸಂ.) (ಆಜ್ಞೆಯ ಮಾತು) ಹೊರಕ್ಕೆ—ಬಾ, ಹೋಗು. Wouldn't give t. for it ಅದಕ್ಕೆ ಒಂದು ಚಿಟಿಕೆಯೂ ಕೊಡಲೊಲ್ಲೆ. At t. ಅದರಂತೆ, ಅದರಲ್ಲೂ. (ಸ್ವಲ್ಪ ಆವೇಶದಿಂದ ಹೇಳುವಲ್ಲಿ) Why will you bring t. woman here ? Shall not easily forget t. day. (ಎರಡು ವಸ್ತುಗಳು ಅಥವಾ ವ್ಯಕ್ತಿಗಳಲ್ಲಿ ವ್ಯತ್ಯಾಸ ಸೂಚಿಸು ವಲ್ಲಿ ಅಥವಾ ಹತ್ತಿರದ್ದಕ್ಕೆ ವ್ಯತಿರಿಕ್ತವಾಗಿ ಪ್ರ.) : This poker is much heavier than t. ; Went to this & t. doctor ಈ ವೈದ್ಯನ ಆ ವೈದ್ಯನ (ಹಲವು ವೈದ್ಯರ) ಬಳಿಗೆ ಹೋದನು. This, t., & the other ಇದು ಅದು, ಮತ್ತೊಂದು : ಹಲವು ವಸ್ತುಗಳು. Put this & t. together ಈ ಸಂಗತಿ ಆ ಸಂಗತಿ (ಹಲವು ಸಂಗತಿ ಗಳನ್ನು) ಜೋಡಿಸು]. (ಸ. ನಾ. ವಾಗಿ *the* ಪದಕ್ಕೆ ಬದಲು ಪ್ರ.; ಜೊತೆಗೆ ಸಂಬಂಧಾರ್ಥಕ ಸ. ನಾ. ಬರುವುದೂ ಉಂಟು) [Had t. in his eye which forbade further trifling ಇನ್ನು ಹೆಚ್ಚಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹುಡುಗಾಟಿಕೆ ಮಾಡದಂತೆ ತಡೆಯಬಲ್ಲ ನೋಟ) ಅವನ ಕಣ್ಣಿನಲ್ಲಿತ್ತು. All those (ಸಾ., the) specimens that I saw. Those (ಸಾ., the) few (books) that I had. Those below the standard]. (ಕ್ರಿ. ವಿ. ; ಉಚ್ಚಾರಣೆ: ದ್ಯಾಟ್) Will go t. far ಅಷ್ಟುಮಟ್ಟಿಗೆ ಅಷ್ಟು ದೂರ, —ನಾನು ಹೋಗುತ್ತೇನೆ. (ಗ್ರಾಮ್ಯ) I was t. angry I could have struck him ಅವನನ್ನು ಹೊಡೆದುಬಿಡುವಷ್ಟು ನನಗೆ ಕೋಪವಿತ್ತು. (ಸಂಬಂಧಾರ್ಥಕ ಸ. ನಾ., ಬ. ವ. ಅದೇ) (ಈಗ ಸಾ., *who*, *which* ಪದಗಳು ರೂಢಿ) The book t. (*or* which) I sent you. The man t. (ಸಾ., whom) you stopped. The meanest flower t. (ವಿರ. ಪ್ರ. which) blows.

That ದಟ್, (ಕೆಲವು ವೇಳೆ) ದ್ಯಾಟ್ (ಸಂ. ಅವ್ಯ.) ಎಂದು, ಎಂಬುದಾಗಿ, ಎಂಬುದು, ಎಂದರೆ. They say t. he is better ಅವನು ಮೇಲೆಂದು ಅವರು ಹೇಳುತ್ತಾರೆ. It is hoped t. all will go well. He lives t. he may eat ತಿಂದುಕೊಂಡಿರಬೇಕೆಂದು ಅವನು ಜೀವಿಸಿದ್ದಾನೆ. Am so sleepy t. I cannot keep my eyes open ಕಣ್ಣು ಬಿಟ್ಟುಕೊಂಡಿರಲಾರದಷ್ಟು ನನಗೆ ನಿದ್ದೆ ಬರುತ್ತದೆ. It is rather t. he has not the time ತನಗೆ ಕಾಲಾವಕಾಶವಿಲ್ಲ ಎಂಬುದು ಅವನ ಕಾರಣ(ವಿರಬಹುದು). Not t. I have any objection ನನಗೇನಾದರೂ ಆಕ್ಷೇಪಣೆ ಇದೆಯೆಂದಲ್ಲ ; ನನಗೇನೋ ಆಕ್ಷೇಪಣೆಯಿದೆಯೆಂದು ಅದನ್ನು ನಾನು ಹೇಳುತ್ತಿಲ್ಲ. (O) t. I knew the truth (ಓ) ನನಗೆ ಸತ್ಯ ತಿಳಿದಿದ್ದರೆ ! (ಪ್ರಾಚೀ. ಪ್ರ., ಸಾಹಿತ್ಯ ಪ್ರ.) In t. —ಕಾರಣದಿಂದ ; ಆ ಮಟ್ಟಿಗೆ. Now t. ಈಗ (—ಕಾರಣ) (You ought to write now t. you know the address ಈಗ ನಿನಗೆ ವಿಳಾಸ ತಿಳಿದದ್ದರಿಂದ ನೀನು ಬರೆಯಬೇಕು)

Thatch ತ್ಯಾಚ್ (ನಾ., ಕ್ರಿ. ಸಕ.) ಹುಲ್ಲು, ಜೊಂಡು, ತೆಂಗಿನ ಗರಿ, ಮಟ್ಟೆ, —ಚಾವಣಿ ; (ಚಾವಣಿಗೆ, ಮನೆಗೆ) ಹುಲ್ಲು, ಜೊಂಡು, —ಹೊದ್ದು.

Thaúmatrope ತಾಮಟ್ರೋಪ್ (ನಾ.) ದುಂಡು ಬಿಲ್ಲೆಯ ಎರಡು ಮುಖಗಳಲ್ಲಿ ಬೇರೆ ಬೇರೆ ಚಿತ್ರಗಳಿದ್ದು (ಉದಾ., ಒಂದು ಮುಖದಲ್ಲಿ ಪಂಜರ, ಮತ್ತೊಂದು ಮುಖದಲ್ಲಿ ಹಕ್ಕಿ), ಆ ಬಿಲ್ಲೆಯನ್ನು ವ್ಯಾಸದ ಮೇಲೆ ಗಿರ್ರನೆ ಸುತ್ತಿಸಿದಾಗ ಒಂದೇ ಚಿತ್ರದಂತೆ (ಪಂಜರದಲ್ಲಿರುವ ಹಕ್ಕಿಯಂತೆ) ಕಣ್ಣಿಗೆ ಭಾಸವಾಗುವ, ಆಟದ ಒಂದು ಸಲಕರಣೆ: ವಿಚಿತ್ರ—ದರ್ಶಕ, ಭ್ರಮಣ.

Thaúmaturge ತಾಮಟರ್ಜ್ (ನಾ.) ಪವಾಡಕಾರ, ಐಂದ್ರಜಾಲಿಕ, ಗಾರುಡಿಗ, ಅದ್ಭುತಕಾರ. **Thaumatúrgic(al)** (ಗು.) ; **Thaúmaturgist** (ನಾ.) = Thaumaturge. **Thaúmaturgy** (ನಾ.) ಪವಾಡ ವಿದ್ಯೆ ; ಇಂದ್ರಜಾಲ.

Thaw ತಾ (ಕ್ರಿ., ನಾ.) (ನೀರ್ಗಲ್ಲು, ಹಿಮ, ಗಡ್ಡೆಕಟ್ಟಿದ ವಸ್ತು, ಮೊ. ಗಳ ವಿಷಯದಲ್ಲಿ) ದ್ರವೀ—ಕರಿಸು, ಭವಿಸು ; ಕರಗು, ಕರಗಿಸು, ನೀರಾಗು; (ಹವದ ವಿಷಯದಲ್ಲಿ) ನೀರ್ಗಲ್ಲನ್ನು ಕರಗಿಸುವಷ್ಟು ಬೆಚ್ಚಗಾಗು, ನೀರ್ಗಲ್ಲ ಶಾಖಕ್ಕಿಂತ ಹೆಚ್ಚಾಗು. (ರೂಪ.) (ಕಾಠಿನ್ಯ, ಅನಾದರ, ನಿರುತ್ಸಾಹ, ಸಡತೆ, ಹಟ, ಮೊ. ನ್ನು ಬಿಟ್ಟು) ಉಲ್ಲಾಸಪರನಾಗು, ಸ್ನೇಹಪರನಾಗು, ಪ್ರಸನ್ನನಾಗು ; ಮನಸ್ಸು—ಕರಗು, ಕರಗಿಸು. (ನಾ.) (ನೀರ್ಗಲ್ಲು) ಕರಗುವಿಕೆ ; ದ್ರವೀ—ಕರಣ, ಭವನ ; (ಹವ) ಬೆಚ್ಚಗಾಗುವುದು (A t. has set in). **Thawless** (ಗು.) ; **Thawy** (ಗು.)

The ದಿ (ಗು., ಕ್ರಿ. ವಿ.) (ಚರ್ಚೆಯಲ್ಲಿರುವ, ಆಗಲೇ ಹೇಳಿರುವ, ತಿಳಿದಿರುವ, ಗೊತ್ತಾದ ವರ್ಗದ, ವ್ಯಕ್ತಿಯನ್ನು ಅಥವಾ ವಸ್ತುವನ್ನು ಸೂಚಿಸುವಲ್ಲಿ ಪ್ರ. ; ನಿರ್ದೇಶಕ ಗುಣವಾಚಿಯಾಗಿ 'ಆ' ಅಥವಾ 'ಅಂಥ' ಎಂಬ ಅರ್ಥ ಕೊಡುವ ಪದ. ಇಂಥ ಪ್ರ. ಕನ್ನಡದಲ್ಲಿ ಇಲ್ಲ) [Tried to soothe the child ಮಗುವನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದನು. What is t. time? ಹೊತ್ತು ಎಷ್ಟಾಯಿತು? ಗಂಟೆ ಎಷ್ಟು? (ಜಾತ್ಯೇಕವಚನದ ಹಿಂದೆ ಪ್ರ.): T. lion ಸಿಂಹ (ಜಾತಿ). T. new woman ನವನಾಜೂಕಿನ ಹೆಂಗಸು, ಈ ಕಾಲದ ಹೆಂಗಸು. (ಪರಿಮಿತಾರ್ಥದಲ್ಲಿ ಕೆಲವು ನಾಮವಾಚಕಗಳೊಡನೆ; ಮು., ರೂಪ., ವೃತ್ತಿ, ಕಲೆ, ಮೊ. ಅರ್ಥಕೊಡುವ ಪ್ರ.). T. stage ನಟವೃತ್ತಿ. T. theatre ನಾಟಕ (ಕಲೆ). T. platform ವೇದಿಕೆಯ ವಾಗ್ಮಿತೆ. T. bottle ಮದ್ಯ—ಪಾನ, ಗೋಷ್ಠಿ. T. pulpit ಉಪದೇಶ ವೃತ್ತಿ ; ಪಾದ್ರಿಯ ವೃತ್ತಿ. T. fancy ಯಾವುದಾದರೂ ಹವ್ಯಾಸ, ಗೀಳು, —ಉಳ್ಳವರು. (ವ್ಯಾಧಿಗಳ ಹೆಸರುಗಳ ಹಿಂದೆ ಪ್ರ.; ಆದರೆ ಈಗ ರೂಢಿ ಕಡಮೆ) T. smallpox ಸಿಡುಬು. T. blues ವಿಷಣ್ಣತೆ, ಮಂಕು. T. drink ಕುಡಿತದ ಅಭ್ಯಾಸ. (—ಒಂದಕ್ಕೆ ಎಂಬ ಅರ್ಥದಲ್ಲಿ *a* ಅಥವಾ *per* ಪ್ರ. ದಂತೆ) 4 d. t. yard ಗಜವೊಂದಕ್ಕೆ ನಾಲ್ಕು ಪೆನಿ. (ಸಂಬಂಧಾರ್ಥಕ ಉಪವಾಕ್ಯ ಅಥವಾ ಗುಣವಾಚಕ ಅಥವಾ ಅದಕ್ಕೆ ಸಮಾನವಾದ ಪದದಿಂದ ಅರ್ಥ ಪೂರ್ಣವಾಗುವಲ್ಲಿ) T. book (that) you borrowed ನೀನು ಎರವು ತೆಗೆದುಕೊಂಡ ಪುಸ್ತಕ. Has not t. nerve for motoring ಮೋಟಾರು ಬಂಡಿ ನಡಸಲು ಧೈರ್ಯವಿಲ್ಲ, ನರವಿಲ್ಲ. (ಗುಣವಾಚಕದೊಂದಿಗೆ ವರ್ಗ ಅಥವಾ ಪಂಗಡ ಸೂಚಕವಾಗಿ) T. brave ಧೈರ್ಯಶಾಲಿಗಳು, ಎದೆಗಾರರು. T. fair ಚೆಲುವೆಯರು, ಸ್ತ್ರೀಯರು]. (ಕ್ರಿ. ವಿ.) ಎಷ್ಟು, ಎಷ್ಟೆಷ್ಟು, ಅಷ್ಟು, ಅಷ್ಟಷ್ಟು ; —ಎಂಬುದರಿಂದ, ಕಾರಣದಿಂದ (T. more he gets t. more he wants ಪಡೆದಷ್ಟೂ ಹೆಚ್ಚಾಗಿ ಬೇಕೆನ್ನುತ್ತಾನೆ. I play t. worse, t. more I practise ಎಷ್ಟು ಎಷ್ಟು ಅಭ್ಯಾಸ ಮಾಡುತ್ತೇನೊ ಅಷ್ಟೂ ಅಷ್ಟು ಹೊಲಸಾಗಿ ಆಡುತ್ತೇನೆ. None t. better for seeing you ನಿನ್ನನ್ನು ನೋಡಿದ್ದರಿಂದ ಏನೂ ಮೇಲಾಗಲಿಲ್ಲ. That made it all t. worse ಅದರಿಂದ ಇದ್ದದ್ದೂ ಹೊಲಸಾಯಿತು, ಕೆಟ್ಟುಹೋಯಿತು ; ಅದು ಇದ್ದದ್ದನ್ನೂ ಕೆಡಿಸಿತು. So much t. worse for him ಅದರಿಂದ ಅವನಿಗೆ ಇದ್ದದ್ದೂ ಕೆಡುಕು)

Theándric ತಿಯ್ಯಾಂಡ್ರಿಕ್ (ಗು.) (ಯೇಸು ಕ್ರಿಸ್ತನಲ್ಲಿ) ದೇವತ್ವ ಮನುಷ್ಯತ್ವಗಳೆರಡೂ ಸೇರಿರುವ ; ದೇವ ಮಾನವ ಸಂಯುಕ್ತ ಕರ್ತೃತ್ವದ ; ದೇವಮಾನವೀಯ.

Theanthrópic(al) ತಿಯ್ಯಂತ್ರಾಪಿಕ್(ಕಲ್) (ಗು.) ದೇವತ್ವ ಮನುಷ್ಯತ್ವಗಳಿರುವ; ದೇವತ್ವ ಮನುಷ್ಯತ್ವಗಳೆರಡರ; —ಎರಡಕ್ಕೂ ಸೇರಿದುದರ; ಮನುಷ್ಯಾಕಾರದಲ್ಲಿ ದೇವರನ್ನು—ನಿರೂಪಿಸುವ, ಮೂರ್ತೀಕರಿಸುವ.

Théarchy ತೀಯರ್ಕಿ (ನಾ.) ದೇವರ, ದೇವರುಗಳ, —ಆಳಿಕೆ ; ದೇವ ಪ್ರಭುತ್ವ. ದೇವ ವರ್ಗ (The Olympian t.)

Théatre ತಿಯಟರ್ (ನಾ.) ನಾಟಕ—ಶಾಲೆ, ಮಂದಿರ ; (Patent t. ದೊರೆಯ ಸನ್ನದಿನ ನಾಟಕ ಮಂದಿರ. Picture t. ಚಲನಚಿತ್ರ ಮಂದಿರ) ; (ಸೋಪಾನ ಪಂಕ್ತಿಗಳಿರುವ, ಪೀಠ ಪಂಕ್ತಿಗಳಿರುವ—) ಉಪನ್ಯಾಸ ಮಂದಿರ, ಸಭಾಂಗಣ [Operating-t. (Operate ನೋಡಿ)]; ನಾಟಕ—ಸಾಹಿತ್ಯ, ಕಲೆ. ಕಾರ್ಯ—ರಂಗ, ಕ್ಷೇತ್ರ (The t. of war ಯುದ್ಧರಂಗ). T.-goer, -going (ಪದೇ ಪದೇ) ನಾಟಕಕ್ಕೆ ಹೋಗುವವನು, ಹೋಗುವುದು. **Theátric** (ಗು.) (ವಿರ. ಪ್ರ.), **Theátrical** (ಗು., ನಾ.) ಪ್ರಭಾವ ಬೀರುವ ಉದ್ದೇಶದ, ನಾಟಕೀಯ, ನಾಟಕಾಭಾಸದ, ಅಭಿನಯಾತ್ಮಕ, ನಟನೆಯ. ನಾಟಕ ಮಂದಿರಕ್ಕೆ ತಕ್ಕ, ನಾಟಕಶಾಲೆಯ ; ಅಭಿನಯದ, ನಟರ. (ನಾ.; ಬ. ವ. ದಲ್ಲಿ) ನಾಟಕ ಪ್ರದರ್ಶನಗಳು (ಮು., Private theatricals ಕಲಾ ಹವ್ಯಾಸಿಗಳ ನಾಟಕ ಪ್ರದರ್ಶನಗಳು). **Theátrically** (ಕ್ರಿ. ವಿ.); **Theátricalism** (ನಾ.) ನಾಟಕೀಯ ಬಿನ್ನಾಣದ ರೀತಿ, ನಾಟಕೀಯತೆ. **Theatricálity** (ನಾ.); **Theátricalize** (ಕ್ರಿ. ಸಕ.) ನಾಟಕೀಯ ಮಾಡು, ನಾಟಕವಾಗಿ ಮಾಡು.

Thébaid ತೀಬೆಯಿಡ್ (ನಾ.) (ಈಜಿಪ್ಟಿನಲ್ಲಿ ನೈಲ್ ನದಿಯ ತೀರದ) ಥೀಬ್ಸ್ ನಗರದ ಸುತ್ತಣ ಸೀಮೆ. (ಗ್ರೀಸಿನಲ್ಲಿರುವ) ಥೀಬ್ಸ್ ನಗರದ (ಮುತ್ತಿಗೆಯ) ಮೇಲಿನ ಕಾವ್ಯ (ಮು., ಸ್ಟೇಷಿಯಸ್ ಬರೆದದ್ದು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Thében ಥೀಬನ್ (ಗು., ನಾ.) ಥೀಬ್ಸಿನ (ನಿವಾಸಿ)

Thee. **Thou** ನೋಡಿ.

Theft ತೆಫ್ಟ್ (ನಾ.) ಕಳ್ಳತನ, ಕಳವು, ಚೌರ್ಯ.

Théic ತೀಯಿಕ್ (ನಾ.) ಟೀಯನ್ನು ಅತಿಯಾಗಿ ಕುಡಿಯುವವನು : ಟೀ ಕುಡುಕ. **Théism**[1] (ನಾ.) (ರೋಗ ನಿದಾನ) ಅತಿ ಟೀ ಕುಡಿತದಿಂದ ಬರುವ, ತಲೆನೋವು, ನಿದ್ರೆಯಿಲ್ಲದಿರುವುದು ಮತ್ತು ಎದೆ ಡವಡವ ಗುಟ್ಟುವುದು, ಮೊ. ಲಕ್ಷಣಗಳನ್ನುಳ್ಳ ರೋಗಸ್ಥಿತಿ: ಟೀ ರೋಗ ವಿಕಾರ. **Théine** ತೀಇನ್, —ಇನ್ (ನಾ.) = Caffeine (Cafe ನೋಡಿ)

Théine. **Theic** ನೋಡಿ.

Their ದೇರ್ (They ಎಂಬುದರ ಷಷ್ಠೀ ವಿಭಕ್ತ್ಯಂತ ; ಸ. ನಾ., ಗು.) ಅವರ, ಅವುಗಳ. Theirs ಅವರದು, ಅವುಗಳದು.

Théism[1]. **Theic** ನೋಡಿ.

Théism[2] ತೀಯಿಸ್ಮ್ (ನಾ.) ಶ್ರುತಿಸಿದ್ಧನೂ, ದಿವ್ಯ ದರ್ಶನದಿಂದ ಮನುಷ್ಯನಿಗೆ ಗೋಚರನೂ ಮತ್ತು ಸ್ವಂತವಾಗಿ ಜೀವಿಗಳ ಸಂಬಂಧವನ್ನಿಟ್ಟುಕೊಂಡಿರುವವನೂ ಆದ, ಒಬ್ಬ ದೇವರಲ್ಲಿ ನಂಬಿಕೆ : ದೇವಾಸ್ತಿಕ್ಯ: ಈಶ್ವರ ವಾದ. **Théist** (ನಾ.) —ವಾದಿ ; ಆಸ್ತಿಕ. **Theístic(al)** (ಗು.)

Them. **They** ನೋಡಿ.

Themátic. **Theme** ನೋಡಿ.

Theme ತೀಂ (ನಾ.) (ಉಪನ್ಯಾಸ, ಲೇಖನ, ಆಲೋಚನೆ, ಮೊ. ಗಳ) ವಿಷಯ, ವಸ್ತು ; (ಕೊಟ್ಟ ವಿಷಯದಮೇಲೆ ಶಾಲಾ ವಿದ್ಯಾರ್ಥಿ ಬರೆದ) ಪ್ರಬಂಧ, ಲೇಖನ ; (ವ್ಯಾ.) ನಾಮಪದದಲ್ಲಿ ಅಥವಾ ಕ್ರಿಯಾಪದದಲ್ಲಿ ಪ್ರತ್ಯಯ ಹತ್ತುವುದಕ್ಕೆ ಹಿಂದಿನ ರೂಪ : ಅಂಗ, ಕಾಂಡ (ಉದಾ., 'ಏನ್' ಪದದಿಂದ ದೊರೆಯುವ ಏತರ, ಏತರಿಂದ, ಏತಕ್ಕೆ, ಮೊ. ಗಳ ಅಂಗ 'ಏತರ್'). (ಸಂ.) (ಸಾ., ವೈವಿಧ್ಯ ಕೊಟ್ಟು ವಿಸ್ತರಿಸಲಾಗುವ) ಪ್ರಧಾನ ಸ್ವರ ಸಂಗತಿ. (ಚರಿತ್ರೆ) ಬಿಸಂಟೈನ್ ಚಕ್ರಾಧಿಪತ್ಯದ ಪ್ರಾಂತ(ಗಳಲ್ಲೊಂದು). **Themátic** ತಿಮ್ಯಾಟಿಕ್ (ಗು.) (ಸಂ.) ಪ್ರಧಾನ ಸ್ವರ ಸಂಗತಿಯ (T. treatment, catalogue); (ವ್ಯಾ.) ಕಾಂಡದ, ಕಾಂಡಕ್ಕೆ ಸೇರಿದ (T. form, vowel). **Thematically** (ಕ್ರಿ. ವಿ.)

Thémis ತೀ(ತೆ)ಮಿಸ್ (ನಾ.) (ಗ್ರೀಕ್ ಪುರಾಣ) ನ್ಯಾಯಾಧಿದೇವತೆ, ಧರ್ಮದೇವತೆ (ಮೂರ್ತೀಕರಿಸಿ ಸಹ ಪ್ರ.)

Then ದೆನ್ (ಕ್ರಿ. ವಿ., ಸಂ. ಅವ್ಯ., ಗು., ನಾ.) ಆ(ವಾ)ಗ, ಆ ಹೊತ್ತಿನಲ್ಲಿ, ಆ ಕಾಲದಲ್ಲಿ (Was t. too much occupied ಆಗ ವಿಪರೀತ ಕೆಲಸದಲ್ಲಿದ್ದೆನು. The t. existing ordinances); ಆಮೇಲೆ, ತರುವಾಯ, ಬಳಿಕ, ಅನಂತರ (It must t. soak for two hours & t. the operation is complete); (Now & t. ಈಗ ಆಗ, ಆಗಾಗ್ಗೆ). (ಸಂ. ಅವ್ಯ.) ಆ ಪಕ್ಷ(ದಲ್ಲಿ), ಹಾಗಾದರೆ, ಹಾಗಿದ್ದರೆ, ಆದ್ದರಿಂದ (ಅನೇಕ ವೇಳೆ well, t.) [Then you should have said so. (But) t. why did you take it? ಹಾಗಿದ್ದರೆ, ನೀನು ಅದನ್ನು ಏತಕ್ಕೆ ತೆಗೆದುಕೊಂಡೆ? Take it t. (ಅರೆಮನಸ್ಸಿನಿಂದ ಅಥವಾ ಅಸಹನೆಯಿಂದ ಕೊಡುವಾಗ): ಹಾಗಾದರೆ ತೆಗೆದುಕೊ(ಂಡುಹೋಗು)] ; ಆ ಪ್ರಕಾರ, ಅದರಂತೆ, ಅನುಸಾರವಾಗಿ (The new Governor, t., came prepared). (ಗು.) ಆ ಕಾಲದ(ಲ್ಲಿದ್ದ), ಆಗಿನ (The t. secretary). (ನಾ.) ಆ ಕಾಲ, ಆ ಹೊತ್ತು, ಅಂದು (Before, till, by, from, t. ಅಂದಿಗೆ ಮೊದಲು, ಅಂದಿನವರೆಗೆ, ಅಂದಿಗೆ, ಅಂದಿನಿಂದ. Every now & t. ಅಡಿಗಡಿಗೆ, ಆಗಾಗ್ಗೆ)

Thénar ತೀನರ್ (ನಾ.) (ಅಂ. ರ. ಶಾ.) ಅಂಗೈ, ಅಂಗಾಲು ; ಹೆಬ್ಬೆರಳಿನ ಸ್ನಾಯುಪಿಂಡ (= T. prominence, eminence ; ವಿಶೇಷಣ ಪ್ರ.)

Thence ದೆನ್ಸ್ (ಕ್ರಿ. ವಿ.) (ಪ್ರಾಚೀ. ಪ್ರ.) ಅಲ್ಲಿಂದ, ಆಯೆಡೆಯಿಂದ. (ಕೊಂಚ ಪ್ರಾಚೀ. ಪ್ರ.) ಆ ಕಾರಣದಿಂದ, ಅದರಿಂದ (It would t. follow that—. A discrepancy t. results). **Thence-fórth, Thencefórward** (ಕ್ರಿ. ವಿ., ನಾ.) ಅಲ್ಲಿಂದ ಮುಂದೆ, ಆ ತರುವಾಯ.

Theo- ತೀಯೊ— (ಸ. ಪೂ. ಪ.) ದೇವ(ತಾ)—. **-cracy** (ತಿಯಾಕ್ರಸಿ) ದೇವರ ಹೆಸರಿನಲ್ಲಿ ಪುರೋಹಿತ, ಅರ್ಚಕ, ಮಠಾಧಿಪತಿಗಳು ನಡಸುವ ಪ್ರಭುತ್ವ, ಆಳುವ ರಾಜ್ಯ: ದೇವ, ಪುರೋಹಿತ, ಮತಾಚಾರ್ಯ, —ಪ್ರಭುತ್ವ, ರಾಜ್ಯ (The T. ಮೋಸೆಸ್ಸಿನ ಕಾಲದಿಂದ ರಾಜಪ್ರಭುತ್ವದ ವರೆಗಿನ ಯೆಹೂದ್ಯರ ರಾಜ್ಯಾಡಳಿತ); **-crat** (ತೀಯೊಕ್ರ್ಯಾಟ್) ದೇವರಾಜ್ಯದಲ್ಲಿ ದೇವರ ಪ್ರತಿನಿಧಿಯಾಗಿ ಆಳುತ್ತಿರುವವನು : ದೇವಪ್ರಭುತ್ವಾಧಿಪತಿ ; ದೇವರಾಜ್ಯದ ಪ್ರಜೆ. **-crátic** (ಗು.) ; **-cratist** (ತಿಯಾಕ್ರಟಿಸ್ಟ್) ದೇವಪ್ರಭುತ್ವದಲ್ಲಿ, ಮತಾಚಾರ್ಯ ಪ್ರಭುತ್ವದಲ್ಲಿ, —ನಂಬಿಕೆಯುಳ್ಳವನು ; ದೇವಪ್ರಭುತ್ವ, ಮತಾಚಾರ್ಯ ಪ್ರಭುತ್ವ, —ವಾದಿ. **-crasy** ಧ್ಯಾನದ ಮೂಲಕ ಜೀವನು ಭಗವಂತನಲ್ಲಿ ಸೇರಿಕೊಳ್ಳುವುದು : ಸಮಾವೇಶ. **-dicy** ದೇವರು ಮನುಷ್ಯನ (ವಿವೇಚನಶಕ್ತಿಯನ್ನು ವೃದ್ಧಿಗೊಳಿಸುವುದಕ್ಕಾಗಿ ಆ ಮೂಲಕ ಅವನ) ಆತ್ಮ ಕಲ್ಯಾಣಕ್ಕಾಗಿ ಕೆಟ್ಟದ್ದು ಲೋಕದಲ್ಲಿರುವಂತೆ ಬಿಟ್ಟಿದ್ದಾನೆಂಬ, ದೇವರ ನ್ಯಾಯ ಗುಣ ಸಮರ್ಥನೆಯ ವಾದ: ದೇವ ನ್ಯಾಯ ವಾದ. **-gony** (—ಗೊನಿ) ದೇವ(ತಾ) ವಂಶಾವಳಿ(ಯನ್ನು ಕುರಿತ ಕಾವ್ಯ). **-gónic** —ಗಾನಿಕ್ (ಗು.) ; **-gonist** (ನಾ.) ; **-machy** (—ಮಕಿ) ದೇವತೆಗಳಲ್ಲಿ, ದೇವತೆಗಳೊಡನೆ, —ಯುದ್ಧ ; ದೇವ ಯುದ್ಧ. **-mánia** ತಾನೇ ದೇವರೆಂಬ ಹುಚ್ಚು, ದೇವೋನ್ಮಾದ ; ಮತಧರ್ಮದ ಹುಚ್ಚು, ಧರ್ಮೋನ್ಮಾದ. **máníac** (ನಾ.) ; **-phany** ದೇವರು ಮನುಷ್ಯನಿಗೆ ಕಾಣಿಸಿಕೊಳ್ಳುವುದು : ಈಶ್ವರ, ದೇವ, —ಸಾಕ್ಷಾತ್ಕಾರ, ಪ್ರತ್ಯಕ್ಷ. **-phánic** (ಗು.); **-philánthropy** ದೇವರನ್ನೂ ಮಾನವರನ್ನೂ ಒಟ್ಟಿಗೆ ಪ್ರೀತಿಸುವುದು : ದೇವ ಮಾನವ ಪ್ರೇಮ. **-philanthrópic** (ಗು.) ; **-philánthropist** ದೇವ ಮಾನವ ಪ್ರೇಮಿ. **-pneústy** ದೈವ ಪ್ರೇರಣೆ. **-pneústic** (ಗು.) ; **-techny** (ಕಾವ್ಯ, ನಾಟಕ, ಮೊ. ಗಳಲ್ಲಿ) ಅತಿಮಾನುಷ ಅಥವಾ ದೈವಿಕ ವ್ಯಕ್ತಿಗಳನ್ನು ತರುವುದು: ದೈವಿಕ ಪಾತ್ರ ಪ್ರಯೋಗ. **-téchnic** (ಗು.)

Theódolite ತಿಯಾಡೊಲೈಟ್ (ನಾ.) ದೂರದರ್ಶಕದ ಮೂಲಕ ಕ್ಷಿತಿಜ ಕೋನಗಳನ್ನೂ ಲಂಬಕೋನಗಳನ್ನೂ ಅಳೆಯಲು ಮೋಜಣಿಯಲ್ಲಿ ಉಪಯೋಗಿಸುವ ಒಂದು ಸಲಕರಣೆ: ಮೋಜಣಿಯ ಕೋನ ಮಾಪಕ ; ಕೋನ ದೂರದರ್ಶಕ. **Theodolític** (ಗು.)

Theólogy ತಿಯಾಲೊಜಿ (ನಾ.) (ಮು., ಕ್ರೈಸ್ತ) ಮತಧರ್ಮ ಶಾಸ್ತ್ರ, ದೇವತಾ ಶಾಸ್ತ್ರ. Natural t. (Nature ಕೆಳಗೆ Natural ನೋಡಿ). Positive, revealed, t. ಶ್ರುತಿಸಿದ್ಧ ದೇವತಾ ಶಾಸ್ತ್ರ. Dogmatic t. ಶಾಸ್ತ್ರಾಧಾರದ, ಬೈಬಲ್ ಆಧಾರದ, —ದೇವತಾ ಶಾಸ್ತ್ರ. Speculative t. ಶ್ರುತಿಯ ಆಧಾರದ್ದು ಮಾತ್ರವಲ್ಲದೆ, ಮಾನವನ ವಿಚಾರಕ್ಕೂ ಅವಕಾಶವಿರುವ ದೇವತಾ ಶಾಸ್ತ್ರ : ವಿಚಾರಾತ್ಮಕ ದೇವತಾ ಶಾಸ್ತ್ರ. Systematic t. ವ್ಯವಸ್ಥಿತ ದೇವತಾ ಶಾಸ್ತ್ರ. **Theológian** —ಯೊಲೋ— (ನಾ.) ದೇವತಾ ಶಾಸ್ತ್ರಜ್ಞ. **Theológical** —ಯೊಲಾ— (ಗು.) ; **Theológically** (ಕ್ರಿ. ವಿ.) ; **Theólogize** —ಯಾಲೊ— (ಕ್ರಿ. ಸಕ.) ದೇವತಾಶಾಸ್ತ್ರ ಸಮ್ಮತಮಾಡು, ದೇವತಾಶಾಸ್ತ್ರ ಪ್ರಕಾರ ಪ್ರತಿಪಾದಿಸು.

Théorem ತೀಯೊರೆಮ್ (ನಾ.) (ಗಣಿತ) ತರ್ಕಸರಣಿಯ ಮೂಲಕ ಸಿದ್ಧಾಂತಪಡಿಸಬೇಕಾದ, ಅಂಗೀಕೃತ ತತ್ತ್ವಗಳ ಮೂಲಕ ಸ್ಥಾಪನೆ ಮಾಡಿ ತೋರಿಸಬೇಕಾದ, —ವಾಕ್ಯ, ತತ್ತ್ವ : ಪ್ರತಿಜ್ಞೆ, ಪ್ರಮೇಯ (Problem ನೋಡಿ); (ಬೀಜಗಣಿತ, ಮೊ. ಗಳಲ್ಲಿಯ) ಸೂತ್ರ, ನಿಯಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

[Binomial t. (Binomial ನೋಡಿ)]; ವಿಚಾರಾತ್ಮಕ ತತ್ತ್ವ; ಸಿದ್ಧಾಂತ (Not theories, but theorems ಊಹೆಗಳಲ್ಲ, ಸಿದ್ಧಾಂತಗಳು). **Theoremátic(al)** — ಮ್ಯಾ — (ಗು.); **Theorématist** —ಮ— (ನಾ.) ಪ್ರತಿಜ್ಞಾ, ಸೂತ್ರ, ಸಿದ್ಧಾಂತ, —ಕಾರ.

Theorétic, etc. Theory ನೋಡಿ.

Theóric ಥಿಯಾರಿಕ್ (ಗು.) (ಗ್ರೀಕ್ ಪ್ರಾ.) ಜನ ನೋಟದ, ಸಾರ್ವಜನಿಕ ಪ್ರದರ್ಶನದ (T. fund ನಾಟಕಶಾಲೆ, ಮೊ. ಗಳಲ್ಲ ಬಡವರಿಗೆ ಉಚಿತ ಪ್ರವೇಶ ದೊರಕಿಸಲು ಏರ್ಪಡಿಸಿದ ನಿಧಿ: ಪ್ರದರ್ಶನ ನಿಧಿ)

Théory ಥೀಯೊರಿ (ನಾ.) ಇಂದ್ರಿಯಗೋಚರ ವಿಷಯ, ಮೊ. ಗಳಿಗೆ ಕಾರಣವಾಗಿ ಅವುಗಳಿಂದ ಪ್ರತ್ಯೇಕವಾದ ತತ್ತ್ವಗಳ ಆಧಾರದ ಮೇಲೆ ಪ್ರತಿಪಾದಿಸಿದ, ಸಮರ್ಥಿಸಿದ, ವಿಚಾರ ಸರಣಿ, ಊಹೆ: ವಾದ, ಮತ (Atomic t. ಪರಮಾಣು ವಾದ. T. of evolution ಪರಿಣಾಮ, ವಿಕಾಸ, —ವಾದ); ಊಹೆ, ಕಲ್ಪನೆ (One of my pet theories); ತತ್ತ್ವ (This is all very well in t., but how will it work in practice? ತತ್ತ್ವದಲ್ಲ ಎಲ್ಲಾ ಬಲು ಚೆನ್ನಾಗಿದೆ, ಆದರೆ ಪ್ರಯೋಗದಲ್ಲ ಹೇಗೆ ಕೆಲಸಮಾಡುತ್ತದೆ?); ಒಂದು ಶಾಸ್ತ್ರ, ಮೊ. ಗಳ ತತ್ತ್ವ ನಿರೂಪಣೆ: ಮೀಮಾಂಸೆ (The t. of music); (ಗಣಿತ) ಒಂದು ವಿಷಯದ ತತ್ತ್ವಗಳನ್ನು ನಿದರ್ಶನ ಮಾಡುವುದಕ್ಕಾಗಿ ಸಂಗ್ರಹಿಸಿದ ಸೂತ್ರಗಳು: ತತ್ತ್ವ ಸೂತ್ರಗಳು (T. of equations). **Theorétic** ಥಿಯೊರೆಟಿಕ್ (ಗು., ನಾ.) = Theoretical. (ನಾ.) (ಬ. ವ. ದಲ್ಲ) (ಒಂದು ಶಾಸ್ತ್ರ, ಮೊ. ಗಳ) ತತ್ತ್ವ ಭಾಗ. **Theorétical** ಥೀ— (ಗು.) (ಪ್ರಯೋಗಾತ್ಮಕ ಎಂಬುದಕ್ಕೆ ವ್ಯತಿರಿಕ್ತವಾಗಿ) ತತ್ತ್ವಕ್ಕೆ ಸಂಬಂಧಿಸಿದ, ತಾತ್ತ್ವಿಕ; ಕೇವಲ ತತ್ತ್ವಾಧಾರದ (ಅನುಭವವೇದ್ಯವಾದಸಂಗತಿಗಳನ್ನು ಕುರಿತದ್ದಲ್ಲ); ಊಹಾತ್ಮಕ. **Theorétically** (ಕ್ರಿ. ವಿ.); **Theoreticían** ಥೀಯೊರೆಟಿಷನ್, **Théorist** —ರಿಸ್ಟ್ (ನಾ.) ತಾತ್ತ್ವಿಕ, ಮೀಮಾಂಸಕ; ಸೂತ್ರ ಪ್ರತಿಪಾದಕ. **Théorize** (ಕ್ರಿ. ಸಕ.) ತತ್ತ್ವ, ಊಹೆ, —ಕಟ್ಟು; ವಾದ ಹೂಡು. **Theorizátion** (ನಾ.)

Theósophy ಥಿಯಾಸೊಫಿ (ನಾ.) ಅತೀಂದ್ರಿಯ ಯೋಗ, ನೇರವಾದ ಅಂತರ್ಬೋಧೆ, ಅಥವಾ ದೇವರೊಡನೆ ವಿಶೇಷ ವೈಯಕ್ತಿಕ ಸಂಬಂಧದ ಮೂಲಕ ಬ್ರಹ್ಮಜ್ಞಾನ ಅಥವಾ ಬ್ರಹ್ಮ ಸಾಕ್ಷಾತ್ಕಾರ ಸಾಧ್ಯವೆಂದು ನಂಬುವ ಪ್ರಾಚೀನ ಅಥವಾ ಆಧುನಿಕ ವಿದ್ಯೆಗಳ ಲ್ಲೊಂದು): ದೇವ, ಬ್ರಹ್ಮ, —ವಿದ್ಯೆ, ಯೋಗ. **Théosoph** ಥೀಯೊಸಾಫ್, **Theósopher** ಥಿಯಾಸೊಫರ್, **Theósophist** (ನಾ.) ಬ್ರಹ್ಮ, ದೇವ, —ವಿದ್ಯಾ ವಾದಿ. **Theosóphic(al)** ಥಿಯೊಸಾ— ಗು.), **Theosophístical** ಥಿಯಾಸೊಫಿಸ್ಟಿಕಲ್ (ಗು.); **Theósopnize** (ಕ್ರಿ. ಅಕ.) ಬ್ರಹ್ಮವಿದ್ಯೆಯನ್ನು ಅಭ್ಯಾಸಮಾಡು; ಬ್ರಹ್ಮವಿದ್ಯೆಯ ರೀತಿಯಲ್ಲಿ ಪ್ರತಿಪಾದಿಸು.

Therapeútic ತೆರಪ್ಯೂಟಿಕ್ (ಗು., ನಾ.) ವಾಸಿಮಾಡುವ, ಗುಣಪಡಿಸುವ; ಚಿಕಿತ್ಸೆಯ, ಚಿಕಿತ್ಸಕ. (ನಾ., ಬ. ವ. ದಲ್ಲ) ವೈದ್ಯಶಾಸ್ತ್ರದ ಚಿಕಿತ್ಸಾ ಭಾಗ: ಚಿಕಿತ್ಸಾ ಶಾಸ್ತ್ರ. **Therapeútical** (ಗು.); **Therapeútically** (ಕ್ರಿ. ವಿ.); **Therapeútist** (ನಾ.) ಚಿಕಿತ್ಸಾ ಶಾಸ್ತ್ರಜ್ಞ, ಚಿಕಿತ್ಸಕ, ವೈದ್ಯ. **Thérapy** (ನಾ.) ಚಿಕಿತ್ಸೆ, ಔಷಧೋಪಚಾರ.

There ದೇ(ಅ)ರ್ (ಕ್ರಿ. ವಿ., ನಾ., ಭಾವ., ಅವ್ಯ.) ಅಲ್ಲಿ, ಆಯೆಡೆ(ಯಲ್ಲಿ), ಆ ಸ್ಥಳದಲ್ಲಿ [Are you t? (ದೂರವಾಣಿಯ ಮೂಲಕ ಮಾತಾಡುವಲ್ಲಿ ಮೊದಲ ಮಾತು): ಇದ್ದೀಯೊ? Have been t. before (ಅಸಂ.) ನನಗೆ ಆ ಸ್ಥಳವೆಲ್ಲಾ, ಅದೆಲ್ಲಾ, ಚೆನ್ನಾಗಿ ಗೊತ್ತು(ಂಟು). All t. (ಅಸಂ.) ಬುದ್ಧಿ ನೆಟ್ಟಗಿದ್ದು. You t! (ಗಮನ ಸೆಳೆಯುವಲ್ಲಿ): ಎಲಾ! T. I agree with you ಆ (ವಿಷಯದಲ್ಲಿ) ನಿನ್ನ ಮಾತು ಒಪ್ಪುತ್ತೇನೆ. T. is (*or* comes in) the difficulty ಅಲ್ಲೆ (ಆ ವಿಚಾರದಲ್ಲೆ) ಕಷ್ಟ ಇರುವುದು (ಬರುವುದು). You had him t. ಆ ವಿಷಯದಲ್ಲಿ ನೀನು ಅವನಿಗಿಂತ ಮೇಲ್ಗೈಯಾದೆ, ಅವನಿಗಿಂತ ನಿನಗೆ ಅನುಕೂಲವಾಯಿತು. T. it is, you see ಅಲ್ಲೆ ನೋಡು (ತೊಂದರೆ). Here & there. Neither here nor t. (Here ನೋಡಿ)]; ಅಲ್ಲಿಗೆ, ಆಯೆಡೆಗೆ, ಆ ಸ್ಥಳಕ್ಕೆ [Get t. (ಅಸಂ.) ಕೆಲಸ ಸಾಧಿಸು, ಜಯಶಾಲಿಯಾಗು. T. *or* thereabouts ಆ ಸುಮಾರು (Two years ago t. *or* thereabouts. Will come to £ 100, t. *or* thereabouts)]; [ಸಾಮಾನ್ಯ ವಾಕ್ಯಗಳ ಆರಂಭದಲ್ಲಿಯೂ ಪ್ರಶ್ನಾರ್ಥಕ ಅಥವಾ ನಿಷೇಧಾರ್ಥಕ ವಾಕ್ಯಗಳಲ್ಲಿ ಕ್ರಿಯಾಪದದ ತರುವಾಯವೂ ಯಾವ ನಿರ್ದಿಷ್ಟ ಅರ್ಥವೂ ಇಲ್ಲದೆ ಪ್ರಯೋಗವಾಗುತ್ತದೆ; ಕೆಲವು ವೇಳೆ ಕಾವ್ಯ ಪ್ರಯೋಗಗಳಲ್ಲಿಯೂ ಆಶ್ಚರ್ಯ ಪ್ರಯೋಗಗಳಲ್ಲಿಯೂ ಕರ್ತೃಪದ ಮೊದಲು ಬರಬಹುದು: T. was plenty to eat ತಿನ್ನುವುದಕ್ಕೆ ಬೇಕಾದಷ್ಟಿದ್ದಿತು. What is t. for supper? A knight t. was. A nice mess t. is *or* seems to be! ಒಳ್ಳೆಯ ಅವ್ಯವಸ್ಥೆ (ಇರುವಂತೆ ಕಾಣುತ್ತದೆ)! There's a dear (ಬಳ. ಮಾ.) = That's a dear (That ನೋಡಿ)]. (ನಾ.) ಆಯೆಡೆ, ಆಸ್ಥಳ (Was brought from t. Tide comes up to t.). (ಭಾವ. ಅವ್ಯ.) ಅಗೊ! [(ಸಮರ್ಥನೆ, ಆಶ್ಚರ್ಯ, ಖೇದ, ಮೊ. ನ್ನು ಸೂಚಿಸುವಲ್ಲಿ ಪ್ರ.): T. what did I tell you? ಅಗೊ! ನಾನು ಏನು ಹೇಳಿದೆ! (ಮಕ್ಕಳು, ಮೊ. ನ್ನು ಸಮಾಧಾನಪಡಿಸುವಲ್ಲಿ ಪ್ರ.): T., t., never mind ಅಗೋ, ಅಗೋ, ಸುಮ್ಮನಿರು]

Thereabóut(s) ಸುಮಾರು—ಅಲ್ಲಿ, ಆ ಹತ್ತಿರ; ಆ ಸುಮಾರು, ಆ ಸುಮಾರಿನಲ್ಲಿ (Ought to be somewhere thereabouts ಎಲ್ಲೋ ಆ ಸುಮಾರಿನಲ್ಲಿ ಇರಬೇಕು. Two gallons or thereabouts ಸುಮಾರು ಎರಡು ಗ್ಯಾಲನ್). **Thereáfter** (ಪ್ರಾಚೀ. ಪ್ರ.) ಆಮೇಲೆ, ತರುವಾಯ, ಬಳಿಕ, ಅನಂತರ; ಅದರಂತೆ, ಆ ಪ್ರಕಾರ. **Theréanent** (ಸ್ಕಾ. ಪ್ರ.) ಆ ವಿಷಯದಲ್ಲಿ; ಅದನ್ನು ಕುರಿತು. **Thereát** (ಪ್ರಾಚೀ. ಪ್ರ.) ಅಲ್ಲಿ; ಆ ಸ್ಥಳದಲ್ಲಿ; ಆ ಕಾರಣದಿಂದ, ಅದಕ್ಕಾಗಿ; ಆಮೇಲೆ, ತರುವಾಯ. **Therebý** ಅದರಿಂದ; ಅದರ—ಪರಿಣಾಮವಾಗಿ, ಫಲವಾಗಿ (And thereby hangs a tale ಆ ಸಂಬಂಧವಾಗಿ—ಹೇಳಬೇಕಾದ್ದು ಇದೆ, ಒಂದು ಕಥೆ ಇದೆ). **Therefór** (ಪ್ರಾಚೀ. ಪ್ರ.) ಆ ಉದ್ದೇಶಕ್ಕಾಗಿ, ಅದಕ್ಕಾಗಿ. **Thérefore** ಆ ಕಾರಣದಿಂದ, ಆದ್ದರಿಂದ, ಅದಕಾರಣ. **Thérefrom** (ಪ್ರಾಚೀ. ಪ್ರ.) ಅದರಿಂದ, ಅಲ್ಲಿಂದ. **Thereín** (ಪ್ರಾಚೀ. ಪ್ರ.) ಅಲ್ಲಿ, ಅದರಲ್ಲಿ, ಆ ವಿಷಯದಲ್ಲಿ. **Thereináfter, Thereinbefóre** (ಅದೇ ಪತ್ರ, ಮೊ. ಗಳಲ್ಲಿ) (—ಕ್ಕೆ) ತರುವಾಯ, (—ಕ್ಕೆ) ಮೊದಲು. **Thereínto** (ಪ್ರಾಚೀ. ಪ್ರ.) ಅದರೊಳಕ್ಕೆ, ಅಲ್ಲಿಗೆ, ಆ ಸ್ಥಳಕ್ಕೆ. **Thereóf** (ಪ್ರಾಚೀ. ಪ್ರ.) ಅದರ, ಅದರಿಂದ. **Thereón** (ಪ್ರಾಚೀ. ಪ್ರ.) (ಚಲನೆಯ ಅಥವಾ ಸ್ಥಾನದ ವಿಷಯದಲ್ಲಿ) ಅದರಮೇಲೆ. **Thereoút** (ಪ್ರಾಚೀ. ಪ್ರ.) ಅದರಿಂದ, ಅದರೊಳಗಿಂದ, ಆ ಮೂಲದಿಂದ. **Therethróugh** (ಪ್ರಾಚೀ. ಪ್ರ.) ಆ ಮೂಲಕ. **Theretó** (ಪ್ರಾಚೀ. ಪ್ರ.) ಅದಕ್ಕೆ; ಅದರ—ಮೇಲೆ, ಜೊತೆಗೆ. **Thereúnder** ಅದರ ಕೆಳಗೆ, ಆ ಕೆಳಗೆ; ಆ ಪ್ರಕರಣದಲ್ಲಿ, ಸಂಬಂಧದಲ್ಲಿ. **Thereúnto** (ಪ್ರಾಚೀ. ಪ್ರ.) ಅದಕ್ಕೆ. **Thereupón** ಅದರಿಂದ; ಆಮೇಲೆ, ಅದಾದಕೂಡಲೆ, ಆ ಕೂಡಲೆ; (ಪ್ರಾಚೀ. ಪ್ರ.) (ಚಲನೆಯ ಅಥವಾ ಸ್ಥಾನದ ವಿಷಯದಲ್ಲಿ) ಅದರಮೇಲೆ. **Therewíth** (ಪ್ರಾಚೀ. ಪ್ರ.) ಅದರೊಡನೆ; ಅದರ—ಸಂಗಡ, ಜೊತೆಗೆ. **Therewithál** ಜೊತೆಗೆ, ಅದಲ್ಲದೆ.

Thériac ಥಿಯರಿಆ್ಯಕ್ (ನಾ.) (ಹಲವು ಮೂಲಿಕೆಗಳನ್ನು ಸೇರಿಸಿ ತಯಾರಿಸಿದ, ವಿಷಜಂತುಗಳು ಕಚ್ಚಿದ್ದಕ್ಕೆ ಔಷಧವಾಗಿ ಉಪಯೋಗಿಸುವ) ಪ್ರತಿ ವಿಷ, ವಿಷಾಪಹಾರಿ (=Theriaca Andromachi, Venice treacle)

Therianthrópic ಥಿಯರಿಆ್ಯಂತ್ರಾಪಿಕ್ (ಗು.) ಮೃಗ ಮತ್ತು ಮನುಷ್ಯ ಎರಡೂ ಸೇರಿದ ಆಕಾರವುಳ್ಳ ವ್ಯಕ್ತಿಗಳ(ನ್ನು ಪೂಜಿಸುವ): ಮೃಗ ಮಾನವ (ಪೂಜೆಯ), ನರಮೃಗ (ಪೂಜಕ). **Theriánthropism** —ತ್ರೊಪಿಸ್ಮ್ (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Therm ತರ್ಮ್ (ನಾ.) ಉಷ್ಣಮಾನ, 'ಕ್ಯಾಲೊರಿ' (Calorie ನೋಡಿ); (ಬಳಸಿದ ಜ್ವಲನಾನಿಲದ ಅಳತೆಗೆ ಆಧಾರವಾಗಿ ಇಟ್ಟುಕೊಳ್ಳುವ) ಉಷ್ಣಾಂಕ (ಈಗ ಗಾತ್ರದ ಮೂಲಕ ಅಳೆಯದೆ ಶಾಖೋತ್ಪತ್ತಿ ಸಾಮರ್ಥ್ಯದ ಮೂಲಕ ಅಳೆಯುತ್ತಾರೆ). **Thérmae** ತರ್ಮೀ (ನಾ., ಬ. ವ.) (ಗ್ರೀಕ್ ಮತ್ತು ರೋ. ಪ್ರಾ.) ಬಿಸಿನೀರಿನ—ಬುಗ್ಗೆಗಳು, ಊಟೆಗಳು; (ಮು., ಸಾರ್ವಜನಿಕ) ಬಿಸಿನೀರಿನ ಸ್ನಾನಗೃಹಗಳು. **Thérmal** (ಗು.) ಕಾವಿನ, ಉಷ್ಣದ [T. unit ಉಷ್ಣದ ಏಕಮಾನ, ಉಷ್ಣಮಾನ. British t. unit (ಸಂಕ್ಷಿಪ್ತ: B. Th. U.) ೩೯°F ಶಾಖದ ಒಂದು ಪೌಂಡು ತೂಕದ ನೀರನ್ನು ೧°F ಶಾಖವೇರಿಸಲು (ಎಂದರೆ, ೪೦°F ಗೆ ಏರಿಸಲು) ಬೇಕಾಗುವ ಉಷ್ಣ: ಬ್ರಿಟಿಷ್ ಉಷ್ಣಮಾನ]: ಬಿಸಿನೀರಿನ—ಊಟೆಗಳ, ಸ್ನಾನಗೃಹಗಳ. T. equator (ಭೂಪಟದಲ್ಲಿ) ಭೂಮಿಯ ಮೇಲ್ಮೈಯಲ್ಲಿ ಅತ್ಯಂತ ಉಷ್ಣವಿರುವ ಪ್ರದೇಶಗಳ ಮೂಲಕ ಹಾಯ್ದಿರುವ ಗೆರೆ: ಉಷ್ಣ ಸಮಭಾಜಕ ರೇಖೆ. T. springs ಬಿಸಿನೀರಿನ ಊಟೆಗಳು. **Thérmally** (ಕ್ರಿ. ವಿ.); **Thermántidote** ತರ್ಮ್ಯಾಂಟಿಡೋಟ್ (ನಾ.) ಗಾಳಿಯನ್ನು ತಂಪುಮಾಡುವ ಸಲಕರಣೆ: ವಾಯುಶೀತಕ. **Thérmic** ತರ್ಮಿಕ್ (ಗು.) ಉಷ್ಣದ (T. rays, conditions). **Thermíon** ತರ್ಮೈಯನ್ (ನಾ.) ನಿಗನಿಗನೆ ಪ್ರಜ್ವಲಿಸುತ್ತಿರುವ ವಸ್ತುವಿನಿಂದ ಹೊರಸೂಸುವ ಒಂದು ಚಲ ವಿದ್ಯುದ್ವಾಹಿ ಕಣ: ಉಷ್ಣ ವಿದ್ಯುದ್ವಾಹಿ ಕಣ. **Thermiónic** —ಯಾನಿಕ್ (ಗು.) T. valve *or* vacuum tube ಹಲವು ಬಗೆಯಲ್ಲಿ ಉಪಯೋಗಿಸಿಕೊಳ್ಳುವುದಕ್ಕಾಗಿ, ಮು., ನಿಸ್ತಂತು ವಾರ್ತಾ ಪ್ರಸರಣದಲ್ಲಿ ತರಂಗಗಳ ಅಭಿವರ್ಧನಕ್ಕೆ ಉಪಯೋಗಮಾಡಿಕೊಳ್ಳುವುದಕ್ಕಾಗಿ, ವಿದ್ಯುದಂಶಗಳನ್ನು (ಎಲೆಕ್ಟ್ರಾನ್‌ಗಳನ್ನು) ಯಥೇಷ್ಟವಾಗಿ ಹರಿಸುವ ಒಂದು ಸಲಕರಣೆ: ವಿದ್ಯುದಂಶ ಪ್ರಸಾರಕ.

Thérmae, Thérmal, Thermántidote, Thérmic, Thermíon, etc. Therm ನೋಡಿ.

Thermo- ತರ್ಮೊ— (ಸ. ಪೂ. ಪ.) ಉಷ್ಣ—, ತಾಪ—, ಶಾಖ—. **-barómeter** ನೀರುಕುದಿಯುವ ಶಾಖದಿಂದ ವಾಯುಮಂಡಲದ ಒತ್ತಡವನ್ನು, ತನ್ಮೂಲಕ ಆ ಪ್ರದೇಶದ ಎತ್ತರವನ್ನು, ಅಳೆಯಲಾಗುವ ಸಲಕರಣೆ; ಶಾಖಮಾಪಕವಾಗಿಯೂ ಉಪಯೋಗಿಸಲಾಗುವ ಸೈಫನ್ ವಾಯುಭಾರಮಾಪಕ: ಶಾಖ (ವಾಯು)ಭಾರಮಾಪಕ. **-dynámics** ಉಷ್ಣಕ್ಕೂ ಬಲಕ್ರಿಯೆಗೂ ಇರುವ ಸಂಬಂಧವನ್ನು ಕುರಿತ ಶಾಸ್ತ್ರ: ಉಷ್ಣಬಲ ಕ್ರಿಯಾಶಾಸ್ತ್ರ. **-electrícity** ಎರಡು ಪದಾರ್ಥಗಳ ಶಾಖ ವ್ಯತ್ಯಾಸದಿಂದ ಉತ್ಪತ್ತಿಯಾದ ವಿದ್ಯುಚ್ಛಕ್ತಿ: ಉಷ್ಣ—ವಿದ್ಯುಚ್ಛಕ್ತಿ, ವಿದ್ಯುತ್. **-eléctric** (ಗು.); **-electrómeter** ವಿದ್ಯುತ್ಪ್ರವಾಹದ ತಪನಶಕ್ತಿಯನ್ನು ಅಳೆಯುವ ಅಥವಾ ಉತ್ಪತ್ತಿಯಾದ ಉಷ್ಣಶಕ್ತಿಯಿಂದ ವಿದ್ಯುತ್ಪ್ರವಾಹವನ್ನು ಅಳೆಯುವ ಸಲಕರಣೆ: ಉಷ್ಣ ವಿದ್ಯುನ್ಮಾಪಕ. **-génesis** (ಮು., ಮನುಷ್ಯ ಶರೀರದಲ್ಲಿ) ಉಷ್ಣ ಜನನ, ಶಾಖೋತ್ಪತ್ತಿ. **-genétic, -génic** (ಗು.); **-gram** ಸ್ವಯಂಲೇಖಕ ಶಾಖಮಾಪಕ ಗುರುತಿಸಿದ ರೇಖನ, ರೇಖಾ ಚಿತ್ರ: ಶಾಖ ಲೇಖನ. **-graph** ರೇಖಾ ಚಿತ್ರವಾಗಿ ಶಾಖಗಳನ್ನು ತಾನೇ ಗುರುತಿಸಿಡುವ ಶಾಖಮಾಪಕ: ಶಾಖ ಲೇಖಕ. **-mótive** ಉಷ್ಣದಿಂದ ಉಂಟಾದ ಚಲನೆಯ; ಉಷ್ಣ ಚಲನೆಯ. **-motor** ಉಷ್ಣಶಕ್ತಿಯಿಂದ, ಮು., ತಪ್ತ ವಾಯುವಿನಿಂದ, ನಡೆಯುವ ಎಂಜಿನು: ಉಷ್ಣಚಲಿ ಎಂಜಿನು. **-pile** (ಅತಿ ಸ್ವಲ್ಪ ಮೊತ್ತಗಳಲ್ಲಿ ಹೊರಸೂಸುವ ವಿಕಿರಣೋಷ್ಣವನ್ನು ಅಳೆಯಲು ಉಪಯೋಗಿಸುವ) ಉಷ್ಣ ವಿದ್ಯುತ್‌ಕೋಶ ಶ್ರೇಣಿ. **-scope** ನಿಷ್ಕೃಷ್ಟವಾಗಿ ಅಳೆಯದೆ ಶಾಖ ವ್ಯತ್ಯಾಸವನ್ನು ಮಾತ್ರ ತೋರಿಸುವ ಸಲಕರಣೆ: ಶಾಖದರ್ಶಕ. **-scópic(al)** (ಗು.); **-stat** ಶಾಖ ನಿಯಂತ್ರಕ. **-státic** (ಗು.); **-státics** ಉಷ್ಣ(ತಾ) ಸಮಸ್ಥಿತಿ ಶಾಸ್ತ್ರ. **-tensile** ಶಾಖ ಪ್ರಭಾವಕ್ಕೆ ಒಳಗಾದ ಕರ್ಷಕ ಬಲಕ್ಕೆ ಸಂಬಂಧಪಟ್ಟ: ಶಾಖ ಕರ್ಷಕ. **-type** ಪ್ರತಿಮಾಡಬೇಕಾದ ವಸ್ತುವನ್ನು (ಉದಾ., ದಾರುವಿನ ಛೇದಮುಖ, ಮೊ. ನ್ನು) ದುರ್ಬಲ ಆಮ್ಲದಿಂದ ನೆನಸಿ, ಅದರಮೇಲೆ ಕಾಗದವನ್ನು ಬಲವಾಗಿ ಒತ್ತಿ ತೆಗೆದ ಪ್ರತಿಯನ್ನು, ಶಾಖದಿಂದ ಸ್ಫುಟಗೊಳಿಸಿದ ಅಚ್ಚು: ಕಾವಚ್ಚು, ಉಷ್ಣ ಮುದ್ರಣ.

Thermómeter ತರ್ಮಾಮಿಟರ್ (ನಾ.) ಪಾದರಸವನ್ನೊ ಮದ್ಯಸಾರವನ್ನೊ ಒಳಗೆ ಹಾಕಿ ಗಾಳಿಯಿಲ್ಲದಂತೆ ಮುಚ್ಚಿ, ಮೇಲುಗಡೆ ಅಳತೆ ಗೆರೆಗಳನ್ನು ಕೆತ್ತಿರುವ, ಶಾಖವಳೆಯುವ, ಒಂದು ರೋಮನಾಳ ನಳಿಕೆ: ಶಾಖಮಾಪಕ [Centigrade, Clinical, Fahrenheit, Maximum, Minimum, Reaumur, t. (ಆಯಾ ಪದ ನೋಡಿ)]. **Thermométric(al)** (ಗು.); **Thermométrically** (ಕ್ರಿ. ವಿ.); **Thermómetry** (ನಾ.) ಶಾಖಮಾಪನ; ಶಾಖಮಾಪಕ—ರಚನೆ, ಪ್ರಯೋಗ.

Thérmos ತರ್ಮಾಸ್ (ನಾ.) ಒಳಗಿರುವ ಪಾನೀಯ ಅಥವಾ ಪದಾರ್ಥ ತುಂಬ ಹೊತ್ತು ಆರದಂತೆ ಏರ್ಪಾಟುಳ್ಳ ಒಂದು ಬಗೆಯ ಶಾಖಪಾತ್ರೆ: ಕಾವು—ಸೀಸೆ, ಬುಡ್ಡಿ (=T. flask) (Vacuum ಕೆಳಗೆ V. flask ನೋಡಿ)

Théroid ತಿಯರಾಯ್ಡ್ (ಗು.) (ಮು., ಹುಟ್ಟುದಡ್ಡನ ವಿಷಯದಲ್ಲಿ) ಮೃಗದಂಥ, ಪಾಶವ(ಪ್ರವೃತ್ತಿಯ)

Therólogy ತಿಯರಾಲೊಜಿ (ನಾ.) ಸಸ್ತನಿ ಪ್ರಾಣಿಶಾಸ್ತ್ರ. **Therólogist** (ನಾ.)

Thesaúrus ತಿಸಾರಸ್ (ನಾ.) ನಿಘಂಟು, ಶಬ್ದಕೋಶ, ಜ್ಞಾನಕೋಶ.

These. This ಪದದ ಬ. ವ.

Thésis ತೀ(ತೆ)ಸಿಸ್ (ನಾ., ಬ. ವ. Theses ತೀಸೀಸ್) ಸಮರ್ಥಿಸಬೇಕಾದ, ಪ್ರತಿಪಾದಿಸಬೇಕಾದ, —ವಿಷಯ: ಪ್ರತಿಜ್ಞೆ, ಪ್ರಮೇಯ; (ಮು., ವಿ. ವಿ. ನಿ. ದ ವಿದ್ವತ್ ಪ್ರಶಸ್ತಿಗಾಗಿ ವಿದ್ಯಾರ್ಥಿ ಬರೆದು ಕಳಿಸಿದ) ಪ್ರೌಢ ಪ್ರಬಂಧ. (ಶಾಲೆಯ) ಅಭ್ಯಾಸ ಪಾಠ; (ಇಂಗ್ಲಿಷ್ ಛಂ.) ಸ್ವರಭಾರವಿಲ್ಲದ—ಉಚ್ಚಾರಾಂಶ, ಅಕ್ಷರ (Arsis ಹೋಲಿಸಿ)

Théspian ತೆಸ್ಪಿಯನ್ (ಗು.) (ಕ್ರಿ. ಪೂ. ೬ನೆಯ ಶ. ಮಾ. ದಲ್ಲಿದ್ದ, ಗ್ರೀಕ್ ನಾಟಕದ ಮೂಲಪುರುಷನೆಂದು ಪ್ರತೀತಿ ಇರುವ) ತೆಸ್ಪಿಸ್ಸಿನ. The T. art ನಾಟಕ (ಕಲೆ)

Théta ತೀಟ (ನಾ.) ಗ್ರೀಕ್ ವರ್ಣಮಾಲೆಯ ಎಂಟನೆಯ ಅಕ್ಷರ (ಥಕಾರ; ⊔, θ)

Théurgy ತೀಯರ್ಜಿ (ನಾ.) (ಮು., ಮನುಷ್ಯ ವ್ಯವಹಾರಗಳಲ್ಲಿ) ಅತಿಮಾನುಷ, ದೈವ, —ವ್ಯಾಪಾರ; ದೈವಘಟನೆ; ದೈವಸಹಾಯ ಪಡೆಯುವ ಕಲೆ; ಭೂತವಿದ್ಯೆ; ಇಂದ್ರಜಾಲ; (ಕಣ್ಕಟ್ಟಿನಿಂದ ಭಿನ್ನವಾದ) ದೈವ—ಪ್ರಭಾವ, ಮಾಟ. **Theúrgic(al)**; **Théurgist** (ನಾ.) ಪವಾಡಕಾರ, ಅದ್ಭುತಕಾರ, ಐಂದ್ರಜಾಲಿಗ.

Thews ತ್ಯೂಸ್ (ನಾ., ಬ. ವ.) ಸ್ನಾಯುಗಳು, ಮಾಂಸಖಂಡಗಳು; (ರೂಪ.) ವೀರ್ಯ, ಸತ್ತ್ವ, ಕಸುವು; ನೈತಿಕ—ಧೈರ್ಯ, ಬಲ. **Thewed** (ಗು.); **Thewless** (ಗು.); **Thewy** (ಗು.)

They ದೇ (ಸ. ನಾ., He, She, It ಗಳ ಬ. ವ.; ದ್ವಿತೀಯ Them, ಷಷ್ಠಿ Their) ಅವರು, ಅವು (T. say ಜನ ಹೇಳುತ್ತಾರೆ)

Thick ತಿಕ್ (ಗು., ನಾ., ಕ್ರಿ. ವಿ.) ದಪ್ಪ(ನಾದ), ಸ್ಥೂಲ, ಮಂದ [Bread is cut too t. ರೊಟ್ಟಿಯನ್ನು ತುಂಬ ಮಂದವಾಗಿ ಕತ್ತರಿಸಿದೆ. A board two inches t. ಎರಡು ಅಂಗುಲ ದಪ್ಪದ, ಮಂದದ, ಹಲಗೆ]; (ಗೆರೆ, ಮೊ. ಗಳ ವಿಷಯದಲ್ಲಿ) ಅಗಲವಾದ; (ಬರವಣಿಗೆ, ಅಚ್ಚು, ಮೊ. ಗಳ ವಿಷಯದಲ್ಲಿ) ದಪ್ಪ ಗೆರೆಯ; ಒತ್ತಾದ, ದಟ್ಟವಾದ, ನಿಬಿಡ, ಸಾಂದ್ರ (T. hair, forest ದಟ್ಟ—ಕೂದಲು, ಅಡವಿ. Crowd grew thicker ಗುಂಪು ನಿಬಿಡವಾಗುತ್ತ ಬಂತು); ಬಹಳ, ಅಸಂಖ್ಯಾತ (Fell t. as peas); ತುಂಬಿದ, ಇಡಿದ, ಇಡುಕಿರಿದ (*With* ಉಪ. ಜೊಡನೆ) (Trees t. with leaves. Air t. with snow); ಗಟ್ಟಿಯಾದ, ಮಂದ (T. paste, soup); ರಾಡಿಯಾದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಗ್ಗಡವಾದ (T. puddles) ; ಮೋಡ ಮುಸುಕಿದ, ತಿಳಿಯಾಗಿಲ್ಲದ (Weather is still t.) ; ದಡ್ಡ, ಮಂದಬುದ್ಧಿಯ ; (ಧ್ವನಿಯ ವಿಷಯದಲ್ಲಿ) ಕುಗ್ಗಿದ, ಅಸ್ಪಷ್ಟ; (ಬಳ. ಮಾ.) ಬಹಳ ಆಪ್ತ, ಕೇವಲದ, ಅನ್ಯೋನ್ಯವಾದ [T. as thieves ಕಳ್ಳ ಕಳ್ಳರ(ಷ್ಟು) ಅನ್ಯೋನ್ಯ ; 'ಗಳಸ್ಯ ಕಂಠಸ್ಯ'] ; [Lay it on t. (ಅಸಂ.) (Lay[3] ನೋಡಿ). A bit t., rather t., A little too t. (ಅಸಂ.) ಅತಿ, ವಿಪರೀತ]. [**T. ear** (ಅಸಂ.) (ಏಟು ಬಿದ್ದದ್ದರಿಂದ) ಕಿವಿಯೂತ (Give person a t. ear). **Thíckhead** ದಡ್ಡ, ಮಂದಬುದ್ಧಿ. **Thíckheaded** (ಗು.) ; **Thickset** (ಗು., ನಾ.) ಒತ್ತಾಗಿ—ಇಟ್ಟ, ಬೆಳೆದ ; ಸ್ಥೂಲವಾದ ; ಕೊಣೆಯನಾದ. (ನಾ.) ಒಂದು ಬಗೆಯ ದಪ್ಪ (ಫಸ್ಟಿಯನ್) ಬಟ್ಟೆ. ದಟ್ಟ ಪೊದೆ (=T.-s. hedge). **T.-skinned** (Skin ನೋಡಿ). **T.-skulled, -witted** ಮಂದಬುದ್ಧಿಯ; ದಡ್ಡ. **Thick'un** (ಅಸಂ.) ಸವರನ್ನು (ನಾಣ್ಯ)]. (ನಾ.) ದಪ್ಪ, ಮಂದ, —ಭಾಗ [(ರೂಪ.) In the t. of it (ಹೋರಾಟ, ಮೊ. ಗಳ) ನಟ್ಟನಡುವೆ ; ಮಗ್ನನಾಗಿ] ; (ಬಳ. ಮಾ.) ಮಂದಬುದ್ಧಿ, ಮೊದ್ದು ; (ಅಸಂ.) ಕೋಕೊ. [Through t. & thin ಕಷ್ಟದಲ್ಲಿಯೂ ಸುಖದಲ್ಲಿಯೂ (ಏಕಪ್ರಕಾರವಾಗಿ) ; ಒಂದೇ ನಿಷ್ಠೆಯಿಂದ. **T.-&-thin** (ಗು.) ಗಾಢ, ದೃಢ, —ನಿಷ್ಠೆಯ (T.-&-thin supporters)]. (ಕ್ರಿ.ವಿ.) ದಪ್ಪಗೆ, ಮಂದವಾಗಿ, ದಟ್ಟವಾಗಿ (Snow was falling t.; Blows came fast & t. ಬೇಗ ಬೇಗ ಬಹಳ ಏಟುಗಳು ಬಿದ್ದವು. Heart beats t. ಎದೆ ಡವಡವನೆ ಹೊಡೆದುಕೊಳ್ಳುತ್ತದೆ). **Thícken** (ಕ್ರಿ.) ದಪ್ಪ, ದಟ್ಟ, ಗಾಢ, ಮಂದ, —ಮಾಡು, ಆಗು (Plot thickens ಕಥೆ, ವಸ್ತು, —ಉತ್ಕಟವಾಗುತ್ತದೆ, ತೊಡಕಾಗುತ್ತದೆ) ; (ಹುಳಿ, ಮೊ. ನ್ನು) ಗಟ್ಟಿ(ಯಾಗಿ) ಮಾಡು [**Thíckening** (ನಾ.)]. **Thíckish** (ಗು.) ; **Thíckly** (ಕ್ರಿ. ವಿ.) ; **Thíckness** (ನಾ.) ದಪ್ಪ(ವಾಗಿರುವುದು), ಮಂದ ; (ಒಂದು ಗೊತ್ತಾದ ಮಂದದ) ಪದರ (Three thicknesses of cardboard will suffice ರಟ್ಟಿನ ಮೂರು ಪದರ, ಮಂದ, ಸಾಕು)

Thícket ತಿಕೆಟ್ (ನಾ.) ಪೊದೆ, ಮೆಳೆ, ಒಬ್ಬೆ, ಹೊದರು, ಕಾಡು.

Thief ತೀಫ್ (ನಾ., ಬ. ವ. -ves —ವ್ಸ್) (ಮು., ಗುಟ್ಟಾಗಿ, ಹಿಂಸೆ ಮಾಡದೆ, ಕದಿಯುವ) ಕಳ್ಳ, ಚೋರ. ಮೋಂಬತ್ತಿ ಕರಗಿ ಹರಿದು ಹೋಗುವಂತೆ ಮಾಡುವ ಅದರ ಬತ್ತಿಯ ಚಾಚು : ಕಳ್ಳಬತ್ತಿ. **Thieve** (ಕ್ರಿ.) ಕಳ್ಳನಾಗಿರು, ಕದಿ, ಚೌರ್ಯಮಾಡು, ಚೋರಿ ನಡಸು. **Thiévery** (ನಾ.) ಕಳ್ಳತನ ; ಚೌರ್ಯ. **Thiévish** (ಗು.) ; **Thiévishly** (ಕ್ರಿ. ವಿ.) ; **Thiévishness** (ನಾ.)

Thieve, etc. **Thief** ನೋಡಿ.

Thigh ತೈ (ನಾ.) ತೊಡೆ. [Smite hip & t. (Hip[1] ನೋಡಿ)]. T.-bone ತೊಡೆಯೆಲುಬು. **(-)thighed** (ಗು.)

Thill ತಿರ್ (ನಾ.) (ಬಂಡಿಯ) ಮೂಕಿ, ದೂರಿ, ಈಸು. T.-horse ಮೂಕಿ (ನಡುವಣ) ಕುದುರೆ [=**Thíller** (ನಾ.)]

Thímble ತಿಂಬ್‌ರ್ (ನಾ.) ಹೊಲಿಯುವಾಗ ಬೆರಳಿಗೆ ತೊಂದರೆಯಾಗದಿರುವುದಕ್ಕೂ ಸೂಜಿಯನ್ನು ಒತ್ತುವುದಕ್ಕೆ ಸಹಾಯಕವಾಗಿಯೂ ದರ್ಜಿಯವರು ಬೆರಳಿಗೆ ಹಾಕಿಕೊಳ್ಳುವ ಲೋಹರಕ್ಷಣೆ : (ದರ್ಜಿಯ) ಬೆರಳು—ಕಾಪು, ಟೋಪಿ ; ಅಂಗುಸ್ತಾನ (ಅಂಗುಲತ್ರಾಣ). (ಯಂತ್ರಶಿಲ್ಪ) ಎರಡು ಕೊಳವೆಗಳನ್ನು ಕೂಡಿಸಲು ಮಧ್ಯೆ ಸೇರಿಸುವ ಸಣ್ಣ ಲೋಹದ ಕೊಳವೆ : ಕೂಡುಕೊಳವೆ (T. joint, coupling ಕೂಡುಕೊಳವೆ—ಸೇರುವೆ, ಜೋಡಣೆ) ; ಹಗ್ಗ ಉಜ್ಜುವಿಕೆಗೆ ಸಿಕ್ಕಿ ಸವೆಯದಂತೆ ಹಾಕುವ, ಹಗ್ಗದ ಕುಣಿಕೆಯಲ್ಲಿ ಬಿಗಿಯಾಗಿ ಕಚ್ಚಿಕೊಳ್ಳುವಂತೆ ಹೊರಸುತ್ತಿನಲ್ಲಿ ಗಾಡಿಮಾಡಿರುವ, ಲೋಹದ ಉಂಗುರ, ಬಳೆ : ಕಣ್ಣಿ—ಉಂಗುರ, ಬಳೆ. **Thímbleful** (ನಾ.) (ಬ್ರಾಂದಿ, ಮೊ.) ಸಣ್ಣ ಮೊತ್ತದ ಪಾನೀಯ : ಗುಟುಕು, ಒಂದು ಒಳಲೆ. **T.-pie** (ಶಿಕ್ಷೆಯಾಗಿ) ಬೆರಳುಕಾಪಿನಿಂದ ತಲೆಯಮೇಲೆ ಮೊಟಕುವುದು.

Thímblerig (ನಾ., ಕ್ರಿ. ಅಕ.) ಜಾತ್ರೆ, ಮೊ. ಗಳಲ್ಲಿ ನಡೆಯುವ, ಬೆರಳುಕಾಪಿನಾಕಾರದ ಮೂರು ಸಣ್ಣ ಬಟ್ಟಲುಗಳನ್ನೂ ಒಂದು ಬಟಾಣಿ ಬೀಜವನ್ನೂ ತೆಗೆದುಕೊಂಡು ಬಟಾಣಿ ಬೀಜದಮೇಲೆ ಕೈಚಳಕದಿಂದ ಬಟ್ಟಲುಗಳನ್ನು ಕವಿಚಿ, ಆಟ ನೋಡುತ್ತಿರುವವರು ಯಾವ ಬಟ್ಟಲ ಕೆಳಗೆ ಬೀಜವಿದೆಯೆಂದು ಊಹಿಸಿ, ಅದರಮೇಲೆ ಪಣವೊಡ್ಡುವ ಒಂದು ಆಟ : ಬಟ್ಟಲು ಚಳಕದಾಟ. (ಕ್ರಿ.) —ಆಡು; ಮೋಸಮಾಡು, ತಂತ್ರಮಾಡು, ಠಕ್ಕಿಸು. **Thímblerigger** (ನಾ.) —ಆಟಗಾರ; ಮೋಸಗಾರ, ವಂಚಕ, ಠಕ್ಕ.

Thin ತಿನ್ (ಗು.) ತೆಳುವಾದ, ತೆಳ್ಳನೆಯ, ಅತಿ ನವುರಿನ, ಸಣ್ಣ (T. wire, string, board, sheet) ; ಒತ್ತಾಗಿಲ್ಲದ, ವಿರಳ (T. air); ದಟ್ಟವಾಗಿಲ್ಲದ, (ಜನ) ತುಂಬಿಲ್ಲದ (T. house ಜನ ಕಡಮೆಯಿದ್ದ ನಾಟಕಶಾಲೆ); ಗಟ್ಟಿಯಾಗಿಲ್ಲದ, ನೀರಾದ, ಅಳ್ಳಕವಾದ (T. gruel); ನಿಸ್ಸಾರ, ಸಪ್ಪೆಯಾದ (T. beer, humour) ; (ರೂಪ.) ಹುರುಳಿಲ್ಲದ, ಕ್ಷುಲ್ಲಕ, ಪೊಳ್ಳು ಸುಲಭವಾಗಿ ತಿಳಿದುಹೋಗುವ, ತೆಳ್ಳನೆಯ [T. excuse, disguise. (ಬಳ. ಮಾ.) That's too t. ಅದು ತೀರ ಹುರುಳಿಲ್ಲದ್ದು, ಕ್ಷುಲ್ಲಕವಾದ್ದು, ನಂಬಲಾಗದ್ದು]. ಸಣಕಲಾದ, ಬಡಕಲಾದ, ತುಂಬಿಕೊಂಡಿಲ್ಲದ (A t. face) ; (ಗೆರೆ) ತೆಳ್ಳನೆಯ ; ನಾಜೂಕಾದ, ಸೂಕ್ಷ್ಮವಾದ ; (ಲಿಪಿ, ಅಚ್ಚುಮೊಳೆ) ತೆಳುಗೆರೆಯ ; (ಅಸಂ.) ಮುಜಗರದ, ಬೇಸರದ, ಮನಸ್ಸಿಗೆ ಒಗ್ಗದ [Have a t. time (of it)] ; [Through thick & t. (Thick ನೋಡಿ)]. T.-skinned (Skin ನೋಡಿ). T. captain ಒಂದು ಬಗೆಯ ಸಣ್ಣ ಸಾದಾ ಬಿಸ್ಕತ್ತು. **Thínly** (ಕ್ರಿ. ವಿ.); **Thínness** (ನಾ.) ; **Thínnish** (ಗು.)

Thin (ಕ್ರಿ.) ತೆಳು, ಸಣ್ಣ, ಕೃಶ, ಬಡಕಲು, —ಮಾಡು, ಆಗು ; (ಗಾತ್ರದಲ್ಲಿ, ಸಂಖ್ಯೆಯಲ್ಲಿ) ಕಡಮೆಯಾಗು, ಕುಗ್ಗು (His hair is thinning. To t. our population) ; (ಬಳ್ಳಿ, ಗಿಡ, ಮೊ. ಗಳಿಂದ) ಮಿಕ್ಕ ಕಾಯಿಗಳು ಹೊರವಾಗಿ ಬೆಳೆಯಲು ಅನುಕೂಲವಾಗುವಂತೆ ಕೆಲವು ಸಣ್ಣ ಕಾಯಿಗಳನ್ನು ಕಿತ್ತುಹಾಕು ; (ಬೆಳೆ) ವಿರಳಮಾಡು (T. out seedlings ಕುಂಟೆ ಹೊಡೆದು, ಕೆಲವು ಸಸಿಗಳನ್ನು ಕಿತ್ತುಹಾಕಿ, —ವಿರಳಮಾಡು)

Thine. **Thy** ನೋಡಿ.

Thing ತಿಂಗ್ (ನಾ.) ವಸ್ತು, ಪದಾರ್ಥ, ಸಾಮಗ್ರಿ, ವಿಷಯ, ಸಾಮಾನು, ಸರಕು ; (ತಿರಸ್ಕಾರ, ಅನುತಾಪ, ವಾತ್ಸಲ್ಯ, ಮೊ. ನ್ನು ಸೂಚಿಸುವಲ್ಲಿ ಸಚೇತನಗಳ, ಮು., ವ್ಯಕ್ತಿಯ ವಿಷಯದಲ್ಲಿ ಪ್ರ.) ಪ್ರಾಣಿ [Poor t. ಅಯ್ಯೋ ಪಾಪ ; ಬಡ ಪ್ರಾಣಿ. A dear old t. ; Dumb things ಮೂಕ ಪ್ರಾಣಿಗಳು. (ಅಸಂ.) Old t. (Old ನೋಡಿ). (ಬಳ. ಮಾ.) And things ಇನ್ನೂ ಅಂಥವು, ಇತ್ಯಾದಿ] ; [Got my things wet ನನ್ನ ಬಟ್ಟೆ(ಬರೆ) ನೆನೆದುಹೋಯಿತು. Pack up your things ನಿನ್ನ ಗಂಟು ಮೂಟೆ ಕಟ್ಟು, ಸಾಮಾನು ಕಟ್ಟಿಕೊ. A foolish t. to do (ಮಾಡಬಾರದಾಗಿತ್ತು ಎಂಬ ಅರ್ಥದಲ್ಲಿ) : ಮುಠ್ಠಾಳ, ಪೆಚ್ಚು, —ಕೆಲಸ. Soft t. (Soft ನೋಡಿ). Put-up t. ಸೃಷ್ಟನೆ, ಮೋಸ, ಸೋಗು. The only t. now is to take a cab ಈಗ ಮಾಡಬೇಕಾಗಿರುವುದು, ಮಾಡುವುದಕ್ಕೆ ಉಳಿದಿರುವುದು,—ಒಂದು ಗಾಡಿ ಗೊತ್ತುಮಾಡಿಕೊಂಡು ಹೋಗುವುದು. Not the t. ಸಂಪ್ರದಾಯವಲ್ಲ, ಶಿಷ್ಟಾಚಾರವಲ್ಲ. Am not feeling at all the t. ನನಗೆ ಮೈ ಸರಿಯಾಗಿಲ್ಲ, ಸ್ವಸ್ಥವಾಗಿಲ್ಲ. The latest t. in hats ಟೋಪಿಗಳಲ್ಲಿ ಇತ್ತೀಚಿನ, ಹೊಸ, ಮಾದರಿ. Has made a mess of things ಎಲ್ಲವನ್ನೂ ಕುಲಗೆಡಿಸಿಬಿಟ್ಟಿದ್ದಾನೆ, ಅವ್ಯವಸ್ಥೆಮಾಡಿ ಹಾಕಿದ್ದಾನೆ. (ನ್ಯಾ. ಶಾ.) Things personal, real ಚರ, ಸ್ಥಿರ, —ಆಸ್ತಿ, ಸ್ವತ್ತು. (ಬ. ವ. ದಲ್ಲಿ ; ಅನೇಕ ವೇಳೆ ಹಾಸ್ಯ ಪ್ರ. : —ಎಂದು ಹೇಳುವವು ಎಂಬರ್ಥದಲ್ಲಿ): Things Japanese, political, feminine ಜಪಾನು ಸಾಮಾನುಗಳು ರಾಜಕೀಯ ವಿಷಯಗಳು, ಹೆಂಗಸರ ವಿಚಾರಗಳು (—ಎಂಬವು).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Make a good t. of —ಇಂದ ಒಳ್ಳೆಯ ಲಾಭಮಾಡು. Do the handsome t. by (—ವಿಷಯದಲ್ಲಿ) ಚೆನ್ನಾಗಿ, ಆದರದಿಂದ,— ನಡೆದುಕೊ, ಕಾಣು. Know a t. *or* two ಮರ್ಮ, ವಿಷಯ, —ತಿಳಿದಿರು ; ಅನುಭವವಾಗಿರು, ಮಾಹಿತಿ ಪಡೆದಿರು]

Thíngamy ತಿಂಗಮಿ, **Thíngumajig** ತಿಂಗಮಜಿಗ್, **Thíngumbob** ತಿಂಗಮ್‌ಬಾಬ್, **Thíngummy** ತಿಂಗಮಿ (ನಾ.) (ಆ ತತ್‌ಕ್ಷಣ ಹೆಸರು ನೆನಪಾಗದಾಗ ಅಥವಾ ಹೆಸರು ಹೇಳುವುದಕ್ಕೆ ಇಷ್ಟಪಡದ ಸಂದರ್ಭದಲ್ಲಿ ಪ್ರ.) : ಅದು (ಎಂದರೆ), ಅವನು, ಆ ಆಸಾಮಿ.

Think ತಿಂಕ್ (ಕ್ರಿ.; ಭೂತ., ಭೂ. ಕೃ. Thought ತಾಟ್) ಭಾವಿಸು ; ಎಣಿಸು, ಯೋಚಿಸು, ಅಭಿಪ್ರಾಯಪಡು, ಪರಿಗಣಿಸು, ಅರಯ್ಯಿ (ಗ್ರಾಂ.), ವಿಚಾರಮಾಡು, ಆಲೋಚಿಸು, ಉದ್ದೇಶಿಸು, ಊಹಿಸು, ಕಲ್ಪನೆಮಾಡಿಕೊ [We t. (that) he will come ಅವನು ಬರುತ್ತಾನೆಂದು ತೋರುತ್ತದೆ. We do not t. it probable. It is not thought fair ಅದು ಸರಿಯೆಂಬ ಅಭಿಪ್ರಾಯವಿಲ್ಲ. (ಅನಂ. ; ವ್ಯಂಗ್ಯ ಪ್ರ. ದಲ್ಲಿ) You are a pattern of virtue, I don't t. ಆಹಾ! ನೀನು ಸದ್ಗುಣದ ಆದರ್ಶ ಎಂದು ನನಗೆ ಭಾವನೆಯಿಲ್ಲ. Thinks to deceive us ನಮ್ಮನ್ನು ಮೋಸಗೊಳಿಸಲು ಉದ್ದೇಶಿಸಿದ್ದಾನೆ. Cannot t. the infinite ಅನಂತದ ಕಲ್ಪನೆಯನ್ನು ಮಾಡಿಕೊಳ್ಳಲು ಆಗುವುದಿಲ್ಲ. (ಬಳ. ಮಾ.) I can't t. how you do it ನೀನು ಹೇಗೆ ಮಾಡುತ್ತೀಯೋ ನಾನು ಕಾಣೆ, ನನಗೆ ತಿಳಿಯದು. Cannot t. away a toothache ಬರಿ ಆಲೋಚನೆಗೆ ಹಲ್ಲುನೋವು ಹೋಗುವುದಿಲ್ಲ. Will t. himself silly ಅವನು ಯೋಚನೆ ಮಾಡಿ ಮಾಡಿ ಪೆದ್ದನಾಗುತ್ತಾನೆ. Let me t. (ಉತ್ತರ ಕೊಡುವುದು, ಮೊ. ಕ್ಕೆ ಮೊದಲು ಕಾಲಾವಕಾಶ ಕೇಳುವಲ್ಲಿ): ಸ್ವಲ್ಪ ಯೋಚಿಸುತ್ತೇನೆ ; ನಾನು ಆಲೋಚನೆ ಮಾಡಬೇಕು. T. twice before doing ಮಾಡುವ ಮೊದಲು ಚೆನ್ನಾಗಿ ಯೋಚನೆ ಮಾಡು ; ದುಡುಕಬೇಡ. T. in German ಜರ್ಮನ್ ಭಾಷೆಯಲ್ಲಿ ಆಲೋಚನೆ ಮಾಡು, ಭಾವನೆಮಾಡು. I t. I'll try (ದೃಢೋದ್ದೇಶವಿಲ್ಲದಿರುವಾಗ) ನೋಡೋಣ, ಪ್ರಯತ್ನಪಡುತ್ತೇನೆ ; ಪ್ರಯತ್ನಪಡುತ್ತೇನೆಂದು ಕಾಣುತ್ತದೆ]. T. about (ಯೋಜನೆ, ಕಾರ್ಯ, ಮೊ. ಗಳ ಸಾಧ್ಯಾಸಾಧ್ಯತೆ, ಮೊ. ನ್ನು ಕುರಿತು) ಪರ್ಯಾಲೋಚಿಸು, ವಿಚಾರಮಾಡು. T. aloud (ಮನಸ್ಸಿನ ಭಾವನೆಗಳನ್ನು) ಬಾಯಲ್ಲಿ ಆಡಿಕೊ; ಗಟ್ಟಿಯಾಗಿ (ಕೇಳುವಂತೆ) ಯೋಚಿಸು. T. of ಯೋಚಿಸು, ವಿಚಾರಮಾಡು ; ಭಾವಿಸಿಕೊ, ಎಂದುಕೊ (Must be thinking of going. To t. of his not guessing it! ಅವನು ಅದನ್ನು ಊಹಿಸಲಾಗಲಿಲ್ಲವೆಂದು ಅಂದುಕೊಳ್ಳುವುದು ಕಷ್ಟ). T. better of (Better[1] ನೋಡಿ). T. little *or* nothing of ಅಲ್ಪವೆಂದು, ತುಚ್ಛವಾಗಿ, ಅಪ್ರಯೋಜಕವೆಂದು,—ಪರಿಗಣಿಸು ; ಲೆಕ್ಕಿಸದಿರು (T. nothing of 30 miles a day ದಿನಕ್ಕೆ ೩೦ ಮೈಲಿ ಹೋಗುವುದು ನನಗೇನೂ ಲೆಕ್ಕವಿಲ್ಲ. I t. nothing of your friend Jones ನಿನ್ನ ಸ್ನೇಹಿತ ಜೋನ್ಸ್ ಅಪ್ರಯೋಜಕನೆಂದು ಗಣಿಸುತ್ತೇನೆ). T. much, well, highly, of ಬಹಳವಾಗಿ ಭಾವಿಸು, ಎಣಿಸು. T. no small beer of (Beer[1] ನೋಡಿ). T. out ಪರ್ಯಾಲೋಚಿಸು, ಎಚ್ಚರಿಕೆಯಿಂದ ಯೋಚಿಸಿ ನೋಡು ; (ಯೋಜನೆ, ಮೊ. ನ್ನು) ಕಲ್ಪಿಸು, ಹುಡುಕು, ಹಂಚಿಕೆಮಾಡು. T. over ಚಿಂತನೆಮಾಡು, ಪರ್ಯಾಲೋಚಿಸು, ಮನಸ್ಸಿನಲ್ಲಿ ವಿಚಾರ ಮಾಡು (T. over what I have said). T. fit *or* good (to do) (ಮಾಡಲು) ಉಚಿತವೆಂದು, ಯೋಗ್ಯವೆಂದು, —ಭಾವಿಸು]. **Thínkable** (ಗು.) ; **Thínker** (ನಾ.) ; **Thínking** (ಗು.) ಆಲೋಚನೆ ಮಾಡುವ, ಆಲೋಚನಾಶಕ್ತಿಯುಳ್ಳ, ವಿವೇಚನೆಯುಳ್ಳ. (All t. men)

Third ತರ್ಡ್ (ಗು., ನಾ.) ಮೂರನೆಯ(ದು, —ವನು, —ವಳು) ; ತೃತೀಯ [T. estate (ಒಂದು ದೇಶದ) ಜನಸಾಮಾನ್ಯರು. T. of exchange (Exchange ನೋಡಿ). T.-class, -rate (ಕಿಳಿಲ ಪ್ರ.) ಕೀಳು ತೆರನ, ಕಳಪೆಯ. (ಕ್ರಿಕೆಟ್) T. man ದಾಂಡುಗಾರನ ಬಲಕ್ಕೆ ಸ್ವಲ್ಪ ಹಿಂದುಗಡೆ ನಿಂತು ಆಟ ಕಾಯುವವನು. T. party (ಮೊಕದ್ದಮೆ, ಮೊ. ಗಳಲ್ಲಿ ಕಕ್ಷಿ ಪ್ರತಿಕಕ್ಷಿಗಳಲ್ಲದ) ಮೂರನೆಯವನು. T.-party risks (ಅವನೇ ನೇರವಾಗಿ ವಿಮಾದಾರನಲ್ಲದಿದ್ದರೂ ಯಾವನಿಗೆ ಆದ ನಷ್ಟವನ್ನು ಕಟ್ಟಿಕೊಡಲು ವಿಮಾಧಿಕಾರಿ ಬದ್ಧನಾಗಿರುತ್ತಾನೆಯೋ ಆ) ಮೂರನೆಯವನ ನಷ್ಟ. T. person ಮೂರನೆಯವನು ; (ವ್ಯಾ.) ಪ್ರಥಮ ಪುರುಷ]. ಮೂರನೆಯೊಂದು ಭಾಗ ; (ಕಾಲದ ಅಥವಾ ಕೋನದ) ಸೆಕಂಡಿನ ಅರುವತ್ತನೆಯೊಂದು ಭಾಗ ; (ಬ. ವ. ದಲ್ಲಿ) ಕೆಲವು ಸಂದರ್ಭಗಳಲ್ಲಿ ವಿಧವೆಗೆ ಸಲ್ಲತಕ್ಕ, ಗಂಡನ ಆಸ್ತಿಯ ಮೂರನೆಯೊಂದು ಭಾಗ : ತೃತೀಯಾಂಶ. **Thírdly** (ಕ್ರಿ. ವಿ.)

Thirst ತರ್ಸ್ಟ್ (ನಾ., ಕ್ರಿ. ಸಕ.) ನೀರಡಿಕೆ, ಬಾಯಾರಿಕೆ, ದಾಹ, ತೃಷೆ [Have a t. (ಬಳ. ಮಾ.) ಬಾಯಾರಿಕೆಯಾಗಿರು, ಪಾನೀಯ ಬೇಕಾಗಿರು]; (ರೂಪ.) ಕಟ್ಟಾಸೆ, ಹೆಬ್ಬಯಕೆ (*Of, for, after* ಉಪ. ಜೊಡನೆ) (T. for glory). (ಕ್ರಿ.) ಬಾಯಾರು, ದಾಹಪಡು, ತೃಷಾರ್ತನಾಗಿರು (ಮು., ರೂಪ.) [(*For, after* ಉಪ. ಜೊಡನೆ) (To t. after power)]. **Thírstless** (ಗು.) ; **Thírsty** (ಗು.) ಬಾಯಾರಿದ, ನೀರಡಸಿದ, ತೃಷಾರ್ತ (Be t. ಬಾಯಾರಿಕೆಯಾಗಿರು, ದಾಹವಾಗಿರು); ಕುಡಿತದ ಆಸೆಯುಳ್ಳ, ಪಾನಾಸಕ್ತ; (ಪ್ರದೇಶ, ಋತು, ಮೊ. ಗಳ ವಿಷಯದಲ್ಲಿ) ಒಣಗಿದ, ಬತ್ತಿದ, ಬರಹಿಡಿದ; (ಬಳ. ಮಾ.) ಬಾಯಾರಿಕೆ ಹುಟ್ಟಿಸುವ (This is a t. work). **Thírstily** (ಕ್ರಿ. ವಿ.)

Thirteén ತರ್ಟೀನ್ (ಗು., ನಾ.) ಹದಿಮೂರು (೧೩, 13, XIII) (The t. superstition ೧೩ನೆಯ ಸಂಖ್ಯೆ ಅವಲಕ್ಷಣದ್ದು ಎಂಬ ಮೂಢಭಾವನೆ). **Thirteénth** (ಗು., ನಾ.) ಹದಿಮೂರನೆಯ(ದು, —ವನು, —ವಳು)

Thírty ತರ್ಟಿ (ಗು., ನಾ.) ಮೂವತ್ತು (೩೦, 30, XXX) [T.-one, etc. ೩೧, ಮೊ. ; T.-first, etc. ೩೧ನೆಯ(ದು), ಮೊ. ; T.-nine Articles (ಚರ್ಚ್ ಆಫ್ ಇಂಗ್ಲೆಂಡ್ ಎಂಬ ಕ್ರೈಸ್ತ ಮತದಲ್ಲಿ ದೀಕ್ಷೆ ವಹಿಸುವವನು ಒಪ್ಪಿಕೊಳ್ಳಬೇಕಾದ) ಮೂವತ್ತೊಂಬತ್ತು ನಿಯಮಗಳು. T.-two-mo, 32mo ಒಂದು ಹಾಳೆಯನ್ನು ೩೨ ಪತ್ರಗಳಾಗುವಂತೆ ಮಡಿಸಿ ಮಾಡಿದ ಆಕಾರ(ದ ಪುಸ್ತಕ)]. **Thírtieth** (ಗು., ನಾ.) ಮೂವತ್ತನೆಯ(ದು, —ವನು, —ವಳು). **Thírtyfold** (ಗು., ನಾ.) ಮೂವತ್ತು ಮಡಿ(ಯ)

This ದಿಸ್ (ಗು., ಸ. ನಾ. ; ಬ. ವ. These ದೀಸ್) (ಹತ್ತಿರ ಇರುವ, ತೋರಿಸಿ ಹೇಳಿದ, ಮುಟ್ಟಿ ತೋರಿಸಿದ, ಗಮನ ಸೆಳೆದ, ಸ್ವಲ್ಪ ಹಿಂದೆ ಹೇಳಿದ ಅಥವಾ ಪ್ರಸ್ತಾಪದಲ್ಲಿರುವ ವಸ್ತು ಅಥವಾ ವ್ಯಕ್ತಿಯನ್ನು ಕುರಿತದ್ದು) : ಈ (ವ್ಯಕ್ತಿ, ವಸ್ತು), ಇದು [Fold it like t. ಇದರಂತೆ, ಹೀಗೆ, —ಮಡಿಸು. T. is not fair ಇದು (ನೀನು ಮಾಡಿದ್ದು, ಈಗ ಹೇಳಿದ್ದು) ಸರಿಯಲ್ಲ, ನ್ಯಾಯವಲ್ಲ. Things are easier in these days ಈ ಕಾಲದಲ್ಲಿ ಇವೆಲ್ಲ ಸುಲಭ. T. & that, This, that, & the other (That ನೋಡಿ). T. much ಇಷ್ಟು (I know t. much, that the thing is absurd ನನಗೆ ಇಷ್ಟು ಗೊತ್ತು, ಅದು ಶುದ್ಧ ಅಸಂಬದ್ಧ). T. day ಈ ದಿನ, ಇವೊತ್ತು. Ought to be ready by t., before t. ಈ ಹೊತ್ತಿಗೆ, ಇದಕ್ಕೆ ಮುಂಚೆಯೇ, ಸಿದ್ಧವಾಗಿರಬೇಕು. Have been asking for these (or t.) three weeks ಈ ಮೂರು ವಾರಗಳಿಂದ ಕೇಳುತ್ತಲೇ ಇದ್ದೇನೆ]. **Thísness** (ನಾ.) = Haecceity (ಆ ಪದ ನೋಡಿ)

Thistle ತಿಸ್‌ಲ್ (ನಾ.) ಊದಾ ಬಣ್ಣದ, ಹಳದಿಯ, ಅಥವಾ ಬಿಳಿಯ ಹೂವು ಬಿಡುವ, ಹೂವಿನ ಬುಡದಲ್ಲಿ ಗುಂಡು ಅಥವಾ ಉರುಳೆ ಗಂಟಿಯಿರುವ ಹಲವು ಬಗೆಯ ಮುಳ್ಳುಗಿಡ : ಅರಿಸಿನ ಉಮ್ಮತ್ತ, ಗೊಳಗೊಳಿಕೆ, ಬ್ರಹ್ಮದಂಡಿ, ಗೋಕ್ಷುರ ; ಸ್ಕಾಟ್ಲೆಂಡಿನ ರಾಷ್ಟ್ರೀಯ ಚಿಹ್ನೆ(ಯಾದ ತಿಸ್‌ಲ್ ಹೂವು) (Order of the T. ಸ್ಕಾಟ್ಲೆಂಡಿನ ಒಂದು 'ನೈಟ್' ವರ್ಗ). **Thístly** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Thíther ದಿದರ್ (ಕ್ರಿ. ವಿ.) (ಪ್ರಾಚೀ. ಪ್ರ.) ಅಲ್ಲಿ(ಗೆ), ಆ ಸ್ಥಳ(ಕ್ಕೆ). **Thítherward(s)** (ಕ್ರಿ. ವಿ.)

Tho'. Though ಎಂಬುದರ ಸಂಕ್ಷಿಪ್ತ.

Thole[1] ತೋಲ್ (ಕ್ರಿ. ಸಕ.) (ಪ್ರಾಚೀ. ಪ್ರ.) (ನೋವು, ದುಃಖ, ಮೊ. ನ್ನು) ಪಡು, ಅನುಭವಿಸು; ತಾಳು, ಸಹಿಸು (He that has a good crop may t. some thistles); ಅವಕಾಶ, ಎಡೆ, —ಕೊಡು.

Thole[2] ತೋ(ತೌ)ಲ್ (ನಾ.) ದೋಣಿಯ ಪಕ್ಕದ ಮೇಲಂಚಿನಲ್ಲಿ ಹುಟ್ಟುಹಾಕುವುದಕ್ಕೆ ಆನಿಕೆಯಾಗಿ ಹಾಕಿರುವ ಲಂಬ ಅಣಿ: ಹುಟ್ಟಾಣಿ (=T.-pin); ಮಧ್ಯದಲ್ಲಿ ಹುಟ್ಟು ತಿರುಗುವಂತೆ ಹಾಕಿರುವ ಎರಡು ಲಂಬ ಅಣಿಗಳಲ್ಲೊಂದು.

Thong ತಾಂಗ್ (ನಾ., ಕ್ರಿ. ಸಕ.) (ಲಗಾಮು, ಚಾವಣಿ, ಮೊ. ಕ್ಕೆ ಉಪಯೋಗಿಸುವ) ತೊಗಲ, ಚರ್ಮದ, —ಪಟ್ಟಿ; ಮಿಣಿ, ಬಾರು. (ಕ್ರಿ.) ಬಾರು ಹಾಕು; ಬಾರಿನಿಂದ ಹೊಡೆ.

Thor ತಾರ್ (ನಾ.) ಸ್ಕಾಂಡಿನೇವಿಯದವರಲ್ಲಿ ಗುಡುಗು, ಯುದ್ಧ ಮತ್ತು ಕೃಷಿಗಳ ಅಧಿದೇವತೆ. T.'s hammer ಚಕಮಕಿ ಕಲ್ಲಿನ ಕೊಡಲಿ (ಕೊಡತಿ)

Thórax ತೋ(ಅ)ರ್ಯಾಕ್ಸ್ (ನಾ.) (ಅಂ. ರ. ಶಾ., ಪ್ರಾ. ವಿ.) ಕತ್ತಿಗೂ ಹೊಟ್ಟೆಗೂ (ಕೆಲವು ಪ್ರಾಣಿಗಳಲ್ಲಿ ಕತ್ತಿಗೂ ಬಾಲಕ್ಕೂ) ನಡುವಣ ಮುಂಡ ಭಾಗ: ಎದೆ(ಗೂಡು), ಬಗ್ಗರಿ, ಉರಸ್ಸು; (ಗ್ರೀಕ್ ಪ್ರಾ.) ಎದೆಗಾಪು, ಉರಸ್ತ್ರಾಣ, ಮೈಜೋಡು. **Thorácic** ತೊರ್ಯಾಸಿಕ್ (ಗು.); **Thoráci-, Thorácico-, Thoráco-** —ರೇ— (ಸ. ಪೂ. ಪ.) ಎದೆ—, ಉರಸ್—.

Thórite ತೋ(ಅ)ರೈಟ್ (ನಾ.) ನಾರ್ವೆ ದೇಶದಲ್ಲಿ ದೊರೆಯುವ ಒಂದು ಕಪ್ಪು ಬಣ್ಣದ ಸಾಂದ್ರ ಖನಿಜ: ತೋರೈಟು. **Thórium** (ನಾ.) ಈ ಖನಿಜದಲ್ಲಿಯ ಲೋಹ ಮೂಲಧಾತು: ತೋರಿಯಂ.

Thorn ತಾರ್ನ್ (ನಾ.) ಮುಳ್ಳು, ಕಂಟಕ; ಮುಳ್ಳು—ಮರ, ಗಿಡ; [A t. in one's flesh *or* side ನಿತ್ಯ—ವ್ಯಥೆ, ಬಾಧೆ, ಕಿರುಕುಳ (ಕೊಡುವಂಥದು); ಇರಿಮುಳ್ಳು, ಹೃಚ್ಛಲ್ಯ. Be, sit, on thorns (ಯಾವ ನಿಮಿಷದಲ್ಲಿ ಸಿಕ್ಕಿಬೀಳುವೆನೊ, ಯಾವ ಗಳಿಗೆಗೆ ಏನೊ, ಎಂಬ ಭಯದಿಂದ) ಬಲು ಆತಂಕಗೊಂಡಿರು; ಮುಳ್ಳಮೇಲಿರು]. ಈಗ ಬಳಕೆಯಲ್ಲಿಲ್ಲದ ಒಂದು ಇಂಗ್ಲಿಷ್ ಅಕ್ಷರ. **Thórnback** ಮುಳ್ಳು 'ರೇ' ಮೀನು; ಬ್ರಿಟಿಷ್ ಜೇಡನಳ್ಳಿ. **Thórnbill, Thórntail** ಹಲವು ಬಗೆಯ ಹಾಡುಹಕ್ಕಿ. **Thórnless** (ಗು.); **Thórny** (ಗು.) ಮುಳ್ಳಿದಿದ, ಕಂಟಕಿತ; (ರೂಪ.) ಮುಳ್ಳು ಸಹವಾಸದ; ಮನಸ್ಸನ್ನು ಇರಿಯುವ, ಬಾಧಿಸುವ; ಜಟಿಲ, ತೊಡಕಿನ (The t. question of States' rights)

Thórough ತರೊ(ರ) (ಗು., ನಾ., ಉಪ., ಕ್ರಿ. ವಿ.) ತೀರ, ಆದ್ಯಂತವಾದ(ಗಿ), ಪೂರ್ತ, ಸಂಪೂರ್ಣ(ವಾದ), ಪರಿಷ್ಕಾರವಾದ, ಶುದ್ಧವಾದ, ಪಕ್ಕಾ (His work is seldom t. ಅವನ ಕೆಲಸ ಪರಿಷ್ಕಾರವಾಗಿದ್ದುದೇ, ಪೂರ್ತಿಯಾಗಿದ್ದುದೇ, ಅಪರೂಪ. A t. change ಪೂರ್ತ ಬದಲಾವಣೆ. A t. scoundrel ಪಕ್ಕಾ ಪಟಿಂಗ). (ನಾ.) ಪಕ್ಕಾ ಕೆಲಸಗಾರತನ; ಪಗರ್ದಸ್ತು. (ಉಪ., ಕ್ರಿ. ವಿ.) ಮೂಲಕ ಹಾಯ್ದು. **T.-brace** ಬಂಡಿಯ ಒಡಲಿನ C ಆಕಾರದ ಎಗುರು ಪಟ್ಟಿಗಳ ನಡುವಣ ಕೂಡುಪಟ್ಟಿ: ಪೂರಾ ಪಟ್ಟಿ. **T.-bred** (ಗು., ನಾ.) (ಪ್ರಾಣಿಯ, ಮು., ಕುದುರೆಯ, ವಿಷಯದಲ್ಲಿ) ಶುದ್ಧ—ತಳಿಯ, ಜಾತಿಯ; (ವ್ಯಕ್ತಿಗಳ ವಿಷಯದಲ್ಲಿ ರೂಪ.) ಕುಲೀನ, ಅಭಿಜಾತ; ಸತ್ತ್ವಶಾಲಿಯಾದ, ಕೆಚ್ಚಿನ. **T.-going** ಸಂಪೂರ್ಣ, ಪಕ್ಕಾ, ಆಮೂಲಾಗ್ರ, ಕೂಲಂಕಷ (T.-going investigator, measure). **T.-paced** (ಕುದುರೆಯ ವಿಷಯದಲ್ಲಿ) ಎಲ್ಲ ನಡಗೆಯ ತರಪೇತುಳ್ಳ; (ರೂಪ.) ತೀರ, ಪಕ್ಕಾ (A t.-paced rascal). **T.-pin** ಕುದುರೆಯ ಚುಂಚುಗಾಲಿನ ಕುಳಿಯಲ್ಲಿಯ ಊತ. **Thóroughfare** ಮುಖ್ಯ (ಸಂಚಾರದ) ಬೀದಿ, ರಸ್ತೆ; ರಾಜಮಾರ್ಗ; ಛಾಟಾಮಾರ್ಗ [No thoroughfare (ಸಂಚಾರಾವಕಾಶವಿಲ್ಲದ, ಖಾಸಗಿ ರಸ್ತೆಯ, ಮುಂದೆ ಹಾಕಿರುವ ಎಚ್ಚರಿಕೆ): ಛಾಟಾಮಾರ್ಗವಲ್ಲ]. **Thóroughly** (ಕ್ರಿ. ವಿ.); **Thóroughness** (ನಾ.)

Thorp(e) ತಾರ್ಪ್ (ನಾ.) ಹಳ್ಳಿ, ಕೊಪ್ಪ(ಲು) (ಮು., ಸ್ಥಳದ ಹೆಸರುಗಳಲ್ಲಿ)

Those. That ಪದದ ಬ. ವ.

Thou ದೌ (ಸ. ನಾ.; ದ್ವಿತೀಯಾ Thee; ಬ. ವ. Ye, you; ಕ್ರಿ.) (ಪ್ರಾಚೀ. ಪ್ರ., ಕಾವ್ಯ ಪ್ರ., ಅಥವಾ ದೇವರನ್ನು ಸಂಬೋಧಿಸುವಲ್ಲಿ ಮಾತ್ರ) ನೀನು. (ಕ್ರಿ.) (ಒಬ್ಬನನ್ನು) 'ನೀನು' ಎಂದು—ಕರೆ, ಸಂಬೋಧಿಸು; (You ಗೆ ಬದಲು) Thou ಉಪಯೋಗಿಸು.

Though, tho' ದೋ (ಸಂ. ಅವ್ಯ.) —ರೂ, ಆದರೂ, ಹಾಗಾದರೂ, ಆದಾಗ್ಯೂ, ಹಾಗಿದ್ದರೂ (=Although) [He finished first t. he began last ಅವನು (ಇತರರಿಗಿಂತ) ಕೊನೆಯಲ್ಲಿ ಆರಂಭಿಸಿದರೂ ಮೊದಲು ಮುಗಿಸಿದನು. It is better to ask him (even) t. he refuse, refuses, should refuse ಅವನು ಇಲ್ಲ ಎನ್ನುವುದಾದರೂ ಅವನನ್ನು ಕೇಳುವುದು ಮೇಲು. I have no doubt he will understand—t. you never know ಅವನ ವಿಚಾರವನ್ನು ಯಾರೂ ಖಚಿತವಾಗಿ ಹೇಳುವಂತಿಲ್ಲದಿದ್ದರೂ ಅವನು ತಿಳಿದುಕೊಳ್ಳುವನೆಂಬುದರಲ್ಲಿ ನನಗೆ ಸಂದೇಹ ತೋರುವುದಿಲ್ಲ. I wish you had told me, t. ಆದರೂ ನೀನು ನನಗೆ ಹೇಳಿದ್ದರೆ ಚೆನ್ನಾಗಿತ್ತು]. What t. ಆದರೆ ತಾನೆ ಏನು, ಆದರೂ ಏನು [What t. the way is long, (ಪ್ರಾಚೀ. ಪ್ರ.) be long?]. As t. ಎಂಬಂತೆ, ಹಾಗೆ [It is as though a man should ask alms of a beggar ತಿರುಪೆಯವನನ್ನು ತಿರುಪೆ ಬೇಡಿದಹಾಗಿದೆ. He acts as t. he were mad ಅವನು ಹುಚ್ಚನಿದ್ದಹಾಗೆ, ಹುಚ್ಚನಹಾಗೆ, ವರ್ತಿಸುತ್ತಾನೆ]

Thought ತಾಟ್ (ನಾ.) ಯೋಚನೆ, ಆಲೋಚನೆ, ಆಲೋಚನಾಶಕ್ತಿ, ಆಲೋಚನಾ ವಿಷಯ, ವಿಚಾರ(ಶಕ್ತಿ), ಪರ್ಯಾಲೋಚನೆ, ಚಿಂತನೆ, ಧ್ಯಾನ, ಭಾವ(ನೆ), ಉದ್ದೇಶ, ಮನಸ್ಸು, ಅಭಿಪ್ರಾಯ [In t. ಧ್ಯಾನಮಗ್ನನಾಗಿ. Take t. ಪರ್ಯಾಲೋಚಿಸು, ವಿಚಾರಮಾಡಿ ನೋಡು. Acts without t. ಯೋಚನೆಯಿಲ್ಲದೆ ಕೆಲಸಮಾಡುತ್ತಾನೆ. An essay full of striking thoughts ಉಜ್ಜ್ವಲ ವಿಚಾರಗರ್ಭಿತ ಪ್ರಬಂಧ. A happy t. ಒಳ್ಳೆಯ, ಸಂದರ್ಭೋಚಿತ, —ಭಾವ(ನೆ), ಸೂಚನೆ. I had (some) thoughts of resigning ರಾಜೀನಾಮೆ ಕೊಡಬೇಕೆಂಬ ಆಲೋಚನೆ ಬಂದಿತ್ತು. I had no t. of offending him ನನಗೆ ಅವನ ಮನಸ್ಸು ನೋಯಿಸಬೇಕೆಂಬ ಉದ್ದೇಶ ಇರಲಿಲ್ಲ. Will tell you my thoughts of the matter ಆ ವಿಷಯದ ಬಗ್ಗೆ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. A penny for your thoughts (Penny ನೋಡಿ). You are much in my thoughts ನಿನ್ನ ವಿಷಯವೇ ನನ್ನ ಮನಸ್ಸಿನಲ್ಲಿ, ನನ್ನ ಆಲೋಚನೆಯಲ್ಲಿ, —ತುಂಬಿದೆ. A t. ಕೊಂಚ, ಸ್ವಲ್ಪ (Cut it a t. shorter. Seems to me a t. arrogant). Quick as t. ಬಲು ಬೇಗನೆ, ಮನೋವೇಗದಲ್ಲಿ. Free-t. (Free ನೋಡಿ). Second thoughts (Second ನೋಡಿ)]. **T.-reader** ಮತ್ತೊಬ್ಬನ ಮನಸ್ಸಿನಲ್ಲಿರುವುದನ್ನು ಗ್ರಹಿಸುವವನು: ಅನ್ಯಚಿತ್ತಗ್ರಾಹಕ. **T.-reading** ಅನ್ಯಚಿತ್ತಗ್ರಹಣ. **T.-transference** ಭಾವಪ್ರೇಷಣೆ (=Telepathy). **T.-wave** (ಭಾವಪ್ರೇಷಣೆಯಲ್ಲಿ ಉಂಟಾಗುವುದೆಂದು ಊಹಿಸುವ) ಭಾವತರಂಗ. **(-)thoughted** (ಗು.); **Thóughtful** (ಗು.) ಆಲೋಚನ, ಧ್ಯಾನ, —ಪರ, ಶೀಲ, ಮಗ್ನ; ಆಲೋಚನಾಸಕ್ತ; (ಗ್ರಂಥ, ಬರಹಗಾರ, ವಾಕ್ಯ, ಮೊ. ಗಳ ವಿಷಯದಲ್ಲಿ) ವಿಚಾರ, ಭಾವ, —ಪೂರ್ಣ. (ವ್ಯಕ್ತಿ, ನಡತೆ, ಮೊ. ಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಯದಲ್ಲಿ) ಆಲೋಚಿಸಿ ಮಾಡುವ, ಸುವಿಚಾರದ, ಪರಹಿತ ಚಿಂತನೆಯುಳ್ಳ, ದಾಕ್ಷಿಣ್ಯಪರ (You are always t.). **Thoúghtfully** (ಕ್ರಿ. ವಿ.); **Thoúghtfulness** (ನಾ.); **Thoúghtless** (ಗು.) ಅವಿಚಾರದ, ನಿರ್ಲಕ್ಷ್ಯದ, ಎಚ್ಚರಿಕೆಯಿಲ್ಲದ; (ಪರರ ಮನಸ್ಸು ನೋಯುವುದೆಂಬ) ದಾಕ್ಷಿಣ್ಯವಿಲ್ಲದ (A t. friend). **Thoúghtlessly** (ಕ್ರಿ. ವಿ.); **Thoúghtlessness** (ನಾ.)

Thought (ಕ್ರಿ.) Think ಧಾತುವಿನ ಭೂತ. ಮತ್ತು ಭೂ. ಕೃ.

Thoúsand ತೌಸೆಂಡ್ (ಗು., ನಾ.) ಸಾವಿರ, ಸಹಸ್ರ (೧೦೦೦, 1000, M); (ಶಿಥಿಲ ಪ್ರ.) ಹಲವು, ಅನೇಕ, ಸಾವಿರಾರು [A t. times easier ಸಾವಿರ ಪಾಲು ಸುಲಭ. One in a t. (ಬಹಳ ವಿರಳ, ಅತ್ಯುತ್ಕೃಷ್ಟ ಎಂಬ ಅರ್ಥಗಳಲ್ಲಿ) ಸಾವಿರಕ್ಕೊಬ್ಬ, ಸಾವಿರಕ್ಕೊಂದು. (A) t. & one ಸಾವಿರದೊಂದು, ಅಸಂಖ್ಯಾತ (The t. & o. small worries of life ಬಾಳಿನ ಸಾವಿರದೊಂದು ಸಣ್ಣ ಕಿರುಕುಳಗಳು, ಮುಜುಗರಗಳು). A t. thanks ಅನೇಕ ವಂದನೆಗಳು. Upper ten t. (Upper ನೋಡಿ)]. **Thoúsandfold** (ಗು., ಕ್ರಿ. ವಿ.); **(-)thoúsandth** (ಗು., ನಾ.)

Thrall ತ್ರಾಲ್ (ನಾ., ಗು., ಕ್ರಿ. ಸಕ.) ಅಡಿಯಾಳು, ಗುಲಾಮ, ತೊತ್ತು, ದಾಸ (*Of*, *to* ಉಪ. ದೊಡನೆ); (ರೂಪ. ಸಹ) ದಾಸ್ಯ, ಗುಲಾಮಗಿರಿ, ಬಂಧನ (In t.). (ಗು.) (ಪ್ರಾಚೀ. ಪ್ರ.) ದಾಸ್ಯದಲ್ಲಿರುವ, ದಾಸನಾದ (*To* ಉಪ. ದೊಡನೆ). (ಕ್ರಿ. ಸಕ.) ದಾಸ್ಯದಲ್ಲಿಡು, ದಾಸನನ್ನಾಗಿ ಮಾಡು. **Thráldom** (ನಾ.) ದಾಸ್ಯ, ಗುಲಾಮಗಿರಿ, ಪಾರತಂತ್ರ್ಯ.

Thrash ತ್ರ್ಯಾಷ್, **Thresh** ತ್ರೆಷ್ (ಕ್ರಿ. ಸಕ.) (ಸಾ., -esh) (ಧಾನ್ಯವನ್ನು) ಒಕ್ಕು, ತೆನೆ ಬಡಿ (Threshing-floor ಕಾಳೊಕ್ಕುವ ನೆಲ: ಕಣ. Threshing-machine ಒಕ್ಕು ಯಂತ್ರ); (ರೂಪ.) ಪುನಃಪುನಃ, ಕೂಲಂಕಷವಾಗಿ, —ಚರ್ಚಿಸು, ವಿಮರ್ಶೆಮಾಡು (*Out*); (ಸಾ., -ash) (ಹಡಗಿನ ಹುಟ್ಟುಗಾಲ, ಮರದ ಕೊಂಬೆ, ಮೊ. ಗಳ ವಿಷಯದಲ್ಲಿ; ಒಕ್ಕುಗೋಲನಂತೆ ಮೇಲಿಂದಮೇಲೆ) ಬಡಿ(ದಾಡು); (ಹಡಗಿನ ವಿಷಯದಲ್ಲಿ) ಅಲೆಗೆ ಬಡಿಯುತ್ತಿರು, ಗಾಳಿಗೆ ಅಥವಾ ಭರತಕ್ಕೆ ಎದುರಾಗಿ ಹೋಗು (T. to windward ಗಾಳಿಗೆ ಎದುರುಹೋಗು); (ಕೋಲು, ಚಾವಟಿ, ಮೊ. ಗಳಿಂದ) ಚೆಚ್ಚು, ತೀಡು, ಸದೆಬಡಿ (ರೂಪ. ಸಹ); ಪೂರ್ತ ಸೋಲಿಸಿಹಾಕು (To t. the visiting team). **Thrásher, thre-** (ನಾ.) ಒಂದು ಬಗೆಯ ಷಾರ್ಕ್ ಮೀನು; (ಸಾ., thre-) ಒಕ್ಕುವವನು, ಒಕ್ಕುಯಂತ್ರ; (ಸಾ., thra-) ಸದೆಬಡಿಯುವವನು, ಚೆಚ್ಚಿಹಾಕುವವನು. **Thráshing** (ನಾ.)

Thrasónical ತ್ರೆಸಾನಿಕಲ್ (ಗು.) ಜಂಬ ಕೊಚ್ಚುವ, ಬಡಾಯಿಯ. **Thrasónically** (ಕ್ರಿ. ವಿ.)

Thread ತ್ರೆಡ್ (ನಾ.) (ಹತ್ತಿ, ಸಣಬು, ರೇಷ್ಮೆ, ಉಣ್ಣೆ, ಮೊ. ಗಳ) (ನೂತ, ಹೊಸೆದ) ಎಳೆ, ನೂಲು, ತಂತು, ದಾರ (Not a dry t. on him ಅವನು ಪೂರ್ತ ತೊಯ್ದುಹೋಗಿದ್ದಾನೆ, ಒದ್ದೆಮುದ್ದೆಯಾಗಿದ್ದಾನೆ); ಸಣ್ಣ ಹುರಿ; [Gold t. ಚಿನ್ನದ ಸರಿಗೆ; ಜರಿ. Lisle t. (ಆ ಪದ ನೋಡಿ). T. & thrum (Thrum[1] ನೋಡಿ)]; ದಾರದಾಕಾರದ, ಉದ್ದ ತೆಳ್ಳನೆಯ, —ವಸ್ತು (ಉದಾ., ತಿರುಪಿನ ದಾರ, ಒಂದು ಸುತ್ತು); (ಅದುರಿನ) ಎಳೆ, ಗೆರೆ; [(ರೂಪ.) The t. of life ಜೀವನದ ಗತಿ; ಜೀವನ ತಂತು, ಬಾಳ ನೂಲು. Hang by a t. (ವ್ಯಕ್ತಿಯ ಪ್ರಾಣ, ಮೊ. ವು) ಅಪಾಯ ಸ್ಥಿತಿಯಲ್ಲಿರು, ಸೂಕ್ಷ್ಮದಲ್ಲಿ ಅಂಟಿಕೊಂಡಿರು; (ಬಹು ಮುಖ್ಯ ಸಂದರ್ಭ, ಮೊ. ವು) (ಇನ್ನೂ ಅನಿಶ್ಚಿತವಾಗಿರುವ ಅಂಶದಿಂದ ಹಾಗೊ ಹೀಗೊ ತೀರ್ಮಾನವಾಗಬಹುದಾದ) ಎಳೆಯಷ್ಟು ಅಂತರದಲ್ಲಿ ತೂಗಾಡುತ್ತಿರು. Lost the t. of his argument ವಾದದ ಸರಣಿ ತಪ್ಪಿಬಿಟ್ಟನು. Resume *or* take up the t. of (ವಿಚ್ಛಿತ್ತಿಯಾದಮೇಲೆ) ಮತ್ತೆ ಮುಂದುವರಿಸು, ಮತ್ತೆ ಎಳೆ ಎತ್ತಿಕೊ. Gather up the threads (ವಿಷಯ ವಿಭಾಗಗಳನ್ನು ಬೇರೆ ಬೇರೆಯಾಗಿ ನಿರೂಪಿಸಿದಮೇಲೆ) ಪರಸ್ಪರ ಸಂಬಂಧ ಕಲ್ಪಿಸಿ ಒಟ್ಟೈಸು; (ವಿಷಯದ) ಎಳೆಗಳನ್ನು ಒಟ್ಟುಕೂಡಿಸಿಕೊ]. **Threádbare** (ಬಟ್ಟೆ) ಗುಂಜು ಸವೆದು ನೂಲು ಕಾಣುತ್ತಿರುವ; ಎಳೆ ಬಿಟ್ಟುಕೊಂಡಿರುವ, ಜೀರ್ಣವಾದ (ಬಟ್ಟೆ ತೊಟ್ಟ); ಜೀರ್ಣಶೀರ್ಣ; (ರೂಪ.) ದರಿದ್ರ; ಹಳಸಲು, ನೀರಸ, ಚರ್ವಿತ ಚರ್ವಣ. **Threádbareness** (ನಾ.); **T. lace** ದಾರದ ಅಲಂಕಾರಪಟ್ಟಿ. **T.-mark** ಖೋಟಾ ತಯಾರಿಕೆ ತಪ್ಪಿಸುವುದಕ್ಕಾಗಿ ಬ್ಯಾಂಕು ಹುಂಡಿಯ ಕಾಗದದ ಮೇಲೆ, ಗಾಢವರ್ಣದ ರೇಷ್ಮೆ ಎಳೆಗಳಿಂದ ಮಾಡಿದ ಗುರುತು: ದಾರದ ಗುರುತು. **T.-needle** ಮಕ್ಕಳ ಒಂದು ಆಟ [Old lady of Threadneedle Street (Old ನೋಡಿ)]. **T.-paper** ದಾರದ ಲಡಿಗಳನ್ನು ಸುತ್ತಿಡುವ (ಮೃದುವಾದ, ತೆಳ್ಳನೆಯ) ಕಾಗದ(ದ ಪಟ್ಟಿ). **Threádworm** (ಮು., ಮಕ್ಕಳ ಗುದನಾಳದಲ್ಲಿ ಸೇರಿಕೊಳ್ಳುವ) ಹಲವು ಬಗೆಯ ದಾರದಂಥ ಹುಳು: ತಂತು ಕ್ರಿಮಿ. **Threády** (ಗು.); **Threádiness** (ನಾ.)

Thread, (ಪ್ರಾಚೀ. ಪ್ರ.) **Thrid** (ಕ್ರಿ. ಸಕ.) (ಸೂಜಿಯ ಕಣ್ಣಿನಲ್ಲಿ) ದಾರ ಪೋಣಿಸು; (ಮಣಿ, ಮೊ. ನ್ನು) ದಾರಕ್ಕೆ ಪೋಣಿಸು; ಪೋಣಿಸಿ (ಸರ, ಮೊ. ನ್ನು) ಮಾಡು. (ತೊಳಸುಬಳಸು ಹಾದಿ, ಬೀದಿಗಳು, ಜನಗುಂಪಿನ ಸ್ಥಳ, ಮೊ. ಗಳ ಮೂಲಕ) ದಾರಿ ಮಾಡಿಕೊ(ಂಡು ಹೋಗು); (ಕಷ್ಟಗಳ ನಡುವೆ) ಉಪಾಯವಾಗಿ, ನುಸುಳಿಕೊಂಡು, —ಹೋಗು. ಮಧ್ಯದಲ್ಲಿ ಬೆರಸು (Tawny hair threaded with white)

Threat ತ್ರೆಟ್ (ನಾ.) (ದಂಡಿಸುವನೆಂಬ, ಕೆಡುಕು ಮಾಡುವನೆಂಬ, ಮೊ.) ಬೆದರಿಕೆ; ಭಯ ಸೂಚನೆ. (ನ್ಯಾ. ಶಾ.) ಒಬ್ಬನ ಕಾರ್ಯ ಸ್ವಾತಂತ್ರ್ಯಕ್ಕೆ ಅಡ್ಡಿ ತರುವುದಕ್ಕಾಗಿ ಮಾಡುವ ಶಾರೀರಕ ಹಿಂಸೆಯ ಅಥವಾ ಕೀರ್ತಿ ಹಾನಿಯ ಅಥವಾ ಆಸ್ತಿ ನಷ್ಟದ ಬೆದರಿಕೆ, ಭೀತಿ: ಹಿಂಸೆಯ, ನಷ್ಟದ, —ಬೆದರಿಕೆ, ಭೀತಿ. ಬರಲಿರುವ ಕೇಡಿನ ಸೂಚನೆ: ಭಯ, ಹೆದರಿಕೆ (There is a t. of rain). **Threáten** ತ್ರೆಟ್‌ನ್ (ಕ್ರಿ.) ಬೆದರಿಸು, ಹೆದರಿಸು, ಬೆದರಿಕೆ ಹಾಕು, ಭಯವುಂಟುಮಾಡು (*With*, *to* do) [Threatened me with death ಸಾಯಿಸಿಬಿಡುವುದಾಗಿ ಹೆದರಿಸಿದನು. Am threatened with a visit ಭೇಟಿಕೊಡುವ ಬೆದರಿಕೆ ನನಗೆ ಬಂದಿದೆ. T. to resign. (ರೂಪ.) The practice threatens to become general ಆ ಪದ್ಧತಿ ಸಾರ್ವತ್ರಿಕವಾಗುವ—ಭಯವಿದೆ, ಭಯ ಹುಟ್ಟಿಸುತ್ತದೆ]. **Threáteningly** (ಕ್ರಿ. ವಿ.)

Three ತ್ರೀ (ಗು., ನಾ.) ಮೂರು, ತ್ರಿ, ತ್ರಯ (೩, 3, III). T. times t. ಮುಮ್ಮಡಿ ಮೂರು ಜಯಘೋಷ. The t. F's ನಿರುಪಾಧಿಕ ಮಾರಾಟ (Free sale), ಹಿಡುವಳಿಯ ಕಾಯಂದಾರಿ (Fixity of tenure), ನ್ಯಾಯವಾದ ಗೇಣಿ (Fair rent) [ಐರ್ಲೆಂಡಿನ ಜಮೀನು ಸಂಘದ (Irish Land League) ತಗಾದೆ ಬೇಡಿಕೆಗಳು]. The t. R's ಓದು, ಬರಹ, ಲೆಕ್ಕ. Rule of t. ತ್ರೈರಾಶಿ. **T.-bottleman** ಹಳೆಯ ರೀತಿಯ ಪಕ್ಕಾ ಕುಡುಕ. **T.-colour process** (ಛಾಯಾಚಿತ್ರಗಳನ್ನು ಕೆಂಪು, ನೀಲ ಮತ್ತು ಹಳದಿಗಳಲ್ಲಿ ತೆಗೆದು ಸ್ವಾಭಾವಿಕ ವರ್ಣಗಳನ್ನು ಪಡಿಮೂಡಿಸುವ) ತ್ರೈವರ್ಣ, ತ್ರಿವರ್ಣ, —ವಿಧಾನ. **T.-cornered** ಮುಮ್ಮೂಲೆಯ, ತ್ರಿಕೋನಾಕಾರದ (T.-c. hat); (ಹೋರಾಟ, ಮೊ. ವು) ಮೂವರಿಗೆ, ಮೂರು ಪಂಗಡಗಳಿಗೆ, ಪರಸ್ಪರ ನಡೆಯುವ: ಮೂವರ, ತ್ರಿಪಕ್ಷೀಯ. **T.-décker** ಮೂರು ಫಿರಂಗಿ ಅಟ್ಟಗಳುಳ್ಳ ಯುದ್ಧದ ಹಡಗು; ಮೂರು ಅಂತಸ್ತಿನ ಉಪದೇಶ ವೇದಿಕೆ. **T.-handed** ಮೂರು ಕೈಗಳುಳ್ಳ; ಮೂರು ಜನ ಆಡುವ; ಮುಕ್ಕೈಯ (T.-h. euchre ಮುಕ್ಕೈಯ ಯೂಕರ್ ಇಸ್ಪೀಟಾಟ). **T. halfpence** ೧½ ಪೆನಿ. T. in One = The Trinity (Trinity ನೋಡಿ). **T.-legged race** ಒಬ್ಬನ ಬಲಗಾಲನ್ನು ಇನ್ನೊಬ್ಬನ ಎಡಗಾಲಿಗೆ ಕಟ್ಟಿ, ಅಂಥ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜೊತೆಗಳಿಗೆ ನಡೆಯುವ ಪಂದ್ಯದ ಓಟ : ಮೂಗಾಲು ಓಟದ ಪಂದ್ಯ. **T.-máster** ಮುಕ್ಕೂವೆಯ ಹಡಗು. **T.-pair** (ಕೋಣೆ) ಮೂರ ನೆಯ ಮಹಡಿಯ(ಲ್ಲಿರುವ) (ನಾ., t.-p. back *or* front): **Threépence** (ತ್ರಿಪೆನ್ಸ್, ತ್ರೆ—, ತ್ರೀ—, ತ್ರ—) ಮೂರು ಪೆನಿ (ಮೊಬಲಗು). **Threépenny (bit)** ಮೂರು ಪೆನಿ ನಾಣ್ಯ. **(The) T.-per-cents** ಶೇಕಡ ಮೂರರ ಬಡ್ಡಿಯ (ಸರಕಾರದ) ಸಾಲ ಪತ್ರಗಳು. **T.-ply** ಮೂರು—ಹುರಿಯ, ಎಳೆಯ, ಮಂದದ; ಮುಪ್ಪುರಿಯ, ಮೂಮಂದದ. (ನಾ.) (ಎಳೆಗಳು ಬೇರೆ ಬೇರೆ ಕಡೆಗಿರು ವಂತೆ ಮೂರು ಪದರಗಳನ್ನು ಒಟ್ಟಿಗೆ ಅಂಟಿಸಿಮಾಡಿದ) ಮುಪ್ಪದರ ಹಲಗೆ. **T.-quarter(s)** (ಗು.) (ಪ್ರಮಾಣ, ಸಂಖ್ಯೆ, ಮೊ. ಗಳ) ಮುಕ್ಕಾಲು (ಭಾಗ) ; (ಭಾವಚಿತ್ರ) ಮುಖದಿಂದ ತೊಡೆಯವರೆಗಿನ ; (ಪಾರ್ಶ್ವ ದೃಶ್ಯಕ್ಕೆ ಮಾರಿ) ಮುಖದ ಮುಕ್ಕಾಲು ಭಾಗ ತೋರಿಸುವ; (ನಾ.) (ಕಾಲ್ಚೆಂಡಾಟ) ಮುಂದಿನ ಸಾಲಿನ ಹಿಂದಿನ ಹಿಂದಣ ೩ ಅಥವಾ ೪ ಆಟಗಾರರಲ್ಲಿ ಒಬ್ಬ. **Threescóre** ಅರುವತ್ತು, ಮೂರಿಪ್ಪತ್ತು (ವಯಸ್ಸು) [T.-s. & ten (ಜೀವಮಾನದ ಸಾಮಾನ್ಯ ಪರಿಮಿತಿಯಾಗಿ ಪರಿಗಣಿಸುವ) ೭೦ ವರ್ಷ ವಯಸ್ಸು]. **Threéfold** (ಗು., ಕ್ರಿ. ವಿ.) ಮುಮ್ಮಡಿ, ತ್ರಿಗುಣ. **Threésome** (ನಾ., ಗು.) (ಮು., ಸ್ಕಾ. ಪ್ರ.) ಮೂವರ ತಂಡ, ತ್ರಯ ; ಮೂವರ ಆಟ. (ಗು.) ಮೂರರ, ಮೂವ್ವರ ; ಮೂವರು (ಒಟ್ಟು ಸೇರಿ) ಮಾಡಿದ. **Thrice** ತ್ರೈಸ್ (ಕ್ರಿ. ವಿ.) (ಪ್ರಾಚೀ. ಪ್ರ. ಅಥವಾ ಸಾಹಿತ್ಯ ಪ್ರ.) ಮೂರು—ಸಲ, ಬಾರಿ ; (ಈಗ ಮು., ಸಮಾಸ ಪದಗಳಲ್ಲಿ) : ಹೆಚ್ಚು, ಬಹಳ, ವಿಶೇಷ (T.-blessed, -favoured)

Thremmatólogy ತ್ರೆಮಟಾಲೊಜಿ (ನಾ.) ಪ್ರಾಣಿಗಳ ಮತ್ತು ಸಸ್ಯಗಳ ತಳಿ ಎಬ್ಬಿಸುವ ವಿಜ್ಞಾನ: ವರ್ಧನಶಾಸ್ತ್ರ.

Thrénode ತ್ರೀನೋಡ್ (ನಾ.), **Thrénody** ತ್ರೆ(ತ್ರೀ)ನೊಡಿ (ನಾ.) ಶೋಕ, ಚರಮ, —ಗೀತೆ ; ಸಾವು ಹಾಡು. **Threnétic** (ಗು.) ; **Threnétical** (ಗು) ; **Threnódial** (—ನೋ—) (ಗು.) ; **Threnódic** (—ನಾ—) (ಗು.) ; **Thrénodist** (ನಾ.)

Thresh, etc. **Thrash, etc.** ನೋಡಿ.

Thréshold ತ್ರೆಷೊ(ೀ)ರ್ಡ್ (ನಾ.) (ಹಲಗೆಯ ಅಥವಾ ಕಲ್ಲಿನ) ಹೊಸ್ತಿಲು ; (ಶಿಥಿಲವಾಗಿ, ಮು., ರೂಪ.) ಪ್ರವೇಶ, ಪ್ರಾರಂಭ, ಮೊದಲು (At the t. of a discussion ಚರ್ಚೆಯ ಪ್ರಾರಂಭದಲ್ಲಿ. On the t. of a new century ಹೊಸ ಶತಮಾನದ ಹೊಸ್ತಿಲಮೇಲೆ, ಮೊದಲನಲ್ಲಿ)

Threw. **Throw** ನೋಡಿ.

Thrice. **Three** ನೋಡಿ.

Thrid. **Thread** (ಕ್ರಿ.) ನೋಡಿ.

Thrídace ತ್ರಿಡೆಸ್ (ನಾ.) ಲೆಟಿಸ್ ಸೊಪ್ಪಿನ ಮಂದಯಿಸಿದ ರಸ : ತ್ರಿಡೆಸ್ ರಸ (ಶಾಮಕ ಔಷಧವಾಗಿ ಉಪಯೋಗ)

Thrift ತ್ರಿಫ್ಟ್ (ನಾ.) ಹಾಳತ, ಹಿಡಿತ ; ಮಿತ—ವ್ಯಯ, ವಿನಿಯೋಗ ; (ಮನೆವಾರ್ತೆ, ಮೊ. ಗಳಲ್ಲಿ) ಒಪ್ಪ(ವಾದ ಆಡಳಿತ), ವ್ಯವಸ್ಥೆ [**Thríftless** (ಗು.) ; **Thríftlessly** (ಕ್ರಿ. ವಿ.) ; **Thríftlessness** (ನಾ.); **Thrífty** (ಗು.) ಹಾಳತದ, ಮಿತವ್ಯಯದ ; ಏಳಿಗೆಯುಳ್ಳಿರುವ, ಅನುಕೂಲ ಸ್ಥಿತಿಯುಳ್ಳಿರುವ, ಪ್ರವರ್ಧಮಾನ. **Thríftily** (ಕ್ರಿ. ವಿ.)]. ಹಲವು ಬಗೆಯ ಸಸ್ಯ. (ಮು., Sea-pink) (Sea ನೋಡಿ)

Thrill ತ್ರಿಲ್ (ಕ್ರಿ., ನಾ.) (ಎದೆ) ಝುಲ್, (ಮೈ) ಜುಂ, —ಎನ್ನಿಸು, ಎನ್ನು ; ರೋಮಾಂಚ—ಗೊಳ್ಳು, ಗೊಳಿಸು; ಪುಳಕಿತ—ಆಗು, ಮಾಡು ; ಭಾವಪರವಶ—ಮಾಡು, ಆಗು (*With* pleasure, etc.) (His voice thrilled the listeners ಅವನ ಶಾರೀರ, ಧ್ವನಿ, ಶ್ರೋತೃಗಳನ್ನು ರೋಮಾಂಚಗೊಳಿಸಿತು). (ಭಾವ, ಮೊ. ಗಳ ವಿಷಯದಲ್ಲಿ) (ರೋಮಾಂಚವುಂಟುಮಾಡುತ್ತ) ಝುಲ್ಲನೆ ಹರಿ, ಪ್ರವಹಿಸು [(*Through, over, along* ಉಪ. ದೊಡನೆ). Fear thrilled through my veins]; [ಭಾವಪರವಶತೆಯಿಂದ (ಹೇಗೋ ಹಾಗೆ)] ಅದುರು, ಕಂಪಿಸು(ವಂತೆ ಮಾಡು) (Earthquake thrills the land). (ನಾ.) (ಎದೆ) ಝುಲ್ಲೆನ್ನುವುದು, (ಮೈ) ಜುಮ್ಮೆನ್ನುವುದು ; ಭಾವಪರವಶತೆ ; ರೋಮಾಂಚ (A t. of joy ಹರ್ಷಪುಲಕ). ನಡುಕ, ಕಂಪನ ; (ವೈ. ಶಾ.) (ಆಕರ್ಣನದಲ್ಲಿ ಕೇಳಬಂದ ಅಥವಾ ಅನುಭವಕ್ಕೆ ಬಂದ) ಕಂಪನ, ಅನುರಣನ, ತುಡಿತ; (ಅಸಂ.) ಮೈ ಜುಮ್ಮೆನ್ನಿಸುವ, ರೋಮಾಂಚಕಾರಿ, —ಕಥೆ, ನಾಟಕ: ರೋಮಾಂಚಕ [= **Thríller** (ನಾ.)]. **Thríllingly** (ಕ್ರಿ. ವಿ.) ; **Thríllingness** (ನಾ.)

Thrips ತ್ರಿಪ್ಸ್ (ನಾ.) ಹಲವು ಬಗೆಯ ಸಸ್ಯಕೀಟ (ಮು., ದ್ರಾಕ್ಷಿ ಬಳ್ಳಿ, ಮೊ. ಕ್ಕೆ ಹಾನಿಕರವಾದವು)

Thrive ತ್ರೈವ್ [ಕ್ರಿ. ಅಕ. ; ಭೂತ. Throve ತ್ರೋವ್, Thrived (ವಿರ. ಪ್ರ.) ; ಭೂ. ಕೃ. Thriven ತ್ರಿವ್‌ನ್, Thrived (ವಿರ. ಪ್ರ.)] ವರ್ಧಿಸು; ಹೊಮ್ಮು, ಉಬ್ಬು ; ಏಳಿಗೆ, ಅಭಿವೃದ್ಧಿ, —ಆಗು, ಹೊಂದು; ಯಶಸ್ವಿಯಾಗು. (ಪ್ರಾಣಿ, ಸಸ್ಯ) ಹುಲುಸಾಗಿ, ಹಸನಾಗಿ, —ಬೆಳೆ. **Thrívingly** (ಕ್ರಿ. ವಿ.) ; **Thrívingness** (ನಾ.)

Thro', Thro. **Through** ನೋಡಿ.

Throat ತ್ರೋಟ್ (ನಾ., ಕ್ರಿ. ಸಕ.) ಗಲ್ಲಕ್ಕೂ ಕೊರಳೆಲುಬಿಗೂ ನಡುವಣ ಭಾಗ : ಕುತ್ತಿಗೆ(ಯ ಮುಂಭಾಗ); ಮುಂಗತ್ತು, ಕೊರಲು, ಮುಂಗೊರಲು ; ಮೆಟರೆ ; ಗೋಣು, ಗೋಣಾಳಿ [Cut one's throat (ಮು., ಕೊಲ್ಲುವ ಉದ್ದೇಶದಿಂದ) ಕತ್ತು—ಕೊಯ್ಯಿ, ಕತ್ತರಿಸು. Take by the t. ಕತ್ತು ಕಿವಿಚು]; ಗಂಟಲು, ಕಂಠ, ಶ್ವಾಸನಾಳ [Words stuck in my t. ಮಾತುಗಳು ನನ್ನ ಗಂಟಲಿನಲ್ಲಿ ಸಿಕ್ಕಿಕೊಂಡವು ; ಮಾತು ಹೊರಡದೆ ಗಂಟಲು ಹಿಡಿದುಕೊಂಡಿತು] ; (ರೂಪ.) ಧ್ವನಿ, ಗಂಟಲು (Shouted at the top of his t.). ಗಂಟಲಿನಾಕಾರದ ವಸ್ತು, (ಒಂದರ) ಕಂಠ (ಭಾಗ) (ಉದಾ., ಬಂಡೆಗಳ ನಡುವಣ ನದಿಯ ಇಕ್ಕಟ್ಟು ಭಾಗ ; ಅನೇಕ ನಾವಿಕ ಪ್ರ. ಗಳಲ್ಲಿ ಸಹ). [Sore t. ಗಂಟಲ—ಉರಿ ಯೂತ, ಹುಣ್ಣು. Clergyman's (sore) t. ಹೆಚ್ಚಾಗಿ ಸಾರ್ವಜನಿಕ ಭಾಷಣ ಮಾಡುವವರಿಗೆ ಬರುವ ಒಂದು ಬಗೆಯ ಗಂಟಲ ಹುಣ್ಣು, ಊತ : ಉಪದೇಶಿಗಳ, ಮಾತುಮಲ್ಲರ, —ಗಂಟಲು (ಹುಣ್ಣು). Cut one's own t. ತನ್ನ ಕೊರಳು ತಾನೆ ಕೊಯ್ದುಕೊ ; ಆತ್ಮನಾಶದ ಮಾರ್ಗ ಹಿಡಿ. Cut one another's throats (ರೂಪ.) ಒಬ್ಬರನ್ನೊಬ್ಬರು ಹಾಳು ಮಾಡಿ ; ಪರಸ್ಪರ ವಿನಾಶಕ ನೀತಿ ಅನುಸರಿಸಿ. Lie in one's throat ವಿಪರೀತ, ಶುದ್ಧ, —ಸುಳ್ಳು ಹೇಳು. Give person the lie in his t. ವಿಪರೀತ ಸುಳ್ಳು ಹೇಳುತ್ತಾನೆಂದು ಎದುರಿಗೇ ಆರೋಪಿಸು. Thrust (thing) down one's t. ಬಲಾತ್ಕಾರವಾಗಿ ಒಪ್ಪಿಸು, ಒಬ್ಬನ ಗಮನಕ್ಕೆ ತರು ; ಗಂಟಲೊಳಕ್ಕೆ ತುರುಕು]. (ಕ್ರಿ.) ಕಾಲುವೆ, ಗಾಡಿ, —ತೋಡು, ಮಾಡು [(-)**throated** (ಗು.)]; **Throáty** (ಗು.) ಗಂಟಲಿನ(ಲ್ಲಿ ಉಚ್ಚರಿಸಿದ); ಕಂಠ್ಯ (T. laugh) ; ಎದ್ದು ಕಾಣುವ, ದೊಡ್ಡ, —ಗಂಟಲುಳ್ಳ; ಹೆಗ್ಗಂಟಲಿನ. **Throátiness** (ನಾ.)

Throb ತ್ರಾಬ್ (ಕ್ರಿ. ಅಕ., ನಾ.) (ಹೃದಯ, ಎದೆ, ಮೊ. ವು) ಡವಡವನೆ ಬಡಿ, ಹೊಡೆದುಕೊ ; ಜೋರಾಗಿ ತುಡಿ, ಮಿಡಿ ; (ರೂಪ.) ಭಾವೋ ದ್ರೇಕದಿಂದ (ಹೇಗೋ ಹಾಗೆ) ಅದಿರಾಡು, ಕಂಪಿಸು, ಸ್ಪಂದಿಸು. (ನಾ.) (ಕ್ರಿಯಾರ್ಥಗಳಲ್ಲಿ) ; (Heart-throbs ಎದೆಯ ಡವಡವ ಹೊಡೆತ, ಹೃದಯ ಸ್ಪಂದನ. Throbs of pleasure ಸುಖ ಸಂತೋಷ ಗಳ—ಮಿಡಿತ, ತುಡಿತ). **Thróbbingly** (ಕ್ರಿ. ವಿ.)

Throe ತ್ರೋ (ನಾ., ಕ್ರಿ. ಅಕ.) (ನಾ., ಬ. ವ. ದಲ್ಲಿ) (ಪ್ರಸವ) ವೇದನೆ ; (ಹೆರಿಗೆಯ) ಬೇನೆ, ಶೂಲೆ (ರೂಪ. ಸಹ); ತೀವ್ರ ಯಾತನೆ. (ಕ್ರಿ.) ತೀವ್ರ ಯಾತನೆ, ಸಂಕಟ, —ಪಡು.

Throgmórton Street (ತ್ರಾಗ್‌ಮಾರ್ಟನ್ ಸ್ಟ್ರೀಟ್). ಲಂಡನ್ನಿನ ಪತ್ರವ್ಯಾಪಾರ ಕಟ್ಟೆ(ಯ—ಸದಸ್ಯರು, ಕಾರ್ಯಕಲಾಪಗಳು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Thrombósis ತ್ರಾಂಬೋಸಿಸ್ (ನಾ.) (ರಕ್ತನಾಳದಲ್ಲಿ ಅಥವಾ ಅಂಗದಲ್ಲಿ) ರಕ್ತ ಹೆಪ್ಪುಗಟ್ಟುವುದು ; ರಕ್ತ ಘನೀಭವನ. **Thrombótic** (—ಬಾ—) (ಗು.)

Throne ತ್ರೋನ್ (ನಾ., ಕ್ರಿ. ಸಕ.) (ದೊರೆ, ಬಿಷಪ್, ಮೊ. ರ) ಗದ್ದುಗೆ, ಸಿಂಹಾಸನ ; ದೊರೆತನ, ಪಟ್ಟ, ಪ್ರಭುತ್ವ (Came to the t. ಪಟ್ಟಕ್ಕೆ ಬಂದನು. Lost his t. ದೊರೆತನ, ರಾಜ್ಯ,—ಕಳೆದುಕೊಂಡನು). (ಬ. ವ. ದಲ್ಲಿ) ದೇವದೂತರಲ್ಲಿ ಮೂರನೆಯ ವರ್ಗ [Order (೧) ನೋಡಿ]. (ಕ್ರಿ. ಸಕ.) ಪಟ್ಟಕ್ಕೇರಿಸು, ಪಟ್ಟ ಕಟ್ಟು, ಪಟ್ಟಾಭಿಷೇಕ ಮಾಡು (ರೂಪ. ಸಹ). **Thróneless** (ಗು.)

Throng ತ್ರಾಂಗ್ (ನಾ., ಕ್ರಿ.) ಜನಸಂದಣಿ, ನೆರವಿ, ಗುಂಪು; (ಮು., ಸ್ವಲ್ಪ ಸ್ಥಳಾವಕಾಶದಲ್ಲಿ, ಜನರ ಅಥವಾ ವಸ್ತುಗಳ) ಕಿಕ್ಕಿರಿದ ಗುಂಪು, ಕಿಕ್ಕಿರಿತ (*Of* ಉಪ. ದೊಡನೆ). (ಕ್ರಿ. ಅಕ.) ಗುಂಪಾಗಿ —ಬರು, ಹೋಗು ; ನೆರೆ, ಸಂದಣಿಸು, ಕಿಕ್ಕಿರಿ (*Round* ಮೊ. ಉಪ. ದೊಡನೆ); (ಬೀದಿ, ಮೊ. ಗಳಲ್ಲಿ) ಗುಂಪಾಗು, ಗುಂಪು ಸೇರು, ಕಿಕ್ಕಿರಿ; (ಪ್ರಾಚೀ. ಪ್ರ.) (ಗುಂಪಿನ ವಿಷಯದಲ್ಲಿ ; ಒಬ್ಬನ ಮೇಲೆ) ಬಲವಾಗಿ ನುಗ್ಗು, (ಒಬ್ಬನನ್ನು) ತುಳಿ.

Thróstle ತ್ರಾಸ್‌ಲ್ (ನಾ.) ಒಂದು ಬಗೆಯ ಹಾಡುಹಕ್ಕಿ (=Song-thrush) ; (ಉಣ್ಣೆ, ಹತ್ತಿ, ಮೊ. ನ್ನು) ನೂಲುವ ಯಂತ್ರ (=T.-frame)

Thróttle ತ್ರಾಟ್‌ಲ್ (ನಾ., ಕ್ರಿ. ಸಕ.) ಕೊರಳು, ಗಂಟಲು, ಗೋಣು ; ಶ್ವಾಸನಾಳ. ಎಂಜಿನಿನಲ್ಲಿ ಆವಿ, ಮೊ. ಗಳ ಹರಿವನ್ನು ನಿಯಂತ್ರಿಸುವ ಕವಾಟ: ನಿಯಂತ್ರಕ ಕವಾಟ (=T.-valve). (ಕ್ರಿ.) ಗಂಟಲು ಹಿಸುಕು, ಉಸಿರು ಕಟ್ಟಿಸು ; (ಎಂಜಿನನ್ನು, ಆವಿ, ಮೊ. ನ್ನು) ಕವಾಟದಿಂದ ನಿಯಂತ್ರಿಸು.

Through, Thro', Thro ತ್ರೂ (ಉಪ., ಕ್ರಿ. ವಿ., ಗು.) ಒಂದು ಕೊನೆಯಿಂದ ಮತ್ತೊಂದು ಕೊನೆಗೆ, ಭೇದಿಸಿಕೊಂಡು, ಮೂಲಕ, ಮುಖಾಂತರ, ದ್ವಾರಾ, ಮೇಲೆ [March t. the town ಊರಿನ ಮೇಲೆ ಹೋಗು. See t. a telescope. (ರೂಪ.) Went t. many trials ಅನೇಕ ಕಷ್ಟಗಳನ್ನು ಅನುಭವಿಸಿದನು. Got t. his examination ಪರೀಕ್ಷೆಯಲ್ಲಿ ತೇರ್ಗಡೆಯಾದನು. Saw t. his hypocrisy ಅವನ ಬೂಟಾಟಿಕೆಯನ್ನು (ಭೇದಿಸಿ) ಕಂಡುಕೊಂಡನು. Wait t. ten long years ಹತ್ತು ವರ್ಷಗಳ ದೀರ್ಘಕಾಲ ಉದ್ದಕ್ಕೂ ಕಾದಿರು. Flashed t. his mind ಮನಸ್ಸಿಗೆ ಹೊಳೆಯಿತು]. —ಕಾರಣದಿಂದ ; —ದೆಸೆಯಿಂದ ; —ತಪ್ಪಿನಿಂದ ; ಮೂಲಕ (It was all t. you that we were late ಎಲ್ಲಾ ನಿನ್ನ ದೆಸೆಯಿಂದ, ತಪ್ಪಿನಿಂದ, ನಾವು ಹೊತ್ತುಮೀರಿದೆವು). (ಕ್ರಿ. ವಿ.) ಪಕ್ಕದಿಂದ ಪಕ್ಕಕ್ಕೆ, ಕೊನೆಯಿಂದ ಕೊನೆಗೆ, ಮೊದಲಿಂದ ಕಡೆಯವರೆಗೆ, ಆದ್ಯಂತವಾಗಿ, ಪೂರ್ತಿಯಾಗಿ [Let us stroll t. ಒಳಗೆಲ್ಲ ಸುತ್ತಾಡೋಣ. Would not let us t. (gate) (ಬಾಗಿಲಲ್ಲಿ) ನಮ್ಮನ್ನು ಬಿಡಲಿಲ್ಲ, ಪ್ರವೇಶಿಸಗೊಡಲಿಲ್ಲ. Read it carefully t. ; Read it t. & t. ಅದನ್ನು ಮೊದಲಿಂದ ಕಡೆಯವರೆಗೆ, ಮತ್ತೆ ಮತ್ತೆ, ಓದಿದೆನು. Looked him t. & t. ಅವನನ್ನು ಚೆನ್ನಾಗಿ ಭೇದಿಸಿ ನೋಡಿದೆನು, ತೀಕ್ಷ್ಣವಾಗಿ ಗಮನಿಸಿ ನೋಡಿದೆನು. Lasted all t. ಪೂರ್ತಿ ಕಾಲ, ಮೊದಲಿಂದ ಕಡೆಯವರೆಗೆ, —ನಡೆಯಿತು, ಇತ್ತು, ಬಂತು. (ಬಳ. ಮಾ.) Are you t. (with that job)? (ಆ ಕೆಲಸವನ್ನು) ನೀನು ಮುಗಿಸಿದೆಯಾ ? Carry, Fall, Pull, t. (ಆಯಾ ಪದ ನೋಡಿ). Go t. with (Go ನೋಡಿ) Drop t.=Fall t.]. (ಗು.) ಒಂದರ ಮೂಲಕ, ಪೂರ್ತಿ ದೂರ, —(ಹಾದು)ಹೋಗುವ, ಹೋಗಗೊಡುವ [A t. bolt (ಕೊನೆಯಿಂದ ಕೊನೆಗೆ) ಪೂರ್ತಿ ತೂರಿಹೋಗುವ ಗುಬ್ಬಿಮೊಳೆ. T.-stone=Bond-stone (Bond[1] ನೋಡಿ)]. (ರೈಲಿನ ಅಥವಾ ಜಹಜಿನ ಪ್ರಯಾಣದ ವಿಷಯದಲ್ಲಿ) ಮಧ್ಯದಲ್ಲಿ ಬದಲಾಯಿಸದೆ ಉದ್ದಕ್ಕೂ ಹೋಗುವ ; ಅದೇ ಟಿಕೆಟ್ಟಿನಮೇಲೆ ಬೇರೆ ಬೇರೆ ಕಂಪೆನಿಗಳ ರೈಲು ಮಾರ್ಗಗಳಲ್ಲಿ ಹೋಗಬಹುದಾದ: ಸೀದಾ, ನೇರ (T. carriage, train, passenger, ticket, fares). **Throúghly** (ಕ್ರಿ. ವಿ.) (ಪ್ರಾಚೀ. ಪ್ರ.)=Thoroughly (Thorough ನೋಡಿ). **Throughoút** (ಕ್ರಿ. ವಿ., ಉಪ.) ಉದ್ದಕ್ಕೂ, ಪ್ರತಿಯೊಂದು ಭಾಗದಲ್ಲೂ, ಎಲ್ಲ ವಿಚಾರಗಳಲ್ಲೂ, ಎಲ್ಲ ಕಡೆಯೂ, ಮೊದಲಿಂದ ಕಡೆಯವರೆಗೆ, ಆದ್ಯಂತವಾಗಿ (Timber was rotten t. Followed a sound policy t. T. the 18th century)

Throw ತ್ರೋ (ಕ್ರಿ. ; ಭೂತ. Threw ತ್ರೂ ; ಭೂ. ಕೃ. Thrown ತ್ರೋನ್) ಎಸೆ, ಒಗೆ, ಬೀರು, ಬಿಸುಡು, ಬಿಸಾಡು ; ಎತ್ತಿಹಾಕು ; (ಹೊರಗೆ) ಹಾಕು, ಎರಚು, ಚೆಲ್ಲು [Must not t. stones ಕಲ್ಲೆಸೆಯಬಾರದು ; (ರೂಪ.) ದೋಷಾರೋಪಣೆ ಮಾಡಬಾರದು. Learnt to t. a fly (ಮೀನು ಹಿಡಿಯುವುದರಲ್ಲಿ) ಗಾಳದ ನೊಣ ಎಸೆಯುವುದನ್ನು ಕಲಿತನು. Hose throws water ನೀರ್ಕೊಳವಿ ನೀರನ್ನು ಎರಚುತ್ತದೆ. Thrown from his horse ಕುದುರೆಮೇಲಿಂದ ಎತ್ತಿಹಾಕಲ್ಪಟ್ಟು, ಕೆಡವಲ್ಪಟ್ಟು. Was thrown into a dilemma ಉಭಯ ಸಂಕಟಕ್ಕೆ ಸಿಕ್ಕಿಬಿದ್ದನು. Ship was thrown upon the coast ಹಡಗು ಕರೆಗೆ ಒಗೆಯಲ್ಪಟ್ಟಿತು. House thrown down by earthquake ಭೂಕಂಪದಿಂದ ಕೆಡವಲ್ಪಟ್ಟ ಮನೆ. Was thrown upon his own resources ಅವನು ತನ್ನ ಸ್ವಂತ ಸಾಧನೋಪಾಯಗಳನ್ನೆ ಅವಲಂಬಿಸಬೇಕಾಯಿತು; —ಸಾಧನೋಪಾಯಗಳಿಗೆ ಬಂದುಬಿದ್ದನು. T. cold water (Cold ನೋಡಿ). T. a sop to (ಕಾಟ ಕೊಡುತ್ತಿರುವವನನ್ನು ಒಲಿಸಿಕೊಳ್ಳುವುದಕ್ಕಾಗಿ) ಬಾಯಿಗೆ ಸ್ವಲ್ಪ (ಉಪಾಹಾರ) ಹಾಕು. T. light on the matter ವಿಷಯದ ಮೇಲೆ ಬೆಳಕು ಚೆಲ್ಲು. T. down the glove (Glove ನೋಡಿ). T. dust in one's eyes (Dust ನೋಡಿ). T. oneself, one's daughter, at the head of (a man) (ಹೆಂಗಸಿನ ವಿಷಯದಲ್ಲಿ) (ತನ್ನನ್ನು ಮದುವೆಯಾಗೆಂದು) ಮೇಲೆಬಿದ್ದುಹೋಗು, ಉದ್ದೇಶಪಟ್ಟು ದೃಷ್ಟಿಗೆ ಬೀಳು, (ತನ್ನ ಮಗಳನ್ನು ಮದುವೆಯಾಗೆಂದು) ಮೇಲೆಬಿದ್ದು ತೋರಿಸು, ದೃಷ್ಟಿಗೆ ಬೀಳಿಸು. T. in one's teeth ಮುಖದ ಮೇಲೆ ಎಸೆ, ಎದುರೆದುರಿಗೆ ಖಂಡಿಸು. T. good money after bad ಹೋದ ಹಣ ಸಂಪಾದಿಸಹೋಗಿ ಇದ್ದ ಹಣವನ್ನೂ ಕಳೆದುಕೊ ; ತಂಬಿಗೆ ಹೋದದ್ದಕ್ಕೆ ಬಿಂದಿಗೆ ಕೊಟ್ಟು ಕಣಿ ಕೇಳು. T. one a kiss ತನ್ನ ತುಟಿಗೆ ಮುತ್ತಿಟ್ಟುಕೊಂಡ ಕೈಯನ್ನು ಒಬ್ಬನ(ಳ) ಕಡೆಗೆ ಚಾಚು: ಮುತ್ತು ಬೀರು]; (ಕ್ರಿಕೆಟ್) (ಚೆಂಡನ್ನು : ತೋಳನ್ನು ನುತ್ತಿಸಿ ಎಸೆಯದೆ) ಒಗೆ, ಬೀರು (Was no-balled for throwing); (ಕುಸ್ತಿಯ ಜಟ್ಟಿ ಎದುರಾಳಿಯನ್ನು, ಕುದುರೆ ಸವಾರನನ್ನು) ನೆಲಕ್ಕೆ ಕೆಡವು, ಉರುಳಿಸು ; (ಬಟ್ಟೆಯನ್ನು) (ಅವಸರವಸರವಾಗಿ, ಅಲಕ್ಷ್ಯದಿಂದ) ತಗುಲಿಸಿಕೊ, ಹಾಕಿಕೊ (*On* ಉಪ. ದೊಡನೆ), ತೆಗೆದುಹಾಕು, ಕಿತ್ತೆಸೆ (*Off* ಉಪ. ದೊಡನೆ), (ಭುಜ, ಮೊ. ಗಳ ಮೇಲೆ) ಹಾಕಿಕೊ (*Over* shoulders, etc.). (ಹಾವಿನ ವಿಷಯದಲ್ಲಿ) (ಪೊರೆ) ಬಿಡು, ಕಳಚು ; (ಪ್ರಾಣಿಗಳ ವಿಷಯದಲ್ಲಿ) ಮರಿ ಹಾಕು, ಈಯು ; (ದಾಳದಿಂದ) ಗರಹಾಕು, ಬೀಳಿಸು (Threw deuce-ace ದುಗ ಹಾಕಿದನು, ಬೀಳಿಸಿದನು); (ರೇಷ್ಮೆ, ಮೊ. ನ್ನು) ಹುರಿಮಾಡು, ಹೊಸೆ ; (ಕುಂಬಾರ ಚಕ್ರದಮೇಲೆ) ರೂಪಿಸು, ಮಣ್ಣಿಗೆ ಆಕಾರಕೊಡು ; (ಅಂಗವನ್ನು : ತಟ್ಟನೆ, ಬಿರುಸಾಗಿ) ತಿರುಗಿಸು, ಎಸೆ, ಮುರಿ [Threw his arms up. Threw a glance backwards. T. a chest (ಅನಂ.) ಎದೆಯಗಲಿಸಿ ನೆಟ್ಟಗೆ ನಿಲ್ಲು]. T. away (ರೂಪ.) (ಅನಾವಶ್ಯಕವಾಗಿ, ಅಲಕ್ಷ್ಯದಿಂದ) ಬಿಸಾಡಿಬಿಡು, ಕಳೆದುಕೊ, ಹಾಳುಮಾಡಿಕೊ (Threw away all his advantages) ; (ಭೂ. ಕೃ.) ವ್ಯರ್ಥ (ಮಾಡಿದ) (The advice was thrown away upon him ಅವನಿಗೆ ಹೇಳಿದ ಬುದ್ಧಿವಾದ ವ್ಯರ್ಥವಾಯಿತು ; ಅವನಿಗೆ ವ್ಯರ್ಥವಾಗಿ ಬುದ್ಧಿವಾದ ಹೇಳಿದೆನು). T. back ಪೂರ್ವಿಕರ ಸ್ವಭಾವಕ್ಕೆ —ಹಿಂದಿರುಗು, ಮರಳು ; ಮರುಕೊಳಿಸು. T. oneself down

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಲಗಿಕೊ, ಬಿದ್ದುಕೊ. T. in (ವ್ಯಾಪಾರದಲ್ಲಿ) ಜೊತೆಗೆ, ಹೆಚ್ಚಿಗೆಯಾಗಿ, —ಕೊಡು (=T. into the bargain); (ಮಾತು, ಟೀಕೆ, ಮೊ. ನ್ನು ಪ್ರಕ್ಷೇಪವಾಗಿ) ನಡುವೆ, ಮಧ್ಯೆ, —ಸೇರಿಸು; (T. in one's lot with ಒಬ್ಬನ ಕಷ್ಟಸುಖಗಳಲ್ಲಿ ಸಹಭಾಗಿಯಾಗು; ಒಬ್ಬನಿಗೆ ಆದದ್ದು ತನಗೂ ಆಗಲೆಂದು ಅವನ ಜೊತೆಗೆ ಸೇರಿಕೊ). T. oneself into ಹುರುಪಿನಿಂದ, ಉತ್ಸಾಹದಿಂದ, —(ಕೆಲಸಕ್ಕೆ) ತೊಡಗು, ಕೈಹಚ್ಚು. T. off ಬಿಸಾಡು; (ಪರಿಚಯ, ಮೊ. ನ್ನು) ತೊರೆ(ದುಬಿಡು); (ರೋಗ, ತೊಂದರೆಗಾರ, ಮೊ. ನ್ನು) ನಿವಾರಿಸಿಕೊ, ತೊಲಗಿಸಿಕೊ; (ವೇಷ) ಬಿಟ್ಟುಬಿಡು, ತೆಗೆದುಹಾಕು; (ಕವನ, ನಾಟು ನುಡಿ, ಟೀಕೆ, ಮೊ. ನ್ನು) ಅಪ್ರಯತ್ನವಾಗಿ, ಫಕ್ಕನೆ,—ಹೇಳು, ಹೇಳಿಬಿಡು; (ಬೇಟೆನಾಯಿ, ಬೇಟೆ, ಮೊ. ಗಳ ವಿಷಯದಲ್ಲಿ; ರೂಪ. ಸಹ) ಬೇಟೆಗೆ ಆರಂಭಿಸು, ತೊಡಗು; (ಆಡಲು) ಮೊದಲು ಮಾಡು, ಪ್ರಾರಂಭಿಸು. T. oneself on, upon (—ಗೆ) ಶರಣು ಹೋಗು; —ಮೇಲೆ ನಂಬಿ ಕೊಂಡಿರು, ಭಾರಹಾಕಿರು (T. oneself on, upon, the mercy of the court). T. open ಫಕ್ಕನೆ, ಅಗಲವಾಗಿ, —ತೆರೆ(ದುಕೊ); (ಎಲ್ಲರಿಗೂ) ತೆರೆ, ಪ್ರವೇಶಕೊಡು (*To* ಉಪ. ದೊಡನೆ) (T. open the door to ಸಾಧ್ಯವಾಗುವಂತೆ ಮಾಡು, ಅವಕಾಶ ಕಲ್ಪಿಸು, ಮಾರ್ಗ ಕೊಡು). T. out ಹೊರಹಾಕು, ಹೊರಕ್ಕೆಸೆ; ವಿಸರ್ಜಿಸು, ಬಹಿಷ್ಕರಿಸು; (ಪಕ್ಕ ಕಟ್ಟಡ, ಚಾಚು ಭಾಗ, ಮೊ. ನ್ನು) ಕಟ್ಟು; ಸೂಚಿಸು, (ವ್ಯಂಗ್ಯವಾಗಿ) ಸೂಚನೆಮಾಡು; (ಶಾಸನ ಸಭೆಯಲ್ಲಿ: ಮಸೂದೆಯನ್ನು) ತಳ್ಳಿಹಾಕು, ನಿರಾಕರಿಸು; (ಮಾತಾಡುತ್ತಿರುವವನನ್ನು, ಕೆಲಸಮಾಡುತ್ತಿರುವವನನ್ನು) ತಪ್ಪುದಾರಿಗೆ ಎಳೆ, ಗಮನ ತಪ್ಪಿಸು, ತಬ್ಬಿಬ್ಬು ಹಿಡಿಸು; (ಕ್ರಿಕೆಟ್ಟಿನಲ್ಲಿ, ಆಟ ಕಾಯುವವನ ವಿಷಯದಲ್ಲಿ) ಚೆಂಡಿನಿಂದ ಗುರಿಕೋಲು ಕೆಡವಿ (ದಾಂಡುಗಾರನ) ಆಟ ಕಳೆ. T. over ಕೈಬಿಡು, ತೊರೆ. T. overboard (Over- ಕೆಳಗೆ Overboard ನೋಡಿ). T. up ಮೇಲಕ್ಕೆ —ಎತ್ತು, ಎಸೆ; (ಅಧಿಕಾರ, ಮೊ. ನ್ನು) ಬಿಟ್ಟುಬಿಡು, ಎಸೆದುಬಿಡು; ವಾಂತಿ—ಆಗು, ಮಾಡು; ಕಾರು [T. one's eyes up (ಗಾಬರಿ, ಮೊ. ಗಳಿಂದ) ಮೇಲಕ್ಕೆ ನೋಡು, ಮೇಲ್ಗಣ್ಣುಮಾಡು. T. up the sponge (Sponge ನಾ., ನೋಡಿ)]. **(-)thrower** (ನಾ.); **Thrówster** (ನಾ.) ರೇಷ್ಮೆಹುರಿಗಾರ.

Throw (ನಾ.) ಎಸೆತ, ಒಗೆತ, ಎರಚಿಕೆ, (ಹೊರಗೆ, ಎತ್ತಿ,—) ಹಾಕುವುದು; (ದಾಳದ) ಗರ; ಗಾಳ ಹಾಕುವುದು, ಗಾಳದ ಬೀಸು; ಎಸೆತದ, ಎಸೆಯಬಲ್ಲ, —ದೂರ (A stone's t. ಕಲ್ಲೆಸೆಯ ದೂರ); (ಶಿಥಿಲ ಪ್ರ.) ಕೊಂಚ ದೂರ, ಹತ್ತಿರ; (ಕುಸ್ತಿಯಲ್ಲಿ) ಬೀಳು(ವುದು), ಬೀಳಿಸುವ ಪಟ್ಟು; (ಕ್ರಿಕೆಟ್) (ಅಕ್ರಮವೆಂದು ಗಣಿಸುವ, ಎಸೆಗಾರನ) ಚೆಂಡಿನ ಬೀರು; (ಭೂ. ವಿ., ಗಣಿ ಕೆಲಸ) (ಭೂಸ್ತರದಲ್ಲಿಯ) ವಿಚ್ಛಿತ್ತಿ, ಛಂಗ. ತೀವ್ರ ಭ್ರಮಣ ಚಲನೆಯ ಯಂತ್ರಸಲಕರಣೆ: ಚರಕಿಯಂತ್ರ. T.-off (ಬೇಟೆಯಲ್ಲ, ಓಟದ ಪಂದ್ಯದಲ್ಲಿ) ಪ್ರಾರಂಭ. T.-stick ಕೈಯಿಂದ ತಿರುಗಿಸಿ ಎಸೆಯುವ ದೊಣ್ಣೆ, ಗದೆ, ಮೊ. ವು: ಎಸೆಗೋಲು.

Thrówster. Throw ನೋಡಿ.

Thrum[1] ತ್ರಂ (ನಾ., ಕ್ರಿ. ಸಕ.) ನೆಯ್ದ ಬಟ್ಟೆಯನ್ನು ಕತ್ತರಿಸಿ ತೆಗೆದ ಮೇಲೆ ಮಗ್ಗದಲ್ಲಿ ಉಳಿಯುವ ದಾರದ ಚುಂಗು: ನೆಯ್ಗೆ ಚುಂಗು; ಬಿದ್ದಿಗೆ; ಈ ಚುಂಗಿನ ಒಂದು ಎಳೆ: ಚುಂಗೆಳೆ; ಚುಂಗು, ಕುಚ್ಚು; ಜುಂಗು; (Thread & t. ಒಳ್ಳೆಯದೂ ಕೆಟ್ಟದ್ದೂ ಎಲ್ಲ; ಸಾರ ನಗಟು). (ಕ್ರಿ.) ಚುಂಗು, ಕುಚ್ಚು, —ಮಾಡು, ಬಿಡು, ಕಟ್ಟು. **Thrúmmy** (ಗು.)

Thrum[2] ತ್ರಂ (ಕ್ರಿ., ನಾ.) (ತಂತಿವಾದ್ಯವನ್ನು) ಏಕತಾನದಲ್ಲಿ, ಚಿಟ್ಟು ಹಿಡಿಯುವಂತೆ, ಒಡ್ಡೊಡ್ಡಾಗಿ, —ನುಡಿಸು, ಬಾರಿಸು, ಮೀಟು (*On* ಉಪ. ದೊಡನೆ); (ಮೇಜು, ಮೊ. ನ್ನು) ಸುಮ್ಮನೆ ತಟ್ಟು(ತ್ತಿರು), ಕುಟ್ಟು(ತ್ತಿರು) (*On* ಉಪ. ದೊಡನೆ). (ನಾ.) —ವುದು, —ವ ಶಬ್ದ.

Thrush[1] ತ್ರಷ್ (ನಾ.) (ಮು., ಯೂರೋಪಿನ) ಒಂದು ಪಕ್ಷಿಜಾತಿ, ಒಂದು ಹಾಡುಹಕ್ಕಿ (=Song-t.)

Thrush[2] ತ್ರಷ್ (ನಾ.) ಬಾಯಲ್ಲೂ ಗಂಟಲಲ್ಲೂ ಮುತ್ತಿನ ಬಣ್ಣದ ಗಂಡೆಗಳೇಳುವ, (ಮಕ್ಕಳ) ಒಂದು ರೋಗ: ಬಾಯಿಹುಣ್ಣು, ಆಸಪಾಕ; ಕುದುರೆಯ ಅಂಗಾಲಿನ ಒಂದು ರೋಗ.

Thrust ತ್ರಸ್ಟ್ (ಕ್ರಿ.; ಭೂತ., ಭೂ. ಕೃ. Thrust; ನಾ.) ತಿವಿ, ಚುಚ್ಚು, ದೂಡು, ತಳ್ಳು, ದಬ್ಬು, ನೂಕು, ತುರುಕು, ಚಾಚು, ಒತ್ತು [T. his fist into my face ಮುಷ್ಟಿಯನ್ನು ನನ್ನ ಮುಖಕ್ಕೆ ತಿವಿದನು. T. the letter into his pocket ಕಾಗದವನ್ನು ತನ್ನ ಜೇಬಿಗೆ ತುರುಕಿದನು. T. a pin into the cushion ಗುಂಡುಸೂಜಿಯನ್ನು ಮೆತ್ತೆಗೆ ಚುಚ್ಚು. I t. out my hand ನಾನು ನನ್ನ ಕೈಯನ್ನು ಚಾಚಿದೆನು. T. him forth ಅವನನ್ನು ಹೊರಕ್ಕೆ—ನೂಕು, ದಬ್ಬು. Was t. from his rights ತನ್ನ ಹಕ್ಕುಗಳಿಂದ ದೂಡಲ್ಪಟ್ಟನು. T. oneself *or* one's nose in (Nose ನೋಡಿ). T. upon ಬಲಾತ್ಕಾರದಿಂದ ಹೇರು, ಹೊರಿಸು (Some have greatness t. upon them). T. oneself upon ಮೇಲೆಬಿದ್ದು ಹೋಗು]; (ವ್ಯಕ್ತಿ, ಮೊ. ನ್ನು) ಇರಿ (*Through* ಉಪ. ದೊಡನೆ); ನುಗ್ಗಿಕೊಂಡು, ತಳ್ಳಿಕೊಂಡು, —ಹೋಗು (*Through, past* ಮೊ. ಉಪ. ದೊಡನೆ); ನೂಕಿ ದಾರಿಮಾಡಿಕೊಂಡು ಹೋಗು. (ನಾ.) ನೂಕು(ವುದು), ತಳ್ಳಿಕೆ, ನೂಕಲು, ನುಗ್ಗಲು; (ಸೈನ್ಯ) (ಶತ್ರು ಸೈನ್ಯದಮೇಲೆ, ಪ್ರದೇಶದಮೇಲೆ) ನುಗ್ಗು ದಾಳಿ; (ಆಯುಧದಿಂದ) ಇರಿತ, ತಿವಿತ; (ಒಬ್ಬನನ್ನು ಕುರಿತು ಮಾಡಿದ) ಕಟು ಟೀಕೆ, ಇರಿನುಡಿ [Home t. (Home ನೋಡಿ). He parried the t.]; (ಎರಡು ಕಾಯಗಳ, ಮು., ಒಂದು ಕಟ್ಟಡದ ಎರಡು ಭಾಗಗಳ, ಪರಸ್ಪರ) ಒತ್ತಡ, ಒತ್ತಾಟ, ದಬಾವಣೆ (ಉದಾ., ದೂಲದಮೇಲಿನ, ಕಮಾನಿನಮೇಲಿನ, ಒತ್ತಡ); (ಕಲ್ಲಿದ್ದಲ ಗಣಿ) ಸುರಂಗ ದಾರಿಯ ಚಾವಣಿಯ ಕುಸಿತ, ಚಾವಣಿಯ ಭಾರದಿಂದ ಕಂಬಗಳು ಮುರಿದುಕೊಂಡು ಬೀಳುವುದು: ಕುಸಿತ. **T.-hoe** ಒತ್ತು, ನೂಕು, —ಗುದ್ದಲಿ (ಸೆಳೆಗುದ್ದಲಿಯಲ್ಲ). **Thrúster** (ನಾ.) (ಕ್ರಿಯಾರ್ಥಗಳಲ್ಲಿ); ಮುಂದಿನ ಸ್ಥಳಕ್ಕಾಗಿ ನುಗ್ಗುವಾಗ ಇತರರಿಗಾಗಲಿ ಬೇಟೆನಾಯಿಗಳಿಗಾಗಲಿ ಅಪಾಯವುಂಟುಮಾಡುವ ಬೇಟೆಗಾರ: ನುಗ್ಗುಬೇಟೆಗಾರ; ಮೇಲೆಬಿದ್ದು, ಮುಂದೆಬಿದ್ದು, —ಹೋಗುವವನು.

Thud ತಡ್ (ಕ್ರಿ. ಅಕ., ನಾ.) ದಡ್ (ಎಂದು ಸದ್ದಾಗು)

Thug ತಗ್ (ನಾ.) ಇಂಡಿಯದಲ್ಲಿ ಹಿಂದೆ ಇದ್ದ ಒಂದು ಕೊಲೆಗಡಿಕರ ಗುಂಪಿನವನು: ಠಕ್ಕ; ಕೊಲೆಗಡಿಕ, ಘಾತುಕ, ಕೊರಳುಕೊಯ್ಕ. **Thúggee** ತಗೀ, **Thúggery, Thúggism** (ನಾ.) ಕೊಲೆಗಡಿಕ, ಠಕ್ಕ, —ವಿದ್ಯೆ.

Thúle ತ್ಯೂಲೀ (ನಾ.) ಗ್ರೀಕ್ ನಾವಿಕನೂ ಭೂಗೋಳ ಶಾಸ್ತ್ರಜ್ಞನೂ ಆದ ಪಿತಿಯಸ್ (Pytheas) ಎಂಬಾತನು ಗ್ರೇಟ್ ಬ್ರಿಟನ್ನಿನ ಉತ್ತರದಲ್ಲಿನ ಯಾವುದೋ ದ್ವೀಪಕ್ಕೆ ಅಥವಾ ಭೂಭಾಗಕ್ಕೆ ಕೊಟ್ಟ ಹೆಸರು. Ultima T. ಯಾವುದಾದರೂ ದೂರದ ಅಪರಿಚಿತ ಪ್ರಾಂತ; (ರೂಪ.) ತುತ್ತತುದಿ, ಪರಾಕಾಷ್ಠೆ.

Thumb ತಂ (ನಾ., ಕ್ರಿ. ಸಕ.) ಕೈಯ ಹೆಬ್ಬೆರಳು, ಹೆಬ್ಬೆಟ್ಟು, ಅಂಗುಷ್ಠ [Thumbs up! (ಅನಂ.) (ತೃಪ್ತಿಸೂಚಕ ಉದ್ಗಾರ): ಭೇಷ್! Rule of t. (Rule ನೋಡಿ). His fingers are all thumbs (Finger ನೋಡಿ). Under one's t. ಒಬ್ಬನ ಹಿಡಿತದಲ್ಲಿ, ಅಧೀನದಲ್ಲಿ]. **T.-blue** (ನಣ್ಣ ನಣ್ಣ ಗಟ್ಟಿಗಳಾಗಿ ಮಾಡಿದ) ಚಲುವೆಯ, ಅಗಸರ, —ನೀಲಿ: ಉಂಡೆನೀಲಿ. **T.-index** ಬೇಕಾದ ಪ್ರಕರಣವನ್ನು ಬೇಗನೆ ಗುರುತಿಸಿ ತೆಗೆಯಲು ಅನುಕೂಲಿಸುವಂತೆ, ಪುಸ್ತಕದ ಹಾಳೆಗಳ ಅಂಚಿನಲ್ಲಿ ಒಳ ಕೊರೆದು ಆದ್ಯಕ್ಷರಗಳನ್ನು ಅಥವಾ ಶಿರನಾಮೆಗಳನ್ನು ಹಾಕಿರುವ ಸೂಚಿ: ಹೆಬ್ಬೆಟ್ಟು ಸೂಚಿ. **T.-latch** ಸನ್ನೆಗೆ ಹೆಬ್ಬೆಟ್ಟನ್ನು ಒತ್ತಿ ಎತ್ತಲಾಗುವ ಅಗುಳಿ: ಹೆಬ್ಬೆಟ್ಟಗುಳಿ. **T.-mark** (ಹಾಳೆಗೆ ಅಂಟಿದ ಅಥವಾ ದಾಖಲೆಯಲ್ಲಿ ಹಾಕಿಸಿದ) ಹೆಬ್ಬೆಟ್ಟಿನ ಗುರುತು. **T.-nail sketch** ಹೆಬ್ಬೆಟ್ಟುಗುರಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಗಲದ ಚಿತ್ರ; ಅಂಗುಷ್ಠ ನಖ (ಪ್ರಮಾಣ) ಚಿತ್ರ; ಅವಸರದ—ಶಬ್ದ ಚಿತ್ರ, ವರ್ಣನೆ. **T.-nut** ಹೆಬ್ಬೆಟ್ಟಿನಿಂದ ತಿರುಗಿಸುವುದಕ್ಕೆ ತಕ್ಕಂತೆ ಮಾಡಿದ ಒಳ ತಿರುಪುಗಟ್ಟಿ : ಹೆಬ್ಬೆಟ್ಟು ತಿರುಪು(ಗಟ್ಟಿ). **T.-print** (ಆಸಾಮಿಯು ಗುರುತಾಗಿ ತೆಗೆದುಕೊಳ್ಳುವ) ಹೆಬ್ಬೆಟ್ಟಿನ ಗುರುತು. **T.-screw** ಹೆಬ್ಬೆಟ್ಟುಗಳನ್ನು ಹಿಸುಕಿ ಹಿಂಸಿಸುವ ಸಾಧನ : ಹೆಬ್ಬೆಟ್ಟು ಹಿಸುಕ. **T.-stall** ಹೆಬ್ಬೆಟ್ಟಿಗೆ ರಕ್ಷಣೆಯಾಗಿ ಹಾಕಿಕೊಳ್ಳುವ ಕವಚ, ಮೆತ್ತೆ, ಮೊ. ವು : ಹೆಬ್ಬೆಟ್ಟಿನ ಕಾಪು, ಅಂಗುಷ್ಠ ತ್ರಾಣ. (ಕ್ರಿ.) (ಹಾಳೆ, ಮೊ. ನ್ನು) ಹೆಬ್ಬೆಟ್ಟು ಗುರುತುಗಳಿಂದ ಕೆಡಿಸು, ಕೊಳೆಮಾಡು ; (ಪಿಯಾನೊ ವಾದ್ಯದ ಕೀಲಿ, ಮೊ. ನ್ನು) ಒಡ್ಡೊಡ್ಡಾಗಿ ಒತ್ತು ; (ಗೀತವನ್ನು) ಒಡ್ಡೊಡ್ಡಾಗಿ ಬಾರಿಸು. **Thúmbless** (ನಾ.)

Thump ತಂಪ್ (ಕ್ರಿ., ನಾ.) (ಮು., ಮುಷ್ಟಿಯಿಂದ) ಬಲವಾಗಿ ಗುದ್ದು, ಕುಟ್ಟು ; ಕುಟ್ಟಿಹಾಕು, ಬಡಿದುಹಾಕು (*At, on* ಮೊ. ಉಪ. ದೊಡನೆ) [T. the *or* a cushion (ಉಪದೇಶಕನು ತನ್ನ ಮಾತುಗಳನ್ನು ಒತ್ತಿ ಹೇಳುವ ಆವೇಶದಲ್ಲಿ). ವೇದಿಕೆಯ ಮೆತ್ತೆಯನ್ನು ಕುಟ್ಟು, ಕೈ ಕುಟ್ಟಿ ಮಾತಾಡು]. (ನಾ.) ಹೊಡೆತ, ಬಡಿತ, ಗುದ್ದು, ಕುಟ್ಟು. **Thúmper** (ನಾ.) (ಕ್ರಿಯಾರ್ಥಗಳಲ್ಲಿ); (ಬಳ. ಮಾ.) ದೊಡ್ಡ, ಭಾರಿ, ಅಸಾಧಾರಣ, ಪ್ರಚಂಡ, —ವ್ಯಕ್ತಿ, ವಸ್ತು (ಮು., ಭಾರಿ ಸುಳ್ಳು, ಘೋಂಗು). **Thúmping** (ಗು.) ದೊಡ್ಡ, ಭಾರಿ.

Thúnder ತಂಡರ್ (ನಾ., ಕ್ರಿ.) ಗುಡುಗು, ಮೊಳಗು, ಮೇಘಧ್ವನಿ ; ಸಿಡಿಲು [Jove's thunders (ಗ್ರೀಕರ ಜೋವ್ ದೇವತೆಯ) ವಜ್ರಾಯುಧ] ; (ರೂಪ.) ದೊಡ್ಡ ಸದ್ದು, ಅಬ್ಬರ, ಮಹಾರವ, ಗರ್ಜನೆ, ಮೊಳಗು [Thunders of applause ಪ್ರಶಂಸನ ಘೋಷ. Blood-&-t. (ಕಾದಂಬರಿ, ಮೊ. ಗಳ ವಿಷಯದಲ್ಲಿ) ರೋಮಾಂಚಕ, ಕೋಲಾಹಲದ] ; (ಬ. ವ. ದಲ್ಲಿ) ಆರ್ಭಟ, ಆಕ್ಷೇಪಣೆ, ಬೆದರಿಕೆ ಗುಡುಗಾಟ (The thunders of *the Times*, of the Church ಟೈಮ್ಸ್ ಪತ್ರಿಕೆಯ, ಕ್ರೈಸ್ತ ಮತದ, —ಆರ್ಭಟ, ಗರ್ಜನೆ). (ಕ್ರಿ.) ಗುಡುಗು (It thunders) ; ಗುಡುಗಾಡು, ಮೊಳಗು, ಘೋಷವಾಗು, ಗರ್ಜಿಸು (Voice thundered in my ears ಧ್ವನಿ ನನ್ನ ಕಿವಿಯಲ್ಲಿ ಮೊಳಗಾಡಿತು, ಗರ್ಜಿಸಿತು) ; ಬೆದರಿಸು, ಆರ್ಭಟಿಸು, ಅಬ್ಬರಿಸು (*Against* ಉಪ. ದೊಡನೆ). **T.-&-lightning** ಕಪ್ಪು ನರೆಬಣ್ಣದ (ಉಣ್ಣೆಯ) ಬಟ್ಟೆ. **Thúnderbolt** ಸಿಡಿಲು, ವಜ್ರ ; (ತಟದ್ದ್ರವ್ಯವೆಂದು ಭಾವಿಸಿದ್ದ ಕಾಲ್ಪನಿಕ) ಸಿಡಿಲು—ಕಂಬಿ, ದಂಡ ; ಸಿಡಿಲುಗಂಬಿಯೆಂದು ಭಾವಿಸಿರುವ ಹಲವು ಬಗೆಯ ಶಿಲೆ, ಪಳೆಯುಳಿಕೆ : ವಜ್ರಶಿಲೆ. ಪ್ರಚಂಡ ಬೆದರಿಕೆ, ಗುಡುಗಾಟ. **T.-clap** ಸಿಡಿಲೆರಗು(ವುದು), ವಜ್ರಾಘಾತ [(ಮು., ರೂಪ) : The news came on me like a t.-clap ಆ ಸುದ್ದಿ ನನಗೆ ಸಿಡಿಲನಂತೆ ಬಡಿಯಿತು ; ಆ ಸುದ್ದಿ ಕೇಳಿ ನನಗೆ ಸಿಡಿಲೆರಗಿದಂತಾಯಿತು]. **T.-cloud** ಸಿಡಿಲು, ಗುಡುಗು, —(ಉಂಟುಮಾಡುವ) ಮೋಡ. **T.-storm** ಸಿಡಿಲು, ಗುಡುಗು, —ಮಳೆ. **T.-struck** ಸಿಡಿಲೆರಗಿದ ; ಬೆರಗಾದ ; ದಿಗ್ಭ್ರಾಂತ, ಚಕಿತ ; ಗಾಬರಿಗೊಂಡ. **Thúnderer** (ನಾ.) (ಕ್ರಿಯಾರ್ಥಗಳಲ್ಲಿ) ; The T. ಜುಪಿಟರ್ ದೇವತೆ, ಜೋವ್ ದೇವತೆ (ನಮ್ಮಲ್ಲಿ ದೇವೇಂದ್ರನಿದ್ದಂತೆ); (ಹಾಸ್ಯಪ್ರ.) ಲಂಡನ್ನಿನ ಟೈಮ್ಸ್ ಪತ್ರಿಕೆ. **Thúndering** (ಗು., ಕ್ರಿ. ವಿ.) (ಕ್ರಿಯಾರ್ಥಗಳಲ್ಲಿ) ; (ಬಳ. ಮಾ.) ಅಸಾಧಾರಣವಾದ (—ವಾಗಿ), ಆಶ್ಚರ್ಯಕರವಾದ (—ವಾಗಿ), ಬಹಳ ಭಾರಿಯ(—ಯಾಗಿ), ಖಂಡಿತವಾದ(—ವಾಗಿ), ಅತ್ಯಂತ(ವಾಗಿ) (A t. nuisance ಮಹಾ ಅನಿಷ್ಟ. Was t. glad to get back ಹಿಂದಿರುಗಲು ಅತ್ಯಂತ ಸಂತೋಷವಾಯಿತು. A t. great fish ಅತಿ ದೊಡ್ಡ ಮೀನು. The T. legion ಅವರ ಪ್ರಾರ್ಥನೆಯ ಫಲವಾಗಿ ದೇವರು ಕರೆದ ಸಿಡಿಲುಮಳೆ ಹಗೆಗಳನ್ನು ದಿಗಿಲುಗೊಳಿಸಿತೆಂಬ ಪ್ರತೀತಿಪಡೆದ ಕ್ರೈಸ್ತ ಸಿಪಾಯಿಗಳನ್ನೊಳಗೊಂಡ ರೋಮನ್ ಸೈನ್ಯದಳ : ಸಿಡಿಲುದಳ). **Thúnderingly** (ಕ್ರಿ. ವಿ.) ; **Thúnderless** (ಗು.); **Thúnderous** (ಗು.) ; **Thúnderously** (ಕ್ರಿ. ವಿ.) ; **Thúndery** (ಗು.) ಗುಡುಗಿನ, ಸಿಡಿಲಿನ ; ಗುಡುಗುವ, ಗುಡುಗಾಡುವ ; (ರೂಪ.) (ಕೋಪ, ಭಾವ, ಮೊ. ಗಳ) ಉದ್ರೇಕದ, ಅಬ್ಬರದ, ಆರ್ಭಟದ ; ಮೋಡಗಟ್ಟಿದ ; ಸಿಡಿಲುಮೋರೆಯ.

Thúrible ತ್ಯೂ(ಅ)ರಿಬ್‌ಲ್ (ಗು.) ಧೂಪಪಾತ್ರೆ, ಧೂಪದಾನಿ, ಧೂಪಾರ್ತಿ. **Thúrifer** (ನಾ.) (ಕ್ರೈಸ್ತ ಮತದಲ್ಲಿ) ಧೂಪಾರ್ತಿ ಹಿಡಿಯುವವನು ; ಧೂಪಧಾರಿ. **Thuríferous** (ಗು.) ಧೂಪೋತ್ಪಾದಕ. **Thurificátion** (ನಾ.) ಧೂಪ ಹಾಕುವುದು, ಧೂಪನ.

Thúrifer, Thuríferous, Thurificátion. Thurible ನೋಡಿ.

Thúrsday ತರ್ಸ್‌ಡೇ(ಡಿ) (ನಾ.) ಗುರುವಾರ, ಬೃಹಸ್ಪತಿವಾರ [Holy, Maundy, T. (ಆಯಾ ಪದ ನೋಡಿ)]

Thus ದಸ್ (ಕ್ರಿ. ವಿ.) ಹೀಗೆ, ಹಾಗೆ ; ಈ, ಆ, —ಪ್ರಕಾರ, ಮೇರೆಗೆ ; ಆದ್ದರಿಂದ, ಅದರಿಂದ, ಇದರಿಂದ ; ಇಲ್ಲಿಯ, ಇಷ್ಟರ, —ವರೆಗೆ (T. far ಇಲ್ಲಿಯವರೆಗೆ. T. much ಇಷ್ಟರ ಮಟ್ಟಿಗೆ). **Thúsness** (ನಾ.) (ಹಾಸ್ಯ ಪ್ರ.) ಹೀಗಿರುವುದು, ಹಾಗಿರುವುದು (Which is the reason of this t.)

Thwack ತ್ವ್ಯಾಕ್ (ಕ್ರಿ. ಸಕ., ನಾ.) = Whack.

Thwait(e) ತ್ವೆಯ್ಟ್ (ನಾ.) ಕಾಡು ಕಡಿದು, ಬಂಜರನ್ನು ಕೃಷಿಮಾಡಿ, —ಸಾಗುವಳಿಗೆ ತಂದ ನೆಲ [ಈಗ ಸ್ಥಳಗಳ ಹೆಸರುಗಳಲ್ಲಿ ಮಾತ್ರ ಪ್ರ.: Esthwait(e), Stonethwait(e) (ಕನ್ನಡದಲ್ಲಿ ಊರಹೆಸರುಗಳಲ್ಲಿ —ಕಾಡು, —ಹಾಳು, ಮೊ. ಇದ್ದಂತೆ)]

Thwart ತ್ವಾರ್ಟ್ [ಕ್ರಿ. ವಿ., ಉಪ., ಗು. (ಪ್ರಾಚೀ. ಪ್ರ.), ಕ್ರಿ. ಸಕ., ನಾ.] ಅಡ್ಡಲಾಗಿ, ಅಡ್ಡಡ್ಡಲಾಗಿ [(ನಾವೆ) T.-hawse ಹಡಗಿನ ಮೂತಿಗೆ ಅಡ್ಡಲಾಗಿರುವ. T.-ship ಹಡಗಿಗೆ ಅಡ್ಡಡ್ಡಲಾಗಿರುವ. T.-ships ಹಡಗಿಗೆ ಅಡ್ಡಡ್ಡಲಾಗಿ]. (ಗು.) ಅಡ್ಡ(ಡ್ಡ)ಲಾಗಿರುವ. (ಕ್ರಿ. ಸಕ.) (ಉದ್ದೇಶ, ಇಷ್ಟ, ಮೊ. ಕ್ಕೆ) ಅಡ್ಡಬರು, ಅಡ್ಡಿಮಾಡು, ಭಂಗ ತರು ; (—ಮೊ. ನ್ನು) ಮುರಿ, ಕೆಡಿಸು [**Thwártingly** (ಕ್ರಿ. ವಿ.)]. (ನಾ.) ದೋಣಿಗೆ ಅಡ್ಡಲಾಗಿ ಹಾಕಿರುವ ಹುಟ್ಟು ನಡಸುವವನ ಪೀಠ : ಅಡ್ಡಮಣೆ.

Thy ದೈ, **Thine** ದೈನ್ (ಸ. ನಾ., ಗು.) (ಈಗ ಪ್ರಾಚೀ. ಪ್ರ. ; ಸ್ವರ ಪರವಾದಾಗ Thine) : ನಿನ್ನ (It was thy fault. The fault was thine ತಪ್ಪು ನಿನ್ನದು. Lift thine eyes)

Thýlacine ತೈ(ತಿ)ಲಸೈ(ಸಿ)ನ್ (ನಾ.) ಜೀಬ್ರ ಪಟ್ಟೆಗಳುಳ್ಳ ಟಾಸ್ಮೇನಿಯದ ಒಂದು ಜಾತಿಯ ತೋಳ : ಜೀಬ್ರ ತೋಳ.

Thyme ಟೈಮ್ (ನಾ.) ಓಮದ ಜಾತಿಯ ಸಸ್ಯ (Common garden t. ಓಮದ ಗಿಡ. Shepherd's *or* wild t. ನಸು ಸುವಾಸನೆಯ ಎಲೆಗಳುಳ್ಳ ಕಾಡು ಓಮದ ಗಿಡ). **Thýmol** ತೈಮಾಲ್ (ನಾ.) (ಓಮದ ಎಣ್ಣೆ, ಮೊ. ಗಳಿಂದ ದೊರೆಯುವ) ಬಿಳಿಯ ಪಾರದರ್ಶಕ ಕಾರ್ಬಾಲಿಕ್ ಆಮ್ಲ ಸ್ಫಟಿಕ : ತೈಮಾಲ್ ($C_{10}H_{13}OH$) (ಒಂದು ತೀವ್ರ ಪೂತಿನಾಶಕ). **Thýmy** ಟೈಮಿ (ಗು.) ಓಮದ(ಥ), ಓಮದ ಸುವಾಸನೆ ಕಟ್ಟಿದ.

Thýmus ತೈಮಸ್ (ನಾ.; ಬ. ವ. -mi —ಮೈ) (ಅಂ. ರ. ಶಾ.) ಕುತ್ತಿಗೆಯ ಬುಡದಲ್ಲಿರುವ ಒಂದು ನಿರ್ನಾಳ ಗ್ರಂಥಿ : ತೈಮಸ್ ಗ್ರಂಥಿ (=T. gland) (ಇದು ಮನುಷ್ಯನಲ್ಲಿ ತಾರುಣ್ಯ ಮೂಡುವಾಗ ಕರಗಿಹೋಗುತ್ತದೆ)

Thýroid ತೈ(ಅ)ರಾಯ್ಡ್ (ಗು., ನಾ.) (ಅಂ. ರ. ಶಾ., ಪ್ರಾ. ವಿ.) ಗುರಾಣಿಯಾಕಾರದ [T. cartilege ದನಿಪೆಟ್ಟಿಗೆಯ ದೊಡ್ಡ ಮೃದ್ವಸ್ಥಿ (ಮನುಷ್ಯನಲ್ಲಿ ಇದರ ಚಾಚೇ ಗೋಮಾಳೆ ಅಥವಾ ಕಂಠಮಣಿ)] ; ತೈರಾಯ್ಡ್ ಮೃದ್ವಸ್ಥಿಯ [T. artery ತೈರಾಯ್ಡ್ (ಮೃದ್ವಸ್ಥಿಯ) ಅಪಧಮನಿ. T. body *or* gland ದನಿಪೆಟ್ಟಿಗೆ ಮತ್ತು ಶ್ವಾಸನಾಳಗಳ ಮೇಲಿರುವ, ಅದರ ನಿರ್ದಿಷ್ಟ ಕಾರ್ಯ ಏನೆಂಬುದು ಇನ್ನೂ ತಿಳಿಯದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ನಿರ್ನಾಳ ಗ್ರಂಥಿ: ತೈರಾಯ್ಡ್ ಗ್ರಂಥಿ; ಪ್ರಾಣಿಗಳ ತೈರಾಯ್ಡ್ ಗ್ರಂಥಿಯಿಂದ ತಯಾರಿಸಿ ಗಂಡಮಾಲೆ, ಮೊ. ರೋಗಗಳ ಚಿಕಿತ್ಸೆಗೆ ಉಪಯೋಗಿಸುವ ಔಷಧ: ತೈರಾಯ್ಡ್ ಔಷಧ (=T.)]; ಗುರಾಣಿ ಗುರುತುಗಳುಳ್ಳ (T. woodpecker). **Thyro-** ತೈ(ಅ)ರೊ— (ಸ. ಪೂ. ಪ.) (ಅಂ. ರ. ಶಾ.) ತೈರಾಯ್ಡ್—.

Thýrsus ತರ್ಸಸ್ (ನಾ., ಬ. ವ. -si —ಸ್ಸೈ) (ಗ್ರೀಕ್ ಪ್ರಾ.) ಪೈನ್ ಕಾಯನ್ನು ಹೋಲುವ ಅಲಂಕಾರದ ತುದಿಯುಳ್ಳ, ಐವಿ ಅಥವಾ ದ್ರಾಕ್ಷಿಬಳ್ಳಿಯನ್ನು ಸುತ್ತಿದ ಕೋಲು, ಧ್ವಂಡ (ಇದು ಬಾಖಸ್ ದೇವತೆಯ ಚಿಹ್ನೆ): ಬಾಖಸ್—ಧ್ವಜ, ದಂಡ.

Thysélf ದೈಸೆಲ್ಫ್ (ಸ. ನಾ.) (Thou ಮತ್ತು thee ಪದಗಳ ಸ್ವಾರ್ಥಕ ಮತ್ತು ನಿರ್ಧಾರಕ ರೂಪ): ನೀನೆ, ನಿನ್ನನ್ನೆ, ನಿನಗೇನೆ (T. shall see the act. Mortal, know t. Here is one for t.)

Tiára ಟಿಯಾರ (ನಾ.) ಪುರಾತನ ಪರ್ಷಿಯನರ ತಲೆಯುಡಿಗೆ; ಉಷ್ಣೀಷ (ರಾಜರದು ಉದ್ದವಾಗಿ ನೆಟ್ಟಗೂ, ಸಾಮಾನ್ಯರದು ಮೊಟಕಾಗಿ ಮಡಿಚುವಂಥದೂ ಆಗಿರುತ್ತಿದ್ದವು); ಪೋಪ್ ಗುರು ಧರಿಸುವ, ತುದಿ ಚೂಪಾಗಿ ಮೂರು ವಲಯಗಳಿಂದ ಸುತ್ತುವರಿದ ಕಿರೀಟ, ಮುಡಿ: ಪೋಪಿನ ಕಿರೀಟ; (ರೂಪ.) ಪೋಪಿನ—ಅಧಿಕಾರ, ಪದವಿ; (ಅಲಂಕಾರದ) ಸಣ್ಣ ಕಿರೀಟ. **Tiára'd** (ಗು.)

Tíbia ಟೈ(ಟಿ)ಬಿಯ (ನಾ.; ಬ. ವ. -ae —ಯಾ) (ಅಂ. ರ. ಶಾ.) ಮೊಣಕಾಲ ಮೂಳೆ [=Shin-bone (Shin ನೋಡಿ)]; ಕೀಟಗಳ ಕಾಲಿನ ನಾಲ್ಕನೆಯ—ಕೀಲು, ತುಂಡು; ಅಟ್ಟಕೋಳಿಯ ಕಾಲಿನ ಕೆಳ ತುಂಡು. **Tíbial** (ಗು.); **Tíbio-** (ಸ. ಪೂ. ಪ.)

Tic ಟಿಕ್ (ಮು., ಮುಖದ) ಸ್ನಾಯು ಸೆಳೆತ, ಸ್ನಾಯು ಸ್ಪಂದ; (ಅತಿ ಯಾತನೆಯ) ಮುಖನರಗಳ ಸೆಳೆತ (=T. douloureux —ಡಾರೋರೂ)

Tice ಟೈಸ್ (ನಾ.) =(ಕ್ರಿಕೆಟ್ ಆಟ) Yorker.

Tick[1] ಟಿಕ್ (ಕ್ರಿ., ನಾ.) (ಮು., ಗಡಿಯಾರದಲ್ಲಿಯಂತೆ) ಟಿಕ್ ಶಬ್ದ (ಮಾಡು), ಟಿಕ್(ಟಿಕ್) (ಎನ್ನು) (To *or* on the t. ಹೊತ್ತಿಗೆ ಸರಿಯಾಗಿ, ಠಾಕೋಠಾಕ್); [T.-tack (ಮು., ಹೃದಯದ) ತುಡಿತದ ಶಬ್ದ. T.-t. (ಮಕ್ಕಳ ಮಾತು) ಗಡಿಯಾರ]. ಪಟ್ಟಿ, ಮೊ. ಗಳನ್ನು ಸರಿನೋಡುವಾಗ ಒಂದೊಂದು ಬಾಬಿನ ಎದುರಿಗೂ ಹಾಕುವ ಚುಕ್ಕಿ, ಮೊ. ಗುರುತು: ಸರಿಗುರುತು, ತನಿಖೆ ಗುರುತು (—ಹಾಕು) (ಸಾ., *off* ಉಪ. ದೊಡನೆ); (ಗಡಿಯಾರ, ಮೊ. ಗಳ ವಿಷಯದಲ್ಲಿ) ಟಿಕ್ ಟಿಕ್ ಎಂದು ಹೊಡೆ (T. away ಟಿಕ್ ಟಿಕ್ ಎಂದು ಕಾಲ ಹೋಗುತ್ತಿರುವುದನ್ನು ಸೂಚಿಸು); (ತಂತೀವರ್ತಮಾನವನ್ನು ತಾನೇ ಬರೆದಿಡುವ ಸಲಕರಣೆಯ ವಿಷಯದಲ್ಲಿ) ಟಿಕ್ ಟಿಕ್ ಎಂದು ಸುದ್ದಿ ಗುರುತಿಸು (T. out). **Tícker** (ನಾ.) (ಕ್ರಿಯಾರ್ಥಗಳಲ್ಲಿ); (ಬಳ. ಮಾ.) ಗಡಿಯಾರ, ತಂತೀವರ್ತಮಾನ ಸುದ್ದಿಪಟ್ಟಿ; (ಹಾಸ್ಯ ಪ್ರ.) ಹೃದಯ.

Tick[2] ಟಿಕ್ (ನಾ.) ಉಣ್ಣಿ (ಹುಳು) (Cattle, dog, sheep, -t.)

Tick[3] ಟಿಕ್ (ನಾ.) ಹಾಸಿಗೆಯ—ಚೀಲ, ಗವುಸು; ಹಾಸಿಗೆಯ ಚೀಲದ ಬಟ್ಟೆ (ಗಡುಸಾದ, ಸಾ., ಪಟ್ಟೆಗಳುಳ್ಳ ಬಟ್ಟೆ) [**Tícking** (ನಾ.)]

Tick[4] ಟಿಕ್ (ನಾ., ಕ್ರಿ. ಅಕ.) (ಬಳ. ಮಾ.) ಸಾಲ, ಕಡ, ಉದ್ದರಿ (—ಕೊಡು) (Buy goods on t. ಸಾಮಾನನ್ನು ಸಾಲವಾಗಿ ಕೊಂಡುಕೊ)

Tícket ಟಿಕೆಟ್ (ನಾ., ಕ್ರಿ. ಸಕ.) ಪ್ರವೇಶಪತ್ರ, ಚೀಟು, ಟಿಕೀಟು [Bath, Concert, Excursion, Lottery, Railway, Theatre, t. ಸ್ನಾನದ, ಸಂಗೀತದ, ವಿಹಾರದ, ಲಾಟರಿಯ, ರೈಲಿನ, ನಾಟಕಶಾಲೆಯ, —ಟಿಕೀಟು, ಪ್ರವೇಶಚೀಟಿ. Return, Season, Through, t. (ಆಯಾ ಪದ ನೋಡಿ)]; (ಸೈನಿಕ ಅಸಂ.) ಕೆಲಸದ ಬಿಡುಗಡೆ (ಚೀಟಿ) (Get one's t. ಬಿಡುಗಡೆ—ಪಡೆ, ಆಗು); (ಬೆಲೆ, ಮೊ. ವಿವರಗಳನ್ನು ನಮೂದಿಸಿ ಸಾಮಾನಿಗೆ ಕಟ್ಟಿರುವ) ವಿವರಣ ಚೀಟಿ; (ಮನೆ ಬಾಡಿಗೆಗೆ ಇರುವ ವಿಷಯ, ಮೊ. ನ್ನು ಬರೆದು ಕಿಟಕಿ, ಮೊ. ಕಡೆ ಇಟ್ಟಿರುವ, ಸಾ., ರಟ್ಟಿನ) ಪ್ರಕಟನೆಯ, ತಿಳಿವಳಿಕೆಯ, —ಚೀಟಿ (The t. in the window which announced 'Apartments to let'); [(ಬಳ. ಮಾ.) The t. ತಕ್ಕದ್ದು, ಯುಕ್ತವಾದ್ದು (Not quite the t. ಅಷ್ಟೇನು ತಕ್ಕದ್ದಲ್ಲ, ಉಚಿತವಾದ್ದಲ್ಲ)]; (ರಾಜಕೀಯ) (ಒಂದು ಪಕ್ಷದ) ಉಮೇದುವಾರರ ಪಟ್ಟಿ; (ರೂಪ.) ಒಂದು ಪಕ್ಷದ ತತ್ತ್ವಗಳು [The democratic t. ಪ್ರಜಾಪ್ರಭುತ್ವ ಪಕ್ಷದ ತತ್ತ್ವಗಳು]; [T. of leave (ಶಿಕ್ಷೆಯ ಅವಧಿಯ ಒಂದು ಭಾಗವನ್ನು ಅನುಭವಿಸಿರುವ ಸೆರೆಯಾಳಿಗೆ ಅಥವಾ ಅಪರಾಧಿಗೆ, ಕೆಲವು ನಿರ್ಬಂಧಗಳನ್ನು ಹಾಕಿ ಸ್ವಾತಂತ್ರ್ಯ ಕೊಡುವ) ಅನುಮತಿ ಚೀಟಿ, ಪರವಾನಗಿ (T.-of-leave man ಪರವಾನಗಿ ಖೈದಿ)]. [**T.-day** (ಪತ್ರವ್ಯಾಪಾರ ಕಟ್ಟೆ) ಲೆಕ್ಕ ತೀರ್ಮಾನದ ಹಿಂದಿನ ದಿನ (ಆ ದಿನ ಪತ್ರವ್ಯಾಪಾರದ ದಳ್ಳಾಳಿಗಳಿಗೆ ಮುಂದಿನ ದಿನ ಪತ್ರಗಳನ್ನು ಕೊಂಡುಕೊಳ್ಳುವವರ ಹೆಸರು ಚೀಟಿಗಳನ್ನು ಕೊಡಲಾಗುತ್ತದೆ). **T.-night** ಅಂದಿನ ನಾಟಕದ ಉತ್ಪತ್ತಿಯನ್ನು ಅವರವರು ಮಾರಿದ ಟಿಕೆಟ್ಟುಗಳ ಪ್ರಮಾಣಾನುಸಾರವಾಗಿ ನಟರು ಹಂಚಿಕೊಳ್ಳುವ ಸಹಾಯಾರ್ಥ ನಾಟಕ: ಆದಾಯ ಹಂಚಿಕೆ ನಾಟಕ. **T.-porter** ಪರವಾನಗಿ ಬಿಲ್ಲೆ ಹಾಕಿಕೊಂಡಿರುವ ರೈಲ್ವೆ ಕೂಲಿ: ಬಿಲ್ಲೆ ಕೂಲಿ(ಯಾಳು). **T.-punch** ಟಿಕೆಟ್ಟು ಕೊರಕ]. (ಕ್ರಿ.) (ಮಾರಾಟದ ಸಾಮಾನು, ಮೊ. ಗಳಿಗೆ) (ಬೆಲೆ)ಚೀಟಿ—ಹಚ್ಚು, ಹಾಕು.

Tíckle ಟಿಕ್‌ಲ್ (ಕ್ರಿ., ನಾ.) ಕಚಕುಳಿ, ಚಕ್ಕಳಗುಳಿ, —ಇಡು, ಇಟ್ಟಂತೆ ಆಗು; ಕಟ್ಟಾಡಿಸು, ಕಿಕ್ಕಿಳಿಮಾಡು (Don't t. ಚಕ್ಕಳಗುಳಿ ಇಡಬೇಡ. My foot tickles); (ವ್ಯಕ್ತಿ, ಆತನ ಹಾಸ್ಯ ಪ್ರವೃತ್ತಿ, ಅಹಂಕಾರ, ಮೊ. ನ್ನು) ಕೆರಳಿಸು, ಕೆಣಕು, ಪ್ರಚೋದಿಸು, ಉದ್ದೀಪನ ಮಾಡು; ಉಬ್ಬಿಸು, ಖುಷಿಮಾಡು (This will t. his palate ಇದು ಅವನ ಬಾಯಲ್ಲಿ ನೀರೂರಿಸುತ್ತದೆ. I was hugely tickled at the idea ಆ ಭಾವನೆಯಿಂದ ಬಹಳವಾಗಿ ಉಬ್ಬಿಹೋದೆನು; ಆ ವಿಷಯ ನನ್ನ ಕುತೂಹಲವನ್ನು ಕೆರಳಿಸಿತು); (ಟ್ರೌಟ್ ಮೀನು, ಮೊ. ನ್ನು) ಕೈಯಿಂದ ಹಿಡಿ. (ನಾ.) ಕಚಕುಳಿ, ಚಕ್ಕಳಗುಳಿ (—ಇಡುವುದು, ಇಟ್ಟಂತಾಗುವುದು). **Tíckler** (ನಾ.) (ಕ್ರಿಯಾರ್ಥಗಳಲ್ಲಿ); ತೊಡಕಿನ, ಸೂಕ್ಷ್ಮ, ನಾಜೂಕಿನ, —ವಿಷಯ, ಪ್ರಶ್ನೆ; ಕ್ರೀಡಾ ವಿಲಾಸಿಗಳು ಮುಖಕ್ಕೆ ಕಚಕುಳಿಯಿಡಲು ಉಪಯೋಗಿಸುವ ಗರಿ: ಕಚಕುಳಿ ಗರಿ. **Tícklish** (ಗು.) ಸುಲಭವಾಗಿ ಕಚಕುಳಿಯಿಡಲಾಗುವ; ಮುಟ್ಟಿದರೆ —ನಗುವ, ಕಚಕುಳಿಯಿಟ್ಟಂತಾಗುವ; (ಪ್ರಶ್ನೆ, ವಿಷಯ, ವಸ್ತು, ಮೊ. ಗಳ ವಿಷಯದಲ್ಲಿ) ಸೂಕ್ಷ್ಮ, ನಾಜೂಕಾದ, ತೊಡಕಿನ, ಎಚ್ಚರಿಕೆ ಬೇಕಾದ. **Tícklishly** (ಕ್ರಿ. ವಿ.); **Tícklishness** (ನಾ.)

Ticpolónga ಟಿಕ್‌ಪೊಲಾಂಗ (ನಾ.) (ಇಂಡಿಯದ ಮತ್ತು ಸಿಲೋನಿನ) ಒಂದು ವಿಷಸರ್ಪ; ಉರಿಮಂಡಲ(ದ ಹಾವು)

Tídal. **Tide** ನೋಡಿ.

Tidbit ಟಿಡ್‌ಬಿಟ್ (ನಾ.) =Titbit.

Tide ಟೈಡ್ (ನಾ.) ಕಾಲ, ಹೊತ್ತು, ಸಮಯ (ಪ್ರಾಚೀ. ಪ್ರ. ಅಥವಾ ಈಗ ಮು., Christmastide, Even-tide, Whitsuntide, Yule-tide, ಮೊ. ಪದಗಳಲ್ಲಿ ಮಾತ್ರ); ಕಾಲಾವಧಿ, ಹೊತ್ತು (Work double tides ಎರಡು ಹೊತ್ತೂ, ಹಗಲಿರುಳೂ, —ಕೆಲಸಮಾಡು). ಚಂದ್ರ ಸೂರ್ಯರ ಆಕರ್ಷಣದಿಂದ ಸಮುದ್ರದ ನೀರಿನಲ್ಲಿ ಉಂಟಾಗುವ ಏರುಬೇಳುಗಳು: ಉಬ್ಬರವಿಳಿತ, ಭರತವಿಳಿತ [Flood-t. (Flood ನೋಡಿ). Ebb t. (Ebb ನೋಡಿ). **Tidólogy** (ನಾ.) —ಶಾಸ್ತ್ರ]. [High t. ಪೂರ್ಣ ಭರತ, ಏರುಬ್ಬರ. Low t. (Low ನೋಡಿ). Spring-t. (Spring ನಾ., ನೋಡಿ). Neap-t. (Neap ನೋಡಿ). Lagging

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

of the tides ಉಬ್ಬರದಿಂದ ಇಳಿತಕ್ಕೆ ಇಳಿಯುವ ಭರತದ ವೇಗಹಾನಿ. Priming of the tides (Priming² ನೋಡಿ). Meteorological t. ಗಾಳಿ, ಮೊ. ಗಳ ಪರ್ಯಾಯಕ್ರಮದ ಬದಲಾವಣೆಗಳಿಂದ ಉಂಟಾಗುವ ಉಬ್ಬರವಿಳಿತ : ವಾಯುವೀಯ ಉಬ್ಬರವಿಳಿತ]; (ರೂಪ.) (ಅಭಿಪ್ರಾಯ, ಅದೃಷ್ಟ, ಘಟನೆ, ಮೊ. ಗಳ) ಓಟ, ಗತಿ, ಪ್ರವಾಹ (Go with the t. ಜನಾಭಿಪ್ರಾಯದಂತೆ—ನಡೆ, ಹೋಗು; ಪ್ರವಾಹ ದೊಂದಿಗೆ ಹೋಗು. The t. turns ಗತಿ ಬದಲಾಯಿಸುತ್ತದೆ; ಸ್ಥಿತಿ —ವ್ಯತ್ಯಾಸವಾಗುತ್ತದೆ, ತಿರುಗಮುರುಗಾಗುತ್ತದೆ). **T.-gate** ಉಬ್ಬರ ಬಂದಾಗ ನೀರನ್ನು ಒಳಬಿಡುವುದಕ್ಕಾಗಿಯೂ ಹಡಗು ಹಾದುಹೋಗುವುದಕ್ಕಾಗಿಯೂ ತೆರೆಯುವ, ಮತ್ತು ಇಳಿತವಾದಾಗ ನೀರು ಹೊರ ಹೋಗದಂತೆ ಮುಚ್ಚುವ ಬಾಗಿಲು : ಉಬ್ಬರವಿಳಿತದ, ಭರತದ, —ಬಾಗಿಲು. **T.-gauge** ಉಬ್ಬರವಿಳಿತಗಳ ಪರಮಾವಧಿಯನ್ನೂ ಸದ್ಯದ ಮಟ್ಟವನ್ನೂ ತೋರಿಸುವ ಸಲಕರಣೆ : ಉಬ್ಬರವಿಳಿತ ಮಾಪಕ, ಭರತಮಾಪಕ. **T.-lock** ಉಬ್ಬರವಿಳಿತದ ಪ್ರಭಾವಕ್ಕೊಳಪಟ್ಟ ರೇವಿಗೂ ಅದರ ಹಿಂದುಗಡೆಯ ಹಡಗುಕಟ್ಟೆಗೂ ನಡುವೆ ಇರುವ ನೀರುಕಟ್ಟೆ : ಭರತಕಟ್ಟೆ, ಉಬ್ಬರವಿಳಿತ ಕಟ್ಟೆ. **T.-rip(s)** ಎದುರು ಪ್ರವಾಹಗಳಿಂದ ಉಂಟಾದ ಕಲಕಾಟ, ಕ್ಷೋಭೆ : ಉಬ್ಬರ ಕಲಕ. **T.-waiter** ಹಡಗು ಬಂದೊಡನೆ ಸುಂಕದ ನಿಯಮಗಳನ್ನು ಚಲಾಯಿಸುವುದಕ್ಕಾಗಿ ಹಡಗಿಗೆ ಹತ್ತುವ ಸುಂಕದ ಅಧಿಕಾರಿ : ಸುಂಕದ ಕಾವಲುಗಾರ. **T.-way** ಉಬ್ಬರದ ನೀರು ಹರಿಯುವ ಕಾಲುವೆ : ಉಬ್ಬರ ನಾಲೆ; ಈ ನಾಲೆಯಲ್ಲಿಯ ಪ್ರವಾಹ. **Tídal** (ಗು.) ಉಬ್ಬರವಿಳಿತದ, ಭರತದ [T. air ಪ್ರತಿ ಶ್ವಾಸಕ್ರಿಯೆಯಲ್ಲಿಯೂ ಶ್ವಾಸಕೋಶದ ಒಳಕ್ಕೂ ಹೊರಕ್ಕೂ ಹೋಗುವ ವಾಯು : ಶ್ವಾಸ (ಸಂಚಾರ) ವಾಯು. T. dock, harbour ಉಬ್ಬರವಿಳಿತದ ಪ್ರಭಾವಕ್ಕೆ ಒಳಪಟ್ಟ ಹಡಗುಕಟ್ಟೆ, ಬಂದರು : ಭರತದ—ಕಟ್ಟೆ, ಬಂದರು. T. friction (ಭೂಮಿಯ ದೈನಂದಿನ ಭ್ರಮಣವನ್ನು ತಡಮಾಡಿ ದಿನದ ಅವಧಿಯನ್ನು ಕೊಂಚ ಮಟ್ಟಿಗೆ ಲಂಬಿಸುವ) ಉಬ್ಬರವಿಳಿತದ ಘರ್ಷಣೆ. T. river ಮುಖದಿಂದ ಸ್ವಲ್ಪ ದೂರದವರೆಗೆ ಸಮುದ್ರದ ಉಬ್ಬರವಿಳಿತದ ಪ್ರಭಾವಕ್ಕೆ ಒಳಗಾದ ನದಿ : ಭರತದ ನದಿ. T. wave ಸೂರ್ಯ ಚಂದ್ರರ ಗತಿಗಳನ್ನು ಅನುಸರಿಸಿ ಬರುವ, ಉಬ್ಬರವಿಳಿತಗಳನ್ನು ಉಂಟುಮಾಡುವ ಅಲೆ : ಭರತದ ಅಲೆ; (ತಪ್ಪಾಗಿ) ಭಾರಿ ಅಲೆ (ಉದಾ., ಭೂಕಂಪದಿಂದ ಏಳುತ್ತದೆಂದು ಹೇಳುವ ದೊಡ್ಡ ಅಲೆ); (ರೂಪ.) ಭಾವೋದ್ರೇಕ, ಉಕ್ಕು]. **Tídally** (ಕ್ರಿ. ವಿ.); **Tídeless** (ಗು.)

Tide (ಕ್ರಿ.) ಉಬ್ಬರವಿಳಿತವನ್ನನುಸರಿಸಿ ಹೋಗು, ಸಾಗು; ಉಬ್ಬರವಿಳಿತದ ಸಹಾಯದಿಂದ (ಬಂದರಿನೊಳಕ್ಕೆ, ಬಂದರಿನ ಹೊರಕ್ಕೆ) —ನಡಸು, ಸಾಗಿಸು; (ಕಷ್ಟ, ಮೊ. ನ್ನು) ದಾಟು, ನಿಭಾಯಿಸು, ತಟಹಾಯಿ (*Over* ಉಪ. ದೊಡನೆ) (T. over this business. T. it over)

Tídings ಟೈಡಿಂಗ್ಸ್ (ನಾ., ಬ. ವ.) (ಈಗ ಮು., ಸಾಹಿತ್ಯ ಪ್ರ.; ಏ. ವ. ಅಥವಾ ಬ. ವ. ಅನ್ವಯ) ಸುದ್ದಿ, ಸಮಾಚಾರ, ವಾರ್ತೆ [The t. come(s) too late]

Tìdy ಟೈಡಿ (ಗು., ನಾ., ಕ್ರಿ. ಸಕ.) (ಉಡುಪು, ಕೋಣೆ, ವ್ಯಕ್ತಿ, ಅಭ್ಯಾಸಗಳು, ಮೊ. ಗಳ ವಿಷಯದಲ್ಲಿ) ಚೊಕ್ಕಟವಾಗಿಯೂ ಅಚ್ಚುಕಟ್ಟಾಗಿಯೂ ಇರುವ, ಒಪ್ಪವಾದ, ಅಣಿಕಟ್ಟಾದ, ಓರಣವಾದ; (ಬಳ. ಮಾ.) ತಕ್ಕ ಮಟ್ಟಿಗೆ ಹೆಚ್ಚಾದ, ಗಣ್ಯವಾದ, ಭಾರಿ, ಪೂರಾ (Left a t. sum behind him. A t. day's work ಒಂದು ದಿನಕ್ಕೆ ತುಂಬು ಕೆಲಸ, ಪೂರಾ ಕೆಲಸ). (ಬಳ. ಮಾ.) ತಕ್ಕಮಟ್ಟಿನ ಆರೋಗ್ಯದ, ನೆಮ್ಮದಿಯಾಗಿರುವ (Am feeling pretty t.). (ನಾ.) (ಕುರ್ಚಿಯ ಬೆನ್ನು, ಮೊ. ಗಳಿಗೆ ಹಾಕುವ) (ಅಲಂಕಾರದ) ಗವುಸು; (ಚಿಲ್ಲರೆ ಸಾಮಾನುಗಳನ್ನು ಹಾಕಿಡುವ) ಚೀಲ, ಪೆಟ್ಟಿಗೆ (Street t. ಬೀದಿಯ ಕಸದ—ತೊಟ್ಟಿ, ಡಬ್ಬ. Toilet-t. ಬಾಚಣಿಗೆ ಪೆಟ್ಟಿಗೆ). (ಕ್ರಿ.) ಅಚ್ಚುಕಟ್ಟು, ಒಪ್ಪ, ಓರಣ,—ಮಾಡು, ಆಗಿ ಇಡು (ಸಾ., *up* ಉಪ. ದೊಡನೆ). **Tídily** (ಕ್ರಿ. ವಿ.); **Tídiness** (ನಾ.)

Tie ಟೈ (ಕ್ರಿ.; ವರ್ತಮಾನ ಕೃ. Tying) (ಹಗ್ಗ, ಮೊ. ಗಳಿಂದ) ಕಟ್ಟು, ಕಟ್ಟಿಹಾಕು, ಬಿಗಿ, ಬಂಧಿಸು [Ride & t. (Ride ನೋಡಿ)]; (ಮೋಜಡದ ದಾರ, ಚೊಪ್ಪಿಗೆಯ ದಾರ, ಮೊ. ನ್ನು) ಬಿಗಿಯಾಗಿ, ಭದ್ರವಾಗಿ, ಎಳೆದು, —ಕಟ್ಟು; (ಕೊರಲಮುಡಿ, ಮೊ. ನ್ನು) ಗಂಟುಹಾಕು (T. your tie, T. it in a bow ಕೊರಲಮುಡಿಯನ್ನು ಕುಣಿಕೆ ಹಾಕು. T. a fly ಮೀನಿನ ಗಾಳವನ್ನು ನೊಣದಾಕಾರದಲ್ಲಿ ಗಂಟು ಹಾಕು : ನೊಣಗಂಟು ಹಾಕು); (ತೀರು, ಮೊ. ನ್ನು ಅಡ್ಡಪಟ್ಟಿ, ಮೊ. ಗಳಿಂದ) ಬಿಗಿಸು, ಭದ್ರಪಡಿಸು; (ವ್ಯಕ್ತಿ, ಮೊ. ನ್ನು ಪರತ್ತು, ಕೆಲಸ, ಮೊ. ಕ್ಕೆ) ಬದ್ಧಮಾಡು, ಕಟ್ಟುಬೀಳಿಸು (*To*, *down to* ಉಪ. ದೊಡನೆ); [Tied to the apron-strings (of mother, wife) (Apron ನೋಡಿ). T. the hands of ಕಾರ್ಯ ಸ್ವಾತಂತ್ರ್ಯ ತಪ್ಪಿಸು; ಕೈ ಕಟ್ಟಿಹಾಕು. T. the knot (ಮದುವೆ) ಗಂಟು—ಹಾಕು, ಹಾಕಿಸು. T. person's tongue ವ್ಯಕ್ತಿಯ ಬಾಯಿಕಟ್ಟು, ಬಾಯಿ ಮುಚ್ಚಿಸು. T. up ನಿರ್ಬಂಧ, ಮಿತಿ, ಕಟ್ಟು, —ಹಾಕು; (ಮು., ಆಸ್ತಿಯನ್ನು ಅನ್ಯಥಾ ವಿನಿಯೋಗಿಸದಂತೆ ಅಂತಿಮ ಇಷ್ಟಪತ್ರದಲ್ಲಿ) ಪರತ್ತು ಹಾಕು. Tied house ಒಂದು ಗೊತ್ತಾದ ವ್ಯಾಪಾರ ಸಂಸ್ಥೆಯೊಡನೆ ಮಾತ್ರ ವ್ಯವಹಾರವಿಟ್ಟುಕೊಳ್ಳುವಂತೆ ನಿರ್ಬಂಧವಿರುವ (ಮದ್ಯದ) ಅಂಗಡಿ : ನಿಗದಿ ಅಂಗಡಿ]; (ಸಂ.) (ಒಟ್ಟಿಗೆ ನುಡಿಸಬೇಕಾದ ಎರಡು ಸ್ವರಗಳಮೇಲೆ) ಕೂಡುಗೆರೆ ಹಾಕು; (ಆಟದಲ್ಲಿ) ಎದುರಾಳಿಯಷ್ಟೇ ಗೆಲ್ಲಂಕಗಳನ್ನು ಮಾಡು; (ಮತ್ತೊಬ್ಬನೊಡನೆ) ಸಮ—ಮಾಡು, ಆಗು (*With* ಉಪ. ದೊಡನೆ)

Tie (ನಾ.) (ಕಟ್ಟುವುದಕ್ಕೆ ಉಪಯೋಗಿಸುವ) ಹಗ್ಗ, ಸರಪಣಿ; ಗಂಟು, ಕಟ್ಟು, ಪಾಶ, ಬಂಧಕ, ಬಂಧನಿ; ಕೊರಲಮುಡಿ, ಕಂಠಬಂಧ (=Neck-t.); (ರೂಪ.) (ವ್ಯಕ್ತಿಗಳನ್ನು ಪರಸ್ಪರ ಒಂದುಗೂಡಿಸುವ) ಬಂಧ(ನ), ಸಂಬಂಧ (Ties of blood, friendship ರಕ್ತಸಂಬಂಧ, ಸ್ನೇಹಸಂಬಂಧ); ಒಂದು ಕಟ್ಟಡದ ಹಲವು ಭಾಗಗಳನ್ನು ಒಟ್ಟಿಗೆ ಹಿಡಿದಿರುವ ತೊಲೆ, ದೂಲ : ಬಿಗಿ—ಪಟ್ಟಿ, ಮರ; (ಅಮೆ. ಸಂ.) (ರೈಲುಕಂಬಿಯ ಕೆಳಗೆ ಹಾಕಿರುವ) ಅಡಿ—ದಿಮ್ಮಿ, ಮರ; (T.-beam ತೀರುಗಳನ್ನು ಬಿಗಿದು ಹಿಡಿಯುವ ಅಡ್ಡಮರ : ಬಿಗಿ—ಮರ, ದೂಲ; ಅಡ್ಡತೊಲೆ); (ಸಂ.) (ಒಟ್ಟಿಗೆ ನುಡಿಸಬೇಕೆಂಬ ಎರಡು ಸ್ವರಗಳಮೇಲೆ ಹಾಕಿರುವ) ಕೂಡುಗೆರೆ; (ಆಟದಲ್ಲಿ ಸ್ಪರ್ಧೆಗಾರರಿಗೆ) ಪರಸ್ಪರ ಸಮ, ಸಮಾನತೆ [Play, shoot, off a t. (ಆಟ ಸಮವಾಗಿರುವಾಗ) : ತೀರ್ಮಾನದ ಆಟವಾಡು]; (ಸ್ಪರ್ಧೆಗಾರರಲ್ಲಿ ಅಥವಾ ಸ್ಪರ್ಧಾ ಪಕ್ಷಗಳಲ್ಲಿ) ಒಂದು ಜೋಡಿಗೆ ನಡೆಯುವ ಪಂದ್ಯ : ಜೋಡಿ, ಜೊತೆ, —ಪಂದ್ಯ (Cup-ties ಬಟ್ಟಲು ಪಂದ್ಯಗಳು). **T.-up** ಹಿಂದಕ್ಕಾಗಲಿ ಮುಂದಕ್ಕಾಗಲಿ ಹೋಗದ ಸ್ಥಿತಿ, ಬಿಕ್ಕಟ್ಟಿನ ಸ್ಥಿತಿ, ಬಿಕ್ಕಟ್ಟು; (ಅಮೆ. ಸಂ.) (ರೈಲ್ವೆ ಕೆಲಸಗಾರರು, ಮೊ. ರ) ಮುಷ್ಕರ. **T.-wig** ಹಿಂದುಗಡೆ ಪಟ್ಟಿಹಾಕಿ ಕಟ್ಟಿದ ಕೂದಲ ಕುಲಾವಿ.

Tier ಟಿಯರ್ (ನಾ., ಕ್ರಿ. ಸಕ.) (ನಾಟಕಶಾಲೆ, ಮೊ. ಗಳಲ್ಲಿಯಂತೆ ಒಂದರ ಮೇಲೊಂದರಂತೆ ಅಳವಟ್ಟಿರುವ) ಸಾಲು, ಪಂಕ್ತಿ, ಶ್ರೇಣಿ, ಅಂತಸ್ತು (Tiers of cable ತಂತಿಸುರುಳಿಯ ಸುತ್ತುಗಳು). (ಕ್ರಿ.) —ಆಗಿ ಇಡು, ಜೋಡಿಸು (ಅನೇಕ ವೇಳೆ *up* ಉಪ. ದೊಡನೆ)

Tierce ಟಿಯರ್ಸ್ (ನಾ.) (ಹಿಂದೆ ದ್ರಾಕ್ಷಾಮದ್ಯದ ಅಳತೆ) : ಪೈಪ್ (ಪೀಪಾಯಿ) ಅಳತೆಯ ಮೂರನೆಯೊಂದು ಭಾಗ (೪೨ ಗ್ಯಾಲನ್ ಅಳತೆ); ಸಾಮಾನು ತುಂಬುವ ಪೀಪಾಯಿ (ಸಾಮಾನಿಗನುಸಾರವಾಗಿ ಬೇರೆ ಬೇರೆ ಅಳತೆಯದು); (ಇಸ್ಪೀಟು) ಒಂದು ರಂಗಿನ ಅನುಕ್ರಮದ ಮೂರು ಎಲೆಗಳು; (ಕತ್ತಿವರಿಸೆಯಲ್ಲಿ) ಒಂದು ನೆರೆ, ವರಿಸೆ. (ಕ್ರೈಸ್ತಮತ) ಮೂರನೆಯ ಘಂಟೆಯ (ಬೆಳಗ್ಗೆ ೮—೯ ಘಂಟೆಯ) ಆರಾಧನೆ (=Terce)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tiércel ಟಿಯರ್ಸೆಲ್ (ನಾ.) = Tercel.

Tiércet ಟಿಯರ್‌ಸೆಟ್, ಟರ್— (ನಾ.) = Tercet.

Tiers état (F) ಟ್ಯೇರ್ಸ್ಟೆಟಾ (ನಾ.) = Third estate (Third ನೋಡಿ)

Tiff ಟಿಫ್ (ನಾ., ಕ್ರಿ.) ಒಂದು ಕುಡಿತ ಮದ್ಯ, ಗುಟುಕು ಮದ್ಯ. ರೇಗು, ಸಿಡುಕು, ಸಿಡಿಮಿಡಿ; ಸಣ್ಣ ಜಗಳ. (ಕ್ರಿ.) ಕುಡಿ, ಹೀರು. ರೇಗಾಡು, ಸಿಡಿವಿಡಿಗೊಳ್ಳು; (ಆಂ. ಇಂ.) (Tiffin ಎಂಬುದರ ಸಂಕ್ಷಿಪ್ತ) ಉಪಾಹಾರ—ತೆಗೆದುಕೊ, ಮಾಡು.

Tíffany ಟಿಫನಿ (ನಾ.) ಒಂದು ಬಗೆಯ ನವುರು ಮಸ್ಲಿನ್ ಬಟ್ಟೆ.

Tíffin ಟಿಫಿನ್ (ನಾ., ಕ್ರಿ. ಅಕ.) (ಆಂ. ಇಂ.) ಉಪಾಹಾರ (—ಮಾಡು, ತೆಗೆದುಕೊ)

Tíger ಟೈಗರ್ (ನಾ.) ಹುಲಿ, ವ್ಯಾಘ್ರ [Bengal t. ಪಟ್ಟೆ ಹುಲಿ. American t. ಒಂದು ಬಗೆಯ ಚಿರತೆ. Red t. (ಒಂದು ಬಗೆಯ) ಕೆಂಪು ಹುಲಿ. Work like a t. ಭಯಂಕರ ಶಕ್ತಿಯಿಂದ ಕೆಲಸ ಮಾಡು]; ಷೋದಾ ಮನುಷ್ಯ, ಪುಂಡ; ಹಿಂಸಕ [**Tígerism** (ನಾ.)]; (ಯಜಮಾನನು ನಡೆಸುವ ಕುದುರೆ ಗಾಡಿಯಲ್ಲಿ ಹಿಂದುಗಡೆ ನಿಂತುಕೊಳ್ಳುವ) ಪೋಷಾಕು ಕಾಸ್ತಾರ; (ಅಮೆ. ಸಂ. ಅಸಂ.) ಮೂರಾವೃತ್ತಿಯ ಜಯಕಾರದ ಕೊನೆಯಲ್ಲಿ ಕೂಗುವ—ಕೂಗು, ಗರ್ಜನೆ(ಯ ಮಾತು). **T.-beetle** ಪಟ್ಟೆಯ ಅಥವಾ ಮಚ್ಚೆಯ ಪಕ್ಷರಕ್ಷೆಗಳುಳ್ಳ ಹಲವು ಬಗೆಯ ಹಿಂಸ್ರಕ ಜೀರುಂಡೆ: (ಹುಲಿ)ಪಟ್ಟೆ ಜೀರುಂಡೆ. **T.-cat** ಹಲವು ಬಗೆಯ ಪಟ್ಟೆಯ ಕಾಡುಬೆಕ್ಕು: (ಹುಲಿ)ಪಟ್ಟೆ ಬೆಕ್ಕು. **T.('s)-eye** ಉಜ್ಜ್ವಲ ಕಾಂತಿಯ ಒಂದು ಕಂದು ಹಳದಿಯ ಪ್ರಶಸ್ತಶಿಲೆ: ವ್ಯಾಘ್ರಮಣಿ. **T.-lily** ಕರಿಯ ಅಥವಾ ಊದಾ ಬಣ್ಣದ ಮಚ್ಚೆಗಳುಳ್ಳ ಹಳದಿ ಹೂವು ಬಿಡುವ ಒಂದು ಗಿಡ: ಹುಲಿ(ಪಟ್ಟೆ) ಹೂವಿನ ಗಿಡ. **T.-moth** ಹುಲಿಪಟ್ಟೆ ಚಿಟ್ಟೆ. **T.-wood** (ಪೆಟ್ಟಿಗೆ, ಮೊ. ನ್ನು ಮಾಡಲು ಉಪಯೋಗಿಸುವ) ಒಂದು ಬಗೆಯ ಬಣ್ಣ ಬಣ್ಣದ ಮರ: ಹುಲಿ(ಪಟ್ಟೆ) ಮರ. **Tígress** (ನಾ., ಸ್ತ್ರೀ.) ಹೆಣ್ಣು ಹುಲಿ. **Tíg(e)rish** (ಗು.) ಹುಲಿಯಂಥ; ಹುಲಿಯಷ್ಟು ಕ್ರೂರವಾದ; ವ್ಯಾಘ್ರ ಸ್ವರೂಪಿಯಾದ.

Tight ಟೈಟ್ (ಗು., ನಾ., ಕ್ರಿ. ವಿ.) ಬಿಗಿಯಾಗಿ ಸೇರಿಕೊಂಡಿರುವ, ಬಿಗಿಯಾದ, ಭದ್ರವಾದ, ಬಂದೋಬಸ್ತಾದ (Cork is too t. ಬಿರಡೆ ಅತಿ ಬಿಗಿಯಾಗಿದೆ. T. knot T. ship ಬಂದೋಬಸ್ತಾದ ಹಡಗು); ನೀರು, ಗಾಳಿ, ಮೊ. ವು ತೂರಲಾಗದ, ಇಳಿಯದ; ಅಭೇದ್ಯ (Air, gas, water, wind, -t.); ಅಚ್ಚುಕಟ್ಟಿನ, ನೀಟಾದ, ಅಡಕವಾದ (A t. little island); ಎಳೆದು, ಬಿಗಿದು, —ಕಟ್ಟಿದ; ಬಿಗಿಯಮೇಲಿರುವ [T.-rope (ದೊಂಬರು, ಮೊ. ರು ನಡೆಯುವ) ಬಿಗಿ ಹಗ್ಗ]; (ಬಳ. ಮಾ.) ಕುಡಿದು ಅಮಲೇರಿದ; [Money is t. ಹಣಕ್ಕೆ ಮುಗ್ಗಟ್ಟಾಗಿದೆ. A t. money-market ಮುಗ್ಗಟ್ಟಿನ ಹಣದ ಪೇಟೆ. Am in a t. place (ಸಾ., ರೂಪ.) ಇಕ್ಕಟ್ಟಿನಲ್ಲಿದ್ದೇನೆ; ಬಿಕ್ಕಟ್ಟಾಗಿದೆ. T.-fisted ಬಿಗಿಮುಷ್ಟಿಯ, ಹಿಡಿತದ, ಜಿಪುಣತನದ]. (ನಾ.) (ಬ. ವ. ದಲ್ಲಿ) (ದೊಂಬರಾಟದವರು, ಮೊ. ರು ತೊಡುವ) ಬಿಗಿಯುಡುಪು, ಗುತ್ತನೆಯ ಉಡುಪು. (ಕ್ರಿ. ವಿ.) ಬಿಗಿಯಾಗಿ, ಗಟ್ಟಿಯಾಗಿ, ಭದ್ರವಾಗಿ (Hold it t.). **Tíghten** (ಕ್ರಿ.) ಬಿಗಿ, ಭದ್ರ, —ಮಾಡು, ಆಗು [T. one's belt (ಹಾಸ್ಯ ಪ್ರ.) ಉಪವಾಸಬಿದ್ದಿರು, (ಅನ್ನವಿಲ್ಲದೆ) ಹೊಟ್ಟೆ ಕಟ್ಟು]. **Tíghtener** (ನಾ.); **Tíghtly** (ಕ್ರಿ. ವಿ.); **Tíghtness** (ನಾ.) ಬಿಗುಪು, ಭದ್ರತೆ.

Tike, Tyke ಟೈಕ್ (ನಾ.) ನಾಯಿ; ಕೀಳ, ನೀಚ, ಒಡ್ಡ, ಹಳ್ಳಿ ಗಮಾರ.

Tílbury ಟಿಲ್ಬರಿ (ನಾ.) ಎರಡು ಚಕ್ರದ, ತೆರೆದ, ಹಗುರ ಬಂಡಿ.

Tilde ಟಿಲ್ಡೆ (ನಾ.) (ಸ್ಪ್ಯಾನಿಷ್ ಭಾಷೆಯಲ್ಲಿ) ನಕಾರದ ಮೇಲುಗಡೆ ಬರೆಯುವ ಯಕಾರೋಚ್ಚಾರ ಚಿಹ್ನೆ: ಯೋಚ್ಚಾರ ಚಿಹ್ನೆ (~) (ಉದಾ., Señor ಸನ್ಯಾರ್)

Tile ಟೈಲ್ (ನಾ., ಕ್ರಿ. ಸಕ.) (ಚಾವಣಿ, ನೆಲಗಟ್ಟು, ಮೊ. ಕ್ಕೆ ಉಪಯೋಗಿಸುವ) ಹೆಂಚು, (ಚದರ)ಬಿಲ್ಲೆ, (ಬೆಂಕಿಗೂಡು, ಮೊ. ಕ್ಕೆ ಹಾಕುವ) ಕಾವು ಬಿಲ್ಲೆ, (ಗೋಡೆಗಳಿಗೆ ಹದ್ದಿಸುವ) ಅಲಂಕಾರದ ಬಿಲ್ಲೆ [Have a t. loose (ಅಸಂ.) ತಲೆಕೆಟ್ಟಿರು, ಹುಚ್ಚು ತಿರುಗಿರು. Dutch t. ಸಾ., ನೀಲಿ ಬಣ್ಣ ಹಾಕಿದ, ಬೈಬಲ್ ವಿಷಯಕ ಚಿತ್ರಗಳನ್ನು ಬಿಡಿಸಿದ, ಬಿಲ್ಲೆ: ಡಚ್ ಬಿಲ್ಲೆ. Plain t. (ಸುಮಾರು ೧೦$\frac{1}{2}$×೬$\frac{1}{2}$ ಚದರ ಅಂಗುಲದ) ಸಾದಾ ಬಿಲ್ಲೆ. T. tea (Tea ನೋಡಿ). Tilestone (ಹಲಗೆಗಳಾಗಿ ಸೀಳಲಾಗುವ) ಬಿಲ್ಲೆಕಲ್ಲು]; (ಬಳ. ಮಾ.) ರೇಷ್ಮೆ ಟೊಪ್ಪಿಗೆ. (ಕ್ರಿ.) ಹೆಂಚು, ಬಿಲ್ಲೆ, —ಹೊದಿಸು, ಹೊಚ್ಚು (T. in ಹೆಂಚಿನಿಂದ ಸುತ್ತುವರಿ); (ಫ್ರೀಮೇಸನ್ ಎಂಬ ಸೌಭ್ರಾತೃ ಮಂಡಲಿ: ಮಂದಿರದೊಳಕ್ಕೆ, ಸಭೆಗೆ, ಹೊರಗಿನವರು ನುಗ್ಗದಂತೆ) ಬಾಗಿಲಿನಲ್ಲಿ ಕಾವಲುಹಾಕು; ಗುಟ್ಟುಬಿಡದಂತೆ ನಿರ್ಬಂಧಿಸು, ಗುಟ್ಟಾಗಿಡುವಂತೆ ಆಣೆ ಹಾಕಿಸಿಕೊ. **Tíler** (ನಾ.) ಹೆಂಚುಗಾರ. (ಫ್ರೀಮೇಸನ್ ಸಂಸ್ಥೆ) ಬಾಗಿಲು ಕಾಯುವವನು, ದ್ವಾರಪಾಲಕ [= **Týler** (ಪ್ರಾಚೀ. ಪ್ರ.)]. **Tílery** (ನಾ.) ಹೆಂಚಿನ ಕಾರ್ಖಾನೆ. **Tíling** (ನಾ.) ಹೆಂಚು, ಬಿಲ್ಲೆ, —ಹೊದಿಸುವುದು, ಹೊದಿಕೆ; ಹೆಂಚುಗಳು, ಬಿಲ್ಲೆಗಳು; ಬಾಗಿಲ ಕಾವಲು.

Till[1] ಟಿಲ್ (ಕ್ರಿ. ಸಕ.) ಉಳು, ಬೇಸಾಯಮಾಡು, ಕೃಷಿಮಾಡು, ಸಾಗುವಳಿಮಾಡು. **Tíllable** (ಗು.); **Tíllage** (ನಾ.) ಬೇಸಾಯ, ಉಳುಮೆ, ಕೃಷಿ, ಆರಂಬ; ಉತ್ತ ನೆಲ, ಬೇಸಾಯದ ಜಮೀನು. **Tíller**[1] (ನಾ.) ಉಳುಮೆ ಮಾಡುವವನು, ಬೇಸಾಯಗಾರ, ಕೃಷಿಕ, ರೈತ.

Till[2] ಟಿಲ್ (ಉಪ., ಸಂ. ಅವ್ಯ.) ವರೆಗೆ, ವರೆಗೂ, ತನಕ (Wait till Monday. Ring t. you get an answer)

Till[3] ಟಿಲ್ (ನಾ.) (ಅಂಗಡಿಯವನ, ಸರಾಫನ) ಹಣದ ಸೆಳೆಖಾನೆ, ಗಲ್ಲ.

Till[4] ಟಿಲ್ (ನಾ.) ಮರಳು, ಕಲ್ಲು, ಮೊ. ವು ಸೇರಿದ ಜಿಗುಟುಜೇಡಿ: ಕಲ್ಲುಮರಳುಗಳ ಜೇಡಿ. **Tílly** (ಗು.)

Tíller[1]. **Till**[1] ನೋಡಿ.

Tíller[2] ಟಿಲರ್ (ನಾ.) ಚುಕ್ಕಾಣಿ ತಿರುಗಿಸಲು ಅದರ ತಲೆಗೆ ಜೋಡಿಸಿರುವ ಸನ್ನೆ: ಚುಕ್ಕಾಣಿ—ಸನ್ನೆ, ಹಿಡಿಕೆ. T.-chain, -rope ಚುಕ್ಕಾಣಿಯ ಹಿಡಿಕೆಯನ್ನು ಚಕ್ರಕ್ಕೆ ಸಂಬಂಧಿಸುವ ಸರಪಣಿ, ಹಗ್ಗ: ಚುಕ್ಕಾಣಿ—ಸರಪಣಿ, ಹಗ್ಗ.

Tíller[3] ಟಿಲರ್ (ನಾ., ಕ್ರಿ. ಅಕ.) ಗಿಡದ ಬುಡದಿಂದ ಹೊರಡುವ ರೆಂಬೆ, ಕುಡಿ; ಕೂಳೆ—ಕುಡಿ, ಸಸಿ; (ಬೇರು) ಸಸಿ. (ಕ್ರಿ.) ಕುಡಿ, ಸಸಿ, —ಒಡೆ.

Tilt[1] ಟಿಲ್ಟ್ (ಕ್ರಿ., ನಾ.) ಓರೆ—ಮಾಡು, ಆಗು; ಬಗ್ಗು, ಬಗ್ಗಿಸು; ಮಾಲು, ಮಾಲಿಸು; ಓಲು, ಓಲಿಸು [Table is apt to t. over ಮೇಜು ಓಲಿ ಮಗುಚಿಕೊಳ್ಳುವುದರಲ್ಲಿದೆ. Cask wants tilting (ಒಳಗಿನ ದ್ರವವನ್ನು ಹೊರ ಸುರಿಯುವಲ್ಲಿ): ಪೀಪಾಯನ್ನು ಬಗ್ಗಿಸಬೇಕು]; ಬಗ್ಗಿಸಿ—ಖಾಲಿಮಾಡು, ಸುರಿ (T. out coal); (ಭೂ. ವಿ.) (ಸ್ತರಗಳ ವಿಷಯದಲ್ಲಿ) (ಕಡಿದಾಗಿ) ಓಲಿರು, ಬಾಗು, ಬಾಗಿರು (*Up* ಉಪ. ದೊಡನೆ); ಈಟಿಯಿಂದ ಇರಿ, ತಿವಿ (*At* ಉಪ. ದೊಡನೆ) [T. at the ring (ಯೋಧನು ಕುದುರೆಸವಾರಿಮಾಡುತ್ತ ಈಟಿಯ ಮೊನೆಯಿಂದ) ತೂಗಹಾಕಿದ ಬಳೆಯನ್ನು ತಿವಿದು ಹಾರಿಸು]; (ರೂಪ.) ಹೋರಾಡು, ಪ್ರತಿಭಟಿಸು, (T. at wrongs). (ಉಕ್ಕು, ಮೊ. ನ್ನು) ಕೀಲು ಚಮ್ಮಟಿಗೆಯಿಂದ ಹೊಡೆ, ಬಡಿ. (ನಾ.) ಓರೆ, ಓಲು, ಮಾಲು (—ಆಗಿರುವುದು). ಈಟಿಯಿಂದ—ಇರಿತ, ತಿವಿತ (T.-yard ಈಟಿ ಕಾಳಗದ, ಈಟಿ ಅಭ್ಯಾಸದ, —ಅಂಗಣ, ಕಳ); (ರೂಪ.) ಹೋರಾಟ, ಕಾದಾಟ; ಮೀನು ಗಾಳಕಚ್ಚಿದ್ದನ್ನು ತೋರಿಸುವ ಕತ್ತರಿಕಡ್ಡಿ, ಮೊ. ಸೂಚಕ; ಭಾರವಾದ ಕೀಲು ಚಮ್ಮಟಿಗೆ (= T.-hammer). Full t. ಪೂರ್ಣ—ವೇಗದಿಂದ, ಬಲದಿಂದ, ಬಿರುಸಿಂದ (Come, run, fall t. against). **Tílter** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tilt[2] ಟಿಲ್ಟ್ (ನಾ., ಕ್ರಿ. ಸಕ.) (ಮು., ಬಂಡಿ, ಮೊ. ಕ್ಕೆ ಹೊದ್ದುವ, ರಟ್ಟುಬಟ್ಟೆ, ಮೊ. ಗಳ) ಹೊದಿಕೆ, ತಟ್ಟು. (ಕ್ರಿ.) —ಹೊದಿಸು, ಹಾಕು.

Tilth ಟಿಲ್ತ್ (ನಾ.) ಉಳುಮೆ, ಸಾಗುವಳಿ; ಉತ್ತ—ಮಣ್ಣು, ನೆಲ; ಉತ್ತ ಆಳ; ಸಾಗುವಳಿ ಮಟ್ಟ.

Tímbal, -ul, Ty- ಟಿಂಬಲ್ (ನಾ.) =Kettledrum (Kettle ನೋಡಿ)

Tímber ಟಿಂಬರ್ (ನಾ.) (ಬಡಗಿ ಕೆಲಸ, ಕಟ್ಟಡ, ಮೊ. ಕ್ಕೆ ಉಪಯೋಗಿಸುವ) ಮರ, ಚೌಬೀನೆ, ದಾರು; ಚೌಬೀನೆ(ಗೆ ಯೋಗ್ಯವಾದ) ಮರ, ದಾರುವೃಕ್ಷ; ಕಾಡು, ತೋಪು (Standing t. ಮರಗಳು, ವೃಕ್ಷಗಳು). ಮರಮುಟ್ಟು, ದಿಮ್ಮಿ, ತೊಲೆ; (ನಾವೆ) ಹಡಗಿನ ಪಕ್ಕದ ಹೊರಬಾಗು ಹಲಗೆ(ಗಳಲ್ಲೊಂದು), ಪಟ್ಟಿ(ಗಳಲ್ಲೊಂದು): ಮರಕಟ್ಟು [Shiver my timbers (ಶಪನೆ) ಹಾಳಾಗಿ ಹೋಗ, ನಾಶವಾಗ]; (ರೂಪ.) ಮೈಕಟ್ಟು, ಸತ್ತ್ವ (There are few men of his timber); (ಬೇಟೆ) ಹೊರ ಬಾಗಿಲುಗಳು ಮತ್ತು ಬೇಲಿಗಳು. **T.-cart** ಮರ ಸಾಗಿಸುವ ಬಂಡಿ, ಚೌಬೀನೆ ಗಾಡಿ (ಎತ್ತರವಾದ ಚಕ್ರಗಳುಳ್ಳದ್ದು). **T.-head** (ಹಡಗಿನ ಅಟ್ಟದಮೇಲೆ ಹಾಯ್ದಿರುವ ಹಗ್ಗ, ಮೊ. ನ್ನು ಸುತ್ತುವ) ಮರಕಟ್ಟಿನ ತಲೆ. **T.-toe(s)** (ಬಳ. ಮಾ.) ಮರಗಾಲಿನ ಮನುಷ್ಯ. **T.-yard** ಚೌಬೀನೆ—ಅಂಗಳ, ಕೋಠಿ. (ಕ್ರಿಕೆಟ್ ಅಸಂ.) ದಾಂಡುಗಾರನ ಹಿಂದಿನ ಗುರಿಕೋಲು. **(-)tímbered** (ಗು.); **Tímbering** (ನಾ.) ಮರಮುಟ್ಟು; ಮರಕಟ್ಟು.

Timbre ಟ್ಯಾ(ಟಿ)ಂಬರ್, (F) ಟ್ಯಾನ್‌ಬ್ರ್ (ನಾ.) (ಆಯಾ ವಾದ್ಯಕ್ಕೆ ಅಥವಾ ಕಂಠಕ್ಕೆ ವಿಶಿಷ್ಟವಾದ, ಕಂಪನ ಸ್ವರೂಪವನ್ನು ಅವಲಂಬಿಸಿರುವ) ನಾದ ಗುಣ.

Tímbrel ಟಿಂಬ್ರೆಲ್ (ನಾ.) ಖಂಜರಿ.

Time ಟೈಮ್ (ನಾ.) ಹೊತ್ತು, ಕಾಲ, ವೇಳೆ, ಸಮಯ, ಅವಕಾಶ, ಅವಧಿ, ವಾಯಿದೆ, ಪುರಸತ್ತು, ಬಿಡುವು [T. will show who is right. Assaults of (old, Father) T. ಕಾಲಪುರುಷನ—ದಾಳಿ, ಹಾವಳಿ. The times of the Stuarts ಸ್ಟೂವರ್ಟ್ ದೊರೆಗಳ ಕಾಲ. For the t. being (Be ನೋಡಿ). Prehistoric times ಚರಿತ್ರ ಪೂರ್ವಕಾಲ. The good old times ಹಿಂದಿನ ಒಳ್ಳೆಯ ಕಾಲ. The scientists of the t. ಆ ಕಾಲದ ವೈಜ್ಞಾನಿಕರು. It will last our t. ನಮ್ಮ ಜೀವಮಾನವೆಲ್ಲ ಬಾಳಿಕೆ ಬರುತ್ತದೆ, ನಡೆದುಬರುತ್ತದೆ. Have no t. for such frivolities ಅಂಥ ಹುಡುಗಾಟಿಕೆಗಳಿಗೆಲ್ಲಾ ಹೊತ್ತು, ಪುರಸತ್ತು, —ಇಲ್ಲ. Will take all your t. (ಬಳ. ಮಾ.) ನಿನ್ನ ಶಕ್ತಿಯನ್ನೆಲ್ಲ ಉಪಯೋಗಿಸಬೇಕಾಗುತ್ತದೆ. Give me t. & I will pay ನನಗೆ ಕಾಲಾವಕಾಶ ಕೊಡು, ಸಲ್ಲಿಸುತ್ತೇನೆ. (ಬಳ. ಮಾ.) I got there t. enough to see him ಅವನನ್ನು ನೋಡುವುದಕ್ಕಾಗುವಷ್ಟು ಮುಂಚೆ ಅಲ್ಲಿಗೆ ಹೋದೆನು. Gain t. (ಅನಿಶ್ಚಿತ ವರ್ತನೆ, ಮೊ. ಗಳಿಂದ) ಕಾಲ ತಳ್ಳು, ಕಾಲಲಾಭ ಪಡೆ. Now is your t. ಇದೀಗ ನಿನ್ನ (ಅನುಕೂಲ) ಸಮಯ, ನಿನಗೆ ಒಳ್ಳೆಯ ಸಂದರ್ಭ. I must bide my t. ನನ್ನ ಸಮಯ ನಾನು ಕಾಯಬೇಕು. It is (high) t. to go (High ನೋಡಿ). It is t. I was going ನಾನು ಹೊರಡುವ ಹೊತ್ತಾಯಿತು. In the nick of t. (Nick ನೋಡಿ). T. is up ಹೊತ್ತಾಯಿತು, ಹೊತ್ತು ಮುಗಿಯುತ್ತ ಬಂತು. T.! (ತೀರ್ಪುಗಾರನ ಕೂಗು): ಕಾಲ ಮುಗಿಯಿತು! ಆಯಿತು! Is serving his t. (ಒಬ್ಬನ ಹತ್ತಿರ ಉಮೇದುವಾರ, ಮೊ. ಗಿ) ಅವಧಿ ನಡಸುತ್ತಿದ್ದಾನೆ. Is doing t. ಸೆರೆ(ಮನೆಯಲ್ಲಿ) ಅನುಭವಿಸುತ್ತಿದ್ದಾನೆ. Is far on in her t. ಅವಳಿಗೆ ದಿನ ತುಂಬುತ್ತಿದೆ. Is near her t. ಅವಳಿಗೆ ದಿನ ತುಂಬಿದೆ, ಹೆರಿಗೆಯ ದಿನ (ಬಂತು). My t. is drawing near ನನ್ನ ಕಾಲ ಮುಗಿಯುತ್ತ ಬಂತು; ಕಡೆಗಾಲ, ಸಾವು, —ಹತ್ತಿರವಾಯಿತು. Hard, bad, good, times ಕಷ್ಟ, ಕೆಟ್ಟ, ಒಳ್ಳೆಯ, —ಕಾಲ, ಪರಿಸ್ಥಿತಿ; ದುರ್ಭಿಕ್ಷದ, ಸುಭಿಕ್ಷದ, —ಕಾಲ. Had a good t. ಒಳ್ಳೆಯ ಮಜಾಮಾಡಿದೆ; ಸುಖ ಸಂತೋಷಗಳಿಂದ ಹೊತ್ತು ಕಳೆದೆ. Those were times! ಆಗಿನ ಕಾಲವೇ ಕಾಲ! What a t. you will have getting him home! ಅವನನ್ನು ಮನೆಗೆ ಕರೆದುಕೊಂಡು ಹೋಗುವುದರೊಳಗಾಗಿ ನೀನು ಏನೇನು ಪಾಡುಪಡಬೇಕಾಗುತ್ತದೆಯೊ!]. ಸಲ, ಸರತಿ, ಬಾರಿ [Did it seven times ಏಳು ಸಲ ಮಾಡಿದೆ. Times out of number ಲೆಕ್ಕವಿಲ್ಲದಷ್ಟು ಸಲ. T. & again ಮತ್ತೆ ಮತ್ತೆ. Many a t. ಅನೇಕ ವೇಳೆ, ಹಲವು ಸಲ. T. after t. ಹತ್ತಾರು ಸಲ, ಮೇಲಿಂದ ಮೇಲೆ, ಬಾರಿ ಬಾರಿಗೆ. Three times nine is twenty seven ಒಂಬತ್ತು ಮೂರಲು ಇಪ್ಪತ್ತೇಳು. He is three times the size of mine ನನ್ನ ಮೂರರಷ್ಟು ಗಾತ್ರವಾಗಿದ್ದಾನೆ. Ten times easier, as easy ಹತ್ತು ಪಾಲು ಸುಲಭ. Past, present, future, t. ಹಿಂದಿನ, ಇಂದಿನ, ಮುಂದಿನ, —ಕಾಲ; ಭೂತ, ವರ್ತಮಾನ, ಭವಿಷ್ಯತ್, —ಕಾಲ. The t. allowed was four months ಕೊಟ್ಟಿದ್ದ ಅವಧಿ ನಾಲ್ಕು ತಿಂಗಳು. What is the t.? ಹೊತ್ತು ಏನಾಯಿತು? ಗಂಟೆ ಎಷ್ಟು? At this t. of day (ರೂಪ.) ಇಷ್ಟು ಕಾಲವಾದ ಬಳಿಕ, ಇಷ್ಟು ತಡವಾಗಿ]; (ಸಂ.) ಸ್ವರ ನುಡಿಯುವ ಕಾಲ, ತಾಳ, ಲಯ; (ದ್ರುತ, ವಿಲಂಬ, ಮೊ.) ಕಾಲ. Against t. (ಅವಧಿಯೊಳಗೆ ಮುಗಿಯಬೇಕೆಂದು) ಅತ್ಯಂತ ವೇಗದಿಂದ; ತೀವ್ರವಾಗಿ (Working against t.). Ahead of, (born) before, one's time(s) ತನ್ನ ಕಾಲಕ್ಕಿಂತ ಬಹಳ ಮುಂದಾದ ಭಾವನೆಗಳುಳ್ಳ. All the t. ಉದ್ದಕ್ಕೂ, ಮೊದಲಿಂದ ಕೊನೆಯವರೆಗೆ (They were laughing all the t.); (ಅಮೆ. ಸಂ.) ಮೂರು ಹೊತ್ತೂ, ಸದಾ (ಕಾಲ) (Is a businessman all the t.). At the same t. ಅದೇ ಕಾಲದಲ್ಲಿ; ಆದಾಗ್ಯೂ, ಹಾಗಾದರೂ. At times ಆಗಾಗ, ಆಗೊಮ್ಮೆ ಈಗೊಮ್ಮೆ. At one t. ಒಮ್ಮೆ, ಒಂದಾನೊಂದು ಕಾಲದಲ್ಲಿ (At one t. we met frequently ಒಂದಾನೊಂದು ಕಾಲದಲ್ಲಿ ನಾವು ಹೆಚ್ಚು ಹೆಚ್ಚಾಗಿ—ಸೇರುತ್ತಿದ್ದೆವು, ಭೇಟಿಯಾಗುತ್ತಿದ್ದೆವು). Beat t. ತಾಳಹಾಕು. Sidereal, Solar, t. (ಆಯಾ ಪದ ನೋಡಿ). Civil t. ವ್ಯಾವಹಾರಿಕ ಕಾಲ. (ಅನುಕೂಲಕ್ಕಾಗಿ ಏರ್ಪಡಿಸಿಕೊಂಡ ವ್ಯಾವಹಾರಿಕ ದಿನ, ವರ್ಷ, ಮೊ. ಗಳಿಂದ ನಿರ್ದಿಷ್ಟವಾದದ್ದು). Close t. =Close season (Close ನೋಡಿ). From t. to t. ಆಗಿಂದಾಗ್ಗೆ, ಆಗಾಗ. In t. ಸಕಾಲದಲ್ಲಿ; ಹೊತ್ತಿಗೆ, ಸಮಯಕ್ಕೆ, —ಸರಿಯಾಗಿ (*To* do, *for* thing); ಕೊನೆಗೆ, ಪರಿಣಾಮದಲ್ಲಿ; ಕಾಲಕ್ರಮದಲ್ಲಿ, ಇಂದಲ್ಲ ನಾಳೆ. ತಾಳಕ್ಕೆ ಸರಿಯಾಗಿ. In no t. ಒಂದು ಕ್ಷಣದಲ್ಲಿ, ಕಣ್ಣು ಮಿಟುಕಿಸುವಷ್ಟರಲ್ಲಿ. Keep t. ತಾಳಕ್ಕೆ ಸರಿಯಾಗಿ—ಹೆಜ್ಜೆ ಹಾಕು, ಹಾಡು; (ಗಡಿಯಾರ) ಗಂಟೆ ತೋರಿಸು (Keep good, bad, t. ಗಂಟೆಯನ್ನು ಸರಿಯಾಗಿ, ತಪ್ಪಾಗಿ, ತೋರಿಸು; ಸರಿಯಾಗಿ ನಡೆ, ತಪ್ಪಾಗಿ ನಡೆ). One, two, at a t. ನಲಕ್ಕೆ ಒಬ್ಬೊಬ್ಬರಂತೆ, ಇಬ್ಬಿಬ್ಬರಂತೆ. Out of t. ಅಕಾಲದ, ಅಕಾಲಿಕ(ವಾಗಿ); (ಸಂಗೀತ, ಮೊ. ಗಳ ವಿಷಯದಲ್ಲಿ) ತಾಳ ತಪ್ಪಿದ. T. immemorial *or* out of mind (ನೆನಪಿಲ್ಲದಷ್ಟು) ಬಹು ಪ್ರಾಚೀನ ಕಾಲ(ದಿಂದ), ಅನಾದಿ ಕಾಲ(ದಿಂದ). The t. of day (ಗಡಿಯಾರ ತೋರಿಸುವ) ಗಂಟೆ [(ಬಳ. ಮಾ.) Pass the t. of day (ಎದುರುಗೊಂಡಾಗ) ಕುಶಲಪ್ರಶ್ನೆ ಮಾಡು, ಕ್ಷೇಮಸಮಾಚಾರ ವಿಚಾರಿಸು. (ಅಸಂ.) So that's the t. of day! ಹಾಗೋ ಸಮಾಚಾರ, ಪರಿಸ್ಥಿತಿ! ಅದೋ ನಿನ್ನ ತಂತ್ರ, ಆಟ!]. The t. of one's life (ಅಸಂ.) ದಶಾಕಾಲ, ಗ್ರಹಚಾರ ಕಾಲ (Have the t. of one's life). What t. (ಕಾವ್ಯ.) ಯಾವಾಗ, ಎಂದು. The Times (ಲಂಡನಿನಲ್ಲಿಯ ಒಂದು ವೃತ್ತಪತ್ರಿಕೆಯ ಹೆಸರು). **T.-ball** ಖಗೋಳ ಸಮೀಕ್ಷಾ ಮಂದಿರದಲ್ಲಿ ಇಟ್ಟಿರುವ, ಒಂದು ನಿರ್ದಿಷ್ಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರಾಸರಿ ಕಾಲವನ್ನು (ಸಾ., ಮಧ್ಯಾಹ್ನ ೧೨ ಅಥವಾ ೧ ಘಂಟೆಯನ್ನು) ಖಚಿತವಾಗಿ ಸೂಚಿಸುವುದಕ್ಕಾಗಿ ಒಂದು ದಂಡದ ತುದಿಯಲ್ಲಿ ತಟ್ಟನೆ ಕೆಳ ಸರಿಯುವಂತೆ ಅಳವಡಿಸಿರುವ ಗುಂಡು: ಹೊತ್ತುಗುಂಡು. **T.-bargain** ಮುಂದೆ ಒಂದು ಗೊತ್ತಾದ ಬೆಲೆಗೆ ಸರಕು (ಬಂಡವಾಳ ಪತ್ರ, ಮೊ. ನ್ನು) ಮಾರುವ ಕರಾರಿನಮೇಲೆ ಮಾಡುವ ಸಟ್ಟಾ ವ್ಯಾಪಾರ: ವಾಯಿದೆ ವ್ಯಾಪಾರ. **T.-book, -card, -sheet** (ಆಯಾ ಕೆಲಸಗಾರರು ಕೆಲಸಮಾಡಿದ ಹೊತ್ತನ್ನು ಗುರುತಿಸುವ) ಹೊತ್ತು—ಪುಸ್ತಕ, ರಟ್ಟು ಚೀಟಿ, ಹಾಳೆ. **T.-fuse** ಒಂದು ನಿರ್ದಿಷ್ಟ ಕಾಲ ಉರಿಯುವ ಜಾಮಿಗೆಬತ್ತಿ: ಹೊತ್ತು ಜಾಮಿಗೆಬತ್ತಿ. **T.-honoured** ಬಹು ಕಾಲದ್ದೆಂದು ಗೌರವ ಪಡೆದಿರುವ; ಪ್ರಾಚೀನತಾ ಗೌರವದ. **Tímekeeper** (ನಾ.) (ಮು., ಕೆಲಸಗಾರರ, ಕೆಲಸದ) ಹೊತ್ತು, ಕಾಲ, —ದಾಖಲೆಗಾರ: ಕಾಲದ ಗುಮಾಸ್ತೆ; ಗಡಿಯಾರ (That watch is a good, bad, t.-k. ಆ ಗಡಿಯಾರ ಸರಿಯಾಗಿ, ತಪ್ಪಾಗಿ, ಹೊತ್ತು ತೋರಿಸುತ್ತದೆ). **Tímepiece** (ಸಾ., ಮೇಜಿನ ಮೇಲಿಟ್ಟು ಕೊಳ್ಳುವ) ಮಧ್ಯಮ ಗಾತ್ರದ ಗಡಿಯಾರ. **T.-server** ಸ್ವಾರ್ಥಸಾಧನೆಗಾಗಿ ಕಾಲಕ್ಕೆ ತಕ್ಕಂತೆ, ಅಧಿಕಾರಿಗಳ ಮರ್ಜಿಯನ್ನು ಅನುಸರಿಸಿ, —ನಡೆಯುವವನು: ಸಮಯಾನುವರ್ತಿ [**T.-serving** (ಗು., ನಾ.)]. **T.-table** ಕಾಲಪಟ್ಟಿ, ವೇಳಾಪಟ್ಟಿ. **T.-work** (ಕೆಲಸಕ್ಕೆ ಇಷ್ಟು ಎಂದು ಕೊಡದೆ) ಹೊತ್ತಿಗೆ ಇಷ್ಟು ಕೂಲಿ ಎಂದು ಕೊಟ್ಟು ಮಾಡಿಸುವ ಕೆಲಸ: ಹೊತ್ತು, ಗಂಟೆ, —(ಕೂಲಿ) ಕೆಲಸ. **Tímeless** (ಗು.) (ವಿರ. ಪ್ರ.) ಕೊನೆಯಿಲ್ಲದ, ಅನಂತ; ಅಕಾಲದ. **Tímely** (ಗು.) ಸಕಾಲದ; ಕಾಲೋಚಿತ, ಸಮಯೋಚಿತ. **Tímeliness** (ನಾ.); **Tím(e)ous** (ಗು.) (ಮು., ಸ್ಕಾ. ಪ್ರ.) =Timely. **Tím(e)ously** (ಕ್ರಿ. ವಿ.)

Time (ಕ್ರಿ.) (ತಕ್ಕ) ಕಾಲವನ್ನು ಗೊತ್ತುಮಾಡು; ಕಾಲಕ್ಕೆ, ಸಮಯಕ್ಕೆ, —ಸರಿಯಾಗಿ ಮಾಡು; ಸಮಯೋಚಿತವಾಗಿ ಮಾಡು (Must t. your blows ಸರಿಯಾದ ಹೊತ್ತಿಗೆ ಏಟುಕೊಡಬೇಕು; ಸಮಯ ನೋಡಿ ಹೊಡೆಯಬೇಕು. Remark was well, ill, timed ಟೀಕೆ ಸಮಯೋಚಿತವಾಗಿತ್ತು, ಸಮಯೋಚಿತವಾಗಿರಲಿಲ್ಲ); (ಪಂದ್ಯಕ್ಕೆ ಹಿಡಿದ, ಓಟಗಾರನು ತೆಗೆದುಕೊಂಡ, ಮೊ.) ಹೊತ್ತನ್ನು, ಕಾಲವನ್ನು, —ಗೊತ್ತು ಮಾಡು, ಲೆಕ್ಕಮಾಡು. ತಾಳಕ್ಕೆ ಸರಿಯಾಗಿರು; ಸಮಯಕ್ಕೆ —ಸರಿಗೂಡು, ಹೊಂದಿಕೆಯಾಗು, ಹೊಂದಿಕೊ (*With* ಉಪ. ದೊಡನೆ). **Tímer** (ನಾ.) ಗಡಿಯಾರ(ದವನು); ಕಾಲ—ನಿಯಾಮಕ, ಗಣಕ. **Tíming** (ನಾ.) ಕಾಲ ನಿಯಮನ; ಸಮಯ ಸಾಂಗತ್ಯ.

Tímeous. **Time** ನೋಡಿ.

Tímid ಟಿಮಿಡ್ (ಗು.) ಸುಲಭವಾಗಿ—ಹೆದರುವ, ಗಾಬರಿಯಾಗುವ; ಪುಕ್ಕಲ, ಅಂಜುಬುರಕ, ಭೀರು. **Timídity** (ನಾ.); **Tímidly** (ಕ್ರಿ. ವಿ.); **Tímidness** (ನಾ.); **Tímorous** (ಗು.) =Timid. **Tímorously** (ಕ್ರಿ. ವಿ.); **Tímorousness** (ನಾ.)

Timócracy ಟೈಮಾಕ್ರಸಿ (ನಾ.) (ಅರಿಸ್ಟಾಟಲನ ಪ್ರಕಾರ) ಆಸ್ತಿವಂತರು ಮಾತ್ರ ಅಧಿಕಾರ ನಡಸುವ ಸರ್ಕಾರ ಪದ್ಧತಿ: ಆಸ್ತಿವಂತರ ಪ್ರಭುತ್ವ. (ಪ್ಲೇಟೋವಿನ ಪ್ರಕಾರ) ಕೇವಲ ಘನತೆ ಗೌರವಗಳಿಗಾಗಿ ಅಧಿಕಾರ ನಡಸುವ ಸರ್ಕಾರ ಪದ್ಧತಿ: ಘನತೆವಂತರ, ಗೌರವಸ್ಥರ, —ಪ್ರಭುತ್ವ. **Timocrátic** —ಮೊಕ್ರಾ್ಯಟಿ— (ಗು.)

Tímorous, etc. **Timid** ನೋಡಿ.

Tímeous, etc. **Time** ನೋಡಿ.

Tin ಟಿನ್ (ನಾ.) ತವರ [T. plate ತವರದ ಮುಲಾಮಿನ (ಕಬ್ಬಿಣದ) ತಗಡು; ತವರದ ತಗಡು]; ತವರದ—ಪಾತ್ರೆ, ಡಬ್ಬಿ; [(ವಿಶೇಷಣ ಪ್ರ.) ತವರದ, ತವರ ಬಳಿದ (ಕಬ್ಬಿಣದ)]; (ಅಸಂ.) ಹಣ, ರೊಕ್ಕ. Cry of t. (ತವರವನ್ನು ಬಗ್ಗಿಸಿದಾಗ ಆಗುವ) ಡಬ ಡಬ ಶಬ್ದ, ಕರ ಕರ ಶಬ್ದ. Salt of t., t.-liquor (ಬಣ್ಣ ಹಾಕುವವರು ಬಣ್ಣ ಗಟ್ಟಾಗಿ ಉಪಯೋಗಿಸುವ) ತವರ ದ್ರಾವಣ. **T. fish** (ನಾವಿಕ ಅಸಂ.) ಟಾರ್ಪಿಡೋ ಎಂಬ ವಿದ್ಯುನ್ಮೀನು (Torpedo ನೋಡಿ). **T. foil** (ನಾ., ಕ್ರಿ. ಸಕ.) (ಸಾಬೂನು, ಹೊಗೆಸೊಪ್ಪು, ಮೊ. ನ್ನು ಸುತ್ತಲು ಉಪಯೋಗಿಸುವ) ತವರದ—ರೇಕು, ಹಾಳೆ; ಬೇಗಡೆ; (ಕ್ರಿ.) —ಹಾಕು, ಸುತ್ತು. **ɪ. god** ಪೂಜ್ಯವೆಂದು ಭ್ರಮಿಸಿ ಆರಾಧಿಸುವ ವಸ್ತು: ಮಿಥ್ಯಾ, ಕ್ಷುದ್ರ, —ದೇವತೆ. **T. hat** (ಸೈನಿಕ ಅಸಂ.) (ಸಿಪಾಯಿಯ) ಉಕ್ಕಿನ ಟೋಪಿ. **T. Lizzie** ಫೋರ್ಡ್ ಮೋಟಾರು ಬಂಡಿ(ಗೆ ಅಡ್ಡಹೆಸರು). **T.-plate** (ಕ್ರಿ. ಸಕ.) ತವರದ ಮುಲಾಮು ಮಾಡು; ತವರ ಹಚ್ಚು. **Tínman, Tínner, T.-smith** ತವರದ ಕೆಲಸದವನು, ತವರಗಾರ, ಕಲಾಯಿಗಾರ. **Tínstone** ತವರದ ಅದುರು. **Tínware** ತವರದ ಸಾಮಾನು. **T. whistle** = Penny whistle (Whistle ನೋಡಿ). **Tínny** (ಗು.) ತವರದ(ಂಥ)

Tin (ಕ್ರಿ. ಸಕ.) ತವರ—ಬಳಿ, ಹಚ್ಚು; ತವರದ ಮುಲಾಮು ಮಾಡು; ಕಲಾಯಿ ಮಾಡು; (ಆಹಾರಪದಾರ್ಥ, ಮೊ. ನ್ನು) ಡಬ್ಬದಲ್ಲಿ ತುಂಬು, ಡಬ್ಬಿಗಳಲ್ಲಿ ಹಾಕಿಡು.

Tíncal, -kal ಟಿಂಕಲ್ (ನಾ.) ಕಚ್ಚಾ ಬಿಳಿಗಾರ, ಟಂಕಣ.

Tinct ಟಿಂಕ್ಟ್ (ನಾ.) (ಕಾವ್ಯ) ಬಣ್ಣ, ವರ್ಣ, ರಂಗು. **Tinctórial** (ಗು.) ಬಣ್ಣದ; ಬಣ್ಣ—ಹಾಕುವ, ಹಾಕುವುದರ; ವರ್ಣೋತ್ಪಾದಕ, ವರ್ಣಜನಕ.

Tíncture ಟಿಂಕ್ಚರ್ (ನಾ., ಕ್ರಿ. ಸಕ.) ಒಂದು ವಸ್ತುವಿನ (ಸಾ., ಸಸ್ಯ ಪದಾರ್ಥದ) ಸಾರವನ್ನು ಮದ್ಯಸಾರದಲ್ಲಿ ಲೀನಮಾಡಿ ಔಷಧದಲ್ಲಿ ಉಪಯೋಗಿಸುವ ದ್ರಾವಣ: ಮದ್ಯಾರ್ಕ, ಟಿಂಚರು (T. of quinine ಕ್ವೈನ ಟಿಂಚರು); ನಸುರುಚಿ, ವಾಸನೆ, ಗಂಧ, ಛಾಯೆ (ರೂಪ. ಸಹ) (*Of* ಉಪ. ದೊಡನೆ); (ವರ್ಣದ) ಛಾಯೆ. (ಕ್ರಿ.) (ನಸು) ಬಣ್ಣ ಕೊಡು, ಛಾಯೆದೋರು, ಛಾಯೆ ಕೊಡು (*With* ಉಪ. ದೊಡನೆ) (ರೂಪ. ಸಹ) (His conversation was tinctured with the Ancient Mythology)

Tínder ಟಿಂಡರ್ (ನಾ.) ಕಿಡಿಯಿಂದ ಬೇಗ ಹೊತ್ತಿಕೊಳ್ಳುವ ಒಣ ವಸ್ತು (ಮು., ಚಕಮುಕಿಯಿಂದ ಬೆಂಕಿಮಾಡುವಲ್ಲಿ ಉಪಯೋಗಿಸುವ ಕರಿಕುಬಟ್ಟೆ, ಮೊ. ವು): ದೂದಿ (T.-box ಚಕಮುಕಿ ಕಲ್ಲು, ಉಕ್ಕಿನ ಬಡಿಗೆ ಮತ್ತು ದೂದಿ ಉಳ್ಳ ಬೆಂಕಿಸಾಮಾನು ಪೆಟ್ಟಿಗೆ: ಚಕಮುಕಿ ಪೆಟ್ಟಿಗೆ). **Tíndery** (ಗು.) ದೂದಿಯ(ಂಥ); (ರೂಪ.) ಬೇಗ ಹೊತ್ತಿಕೊಳ್ಳುವ, ಸುಲಭವಾಗಿ ಉದ್ರೇಕಗೊಳ್ಳುವ.

Tine ಟೈನ್ (ನಾ.) (ಸಾರಂಗದ ಕೊಂಬು, ತ್ರಿಶೂಲ, ಹಲುಬೆ, ಮೊ. ಗಳ) ಮೊನೆ, ಮುಳ್ಳು, ಹಲ್ಲು, ಕವಲು, ಕೋಡು. **(-)tined** (ಗು.)

Ting ಟಿಂಗ್ (ನಾ., ಕ್ರಿ. ಅಕ.) (ಘಂಟಾನಾದದಂತೆ) ಟಿಂಗ್ ಟಿಂಗ್ ಶಬ್ದ, ಗಣ ಗಣ ಶಬ್ದ(—ಮಾಡು)

Tinge ಟಿಂಜ್ (ಕ್ರಿ. ಸಕ., ನಾ.) (ಬಣ್ಣದ) ಛಾಯೆ ಕೊಡು (*With* ಉಪ. ದೊಡನೆ); (ರೂಪ.) ಬೆರಕೆಮಾಡು, ಸೇರಿಸು (T. with envy ಮಾತ್ಸರ್ಯ ಮಿಶ್ರಿತ, ಮಾತ್ಸರ್ಯ ವಾಸಿತ,—ಮಾಡು). (ನಾ.) ನಸು ಬಣ್ಣ, ಛಾಯೆ, ಗಂಧ, ವಾಸನೆ (ರೂಪ. ಸಹ)

Tíngle ಟಿಂಗ್‌ಲ್ (ಕ್ರಿ., ನಾ.) ಜುಮ ಜುಮ, ಗುಂಯ್ (—ಗುಟ್ಟು, ಗುಟ್ಟಿಸು); ಜುಮ್ಮೆನ್ನು; ಮೈಮುಳ್ಳು, ರೋಮಾಂಚ, ಪುಲಕಿತ, —ಆಗು, ಮಾಡು (The reply tingled in his ears ಉತ್ತರ ಅವನ ಕಿವಿಯಲ್ಲಿ ಗುಂಯ್‌ಗುಟ್ಟಿತು, ಮೊರೆಯಿತು. The news that tingles all hearts ಎಲ್ಲ ಹೃದಯಗಳನ್ನೂ ಮುಲಮುಲಗುಟ್ಟಿಸುವ, ಪುಲಕಿತ ಮಾಡುವ, ಸುದ್ದಿ)

Tínker ಟಿಂಕರ್ (ನಾ., ಕ್ರಿ.) ಪಾತ್ರೆಪರಟೆಗಳ ದುರಸ್ತುಗಾರ (ಮು., ಸ್ಥಳದಿಂದ ಸ್ಥಳಕ್ಕೆ ಹೋಗಿ ಕೆಲಸಮಾಡುವವನು): ಕಲಾಯಿಗಾರ (Don't care a t.'s damn ಕೊಂಚವೂ ಲಕ್ಷ್ಯಮಾಡುವುದಿಲ್ಲ; ಕಾಸಿಗಿಂತ ಕಡೆ); ಒಡ್ಡ, ಒರಟು, —(ತೇಪೆ) ಕೆಲಸ(ಗಾರ) (Had an hour's t. at it ಅದಕ್ಕೆ ಒಂದು ಗಂಟೆಯ ಹೊತ್ತು ಒಡ್ಡ ದುರಸ್ತು ಮಾಡಿದೆ, ತೇಪೆಹಾಕಿದೆ). ಹಲವು ಬಗೆಯ ಮೀನು, ಪಕ್ಷಿ, ಸೀಲ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಾಣಿ. (ಕ್ರಿ.) (ಪಾತ್ರೆಗಳನ್ನು) ದುರಸ್ತು, ರಿಪೇರಿ, ಕಲಾಯಿ, —ಮಾಡು; ತೇಪೆ ಕೆಲಸಮಾಡು, ತೇಪೆಹಾಕು (ರೂಪ. ಸಹ) (ಅನೇಕ ವೇಳೆ *up* ಉಪ. ಮೊಡನೆ); ಅಲ್ಪಸುಧಾರಣೆ ಮಾಡು; (ದುರಸ್ತು ಅಥವಾ ಬದಲಾವಣೆಯನ್ನು) ಒರಟೊರಟಾಗಿ, ಹರುಕುಮುರುಕಾಗಿ, —ಮಾಡು (*At* ಉಪ. ದೊಡನೆ). **Tínkerly** (ಗು.)

Tínkle ಟಿಂಕ್‌ಲ್ (ಕ್ರಿ., ನಾ.) ಝಣತ್ಕಾರ (ಮಾಡು); (ಕಿರುಗಂಟೆ, ಮೊ. ಗಳ ವಿಷಯದಲ್ಲಿ) ಗಣ ಗಣ (ಎನ್ನಿಸು); ಕ್ವಣನ, ಕ್ವಣಿಸು; ಖಣ ಖಣಿಸು. (ಗತಪ್ರ.) =Tingle. **Tínkler** (ನಾ.) (ಕ್ರಿಯಾರ್ಥ ಗಳಲ್ಲಿ); (ಅನಂ.) ಕಿರುಗಂಟೆ.

Tinnítus ಟಿನೈಟಸ್ (ಗು.) (ವೈ. ಶಾ.) ಕಿವಿಯಲ್ಲಿ ಗುಂಯ್‌ಗುಟ್ಟು ವುದು; ಕಿವಿ ಮೊರೆತ.

Tínsel ಟಿನ್ಸೆಲ್ (ನಾ., ಗು., ಕ್ರಿ. ನಕ.) ಗುನ್ನಾಂಪಟ್ಟೆ, ಬೇಗಡೆ, ಚಮಕಿ (—ಹಾಕಿದ ಬಟ್ಟೆ, ಉಡುಪು); (ರೂಪ.) ಹೊರ—ಮೆರುಗು, ಹೊಳಪು; ಥಳುಕು, ಬೆಡಗು. (ಗು.) ಬಾಹ್ಯಾಡಂಬರದ, ಥಳುಕಿನ, ಅಗ್ಗದ ಶೋಭೆಯ. (ಕ್ರಿ.) ಗುನ್ನಾಂಪಟ್ಟೆಯಲಂಕಾರ ಮಾಡು, ಥಳುಕಿನ ಅಲಂಕಾರಮಾಡು.

Tint ಟಿಂಟ್ (ನಾ., ಕ್ರಿ. ನಕ.) ಒಂದು ಬಣ್ಣದ ಪ್ರಭೇದ, ಛಾಯೆ (ಮು., ಬಿಳಿಯ ಬಣ್ಣ ಸೇರಿಸಿ ತೆಳುವುಮಾಡಿದ್ದು); ತಿಳಿ ಬಣ್ಣ; ಬಣ್ಣ, ರಂಗು; (ವಿರ. ಪ್ರ.) ಮತ್ತೊಂದು ಬಣ್ಣದ—ಛಾಯೆ, ಮಿಶ್ರ (Red of *or* with a blue t. ನೀಲಛಾಯೆಯ ಕೆಂಪು, ನೀಲ ತಿರುಗಿದ ಕೆಂಪು. Autumn tints ಹಣ್ಣೆಲೆಯ ಬಣ್ಣ); (ಕೊರೆತದ ಕೆಲಸದಲ್ಲಿ) ಒಂದೇ ಸಮನಾದ ಛಾಯೆ ಬರುವಂತೆ ಕೊರೆದ ಸಮಾನಾಂತರ ರೇಖಾ ವ್ಯೂಹ: ಛಾಯಾ—ರೇಖೆ, ಪಂಕ್ತಿ (T.-tool ಛಾಯಾರೇಖಕ); [T.-block ನಸು ಬಣ್ಣದ ಹಿನ್ನೆಲೆಯಾಗಿ ಮುದ್ರಿಸಬೇಕಾಗಿರುವ ಪಡಿಯಚ್ಚು: ಹಿನ್ನೆಲೆ, ಛಾಯಾ,—ಪಡಿಯಚ್ಚು. Ruled, crossed, t. ಸಮಾನಾಂತರ ರೇಖೆಗಳ, ಕತ್ತರಿ ರೇಖೆಗಳ, —ಮೇಲ್ಮೈ (ಪಡಿಯಚ್ಚು)]. (ಕ್ರಿ.) (ಬಣ್ಣಕ್ಕೆ) ಛಾಯೆ ಕೊಡು; ಬಣ್ಣ, ರಂಗು, —ಕೊಡು. **Tínter** (ನಾ.) ಛಾಯೆ, ಬಣ್ಣ, —ಹಾಕುವವನು, ಹಾಕುವ ಸಲಕರಣೆ; ಬಣ್ಣಗಾರ, ರಂಗಾರೆಯವನು; ಮಾಯಾದೀಪದಲ್ಲಿ ಉಪಯೋಗಿ ಸುವ ಬಣ್ಣದ ಸಾದಾ ಗಾಜಿನ ಫಲಕ: ರಂಗು ಫಲಕ. **Tíntless** (ಗು.); **Tintómeter** ಟಿಂಟಾ— (ನಾ.) ವರ್ಣಚ್ಛಾಯಾ ಮಾಪಕ. **Tínty** (ಗು.) ರಂಗು ರಂಗಿನ; ಅತಿಯಾಗಿ ಬಣ್ಣ ಬಳಿದ, ರಾವು ಬಣ್ಣದ.

Tintinnábulum ಟಿಂಟಿನ್ಯಾಬ್ಯುಲಮ್ (ನಾ.; ಬ. ವ. -la —ಲ) ಗಂಟೆ (ಮು., ಕ್ವಣಿಸುವ ಕಿರುಗಂಟೆ), ಕಿಂಕಿಣಿ, ಗೆಜ್ಜೆ; (ಸಣ್ಣ ಗಂಟೆ ಗಳ ಅಥವಾ ಲೋಹಫಲಕಗಳ) ಝಣತ್ಕಾರ, ಕ್ವಣನ, ಗಣ ಗಣ, ಜಣ ಜಣ. **Tintinnábulary, Tintinnábulous** (ಗು.); **Tíntinnabulátion** (ನಾ.)

Tintómeter, Tínty. **Tint** ನೋಡಿ.

Tíny ಟೈನಿ, (ಮಕ್ಕಳ ಮಾತು) **Teény** ಟೀನಿ (ಗು.) (ಬಹಳ) ಸಣ್ಣ, ಪುಟ್ಟ, ಪುಟಾಣಿ (A t. little boy. Little t. boy)

Tip[1] ಟಿಪ್ (ನಾ., ಕ್ರಿ. ನಕ.) ತುದಿ, ಮೊನೆ, ಕೊನೆ, ಅಗ್ರ(—ಮಾಡು, ಇಡು) (Tips of the fingers ಬೆರಳ ಕೊನೆಗಳು. Walk on the tips of your toes ಮೆಟ್ಟಂಗಾಲನಲ್ಲಿ, ತುದಿಯುಂಗುಟದಲ್ಲಿ, —ನಡೆ. T. of a cigar ಚುಟ್ಟಾ ತುದಿ. Bird measures 15 in. from t. to t. ಹಕ್ಕಿ ಒಂದು ರೆಕ್ಕೆ ತುದಿಯಿಂದ ಮತ್ತೊಂದು ರೆಕ್ಕೆ ತುದಿಗೆ ೧೫ ಅಂಗುಲ ಅಗಲವಿದೆ. Had it on the t. of my tongue ನನ್ನ ನಾಲಗೆಯ ತುದಿಯಲ್ಲಿತ್ತು; ಇನ್ನೇನು ಹೇಳು ವುದರಲ್ಲಿದ್ದೆ). (ಗಿಲೀಟು ಕೆಲಸದಲ್ಲಿ ಉಪಯೋಗಿಸುವ) ಕೂರ್ಚ; ಒಂದರ ತುದಿಗೆ ಖಚಿಸಿದ ಸಣ್ಣ ಭಾಗ, ಚೂರು: ಮೂತಿ, ಅಣಸು (—ಮಾಡು, ಹಾಕು). **Típstaff** (ಬ. ವ. -staves) (ಚರಿತ್ರೆ) ಷೆರೀಫಿನ ದಂಡ ಧಾರಿ, ಕಟ್ಟಿಗೆಯವನು; (ಈ ಅಧಿಕಾರದ ಗುರುತಾಗಿ ಹಿಡಿಯುವ) ಲೋಹ ಮೂತಿಯ ಕೋಲು; ಅಣಸು—ದೊಣ್ಣೆ, ಕೋಲು. **T.-tilted** (ಮೂಗಿನ ವಿಷಯದಲ್ಲಿ) ತುದಿ—ಎತ್ತಿರುವ, ಮೇಲ್ಮುಖವಾಗಿ ತಿರುಗಿದ. **Típtoe** (ಕ್ರಿ. ವಿ., ಕ್ರಿ. ಅಕ.) ಮೆಟ್ಟಂಗಾಲಿನಲ್ಲಿ (=On tiptoe); (ಕ್ರಿ.) ಮೆಟ್ಟಂಗಾಲಿನಲ್ಲಿ ನಡೆ. **Tiptóp** (ನಾ., ಗು., ಕ್ರಿ. ವಿ.) ಪರಾಕಾಷ್ಠೆ, ಪರಮೋತ್ಕರ್ಷ, ತುತ್ತತುದಿ; (ಗು., ಕ್ರಿ. ವಿ.) ಅತ್ಯುತ್ತಮವಾದ(ವಾಗಿ); ಬಲು ಅಚ್ಚುಕಟ್ಟಾದ(ಗಿ), ಠೀಕಾದ(ಗಿ)

Tip[2] ಟಿಪ್ (ಕ್ರಿ., ನಾ.) ಒರಗು, ಒರಗಿಸು, ಓಲು, ಓಲಿಸು; ಆಯ ತಪ್ಪಿ ಉರುಳು, ಉರುಳಿಸು; ಮಗುಚಿ ಬೀಳು, ಬೀಳಿಸು (*Over, up,* ಮೊ. ಉಪ. ದೊಡನೆ) (T. a cask. T. a boat. T. one out of a boat. T. person into pond); ಮೆತ್ತಗೆ ಮುಟ್ಟು, ತಗುಲಿಸು, ತಟ್ಟು [T. and run (ಕ್ರಿಕೆಟ್ಟಿನಲ್ಲಿ) ದಾಂಡಿಗೆ ಚೆಂಡು ತಗುಲಿದರೆ ದಾಂಡುಗಾರನು ಓಟ ಓಡಬೇಕಾದ ಆಟ: ತಗುಲೋಟ]; (ಪಾತ್ರೆ, ಮೊ. ಗಳಲ್ಲಿರುವುದನ್ನು) ಬಗ್ಗಿಸಿ (ಸುರಿದು)ಬಿಡು (*Out, into,* ಮೊ. ಉಪ. ದೊಡನೆ); (ಅನಂ.) ಮೆಲ್ಲಗೆ ಎಸೆ, ಕೊಡು; ಸೂಕ್ಷ್ಮವಾಗಿ ತಿಳಿಸು [T. a copper ಕಾಸು ಎಸೆ, ಕೊಡು. T. us your fin (Fin ನೋಡಿ). T. us a song ನಮಗೆ ಒಂದು ಹಾಡು ಹೇಳು. Might have tipped me the wink (ನನಗೆ ಎಚ್ಚರಿಕೆ ಕೊಡು ವುದಕ್ಕಾಗಿ) ಮೆಲ್ಲಗೆ ಕಣ್ಣು ಮಿಟುಕಿಸಬಹುದಾಗಿತ್ತು]; (ಕ್ರೀಡಾ ಅನಂ.) (ಜೂಜಿನ ಕುದುರೆ, ಮೊ. ಗಳ) ಗುಟ್ಟು, ರಹಸ್ಯ, —ತಿಳಿಸು; ಸುಳಿವು, ಸೂಚನೆ, —ಕೊಡು; ಬಕ್ಷೀಸು ಕೊಡು, ಕೈಬೆಚ್ಚಗೆ ಮಾಡು, ಕೈಗೆ ಹಾಕು [Tipped me (ವಿರ. ಪ್ರ. *with*) half-a-crown]. (ನಾ.) ಬಕ್ಷೀಸು, ಇನಾಮು; ಗುಟ್ಟು, ರಹಸ್ಯ, ಸುಳಿವು, ಸೂಚನೆ (Will give you the straight t. ಸರಿಯಾದ ಸುಳಿವು ಕೊಡುತ್ತೇನೆ); (ಒಂದು ಕೆಲಸ ಮಾಡುವುದಕ್ಕೆ) ತಕ್ಕ ಸಲಹೆ, ಉಪಾಯ; (Miss one's t. ಗುರಿ ಸಾಧಿಸದೆ ಹೋಗು, ಉದ್ದೇಶ ನೆರವೇರದಿರು); ಮೆಲ್ಲಗೆ ನೂಕು(ವುದು), ತಟ್ಟು(ವುದು); ಮೆತ್ತನೆಯ ಏಟು. ತಿಪ್ಪೆ (ಗುಂಡಿ). **T.-car, -cart** ಬಗ್ಗಿಸಿ ಸುರಿಯುವುದಕ್ಕಾಗಿ, ಕೀಲುಗಳ ಮೇಲೆ ತಿರುಗುವ) ಓಲು, ಮಗುಚು, —ಬಂಡಿ. **T.-cat** ಚಿಣ್ಣಿ (ಕೋಲು), ಚಿಣ್ಣಿ ಕೋಲಾಟ. **T.-up seat** (ನಾಟಕ ಶಾಲೆ ಮೊ. ಗಳಲ್ಲಿ ಹಾಕಿರುವ) ಮೇಲಕ್ಕೆ ಮಡಿಚಲಾಗುವ ಕೀಲು ಪೀಠ; ಮೇಲ್ಮಡಿಚು ಕುರ್ಚಿ. **Típper** (ನಾ.); **Típster** (ನಾ.) (ಪಂದ್ಯಗಳಲ್ಲಿ) ಸುಳಿವು, ಸೂಚನೆ, —ಕೊಡುವವನು.

Tipperáry ಟಿಪರೇರಿ (ನಾ.) ೧೯೧೪ರಲ್ಲಿ ಬ್ರಿಟಿಷ್ ದಂಡಯಾತ್ರೆ ಸೈನ್ಯ ದಲ್ಲಿ ಬಳಕೆಯಾಗಿದ್ದ ಒಂದು ಹಾಡು (It's a long long way to t. ಆ ಹಾಡಿನ ಮೊದಲ ಮಾತುಗಳು)

Típpet ಟಿಪೆಟ್ (ನಾ.) (ಹೆಂಗಸರು, ನ್ಯಾಯಾಧೀಶರು, ಪಾದ್ರಿಗಳು ಮೊ. ರು ಹಾಕಿಕೊಳ್ಳುವ) ಭುಜವಸ್ತ್ರ, ಕಂಠವಸ್ತ್ರ.

Típple ಟಿಪ್‌ಲ್ (ಕ್ರಿ., ನಾ.) ವಾಡಿಕೆಯಾಗಿ ತೀಕ್ಷ್ಣ ಮದ್ಯ ಕುಡಿ. ನಿಧಾನವಾಗಿ ಮೇಲಿಂದಮೇಲೆ ಕುಡಿ. (ನಾ.) ತೀಕ್ಷ್ಣ ಮದ್ಯ. **Típpler** (ನಾ.)

Típster. **Tip**[2] ನೋಡಿ.

Típsy ಟಿಪ್ಸಿ (ಗು.) ಕುಡಿದು ಅಮಲೇರಿದ, ಮದ್ಯೋನ್ಮತ್ತ; ಅಮಲಿನ, ಅಮಲಿನಿಂದುಂಟಾದ (A t. lurch ಅಮಲಿನ ಗಿರಕಿ). **T.-cake** (ಮೊಟ್ಟೆ ಹಾಲಿನೊಂದಿಗೆ ಬಡಿಸುವ) ಮದ್ಯದಲ್ಲಿ ನೆನಸಿದ ಒಂದು ಬಗೆಯ ರೊಟ್ಟಿ. **Típsify** (ಕ್ರಿ. ನಕ.) ಅಮಲೇರಿಸು. **Típsily** (ಕ್ರಿ. ವಿ.); **Típsiness** (ನಾ.)

Tiráde ಟಿ(ಟೈ)ರೇಡ್ (ನಾ.) ದೀರ್ಘವಾದ ಉದ್ರೇಕ ಭಾಷಣ; ದೀರ್ಘ ನಿಂದಾ, ಆಕ್ಷೇಪಕ, —ಭಾಷಣ; ತೀವ್ರ ಟೀಕೆ; ಬೈಗುಳದ ಸುರಿಮಳೆ. (ಯಾವುದಾದರೂ ಒಂದು ವಿಷಯವನ್ನು ಕುರಿತ) ಪದ್ಯ (ಭಾಗ)

Tirailleúr ಟಿರಾಲ(ಲ್ಯ)ರ್, (F) ಟೀರಾಯರ್ (ನಾ.) (ಫ್ರೆಂಚ್ ಸೈನ್ಯದಲ್ಲಿ) ಒಳ್ಳೆಯ ಗುರಿಗಾರ, ತುಂಡು ಕಾಳಗದವನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tire[1] ಟೈ(ಅ)ರ್ (ಕ್ರಿ.) ಬಳಲು, ದಣಿ, ಸೋತುಹೋಗು, ಸುಸ್ತಾಗು, ಆಯಾಸಗೊಳ್ಳು, ಬಳಲಿಸು, ದಣಿಸು, ಸುಸ್ತುಮಾಡು, ಆಯಾಸಗೊಳಿಸು (*Of, with* ಉಪ. ದೊಡನೆ) (Am tired of ನನಗೆ ಸಾಕಾಗಿ ಹೋಗಿದೆ, ಬೇಸರವಾಗಿ ಬಿಟ್ಟಿದೆ). **Tíredness** (ನಾ.); **Tíreless**[1] (ಗು.); **Tírelessly** (ಕ್ರಿ. ವಿ.); **Tíresome** (ಗು.) ಬಳಲಿಸುವ, ದಣಿಸುವ, ಆಯಾಸದ; ಶ್ರಮದ; ಬೇಸರದ; ಫಜೀತಿಯ (How t.!—I have left my watch behind ಏನು ಫಜೀತಿ! ನನ್ನ ಗಡಿಯಾರವನ್ನು ಹಿಂದೆ ಬಿಟ್ಟುಬಂದೆ). **Tíresomely** (ಕ್ರಿ. ವಿ.); **Tíresomeness** (ನಾ.)

Tire[2], **Tyre** ಟೈ(ಅ)ರ್ (ನಾ., ಕ್ರಿ. ಸಕ.) (ಚಕ್ರದ ಹೊರಸುತ್ತಿನಲ್ಲಿ ಬಿಗಿಗಾಗಿ ಹಾಕಿರುವ, ಲೋಹ, ರಬ್ಬರು, ಮೊ. ಗಳ) ಪಟ್ಟಿ, ಪಟ್ಟೆ [Pneumatic t. (Pneumatic ನೋಡಿ)]. (ಕ್ರಿ.) ಪಟ್ಟಿ, ಪಟ್ಟೆ, —ಹಾಕು. (-)**tired** (ಗು.); **Tíreless**[2] (ಗು.)

Tire[3] ಟೈ(ಅ)ರ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) ತಲೆಯುಡಿಗೆ, ಉಷ್ಣೀಷ; ಉಡಿಗೆ, ಉಡುಪು. (ಕ್ರಿ.) ಉಡುಪು—ಹಾಕಿಕೊ, ತೊಡು; ಅಲಂಕಾರಮಾಡು (She tired her head). **Tíre-woman** (ನಾ., ಸ್ತ್ರೀ.) (ಪ್ರಾಚೀ. ಪ್ರ.) ಉಡಿಗೆ ತೊಡಿಗೆಗಳಿಂದ ಅಲಂಕಾರಮಾಡಲು ನೇಮಕವಾದವಳು: ಪ್ರಸಾಧಕಿ; ಅಲಂಕಾರಗಿತ್ತಿ.

Tíresome. **Tire**[1] ನೋಡಿ.

Tíro, Týro ಟೈ(ಅ)ರೊ (ನಾ; ಬ.-ವ. -os, -oes —ರೋಸ್) ಹೊಸಬು, ಆರಂಭಿಗ, ನವ ಶಿಷ್ಯ. **Tirocínium** ಟೈ(ಟಿ)ರೊಸಿನಿಯಂ (ನಾ.) ಉಮೇದುವಾರಿಕೆ, ಅಭ್ಯಾಸಿ ದಶೆ; (ಒಂದು ಕಲೆಯ) ಮೂಲ ಪಾಠ, ಬಾಲಶಿಕ್ಷೆ.

'tis ಟಿಸ್ =It is (ಎಂಬುದರ ಸಂಕ್ಷಿಪ್ತ)

Tisáne (F) ಟಿಸ್ಯಾನ್ (ನಾ.) =Ptisan.

Tíssue ಟಿಸ್ಯು(ಷ್ಯು, ಷೂ) (ನಾ.) ನಯ ನೆಯ್ಗೆ(ಯ ಬಟ್ಟೆ), ನವುರು ಬಟ್ಟೆ; (ಜೀ. ವಿ.) ಅಂಗಾಂಶ, ಅಂಗಸತ್ತ್ವ; ಜೀವಕೋಶಗಳಿಂದಲೂ ಜೀವದ್ರವ್ಯದಿಂದಲೂ ಕೂಡಿದ ಅಂಗಕಟ್ಟು (Adipose, connective, muscular, nervous, t. ಮೇದಸ್ಸಿನ, ಸಂಯೋಜಕ, ಸ್ನಾಯು, ನರ, —ಅಂಗಾಂಶ, ಸತ್ತ್ವ); (ರೂಪ.) (ಸುಳ್ಳು, ಅಪರಾಧ, ಮೊ. ಗಳ) ಹೆಣಿಗೆ, ಜಾಲ, ಪರಂಪರೆ, ತಂಡ (*Of* ಉಪ. ದೊಡನೆ) (T. of lies ಸುಳ್ಳಿನ ಕಂತೆ); (ನಾಜೂಕಾದ ಪದಾರ್ಥಗಳನ್ನು ಸುತ್ತಿಡುವುದಕ್ಕೆ, ಪುಸ್ತಕದ ಚಿತ್ರಕ್ಕೆ ರಕ್ಷಕವಾಗಿ, ಉಪಯೋಗಿಸುವ) ನವುರು, ಜಲ್ಲಿ, ಪೊರೆ, —ಕಾಗದ (=T.-paper). (-)**tissued** (ಗು.)

Tit[1] ಟಿಟ್ (ನಾ.) ಹಲವು ಬಗೆಯ ಸಣ್ಣ ಹಕ್ಕಿ (Titlark, Titling[1], Titmouse ಇದರ ಪ್ರಭೇದಗಳು); (ಪ್ರಾಚೀ. ಪ್ರ.) ಸಣ್ಣ, ಬಡಕಲು, —ಕುದುರೆ; ಮಗು; (ದಿಟ್ಟ) ಹುಡುಗಿ.

Tit[2] ಟಿಟ್ (ನಾ.) T. for tat ಮುಯ್ಯಿಗೆ ಮುಯ್ಯಿ.

Títan ಟೈಟನ್ (ನಾ.) (ಗ್ರೀಕ್ ಪುರಾಣ) ಭೂದೇವಿಗೂ ಆಕಾಶ ದೇವನಿಗೂ ಹುಟ್ಟಿದ (ದೈತ್ಯವರ್ಗದ) ಮಕ್ಕಳಲ್ಲೊಬ್ಬ (ನಮ್ಮಲ್ಲಿ ದೈತ್ಯ, ದಾನವ, ರಾಕ್ಷಸ, ಮೊ. ರು ಇದ್ದಂತೆ): ಟೈಟನ್; ಸೂರ್ಯದೇವತೆ; [The weary T. (ಬ್ರಿಟಿಷ್ ಅಥವಾ ಇತರ) ಭಾರಿ ಚಕ್ರಾಧಿಪತ್ಯ]. ಅತಿ ಮಾನುಷ ಗಾತ್ರ, ಶಕ್ತಿ, ಅಥವಾ ಬುದ್ಧಿ, ಮೊ. ನ್ನುಳ್ಳ ವ್ಯಕ್ತಿ: ಪ್ರಚಂಡ; ರಾಕ್ಷಸವ್ಯಕ್ತಿ (ಅಮಾತ್ಯರಾಕ್ಷಸ ಹೋಲಿಸಿ). ಟೈಟೇನಿಯಂ ಲೋಹ. **Titanésque** (ಗು.) ಟೈಟನಿನಂಥ. **Títaness** (ನಾ., ಸ್ತ್ರೀ.) ಪ್ರಚಂಡ, ರಾಕ್ಷಸ, —ಸ್ತ್ರೀ. **Titánic** ಟೈಟ್ಯಾ— (ಗು.)

Titánium ಟೈಟೇನಿಯಂ (ನಾ.) ಒಂದು ಕಪ್ಪು ಬೂದು ಲೋಹಧಾತು: ಟೈಟೇನಿಯಂ. **Títanate** (ನಾ.) ಟೈಟ್ಯಾನಿಕ್ ಆಮ್ಲದ ಲವಣ.

Títbít ಟಿಟ್‌ಬಿಟ್ (ನಾ.) ರುಚಿ ತಿಂಡಿ, ರಸಕವಳ; (ರೂಪ.) ಸ್ವಾರಸ್ಯದ ಚುಟುಕೆ; ತುಣುಕು ಮಿಣುಕು

Tithe ಟೈದ್ (ನಾ., ಕ್ರಿ. ಸಕ.) ದಶಾಂಶ ತೆರಿಗೆ (ಮು., ಪದಾರ್ಥರೂಪದಲ್ಲಿ ಕೊಡುವಂಥದು); (ಅನೇಕ ವೇಳೆ ಬ. ವ. ದಲ್ಲಿ) ಕ್ರೈಸ್ತ ಮಠಗಳ ಮತ್ತು ಪಾದ್ರಿಗಳ ಪೋಷಣಾರ್ಥವಾಗಿ ತೆಗೆದುಕೊಳ್ಳುವ ಜಮೀನಿನ ವರ್ಷಾದಾಯದ ಹತ್ತನೆಯೊಂದು ಭಾಗ: ದಶಾಂಶ [Predial tithes ಭೂಮ್ಯುತ್ಪನ್ನದ ದಶಾಂಶ. Personal tithes ಕಸಬಿನ ಉತ್ಪನ್ನಗಳ ದಶಾಂಶ; ಉದ್ಯಮೋತ್ಪನ್ನದ ದಶಾಂಶ. Mixed tithes (ಭೂಮ್ಯುತ್ಪನ್ನದಿಂದ ಬೆಳೆಯುವ) ಹಸು, ಹಂದಿ, ಕುರಿ, ಮೊ. ಗಳ ದಶಾಂಶ: ಮಿಶ್ರ ದಶಾಂಶ]; [T. commissioners ದಶಾಂಶ ತೆರಿಗೆ ಮಂಡಲಿಯವರು. T.-pig (ದಶಾಂಶ ತೆರಿಗೆಯಾಗಿ ಕೊಟ್ಟುಬಿಡುವ) ಹತ್ತನೆಯ ಹಂದಿ, ದಶಾಂಶದ ಹಂದಿ]; (ಅಲಂ.) ಹತ್ತನೆಯೊಂದು ಭಾಗ, ದಶಾಂಶ (Not a t. of ಹತ್ತರಲ್ಲೊಂದು ಪಾಲಿಲ್ಲ). (ಕ್ರಿ.) ದಶಾಂಶ (ತೆರಿಗೆ) —ಹಾಕು, ಎತ್ತು, ವಿಧಿಸು. **Títhable** (ಗು.); **Títhing** (ನಾ.) ದಶಾಂಶ (ತೆರಿಗೆ) ಎತ್ತುವುದು; (ಚರಿತ್ರೆ) ಹತ್ತಿರ ಹತ್ತಿರ, ಒಂದು ಕೊಪ್ಪಲಾಗಿ, ವಾಸಮಾಡುವ ಪ್ರತಿಯೊಬ್ಬರ ಶಾಂತ ವರ್ತನೆಗೂ ಪರಸ್ಪರ ಹೊಣೆ ಹೊತ್ತ, ಹತ್ತು ಮಂದಿ ಗೃಹಸ್ಥರು: ಹತ್ತರ ಕೊಪ್ಪಲು.

Títillate ಟಿಟಿಲೇಟ್ (ಕ್ರಿ. ಸಕ.) ಕಚಕುಳಿ, ಚಕ್ಕಳಗುಳಿ, —ಇಡು; ಸ್ವಲ್ಪ ಜುಮ್ಮೆನ್ನಿಸು, ಚುಮುಚುಮು ಎನ್ನಿಸು, ಉದ್ದೀಪನಮಾಡು, (ಬಾಯಲ್ಲಿ) ನೀರೂರಿಸು. **Titillátion** (ನಾ.)

Tít(t)ivate ಟಿಟಿವೇಟ್ (ಕ್ರಿ.) (ಬಳ. ಮಾ.) ಸಿಂಗಾರ, ಸೊಗಸು, —ಮಾಡು, ಮಾಡಿಕೊ.

Títlark ಟಿಟ್ಲಾರ್ಕ್ (ನಾ.). **Tit**[1] ನೋಡಿ.

Títle ಟೈಟ್‌ಲ್ (ನಾ.) (ಅಧ್ಯಾಯ, ಕವನ, ಮೊ. ಗಳ) ಮೇಲಗಡೆ ಕೊಟ್ಟಿರುವ ಹೆಸರು, ನಾಮ; ಶಿರೋನಾಮ; (ಪುಸ್ತಕದ) ಮುಖಪತ್ರದಲ್ಲಿಯ ವಿಷಯ, ಮುಖಲೇಖ; (ದಸ್ತಾವೇಜು, ನಿಬಂಧನೆ, ಮೊ. ಗಳ ಮೇಲಗಡೆ ಹಾಕಿರುವ) ಶಿರೋನಾಮ, ಲೇಖ; ಅಧಿಕಾರನಾಮ, ಪದವಿ, ಪ್ರಶಸ್ತಿ, ಬಿರುದು [ಉದಾ., (ಅಧಿಕಾರ ಸೂಚಕ) King, Mayor; (ಶ್ರೀಮಂತಿಕೆಯ ಸೂಚಕ) Duke, Viscount; (ಗೌರವ ಸೂಚಕ) Baronet, Knight; (ಪ್ರಶಸ್ತಿ ಸೂಚಕ) D.D., M.A.; (ಸಂಬೋಧನೆಯಲ್ಲಿ, ಹೆಸರಿನ ಹಿಂದೆ) Lord, Sir, Professor; His, Her, Your, Majesty]; (ನ್ಯಾ. ಶಾ.) (ಆಸ್ತಿ, ಮೊ. ಗಳಿಗೆ) ಹಕ್ಕು(ದಾರಿ), ಅಧಿಕಾರ; ಹಕ್ಕು ಸ್ಥಾಪಿಸುವ ಸಂಗತಿ; ಹಕ್ಕುಪತ್ರ, ಪಟ್ಟೆ, ಖಾತೆ (=**T.-deed**); (ಸೇವೆ, ಗೌರವ, ಮೊ. ಗಳಿಗೆ) ನ್ಯಾಯವಾದ ಅಥವಾ ಅಂಗೀಕಾರವಾದ ಹಕ್ಕು (*To* ಉಪ. ದೊಡನೆ); (ಕ್ಯಾರಟ್‌ಗಳಲ್ಲಿ ಸೂಚಿಸುವ) ಚಿನ್ನದ ಬಣ್ಣ, ಚೊಕ್ಕತನ; ಪಾದ್ರಿಯಾಗಿ ದೀಕ್ಷೆ ಕೊಡಬೇಕಾದರೆ ಅಭ್ಯರ್ಥಿ ತೋರಿಸಿಕೊಡಬೇಕಾದ ತನಗಿರುವ ನಿರ್ದಿಷ್ಟ ಕಾರ್ಯಕ್ಷೇತ್ರ ಮತ್ತು ಉಪಪತ್ತಿ: ಪಾದ್ರಿತನಕ್ಕೆ ಹಕ್ಕು. (ರೋಮಿನಲ್ಲಿ) ಪ್ಯಾರಿಷ್ ಚರ್ಚು (ಪ್ರಾಂತ). **T.-page** (ಗ್ರಂಥದ ಹೆಸರು, ಗ್ರಂಥ ಕರ್ತನ ಹೆಸರು, ಪ್ರಕಾಶಕನ ಹೆಸರು, ಮೊ. ನ್ನು ತಿಳಿಸುವ) ಮುಖಪತ್ರ. **T.-role** ನಾಟಕಕ್ಕೆ ಹೆಸರು ಬಂದಿರುವ ಪಾತ್ರ: ಅಭಿಧಾನ ಪಾತ್ರ, ಪ್ರಧಾನ ಪಾತ್ರ, (ಉದಾ., ರತ್ನಾವಳಿ, ಚಾರುದತ್ತ). **Títleless** (ಗು.); **Títled** (ಗು.) ಶ್ರೀಮಂತ ಪ್ರಶಸ್ತಿಯುಳ್ಳ; ಬಿರುದಾಂಕಿತ. **Títling**[2] (ನಾ.) (ಪುಸ್ತಕದ ಬೆನ್ನ ಮೇಲೆ ಚಿನ್ನದ ರೇಕು, ಮೊ. ಗಳಿಂದ) ಹೆಸರೊತ್ತುವುದು, ನಾಮಾಂಕನ. **Títular** ಟಿಟ್ಯುಲರ್ (ಗು., ನಾ.) ಹಕ್ಕುದಾರಿಯ (T. possessions); ಹೆಸರಿಗೆ ಮಾತ್ರದ, ನಾಮ ಮಾತ್ರದ, ನಾಮಕಾವಾಸ್ತೆಯ (T. sovereign); [(ರೋ. ಕ್ಯಾ.) T. bishop (ಮು., ಮಹಮ್ಮದೀಯ ದೇಶಗಳಲ್ಲಿ) ಹಿಂದೆ ಒಂದಾನೊಂದು ಕಾಲದಲ್ಲಿದ್ದ ಕ್ರೈಸ್ತ ಮಠಾಧಿಪತ್ಯದಿಂದ ಬಿಷಪ್ ಹೆಸರು ಪಡೆದವನು: ನಾಮ ಮಾತ್ರದ ಬಿಷಪ್. T. (saint) ಚರ್ಚಿನ ರಕ್ಷಕ ಸಂತ]. (ನಾ.) (ಕರ್ತವ್ಯಗಳೊಂದೂ ಇಲ್ಲದ) ನಾಮ ಮಾತ್ರದ—ಅಧಿಕಾರಿ, ಮಠಮಾನ್ಯದವನು. **Títularly** (ಕ್ರಿ. ವಿ.)

Títling[1] ಟಿಟ್ಲಿಂಗ್ (ನಾ.). **Tit**[1] ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Títling[2] ಟೈಟ್ಲಿಂಗ್ (ನಾ.). **Title** ನೋಡಿ.

Títmouse ಟಿಟ್‌ಮೌಸ್ (ನಾ.; ಬ. ವ. -mice) **Tit**[1] ನೋಡಿ.

Títrate ಟೈಟ್ರೇಟ್ (ಕ್ರಿ. ಸಕ.) (ರ. ವಿ.) ಒಂದು ದ್ರಾವಣದ ತೀಕ್ಷ್ಣತೆಯನ್ನಾಗಲಿ, ದ್ರಾವಣದಲ್ಲಿಯ ವಸ್ತುವಿನ ಸಾರವನ್ನಾಗಲಿ ಆ ದ್ರಾವಣವನ್ನು ಗೊತ್ತಾದ ಅಳತೆಯಷ್ಟು ತೆಗೆದುಕೊಂಡು ನಿಯತ ಪ್ರಮಾಣದ ಮತ್ತೊಂದು ದ್ರಾವಣದ ಪ್ರತಿಕ್ರಿಯೆಗೆ ಒಳಪಡಿಸುವುದರ ಮೂಲಕ ಗೊತ್ತುಮಾಡು: ಪ್ರಮಾಣಮಾಪನ ಮಾಡು. **Titrátion** (ನಾ.) ಪ್ರಮಾಣಮಾಪನ; ಗಾತ್ರ ವಿಶ್ಲೇಷಣ.

Títter ಟಿಟರ್ (ಕ್ರಿ. ಅಕ., ನಾ.) ಉಕ್ಕಿ ಬರುವ ನಗುವನ್ನು ಅದುಮಿ ನಗು; ಚಿರಿಚು. **Títterer** (ನಾ.)

Títtle ಟಿಟ್‌ಲ್ (ನಾ.) ಕಣ, ಲವ, ಲೇಶ (Not one jot *or* t. ಲವಲೇಶವೂ ಇಲ್ಲ)

Títtlebat ಟಿಟಲ್‌ಬ್ಯಾಟ್ (ನಾ.) =Stickleback (ಎಂಬುದರ ಅಪಭ್ರಂಶ)

Títtle-tattle ಟಿಟಲ್‌ಟ್ಯಾಟ್‌ಲ್ (ನಾ., ಕ್ರಿ. ಅಕ.) ಕಾಡುಹರಟೆ (ಹೊಡೆ); ಹರಟೆ, ಸುದ್ದಿ, —ಮಲ್ಲ, ಮಲ್ಲಿ.

Títtup ಟಿಟಪ್ (ಕ್ರಿ. ಅಕ., ನಾ.) ಸಡಗರದಿಂದ, ಸಂಭ್ರಮದಿಂದ, ಗೆಲುವಿನಿಂದ, —ತಿರುಗಾಡು, ಓಡಾಡು; ಕುಲುಕು ನಡಗೆಯಲ್ಲಿ —ಹೋಗು, ಓಡಾಡು; ಜಿಗಿದಾಡು, ನೆಗೆದಾಡು; (ದೋಣಿ) ಕುಲುಕಾಡು; (ನಾವೆ, ಮೊ.; ಅಸಂ.) ಕುಡಿತ ಕೊಡಿಸುವವರನ್ನು ನಿರ್ಧರಿಸಲು ನಾಣ್ಯ ಹಾರಿಸು, ಚಿಮ್ಮಿನೋಡು. (ನಾ.) ಜಿಗಿದಾಟ, ನೆಗೆದಾಟ, ಸಡಗರದ ಓಡಾಟ. **Títtup(p)y** (ಗು.)

Titubátion ಟಿಟ್ಯುಬೇಷನ್ (ನಾ.) ಗಿರಕಿ ನಡಗೆ, ಓಲಾಟ, ತೂರಾಟ. (ವೈ. ಶಾ.) (ಮು., ನರಗಳ ಉದ್ರೇಕದಿಂದ ಉಂಟಾದ) ಚಡಪಡಿಕೆ.

Títular. **Title** ನೋಡಿ.

Títyre-tu ಟಿಟಿರೆಟ್ಯು, ಟಿಟಿರಿಟ್ಯು (ನಾ.) (ಎರಡನೆಯ ಚಾರ್ಲ್ಸ್ ದೊರೆಯ ಕಾಲದಲ್ಲಿಯ) ಲಂಡನ್ನಿನ ಶ್ರೀಮಂತ ಪುಂಡ(ರ ಗುಂಪಿನವನು)

Tízzy ಟಿಸಿ (ನಾ.) (ಅಸಂ.) ಆರು ಪೆನಿ ನಾಣ್ಯ.

Tmésis ಟ್ಮೀಸಿಸ್ (ನಾ.) (ವ್ಯಾ.) ಒಂದು ಸಮಾಸಪದದ ಭಾಗಗಳ ನಡುವೆ ಬೇರೆ ಪದ(ಗಳು) ಬಂದು ಆ ಸಮಾಸಪದ ಒಡೆಯುವುದು: ಸಮಾಸ ವಿಶ್ಲೇಷ (ಉದಾ., Whatsoever place ಎನ್ನುವುದಕ್ಕೆ What place soever ಎಂದು ಹೇಳುವುದು)

TNT ಟೀಎನ್‌ಟೀ (ಸಂಕ್ಷಿಪ್ತ) =Trinitrotoluene, -toluol.

To ಟು, ಟೂ, ಟ (ಉಪ., ಕ್ರಿ. ವಿ.) (ಸ್ಥಳ, ವ್ಯಕ್ತಿ, ವಸ್ತು, ಮೊ. ಗಳ) ಬಳಿಗೆ, ಹತ್ತಿರ(ಕ್ಕೆ), ಕಡೆ(ಗೆ), ದಿಕ್ಕಿಗೆ, (ಅಭಿ)ಮುಖವಾಗಿ; —ಗೆ, —ಕ್ಕೆ, —ಕ್ಕಾಗಿ; —ಅಲು, —ಅಲಿಕ್ಕೆ, —ಉದು, —ಉವುದಕ್ಕೆ; ವರೆಗೆ, ವರೆಗೂ, ತನಕ [Was walking over to Mysore ಮೈಸೂರ ಕಡೆಗೆ (ನಡೆದು)ಹೋಗುತ್ತಿದ್ದನು. On his way to station ನಿಲ್ದಾಣಕ್ಕೆ ಹೋಗುತ್ತಿದ್ದಾಗ (ದಾರಿಯಲ್ಲಿ). Throw it to me ನನ್ನ ಕಡೆ(ಗೆ) ಎಸೆ. Was committed to the flames ಬೆಂಕಿಯ ಪಾಲಾಯಿತು. House looks to the south ಮನೆ ದಕ್ಷಿಣಾಭಿಮುಖವಾಗಿದೆ. Held it to the light ಬೆಳಕಿಗೆ ಹಿಡಿದನು. To arms! ತೆಗೋ ಆಯುಧ! ತೊಡು ಶಸ್ತ್ರ! Hand to hand ಕೈಯಿಂದ ಕೈಗೆ; ಕೈ ಕೈ(ಗೆ). Told him to his face ಅವನ ಎದುರೆದುರಿಗೇ, ಮುಖಕ್ಕೇ,—ಹೇಳಿದೆನು. Fell to work ಕೆಲಸಕ್ಕೆ ತೊಡಗಿದನು. Tends to indolence ಸೋಮಾರಿತನಕ್ಕೆ ಇಟ್ಟುಕೊಳ್ಳುತ್ತದೆ. Slow to anger ಬೇಗ ಸಿಟ್ಟುಗೇಳದ. Born to a great fortune ಅಧಿಕ ಸಂಪತ್ತಿಗೆ ಉತ್ತರಾಧಿಕಾರಿಯಾಗಿ ಹುಟ್ಟಿ; ಲಕ್ಷ್ಮೀಪುತ್ರನಾಗಿ ಹುಟ್ಟಿ. All to no purpose ಯಾವ ಕೆಲಸಕ್ಕೂ ಬಾರದೆ, ಯಾವ ಪ್ರಯೋಜನಕ್ಕೂ ಬಾರದೆ, ಎಲ್ಲವೂ ವ್ಯರ್ಥ(ವಾಗಿ). To his shame be it said ಅವನ ನಾಚಿಕೆಗೆ ಈ ಮಾತನ್ನು ಹೇಳಬೇಕಾಗಿದೆ. True to the end ಕೊನೆಯವರೆಗೂ ನಿಷ್ಠೆಯಿಂದ. Cut him to the heart ಮನಮುಟ್ಟುವಂತೆ, ಹೃದಯದವರೆಗೂ, —ಭೇದಿಸಿತು. A Home-ruler to the core ಸರ್ವಾತ್ಮನಾ ಸ್ವರಾಜ್ಯವಾದಿ. Fought to the last gasp ಕೊನೆಯುಸಿರತನಕ ಹೋರಾಡಿದನು. Suits him to a T. ಅವನಿಗೆ ಚಚ್ಚೌಕವಾಗಿ, ಅಚ್ಚುಕಟ್ಟಾಗಿ, ಹೊಂದುತ್ತದೆ. Acted his part to perfection ತನ್ನ ಪಾತ್ರವನ್ನು ಅತ್ಯಂತ ಸಮರ್ಪಕವಾಗಿ, ಪರಿಪೂರ್ಣವಾಗಿ, ನಿರ್ವಹಿಸಿದನು. Might run to £5 ೫ ಪೌಂಡಿನವರೆಗೆ ಹೋಗಬಹುದು. Drank himself to death ಕುಡಿದು ಕುಡಿದು ಸತ್ತುಹೋದನು. 3 is to 4 as 6 is to 8 ೬ : ೮ರ ಪ್ರಮಾಣದಂತೆಯೆ ೩ : ೪ರ ಪ್ರಮಾಣ. Ten to one he will find it out ಹತ್ತು ಪಾಲು ಅವನು ಅದನ್ನು ಕಂಡುಹಿಡಿದುಬಿಡುತ್ತಾನೆ. Equal to the occasion ಸಂದರ್ಭಕ್ಕೆ ಸಮರ್ಥವಾದ. Made to order ಹೇಳಿ ಮಾಡಿಸಿದ; ಕೋರಿಕೆಗೆ ತಕ್ಕಂತೆ ಮಾಡಿದ. Not to the point ಪ್ರಸಕ್ತ ವಿಷಯಕ್ಕೆ—ಸಂಬಂಧವಿಲ್ಲದ, ಹೊಂದದ; ಅಪ್ರಸ್ತುತ, ಅಪ್ರಸಕ್ತ. True to life ಜೀವನಕ್ಕೆ ತದ್ವತ್ತಾದ. Will speak to that question later ಆ ಪ್ರಶ್ನೆಯನ್ನು ಕುರಿತು ಮುಂದೆ ಮಾತನಾಡುತ್ತೇನೆ. Sang to his guitar ಗಿಟಾರು ಬಾರಿಸಿಕೊಂಡು ಹಾಡಿದನು. Corresponding to ಅನುಸಾರವಾಗಿ, ತಕ್ಕಂತೆ. Compared to (—ಕ್ಕೆ) ಹೋಲಿಸಿದರೆ. Inferior, superior, to —ಕ್ಕಿಂತ ಕೀಳಾಗಿ, ಮೇಲಾಗಿ. Cannot do it to his liking ಅವನ ಇಷ್ಟಕ್ಕೆ ಅನುಸಾರವಾಗಿ, ಮನಸ್ಸಿಗೆ ರುಚಿಸುವಂತೆ, —ಮಾಡಲಾರೆನು. (ಪ್ರಾಚೀ. ಪ್ರ.) Took her to wife ಆಕೆಯನ್ನು ಹೆಂಡತಿಯಾಗಿ ಸ್ವೀಕರಿಸಿದನು, ಮದುವೆ ಮಾಡಿಕೊಂಡನು. Has a duke to his father-in-law ಅವನ ಮಾವ(ತನಕ್ಕೆ) ಒಬ್ಬ ಡ್ಯೂಕ್ ಇದ್ದಾನೆ. Lend your knife to him, to John (ಅಥವಾ: Lend him, John, your knife; ಆದರೆ, Lend to him, to John, your knife ಎಂದು ಹೇಳಬಾರದು) ಅವನಿಗೆ, ಜಾನಿಗೆ, ನಿನ್ನ ಚಾಕು ಕೊಡು. Seems to me absurd ಅವಿವೇಕವೆಂದು ನನಗೆ ತೋರುತ್ತದೆ. Pleasant to the taste ನಾಲಗೆಗೆ ರುಚಿಯಾಗಿ, ಹಿತವಾಗಿ. Unkind to him ಅವನ ವಿಷಯದಲ್ಲಿ, ಅವನಮೇಲೆ,—ನಿರ್ದಯನಾಗಿ. Has been a good father to them ಅವರ ವಿಷಯದಲ್ಲಿ, ಅವರಿಗೆ,—ಒಳ್ಳೆಯ ತಂದೆಯಾಗಿದ್ದಾನೆ, ತಂದೆಯಾಗಿ ನಡೆದುಕೊಂಡಿದ್ದಾನೆ. What's that to you? ಅದನ್ನು ಕಟ್ಟಿಕೊಂಡು ನಿನಗೇನು? ಅದಕ್ಕೂ ನಿನಗೂ ಏನು ಸಂಬಂಧ? Here's to you ನಿನಗಾಗಿ ಸ್ವಸ್ತಿಪಾನ (ಮಾಡುತ್ತೇನೆ). Broken in to the saddle ಜೀನಿಗೆ ಪಳಗಿಸಿ. Accustomed to it ಅದಕ್ಕೆ ಒಗ್ಗಿ(ಹೋಗಿ). Next door to us ನಮ್ಮ ಮನೆಯ, ನಮ್ಮ ಮನೆಗೆ, —ಮಗ್ಗುಲು, ಪಕ್ಕ. Ready to his hand ಅವನ ಕೈಗೆ ಸಿದ್ಧವಾಗಿ. He has not a shilling to his name ಅವನಿಗೆ ತನ್ನ ಹೆಸರಿನಲ್ಲಿ ಒಂದು ಷಿಲಿಂಗೂ ಇಲ್ಲ. (ಪ್ರಾಚೀ. ಪ್ರ.) Takes no wine to his dinner ಅವನು ಭೋಜನದಲ್ಲಿ ಮದ್ಯ ಕುಡಿಯುವುದಿಲ್ಲ. There is a moral to it ಅದರಿಂದ ಒಂದು ನೀತಿ ಹೊರಡುತ್ತದೆ. Would to God that —ದೈವಚಿತ್ತವಾಗಿದ್ದರೆ; ದೇವರ ದಯದಿಂದ ಹಾಗಾಗಿದ್ದರೆ, ಹಾಗಾಗುವುದಾದರೆ. I fail to understand ನನಗೆ ತಿಳಿಯುವುದಿಲ್ಲ, ನಾನು ಅರ್ಥ ಮಾಡಿಕೊಳ್ಳಲಾರೆ. Does it to annoy ರೇಗಿಸುವುದಕ್ಕಾಗಿ, ರೇಗಿಸಬೇಕೆಂದು, —ಮಾಡುತ್ತಾನೆ. It is useless to rebel ಪ್ರತಿಭಟಿಸುವುದು ವ್ಯರ್ಥ. Was seen to fall ಅವನು ಬಿದ್ದದ್ದು ಕಂಡಿತು. Was pleased to be angry ಕೋಪಕ್ಕೆ ಮನಸ್ಸು ಮಾಡಿದನು; ರೇಗಬೇಕೆಂದು ಚಿತ್ತಕ್ಕೆ ಬಂತು. Was about to protest ಪ್ರತಿಭಟಿಸುವುದರಲ್ಲಿ, ಪ್ರತಿಭಟಿಸಬೇಕೆಂದು,—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದ್ದೆ. (ಪ್ರಾಚೀ. ಪ್ರ.) He is much to seek in that respect ಆ ವಿಷಯದಲ್ಲಿ ಅವನು ಇನ್ನೂ ತುಂಬ ಕಲಿಯಬೇಕಾಗಿದೆ, ಅವನಿಗೆ ತಿಳಿವಳಿಕೆ ಸಾಲದು. (ಪ್ರಾಚೀ. ಪ್ರ.) What went ye out for to see? ಏನು ನೋಡುವುದಕ್ಕಾಗಿ (ಹೊರಗೆ) ಹೋದೆ? That's all there is to it ಅದರ ವಿಷಯ ಅಷ್ಟೆ (ಹೆಚ್ಚಿಗೆ ಏನೂ ಇಲ್ಲ)]. (ಕ್ರಿ. ವಿ.) Bring, come, fall, go, heave, lie², to (ಆಯಾ ಪದ ನೋಡಿ). The door is to ಕದ—ಸ್ವಲ್ಪ ತೆರೆದಿದೆ, ಪೂರ್ತಿ ಮುಚ್ಚಿಲ್ಲ. To & fro (Fro ನೋಡಿ)

Toad ಟೋಡ್ (ನಾ.) (ಸಂತಾನಾಭಿವೃದ್ಧಿಕಾಲದ ಹೊರತು ಮಿಕ್ಕಲ್ಲಿ ಸ್ಥಲವಾಸಿಯಾದ, ಒಡ್ಡೊಡ್ಡಾದ ಗಂಟು ಗಂಟು ಒಡಲನ) ಕಪ್ಪೆ (ಜಾತಿಯ ಪ್ರಾಣಿ); ಕಾಡುಕಪ್ಪೆ; ನೆಲಗಪ್ಪೆ. ಅಸಹ್ಯ(ಕರ) ವ್ಯಕ್ತಿ, ಜುಗುಪ್ಸೆ ಹುಟ್ಟಿಸುವವನು. T. in a (*or* the) hole ಕಣಕ ದಲ್ಲಿಟ್ಟು ಅಟ್ಟ ಗೋಮಾಂಸ. **T.-eater** ಹೊಗಳುಭಟ್ಟ, ಭಟ್ಟಂಗಿ, ಹಲ್ಲು ಕಿರಿಯುವ ಪರೋಪಜೀವಿ [**T.-eating** (ಗು., ನಾ.)]; **T.-flax** (ಕಿತ್ತಿಳೆ ಬಣ್ಣದ ಚುಕ್ಕೆಗಳುಳ್ಳ ಹಳದಿ ಹೂವು ಬಿಡುವ) ಒಂದು ಬಗೆಯ ಸಸ್ಯ. **T.-spit** = Cuckoo-spit (Cuckoo ನೋಡಿ). **Toádstone** ಟೋಡ್ ಪ್ರಾಣಿಯ ಆಕಾರವುಳ್ಳ, ಹಿಂದೆ ತಾಯಿತಿ, ಮೊ. ಗಳಿಗಾಗಿ ಉಪಯೋಗಿಸುತ್ತಿದ್ದ, ಒಂದು ಬಗೆಯ (ಪ್ರಶಸ್ತ)ಶಿಲೆ: ಕಪ್ಪೆಕಲ್ಲು, ಮಂಡೂಕ ಶಿಲೆ (ಕಾಡುಕಪ್ಪೆಯ ತಲೆಯಲ್ಲಿ ಹುಟ್ಟುವುದೆಂದು ನಂಬಿಕೆ ಯಿತ್ತು). **Toádish** (ಗು.); **Toády** (ನಾ., ಕ್ರಿ. ಸಕ.) = Toad-eater. (ಕ್ರಿ.) ಅತಿದೈನ್ಯದಿಂದ ಮುಖಸ್ತುತಿಮಾಡು, ಹೊಗಳು; ಭಟ್ಟಂಗಿ ಕೆಲಸಮಾಡು. **Toádyish** (ಗು.); **Toádyism** (ನಾ.)

Toast ಟೋಸ್ಟ್ (ನಾ., ಕ್ರಿ.) (ಮು., ಬೆಂಕಿಯಲ್ಲಿ) ಕಂದಿಸಿದ, ಬಾಡಿಸಿದ, ಸುಟ್ಟ, —ರೊಟ್ಟಿ (ಬಿಲ್ಲೆ) [Have one on t. (ಅಸಂ.) ಒಬ್ಬನನ್ನು ತನ್ನ ಹಿಡಿತದೊಳಕ್ಕೆ ತೆಗೆದುಕೊ. As warm as a t. ಹದ ಬಿಸಿಯಾಗಿ; ಪ್ರೀತ್ಯಾದರದಿಂದ. A t. (ಪ್ರಾಚೀ. ಪ್ರ.) ಬಟ್ಟಲು ಮದ್ಯದಲ್ಲಿ ಊರಿಟ್ಟ ರೊಟ್ಟಿಯ ಚೂರು]; ಯಾರ ಆರೋಗ್ಯಭಾಗ್ಯ ಕ್ಕಾಗಿ ಸ್ವಸ್ತಿಪಾನ ಮಾಡುವರೋ ಆ (ಸ್ತ್ರೀ) ವ್ಯಕ್ತಿ; ಸ್ವಸ್ತಿಪಾನ ಕಾಲದಲ್ಲಿ ಹೆಸರಿಸುವ ವಸ್ತು, ಭಾವನೆ, ಮೊ. ವು: ಸ್ವಸ್ತಿಪಾನ—ವ್ಯಕ್ತಿ, ವಿಷಯ [Was a great t. in her day ಆಕೆ ತನ್ನ ದಿನಗಳಲ್ಲಿ ಸ್ವಸ್ತಿಪಾನ ವಿಷಯಳಾದ, ಗೋಷ್ಠಿಗೆ ಇಷ್ಟಳಾದ, —ವ್ಯಕ್ತಿಯಾಗಿದ್ದಳು. **T.-list** (ಸಾರ್ವಜನಿಕ ಭೋಜನಗಳಲ್ಲಿ) ಸ್ವಸ್ತಿಪಾನ (ಭಾಷಣಕಾರರ) ಪಟ್ಟಿ. **T.-master** ಸ್ವಸ್ತಿಪಾನಾಧ್ಯಕ್ಷ]; [**T.-fork** (ರೊಟ್ಟಿ, ಮೊ. ನ್ನು) ಸುಡುವ ಶೂಲಗಂಬಿ, ಅಡುಗಂಬಿ; (ಹಾಸ್ಯ ಪ್ರ.) ಕತ್ತಿ (= **T.-iron**). **T.-rack** ಸುಟ್ಟ ರೊಟ್ಟಿಯ (ಬಿಲ್ಲೆಗಳ) ನಿಲುವು. **T.-water** (ತಂಪು ಪಾನೀಯವಾಗಿ ಉಪಯೋಗಿಸುವ) ರೊಟ್ಟಿ (ಬಿಲ್ಲೆಯನ್ನು ಊರಿಟ್ಟ) ನೀರು; ರೊಟ್ಟಿಯ ರಸ (= T. & water)]. (ಕ್ರಿ.) (ರೊಟ್ಟಿ, ಚೀಸು, ಮಾಂಸ, ಮೊ. ಗಳ ವಿಷಯದಲ್ಲಿ) ಬೆಂಕಿಯಲ್ಲಿ ಸುಡು, ಕಂದು, ಕಂದಿಸು; (ಕಾಲು, ಮೊ. ನ್ನು) ಕಾಯಿಸಿಕೊ, ಬೆಚ್ಚಗೆ ಮಾಡಿಕೊ; ಒಬ್ಬನ ಆರೋಗ್ಯಭಾಗ್ಯ ಕೋರಿ, ಗೌರವಾರ್ಥವಾಗಿ, ಮದ್ಯಪಾನ ಮಾಡು: ಸ್ವಸ್ತಿಪಾನ ಮಾಡು. **Toáster** (ನಾ.); **Toásting** (ನಾ.) (ಕ್ರಿಯಾರ್ಥಗಳಲ್ಲಿ)

Tobácco ಟೊಬ್ಯಾಕೊ (ನಾ.; ಬ. ವ. -os) ಹೊಗೆಸೊಪ್ಪಿನ, ತಂಬಾಕಿನ, —ಗಿಡ (= T.-plant); ಹೊಗೆಸೊಪ್ಪು, ತಂಬಾಕು (ಸಂಕ್ಷಿಪ್ತ: Baccy). **T.-cutter** ತಂಬಾಕು ಕತ್ತರಿ. **T. heart** ತಂಬಾಕಿನ ಅತಿಸೇವನೆಯಿಂದ ಆದ ಹೃದಯ ವಿಕಾರ: ತಂಬಾಕು ಹೃದಯ ವ್ಯಾಧಿ. **T.-pipe** (Pipe ನೋಡಿ). **T.-pouch** ತಂಬಾಕು ಸಂಚಿ; ಹೊಗೆಸೊಪ್ಪಿನ, ಕಡ್ಡಿಪುಡಿಯ, —ಚೀಲ. **T.-stopper** ಚುಂಗಾಣಿಗೆ ಹೊಗೆಸೊಪ್ಪನ್ನು ಗಿಡುಗುವ ಸಲಕರಣೆ: ತಂಬಾಕು ಕೂರಿಗೆ. **Tobácconist** (ನಾ.) ತಂಬಾಕು ವ್ಯಾಪಾರಿ.

Tobóggan ಟೊಬಾಗನ್ (ನಾ., ಕ್ರಿ. ಅಕ.) (ಬೆಟ್ಟದ ಇಳಿಜಾರಿನಲ್ಲಿ ಮು., ಹಿಮದಮೇಲಾಗಲಿ ನೀರ್ಗಲ್ಲಮೇಲಾಗಲಿ ಹೋಗಲು ಉಪಯೋಗಿಸುವ) ನಿಡಿದೂ ಕಿರಿದೂ ಆದ ಜಾರುಬಂಡಿ [T.-chute, -shoot, -slide (ಬೆಟ್ಟದಿಂದ ಕೆಳಕ್ಕೆ ಜಾರುಬಂಡಿಯಲ್ಲಿ ಜಾರಲು ಮಾಡಿರುವ) ಇಳುಕಲು ದಾರಿ(ಗಳಲ್ಲೊಂದು); ಜಾರಿಳುಕಲು]. (ಕ್ರಿ.) ಜಾರುಬಂಡಿಯಲ್ಲಿ—ಹೋಗು, ಜಾರು; (ಬೆಲೆ, ಮೊ. ವು) ಇದ್ದಕ್ಕಿದ್ದಹಾಗೆ ಇಳಿದುಹೋಗು, ಬಿದ್ದುಹೋಗು. **Tobógganer** (ನಾ.); **Tobógganing** (ನಾ.)

Tóby ಟೋಬಿ (ನಾ.) ಮುಮ್ಮೂಲೆಯ ಟೊಪ್ಪಿಗೆಯನ್ನು ಧರಿಸಿದ ಮುದುಕನ ಆಕಾರದ ಹೂಜಿ, ಕೊಳಗಪಾತ್ರೆ (= T. Filipot). T. collar ಕೆಳಮಡಿಚಿನ ನಿರಿಗೆಯುಳ್ಳ ಅಗಲವಾದ ಕೊರಲಪಟ್ಟಿ.

Tóco, -ko ಟೋಕೊ (ನಾ.) (ಅಸಂ.) ಶಿಕ್ಷೆ, ದಂಡನೆ, ಒದೆತ, ಗಲೀತ. (Give him t.; To catch or get t. ಒದೆ, ಗಲೀತ, —ತಿನ್ನು)

Tócsin ಟಾಕ್ಸಿನ್ (ನಾ.) (ಈಗ ಮು., ರೂಪ.) ಅಪಾಯ ಸೂಚನೆ (ಯಾಗಿ ಬಾರಿಸಿದ ಗಂಟೆ); ಅಪಾಯ ಗಂಟೆ.

Tod¹ ಟಾಡ್ (ನಾ.) (ಪ್ರಾಚೀ. ಪ್ರ.) ಪೊದೆ, ಹೊದರು; ಎಲೆಗುಂಪಲು, ತುರುಗಲು. ತುಪ್ಪಟದ ಒಂದು ತೂಕ (ಸಾ., ೨೮ ಪೌಂಡು)

Tod² ಟಾಡ್ (ನಾ.) (ಪ್ರಾಂ. ಪ್ರ.) ನರಿ.

Todaý, To-daý ಟುಡೇ (ಕ್ರಿ. ವಿ., ನಾ.) ಇವೊತ್ತು, ಈ ದಿನ.

Tóddle ಟಾಡ್‌ಲ್ (ಕ್ರಿ., ನಾ.) (ನಡಗೆ ಕಲಿಯುತ್ತಿರುವ ಮಗುವಿನಂತೆ) ತತ್ತರಿಸಿಕೊಂಡು ಸಣ್ಣ ಹೆಜ್ಜೆಯಿಂದ ನಡೆ; ದಟ್ಟಡಿಯಿಡು; ದಟ್ಟಗಾಲು ಹಾಕು; ದಟ್ಟಗಾಲು ಹಾಕಿಕೊಂಡು ಹೋಗು, ನಡೆ (T. one's way); ತಿರುಗಾಡಿಕೊಂಡು, ಕಾಲಾಡಿಸಿಕೊಂಡು,—ಬಾ (*Round, to*, ಮೊ. ಉಪ. ದೊಡನೆ). (ನಾ.) ದಟ್ಟಡಿ, ದಟ್ಟನಡಗೆ; (ಬಳ. ಮಾ.) ದಟ್ಟಡಿಯ ಮಗು. **Tóddler** (ನಾ.)

Tóddy ಟಾಡಿ (ನಾ.) (ಈಚಲು, ತೆಂಗು, ತಾಳೆ, ಮೊ. ಗಳ) ಹೆಂಡ; ಮದ್ಯಸಾರ ಮತ್ತು ಬಿಸಿನೀರುಗಳ ಮಿಶ್ರಣಕ್ಕೆ ಸಿಹಿ ಸೇರಿಸಿ ಮಾಡಿದ ಒಂದು ಪಾನೀಯ: ಮದ್ಯಪಾನೀಯ.

To-dó ಟು(ಟ)ಡೂ (ನಾ.) = Ado.

Toe ಟೋ (ನಾ., ಕ್ರಿ.) ಕಾಲ್ಬೆರಳು; ಕಾಲ್ಬೆರಳುಗಳನ್ನು ಮುಚ್ಚುವ, ಪಾದರಕ್ಷೆ, ಕಾಲುಚೀಲ, ಮೊ. ಗಳ ಭಾಗ: ಕಾಲ್ಬೆರಳ ಭಾಗ; ಗೊರಸಿನ ಮುಂಭಾಗ, ಮುಂಗೊರಸು; ಕುದುರೆ ಜಾರದಂತೆ ಲಾಳದ ಮುಂಭಾಗದ ಕೆಳಗಡೆ ಹಾಕಿರುವ ಕಬ್ಬಿಣದ ತುಂಡು: ಲಾಳದ ಮುನ್‌ತುಂಡು; ಊರೆಗೋಡೆ, ಮೊ. ಗಳ ಬುಡದಲ್ಲಿ ಭದ್ರತೆಗಾಗಿ ಹಾಕಿರುವ ಮುಂಚಾಚು: ಅಡಿಚಾಚು; ಗಾಲ್ಫ್ ದಾಂಡಿನ—ತಲೆಯ ತುದಿ, ಚಾಚು; (ಯಂತ್ರಶಿಲ್ಪ) ಒಂದು ಮೆಟ್ಟಲಲ್ಲಿ ನಿಂತಿರುವ ಲಂಬದಂಡದ ಕೆಳ ತುದಿ; ಆವಿ ಎಂಜಿನಿನ ಕವಾಟ ಎತ್ತಿಗೆಯ ದಂಡದ ತೋಳು; [Ball of t. ಕಾಲ್ಬೆರಳ ತಳಭಾಗದ ಮಾಂಸದ ಚೆಂಡು. Great, little, t. ಕಾಲಿನ ಹೆಬ್ಬೆರಳು, ಕಿರುಬೆರಳು. Tread on person's toes ಒಬ್ಬನ ಮನಸ್ಸು ನೋಯಿಸು. The light fantastic t. (ಹಾಸ್ಯ ಪ್ರ.) ಕುಣಿತ, ನರ್ತನ. Turn up one's toes (ಅಸಂ.) ಸಾಯಿ. From top to t. ತಲೆಯಿಂದ ಅಡಿಯವರೆಗೆ, ಆದ್ಯಂತ. Heel-&-t. walking (Walk ನೋಡಿ). **T.-cap** ಪಾದರಕ್ಷೆಯಲ್ಲಿ ಮುನ್ನಡಿಯನ್ನು ಮುಚ್ಚುವ ಹೊರ ಮುಚ್ಚಳ: ಮುನ್ನಡಿ, ಬೆರಳ, —ಮುಚ್ಚಿಗೆ. **T.-drop** (ಸ್ನಾಯುಗಳ ಪಾರ್ಶ್ವವಾಯುವಿನಿಂದ) ಕಾಲ್ಬೆರಳುಗಳನ್ನು ಎತ್ತಲಾರದೆ ಹೋಗುವುದು: ಕಾಲ್ಬೆರಳ ಜೋಲು. **T.-nail** (ಮನುಷ್ಯರ) ಕಾಲುಗುರು; (ಹಲಗೆ, ಮೊ. ಗಳ ತುದಿಯಲ್ಲಿ) ಓರೆಯಾಗಿ ಹೊಡೆದ ಮೊಳೆ]. (ಕ್ರಿ.) (ಕಾಲುಚೀಲ, ಪಾದರಕ್ಷೆ, ಮೊ. ಗಳ) ಬೆರಳ ಭಾಗವನ್ನು, ಮುನ್ನಡಿಯನ್ನು, —ಇಡು, ಮಾಡು, ದುರಸ್ತು ಮಾಡು; (ಪಾಠಶಾಲಾ ಅಸಂ.) (ಒಬ್ಬನನ್ನು) ಒದೆ; (ಪಂದ್ಯದಲ್ಲಿ ಓಡುವುದಕ್ಕೆ ಸಿದ್ಧವಾಗಿ) ಗೆರೆಗೆ ಕಾಲ್ಬೆರಳು ಸೋಕುವಂತೆ ನಿಂತುಕೊ [T. the line, mark, scratch. T. the line (ರೂಪ.) (ಒಂದು ಪಕ್ಷದ ನೀತಿ ನಿಯಮಗಳನ್ನು) (ನಿರ್ಬಂಧದಿಂದ) ಬಿಡದೆ ಅನುಸರಿಸು]; (ಗಾಲ್ಫ್ ಆಟದಲ್ಲಿ: ಚೆಂಡನ್ನು) ದಾಂಡಿನ ಮುಂತುದಿ ಯಿಂದ ಹೊಡೆ; [T. in, out (ನಡಗೆಯಲ್ಲಿ) ಕಾಲ್ಬೆರಳನ್ನು ಒಳ ಮಡಿಚು, ಹೊರಮಡಿಚು]. **(-)toed** (ಗು.); **Toéless** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tó-fall ಟೂಫಾಲ್ (ನಾ.) (ಪ್ರಾಚೀ. ಪ್ರ., ಕಾವ್ಯ ಪ್ರ.) (ದಿವಸ, ಮೊ. ಗಳ) ಅವಸಾನ, ಇಳಿಹೊತ್ತು (*Of* ಉಪ. ಜೊಡನೆ)

Toff ಟಾಫ್ (ನಾ.) (ಅಸಂ.) ಗಣ್ಯ, ಭಾರಿ, —ವ್ಯಕ್ತಿ; ಸೀಟುಗಾರ.

Tóffee, -fy ಟಾಫಿ (ನಾ.) (ಸಕ್ಕರೆ, ಬೆಣ್ಣೆ, ಮೊ. ಗಳನ್ನು ಹಾಕಿ ಮಾಡಿದ) ಹಲವು ಬಗೆಯ ಮಿಠಾಯಿ (Almond t. ಬಾದಾಮಿ ಮಿಠಾಯಿ)

Toft ಟಾಫ್ಟ್ (ನಾ.) (ನ್ಯಾ. ಶಾ.) ಮನೆ(ಯ ನಿವೇಶನ), ಮಂದಳ. **Tóftman** (ಚರಿತ್ರೆ) ಮಂದಳದವನು, ಮನೆಯೊಡೆಯ.

Tog ಟಾಗ್ (ನಾ., ಕ್ರಿ. ಸಕ.) (ಅಸಂ.) (ಸಾ., ಬ. ವ. ದಲ್ಲಿ) ಬಟ್ಟೆಬರೆ, ಉಡುಪು [(ನಾವೆ) Long togs (ನಾವಿಕರಲ್ಲದ) ನೆಲವಾಸಿಗಳ ಉಡುಪು; ತೀರದುಡುಪು]. (ಕ್ರಿ.) ಉಡುಪು—ಹಾಕಿಕೊ, ಹಾಕು (ಸಾ., *out* ಉಪ. ಜೊಡನೆ). **Tóggery** ಟಾಗರಿ (ನಾ.) ಉಡುಪು; ಪೋಷಾಕು.

Tóga ಟೋಗ (ನಾ.) (ಪುರಾತನ ರೋಮನ್ ಗಂಡಸರು ಪೌರತ್ವ, ಅಧಿಕಾರ, ಮೊ. ಗಳ ಸೂಚಕವಾಗಿ ಧರಿಸುತ್ತಿದ್ದ) ಇಳಿವಸ್ತ್ರ, ಹಚ್ಚಡ, ಉತ್ತರೀಯ; (ರೂಪ.) ಅಧಿಕಾರ ವಸ್ತ್ರ (To don the t. of a judge). T. virilis (—ವಿರೈಲಿಸ್) ಹುಡುಗರು ಪ್ರಾಯಕ್ಕೆ ಬಂದಾಗ ಹೊದೆಯುತ್ತಿದ್ದ ಉತ್ತರೀಯ: ಗಂಡು ಕವುದಿ, ಪ್ರಾಯದ ಉತ್ತರೀಯ. **Tóga'd, Tógaed** ಟೋಗಅಡ್ (ಗು.) ಉತ್ತರೀಯ ಧರಿಸಿದ.

Togéther ಟುಗೆದರ್ (ಕ್ರಿ. ವಿ.) ಜೊತೆಯಲ್ಲಿ, ಒಡಗೂಡಿ, ಸಂಗಡ, ಒಟ್ಟಿಗೆ (ಸೇರಿ), ಕೂಡಿ, ಕೂಡ [Lived t.; Compared t. ಪರಸ್ಪರ, ಒಂದರೊಡನೆ ಒಂದನ್ನು, —ಹೋಲಿಸಿದರೆ. Get t., Hang t. (ಆಯಾ ಪದ ನೋಡಿ). Put two & two t. (Two ನೋಡಿ). T. with ಜೊತೆಗೆ (Sent a host of foot-soldiers t. with some cavalry)]

Tógger ಟಾಗರ್ (ನಾ.) (ಆಕ್ಸ್‌ಫರ್ಡ್ ವಿ. ವಿ. ನಿ. ಅಸಂ.) = Torpid.

Tóggery. **Tog** ನೋಡಿ.

Tóggle ಟಾಗ್ಲ್ (ನಾ.) (ನಾವೆ) ಕುಣಿಕೆ, ಉಂಗುರ, ಮೊ. ವು ಜಾರಿಕೊಂಡು ಬರದಂತೆ ಭದ್ರವಾಗಿ ತಡೆಯಲು ಹಗ್ಗದ ಕಣ್ಣಿನಲ್ಲಿ ತೂರಿಸಿದ ಅಡ್ಡಬೆಣೆ, ಗೂಟ: ಕಣ್ಣಿಯ—ಬೆಣೆ, ಗೂಟ; ಒತ್ತಡವನ್ನು ಸಮಕೋನದಲ್ಲಿ ವರ್ಗಾಯಿಸಲಾಗುವಂತೆ ಮಂಡಿಕೀಲಿನಿಂದ ಜೋಡಿಸಿದ ದಂಡಗಳ ಅಥವಾ ಫಲಕಗಳ ಜೋಡಿ: ಕೀಲು ಜೋಡಿ (ಸೇರುವೆ). **T.-iron** ಸರಿದಾಡುವ ಅಲಗುಳ್ಳ ಈಟಿಗಾಳ. **T.-joint** ಮಂಡಿ—ಕೀಲು, ಸೇರುವೆ. **T.-press** ಮಂಡಿಕೀಲು ಒತ್ತುಯಂತ್ರ.

Toil[1] ಟಾಯ್ಲ್ (ಕ್ರಿ. ಅಕ., ನಾ.) ಕಷ್ಟಪಡು, ಶ್ರಮಿಸು, ಹೆಣಗು, ದುಡಿ (*At, on, through* ಉಪ. ಜೊಡನೆ); ಕಷ್ಟಪಟ್ಟುಕೊಂಡು, ಹೆಣಗಾಡಿಕೊಂಡು, —ಹೋಗು, ಸಾಗು (T. *up* hill. T. *along*). (ನಾ.) ಕಷ್ಟದ ಕೆಲಸ, ಶ್ರಮ, ಹೆಣಗಾಟ, ದುಡಿತ. **T.-worn** ದುಡಿದು ಬೇಸತ್ತ, ಸುಸ್ತಾದ. **Toiler** (ನಾ.); **Toílful** (ಗು.) ದುಡಿಯುವ, ಕಷ್ಟಪಡುವ; ಕಷ್ಟದ, ಶ್ರಮದ. **Toílfully** (ಕ್ರಿ. ವಿ.); **Toílless** (ಗು.); **Toílsome** (ಗು.) = Toilful. **Toílsomely** (ಕ್ರಿ. ವಿ.); **Toílsomeness** (ನಾ.)

Toil[2] ಟಾಯ್ಲ್ (ನಾ.) (ಈಗ ಬ. ವ. ದಲ್ಲಿ ಮಾತ್ರ ಪ್ರ.) ಬಲೆ, ಜಾಲ (ರೂಪ. ಸಹ) (Taken in the toils ಬಲೆಗೆ ಸಿಕ್ಕಿ)

Toile (F) ಟ್ವಾಲ್ (ನಾ.) ಬಟ್ಟೆ (ಮು., ಅಗಸೆನಾರಿನ ಬಟ್ಟೆ, ರೇಷ್ಮೆ ಮತ್ತು ಅಗಸೆನಾರಿನ ಮಿಶ್ರ ಬಟ್ಟೆ). **T. cireé** (—ಸೀರೇ) ಮೇಣ್ತೆರನ ಮೇಣಗಪಟ. **T. colbert** (—ಕಾಲ್ಬೇರ್) ಕಸೂತಿಹಾಕುವ ರಟ್ಟು ಬಟ್ಟೆ. **T. d'Alsace** (—ಡಲ್ಸಾಸ್), **T. de Vichý** (—ಡ ವೀಷೀ) ಹೆಂಗಸರ ಬೇಸಗೆಯ ಉಡುಪು ಮಾಡುವ ಅಗಸೆನಾರಿನ ಬಟ್ಟೆ.

Toílet ಟಾಯ್ಲೆಟ್, **Toiléttе** ಟ್ವಾಲೆಟ್ (ನಾ.) ತಲೆಬಾಚಿಕೊಂಡು ಅಲಂಕಾರಮಾಡಿಕೊಳ್ಳುವುದು, ಕೇಶಾಲಂಕಾರ, ಪ್ರಸಾಧನ (Make one's t. ಅಲಂಕಾರಮಾಡಿಕೊ); ಉಡುಪು, ಪೋಷಾಕು (ಧರಿಸುವ ರೀತಿ); ವೇಷಭೂಷಣ (An elaborate t.; A t. of white satin); (ಕನ್ನಡಿ ಅಳವಡಿಸಿದ) ಪ್ರಸಾಧನ ಮೇಜು (= **T.-table**); [**T.-cover** ಪ್ರಸಾಧನ ಮೇಜಿನ—ಬಟ್ಟೆ, ಗವುಸು. **T.-paper** ಅಂಡೊರಸುವ ಕಾಗದ. **T.-set** ಪ್ರಸಾಧನ—ಸಜ್ಜು, ಸಲಕರಣೆ; ಸಿಂಗರದ ಅಣಿ; ಬಾಚಣಿಗೆ ಪೆಟ್ಟಿಗೆ. **T.-soap** ಮೈಗೆ ಹಾಕಿಕೊಳ್ಳುವ, ಪ್ರಸಾಧನ, —ಸಾಬೂನು. **T. Vinegar** ಮುಖ ತೊಳೆಯುವ ನೀರಿಗೆ ಹಾಕುವ ಪರಿಮಳಿತ ವಿನೀಗರ್ ಆಮ್ಲ: ಪ್ರಸಾಧನ ವಿನೀಗರ್]; (ವೈ. ಶಾ.) ಶಸ್ತ್ರಚಿಕಿತ್ಸೆಯಾದಮೇಲೆ ಆ ಭಾಗವನ್ನು ತೊಳೆಯುವುದು: ತೊಳೆತ, ಮಾರ್ಜನ.

Toilinét(te) ಟಾಯ್ಲಿನೆಟ್ (ನಾ.) ಉಣ್ಣೆ, ರೇಷ್ಮೆ ಮತ್ತು ಹತ್ತಿಗಳ ಮಿಶ್ರ ಬಟ್ಟೆ.

Toison d'ór (F) ಟ್ವಾಸಾನ್ ಡಾರ್ (ನಾ.) = Golden Fleece (Fleece ನೋಡಿ)

Tokaý ಟೊಕೇ (ನಾ.) (ಹಂಗರಿಯಲ್ಲಿಯ ಟೊಕೇ ಪಟ್ಟಣದ ಸುತ್ತಮುತ್ತ ತಯಾರಾಗುವ) ಒಂದು ಸುವಾಸನೆಯ ದ್ರಾಕ್ಷಾ ಮದ್ಯ; ಒಂದು ಬಗೆಯ ದ್ರಾಕ್ಷಿ.

Tóken ಟೋಕೆನ್ (ನಾ.) (ಪ್ರೀತಿ, ಮೊ. ಗಳ) ಗುರುತು, ಕುರುಹು, ಚಿಹ್ನೆ, ಸಂಕೇತ (In t. of —ರ ಗುರುತಾಗಿ, ಸೂಚಕವಾಗಿ); ಸ್ನೇಹ ನಿದರ್ಶನ, ನೆನಪಿನ ವಸ್ತು; (ಪ್ರಾಮಾಣ್ಯ ನಿದರ್ಶನವಾದ) ಗುರುತಿನ —ಉಂಗುರ, ನಾಣ್ಯ, ಬಿಲ್ಲೆ, ಮೊ. ವು: ಅಭಿಜ್ಞಾನ; (ಬೈಬಲ್) ದೈವ ಸಂಕೇತ, ಮುನ್ಸೂಚನೆ, ಶಕುನ; (ಚರಿತ್ರೆ) ನಾಣ್ಯದಂಥ ಮತ್ತು ನಾಣ್ಯಕ್ಕೆ ಬದಲಾಗಿ ಉಪಯೋಗಿಸುವ, ಅದರ ಮುದ್ರಿತ ಬೆಲೆ ಆಂತರಿಕ ಬೆಲೆಗಿಂತ ಹೆಚ್ಚಾಗಿರುವ, ಸರಕಾರದಿಂದ ಅಧಿಕಾರ ಪಡೆದಿಲ್ಲದ, ವ್ಯಾಪಾರಿಗಳು, ಬ್ಯಾಂಕು, ಮೊ. ರು ಚಲಾವಣೆಗೆ ತಂದಿದ್ದ ಲೋಹದ ಬಿಲ್ಲೆ: ಅನಧಿಕಾರ ಚಲಾವಣೆ ನಾಣ್ಯ. (ಪ್ರಾಚೀ. ಪ್ರ. ಅಥವಾ ಹಾಸ್ಯ ಪ್ರ.) By (this, the same) t. ಅದರಿಂದರೇ, ಅದೇ ಕಾರಣದಿಂದ; ನಿದರ್ಶನವಾಗಿ, ಉಪಷ್ಟಂಭಕವಾಗಿ. More by t. ನಾನು ಹೇಳಿದ್ದನ್ನು ದೃಢೀಕರಿಸಲು; ಜೊತೆಗೆ, ಮತ್ತೂ. **T. money** ನೈಜಬೆಲೆಗಿಂತ ನಮೂದುಬೆಲೆ ಹೆಚ್ಚಾಗಿರುವ, ಆ ಹೆಚ್ಚಿನ ನಮೂದು ಬೆಲೆಯ ಪ್ರಕಾರ ಪ್ರಮಾಣ ನಾಣ್ಯಕ್ಕೆ ಪರಿವರ್ತಿಸಬಹುದಾದ ನಾಣ್ಯ: ಸಂಕೇತ ನಾಣ್ಯ. **T. payment** (ರಾಜ್ಯನೀತಿ) (ಮು., ದೇಶ ದೇಶಗಳ ವ್ಯವಹಾರದಲ್ಲಿ) ತೀರಿಸಬೇಕಾಗಿರುವ ಸಾಲವನ್ನು ಒಪ್ಪಿಕೊಂಡು ಅದರ ಗುರುತಿಗಾಗಿ ಸಾಲದಲ್ಲಿ ಒಂದು ಸಣ್ಣ ಅಂಶವನ್ನು ಸಲ್ಲಿಸುವುದು: ಕುರುಹು ಸಲ್ಲಿಕೆ. **T. vote** ಅದರಲ್ಲಿ ನಮೂದಿಸಿದ ಹಣದ ಮೊತ್ತಕ್ಕೇ ಬದ್ಧವಾಗಿರಬೇಕೆಂಬ ನಿಯಮ ಹಾಕದೆ, ಔಪಚಾರಿಕವಾಗಿ ಕೇಳಿದ ಒಂದು ಹಣವನ್ನು, ಮಂಜೂರು ಮಾಡುವ ಶಾಸನ ಸಭೆಯ ಅಭಿಮತ: ಸಾಂಕೇತಿಕ ಅಭಿಮತ. **Tókenless** (ಗು.)

Tókenhouse Yard ಟೋಕನ್‌ಹೌಸ್ ಯಾರ್ಡ್ (ನಾ.) (ಲಂಡನ್ ಪಟ್ಟಣದಲ್ಲಿರುವ) ಭೂಸ್ವತ್ತಿನ ಹರಾಜುಕಟ್ಟೆ.

Tóko. **Toco** ನೋಡಿ.

Tóla ಟೋಲ (ನಾ.) ತೊಲ (ಒಂದು ರೂಪಾಯಿ ತೂಕ)

Tolédo ಟೊಲೀಡೊ (ನಾ.) ಸ್ಪೈನ್ನಿನಲ್ಲಿಯ ಟೊಲೀಡೋದಲ್ಲಿ ತಯಾರಾಗುವ ಒಂದು ಖಡ್ಗ(ದ ಅಲಗು)

Tólerable, etc. **Tolerate** ನೋಡಿ.

Tólerate ಟಾಲೆರೇಟ್ (ಕ್ರಿ. ಸಕ.) ತಾಳು, ತಾಳಿಕೊ, ಸೈರಿಸು, ಸಹಿಸು, ಸಹಿಸಿಕೊ, ತಾಳ್ಮೆಯಿಂದಿರು, ಸಹಿಷ್ಣುತೆ ತೋರು. **Tólerable** (ಗು.) ತಾಳಿಕೊಳ್ಳಲಾಗುವ, ಸೈರಿಸಲಾಗುವ; ಸುಮಾರು ಚೆನ್ನಾಗಿರುವ, ತಕ್ಕಮಟ್ಟಿನ (Am in t. health ತಕ್ಕಮಟ್ಟಿನ ಆರೋಗ್ಯದಲ್ಲಿದ್ದೇನೆ. Had a t. passage ತಕ್ಕಮಟ್ಟಿನ ಸುಖ ಪ್ರಯಾಣವಾಯಿತು). **Tólerableness** (ನಾ.); **Tólerably** (ಕ್ರಿ. ವಿ.); **Tólerance**

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

—ರನ್ಸ್ (ನಾ.) ತಾಳಿಕೆ, ಸ್ಥೈರಣೆ, ಸಹನೆ. **Tólerant** (ಗು.) ತಾಳ್ಮೆಯ, ಸ್ಥೈರಣೆಯುಳ್ಳ, ಸಹಿಷ್ಣುವಾದ. **Tólerantly** (ಕ್ರಿ. ವಿ.); **Tolerátion** —ರೇ— (ನಾ.) ಸ್ಥೈರಣೆ, ಸಹನೆ; ಅನ್ಯಮತ, ಪರಧರ್ಮ, —ಸಹಿಷ್ಣುತೆ. **Tolerátionist** (ನಾ.) ಅನ್ಯಮತ ಸಹಿಷ್ಣುತಾ ವಾದಿ. **Tólerator** (ನಾ.)

Toll[1] ಟೋಲ್ (ನಾ.) (ಪೇಟೆ, ರಸ್ತೆ, ಮೊ. ಗಳನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ, ನಲ್ಲಿಸಿದ ಸೇವೆಗಾಗಿ, ಕೊಡುವ) ಸುಂಕ, ಜಕಾತಿ, ಟೋಲು [(ನ್ಯಾ. ಶಾ.) T. through (ತನ್ನ ಸೇತುವೆ, ರಸ್ತೆ, ಮೊ. ಗಳ ಮೂಲಕ ವಾಹನಾದಿಗಳು ಹಾದುಹೋಗುವುದಕ್ಕಾಗಿ ಒಂದು ಪಟ್ಟಣ ವಸೂಲು ಮಾಡುವ) ದಾರಿ, ಭಾಟಾ, —ಸುಂಕ. T. traverse (ಖಾಸಗಿ ಜಮೀನಿನಮೇಲೆ ಹಾದುಹೋಗಲು ಕೊಡಬೇಕಾದ) ಹಾಯು, ದಾಟು, —ಸುಂಕ]; ಬೀಸು ಯಂತ್ರದವನು ಬೀಸಿದ ಬಾಡಿಗೆಗಾಗಿ ಉಳಿಸಿಕೊಳ್ಳುವ ಕಾಳು: ಸುಂಕದ ಕಾಳು, ಶುಲ್ಕ ಧಾನ್ಯ [(ರೂಪ.) Take t. ಒಂದು ಭಾಗವನ್ನು, ಅಂಶವನ್ನು, ತೆಗೆದುಕೊ (*Of* ಉಪ. ದೊಡನೆ)]. **T.-bar, -gate** ಸುಂಕದ ಕಟ್ಟೆ, ಉಕ್ಕಡ. **Tol(l)-booth** (ಪ್ರಾಚೀ. ಪ್ರ., ಸ್ಕಾ. ಪ್ರ.) ಊರಿನ ಚಾವಡಿ, ಸೆರೆಮನೆ (ಮೊದಲು ಸುಂಕ ವಸೂಲು ಮಾಡುವುದಕ್ಕೂ, ಅದನ್ನು ಕೊಡಲು ತಪ್ಪಿದವರನ್ನೂ ಇತರರನ್ನೂ ಬಂಧಿಸಿಡುವುದಕ್ಕೂ ಉಪಯೋಗಿಸುತ್ತಿದ್ದದ್ದು). **Toll-house** ಉಕ್ಕಡದ ಮನೆ, ಸುಂಕದ ಚಾವಡಿ.

Toll (ಕ್ರಿ. ಅಕ.) ಸುಂಕ—ಕೊಡು, ಹಾಕು, ತೆಗೆದುಕೊ. **Tóllable** (ಗು.) ಸುಂಕ ಹಾಕಬಹುದಾದ.

Toll[2] ಟೋಲ್ (ಕ್ರಿ., ನಾ.) (ಘಂಟೆಯನ್ನು) ಒಂದೇ ಸಮನೆ ನಿಧಾನವಾಗಿ ಹೊಡೆ, ಬಾರಿಸು; (ಘಂಟೆ ಅಥವಾ ಗಡಿಯಾರದ ವಿಷಯದಲ್ಲಿ: ಹೊತ್ತಿನ ಘಂಟೆ, ಮೊ. ನ್ನು) ಹೊಡೆ; ಮರಣ ಘಂಟೆ—ಹೊಡೆ, ಬಾರಿಸು. (ನಾ.) ಘಂಟೆ—ಬಾಜಣೆ, ಹೊಡೆತ; ಘಂಟಾ ನಾದ; ಮರಣ ಘಂಟೆ.

Tol-lól(lish) ಟಾಲ್‌ಲಾಲ್(ಲಿಷ್) (ಗು.) (ಅಸಂ.) ಪರವಾಯಿಲ್ಲದ, ಸುಮಾರಾದ, ತಕ್ಕಮಟ್ಟಿನ, ಮಧ್ಯಸ್ಥವಾದ.

Tolú ಟೊಲ್ಯೂ, **Tólu** ಟೋಲ್ಯು (ನಾ.) ಪರಿಮಳದ್ರವ್ಯಗಳಲ್ಲಿಯೂ ಔಷಧದಲ್ಲಿಯೂ ಉಪಯೋಗಿಸುವ, ದ. ಅಮೆರಿಕದ ಒಂದು ಮರದಲ್ಲಿ ದೊರೆಯುವ ಒಂದು ಧೂಪ: ಟೋಲ್ಯು ಧೂಪ. **Tolúic** (ಗು.); **Tóluene** ಟೋ(ಟಾ)ಲ್ಯುಈನ್, **Tóluol** —ಆಲ್ (ನಾ.) ಬೆನ್ಜೀನ್ ವಾಸನೆಯೂ, ಉರಿ ರುಚಿಯೂ ಉಳ್ಳ, ಒಂದು ಹೈಡ್ರೊಕಾರ್ಬನ್ ದ್ರವ: ಟೊಲ್ಯುಈನ್.

Tom ಟಾಮ್ (ನಾ.) (Thomas ಎಂಬುದರ ಸಂಕ್ಷಿಪ್ತ) [T., Dick, & Harry (Dick ನೋಡಿ)]. ಗಂಡು ಪ್ರಾಣಿ, (ಮು.) ಗಂಡು ಬೆಕ್ಕು, ಬಾವುಗ (=T.-cat). Long t. (ನಾವೆ) (ಮು., ಹಡಗಿನ ಮಧ್ಯದಲ್ಲಿ ಇಟ್ಟಿರುವ) ಉದ್ದ ಫಿರಂಗಿ. Old T. ಜೋರಾದ ಜಿನ್ ಮದ್ಯ. **T. & Jerry** (ಅಮೆ. ಸಂ.) ರಂ ಮದ್ಯಕ್ಕೆ ನೀರು ಬೆರಸಿ ಮೊಟ್ಟೆ, ಮೊ. ನ್ನು ಹಾಕಿ ಮಾಡಿದ ಪಾನೀಯ: ರಂ ಮೊಟ್ಟೆ ಪಾನೀಯ. **Tómboy** ದಿಟ್ಟ ಹುಡುಗಿ, ಗಂಡು ಹುಡುಗಿ. **Tómfoól** (ನಾ., ಕ್ರಿ. ಅಕ.) ಅವಿವೇಕಿ, ಹುಚ್ಚಾಟದವನು, ಮೂರ್ಖ, ಮುಟ್ಠಾಳ; (ಕ್ರಿ.) ಹುಚ್ಚಾಟವಾಡು [**Tomfoólery** (ನಾ.) ಹುಚ್ಚಾಟಿಕೆ; ಕೆಲಸಕ್ಕೆ ಬಾರದ ಥಳುಕುಪಳುಕು]. **T. Fool** ಮಡೆಯ, ಮುಟ್ಠಾಳ [(ಗಾದೆ) There's more knows T. Fool than T. Fool knows ಅಪಪ್ರಸಿದ್ಧಿ ಕೀರ್ತಿಯಲ್ಲ]. **Tomnóddy** (ಜಂಬದ) ದಡ್ಡ, ಮುಟ್ಠಾಳ. **T. Thumb** (ಕಥೆಗಳಲ್ಲಿ ಬರುವ) ಕುಳ್ಳ, ಗುಜ್ಜಾರಿ; ಹಲವು ಸಸ್ಯಗಳ ಗುಜ್ಜಾರಿ ಜಾತಿ. **T. Tiddler's ground** ಒಂದು ಬಗೆಯ ಮಕ್ಕಳಾಟ; ಸಿಕ್ಕಿದವರಿಗೆ ಸೀರುಂಡೆಯಾಗಿ ಹಣ ದೊರೆಯುವ ಸ್ಥಳ; ಯಾರೆಂದರೆ ಅವರು ಯಥೇಚ್ಛವಾಗಿ ಹಣ ಎತ್ತಿಕೊಳ್ಳಬಹುದಾದ ಸ್ಥಳ. **Tómtít** ಹಲವು ಬಗೆಯ ಹಕ್ಕಿ. **Tómmy** (ನಾ.) (Tom ಪದದ ಸಲಿಗೆಯ ರೂಪ) [T. Atkins ಬ್ರಿಟಿಷ್ ಸೈನಿಕ. T. *or* t. (ಅಸಂ.) ಸಾದಾ ಬ್ರಿಟಿಷ್ ಸಿಪಾಯಿ, ಸಾಮಾನ್ಯ ಸೈನಿಕ]. (ಯಂತ್ರಶಿಲ್ಪ) ಹಲವು ಬಗೆಯ ತಿರುಪಾಯುಧ, ತಿರುಗೆ; ಬಿಲ್ಮುಡಿಕೆಗಳನ್ನು ತಿರುಗಿಸುವ ಕಂಬಿ: ತಿರುಪು ಕಂಬಿ, ತಿರುಗುಗಂಬಿ (=T.-bar); (ಮು., ಕೆಲಸಗಾರರಿಗೆ) ಕೂಲಿಗೆ ಬದಲಾಗಿ ಕೊಡುವ ರೊಟ್ಟಿ, ಆಹಾರ (ಸಾಮಗ್ರಿ): ಪಡಿಗೂಲಿ (ಪದ್ಧತಿ); ತಮ್ಮ ದಣಿಗಳಿಂದಲೆ ಆಹಾರ ಸಾಮಗ್ರಿ ಕೊಳ್ಳಬೇಕೆಂಬ ಕರಾರಿನಮೇಲೆ ಕೂಲಿಹಣ ಕೊಡುವ ಪದ್ಧತಿ: ಧಾನ್ಯಗೂಲಿ ಪದ್ಧತಿ [T.-shop (ಹಿಂದಿನ ಅರ್ಥ) ಧಾನ್ಯಗೂಲಿಯಂಗಡಿ; (ಈಗಿನ ಅರ್ಥ) ಕಾರಖಾನೆಯಲ್ಲಿಯ ಅಂಗಡಿ; ರೊಟ್ಟಿಯಂಗಡಿ]; (ಕೆಲಸಗಾರರು ತೆಗೆದುಕೊಂಡು ಹೋಗುವ) ಬುತ್ತಿ. T. rot (Rot ನೋಡಿ). Soft t. (ನಾವೆ) ಮೆದುರೊಟ್ಟಿ, ಹೊಸ ರೊಟ್ಟಿ.

Tómahawk ಟಾಮಹಾಕ್ (ನಾ., ಕ್ರಿ. ಸಕ.) (ದ. ಅಮೆರಿಕದ ಇಂಡಿಯನರು ಉಪಯೋಗಿಸುತ್ತಿದ್ದ ಕೊಂಬು, ಕಲ್ಲು, ಉಕ್ಕು, ಮೊ. ಗಳಿಂದ ಮಾಡಿದ ತಲೆಯುಳ್ಳ) ಯುದ್ಧ ಕೊಡಲಿ, ಗಂಡುಗೊಡಲಿ [Bury the t.=Bury the hatchet (Bury ನೋಡಿ)]. (ಕ್ರಿ.) ಗಂಡುಗೊಡಲಿಯಿಂದ ಹೊಡೆ(ದು ಕೊಲ್ಲು); ಕೊಡಲಿಪೆಟ್ಟು ಹಾಕು, ಕುಠಾರ ಪ್ರಯೋಗಮಾಡು (ರೂಪ. ಸಹ); ಕಟು, ಉಗ್ರ,—ಟೀಕೆ ಮಾಡು; (ಟೀಕೆಯಲ್ಲಿ) ತುಂಡರಿಸು, ಸಿಗಿದುಹಾಕು.

Tomán ಟೊಮಾನ್, **Tóman** ಟಮನ್ (ನಾ.) ಒಂದು ಪರ್ಷಿಯನ್ ಚಿನ್ನದ ನಾಣ್ಯ.

Tomáto ಟೊಮಾ(ಮೇ)ಟೊ (ನಾ.; ಬ. ವ. -oes) ತಕ್ಕಾಳಿ, ಚಪ್ಪರಬದನೆ (—ಹಣ್ಣು, ಗಿಡ). Currant t. ದ್ವೀಪದ್ರಾಕ್ಷಿ ಗಾತ್ರದ, ಕಿರು,—ತಕ್ಕಾಳಿ.

Tomb ಟೂಂ (ನಾ., ಕ್ರಿ. ಸಕ.) ಹೆಣ ಹುಗಿಯುವ ಕುಳಿ, ಹುಗಿಗುಂಡಿ; ಗೋರಿ, ಸಮಾಧಿ (—ಕಟ್ಟಡ); ಚೈತ್ಯ; (ರೂಪ.) ಸಾವು, ಮರಣ (=The t.). (ಕ್ರಿ.) ಗೋರಿ, ಸಮಾಧಿ, —ಮಾಡು, ಅಗಿರು; (ಗೋರಿಯಂತೆ) ಒಳಕೊಳ್ಳು, ಕವಿ. **Tómbless** (ಗು.); **Tómbstone** (ನಾ.) ಗೋರಿಕಲ್ಲು, ಸಮಾಧಿಸ್ತಂಭ.

Tómbac, -ak ಟಾಂಬ್ಯಕ್ (ನಾ.) ಅಗ್ಗದ ಒಡವೆಗಳನ್ನು ತಯಾರಿಸಲು ಉಪಯೋಗಿಸುವ, ಹಲವು ಬಗೆಯ, ತಾಮ್ರ ಸತುಗಳ ಮಿಶ್ರ ಲೋಹ: ಒಡವೆ ಕಂಚು.

Tómbola ಟಾಂಬೊಲ (ನಾ.) (ಫ್ರಾನ್ಸ್ ಮತ್ತು ದ. ಅಮೆ. ಸಂ. ಗಳಲ್ಲಿ) ಥಳುಕಿನ ವಸ್ತುಗಳನ್ನು ಬಹುಮಾನವಾಗಿ ಕೊಡುವ ಒಂದು ಬಗೆಯ ಲಾಟರಿ.

Tome ಟೋಮ್ (ನಾ.) (ಭಾರಿ) ಸಂಪುಟ.

Toméntum ಟೊಮೆಂಟಂ (ನಾ.) (ಸ. ವಿ.) ದಟ್ಟವಾದ ಉಣ್ಣೆಗೂದಲ ಬೊಂತೆಯಂಥ ತುಪ್ಪುಳು; (ಅಂ. ರ. ಶಾ.) ಮಿದುಳಿನ ಒಳ ಪೊರೆಯ ಬೊಂತೆ ಬೊಂತೆಯಾದ ಒಳಮೈ: ಬೊಂತೆ ಪೊರೆ. **Tomentóse** (ಗು.); **Toméntous** (ಗು.) ಬೊಂತೆಗೂದಲಿನ, ತುಪ್ಪುಳುಳ್ಳ, ಜುಂಗಿನ.

Tómmy. Tom ನೋಡಿ.

Tomórrow, To-morrow ಟುಮಾರೋ (ಕ್ರಿ. ವಿ., ನಾ.) ನಾಳೆ (ಯ ದಿನ) [(ಗಾದೆ) T. never comes ನಾಳೆ ಎಂದರೆ ಎಂದಿಗೂ ಇಲ್ಲ. T. week ನಾಳೆಗೆ ಎಂಟು ದಿನಕ್ಕೆ; ಮುಂದಿನ ವಾರ ಈ ದಿನ]

Tómpion ಟಾಂಪಿಯನ್ (ನಾ.)=Tampion.

Tómtom ಟಾಮ್‌ಟಾಮ್ (ನಾ., ಕ್ರಿ. ಅಕ.) ತಮಟೆ, ಡಂಗುರ ಟಾಂಟಾಂ (—ಬಾರಿಸು, ಹೊಡೆ)

-tomy —ಟೊಮಿ (ಉ. ಪ್ರ.) (ಮು., ಶಸ್ತ್ರಚಿಕಿತ್ಸಾ ಪದಗಳಲ್ಲಿ ಪ್ರ. —ಕೊಯ್ತ, ಛೇದ (ಉದಾ., Phlebotomy)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ton[1] ಟನ್ (ನಾ.) ೨,೨೪೦ ಪೌಂಡಿನ ತೂಕ : ಟನ್ನು [(ಅಮೆ. ಸಂ.) Short t. ೨೦೦೦ ಪೌಂಡಿನ ಟನ್ನು, ಸಣ್ಣ ತೂಕದ ಟನ್ನು. Metric t. ೧೦೦೦ ಕಿಲೋಗ್ರಾಮುಗಳ ಟನ್ನು]; ಒಂದು ಘನ ಅಳತೆ [(ಬೇರೆ ಬೇರೆ ವಸ್ತುಗಳಿಗೆ ಬೇರೆ ಬೇರೆ ಅಳತೆ) : ಚೌಬೀನೆ (೪೦ ಅಡಿ), ಕಲ್ಲು (೧೬ ಸಲೆ ಅಡಿ), ಉಪ್ಪು (೪೨ ಬುಷೆಲ್), ಸುಣ್ಣಕಲ್ಲು (೪೦ ಬುಷೆಲ್), ಕಲ್ಲಿದ್ದಲ ಕಿಟ್ಟ (೨೮ ಬುಷೆಲ್), ಗೋಧಿ (೨೦ ಬುಷೆಲ್), ಮದ್ಯ (೨೫೨ ಗ್ಯಾಲನ್)]; ಹಡಗಿನ ಒಳ ಅವಕಾಶದ ಏಕಮಾನ (=೧೦೦ ಸಲೆ ಅಡಿ), ಅಥವಾ ಸರಕು ಸಾಗಣೆಯ ಅವಕಾಶದ ಏಕಮಾನ (=೪೦ ಸಲೆ ಅಡಿ); (ಬಳ. ಮಾ.) ಭಾರಿ—ಸಂಖ್ಯೆ, ಮೊತ್ತ [Bag weighs (half) a t. ಚೀಲ ಬಹಳ ತೂಗುತ್ತದೆ, ಭಾರವಾಗಿದೆ. Tons of people ನೂರಾರು ಜನ, ಬಹು ಮಂದಿ. Tons of times ಹಲವು ಸಲ, ಅನೇಕ ಬಾರಿ].
Tónnage ಟನೆ(ನಿ)ಜ್ (ನಾ.) ಟನ್ನುಗಳಲ್ಲಿ ವ್ಯಕ್ತಪಡಿಸಿದ, ಹಡಗಿನ ಒಳ ಅವಕಾಶ ಅಥವಾ ಸರಕು ಸಾಗಣೆಯ ಅವಕಾಶ : ಟನ್‌ಮಾನ; (ಮು., ಒಂದು ದೇಶದ ವ್ಯಾಪಾರದ ಹಡಗುಗಳ) ಸರಕು ಸಾಗಣೆಯ ಒಟ್ಟು ಭರ್ತಿ, ಹೇರು; (ಹಿಂದೆ ಹಡಗಿನ ಟನ್‌ಮಾನದ ಪ್ರಕಾರ ಹಾಕುತ್ತಿದ್ದ, ಈಗ ದಾಖಲೆಯಾಗಿರುವ ಗಾತ್ರದ ಪ್ರಕಾರ ಹಾಕುವ) ಹಡಗು ಸುಂಕ; ಟನ್ (ಪ್ರಕಾರ) ಬಾಡಿಗೆ, ರುಸುಮು. **T. & poundage** (ಚರಿತ್ರೆ) ಟನ್ (೨೫೨ ಗ್ಯಾಲನ್) ಮದ್ಯಕ್ಕೆ ಇಷ್ಟೆಂದೂ, ಪೌಂಡು ಬೆಲೆಯ ಸರಕಿಗೆ ಇಷ್ಟೆಂದೂ ಆಮದು ರಫ್ತುಗಳಮೇಲೆ ವಿಧಿಸುತ್ತಿದ್ದ ಸುಂಕ : ಟನ್ ಮತ್ತು ಪೌಂಡು ಸುಂಕ. **T.-deck** (ಹಡಗಿನ) ಎರಡನೆಯ ಅಟ್ಟ. **(-)tónner** (ನಾ.) —ಟನ್ ತೂಕದ ಹಡಗು (A two-thousand-t.)

Ton[2] (F) ಟಾನ್ (ನಾ.) ಪ್ರಚಲಿತ ಪದ್ಧತಿ, ರೂಢಿ, ವಾಡಿಕೆ [In the t. ರೂಢಿಯಲ್ಲಿ. Bon-t. (Bon ನೋಡಿ)]

Tónal, etc., Tonálity. **Tone** ನೋಡಿ.

Tó-name ಟೂನೇಮ್ (ನಾ.) (ಮು., ಸ್ಕಾ. ಪ್ರ.) (ಒಂದೇ ಕ್ರೈಸ್ತ ನಾಮವೂ ಉಪನಾಮವೂ ಇರುವ ಹಲವರನ್ನು ಪರಸ್ಪರ ವಿಶೇಷಿಸು ವುದಕ್ಕಾಗಿ ಸೇರಿಸುವ) ವಿಶೇಷನಾಮ, ಕೂಡುಹೆಸರು.

Tondíno ಟೊಂಡೀನೊ (ನಾ.) ಬಟ್ಟಲಾಕಾರದ ಮಧ್ಯವುಳ್ಳ ದುಂಡು ಚಿತ್ರ; ನಾಣ್ಯ ಟಂಕಿಸುವ ದುಂಡು ಬಿಲ್ಲೆ. (ವಾ. ಶಾ.) = Astragal.

Tóndo ಟೊಂಡೊ (ನಾ.) ದುಂಡು ಚಿತ್ರ, ವಲಯ ಚಿತ್ರ; ಚಿತ್ರ ಕೆತ್ತಿದ ದುಂಡು ಬಿಲ್ಲೆ.

Tone ಟೋನ್ (ನಾ.) ಧ್ವನಿ, ನಾದ (ಮು., ಸ್ಥಾಯಿ, ಗುಣ ಮತ್ತು ಬಲಗಳಿಗೆ ಸಂಬಂಧಪಟ್ಟಹಾಗೆ) [Heart tones (ಆಕರ್ಣನದಲ್ಲಿ ಕೇಳಿ ಸುವ) ಹೃದಯ (ಸ್ಪಂದನ) ಧ್ವನಿ]; ಸಂಗೀತ ಧ್ವನಿ, ಸ್ವರ [Fundamental, harmonic, t. (ಆಯಾ ಪದ ನೋಡಿ)]; (ಭಾವೋದ್ರೇಕ, ಮನೋಭಾವ, ಮೊ. ನ್ನು ಸೂಚಿಸಲು ಏರಿಳಿಸುವ) ದನಿ, ಕೊರಲು, ಸ್ವರ, ಕಂಠ (Impatient, imploring, suspicious, t.); (ವ್ಯಾ.) (ಪದದ ಒಂದು ಉಚ್ಚಾರಾಂಶದಮೇಲೆ ಹಾಕುವ) ಒತ್ತು, ಸ್ವರಭಾರ; (ಸಂ.) ಪುರಾತನ ಸ್ತೋತ್ರಗಾನದ ರಾಗ (ಮು., ಪೋಪ್ ಗುರು ಮೊದಲನೆಯ ಗ್ರಿಗೋರಿ ಕಲ್ಪಿಸಿದ್ದು); (ಸ್ವರಾಷ್ಟಕದಲ್ಲಿಯ ಯಾವುದಾದರೂ) ಪ್ರಧಾನ ಸ್ವರ (=Whole t.) (ಎದುರು ಪದ : Semitone); (ವೈ. ಶಾ.) ಮೈ ಹದ, ಸ್ವಸ್ಥಸ್ಥಿತಿ, ದೇಹಾರೋಗ್ಯ, ಸತ್ತ್ವ (Has lost, recovered, t.); ನೀತಿಯ, ಮನೋಭಾವದ, ನಡತೆಯ, ಶೀಲದ, —ಮಟ್ಟ, ಸ್ಥಿತಿ, ಸ್ವರೂಪ; ರೀತಿ ಧ್ವನಿ (The t. of the nation must be raised. Gave a flippant t. to the debate); (ಚಿತ್ರದಲ್ಲಿ) ಬಣ್ಣದ ಅಥವಾ ನೆರಳು ಬೆಳಕುಗಳ ಪ್ರಭಾವ; ಬಣ್ಣ, ರಂಗು, ಛಾಯೆ; ಬಣ್ಣದ ಪ್ರಕಾಶ, ಹೊಳಪು, ಉಜ್ಜ್ವಲತೆ; (ಛಾಯಾ ಚಿತ್ರ) ವಾಸ್ತವ ಚಿತ್ರದ, ಸಮ ಪ್ರತಿಯ, —ಛಾಯೆ, ವರ್ಣ ಸಾಂದ್ರತೆ. **Tóneless** (ಗು.); **Tónelessness** (ಕ್ರಿ. ವಿ.); **Tónal** (ಗು.) ಧ್ವನಿಯ, ನಾದದ, ಸ್ವರದ; ವರ್ಣವಿನ್ಯಾಸದ. **Tónally** (ಕ್ರಿ. ವಿ.); **Tonálity** ಟೊನ್ಯಾಲಿಟಿ (ನಾ.) ನಾದ, ಸ್ವರ, —ಸ್ವರೂಪ, ಪದ್ಧತಿ; (ಚಿತ್ರದ) ವರ್ಣವಿನ್ಯಾಸ. **Tónic** ಟಾನಿಕ್ (ಗು., ನಾ.) (ವೈ. ಶಾ.) ಹುರಿದುಂಬಿಸುವ, ಉತ್ತೇಜಕ, ಉದ್ದೀಪಕ, ಬಲವರ್ಧಕ (ಔಷಧ) (ರೂಪ. ಸಹ); (ಸಂ.) ಸ್ವರದ, ನಾದದ; ಮೂಲ ಸ್ವರ(ದ). T. accent (ಪದದ ಉಚ್ಚಾರಾಂಶದ ಮೇಲೆ ಹಾಕುವ) ಸ್ವರಭಾರ, ಒತ್ತು. T. spasm ಸ್ನಾಯುಗಳು ಒಂದೇಸಮನೆ ಸೆಡೆಯುತ್ತ ಹೋಗುವುದು : ಸೆಡೆಸೆಳವು (Clonus ಕೆಳಗೆ Clonic ನೋಡಿ). T. sol-fa ಒಂದು ಬಗೆಯ ಸಂಗೀತ ಸ್ವರ ಲೇಖನ ಪದ್ಧತಿ [T.-sol-faist (ನಾ.) ಈ ಪದ್ಧತಿಯವನು]. **Tónically** (ಕ್ರಿ. ವಿ.); **Tonícity** ಟೊನಿಸಿಟಿ (ನಾ.) ನಾದ(ತೆ), ಸ್ವರ(ತೆ); (ಸ್ನಾಯು, ಮೊ. ಗಳ) ಹದ, ದಾರ್ಢ್ಯ, ಸ್ಥಿತಿಸ್ಥಾಪಕತೆ, ಸಮತೆ. **Tonómeter** ಟೊನಾಮಿಟರ್ (ನಾ.) ಸ್ವರಕಂಪ ಮಾಪಕ, ಸ್ಥಾಯಿ ಮಾಪಕ.

Tone (ಕ್ರಿ.) ನಾದ ಕೊಡು; ಬಣ್ಣ, ಛಾಯೆ, —ಕೊಡು (Toned paper ಮು., ಮಾಸಲು ಅಂಬರ್ ಬಣ್ಣದ ಕಾಗದ); (ಸಂ.) (ವಾದ್ಯ ವನ್ನು) ಶ್ರುತಿಮಾಡು; (ಛಾಯಾಚಿತ್ರ) (ಚಿತ್ರಕ್ಕೆ) ಕಾಂತಿ ಸಂಸ್ಕಾರ ಕೊಡು, ಒಪ್ಪಕೊಡು; (ಚಿತ್ರ) ಕಾಂತಿ ಸಂಸ್ಕಾರ ಪಡೆ, ಒಪ್ಪಗೊಳ್ಳು. ಹೊಂದಿಕೊ, ಸಮರಸವಾಗು, ಮೇಳವಾಗು (Does not t. with the wallpaper); ಹದಕೊಡು. T. down (ಚಿತ್ರದ) ಬಣ್ಣವನ್ನು ತೆಳ್ಳನು, ತಗ್ಗಿಸು; (ಹೇಳಿಕೆ, ಮೊ. ಗಳ ತೀಕ್ಷ್ಣತೆಯನ್ನು) ಮಟ್ಟುಮಾಡು, ಸೌಮ್ಯಮಾಡು; ಕಾವಿಳಿಸು; ಮಟ್ಟಾಗು, ಸೌಮ್ಯವಾಗು, ತಗ್ಗು. T. up ಜೋರು—ಮಾಡು, ಆಗು; ಬಲ, ಹುರುಪು, —ಕೊಡು, ಗೊಳ್ಳು.

Tónga ಟಾಂಗ (ನಾ.) ಇಂಡಿಯದಲ್ಲಿ ಉಪಯೋಗಿಸುವ, ಎರಡು ಚಕ್ರದ ಹಗುರ ಬಂಡಿ.

Tongs ಟಾಂಗ್ಸ್ (ನಾ., ಬ. ವ.) ಇಕ್ಕುಳ, ಚಿಮುಟ, ಪಟಕಾರು, ತಂಡಸ (=Pair of t.) [Fire, sugar, -t.; Lazy-t. ದೂರ ದಲ್ಲಿರುವ ವಸ್ತುಗಳನ್ನು ತೆಗೆದುಕೊಳ್ಳಲು ಉಪಯೋಗಿಸುವ, ಹಲವು ಕಂಬಿ ಗಳನ್ನು ಉದ್ದಕ್ಕೂ ಅಡ್ಡಡ್ಡವಾಗಿ ಕೀಲಿಸಿ ಮಾಡಿರುವ ಇಕ್ಕುಳ: ಸಾಲಿಕ್ಕುಳ. Hammer & t. (Hammer ನೋಡಿ). Would not touch with a pair of t. (ಅಸಹ್ಯ, ದ್ವೇಷ, —ಸೂಚನೆಯಲ್ಲಿ) : ಇಕ್ಕುಳ ದಿಂದಲೂ, ಕೋಲಿನಿಂದಲೂ, —ಮುಟ್ಟುವುದಿಲ್ಲ.]

Tongue ಟಂಗ್ (ನಾ.) ನಾಲಗೆ, ಜಿಹ್ವೆ, ರಸನ [Put out one's t. (ಹಲ್ಲುಕಿರಿತದಲ್ಲಿ ಅಥವಾ ವೈದ್ಯ ಪರೀಕ್ಷೆಗಾಗಿ) ನಾಲಗೆ ಚಾಚು. On the tongues of men ಎಲ್ಲರ ಬಾಯಲ್ಲಿ ಬಂದು, ಎಲ್ಲರ ಬಾಯಲ್ಲೂ (ಅದೇ ಮಾತಾಗಿ), ಜನಜನಿತವಾಗಿ. Furred *or* dirty t. (ರೋಗ ಲಕ್ಷಣವಾಗಿ) ಹೆಪ್ಪು ಕಟ್ಟಿದ ನಾಲಗೆ]; (ಆಹಾರವಾಗಿ) ಪ್ರಾಣಿಗಳ ನಾಲಗೆ (Ox-, sheep's, reindeer's, t.); ಮಾತು, ವಾಕ್ [Has a ready *or* fluent t. ತಡಬಡೆಯಿಲ್ಲದೆ, ನಿರರ್ಗಳವಾಗಿ, ಮಾತಾಡುತ್ತಾನೆ. Has a sharp, caustic, t. ಹರಿತವಾಗಿ, ಕಟುವಾಗಿ, ಮಾತಾಡುತ್ತಾನೆ. Has a long t. ಬಹಳ ಮಾತಾಡು ತ್ತಾನೆ, ಹರಟುತ್ತಾನೆ. Put, speak with, one's t. in one's cheek ವ್ಯಂಗ್ಯವಾಗಿ ಮಾತಾಡು; (ಶ್ರೋತೃವಿನ ಮನವೊಲಿಸಲು) ಇಚ್ಛಕವಾಡು; ವಂಚನೆಯ ಮಾತಾಡು, ಕಪಟವಾಡು; ಒಳಗೊಂದು ಇಟ್ಟುಕೊಂಡು ಹೊರಗೊಂದು ಮಾತಾಡು. Keep a civil t. in one's head ನಯವಾಗಿ, ಮರ್ಯಾದೆಯಿಂದ, —ಮಾತಾಡು]; (ಒಂದು ಜನಾಂಗ, ಮೊ. ರ) ನುಡಿ, ಭಾಷೆ [The German t. ಜರ್ಮನ್ ಭಾಷೆ. Mother t. ತಾಯ್ನುಡಿ, ಮಾತೃಭಾಷೆ. Gift of tongues ಅಪರಿಚಿತ ಭಾಷೆಗಳಲ್ಲಿ ಮಾತಾಡುವ ಶಕ್ತಿ (ಮು., ಆದ್ಯ ಕ್ರೈಸ್ತರಿಗೆ ದೈವ ವರವಾಗಿ ಅನುಗ್ರಹಿಸಿದ್ದು); ಬಹುಭಾಷಾಭಿಜ್ಞತೆ. Confusion of tongues (ಬೈಬಲ್) (ಬೇಬೆಲ್ ಗೋಪುರ ಕಟ್ಟು ತ್ತಿದ್ದಾಗ ಒಬ್ಬರು ಮಾತಾಡಿದ್ದು ಇನ್ನೊಬ್ಬರಿಗೆ ತಿಳಿಯದಹಾಗೆ ದೇವರು ತಂದೊಡ್ಡಿದ) ನುಡಿಗೊಂದಲ, ಭಾಷೆಗಳ ಅವ್ಯವಸ್ಥೆ]; (ಕಾರ್ಯದಲ್ಲಾಗಲಿ ಆಕಾರದಲ್ಲಾಗಲಿ) ನಾಲಗೆಯಂಥ ವಸ್ತು [ಉದಾ., ಉದ್ದಕ್ಕೆ ಚಾಚಿ ರುವ ಭೂಶಿರ, ಮೋಜದ ಮುನ್ ಮೇಲ್ಭಾಗದ ತೆರಪನ್ನು ಮುಚ್ಚುವ ತೊಗಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಟ್ಟಿ, ಗಂಟೆಯ ನಾಲಗೆ, ಬಂಧನಿಯ ಕೊಕ್ಕೆಮೊಳೆ, ಗಾಡಿ ತೋಡಿರುವ ಎರಡು ಹಲಗೆ, ಮೊ. ನ್ನು ಕೂಡಿಸುವ ಅಡ್ಡಪಟ್ಟಿ, ತಕ್ಕಡಿಯ ನೂಚಿಮುಳ್ಳು, ವಾದ್ಯದ ಕಂಪನಪಟ್ಟಿ, ಜ್ವಾಲೆಯ ಚಿಮ್ಮುಲು (ಉರಿಯ ನಾಲಗೆ), ರೈಲಿನ ಕೀಲುಕಂಬಿಯ ಮೊನೆಗಂಬಿ]. Have lost my t. (ನಾಚಿಕೆ, ಮೊ.ಗಳಿಂದ) ಮಾತು ಉಡುಗಿಹೋಗಿದೆ, ನಾಲಗೆ ಕಟ್ಟಿಹೋಗಿದೆ. Find one's t. ಮತ್ತೆ ಮಾತಾಡುವ ಶಕ್ತಿ ಪಡೆ; ಬಾಯಿ, ನಾಲಗೆ, —ಬರು. Give *or* throw t. (ಬೇಟೆನಾಯಿಗಳ ವಿಷಯದಲ್ಲಿ) (ಮು., ಬೇಟೆಯ ವಾಸನೆ ಯನ್ನು ಕಂಡಾಗ) ಬಗುಳು. Hold one's t. ನಾಲಗೆ ಬಗಿಹಿಡಿದಿರು; ಮಾತಾಡದಿರು, ಮೌನವಾಗಿರು. On the tip of one's t. (Tip[1] ನೋಡಿ). Wag one's t. ನಾಲಗೆ ಆಡಿಸು; ಅತಿಯಾಗಿ, ಹಿಂದು ಮುಂದು ನೋಡದೆ, —ಮಾತಾಡು, ಹರಟು. **T.-bit** ಕಡಿವಾಣದ ಬಾಯಿಭಾಗದಮೇಲೆ ನಾಲಗೆಯಾಡಿಸದಂತೆ ಪಟ್ಟಿಹಾಕಿರುವ ಕಡಿ ವಾಣ: ನಾಲಗೆ ಕಡಿವಾಣ. **T.-bone** = Hyoid (ಆ ಪದ ನೋಡಿ). **T.-tie** (ನಾಲಗೆಯ ನಿರೋಧಕ ಅಸ್ಥಿರಜ್ಜು ಮೊಟಕಾದ್ದರಿಂದ ಉಂಟಾ ಗುವ) ನಾಲಗೆ ಕಟ್ಟು, ಮಾತುತಡೆ, ಜಿಹ್ವಾಬಂಧ. **T.-tied** ಜಿಹ್ವಾ ಬಂಧವುಳ್ಳ; (ರೂಪ.) ವಾಗ್ಬಂಧವಾಗಿರುವ, ಮಾತಾಡಲು ಅವಕಾಶ ವಿಲ್ಲದ, ನಾಲಗೆ ಕಟ್ಟಿರುವ. **(-)tongued** (ಗು.); **Tóngueless** (ಗು.); **Tónguelet** (ನಾ.) ಸಣ್ಣ, ಪುಟ್ಟ, —ನಾಲಗೆ.

Tongue (ಕ್ರಿ.) (ಕೊಳಲು, ಮೊ. ನ್ನು ನುಡಿಸುವಾಗ) ನಾಲಗೆ ಯಾಡಿಸಿ ಬಿಟ್ಟು ಬಿಟ್ಟು ನುಡಿಸು, (ಬಿಟ್ಟು ಬಿಟ್ಟು ನುಡಿಯುವಂತೆ) ನಾಲಗೆಯಾಡಿಸು. T. & groove (ಸೇರುವೆ ಹಲಗೆ, ಮೊ. ಕ್ಕೆ) ಚಾಚನ್ನೂ ಕುಳಿಯನ್ನೂ ಮಾಡು.

Tónic, etc., Tonícity. **Tone** ನೋಡಿ.

Toníght, To-night ಟುನೈಟ್ (ಕ್ರಿ. ವಿ., ನಾ.) ಈ, ಇವೊತ್ತು, —ರಾತ್ರಿ.

Tón(n)ish ಟಾನಿಷ್ (ಗು.) (ಈಗ ವಿರ. ಪ್ರ.) ಪ್ರಚಲಿತ—ರೀತಿಯ, ಶೈಲಿಯ, ಮಾದರಿಯ; ನಯನಾಜೂಕಿನ. **Tón(n)ishness** (ನಾ.)

Tónite ಟೋನೈಟ್ (ನಾ.) ಒಂದು ಪ್ರಬಲ ಸಿಡಿಹತ್ತಿ.

Tonk ಟಾಂಕ್ (ಕ್ರಿ. ಸಕ.) (ಅನಂ.) (ಚೆಂಡನ್ನು, ವ್ಯಕ್ತಿಯನ್ನು) ಚೆನ್ನಾಗಿ ಹೊಡೆ, ಕುಟ್ಟಿ ಬಡಿ; (ಸ್ಪರ್ಧೆಯಲ್ಲಿ) ಹೊಡೆದುಹಾಕು, ಸುಲಭವಾಗಿ ಸೋಲಿಸು.

Tónka bean ಟಾಂಕ ಬೀನ್ (ನಾ.) ಪರಿಮಳದ್ರವ್ಯಗಳಲ್ಲಿ ಉಪ ಯೋಗಿಸುವ, ಗಿಯಾನ, ಮೊ. ದೇಶಗಳಲ್ಲಿ ಬೆಳೆಯುವ, ಒಂದು ಸುವಾಸನೆಯ ಬೀಜ: ಟಾಂಕ ಬೀಜ.

Tónnage. **Ton**[1] ನೋಡಿ.

Tonneau (F) ಟಾನೋ (ನಾ.) (ಕೆಲವು ಮೋಟಾರು ಬಂಡಿಗಳಲ್ಲಿ) ಹಿಂದಿನ ಪೀಠಗಳಿರುವ ಭಾಗ, ಹಿಂಭಾಗ.

-tónner. **Ton**[1] ನೋಡಿ.

Tonómeter (ನಾ.) **Tone** ನೋಡಿ.

Tónsil ಟಾನ್ಸಿಲ್, ಟಾನ್ಸ್‌ರ್ (ನಾ.) ಗಂಟಲಿನ ಇಕ್ಕಡೆಗಳಲ್ಲಿಯೂ ಇರುವ ಗ್ರಂಥಿ: ಗಲಗ್ರಂಥಿ, ಮೊಡಿಕೆ, ಟಾನ್ಸಿಲ್. **Tónsillar** (ಗು.); **Tonsillítis** (ನಾ.) ಗಲಗ್ರಂಥಿಯ ಉರಿಯೂತ.

Tónsor ಟಾನ್ಸರ್ (ನಾ.) ಕ್ಷೌರಕ, ಹಜಾಮ. **Tonsórial** ಟಾನ್ಸೋ(ಅ)ರಿಯಲ್ (ಗು.) (ಹಾಸ್ಯ ಪ್ರ.) ಕ್ಷೌರಕನ, ಕ್ಷೌರದ, ಕ್ಷುರಕರ್ಮದ. **Tónsure** ಟಾನ್ಶರ್ (ನಾ., ಕ್ರಿ. ಸಕ.) ಚೂಡಾಕರ್ಮ, ಚೌಲ; (ಧರ್ಮದೀಕ್ಷೆ, ಸಂನ್ಯಾಸ, ಮೊ. ನ್ನು ಸ್ವೀಕರಿಸುವವರಿಗೆ ಮಾಡುವ) ಮುಂಡನ, ವಪನ, ಕ್ಷೌರ(ಕರ್ಮ); (ಸಂನ್ಯಾಸಿ, ಪಾದ್ರಿ, ಮೊ. ರ) ಕ್ಷೌರಮಾಡಿದ, ಬೋಳು, —ತಲೆ; (ರೂಪ.) ಧರ್ಮ ದೀಕ್ಷೆ. (ಕ್ರಿ.) ಕ್ಷೌರಮಾಡು, ತಲೆಬೋಳಿಸು; (ಧರ್ಮ)ದೀಕ್ಷೆ ಕೊಡು.

Tontíne ಟಾಂಟೀನ್ (ನಾ.) ಹಲವರು ಪಾಲುದಾರರು ಹಣ ಹಾಕಿ, ಆ ನಿಧಿಯಿಂದ ಬರುವ ವರ್ಷಾಶನವನ್ನು ಎಲ್ಲರೂ ಸಮವಾಗಿ ಹಂಚಿ ಕೊಳ್ಳುವಂತೆಯೂ, ಸತ್ತುಹೋದ ಪಾಲುದಾರರ ಭಾಗ ಉಳಿದವರಿಗೆ ಹೋಗುತ್ತ ಕೊನೆಯಲ್ಲಿ ಉಳಿದುಕೊಳ್ಳುವವನಿಗೆ ಎಲ್ಲವೂ ಸೇರು ವಂತೆಯೂ ಏರ್ಪಡಿಸಿದ ಒಂದು ವರ್ಷಾಶನ ಪದ್ಧತಿ: ಟಾಂಟೀನ್ ವರ್ಷಾಶನ ಪದ್ಧತಿ. T. policy of insurance ವಿಮಾದಾರರು ಒಂದು ನಿರ್ದಿಷ್ಟ ಕಾಲಾವಧಿಯವರೆಗೆ ಲಾಭಾಂಶ, ಮೊ. ನ್ನು ಪಡೆಯದೆ, ಅವಧಿ ಮುಗಿದಾಗ ಜೀವಂತವಾಗಿರುವ ವಿಮಾದಾರರು ಹಣವನ್ನು ಹಂಚಿಕೊಳ್ಳುವ ಏರ್ಪಾಡಿನ ವಿಮಾಪತ್ರ: ಟಾಂಟೀನ್ ವಿಮಾಪತ್ರ. T. period ಟಾಂಟೀನ್ ವಿಮಾ—ಕಾಲಾವಧಿ, ಗಡು. (ಈ ಏರ್ಪಾಡನ್ನು ಆಚರಣೆಗೆ ತಂದ Lorenzo Tonti ಎಂಬಾತನ ಹೆಸರಿನಿಂದ)

Too ಟೂ (ಕ್ರಿ., ಗು.) ಅತಿ(ಯಾದ), ಮಿತಿಮೀರಿ(ದ), ತೀರ, ಅತ್ಯಂತ [T. ripe for cooking ಅಡಿಗೆಗೆ ಉಪಯೋಗಿಸಲಾಗದಷ್ಟು ಮಾಗಿ ಹೋದ, ಬಲಿತುಹೋದ. T. large for me ನನಗೆ ತುಂಬ ದೊಡ್ಡದು. Is t. fond of comfort ಅತಿ ಸೌಖ್ಯಾಭಿಲಾಷಿಯಾಗಿದ್ದಾನೆ. He was (one) t. many for us (Many ನೋಡಿ). T. much (of a good thing) (ಒಳ್ಳೆಯದಾದರೂ) ಅತಿ, ಸಹಿಸಲಾಗದಷ್ಟು (This is really t. much *or* t. much of a good thing ಇದು ತೀರ ಅತಿ). (ಕೃತಕ ಪ್ರ. ಅಥವಾ ಅತ್ಯುತ್ಸಾಹದ ಪ್ರ.) Is quite t., is t. (delightful, etc.) ತುಂಬ, ಅತ್ಯಂತ (ಹರ್ಷಕರ, ಮೊ.)]. —ಊ, ಕೂಡ, ಸಹ [Take the others t. ಮಿಕ್ಕವನ್ನೂ ತೆಗೆದುಕೊ. Mean to do it t. (ಹೆದರಿಸುವುದು, ಹೇಳುವುದು, ಮೊ. ಮಾತ್ರವಲ್ಲದೆ) ಮಾಡಲೂ ಉದ್ದೇಶವಿದೆ]; ಅಲ್ಲದೆ (Achieved, t., at small cost ಸಾಧಿಸಿದನು ಮಾತ್ರವಲ್ಲ, ಕಡಮೆ ವೆಚ್ಚದಲ್ಲಿ ಸಾಧಿಸಿ ದನು). **T.-t.** (ಗು.) ಅತ್ಯಂತ ಸೊಗಸಾದ; ಬಹಳ ಬಹಳ, ಅತಿ, ವಿಪರೀತ (Her clothes are t.-t.; A t.-t. radical)

Took. Take ಧಾತುವಿನ ಭೂತ ರೂಪ.

Tool ಟೂಲ್ (ನಾ.) ಮುಟ್ಟು, ಆಯುಧ, ಸಲಕರಣೆ, ಉಪಕರಣ, ಸಾಧನ (Carpenter's, Engraver's, tools); ಯಂತ್ರ ತಯಾರಿಸುವ ಯಂತ್ರ; ಉಪಕರಣ, ಸಾಧನ, —ಯಂತ್ರ (= Machine-t.) (ಉದಾ., ಕಡೆತದ ಯಂತ್ರ); (ರೂಪ.) ಸಾಧ ನೋಪಕರಣ, ಸಾಧನೋಪಾಯ, ಸಾಧಕ (Literary tools ಸಾಹಿತ್ಯೋಪಕರಣಗಳು, ಸಾಹಿತ್ಯ ಸಾಧಕಗಳು. The tools of one's trade ತನ್ನ ಕಸಬಿನ ಸಾಧನೋಪಕರಣಗಳು); ಮತ್ತೊಬ್ಬರ ಉದ್ದೇಶಕ್ಕೆ ಸಾಧನಮಾತ್ರವಾಗಿ ಉಪಯೋಗವಾಗುವ ವ್ಯಕ್ತಿ: ಕೈಗೊಂಬೆ, ಉಪಕರಣ ಮಾತ್ರದವನು; (ಪುಸ್ತಕದ ರಟ್ಟುಕಟ್ಟು) ರಟ್ಟಿನಮೇಲೆ ಚಿತ್ರವೊತ್ತುವ ಮುದ್ರೆ; ಚಿತ್ರಾಂಕಕ; [Broad t. = Tooler. Edge(d) t. (Edge ನೋಡಿ)]. **T.-holder** (ಕಡೆತದ ಯಂತ್ರದಲ್ಲಿ) ಮುಟ್ಟುಹಿಡಿಕೆ, ಉಪಕರಣ ಗ್ರಾಹಿ; (ಹಲವು ಬಗೆಯ ಸಲಕರಣೆಗಳಿಗೆ ಉಪಯೋಗವಾಗುವ) ಹಿಡಿ(ಕೆ). **T.-post, -rest** (ಕಡೆತದ ಯಂತ್ರದಲ್ಲಿ) ಅಲಗು ಹಿಡಿ(ಕೆ); ಅಲಗಾಸರೆ. **Toóler** (ನಾ.) (ಕ್ರಿಯಾರ್ಥಗಳಲ್ಲಿ); ಕಲ್ಲುಕುಟಿಗನ ಅಗಲಬಾಯ ಉಳಿ. **Toóling** (ನಾ.) ಅಗಲ ಉಳಿಯಲ್ಲಿ ಕಲ್ಲು ಕೆತ್ತುವುದು; ಅಗಲುಳಿ ಕೆತ್ತನೆ; (ಪುಸ್ತಕದ ರಟ್ಟಿನಮೇಲೆ) ಚಿತ್ರಾಂಕನ (ಮಾಡು ವುದು) (Blind t. ಗಿಲೀಟು ಹಾಕದ, ಸಾದಾ, —ಚಿತ್ರಾಂಕನ)

Tool (ಕ್ರಿ.) (ಕಲ್ಲನ್ನು) ಉಳಿಯಿಂದ ಕೆತ್ತು; (ಪುಸ್ತಕದ ರಟ್ಟಿನ ಮೇಲೆ) ಚಿತ್ರಾಂಕನ ಮಾಡು; ಆಯುಧದಿಂದ ಕೆಲಸಮಾಡು, ಆಯುಧ ಉಪಯೋಗಿಸು; (ಅನಂ.) (ಬಂಡಿ, ಮೊ. ನ್ನು ಅನುದ್ದಿಷ್ಟವಾಗಿ, ನಿಧಾನವಾಗಿ) ಹೊಡೆದುಕೊಂಡು ಹೋಗು, ಸವಾರಿಮಾಡಿಕೊಂಡು ಹೋಗು (ಅನೇಕ ವೇಳೆ *along* ಮೊ. ಉಪ. ದೊಡನೆ)

Toon ಟೂನ್ (ನಾ.) ಈಸ್ಟ್ ಇಂಡಿಯದ ಒಂದು ಮರ; ತುನ್ನ(ಕ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Toot ಟೂಟ್ (ಕ್ರಿ., ನಾ.) (ಕೊಂಬು, ಶಿಲ್ಪಿ, ಮೊ. ನ್ನು) (ಗಟ್ಟಿಯಾಗಿ, ಕರ್ಕಶವಾಗಿ) ಊದು; (ಕೊಂಬು, ಮೊ. ವು) (ಕರ್ಕಶ) ಧ್ವನಿ —ಮಾಡು, ಕೊಡು; (ಗ್ರೌಸ್ ಹಕ್ಕಿಯ ವಿಷಯದಲ್ಲಿ) ಕೂಗು. (ನಾ.) (ಕೊಂಬು, ಕಹಳೆ, ಮೊ. ಗಳ) ಕೂಗು, ಮೊಳಗು, ಧ್ವನಿ.

Tooth ಟೂತ್ (ನಾ.; ಬ. ವ. Teeth ಟೀತ್) ಹಲ್ಲು, ದಂತ [Canine, eye-, milk, molar[1], wisdom, t. (ಆಯಾ ಪದ ನೋಡಿ). Artificial, false, t. ಕಟ್ಟಿಸಿದ ಹಲ್ಲು; ಕೃತಕ ಹಲ್ಲು]; ಹಲ್ಲಿನಾಕಾರದ ವಸ್ತು (ಚಕ್ರ, ಗರಗಸ, ಬಾಚಣಿಗೆ, ಮೊ. ಗಳ ಹಲ್ಲು, ಮೊನೆ). Sweet t. (Sweet ನೋಡಿ). Cast (thing) in person's teeth ಆಕ್ಷೇಪಿಸು, ಮೂದಲಿಸು. In the teeth of (ಪ್ರತಿಭಟನೆ, ವಿರೋಧ, ಮೊ. ವು) ಇದ್ದರೂ, (—ಮೊ. ಗಳ) ಲಕ್ಷ್ಯವಿಲ್ಲದೆ; (ಸೂಚನೆ, ಮೊ. ಗಳಿಗೆ) ಪ್ರತಿಯಾಗಿ, ವಿರೋಧವಾಗಿ; (ಗಾಳಿ, ಮೊ. ಕ್ಕೆ) ಎದುರಾಗಿ. Armed to the teeth ಪೂರ್ತಿಯಾಗಿ, ಆಪಾದಮಸ್ತಕವಾಗಿ, —ಕೈದು ಧರಿಸಿ, ಶಸ್ತ್ರ ಸನ್ನದ್ಧನಾಗಿ. Cut one's eye-teeth ಲೌಕಿಕ ವಿವೇಕ ಪಡೆ, ಲೋಕ ವ್ಯವಹಾರ ತಿಳಿದುಕೊ. Escape by the skin of one's teeth (Skin ನೋಡಿ). Fight, struggle, t. & nail ಶಕ್ತಿಯನ್ನೆಲ್ಲಾ ಬಿಟ್ಟು, ಪಟ್ಟುಹಿಡಿದು, —ಹೋರಾಡು, ಹೆಣಗು. From the teeth outwards (ಪ್ರಾಚೀ. ಪ್ರ.) ಅಪ್ರಮಾಣಿಕವಾಗಿ, ತುದಿನಾಲಗೆಯಿಂದ; ಒಳಗೊಂದು ಇಟ್ಟುಕೊಂಡು ಹೊರಗೊಂದು ಆಡುತ್ತ. Lie in one's teeth (Lie[1] ನೋಡಿ). Set one's teeth on edge (Edge ನೋಡಿ). Show one's teeth ಬೆದರಿಸು, ಹೆದರಿಸು. Take bit between teeth (Take ನೋಡಿ). **Toóthache** ಹಲ್ಲುನೋವು. **T.-billed** (ಹಕ್ಕಿಯ ವಿಷಯದಲ್ಲಿ) ಕೊಕ್ಕಿನ ಏಣಿನಲ್ಲಿ ಹಲ್ಲುಗಳಂಥ ಮೊನೆಗಳುಳ್ಳ: ಹಲ್ಲು ಕೊಕ್ಕಿನ. **T.-brush** ಹಲ್ಲು(ಜ್ಜುವ) ಕೂರ್ಚ. **T.-comb** ಒತ್ತಾಗಿ ಹಲ್ಲು ಬಿಡಿಸಿರುವ ಬಾಚಣಿಗೆ: ಸಣ್ಣ ಹಲ್ಲು ಬಾಚಣಿಗೆ. **T. ornament** (ವಾ. ಶಾ.) ದಂತಾಲಂಕಾರ. **T.-paste** ದಂತ—ಮಂಜನ, ಶುಧ್ರಕ; ಹಲ್ಲು ಸರಿ. **T.-pick** (ಹಲ್ಲುಸಂದಿನಲ್ಲಿ ಸಿಕ್ಕಿಕೊಂಡ ಪದಾರ್ಥವನ್ನು ತೆಗೆಯುವ) ಹಲ್ಲುಕಡ್ಡಿ. **T.-powder** ಹಲ್ಲುಪುಡಿ. **Toóthful** (ನಾ.) (ಮದ್ಯ, ಮೊ. ಗಳ) ಸಣ್ಣ ಗುಟುಕು. **Toóthless** (ಗು.); **Toóthlet** (ನಾ.) ಸಣ್ಣ, ಕಿರು, —ಹಲ್ಲು. **Toóthsome** (ಗು.) ರುಚಿಕರವಾದ, ಸವಿಯಾದ. **Toóthsomely** (ಕ್ರಿ. ವಿ.); **Toóthsomeness** (ನಾ.)

Tooth (ಕ್ರಿ.) ಹಲ್ಲು—ಮಾಡು, ಇಡು, ಬಿಡಿಸು; (ಹಲ್ಲುಚಕ್ರಗಳ ವಿಷಯದಲ್ಲಿ) ಹಲ್ಲು—ಕೂಡು, ಕುಳಿತುಕೊ, ಹೊಂದಿಕೊ. **-toóthed** (ಗು.); **Toóthing** (ನಾ.) (ಕ್ರಿಯಾರ್ಥಗಳಲ್ಲಿ); ಗೋಡೆಯನ್ನು ಮುಂದುವರಿಸಿ ಕಟ್ಟಲು ಅನುಕೂಲಿಸುವಂತೆ ಅದರ ಕೊನೆಯಲ್ಲಿ ಹಲ್ಲುಗಳಂತೆ ಚಾಚಿಸಿದ ಇಟ್ಟಿಗೆಗಳು ಅಥವಾ ಕಲ್ಲುಗಳು: ಹಲ್ಲುವರಿಸೆ. **T.-plane** ಮೇಲ್ಮೈಯನ್ನು ತರಕಲು ಮಾಡಲು ಉಪಯೋಗಿಸುವ, ಹಲ್ಲುವರಿಸೆಯುಳ್ಳ ಹಾಕಿದ, ತೋಪಡ: ತರಚು, ಹಲ್ಲು, —ತೋಪಡ.

Toótle ಟೂಟ್ಲ್ (ಕ್ರಿ. ಅಕ.) (ಮು., ಕೊಳಲನ್ನು) ಮೆತ್ತಗೆ, ಮೇಲಂದ ಮೇಲೆ, —ನುಡಿಸು.

Toótsy(-woótsy) ಟೂಟ್ಸಿ(ವೂಟ್ಸಿ) (ನಾ.) (ಮಕ್ಕಳಮಾತು) ಅಡಿ, ಪಾದ.

Top[1] ಟಾಪ್ (ನಾ., ಗು.) ತುದಿ, ನೆತ್ತಿ, ತಲೆ, ಅಗ್ರ, ಶಿಖರ [Hill-t. ಬೆಟ್ಟದ ನೆತ್ತಿ. At the t. of the tree (ರೂಪ.) (ಉದ್ಯೋಗ, ಮೊ. ಗಳ) ತುತ್ತತುದಿಯಲ್ಲಿ, ಉಚ್ಚಸ್ಥಾನದಲ್ಲಿ. Come to the t. ಅಗ್ರಸ್ಥಾನ ಪಡೆ, ಪ್ರಾಶಸ್ತ್ಯ ಪಡೆ. On t. ಮೇಲೆ. On the t. of —ರ ಜೊತೆಗೆ, ಮೇಲೆ]; ಗಡ್ಡೆ ಸಸ್ಯಗಳ ನೆಲದ ಮೇಲಣ (ಎಲೆ, ಮೊ.) ಭಾಗ: ನೆತ್ತಿ (Beet, turnip, -tops); (ನೆಲ, ಮೇಜು, ಪುಸ್ತಕ, ಮೋಜ, ಮೊ. ಗಳ) ಮೇಲ್ಭಾಗ; (ಬಂಡಿಯ) ಚಾವಣಿ; (ಡಬರಿ, ಮೊ. ಗಳ) ಮುಚ್ಚಳ; (ಪುಸ್ತಕ, ಪುಟ, ಮೊ. ಗಳ) ಮೇಲು—ಪಕ್ಕ, ಅಂಚು (Gilt t.); ಅತ್ಯಂತ ಮೇಲುದರ್ಜೆ(ಯವನು), ಅಗ್ರಸ್ಥಾನ(ದವನು) [Came out (at the) t. of the school ಪಾಠಶಾಲೆಗೆಲ್ಲಾ ಮೇಲನವನಾಗಿ, ಮೊದಲನೆಯವನಾಗಿ, ಬಂದನು. The t. of the table ಭೋಜನ ಗೋಷ್ಠಿಯ, ಊಟದ ಮೇಜಿನ, —ಅಗ್ರ(ಸ್ಥಾನ)]; ತುತ್ತತುದಿ, ಅತ್ಯಂತ ಮೇಲ್ಮಟ್ಟ, ಪರಮಾವಧಿ, ಪರಾಕಾಷ್ಠೆ (Realised the t. of my ambition ನನ್ನ ಹೆಬ್ಬಯಕೆಯ ತುತ್ತತುದಿಯನ್ನು ಮುಟ್ಟಿದೆನು. Called at the t. of his voice ಶಕ್ತಿಯೆಲ್ಲಾ ಬಿಟ್ಟು ಕೂಗಿದನು, ಉಚ್ಚಕಂಠದಲ್ಲಿ ಕೂಗಿದನು); (ತಲೆಯ) ನೆತ್ತಿ, ಮುಡಿ, ಶಿಖೆ [From t. to toe (Toe ನೋಡಿ)]; [The t. of the morning (to you) (ಐರ್ಲೆಂಡ್ ಜನರ ಬೆಳಗಿನ ವಂದನೆಯ ಒಕ್ಕಣೆ): (ನಿನಗೆ) ಸುಪ್ರಭಾತ]; (ನಾವೆ) ಮೇಲ್ಕೂವೆಯ ಹಗ್ಗಹುರಿಗಳನ್ನು ವಿಸ್ತರಿಸಲು ಅನುಕೂಲಿಸುವ ಕೆಳ ಕೂವೆಯ ಮೇಲ್ತುದಿಯ ಕಟ್ಟೆ, ಜಗಲಿ: ತಲೆ, ನೆತ್ತಿ (—ಕಟ್ಟೆ) (Foretop ಮುಂಗೂವೆಯ ನೆತ್ತಿ. Maintop ಮುಖ್ಯ ಕೂವೆಯ ನೆತ್ತಿ. Mizzentop ಹಿಂಗೂವೆಯ ನೆತ್ತಿ); (ಬ. ವ. ದಲ್ಲಿ) ಮುಖಭಾಗ ಮಾತ್ರ ಮುಲಾಮು ಮಾಡಿದ ಲೋಹದ ಗುಂಡಿಗಳು: ಮುಖ ಮುಲಾಮಿನ ಗುಂಡಿಗಳು; (ಮು., ಒಂದು ಅಳತೆಯಾಗಿ) (ಕೂದಲು, ನಾರು, ಮೊ. ಗಳ) ಕುಚ್ಚು (=೧⅔ ಪೌಂಡು ತೂಕ). (ಗು.) ಅತ್ಯಂತ ಮೇಲಿನ, ಅಗ್ರಸ್ಥ [The t. rail ನೆತ್ತಿಗಂಬಿ. At t. speed ಅತ್ಯಂತ ವೇಗವಾಗಿ. T. dog (ಅನಂ.) ಗೆದ್ದವನು; ಒಡೆಯ, ಧಣಿ (ಎದುರು ಪದ: Under dog)] **Tópmost** (ಗು.) ತುತ್ತತುದಿಯ, ಅತ್ಯಂತ ಮೇಲಿನ. **T. (-boot)** ಸಾ., ಬೇರೆಯ ಪದಾರ್ಥದ ಅಥವಾ ಬೇರೆಯ ಬಣ್ಣದ ಎತ್ತರಿಸಿದ ಮೇಲ್ಭಾಗವುಳ್ಳ, ಸಾ., ಸವಾರರು ತೊಡುವ ಮೋಜ: ಮೇಲ್ನೆತ್ತಿ ಮೋಜ. **T.-coat** ಮೇಲಂಗಿ. **T.-dress** (ಗೊಬ್ಬರ, ಮೊ. ನ್ನು ಉತ್ತು ನೆಲದೊಳಕ್ಕೆ ಸೇರಿಸದೆ) ನೆಲದ ಮೇಲ್ಗಡೆ, ಮೇಲ್ಮೈಗೆ, —ಹಾಕು. **T.-dressing** (ನಾ.) (ಹೀಗೆ) ಮೇಲ್ಗಡೆ —ಹಾಕುವುದು, ಹಾಕಿದ್ದು. **Topgállant** (ಟಾಪ್‌ಗ್ಯಾಲಂಟ್, ಟಗ್ಯಾಲಂಟ್) (ಮೇಲ್ಕೂವೆಗೂ ಮೇರ್‌ಹಾಯಿಗೂ ಮೇಲಿರುವ) ತುದಿ, ನೆತ್ತಿ, —ಕೂವೆ, ಹಾಯಿ, ತೊಲೆ, ಹಗ್ಗ. **T. hamper** ಹಗುರವಾದ ಮೇರ್‌ಹಾಯಿ ಹಗ್ಗಗಳು. **T. hat** ಎತ್ತರವಾದ ರೇಷ್ಮೆ ಟೊಪ್ಪಿಗೆ. **T.-heavy** (ದೃಢವಾಗಿ ನಿಲ್ಲಲಾರದಷ್ಟು) ತಲೆ (ಕಡೆ) ಭಾರವಾದ, ಉರುಳಿಕೊಳ್ಳುವ (ಯೋಜನೆ, ಮೊ. ಗಳ ವಿಷಯದಲ್ಲಿ ರೂಪ.). **T.-hole** (ಅನಂ.) ಮೊದಲನೆಯ ದರ್ಜೆಯ, ಸರ್ವೋತ್ಕೃಷ್ಟ. **Tópknot** (ಹಿಂದೆ ಹೆಂಗಸರು ಧರಿಸುತ್ತಿದ್ದ) ನೆತ್ತಿಯ ಮುಡಿಪಟ್ಟಿಯ ಕುಣಿಕೆ, ಗಂಟು; ನೆತ್ತಿಯ ಮುಡಿ, ಶಿಖೆ, ಚೂಡ. **T.-lantern, -light** (ನೌಕಾಧಿಪತಿಯ ಹಡಗಿನ ಹಿಂಗೂವೆಯಲ್ಲಿಯ) ನೆತ್ತಿ—ದೀಪ, ಬೆಳಕು. **Tópman** ಮೇಲ್ಗಡೆಯವನು (ಮು., ಗರಗಸದಿಂದ ಮರ ಕೊಯ್ಯುವಲ್ಲಿ: ಮೇಲ್ಗಡೆ ನಿಂತವನು); (ನಾವೆ) ಕೂವೆನೆತ್ತಿಯಲ್ಲಿ ಕೆಲಸಮಾಡುವವನು: ನೆತ್ತಿಗ (=**Tópsman**). **Tópmast** ಮೇಲ್ಕೂವೆ; ನೆತ್ತಿಕೂವೆ. **Tópsail** ಮೇರ್, ನೆತ್ತಿ, —ಹಾಯಿ, ಪಟ. **Topsáwyer** (ಮರ ಕೊಯ್ಯುವಲ್ಲಿ) ತಲೆ ಕಡೆಯ ಗರಗಸದವನು, ಮೇಲ್ಗಡೆಯವನು; (ರೂಪ.) ಅಗ್ರಸ್ಥ, ಮೇಲ್ದರ್ಜೆಯವನು. **Topsides** (ಹಡಗಿನ ವಿಷಯದಲ್ಲಿ) ನೀರುಮಟ್ಟದ ಮೇಲ್ಭಾಗದ ಪಕ್ಕಗಳು: ಮೇಲ್ಪಕ್ಕಗಳು.

Top (ಕ್ರಿ. ಸಕ.) ಚಾವಣಿ, ಮುಚ್ಚಳ, ಟೋಪಿ, ಕುಲಾವಿ, —ಇಡು, ಹಾಕು, ಮಾಡು; (ನಾವೆ) (ತೊಲೆ, ಮೊ. ಗಳ) ಒಂದು ಕೊನೆಯನ್ನು, ತುದಿಯನ್ನು, —ಎತ್ತರಿಸು, ಮೇಲಕ್ಕೆ ಮಾಡು; (ಬೆಳವಣಿಗೆಯನ್ನು ಉತ್ತಮಪಡಿಸುವುದಕ್ಕಾಗಿ) ಗಿಡದ ತಲೆ ಕಡಿ(ದು ಕಸಿಮಾಡು), ತುದಿ ಕತ್ತರಿಸು; (ಬೆಟ್ಟ, ಮೊ. ಗಳ) ತುದಿ, ನೆತ್ತಿ, ಶಿಖರ, —ಮುಟ್ಟು, ಸೇರು; ತುದಿಗೆ—ಏರು, ಹತ್ತು; (—ಇಂತ) ಮೇಲಿರು, ಎತ್ತರವಾಗಿರು, ಉನ್ನತವಾಗಿರು; (—ಇಂತ) ಮೇಲಾಗಿರು, ಮೀರಿಸಿರು, ಮಿಗಿಲಾಗು (Tops all I ever saw); (ಗಾಲ್ಫ್ ಆಟದಲ್ಲಿ) ಚೆಂಡಿನ ನೆತ್ತಿಗೆ ಹೊಡೆ; ಎತ್ತರವಾಗಿರು (He tops 6 ft). T. one's part ತನ್ನ ಪಾತ್ರವನ್ನು ಅತ್ಯಂತ ಚೆನ್ನಾಗಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವೋತ್ಕೃಷ್ಟವಾಗಿ, ನಿರ್ವಹಿಸು. T. off *or* up ಕೊನೆ ಮುಟ್ಟಿಸು, ಮುಗಿಸು; ಮುಗಿತಾಯ ಕೊಡು, ಕಳಸವಿಡು. **Tópper** (ನಾ.) (ಕ್ರಿಯಾರ್ಥಗಳಲ್ಲಿ); (ಬಳ. ಮಾ.) = Top hat; (ವ್ಯಾಪಾರದ ಘಾತು : ಪ್ರದರ್ಶನಕ್ಕಾಗಿ ಬುಟ್ಟಿಲನ ನೆತ್ತಿಯಲ್ಲಿಟ್ಟ) ಆಯಪಾಣಿ (ಹಣ್ಣು, ಮೊ.), (ತಲೆ)ಮೇಲಿನದು. **Tópping** (ಗು.); **Tóppingly** (ಕ್ರಿ. ವಿ.)

Top² ಟಾಪ್ (ನಾ.) ಬುಗುರಿ, ಬಂಗರ [Humming, Peg, Whip(ping), -t. (ಆಯಾ ಪದ ನೋಡಿ). Sleep like a t. (Sleep ನೋಡಿ)]. **T.-shell** ಬುಗುರಿಚಿಪ್ಪಿನ ಮೀನು.

Tópaz ಟೋಪ್ಯಾಸ್ (ನಾ.) ಹಳದಿ, ಬಿಳುಪು, ಹಸುರು, ನೀಲಿ ಬಣ್ಣದ ಅಥವಾ ಬಣ್ಣವಿಲ್ಲದ, (ನಸು) ಪಾರದರ್ಶಕವಾದ ಒಂದು ಅಲ್ಯೂಮಿನಿಯಂ ಸಿಲಿಕೇಟ್ ಖನಿಜ : ಗೋಮೇಧಿಕ (False t. ಒಂದು ಬಗೆಯ ಹಳದಿ ಬೆಣಚುಕಲ್ಲು); ಒಂದು ಬಗೆಯ ಹಾಡುಹಕ್ಕಿ. **Topázolite** ಟೊಪ್ಯಾಸೊಲೈಟ್ (ಗು.) ಹಳದಿ ಅಥವಾ ಹಸುರು ಪದ್ಮರಾಗ.

Tope¹ ಟೋಪ್ (ಕ್ರಿ. ಅಕ.) (ವಾಡಿಕೆಯಾಗಿ) ಮಿತಿಮೀರಿ ಮದ್ಯ ಕುಡಿ. **Tóper** (ನಾ.) ಅತಿಕುಡುಕ.

Tope² ಟೋಪ್ (ನಾ.) (ಆಂ. ಇಂ.) ತೋಪು.

Tope³ ಟೋಪ್ (ನಾ.) (ಬೌದ್ಧ) ಸ್ತೂಪ.

Tope⁴ ಟೋಪ್ (ನಾ.) ಸಣ್ಣ ಜಾತಿಯ ಷಾರ್ಕ್ ಮೀನು.

Toph ಟಾಫ್, **Tóphus** ಟೋಫಸ್ (ನಾ.) ಸಂಧಿವಾತ ರೋಗಿಗಳಲ್ಲಿ ಹಲ್ಲಿನ ಸುತ್ತ ಮತ್ತು ಕೀಲುಗಳ ಮೇಲುಗಡೆ ಕಟ್ಟುವ ಹೆಪ್ಪು : ಸಂಧಿವಾತದ (ಹಲ್ಲು)ಹೆಪ್ಪು. **Topháceous** (ಗು.)

Tóphet ಟೋಫೆಟ್ (ನಾ.) ಮೊದಲು ನರಬಲಿಗಳ ಮೂಲಕ ವಿಗ್ರಹಾರಾಧನೆಗೆ ಉಪಯೋಗಿಸುತ್ತಿದ್ದು, ಕಾಲಕ್ರಮದಲ್ಲಿ ಊರಿನ ತಿಪ್ಪೆಯಾಗಿ ಅದನ್ನು ಸುಡಲು ಸದಾ ಬೆಂಕಿಯುರಿಸುತ್ತಿದ್ದ, ಜೆರೂಸಲೆಂ ಬಳಿಯ ಹಿನ್ನೊಂ ಕಣಿವೆಯಲ್ಲಿಯ ಒಂದು ಸ್ಥಳ ; ನರಕ.

Topi ಟೋಪಿ, **Topee** ಟೊಪೀ (ನಾ.) ಟೋಪಿ ; ಬೆಂಡು ಟೋಪಿ (= Sola t.)

Tópia (L) ಟೋಪಿಯ (ನಾ.) (ರೋ. ಪ್ರಾ.) ವಿವಿಧ ಅಥವಾ ವಿಚಿತ್ರ ಭೂದೃಶ್ಯಗಳ ಭಿತ್ತಿಚಿತ್ರ (ಶೈಲಿ)

Tópiary ಟೋಪಿಯರಿ (ಗು.) The t. art ಗಿಡ, ಪೊದೆ, ಮೊ. ನ್ನು ಅಲಂಕಾರದ ಆಕಾರಗಳಲ್ಲಿ ಕತ್ತರಿಸುವ ಕಲೆ: ನಸ್ಯ —ಪರಿಷ್ಕರಣ ಕಲೆ, ಅಲಂಕರಣ ಕಲೆ. **Topiárian** —ಯೇರಿಯನ್ (ಗು.); **Tópiarist** —ಯರಿಸ್ಟ್ (ನಾ.)

Tópic ಟಾಪಿಕ್ (ನಾ.) (ಚರ್ಚೆ, ಸಂಭಾಷಣೆ, ಭಾಷಣ, ಮೊ. ಗಳ) ವಸ್ತು, ವಿಷಯ, ಪ್ರಕರಣ ; (ತರ್ಕ, ಅಲಂ.) ವಾದಾಂಶಗಳ ನ್ನೊದಗಿಸುವ ಪ್ರಕರಣ : ವಾದ ಪ್ರಕರಣ (These strong topics in favour of the House of Lancaster). **Tópical** (ಗು.) ವಿಷಯಗಳ ; ಪ್ರಸಕ್ತ, ಪ್ರಕೃತ, ಸ್ಥಳೀಯ, —ವಿಷಯಕ್ಕೆ ಸಂಬಂಧಪಟ್ಟ (T. allusion, song); (ವೈ. ಶಾ.) ಶರೀರದ ಒಂದು ಭಾಗಕ್ಕೆ ಮಾತ್ರ ಸಂಬಂಧಿಸಿದ ; ಸ್ಥಳಿಕ. **Tópically** (ಕ್ರಿ. ವಿ.)

Topógraphy ಟೊಪಾಗ್ರಫಿ (ನಾ.) ಒಂದು ಊರು, ಪ್ರಾಂತ, ಮೊ. ಗಳ ಸ್ವಾಭಾವಿಕ ಮತ್ತು ಕೃತಕ ಸ್ವರೂಪ ಲಕ್ಷಣಗಳ ವಿವರ ವರ್ಣನೆ, ನಕ್ಷಾ ನಿರೂಪಣೆ : ಸ್ಥಲ, ಪ್ರದೇಶ, —ವಿವರಣೆ, ನಕ್ಷೆ, ಸ್ವರೂಪ, ಲಕ್ಷಣ; (ಅಂ. ರ. ಶಾ.) ಒಳಗಡೆಯ ಅಂಗವಿನ್ಯಾಸವನ್ನು ಮೇಲ್ಮೈಯಲ್ಲಿ ತೋರಿಸಿ ಚಿತ್ರಿಸುವುದು : ಅಂಗವಿನ್ಯಾಸ ಪಟ. **Topógrapher** (ನಾ.) ; **Topográphic(al)** ಟಾಪೊಗ್ರಾಫಿಕ್— (ಗು.) ; **Topográphically** (ಕ್ರಿ. ವಿ.)

Topónymy ಟೊಪಾನಿಮಿ (ನಾ.) (ವ್ಯಾಸಂಗದ ವಿಷಯವಾಗಿ) ಒಂದು ಪ್ರದೇಶದ ಸ್ಥಳಗಳ ಹೆಸರುಗಳು : ಸ್ಥಳ ನಾಮ, ಊರ ಹೆಸರುಗಳು.

Tópper. Top¹ ನೋಡಿ.

Tópple ಟಾಪ್‌ಲ್ (ಕ್ರಿ.) ತಲೆಕೆಳಗಾಗಿ, ಉರುಚಿ,—ಬೀಳು, ಬೀಳಿಸು; ಉರುಳು, ಉರುಳಿಸು (ಅನೇಕ ವೇಳೆ *down, over* ಉಪ. ದೊಡನೆ)

Topsytúrvy ಟಾಪ್ಸಿಟರ್ವಿ (ಕ್ರಿ. ವಿ., ಗು., ನಾ., ಕ್ರಿ. ಸಕ.) ತಲೆಕೆಳಕು (ಮಾಡು) ; ಅವ್ಯವಸ್ಥೆ(ಯಾಗಿ) ; ತಲೆಕೆಳಗಾದ, ಅವ್ಯವಸ್ಥೆಯ(ಲ್ಲಿ). **Topsytúrvydom** (ನಾ.) (ಹಾಸ್ಯ ಪ್ರ.) ತಲೆಕೆಳಕು, ಅವ್ಯವಸ್ಥೆಯ, —ಸ್ಥಿತಿ, ಪ್ರಪಂಚ. **Topsytúrvify** (ಕ್ರಿ. ಸಕ.) ; **Topsyturvificátion** (ನಾ.)

Toque ಟೋಕ್ (ನಾ.) (ಚರಿತ್ರೆ) ಸಣ್ಣ ತೆರದ ಟೊಪ್ಪಿಗೆ, ಕಿರುಟೊಪ್ಪಿಗೆ; ಸಣ್ಣ ಟೋಪಿ ; ಕುಲಾವಿಯಂತೆ ತಲೆಕೂದಲುಳ್ಳ ಹಲವು ಬಗೆಯ ಕೋತಿ : ಕುಲಾವಿ ಕೋತಿ.

Tor ಟಾರ್ (ನಾ.) ಗುಡ್ಡ, ಕಲ್ಗುಡ್ಡ, ಕೋಡುಬಂಡೆ.

Tórah (ಹೀಬ್ರೂ) ಟೋ(ಅ)ರಾ (ನಾ.) ಪುರಾತನ ಯೆಹೂದ್ಯ ಪುರೋಹಿತರು ದಿವ್ಯ ದರ್ಶನದಿಂದ ಲಭಿಸಿದ್ದೆಂದು ಹೇಳಿ ವಿಧಿಸಿದ ಶಾಸನ, ಕಟ್ಟಳೆ; ಯೆಹೂದ್ಯ ಧರ್ಮಶಾಸ್ತ್ರ ; ಮೋಸೆಸ್ಸಿನ ಶಾಸನ ; = Pentateuch (ಆ ಪದ ನೋಡಿ)

Torch ಟಾರ್ಚ್ (ನಾ.) ಪಂಜು, ದೀವಟಿಗೆ [T. of Hymen ಪ್ರೇಮಾನುರಾಗ, ಪ್ರೇಮದ ಪಂಜು. Hand on the t. ಜ್ಞಾನ (ಮೊ. ಗಳ) ಜ್ಯೋತಿಯನ್ನು ಪರಂಪರೆಯಾಗಿ ಉಜ್ಜ್ವಲವಾಗಿಟ್ಟರು, ಮುಂದಕ್ಕೆ ಸಾಗಿಸು. Electric t. (Electric ನೋಡಿ). T.-fishing ಪಂಜುಬೆಳಕಿನಿಂದ ಮೀನುಹಿಡಿಯುವುದು (= **Tórching** ನಾ.)]. **T.-light** ಪಂಜಿನ ಬೆಳಕು. **T.-race** ಪುರಾತನ ಗ್ರೀಕರು ಉತ್ಸವಾದಿಗಳಲ್ಲಿ ಒಬ್ಬರ ಕೈಯಿಂದ ಮತ್ತೊಬ್ಬರಿಗೆ ಪಂಜನ್ನು ಸಾಗಿಸಿ ಓಡುತ್ತಿದ್ದ ಪಂದ್ಯದ ಓಟ : ಪಂಜೋಟ, ಪಂಜು ಪಂದ್ಯ.

Tórchon ಟಾರ್ಷಾನ್ (ನಾ.) (ವಿಶೇಷಣ ಪ್ರ.) : **T. paper** ಜಲವರ್ಣ ಚಿತ್ರಕ್ಕೆ ಉಪಯೋಗಿಸುವ ಒಂದು ಬಗೆಯ ಒರಟು ಮೈಯ ಗಡುಸು ಕಾಗದ : ಟಾರ್ಷಾನ್ ಕಾಗದ. **T. board** ಟಾರ್ಷಾನ್ (ಕಾಗದ ಹಾಕಿದ) ರಟ್ಟು. **T. mat** ಟಾರ್ಷಾನ್ ಕಾಗದದ ಒರಟು ಮೈ. **T. lace** ಜ್ಯಾಮಿತಿಯ ಆಕೃತಿಗಳುಳ್ಳ ಒಂದು ಬಗೆಯ ಒರಟು ಜಾಳು ಸರಿಗೆ.

Tore¹. Tear ಧಾತುವಿನ ಭೂತ ರೂಪ.

Tore² ಟೋ(ಅ)ರ್ (ನಾ.) = Torus (ವಾ. ಶಾ. ಅರ್ಥದಲ್ಲಿ)

Tóreador ಟಾರಿ(ರೆ)ಯಡೋ(ಅ)ರ್ (ನಾ.) (ಸ್ಪೈನಿನಲ್ಲಿ, ಸಾ., ಗೂಳಿಯ ಮೇಲೆ ಕುಳಿತು ಕಾಳಗವಾಡುವ) ಗೂಳಿ ಕಾಳಗಗಾರ.

Toreútic ಟೊರೂಟಿಕ್ (ಗು., ನಾ.) (ಲೋಹ) ಕೆತ್ತನೆಯ, ಕುಸುರಿ ಕೆಲಸದ, ನಕಾಸೆ ಕೆಲಸದ. (ನಾ., ಬ. ವ. ದಲ್ಲಿ) ಕೆತ್ತನೆ, ಕುಸುರಿ, ನಕಾಸೆ, —ಕೆಲಸ.

Tórment ಟಾರ್ಮೆಂಟ್ (ನಾ.), **Tormént** (ಕ್ರಿ. ಸಕ.) ಅತಿ ತೀಕ್ಷ್ಣವಾದ ಮಾನಸಿಕ ಅಥವಾ ದೈಹಿಕ ಯಾತನೆ; ಯಮಯಾತನೆ (ಕೊಡು) ; (ಚಿತ್ರ)ಹಿಂಸೆ (ಕೊಡು); ಹಿಂಸಿಸು, ಪೀಡಿಸು, ಗೋಳು ಗುಟ್ಟಿಸು (Tormented with neuralgia, suspense, inquiries); (ಬಳ. ಮಾ.) ಹಿಂಸೆಕೊಡುವ—ವ್ಯಕ್ತಿ, ವಸ್ತು; ಹಿಂಸಕ, ಪೀಡಕ (The child is a positive t. ಮಗು ಒಂದು ಶುದ್ಧ ಪೀಡೆಯೇ ಸರಿ). **Torméntingly** (ಕ್ರಿ. ವಿ.) ; **Torméntor** (ನಾ.) ಹಿಂಸೆ ಕೊಡುವ—ವಸ್ತು, ವ್ಯಕ್ತಿ ; ಹಿಂಸಕ, ಪೀಡಕ. (ಹಡಗಿನಲ್ಲಿ ಕುದಿ ಪಾತ್ರೆಯಿಂದ ಮಾಂಸವನ್ನು ಎತ್ತಿ ಕೊಳ್ಳಲು ಉಪಯೋಗಿಸುವ) ಉದ್ದವಾದ ಕವಲು ಚಮಚ ; ಗಾಲಿಯಮೇಲೆ ಚಲಿಸುವ ಹಲುಬೆ : ಗಾಲಿ ಹಲುಬೆ. **Torméntress** (ನಾ., ಸ್ತ್ರೀ.)

Tórmentil ಟಾರ್ಮೆಂಟಿಲ್ (ನಾ.) ಉಜ್ಜ್ವಲ ಹಳದಿ ಹೂವುಗಳನ್ನು ಬಿಡುವ, ಅದರ ಬೇರುಗಳು ಬಲವಾದ ರಕ್ತಬಂಧಕ ಔಷಧವಾಗಿ ಉಪಯೋಗವಾಗುವ ಒಂದು ಗುಲ್ಮ : ದತ್ತೂರಿ ಗಿಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tórmina ಟಾರ್ಮಿನ (ನಾ.) ಹೊಟ್ಟೆ—ನುಲಿತ, ಶೂಲೆ.

Torn. Tear ಧಾತುವಿನ ಭೂ. ಕೃ.

Tornádo ಟಾರ್ನೇಡೊ (ನಾ. ; ಬ. ವ. -oes) ಸುಂಟರಗಾಳಿ (ಮಳೆ), ಬಿರುಗಾಳಿ ಮಳೆ, ತುಫಾನು ; (ರೂಪ.) (ಜಯಘೋಷ, ಆಕ್ಷೇಪಣೆ, ಕ್ಷಿಪಣಿ, ಮೊ. ಗಳ) ಪ್ರಚಂಡ ವರ್ಷ, ಸುರಿಮಳೆ. **Tornádic** ಟಾರ್ನ್ಯಾಡಿಕ್ (ಗು.)

Tórous ಟೋರಸ್, **Toróse** ಟೋ(ೕ)ರೋಸ್ (ಗು.) (ಸ. ವಿ.) ನಡು ನಡುವೆ ಉಬ್ಬುಗಳಿರುವ ಉರುಳೆಯಾಕಾರದ ; ಉಬ್ಬುರುಳೆಯಾಕಾರದ ; (ಪ್ರಾ. ವಿ.) ಗುಬಟುಗಳುಳ್ಳ, ಉಬ್ಬುಗಳುಳ್ಳ.

Torpédo ಟಾರ್ಪೀಡೊ (ನಾ., ಬ. ವ. -oes) ತನ್ನ ಆಹಾರಪ್ರಾಣಿಯನ್ನು ಕೊಲ್ಲುವಂತೆ ಅಥವಾ ಅದರ ಚಲನಶಕ್ತಿ ಹೋಗಿಬಿಡುವಂತೆ ವಿದ್ಯುದ್ಧಕ್ಕೆ ಕೊಡುವ ಸಲಕರಣೆಯುಳ್ಳ ಒಂದು ಮೀನು : ವಿದ್ಯುನ್ಮೀನು ; ಹಲವು ಬಗೆಯ ಸಿಡಿಗುಂಡು, ಬಾಣಬಿರುಸು ; ಹಡಗಿಗೆ ಗುರಿಯಿಟ್ಟು ನೀರಿನೊಳಗಡೆಯಿಂದ ಪ್ರಯೋಗಿಸುವ, ಅದಕ್ಕೆ ತಗುಲಿದೊಡನೆ ಸಿಡಿಯುವ, ಚುಟ್ಟದ ಆಕಾರದ, ಸ್ವಯಂಚಲಿ ಅಸ್ತ್ರ : ಹಡಗುಸಿಡುಕ, ನೌಕಾ ಸ್ಫೋಟಕ, ಟಾರ್ಪಿಡೊ (Aerial t. ವಿಮಾನದಿಂದ ಬಿಡುವ ಟಾರ್ಪಿಡೊ : ಆಕಾಶ ಟಾರ್ಪಿಡೊ). **T.-boat** ಟಾರ್ಪಿಡೊಗಳನ್ನು ಸಾಗಿಸುವ ಅಥವಾ ಬಿಡುವ ಸಣ್ಣ ಹಗುರ ವೇಗ ನೌಕೆ : ಟಾರ್ಪಿಡೊ ಹಡಗು. **T.(-boat)-catcher, T. gunboat** ಟಾರ್ಪಿಡೊ ಹಡಗನ್ನು ಹಿಡಿಯುವ ದೊಡ್ಡ ಹಡಗು : ಟಾರ್ಪಿಡೊ ಹಿಡುಕ. **T.(-boat) destroyer** ಟಾರ್ಪಿಡೊ ನಾಶಕ (ಹಡಗು), ದೊಡ್ಡ ಟಾರ್ಪಿಡೊ ಹಡಗು. **T.-net** ಟಾರ್ಪಿಡೊಗಳು ತಗುಲದಂತೆ ಹಡಗಿನ ಸುತ್ತ ಹಾಕಿದ ಬಲೆ: ಟಾರ್ಪಿಡೊ ತಡೆಬಲೆ. **T.-tube** ಟಾರ್ಪಿಡೊ (ಬಿಡುವ) ಕೊಳವೆ. **Torps** ಟಾರ್ಪ್ಸ್ (ನಾ.) (ನಾವಿಕ ಅಸಂ.) ಹಡಗಿನ ಟಾರ್ಪಿಡೊ ಅಧಿಕಾರಿ.

Torpédo (ಕ್ರಿ. ಸಕ.) ಟಾರ್ಪಿಡೊ ಹೊಡೆ(ದು ನಾಶಮಾಡು) ; (ರೂಪ.) (ಯೋಜನೆ, ಸಂಸ್ಥೆ, ಮೊ. ನ್ನು) ಮುರಿದುಬಿಡು, ಮುಳುಗಿಸು.

Tórpid ಟಾರ್ಪಿಡ್ (ಗು., ನಾ.) (ಚಳಿಗಾಲವನ್ನು ನಿಶ್ಚೇಷ್ಟವಾಗಿ ಕಳೆಯುವ ಪ್ರಾಣಿಯ ವಿಷಯದಲ್ಲಿ) ನಿಶ್ಚೇಷ್ಟ, ಸುಪ್ತಾವಸ್ಥೆಯ(ಲ್ಲಿಯ), ಸುಪ್ತ ; ಜೋಪುಹಿಡಿದ, ಮರಗಟ್ಟಿದ ; ಜಡ, ಹುರುಪಿಲ್ಲದ, ಚಟುವಟಿಕೆಯಿಲ್ಲದ, ನಿರುತ್ಸಾಹದ. (ನಾ., ಬ. ವ. ದಲ್ಲಿ) ಲೆಂಟ್ ಕಾಲದಲ್ಲಿ ಆಕ್ಸ್‌ಫರ್ಡ್ ಕಾಲೇಜಿನ ವಿದ್ಯಾರ್ಥಿಗಳು ನಡಸುವ ದೋಣಿ ಪಂದ್ಯ ; ಈ ಪಂದ್ಯದಲ್ಲಿ ದೋಣಿ ನಡಸುವುದು, ಹುಟ್ಟುಹಾಕುವುದು. **Torpídity** (ನಾ.), **Tórpidly** (ಕ್ರಿ. ವಿ.) ; **Tórpidness** (ನಾ.), **Tórpify** (ಕ್ರಿ. ಸಕ.) ; **Tórpor** (ನಾ.) ನಿಶ್ಚೇಷ್ಟತೆ, ಜಡತೆ. **Torporífic** (ಗು.)

Torps. **Torpedo** ನೋಡಿ.

Tórquate(d) ಟಾರ್ಕ್ವೇಟ್(ಟೆಡ್) (ಗು.) (ಪ್ರಾ. ವಿ.) ಕುತ್ತಿಗೆಯ ಸುತ್ತ ವಿಶಿಷ್ಟ ಬಣ್ಣದ ಅಥವಾ ರಚನೆಯ ಕೂದಲಿನ ಅಥವಾ ಗರಿಯ ಪಟ್ಟಿಯುಳ್ಳ : ಕಂಠಾಭರಣವುಳ್ಳ.

Torque, Torc ಟಾರ್ಕ್ (ನಾ.) (ಮು., ಗಾಲರು ಧರಿಸುತ್ತಿದ್ದ) ತಿರುಚು ಲೋಹದ ಕೊರಳ ಸರ. (ಯಂತ್ರಶಿಲ್ಪ -que) ತಿರುಚು ಶಕ್ತಿ, ಭ್ರಾಮಕ ಶಕ್ತಿ.

Tórrefy, etc. **Torrid** ನೋಡಿ.

Tórrent ಟಾರೆಂಟ್ (ನಾ.) (ನೀರು, ಮೊ. ಗಳ) ನುಗ್ಗು ಹೊನಲು, ರಭಸ ಪ್ರವಾಹ ; ನಿರ್ಝರ ; (ಬ. ವ. ದಲ್ಲಿ) ಸುರಿಮಳೆ, ಧಾರಾಕಾರದ ಮಳೆ (Rain falls in torrents) ; (ರೂಪ.) (ಬೈಗುಳ, ವ್ಯಥೆ, ಪ್ರಶ್ನೆ, ಮೊ. ಗಳ) ಬಿರುಹೊಡೆತ, ಬಿರು ಸುರಿಮಳೆ, ನಿರ್ಝರ. **Torréntial** —ಷಲ್ (ಗು.) ಧಾರಾಕಾರದ, ರಭಸದ ; ನಿರ್ಝರದ. **Torréntially** (ಕ್ರಿ. ವಿ.)

Torricéllian ಟಾರಿಚೆ(ಸೆ)ಲಿಯನ್ (ಗು.) T. experiment ಒಂದು ಕೊನೆ ಗಾಳಿ ತೂರದಂತೆ ಬೆಸದೂ ಮತ್ತೊಂದು ಕೊನೆ ತೆರೆದೂ ಇರುವ ಉದ್ದ ನಳಿಕೆಯಲ್ಲಿ ಪೂರ್ತಿ ಪಾದರಸ ತುಂಬಿ, ಪಾದರಸವುಳ್ಳ ಒಂದು ಪಾತ್ರೆಯಲ್ಲಿ ತೆರಪುಕೊನೆ ಮುಳುಗುವಂತೆ ಬೋರಲುಹಾಕಿ, ಇಟಲಿಯ ಟಾರಿಚಲಿ ಎಂಬ ಭೌತವಿಜ್ಞಾನಿ ನಡಸಿದ ವಾಯುಭಾರಮಾಪನ ಪ್ರಯೋಗ : ಟಾರಿಚಲಿ ಪ್ರಯೋಗ. T. tube ಟಾರಿಚಲಿ (ಪ್ರಯೋಗದ) ನಳಿಕೆ. T. vacuum ಈ ಪ್ರಯೋಗದಲ್ಲಿ ನಳಿಕೆಯ ಮೇಲ್ಭಾಗದಲ್ಲಿ ಉಂಟಾಗುವ ನಿರ್ವಾಯು ಸ್ಥಳ : ಟಾರಿಚಲಿ ನಿರ್ವಾಯು ಸ್ಥಳ.

Tórrid ಟಾರಿಡ್ (ಗು.) (ನೆಲ, ಮೊ. ಗಳ ವಿಷಯದಲ್ಲಿ) ಬಿಸಿಲಿನಿಂದ ಬೆಂದುಹೋದ, ಸುಟ್ಟುಹೋದ, ಬತ್ತಿದ, ಗಾರಾದ ; ಸುಡುಬಿಸಿಲಿನ, ಉಷ್ಣದ (T. zone ಉಷ್ಣವಲಯ). **Torrídity** (ನಾ.) ; **Tórridness** (ನಾ.); **Tórrefy** ಟಾರಿ(ರೆ)ಫೈ (ಕ್ರಿ. ಸಕ.) (ಅದುರು, ಮೂಲಿಕೆ, ಮೊ. ನ್ನು) ಬೆಂಕಿಯಲ್ಲಿ ಬಾಡಿಸು, ಹುರಿ. **Torrefáction** (ನಾ.)

Tórsel ಟಾರ್ಸೆ(ಸ್)ಲ್ (ನಾ.) ತಿರುಚಿದ—ಅಲಂಕಾರ, ಆಧರಣ : ಮುರಿಗೆ; ಸುರುಳಿಯಲಂಕಾರ; (ಇಟ್ಟಿಗೆಗೋಡೆಯಲ್ಲಿ ದೂಲ, ಮೊ. ನ್ನು ಕೂರಿಸುವುದಕ್ಕಾಗಿ ಹಾಕುವ) ಅಡಿಮರ.

Tórsion ಟಾರ್ಷನ್ (ನಾ.) ತಿರುಚು(ವುದು), ಮುರಿಗೆ ; ವ್ಯಾವರ್ತನ ; (ಸ. ವಿ.) ಸುರುಳಿ (ಸುತ್ತಿಕೊಂಡಿರುವುದು) [**Tórsive** (ಗು.)] ; (ವೈ. ಶಾ.) (ಶಸ್ತ್ರಚಿಕಿತ್ಸೆ, ಮೊ. ಗಳ ತರುವಾಯ ರಕ್ತಸ್ರಾವವನ್ನು ತಡೆಯುವುದಕ್ಕಾಗಿ) ಅಪಧಮನಿಯ ಕತ್ತರಿಸಿದ ಕೊನೆಯನ್ನು ತಿರುಚುವುದು, ಸುರುಳಿ ಸುತ್ತುವುದು. T. balance ತಿರುಚಿದ ಸೂಕ್ಷ್ಮ ತಂತಿಯ ಮೂಲಕ ಅತ್ಯಲ್ಪ ಪ್ರಮಾಣದ ಬಲಗಳನ್ನು ಅಳೆಯುವ ಸಾಧನ : ವ್ಯಾವರ್ತನ, ತಿರುಚು, —ಮಾಪಕ. **Tórsional** (ಗು.); **Tórsionally** (ಕ್ರಿ. ವಿ.) ; **Tórsionless** (ಗು.)

Torsk ಟಾರ್ಸ್ಕ್ (ನಾ.) ಕಾಡ್ ಜಾತಿಯ ಮೀನು.

Tórso ಟಾರ್ಸೊ (ನಾ.) (ತಲೆ ಮತ್ತು ಕೈಕಾಲುಗಳನ್ನು ಬಿಟ್ಟು) ಪ್ರತಿಮೆಯ—ಕಾಂಡ ಭಾಗ, ಮುಂಡ; (ಮು., ಕರ ಶಿರಗಳಿಲ್ಲದ) ಭಗ್ನ ವಿಗ್ರಹದ ಮುಂಡ. (ರೂಪ.) ಅರ್ಧಮಾಡಿ ಬಿಟ್ಟುಬಿಟ್ಟ, ಮುರುಕಾಗಿ ನಿಂತಿರುವ, —ಕೆಲಸ, ಕೃತಿ : ಅಪೂರ್ಣ, ಭಗ್ನ,—ಕಾರ್ಯ, ಕೃತಿ; ಅರೆಗೆಲಸ, ಮುಕ್ಕುಗೆಲಸ.

Tort ಟಾರ್ಟ್ (ನಾ.) (ನ್ಯಾ. ಶಾ.) ಒಬ್ಬ ವ್ಯಕ್ತಿ ಮತ್ತೊಬ್ಬನಮೇಲೆ ನಷ್ಟ ಪರಿಹಾರಕ್ಕಾಗಿ ವ್ಯಾಜ್ಯ ಹೂಡಲು ಅವಕಾಶವಾಗುವಂತೆ ಆ ಮತ್ತೊಬ್ಬನಿಂದ ನಡೆಯುವ ಕರ್ತವ್ಯ ಲೋಪ : ವೈಯಕ್ತಿಕ ಅಪರಾಧ, ಖಾಸಗಿ ತಕ್ಸೀರು. **Tórtious** ಟಾರ್ಷಸ್ (ಗು.) ; **Tórtiously** (ಕ್ರಿ. ವಿ.)

Torticóllis ಟಾರ್ಟಿಕಾಲಿಸ್ (ನಾ.) (ವೈ. ಶಾ.) ಕುತ್ತಿಗೆಯ ಸ್ನಾಯುಗಳ ವಾತರೋಗ : ಕಂಠವಾತ; ಸೆಟೆಗೊರಲು.

Tórtile ಟಾರ್ಟಿ(ಟೈ)ಲ್ (ಗು.) ತಿರುಚಿದ, ವಕ್ರ ; (ಸ. ವಿ.) ಸುರುಳಿ ಸುತ್ತಿದ. **Tortílity** (ನಾ.)

Tortílla ಟೋರ್ಟೀಲ್ಯ (ನಾ.) (ಮು., ಮುಸುಕಿನ ಜೋಳದ) (ಚಪ್ಪಟೆ) ರೊಟ್ಟಿ.

Tórtious. **Tort** ನೋಡಿ.

Tórtoise ಟಾರ್ಟಸ್(ಟಾಯ್ಸ್) (ನಾ.) ಆಮೆ, ಕೂರ್ಮ ; (ರೋ. ಪ್ರಾ.) = Testudo (ಆ ಪದ ನೋಡಿ). Hare & t. ಮೊಲ ಆಮೆ ಕಥೆ (ನಂತತ ಪರಿಶ್ರಮದಿಂದ ಕ್ಷಣಿಕೋತ್ಸಾಹದ ಸಾಮರ್ಥ್ಯವನ್ನು ಸೋಲಿಸಬಹುದು ಎಂಬ ನೀತಿಯ ನಿದರ್ಶನ). T.-shell ಆಮೆಚಿಪ್ಪು (ಮು., ಕಡಲಾಮೆಗಳದು). T.-shell cat, butterfly ಆಮೆಚಿಪ್ಪಿನ ಹಾಗೆ ಹಳದಿ ಕಪ್ಪು ಗುರುತುಗಳುಳ್ಳ ಬೆಕ್ಕು, ಚಿಟ್ಟೆ : ಆಮೆ ಚಿಪ್ಪು—ಬೆಕ್ಕು, ಚಿಟ್ಟೆ. Alligator t = Snapping turtle (Snap ನೋಡಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tórtuous ಟಾರ್ಚ್ಯುಅಸ್ (ಗು.) ತಿರುಚು ಮುರುಚಾದ, ತಿರುಚುಗಳುಳ್ಳ, ವಕ್ರವಕ್ರವಾಗಿರುವ ; (ರೂಪ.) (ನೀತಿ, ಮೊ. ಗಳ ವಿಷಯದಲ್ಲಿ) ತೊಳಸಂಬಟ್ಟೆಯ, ಸೊಟ್ಟಪಟ್ಟ, ಸುತ್ತುಬಳಸಿನ ; ವಕ್ರ, ಕುಟಿಲ. **Tortuóse** —ಓಸ್ (ಗು.) (ಸ ವಿ.) ; **Tortuósity** —ಆ— (ನಾ.) ; **Tórtuousness** (ನಾ.) ; **Tórtuously** (ಕ್ರಿ. ವಿ.)

Tórture ಟಾರ್‌ಚರ್(ಟ್ಯುರ್) (ನಾ., ಕ್ರಿ. ಸಕ.) ಚಿತ್ರಹಿಂಸೆ(ಕೊಡು) (Instruments of t. ಚಿತ್ರಹಿಂಸಾ ಸಾಧನಗಳು) ; (ದೈಹಿಕ ಅಥವಾ ಮಾನಸಿಕ) ಕ್ರೂರ ಯಾತನೆ (Tortured with neuralgia, tight boots, anxiety) ; (ರೂಪ.) (ಪದ, ವಾಕ್ಯ, ಮೊ. ಗಳ ಅರ್ಥವನ್ನು) ತಿರುಚು, ಕಷ್ಟಪಟ್ಟು ಹೊರಡಿಸು. **Tórturable** (ಗು.) ; **Tórturer** (ನಾ.) ; **Tórturingly** (ಕ್ರಿ. ವಿ.) ; **Tórturous** (ಗು.)

Tórula ಟಾರ್ಯುಲ (ನಾ.; ಬ. ವ. -lae —ಲೀ) ಒಂದು ಬಗೆಯ ಹುದುಗು ಶಿಲೀಂಧ್ರ ; ದುಂಡು ಏಕಾಣುಜೀವಿಗಳ ಮಾಲೆ ; (ಸ. ವಿ.) =Torus (ಸ. ವಿ. ದ ಅರ್ಥದಲ್ಲಿ). **Tóruliform** (ಗು.) ಮಣಿಮಾಲೆಯಂತಿರುವ, ಗುಂಡು ಕೋದಂತಿರುವ.

Tórus ಟೋ(ಅ)ರಸ್ (ನಾ. ; ಬ. ವ. -ri —ರೈ) (ವಾ. ಶಾ.) ಕಂಬದ ಪೀಠದಲ್ಲಿ ಮಾಡಿರುವ ಅರೆಯುರುಳೆಯ ದಿಂಡು ; (ಸ. ವಿ.) ಪುಷ್ಪ ಪಾತ್ರ(ದಂತೆ ತೋರುವ ಕಾವಿನ ತುದಿ) ; (ಅಂ. ರ. ಶಾ.) (ಸ್ನಾಯು ವಿನದರಂಥ) ನುಣುಪೇಣು, ದುಂಡೇಣು.

Tóry ಟೋ(ಅ)ರಿ (ನಾ., ಗು.) ಸಂಪ್ರದಾಯವರ್ತಿ, ಯಥಾಸ್ಥಿತಿ ವಾದಿ; (ಇಂಗ್ಲೆಂಡಿನಲ್ಲಿ) ರೋ. ಕ್ಯಾ. ಮತದವನಾದ ಡ್ಯೂಕ್ ಆಫ್ ಯಾರ್ಕಿಗೆ (ಎರಡನೆಯ ಜೇಮ್ಸಿಗೆ) ರಾಜ್ಯದ ಉತ್ತರಾಧಿಕಾರ ತಪ್ಪಿಸಿದ್ದು ಸರಿಯಲ್ಲವೆಂದು ಪ್ರತಿಭಟಿಸಿದ, ೧೬೮೯ರಿಂದ ಸ್ಟೂವರ್ಟ್ ಮನೆತನಕ್ಕೆ ಒಲೆದ, ಅರಮನೆ ಗುರುಮನೆಗಳಲ್ಲಿ ವಿಶೇಷ ನಿಷ್ಠೆಯುಳ್ಳ ಒಂದು ರಾಜಕೀಯ ಪಕ್ಷದ(ವನು) : ಸಂಪ್ರದಾಯ ಪಕ್ಷದ(ವನು), ಟೋರಿ ಪಕ್ಷದ(ವನು) (Whig ಪದ ನೋಡಿ). T. Democrat ಪ್ರಜಾ ಪ್ರಭುತ್ವದ ಒಲವಿನ ಟೋರಿ (ಪಕ್ಷದವನು). **Tóryism** (ನಾ.)

Tosh ಟಾಷ್ (ನಾ.) (ಅಸಂ.) ಶುದ್ಧ ಅವಿವೇಕ, ಅಸಂಬದ್ಧ, ಕಾಳು ಹರಟೆ; (ಕ್ರಿಕೆಟ್, ಟೆನಿಸ್, ಮೊ. ಗಳಲ್ಲಿ) ಸಪ್ಪೆಯ —ಚೆಂಡೆಸೆತ, ಹೊಡೆತ.

Tósher ಟಾಷರ್ (ನಾ.) (ಅಸಂ.) (ವಿ. ವಿ. ನಿ. ಕ್ಕೆ ಸೇರಿದ) ಯಾವ ಕಾಲೇಜಿನಲ್ಲಿಯೂ ವ್ಯಾಸಂಗ ಮಾಡುತ್ತಿಲ್ಲದ ವಿದ್ಯಾರ್ಥಿ.

Toss ಟಾಸ್ (ಕ್ರಿ.; ಭೂತ., ಭೂ. ಕೃ. Tossed ಟಾಸ್ಟ್, ಕಾವ್ಯ ಪ್ರ. Tost) (ಚೆಂಡು, ಮೊ. ನ್ನು) ಮೇಲಕ್ಕೆ ಎಸೆ, ಹಾರಿಸು ; (ಗೂಳಿ, ಕುದುರೆ, ಮೊ. ಗಳವಿಷಯದಲ್ಲಿ) (ಕೊಂಬಿನಿಂದ) ಎತ್ತಿಹಾಕು, ಕೆಡವು; (ವಸ್ತುವನ್ನು ವ್ಯಕ್ತಿಗೆ ಅಥವಾ ಬೇರೆ ಕಡೆಗೆ, ಉದಾಸೀನವಾಗಿ ಅಥವಾ ಹಗುರವಾಗಿ) ಎಸೆ, ಹಾಕು (*Away, aside* ಉಪ. ದೊಡನೆ) ; (ಅದು ಬೀಳುವ ಮುಖ ವನ್ನು ಅನುಸರಿಸಿ ಆಯ್ಕೆ, ಮೊ. ನ್ನು ನಿರ್ಧರಿಸುವುದಕ್ಕಾಗಿ, ನಾಣ್ಯವನ್ನು) ಮೇಲಕ್ಕೆ ಚಿಮ್ಮು, ಮಿಡಿ, ಮಿಾಟು ; ಚಿಮ್ಮಿ, ಮಿಾಟಿ, —ನಿರ್ಧರಿಸು (Will t. you for, *or* who has, the armchair); (ಟೆನಿಸ್ ಆಟ) (ಚೆಂಡನ್ನು) ಬಹಳ ಎತ್ತರಕ್ಕೆ, ಮೇಲಕ್ಕೆ, —ಹೊಡೆ, ಕಳಿಸು; (ಹಾಸಿಗೆಯಲ್ಲಿ ಪಕ್ಕದಿಂದ ಪಕ್ಕಕ್ಕೆ) ಹೊರಳಾಡು, ಹೊರಳಿಸು ; ಚಡ ಪಡಿಸು ; (ಹಡಗು, ಕೊಂಬೆ, ಮೊ.) ಹೊಯ್ದಾಡು, ತೂಗಾಡು ; (ತವರದ ಅದುರನ್ನು ಪಾತ್ರೆಯಲ್ಲಿ ಹಾಕಿ ಅಡಿಸುವುದರಿಂದ) ಭಾರಭಾಗವನ್ನು ಹಗುರ ಭಾಗದಿಂದ ಬೇರ್ಪಡಿಸು : ಒನೆ. T. one's head (ತಿರಸ್ಕಾರ, ಅಸಹನೆ, ಮೊ.ಗಳಿಂದ) ತಲೆಯನ್ನು ಹಿಂದಕ್ಕೆ —ಎಸೆ, ಕೊಡವು. T. one in blanket ಕಂಬಳಿಯ ನಾಲ್ಕು ಮೂಲೆಗಳನ್ನು ತಟಕ್ಕನೆ ಎಳೆದು ಅದರ ಮೇಲಿದ್ದವನನ್ನು ಮೇಲಕ್ಕೆ ಚಿಮ್ಮು : ಕಂಬಳಿಯಲ್ಲಿ (ಹಾಕಿ) ಚಿಮ್ಮು(ರಾಡು). T. a pancake ದೋಸೆಯನ್ನು ಚಿಮ್ಮಿ (ಕಾವಲಿಯ ಮೇಲೆ) ಮಗುಚಿಹಾಕು. T. oars (ಹುಟ್ಟು ಹಾಕುವವರ ವಿಷಯದಲ್ಲಿ) ದೋಣಿಯ ಹುಟ್ಟುಗಳನ್ನು ನೆಟ್ಟಗೆ ಹಿಡಿ(ದು ವಂದಿಸು). T. off ಒಂದೇ ಏಟಿಗೆ, ಗುಟುಕಿಗೆ, —ಕುಡಿದುಬಿಡು; (ಕೆಲಸವನ್ನು) ಒಂದೇ ಪಟ್ಟಿಗೆ, ಸರಾಗವಾಗಿ, —ಮಾಡಿ ಎಸೆ. T. up (ನಾಣ್ಯವನ್ನು) ಮೇಲಕ್ಕೆ ಚಿಮ್ಮು ; (ಅಡಿಗೆಯನ್ನು) ಆತುರಾತುರವಾಗಿ, ಲಕ್ಷ್ಯವಿಲ್ಲದೆ,—ಮಾಡಿ ಎಸೆ. T.-pot (ಪ್ರಾಚೀ. ಪ್ರ.) ಅತಿಕುಡುಕ, ಮಹಾಕುಡುಕ.

Toss (ನಾ.) (ನಾಣ್ಯ, ತಲೆ, ಮೊ. ನ್ನು) ಚಿಮ್ಮುವುದು, ಎಸೆಯುವುದು, ಝಾಡಿಸುವುದು ; ಚಿಮ್ಮು, ಎಸೆತ, ಝಾಡಿಕೆ ; ಹೊಯ್ದಾಟ, ತೂಗಾಟ, ಹೊರಳಾಟ ; ಕಲಕ, ಕ್ಷೋಭೆ ; (ಕುದುರೆ, ಮೊ. ಗಳಿಂದ) ಬೀಳು, ಪಾತ (Take a t. ಬೀಳು). Win the t. (ನಾಣ್ಯದ) ಚಿಮ್ಮನ್ನು ಗೆಲ್ಲು ; ಆಯ್ಕೆಯ, ನಿರ್ಣಯದ, —ಅಧಿಕಾರವನ್ನು ಪಡೆ. Full t. (ಅಸಂ.) (ಕ್ರಿಕೆಟ್) ಗುರಿಕೋಲುಗಳ ಮಧ್ಯೆ ಎಲ್ಲಿಯೂ ನೆಲವನ್ನು ಮುಟ್ಟದ ಎಸೆತ : ಪೂರಾ ಚೆಂಡೆಸೆತ. T.-up ನಾಣ್ಯ ಚಿಮ್ಮುವುದು ; ಸಂದಿಗ್ಧ—ಪ್ರಶ್ನೆ, ವಿಷಯ (Is quite a t.-up whether he comes or not). Pitch-and-t. (Pitch[2] ನೋಡಿ)

Tot[1] ಟಾಟ್ (ನಾ.) ಸಣ್ಣ ಮಗು, ಕಿರುಗೂಸು (ಮು., A tiny t.) ; (ಬಳ. ಮಾ.) ಒಂದು ಡ್ರ್ಯಾಂ ಮದ್ಯ.

Tot[2] ಟಾಟ್ (ನಾ., ಕ್ರಿ.) (ಬಳ. ಮಾ.) ಕೂಡಬೇಕಾದ ಅಂಕಿಗಳು, ಕೂಡುವ ಲೆಕ್ಕ; ಒಟ್ಟು, ಮೊತ್ತ. (ಕ್ರಿ.) ಕೂಡು (*Up* ಉಪ. ದೊಡನೆ) ; ಒಟ್ಟು, ಮೊತ್ತ, —ಆಗು (T. up to ಮೊತ್ತವಾಗು)

Tótal ಟೋಟಲ್ (ಗು., ನಾ., ಕ್ರಿ. ಸಕ.) (ಎಲ್ಲಾ) ಒಟ್ಟು (T. population. Sum t. ಒಟ್ಟು ಮೊತ್ತ) ; ಸಂಪೂರ್ಣ, ತೀರ, ಪೂರ [Was in t. ignorance of it ಆ ವಿಚಾರ ಕೊಂಚವೂ ತಿಳಿದಿರಲಿಲ್ಲ ; ಆ ಬಗ್ಗೆ ಸಂಪೂರ್ಣ ಅಜ್ಞಾನದಲ್ಲಿದ್ದನು. T. abstinence, T. eclipse (ಆಯಾ ಪದ ನೋಡಿ)] . (ನಾ.) ಒಟ್ಟು (—ಮೊತ್ತ, ಸಂಖ್ಯೆ). (ಕ್ರಿ.) ಕೂಡು, ಮೊತ್ತ ಕಂಡುಹಿಡಿ ; ಒಟ್ಟು, —ಮಾಡು, ಆಗು (The visitors totalled 131). **Totálity** ಟೊಟ್ಯಾಲಿಟಿ (ನಾ.) ಪೂರ್ಣತೆ (A plan in its t.) ; ಒಟ್ಟು ಮೊತ್ತ (The t. of human knowledge) ; (ಖ. ವಿ.) (ಗ್ರಹಣದಲ್ಲಿ) ಪೂರ್ಣ ಗ್ರಾಸ (The t. began at 9 O' clock). **Tótalize** ಟೋಟ— (ಕ್ರಿ.) ಮೊತ್ತ, ಒಟ್ಟು, —ಮಾಡು, ಕಂಡುಹಿಡಿ ; ಒಟ್ಟು, —ಗೂಡು, ಗೂಡಿಸು ; (ಪಂದ್ಯದಲ್ಲಿ) ಸಂಕಲಕವನ್ನು ಉಪಯೋಗಿಸು. **Totalizátion** (ನಾ.); **Tótalizer** (ನಾ.) ಒಂದು ಪಂದ್ಯದಲ್ಲಿ ಒಡ್ಡಿದ ಒಟ್ಟು ಮೊತ್ತವನ್ನು ಗೆದ್ದ ಕುದುರೆಯ ಮೇಲೆ ಪಣವೊಡ್ಡಿದವರಲ್ಲಿ ಹಂಚಲು ಅನುಕೂಲಿಸು ವಂತೆ, ಪಂದ್ಯದಲ್ಲಿ ಒಡ್ಡಿದ ಪಣಗಳ ಒಟ್ಟು ಸಂಖ್ಯೆಯನ್ನೂ ಮೊತ್ತವನ್ನೂ ತೋರಿಸುವ ಒಂದು ಸಲಕರಣೆ : ಸಂಕಲಕ (=**Tótalizator**). **Tótally** (ಕ್ರಿ. ವಿ.)

Tote[1] ಟೋಟ್ (ನಾ.) (ಅಸಂ.) =Total, Totalizator (ಎಂಬವುಗಳ ಸಂಕ್ಷಿಪ್ತ) ; ಮದ್ಯ ತ್ಯಾಗಿ.

Tote[2] ಟೋಟ್ (ಕ್ರಿ. ಸಕ.) (ಅಮೆ. ಸಂ.) (ಸರಬರಾಯಿ, ಮರ, ಮೊ. ನ್ನು) ಸಾಗಿಸು, ರವಾನಿಸು.

Tótem ಟೋಟೆಂ (ನಾ.) ಉ. ಅಮೆರಿಕದ ಇಂಡಿಯನರಲ್ಲಿ ಒಂದು ಕುಲವಾಗಲಿ ವ್ಯಕ್ತಿಯಾಗಲಿ ತನಗೆ ಸಂಬಂಧಪಟ್ಟದ್ದೆಂಬ ಭಾವನೆ ಯಿಂದ ಲಾಂಛನವಾಗಿ ಪರಿಗಣಿಸಿದ ವಸ್ತು (ಮು., ಪ್ರಾಣಿ ಅಥವಾ ಸಸ್ಯ ; ಉದಾ., ನರಿ, ಎಕ್ಕದ ಎಲೆ) : ಮನೆದೇವರು, ಕುಲದೇವತೆ ; ಮನೆದೇವರ, ಕುಲದೇವತೆಯ, —ವಿಗ್ರಹ, ಚಿಹ್ನೆ ; ಟೋಟೆಂ. T.-post ಕುಲದೇವತೆಯ ವಿಗ್ರಹ ಕೆತ್ತಿದ ಅಥವಾ ತೂಗಹಾಕಿದ ಕಂಬ : ಕುಲದೇವತೆಯ ಕಂಬ. T. stage ಕುಲದೇವತಾ ಚಿಹ್ನೆಗಳನ್ನು ಕುಲನಾಮ ಗಳನ್ನಾಗಿಯೂ ಪೂಜಾವಸ್ತುಗಳನ್ನಾಗಿಯೂ ಬಳಸುವ, ಮಾನವನ ಬುದ್ಧಿವಿಕಾಸದ ಒಂದು ಸ್ಥಿತಿ, ಮೆಟ್ಟಲು : ಮನೆದೇವರ ಪೂಜಾ ಪ್ರಾಬಲ್ಯದ ಸ್ಥಿತಿ. **Totémic** (ಗು.) ; **Tótemism** (ನಾ.) ಕುಲ ದೇವತಾ ಪದ್ಧತಿ(ಯಲ್ಲಿ ನಂಬಿಕೆ). **Tótemist** (ನಾ.) ಮನೆದೇವರ, ಕುಲದೇವತಾ, —ಭಕ್ತ ; ಕುಲದೇವತಾ ಶಾಸ್ತ್ರಜ್ಞ. **Totemístic** (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

T'óther, Tóther ಟದರ್ (ಗು., ಸ. ನಾ.) (ಎರಡರಲ್ಲಿ) ಇನ್ನೊಂದು, ಮತ್ತೊಂದು; (ಇಬ್ಬರಲ್ಲಿ) ಇನ್ನೊಬ್ಬ(ಳು), ಮತ್ತೊಬ್ಬ(ಳು) [Tell t. from which (Tell one from the other ಎಂಬುದರ ಹ್ರಾಸ್ವ ರೂಪ) : ಒಂದಕ್ಕೊಂದಕ್ಕೆ ವ್ಯತ್ಯಾಸ ತಿಳಿ]

Tótidem vérbis (L) ಟಾಟಿಡೆಂ ವರ್ಬಿಸ್ (ಕ್ರಿ. ವಿ.) ಸ್ಪಷ್ಟವಾಗಿ ಈ, ಆ, ಮಾತುಗಳಲ್ಲಿ; ಇದೇ, ಅದೇ, —ಮಾತುಗಳಲ್ಲಿ (He said, t.v., that he would write in either case)

Tóties quóties (L) ಟಾಟಿಈಸ್ ಕ್ವಾಟಿಈಸ್, ಟೋಷಿಈಸ್(ಸ್) ಕ್ವೋಷಿಈಸ್(ಸ್) (ಕ್ರಿ. ವಿ.) ಪ್ರತಿಸಲವೂ, ಸಲಸಲವೂ (Offer was refused t.q.)

Tóto caélo (L) ಟೋಟೊ ಸೀಲೋ (ಕ್ರಿ. ವಿ.) ಆಕಾಶದಷ್ಟು (Differ t.c. ಆಕಾಶದಷ್ಟು ಅಂತರವಿರು)

Tótter ಟಾಟರ್ (ಕ್ರಿ. ಅಕ.) (ಮು., ನಡಗೆ ಕಲಿಯುವ ಮಗುವಿನ ವಿಷಯದಲ್ಲಿ) ದಟ್ಟಡಿಯಿಡು; ತಪ್ಪುಹೆಜ್ಜೆ ಹಾಕು, ತೂರಾಡು, ತತ್ತರಿಸು (T. with age. The old tree is tottering in the wind); (ಗೋಪುರ, ಮೊ. ವು; ರೂಪಕವಾಗಿ ರಾಜ್ಯ, ಸಂಸ್ಥೆ, ಮೊ. ವು) ಉರುಳಿಕೊಳ್ಳುವಂತಿರು, ಬೀಳುವಂತಿರು; (ವರ್ತಮಾನ ಕೃ.) (ಹೆಜ್ಜೆಯ ವಿಷಯದಲ್ಲಿ) ತತ್ತರಿಸುವ. **Tótterer** (ನಾ.); **Tótteringly** (ಕ್ರಿ. ವಿ.); **Tóttery** (ಗು.)

Toucán ಟೂಕಾನ್, **Toúcan** ಟೂಕನ್ (ನಾ.) ದ. ಅಮೆರಿಕದ, ಭಾರಿ ಕೊಕ್ಕಿನ ಹಲವು ಬಗೆಯ ಹಕ್ಕಿ.

Touch ಟಚ್ (ಕ್ರಿ.) ಮುಟ್ಟು, ಸೋಕು, ತಾಕು, ಸ್ಪರ್ಶಿಸು, ಮುಟ್ಟುವಂತೆ ಮಾಡು, ಮುಟ್ಟಿಸು, ಸೋಕಿಸು, ತಾಕಿಸು [T. pitch ಕಂದೆಣ್ಣೆಯಲ್ಲಿ ಕೈಯಿಡು; ಕಳಂಕಾಸ್ಪದ, ಶಂಕಾಸ್ಪದ, —ಕೆಲಸದಲ್ಲಿ ಕೈಹಾಕು, ವ್ಯಕ್ತಿಯೊಡನೆ ವ್ಯವಹರಿಸು. Wouldn't t. him with a barge-pole (ಬಹಳ ಅಸಹ್ಯ, ದ್ವೇಷ ಎಂಬ ಅರ್ಥಗಳಲ್ಲಿ): ಅವನನ್ನು ಗಣೆಯಿಂದಲೂ ಮುಟ್ಟುವುದಿಲ್ಲ. I never touched him ನಾನು ಅವನಮೇಲೆ ಕೈಮಾಡಲಿಲ್ಲ, ಕೈಹಾಕಲಿಲ್ಲ; ನಾನು ಅವನನ್ನು ಮುಟ್ಟಕೂಡ ಮುಟ್ಟಲಿಲ್ಲ. Can just t. bottom (ನೀರಿನ) ತಳವನ್ನು ಕಾಲಬೆರಳಿಂದ ಮುಟ್ಟಬಲ್ಲೆ. T. bottom (Bottom ನೋಡಿ). Touched his hat (ತನ್ನ ಟೊಪ್ಪಿಗೆಯನ್ನು ಮುಟ್ಟಿ) ವಂದಿಸಿದನು. Was touched by the king (ಗಂಡಮಾಲೆಯ ಪರಿಹಾರಕ್ಕಾಗಿ) ರಾಜನಿಂದ ಸ್ಪರ್ಶಮಾಡಲ್ಪಟ್ಟನು. T. wood (ತಾನು ಆಪತ್ತು ತಪ್ಪಿಸಿಕೊಂಡನೆಂದು ಜಂಬ ಕೊಚ್ಚಿದಮೇಲೆ) ಆಪತ್ತು ತಟ್ಟದಿರಲೆಂದು, ಪೀಡಾನಿವಾರಣೆಗಾಗಿ, —ಮರವನ್ನು ಮುಟ್ಟು (ನಮ್ಮಲ್ಲಿ 'ಬಿಟ್ಟತು, ಬಿಟ್ಟತು' ಎನ್ನುವಂತೆ). T. the spot ನೆರೆ, ಮರ್ಮ, —ತಿಳಿ(ದುಕೊ), ಕಂಡುಕೊ; ಸರಿಯಾದ್ದನ್ನು, ಮಾಡಬೇಕಾದ್ದನ್ನು, —ಮಾಡು]. (ಜ್ಯಾ.) (ವೃತ್ತ, ಮೊ. ಕ್ಕೆ) ಸ್ಪರ್ಶರೇಖೆಯಾಗಿರು, (—ನ್ನು) ಸ್ಪರ್ಶಿಸು. ಮೆತ್ತಗೆ ಒತ್ತು, ಅದುಮು (He touched the bell ಒತ್ತಿ ಗಂಟೆ ಬಾರಿಸಿದನು); (ವಾದ್ಯದ ತಂತಿ, ಮೊ. ನ್ನು) ಮಿಡಿ, ಮಿಾಟು; (ಕುಂಚ, ಸೀಸದಕಡ್ಡಿ, ಮೊ. ಗಳಿಂದ) ತೆಳ್ಳಗೆ, ನಸು ಗೆರೆಗಳಿಂದ, —ಗುರುತಿಸು, ಚಿತ್ರಿಸು, ತಿದ್ದು; ಎಟುಕಿಸು (Can just t. the ceiling ಮಾಳಿಗೆ ಎಟುಕುತ್ತದೆ; ಮಾಳಿಗೆಯನ್ನು ಮುಟ್ಟಬಲ್ಲೆ, ಮುಟ್ಟಬಲ್ಲದು); (ರೂಪ.) (ಶ್ರೇಷ್ಠತೆ, ಮೊ. ಗಳಲ್ಲಿ) ಸಮಕ್ಕೆ ಬರು, ಸರಿಗಟ್ಟು, ಸಮವಾಗು (No one can t. him for purity of style ಶೈಲಿ ಪರಿಶುದ್ಧತೆಯಲ್ಲಿ ಅವನ ಸಮಕ್ಕೆ ಬರುವವರು ಯಾರೂ ಇಲ್ಲ); ಮನ—ಮುಟ್ಟು, ತಟ್ಟು, ಕರಗಿಸು (It touched me to the heart. Was touched by her appeal ಆಕೆಯ ಮೊರೆಯಿಂದ ಅವನ ಮನಸ್ಸು ಕರಗಿತು): (ಮನಸ್ಸನ್ನು) ನಾಟು, ಇರಿ, ನೋಯಿಸು, ಕೆರಳಿಸು [T. one home ಮನಸ್ಸಿಗೆ ಚೆನ್ನಾಗಿ ನಾಟು. T. one to the quick (Quick ನೋಡಿ). T. one on the raw (Raw ನೋಡಿ)]; (ವಿಷಯವನ್ನು) ಸ್ವಲ್ಪ ಮಾತ್ರ—ಪ್ರಸ್ತಾಪಿಸು, ಸೂಚಿಸು; ಸಂಬಂಧಿಸಿರು, ಕುರಿತಿರು (The question touches you nearly); (ಮು., ನಿಷೇಧ ಪ್ರ. ಗಳಲ್ಲಿ ಮಾತ್ರ) ವ್ಯವಹರಿಸು, ಸಂಬಂಧವಿಟ್ಟುಕೊಂಡಿರು (Refuses to t. breweries ಸಾರಾಯಿಖಾನೆಗಳಿಗೆ ಬಂಡವಾಳ ಹಾಕಲು ಒಪ್ಪುವುದಿಲ್ಲ. Dare not t. beer ಬಿಯರ್ ಮದ್ಯ ಮುಟ್ಟುವ, ಕುಡಿಯುವ, ಧೈರ್ಯವಿಲ್ಲ); ಸ್ವಲ್ಪ ಹಾನಿಯುಂಟುಮಾಡು, ಕೆಡಿಸು (Fruit touched by the frost); (ಭೂ. ಕೃ.) ಸ್ವಲ್ಪ ಹುಚ್ಚಾದ (His brain is touched ಅವನ ಮಿದುಳು ಸ್ವಲ್ಪ ಕೆಟ್ಟಿದೆ); ಸ್ವಲ್ಪ ಸೋಕು ಇರು; ಕೊಂಚವಾಗಿ —ಸೇರು, ಮಾರ್ಪಡಿಸು (Religion is morality touched with emotion ಧರ್ಮವೆಂಬುದು ರಾಗ ಭಾವ ರಂಜಿತ ನೀತಿ, ನಡತೆ). (ನಿಷೇಧಾರ್ಥಕ ವಾಕ್ಯಗಳಲ್ಲಿ) ಸ್ವಲ್ಪವಾದರೂ—ಪರಿಣಾಮವುಂಟು ಮಾಡು, ಹಿಡಿ, ಅಂಟು, ನಿರ್ವಹಿಸು, ನಿಭಾಯಿಸು (Brass polish won't t. these candlesticks. Couldn't t. the algebra paper ಬೀಜಗಣಿತದ ಪ್ರಶ್ನೆಪತ್ರಿಕೆಯನ್ನು ಸ್ವಲ್ಪವೂ ಮಾಡಲಾಗಲಿಲ್ಲ). (ಅಸಂ.) T. one for ಒಬ್ಬನಿಂದ (ಹಣ) ಕೀಳು, ಹೊರಡಿಸು (He touched me for £5 ಅವನು ನನ್ನಿಂದ £೫ ಕಿತ್ತನು). T. at (ನಾವೆ) (ಬಂದರು, ಮೊ. ಗಳಲ್ಲಿ) ಹೊಕ್ಕುಹೋಗು, ತಂಗಿಹೋಗು. T. down (ರಗ್ಬಿ ಕಾಲ್ಚೆಂಡಾಟ) (ತನ್ನ ಅಥವಾ ಎದುರಾಳಿಯ) ಗುರಿ ಗಂಬದ ಹಿಂದೆ ಚೆಂಡು ಸಮೇತ ನೆಲಮುಟ್ಟು. T. on *or* upon (ವಿಷಯವನ್ನು) ಸ್ಥೂಲವಾಗಿ, ಸಂಕ್ಷೇಪವಾಗಿ, —ಪ್ರಸ್ತಾಪಿಸು. T. off ಆತುರವಾಗಿ—ರೇಖಿಸು, ಚಿತ್ರಿಸು; (ಫಿರಂಗಿ) ಹಾರಿಸು, ಉಡಾಯಿಸು; (ದೂರವಾಣಿಯ ಸಂಭಾಷಣೆಯನ್ನು) ಕಡಿದುಬಿಡು, ನಿಲ್ಲಿಸಿಬಿಡು. T. up (ಚಿತ್ರ, ಲೇಖನ, ಮೊ. ನ್ನು) ತಿದ್ದು, ಪರಿಷ್ಕರಿಸು, ಒಪ್ಪಕೊಡು; (ಕುದುರೆಯನ್ನು) ಚಾವಟಿಯಿಂದ ಹೊಡೆ; (ನೆನಪನ್ನು) ಕುದುರಿಸು. **Toúchwood**[1] (ಮಕ್ಕಳಾಡುವ) ಅಜ್ಜಿ ಮುಟ್ಟುವಾಟ. **Toúchable** (ಗು.); **Toúcher** (ನಾ.) (ಕ್ರಿಯಾರ್ಥಗಳಲ್ಲಿ). (ಅಸಂ.) Near t. (ಅಪಾಯ, ಘಟನೆ) ಸ್ವಲ್ಪದಲ್ಲಿ, ಇನ್ನೇನು,—ಆಗಿಹೋಗುವುದರಲ್ಲಿರುವುದು, ತಪ್ಪುವುದು (As near as a t. ಹತ್ತಿರ ಹತ್ತಿರ, ಬಹುಮಟ್ಟಿಗೆ, —ಸರಿಯಾಗಿ). **Toúching** (ಗು., ಉಪ.) ಎದೆ ಕರಗಿಸುವ, ಹೃದಯಸ್ಪರ್ಶಿ, ಹೃದಯದ್ರಾವಕ, ಕರುಣಾಜನಕ (A t. incident. Shows the most t. confidence in us ಎದೆ ಕರಗಿಸುವಂಥ ನಂಬಿಕೆಯನ್ನು ನಮ್ಮಲ್ಲಿ ಇಟ್ಟಿದ್ದಾನೆ). (ಉಪ.; ಪ್ರಾಚೀ. ಪ್ರ. ಅಥವಾ ಸಾಹಿತ್ಯ ಪ್ರ.) ಕುರಿತು, ಸಂಬಂಧಪಟ್ಟು, ಬಗ್ಗೆ. **Toúchingly** (ಕ್ರಿ. ವಿ.); **Toúchingness** (ನಾ.)

Touch (ನಾ.) ಮುಟ್ಟುವುದು, ಸೋಕು(ವುದು), ತಾಕು(ವುದು), ಸ್ಪರ್ಶ(ನ) [Royal t. (ಗಂಡಮಾಲೆಯ ಪರಿಹಾರಕವಾಗಿ) ರಾಜಸ್ಪರ್ಶ. T. of nature ಪ್ರಕೃತಿ ಗುಣದ—ಸೋಂಕು, ಪರಿಣಾಮ: (ಬಳ. ಮಾ.) ಇತರರೂ ಸಹವರ್ತಿಸುವಂತೆ ಮಾಡುವ ಭಾವಪ್ರದರ್ಶನ. Near t. (ಅಪಾಯ, ಮೊ. ವು) ಕೊಂಚದಲ್ಲಿ ತಪ್ಪುವುದು. At a t. ಸ್ವಲ್ಪ ಮುಟ್ಟಿದರೆ, ಮುಟ್ಟಿಬಿಟ್ಟರೆ (ಸಾಕು)]. ಸ್ಪರ್ಶಜ್ಞಾನ, ಸ್ಪರ್ಶೇಂದ್ರಿಯ [**Toúchless** (ಗು.) ಸ್ಪರ್ಶಜ್ಞಾನ ಶೂನ್ಯ]; (ಚಿತ್ರ ಕೆಲಸದಲ್ಲಿ; ಕುಂಚ, ಸೀಸದಕಡ್ಡಿ, ಮೊ. ಗಳ) ನಸುಗೆರೆ, ಲಘು ಸ್ಪರ್ಶ [Finishing touches (ಅನೇಕ ವೇಳೆ ರೂಪ.) ಒಪ್ಪವಿಡುವ ಕೆಲಸ, ಪರಿಷ್ಕರಣ, ಮುಕ್ತಾಯ ಸಂಸ್ಕಾರ]; ಕೊಂಚ (ಮೊತ್ತ), ಸ್ವಲ್ಪ, ರವಷ್ಟು; ಸುಳಿವು, ಛಾಯೆ [Wants a t. of salt ರವಷ್ಟು ಉಪ್ಪು (ಸೋಕಿಸ) ಬೇಕೆನ್ನುತ್ತದೆ. An occasional t. of irony ಕ್ವಚಿತ್ ವ್ಯಂಗ್ಯ ಛಾಯೆ]; ವಾದ್ಯಗಾರನು ತಂತಿಗಳನ್ನು ಮಿಾಟುವ, ಕೀಲಿಗಳನ್ನು ಒತ್ತುವ, ರೀತಿ: ಮಿಡಿತ, ವಾದನ ರೀತಿ (Has a light t. on piano ಪಿಯಾನೊ ಕೀಲಿಗಳನ್ನು ಹಗುರವಾಗಿ ಒತ್ತುತ್ತಾನೆ. Piano is wanting in t. ಪಿಯಾನೊ ಕೀಲಿಗಳ ಮಿಡಿತ ಸಾಲದು); (ಕೆತ್ತನೆ, ಲೇಖನ, ಮೊ. ಗಳ) ರೀತಿ, ಶೈಲಿ, ಕೈವಾಡ [Writer has light t. ಲೇಖಕನು ಬಹಳ ನವುರಾಗಿ ಕೆಲಸಮಾಡುತ್ತಾನೆ; ಲೇಖಕನ ಶೈಲಿ ಲಲಿತವಾಗಿದೆ. The Nelson t. (ಒಂದು ಸಂದರ್ಭವನ್ನು ನಿರ್ವಹಿಸುವುದರಲ್ಲಿ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೆಲ್ಲಸಿನ ಕೈವಾಡ] ; ಸಂಪರ್ಕ, ವ್ಯವಹಾರ [Keep in t. (with) —ಒಡನೆ ಸಂಪರ್ಕವಿಟ್ಟುಕೊಂಡಿರು, ಪತ್ರವ್ಯವಹಾರ ನಡಸುತ್ತಿರು] ; ಉಕ್ಕಿನ ತುಂಡಿಗೆ ಒಂದು ನಿರ್ದಿಷ್ಟ ಕ್ರಮದಲ್ಲಿ ಅಯಸ್ಕಾಂತದ ಸಂಪರ್ಕವುಂಟುಮಾಡಿ ಆ ತುಂಡಿಗೆ ಕಾಂತಶಕ್ತಿಯನ್ನು ಕೊಡುವುದು: ಕಾಂತ ಸ್ಪರ್ಶ ; (ಪ್ರಾಚೀ. ಪ್ರ.) ಒರೆಗಲ್ಲು, ಪರೀಕ್ಷೆ (Put it to the t. ಒರೆಹಚ್ಚಿ ನೋಡು) ; (ವೈ. ಶಾ.) ಅಂಗ, ಮೊ. ನ್ನು ಮುಟ್ಟಿ ಪರೀಕ್ಷಿಸುವುದು : ಸ್ಪರ್ಶ ಪರೀಕ್ಷೆ ; (ಕಾಲ್ಚೆಂಡಾಟ) ಆಟದ ಬಯಲಿನ ಪಕ್ಕ ಎಲ್ಲೆಗಳ ಹೊರಗಿನ ಭಾಗ : ಹೊರ ಬದಿ [**T.-lines** ಪಕ್ಕ ಎಲ್ಲೆಗಳು, ಬದಿ ಗೆರೆಗಳು. **T.-in-goal** ಬದಿ ಗೆರೆಗಳೂ ಗುರಿಗಂಬದ ಗೆರೆಗಳೂ ಸೇರುವ (ನಾಲ್ಕು) ಹೊರ ಮೂಲೆ(ಗಳಲ್ಲೊಂದು). **T.-down** ಚೆಂಡಿನ ಸಮೇತ ನೆಲ ಮುಟ್ಟುವುದು (ಕ್ರಿಯಾರ್ಥ ನೋಡಿ)]. **T.-&-go** (ಗು., ನಾ.) ಅನಿಶ್ಚಿತ, ಸಂದಿಗ್ಧ, —ಸಂದರ್ಭ(ದ); ಸಂದೇಹಾಸ್ಪದ ; ಅಪಾಯ ಸಂಭವ(ದ) (It was t.-&-go whether we got past ನಾವು ದಾಟಿಹೋಗಿದ್ದೆವೋ ಎಂಬುದು ಸಂದೇಹಾಸ್ಪದವಾಗಿತ್ತು. A t.-&-go business ಅಪಾಯಕರವಾದ—ವ್ಯಾಪಾರ, ವ್ಯವಹಾರ. We were t.-&-go all the time ನಾವು ಉದ್ದಕ್ಕೂ ಅಪಾಯ ಸ್ಥಿತಿಯಲ್ಲಿದ್ದೆವು). **T.-body, -corpuscle** ಸ್ಪರ್ಶಕ್ಕೆ ಸಿಕ್ಕುವ ಕಣ : ಸ್ಪರ್ಶಕಣ. **T.-hole** ಹಿಂದಿನ ಕಾಲದ ಫಿರಂಗಿಯಲ್ಲಿ ಮದ್ದಿಗೆ ಬೆಂಕಿ ಹೊತ್ತಿಸುತ್ತಿದ್ದ ಕಂಡಿ : ಬೆಂಕಿ ಮುಟ್ಟಿಸುವ ಕಂಡಿ. **T.-last** (ಹಿಡಿಯುವವನು ಯಾರನ್ನು ಮುಟ್ಟುತ್ತಾನೊ ಆ ಮುಟ್ಟಲ್ಪಟ್ಟವನು ಮತ್ತೊಬ್ಬನನ್ನು ಹಿಡಿಯಬೇಕಾದ) ಒಂದು ಮಕ್ಕಳ ಮುಟ್ಟುವಾಟ. **T.-needle** ಚಿನ್ನದ (ಅಥವಾ ಬೆಳ್ಳಿಯ) ಬಣ್ಣವನ್ನು ಗೊತ್ತುಮಾಡುವುದಕ್ಕಾಗಿ ಒರೆಗಲ್ಲಿನಮೇಲೆ ಹೋಲಿಕೆಗೆ ಗೀರಲು ಉಪಯೋಗಿಸುವ, ಗೊತ್ತಾದ ಗುಣ ಪ್ರಮಾಣದ ಚಿನ್ನದ (ಅಥವಾ ಬೆಳ್ಳಿಯ) ಸೂಜಿ, ಕಡ್ಡಿ ; ಒರೆ—ಕಡ್ಡಿ, ಸೂಜಿ. **T.-paper** ಬಂದೂಕಿನ ಮದ್ದು, ಮೊ. ನ್ನು ಹೊತ್ತಿಸಲು ಉಪಯೋಗಿಸುವ, ಪೆಟ್ಲುಪ್ಪಿನ ದ್ರಾವಣದಲ್ಲಿ ಅದ್ದಿದ ಕಾಗದ: ಬೆಂಕಿ ಮುಟ್ಟಿಸುವ ಕಾಗದ. **Toúchstone** ಒರೆಗಲ್ಲು, ನಿಕಷ (ರೂಪ. ಸಹ). **Toúchwood**[2] ಕೆಲವು ಶಿಲೀಂಧ್ರಗಳ ದೆಸೆಯಿಂದ ಮರದ ದಾರು ಮಾರ್ಪಟ್ಟು ಆಗುವ, ಚಕಮಕಿ ಹೊತ್ತಿಸಲು ಉಪಯೋಗಿಸುವ, ಮೃದು ಪದಾರ್ಥ : ಬೊಡ್ಡು ಮರ. **Toúchy** (ಗು.) ಬೇಗ ತಪ್ಪು ತಿಳಿದುಕೊಳ್ಳುವ, ಅತಿಯಾಗಿ ಮನಸ್ಸಿಗೆ ಹಚ್ಚಿಕೊಳ್ಳುವ ; ಅತಿ ಸೂಕ್ಷ್ಮ. **Toúchily** (ಕ್ರಿ. ವಿ.) ; **Toúchiness** (ನಾ.)

Toúcher, Toúching, Toúchy, etc. Touch ನೋಡಿ.

Tough ಟಫ್ (ಗು., ನಾ.) ಬಗ್ಗಿಸಿದರೂ ಮುರಿಯಲಾಗದ, ನಾರುಗಟ್ಟಿಯಾದ ; ಗಡುಸಾದ, ಬಿಗಿಯಾದ, ಕಠಿನವಾದ (A beefsteak as t. as leather. Toughest steel) ; (ಜೇಡಿ, ಮೊ. ದು) ಜಿಗುಟಾದ, ಬಿಗುಪಿನ ; (ಕಷ್ಟ) ಸಹಿಷ್ಣುವಾದ, ಗಟ್ಟಿಮುಟ್ಟಾದ, (ದೇಹ) ದಾರ್ಢ್ಯವುಳ್ಳ ; ಬಗ್ಗದ, ಸಗ್ಗದ, ಛಲದ, ಅಚಲ, ದೃಢ (A man of ripe years, but t. in opinion) ; ಕಷ್ಟವಾದ (A t. job) ; (ಬಳ. ಮಾ. ; ಅದೃಷ್ಟ, ಮೊ. ಗಳ ವಿಷಯದಲ್ಲಿ) ಕ್ರೂರ, ಸಹಿಸಲಾಗದ, ದುಸ್ಸಹ ; (ಅಮೆ. ಸಂ. ಅಸಂ.) ಘಾತುಕತನದ, ಕೇಡಿಗತನದ, ಪುಂಡ. (ನಾ.) ಬೀದಿಯ ಪುಂಡ, ಕೊಲೆಗಡಿಕ. **Toúghen** (ಕ್ರಿ.) ಬಿಗುಪು, ಗಟ್ಟಿ, —ಮಾಡು, ಆಗು. **Toúghish** (ಗು.) ; **Toúghly** (ಕ್ರಿ. ವಿ.) ; **Toúghness** (ನಾ.)

Toupeé ಟೂಪೀ (ನಾ.) (ತಲೆಯ ಬಕ್ಕಬಿದ್ದ ಭಾಗವನ್ನು ಮುಚ್ಚುವುದಕ್ಕಾಗಿ ಧರಿಸುವ) ಕೃತಕ--ಕೇಶ, ಕೂದಲು.

Toupet (F) ಟೂಪೇ (ನಾ.) ಕೃತಕ—ಕೂದಲಿನ ಮುಂಭಾಗ, ಮುಂಜುಟ್ಟು.

Tour ಟೂ(ಅ)ರ್ (ನಾ., ಕ್ರಿ.) (ದೇಶದಲ್ಲಿ ಸ್ಥಳದಿಂದ ಸ್ಥಳಕ್ಕೆ) ಪ್ರಯಾಣ, ಯಾತ್ರೆ, ಸಂಚಾರ; ಪ್ರವಾಸ; ದೇಶಾಟನ [The grand t. (ಚರಿತ್ರೆ) (Grand ನೋಡಿ)]; ಸುತ್ತಾಟ, ತಿರುಗಾಟ, ವಿಹಾರ, ನಡೆದಾಟ (A t. through the town ನಗರ ಸಂಚಾರ); (ಸೈನಿಕ) ಕೆಲಸದ ಸರದಿ, ಠಾಣೆಯಲ್ಲಿರಬೇಕಾದ ಸರದಿ. [**T. de force** ಶಕ್ತಿ, ಚಾತುರ್ಯ, —ಪ್ರದರ್ಶನ]. (ಕ್ರಿ.) ಪ್ರಯಾಣಮಾಡು, ಪ್ರವಾಸ ಮಾಡು (*Through*, *about*, ಮೊ. ಉಪ. ದೊಡನೆ) ; (ದೇಶ, ಮೊ. ನ್ನು) ಸುತ್ತು, ಸಂಚರಿಸು. **Toúrist** (ನಾ.) ದೇಶಸಂಚಾರಿ, ಯಾತ್ರಿಕ, ಪ್ರವಾಸಿ(ಗ). T. ticket ಮು., ಒಂದು ಹೆಚ್ಚಿನ ಕಾಲಾವಧಿಯವರೆಗೂ ಉಪಯೋಗಕ್ಕೆ ಬರುವುದಾಗಿದ್ದು ಹಿಂದಿರುಗಿ ಬರುವುದಕ್ಕೂ ಅನುಕೂಲಿಸುವ, ರೈಲ್ವೆ, ಮೊ. ಗಳ ರಿಯಾಯಿತಿಯ, ಟಿಕೆಟ್ಟು : ಪ್ರವಾಸಿಯ ಟಿಕೆಟ್ಟು.

Tourbíllion ಟೂರ್‌ಬಿಲ್ಯನ್ (ನಾ.) ಉರಿಯ ಸುರುಳಿಯಂತೆ ಅಥವಾ ಸುರುಳಿಗಂಬದಂತೆ ಆಕಾಶದಲ್ಲಿ ಸುತ್ತು ತಿರುಗುವ ಒಂದು ಬಗೆಯ ಬಾಣ ಬಿರುಸು: ಸುತ್ತು, ಸುರುಳಿ, —ಬಾಣ.

Toúrmalin(e) ಟೂ(ಅ)ರ್‌ಮಲಿ(ೀ)ನ್ (ನಾ.) ಪ್ರಶಸ್ತಶಿಲೆಯಾಗಿ ಉಪಯೋಗಿಸುವ, ಬಲವಾದ ವಿದ್ಯುದ್ಗುಣಗಳನ್ನುಳ್ಳ, ಬೇರೆ ಬೇರೆ ಬಣ್ಣಗಳ ಖನಿಜವಸ್ತು : ತೋರಮಲ್ಲಿ. T. granite ಟೂರ್ಮಲಿನ್ (ಖನಿಜವುಳ್ಳ) ಗ್ರ್ಯಾನಿಟ್ (ಕಲ್ಲು)

Toúrnament ಟೂ(ಅ)ರ್ನಮೆಂಟ್, ಟರ್— (ನಾ.) (ಚರಿತ್ರೆ) ಯುದ್ಧ ಕವಚಗಳನ್ನು ಧರಿಸಿದ ಸವಾರರ ಎರಡು ತಂಡಗಳು ಮೊಂಡು ಆಯುಧಗಳಿಂದ ನಡಸುತ್ತಿದ್ದ ಯುದ್ಧಕ್ರೀಡೆಯ ಪ್ರದರ್ಶನ : ಕ್ರೀಡಾ ಯುದ್ಧ ; ಕುದುರೆಮಲ್ಲರ ಕಾಳಗ. ಅನೇಕ ಮಂದಿ ಸ್ಪರ್ಧಿಗಳಿಗೆ ನಡೆಯುವ ಚಾತುರ್ಯ ಪರೀಕ್ಷೆಯ ಸ್ಪರ್ಧೆ, ಮೇಲಾಟ : ಕ್ರೀಡಾ ಸ್ಪರ್ಧೆ (Chess, lawn-tennis, t.). **Toúrney** ಟೂ(ಅ)ರ್ನಿ, ಟರ್ನಿ (ನಾ., ಕ್ರಿ. ಅಕ.) (ಚರಿತ್ರೆ) ಕ್ರೀಡಾ ಯುದ್ಧ(ದಲ್ಲಿ ಭಾಗ ವಹಿಸು)

Toúrnay ಟೂರ್ನೇ (ನಾ.) (ಪೀಠೋಪಕರಣ, ಮೊ. ಗಳಿಗೆ ಉಪಯೋಗಿಸುವ) ಅಚ್ಚೊತ್ತಿದ ಉಣ್ಣೆಯ ಗವುಸು ಬಟ್ಟೆ.

Toúrney. **Tournament** ನೋಡಿ.

Toúrniquet ಟೂ(ಅ)ರ್‌ನಿಕೆಟ್, ಟುರ್‌ನಿಕೆ (ನಾ.) ತಿರುಪು ತಿರುಗಿಸುವುದರಿಂದ ಅಪಧಮನಿಯನ್ನು ಬಿಗಿದು ರಕ್ತಸ್ರಾವವನ್ನು ತಡೆಗಟ್ಟುವ, (ಒಂದು ಬಟ್ಟೆಪಟ್ಟಿ, ಒಂದು ಮೆತ್ತೆಕಟ್ಟು ಮತ್ತು ಒಂದು ತಿರುಪು —ಇವನ್ನುಳ್ಳ) ಒಂದು ಸಲಕರಣೆ : ತಿರುಪುಪಟ್ಟಿ ; ರಕ್ತ ತಡೆಪಟ್ಟಿ ; (ಇದೇ ರೀತಿ ಉಪಯೋಗಿಸುವ) ತಿರಿಚೊತ್ತು ಪಟ್ಟಿ.

Tournúre (F) ಟೂರ್‌ನ್ಯೂರ್ (ನಾ.) ಬಾಗು, ತಿರುವು ; (ಅಂಗದ) ಆಕಾರ, ಬಾಹ್ಯ, —ರೇಖೆ ; ಸೊಂಡಿ ಅಥವಾ ಟೊಂಕ ದುಂಡಗೆ ಕಾಣುವಂತೆ ಹೆಂಗಸರು ಧರಿಸುತ್ತಿದ್ದ ಮೆತ್ತೆ : ಟೊಂಕಮೆತ್ತೆ ; ಉಡುಪಿನ ಹಿಂಭಾಗದ ವಿನ್ಯಾಸ.

Toúsle ಟೌ(ಟೂ)ಸ್‌ಲ್ (ಕ್ರಿ. ಸಕ.) ಒರಟೊರಟಾಗಿ ಹಿಡಿದೆಳೆ ; (ಮು., ಹೆಂಗಸನ್ನು) ಹಿಗ್ಗಾಮುಗ್ಗಾ ಎಳೆ, ಒರಟೊರಟಾಗಿ ಎಳೆದಾಡು ; (ಮು., ಕೂದಲನ್ನು) ಗೋರಾಡು, ಕೆದರು. **Toúsy** (ಗು.) ಒರಟಾದ ; ದೊರಗಾದ ; ಬೊಂತೆಗಟ್ಟಿದ ; ಕೆದರಿದ; ಬಾಚಿಲ್ಲದ.

Toúsy. **Tousle** ನೋಡಿ.

Tout ಟೌಟ್ (ಕ್ರಿ. ಅಕ., ನಾ.) ಗಿರಾಕಿಯಾಗೆಂದು—ಹಿಡಿ, ಬೇಡು, ಪೀಡಿಸು (*For* orders); (ಪಣವೊಡ್ಡುವ ಉದ್ದೇಶಕ್ಕಾಗಿ) ತರಬೇತಾಗುತ್ತಿರುವ ಜೂಜಿನ ಕುದುರೆಗಳ ಚಲನ ವಲನಗಳನ್ನೂ ಸ್ಥಿತಿಯನ್ನೂ ಹೊಂಚು ನೋಡು : ಜೂಜು ಕುದುರೆಯ ಹೊಂಚು ನೋಡು. (ನಾ.) ಗಿರಾಕಿ ಬೇಡಿಕೆ; (ಜೂಜು ಕುದುರೆಯ) ಹೊಂಚು ನೋಡುವಿಕೆ. ಗಿರಾಕಿ—ಒದಗಿಸುವವನು, ದಳ್ಳಾಳಿ, ಹಿಡುಕ ; ಜೂಜು ಕುದುರೆಯ ಹೊಂಚುಗಾರ [=**Toúter** (ನಾ.) (ವಿರ. ಪ್ರ.)]

Tout court (F) ಟೂ ಕೂರ್ (ಕ್ರಿ. ವಿ.) (ಹೆಸರು, ಮೊ. ಗಳ ವಿಷಯದಲ್ಲಿ) ಸೇರಿಕೆ, ವಿವರಣೆ, —ಇಲ್ಲದೆ ; ಸಂಕ್ಷೇಪದಲ್ಲಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tout ensemble (F). **Ensemble** ನೋಡಿ.

Tów[1] ಟೋ (ಕ್ರಿ. ಸಕ., ನಾ.) (ಹಡಗು, ಏರಿಯ ಮೇಲಿನ ಕುದುರೆ, ಮೊ. ಗಳ ವಿಷಯದಲ್ಲಿ) ಹಗ್ಗದಿಂದ ಅಥವಾ ಸರಪಣಿಯಿಂದ (ದೋಣಿ, ಹರಿಗೋಲು, ಮೊ. ನ್ನು) ನೀರಿನಲ್ಲಿ ಉದ್ದಕ್ಕೂ ಎಳೆ(ದುಕೊಂಡು ಹೋಗು); (ವ್ಯಕ್ತಿಯನ್ನು, ವಸ್ತುವನ್ನು) ತನ್ನ ಹಿಂದೆ ಎಳೆದುಕೊಂಡು ಹೋಗು; (ಪ್ರಾಣಿ ಮಾದರಿಗಳ ಸಂಗ್ರಹಣಕ್ಕಾಗಿ) ಬಲೆಯನ್ನು ನೀರಿನ ಮೇಲೆ ಎಳೆ. (ನಾ.) ಹೀಗೆ ಎಳೆಯುವುದು, ಎಳೆಯಲ್ಪಡುವುದು; ಎಳೆತ [Take, have, in t. ಹಗ್ಗ ಹಿಡಿದು ನಡೆಸು; (ರೂಪ.) (ಒಬ್ಬನನ್ನು) ವಶಕ್ಕೆ ತೆಗೆದುಕೊ, ಮೂಗುದಾರ ಹಾಕಿ ಎಳೆ]. Tow(ing)-line, -rope ಎಳೆಯುವ ಹುರಿ, ಹಗ್ಗ. Tow(ing)-net (ಪ್ರಾಣಿ ಮಾದರಿಗಳನ್ನು ಕಲೆಹಾಕುವುದಕ್ಕಾಗಿ) ನೀರಲ್ಲಿ ಎಳೆಯುವ ಬಲೆ: ಎಳೆ, ಗೋರು, —ಬಲೆ. Tow(ing)-path ದೋಣಿ, ಮೊ. ಗಳನ್ನು ನದಿಯ ಅಥವಾ ಕಾಲುವೆಯ ಉದ್ದಕ್ಕೂ ಎಳೆದುಕೊಂಡು ಹೋಗುವುದಕ್ಕಾಗಿ ಉಪಯೋಗಿಸುವ ನೆಲದ ದಾರಿ: ಎಳೆದಾರಿ. **Tówage** ಎಳೆತ(ದ—ಬಾಡಿಗೆ, ರುಸುಮು)

Tow[2] ಟೋ (ನಾ.) ಅಗಸೆಯ ಅಥವಾ ಸಣಬಿನ ನಾರಿನ ಒರಟು ತುಂಡು; ಕಿತ್ತಾನಾರು, ತುಂಡುನಾರು. **Tówy** (ಗು.)

Tóward[1] ಟೋ(ವ್)ಅರ್ಡ್ (ಗು.) (ಪ್ರಾಚೀ. ಪ್ರ.) ಕಲಿಯಲು ಇಷ್ಟವುಳ್ಳ; ಸಾಧುವಾದ, ವಿನೀತ. **Tówardly** (ಗು.); **Tówardness** (ನಾ.)

Towárds ಟುವರ್ಡ್ಸ್, ಟೋ(ಅ)ರ್ಡ್ಸ್, **Towárd**[2] ಟುವಾರ್ಡ್, ಟೋ(ಅ)ರ್ಡ್ (ಉಪ.) (ಗದ್ಯದಲ್ಲೂ ಬಳ. ಮಾ. ನಲ್ಲೂ ಈಗ Towards ಹೆಚ್ಚು ರೂಢಿ) (—ರ) ಕಡೆಗೆ, ದಿಕ್ಕಿನಲ್ಲಿ, ಅಭಿಮುಖವಾಗಿ [Looks t. the sea ಸಮುದ್ರದ ಕಡೆಗಿದೆ. I look t. you (ಸ್ವಸ್ತಿಪಾನದಲ್ಲಿ) ನಿನ್ನ ಆರೋಗ್ಯಲಾಭಕ್ಕಾಗಿ]; (—ರ) ವಿಷಯದಲ್ಲಿ, ಸಂಬಂಧವಾಗಿ, ಬಗ್ಗೆ, ಕುರಿತು (His attitude t. Home Rule); [(ಪ್ರಾಚೀ. ಪ್ರ.; ಮು., ಬೈಬಲ್ ಪ್ರ.) To usward ನಮ್ಮ—ಕಡೆಗೆ, ವಿಷಯದಲ್ಲಿ]; —ಓಸ್ಕರ, —ಕ್ಕಾಗಿ, —ಉದ್ದೇಶಕ್ಕಾಗಿ (Saved something t. his education); ಹತ್ತಿರ(ದಲ್ಲಿ), (—ದ) ಹೊತ್ತಿಗೆ, (—ಕ್ಕೆ) ಸ್ವಲ್ಪ ಮುಂಚೆ (T. noon ಮಧ್ಯಾಹ್ನದ—ಹತ್ತಿರ ಹತ್ತಿರ, ಹೊತ್ತಿಗೆ. T. the end of our journey ನಮ್ಮ ಪ್ರಯಾಣದ ಕಡೆ ಕಡೆಯಲ್ಲಿ); (ಪ್ರಾಚೀ. ಪ್ರ.; ಕ್ರಿ. ವಿ. ವಾಗಿ) Feast is toward ಹಬ್ಬ—ಸಮೀಪಿಸುತ್ತಿದೆ, ಬರುತ್ತಿದೆ.

Tówel ಟೌಎಲ್ (ನಾ., ಕ್ರಿ.) (ಮೈ ಒರಸುವ) ಚೌಕ, ಟವಲು. [Roller t. ಸುತ್ತು ತಿರುಗುವ ಕಂಬಿಯಮೇಲೆ ಹಾಕಿರುವ ಕೊನೆಯಿಲ್ಲದ ಟವಲು: ಸುತ್ತುಗಂಬಿ ಟವಲು. T.-horse ಟವಲು (ಹಾಕುವ) ನಿಲವು. T.-roller ಕೊನೆಯಿಲ್ಲದ ಟವಲು ಅಳವಡಿಸಿರುವ ಉರುಳುಗಂಬಿ: ಟವಲುಗಂಬಿ. (ಹಳೆಯ ಅಸಂ.) Lead t. (ಬಂದೂಕದ) ಗುಂಡು. Oaken t. ದೊಣ್ಣೆ, ಲಟ್ಟಾ]. (ಕ್ರಿ.) ಟವಲಿನಿಂದ—ಒರಸು, ಒರಸಿಕೊ. (ಅಸಂ.) (ದೊಣ್ಣೆಯಿಂದ) ಹೊಡೆ, ಸದೆಬಡಿ. **Tówelling** (ನಾ.) (ಕ್ರಿಯಾರ್ಥಗಳಲ್ಲಿ); ಟವಲು (ಮಾಡುವ) ಬಟ್ಟೆ.

Tówer ಟೌಅರ್ (ನಾ., ಕ್ರಿ. ಅಕ.) ಚರ್ಚು, ಮೊ. ಭಾರಿ ಕಟ್ಟಡಗಳ ಭಾಗವಾದ, ಸಾ., ಚದರತಲದ ಅಥವಾ ಗುಂಡುತಲದ ಎತ್ತರ ಕಟ್ಟಡ: ಗೋಪುರ, ಶಿಖರ. (T. of silence ಪಾರ್ಸಿಗಳು ಹೆಣಗಳನ್ನು ಹದ್ದುಗಳಿಗಿಕ್ಕುವ ಕಟ್ಟಡ: ಪಾರ್ಸಿಗಳ ಸ್ಮಶಾನ). (ರೂಪ.) ರಕ್ಷಣೆ ಸ್ಥಳ, ದುರ್ಗ; ರಕ್ಷಕ [T. of strength ಬಲಸ್ತಂಭ, ಆಧಾರಸ್ತಂಭ(ಪ್ರಾಯಯನಾದವನು); ರಕ್ಷಾವೀರ, ಬಲಭೀಮ]. [Martello t. (Martello ನೋಡಿ). Water-t. ಬೆಂಕಿಯ ಅನಾಹುತಗಳಲ್ಲಿ ನೀರು ರಭಸದಿಂದ ಎತ್ತರಕ್ಕೆ ಹಾಯುವಂತೆ ಏರ್ಪಡಿಸಿರುವ ನಳಿಕೆ; ಹೆಚ್ಚು ಒತ್ತಡದಿಂದ ನೀರು ಸರಬರಾಯಿ ಆಗುವಂತೆ ನೀರಿನ ಶೇಖರಣೆಯನ್ನು ಇಟ್ಟಿರುವ ಗೋಪುರ: ನೀರಗೋಪುರ. The T. (of London) ಈಗ ಯುದ್ಧಾಯುಧ ಸಂಗ್ರಹಶಾಲೆಯಾಗಿಯೂ ಸರ್ವಜನಾಕರ್ಷಣೀಯ ವಸ್ತುಸಂಗ್ರಹಶಾಲೆಯಾಗಿಯೂ ಉಪಯೋಗಿಸುತ್ತಿರುವ, ಲಂಡನ್ ಪಟ್ಟಣದಲ್ಲಿಯ ಕಟ್ಟಡಗಳ ತಂಡ (ಹಿಂದೆ ಇದು ದುರ್ಗವಾಗಿಯೂ, ಒಮ್ಮೆ ರಾಜನ ಅರಮನೆಯಾಗಿಯೂ, ತರುವಾಯ ರಾಜಕೀಯ ಕೈದಿಗಳಿಗೆ ಸರ್ಕಾರದ ಸೆರೆಮನೆಯಾಗಿಯೂ ಉಪಯೋಗದಲ್ಲಿತ್ತು): ಲಂಡನ್ ದುರ್ಗ]. (ಕ್ರಿ. ಅಕ.) (ಸುತ್ತಮುತ್ತಲಗಿಂತ) ಎತ್ತರವಾಗಿರು, ಉನ್ನತವಾಗಿರು [*Above* ಉಪ. ಜೊಡನೆ. (ಘನತೆಯುಳ್ಳ ವ್ಯಕ್ತಿಯ ವಿಷಯದಲ್ಲಿ ರೂಪ.): Towers above his contemporaries ತನ್ನ ಸಮಕಾಲೀನರಿಗಿಂತ ಉನ್ನತನಾಗಿದ್ದಾನೆ]. (ಹದ್ದು, ಮೊ. ಗಳ ವಿಷಯದಲ್ಲಿ) ಎತ್ತರದಲ್ಲಿ, ಬಹುಮೇಲೆ, —ಹಾರುತ್ತಿರು, ತೇಲಾಡುತ್ತಿರು; (ಗಾಯಗೊಂಡ ಹಕ್ಕಿಯ ವಿಷಯದಲ್ಲಿ) ಮೇಲಕ್ಕೆ ನೇರವಾಗಿ ಹಾರು. (ವರ್ತಮಾನ ಕೃ.) ಬಹಳ ಎತ್ತರವಾದ; ಉನ್ನತ; ಅತ್ಯುಚ್ಚ [(ರೂಪ.) A towering rage, passion ಪ್ರಚಂಡ —ಕೋಪೋದ್ರೇಕ, ಆವೇಶ]. **Tówered** (ಗು.); **Tówery** (ಗು.)

Town ಟೌನ್ (ನಾ.) (ಚರಿತ್ರೆ) (ಸುತ್ತಲೂ ಗೋಡೆ ಅಥವಾ ಬೇಲಿ ಇರುವ) ಸಣ್ಣ ಊರು; (ಹಳ್ಳಿಗಿಂತ ದೊಡ್ಡದಾದ, ಇನ್ನೂ ನಗರವಾಗಿಲ್ಲದ) ಊರು; ಪಟ್ಟಣ (ಅನೇಕ ವೇಳೆ Country ಪದಕ್ಕೆ ವಿರುದ್ಧ ಪ್ರ.); ಊರಿನ ಜನ, ಊರವರು, ಪೌರರು (The whole t. knows of it ಊರಿಗೆಲ್ಲ ಅದು ಗೊತ್ತು. It is the talk of the t. ಊರಲ್ಲೆಲ್ಲ ಅದೇ ಮಾತಾಗಿದೆ; ಅದು ಊರಮಾತಾಗಿದೆ); (The ಪದ ಇಲ್ಲದೆ ಪ್ರ.) ಲಂಡನ್ ಪಟ್ಟಣ ಅಥವಾ ನೆರೆಯೂರು [Went up to t. (=London) from York]. [Man about t. (ಮು., ಲಂಡನ್ ಪಟ್ಟಣದಲ್ಲಿನ) ನೀಟುಗಾರ ಸೋಮಾರಿ; ಊರಿನ ಉಂಡಾಡಿಗ. Paint the t. red (Paint ನೋಡಿ). County t. ಕೌಂಟಿಯ ಮುಖ್ಯ ಪಟ್ಟಣ]. **T. & gown** (Gown ನೋಡಿ). **T. clerk** ಪಟ್ಟಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನೋಡಿಕೊಳ್ಳುವ ಅಧಿಕಾರಿ: ಪಟ್ಟಣದ ದಾಖಲೆ ಅಧಿಕಾರಿ; ಪೌರಸಭೆಯ ಕಾರ್ಯದರ್ಶಿ. **T. council(lor)** ಪೌರ, ನಗರ, —ಸಭೆ(ಯ ಸದಸ್ಯ). **T. crier** ಪಟ್ಟಣದ—ಡಂಗುರದವ, ಡಂಗುರದಾರ. **T. hall** ಪಟ್ಟಣದ ಆಡಳಿತ ನಡಸುವ ಅಧಿಕಾರಸ್ಥಾನ: ಪುರಭವನ (ಸಾರ್ವಜನಿಕ ಸಭಾಭವನ ಸಹ). **T.-house** (ಒಬ್ಬನ) ಪಟ್ಟಣದ—ನಿವಾಸಸ್ಥಾನ, ಮನೆ (Country house ಎಂಬುದಕ್ಕೆ ವಿರುದ್ಧವಾಗಿ). **Tównsfolk** ಊರವರು, ಪಟ್ಟಣಿಗರು. **Tównsman** ಊರವನು; ಪಟ್ಟಣಿಗ; ತನ್ನ ಊರಿನವನು. **Tównspeople** ಊರಜನ, ಪಟ್ಟಣದ ಜನ. **T. talk** ಊರಮಾತು. **Towneé** (ನಾ.) (ವಿ. ವಿ. ನಿ. ಅಸಂ.) (ವಿಶ್ವವಿದ್ಯಾನಿಲಯವಿರುವ ಪಟ್ಟಣದಲ್ಲಿ) ವಿ. ವಿ. ನಿ. ದ ಸದಸ್ಯನಲ್ಲದ ಪಟ್ಟಣಿಗ. **Tównship** (ನಾ.) (ಚರಿತ್ರೆ) 'ಮ್ಯಾನರ್', 'ಪ್ಯಾರಿಷ್', ಮೊ. ಗಳಲ್ಲಿ ವಾಸವಾಗಿರುವ ಜನಪಂಗಡ; (ಪ್ರಾಂತ ವಿಭಾಗವಾಗಿ) 'ಮ್ಯಾನರ್' ಅಥವಾ 'ಪ್ಯಾರಿಷ್'; ದೊಡ್ಡ 'ಪ್ಯಾರಿಷ್'ನ ಭಾಗವಾದ ಸಣ್ಣ ಊರು ಅಥವಾ ಹಳ್ಳಿ: ಪ್ಯಾರಿಷ್—ಊರು, ಹಳ್ಳಿ; (ದೊಡ್ಡ 'ಪ್ಯಾರಿಷ್'ನ ಭಾಗಗಳಾದ) ಉಪ ಪ್ಯಾರಿಷ್(ಗಳಲ್ಲಿ ಒಂದು); (ಅಮೆ. ಸಂ. ಮತ್ತು ಕೆನಡಾ ದೇಶ) ಕೆಲವು ಸ್ಥಳೀಯ ಆಡಳಿತಾಧಿಕಾರಗಳುಳ್ಳ ಕೌಂಟಿಯ ಭಾಗ (ಆರು ಮೈಲಿಗಳ ಉದ್ದಗಲಗಳುಳ್ಳ, ೩೬ ಚದರಮೈಲಿ ವಿಸ್ತೀರ್ಣದ, ಜಿಲ್ಲೆ): ಉಪ ಕೌಂಟಿ; (ಆಸ್ಟ್ರೇಲಿಯ) ಪಟ್ಟಣ ಕಟ್ಟಲು ಗೊತ್ತುಪಡಿಸಿದ ನಿವೇಶನ: ಪಟ್ಟಣದ ನಿವೇಶನ. **Tównless** (ಗು.); **Tównlet** (ನಾ.) ಸಣ್ಣ ಊರು. **Tównward** (ಗು., ಕ್ರಿ. ವಿ.); **Tównwards** (ಕ್ರಿ. ವಿ.)

Toxaémia ಟಾಕ್ಸೀಮಿಯ (ನಾ.) ರಕ್ತವಿಷ; ನೆತ್ತರು ನಂಜು; ನಂಜಿನ ಕಾಯಿಲೆ. **Toxaémic** (ಗು.)

Tóxic ಟಾಕ್ಸಿಕ್ (ಗು.) ನಂಜಿನ, ವಿಷದ, ವಿಷವುಳ್ಳ (T. symptoms. T. substances. T. anaemia ವಿಷದಿಂದ ಉಂಟಾದ ರಕ್ತಕ್ಷಯ) **Tóxically** (ಕ್ರಿ. ವಿ.); **Tóxicant** (ಗು., ನಾ.) ವಿಷಸ್ವಭಾವದ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷ(ವಸ್ತು). **Toxicólogy** —ಕಾಲೊಜಿ (ನಾ.) ವಿಷ—ವಿಜ್ಞಾನ, ಶಾಸ್ತ್ರ. **Toxicológical** ಟಾಕ್ಸಿಕೊಲಾಜಿಕಲ್ (ಗು.) ವಿಷ — ವಿಜ್ಞಾನದ. ವಿಜ್ಞಾನಸಂಬಂಧವಾದ. **Toxicológically** (ಕ್ರಿ. ವಿ.) ; **Toxicólogist** —ಕಾಲೊಜಿಸ್ಟ್ (ನಾ.) ವಿಷವಿಜ್ಞಾನ ನಿಪುಣ ; ವಿಷ ಶಾಸ್ತ್ರಜ್ಞ. **Toxicománia** ಟಾಕ್ಸಿಕೊಮೇನಿಯ (ನಾ.) ವಿಷ ವಸ್ತು(ಉದಾ., ಅಫೀಮು) ಸೇವನೆಯ ಚಟ; ವಿಷದ ಗೀಳು. **Toxicósis** ಟಾಕ್ಸಿಕೋಸಿಸ್ (ನಾ.; ಬ. ವ. -ses —ಸೀಸ್) ವಿಷಪರಿಣಾಮದ ರೋಗ(ಸ್ಥಿತಿ). **Tóxin** ಟಾಕ್ಸಿನ್ (ನಾ.) ಮು., ಸೂಕ್ಷ್ಮದರ್ಶಕೀಯ ಜೀವಿ ಸ್ರವಿಸಿದ, ಒಂದು ನಿರ್ದಿಷ್ಟ ರೋಗವನ್ನುಂಟುಮಾಡುವ ವಿಷ: ಜೀವಾಣು ವಿಷ. **Toxiphóbia** (ನಾ.) ವಿಷ(ಹಾಕಿರುವ ರೆಂಬ) ಭೀತಿ.

Tóxin. **Toxic** ನೋಡಿ.

Toxóphilite ಟಾಕ್ಸಾಫಿಲೈಟ್ (ಗು., ನಾ.) ಧನುರ್ವಿದ್ಯೆಯ, ಬಿಲ್ಲು ವಿದ್ಯೆಯ ; ಧನುರ್ವಿದ್ಯಾಭ್ಯಾಸಿ ; ಧನುರ್ವಿದ್ಯಾ ಪ್ರೇಮಿ, ಬಿಲ್ಲುಗಾರ. **Toxophilític** (ಗು.)

Toy ಟಾಯ್ (ನಾ., ಕ್ರಿ. ಅಕ.) (ಮು., ಮಗುವಿನ) ಆಟದ ಸಾಮಾನು; ಥಳುಕಿನ—ವಸ್ತು, ಒಡವೆ. ನಿಜವಾದ ಉಪಯೋಗಕ್ಕಲ್ಲದೆ ವಿನೋದಕ್ಕಾಗಿ ಉದ್ದೇಶಿಸಿದ ವಸ್ತು : ಆಟದ, ವಿನೋದ, —ವಸ್ತು (The spinthariscope is a pretty t.) ; ಶ್ರದ್ಧೆಯಿಲ್ಲದ, ಥಳುಕಿನ, ಹುಡುಗಾಟಿಕೆಯ, —ಕೆಲಸ ; ಆಟ ; ಹವ್ಯಾಸ (She makes a t. of housekeeping ಮನೆವಾರ್ತೆಯನ್ನು ದೊಡ್ಡ ಆಟವನ್ನಾಗಿ, ಹವ್ಯಾಸವನ್ನಾಗಿ, ಮಾಡಿಕೊಂಡಿದ್ದಾಳೆ). [T.-box ಆಟದ ಸಾಮಾನಿನ ಪೆಟ್ಟಿಗೆ. T. dog, spaniel, terrier (ಮುದ್ದಿಗಾಗಿ ಅಥವಾ ಅಪೂರ್ವ ಮಾದರಿಗಳಾಗಿ ಇಟ್ಟುಕೊಂಡಿರುವ) ನಣ್ಣ ನಾಯಿಜಾತಿಗಳು. **Tóyshop** ಆಟದ ಸಾಮಾನಿನ ಅಂಗಡಿ. T. soldier (ಸೀಸ, ಮೊ. ಗಳ) ಸಿಪಾಯಿಬೊಂಬೆ ; (ಯುದ್ಧಮಾಡಬೇಕಾಗಿಲ್ಲದ ಸೈನ್ಯಕ್ಕೆ ಸೇರಿದ) ಕೆಲಸವಿಲ್ಲದ ಸಿಪಾಯಿ, ಅಲಂಕಾರದ ಸಿಪಾಯಿ]. (ಕ್ರಿ. ಅಕ.) ಆಟವಾಡು, ವಿನೋದವಾಡು ; ಲಘುವಾಗಿ, ಹುಡುಗಾಟಿಕೆಯಾಗಿ, —ವರ್ತಿಸು ; ಹುಡುಗಾಟವಾಡು ; ಚೆಲ್ಲಾಟವಾಡು. T. with ಆಟವಾಡುವ ರೀತಿಯಲ್ಲಿ, ಬೇಕಾಬಿಟ್ಟಿಯಾಗಿ, ಚೆಲ್ಲಾಟವಾಗಿ,— ನಿರ್ವಹಿಸು, ಮಾಡು, ಹಿಡಿದಾಡಿಸು (Toyed with a plate of strawberries). **Tóyingly** (ಕ್ರಿ. ವಿ.)

Trabeátion ಟ್ರೇಬಿಯೇಷನ್ (ನಾ.) (ಕಮಾನುಗಳನ್ನು ಅಥವಾ ಕಮಾನು ಚಾವಣಿಯನ್ನು ಕಟ್ಟದೆ) ಬರಿ ಜಂತೆಗಳನ್ನು, ದೂಲಗಳನ್ನು, —ಉಪಯೋಗಿಸುವುದು, ಉಪಯೋಗಿಸಿದ ಕಟ್ಟಡ. **Trábeate(d)** (ಗು.)

Trabécula ಟ್ರಬೆಕ್ಯುಲ (ನಾ. ; ಬ. ವ. -lae —ಲೀ) (ಅಂ. ರ. ಶಾ.) ಸಂಬಂಧಕ ಅಂಗಾಂಶ, ಮೊ. ಗಳ (ನಣ್ಣ ಜಂತೆಯಾಕಾರದ) ಆಧಾರ ಪಟ್ಟಿ : ಜಂತೆಪಟ್ಟಿ. (ಸ. ವಿ.) ದೂಲದಾಕಾರದ—ಚಾಚು, ಗಂಟು. **Trabécular** (ಗು.) ; **Trabéculate(d)** (ಗು.)

Tracásseries (F) ಟ್ರಾಕಾಸ್ರೀ (ನಾ. ; ಬ. ವ.) ಸಣ್ಣ ಪುಟ್ಟ— ಜಂಜಾಟಗಳು, ತೊಡಕುಗಳು, ಜಗಳಗಳು.

Trace[1] ಟ್ರೇಸ್ (ಕ್ರಿ. ಸಕ., ನಾ.) ರೇಖಿಸು, ಗುರುತಿಸು, (ನಿ)ರೂಪಿಸು, ಚಿತ್ರಿಸು, (ಶ್ರಮಪಟ್ಟು) ಬರೆ [Traced (out) a plan of the district. Traced the words with a shaking hand ಅದುರುವ ಕೈಯಿಂದ ಮಾತುಗಳನ್ನು ಬರೆದನು. (ರೂಪ.) The policy traced (out) by him was never followed ಅವನು ನಿರೂಪಿಸಿದ ಕಾರ್ಯನೀತಿಯನ್ನು ಯಾರೂ ಅನುಸರಿಸಲೇ ಇಲ್ಲ] ; (ನಕ್ಷೆ, ಪ್ರತಿ, ಮೊ. ನ್ನು) (ಅಸಲಿನಮೇಲೆ ಅಥವಾ ಕೆಳಗೆ ಇಟ್ಟ ಕಾಗದದಮೇಲೆ) ತಿದ್ದು, ಪ್ರತಿಮಾಡು (=T. over) [Tracing-paper (ಕರ್ಪೂರತೈಲ, ಮೊ. ಗಳಿಂದ ಪಾರದರ್ಶಕವಾಗಿ ಮಾಡಿದ) ನಕ್ಷೆ ತಿದ್ದುವ ಕಾಗದ, ತಿದ್ದು ಕಾಗದ] ; (ಮನುಷ್ಯ, ಪ್ರಾಣಿ, ಹೆಜ್ಜೆ, ಮೊ. ಗಳ) ಜಾಡು ಹಿಡಿದು ಹೋಗು, ಅನುಸರಿಸು (*Along, through, to* ಮೊ. ಉಪ. ದೊಡನೆ); (ಉಳಿದಿರುವ ಅವಶೇಷಗಳಿಂದ ಹಿಂದಿನ ಕಾಲದ ರಸ್ತೆ, ಗೋಡೆ, ಮೊ. ಗಳ) ನೆಲೆ, ಅಳತೆ, ಮೊ. ನ್ನು ಗೊತ್ತುಮಾಡು, ನಿರ್ಣಯಿಸು ; ಗುರುತು, ಸುಳಿವು, ಕುರುಹು, —ಕಾಣು, ಕಂಡುಹಿಡಿ, ಪತ್ತೆಹಚ್ಚು (His resentment can be clearly traced in many passages ಅವನ ಅಸಮಾಧಾನವನ್ನು ಅನೇಕ ವಾಕ್ಯಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. Cannot trace any letter of that date ಆ ತಾರೀಖಿನ ಯಾವ ಕಾಗದವೂ ಸಿಕ್ಕಿಲ್ಲ, ನನ್ನ ಕೈಗೆ ಬಂದಂತಿಲ್ಲ) ; ದಾರಿ, ಮಾರ್ಗ, —ಹಿಡಿ, ಅನುಸರಿಸು. T. back ಹಿಂದು ಹಿಂದಕ್ಕೆ, ಮೂಲಕ್ಕೆ, —ಗುರುತಿಸು(ತ್ತ ಹೋಗು) ; ಪತ್ತೆಹಚ್ಚು [Have traced his genealogy back to (the time of) William I. The report has been traced back to you ಆ ಸುದ್ದಿ ನಿನ್ನಿಂದ ಹೊರಟಿತೆಂದು ಪತ್ತೆಹಚ್ಚಲಾಗಿದೆ]. (ನಾ.) (ಹೆಜ್ಜೆ) ಗುರುತು, ಜಾಡು, ಕುರುಹು, ಸುಳಿವು, ಚಿಹ್ನೆ, ಲಕ್ಷಣ (Of these buildings no t. remains ಈ ಕಟ್ಟಡಗಳ ಯಾವ ಕುರುಹೂ ಉಳಿದಿಲ್ಲ. Sorrow has left its traces on her face ಪಟ್ಟ ದುಃಖ ಆಕೆಯ ಮುಖದಲ್ಲಿ ಗುರುತುಗಳನ್ನು ಬಿಟ್ಟಿದೆ. Traces of Italian influence abound in his earlier works ಅವನ ಮೊದಮೊದಲಿನ ಕೃತಿಗಳಲ್ಲಿ ಇಟಾಲಿಯನ್ ಪ್ರಭಾವದ ಲಕ್ಷಣಗಳು ತುಂಬಿವೆ) ; (ಶಿಥಿಲ ಪ್ರ.) ತುಸ, ಕೊಂಚ, ರವಷ್ಟು (Contains traces of soda). **Tráceable** (ಗು.) ; **Tráceableness** (ನಾ.) ; **Traceabílity** (ನಾ.) ; **Tráceably** (ಕ್ರಿ. ವಿ.) ; **Tráceless** (ಗು.) ; **Trácelessly** (ಕ್ರಿ. ವಿ.) ; **Trácer** (ನಾ.) (ಮು., ಸೈನಿಕ) ಹೊಗೆ ಅಥವಾ ಜ್ವಾಲೆಯ ಮೂಲಕ ತನ್ನ ಪಥವನ್ನು ಗೋಲಂದಾಜರವನಿಗೆ ತೋರಿಸುವ ಕ್ಷಿಪಣಿ ಅಥವಾ ಗುಂಡು : ಪಥದ್ಯೋತಕ ಕ್ಷಿಪಣಿ. **Trácery** (ನಾ.) ಗಾತಿಕ್ ಶಿಲ್ಪದ ಕಿಟಕಿಯ ತಲೆಭಾಗದಲ್ಲಿಯ ತೆರಪು ಕೆತ್ತನೆ ಕೆಲಸ : ಜಾಲರ (ಕೆಲಸ); (ಇಂತಹ ಅಲಂಕಾರದ ಅಥವಾ ಸ್ವಾಭಾವಿಕವಾದ) ಜಾಲರ—ನಕ್ಷೆ, ರೇಖನ (ಉದಾ., ಹಕ್ಕಿಯ ರೆಕ್ಕೆಯಲ್ಲಿಯದು). **Tráceried** (ಗು.)

Trace[2] ಟ್ರೇಸ್ (ನಾ.) (ಕುದುರೆ ಬಂಡಿಯನ್ನು ಎಳೆಯಲಾಗುವಂತೆ ಎರಡೂ ಪಕ್ಕಗಳಲ್ಲಿ ಹಾಕಿರುವ) ಎಳೆ, ಪಕ್ಕ,—ಪಟ್ಟಿ, ಬಾರು, ಸರಪಣಿ [In the traces ಹೂಡಿ, ಸಜ್ಜಾಗಿ (ರೂಪ. ಸಹ). Kick over the traces (ಮನುಷ್ಯರ ವಿಷಯದಲ್ಲಿ ರೂಪ.) ತುಂಟಾಟ ಮಾಡು, ಅವಿಧೇಯತೆ ತೋರು]. T.-horse ಎಳೆಪಟ್ಟಿಯಿಂದ ಎಳೆಯುವ ಕುದುರೆ (ಮು., ಗುಡ್ಡ ಹತ್ತುವಲ್ಲಿ ಒಂದೇ ಎಳೆಪಟ್ಟಿಯಿಂದ ಎಳೆಯುವಂಥದು)

Trácery. **Trace**[1] ನೋಡಿ.

Trachéa ಟ್ರಕೀಯ, **Tráchea** ಟ್ರೇಕಿಯ (ನಾ., ಬ. ವ. -ae —ಯಾ) (ದೇಹದ) ಶ್ವಾಸನಾಳ, ಉಸಿರುಗೊಳವೆ ; (ಕೀಟಗಳಲ್ಲಿ) ಹೊರಗಾಳಿ ಒಳಹೊಗುವ ರಂಧ್ರ(ಗಳಲ್ಲೊಂದು): ಶ್ವಾಸರಂಧ್ರ ; (ಸ. ವಿ.) ನಾಳ. **Trácheal** ಟ್ರೇ— (ಗು.), **Tráchean** (ಗು.) (ಶ್ವಾಸ)ನಾಳದ(ಂಥ) ; (ಶ್ವಾಸ)ನಾಳ ಸಂಬಂಧವಾದ ; (ಶ್ವಾಸ)ನಾಳವುಳ್ಳ (-ean). **Trácheate** (ಪ್ರಾ. ವಿ.) (ಗು.) ಶ್ವಾಸರಂಧ್ರವುಳ್ಳ. **Tracheó-** (ಸ. ಪೂ. ಪ.) ; **Trácheocele** (ನಾ.) ಶ್ವಾಸನಾಳದ (ರೋಳೆಪೊರೆಯ) ಕುರು. **Trácheótomy** (ನಾ.) ಶ್ವಾಸನಾಳ ಛೇದನ. **Tracheítis** (ನಾ.) ಶ್ವಾಸನಾಳದ ಉರಿಯೂತ.

Trachélo- ಟ್ರಕೀಲೊ— (ಸ. ಪೂ. ಪ.) ಕುತ್ತಿಗೆ—, ಕೊರಲು—, ಕಂಠ—. **-tomy** ಗರ್ಭಕೋಶದ ಕಂಠವನ್ನು ಕತ್ತರಿಸಿಹಾಕುವುದು : ಗರ್ಭಕಂಠಚ್ಛೇದ.

Trachóma ಟ್ರಕೋಮ (ನಾ.) ರೆಪ್ಪೆಯ ಒಳ ಮುಖದಲ್ಲಿ ಕಣ ಕಣವಾಗಿ ಗುಳ್ಳೆಗಳಾಗುವ ಒಂದು ಬಗೆಯ ಕಣ್ಣಿನ ರೋಗ : ಕಣ್ಣಿನ ರವೆ ರೋಗ. **Trachómatous** — ಕಾ— (ಗು.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tráchy- ಟ್ರ್ಯಾಕಿ— (ನ. ಪೂ. ಪ.) ತರಕಲು—, ಒರಟು—. **-phónia** ಬಿರುದನಿ ; ಗಂಟಲು ಕಟ್ಟಿರುವುದು.

Tráchyte ಟ್ರ್ಯಾ(ಟ್ರೇ)ಕೈಟ್ (ನಾ.) ತಿಳಿಬಣ್ಣದ ತರಕಲಾದ ಜ್ವಾಲಾಮುಖಿ ಶಿಲೆ. **Trachýtic** ಟ್ರಕಿಟಿಕ್ (ಗು.)

Track ಟ್ರ್ಯಾಕ್ (ನಾ., ಕ್ರಿ.) ಗಾಡಿ, ಹಡಗು, ಪ್ರಾಣಿ ಅಥವಾ ಮನುಷ್ಯ ಹೋಗುವಾಗ ಹಿಂಬಿಟ್ಟ (ಹೆಜ್ಜೆ) ಗುರುತುಗಳ ಪರಂಪರೆ, ಸಾಲು ; ಜಾಡು ; (ಬ. ವ. ದಲ್ಲಿ) ಹೆಜ್ಜೆ ಗುರುತು(ಗಳು) [Watched the broad t. of departing ship. Followed his t. through the snow. Am on his t. ಅವನ ಜಾಡು ಹಿಡಿದಿದ್ದೇನೆ; (ರೂಪ.) ಅವನ (ನಡತೆ, ಹೂಟ, ಮೊ. ಗಳ) ಸುಳಿವು, ಜಾಡು, ನನಗೆ ಸಿಕ್ಕಿದೆ. Keep t. of (—ರ) ಜಾಡು ಹಿಡಿದುಹೋಗು, ಬೆಳೆವಣಿಗೆಯನ್ನು ಅನುಸರಿಸು]; ದಾರಿ, ಹಾದಿ, ಮಾರ್ಗ, ಪಥ (Followed in his t. ಅವನ ಮಾರ್ಗವನ್ನು ಅನುಸರಿಸಿದೆವು. T. of a comet ಧೂಮಕೇತುವಿನ ಪಥ) ; ಕಾಲಹಾದಿ, ಬಳಕೆಯ ದಾರಿ ; (ರೂಪ.) ಜೀವನದ —ನಿಯತ ಮಾರ್ಗ, ಜಾಡು ; ಅಭ್ಯಾಸ, ಪದ್ಧತಿ (Is covered with sheep-tracks ಕುರಿಗಳ ಓಡಾಟದ ದಾರಿಗಳಿಂದ ತುಂಬಿದೆ. Beaten track ಬಳಕೆಯ ದಾರಿ, ತುಳಿದ ಹಾದಿ); ಕುದುರೆ ಜೂಜೋಟದ ದಾರಿ, ವೈಹಾಳಿಪಥ [Cinder-t. = Cinder-path (Cinder ನೋಡಿ)] ; ರೈಲು—ಹಾದಿ, ಮಾರ್ಗ (Single t. ಒಂದು ಜೋಡಿ ಕಂಬಿಯ ಮಾರ್ಗ ; ಒಂಟಿ ಹಾದಿ. Double t. ಎರಡು ಜೋಡಿ ಕಂಬಿಯ ಮಾರ್ಗ : ಜೋಡಿ ಹಾದಿ) ; (ಯಂತ್ರಶಿಲ್ಪ : ಭಾರವೆಳೆಯುವ ಎಂಜಿನು, ಮೊ. ವು ಸರಿಯಾದ ದಾರಿಯಿಲ್ಲದೆಡೆಯಲ್ಲಿ ಹೋಗಲು ಅನುಕೂಲಸುವಂತೆ ಹಾಕಿರುವ) ಕೊಂಡಿಗಳುಳ್ಳ ಕೊನೆಯಿಲ್ಲದ ಉಕ್ಕಿನ ಕೀಲುಪಟ್ಟಿ : ಜಾಡುಪಟ್ಟಿ [**Trácked** (ಗು.) (ಬಂಡಿಗಳ ವಿಷಯದಲ್ಲಿ) ಜಾಡುಪಟ್ಟಿಯುಳ್ಳ]; [In one's tracks (ಅಸಂ.) ನಿಂತೆಡೆಯೆ, ಇದ್ದಲ್ಲೆ. Make tracks (ಅಸಂ.) ಓಟ ಕೀಳು, ಪರಾರಿಯಾಗು. Make tracks for (ಅಸಂ.) ಹಿಂಬಾಲಿಸು, ಬೆನ್ನುಹತ್ತಿ ಹೋಗು. Off the t. ದಾರಿತಪ್ಪಿ, ಜಾಡುತಪ್ಪಿ; (ರೂಪ.) ವಿಷಯಬಿಟ್ಟು. T.-clearer ಮುಂದುಗಡೆ ಅಥವಾ ಹಿಂದುಗಡೆ ದಾರಿಯನ್ನು ಬಿಡಿಸಿಕೊಳ್ಳಲು ಸ್ವಯಂಚಲ ಎಂಜಿನು, ಕೊಯ್ಲು ಯಂತ್ರ, ಮೊ. ಕ್ಕೆ ಜೋಡಿಸಿರುವ ಹಲವು ಬಗೆಯ ಸಲಕರಣೆ : ಮಾರ್ಗಶೋಧಕ]. (ಕ್ರಿ.) (ಮೃಗಗಳ ಇಕ್ಕೆಗೆ) ಜಾಡು ಹಿಡಿದುಹೋಗು, ಹಿಂಬಾಲಿಸು, ಬೆನ್ನುಹತ್ತಿ ಹೋಗು. (*To* ಉಪ. ದೊಡನೆ) (T. down ಹಿಂಬಾಲಿಸಿ, ಅಟ್ಟಿಸಿಕೊಂಡು ಹೋಗಿ, ಹಿಡಿ) ; (ಉಳಿದಿರುವ ಗುರುತು, ಮೊ. ಗಳಿಂದ) ಸುಳಿವು, ಜಾಡು, —(ಕಂಡು)ಹಿಡಿ ; ಪತ್ತೆಹಚ್ಚು; (ದೋಣಿಯನ್ನು ಹಗ್ಗ, ಸರಪಣಿ, ಮೊ. ನ್ನು ಕಟ್ಟಿ ದಡದಮೇಲಿಂದ) ಎಳೆದುಕೊಂಡುಹೋಗು ; (ಚಕ್ರಗಳ ವಿಷಯದಲ್ಲಿ : ಹಿಂದಿನ ಚಕ್ರ ಮುಂದಿನ ಚಕ್ರದ) ಜಾಡಿನಲ್ಲಿ ಹೋಗು. **Tráckage** (ನಾ.) (ದೋಣಿ) ಎಳೆಯುವುದು ; ಎಳೆಯುವ—ಕೂಲಿ, ಬಾಡಿಗೆ. (ಒಟ್ಟು) ರೈಲುಮಾರ್ಗಗಳು, ರೈಲುಮಾರ್ಗಗಳ ಮೊತ್ತ. **Trácker** (ನಾ.) ಎಳೆಯುವ ಸಾಧನ, ಎಳಕ; ಎಳೆದೋಣಿ ; ಆರ್ಗನ್ ವಾದ್ಯದಲ್ಲಿ ಕೀಲಬಿರಡೆಯನ್ನೂ ವಾಯು ಸಂಪುಟದ ಕವಾಟವನ್ನೂ ಕೂಡಿಸುವ ಮರದ ಪಟ್ಟಿ : ಸಂಬಂಧ ಪಟ್ಟಿ. **Tráckless** (ಗು.) ; **Tráacklessly** (ಕ್ರಿ. ವಿ.) ; **Trácklessness** (ನಾ.)

Tráckage, Trácker. Track ನೋಡಿ.

Tract[1] ಟ್ರ್ಯಾಕ್ಟ್ (ನಾ.) (ಅನಿರ್ದಿಷ್ಟ ಮೇರೆಗಳ, ವಿಶಾಲವಾದ) ಪ್ರದೇಶ, ಪ್ರಾಂತ (A t. of sand ಮರಳುಪ್ರದೇಶ) ; ಹರವು, ಬಯಲು ; (ಅಂ. ರ. ಶಾ.) ಅಂಗ(ವ್ಯೂಹ)ದ ಪ್ರದೇಶ (Olfactory, Optic, Respiratory, t. ಘ್ರಾಣೇಂದ್ರಿಯ, ದೃಗಿಂದ್ರಿಯ, ಶ್ವಾಸೇಂದ್ರಿಯ, —ಪ್ರದೇಶ) ; (ಪ್ರಾಚೀ. ಪ್ರ.) (ಕಾಲ, ಮೊ. ಗಳ) ಅವಧಿ (Foreshorten'd the t. of time)

Tract[2] ಟ್ರ್ಯಾಕ್ಟ್ (ನಾ.) (ರೋ. ಕ್ಯಾ.) ಒಂದು ಬಗೆಯ ಸ್ತೋತ್ರ, ಸಂಕೀರ್ತನ. (ಮು., ಮತಧರ್ಮ ವಿಷಯದ) ಲಘು—ಪುಸ್ತಕ, ಲೇಖನ ; ಕಿರು ಹೊತ್ತಗೆ (Tracts for the Times, Oxford Tracts ವಿಚಾರ ವಾದಕ್ಕೂ ಅತಿನಿಯಮಬದ್ಧ ಬಾಹ್ಯ ನಿಷ್ಠೆಗೂ ವ್ಯತಿರಿಕ್ತವಾಗಿ, ಆದ್ಯ ರೋ. ಕ್ಯಾ. ತತ್ತ್ವಗಳ ಕಡೆ ಒಲೆದು, ಆಕ್ಸ್‌ಫರ್ಡಿನಲ್ಲಿ ನ್ಯೂಮನ್, ಪ್ಯೂಸಿ, ಕೆಬ್ಲ್, ಫ್ರೂಡ್, ಮೊ. ರು ಬರೆದು ಪ್ರಕಟಿಸಿದ ೯೦ ಲಘು ಲೇಖನಗಳು : ಆದ್ಯ ರೋ. ಕ್ಯಾ. ಮತದ ಪುನರುದ್ಧಾರ ಲೇಖನಗಳು). **Tractárian** (ಗು., ನಾ.) ಈ ಲೇಖನಗಳಲ್ಲಿ ಪ್ರತಿಪಾದಿತವಾದ ಮತ ತತ್ತ್ವಗಳ (ಪ್ರವರ್ತಕ, ಅನುಯಾಯಿ) : ಟ್ರ್ಯಾಕ್ಟೇರಿಯನ್—ಮತದ, ತತ್ತ್ವದ(ವನು). **Tractárianism** (ನಾ.) ಆದ್ಯ ರೋ. ಕ್ಯಾ. ಮತದ ಪುನರುದ್ಧಾರ [= Oxford movement (Oxford ನೋಡಿ)]. **Tráctate** (ನಾ.) (ನಿರ್ದಿಷ್ಟ ವಿಷಯದ) ಗ್ರಂಥ, ಲೇಖನ, ಪ್ರಬಂಧ.

Tráctable ಟ್ರ್ಯಾಕ್ಟಬ್‌ಲ್ (ಗು.) (ಮನುಷ್ಯರ ವಿಷಯದಲ್ಲಿ ; ವಿರಳವಾಗಿ ವಸ್ತುಗಳ ವಿಷಯದಲ್ಲಿ) ಸುಲಭವಾಗಿ ನಿರ್ವಹಿಸಬಹುದಾದ, ಹೇಳಿದಂತೆ ಕೇಳುವ, ಸಗ್ಗುವ, ವಿಧೇಯ, ಸಾಧುವಾದ. **Tractabílity** (ನಾ.) ಸುಲಭ ನಿರ್ವಾಹ್ಯತೆ, ನಿರ್ವಾಹ ಸಾಧ್ಯತೆ, ವಿಧೇಯತೆ. **Tráctableness** (ನಾ.) ; **Tráctably** (ಕ್ರಿ. ವಿ.)

Tractárian(ism), Tráctate. Tract[2] ನೋಡಿ.

Tráction ಟ್ರ್ಯಾಕ್‌ಷನ್ (ನಾ.) (ಒಂದು ವಸ್ತುವನ್ನು ಒಂದು ಮೇಲ್ಮೈಯ ಮೇಲೆ) ಎಳೆಯುವುದು, ಎಳೆತ, ಕರ್ಷಣ (Electric, steam, t. ವಿದ್ಯುಚ್ಛಕ್ತಿಯಿಂದ, ಆವಿಶಕ್ತಿಯಿಂದ, ಎಳೆಯುವುದು. Line of t. ಕರ್ಷಣ ಬಲ ಪ್ರಯೋಗವಾಗುವ ರೇಖೆ : ಕರ್ಷಣ—ರೇಖೆ, ದಿಕ್ಕು. Angle of t. ಕರ್ಷಣ ರೇಖೆಗೂ ಎಳೆಯಲ್ಪಡುವ ವಸ್ತುವಿರುವ ಮೇಲ್ಮೈಗೂ ಇರುವ ಕೋನ : ಕರ್ಷಣ ಕೋನ) ; (ಸ್ನಾಯು, ಮೊ. ಗಳ) ಸಂಕೋಚನ, ಸೆಳೆತ (T. aneurysm ಸೆಳೆತದಿಂದಾದ ಊತ). **T.-engine** (ಸಾಧಾರಣ ರಸ್ತೆಗಳಲ್ಲಿ ಭಾರವೆಳೆದುಕೊಂಡು ಹೋಗುವುದು, ಜಮೀನಿನಲ್ಲಿ ನೇಗಿಲ ತಂಡವನ್ನು ಎಳೆದುಕೊಂಡುಹೋಗುವುದು, ಮೊ. ಕ್ಕೆ ಉಪಯೋಗಿಸುವ) ಎಳೆಯುವ ಎಂಜಿನು, ಕರ್ಷಕ ಎಂಜಿನು. **T.-wheel** (ಸ್ವಯಂಚಲ ಎಂಜಿನು, ಮೊ. ಗಳ) ಚಾಲಕ, ಕರ್ಷಕ,—ಚಕ್ರ. **Tráctional** (ಗು.) ಕರ್ಷಣ ಸಂಬಂಧವಾದ, ಕರ್ಷಕ. **Tráctive** (ಗು.) ಎಳೆಯುವ, ಎಳೆಯುವುದಕ್ಕೆ ಉಪಯೋಗಿಸುವ, ಕರ್ಷಕ. **Tráctor** (ನಾ.) ಎಳಕ, ಕರ್ಷಕ ; ಎಳೆಯುವ, ಕರ್ಷಕ, —ಎಂಜಿನು ; ಎಂಜಿನು ಮುಂದುಗಡೆ ಇರುವ ವಿಮಾನ : ಕರ್ಷಕ ವಿಮಾನ (ಎದುರು ಪದ : Pusher)

Trade ಟ್ರೇಡ್ (ನಾ., ಕ್ರಿ.) ಜೀವನೋಪಾಯಕ್ಕಾಗಿ ಅಥವಾ ಲಾಭಕ್ಕಾಗಿ ಕೈಗೊಂಡ ಯಾಂತ್ರಿಕ ಅಥವಾ ವಾಣಿಜ್ಯ ಸಂಬಂಧವಾದ ಉದ್ಯಮ : ಕಸಬು, ಕಾಯಕ, ಉದ್ಯೋಗ, ವೃತ್ತಿ (A potter, Sir, he was by t.) (ಎದುರು ಪದ : Profession ಪಾಂಡಿತ್ಯೋದ್ಯೋಗ) ; [Jack of all trades (Jack[1] ನೋಡಿ). Two of a t. never agree ಒಂದು ಕಸಬಿನ ಇಬ್ಬರಲ್ಲಿ ಎಂದಿಗೂ ಒಮ್ಮತವಿಲ್ಲ. Trick of the t. ಗಿರಾಕಿಗಳನ್ನು ಆಕರ್ಷಿಸುವ ಉಪಾಯ, ಎದುರು ವ್ಯಾಪಾರಿಯನ್ನು ಮೀರಿಸುವ ಉಪಾಯ, ಮೊ. ವು : ಕಸಬಿನ, ವ್ಯಾಪಾರದ, —ತಂತ್ರ, ಉಪಾಯ. The t. (ಬಳ. ಮಾ.) ಒಂದು ಕಸಬಿನವರು ; ಸನ್ನದು ಪಡೆದಿರುವ—ಆಹಾರಸಾಮಗ್ರಿ ವ್ಯಾಪಾರಿಗಳು, ದಿನಸಿ ವ್ಯಾಪಾರಿಗಳು ; ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಟನಕಾರರು. (ನಾವಿಕ ಅಸಂ.) ಜಲಾಂತರ್ನೌಕೆಯ ಶಾಖೆ]. (ಸರಕಿನ) ವ್ಯಾಪಾರ, ವಾಣಿಜ್ಯ [Foreign t. ಹೊರ ದೇಶಗಳೊಡನೆ ನಡೆಸುವ ಆಮದು ರಫ್ತು : ಹೊರ ದೇಶದ ವ್ಯಾಪಾರ. Domestic *or* home t. ಒಳದೇಶದ ವ್ಯಾಪಾರ. Is good, bad, for t. ವ್ಯಾಪಾರಕ್ಕೆ ಒಳ್ಳೆಯದು, ಕೆಟ್ಟದು. Carrying-trade ಸರಕನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ (ನೀರಮೇಲೆ) ಸಾಗಿಸುವುದು : ಸಮುದ್ರ ವ್ಯಾಪಾರ, ಸಾಗಣೆ ವ್ಯಾಪಾರ]. ಕಸಬಿನವರು, ಉದ್ಯೋಗಿಗಳು, ವೃತ್ತಿಯವರು, ವ್ಯಾಪಾರಗಾರರು [The t. will never

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

submit to it. Is unpopular with the book t. ಪುಸ್ತಕ ವ್ಯಾಪಾರಿಗಳಿಗೆ ಅಪ್ರಿಯವಾಗಿದೆ. Board of T. (ಇಂಗ್ಲೆಂಡಿನಲ್ಲಿ) ವಾಣಿಜ್ಯ ಮತ್ತು ಕೈಗಾರಿಕೆಗಳ ಮೇಲ್ವಿಚಾರಣೆ ನೋಡಿಕೊಳ್ಳುವ ಪ್ರಿವಿ ಕೌನ್ಸಿಲ್ಲಿನ ಒಂದು ಸಮಿತಿ: ವ್ಯಾಪಾರ ಸಮಿತಿ. Balance of t. (Balance ನೋಡಿ). Free-t., Fair-t. (Free, Fair² ನೋಡಿ)]. =T.-wind. [**T.-hall** ವ್ಯಾಪಾರಿಗಳ (ಸಂಘದ) ಸಭಾಮಂದಿರ. **T. mark** ನಿರ್ದಿಷ್ಟ ಸರಕು ತಯಾರುಗಾರನ ಅಥವಾ ವ್ಯಾಪಾರ ಗಾರನ ಸರಕೆಂದು ಸೂಚಿಸುವುದಕ್ಕಾಗಿ ಕಾನೂನು ಪ್ರಕಾರ ದಾಖಲಾಗಿರುವ (ಅಥವಾ ಬಳಕೆಯಿಂದ ಸ್ಥಾಪಿತವಾಗಿರುವ) ಗುರುತು, ಸಂಕೇತ ಪದ(ಗಳು): ವ್ಯಾಪಾರ (ಸ್ವಾಮ್ಯ) ಮುದ್ರೆ, ಸರಕು ಮುದ್ರೆ. **T. name** ವ್ಯಾಪಾರದಲ್ಲಿ, ಪೇಟೆಯಲ್ಲಿ, ಸರಕಿ ಗಿರುವ ಹೆಸರು; ತಾನು ಸ್ವಾಮ್ಯಪಡೆದಿರುವ ಸರಕಿಗೆ ತಯಾರು ಗಾರನು ಕೊಟ್ಟಿರುವ ಹೆಸರು: ವ್ಯಾಪಾರದ ಹೆಸರು. **T. price** ಸರಕು ತಯಾರುಗಾರನು ಒಟ್ಟು ವ್ಯಾಪಾರಿಗೆ ಅಥವಾ ಒಟ್ಟು ವ್ಯಾಪಾರಿ ಚಿಲ್ಲರೆ ವ್ಯಾಪಾರಿಗೆ ಮಾರುವ ಬೆಲೆ: ವರ್ತಕರ, ವ್ಯಾಪಾರದ, —ಬೆಲೆ. **T. school** ಕಸಬಿನ ಪಾಠಶಾಲೆ; ವೃತ್ತಿ ಶಿಕ್ಷಣಶಾಲೆ. **Trádesman** ವ್ಯಾಪಾರಿ, ವರ್ತಕ, ಹರದ, ಬಣಜಿಗ. **Trádespeople** ವ್ಯಾಪಾರದ ಕಸಬಿನ ಜನವರ್ಗ (ಅವರ ಕುಟುಂಬ, ಮೊ. ರಲ್ಲ ಸೇರಿ): ವ್ಯಾಪಾರಿ ಜನ, ಹರದರು. **T. union** ಒಂದು ಕಸಬಿನ ಕೆಲಸಗಾರರು ತಮ್ಮ ಅಭಿವೃದ್ಧಿಗಾಗಿಯೂ ಸಾಮಾನ್ಯ ಹಿತಗಳ ರಕ್ಷಣೆಗಾಗಿಯೂ ಏರ್ಪಡಿಸಿಕೊಂಡ ವ್ಯವಸ್ಥಿತ ಸಂಘ: ಕೆಲಸ ಗಾರರ, ಕಸಬುದಾರರ,—ಸಂಘ; ವೃತ್ತಿ ಸಂಘ. **T.-únionism** ವೃತ್ತಿ ಸಂಘ ಪದ್ಧತಿ. **T.-únionist** —ಪದ್ಧತಿಯ ವಾದಿ; ವೃತ್ತಿ ಸಂಘ ಸದಸ್ಯ. **T. wind** ೩೦° ಉ. ಅಕ್ಷಾಂಶ ಮತ್ತು ೩೦° ದ. ಅಕ್ಷಾಂಶಗಳ ನಡುವೆ ಭೂಮಧ್ಯರೇಖೆಯ ಕಡೆಗೆ, ಭೂಮಿಯ ಸುತ್ತು ಚಲನೆಯಿಂದ ಪಶ್ಚಿಮಕ್ಕೆ ತಿರುಗಿ ಸದಾ ಬೀಸುವ ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳ ಒಂದು ಮಾರುತ: ವಾಣಿಜ್ಯ ಮಾರುತ; (ಬ. ವ. ದಲ್ಲಿ) ವಾಣಿಜ್ಯ ಮಾರುತ ಮತ್ತು ವಾಣಿಜ್ಯ ಪ್ರತಿ ಮಾರುತ ಗಳು]. (ಕ್ರಿ.) ಕೊಂಡು ಮಾರು; ವ್ಯಾಪಾರ—ಮಾಡು, ನಡಸು (*In* commodity, *with* person) (ರಾಜಕೀಯ ಪ್ರಭಾವ, ಮೊ. ಗಳಿಂದ ಸ್ವಾರ್ಥವನ್ನು ಗಳಿಸುವಲ್ಲಿ ರೂಪ. ಸಹ: To t. in racial dissensions, in pardons). (ಒಬ್ಬನೊಡನೆ) ವ್ಯವಹಾರ ಇಟ್ಟುಕೊ (*With* person *for* thing); (ಒಂದು ಸ್ಥಳಕ್ಕೆ) ಸರಕು —ತೆಗೆದುಕೊಂಡುಹೋಗು, ಸಾಗಿಸು; ವ್ಯಾಪಾರಕ್ಕೆ ಹೋಗು (*To* ಉಪ. ದೊಡನೆ) (They traded with profit only to China); ಅದಲು ಬದಲು ವ್ಯಾಪಾರಮಾಡು, ವಿನಿಮಯ ಮಾರಾಟ ಮಾಡು. T. on (ಒಬ್ಬನ ಒಳ್ಳೆಯತನ, ತನಗೆ ತಿಳಿದಿರುವ ಗುಟ್ಟು, ಮೊ. ರಿಂದ) ಅನ್ಯಾಯವಾಗಿ ಲಾಭಪಡೆ (They still t. on the fears & fancies of their fellows). **Tráder** (ನಾ.) ವ್ಯಾಪಾರಿ, ವರ್ತಕ, ಸೆಟ್ಟಿ; ವ್ಯಾಪಾರದ ಹಡಗು, ವಾಣಿಜ್ಯ ನೌಕೆ.

Tradítion ಟ್ರಡಿಷನ್ (ನಾ.) ಪೂರ್ವಿಕರಿಂದ ಪರಂಪರೆಯಾಗಿ ಬಂದಿರುವ ಅಭಿಪ್ರಾಯ, ನಂಬಿಕೆ, ಆಚಾರ: ಸಂಪ್ರದಾಯ, ರೂಢಿ, ಪದ್ಧತಿ; —ಬಂದಿರುವುದು, ಆಗಿರುವುದು; ಪೂರ್ವಾಚಾರ. (ದೇವ. ಶಾ.) ದೈವಿಕ ಪ್ರಾಮಾಣ್ಯವುಂಟೆಂದು ಊಹಿಸಿರುವ ಆದರೆ ಲಿಖಿತರೂಪದಲ್ಲಿಲ್ಲದ ತತ್ತ್ವ, ಬೋಧೆ, ಉಪದೇಶ: ಪರಂಪರಾಗತ —ಬೋಧೆ, ಉಪದೇಶ; ಸಾಂಪ್ರದಾಯಿಕ ಸೂತ್ರ (ಮು., ಭಗ ವಂತನು ಮೋಸೆಸ್ಸಿಗೆ ತಿಳಿಸಿಕೊಟ್ಟವೆಂದು ಫ್ಯಾರಿಸಿಗಳು ನಂಬಿದ್ದ ಧರ್ಮಸೂತ್ರಗಳು, ದೈವ ಶಾಸನಗಳು; ಕ್ರಿಸ್ತನ ಸಾಕ್ಷಾತ್ ಶಿಷ್ಯರು ಬರೆದಿಟ್ಟಿಲ್ಲದ ಕ್ರಿಸ್ತನ ಬಾಯುಪದೇಶಗಳು; ಕೊರಾನಿನಲ್ಲಿಲ್ಲದ ಮಹಮ್ಮದನ ವಚನಗಳು ಮತ್ತು ಕಾರ್ಯಗಳು). ಐತಿಹ್ಯ, ಪುರಾಣ ಕಥೆ. (ಕಲೆ, ಸಾಹಿತ್ಯ, ಮೊ. ಗಳ) ಸಂಪ್ರದಾಯ (Stage t. ರಂಗ ಸಂಪ್ರದಾಯ. The traditions of the Dutch School ಡಚ್ ವರ್ಣಚಿತ್ರಕಾರರ ಸಂಪ್ರದಾಯಗಳು). (ನ್ಯಾ. ಶಾ.) ವಿಧಿ ವಿಹಿತವಾಗಿ (ಸ್ವತ್ತನ್ನು) ಒಪ್ಪಿಸಿಬಿಡುವುದು, ಕೊಟ್ಟುಬಿಡುವುದು. **Tradítional** (ಗು.) ಸಾಂಪ್ರದಾಯಿಕ. **Tradítionally** (ಕ್ರಿ. ವಿ.); **Tradítionary** (ಗು.) =Traditional. **Tradítionalism** (ನಾ.) (ಮು., ಮತ ವಿಚಾರಗಳಲ್ಲಿ) ಸಂಪ್ರದಾಯಕ್ಕೆ (ಅತಿ) ಮರ್ಯಾದೆ ತೋರಿಸುವುದು: ಸಂಪ್ರದಾಯ—ಶರಣತೆ, ನಿಷ್ಠೆ. ಮತಸಂಬಂಧವಾದ ಜ್ಞಾನವೆಲ್ಲ ಶ್ರುತಿ ಸಿದ್ಧ ಮತ್ತು ಸಂಪ್ರದಾಯ ಸಿದ್ಧಗಳೆಂದು ಪ್ರತಿಪಾದಿಸುವ ಒಂದು ದರ್ಶನ ಪದ್ಧತಿ, ತಾತ್ತ್ವಿಕ ಪದ್ಧತಿ: ಶ್ರುತಿ, ಸಂಪ್ರದಾಯ, —ಪಾರಮ್ಯ ವಾದ. **Tradítion(al)ist** (ನಾ.) ಸಂಪ್ರದಾಯ —ಶರಣ, ಪಾರಮ್ಯ ವಾದಿ. **Traditionalístic** (ಗು.)

Tráditor ಟ್ರ್ಯಾ(ಟ್ರೇ)ಡಿಟರ್ (ನಾ.; ಬ. ವ. -ors —ಟರ್ಸ್, -ores —ಟೋರೀಸ್) ತನ್ನ ಪ್ರಾಣ ಉಳಿಸಿಕೊಳ್ಳುವುದಕ್ಕಾಗಿ ಪೀಡಕರಿಗೆ ತನ್ನಲ್ಲಿದ್ದ ಧರ್ಮಗ್ರಂಥಗಳ (ಬೈಬಲ್ಲಿನ) ಪ್ರತಿಗಳನ್ನೂ ಚರ್ಚಿನ ಸ್ವತ್ತನ್ನೂ ಒಪ್ಪಿಸಿಬಿಡುತ್ತಿದ್ದ ಆದಿ ಕ್ರೈಸ್ತ: ಧರ್ಮದ್ರೋಹಿ.

Tradúce ಟ್ರಡ್ಯೂಸ್ (ಕ್ರಿ. ಸಕ.) (ಸುಳ್ಳು ಸುಳ್ಳಾಗಿ, ದುರುದ್ದೇಶದಿಂದ) ನಿಂದೆ ಹೊರಿಸು, ದೋಷಾಪಾದನೆಮಾಡು, ದೂಷಿಸು, ಹೆಸರು ಕೆಡಿಸು; ತಪ್ಪುತಿಳಿವಳಿಕೆ ಕೊಡು. ದುರ್ಮಾರ್ಗಕ್ಕೆ, ಪಾಪಕ್ಕೆ, —ಎಳೆ. **Tradúcer** (ನಾ.); **Tradúcement** (ನಾ.); **Tradúcible** (ನಾ.)

Tradúcian(ist) ಟ್ರಡ್ಯೂಸಿಯನ್, —ಷಿಯನ್, —ಷನ್(ನಿಸ್ಟ್) (ನಾ.) ದೇಹಾತ್ಮಗಳೆರಡೂ ತಂದೆತಾಯಿಗಳಿಂದ ಹುಟ್ಟುವುವೆಂದು ನಂಬುವವನು: ದೇಹಾತ್ಮ ಸಹ ಸೃಷ್ಟಿ ವಾದಿ.

Trafálgar Square ಟ್ರಫ್ಯಾಲ್ಗರ್ ಸ್ಕ್ವೇರ್ (ನಾ.) ಲಂಡನ್ ಪಟ್ಟಣದ ಒಂದು ಪ್ರಸಿದ್ಧ ಚೌಕ (ಸಾರ್ವಜನಿಕ ಪ್ರದರ್ಶನಗಳಿಗಾಗಿ ಉಪಯೋಗಿಸುವ, ಮತ್ತು ನೆಲ್ಸನ್ ಪ್ರತಿಮೆಯ ಸ್ತಂಭವಿರುವ ಚೌಕ)

Tráffic ಟ್ರ್ಯಾಫಿಕ್ (ನಾ., ಕ್ರಿ.) (ಸರಕಿನ) ಕ್ರಯ ವಿಕ್ರಯ, ವ್ಯಾಪಾರ (—ಮಾಡು, ನಡಸು) (*In* ಉಪ. ದೊಡನೆ) (ರೂಪ. ಸಹ) (The t. in raw hides ಹಸಿದೊಗಲುಗಳ ವ್ಯಾಪಾರ. Unscrupulous t. in lucrative appointments). ಮಾರುವೆ, ವಿನಿಮಯ (—ಮಾಡು); (ರಸ್ತೆಗಳಲ್ಲಿ, ರೈಲುಗಳಲ್ಲಿ, ಜಹಜುಗಳ ಮೂಲಕ) ಸರಕಿನ, ಜನಗಳ, —ಓಡಾಟ, ಸಾಗಾಟ; ಸರಕು ಸಾಗಣೆಯ, ಜನರ ಓಡಾಟದ, —ಮೊತ್ತ; ವಾಹನ, ಜನ, —ಸಂಚಾರ (There is little t. on these roads). **T.-returns** (ರೈಲುಗಳಲ್ಲಿ) ಸರಕು ಸಾಗಣೆಯ ಮತ್ತು ಜನಸಂಚಾರದ (ಆದಾಯ ಸೂಚಕ) ತಃಖ್ತೆಗಳು: ಸಂಚಾರ, ಸಾಗಣೆ, —ಲೆಕ್ಕಪಟ್ಟಿಗಳು. **T.-manager** (ರೈಲು ಸಂಸ್ಥೆಯಲ್ಲಿ) ಸಂಚಾರ —ನಿರ್ವಾಹಕ, ವ್ಯವಸ್ಥಾಪಕ. **Tráfficker** (ನಾ.) ವ್ಯಾಪಾರಿ, ವರ್ತಕ. **Trâfficless** (ಗು.)

Trágacanth ಟ್ರ್ಯಾಗಕ್ಯಾಂತ್ (ನಾ.) ಕೆಲವು ಗುಲ್ಮಗಳಿಂದ ದೊರೆಯುವ, ಔಷಧ ತಯಾರಿಕೆಯಲ್ಲೂ ಬಟ್ಟೆಗೆ ಮುದ್ರೆಯೊತ್ತುವುದು, ಮೊ. ರಲ್ಲಿಯೂ ಉಪಯೋಗಿಸುವ, ಬಿಳಿಯ ಅಥವಾ ಕೆಂಪು ಛಾಯೆಯ ಒಂದು ಅಂಟು, ಬಂಕೆ.

Trágedy ಟ್ರ್ಯಾಜೆ(ಜಿ)ಡಿ (ನಾ.) ಉದಾತ್ತ ವಸ್ತು ಮತ್ತು ಶೈಲಿಗಳುಳ್ಳ ವಿಷಾದಾಂತ (ಗದ್ಯ ಅಥವಾ ಪದ್ಯ) ನಾಟಕ: ರುದ್ರ ನಾಟಕ [T. queen ರುದ್ರ (ನಾಟಕದ) ನಾಯಕಿ]. ಮೂರ್ತೀಕರಿಸಿದ ರುದ್ರ ನಾಟಕ (T-); ದುಃಖಕರವಾದ ಸಂಗತಿ, ಘಟನೆ; ಅನಾಹುತ, ದುರಂತ; ಮಹಾ—ಪ್ರಮಾದ, ಆಕಸ್ಮಿಕ; ಮಹಾಪರಾಧ; ಘೋರ ಪ್ರಸಂಗ. **Tragédian** ಟ್ರಜೀಡಿಯನ್ (ನಾ.) ರುದ್ರ ನಾಟಕಕಾರ; ರುದ್ರ (ನಾಟಕದ) ನಟ. **Tragediénne** ಟ್ರಜೀಡಿಯೆನ್, ಟ್ರಷೆಡ್ಯೆನ್ (ನಾ., ಸ್ತ್ರೀ.). **Trágic(al)** ಟ್ರ್ಯಾ— (ಗು.) (-ic) ರುದ್ರ ನಾಟಕದ; ರುದ್ರ (ನಾಟಕ) ಶೈಲಿಯ(ಲ್ಲಿರುವ) (T. drama, t

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

actor, the t. stage, in a t. voice. T. irony ಅನುದ್ದಿಷ್ಟ. ವಾದ ಭವಿಷ್ಯ ಸೂಚನೆಯನ್ನೊಳಗೊಂಡ ದುರಂತ ವ್ಯಂಗ್ಯ : ರುದ್ರ ವ್ಯಂಗ್ಯ) ; ದುಃಖಕರ, ದುರಂತ, ಹೃದಯದ್ರಾವಕ, ವಿಪತ್ತಿನ (A t. tale, event, scene). **Trágically** (ಕ್ರಿ. ವಿ.) ; **Trágicalness** (ನಾ.) ; **Tragicómedy** ಟ್ರ್ಯಾಜಿಕಾಮಿಡಿ (ನಾ.) ರೌದ್ರ ಮತ್ತು ಹರ್ಷ ಸನ್ನಿವೇಶಗಳ ಮಿಶ್ರ ನಾಟಕ: ರುದ್ರ ಹರ್ಷ ನಾಟಕ. **Tragicómic** (ಗು.) ; **Tragicómically** (ಕ್ರಿ. ವಿ.)

Trágopan ಟ್ರ್ಯಾಗೊಪ್ಯಾನ್ (ನಾ.) ಕೋಡುಗಳುಳ್ಳ ಜೀವಂಜೀವ ಹಕ್ಕಿ.

Trail ಟ್ರೆಯ್ಲ್, ಟ್ರೇಲ್ (ನಾ., ಕ್ರಿ.) ಒಂದರ ಹಿಂದೆ (ಎಳೆದುಕೊಂಡು) ಹೋಗುತ್ತಿರುವ ಭಾಗ ; (ಉದ್ದನಾದ) ಹಿಂಜೋಲು, ಅನುಬಂಧ ; ಹಿಂಬಾಲ, ತೋಕೆ (Engine left a t. of smoke behind it ಎಂಜಿನು ಹೊಗೆಯ ಹಿಂಜೋಲನ್ನು ತನ್ನ ಹಿಂದೆ ಬಿಟ್ಟಿತು. The t. of a meteor) ; ಫಿರಂಗಿ ಗಾಡಿಯ ಹಿಂತುದಿ ; (ಮುಂದುವರಿದು ಹೋದ ಅಥವಾ ಎಳೆದುಕೊಂಡು ಹೋಗಲ್ಪಟ್ಟ ವಸ್ತು) ನೆಲದಮೇಲೆ ಬಿಟ್ಟ ಗುರುತು ; ಹಿಂಬಿಟ್ಟ ಗುರುತು, ಜಾಡು (Slimy t. of a slug) ; (ಬೇಟೆಯಲ್ಲಿ ಅನುಸರಿಸಿ ಹೋಗುವ) ಮೃಗದ ಜಾಡು, ವಾಸನೆ, ಸುಳಿವು (Got on, off, the t. ಜಾಡು ಹಿಡಿದನು, ತಪ್ಪಿದನು) ; (ಮು., ಕಾಡುಪ್ರದೇಶದಲ್ಲಿ) ನಡೆದು ನಡೆದು ಆದ ದಾರಿ ; ಕಾಲುದಾರಿ ; ತುಳಿದ ದಾರಿ. [At the t. (ಸೈನ್ಯ) ಬಂದೂಕು ಗಳನ್ನು ನೆಲಕ್ಕೆ ಸಮಾನಾಂತರವಾಗಿ (ಬಲಗೈಯಲ್ಲಿ) ಇಳಿಹಿಡಿದು ; ಸಮಾನಾಂತರವಾಗಿ ಜೋತು ಹಿಡಿದು. T.-net ಎಳೆ(ಯುವ) ಬಲೆ]. (ಕ್ರಿ.) (ನೆಲದಮೇಲೆ) ಹಿಂದೆ ಎಳೆದುಕೊಂಡುಹೋಗು (Was trailing a toy cart. Trailing clouds of glory do we come from God ನಾವು ದಿವ್ಯ ಪ್ರಭೆಯ ಮೇಘಗಳನ್ನೆಳೆದುಕೊಂಡು ದೇವ ರಿಂದ ಬರುತ್ತೇವೆ). (ಸೈನ್ಯ) T. arms ಬಂದೂಕಗಳನ್ನು (ನೆಲಕ್ಕೆ ಸಮಾನಾಂತರವಾಗಿ) ಕೈಯಲ್ಲಿ ಜೋತುಹಿಡಿ (Right, left, t. ಬಲಗೈಯಲ್ಲಿ, ಎಡಗೈಯಲ್ಲಿ,—). ದಾರಿಯಾಗುವಂತೆ, ಜಾಡುಬೀಳು ವಂತೆ, — (ಹುಲ್ಲು, ಮೊ. ನ್ನು) ತುಳಿ(ಯುತ್ತ ನಡೆದಾಡು) ; ತುಳಿ ತುಳಿದು —ಜಾಡುಮಾಡು, ದಾರಿಮಾಡು ; ಹಿಂದುಗಡೆ (ನೆಲದ ಮೇಲೆ) ಎಳೆದಾಡು, ಎಳೆಯಲ್ಪಡು (Skirt trails on the ground); [Trailing-wheel ಬಂಡಿಯ ಹಿಂಗಾಲ(ಗಳೆರಡರಲ್ಲೊಂದು)]. ಕಾಲು ಗಳನ್ನು ಎಳೆದುಕೊಂಡು ನಡೆ, ಹೋಗು ; ಆಯಾಸದಿಂದ, ನಿಧಾನ ವಾಗಿ, ನಡೆ ; ಅವ್ಯವಸ್ಥೆಯಾಗಿ ತೊಳಲು. ಜೋಲು(ಬೀಳು), ತೊಂಗು(ತ್ತಿರು) ; (ಸಸ್ಯದ ವಿಷಯದಲ್ಲಿ : ನೆಲ, ಗೋಡೆ, ಮೊ. ಗಳ ಮೇಲೆ) ಹಬ್ಬು; ಜಾಡು ಹಿಡಿದುಹೋಗು, ಬೆನ್ನಟ್ಟು. **Traíler** (ನಾ.) (ಕ್ರಿಯಾರ್ಥಗಳಲ್ಲಿ); ಹಬ್ಬು —ಸಸ್ಯ, ಬಳ್ಳಿ ; ಬೈಸಿಕಲ್ ಅಥವಾ ಟ್ರೈಸಿ ಕಲ್‌ಗಳ ಹಿಂದೆ ಎಳೆದುಕೊಂಡುಹೋಗುವ ಗಾಲಿಗಳುಳ್ಳ ಕುರ್ಚಿ : ಎಳೆಕುರ್ಚಿ; ಮತ್ತೊಂದು ಟ್ರ್ಯಾಂ ಬಂಡಿ, ಮೊ. ವು ಎಳೆದು ಕೊಂಡುಹೋಗುತ್ತಿರುವ ಟ್ರ್ಯಾಂ ಬಂಡಿ, ಮೊ. ವು : ಹಿಂಬಾಲಕ, ತೋಕೆ, —ಬಂಡಿ. ಒಂದು ಚಲನಚಿತ್ರದ ಪ್ರಕಟನೆಗೋಸ್ಕರ ಪೂರ್ವಭಾವಿಯಾಗಿ ತೋರಿಸುವ ಅದರ ಕೆಲವು ತುಣುಕುಗಳ ತಂಡ : ಜಾಡು ತುಣುಕು.

Train ಟ್ರೆಯ್ನ್, ಟ್ರೇನ್ (ಕ್ರಿ.) (ಬೋಧನೆ, ಅಭ್ಯಾಸ, ಮೊ. ಗಳಿಂದ) ತರಪೇತು, —ಆಗು, ಮಾಡು ; ಪಳಗು, ಪಳಗಿಸು ; (ವ್ಯಾಯಾಮದ ಆಟಗಳಿಗೂ ಕುದುರೆ ಜೂಜಿಗೂ) ಶಿಕ್ಷಣ—ಕೊಡು, ಪಡೆ ; ಸಾಧನೆ— ಮಾಡು, ಮಾಡಿಸು [A trained nurse ತರಪೇತಾದ, ಶಿಕ್ಷಣಪಡೆದ, —ದಾದಿ. Trained faculties ಶಿಕ್ಷಿತ, ಪಳಗಿದ,—ಬುದ್ಧಿಶಕ್ತಿಗಳು. Did not escape his trained eye ಅವನ ಪಳಗಿದ ಕಣ್ಣಿಗೆ ತಪ್ಪಿಸಿಕೊಳ್ಳಲಿಲ್ಲ. Half-trained ಅರ್ಧ(ಮರ್ಧ) ತರಪೇತಾದ. Over, under, -trained ಅತಿ, ಅಲ್ಪ, —ಶಿಕ್ಷಿತ. T. down ಸಾಧನೆಯಿಂದ ತೂಕ ಕಡಮೆಮಾಡಿಕೊ. T. fine ನಿಷ್ಕೃಷ್ಟ ಸ್ಥಿತಿಗೆ ಬರುವಂತೆ ಸಾಧನೆಮಾಡು. Always trains on vegetarian diet ಸಸ್ಯಾಹಾರವನ್ನು ತಿಂದು ಸಾಧನೆ ಮಾಡುತ್ತಾನೆ, —ತಿನ್ನಿಸಿ ಸಾಧನೆ ಮಾಡಿಸುತ್ತಾನೆ]. (ಸಸ್ಯವನ್ನು) ಗೊತ್ತಾದ ಆಕಾರದಲ್ಲಿ ಹಬ್ಬಿಸು, ಬೆಳಸು (*Up, over,* wall, etc.). (ಫಿರಂಗಿಯನ್ನು ಒಂದರಮೇಲೆ) ಗುರಿಯಿಡು (*Upon* ಉಪ. ದೊಡನೆ). (ಪ್ರಾಚೀ. ಪ್ರ.) (ತಂತ್ರದಿಂದ ಅಥವಾ ಆಸೆ ತೋರಿಸಿ) ಸೆಳೆ, ಆಕರ್ಷಿಸು, ಬಲೆಗೆ ಕೆಡವು (*Away, from* post, etc.) (Being trained into a well-laid ambush) ; (ಈಗ ವಿರ. ಪ್ರ.) (ಮು., ಭಾರವಾದ ಪದಾರ್ಥ ವನ್ನು ನೆಲದಮೇಲೆ) ಎಳೆದುಕೊಂಡುಹೋಗು. (ಬಳ. ಮಾ.) ರೈಲು ಬಂಡಿಯಲ್ಲಿ—ಪ್ರಯಾಣಮಾಡು, ಹೋಗು (Shall t. from York to Leeds). T. off (ಗುಂಡಿನ ವಿಷಯದಲ್ಲಿ) ಓರೆಯಾಗಿ—ಹೋಗು, ಹಾರು. **Traínable** (ಗು.) ; **Traineé** (ನಾ.) ಶಿಕ್ಷಣ ಪಡೆಯು (ತ್ತಿರು)ವವನು, —ವದು ; ಶಿಕ್ಷ್ಯ. **Traíner** (ನಾ.) (ಕ್ರಿಯಾರ್ಥ ಗಳಲ್ಲಿ) ; (ಜೂಜು ಕುದುರೆ, ಸರ್ಕಸ್ ಕುದುರೆ, ಜಟ್ಟಿ, ಮೊ. ರ) ಶಿಕ್ಷಕ, ತರಪೇತುಗಾರ. **Traíning** (ನಾ.) (ಕ್ರಿಯಾರ್ಥಗಳಲ್ಲಿ). Be in t., go into t. (ಪಂದ್ಯ, ಮೊ. ಗಳಿಗೆ) ಶಿಕ್ಷಣ ಪಡೆ(ಯುತ್ತಿರು), ತರ ಪೇತಾಗು(ತ್ತಿರು). T.-bit (ತುಂಟ ಕುದುರೆಗೆ ಪಳಗಿಸಲು ಹಾಕುವ) ಗಿಡುಗು ಕಡಿವಾಣ. T.-college, -school ಉಪಾಧ್ಯಾಯರಿಗೆ ಶಿಕ್ಷಣ ಕೊಡುವ (ಪ್ರೌಢ)ಶಾಲೆ : ಬೋಧಕ ಶಿಕ್ಷಣಶಾಲೆ. T.-ship ಹುಡುಗರಿಗೆ ನಾವಿಕತನ, ಮೊ. ನ್ನು ಕಲಿಸಿಕೊಡುವ ಹಡಗು : ಶಿಕ್ಷಣದ ಹಡಗು ; ಶಿಕ್ಷಣ ನೌಕೆ.

Train (ನಾ.) ಹಿಂದುಗಡೆ (ನೆಲದಮೇಲೆ) ಎಳೆಯಲ್ಪಟ್ಟು ಹೋಗುವ ಅಥವಾ ಒಂದರ ಹಿಂಭಾಗವಾಗಿ (ಜೋತು) ಬರುತ್ತಿರುವ ವಸ್ತು : ಹಿಂಜೋಲು ; ಹಿಂಬಾಲಕ ವಸ್ತು ; (ಮು., ಹೆಂಗಸಿನ ಲಂಗದ ಅಥವಾ ಅಧಿಕಾರದ ಮೇಲಂಗಿಯ) ಜೋಲು ಅನುಬಂಧ; ಮೇಲಂಗಿಯ, ಲಂಗದ, —ತೋಕೆ ; ಹಕ್ಕಿಯ —ಉದ್ದ ತೋಕೆ, ಎದ್ದು ಕಾಣುವ ತೋಕೆ ; ಅನುಚರರ ಪಂಕ್ತಿ ; ಹಿಂಬಾಲಕರು, ಪರಿವಾರ (Formed part of his t. ; A t. of admirers ಮೆಚ್ಚುಗಾರರ ಪರಿವಾರ). (ವ್ಯಕ್ತಿಗಳ ಅಥವಾ ವಸ್ತುಗಳ) ಶ್ರೇಣಿ, ಸರಣಿ, ಸಾಲು, ಪರಂಪರೆ, ಪಂಕ್ತಿ [Long t. of sight seers. By an unlucky t. of events ದುರದೃಷ್ಟ (ಘಟನೆಗಳ) ಪರಂಪರೆಯಿಂದ. In the t. of —ರ ಹಿಂದೆಯೇ, ಪರಿಣಾಮವಾಗಿ, ಅನುಸರಿಸಿ (War with pestilence in its t. ಯುದ್ಧ ಮತ್ತು ಅದನ್ನು ಅನುಸರಿಸಿ ಪಿಡುಗು ಗಳು)]. (ಒಂದೇ) ಎಂಜಿನು(ಗಳು) ಎಳೆದುಕೊಂಡುಹೋಗುವ ಬಂಡಿ ಸಾಲು : ರೈಲುಬಂಡಿ ಸಾಲು ; ಟ್ರೈನು, ರೈಲು [Missed my t. ನನಗೆ ರೈಲು ತಪ್ಪಿತು. Express, Through, Corridor, Parliamentary, Special, t. (ಆಯಾ ಪದ ನೋಡಿ). Up, Down, t. (Up ಗು. ನೋಡಿ). Fast, slow, t. ವೇಗದ, ನಿಧಾನದ, ರೈಲು. Train de luxe (Luxe ನೋಡಿ)]. ಸಿಡಿಮದ್ದು ಪಾತ್ರೆಗೆ ಬೆಂಕಿ ಹರಿಸಲು ಮಾಡಿರುವ ದಾಹ್ಯವಸ್ತುವಿನ ದಾರ, ತೋಕೆ : ಮದ್ದು ಬತ್ತಿ(ಯ ತೋಕೆ), ಸಿಡಿಮದ್ದಿನ ತೋಕೆ. (ಪ್ರಾಚೀ. ಪ್ರ.) ಓರಣ, ಅಣಿ, ಸುವ್ಯವಸ್ಥೆ (Matters were in fine t.). (ಯಂತ್ರದಲ್ಲಿ) ಪರಸ್ಪರ ಸಂಬಂಧವಿರುವ ಚಕ್ರಗಳ ಅಥವಾ ಭಾಗಗಳ ಸಾಲು : ಸಂಬಂಧಕ ಸರಣಿ. **T.-band** (ಚರಿತ್ರೆ) (ಮು., ಸ್ಟೂಅರ್ಟರ ಕಾಲದಲ್ಲಿ) ಲಂಡನಿನ ಪೌರ ಸೈನಿಕ ದಳ(ಗಳಲ್ಲೊಂದು). **T.-bearer** ದೊಡ್ಡ ಮನುಷ್ಯರ ಮೇಲಂಗಿಯ ತೋಕೆಯನ್ನು ಎತ್ತಿ ಹಿಡಿದಿರಲು ನೇಮಿತ ನಾದವನು(ಳು): ಉಡುಪಿನ ತೋಕೆ ಹಿಡಿಯುವವನು(ಳು). **T.-mile** (ರೈಲ್ವೆಯ ಲೆಕ್ಕಗಳಲ್ಲಿ ಕೆಲಸದ ಏಕಮಾನವಾಗಿ) ರೈಲುಬಂಡಿ ಸಾಲು ಓಡಿದ ಮೈಲಿ : ರೈಲು ಮೈಲಿ. **Traínless** (ಗು.)

Traín-oil ಟ್ರೆಯ್ನ್ಆಯ್ಲ್ (ನಾ.) ತಿಮಿಂಗಿಲದ ಕೊಬ್ಬಿನಿಂದ ತೆಗೆದ ಎಣ್ಣೆ : ತಿಮಿಂಗಿಲದ ಎಣ್ಣೆ.

Trait ಟ್ರೇ, (ಅಮೆ. ಸಂ.) ಟ್ರೇಟ್ (ನಾ.) (ಶೀಲ, ಮುಖಮುದ್ರೆ, ಅಭ್ಯಾಸ, ಅಥವಾ ಭಾವಚಿತ್ರಣದಲ್ಲಿ) ವಿಶೇಷ ಲಕ್ಷಣ, ಸ್ವಭಾವ ಲಕ್ಷಣ, ವಿಶಿಷ್ಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಿಹ್ನೆ, ಗುಣ. (ಹಾಸ್ಯ, ಮೊ. ಗಳ) ಮಿನುಗು, ರೇಖೆ, ಛಾಯೆ, ಮಿಶ್ರಣ (*Of* ಉಪ. ಜೊಡನೆ)

Traítor ಟ್ರೆಯ್‌ಟರ್, ಟ್ರೇಟರ್ (ನಾ.) (ತನ್ನ ದೇಶ, ದೊರೆ, ಧ್ಯೇಯ, ಮತ, ತತ್ತ್ವಗಳು, ಮೊ. ಗಳಲ್ಲಿ) ನಿಷ್ಠೆ ತಪ್ಪಿ ನಡೆಯುವವನು; (ದೇಶ, ರಾಜ, ಮತ, ಆತ್ಮ—) ದ್ರೋಹಿ (*To* ಉಪ. ಜೊಡನೆ) ; ವಿಶ್ವಾಸ ಘಾತುಕ. **Traítorous** (ಗು.) ; **Traítorously** (ಕ್ರಿ. ವಿ.); **Traítorousness** (ನಾ.) ; **Traítress** (ನಾ., ಸ್ತ್ರೀ.)

Trájectory ಟ್ರಜೆಕ್ಟರಿ (ನಾ.) ನಿರ್ದಿಷ್ಟ ಶಕ್ತಿಗಳಿಗೆ ಒಳಪಟ್ಟು ಚಲಿಸುತ್ತಿರುವ ಕ್ಷಿಪಣಿಯ ಮಾರ್ಗ : ಕ್ಷಿಪಣಿ, ವಿಕ್ಷೇಪ, —ಪಥ ; (ಜ್ಯಾ.) ವಕ್ರರೇಖೆಗಳ (ಅಥವಾ ತಲಗಳ) ವ್ಯೂಹವನ್ನು ಸಮಾನ ಕೋನದಲ್ಲಿ ಛೇದಿಸುವ ವಕ್ರರೇಖೆ (ಅಥವಾ ತಲ) : ವಿಕ್ಷೇಪ—ವಕ್ರ, ತಲ.

Tram[1] ಟ್ರ್ಯಾಮ್ (ನಾ., ಕ್ರಿ.) ಸಾರ್ವಜನಿಕ ರಸ್ತೆಯಲ್ಲಿ ಹಾಕಿದ ಕಂಬಿದಾರಿಯ ಮೇಲೆ ಓಡಾಡುವ ಪ್ರಯಾಣಿಕರ ಬಂಡಿ : ರಸ್ತೆ ರೈಲುಬಂಡಿ, ಕಂಬಿಬಂಡಿ, ಟ್ರ್ಯಾಂ ಬಂಡಿ (=T.-car) ; (ಹೀಗೆ ಹಾಕಿದ) ರಸ್ತೆಕಂಬಿ ; ಕಂಬಿದಾರಿ, ಟ್ರ್ಯಾಂದಾರಿ (=**Trámway**, t.-line) ; ಕಲ್ಲಿದ್ದಲ ಗಣಿಗಳಲ್ಲಿ ಉಪಯೋಗಿಸುವ ನಾಲ್ಕು ಚಕ್ರದ ಬಂಡಿ: ಗಣಿಯ ಬಂಡಿ. [T.-road (ಚರಿತ್ರೆ) ಮರದ, ಕಲ್ಲಿನ ಅಥವಾ ಲೋಹದ ಗಾಲಿ ದಾರಿಗಳುಳ್ಳ ರಸ್ತೆ : ಟ್ರ್ಯಾಂ ರಸ್ತೆ ; ಬಹಳ ಕಿರಿಯ ರೈಲುರಸ್ತೆ]. (ಕ್ರಿ.) ಟ್ರ್ಯಾಂ ಬಂಡಿಯಲ್ಲಿ—ಸಾಗಿಸು, ಪ್ರಯಾಣ ಮಾಡು, ಹೋಗು.

Tram[2] ಟ್ರ್ಯಾಂ (ನಾ.) (ಕೆಲವು ಮಖಮಲ್ಲಿನ ಮತ್ತು ರೇಷ್ಮೆಯ ಬಟ್ಟೆಗಳಿಗೆ ಉಪಯೋಗಿಸುವ) ಒಂದು ಬಗೆಯ ಜೋಡಿ ರೇಷ್ಮೆದಾರ.

Trámmel ಟ್ರ್ಯಾಮೆಲ್ (ನಾ., ಕ್ರಿ. ಸಕ.) ಹಲವು ಬಗೆಯ ಮೀನುಬಲೆ ; (ಮು., ನೆಟ್ಟಗೆ ನಿಲ್ಲಿಸಿದ ದೊಡ್ಡ ಕಂಡಿಗಳ ಎರಡು ಉದ್ದ ಬಲೆಗಳೂ ಅವುಗಳ ನಡುವೆ ಸಣ್ಣ ಕಂಡಿಗಳ ಸೂಕ್ಷ್ಮವಾದ ಒಂದು ಬಲೆಯೂ ಇರುವ) ಮೂರು ಎಳೆಬಲೆಗಳ ತಂಡದ ಮೀನುಬಲೆ (=T.-net) ; ಕುದುರೆಗಳಿಗೆ ಜಗ್ಗುನಡೆ ಕಲಿಸುವುದಕ್ಕಾಗಿ ತೊಡಿಸುವ ಬಂಧನ: ಕಾಲ್ಕಟ್ಟು ; ಕಾಲತೊಡರು. (ಒಲೆಯಮೇಲೆ) ಕೆಟಲ್, ಮೊ. ನ್ನು ತೂಗಹಾಕುವ ಕೊಂಡಿ : ತೂಗುಕೊಂಡಿ ; ಅಂಡವೃತ್ತಗಳನ್ನು ರೇಖಿಸುವ ಸಲಕರಣೆ : ಅಂಡವೃತ್ತ ರೇಖಕ, ದಂಡ ಕೈವಾರ. (ಸಾ., ಬ. ವ. ದಲ್ಲಿ) (ಮು., ರೂಪ.) (ಚಲನ ಸ್ವಾತಂತ್ರ್ಯಕ್ಕೆ, ಕಾರ್ಯ ಸ್ವಾತಂತ್ರ್ಯಕ್ಕೆ) ತಡೆ(ಗಳು), ಬಂಧನ(ಗಳು), ಅಡ್ಡಿ(ಗಳು) (Trammels of official routine ಕಚೇರಿ ಕ್ರಮದ ತಡೆಗಳು). (ಕ್ರಿ.) ಬಂಧಿಸು, ತಡೆಯೊಡ್ಡು, ಅಡಚಣೆಯುಂಟುಮಾಡು, ಕೈಕಾಲು ಕಟ್ಟಿಹಾಕು (ಸಾ., ರೂಪ.). (ಭೂ. ಕೃ. ; ಕುದುರೆಗಳ ವಿಷಯದಲ್ಲಿ) ಒಂದೇ ಪಕ್ಕದ ಹಿಂಗಾಲು ಮುಂಗಾಲುಗಳಲ್ಲಿ ಬಿಳಿಯ ಮಚ್ಚೆಗಳಿರುವ (Cross-trammelled ಒಂದು ಪಕ್ಕದ ಮುಂಗಾಲಿನಲ್ಲೂ ಇನ್ನೊಂದು ಪಕ್ಕದ ಹಿಂಗಾಲಿನಲ್ಲೂ ಬಿಳಿಯ ಮಚ್ಚೆಗಳಿರುವ : ಮೂರೆ ಕಾಲುಗಳಲ್ಲಿ ಬಿಳಿಯ ಮಚ್ಚೆಗಳಿರುವ)

Tramontána ಟ್ರಾಮೊಂಟಾನಾ (ನಾ.) (ಮೆಡಿಟರೇನಿಯನ್ ಪ್ರಾಂತದಲ್ಲಿ) ಉತ್ತರ ಮಾರುತ ; (ಈಜಿಯನ್ ಸಮುದ್ರ ಪ್ರಾಂತದಲ್ಲಿ) ಶೀತ ಮಾರುತ.

Tramóntane ಟ್ರ(ಟ್ರ್ಯಾ)ಮಾಂಟೇನ್ (ಗು., ನಾ.) ಆಲ್ಪ್ಸ್ ಪರ್ವತದ ಆಚೆ ಕಡೆಯ ; —ಯಲ್ಲಿ ಇರುವ, ವಾಸಿಸುವ(ವನು). (ರೂಪ., ಇಟಲಿಯವರ ದೃಷ್ಟಿಯಿಂದ) ಪರದೇಶೀಯ, ಅನಾಗರಿಕ, ಮೂಕ್ಷ. =Tramontana.

Tramp ಟ್ರ್ಯಾಂಪ್ (ಕ್ರಿ., ನಾ.) ಸದ್ದಾಗುವಂತೆ ತುಳಿದು ತುಳಿದು, ದೊಪ್ಪ ದೊಪ್ಪನೆ, —ನಡೆ (Heard him tramping about overhead) ; ಕಾಲನಡಗೆಯಲ್ಲಿ ಹೋಗು ; ನಡೆ(ದುಕೊಂಡು ಹೋಗು) (ಸಾ., ಇಷ್ಟವಿಲ್ಲದಿರುವುದು, ಆಯಾಸ, ಮೊ. ನ್ನು ಸೂಚಿಸುವಲ್ಲಿ ಪ್ರ.) (Have tramped up & down all day looking for you ನಿನ್ನನ್ನು ಹುಡುಕುತ್ತ ದಿನವೆಲ್ಲಾ ಮೇಲಕ್ಕೂ ಕೆಳಕ್ಕೂ ಅಲೆದಿದ್ದೇನೆ. Missed the train & had to t. it ರೈಲು ತಪ್ಪಿತು, ಇನ್ನು ಆ ದಾರಿಯನ್ನು ನಡೆಯಬೇಕಾಯಿತು) ; ನಡೆಯುತ್ತ—ಪ್ರಯಾಣ ಮಾಡು, ದೇಶ ತಿರುಗು, ಸುತ್ತಾಡು (Have tramped the whole country in my time); (ಅಲೆಮಾರಿಯಾಗಿ) ಸುತ್ತಾಡು, ತಿರುಗು; ಪೋಲಿ(ಯಾಗಿ) ಅಲೆ. (ನಾ.) [ಮನುಷ್ಯನ(ರ), ಕುದುರೆಯ] ಹೆಜ್ಜೆಯ ಸದ್ದು, ಕಾಲಸಪ್ಪಳ, ನಡೆಯುವ ಶಬ್ದ ; ಕಾಲ್ನಡಗೆ(ಯ ಪ್ರಯಾಣ); ನಡೆದಾಟ ; ಅಗೆಯುವಾಗ ಗುದ್ದಲಿಯ ತುದಿಯನ್ನು ತುಳಿಯುವುದರಿಂದ ಜೋಡಿನ ಅಡಿ ಸವೆದುಹೋಗದಂತೆ ಜೋಡಿನ ತಳಕ್ಕೆ ಹಾಕುವ ಕಬ್ಬಿಣದ ತಗಡು : ಜೋಡಿನ—ತಳತಗಡು, ತುಳಿತಗಡು ; ಜೋಡಿ ತುಳಿಯುವ ಗುದ್ದಲಿಯ ಭಾಗ. ಕೆಲಸ ಹುಡುಕಿಕೊಂಡು ಅಥವಾ ಪೋಲಿಯಾಗಿ ಅಲೆಯುವವನು, ಅಲೆಯುವುದು : ಅಲೆಮಾರಿ, ಪೋಲಿ, (—ಜೀವನ) [ಮು., on the t. (ಕೆಲಸ ಹುಡುಕಿಕೊಂಡು) ಅಲೆಯುತ್ತ] ; ಗೊತ್ತಾದ ಸಂಚಾರಮಾರ್ಗಕ್ಕೆ ಕಟ್ಟುಬಿದ್ದಿಲ್ಲದ, ಬೇಕಾದೆಡೆಗೆ ಸಾಮಾನು ಒಯ್ಯುವ, —ಸರಕು ಹಡಗು : ಅಲೆಮಾರಿ, ಪೋಲಿ,—ಸರಕು ಹಡಗು. T.-pick ಗಟ್ಟಿ ನೆಲವನ್ನು ಅಗೆಯುವಲ್ಲಿ ಉಪಯೋಗಿಸುವ ಗುದ್ದಲಿ ; ಗಟ್ಟಿ ಗುದ್ದಲಿ.

Trámple ಟ್ರ್ಯಾಂಪಲ್ (ಕ್ರಿ.) ತುಳಿದುಹಾಕು ; ತುಳಿದು—ಅಜ್ಜಿಬಜ್ಜಿಮಾಡು, ಧ್ವಂಸಮಾಡು (Trampled to death by elephants). T. on ತುಳಿ(ದುಹಾಕು) (ರೂಪ. ಸಹ) ; ದಬ್ಬಾಳಿಕೆ ನಡಸು ; ದಯಾದಾಕ್ಷಿಣ್ಯವಿಲ್ಲದೆ, ಮಹಾ ತಿರಸ್ಕಾರದಿಂದ, —ವರ್ತಿಸು (T. on one's feelings). (ನಾ.) ತುಳಿತ(ದ ಸದ್ದು). **Trámpler** (ನಾ.)

Trance ಟ್ರಾನ್ಸ್ (ನಾ., ಕ್ರಿ. ಸಕ.) ಜೀವ ದೇಹವನ್ನು ಬಿಟ್ಟಿರುವಂತೆ ತೋರುವ ಸ್ಥಿತಿ : (ಯೋಗ) ಸಮಾಧಿ (ಸ್ಥಿತಿ) ; ಬ್ರಹ್ಮಾನಂದ, ಪರಮಾನಂದ, ಆನಂದಪರವಶತೆ. (ರೋಗ ನಿದಾನ) ಬಾಹ್ಯ ಸನ್ನಿವೇಶಗಳ ಅರಿವು ತಪ್ಪಿಹೋಗಿರುವ, ದೇಹವ್ಯಾಪಾರ ನಿಂತುಹೋಗಿರುವ, ಸ್ಥಿತಿ : ಮೂರ್ಛೆ(ರೋಗ), ಅಪಸ್ಮಾರ ; ವಶ್ಯಸುಪ್ತಿ. (ಕ್ರಿ., ಕಾವ್ಯ) =Entrance (ಆ ಪದ ನೋಡಿ)

Tránquil ಟ್ರ್ಯಾಂಕ್ವಿಲ್ (ಗು.) ನೆಮ್ಮದಿಯ, (ಪ್ರ)ಶಾಂತ, ಅಕ್ಷುಬ್ಧ, ನಿರಾಕುಲ, ಏಕರೀತಿಯ (T. surface of pond. T. scene. A t. mind. The heating powers of the t. flame ಏಕರೀತಿ ಜ್ವಾಲೆಯ ಶಾಖಶಕ್ತಿಗಳು). **Tránquilly** (ಕ್ರಿ. ವಿ.) ; **Tranquíllity** (ನಾ.) ; **Tranquillizátion** (ನಾ.) ; **Tránquillizer** (ನಾ.) ; **Tránquillize** (ಕ್ರಿ. ಸಕ.) ಶಾಂತಗೊಳಿಸು, ಶಾಂತವಾಗು. **Tránquillizingly** (ಕ್ರಿ. ವಿ.)

Trans- ಟ್ರಾನ್ಸ್—, ಟ್ರಾನ್ಜ್ (ಸ. ಪೂ. ಪ.) (S ಅಕ್ಷರ ಆದಿಯಾದ ಪದಗಳ ಹಿಂದೆ ಸಾ., tran-, ಉಳಿದ ವ್ಯಂಜನಗಳಿಂದ ಮೊದಲಾಗುವ ಲ್ಯಾಟಿನ್ ಮೂಲದ ಪದಗಳ ಹಿಂದೆ ಕೆಲವು ವೇಳೆ tra- ಪ್ರ.) (—ರ) ಆಚೆ(ಗೆ), ಆಚೆ ಕಡೆ(ಯಲ್ಲಿ) (Transalpine, Transhimalayan) ; ಮೂಲಕ (Transfix) ; ಸ್ಥಿತ್ಯಂತರಕ್ಕೆ, ಸ್ಥಳಾಂತರಕ್ಕೆ (Transform, translate). (ಈಗ ಪ್ರಚಾರದಲ್ಲಿರುವ ಪ್ರ.) ಆಚೆಯ ಪಕ್ಕದಲ್ಲಿಯ [Transfrontier (ಮು., ಇಂಡಿಯಾ ಚಕ್ರಾಧಿಪತ್ಯದ) ಗಡಿಯ ಆಚೆಯ ಪಕ್ಕದಲ್ಲಿಯ, ಗಡಿನಾಡಿನ ಆಚೆಯ. Trans-Gangetic ಗಂಗಾ ನದಿಯ ಆಚೆಯ ಪಕ್ಕದಲ್ಲಿನ]

Transáct ಟ್ರಾನ್‌ಸ್ಯಾ(ಸ್ಯಾ)ಕ್ಟ್ (ಕ್ರಿ.) (ಕೆಲಸ) ನಿರ್ವಹಿಸು, ನಡಸು, ಮಾಡಿ ಮುಗಿಸು; ವ್ಯವಹಾರ ನಡಸು, ವ್ಯವಹರಿಸು (*With* person). **Transáctor** (ನಾ.) ; **Transáction** (ನಾ.) ಕಾರ್ಯ, ವ್ಯವಹಾರ, ಕೆಲಸ (—ನಡಸುವುದು, ನಿರ್ವಹಿಸುವುದು) (Mixed up in shady transactions ಸಂದೇಹಾಸ್ಪದ ವ್ಯವಹಾರಗಳಲ್ಲಿ ಬೆರೆತು); ನಿರ್ವಾಹ, ನಿರ್ವಹಣ (Left the t. of the matter to him); ವ್ಯಾಪಾರ, (ಅಂಗಡಿಯ) ವ್ಯವಹಾರ (The transactions of a firm) ; (ಬ. ವ. ದಲ್ಲಿ) ವಿದ್ವತ್ ಸಂಘಗಳಲ್ಲಿ ನಡೆದ ಚರ್ಚೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಓದಿದ ಲೇಖನಗಳು, ಮೊ. ಗಳನ್ನು ಕುರಿತ ವರದಿ: ನಡವಳಿಕೆಗಳು, ಕಾರ್ಯಕಲಾಪಗಳು (Philosophical Transactions ಲಂಡನ್ನಿನ ರಾಯಲ್ ಸೊಸೈಟಿಯ ನಡವಳಿಕೆಗಳು). (ನ್ಯಾ. ಶಾ.) ಪರಸ್ಪರ ರಿಯಾಯಿತಿಗಳಿಂದ ವ್ಯಾಜ್ಯವನ್ನು ಪರಿಹರಿಸಿಕೊಳ್ಳುವುದು: ರಾಜಿ, ಒಪ್ಪಂದ; ನ್ಯಾಯಾನುಸಾರವಾದ ಹಕ್ಕುಗಳ ಮೇಲೆ ಪರಿಣಾಮ ಬೀರುವ ಯಾವುದಾದರೂ ನಡವಳಿ: ಹಕ್ಕು ಸಂಬಂಧ ನಡವಳಿ.

Transálpine ಟ್ರಾನ್ಸ್(ನ್ಸ್)ಆ್ಯಲ್‌ಪೈನ್ (ಗು., ನಾ.) (ಸಾ., ಇಟಲಿಯವರ ದೃಷ್ಟಿಯಿಂದ) ಆಲ್ಪ್ಸ್ ಪರ್ವತದ ಆಚೆಕಡೆಯ (ನಿವಾಸಿ); ಆಲ್ಪ್ಸ್ ಪರ್ವತೋತ್ತರದ(ವನು)

Transatlántic ಟ್ರಾನ್ಸ್(ನ್ಸ್)ಅಟ್ಲಾಂಟಿಕ್ (ಗು.) ಅಟ್ಲಾಂಟಿಕ್ (ಸಾಗರದ) ಆಚೆಯ; ಅಮೆರಿಕದ; ಅಟ್ಲಾಂಟಿಕ್ ಸಾಗರವನ್ನು ದಾಟುವ, ಅಡ್ಡಹಾಯುವ (T. line, steamer)

Transcénd ಟ್ರಾನ್ಸೆಂಡ್ (ಕ್ರಿ.) (ಮನುಷ್ಯನ ಅನುಭವ, ವಿಚಾರಶಕ್ತಿ, ನಂಬಿಕೆ, ಮೊ. ಕ್ಕೆ) ಮೀರಿರು, ಅಸಾಧ್ಯವಾಗಿರು, ಅತೀತವಾಗಿರು, ದುರ್ಗ್ರಾಹ್ಯವಾಗಿರು; ಅತಿಶಯಿಸು, ಮೀರು (Electromagnets far t. permanent magnets in power). **Transcéndent** (ಗು., ನಾ.) ಅತಿಶಯವಾದ; ಅತ್ಯುತ್ತಮ, ಮೀರಿದ (T. merit, genius); (ತಾರ್ಕಿಕರ ತ. ಶಾ.) ದಶಪದಾರ್ಥಗಳಿಗೆ (Ten categories: Category ನೋಡಿ) —ಮೇಲಿನ, ಮೀರಿದ; ವಿಷಯಾತೀತ; (ಕ್ಯಾಂಟನ ತ. ಶಾ.) ಅನುಭವಾತೀತ; (ಮು., ದೇವರ ವಿಷಯದಲ್ಲಿ) ಸ್ಥೂಲ ಪ್ರಪಂಚದಿಂದ, ವಿಶ್ವದಿಂದ, ಬೇರೆಯಾಗಿ ಅಸ್ತಿತ್ವದಲ್ಲಿರುವ; ವಿಶ್ವದ ಪರಿಮಿತಿಗಳಿಗೆ ಒಳಪಟ್ಟಿಲ್ಲದ; ವಿಶ್ವಾತೀತ, ಪ್ರಕೃತ್ಯತೀತ. (ನಾ.) (ತ. ಶಾ.) —ವಾದುದು. **Transcéndence, -ency** (ನಾ.); **Transcéndently** (ಕ್ರಿ. ವಿ.); **Transcéndental** (ಗು., ನಾ.) ವಿಷಯಾತೀತ; ಕೇವಲ ಪಾರಮಾರ್ಥಿಕ. (ಕ್ಯಾಂಟನ ತ. ಶಾ.) ಅನುಭವದಲ್ಲಿ ಸೇರಿರುವ ಮತ್ತು ಅನುಭವಕ್ಕೆ ಆವಶ್ಯಕವಾದ ಆದರೆ ಅನುಭವಜನ್ಯವಲ್ಲದ: ಬುದ್ಧಿರೂಢ (T. cognition ಬುದ್ಧಿರೂಢ ಜ್ಞಾನ. T. object ಅಜ್ಞಾತವೂ ಅಜ್ಞೇಯವೂ ಆದ ವಸ್ತು: ಪರವಸ್ತು. T. unity ಸಮಸ್ತ ಜ್ಞಾನಾನುಭವಗಳ ಏಕಾಕಾರ ವೃತ್ತಿ: ಅಖಂಡಾಕಾರ ವೃತ್ತಿ; ಅಖಂಡಾಕಾರ ಪರಿಣಾಮ). (ಬಳ. ಮಾ.) ಗಹನ, ದುರ್ಜ್ಞೇಯ; ಅಸ್ಪಷ್ಟ; ಗೂಢ; ಕಾರ್ಯಗತವಾಗತಕ್ಕದ್ದಲ್ಲದ: (ಗಣಿತ) ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ ಮತ್ತು ಘಾತೀಕರಣಗಳೆಂಬ ಬೀಜಗಣಿತ ಕ್ರಿಯೆಗಳಿಂದಾಗಲಿ ವಿಪರ್ಯಯ ಕ್ರಿಯೆಗಳಿಂದಾಗಲಿ ಸಿದ್ಧಿಸದ: ಗಣಿತ ಕ್ರಿಯಾತೀತ (T. curve ಗಣಿತ ಕ್ರಿಯಾತೀತ ಪರಿಮಾಣದ ವಕ್ರರೇಖೆ). **Transcendéntally** (ಕ್ರಿ. ವಿ.); **Transcendéntalism** (ನಾ.) (ಮು., ಷಿಲಿಂಗ್ ಮತ್ತು ಅವನ ಅನುಯಾಯಿಗಳ, ಉದಾ., ಎಮರ್ಸನ್ನಿನ) ಅನುಭವ ದರ್ಶನ, ಅತೀಂದ್ರಿಯ ತತ್ತ್ವಶಾಸ್ತ್ರ. **Transcendéntalist** (ನಾ.); **Transcendéntalize** (ಕ್ರಿ. ಸಕ.)

Transcontinéntal ಟ್ರಾನ್ಸ್‌ಕಾಂಟಿನೆಂಟಲ್ (ಗು.) ಒಂದು ಖಂಡದ ಉದ್ದಕ್ಕೂ ಹಾಯ್ದಿರುವ; ಖಂಡಾದ್ಯಂತಗಾಮಿ, ಖಂಡೋತ್ತರದ (T. Railway)

Transcríbe ಟ್ರಾನ್ಸ್‌ಕ್ರೈಬ್ (ಕ್ರಿ. ಸಕ.) (ಕೈಯಕ್ಷರದಲ್ಲಿ) ನಕಲು, ಪ್ರತಿ, —ಮಾಡು; (ಲಘುಲಿಪಿಯಲ್ಲಿರುವುದನ್ನು) ಸಾಧಾರಣ ಲಿಪಿಯಲ್ಲಿ, —ಬರೆ, ಟೈಪುಮಾಡು. **Transcríber** (ನಾ.); **Transcríption** (ನಾ.); **Transcríptional, Transcríptive** (ಗು.); **Tránscript** (ನಾ.) (ಕೈಯಕ್ಷರದಲ್ಲಿ ಬರೆದ) ನಕಲು.

Transcúrrent ಟ್ರಾನ್ಸ್‌ಕರೆಂಟ್ (ಗು.) (ಪ್ರಕೃತಿ ಚರಿತ್ರೆ) ಮೂಲೆಯಿಂದ ಮೂಲೆಗೆ ಅಡ್ಡಡ್ಡಲಾಗಿ ಹರಡಿರುವ, ವಿನ್ಯಾಸವಿರುವ: ಅಡ್ಡಡ್ಡ—ಹರಡಿಕೆಯ, ವಿನ್ಯಾಸದ.

Transéction ಟ್ರಾನ್‌ಸೆಕ್‌ಷನ್ (ನಾ.) ಅಡ್ಡಕೊಯ್ತ.

Tránsept ಟ್ರಾನ್ಸೆಪ್ಟ್ (ನಾ.) ಶಿಲುಬೆಯಾಕಾರದ ಕ್ರೈಸ್ತ ದೇವಾಲಯಗಳಲ್ಲಿ ಅಡ್ಡಭಾಗ; ಈ ಅಡ್ಡಭಾಗದ ಬಾಹು (North t. ಉತ್ತರ ಬಾಹು. South t. ದಕ್ಷಿಣ ಬಾಹು). **Transéptal** (ಗು.)

Transfér ಟ್ರಾನ್ಸ್‌ಫರ್ (ಕ್ರಿ. ಸಕ.) (ವಸ್ತು, ಮೊ. ನ್ನು ವ್ಯಕ್ತಿಯಿಂದ ವ್ಯಕ್ತಿಗೆ ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ; ಆಸ್ತಿ, ಹಕ್ಕು, ಮೊ. ನ್ನು ಮತ್ತೊಬ್ಬನಿಗೆ; ಚಿತ್ರ, ಮೊ. ನ್ನು ಒಂದು ಮೇಲ್ಮೈಯಿಂದ ಮತ್ತೊಂದು ಮೇಲ್ಮೈಗೆ) ಸಾಗಿಸು, ಒಯ್ಯಿ, ವರ್ಗಮಾಡು, ವರ್ಗಾಯಿಸು, ಎಡೆಮಾರಿಸು, ಸ್ಥಾನಾಂತರಿಸು, ಸ್ಥಳಾಂತರ ಮಾಡು. **Tránsferable** (ಗು.) ವರ್ಗಾಯಿಸಲಾಗುವ, ವರ್ಗಸಾಧ್ಯ [T. vote (Vote ನೋಡಿ)]. **Transferabílity** (ನಾ.) ವರ್ಗಸಾಧ್ಯತೆ. **Transfereé** (ನಾ.) ವರ್ಗ—ತೆಗೆದುಕೊಂಡವನು, ಪಡೆದವನು; ವರ್ಗವಾದವನು. **Tránsference** (ನಾ.) ವರ್ಗಮಾಡುವುದು, ವರ್ಗಾವಣೆ. **Tránsferrer, Tránsferor** (ನಾ.) ವರ್ಗ—ಕೊಡುವವನು, ಮಾಡುವವನು. **Transferéntial** (ಗು.) ವರ್ಗಾವಣೆಯ ಸಂಬಂಧವಾದ.

Tránsfer (ನಾ.) ವರ್ಗ, ವರ್ಗಾವಣೆ, ವರ್ಗಾವರ್ಗಿ; ವರ್ಗಪತ್ರ; ವರ್ಗಾಯಿಸಿದ, ವರ್ಗಾಯಿಸಬೇಕಾದ, —ಮಾದರಿ, ಚಿತ್ರ: ವರ್ಗ್ಯ; (ಮತ್ತೊಂದು ಮೇಲ್ಮೈಗೆ ವರ್ಗಾಯಿಸಲಾಗುವ) ಸಣ್ಣ (ಬಣ್ಣದ) ಚಿತ್ರ; ವರ್ಗ ಚಿತ್ರ. ಒಂದು ದಳದಿಂದ ಮತ್ತೊಂದು ದಳಕ್ಕೆ ಅದಲು ಬದಲು ಮಾಡಿದ ಸೈನಿಕ: ವಿನಿಮಯದ, ವರ್ಗಾವರ್ಗದ, —ಸೈನಿಕ. **T.-book** ಆಸ್ತಿ, ಬಂಡವಾಳ ಪಾಲುಗಳು, ಮೊ. ಗಳ ವರ್ಗಾವಣೆಯ ದಾಖಲೆ, ಪುಸ್ತಕ: ವರ್ಗ ಪುಸ್ತಕ. **T.-days** ಇಂಗ್ಲೆಂಡು ಬ್ಯಾಂಕಿನಲ್ಲಿ (Bank of England) ಸಂಚಿತ ಸಾಲಪತ್ರ, ಮೊ. ನ್ನು ರುಸುಮು ತೆಗೆದುಕೊಳ್ಳದೆ ಒಬ್ಬರಿಂದೊಬ್ಬರಿಗೆ ವರ್ಗಮಾಡುವ ದಿನಗಳು (ಶನಿವಾರ ಭಾನುವಾರಗಳು ಹೊರತು ಮಿಕ್ಕೆಲ್ಲ ದಿನಗಳು): ವರ್ಗ ದಿನಗಳು. **T.-ink** (ಚಿತ್ರ, ಮೊ. ನ್ನು ಅಚ್ಚುಗಲ್ಲಿಗೆ ಅಥವಾ ವರ್ಗ ಕಾಗದಕ್ಕೆ ವರ್ಗಾಯಿಸಲು ಅನುಕೂಲಿಸುವ) ವರ್ಗಮಸಿ. **T.-paper** (ವರ್ಗಮಸಿಯನ್ನು ಗ್ರಹಿಸಿ ಅಚ್ಚುಗಲ್ಲಿಗೆ ವರ್ಗಾಯಿಸುವಂತೆ ವಿಶೇಷ ರೀತಿಯಲ್ಲಿ ಸಂಸ್ಕರಿಸಿದ) ವರ್ಗ ಕಾಗದ.

Transfígure ಟ್ರ್ಯಾನ್ಸ್‌ಫಿಗರ್ (ಕ್ರಿ. ಸಕ.) ರೂಪ—ಬದಲಾಯಿಸು, ಮಾರ್ಪಡಿಸು; ರೂಪಾಂತರಿಸು; ಉತ್ತಮ ರೂಪ, ಆದರ್ಶ ರೂಪ, ದಿವ್ಯ ರೂಪ, —ಕೊಡು. **Transfigurátion** (ನಾ.) ರೂಪಾಂತರ; (T-) ಯೇಸು ಕ್ರಿಸ್ತನ ರೂಪಾಂತರದ ಹಬ್ಬದ ದಿನ (ಆಗಸ್ಟ್ ೬)

Transfíx ಟ್ರ್ಯಾನ್ಸ್‌ಫಿಕ್ಸ್ (ಕ್ರಿ. ಸಕ.) (ಈಟಿ, ಮೊ. ಗಳಿಂದ) ಭೇದಿಸು, ಚುಚ್ಚು, ತಿವಿದುಬಿಡು, ಇರಿ; (ಹೀಗೆ) ಇರಿದು ಬಂಧಿಸು, ಸಿಕ್ಕಿಸು; (ಭಯ, ಗಾಬರಿ, ಮೊ. ಗಳ ವಿಷಯದಲ್ಲಿ: ವ್ಯಕ್ತಿಯನ್ನು) ಸ್ತಬ್ಧಮಾಡು, ಸ್ತಂಭಿತಮಾಡು. **Transfíxion** (ನಾ.) (ಕ್ರಿಯಾರ್ಥಗಳಲ್ಲಿ); (ಶಸ್ತ್ರಚಿಕಿತ್ಸೆ: ಅಂಗ ವಿಚ್ಛೇದನದಲ್ಲಿ ಒಳಗಡೆಯಿಂದ ಮೇಲಕ್ಕೆ ಕೊಯ್ಯುವುದಕ್ಕಾಗಿ ಶಸ್ತ್ರವನ್ನು) ಅಡ್ಡಲಾಗಿ ನಾಟುವುದು; ಅಡ್ಡ—ನಾಟಿ, ತಿವಿತ.

Transfórm ಟ್ರಾನ್ಸ್‌ಫಾರ್ಮ್ (ಕ್ರಿ. ಸಕ.) ರೂಪ, ಆಕಾರ, ಸ್ವರೂಪ—ಬದಲಾಯಿಸು, ಮಾರ್ಪಡಿಸು; ರೂಪಾಂತರಿಸು, ಪರಿವರ್ತಿಸು. **Transfórmable** (ಗು.); **Transformátion** (ನಾ.) (ಕೀಟಗಳಲ್ಲಿ; ಘನ, ದ್ರವ ಮತ್ತು ಅನಿಲ ಎಂಬ ಸ್ಥಿತಿಗಳಲ್ಲಿ ಒಂದರಿಂದ ಮತ್ತೊಂದಕ್ಕೆ; ಗಣಿತದಲ್ಲಿ ಒಂದು ರಾಶಿಯಿಂದ ಮತ್ತೊಂದು ರಾಶಿಗೆ; ರಕ್ತನಾಳವ್ಯೂಹದಲ್ಲಿ ಲೋಮನಾಳಗಳ ಮೂಲಕ ಹರಿಯುವ ರಕ್ತದಲ್ಲಿ; ಒಂದರ ಅಂಗಾಂಶ ಬೇರೆ ಭಾಗದ ಅಂಗಾಂಶಕ್ಕೆ) (ರೂಪ) ಪರಿವರ್ತನೆ, ಮಾರ್ಪಾಡು, ಬದಲಾವಣೆ (Has undergone a great t.); (ಅಂಗಡಿಯ ಮಾತು) ಹೆಂಗಸಿನ ಕೃತಕ ಕೇಶ, ಚೌರಿ. **T.-scene** ಮು., ಮೂಕಾಭಿನಯದ ಮುಖ್ಯ ಪಾತ್ರಗಳು ಕೋಡಂಗಿಯಾಟದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುಖ್ಯ ಪಾತ್ರತಗಳಾಗಿ ಪರಿರ್ವನವಾಗುವ ದೃಶ್ಯ : ಪರಿವರ್ತನ ದೃಶ್ಯ. **Transfórmative** —ಫಾರ್ಮಟಿವ್ (ಗು.) ಪರಿವರ್ತಕ (ಶಕ್ತಿಯುಳ್ಳ). **Transfórmer** (ನಾ.) (ಕ್ರಿಯಾರ್ಥಗಳಲ್ಲಿ); (ವಿದ್ಯುತ್ ಪ್ರವಾಹದ) ಸ್ಥಾನಶಕ್ತಿಯನ್ನು ಏರಿಸಲು ಅಥವಾ ಇಳಿಸಲು ಅನುಕೂಲಿಸುವ ಸಲಕರಣೆ; ಅವಿಚ್ಛಿನ್ನ ಪ್ರವಾಹವನ್ನು ಪರ್ಯಾಯ ಪ್ರವಾಹವನ್ನಾಗಿ ಅಥವಾ ಪರ್ಯಾಯ ಪ್ರವಾಹವನ್ನು ಅವಿಚ್ಛಿನ್ನ ಪ್ರವಾಹವನ್ನಾಗಿ ಪರಿವರ್ತಿಸುವ ಸಲಕರಣೆ: (ವಿದ್ಯುತ್) ಪರಿವರ್ತಕ (=**Tránsformator**). **Transfórmism** (ನಾ.) (ಜೀ. ವಿ.) ಒಂದು ವಂಶ ಕಾಲಕ್ರಮದಲ್ಲಿ ಮತ್ತೊಂದು ವಂಶವಾಗಿ ಮಾರ್ಪಡುವುದೆಂಬ ವಾದ : ವಂಶ ಪರಿವರ್ತನ ವಾದ ; ಹೀಗೆ ಮಾರ್ಪಡುವುದು, ವಂಶ ಪರಿವರ್ತನ. ಸ್ವತಂತ್ರ ಜೀವಿಗಳು ಸಂಗಡ ಜೀವಿಗಳಾಗಿ ಸಮುದಾಯದಲ್ಲಿ ಸೇರಿ ಸಂಕೀರ್ಣ ಪ್ರಾಣಿ ವ್ಯಕ್ತಿಯ ಅಂಗಾಂಗಗಳಾಗಿ ಪರಿವರ್ತನೆ ಹೊಂದುವುವೆಂದೂ ಹೀಗೆ ಸಂಕೀರ್ಣ ಪ್ರಾಣಿಗಳುಂಟಾಗುವುವೆಂದೂ ಹೇಳುವ ಒಂದು ವಾದ: ಪ್ರಾಣಿ ಪರಿವರ್ತನ ವಾದ. **Transfórmist** (ನಾ.) —ವಾದಿ. **Transformístic** (ಗು.)

Transfúse ಟ್ರಾನ್ಸ್‌ಫ್ಯೂಸ್ (ಕ್ರಿ. ಸಕ.) (ದ್ರವ, ಅನಿಲ, ಮೊ. ನ್ನು) ಒಂದು ಪಾತ್ರೆ, ಮೊ. ರಿಂದ ಮತ್ತೊಂದಕ್ಕೆ ಹರಿಸು; ಪಾತ್ರಾಂತರಗೊಳಿಸು (ರೂಪಕವಾಗಿ ಗುಣ, ಮೊ. ನ್ನು ಸಹ); ವ್ಯಾಪಿಸುವಂತೆ ಮಾಡು (Air transfused with sunshine); (ವೈ. ಶಾ.) (ಒಬ್ಬನ ರಕ್ತನಾಳದಿಂದ ಮತ್ತೊಬ್ಬನ ರಕ್ತನಾಳಕ್ಕೆ) ರಕ್ತ ಪೂರಣ ಮಾಡು, ರಕ್ತ ಸಂಯೋಜನೆ ಮಾಡು; (ದ್ರವವನ್ನು) ರಕ್ತಕ್ಕೆ ಸೇರಿಸು. **Transfúsion** —ಫ್ಯೂಷನ್ (ನಾ.) ; **Transfúsionist** (ನಾ.) ; **Transfúsive** —ಸಿವ್ (ಗು.)

Transgréss ಟ್ರಾನ್ಸ್‌ಗ್ರೆಸ್ (ಕ್ರಿ. ಸಕ.) (ಆಜ್ಞೆ, ಕಟ್ಟಳೆ, ಮೊ. ನ್ನು) ಮೀರು, ಉಲ್ಲಂಘಿಸು, ಅತಿಕ್ರಮಿಸು. **Transgréssion** (ನಾ.) ; **Transgréssor** (ನಾ.)

Tranship ಟ್ರಾನ್‌ಷಿಪ್ (ಕ್ರಿ. ಸಕ.) =Trans-ship (ಆ ಪದ ನೋಡಿ)

Tránsient ಟ್ರಾನ್‌ಸಿ(ಸ್ಸಿ)ಯೆಂಟ್ (ಗು.) ಅಶಾಶ್ವತ, ಅಸ್ಥಿರ, ನಶ್ವರ (The t. affairs of this life ಇಹಜೀವನದ ನಶ್ವರ ವ್ಯಾಪಾರಗಳು) ; ಕ್ಷಣಿಕ, ಆತುರದ (A t. gleam of hope. Snatched a t. glance). T. chord, note (ಸಂ.) ಸಂಬಂಧ ಕಲ್ಪನೆಗೆ ಮಾತ್ರ ಬೇಕಾದ ಅಮುಖ್ಯ ಸ್ವರಾಲಾಪ. **Tránsiently** (ಕ್ರಿ. ವಿ.); **Tránsience** —ಸಿಯೆನ್ಸ್, —ಷನ್ಸ್, **-ncy** (ನಾ.) ನಶ್ವರತೆ, ಕ್ಷಣಿಕತೆ.

Transilient ಟ್ರಾನ್ಸಿಲಿಯೆಂಟ್ (ಗು.) (ಒಂದು ಆಧಾರದಿಂದ ಅಥವಾ ಒಂದು ಸ್ಥಿತಿಯಿಂದ ಮತ್ತೊಂದಕ್ಕೆ) ಹಾರುವ, ಎಗುರುವ, ಹಾಯ್ದುರುವ ; ತಟಕ್ಕನೆ ಬದಲಾಯಿಸುವ (T. series of tones)

Transilluminátion ಟ್ರಾನ್ಸ್(ಸ್)ಇಲ್ಯೂಮಿನೇಷನ್ (ನಾ.) (ವೈ. ಶಾ.) ಪರೀಕ್ಷೆಗಾಗಿ ಅಂಗ, ಮೊ. ಗಳ ಮೂಲಕ ಪ್ರಬಲ ಪ್ರಕಾಶವನ್ನು ಬಿಡುವುದು : ಅಂತಃಪ್ರಕಾಶನ.

Transíre (L) ಟ್ರಾನ್ಸ್(ಸ್)ಐರಿ(ರೆ) (ನಾ.) (ಸುಂಕದ ಕಚೇರಿ ಕೊಟ್ಟ) ಸರಕು ಸಾಗಣೆ—ಪರವಾನಗಿ, ರಹದಾರಿ.

Tránsit ಟ್ರಾನ್‌ಸಿ(ಸ್ಸಿ)ಟ್ (ನಾ., ಕ್ರಿ. ಸಕ.) (ಒಂದರ ಮೂಲಕ, ಒಂದನ್ನು ಹಾಯ್ದು) ಹೋಗುವುದು, ಪ್ರಯಾಣ, ಒಯ್ಯುವುದು, ಸಾಗುವುದು, ಸಾಗಿಸುವುದು, ಸಾಗಣೆ, ರವಾನೆ (Allowed 2 days for the t. of the lake. Goods delayed in the t.) ; (ಪ್ರಯಾಣದ, ರವಾನೆಯ) ದಾರಿ, ಮಾರ್ಗ (The overland t.) ; (ರೂಪ.) ಬದಲಾವಣೆ, ಪರಿವರ್ತನೆ (In the t. from one form of government to another) ; (ಖ. ವಿ.) ಒಂದು ಆಕಾಶಸ್ಥ ಕಾಯ ಒಂದು ಸ್ಥಳದ ಮಧ್ಯಾಹ್ನರೇಖೆಯನ್ನು ಹಾಯ್ದುಹೋಗುವುದು ; ಒಂದು ಸಣ್ಣ ಆಕಾಶಸ್ಥ ಕಾಯ (ಉದಾ., ಬುಧ ಅಥವಾ ಶುಕ್ರ ಗ್ರಹ) ದೊಡ್ಡ ಆಕಾಶಸ್ಥ ಕಾಯದ (ಉದಾ., ಸೂರ್ಯನ) ಮಂಡಲವನ್ನು ಹಾಯ್ದು ಹೋಗುವುದು: ಸಂಕ್ರಮ; = t.-circle, -compass, -instrument. [T.-circle, -instrument ಸಂಕ್ರಮ (ಕಾಲ) ಮಾಪಕ. T.-compass ಕ್ಷಿತಿಜ ಕೋನವನ್ನು ಅಳೆಯುವ ಸಲಕರಣೆ : ಕ್ಷಿತಿಜ ಕೋನ ಮಾಪಕ. T.-duty (ಒಂದು ದೇಶದ ಮೂಲಕ ಹಾದುಹೋಗಲು ಕೊಡುವ) ಸಾಗಣೆ ಸುಂಕ] . (ಕ್ರಿ.) (ಸೂರ್ಯ, ಮೊ. ಗಳ ಮಂಡಲವನ್ನು) ದಾಟು, ಹಾದುಹೋಗು. **Transítion** —ಷ(ಝ)ನ್ (ನಾ.) (ಒಂದು ಸ್ಥಳ, ಸ್ಥಿತಿ, ಕಾರ್ಯ, ಮೊ. ರಿಂದ ಮತ್ತೊಂದಕ್ಕೆ) ದಾಟುವುದು, ಸಂಕ್ರಮ, ಬದಲಾವಣೆ, ಪರಿವರ್ತನೆ (Made a hurried t. to indifferent topics ಯಾವ ಯಾವದೋ ಅಪ್ರಧಾನ ವಿಷಯಗಳಿಗೆ ಆತುರವಾಗಿ ದಾಟಿದನು, ಸಾಗಿದನು. He is subject to frequent transitions from high spirits to depression ಅವನು ಪದೇ ಪದೇ ಉತ್ಸಾಹದಿಂದ ವಿಷಣ್ಣತೆಯ ವ್ಯತ್ಯಾಸಕ್ಕೆ ಗುರಿಯಾಗುತ್ತಿರುತ್ತಾನೆ) ; (ಸಂ.) ಒಂದು ಸ್ವರ ಪದ್ಧತಿಯಿಂದ ಮತ್ತೊಂದಕ್ಕೆ ಕ್ರಮವಾಗಿ ತಿರುಗುವುದು, ಬದಲಾಯಿಸುವುದು ; (ಕಲೆ) ಒಂದು ಪದ್ಧತಿಯಿಂದ ಮತ್ತೊಂದಕ್ಕೆ ತಿರುಗುವುದು, ಕ್ರಮೇಣ ಬದಲಾವಣೆ. [(ವಿಶೇಷಣ ಪ್ರ.) T. stage, period ಪರಿವರ್ತನ, ಸಂಧಿ, —ದಶೆ, ಕಾಲ. T. tumour ಮರುಕಳಿಸಿದರೆ ಬಹು ದಾರುಣವಾಗುವಂಥ ವ್ರಣದ ಗಡ್ಡೆ : ಉಲ್ಬಣಾವಸ್ಥೆಯ ಗಡ್ಡೆ] . **Transítional** (ಗು.) ಬದಲಾವಣೆಯ, ಅವಸ್ಥಾ ಪರಿವರ್ತನೆಯ, ಮಧ್ಯ ಕಾಲದ. **Transítionally** (ಕ್ರಿ. ವಿ.); **Transítionary** (ಗು.) =Transitional; **Tránsitory** (ಗು.) ಕಾಯಂ ಅಲ್ಲದ, ಕಿಂಚಿತ್ ಕಾಲದ. T. action (ನ್ಯಾ. ಶಾ.) [ಸಂಬಂಧಪಟ್ಟ ವ್ಯವಹಾರ (ಸಾಲ, ಮೊ. ವು) ಎಲ್ಲಿಯೇ ನಡೆದಿರಲಿ, ಆ ಬಗ್ಗೆ] ಯಾವ ದೇಶದಲ್ಲಿ ಬೇಕಾದರೂ ಕ್ರಮ ಹೂಡಬಹುದಾದ ವ್ಯಾಜ್ಯ : ಸ್ಥಳಾಂತರ ಸಾಧ್ಯ ವ್ಯವಹಾರ. **Tránsitorily** (ಕ್ರಿ. ವಿ.) ; **Tránsitoriness** (ನಾ.)

Transítion. Transit ನೋಡಿ.

Tránsitive ಟ್ರಾನ್‌ಸಿ(ಸ್ಸಿ)ಟಿವ್ (ಗು., ನಾ.) (ವ್ಯಾ.) (ವ್ಯಕ್ತವಾಗಿಯಾಗಲಿ ಅಧ್ಯಾಹೃತವಾಗಿಯಾಗಲಿ) ಕರ್ಮಪದವುಳ್ಳ, ಸಕರ್ಮಕ (—ಕ್ರಿಯಾಪದ). **Tránsitively** (ಕ್ರಿ. ವಿ.) ; **Tránsitiveness** (ನಾ.)

Tránsitory. Transit ನೋಡಿ.

Tránslate ಟ್ರಾನ್ಸ್(ಸ್)ಲೇಟ್ (ಕ್ರಿ. ಸಕ.) (ಮಾತು, ವಾಕ್ಯ, ಗ್ರಂಥ, ಮೊ. ನ್ನು) ಬೇರೆ ಭಾಷೆಗೆ ತಿರುಗಿಸು ; ಪರಿವರ್ತಿಸು ; ತರ್ಜುಮೆ ಮಾಡು, ಭಾಷಾಂತರಿಸು (*Into* ಉಪ. ದೊಡನೆ) [(ರೂಪ.) Kindly t. ದಯವಿಟ್ಟು ತಮ್ಮ ಅಭಿಪ್ರಾಯವನ್ನು ಸ್ಪಷ್ಟ ರೀತಿಯಲ್ಲಿ, ಸ್ಪಷ್ಟೋಕ್ತಿಯಲ್ಲಿ, ಹೇಳಿ] ; ಭಾಷಾಂತರಕ್ಕೆ ಬರು, ಭಾಷಾಂತರವಾಗು, ಭಾಷಾಂತರ ಸಾಧ್ಯವಾಗಿರು (*Ill*, *well* ಮೊ. ಪದಗಳೊಡನೆ) ; (ಭಾವ, ತತ್ತ್ವ, ಮೊ. ನ್ನು) ಪರಿವರ್ತಿಸು (T. into action ಕಾರ್ಯ ರೂಪಕ್ಕೆ ಪರಿವರ್ತಿಸು) ; ಅರ್ಥಮಾಡು, ಭಾವಿಸು, ಅಭಿಪ್ರಾಯ ತಿಳಿಸು (This I translated as a protest. Translated his gestures to the bystanders ಅವನ ಅಭಿನಯಗಳನ್ನು ಪ್ರೇಕ್ಷಕರಿಗೆ ಅರ್ಥಮಾಡಿ ಹೇಳಿದನು); (ಬಿಷಪ್ಪನ್ನು ಒಂದು ಚರ್ಚು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ) ಬದಲಾಯಿಸು, ವರ್ಗಮಾಡು ; (ಬೈಬಲ್) ಮರಣವಿಲ್ಲದೆ, ಸಶರೀರವಾಗಿ, ಸ್ವರ್ಗಕ್ಕೆ ಒಯ್ಯು; (ಪ್ರಾಚೀ. ಪ್ರ.) ರೂಪಾಂತರಿಸು ; (ತಂತಿಯ ಸಮಾಚಾರವನ್ನು) ಮುಂದಕ್ಕೆ ಸಾಗಿಸು, ಸ್ಥಾನಾಂತರಮಾಡು, ವರ್ಗಾಯಿಸು ; (ಅಸಂ.) (ಮು., ಉಡುಪು, ಪಾದರಕ್ಷೆ, ಮೊ. ನ್ನು) ಹಳೆಯ ಸಾಮಾನುಗಳಿಂದ ಮಾಡು ; (ಯಂತ್ರಶಿಲ್ಪ) ವಸ್ತು ಉರುಳದೆ ಅದರ ಎಲ್ಲ ಭಾಗಗಳೂ ಒಂದೇ ದಿಕ್ಕಿನಲ್ಲಿ ಅಖಂಡವಾಗಿ ಚಲಿಸುವಂತೆ ಮಾಡು : ಸ್ಥಾನಾಂತರ, ಸಾಗು, —ಚಲನೆಕೊಡು. **Translátable** (ಗು.) ; **Translátion** (ನಾ.); **Translátional** (ಗು.); **Translátor** (ನಾ.) ಭಾಷಾಂತರಕಾರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Translíterate ಟ್ರಾನ್ಸ್(ಸ್)ಲಿಟೆರೇಟ್ (ಕ್ರಿ. ಸಕ.) (ಮಾತುಗಳನ್ನು) ಮತ್ತೊಂದು ಭಾಷೆಯ ಅಕ್ಷರಗಳಲ್ಲಿ, ಲಿಪಿಗಳಲ್ಲಿ, ಬರೆ: ಲಿಪ್ಯಂತರ ಮಾಡು. **Transliterátion** (ನಾ.); **Translíterator** (ನಾ.)

Translúcent ಟ್ರಾನ್ಸ್(ಸ್)ಲ್ಯೂಸೆಂಟ್ (ಗು.) ಪಾರದರ್ಶಕವಾಗಿರದೆ ಪ್ರಕಾಶವನ್ನು ಮಾತ್ರ ಹಾಯಗೊಡುವ: ಪಾರದೀಪಕ, ಪ್ರಕಾಶ ಭೇದ್ಯ; (ಶಿಥಿಲ ಪ್ರ.) ಪಾರದರ್ಶಕ. **Translúcence, -ncy** (ನಾ.); **Translúcid** (ಗು.) (ವಿರ. ಪ್ರ.)

Transmaríne ಟ್ರಾನ್ಸ್(ಸ್)ಮರೀನ್ (ಗು.) ಸಮುದ್ರದಾಚೆಯ.

Tránsmigrate ಟ್ರಾನ್ಸ್‌ಮೈ(ಮಿ)ಗ್ರೇಟ್ (ಕ್ರಿ. ಅಕ.) (ಆತ್ಮದ ವಿಷಯದಲ್ಲಿ) ದೇಹಾಂತರ ಹೊಂದು, ಬೇರೆ ದೇಹ ಪಡೆ (I think my soul would t. into some tree, when she bids this body farewell); ಜನ್ಮಾಂತರ, ಪುನರ್ಜನ್ಮ, —ಪಡೆ, ಎತ್ತು; =Migrate (ಆ ಪದ ನೋಡಿ). **Tránsmigrant** —ಮಿಗ್ರಂಟ್ (ಗು., ನಾ.) ಒಂದು ದೇಶದ ಮೂಲಕ ಹಾದುಹೋಗುವ (ವಲಸಿಗ). **Transmigrátion** —ಮಿ(ಮೈ)— (ನಾ.) ದೇಹಾಂತರ—ಪ್ರವೇಶ, ಪ್ರಾಪ್ತಿ (=Metempsychosis); =Migration. **Transmigrátionism** (ನಾ.); **Transmigrátionist** (ನಾ.); **Tránsmigrator** (ನಾ.); **Tránsmigratory** (ಗು.)

Transmít ಟ್ರಾನ್ಸ್(ಸ್)ಮಿಟ್ (ಕ್ರಿ. ಸಕ.) ಮುಂದಕ್ಕೆ ಸಾಗಿಸು, ಕಳಿಸು, ಕಳಿಸಿಕೊಡು, ಒಯ್ಯಿ, ತಲಪಿಸು, ರವಾನಿಸು (T. the parcel. Will t. the title, the disease, the faculty, to his descendants ತನ್ನ ಬಿರುದನ್ನು, ರೋಗವನ್ನು, ಬುದ್ಧಿಶಕ್ತಿಯನ್ನು, ತನ್ನ ಸಂತತಿಯವರಿಗೆ ಸಾಗಿಸುತ್ತಾನೆ); (ಕಾವು, ಬೆಳಕು, ಶಬ್ದ, ವಿದ್ಯುತ್ತು, ಭಾವ, ಸುದ್ದಿ, ಮೊ. ನ್ನು) ಸಾಗಗೊಡು, (—ಮೊ. ಕ್ಕೆ) ವಾಹಕವಾಗಿರು. **Transmissibílity** (ನಾ.) ವಹನ ಸಾಧ್ಯತೆ, ವಾಹ್ಯತೆ. **Transmíssible, Transmíssive, Transmíttable** (ಗು.); **Transmíssion** (ನಾ.) ಸಾಗಣೆ, ರವಾನೆ, ವಹನ. **Transmíttal** (ನಾ.); **Transmítter** (ನಾ.) ವಾಹಕ; ದೂರವಾಣಿಯ ಅಥವಾ ದೂರಲೇಖಕ ಸಲಕರಣೆಯಲ್ಲಿ ಸುದ್ದಿಗಳನ್ನು ಕಳುಹಿಸುವ ಭಾಗ, (ರೇಡಿಯೊ) ನಿಸ್ತಂತು ತರಂಗಗಳನ್ನು ಕಳುಹಿಸುವ ಯಂತ್ರಸಲಕರಣೆ: ಪ್ರೇಷಕ (=Transmitting set) (Receive ಪದದ ಕೆಳಗೆ Receiver ನೋಡಿ)

Transmógrify ಟ್ರಾನ್ಸ್(ಸ್)ಮಾಗ್ರಿಫೈ (ಕ್ರಿ. ಸಕ.) (ಹಾಸ್ಯ ಪ್ರ.) (ಮಾಂತ್ರಿಕವಾಗಿ ಅಥವಾ ಅದ್ಭುತ ರೀತಿಯಲ್ಲಿ) ರೂಪಾಂತರಿಸು, ಪರಿವರ್ತನಮಾಡು. **Transmogrificátion** (ನಾ.)

Transmúte ಟ್ರಾನ್ಸ್(ಸ್)ಮ್ಯೂಟ್ (ಕ್ರಿ. ಸಕ.) (ರೂಪ, ಸ್ವಭಾವ, ಸತ್ತ್ವ, ಮೊ. ನ್ನು) ಬದಲಾಯಿಸು, ಪರಿವರ್ತಿಸು; ವಸ್ತ್ವಂತರಿಸು. **Transmútable** (ಗು.) ಪರಿವರ್ತನ ಸಾಧ್ಯ, ಪರಿವರ್ತ್ಯ. **Transmutabílity** (ನಾ.); **Transmútably** (ಕ್ರಿ. ವಿ.); **Transmutátion** (ನಾ.) ಬದಲಾವಣೆ, ಪರಿವರ್ತನೆ; (ರಸತಂತ್ರ) ಕ್ಷುದ್ರ ಲೋಹವನ್ನು ಪ್ರಶಸ್ತ ಲೋಹವನ್ನಾಗಿ ಪರಿವರ್ತಿಸುವುದು: ಲೋಹ ಪರಿವರ್ತನೆ; (ಜ್ಯಾ.) ಒಂದು ಆಕೃತಿಯನ್ನು ಅದೇ ಚದರಳತೆಯ ಮತ್ತೊಂದು ಆಕೃತಿಯಾಗಿ, ಒಂದು ಕಾಯವನ್ನು ಅದೇ ಘನ ಅಳತೆಯ ಮತ್ತೊಂದು ಕಾಯವನ್ನಾಗಿ ಮಾರ್ಪಡಿಸುವುದು: ಆಕೃತಿ, ಕಾಯ, —ಪರಿವರ್ತನೆ; (ಜೀ. ವಿ.) ಒಂದು ವಂಶ ಮತ್ತೊಂದು ವಂಶವಾಗಿ ಬದಲಾಯಿಸುವುದು: ವಂಶ ಪರಿವರ್ತನೆ. T. glaze ವಿವಿಧ ವರ್ಣ ಸ್ಫುರಣದ ಪಿಂಗಾಣಿ ಹೊಳಪು. **Transmutátionist** (ನಾ.) ಪರಿವರ್ತನವಾದಿ. **Transmútative** (ಗು.) ಪರಿವರ್ತನೆಯ, ಪರಿವರ್ತಕ. **Transmúter** (ನಾ.)

Transnórmal ಟ್ರಾನ್ಸ್(ಸ್)ನಾರ್ಮಲ್ (ಗು.) ರೂಢಿಯ ಸ್ಥಿತಿಗೆ ಮೀರಿದ; ಸಾಧಾರಣಾತೀತ.

Transoceánic ಟ್ರಾನ್ಸ್‌ಓಷಿಆ್ಯನಿಕ್ (ಗು.) ಸಾಗರದಾಚೆಯ; ಸಾಗರ ದಾಟುವ, ಸಾಗರ ಸಂಚಾರದ (T. flight of birds)

Tránsom ಟ್ರಾನ್ಸಮ್ (ನಾ.) (ಕಿಟಕಿ, ಬಾಗಿಲು, ಮೊ. ಗಳ) ಅಡ್ಡ—ಪಟ್ಟಿ, ಮರ (Mullion ಪದದೊಡನೆ ಹೋಲಿಸಿ) [T. window ಅಡ್ಡಮರ ಹಾಕಿರುವ ಕಿಟಕಿ; ಬಾಗಿಲ ಅಡ್ಡಮರದ ಮೇಲಿನ ಕಿಟಕಿ: ಅಡ್ಡಮರದ ಕಿಟಕಿ]; ಹಡಗಿನ ಹಿಂಗಂಬಕ್ಕೆ ಬಂಧಿಸಿರುವ ಅಡ್ಡತೊಲೆ(ಗಳಲ್ಲೊಂದು); ಮರ ಕೊಯ್ಯುವ ಗರಗಸದ ಕುಳಿಗೆ ಅಡ್ಡಲಾಗಿ ಹಾಕಿರುವ, ಕೊಯ್ಯಬೇಕಾದ ನಾಟಾ ದಿಮ್ಮಿಗೆ ಆಧಾರವಾಗಿರುವ, ಮರ: ಅಡ್ಡಮರ; (ಬಿಗಿಗಾಗಿ ಹಾಕಿರುವ) ಅಡ್ಡ ಬಿಗಿಪಟ್ಟಿ. **Tránsomed** (ಗು.)

Tránspadane ಟ್ರಾನ್ಸ್‌ಪ(ಪೇ)ಡೇನ್ (ಗು.) ಪೋ ನದಿಯಾಚೆಯ (ಸಾ., ಪೋ ನದಿಯ ಉತ್ತರದಲ್ಲಿರುವ)

Transpárent ಟ್ರಾನ್ಸ್‌ಪೇ(ಪ್ಯಾ)ರೆಂಟ್ (ಗು.) ಆಚೆಯ ಕಡೆ ಇರುವ ವಸ್ತು ಸ್ಪಷ್ಟವಾಗಿ ಕಾಣಲಾಗುವಂತೆ ಬೆಳಕನ್ನು ತನ್ನ ಮೂಲಕ ಶುದ್ಧವಾಗಿ ಹಾಯಗೊಡುವ: ಪಾರದರ್ಶಕ; (ರೂಪ.) (ವೇಷ, ನೆಪ, ಮೊ. ಗಳ ವಿಷಯದಲ್ಲಿ) ಸುಲಭವಾಗಿ ಕಂಡುಹೋಗುವ; ಸ್ಪಷ್ಟ, ವ್ಯಕ್ತ (T. motive, trick, flattery); (ರೂಪ.) ಕೃತಕತೆ ಅಥವಾ ಬೆಡಗು ಇಲ್ಲದ: ಸರಳ, ಶುದ್ಧ, ಪ್ರಸನ್ನ, ತಿಳಿಯಾದ (T. style); (ರೂಪ.) ಮುಚ್ಚುಮರೆಯಿಲ್ಲದ, ನಿಷ್ಕಪಟ. T. colours (ವರ್ಣಚಿತ್ರ ಕಲೆಯಲ್ಲಿ) ತೆಳುವಾಗಿ ತೊಡೆದಾಗ ಕೆಳಗಡೆಯ ಬಣ್ಣಗಳನ್ನೂ ರೂಪಗಳನ್ನೂ ಕಾಣಗೊಡುವಂಥ ಬಣ್ಣಗಳು; (ಬಣ್ಣದ ಗಾಜುಗಳ ವಿಷಯದಲ್ಲಿ) ಬೆಳಕು ಹಾಯ್ದಾಗ ಮಾತ್ರ ಕಾಣಿಸುವ ಬಣ್ಣಗಳು: ಪಾರದರ್ಶಕ ವರ್ಣಗಳು. **Transpárently** (ಕ್ರಿ. ವಿ.); **Transpárentness** (ನಾ.); **Transpárence** (ನಾ.) ಪಾರದರ್ಶಕತೆ; ಸ್ವಚ್ಛತೆ; ನಿಷ್ಕಾಪಟ್ಯ. **Transpárency** (ನಾ.) =Transparence; ಬಟ್ಟೆ, ಗಾಜು, ಕಾಗದ, ಮೊ. ಗಳ ಮೇಲೆ ಬರೆದು, ಹಿಂಗಡೆಯಿಂದ ಬೆಳಕು ಬೀಳಿಸಿ ಕಾಣುವಂತೆ ಮಾಡಿದ ಚಿತ್ರ, ರೇಖನ: ಪಾರದರ್ಶನ ಚಿತ್ರ; ಈ ಚಿತ್ರದ ಮರದ ಚೌಕಟ್ಟು; (ಛಾಯಾಚಿತ್ರ) ಅದರ ಮೂಲಕ ಹಾಯ್ದು ಬೆಳಕಿನಿಂದ ನೋಡಲು ಸಾಧ್ಯವಾದ, ಗಾಜುಹಲಗೆಯ ಮೇಲಿನ ಸಮಪ್ರತಿ ಚಿತ್ರ; (ಛಾಯಾದೀಪದಲ್ಲಿ ಫಲಕ ಚಿತ್ರವಾಗಿ, ಕಿಟಕಿಗಳಲ್ಲಿ ಅಲಂಕಾರವಾಗಿ ಉಪಯೋಗಿಸುವ) ಪಾರದರ್ಶನ ಚಿತ್ರ; (ಬೇರೆ ಬೇರೆ ದಪ್ಪದ, ಬೇರೆ ಬೇರೆ ಪಾರದರ್ಶಕ ಭಾಗಗಳುಳ್ಳ) ಪಿಂಗಾಣಿ ಉಬ್ಬು ಚಿತ್ರ; (ಹಾಸ್ಯ ಪ್ರ.; His Excellency ಮೊ. ಗಳ ಮಾದರಿಯಲ್ಲಿ ಮಾಡಿದ ಅಣಕ ಒಕ್ಕಣೆ): His T.

Transpiérce ಟ್ರಾನ್ಸ್‌ಪಿಯರ್ಸ್ (ಕ್ರಿ. ಸಕ.) (ಛೇದಿಸಿಕೊಂಡು ಹೋಗುವಂತೆ) ಚುಚ್ಚು, ಇರಿ, ತಿವಿ.

Transpíre ಟ್ರಾನ್ಸ್‌ಪೈ(ಅ)ರ್ (ಕ್ರಿ.) (ಚರ್ಮ, ಶ್ವಾಸಕೋಶ—ಈ ವಿಸರ್ಜಕಾಂಗಗಳ ಮೂಲಕ) ಹೊರಬಿಡು, ವಿಸರ್ಜಿಸು; ಆವಿಯಾಗಿ, ಆವಿರೂಪದಲ್ಲಿ, —ಬಿಡು, ಹೋಗು; (ಬಹಳ ಸೂಕ್ಷ್ಮವಾಗಿ) ಬೆವರು, ಸ್ವೇದಿಸು; (ಅನಿಲದ ಅಥವಾ ದ್ರವದ ವಿಷಯದಲ್ಲಿ) (ಒತ್ತಡದ ಪ್ರಭಾವದಿಂದ) ಲೋಮನಾಳದಲ್ಲಿ ಹರಿ, ಪ್ರವಹಿಸು; (ಸ. ವಿ.) (ಸಸ್ಯದ ಅಥವಾ ಎಲೆಯ ವಿಷಯದಲ್ಲಿ) ಆವಿ ಬಿಡು; (ರೂಪ.) (ಗುಟ್ಟು, ಮೊ. ಗಳ ವಿಷಯದಲ್ಲಿ) ಬಯಲಿಗೆ ಬರು, ಹೊರಬೀಳು, ಗೊತ್ತಾಗು (Yesterday's quarrel may t.); (ಗ್ರಾಮ್ಯ ಪ್ರ.) ಆಗು, ನಡೆ, ಸಂಭವಿಸು (An event which transpired eighteen hundred years ago). **Transpírable** (ಗು.); **Transpirátion** —ಪಿ— (ನಾ.); **Transpíratory** —ಪೈರಟೊರಿ (ಟರಿ) (ಗು.)

Transplánt ಟ್ರಾನ್ಸ್‌ಪ್ಲಾಂಟ್ (ಕ್ರಿ. ಸಕ.) (ಸಸ್ಯವನ್ನು) (ಕಿತ್ತು) ಬೇರೆ ಕಡೆ ನೆಡು, ನಾಟಿಹಾಕು; ಒಂದು ಸ್ಥಳದಿಂದ ತೆಗೆದು ಮತ್ತೊಂದು ಸ್ಥಳದಲ್ಲಿ ಸ್ಥಾಪಿಸು: ಸ್ಥಳಾಂತರ ಮಾಡು (The policy of transplanting nations); (ಶಸ್ತ್ರಚಿಕಿತ್ಸೆ) (ಶರೀರದ ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಗದಿಂದ ಮತ್ತೊಂದು ಭಾಗಕ್ಕೆ, ಒಬ್ಬನ ಶರೀರದಿಂದ ಮತ್ತೊಬ್ಬನ ಶರೀರಕ್ಕೆ, ಜೀವಂತ ಅಂಗಾಂಶವನ್ನು) ಕಿತ್ತು ನೆಲೆಗೊಳಿಸು, ಅನ್ಯತ್ರ ಸ್ಥಾಪನೆಮಾಡು. **Transplántable** (ನಾ.); **Transplantátion** (ನಾ.); **Transplánter** (ನಾ.) (ಕ್ರಿಯಾರ್ಥಗಳಲ್ಲಿ); ನಾಟಿ ಹಾಕಲು ಸಸಿಗಳನ್ನು ಮಣ್ಣು ಬೇರು ಸಮೇತ ಎತ್ತುವ ಕೈಸಲಕರಣೆ, ಅಥವಾ ಮರಗಳನ್ನು ಹೀಗೆ ಎತ್ತುವ ಯಂತ್ರ: ಎಬ್ಬು—ಸನಿಕೆ, ಯಂತ್ರ; ನಾಟಿಗೆ, ನಾಟಿಯಂತ್ರ.

Transpóntine ಟ್ರಾನ್ಸ್‌ಪಾಂಟೈನ್ (ಗು.) ಲಂಡನಿನ ಥೇಮ್ಸ್ ನದಿಯ ತೆಂಕಲು ಭಾಗದ; (೧೯ನೆಯ ಶ. ಮಾ. ದಲ್ಲಿ ಆ ತೆಂಕಲು ಪ್ರಾಂತದಲ್ಲಿ ಬಳಕೆಯಲ್ಲಿದ್ದ ನಾಟಕಗಳ ಮಾದರಿಯಿಂದ): ಭಾವೋದ್ರೇಕದ, ಆವೇಶದ, ರೋಮಾಂಚಕ.

Transpórt ಟ್ರಾನ್ಸ್‌ಪೋ(ಅ)ರ್ಟ್ (ಕ್ರಿ. ಸಕ.) (ಮನುಷ್ಯರು, ಸಾಮಾನು, ಮೊ. ನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ) ಸಾಗಿಸು, ಒಯ್ಯು; (ಅಪರಾಧಿಯನ್ನು) ಶಿಕ್ಷೆಯ ನೆಲಸೆಗೆ ಸಾಗಿಸು, ಗಡೀಪಾರುಮಾಡು; (ಮು., ಭೂ. ಕೃ. ನಲ್ಲಿ) ಪರವಶಮಾಡು, ಮೈಮರಸು (Transported with joy ಆನಂದಪರವಶನಾಗಿ). **Transpórtable** (ಗು.) ಸಾಗಿಸಬಹುದಾದ [**Transportabílity** (ನಾ.)]; (ಅಪರಾಧಿಯ ಅಥವಾ ಅಪರಾಧದ ವಿಷಯದಲ್ಲಿ) ಗಡೀಪಾರು ಶಿಕ್ಷೆಯ. **Transportátion** (ನಾ.) ಸಾಗಣೆ, ವಾಹನ (ಸೌಕರ್ಯ); ಗಡೀಪಾರು. **Transpórter** (ನಾ.) ಸಾಗಿಸುವವನು, ಸಾಗಣೆ ಸಲಕರಣೆ, ವಾಹಕ. **Transpórtingly** (ಕ್ರಿ. ವಿ.) ಪರವಶವಾಗಿ.

Tránsport (ನಾ.) ಸಾಗಣೆ, ವಾಹನ (ಸೌಕರ್ಯ) (T. Workers ಸಾಗಣೆ ಕೆಲಸದವರ ಒಂದು ಸಂಘ); ಸೈನಿಕರು, ಸಾಮಾನು, ಮೊ. ನ್ನು ಸಾಗಿಸುವ ಹಡಗು: ಸಾಗಣೆ ಹಡಗು (= T. ship, vessel); ಗಡೀಪಾರು—ಅಪರಾಧಿ, ಖೈದಿ; ಉದ್ರೇಕ, ಆವೇಶ; ಪರವಶತೆ, ಮೈಮರವು [In a t. of rage ರೋಷಾವೇಶದಲ್ಲಿ. Was in transports (of joy) (ಆನಂದ)ಪರವಶನಾಗಿದ್ದನು]

Transpóse ಟ್ರಾನ್ಸ್‌ಪೋಸ್ (ಕ್ರಿ. ಸಕ.) (ವಸ್ತುಗಳನ್ನು ಪರಸ್ಪರ) ಸ್ಥಾನ, ಎಡೆ, —ಬದಲಿಸು; ಎಡೆಮಾರಿಸು; ಸ್ಥಳಾಂತರಿಸು; (ಬೀ. ಗ.) (ಪದವನ್ನು ಸಮೀಕರಣದ ಒಂದು ಕಡೆಯಿಂದ ಮತ್ತೊಂದು ಕಡೆಗೆ, ತಕ್ಕ ಚಿಹ್ನೆಯ ಬದಲಾವಣೆಯೊಡನೆ) ಪಾರ್ಶ್ವಾಂತರಮಾಡು, ಪಕ್ಕ ಬದಲಾಯಿಸು; (ವಾಕ್ಯದಲ್ಲಿಯ ಪದದ, ಪದಗಳ) ಸ್ಥಾನ, ಕ್ರಮ, —ಬದಲಾಯಿಸು, ಪಲ್ಲಟಿಮಾಡು; (ಸಂ.) ಬೇರೆ ಸ್ವರಪದ್ಧತಿಯಲ್ಲಿ—ಬರೆ, ನುಡಿಸು (Transposed from G to B. Transposing instrument ಲಿಖಿತ ಸ್ವರಗಳಿಗಿಂತ ಬೇರೆ ಸ್ಥಾಯಿಯ ಸ್ವರಗಳನ್ನು ನುಡಿಸುವ ವಾದ್ಯ: ಸ್ವರ, ಸ್ಥಾಯಿ, —ಪಲ್ಲಟ ವಾದ್ಯ. Transposing piano ಸ್ವರಪಲ್ಲಟವನ್ನು ಯಾಂತ್ರಿಕವಾಗಿ ಉಂಟುಮಾಡಬಹುದಾದ ಪಿಯಾನೊ: ಸ್ವರಪಲ್ಲಟ ಪಿಯಾನೊ). **Transpósal** (ನಾ.) ಸ್ಥಾನ, ಸ್ಥಳ, —ಬದಲಾವಣೆ, ಪಲ್ಲಟ. **Transpóser** (ನಾ.); **Transposítion** —ಪೊಸಿ— (ನಾ.); **Transpositional** (ಗು.); **Transpósitive** —ಪಾ— (ಗು.)

Trans-ship ಟ್ರಾನ್ಸ್‌ಷಿಪ್, **Tran-** ಟ್ರಾನ್— (ಕ್ರಿ. ಸಕ.) ಹಡಗಿನಿಂದ ಹಡಗಿಗೆ (ಅಥವಾ ಒಂದು ರೈಲಿನಿಂದ ಮತ್ತೊಂದು ರೈಲಿಗೆ) ಸಾಗಿಸು, ಬದಲಾಯಿಸು; ಹಡಗು, ಗಾಡಿ, ರೈಲು, —ಬದಲಾಯಿಸು. **Trans-shípment** (ನಾ.)

Transubstántiate ಟ್ರಾನ್‌ಸಬ್‌ಸ್ಟ್ಯಾನ್ಷಿಯೇಟ್ (ಕ್ರಿ. ಸಕ.) ಒಂದು ಪದಾರ್ಥವನ್ನು ಮತ್ತೊಂದು ಪದಾರ್ಥವಾಗಿ ಮಾರ್ಪಡಿಸು; ವಸ್ತ್ವಂತರಿಸು, ಪದಾರ್ಥ ಪರಿವರ್ತನೆ ಮಾಡು. **Transubstantiátion** (ನಾ.) ವಸ್ತ್ವಂತರೀಕರಣ, ಪದಾರ್ಥ ಪರಿವರ್ತನೆ, (ಕ್ರೈಸ್ತ ದೇವ. ಶಾ.) ಪ್ರಭುಭೋಜನ ಸಂಸ್ಕಾರದಲ್ಲಿಯ ರೊಟ್ಟಿ ಮದ್ಯಗಳು ಸಂಪೂರ್ಣವಾಗಿ ಕ್ರಿಸ್ತನ ದೇಹ ರಕ್ತಗಳಾಗಿ ವಸ್ತುತಃ ಪರಿವರ್ತನೆಯಾಗುವುದು: ಸತ್ತ್ವ ಪರಿವರ್ತನ (ವಾದ) (Consubstantial ಕೆಳಗೆ Consubstantiation ನೋಡಿ)

Transúde ಟ್ರಾನ್ಸ್ಯೂಡ್ (ಕ್ರಿ. ಅಕ.) (ಪ್ರವಾಹಿಗಳ ವಿಷಯದಲ್ಲಿ; ತೆಳು ಪೊರೆ, ಸೂಕ್ಷ್ಮ ರಂಧ್ರಗಳು, ಮೊ. ಗಳ ಮೂಲಕ) (ಬೆವರಿನಂತೆ) ಒಸರು, ಜಿನುಗು, ಸ್ರವಿಸು. **Transudátion** (ನಾ.); **Transúdatory** (ಗು.)

Transvérse ಟ್ರಾನ್ಸ್(ಸ್)ವರ್ಸ್ (ಗು., ನಾ.) ಅಡ್ಡ(ಡ್ಡ)ನಾದ, ಅಡ್ಡ [T. artery, ligament ಅಡ್ಡ—ಅಪಧಮನಿ, ಅಸ್ಥಿರಜ್ಜು. T. magnet ಧ್ರುವಗಳು (ತುದಿಯಲ್ಲಿಲ್ಲದೆ) ಪಕ್ಕಗಳಲ್ಲಿರುವ ಅಯಸ್ಕಾಂತ. T. section ಅಡ್ಡಕೊಯ್ತ]. (ನಾ.) ಅಡ್ಡ ಸ್ನಾಯು. **Transvérsal** (ಗು., ನಾ.) (ರೇಖೆಯ ವಿಷಯದಲ್ಲಿ) ಒಂದು ರೇಖಾ ವ್ಯೂಹವನ್ನು ಕತ್ತರಿಸುವ (ರೇಖೆ); ಛೇದಕ (ರೇಖೆ); (ಅಂ. ರ. ಶಾ.) ಅಡ್ಡ—ಸ್ನಾಯು, ರಚನೆ [= **Transversális** (L) (ಬ. ವ. -les), **Transvérsus** (L) (ಬ. ವ. -si —ಸ್ಸೈ)]. **Transversálity** (ನಾ.) ಅಡ್ಡತನ, ಛೇದಕತ್ವ. **Transvérsally, Transvérsely** (ಕ್ರಿ. ವಿ.) ಅಡ್ಡ(ಡ್ಡ)ಲಾಗಿ, ಛೇದಕವಾಗಿ. **Transvérso-** (ಸ. ಪೂ. ಪ.) ಅಡ್ಡ—.

Tránter ಟ್ರಾಂಟರ್ (ನಾ.) (ಪ್ರಾಂ. ಪ್ರ.) ಹೊರೆ ಬಂಡಿಯವನು, ಸಾಮಾನು ಬಂಡಿಯವನು; ತಿರುಗು ವ್ಯಾಪಾರಿ; ಕೋರಿಸೆಟ್ಟಿ.

Trap[1] ಟ್ರ್ಯಾಪ್ (ನಾ., ಕ್ರಿ.) (ಪ್ರಾಣಿಗಳನ್ನು ಉಪಾಯದಿಂದ ಹಿಡಿಯುವ) ಹಳ್ಳ, ಕಪ್ಪು, ಬೋನು, ಬಲೆ, ಪಾಶ (ರೂಪ. ಸಹ) [Fly[1]-t., Rat[1]-t. (ಆಯಾ ಪದ ನೋಡಿ). (Walked straight into the t. ನೇರವಾಗಿ ಬಲೆಗೆ ಬಿದ್ದನು, ಮೋಸಕ್ಕೊಳಗಾದನು. Is this a t.? ಇದು ನನ್ನನ್ನು ಸಿಕ್ಕಿಸಿಕೊಳ್ಳುವ ಉಪಾಯವೊ? ನನಗೆ ಒಡ್ಡಿದ ಬಲೆಯೊ?)]. ಬಂದೂಕು ಹೊಡೆಯಲು ಗುರಿಯಾಗಿ ಹಕ್ಕಿ, ಚೆಂಡು, ಮೊ. ನ್ನು ಆಕಾಶಕ್ಕೆ ಥಟ್ಟನೆ ಹಾರಿಸುವ ಯಂತ್ರ: ಗುರಿಸಿಡಿ, ಗುರಿಕವಣೆ, ಲಕ್ಷ್ಯ ಕ್ಷೇಪಕ; ಚಿಣ್ಣಿ ಚೆಂಡಾಟದಲ್ಲಿ ಚೆಂಡನ್ನು ಚಿಮ್ಮಲು ಉಪಯೋಗಿಸುವ ಮರದ ಚಿಣ್ಣಿ: ಚಿಮ್ಮು ಚಿಣ್ಣಿ, ಚಿಮ್ಮುಗೆ (T.-ball ಚಿಮ್ಮು ಚಿಣ್ಣಿಯ ಒಂದು ತುದಿಯಲ್ಲಿ ಚೆಂಡನ್ನಿಟ್ಟು ಮತ್ತೊಂದು ತುದಿಯನ್ನು ದಾಂಡಿನಿಂದ ಹೊಡೆದು ಚೆಂಡು ಹಾರಿಸಿ, ಹಾಗೆ ಹಾರಿದ ಚೆಂಡನ್ನು ದಾಂಡಿನಿಂದ ಹೊಡೆದು ಆಡುವ ಆಟ: ಚಿಮ್ಮು ಚೆಂಡಾಟ, ಚಿಣ್ಣಿ ಚೆಂಡಾಟ); ಕೊಳವೆಯಿಂದ ಕೆಟ್ಟ ಅನಿಲ ಹೊರಬರದಂತೆ ದ್ರವವನ್ನು ಅಡಚಾಗಿ ಶೇಖರಿಸಿಡಲು ಮಾಡಿರುವ U ಮೊ. ಆಕಾರದ ಕೊಂಕು: ದುರ್ವಾಯು—ತಡೆ, ಅಡಚು; ಹಲವು ಬಗೆಯ ಸ್ಪ್ರಿಂಗ್ ಬಂಡಿ (ಉದಾ., Dog-cart ಬಂಡಿ); (ಅಸಂ.) ಪೋಲೀಸಿನವನು; = T. door; [**T.-cellar** ರಂಗಸ್ಥಳದ ಕೆಳಭಾಗದ ಕೋಣೆ: ಕೆಳ, ನೆಲ, —ಮಾಳಿಗೆ. **Trápdoor** ನೆಲದಲ್ಲಿಯ ಅಥವಾ ಮಾಳಿಗೆಯಲ್ಲಿಯ ಬಾಗಿಲು: ಮಾಳಿಗೆ, ನೆಲ, —ಬಾಗಿಲು (T.-door spider ತನ್ನ ಗೂಡಿನ ಮೇಲ್ಭಾಗದಲ್ಲಿ ಕೀಲುಕವಾಟದ ಬಾಗಿಲನ್ನು ಮಾಡಿಕೊಳ್ಳುವ ಜೇಡ: ಕೀಲು ಕವಾಟ ಜೇಡ); (ರೂಪ.) (ಬಟ್ಟೆ, ಮೊ. ಗಳಲ್ಲಿ) L ಆಕಾರದ ಹರುಕು, ಕವಾಟ ಹರುಕು]. (ಕ್ರಿ.) ಹಳ್ಳಕ್ಕೆ, ಬೋನಿಗೆ, —ಕೆಡವು, ಬೀಳಿಸು (ರೂಪ. ಸಹ); (ರಂಗಸ್ಥಳದಲ್ಲಿ) ಕೆಳ ಮಾಳಿಗೆ ಮಾಡು; (ಪೊದೆ, ಮೊ. ಗಳಲ್ಲಿ) ಬೋನು—ಇಡು, ಒಡ್ಡು; ದುರ್ವಾಯು ತಡೆಯಲ್ಲಿ—(ಅನಿಲವನ್ನು) ಸಿಕ್ಕಿಸು, ತಡೆಗಟ್ಟು; (ಚರಂಡಿಯಲ್ಲಿ) ದುರ್ವಾಯು ತಡೆಯನ್ನು—ಇಡು, ಏರ್ಪಡಿಸು; (ಆವಿಯ ವಿಷಯದಲ್ಲಿ) (ನಳಿಕೆ, ಮೊ. ರಲ್ಲಿ) ಸಿಕ್ಕಿಕೊ, ತಡೆಹೊಂದು. **Trápper** (ನಾ.) (ಮು., ತುಪ್ಪುಳು ಚರ್ಮಕ್ಕಾಗಿ) ಪ್ರಾಣಿಗಳನ್ನು ಹಳ್ಳಕ್ಕೆ, ಬೋನಿಗೆ, —ಕೆಡವುವವನು: ಬೋನಿಗ. ಗಣಿಗಳಲ್ಲಿ ವಾಯು ಕವಾಟಗಳನ್ನು ನೋಡಿಕೊಳ್ಳುವವನು: ಕವಾಟ ಪಾಲಕ, ಕವಾಟಕ. **Tráppy** (ಗು.) (ಬಳ. ಮಾ.) (ಮು., ವಸ್ತುಗಳ ವಿಷಯದಲ್ಲಿ) ಮೋಸದ, ತಂತ್ರದ. **Tráppiness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Trap[2] ಟ್ರ್ಯಾಪ್ (ನಾ.) ಸ್ತಂಭ ರಚನೆಯ ಕಪ್ಪು ಬಣ್ಣದ ಜ್ವಾಲಾಮುಖಿ ಶಿಲೆ ; (ಬ. ವ. ದಲ್ಲಿ) (ಒಯ್ಯಲಾಗುವ) ಅಟ್ಟಣಿಯೇಣಿ. **Tráppean** ಟ್ರ್ಯಾಪಿಅನ್ (ಗು.) ಸ್ತಂಭರಚನ ಶಿಲೆಯ. **Tráppoid** (ಗು.) —ಶಿಲೆಯಂಥ. **Tráppose** (ಗು.) —ಶಿಲೆಯ (ಸ್ವಭಾವದ)

Trap[3] ಟ್ರ್ಯಾಪ್ (ಕ್ರಿ. ಸಕ., ನಾ.) (ಕುದುರೆಗೆ) ಅಲಂಕಾರದ ಸಜ್ಜು, ಗವುಸು, —ತೊಡಿಸು, ಹಾಕು ; ಮುಸ್ತೈದುಮಾಡು, ಅಲಂಕರಿಸು. (ನಾ., ಬ. ವ. ದಲ್ಲಿ ; ಒಬ್ಬನಿಗೆ ಸೇರಿದ) ಸಾಮಾನು ಸರಂಜಾಮು, ಗಂಟುಮೂಟೆ (Pack up your traps). **Tráppings** (ನಾ., ಬ. ವ.) ಕುದುರೆಯ ಸಜ್ಜು (ಮು., ಅಲಂಕಾರದ್ದು) ; (ರೂಪ.) (ಒಂದು ಅಧಿಕಾರ, ಪದವಿ, ಮೊ. ಗಳಿಗೆ ತಕ್ಕ) ವೇಷಭೂಷಣ, ಅಲಂಕಾರ ಸಜ್ಜು.

Trapán = Trepan[2].

Trapes ಟ್ರೇಪ್ಸ್ (ನಾ., ಕ್ರಿ. ಅಕ.) ಕೊಳಕಿ, ಹೊಲಸಿತಿ. (ಕ್ರಿ.) (ಮು., ಹೆಂಗಸಿನ ವಿಷಯದಲ್ಲಿ) ಲಂಗ (ಅಥವಾ ಸೀರೆ) ಎಳೆದಾಡಿ ಕೊಂಡು—ನಡೆ, ಹೋಗು ; ಅಲೆ, ತಿರಿ.

Trapéze ಟ್ರಪೀಸ್ (ನಾ.) ಉಯ್ಯಾಲೆಯಾಡಲು ಅನುಕೂಲಿಸುವಂತೆ ಎರಡು ತುದಿಗಳಲ್ಲೂ ಹಗ್ಗಗಳಿಂದ ತೂಗಕಟ್ಟಿರುವ ದಂಡ : ಉಯ್ಯಾಲೆ, ಜೋಕಾಲೆ, —ದಂಡ ; = Trapezium. **Trapéziform** (ಗು.) ವಿಷಮ ಚತುರಸ್ರಾಕಾರದ. **Trapézium** ಟ್ರಪೀಸಿಯಂ (ನಾ.) ಯಾವ ಎರಡು ಭುಜಗಳೂ ಸಮಾನಾಂತರವಾಗಿಲ್ಲದ, ಅಥವಾ ಎರಡು ಭುಜಗಳು ಮಾತ್ರ ಸಮಾನಾಂತರವಾಗಿರುವ, ಚತುರ್ಭುಜ: ವಿಷಮ ಚತುರಸ್ರ, ವಿಷಮ ಸಮಾನಾಂತರ ಚತುರ್ಭುಜ. (ಅಂ. ರ. ಶಾ.) ಈ ಆಕಾರದ ಮಣಿಕಟ್ಟಿನ ಎಲುಬು. **Trápezoid** ಟ್ರ್ಯಾಪಿ(ಟ್ರಪೀ)ಜ಼ಾಯ್ಡ್ (ನಾ., ಗು.) = Trapezium. (ಗು.) ವಿಷಮ ಸಮಾನಾಂತರ ಚತುರ್ಭುಜಾಕಾರದ. **Trapezóidal** (ಗು.)

Trapéziform, Trapézium, Trápezoid, etc. Trapeze ನೋಡಿ.

Tráppean, Tráppoid, Tráppose. Trap[2] ನೋಡಿ.

Trápper. Trap[1] ನೋಡಿ.

Tráppings. Trap[3] ನೋಡಿ.

Tráppist ಟ್ರ್ಯಾಪಿಸ್ಟ್ (ನಾ.) ನಾರ್ಮಂಡಿಯಲ್ಲಿಯ ಮೌನವ್ರತ ಪ್ರಧಾನವಾದ ಒಂದು ಸಂನ್ಯಾಸಿ ಮಠದ ಸಂನ್ಯಾಸಿ : ಟ್ರ್ಯಾಪಿಸ್ಟ್ ಸಂನ್ಯಾಸಿ, ಮೌನ ಸಂನ್ಯಾಸಿ. **Tráppistine** —ಟಿ(ಟೈ)ನ್ (ನಾ.) ಟ್ರ್ಯಾಪಿಸ್ಟ್ ಸಂನ್ಯಾಸಿಗಳು ತಯಾರಿಸಿದ ಒಂದು ಮದ್ಯ ; ಮೌನ ಸಂನ್ಯಾಸಿನಿ.

Tráppy, etc. Trap[1] ನೋಡಿ.

Trash ಟ್ರ್ಯಾಷ್ (ನಾ., ಕ್ರಿ. ಸಕ.) ಕೆಲಸಕ್ಕೆ ಬಾರದ್ದು, ಕಸ, ಕಚಡ ; (ಸವರಿದ ಪೊದೆಯ, ಮರದ) ಚೂರುಪಾರು, ಕಡ್ಡಿಪುಳ್ಳೆಗಳು, ತರಗು ಪರಗು ; (ಜಲ್ಲೆ ಕತ್ತರಿಸಿಕೊಂಡು ಕಿತ್ತುಹಾಕಿದ) ಕಬ್ಬಿನ ಗರಿ, ಸೋಗೆ ; (ರಸ ಹಿಂಡಿ ಉಳಿದ) ಕಬ್ಬಿನ ಹಿಪ್ಪೆ ; [(ವೆಸ್ಟ್ ಇಂಡೀಸಿನಲ್ಲಿ) : Field t. ಒಣಗಿದ ಸೋಗೆ, ತೊಂಡೆ, ಮೊ. ವು ; Cane t. ಕಬ್ಬಿನ ಹಿಪ್ಪೆ. T.-house (ಕಬ್ಬಿನ ಗದ್ದೆಯಲ್ಲಿ) ಹಿಪ್ಪೆ ಅಡಕುವ ಮನೆ, ಹಿಪ್ಪೆಮನೆ] ; ಕಳಪೆ(ಯ—ಪದಾರ್ಥ, ಕೆಲಸ) ; ಕೆಲಸಕ್ಕೆ ಬಾರದ—ಮಾತು, ಲೇಖನ; ಅಸಂಬದ್ಧ ಪ್ರಲಾಪ ; ಕಸ. ನೀರು ಬೆರಸಿದ, ಚೂರು ಮಾಡಿದ ನೀರ್ಗಲ್ಲು (= T.-ice); ತುಂಟ ದನಗಳ ಅಥವಾ ನಾಯಿಗಳ ಕೊರಳಿಗೆ ನೇತುಗಟ್ಟಿರುವ ತುಂಡು : ತೊಡರು. (ಕ್ರಿ.) ಕಬ್ಬಿನ ಸೋಗೆ —ತೆಗೆದುಹಾಕು, ಸವರು. **Tráshery** (ನಾ.) ; **Tráshily** (ಕ್ರಿ. ವಿ.) ; **Tráshiness** (ನಾ.) ; **Tráshy** (ಗು.)

Trass ಟ್ರಾಸ್, **Tárras** ಟ್ಯಾರಸ್ (ನಾ.) (ಹಿಂದೆ ಸಿಮೆಂಟ್ ಪದಾರ್ಥವಾಗಿ ಉಪಯೋಗಿಸುತ್ತಿದ್ದ) ಒಂದು ಜ್ವಾಲಾಮುಖಿ ಮಣ್ಣು.

Traúma ಟ್ರೌಮ (ನಾ.) ಗಾಯ, ಪೆಟ್ಟು(—ಗಳಿಂದಾದ ರೋಗಾವಸ್ಥೆ). **Traumátic** —ಮ್ಯಾ— (ಗು., ನಾ.) ಗಾಯದ (ಔಷಧ). **Traúmatism** —ಮ— (ನಾ.) ಗಾಯದಿಂದಾದ ರೋಗಸ್ಥಿತಿ.

Trávail ಟ್ರ್ಯಾವೆಯ್ಲ್ (ನಾ., ಕ್ರಿ. ಅಕ.) (ಪ್ರಾಚೀ. ಪ್ರ.) ಹೆರಿಗೆಯ ನೋವು, ಪ್ರಸವವೇದನೆ (—ಪಡು, ಅನುಭವಿಸು) ; ಕ್ಲೇಶ, ತ್ರಾಸ, ಪ್ರಯಾಸ(—ಪಡು)

Trável ಟ್ರ್ಯಾವೆಲ್, —ವ್ಲ್ (ಕ್ರಿ., ನಾ.) (ಮು., ದೀರ್ಘವಾದ, ದೂರದೇಶದ) ಪ್ರಯಾಣ(—ಮಾಡು, ಹೋಗು) ; ದೇಶಾಟನೆ, ದೇಶಸಂಚಾರ (—ಮಾಡು, ಹೋಗು) (Travelled France from end to end ಫ್ರಾನ್ಸ್ ದೇಶವನ್ನು ಒಂದು ಕೊನೆಯಿಂದ ಮತ್ತೊಂದು ಕೊನೆಗೆ ಪರ್ಯಟನ ಮಾಡಿದೆನು. Is going to publish his travels ಅವನು ತನ್ನ ದೇಶಸಂಚಾರದ ಅನುಭವಗಳನ್ನು ಪ್ರಕಟಿಸುವುದರಲ್ಲಿದ್ದಾನೆ) ; ದೇಶ—ಸುತ್ತು, ತಿರುಗು (Spent his life in travelling) ; ತಿರುಗು ದಲ್ಲಾಳಿ ಕೆಲಸಮಾಡು (*For* firm, *in* commodity ; Mr. Bingle travelled in whisky) ; (ಯಂತ್ರದ ಅಥವಾ ಅದರ ಭಾಗದ ವಿಷಯದಲ್ಲಿ) (ಕಂಬಿ, ಮೊ. ಗಳ ಮೇಲೆ, ಗಾಡಿ, ಮೊ. ಗಳಲ್ಲಿ) ಓಡಾಡು, ಚಲಿಸು ; (ಯಂತ್ರ ಭಾಗದ) ಓಡಾಟ, ಚಲನೆ(ಯ ರೀತಿ, ವೇಗ, ವಿಸ್ತಾರ, ವ್ಯಾಪ್ತಿ) (Has extended, improved, the t. of the valves) ; (ಕ್ರಮವಾಗಿ ವಿಷಯದಿಂದ ವಿಷಯಕ್ಕೆ) ಹೋಗು, ಚಲಿಸು, ಸಂಚರಿಸು (His eye travelled over the scene ಆತನ ಕಣ್ಣು ದೃಶ್ಯದ ಆದ್ಯಂತ ಹರಿಯಿತು. Mind travels over the events of the day ದಿನದ ಘಟನೆಗಳನ್ನು ಮನಸ್ಸು ವಿಮರ್ಶಿಸುತ್ತದೆ, ಒಂದೊಂದಾಗಿ ನೆನಸಿಕೊಳ್ಳುತ್ತದೆ) ; (ಜಿಂಕೆ, ಮೊ. ಗಳ ವಿಷಯದಲ್ಲಿ) ಮೇಯುತ್ತ (ಮುಂದಕ್ಕೆ) ಹೋಗು ; ನಡೆ, ಹೋಗು, ಸಾಗು, ಚಲಿಸು, ಸಂಚರಿಸು (Horse travels slowly. Light travels faster than sound) ; (ದನ, ಮೊ. ನ್ನು) ಮೇವಿಗೆ ಹೊಡೆದುಕೊಂಡು ಹೋಗು (It would be advisable not to t. any stock at present ಸದ್ಯಕ್ಕೆ ದನಗಳನ್ನು ಮೇವಿಗೆ ಹೊಡೆದುಕೊಂಡು ಹೋಗದಿರುವುದು ಉತ್ತಮ) ; (ಭೂ. ಕೃ. ನಲ್ಲಿ) ದೇಶಾಟನದಿಂದ ಅನುಭವಪಡೆದ, ದೇಶ ಸುತ್ತಿರುವ (Is a travelled man). T. out of the record ವಿಷಯ ಬಿಟ್ಟು ಹೋಗು, ಅಲೆ. Travelling-cap, -dress ಪ್ರಯಾಣದ ಟೋಪಿ, ಉಡುಪು. T.-soiled, -stained (ವ್ಯಕ್ತಿ, ಆತನ ಉಡುಪು, ಮೊ. ಗಳ ವಿಷಯದಲ್ಲಿ) ಪ್ರಯಾಣದಿಂದ, ದೇಶಾಟನೆಯಿಂದ,—ಕೊಳೆಯಾದ. **Tráveller** (ನಾ.) (ಕ್ರಿಯಾರ್ಥಗಳಲ್ಲಿ) ; ಹಲವು ಬಗೆಯ ಚಲ ಯಂತ್ರ (ಮು., ಮೇಲುಗಡೆ ಕಂಬಿಗಳಮೇಲೆ ಚಲಿಸುವ ಎತ್ತು ಯಂತ್ರ); = Commercial t. (Commerce ಕೆಳಗೆ Commercial ನೋಡಿ). Bona fide t. ಮೂರು ಮೈಲಿ ನಡೆದುಬಂದದ್ದರಿಂದ ಭಾನುವಾರವಾದರೂ ಉಪಾಹಾರ ನೀಡಬೇಕೆಂದು ತಿಂಡಿಯಂಗಡಿಯಲ್ಲಿ ಕೇಳುವ ಹಕ್ಕುಳ್ಳ ಪ್ರಯಾಣಿಕ : ವಾಸ್ತವ ಪ್ರಯಾಣಿಕ. Tip person the t. ಒಬ್ಬನನ್ನು ಮೋಸಗೊಳಿಸು, ವಿಮಾರಿಸು ; ಒಬ್ಬನಿಗೆ ಸುಳ್ಳು ಹೇಳು. T.'s tale ಸುಳ್ಳು, ಕಟ್ಟುಕಥೆ (ಎಂದು ಎಣಿಸಬಹುದಾದ್ದು). T.'s-joy ಒಂದು ಬಗೆಯ ಬಳ್ಳಿ. **Trávelogue** ಟ್ರ್ಯಾವೆಲಾ(ಲೋ)ಗ್ (ನಾ.) (ಅನೇಕ ವೇಳೆ, ದೀಪಚಿತ್ರ ಸಮೇತ ಮಾಡುವ) ದೇಶಾಟನೆಯ ಮೇಲಿನ ಉಪನ್ಯಾಸ, ಪ್ರವಾಸ ಕಥನ.

Tráverse ಟ್ರ್ಯಾವರ್ಸ್ (ಗು., ನಾ., ಕ್ರಿ.) (ಪ್ರಾಚೀ. ಪ್ರ.) = Transverse. (ವಂಶಲಾಂಛನ ವಿದ್ಯೆ) ಗುರಾಣಿಯನ್ನು ಅಡ್ಡ ಹಾಯ್ದಿರುವ; (T. sailing ಅಡ್ಡಡ್ಡ ನೌಕಾ ಚಲನೆ). (ನಾ.) ಮತ್ತೊಂದನ್ನು ಅಡ್ಡಹಾಯುವ ಕಟ್ಟಡ(ಭಾಗ) : ಅಡ್ಡ—ಕಟ್ಟಡ, ರಚನೆ ; (ಕೋಟೆ ಶಿಲ್ಪ) (ಮರೆದಾರಿ, ಮೊ. ಗಳ ಕಾಪಿಗಾಗಿ ಹಾಕಿರುವ) ಮಣ್ಣಿನ ಕೈಪಿಡಿ ಗೋಡೆ ; ಅಡ್ಡ—ಗೋಡೆ, ಕಟ್ಟೆ ; ಸಾಲು ಹೊಡೆತಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಕಂದಕಗಳಲ್ಲಿ ಮಾಡಿರುವ ಇಮ್ಮಡಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥವಾ ನಾಲ್ಕು ಡಿಯ ಸಮಕೋನ ರಚನೆ (⌐⌐, ⌐⌐ ಆಕಾರದ್ದು); (ಚರ್ಚು, ಮೊ. ಗಳಲ್ಲಿ) ಅಡ್ಡಸಾಲಿನ ಪೀಠ ಪಂಕ್ತಿ; (ಜ್ಯಾ.) ಛೇದಕ (ರೇಖೆ); (ನಾವೆ) (ಎದುರುಗಾಳಿ, ಅಲೆ, ಮೊ. ಗಳಿಂದ ಹಡಗು ಅನುಸರಿಸುವ) ಅಡ್ಡಡ್ಡ ದಾರಿ, ವಕ್ರಪಥ (Work, solve, a t. ಅಡ್ಡಡ್ಡ ದಾರಿಯಲ್ಲಿ ಹೋದ ಲೆಕ್ಕದಿಂದ ಒಟ್ಟು ನೇರ ದೂರವನ್ನು ಕಂಡುಹಿಡಿ, ಗುಣಿಸು); (ಯಂತ್ರ ಭಾಗದ) ಅಡ್ಡ ಚಲನೆ; (ಬೆಟ್ಟ ಹತ್ತುವಲ್ಲಿ) (ಪ್ರಪಾತವನ್ನು ನೇರವಾಗಿ ಹತ್ತಿಳಿಯುವ ಕಷ್ಟವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಅನುಕೂಲವಾದ ಎಡೆಯಲ್ಲಿ ಮಾಡುವ) ಅಡ್ಡ ನಡಗೆ, ಅಡ್ಡಡ್ಡ ದಾರಿ (ಮಾಡಿರುವ ಎಡೆ); (ನ್ಯಾ. ಶಾ.) (ಎದುರು ಕಕ್ಷಿ ವಾಸ್ತವವೆಂದು ಹೇಳಿದ ಸಂಗತಿಯನ್ನು) ಇಲ್ಲವೆನ್ನುವುದು, ನಿರಾಕರಣೆ. (ಪ್ರಾಚೀ. ಪ್ರ.) ಅಡಚಣೆಯ, ಪ್ರತಿಕೂಲ, —ಪರಿಸ್ಥಿತಿ, ಸಂದರ್ಭ. ಫಿರಂಗಿಯನ್ನು ನಿರ್ದಿಷ್ಟ ದಿಕ್ಕಿಗೆ ತಿರುಗಿಸುವುದು; [T.-table ನೌಕೆಯ ಅಡ್ಡದಾರಿಯ ಲೆಕ್ಕದಿಂದ ನೇರ ದೂರವನ್ನು ಗುಣಿಸುವ ಕೋಷ್ಟಕ: ವಕ್ರ (ಮಾರ್ಗ) ಕೋಷ್ಟಕ; (ಎಂಜಿನು, ಮೊ. ನ್ನು ಒಂದು ಕಂಬಿದಾರಿಯಿಂದ ಸಮಾನಾಂತರದ ಮತ್ತೊಂದು ಕಂಬಿದಾರಿಗೆ ಬದಲಾಯಿಸಲು ಅನುಕೂಲಿಸುವ) ಗಾಲಿಗಳುಳ್ಳ ಚಲವೇದಿಕೆ, ಹೊರಳು ಜಗಲಿ]. (ಕ್ರಿ.) ಅಡ್ಡಹಾಯಿ, ಹಾಯ್ದಿರು, ಹಾಯ್ದುಹೋಗು, ಪ್ರಯಾಣಮಾಡು, ಸಂಚರಿಸು [Must t. a vast extent of country. District traversed by canals ನಾಲೆಗಳು (ಅಡ್ಡ)ಹಾಯ್ದಿರುವ ಜಿಲ್ಲೆ. Wall traversed by beam ತೊಲೆ ಅಡ್ಡಹಾಯ್ದಿರುವ ಗೋಡೆ]; (ಬೆಟ್ಟ ಹತ್ತುವಲ್ಲಿ) ಅಡ್ಡಡ್ಡ ದಾರಿಯಲ್ಲಿ ಹೋಗು; (ರೂಪ.)(ವಿಷಯವನ್ನು) ಆದ್ಯಂತವಾಗಿ, ಸಮಗ್ರವಾಗಿ, —ಪರ್ಯಾಲೋಚಿಸು, ಚರ್ಚಿಸು; (ಫಿರಂಗಿಯನ್ನು ನಿರ್ದಿಷ್ಟ ದಿಕ್ಕಿಗೆ) ತಿರುಗಿಸು; (ಮರವನ್ನು ಎಳೆಗೆ) ಅಡ್ಡನಾಗಿ ತೋಪಡ ಹಿಡಿ; (ನ್ಯಾ. ಶಾ.) (ಎದುರಾಳಿ ಹೇಳಿದ್ದನ್ನು) ಇಲ್ಲವೆನ್ನು, ನಿರಾಕರಿಸು; (ಯೋಜನೆ, ಅಭಿಪ್ರಾಯ, ಮೊ. ನ್ನು) ಪ್ರತಿಘಟಿಸು, ಮುರಿ, ತಡೆ; ವಿರೋಧವಾಗಿರು, ಪ್ರತಿಕೂಲವಾಗಿರು; (ದಿಕ್ಸೂಚಿಯ ಸೂಜಿ, ಮೊ. ಗಳ ವಿಷಯದಲ್ಲಿ) ತಿರುಗಣೆಯಮೇಲೆ (ಹೇಗೊ ಹಾಗೆ) ತಿರುಗು, ಚಲಿಸು; (ಕುದುರೆಯ ವಿಷಯದಲ್ಲಿ) ಅಡ್ಡಡ್ಡವಾಗಿ ನಡೆ. [Traversing pulley (ಆಸರೆಯ ಹಗ್ಗ, ಮೊ. ಗಳ ಮೇಲೆ) ಓಡಾಡುವ, ಚಲಿಸುವ, —ಕಪ್ಪಿ]. **Tráverser** (ನಾ.) (ಕ್ರಿಯಾರ್ಥಗಳಲ್ಲಿ); ರೈಲ್ವೆಯ ಹೊರಳು ಜಗಲಿ.

Trávertin(e) ಟ್ರ್ಯಾವರ್ಟಿನ್ (ನಾ.) ಇಟಲಿಯಲ್ಲಿ ಕಟ್ಟಡಕ್ಕೆ ಉಪಯೋಗಿಸುವ ಒಂದು ಬಗೆಯ ಬಿಳಿಯ ಸುಣ್ಣಗಲ್ಲು.

Trávesty ಟ್ರ್ಯಾವೆಸ್ಟಿ (ಕ್ರಿ. ಸಕ., ನಾ.) (ಒಂದು ವಿಷಯವನ್ನು ಕುರಿತು ಉದ್ದೇಶದಿಂದಲೂ ಅಲ್ಲವೂ) ವಿಕಟ ವಿಕಾರ ಮಾಡು, ಹಾಸ್ಯಾಸ್ಪದ ಮಾಡು, ವೈಪರೀತ್ಯಕ್ಕೆ ತಿರುಗಿಸು, ನಗೆಗೇಡುಮಾಡು, ನಗುಪಾಟಲು ಮಾಡು. (ವ್ಯಕ್ತಿ, ವಸ್ತು, ಮೊ. ಗಳ ವಿಷಯದಲ್ಲಿ; ಮು., ಸಾಹಿತ್ಯ ಕೃತಿ) (ಮತ್ತೊಂದರ) ವಿಕಟಾನುಕರಣ, ಹಾಸ್ಯಾನುಕರಣ, ವೈಪರೀತ್ಯ, ತರಕೆಳಕು, —ಆಗಿರು. (ನಾ.) ವೈಪರೀತ್ಯ(ವಾಗಿ ತೋರಿಸುವುದು), ವಿಕಟ ವಿಕಾರ.

Trawl ಟ್ರಾರ್ಲ್ (ಕ್ರಿ., ನಾ.) (ಎಳೆಬಲೆಯನ್ನು) ಎಳೆ; ಎಳೆಬಲೆಯಲ್ಲಿ ಮೀನು ಹಿಡಿ [**Tráwling** (ನಾ.)]. (ನಾ.) ದೋಣಿಗೆ ಕಟ್ಟಿ ನೀರಿನ ತಳದಲ್ಲಿ ಎಳೆಯುವ, ದೂಲ, ಮೊ. ಗಳಿಂದ ಬಾಯನ್ನು ತೆರೆದಿಟ್ಟಿರುವ, ಚೀಲದಾಕಾರದ ದೊಡ್ಡ ಬಲೆ: ಎಳೆಬಲೆ (=T.-net) (Beam-t. ದೂಲ ಬಾಯಿಯ ಎಳೆಬಲೆ); (ಅಮೆ. ಸಂ.) ಎರೆ ಕಟ್ಟಿದ ಕೊಕ್ಕೆಯ ಹುರಿಗಳಿಗೆ ಆಸರೆಯಾಗಿ, ತೇಲ್ಬೆ ಕಟ್ಟಿ ನೀರಿನಲ್ಲಿ ಬಿಟ್ಟಿರುವ, ಮೀನು ಹಿಡಿಯುವ ಉದ್ದವಾದ ಹಗ್ಗ: ಗಾಳದ ಆಸರೆ ಹಗ್ಗ (=T.-line); T.-boat ಎಳೆಬಲೆಯೆಳೆಯುವ ದೋಣಿ: ಬಲೆ ದೋಣಿ. **Traẃler** (ನಾ.) ಎಳೆಬಲೆಯೆಳೆಯುವವನು; ಬಲೆ ದೋಣಿ.

Tray ಟ್ರೇ (ನಾ.) (ಮರದ ಅಥವಾ ಲೋಹದ) ತಟ್ಟೆ, ಹರಿವಾಣ [Tea-t. ಟೀ (ಪಾತ್ರೆಯಿಡುವ) ಹರಿವಾಣ. Pen-t. ಲೇಖನಿ(ಯಿಡುವ) ತಟ್ಟೆ. Developing-t. (ಛಾಯಾಚಿತ್ರ) ಸ್ಫುಟೀಕರಣ ತಟ್ಟೆ]; ಮತ್ತೊಂದು ಪೆಟ್ಟಿಗೆಯೊಳಗೆ ಅಂಕಣವಾಗಿ ಇಡಲಾಗುವ, ಮುಚ್ಚಳವಿಲ್ಲದ, ಆಳವಿಲ್ಲದ ಖಾನೆ: ಪೆಟ್ಟಿಗೆ ಖಾನೆ. **Traýful** (ನಾ.)

Treácherous ಟ್ರೆಚರಸ್ (ಗು.) ವಿಶ್ವಾಸಘಾತುಕ; (ನಂಬಿಕೆ) ದ್ರೋಹದ; ನಂಬಬಾರದ, ಮೋಸದ (T. memory ನೆಚ್ಚಲಾಗದ, ಸಮಯದಲ್ಲಿ ಕೈಕೊಡುವ, —ಜ್ಞಾಪಕಶಕ್ತಿ, ನೆನಪು. T. ice ಇದ್ದಕ್ಕಿದ್ದಹಾಗೆ ಕರಗಿ ಡೊಗರು ಬೀಳುವ ನೀರ್ಗಲ್ಲು: ಮೋಸದ ನೀರ್ಗಲ್ಲು). **Treácherously** (ಕ್ರಿ. ವಿ.); **Treácherousness** (ನಾ.). **Treáchery** (ನಾ.) ವಿಶ್ವಾಸ ಘಾತುಕತೆ, ದ್ರೋಹ, ಮೋಸ.

Treácle ಟ್ರೀಕ್‍ಲ್ (ನಾ.) ಸಕ್ಕರೆಯ ಶುದ್ಧೀಕರಣದಲ್ಲಿ ದೊರೆಯುವ, ಇನ್ನೂ ಸ್ಫಟಿಕಗಳಾಗಿ ಮಾರ್ಪಟ್ಟಿಲ್ಲದ, ಪಾಕ; ಸಕ್ಕರೆ ಜೋನಿ; (ಶಿಥಿಲ ಪ್ರ.) ಕಾಕಂಬಿ; (ಹಲವು ಸಸ್ಯಗಳ) ಸಕ್ಕರೆ ರಸ, ಶರ್ಕರ ದ್ರವ. **Treácly** (ಗು.)

Tread ಟ್ರೆಡ್ (ಕ್ರಿ.; ಭೂತ. Trod ಟ್ರಾಡ್, ಪ್ರಾಚೀ. ಪ್ರ. Trode ಟ್ರೋಡ್; ಭೂ. ಕೃ. Trodden ಟ್ರಾಡ್‍ನ್, Trod; ನಾ.) ಹೆಜ್ಜೆ, ಕಾಲು, —ಇಡು, ಹಾಕು; ನಡೆ, ಹೋಗು; (ಅಡಿಯ ವಿಷಯದಲ್ಲಿ) ತುಳಿ, ಮೆಟ್ಟು [Trod on a snake ಹಾವಿನಮೇಲೆ ಕಾಲಿಟ್ಟನು, ತುಳಿದನು. T. lightly (ರೂಪ.) (ಸೂಕ್ಷ್ಮ ವಿಷಯವನ್ನು ಕುರಿತು) ಜಾಗರೂಕತೆಯಿಂದ ವರ್ತಿಸು, ಸೂಕ್ಷ್ಮವಾಗಿ ನಿರ್ವಹಿಸು. Where angels fear to t. ದೇವದೂತರೂ ಹೆಜ್ಜೆಯಿಡಲು ಹೆದರುವ ಸ್ಥಳ. T. in one's (foot)steps (ರೂಪ.) ಒಬ್ಬನು ಹೋದ ದಾರಿಯಲ್ಲಿ ಹೋಗು; ಒಬ್ಬನ ಮೇಲ್ಪಂಕ್ತಿಯನ್ನು ಅನುಸರಿಸು. T. on person's corns *or* toes ಒಬ್ಬನ ಮನಸ್ಸು ನೋಯಿಸು. T. on the heels of ಹಿಂದೆಯೇ, ಒಡನೆಯೇ, —ಹಿಂಬಾಲಿಸು; ಬೆನ್ನು ಹತ್ತಿ ಬರು (ರೂಪ. ಸಹ). T. *or* seem to t. on air ಸಂತೋಷದಿಂದ (ನಲಿಯುತ್ತ) ಹೋಗು; (ಆನಂದಪರವಶವಾದವನ ವಿಷಯದಲ್ಲಿ) ಆಕಾಶದಲ್ಲಿ ಹೋಗು(ವಂತೆ ಕಾಣು). T. on *or* as on eggs (ಅತಿ ಚಾತುರ್ಯದಿಂದ ವರ್ತಿಸಬೇಕಾದ ಸಂದರ್ಭದಲ್ಲಿ): ಬಲು ನಾಜೂಕಿನಿಂದ ನಡೆ, ಎಚ್ಚರಿಕೆಯಿಂದ ವರ್ತಿಸು. T. on the neck of person (ಒಬ್ಬನಮೇಲೆ ತನ್ನ ಒಡೆತನವನ್ನು ಮೆರೆಯುವುದಕ್ಕಾಗಿ) ಕುತ್ತಿಗೆ, ತಲೆ, —ಮೆಟ್ಟು (ರೂಪ. ಸಹ). T. awry ತಪ್ಪಿ—ಹೋಗು, ನಡೆ; ತಪ್ಪುಮಾಡು. T. grapes (ದ್ರಾಕ್ಷಾಮದ್ಯ ತಯಾರಿಸುವಲ್ಲಿ) ದ್ರಾಕ್ಷಿಯನ್ನು ತುಳಿ. Trod ten hurried paces ಹತ್ತು ಆತುರದ ಹೆಜ್ಜೆ ಹಾಕಿದನು. T. a measure (Measure ನೋಡಿ). T. down ಕಾಲಕೆಳಗೆ ತುಳಿ(ದುಹಾಕು), ಹೊಸಕಿಹಾಕು, ಧ್ವಂಸಮಾಡು (T. down the earth round the root ಬೇರಸುತ್ತ ಮಣ್ಣನ್ನು ಕಾಲಿನಿಂದ ತುಳಿ. Must t. down Satan under our feet ಸೈತಾನನನ್ನು ನಮ್ಮ ಕಾಲಕೆಳಗೆ ತುಳಿದುಹಾಕಬೇಕು). T. in (ಕಾಲಿನಿಂದ) ಒಳಕ್ಕೆ ತುಳಿ. T. out (ಬೆಂಕಿಯನ್ನು; ರೂಪ., ದಂಗೆ, ಮೊ. ನ್ನು) ತುಳಿದುಹಾಕು; ತುಳಿದು —ಆರಿಸು, ಅಡಗಿಸು; (ದ್ರಾಕ್ಷೆ, ಮೊ. ನ್ನು) ತುಳಿ(ದು ಹಿಸುಕು); (ದನಗಳು ಕಣದಲ್ಲಿ: ತೆನೆಗಳನ್ನು) ತುಳಿ, ತುಳಿದು (ಕಾಳು) ಬಿಂಗಡಿಸು; (ಧಾನ್ಯವನ್ನು) ಒಕ್ಕು. T. the stage *or* boards ರಂಗದಮೇಲೆ ಬರು, ನಟನಾಗು. T. under foot (ರೂಪ.) (ತಿರಸ್ಕಾರದಿಂದ ಕಾಣುವುದು, ಧ್ವಂಸ ಮಾಡುವುದು, ಮೊ. ಅರ್ಥಗಳಲ್ಲಿ): ತುಳಿದುಹಾಕು, ಹೊಸಕಿಹಾಕು. T. water ಆಳವಾದ ನೀರಿನಲ್ಲಿ ನೆಟ್ಟಗೆ ನಡೆ; ನಿಲುಈಜು ಈಜು]. (ಹುಂಜದ ವಿಷಯದಲ್ಲಿ) (ಹೇಂಟೆಯೊಡನೆ) ಸಂಗಮಾಡು, ಕೂಡು. (ನಾ.) ನಡಗೆ, (ಕಾಲ) ಸಪ್ಪಳ, ಹೆಜ್ಜೆ(ಯ ಸದ್ದು), ತುಳಿತ (Recognized his heavy t. ಅವನ ಭಾರದ ನಡಗೆ ಗೊತ್ತಾಯಿತು. Approached with cautious t. ಎಚ್ಚರಿಕೆಯ ಹೆಜ್ಜೆಗಳಿಂದ ಸಮೀಪಿಸಿದನು; ಹುಷಾರಾಗಿ ಹೆಜ್ಜೆ ಹಾಕುತ್ತ ಬಂದನು); (ಗಂಡು ಹಕ್ಕಿಯ ವಿಷಯದಲ್ಲಿ) ಸಂಗ, ಕೂಟ; ಮೆಟ್ಟಿಲ, ಹಂತದ,—ಮೇಲ್ಮೈ:

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೆಟ್ಟುಮಣೆ (=**T.-board**); ತುಳಿತ ಯಂತ್ರದ —ಮೆಟ್ಟು, ಮೆಟ್ಟಿಲು; ಸವೆತವನ್ನು ಅಥವಾ ಸದ್ದನ್ನು ಕಡಮೆಮಾಡುವುದಕ್ಕಾಗಿ ಮೆಟ್ಟಿಲಮೇಲೆ ಹಾಕಿರುವ ರಬ್ಬರು, ಲೋಹ, ಮೊ. ಗಳ ಪಟ್ಟಿ: ಮೆಟ್ಟಿಗೆ; ನೆಲವನ್ನು ಅಥವಾ ಕಂಬಿಯನ್ನು ಸೋಕುವ ಚಕ್ರದ ಭಾಗ, ಚಕ್ರವನ್ನು ಸೋಕುವ ಕಂಬಿಯ ಭಾಗ: ಸ್ಪರ್ಶ ಭಾಗ, ಸೋಕು ಮೈ; (ಮೆಟ್ಟುಗೋಲಿನಲ್ಲಿ) ಅಡಿಯೂರುವ ಭಾಗ, ಮೆಟ್ಟು, (ಪಾದರಕ್ಷೆಯಲ್ಲಿ) ಅಟ್ಟೆ ನೆಲ ಸೋಕುವ ಭಾಗ; ಬೈಸಿಕಲ್ಲಿನ ಮೆಟ್ಟುಸನ್ನೆಗಳಿಗಿರುವ ದೂರ: ಮೆಟ್ಟಗಲ; ಮೊಟ್ಟೆಯ ಹಳದಿಯ ಬಂಡಾರದಮೇಲಿನ ಬಿಳಿಯ ಚುಕ್ಕೆ (ಗರ್ಭ ಕಟ್ಟಿದ ಮೊಟ್ಟೆಗಳಲ್ಲಿ ಮಾತ್ರ ಇದು ಕಾಣಿಸಿಕೊಳ್ಳುವುದಾಗಿ ಹಿಂದೆ ನಂಬಿದ್ದರು): ಗರ್ಭ ಮೆಟ್ಟು. **Treádmill** ಸುತ್ತುವ ಉರುಳೆಗೆ ಜೋಡಿಸಿರುವ ಮೆಟ್ಟಿಲುಗಳನ್ನು ಮನುಷ್ಯ, ಕುದುರೆ, ಮೊ. ಗಳಿಂದ ತುಳಿಸಿ ತಿರುಗಿಸುವ ಒಂದು ಸಲಕರಣೆ: ಮೆಟ್ಟು, ತುಳಿತದ, —ಯಂತ್ರ (ಮು., ಸೆರೆಮನೆಗಳಲ್ಲಿ ಶಿಕ್ಷೆಗಾಗಿ ಉಪಯೋಗಿಸುತ್ತಿದ್ದದ್ದು); (ರೂಪ.) ಬೇಸರದ ನಿತ್ಯಗಟ್ಟಳೆ, ಗಾಣದೆತ್ತಿನ ದುಡಿತ. **T.-wheel** ಮೆಟ್ಟುಯಂತ್ರ (ದಂಥ ಸಲಕರಣೆ), ಮೆಟ್ಟುಚಕ್ರ. **Treádle** ಟ್ರೆಡ್'ಲ್ (ನಾ., ಕ್ರಿ. ಅಕ.) ಕಾಲೊತ್ತಿನಿಂದ ಚಲಿಸಿ ಯಂತ್ರವನ್ನು ನಡಸುವ ಸನ್ನೆ: ಕಾಲೊತ್ತು, ಮೆಟ್ಟುಸನ್ನೆ (ಉದಾ., ಹೊಲಿಗೆ ಯಂತ್ರ, ಬೈಸಿಕಲ್, ಮೊ. ಗಳಲ್ಲಿಯದು). (ಕ್ರಿ.) (ಕಾಲೊತ್ತನ್ನು, ಮೆಟ್ಟನ್ನು) ತುಳಿ, ಒತ್ತು. T.-machine, -press ಕಾಲೊತ್ತು, ಮೆಟ್ಟು, —ಮುದ್ರಣ ಯಂತ್ರ, ಮುದ್ರಕ. **Treádler** (ನಾ.)

Treáson ಟ್ರೀಸ್'ನ್ (ನಾ.) ರಾಜ, ರಾಜ್ಯ,—ದ್ರೋಹ (=High-t.) (ಉದಾ., ರಾಜನನ್ನು, ರಾಣಿಯನ್ನು, ರಾಜನ ಹಿರಿಯ ಮಗನನ್ನು ಕೊಲೆಮಾಡುವುದು ಅಥವಾ ಕೊಲೆಮಾಡುವ ಉದ್ದೇಶಪಟ್ಟಿರುವುದು; ರಾಜನ ಅಥವಾ ರಾಜ್ಯದ ಉತ್ತರಾಧಿಕಾರಿಯ ಹೆಂಡತಿಯನ್ನು, ರಾಜನ ಮದುವೆಯಿಲ್ಲದ ಹಿರಿಯ ಮಗಳನ್ನು ಕೆಡಿಸುವುದು; ರಾಜ್ಯದೊಳಗೇ ರಾಜನಮೇಲೆ ಯುದ್ಧಮಾಡುವುದು; ರಾಜ್ಯದೊಳಗೇ ರಾಜನ ಶತ್ರುವಿನ ಪಕ್ಷ ವಹಿಸುವುದು; ರಾಜ್ಯದೊಳಗಾಗಲಿ ಹೊರಗಾಗಲಿ ಶತ್ರುವಿಗೆ ಸಹಾಯ ಮಾಡುವುದು; ತನ್ನ ಅಧಿಕಾರ ನಿರ್ವಾಹದಲ್ಲಿರುವ ನ್ಯಾಯಾಧ್ಯಕ್ಷನನ್ನಾಗಲಿ ನ್ಯಾಯಾಧೀಶನನ್ನಾಗಲಿ ಕೊಲ್ಲುವುದು; ರಾಜಪ್ರತಿನಿಧಿಯ ಮತ್ತು ಪಾರ್ಲಿಮೆಂಟಿನ ಲಿಖಿತ ಅನುಮತಿಯಿಲ್ಲದೆ, ೧೮ ವರ್ಷ ವಯಸ್ಸಿನೊಳಗಿನ ರಾಜನ ಮದುವೆಗೆ ಸಹಾಯ ಮಾಡುವುದು); ನಂಬಿಕೆ ದ್ರೋಹ; ವಿಶ್ವಾಸಘಾತ; ದ್ರೋಹ. Constructive t. ವಸ್ತುತಃ ರಾಜದ್ರೋಹಗಳ ಪಟ್ಟಿಯಲ್ಲಿ ಬಾರದಿದ್ದರೂ, ಕಾನೂನಿನ ದೃಷ್ಟಿಯಲ್ಲಿ ರಾಜದ್ರೋಹಕ್ಕೆ ಸಮಾನವೆಂದು ಪರಿಗಣಿತವಾದ ಅಪರಾಧ: ಅನುಮೇಯ ರಾಜದ್ರೋಹ. Misprision of t. (Misprision[1] ನೋಡಿ). Petit *or* Petty t. ಸ್ವಾಮಿದ್ರೋಹ (ಉದಾ., ಹೆಂಡತಿ ಗಂಡನನ್ನು, ಸೇವಕ ಯಜಮಾನನನ್ನು, —ಕೊಲ್ಲುವುದು). T.-felony (ಹಿಂದೆ ರಾಜದ್ರೋಹಗಳ ಪಟ್ಟಿಯಲ್ಲಿ ಸೇರಿದ್ದು ಈಚೆಗೆ ಅದರಿಂದ ಬೇರ್ಪಡಿಸಿದ, ಮರಣದಂಡನೆ ವಿಧಿಸಲಾಗದ) ರಾಜ, ರಾಜ್ಯ, —ದ್ರೋಹಾಪರಾಧ (ರಾಜನನ್ನು ಪಟ್ಟದಿಂದ ಉರುಳಿಸುವುದು, ಆಡಳಿತಕ್ರಮವನ್ನು ಬದಲಾಯಿಸುವಂತೆ ಬಲಾತ್ಕರಿಸಲು ಯುದ್ಧಮಾಡುವುದು, ಪಾರ್ಲಿಮೆಂಟನ್ನು ಹೆದರಿಸುವುದು, ಶತ್ರುಗಳು ದಂಡೆತ್ತಿ ಬರುವಂತೆ ಎತ್ತಿಕಟ್ಟುವುದು, ಮೊ. ಕ್ಕೆ ಪ್ರಯತ್ನಿಸುವುದು). **Treásonable** (ಗು.) ರಾಜದ್ರೋಹದ. **Treásonableness** (ನಾ.); **Treásonably** (ಕ್ರಿ. ವಿ.); **Treásonous** (ಗು.) ರಾಜದ್ರೋಹದ; ರಾಜದ್ರೋಹಮಯ.

Treásure ಟ್ರೆಷರ್ (ನಾ., ಕ್ರಿ. ಸಕ.) ಪ್ರಶಸ್ತ ಲೋಹಗಳು, ರತ್ನಗಳು; ನಿಧಿ, ನಿಧಾನ, ಸಂಪತ್ತು, ಐಶ್ವರ್ಯ, ಧನ (Buried t. ನಿಕ್ಷೇಪ. Had amassed great t. *or* treasures ಬಹಳ ಐಶ್ವರ್ಯಗಳಿಸಿದ್ದನು); ಪ್ರಶಸ್ತ, ಅಮೂಲ್ಯ, ಅಪೂರ್ವ —ವಸ್ತು, ಕೃತಿ [Art treasures ಕಲಾಕೃತಿಗಳ ನಿಧಿ, ಅಪೂರ್ವ ಕಲಾಕೃತಿಗಳ ಸಂಗ್ರಹ. Absorbed in his latest t. ಅವನ ಹೊಸ ನಿಧಿಯಲ್ಲಿ (ಗ್ರಂಥ, ಚಿತ್ರ, ಮೊ. ದಲ್ಲಿ) ಮಗ್ನನಾಗಿ]; (ಬಳ. ಮಾ.) ಮೆಚ್ಚಿನ, ಮುದ್ದಿನ, —ವ್ಯಕ್ತಿ (ಮು., ಮಗು) (My t. ನನ್ನ ಚಿನ್ನ, ರತ್ನ); (ಬಳ. ಮಾ.) ದಕ್ಷ, ಸಮರ್ಥ, —ವ್ಯಕ್ತಿ; ಗಟ್ಟಿಗ, ಗಟ್ಟಿಗಿತ್ತಿ (The girl is a perfect t. ಆಕೆ ರತ್ನದಂಥ ಹುಡುಗಿ). (ಕ್ರಿ.) (ಅಮೂಲ್ಯವಾದುದೆಂದು) ಶೇಖರಿಸಿಡು; ಭದ್ರಪಡಿಸು (ಸಾ., *Up* ಉಪ. ದೊಡನೆ). **T.-city** (ಬೈಬಲ್) ಮದ್ದುಗುಂಡುಗಳ ಕೋಠಿಯಾಗಿಯೂ, ದವಸಧಾನ್ಯಗಳ ಕಣಜವಾಗಿಯೂ ಉಪಯೋಗಿಸುವ ಪಟ್ಟಣ: ಕೋಶ, ಭಂಡಾರ, —ನಗರ. **T.-house** ಕೋಶಾಗಾರ, ಭಂಡಾರ (ಮು., ರೂಪ.). **T. trove** (ನೆಲದಲ್ಲಿ ಸಿಕ್ಕಿದ, ಒಡೆಯರು ಗೊತ್ತಿಲ್ಲದ) ಗುಪ್ತನಿಧಿ, ನಿಕ್ಷೇಪ. **Treásurer** (ನಾ.) (ಸರಕಾರ, ಸಂಘ, ಸಂಸ್ಥೆ, ಮೊ. ಗಳ ಹಣಕಾಸನ್ನು ನೋಡಿಕೊಳ್ಳುವ) ಬೊಕ್ಕಸದ ಅಧಿಕಾರಿ, ಕೋಶಾಧ್ಯಕ್ಷ, ಕೋಶಾಧಿಕಾರಿ, ಖಜಾಂಚಿ, ಭಂಡಾರಿ. Lord High T. (ಇಂಗ್ಲೆಂಡಿನ ಚರಿತ್ರೆ) (ಈಗ ರಾಜ್ಯಕೋಶ ಸಚಿವರು ನಿರ್ವಹಿಸುವ ಕೆಲಸವನ್ನು ಹಿಂದೆ ನಿರ್ವಹಿಸುತ್ತಿದ್ದ) ರಾಜ್ಯಕೋಶಾಧ್ಯಕ್ಷ. T. of the Household ಅರಮನೆಯ ಖಜಾಂಚಿ (Lord Steward ಎಂಬ ಅಧಿಕಾರಿಯ ಕೆಳಗಿನ ಒಬ್ಬ ಅಧಿಕಾರಿ). **Treásurership** (ನಾ.); **Treásury** (ನಾ.) ಕೋಶ, ಕೋಶಾಗಾರ, ಭಂಡಾರ, ಬೊಕ್ಕಸ, ಖಜಾನೆ; (ರೂಪ.) ಜ್ಞಾನ, ಮೊ. ಗಳ ನಿಧಿಯೆಂದು ಭಾವಿಸಿರುವ ವ್ಯಕ್ತಿ, ಗ್ರಂಥ, ಮೊ. ವು: ನಿಧಿ, ಭಂಡಾರ; (ಸರಕಾರದ) ಖಜಾನೆ ಖಾತೆ. T. Board, Lords (Commissioners) of the T. (ಇಂಗ್ಲೆಂಡಿನ) ರಾಜ್ಯಕೋಶ ಮಂಡಲ, ಭಂಡಾರ ಸಚಿವರು [ಇದರಲ್ಲಿರುವವರು: First Lord of the T. (ಕೋಶ ಪ್ರಧಾನಿ; ಸಾ., ಮುಖ್ಯ ಮಂತ್ರಿ), Chancellor of the Exchequer (ಆರ್ಥಿಕ ಮಂತ್ರಿ), ಮತ್ತು ಇತರ ಮೂವರು]. T. bench (ಇಂಗ್ಲೆಂಡಿನ ಪ್ರಜಾಸಭೆಯಲ್ಲಿ) ಅಧ್ಯಕ್ಷನ ಬಲಗಡೆ ಮೊದಲ ಸಾಲಿನಲ್ಲಿ (ಕೋಶ) ಪ್ರಧಾನಿ, ಆರ್ಥಿಕ ಸಚಿವ, ಮತ್ತು ಇತರ ಸಚಿವರು ಕುಳಿತುಕೊಳ್ಳುವ ಪೀಠ: ಸಚಿವ ಪೀಠ. T. bill ಸರಕಾರದ ಖಜಾನೆಯವರು ತಾತ್ಕಾಲಿಕ ಆವಶ್ಯಕತೆಗಳಿಗಾಗಿ ಹಣ ಎತ್ತಲು ಹೊರಡಿಸಿ, ಅತ್ಯಂತ ಹೆಚ್ಚು ಸವಾಲುದಾರನಿಗೆ ಮಾರುವ ಹುಂಡಿ: ಖಜಾನೆ ಹುಂಡಿ. T. note (ಇಂಗ್ಲೆಂಡಿನಲ್ಲಿ) ಮೊದಲನೆಯ ಮಹಾ ಯುದ್ಧ ಕಾಲದಲ್ಲೂ ಅನಂತರವೂ ಖಜಾನೆಯವರು ಹೊರಡಿಸಿದ ೧ ಪೌಂಡು, ಮತ್ತು ೧೦ ಷಿ. ಬೆಲೆಗಳ ನೋಟು; (ಅಮೆ. ಸಂ.) ಖಜಾನೆಯವರು ಹೊರಡಿಸಿದ, ಸರಕಾರಕ್ಕೆ ಸಲ್ಲಬೇಕಾದ ಹಣವನ್ನು ಅದರ ರೂಪದಲ್ಲಿ ಸಲ್ಲಿಸಬಹುದಾದ ನಾಣ್ಯ (ಹುಂಡಿ) ಪತ್ರ: ಖಜಾನೆಯ ನೋಟು. T. warrant ಖಜಾನೆಯ—ರಸೀತಿ, ಹಣ ಸಲಿಕೆ ಪತ್ರ (ಖಜಾನೆಗೆ ಅಥವಾ ಖಜಾನೆಯಿಂದ ಹಣ ಕೊಟ್ಟುದ್ದಕ್ಕೆ ದಾಖಲೆ)

Treat ಟ್ರೀಟ್ (ಕ್ರಿ., ನಾ.) ನಡೆ(ದುಕೊ), ವರ್ತಿಸು, ವ್ಯವಹರಿಸು, ಕಾಣು, ನೋಡಿಕೊ, ಭಾವಿಸು (How did they t. you? ಅವರು ನಿನ್ನನ್ನು ಹೇಗೆ ನೋಡಿಕೊಂಡರು, ಕಂಡರು? ನಿನ್ನ ವಿಷಯದಲ್ಲಿ ಹೇಗೆ ನಡೆದುಕೊಂಡರು? Better t. it as a joke ಅದನ್ನು ಒಂದು ತಮಾಷೆಯೆಂದು ಭಾವಿಸುವುದು ಮೇಲು); ಚಿಕಿತ್ಸೆ ನಡಸು, ರಾಸಾಯನಿಕ ಪ್ರಕ್ರಿಯೆಗೆ ಒಳಪಡಿಸು, ಸಂಸ್ಕರಿಸು (Treated him for smallpox. Must be treated with sulphuric acid); (ಸಾಹಿತ್ಯದಲ್ಲಿ ಅಥವಾ ಕಲೆಯಲ್ಲಿ ಒಂದು ವಿಷಯವನ್ನು) ನಿರೂಪಿಸು, ಪ್ರತಿಪಾದಿಸು, ನಿರ್ವಹಿಸು; ತಿಂಡಿ ತೀರ್ಥ ಕೊಡಿಸು; ಔತಣ—ಕೊಡು, ಮಾಡು; ಸತ್ಕರಿಸು (I will t. you all); (ತನ್ನ ವೆಚ್ಚದಲ್ಲಿ) ನಾಟಕ, ಮೊ. ಕ್ಕೆ ಕರೆದುಕೊಂಡುಹೋಗು (You might t. me to a theatre); (ಚುನಾವಣೆಗೆ ನಿಂತಿರುವ ಉಮೇದುವಾರನ ವಿಷಯದಲ್ಲಿ) (ಅಭಿಮತ ಸಂಪಾದನೆಗಾಗಿ) ಮತದಾರರಿಗೆ ತಿಂಡಿ ತೀರ್ಥ ಕೊಡಿಸು [(ಇಂಗ್ಲೆಂಡಿನಲ್ಲಿ ಇದು ಅಪರಾಧ); **Treáting** (ನಾ.)]; (ಒಬ್ಬನೊಡನೆ) ಸಂಧಾನ ನಡಸು (*With* ಉಪ. ದೊಡನೆ). [T. of (ವಿಷಯವನ್ನು) ಚರ್ಚಿಸು, ಪ್ರಸ್ತಾಪಿಸು, ನಿರೂಪಿಸು]. (ನಾ.) ಸಂತೋಷಕರವಾದುದು, ಆನಂದದಾಯಕವಾದುದು (What a t. it is not to have to get up early);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಔತಣ ; ಸತ್ಕಾರ, ವಿನೋದ ಕೂಟ, ಸಂತೋಷ ಕೂಟ (School-t. ಶಾಲಾ ವಿನೋದ ಕೂಟ). Stand t. ಔತಣದ ವೆಚ್ಚವನ್ನು ವಹಿಸು, ಔತಣ ಕೊಡು. **Treátable** (ಗು.) ; **Treáter** (ನಾ.) ; **Treátise** ಟ್ರೀಟಿಸ್(ಸ್) (ನಾ.) (ಒಂದು ನಿರ್ದಿಷ್ಟ ವಿಷಯದಮೇಲೆ ಕ್ರಮವಾಗಿ ಬರೆದಿರುವ) ಗ್ರಂಥ; ಪ್ರಕರಣ ಗ್ರಂಥ. **Treátment** (ನಾ.) ನಡವಳಿಕೆ, ವ್ಯವಹಾರ, ವರ್ತನೆ (Received strange t. from him); ಚಿಕಿತ್ಸೆ (Must vary the t.); ಸಂಸ್ಕಾರ, ಸಂಸ್ಕರಣ (Is now ready for t. with an acid); (ಸಾಹಿತ್ಯದಲ್ಲಿ, ಕಥೆಯಲ್ಲಿ) ನಿರೂಪಣೆ, ಪ್ರತಿಪಾದನೆ, ನಿರ್ವಹಣೆ. **Treáty** (ನಾ.) ಒಪ್ಪಂದ, ಕರಾರು, ಕೌಲು, ಒಡಂಬಡಿಕೆ, ಸಂಧಿ. Be in t. with (ವ್ಯಾಪಾರಕ್ಕಾಗಿ ಒಬ್ಬನೊಡನೆ) ಸಂಧಾನ ನಡಸುತ್ತಿರು. T. port ಹೊರದೇಶದ ವ್ಯಾಪಾರಕ್ಕೆ ಆತಂಕವಿಲ್ಲದೆ ತೆರೆದಿಟ್ಟಿರಲು ಕರಾರುಬದ್ಧವಾಗಿರುವ ರೇವು ಪಟ್ಟಣ: ಕರಾರು ರೇವು (ಪಟ್ಟಣ)

Treátise, Treátment, Treáty. Treat ನೋಡಿ.

Tréble ಟ್ರೆಬ್‌ಲ್ (ಗು., ನಾ., ಕ್ರಿ.) ಮುಮ್ಮಡಿ(ಯ), ಮೂರರಷ್ಟು, ತ್ರಿಗುಣ (The enemy had t. our numbers ಶತ್ರುಪಕ್ಷ ನಮ್ಮ ಮೂರರಷ್ಟಿತ್ತು); (ಹುಡುಗನ ಅಥವಾ ಹುಡುಗನ ಕಂಠದ ವಿಷಯದಲ್ಲಿ) ತಾರಸ್ವರದ. (ನಾ.) (ವ್ಹಿಸ್ಟ್) ಎದುರಾಳಿಯ ಅಂಕ ಸೊನ್ನೆಯಿದ್ದು ತಾನು ಐದು ಅಂಕಗಳಿಂದ ಗೆದ್ದ ಆಟ (ಇದು ಮೂರು ಗೆಲ್ಲಂಕಗಳೆಂದು ಪರಿಗಣನೆ). (ಕ್ರಿ.) ಮುಮ್ಮಡಿ, ಮೂರರಷ್ಟು, ತ್ರಿಗುಣಿತ, —ಮಾಡು, ಆಗು ; ಮೂರರಿಂದ ಗುಣಿಸು. **Trébly** (ಕ್ರಿ. ವಿ.)

Trébuchet ಟ್ರೆಬ್ಯೂಷೆಟ್, **Trébucket** ಟ್ರೀ(ಟ್ರೆ)ಬಕೆಟ್ (ನಾ.) (ಚರಿತ್ರೆ)ಕಲ್ಲು, ಮೊ. ನ್ನು ಎಸೆಯುವ ಸೈನಿಕ ಯಂತ್ರ; ಕವಣೆ ಯಂತ್ರ; (ಹಗುರವಾದ ವಸ್ತುಗಳನ್ನು ತೂಕಮಾಡುವ) ಒಂದು ಬಗೆಯ ಸೂಕ್ಷ್ಮ ತಕ್ಕಡಿ; (ಸಣ್ಣ ಹಕ್ಕಿ, ಮೊ. ನ್ನು ಹಿಡಿಯುವ) ಒಂದು ಬಗೆಯ ಬೋನು.

Trecénto (It.) ಟ್ರೆಚೆಂಟೊ (ನಾ.) (ಇಟಲಿಯ ಸಾಹಿತ್ಯ ಮತ್ತು ಕಲೆಗಳ ಚರಿತ್ರೆಯಲ್ಲಿ) ೧೪ನೆಯ ಶತಮಾನ. **Trecéntist** (ನಾ.)

Trechómeter ಟ್ರೆಕಾಮಿಟರ್ (ನಾ.) =Hodometer.

Tree ಟ್ರೀ (ನಾ., ಕ್ರಿ. ಸಕ.) ಮರ, ತರು, ವೃಕ್ಷ ; ಮರದ ಚೌಕಟ್ಟು, ಮರದ ತುಂಡು, (ಮೂಕಿ, ಮೊ. ಗಳ) ಮರ [Axle, Boot[1], Roof, Saddle, -t. (ಆಯಾ ಪದ ನೋಡಿ). Christmas t. (Christ ಕೆಳಗೆ Christmas ನೋಡಿ). Cross-trees (Cross-ನೋಡಿ)]; (ಪ್ರಾಚೀ. ಪ್ರ.) ಗಲ್ಲು(ಮರ), (ಯೇಸು ಕ್ರಿಸ್ತನನ್ನು ಏರಿಸಿದ) ಶಿಲುಬೆ; (ಗಣಿತ) ಕವಲು ಗೆರೆಗಳ ನಕ್ಷೆ, ವೃಕ್ಷ ರೇಖಾಕೃತಿ. **T. agate** ವೃಕ್ಷಾಂಕನಗಳುಳ್ಳ ಅಗೇಟ್ ಶಿಲೆ. **T. calf** ಸಸ್ಯ ಚಿತ್ರ ಮುದ್ರಿಸಿದ, ಕರು ತೊಗಲಿನ ರಟ್ಟು ಕಟ್ಟು. **T.-creeper** ಹಲವು ಬಗೆಯ ಸಣ್ಣ ಹಕ್ಕಿ. **T.-fern** ಮರದಹಾಗೆ ಬೆಳೆಯುವ ಜರೀ ಗಿಡ ; ಮರ ಜರೀ, ಜರೀಮರ. **T.-gorse** ಬಾರ್ನಕಲ್ ಬಾತು. **T.-milk** (ಸಿಲೋನಿನಲ್ಲಿ ಹಾಲಿಗೆ ಬದಲು ಉಪಯೋಗಿಸುವ) ಸಸ್ಯಕ್ಷೀರ, ಮರಹಾಲು. **T.-nail** ಮರದ—ಬೆಣೆ, ಗೂಟ, ಮೊಳೆ. [Family t., Geneological t. ವಂಶವೃಕ್ಷ. Up a t. (ರೂಪ.) ಇಕ್ಕಟ್ಟಿಗೆ, ಸಂಕಟಕ್ಕೆ, —ಸಿಕ್ಕಿ ; ದಿಕ್ಕು ತೋಚದೆ. At the top of the t. (ತನ್ನ ವೃತ್ತಿ, ಮೊ. ಗಳ) ಮೇಲ್ತುದಿಯಲ್ಲಿ, ಶಿಖರದಲ್ಲಿ, ಉಚ್ಚಸ್ಥಾನದಲ್ಲಿ. T. of knowledge of good and evil (ಬೈಬಲ್) ಪಾಪ ಪುಣ್ಯಗಳ, ಸದಸದ್ವಿವೇಚನೆಯ, —ಜ್ಞಾನ ವೃಕ್ಷ (ಇದರ ಹಣ್ಣನ್ನು ತಿನ್ನಕೂಡದೆಂದು ದೇವರ ಕಟ್ಟಳೆಯಾಗಿತ್ತು); ನಿಷಿದ್ಧ ಜ್ಞಾನ. T. of liberty (ಮು., ಫ್ರಾನ್ಸಿನ ಕ್ರಾಂತಿಯಲ್ಲಿ) ಸ್ವಾತಂತ್ರ್ಯಕ್ಕೆ ಚಿಹ್ನೆಯಾಗಿ ಸಾರ್ವಜನಿಕ ಸ್ಥಳದಲ್ಲಿ ನಟ್ಟ ಮರ: ಸ್ವಾತಂತ್ರ್ಯ ವೃಕ್ಷ. T. of life (ಬೈಬಲ್) ಆದರ ಹಣ್ಣನ್ನು ಅಥವಾ ಎಲೆಯನ್ನು ತಿಂದರೆ ಅಮರತ್ವ ಬರುವುದೆಂದು ನಂಬಿರುವ, ಸ್ವರ್ಗಾರಾಮದಲ್ಲಿ ಬೆಳೆಯುವ, ಒಂದು ಮರ: ಜೀವನ ವೃಕ್ಷ (ರೂಪ. ಸಹ)]. (ಕ್ರಿ.) (ಪ್ರಾಣಿಯನ್ನು, ರೂಪಕವಾಗಿ ಮನುಷ್ಯನನ್ನು) ಮರ ಹತ್ತುವಂತೆಮಾಡು ; (ಬೇಟೆಗಾರನಿಂದ, ಬೆನ್ನಟ್ಟಿ ಬರುವವನಿಂದ ತಪ್ಪಿಸಿಕೊಳ್ಳಲು) ಮರ ಸೇರಿಕೊ ; (ಬಳ. ಮಾ.) ಸಂಕಟಕ್ಕೆ, ಇಕ್ಕಟ್ಟಿಗೆ, —ಸಿಕ್ಕಿಸು; (ಬೂಟನ್ನು) (ಬೂಟಿನ) ಅಚ್ಚು ಮರದ ಮೇಲೆ ಹಿಗ್ಗಿಸು. **Treéless** (ಗು.) ; **Treélessness** (ನಾ.)

Tréfoil ಟ್ರೀ(ಟ್ರೆ)ಫಾಯ್‌ಲ್ (ನಾ., ಗು.) ಮೂರು ಎಲೆಗಳ ದಳಗಳುಳ್ಳ ಹಲವು ಬಗೆಯ ಸಸ್ಯ : ತ್ರಿಪತ್ರಕ, ತ್ರಿಪರ್ಣಿ ; (ರೇಖಾಚಿತ್ರ, ಮೊ. ಗಳಲ್ಲಿ) ತ್ರಿಪತ್ರಾಲಂಕಾರ; ತ್ರಿಪತ್ರಕ (ವಸ್ತು). **Tréfoiled** (ಗು.)

Trek ಟ್ರೆಕ್ (ಕ್ರಿ. ಅಕ., ನಾ.) (ದ. ಆಫ್ರಿಕದಲ್ಲಿ) (ಎತ್ತಿನ ವಿಷಯದಲ್ಲಿ) ಬಂಡಿ, ಭಾರ, —ಎಳೆ ; ಎತ್ತಿನ ಬಂಡಿಯಲ್ಲಿ —ಹೋಗು, ಪ್ರಯಾಣ ಮಾಡು ; ವಲಸೆಹೋಗು ; (ಅಸಂ.) ಹೊರಟುಹೋಗು, ತೊಲಗಿಹೋಗು, ಗಾಡಿಬಿಡು. (ನಾ.) ಎತ್ತಿನ ಬಂಡಿಯ ಪ್ರಯಾಣ(ದ ಮಜಲು) ; ಗುಂಪು ವಲಸೆ(ಹೋಗುವುದು). **Trékker** (ನಾ.)

Tréllis ಟ್ರೆಲಿಸ್ (ನಾ., ಕ್ರಿ. ಸಕ.) (ತಂತಿ, ಮರದಪಟ್ಟಿ, ಮೊ. ಗಳ) ಜಾಲಕ, ಜಾಳಂದರ; ಜಾಳಂದರ—ತಡಿಕೆ, (ಬೇಸಗೆ) ಮನೆ. (ಕ್ರಿ.) ಜಾಳಂದರ ಮಾಡು ; (ಬಳ್ಳಿ, ಮೊ. ಕ್ಕೆ) ತಡಿಕೆಯಾಸರ ಕೊಡು, (ಬಳ್ಳಿ, ಮೊ. ನ್ನು) ತಡಿಕೆಯ ಮೇಲೆ ಹಬ್ಬಿಸು.

Trémble ಟ್ರೆಂಬ್‌ಲ್ (ಕ್ರಿ. ಅಕ., ನಾ.) (ದಿಗಿಲು, ಕಳವಳ, ನಿಶ್ಶಕ್ತಿ, ಮೊ. ಗಳಿಂದ) ನಡುಗು, ಅದಿರು, ಕಂಪಿಸು ; (ರೂಪ.) ತತ್ತರಿಸು, ತತ್ತರಗುಟ್ಟು, ತಳ್ಳಂಕಗೊಳ್ಳು, ತಲ್ಲಣಿಸು, ಕಳವಳಗೊಂಡಿರು, ದಿಗಿಲಾಗಿರು (T. at the thought ಆ ಯೋಚನೆ ಬಂದರೇನೆ ದಿಗಿಲಾಗುತ್ತದೆ. I t. for his safety ಅತನ ಕ್ಷೇಮದ ಬಗ್ಗೆ ತಲ್ಲಣಿಸುತ್ತೇನೆ. In trembling uncertainty ಕಳವಳ ಹುಟ್ಟಿಸುವ ಅನಿಶ್ಚಯದಲ್ಲಿ); ಅಡು, ಅಳ್ಳಾಡು, ಹೊಯ್ದಾಡು [Leaves t. in the breeze. (ರೂಪ.) His life, fate, trembles in the balance ಅವನ ಪ್ರಾಣ, ಅದೃಷ್ಟ, —ಹಾಗೋ ಹೀಗೋ ಎಂದು ಹೊಯ್ದಾಡುತ್ತಿದೆ, ಅಪಾಯ ಸ್ಥಿತಿಯಲ್ಲಿದೆ]. (ನಾ.) ನಡುಕ, ಅದಿರಾಟ, ಕಂಪ(ನ) (There was a t. in her voice); (ಬ. ವ. ದಲ್ಲಿ) (ಮು., ಜಾನುವಾರುಗಳ) ನಡುಕ ರೋಗ, ಅದಿರುವಾಯು. (ಬಳ. ಮಾ.) Was all of a t. ಮೈಯೆಲ್ಲ—ತತ್ತರಗುಟ್ಟುತ್ತಿದ್ದನು, ನಡುಗುತ್ತಿತ್ತು. **Trémblement** (ನಾ.) ; **Trémbler** (ನಾ.) (ಕ್ರಿಯಾರ್ಥಗಳಲ್ಲಿ); ವಿದ್ಯುತ್ಪ್ರವಾಹ ಸಂಪರ್ಕವನ್ನು ಉಂಟುಮಾಡುವ ಮತ್ತು ಕಡಿಯುವ ಸ್ವಯಂಚಲ ಸಲಕರಣೆ : ಕಂಪಕ ; ವಿದ್ಯುದ್ಘಂಟೆ. **Trémblingly** (ಕ್ರಿ. ವಿ.) ; **Trémbly** (ಗು.) ನಡುಗುವ, ನಡುಕದ.

Trémellose ಟ್ರೆಮೆಲೋಸ್ (ಗು.) (ಸ. ವಿ.) ಜೆಲಟಿನ್ನಿನಂಥ, ಜೆಲ್ಲಿ ಲೋಳೆಯಂಥ ; ಜೆಲ್ಲಿಯಂತೆ ಅದಿರುವ.

Treméndous ಟ್ರಿಮೆಂಡಸ್ (ಗು.) ಭಯಂಕರ, ಭೀಕರ, ನಡುಕ ಹುಟ್ಟಿಸುವ; (ಬಳ. ಮಾ.) ಭಾರಿ, ಮಹತ್ತರವಾದ, ಪ್ರಚಂಡ (A t. explosion, revolution. Makes a t. difference). **Treméndously** (ಕ್ರಿ. ವಿ.) ; **Treméndousness** (ನಾ.)

Tremolándo (It.) ಟ್ರೆಮೊಲಾಂಡೊ (ಕ್ರಿ. ವಿ.) (ಸಂ.) ಅದಿರಿಸಿ, ಕಂಪಿಸಿ.

Trémolant ಟ್ರೆಮೊಲಂಟ್, **-mulant** —ಮ್ಯುಲಂಟ್ (ನಾ.) (ಆರ್ಗನ್ ವಾದ್ಯದಲ್ಲಿ) ಕಂಪನ ಧ್ವನಿ ಸಲಕರಣೆ, ಕಂಪಕ.

Trémolo (It.) ಟ್ರೆಮೊಲೊ (ನಾ.) (ಸಂ.) (ಹಾಡುಗಾರಿಕೆಯಲ್ಲಾಗಲಿ ವಾದ್ಯ ಬಾಜಣೆಯಲ್ಲಾಗಲಿ) ಬೇಕೆಂದು ಧ್ವನಿಯನ್ನು ಅದಿರಿಸುವುದು ; ಧ್ವನಿ ಗುಡುಗು, ಸ್ವರ ಕಂಪನ ; ಕಂಪಕ.

Trémor ಟ್ರೆ(ಟ್ರೀ)ಮರ್ (ನಾ.) (ಎಲೆ, ಧ್ವನಿ, ಅಂಗ, ವ್ಯಕ್ತಿ, ಮೊ. ಗಳ ವಿಷಯದಲ್ಲಿ) ನಡುಕ, ಅದಿರು, ಅದಿರಾಟ, ಕಂಪ(ನ) ; (ಭಯ, ಉದ್ರೇಕ, ಮೊ. ಗಳ) ಮೈಜುಮ್ಮು, ರೋಮಾಂಚ, ತಳ್ಳಂಕ, ತಲ್ಲಣ. Intention t. (ಏನಾದರೂ ಕಾರ್ಯಮಾಡಲು ಅಂಗ ಚಲಿಸಿದಾಗ ಅದರಲ್ಲಿ ಉಂಟಾಗುವ) ಸಂಕಲ್ಪಸಹಜನಿತ ಕಂಪನ. Metallic t. ಲೋಹ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕೆಲಸಗಾರರಿಗೆ ಬರುವ) ಕಂಪವಾಯು. **Trémorless** (ಗು.); **Trémulous** ಟ್ರೆಮ್ಯುಲಸ್ (ಗು.) ನಡುಗುವ, ಅದಿರುವ, ಕಂಪಿಸುವ (T. hand, leaves, voice). (T. line ಅದಿರು ಕೈಯಿಂದ ಬರೆದ ಗೆರೆ : ಅದಿರು ಗೆರೆ); ಹೊಯ್ದಾಡುವ, ಹಿಂದೆ ಮುಂದೆ ನೋಡುವ, ಹೆದರುವ, ಪುಕ್ಕಲಿನ. **Trémulously** (ಕ್ರಿ. ವಿ.); **Trémulousness** (ನಾ.)

Trémulous, etc. **Tremor** ನೋಡಿ.

Trench ಟ್ರೆಂಚ್, ಟ್ರೆನ್ಷ್ (ಕ್ರಿ., ನಾ.) (ನೆಲದಲ್ಲಿ) ಹಳ್ಳ, ಕಾಲುವೆ, ಅಗಳು, ಕಂದಕ—ತೋಡು, ಮಾಡು, ಅಗೆ, ತೆಗೆ; (ಹೊಲ, ಗದ್ದೆ, ತೋಟ, ಮೊ. ಗಳಲ್ಲಿ) ಪಕ್ಕ ಪಕ್ಕದಲ್ಲಿ ಸಮಾನಾಂತರ ಕಂದಕಗಳನ್ನು ಆಳವಾಗಿ ತೋಡಿ ಒಂದು ಕಂದಕದ ಮಣ್ಣನ್ನು ಪಕ್ಕದ ಕಂದಕಕ್ಕೆ ಎತ್ತಿಹಾಕು : ಕಂದಕ ಅಗತೆಮಾಡು, ತೋಡಗತೆ ಮಾಡು; (ಮರ, ಮೊ. ಗಳಲ್ಲಿ) ಗಾಡಿ, ಕಾಲುವೆ—ಮಾಡು, ಹೊಡೆ; ಕಂದಕ ತೋಡಿ ದಾರಿಮಾಡಿಕೊ, ಮುಂದುವರಿ (*Down*, *along*, ಮೊ. ಉಪ. ದೊಡನೆ); (ಒಬ್ಬನ ಹಕ್ಕು, ಮೊ. ಗಳ ಮೇಲೆ) ಆಕ್ರಮಣಮಾಡು, ಅತಿಕ್ರಮಿಸು, ಒತ್ತಿಕೊ(ಂಡು ಹೋಗು) (*Up*, *upon* ಉಪ. ದೊಡನೆ); (ಒಂದರ) ಅಂಚಿನಲ್ಲಿರು, ಹತ್ತಿರವಿರು, ಹೋಲು (*Up*, *upon* ಉಪ. ದೊಡನೆ) (T. upon heresy, vulgarity). (ನಾ.) ಹಳ್ಳ, ಕಾಲುವೆ, ತೋಡು; (ಸೈನಿಕ) (ಸುಮಾರು ೭ ಅಡಿ ಆಳವುಳ್ಳ, ಅಗೆದು ಹಾಕಿದ ಮಣ್ಣನ್ನು ಕಾಪುಗೋಡೆಗಾಗಿ ಒಟ್ಟಿದ) ಕಂದಕ, ಜಿಗಳು, ಅಗಳು (Open the trenches ಕಂದಕ, ಅಗಳು, —ತೋಡು. Mount the trenches ಕಂದಕ ಕಾಯಿ, ಕಂದಕಕ್ಕೆ ಪಹರೆಯಿರು). **T.-cart** ಕಂದಕಗಳಲ್ಲಿ ಉಪಯೋಗಿಸುವ, ತಗ್ಗು ಗಾಲಿಗಳ, ಕೈಬಂಡಿ : ಕಂದಕ ಬಂಡಿ. **T.-coat** ಸೈನಿಕನ ನೀರಿಳಿಯದ ಬಟ್ಟೆಯಂಗಿ : ಕಂದಕ ಕವಚ. **T. foot** ನೀರಲ್ಲಿ ಬಹುವಾಗಿ ನಿಂತದ್ದರಿಂದ ಬರುವ, ಅರ್ಬುದ ವ್ಯಾಧಿಯಂಥ ಕಾಲಿನ ರೋಗ : ಕಂದಕ ಕಾಲುರೋಗ. **T. mortar** ಬಲವಾದ ಸಿಡಿಮದ್ದಿನ ಭಾರಿ ಮೊತ್ತವನ್ನು ಸ್ವಲ್ಪ ದೂರ ಎಸೆಯಬಲ್ಲ, ಕಂದಕಗಳಲ್ಲಿ ಉಪಯೋಗಿಸುವ, ಹಗುರ ಫಿರಂಗಿ : ಕಂದಕ ಫಿರಂಗಿ. **Trénchér**[1] (ನಾ.) ಕಂದಕ ತೋಡುವವನು, ಕಂದಕಗಾರ.

Trénchant ಟ್ರೆಂಚಂಟ್, ಟ್ರೆನ್ಷಂಟ್ (ಗು.) ಹರಿತವಾದ, ತೀಕ್ಷ್ಣವಾದ (T. blade, sword) (ಈಗ ವಾಚ್ಯಾರ್ಥದಲ್ಲಿ ವಿರ. ಪ್ರ.); (ರೂಪ.) (ಶೈಲಿ, ಭಾಷೆ, ನಡವಳಿಕೆ, ಮೊ. ಗಳ ವಿಷಯದಲ್ಲಿ) ಚುರುಕಾದ, ಖಂಡಿಸುವ, ಕಟುವಾದ, ಚುಚ್ಚುವ. **Trénchantly** (ಕ್ರಿ. ವಿ.); **Trénchancy** (ನಾ.)

Trénchér[1]. **Trench** ನೋಡಿ.

Trénchér[2] ಟ್ರೆಂಚರ್, ಟ್ರೆನ್‌ಷರ್ (ನಾ.) (ಈಗ ಮು., ಮೇಜಿನಮೇಲೆ ರೊಟ್ಟಿ ಕೊಯ್ಯುವುದಕ್ಕಾಗಿ ಉಪಯೋಗಿಸುವ) ಮರದ—ತಟ್ಟೆ, ಪರಾತ; (ಪ್ರಾಚೀ. ಪ್ರ.) ಭೋಜನ (ಸುಖ), ಊಟ [(ಮು., ವಿಶೇಷಣ ಪ್ರ. ಅಥವಾ ಸಮಾಸ ಪ್ರ.) : T. companions ಊಟದ ಸಂಗಾತಿಗಳು. T.-valiant ಭೋಜನ ಶೂರ]. T. cap ಕಾಲೇಜಿನವರ ಚೌಕನೆಯ ಟೋಪಿ. T.-fed (ಬೇಟೆನಾಯಿಗಳ ವಿಷಯದಲ್ಲಿ) ಬೇಟೆ ಪಡೆಯವರು ತಾವು ತಾವು ಪ್ರತ್ಯೇಕವಾಗಿ ಸಾಕಿಕೊಂಡಿರುವ. **Trénchérman** (ನಾ.) ಊಟಗಾರ, ಭೋಕ್ತ (Good, poor, t.)

Trend ಟ್ರೆಂಡ್ (ಕ್ರಿ. ಅಕ., ನಾ.) —ದಿಕ್ಕಿಗೆ ತಿರುಗಿಕೊಂಡಿರು, ಅಭಿಮುಖವಾಗಿರು; —ಕಡೆಗೆ ಚಾಚಿರು, ಹಾಯ್ದಿರು [Coast trends (towards the) south]; (ರೂಪ.) ಪ್ರವೃತ್ತಿ ಇರು, ಪ್ರವಣತೆಯಿರು, ಒಲವಿರು, ಒಲೆ (*Towards* ಮೊ. ಉಪ. ದೊಡನೆ). (ನಾ.) (ಮು., ರೂಪ.) (ಘಟನೆ, ಅಭಿಪ್ರಾಯ, ಮೊ. ಗಳ) ಒಲವು, ಪ್ರವೃತ್ತಿ, ಪ್ರವಣತೆ.

Trente-et-quarante (F) ಟ್ರಾಂಟೇಕಾರಾಂಟ್ (ನಾ.) = Rouge-et-noir (Rouge[1] ನೋಡಿ)

Trepán[1] ಟ್ರಿಪ್ಯಾನ್ (ನಾ., ಕ್ರಿ. ಸಕ.) (ಮಿದುಳಿನಮೇಲಿನ ಭಾರವನ್ನು ಕಡಮೆ ಮಾಡುವುದಕ್ಕಾಗಿ ತಲೆಚಿಪ್ಪಿನ ಎಲುಬನ್ನು ಕೊರೆಯಲು ಉಪಯೋಗಿಸುವ ಶಸ್ತ್ರಚಿಕಿತ್ಸಕನ) ಉರುಳೆ ಗರಗಸ, ತಲೆಕೊರಕ; ಸುರಂಗ ಕೊರೆಯುವ ಯಂತ್ರ : ಸುರಂಗ—ಕೊರಕ, ಬೈರಿಗೆ. (ಕ್ರಿ.) (ತಲೆಚಿಪ್ಪನ್ನು) ಉರುಳೆ ಗರಗಸದಿಂದ ಕೊರೆ. **Trepanátion** (ನಾ.); **Trepánning** (ನಾ.)

Trepán[2] ಟ್ರೆ(ಟ್ರಿ)ಪ್ಯಾನ್ (ಕ್ರಿ. ಸಕ.) ಮೋಸಗೊಳಿಸು, ಮೋಸದಿಂದ ಸಿಕ್ಕಿಸು; ಬಲೆಗೆ—ಬೀಳಿಸು, ಕೆಡವು; ವಂಚಿಸು, ಠಕ್ಕಿಸು (*Into*, *from*, place, etc. ; *Into* doing)

Trephíne ಟ್ರಿಫೈ(ಫೀ)ನ್ (ನಾ., ಕ್ರಿ. ಸಕ.) ಒಂದು ಬಗೆಯ ಸುಧಾರಿಸಿದ ಉರುಳೆ ಗರಗಸ, ತಲೆ(ಬುರುಡೆ) ಕೊರಕ, ಕಪಾಲ ಬೈರಿಗೆ. (ಕ್ರಿ.) (ಕಪಾಲ, ಕಣ್ಣುಗುಡ್ಡೆ, ವ್ಯಕ್ತಿ, ಮೊ. ನ್ನು) ಕೊರಕದಿಂದ, ಬೈರಿಗೆಯಿಂದ, —ಕೊರೆ.

Trepidátion ಟ್ರೆಪಿಡೇಷನ್ (ನಾ.) ಗಾಬರಿ, ಕಳವಳ, ತಲ್ಲಣ; (ಪಾರ್ಶ್ವವಾಯು, ಮೊ. ಗಳಲ್ಲಿ ಬರುವ) ಅದಿರು, ನಡುಕ, ಕಂಪ; (ಚರಿತ್ರೆ) (ಸಂಕ್ರಾಂತಿ ವೃತ್ತದ ವಿಷುವದ್ಬಿಂದುಗಳ ಅಯನಾಂಶಕ್ಕೆ ಕಾರಣವೆಂದು ಹಿಂದೆ ಭಾವಿಸಿದ್ದ) ಕ್ರಾಂತಿವೃತ್ತದ ಆಂದೋಲನ.

Tréspass ಟ್ರೆಸ್‌ಪಸ್ (ಕ್ರಿ. ಅಕ., ನಾ.) (ನೆಲ, ಹಕ್ಕು, ಮೊ. ಗಳ ಮೇಲೆ) ಅತಿಕ್ರಮ ಪ್ರವೇಶಮಾಡು, ಅತಿಕ್ರಮಿಸು, ನುಗ್ಗಿಕೊಂಡು ಹೋಗು, ಉಲ್ಲಂಘಿಸು [*On*, *upon* ಉಪ. ದೊಡನೆ. T. on one's preserves (ರೂಪ.) ಒಬ್ಬನ ಮೀಸಲು ವಿಷಯದಲ್ಲಿ ಕೈಹಾಕು, ಪ್ರವೇಶಮಾಡು]; ಮೇಲೆಬಿದ್ದು ಹೋಗು, ಒತ್ತಾಯಪಡಿಸು [(ಮು., ಮರ್ಯಾದೆಯ ಒಕ್ಕಣೆಗಳಲ್ಲಿ ಪ್ರ.): Shall t. on your hospitality ನಿಮ್ಮ ಆತಿಥ್ಯಕ್ಕಾಗಿ ಮನೆಗೆ ನುಗ್ಗಿಬಂದಿದ್ದೇನೆ]; ಎಲ್ಲೆ, ಮಿತಿ,—ಮೀರು; (ನ್ಯಾಯ, ತತ್ತ್ವ, ಮೊ. ಗಳಿಗೆ) ಅಪರಾಧಮಾಡು, ಅಪಚಾರ ಮಾಡು, ತಪ್ಪುಮಾಡು [*Against* ಉಪ. ದೊಡನೆ (ಈಗ, ಮು., ಸಾಹಿತ್ಯ ಪ್ರ.) : Forgive them that t. against us]. (ನಾ.) ಅತಿಕ್ರಮ ಪ್ರವೇಶ, ಅತಿಕ್ರಮಣ, ಉಲ್ಲಂಘನೆ; (ನ್ಯಾ. ಶಾ.) (ಸಾಮಾನ್ಯ) ಅಪರಾಧ; ಅಪಚಾರ, ತಪ್ಪು; ಅತಿಕ್ರಮ ಪ್ರವೇಶದಿಂದಾದ ನಷ್ಟದ ಪರಿಹಾರಕ್ಕಾಗಿ ಹೂಡಿದ ದಾವೆ: ಅತಿಕ್ರಮ ಪರಿಹಾರ ದಾವೆ (= Action of t.). T.-offering (ಮೋಸೆಸಿನ ಕಟ್ಟಳೆಗಳನ್ನು ಮೀರಿದ್ದಕ್ಕೆ ಪರಿಹಾರವಾಗಿ ನಡಸುವ) ಪ್ರಾಯಶ್ಚಿತ್ತ—ಯಜ್ಞ, ಬಲಿ. **Tréspasser** (ನಾ.) ಅತಿಕ್ರಮ ಪ್ರವೇಶಕ; ಅಪರಾಧಿ.

Tress ಟ್ರೆಸ್ (ನಾ., ಕ್ರಿ. ಸಕ.) (ಮು., ಹೆಂಗಸಿನ) ಹೆರಳು, ಜಡೆ; (ಬ. ವ. ದಲ್ಲಿ) (ಮು., ಹೆಂಗಸಿನ) ತಲೆಕೂದಲು, ಕೇಶರಾಶಿ. (ಕ್ರಿ.) ಹೆರಳು, ಜಡೆ, —ಹಾಕು (ಮು., ಭೂ. ಕೃ. ನಲ್ಲಿ). **(-)tressed** (ಗು.); **Tréssy** (ಗು.) ಜಡೆ, ಹೆರಳು, —ತೂಗುವ; ಕೇಶರಾಶಿಯುಳ್ಳ; ಜಡೆಯಂಥ, ಹೆರಳಂಥ.

Tréstle ಟ್ರೆಸ್‌ಲ್ (ನಾ.) ಮೇಜು, ಬೆಂಚು, ಮಂಚ, ಮೊ. ಗೆ ಉಪಯೋಗಿಸಿಕೊಳ್ಳಲಾಗುವ ಹಲಗೆಗೆ ಊರೆಯಾಗಿರುವ, ಕೀಲುಗೂಡಿಸಿದ ಕಾಲುಗಳ ಅಥವಾ ಪಟ್ಟಿಗಳ ಜೊತೆಗಳಲ್ಲೊಂದು : ಊರೆಕಟ್ಟು, ಕಾಲಟ್ಟ; (ಸೇತುವೆ, ಮೊ. ಗಳಿಗೆ ಆಧಾರವಾದ) ಮರದ ಅಥವಾ ಲೋಹದ ಕಟ್ಟು : ಆಸರೆಕಟ್ಟು (= T.-work); (ನಾವೆ) ಮೇಲ್ಲೂವೆ, ಮೊ. ಕ್ಕೆ ಆಧಾರವಾಗಿ, ಕೆಳ ಕೂವೆಯಲ್ಲಿರುವ ಅಡ್ಡ ಜೋಡುಪಟ್ಟಿ (ಗಳಲ್ಲೊಂದು) : ಊರೆಪಟ್ಟಿ (= T.-tree)

Tret ಟ್ರೆಟ್ (ನಾ.) (ವ್ಯಾಪಾರ) ಕೆಲವು ಸರಕುಗಳ ಮಾರಾಟದಲ್ಲಿ ಕೊಂಡುಕೊಂಡ ಪ್ರತಿ ೧೦೪ ಪೌಂಡು ತೂಕಕ್ಕೆ ಕೊಸರಾಗಿ ಕೊಡುತ್ತಿದ್ದ ೪ ಪೌಂಡು ತೂಕ : ಮೇಲ್ತೂಕ, ಕೊಸರು.

Trevet = Trivet.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Trews ಟ್ರೂಸ್ (ನಾ., ಬ. ವ.) (ಸ್ಕಾಟ್ಲೆಂಡಿನ ಮೇಲ್ನಾಡಿಗರು ತೊಡುವ) ಉಣ್ಣೆಯ ಪಪ್ಪಳಿ ಬಟ್ಟೆಯ ಷರಾಯಿ.

Trey ಟ್ರೇ (ಗು.) (ದಾಳ) ಮೂರರ ಗರ ; (ಇಸ್ಪೀಟು) ಮೂರನೆಯ ಬಂದು.

Tri- ಟ್ರೈ—, ಟ್ರಿ— (ಸ. ಪೂ. ಪ.) ಮೂರು—, ಮೂರು ಮಡಿ—, ತ್ರಿ—, ತ್ರಿಗುಣ—, ತ್ರೈ—. **-adélphous** ಕೇಸರಗಳು ಮೂರು ತಂಡವಾಗಿರುವ; ತ್ರಿಗುಚ್ಛ ಕೇಸರಿ, ತ್ರಿಕೇಸರ ಗುಚ್ಛ. **-ándrous** ಮೂರು ಕೇಸರಗಳುಳ್ಳ, ತ್ರಿಕೇಸರಿ. **-ápsidal** (ವಾ. ಶಾ.) ತ್ರಿದಳಾಕಾರದ, ತ್ರಿಕೂಟ. **-básic** (ಆಮ್ಲ) ಕ್ಷಾರದಿಂದ ಪಲ್ಲಟವಾಗುವ ಮೂರು ಜಲಜನಕ ಪರಮಾಣುಗಳುಳ್ಳ ; (ಲವಣ) ಮೂರು ಕ್ಷಾರೀಯ ಅಣುಗಳುಳ್ಳ; ತ್ರಿಕ್ಷಾರಕ. **-bráchial** ಮೂರು—ಕವಲಿನ, ಹಲ್ಲಿನ (ಸಲಕರಣೆ, ಆಯುಧ, ಮೊ.) (ಉದಾ., ತ್ರಿಶೂಲ). **-cápsular** (ಸ. ವಿ., ಪ್ರಾ. ವಿ.) ಮೂರು ಬೀಜಕೋಶಗಳುಳ್ಳ, ತ್ರಿಕೋಶಿ. **-cárpous** ಮೂರು ಶಲಾಕಾಕೋಶಗಳನ್ನು ಬಿಡುವ, ಮೂರು ಹಣ್ಣುಗಳು ಬಿಡುವ ; ತ್ರಿಫಲಿ. **-centenary** = Tercentenary (ಆ ಪದ ನೋಡಿ). **-chord** (ಗು., ನಾ.) ಮೂರು ತಂತಿಯ (ವಾದ್ಯ) ; (ಪಿಯಾನೊ ವಾದ್ಯದ ವಿಷಯದಲ್ಲಿ) ಪ್ರತಿ ಸ್ವರಕ್ಕೂ ಮೂರು ತಂತಿಗಳುಳ್ಳ. **-chromátic** ಮೂರು ಬಣ್ಣದ, ತ್ರಿವರ್ಣ [T.-c. photography = Three-colour process (Three ನೋಡಿ)]. (ಕಣ್ಣಿನ ವಿಷಯದಲ್ಲಿ) ಕೆಂಪು, ಹಸುರು, ಊದಾ—ಈ ಮೂರು ಬಣ್ಣಗಳನ್ನು ಗ್ರಹಿಸುವ ಶಕ್ತಿಯುಳ್ಳ: ತ್ರಿವರ್ಣ ಗ್ರಾಹಿ. **-chrómatism** (ನಾ.); **-corn** ಮೂರು ಕೊಂಬುಗಳು, ಕೋಡುಗಳು, ಉಳ್ಳ: ಮುಕ್ಕೋಡಿನ, ತ್ರಿಶೃಂಗಿ; (ನಾ.) ಅಂಚನ್ನು ಮೂರು ಕಡೆಗಳಲ್ಲಿ ಮೇಲಕ್ಕೆ ಬಗ್ಗಿಸಿದ ಟೊಪ್ಪಿಗೆ : ಮುಪ್ಪಕ್ಕದ ಟೊಪ್ಪಿಗೆ ; (ಬಳ. ವಾ.) ಫ್ರೆಂಚ್ ಪೋಲೀಸಿನವನ ಇಪ್ಪಕ್ಕದ ಟೊಪ್ಪಿಗೆ (= **T.-corne**). **-córporal, -córporate** (ವಂಶಲಾಂಛನ ವಿದ್ಯೆ) ಒಂದು ತಲೆಯೂ ಮೂರು ಮೈಯೂ ಉಳ್ಳ, ಮುಮ್ಮೈಯ. **-cotylédonous** ಮೂರು ಬೀಜದಳಗಳುಳ್ಳ, ತ್ರಿಬೀಜದಳ. **-crótic** (ನಾಡಿಯ ವಿಷಯದಲ್ಲಿ) ಮೂರು ತುಡಿತವುಳ್ಳ, ತ್ರಿಸ್ಪಂದಿ. **-cúspid** ಮೂರು ಮೊನೆಗಳುಳ್ಳ, ತ್ರ್ಯಗ್ರ [T.-cuspid valve (ಹೃದಯದ) ತ್ರ್ಯಗ್ರ ಕವಾಟ. T.-cuspid murmur ತ್ರ್ಯಗ್ರ ಕವಾಟದ (ಅವ್ಯವಸ್ಥೆಯಿಂದಾಗುವ) ಮರ್ಮರ ಶಬ್ದ]. **-dáctyl(ous)** ಮೂರು ಬೆರಳುಳ್ಳ, ತ್ರ್ಯಂಗುಲಿ. **-déntate** ಮೂರು ಹಲ್ಲುಗಳುಳ್ಳ, ಮೂರು ಕವಲುಗಳುಳ್ಳ; ತ್ರಿದಂತಿ, ತ್ರಿಶೂಲಿ. **-dígitate** = -dactyl. **-diménsional** ಮೂರು ಪರಿಮಾಣಗಳುಳ್ಳ, ತ್ರಿಪರಿಮಾಣಕ. **-fácial** (ಗು., ನಾ.) ತ್ರಿಕ್ರಿಯಾನರ(ದ) (-geminus ನೋಡಿ). **-flóral, -flórous** ಮೂರು ಹೂವುಳ್ಳ, ತ್ರಿಪುಷ್ಪಿ. **-fóliate, -fóliolate** (ಸಂಯುಕ್ತ ಪರ್ಣದ ವಿಷಯದಲ್ಲಿ) ತ್ರಿಪರ್ಣಕ ; (ಸಸ್ಯದ ವಿಷಯದಲ್ಲಿ) ತ್ರಿಪರ್ಣಕ ಎಲೆಗಳುಳ್ಳ. **-fóliated** (ಸ. ವಿ.) = T.-foliate ; (ವಾ. ಶಾ.) ತ್ರಿದಳಾಲಂಕಾರದ. **-form(ed)** ಮೂರು ಭಾಗಗಳುಳ್ಳ; ಮೂರು —ರೂಪಗಳುಳ್ಳ, ದೇಹಗಳುಳ್ಳ; ತ್ರಿರೂಪಿ. **-fúrcate** (ಗು., ಕ್ರಿ.) ಮೂರು ಕವಲುಗಳುಳ್ಳ, ತ್ರಿಶೂಲಿ. (ಕ್ರಿ.) ಮೂರು ಕವಲು—ಆಗು, ಮಾಡು. **-géminal** (ಗು., ನಾ.) ಮುಕ್ಕೂಟ, ಮುಮ್ಮಡಿ, ತ್ರಿಗುಣ ; ತ್ರಿಕ್ರಿಯಾನರ(ದ). **-géminus** ಚಲನೆ, ವೇದನೆ, ರುಚಿ—ಈ ಮೂರು ಶಕ್ತಿಗಳುಳ್ಳ ಕಪಾಲದ ಒಂದು ನರ; ತ್ರಿಕ್ರಿಯಾನರ. **-glot** ಮೂರು ಭಾಷೆಗಳಲ್ಲಿ ಬರೆದಿರುವ, ತ್ರಿಭಾಷಿ, ತ್ರೈಭಾಷಿಕ. **-goneútic** (ಕ್ರಿಮಿಶಾಸ್ತ್ರ) ವರ್ಷಕ್ಕೆ ಮೂರು ಬಾರಿ ಸಂತಾನ ವೃದ್ಧಿ ಮಾಡುವ ; ತ್ರಿಸಂಜನಿ. **-gram, -graph** ಒಂದು ಧ್ವನಿಯನ್ನು ಸೂಚಿಸುವ ಮೂರಕ್ಷರ ತಂಡ ; ತ್ರ್ಯಕ್ಷರಿ. **-gynous** ಮೂರು (ಪುಷ್ಪ)ಶಲಾಕೆಗಳುಳ್ಳ, ತ್ರಿಶಲಾಕಿ. **-hédral** ಮೂರು ಸಮತಲಗಳುಳ್ಳ, ಮೂರು ಮುಖಗಳುಳ್ಳ, ತ್ರಿಮುಖಿ. **-júgate, -júgous** (ಸ. ವಿ.) ಮೂರು ಜೋಡಿಗಳುಳ್ಳ, ಮೂರು ಜೋಡಿಗಳಾಗಿ ಅಳವಟ್ಟ ; ಮೂಜೋಡಿ, ತ್ರಿಯುಗ್ಮ. **-labe** (ವೈ. ಶಾ.) ಅಶ್ಮರಿ, ಮೊ. ನ್ನು ಹೊರತೆಗೆಯಲು ಉಪಯೋಗಿಸುವ ಮೂರು ಮೊನೆಯ ಶಸ್ತ್ರ: ತ್ರಿಶೂಲ, ತ್ರಿಶೃಂಗಿ. **-lábiate** ಮೂರು ತುಟಿಗಳುಳ್ಳ, ಮುತ್ತುಟಿಯ. **-láminar** ಮೂರು ಪದರಗಳುಳ್ಳ, ಮುಪ್ಪದರದ, ತ್ರಿಸ್ತರ. **-láteral** (ಗು., ನಾ.) ಮೂರು ಪಕ್ಕಗಳ, ತ್ರಿಪಾರ್ಶ್ವ ; (ವ್ಯವಹಾರದ ವಿಷಯದಲ್ಲಿ) ಮೂರು ಪಕ್ಷಗಳಿರುವ, ತ್ರಿಪಕ್ಷ, ತ್ರಿಪಕ್ಷೀಯ. (ನಾ.) ತ್ರಿಭುಜ, ತ್ರಿಪಾರ್ಶ್ವ ಪ್ರದೇಶ. **-láterally** (ಕ್ರಿ. ವಿ.) ; **-lémma** ಮೂರರಲ್ಲೊಂದನ್ನು ಆಯ್ದುಕೊಳ್ಳಬೇಕಾದ ಸ್ಥಿತಿ ; ತ್ರಿಮಾರ್ಗ ಪ್ರಶ್ನೆ. **-linear** ಮೂರು ಗೆರೆಯ, ತ್ರಿರೇಖಿ. **-língual** ಮೂರು ಭಾಷೆಗಳ(ಲ್ಲಿ ಹೇಳಿದ), ತ್ರಿಭಾಷಿ. **-líteral** ಮೂರಕ್ಷರದ, ತ್ರ್ಯಕ್ಷರಿ ; (ಸೆಮಿಟಿಕ್ ಭಾಷೆಗಳ ವಿಷಯದಲ್ಲಿ) (ಬಹು ಪಾಲು ಪ್ರಕೃತಿಗಳು) ಮೂರು ವ್ಯಂಜನಗಳನ್ನುಳ್ಳ, ತ್ರಿವರ್ಣಾತ್ಮಕ. **-líteralism** (ನಾ.) ತ್ರಿವರ್ಣ ಪದ ಪ್ರಯೋಗ. **-literálity** (ನಾ.) ; **-lith** (ಎರಡು ನೇರವಾಗಿ ನಿಂತಿದ್ದು ಮೂರನೆಯದು ಅವುಗಳಮೇಲೆ ಅಡ್ಡಲಾಗಿರುವ) ಮುಕ್ಕಲ್ಲು (ಸ್ಮಾರಕ), ತ್ರಿಶಿಲಾ ಸ್ಮಾರಕ. **-líthic** (ಗು.); **-lóbate** ಮೂರು ಹಾಲೆಗಳುಳ್ಳ. **-lobite** ಮೂರು ಭಾಗಗಳುಳ್ಳ ಶರೀರವಿದ್ದ, ಈಗ ವಂಶ ನಷ್ಟವಾಗಿ ಹೋಗಿರುವ, ಒಂದು ಪ್ರಾಚೀನ ವರ್ಗದ ಪ್ರಾಣಿ: ತ್ರಿಖಂಡ ಪ್ರಾಣಿ. **-lobític** (ಗು.) ; **-lócular** ಮೂರು ಅಂಕಣಗಳು, ಗೂಡುಗಳು, ವಿಂಗಡಗಳು, —ಉಳ್ಳ : ತ್ರಿಕೋಶಿ. **-ménsual, -méstr(i)al** ಮೂರು ತಿಂಗಳಿಗೊಮ್ಮೆ ಬರುವ; ತ್ರೈಮಾಸಿಕ. **-mérous** ಮೂರು ಖಂಡಗಳುಳ್ಳ, ಮೂರು ಕೀಲುಗಳುಳ್ಳ, ತ್ರಿಖಂಡ, ತ್ರಿಸಂಧಿ (= 3 -merous). **-mórphous** (ಜೀ. ವಿ., ಸ. ವಿ., ಸ್ಫಟಿಕ ವಿಜ್ಞಾನ) ಮೂರು ರೂಪಗಳುಳ್ಳ, ತ್ರಿರೂಪಿ. **-mórphism** ತ್ರಿರೂಪತೆ, ತ್ರೈರೂಪ್ಯ. **-nérvate** ಮೂರು ನರಗಳುಳ್ಳ. **-nódal** (ಅಂ. ರ. ಶಾ., ಸ. ವಿ.) ಮೂರು ಕೀಲುಗಳು, ಗೆಣ್ಣುಗಳು, —ಇರುವ ; ತ್ರಿಸಂಧಿ. **-nómial** (ಗು., ನಾ.) ಮೂರು ಪದಗಳ (—ಪಾರಿಭಾಷಿಕ ಪದ, ಬೀಜಗಣಿತ ರಾಶಿ) ; ತ್ರೈಪದಿ. **-nómialism** (ಪ್ರಕೃತಿ ಚರಿತ್ರೆಯಲ್ಲಿ : ಜಾತಿ, ವರ್ಗ ಮತ್ತು ಒಳಭೇದಗಳ ಹೆಸರುಗಳನ್ನೊಳಕೊಂಡ) ತ್ರಿಪದ ಪ್ರಯೋಗ. **-oécious** (ಬೇರೆ ಬೇರೆ ಗಿಡಗಳಲ್ಲಿ) ಗಂಡು ಹೂವು, ಹೆಣ್ಣು ಹೂವು, ಮತ್ತು ಉಭಯ ಲಿಂಗದ ಹೂವು ಬಿಡುವ (ಜಾತಿಯ) : ತ್ರಿಲಿಂಗಿ. **-óxide** ಮೂರು ಆಮ್ಲಜನಕ ಪರಮಾಣುಗಳುಳ್ಳ ಆಮ್ಲಜನಕ ಸಂಯುಕ್ತ : ಟ್ರೈಆಕ್ಸೈಡು. **-pénnate** = T.-pinnate. **-pétalous** ಮೂರು ಎಸಳುಳ್ಳ, ತ್ರಿದಳ. **-phthong** ಮೂರು ಸ್ವರ ಕೂಡಿ ಒಂದು ಧ್ವನಿಯಾಗುವ, ತ್ರಿಸ್ವರಿ. **-phthóngal** ತ್ರಿಸ್ವರದ. **-phýllous** ಮೂರೆಲೆಯ, ತ್ರಿಪರ್ಣಿ. **-pínnate** ಮೂರು ತಂಡದ ಪರ್ಣಕಗಳುಳ್ಳ, ತ್ರಿಶ್ರೇಣಿಪರ್ಣಕ. **-rádial, -rádiate(d)** ಮೂರು ದಿಕ್ಕುಗಳಲ್ಲಿ ಹೋಗುವ, ತ್ರಿಪಥಗಾಮಿ ; ಮೂರು ಕಿರಣಗಳುಳ್ಳ, ತ್ರಿಕಿರಣ. **-sérial, -sériate** (ಅಂ. ರ. ಶಾ., ಸ. ವಿ.) ಮೂರು ಸಾಲಿನಲ್ಲಿ ಅಳವಟ್ಟ, ತ್ರಿಶ್ರೇಣಿಕ. **-spérmous** ಮೂರು ಬೀಜಗಳುಳ್ಳ, ತ್ರಿಬೀಜಕ. **-spórous, -spóric** ಮೂರು ಬೀಜಕಣ, ಜೀವಕಣ, ಉಳ್ಳ; ತ್ರಿಬೀಜ ಕಣ, ತ್ರ್ಯಂಕುರ. **-stichous** (—ಸ್ಟಿಕಸ್) (ಸ. ವಿ.) ಮೂರು ಲಂಬ ಸಾಲಿನಲ್ಲಿ ಅಳವಟ್ಟ. **-stigmátic** (ಸ. ವಿ.) ಮೂರು ಶಲಾಕಾಗ್ರವುಳ್ಳ, ತ್ರಿಶಲಾಕಾಗ್ರ. **-stýlous** (ಸ. ವಿ.) ಮೂರು ಶಲಾಕೆಗಳುಳ್ಳ, ತ್ರಿಶಲಾಕಿ. **-súlcate** (ಸ. ವಿ.) ಮೂರು ಗಾಡಿಗಳು ಇರುವ ; (ಪ್ರಾ. ವಿ.) ಮೂರು ಬೆರಳಾಗಿ, ಗೊರಸಾಗಿ, ವಿಂಗಡವಾಗಿರುವ ; ಮೂರಾಗಿ—ಒಡೆದ, ಕವಲಾದ. **-térnate** (ಸ. ವಿ.) ಇಪ್ಪತ್ತೇಳು ಪರ್ಣಕಗಳುಳ್ಳ; ತ್ರಿತ್ರಯ, ತ್ರಿತ್ರಿ, —ಪರ್ಣಕ. **-tone** (ಸಂ.) ಮೂರು ಸ್ವರಗಳ ಅಂತರ, ತ್ರಿಸ್ವರ. **-valent** (ರ. ವಿ.) ತ್ರಿಯೋಗಶಕ್ತ.

Tríable. **Try** ನೋಡಿ.

Triacontahédral ಟ್ರೈಅಕಾಂಟಹೀ(ಹೆ)ಡ್ರಲ್ (ಗು.) ೩೦ ಪಕ್ಕಗಳು, ಮುಖಗಳು, ಇರುವ : ತ್ರಿಂಶನ್ಮುಖ.

Tríad ಟ್ರೈಅ್ಯಡ್ (ನಾ.) ಮೂರರ—ತಂಡ, ಗುಂಪು ; ಮುಕ್ಕೂಟ; ತ್ರಿತಯ ; ತ್ರಯ ; ತ್ರಿಕ ; (ರ. ವಿ.) ತ್ರಿಯೋಗಶಕ್ತ (ಮೂಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಸ್ತು, ಘಟಕ) ; (ಸಂ.) ಸ್ವರತ್ರಯ (ಮೇಳ) ; (ವೆಲ್ಷ್ ಸಾಹಿತ್ಯದಲ್ಲಿ ಕಂಡುಬರುವ) ಮೂರು ಮೂರಾಗಿ ಗುಂಪುಮಾಡಿ ವಿಷಯ ವಿವರಣೆ ಮಾಡುವ ಕ್ರಮ : ಮುಕ್ಕೂಟ ರಚನೆ. **Triádic** —ಆ್ಯಡಿಕ್ (ಗು.)

Tríage ಟ್ರೈಯೆ(ಯಿ)ಜ್ (ನಾ.) ಕಳಪೆ, ಚೀಕಲು, —ಕಾಫಿ ಬೀಜ.

Trial. Try ನೋಡಿ.

Tríangle ಟ್ರೈಆ್ಯಂಗ್‌ಲ್ (ನಾ.) ಮುಮ್ಮೂಲೆ, ತ್ರಿಕೋನ, ತ್ರಿಭುಜ (—ಆಕೃತಿ) [Equilateral t. ಸಮತ್ರಿಭುಜ, ಸಮ(ಬಾಹು) ತ್ರಿಕೋನ. Isosceles t. ಸಮದ್ವಿಬಾಹು ತ್ರಿಕೋನ. Right-angled t. ಸಮಕೋನ, ಕಾಟಕೋನ, —ತ್ರಿಕೋನ. Scalene t. (Scalene ನೋಡಿ). Spherical t. (Sphere ಕೆಳಗೆ Spherical ನೋಡಿ)]. ಒಂದೇ ಸರಳರೇಖೆಯಲ್ಲಿಲ್ಲದ ಮೂರು ಬಿಂದುಗಳೂ ಅವುಗಳನ್ನು ಕೂಡಿಸಬಹುದಾಗಿ ಭಾವಿಸಿಕೊಳ್ಳಲಾಗುವ ಗೆರೆಗಳೂ ಸೇರಿ ಆದ ತ್ರಿಕೋನ : ಕಲ್ಪನೆಯ ತ್ರಿಕೋನ ; (ರೇಖನ ಸಲಕರಣೆಯಾದ) ಮುಮ್ಮೂಲೆ—ಪಟ್ಟಿ, ತಗಡು; (ನಾವೆ) (ಭಾರಗಳನ್ನು ಎತ್ತಲು ಉಪಯೋಗಿಸುವ ದೂಲಗಳ) ಮುಮ್ಮೂಲೆ ಕಟ್ಟು ; (ಸಂ.) ಉಕ್ಕಿನ ಕಡ್ಡಿಯಿಂದ ಹೊಡೆದು ನಾದ ಬರಿಸುವ, ತ್ರಿಕೋನಾಕಾರದಲ್ಲಿ ಬಗ್ಗಿಸಿ ಒಂದು ಮೂಲೆಯಲ್ಲಿ ಕೂಡಿಸದೆ ಬಿಟ್ಟಿರುವ ಉಕ್ಕಿನ ಕಂಬಿಯ ವಾದ್ಯ: ತ್ರಿಕೋನ ವಾದ್ಯ; (ಚರಿತ್ರೆ) (ಚೆಡಿಯಿಂದ ಹೊಡೆದು ಶಿಕ್ಷಿಸುವುದಕ್ಕಾಗಿ ಸಿಪಾಯಿಯನ್ನು ಕಟ್ಟುತ್ತಿದ್ದ, ತುದಿಯಲ್ಲಿ ಒಟ್ಟುಗೂಡಿಸಿ ಕಟ್ಟಿದ) ಮೂರು ಈಟಿಗೂಡಲಿಗಳ ನಿಲುಕಟ್ಟು: ಮುಕ್ಕಾಲು ನಿಲುಕಟ್ಟು. (T-) ಉತ್ತರ ದಿಕ್ಕಿನ ಒಂದು ನಕ್ಷತ್ರಪುಂಜ. The eternal t. (Eternal ನೋಡಿ). Triangles of the neck (ಶಸ್ತ್ರಚಿಕಿತ್ಸೆಯ ಉದ್ದೇಶದಿಂದ ವಿಂಗಡಿಸಿಕೊಂಡಿರುವ) ಕೊರಲ ತ್ರಿಕೋನ ಪ್ರದೇಶಗಳು. Solution of a t. ದತ್ತ ಭುಜಗಳು ಮತ್ತು ಕೋನಗಳಿಂದ ಮಿಕ್ಕ ಭುಜಗಳನ್ನೂ ಕೋನಗಳನ್ನೂ ಕಂಡುಹಿಡಿಯುವುದು : ತ್ರಿಕೋನ ಪೂರಣ. T. of forces ಸಮತೋಲನ ಸ್ಥಿತಿಯ ಮೂರು ಬಲಗಳನ್ನು ಪರಿಮಾಣದಲ್ಲೂ ದಿಕ್ಕಿನಲ್ಲೂ ನಿರ್ದೇಶಿಸುವ, ಕ್ರಮವಾದ ಮೂರು ಭುಜಗಳುಳ್ಳ ತ್ರಿಕೋನ : ಬಲ ತ್ರಿಕೋನ ; ಅಂಥ ಮೂರು ಬಲಗಳನ್ನು ತ್ರಿಕೋನದ ಮೂರು ಬಾಹುಗಳಿಂದ ನಿರ್ದೇಶಿಸಬಹುದೆಂಬ ತತ್ತ್ವ : ಬಲ ತ್ರಿಕೋನ ತತ್ತ್ವ. **Triángular** (ಗು.) ತ್ರಿಕೋನಾಕಾರದ, ಮುಮ್ಮೂಲೆಯ. T. Treaty, duel ತ್ರಿಪಕ್ಷೀಯ—ಕರಾರು, ಯುದ್ಧ. T. compasses ಮೂರು ಕಾಲಿನ ಕೈವಾರ. T. numbers ೧, ೨, ೩, ೪—ಇತ್ಯಾದಿ ನಿಸರ್ಗ ಸಂಖ್ಯಾ ಶ್ರೇಣಿಯ ಮೊದಲ n ಸಂಖ್ಯೆಗಳ ಅನುಕ್ರಮ ಮೊತ್ತ : ಮುಮ್ಮೂಲೆಯ ಸಂಖ್ಯೆಗಳು (ಶ್ರೇಣಿಯಲ್ಲಿ ಮೊದಲ ಸಂಖ್ಯೆಯ ಮೊತ್ತ =೧; ಮೊದಲೆರಡು ಸಂಖ್ಯೆಗಳ ಮೊತ್ತ=೩; ಮೊದಲ ಮೂರು ಸಂಖ್ಯೆಗಳ ಮೊತ್ತ=೬ ; ಹೀಗೆಯೇ ಮುಂದುವರಿಸಿದರೆ ೧೦, ೧೫, ೨೧ ಮೊ. ಬರುತ್ತವೆ. ಆದ್ದರಿಂದ ೧, ೩, ೬, ೧೦, ೧೫, ೨೧, ೨೮, ೩೬, ೪೫, ೫೫, ಇತ್ಯಾದಿ ಸಂಖ್ಯೆಗಳು ಮುಮ್ಮೂಲೆಯ ಸಂಖ್ಯೆಗಳು) (ಈ ಸಂಖ್ಯೆಗಳಷ್ಟು ಚುಕ್ಕಿಗಳನ್ನು ಒಂದು ಸಮತ್ರಿಕೋನ ರೂಪದಲ್ಲಿ ವಿನ್ಯಾಸಮಾಡಬಹುದು). T. pyramid ತ್ರಿಕೋನ(ತಲದ) ಗೋಪುರಾಕೃತಿ. **Tri-angulárity** (ನಾ.) ; **Triángularly** (ಕ್ರಿ. ವಿ.) ; **Triángulate** —ಲೇಟ್ (ಕ್ರಿ. ಸಕ., ಗು.) ತ್ರಿಕೋನ, ಮುಮ್ಮೂಲೆ, —ಮಾಡು ; (ಮೋಜಣಿಗಾಗಿ ; ಪ್ರದೇಶ, ಮೊ. ನ್ನು) ತ್ರಿಕೋನಗಳಾಗಿ ವಿಂಗಡಿಸು ; (ಎತ್ತರ, ದೂರ, ಮೊ. ನ್ನು) ತ್ರಿಕೋನ ವಿಂಗಡಿಕೆಯಿಂದ, ತ್ರಿಕೋನ ಮಾನದಿಂದ, —ಕಂಡುಹಿಡಿ. (ಗು.) —ಲೆಟ್ (ಪ್ರಾ. ವಿ.) ತ್ರಿಕೋನಾಕಾರದ ಗುರುತುಗಳುಳ್ಳ, ತ್ರಿಕೋನಾಂಕಿತ. **Triángu-lately** (ಕ್ರಿ. ವಿ.) ; **Triangulátion** (ನಾ.) ; **Triánguloid** (ಗು.) ಸರಿಸುಮಾರು ತ್ರಿಕೋನಾಕಾರದ, ತ್ರಿಕೋನ ಕಲ್ಪ.

Trías ಟ್ರೈಆ್ಯಸ್ (ನಾ.) (ಭೂ. ವಿ.) ಜುರಾಸಿಕ್ ಸ್ತರಗಳ ಕೆಳಗಿನ ಸ್ತರ (ಈ ಸ್ತರವನ್ನು ಮೂರು ಗುಂಪಾಗಿ ವಿಂಗಡಿಸಬರುವುದರಿಂದ ಈ ಹೆಸರು) : ತ್ರಿಸ್ತರ. **Triássic** (ಗು.)

Triátic stay ಟ್ರೈಆ್ಯಟಿಕ್ ಸ್ಟೇ (ನಾ.) (ನಾವೆ) ಮುನ್ ಕೂವೆಯ ಮತ್ತು ಮುಖ್ಯ ಕೂವೆಯ ತಲೆಗಳಿಗೆ ಬಿಗಿಯುವ ಹಗ್ಗ.

Tríbadism ಟ್ರಿಬಡಿಸ್ಮ್ (ನಾ.) ಪರಸ್ಪರ ಸ್ತ್ರೀ ಮೈಥುನ.

Tribe ಟ್ರೈಬ್ (ನಾ.) ಗೊತ್ತಾದ ನಾಯಕನುಳ್ಳ, ಅನಾಗರಿಕ ಜನರ ಅಥವಾ ಮನೆತನಗಳ ತಂಡ: ಬುಡಕಟ್ಟು, ಬಣ, ಕುಲ ; (ರೋಮನ್ ಚರಿತ್ರೆ) ರಾಜಕೀಯ ಪಂಗಡ, ವರ್ಗ (ಮೊದಲು ೩ ಇದ್ದದ್ದು ಕ್ರಮೇಣ ೩೫ ಆಯಿತು); ಒಬ್ಬ ಮೂಲಪುರುಷನಿಂದ ಬಂದ ಸಂತತಿ(ಯವರ ಗುಂಪು) : ಗೋತ್ರ [The twelve tribes (of the Israelites) ಜೇಕಬ್ಬಿನ ೧೨ ಮಕ್ಕಳಿಂದ ಬಂದ (ಯಹೂದ್ಯರ) ಹನ್ನೆರಡು ಗೋತ್ರಗಳು. The ten tribes (ಇವುಗಳಲ್ಲಿ ಜೂಡ ಮತ್ತು ಬೆಂಜಮಿನ್ ಗೋತ್ರಗಳನ್ನು ಬಿಟ್ಟು ಮಿಕ್ಕ) ದಶ ಗೋತ್ರಗಳು. The lost tribes ಷಾಲ್ಮನೀಸರ್ ದೊರೆಯಿಂದ ಗಡೀಪಾರಾದ ಹತ್ತು ಗೋತ್ರಗಳು] ; (ಪ್ರಾ. ವಿ., ಸ. ವಿ.) (ಸಸ್ಯಗಳ ಅಥವಾ ಪ್ರಾಣಿಗಳ) ಪಂಗಡ (ಉಪಕುಲದ ಕೆಳಗಣ ವಿಂಗಡ); (ಸಾ., ತಿರಸ್ಕಾರ ಪ್ರ.) (ಒಂದೇ ಕಸಬಿನ) ಜನವರ್ಗ, ತಂಡ (The whole t. of actors. The scribbling t. ಲೇಖಕ ವರ್ಗ). **Tríbesman** (ನಾ.) ಬಣದವನು; ಸಗೋತ್ರದವನು, ಸ್ವಕುಲದವನು. **Tríbal** (ಗು.) ; **Tríbalism** (ನಾ.) ಬಣ—ಪದ್ಧತಿ, ವ್ಯವಸ್ಥೆ. **Tríbally** (ಕ್ರಿ. ವಿ.)

Tríblet ಟ್ರಿಬ್ಲೆಟ್, **Tríbolet** ಟ್ರಿಬೊಲೆಟ್ (ನಾ.) (ಬಳೆ, ಕೊಳವೆ, ಮೊ. ನ್ನು ಮಾಡಲು ಉಪಯೋಗಿಸುವ) ಲೋಹದ ದಂಡ, ಕಂಬಿ.

Tribómeter ಟ್ರೈಬಾಮಿಟರ್ (ನಾ.) ಜಾರುವಲ್ಲಿ ತಲೆದೋರುವ ಘರ್ಷಣವನ್ನು ಅಳೆಯುವ ಸಲಕರಣೆ : ಘರ್ಷಣ ಮಾಪಕ.

Tríbrach ಟ್ರಿಬ್ರ್ಯಾಕ್ (ನಾ.) ತ್ರಿಲಘು ಗಣ, ನಗಣ (∪∪∪). **Tri-bráchic** (ಗು.)

Tribulátion ಟ್ರಿಬ್ಯುಲೇಷನ್ (ನಾ.) ತೀವ್ರ—ಯಾತನೆ, ಪರೀಕ್ಷೆ ; ಸಂಕಟ, ಕ್ಲೇಶ.

Tribúnal ಟ್ರಿ(ಟ್ರೈ)ಬ್ಯೂನಲ್ (ನಾ.) ನ್ಯಾಯಾಧಿಪತಿಗಳು ಕುಳಿತುಕೊಳ್ಳುವ ಪೀಠ: ನ್ಯಾಯಾಸನ, ಧರ್ಮಾಸನ, ನ್ಯಾಯಪೀಠ ; ನ್ಯಾಯಸ್ಥಾನ [(ಅನೇಕ ವೇಳೆ ರೂಪ.) Before the t. of public opinion ಜನಾಭಿಪ್ರಾಯದ ನ್ಯಾಯಸ್ಥಾನದಲ್ಲಿ] ; (೧೯೧೪-೧೮ರ ಮಹಾ ಯುದ್ಧದಲ್ಲಿ) ಸೈನಿಕ ಸೇವೆಯಿಂದ ವಿನಾಯಿತಿಗಾಗಿ ಬಂದ ಅರ್ಜಿಗಳನ್ನು ಪರಾಮರ್ಶಿಸುತ್ತಿದ್ದ ಸ್ಥಳೀಯ ಮಂಡಲಿ. **Tríbune** (ನಾ.) (ರೋಮನ್ ಚರಿತ್ರೆ) ಶಾಸನ ಸಭೆಯೂ ದಂಡಾಧಿಕಾರಿಗಳೂ ಪ್ರಜಾ ಸ್ವಾತಂತ್ರ್ಯವನ್ನು ಅತಿಕ್ರಮಿಸದಂತೆ ನೋಡಿಕೊಳ್ಳುವುದಕ್ಕಾಗಿ ಪ್ರಜೆಗಳು ಆಯ್ದು ನೇಮಿಸುತ್ತಿದ್ದ (ಮೊದಲು ಇಬ್ಬರು, ಕ್ರಮೇಣ ಹತ್ತು) ಅಧಿಕಾರಿ(ಗಳಲ್ಲೊಬ್ಬ) : ಪ್ರಜಾರಕ್ಷಕ ; ಹಲವು ತೆರದ ಸೈನಿಕ, ಆರ್ಥಿಕ ಮತ್ತು ಇತರ ಅಧಿಕಾರಿ ; ಪ್ರಜಾ, ಜನ, —ನಾಯಕ, ವಾದಿ (ಮು., ವೃತ್ತಪತ್ರಿಕೆಗಳ ಹೆಸರಾಗಿ) ; (ರೋಮನ್ ನ್ಯಾಯಸ್ಥಾನದಲ್ಲಿ ನ್ಯಾಯಾಧೀಶನ ಪೀಠ ಹಾಕುವುದಕ್ಕಾಗಿ ಎತ್ತರಿಸಿ ಮಾಡಿದ್ದ) ನ್ಯಾಯ ವೇದಿಕೆ ; (ಚರ್ಚುಗಳಲ್ಲಿ) ಬಿಷಪ್ಪಿನ ಧರ್ಮಾಸನ (ಇರುವ ಅಂಕಣ) ; ವೇದಿಕೆ (ಮು., ಫ್ರೆಂಚ್ ಪ್ರಜಾ ಸಭೆಯಲ್ಲಿ ಭಾಷಣಕಾರರು ಉಪಯೋಗಿಸುವದು). **Tríbunary** (ಗು.) ನ್ಯಾಯಸ್ಥಾನದ, ನ್ಯಾಯ ಸಂಬಂಧವಾದ ; (ರೋಮನ್ ಚರಿತ್ರೆ) ಪ್ರಜಾ ರಕ್ಷಕನ, ದಂಡಾಧಿಕಾರಿಯ. **Tríbunate** (ನಾ.), **Tríbuneship** (ನಾ.)—ಪದವಿ, ಅಧಿಕಾರ, ಕರ್ತವ್ಯ. **Tribunícial, -tial** (—ಷಲ್) (ಗು.) ; **Tribunícian, -tian** (ಗು.) (ರೋಮನ್ ಚರಿತ್ರೆ) ಪ್ರಜಾ ರಕ್ಷಕನ, ದಂಡಾಧಿಕಾರಿಯ.

Tríbutary. Tribute ನೋಡಿ.

Tríbute ಟ್ರಿಬ್ಯೂಟ್ (ನಾ.) (ಅಧೀನ ರಾಜ್ಯ ಅಥವಾ ರಾಜ ಅಧಿರಾಜ್ಯಕ್ಕೆ ಅಥವಾ ಅಧಿರಾಜನಿಗೆ ಕೊಡುವ) ಕಪ್ಪ, ಪೊಗದಿ ; ಕಪ್ಪಕೊಡಬೇಕಾದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಥಿತಿ (Was laid under t.); (ರೂಪ.) ಗೌರವಾರ್ಥ, ಕಾಣಿಕೆ (The t. of a tear ಕಣ್ಣೀರ ಕಾಣಿಕೆ. Floral tributes (ನಟ, ಮೊ. ರಿಗೆ ಅಥವಾ ಇತರ ಸಂದರ್ಭಗಳಲ್ಲಿ ಕೊಡುವ) ಹೂವಿನ ಕಾಣಿಕೆ, ಪುಷ್ಪ ಸಮರ್ಪಣೆ. The tributes of her admirers ಆಕೆಯ ಮೆಚ್ಚುಗಾರರ ಬಹುಮಾನಗಳು, ಶ್ಲಾಘನೆಗಳು, ಮರ್ಯಾದೋಪಚಾರಗಳು); (ಗಣಿ ಕೆಲಸದಲ್ಲಿ) ಗಣಿ ಕೆಲಸದವರಿಗೆ ಅವರ ಕೆಲಸಕ್ಕಾಗಿ ಕೊಡುವ ಅದುರಿನ ಭಾಗ ಅಥವಾ ಅದರ ಬೆಲೆ: ಕುಳಪಾಲು (T.-work ವಾರ ಗುತ್ತಿಗೆ); ಗಣಿ ಕೆಲಸದವರು ಗಣಿಯ ಒಡೆಯರಿಗೆ ಕೊಡುವ ಪಾಲು: ರಾಜಪಾಲು. **Tríbutary** (ಗು., ನಾ.) ಟ್ರಿಬ್ಯುಟರಿ (ಗು., ನಾ.) ಕಪ್ಪ, ಪೊಗದಿ, —ಕೊಡುವ (ಸಂಸ್ಥಾನ, ರಾಜ); ಸಹಾಯಕ, ಉಪ; (ನದಿಯ ವಿಷಯದಲ್ಲಿ) ಕೂಡು ಹೊಳೆ, ಉಪನದಿ(ಯಾದ). **Tríbutarily** (ಕ್ರಿ. ವಿ.); **Tríbutariness** (ನಾ.)

Trice[1] ಟ್ರೈಸ್ (ಕ್ರಿ. ಸಕ.) (ನಾವೆ) ಎಳೆ(ದು ಕಟ್ಟು), ಬಿಗಿ(ದು ಕಟ್ಟು) (ಸಾ., *up* ಉಪ. ದೊಡನೆ)

Trice[2] ಟ್ರೈಸ್ (ನಾ.). In a t. ಒಂದು ಕ್ಷಣದಲ್ಲಿ.

Tríceps ಟ್ರೈಸೆಪ್ಸ್ (ಗು., ನಾ.) (ಸ್ನಾಯುಗಳ ವಿಷಯದಲ್ಲಿ) ಮೂರು ಸೇರಿಕೆಗಳುಳ್ಳ, ಮೂರು ಮೇಲ್ತುದಿಗಳುಳ್ಳ. (ನಾ.) ಮೂರು ಸೇರಿಕೆಗಳುಳ್ಳ ಸ್ನಾಯು, ತ್ರಿಕೂಟಸ್ನಾಯು, ತ್ರಿಶಿರಸ್ಕ ಸ್ನಾಯು (ಮು., ತೋಳ ಹಿಂಭಾಗದ ದಪ್ಪ ಸ್ನಾಯು)

Trichíasis ಟ್ರಿಕೈಅಸಿಸ್, ಟ್ರಿಕಿಏಸಿಸ್ (ನಾ.) ಮೂತ್ರದಲ್ಲಿ ಕೂದಲಿನಂಥ ತಂತುಗಳು ಹೋಗುವ ಒಂದು ರೋಗ: ತಂತುಮೂತ್ರ; (ಬಾಣಂತಿಯರಿಗೆ ಬರುವ) ಮೊಲೆ ಬಿರಿತ (ರೋಗ); ಎವೆಗೂದಲು ರೆಪ್ಪೆಯೊಳಕ್ಕೆ ತಿರುಗಿಕೊಂಡು ಕಣ್ಣು ರೇಗುವುದು: ಎವೆ ತಿರುವು; ಕೂದಲು ಜೊಂತೆ ಕಟ್ಟುವ ರೋಗ: ಜೊಂತೆಗೂದಲ ರೋಗ.

Tríchina ಟ್ರಿಕಿನ (ನಾ., ಬ. ವ. -ae —ನೀ) ಮನುಷ್ಯ, ಹಂದಿ, ಇಲಿ, ಮೊ. ಪ್ರಾಣಿಗಳಲ್ಲಿ ಪರಸತ್ತ್ವೋಪಜೀವಿಯಾಗಿ ಬಾಳುವ, ಸಾ., ಸರಿಯಾಗಿ ಅಟ್ಟದ ಹಂದಿಯ ಮಾಂಸ, ಮೊ. ನ್ನು ತಿನ್ನುವುದರಿಂದ ಬರುವ, ಅನೇಕ ವೇಳೆ ಮಾರಕ ರೋಗ ತರುವ, ಕೂದಲಿನಂಥ ಒಂದು ಹುಳು: ಕೂದಲ ಹುಳು, ರೋಮಕ್ರಿಮಿ. **Trichiníasis** —ನೈಅಸಿಸ್ (ನಾ.), **Trichinósis** —ನೋ— (ನಾ.) ರೋಮಕ್ರಿಮಿರೋಗ. **Tríchinize** (ಕ್ರಿ. ಸಕ.) ರೋಮಕ್ರಿಮಿ, ಕೂದಲ ಹುಳು, —ಸೋಂಕು ಹಿಡಿಸು (Trichinized pork). **Trichinizátion** (ನಾ.); **Tríchinosed** (ಗು.), **Trichinótic** (ಗು.), **Tríchinous** (ಗು.) ಕೂದಲುಹುಳು ಬಿದ್ದ; ರೋಮಕ್ರಿಮಿ ರೋಗದ.

Tricho- ಟ್ರಿ(ಟ್ರೈ)ಕೊ—, (ಸ್ವರ ಪರವಾದಾಗ Trich-) (ಸ. ಪೂ. ಪ.) ಕೂದಲು—, ಕೇಶ—, ರೋಮ—. **-gen** ಕೇಶವರ್ಧಿನಿ. **-genous** ಕೇಶವರ್ಧಕ. **-logy** ಕೇಶ, ರೋಮ, —ಶಾಸ್ತ್ರ, ವಿದ್ಯೆ. **-pathy** ಕೇಶರೋಗ ಚಿಕಿತ್ಸೆ. **-pathic** ಕೇಶರೋಗದ. **Trichósis** ಕೇಶರೋಗ.

Trichótomy ಟ್ರಿ(ಟ್ರೈ)ಕಾಟೊಮಿ (ನಾ.) ಮೂರಾಗಿ ವಿಭಾಗಿಸುವುದು (ಮು., ಮನುಷ್ಯ ಪ್ರಕೃತಿಯನ್ನು ದೇಹ, ಆತ್ಮ, ಚೈತನ್ಯ ಎಂದು ಮೂರಾಗಿ ವಿಂಗಡಿಸುವುದು); ತ್ರಿವಿಧಜನ. **Trichótomous** (ಗು.)

Trick ಟ್ರಿಕ್ (ನಾ., ಕ್ರಿ.) ತಂತ್ರ, ಯುಕ್ತಿ, ಉಪಾಯ, ಕಪಟೋಪಾಯ, ಹೂಟ, ಮೋಸ, ಕೃತ್ರಿಮ [I suspect some t. ಏನೋ ಮೋಸ, ತಂತ್ರ, ಇರಬೇಕೆಂದು ನನಗೆ ಸಂಶಯವಾಗುತ್ತದೆ. T. of the trade (Trade ನೋಡಿ). Shall not serve me that t. twice ಆ ಯುಕ್ತಿ ಎರಡನೆಯ ಸಲ, ಮತ್ತೊಂದಾವರ್ತಿ, ನನ್ನ ಹತ್ತಿರ ನಡೆಯದು, ಸಾಗದು]; ಚಳಕ, ಚಾತುರ್ಯ, ಕೌಶಲ, ಚಮತ್ಕಾರ; ಒಂದು ಕೆಲಸವನ್ನು ನಿರ್ವಹಿಸುವ ನಿಷ್ಕೃಷ್ಟ ಕ್ರಮ: ಫಕ್ಕಿ [Conjurer's t. ಐಂದ್ರಜಾಲಿಕನ ಕೈಚಳಕ, ಚಮತ್ಕಾರ. Do the t. (ಅಸಂ.) ತಕ್ಕ ಉಪಾಯ ಮಾಡು; ತನ್ನ ಉದ್ದೇಶ ಸಾಧಿಸಿಕೊ. I know a t. worth two of that ಅದಕ್ಕಿಂತ ಎರಡರಷ್ಟು ಒಳ್ಳೆಯ ಉಪಾಯ ನನಗೆ ಗೊತ್ತು. Shall soon get *or* learn the t. of it ಅದರ ಫಕ್ಕಿಯನ್ನು ಬೇಗ ಕಲಿತುಕೊಳ್ಳುತ್ತೇನೆ, ಕಂಡುಕೊಳ್ಳುತ್ತೇನೆ. (ವಿಶೇಷಣವಾಗಿ) T. cyclist ಚಮತ್ಕಾರದ, ದೊಂಬರಾಟದ, —ಬೈಸಿಕಲ್ ಸವಾರ]; ವಿಲಕ್ಷಣ—ಅಭ್ಯಾಸ, ಪದ್ಧತಿ; ಚಾಳಿ (Has a t. of repeating himself). ಚೇಷ್ಟೆ, ಕೀಟಲೆ, ಕುಚೇಷ್ಟೆ, ಹುಡುಗಾಟ (A dirty *or* shabby *or* dog's t. to play on any one); (ಇಸ್ಪೀಟಾಟದಲ್ಲಿ) ಪಟ್ಟು [Take up the t. ಪಟ್ಟು ಎತ್ತಿಕೊ. Won the t. ಪಟ್ಟು ಗೆದ್ದನು The odd t. (Odd ನೋಡಿ)]; (ನಾವೆ) (ಕೆಲಸಗಾರನು ಚುಕ್ಕಾಣಿಯ ಹತ್ತಿರ ಕೆಲಸಮಾಡಬೇಕಾದ) ಸರದಿ, ಸೂಳು (ಸಾ., ಎರಡು ಗಂಟೆಗಳ ಕಾಲದ್ದು); [T.-line ಮೂಕಾಭಿನಯದಲ್ಲಿ ಬದಲಾವಣೆಗಳನ್ನು ಮಾಡಲು ಉಪಯೋಗಿಸುವ ಹುರಿ: ಪರಿವರ್ತನ ಸೂತ್ರ. T. scene (ತೆರೆಯನ್ನು ಬಿಡದೆ ಬದಲಾಯಿಸಿದ) ಚಮತ್ಕಾರ ದೃಶ್ಯ. T. wig ಅದಕ್ಕೆ ಅಳವಡಿಸಿರುವ ಒಂದು ದಾರವನ್ನು ಎಳೆಯುವುದರಿಂದ, ಅದರ ಕೂದಲನ್ನೆಲ್ಲ ನೆಟ್ಟಗೆ ನಿಲ್ಲಿಸಲಾಗುವ ಕೂದಲ ಟೋಪಿ: ಚಮತ್ಕಾರದ ಕೂದಲ ಟೋಪಿ]. (ಕ್ರಿ.) ಉಪಾಯದಿಂದ ಮೋಸಗೊಳಿಸು, ವಿಮಾರಿಸು (*Out of* thing; *into* doing); (ವಸ್ತುವಿನ ವಿಷಯದಲ್ಲಿ) ಸಾಗದಂತೆ ಮಾಡು, ದಿಗ್ಭ್ರಮೆಗೊಳಿಸು; ಎಣಿಕೆಗೆ ಭಂಗ ತರು, ಕೈಕೊಡು; ಚೇಷ್ಟೆ ಮಾಡು, ಹುಡುಗಾಟವಾಡು; ತಂತ್ರ, ಯುಕ್ತಿ, —ನಡಸು; ಅಲಂಕಾರ ಮಾಡು, ಸಿಂಗರಿಸು (T. *out* or *up*). **Trícker** (ನಾ.), **Trickster** (ನಾ.) ತಂತ್ರಗಾರ, ತಂತ್ರಿ, ಕೃತ್ರಿಮಿ, ಮೋಸಗಾರ. **Tríckery** (ನಾ.) ತಂತ್ರ, ಕೃತ್ರಿಮ, ಮೋಸ. **Tríckish** (ಗು.) (ವಿರ. ಪ್ರ.); **Trícky** (ಗು.) ತಂತ್ರದ, ಮೋಸದ; ತಪ್ಪಿಸಿಕೊಳ್ಳುವುದರಲ್ಲಿ ಚತುರನಾದ; ಉಪಾಯ ಕೌಶಲವುಳ್ಳ; ಚಾತುರ್ಯವುಳ್ಳ, ಕೈಚಳಕದ, ಕೌಶಲದ; (ಕೆಲಸ, ಮೊ. ಗಳ ವಿಷಯದಲ್ಲಿ) ಚಾತುರ್ಯದಿಂದ ವರ್ತಿಸಬೇಕಾದ, ಉಪಾಯದಿಂದ ನಿರ್ವಹಿಸಬೇಕಾದ; ಮೋಸಗಳಿಂದ ತುಂಬಿದ, ಕೈಕೊಡುವ; ಸೂಕ್ಷ್ಮ, ನಾಜೂಕಾದ. **Tríckily** (ಕ್ರಿ. ವಿ.); **Tríckiness** (ನಾ.); **Trícksy** (ಗು.) ಹುಡುಗಾಟದ, ಚೇಷ್ಟೆಯ; ತಂತ್ರದ, ಮೋಸದ; ವಿಚಿತ್ರ ನಮೂನೆಯ.

Tríckle ಟ್ರಿಕ್‌ಲ್ (ಕ್ರಿ., ನಾ.) (ದ್ರವದ ವಿಷಯದಲ್ಲಿ) ತೊಟ್ಟಿಕ್ಕು, ಸಣ್ಣಗೆ ಹರಿ [Tears trickled down her cheeks. Water trickles through crevice. (ರೂಪ.) The information trickled out ಸುದ್ದಿ ಮೆತ್ತಗೆ ಹೊರಬಂತು]; ತೊಟ್ಟಿಕ್ಕಿಸು. (ನಾ.) ತೊಟ್ಟಿಕ್ಕುವ ಹನಿ, ಜಿನುಗು ಹರಿತ. **Trícklet** (ನಾ.) ಝರಿ, ಜಿನುಗು ತೊರೆ. **Trickly** (ಗು.)

Trícksy, Trícky. **Trick** ನೋಡಿ.

Triclínium ಟ್ರಿ(ಟ್ರೈ)ಕ್ಲಿನಿಯಂ (ನಾ.; ಬ. ವ. -nia —ನಿಯ) (ರೋ. ಪ್ರಾ.) ಮೂರು ಪಕ್ಕಗಳಲ್ಲಿ ಸೋಫಾ ಹಾಕಿರುವ ಊಟದ ಮೇಜು (ಇರುವ ಕೋಣೆ)

Trícolo(u)r ಟ್ರೈಕಲರ್ (ಗು., ನಾ.) ಮೂರು ಬಣ್ಣದ, ತ್ರಿವರ್ಣ [=**Trícolo(u)red**]. (ನಾ.) ತ್ರಿವರ್ಣ ಧ್ವಜ (ಮು., ಕ್ರಾಂತಿ ಕಾಲದಲ್ಲಿ ಬಳಕೆಗೆ ಬಂದ ಕೆಂಪು, ಬಿಳುಪು ಮತ್ತು ನೀಲ ಬಣ್ಣದ, ಫ್ರಾನ್ಸಿನ ರಾಷ್ಟ್ರಧ್ವಜ)

Trícot (F) ಟ್ರೀಕೊ (ನಾ.) ಹೆಣೆದ ಉಣ್ಣೆ ಬಟ್ಟೆ(ಯಂಥ ಬಟ್ಟೆ); ಹಲವು ಬಗೆಯ ಉಬ್ಬೆಳೆಯ ಹುರಿಬಟ್ಟೆ **T.-stitch** ಒಂದು ಬಗೆಯ ಕಸೂತಿ ಹೊಲಿಗೆ.

Trícycle ಟ್ರೈಸಿಕ್‌ಲ್ (ನಾ., ಕ್ರಿ.) ಮೂರು ಚಕ್ರದ ಸೈಕಲ್ಲು, ಮುಗ್ಗಾಲಿ (—ಸವಾರಿಮಾಡು). Sociable t. ಪಕ್ಕಸಾಲು ಪೀಠಗಳ ಮುಗ್ಗಾಲಿ. Tandem t. ಬೆನ್ನುಸಾಲು ಪೀಠಗಳ ಮುಗ್ಗಾಲಿ. **Trícyclist** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Trídent ಟ್ರೈಡೆಂಟ್ (ನಾ.) ಮೂರು ಕವಲಿನ, ಮೊನೆಯ, —ಆಯುಧ (ಉದಾ., ಮೀನೀಟಿ); (ಗ್ರೀಕರ ಸಮುದ್ರದೇವತೆಯ, ಹಿಂದುಗಳ ಈಶ್ವರನ) ತ್ರಿಶೂಲ.

Tridéntine ಟ್ರೈ(ಟ್ರಿ)ಡೆಂಟೈನ್ (ಗು., ನಾ.) (ರೋ. ಕ್ಯಾ. ಮತದ ತತ್ತ್ವಗಳನ್ನೂ ಆಚರಣೆಗಳನ್ನೂ ನಿರ್ಧರಿಸಿದ, ೧೫೪೫-೬೩ರಲ್ಲಿ ನಡೆದ) ಟ್ರೆಂಟ್ ನಗರದ ರೋ. ಕ್ಯಾ. ಮತಸಭೆಯ (T. theology ಟ್ರೆಂಟ್ ಸಭಾನುಸಾರವಾದ, ರೋ. ಕ್ಯಾ. ದೇವತಾಶಾಸ್ತ್ರ). (ನಾ.) ರೋ. ಕ್ಯಾ. ಮತದವನು.

Tríduo ಟ್ರೀಡುಒ, **Tríduum** ಟ್ರೈಡ್ಯುಅಮ್ (ನಾ.) (ಸಂತನ ಪುಣ್ಯದಿನಾಚರಣೆಗೆ ಪೀಠಿಕೆಯಾಗಿ ಅಥವಾ ಸಂತನ ಅನುಗ್ರಹಾರ್ಥವಾಗಿ, ಆಚರಿಸುವ) ಮೂರು ದಿನಗಳ ಆರಾಧನೆ; ವ್ರತಾಚರಣೆಯ, ಆರಾಧನೆಯ, —ಮೂರು ದಿನಗಳು.

Triénnial ಟ್ರೈಎನಿಯಲ್ (ಗು., ನಾ.) ಮೂರು ವರ್ಷ(ಗಳ ಕಾಲ) ಇರುವ; ಮೂರು ವರ್ಷಕ್ಕೊಮ್ಮೆ—ಬರುವ, ನಡೆಯುವ; ತ್ರೈವಾರ್ಷಿಕ [T. plants ತ್ರೈವಾರ್ಷಿಕ ಸಸ್ಯ. T. Act (ಪಾರ್ಲಿಮೆಂಟಿನ ಅವಧಿ ಮೂರು ವರ್ಷವಿರಬೇಕೆಂದು ವಿಧಿಸಿದ) ತ್ರೈವಾರ್ಷಿಕ ಶಾಸನ (ಇದು ೧೬೯೪ರಲ್ಲಿ ರದ್ದಾಯಿತು)]. (ನಾ.) ತ್ರೈವಾರ್ಷಿಕ ಸಸ್ಯ; ಸತ್ತವನಿಗಾಗಿ ಪ್ರತಿದಿನವೂ ಮೂರು ವರ್ಷಕಾಲ ನಡಸುವ ಆರಾಧನೆ: ತ್ರೈವಾರ್ಷಿಕಾರಾಧನೆ; ಮೂರು ವರ್ಷಕ್ಕೊಮ್ಮೆ ನಡಸುವ ಉತ್ಸವ: ತ್ರೈವಾರ್ಷಿಕೋತ್ಸವ. **Triénnially** (ಕ್ರಿ. ವಿ.)

Triér. Try ನೋಡಿ.

Trierarch ಟ್ರೈಎರಾರ್ಕ್ (ನಾ.) (ಗ್ರೀಕ್ ಪ್ರಾಚೀನ) ಮೂರು ಅಂತಸ್ತಿನ ಹುಟ್ಟಿನ ಸಾಲುಳ್ಳ ಯುದ್ಧ ಹಡಗಿನ ಯಜಮಾನ; ತನ್ನ ವೆಚ್ಚದಿಂದ ಅಂಥ ಯುದ್ಧ ಹಡಗನ್ನು ಕಟ್ಟಿ ಸಜ್ಜುಗೊಳಿಸಿ ಕೊಡಬೇಕಾದ ಧನಿಕ; ಟ್ರೈಯೆರಾರ್ಕ್. **Triérarchal** (ಗು.); **Triérarchy** (ನಾ.) ಟ್ರೈಯೆರಾರ್ಕಿನ—ಅಧಿಕಾರ, ಕರ್ತವ್ಯ; ಟ್ರೈಯೆರಾರ್ಕುಗಳು; ಟ್ರೈಯೆರಾರ್ಕುಗಳ ಮೂಲಕ ಸಿದ್ಧಗೊಳಿಸಿದ ನೌಕಾಬಲ.

Trífid ಟ್ರೈಫಿಡ್ (ಗು.) (ಪ್ರಾ. ವಿ., ಸ. ವಿ.) ಮೂರಾಗಿ—ಭಾಗಿಸಿದ, ಸೀಳಿದ; ತ್ರಿವಿಭಕ್ತ.

Trífle ಟ್ರೈಫ್‌ಲ್ (ನಾ., ಕ್ರಿ.) ಅಲ್ಪ, ಕ್ಷುದ್ರ, ನಿರರ್ಥಕ, ಕೆಲಸಕ್ಕೆ ಬಾರದ, —ವಸ್ತು, ವಿಷಯ [Wastes time on trifles ಕ್ಷುದ್ರ ವಿಷಯಗಳಲ್ಲಿ ಕಾಲ ಕಳೆಯುತ್ತಾನೆ. (ವ್ಯಂಗ್ಯ ಪ್ರ.) Shall probably break our necks, but that is a t. ಬಹುಶಃ ನಮ್ಮ ಕುತ್ತಿಗೆ ಮುರಿಯಬಹುದು, ಆದರೆ ಅದು ಅಲ್ಪವಿಷಯ, ಅಷ್ಟೇನೂ ಮಹತ್ತ್ವದ್ದಲ್ಲ]; ಕೊಂಚ, ತುಸ (ಮು., ಕೊಂಚ ಹಣ) [Spare a t. for the porter ಕೂಲಿಯವನಿಗೆ ಕೊಂಚ ದುಡ್ಡು ಕೊಡು. (ಕ್ರಿ. ವಿ.) Seems a t. angry ಕೊಂಚ ರೇಗಿರುವಂತೆ ತೋರುತ್ತದೆ]; ಹಣ್ಣು, ಬಾದಾಮಿ, ಮದ್ಯ, ಮೊ. ನ್ನು ಹಾಕಿ ಮಾಡಿದ ಹಾಲುಕೆನೆಯ ಅಥವಾ ಕೋಳಿ ಮೊಟ್ಟೆಯ ಒಂದು ತೆರನ ಮಿಠಾಯಿ; ಪ್ಯೂಟರ್ (ಬೆರಕೆ) ಲೋಹ. (ಕ್ರಿ.) ಲಘುವಾಗಿ—ಮಾತಾಡು, ವರ್ತಿಸು; ಹುಡುಗಾಟವಾಡು; (ಕಾಲ, ಶಕ್ತಿ, ಹಣ, ಮೊ. ನ್ನು) ಹಾಳುಮಾಡು, ಪೋಲುಮಾಡು, ಅಪವ್ಯಯಮಾಡು (*Away* ಉಪ. ಜೊತೆ). (ವರ್ತಮಾನ ಕೃ. ಪ್ರ.) A trifling error, circumstance ಅಮುಖ್ಯ, ಸಣ್ಣ, —ದೋಷ, ಸಂಗತಿ. T. with (ವ್ಯಕ್ತಿ, ವಸ್ತು, ವಿಷಯ, ಮೊ. ನ್ನು) ಲಘುವಾಗಿ ಕಾಣು, ಅನಾಸ್ಥೆಯಿಂದ ನೋಡು, ಹುಡುಗಾಟಿಕೆ ಮಾಡು. ಅಲ್ಪ ಹವ್ಯಾಸದಲ್ಲಿ—ಆಟವಾಡು, ಕಾಲ ಕಳೆ. **Trífler** (ನಾ.); **Tríflingly** (ಕ್ರಿ. ವಿ.)

Trifórium ಟ್ರೈಫೋ(ಅ)ರಿಯಂ (ನಾ., ಬ. ವ. -ia) ಚರ್ಚಿನ ಮಧ್ಯಾಂಗಣ, ಗಾಯಕಸ್ಥಾನ ಮತ್ತು ಅಡ್ಡಭಾಗಗಳ ಮೇಲುಗಡೆ, ಸಾ., ಕಮಾನು ಸಾಲನಾಕಾರದಲ್ಲಿರುವ ಉಪ್ಪರಿಗೆ ಪೀಠಪಂಕ್ತಿ: ಉಪ್ಪರಿಗೆ ಗ್ಯಾಲರಿ.

Trig[1] ಟ್ರಿಗ್ (ಗು., ಕ್ರಿ. ಸಕ., ನಾ.) ನೀಟಾದ, ಠೀಕಾದ, ಅಚ್ಚುಕಟ್ಟಾದ. (ಕ್ರಿ.) ನೀಟು, ಠೀಕು, ಅಚ್ಚುಕಟ್ಟು, —ಮಾಡು (ಅನೇಕ ವೇಳೆ *up*, *out* ಉಪ. ಜೊತೆ); (ಕಲ್ಲು, ಕೊರಡು, ಮೊ. ನ್ನು ಇಟ್ಟು ಚಕ್ರವನ್ನು) ತಡೆ, ನಿಲ್ಲಿಸು; ಊರೆಕೊಡು (*Up* ಉಪ. ಜೊತೆ). (ನಾ.) ತಡೆಮರ, ಗೊಡಮ.

Trig[2] ಟ್ರಿಗ್ (ನಾ.) (ಪಾಠಶಾಲಾ ಸಂಕ್ಷಿಪ್ತ) = Trigonometry.

Trígamous ಟ್ರಿಗಮಸ್ (ಗು.) ಮೂರುಸಲ ಮದುವೆಯಾಗಿರುವ; ಏಕ ಕಾಲದಲ್ಲಿ ಮೂರು ಗಂಡಂದಿರು ಅಥವಾ ಮೂರು ಹೆಂಡತಿಯರು ಇರುವ: ತ್ರಿಭರ್ತೃಕೆ, ತ್ರಿಪತ್ನೀಕ; (ಸ. ವಿ.) ಒಂದೇ ತೆನೆಯಲ್ಲಿ ಗಂಡು, ಹೆಣ್ಣು, ಹೆಣ್‌ಗಂಡು ಹೂವುಗಳುಳ್ಳ: ತ್ರಿಲಿಂಗಿ. **Trígamist** (ನಾ.) ತ್ರಿಪತ್ನೀಕ, ತ್ರಿಭರ್ತೃಕೆ. **Trígamy** (ನಾ.) ತ್ರಿಪತ್ನೀತ್ವ, ತ್ರಿಪತಿತ್ವ.

Trígger ಟ್ರಿಗರ್ (ನಾ.) ಯಂತ್ರದಲ್ಲಿಯ ಎಗುರುಪಟ್ಟಿಯನ್ನು ಅಥವಾ ಹಿಡಿಕೆಯನ್ನು ಸಡಿಲಿಸಿ ಯಂತ್ರವನ್ನು ಕೆಲಸಕ್ಕೆ ತೊಡಗಿಸುವ ಸಲಕರಣೆ: ವಿಯೋಜಕ, ಮೋಚಕ; ಬಂದೂಕಿನಲ್ಲಿ ಕುದುರೆಯನ್ನು ಸಡಿಲಿಸುವ ಕೀಲು: ಚಾಪು—ಸನ್ನೆ ಕೀಲು, ಬಿಡುಕ. Hair-t. (Hair ನೋಡಿ). **(-)triggered.**

Trígon ಟ್ರೈಗಾನ್ (ನಾ.) (ಜ್ಯೋ.) ಮೇಷಾದಿ ಹನ್ನೆರಡು ರಾಶಿಗಳಲ್ಲಿ ಪರಸ್ಪರ ೧೨೦° ಅಂತರವಿರುವ ಮೂರು ಮೂರು ರಾಶಿಗಳ (ನಾಲ್ಕು) ಗುಂಪು(ಗಳಲ್ಲೊಂದು): ರಾಶಿ ತ್ರಿಕೋನ [Watery t. (ಕರ್ಕಾಟಕ, ವೃಶ್ಚಿಕ, ಮೀನ ರಾಶಿಗಳನ್ನೊಳಕೊಂಡ) ಜಲರಾಶಿ ತ್ರಿಕೋನ. Earthly t. (ವೃಷಭ, ಕನ್ಯಾ, ಮಕರ ರಾಶಿಗಳನ್ನೊಳಗೊಂಡ) ಭೂರಾಶಿ ತ್ರಿಕೋನ. Airy t. (ಮಿಥುನ, ತುಲಾ, ಕುಂಭ ರಾಶಿಗಳನ್ನೊಳಗೊಂಡ) ವಾಯುರಾಶಿ ತ್ರಿಕೋನ. Fiery t. (ಮೇಷ, ಸಿಂಹ, ಧನೂ ರಾಶಿಗಳನ್ನೊಳಗೊಂಡ) ಅಗ್ನಿರಾಶಿ ತ್ರಿಕೋನ]; (ಸೂಚೀಫಲಕದಿಂದ ಅಳೆಯುವಲ್ಲಿ ಉಪಯೋಗಿಸುವ) ತ್ರಿಕೋನ ಸಲಕರಣೆ; = Trine (ಜ್ಯೋ. ಅರ್ಥದಲ್ಲಿ); (ಗ್ರೀಕ್ ಪ್ರಾ.) ಮೂವರು ಆಡುವ ಒಂದು ಚೆಂಡಾಟ; ತ್ರಿಕೋನಾಕಾರದ ತಂತಿವಾದ್ಯ (= **Trigónon** ಟ್ರಿಗೋನಾನ್); (ಗಣಿತ) ತ್ರಿಕೋನ. **Trígonal** ಟ್ರಿಗೊನಲ್ (ಗು.) (ಗಣಿತ) ತ್ರಿಕೋನದ, ತ್ರೈ(ತ್ರಿ)ಕೋನಿಕ; (ಸ. ವಿ., ಪ್ರಾ. ವಿ.) (ಅಡ್ಡಕೊಯ್ತು) ತ್ರಿಕೋನಾಕಾರದ (T. stem). **Trígonally** (ಕ್ರಿ. ವಿ.); **Trigónic** ಟ್ರೈಗಾನಿಕ್ (ಗು.) (ರಾಶಿ) ತ್ರಿಕೋನದ. **Trígonous** ಟ್ರಿಗೊನಸ್ (ಗು.) ಮುಮ್ಮೂಲೆಯ, ತ್ರಿಕೋನಾಕಾರದ.

Trigonómeter ಟ್ರಿಗೊನಾಮಿಟರ್ (ನಾ.) ಯಾವುದೇ ಸಮಕೋನ ತ್ರಿಕೋನದ ಮಾನಗಳನ್ನು ಕಂಡುಹಿಡಿಯಲು ಬರುವ ಒಂದು ಬಗೆಯ ನಕ್ಷಾ ಸಲಕರಣೆ: ಸಮಕೋನ ತ್ರಿಕೋನ ಮಾಪಕ. ತ್ರಿಕೋನ ಮಿತಿಜ್ಞ. **Trigonómetry** (ನಾ.) ತ್ರಿಕೋನದ ಕೋನಗಳ ಮತ್ತು ಬಾಹುಗಳ ಪರಸ್ಪರ ಸಂಬಂಧವನ್ನು ಕುರಿತ ಗಣಿತದ ಭಾಗ: ತ್ರಿಕೋನ ಮಿತಿ. **Trigonométric(al)** (ಗು.); **Trigonométrically** (ಕ್ರಿ. ವಿ.)

Trike ಟ್ರೈಕ್ (ನಾ., ಕ್ರಿ. ಸಕ.) (ಬಳ. ಮಾ.) = Tricycle.

Trílby ಟ್ರಿಲ್ಬಿ (ನಾ.) (ಬಳ. ಮಾ.) ಮೃದುವಾದ ಫೆಲ್ಟು ಟೊಪ್ಪಿಗೆ (= T. hat); (ಬ. ವ. ದಲ್ಲಿ, ಅಸಂ.) ಪಾದಗಳು, ಕಾಲುಗಳು.

Trill ಟ್ರಿಲ್ (ಕ್ರಿ., ನಾ.) (ವ್ಯಕ್ತಿಯ ಅಥವಾ ವಸ್ತುವಿನ ವಿಷಯದಲ್ಲಿ) ಧ್ವನಿ ಅದಿರಿಸು, ಧ್ವನಿ ಕಂಪಿಸು, ಅದಿರು ಧ್ವನಿ ಕೊಡು (Trilling laughter ಅದಿರು ನಗು); ಅದಿರು ದನಿಯಲ್ಲಿ, ಕಂಪನ ಧ್ವನಿಯಲ್ಲಿ, —ಹಾಡು; ದನಿ ನಡುಗಿಸು. (ನಾ.) ನಡುಗು, ಕಂಪ, —ಧ್ವನಿ; ಧ್ವನಿ ಕಂಪನ; ಸ್ವರ ಕಂಪನ; ಅದಿರು ದನಿಯಲ್ಲಿ ಉಚ್ಚರಿಸುವ ವ್ಯಂಜನ (ಉದಾ., ರ)

Trílling ಟ್ರಿಲಿಂಗ್ (ನಾ.) (ಮೂರು ಹರಳುಗಳು ಕೂಡಿ ಆದ) ಮುಕ್ಕೂಟದ ಹರಳು, ತ್ರಿಸ್ಫಟಿಕ. ಒಂದೇಸಲ ಹುಟ್ಟಿದ ಮೂರು ಮಕ್ಕಳಲ್ಲೊಂದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tríllion ಟ್ರಿಲ್ಯನ್ (ನಾ., ಗು.) ಹತ್ತು ಲಕ್ಷದ ಹತ್ತು ಲಕ್ಷದ ಹತ್ತು ಲಕ್ಷ (೧೦^೧೮); (ಅಮೆ. ನಂ.) ಹತ್ತು ಲಕ್ಷದ ಹತ್ತು ಲಕ್ಷ (೧೦^೧೨). **Tríllionth** (ಗು., ನಾ.)

Trílogy ಟ್ರಿಲೊಜಿ (ನಾ.) (ಗ್ರೀಕ್ ಪ್ರಾ.) ಒಂದೇ ದಿನ ಅನುಗೂಡಿ ಆಡುವ, (ಸಾ., ಪರಸ್ಪರ ಸಂಬಂಧವುಳ್ಳ) ರುದ್ರ ನಾಟಕ ತ್ರಯ; ಮುಕ್ಕೂಟ (ರುದ್ರ) ನಾಟಕ; ತ್ರೈನಾಟಕ ಚಕ್ರ; ಪ್ರತಿಯೊಂದೂ ಸಮಗ್ರವಾಗಿದ್ದು ಎಲ್ಲವೂ ಒಂದೇ ಸಾಮಾನ್ಯ ವಿಷಯವನ್ನು ಕುರಿತ ಮೂರು ಪ್ರಬಂಧಗಳು, ಉಪನ್ಯಾಸಗಳು: ಕೃತಿ, ಭಾಷಣ, —ತ್ರಯ.

Trim ಟ್ರಿಂ (ಗು., ಕ್ರಿ., ನಾ.) ಅಣಿಯಾದ, ಒಪ್ಪವಾದ, ಓರಣವಾದ, ಅಚ್ಚುಕಟ್ಟಾದ, ನೀಟಾದ, ಠೀಕಾದ, ಪರಿಷ್ಕಾರವಾದ [**Trímly** (ಕ್ರಿ. ವಿ.); **Trímness** (ನಾ.)]. (ಕ್ರಿ.) ಅಣಿ, ಒಪ್ಪ, ಓರಣ, ನೀಟು, ಠೀಕು, ಅಚ್ಚುಕಟ್ಟು, —ಆಗಿ ಇಡು, ಮಾಡು; (ದೀಪದ ಬತ್ತಿ, ಬೇಲಿ, ಗಡ್ಡ, ಮೊ. ನ್ನು) ಸಮರು, ಕತ್ತರಿಸಿ ಸರಿಮಾಡು; (ಅನಾವಶ್ಯಕ ಭಾಗಗಳನ್ನು) ಸಮರಿಹಾಕು, ಕತ್ತರಿಸಿಹಾಕು (ಅನೇಕ ವೇಳೆ *off*, *away* ಉಪ. ಜೊಡನೆ); (ಉಡಿಗೆ ತೊಡಿಗೆಗಳಿಂದ, ಪ್ರಸಾಧನದಿಂದ) ಅಂದ, ಠೀಕು, —ಮಾಡು, ಮಾಡಿಕೊ (ಅನೇಕ ವೇಳೆ *up* ಉಪ. ಜೊಡನೆ); (ಉಡುಪಿಗೆ ಜರಿ, ಮೊ. ನ್ನು ಹಾಕಿ) ಅಲಂಕಾರ ಮಾಡು; [(ಮಾನು ಹಿಂಡಿನ ವಿಷಯದಲ್ಲಿ): T. the shore ದಡಕ್ಕೆ ಹತ್ತಿರದಲ್ಲೆ —ಹೋಗು, ಸಂಚರಿಸು]; (ನಾವೆ) (ಪ್ರಯಾಣಿಕರು, ಸರಕು, ಮೊ. ನ್ನು ಸರಿಯಾಗಿ ಹಂಚಿಟ್ಟು ಹಡಗು, ದೋಣಿ. ಮೊ. ನ್ನು) ಸಮತೂಕದಲ್ಲಿಡು, (ಸರಕು, ಮೊ. ನ್ನು) ಸಮತೂಕವಾಗಿ ಅಡುಕು, (ಪ್ರಯಾಣಿಕರನ್ನು) ಓರಣವಾಗಿ ಕೂರಿಸು; (ದಿಮ್ಮಿ, ಹಾಯಿ, ಮೊ. ನ್ನು) ಗಾಳಿಗೆ ಸರಿಯಾಗಿ ಅನುಗೊಳಿಸು (T. by the head, stern ಹಡಗಿನ ಮುಂಭಾಗ, ಹಿಂಭಾಗ, ಹೆಚ್ಚು ಮುಳುಗುವಂತೆ ಹಾಯಿಗಳನ್ನು ಅಳವಡಿಸು); (ರಾಜಕೀಯ, ಅಭಿಪ್ರಾಯ, ಮೊ. ಗಳಲ್ಲಿ) ಮಧ್ಯಮಾರ್ಗ ಹಿಡಿ; ತಟಸ್ಥನಾಗಿರು, ಯಾವ ಕಡೆಗೂ ಸೇರದಿರು; ಸಮಯಾನುಸಾರ—ಹೊಂದಿಕೊ, ಹೊರಳಿಕೊ; (ಬಳ. ಮಾ.) ತೀವ್ರವಾಗಿ ಆಕ್ಷೇಪಿಸು, ಖಂಡಿಸು, ಝುಂಕಿಸು, ತರಾಟೆಗೆ ತೆಗೆದುಕೊ; ಸದೆಬಡಿ; ಸೋಲಿಸು; [(ಬಳ. ಮಾ.) T. person's jacket ಸದೆಬಡಿ, ಚೆಚ್ಚಿ ಹಾಕು]. (ನಾ.) ಅಣಿ, ಒಪ್ಪ, ಓರಣ, ಅಚ್ಚುಕಟ್ಟು, ನೀಟು, ಠೀಕು [Found everything in perfect t.; Am in no t. for rough work ಒರಟು ಕೆಲಸಕ್ಕೆ ನಾನು ಸಿದ್ಧನಾಗಿಲ್ಲ, ತಯಾರಿಲ್ಲ. In fighting t. (ಹಡಗಿನ ವಿಷಯದಲ್ಲಿ) ಯುದ್ಧ ಸಜ್ಜಿನಲ್ಲಿ, ಯುದ್ಧಕ್ಕೆ ಸನ್ನದ್ಧವಾಗಿ (ರೂಪ. ಸಹ)]; ವ್ಯವಸ್ಥೆ, ಸುಸ್ಥಿತಿ [(ಮು.) (ಹಡಗಿನ ವಿಷಯದಲ್ಲಿ) In, out of, t.]. [(ನಾವೆ) T. of the masts ಕೂವೆಗಳ ಪರಸ್ಪರ ಸ್ಥಾನ, ಅಳವಡಿಕೆ]. **Trímmer** (ನಾ.) (ಕ್ರಿಯಾರ್ಥಗಳಲ್ಲಿ); ಉಡುಪನ್ನು ಒಪ್ಪಮಾಡುವವನು, ಒಪ್ಪಗಾರ (Coat, hat, -t.); ತಟಸ್ಥ, ಸಮಯಾನುವರ್ತಿ; ಕತ್ತರಿಸುವ, ಸಮರುವ, —ಸಲಕರಣೆ: ಸಮರುಗೆ; ಒಲೆಯ ಗೂಡು, ಮಹಡಿ ಮೆಟ್ಟಿಲಗಂಡಿ, ಮೊ. ಗಳ ತೆರಪಿನ ಅಂಚಿನಲ್ಲಿ ತೊಲೆಗಳ ಮೊಟಕು ತುದಿಗಳನ್ನು ಕಚ್ಚಿಸಲು ಆಧಾರವಾಗಿ ಹಾಕಿರುವ ಮರ: (ತುದಿ) ಕೂರಿಗೆ ಮರ. **Trímming** (ನಾ.) (ಕ್ರಿಯಾರ್ಥಗಳಲ್ಲಿ); (ಉಡುಪಿಗೆ) ಜರಿ, ಮೊ. ಗಳ ಅಲಂಕಾರ; (ಬಳ. ಮಾ.; ಬ. ವ. ದಲ್ಲಿ) ಪರಿಕರಗಳು, ಉಪಕರಣಗಳು, ವ್ಯಂಜನಗಳು (Leg of mutton & trimmings. Educational trimmings ಶಿಕ್ಷಣೋಪಕರಣಗಳು)

Trímeter ಟ್ರಿಮಿಟರ್ (ನಾ., ಗು.) ತ್ರಿಪ್ರಮಾಣದ (ಪದ್ಯ ಚರಣ) (Dimeter ನೋಡಿ). Iambic t. (ಗ್ರೀಕ್ ನಾಟಕದ ಸಂಭಾಷಣೆಯಲ್ಲಿ ಬರುವ) ಆರು ಲಘು ಗುರು (ᴗ—) ಗಣಗಳ ಚರಣ. **Trimmétric(al)** (ಗು.)

Tríne ಟ್ರೈನ್ (ಗು., ನಾ.) ಮುಮ್ಮಡಿಯ, ತ್ರಿಗುಣ, ಮೂರು ಭಾಗಗಳುಳ್ಳ [**Trínal** (ಗು.), **Trínary** (ಗು.)]; (ಖ. ವಿ.) ಪರಸ್ಪರ ೧೨೦° ಅಂತರವಿರುವ (ಗ್ರಹಗಳ ದೃಷ್ಟಿಯ); [T. aspersion *or* immersion (ಕ್ರೈಸ್ತ ಜ್ಞಾನಸ್ನಾನ ಸಂಸ್ಕಾರದಲ್ಲಿ) ತ್ರಿಪ್ರೋಕ್ಷಣ, ತ್ರಿಮಜ್ಜನ]. (ನಾ.) (ಜ್ಯೋ.) ೧೨೦° ಅಂತರದಲ್ಲಿರುವ ಗ್ರಹಗಳ ದೃಷ್ಟಿ [In t. ಪರಸ್ಪರ ೧೨೦° ಅಂತರದಲ್ಲಿರುವ (*To* ಉಪ. ಜೊಡನೆ)]

Tríngle ಟ್ರಿಂಗ್‌ಲ್ (ನಾ.) ಪರದೆಯ—ಕಂಬಿ, ಸರಳು; ಮಂಚದ ಚಪ್ಪರ ಕಟ್ಟು; (ವಾ. ಶಾ.) ಚಿಕ್ಕ ಚೌಕನೆಯ ಅಲಂಕಾರ. ಫಿರಂಗಿಯ ವೇದಿಕೆಯಲ್ಲಿ ಹಿನ್ನೂದೆತವನ್ನು ತಡೆಯಲು ಹಾಕಿರುವ ಅಡ್ಡದಂಡ: ಒದೆದಂಡ.

Trinitrotóluene ಟ್ರೈನೈಟ್ರೊಟಾಲ್ಯುಈನ್, **-luol** —ಲ್ಯುಓ(ಅ)ಲ್ (ನಾ.) (ಬೆನ್ಜೈಲಿಕ್ ಹೈಡ್ರೈಡ್ ಎಂಬ ಸಂಯುಕ್ತದಮೇಲೆ ಗಂಧಕಾಮ್ಲ ಮತ್ತು ನೈಟ್ರಿಕ್ ಆಮ್ಲಗಳ ಕ್ರಿಯೆಯಿಂದ ದೊರೆಯುವ) ಒಂದು ಪ್ರಬಲ ಸ್ಫೋಟಕ, ಸಿಡಿಮದ್ದು (ಸಂಕ್ಷಿಪ್ತ: Trotyl; T.N.T.)

Trínity ಟ್ರಿನಿಟಿ (ನಾ.) ಮೂರಾಗಿರುವುದು, ತ್ರಿತ್ವ; ಮೂರರ ತಂಡ, ತ್ರಯ, ತ್ರಿತಯ; ಮೂರು ವ್ಯಕ್ತಿಗಳು ಒಂದು ದೇವತ್ವದಲ್ಲಿ ಐಕ್ಯವಾಗಿರುವುದು: ತ್ರಯ್ಯೈಕ್ಯ, ತ್ರಿಮೂರ್ತಿತ್ವ (=The T.) [ಉದಾ., (ಕ್ರೈಸ್ತರಲ್ಲಿ) ದೇವರು, ದೇವಪುತ್ರ ಮತ್ತು ದಿವ್ಯಾತ್ಮ]. ತ್ರಿಮೂರ್ತಿ—ವಾದ, ತತ್ತ್ವ; (ಕಲೆಯಲ್ಲಿ) ತ್ರಿಮೂರ್ತಿ ನಿರೂಪಣೆ. T. ring ಐರ್ಲೆಂಡಿನಲ್ಲಿ ದೊರೆಯುವ, ಮೂರು ಗುಬಟು, ಮೊ. ಇರುವ, ಹಲವು ಬಗೆಯ ಕಂಚಿನ ಉಂಗುರ. T. Sunday 'ವಿಟ್ ಸಂಡೆ'ಗೆ ತರುವಾಯದ ಭಾನುವಾರ. T. Brethren ಟ್ರಿನಿಟಿ ಸಂಘದ ಸದಸ್ಯರು. T. House (ಇಂಗ್ಲೆಂಡಿನಲ್ಲಿ) ಹಡಗು ನಡಸುವವರಿಗೆ ರಹದಾರಿ ಕೊಡುವುದು, ತೇಲ್ಬೆಗಳು, ದೀಪಗೃಹಗಳು, ಮೊ. ಗಳನ್ನು ಕಟ್ಟಿಸುವುದು, ಮೊ. ಕ್ಕೆ ಸಂಬಂಧಪಟ್ಟ ಸಂಘ: ಟ್ರಿನಿಟಿ ಸಂಘ. T. term (ವಿ. ವಿ. ನಿ.) ಒಂದು ವ್ಯಾಸಂಗಾವಧಿ. **Trinitárian** (ಗು., ನಾ.) ತ್ರಿಮೂರ್ತಿ—ವಾದದ, ವಾದಿ. **Trinitárianism** (ನಾ.) ತ್ರಿಮೂರ್ತಿ—ತತ್ತ್ವ, ಮತ.

Trínket ಟ್ರಿಂಕೆಟ್ (ನಾ.) ಅಲ್ಪ ಬೆಲೆಯ, ಕ್ಷುದ್ರ, —ಒಡವೆ; ಥಳುಕು ಪಳುಕಿನ—ಸಾಮಾನು, ಒಡವೆ. **Trínketry** (ನಾ.)

Trío ಟ್ರೈ(ಟ್ರೀ)ಓ (ನಾ.) (ಸಂ.) ಮೂರು ಧ್ವನಿಗಳಿಗೆ ಅಥವಾ ವಾದ್ಯಗಳಿಗೆ ಅನುಕೂಲಿಸುವಂತೆ ರಚಿಸಿದ ಕೃತಿ; ಮೂವರು ಗಾಯಕರ, ಮೂವರು ವಾದ್ಯಗಾರರ, —ತಂಡ; ಮೂವರ, ಮೂರರ,—ತಂಡ; ತ್ರಯ; ಮಿನ್ಯುಯೆಟ್ ಎಂಬ ನೃತ್ಯ, ಮೊ. ರಲ್ಲಿ ಒಂದು ಗೌಣ ಭಾಗ; (ಇಸ್ಪೀಟಾಟದಲ್ಲಿ) ಮೂರು—ಹಾಸು, ರಾಜ, ರಾಣಿ, ಗುಲಾಮ; ಮುಕ್ಕೂಟ.

Tríole ಟ್ರೀಯೋಲ್ (ನಾ.) (ಸಂ.) = Triplet (Triple ಕೆಳಗೆ ನೋಡಿ)

Tríolet ಟ್ರೈ(ಟ್ರೀ)ಯೊಲೆಟ್ (ನಾ.) ಒಂದು ಬಗೆಯ ಅಂತ್ಯಪ್ರಾಸಗಳುಳ್ಳ ಅಷ್ಟಪದಿ. (Cat dog bat cat fat hog cat dog ಎಂಬಂತೆ ಮೊದಲನೆಯ ಚರಣದ್ದು ನಾಲ್ಕನೆಯ ಮತ್ತು ಏಳನೆಯ ಚರಣಗಳಲ್ಲಿಯೂ ಎರಡನೆಯ ಚರಣದ್ದು ಎಂಟನೆಯದರಲ್ಲಿಯೂ ಬರುವಂಥದು)

Tríonal ಟ್ರೈಓನಲ್ (ನಾ.) ಸ್ಪರ್ಶಜ್ಞಾನವಿಲ್ಲದಂತೆ ಮಾಡುವ ಮತ್ತು ನಿದ್ದೆ ಬರಿಸುವ ಒಂದು ಔಷಧ: ಟ್ರೈಯೊನಲ್.

Triónes ಟ್ರೈಓನೀಸ್ (ನಾ., ಬ. ವ.) ಸಪ್ತರ್ಷಿ ಮಂಡಲ(ದ ಏಳು ನಕ್ಷತ್ರಗಳು)

Trior. **Try** (ಕೆಳಗೆ Trier) ನೋಡಿ.

Trip ಟ್ರಿಪ್ (ಕ್ರಿ., ನಾ.) ಬೇಗ ಬೇಗ ಹಗುರಹೆಜ್ಜೆ ಹಾಕುತ್ತ—ನಡೆ, ಓಡು, ನರ್ತನಮಾಡು; ಪಟಪಟನೆ—ನಡೆ, ಓಡು, ನರ್ತಿಸು; (ರೂಪ; ಲಯ, ತಾಳ, ಮೊ. ಗಳ ವಿಷಯದಲ್ಲಿ) ಹಗುರವಾಗಿ ಓಡು [**Tríppingly** (ಕ್ರಿ. ವಿ.)]; (ಪ್ರಾಚೀ. ಪ್ರ.) (ಲಘು, ಸಂತೋಷ) ಪ್ರಯಾಣ ಪ್ರವಾಸ, ಸಂಚಾರ,—ಹೊರಡು, ಮಾಡು [(ಆಧುನಿಕ ಪ್ರ.) **Trípper** (ನಾ.)]; ಎಡವು, ಮುಗ್ಗರಿಸು (ಅನೇಕ ವೇಳೆ *over* ಉಪ. ಜೊಡನೆ);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಪ್ಪುಮಾಡು, ಅಸಂಬದ್ಧವಾಗಿ ಹೇಳು; ನೀತಿ, ನಡತೆ, —ತಪ್ಪು (All are apt to t. ಎಲ್ಲರೂ ತಪ್ಪುಮಾಡುತ್ತಾರೆ, ಎಡವುತ್ತಾರೆ); (ವ್ಯಕ್ತಿಯ ಅಥವಾ ಅಡಚಣೆಯ ವಿಷಯದಲ್ಲಿ) ತೊಡರುಕೊಟ್ಟು, ತೊಡರಿಕೊಂಡು, —ಬೀಳಿಸು, ಕೆಡವು (ಅನೇಕ ವೇಳೆ *up* ಉಪ. ದೊಡನೆ); (ವ್ಯಕ್ತಿಯನ್ನು) ತಪ್ಪು ಮಾಡುತ್ತಿರುವಾಗ (ಕಂಡು)ಹಿಡಿ (ಅನೇಕ ವೇಳೆ *up* ಉಪ. ದೊಡನೆ); (ನಾವೆ) (ತಳವೂರಿದ ಲಂಗರನ್ನು) ಹೊರಜಿಯಿಂದ ಎಳೆದು—ಬಿಡಿಸು, ಎತ್ತು; (ನಾವೆ) (ದೂಲ, ಮೊ. ನ್ನು) ಕ್ಷಿತಿಜಮಟ್ಟದಿಂದ ಲಂಬವಾಗಿ ತಿರುಗಿಸು; (ಯಂತ್ರ ಭಾಗವನ್ನು ಹಿಡಿಕೆ ತೆಗೆದು) ತಟಕ್ಕನೆ ಬಿಡು; ಕಳಚು. (ನಾ.) ಪ್ರಯಾಣ, (ಸಂತೋಷ) ಪ್ರವಾಸ, ಸಂಚಾರ, ಪರ್ಯಟನ (Cheap trips to Mysore. Round t. ಹೊರಟ ಸ್ಥಳಕ್ಕೆ ಮತ್ತೆ ಬಂದು ಸೇರುವ ಪ್ರಯಾಣ: ಸುತ್ತು ಪ್ರಯಾಣ); ಹಗುರ, ಚಳಕದ, —ಹೆಜ್ಜೆ; ಎಡವು, ಮುಗ್ಗರಿಕೆ (ರೂಪ. ಸಹ); ತೊಡರಿ—ಬೀಳುವುದು, ಬೀಳಿಸುವುದು. ಹಡಗು ಪ್ರಯಾಣದಲ್ಲಿ ಹಿಡಿದ ಮೀನು. T.-hammer ಒಂದು ಬಗೆಯ ಕೀಲು ಚಮ್ಮಟಿಗೆ.

Tripártite ಟ್ರೈ(ಟ್ರಿ)ಪಾರ್ಟೈಟ್ (ಗು.) ಮೂರು ಭಾಗಗಳಾಗಿ ವಿಭಾಗಿಸಿದ; ತ್ರಿವಿಭಕ್ತ; (ಸ. ವಿ.) (ಎಲೆಗಳ ವಿಷಯದಲ್ಲಿ) (ಹೆಚ್ಚು ಕಡಮೆ ಬುಡದವರೆಗೂ) ಮೂರಾಗಿ ಸೀಳಿರುವ, ತ್ರಿಖಂಡ; ಮೂರು ಪಕ್ಷಗಳಿಗೆ ಸಂಬಂಧಿಸಿದ, ಮೂರು ಪಕ್ಷಗಳು ಸೇರಿ ಮಾಡಿಕೊಂಡಿರುವ: ತ್ರಿಪಕ್ಷ (T. treaty). T. indenture (ಪ್ರತಿಯೊಂದು ಪಕ್ಷದವರಲ್ಲಿಯೂ ಒಂದೊಂದು ಪ್ರತಿಯಿರುವಂತೆ) ಮೂರು ಪ್ರತಿಗಳು ಇರುವ ದಸ್ತೈವಜು, ಪತ್ರ: ತ್ರಿಪ್ರತಿ, ಮುಪ್ಪಡಿ,—ಪತ್ರ. **Tripártitely** (ಕ್ರಿ. ವಿ.); **Tripartítion.**

Tripe ಟ್ರೈಪ್ (ನಾ.) (ಆಹಾರವಾಗಿ ಎತ್ತು, ಮೊ. ಗಳ) ಹೊಟ್ಟೆಯ ಭಾಗ, ಹೊಟ್ಟೆಯ ಮಾಂಸ [Will stand anything but (a) t.]; (ಈಗ ಗ್ರಾಮ್ಯ ಪ್ರ.; ಸಾ., ಬ. ವ. ದಲ್ಲಿ) ಕರುಳು, ಹೊಟ್ಟೆ; (ಅಸಂ.) ಕೀಳು ದರ್ಜೆಯದು, ಕೆಲಸಕ್ಕೆ ಬಾರದ್ದು; ಕಳಪೆ, ಕಚ್ಚಾ (ಚೆಂಡೆಸೆತ, ಮೊ.). **Trípeman** ಹೊಟ್ಟೆಮಾಂಸ (ಅಣಿಗೊಳಿಸಿ) ಮಾರುವವನು. **Trípery** (ನಾ.) ಹೊಟ್ಟೆಮಾಂಸ—ಅಣಿಗೊಳಿಸುವ ಸ್ಥಳ, ಮಾರುವ ಸ್ಥಳ.

Tríplane ಟ್ರೈಪ್ಲೇನ್ (ನಾ.) ಮೂರು ಫಲಕಗಳ ವಿಮಾನ; ತ್ರಿಫಲಕ ವಿಮಾನ.

Tríple ಟ್ರಿಪ್‌ಲ್ (ಗು., ಕ್ರಿ.) ಮೂರರಷ್ಟು, ಮುಮ್ಮಡಿ, ಮೂರು ಭಾಗಗಳುಳ್ಳ, ತ್ರಿಗುಣ [T.-headed ಮೂರು ತಲೆಯ, ತ್ರಿಶಿರಸ್ಕ. T.-nerved ಮೂರು ನರಗಳುಳ್ಳ. T. Alliance (ರಾಷ್ಟ್ರಗಳು, ರಾಜಕೀಯ ಅಥವಾ ಕೆಲಸಗಾರರ ಸಂಘಗಳು, ಮೊ. ಗಳ) ತ್ರಿರಾಷ್ಟ್ರ, ತ್ರಿಪಕ್ಷ,—ಮೈತ್ರಿ (ಚರಿತ್ರೆಯಲ್ಲಿ ವಿವಿಧ ಕಾಲಗಳಲ್ಲಿ ವಿವಿಧ ರಾಷ್ಟ್ರಗಳು ಮಾಡಿಕೊಂಡದ್ದು ಸಹ). T. crown ಪೋಪ್ ಗುರುವಿನ (ಮೂರು ವಲಯದ) ಕಿರೀಟ. T. Entente (೧೯೦೮ರಲ್ಲಿ ಏರ್ಪಟ್ಟ, ಗ್ರೇಟ್ ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಗಳ) ತ್ರಿರಾಷ್ಟ್ರ ಮೈತ್ರಿ. T. time (ಸಂ.) ಒಂದು ಬಗೆಯ ತಾಳ]. (ಕ್ರಿ.) ಮೂರರಷ್ಟು, ಮೂರುಮಡಿ, ತ್ರಿಗುಣಿತ,—ಆಗು, ಮಾಡು; ತ್ರಿಗುಣಿಸು; (ಎಂಜಿನನ್ನು) ಮೂರುರುಳೆಯೆಂಜಿನಾಗಿ ಬದಲಾಯಿಸು. **Tríplet** (ನಾ.) ಮೂರರ ತಂಡ, ಮುಕ್ಕೂಟ, ತ್ರಯ, ತ್ರಿತಯ; (ಸಾ., ಅಂತ್ಯ ಪ್ರಾಸವುಳ್ಳ) ತ್ರಿಪದಿ; (ಸಂ.) ತ್ರಿಸ್ವರ, ಸ್ವರತ್ರಯ; (ಬಳ. ಮಾ.) ಒಂದೇಸಲ ಹುಟ್ಟಿದ ಮೂರು ಮಕ್ಕಳಲ್ಲೊಂದು; (ನಾವೆ) ಹೊರಜಿಗೂ ಲಂಗರಿನ ಉಂಗುರಕ್ಕೂ ನಡುವೆ ಇರುವ ಸರಪಣಿಯ ಮೂರು ಕೊಂಡಿಗಳು: ಮುಕ್ಕೊಂಡಿ. **Tríplex** (ನಾ.) (ಸಂ.) ತಾಳವಿಶೇಷ; ತ್ರಿಭಾಗ, ತ್ರಿಖಂಡ, —ರಚನೆ. **Tríplicate** —ಕೆಟ್ (ಗು., ನಾ.), —ಕೇಟ್ (ಕ್ರಿ. ಸಕ.) ಮೂರು ಮಡಿಯ, ಮೂರು ಭಾಗಗಳಲ್ಲಿರುವ, ಮುಪ್ಪಡಿಯ, ತ್ರಿಪ್ರತಿಯ (T. certificate); [T. ratio (of two numbers) (ಎರಡು ಸಂಖ್ಯೆಗಳ) ತ್ರಿಘಾತ, ಘನ, —ಪ್ರಮಾಣ (The t. ratio of a to b is $a^3 : b^3$)]. (ನಾ.) ತ್ರಿಪ್ರತಿ(ಗಳಲ್ಲೊಂದು), ಮುಪ್ಪಡಿ(ಗಳಲ್ಲೊಂದು) (Document drawn up in t. ತ್ರಿಪ್ರತಿ ದಸ್ತೈವಜು). (ಕ್ರಿ.) ಮೂರು ಮಡಿ, ತ್ರಿಗುಣಿತ, —ಮಾಡು; ತ್ರಿಪ್ರತಿಮಾಡು. **Triplicátion** (ನಾ.); **Tríplicature** (ನಾ.); **Tríplice** (It.) ಟ್ರಿಪ್ಲಿಚೇ (ನಾ.) ತ್ರಿರಾಷ್ಟ್ರ ಮೈತ್ರಿ (ರಷ್ಯಾ ಫ್ರಾನ್ಸುಗಳಿಗೆ ವಿರುದ್ಧವಾಗಿ ೧೮೮೨-೩ರಲ್ಲಿ ಏರ್ಪಟ್ಟ ಜರ್ಮನಿ, ಆಸ್ಟ್ರಿಯ ಮತ್ತು ಇಟಲಿಗಳ ಮೈತ್ರಿ). **Triplícity** (ನಾ.) ತ್ರಯ(ತ್ವ), ತ್ರಿತಯ(ತ್ವ), ತ್ರಿತ್ವ, ತ್ರಿಗುಣತ್ವ.

Tríplet, Tríplex, Tríplicate, etc., Tríplice, Triplícity. **Triple** ನೋಡಿ.

Trípod ಟ್ರಿ(ಟ್ರೈ)ಪಾಡ್ (ನಾ.) ಮೂರು ಕಾಲಿನ—ಮಣೆ, ಮೇಜು, ಪಾತ್ರೆ, ಆಧಾರ, ನಿಲವು: ಮುಕ್ಕಾಲಿ, ತ್ರಿಪಾದಿ; ಛಾಯಾಗ್ರಾಹಕದ ತ್ರಿಪಾದಿ; (ಗ್ರೀಕ್ ಪ್ರಾ.) ಡೆಲ್ಫಿಯ ಅಪಾಲೋ ದೇವಸ್ಥಾನದಲ್ಲಿ ಪೂಜಾರಿಣಿ ಭವಿಷ್ಯ ಹೇಳಲು ಕೂತುಕೊಳ್ಳುತ್ತಿದ್ದ ಕಂಚಿನ ಮುಕ್ಕಾಲಿ ಪೀಠ: ಭವಿಷ್ಯ ಪೀಠ; (ರೂಪ.) ಭವಿಷ್ಯ, ದಿವ್ಯ ವಾಣಿ; ಡೆಲ್ಫಿಯ ವ್ಯಾಯಾಮ ಕ್ರೀಡೆ, ಮೊ ಗಳಲ್ಲಿ ಗೆದ್ದವರಿಗೆ ಬಹುಮಾನವಾಗಿ ಕೊಡುತ್ತಿದ್ದ ಮೂರು ಕಾಲಿನ ಬಟ್ಟಲು ತ್ರಿಪಾದಿ ಬಟ್ಟಲು. **Trípodal** —ಪೋಡಲ್ (ಗು.) ಮೂರು ಕಾಲಿನ, ತ್ರಿಪಾದಿ.

Trípoli ಟ್ರಿಪೊಲಿ (ನಾ.) = Rotten-stone (Rot ನೋಡಿ)

Trípos ಟ್ರೈಪಾಸ್ (ನಾ.) (ಕೇಂಬ್ರಿಡ್ಜ್ ವಿ. ವಿ. ನಿ.) ಘನ ಪಾಂಡಿತ್ಯ (ಆನರ್ಸ್) ಪರೀಕ್ಷೆ(ಯಲ್ಲಿ ತೇರ್ಗಡೆಯಾದವರ ಪಟ್ಟಿ)

Tríptych ಟ್ರಿಪ್ಟಿಕ್ (ನಾ.) ಪಕ್ಕಪಕ್ಕವಾಗಿ ಮೂರು ಅಂಕಣಗಳಲ್ಲಿ ಕೆತ್ತಿದ, ಚಿತ್ರಿಸಿದ, —ಚಿತ್ರ: ಮೂರಂಕಣ—ಚಿತ್ರ, ಕೆತ್ತನೆ; ಪಕ್ಕ ಪಕ್ಕವಾಗಿಟ್ಟ ಪರಸ್ಪರ ಸಂಬಂಧವುಳ್ಳ ಮೂರು ಚಿತ್ರಗಳು: ಚಿತ್ರತ್ರಯ, ತ್ರಿಚಿತ್ರ; ಕೀಲುಗೂಡಿಸಿದ ಅಥವಾ ಒಟ್ಟಿಗೆ ಕಟ್ಟಿದ ಮೂರು ಲೇಖನ ಫಲಕಗಳು: ತ್ರಿಫಲಕ.

Tripúdiate ಟ್ರೈಪ್ಯೂಡಿಯೇಟ್ (ಕ್ರಿ. ಅಕ.) (ಪಾಂಡಿತ್ಯ ಪ್ರ.) ಸಂಭ್ರಮದಿಂದ, ಸಂತೋಷದಿಂದ, —ಕುಣಿದಾಡು, ನರ್ತಿಸು; ಜಯೋತ್ಸಾಹದಿಂದ, ಹೆಕ್ಕಳದಿಂದ, —ನಲಿ, ಎಗುರಾಡು (*Upon* ಉಪ. ದೊಡನೆ)

Triquétra ಟ್ರೈಕ್ವೆ(ಕ್ವೀ)ಟ್ರ (ನಾ., ಬ. ವ. -ae —ಟ್ರೀ) ಒಂದಕ್ಕೊಂದು ಒಳಸೇರಿಕೊಂಡ ಮೂರು ಕಮಾನುಗಳ ಒಂದು ತ್ರಿಕೋನಾಕಾರದ ಆಭರಣ: ತ್ರಿಚಾಪಕೋನ. **Triquétrous** (ಗು.) ಮುಮ್ಮೂಲೆಯ; (ಸ. ವಿ., ತಾಳಿನ ವಿಷಯದಲ್ಲಿ) ಮೂರು ಲಘು ಕೋನಗಳುಳ್ಳ, ತ್ರಿಕೋನಿ. **Triquétrously** (ಕ್ರಿ. ವಿ.)

Tríreme ಟ್ರೈರೀಮ್ (ನಾ.) ಮೂರು ಅಂತಸ್ತುಗಳ ಹುಟ್ಟು ಸಾಲಿನ ಹಡಗು (ಮು., ಗ್ರೀಸಿನಲ್ಲಿ ಉಪಯೋಗಿಸುತ್ತಿದ್ದ ಯುದ್ಧ ಹಡಗು)

Trisécт ಟ್ರೈಸೆಕ್ಟ್ (ಕ್ರಿ. ಸಕ.) (ರೇಖೆ, ಕೋನ, ಮೊ. ನ್ನು) ಮೂರು (ಸಮ)ಭಾಗವಾಗಿ ಕತ್ತರಿಸು, ಭಾಗಿಸು; ತ್ರಿಭಾಗಮಾಡು, ತ್ರಿವಿಭಕ್ತ ಮಾಡು. **Trisection** (ನಾ.)

Trísmus ಟ್ರಿಸ್ಮಸ್ (ನಾ.) (ರೋಗ ನಿದಾನ) = Lockjaw (Lock[2] ನೋಡಿ)

Trístful ಟ್ರಿಸ್ಟ್‌ಫುಲ್ (ಗು.) (ಪ್ರಾಚೀ. ಪ್ರ.) ದುಃಖಿತ, ವಿಷಣ್ಣ; ಹಾಳು ಸುರಿಯುವ, ಮಂಕುಗವಿದ. **Trístfully** (ಕ್ರಿ. ವಿ.)

Trisýllable ಟ್ರಿ(ಟ್ರೈ)ಸಿಲಬ್‌ಲ್ (ನಾ.) ಮೂರು ಉಚ್ಚಾರಾಂಶಗಳ, ಮೂರು ಅಕ್ಷರಗಳ, —ಪದ; ತ್ರ್ಯಕ್ಷರಿ. **Trisyllábic** —ಸಿಲ್ಯಾ— (ಗು.); **Trisyllábically** (ಕ್ರಿ. ವಿ.)

Tritagónist ಟ್ರಿ(ಟ್ರೈ)ಟಗೋನಿಸ್ಟ್, **Tritágonist** —ಟ್ಯಾಗೋನಿಸ್ಟ್ (ನಾ.) (ಗ್ರೀಕ್ ನಾಟಕಗಳಲ್ಲಿ) ಮೂರನೆಯ ನಟ.

Trite ಟ್ರೈಟ್ (ಗು.) (ವಾಕ್ಯ, ಭಾವ, ಮೊ. ಗಳ ವಿಷಯದಲ್ಲಿ) ಸರ್ವಸಾಮಾನ್ಯವಾದ, ದಿನಬಳಕೆಯ, ಚರ್ವಿತ ಚರ್ವಣದ, ಹಳಸಲಾದ. **Trítely** (ಕ್ರಿ. ವಿ.); **Tríteness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Trítheism ಟ್ರೈತೀಇಸ್ಮ್ (ನಾ.) ದೇವರು, ದೇವಪುತ್ರ (ಕ್ರಿಸ್ತ), ದಿವ್ಯಾತ್ಮ—ಇವು ಮೂರು ಪ್ರತ್ಯೇಕ ಮೂರು ದೇವತತ್ತ್ವಗಳೆಂಬ ವಾದ: ತ್ರಿದೇವ ವಾದ; ತ್ರಿದೇವ ತತ್ತ್ವ (ವಾದ). **Trítheist** (ನಾ.); **Tritheístic(al)** (ಗು.)

Tríton ಟ್ರೈಟನ್ (ನಾ.) (ಗ್ರೀಕ್ ಪುರಾಣ) ಸಮುದ್ರಾಧಿದೇವನಾದ ಪೋಸೈಡನನ ಮತ್ತು ಸಮುದ್ರಾಧಿದೇವಿಯಾದ ಆ್ಯಂಫಿಟ್ರೈಟಿಯ ಮಗನಾದ ಒಬ್ಬ ಸಮುದ್ರೋಪದೇವತೆ (ಆತನ ಕೆಳಮೈ ಮೀನಿನಾಕಾರದ್ದೆಂದೂ ಆತನ ವಿಶಿಷ್ಟಲಾಂಛನ ಊದುವ ಶಂಖವೆಂದೂ ಭಾವನೆ): ಟ್ರೈಟನ್ [T. among the Minnows (Minnow ನೋಡಿ)]; ತುತೂರಿಯಾಕಾರದ ಚಿಪ್ಪುಳ್ಳ ಹಲವು ಬಗೆಯ ಉದರಪಾದಿ ಮತ್ತು ಧೂಜಲ ಜೀವಿ.

Tríturate ಟ್ರಿಟ್ಯುರೇಟ್ (ಕ್ರಿ. ಸಕ.) ನುಣ್ಣಗೆ ಪುಡಿಮಾಡು, ಬೀಸು; ದವಡೆಹಲ್ಲಿನಿಂದ ಅರೆ; ಚೆನ್ನಾಗಿ ಅಗಿ(ದು ಪುಡಿಮಾಡು). **Tríturable** (ಗು.); **Triturátion** (ನಾ.); **Tríturator** (ನಾ.) ಪುಡಿಮಾಡುವ ಯಂತ್ರ, ಚೂರ್ಣಕ.

Tríumph ಟ್ರೈಅಂಫ್ (ನಾ., ಕ್ರಿ. ಅಕ.) (ರೋ. ಪ್ರಾ.) ವಿಜಯದ ಮತ್ತು ವಿಜೇತ ನಾಯಕನ ಸಲುವಾಗಿ ನಡೆಯುವ ಮೆರವಣಿಗೆ ಮತ್ತು ಉತ್ಸವ: ಗೆಲವೊಸಗೆ, ವಿಜಯೋತ್ಸವ; (ವಿ)ಜಯ, ಗೆಲವು, ಮಹಾಸಾಧನೆ (Returned home in t. ಜಯ ಪಡೆದು ಹಿಂದಿರುಗಿದನು. The triumphs of science ವಿಜ್ಞಾನದ ಮಹಾಸಾಧನೆಗಳು. His hat is a t. of ugliness ಅವನ ಟೊಪ್ಪಿಗೆ ವಿಕಾರದ ಪೂರ್ಣ ವಿಜಯ, ಪರಮ ಸಿದ್ಧಿ); ವಿಜಯೋತ್ಸಾಹ, ಜಯಾನಂದ, ವಿಜಯ ಸಂಭ್ರಮ, ಹರ್ಷೋತ್ಕರ್ಷ, ಹೆಕ್ಕಳಿಕೆ (Could detect no t. in his eye). (ಕ್ರಿ.) (ರೋ. ಪ್ರಾ.) ವಿಜಯೋತ್ಸವ—ಹೊರಡು, ನಡಸು. ಜಯ ಪಡೆ, ವಿಜಯಿಯಾಗು, ಜಯಿಸು, ಗೆಲ್ಲು (*Over* ಉಪ. ಜೊಡನೆ); (ಬದ್ಧ ಶತ್ರು, ಮೊ. ನ್ನು ಕಂಡು) ಹೆಕ್ಕಳಿಸು (*Over* ಉಪ. ಜೊಡನೆ). **Triúmphal** (ಗು.) ವಿಜಯೋತ್ಸವದ [T. car, hymn. T. crown ಜಯ ಪಡೆದ ರೋಮನ್ ಸೇನಾಪತಿಯ ತಲೆಗೆ ಅಲಂಕಾರವಾಗಿ ಇಡುತ್ತಿದ್ದ ಎಲೆಗಳ ಮಾಲೆ: ಜಯ—ಬಾಸಿಗ, ಕಿರೀಟ. T. arch (ವಿಜಯದ ಸ್ಮಾರಕವಾಗಿ ಕಟ್ಟಿದ) ವಿಜಯ—ತೋರಣ, ಮಂಟಪ]. **Triúmphant** (ಗು.) ಜಯ ಪಡೆದ, ವಿಜಯಿಯಾದ, ಗೆದ್ದ; ಜಯದ; (ವ್ಯಕ್ತಿ, ಮಾತು, ಮೊ. ಗಳ ವಿಷಯದಲ್ಲಿ) ಪರಮೋತ್ಸಾಹದ, ಹೆಕ್ಕಳಿಕೆಯ. **Triúmphantly** (ಕ್ರಿ. ವಿ.); **Tríumphingly** (ಕ್ರಿ. ವಿ.)

Triúmvir ಟ್ರೈಅಂವರ್ (ನಾ.; ಬ.ವ. -ri —ರೈ, -rs ರ್ಸ್) (ರೋ.ಪ್ರಾ.) ಮೂವರು ಆಡಳಿತಾಧಿಕಾರಿಗಳಲ್ಲೊಬ್ಬ, ಅಧಿಕಾರಿತ್ರಯರಲ್ಲೊಬ್ಬ; (ರೋಮನ್ ಚರಿತ್ರೆ) (ಮೊದಲನೆಯ ಅಥವಾ ಎರಡನೆಯ) ನಾಯಕತ್ರಯರಲ್ಲೊಬ್ಬ. **Triúmviral** (ಗು.); **Triúmvirate** —ವಿರೆಟ್ (ನಾ.) ಅಧಿಕಾರಿತ್ರಯ—ಪದವಿ, ಪ್ರಭುತ್ವ; ತ್ರಿಪ್ರಭುತ್ವ; ನಾಯಕತ್ರಯ; [(ರೋಮನ್ ಚರಿತ್ರೆ) First t. (ಕ್ರಿ. ಪೂ. ೬೦ರಲ್ಲಿ ಏರ್ಪಟ್ಟ) ಪಾಂಪೆ, ಜೂಲಿಯಸ್ ಸೀಸರ್ ಮತ್ತು ಕ್ರ್ಯಾಸಸ್ (ನಾಯಕರ ಪ್ರಭುತ್ವ): ಪ್ರಥಮ ನಾಯಕತ್ರಯ (ಪ್ರಭುತ್ವ); Second t. (ಕ್ರಿ. ಪೂ. ೪೩ರಲ್ಲಿ ಏರ್ಪಟ್ಟ) ಮಾರ್ಕ್ ಆ್ಯಂಟೊನಿ, ಆಕ್ಟೇವಿಯನ್ ಮತ್ತು ಲೆಪಿಡಸ್ (ನಾಯಕರ ಪ್ರಭುತ್ವ): ದ್ವಿತೀಯ ನಾಯಕತ್ರಯ (ಪ್ರಭುತ್ವ)]. ಮೂರರ ತಂಡ, ಮೂವರ ಗುಂಪು, ಮುಕ್ಕೂಟ, ತ್ರಯ.

Tríune ಟ್ರೈಯೂನ್ (ಗು.) ಮೂರೂ ಒಂದರಲ್ಲಿ ಐಕ್ಯವಾಗಿರುವ, ತ್ರಿತಯೈಕ್ಯ (T. Godhead). **Triúnity** (ನಾ.) ತ್ರಿತಯೈಕ್ಯತೆ.

Trívet ಟ್ರಿವೆಟ್ (ನಾ.) (ಬೆಂಕಿಯಮೇಲೆ ಅಡಿಗೆಯ ಪಾತ್ರೆಯನ್ನಿಡಲು ಉಪಯೋಗಿಸುವ) ಕಬ್ಬಿಣದ ಮುಕ್ಕಾಲ ಒಲೆ, ಅಡ್ಡಣಿಗೆ; ಇದೇ ಉದ್ದೇಶಕ್ಕಾಗಿ ಒಲೆಕಟ್ಟಿನ ಕಂಬಿಗೆ ಕೊಂಡಿಯ ಮೂಲಕ ತಗುಲಿಸುವಂತೆ ಮಾಡಿರುವ ಲೋಹದ ಬಂಕ: ಅಡ್ಡಣಿಗೆ ಬಂಕ. (ಬಳ. ಮಾ.) Right as a t. ಭದ್ರವಾಗಿ, ಅಚ್ಚುಕಟ್ಟಾಗಿ, ನೆಮ್ಮದಿಯಾಗಿ (—ಇರುವ). T. table ಮೂರು ಕಾಲಿನ ಮೇಜು.

Trívial ಟ್ರಿವಿಯಲ್ (ಗು.) ಅಲ್ಪ ಬೆಲೆಯ; ಅಲ್ಪ, ತುಚ್ಛ, ಕ್ಷುದ್ರ (T. matters. Raised t. objections); (ವ್ಯಕ್ತಿಯ ವಿಷಯದಲ್ಲಿ) ಸಾಮರ್ಥ್ಯವಾಗಲಿ ನೀತಿಯಾಗಲಿ ಇಲ್ಲದ, ಕೆಲಸಕ್ಕೆ ಬಾರದ, ಅಪ್ರಯೋಜಕ, ಕ್ಷುಲ್ಲಕ; ದಿನಬಳಕೆಯ, ನಿತ್ಯಗಟ್ಟಳೆಯ (The t. round of daily life); (ಸ. ವಿ., ಪ್ರಾ. ವಿ.; ಹೆಸರಿನ ವಿಷಯದಲ್ಲಿ) ಬಳಕೆಯ, ಜನರೂಢಿಯ; ವಂಶವಿಶಿಷ್ಟ (ವಿರುದ್ಧ ಪದ: Generic). **Trívialism** (ನಾ.); **Triviálity** (ನಾ.); **Trívialize** (ಕ್ರಿ. ಸಕ.); **Trívially** (ಕ್ರಿ. ವಿ.); **Trívialness** (ನಾ.)

Trívium ಟ್ರಿವಿಯಂ (ನಾ.) (ಚರಿತ್ರೆ) (ಮಧ್ಯ ಯುಗದ ಪಾಠಶಾಲೆಗಳಲ್ಲಿ) ಮೊದಲ ಮೂರು ವ್ಯಾಸಂಗ ವಿಷಯಗಳು: ವ್ಯಾಕರಣ, ಅಲಂಕಾರ, ತರ್ಕ (ನ್ಯಾಯ); ಶಾಸ್ತ್ರತ್ರಯ.

-trix —ಟ್ರಿಕ್ಸ್, (ಉ. ಪ್ರ.) -tor ಅಂತ್ಯವಾದ ಪುಲ್ಲಿಂಗ ನಾಮಪದಗಳಿಂದ ಸ್ತ್ರೀಲಿಂಗ ರೂಪವನ್ನು ಮಾಡಲು ಹಚ್ಚುವ ಪ್ರತ್ಯಯ (ಉದಾ., Administrator, -trix; Executor, -trix)

Troat ಟ್ರೋಟ್ (ನಾ., ಕ್ರಿ. ಅಕ.) ಬೆದೆಹತ್ತಿದ ಗಂಡು ಜಿಂಕೆಯ ಕೂಗು. (ಕ್ರಿ.) (ಜಿಂಕೆ) ಬೆದೆಹತ್ತಿ ಕೂಗು.

Trócar ಟ್ರೋಕಾರ್ (ನಾ.) (ವೈ. ಶಾ.) ಜಲೋದರ, ಮೊ. ರೋಗಗಳಲ್ಲಿ ದೇಹದಲ್ಲಿಯ ನೀರನ್ನು ಹೊರತೆಗೆಯಲು ಉಪಯೋಗಿಸುವ ಸಲಕರಣೆ: (ಜಲ) ಚೋಷಕ.

Trocháic ಟ್ರೋಕೇಇಕ್ (ಗು., ನಾ.) ಒಂದು ಗುರು, ಒಂದು ಲಘು (-᠌) ಗಣದ; ಟ್ರೋಕೀ ಗಣದ. (ನಾ., ಬ. ವ. ದಲ್ಲಿ) ಟ್ರೋಕೀ ಗಣ ವೃತ್ತ. **Tróchee** ಟ್ರೋಕೀ (ನಾ.) ಒಂದು ಗುರು ಮತ್ತು ಒಂದು ಲಘುವಿನ ಗಣ (-᠌): ಟ್ರೋಕೀ ಗಣ.

Tróchal ಟ್ರೋ(ಟ್ರಾ)ಕಲ್ (ಗು.) (ಪ್ರಾ. ವಿ.) ಚಕ್ರಾಕಾರದ.

Trochánter ಟ್ರೊಕ್ಯಾಂಟರ್ (ನಾ.) (ಅಂ. ರ. ಶಾ., ಪ್ರಾ. ವಿ.) ತೊಡೆಯೆಲುಬಿನ ಮೇಲುಭಾಗದ ಚಾಚು ಅಥವಾ ಗುಬಟು(ಗಳಲ್ಲೊಂದು) (ಸ್ನಾಯುಗಳು ಕಚ್ಚಿಕೊಳ್ಳುವುದಕ್ಕೆ ಇವು ಅನುಕೂಲವಾಗುತ್ತವೆ); ಕೀಟದ ಕಾಲಿನ ಎರಡನೆಯ ತುಂಡು, ಕೀಲು.

Tróche ಟ್ರೋಕ್ (ಕೀ, ಷ್, ಚ್) (ನಾ.) ಔಷಧಿ—ಬಿಲ್ಲೆ, ಮಾತ್ರೆ.

Tróchee. Trochaic ನೋಡಿ.

Tróchil(us) ಟ್ರಾಕಿಲ್(ಲಸ್) (ನಾ.) ಹಲವು ಬಗೆಯ ಹಕ್ಕಿ.

Tróchlea ಟ್ರಾಕ್ಲಿ(ಲಿ)ಯ (ನಾ.; ಬ. ವ. -ae —ಯೀ) (ಅಂ. ರ. ಶಾ.) ಕಪ್ಪಿಯಂಥ—ಭಾಗ, ರಚನೆ, ಅಳವಡಿಕೆ. **Tróchlear** (ಗು.) (ಅಂ. ರ. ಶಾ., ಸ. ವಿ.); **Tróchleate** (ಗು.) (ಸ. ವಿ.)

Tróchoid ಟ್ರಾ(ಟ್ರೋ)ಕಾಯ್ಡ್ (ಗು., ನಾ.) (ಅಂ. ರ. ಶಾ.) ತನ್ನ ಅಕ್ಷದಮೇಲೆ ತಿರುಗುವ, ಸುತ್ತುವ; ಭ್ರಮಕ; (ವಕ್ರರೇಖೆಯ ವಿಷಯದಲ್ಲಿ) ಮತ್ತೊಂದು ವಕ್ರರೇಖೆಯ ಮೇಲೆ ಉರುಳುತ್ತಿರುವ ಒಂದು ವಕ್ರರೇಖೆಯ ಯಾವುದಾದರೊಂದು ಬಿಂದುವಿನಿಂದ ರಚಿತವಾದ: ವಕ್ರ ವಲನದ; (ಶಂಖದ ವಿಷಯದಲ್ಲಿ) ಬುಗುರಿಯಾಕಾರದ. (ನಾ.) ಭ್ರಮಕ ಸಂಧಿ, ಅಚ್ಚುಕೀಲು; ವಕ್ರ ವಲನ ವಕ್ರ; ಹಲವು ಬಗೆಯ ಉದರಪಾದಿ. **Trochoídal** (ಗು.)

Trochómeter ಟ್ರೊಕಾಮಿಟರ್ (ನಾ.) = Hodometer.

Trod(den). Tread ನೋಡಿ.

Tróglodyte ಟ್ರಾ(ಟ್ರೋ)ಗ್ಲೊಡೈಟ್ (ನಾ.) (ಚರಿತ್ರ ಪೂರ್ವಕಾಲದ ಪ. ಯೂರೋಪಿನ) ಗುಹಾವಾಸಿ (ಅನೇಕ ವೇಳೆ ವಿಶೇಷಣ ಪ್ರ.); (ರೂಪ.) ಏಕಾಂತವಾಸಿ, ವಿರಕ್ತ; ಹಲವು ಬಗೆಯ ರೆನ್ ಹಕ್ಕಿ, ನರವಾನರ. **Troglodýtic(al)** —ಡಿಟಿ— (ಗು.); **Tróglodytism** —ಡೈಟಿಸ್ಮ್ (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Troíka (ರಷ್ಯದ ಭಾಷೆ) ಟ್ರಾಯ್ಕ (ನಾ.) ಪಕ್ಕ ಪಕ್ಕದಲ್ಲಿ ಕಟ್ಟಿದ ಮೂರು ಕುದುರೆಗಳು; ಇಂಥ ಮೂರು ಕುದುರೆ—ಸಾರೋಟು, ಬಂಡಿ.

Trójan ಟ್ರೋಜನ್ (ಗು., ನಾ.) ಟ್ರಾಯ್ ಪಟ್ಟಣದ(ವನು); ಟ್ರೋಜನರ (T. War ಹೆಲೆನ್ನಿನ ಅಪಹರಣದ ನಿಮಿತ್ತ ಗ್ರೀಕರಿಗೂ ಟ್ರೋಜನರಿಗೂ ಹತ್ತು ವರ್ಷಗಳು ನಡೆದ ಯುದ್ಧ: ಟ್ರೋಜನ್ ಯುದ್ಧ); (ರೂಪ.) ಧೈರ್ಯದಿಂದ—ಕೆಲಸಮಾಡುವವನು, ಕಾದಾಡುವವನು, ಸಹಿಸಿ ಕೊಳ್ಳುವವನು: ಸಾಹಸಿ, ಧೀರ, ಸಹಿಷ್ಣು (Like a T.)

Troll[1] ಟ್ರೋಲ್ (ಕ್ರಿ., ನಾ.) (ಹಾಡಿನ ಭಾಗಗಳನ್ನು) ಅನುಕ್ರಮವಾಗಿ, ವರಿಸೆಯಾಗಿ, —ಹಾಡು; ನಿರ್ಲಕ್ಷ್ಯವಾಗಿ ಹಾಡು; ತುಂಬುದನಿ ಯಲ್ಲಿ ಹಾಡು; ಗುಂಯ್‌ಗುಟ್ಟು, ಮೊರೆ (I have had a tune trolling in my head); ದೋಣಿಯ ಹಿಂದುಗಡೆ ಎರೆ ಗಾಳವನ್ನು ಅಥವಾ ಚಮಚ ಗಾಳವನ್ನು ಎಳೆದುಕೊಂಡುಹೋಗುತ್ತ ಮೀನು ಹಿಡಿ (Trolling-spoon ಮೀನನ್ನು ಆಕರ್ಷಿಸುವುದಕ್ಕಾಗಿ ಹೀಗೆ ಉಪ ಯೋಗಿಸುವ, ಸುತ್ತುತ್ತಿರುವ ಚಮಚದಾಕಾರದ ಹೊಳಪು ಲೋಹ: ಎರೆಚಮಚ, ಚಮಚ ಗಾಳ); (ಪ್ರಾಚೀ. ಪ್ರ.) (ಊಟ, ಮೊ. ಗಳಲ್ಲಿ ಮದ್ಯಪಾತ್ರೆ, ಮೊ. ನ್ನು) ಸುತ್ತ ಕಳಿಸು. (ನಾ.) ವರಿಸೆಯಾಗಿ ಹಾಡಿದ ಹಾಡು, ಅನುಕ್ರಮ ಗೀತ; ಗಾಳದ ಹುರಿ ತಿರುಗಣಿ, ಸುತ್ತು ಹಗ್ಗ; =Trolling-spoon.

Troll[2] ಟ್ರೋಲ್ (ನಾ.) ಸ್ಕ್ಯಾಂಡಿನೇವಿಯನರ ಪುರಾಣಗಳಲ್ಲಿ ಬರುವ ಒಂದು ಅಮಾನುಷ ವ್ಯಕ್ತಿ; ರಾಕ್ಷಸ; ತುಂಟ ಕುಳ್ಳಭೂತ.

Tróll(e)y ಟ್ರಾಲಿ (ನಾ.) ಓಲಿಸಬಹುದಾದ ಒಂದು ಬಗೆಯ ಬಂಡಿ; (ತಿರುಗು ವ್ಯಾಪಾರಿಯ) ಕೈಬಂಡಿ, ಕತ್ತೆಬಂಡಿ; ಕೆಲಸಗಾರರನ್ನು ಒಯ್ಯುವ, ರೈಲುಕಂಬಿಗಳ ಮೇಲೆ ತಳ್ಳಿಕೊಂಡುಹೋಗುವ, ಬಂಡಿ: ರೈಲಿನ ತಳ್ಳುಬಂಡಿ, ಟ್ರಾಲಿ; ರಸ್ತೆಗಳ ವಿದ್ಯುತ್ ರೈಲಿನಲ್ಲಿ, ಮೇಲ್ಗಡೆ ಹಾಯ್ದಿರುವ ವಿದ್ಯುತ್ ತಂತಿಯಿಂದ ವಿದ್ಯುಚ್ಛಕ್ತಿಯನ್ನು ಸಾಗಿಸಲು ಆ ತಂತಿಗೆ ತಗುಲಿಕೊಂಡು ಉರುಳುತ್ತಹೋಗುವ ಕಪ್ಪಿ: ವಿದ್ಯುತ್ ಕಪ್ಪಿ (T.-pole ವಿದ್ಯುತ್ ಕಪ್ಪಿಯನ್ನು ಎತ್ತಿಹಿಡಿದಿರುವ ಗಣೆ: ಕಪ್ಪಿಗಣೆ); ದಪ್ಪ ದಾರದಿಂದ ಮಾದರಿ ಬಿಡಿಸಿದ ಕರೆಪಟ್ಟಿ (=T.-lace)

Tróllop ಟ್ರಾಲಪ್ (ನಾ.) ಕೊಳಕಿ, ಹೊಲಸು ಹೆಂಗಸು; ಗುಡಿಸೆಟ್ಟಿ. **Tróllopish** (ಗು.); **Tróllopy** (ಗು.)

Trómba (It.) ಟ್ರಾಂಬ, ಟ್ರೋಂಬಾ (ನಾ.) (ಸಂ.) ತುತೂರಿ, ಕಹಳೆ.

Trómbone ಟ್ರಾಂಬೋನ್ (ನಾ.) (ಜಾರು ಕೊಳವೆಗಳು ಅಥವಾ ಕವಾಟಗಳು ಇರುವ) ತುತೂರಿ ಜಾತಿಯ ದೊಡ್ಡ ವಾದ್ಯ. **Trómbonist** (ನಾ.)

Trómmel ಟ್ರಾಮೆಲ್ (ನಾ.) (ಗಣಿ ಕೆಲಸ) (ಅದುರನ್ನು ಶೋಧಿಸಲು ಉಪಯೋಗಿಸುವ, ಸುತ್ತುತ್ತಿರುವ) ಉರುಳೆ ಜಲ್ಲಡಿ.

Tromómeter ಟ್ರೊಮಾಮಿಟರ್ (ನಾ.) ಬಹು ಸ್ವಲ್ಪ ಪ್ರಮಾಣದ ಭೂಕಂಪಗಳನ್ನು ಅಳೆಯುವ ಸಲಕರಣೆ: (ಲಘು, ಸೂಕ್ಷ್ಮ—) ಭೂಕಂಪ ಮಾಪಕ.

Trompe ಟ್ರೋಮ್ಪ್ (ನಾ.) (ಕುಲುಮೆಯಲ್ಲಿ) ನುಗ್ಗುಗಾಳಿಯುಂಟು ಮಾಡುವ ಒಂದು ಸಲಕರಣೆ.

Troop ಟ್ರೂಪ್ (ನಾ., ಕ್ರಿ.) (ಜನಗಳ ಅಥವಾ ಪ್ರಾಣಿಗಳ) ಗುಂಪು, ತಂಡ, ಹಿಂಡು (A t. of school-children. A t. of antelopes); (ಬ. ವ. ದಲ್ಲಿ) ಸೈನಿಕರು, ಸಿಪಾಯಿಗಳು; ದಂಡು, ಸೈನ್ಯ [Lost a third of his troops. Household troops (House ಕೆಳಗೆ Household ನೋಡಿ)]; ಸೈನ್ಯದಳ; (ಸಾ., ೬೦ ರಾವುತರುಳ್ಳ) ಅಶ್ವದಳ; ಇಂಥ ದಳದ ನಾಯಕತ್ವ (Get one's t. ದಳಪತಿಯಾಗಿ ಬಡತಿ ಹೊಂದು. T.-horse ಅಶ್ವದಳದ ಕುದುರೆ; ರಾವುತ ಕುದುರೆ. T.-ship ಸೈನ್ಯ ಸಾಗಿಸುವ ಹಡಗು; ಸೈನಿಕ ಹಡಗು); ಸೈನ್ಯ ಮುನ್ನಡೆಯಲು ಸೂಚನೆಯಾಗಿ ಬಾರಿಸುವ ಭೇರಿ: ನಡೆ, ಪ್ರಸ್ಥಾನ, —ಭೇರಿ; (ನಟರು, ಮೊ. ರ) ಮಂಡಲಿ, ವರ್ಗ (=Troupe); (ಕ್ರಿ.) ಗುಂಪು, ಹಿಂಡು,—ಸೇರು, ಕೂಡು (ಅನೇಕ ವೇಳೆ *up*, *together* ಮೊ. ಉಪ. ದೊಡನೆ); ಗುಂಪಾಗಿ, ಹಿಂಡು ಹಿಂಡಾಗಿ, —ಹೋಗು (*Along*, *in*, *out* ಮೊ. ಉಪ. ದೊಡನೆ); ಆತುರದಿಂದ ಹೋಗು, ನಡೆ (*Off*, *away* ಉಪ. ದೊಡನೆ; ಬ. ವ. ಕರ್ತೃವಿನೊಡನೆ ಅನ್ವಯ); (ಸೈನ್ಯವನ್ನು) ತಂಡಗಳಾಗಿ, ದಳಗಳಾಗಿ, —ವಿಂಗಡಿಸು. Trooping the colour(s) ಸೈನ್ಯವ್ಯೂಹದ ಮುಂದುಗಡೆ ವಾದ್ಯ ಸಮೇತ ಧ್ವಜವನ್ನು ಮೆರವಣಿಗೆ ತೆಗೆದುಕೊಂಡು ಹೋಗುವುದು: ಧ್ವಜದ ಮೆರವಣಿಗೆ, ಧ್ವಜೋತ್ಸವ. **Troóper** (ನಾ.) ರಾವುತ, ಕುದುರೆ ಸಿಪಾಯಿ (Swear like a t. ವಿಪರೀತ ಆಣೆಯಿಡು); ರಾವುತ ಕುದುರೆ, ಸೇನಾಶ್ವ; ಸೈನಿಕ ಹಡಗು, ಸೇನಾ ನೌಕೆ.

Trope ಟ್ರೋಪ್ (ನಾ.) (ಒಂದು ಪದದ) ರೂಪಕಾರ್ಥ, ಆಲಂಕಾರಿಕ,— ಪ್ರಯೋಗ.

Tróphic ಟ್ರಾಫಿಕ್ (ಗು.) ಪೋಷಣ ಸಂಬಂಧವಾದ, ಪುಷ್ಟಿಯ, ಪೌಷ್ಟಿಕ (T. nerves ಪೌಷ್ಟಿಕ ನರಗಳು)

Tropho- ಟ್ರಾಫೊ— (ಸ. ಪೂ. ಪ.) ಆಹಾರ—. **-neurósis** ನರ ಗಳ ದುರವಸ್ಥೆಯಿಂದಾಗುವ ಅಪುಷ್ಟಿ ರೋಗ: ಅಪುಷ್ಟಿ ನರ ರೋಗ.

Tróphy ಟ್ರೋಫಿ (ನಾ.) (ಗ್ರೀಕ್ ಪ್ರಾ.) ವಿಜಯೋತ್ಸವದಲ್ಲಿ ಅಥವಾ ವಿಜಯ ಸ್ಮಾರಕವಾಗಿ ಯುದ್ಧರಂಗದಲ್ಲಾಗಲಿ ಬೇರೆ ಸ್ಥಳದಲ್ಲಾಗಲಿ ಕಂಬಕ್ಕೆ ಅಥವಾ ಮರಕ್ಕೆ ತೂಗಹಾಕಿ ಪ್ರದರ್ಶಿಸಿದ, ಸೋತ ಶತ್ರು ವಿನ ಆಯುಧಗಳು, ಮೊ. ವು: ವಿಜಯದ ಸೂರೆ, ವಿಜಯ ಸ್ಮಾರಕ; ಇದೇ ರೀತಿಯಲ್ಲಿ, ಆದರೆ ಇನ್ನೂ ಶಾಶ್ವತ ರೂಪದಲ್ಲಿ, ರೋಮನರು ಏರ್ಪಡಿಸುತ್ತಿದ್ದ ಜಯಸ್ಮಾರಕ: ವಿಜಯ—ಗೋಪುರ, ಸ್ತಂಭ; (ಹತ್ತಿರ ಇಟ್ಟುಕೊಂಡಿರುವ) ಜಯದ ಗುರುತು (ಶತ್ರುವಿನಿಂದ ಕಿತ್ತು ಕೊಂಡ ಬಾವುಟ, ಮೊ. ದು) (ರೂಪ. ನಹ); (ವ್ಯಾಯಾಮ ಕ್ರೀಡೆಗಳಲ್ಲಿ ಅಥವಾ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಕೊಡುವ ಬಟ್ಟಲು, ಗುರಾಣಿ, ಮೊ.) ಬಹುಮಾನ, ಪಾರಿತೋಷಿಕ; ನೆನಪಿನ ವಸ್ತು, ಸ್ಮಾರಕ; ಗೋಡೆ, ಮೊ. ಗಳ ಮೇಲೆ ಅಲಂಕಾರಿಕವಾಗಿ ಅಳವಡಿಸಿದ ಸಾಂಕೇತಿಕ ಅಥವಾ ಮಾದರಿಯ ವಸ್ತುಗಳ ತಂಡ (ಸಾ., ಯುದ್ಧಾಯುಧಗಳು ಅಥವಾ ಅವುಗಳ ಚಿತ್ರ). (-)**trophied** (ಗು.)

Trópic ಟ್ರಾಪಿಕ್ (ನಾ., ಗು.) ವಿಷುವದ್ವೃತ್ತದ ಉತ್ತರಕ್ಕಾಗಲಿ ದಕ್ಷಿಣಕ್ಕಾಗಲಿ ೨೩° ೨೮′ ನಲ್ಲಿರುವ ಅಕ್ಷಾಂಶರೇಖೆ: ಸಂಕ್ರಾಂತಿ ವೃತ್ತ [T. of cancer (Cancer ನೋಡಿ). T. of Capricorn (Capricorn ನೋಡಿ). The tropics ಸಂಕ್ರಾಂತಿ ವೃತ್ತ ಗಳ ನಡುವಣ ಪ್ರದೇಶ; ಉಷ್ಣವಲಯ. T.-bird ಹಲವು ಬಗೆಯ ಉಷ್ಣ ವಲಯದ ಪಕ್ಷಿ]; (ಸೂರ್ಯನು ಉತ್ತರಕ್ಕೂ ದಕ್ಷಿಣಕ್ಕೂ ಪರಮಾವಧಿ ದೂರ ಹೋದಮೇಲೆ ಅಲ್ಲಿ ದಿಕ್ಕು ಬದಲಾಯಿಸಿ ತಿರುಗುವಂತೆ ತೋರುವ, ಭೂಗೋಳ ಸಂಕ್ರಾಂತಿ ವೃತ್ತಗಳಿಗೆ ಜವಾಬಾದ) ಖಗೋಳ ಸಂಕ್ರಾಂತಿ ವೃತ್ತ(ಗಳಲ್ಲೊಂದು). (ಗು.) ಸಂಕ್ರಾಂತಿ ಪ್ರದೇಶದ, ಉಷ್ಣ ವಲಯದ. **Trópical** (ಗು.) ಸಂಕ್ರಾಂತಿ ಪ್ರದೇಶದ, ಉಷ್ಣ ವಲಯದ (T. plants, diseases, heat. T. abscess ಉಷ್ಣ ದೇಶದಲ್ಲಿ ವಾಸಿಸುವುದರಿಂದ ಬರುವ ಒಂದು ಬಗೆಯ ಯಕೃತ್ತಿನ ಕುರು: ಉಷ್ಣ ಕುರು. T. year ಸೂರ್ಯನು ಒಂದು ವಿಷುವದ್ಬಿಂದುವನ್ನು ಒಮ್ಮೆ ಹಾದುಹೋದಮೇಲೆ ಮತ್ತೆ ಅದೇ ದಿಕ್ಕಿನಲ್ಲಿ ಹಾಯುವುದಕ್ಕೆ ಹಿಡಿ ಯುವ ಕಾಲ: ಸಂಕ್ರಾಂತಿ ವರ್ಷ, ಸೌರಮಾನ ವರ್ಷ). (ರೂಪ.) ಕಾವಿನ, ಭಾವೋದ್ರೇಕದ. **Trópically** (ಕ್ರಿ. ವಿ.); **Tropicopólitan** (ಗು., ನಾ.) ಉಷ್ಣ ವಲಯದ (ಪ್ರಾಣಿ, ಸಸ್ಯ)

Tropólogy ಟ್ರೊಪಾಲೊಜಿ (ನಾ.) ಪದಗಳ ರೂಪಕಾರ್ಥ ಪ್ರಯೋಗ, ಆಲಂಕಾರಿಕ ಪ್ರಯೋಗ; (ಮು., ಬೈಬಲ್ಲಿನ) ರೂಪಕಾರ್ಥ ಪ್ರತಿ ಪಾದನೆ, ಲಕ್ಷಣಾರ್ಥ ವಿವರಣೆ (ನೀತಿಗೆ ಅಥವಾ ನಡೆವಳಿಗೆ ಸಂಬಂಧ ಪಟ್ಟಂತೆ) [**Trópist** ಟ್ರೋ— (ನಾ.)]. **Tropológical** ಟ್ರಾಪೊಲಾ— (ಗು.); **Tropológically** (ಕ್ರಿ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Trot ಟ್ರಾಟ್ (ಕ್ರಿ., ನಾ.) (ಕುದುರೆ, ಮೊ. ಗಳ ವಿಷಯದಲ್ಲಿ) ಕುಕ್ಕು ಲೋಟ(ದಲ್ಲಿ) —ಹೋಗು, ಓಡು; (ಕುದುರೆ, ಮೊ. ನ್ನು) ಕುಕ್ಕು ಲೋಟ(ದಲ್ಲಿ) —ಬಿಡು, ಓಡಿಸು; (ಮನುಷ್ಯನ ವಿಷಯದಲ್ಲಿ) ಸಾಧಾರಣ ವೇಗದಲ್ಲಿ ಓಡು (ಅನೇಕ ವೇಳೆ *along* ಮೊ. ಉಪ. ದೊಡನೆ); (ಮನುಷ್ಯ, ಕುದುರೆ, ಮೊ. ನ್ನು) ಕುಕ್ಕುಲೋಟ ಓಡಿಸಿ ಒಂದು ಸ್ಥಿತಿಗೆ ತರು [Trotted him to death ಕುಕ್ಕುಲೋಟ ಓಡಿಸಿ ಓಡಿಸಿ ಸಾಯಿಸಿದನು. T. out (ಕುದುರೆಯನ್ನು ಮುಂದೆ ತಂದು) ಕುಕ್ಕುಲೋಟ ವನ್ನು ಮೆರಸು, ಪ್ರದರ್ಶಿಸು; (ರೂಪ.) (ವ್ಯಕ್ತಿ, ವಿಷಯ, ಅಭಿಪ್ರಾಯ, ಸಂಗತಿ, ಮೊ. ನ್ನು) (ಮೆಚ್ಚಿಕೆ ಸೆಳೆಯುವಂತೆ) ಮೆರಸು, ಮೆರವಣಿಗೆ ಮಾಡು, ಪ್ರದರ್ಶಿಸು]; (ಒಬ್ಬನನ್ನು, ಒಂದು ಸ್ಥಳ ನೋಡಲು) ಕರೆದುಕೊಂಡು ಹೋಗು (*To* or *round* a place). (ನಾ.) ಕುಕ್ಕುಲೋಟ, ಕುಕ್ಕುಲು ನಡಗೆ (Proceeded at a t. Went for a t.); (ರೂಪ.) ಒಂದೇ ಸಮನೆ—ದುಡಿತ, ಚಟುವಟಿಕೆ, ಚುರುಕು ಓಡಾಟ (Kept him on the t.); ದಟ್ಟಡಿಯ ಮಗು. **Trótter** (ನಾ.) (ಕ್ರಿಯಾರ್ಥಗಳಲ್ಲಿ); ಕುಕ್ಕುಲೋಟದ (ತಳಿಯ) ಕುದುರೆ; (ಬ. ವ. ದಲ್ಲಿ) ಆಹಾರವಾಗಿ ಉಪಯೋಗಿಸುವ ಪ್ರಾಣಿಯ ಕಾಲು, ಕಾಲಿನ ಮಾಂಸ (Pig's, sheep's, trotters); (ಹಾಸ್ಯ ಪ್ರ.) (ಮನುಷ್ಯನ) ಕಾಲು, ಪಾದ.

Troth ಟ್ರೋತ್, ಟ್ರಾತ್ (ನಾ.) (ಪ್ರಾಚೀ. ಪ್ರ.) ನಿಜ, ಸತ್ಯ, ದಿಟ [In t. ನಿಜವಾಗಿ, ನನ್ನಾಣೆಗೂ. Plighted one's t. (ಮು., ಮದುವೆಯ ನಿಶ್ಚಿತಾರ್ಥದಲ್ಲಿ) ಮಾತುಕೊಟ್ಟನು, ವಾಗ್ದಾನ ಮಾಡಿದನು]

Trottoír (F) ಟ್ರಾಟ್ವಾರ್ (ನಾ.) (ರಸ್ತೆಯ ಪಕ್ಕದಲ್ಲಿ ಪಾದಚಾರಿಗಳಿಗಾಗಿ ಮಾಡಿರುವ) ನೆಲಗಟ್ಟು, ನೆಲಗಟ್ಟಿನ ಕಾಲುದಾರಿ.

Trótyl ಟ್ರೋಟಿಲ್ (ನಾ.) (ರ. ವಿ.) =Trinitrotoluol (ಆ ಪದ ನೋಡಿ)

Troúbadour ಟ್ರೂಬಡೂ(ಅ)ರ್, —ಡೋ(ಅ)ರ್ (ನಾ.) (ಮು., ಪ್ರಾವೆನ್ಸ್, ದ. ಫ್ರಾನ್ಸ್ ಮತ್ತು ಉ. ಇಟಲಿಗಳಲ್ಲಿ ೧೧-೧೩ನೆಯ ಶತಮಾನಗಳಲ್ಲಿದ್ದ) ಭಾವ ಗೀತೆಗಳ ಕವಿ, ಕವಿ ಗಾಯಕ.

Troúble ಟ್ರಬ್ಲ್ (ಕ್ರಿ., ನಾ.) ಕಲಕು, ಕಲಕಗೊಳ್ಳು; ಕ್ಷುಬ್ಧ—ಆಗು, ಮಾಡು (Troubled waters); ತೊಂದರೆ, ತ್ರಾಸ, ಕಷ್ಟ, ಕ್ಲೇಶ, —ಪಡು, ಕೊಡು (Don't let it t. you, Don't t. about it ಅದರ ಚಿಂತೆ ಹಚ್ಚಿಕೊಳ್ಳಬೇಡ, ಆ ಬಗ್ಗೆ ತೊಂದರೆ ತೆಗೆದುಕೊಳ್ಳಬೇಡ. A troubled countenance ಕಳವಳಗೊಂಡ ಮುಖ, ಚಿಂತಾಮುದ್ರಿತ ಮುಖ); ಬಾಧಿಸು, ಬಾಧೆಗೊಳ್ಳು, ನರಳಿಸು, ನರಳು (Am troubled with neuralgia. How long has it been troubling you?); (ಮು., ಔಪಚಾರಿಕ ಸಂಪ್ರದಾಯದಲ್ಲಿ): ಶ್ರಮ, ತೊಂದರೆ, —ಕೊಡು, ತೆಗೆದುಕೊ [May I t. you to shut the door? ಬಾಗಿಲು ಮುಚ್ಚುವ ಶ್ರಮ ಕೊಡಬಹುದೆ? I will t. you to translate this ಇದನ್ನು ಭಾಷಾಂತರಮಾಡಿ, ನೋಡೋಣ. Will t. you for his last exploit ಆತನ ಕೊನೆಯ ಸಾಹಸದ ವಿಷಯವಾಗಿ ತಮ್ಮ ಟೀಕೆಯನ್ನು ಕೋರುತ್ತೇನೆ]. (ನಾ.) ಕಿರುಕುಳ, ತೊಂದರೆ, ಕ್ಲೇಶ, ಶ್ರಮ, ತ್ರಾಸ (Life is full of such troubles ಬದುಕೆಲ್ಲ ಇಂಥ ಕಿರುಕುಳಗಳಿಂದ ತುಂಬಿದೆ); ರೋಗ, ಬಾಧೆ (Liver troubles); ಅನನುಕೂಲ, ಅಸೌಕರ್ಯ, ಫಜೀತಿ [Fear the child is a great t. to you ಮಗುವಿನಿಂದ ನಿನಗೆ ದೊಡ್ಡ ಫಜೀತಿಯೆಂದು ತೋರುತ್ತದೆ. Did it to spare you t. ನಿನಗೆ ತೊಂದರೆ ಕೊಡಬಾರದೆಂದು ನಾನು ಮಾಡಿದೆನು. (ಔಪಚಾರಿಕವಾಗಿ) No t. (at all) ತೊಂದರೆ ಯೇನೂ ಇಲ್ಲ. (ಅನಂ.) Ask *or* look for t. ತಾನಾಗಿ ತೊಂದರೆ ತಂದುಕೊ; ತಂಟೆಗೆ ಹೋಗು; ದುಡುಕಿ ಹೋಗು. Be in, get into, t. ಆಕ್ಷೇಪಣೆ, ಶಿಕ್ಷೆ, ಮೊ. ಕ್ಕೆ ಒಳಗಾಗು; ತೊಂದರೆಗೆ —ಸಿಕ್ಕಿಕೊ, ಬೀಳು]. (ಗಣಿ ಕೆಲಸ) ಸಣ್ಣ ಸ್ತರ ಭಂಗ. **Troúblesome** (ಗು.) ತೊಂದರೆಯ, ತ್ರಾಸದ, ಫಜೀತಿಯ, ತಂಟೆಯ. **Troúblesomely** (ಕ್ರಿ. ವಿ.); **Troúblesomeness** (ನಾ.); **Troúblous** (ಗು.) (ಸಾಹಿತ್ಯ ಪ್ರ. ಅಥವಾ ಪ್ರಾಚೀ. ಪ್ರ.) ತೊಂದರೆಯ, ಕಳವಳದ, ಕ್ಷೋಭೆಯ, ಕ್ಷುಬ್ಧ (T. times)

Trough ಟ್ರಾಫ್ (ನಾ.) ಹಿಟ್ಟು ನಾದುವುದು, ಅದುರು ತೊಳೆಯುವುದು, ದನಕರುಗಳಿಗೆ ತಿಂಡಿ ನೀರು ಹಾಕುವುದು, ಮೊ. ಕ್ಕೆ ಉಪಯೋಗಿಸುವ ಮರದ, ಕಲ್ಲಿನ ಅಥವಾ ಇತರ ಪದಾರ್ಥದ ಉದ್ದನೆಯ ಪಾತ್ರೆ: ತೊಟ್ಟಿ, ಬಾನೆ, ದೋಣಿ; (ನೀರಿನ) ಹರಿದೋಣಿ; ತೊಟ್ಟಿಯನ್ನು ವಿದ್ಯುತ್‌ಕೋಶದ ಅಂಕಣಗಳಾಗಿ ವಿಭಾಗಿಸಿರುವ ವಿದ್ಯುತ್ ಕೋಶ ಶ್ರೇಣಿ: ದೋಣಿ ವಿದ್ಯುತ್‌ಕೋಶ ಶ್ರೇಣಿ (=T.-battery). T. of the sea ಎರಡು ಅಲೆಗಳ ಮಧ್ಯದಲ್ಲಿ ಕಾಣುವ ತಗ್ಗು, ಕುಳಿ: ಅಲೆ—ಕುಳಿ, ತೊಟ್ಟಿ. T. of barometric depression (ಎರಡು ಹೆಚ್ಚು ವಾಯುಭಾರದ ಪ್ರದೇಶಗಳ ನಡುವಣ) ಅತ್ಯಂತ ತಗ್ಗಿನ ಒತ್ತಡದ—ಪ್ರದೇಶ, ರೇಖೆ: ಕನಿಷ್ಠಪಾತ (ರೇಖೆ)

Trounce ಟ್ರೌನ್ಸ್ (ಕ್ರಿ. ಸಕ.) ಚೆನ್ನಾಗಿ ಹೊಡೆ, ಸದೆಬಡಿ, ಚಚ್ಚಿ ಹಾಕು (ರೂಪ. ಸಹ). **Troúncing** (ನಾ.)

Troupe ಟ್ರೂಪ್ (ನಾ.) ನಟ—ವರ್ಗ, ಮಂಡಲಿ; (ಆಟಗಾರರು, ಡೊಂಬರು, ಮೊ. ರ) ತಂಡ.

Troúser ಟ್ರೌಸರ್ (ನಾ.) ಷರಾಯಿ, ಇಜಾರ (Here is a smart t.) [(ಸಾ., ಬ. ವ. ದಲ್ಲಿಯೇ ಪ್ರ.) =Pair of trousers]; (೧೯ನೆಯ ಶ. ಮಾ. ದ ಆದಿ ಭಾಗದಲ್ಲಿ ಬಳಕೆಯಲ್ಲಿದ್ದ, ಉದ್ದನೆಯ, ಕರಕೆಲಸ ಮಾಡಿದ) ಹೆಂಗಸಿನ ಒಳ ಇಜಾರ. T.-button ಷರಾಯಿ ಗುಂಡಿ. Trouser(s) pocket ಷರಾಯಿ ಜೇಬು. T.-stretcher (ಷರಾಯಿಯ ಆಕಾರ ಕೆಡದಂತೆ ಹರವಿ ಇಡಲು ಉಪಯೋಗಿಸುವ) ಷರಾಯಿ ಚೌಕಟ್ಟು. **Troúsered** (ಗು.); **Troúsering** (ನಾ.) ಷರಾಯಿ ಬಟ್ಟೆ.

Trousseaú ಟ್ರೂಸೋ (ನಾ.) ಮದುವಣಗಿತ್ತಿಯ—ವಸ್ತ್ರಾಭರಣ, ಉಡುಗೆ ತೊಡುಗೆ.

Trout ಟ್ರೌಟ್ (ನಾ.; ಬ. ವ. ಅದೇ; ಕ್ರಿ. ಅಕ.) ಆಹಾರಕ್ಕೆ ಉತ್ತಮವಾದುದೆಂದು ಎಣಿಸಿರುವ, ಹಲವು ಬಗೆಯ ಸೀನೀರು ಮೀನು; ಟ್ರೌಟ್ ಮೀನು [T.-coloured (ಬಿಳಿಯ ಕುದುರೆಯ ವಿಷಯದಲ್ಲಿ) ಕರಿಯ, ಪಿಂಗಲ, ಅಥವಾ ಕೆಂಗಂದು ಮಚ್ಚೆಗಳುಳ್ಳ]. (ಕ್ರಿ.) ಟ್ರೌಟ್ ಮೀನು ಹಿಡಿ. **Troútlet, Troútling** (ನಾ.) ಸಣ್ಣ, ಪುಟ್ಟ, —ಟ್ರೌಟ್ ಮೀನು. **Troúty** (ಗು.) ಟ್ರೌಟ್ ಮೀನುಗಳು—ಇರುವ, ತುಂಬಿರುವ.

Trouvaille (F) ಟ್ರೂವಾಯ್ (ನಾ.) ಅದೃಷ್ಟದ ಹೊಡೆತ; ಆಕಸ್ಮಿಕ —ಸಂಪತ್ತು, ಭಾಗ್ಯ.

Trouvére ಟ್ರೂವೇರ್ (ನಾ.) (ಉ. ಫ್ರಾನ್ಸಿನಲ್ಲಿ ೧೧-೧೪ನೆಯ ಶ. ಮಾ. ಗಳಲ್ಲಿದ್ದ) ಇತಿಹಾಸ ಕಾವ್ಯ ಕವಿ(ಗಳಲ್ಲೊಬ್ಬ)

Trove. **Treasure** (ಕೆಳಗೆ Treasure-trove) ನೋಡಿ.

Tróver ಟ್ರೋವರ್ (ನಾ.) (ನ್ಯಾ. ಶಾ.) ತನಗೆ ಸಿಕ್ಕಿದ ಚರಸ್ವತ್ತನ್ನು ಸ್ವಂತಕ್ಕೆ ಇಟ್ಟುಕೊಂಡುಬಿಡುವುದು; ಹೀಗೆ ಚರಸ್ವತ್ತಿನ—ಲಪಟಾವಣೆ, ಸಂಪಾದನೆ; ಮತ್ತೊಬ್ಬನು ದುರುಪಯೋಗಪಡಿಸಿಕೊಂಡ ತನ್ನ ಚರಸ್ವತ್ತಿನ ಮೌಲ್ಯಕ್ಕಾಗಿ ಹೂಡಿದ ದಾವೆ: ಚರಸ್ವತ್ತು ಪರಿಹಾರ ದಾವೆ.

Trow ಟ್ರೋ, ಟ್ರಾ (ಕ್ರಿ. ಸಕ., ಪ್ರಾಚೀ. ಪ್ರ.) ಎಣಿಸು, ತಿಳಿ, ಭಾವಿಸು, ಯೋಚಿಸು, ನಂಬು [What ails him, (I) t.? ಅವನಿಗೆ ಏನು ಸಂಕಟವೋ, ಯಾರಿಗೆ ಗೊತ್ತು?]

Trowél ಟ್ರೌಎಲ್ (ನಾ., ಕ್ರಿ. ಸಕ.) (ಗಾರೆ ಕೆಲಸದವನ) ಕರಣೆ, ಉಜ್ಜುಮಣೆ [Lay it on with a t. (ರೂಪ.) ಅತಿಯಾಗಿ ಹೊಗಳು]; ಸಸಿ, ಮೊ. ಗಳನ್ನು ಎಬ್ಬಲು ತೋಟಗಾರನು ಉಪಯೋಗಿಸುವ ಸಲಕರಣೆ: ಎಬ್ಬಿಗೆ (ಕರಣೆ). (ಕ್ರಿ.) (ಗಾರೆ, ಮೊ. ನ್ನು) ಕರಣೆಯಿಂದ ಹಾಕು; (ಗಾರೆ ಮೆತ್ತಿದ ಗೋಡೆ, ಮೊ. ನ್ನು) ಉಜ್ಜುಮಣೆಯಿಂದ, ಕರಣೆಯಿಂದ, —ಉಜ್ಜು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Troy ಟ್ರಾಯ್ (ನಾ.) ಚಿನ್ನ ಬೆಳ್ಳಿಗಳ ತೂಕ ಪದ್ಧತಿ (=T. weight) [ಇದರ 'ಪೌಂಡು' ಮಾನಕ್ಕೆ ೧೨ ಔನ್ಸುಗಳು (ಅಥವಾ ೫೭೬೦ ಗ್ರೇನುಗಳು)] (Avoirdupois ಪದದೊಡನೆ ಹೋಲಿಸಿ)

Trúant ಟ್ರೂಅಂಟ್ (ನಾ., ಗು., ಕ್ರಿ. ಅಕ.) ಕೆಲಸಕ್ಕೆ ಹೋಗದೆ ತಪ್ಪಿಸಿಕೊಳ್ಳುವವನು, ಕೆಲಸಗಳ್ಳ; (ಮು.) ಶಾಲೆಗೆ ತಪ್ಪಿಸಿಕೊಳ್ಳುವ ಹುಡುಗ: ಶಾಲೆಗಳ್ಳ, ಓದುಗಳ್ಳ; (Play t. ಕೆಲಸಕ್ಕೆ, ಶಾಲೆಗೆ, —ತಪ್ಪಿಸಿಕೊ, ಚಕ್ಕರ್‌ಹೊಡೆ. T.-school ಶಾಲೆಗಳ್ಳರ ಕೈಗಾರಿಕೆಯ ಶಾಲೆ). (ಗು.) (ವ್ಯಕ್ತಿ, ನಡತೆ, ಆಲೋಚನೆ, ಮೊ. ಗಳ ವಿಷಯದಲ್ಲಿ) ಕೆಲಸಕ್ಕೆ ಕದಿಯುವ, ಸೋಮಾರಿಯಾದ, ಮೈಗಳ್ಳನಾದ, ಅಲೆಯುವ. (ಕ್ರಿ.) ಕೆಲಸಕ್ಕೆ, ಶಾಲೆಗೆ, —ತಪ್ಪಿಸಿಕೊ, ಚಕ್ಕರ್‌ಹೊಡೆ. **Trúantly** (ಕ್ರಿ. ವಿ.); **Trúancy** (ನಾ.)

Truce ಟ್ರೂಸ್ (ನಾ.) ಯುದ್ಧವನ್ನು ತಾತ್ಕಾಲಿಕವಾಗಿ ನಿಲ್ಲಿಸುವುದು; ಹೀಗೆ ನಿಲ್ಲಿಸಲು ಮಾಡಿಕೊಂಡ ಸಂಧಿ; ಯುದ್ಧ ವಿರಾಮ (ಸಂಧಿ) [Flag of t. (Flag[4] ನೋಡಿ)]; (ನೋವು, ಕೆಲಸ, ಮೊ. ಗಳಿಂದ) ಬಿಡುವು, ವಿರಾಮ, ವಿಶ್ರಾಂತಿ [(ಪ್ರಾಚೀ. ಪ್ರ.) A t. to— (—) ನಿಲ್ಲಲಿ, ಕೊನೆಗೊಳ್ಳಲಿ]. T. of God (ಚರಿತ್ರೆ) ಕೆಲವು ಧಾರ್ಮಿಕ ಹಬ್ಬಗಳು, ಮೊ. ಗಳ ಸಂದರ್ಭದಲ್ಲಿ ಕಲಹಗಳನ್ನು ನಿಲ್ಲಿಸುವುದು: ದೈವ, ಪವಿತ್ರ, —ವಿರಾಮ, ವಿಶ್ರಾಂತಿ. **Trúceless** (ಗು.)

Truck[1] ಟ್ರಕ್ (ಕ್ರಿ., ನಾ.) ಅದಲು ಬದಲು, ಸಾಟಿ, ವಿನಿಮಯ, —ಮಾಡು, ಮಾಡಿಕೊ; ವಿನಿಮಯ, ಸಾಟಿ, —ವ್ಯಾಪಾರ ಮಾಡು (*With* person *for* thing; thing *for* another); (ಸರಕನ್ನು) ಹೊತ್ತು ಮಾರು; ತಿರುಗು ವ್ಯಾಪಾರ ಮಾಡು; (ಅನೇಕ ವೇಳೆ ರೂಪ.) ಕೊಸರಾಡು, ಚೌಕಾಸಿಮಾಡು; ವ್ಯವಹರಿಸು, ವ್ಯವಹಾರವಿಟ್ಟುಕೊ. (ನಾ.) ಅದಲು ಬದಲು, ಸಾಟಿ, ವಿನಿಮಯ (—ವ್ಯಾಪಾರ); ವ್ಯವಹಾರ (Have no t. with —ಒಡನೆ ವ್ಯವಹಾರ ನಡಸದಿರು); ಚಿಲ್ಲರೆ ಸರಕು; (ಬಳ. ಮಾ.) ಕೆಲಸಕ್ಕೆ ಬಾರದ್ದು, ಕಸ; (ರೂಪ.) ಅವಿವೇಕ, ಅಸಂಬದ್ಧ (Shall stand no t.); ಕೆಲಸಗಾರರಿಗೆ ಹಣಕ್ಕೆ ಬದಲು ಧಾನ್ಯವನ್ನು ಕೂಲಿಯಾಗಿ ಕೊಡುವ ಅಥವಾ ಕಾರಖಾನೆಯ ಅಂಗಡಿಯಲ್ಲಿಯೇ ಧಾನ್ಯ ಕೊಳ್ಳಬೇಕೆಂಬ ಒಪ್ಪಂದದಮೇಲೆ ನಗದು ಕೂಲಿಕೊಡುವ ಪದ್ಧತಿ: ಪಡಿಗೂಲಿ ಪದ್ಧತಿ, ಧಾನ್ಯಗೂಲಿ ಪದ್ಧತಿ (=T. system, tommy) (T. Acts ಇಂಗ್ಲೆಂಡಿನಲ್ಲಿ ೧೮೩೧ರಲ್ಲೂ ೧೮೭೦ರಲ್ಲೂ ಜಾರಿಗೆ ತಂದ, ಧಾನ್ಯಗೂಲಿ ಪದ್ಧತಿಯನ್ನು ನಿಲ್ಲಿಸುವ ಅಥವಾ ಪರಾಮರ್ಶಿಸುವ ಬಗ್ಗೆ ಕಾಯಿದೆ: ಧಾನ್ಯಗೂಲಿ ಕಾಯಿದೆ. T. shop ಧಾನ್ಯಗೂಲಿಯ ಅಂಗಡಿ)

Truck[2] ಟ್ರಕ್ (ನಾ., ಕ್ರಿ. ಸಕ.) ಭಾರವಾದ ಸಾಮಾನನ್ನು ಸಾಗಿಸುವ, ಸಾ., ನಾಲ್ಕು ಅಥವಾ ಆರು ತಗ್ಗುಚಕ್ರದ, ಬೋಳುಬಂಡಿ: ಸಾಮಾನಿನ ಬೋಳುಬಂಡಿ; ಬೋಳು ರೈಲುಬಂಡಿ; ಟ್ರಕ್ಕು; (ರೈಲ್ವೆ ನಿಲ್ದಾಣಗಳಲ್ಲಿ ಕೂಲಿಯವರು ಸಾಮಾನು ಸಾಗಿಸಲು ಉಪಯೋಗಿಸುವ) ತಗ್ಗುಚಕ್ರಗಳ ತಳ್ಳುಬಂಡಿ; ರೈಲುಬಂಡಿ, ಮೊ. ಗಳ ಒಡಲನ್ನು ಹೊತ್ತುಕೊಳ್ಳುವುದಕ್ಕಾಗಿ ಮಾಡಿರುವ, ಗಾಲಿಯುಳವಡಿಸಿದ ಚೌಕಟ್ಟು: ಗಾಲಿ—ತಳಕಟ್ಟು, ಹದಿ(ಕಟ್ಟು). (ನಾವೆ) ಕೂವೆಯ ನೆತ್ತಿಯಲ್ಲಿರುವ, ರಾಟಣದ ಹಗ್ಗಗಳ, ಸರಿದಾಡಲು ಕಂಡಿಗಳಿರುವ, ಮರದ ಹಲಗೆ: ಕೂವೆ ನೆತ್ತಿಯ ಹಲಗೆ; (ಈಗ ವಿರ. ಪ್ರ.) ಪಟ್ಟೆಯಿಲ್ಲದ ಸಣ್ಣ ಗಾಲಿ; (T.-bolster ಬಂಡಿಯ ಒಂದು ತುದಿಗೆ ಆಧಾರವಾದ ಹದಿಕಟ್ಟಿನ ಅಡ್ಡತೊಲೆ: ಬಂಡಿಯ ಆಧಾರ ತೊಲೆ). (ಕ್ರಿ.) ಬೋಳು (ರೈಲು)ಬಂಡಿಯಲ್ಲಿ ಸಾಗಿಸು. **Trúckage** (ನಾ.) ಟ್ರಕ್ ಬಂಡಿಯಲ್ಲಿ ಸಾಗಿಸುವುದು, ಟ್ರಕ್ ಸಾಗಣೆ; ಟ್ರಕ್ (ಸಾಗಣೆಯ) ಬಾಡಿಗೆ; ಟ್ರಕ್ ಬಂಡಿಗಳು.

Trúckle ಟ್ರಕ್‌ಲ್ (ಕ್ರಿ. ಅಕ., ನಾ.) ದೈನ್ಯದಿಂದ, ಅಡಿಯಾಳುತನದಿಂದ, —ಶರಣಾಗು, ಅಧೀನನಾಗು, ಹಲ್ಲುಗಿರಿ, ಗೋಗರೆ(ದುಬೇಡು) [**Trúckler** (ನಾ.)]. (ನಾ.) ಮತ್ತೊಂದು ಮಂಚದ ಕೆಳಕ್ಕೆ ತೂರುವ, ಗಾಲಿ ಹಾಕಿದ ತಗ್ಗುಮಂಚ (=T.-bed) (ಮು., ಹಿಂದಿನ ಕಾಲದಲ್ಲಿ ಸೇವಕರು, ಮೊ. ರು ಉಪಯೋಗಿಸುತ್ತಿದ್ದದ್ದು): ತಗ್ಗುಗಾಲಿ ಮಂಚ; ಕೆಳಗೆ ತೂರುವ ಮಂಚ.

Trúculent ಟ್ರ(ಟ್ರೂ)ಕ್ಯುಲೆಂಟ್ (ಗು.) ಜಗಳಗಂಟಿಯಾಗಿ ನಿರ್ದಾಕ್ಷಿಣ್ಯದಿಂದ ಮೇಲೆ ಬೀಳುವ; ದುಂಡಾವರ್ತಿಯ. **Trúculently** (ಕ್ರಿ. ವಿ.); **Trúculence, -ncy** (ನಾ.)

Trudge ಟ್ರಡ್ಜ್ (ಕ್ರಿ., ನಾ.) ಭಾರವಾಗಿ, ಕಷ್ಟಪಟ್ಟುಕೊಂಡು, —ಹೆಜ್ಜೆಹಾಕು, ನಡೆ(ದುಹೋಗು). (ನಾ.) ಪ್ರಯಾಸದ, ಆಯಾಸದ, —ನಡಿಗೆ.

Trúdgen ಟ್ರಡ್ಜನ್ (ನಾ.) ತೋಳುಗಳನ್ನು ಒಂದಾದಮೇಲೊಂದರಂತೆ ಎತ್ತಿ ಚಾಚಿ ನೀರುಬಗೆಯುತ್ತ, ಕಾಲಿನಿಂದ ಸಾಧಾರಣ ರೀತಿಯಲ್ಲಿ ನೀರೊದೆಯುತ್ತ, ಈಜುವ ಈಜು: ಮಾರುಗೈ ಈಜು, ಮಾರೀಜು (=T. stroke) (John Trudgen ಎಂಬಾತನ ಹೆಸರಿನಿಂದ)

True ಟ್ರೂ (ಗು., ಕ್ರಿ. ವಿ., ಕ್ರಿ. ಸಕ.) ನಿಜವಾದ, ದಿಟವಾದ, ಸತ್ಯವಾದ, ವಾಸ್ತವವಾದ, ಯಥಾರ್ಥವಾದ, ಸರಿಯಾದ, ಸಾಚಾ [His story is t. ಅವನ ಕಥೆ ನಿಜ. Could not form a t. judgement ಸರಿಯಾದ ತೀರ್ಮಾನಕ್ಕೆ ಬರಲಾಗಲಿಲ್ಲ. Frog is not a t. reptile ಕಪ್ಪೆ ಯಥಾರ್ಥವಾದ ಸರೀಸೃಪವಲ್ಲ. T. ribs (Rib ನೋಡಿ). T. horizon (Horizon ನೋಡಿ)]; (ಮಾದರಿ, ಮೊ. ಕ್ಕೆ) ಸರಿಹೊಂದುವ, ಕರಾರುವಾಕಾದ, ಯಥಾವತ್ತಾದ; (ಧ್ವನಿಯ ವಿಷಯದಲ್ಲಿ) ಶ್ರುತಿ ಸರಿಯಾಗಿರುವ; ಸ್ಥಿರ ವಿಶ್ವಾಸದ, ನಚ್ಚಿನ, ನಿಷ್ಠೆಯ (*To* one's word, friend, one*self*, etc.) (ಅನೇಕ ವೇಳೆ T. as steel ದೃಢ ನಿಷ್ಠೆಯ); (ಚಕ್ರ, ಕಂಬ, ತೊಲೆ, ಮೊ. ಗಳ ವಿಷಯದಲ್ಲಿ) ಸರಿಯಾದ ಸ್ಥಾನದಲ್ಲಿರುವ, ಒಂದೇ ನೇರವಾಗಿರುವ, ನೆಟ್ಟಗಿರುವ, ಸಮವಾಗಿರುವ; (ಪ್ರಾಚೀ. ಪ್ರ.) ಸತ್ಯವಾದಿಯಾದ, ನಿಜ ಹೇಳುವ; (ಪ್ರಾಚೀ. ಪ್ರ.) ಪ್ರಾಮಾಣಿಕ, ಸತ್ಯಸಂಧ (T. men); [**T.-bill** (ಸಾಕ್ಷ್ಯಗಳಿಂದ ರುಜುವಾತಾಗಿರುವುದೆಂದು ಪ್ರಧಾನ ನ್ಯಾಯದರ್ಶಿಗಳು ಷರಾ ಬರೆದು ಕಳಿಸಿದ) ಅಪಾದನೆಯ ಸತ್ಯತೆಯ ಪತ್ರ. **T.-blue** (ಗು., ನಾ.) ಅಚಲ, ದೃಢ, ವೀರ, —ನಿಷ್ಠೆಯ(ವನು). **T.-born** ಶುದ್ಧ ರಕ್ತದ, ನಿಜವಾದ (ಹುಟ್ಟಿನ) (A t.-b. Englishman). **T.-bred** ಒಳ್ಳೆಯ, ಸಾಚಾ, —ತಳಿಯ. **T.-hearted** ನಿಷ್ಕಪಟ ಹೃದಯವುಳ್ಳ; ಪ್ರಾಮಾಣಿಕ, ನಿಷ್ಠೆಯ. **T.-heartedness** (ನಾ.); **T.-love** ನಿಜವಾಗಿ ಪ್ರೀತಿಸುವ ಅಥವಾ ಪ್ರೀತಿಸಲ್ಪಡುತ್ತಿರುವ—ಇನಿಯ, ಇನಿಯಳು: ನಚ್ಚಿನ, ನಿಷ್ಕಪಟ, —ಪ್ರೇಮಿ, ಪ್ರಣಯಿ(ನಿ); ನಾಲ್ಕು ಎಲೆಗಳು ಪ್ರೇಮ ಗ್ರಂಥಿಯಾಕಾರದಲ್ಲಿ ಅಳವಟ್ಟಿರುವ ಒಂದು ಸಸ್ಯ. **T.-love(r's) knot** ಸುಲಭವಾಗಿ ಬಿಚ್ಚಲಾಗದ, ಎರಡು ಕಡೆ ಕುಣಿಕೆಗಳಿದ್ದು ನಡುವೆ ಗಂಟುಹಾಕಿರುವ ಒಂದು ಬಗೆಯ ಗ್ರಂಥಿ: ನಲ್ಮೆಯ ಗಂಟು, ಪ್ರೇಮ ಗ್ರಂಥಿ. **Truépenny** (ಪ್ರಾಚೀ. ಪ್ರ.) ನಾಣ್ಯಗಾರ, ಪ್ರಾಮಾಣಿಕ ಮನುಷ್ಯ]. (ಕ್ರಿ. ವಿ.) ನಿಜವಾಗಿ, ಸರಿಯಾಗಿ, ಪ್ರಾಮಾಣಿಕವಾಗಿ [(ಕೆಲವು ವಿಶೇಷ ಪ್ರ. ಗಳಲ್ಲಿ ಹೊರತು ವಿರ. ಪ್ರ.): Tell me, aim, breed, t.]. (ಕ್ರಿ.) (ಆಯುಧ, ಚಕ್ರ, ಮೊ. ನ್ನು) ಸರಿಯಾದ ಸ್ಥಾನಕ್ಕೆ, ಆಕಾರಕ್ಕೆ, —ತರು; ನೆಟ್ಟಗೆ ಮಾಡು, ನೇರವಾಗಿಡು, ಸಮವಾಗಿಡು. **Truéness** (ನಾ.); **Trúism** (ನಾ.) ನಿರ್ವಿವಾದವಾದ, ಸ್ವತಸ್ಸಿದ್ಧ, —ಸತ್ಯ; ಒಂದು ಪದದಲ್ಲಿ ಉಕ್ತವಾಗಿರುವುದನ್ನು ಇನ್ನೊಂದು ಪದದಲ್ಲಿ ಮತ್ತೆ ಹೇಳುವ ವಾಕ್ಯ, ಕರ್ತೃವಿನಲ್ಲಿ ಅಡಗಿರುವುದನ್ನೆ ಕ್ರಿಯಾಪದ ಪುನಃ ಹೇಳುವ ವಾಕ್ಯ: ಸ್ವತಃ ಸ್ಪಷ್ಟೋಕ್ತಿ. ಎಲ್ಲರಿಗೂ ತಿಳಿದಿರುವ, ಹಳಸಲು, —ಸತ್ಯ. **Trúly** (ಕ್ರಿ. ವಿ.) ನಿಜವಾಗಿ, ಸತ್ಯವಾಗಿ, ಪ್ರಾಮಾಣಿಕವಾಗಿ, ನಿರ್ವಂಚನೆಯಾಗಿ (Am t. grateful); [(ಪತ್ರವ್ಯವಹಾರದಲ್ಲಿ ಸಾಮಾನ್ಯ ಔಪಚಾರಿಕ ರೀತಿಯ ಕೊನೆಯೊಕ್ಕಣಿಯಾಗಿ): Yours (very) t. ತಮ್ಮ (ಅತ್ಯಂತ) ವಿಶ್ವಾಸಿ. (ಹಾಸ್ಯ ಪ್ರ.) Yours t. (ತಮ್ಮ ವಿಶ್ವಾಸಿ): ನಾನು, ನನಗೆ, ನನ್ನನ್ನು (Won't do for yours t. ಅದು ನನಗೆ ಆಗುವುದಿಲ್ಲ)]; ವಾಸ್ತವವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(T., I should be puzzled to say); ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ (Has served him t.); ಯಥಾರ್ಥವಾಗಿ, ಯಥಾವತ್ತಾಗಿ, ಸರಿಯಾಗಿ (It has been t. stated). **Truth** ಟ್ರೂತ್ (ನಾ.; ಬ. ವ. -s ಟ್ರೂದ್ಸ್) ನಿಜ(ಸ್ಥಿತಿ), ಸತ್ಯ(ತೆ), ಸರಿಯಾದ ಸ್ಥಿತಿ, ವಸ್ತುಸ್ಥಿತಿ, ಪ್ರಾಮಾಣಿಕತೆ, ಯಾಥಾರ್ಥ್ಯ, ವಾಸ್ತವ ಸಂಗತಿ, ಸರಿಯಾದ ಆಕಾರ, ಹೊಂದಿಕೆ [Wheel is out of t. ಚಕ್ರ—ಡೊಂಕಾಗಿದೆ, ಸರಿಯಾದ ಸ್ಥಾನದಲ್ಲಿಲ್ಲ, ಹೊಂದಿಕೆ ತಪ್ಪಿದೆ. Fundamental truths ಮೂಲಾಧಾರ ಸತ್ಯಗಳು. Home t. ತೀಕ್ಷ್ಣಸತ್ಯ. God's t. ಪರಮಸತ್ಯ. Gospel t. (Gospel ನೋಡಿ). (ಸಾಹಿತ್ಯ ಪ್ರ.) In t., (ಪ್ರಾಚೀ. ಪ್ರ.) Of a t. ನಿಜವಾಗಿ, ಸತ್ಯವಾಗಿ. To tell the t., T. to tell (ಮನಸ್ಸಿನಲ್ಲಿರುವುದನ್ನು ಪ್ರಕಾಶಪಡಿಸುವಾಗ): ನಿಜವನ್ನು ಹೇಳುವುದಾದರೆ]. **Trúthful** (ಗು.) ನಿಜ ಹೇಳುವ, ಸತ್ಯವಾದಿಯಾದ; (ಕಥೆ, ಮೊ. ಗಳ ವಿಷಯದಲ್ಲಿ) ನಿಜವಾದ, ವಾಸ್ತವವಾದ. **Trúthfully** (ಕ್ರಿ. ವಿ.); **Trúthfulness** (ನಾ.); **Trúthless** (ಗು.) (ಹೇಳಿಕೆಯ ವಿಷಯದಲ್ಲಿ) ಸುಳ್ಳಾದ, ನಿಜವಲ್ಲದ, ಅಸತ್ಯವಾದ; (ವ್ಯಕ್ತಿಯ ವಿಷಯದಲ್ಲಿ) ಅಪ್ರಾಮಾಣಿಕ, ಮಾತಿಗೆ ತಪ್ಪುವ. **Trúthlessness** (ನಾ.)

Trúffle ಟ್ರ(ಟ್ರು)ಫ್‌ಲ್ (ನಾ.) (ಅಡಿಗೆಯಲ್ಲಿ ಮಸಾಲೆಯಾಗಿ ಉಪಯೋಗಿಸುವ, ನೆಲದೊಳಗೆ ಬೆಳೆಯುವ) ಒಂದು ಬಗೆಯ ಅಣಬೆ. **Trúffled** (ಗು.) —ಹಾಕಿದ.

Trug ಟ್ರಗ್ (ನಾ.) (ಮರದಿಂದ ಮಾಡಿದ) ಹಾಲು ಮರಿಗೆ; ಕುಕ್ಕೆ.

Trúism. **True** ನೋಡಿ.

Trull ಟ್ರಲ್ (ನಾ.) (ಪ್ರಾಚೀ. ಪ್ರ.) ಸೂಳೆ, ಗುಡಿಸೆಟ್ಟಿ.

Trúly. **True** ನೋಡಿ.

Trump[1] ಟ್ರಂಪ್ (ನಾ.) (ಪ್ರಾಚೀ. ಪ್ರ., ಕಾವ್ಯ) ತುತೂರಿ(ಯ ಶಬ್ದ). (Last t., T. of doom ಅಂತ್ಯ, ಮಹಾವಿಚಾರಣೆಯ ದಿನ ಆಗುವ,—ತುತೂರಿಯ ಶಬ್ದ)

Trump[2] ಟ್ರಂಪ್ (ನಾ., ಕ್ರಿ.) (ಇಸ್ಪೀಟಾಟ) ತುರುಫು, ತುರುಫೆಲೆ [A call for trumps (ಜೊತೆಯಾಟಗಾರನಿಗೆ) ತುರುಫು ಇಳಿಯುವಂತೆ ಸೂಚನೆ, ಸಂಕೇತ. T. card ಯಾವ ರಂಗು ತುರುಫಾಗುವುದೊ ಅದನ್ನು ನಿರ್ಧರಿಸಲು ಮೇಲ್ಮೊಗಮಾಡಿದ ಎಲೆ; ತುರುಫು ರಂಗಿನ ಯಾವುದಾದರೂ ಎಲೆ: ತುರುಫೆಲೆ; (ರೂಪ.) ಬೆಲೆಯುಳ್ಳ ಸಲಕರಣೆ, ಪರಮಸಾಧನ, ಪರಮೋಪಾಯ]; (ಬಳ. ಮಾ.) ಒಳ್ಳೆಯ ಧೈರ್ಯಶಾಲಿ, ಒಳ್ಳೆಯ ಉದಾರಿ, ಸಮಯೋಪಾಯಜ್ಞ; ಘರ್ಜರಿ ಮನುಷ್ಯ; ಒಳ್ಳೆಯ ವ್ಯಕ್ತಿ; [Put person to his trumps (ರೂಪ.) ಕೊನೆಯ ಉಪಾಯಗಳನ್ನು, ಆಪದಸ್ತ್ರಗಳನ್ನು, —ಉಪಯೋಗಿಸುವಂತೆ ಮಾಡು. Turn up trumps (ಬಳ. ಮಾ.) ನಿರೀಕ್ಷಿಸಿದ್ದಕ್ಕಿಂತ ಚೆನ್ನಾಗು; ಅದೃಷ್ಟ ಕುರಾಯಿಸು]. (ಕ್ರಿ.) ತುರುಫಿನಿಂದ ಹೊಡೆ; ತುರುಫಾಡು, ತುರುಫು ಇಳಿ; (ರೂಪ.) ಪರಮೋಪಾಯ, ಕೊನೆಯುಪಾಯ, —ಉಪಯೋಗಿಸು. T. up (ಆಪಾದನೆ, ನೆಪ, ಮೊ. ನ್ನು) ಸೃಷ್ಟನೆ ಮಾಡು, ಕಲ್ಪನೆ ಮಾಡು.

Trúmpery ಟ್ರಂಪರಿ (ನಾ., ಗು.) ಕೆಲಸಕ್ಕೆ ಬಾರದ ಥಳುಕುಪಳುಕು; ಕಚಡ, ಕಸ; ಅಸಂಬದ್ಧ, ಅವಿವೇಕ. (ಗು.) ಥಳುಕುಪಳುಕಿನ, ಮೋಸದ, ಜಳ್ಳಾದ, ಪೊಳ್ಳಾದ (T. furniture, arguments)

Trúmpet ಟ್ರಂಪೆಟ್ (ನಾ., ಕ್ರಿ.) ತುತೂರಿ, ಕಹಳೆ; ತುತೂರಿ ಊದುವವನು, ಕಹಳೆಯವನು; (ಮು., ಪಾತ್ರ) ದೂತ, ಘೋಷಕ; (ರೂಪ.) ಪ್ರಶಂಸಕ, ಕೀರ್ತಿ ಘೋಷಕ; ಆರ್ಗನ್ ವಾದ್ಯದಲ್ಲಿಯ ಒಂದು ಬಗೆಯ ಪೀಪಿ; [Ear-t. (Ear[1] ನೋಡಿ). Speaking t. (Speak ಕೆಳಗೆ Speaking ನೋಡಿ)]; ಕಹಳೆಯಾಕಾರದ ವಸ್ತು (ಉದಾ., ಒಂದು ಬಗೆಯ ನಾಳಿಕೆ); ಕಹಳೆಯ(ದರಂಥ)ಶಬ್ದ; [Feast of trumpets ಯೆಹೂದ್ಯರ ಯುಗಾದಿ ಹಬ್ಬ. Flourish of trumpets ಕಹಳೆಯ—ಮೊಳಗು, ಘೋಷ. Blow one's own t. (Blow[1] ನೋಡಿ). T.-call ತುತೂರಿಯೂದಿ ಕರೆಯುವುದು, ಕಹಳೆ ಕರೆ, ತುತೂರಿ ಕೂಗು; (ರೂಪ.) ತುರ್ತು, ಜರೂರು, —ಕರೆ. T.-conch, -shell, Sea-t. ವಲಯ ಗೋಪುರದ ದೊಡ್ಡ ಚಿಪ್ಪುಳ್ಳ ಹಲವು ಬಗೆಯ ಉದರಪಾದಿ. T.-flower, -leaf ಕಹಳೆಯಾಕಾರದ ಹೂವುಗಳು, ಎಲೆಗಳು, —ಬಿಡುವ ಹಲವು ಬಗೆಯ ಸಸ್ಯ. T. major ರಾವುತ ದಳದ ತುತೂರಿ ನಾಯಕ]. (ಕ್ರಿ.) ತುತೂರಿ, ಕಹಳೆ—ಊದು, ಮೂಲಕ ಘೋಷಿಸು; (ರೂಪ.) ಜೋರಾಗಿ ಪ್ರಕಟಮಾಡು, ಉದ್ಘೋಷಿಸು; (ಆನೆ, ಮೊ. ಗಳ ವಿಷಯದಲ್ಲಿ) ಕಹಳೆ ಶಬ್ದ(ದಂತೆ ದೊಡ್ಡ ಶಬ್ದ) ಮಾಡು; ಘೀಳಿಡು. **Trúmpeter** (ನಾ.) ತುತೂರಿ ಊದುವವನು, ಕಹಳೆಯವನು; (ಮು., ತುತೂರಿಯ ಮೂಲಕ ಸಂಕೇತಗಳನ್ನು ಕೊಡುವ) ಕಹಳೆ ರಾವುತ [Be one's own t. ಆತ್ಮಪ್ರಶಂಸೆ ಮಾಡಿಕೊ, ಬಡಾಯಿ ಕೊಚ್ಚಿಕೊ]; ಒಂದು ವಿಶಿಷ್ಟ ರೀತಿಯಲ್ಲಿ ಗುಬ್ಬಳಿಸುವ ಸಾಕು ಪಾರಿವಾಳ; ಕಹಳೆ ಧ್ವನಿಯ ಹಲವು ಬಗೆಯ ಹಕ್ಕಿ; ಉ. ಅಮೆರಿಕದ ಒಂದು ದೊಡ್ಡ ಜಾತಿಯ ಹಂಸ (=T. swan)

Trúncal. **Trunk** ನೋಡಿ.

Trúncate ಟ್ರಂಕೇಟ್ (ಕ್ರಿ. ಸಕ., ಗು.) (ಮರ, ದೇಹ, ಶಂಕು, ಮೊ. ಗಳ) ತುದಿ, ತಲೆ, ಅಗ್ರ, —ಕತ್ತರಿಸಿಹಾಕು; (ಉದಾಹರಿಸಿದ ವಾಕ್ಯ, ಮೊ. ನ್ನು) ಕತ್ತರಿಸಿ ಊನಮಾಡು. (ಸ್ಫಟಿಕಶಾಸ್ತ್ರ) ಏಣು ಸಮರಿ ಸಮತಲಮಾಡು, ಏಣು ಸಮರು. (ಗು.) —ಕತ್ತರಿಸಿದ, ಸಮರಿದ; ಊನಮಾಡಿದ; ಛಿನ್ನಾಗ್ರ. **Trúncately** (ಕ್ರಿ. ವಿ.); **Truncátion** (ನಾ.) —ಕತ್ತರಿಸುವುದು; ಮೊಟಕುಮಾಡುವುದು; ಕತ್ತರಿಸಿದ ಸ್ಥಳ. **Trúncature** (ನಾ.) (ಪ್ರಾ. ವಿ.) =Truncation.

Trúncheon ಟ್ರನ್ಷನ್ (ನಾ.) ಮೋಟುದೊಣ್ಣೆ; ಸೋಟ (ಉದಾ., ಪೊಲೀಸಿನವನದು); ಅಧಿಕಾರದಂಡ (ಮು., ವಂಶರಾಂಛನ ಸಂಸ್ಥೆಯ ಅಧ್ಯಕ್ಷನ ಅಧಿಕಾರದಂಡ)

Trúndle ಟ್ರಂಡ್‌ಲ್ (ನಾ., ಕ್ರಿ.) ಸಣ್ಣ ಅಗಲ ಗಾಲಿ (ಉದಾ., ಮೇಜು, ಮೊ. ಗಳ ತಿರುಗುಗಾಲಿ); ಉರುಳೆಯಾಕಾರದ ಹಲ್ಲಿನ ಸಣ್ಣ ಚಕ್ರ; ತಗ್ಗುಗಾಲಿಯ (ತಳ್ಳು)ಬಂಡಿ; =Truckle-bed (=T.-bed) (Truckle ನೋಡಿ); (ಹಡಗಿನ ಜೋಡುಹಾಯಿರಾಟೆಯಲ್ಲಿ) ತಳ ರಾಟೆಯ ದುಂಡು ನೆತ್ತಿ. (ಕ್ರಿ.) (ಗಾಲಿ, ತಳ್ಳುಬಂಡಿ, ಮೊ. ವು) ಉರುಳು, ಉರುಳಿಸು (ಅನೇಕ ವೇಳೆ *along*, *down* ಮೊ. ಉಪ. ದೊಡನೆ); (ಅಸಂ.) (ಕ್ರಿಕೆಟ್) ಚೆಂಡು—ಎಸೆ, ಉರುಳಿಸು; ಬೋಲು ಮಾಡು. **Trúndler** (ನಾ.) (ಮು., ಅಸಂ.) (ಕ್ರಿಕೆಟ್) ಚೆಂಡೆಸೆಗಾರ, ಬೋಲು ಮಾಡುವವನು.

Trunk ಟ್ರಂಕ್ (ನಾ., ಕ್ರಿ. ಸಕ.) (ಮರದ) ತಾಳು, ಕಾಂಡ; (ಮನುಷ್ಯನ ಅಥವಾ ಪ್ರಾಣಿಯ) ಮುಂಡ, ಅಟ್ಟೆ, ಕಬಂಧ; (ಒಂದು ರಚನೆಯ ಅಥವಾ ಕಟ್ಟಡದ) ಮುಖ್ಯ, ಪ್ರಧಾನ, —ಭಾಗ; (ರೈಲುಮಾರ್ಗ, ನಾಲೆ, ದೂರವಾಣಿ, ಮೊ. ಗಳ) ರಾಜ, ಪ್ರಧಾನ, —ಮಾರ್ಗ (=T.-line); (ಲೋಹ, ಚರ್ಮ, ಬೆತ್ತ, ಮೊ. ಗಳಿಂದ ಮಾಡಿದ, ಕೀಲುಮುಚ್ಚಳವುಳ್ಳ) ಪೆಟ್ಟಿಗೆ, ಸಂದೂಕ, ಟ್ರಂಕು; (ಗಾಳಿ ಬೆಳಕುಗಳಿಗಾಗಿ ಮಾಡಿದ) ಪೆಟ್ಟಿಗೆಯಾಕಾರದ ಸುರಂಗ, ಬಾವಿದಾರಿ; (ಅದುರು ಬೇರ್ಪಡಿಸುವುದು, ಮೊ. ಕ್ಕಾಗಿ ಉಪಯೋಗಿಸುವ, ಸಾ., ಮರದಿಂದ ಆಯದಾಕಾರದಲ್ಲಿ ಮಾಡಿರುವ) ಜರಡಿ—ತೊಟ್ಟಿ, ಪೆಟ್ಟಿಗೆ; (ಕೆಲವು ಜಹಜುಗಳ ಮತ್ತು ಇತರ ಎಂಜಿನುಗಳಲ್ಲಿ ಚಾಲಕ ದಂಡಕ್ಕೆ ಬದಲಾಗಿ ಉಪಯೋಗಿಸುವ) ತೆರಪುರುಳೆ (T.-engines ತೆರಪುರುಳೆ ಎಂಜಿನುಗಳು); (ಮು., ಆನೆಯ) ಸೊಂಡಿಲು; (ಬ. ವ. ದಲ್ಲಿ: ೧೬-೧೭ನೆಯ ಶ. ಮಾ. ಗಳಲ್ಲಿ ಬಳಕೆಯಲ್ಲಿದ್ದ) ಚಡ್ಡಿ, ಚಲ್ಲಣ (=T.-hose); [T.-call (ದೂರವಾಣಿ) (ಪಟ್ಟಣಗಳಿಂದ ಪಟ್ಟಣಕ್ಕೆ) ಪ್ರಧಾನ ಮಾರ್ಗದ ಕರೆ. T. drawers (ಅಂಗಡಿಯ ಮಾತು) ಮೊಣಕಾಲ (ವರೆಗಿನ) ಷರಾಯಿ. T.-nail ಟ್ರಂಕು ಪೆಟ್ಟಿಗೆ, ಮೊ. ಗಳಿಗೆ ಹೊಡೆಯುವ, ಅಲಂಕಾರದ ತಲೆಯುಳ್ಳ ಮೊಳೆ: ಪೆಟ್ಟಿಗೆ ಮೊಳೆ. T.-road (ದೇಶದ) ಮುಖ್ಯ ರಸ್ತೆ, ಛಾಟಾ ಮಾರ್ಗ]. (ಕ್ರಿ.) ಅದುರನ್ನು—ಬೇರ್ಪಡಿಸು, ಜರಡಿಯಾಡು. **Trúnkful** (ನಾ.); **Trúnkless** (ಗು.); **Trúncal** ಟ್ರಂಕಲ್ (ಗು.) (ಮರದ) ತಾಳಿನ, ಕಾಂಡದ; (ದೇಹದ) ಮುಂಡದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Trúnnion ಟ್ರನ್ಯನ್ (ನಾ.) ಫಿರಂಗಿಯ (ಎರಡು ಪಕ್ಕದಲ್ಲೂ ಇರುವ ಉರುಳೆಯಾಕಾರದ) ಆಸರೆ ಚಾಚು ; (ಆವಿಯೆಂಜಿನಿನಲ್ಲಿ ಉರುಳೆಗೆ ಆಸರೆಯಾಗಿದ್ದು, ಆವಿಯ ಸಂಚಾರಕ್ಕೆ ಅವಕಾಶಕೊಡುವ) ಪೊಳ್ಳು ತಿರುಗಣೆ. **Trúnnioned** (ಗು.)

Truss ಟ್ರಸ್ (ಕ್ರಿ. ಸಕ., ನಾ.) (ಸೇತುವೆ, ಚಾವಣಿ, ಮೊ. ಕ್ಕೆ) ಊರೆ ಕಟ್ಟು, ಆಸರೆಕಟ್ಟು, —ಕೊಡು, ಹಾಕು ; (ಬಿಗಿಪಟ್ಟಿ ಹಾಕಿ) ಬಿಗಿಸು, ಭದ್ರಮಾಡು ; (ಅಡುವ ಮೊದಲು, ಕೋಳಿ, ಮೊ. ಗಳ) ರೆಕ್ಕೆಗಳನ್ನು ಕಟ್ಟು ; (ಮನುಷ್ಯನ ತೋಳುಗಳನ್ನು) ಪಕ್ಕೆಗಳಿಗೆ ಸೇರಿಸಿ ಕಟ್ಟು ; (ಪ್ರಾಚೀ. ಪ್ರ.) (ಹಾಕಿಕೊಂಡ ಉಡುಪು, ಮೊ. ನ್ನು) ಸರಿಯಾಗಿ ಬಿಗಿದುಕೊ (ಸಾ., *up* ಉಪ. ದೊಡನೆ); (ಪ್ರಾಚೀ. ಪ್ರ.) (ಅಪರಾಧಿಯನ್ನು) ಗಲ್ಲಿಗೆ ಹಾಕು, ನೇಣುಹಾಕು (ಸಾ., *up* ಉಪ. ದೊಡನೆ) ; (ಪ್ರಾಚೀ. ಪ್ರ.) (ಡೇಗೆ, ಮೊ. ಗಳ ವಿಷಯದಲ್ಲಿ) (ಹಕ್ಕಿ) ಹಿಡಿ(ದುಕೊ). (ನಾ.) (ಚಾವಣಿ, ಸೇತುವೆ, ಮೊ. ಗಳ) ಊರೆ, ಆಸರೆ, —ಕಟ್ಟು (T.-bridge ಆಸರೆಕಟ್ಟಿನ ಸೇತುವೆ) ; (ಹಲವು ತೂಕಗಳ) ಒಣಹುಲ್ಲು ಹೊರೆ; ಕಾವಿನ ತುದಿಯಲ್ಲಿ ಒತ್ತಾಗಿರುವ ಹೂಗೊಂಚಲು : ತುದಿ ಗೊಂಚಲು ; (ವಾ. ಶಾ.) (ಗೋಡೆಯಿಂದ ಚಾಚಿಕೊಂಡಿರುವ, ಕಪೋತ, ಮೊ. ಕ್ಕೆ ಆಸರೆಯಾದ) ಬೋದಿಗೆ (ಕೈ) ; (ನಾವೆ) ಕೆಳ ದಿಮ್ಮಿಗಳನ್ನು ಕೂವೆಗೆ ಬಿಗಿಸುವ ಕಬ್ಬಿಣದ ಕಟ್ಟು : ಕೆಳ ದಿಮ್ಮಿ ಕಟ್ಟು; (ಶಸ್ತ್ರವೈದ್ಯ) ಒಳಗಿನ ಭಾಗಗಳು ಹೊರಹೊರಟುಕೊಳ್ಳುವ ಸಂಭವವಿರುವಲ್ಲಿ ಹಾಗೆ ಹೊರಟುಕೊಳ್ಳದಂತೆ ಆಸರೆಯಾಗಿ ಹಾಕುವ ಮೆತ್ತೆಕಟ್ಟು ಅಥವಾ ಸ್ಪ್ರಿಂಗ್ ಸುತ್ತುಪಟ್ಟಿ : ಆಸರೆಕಟ್ಟು, ರಕ್ಷಾಬಂಧ.

Trust ಟ್ರಸ್ಟ್ (ನಾ., ಕ್ರಿ.) (ಒಬ್ಬನ ಪ್ರಾಮಾಣಿಕತೆ, ಸತ್ಯಸಂಧತೆ, ನ್ಯಾಯ, ಮೊ. ಗಳ ವಿಷಯದಲ್ಲಿ) ದೃಢ ನಂಬಿಕೆ, ನೆಚ್ಚಿಕೆ, ವಿಶ್ವಾಸ, ಭರವಸೆ (Our t. is in God) ; ಭರವಸೆಯ ನಿರೀಕ್ಷೆ (*That* ಪದದೊಡನೆ) ; ನಂಬಿಕೆಯ—ವ್ಯಕ್ತಿ, ವಸ್ತು ; ವಿಶ್ವಾಸಪಾತ್ರ (He is our sole t.); ಪರೀಕ್ಷೆ ಮಾಡದೆಯೇ ನಿಜವೆಂದು ನಂಬುವುದು : (ಬರಿಯ) ನಂಬಿಕೆ (Takes everything on t.). (ವ್ಯಾಪಾರ) ಖಾತ್ರಿ, ಉದ್ದರಿ (Supplied goods on t. ಖಾತ್ರಿಯ ಮೇಲೆ ಸರಕನ್ನು ಒದಗಿಸಿದನು) ; ನಂಬಿಕೆಯ ಹೊಣೆ, ಜವಾಬ್ದಾರಿ (Am in a position of t.); (ನ್ಯಾ. ಶಾ.) ಮತ್ತೊಬ್ಬನ ಪ್ರಯೋಜನಾರ್ಥವಾಗಿ ನಿರ್ವಹಿಸಬೇಕಾದ ಆಸ್ತಿಗೆ ಒಬ್ಬನನ್ನು ಹೆಸರಿಗೆ ಮಾತ್ರ ಒಡೆಯನನ್ನಾಗಿ ಮಾಡಿ ಅವನಲ್ಲಿ ಇಡುವ ನಂಬಿಕೆ : ನ್ಯಾಸ ವಿಶ್ವಾಸ; ಯಾರಿಗಾಗಿ ನ್ಯಾಸ ಇಟ್ಟಿದೆಯೊ ಅವನು ಅದರಿಂದ ಪ್ರಯೋಜನ ಪಡೆಯುವ ಹಕ್ಕು : ನ್ಯಾಸಾನುಭೋಗ(ದ ಹಕ್ಕು) ; ನ್ಯಾಸ(ವಾಗಿ ಇಟ್ಟ ಆಸ್ತಿ); ನ್ಯಾಸಧಾರಿಗೂ ನ್ಯಾಸದ ಆಸ್ತಿಗೂ ಇರುವ ಸಂಬಂಧ : ನ್ಯಾಸ ಸಂಬಂಧ (Have accepted a t. ; The property is merely a t. ; Is held in t.; T.-money ನ್ಯಾಸ ಧನ). ಒಬ್ಬನ ವಶಕ್ಕೆ ಒಪ್ಪಿಸಿದ ವಸ್ತು, ವ್ಯಕ್ತಿ : ಕೈಯೆಡೆ, ನ್ಯಾಸ (Would not desert his t.). ; ನ್ಯಾಸದ ಹೊಣೆ (Have fulfilled my t.) ; (ವ್ಯಾಪಾರ) ಪೈಪೋಟಿಯನ್ನು ಕಡಮೆ ಮಾಡುವ ಅಥವಾ ನಿಷ್ಫಲಗೊಳಿಸುವ ಉದ್ದೇಶದಿಂದ ಹಲವು ವ್ಯಾಪಾರ ಸಂಘಗಳು ಒಟ್ಟುಸೇರಿ, ಪ್ರತಿಯೊಂದರ ಮೇಲ್ವಿಚಾರಣೆಯನ್ನೂ ಬಂಡವಾಳದ ಎಲ್ಲ ಅಥವಾ ಬಹು ಭಾಗವನ್ನೂ ಕೇಂದ್ರ ಸಮಿತಿಗೆ ವಹಿಸಿ ವಹಿವಾಟು ನಡಸಲು ಸ್ಥಾಪಿಸಿಕೊಂಡ ಸಂಸ್ಥೆ : ಕೂಡು ವ್ಯಾಪಾರ ಸಂಸ್ಥೆ ; [T.-deed ಸಾಲಗಾರನು ತನ್ನ ಸಾಲ ತೀರಿಸುವುದಕ್ಕಾಗಿ ತನ್ನ ಆಸ್ತಿಯನ್ನು ನ್ಯಾಸದರ್ಶಿಗೆ ವಹಿಸಿಕೊಡುವ ಪತ್ರ; ಆಸ್ತಿಯನ್ನು ಮಾರಿ ತನಗೆ ಬರಬೇಕಾದ ಹಣವನ್ನು ಕಟಾಯಿಸಿಕೊಂಡು ಉಳಿದದ್ದನ್ನು ಸಾಲಗಾರನಿಗೆ ಹಿಂದಿರುಗಿಸುವಂತೆ ಸಾಲಗಾರನು ಸಾಲ ಕೊಟ್ಟವನಿಗೆ ಆಸ್ತಿ ವಹಿಸಿಕೊಟ್ಟ ಪತ್ರ: ನ್ಯಾಸಪತ್ರ]. (ಕ್ರಿ.) ನಂಬಿಕೆ, ನೆಚ್ಚಿಕೆ, ವಿಶ್ವಾಸ, ಭರವಸೆ, —ಇಡು ; ನಂಬು, ನೆಚ್ಚು [Do not t. him with your typewriter ನಿನ್ನ ಟೈಪ್‌ರೈಟರನ್ನು (ಉಪಯೋಗಿಸಲು) ಅವನನ್ನು ನಂಬಿ ಕೊಡಬೇಡ. Cat cannot be trusted with milk ಬೆಕ್ಕನ್ನು ನಂಬಿ ಹಾಲಿಟ್ಟು ಹೋಗಬಾರದು] ; (ವಸ್ತು, ಮೊ. ನ್ನು ಒಬ್ಬನ ವಶಕ್ಕೆ) ನಂಬಿ ಕೊಡು (*To* ಉಪ. ದೊಡನೆ) (He trusted his wealth to my care) ; (ಒಂದು ಸ್ಥಳದಲ್ಲಿ, ಒಬ್ಬನ ವಶದಲ್ಲಿ) ನಂಬಿ —ಇಡು, ಬಿಡು (*In* place ; *with* person) ; ನ್ಯಾಸವಿಡು, ನಂಬಿ ವಶಕ್ಕೆ ಕೊಡು ; ಖಾತ್ರಿಯ ಮೇಲೆ ಸಾಮಾನು ಕೊಡು, ಉದ್ದರಿ ಕೊಡು ; ನಂಬು, ನಂಬಿಕೊ(ಂಡಿರು), ಹಾರೈಸು [I t. he is not hurt. T. to (ಅತಿ) ನಂಬಿಕೆ ಇಡು, (ಅತಿ) ಭರವಸೆ ಇಡು, ನೆಚ್ಚು (Does not do to t. to memory for these things ಈ ವಿಚಾರಗಳಲ್ಲಿ ಜ್ಞಾಪಕಶಕ್ತಿಯನ್ನು ನಂಬಲಾಗುವುದಿಲ್ಲ] . **Trusteé** (ನಾ.) ಮತ್ತೊಬ್ಬನಿಗಾಗಿ ಆಸ್ತಿಯನ್ನು ತನ್ನ ವಶದಲ್ಲಿಟ್ಟುಕೊಂಡಿರುವವನು : ನ್ಯಾಸಧಾರಿ (The Public T. ಇಂಗ್ಲೆಂಡಿನಲ್ಲಿ ೧೯೦೮ರಿಂದ ಈಚೆಗೆ ನೇಮಕವಾದ, ತನಗೆ ಕೋರಿಕೆ ಬಂದ ಸಂದರ್ಭದಲ್ಲಿ ಅಂತಿಮ ಇಷ್ಟಪತ್ರಗಳನ್ನೂ ನ್ಯಾಸಗಳನ್ನೂ ಜಾರಿಗೆ ತರುವ ಒಬ್ಬ ಅಧಿಕಾರಿ : ಸರ್ಕಾರಿ —ನ್ಯಾಸಾಧಿಕಾರಿ, ನ್ಯಾಸ ನಿರ್ವಾಹಕ) ; (ಬಳ. ಮಾ.) ವಿದ್ಯಾಸಂಸ್ಥೆ, ಮೊ. ಗಳ (ಸಾ., ಚುನಾಯಿತನಾದ) ಆಡಳಿತ ಸಮಿತಿಯ ಸದಸ್ಯ : ನ್ಯಾಸ—ವಾಹಿ, ನಿರ್ವಾಹಕ, ದರ್ಶಿ ; ಆಡಳಿತಗಾರ. **Trústeeship** (ನಾ.) ; **Trústful** (ಗು.) ನಂಬುವ, ನಂಬಿಬಿಡುವ. **Trústfully** (ಕ್ರಿ. ವಿ.) ; **Trústfulness** (ನಾ.) ; **Trústingly** (ಕ್ರಿ. ವಿ.) ನಂಬಿ(ಕೆಯಿಟ್ಟು), ನೆಚ್ಚಿ(ಕೆಯಿಟ್ಟು). **Trústworthy** (ಗು.) ನಂಬಿಕೆಗೆ ಅರ್ಹವಾದ, ನೆಚ್ಚಿಕೆಯ, ವಿಶ್ವಾಸಪಾತ್ರ. **Trústworthiness** (ನಾ.) ; **Trústy** (ಗು., ನಾ.) (ಮು., ಪ್ರಾಚೀ. ಪ್ರ.) ನೆಚ್ಚಿಕೆಯ, ವಿಶ್ವಾಸಾರ್ಹ (T. steed, sword, servant). (ನಾ.) ಒಳ್ಳೆ ನಡತೆಯಿಂದ ಕೆಲವು ರಿಯಾಯಿತಿ ಪಡೆದಿರುವ ಕೈದಿ : ನಂಬಿಕೆಯ ಕೈದಿ. **Trústily** (ಕ್ರಿ. ವಿ.) ; **Trústiness** (ನಾ.)

Truth, Trúthful, Trúthless. True ನೋಡಿ.

Try ಟ್ರೈ (ಕ್ರಿ.) (ವ್ಯಕ್ತಿಯ ಅಥವಾ ವಸ್ತುವಿನ ಗುಣವನ್ನು) ಪರೀಕ್ಷಿಸು, (ಪರೀಕ್ಷಿಸಿ) ನೋಡು ; [T. (the effect of) soap and water ಸಾಬೂನನ್ನೂ ನೀರನ್ನೂ ಉಪಯೋಗಿಸಿ ನೋಡು. T. our goods ನಮ್ಮ ಸರಕನ್ನು ಕೊಂಡು ನೋಡಿ. Did you ever t. quinine for it ? ನೀನು ಯಾವಾಗಲಾದರೂ ಅದಕ್ಕೆ ಕ್ವೈನ ಕೊಟ್ಟು, ತೆಗೆದುಕೊಂಡು, ನೋಡಿದೆಯಾ ? (Strength of) rope must be tried before it is used ಉಪಯೋಗಿಸುವ ಮೊದಲು ಹಗ್ಗದ ಬಲವನ್ನು ಪರೀಕ್ಷಿಸಬೇಕು. T. your hand at ನಿನ್ನ ಚಾತುರ್ಯವನ್ನು ಉಪಯೋಗಿಸು, ಒಂದು ಕೈ ನೋಡು]. (ವ್ಯಕ್ತಿ, ಮೊ. ನ್ನು ಪರೀಕ್ಷಿಸಿ ನೋಡುವುದಕ್ಕಾಗಿಯೊ ಎಂಬಂತೆ) ಕಷ್ಟಕ್ಕೆ ಗುರಿಮಾಡು, ದುಃಖಕ್ಕೀಡುಮಾಡು (This will t. his courage ಇದು ಅವನ ಧೈರ್ಯವನ್ನು ಪರೀಕ್ಷಿಸುತ್ತದೆ. Patience has been sorely tried ತಾಳ್ಮೆಗೆ ತೀವ್ರ ಪರೀಕ್ಷೆಯಾಗಿದೆ. Should not t. your eyes with that small print ಆ ಸಣ್ಣ ಅಚ್ಚು ಅಕ್ಷರಗಳನ್ನು ಓದಿ ಕಣ್ಣಿಗೆ ಕಷ್ಟಕೊಡಬಾರದು) [**Trýing** (ಗು.) ಯೋಗ್ಯತೆ ಪರೀಕ್ಷಿಸುವ, ಕಷ್ಟಕರ, ತೊಂದರೆಯ. **Trýingly** (ಕ್ರಿ. ವಿ.)] ; ಪ್ರಯೋಗಿಸಿ, ಪರೀಕ್ಷೆ ಮಾಡಿ, —ನೋಡು [Let us t. whether it will break. T. conclusions with (Conclude ಕೆಳಗೆ Conclusion ನೋಡಿ). T. a fall (Fall ನಾ. ನೋಡಿ)] ; (ಮೊಕದ್ದಮೆಯನ್ನು, ಅಪರಾಧಕ್ಕಾಗಿ ವ್ಯಕ್ತಿಯನ್ನು) ವಿಚಾರಣೆ ಮಾಡು (T. one *for* murder, *for* his *life*) ; (ವಿವಾದಾಸ್ಪದ ವಿಷಯವನ್ನು, ಪ್ರಶ್ನೆಯನ್ನು) ಪ್ರಯೋಗಮಾಡಿ, ಪರೀಕ್ಷೆಮಾಡಿ, —ನಿರ್ಧರಿಸು ; ಪ್ರಯತ್ನಮಾಡು, ಪ್ರಯತ್ನಿಸು [*To* ಉಪ. ದೊಡನೆ ; (ಬಳ. ಮಾ.) ಅನೇಕ ವೇಳೆ *and* ನಂ. ಅವ್ಯ. ದೊಡನೆ : Must t. to (*or* and) get it finished tonight]. (ಒರಟು ಹತ್ತರಿ ಹಿಡಿದ ಮರವನ್ನು) ನಯ ಹತ್ತರಿ ಹಿಡಿ (=T. up) (**Trying-plane** ನಯ ಹತ್ತರಿ); (ಲೋಹ, ಕೊಬ್ಬು, ಎಣ್ಣೆ, ಮೊ. ನ್ನು) ಕರಗಿಸಿ, ಕುದಿಸಿ, —ಶುದ್ಧಮಾಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(=T. out). T. back=Hark back (Hark ನೋಡಿ). T. for (—ಕ್ಕೆ, —ಕ್ಕಾಗಿ) ಪ್ರಯತ್ನ—ಪಡು, ಮಾಡು; (ನೌಕರಿಗೆ) ಅರ್ಜಿಹಾಕು. T. on (ಉಡುಪು, ಮೊ. ನ್ನು) ಹಾಕಿಕೊಂಡು ನರಿನೋಡು; ಪ್ರಯೋಗಮಾಡಿ, ಪರೀಕ್ಷೆಮಾಡಿ,—ನೋಡು (No use trying it, your games, tricks, on with me ನನ್ನ ಹತ್ತಿರ ಆ ಆಟ ಸಾಗುವುದಿಲ್ಲ; ಅದಕ್ಕೆಲ್ಲ ನಾನು ಸಿಕ್ಕಿಬೀಳುವವನಲ್ಲ). T. out ಚೆನ್ನಾಗಿ ಪರೀಕ್ಷಿಸು, ಪರೀಕ್ಷೆಗೆ ಹಾಕು. **Trýsail** ಬಿರುಸು ಹವದಲ್ಲಿ ಕಟ್ಟುವ ಸಣ್ಣ ಹಾಯಿ. **Try(ing)-square** (ನಾ., ಒಂದು ಬಾಹು ಮರದಿಂದಲೂ ಒಂದು ಬಾಹು ಲೋಹದಿಂದಲೂ ಮಾಡಿದ, ಬಡಗಿ ಉಪಯೋಗಿಸುವ) ಮೂಲೆಮಟ್ಟ. **Try -works** ತಿಮಿಂಗಿಲದ ಕೊಬ್ಬನ್ನು ಶೋಧಿಸುವ ಕುಲುಮೆ: ತಿಮಿ ಮೇದಶ್ಶೋಧಕ. **Tríable** (ಗು.) ಪ್ರಯತ್ನಪಡಬಹುದಾದ, ಪರೀಕ್ಷಿಸಬಹುದಾದ; ವಿಚಾರಣೆ ನಡಸಬಹುದಾದ. **Tríal** ಟ್ರೈಅಲ್ (ನಾ.) ಪರೀಕ್ಷೆ, ಪ್ರಯೋಗ [Shall subject *or* put it to further t. ಇನ್ನೂ, ಮತ್ತೂ, ಪರೀಕ್ಷೆಗೆ ಈಡುಮಾಡಿ ನೋಡುತ್ತೇನೆ. Will make the t. ಪ್ರಯೋಗ ಮಾಡಿ ನೋಡುತ್ತೇನೆ. Employed on t. ಪರೀಕ್ಷಾರ್ಥವಾಗಿ ನೇಮಕವಾದ. T. of the Pyx (Pyx ನೋಡಿ)]; =T. heat (Heat ನೋಡಿ); ಪ್ರಯತ್ನ, ಉದ್ಯಮ; ಪರೀಕ್ಷಿಸಿ ನೋಡುವಂಥದು, ಕಷ್ಟ, ತೊಂದರೆ (Old age has many trials ಮುಪ್ಪಿನಲ್ಲಿ ಹಲವು ಕ್ಲೇಶಗಳಿವೆ. The boy is a great t. ಆ ಹುಡುಗ ಒಂದು ದೊಡ್ಡ ಪೀಡೆ); (ಮೊಕದ್ದಮೆ, ಮೊ. ಗಳ) ವಿಚಾರಣೆ [Was on his t. *or* stood *or* underwent t. for murder. Granted a new t. (ಮೊದಲ ವಿಚಾರಣೆಯಲ್ಲಿ ಅಕ್ರಮ ಅಥವಾ ಅನ್ಯಾಯ ಆಯಿತೆಂಬ ಕಾರಣದಿಂದ) ಪುನರ್ವಿಚಾರಣೆಗೆ ಅನುಮತಿ ಕೊಟ್ಟಿತು]. T. balance (ಎರಡು ನಲ ರೆಕ್ಕ ಬರೆಯುವ ಲೆಕ್ಕ ಪದ್ಧತಿಯಲ್ಲಿ, ಹೆಚ್ಚು ಕಡಮೆಗಳನ್ನು ಕಂಡುಹಿಡಿಯಲು ಮಾಡುವ) ಆಯ ಬೀಯಗಳ —ಪರೀಕ್ಷೆ, ತನಿಖೆ. (Method of) T. and error (ಗಣಿತ) ಅವ್ಯಕ್ತ ಪರಿಮಾಣಕ್ಕೆ ಒಂದು ಬೆಲೆಯನ್ನು ಊಹಿಸಿ, ಅದು ನರಿಹೋಗದಿದ್ದಲ್ಲಿ ಮತ್ತೊಂದು ಬೆಲೆಯನ್ನು ಊಹಿಸುತ್ತ ಹೀಗೆ ನಿಜವಾದ ಬೆಲೆಯನ್ನು ಪರೀಕ್ಷೆಗಳಿಂದ ಕಂಡುಹಿಡಿಯುವ ಕ್ರಮ; ಪರೀಕ್ಷಾ ಪ್ರಯೋಗಮಾಡಿ ಕಂಡುಬಂದ ತಪ್ಪುಗಳನ್ನು ತಿದ್ದಿಕೊಂಡು ಮುಂದುವರಿಯುವ ಕ್ರಮ: ಪರೀಕ್ಷಾ ಊಹೆ ಮತ್ತು ತಪ್ಪು ನರಿನೋಡುವ ಕ್ರಮ. T. eights ದೋಣಿ ಪಂದ್ಯಕ್ಕೆ ಹುಟ್ಟುಗಾರರನ್ನು ಆಯ್ಕೆಮಾಡುವ ಉದ್ದೇಶದಿಂದ ಪರೀಕ್ಷಾರ್ಥವಾಗಿ ಪಂದ್ಯಕ್ಕೆ ಬಿಟ್ಟ ಎಂಟೆಂಟು ಹುಟ್ಟುಗಳ ಎರಡು ದೋಣಿಗಳು: ಪರೀಕ್ಷಾರ್ಥಕ ಎಂಟು. T. marriage= Companionate marriage (Marriage ನೋಡಿ). T. run (ಹೊಸದಾಗಿ ತಯಾರಿಸಿದ ಮೋಟಾರು ಬಂಡಿ, ಮೊ. ರ) ಪರೀಕ್ಷಾರ್ಥ ಓಟ. T. trip ಹಡಗಿನ ಪ್ರಯಾಣ ಯೋಗ್ಯತೆ, ಮೊ. ನ್ನು ಪರೀಕ್ಷಿಸುವುದಕ್ಕಾಗಿ ಮಾಡುವ ಅದರ ಮೊದಲ ಪ್ರಯಾಣ: ಪರೀಕ್ಷಾ—ಪ್ರಯಾಣ, ಸಂಚಾರ; (ರೂಪ.) ಪ್ರಯೋಗ (ಪರೀಕ್ಷೆ). **Tríer** (ನಾ.) (ಕ್ರಿಯಾರ್ಥಗಳಲ್ಲಿ); ನ್ಯಾಯದರ್ಶಿಯ ಮೇಲಿನ ಆಕ್ಷೇಪಣೆಗೆ ಆಧಾರವಿದೆಯೋ ಎಂಬುದನ್ನು ನಿರ್ಣಯಿಸುವುದಕ್ಕಾಗಿ ನೇಮಕವಾದವನು: ವಿಚಾರಣಾಧಿಕಾರಿ (=**Trior**)

Try (ನಾ.) (ಬಳ. ಮಾ.) ಪ್ರಯತ್ನ (Have a t. at it, for it ಪ್ರಯತ್ನಪಟ್ಟು ನೋಡು, ಒಂದು ಕೈ ನೋಡು)

Trýpanosome ಟ್ರಿಪನೊಸೋಂ (ನಾ.) ರಕ್ತದಲ್ಲಿ ಸೇರಿಕೊಂಡು ನಿದ್ರಾರೋಗ, ಮೊ. ವ್ಯಾಧಿಗಳನ್ನು ಉಂಟುಮಾಡುವ ಹಲವು ಬಗೆಯ ಪರೋಪಜೀವಿ: ಕೊರೆಕ್ರಿಮಿ.

Trýpsin ಟ್ರಿಪ್ಸಿನ್ (ನಾ.) ಮೇದೋಜೀರಕ ರಸದ ಮುಖ್ಯ ಜೀರಕ ಕಿಣ್ವ: ಟ್ರಿಪ್ಸಿನ್.

Tryst ಟ್ರಿ(ಟ್ರೈ)ಸ್ಟ್ (ನಾ., ಕ್ರಿ. ಸಕ.) (ಭೇಟಿಯ) ಗೊತ್ತುಪಾಡು (Keep, break, t.). (ಒಬ್ಬನನ್ನು ಭೇಟಿಮಾಡಲು ಅಥವಾ ಭೇಟಿಯ ಸ್ಥಳ, ಕಾಲ, ಮೊ. ನ್ನು) ಗೊತ್ತು(ಪಾಡು) ಮಾಡು.

Tsar, etc. **Czar** ನೋಡಿ.

Tsétse ಟ್ಸೆಟ್ಸಿ (ನಾ.) ದ. ಆಫ್ರಿಕದ ಒಂದು ನೊಣ (ಅನೇಕ ವೇಳೆ ದನಕರುಗಳು ಇದರ ಕಡಿತದಿಂದ ಸಾಯುವುದುಂಟು)

Tub ಟಬ್ (ನಾ.) (ಮರದ) ತೊಟ್ಟಿ (Wash-t. ಬಟ್ಟೆ ಒಗೆಯುವ ತೊಟ್ಟಿ. Let every t. stand on its own bottom ಪ್ರತಿಯೊಬ್ಬನೂ—ಅವನವನ ಕಾಲಮೇಲೆ ನಿಲ್ಲಲಿ, ಅವನವನ ಪಾಡು ನೋಡಿಕೊಳ್ಳಲಿ); ಬೆಣ್ಣೆ, ಟೀ, ಧಾನ್ಯ, ಮೊ. ಗಳ ಹಲವು ಬಗೆಯ ಅಳತೆ; ಸ್ನಾನದ ತೊಟ್ಟಿ, ತೊಟ್ಟಿ ಸ್ನಾನ [Seldom has a t. ಸ್ನಾನ ಮಾಡುವುದೇ ಅಪರೂಪ. A cold t. would do him good ತಣ್ಣೀರು ಸ್ನಾನ ಅವನಿಗೆ ಒಳ್ಳೆಯದು]; (ಗಣಿ ಕೆಲಸ) ಅದುರು, ಕಲ್ಲಿದ್ದಲು (ಮೊ. ನ್ನು ಸಾಗಿಸುವ), —ತೊಟ್ಟಿ, ಪೆಟ್ಟಿಗೆ; (ತಿರಸ್ಕಾರ ಪ್ರ.) ನಿಧಾನದ ಒಡ್ಡೊಡ್ಡಾದ ದೋಣಿ; ಹುಟ್ಟುಹಾಕುವುದನ್ನು ಕಲಿಯಲು ಉಪಯೋಗಿಸುವ ದೋಣಿ: ಅಭ್ಯಾಸ, ಕಲ್ಕೆ, —ದೋಣಿ (**T.-pair** ಇಬ್ಬರು ನಡಸುವ ಅಭ್ಯಾಸ ದೋಣಿ. **T.-eight** ಎಂಟು ಮಂದಿ ನಡಸುವ ಅಭ್ಯಾಸ ದೋಣಿ). [**T.-thumper** (ಮೇಜು ಬಡಿದು ಬಡಿದು ಮಾತಾಡುವ) ಅಬ್ಬರದ, ಪಟಾಟೋಪದ, —ಭಾಷಣಕಾರ, ಉಪದೇಶಕ; ಮೇಜುಬಡಿಕ ಭಾಷಣಕಾರ. **T.-thumping** (ಗು., ನಾ.)]. **T.-wheel** ಬೋಗುಣಿಯಾಕಾರದ ಜಲಚಕ್ರ; (ತೊಗಲು, ಮೊ. ನ್ನು ತೊಳೆಯಲು ಉಪಯೋಗಿಸುವ ಒಂದು ಬಗೆಯ) ತಿರುಗು—ಕೊಳಗಪಾತ್ರೆ, ತೊಟ್ಟಿ. **Túbby** (ಗು.) ತೊಟ್ಟಿಯಾಕಾರದ; ಗುಡಾಣ ಹೊಟ್ಟೆಯ; ಡುಬ್ಬು ಹೊಟ್ಟೆಯ, ಬೊಜ್ಜು ಬೆಳೆದ [**Túbbish** (ಗು.)]; (ಸಂಗೀತ ವಾದ್ಯದ ವಿಷಯದಲ್ಲಿ; ಖಣಿಲು ಶಬ್ದವಿಲ್ಲದೆ) ಮದದು ಶಬ್ದದ, ತೊಟ್ಟಿಯ ಸದ್ದಿನ. **Túbful** (ನಾ.) ತೊಟ್ಟಿ ತುಂಬು.

Tub (ಕ್ರಿ.) ತೊಟ್ಟಿ ಸ್ನಾನ—ಮಾಡು, ಮಾಡಿಸು; ತೊಟ್ಟಿಯಲ್ಲಿ ನೆಡು; ಅಭ್ಯಾಸ ದೋಣಿಯಲ್ಲಿ ಹುಟ್ಟು ಹಾಕು(ವುದನ್ನು ಕಲಿಸು); (ಗಣಿ ಕೆಲಸ) (ಸುರಂಗದ ಪಕ್ಕಗಳಿಗೆ) ಮರ(ದ ಹಲಗೆ), ಕಬ್ಬಿಣ(ದ ತಗಡು)—ಹೊದ್ದಿಸು. **Túbbing** (ನಾ.)

Túba ಟ್ಯೂಬ (ನಾ.) ಒಂದು ಬಗೆಯ ಮಂದ್ರಸ್ಥಾಯಿಯ ದೊಡ್ಡ ತುತೂರಿ; ಆರ್ಗನ್ ವಾದ್ಯದ ಪಿಳ್ಳಂಗೋವಿ.

Túbby. **Tub** ನೋಡಿ.

Tube ಟ್ಯೂಬ್ (ನಾ.) ಕೊಳವೆ, ನಳಿಕೆ, ನಾಳ; (ಬಣ್ಣ, ರಬ್ಬರು ಅಂಟು, ಮೊ. ವನ್ನು ಒಳಗುಳ್ಳ, ತಿರುಪು ಮುಚ್ಚಳವುಳ್ಳ, ಮೆತುತೆಳುಲೋಹದ) ಅದುಮು ಕೊಳವೆ [T. colours (ಅದುಮು) ಕೊಳವೆ ಬಣ್ಣಗಳು]; ಗಾಳಿ ವಾದ್ಯದ ಕೊಳವೆ; (ಅಂ. ರ. ಶಾ.) ಉರುಳೆಯಾಕಾರದ ಪೊಳ್ಳು ಅಂಗ: ನಾಳ (Bronchial t. ಶ್ವಾಸನಾಳ. Intestinal t. ಅಂತ್ರ ನಾಳ, ಕರುಳ ಕೊಳವೆ); (ಮ್ಯ., ಲಂಡನಿನಲ್ಲಿಯ) ಸುರಂಗ ರೈಲ್ವೆ(ಗಳಲ್ಲೊಂದು) (=T.-railway). Crooke's t. (ಅನಿಲಗಳ ಕೆಲವು ಗುಣಗಳನ್ನು ತೋರಿಸುವ) ಒಂದು ಬಗೆಯ ನಿರ್ವಾಯುನಾಳ. Pneumatic t. (ಗಾಳಿಯ ಶೋಷಣದ ಅಥವಾ ಒತ್ತಡದ ಮೂಲಕ ಸಾಮಾನು ಕಟ್ಟುಗಳನ್ನು ಸಾಗಿಸಲು ಉಪಯೋಗಿಸುವ) ಗಾಳಿ ಸುರಂಗಮಾರ್ಗ. Test-t. (Test[1] ನೋಡಿ). **T.-flower** ಈಸ್ಟ್ ಇಂಡೀಸಿನ ಒಂದು ಅಲಂಕಾರದ ಹೂವು ಗಿಡ. **T.-shell** ಚಿಪ್ಪಿನ ನಳಿಕೆಗಳುಳ್ಳ ಹಲವು ಬಗೆಯ ಇಚ್ಚಿಪ್ಪು ಪ್ರಾಣಿ: ಕೊಳವೆ ಚಿಪ್ಪಿ. **T.-well** ಚೂಪು ತುದಿಯೂ, ನೀರು ಒಳಗೆ ಬರಲು ಆ ತುದಿಯಮೇಲೆ ರಂಧ್ರಗಳೂ ಇರುವ, ಬಾವಿಯಾಗಲು ನೆಲದಲ್ಲಿ ನಾಟುವ ಕಬ್ಬಿಣದ ಕೊಳವೆ: ಕೊಳವೆ ಬಾವಿ. **Túbal** (ಗು.) ಕೊಳವೆಯ (ಸ್ವಭಾವದ); ಕೊಳವೆಗಳುಳ್ಳ; (ದೇಹದಲ್ಲಿಯ) ನಾಳದ, ನಾಳ ಸಂಬಂಧವಾದ (T. cough ಶ್ವಾಸನಾಳದ ಕೆಮ್ಮು. T. dropsy ಅಂಡನಾಳಗಳ ಶೋಥೆ. T. nephritis ಮೂತ್ರಪಿಂಡದ ಉರಿಯೂತ). **Túbar** (ಗು.)= Tubular. **Túbular** (ಗು.) ಕೊಳವೆಯಾಕಾರದ, ನಾಳಾಕಾರದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೊಳವೆಗಳುಳ್ಳ, ನಾಳಗಳಿರುವ, ಕೊಳವೆಗಳಲ್ಲಿರುವ, ನಾಳದಲ್ಲಿರುವ (T. boiler ಹಲವು ಕೊಳವೆಗಳ ಮೂಲಕ ಶಾಖವಾಗಲಿ ಕಾಯಬೇಕಾದ ನೀರಾಗಲಿ ಹರಿಯುವ ಕುದಿಪಾತ್ರೆ : ಕೊಳವೆ ಕುದಿಪಾತ್ರೆ. T. bridge ರೈಲು, ಮೊ. ಗಳು ಸಾಗಿಹೋಗಲು ಅವಕಾಶವುಳ್ಳ, ಸೇತುವೆಯಾಗಿ ಉಪಯೋಗಿಸುವ, ಆಯದಾಕಾರದ ಕೊಳವೆ : ಕೊಳವೆ ಸೇತುವೆ) ; (ಶ್ವಾಸ ಶಬ್ದದ ವಿಷಯದಲ್ಲಿ) ಕೊಳವೆಯಲ್ಲಿ ಹಾಯುವ ಗಾಳಿಯ ಶಬ್ದದಂಥ ; ಕೊಳವೆ ಶಬ್ದದ. **Túbulose** (ಗು.) (ವಿರ. ಪ್ರ.), **Túbulous** (ಗು.) ಕೊಳವೆಯಾಕಾರದ; ಕೊಳವೆಗಳುಳ್ಳ. **Túbule** (ನಾ.) ಸಣ್ಣ ಕೊಳವೆ, ನಾಳಿಕೆ. **Tubi-** ಟ್ಯೂಬಿ— (ಸ. ಪೂ. ಪ.) ಕೊಳವೆ—, ನಾಳ—. **-corn** (ಗು., ನಾ.) ಪೊಳ್ಳು ಕೊಂಬಿನ ಪ್ರಾಣಿ, ಕೊಳವೆ ಕೊಂಬಿ. **-form** ಕೊಳವೆಯಾಕಾರದ, ನಾಳಾಕಾರದ. **-língual** ಕೊಳವೆ ನಾಲಗೆಯುಳ್ಳ. **Túbuli-** ಟ್ಯೂಬ್ಯುಲಿ— (ಸ. ಪೂ. ಪ.) ನಾಳಿಕೆ—. **-ferous** ನಾಳಿಕೆಗಳುಳ್ಳ.

Tube (ಕ್ರಿ. ಸಕ.) ಕೊಳವೆ, ನಳಿಕೆ, ನಾಳ, —ಹಾಕು, ಇಡು ; ಕೊಳವೆಯಲ್ಲಿ —ಹಾಕು, ಇಡು. **Túbing** (ನಾ.) ಕೊಳವೆ(ಗಳು); —ನ್ನು ಒದಗಿಸುವುದು, ಹಾಕುವುದು.

Túber ಟ್ಯೂಬರ್ (ನಾ.) ಗೆಡ್ಡೆ, ಕಂದ (ಉದಾ., ಆಲೂಗೆಡ್ಡೆ); ಹಲವು ಬಗೆಯ ನೆಲದಡಿಯ ಶಿಲೀಂಧ್ರ, ಅಣಬೆ ; (ಅಂ. ರ. ಶಾ.) ಊದು ಭಾಗ, ಗಂತಿ, ಗಂಟು. **Tuberíferous** (ಗು.) ಗೆಡ್ಡೆ ಬಿಡುವ. **Túberiform** (ಗು.) ಗೆಡ್ಡೆಯಾಕಾರದ. **Túberose** ಟ್ಯೂಬರೋಸ್ (ಗು., ನಾ.) ಗೆಡ್ಡೆಗಳುಳ್ಳ, ಗಂತಿ (ಗಂತಿ) ಯಾದ, ಗೆಡ್ಡೆಯಂಥ, ಗಂತಿಯ ಸ್ವಭಾವದ ; ಗೆಡ್ಡೆ ಬಿಡುವ. (ನಾ.) ಒಂದು ಬಗೆಯ ಗೆಡ್ಡೆ ಸಸ್ಯ. **Túberous** (ಗು.) (ಅಂ. ರ. ಶಾ.) ಗಂತಿಯಾದ, ಗಂತಿಯ ; (ರೋಗ ನಿದಾನ) ಗೆಡ್ಡೆಯಾದ ; (ಸ. ವಿ.) ಗೆಡ್ಡೆ ಬಿಡುವ, ಗೆಡ್ಡೆಯ. **Túberousness** (ನಾ.) ; **Tuberósity** (ನಾ.) ; **Túbercle** ಟ್ಯೂಬರ್ಕ್‌ಲ್ (ನಾ.) (ಮು., ಮೂಳೆಯ) ಸಣ್ಣ ಗುಂಡು ಚಾಚು, ಗುಬಟು ; ಸಣ್ಣ ಗಂಟು, ಗಂತಿ, ಗಳಲೆ ; ಕ್ಷಯರೋಗ, ಮೊ. ಗಳಿಗೆ ಕಾರಣವಾದ, ಅಂಗ ಸತ್ತ್ವದಲ್ಲಿಯೇ (ಶ್ವಾಸಕೋಶ, ಮೊ. ಗಳಲ್ಲಿ) ಉಂಟಾಗುವ ರವೆಗಂತಿ : ಕ್ಷಯಗಂತಿ ; (ಸ. ವಿ.) ಸಣ್ಣ—ಗಂತಿ, ಗೆಡ್ಡೆ. **Tubércled** (ಗು.) ; **Tubércular** (ಗು.); **Tubérculate(d)** (ಗು.) ರವೆಗಂತಿಗಳುಳ್ಳ, ಕ್ಷಯಗಂತಿಗಳುಳ್ಳ. **Tuberculátion** (ನಾ.) ಕ್ಷಯಗಂತಿ, ರವೆಗಂತಿ, —ರಚನೆ ; ಗಂತಿ ವ್ಯೂಹ. **Tubércul(ar)ize** (ಕ್ರಿ. ಸಕ.) ಕ್ಷಯರೋಗ—ಅಂಟಿಸು, ತಗುಲಿಸು. **Tubercul(ar)izátion** (ನಾ.) ; **Tubérculoid** (ಗು.) (ಕ್ಷಯ) ಗಂತಿಯಂಥ, (ಕ್ಷಯ) ಗಂತಿಕಲ್ಪ. **Tubérculose** (ಗು.) ; **Tubérculosed** (ಗು.) ಕ್ಷಯ ತಗುಲಿದ. **Tuberculósis** (ನಾ.) ಕ್ಷಯ(ರೋಗ), ಯಕ್ಷ್ಮ (Pulmonary t. ಶ್ವಾಸಕೋಶ ಕ್ಷಯ). **Tubérculin** (ನಾ.) ಕ್ಷಯರೋಗದ ಪರೀಕ್ಷಾ ಸಾಧನವಾಗಿ ಉಪಯೋಗಿಸುವ, ಕ್ಷಯ ಕ್ರಿಮಿಗಳಿಂದ ತಯಾರಿಸಿದ, ಒಂದು ದ್ರವ: ಕ್ಷಯಕ್ರಿಮಿ ಸಾರ. **Tubérculous** (ಗು.) (ಕ್ಷಯ) ಗಂತಿಗಳುಳ್ಳ.

Túbercle, Tuberculátion, etc., Túberose, etc. Tuber ನೋಡಿ.

Tubi-, Túbular, etc., Túbule, Túbuli-. Tube ನೋಡಿ.

Tuck[1] ಟಕ್ (ಕ್ರಿ., ನಾ.) (ಬಟ್ಟೆಯನ್ನು ಹೊಲಿಯುವುದಕ್ಕಾಗಿ) ಚಪ್ಪಟೆ ನಿರಿಗಳಾಗಿ ಮಡಿಸು ; ನಿರಿ ಹಿಡಿದು, ಮಡಿಚಿ, —ಹೊಲಿ ; ಟಕ್ಕು ಹಿಡಿ ; (ಬಟ್ಟೆ, ಮೊ. ನ್ನು) ನಿರಿಗೆ ಕಟ್ಟು ; (ಉಡುಪಿನ ಸಡಿಲ ಕೊನೆಗಳನ್ನು) ಮೇಲಕ್ಕೆ, ಒಳಕ್ಕೆ, —ಸಿಕ್ಕಿಸು, ಮಡಿಸು, ಸುತ್ತು (*Up, in* ಉಪ. ದೊಡನೆ) (T. in the loose ends. Tucked up his shirt-sleeves) ; ಮಡಿಚು, ಮಡಿಚಿಕೊ, ಮುದುರಿಕೊ (Tucked his legs under him like a tailor. Bird tucks his head under his wing). ಬೆಚ್ಚಗೆ, ಬಿಮ್ಮಗೆ, —ಹೊದ್ದಿಸು, ಹೊದ್ದುಕೊ (*Up* ಅಥವಾ *in* ಉಪ. ದೊಡನೆ) (Tucked himself up in bed) ; (ಸಾಮಾನು, ಮೊ. ನ್ನು ಮೂಲೆ, ಮೊ. ಗಳಲ್ಲಿ) ತುರುಕು, ಅಡಕು (*In, away* ಮೊ. ಉಪ. ದೊಡನೆ) ; (ಬಟ್ಟೆ, ಮೊ. ಗಳ ವಿಷಯದಲ್ಲಿ) ಮಡಿಚಲ್ಪಡು, ಸುತ್ತಲ್ಪಡು, ಟಕ್ಕು ಹಿಡಿಯಲ್ಪಡು ; (ದೊಡ್ಡ ಬಲೆಯಲ್ಲಿಯ ಮೀನನ್ನು) ಮೊಗೆ ಬಲೆಯಿಂದ—ತೆಗೆದುಹಾಕು, ತೆಗೆದು ಖಾಲಿಮಾಡು ; (ಅಸಂ.) (ಅಪರಾಧಿಯನ್ನು) ಗಲ್ಲಿಗೆ ಹಾಕು, ನೇಣುಹಾಕು (*Up* ಉಪ. ದೊಡನೆ) ; [T. in (ಅಸಂ.) ಗಡದ್ದಾಗಿ, ಪುಷ್ಕಳವಾಗಿ, —ತಿನ್ನು, ಹೊಡೆ (*At* ಉಪ. ದೊಡನೆ] . (ನಾ.) ಮಡಿಕೆ, ಟಕ್ಕು (Make a t. in sleeves ತೋಳು ಟಕ್ಕು ಹಿಡಿ) ; (ನಾವೆ) ಹಿನ್ ಹಲಗೆಗಳು ಸೇರುವ ಹಡಗಿನ ಒಡಲ ಭಾಗ : ಹಿನ್ ಸೇರುವೆ ; (ಅಸಂ.) ತಿಂಡಿ (ಮು., ಕಜ್ಜಾಯ, ಮೊ. ಸಿಹಿ ತಿಂಡಿ) (T.-shop ತಿಂಡಿಯಂಗಡಿ, ಮಿಠಾಯಿ ಅಂಗಡಿ). T.-in, -out ಪುಷ್ಕಳ ಭೋಜನ, ಗಡದ್ದು ಊಟ. T.-net, -seine ಮೊಗೆಬಲೆ. **Túcker** (ನಾ.) (ಕ್ರಿಯಾರ್ಥಗಳಲ್ಲಿ) ; (ಇಂಗ್ಲೆಂಡಿನಲ್ಲಿ ೧೭-೧೮ರನೆಯ ಶ. ಮಾ. ಗಳ ಹೆಂಗಸರ ಉಡುಪಿನಲ್ಲಿ; ಕತ್ತನ್ನೂ ಭುಜಗಳನ್ನೂ ಮುಚ್ಚುತ್ತಿದ್ದ) ಕರೆಪಟ್ಟಿ, ಸರಿಗೆ (Best bib & t. ಒಳ್ಳೆಯ, ಹಬ್ಬದ,—ಉಡುಪು, ಬಟ್ಟೆ) ; (ಹೊಲಿಗೆ ಯಂತ್ರದಲ್ಲಿ) ಟಕ್ಕು ಹೊಲಿಯುವ ಭಾಗ ; (ಅಸಂ.) ತಿಂಡಿ, ಊಟ, ಆಹಾರ.

Tuck[2] ಟಕ್ (ನಾ.) (ಪ್ರಾಚೀ. ಪ್ರ.) ತುತೂರಿಯ—ಶಬ್ದ, ಮೊಳಗು [=**Tucket** (ನಾ.) (ಪ್ರಾಚೀ. ಪ್ರ.)] ; (ಸ್ಕಾ. ಪ್ರ.) T. of drum ಮದ್ದಲೆ ಹೊಡೆತ, ಭೇರಿ ತಾಡನ.

Túdor ಟ್ಯೂಡರ್ (ಗು.) ಇಂಗ್ಲೆಂಡನ್ನು ಆಳಿದ ಏಳನೆಯ ಹೆನ್ರಿಯಿಂದ ಎಲಿಸಬೆತ್ ರಾಣಿಯ ವರೆಗಿನ ರಾಜಸಂತತಿಯ : ಟ್ಯೂಡರ್ ಸಂತತಿಯ ; ಟ್ಯೂಡರ್—ಆಳಿಕೆಯ, ಕಾಲದ. T. style (ವಾ. ಶಾ.) ಟ್ಯೂಡರ್ ಶಿಲ್ಪಪದ್ಧತಿ. T. rose (ಟ್ಯೂಡರ್ ವಾಸ್ತುಶಿಲ್ಪ ಪದ್ಧತಿಯಲ್ಲಿ ಉಪಯೋಗಿಸುತ್ತಿದ್ದ) ಪಂಚದಳಾಲಂಕಾರ. T. flower ತ್ರಿದಳಾಲಂಕಾರ.

Tuésday ಟ್ಯೂಸ್ಡೆ (ನಾ.) ಮಂಗಳವಾರ [Shrove T. (ಆ ಪದ ನೋಡಿ)]

Túfa ಟೂ(ಟ್ಯೂ)ಫ (ನಾ.) ಜ್ವಾಲಾಮುಖಿಯ (ಅಥವಾ ಇತರ ಸಂಬಂಧವಾದ) ಒಂದು ಬಗೆಯ ಒರಟುಗಲ್ಲು ಅಥವಾ ಸರಂಧ್ರ ಶಿಲೆ. **Tufáceous** (ಗು.) ಟೂಫ ಕಲ್ಲಿನಂಥ (ರಚನೆಯುಳ್ಳ)

Tuff ಟಫ್ (ನಾ.) ಹಲವು ಬಗೆಯ ಜ್ವಾಲಾಮುಖಿ ಶಿಲೆ. T.-cone ಜ್ವಾಲಾಮುಖಿಯ ಬಾಯಹತ್ತಿರವಿರುವ, ಘನೀಭವಿಸಿದ ಶಿಲಾರಸ, ಮೊ. ಗಳಿಂದಾದ ಶಂಕ್ವಾಕೃತಿ : ಜ್ವಾಲಾಮುಖಿಯ ಬಾಯಿಶಂಕು.

Tuft ಟಫ್ಟ್ (ನಾ., ಕ್ರಿ.) ಕುಚ್ಚು, ಕಟ್ಟು, ಗೊಂಚಲು, ತುರಾಯಿ ; ಜುಟ್ಟು, ಶಿಖೆ ; (ಅಂ. ರ. ಶಾ.) ಸಣ್ಣ ರಕ್ತನಾಳಗಳ ಕುಚ್ಚು ; ಕೆಳದುಟಿಯ ಮೊನೆ ಗಡ್ಡ, ಕುಚ್ಚುಗಡ್ಡ ; (ವಿ. ವಿ. ನಿ.) ಶ್ರೀಮಂತ ವಿದ್ಯಾರ್ಥಿ (ಹಿಂದೆ ಈತನ ಟೋಪಿಯಮೇಲೆ ಕುಚ್ಚು ಇರುತ್ತಿದ್ದದ್ದರಿಂದ); (T.-hunter ಬಿರುದಾಂಕಿತರ, ಶ್ರೀಮಂತರ, —ಸ್ನೇಹಾಕಾಂಕ್ಷಿ ಸ್ನೇಹಾನ್ವೇಷಕ. T.-hunting). (ಕ್ರಿ.) —ಇಡು, ಅಳವಡಿಸು; (ಮೆತ್ತೆ, ಮೊ. ಗಳಲ್ಲಿ) (ಸಮದೂರಗಳಲ್ಲಿ ಮೇಲ್ಮುಖದಿಂದ ಕೆಳಮುಖಕ್ಕೆ ದಾರ ಹೊಗಿಸಿ) ಟಾಕು ಹಾಕು. ಕುಚ್ಚಾಗಿ, ಗೊಂಚಲಾಗಿ, —ಬೆಳೆ. **Túfty** (ಗು.)

Tug ಟಗ್ (ಕ್ರಿ., ನಾ.) ಬಹಳ ಪ್ರಯತ್ನದಿಂದ, ಬಲವಾಗಿ, —ಎಳೆ, ತುಯ್ಯಿ (*At* ಉಪ. ದೊಡನೆ) ; (ಹಡಗನ್ನು) ಜಗ್ಗುದೋಣಿಯಿಂದ, ಕರ್ಷಕ ನಾಕೆಯಿಂದ, —ಎಳೆ ; (ಜಗ್ಗುದೋಣಿಯ ವಿಷಯದಲ್ಲಿ) (ಹಡಗನ್ನು) ಜಗ್ಗು, ಎಳೆದುಕೊಂಡುಹೋಗು. (ರೂಪ.) (ವಿಷಯ, ಮೊ. ನ್ನು) ಬಲಾತ್ಕಾರವಾಗಿ ಎಳೆ(ದು ತರು) (*In* ಮೊ. ಉಪ. ದೊಡನೆ). (ನಾ.) ಎಳೆತ, ತುಯ್ತ (Gave a t. at the bell) ; ಪ್ರಯಾಸ, ಕಷ್ಟ, ಶ್ರಮ, ಸಂಕಟ (Felt a great t. at parting ಅಗಲುವಾಗ ಮನಸ್ಸಿಗೆ ಬಹಳ ಜಗ್ಗಾಟವಾಯಿತು. Had a great t. to persuade him ಅವನನ್ನು ಒಪ್ಪಿಸಲು ಬಹಳ ಶ್ರಮವಾಯಿತು) ; (ಈಟನ್ ಶಾಲಾ ಅಸಂ.) ದತ್ತಿ ವೇತನಿ. ಇತರ ಹಡಗುಗಳನ್ನು ಎಳೆಯಲು ಉಪಯೋಗಿಸುವ, ಬಲಶಾಲಿಯಾದ, ಸಣ್ಣ ಆವಿ ದೋಣಿ :

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಗ್ಗು ಹಡಗು, ಕರ್ಷಕ ನೌಕೆ (=**Túgboat**); (ಜೋಡು ಕುದುರೆ ಗಾಡಿಯಲ್ಲಿ) ಎಳೆ—ಪಟ್ಟಿ, ಸರಪಣಿ; (ಒಂಟಿ ಕುದುರೆಗಾಡಿಯ ಹಲ್ಲಣದಲ್ಲಿ) ಪಕ್ಕ ಮರ, ಪಕ್ಕ ಮೂಕಿ,—ತೂರುವ ಕುಣಿಕೆ [T.-spring (ಗಾಡಿ ಹೊರಡುವಾಗ, ಮೊ. ಸಂದರ್ಭದಲ್ಲಿ ಧಕ್ಕೆಯಾಗದಂತೆ, ಎಳೆಪಟ್ಟಿಗೆ ಅಥವಾ ಮೂಕಿ ಕುಣಿಕೆಗೆ ಜೋಡಿಸಿರುವ) ಧಕ್ಕೆ—ಕಾಪು, ಎಗುರುಪಟ್ಟಿ]; (ಗಣಿ ಕಲಸ) ಕಪ್ಪಿಯ ವ್ಯೂಹವನ್ನು ಬಿಗಿದಿರುವ ಕಬ್ಬಿಣದ ಬಳೆ. T. of war ಒಂದು ಹಗ್ಗವನ್ನು ಒಂದು ಪಂಗಡದವರು ಒಂದು ಕಡೆಯೂ ಮತ್ತೊಂದು ಪಂಗಡದವರು ಇನ್ನೊಂದು ಕಡೆಯೂ ಹಿಡಿದು ಎಳೆಯುತ್ತ, ಎದುರು ಪಂಗಡದವರನ್ನು ನಡುಗೆರೆ ದಾಟಿಸಿ ತಮ್ಮ ಕಡೆಗೆ ಬರುವಂತೆ ಎಳೆಯುವ ಒಂದು ಸ್ಪರ್ಧೆ: (ಹೊರಜಿ) ಎಳೆಯುವ ಸ್ಪರ್ಧೆ; (ರೂಪ.) ಬಲವಾದ, ಜೋರಾದ, —ಹೋರಾಟ.

Túism ಟ್ಯೂಇಸ್ಮ್ (ನಾ.) ತನ್ನನ್ನು ತಾನೇ ಮಧ್ಯಮ ಪುರುಷದಲ್ಲಿ ಸಂಬೋಧಿಸಿಕೊಳ್ಳುವ ವಾಕ್ಯಪದ್ಧತಿ: ತ್ವಂಪ್ರತ್ಯಯ ಪದ್ಧತಿ.

Tuítion ಟ್ಯೂಇಷನ್ (ನಾ.) (ಹಣಕ್ಕಾಗಿ, ಮನೆಗಳಲ್ಲಿ) ಪಾಠ (ಹೇಳುವುದು); ಪಾಠಶುಲ್ಕ. **Tuítional** (ಗು.); **Tuítionary** (ಗು.)

Túlchan, -in ಟುಲ್ಚನ್ (ನಾ.) (ಸ್ಕಾ. ಪ್ರ.) ಕರು ಸತ್ತುಹೋದ ಹಸು ಹಾಲು ಕೊಡುವಂತೆ ಮಾಡಲು ಅದರ ಪಕ್ಕದಲ್ಲಿ ನಿಲ್ಲಿಸುವ, ಹುಲ್ಲು ತುರುಕಿ ಕರುಚರ್ಮ ಹೊದಿಸಿ ಮಾಡಿದ ಕರುವಿನಾಕೃತಿ: ಗೊಂಬೆ ಕರು.

Túlip ಟ್ಯೂಲಿಪ್ (ನಾ.) ಗಂಟೆಯಾಕಾರದ ನಾನಾ ಬಣ್ಣಗಳ ಹೂವು ಬಿಡುವ ಹಲವು ಬಗೆಯ ಸಸ್ಯ: ಟ್ಯೂಲಿಪ್ ಗಿಡ; (ಫಿರಂಗಿಯ) ಗಂಟೆಯಾಕಾರದ ಮೂತಿ. T.-root ತಾಳಿನ ಬುಡವನ್ನು ಊದಿಕೊಳ್ಳುವಂತೆ ಮಾಡುವ, ಓಟ್ಸ್ ಗಿಡಕ್ಕೆ ತಗುಲುವ ಒಂದು ರೋಗ: ಟ್ಯೂಲಿಪ್ ಬೇರು ರೋಗ. **Tulipománia** (ನಾ.) (ಮು., ಹಾಲೆಂಡಿನಲ್ಲಿ ೧೭ನೆಯ ಶತಮಾನದಲ್ಲಿ ತಲೆದೋರಿದ) ಟ್ಯೂಲಿಪ್ (ಮೇಲಿನ) ಹುಚ್ಚು. **Tulipomániac** (ನಾ.)

Tulle ಟುಲ್, ಟ್ಯೂಲ್ (ನಾ.) (ಮುಖಪರದೆ, ಉಡುಪು, ಮೊ. ಗಳಿಗೆ ಉಪಯೋಗಿಸುವ) ನವಿರು ರೇಷ್ಮೆಯ ಜಾಲರಿಬಟ್ಟೆ, ರೇಷ್ಮೆ ಬಲೆ.

Túlwar ಟಲ್ವಾರ್ (ನಾ.) ಉ. ಇಂಡಿಯದ ಕೆಲವು ಬುಡಕಟ್ಟಿನವರು ಉಪಯೋಗಿಸುವ ಒಂದು ಬಗೆಯ ಕುಡುಗತ್ತಿ: ತಲವಾರ (ಕತ್ತಿ)

Tum ಟಂ, **Túmtum** ಟಂಟಂ (ನಾ.) (ವಾದ್ಯದ) ಟಂ (ಟಂ) ನಾದ.

Túmble ಟಂಬ್ಲ್ (ಕ್ರಿ., ನಾ.) (ತಟ್ಟನೆ, ರಭಸದಿಂದ) ಬೀಳು, ಉರುಳು, ಮುಗ್ಗರಿಸು, ಎಡವು (*Down, over, off, from* ಮೊ. ಉಪ. ಮೊದನೆ); (ಅಲೆ, ರೋಗಿ, ಮೊ. ಗಳ ವಿಷಯದಲ್ಲಿ) ಹೊರಳಾಡು, ಹೊಯ್ದಾಡು, ಉರುಳಾಡು; ಏಳುತ್ತ ಬೀಳುತ್ತ, ಮುಗ್ಗರಿಸುತ್ತ, —ನಡೆ, ಹೋಗು, ಓಡು (Came tumbling along. Tumbled up the stairs. Tumbled into *or* out of bed ಹಾಸಿಗೆಯ ಮೇಲೆ ಉರುಳಿಕೊಂಡನು, ಹಾಸಿಗೆಯಿಂದ ಹೊರಬಿದ್ದನು); ಲಾಗಹಾಕು, ದೊಂಬರಾಟ ಆಡು; (ಬಟ್ಟೆ, ಕೂದಲು, ಮೊ. ನ್ನು) ಹುಚ್ಚುಹುಚ್ಚಾಗಿ ಎಳೆದಾಡು, ಕೆದರಿಹಾಕು, ಅಸ್ತವ್ಯಸ್ತಮಾಡು; ಉರುಳಿಸು, ಬೀಳಿಸು, ಕೆಡವು, ಎಸೆ(ದಾಡು), (ಸಿಕ್ಕಾಬಟ್ಟೆ) ತಳ್ಳು, ನೂಕು (*Down, out, in* ಮೊ. ಉಪ. ಮೊದನೆ); (ಹಕ್ಕಿ, ಮೊಲ, ಮೊ. ನ್ನು) ಹೊಡೆದು, ಗುಂಡು ಹಾರಿ. —ಕೆಡವು; (ಎರಕದ ವಸ್ತು, ಮೊ. ಕ್ಕೆ) ಉರುಳುಪೆಟ್ಟಿಗೆಯಲ್ಲಿ ಸುತ್ತಿಸಿ ಹೊಳಪುಕೊಡು, (—ಮೊ. ನ್ನು) ಉರುಳುಪೆಟ್ಟಿಗೆಯಲ್ಲಿ ಉರುಳಾಡಿಸು; [T.-in (ಮರದ ತುಂಡನ್ನು) ಇನ್ನೊಂದರೊಳಕ್ಕೆ ಜೋಡಿಸು, ಕಚ್ಚಿಸು; (ನಾವೆ) (ಹಡಗಿನ ಪಕ್ಕಗಳ ವಿಷಯದಲ್ಲಿ) ಒಳಬಾಗಿಗು, ಒಳವೋರೆಯಾಗಿರು (=T. home); (ಅನಂ.) ಹಾಸಿಗೆಯ ಮೇಲೆ ಉರುಳಿಕೊ. T. to (ಅನಂ.) (ಭಾವ, ಮೊ. ನ್ನು) ಹಿಡಿ, ಗ್ರಹಿಸು]. (ನಾ.) ಬೀಳು, ಉರುಳು (Had a slight, nasty, t.); ದೊಂಬರ ಲಾಗ, ಪಲ್ಟಿ, ಲಾಗ; ಅವ್ಯವಸ್ಥೆ, ಅಸ್ತವ್ಯಸ್ತತೆ (Things were all in a t.). **T.-bug** ಹಲವು ಬಗೆಯ ಸೆಗಣಿ ಜೀರುಂಡೆ. **Túmbledown** (ಗು.) ಉರುಳಿಕೊಳ್ಳುವ, ಮುರಿದುಬಿದ್ದ, ಶಿಥಿಲ, ಜರ್ಜರಿತ. **Túmbler** (ನಾ.) (ಕ್ರಿಯಾರ್ಥಗಳಲ್ಲಿ); ಲಾಗ, ಮೊ. ನ್ನು ಹಾಕುವವನು: ದೊಂಬ(ರಾಟದವನು); ಹಾರುವಾಗ ಪಲ್ಟಿ ಹೊಡೆಯುವ ಪಾರಿವಾಳ: ದೊಂಬ ಪಾರಿವಾಳ; ಮುಟ್ಟಿದರೆ ತೂಗಾಡುವ ಗೊಂಬೆ: ತೂಗುಗೊಂಬೆ; (ಈಗ ಚಪ್ಪಟೆತಳದ) ಗಾಜಿನ ಲೋಟ (ಹಿಂದೆ ನೆಟ್ಟಗೆ ನಿಲ್ಲಲಾಗದಂತೆ ಗುಂಡು ತಳವಿತ್ತು); ಲೋಟ, ಬಟ್ಟಲು [**Túmblerful** (ನಾ.)]; ಬೀಗದ ಅಥವಾ ಬಂದೂಕು ಚಾಪಿನ ಒಂದು ಭಾಗ. **Túmbling** (ನಾ.) (ಕ್ರಿಯಾರ್ಥಗಳಲ್ಲಿ). T.-barrel, -box, -wheel ಎರಕದ ಸಾಮಾನುಗಳನ್ನು ಉಜ್ಜಾಟದಿಂದ ಶುಭ್ರಮಾಡುವುದಕ್ಕಾಗಿ ಅವನ್ನು ಹಾಕಿ ಉರುಳಾಡಿಸುವ, ಕುರುಂದದ ಕಲ್ಲಿನ ಪುಡಿ, ಮೊ. ನ್ನು ಹಾಕಿದ, ಒಂದು ಬಗೆಯ ಪೆಟ್ಟಿಗೆ, ಪೀಪಾಯಿ: ಉರುಳು—ಪೆಟ್ಟಿಗೆ, ಪೀಪಾಯಿ. T.-bob (ಒಂದು ನಿರ್ದಿಷ್ಟ ಸ್ಥಾನಕ್ಕೆ ಎತ್ತರಿಸಿದಾಗ ಕಾರ್ಯಮಾಡುವ) ತೂಕ ಕಟ್ಟಿದ ಸನ್ನೆ. **Túmbly** (ಗು.) (ವಿರ. ಪ್ರ.) =Tumbledown.

Túmbrel ಟಂಬ್ರೆಲ್, **-il** —ಬ್ರಿಲ್ (ನಾ.) (ಸೈನಿಕ) ಸಲಕರಣೆಗಳು, ಮದ್ದುಗುಂಡು, ಮೊ. ನ್ನು ಸಾಗಿಸಲು ಉಪಯೋಗಿಸುವ, ಎರಡು ಚಕ್ರದ, ಮುಚ್ಚಿದ ಬಂಡಿ: ಮದ್ದುಗುಂಡಿನ, ಆಯುಧ, —ಬಂಡಿ; ಗೊಬ್ಬರದ ಬೋಳುಬಂಡಿ; (ಚರಿತ್ರೆ) ಒಂದು ದಂಡನೆಯ ಸಲಕರಣೆ.

Túmefy ಟ್ಯೂಮಿಫೈ (ಕ್ರಿ.) ಊದಿಕೊ, ಉಬ್ಬಿಕೊ, ಊದಿಸು, ಉಬ್ಬಿಸು (ರೂಪ. ಸಹ). **Tumefácient** —ಫೇಷೆಂಟ್ (ಗು.) ಊದಿಕೊಳ್ಳುವ, ಊದಿಸುವ. **Tumefáction** (ನಾ.) ಊದು(ವುದು), ಊತ. **Tuméscence** ಟ್ಯೂಮೆಸೆನ್ಸ್ (ನಾ.) ಊದಿಕೊಳ್ಳುವುದು, ಊತ; ಊತಕ್ಕೆ ತಿರುಗುವುದು. **Tuméscent** (ಗು.) ಊದಿಕೊಳ್ಳುವ. **Túmid** ಟ್ಯೂಮಿಡ್ (ಗು.) ಊದಿದ, ಉಬ್ಬಿದ, ಬಾತುಕೊಂಡ. (ಶೈಲಿ, ಮೊ. ಗಳ ವಿಷಯದಲ್ಲಿ ರೂಪ.) ಡೊಳ್ಳಾದ, ವಾಗಾಡಂಬರದ. **Tumídity** (ನಾ.); **Túmidly** (ಕ್ರಿ. ವಿ.); **Túmidness** (ನಾ.); **Túmour** ಟ್ಯೂಮರ್ (ನಾ.) ಊತ, ಬಾವು; ಗೆಡ್ಡೆ; ದುರ್ಮಾಂಸ. Malignant t. (ತೆಗೆದುಹಾಕಿದರೂ ಮತ್ತೆ ಬೆಳೆದುಕೊಂಡು ಮರಣಕ್ಕೆ ಕಾರಣವಾಗುವ) ಮಾರಕ ದುರ್ಮಾಂಸ (ಎದುರು ಪದ: Benign t.)

Túmid, etc. **Tumefy** ನೋಡಿ.

Túmmy ಟಮಿ (ನಾ.) (ಮಕ್ಕಳ ಮಾತು) ಹೊಟ್ಟೆ.

Túmour. **Tumefy** ನೋಡಿ.

Túmtum[1] ಟಂಟಂ (ನಾ.) (ಆಂ. ಇಂ.) ಒಂದು ಹಗುರ ಗಾಡಿ; ಡಾಗ್‌ಕಾರ್ಟ್ (Dog-cart) ಗಾಡಿ.

Túmtum[2]. **Tum** ನೋಡಿ.

Túmult ಟ್ಯೂಮಲ್ಟ್ (ನಾ.) ಗುಂಪಿನ ಗಲಬಿಲಿ, ಗಲಭೆ, ಗೊಂದಲ, ಕೋಲಾಹಲ, ತುಮುಲ; ದೊಂಬಿ, ದಂಗೆ; ಕ್ಷೋಭೆ (The t. within him had subsided ಅವನ ಮನಃಕ್ಷೋಭೆ ಶಾಂತವಾಗಿತ್ತು). **Tumúltuary** ಟ್ಯೂಮಲ್ಟ್ಯುಅರಿ (ಗು.) ಶಿಸ್ತಿಲ್ಲದ, ಅವ್ಯವಸ್ಥೆಯ; ಗೊಂದಲದ, ಕೋಲಾಹಲದ. **Tumúltuous** (ಗು.) ಕ್ಷೋಭೆಯ, ಗೊಂದಲದ, ಗಲಭೆಯ; ದೊಂಬಿಯ, ದಂಗೆಯ. **Tumúltuously** (ಕ್ರಿ. ವಿ.); **Tumúltuousness** (ನಾ.)

Túmulus ಟ್ಯೂಮ್ಯುಲಸ್ (ನಾ.; ಬ. ವ. -li —ಲೈ) ಸಮಾಧಿ ದಿಣ್ಣೆ, ಗೋರಿ ದಿಬ್ಬ. **Túmular(y)** (ಗು.)

Tun ಟನ್ (ನಾ., ಕ್ರಿ. ಸಕ.) (ಮದ್ಯ, ಮೊ. ಗಳ) ದೊಡ್ಡ ಪೀಪಾಯಿ (ಹಿಂದೆ, ಒಂದು ಅಳತೆಯಾಗಿ ಉಪಯೋಗಿಸುತ್ತಿದ್ದದ್ದು: ೨೫೨ ಮದ್ಯ ಗ್ಯಾಲನ್ನುಗಳು); ಸಾರಾಯಿ ಹುಳಿಸುವ ತೊಟ್ಟಿ. (ಕ್ರಿ.) ಪೀಪಾಯಿಯಲ್ಲಿ ತುಂಬು. **Túndish** (ನಾ.) (ಮು., ಸಾರಾಯಿಬಟ್ಟಿ ಇಳಿಸುವುದರಲ್ಲಿ ಉಪಯೋಗಿಸುವ) ಒಂದು ಬಗೆಯ ಪನ್ನಾಲೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tund ಟಂಡ್ (ಕ್ರಿ. ಸಕ.) (ಶಾಲಾ ಅಸಂ.) ಚೆಡಿಯಿಂದ, ಬೆತ್ತದಿಂದ, —ಚೆಚ್ಚು, ತದಕು.

Túndra ಟು(ಟ)ಂಡ್ರ (ನಾ.) (ಉ. ರಷ್ಯದಲ್ಲಿಯ) ಪಾಚಿ ಬೆಳೆದ ಜೌಗು ಪ್ರದೇಶ: ಪಾಚಿ ಬಯಲು; ತಂಡ್ರ.

Tune ಟ್ಯೂನ್ (ನಾ., ಕ್ರಿ.) ರಾಗ, ಧಾಟಿ, ಮಟ್ಟು (Psalm, Hymn, -t. ಸ್ತೋತ್ರಗೀತದ ಮಟ್ಟು); (ಹಾಡಿಕೆಯಲ್ಲಿ ಅಥವಾ ಬಾಜಣೆಯಲ್ಲಿ) ಶ್ರುತಿ (Piano is out of t. ಪಿಯಾನೊ ಶ್ರುತಿ ತಪ್ಪಿದೆ. Sings out of t. ಶ್ರುತಿಬಿಟ್ಟು ಹಾಡುತ್ತಾನೆ); ಹೊಂದಿಕೆ, ಸಾಂಗತ್ಯ, ಸಾಮರಸ್ಯ (In, out of, t. with one's surroundings *or* company ತನ್ನ ಪರಿಸ್ಥಿತಿಗೆ, ಗೋಷ್ಠಿಗೆ, ಹೊಂದಿಕೊಂಡು, ಹೊಂದಿಕೊಳ್ಳದೆ); (ಒಂದು ಉದ್ದೇಶ, ಮೊ. ಕ್ಕೆ) ತಕ್ಕ ಮನೋಭಾವ, ಚಿತ್ತವೃತ್ತಿ; [Change one's t., Sing another t. ಮಾತಿನ, ವರ್ತನೆಯ, —ರೀತಿ ಬದಲಾಯಿಸು; ಧಾಟಿ ಬದಲಾಯಿಸು (ಉದಾ., ಧಾರ್ಷ್ಟ್ಯ ಬಿಟ್ಟು ಮರ್ಯಾದೆಗೆ). To the t. of Rs. 100 ನೂರು ರೂಪಾಯಿವರೆಗೆ (ಬಹಳ ಹೆಚ್ಚು ಎಂಬ ಅರ್ಥದಲ್ಲಿ)]. (ಕ್ರಿ.) (ವಾದ್ಯವನ್ನು) ಶ್ರುತಿಮಾಡು [**Túner** (ನಾ.) ಶ್ರುತಿಕಾರ(ಕ)]; (ರೂಪ.) (ನಿಯತ ದರ್ಜೆಗೆ, ಉದ್ದೇಶಕ್ಕೆ, ಸಂದರ್ಭಕ್ಕೆ) ಹೊಂದಿಸು, ಅನುಗೊಳಿಸು (*To* ಉಪ. ಜೊಡನೆ); ಶ್ರುತಿಗೂಡು, ಮೇಳವಾಗು, ಸಮರಸದಿಂದಿರು, ಹೊಂದಿಕೊ (ರೂಪ. ಸಹ) (*With* ಉಪ. ಜೊಡನೆ); (ಕಾವ್ಯ ಪ್ರ.) (ಸಂಗೀತ) ನುಡಿ, ಹಾಡು (Lark tunes his song); (ಗೀತದಲ್ಲಿ) ಹಾಡು, ಕೊಂಡಾಡು. T. in (ನಿಸ್ತಂತು ಗ್ರಾಹಕವನ್ನು) ಸರಿಯಾದ ಅಲೆಗೆ, ತರಂಗಮಾನಕ್ಕೆ, —ಅಳವಡಿಸು; ಶ್ರುತಿಮಾಡು. T. up (ವಾದ್ಯಮೇಳದವರ ವಿಷಯದಲ್ಲಿ) (ಎಲ್ಲ ವಾದ್ಯಗಳನ್ನೂ) ಒಂದೇ ಶ್ರುತಿಗೆ ತರು; ಶ್ರುತಿಮಾಡಿಕೊ; ಹಾಡಲು, ಬಾಜಿಸಲು, —ಆರಂಭಿಸು; (ಮಗುವಿನ ವಿಷಯದಲ್ಲಿ, ಹಾಸ್ಯ ಪ್ರ.) ರಾಗ ತೆಗೆ, ಶ್ರುತಿ ಎತ್ತು, ಅಳತೊಡಗು. **Túnable** (ಗು.) ಶ್ರುತಿಮಾಡಲಾಗುವ; ಶ್ರುತಿಗೂಡಿದ; ಸುಸ್ವರದ; ಇಂಪಾದ; ಮಧುರವಾದ. **Túnableness** (ನಾ.); **Túnably** (ಕ್ರಿ. ವಿ.); **Túneful** (ಗು.) ಸುಸ್ವರದ, ಇಂಪಾದ, ಮಧುರವಾದ. **Túnefully** (ಕ್ರಿ. ವಿ.); **Túnefulness** (ನಾ.); **Túneless** (ಗು.) ಶ್ರುತಿ ಸರಿಯಿಲ್ಲದ; ಅಪಶ್ರುತಿಯ; ಅಪಸ್ವರದ; (ವಾದ್ಯದ ವಿಷಯದಲ್ಲಿ) ನುಡಿಯದ, ಮೂಕ (T. harps). **Túning** (ನಾ.) (ಕ್ರಿಯಾರ್ಥಗಳಲ್ಲಿ). T.-crook (ಕಹಳೆ, ಮೊ. ಗಳಲ್ಲಿ ಸ್ಥಾಯಿ ಬದಲಾಯಿಸುವುದಕ್ಕಾಗಿರುವ) ಶ್ರುತಿಕೊಕ್ಕೆ. T.-fork (Fork ನೋಡಿ). T.-hammer ಪಿಯಾನೋ ವಾದ್ಯದಲ್ಲಿ ತಂತಿಗಳ ಬಿಗುಪನ್ನು ಸರಿಪಡಿಸುವುದಕ್ಕಾಗಿ ಇರುವ, ಬಿರಡೆಗಳಿಗೆ ಸೇರಿಸಿರುವ, ಸುತ್ತಿಗೆಯಾಕಾರದ ತಿರುಪು: ಶ್ರುತಿ ತಿರುಪು. T.-pegs, -pins (ಶ್ರುತಿ ತಿರುಪಿಗೆ ಸೇರಿರುವ) ಶ್ರುತಿ ಬಿರಡೆಗಳು. **Túny** (ಗು.) (ಸಂಗೀತದ ವಿಷಯದಲ್ಲಿ) ಮನಸ್ಸಿಗೆ ಹಿಡಿಯುವ, ಆಕರ್ಷಕ, —ರಾಗಪುಳ್ಳ, ಧಾಟಿಯ. **Túniness** (ನಾ.)

Túngsten ಟಂಗ್‌ಸ್ಟನ್ (ನಾ.) ಉಕ್ಕು ನರೆಬಣ್ಣದ ಒಂದು ಲೋಹಮೂಲಧಾತು: ಟಂಗ್‌ಸ್ಟನ್. **Túngstate** ಟಂಗ್‌ಸ್ಟೇಟ್ (ನಾ.) ಟಂಗ್‌ಸ್ಟಿಕ್ ಆಮ್ಲದ ಲವಣ. **Túngstic** (ಗು.) (ಆರು ಯೋಗಶಕ್ತಿಗಳಿರುವಂತೆ), **Túngstous** (ಗು.) (ನಾಲ್ಕು ಯೋಗಶಕ್ತಿಗಳಿರುವಂತೆ) ಟಂಗ್‌ಸ್ಟನ್ನಿರುವ, ಟಂಗ್‌ಸ್ಟನ್ನಿನ.

Túnic ಟ್ಯೂನಿಕ್ (ನಾ.) ಪ್ರಾಚೀನ ಗ್ರೀಕರ ಅಥವಾ ರೋಮನರ, ಮಂಡಿಯವರೆಗೆ ಬರುತ್ತಿದ್ದ, ತೋಳು ತೋಳಿನ ಜುಬ್ಬ; ಕಪಣಿ; (ನಡುವಿನ ಬಳಿ ನಿರಿಕಟ್ಟಿದ ಅಥವಾ ನಡುಪಟ್ಟಿ ಹಾಕಿದ ಹೆಂಗಸಿನ) ರವಿಕೆ, ಗಿಡ್ಡ ಅಂಗಿ; (ಸಿಪಾಯಿಯ ಅಥವಾ ಪೋಲೀಸಿನವನ) ಗಿಡ್ಡ ಗುತ್ತನೆಯ ಅಂಗಿ, ಕುಡುತ; (ಪ್ರಾ. ವಿ.) (ಕೆಲವು ಮೃದ್ವಂಗಿಗಳ) ಚರ್ಮಕವಚ; (ಅಂ. ರ. ಶಾ.) (ಒಂದು ಅಂಗದ) ಆವರಣಕೋಶ, ಹೊದಿಕೆ ಪೊರೆ; (ಸ. ವಿ.) (ಗೆಡ್ಡೆಯ) ಪದರ(ಗಳಲ್ಲೊಂದು), ಸಿಪ್ಪೆ (T. of a seed); (ಕ್ರೈಸ್ತ ಮತ) = Tunicle. **Túnicate** (ಗು., ನಾ.) (ಪ್ರಾ. ವಿ., ಸ. ವಿ., ಅಂ. ರ. ಶಾ.) ಚರ್ಮಕವಚ ಆವರಣಕೋಶ,—ಉಳ್ಳ. (ನಾ.) (ಪ್ರಾ. ವಿ.) ಚರ್ಮಕವಚಿ(ಯಾದ ಮೃದ್ವಂಗಿ). **Túnicle** (ನಾ.) ನವಿರು—ಹೊದಿಕೆ, ಪೊರೆ, ಪದರ ಕವಚ, ಸಿಪ್ಪೆ (ಮು., ಪ್ರಾ. ವಿ ಮತ್ತು ಸ. ವಿ.); (ಮು., ರೋ. ಕ್ಯಾ.) (ಪ್ರಭು ಭೋಜನ ಸಂಸ್ಕಾರ, ಮೊ. ಸಂದರ್ಭಗಳಲ್ಲಿ ಡೀಕನ್ ಧರಿಸುವ) ಗಿಡ್ಡ ಕವಚ; (ಬಿ. ವ. ದಲ್ಲಿ) (ಬಿಷಪ್ಪು ಧರಿಸುವ) ಗುಜ್ಜು ಕವಚ ಮತ್ತು ದಗಲೆ.

Túnicate, Túnicle. Tunic ನೋಡಿ.

Túning. Tune ನೋಡಿ.

Túnnel ಟನೆಲ್ (ನಾ., ಕ್ರಿ.) (ಬೆಟ್ಟದ ಮೂಲಕ ಅಥವಾ ನದಿ, ಮೊ. ಗಳ ಕೆಳಗಡೆ ಮಾಡಿದ) ಸುರಂಗ(ಮಾರ್ಗ); (ನರಿ, ಹೆಗ್ಗಣ, ಮೊ. ವು ತೋಡಿ ಮಾಡಿದ) ಬಿಲ; (ಗಣಿ ಕೆಲಸ) ಒಂದು ಕೊನೆ ತೆರಪಾದ, ಸಮತಲದ ಸುರಂಗ ದಾರಿ; ಹೊಗೆಕೊಳವೆ(ಯ ತೆರಪು ಭಾಗ) [T.-borer ಸುರಂಗ ಕೊರಕ (ಯಂತ್ರ). T.-net ಬಾಯಿ ಅಗಲವಾದ ತಳ ಕಿರಿದಾದ ಮೀನುಬಲೆ: ಸುರಂಗ ಬಲೆ]. (ಕ್ರಿ.) ಸುರಂಗ—ಮಾಡು, ಹಾಕು; ಸುರಂಗ ಕೊರೆದುಕೊಂಡು ಹೋಗು (*Through, into* ಮೊ. ಉಪ. ಜೊಡನೆ)

Túnny ಟನಿ (ನಾ.) ಆಹಾರವಾಗಿ ಉಪಯೋಗಿಸುವ ಒಂದು ದೊಡ್ಡ ಸಾಗರ ಮೀನು.

Túny. Tune ನೋಡಿ.

Tup ಟಪ್ (ನಾ., ಕ್ರಿ. ಸಕ.) ಗಂಡು ಕುರಿ, ಟಗರು; (ಆಪಿಸುತ್ತಿಗೆ, ಮೊ. ಗಳ) ಬಡಿಯುವ ಮುಖ. (ಕ್ರಿ.) (ಟಗರು: ಹೆಣ್ಣು ಕುರಿಯ ಮೇಲೆ) ಹಾರು.

Tu quóque (L) ಟೂ(ಟ್ಯೂ) ಕ್ವೋಕ್ವಿ(ಕ್ವೆ) (ನಾ.) (ವಾದವನ್ನು ಹಿಂದಿರುಗಿಸುವಾಗ ಹೇಳುವ ಮಾತು): ನೀನೂ ಹಾಗೆಯೆ (ಮಾಡಿದೆ, ಇದ್ದೀಯೆ)

Turánian ಟ್ಯೂ(ಟ್ಯು)ರೇನಿಯನ್ (ಗು.) (ಸೆಮಿಟಿಕ್ ಅಥವಾ ಇಂಡೋ ಯೂರೋಪಿಯನ್ ಭಾಷಾ ವರ್ಗಕ್ಕೆ ಸೇರಿಲ್ಲದೆ, ಫಿನಿಷ್ ಮತ್ತು ಮಂಗೋಲಯನ್ ವರ್ಗಕ್ಕೆ ಸೇರಿದ) ತುರಾನೀ (ಭಾಷೆಗಳ)

Túrban ಟರ್ಬನ್ (ನಾ.) ರುಮಾಲು, ಪೇಟ, ಮುಂಡಾಸು, ಪಗಡಿ, ಪಾಗು; (ಇಂಗ್ಲೆಂಡಿನಲ್ಲಿ ೧೯ನೆಯ ಶ. ಮಾ. ದ ಆದಿಯಲ್ಲಿ ಹೆಂಗಸರು ತಲೆಗೆ ಸುತ್ತುತ್ತಿದ್ದ) ರುಮಾಲಿನಂಥ ತಲೆಯುಡುಪು; ಆಧುನಿಕ ಹೆಂಗಸಿನ ಅಥವಾ ಮಗುವಿನ, ಅಂಚು (ಹೆಚ್ಚಾಗಿ) ಇಲ್ಲದ ಟೋಪಿಗೆ: ರುಮಾಲು ಟೋಪಿಗೆ. ಏಕ ಕವಾಟದ ಚಿಪ್ಪಿನ ಸುತ್ತು. T.-shell ರುಮಾಲಿನ ಆಕಾರದ ಹಲವು ಬಗೆಯ ಉದರಪಾದಿ ಅಥವಾ ಚಿಪ್ಪಿನ ಪ್ರಾಣಿ. T.-stone ಅಗ್ರದಲ್ಲಿ ರುಮಾಲಿನ ಆಕೃತಿಯನ್ನು ಕೆತ್ತಿದ, ಮಹಮ್ಮದೀಯ ಗೋರಿ ಕಲ್ಲು: ರುಮಾಲು ಗೋರಿಕಲ್ಲು. T.-top ಒಂದು ಬಗೆಯ ಅಣಬೆ. **Túrbaned** (ಗು.)

Túrbary ಟರ್ಬರಿ (ನಾ.) (ಇನ್ನೊಬ್ಬರ ನೆಲದಲ್ಲಿ ಉರುವಲಿಗಾಗಿ) ಹುಲ್ಲು ಹೆಪ್ಪನ್ನು ಅಥವಾ ಸೊಪ್ಪು ಸೌದೆಯನ್ನು ಅಗೆದುಕೊಳ್ಳುವ ಹಕ್ಕು; ಹೀಗೆ ಅಗೆದ ಸ್ಥಳ.

Túrbid ಟರ್ಬಿಡ್ (ಗು.) (ದ್ರವದ ಅಥವಾ ಬಣ್ಣದ ವಿಷಯದಲ್ಲಿ) ರಾಡಿಯಾದ, ಬಗ್ಗಡವಾದ, ಕದಡಿಹೋದ; (ರೂಪ.) ಕಲಕಿಹೋದ, ಗಲಿಬಿಲಿಯಾದ; ಕ್ಷುಬ್ಧ, ಅವ್ಯವಸ್ಥೆಯ. **Turbídity** (ನಾ.); **Túrbidly** (ಕ್ರಿ. ವಿ.); **Túrbidness** (ನಾ.)

Túrbinate ಟರ್ಬಿನೆಟ್ (ಗು.) ತಲೆಕೆಳಕು ಶಂಕುವಿನಾಕಾರದ; ಬುಗುರಿಯಾಕಾರದ; ಬುಗುರಿಯಂತೆ ಸುತ್ತು ತಿರುಗುವ; (ಅಂ. ರ. ಶಾ.) (ಕೆಲವು ನಾಸಿಕಾಸ್ಥಿಗಳ ವಿಷಯದಲ್ಲಿ) ಸುರುಳಿಯಂಥ (ರಚನೆಯ). **Túrbinal** (ಗು.) = Turbinate. **Turbinátion** (ನಾ.); **Túrbiniform** (ಗು.); **Túrbinoid** (ಗು.) ಬುಗುರಿಯಂಥ, ಬುಗುರಿಚಿಪ್ಪಿನಂಥ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Túrbine ಟರ್‌ಬೈ(ಬಿ)ನ್ (ನಾ.) (ಹರಿನೀರಿನಿಂದ ತಿರುಗುತ್ತ ಕೆಲಸಮಾಡುವ ಹಲವು ಬಗೆಯ) ರೆಕ್ಕೆಗಳುಳ್ಳ ಜಲಚಕ್ರ, ನೀರ್ಗಾಲಿ. Air t. (ಗಾಳಿಯಿಂದ ತಿರುಗಿ ಕೆಲಸಮಾಡುವ) ವಾಯುಚಕ್ರ, ಗಾಳಿ ಗಾಲಿ. Steam t. (ಆವಿಯಿಂದ ಕೆಲಸಮಾಡುವ) ಆವಿಚಕ್ರ. T. boat ನೀರ್ಗಾಲಿ(ಗಳಿಂದ ನಡೆಯುವ) ದೋಣಿ.

Túrbit ಟರ್ಬಿಟ್ (ನಾ.) ಚಪ್ಪಟೆ ತಲೆಯ, ಮೋಟು ಕೊಕ್ಕಿನ, ಒಂದು ಬಗೆಯ ಸಾಕು ಪಾರಿವಾಳ.

Túrbot ಟರ್ಬಟ್ (ನಾ.) ಆಹಾರಕ್ಕಾಗಿ ಉಪಯೋಗಿಸುವ, ಶ್ಲಾಘ್ಯವಾದ, ದೊಡ್ಡ ಜಾತಿಯ, ಚಪ್ಪಟೆ ಮೀನು.

Túrbulent ಟರ್ಬ್ಯುಲೆಂಟ್ (ಗು.) ಪ್ರಕ್ಷುಬ್ಧ; ಗಲಭೆಯ, ಗೊಂದಲದ, ಗಲಾಟೆಯ; ದೊಂಬಿಯ, ದಂಗೆಯ; ಎದುರುಬೀಳುವ, ಅವಿಧೇಯ, ದುರ್ದಮ್ಯ. **Túrbulently** (ಕ್ರಿ. ವಿ.); **Túrbulence** (ನಾ.)

Túrco ಟರ್ಕೊ (ನಾ.) ಫ್ರೆಂಚ್ ಸೈನ್ಯದಲ್ಲಿಯ ಆಲ್ಜೀರಿಯಾ ಸಿಪಾಯಿ.

Túrco-, Túrko- ಟರ್ಕೊ— (ಸ. ಪೂ. ಪ.) ತುರ್ಕರ(ರ); ತುರ್ಕಿ(ಯ). **-phil** ತುರ್ಕಿ, ತುರ್ಕ, —ಅಭಿಮಾನಿ, ಪಕ್ಷಪಾತಿ. **Turcóphilism** (ನಾ.); **Túrcophobe** —ದ್ವೇಷಿ, —ಭೀತ.

Turd ಟರ್ಡ್ (ನಾ.) (ಸಭ್ಯ ಪ್ರ. ಅಲ್ಲ): ಲದ್ದಿ; ಹೇಲುಮುದ್ದೆ.

Túrdine ಟರ್ಡೈ(ಡಿ)ನ್ (ಗು.) ತ್ರಷ್ ಹಕ್ಕಿಯಂಥ. **Túrdiform** (ಗು.); **Túrdoid** (ಗು.) ತ್ರಷ್‌ಕಲ್ಪ.

Tureén ಟ್ಯು(ಟ)ರೀನ್ (ನಾ.) ಸಾರು ಬಡಿಸುವ, ಮುಚ್ಚಳವುಳ್ಳ, ಬೋಗುಣಿಯಾಕಾರದ ಪಾತ್ರೆ; ಸಾರಿನ ಡಬರಿ.

Turf ಟರ್ಫ್ (ನಾ., ಕ್ರಿ. ಸಕ.) ಹುಲ್ಲು, ಮೊ. ವು ಬೆಳೆದಿರುವ ನೆಲದ ಮೇಲುವರಿಸೆಯ ಮಣ್ಣು; ಹುಲ್ಲುನೆಲ; (ಎಬ್ಬಿ ತೆಗೆದ) ಹುಲ್ಲುಹೆಪ್ಪು; (ಐರ್ಲೆಂಡಿನಲ್ಲಿ) ಹುಲ್ಲುಬೆರಣಿ, ಸಸ್ಯಾಂಗಾರ, ಪೀಟ್ ಹೆಪ್ಪು; [The t. ಕುದುರೆ ಜೂಜಿನ ಮೈದಾನ, ಹೈಹಾಳಿಪಥ; ಕುದುರೆ ಜೂಜು, ಕುದುರೆ ಜೂಜಿನ ಕಸುಬು (On the t. ಕುದುರೆ ಜೂಜಿನಲ್ಲಿ ತೊಡಗಿ). T.-bound ಹುಲ್ಲುಹೆಪ್ಪುಕಟ್ಟಿದ. T. drain ಹುಲ್ಲುಹೆಪ್ಪು ಕಟ್ಟಿದ ಮೋರಿ]. (ಕ್ರಿ.) (ನೆಲಕ್ಕೆ) ಹುಲ್ಲುಹೆಪ್ಪು—ಕಟ್ಟು, ಹೊದಿಸು. **Túrfite** (ನಾ.), **Túrfman** (ನಾ.) ಕುದುರೆ ಜೂಜಿನ ಪ್ರೇಮಿ. **Túrfy** (ಗು.) ಹುಲ್ಲು ಬೆಳೆದ, ಹುಲ್ಲುಹೆಪ್ಪು ಕಟ್ಟಿದ; ಕುದುರೆ ಜೂಜಿನ (ಕಸುಬಿನ) (T. talk). **Túrfiness** (ನಾ.)

Túrgid ಟರ್ಜಿಡ್ (ಗು.) (ರೋಗದಿಂದ) ಊದಿಕೊಂಡ, ಉಬ್ಬಿಕೊಂಡ, ಬಾತುಕೊಂಡ; (ಭಾಷೆಯ ವಿಷಯದಲ್ಲಿ ರೂಪ.) ಡೊಳ್ಳಾದ, ವಾಗಾಡಂಬರದ, ಬರಿಯ ಡೌಲಿನ. **Turgéscence** ಟರ್ಜೆಸೆನ್ಸ್ (ನಾ.); **Turgéscent** (ಗು.); **Turgéscible** (ಗು.) ಉಬ್ಬಿಸಲಾಗುವ. **Turgídity** (ನಾ.) ಊತ, ಉಬ್ಬು, ಬಾವು; ವಾಗಾಡಂಬರ, ಡೌಲು. **Túrgidly** (ಕ್ರಿ. ವಿ.)

Túrion ಟ್ಯೂರಿಯನ್ (ನಾ.) (ಸ. ವಿ.) ನೆಲದಡಿಯ ಮೊಗ್ಗೆಯಿಂದ ಬೆಳೆದು, ನೆಲದಿಂದೇಳುವ ಕುಡಿ: ನೆಲಕುಡಿ. **Turioníferous** (ಗು.) ನೆಲಕುಡಿ ಬಿಡುವ.

Turk ಟರ್ಕ್ (ನಾ.) ತುರ್ಕ, ತುರುಕ, ತುರ್ಕಿಯವನು; ಕ್ರೂರ, ಕಾಡು, ದುಂಡಾವರ್ತಿ, ಅಗಡು—ಮನುಷ್ಯ, [ಈಗ ಮು., ಹಾಸ್ಯ ಪ್ರ. ಅಥವಾ ಹತೋಟಿಗೆ ಬರದ ಮಗುವಿನ ವಿಷಯದಲ್ಲಿ (Young *or* little T.)]; ಮಹಮ್ಮದೀಯ; ತುರ್ಕಿ ಕುದುರೆ. T.'s-cap ಹಲವು ಬಗೆಯ ನಸ್ಯ. T.'s-head (ಕತ್ತಿವರಿಸೆಯ ಪ್ರದರ್ಶನಗಳಿಗಾಗಿ ಉಪಯೋಗಿಸುವ) ಕಂಬದಮೇಲಿನ ತಲೆ; ರುಮಾಲಿನಂಥ (ಅಲಂಕಾರದ) ಗಂಟು; ಹಲವು ಬಗೆಯ ಉದ್ದ ಹಿಡಿಯ ದುಂಡು ಪೊರಕೆ ಅಥವಾ ತೊಡಪ; ಒಂದು ಬಗೆಯ ತವೆ, ಬಾಣಲೆ. **Túrkish** (ಗು., ನಾ.) ತುರ್ಕಿಯ, ತುರ್ಕರ. (ನಾ.) ತುರ್ಕಿ ಭಾಷೆ. T. bath ಆವಿ ಶಾಖದಿಂದ ಬೆವರು ಬರಿಸಿ, ತರುವಾಯ ಸಾಬೂನು ಉಜ್ಜಿ, ನೀವಿ, ಮಾಡಿಸುವ ಒಂದು ಸ್ನಾನ ಸಂಸ್ಕಾರ: ತುರ್ಕಿ ಸ್ನಾನ; (ಬ. ವ. ದಲ್ಲೂ ಪ್ರ.) ತುರ್ಕಿ ಸ್ನಾನಗೃಹ. T. carpet (ಪೂರ್ತಿಯಾಗಿ ಉಣ್ಣೆಯಿಂದ ಮಾಡಿದ, ಮುಖಮಲ್ಲಿನ ನಯವಿರುವ) ರತ್ನಗಂಬಳಿ. T. delight ಒಂದು ಬಗೆಯ ಮಿಠಾಯಿ. T. music ತಟ್ಟಿ ಬಾಜಿಸುವ ವಾದ್ಯ ಸಂಗೀತ. T. pound ಸುಮಾರು ೧೮ ಷಿ. ೨ ಪೆ. ಬೆಲೆಯ ಚಿನ್ನದ ನಾಣ್ಯ: ತುರ್ಕಿ ಪೌಂಡು (£ T. 50). T. towel ಗುಂಜುಗಳು ಎದ್ದಿರುವ ಒರಟು ಚೌಕ: ತುರ್ಕಿ ಚೌಕ, ಗುಂಜು ಚೌಕ. **Túrkism** (ನಾ.) ತುರ್ಕರ—ಮತ, ಪದ್ಧತಿ; ಮಹಮ್ಮದೀಯ ಮತ. **Túrkey** ಟರ್ಕಿ (ನಾ.) (T-) ತುರ್ಕಿ (ದೇಶ). ಆಹಾರಕ್ಕೆ ಶ್ಲಾಘ್ಯವಾದ, ಕ್ರಿಸ್ಮಸ್ ಹಬ್ಬದಲ್ಲಿ ವಿಶೇಷವಾಗಿ ಉಪಯೋಗಿಸುವ, ಅಮೆರಿಕದ ಮೂಲವಾಸಿಯಾದ, ಒಂದು ಕುಕ್ಕುಟ ಜಾತಿಯ ಪಕ್ಷಿ: ಟರ್ಕಿ ಕೋಳಿ (ಮೊದಲನಲ್ಲಿ ತುರ್ಕಿಯ ದೇಶದ್ದೆಂಬ ತಪ್ಪು ಭಾವನೆಯಿಂದ). T. buzzard, vulture ಅಮೆರಿಕದ ಒಂದು ಜಾತಿಯ ರಣಹದ್ದು. T. carpet = Turkish carpet (ಮೇಲೆ ನೋಡಿ). T. cock ಟರ್ಕಿ ಹುಂಜ [Red as a t.-c. (ಕೋಪ, ಮೊ. ಗಳಿಂದ ಕೆಂಪೇರಿದವನ ವಿಷಯದಲ್ಲಿ)]; (ರೂಪ.) ಆಡಂಬರದ ಮನುಷ್ಯ, ಸ್ವಪ್ರತಿಷ್ಠೆಯವನು, ಜಂಬದ ಕೋಳಿ. T. corn ಮುಸುಕಿನ ಜೋಳ. T. leather ಕೂದಲನ್ನು ಹೆರೆದುಹಾಕುವುದಕ್ಕೆ ಮೊದಲು ಎಣ್ಣೆ ಹಾಕಿ ಸಂಸ್ಕರಿಸಿದ ಒಂದು ಬಗೆಯ ತೊಗಲು: ತುರ್ಕಿ ತೊಗಲು. T.-poult ಟರ್ಕಿ ಕೋಳಿಮರಿ. T. red ಒಂದು ಬಗೆಯ ಕೆಂಬಣ್ಣ; ಟರ್ಕಿ ಕೆಂಪು; ಟರ್ಕಿ ಕೆಂಬಣ್ಣದ ಹತ್ತಿಬಟ್ಟೆ. T. stone (ಎಣ್ಣೆ ಹಾಕಿ ಚಾಕು, ಮೊ. ನ್ನು ಮಸೆಯುವ) ಒಂದು ಬಗೆಯ ಸಾಣೆಕಲ್ಲು, ಮಸೆಕಲ್ಲು. T. trot ಒಂದು ಬಗೆಯ ಕುಣಿತ.

Túrkoman, Turco- ಟರ್ಕೊಮ್ಯನ್, **Túrkman** ಟರ್ಕ್‌ಮ್ಯನ್ (ನಾ.; ಬ. ವ. -ns) (ತುರ್ಕಿಸ್ತಾನ, ಅಫ್ಘಾನಿಸ್ತಾನ, ಪರ್ಷಿಯ, ಮತ್ತು ರಷ್ಯಗಳಲ್ಲಿಯ) ತುರ್ಕಿ—ಬುಡಕಟ್ಟಿನವನು, ಜನಾಂಗದವನು. T. carpet ಮೃದುವಾದ ಉಜ್ಜ್ವಲ ವರ್ಣದ ರತ್ನಗಂಬಳಿ.

Túrmalin(e) = Tourmalin(e)

Túrmeric ಟರ್ಮರಿಕ್ (ನಾ.) ಅರಿಸಿನದ—ಗಿಡ, ಪುಡಿ. T. paper (ಕ್ಷಾರ ಪರೀಕ್ಷೆಗಳಿಗಾಗಿ ಉಪಯೋಗಿಸುವ) ಅರಿಸಿನ(ದಲ್ಲಿ ಅದ್ದಿದ) ಕಾಗದ.

Túrmoil ಟರ್ಮಾಯ್ಲ್ (ನಾ., ಕ್ರಿ. ಸಕ.) ಸಂಕ್ಷೋಭೆ, ಗಲಭೆ, ಗದ್ದಲ. (ಕ್ರಿ.) ಸಂಕ್ಷೋಭೆಗೊಳಿಸು, ಗಲಭೆಮಾಡು (ಮು., ಭೂ. ಕೃ. ನಲ್ಲಿ)

Turn ಟರ್ನ್ (ಕ್ರಿ.) ತಿರುಗು, ತಿರುಗಿಸು, ಸುತ್ತು, ಸುತ್ತಿಸು, ಸುತ್ತು ತಿರುಗು, ಸುತ್ತು ತಿರುಗಿಸು [Wheel turns ಚಕ್ರ ತಿರುಗುತ್ತದೆ. T. the tap ನಲ್ಲಿ ತಿರುಗಿಸು. T. person round one's finger (Finger ನೋಡಿ). Everything turns on his answer ಎಲ್ಲವೂ ಅವನ ಉತ್ತರವನ್ನು ಅವಲಂಬಿಸಿದೆ, ಉತ್ತರದಮೇಲೆ ನಿಂತಿದೆ]; ಲಾಗ, ಪಲ್ಟಿ, —ಹಾಕು; ಪಕ್ಕ ಬದಲಾಯಿಸು, ತಿರುವಿಹಾಕು, ತಲೆಕೆಳಗುಮಾಡು, ಮಗುಚು, ಮಗುಚಿಹಾಕು; (ರೂಪ.) ಮನಸ್ಸಿನಲ್ಲಿ ತಿರುವಿಹಾಕು, ಚಿಂತನಮಾಡು [Turns everything upside down *or* inside out ಎಲ್ಲವನ್ನೂ ತಲೆ ಕೆಳಗು ಮಾಡಿಹಾಕುತ್ತಾನೆ, ಅವ್ಯವಸ್ಥೆ ಮಾಡಿಬಿಡುತ್ತಾನೆ. Umbrella turns inside out ಕೊಡೆ ಒಳಹೊರಗಾಗುತ್ತದೆ. Turned comma = Inverted comma (Comma ನೋಡಿ). Turned period ಮೇಲುಗಡೆ, ಎತ್ತರಿಸಿ, —ಹಾಕಿದ ಪೂರ್ಣವಿರಾಮ ಚಿಹ್ನೆ (·). T. turtle (Turtle ನೋಡಿ). T. the tables on (Table ನೋಡಿ). T. over pages of a book ಪುಸ್ತಕದ ಪುಟಗಳನ್ನು ತಿರುವಿಹಾಕು, ಮಗುಚಿಹಾಕು. T. over new leaf (Leaf[1] ನೋಡಿ). Not t. a hair (Hair ನೋಡಿ). Dress must be turned (ಕೊಳೆಯ ಹೊರ ಮುಖವನ್ನು ಮಗುಚಿ) ಉಡುಪನ್ನು ಒಳಹೊರಗು ಮಾಡಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಿರುಗಿಸಿ, ಹೊಲಿಯಬೇಕು. T. one's coat (Coat ನೋಡಿ). T. an honest penny (Penny ನೋಡಿ)]; (ಬೇರೆಯ) ಕಡೆಗೆ, ದಿಕ್ಕಿಗೆ, —ತಿರುಗು, ತಿರುಗಿಸು; ಹೊಂದಿಕೊ, ಹೊಂದಿಸು [River turns to the right ನದಿ ಬಲಕ್ಕೆ ತಿರುಗುತ್ತದೆ. I scarcely know where *or* which way to t. (ರೂಪ.) ಎತ್ತ ಹೋಗಬೇಕೆಂಬುದೇ ತೋರದಿದೆ; ದಿಕ್ಕೇ ತೋಚ ದಂತಾಗಿದೆ. Turned to God in her trouble ಕಷ್ಟದಲ್ಲಿ ದೇವರ ಮರೆಹೊಕ್ಕಳು. T. one's back (up)on (Back[1] ನೋಡಿ). T. a deaf ear to (Deaf ನೋಡಿ). T. the edge of (ಚಾಕು, ಮೊ. ಗಳ) ಅಲಗನ್ನು ಮೊಂಡುಮಾಡು; (ರೂಪ.) (ಟೀಕೆ, ಮೊ. ಗಳ) ತೀಕ್ಷ್ಣತೆಯನ್ನು ಮಂದಮಾಡು. Can t. his hand to anything ಯಾವುದನ್ನು ಬೇಕಾದರೂ (ಮಾಡ)ಕಲಿಯಬಲ್ಲನು. T. your attention to this ಇದಕ್ಕೆ ನಿನ್ನ ಗಮನ —ತಿರುಗಿಸು, ಕೊಡು. Turns even his errors to account ತನ್ನ ತಪ್ಪು ಗಳನ್ನೂ ಲಾಭಕ್ಕೆ ತಿರುಗಿಸಿಕೊಳ್ಳುತ್ತಾನೆ; ತನ್ನ ತಪ್ಪುಗಳಿಂದಲೂ ಲಾಭಪಡೆಯುತ್ತಾನೆ. All turns to his profit ಎಲ್ಲವೂ ಅವನ ಲಾಭಕ್ಕೆ ತಿರುಗಿಕೊಳ್ಳುತ್ತದೆ, ಪರಿವರ್ತನೆಯಾಗುತ್ತದೆ. Tide turns ಉಬ್ಬರ ಇಳಿಯುತ್ತದೆ, ಇಳಿತ ಏರುತ್ತದೆ; ಉಬ್ಬರ, ಇಳಿತ, —ಮರಳು ತ್ತದೆ. T. the corner (Corner ನೋಡಿ). T. the scale (Scale[2] ನೋಡಿ). T. (the flank *or* position of) an army ಸೈನ್ಯವನ್ನು ಪಕ್ಕದಿಂದ, ಹಿಂದಿನಿಂದ, —ಆಕ್ರಮಿಸು. T. person's flank (ಒಬ್ಬನನ್ನು ವಾದ, ಮೊ. ಗಳಲ್ಲಿ) ಸೋಲಿಸು, ಮೀರಿಸು. Be turned (of) 40 ೪೦ ವರ್ಷ ವಯಸ್ಸಾಗಿರು, ನಲವತ್ತಾಗಿರು]; ಹೋಗಗೊಡು, ಬಿಡು, ಕಳಿಸು [He was turned adrift in the world ಅವನನ್ನು ಪ್ರಪಂಚದಲ್ಲಿ ನೆಲೆ ಯಿಲ್ಲದೆ ಅಲೆಯುವಂತೆ ಬಿಟ್ಟರು. T. it out into a basin ಅದನ್ನು ಬೋಗುಣಿಯೊಳಕ್ಕೆ ಬಿಡು. Never turned (away) a beggar from his door ಅವನು ಮನೆಗೆ ಬಂದ ಭಿಕ್ಷುಕನನ್ನು ಎಂದೂ ಹಾಗೆಯೇ ಕಳಿಸಲಿಲ್ಲ. Will t. a bullet ಗುಂಡನ್ನು ನಿವಾರಿಸು ತ್ತದೆ, ತಡೆಯುತ್ತದೆ]. (ಸ್ವಭಾವ, ಸ್ಥಿತಿ, ರೂಪ, ಮೊ. ಗಳಲ್ಲಿ) ಬದಲಾಯಿಸು, ಮಾರ್ಪಾಟಾಗು, ಮಾರ್ಪಾಟುಮಾಡು, ಆಗು, ಆಗಿಸು, [Turned water into wine. Has turned traitor ದ್ರೋಹಿ ಯಾಗಿ ಪರಿಣಮಿಸಿದ್ದಾನೆ. T. it into French ಅದನ್ನು ಫ್ರೆಂಚ್ ಭಾಷೆಗೆ ಪರಿವರ್ತಿಸು. Milk will t. (sour) ಹಾಲು ಹುಳಿ ತಿರುಗು ತ್ತದೆ. Very thought turns me pale ಅದನ್ನು ಯೋಚನೆ ಮಾಡಿದರೇನೇ (ನನ್ನ ಮುಖ) ವಿವರ್ಣವಾಗುತ್ತದೆ, ಬಿಳಿಚಿಕೊಳ್ಳುತ್ತದೆ. Sight of raw meat turns my stomach ಹಸಿ ಮಾಂಸ ನೋಡಿದರೆ ನನ್ನ ಹೊಟ್ಟೆ ತೊಳಸುತ್ತದೆ. Success has turned his head ಜಯ ಅವನ ತಲೆಯನ್ನು ತಿರುಗಿಸಿ(ಬಿಟ್ಟಿ)ದೆ. Head turns ತಲೆ—ಸುತ್ತುತ್ತದೆ, ತಿರುಗುತ್ತದೆ. Overwork has turned his brain ಅತಿದುಡಿತದಿಂದ ಅವನ ಮಿದುಳು ಕೆಟ್ಟಿದೆ, ಅವನಿಗೆ ಬುದ್ಧಿಭ್ರಮಣೆ ಯಾಗಿದೆ]; ಚರಕಿ ಯಂತ್ರದಿಂದ ಕಡೆ, ಕಡೆದು ಮಾಡು; (ವಸ್ತು ವಿನ ವಿಷಯದಲ್ಲಿ) ಕಡೆಯು ಬರು, ಕಡೆತವಾಗು (T. well, easily); (ಮನೋಹರವಾದ, ಆಕರ್ಷಕವಾದ) ರೂಪ, ಆಕಾರ, —ಕೊಡು; ರೂಪಿಸು, ರಚಿಸು (Could t. a Latin verse in my day ನನ್ನ ಕಾಲದಲ್ಲಿ ಲ್ಯಾಟಿನ್ ಪದ್ಯ ರಚಿಸಬಲ್ಲವನಾಗಿದ್ದೆನು. Well-turned phrase ಚೆನ್ನಾಗಿ ಕಡೆದ ಮಾತು, ಸೊಗಸಾದ ಉಕ್ತಿ. Exquisitely-turned wrist ಅಂದವಾದ ಆಕಾರವುಳ್ಳ ಮಣಿಕಟ್ಟು)

(ಕ್ರಿ. ವಿ. ಮತ್ತು ಉಪ. ಗಳೊಡನೆ): T. about ಸುತ್ತ ತಿರುಗು, ಬೇರೆ ದಿಕ್ಕಿಗೆ ತಿರುಗು, ಹೀಗೆ ಹಾಗೆ ತಿರುಗು, ಹಿಂದು ಮುಂದಾಗು; (ನೀತಿ, ಮೊ. ನ್ನು) ವಿಪರ್ಯಾಯ ಮಾಡು. T. against ಪ್ರತಿಕೂಲ, ವಿರೋಧಿ, —ಆಗು; ಎದುರುಬೀಳು. T. down ಕೆಳಕ್ಕೆ ಮಡಿಸು; (ಇಸ್ಪೀಟು, ಮೊ. ನ್ನು) ಕೆಳಮುಖನಾಗಿ ಇಡು; (ದೀಪ, ಮೊ. ನ್ನು) ಸಣ್ಣದು ಮಾಡು; ಬೋರಲುಹಾಕು (T. down a wine glass); (ಅಸಂ.) (ಸಲಹೆ, ಸಲಹೆಗಾರ, ಮೊ. ನ್ನು) ನಿರಾಕರಿಸು, ತಿರಸ್ಕರಿಸು. T. in ಒಳಕ್ಕೆ ಮಡಿಸು; ಒಳಮುಖವಾಗಿರು, ಒಳಕ್ಕೆ ಬಾಗಿರು (His toes t. in); (ಬಳ. ಮಾ.) ಹೋಗಿ ಮಲಗಿಕೊ, ಮುದುರಿಕೊ. T. off (ನೀರು, ಅನಿಲ, ಮೊ. ಗಳ ಹರಿವನ್ನು ಬಿರಡೆ ತಿರುಗಿಸಿ) ಬಂದು ಮಾಡು, ನಿಲ್ಲಿಸಿಬಿಡು; (ಕಾರ್ಯ, ಮೊ. ನ್ನು) ಮಾಡು, ಸಾಧಿಸು (T. off an epigram ಒಂದು ನಾಟು ನುಡಿಯನ್ನು ಬಿಡು); (ಸೇವಕರು, ಮೊ. ನ್ನು) ಕೆಲಸದಿಂದ ತೆಗೆದುಹಾಕು, ಕಳಿಸಿಬಿಡು; (ಅಸಂ.) (ಅಪರಾಧಿ ಯನ್ನು) ಗಲ್ಲಿಗೆ ಹಾಕು, (ವಧೂವರರಿಗೆ) ಮದುವೆ ಮಾಡಿ ಕಳಿಸು. T. on (ನೀರು, ಮೊ. ನ್ನು ಬಿರಡೆ ತಿರುಗಿಸಿ) ಹರಿಯಬಿಡು; (ಬಳ. ಮಾ.) ನಿರಾತಂಕವಾಗಿ, ಧಾರಾಳವಾಗಿ, —ಅವಕಾಶಕೊಡು, ಬಿಡು (T. on the waterworks ಕಣ್ಣೀರು ಹರಿಸು, ಅಳತೊಡಗು); (—ಮೇಲೆ) ಅವಲಂಬಿಸು; ಎದುರುಬೀಳು, ತಿರುಗಿಬೀಳು. T. out ಹೊರಕ್ಕೆ ಕಳಿಸು, ಕೆಲಸದಿಂದ ತೆಗೆದುಹಾಕು; ಹೊರಮುಖ ಮಾಡು, ಹೊರಕ್ಕೆ ಬಾಗಿಸು (T. out your toes); (ಸರಕು, ಮೊ. ನ್ನು) ತಯಾರಿಸು, ಉತ್ಪತ್ತಿಮಾಡು; ಒಳಹೊರಗುಮಾಡು, ಹೊರಕ್ಕೆ ತಿರುಗಿಸು (Made him t. out his pockets); (ಕೆಲಸ, ಮೊ. ಕ್ಕಾಗಿ) ಹಾಜರಾಗು, ಕೂಡು, ನೆರೆ (15 men turned out); ಹಾಸಿಗೆ ಬಿಟ್ಟು ಏಳು; ಹೊರಪಡು, ಆಗು, ತೋರಿಬರು, ಪರಿಣಮಿಸು (This turns out to be true ಇದು ನಿಜವಾಗಿ ಪರಿಣಮಿಸುತ್ತದೆ. He turned out a humbug. We shall see how things t. out ಸಂದರ್ಭಗಳು ಹೇಗೆತಿರುಗುತ್ತವೆಯೊ, ಪರಿಣಮಿಸುತ್ತವೆಯೊ, ನೋಡ್ಯೋಣ); (ಸೈನಿಕ) T. out the guard ಕಾವಲು ಕೋಣೆಯಿಂದ ಪಹರೆ ಯವರನ್ನು ಹೊರಕ್ಕೆ ಕರೆ. T. over ಉರುಳಿಸು, ಬೀಳಿಸು, ಕೆಡವು; (ಒಂದರ ನಿರ್ವಾಹವನ್ನು, ಮತ್ತೊಬ್ಬನಿಗೆ) ವಹಿಸಿಕೊಡು, ವರ್ಗಾಯಿಸು; (—ಮೊತ್ತದಷ್ಟು) ವ್ಯಾಪಾರಮಾಡು, ವ್ಯವಹಾರ ನಡಸು (Turns over £ 500 a week). T. round ಹಿಂದು ಮುಂದಾಗಿ ತಿರುಗು; ಹೊಸ ಅಭಿಪ್ರಾಯ, ನೀತಿ, ಮೊ. ನ್ನು (ಮು., ಮೊದಲನದಕ್ಕೆ ವಿರೋಧಾ ಭಿಪ್ರಾಯ, ಮೊ. ನ್ನು) ಹಿಡಿ, ಅನುಸರಿಸು; ವಿರೋಧಪಕ್ಷ ಹಿಡಿ; (T. round on, upon ಮೇಲೆ ಬೀಳು, ತಿರುಗಿಬೀಳು). T. to (ಕೆಲಸ, ಮೊ. ಗಳಲ್ಲಿ) ತೊಡಗು, ಕೈಹಚ್ಚು; ಕೆಲಸಕ್ಕೆ ತೊಡಗು, ಕಾರ್ಯಾರಂಭಮಾಡು. T. up (ಇಸ್ಪೀಟಾಟದಲ್ಲಿ; ಕೆಳಮುಖವಾಗಿದ್ದ ತುರುಪೆಲೆನ್ನು) ತಿರುವಿ ತೋರಿಸು, ಮೇಲ್ಮುಖಮಾಡು; ತಿರುವಿ, ಎತ್ತಿ,—ಹಾಕು (Plough turns up the soil); ಮುಖ ತೋರಿಸು, ಕಾಣಿಸಿಕೊ, ತಲೆಹಾಕು (Turned up an hour late, unexpectedly); (ಘಟನೆ, ಅವಕಾಶ, ಮೊ. ಗಳ ವಿಷಯದಲ್ಲಿ) ಆಗು, ಏರ್ಪಡು, ಸಂಭವಿಸು, ತಲೆದೋರು; (ಬಳ. ಮಾ.) ಓಕರಿಕೆ, ವಾಂತಿ, —ಬರಿಸು, ಉಂಟುಮಾಡು (Sight turned me up). T. upon = T. on. **T.-bench** ಗಡಿಯಾರಕಾರನ (ಸಾಗಿಸಲಾಗುವ) ಚರಕಿ ಯಂತ್ರ. **T.-buckle** ಲೋಹದ ಸರಳುಗಳ ಭಾಗಗಳನ್ನು ಬಿಗಿಸುವ ಒಂದು ಸಲಕರಣೆ: ತಿರುಪುಕೊಂಡಿ. **T.-cap** ಹೊಗೆಕೊಳವಿಯ ತಿರುಗು ತುದಿ. **Túrncoat** ಪಕ್ಷ ಬದಲಾಯಿಸುವವನು, ಸ್ವಪಕ್ಷತ್ಯಾಗಿ. **Túrncock** ನೀರನ್ನು ಮುಖ್ಯ ಕೊಳಾಯಿಯಿಂದ ಸರಬರಾಯಿ ಕೊಳಾಯಿಗೆ ಹಾಯಿಸುವ ವನು: ನೀರು ತಿರುಗಿಸುವವನು; ನೀರ್ಗಂಟಿ. **T.-down** (ಕೊರಲ ಪಟ್ಟಿಯ ವಿಷಯದಲ್ಲಿ) ಕೆಳ ಮಡಿಚಿದ. **Túrnkey** ಸೆರೆಮನೆಯ ಬೀಗದಕ್ಕೈಯಧಿಕಾರಿ. **T.-out** (ಕೆಲಸಕ್ಕಾಗಿ) ಹಾಜರಾಗುವುದು, ನೆರೆಯುವುದು; ಹಾಜರಾದವರು, ನೆರೆದವರು; ಕೆಲಸಗಾರರ ಮುಷ್ಕರ; (ನೋಟ, ಮೊ. ನ್ನು ನೋಡುವುದಕ್ಕಾಗಿ) ನೆರೆದ ಮಂದಿ, ನೆರವಿ, ಗುಂಪು; ಸಾಮಾನು ಸರಂಜಾಮು, ಸಜ್ಜು; (ಒಂದು ನಿರ್ದಿಷ್ಟ ಕಾಲದಲ್ಲಿ) ತಯಾರಾದ ಸರಕಿನ ಮೊತ್ತ, ಉತ್ಪತ್ತಿ. **Túrnover** (ಬಂಡಿ, ಮೊ. ಗಳು) ತಲೆಕೆಳಕಾಗುವುದು, ಮಗುಚಿಕೊಳ್ಳುವುದು; ಅರ್ಧ ವೃತ್ತಾಕಾರದ ಹೂರಣಗಡುಬು, ಮಡಿಚುಗಡುಬು; ವ್ಯಾಪಾರದ ಮೊತ್ತ; ಮುಂದಿನ ಪುಟಕ್ಕೆ ಮುಂದುವರಿದಿರುವ ಪತ್ರಿಕಾ ಲೇಖನ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Túrnpike (ಚರಿತ್ರ) ರಾವುತರು, ಮೊ. ನ್ನು ತಡೆಯಲು ರಸ್ತೆ, ಮೊ. ಗಳಲ್ಲಿ ರಕ್ಷಣೆಗಾಗಿ ಹಾಕುತ್ತಿದ್ದ ದಸಿಗಳ ಅಡ್ಡಗಟ್ಟು: ದಸಿ—ಕಾಪು, ಕಟ್ಟೆ; ಸುಂಕ ಕೊಡಬೇಕಾದ ಬಂಡಿ, ಮೊ. ಗಳನ್ನು ತಡೆದು ನಿಲ್ಲಿಸುವುದಕ್ಕಾಗಿ ರಸ್ತೆಗೆ ಅಡ್ಡಲಾಗಿ ಹಾಕಿರುವ ಕಟಕಟೆ: ಸುಂಕದ ಕಟ್ಟೆ, ಉಕ್ಕಡ; ಸುಂಕದ ಕಟ್ಟೆಗಳಿರುವ, ಸುಂಕದ ಹಣದಿಂದ ಮಾಡಿದ, —ರಸ್ತೆ: ಸುಂಕದ ರಸ್ತೆ. **T.-screw** ತಿರುಪುಳಿ. **Túrnside** (ನಾಯಿಗಳ) ತಲೆಸುತ್ತು. **Túrnsole** ಸೂರ್ಯನನ್ನು ಅನುಸರಿಸಿ ತಿರುಗುತ್ತ ಹೋಗುವುದೆಂದು ನಂಬಿರುವ, ಹಲವು ಬಗೆಯ ಸಸ್ಯ (ಉದಾ., ಸೂರ್ಯಕಾಂತಿ). **Túrnspit** ಹಿಂದೆ ಅಡುಗಂಬಿಯನ್ನು ತಿರುಗಿಸುವುದಕ್ಕಾಗಿ ಉಪಯೋಗಿಸುತ್ತಿದ್ದ, ನೀಳ ಒಡಲಿನ ಮೋಟುಗಾಲಿನ ಒಂದು ಜಾತಿಯ ನಾಯಿ: ಅಡುಗಂಬಿ ನಾಯಿ. **Túrnstile** ಒಬ್ಬೊಬ್ಬರಾಗಿ ಹಾಯ್ದು ಹೋಗಲು ಅವಕಾಶವಿರುವಂತೆ, ತಿರುಗುವ ನಾಲ್ಕು ತೋಳುಗಳುಳ್ಳ, ದ್ವಾರಮಧ್ಯದ ಒಂದು ಕಂಬ: ತಿರುಗುತೋಳ್ಗಂಬ. **Túrnstone** ಪ್ಲವರ್ ಜಾತಿಯ ಒಂದು ಹಕ್ಕಿ. **T.-table** (ಎಂಜಿನು, ಮೊ. ಗಳನ್ನು ಹಿಂದು ಮುಂದಾಗಿ ತಿರುಗಿಸಲು ಅನುಕೂಲಿಸುವ, ವೃತ್ತಾಕಾರದ) ತಿರುಗು ಜಗಲಿ. **T.-up** (ಬಳ. ಮಾ.) ಗಲಭೆ, ಗೊಂದಲ, ಕೋಲಾಹಲ. **Túrner** (ನಾ.) (ಕ್ರಿಯಾರ್ಥಗಳಲ್ಲಿ); ಚರಕಿ ಯಂತ್ರದಲ್ಲಿ ಕೆಲಸ ಮಾಡುವವನು, ಚರಕಿಯುವನು; ಒಂದು ಬಗೆಯ ಪಲ್ಟಿ (ಹಾಕುವ) ಪಾರಿವಾಳ. **Túrnery** (ನಾ.) ಕಡೆತದ, ಚರಕಿ, —ಕೆಲಸ, ಕಲೆ; ಕಡೆತದ ಸಾಮಾನು; ಚರಕಿ ಯಂತ್ರಶಾಲೆ; ಕಡೆತದ ಮನೆ. **Túrning** (ನಾ.) (ಕ್ರಿಯಾರ್ಥಗಳಲ್ಲಿ); ಕಡೆಯುವುದು, ಚರಕಿ ಉಪಯೋಗಿಸುವುದು; ಒಂದು ರಸ್ತೆ ಇನ್ನೊಂದು ರಸ್ತೆಯನ್ನು ಸೇರುವ ಸ್ಥಳ: ರಸ್ತೆಯ ತಿರುವು, ರಸ್ತೆ ಕೂಡಲು; ಕೂಡು ರಸ್ತೆ (Stop at the next t.). **T.-point** ಒಂದರ ಸ್ಥಿತಿಯಲ್ಲಿ ನಿರ್ಧಾರಕ ಬದಲಾವಣೆಯಾಗುವ ಸಮಯ: ಉತ್ಕಟ ಸಮಯ, ಸಂಧಿಕಾಲ (This may be the t.-point of his life)

Turn (ನಾ.) ಸುತ್ತು(ವಿಕೆ), ತಿರುಗು(ವಿಕೆ), ತಿರುವು, ಮುರುವು, ಆವರ್ತ(ನ), ಪರಿವರ್ತನ, ಬದಲಾವಣೆ, ಓಲು, ಬಾಗು, ಪ್ರವಣತೆ, ಒಲವು [A single t. of the handle ಹಿಡಿಕೆಯ ಒಂದು ಸುತ್ತು. A t. of the Fortune's wheel ಅದೃಷ್ಟ ಪರಿವರ್ತನ, ಭಾಗ್ಯ ಚಕ್ರಾವರ್ತ. Milk is on the t. ಹಾಲು ಹುಳಿ ಹಿಡಿಯುವುದರಲ್ಲಿದೆ. Gave a new t. to the argument ವಾದಕ್ಕೆ ಹೊಸ ಮುಖ, ತಿರುವು, ಕೊಟ್ಟನು. Path is full of turns and twists ದಾರಿಯ ತುಂಬ ತಿರುವು ಮುರುವುಗಳಿವೆ. Walked along a t. of the river ನದಿಯ ತಿರುವಿನಲ್ಲಿ ನಡೆದುಕೊಂಡುಹೋದನು. (ಸೈನಿಕ ಆಜ್ಞೆ) Right, left, about, t. ಬಲಕ್ಕೆ, ಎಡಕ್ಕೆ, ಹಿಂದು ಮುಂದಾಗಿ, ತಿರುಗು]; ಸ್ವಭಾವ, ಪ್ರಕೃತಿ, ಪ್ರವೃತ್ತಿ, ಸ್ವರೂಪ, ರಚನೆ, ಮಾಟ [Was of a humorous t. ಹಾಸ್ಯ ಪ್ರವೃತ್ತಿಯುವನಾಗಿದ್ದನು. Do not like the t. of the sentence ಆ ವಾಕ್ಯದ ರೂಪ ನನಗೆ ರುಚಿಸುವುದಿಲ್ಲ. The t. of an ankle ಕಾಲಹರಡಿನ ಮಾಟ. They have a fine, pretty, t. of speed (ಸಂದರ್ಭ ಬದ್ಧರೆ) ಅವು ಬಹು ವೇಗದಲ್ಲಿ ಹೋಗಬಲ್ಲವು]; ಸಣ್ಣ—ತಿರುಗಾಟ, ಸುತ್ತಾಟ; ಅಡ್ಡಾಟ, ಸವಾರಿ; ಕೆಲಸದ ಪಟ್ಟು [Take a t. in the garden ತೋಟದಲ್ಲಿ ಅಡ್ಡಾಡು. Took a t. of work ಒಂದು ಪಟ್ಟು ಕೆಲಸ ಮಾಡಿದನು. Short turns (ಸಂಗೀತಶಾಲೆ, ಮೊ. ಗಳಲ್ಲಿ) ಸಣ್ಣ—ಹಾಡುಗಳು, ವಾಚನಗಳು]; ಸರದಿ, ಪಟ್ಟು, ಅವಕಾಶ, ಸಮಯ [Must not speak out of your t. ನಿನ್ನ ಸರದಿ ಬಿಟ್ಟು (ಸರದಿಗೆ ಮುಂಚೆಯಾಗಲಿ ಹಿಂಚೆಯಾಗಲಿ) ಮಾತಾಡಬಾರದು. Will hear you all in t. ನಿಮ್ಮೆಲ್ಲರನ್ನೂ ಸರದಿಯಮೇಲೆ ಕೇಳುತ್ತೇನೆ, ಒಬ್ಬೊಬ್ಬರನ್ನಾಗಿ ಕೇಳುತ್ತೇನೆ. Take turns ಸರದಿಯಮೇಲೆ ಕೆಲಸಮಾಡು. Work t. and t. about (ಇಬ್ಬರೂ) ಸರದಿಯ ಮೇಲೆ, ಒಬ್ಬರಾಗುತ್ತ ಒಬ್ಬರು, ಕೆಲಸಮಾಡಿ. Did not serve my t. ನನ್ನ ಉದ್ದೇಶಕ್ಕೆ ಸಾಧಕವಾಗಲಿಲ್ಲ, ಒದಗಲಿಲ್ಲ. Did me a good, an ill, t. ನನಗೆ ಉಪಕಾರ, ಅಪಕಾರ, ಮಾಡಿದನು]; (ಸಂ.) ಸ್ವರವಿನ್ಯಾಸದ ಒಂದು ಬೆಡಗು, ವಿಲಾಸ; (ಹಗ್ಗದ ಸುತ್ತುಗಳಲ್ಲಿ) ಒಂದು ಸುತ್ತು; (ಬ. ವ. ದಲ್ಲಿ) ಮುಟ್ಟು, ರಜಸ್ಸು; (ಮುದ್ರಣ) (ಕೊರತೆಯಾದ ಅಕ್ಷರಕ್ಕೆ ಬದಲು ತಾತ್ಕಾಲಿಕವಾಗಿ ಹಾಕಿರುವ ಅಥವಾ ತಪ್ಪಾಗಿ ಜೋಡಿಸಿದ) ತಲೆಕೆಳಕು ಅಕ್ಷರ; (ಬಳ. ಮಾ.) (ಮನಸ್ಸಿಗೆ) ಬೆಬ್ಬಳ, ಧಕ್ಕೆ (Gave me quite a t.). Meat is done to a t. ಮಾಂಸ ಹದವಾಗಿ ಅಟ್ಟಿದೆ.

Túrner, Túrnery, Túrning. Turn (ಕ್ರಿ.) ನೋಡಿ.

Túrnip ಟರ್ನಿಪ್ (ನಾ.) ಸಾಸವೆ ಜಾತಿಯ ಒಂದು ದ್ವಿವಾರ್ಷಿಕ ಸಸ್ಯ; ತರಕಾರಿಯಾಗಿಯೂ ದನಕರುಗಳಿಗೆ ಮೇವಾಗಿಯೂ ಉಪಯೋಗಿಸುವ, ಈ ಸಸ್ಯದ ದುಂಡು ತಿರುಳು ಬೇರು: ಟರ್ನಿಪ್ ಗೆಡ್ಡೆ. T.-top (ತರಕಾರಿಯಾಗಿ ಉಪಯೋಗವಾಗುವ) ಟರ್ನಿಪ್ ಸೊಪ್ಪು. **Túrnipy** (ಗು.) ಟರ್ನಿಪ್ ರುಚಿಯ.

Túrpentine ಟರ್ಪೆಂಟೈನ್ (ನಾ., ಕ್ರಿ. ಸಕ.) ಬಣ್ಣಗಳನ್ನು ಮಿಶ್ರ ಮಾಡುವುದಕ್ಕೂ ಮೆರುಗೆಣ್ಣೆಗೂ ಔಷಧಕ್ಕೂ ಉಪಯೋಗವಾಗುವ, ಹಲವು ಶಂಕು ವೃಕ್ಷಗಳಿಂದ ಸ್ರವಿಸುವ ತೈಲರೂಪದ ರಾಳ: ಟರ್ಪೆಂಟೈನ್ ರಾಳ; ದೇವದಾರು ತೈಲ, ಕರ್ಪೂರ ತೈಲ, ಟರ್ಪೆಂಟೈನ್ [=**Trups** (ಬಳ. ಮಾ.)]; (T.-tree ದೇವದಾರು, ಟರ್ಪೆಂಟೈನ್ ಮರ, ಕರ್ಪೂರ ತೈಲದ ಮರ). (ಕ್ರಿ.) ಟರ್ಪೆಂಟೈನ್, ಕರ್ಪೂರ ತೈಲ, —ಹಚ್ಚು, ಬಳಿ. **Turpentínic** —ಟಿನಿಕ್ (ಗು.)

Túrpeth ಟರ್ಪೆತ್ (ನಾ.) ಈಸ್ಟ್ ಇಂಡಿಯದ ಒಂದು ಸಸ್ಯದ, ಭೇದಿ ಮಾಡಿಸುವ ಗುಣವುಳ್ಳ ಬೇರು: ತಿಗಡೆ ಬೇರು.

Túrpitude ಟರ್ಪಿಟ್ಯೂಡ್ (ನಾ.) ಕೀಳುತನ, ನೀಚತನ, ಜಘನ್ಯತೆ.

Túrquoise ಟರ್ಕಾ(ಕ್ವಾ)ಯ್ಸ್ (ನಾ.) ಆಕಾಶ ನೀಲವರ್ಣದ ಅಥವಾ ಹಸುರು ಛಾಯೆಯ ನೀಲವರ್ಣದ ಒಂದು ಅಪಾರದರ್ಶಕ ಪ್ರಶಸ್ತ ಶಿಲೆ: ಒಂದು ಬಗೆಯ ವೈಡೂರ್ಯ.

Túrret ಟರೆಟ್ (ನಾ.) ಸಣ್ಣ ಗೋಪುರ; (ಸೈನಿಕ) ಹಡಗಿನಲ್ಲಾಗಲಿ ಕೋಟೆಯಲ್ಲಾಗಲಿ ಫಿರಂಗಿಗಳೂ ಫಿರಂಗಿಯವರೂ ಇರಲು ಮಾಡಿರುವ ಎತ್ತರವಿಲ್ಲದ ತಿರುಗು ಗೋಪುರ: ತಿರುಗು —ಬುರುಜು, ಹೂಡೆ; (ಚರಿತ್ರೆ) ದುರ್ಗಾಕ್ರಮಣದಲ್ಲಿ ಉಪಯೋಗಿಸುವ, ಗಾಲಿಗಳ ಮೇಲೆ ಕಟ್ಟಿದ, ಹಲವು ಉಪ್ಪರಿಗೆಗಳ ಚೌಕನೆಯ ಕಟ್ಟಡ: ದಾಳಿ ಗೋಪುರ. T. gun ತಿರುಗು ಬುರುಜಿನ ಫಿರಂಗಿ. T.-ship ತಿರುಗು ಬುರುಜಿನ ಹಡಗು. **Túrreted** (ಗು.)

Turriculate(d) ಟರಿಕ್ಯುಲೆಟ್, —ಲೇಟೆಡ್ (ಗು.) (ಶಂಖದ ವಿಷಯದಲ್ಲಿ) ಉದ್ದ ಸುರುಳಿ ಗೋಪುರದ.

Túrtle[1] ಟರ್ಟಲ್ (ನಾ.) ಹಲವು ಬಗೆಯ ಪಾರಿವಾಳ (ಸಾ., =T.-dove) (ಮು., ಮೆಲುದನಿಗೂ ತನ್ನ ಜೊತೆ ಹಕ್ಕಿಯ ಮತ್ತು ಮರಿಗಳ ಮೇಲಿನ ಪ್ರೀತಿಗೂ ಪ್ರಸಿದ್ಧವಾದ್ದು)

Túrtle[2] ಟರ್ಟಲ್ (ನಾ., ಕ್ರಿ. ಅಕ.) ಒಂದು ಜಾತಿಯ ಕಡಲಾಮೆ; (ಯಾವುದಾದರೂ ಬಗೆಯ) ಆಮೆ [Green t. (ಎಸರಿಗೆ ಬಹಳವಾಗಿ ಉಪಯೋಗಿಸುವ) ಹಸುರು ಆಮೆ. Turn t. (ನಾವಿಕ ಅಸಂ.) ತಲೆಕೆಳಕಾಗು, ಮಗುಚಿಕೊ. T.-shell (ಮು., ಕೆತ್ತನೆಯ ಕೆಲಸದಲ್ಲಿ ಉಪಯೋಗಿಸುವ, ಕಪ್ಪು ಬಣ್ಣದ) ಆಮೆಚಿಪ್ಪು; ದೊಡ್ಡ ಜಾತಿಯ ಅಂದವಾದ ಕವಡೆ: ಆಮೆ ಕವಡೆ (=T.-cowry)]. (ಕ್ರಿ.) ಆಮೆ ಹಿಡಿ. **Túrtler** (ನಾ.) ಆಮೆ ಹಿಡಿಯುವವನು, ಆಮೆ ಹಿಡಿಯುವ ಹಡಗು. **Túrtling** (ನಾ.) ಆಮೆ ಷಿಕಾರಿ.

Túscan ಟಸ್ಕನ್ (ಗು., ನಾ.) ಟಸ್ಕನಿ ಪ್ರಾಂತದ (ಭಾಷೆ, ನಿವಾಸಿ). T. order (ವಾಸ್ತುಶಿಲ್ಪದ ಒಂದು ಶೈಲಿ). T. straw ಟೊಪ್ಪಿಗೆ, ಮೊ. ನ್ನು ಮಾಡುವುದಕ್ಕಾಗಿ ಉಪಯೋಗಿಸುವ ನಯವಾದ ಹಳದಿ ಬಣ್ಣದ ಗೋಧಿ ಹುಲ್ಲು: ಟಸ್ಕನ್ ಹುಲ್ಲು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tush[1] ಟಷ್ (ಭಾವ. ಅವ್ಯ., ನಾ., ಕ್ರಿ.) (ಪ್ರಾಚೀ. ಪ್ರ.) = Pshaw. **Túshery** (ನಾ.) (ಸಾಹಿತ್ಯ ಪ್ರ.) ಪ್ರಾಚೀನ ಪ್ರಯೋಗಗಳ ಬಳಕೆ.

Tush[2] ಟಷ್ (ನಾ.) ಉದ್ದನೆಯ ಮೊನೆಹಲ್ಲು, (ಮು.) ಕುದುರೆಯ ಕೋರೆಹಲ್ಲು.

Tusk ಟಸ್ಕ್ (ನಾ., ಕ್ರಿ. ಸಕ.) ಆನೆ, ಕಾಡುಹಂದಿ, ಮೊ. ಗಳ ಬಾಯಿಂದ ಹೊರಹಾಯ್ದಿರುವ ಕೋರೆಹಲ್ಲು: ದಾಡೆ, ದಂಷ್ಟ್ರ; ಆನೆಯ ಕೊಂಬು, ದಂತ; (ಹಲುಬೆ, ಬೀಗ, ಮೊ. ಗಳಲ್ಲಿ) ದಾಡೆಯಂಥ, ಕೋರೆಹಲ್ಲಿನಂಥ, —ಭಾಗ. (ಕ್ರಿ.) ಕೋರೆಹಲ್ಲಿನಿಂದ, ದಾಡೆಯಿಂದ, —ತಿವಿ, ಹಾಯಿ, ಬಗಿ, ಕೀಳು. (-)**tusked** (ಗು.); **Túsker** (ನಾ.) ಕೊಂಬಿನಾನೆ, ದಂತಿ, ದಾಡೆ ಹಂದಿ, ಮೊ. ಪು. **Túsky** (ಗು.)

Tússer, -ur ಟಸರ್, **Tússore** ಟಸೋರ್ (ನಾ.) ಗಟ್ಟಿಯೂ ಒರಟೂ ಆದ ರೇಷ್ಮೆ ದಾರವುಳ್ಳ ರೇಷ್ಮೆ ಹುಳು : ಟಸೋರ್ ರೇಷ್ಮೆ ಹುಳು ; ಇದರ ರೇಷ್ಮೆ, ಟಸೋರ್ ರೇಷ್ಮೆ (= T. silk)

Tússive ಟಸಿವ್ (ಗು.) (ವೈ. ಶಾ.) ಕೆಮ್ಮಿನ.

Tússle ಟಸ್‌ಲ್ (ಕ್ರಿ. ಅಕ., ನಾ.) ಹೋರಾಡು, ಹೆಣಗಾಡು, ಕಾದಾಡು, ಜಗಳವಾಡು (*With* person, *for* thing). (ನಾ.) ಹೋರಾಟ, ಕಾದಾಟ.

Tússock ಟಸಕ್ (ನಾ.) (ಹುಲ್ಲು, ಮೊ. ಗಳ) ತೆಂಡೆ, ಪೊದೆ, ಗುಡ್ಡ, ಮೆಳೆ ; (ಕೂದಲಿನ) ಕುಚ್ಚು, ಗುಚ್ಛ ; ಅದರ ಮರಿಹುಳುವಿಗೆ ಉದ್ದನೆಯ ಗೊಂಚಲು ಕೂದಲು ಇರುವ, ಹಲವು ಬಗೆಯ ಪತಂಗ : ಕುಚ್ಚು ಪತಂಗ (= T.-moth). T.-grass ಜೌಗುನೆಲದಲ್ಲಿ ಬೆಳೆಯುವ ಉದ್ದವೂ ಗಟ್ಟಿಯೂ ನಯವೂ ಆದ ಒಂದು ಬಗೆಯ ಹುಲ್ಲು: ನೊಜೆ ಹುಲ್ಲು. **Tússocky** (ಗು.)

Tússore. **Tusser** ನೋಡಿ.

Tut[1] ಟಟ್, **Tut-tút** ಟಟ್‌ಟಟ್ (ನಾ., ಕ್ರಿ. ಅಕ., ಭಾವ. ಅವ್ಯ.) (ಅಸಹನೆ, ತಿರಸ್ಕಾರ, ನಿಂದೆ, ಮೊ. ನ್ನು ಸೂಚಿಸುವ ಪದ) : ಥತ್, ಥುತ್ (ಎನ್ನು) ; ಥೂ(ಕರಿಸು)

Tut[2] ಟಟ್ (ನಾ., ಕ್ರಿ. ಅಕ.) (ಗಣಿ ಕೆಲಸ) ಚಿಲ್ಲರೆ, ತುಂಡು, —ಕೆಲಸ. (Upon t., By the t.) [T.-work (ಮಾಡಿದಷ್ಟು ಕೆಲಸಕ್ಕೆ ಕೂಲಿ ಕೊಡುವ) ಚಿಲ್ಲರೆ, ತುಂಡು, —ಕೆಲಸ]. (ಕ್ರಿ.) ತುಂಡು ಕೆಲಸ ಮಾಡು.

Tutánia ಟ್ಯುಟೇನಿಯ (ನಾ.) ಒಂದು ಬಗೆಯ ಬ್ರಿಟ್ಯಾನಿಯ ಲೋಹ (Britain ಕೆಳಗೆ Britannia metal ನೋಡಿ)

Tútelage ಟ್ಯೂಟಿ(ಟೆ)ಲೆಜ್ (ನಾ.) ಪಾಲನೆ, ಪೋಷಣೆ, ರಕ್ಷಣೆ ; ಪಾಲನೆಯಲ್ಲಿರುವುದು ; ಪಾಲನೆಯಲ್ಲಿರುವ ಕಾಲ. **Tútelar(y)** (ಗು.) ಪಾಲಕ(ನ), ರಕ್ಷಕ(ನ) (T. authority ಪಾಲಕನ ಅಧಿಕಾರ)

Tútenag ಟ್ಯೂಟೆನ್ಯಾಗ್ (ನಾ.) ಚೀನಾ ದೇಶದಿಂದಲೂ ಮತ್ತು ಈಸ್ಟ್ ಇಂಡೀಸ್ ದ್ವೀಪಗಳಿಂದಲೂ ಬರುವ ಒಂದು ಬಗೆಯ ಸತು; ಜರ್ಮನ್ ಬೆಳ್ಳಿಯಂಥ ಒಂದು ಬಿಳಿಯ ಮಿಶ್ರಲೋಹ.

Tútor ಟ್ಯೂಟರ್ (ನಾ., ಕ್ರಿ.) (ಹುಡುಗನ ವಿದ್ಯಾಭ್ಯಾಸದ ಸಾಮಾನ್ಯ ಜವಾಬ್ದಾರಿಯುಳ್ಳ) ಮನೆಯ, ಖಾಸಗಿ, —ಉಪಾಧ್ಯಾಯ, ಶಿಕ್ಷಕ ; ಮನೆ ಮೇಷ್ಟ್ರು ; (ಇಂಗ್ಲೆಂಡಿನ ವಿ. ವಿ. ನಿ. ಗಳಲ್ಲಿ) ಪದವಿಗಾಗಿ ಓದುತ್ತಿರುವ ವಿದ್ಯಾರ್ಥಿಗಳ ವ್ಯಾಸಂಗದ ಮೇಲ್ವಿಚಾರಣೆ ನೋಡಿಕೊಳ್ಳುವ ಅಧಿಕಾರಿ : ವ್ಯಾಸಂಗದ ಮೇಲ್ವಿಚಾರಕ ; ಅಧ್ಯಾಪಕ ; (ಅಮೆ. ಸಂ.) ಮಹೋಪಾಧ್ಯಾಯನ ಕೆಳಗಿನ ಅಧ್ಯಾಪಕ: ಉಪಾಧ್ಯಾಯ ; (ನ್ಯಾ. ಶಾ.) (ಅಪ್ರಾಪ್ತ ವಯಸ್ಕನ) ಪಾಲಕ, ಪೋಷಕ. (ಕ್ರಿ.) ಪಾಠ ಹೇಳಿಕೊಡು ; ಅಧ್ಯಾಪಕನಾಗಿರು (ಜೀವನಕ್ಕಾಗಿ ನಹ) ; (ವ್ಯಕ್ತಿ, ಕೋಪೋದ್ರೇಕ, ಮೊ. ಗಳ ಮೇಲೆ) ಹತೋಟಿಯಿಟ್ಟುಕೊಂಡಿರು, ಅಂಕೆಯಿಟ್ಟಿರು ; (ಏನು ಮಾಡಬೇಕು, ಏನು ಹೇಳಬೇಕು, ಮೊ. ನ್ನು) ಹೇಳಿಕೊಡು ; (ಮು., ಸಾಕ್ಷಿಯನ್ನು, ಸಾಕ್ಷ್ಯವನ್ನು) ಹೇಳಿಕೊಟ್ಟು ತಯಾರುಮಾಡು. **Tútorage** (ನಾ.) ಪಾಲಕತ್ವ, ಅಧ್ಯಾಪಕತ್ವ, ಶಿಕ್ಷಕತ್ವ ; ಪಾಲನೆ, ಶಿಕ್ಷಣ. **Tútoress** (ನಾ., ಸ್ತ್ರೀ.); **Tutórial** ಟ್ಯುಟೋರಿಯಲ್ (ಗು.) ; **Tutórially** (ಕ್ರಿ. ವಿ.) ; **Tútorship** ಟ್ಯೂಟರ್— (ನಾ.) ಅಧ್ಯಾಪಕತ್ವ.

Tútti (It.) ಟುಟೀ (ಸಂ. ಸೂಚನೆ ; ನಾ.) ಎಲ್ಲರೂ, ಎಲ್ಲ ವಾದ್ಯಗಳೂ —ಒಟ್ಟಿಗೆ (ಬಾಜಿಸುವ ಸಂಗೀತ)

Tutté-frutti ಟುಟೀಫ್ರುಟೀ (ನಾ.) ಹಲವು ಹಣ್ಣಿನ —(ಮಂಜು) ಮಿಠಾಯಿ, ರಸಾಯನ.

Tútty ಟಟಿ (ನಾ.) (ಮೆರುಗು ಪುಡಿಯಾಗಿ ಉಪಯೋಗಿಸುವ) ಒಂದು ಅಶುದ್ಧ ಸ್ಟಿಂಕ್ ಆಕ್ಸೈಡು.

Túum ಟ್ಯೂಅಂ (ನಾ.). **Meum** ನೋಡಿ.

Tu-whít ಟೂ(ಹ್)ವಿಟ್ (ನಾ.), **Tu-whoó** ಟೂವ್ಹೂ (ನಾ., ಕ್ರಿ. ಅಕ.) ಗೂಬೆಯ ಕೂಗು ; ಗೂಗುಕ್ (ಎನ್ನು)

Tuxédo ಟಕ್ಸೀಡೊ (ನಾ.) (ಅಮೆ. ಸಂ.) (ಸಂಜೆಯ ವೇಳೆ ಗೋಷ್ಠಿ, ಮೊ. ಕ್ಕಾಗಿ ತೊಡುವ) ಗಂಡಸರ ಒಂದು ಬಗೆಯ ಅಂಗಿ; ಮಧ್ಯಾಹ್ನದ ಊಟದ ಕಾಲದ ಗಿಡ್ಡ ಅಂಗಿ.

Tuyére ಟ್ವೀ(ಟ್ಯೂ)ಯೇರ್, ಟ್ವಿಯರ್, **Twýer** ಟ್ವೈಯರ್ (ನಾ.) ಕುಲುಮೆ, ಮೊ. ಕ್ಕೆ ಗಾಳಿ ನುಗ್ಗಿಸುವ ಕೊಳವೆ ಮೂತಿ ; ನುಗ್ಗು ಗಾಳಿಯ ಕೊಳವೆ ಮೂತಿ.

Twáddell ಟ್ವಾಡೆಲ್ (ನಾ.) ನೀರಿಗಿಂತ ಭಾರವಾದ ದ್ರವಗಳ ವಿಶಿಷ್ಟ ಗುರುತ್ವವನ್ನು ಅಳೆಯುವ ಸಲಕರಣೆ : ಟ್ವಾಡೆಲ್ ವಿಶಿಷ್ಟ ಗುರುತ್ವ ಮಾಪಕ (ನಿರ್ಮಾಪಕನ ಹೆಸರಿನಿಂದ)

Twáddle ಟ್ವಾಡ್‌ಲ್ (ಕ್ರಿ. ಅಕ., ನಾ.) ಗೊಡ್ಡು, ಕಾಡು, —ಹರಟೆ (ಹರಟು). **Twáddler** (ನಾ.) ; **Twáddly** (ಗು.)

Twain ಟ್ವೇಯ್ನ್ (ಗು., ನಾ.) (ಪ್ರಾಚೀ. ಪ್ರ.) ಎರಡು, ಇಬ್ಬರು, ಜೊತೆ (Cut in t. ಎರಡಾಗಿ ಕತ್ತರಿಸು. To bless this t. that they may prosperous be)

Twang ಟ್ವ್ಯಾಂಗ್ (ಕ್ರಿ., ನಾ.) (ಮೀಟಿದ ತಂತಿ, ವಾದ್ಯ, ಅಥವಾ ಬಿಲ್ಲಿನ ಹೆದೆಯಂತೆ) ಟಂಕಾರ, ಟಂಕೃತಿ (—ಮಾಡು) ; (ತಿರಸ್ಕಾರ ಪ್ರ.) (ಪಿಟೀಲು, ಮೊ. ನ್ನು) ಟೊಂಯ್‌ಗುಟ್ಟಿಸು, ಬಾಜಿಸು [He twanged (on) his fiddle ಅವನು ಪಿಟೀಲನ್ನು ಟೊಂಯ್‌ಗುಟ್ಟಿಸಿದನು. He twanged his bow ಬಿಲ್ಲನ್ನು ಟಂಕಾರಮಾಡಿದನು] ; ಅನುನಾಸಿಕೋಚ್ಚಾರ(ದಿಂದ ಮಾತಾಡು), ಗೊಂಯ್ ಗೊಂಯ್ (ಎಂದು ಮಾತಾಡು), ಮೂಗಿನಲ್ಲಿ ಮಾತಾಡು(ವುದು). **Twángle** (ಕ್ರಿ.) ಟೊಂಯ್ ಟೊಂಯ್—ಗುಟ್ಟು, ಗುಟ್ಟಿಸು.

Twánkay ಟ್ವ್ಯಾಂಕೆ (ನಾ.) ಒಂದು ಬಗೆಯ ಹಸುರು ಟೀ.

'twas ಟ್ವಾಸ್. It was ಎಂಬುದರ ಸಂಕ್ಷಿಪ್ತ.

Twaýblade ಟ್ವೇಬ್ಲೇಡ್ (ನಾ.) ಹಸುರು ಅಥವಾ ಊದಾ ಹೂವುಗಳು ಬಿಡುವ, ಒಂಟಿ ಜೊತೆಯ ಎಲೆಯುಳ್ಳ, ಹಲವು ಬಗೆಯ ಸೀತಾಳೆ ಗೆಡ್ಡೆ : ಎರಡೆಲೆಗ.

Tweak ಟ್ವೀಕ್ (ಕ್ರಿ. ಸಕ., ನಾ.) ಚಿವುಟು, ನುಲಿಚು, ನುಲಿಚಿ ತಟಕ್ಕನೆ ಎಳೆ. (ನಾ.) (ಕ್ರಿಯಾರ್ಥಗಳಲ್ಲಿ) ; (ಅಸಂ.) ಉಪಾಯ, ಯುಕ್ತಿ, ಹೂಟ. **Tweáker** (ನಾ.) (ಅಸಂ.) (ಹುಡುಗನ) ಕವಣೆ.

Tweed ಟ್ವೀಡ್ (ನಾ.) ಗಂಡಸರ ಉಡುಪಿಗೆ ಉಪಯೋಗಿಸುವ, ಒಂದೇ ನೂಲಿನಲ್ಲಿ ಎರಡು ಅಥವಾ ಇನ್ನೂ ಹೆಚ್ಚು ಬಣ್ಣಗಳು ಬೆರೆತಿರುವ ಮೂಲೆ ನೆಯ್ಗೆಯ, ಒರಟು ಮೇಲ್ಮೈಯ, ಒಂದು ಬಗೆಯ ಉಣ್ಣೆಯ ಅಥವಾ ಉಣ್ಣೆಹತ್ತಿಗಳ ಮಿಶ್ರದ ಬಟ್ಟೆ : ಟ್ವೀಡು (ಬಟ್ಟೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Tweédle ಟ್ವೀಡ್‌ಲ್ (ನಾ.) ಪಿಟೀಲಿನದರಂಥ ನಾದ. **Tweedle-dúm & Tweedledeé** ಹೆಸರಿಗೆ ಮಾತ್ರ ಭಿನ್ನವಾದ, ಅತ್ಯಲ್ಪ ವ್ಯತ್ಯಾಸವುಳ್ಳ, —ವಸ್ತುಗಳು.

'tween ಟ್ವೀನ್ (ಕ್ರಿ. ವಿ., ಉಪ.) =Between. ['t.-decks ಹಡಗಿನ ಅಟ್ಟಗಳ ನಡುವೆ (ಇರುವ ಅವಕಾಶ)]

Tweény ಟ್ವೀನಿ (ನಾ.) (ಬಳ. ಮಾ.) (ಅಡಿಗೆಯವಳಿಗೂ ಪರಿಚಾರಕಳಿಗೂ —ಹೀಗೆ) ಇಬ್ಬರಿಗೆ ಸಹಾಯಕಳು ; ಉಭಯ ಪರಿಚಾರಿಕೆ. ಸಣ್ಣ ಚುಟ್ಟ.

Tweet ಟ್ವೀಟ್ (ನಾ., ಕ್ರಿ. ಅಕ.) (ಹಕ್ಕಿಯ ವಿಷಯದಲ್ಲಿ) ಚಿಲಿಪಿಲಿ (ಗುಟ್ಟು)

Tweézer ಟ್ವೀಸರ್ (ನಾ., ಕ್ರಿ. ಸಕ.) ಸಣ್ಣ ಚಿಮುಟ (ಸಾ., ಬ. ವ. ದಲ್ಲಿ ಪ್ರ. ; =Pair of tweezers). (ಕ್ರಿ.) (ಕೂದಲು, ಮುಳ್ಳು, ಮೊ. ನ್ನು) ಸಣ್ಣ ಚಿಮುಟದಿಂದ ತೆಗೆ.

Twelve ಟ್ವೆಲ್ವ್ (ಗು., ನಾ.) ಹನ್ನೆರಡು (೧೨, 12, XII). The T. ಹನ್ನೆರಡು ಮಂದಿ ಕ್ರೈಸ್ತ ಪ್ರವರ್ತನಾಚಾರ್ಯರು. The t. tables (Table ನೋಡಿ). In twelves ದ್ವಾದಶಪತ್ರಾಕಾರದಲ್ಲಿ. Long, square, twelves ನೀಳ, ಚೌಕ, ದ್ವಾದಶಪತ್ರ. **Twélvefold** (ಗು., ಕ್ರಿ. ವಿ.) ಹನ್ನೆರಡರಷ್ಟು ; ಹನ್ನೆರಡು ಮಡಿ. **Twélvemo, 12mo** ದ್ವಾದಶಪತ್ರ, ದ್ವಾದಶಪತ್ರಾಕಾರ(ದ ಪುಸ್ತಕ). **Twélvemonth** ಹನ್ನೆರಡು ತಿಂಗಳು, ವರ್ಷ (Has been there a t.-m. ಅಲ್ಲಿ ಒಂದು ವರ್ಷ ಇದ್ದನು). (ಕ್ರಿ. ವಿ.) This day t.-m. ಹೋದ, ಮುಂದಿನ, —ವರ್ಷ ಇದೇ ದಿನ. **Twélvepence** (ಅಂಗಡಿಯವರ ಮಾತಿನಲ್ಲಿ ಹೊರತು ಪ್ರಾಚೀ. ಪ್ರ.) ಹನ್ನೆರಡು ಪೆನಿ, ಒಂದು ಷಿಲಿಂಗು. **Twélvepenny** (ಗು.) ಹನ್ನೆರಡು ಪೆನಿಯ, ಷಿಲಿಂಗಿನ (ಬೆಲೆಯ). **Twelfth** (ಗು., ನಾ.) ಹನ್ನೆರಡನೆಯ(ದು); ಹನ್ನೆರಡನೆಯೊಂದು ಭಾಗ. The t. (ಗ್ರೌಸ್ ಕೋಳಿಯ ಷಿಕಾರಿಯ ಆರಂಭ ದಿನವಾದ) ಆಗಸ್ಟ್ ಹನ್ನೆರಡು. T.-day ಕ್ರಿಸ್ಮಸ್ ತರುವಾಯದ ಹನ್ನೆರಡನೆಯ ದಿನ, ಕ್ರಿಸ್ತ ಪ್ರತ್ಯಕ್ಷ ದಿನ (ಜನವರಿ ೬). T.-night ಸಂತೋಷ ಸಮಾರಂಭಗಳಿಂದ ಆಚರಿಸುವ, ಈ ಹನ್ನೆರಡನೆಯ ದಿನದ ಹಿಂದಿನ ಸಂಜೆ. T.-cake ಈ ಸಂಜೆಯ ಸಮಾರಂಭಕ್ಕಾಗಿ ಮಾಡಿದ ರೊಟ್ಟಿ. **Twélfthly** (ಕ್ರಿ. ವಿ.) ಹನ್ನೆರಡನೆಯದಾಗಿ.

Twénty ಟ್ವೆಂಟಿ (ಗು., ನಾ.) ಇಪ್ಪತ್ತು (೨೦, 20, XX) [Have told him t. times ಅವನಿಗೆ ಇಪ್ಪತ್ತುಸಲ (ಅಂದರೆ ಹಲವು ಸಲ) ಹೇಳಿದ್ದೇನೆ. T.-one, T.-two, etc. ೨೧, ೨೨, ಮೊ.]. **Twénty-mo** ೨೦ ಸಮಭಾಗಗಳಾಗಿ ಮಡಿಸಿದ ಹಾಳೆಯ ಪತ್ರ : ವಿಂಶತಿ—ಪತ್ರ, ಪತ್ರಾಕಾರದ ಪುಸ್ತಕ. **Twentyfóurmo** ೨೪ ಸಮ ಭಾಗಗಳಾಗಿ ಮಡಿಸಿದ ಹಾಳೆಯ ಪತ್ರ : ಚತುರ್ವಿಂಶತಿ—ಪತ್ರ, ಪತ್ರಾಕಾರದ ಪುಸ್ತಕ. **Twéntieth** (ಗು., ನಾ.) ; **Twéntyfold** (ಗು., ಕ್ರಿ. ವಿ.) ಇಪ್ಪತ್ತರಷ್ಟು ; ಇಪ್ಪತ್ತುಮಡಿ.

'twere ಟ್ವೇ(ಅ)ರ್, ಟ್ವರ್. It were ಎಂಬುದರ ಸಂಕ್ಷಿಪ್ತ.

Twi- ಟ್ವೈ— (ಸ. ಪೂ. ಪ.) ಎರಡು—, ಇರ್—, ದ್ವಿ—. **-bill** ಇಬ್ಬಾಯ ಗಂಡುಗೊಡಲಿ ; ಒಂದು ಬಗೆಯ ಪಿಕಾಸಿ. **-blade** =Twayblade (ಆ ಪದ ನೋಡಿ). **-fold** (ಗು., ಕ್ರಿ. ವಿ.) ಇಮ್ಮಡಿ(ಯಾಗಿ). **-folded** (ಗು.) ; **-forked** ಎರಡು ಕವಲಿನ, ದ್ವಿಶೂಲಿ. **-formed** ಎರಡು ರೂಪದ, ದ್ವಿರೂಪಿ.

Twice ಟ್ವೈಸ್ (ಕ್ರಿ. ವಿ.) ಎರಡು—ಸಲ, ಬಾರಿ (T. 3 is 6 ಮೂರೆರಡಲು ಆರು); ಎರಡರಷ್ಟು, ಇಮ್ಮಡಿ, ದ್ವಿಗುಣ (T. as strong. Is t. the man he was ಮೊದಲಿಗಿಂತ ಎರಡರಷ್ಟು ಬಲಶಾಲಿಯಾಗಿದ್ದಾನೆ). (ಬಳ. ಮಾ.) Did it in t. ಎರಡು ಪಟ್ಟಿನಲ್ಲಿ ಮಾಡಿದೆ. **Twícer** (ನಾ.) ಮೊಳೆ ಜೋಡಿಸುವ ಮತ್ತು ಮುದ್ರಣಯಂತ್ರ ನಡಸುವ—ಹೀಗೆ ಎರಡೂ ಕೆಲಸಗಳನ್ನು ನೋಡಿಕೊಳ್ಳುವವನು : ಇಕ್ಕೆಲಸಗಾರ.

Twíddle ಟ್ವಿಡ್‌ಲ್ (ಕ್ರಿ., ನಾ.) (ಕೆಲಸವಿಲ್ಲದೆ, ಸೋಮಾರಿಯಾಗಿ ಕುಳಿತು, ಏನನ್ನಾದರೂ) ಸುತ್ತಿಸು, ತಿರುಗಿಸು, ಆಡಿಸು ; ಅಂಗಚೇಷ್ಟೆ ಮಾಡು [T. one's thumbs (ಬೇರೆ ಕೆಲಸವಿಲ್ಲದೆ) ಹೆಬ್ಬೆಟ್ಟಾಡಿಸು] ; (ಅನ್ಯಮನಸ್ಕನಾಗಿ, ಸೋಮಾರಿಯಾಗಿ, ಒಂದರೊಡನೆ) ಕುಚೇಷ್ಟೆಮಾಡು (*With* ಉಪ. ದೊಡನೆ). (ನಾ.) ಸುತ್ತು, ತಿರುಗು. Twiddling-line ದಿಕ್ಸೂಚಿಯ ಫಲಕ ಆಡದೆ ಕಚ್ಚಿಕೊಂಡಾಗ ಅದನ್ನು ಸರಾಗವಾಗಿ ಆಡುವಂತೆ ಮಾಡಲು, ದಿಕ್ಸೂಚಿಯ ಜಿಂಬಲ್ ಸಲಕರಣೆಗೆ ಕಟ್ಟಿ ಎಳೆಯುವ ದಾರ : ಆಡುದಾರ.

Twig[1] ಟ್ವಿಗ್ (ನಾ.) ಸಣ್ಣ—ಕೊಂಬೆ, ರೆಂಬೆ; ಸೆಳೆಗೊಂಬು ; ಕುಡಿ, ಕೊನೆ ; (ಅಂ. ರ. ಶಾ.) (ಅಪಧಮನಿ, ಮೊ. ಗಳ) ಸಣ್ಣ ಕವಲು, ಕಿರು ಶಾಖೆ ; (ವಿದ್ಯುಚ್ಛಕ್ತಿ) ಸಣ್ಣ ಶಾಖಾ ವಿದ್ಯುದ್ವಾಹಕ ; ಊಹೆ ಕಡ್ಡಿ (=Dowsing-rod) [(Dowsing ನೋಡಿ). ವಾ., Work the t.]. Hop the t. (ಬಳ. ಮಾ.) ಸಾಯಿ, ಕಂತೆವೊಗೆ **(-)twigged** (ಗು.) ; **Twígless** (ಗು.) ; **Twíggy** (ಗು.) ಸೆಳೆಗೊಂಬಿನಂಥ ; ಸಣ್ಣ ಸಣ್ಣ ರೆಂಬೆಗಳಿರುವ ; ಪೊದರಾಗಿ ಬೆಳೆದ, ಕುರುಚಲಾದ.

Twig[2] ಟ್ವಿಗ್ (ಕ್ರಿ. ಸಕ.) (ಬಳ. ಮಾ.) ತಿಳಿದುಕೊ, ಗ್ರಹಿಸು, (ಅರ್ಥ) ಹಿಡಿ (I twigged what you were after); ನೋಡು, ನಿಗಾ ಇಡು, ಪರಾಮರ್ಶಿಸು, ಪರಿಶೀಲಿಸು.

Twílight ಟ್ವೈಲೈಟ್ (ನಾ., ಕ್ರಿ. ಸಕ.) ಬೆಳಗ್ಗೆ ಅಥವಾ (ಸಾ.) ಸಂಜೆ ಸೂರ್ಯನು ಕ್ಷಿತಿಜದ ಕೆಳಗಿರುವಾಗ ಬಾನಿಂದ ಪಸರಿಸುವ ಬೆಳಕು : ಮುಂಬೆಳಕು, ಹಿಂಬೆಳಕು, ಸಂಧಿ ಪ್ರಕಾಶ; ನಸು ಬೆಳಕು ; (ರೂಪ.) ಸಂಧಿಸ್ಥಿತಿ, ಅಪೂರ್ಣ ಜ್ಞಾನ, ಅರೆ ತಿಳಿವಳಿಕೆ ; [T. arc(h) *or* curve ಸೂರ್ಯಾಸ್ತ ಕಾಲದಲ್ಲಿ ಪೂರ್ವ ದಿಕ್ಕಿನ ಕ್ಷಿತಿಜದಲ್ಲಿ ಕಂಡುಬರುವ ಗಾಢ ನೀಲ ಛಾಯಾ ಪ್ರದೇಶದ ಎಲ್ಲೆಯಾದ ಪಾಟಲವರ್ಣದ ಪಟ್ಟೆ : ಸಂಧ್ಯಾ ಚಾಪ. T. of the gods (ನಾರ್ವೆಯವರ ಪುರಾಣ : ಪರಸ್ಪರ ನಾಶದಲ್ಲಿ ಪರ್ಯವಸಾನಗೊಂಡ) ದೇವಾಸುರ ಯುದ್ಧ. T. sleep ಹೆರಿಗೆಯಲ್ಲಿ ನೋವಾಗದಂತೆ ಮಾಡುವ ಒಂದು ಆಧುನಿಕ ವಿಧಾನ : ಸೂಲು, ಸಂಧಿ,—ನಿದ್ರೆ]. (ಕ್ರಿ.) ನಸು ಬೆಳಗು, ಮಬ್ಬಾಗಿ ಬೆಳಗು.

Twill ಟ್ವಿಲ್ (ನಾ., ಕ್ರಿ. ಸಕ.) ಮೂಲೆ ನೆಯ್ಗೆಯ ಬಟ್ಟೆ ; ಟ್ವಿಲ್ಲು. (ಕ್ರಿ.) ಮೂಲೆ ನೆಯ್ಗೆ ನೆಯ್ಯಿ (ಸಾ., ಭೂ. ಕೃ. ನಲ್ಲಿ)

'twill ಟ್ವಿಲ್. It will ಎಂಬುದರ ಸಂಕ್ಷಿಪ್ತ.

Twin ಟ್ವಿನ್ (ಗು., ನಾ., ಕ್ರಿ.) ಅವಳಿ (ಜವಳಿ), ಯಮಳ [T. children, brother(s), sister(s) ಅವಳಿ—ಮಕ್ಕಳು, ಸೋದರ(ರು), ಸೋದರಿ(ಯರು). The T. Brothers *or* Brethren ಮಿಥುನ ರಾಶಿಯ (Castor & Pollux ಎಂಬ) ಯಮಳ ನಕ್ಷತ್ರಗಳು] ; (ಸ. ವಿ.) ಜೊತೆಯಾಗಿ, ಜೋಡಿಯಾಗಿ, —ಬೆಳೆಯುವ ; ಪರಸ್ಪರ ನಿಕಟ ಸಂಬಂಧವಿರುವ ಎರಡು ಸದೃಶ ಭಾಗಗಳುಳ್ಳ : ಎಣೆ ; [T. boat, steamer (ಒಂದೇ ಅಟ್ಟಕ್ಕೆ ಆಧಾರವಾಗಿ ಎರಡು ಒಡಲುಗಳು ಇದ್ದು ನಡುವೆ ಹುಟ್ಟುಚಕ್ರವುಳ್ಳ) ಅವಳಿ—ದೋಣಿ, ಜಹಜು. Twin-flower ಜೊತೆಯಾಗಿ ಸುವಾಸನೆಯ ಹೂವು ಬಿಡುವ ಒಂದು ಬಳ್ಳಿ : ಯಮಲ ಪುಷ್ಪಿ, ಎಣೆ ಹೂಬಳ್ಳಿ. T.-screw ಪ್ರತ್ಯೇಕ ಅಕ್ಷದಂಡಗಳ ಮೇಲೆ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ತಿರುಗುವ ಎರಡು ತಿರುಪು ಚಾಲಕಗಳುಳ್ಳ ಜಹಜು : ಅವಳಿ ತಿರುಪು ಚಾಲಕ ಜಹಜು]. (ನಾ.) ಅವಳಿ (ಮಗು) ; (ವ್ಯಕ್ತಿಯ ಅಥವಾ ವಸ್ತುವಿನ) ಪಡಿ, ಜೋಡಿ, ಜೊತೆ ; ಒಂದರ ಭಾಗಗಳು ಮತ್ತೊಂದರ ಭಾಗಗಳಿಗೆ ಪರಸ್ಪರ ವಿಮುಖ ಸ್ಥಿತಿಯಲ್ಲಿರುವ ಸಂಯುಕ್ತ ಸ್ಫಟಿಕ: ಯಮಲ ಸ್ಫಟಿಕ; [The twins ಮಿಥುನ ರಾಶಿ(ಯ ನಕ್ಷತ್ರಗಳು). Siamese twins (Siamese ನೋಡಿ)]. (ಕ್ರಿ.) (ಎರಡನ್ನು) ಒಟ್ಟು, ಜೊತೆ, ಜೋಡಿ, ಅವಳಿ,—ಮಾಡು, ಆಗು (*With* ಉಪ. ದೊಡನೆ). Twinning-machine, -saw (ಬಾಚಣಿಗೆಯ ಹಲ್ಲುಗಳನ್ನು ಕೊರೆಯುವ) ಅವಳಿ ಗರಗಸ, ಹಣಿಗೆ ಗರಗಸ (ಎರಡು ಅಂಚಿನಲ್ಲೂ ಒಟ್ಟಿಗೆ ಹಲ್ಲು ಕೊರೆದು ತರುವಾಯ ನಡುವೆ ಎರಡಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೀಳಿ ಎರಡು ಬಾಚಣಿಗೆಗಳನ್ನು ಮಾಡುವುದರಿಂದ). **Twínling** (ನಾ.) ಅವಳಿಮಗು. **Twínship** (ನಾ.) ಯಮಲತ್ವ.

Twine ಟ್ವೈನ್ (ನಾ., ಕ್ರಿ.) (ನಣಬು, ಮೊ. ಗಳ ಎರಡು ಮೂರು ಎಳೆಗಳನ್ನು ಹೊಸೆದುಮಾಡಿದ) ಹುರಿ, ಟ್ವೈನ್ ದಾರ ; ಸುರುಳಿ, ಸಿಂಬಿ, ನುಲಿಕೆ, ತಿರುಚು (Snaky twines) ; ಹೆಣಿಗೆ, ಗೋಜು. (ಕ್ರಿ.) (ಹೊಸೆದು) ಹುರಿಮಾಡು ; ಹೊಸೆ ; (ಮಾಲೆ, ಮೊ. ನ್ನು) ಹೆಣೆ(ದು ಮಾಡು). (ಹಣೆ, ಮೊ. ನ್ನು) ಸುತ್ತುವರಿ, ಮಾಲೆ ಕಟ್ಟು (*With* ಉಪ. ದೊಡನೆ) ; ಹೆಣೆ, ಹೆಣಿಗೆ ಹಾಕು ; ಸುತ್ತು(ಗಟ್ಟು), ಸುರುಳಿ ಸುತ್ತು (*About*, *round* ಉಪ. ಗಳೊಡನೆ) ; (ಸಸ್ಯ, ಹಾವು, ಮೊ. ಗಳ ವಿಷಯದಲ್ಲಿ) ಸಿಂಬಿ, ಸುರುಳಿ,—ಸುತ್ತಿಕೊ (*Round* ಪದದೊಡನೆ). **Twíner** (ನಾ.) (ಕ್ರಿಯಾರ್ಥಗಳಲ್ಲಿ) ; ಮು., ಸುರುಳಿಬಳ್ಳಿ ಸಸ್ಯ. **Twíningly** (ಕ್ರಿ. ವಿ.)

Twinge ಟ್ವಿಂಜ್ (ಕ್ರಿ. ಸಕ., ಪ್ರಾಚೀ. ಪ್ರ., ನಾ.) ಚಳುಕು (ಬರಿಸು), ಇರಿ(ತ), ಚುಚ್ಚು (ನೋವು) (A t. of tooth-ache, remorse Conscience twinged him)

Twínkle ಟ್ವಿಂಕ್‌ಲ್ (ಕ್ರಿ., ನಾ.) (ಬೆಳಕು, ನಕ್ಷತ್ರಗಳು, ಮೊ. ಗಳ ವಿಷಯದಲ್ಲಿ) ಮಿನುಗು(ಟ್ಟು), ಮಿರುಗು, ಥಳಥಳಿಸು ; (ಕಣ್ಣು, ಕಣ್ಣರೆಪ್ಪೆ, ಕುಣಿಯುವಾಗ ಪಾದಗಳು, ಮೊ. ಗಳ ವಿಷಯದಲ್ಲಿ) ತಕತಕನೆ—ಆಡು, ಆಡಿಸು ; ಮಿಟುಕು, ಮಿಟುಕಿಸು ; ಮಿಟಿಮಿಟಿ ನೋಡು ; (ಕಣ್ಣಿನ ವಿಷಯದಲ್ಲಿ) ಸ್ಫುರಿಸು, ಥಳಗುಟ್ಟು (*At* jest, etc.). (ನಾ.) ಕಣ್ಣು ಮಿಟುಕು, ರೆಪ್ಪೆಯ ಹೊಡೆತ, ಮಿಟಿ ಮಿಟಿ ನೋಟ ; (ಕಣ್ಣಿನ) ಮಿನುಗು, ಸ್ಫುರಣ (Humorous, mischievous, t. ಹಾಸ್ಯದ, ಚೇಷ್ಟೆಯ, ಮಿನುಗು) ; ಲಘು ಶೀಘ್ರ ಗತಿ, ಸ್ಫುರಚ್ಚಲನ (ಉದಾ., ನರ್ತನದಲ್ಲಿ ಪಾದಗಳ ಚಲನೆ) ; ಮಿಣುಕು, ನಸುಹೊಳಪು. **Twínkler** (ನಾ.) ; **Twínkling** (ನಾ.) (ಕ್ರಿಯಾರ್ಥಗಳಲ್ಲಿ). In a t., in the t. of an eye, in the t. of a bed post ಒಂದು ಕ್ಷಣದಲ್ಲಿ, ಕಣ್ಣು ಮಿಟುಕಿಸುವಷ್ಟರಲ್ಲಿ.

Twirl ಟ್ವರ್‌ಲ್ (ಕ್ರಿ., ನಾ.) ಸುತ್ತು, ತಿರುಗು, ಗಿರಕಿ ಹೊಡೆ, ಸುತ್ತಿಸು, ತಿರುಗಿಸು, ಗಿರಕಿ ಹೊಡಸು (*Round* ಪದದೊಡನೆ) ; (ಹೆಬ್ಬೆಟ್ಟು, ಮೊ. ನ್ನು ಕೆಲಸವಿಲ್ಲದೆ) ಸುಮ್ಮನೆ—ಸುತ್ತಿಸು, ತಿರುಗಿಸು. (ನಾ.) ಸುತ್ತು ತಿರುಗುವುದು, ಗಿರಕಿ; (ಲೇಖನಿ, ಮೊ. ಗಳಿಂದ ಮಾಡಿದ) ವಕ್ರಾಲಂಕಾರ, ವೈಖರಿ, ಕೊಂಕು.

Twist ಟ್ವಿಸ್ಟ್ (ನಾ., ಕ್ರಿ.) ಹೊಸೆದ, ಹುರಿಮಾಡಿದ, —ದಾರ, ಹಗ್ಗ; (ರೇಷ್ಮೆಯ ಅಥವಾ ಹತ್ತಿಯ) ಗಟ್ಟಿ ದಾರ, ಹುರಿ ; (ಹೊಸೆದ ಹಗ್ಗದ ಆಕಾರದ) ಸುರುಳಿ ಹೊಗೆಸೊಪ್ಪು, ರೊಟ್ಟಿ, ಮೊ. ವು ; ಎರಡು ಕೊನೆಗಳಲ್ಲಿಯೂ ತಿರುಚಿದ ಕಾಗದದ ಪೊಟ್ಟಣ : ತಿರುಚು ಪೊಟ್ಟಣ ; ಹೊಸೆತ, ತಿರುಚು, ನುಲಿ(ತ) (Give it a t. ಅದನ್ನು ಒಂದುನಲ ನುಲಿ, ತಿರುಚು. Full of turns & twists ತುಂಬ ತಿರುಚು ಮುರುಚುಗಳುಳ್ಳ) ; ತಿರುಚಿರುವ—ರೀತಿ, ಪರಿಮಾಣ : ತಿರುವು, ಮುರುವು (ಉದಾ., ರೈಫಲ್ ಬಂದೂಕಿನ ಗಾಡಿಯದು, ಕ್ರಿಕೆಟ್‌ನಲ್ಲಿ ಎಸಗಾರನು ಎಸದ ಚೆಂಡಿನದು, ಮೊ.). (ಮನಸ್ಸು, ಸ್ವಭಾವ, ಮೊ. ಗಳ) ವಿಚಿತ್ರ ಪ್ರವೃತ್ತಿ, ಕೊಂಕು, ವಕ್ರತೆ, ವೈಚಿತ್ರ್ಯ. (ಭೌ. ವಿ.) ತಿರುಚು ವಿಕಾರ, ತಿರುಚು ಕೋನ ; ತಿರುಚು, ತಿರುವು, —ಮುನ್ ಚಲನೆ ; ತಿರುಚು ಮುಂಬರಿವು; ಹಲವು ಬಗೆಯ ಮಿಶ್ರ ಪಾನೀಯ (Gin t.) ; (ಬಳ. ಮಾ.) ಹಸಿವು (Had a tremendous t.); [Damascus t. ಫಿರಂಗಿಯ ನಳಿಕೆಯನ್ನು ಮಾಡುವುದಕ್ಕಾಗಿ ದಮಾಸ್ಕಸ್ ಕಬ್ಬಿಣವನ್ನು ತಿರುಚುವ ವಿಧಾನ : ದಮಾಸ್ಕಸ್ ತಿರುಚು. T. of the wrist (ರೂಪ.) ಕೈಚಳಕ, ಹಸ್ತಕೌಶಲ]. (ಕ್ರಿ.) (ಎಳೆ, ಮೊ. ನ್ನು) ಹೊಸೆ, ಹುರಿಮಾಡು; ಹೊಸೆದು (ಹಗ್ಗ, ಮೊ. ನ್ನು) ಮಾಡು ; (ಒಂದರೊಡನೊಂದನ್ನು) ಹೆಣೆ (*With*, *in with* ಪದಗಳೊಡನೆ) ; (ಕಂಬಿ, ಕಂಬ, ಮೊ. ನ್ನು) ತಿರುಚು ; ತಿರುಚಿಕೊ(ಂಡು ಬೆಳೆ), ಸುರುಳಿ ಸುತ್ತಿಕೊ(ಂಡು ಬೆಳೆ), ಸುರುಳಿಯಾಗಿ ಬೆಳೆ ; (ಚೆಂಡನ್ನು) ತಿರುಚಿ(ಕೊಂಡುಹೋಗುವಂತೆ)—ಹೊಡೆ, ಎಸೆ ; (ಹೂವು, ಮೊ. ನ್ನು) ಹಾರ ಹೆಣೆ (*Into* ಉಪ ದೊಡನೆ) ; ಹೆಣೆದು (ಹಾರ)ಮಾಡು ; (ಗುಂಪಿನಲ್ಲಿ) ತಿರುಚಿಕೊಂಡು, ನುಲಿಚಿಕೊಂಡು,—ದಾರಿಮಾಡಿಕೊ, ಹೋಗು (*Through*, *along* ಮೊ. ಉಪ. ದೊಡನೆ) ; ತಿರುಚು, ವಕ್ರಮಾಡು [Features twisted with pain. T. one's arm ರಟ್ಟೆ ತಿರುಚಿ ಹಿಂಸಿಸು. (ರೂಪ.) Wants to t. my words into an admission of error ನಾನು ತಪ್ಪೊಪ್ಪಿಕೊಂಡಂತೆ ನನ್ನ ಮಾತುಗಳನ್ನು ತಿರುಚಬಯಸುತ್ತಾನೆ]. T. off ತಿರುಚಿ, ನುಲಿಚಿ, —ಕಿತ್ತುಹಾಕು, ಮುರಿದುಹಾಕು. T. up (ಕಾಗದ, ಮೊ. ನ್ನು) ಸುರುಳಿ ತಿರುಚು. **Twístable** (ಗು.) ; **Twíster** (ನಾ.) (ಕ್ರಿಯಾರ್ಥಗಳಲ್ಲಿ) ; (ಕ್ರಿಕೆಟ್ ಅಥವಾ ಬಿಲ್ಯರ್ಡ್ಸ್ ಆಟದಲ್ಲಿ) ತಿರುಚು, ನುಲಿಚು, —ಚೆಂಡು ; (ಕಬ್ಬಿಣದ) ತೊಲೆ, ಸರ ; (ಕುದುರೆ ಮೇಲೆ ಕುಳಿತು ಸವಾರಿಮಾಡುವುದಕ್ಕೆ ಸರಿಯಾದ ಭಾಗವಾದ) ತೊಡೆಯ ಒಳ ಪಕ್ಕ, ಒಳ ತೊಡೆ.

Twit ಟ್ವಿಟ್ (ಕ್ರಿ. ಸಕ.) ಬಯ್ಯಿ, ಮೂದಲಿಸು, ಆಕ್ಷೇಪಿಸು, ಹಂಗಿಸು (T. person *with* fault). **Twíttingly** (ಕ್ರಿ. ವಿ.)

Twitch ಟ್ವಿಚ್ (ಕ್ರಿ., ನಾ.) ತಟಕ್ಕನೆ—ಎಳೆ, ಜಗ್ಗು, ಜಗ್ಗಿ ಕಿತ್ತುಬಿಡು (*Off* ಮೊ. ಉಪ. ದೊಡನೆ); (ಮು., ಗಮನ ಸೆಳೆಯುವುದಕ್ಕಾಗಿ ವ್ಯಕ್ತಿಯ ಅಂಗಿಯ ತೋಳು, ಮೊ. ನ್ನು) ಹಿಡಿದೆಳೆ, ಜಗ್ಗು, ತುಯ್ಯಿ ; (ಮುಖಭಾವ, ಸ್ನಾಯು, ಕೈಕಾಲು, ಮೊ. ಗಳ ವಿಷಯದಲ್ಲಿ: ಸೆಳೆರೋಗದಲ್ಲಿಯಂತೆ) ತುಡಿದುಕೊ, ವಕ್ರವಾಗಿ ಸ್ಪಂದಿಸು. (ನಾ.) ತುಡಿತ, ಸ್ಪಂದನ; ತಟಕ್ಕನೆಯ—ಎಳೆತ, ತುಯ್ತ, ಜಗ್ಗು ; ಕುದುರೆಗೆ ಶಸ್ತ್ರಚಿಕಿತ್ಸೆ ಮಾಡುವಾಗ ಅದನ್ನು ಅಲುಗಾಡದೆ ಹಿಡಿದು ನಿಲ್ಲಿಸುವುದಕ್ಕಾಗಿ ಮೂತಿಗೆ ತೊಡಿಸಿ ಬಿಗಿಸುವ ಒಂದು ಬಗೆಯ ಕುಣಿಕೆ : ತಿರುಚು ಕುಣಿಕೆ.

Twítter ಟ್ವಿಟರ್ (ಕ್ರಿ., ನಾ.) (ಹಕ್ಕಿಯ ವಿಷಯದಲ್ಲಿ) ಚಿಲಿಪಿಲಿಗುಟ್ಟು ; ಚಿಲಿಪಿಲಿಗುಟ್ಟುತ್ತ, ಕಿಲ ಕಿಲನೆ,—ಹೇಳು. (ನಾ.) ಚಿಲಿ ಪಿಲಿ ; ಕಿಲ ಕಿಲ. (ಬಳ. ಮಾ.) ಉದ್ರೇಕದ ತತ್ತರಿಕೆ, ಉದ್ರೇಕ ಸ್ಥಿತಿ (=**Twitterátion**)

'twixt ಟ್ವಿಕ್ಸ್ಟ್ (ಉಪ.) =Betwixt (ಎಂಬುದರ ಸಂಕ್ಷಿಪ್ತ)

Two ಟೂ (ಗು., ನಾ.) ಎರಡು, ದ್ವಿ (೨, 2, II). One or t. ಒಬ್ಬಿಬ್ಬರು, ಕೆಲವರು. Cut, divide, in t. ಎರಡಾಗಿ ಕತ್ತರಿಸು. ಸೀಳು ; ಇಬ್ಭಾಗ ಮಾಡು. T. can play at that game (ಪ್ರತೀಕಾರದ ಹೆದರಿಕೆಯನ್ನು ಸೂಚಿಸುವಲ್ಲಿ) ಆ ಆಟ ಇಬ್ಬರೂ ಆಡಬಹುದು ; ನಿನಗೂ ನಾನು ಹಾಗೆಯೇ ಮಾಡಬಲ್ಲೆ. Put t. & t. together ಗೊತ್ತಿರುವ ಸಂಗತಿಗಳನ್ನು ಜೋಡಿಸಿ— ಅನುಮಿತಿಮಾಡು, ಊಹಿಸು. In t. twos ಬಹು ಸ್ವಲ್ಪ ಕಾಲದಲ್ಲಿ, ನಾಲ್ಕೆಣಿಸುವುದರಲ್ಲಿ. **T.-cleft** (ಸ. ವಿ.) (ಮಧ್ಯದವರೆಗೆ) ಎರಡಾಗಿ ಸೀಳಿರುವ. **T.-edged** =Double-edged (Double ಕೆಳಗೆ ಆ ಪದ ನೋಡಿ). **T.-faced** =Double-faced (Double ಕೆಳಗೆ ಆ ಪದ ನೋಡಿ). **Twófold** (ಗು., ನಾ.) ಎರಡರಷ್ಟು, ಇಮ್ಮಡಿ(ಯಾಗಿ), ದ್ವಿಗುಣ(ವಾಗಿ). **T.-handed** ಎರಡು ಕೈಗಳುಳ್ಳ, ಇಕ್ಕೈಯ ; (ಕತ್ತಿಯ ವಿಷಯದಲ್ಲಿ) ಎರಡೂ ಕೈಗಳಿಂದ ಉಪಯೋಗಿಸಬೇಕಾದ ; (ಗರಗಸ, ಆಟ, ಮೊ. ಗಳ ವಿಷಯದಲ್ಲಿ) ಇಬ್ಬರು ಹಿಡಿಯಬೇಕಾದ, ಆಡಬೇಕಾದ. **T.-handled** ಎರಡು ಹಿಡಿಗಳುಳ್ಳ, ಇಪ್ಪಿಡಿಯ (ಹಾಗೆಯೆ : T.-legged, T.-tipped, T.-masted, T.-petalled, T.-toothed). **T.-line** (ಮುದ್ರಣ) (ನಿರ್ದಿಷ್ಟ ಅಳತೆಯ) ಎರಡರಷ್ಟು ಉದ್ದನಾದ (T.-line pica). **Twópence** (ಟಪನ್ಸ್) ಎರಡು ಪೆನಿ (ನಾಣ್ಯ) [A penny plain & t.-p. coloured (Penny ನೋಡಿ)]. **Twópenny** ಟಪೆನಿ (ಗು., ನಾ.) ಎರಡು ಪೆನಿ ಬೆಲೆಯ, ಅಗ್ಗದ, ಕೆಲಸಕ್ಕೆ ಬಾರದ. (ನಾ.) ಒಂದು ಬಗೆಯ ಬಿಯರ್ ಮದ್ಯ ; [(ಅಸಂ.) Tuck in your t.-p. (ಕಪ್ಪೆ ಕುಪ್ಪಳಿಸಾಟದಲ್ಲಿ) ನಿನ್ನ ತಲೆಯನ್ನು ಒಳಗಿಟ್ಟುಕೊ]. **Twopenny-halfpenny** (ಟಪೆನಿಹೇಪ್ನಿ) ದಮ್ಮಡಿ ಬಾಳದ, ನಿಕೃಷ್ಟ, ಕೆಲಸಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಾರದ. **T.-ply** ಎರಡು—ಎಳೆಯ, ಪದರದ, ದಪ್ಪದ (T.-ply rope, carpet). **T.-speed** ಎರಡು ವೇಗಗಳಿಗೆ—ಅನುಕೂಲಿಸುವ, ಹೊಂದಿಸಿದ; ಎರಡು ವೇಗಗಳ (T.-speed gear, bicycle). **T.-sided** ಎರಡು ಪಕ್ಕಗಳು, ಪಕ್ಷಗಳು, ದೃಷ್ಟಿಗಳು, —ಉಳ್ಳ. **T.-step** ಒಂದು ಬಗೆಯ ಗುಂಡು ಕುಣಿತ. **T.-tongued** ಎರಡು ನಾಲಗೆಯ; ಮೋಸದ, ಕೃತ್ರಿಮದ. **T.-way** (ನಲ್ಲಿಯ ತಿರುಪು ಬಿರಡೆಯ ವಿಷಯದಲ್ಲಿ) ಎರಡರಲ್ಲಿ ಯಾವ ಕಡೆ ಬೇಕಾದರೂ ದ್ರವ ಹರಿಯಲು ಅವಕಾಶಕೊಡುವ: ಇದ್ವಾರಿಯ, ದ್ವಿಮಾರ್ಗದ; (ಗಣಿತ) ಎರಡು ವಿಧಾನಗಳಲ್ಲಿ ವ್ಯತ್ಯಯವಾಗುವ: ದ್ವಿಮಾರ್ಗಿ. **Twóness** (ನಾ.) ಎರಡುತನ, ದ್ವಿತ್ವ, ದ್ವೈತ, ದ್ವೈಧ. **Twósome** (ಗು., ನಾ.) (ಸ್ಕಾ. ಪ್ರ.) ಇಬ್ಬರು ಆಡುವ (ಆಟ, ಕುಣಿತ, ಮೊ.)

'twould ಟ್ವುಡ್. It would ಎಂಬುದರ ಸಂಕ್ಷಿಪ್ತ.

Twy- ಟ್ವೈ— (ಸ. ಪೂ. ಪ.). Twi- ಎಂಬುದರ ರೂಪಾಂತರ.

Twýer ಟ್ವೈಅರ್ (ನಾ.). **Tuyere** ನೋಡಿ.

Týburn ಟೈಬರ್ನ್ (ನಾ.) (ಚರಿತ್ರೆ) ಲಂಡನಿನಲ್ಲಿಯ ವಧ್ಯಸ್ಥಾನ, ಗಲ್ಲಿಗೆ ಹಾಕುವ ಸ್ಥಳ. T. Ticket (ಚರಿತ್ರೆ) (ಘಾತುಕನಿಗೆ ಶಿಕ್ಷೆ ಯಾಗುವಂತೆ ಫಿರ್ಯಾದು ನಡಸಿದವನಿಗೆ) ಗ್ರಾಮಕರ್ತವ್ಯ, ಮೊ. ಗಳಿಂದ ಕೊಟ್ಟ ವಿನಾಯಿತಿ; ಇಂಥ ವಿನಾಯಿತಿ ಪತ್ರ. T. tippet ನೇಣು. T. tree ಗಲ್ಲು(ಮರ). **Týburnia** (ನಾ.) ಹೈಡ್‌ಪಾರ್ಕಿಗೆ ಉತ್ತರ ಪಾರ್ಶ್ವದ, ಲಂಡನಿನ ಒಂದು ನೀಟುಗಾರರ ಪ್ರಾಂತ.

Tycoón ಟೈಕೂನ್ (ನಾ.) ಜಪಾನಿನಲ್ಲಿ 'ಷೋಗುನ್'ನಿಗೆ ಪರದೇಶೀಯರು ಉಪಯೋಗಿಸುತ್ತಿದ್ದ ಬಿರುದು. **Tycoónate** (ನಾ.) ಟೈಕೂನಿನ—ಅಧಿಕಾರ, ಪದವಿ.

Tying. **Tie** ನೋಡಿ.

Tyke. **Tike** ನೋಡಿ.

Tyler. **Tile** (ಕೆಳಗೆ Tiler) ನೋಡಿ.

Týlopod ಟೈಲೊಪಾಡ್ (ಗು., ನಾ.) ಬೆರಳುಗಳಲ್ಲಿ ಗೊರಸಿಗೆ ಬದಲು ಮೆತ್ತೆಗಳುಳ್ಳ (ಪ್ರಾಣಿ): ಮೆತ್ತೆಪಾದಿ (ಉದಾ., ಒಂಟೆ). **Tylópodous** ಟೈಲಾಪೊಡಸ್ (ಗು.)

Tylósis ಟೈಲೋಸಿಸ್ (ನಾ.) (ರೋಗ ನಿದಾನ) ಎವೆಯಂಚು ಗಡುಸಾಗುವ ಕಣ್ಣೆವೆಯ ಒಂದು ಉರಿಯೂತ: ಎವೆಯೂತ; (ಸ. ವಿ.) ಸಸ್ಯನಾಳ(ದಲ್ಲಿ ಬೆಳೆದುಕೊಳ್ಳುವ ಒಂದು ಬಗೆಯ) ಗಂತಿ. **Týlote** ಟೈಲೋಟ್ (ನಾ.) (ಪ್ರಾ. ವಿ.) ಎರಡು ತುದಿಗಳಲ್ಲೂ ಗುಬಟುಗಳುಳ್ಳ, ಸ್ಪಂಜಿನ ಸೂಚ್ಯಂಗ. **Tylótic** ಟೈಲಾಟಿಕ್ (ಗು.) ಎವೆಯೂತದ.

Týlote, Tylótic. **Tylosis** ನೋಡಿ.

Tymp ಟಿಂಪ್ (ನಾ.) (ಊದು ಕುಲುಮೆಯಲ್ಲಿ) ಬೆಂಕಿಗೂಡಿನ ಮುಂಭಾಗದ ಬಾಯಿನೆತ್ತಿ; (ಗಣಿಯಲ್ಲಿ) ಸಮತಲದ ಮೋಟು ಚಾವಣಿ ತೊಲೆ.

Týmpan ಟಿಂಪನ್ (ನಾ.) ಬಿಗಿದೆಳೆದ—ಪೊರೆ, (ಅಥವಾ ಇತರ) ಹಾಳೆ; ಕೆಲವು ಮುದ್ರಣ ಯಂತ್ರಗಳಲ್ಲಿ ಒತ್ತಡವನ್ನು ಸಮವಾಗಿಡಲು ಇರುವ ಚೌಕಟ್ಟು: ಸಮವೊತ್ತಡ ಚೌಕಟ್ಟು; (ಅಂ. ರ. ಶಾ., ವಾ. ಶಾ.) =Tympanum. **Tympánic** ಟಿಂಪ್ಯಾನಿಕ್ (ಗು.) ಮದ್ದಲೆಯಂಥ; (ಅಂ. ರ. ಶಾ.) ನಡುಕಿವಿಯ [T. membrane ನಡುಕಿವಿಯ ಪೊರೆ, ಕಿವಿಯ ಹರೆ. T. (bone) ಕಿವಿಹರೆಯ ಪೊರೆಗೆ ಆಧಾರವಾದ ಮೂಳೆ: ಕಿವಿಹರೆಯೆಲುಬು]. **Tympanítes** ಟಿಂಪನೈಟೀಸ್ (ನಾ.) (ಕರುಳು, ಮೊ. ಗಳಲ್ಲಿ ವಾಯು ಸೇರಿಕೊಳ್ಳುವುದರಿಂದಾದ) ಕಿಬ್ಬೊಟ್ಟೆಯ ಊತ, ಹೊಟ್ಟೆಯುಬ್ಬರ. **Tympanític** —ನಿಟಿಕ್ (ಗು.) ಹೊಟ್ಟೆಯುಬ್ಬರದ. **Tympanítis** —ನೈಟಿಸ್ (ನಾ.) ಕಿವಿಹರೆಯ ಪೊರೆಯೂತ. **Týmpanum** ಟಿಂಪನಂ (ನಾ.) (ಅಂ. ರ. ಶಾ.) ಮಧ್ಯ ಕಿವಿ, ನಡು ಕಿವಿ; ಕಿವಿಯ ಹರೆ (=Tympanic membrane); (ಬಾತುಕೋಳಿ, ಮೊ. ಗಳಲ್ಲಿ) ಶ್ವಾಸನಾಳದ ಬುಡದಲ್ಲಿ ಅನುರಣನ ಪೊರೆಯುಳ್ಳ ಭಾಗ: ಶ್ವಾಸನಾಳದ ಹರೆ. (ವಾ. ಶಾ.) ಕಟ್ಟಡದ ಮುಖಮಂಟಪದ ಮೇಲಿನ ತ್ರಿಕೋಣಾಕೃತಿ ರಚನೆಯ ಒಡಲು; ಬಾಗಿಲವಾಡದ ಮೇಲಿನ ಹಾಸುಗಲ್ಲಿಗೂ ಕಮಾನಿಗೂ ನಡುವೆ ಇರುವ ತ್ರಿಕೋಣಾಕೃತಿಯ ಸ್ಥಳ; ಕದದ ಪುಟೀಪು. ಒಂದು ಬಗೆಯ ಮೆಟ್ಟುಯಂತ್ರ; (ನದಿಯಿಂದ) ನೀರೆತ್ತುವ ಉರುಳೆ ಚಕ್ರ.

Týnwald ಟೈನ್‌ವಾಲ್ಡ್ (ನಾ.) ಐಲ್ ಆಫ್ ಮ್ಯಾನ್ ದ್ವೀಪದ ಶಾಸನ ಸಭೆ.

Type ಟೈಪ್ (ನಾ.) ಮಾದರಿ, ನಮೂನೆ, ಬಗೆ, ಆದರ್ಶ, ನಿದರ್ಶನ, ಭವಿಷ್ಯದ ಲಕ್ಷಣ, ಕುರುಹು, ಸಂಕೇತ [In (the) t. ಸಂಕೇತ ರೂಪದಲ್ಲಿ. Paschal lamb is a t. of Christ 'ಪಾಸೋವರ್' ಹಬ್ಬದ ಕುರಿಮರಿ ಕ್ರಿಸ್ತನ ಒಂದು ಸಂಕೇತ. These things are a t. ಇವು (ಭವಿಷ್ಯದ) ಮುನ್ ಸೂಚನೆಗಳು, ಪೂರ್ವ ಲಕ್ಷಣಗಳು. Her beauty was of *or* belonged to another t. ಆಕೆಯ ಚೆಲುವು ಮತ್ತೊಂದು ನಮೂನೆಯದಾಗಿತ್ತು, ಬೇರೆ ಮಾದರಿಯದಾಗಿತ್ತು. I dislike men of that t. ಆ ಬಗೆಯ ಜನರನ್ನು ಕಂಡರೆ ನನಗೆ ಆಗುವುದಿಲ್ಲ]; (ಜೀ. ವಿ, ಮೊ.) ಮಾದರಿ, ರಚನಾಕ್ರಮ (Deviates from the t.), ವರ್ಗ (The vertebrate t.), ವರ್ಗದ ಮಾದರಿ (T. genus ತಾನು ಸೇರಿರುವ ಕುಲಕ್ಕೆ ತನ್ನ ಜಾತಿನಾಮವನ್ನು ಕೊಡುವ ಜೀವಿಜಾತಿ: ಮಾದರಿ ಜಾತಿ) [**Týpal** (ಗು.)]; (ರ. ವಿ.) (ಇತರ ಸಂಯುಕ್ತಗಳ ರಚನೆಯನ್ನು ನಿದರ್ಶಿಸುವುದೆಂದು ಭಾವಿಸಿರುವ) ಮಾದರಿ ಸಂಯುಕ್ತ (ಮು., ಹೈಡ್ರೊಕ್ಲೋರಿಕ್ ಆಮ್ಲ, ನೀರು, ಅಮೋನಿಯ, ಮಾರ್ಷ್‌ಗ್ಯಾಸ್); (ಲಲಿತ ಕಲೆ) ಮುಂದೆ ಬರುವ ಕಲೆಗಾರರಿಗೆ ಆದರ್ಶವಾಗುವ ವಸ್ತು, ಕಲ್ಪನೆ ಅಥವಾ ಕೃತಿ: ಆದರ್ಶ, ಮಾದರಿ, —ವಸ್ತು, ಕೃತಿ, ಕಲ್ಪನೆ; ಪದಕದ ಅಥವಾ ನಾಣ್ಯದ ಎರಡೂ ಪಕ್ಕಗಳಲ್ಲಿರುವ ನಮೂನೆ: ಚಿತ್ರಾಂಕನ; (ಮುದ್ರಣ) ಅಚ್ಚಿನ ಮೊಳೆ, (ಜಾತ್ಯೇಕವಚನವಾಗಿ) ಅಚ್ಚಿನ ಮೊಳೆಗಳು [Ran short of t.; Short of certain types. Brilliant, diamond, pearl, ruby, nonpareil, emerald, minion, brevier, bourgeois, long primer, small pica, pica, English, great primer, canon, t. (ಏರುಕ್ರಮದಲ್ಲಿ ಅಚ್ಚಿನ ಅಕ್ಷರಗಳ ಮುಖ್ಯವಾದ ಅಳತೆಗಳು). German-text, Gothic, t.= Black letter t. (Black ನೋಡಿ). Church-text t. (Church ನೋಡಿ). Clarendon, Roman, Script, t. (ಆಯಾ ಪದ ನೋಡಿ). Italic t. (Italian ನೋಡಿ). Runic t. (Rune ನೋಡಿ)]. **T.-bar** ಕೆಲವು ಅಚ್ಚು ಜೋಡಣೆ ಯಂತ್ರಗಳಲ್ಲಿಯಂತೆ ಒಟ್ಟಿಗೆ ಎರಕಹೊಯ್ದ, ಗಟ್ಟಿ ಕಂಬಿಯ ರೂಪದಲ್ಲಿಯ ಅಚ್ಚುಮೊಳೆಗಳ ಸಾಲು: ಅಚ್ಚುಮೊಳೆ ಕಂಬಿ, ಮುದ್ರಾಕ್ಷರ ದಂಡ. **T.-founder** ಅಚ್ಚುಮೊಳೆಗಳನ್ನು ಎರಕ ಹೊಯ್ಯುವವನು; ಅಚ್ಚುಮೊಳೆಗಾರ. **T. foundry** ಅಚ್ಚುಮೊಳೆ ಕಾರಖಾನೆ. **T.-high** (ಮರದ ಚಿತ್ರದಚ್ಚು, ಮೊ. ಗಳ ವಿಷಯದಲ್ಲಿ) ಅಚ್ಚುಮೊಳೆಯೆತ್ತರದ. **T.-metal** ಅಚ್ಚುಮೊಳೆಗಳನ್ನು ಮಾಡುವ ಒಂದು ಮಿಶ್ರಲೋಹ: ಅಚ್ಚುಮೊಳೆ ಲೋಹ. **T.-setter** ಅಚ್ಚುಮೊಳೆ—ಜೋಡಿಸುವವನು, ಜೋಡಣೆಯಂತ್ರ; ಅಚ್ಚುಮೊಳೆ ಜೋಡಕ. **T.-setting** ಅಚ್ಚುಮೊಳೆ ಜೋಡಣೆ (T.-s. machine —ಯಂತ್ರ). **T.-wheel** ಕೆಲವು ಮುದ್ರಾ ಲೇಖಕಗಳಲ್ಲಿಯೂ ದೂರ ಲೇಖಕಗಳಲ್ಲಿಯೂ ಉಪಯೋಗಿಸುವ, ಅಕ್ಷರ ಕೆತ್ತಿದ ಚಕ್ರ: ಅಕ್ಷರ ಚಕ್ರ. **T.-write** ಮುದ್ರಾ ಲೇಖಕದಿಂದ ಅಚ್ಚುಮಾಡು, ಟೈಪುಮಾಡು. **T.-writer** (ಕಾಗದದಮೇಲೆ ಕೈಬರವಣಿಗೆಗೆ ಬದಲು) ಅಚ್ಚಕ್ಷರ ಒತ್ತುವ ಯಂತ್ರ; ಮುದ್ರಾ ಲೇಖಕ, ಟೈಪ್‌ರೈಟರ್; ಟೈಪು ಮಾಡುವವನು. **Týpic** ಟಿಪಿಕ್ (ಗು.); T. fever ನಿರ್ದಿಷ್ಟ ಕ್ರಮದ, ನಿರ್ದಿಷ್ಟ ನಮೂನೆಯ,—ಜ್ವರ. **Týpical** (ಗು.) ನಮೂನೆಯ, ಮಾದರಿಯ, ಆದರ್ಶ ಸ್ವರೂಪದ, ಲಾಕ್ಷಣಿಕ, ಸಾಂಕೇತಿಕ ಪ್ರತಿನಿಧಿರೂಪವಾದ, ಮುನ್ ಸೂಚಕ (A t. genus, plant,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Scotchman. Was t. of Christ's second coming ಕ್ರಿಸ್ತನ ಪುನರಾಗಮನದ ಮುನ್ ಸೂಚಕವಾಗಿತ್ತು); ಒಂದು ಮಾದರಿಗೆ ವಿಶೇಷವಾದ, ಲಕ್ಷಣವಾದ: ವಿಶೇಷ (ಲಕ್ಷಣದ) (T. markings, structure, phraseology). **Týpically** (ಕ್ರಿ. ವಿ.); **Týpicalness** (ನಾ.); **Týpify** (ಕ್ರಿ. ಸಕ.) ಮಾದರಿಯಾಗಿ ತೋರಿಸು, ನಿರೂಪಿಸು; ಮುನ್ ಸೂಚಿಸು; ಮಾದರಿಯಾಗಿರು, ಲಕ್ಷಣವುಳ್ಳದ್ದಾಗಿರು. **Typificátion** (ನಾ.); **Týpifier** (ನಾ.); **Týpist** ಟೈಪಿಸ್ಟ್ (ನಾ.) ಮುದ್ರಾಲೇಖಕದಿಂದ ಬರೆಯುವವನು, ಟೈಪುಮಾಡುವವನು. **Týpo** ಟೈಪೊ (ನಾ.) (ಬಳ. ಮಾ.) =Typographer. **Typo-** (ಸ್ವರಪರವಾದಾಗ: **Typ-**) (ಸ. ಪೂ. ಪ.) ಅಚ್ಚು(ಮೊಳೆ)—, ಮುದ್ರಾ(ಕ್ಷರ)—, ಮುದ್ರಣ—, ಮಾದರಿ—, ಸಂಕೇತ—. **-graph** ಅಚ್ಚುಮೊಳೆ ಜೋಡಕ (ಯಂತ್ರ). **-grapher** (—ಪಾಗ್ರಫರ್) ಮುದ್ರಣಗಾರ. **-graphy** (-ಫೀ-) ಮುದ್ರಣ ಕಲೆ; ಮುದ್ರಣ(ರೀತಿ) (The t. was admirable. Faults of t. ಮುದ್ರಣ ದೋಷಗಳು). **-gráphic(al)** (ಗು.); **-gráphically** (ಕ್ರಿ. ವಿ.). **-lite** ಪ್ರಾಣಿ, ಮೊ. ಗಳ ಚಿತ್ರಾಂಕನವುಳ್ಳ ಕಲ್ಲು: ಮುದ್ರಾಂಕಿತ ಶಿಲೆ, ಪಳೆಯುಳಿಕೆ. **-logy** (—ಪಾಲೊಜಿ) ಸಂಕೇತ ನಿರೂಪಣ (—ಶಾಸ್ತ್ರ, ತತ್ತ್ವ) (ಮು., ಬೈಬಲ್ ಸಂಕೇತಗಳ ನಿರೂಪಣ). **-lógical** (—ಪೊಲಾ—) (ಗು.); **-onym** (ಜೀ. ವಿ.) ಮಾದರಿ(ಯಿಂದ ಬಂದ) ಹೆಸರು. **-ónymal** (—ಪಾನಿ—) (ಗು.); **-onýmic** —ಪೊನಿ— (ಗು.)

Type (ಕ್ರಿ. ಸಕ.) ಮಾದರಿ, ಸಂಕೇತ, ಮುನ್ ಸೂಚನೆ, —ಆಗಿರು; ಟೈಪುಮಾಡು, ಮುದ್ರಾಲೇಖಕದಿಂದ ಬರೆ.

Typhlítis ಟಿಫ್ಲೈಟಿಸ್ (ನಾ.) ಅಂಧಾಂತ್ರ ಮತ್ತು ಅಂತ್ರಪುಚ್ಛಗಳ ಉರಿಯೂತ; ಅಂಧಾಂತ್ರ ಶೋಫೆ. **Typhlític** —ಫ್ಲಿ— (ಗು.)

Týphoid, Typhománia. Typhus ನೋಡಿ.

Typhoón ಟೈಫೂನ್ (ನಾ.) ಚೀನಾ ಸಮುದ್ರದಲ್ಲಿ ಮು., ಜುಲೈಯಿಂದ ಅಕ್ಟೋಬರ್ ವರೆಗೆ ತಲೆದೋರುವ ಬಿರುಗಾಳಿ: ಟೈಫೂನ್, ತುಫಾನು. **Typhónic** —ಫಾ— (ಗು.)

Týphus ಟೈಫಸ್ (ನಾ.) ಊದಾ ಅಥವಾ ಕೆಂಪು ಗುಳ್ಳೆಗಳು ಏಳುವುದು, ಅತಿ ಸುಸ್ತಾಗುವುದು, ಮತ್ತು ಸಾ., ಸನ್ನಿ ಬರುವುದು—ಈ ಲಕ್ಷಣಗಳುಳ್ಳ ಒಂದು ಜ್ವರ: ಟೈಫಸ್ ಜ್ವರ (Malignant, simple, t. ವಿಷಮ, ಸಾದಾ,—ಟೈಫಸ್ ಜ್ವರ). **Týphoid** ಟೈಫಾಯ್ಡ್ (ಗು., ನಾ.) ಟೈಫಸ್ಸಿನಂಥ; ಎದೆಯಮೇಲೂ ಹೊಟ್ಟೆಯಮೇಲೂ ಕೆಂಪು ಕಲೆಗಳು ಏಳುವ, ಕರುಳಿನಲ್ಲಿ ಉರಿತವಾಗುವ, ಒಂದು ಸಾಂಕ್ರಾಮಿಕ ಜ್ವರ: ಟೈಫಾಯ್ಡ್ ಜ್ವರ, ವಿಷಮಶೀತ ಜ್ವರ (=T. fever). T. bacillus ಟೈಫಾಯ್ಡ್ ಕ್ರಿಮಿ, ವಿಷಮಶೀತ ಜ್ವರ ಕ್ರಿಮಿ. T. condition (ಹಲವು ತೀವ್ರ ವ್ಯಾಧಿಗಳಲ್ಲಿ ಕಾಣಿಸಿಕೊಳ್ಳುವ) ನಿಸ್ಸತ್ತ್ವ ಸ್ಥಿತಿ, ಟೈಫಾಯ್ಡ್ ಸ್ಥಿತಿ. T. pneumonia ನ್ಯುಮೋನಿಯ ಸೇರಿದ ಟೈಫಾಯ್ಡ್. **Typhoídal** (ಗು.); **Týphous** (ಗು.) ಟೈಫಸ್ಸಿನ. **Typhománia** ಟೈಫೊಮೇನಿಯ (ನಾ.) (ಟೈಫಸ್ ಜ್ವರದಲ್ಲಿಯಂತೆ) ಮಾತಾಡುವ, ಗೊಣಗುಟ್ಟುವ, —ಸನ್ನಿ; ಬಗುಳು ಸನ್ನಿ.

Týpic, Týpical, Týpify, Týpist, Týpo-, etc. Type ನೋಡಿ.

Týrannic(al), Týrannize, Týranny. Tyrant ನೋಡಿ.

Týrant ಟೈ(ಅ)ರಂಟ್ (ಗು.) ಕ್ರೂರ, (ಪ್ರಜಾ) ಪೀಡಕ, —ರಾಜ; ದಬ್ಬಾಳಿಕೆಯ ದೊರೆ; (ಗ್ರೀಕ್ ಚರಿತ್ರೆ) ದುರಾಕ್ರಮಣದಿಂದ ರಾಜ್ಯಾಧಿಕಾರಕ್ಕೆ ಬಂದ ನಿರಂಕುಶ ಪ್ರಭು: ಅಪರಾಜ. Thirty Tyrants ಕ್ರಿ. ಪೂ. ೪೦೪-೩ರಲ್ಲಿ ಅಥೆನ್ಸ್ ಪಟ್ಟಣವನ್ನು ಆಳಿದ ಮೂವತ್ತು ಮಂದಿ ನಿರಂಕುಶ ಪ್ರಭುಗಳು. T. bird, T. fly-catcher ಹಲವು ಬಗೆಯ ಅಮೆರಿಕದ ಹಕ್ಕಿ. **Tyránnic(al)** ಟಿ(ಟೈ)ರ್ಯಾನಿಕ್(ಕಲ್) (ಗು.) ಪ್ರಜಾಪೀಡಕ, ಕ್ರೂರ, ದಬ್ಬಾಳಿಕೆಯ, ನಿರಂಕುಶ. **Tyránnically** (ಕ್ರಿ. ವಿ.); **Tyránnicalness** (ನಾ.); **Týrannous** ಟಿ— (ಗು.); **Týrannously** (ಕ್ರಿ. ವಿ.); **Tyránnicide** (ನಾ.) ಅಪರಾಜ, ಪೀಡಕರಾಜ,—ಹತ್ಯೆ, ಹಂತಕ. **Tyrannicídal** (ಗು.); **Týrannize** ಟಿರನೈಸ್ (ಕ್ರಿ.) ಅಪರಾಜನಾಗಿರು, ಪ್ರಜಾಪೀಡಕನಾಗಿರು; ದಬ್ಬಾಳಿಕೆ ನಡೆಸು, ನಿರಂಕುಶ ಪ್ರಭುತ್ವಮಾಡು (*Over* ಉಪ. ದೊಡನೆ). **Týranny** (ನಾ.) ದಬ್ಬಾಳಿಕೆ, ಪೀಡಕ ಪ್ರಭುತ್ವ, ನಿರಂಕುಶಾಧಿಕಾರ; ಪೀಡನ, ಉಪದ್ರವ; (ಗ್ರೀಕ್ ಚರಿತ್ರೆ) ಅಪರಾಜ ಪ್ರಭುತ್ವ(ದ ಕಾಲ)

Tyre[1] ಟೈ(ಅ)ರ್ (ನಾ.) (ಆಂ. ಇಂ.) ಮೊಸರು (ತಮಿಳು: ತಯಿರ್)

Tyre[2]. **Tire**[2] ನೋಡಿ.

Tyro. Tiro ನೋಡಿ.

Tyrolése ಟಿರೊಲೀಸ್ (ಗು.; ನಾ., ಬ. ವ. ಅದೇ) (ಆಸ್ಟ್ರಿಯ ಹಂಗರಿಯ ಒಂದು ಪ್ರಾಂತವಾದ) ಟಿರಾಲ್ ಪ್ರಾಂತದ(ವನು). **Tyroliénne** (F) ಟಿರೋಲಿಯೆನ್, ಟೀರೊಲ್ಯೆನ್ (ನಾ.) ಟಿರಾಲ್ ಪ್ರಾಂತದ ರೈತರ ಒಂದು ಕುಣಿತ; ಇದಕ್ಕೆ ಹೊಂದಿಸಿದ ಸಂಗೀತ.

Tyrotóxicon ಟೈ(ಅ)ರೊಟಾಕ್ಸಿಕಾನ್ (ನಾ.) ಹಾಲಿನಲ್ಲಿ ಅಥವಾ ಚೀಸಿನಲ್ಲಿ ಉತ್ಪತ್ತಿಯಾಗುವ ಒಂದು ವಿಷಾನ್ವಿತ ಸಸ್ಯಕ್ಷಾರ: ಕ್ಷೀರ ವಿಷ.

Týrrhene ಟಿರೀನ್, **Tyrrhénian** ಟಿರೀನಿಯನ್ (ಗು.) ಇಟ್ರುರಿಯಾ ದೇಶದ(ವರ)

Tzar. Czar ನೋಡಿ.

Tzetze ಟ್ಸೆಟ್ಸಿ (ನಾ.) =Tsetse.

Tzigáne ಟ್ಸಿಗಾನ್ (ಗು., ನಾ.) ಹಂಗರಿಯ ಜಿಪ್ಸಿಯುವರ (ಸಂಗೀತದ). (ನಾ.) ಹಂಗರಿಯ ಜಿಪ್ಸಿ(ಯುವನು)

U

U ಯೂ. ಇಂಗ್ಲಿಷ್ ವರ್ಣಮಾಲೆಯ ಇಪ್ಪತ್ತೊಂದನೆಯ ಅಕ್ಷರ. U-boat ಜರ್ಮನರ ಜಲಾಂತರ್ನಾಕೆ. U-bolt, -tube = U ಆಕಾರದ ತಾಪಾಳುಕೊಂಡಿ, ಕೊಳವಿ. U.P. (Up ಪದದ ಅನಂ. ಉಚ್ಚಾರಣೆ: It's all U.P. with him ಅವನ ಕಥೆ ಮುಗಿದಂತೆಯೆ, ಏನು ಆಶೆಯೂ ಇಲ್ಲ)

ಸಂಕ್ಷಿಪ್ತಗಳು: (1) Union ಸಂಘ [**U.S.S.R.** (Union of Socialistic Soviet Republics) (Soviet ನೋಡಿ)]. (2) United ಸಂಯುಕ್ತ [**U.K.** (United Kingdom) ಗ್ರೇಟ್ ಬ್ರಿಟನ್ ಮತ್ತು ಉ. ಐರ್ಲೆಂಡ್ ಸಂಯುಕ್ತ ರಾಜ್ಯ. **U.P.** (United Presbyterian; United Provinces). **U.S.** (United States) (ಅಮೆರಿಕದ) ಸಂಯುಕ್ತ ಸಂಸ್ಥಾನಗಳು. **U.S.A.** (United States of America, United States Army) ಅಮೆರಿಕದ ಸಂಯುಕ್ತ ಸಂಸ್ಥಾನಗಳು, —ಗಳ ಸೈನ್ಯ. **U.S.N.** (United States Navy) —ಗಳ ನೌಕಾ ಸೈನ್ಯ]. (3) Utah ಯೂಟಾ [**U.T.** (Utah Territory) ಅಮೆ. ಸಂ. ದ ಯೂಟಾ ಸಂಸ್ಥಾನ]. (4) Under [**U.P.** (Under proof) (ಮದ್ಯ) ಗೊತ್ತಾದುದಕ್ಕಿಂತ ಕಡಮೆ ಜೋರಿನ]. (5) Upper [**U.C.** (Upper case) ಮೇಲಿನ ಅಚ್ಚುಮೊಳೆ ಖಾನೆ: ದೊಡ್ಡಕ್ಷರ]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ult.(imo). Univ.(ersity). Ut.(ah).

Ubíety ಯುಬೈಎಟಿ (ನಾ.) ಒಂದು ಗೊತ್ತಾದ—ಸ್ಥಳದಲ್ಲಿರುವುದು, ಸ್ಥಾನ ಪಡೆದಿರುವುದು ; ಸ್ಥಾನ ಸಂಬಂಧ(ವಿರುವುದು) ; ಸ್ಥಾನತ್ವ.

Ubiquitárian, etc. Ubiquity ನೋಡಿ.

Ubíquity ಯುಬಿಕ್ವಿಟಿ (ನಾ.) ಏಕಕಾಲದಲ್ಲಿ ಸರ್ವತ್ರ ಅಥವಾ ಅನೇಕ ಸ್ಥಳಗಳಲ್ಲಿ ಇರುವುದು : ಸರ್ವತ್ರ ಪ್ರತ್ಯಕ್ಷತೆ ; ಸರ್ವತ್ರ ಅಸ್ತಿತ್ವ ; ಸರ್ವ(ತ್ರ) ವ್ಯಾಪಕತೆ. U. of the king (ನ್ಯಾ. ಶಾ.) ರಾಜನು ನ್ಯಾಯಾಧೀಶರಲ್ಲಿ ಮೂರ್ತಿಮತ್ತಾಗಿರುವುದು : ರಾಜ—ಸರ್ವಾಂತರ್ಯಾಮಿತ್ವ, ಸರ್ವಗೋಚರತೆ. **Ubíquitous** (ಗು.) ; **Ubíquitously** (ಕ್ರಿ. ವಿ.) ; **Ubíquitousness** (ನಾ.) ; **Ubiquitárian** —ಟೇರಿಯನ್ (ಗು., ನಾ.) (ದೇವ. ಶಾ.) ಯೇಸು ಕ್ರಿಸ್ತನ ಸಾರ್ವತ್ರಿಕ ಪ್ರತ್ಯಕ್ಷತೆಯ(ನ್ನು ನಂಬುವವನು) ; ಕ್ರಿಸ್ತನ ಸರ್ವತ್ರ ಪ್ರತ್ಯಕ್ಷತೆಯ (ವಿಶ್ವಾಸಿ). **Ubiquitárianism** (ನಾ.)

Ubi súpra (L) ಯುಬಿ(ಬೈ) ಸೂಪ್ರ (ಕ್ರಿ. ವಿ.) (ಪುಸ್ತಕ, ಮೊ. ಗಳಲ್ಲಿ) ಮೇಲೆ ಹೇಳಿದ—ಕಡೆಯಲ್ಲಿ, ಸ್ಥಳದಲ್ಲಿ.

Údal ಯೂಡಲ್ (ನಾ.) [ಉ. ಯೂರೋಪಿನಲ್ಲಿ (ಸ್ವಾಮಿಭೃತ್ಯ ಸಂಬಂಧದ) ಊಳಿಗಮಾನ್ಯ ಪದ್ಧತಿಗೆ ಮೊದಲು ಇದ್ದ, ಈಗಲೂ ಆರ್ಕ್ನಿ ಮತ್ತು ಷೆಟ್ಲಂಡ್ ದ್ವೀಪಗಳಲ್ಲಿರುವ, ಅವಿಚ್ಛಿನ್ನ ಅನುಭೋಗದಿಂದ ಬಂದ] ಒಂದು ಜಮೀನು ಮಾನ್ಯದ ಪದ್ಧತಿ (ಅನೇಕ ವೇಳೆ ವಿಶೇಷಣವಾಗಿ ಪ್ರ. : U. tenure ಯೂಡಲ್ ಪದ್ಧತಿಯ ಹಿಡುವಳಿ. Udalman —ಹಿಡುವಳಿದಾರ). **Údaller** (ನಾ.) = Udalman.

Údder ಅಡರ್ (ನಾ.) (ಹಸು, ಮೊ. ಗಳ) ಕೆಚ್ಚಲು. **(-)uddered** (ಗು.) ; **Údderless** (ಗು.)

Udómeter ಯುಡಾಮಿಟರ್ (ನಾ.) ಮಳೆಯ ಮೊತ್ತವನ್ನು ಅಳೆಯುವ ಸಲಕರಣೆ : ವೃಷ್ಟಿಮಾಪಕ. **Udométric** (ಗು.)

Ugh ಉಹ್, ಅಹ್ (ಭಾವ. ಅವ್ಯ.) (ಅಸಹ್ಯ ಸೂಚಿಸುವ ಕೆಮ್ಮು ಸದ್ದು) : ಉಹ್.

Úgly ಅಗ್ಲಿ (ಗು., ನಾ.) (ನೋಟಕ್ಕೆ) ಅಸಹ್ಯವಾದ, ಕುರೂಪವಾದ, ಅವಲಕ್ಷಣದ, ವಿಕಾರವಾದ, ಘೋರ (Must not make u. faces ಮುಖವಿಕಾರಗಳನ್ನು ಮಾಡಬಾರದು) ; ಹೇಯವಾದ, ಕುತ್ಸಿತ, ನಾಚಿಕೆಗೇಡಾದ, ಕೆಟ್ಟ, ದುಷ್ಟ, ತೊಂದರೆಯ, ಅಹಿತ ಸೂಚನೆಯ, ಜುಗುಪ್ಸೆಯುಂಟುಮಾಡುವ, ಅಶುಭಕರ, ಬೆದರಿಕೆಯ, ಭೀಷಣವಾದ, ನಿರಾಶಾಜನಕ [U. vices ಹೇಯವಾದ ದುರಭ್ಯಾಸಗಳು, ದುರಾಚಾರಗಳು. His conduct has an u. look ಅವನ ನಡತೆ ಅಸಹ್ಯವಾಗಿದೆ, ಅವಲಕ್ಷಣವಾಗಿದೆ. U. rumours ಅಸಹ್ಯ, ಅಶುಭ, —ವದಂತಿಗಳು. An u. job ಎಡವಟ್ಟಿನ ಕೆಲಸ. An u. customer ಅಸಾಧ್ಯ, ತೊಂದರೆಯ, —ಗಿರಾಕಿ. U. weather (ಬಿರುಗಾಳಿ ಮಳೆಯ) ಅಸಹ್ಯ ಹವ. An u. gash ಭಯಂಕರ—ಗಾಯ(ದ ಕಂಡಿ)]. [U. duckling ಒಂದು ಸಂಸಾರದಲ್ಲಿ ದಡ್ಡನಾಗಿ (ಅಥವಾ ಅಷ್ಟಾವಕ್ರನಾಗಿ) ಕಾಣುತ್ತಿದ್ದು ಕೊನೆಗೆ ಪ್ರಚಂಡನಾಗಿ (ಅಥವಾ ಚೆಲುವನಾಗಿ) ಪರಿಣಮಿಸುವವನು (ಒಂದು ಕಟ್ಟುಕಥೆಯಲ್ಲಿಯ ಪ್ರಸಂಗದಿಂದ)]. (ನಾ.) (೧೯ನೆಯ ಶ. ಮಾ. ದ ಮಧ್ಯಭಾಗದಲ್ಲಿ ಬಳಕೆಯಲ್ಲಿದ್ದ) ಹೆಂಗಸರ ಟೊಪ್ಪಿಗೆಯ ಬಿಸಿಲುಮರೆ. **Úglify** (ಕ್ರಿ. ಸಕ.) ಕುರೂಪ, ವಿಕಾರ, —ಮಾಡು. **Úglily** (ಕ್ರಿ. ವಿ.) ; **Úgliness** (ನಾ.)

Úgrian ಊ(ಯೂ)ಗ್ರಿಯನ್, **Úgric** —ಗ್ರಿಕ್ (ಗು.) = Finnic (Finn ನೋಡಿ)

Úhlan ಊ(ಯೂ)ಲನ್ (ನಾ.) (ಯೂರೋಪಿನ ಕೆಲವು ಸೈನ್ಯಗಳಲ್ಲಿ) ಈಟಿ ರಾವುತ.

Úitlander ಆಯ್ಟ್‌ಲಂಡರ್ (ನಾ.) (ದ. ಆಫ್ರಿಕ) (ದ. ಆಫ್ರಿಕದಲ್ಲಿ ನೆಲಸಿರುವ ಅಥವಾ ಪ್ರವಾಸ ಮಾಡುತ್ತಿರುವ) ಹೊರನಾಡಿಗ ; ವಿದೇಶಿ ; ಅನ್ಯ.

Ukáse ಯು(ಯೂ)ಕೇಸ್ (ನಾ.) (ಹಿಂದೆ) ರಷ್ಯದ ಚಕ್ರವರ್ತಿಯ, ರಷ್ಯ ಸರ್ಕಾರದ, —ಹುಕುಂನಾಮೆ ; (ರೂಪ.) ನಿರಂಕುಶ ಆಜ್ಞೆ.

Úlcer ಅಲ್ಸರ್ (ನಾ.) (ಕೀವು ಸ್ರವಿಸುವ) ಹುಣ್ಣು, ವ್ರಣ. (ರೂಪ.) ದುರ್ನೀತಿ, ಕೆಡಿಸತಕ್ಕ ಪ್ರಭಾವ, ನೀತಿಭ್ರಷ್ಟಕಾರಿ. **Úlcerate** —ರೇಟ್ (ಕ್ರಿ.) ಹುಣ್ಣು, ವ್ರಣ, —ಆಗು, ಮಾಡು, ಆಗಿಸು ; (ರೂಪ.) (ಹುಣ್ಣಿನಂತೆ) ತೀವ್ರ ಯಾತನೆ ಕೊಡು, ವಿಷಮಿಸು, ನಂಜುಹಿಡಿ. **Úlcerable, Úlcerative** (ಗು.) ; **Ulcerátion** (ನಾ.) ; **Úlcered** (ಗು.) ಹುಣ್ಣಾದ, ಹುಣ್ಣುಗಳಿಂದ ಕೂಡಿದ. **Úlcerous** (ಗು.) ; **Úlcerously** (ಕ್ರಿ. ವಿ.) ; **Úlcerousness** (ನಾ.)

Úlema ಊಲೆಮ, ಯುಲೀಮ (ನಾ.) (ಮು., ತುರ್ಕಿ ಚಕ್ರಾಧಿಪತ್ಯದಲ್ಲಿ) ಮುಸಲ್ಮಾನ್—ಧರ್ಮಶಾಸ್ತ್ರಜ್ಞ, ದೇವತಾ ಶಾಸ್ತ್ರಜ್ಞ ; ಊಲೆಮ.

Ulíginose ಯುಲಿಜಿನೋಸ್, **-nous** —ನಸ್ (ಗು.) (ಸ. ವಿ.) ಕೆಸರಿನಲ್ಲಿ ಬೆಳೆಯುವ.

Úllage ಅಲೇಜ್ (ನಾ.) (ವ್ಯಾಪಾರ) ಪೀಪಾಯಿ, ಮೊ. ವು ಭರ್ತಿಯಾಗುವುದಕ್ಕೆ ಕೊರೆಬಿದ್ದ ಮೊತ್ತ : ಕೊರವು, ಕೊರತೆ.

Úlmin ಅಲ್ಮಿನ್ (ನಾ.) (ರ. ವಿ.) (ಎಲ್ಮ್, ಮೊ. ಮರಗಳಮೇಲೆ ದೊರೆಯುವ, ಅಥವಾ ದಾರು ಕೊಳೆಯುವಾಗ ಅಥವಾ ಸಸ್ಯಪದಾರ್ಥಗಳು ಕೊಳೆಯುವಾಗ ದೊರೆಯುವ) ಒಂದು ಕಪ್ಪು ಬಂಕೆ (ಪದಾರ್ಥ) ; ದಾರು ಬಂಕೆ, ಅಲ್ಮಿನ್. **Úlmic, Úlmous** (ಗು.) (ರ. ವಿ.) U.-acid.

Úlna ಅಲ್ನ (ನಾ., ಬ. ವ. -ae) ಮುಂದೋಳಿನ ಒಳ(ಪಾರ್ಶ್ವದ) ಎಲುಬು (Radius ನೋಡಿ). **Úlnar** (ಗು.) ; **Úlno-** (ಸ. ಪೂ. ಪ.)

Ulótrichan ಯುಲಾಟ್ರಿಕನ್ (ಗು., ನಾ.), **-chous** —ಕಸ್ (ಗು.) ತುಪ್ಪುಳು, ಉಣ್ಣೆ, —ಕೂದಲಿನ (ಜನವರ್ಗದ) ; (ನಾ.) —ವನು ; ಊರ್ಣಕೇಶಿ.

Úlster ಅಲ್ಸ್ಟರ್ (ನಾ.) ಸಾ., ನಡುಪಟ್ಟಿಯಿರುವ ಉದ್ದ, ಸಡಿಲ, ಮೇಲಂಗಿ (ಮೊದಲು ಅಲ್ಸ್ಟರ್ ಉಜ್ಜುಗಂಬಳಿಯಿಂದ ಮಾಡುತ್ತಿದ್ದದ್ದು). U. custom (ಐರ್ಲಂಡಿನ ಅಲ್ಸ್ಟರ್ ಪ್ರಾಂತದಲ್ಲಿ ಬಳಕೆಯಿರುವ) ಒಂದು ಜಮೀನು ಹಿಡುವಳಿ ಪದ್ಧತಿ. **Úlstered** (ಗು.)

Ultérior ಅಲ್ಟೀರಿಯರ್ (ಗು.) ಆಚೆಯ, ದೂರದ(ಲ್ಲಿರುವ), ಸದ್ಯದ್ದಲ್ಲದ, ಭವಿಷ್ಯದ ; ಹಿನ್ನೆಲೆಯಲ್ಲಿರುವ; ಕಾಣುವುದಕ್ಕಿಂತ, ಹೇಳುವುದಕ್ಕಿಂತ, —ಮೀರಿ ಇರುವ : ಗೋಚರಾತೀತ, ಅವ್ಯಕ್ತ, ಗುಪ್ತ (U. views ಆಚೆಯ ನೋಟಗಳು. U. object ದೂರದ, ಭವಿಷ್ಯದ, —ಉದ್ದೇಶ. U. plans ಗುಪ್ತ ಹಂಚಿಕೆಗಳು). **Ultériorly** (ಕ್ರಿ. ವಿ.)

Última (L) ಅಲ್ಟಿಮ (ಗು.) ಕಡೆಯ, ಅಂತಿಮ. U. ratio ಕೊನೆಯ ವಾದ (ಎಂದರೆ ಬಲಪ್ರಯೋಗ). U. ratio regum ದೊರೆಗಳ ಕೊನೆಯ ವಾದ: ದಂಡೋಪಾಯ. U. thule (Thule ನೋಡಿ)

Últimate ಅಲ್ಟಿಮೆಟ್ (ಗು.) (ಕಟ್ಟ) ಕಡೆಯ, ಅಖೈರಿನ, ಅಂತಿಮ, ಅಂತ್ಯದ (U. result, analysis) ; ಮೂಲ(ಭೂತವಾದ) [U. principles, truth, cause ಮೂಲ—ತತ್ತ್ವಗಳು, ಸತ್ಯ, ಕಾರಣ. U. facts of nature (ಮುಂದೆ ವಿಭಜನೆಗೆ ಸಾಧ್ಯವಲ್ಲದ) ಪ್ರಕೃತಿಯ ಮೂಲ—ವಿಚಾರಗಳು, ಸತ್ಯಗಳು]. **Últimately** (ಕ್ರಿ. ವಿ.) ; **Últimateness** (ನಾ.) ; **Ultimátum** —ಮೇಟಂ (ನಾ., ಬ. ವ. -tums, -ta) (ಯಾವುದನ್ನು ನಿರಾಕರಿಸಿದ್ದೇ ಆದರೆ ಸಂಬಂಧ ವಿಚ್ಛೇದ, ಯುದ್ಧ ಘೋಷಣೆ, ಮೊ. ಕ್ಕೆ ಆಸ್ಪದವಾಗುವುದೊ ಅ) ಕಟ್ಟಕಡೆಯ—ತೀರ್ಮಾನ, ಷರತ್ತುಗಳ ನಿರ್ದೇಶ ; ಅಂತ್ಯ ನಿರ್ಧಾರ ; ಕೊನೆಯ ಮಾತು. ಮೂಲತತ್ತ್ವ.

Último (L) ಅಲ್ಟಿಮೊ (ಗು.) (ಸಾ., ಸಂಕ್ಷಿಪ್ತ : ult.) ಹೋದ, ಹಿಂದಿನ, —ತಿಂಗಳಿನ ; ಗತ ಮಾಸದ (Your letter of the 28th ult.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ultimogéniture ಅಲ್ಟಿಮೊಜೆನಿಟ್ಯುರ್ (ನಾ.) ಕೊನೆಯ ಮಗನಿಗೆ ಮಾತ್ರ ಆಸ್ತಿಯ ಹಕ್ಕಿರುವ ಪದ್ಧತಿ : ಕನಿಷ್ಠ ಪುತ್ರಾಧಿಕಾರ (ಪದ್ಧತಿ). =Borough-English (Borough ನೋಡಿ)

Últra ಅಲ್ಟ್ರ (ಗು., ನಾ.) ಉಗ್ರಾಭಿಪ್ರಾಯಗಳ, ಉಗ್ರ ಕಾರ್ಯಾಚರಣೆಗಳ (—ಬೆಂಬಲಕಾರ, ವಾದಿ) ; ಉಗ್ರ ಪಂಥದ(ವನು) ; ಉಗ್ರ (ಪಂಥ) ವಾದಿ; ಅತಿಗಾಮಿ. **Últraist** (ನಾ.) (ರಾಜಕೀಯ, ಮತ, ಮೊ. ಗಳಲ್ಲಿ) ಉಗ್ರವಾದಿ, ಅತಿಗಾಮಿ. **Últraism** (ನಾ.)

Últra- ಅಲ್ಟ್ರ— (ಸ. ಪೂ. ಪ.) —ರ ಆಚೆಯ, ಆಚೆ ಕಡೆಯ ; ಅತಿ—. **-conservatism** ಅತಿ ಸಂಪ್ರದಾಯ ಪಾಲನೆ. **-conservative** ಅತಿ ಸಂಪ್ರದಾಯಿ. **-critical** ಅತಿ ವಿಮರ್ಶೆಯ. **-religious** ಅತಿ (ಮತ)ನಿಷ್ಠೆಯ. (ಬಹಳ ಸೂಕ್ಷ್ಮ ಪರಿಮಾಣಗಳನ್ನು ಅಳೆಯುವ ಸಲಕರಣೆಗಳ ವಿಷಯದಲ್ಲಿ) : **-micrometer, -microscope** ಅತಿ ಸೂಕ್ಷ್ಮಮಾಪಕ, ಅತಿ ಸೂಕ್ಷ್ಮದರ್ಶಕ. **-microscopic** ಸೂಕ್ಷ್ಮದರ್ಶಕಗಳಿಗೆ ಅತೀತವಾದ ; ಅತಿ ಸೂಕ್ಷ್ಮದರ್ಶಕೀಯ. **Últramaríne** —ಮರೀನ್ (ಗು., ನಾ.) ಸಮುದ್ರದಾಚೆಯಿರುವ, ಸಮುದ್ರಪಾರಸ್ಥ. (ನಾ.) ನೀಲೋಪಲದಿಂದ ತಯಾರಿಸಿದ ಒಂದು ನೀಲವರ್ಣದ್ರವ್ಯ. Artificial u. (ಜೇಡಿ ಮಣ್ಣು, ಸೋಡಿಯಂ ಕಾರ್ಬೊನೇಟ್, ಗಂಧಕ ಮತ್ತು ರಾಳ—ಇವುಗಳನ್ನು ಬೆರಸಿ ಮಾಡಿದ) ಕೃತಕ ನೀಲವರ್ಣದ್ರವ್ಯ. U. ashes (ನೀಲವರ್ಣದ್ರವ್ಯವನ್ನು ತೆಗೆದಮೇಲೆ ಉಳಿಯುವ) ನೀಲೋಪಲದ ಬೂದಿ. **Ultramóntane** —ಮಾಂಟೇನ್ (ಗು., ನಾ.) ಆಲ್ಪ್ಸ್ ಪರ್ವತದ ದಕ್ಷಿಣಕ್ಕಿರುವ ; ಇಟಲಿಯ ; (ನಂಬಿಕೆ, ಶಿಸ್ತು, ಮೊ. ಗಳಲ್ಲಿ) ಪೋಪ್ ಗುರುವಿನ ಸರ್ವಾಧಿಕಾರಕ್ಕೆ ಅನುಕೂಲವಾದ. (ನಾ.) ಆಲ್ಪ್ಸ್ ಪರ್ವತದ ದಕ್ಷಿಣವಾಸಿ ; ಪೋಪ್ ಗುರುವಿನ ಸರ್ವಾಧಿಕಾರ ವಾದಿ. **Ultramóntanism** (ನಾ.) ; **Ultramóntanist** (ನಾ.) ; **Ultramúndane** —ಮಂಡೇನ್ (ಗು.) ಇಹಲೋಕಕ್ಕೆ ಆಚೆಯ, ಪ್ರಪಂಚಾತೀತ ; ಪಾರಲೌಕಿಕ. ಸೌರವ್ಯೂಹದ ಆಚೆಯ ; ಅನ್ಯಲೋಕ, ಪರಲೋಕ,—ಜೀವನದ. **Últra-víolet** —ವಯೊಲೆಟ್ (ಗು.) (ವರ್ಣಪಟಲದಲ್ಲಿ) ಊದಾ ಬಣ್ಣದ ಆಚೆಯಿರುವ (ಅದೃಶ್ಯ ಕಿರಣಗಳ) : ನೀಲಲೋಹಿತಾತೀತ. **Últra-víres** —ವೈರೀಸ್ (ಕ್ರಿ. ವಿ., ಗು.) (ಒಬ್ಬನ) ಅಧಿಕಾರಕ್ಕೆ ಮೀರಿ(ದ)

Ultromotívity ಅಲ್ಟ್ರೋಮೋಟಿವಿಟಿ (ನಾ.) ಸ್ವಯಂ ಚಲನಶಕ್ತಿ ; ಅನೈಚ್ಛಿಕ ಚಲನಶಕ್ತಿ.

Úlulate ಅ(ಯೂ)ಲ್ಯುಲೇಟ್ (ಕ್ರಿ. ಅಕ.) (ತೋಳ, ನಾಯಿ, ಮೊ. ಗಳ ವಿಷಯದಲ್ಲಿ) ಊಳು, ಅಳು(ವಿನಂತೆ ಬಗುಳು) ; (ಗೂಬೆ) 'ಗೂಗುಕ್' ಎನ್ನು ; ಘೂತ್ಕಾರ ಮಾಡು. **Úlulant** (ಗು.) ; **Ululátion** (ನಾ.)

Úmbel ಅಂಬೆಲ್ (ನಾ.) (ಸ. ವಿ.) ಸಮಾನ ಕೇಂದ್ರದಿಂದ ಹೊರಟ ಸರಿಸುಮಾರು ಒಂದೇ ಉದ್ದದ ತಾಳುಗಳುಳ್ಳ ಮತ್ತು ಹೊರ ಉಬ್ಬಿನ ಅಥವಾ ಒಳ ತಗ್ಗಿನ ಮೇಲ್ಮೈ ಆಗುವಂತೆ ಪುಷ್ಪ ವಿನ್ಯಾಸವುಳ್ಳ ಹೂಗೊಂಚಲು: ಛತ್ರಿಯ ಆಕಾರದ ಹೂಗೊಂಚಲು, ಛತ್ರ(ಪುಷ್ಪ) ಮಂಜರಿ. **Úmbellal, Úmbellar, Úmbellate** (ಗು.) (ಹೂವು) ಛತ್ರಾಕಾರದ ಗೊಂಚಲಾಗುವ, ಛತ್ರಮಂಜರಿಯಾಕಾರದ. **Umbellíferous** (ಗು.) ; **Umbélliform** (ಗು.) ; **Úmbellet, Umbéllule** (ನಾ.) ಛತ್ರಮಂಜರಿಯಲ್ಲಿಯ ಒಂದು ಬಿಡಿ ಹೂವು.

Úmber ಅಂಬರ್ (ನಾ., ಗು., ಕ್ರಿ. ಸಕ.) ಕಾವಿಯಂಥ ಆದರೆ ಅದಕ್ಕಿಂತ ಕಪ್ಪು ಕಂದಿನ ಒಂದು ಸ್ವಾಭಾವಿಕ ವರ್ಣದ್ರವ್ಯ ; ಕಂದು ಕಾವಿ ; —ಬಣ್ಣ ; ಅಂಬರ್ ಬಣ್ಣ [Raw u. (ಕಪ್ಪು ಹಳದಿಯ) ಹಸಿ, ಕಚ್ಚಾ, —ಅಂಬರ್ (ಬಣ್ಣ). Burnt u. (ಹೆಚ್ಚು ಗಾಢಕೆಂಪಿನ) ಸುಟ್ಟ ಅಂಬರ್ (ಬಣ್ಣ)]. ಒಂದು ಬಗೆಯ ಚಿಟ್ಟೆ (=Grayling. ಆ ಪದ ನೋಡಿ). [U.-bird ಸ್ಟಾರ್ಕ್ ಮತ್ತು ಹೆರನ್ ಜಾತಿಗಳಿಗೆ ಸೇರಿದ ಆಫ್ರಿಕದ ಒಂದು ಪಕ್ಷಿ (=**Umbrétte**)]. (ಗು.) ಅಂಬರ್ ಬಣ್ಣದ ; ಕಪ್ಪು ಕಂದಿನ ; ಹೊಗೆ ಬಣ್ಣದ. (ಕ್ರಿ.) ಅಂಬರ್ ಬಣ್ಣ ಹಾಕು. **Úmbery** (ಗು.) ಅಂಬರ್ ಬಣ್ಣದ, ಕಪ್ಪು ಕಂದಿನ.

Umbílical, Umbílicate, etc., Umbilícular. Umbilicus ನೋಡಿ.

Umbilícus ಅಂಬಿಲೈಕಸ್, **-bílicus** —ಬಿಲಿಕಸ್ (ನಾ.) ಹೊಕ್ಕುಳು, ನಾಭಿ; (ಸ. ವಿ., ಪ್ರಾ. ವಿ., ಶಂಖಶಾಸ್ತ್ರ) ಹೊಕ್ಕುಳಾಕೃತಿ(ಯ ರಚನೆ), ಹೊಕ್ಕುಳು ; (ಜ್ಯಾ.) (ವಕ್ರರೇಖೆಯ) ನಾಭಿ; (ರೋ. ಪ್ರಾ.) (ಹಸ್ತಪ್ರತಿಯನ್ನು ಸುರುಳಿ ಸುತ್ತುತ್ತಿದ್ದ ಕೋಲಿನ) ಇಕ್ಕಡೆಯ ಗುಬಟು. **Umbilíferous** (ಗು.) ಹೊಕ್ಕುಳುಳ್ಳ, ಸನಾಭಿ. **Úmbiliform** (ಗು.) ಹೊಕ್ಕುಳಿನಾಕಾರದ. **Umbílical**—ಲಿಕಲ್, **-bilícal**—ಲೈಕಲ್ (ಗು.) ಹೊಕ್ಕುಳಿನ (ಹತ್ತಿರವಿರುವ) (U. cord ಹೊಕ್ಕುಳ ಬಳ್ಳಿ); ಮಧ್ಯದಲ್ಲಿರುವ, ಕೇಂದ್ರವಾದ. ಹೆಣ್ಣು ಸಂತತಿಯ (ಸಂಬಂಧದ) (An u. ancestor). **Umbílicate** —ಕೇಟ್ (ಗು.) ಹೊಕ್ಕುಳಿನಾಕಾರದ ; ಹೊಕ್ಕುಳುಳ್ಳ. **Umbilicátion** (ನಾ.) ; **Umbilícular** (ಗು.) ಹೊಕ್ಕುಳಿನ, ನಾಭಿಯ. U. contemplation ತನ್ನ ಹೊಕ್ಕುಳಮೇಲೆ ದೃಷ್ಟಿ ನೆಟ್ಟು ಕುಳಿತು ಮಾಡುವ ಯೋಗಾಭ್ಯಾಸ, ಧ್ಯಾನ ; ನಾಭಿ (ದೃಷ್ಟಿ) ಧ್ಯಾನ.

Úmbo ಅಂಬೊ (ನಾ., ಬ. ವ. -os, -ónes ಅಂಬೋನೀಸ್) ಗುರಾಣಿಯ (ಮಧ್ಯದ) ಗುಬಟು. (ಸ. ವಿ., ಪ್ರಾ. ವಿ., ಮೊ.) ಉಬ್ಬು, ಗುಬಟು, ಗಂಟು. **Úmbonal** (ಗು.) ; **Úmbonate** —ನೇಟ್ (ಗು.) (ಮು., ಸ. ವಿ.) ಗಂಟಿಯುಳ್ಳ. **Umbónic** —ಬಾನಿಕ್ (ಗು.)

Úmbra ಅಂಬ್ರ (ನಾ., ಬ. ವ. -ae —ಬ್ರೀ) (ಜ್ಯೋ. ವಿ.) (ಗ್ರಹಣ ಕಾಲದಲ್ಲಿ ಭೂಮಿಯಾಗಲಿ ಚಂದ್ರನಾಗಲಿ ಬೀಳಿಸಿದ) ಮಂದ, ದಟ್ಟ, —ನೆರಳು ; ಪೂರ್ಣಚ್ಛಾಯೆ (Penumbra ನೋಡಿ) ; ಸೂರ್ಯ ಮಚ್ಚೆಯ ಕಪ್ಪನೆಯ ಮಧ್ಯಭಾಗ. (ರೋ. ಪ್ರಾ.) (ಅತಿಥಿ ಕರೆದು ಕೊಂಡುಬಂದ) ಅಭ್ಯಾಗತ, ಅನಾಹೂತ (ಅಳಿಯನ ಹಿಂದೆ ಗೆಳೆಯ ಎಂಬಂತೆ). **Úmbral** (ಗು.)

Úmbrage ಅಂಬ್ರೆಜ್ (ನಾ.) ತಿರಸ್ಕಾರ, ಘಾತಿ, —ಆಯಿತೆಂಬ ಭಾವನೆ ; ಅಪಚಾರ(ಭಾವನೆ) ; ಅಸಮಾಧಾನ, ಮುನಿಸು (Give, take, u.) ; (ಮು., ಕಾವ್ಯ) ಮರದ ನೆರಳು ; ನೆರಳು ಕೊಡುವ ವಸ್ತು, ಮರೆ. **Umbrágeous** (ಗು.)

Umbrélla ಅಂಬ್ರೆಲ (ನಾ.) ಕೊಡೆ, ಛತ್ರ, ಛತ್ರಿ ; (ರೂಪ.) (ಭಿನ್ನಾಭಿಪ್ರಾಯದ ರಾಜಕೀಯದವರು, ಮೊ. ರು) ಒಟ್ಟಾಗಲು ಸಹಾಯಕವಾದ ಸೂತ್ರ, ರಾಜಿ : ನೆರಳು, ಆಶ್ರಯ (Under the Unionist u.) ; (ಲೋಳೆ ಮೀನು, ಮೊ. ಗಳ) ಜೆಲಟನ್ನಿನಂಥ ಈಜುಬಿಲ್ಲೆ. ಕೊಡೆಯಂಥ ಚಿಪ್ಪುಳ್ಳ ಒಂದು ಉದರಪಾದಿ: ಕೊಡೆಚಿಪ್ಪು ಪ್ರಾಣಿ (=U.-shell). U.-bird ದ. ಅಮೆರಿಕದ, ಕೊಡೆಯಂತೆ ಬಿಚ್ಚಿದ ಶಿಖೆಯುಳ್ಳ, ಹಲವು ಬಗೆಯ ಹಕ್ಕಿ : ಕೊಡೆಹಕ್ಕಿ. U.-stand ಮುಚ್ಚಿದ ಕೊಡೆಗಳನ್ನಿಡುವ, ಸಾ., ತೊಟ್ಟಿಕ್ಕುವ ನೀರಿಗಾಗಿ ಕೆಳಗೆ ತಟ್ಟೆಯಿರುವ, ನಿಲುವು : ಕೊಡೆನಿಲುವು. U.-tree ಕೊಂಬೆಗಳ ತುದಿಯಲ್ಲಿ ಕೊಡೆಯಂತೆ ಸುರುಳಿ ಸುತ್ತಿದ ಎಲೆ ಬಿಡುವ ಒಂದು ಮರ : ಛತ್ರಿಯೆಲೆಯ ಮರ. (ಬಳ. ಮಾ.) ರೆಂಬೆಗಳನ್ನು ಕೊಡೆಯಾಕಾರದಲ್ಲಿ ಸಮರಿ, ತಿದ್ದಿ, ಬೆಳಸಿದ ಮರ : ಛತ್ರಿಮರ. **Umbrélla'd** (ಗು.)

Umbrétte. Umber ನೋಡಿ.

Úmbrian ಅಂಬ್ರಿಯನ್ (ಗು.) (ಮಧ್ಯ ಇಟಲಿಯಲ್ಲಿಯ) ಅಂಬ್ರಿಯ ಪ್ರಾಂತದ (U. school ರ್‍ಯಾಫೇಎಲ್ ಮತ್ತು ಪೆರುಗಿನೊ ಎಂಬ ವರ್ಣಚಿತ್ರಕಾರರ ಪಂಥ). (ನಾ.) ಪ್ರಾಚೀನ ಅಂಬ್ರಿಯ ಪ್ರಾಂತದ —ಭಾಷೆ, ನಿವಾಸಿ.

Umbríferous ಅಂಬ್ರಿಫೆರಸ್ (ಗು.) ನೆರಳು ಕೊಡುವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Úmlaut ಉಉ(ಉ)ಮ್‌ಲೌಟ್ (ನಾ., ಕ್ರಿ. ಸಕ.) ಒಂದು ಪದದ ಪಕ್ಕದ ಧ್ವನಿಯಲ್ಲಿ ಸಮರೂಪವಾಗುವುದರಿಂದ ಸ್ವರದ ಧ್ವನಿಯಲ್ಲಿ ಉಂಟಾಗುವ ವ್ಯತ್ಯಾಸ: ಸ್ವರ—ರೂಪಾಂತರ, ವ್ಯತ್ಯಯ. (ಕ್ರಿ.) —ಮಾಡು.

Úmpire ಅಂಪೈ(ಅ)ರ್ (ನಾ., ಕ್ರಿ.) (ನ್ಯಾ. ಶಾ.) ಮಧ್ಯಸ್ಥಗಾರರಲ್ಲಿ ಭಿನ್ನಾಭಿಪ್ರಾಯ ಬಂದಾಗ ನಿರ್ಣಯಕೊಡಲು ಕರೆಸಲ್ಪಟ್ಟ ಮೂರನೆಯವನು; ನ್ಯಾಯನಿರ್ಣಾಯಕ; ನಿರ್ಣಯಕಾರ; ವ್ಯಾಜ್ಯ ಬಂದಾಗ ನಿರ್ಣಯಿಸಲು ಆರಿಸಲ್ಪಟ್ಟವನು: ಮಧ್ಯಸ್ಥಗಾರ, ವ್ಯಾಜ್ಯ ವಿಮರ್ಶಕ; (ಕ್ರಿಕೆಟ್, ಮೊ. ಆಟಗಳಲ್ಲಿ) ನಿಯಮ ಪಾಲನೆಗೂ ವ್ಯಾಜ್ಯಗಳ ತೀರ್ಮಾನಕ್ಕೂ ನೇಮಕನಾದವನು: ಆಟದ—ಮಧ್ಯಸ್ಥಗಾರ, ತೀರ್ಪುಗಾರ; ಕ್ರೀಡಾನ್ಯಾಯದರ್ಶಿ. (ಕ್ರಿ.) —ಆಗು, ಆಗಿ ವರ್ತಿಸು (*For* persons, *in* game). **Úmpirage** (ನಾ.); **Úmpireship** (ನಾ.)

Úmpteen ಅಂಪ್ಟೀನ್, ಅಮ್‌ಟೀನ್ (ಗು.) (ಅಸಂ.) ಹಲವು, ಅನೇಕ, ಬಹಳ, ವಿಪರೀತ.

'un ಅನ್ (ಸ. ನಾ.) (ಬಳ. ಮಾ.) =One. ಒಂದು, ಒಬ್ಬ. That's a good 'un. He's a tough 'un.

Un- ಅನ್— (ಪೂ. ಪ್ರ.) ನಿಷೇಧಾರ್ಥಕ ಪೂ. ಪ್ರ.: ಅ—, ಅನ್—ನಿ—, ನಿರ್—, —ಇಲ್ಲದ, —ಅಲ್ಲದ. [ಇದರ ಮುಂದೆ ಸೇರಿದ ಪದದ ಸಾಮಾನ್ಯ ಕ್ರಿಯಾರ್ಥಕ್ಕೆ ವಿರುದ್ಧವಾದ ಅಥವಾ ಪ್ರತಿಷೇಧಕ ವಾಚಿ ಅರ್ಥವನ್ನು ಸೂಚಿಸುತ್ತದೆ. ಈ ಪ್ರತ್ಯಯ ಪ್ರಯೋಗದಿಂದ ವ್ಯುತ್ಪನ್ನ ಪದಗಳನ್ನು ಅಪರಿಮಿತವಾಗಿ ಮಾಡಿಕೊಳ್ಳಬಹುದು. ಇಲ್ಲಿ ಕೆಲವು ಪದಗಳನ್ನೂ ಅವುಗಳಲ್ಲಿ ಕೆಲವಕ್ಕೆ ಮಾತ್ರ ಅರ್ಥಗಳನ್ನೂ ಕೊಟ್ಟಿದೆ. ಅರ್ಥವನ್ನು ಕೊಡದ ಸಂದರ್ಭಗಳಲ್ಲಿ ಮುಂದೆ ಹೇಳಿರುವ ವರ್ಗಗಳ ಪ್ರಯೋಗಾನುಸಾರ ಅರ್ಥವನ್ನು ತಿಳಿದುಕೊಳ್ಳಬೇಕು]. **Un-** ಪೂ. ಪ್ರ. ದ ಪ್ರಯೋಗಗಳು ಈ ರೀತಿ ಇವೆ:

(1) ಸಾಮಾನ್ಯ ಕ್ರಿಯಾಪದಗಳ ಹಿಂದೆ ಸೇರಿ ಆ ಪದಗಳ ವಿರುದ್ಧಾರ್ಥವನ್ನು ಸೂಚಿಸುವ '—ಕಳಚು, ತೆಗೆ' ಎಂಬ ಅರ್ಥಗಳಲ್ಲಿ ಪ್ರ. (ಉದಾ., unbar, unbind)

(2) ನಾಮವಾಚಕ ಮತ್ತು ಕ್ರಿಯಾಪದಗಳ ಹಿಂದೆ ಸೇರಿ, '—ಬಿಚ್ಚಿಹಾಕು, ತೆಗೆ(ದುಹಾಕು)' ಎಂಬ ಅರ್ಥಗಳಲ್ಲಿ ಪ್ರ. (ಉದಾ., unfrock, unnail)

(3) ಮೇಲಿನಂತೆಯೆ ನಾಮವಾಚಕ ಮತ್ತು ಕ್ರಿಯಾಪದಗಳ ಹಿಂದೆ ಸೇರಿ '(—ಇಂದ) ಹೊರಕ್ಕೆ ತೆಗೆ, ಬಿಡು, ಬಿಡುಗಡೆಮಾಡು, ಸ್ಥಾನಚ್ಯುತಿ ಮಾಡು' ಎಂಬ ಅರ್ಥಗಳಲ್ಲಿ ಪ್ರ. (ಉದಾ., uncase, unfold)

(4) ನಾಮವಾಚಕಗಳ ಹಿಂದೆ ಸೇರಿ '(—ಅಲ್ಲಿಂದ, ಆ ಪದವಿ) ತಪ್ಪಿಸು, ತೆಗೆದುಹಾಕು' ಎಂಬ ಅರ್ಥದ ಕ್ರಿಯಾಪದಗಳ ರಚನೆಯಲ್ಲಿ ಪ್ರ. (ಉದಾ., unbishop, unmonk)

(5) -able, -ed, -ing, -ic, -al ಮೊ. ಪ್ರತ್ಯಯಾಂತ ಗುಣವಾಚಕಗಳ ಹಿಂದೆ ಸೇರಿ ವಿರುದ್ಧಾರ್ಥಕ ಗುಣವಾಚಕಗಳಾಗುವಲ್ಲಿ ಪ್ರ. '(—) ಅಲ್ಲದ, ಇಲ್ಲದ, ಆಗದ, ವಿರುದ್ಧ' ಎಂಬ ಅರ್ಥಗಳಾಗುತ್ತವೆ (ಉದಾ., unable, uncoloured, unenthusiastic)

['Un-' ಗೂ 'in-' ಗೂ ಅರ್ಥದಲ್ಲಿ ವ್ಯತ್ಯಾಸಮಾಡುವ ಪ್ರಯತ್ನಗಳು ನಡೆದಿವೆ. ಅಂಥ ವ್ಯತ್ಯಾಸ ಮಾಡುವಾಗ un- ಪ್ರತ್ಯಯಕ್ಕೆ 'ಅಲ್ಲದ, ಸಂಬಂಧಪಡದ' ಎಂಬ ಅರ್ಥವೂ, in- ಪ್ರತ್ಯಯಕ್ಕೆ 'ವಿರುದ್ಧವಾದ, ವ್ಯತಿರಿಕ್ತ' ಎಂಬ ಅರ್ಥವೂ ಸೂಚಿತವಾಗುತ್ತವೆ: ಉದಾ., immoral ನೀತಿವಿರುದ್ಧ, unmoral ನೀತಿವಿಷಯಕ್ಕೆ ಸಂಬಂಧಪಡದ. ಆದರೆ ಬಳಕೆಯಲ್ಲಿರುವ ಎಷ್ಟೋ un- ಪದಗಳಿಗೆ 'ವಿರುದ್ಧ' ಎಂಬ ಅರ್ಥವೇ ಇದೆ (ಉದಾ., untrue, unmanly ಇತ್ಯಾದಿ)]

(6) ಸಾಮಾನ್ಯ ನಾಮವಾಚಕಕ್ಕೆ ಅಥವಾ ಗುಣವಾಚಕಕ್ಕೆ ಹಿಂದೆ ಸೇರಿ ವಿರುದ್ಧಾರ್ಥದ ನಾಮವಾಚಕಗಳಾಗುವಲ್ಲಿ '—ಅಲ್ಲದಿರುವುದು, ಇಲ್ಲದಿರುವುದು' ಎಂಬ ಅರ್ಥಗಳಲ್ಲಿ ಪ್ರ. (ಉದಾ., unbelief, unrepair)

[ನಾ., ಕನ್ನಡದಲ್ಲಿ (1)—(2) ವರ್ಗಗಳ ಪದಗಳಿಗೆ '—ಬಿಚ್ಚಿಹಾಕು, ತೆಗೆದುಹಾಕು, ಕಳಚು'; (3) ರಲ್ಲಿ 'ಹೊರಕ್ಕೆ—ತೆಗೆ, ಬಿಡು, ಹಾಕು'; (4) ರಲ್ಲಿ 'ತೆಗೆದುಹಾಕು, ತಪ್ಪಿಸು'; (5) ರಲ್ಲಿ 'ಅಲ್ಲದ, ಇಲ್ಲದ'; (6) ರಲ್ಲಿ 'ಅಲ್ಲದಿರುವುದು, ಇಲ್ಲದಿರುವುದು' ಎಂಬ ಅರ್ಥಗಳು ಬರುತ್ತವೆ]

[ಮುಂದೆ ಕೊಟ್ಟಿರುವ ಪದಗಳಲ್ಲಿ ಉತ್ತರ ಭಾಗವಾದ ಕ್ರಿಯಾಪದದ ಅಥವಾ ನಾಮವಾಚಕಗಳಲ್ಲಿನ ಸ್ವರಭಾರವೇ ಒಟ್ಟು ಪದದ ಸ್ವರಭಾರವಾಗಿರುವುದರಿಂದ ಆ ಪದಗಳಿಗೆ ಸ್ವರಭಾರವನ್ನು ಗುರುತಿಸಿಲ್ಲ; ಆ ಕ್ರಿಯಾಪದ ಅಥವಾ ನಾಮವಾಚಕವು ಒಂದೇ ಉಚ್ಚಾರಾಂಶವುಳ್ಳ ಪದವಾಗಿದ್ದರೆ ಸಮಾಸಪದದ ಎರಡನೆಯ ಉಚ್ಚಾರಾಂಶದ ಮೇಲೆ ಸ್ವರಭಾರವಿರುವುದೆಂದು ತಿಳಿಯತಕ್ಕದ್ದು (ಉದಾ., undeceíve, unsay'). ಆದರೆ ed ಪ್ರತ್ಯಯಾಂತವಾದ ಭೂತಕೃದ್ವಾಚಿಗಳಿಗೆ ಅಥವಾ ಗುಣವಾಚಕಗಳಿಗೆ un- ಮೇಲೆ ಸ್ವರಭಾರವಿರುತ್ತದೆ (ಉದಾ., únmasked, únmuzzled)]

Unable (5) (ಗು.) ಶಕ್ತನಲ್ಲದ, ಅಸಮರ್ಥ. **Unaccompanied** (5) (ಗು.) ಜೊತೆಯಲ್ಲಿ ಯಾರೂ ಇಲ್ಲದ, ಒಂಟಿಯಾದ, ಏಕಾಕಿಯಾದ. (ಸಂ.) ಪಕ್ಕವಾದ್ಯಗಳಿಲ್ಲದ. **Unaccomplished** (5) ಸಾಧಿಸಿಲ್ಲದ, ಪೂರೈಸಿಲ್ಲದ; ಸಂಸ್ಕೃತಿ ಸುಶಿಕ್ಷಣಗಳಿಲ್ಲದ, ಕುಶಲತೆಯಿಲ್ಲದ. **Unaccountable** (5) ಕಾರಣ—ಹೇಳಲಾಗದ, ತಿಳಿಯದ; ವಿವರಿಸಲಾಗದ; ವಿಚಿತ್ರ; ಜವಾಬ್ದಾರಿ, ಹೊಣೆ,—ಇಲ್ಲದ. **Unaccountability, Unaccountableness** (ನಾ.); **Unaccountably** (ಕ್ರಿ. ವಿ.); **Unaccustomed** (5) ವಾಡಿಕೆ, ರೂಢಿ, —ಇಲ್ಲದ (His u. silence); ಅಭ್ಯಾಸ, ಬಳಕೆ, —ಇಲ್ಲದ (*To* ಉಪ. ದೊಡನೆ). **Unadopted** (5) (ಮು., ಹೊಸ ರಸ್ತೆಗಳ ವಿಷಯದಲ್ಲಿ) ಸ್ಥಳೀಯ ಸಂಸ್ಥೆ ವಹಿಸಿಕೊಂಡಿಲ್ಲದ. **Unadvisable** (5) ಬುದ್ಧಿ ಹೇಳಲಾಗದ, ತಿದ್ದಲಾಗದ; ಅನುಚಿತ. **Unadvisability** (ನಾ.); **Unadvised** (5) ವಿವೇಚನೆಯಿಲ್ಲದ, ಮುಂದಾಲೋಚನೆಯಿಲ್ಲದ, ದುಡುಕಿನ; ಸಲಹೆ, ಬುದ್ಧಿವಾದ, —ತೆಗೆದುಕೊಂಡಿಲ್ಲದ; ಸಲಹೆಗಾರರು, ಬುದ್ಧಿ ಹೇಳುವವರು, —ಇಲ್ಲದ. **Unadvisedly** (ಕ್ರಿ. ವಿ.); **Unaffected** (5) ಕೃತಕತೆ, ನಟನೆ, —ಇಲ್ಲದ; ನಿಷ್ಕಪಟ; ಅಚ್ಚ; (—ಇಂದ) ಬಾಧಿತವಾಗದ (*By* ಉಪ. ದೊಡನೆ); ತಾಗದ, ತಟ್ಟದ. **Unaffectedly** (ಕ್ರಿ. ವಿ.); **Unaffectedness** (ನಾ.); **Un-American** (5) ಅಮೆರಿಕದ್ದಲ್ಲದ; ಅಮೆರಿಕನ್ ಪದ್ಧತಿಗಳಿಗೆ, ಭಾವನೆಗಳಿಗೆ, ಬೇರೆಯಾದ. **Unanchor** (1) (ಕ್ರಿ.) ಲಂಗರು—ಎತ್ತು, ತೆಗೆ. **Unanswerable** (5) ಉತ್ತರ ಕೊಡಲಾಗದ, ಪ್ರತಿಹೇಳಲಾಗದ. **Unanswerability, Unanswerableness** (ನಾ.); **Unanswerably** (ಕ್ರಿ. ವಿ.); **Unanswered** ಉತ್ತರ ಕೊಟ್ಟಿಲ್ಲದ. **Unapostolic** (5) ಧರ್ಮಪ್ರವರ್ತಕ ಪದ್ಧತಿಗೆ ವಿರುದ್ಧವಾದ; ಧರ್ಮಪ್ರಾಮಾಣ್ಯವಿಲ್ಲದ, ಪ್ರವರ್ತನಾಚಾರ್ಯರ ಅಂಗೀಕಾರವಿಲ್ಲದ; ಸಂಪ್ರದಾಯ ಬಾಹಿರವಾದ. **Unapparel** (2) (ಕ್ರಿ. ಸಕ.); **Unappropriated** (5) ಬಳಸಿಲ್ಲದ, ಉಪಯೋಗಿಸಿಲ್ಲದ [U. blessing (ಹಾಸ್ಯ ಪ್ರ.) ವೃದ್ಧ ಕನ್ಯೆ]. **Unarm** (2) (ಕ್ರಿ. ಸಕ.) ನಿಶ್ಶಸ್ತ್ರ, ನಿರಾಯುಧ, —ಮಾಡು; (ಮತ್ತೊಬ್ಬನ) ಕವಚ ತೆಗೆದುಹಾಕು. **Unarmed** (5) (ಗು.) ನಿಶ್ಶಸ್ತ್ರನಾದ. **Unartificial** (5) ಅಕೃತಕ, ಸಹಜ, ಸ್ವಾಭಾವಿಕ. **Unartificially** (ಕ್ರಿ. ವಿ.); **Unassailable** (5) ಆಕ್ರಮಣ ಸಾಧ್ಯವಲ್ಲದ; (ಹೇಳಿಕೆ, ಮೊ. ವು) ಪ್ರತಿಹೇಳಲಾಗದ, ಟೀಕಿಸಲಾಗದ, ಆಕ್ಷೇಪಿಸಲಾಗದ. **Unassuming** (5) ನಿಗರ್ವಿ, ಅಹಂಕಾರವಿಲ್ಲದ. **Unattached** (5)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಬಂಧಪಟ್ಟಿಲ್ಲದ, ಸೇರಿ(ಕೊಂಡಿ)ಲ್ಲದ ; ಅಂಟಿಕೊಂಡಿಲ್ಲದ, ಬಿಡಿಯಾದ ; ಆಸಕ್ತಿ, ಅನುರಕ್ತಿ,—ಇಲ್ಲದ ; ನಿರ್ಲಿಪ್ತ ; (ನ್ಯಾ. ಶಾ.) (ಸಾಲಕ್ಕಾಗಿ) ಜಪ್ತಿಮಾಡಿಲ್ಲದ ; (ಸೈನಿಕ) ಯಾವುದೊಂದು ದಳಕ್ಕೂ ಸೇರಿಲ್ಲದ, ನೇಮಕಮಾಡಿಲ್ಲದ ; (ವಿ. ವಿ. ನಿ.) ಯಾವ ಕಾಲೇಜಿಗೂ ಸೇರಿಲ್ಲದ. **Unattire** (1) (ಕ್ರಿ.) ಉಡುಪು ತೆಗೆದುಹಾಕು. **Unavailing** (5) ಫಲಕಾರಿಯಾಗದ, ನಿರರ್ಥಕ, ನಿಷ್ಪ್ರಯೋಜಕ. **Unavailingly** (ಕ್ರಿ. ವಿ.) ; **Unaware** (5) (—ಎಂದು, —ರ) ಅರಿವಿಲ್ಲದ, ಪರಿಜ್ಞಾನವಿಲ್ಲದ (*Of, that* ಪದದೊಡನೆ). **Unawares** (5) (ಕ್ರಿ. ವಿ., ನಾ.) ಇದ್ದಕ್ಕಿದ್ದಹಾಗೆ, ಅನಿರೀಕ್ಷಿತವಾಗಿ, ಹಠಾತ್ತಾಗಿ, ಪರವೆಯಿಲ್ಲದೆ, ತನಗೇ ತಿಳಿಯದೆ (Was taken u. by that question ಅವನು ಆ ಪ್ರಶ್ನೆಗೆ ಅಸಿದ್ಧನಾಗಿ ಸಿಕ್ಕಿಬಿದ್ದನು. Must have dropped it u. ಅದನ್ನು ಪರವೆಯಿಲ್ಲದೆ ಎತ್ತಿಹಾಕಿರಬೇಕು). (ನಾ.) At u. ಅನಿರೀಕ್ಷಿತವಾಗಿ. **Unbacked** (5) ಬೆಂಬಲವಿಲ್ಲದ, ಸಹಾಯಕರಿಲ್ಲದ, ಅನುಮೋದನಕಾರರಿಲ್ಲದ ; (ಮು., ಜೂಜಿನಲ್ಲಿ) ಪಂದ್ಯ, ಪಂಥ, —ಕಟ್ಟುವವರಿಲ್ಲದ ; (ಕುದುರೆ) ಸವಾರಿಗೆ ಪಳಗಿಲ್ಲದ. **Unbag** (3) (ಕ್ರಿ. ಸಕ.) ಚೀಲದಿಂದ ಹೊರತೆಗೆ. **Unbalance** (1) (ಕ್ರಿ. ಸಕ.) ಸಮತೂಕ ತಪ್ಪಿಸು. **Unbalanced** (5) (ಮು., ಮನಸ್ಸು) ಸಮತೆ ತಪ್ಪಿದ ; (ಬುದ್ಧಿ) ಪಲ್ಲಟವಾದ ; ಹುಚ್ಚು ಆವೇಶದ ; ಅರ್ಭಟದ, ದುಡುಕಿನ. **Unballast** (2) (ಕ್ರಿ. ಸಕ.) ; **Unbank** (1) (ಕ್ರಿ. ಸಕ.) ಅದರಮೇಲೆ ಕವಿದಿರುವ ಬೂದಿಯನ್ನು ತೆಗೆದುಹಾಕಿ (ಬೆಂಕಿ) ಚೆನ್ನಾಗಿ ಉರಿಯುವಂತೆ ಮಾಡು ; ಬೆಂಕಿ ಕೆದಕು. **Unbar** (1) (ಕ್ರಿ. ಸಕ.) ತಾಪಾಳು, ಅಗುಳಿ, —ತೆಗೆ ; ತೆರೆ(ದಿಡು) (ರೂಪ.). **Unbear** (1) (ಕ್ರಿ. ಸಕ.) (ಕುದುರೆಯ) ಲಗಾಮು—ಸಡಿಲಿಸು, ಕಳಚಿಹಾಕು. **Unbeaten** (5) ಸೋತಿಲ್ಲದ, ಅಜಿತ, ದುರ್ಜಯ ; ಯಾರೂ—ತುಳಿದಿಲ್ಲದ, ಓಡಾಡಿಲ್ಲದ (Some new u. passage to the sky) ; ಯಾವುದೂ, ಯಾರೂ, ಅದನ್ನು ಮೀರಿಲ್ಲದ ; ಮೀರಿರದ, ದುರ್ಜಯ (U. record). **Unbeautiful** (5) ಅಂದವಿಲ್ಲದ, ಕುರೂಪಿಯಾದ, ವಿಕಾರವಾದ. **Unbecoming** (5) ಮರ್ಯಾದೆಗೆಟ್ಟ, ತಗದ, ಯೋಗ್ಯವಲ್ಲದ (An u. speech) ; ಅನುಚಿತ (*To* or *for* person) ; (ಧರಿಸಿರುವವನಿಗೆ) ಒಪ್ಪದ (An u. hat). **Unbed** (3) (ಕ್ರಿ. ಸಕ.) ; **Unbeknown** (5), **-knownst** (ಬಳ. ಮಾ.) ತಿಳಿಯದ, ಅಜ್ಞಾತ. U. to (ಕ್ರಿ. ವಿ.) (—ಗೆ) ತಿಳಿಯ(ಗೊಡ)ದೆ ; ತಿಳಿವಳಿಕೆಗೆ—ಬಾರದೆ, ತರದೆ (Did it u. to him). **Unbelief** (6) (ಮು., ಶ್ರುತಿಯಲ್ಲಿ, ಮತದಲ್ಲಿ) ನಂಬಿಕೆಯಿಲ್ಲದಿರುವುದು, ಅಪನಂಬಿಕೆ, ಅವಿಶ್ವಾಸ. **Unbeliever** ; **Unbelieving** (5) ನಂಬದ, ನಂಬಿಕೆಯಿಲ್ಲದ (ಮು., ಶ್ರುತಿಯಲ್ಲಿ). **Unbelievingly** (ಕ್ರಿ. ವಿ.) ; **Unbend** (1) (ಕ್ರಿ.) ಬಗ್ಗಿರುವುದನ್ನು ಸರಿಮಾಡು ; ನೇರ—ಮಾಡು, ಆಗು ; (ಮನಸ್ಸು, ಮೊ. ಗಳ) ಬಿಗುಪು, ಶ್ರಮ,—ಕಡಮೆಮಾಡು, ಕಡಮೆಯಾಗು ; ನೆಮ್ಮದಿಯಾಗು, ನೆಮ್ಮದಿಮಾಡು ; ಸಗ್ಗು, ಬಗ್ಗು ; ಪ್ರಸನ್ನನಾಗು, ಮೃದುವಾಗು [**Unbending**[1] (ಗು.)]. (ನಾವೆ) (ಪಟಗಳನ್ನು) ದಿಮ್ಮಿಗಳಿಂದ ಮತ್ತು ಕೂವೆಹಗ್ಗಗಳಿಂದ ಬಿಚ್ಚು ; (ಹೊರಜಿಯನ್ನು) ಸಡಿಲಬಿಡು ; (ಹಗ್ಗವನ್ನು) ಬಿಚ್ಚು. **Unbending**[2] (5) ಬಗ್ಗದ, ಸಗ್ಗದ, ದೃಢ, ಕಠಿನ. **Unbendingly** (ಕ್ರಿ. ವಿ.) ; **Unbendingness** (ನಾ.) ; **Unbeseem** (1) (ಕ್ರಿ. ಸಕ.) ಅಯೋಗ್ಯವಾಗು, ಅನುಚಿತವಾಗು, ಶೋಭಿಸದಿರು. **Unbias** (1) (ಕ್ರಿ. ಸಕ.) ಪಕ್ಷಪಾತ ರಹಿತ ಮಾಡು, ಮುನ್ನೊಲವು ಕಳೆ. **Unbiblical** (5) ಬೈಬಲ್ಲಿನಲ್ಲಿ ಇಲ್ಲದ, ಬೈಬಲ್ಲಿನ ಪ್ರಾಮಾಣ್ಯವಿಲ್ಲದ. **Unbidden** (5) ಆಜ್ಞೆ ಕೊಟ್ಟಿಲ್ಲದ, ಆಜ್ಞೆಯಿಲ್ಲದ ; ಆಹ್ವಾನಿಸಿಲ್ಲದ, ಅನಾಹೂತ. **Unbind** (1) (ಕ್ರಿ. ಸಕ.) ಬಂಧನ, ಕಟ್ಟು,—ಕಳೆದುಹಾಕು, ಬಿಚ್ಚು. **Unbishop** (4) (ಕ್ರಿ. ಸಕ.); **Unblindfold** (1) (ಕ್ರಿ. ಸಕ.) ಕಟ್ಟಿದ್ದ ಕಣ್ಣು ಬಿಚ್ಚು ; ಕಣ್ಣಿನ ಕಟ್ಟು ಬಿಚ್ಚು. **Unblock** (1) (ಕ್ರಿ. ಅಕ.) (ವಿಸ್ಟ್ ಇಸ್ಪೀಟಾಟ; ಜೊತೆಗಾರನ ಒಂದೇ ರಂಗಿನ ಎಲೆಗಳ ದೊಡ್ಡ ಸರಣಿಯನ್ನು ಕಡಿನದಿರುವುದಕ್ಕಾಗಿ) ಹೆಚ್ಚು ಬೆಲೆಯ ಎಲೆ ಇಳಿ. **Unblooded** (5) (ಕುದುರೆಯ ವಿಷಯದಲ್ಲಿ) ಉತ್ತಮ ಜಾತಿಯದಲ್ಲದ ; ಅಶುದ್ಧ ತಳಿಯ ; ಕೆಟ್ಟಿಲ್ಲದ. **Unbolt** (1) (ಕ್ರಿ. ಸಕ.) (ಬಾಗಿಲನ) ಅಗುಳಿ ತೆಗೆ. **Unbonnet** (1) (ಕ್ರಿ.) (ವಂದನೆಯಲ್ಲಿ) ಟೋಪಿಗೆ ತೆಗೆ ; ಮೇಲ್ಮುಚ್ಚಳ, ಕೀಲು ಮುಚ್ಚಳ, —ತೆಗೆ(ದುಬಿಡು). **Unbosom** (1) (ಕ್ರಿ.) ಅಂತರಂಗ, ರಹಸ್ಯ (ಮನೋಭಾವ, ಆಲೋಚನೆ), ಹೃದಯ, —ಬಿಚ್ಚಿಹೇಳಿಕೊ. **Unbounded** (5) ಎಲ್ಲೆಯಿಲ್ಲದ, ಅಮಿತ, ಅಪಾರ (*By* ಉಪ. ದೊಡನೆ ಸಹ). **Unboundedly** (ಕ್ರಿ. ವಿ.) ; **Unboundedness** (ನಾ.) ; **Unbrace** (1) (ಕ್ರಿ. ಸಕ.) ಬಿಗಿಪಟ್ಟಿಗಳನ್ನು —ತೆಗೆದುಹಾಕು, ಕಳಚು ; ಬಿಗುಪು ಕಳೆ ; ನಿರಾತಂಕಮಾಡು, ಮನಸ್ಸು ಹಗುರ ಮಾಡು, (ನರ, ಮೊ. ನ್ನು) ಸಡಿಲಿಸು. **Unbraid** (1) (ಕ್ರಿ. ಸಕ.) ಜಡೆ, ಹೆಣಿಗೆ, —ಬಿಚ್ಚು ; ತಿರಿ ಬಿಡಿಸು. **Unbreech** (1) (ಕ್ರಿ. ಸಕ.) ಫಿರಂಗಿಯ ಹಿಂಭಾಗದ ಬಂಧನಗಳನ್ನು ತೆಗೆದುಹಾಕು, ಕಳಚು. **Unbridle** (1) (ಕ್ರಿ. ಸಕ.) (ಕುದುರೆಗೆ, ರೂಪಕವಾಗಿ ಮನುಷ್ಯನಿಗೆ, ಅವನ ನಾಲಗೆಗೆ) ಲಗಾಮು—ತೆಗೆದುಬಿಡು, ಕಳಚು. **Unbridled** (5) ಕಡಿವಾಣವಿಲ್ಲದ, ಲಂಗು ಲಗಾಮಿಲ್ಲದ, ಅಂಕೆಯಿಲ್ಲದ (ರೂಪ. : U. tongue). **Unbroken** (5) ಒಡೆದಿಲ್ಲದ ; ಬಗ್ಗಿ(ಸಿ)ಲ್ಲದ, ಸಗ್ಗಿಲ್ಲದ ; ವಿಚ್ಛಿತ್ತಿಯಿಲ್ಲದ, ಒಂದೇಸಮನಾದ, ನಿರಾತಂಕವಾದ (U. slumber, peace) ; ಮೀರಿ(ಸಿ)ಲ್ಲದ (U. record) ; ಪಳಗಿ(ಸಿ)ಲ್ಲದ (U. horse). **Unbuckle** (1) (ಕ್ರಿ. ಸಕ.) (ಪಟ್ಟಿ, ಮೋಜ, ಮೊ. ಗಳ) ಚಿಲುಕು ಕಟ್ಟು ಬಿಚ್ಚು. **Unburden** (1) (ಕ್ರಿ. ಸಕ.) ಹೊರೆಇಳಿಸು, —ಯಿಳಿಸಿಕೊ. (ಒಪ್ಪಿಕೊಳ್ಳುವುದು, ಹೇಳಿಕೊಳ್ಳುವುದು, ಮೊ. ರಿಂದ) ಹೃದಯದ ಭಾರ ಇಳಿಸಿಕೊ (*Oneself, to* person). **Unbutton** (1) (ಕ್ರಿ. ಸಕ.) (ಅಂಗಿ, ಮೊ. ಗಳ) ಗುಂಡಿ—ಬಿಚ್ಚು, ಬಿಚ್ಚಿಹಾಕು. **Uncage** (3) (ಕ್ರಿ. ಸಕ.) ; **Uncalled** (5) ಕರೆದಿಲ್ಲದ, ಕರೆಯದ [U. for ಕೇಳದ, ಅನಾವಶ್ಯಕವಾದ, ಅಧಿಕಪ್ರಸಂಗಿತನದ (U.-for remark —ಟೀಕೆ)]. **Uncanny** (5) ಅಸ್ವಾಭಾವಿಕವಾದ (ಕಾರಣದಿಂದ—ನಂಬಲಾಗದ, ಅಹಿತವಾದ) ; ಅಲೌಕಿಕ ; ಕೇಡು, ಅಪಾಯ, —ಸೂಚನೆಯ ; ವಿಚಿತ್ರ. **Uncanniness** (ನಾ.) ; **Uncap** (2) (ಕ್ರಿ. ಸಕ.) ; **Uncared-for** (5) ಅಲಕ್ಷ್ಯಕ್ಕೀಡಾದ, ದಿಕ್ಕಿಲ್ಲದ, ಉಪೇಕ್ಷಿತ. **Uncart** (3) (ಕ್ರಿ. ಸಕ.) ; **Uncase** (3) (ಕ್ರಿ. ಸಕ.) ; **Uncaused** (5) ಉಂಟುಮಾಡಿದ್ದಲ್ಲದ, ಸೃಷ್ಟಿಮಾಡಿದ್ದಲ್ಲದ, ಸ್ವಯಂಭೂ. **Unceremonious** (5) ಅನೌಪಚಾರಿಕ, ಅನಿರ್ಬಂಧ ರೀತಿಯ, ಸಲಿಗೆಯ ; ಒರಟೊರಟಾದ ; ವಿನಯ, ಮರ್ಯಾದೆ, —ತಪ್ಪಿದ. **Unceremoniously** (ಕ್ರಿ. ವಿ.) ; **Unceremoniousness** (ನಾ.) ; **Uncertain** (5) ಖಚಿತವಾಗಿ—ತಿಳಿಯದ, ಗೊತ್ತಿಲ್ಲದ ; ಅನಿಶ್ಚಿತ, ಸಂದಿಗ್ಧ (Am u. which he means. The result is u.). ನೆಚ್ಚಲಾಗದ, ಭರವಸೆಯಿಲ್ಲದ (Is u. in his aim) ; ಬದಲಾಯಿಸುವ, ಚಂಚಲ (U. temper, weather). **Uncertainly** (ಕ್ರಿ. ವಿ.) ; **Uncertainty** (ನಾ.) ; **Unchain** (1) (ಕ್ರಿ. ಸಕ.) ಸರಪಣಿ ಕಳಚು, ವಿಶೃಂಖಲಮಾಡು, ಬಂಧನ ಮುಕ್ತಮಾಡು. **Unchancy** (5) (ಮು., ಸ್ಕಾ. ಪ್ರ.) ಅದೃಷ್ಟವಿಲ್ಲದ, ದುರದೃಷ್ಟದ ; ಸಮಯೋಚಿತವಲ್ಲದ ; ಅಕಾಲದ. **Uncharitable** (5) ಉದಾರ ಭಾವನೆಯಿಲ್ಲದ, ದಾಕ್ಷಿಣ್ಯ ರಹಿತ ; ಆಕ್ಷೇಪಿಸುವ ; ಕಟುವಾದ ; ಕಠಿನ ವಿಮರ್ಶೆಯ. **Uncharitably** (ಕ್ರಿ. ವಿ.) ; **Uncharitableness** (ನಾ.) ; **Unchastity** (6) ಶೀಲವಿಲ್ಲದಿರುವುದು ; ದುಶ್ಶೀಲ. **Unchristian** (5) ಅಕ್ರೈಸ್ತ, ಕ್ರೈಸ್ತ ಧರ್ಮ ವಿರುದ್ಧ, ಕ್ರೈಸ್ತ ಯೋಗ್ಯವಲ್ಲದ. **Unchristianly** (ಕ್ರಿ. ವಿ.) ; **Unchristianness** (ನಾ.) ; **Unchristianize** (1) (ಕ್ರಿ. ಸಕ.) ಅಕ್ರೈಸ್ತ ಮಾಡು. **Unchurch** (3) (ಕ್ರಿ. ಸಕ.) ಮಠದಿಂದ, ಮತದಿಂದ, —ಹೊರಕ್ಕೆ ಹಾಕು ; ಬಹಿಷ್ಕಾರಮಾಡು. **Uncircumcised** (5) ಸುನತಿಯಾಗಿಲ್ಲದ ; (ರೂಪ.) ಹೀದನ್, ವಿಧರ್ಮಿ, —ಆದ ; ಧರ್ಮ ಸಂಸ್ಕಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಹಿತ. **Uncircumcision** (6) ಸುನತಿಯಾಗಿಲ್ಲದಿರುವುದು (The u. ಸುನತಿಯಾಗಿಲ್ಲದವರು ; ಯೆಹೂದ್ಯೇತರರು). **Uncircumstantial** (5) ವಿವರಗಳಿಗೆ ಹೋಗದ ; ವಿವರಗಳನ್ನು ಲೆಕ್ಕಿಸದ. **Uncivil** (5) ನಡತೆಗೆಟ್ಟ, ಅಸಭ್ಯ, ಒರಟು ರೀತಿಯ. **Uncivilly** (ಕ್ರಿ. ವಿ.) ; **Unclasp** (1) (ಕ್ರಿ. ಸಕ.) ಕಿಡಿಕೆ ಕಳಚು. **Unclean** (5) ಚೊಕ್ಕಟವಿಲ್ಲದ, ಅಶುಚಿಯಾದ, ಹೊಲಸಾದ; ವ್ಯಭಿಚಾರದ (U. affections); ಮಡಿಯಿಲ್ಲದ, ಮೈಲಿಗೆಯ. **Unclench, -inch** (1) (ಕ್ರಿ.); **Uncloak** (2) (ಕ್ರಿ. ಸಕ.) ; **Unclog** (1) (ಕ್ರಿ. ಸಕ.) ; **Uncloister** (3) (ಕ್ರಿ. ಸಕ.); **Unclose** (1) (ಕ್ರಿ.) ತೆರೆ. **Unclothe** (1) (ಕ್ರಿ. ಸಕ.) ; **Unclouded** (5) (ಮು., ಸುಖ ಸಂತೋಷಗಳ ವಿಷಯದಲ್ಲಿ) ಖೇದ, ಚಿಂತಾ, —ರಹಿತ ; ಅಮ್ಲಾನ ; ಸ್ವಚ್ಛ (Cloudless ಹೋಲಿಸಿ). **Unco** (5) (ಗು., ನಾ., ಕ್ರಿ. ವಿ.) (ಸ್ಕಾ. ಪ್ರ.) ತಿಳಿಯದ, ಅಸಾಧಾರಣವಾದ, ವಿಚಿತ್ರವಾದ. (ನಾ.) ಅಪರಿಚಿತ, ಹೊಸಬ. (ಕ್ರಿ. ವಿ.) ಬಲು ಮಟ್ಟಿಗೆ, ವಿಪರೀತವಾಗಿ [Uncouth ಎಂಬುದರ ಸಂಕ್ಷಿಪ್ತ]. **Uncock** (1) (ಕ್ರಿ. ಸಕ.) (ಗುಂಡು ಹಾರದಂತೆ) ಬಂದೂಕಿನ ಚಾಪನ್ನು ಮೆಲ್ಲನೆ ಹಿಂದಕ್ಕೆ ಬಿಡು. **Uncoil** (1) (ಕ್ರಿ. ಸಕ.) ; **Uncoloured** (5) ಬಣ್ಣವಿಲ್ಲದ, ಬಣ್ಣ ಹಾಕಿಲ್ಲದ. (ರೂಪ.) (ವರ್ಣನೆ, ಮೊ. ವು) ಅತಿಶಯೋಕ್ತಿಯಿಲ್ಲದ; ಬಣ್ಣ ಕಟ್ಟಿಲ್ಲದ (U. account). **Uncome-at-able** (5) (ಬಳ. ಮಾ.) ಸಮೀಪಿಸಲಾಗದ, ದುಸ್ಸಾಧ್ಯ, ಪಡೆಯಲಾಗದ. **Uncommercial** (5) ವಾಣಿಜ್ಯದ್ದಲ್ಲದ ; ವ್ಯಾಪಾರ ಧರ್ಮ ವಿರುದ್ಧ. **Uncommon** (5) (ಗು.) ಸಾಮಾನ್ಯವಲ್ಲದ, ಅಸಾಧಾರಣ. (ಬಳ. ಮಾ., ಕ್ರಿ. ವಿ.) ಅಸಾಧಾರಣವಾಗಿ (An u. fine girl). **Uncommonly** (ಕ್ರಿ. ವಿ.) ; **Uncommonness** (ನಾ.) ; **Uncommunicative** (5) ಹೆಚ್ಚು ಮಾತನಾಡದ ; ಮನಸ್ಸಿನಲ್ಲಿರುವುದನ್ನು, ಗುಟ್ಟನ್ನು,—ತಿಳಿಸದ; ಗುರುಗುಮ್ಮನೆಯ, ಮೌನ. **Uncommunicatively** (ಕ್ರಿ. ವಿ.) ; **Uncommunicativeness** (ನಾ.); **Uncompromising** (5) ರಾಜಿಗೆ, ಸಂಧಾನಕ್ಕೆ, —ಬರದ; ಪಟ್ಟು ಹಿಡಿದಿರುವ, ಸಗ್ಗದ, ಸೋಲದ, ಖಂಡಿತದ. **Uncompromisingly** (ಕ್ರಿ. ವಿ.) ; **Unconcern** (6) ಕಳವಳ, ಚಿಂತೆ, —ಇಲ್ಲದಿರುವುದು; ನಿರಾತಂಕ, ನಿರ್ವ್ಯಾಕುಲತೆ; ನಿರಾಸಕ್ತಿ; ಔದಾಸೀನ್ಯ. **Unconcerned** (5) (—ರ) ಸಂಬಂಧವಿಲ್ಲದ (*In, with* ಉಪ. ಜೊಡನೆ); ಮನಸ್ಸಿಗೆ ಹಚ್ಚಿಕೊಳ್ಳದ, ನಿಶ್ಚಿಂತ ; ಹಾಯಾಗಿರುವ, ನಿರಾತಂಕವಾಗಿರುವ. **Unconditional** (5) ಯಾವ ಷರತ್ತೂ ಇಲ್ಲದ, ಸಮಗ್ರ, ನಿರುಪಾಧಿಕವಾದ (U. surrender, refusal). **Unconditionally** (ಕ್ರಿ. ವಿ.) ; **Unconditionality, Unconditionalness** (ನಾ.) ; **Unconditioned** (ಗು.) ನಿಯಮ ನಿಬಂಧನೆಗಳಿಗೆ ಒಳಪಟ್ಟಿಲ್ಲದ ; ನಿರುಪಾಧಿಕ. The u. (ತ. ಶಾ.) ಪರಿಮಿತ ಅಸ್ತಿತ್ವದ ನಿಯಮಗಳಿಗೆ ಒಳಪಟ್ಟಿಲ್ಲದ್ದು : ನಿರುಪಾಧಿಕವಾದುದು. U. reflex (ಮ. ಶಾ.) (ಒಂದು ಪ್ರಚೋದನೆಗೆ ಹುಟ್ಟುಗುಣದಿಂದ ಪ್ರತಿಕ್ರಿಯೆಯಾಗಿ ನಡೆಯುವ) ಸಹಜ ಪ್ರತಿವರ್ತನೆ. **Unconfirmed** (5) (ಮು., ವದಂತಿ) ದೃಢಪಟ್ಟಿಲ್ಲದ. **Unconscionable** (5) ಪೂರಾ ಅನ್ಯಾಯದ ; ಆತ್ಮಸಾಕ್ಷಿಗೆ ಹೆದರದ; ಯಾವುದಕ್ಕೂ ಹೇಸದ; ಪೈಶಾಚಿಕ ; (ನ್ಯಾ. ಶಾ.) U. bargain (ಕಾನೂನು ಮೇರೆಗೆ ಜಾರಿಮಾಡಲಾಗದಷ್ಟು) ತೀರ ಅನ್ಯಾಯದ ಒಪ್ಪಂದ. **Unconscious** (5) ಪ್ರಜ್ಞೆಯಿಲ್ಲದ, ಮೈಮೇಲೆ ಎಚ್ಚರವಿಲ್ಲದ [Lay u. for some hours. U. cerebration (Cerebrum ಕೆಳಗೆ ನೋಡಿ)]. The u. (ಮ. ಶಾ.) (ಮನಸ್ಸಿನ) ಅಜಾಗೃತ ಸ್ಥಿತಿ (Psycho- ಕೆಳಗೆ Psychoanalysis ನೋಡಿ). **Unconsciously** (ಕ್ರಿ. ವಿ.); **Unconsciousness** (ನಾ.); **Unconsidered** (5) ಪರಿಗಣಿಸದೆ ಬಿಟ್ಟಿರುವ, ಕಡೆಗಣಿಸಿದ, ಉಪೇಕ್ಷಿತ. **Unconstitutional** (5) (ಕಾರ್ಯಕ್ರಮಗಳು, ಕಾನೂನು, ಮೊ.) ರಾಜ್ಯಘಟನೆಗೆ, ರಾಜ್ಯವ್ಯವಸ್ಥೆಗೆ, —ವಿರುದ್ಧವಾದ. **Unconstitutionally** (ಕ್ರಿ. ವಿ.); **Unconstitutionality** (ನಾ.); **Unconstraint** (6) ಅನಿರ್ಬಂಧ. **Uncontemplated** (5) ಆಲೋಚಿಸದಿದ್ದ ; ಅನಿರೀಕ್ಷಿತ. **Unconventional** (5) ಸಂಪ್ರದಾಯಬದ್ಧ—ವಲ್ಲದ, ನಲ್ಲದ ; ಸ್ವತಂತ್ರ. **Unconventionally** (ಕ್ರಿ. ವಿ.) ; **Unconventionality** (ನಾ.) ; **Uncoop** (3) (ಕ್ರಿ. ಸಕ.) ; **Uncord** (1) (ಕ್ರಿ. ಸಕ.) ; **Uncork** (1) (ಕ್ರಿ. ಸಕ.) (ಸೀಸೆಯಿಂದ) ಬಿರಡೆ—ತೆಗೆ, ಕಳಚು. (ಬಳ. ಮಾ.) (ಮನಸ್ಸನ್ನು, ಭಾವ, ಮೊ. ನ್ನು) ಹೊರಸೂಸು, ಹೇಳಿಕೊ. **Uncouple** (1) (ಕ್ರಿ. ಸಕ.) (ರೈಲುಬಂಡಿ, ಮೊ. ರ) ಕೂಡುಕೊಂಡಿಗಳನ್ನು ಕಳಚು, (ನಾಯಿಗಳ) ಕೂಡು ಬಾರನ್ನು ಬಿಚ್ಚು. **Uncovenanted** (5) (ದೇವರ) ಒಪ್ಪಂದದಲ್ಲಿ, ಒಡಂಬಡಿಕೆಯಲ್ಲಿ, —ವಾಗ್ದಾನ ಮಾಡಿಲ್ಲದ, ಆಧಾರವಿಲ್ಲದ ; ಒಪ್ಪಂದವಾಗಿರದ (U. mercies of God). ಒಡಂಬಡಿಕೆಯ ಕಟ್ಟಿಗೊಳಪಟ್ಟಿಲ್ಲದ, ಒಡಂಬಡಿಕೆ ಮಾಡಿಕೊಂಡಿಲ್ಲದ (ಮು., ಇಂಡಿಯದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ದೇಶೀಯ ಅಧಿಕಾರಿಗಳು : U. civil service in India). **Uncover** (1) (ಕ್ರಿ.) ಮುಸುಕು, ಮರೆ, —ತೆಗೆ ; ತೆರೆದಿಡು ; ತೆರೆದು ತೋರಿಸು ; (ವಂದನೆ ಮಾಡುವಲ್ಲಿ) (ತಲೆಯಿಂದ) ಟೊಪ್ಪಿಗೆಯನ್ನು ತೆಗೆ. (ಸೈನ್ಯ) (ಮುಂದಿನ ಸಾಲು ಎಡಕ್ಕೋ ಬಲಕ್ಕೋ ತಿರುಗಿ, ಹಿಂದಿನ ಸಾಲನ್ನು) ಬಯಲುಮಾಡು, ಕಣ್ಣಿಗೆ ಬೀಳಿಸು, ಮರೆದೆಗೆ. **Uncowl** (2) (ಕ್ರಿ. ಸಕ.) (ಕ್ರೈಸ್ತ ಸಂನ್ಯಾಸಿಯ) ತಲೆಯುಡಿಗೆ, ಟೊಪ್ಪರ,—ತೆಗೆದು ಹಾಕು ; ಅಸಂನ್ಯಾಸಿಯಾಗಿ ಮಾಡು. **Uncreate**[1] (1) (ಕ್ರಿ. ಸಕ.) ಧ್ವಂಸಮಾಡು, ಲಯಗೊಳಿಸು. **Uncreated** (5) ಇನ್ನೂ ಉಂಟು ಮಾಡಿಲ್ಲದ, ಸೃಷ್ಟಿಸಿಲ್ಲದ ; (ಒಬ್ಬರಿಂದ) ಸೃಷ್ಟಿಯಾಗದೆ ತಾನಾಗಿಯೇ ಅಸ್ತಿತ್ವದಲ್ಲಿರುವ : ಅಸೃಷ್ಟ, ಸ್ವಯಂಭೂ [=**Uncreate**[2] (5) (ಪ್ರಾಚೀ. ಪ್ರ.)]. **Uncritical** (5) ವಿಮರ್ಶನ ಯೋಗ್ಯತೆಯಿಲ್ಲದ, ವಿಮರ್ಶಿಸಲೊಲ್ಲದ; ವಿಮರ್ಶ ತತ್ತ್ವ ವಿರುದ್ಧವಾದ. **Uncritically** (ಕ್ರಿ. ವಿ.) ; **Uncross** (1) (ಕ್ರಿ. ಸಕ.) (ಕಾಲುಗಳು, ತೋಳುಗಳು, ಚೂರಿಗಳು, ಮೊ. ನ್ನು) ಒಂದನ್ನೊಂದು ಅಡ್ಡಹಾಯ್ದಿರುವುದನ್ನು, ಕತ್ತರಿಯಾಕಾರದಲ್ಲಿರುವುದನ್ನು, —ತಪ್ಪಿಸು, ಸರಿಮಾಡು. **Uncrossed** (5) (ಹುಂಡಿ) ಅಡ್ಡಗೀಟು ಹಾಕಿಲ್ಲದ (U. cheque) ; ಅಡ್ಡಿಗಳಿಲ್ಲದ, ಅಡಚಣೆಯೊಡ್ಡಿಲ್ಲದ. **Uncrown** (2) (ಕ್ರಿ. ಸಕ.) (ದೊರೆ, ಮೊ. ರ) ಕಿರೀಟ ತೆಗೆದುಹಾಕು, ಪ್ರಭುತ್ವ ತಪ್ಪಿಸು (ರೂಪ. ಸಹ). **Uncrowned** (5) (U. king ಇನ್ನೂ ಕಿರೀಟ ಧಾರಣೆಯಾಗಿಲ್ಲದ, ಪಟ್ಟ ಕಟ್ಟಿಲ್ಲದ, —ರಾಜ. ರಾಜನೆಂಬ ಹೆಸರಿಲ್ಲದೆ ರಾಜನ ಅಧಿಕಾರ ಚಲಾಯಿಸುತ್ತಿರುವವನು : ಅನಭಿಷಿಕ್ತ ರಾಜ). **Uncurb** (1) (ಕ್ರಿ. ಸಕ.) ; **Uncurl** (1) (ಕ್ರಿ. ಸಕ.) ; **Uncustomed** (5) ಸುಂಕಕ್ಕೊಳಪಟ್ಟಿಲ್ಲದ, ಸುಂಕವಿಲ್ಲದ ; ಸುಂಕ ಕೊಟ್ಟಿಲ್ಲದ. **Uncut** (5) ಕತ್ತರಿಸಿಲ್ಲದ, ಸಾಣೆಹಿಡಿದಿಲ್ಲದ; (ಮು., ಪುಸ್ತಕ) ಅಂಚು ಕತ್ತರಿಸಿಲ್ಲದ. **Undated** (5) ತೇದಿ, ತಾರೀಕು, —ಹಾಕಿಲ್ಲದ, ನಮೂದಿಸಿಲ್ಲದ. **Undaunted** (5) ಎದೆಗುಂದದ, ಧೈರ್ಯಗೆಡದ, ನಿರ್ಭೀತ. **Undauntedly** (ಕ್ರಿ. ವಿ.); **Undauntedness** (ನಾ.); **Undeceive** (1) (ಕ್ರಿ. ಸಕ.) ತಪ್ಪು ತಿಳಿವಳಿಕೆಯನ್ನು ಕಳೆ, ಭ್ರಾಂತಿಯನ್ನು ಕಳೆ, ಮೋಸ ತಿಳಿಸು. **Undeceived** (5) ತಪ್ಪು ಭಾವನೆ ಬಿಟ್ಟ ; ಜ್ಞಾನೋದಯವಾದ, ಭ್ರಾಂತಿ ಪರಿಹಾರವಾದ. **Undecided** (5) ನಿಶ್ಚಿತವಾಗಿಲ್ಲದ, ತೀರ್ಮಾನವಾಗಿಲ್ಲದ, ಅನಿರ್ಣೀತ (The point is still u.). ನಿರ್ಧಾರ ಮನಸ್ಸಿಲ್ಲದ ; ತೂಗಾಡುವ, ಸಂದಿಗ್ಧ, —ಮನಸ್ಸಿನ (He stood u.). **Undecidedly** (ಕ್ರಿ. ವಿ.) ; **Undefended** (5) ಅರಕ್ಷಿತ; (ಮು., ದಾವೆಯ ವಿಷಯದಲ್ಲಿ) ಪ್ರತಿವಾದ ಮಾಡದೆ ಬಿಟ್ಟ. **Undeify** (1) (ಕ್ರಿ. ಸಕ.) ; **Undemonstrative** (5) ಉದ್ರೇಕವನ್ನು—ತಡೆದಿಟ್ಟುಕೊಳ್ಳುವ, ತೋರಿಸಿಕೊಳ್ಳದ; (ಭಾವ) ಪ್ರದರ್ಶನಶೀಲನಲ್ಲದ ; ಆಡಂಬರವಿಲ್ಲದ. **Undeniable** (5) ಅಲ್ಲವೆನ್ನಲಾಗದ, ಪ್ರತಿಹೇಳಲಾಗದ, ನಿರ್ವಿವಾದವಾದ, ಸ್ಪಷ್ಟವಾದ. **Undeniably** (ಕ್ರಿ. ವಿ.) ; **Undenominational** (5) (U. education ಮತಾನುಸಾರ ಶಿಕ್ಷಣಕೊಡದ ವಿದ್ಯಾಭ್ಯಾಸ ; ಮತ ಸಂಬಂಧವಿಲ್ಲದ, ನಿರ್ಮತ, —ವಿದ್ಯಾಭ್ಯಾಸ). **Undesigned** (5) ಪೂರ್ವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಲ್ಪಿತವಲ್ಲದ, ಅನುದ್ದೇಶಪೂರ್ವಕವಾದ, ಅನುದ್ದಿಷ್ಟ. **Un-designedly** (ಕ್ರಿ. ವಿ.) ; **Undesirable** (5) (ಗು., ನಾ.) ಅಪೇಕ್ಷಣೀಯವಲ್ಲದ, ಅಹಿತವಾದ, ಅನನುಕೂಲದ, ಅನಿಷ್ಟ. (ನಾ.) —ಮನುಷ್ಯ. **Undesirably** (ಕ್ರಿ. ವಿ.) ; **Undesirability, Undesirableness** (ನಾ.) ; **Undesired** (5) ಅಪೇಕ್ಷಿಸಿ(ದ್ದ)ಲ್ಲದ, ಕೋರಿದ್ದಲ್ಲದ, ಕೋರದ. **Undetermined** (5) ತೀರ್ಮಾನವಾಗಿಲ್ಲದ, ಅನಿರ್ಣೀತ ; ಅನಿಶ್ಚಿತ, ಸಂದಿಗ್ಧ. **Undigested** (5) (ಮು., ಸಂಗತಿಗಳು, ಮೊ. ನ್ನು) ಜೀರ್ಣಿಸಿಕೊಂಡಿಲ್ಲದ, ಅರ್ಥಮಾಡಿಕೊಂಡಿಲ್ಲದ. **Undignified** (5) ಗಾಂಭೀರ್ಯವಿಲ್ಲದ ; ಘನತೆಗೆ ತಗದ ; ಅಯೋಗ್ಯ. **Undisguised** (5) ಮುಚ್ಚುಮರೆಯಿಲ್ಲದ, ಪ್ರಕಟ (U. reluctance). **Undistributed** (5) (U. middle ಉಭಯ ಪ್ರತಿಜ್ಞೆಗಳಿಗೂ ಅನ್ವಯಿಸಬೇಕಾದ ನಿಯಮವನ್ನು ಪೂರ್ಣ ವ್ಯಾಪನಾರ್ಥದಲ್ಲಿ ಉಪಯೋಗಿಸದೆ ಹೋದದ್ದರಿಂದ ಫಲಿಸುವ ದೋಷ: ಅಪೂರ್ಣವ್ಯಾಪ್ತಿದೋಷ). **Undo** (1) (ಕ್ರಿ. ಸಕ.) (ಹಿಂದೆ ಮಾಡಿದ್ದನ್ನು) ರದ್ದುಗೊಳಿಸು, ತೊಡೆದುಹಾಕು (Cannot u. the past, our past actions) ; ಅಲ್ಲಗೊಳಿಸು, ಇಲ್ಲಮಾಡು ; (ಅಂಗಿ, ಗುಂಡಿ, ಗಂಟು) ಬಿಚ್ಚು, ಕಳಚು; ಉಡುಪು ಬಿಚ್ಚು; (ಒಬ್ಬನ ಹೆಸರು, ಅಭಿವೃದ್ಧಿ ಸಂಭವ, ನೀತಿ, ಮೊ. ನ್ನು) ಕೆಡಿಸು, ಹಾಳುಮಾಡು [**Undoer** (ನಾ.); **Undoing** (ನಾ.)] ; **Undone**[1] (ಗು.) ಹಾಳಾದ, ಕೆಟ್ಟುಹೋದ ; ಮುಳುಗಿಹೋದ. **Undone**[2] (5) ಇನ್ನೂ ಮಾಡಿಲ್ಲದ, ನೆರವೇರಿಸಿಲ್ಲದ, ಸಾಧಿಸಿಲ್ಲದ. **Undock** (3) (ಕ್ರಿ. ಸಕ.) ; **Undomesticate** (1) (ಕ್ರಿ. ಸಕ.); **Undoubtedly** (5) (ಕ್ರಿ. ವಿ.) ನಿಸ್ಸಂದೇಹವಾಗಿ, ಖಂಡಿತವಾಗಿ (Doubtless ಹೋಲಿಸಿ). **Undrape** (1) (ಕ್ರಿ. ಸಕ.); **Undress**[1] (1) (ಕ್ರಿ.) ಬಟ್ಟೆಬರೆ, ಉಡುಪು, —ತೆಗೆದುಹಾಕು, ಕಳೆ, ಬಿಚ್ಚಿಹಾಕು. **Undress**[2] (6) ಸಾಮಾನ್ಯ, ಸಾದಾ, ಖಾಸಗಿ, —ಉಡುಪು (ವಿಹಿತಕ್ರಮದ, ಅಧಿಕಾರದ, ಉಡುಪಲ್ಲ); ಅರ್ಧಮರ್ಧದ, ಶಿಸ್ತಿಲ್ಲದ, —ಉಡುಪು ; ಮನೆಯುಡುಪು (ರೂಪ. ಸಹ). **Un-dressed** (5) ಉಡುಪು, ಬಟ್ಟೆಬರೆ, —ಹಾಕಿಲ್ಲದ ; (ತೊಗಲು) ನಯಮಾಡಿಲ್ಲದ. **Undue** (5) ವಿಪರೀತ, ಮಿತಿಮೀರಿದ (Spoke with u. warmth) ; ನ್ಯಾಯವಲ್ಲದ, ಮಾಡಬಾರದ, ಅನುಚಿತ, ಅನ್ಯಾಯದ (U. influence ಅನ್ಯಾಯವಾಗಿ ಬೀರಿದ, ಅನುಚಿತ, —ಪ್ರಭಾವ, ಒತ್ತಾಯ) ; (ಹುಂಡಿ, ಮೊ. ವು) ವಾಯಿದೆ ಬಂದಿಲ್ಲದ. **Unduly** (ಕ್ರಿ. ವಿ.), **Unduke** (4) (ಕ್ರಿ. ವಿ.) ; **Undying** (5) ಅಮರವಾದ, ಶಾಶ್ವತವಾದ (U. fame). **Undyingly** (ಕ್ರಿ. ವಿ.) ; **Unearned** (5) ದುಡಿದು ಸಂಪಾದಿಸಿದ್ದಲ್ಲದ [U. increment (ತನ್ನ ದುಡಿಮೆಯಿಂದಾಗಲಿ, ಹೆಚ್ಚು ಬಂಡವಾಳ ಹಾಕಿದ್ದರಿಂದಾಗಲಿ ಅಲ್ಲದೆ, ಜನಸಂಖ್ಯೆಯ ಹೆಚ್ಚಿಕೆ, ಗಿರಾಕಿಯ ಏರು, ಮೊ.) ಬಾಹ್ಯ ಕಾರಣಗಳಿಂದ ಏರಿದ ಜಮೀನಿನ ಹೆಚ್ಚು ಬೆಲೆ]. **Unearth** (3) (ಕ್ರಿ. ಸಕ.) (ನರಿ, ಮೊ. ನ್ನು) ಇಕ್ಕೆಯಿಂದ ಹೊರಡಿಸು ; (ನೆಲವನ್ನು) ಅಗೆದು ತೆಗೆ ; (ರೂಪ.) ಬೆಳಕಿಗೆ, ಬಯಲಿಗೆ,—ತರು ; ರಟ್ಟುಮಾಡು, ಹೊರಹಾಕು. **Unearthly** (5) ಇಹಲೋಕಕ್ಕೆ ಸಂಬಂಧಿಸಿದ್ದಲ್ಲದ ; ಅಲೌಕಿಕ, ಅಮಾನುಷ ; ಪ್ರೇತದ(ಂಥ) [U. cry, sound, pallor. U. hour, time (ಬಳ. ಮಾ.) ಅವೇಳೆ, ನಡುರಾತ್ರಿ]. **Unearthli-ness** (ನಾ.) ; **Unease** (6) (ಪ್ರಾಚೀ. ಪ್ರ.) ಇರುಸು ಮುರುಸು, ಅಹಿತ, ಕ್ಲೇಶ, ಕಿರಿಕಿರಿ, ಅಸೌಖ್ಯ. **Uneasy** (5) ದೇಹದಲ್ಲಾಗಲಿ ಮನಸ್ಸಿನಲ್ಲಾಗಲಿ—ಅಹಿತದ, ಕಲಕಿನ: ನೆಮ್ಮದಿಯಿಲ್ಲದ, ಆತಂಕದ, ಕಳವಳಗೊಂಡ, ಚಿಂತಾಭರಿತ (Passed an u. night). **Un-easily** (ಕ್ರಿ. ವಿ.) ; **Uneasiness** (ನಾ.) ; **Uneconomic** (5) (ಮು., ಬಾಡಿಗೆಯ ವಿಷಯದಲ್ಲಿ ; ಮಾಲೀಕನಿಗೆ) ಲಾಭಕರವಲ್ಲದ. **Uneconomical** (ಗು.); **Unedge** (2) (ಕ್ರಿ. ಸಕ.) (ಅಲಗಿನ) ಬಾಯಿ ಕೆಡಿಸು ; ಮೊಂಡುಮಾಡು. **Unedifying** (5) ನೀತಿಕರವಲ್ಲದ, ದುಷ್ಟ ; ಆತ್ಮೋನ್ನತಿ ಸಾಧಕವಲ್ಲದ ; ಜ್ಞಾನಪ್ರದವಲ್ಲದ. **Un-egoize** (1) (ಕ್ರಿ. ಸಕ.) ; **Unemployable** (5) (ಗು., ನಾ.) (ಅಯೋಗ್ಯತೆ, ವಯಸ್ಸು, ಮೊ. ಕಾರಣಗಳಿಂದ) ನೌಕರಿಗೆ, ಕೆಲಸಕ್ಕೆ, —ಅನರ್ಹನಾದ(ವನು). **Unemployed** (5) ಉಪಯೋಗಿಸಿಲ್ಲದ ; ಕೆಲಸವಿಲ್ಲದ, ನಿರುದ್ಯೋಗಿಯಾದ (U. capital ಉಪಯೋಗಿಸದೆ ಇರುವ, ಕೊಳೆಯುತ್ತಿರುವ, —ಬಂಡವಾಳ. U. energies. The u. ನಿರುದ್ಯೋಗಿಗಳು). **Unemployment** (6) ನಿರುದ್ಯೋಗ (U. benefit ವಿಮೆ ಕಾನೂನಿನ ಪ್ರಕಾರ ಉದ್ಯೋಗ ಸಿಕ್ಕಿಲ್ಲದ ಕೆಲಸಗಾರನಿಗೆ ಕೊಡುವ ದ್ರವ್ಯಸಹಾಯ: ನಿರುದ್ಯೋಗ ಸಹಾಯ). **Unencumbered** (5) ಸಾಲಕ್ಕೀಡಾಗಿಲ್ಲದ (U. estate ಪೂರ್ವಾಧಿಯಿಲ್ಲದ ಸ್ವತ್ತು). **Unending** (5) ಕೊನೆಯಿಲ್ಲದ, ಮುಗಿಯದ, ಅನಂತ. **Unending-ly** (ಕ್ರಿ. ವಿ.) ; **Unendingness** (ನಾ.). **Un-English** (5) ಇಂಗ್ಲಿಷ್ ಅಲ್ಲದ ; ಇಂಗ್ಲಿಷ್ ರೀತಿ, ಲಕ್ಷಣ, ಅಲ್ಲದ. **Unentangle** (1) (ಕ್ರಿ. ಸಕ.) ; **Unequal** (5) ಸಮವಲ್ಲದ, ಅಸಮ, ಅಸಮಾನ (*To* ಉಪ. ಜೊಡನೆ) ; ವ್ಯತ್ಯಾಸವಾಗುತ್ತ ಹೋಗುವ ; ವ್ಯತ್ಯಾಸ ಲಕ್ಷಣಗಳುಳ್ಳ. **Unequally** (ಕ್ರಿ. ವಿ.) ; **Unequalize** (1) (ಕ್ರಿ. ಸಕ.) ; **Unequivocal** (5) ನಿಸ್ಸಂದಿಗ್ಧವಾದ, ಸ್ಪಷ್ಟವಾದ, ತಪ್ಪು ತಿಳಿದುಕೊಳ್ಳಲು ಅವಕಾಶವೇ ಇಲ್ಲದ. **Unequivocally** (ಕ್ರಿ. ವಿ.); **Unequivocalness** (ನಾ.) ; **Unerring** (5) ಗುರಿತಪ್ಪದ ; ತಪ್ಪುಮಾಡದ, ತಪ್ಪಿಹೋಗದ ; ಕುರಿತೇಟಿನ (U. judgement, wisdom, aim) ; **Unerringly** (ಕ್ರಿ. ವಿ.) ; **Unerringness** (ನಾ.) ; **Unessential** (ಗು., ನಾ.) ಆವಶ್ಯಕವಲ್ಲದ ; ಪ್ರಧಾನವಲ್ಲದ. (ನಾ.) —ಭಾಗ, ವಸ್ತು ; ಅನಾವಶ್ಯಕವಾದುದು, ಅಪ್ರಧಾನವಾದುದು. **Uneven** (5) ಒಂದೇ ಮಟ್ಟವಾಗಿಲ್ಲದ ; ಸಮತೆಯಿಲ್ಲದ, ವಿಷಮ, ವ್ಯತ್ಯಾಸ ಹೊಂದುವ (U. progress. U. temper). (ಸಂಖ್ಯೆ) ಬೆಸ. **Unexampled** (5) ಅನ್ಯಾದೃಶವಾದ. **Unexceptionable** (5) ತಪ್ಪು ಕಂಡುಹಿಡಿಯಲಾಗದ; ನಿರ್ದೋಷವಾದ, ನಿರಾಕ್ಷೇಪಣೀಯವಾದ. **Unexceptionably** (ಕ್ರಿ. ವಿ.); **Unexceptionableness** (ನಾ.) ; **Unexcised** (5) ಸುಂಕಕ್ಕೆ ಒಳಪಟ್ಟಿಲ್ಲದ ; ಸುಂಕವಿಲ್ಲದ. **Unexpired** (5) (ಗುತ್ತಿಗೆ, ಮೊ. ವು) ವಾಯಿದೆ ಮುಗಿದಿಲ್ಲದ, ಇನ್ನೂ ನಡೆಯುತ್ತಿರುವ, ಚಾಲ್ತಿಯಲ್ಲಿರುವ. **Unextended** (5) ಮುಂದುವರಿಸಿ(ದ್ದ)ಲ್ಲದ, ಹಿಗ್ಗಿಸಿಲ್ಲದ, ಅಲಂಬಿತ ; ಸ್ಥಳವನ್ನಾಕ್ರಮಿಸದ, ಪರಿಮಾಣವಿಲ್ಲದ. **Un-face** (2) (ಕ್ರಿ. ಸಕ.) ಮುಸುಕು ತೆಗೆ, ಬಯಲುಮಾಡು, ಪ್ರಕಾಶಕ್ಕೆ ತರು. **Unfadable** (5) ಬಾಡದ, ಮ್ಲಾನವಾಗದ. **Unfailing** (5) ವಿಫಲವಾಗದ, ತಪ್ಪದ ; ಕಡಮೆ ಬೀಳದ, ಯಥೇಷ್ಟವಾಗಿರುವ (U. supply) ; ನಿರೀಕ್ಷಣ ಭಂಗಮಾಡದ, ನೆಚ್ಚಿಕೆಯ (U. sup-porter). **Unfailingly** (ಕ್ರಿ. ವಿ.) ; **Unfailingness** (ನಾ.) ; **Unfair** (5) ತರವಲ್ಲದ, ಅನ್ಯಾಯದ, ಪಕ್ಷಪಾತದ, ಅಪ್ರಾಮಾಣಿಕತೆಯ (U. advantage. Got by u. means). **Unfaith** (6) (ವಿರ. ಪ್ರ.) ಅವಿಶ್ವಾಸ, ನಿಷ್ಠೆಯಿಲ್ಲದಿರುವುದು. **Unfashioned** (5) ರೂಪಕೊಟ್ಟಿಲ್ಲದ; ಆಕಾರಕ್ಕೆ ಬಂದಿಲ್ಲದ. **Unfasten** (1) (ಕ್ರಿ. ಸಕ.) ಅಗುಳಿ, ಕಟ್ಟು, ಕೊಕ್ಕೆ, —ತೆಗೆ, ಕಳಚು. **Unfastened** (5) ಕಟ್ಟಿಲ್ಲದ ; ಅಗುಳಿ, ಕಟ್ಟು, —ಹಾಕಿಲ್ಲದ, ತೆಗೆದಿರುವ. **Un-fathered** (5) (ಕಾವ್ಯ) ತಂದೆಯಿಲ್ಲದ; ತಂದೆ ಗೊತ್ತಿಲ್ಲದ; (ರೂಪ.) ಕರ್ತೃತ್ವವೊಪ್ಪಿಕೊಂಡಿಲ್ಲದ, ಕರ್ತೃ ತಿಳಿದಿಲ್ಲದ (U. theory). **Unfeather** (2) (ಕ್ರಿ. ಸಕ.) ; **Unfeed** (5) ರುಸುಮಿಲ್ಲದ, ರುಸುಮಿಗೆ ಗೊತ್ತುಮಾಡಿಲ್ಲದ. **Unfeeling** (5) ವೇದನೆಯಾಗದ ; ಮನ ತಾಕದ, ಸೂಕ್ಷ್ಮತೆಯಿಲ್ಲದ, ಜಡ ; ಮನಸ್ಸು ಕರಗದ, ಕಲ್ಲೆದೆಯ, ಕಠಿನ, ಕ್ರೂರ. **Unfeelingly** (ಕ್ರಿ. ವಿ.); **Unfeeling-ness** (ನಾ.) ; **Unfelt** (5) ಮನ ತಟ್ಟದ, ಅನುಭವಿಸಿಲ್ಲದ. **Un-fetter** (1) (ಕ್ರಿ. ಸಕ.) ಬೇಡಿ, ಸಂಕಲೆ, —ತೆಗೆದುಹಾಕು, ಕಳಚು. **Unfettered** (ಗು.) ; **Unfeudalize** (1) (ಕ್ರಿ. ಸಕ.) ; **Unfigur-ed** (5) ಚಿತ್ರ, ಆಕೃತಿ,—ಗುರುತಿಸಿಲ್ಲದ, ಹಾಕಿಲ್ಲದ (U. muslin, vase). **Unfile** (1) (ಕ್ರಿ. ಸಕ.) (ಕಾಗದವನ್ನು) ಕಟ್ಟಿನಿಂದ ಹೊರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೆಗೆ. **Unfit** (1, 5) (ಕ್ರಿ. ಸಕ., ಗು.) ಅಸಂಗತ, ಆಯೋಗ್ಯ, ಅನುಚಿತ,—ಮಾಡು (*For* ಉಪ. ದೊಡನೆ). (ಗು.) ಹೊಂದದ, ತಗದ, ಯುಕ್ತವಲ್ಲದ, ಅನುಚಿತ, ಅಯೋಗ್ಯ, ಅಸಮರ್ಥ (*To* do, *for* purpose. U. for a doctor ವೈದ್ಯನಾಗಲು ಅಸಮರ್ಥ). **Unfitly** (ಕ್ರಿ. ವಿ.); **Unfitness** (ನಾ.); **Unfitted**=Unfit; ಅಳವಡಿಸಿಲ್ಲದ, ಸಜ್ಜುಗೊಳಿಸಿಲ್ಲದ. **Unfix** (1) (ಕ್ರಿ. ಸಕ.) ಅಭದ್ರಮಾಡು; (ನಾಟಿರುವುದನ್ನು) ಸಡಿಲಿಸು, ಕಳಚು. **Unfixed** (5) (ಗು.) ಬಂಧಿಸಿಲ್ಲದ, ಬಿಗಿಸಿಲ್ಲದ. **Unfledged** (5) ಗರಿ ಮೂಡಿಲ್ಲದ, ರೆಕ್ಕೆ ಬಂದಿಲ್ಲದ (ರೂಪ. ಸಹ); ಬೆಳೆದಿಲ್ಲದ, ಬಲಿತಿಲ್ಲದ. **Unflower** (2) (ಕ್ರಿ. ಸಕ.); **Unfold**[1] (1) (ಕ್ರಿ.) ಮಡಿಕೆಗಳನ್ನು, ಪದರಗಳನ್ನು, —ತೆಗೆ, ಬಿಚ್ಚು; (ಹೀಗೆ ತೆಗೆದು) ಹರವು; (ಆಲೋಚನೆಗಳು, ಹಂಚಿಕೆ, ಮೊ. ನ್ನು) ಬಯಲುಮಾಡು, ಪ್ರಕಾಶಗೊಳಿಸು, ಹೊರಗೆಡವು. ಅರಳು, ವಿಕಾಸವಾಗು. **Unfold**[2] (3) (ಕ್ರಿ. ಸಕ.) (ಕುರಿಗಳನ್ನು) ರೊಪ್ಪದಿಂದ ಹೊರಕ್ಕೆ ಬಿಡು. **Unform** (1) (ಕ್ರಿ. ಸಕ.); **Unformed** (5) ರೂಪಗೊಂಡಿಲ್ಲದ, ಆಕಾರವಿಲ್ಲದ. **Unfortunate** (5) (ಗು., ನಾ.) ದುರದೃಷ್ಟದ, ಅದೃಷ್ಟಹೀನ; ದೌರ್ಭಾಗ್ಯದ. (ನಾ.) ದುರದೃಷ್ಟದವನು, ನಿರ್ಭಾಗ್ಯ. **Unfounded** (5) ಬುಡವಿಲ್ಲದ, ಅಡಿಪಾಯವಿಲ್ಲದ, ನಿರಾಧಾರ (U. rumour, hopes); ಇನ್ನೂ ಸ್ಥಾಪನೆಯಾಗಿಲ್ಲದ. **Unframe** (2) (ಕ್ರಿ. ಸಕ.); **Unfriend** (6) (ಪ್ರಾಚೀ. ಪ್ರ.) ಶತ್ರು, ಹಗೆ. **Unfriended** (5) ಸ್ನೇಹಿತರಿಲ್ಲದ, ಕೆಳೆಯಿಲ್ಲದ. **Unfrock** (2) (ಕ್ರಿ. ಸಕ.) ಲಂಗ, ನಿಲುವಂಗಿ, —ತೆಗೆದುಹಾಕು; (ರೂಪ.) ಪಾದ್ರಿಪದವಿ ತಪ್ಪಿಸು. **Unfunded** (5) (ಸಾಲ) ಶಾಶ್ವತ ಋಣವನ್ನಾಗಿ ಮಾರ್ಪಡಿಸಿಲ್ಲದ; ಅಸಂಚಿತ; ಚಲ. **Unfurl** (1) (ಕ್ರಿ.) (ಹಡಗಿನ ಪಟ, ಮೊ. ಗಳ ವಿಷಯದಲ್ಲಿ) ಬಿಚ್ಚಿ ಹರಡು; ಹರಡಿಕೊ. **Unfurnished** (5) ಒದಗಿಸಿಲ್ಲದ, ಸರಬರಾಯಿ ಮಾಡಿಲ್ಲದ; (ಪೀಠೋಪಸ್ಕರಗಳಿಂದ) ಸಜ್ಜುಗೊಳಿಸಿಲ್ಲದ; ಅಸಜ್ಜಿತ. **Ungallant** (5) ರಸಿಕನಲ್ಲದ, ಸ್ತ್ರೀಪರಾಯಣನಲ್ಲದ. **Ungarnished** (5) ಅಲಂಕಾರ ಮಾಡಿಲ್ಲದ, ಅನಲಂಕೃತ. **Ungear** (1) (ಕ್ರಿ. ಸಕ.) ಉಡುಪು, ಸರಂಜಾಮು, —ಕಳಚು; ಚಾಲಕ ಸಂಯೋಜನೆ—ತಪ್ಪಿಸು, ಕಳಚು; ಅವ್ಯವಸ್ಥೆಗೊಳಿಸು. **Ungentle** (5) ಮೃದುವಲ್ಲದ, ಅವಿನಯ, ಒರಟಾದ, ಅಸಭ್ಯ, ಅಸಂಸ್ಕೃತ. **Ungently** (ಕ್ರಿ. ವಿ.); **Ungentleness** (ನಾ.); **Ungentlemanly** (5) ಸಂಭಾವಿತನಿಗೆ ಉಚಿತವಲ್ಲದ; ಅಸಭ್ಯ, ಒರಟಾದ, ಅವಿನೀತ. **Ungentlemanliness** (ನಾ.); **Ungild** (1) (ಕ್ರಿ. ಸಕ.); **Ungird** (1) (ಕ್ರಿ. ಸಕ.); **Ungirdle** (2) (ಕ್ರಿ. ಸಕ.); **Unglaze** (1) (ಕ್ರಿ. ಸಕ.); **Unglove** (2) (ಕ್ರಿ.) ಕೈಚೀಲ ತೆಗೆದು ಹಾಕು, ಕಳಚು. **Ungovernable** (5) ಅಂಕೆಯಲ್ಲಿಡಲಾಗದ, ಹತೋಟಿ ಮೀರಿದ; ಸ್ವೇಚ್ಛಾಚಾರದ, ಹುಚ್ಚಾಬಟ್ಟೆಯ, ದುರ್ದಮನೀಯ (U. passions). **Ungovernably** (ಕ್ರಿ. ವಿ.); **Ungown** (2) (ಕ್ರಿ. ಸಕ.); **Ungracious** (5) ಅನಾದರಣೆಯ, ವಿನಯವಿಲ್ಲದ; ದಾಕ್ಷಿಣ್ಯವಿಲ್ಲದ; ನಿರ್ದಯ (U. reception, reply). **Ungrammatical** (5) ವ್ಯಾಕರಣ—ಸಮ್ಮತವಲ್ಲದ, ವಿರುದ್ಧ. **Ungrammatically** (ಕ್ರಿ. ವಿ.); **Ungrounded** (5) (ಹೇಳಿಕೆ, ಮೊ. ವು) ಬುಡವಿಲ್ಲದ, ನಿರಾಧಾರವಾದ. **Unguarded** (5) ರಕ್ಷಣೆಯಿಲ್ಲದ; ಎಚ್ಚರಿಕೆ ತಪ್ಪಿದ, ಬೇಹುಷಾರಿನ; ವಿಚಾರಹೀನ (U. expression, admission). **Ungum** (2) (ಕ್ರಿ. ಸಕ.); **Unhallow** (1) (ಕ್ರಿ. ಸಕ.) ಅಪವಿತ್ರಮಾಡು, ಕೆಡಿಸು. **Unhand** (1) (ಕ್ರಿ. ಸಕ.) ಕೈತೆಗೆ, ಹಿಡಿತಬಿಡು. **Unhandsome** (5) (ರೂಪ, ನಡತೆ) ಅಂದವಲ್ಲದ, ಚೆನ್ನಲ್ಲದ; ಔದಾರ್ಯವಿಲ್ಲದ. **Unhandsomely** (ಕ್ರಿ. ವಿ.); **Unhandsomeness** (ನಾ.); **Unhandy** (5) (ಎತ್ತಲು, ಹಿಡಿಯಲು) ಅನುವಾಗಿಲ್ಲದ, ಅಡಕವಾಗಿಲ್ಲದ; (ಮನುಷ್ಯ) ಒಡ್ಡೊಡ್ಡಾದ, ನಾಜೂಕಿಲ್ಲದ. **Unhandily** (ಕ್ರಿ. ವಿ.); **Unhandiness** (ನಾ.); **Unhang** (1) (ಕ್ರಿ. ಸಕ.) ತೂಗಬಿದ್ದಿರುವ ಸ್ಥಿತಿಯನ್ನು ತಪ್ಪಿಸು; ನೇರಲಾಟ ತಪ್ಪಿಸಿ ಇಡು; (ಗೋಡೆಗಿರುವ ಪರದೆ, ಮೊ. ನ್ನು) ತೆಗೆದುಹಾಕು, ಕಳಚು. **Unhanged** (5) ಗಲ್ಲು ತಪ್ಪಿಸಿಕೊಂಡಿರುವ, ಗಲ್ಲಾಗದಿರುವ (The greatest scoundrel u.). **Unhappy** (5) ಸುಖ, ಸಂತೋಷ, ನೆಮ್ಮದಿ, —ಇಲ್ಲದ; ದುಃಖ—ಭರಿತ, ಕರ; ದುರದೃಷ್ಟದ; ಗೋಳಿನ, ದರಿದ್ರ. **Unhappily** (ಕ್ರಿ. ವಿ.); **Unhappiness** (ನಾ.); **Unharness** (1) (ಕ್ರಿ. ಸಕ.) (ಕುದುರೆಯ) ಸಜ್ಜು, ಸರಂಜಾಮು, —ತೆಗೆದುಹಾಕು, ಕಳಚು. **Unhasp** (1) (ಕ್ರಿ. ಸಕ.) ಚಿಲುಕ, ಕೊಂಡಿ, —ತೆಗೆ, ಕಳಚು. **Unhealthy** (5) ಅನಾರೋಗ್ಯದ; (ಮು., ಸೈನಿಕ ಅನು.) (ಪ್ರದೇಶ) ಅಪಾಯಕ್ಕೆ, ಗುಂಡಿನೇಟಿಗೆ, —ಈಡಾದ, ಸಿಕ್ಕುವ. **Unhealthily** (ಕ್ರಿ. ವಿ.); **Unhealthiness** (ನಾ.); **Unheard** (5) ಕೇಳಿಲ್ಲದ, ಕೇಳಿ ಅರಿಯದ [U. of ಅಶ್ರುತಪೂರ್ವ, ಹಿಂದೆಂದೂ ಕೇಳಿಲ್ಲದ(ಂಥ)]. **Unhewn** (5) ಕಡಿದು ನಯಮಾಡಿಲ್ಲದ, ಒಡ್ಡೊಡ್ಡಾದ, ಒರಟು ಮುರುಟಾದ, ಅಪರಿಷ್ಕೃತ (ರೂಪ. ಸಹ). **Unhinge** (1) (ಕ್ರಿ. ಸಕ.) (ಕದವನ್ನು) ಕೀಲು ಕಳಚು, ಕಳಚಿಡು; (ಬುದ್ಧಿಯನ್ನು) ಅವ್ಯವಸ್ಥೆಗೊಳಿಸು, ಭ್ರಮಣೆಗೊಳಿಸು. **Unhinged** (ಗು.); **Unhistoric(al)** (5) ಐತಿಹಾಸಿಕವಲ್ಲದ; ಕೇವಲ ಪುರಾಣ ಕಲ್ಪನೆಯ. **Unhitch** (1) (ಕ್ರಿ. ಸಕ.); **Unhive** (3) (ಕ್ರಿ. ಸಕ.); **Unholy** (5) ಪವಿತ್ರವಲ್ಲದ, ಅಪವಿತ್ರ, ದುಷ್ಟ, ಪಾಪಕರ. **Unholily** (ಕ್ರಿ. ವಿ.); **Unholiness** (ನಾ.); **Unhook** (1) (ಕ್ರಿ. ಸಕ.) ತಗುಲಿಸಿರುವ ಕೊಕ್ಕೆಯಿಂದ ತೆಗೆ; (ಉಡುಪು, ಮೊ. ನ್ನು) ಕೊಕ್ಕೆ ಕಳಚಿ—ತೆರೆ, ಹರಡು. **Unhoop** (1) (ಕ್ರಿ. ಸಕ.); **Unhorse** (3) (ಕ್ರಿ. ಸಕ.) ಕುದುರೆಯಿಂದ —ಕೆಡವು, ಕೆಡವಿಸು; (ಕುದುರೆ: ಸವಾರನನ್ನು) ಎತ್ತಿಹಾಕು, ಕೆಳಕ್ಕೆ ಕೆಡವು, ಇಳಿಯುವಂತೆ ಮಾಡು. **Unhouse** (1) (ಕ್ರಿ. ಸಕ.) ಆಶ್ರಯ ತಪ್ಪಿಸು; ಮನೆಬಿಟ್ಟು ಹೊರಡಿಸು; ಮನೆಯಿಂದ ಹೊರಹಾಕು. **Unhuman** (5) ಮಾನುಷವಲ್ಲದ, ಅಮಾನುಷ. **Unhumanize** (1) (ಕ್ರಿ. ಸಕ.); **Unhusk** (2) (ಕ್ರಿ. ಸಕ.); **Unidea'd** (5) ಭಾವನೆಗಳಿಲ್ಲದ; ಭಾವನಾ, ಕಲ್ಪನಾ, —ಶೂನ್ಯ. **Unideal** (5) ಆದರ್ಶಪ್ರಾಯವಲ್ಲದ, ಶುಷ್ಕ, ನೀರಸ, ಸಾಮಾನ್ಯ, ಕಳಪೆಯ, ಸಪ್ಪೆಯ, ಕೀಳು ತೆರನಾದ. **Unimpeachable** (5) ಯಾವ ಆರೋಪಣೆಗೂ, ಅಪನಂಬಿಕೆಗೂ, —ಎಡೆಯಿಲ್ಲದ; ನಿರಾಕ್ಷೇಪಣೀಯ, ನಿರ್ದುಷ್ಟ, ನಾಚಾ. **Unimpeachably** (ಕ್ರಿ. ವಿ.); **Unimpeachableness, Unimpeachability** (ನಾ.); **Unimproved** (5) (ಮು., ಜಮೀನಿನ ವಿಷಯದಲ್ಲಿ) ಅಭಿವೃದ್ಧಿಪಡಿಸಿಲ್ಲದ. **Uninformed** (5) (ಮು.) ತಿಳಿವಳಿಕೆಯಿಲ್ಲದ, ಅಜ್ಞಾನಿ. **Uninspired** (5) (ಮು., ಭಾಷಣ, ಮೊ. ವು) ಸ್ಫೂರ್ತಿಶೂನ್ಯ, ಭಾವೋದ್ವೇಗಶೂನ್ಯ, ಸಾಧಾರಣವಾದ. **Uninviting** (5) ಆಕರ್ಷಕವಲ್ಲದ, ಅನಾಕರ್ಷಕ. **Uninvitingly** (ಕ್ರಿ. ವಿ.); **Unjoin** (1) (ಕ್ರಿ. ಸಕ.); **Unjoint** (1) (ಕ್ರಿ. ಸಕ.) (ಗಾಳದ ಕೋಲು, ಮೊ. ಗಳ) ಕೀಲುಗಳನ್ನು, ಸಂಧಿಗಳನ್ನು, —ಕಳಚು, ಪ್ರತ್ಯೇಕಿಸು. **Unjust** (5) ಅನ್ಯಾಯದ, ತರವಲ್ಲದ. **Unjustly** (ಕ್ರಿ. ವಿ.); **Unkind** (5) ಕರುಣೆ, ದಯೆ, —ಇಲ್ಲದ; ನಿರ್ದಯ, ಕಠಿನ, ಕ್ರೂರ. **Unkindly** (ಕ್ರಿ. ವಿ.); **Unkindness** (ನಾ.); **Unking** (4) (ಕ್ರಿ. ಸಕ.); **Unknowing** (5) ತಿಳಿಯದ, ಅರಿವಿಲ್ಲದ, ಉದ್ದೇಶಪೂರ್ವಕವಲ್ಲದ (*Of* ಉಪ. ದೊಡನೆ ಸಹ). **Unknowingly** (ಕ್ರಿ. ವಿ.); **Unknown** (5) (ಗು., ನಾ., ಕ್ರಿ. ವಿ.) ತಿಳಿಯದ, ತಿಳಿದಿಲ್ಲದ, ಅಜ್ಞಾತ [His purpose was unknown to me. A youth to fame u. ಅಜ್ಞಾತ ಯುವಕ. X and Y denote u. quantities in equation ಸಮೀಕರಣದಲ್ಲಿ x ಮತ್ತು y ಅಜ್ಞಾತ ಪದಗಳನ್ನು ಸೂಚಿಸುತ್ತವೆ. The u. warrior (War ಕೆಳಗೆ ನೋಡಿ)]. (ನಾ.) ತಿಳಿಯದ್ದು (We all dread the u.; Equation of

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

two unknowns). (ಕ್ರಿ. ವಿ.) U. to ಗೋಚರಕ್ಕೆ, ತಿಳಿವಳಿಕೆಗೆ, —ಬರದೆ; ತಿಳಿಯದೆ, ತಿಳಿನದೆ (Did it u. to me). **Unknowable** (The u. ಅಜ್ಞೇಯ). **-bly, -ness, -bility**; **Unlaboured** (5) (ಶೈಲಿ, ಮೊ. ವಿಷಯದಲ್ಲಿ) ಕಷ್ಟಪಟ್ಟಿಲ್ಲದ, ತಿಣಿಕಿಲ್ಲದ, ಅಕ್ಲಿಷ್ಟ, ಅಕೃತಕ, ಸಹಜವಾದ. **Unlace** (1) (ಕ್ರಿ. ಸಕ.) (ಮೋಜ, ಮೊ. ಗಳ) ದಾರವನ್ನು, ಕಟ್ಟನ್ನು, —ಬಿಚ್ಚು; ದಾರವನ್ನು ಬಿಚ್ಚಿ (ಮೋಜ, ಮೊ. ನ್ನು) ಸಡಿಲಮಾಡು, ತೆರೆ. **Unlatch** (1) (ಕ್ರಿ. ಸಕ.) (ಬಾಗಿಲ) ಅಗುಳಿ ತೆಗೆ. **Unlay** (1) (ಕ್ರಿ. ಸಕ.) (ನಾವೆ) ತಿರುಚನ್ನು ತೆಗೆ; ಹೊಸೆದಿರುವುದನ್ನು ಬಿಚ್ಚು. **Unlead** (2) (ಕ್ರಿ. ಸಕ.) (ಮುದ್ರಣ: ಸಾಲುಗಳ ನಡುವಣ) ತೆಳುಪಟ್ಟಿಗಳನ್ನು ತೆಗೆದುಹಾಕು; ಒತ್ತುಸಾಲು ಮಾಡು. **Unlearn** (1) (ಕ್ರಿ. ಸಕ.) ಜ್ಞಾಪಕದಲ್ಲಿ ನಿಲ್ಲಗೊಡದಿರು; ಮರೆತುಬಿಡು; (ತಪ್ಪು ತಿಳಿವಳಿಕೆ, ದುರಭ್ಯಾಸ, ಮೊ. ನ್ನು) ತ್ಯಜಿಸು, ತೊರೆ. **Unlearned**[1] (5) (ಅನ್‌ಲರ್ನಿಡ್) ಪಾಂಡಿತ್ಯವಿಲ್ಲದ, ಪಂಡಿತನಲ್ಲದ. **Unlearnt, Unlearned**[2] (ಅನ್‌ಲರ್ನ್ಡ್) ಕಲಿತಿಲ್ಲದ. **Unleash** (3) (ಕ್ರಿ. ಸಕ.); **Unlettered** (5) ಅಕ್ಷರಜ್ಞಾನವಿಲ್ಲದ, ಅನಕ್ಷರಸ್ಥ. **Unlicked** ರೂಪಕ್ಕೆ, ವ್ಯವಸ್ಥೆಗೆ, —ತಂದಿಲ್ಲದ; ನಡತೆಗೆಟ್ಟ, ಅಸಭ್ಯ. **Unlike** (5) (ಗು., ಉಪ.) (—) ಹಾಗಿಲ್ಲದ; ಹೋಲಿಕೆಯಿಲ್ಲದ, ಅಸದೃಶ (Is u. both his parents ತಾಯಿತಂದೆಗಳಲ್ಲಿ ಒಬ್ಬರನ್ನೂ ಅವನು ಹೋಲುವುದಿಲ್ಲ. U. signs ಅಸದೃಶ ಚಿಹ್ನೆಗಳು: +, —). **Unlikely** (5) ಅಸಂಭವ; ವಿಫಲವಾಗುವ, (ಜಯದ) ಭರವಸೆಯಿಲ್ಲದ (U. tale, errand). **Unlikelihood** (ನಾ.); **Unlikeliness** (ನಾ.); **Unlimber** (2) (ಕ್ರಿ. ಸಕ.); **Unlimited** (5) ಎಲ್ಲೆ, ಮಿತಿ, —ಇಲ್ಲದ; ಅ(ಪರಿ)ಮಿತ; ಅನಂತ, ಅಪಾರ, ಅಸಂಖ್ಯಾತ (Drinks u. coffee. U. expanse of sea. U. scope). **Unlimitedly** (ಕ್ರಿ. ವಿ.); **Unlimitedness** (ನಾ.); **Unline** (1) (ಕ್ರಿ. ಸಕ.) ಅಸ್ತರಿಯನ್ನು ತೆಗೆದುಹಾಕು. **Unlined** (5) (ಮು.) ಅಸ್ತರಿ ಹಾಕಿಲ್ಲದ; (ಮುಖ, ಮೊ. ವು) ಸುಕ್ಕಿಲ್ಲದ. **Unlink** (1) (ಕ್ರಿ. ಸಕ.); **Unload** (1) (ಕ್ರಿ. ಸಕ.) (ಹಡಗು, ಬಂಡಿ, ಮೊ. ಗಳಿಂದ) ಸಾಮಾನು ಇಳಿಸು. (ಬಂದೂಕು, ಮೊ. ಗಳಿಂದ) ಮದ್ದು, ತೋಟಾ, —ತೆಗೆದುಬಿಡು. **Unlock** (1) (ಕ್ರಿ. ಸಕ.) (ಪೆಟ್ಟಿಗೆ, ಬಾಗಿಲು, ಮೊ. ಗಳ) ಬೀಗ ತೆಗೆ; (ರೂಪ.) ಮನಸ್ಸು—ಬಿಚ್ಚು, ಹೇಳಿಕೊ; (ಗುಟ್ಟು, ಮೊ. ನ್ನು) ಹೊರಗೆಡವು, ಬಹಿರಂಗಪಡಿಸು. **Unlodge** (1) (ಕ್ರಿ. ಸಕ.) ನೆಲೆ ತಪ್ಪಿಸು, ಸ್ಥಳದಿಂದ ಹೊರಡಿಸು, ಉಚ್ಚಾಟನೆ ಮಾಡು. **Unlooked-for** (5) ನಿರೀಕ್ಷಿಸಿ(ದ್ದ)ಲ್ಲದ; ಅನಿರೀಕ್ಷಿತ. **Unloose** (1) (ಕ್ರಿ. ಸಕ.) ಸಡಿಲಿಸು, ಬಿಚ್ಚು, ಕಳಚು. **Unlord** (4) (ಕ್ರಿ. ಸಕ.); **Unlovely** (5) ರಮಣೀಯವಲ್ಲದ, ಹರ್ಷಕರವಲ್ಲದ, ಆಕರ್ಷಕವಲ್ಲದ; ಅಸುಂದರ, ವಿಕಾರ. **Unloveliness** (ನಾ.); **Unlucky** (5) ಅದೃಷ್ಟಹೀನ, ದುರದೃಷ್ಟದ, ನಿರ್ಭಾಗ್ಯ, ದುಶ್ಶಕುನದ, ದೌರ್ಭಾಗ್ಯದ; ಅಪಜಯಕಾರಕ, ವಿಷಫಳಿಗೆಯ, ಅಸಂದರ್ಭದ, ನಿಷ್ಫಲದ, ಕೆಟ್ಟ ರಚನೆಯ (U. toss of coin ಅದೃಷ್ಟಹೀನ ನಾಣ್ಯದ ಚಿಮ್ಮು. Asked in an u. hour ವಿಷಘಳಿಗೆಯಲ್ಲಿ ಕೇಳಿದನು. Single magpie is u. ಒಂಟಿ ಮ್ಯಾಗ್‌ಪೈ ಹಕ್ಕಿ ಕಂಡರೆ ದುಶ್ಶಕುನ. His u. efforts to please ಮೆಚ್ಚಿಸಲು ಮಾಡಿದ ಅವನ ನಿಷ್ಫಲ ಪ್ರಯತ್ನಗಳು. An u. expedient). **Unluckily** (ಕ್ರಿ. ವಿ.); **Unmailable** (5) ಅಂಚೆಯ ಮೂಲಕ—ರವಾನಿಸಬಾರದ, ರವಾನಿಸಲಾಗದ; ಅಂಚೆಗೆ ಅಸಾಧ್ಯವಾದ. **Unmake** (1) (ಕ್ರಿ. ಸಕ.) ಹಾಳು, ನಾಶ, ಧ್ವಂಸ, —ಮಾಡು; ಅಳಿಸು, ರದ್ದುಮಾಡು, ತೊಡೆದುಹಾಕು. **Unman**[1] (4) (ಕ್ರಿ. ಸಕ.) ಪೌರುಷ ಕಳೆ; ನಿರ್ವೀರ್ಯಮಾಡು; ಧೈರ್ಯವುಡುಗಿಸು; ಎದೆಗೆಡಿಸು; ನಿಸ್ಸತ್ತ್ವಮಾಡು. **Unman**[2] (2) (ಕ್ರಿ. ಸಕ.) (ಮು., ಹಡಗಿನ) ಸಿಬ್ಬಂದಿಯಿಲ್ಲದಂತೆ ಮಾಡು, ಕಲಾಸಿಗಳಿಲ್ಲದಂತೆ ಮಾಡು; ಬರಿ ಹಡಗು ಮಾಡು. **Unmanageable** (5) ಸುಲಭವಾಗಿ—ನಿರ್ವಹಿಸಲಾಗದ, ಸಂಯೋಜಿಸಲಾಗದ, ಹತೋಟಿಯಲ್ಲಿಡಲಾಗದ (U. child, material, situation). **Unmanageably** (ಕ್ರಿ. ವಿ.); **Unmanageableness** (ನಾ.); **Unmanlike** (5) ಗಂಡಸಿನಂತಲ್ಲದ, ಪೌರುಷಶೂನ್ಯ; (ಮು.) ಹೆಣ್ಣಿಗತನದ, ಹುಡುಗತನದ. **Unmannerly** (5) ಮರ್ಯಾದೆ, ನಡತೆ, —ಗೆಟ್ಟ; ಒರಟಾದ, ಅವಿನೀತ. **Unmannerliness** (ನಾ.); **Unmantle** (2) (ಕ್ರಿ. ಸಕ.); **Unmarked** (5) ಗುರುತು ಹಾಕಿಲ್ಲದ, ಗುರುತಿಸಿಲ್ಲದ, ಗಮನಿಸಿಲ್ಲದ. **Unmartial** (5) ಯೋಧಗುಣಗಳಿಲ್ಲದ, ಅಯೋಧ. **Unmasculine** (5) ಗಂಡುತನವಿಲ್ಲದ, ಪೌರುಷವಿಲ್ಲದ. **Unmask** (1) (ಕ್ರಿ.) (ತನ್ನ, ಒಬ್ಬನ, ಒಂದರ) ಮುಸುಕು, ಮುಖವಾಡ,—ತೆಗೆ(ದುಹಾಕು); (ದುರಾತ್ಮನನ್ನು, ದೌರಾತ್ಮ್ಯವನ್ನು) ಬಯಲಿಗೆಳೆ, ರಟ್ಟುಮಾಡು, ಬಹಿರಂಗಪಡಿಸು; (ತನ್ನ ನಿಜಸ್ವಭಾವ, ಮೊ. ನ್ನು) ಪ್ರಕಟಿಸು, ತೋರ್ಪಡಿಸಿಕೊ. **Unmaterial** (5) ದ್ರವ್ಯಾತ್ಮಕವಲ್ಲದ, ಅಭೌತ, ಅವಾಸ್ತವ. **Unmeaning** (5) ಅರ್ಥವಿಲ್ಲದ, ಅಸಂಬದ್ಧ. **Unmeaningly** (ಕ್ರಿ. ವಿ.); **Unmeaningness** (ನಾ.); **Unmeant** (5) ಉದ್ದೇಶಿಸಿ(ದ್ದ)ಲ್ಲದ, ಅನುದ್ದಿಷ್ಟ. **Unmeasured** (5) ಅಳೆದಿಲ್ಲದ; (ಕಾವ್ಯ) ಅಳೆಯಲಾಗದ, ಅಮೇಯ, ವಿಪರೀತ. **Unmeet** (5) (ಪ್ರಾಚೀ. ಪ್ರ.) ತಕ್ಕದ್ದಲ್ಲದ, ಅನುಚಿತ, ಅಯುಕ್ತ (*To* do, *for* purpose). **Unmeetly** (ಕ್ರಿ. ವಿ.); **Unmeetness** (ನಾ.); **Unmentionable** (5) ಹೇಳಲು ತಕ್ಕದ್ದಲ್ಲದ; ಅವಾಚ್ಯ. (ನಾ., ಬ. ವ. ದಲ್ಲಿ; ಹಾಸ್ಯ ಪ್ರ.) ಷರಾಯಿ. **Unmetrical** (5) ಛಂದೋಬದ್ಧವಲ್ಲದ, ಛಂದಸ್ಸು ತಪ್ಪಿರುವ. **Unmetrically** (ಕ್ರಿ. ವಿ.); **Unmew** (1) (ಕ್ರಿ. ಸಕ.) (ಕಾವ್ಯ, ಅಲಂ.) ಬಿಡುಗಡೆಮಾಡು, ಬಂಧಮುಕ್ತಮಾಡು. **Unmistakable** (5) ತಪ್ಪು ತಿಳಿದುಕೊಳ್ಳಲು, ಸಂದೇಹಪಡಲು, —ಅವಕಾಶವೇ ಇಲ್ಲದ; ಸುಸ್ಪಷ್ಟ. **Unmistakably** (ಕ್ರಿ. ವಿ.); **Unmitigated** (5) ಸ್ವಲ್ಪವೂ ಮಟ್ಟು, ಸೌಮ್ಯ,—ಆಗಿಲ್ಲದ; ಶುದ್ಧಾಂಗವಾದ; ಪಕ್ಕಾ, ಪೂರಾ (U. blackguard, lie). **Unmonk** (4) (ಕ್ರಿ. ಸಕ.); **Unmoor** (1) (ಕ್ರಿ. ಸಕ.) (ಹಡಗಿನ) ಕಟ್ಟುಗಳನ್ನು—ಕಳಚು, ತೆಗೆದುಹಾಕು (ರೂಪ. ಸಹ); (ಎರಡು ಅಥವಾ ಹೆಚ್ಚಿನ ಲಂಗರುಗಳಲ್ಲಿ) ಒಂದು ಲಂಗರನ್ನು ಎತ್ತು. **Unmoral** (5) ನೀತಿಗೆ ಸಂಬಂಧಪಡದ; ನೀತಿ ವಿವಕ್ಷೆಯಿಲ್ಲದ. **Unmorality** (ನಾ.); **Unmortise** (1) (ಕ್ರಿ. ಸಕ.) ಕೂಲಿನಿಂದ, ವೆಜ್ಜದಿಂದ, —ತೆಗೆದುಬಿಡು, ಕಳಚು. **Unmould** (ಕ್ರಿ. ಸಕ.) ರೂಪಾಂತರಗೊಳಿಸು, ಆಕಾರ ಬದಲಾಯಿಸು. **Unmounted** (5) (ಪೊಲೀಸಿನವನು) ಕುದುರೆಯೇರಿಲ್ಲದ; (ಚಿತ್ರ) ರಟ್ಟಿಗೆ ಹಚ್ಚಿಲ್ಲದ, ಬೆನ್ನುರಟ್ಟಿಲ್ಲದ; (ರತ್ನ) ಗೂಡಿನಲ್ಲಿ ಕೂಡಿಸಿಲ್ಲದ, ಕೇವಣಿಸಿಲ್ಲದ; (ಆಭರಣ) ಖಚಿಸಿದ್ದಲ್ಲದ. **Unmoved** (5) ಚಲಿಸದ, ಅಚಲ; ದೃಢ—ಸಂಕಲ್ಪದ, ಉದ್ದೇಶದ; (ಭಾವ ರಾಗಗಳಿಂದ) ಮನೋವಿಕಾರ ಹೊಂದದ; ಮನ ಕೆಟ್ಟದ, ಅಕ್ಷುಬ್ಧ. **Unmuffle** (1) (ಕ್ರಿ.) (ಡೋಲು, ಗಂಟೆ, ಮೊ. ಗಳಿಂದ) ಶಬ್ದ ಮಂದಕಾರಿ ತೆಗೆ; (ಮುಖ, ಮೊ. ರಿಂದ) ಮುಸುಕು ತೆಗೆ. **Unmurmuring** (5) ಗೊಣಗುಟ್ಟದ; ಅಸಮಾಧಾನ—ಸೂಚಿಸದ, ಹೇಳಿಕೊಳ್ಳದ; (ಕಷ್ಟನಿಷ್ಠುರಗಳನ್ನು) ಮೌನವಾಗಿ ಸಹಿಸಿಕೊಳ್ಳುವ. **Unmurmuringly** (ಕ್ರಿ. ವಿ.); **Unmusical** (5) ಕಿವಿಗೆ ಹಿತವಲ್ಲದ, ಶ್ರಾವ್ಯವಲ್ಲದ; ಸಂಗೀತದಲ್ಲಿ—ಕೌಶಲವಿಲ್ಲದ, ಅಭಿರುಚಿಯಿಲ್ಲದ. **Unmuzzle** (1) (ಕ್ರಿ. ಸಕ.) (ಮು., ರೂಪ.) ಬಾಯಿಬೀಗ ತೆಗೆ; ಮಾತನಾಡಲು—ಅವಕಾಶ ಕೊಡು, ಸ್ವಾತಂತ್ರ್ಯ ಕೊಡು. **Unnail** (2) (ಕ್ರಿ. ಸಕ.) ಮೊಳೆ(ಗಳನ್ನು) —ಕಳಚು, ತೆಗೆದುಹಾಕು; (ಹೀಗೆ ಪೆಟ್ಟಿಗೆ, ಮೊ. ನ್ನು) ಕಳಚು, ತೆರೆ. **Unnameable** (5) (ದುರ್ನಡತೆ, ಪಾಪಕರ್ಮ, ಮೊ.) ಹೆಸರಿಸಲಾಗದ(ಷ್ಟು ಘೋರವಾದ); ಅವಾಚ್ಯ. **Unnatural** (5) ಅಸ್ವಾಭಾವಿಕವಾದ, ಪ್ರಕೃತಿ ವಿರುದ್ಧ, ವೈಪರೀತ್ಯದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಹಾ ಘೋರ (U. crimes, vices); ಸ್ವಾಭಾವಿಕ ಪ್ರೀತಿ ವಾತ್ಸಲ್ಯಗಳಿಲ್ಲದ (U. parent, child); ಕೃತಕ, ಬಲಾತ್ಕಾರದ, ನಟನೆಯ. **Unnaturalize** (1) (ಕ್ರಿ. ಸಕ.) ಅಸ್ವಾಭಾವಿಕ ಮಾಡು. **Unnaturalized** ದೇಶಕ್ಕೆ ಪಳಗಿಲ್ಲದ. **Unnecessary** (5) (ಗು., ನಾ.) ಅವಶ್ಯಕವಲ್ಲದ, ಬೇಕಾದ್ದಕ್ಕಿಂತ ಹೆಚ್ಚಿನ; ಅನಾವಶ್ಯಕವಾದ, ಅನಗತ್ಯವಾದ (With u. care). (ನಾ.; ಸಾ., ಬ. ವ. ದಲ್ಲಿ) ಅನಾವಶ್ಯಕವಾದ್ದು(—ದುವು). **Unnecessarily** (ಕ್ರಿ. ವಿ.); **Unnerve** (1) (ಕ್ರಿ. ಸಕ.) ನರ ಕುಂದಿಸು; ಧೈರ್ಯ, ಸ್ಥೈರ್ಯ, —ಕೆಡಿಸು; ಎದೆಗುಂದಿಸು; ಶಕ್ತಿಯುಡುಗಿಸು. **Unnest** (3) (ಕ್ರಿ. ಸಕ.); **Unnumbered** (5) ಸಂಖ್ಯೆ—ಹಾಕಿಲ್ಲದ, ಗುರುತಿಸಿಲ್ಲದ; ಎಣಿಸಿಲ್ಲದ; ಎಣಿಕೆಮಾಡಲಾಗದ, ಅಸಂಖ್ಯಾತ. **Unoffending** (5) ಹಾನಿಮಾಡದ, ನಿರಪಾಯದ, ನಿರ್ದೋಷದ. **Unofficial** (5) (ಮು., ಸುದ್ದಿ) ಅಧಿಕಾರಿಗಳಿಂದ—ಬಂದದ್ದಲ್ಲದ, ದೃಢಪಟ್ಟಿಲ್ಲದ; ಅಧಿಕಾರಯುತವಲ್ಲದ. **Unoriginal** (5) ಸ್ವಂತ —ಪ್ರತಿಭೆಯಿಲ್ಲದ, ಕಲ್ಪನಾಶಕ್ತಿಯಿಲ್ಲದ; ಸ್ವೋಪಜ್ಞತೆಯಿಲ್ಲದ; ಅಮೌಲಿಕ, ವ್ಯುತ್ಪನ್ನ; ಮತ್ತೊಬ್ಬರಿಂದ—ಬಳಸಿಕೊಂಡ, ತೆಗೆದುಕೊಂಡ. **Unornamental** (5) ಅಲಂಕಾರ(ಪ್ರಾಯ)ವಲ್ಲದ; (ನೋಟಕ್ಕೆ) ಅಂದವಲ್ಲದ, ವಿರೂಪವಾದ. **Unpack** (1) (ಕ್ರಿ. ಸಕ.) ಗಂಟು, ಮೂಟೆ, —ತೆರೆ, ಬಿಚ್ಚು; —ತೆರೆದು ಸಾಮಾನು ಹೊರಕ್ಕೆ ತೆಗೆ; (ಗಂಟು, ಮೊ. ರಿಂದ; ಅಡಕಿದ್ದ ಸಾಮಾನು) ಹೊರಕ್ಕೆ ತೆಗೆ. **Unpaged** (5) ಪುಟ ಸಂಖ್ಯೆ ಹಾಕಿಲ್ಲದ. **Unpaid** (5) (ಮೊಬಲಗು, ಸಾಲ, ಮೊ. ವು) ಸಲ್ಲಿಸಿಲ್ಲದ, ಪಾವತಿಯಾಗಿಲ್ಲದ; ಸಂಬಳ ತೆಗೆದುಕೊಳ್ಳದ, ಉಚಿತಾರ್ಥದ (The great u. ಸಂಬಳವಿಲ್ಲದ ದಂಡಾಧಿಕಾರಿಗಳು, ನ್ಯಾಯಾಧಿಪತಿಗಳು). **Unparalleled** (5) ಅಸಮಾನ, ಸಾಟಿಯಿಲ್ಲದ. **Unparental** (5) ಹೆತ್ತವರಿಗೆ ಉಚಿತವಲ್ಲದ; ತಂದೆತಾಯಿಗಳಿಗೆ ಅನುಚಿತವಾದ. **Unparliamentary** (5) ಶಾಸನ ಸಭೆಯ ಮರ್ಯಾದೆಗೆ, ಪದ್ಧತಿಗೆ, —ಉಚಿತವಲ್ಲದ, ವಿರುದ್ಧವಾದ; ಸಭೆಗೆ ಯೋಗ್ಯವಲ್ಲದ (U. language ಬೈಗುಳು, ಶಪನೆ). **Unparliamentarily** (ಕ್ರಿ. ವಿ.); **Unparliamentariness** (ನಾ.); **Unpeg** (1) (ಕ್ರಿ. ಸಕ.) ಬಿರಡೆ, ಬೆಣೆ, ಆಣಿ, ಗೂಟ,—ತೆಗೆ(ದು ತೆರೆ). **Unpen** (3) (ಕ್ರಿ. ಸಕ.); **Unpeople** (1) (ಕ್ರಿ. ಸಕ.) ಜನಶೂನ್ಯ, ನಿರ್ಜನ, —ಮಾಡು. **Unperch** (3) (ಕ್ರಿ. ಸಕ.); **Unphilosophical** (5) ತತ್ತ್ವಶಾಸ್ತ್ರ—ಸಮ್ಮತವಲ್ಲದ, ವಿರುದ್ಧ; ತತ್ತ್ವಜ್ಞಾನವಿಲ್ಲದ. **Unphilosophically** (ಕ್ರಿ. ವಿ.); **Unphilosophicalness** (ನಾ.); **Unpick** (1) (ಕ್ರಿ. ಸಕ.) ಹೊಲಿಗೆ—ಕಿತ್ತುಹಾಕು, ಬಿಚ್ಚಿಹಾಕು; ಪಿಕಾಸಿಯಿಂದ—ಕಿತ್ತುಹಾಕು, ತೆರೆ. **Unpicked** (5) ಆಯ್ಕೆಮಾಡಿ(ದ್ದ)ಲ್ಲದ, ಆರಿಸಿಲ್ಲದ; (ಹೂವು) ಕಿತ್ತಿರದ, ಕೊಯ್ದಿಲ್ಲದ. **Unpin** (1) (ಕ್ರಿ. ಸಕ.) ಸೂಜಿ ತೆಗೆದು —ಕಳಚಿಬಿಡು, ಬಿಚ್ಚಿಬಿಡು. **Unplaced** (5) (ಪಂದ್ಯದಲ್ಲಿ, ಪಟ್ಟಿಯಲ್ಲಿ) ಸೇರಿಸಿಲ್ಲದ, ಸೇರಿಸಿರದ. **Unplait** (1) (ಕ್ರಿ. ಸಕ.) ಹೆಣಿಗೆ, ಜಡೆ, —ಬಿಚ್ಚು. **Unplayable** (5) (ಮು., ಎಸೆದ ಚೆಂಡು) ಆಡಲಾಗದ. **Unpleasant** (5) ಹಿತವಲ್ಲದ, ಅಹಿತಕರ; ರುಚಿಸದ. **Unpleasantly** (ಕ್ರಿ. ವಿ.); **Unpleasantness** (ನಾ.) (ಗುಣ ವಾಚಕಾರ್ಥಗಳಲ್ಲದೆ); ಮನಸ್ತಾಪ, ವೈಮನಸ್ಯ, ಅಂತಃಕಲಹ; [The late u. (ಹಾಸ್ಯ ಪ್ರ., ಅಮೆ. ಸಂ.) ಅಮೆರಿಕದ ಒಳಯುದ್ಧ]. **Unplug** (1) (ಕ್ರಿ. ಸಕ.) ಬಿರಡೆ ತೆಗೆ(ದು ಹಾಕು). **Unplume** (2) (ಕ್ರಿ. ಸಕ.); **Unpointed** (5) (ತುದಿ) ಚೂಪು ಮಾಡಿಲ್ಲದ; ವಿರಾಮ ಚಿಹ್ನೆ ಹಾಕಿಲ್ಲದ; (ಹೀಬ್ರು ಭಾಷೆ) ಸ್ವರ(ದ ಗುರುತಾದ) ಚುಕ್ಕೆ ಹಾಕಿಲ್ಲದ; (ಕಲ್ಲು ಕಟ್ಟಡ) ಸಂದುಗಾರೆ ಮಾಡಿಲ್ಲದ. **Unpolitical** (5) ರಾಜಕೀಯ—ವಲ್ಲದ, ಸಂಬಂಧವಿಲ್ಲದ. **Unpolled** (5) ಅಭಿಮತ, ವೋಟು, —ಕೊಟ್ಟಿಲ್ಲದ, ಚಲಾಯಿಸಿಲ್ಲದ (U. vote ಚಲಾಯಿಸದೆ ಬಿಟ್ಟ ವೋಟು).

Unpope (4) (ಕ್ರಿ. ಸಕ.); **Unpopular** (5) ಜನಪ್ರಿಯವಲ್ಲದ, ಜನಕ್ಕೆ ಇಷ್ಟವಲ್ಲದ, ಜನರ ಮೆಚ್ಚಿಕೆ ಪಡೆದಿಲ್ಲದ. **Unpopularly** (ಕ್ರಿ. ವಿ.); **Unpopularity** (ನಾ.); **Unportioned** (5) ಬಳುವಳಿಯಿಲ್ಲದ. **Unpossessed** (5) (—ರ) ಸ್ವಾಮ್ಯವಿಲ್ಲದ, (—ನ್ನು) ಪಡೆದಿಲ್ಲದ. **Unposted** (5) ಸಮಾಚಾರ, ವಿಷಯ, —ತಿಳಿದಿಲ್ಲದ. (ಕಾಗದ) ಅಂಚೆಗೆ ಹಾಕಿಲ್ಲದ. **Unpractical** (5) (ಮನುಷ್ಯ, ಹಂಚಿಕೆ, ವಿಧಾನ) ಆಚರಣೆಗೆ ತರಲಾಗದ, ಕಾರ್ಯಸಾಧ್ಯವಲ್ಲದ. **Unpractically** (ಕ್ರಿ. ವಿ.); **Unpracticality** (ನಾ.); **Unpractised** (5) ನುರಿತಿಲ್ಲದ, ಅನನುಭವಿಯಾದ, ಕೌಶಲವಿಲ್ಲದ; ಅಭ್ಯಾಸಕ್ಕೆ, ಕಾರ್ಯರೂಪಕ್ಕೆ, —ತಂದಿಲ್ಲದ. **Unpreach** (1) (ಕ್ರಿ. ಸಕ.) (ತಾನು ಮಾಡಿದ್ದ) ಉಪದೇಶವನ್ನು—ಹಿಂದಕ್ಕೆ ತೆಗೆದುಕೊ, ತ್ಯಜಿಸಿಬಿಡು. **Unprecedented** (5) ಹಿಂದೆಂದೂ ಕಂಡಿಲ್ಲದ, ಅಭೂತಪೂರ್ವ, ಪೂರ್ವ ನಿದರ್ಶನವಿಲ್ಲದ. **Unprejudice** (6) ಮುನ್ನೊಲವು, ಪಕ್ಷಪಾತ, —ಇಲ್ಲದಿರುವುದು; ಪಕ್ಷಪಾತ ರಾಹಿತ್ಯ, ತೆರೆದ ಮನಸ್ಸು. **Unprejudiced** (5) ಯಾವುದೊಂದು ಮುನ್ನೊಲವೂ, ಮುನ್ ದುರಭಿಪ್ರಾಯವೂ, ಇಲ್ಲದ: ನಿಷ್ಪಕ್ಷಪಾತವಾದ. **Unprelate** (4) (ಕ್ರಿ. ಸಕ.); **Unpremeditated** (5) ಮೊದಲೇ ಯೋಚನೆ ಮಾಡಿದ್ದಲ್ಲದ; ಪೂರ್ವ ಚಿಂತಿತವಲ್ಲದ, ಅನುದ್ದೇಶಪೂರ್ವಕವಾದ. **Unpremeditatedly** (ಕ್ರಿ. ವಿ.); **Unprepared** (5) (ಪೂರ್ವ) ಸಿದ್ಧತೆಯಿಲ್ಲದ, ಸಿದ್ಧವಾಗಿಲ್ಲದ, ಅಸಜ್ಜಿತ (Found everything u. Made an u. speech ಪೂರ್ವ ಸಿದ್ಧತೆಯಿಲ್ಲದ, ಆಶು, —ಭಾಷಣ ಮಾಡಿದನು). **Unpresentable** (5) ಕೊಡಲು ಯೋಗ್ಯವಲ್ಲದ; ಗೋಷ್ಠಿ ಪರಿಚಯಕ್ಕೆ ಯೋಗ್ಯವಲ್ಲದ; ನೋಡ(ಲು) ತಕ್ಕದ್ದಲ್ಲದ. **Unpretending, Unpretentious** (5) ಬಹಿರಾಡಂಬರಶೀಲ, ಪ್ರದರ್ಶನಶೀಲ, —ಅಲ್ಲದ; ನಿರಾಡಂಬರದ. **Unpretentiously** (ಕ್ರಿ. ವಿ.); **Unpretentiousness** (ನಾ.); **Unpretendingly** (ಕ್ರಿ. ವಿ.); **Unpriced** (5) ಬೆಲೆ—ಗೊತ್ತುಮಾಡಿಲ್ಲದ, ಹಾಕಿಲ್ಲದ, ಹೇಳಿಲ್ಲದ (U. goods, catalogue). **Unpriest** (4) (ಕ್ರಿ. ಸಕ.); **Unprince** (4) (ಕ್ರಿ. ಸಕ.); **Unprincipled** (5) ನೀತಿ ನಿಯಮಗಳಿಲ್ಲದ, ಸ್ವೇಚ್ಛಾಚಾರದ (U. person, conduct); **Unprintable** (5) (ಮು.) (ತೀರ ದೂಷಣೆ, ಅಶ್ಲೀಲ, ಮೊ. ಕಾರಣಗಳಿಂದ) ಮುದ್ರಣ ಯೋಗ್ಯವಲ್ಲದ. **Unprized** (5) ಬೆಲೆ—ಬಾಳದ, ಕಟ್ಟಲಾಗದ. **Unprofessional** (5) (ತನ್ನ) ಕಸಬಿಗೆ, ವೃತ್ತಿಗೆ, —ಸಂಬಂಧಪಡದ, ಸೇರಿರದ; ಕಸಬಿನದಲ್ಲದ; ವೃತ್ತಿಮರ್ಯಾದೆಗೆ—ಉಚಿತವಲ್ಲದ, ವಿರುದ್ಧವಾದ (Ask an u. man ಕಸಬಿನವನಲ್ಲದ ಯಾರನ್ನಾದರೂ ಕೇಳು. U. conduct). **Unprofitable** (5) ಲಾಭಕರವಲ್ಲದ, ಪ್ರಯೋಜನಕರವಲ್ಲದ (U. servants ಸಂಬಳದ ಬಗ್ಗೆ ತಮ್ಮ ಕೆಲಸವಷ್ಟನ್ನು ಮಾತ್ರ ಮಾಡುವವರು). **Unprofitably** (ಕ್ರಿ. ವಿ.); **Unprofitableness** (ನಾ.); **Unprogressive** (5) ಪ್ರಗತಿಪರವಲ್ಲದ; ಮುಂದುವರಿಯದ; ಮಂದಗಾಮಿಯಾದ, ಸಂಪ್ರದಾಯಬದ್ಧನಾದ. **Unprogressiveness** (ನಾ.); **Unprompted** (5) ಪರಪ್ರೇರಣೆಯಿಂದಲ್ಲದ; ಸ್ವಪ್ರೇರಿತ. **Unprop** (2) (ಕ್ರಿ. ಸಕ.); **Unproportional** (5) (ಪರಸ್ಪರ) ಪ್ರಮಾಣಾನುಸಾರವಾಗಿಲ್ಲದ. **Unprovided** (5) (ಹಣ, ಮೊ.) ಒದಗಿಸಿ(ಕೊಂಡಿ)ಲ್ಲದ (*With* ಉಪ. ದೊಡನೆ); ಸಿದ್ಧವಾಗಿಲ್ಲದ, ಸಿದ್ಧಮಾಡಿಕೊಂಡಿಲ್ಲದ. **Unprovoked** (5) ಉದ್ರೇಕ ಕಾರಣವಿಲ್ಲದ; ಸುಮ್ಮಸುಮ್ಮನೆ—ರೇಗಿದ, ಮಾಡಿದ. **Unpublished** (5) ಬಹಿರಂಗಪಡಿಸಿಲ್ಲದ; (ಹಸ್ತಪ್ರತಿ, ಮೊ. ವು) ಪ್ರಕಟಪಡಿಸಿಲ್ಲದ, ಪ್ರಕಾಶವಾಗಿಲ್ಲದ. **Unqualified** (5) ಅರ್ಹತೆಯಿಲ್ಲದ, ಅರ್ಹನಲ್ಲದ; ಕಾನೂನು ಪ್ರಕಾರ ಅಥವಾ ಅಧಿಕಾರವತ್ತಾಗಿ—ಸನ್ನದು ಪಡೆದಿಲ್ಲದ, ಯೋಗ್ಯತೆಯಿಲ್ಲದ; ಪ್ರತಿಷೇಧವಿಲ್ಲದ, ಅಭ್ಯಂತರವಿಲ್ಲದ, ಶುದ್ಧಾಂಗವಾದ, ಸಂಪೂರ್ಣವಾದ (Am u. to serve ನೌಕರಿಗೆ ಸೇರಲು, ನೌಕರಿ ಮಾಡಲು,—ನಾನು ಅರ್ಹನಲ್ಲ. An

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

u. medical practitioner ನಾಸನ್ನದಿನ, ಅಧಿಕಾರವತ್ತಾಗಿ ಯೋಗ್ಯತೆಯಿಲ್ಲದ, —ವೈದ್ಯ. Gave his u. assent ಸಂಪೂರ್ಣ ಸಮ್ಮತಿಯನ್ನು ಕೊಟ್ಟನು). **Unqualifiedly** (ಕ್ರಿ. ವಿ.) ; **Unqueen** (4) (ಕ್ರಿ. ಸಕ.) ; **Unquestionable** (5) ನಿರ್ವಿವಾದವಾದ, ಭದ್ರವಾದ; ನಿರಾಕ್ಷೇಪಣೀಯವಾದ. **Unquestionably** (ಕ್ರಿ. ವಿ.) ; **Unquestionableness** (ನಾ.) ; **Unquestioned** ನಿರ್ವಿವಾದವಾದ, ನಿಸ್ಸಂದೇಹವಾದ ; ಪ್ರಶ್ನೆ ಕೇಳಿಲ್ಲದ. **Unquestioning** ಯಾವ ಪ್ರಶ್ನೆಯನ್ನೂ ಕೇಳದ, ಪ್ರತಿಹೇಳದ, ಸಂಪೂರ್ಣ (U. obedience ಸಂಪೂರ್ಣ ವಿಧೇಯತೆ). **Unquestioningly** (ಕ್ರಿ. ವಿ.) ; **Unquiet** (5) ಅಶಾಂತ, ಕ್ಷುಬ್ಧ (U. spirit, times). **Unquotable** (5) (ತೀರ ಬಯ್ಗುಳು, ಅಶ್ಲೀಲ, ಮೊ. ಕಾರಣಗಳಿಂದ) ಎತ್ತಿ ಹೇಳಲು, ಉದ್ಧಾರಮಾಡಲು, —ಯೋಗ್ಯವಲ್ಲದ ; ಅವಾಚ್ಯ. **Unravel** (1) (ಕ್ರಿ. ಸಕ.) (ದಾರ) ದಾರವಾಗಿ ಬಿಚ್ಚಿಬಿಡು, ದಾರ ಬಿಡಿಸು (To u. a stocking) ; ಗೋಜು, ಸಿಕ್ಕು, —ಬಿಡಿಸು (ರೂಪ. ಸಹ: To u. a plot). **Unrazored** (5) ಕ್ಷೌರಮಾಡಿಕೊಂಡಿಲ್ಲದ. **Unread** (5) (ಪುಸ್ತಕ) ಓದಿಲ್ಲದ ; (ಮನುಷ್ಯ) (ಚೆನ್ನಾಗಿ) ಓದು ಬಾರದ, ಅವಿದ್ಯಾವಂತನಾದ. **Unready** (5) ಸಿದ್ಧವಾಗಿಲ್ಲದ ; ಸಜ್ಜಾಗಿಲ್ಲದ ; ಚುರುಕಿಲ್ಲದ. **Unreal** (5) ಮಿಥ್ಯೆಯ, ಮಾಯೆಯ, ಭ್ರಾಂತಿಯ, ಕಾಲ್ಪನಿಕ. **Unreally** (ಕ್ರಿ. ವಿ.) ; **Unreality** (ನಾ.); **Unreason** (6) ಬುದ್ಧಿ, ವಿವೇಚನೆ, —ಇಲ್ಲದಿರುವುದು ; ಅವಿವೇಕ, ಮೂರ್ಖತನ, ಮೌಢ್ಯ. **Unreasonable** (5) ವಿಚಾರಹೀನ, ಅವಿವೇಕದ, ದುರ್ಬುದ್ಧಿಯ ; ಅತಿ ದುಬಾರಿಯ, ನ್ಯಾಯವಲ್ಲದ, ಅನ್ಯಾಯದ ; ಬುದ್ಧಿವಾದವನ್ನು ಕೇಳದ, ಮೂರ್ಖ (U. demands ಅನ್ಯಾಯದ ಕೇಳಿಕೆಗಳು. U. conduct ಅವಿವೇಕದ ನಡತೆ). **Unreasonably** (ಕ್ರಿ. ವಿ.) ; **Unreasonableness** (ನಾ.) ; **Unreasoned** ವಿಚಾರಪೂರ್ವಕವಾಗಿ ಆಲೋಚಿಸಿದ್ದಲ್ಲದ, ಬುದ್ಧಿ ವಿವೇಚನೆಯಿಲ್ಲದ, ಅವಿಚಾರದ. **Unreasoning** ವಿಚಾರಮಾಡದ, ವಿವೇಚನೆಯಿಲ್ಲದ, ಪರ್ಯಾಲೋಚಿಸದ. **Unreasoningly** (ಕ್ರಿ. ವಿ.); **Unredeemed** (5) (ಒತ್ತೆಯಿಂದ) ಬಿಡಿಸಿಕೊಂಡಿಲ್ಲದ, ವಿಮೋಚನೆಯಾಗಿಲ್ಲದ ; (ವಾಗ್ದಾನ) ನಡಸಿಲ್ಲದ ; (ಹುಂಡಿ, ಮೊ. ವು) ಹಣ—ಸಲ್ಲಿಸಿಲ್ಲದ, ಸಲ್ಲಿಸಿ ಹಿಂದಕ್ಕೆ ಪಡೆದಿಲ್ಲದ ; (ದೋಷಗಳು, ಕುಂದುಗಳು) ಬೇರೆ ಗುಣಾಂಶಗಳಿಲ್ಲದ ; —ಗಳಿಂದ ಮರೆಸಲ್ಪಟ್ಟಿಲ್ಲದ, ಪರಿಹಾರವಾಗಿಲ್ಲದ (*By* ಉಪ. ದೊಡನೆ). **Unreel** (1) (ಕ್ರಿ.) ರಾಟೆಯಿಂದ ಬಿಚ್ಚು, ಬಿಚ್ಚಿಕೊ ; ಸುರುಳಿಯನ್ನು ಬಿಚ್ಚು, ಸುರುಳಿ ಬಿಚ್ಚಿಕೊ. **Unreeve** (1) (ಕ್ರಿ. ಸಕ.) (ನಾವೆ) ತೂರಿಸಿದ್ದ ಹಗ್ಗವನ್ನು ಹಿಂದಕ್ಕೆಳೆದುಬಿಡು. **Unrefined** (5) ಶುದ್ಧೀಕರಿಸಿ(ದ್ದ)ಲ್ಲದ, ಸಂಸ್ಕರಿಸಿ(ದ್ದ)ಲ್ಲದ, ಅಶುದ್ಧ, ಒರಟಾದ (U. sugar, manners). **Unrehearsed** (5) (ಅವುಗಳ ಕರ್ತೃಗಳಿಗೆ ಆಶ್ಚರ್ಯಕರವಾದ ಫಲಗಳ ವಿಷಯದಲ್ಲಿ) ಪೂರ್ವಾಭ್ಯಾಸದಲ್ಲಿ—ಕಂಡುಬಂದದ್ದಲ್ಲದ, ಕಾಣದ. **Unrein** (1) (ಕ್ರಿ. ಸಕ.) ಲಗಾಮು (ಸಡಿಲ)ಬಿಡು (ಅನೇಕ ವೇಳೆ ರೂಪ. ಸಹ). **Unrelieved** (5) ವೈವಿಧ್ಯದಿಂದ, ವೈದೃಶ್ಯದಿಂದ, —ಏಕರೂಪತೆ ಮುರಿದಿಲ್ಲದ ; ಶುದ್ಧ ಏಕರೂಪತೆಯ. **Unreligious** (5) ಮತಧರ್ಮಕ್ಕೆ—ಸಂಬಂಧಪಡದ, ಸಂಬಂಧವಿಲ್ಲದ ; ಮತಧರ್ಮೇತರ. **Unremitting** (5) ಕಡಮೆಯಾಗದ, ಕುಂದದ, (ಎಡೆ)ಬಿಡದ, ಸತತ (U. exertions ಸತತ—ವ್ಯವಸಾಯ, ಪ್ರಯತ್ನ). **Unremittingly** (ಕ್ರಿ. ವಿ.) ; **Unremunerative** (5) ಲಾಭಕರವಲ್ಲದ. **Unrepair** (6) ಜೀರ್ಣಾವಸ್ಥೆ, ಶಿಥಿಲವಾಗಿರುವುದು, ನಾದುರಸ್ತು. **Unrequited** (5) ಹಿಂದಿರುಗಿಸದ ; ಪ್ರತಿಯಾಗಿ—ತೋರಿಸದ, ಮಾಡದ (U. affection). **Unreserve** (6) ಸಂಕೋಚ, ಬಿಗುಮಾನ, ಮುಚ್ಚುಮರೆ, —ಇಲ್ಲದಿರುವುದು ; ನಿಸ್ಸಂಕೋಚತೆ, ಸ್ಪಷ್ಟತೆ, ಸರಳತೆ, ನಿಷ್ಕಾಪಟ್ಯ. **Unreserved** (5) ಅಭ್ಯಂತರವಿಲ್ಲದ, ಸಂಪೂರ್ಣವಾದ (U. compliance) ; ಮುಚ್ಚುಮರೆಯಿಲ್ಲದ, ಪ್ರಕಾಶ, ತೆರೆದ (ಮನಸ್ಸಿನ) (An u. nature) ; ಕಾದಿಟ್ಟಿಲ್ಲದ, ಮೀಸಲಲ್ಲದ (U. seats) ; **Unreservedly** (ಕ್ರಿ. ವಿ.) ; **Unreservedness** (ನಾ.) ; **Unresolved** (5) ನಿರ್ಧಾರಕ್ಕೆ ಬಂದಿಲ್ಲದ, ನಿಶ್ಚಯ ಮಾಡಿಲ್ಲದ ; ಬಗೆಹರಿಸಿಲ್ಲದ, ಬಿಡಿಸಿಲ್ಲದ (U. doubts, problem) ; ಘಟಕಗಳಾಗಿ ಪ್ರತ್ಯೇಕಿಸಿಲ್ಲದ, ಪೃಥಕ್ಕರಿಸಿಲ್ಲದ. **Unrest** (6) ಅಶಾಂತಿ, ಕ್ಷೋಭೆ (The u. in Turkey). **Unrestraint** (6) ಅನಿರ್ಬಂಧ. **Unrhythmical** (5) (ಸರಿಯಾದ) ತಾನ, ಓಟ, —ಇಲ್ಲದ. **Unriddle** (1) (ಕ್ರಿ. ಸಕ.) ರಹಸ್ಯ, ಸಮಸ್ಯೆ,—ಬಿಡಿಸು ; ಒಗಟೆ ಒಡೆ. **Unrig** (1) (ಕ್ರಿ. ಸಕ.) (ನಾವೆ) ಹಗ್ಗ ಕಟ್ಟುಗಳನ್ನು ಬಿಚ್ಚು. **Unright** (6) (ಪ್ರಾಚೀ. ಪ್ರ.) ಸರಿಯಲ್ಲದ್ದು, ತಪ್ಪು, ಅನ್ಯಾಯ. **Unrighteous** (5) ಋಜುವಲ್ಲದ, ಅನ್ಯಾಯದ ; ಅಧಾರ್ಮಿಕ. **Unrighteously** (ಕ್ರಿ. ವಿ.) ; **Unrighteousness** (ನಾ.) ; **Unring** (2) (ಕ್ರಿ. ಸಕ.) ; **Unrip** (1) (ಕ್ರಿ. ಸಕ.) ಸಿಗಿದುಹಾಕು, ಸೀಳಿಹಾಕು. **Unripe** (5) ಪಕ್ವವಾಗಿಲ್ಲದ, ಅಪಕ್ವ (ರೂಪ. ಸಹ). **Unripeness** (ನಾ.) ; **Unrivalled** (5) ಎಣೆಯಿಲ್ಲದ, ಸಾಟಿಯಿಲ್ಲದ, ಅಪ್ರತಿಮ, ಅಸಮಾನ. **Unrivet** (1) (ಕ್ರಿ. ಸಕ.) ; **Unrobe** (ಕ್ರಿ.) ಉಡುಪು, ಬಟ್ಟೆಬರೆ, —ತೆಗೆದುಹಾಕು, ಕಳಚು. **Unroll** (1) (ಕ್ರಿ.) ಸುರುಳಿ—ಬಿಚ್ಚು, ಬಿಚ್ಚಿಕೊ ; ಬಿಚ್ಚಿ—ತೋರಿಸು, ತೋರಿಸಲ್ಪಡು. **Unroof** (2) (ಕ್ರಿ. ಸಕ.) ; **Unroost** (3) (ಕ್ರಿ. ಸಕ.) ; **Unroot** (1) (ಕ್ರಿ. ಸಕ.) ಬೇರು (ಸಹಿತ) ಕಿತ್ತುಹಾಕು ; ನಿರ್ಮೂಲಮಾಡು. **Unromanize** (1) (ಕ್ರಿ. ಸಕ.) ; **Unroyal** (5) ದೊರೆಗೆ ತಗದ, ರಾಜೋಚಿತವಲ್ಲದ. **Unroyally** (ಕ್ರಿ. ವಿ.) ; **Unruled** (5) ಆಡಳಿತವಿಲ್ಲದ, ಆಳಿಕೆಯಿಲ್ಲದ ; ಗೆರೆಗಳು ಹಾಕಿಲ್ಲದ. **Unruly** (5) ನ್ಯಾಯವನ್ನು, ಕಾನೂನನ್ನು, —ಲಕ್ಷಿಸದ ; ಸ್ವಚ್ಛಂದ, ಪುಂಡಾಟದ. **Unruliness** (ನಾ.) ; **Unrumple** (2) (ಕ್ರಿ. ಸಕ.) ; **Unsaddle** (1) (ಕ್ರಿ. ಸಕ.) ಜೀನು ತೆಗೆದುಹಾಕು ; ಜೀನಿನಿಂದ, ಕುದುರೆಯಿಂದ, —ಬೀಳಿಸು, ಎತ್ತಿಹಾಕು. **Unsafe** (5) ಸುರಕ್ಷಿತವಲ್ಲದ, ಅಭದ್ರ, ಅಪಾಯಕರವಾದ. **Unsafely** (ಕ್ರಿ. ವಿ.) ; **Unsafeness** (ನಾ.) ; **Unsanitary** (5) ನೈರ್ಮಲ್ಯವಿಲ್ಲದ, ಅನಾರೋಗ್ಯದ. **Unsaved** (5) (ಮು., ಮತಧರ್ಮದ ಅರ್ಥದಲ್ಲಿ) ಉದ್ಧಾರವಾಗಿಲ್ಲದ. **Unsavoury** (5) ರುಚಿಸದ, ಅಸಹ್ಯದ (U. dish, smell, theme). **Unsavourily** (ಕ್ರಿ. ವಿ.) ; **Unsavouriness** (ನಾ.) ; **Unsay** (1) (ಕ್ರಿ. ಸಕ.) (ಹೇಳಿದ್ದನ್ನು) ಹಿಂದಕ್ಕೆ ತೆಗೆದುಕೊ, ಇಲ್ಲವೆನ್ನು. **Unsaid**[1] (ಗು.) ; **Unsaid**[2] (5) ಹೇಳಿಲ್ಲದ. **Unscale** (2) (ಕ್ರಿ. ಸಕ.) ಶಲ್ಕಗಳನ್ನು ತೆಗೆದುಹಾಕು. **Unscaleable** (5) ಹತ್ತಲಾಗದ. **Unscannable** (5) ಪ್ರಸ್ತಾರ ಹಾಕಲಾಗದ, ಗಣ ವಿಭಾಗ ಮಾಡಲಾಗದ (U. verses). **Unscathed** (5) ಗಾಯ, ಪೆಟ್ಟು, ಅಪಾಯ, —(ಆಗದೆ) ತಪ್ಪಿಸಿಕೊಂಡ. **Unscientific** (5) ವಿಜ್ಞಾನ—ಸಮ್ಮತವಲ್ಲದ, ವಿರುದ್ಧ ; ಅಶಾಸ್ತ್ರೀಯ. **Unscientifically** (ಕ್ರಿ. ವಿ.) ; **Unscreened** (5) (ಕಲ್ಲಿದ್ದಲು) ಜಲ್ಲಡಿ ಹಿಡಿದಿಲ್ಲದ. **Unscrew** (1) (ಕ್ರಿ. ಸಕ.) ತಿರುಪುಮೊಳೆ—ಕಳಚು, ಕಳಚಿತೆಗೆ. **Unscriptural** (5) ಬೈಬಲ್ಲಿಗನುಸಾರವಾಗಿಲ್ಲದ ; ಶ್ರುತಿಸಮ್ಮತವಲ್ಲದ. **Unscripturally** (ಕ್ರಿ. ವಿ.) ; **Unscrupulous** (5) ಯಾವುದಕ್ಕೂ ಹೇಸದ, ನಿರ್ಲಜ್ಜೆಯ, ನೀತಿ ನಿಷ್ಠೆಗಳಿಲ್ಲದ. **Unscrupulously** (ಕ್ರಿ. ವಿ.) ; **Unscrupulousness** (ನಾ.) ; **Unsculptured** (5) ಶಿಲ್ಪಕೆಲಸ ಮಾಡಿಲ್ಲದ. (ಪ್ರಾ. ವಿ.) ನಯವಾದ, ಸಾಫಾದ. **Unseal** (1) (ಕ್ರಿ. ಸಕ.) ಮುದ್ರೆಯೊಡೆ ; ಲಕ್ಕೋಟೆ ಒಡೆ. **Unseam** (1) (ಕ್ರಿ. ಸಕ.) (ಉಡುಪು) ಹೊಲಿಗೆ ಕೀಳು, ಹೊಲಿಗೆ ಕಿತ್ತುಕೊಳ್ಳುವಂತೆ ಹರಿ. **Unsearchable** (5) ಹುಡುಕಲಾಗದ ; ಹುಡುಕಿದರೆ ಸಿಕ್ಕದ. **Unseat** (1) (ಕ್ರಿ. ಸಕ.) ಪೀಠದಿಂದ ತಳ್ಳಿಹಾಕು ; (ಕುದುರೆ) ಬೆನ್ನಿಂದ, ಜೀನಿನಿಂದ, —ಎತ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಕು, ಬೀಳಿಸು ; (ಸದಸ್ಯನನ್ನು, ಚುನಾವಣೆಯಲ್ಲಿ) ಸ್ಥಾನ ಚ್ಯುತಿ ಮಾಡು. **Unseated**[1] (ಗು.) ; **Unseated**[2] (5) ಪೀಠಗಳಿಲ್ಲದ, ಪೀಠಗಳನ್ನು ಒದಗಿಸಿಲ್ಲದ. **Unsectarian** (5) ಪಂಗಡ ಭಾವನೆಯಿಲ್ಲದ; ಪಂಥಾಭಿಮಾನವಿಲ್ಲದ. **Unsectarianism** (ನಾ.) ; **Untack** (1) (ಕ್ರಿ. ಸಕ.) (ಮತ್ತೊಂದಕ್ಕೆ ಸೇರಿಸಿದ್ದನ್ನು) ಬೇರ್ಪಡಿಸು, ಕಳಚಿಹಾಕು. **Untaught** (5) (ವಿಷಯ, ಮನುಷ್ಯ) ಕಲಿಸಿಲ್ಲದ, ಪಾಠವಾಗಿಲ್ಲದ ; (ಮನುಷ್ಯ) ಅರಿತವನಲ್ಲದ. **Untemper** (1) (ಕ್ರಿ. ಸಕ.) (ಲೋಹ, ಮೊ. ಗಳ) ಹದ—ಕೆಡಿಸು, ಕಳೆ. **Untempered** (5) ಹದ—ಕೊಟ್ಟಿಲ್ಲದ, ಮಾಡಿಲ್ಲದ (U. steel, mortar) ; (ದಯೆ, ಮೊ. ರಿಂದ) ಮಟ್ಟುಮಾಡಿಲ್ಲದ (U. severity). ಅಂಕೆಯಿಲ್ಲದ, ಹತೋಟಿಯಿಲ್ಲದ. **Untenantable** (5) ವಾಸಕ್ಕೆ ಯೋಗ್ಯವಲ್ಲದ, ವಾಸಾರ್ಹವಲ್ಲದ. **Untendered** (5) ಕೊಟ್ಟಿಲ್ಲದ, ನೀಡಿಲ್ಲದ, ಒಪ್ಪಿಸಿಲ್ಲದ. **Untent** (3) (ಕ್ರಿ. ಸಕ.) ; **Untether** (1) (ಕ್ರಿ. ಸಕ.); **Unthink** (1) (ಕ್ರಿ. ಸಕ.) (ಯೋಚಿಸಿದ್ದನ್ನು) ಯೋಚನೆಯಿಂದ ಬಿಟ್ಟುಬಿಡು ; (ಒಂದರ) ಆಲೋಚನೆ ಬಿಟ್ಟುಬಿಡು; ಮನಸ್ಸು ಬದಲಾಯಿಸು. **Unthinkable** (5) ಯೋಚಿಸಲಾಗದ, ಅಚಿಂತ್ಯ ; (ಬಳ. ಮಾ.) ಅಸಂಭವದ. **Unthinking** (5) ಯೋಚನೆಮಾಡದ, ಅವಿಚಾರದ, ದೂರಾಲೋಚನೆಯಿಲ್ಲದ. **Unthinkingly** (ಕ್ರಿ. ವಿ.) ; **Unthought** ಆಲೋಚಿಸಿದ್ದಲ್ಲದ, ಎಣಿಸಿರದ (U.-of). **Unthread** (1) (ಕ್ರಿ. ಸಕ.) ಪೋಣಿಸಿದ್ದ ದಾರವನ್ನು ತೆಗೆದುಹಾಕು ; (ತೊಳಸು ಬಳಸಿನಿಂದ) ಹೊರಕ್ಕೆ—ದಾರಿಮಾಡಿಕೊ, ಬಾ. **Unthrift** (6) (ಪ್ರಾಚೀ. ಪ್ರ.) ದುಂದುಗಾರ, ದುಂದುಗಾರಿಕೆ. **Unthrone** (3) (ಕ್ರಿ. ಸಕ.) ; **Untie** (1) (ಕ್ರಿ. ಸಕ.) (ಗಂಟು, ಮೊ. ನ್ನು) ಬಿಚ್ಚು ; (ಮೂಟೆ, ಗಂಟು, ಮೊ. ಗಳ) ಕಟ್ಟು ಬಿಚ್ಚು. **Untied**[1] (ಗು.) ; **Untied**[2] (5) ಕಟ್ಟಿಲ್ಲದ. **Untile** (2) (ಕ್ರಿ. ಸಕ.) ; **Untin** (2) (ಕ್ರಿ. ಸಕ.) ; **Untithed** (5) ದಶಾಂಶ ಕಂದಾಯಕ್ಕೆ ಈಡಾಗಿಲ್ಲದ ; ದಶಾಂಶ—ಹಾಕಿಲ್ಲದ, ಕೊಡಬೇಕಾಗಿಲ್ಲದ. **Untold** (5) ಹೇಳಿಲ್ಲದ, ಹೇಳಲಾಗದ ; ಎಣಿಸಿಲ್ಲದ ; ಲೆಕ್ಕವಿಲ್ಲದ, ಅಗಣಿತ (U. gold). **Untomb** (3) (ಕ್ರಿ. ಸಕ.) ; **Untooth** (2) (ಕ್ರಿ. ಸಕ.) ; **Untoward** (5) (ಪ್ರಾಚೀ. ಪ್ರ.) ವಕ್ರ, ಅಂಕೆಗೊಳಪಡದ ; ಅಡ್ಡಾದಿಡ್ಡಿಯ, ಎಡವಟ್ಟಾದ ; ದುರದೃಷ್ಟದ, ದುಷ್ಪರಿಣಾಮದ, ನಿರ್ಭಾಗ್ಯ (An u. generation ಅಂಕೆಯಿಲ್ಲದ, ವಕ್ರ, —ತಲೆಮೊರೆಯವರು. An u. accident). **Untracked** (5) ಜಾಡುಗಳಿಲ್ಲದ, ಜಾಡು ಹಿಡಿದು ಹಿಂಬಾಲಿಸಿಲ್ಲದ. **Untragic** (5) ರುದ್ರ ನಾಟಕೀಯವಲ್ಲದ, ದುರಂತವಲ್ಲದ ; ರುದ್ರ ನಾಟಕ ಯೋಗ್ಯವಲ್ಲದ. **Untrained** (5) ಶಿಕ್ಷಣಪಡೆದಿಲ್ಲದ, ಅಶಿಕ್ಷಿತ, ನುರಿತಿಲ್ಲದ ; (ಪಂದ್ಯ, ಮೊ. ಗಳಿಗೆ) ತರಪೇತು ಮಾಡಿಲ್ಲದ. **Untransferable** (5) ವರ್ಗಾಯಿಸಲಾಗದ, ವರ್ಗಾಯಿಸಕೂಡದ. **Untravelled** (5) (ದೇಶ) ಸಂಚಾರಮಾಡಿಲ್ಲದ; ಪ್ರಯಾಣಮಾಡಿಲ್ಲದ; (ದೇಶ, ಪ್ರಾಂತ) ಯಾರೂ ಸಂಚಾರಮಾಡಿಲ್ಲದ, ಹೊಕ್ಕು ನೋಡಿಲ್ಲದ, ಅಪರಿಚಿತ. **Untried** (5) (ಮು.) ಅನುಭವವಿಲ್ಲದ, ಪರೀಕ್ಷಿಸಿದ್ದಲ್ಲದ ; (ನ್ಯಾಯಸ್ಥಾನದಲ್ಲಿ) ವಿಚಾರಣೆಯಾಗಿಲ್ಲದ. **Untroubled** (5) ಕಳಕಳ ಪಡದ, ಸಮಾಧಾನಸ್ಥಿತಿಯ, ಅಕ್ಷುಬ್ಧ, ಶಾಂತ. **Untrue** (5) ನಿಜವಲ್ಲದ, ಅಸತ್ಯ, ಸುಳ್ಳಿನ ; ನಿಷ್ಠೆಯಿಲ್ಲದ, ದೃಢಬದ್ಧನಾಗಿಲ್ಲದ, ದ್ರೋಹಿಯಾದ (*To* person, principles); ಸರಿಯಾದ ಆದರ್ಶಕ್ಕೆ ತಪ್ಪಿದ ; ಸರಿಯಲ್ಲದ, ಋಜುವಲ್ಲದ, ತಪ್ಪು ದಾರಿಯ. **Untruly** (ಕ್ರಿ. ವಿ.) ; **Untruth** (6) ಅಸತ್ಯ, ಸುಳ್ಳು, ಅನೃತ (Told me an u.). **Untruss** (1) (ಕ್ರಿ. ಸಕ.) ; **Untuck** (1) (ಕ್ರಿ. ಸಕ.); **Untune** (1) (ಕ್ರಿ. ಸಕ.) ಶ್ರುತಿ ತಪ್ಪಿಸು, ಅಪಸ್ವರಮಾಡು (ರೂಪ. ಸಹ). **Unturf** (2) (ಕ್ರಿ. ಸಕ.) ; **Unturned** (5) ತಿರುಗಿಸಿಲ್ಲದ, ಮಗುಚಿಲ್ಲದ [Leave no stone u. (Stone ನೋಡಿ)]. **Untutored** (5) ಹೇಳಿಕೊಟ್ಟಿಲ್ಲದ, ಬೋಧನೆಯಾಗಿಲ್ಲದ. **Untwine** (1) (ಕ್ರಿ.) ; **Untwist** (1) (ಕ್ರಿ.) ;

Unusual (5) ರೂಢಿಯಲ್ಲದ, ಅಸಾಮಾನ್ಯ, ಅಸಾಧಾರಣವಾದ. **Unusually** (ಕ್ರಿ. ವಿ.) ; **Unusuality** (ನಾ.) (ವಿರ. ಪ್ರ.) ; **Unusualness** (ನಾ.); **Unutterable** (5) ಮಾತಿನಿಂದ ಹೇಳಲಾಗದ; ಹೇಳಲು ಅರ್ಹವಲ್ಲದ, ಅವಾಚ್ಯ ; ವರ್ಣಿಸಲಾಗದ (U. joy. An u. fool ಹೇಳಲಾಗದಷ್ಟು, ವರ್ಣಿಸಲಾಗದಷ್ಟು, —ಮೂರ್ಖ). **Unutterably** (ಕ್ರಿ. ವಿ.) ; **Unvalued** (5) ಬೆಲೆಯುಳ್ಳದ್ದೆಂದು ಎಣಿಸಿಲ್ಲದ ; ಗಣನೆಯಿಲ್ಲದ, ಬೆಲೆಯಿಲ್ಲದ ; ಬೆಲೆ—ಕಟ್ಟಿಲ್ಲದ, ಹಾಕಿಲ್ಲದ. **Unvarnished** (5) ಮೆರುಗು—ಬಳಿದಿಲ್ಲದ, ಕೊಟ್ಟಿಲ್ಲದ ; ಬಣ್ಣ ಕಟ್ಟಿಲ್ಲದ, ಶುದ್ಧ (ರೂಪ. ಸಹ) (U. surface, truth). **Unveil** (1) (ಕ್ರಿ.) ಬುರುಕಿ, ಮುಸುಕು,—ತೆಗೆ; (ಪ್ರತಿಮೆ, ಭಾವಚಿತ್ರ, ಮೊ.ರ) ಅನಾವರಣ ಮಾಡು. **Unversed** (5) ನುರಿತಿಲ್ಲದ, ನಿಷ್ಣಾತನಲ್ಲದ (*In* ಉಪ. ದೊಡನೆ). **Unvicar** (4) (ಕ್ರಿ. ಸಕ.) ; **Unvoiced** (5) ಉಚ್ಚರಿಸಿಲ್ಲದ, ನುಡಿದಿಲ್ಲದ, ಹೇಳಿಲ್ಲದ, ಮೌನದ ; (ಭಾಷಾ ಶಾಸ್ತ್ರ) ಧ್ವನಿ ತಂತುವನ್ನುಪಯೋಗಿಸದೆ ಉಚ್ಚರಿಸುವ (ಉದಾ., ಗ, ಬ). **Unvote** (1) (ಕ್ರಿ. ಸಕ.) (ಹಿಂದೆ ಅಭಿಮತಕೊಟ್ಟು ಒಪ್ಪಿದ್ದನ್ನು) ಮತ್ತೆ ಅಭಿಮತಕೊಟ್ಟು ರದ್ದುಪಡಿಸು. **Unvouched** (5) ದೃಢಪಡಿಸಿಲ್ಲದ, ರುಜುವಾತು ಮಾಡಿಲ್ಲದ ; ಹೊಣೆ ಹೊತ್ತಿಲ್ಲದ (*For* ಉಪ. ದೊಡನೆ). **Unwarp** (1) (ಕ್ರಿ. ಸಕ.) (ಡೊಂಕನ್ನು) ನೆಟ್ಟಗೆ ಮಾಡು. **Unwarrantable** (5) ಸಮರ್ಥಿಸಲಾಗದ, ಅಯುಕ್ತವಾದ, ತಕ್ಕದ್ದಲ್ಲದ. **Unwarrantably** (ಕ್ರಿ. ವಿ.) ; **Unwarrantableness** (ನಾ.) ; **Unwarranted** (5) ಅಧಿಕಾರಯುಕ್ತವಲ್ಲದ; ಅರ್ಹತೆ, ಅಧಿಕಾರ, ಸನ್ನದು, —ಪಡೆದಿಲ್ಲದ; ಭರವಸೆ, ಸಮರ್ಥನೆ, ಆಧಾರ, —ಇಲ್ಲದ; ನಿರಾಧಾರ. **Unwashed** (5) ತೊಳೆದಿಲ್ಲದ, ಒಗೆದಿಲ್ಲದ (The great u. ಕೀಳು ಮಂದಿ). **Unwatered** (5) ನೀರು—ಹಾಕಿಲ್ಲದ, ಕುಡಿಸಿಲ್ಲದ (U. horse); ನೀರು—ಬೆರಸಿಲ್ಲದ, ಬೆರಸಿ ತೆಳ್ಳಗೆ ಮಾಡಿಲ್ಲದ (U. milk); (ಬಂಡವಾಳ) ಹೊಸ ಪಾಲುಗಳನ್ನು ಹಂಚಿ ಹೆಸರಿಗೆ ಮಾತ್ರ ಹೆಚ್ಚಿಸಿದ್ದಲ್ಲದ : ಹೆಸರು ಮಾತ್ರದ ವೃದ್ಧಿಯಿಲ್ಲದ. **Unwearying** (5) ಬೇಸರಗೊಳ್ಳದ, ಆಯಾಸವರಿಯದ, ಸತತ (U. efforts ಸತತ ಪ್ರಯತ್ನಗಳು). **Unwearyingly** (ಕ್ರಿ. ವಿ.) ; **Unweave** (1) (ಕ್ರಿ. ಸಕ.) (ನೆಯ್ದ ಸರಕಿನ) ಹೆಣಿಗೆ, ನೆಯ್ಗೆ, —ಬಿಚ್ಚು ; ನೂಲು ನೂಲಾಗಿ ಮಾಡು. **Unwell** (5) ಸ್ವಸ್ಥವಿಲ್ಲದ, ಅಸ್ವಸ್ಥ, ಆರೋಗ್ಯವಿಲ್ಲದ ; ಮುಟ್ಟಾಗಿರುವ, ರಜಸ್ಸು ಹೋಗುತ್ತಿರುವ. **Unwept** (5) (ಅಲಂ., ಕಾವ್ಯ) ಯಾರೂ ಶೋಕಿಸದ, ಅಶೋಚಿತ. **Unwill** (1) (ಕ್ರಿ. ಸಕ.) (ಮೊದಲನದಕ್ಕೆ) ವಿರುದ್ಧ ಸಂಕಲ್ಪ ಮಾಡು, ವಿರುದ್ಧೇಚ್ಛೆಪಡು. **Unwilling** (5) ಇಷ್ಟ, ಮನಸ್ಸು, —ಇಲ್ಲದ (*To* do, *for* thing, *for* thing *to* be done, *that*). **Unwillingly** (ಕ್ರಿ. ವಿ.) ; **Unwillingness** (ನಾ.) ; **Unwind** (1) (ಕ್ರಿ.) (ಸುರುಳಿ, ಮೊ. ವು) ಬಿಚ್ಚು, ಬಿಚ್ಚಿಕೊ. **Unwinking** (5) ರೆಪ್ಪೆಹಾಕದ, ಎಚ್ಚರದಿಂದಿರುವ, ಜಾಗರೂಕ. **Unwise** (5) ಬುದ್ಧಿಹೀನ, ಅವಿವೇಕದ, ಮೂರ್ಖ. **Unwisely** (ಕ್ರಿ. ವಿ.) ; **Unwisdom** (6) ತಿಳಿಗೇಡಿತನ, ಅವಿವೇಕ, ಅಚಾತುರ್ಯ. **Unwished** (5) ಕೋರಿ(ದ್ದ)ಲ್ಲದ, ಹಾರೈಸಿಲ್ಲದ, ಆಸೆಪಡದ (*For* ಉಪ. ದೊಡನೆ). **Unwitting** (5) ಬುದ್ಧಿಪೂರ್ವಕವಲ್ಲದ, ಉದ್ದೇಶಪೂರ್ವಕವಲ್ಲದ, ಬೇಹುಷಾರಿನ. **Unwittingly** (ಕ್ರಿ. ವಿ.) ; **Unwork** (1) (ಕ್ರಿ. ಸಕ.) ನಾಶಮಾಡು, ಹಾಳುಮಾಡು, ಕೆಡಿಸು ; (ನೆಯ್ದದ್ದನ್ನು) ಕಿತ್ತುಹಾಕು. **Unworldly** (5) ಪ್ರಾಪಂಚಿಕವಲ್ಲದ, ಅಲೌಕಿಕ, ಆಧ್ಯಾತ್ಮಿಕ (U.-minded). **Unworn** (5) ಸವೆದಿಲ್ಲದ, ಜೀರ್ಣವಾಗಿಲ್ಲದ; ತೊಟ್ಟುಕೊಂಡಿಲ್ಲದ, ತೊಟ್ಟಿಲ್ಲದ, ಮಾಸಿಲ್ಲದ. **Unworthy** (5) (—ಕ್ಕೆ) ತಗದ ; ಯೋಗ್ಯವಲ್ಲದ, ಉಚಿತವಲ್ಲದ ; ಅಯೋಗ್ಯ ; ಅನರ್ಹ. **Unworthily** (ಕ್ರಿ. ವಿ.) ; **Unworthiness** (ನಾ.); **Unwound** (5) ಸುರುಳಿ, ಸುತ್ತು,— ಬಿಚ್ಚಿರುವ. **Unwrap** (1) (ಕ್ರಿ. ಸಕ.); **Unwrinkle** (1) (ಕ್ರಿ. ಸಕ.); **Unwritten** (5) ಬರೆದಿ(ಟ್ಟಿ)ಲ್ಲದ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಲಿಖಿತ [U. law (ಲಿಖಿತ ಶಾಸನಗಳ ಆಧಾರವಿಲ್ಲದಿದ್ದರೂ) ಸಂಪ್ರದಾಯವನ್ನೊ ನ್ಯಾಯಸ್ಥಾನದ ತೀರ್ಮಾನಗಳನ್ನೊ ಆಧಾರವಾಗುಳ್ಳ ನ್ಯಾಯ: ಅಲಿಖಿತ, ಸಂಪ್ರದಾಯ, —ನ್ಯಾಯ. ಆತ್ಮಗೌರವವನ್ನು ಕಾಪಾಡಿಕೊಳ್ಳುವುದಕ್ಕಾಗಿಯೊ ಶೀಲವನ್ನು ಕೆಡಿಸಿದ್ದಕ್ಕೆ ಸೇಡು ತೀರಿಸಿಕೊಳ್ಳುವುದಕ್ಕಾಗಿಯೊ ಮಾಡಿದ ಕೊಲೆ ಅಪರಾಧವಲ್ಲವೆಂಬ ಭಾವನೆ: ಆತ್ಮರಕ್ಷಣ ನ್ಯಾಯ]. **Unwrung** (5) ಹಿಂಡಿಲ್ಲದ, ತಿರುಚಿಲ್ಲದ [Withers are u. (Withers ನೋಡಿ)]. **Unyielding** (5) ಬಗ್ಗದ, ಸಗ್ಗದ, ದೃಢ; ಪಟ್ಟುಹಿಡಿದಿರುವ, ಮೊಂಡುತನದ. **Unyieldingly** (ಕ್ರಿ. ವಿ.); **Unyieldingness** (ನಾ.); **Unyoke** (1) (ಕ್ರಿ.) ನೊಗ ಕಳಚು. (ರೂಪ.) ಕೆಲಸ ನಿಲ್ಲಿಸು.

Unánimous ಯುನ್ಯಾನಿಮಸ್ (ಗು.) ಎಲ್ಲರೂ ಒಂದೇ ಮನಸ್ಸುಳ್ಳ, ಏಕಾಭಿಪ್ರಾಯದ; ಒಮ್ಮತದ, ಸರ್ವಾನುಮತದ (The meeting was u. *for* reform, *in* protesting. U. vote). **Unánimously** (ಕ್ರಿ. ವಿ.); **Unánimousness** (ನಾ.); **Unanímity** (ನಾ.)

Úncate. Uncinate ನೋಡಿ.

Úncia ಅನ್ಸಿಯ (ನಾ.) (ರೋ. ಪ್ರಾ.; ಬ. ವ. -ae —ಯಿ) $\frac{1}{12}$ ಭಾಗ; ದ್ವಾದಶಾಂಶ (ಮು., ರೋಮನ್ ನಾಣ್ಯ 'ಆ್ಯಸ್'ನ ದ್ವಾದಶಾಂಶ); ಔನ್ಸು; ಅಂಗುಲ.

Úncial ಅನ್ಸಿಯಲ್ (ಗು., ನಾ.) ೪—೮ ಶ. ಮಾ. ಗಳ ಹಸ್ತಪ್ರತಿಗಳಲ್ಲಿ ಕಂಡುಬರುವ ಒಂದು ಬಗೆಯ ದೊಡ್ಡಕ್ಷರಗಳ(ಲ್ಲಿ ಬರೆದ). (ನಾ.) ಈ ದೊಡ್ಡಕ್ಷರ(ದ ಹಸ್ತಪ್ರತಿ)

Úncinate ಅನ್ಸಿನೇಟ್, **Úncate** ಅನ್‌ಕೇಟ್ (ಗು.) ಕೊಕ್ಕೆಯಂತೆ ಬಾಗಿರುವ, ಕೊಕ್ಕೆಯಾಕಾರದ, ಕೊಂಕಾದ. **Uncíferous** (ಗು.); **Únciform** (ಗು.); **Úncinal** (ಗು.)

Uncle ಅಂಕ್‌ಲ್ (ನಾ.) ತಂದೆಯ ಅಥವಾ ತಾಯಿಯ ಸೋದರ; ಚಿಕ್ಕಮ್ಮನ ಅಥವಾ ದೊಡ್ಡಮ್ಮನ, ಸೋದರತ್ತೆಯ, —ಗಂಡ; ಚಿಕ್ಕಪ್ಪ, ದೊಡ್ಡಪ್ಪ, ಸೋದರಮಾವ; (ಅಮೆ. ಸಂ., ಸಲಿಗೆಯ ಸಂಬೋಧನೆಯಲ್ಲಿ) ಮಾವ (U. Tom's Cabin. U. Sam ಅಮೆ. ಸಂ. ದ —ಸರ್ಕಾರ, ಮಾದರಿ ಪ್ರಜೆ). (ಅಸಂ.) ಒತ್ತೆಯ ವ್ಯಾಪಾರಿ, ಗಿರವಿಗಾರ. (ಬಳ.ಮಾ., ಹೆಸರನ್ನು ಸೇರಿಸಿ ಅಥವಾ ಸಂಬೋಧನೆಯಲ್ಲಿ) ಹಿರಿಯ ಗೆಳೆಯ, ಮಾವಯ್ಯ. [Talk to (person) like a Dutch u. ದಯಾರ್ದ್ರ ನಿಷ್ಠುರತೆಯಿಂದ ಮಾತಾಡು]. **Úncleship** (ನಾ.)

Uncoúth ಅನ್‌ಕೂತ್ (ಗು.) (ಗತ ಪ್ರ., ಅಥವಾ ಪ್ರಾಚೀ. ಪ್ರ.) ಅಜ್ಞಾತ, ಅಪರಿಚಿತ, ಬಳಕೆಯಿಲ್ಲದ, ಅಪೂರ್ವದ; (ಸ್ಥಳ, ಮೊ. ವು; ಈಗ ಕಾವ್ಯ ಪ್ರ.) ಜನಸಂಚಾರವಿಲ್ಲದ, ನಿರ್ಜನ, ಕಾಡುಕೊಂಪೆಯಾದ; (ಜೀವನ) ಅನಾಗರಿಕ, ಸೌಕರ್ಯಗಳಿಲ್ಲದ; (ವ್ಯಕ್ತಿ, ಮುಖಲಕ್ಷಣ, ನಡತೆ, ಮೊ. ವು) ಒಡ್ಡೊಡ್ಡಾದ, ವಿಕಾರವಾದ, ವಿಲಕ್ಷಣವಾದ, ಅಸಂಸ್ಕೃತ, ಹಳ್ಳಿಮುಕ್ಕನ; (ಭಾಷೆ) ಒರಟಾದ, ನಯನಾಜೂಕುಗಳಿಲ್ಲದ, ಅಪರಿಷ್ಕೃತ, ಶುಷ್ಕ ಪಾಂಡಿತ್ಯದ. **Uncoúthly** (ಕ್ರಿ. ವಿ.); **Uncoúthness** (ನಾ.)

Únction ಅಂಕ್‌ಷನ್ (ನಾ.) (ಚಿಕಿತ್ಸೋದ್ದೇಶದಿಂದ ಅಥವಾ ಮತಕರ್ಮವಾಗಿ) ತೈಲಲೇಪನ, ಎಣ್ಣೆಯೊತ್ತುವುದು; ಅಭ್ಯಂಜನ [Extreme u. (Extreme ನೋಡಿ)]; ಅಭ್ಯಂಜನ ವಸ್ತು; ತೈಲ; (ರೂಪ.) ಶಾಮಕ, ಸಮಾಧಾನಕಾರಕ, ಆತ್ಮತೃಪ್ತಿಕಾರಕ (—ನುಡಿ, ಆಲೋಚನೆ, ಸ್ಥಿತಿ) [Flattering u. (Flatter ನೋಡಿ)]. ಧಾರ್ಮಿಕೋತ್ಸಾಹ, ಧಾರ್ಮಿಕ ಸಂಸ್ಕಾರ, ಮೊ. ಗಳಿಂದ ಉಂಟಾಗುವ ಮಾತಿನ ಅಥವಾ ದನಿಯ ನುಣುಪು, ನಯ: ಭಾವ ನಯ, ದನಿ ನುಣುಪು; ಇಂತಹುದರ ತೋರಿಕೆ, ಕೃತಕ ನಯ; ಬೆಣ್ಣೆಯಂಥ ನಯಗಾರಿಕೆ, ಅತಿದಾಕ್ಷಿಣ್ಯ; ಹೇಳುವುದರಲ್ಲಿ ಕೃತಕ ನಯ (Told the story with much u.). **Únctuous** (ಗು.) ಅತ್ಯುತ್ಸಾಹದ, ಕೃತಕೋತ್ಸಾಹದ, ಹೆಚ್ಚಳದ. ಜಿಡ್ಡಿನ, ತೈಲಗುಣದ, ಸ್ನಿಗ್ಧ; (ಖನಿಜ) ಸಾಬೂನು ಸ್ಪರ್ಶದ, ಜಿಡ್ಡು ಮೈಯ. **Únctuously** (ಕ್ರಿ. ವಿ.); **Únctuousness** (ನಾ.)

Únde ಅಂಡೇ, **Úndee** ಅಂಡಿ (ಗು.) (ವಂಶಲಾಂಛನ ವಿದ್ಯೆ) ಅಲೆಯಾಕಾರದ.

Únder ಅಂಡರ್ (ಉಪ., ಕ್ರಿ. ವಿ., ಗು.) ಕೆಳಗೆ, ಕೆಳಗಡೆ [Assembled under the castle wall. Nothing new u. the sun ಪ್ರಪಂಚದಲ್ಲಿ ಹೊಸದೇನೂ ಇಲ್ಲ. U. foot, hatches (Foot, Hatch[1] ನೋಡಿ). U. one's nose, wing (ಆಯಾ ಪದ ನೋಡಿ). U. water ನೀರೊಳಗೆ]. ಒಳಗೆ, ಒಳಗಡೆ, ತಳಗಡೆ (Inserted a knife -blade u. the bark. With a good meal u. his belt ಗಡದ್ದು ಊಟಮಾಡಿ, ಹೊಟ್ಟೆ ಭರ್ತಿಯಾಗಿ). ಕಡಮೆಯಾಗಿ, ಕೀಳಾಗಿ (No one under a bishop. Cannot be done u. £5 ಐದು ಪೌಂಡಿಗಿಂತ ಕಡಮೆ ಖರ್ಚಿನಲ್ಲಿ ಮಾಡಲಾಗುವುದಿಲ್ಲ. Speak u. one's breath ಪಿಸುಮಾತಿನಲ್ಲಿ—ಆಡು, ಹೇಳು); ಒಳಗಾಗಿ, ಒಳಪಟ್ಟು, ಈಡಾಗಿ, ಅನುಭವಿಸುತ್ತ [Sank u. the load ಭಾರದಿಂದ—ಮುಳುಗಿಹೋಯಿತು, ಕುಸಿದುಬಿದ್ದನು (ರೂಪ. ಸಹ). U. a cloud (Cloud ನೋಡಿ). Groaning u. tyranny ದಬ್ಬಾಳಿಕೆಗೆ ಒಳಗಾಗಿ ನರಳುತ್ತ. Is now u. repair ಈಗ ದುರಸ್ತಿನಲ್ಲಿದೆ. U. examination ಪರೀಕ್ಷೆಗೊಳಗಾಗಿ, ಪರೀಕ್ಷೆಯಲ್ಲಿ. A few acres are u. cotton ಕೆಲವು ಎಕರೆಗಳಲ್ಲಿ ಹತ್ತಿ ಬೆಳೆ ಇಟ್ಟಿದ್ದಾರೆ. U. fire (Fire ನೋಡಿ). U. sail ಪಟದಿಂದ ಸಾಗುತ್ತ. U. way, arms (ಆಯಾ ಪದ ನೋಡಿ). Forbidden u. pain of death ಮೀರಿದರೆ ಮರಣದಂಡನೆಯೆಂಬ ಭಯದಿಂದ ನಿಷೇಧಿಸಲ್ಪಟ್ಟು. U. sentence of death ಮರಣದಂಡನೆಗೆ ಒಳಗಾಗಿ. Have sat u. famous preachers ಪ್ರಖ್ಯಾತ ಉಪದೇಶಕರ ಬಳಿ ಉಪದೇಶಗಳನ್ನು ಕೇಳಿದ್ದೇನೆ. Country prospered u. him ಅವನ ಕೈಕೆಳಗೆ ದೇಶ ಅಭಿವೃದ್ಧಿ ಪಡೆಯಿತು. Might succeed u. other conditions ಬೇರೆ ಪರಿಸ್ಥಿತಿಗಳಲ್ಲಿ ಜಯಶೀಲವಾಗಬಹುದು. Is u. a delusion ಭ್ರಾಂತಿಗೊಳಗಾಗಿದ್ದಾನೆ. Was u. the impression —ಎಂಬ ಭಾವನೆಯಲ್ಲಿದ್ದನು. U. the circumstances ಈ, ಆ, —ಪರಿಸ್ಥಿತಿಯಲ್ಲಿ. U. the rose (Rose[1] ನೋಡಿ). U. favour (Favour ನೋಡಿ). U. one's hand & seal ತನ್ನ ರುಜುವನ್ನೂ ಮುದ್ರೆಯನ್ನೂ ಹಾಕಿ. U. a vow ವ್ರತ ಕೈಕೊಂಡು; ಪ್ರತಿಜ್ಞೆ ಮಾಡಿ. Known u. an assumed name ಗುಪ್ತನಾಮದಿಂದ ಪರಿಚಿತನಾಗಿ, ಪ್ರಸಿದ್ಧನಾಗಿ. U. pretence of ignorance ಅಜ್ಞಾನದ ನೆಪದಲ್ಲಿ. Lived u. the Stuarts ಸ್ಟೂವರ್ಟ್ ದೊರೆಗಳ ಕಾಲದಲ್ಲಿ ಜೀವಿಸಿದ್ದನು]. (ಕ್ರಿ. ವಿ.) ಕೆಳಗಿನ ಸ್ಥಾನಕ್ಕೆ, ಕೆಳಗಡೆ(ಗೆ) [Bring, go, keep, knock, knuckle, u. (ಆಯಾ ಪದ ನೋಡಿ)]. (ಗು.) ಕೆಳ(ಗಿನ) (U. jaw ಕೆಳ ದವಡೆ. U. servants ಕೆಳಗಿನ ಆಳುಗಳು). U. dog (ಅಸಂ.) ಹೋರಾಟದಲ್ಲಿ ತೀರ ಸೋತುಹೋದ ನಾಯಿ, ಮನುಷ್ಯ: ಅನ್ಯಾಯಕ್ಕೊಳಗಾದವನು, ಹೀನಸ್ಥಿತಿಯಲ್ಲಿರುವವನು, ಕನಿಕರಕ್ಕೆ ಅರ್ಹನಾದವನು. **Úndermost** (ಗು.)

Under- (ಸ. ಪೂ. ಪ.) (ಉಪ., ಕ್ರಿ. ವಿ., ಗು. ಅರ್ಥಗಳಲ್ಲಿ)

1. ನಾಮವಾಚಕಗಳಿಗೆ ಹಿಂದೆ ಸೇರಿ '—ಕೆಳಗೆ' ಎಂಬ ಸ್ಥಾನ ನಿರ್ದೇಶಕಾರ್ಥದಲ್ಲಿ ಪ್ರ. (Underfoot ಕಾಲಿನ ಕೆಳಗೆ). ಸಮಾಸಪದಗಳು ಗುಣವಾಚಕವಾಗಿ ಸಹ ಪ್ರ. [Underproof (ಮದ್ಯದ ವಿಷಯದಲ್ಲಿ) ಪ್ರಮಾಣಕ್ಕಿಂತ ಕಡಮೆ ಜೋರಿನ]

2. ಕ್ರಿಯಾಪದಗಳಿಗೂ ಅವುಗಳ ವ್ಯುತ್ಪನ್ನ ಪದಗಳಿಗೂ ಹಿಂದೆ ಸೇರಿ '—ಕ್ಕಿಂತ ಕಡಮೆಯಾಗಿ, ಕೆಳಗೆ' ಎಂಬ ಅರ್ಥಗಳಲ್ಲಿ ಪ್ರ. (Underbid)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

3. ಕ್ರಿಯಾಪದಗಳಿಗೂ, ಗುಣವಾಚಕಗಳು ಮತ್ತು ಅವುಗಳ ವ್ಯುತ್ಪನ್ನ ಪದಗಳಿಗೂ ಹಿಂದೆ ಸೇರಿ, 'ಕಡಮೆಯಾಗಿ, ಅಪೂರ್ಣವಾಗಿ' ಎಂಬ ಅರ್ಥಗಳಲ್ಲಿ ಪ್ರ. (Underdo). ಗುಣವಾಚಕಗಳಿಗೂ ಭೂ. ಕೃ. ಗಳಿಗೂ ಸೇರಿ ಆದ ಸಮಾಸಪದಗಳು ವಿಶೇಷಣಗಳಾಗಿ ಪ್ರ. (Under-ripe, Under-fired)

4. ನಾಮವಾಚಕಗಳ ಹಿಂದೆ ಸೇರಿ, '—ಕ್ಕೆ ಕೆಳಗಿರುವ, ಒಳಗಡೆಯಿರುವ, ಅಧೀನವಾದ' ಎಂಬ ಅರ್ಥಗಳಲ್ಲಿ ಪ್ರ. (Under-clothes, Under-secretary)

(ಮುಂದೆ ಕೊಟ್ಟಿರುವ ಸಮಾಸಪದಗಳಲ್ಲಿ ಸೇರಿಲ್ಲದ Underhand ಮೊ. ಕೆಲವು ಪದಗಳನ್ನು ಬೇರೆಯಾಗಿ ಕೊಟ್ಟಿದೆ)

Underáct (3) (ಕ್ರಿ. ಸಕ.) (ಪಾತ್ರವನ್ನು) ಅಸಮರ್ಪಕವಾಗಿ, ಅಪೂರ್ಣವಾಗಿ, —ಆಡು, ನಡಸು. **Under-agent** (4) (ನಾ.) (ಕೈ)ಕೆಳಗಿನ—ನಿಯೋಗಿ, ದಳ್ಳಾಳಿ. **Underbíd** (2) (ಕ್ರಿ. ಸಕ.) (ಮತ್ತೊಬ್ಬನಿಗಿಂತ) ಕಡಮೆ—ಸವಾಲು ಮಾಡು, ಬೆಲೆ ಕೇಳು. **Únderbréd** (3) ಅಶಿಕ್ಷಿತ, ಅಸಭ್ಯ; ತುಚ್ಛ. **Únderbrush** (4) (ನಾ.)=Undergrowth. **Underchárge** (3) (ಕ್ರಿ. ಸಕ.), **Úndercharge** (ನಾ.) (ನ್ಯಾಯವಾದುದಕ್ಕಿಂತ) ಕಡಮೆ ಬೆಲೆ (ಹಾಕು, ತೆಗೆದುಕೊ). (ಬಂದೂಕು, ಮೊ. ಕ್ಕೆ) (ಬೇಕಾದುದಕ್ಕಿಂತ) ಕಡಮೆ, ಕೊರೆಯ, —ಮದ್ದು (ತುಂಬು). **Únderclay** (4) ಕಲ್ಲಿದ್ದಲ (ಸ್ತರದ) ಕೆಳಗಿನ ಜೇಡಿಮಣ್ಣಿನ ಸ್ತರ: ಅಡಿ ಜೇಡಿ ಪದರ. **Under-clerk(ship)** (4) (ನಾ.); **Únderclothes, Únder-clothing** (4) (ನಾ.) ಇತರ ಉಡುಪುಗಳ ಒಳಗಡೆ ತೊಡುವ ಉಡುಪು: ಒಳ ಉಡುಪು. **Undercút**[1] (2) (ಕ್ರಿ. ಸಕ.) (ಕೆತ್ತನೆಯಲ್ಲಿ: ಮಾದರಿ ಎದ್ದುಕಾಣುವಂತೆ, ಉಬ್ಬು ಚಿತ್ರವಾಗಿ ಕಾಣುವಂತೆ) ಹಿನ್ನೆಲೆಯನ್ನು ಕೆತ್ತಿಹಾಕು. (ಗಾಲ್ಫ್ ಆಟ) (ಎತ್ತರಕ್ಕೆ ಹೋಗುವಂತೆಯೂ ನೆಲದಮೇಲೆ ಹೆಚ್ಚು ದೂರ ಉರುಳದಂತೆಯೂ ಚೆಂಡನ್ನು) ಮಧ್ಯಕ್ಕಿಂತ ಕೆಳಕ್ಕೆ ಹೊಡೆ. (ವ್ಯಾಪಾರ) (ಮತ್ತೊಬ್ಬ ವ್ಯಾಪಾರಿಗಿಂತ) ಕಡಮೆ ಬೆಲೆ ಹೇಳು. **Under-devélop** (3) (ಕ್ರಿ. ಸಕ.) (ಛಾಯಾಚಿತ್ರ) ಸಾಕಷ್ಟು ಸ್ಫುಟಗೊಳಿಸದಿರು; ಅಪೂರ್ಣವಾಗಿ ಸ್ಫುಟಗೊಳಿಸು. **Underdó** (3) (ಕ್ರಿ. ಸಕ.) ಕಡಮೆಯಾಗಿ ಬೇಯಿಸು, ಸಾಕಷ್ಟು ಬೇಯಿಸದಿರು. **Underdone** (ಭೂ. ಕೃ.). **Underdóse** (3) (ಕ್ರಿ. ಸಕ.) (ಔಷಧ: ಬೇಕಾದುದಕ್ಕಿಂತ) ಕಡಮೆ ಪ್ರಮಾಣದಲ್ಲಿ ಒಂದು ಸಲಕ್ಕೆ ಕೊಡು. **Underdraín**[1] (4) (ನಾ.) ನೆಲದೊಳಗಿನ ಚರಂಡಿ, ಒಳ ಚರಂಡಿ. **Underdraín**[2] (2) (ಕ್ರಿ. ಸಕ.) (ನೆಲದಲ್ಲಿ) ಒಳ ಚರಂಡಿ ಮಾಡಿ ಸಾಗಿಸು. **Under-dráw** (3) (ಕ್ರಿ. ಸಕ.) ಅಸಮರ್ಪಕವಾಗಿ, ಕೊರೆಯಾಗಿ, —ಚಿತ್ರಿಸು, ನಿರೂಪಿಸು. **Under-dréss** (3) (ಕ್ರಿ.) ತೀರ ಸಾದಾ ಉಡುಪನ್ನು ಧರಿಸು; ಉಚಿತಕ್ಕಿಂತ ಕಡಮೆ ಉಡುಪನ್ನು ಧರಿಸು. **Underéstimate** (3) —ಎಸ್ಟಿಮೇಟ್ (ಕ್ರಿ. ಸಕ.), **Undérestimate** —ಮೆಟ್, **-mation** —ಮೇಷನ್ (ನಾ.) (ನ್ಯಾಯವಾದುದಕ್ಕಿಂತ) ಕಡಮೆ—ಅಂದಾಜು, ಬೆಲೆ(ಕಟ್ಟು); ಕಡಮೆಯಾಗಿ ಎಣಿಸು. **Under-expóse** (3) (ಕ್ರಿ. ಸಕ.) (ಛಾಯಾಚಿತ್ರ) ಅಸಮರ್ಪಕವಾಗಿ, ಕೊರೆಯಾಗಿ, —ಬೆಳಕಿಗೆ ಒಡ್ಡು. **Under-exposure** (ನಾ.); **Underfeéd** (3) (ಕ್ರಿ. ಸಕ.) ಅರೆ ಹೊಟ್ಟೆ ಹಾಕು; ಸಾಕಷ್ಟು ಆಹಾರ ಕೊಡದಿರು. **Under-fíréd** (3) (ಗು.) (ಮಡಕೆ, ಮೊ. ವು) ಅರೆಸುಟ್ಟ, ಸಾಕಷ್ಟು ಬೆಂದಿಲ್ಲದ, ಕೊರೆಗಾವಿನ. **Únderflow** (4) (ನಾ.) ಒಳ ಹರಿತ; ಕೆಳ ಹರಿತ; ನೆಲದೊಳಗಿನ ಹರಿತ; ಗುಪ್ತ, ಅಂತಃ, —ಪ್ರವಾಹ. **Únder-garment** (4) (ನಾ.) ಒಳ—ಉಡುಪು, ಬಟ್ಟೆ (ಇತರ ಉಡುಪಿನ ಒಳಗೆ ತೊಡುವಂಥದು). **Undergrówn** (3) (ಗು.) ಕಡಮೆ ಬೆಳವಣಿಗೆಯ, ಪೀಚಾದ. **Úndergrowth** (4) (ನಾ.) ದೊಡ್ಡ ಮರಗಳ ಬುಡದಲ್ಲಿ ಬೆಳೆಯುವ ಕುರುಚಲು ಅಥವಾ ಇತರ ಸಸ್ಯ: ಕೆಳ—ಕುರುಚಲು, ಸಸ್ಯ. **Under-king** (4) (ನಾ.) ಸಾಮಂತ, ಅಧೀನ, —ರಾಜ. **Underláy**[1] (2) (ಕ್ರಿ.) (ಒಂದರ) ಕೆಳಗೆ ಇಡು; (ಮುದ್ರಣ: ಅಚ್ಚಿನ ಮೊಳೆಗಳನ್ನು ಎತ್ತರಿಸುವುದಕ್ಕಾಗಿ) ಕೆಳಗಡೆ ಕಾಗದ ಇಡು. (ಗಣಿ ಶಿಲ್ಪ) ಲಂಬದಿಂದ ಓರೆಯಾಗಿರು. **Únderlay**[2] (ನಾ.) ಅಚ್ಚಿನ ಮೊಳೆಗಳ ಕೆಳಗಿಟ್ಟ ಕಾಗದ; (ಗಣಿ ಶಿಲ್ಪ) ಓರೆಯಾಗಿರುವ —ಪಟ್ಟೆ, ತೋಡುದಾರಿ. (ಜಮಖಾನೆ, ಚಾಪೆ, ಮೊ. ಗಳ ಕೆಳಗೆ ಉಪಯೋಗಿಸುವ) ನೀರಿಳಿಯದ ತಳಹಾಸು. **Under-lease** (4) (ನಾ.) ಒಬ್ಬ ಭೋಗ್ಯದಾರನು ಮತ್ತೊಬ್ಬನಿಗೆ (ತನ್ನದಕ್ಕಿಂತ ಕಡಮೆ ಅವಧಿಗೆ) ಮಾಡಿದ ಭೋಗ್ಯ: ಒಳ ಭೋಗ್ಯ. **Under-lét** (2) (ಕ್ರಿ. ಸಕ.) (ನ್ಯಾಯವಾದುದಕ್ಕಿಂತ) ಕಡಮೆ ಬಾಡಿಗೆಗೆ ಕೊಡು; ತಾನು ಬಾಡಿಗೆಗೆ ತೆಗೆದುಕೊಂಡು ಮತ್ತೊಬ್ಬನಿಗೆ ಬಾಡಿಗೆಗೆ ಕೊಡು: ಒಳ ಬಾಡಿಗೆಗೆ ಕೊಡು. **Underlíne**[1] (2) (ಕ್ರಿ. ಸಕ.) (ಒತ್ತಿಹೇಳುವ ಉದ್ದೇಶದಿಂದ ಅಥವಾ ಓರೆ ಮುದ್ರಾಕ್ಷರಗಳಲ್ಲಿರಬೇಕೆಂದು ಸೂಚಿಸುವುದಕ್ಕಾಗಿ) (ಮಾತಿನ) ಕೆಳಗೆ ಗೆರೆ ಎಳೆ, ಅಡಿಗೆರೆ ಹಾಕು. **Únderline**[2] (4) (ನಾ.) ನಾಟಕದ ಪ್ರಕಟನೆ ಚೀಟಿಯ ತಳದಲ್ಲಿ ಕಾಣಿಸಿರುವ, ಮುಂದೆ ಆಡಲಿರುವ ನಾಟಕದ ಮುನ್ ಪ್ರಕಟನೆ: ಅಡಿ ಪ್ರಕಟನೆ. **Únderlinen** (4) (ನಾ.) ಒಳ—ಬಟ್ಟೆ, ಉಡುಪು. **Undermán** (3) (ಕ್ರಿ. ಸಕ.) (ಹಡಗು, ಮೊ. ಕ್ಕೆ) ಬಹಳ ಕಡಮೆ ಜನರನ್ನು, ಕಲಾಸಿಗಳನ್ನು, —ಒದಗಿಸು; ತೀರ ಕಡಮೆ ಸಿಬ್ಬಂದಿ ಇಡು. **Undermásted** (3) (ಗು.) ಕಡಮೆ ಕೂವೆಗಳುಳ್ಳ. **Underméntioned** (2) (ಗು.) ಕೆಳಗೆ ಕಾಣಿಸಿದ. **Underpáy** (3) (ಕ್ರಿ. ಸಕ.) (ಕೆಲಸಗಾರರಿಗೆ) ಬಹಳ ಕಡಮೆ ಕೂಲಿ, ಸಂಬಳ, —ಕೊಡು; ಅಸಮರ್ಪಕ ಸಂಬಳ ಕೊಡು. **Underpín** (2) (ಕ್ರಿ. ಸಕ.) (ಗೋಡೆ, ಚಾಚುಕಟ್ಟೆ, ಮೊ. ಗಳಿಗೆ) ಬಲವಾದ, ಗಾರೆ ಗಚ್ಚಿನ, —ಅಡಿಪಾಯ ಹಾಕು. **Underpláy** (2) (ಕ್ರಿ. ಸಕ.), **Únderplay** (ನಾ.) (ವ್ಹಿಸ್ಟ್ ಇಸ್ಪೀಟಾಟದಲ್ಲಿ) (ಅದೇ ರಂಗಿನ ಹೆಚ್ಚು ಬೆಲೆಯ ಎಲೆಯಿದ್ದರೂ) ಕಡಮೆ ಬೆಲೆಯ ಎಲೆ ಇಳಿ(ಯುವುದು). **Únderplot** (4) (ನಾ.) (ನಾಟಕದಲ್ಲಾಗಲಿ ಕಾದಂಬರಿಯಲ್ಲಾಗಲಿ) ಉಪವಸ್ತು. **Under-prodúction** (3) (ನಾ.) ವಾಡಿಕೆಗಿಂತ, ಬೇಕಾಗಿರುವುದಕ್ಕಿಂತ, ಗಿರಾಕಿಗಿಂತ, —ಕಡಮೆ ತಯಾರಿಕೆ, ಕಡಮೆ ಉತ್ಪನ್ನ. **Underpróp** (2) (ಕ್ರಿ. ಸಕ.) ಕೆಳ ಆಧಾರ, ಕೆಳ ತಾಂಗು,—ಕೊಡು. **Underquóte** (2) (ಕ್ರಿ. ಸಕ.) (ಮತ್ತೊಬ್ಬರಿಗಿಂತ) ಕಡಮೆ ಬೆಲೆ ಹೇಳು. **Underráte** (3) (ಕ್ರಿ. ಸಕ.)= Underestimate. **Under-réckon** (3) (ಕ್ರಿ. ಸಕ.); **Under-rípe** (3) (ಗು.) ಕಡಮೆ ಪಕ್ವವಾಗಿರುವ, ದೋರೆಗಾಯಾದ. **Underrún** (2) (ಕ್ರಿ.) ಕೆಳಗಡೆ—ಓಡು, ಹಾಯ್ದು ಹೋಗು. (ನಾವೆ) (ಹೊರಜಿ, ತಂತಿ, ಮೊ. ನ್ನು ಹಡಗಿನ ಮೇಲಕ್ಕೆ ಎತ್ತಿ) ಕೈಮೇಲೆ ಉದ್ದಕ್ಕೂ ಹರಿಸಿ ಮುಟ್ಟಿ ಪರೀಕ್ಷಿಸು. **Underscóre** (2) (ಕ್ರಿ. ಸಕ.)= Underline. **Únder-sécretary(ship)** (4) (ಸರ್ಕಾರದ ಒಂದು ಖಾತೆಯ ಖಾಯಂ ಮುಖ್ಯಸ್ಥನ ವಿಷಯದಲ್ಲಿ) ಅಧೀನ ಕಾರ್ಯದರ್ಶಿ(ತ್ವ); ಉಪ ಕಾರ್ಯದರ್ಶಿ(ತ್ವ). **Underséll** (2) (ಕ್ರಿ. ಸಕ.) (ಮತ್ತೊಬ್ಬನಿಗಿಂತ) ಕಡಮೆ ಬೆಲೆಗೆ, ಅಗ್ಗವಾಗಿ, —ಮಾರು. **Únder-seller** (ನಾ.); **Under-servant** (4) (ನಾ.); **Under-sét**[1] (2) (ಕ್ರಿ. ಸಕ.) (ಕಟ್ಟಡ, ಮೊ. ಕ್ಕೆ) ಊರೆ, ಆಸರೆ, —ಕೊಡು; —ಕೊಟ್ಟು ಬಲಪಡಿಸು. **Únderset**[2] (4) (ನಾ.) (ನಾವೆ) ಗಾಳಿಗೆ ಅಥವಾ ಮೇಲ್ಮೈನೀರಿನ ಹರಿತಕ್ಕೆ ಎದುರಾಗಿ ಹರಿಯುವ ಒಳ ಹರಿತ: ಎದುರು ಒಳ ಹರಿತ. **Under-sheriff** (4) (ನಾ.) ಷೆರಿಫ್‌ನ ಕೈಕೆಳಗಿನ ಅಧಿಕಾರಿ: ಉಪ ಷೆರಿಫ್. **Under-shirt** (4) (ನಾ.) ಒಳ ಷರ್ಟು. **Úndershot** (2) (ಗು.) (ಚಕ್ರ) ಕೆಳಗೆ ನೀರು ತಳ್ಳುವುದರಿಂದ ಸುತ್ತುವ. =Underhung (ಆ ಪದ ನೋಡಿ). **Úndershrub** (4) (ನಾ.) ಸಣ್ಣ, ಗಿಡ್ಡ, —ಕುರುಚಲು. **Undersígned** (2) (ಗು.) ಕೆಳಗೆ ರುಜುಮಾಡಿರುವ (We, the u.). **Undersízed** (3) (ಗು.) (ವಾಡಿಕೆಗಿಂತ) ತೀರ ಕಡಮೆ—ಆಕಾರದ, ಗಾತ್ರದ; ಗುಜ್ಜು, ಗಿಡ್ಡಾದ. **Únderskirt** (4) (ಗು.) ಒಳ ಲಂಗ. **Úndersleeve** (4) (ನಾ.) ಕವಚದ ತೋಳಿನೊಳಗಿಟ್ಟಿರುವ ಬಿಡಿ ತೋಳು: ಒಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೋಳು. **Úndersoil** (4) (ನಾ.) ಕೆಳ, ತಳ, —ಮಣ್ಣು. **Understáte** (3) (ಕ್ರಿ. ಸಕ.) (ಇರುವುದಕ್ಕಿಂತ, ಸತ್ಯಕ್ಕಿಂತ) ಕಡಮೆಯಾಗಿ, ಕೊರೆಯಾಗಿ, ಕುಂದಿಸಿ, —ಹೇಳು. **Understátement** (ನಾ.). **Understóck** (3) (ಕ್ರಿ. ಸಕ.) (ಬೇಕಾದುದಕ್ಕಿಂತ) ತೀರ ಕಡಮೆ —ದಾಸ್ತಾನಿಡು, ದಾಸ್ತಾನು ಒದಗಿಸು. **Únder-strapper** (4) (ನಾ.) ಕೀಳಾಳು, ಅಡಿಯಾಳು, ಕೈಕೆಳಗಿನವನು. **Under-stratum** (4) (ನಾ.) ಒಳ, ತಳ, —ಪದರ. **Under-tenant** (4) (ನಾ.) ಒಳ—ಹಿಡುವಳಿದಾರ, ಬಾಡಿಗೆದಾರ. **Under-tenancy** (ನಾ.); **Under-tímed** (3) (ಗು.) = Under-exposed. **Úndertint** (4) (ನಾ.) ತೆಳು ಬಣ್ಣ. **Úndertone** (4) (ನಾ.) (ಮು., ಮಾತನಾಡುವಲ್ಲಿ) ತಗ್ಗುದನಿ. ತೆಳು ಬಣ್ಣ. **Úndertow** (4) (ನಾ.) ದಡಕ್ಕೆ ಹೊಡೆಯುವ ಅಲೆಯ ಹಿಂಬರಿವು; = Underset. **Undertrúmp** (2) (ಕ್ರಿ. ಸಕ.) (ಮತ್ತೊಬ್ಬನು ಇಳಿದಿರುವುದಕ್ಕಿಂತ) ಕಡಮೆ ಬೆಲೆಯ ತುರುಪು ಆಡು, ಹಾಕು. **Underválue** (3) (ಕ್ರಿ. ಸಕ.) (ನ್ಯಾಯವಾದುದಕ್ಕಿಂತ) ತೀರ ಕಡಮೆ ಬೆಲೆ ಕಟ್ಟು, ಕಡಮೆಯಾಗಿ ಗಣಿಸು. **Undervaluátion** (ನಾ.); **Únderwear** (4) (ನಾ.) ಒಳ—ಉಡುಪು, ಬಟ್ಟೆ; (ಮತ್ತೊಂದರ) ಒಳಗೆ ಧರಿಸುವದು. **Únder-wing** (4) (ನಾ.) ತಳ ರೆಕ್ಕೆಗಳಲ್ಲಿ ಉಜ್ಜ್ವಲವಾದ ಗುರುತುಗಳುಳ್ಳ ಹಲವು ಚಿಟ್ಟೆಯ ಜಾತಿ. **Únderwood** (4) (ನಾ.) = Under-growth. **Únderworld** (4) (ನಾ.) ಅಭಿಪಾದಿ; ಅಧೋಲೋಕ, ಪಾತಾಳ; ಅತ್ಯಂತ ಕೀಳು, ನೀಚ, —ಜನವರ್ಗ.

Únder-arm ಅಂಡರ್‌ಆರ್ಮ್ (ಗು.) (ಕ್ರಿಕೆಟ್) = Underhand (ಆ ಪದ ನೋಡಿ); (ಟೆನಿಸ್ ಆಟ) ದಾಂಡನ್ನು ಭುಜದ ಮಟ್ಟದಿಂದ ಕೆಳಕ್ಕೆ ತೂಗಿ ಹೊಡೆದ.

Úndercroft ಅಂಡರ್‌ಕ್ರಾಫ್ಟ್ (ನಾ.) ನೆಲಗವಿ, ನೆಲಮಾಳಿಗೆ.

Úndercurrent ಅಂಡರ್‌ಕರೆಂಟ್ (ನಾ.) ಮೇಲ್ಮೈ ಕೆಳಗಿನ, ನೆಲದೊಳಗಿನ, —ಹರಿವು: ಒಳಹರಿವು, ಅಂತಃಪ್ರವಾಹ. (ರೂಪ.) ಒಳಗೊಳಗೆ ಅಗೋಚರವಾಗಿ ನಡೆಯುವ ಪ್ರಭಾವ, ವ್ಯತಿರಿಕ್ತ ಪ್ರವೃತ್ತಿ: ಒಳ, ಗುಪ್ತ, —ಪ್ರಭಾವ; ಮಸಲತ್ತು. (ಗಣಿ ಕೆಲಸ) ಮುಖ್ಯ ನೀರುಹರಿವಿನ ಪಕ್ಕದಲ್ಲಿಟ್ಟಿರುವ, ಚಿನ್ನವನ್ನು ಉಳಿಸಿಕೊಳ್ಳಲು ಸಹಾಯಕವಾದ, ಅಗಲವಾದ ತೆಟ್ಟೆಪೆಟ್ಟಿಗೆ.

Undercút[1]. **Under-** ನೋಡಿ.

Úndercut[2] ಅಂಡರ್‌ಕಟ್ (ನಾ.) ದನದ ಪಕ್ಕೆ ಮಾಂಸದ ತಳ ಭಾಗ. (ಮುಷ್ಟಿಕಾಳಗದಲ್ಲಿ) ಮೇಲಹೊಡೆತ.

Undergó ಅಂಡರ್‌ಗೋ (ಕ್ರಿ. ಸಕ.) (ಮು., ದೃಢಮನಸ್ಸಿನಿಂದ) ಅನುಭವಿಸು, ಈಡಾಗು, ಒಳಗಾಗು, ಪಡು (Has undergone many trials)

Undergráduate ಅಂಡರ್‌ಗ್ರ್ಯಾಡ್ಯುಎಟ್ (ನಾ.) ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದು ಇನ್ನೂ ಮೊದಲನೆಯ ಪಾಂಡಿತ್ಯ ಪದವಿಯನ್ನು ತೆಗೆದುಕೊಂಡಿಲ್ಲದ ವಿದ್ಯಾರ್ಥಿ: ಪದವಿಯ ಅಭ್ಯರ್ಥಿ (ಹಲವು ವೇಳೆ ವಿಶೇಷಣ ಪ್ರ.). **Undergráduateship** (ನಾ.); **Undergra-duétte** ಅಂಡರ್‌ಗ್ರ್ಯಾಡ್ಯುಎಟ್ (ನಾ., ಸ್ತ್ರೀ.) (ಹಾಸ್ಯ ಪ್ರ.)

Undergroúnd ಅಂಡರ್‌ಗ್ರೌಂಡ್ (ಕ್ರಿ. ವಿ., ಗು., ನಾ.) ಭೂಮಿಯ, ನೆಲದ,—ಕೆಳಗೆ, ಒಳಗೆ [ಇರುವ(ದು)] [The u. (railway)]

Underhánd ಅಂಡರ್‌ಹ್ಯಾಂಡ್ (ಕ್ರಿ. ವಿ., ಗು.) ಗುಟ್ಟಾಗಿ, ಗುಟ್ಟಾದ; ಮರೆಯಲ್ಲ(ಯ); ಮೋಸದ, ರಹಸ್ಯದ; ಗೋಪ್ಯವಾದ; ಒಳಸಂಚಿನ, ಅಪ್ರಾಮಾಣಿಕತೆಯ; (ಕ್ರಿಕೆಟ್: ಚೆಂಡೆಸೆತದ ವಿಷಯದಲ್ಲಿ) ಕೆಳಗೈಯ(ಲ್ಲಿ) (Bowls u.; u. bowling)

Underhúng ಅಂಡರ್‌ಹಂಗ್ (ಗು.) (ಕೆಳ ದವಡೆ) ಮೇಲು ದವಡೆಗಿಂತ ಮುಂಚಾಚಿಕೊಂಡಿರುವ; ಚಾಚಿದ ಕೆಳ ದವಡೆಯುಳ್ಳ.

Underlié ಅಂಡರ್‌ಲೈ (ಕ್ರಿ. ಸಕ.) (ಸ್ತರ, ಮೊ. ರ) ಕೆಳಗೆ, ಕೆಳಗಡೆ, —ಇರು, ನೆಲಸಿರು; (ರೂಪ.; ತತ್ತ್ವ, ಮೊ. ವು) ಆಧಾರವಾಗಿ ಮೂಲಭೂತವಾಗಿ, —ಇರು.

Únderling ಅಂಡರ್‌ಲಿಂಗ್ (ನಾ.) ಕೈಕೆಳಗಿನವನು, ಕೀಳಾಳು (ತಿರಸ್ಕಾರ ಪ್ರ.)

Undermíne ಅಂಡರ್‌ಮೈನ್ (ಕ್ರಿ. ಸಕ.) ಕೆಳಗಡೆ (ಸುರಂಗ) ತೋಡು; ತಳಭಾಗವನ್ನು, ಅಡಿಪಾಯವನ್ನು, —ಶಿಥಿಲಗೊಳಿಸು, ಕೊರೆದು ಹಾಕು (Rivers u. their banks. U. the walls). (ವ್ಯಕ್ತಿ, ಕೀರ್ತಿ, ಪ್ರಭಾವ, ಮೊ. ನ್ನು) ಒಳಗೊಳಗೆ, ಗುಪ್ತವಾಗಿ, —ಹಾಳುಮಾಡು; ಬುಡಕ್ಕೆ ನೀರೆರೆಯುತಿದ್ದು; (ಆರೋಗ್ಯವನ್ನು) ಒಳಗೊಳಗೆ, ಅಗೋಚರವಾಗಿ, —ಕೆಡಿಸು, ಕುಗ್ಗಿಸು. **Underminer** (ನಾ.)

Underneáth ಅಂಡರ್‌ನೀತ್ (ಕ್ರಿ. ವಿ., ಉಪ., ಗು., ನಾ.) ಕೆಳಗೆ, ಕೆಳಗಡೆ; ಕೆಳ (ಭಾಗ)

Understánd ಅಂಡರ್‌ಸ್ಟ್ಯಾಂಡ್ (ಕ್ರಿ.; ಭೂತ., ಭೂ. ಕೃ. -stood; ಪ್ರಾಚೀ. ಪ್ರ., ಭೂ. ಕೃ. -standed) ತಿಳಿ(ದುಕೊ), ಅರ್ಥಮಾಡಿಕೊ, ಗ್ರಹಿಸು, ಹಿಡಿ [Tongue not understanded of the people ಅನ್ಯ, ಪರ, —ಭಾಷೆ. Cannot u. his conduct ಅವನ ನಡತೆ ನನಗೆ ಅರ್ಥವಾಗುವುದಿಲ್ಲ. You don't u. (ಪರಿಸ್ಥಿತಿ, ಮೊ.) ನಿನಗೆ ಗೊತ್ತಾಗುವುದಿಲ್ಲ. What did you u. him to say? ಅವನ ಮಾತುಗಳನ್ನು ಏನೆಂದು ಅರ್ಥಮಾಡಿಕೊಂಡೆ? (ಆಶ್ಚರ್ಯ, ಕೋಪ, ಸಂದೇಹ, ಮೊ. ಗಳನ್ನು ಸೂಚಿಸುವಲ್ಲಿ): Do I u. (you to say) that you refuse? Am I to u. that you refuse? ನೀನು ನಿರಾಕರಿಸುತ್ತೀಯೆ—ಎಂದು ತಿಳಿಯಲೊ? ಎಂದು ಅರ್ಥವೊ? (ಬೆದರಿಕೆ, ಎಚ್ಚರಿಕೆ, ಮೊ. ಗಳ ಸಂದರ್ಭದಲ್ಲಿ): Now u. me ಇಗೋ ತಿಳಿದುಕೊ]; (ಮನಸ್ಸಿನಲ್ಲಿ) ಅಧ್ಯಾಹಾರ ಮಾಡಿಕೊ (The verb may be either expressed or understood ಕ್ರಿಯಾಪದ ವಾಚ್ಯವಾಗಿರಬಹುದು, ಇಲ್ಲವೆ, ಅಧ್ಯಾಹಾರವಾಗಿರಬಹುದು). **Under-stánding**[1] (ಗು.) ತಿಳಿವಳಿಕೆ, ಬುದ್ಧಿ, ವಿವೇಚನೆ, —ಉಳ್ಳ. **Understánding**[2] (ನಾ.) (ಕ್ರಿಯಾರ್ಥಗಳಲ್ಲಿ); ಅರಿವು, ತಿಳಿವಳಿಕೆ, ಬುದ್ಧಿ, ವಿವೇಚನೆ, ಜ್ಞಾನ, ಗ್ರಹಣಶಕ್ತಿ (Men without u. ಅಜ್ಞಾನಿಗಳು, ತಿಳಿವಳಿಕೆಯಿಲ್ಲದವರು); ಒಮ್ಮನಸ್ಸು, ಹೊಂದಿಕೆ, ಸಾಮರಸ್ಯ, ಒಪ್ಪಂದ, ಗೊತ್ತುಪಾಡು [Disturbed the (good) u. between them ಅವರವರಿಗಿದ್ದ ಒಮ್ಮನಸ್ಸನ್ನು, ಸಾಮರಸ್ಯವನ್ನು, ಕದಡಿಬಿಟ್ಟನು. Must come to an u. with him ಅವನೊಂದಿಗೆ ಒಂದು ಒಪ್ಪಂದಕ್ಕೆ, ಗೊತ್ತುಪಾಡಿಗೆ, ಬರಬೇಕು. Consented only on this u. ಈ ಒಪ್ಪಂದದ, ಷರತ್ತಿನ, ಮೇಲೆ ಮಾತ್ರ ಒಪ್ಪಿಕೊಂಡೆ]; (ಬ. ವ. ದಲ್ಲಿ, ಅಸಂ.) ಪಾದಗಳು, ಕಾಲುಗಳು, ಪಾದರಕ್ಷೆಗಳು, ಮೊ. ವು.

Únderstudy ಅಂಡರ್‌ಸ್ಟಡಿ (ನಾ., ಕ್ರಿ. ಸಕ.) ನಿಯಮಿತನಾದ ನಟನು ಸಮಯದಲ್ಲಿ ಬಾರದೆಹೋದಾಗ, ಅವನಿಗೆ ಬದಲು ಪಾತ್ರ ವಹಿಸುವುದಕ್ಕಾಗಿ ಸಿದ್ಧವಾಗಿರಲು ಆ ಪಾತ್ರ ಭಾಗವನ್ನು ಗಟ್ಟಿಮಾಡಿಕೊಳ್ಳುವವನು: ಕೈಗಾವಲು ನಟ, ಬದಲಿ ನಟ. (ಕ್ರಿ.) ಬದಲ ನಟನಾಗಿ (ಭಾಗವನ್ನು) ಗಟ್ಟಿಮಾಡು.

Undertáke ಅಂಡರ್‌ಟೇಕ್ (ಕ್ರಿ.) (ಕೆಲಸ, ಜವಾಬ್ದಾರಿ, ಮೊ. ನ್ನು) ಕೈಕೊಳ್ಳು, ಹೊತ್ತುಕೊ, ವಹಿಸು; (ಕೆಲಸ, ಮೊ. ಕ್ಕೆ) ಕೈಹಾಕು, ತೊಡಗು; ಮಾತುಕೊಡು, ವಾಗ್ದಾನಮಾಡು (*To* do); (ಪ್ರಾಚೀ. ಪ್ರ.) (ದ್ವಂದ್ವ ಯುದ್ಧ, ವಾದ, ಮೊ. ಗಳಲ್ಲಿ) ಎದುರಿಸು, ಸೆಣಸು; ಧರವಸೆಕೊಡು, ದೃಢವಾಗಿ ಹೇಳು (I will u. that he has not heard a word ಅವನು ಒಂದು ಮಾತನ್ನೂ ಕೇಳಿಲ್ಲವೆಂದು ನಾನು ಧರವಸೆಕೊಡುತ್ತೇನೆ); (ಪ್ರಾಚೀ. ಪ್ರ.) ಹೊಣೆಯಾಗಿರು, ಜವಾಬ್ದಾರನಾಗಿರು (*For* ಉಪ. ದೊಡನೆ); (ಬಳ. ಮಾ.) ಶವ ಸಂಸ್ಕಾರಗಳನ್ನು ನಿರ್ವಹಿಸು. **Úndertaker** (ನಾ.) (ಕ್ರಿಯಾರ್ಥಗಳಲ್ಲಿ); ಶವ ಸಂಸ್ಕಾರ ನಿರ್ವಾಹಕ; (ಚರಿತ್ರೆ) ದೊರೆ ಕೆಲವು ರಿಯಾಯಿತಿ ತೋರಿಸುವುದಾದರೆ, ಅವನಿಗೆ ಬೇಕಾದ ಸರಬರಾಯಿಗಳನ್ನು ಕೊಡುವ ಶಾಸನವನ್ನು ಪಾರ್ಲಿಮೆಂಟಿನಲ್ಲಿ ಮಂಜೂರುಮಾಡಿಸುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜವಾಬ್ದಾರಿ ಹೊತ್ತುಕೊಳ್ಳುತ್ತಿದ್ದ ಶ್ರೀಮಂತ. **Undertáking** (ನಾ.) (ಕ್ರಿಯಾರ್ಥಗಳಲ್ಲಿ) ; ಕೈಕೊಂಡ ಕೆಲಸ ; ವಾಗ್ದಾನ, ಜವಾಬ್ದಾರಿ, ಹೊಣೆ (A serious u.) ; ಶವ ಸಂಸ್ಕಾರ ನಿರ್ವಾಹ.

Underwríte ಅಂಡರ್‌ರೈಟ್ (ಕ್ರಿ.) (ಸಮುದ್ರ) ವಿಮಾಪತ್ರ ಬರೆದು ಕೊಡು, (ಸಮುದ್ರ) ವಿಮಾಪತ್ರಕ್ಕೆ ರುಜುಹಾಕು, (ಸಮುದ್ರ) ವಿಮಾ ವ್ಯಾಪಾರಮಾಡು ; ಸಾರ್ವಜನಿಕರು ಕೊಂಡಿರದ, ಒಂದು ಸಂಸ್ಥೆಯ ಬಂಡವಾಳ ಪಾಲುಗಳನ್ನೆಲ್ಲಾ ಕೊಂಡುಕೊಳ್ಳಲು ಒಪ್ಪಂದಮಾಡಿಕೊ ; ಒಟ್ಟು ಕೊಳ್ಳುವಿಕೆಯ ಒಪ್ಪಂದಮಾಡಿಕೊ; ಕೆಳಗೆ ಬರೆ (The underwritten names ಕೆಳಗೆ ಬರೆದಿರುವ ಹೆಸರುಗಳು). **Únderwriter** (ನಾ.) ಸಮುದ್ರ ವಿಮಾ ವ್ಯಾಪಾರಿ ; ಒಟ್ಟು ಕೊಳ್ಗೆಯ ಒಪ್ಪಂದಗಾರ.

Úndies ಅಂಡಿಸ್ (ನಾ., ಬ. ವ.) (ಅಸಂ.) ಒಳ(ಗಡೆ ಹಾಕಿಕೊಳ್ಳುವ)—ಬಟ್ಟೆಗಳು, ಉಡುಪು (= Underclothes) (Under- ನೋಡಿ)

Undíne ಅಂಡೀನ್ (ನಾ.) (ಮರ್ತ್ಯನನ್ನು ಮದುವೆಯಾಗಿ ಮಗುವನ್ನು ಹೆತ್ತದ್ದಾದರೆ ಆತ್ಮವನ್ನು ಪಡೆಯಬಹುದಾದ) ಒಂದು ಜಲ ಯಕ್ಷಿಣಿ. **Undínal** (ಗು.)

Úndose ಅಂಡೋಸ್ (ಗು.) (ಕೀಟ ವಿಜ್ಞಾನ) ಅಲೆಯಾಕಾರದ.

Úndulate ಅಂಡ್ಯುಲೇಟ್ (ಕ್ರಿ. ಅಕ.), —ಲೆಟ್ (ಗು.) ಅಲೆಯಾಕಾರವಾಗಿ—ಇರು, ಚಲಿಸು ; ತರಂಗಗದಂತೆ—ಏರಿಳಿತಗಳಿರು, ರಚನೆಯಿರು. (ಗು.) ಅಲೆಯಾಕಾರದ, ತರಂಗಿತ (Leaves with u. margins). **Úndulant** —ಲಂಟ್ (ಗು.) ಅಲೆಯಾಕಾರದ(ಲ್ಲ ಏರಿಳಿಯುವ). U. fever ಮಾಲ್ಟ ದ್ವೀಪದಲ್ಲ ವಿಶೇಷವಾಗಿರುವ, ದೀರ್ಘಕಾಲ ನರಳಿಸುವ, ಜ್ವರ ಬಿಟ್ಟು ಬಿಟ್ಟು ಬರುವ, ಧಾರಾಳವಾಗಿ ಬೆವರುವ, ಕೀಲುಗಳಲ್ಲಿ ನೋವೂ ಊತವೂ ಕಾಣಿಸಿಕೊಳ್ಳುವ, ಗುಲ್ಮ ಹಿಗ್ಗಿಕೊಳ್ಳುವ ಒಂದು ರೋಗ; ತರಂಗ ಜ್ವರ. **Úndulately** (ಕ್ರಿ. ವಿ.) ; **Úndulatingly** (ಕ್ರಿ. ವಿ.); **Undulátion** (ನಾ.) ತರಂಗ—ರೂಪ, ರಚನೆ, ಚಲನೆ ; (ಅಲೆಯಾಕಾರದ) ಏರಿಳಿತ ; ತರಂಗ—ರೇಖೆ, ರೇಖಾವಳಿ ; (ರೋಗ ನಿದಾನ ; ಹೃದಯದಲ್ಲ ಆಗುವಂತೆ ತೋರುವ) ತರಂಗ ಸ್ಪಂದನ. **Úndulatory** (ಗು.) ತರಂಗ—ರೂಪದ, ರಚನೆಯ, ಚಲನೆಯ. U. theory of light ಬೆಳಕು ಆಕಾಶದಲ್ಲ ತರಂಗ ಚಲನೆಯ ಮೂಲಕ ಪ್ರಸಾರವಾಗುತ್ತದೆಂಬ ವಾದ : ಪ್ರಕಾಶದ ತರಂಗ ವಾದ [**Undulátionist** (ನಾ.) —ವಾದಿ]

Ungaínly ಅನ್‌ಗೇನ್ಲಿ (ಗು., ಕ್ರಿ. ವಿ.) (ಮನುಷ್ಯ, ಪ್ರಾಣಿ, ಅವುಗಳ ನಡಗೆ, ಮೊ. ಗಳ ವಿಷಯದಲ್ಲಿ) ಒಡ್ಡೊಡ್ಡಾದ(ಗಿ) ; ವಿಕಾರ, ವಕ್ರ (—ವಾಗಿ). **Ungaínliness** (ನಾ.)

Úngual ಅಂಗ್ವಲ್ (ಗು.) ಉಗುರು, ಮೊನೆದುಗುರು, ಗೊರಸು, —ಉಳ್ಳ ; ಉಗುರಿನ(ಅಥ), ನಖದ(ಅಥ), ಗೊರಸಿನ(ಅಥ). **Unguícular** ಅಂಗ್ವಿಕ್ಯುಲರ್ (ಗು.)= Ungual. **Unguículate** —ಲೆಟ್ (ಗು.) ಉಗುರು, ನಖ, —ಉಳ್ಳ. (ಸ. ವಿ.) (ಹೂವಿನ ಎಸಳಿನ ವಿಷಯದಲ್ಲಿ) ಮೊನೆ ಬುಡವುಳ್ಳ, ನಖತಲದ. **Unguíferous** (ಗು.) —ಉಳ್ಳ. **Únguiform** (ಗು.) —ರೂಪದ. **Úngula** ಅಂಗ್ಯುಲ (ನಾ.; ಬ. ವ. -æ —ಲೀ) ಗೊರಸು, ಮೊನೆಯುಗುರು, ನಖ ; ಸತ್ತ ಭ್ರೂಣವನ್ನು ಈಚೆಗೆ ತೆಗೆಯುವ ಶಸ್ತ್ರ ಸಲಕರಣೆ : ಮೊನೆಕೊಕ್ಕೆ ; ತಲಕ್ಕೆ ವಕ್ರಕೋನದಲ್ಲಿರುವ ಸಮತಲದಿಂದ ತುದಿ ಕತ್ತರಿಸಿದ (ಆದ್ದರಿಂದ ಉಗುರಿನಂಥ ತುದಿಯುಳ್ಳ) ಶಂಕು ಅಥವಾ ಸ್ತಂಭಾಕೃತಿ : ನಖಾಗ್ರ—ಶಂಕು, ಸ್ತಂಭಾಕೃತಿ. **Úngular** (ಗು.)= Ungual. **Úngulate** (ಗು., ನಾ.) ಗೊರಸಿನಾಕಾರದ ; ಗೊರಸುಳ್ಳ (ಪ್ರಾಣಿ)

Únguent ಅಂಗ್ವೆಂಟ್ (ನಾ.) ಅಭ್ಯಂಜನ (ವಸ್ತು), ಲೇಪನ, ಮುಲಾಮು. **Únguentary** (ಗು.)

Úngula, etc. **Ungual** ನೋಡಿ.

Uni- ಯೂನಿ— (ಸ. ಪೂ. ಪ.) ಒಂದು—, ಒರ್—, ಏಕ—. **-artículate** ಒಂದೇ ಕೀಲಿನ, ಏಕಸಂಧಿ. **-áx(i)al** ಒಂದೇ ಅಕ್ಷವುಳ್ಳ, ಏಕಾಕ್ಷ. **-áx(i)ally** (ಕ್ರಿ. ವಿ.) ; **-cámeral** ಒಂದೇ ಸಭೆಯುಳ್ಳ (U. legislature ಏಕಸಭಾ ಶಾಸನ ಸಭೆ). **-cápsular** ಒಂದೇ ಬೀಜಕೋಶವುಳ್ಳ. **-céllular** ಒಂದೇ—ಕೋಶವುಳ್ಳ, ಜೀವಕಣವುಳ್ಳ. **-cólour(ed)** ಒಂದೇ ಬಣ್ಣದ, ಏಕವರ್ಣಿ. **-córnous** ಒಂದೇ ಕೊಂಬುಳ್ಳ, ಏಕಶೃಂಗಿ. **-cóstate** ಒಂದೇ ಪಕ್ಕೆಲುಬುಳ್ಳ. **-cúspid** (ಗು., ನಾ.) ಒಂದೇ ಮೊನೆಯುಳ್ಳ (ಹಲ್ಲು). **Únicycle** ಒಂದು ಚಕ್ರದ ಸೈಕಲ್ಲು ; ಒಗ್ಗಾಲಿ. **-flórous** ಒಂದೇ ಹೂವು ಬಿಡುವ, ಏಕಪುಷ್ಪಿ. **-fóliate** ಒಂದೇ ಎಲೆ ಬಿಡುವ, ಏಕಪರ್ಣಿ. **-láteral** ಒಂದೇ ಪಕ್ಕದ, ಒಮ್ಮಗ್ಗುಲಿನ, ಏಕಪಕ್ಷದ (U. leaves ತಾಳಿನ ಒಂದೇ ಕಡೆ ಒಲಿರುವ ಎಲೆಗಳು. U. contract ಒಂದು ಪಕ್ಷದವರಿಗೆ ಮಾತ್ರ ಅನ್ವಯಿಸುವ ಒಪ್ಪಂದ : ಏಕಪಕ್ಷದ ಒಪ್ಪಂದ). **-láterally** (ಕ್ರಿ. ವಿ.) ; **-líteral** ಒಂದೇ ಅಕ್ಷರವುಳ್ಳ, ಏಕಾಕ್ಷರಿ. **-lócular, -lóculate** (ಸ. ವಿ., ಪ್ರಾ. ವಿ.) ಒಂದೇ ಗೂಡುಳ್ಳ ; ಏಕಕೋಶಿ. **Úniparous** (ಯುನಿಪರಸ್) ಒಂದು ಸಲಕ್ಕೆ ಒಂದನ್ನು ಮಾತ್ರ ಹೆರುವ ; (ಸ. ವಿ.) ಒಂದೇ ಅಕ್ಷ ಅಥವಾ ಶಾಖೆ ಉಳ್ಳ. **pártite** ಅಖಂಡ, ಅವಿಭಕ್ತ. **Úniped** ಒಂದೇ ಪಾದವುಳ್ಳ, ಏಕಪಾದಿ. **-pérsonal** (ದೇವತೆಯ ವಿಷಯದಲ್ಲಿ) ಒಂದೇ ವ್ಯಕ್ತಿಯಾಗಿರುವ, ಏಕಪುರುಷೀಯ ; (ಕ್ರಿಯಾಪದದ ವಿಷಯದಲ್ಲಿ) ಒಂದು ಪುರುಷದಲ್ಲಿ ಮಾತ್ರ ಉಪಯೋಗವಾಗುವ : ಏಕಪುರುಷೀಯ. **-plánar** ಒಂದೇ ಸಮತಲದಲ್ಲಿರುವ. **-pólar** (ಜೀ. ವಿ.) (ಜೀವಕಣ, ಮೊ. ಗಳ ವಿಷಯದಲ್ಲಿ) ಒಂದೇ ಧ್ರುವವುಳ್ಳ, ಏಕಧ್ರುವಿ ; (ವಿದ್ಯುಚ್ಛಕ್ತಿ) ಒಂದೇ ಧ್ರುವ (ಗುಣ)ದ. **-polárity** (ನಾ.); **-rádiate(d)** ಒಂದೇ ತೋಳು, ಚಾಚು, —ಉಳ್ಳ. **-sérial** ಒಂದೇ ಸಾಲಿನ, ಏಕಪಂಕ್ತಿಯ. **-séxual** ಒಂದೇ ಲಿಂಗದ, ಏಕಲಿಂಗಿ ; ಕೇಸರ (ಅಥವಾ ಶಲಾಕೆ) ಮಾತ್ರವುಳ್ಳ. **-sexuálity** (ನಾ.); **-séxually** (ಕ್ರಿ. ವಿ.); **-súlcate** (ಸ. ವಿ., ಪ್ರಾ. ವಿ.) ಒಂದೇ ಗಾಡಿ, ಒಂದೇ ಕಾಲುವೆ, —ಉಳ್ಳ. **Únivalent** (ರ. ವಿ.) ಏಕಯೋಗ ಶಕ್ತ. **-valence, -valency** (ನಾ.) ; **-valve** (ಗು., ನಾ.) ಒಂದೇ ಚಿಪ್ಪುಳ್ಳ (ಮೃದ್ವಂಗಿ). **Univócal** (ಗು., ನಾ.) ಏಕಾರ್ಥ (ಪದ) ; ನಿಸ್ಸಂದಿಗ್ಧಾರ್ಥ (ಪದ) ; (ಸಂ.) ಒಂದೇ—ನಾದವುಳ್ಳ, ಶ್ರುತಿಯುಳ್ಳ. **-vocally** (ಕ್ರಿ. ವಿ.) ; **-vocátion** ಹೆಸರು ಅರ್ಥಗಳ ಹೊಂದಿಕೆ ; ನಾಮಾರ್ಥ ಸಾಂಗತ್ಯ.

Úniat ಯೂನಿಅ್ಯಟ್, **Úniate** —ಎಟ್ (ನಾ.) ಪೋಪ್ ಗುರುವಿನ ಶ್ರೇಷ್ಠತೆಯನ್ನು ಒಪ್ಪಿಕೊಂಡು, ಆದರೆ ತನ್ನದೇ ಬೇರೆ ಪ್ರಾರ್ಥನಾ ಕ್ರಮ, ಮೊ. ನ್ನು ಉಳಿಸಿಕೊಂಡಿರುವ ಪ್ರಾಚ್ಯ ಕ್ರೈಸ್ತ ಸಂಘದವನು.

Únicorn ಯೂನಿಕಾರ್ನ್ (ನಾ.) ಕುದುರೆಯ ಮೈಯೂ ಒಂದೇ ನೇರ ಕೊಂಬೂ ಉಳ್ಳದ್ದೆಂದು (ಗ್ರೀಕ್) ಪುರಾಣಪ್ರಸಿದ್ಧವಾದ ಪ್ರಾಣಿ : ಏಕಶೃಂಗಿ ; ಒಕ್ಕೊಂಬಿ ; ಹೋತನ ಗಡ್ಡವನ್ನೂ ಸಿಂಹದ ಬಾಲವನ್ನೂ ಸೇರಿಸಿ ಬ್ರಿಟಿಷ್ ದೊರೆಗಳ ವಂಶಲಾಂಛನದಲ್ಲಿ ನಿರೂಪಿಸಿರುವ ಏಕಶೃಂಗಿಯ ಚಿತ್ರ ; ಒಂದು ಬಗೆಯ ಒಕ್ಕೊಂಬು ಜೀರುಂಡೆ ; ಬೆನ್ನಮೇಲೆ ಕೊಂಬಿನಂಥ ಚಾಚು ಇರುವ ಕಂಬಳಿ ಹುಳು : ಕೊಂಬು ಕಂಬಳಿ ಹುಳು (U. moth ಇದರ ಚಿಟ್ಟೆ) ; ಮುಂದುಗಡೆ ಮೂರನೆಯ ಕುದುರೆಯೊಂದನ್ನು ಹೂಡಿರುವ ಜೋಡಿ ಕುದುರೆ ; ಇಂಥ ಮೂರು ಕುದುರೆಗಳ—ಸಜ್ಜು, ಗಾಡಿ ; ಚಿಪ್ಪಿನ ತುಟಿಯಲ್ಲಿ ಕೊಂಬಿನಂಥ ಚಾಚು ಇರುವ ಹಲವು ಬಗೆಯ ಸಮುದ್ರ ಉದರಪಾದಿ : ಕೊಂಬುಳ್ಳ ಉದರಪಾದಿ (= U.-shell)

Úniform ಯೂನಿಫಾರ್ಮ್ (ಗು., ನಾ., ಕ್ರಿ. ಸಕ.) (ರೂಪದಲ್ಲಾಗಲಿ ಸ್ವಭಾವದಲ್ಲಾಗಲಿ) ಏಕರೀತಿಯ, ಏಕಪ್ರಕಾರದ, ಏಕರೂಪದ [U. acceleration (ಕಾಲಕ್ರಮದಲ್ಲ ಬದಲಾಗದ) ಒಂದೇ ಸಮನಾದ, ಏಕಪ್ರಕಾರದ, —ಗತಿವೃದ್ಧಿ. U. tax] ; ಒಂದೇ ನಿಯಮವನ್ನು, ಒಂದೇ ಕ್ರಮವನ್ನು,—ಅನುಸರಿಸುವ : ಕ್ರಮಾನುಸಾರಿ. (ನಾ.) (ಸಿಪಾಯಿಗಳು, ನಾವಿಕರು, ಪೊಲೀಸಿನವರು, ಮೊ. ಒಂದು ದಳದವರೆಲ್ಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಕಿಕೊಳ್ಳುವ) ಏಕರೂಪದ ಉಡುಪು, ಸಮವಸ್ತ್ರ, ದಳವಸ್ತ್ರ. (ಕ್ರಿ.) ಏಕರೀತಿ, ಏಕಪ್ರಕಾರ,—ಮಾಡು ; ದಳವಸ್ತ್ರ, ಸಮವಸ್ತ್ರ, —ಹಾಕು. **Úníformly** (ಕ್ರಿ. ವಿ.) ; **Unifórmity** (ನಾ.) ಒಂದೇ ಸಮ (ನಾಗಿರುವುದು), ಏಕರೀತಿ, ಏಕರೂಪತೆ, ಏಕಪ್ರಕಾರತೆ, ಕ್ರಮಾನುಸರಣೆ. Act of u. ಚರ್ಚುಗಳ ಪೂಜೆ ಪ್ರಾರ್ಥನೆಗಳಲ್ಲಿ ಏಕರೂಪತೆ ತರಲು ಇಂಗ್ಲೆಂಡಿನಲ್ಲಿ ೧೬೬೨ರಲ್ಲಿ ಮಾಡಿದ ಶಾಸನ: ಏಕರೂಪತಾ ಶಾಸನ. Doctrine of u. ಎಲ್ಲ ಕಾಲಗಳಲ್ಲೂ ಭೌತಕಾರಣಗಳ ಮತ್ತು ಪರಿಣಾಮಗಳ ಏಕಪ್ರಕಾರತೆ ಇದೆ ಎಂಬ ತತ್ತ್ವ : ಏಕಪ್ರಕಾರತಾ ತತ್ತ್ವ. **Uniformitárian** (ನಾ.) ಏಕಪ್ರಕಾರತಾ ವಾದಿ. **Uniformitárianism** (ನಾ.)

Únify ಯೂನಿಫೈ (ಕ್ರಿ. ಸಕ.) ಒಂದುಗೂಡಿಸು, ಒಗ್ಗೂಡಿಸು, ಒಟ್ಟಿಗೆ ಸೇರಿಸು ; ಒಂದುಮಾಡು, ಐಕ್ಯಮಾಡು, ಏಕೀಕರಣಮಾಡು ; ಏಕ ಪ್ರಕಾರ ಮಾಡು, ಏಕರೂಪಕ್ಕೆ ತರು. **Unificátion** (ನಾ.) ; **Únifier** (ನಾ.)

Únion ಯೂನಿಯನ್, ಯೂನ್ಯನ್ (ನಾ.) ಒಕ್ಕಟ್ಟು, ಒಕ್ಕೂಟ, ಐಕ್ಯ, ಐಕಮತ್ಯ, ಸೇರಿಕೆ, ಸಂಯೋಗ [The u. of the parts was imperfect ಭಾಗಗಳ ಸೇರಿಕೆ ಅಸಮರ್ಪಕವಾಗಿತ್ತು. U. by first or second intention (Intense ಪದದ ಕೆಳಗೆ Intention ನೋಡಿ). The u. (೧೭೦೭ರಲ್ಲಿ) ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡುಗಳ ಐಕ್ಯ; ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡುಗಳ ಐಕ್ಯ : ಸಂಯುಕ್ತ—ರಾಷ್ಟ್ರ, ರಾಜ್ಯ] ; ಮದುವೆ, ವಿವಾಹ (ಸಂಬಂಧ) ; ಹೊಂದಿಕೆ, ಸಾಂಗತ್ಯ, ಸಾಮರಸ್ಯ, ಮೈತ್ರಿ ; ಏಕೀಭಾವ (Lived together in perfect u.) ; ಸಂಘ, ಸಂಸ್ಥೆ, ಮಂಡಲಿ [(ಮು.) ಅಮೆರಿಕದ ಸಂಯುಕ್ತ ಸಂಸ್ಥಾನಗಳು ; ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡು. Postal u. (Post² ಕೆಳಗೆ ನೋಡಿ). Trade u. (Trade ನೋಡಿ)] ; ನಿರ್ಗತಿಕರ ಜೀವನಾಧಾರ ಕಾನೂನುಗಳ ನಿರ್ವಾಹಕ್ಕಾಗಿ ಒಂದುಗೂಡಿಸಿದ ಹಲವು ಪ್ಯಾರಿಷ್‌ಗಳು : ಪ್ಯಾರಿಷ್ ಕೂಟ, ಸಂಯುಕ್ತ ಪ್ಯಾರಿಷ್ ; ಇಂಥ ಸಂಯುಕ್ತ ಪ್ಯಾರಿಷ್ ನಡಸುವ ನಿರ್ಗತಿಕರ ಕಾರ್ಯಾಲಯ (= U. work-house); (ಸಹಕಾರಕ್ಕಾಗಿ ಒಂದುಗೂಡಿದ) ಸ್ವತಂತ್ರ ಚರ್ಚುಗಳ ಕೂಟ (The Baptist u.) ; ಗ್ರೇಟ್ ಬ್ರಿಟನ್ನಿನ ಧ್ವಜದಲ್ಲಿ (ರೂಢಿಯಾಗಿ ಧ್ವಜಸ್ತಂಭದ ಮಗ್ಗುಲಿನ ಮೇಲು ಮೂಲೆಯಲ್ಲಿ ಕಾಣುವ) ಐಕ್ಯಚಿಹ್ನೆ [Ensign hoisted u. down (ವಿಪತ್ತಿನ ಸೂಚನೆಯಾಗಿ) ಐಕ್ಯಚಿಹ್ನೆ ಕೆಳಗೆ ಬರುವಂತೆ ಹಾರಿಸಿದ ಬಾವುಟ ; ತಲೆಕೆಳಗಾಗಿ ಹಾರಿಸಿದ ಬಾವುಟ. Union Jack *or* flag (ಸಂತ ಜಾರ್ಜ್, ಸಂತ ಆ್ಯಂಡ್ರೂ, ಸಂತ ಪ್ಯಾಟ್ರಿಕ್—ಈ ಮೂರು ಸಿಲುಬೆ ಗುರುತುಗಳು ಸೇರಿರುವ) ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡುಗಳ ರಾಷ್ಟ್ರ ಧ್ವಜ] ; (ಕೊಳವೆ, ಮೊ. ಗಳನ್ನು ಸುಲಭವಾಗಿ ಕೂಡಿಸುವುದಕ್ಕೂ ಬೇರೆ ಮಾಡುವುದಕ್ಕೂ ಅನುಕೂಲಿಸುವ) ಜೋಡಣೆ (ಸಲಕರಣೆ), ಸಂಯೋಜಕ; ಬಿಯರ್ ಮದ್ಯ (ತಿಳಿಯಾಗಲು ಹಾಕಿಡುವ, ಆಳವಿಲ್ಲದ) ತೊಟ್ಟಿ ; (ಹತ್ತಿ, ಸಣಬು, ರೇಷ್ಮೆ, ಮೊ. ಗಳ) ಮಿಶ್ರ ನೆಯ್ಗೆ ಬಟ್ಟೆ. U. suit (ಅಮೆ. ಸಂ.) ಜುಬ್ಬ ಮತ್ತು ಪಾಯಿಜಾಮ ಸೇರಿದ ಒಂದೇ ಒಳ ಉಡುಪು : ಕೂಡುಡುಪು. **Únionist** (ನಾ.) ವೃತ್ತಿ ಸಂಘ—ಸದಸ್ಯ, ವಾದಿ ; ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡುಗಳ ವಿಯೋಜನೆಗೆ ವಿರೋಧಿಯಾದವನು : ಐಕ್ಯವಾದಿ, ಏಕೀಕರಣವಾದಿ [Liberal u. (Liberal ನೋಡಿ). (ವಿಶೇಷಣವಾಗಿ) U. party, principles ಐಕ್ಯ ವಾದಿ—ಪಕ್ಷ, ತತ್ತ್ವಗಳು] ; (ಅಮೆ. ಸಂ., ಚರಿತ್ರೆ) ಅಮೆರಿಕದ ಒಳ ಯುದ್ಧ ನಡೆದಾಗ, ದಕ್ಷಿಣ ಸಂಸ್ಥಾನಗಳನ್ನು ಬಿಟ್ಟುಕೊಡಕೂಡದೆಂದು ವಾದಿಸಿದವನು : ಏಕೀಕರಣ ವಾದಿ. **Únionism** (ನಾ.) ಐಕ್ಯ, ಒಕ್ಕೂಟ, —ತತ್ತ್ವ, ನೀತಿ, ಪದ್ಧತಿ; ವೃತ್ತಿ ಸಂಘ ಪದ್ಧತಿ ; ಐಕ್ಯವಾದೀ ಪಕ್ಷದ —ತತ್ತ್ವ, ನೀತಿ. **Unionístic** (ಗು.)

Uníque ಯುನೀಕ್ (ಗು., ನಾ.) ಎಣೆಯಿಲ್ಲದ, ಸಾಟಿಯಿಲ್ಲದ, ಅಸದೃಶ, ಅಪೂರ್ವ, ಅದ್ವಿತೀಯ, ಏಕಮಾತ್ರ (—ವಸ್ತು) [(ಗ್ರಾಮ್ಯ ಪ್ರ.) The most u. man I ever met ನಾನು ನೋಡಿದವರಲ್ಲೆಲ್ಲಾ ಅತ್ಯಂತ ಅಸಾಧಾರಣ ವ್ಯಕ್ತಿ]. **Uníquely** (ಕ್ರಿ. ವಿ.) ; **Uníqueness** (ನಾ.)

Únison ಯೂನಿಸ(ಸ)ನ್ (ಗು., ನಾ.) (ಸಂ.) ಒಂದೇ—ಸ್ಥಾಯಿಯ, ಶ್ರುತಿಯ [U. string (ಮತ್ತೊಂದರೊಡನೆ ನುಡಿಸಲು ಹೊಂದಿಸಿದ) ಶ್ರುತಿ ತಂತಿ]. (ನಾ.) ಸ್ಥಾಯಿ, ಶ್ರುತಿ,—ಮೇಳ, ಐಕ್ಯ ; (ಸಂ.) ಶ್ರುತಿ (In u. ಶ್ರುತಿಗೂಡಿ) ; ಶ್ರುತಿ ತಂತಿ ; ಹೊಂದಿಕೆ, ಸಾಂಗತ್ಯ, ಮೇಳ (Acted in perfect u.). **Unísonal** ಯುನಿಸೊನಲ್ (ಗು.) ಒಂದೇ ಸ್ಥಾಯಿಯ, ಶ್ರುತಿಯ. **Unísonance** (ನಾ.) ನಾದ, ಸ್ವರ, —ಮೈತ್ರಿ ; ಶ್ರುತಿ ಮೇಳ ; ಸ್ವರ ಸಾಂಗತ್ಯ. **Unísonant** (ಗು.) ; **Unísonous** (ಗು.)

Únit ಯೂನಿಟ್ (ನಾ.) ಲೆಕ್ಕಾಚಾರ, ಮೊ. ಗಳ ಬಗ್ಗೆ ಒಂದು ಎಂಬುದಾಗಿ ಗಣಿಸುವ ಬಿಡಿ ವಸ್ತು, ವ್ಯಕ್ತಿ, ಅಥವಾ ಅವುಗಳ ತಂಡ : ಒಂದು, ಏಕ, ಏಕಾಂಶ, ವ್ಯಕ್ತಿ (Take the family as the u. of society ಸಂಸಾರವನ್ನು, ಒಕ್ಕಲನ್ನು,—ಸಮಾಜದ ಏಕಾಂಶವಾಗಿ ಪರಿಗಣಿಸು) ; (ಇತರ ಮೊತ್ತಗಳನ್ನು ನಿರ್ದೇಶಿಸಲು ಪ್ರಮಾಣವಾಗಿ ತೆಗೆದುಕೊಳ್ಳುವ) ಏಕಮಾನ (Abstract u. ಒಂದು, ಏಕ. Electrical, magnetic, thermal, u. ವಿದ್ಯುಚ್ಛಕ್ತಿಯ, ಕಾಂತಶಕ್ತಿಯ, ಉಷ್ಣದ, ಏಕಮಾನ. G.G.S. system of units ಸೆಂಟಿಮೀಟರ್, ಗ್ರಾಮ್ ಮತ್ತು ಸೆಕಂಡುಗಳ ಏಕಮಾನ ಪದ್ಧತಿ). **Unitárian** ಯೂನಿಟೇರಿಯನ್ (ನಾ., ಗು.) (ಕ್ರೈಸ್ತರ ತ್ರಿಮೂರ್ತಿ ತತ್ತ್ವಕ್ಕೆ ವಿರುದ್ಧವಾಗಿ) ದೇವರು ಒಂದೇ ವ್ಯಕ್ತಿ ಎಂದು ವಾದಿಸುವವನು : ಏಕವ್ಯಕ್ತಿ, ಏಕಮೂರ್ತಿ, —ವಾದಿ [**Unitárianism** (ನಾ.) ಏಕಮೂರ್ತಿ ವಾದ. **Unitárianize** (ಕ್ರಿ. ಸಕ.) ಏಕಮೂರ್ತಿ ವಾದಕ್ಕೆ ತಿರುಗಿಸು] ; (ರಾಜಕೀಯ, ಮೊ. ಗಳಲ್ಲಿ) ಕೇಂದ್ರೀಕರಣ, ಏಕೀಕರಣ, —ವಾದಿ. (ಗು.) ಏಕಮೂರ್ತಿ ವಾದಿಗಳ (The u. church) ; = Unitary. **Únitary** (ಗು.) ಏಕದ, ಏಕ ಮಾನದ [U. method (ಗಣಿತದಲ್ಲಿ : ತ್ರೈರಾಶಿಯಂಥ) ಏಕಮಾನ ಪದ್ಧತಿ] ; (ರಾಜಕೀಯ, ಮೊ. ಗಳಲ್ಲಿ) ಏಕೀಕೃತ, ಏಕೀಭೂತ, ಏಕಾತ್ಮಕ (U. Government, University) (ಎದುರು ಪದ : Federal ಸಂಯುಕ್ತ) ; ಐಕ್ಯವುಳ್ಳ, ಏಕರೂಪದ, ಏಕತೆಯ. **Únitism** (ನಾ.) = Monism (ಆ ಪದ ನೋಡಿ). **Únitize** (ಕ್ರಿ. ಸಕ.) ಏಕಮಾನವಾಗಿ —ಮಾಡು, ಪರಿಗಣಿಸು.

Unitárian, etc., Únitary. **Unit** ನೋಡಿ.

Uníte ಯುನೈಟ್ (ಕ್ರಿ.) ಸೇರಿಸು, ಕೂಡಿಸು, ಸಂಯೋಜಿಸು, ಒಂದುಗೂಡಿಸು, ಒಂದುಮಾಡು, ಏಕೀಕರಿಸು, ಸೇರು, ಕೂಡು, ಒಂದಾಗು, ಒಟ್ಟಾಗು, ಏಕೀಭವಿಸು, ಸಂಯೋಗವಾಗು (Oil will not u. with water ಎಣ್ಣೆ ನೀರಿನೊಡನೆ ಸೇರುವುದಿಲ್ಲ, ಬೆರೆಯುವುದಿಲ್ಲ) ; [United States (State² ನೋಡಿ). United Kingdom (King ಕೆಳಗೆ Kingdom ನೋಡಿ). United Irishmen ಪಾರ್ಲಿಮೆಂಟಿನ ಸುಧಾರಣೆ, ಮೊ. ಗಳಿಗಾಗಿ ೧೭೯೧ರಲ್ಲಿ ಸ್ಥಾಪಿತವಾದ ಒಂದು ಐರಿಷ್ ಸಂಘ]. ಕೂಡಿಕೊ, ಹೊಂದಿಕೊ, ಒಗ್ಗಟ್ಟಾಗು, ಐಕಮತ್ಯದಿಂದಿರು, ಸಹಕರಿಸು. **Unítedly** (ಕ್ರಿ. ವಿ.) ; **Únitive** (ಗು.) ಸಂಯೋಜಕ, ಸಂಯೋಗದ, ಏಕೀಕರಣದ, ಏಕೀಭಾವದ.

Únitism, Únitize. **Unit** ನೋಡಿ.

Únity ಯೂನಿಟಿ (ನಾ.) ಏಕತೆ, ಅಖಂಡತೆ, ಐಕ್ಯ, ಅದ್ವೈತ, ಒಕ್ಕಟ್ಟು, ಐಕಮತ್ಯ (Disturbs the u. of the idea ಭಾವದ ಐಕ್ಯವನ್ನು ಭಂಗಪಡಿಸುತ್ತದೆ. National u. ರಾಷ್ಟ್ರೀಯ ಐಕಮತ್ಯ) ; ವ್ಯಕ್ತಿ, ವ್ಯಷ್ಟಿ (A person regarded as a u. ಅಖಂಡ ವ್ಯಕ್ತಿಯಾಗಿ ಪರಿಗಣಿತನಾದ ಪುರುಷ) ; (ಗಣಿತ) ಒಂದು, ಏಕ ; [The dramatic unities : unities of time, place, and action ನಾಟಕೀಯ ಐಕ್ಯಗಳು : ಕಾಲೈಕ್ಯ, ಸ್ಥಳೈಕ್ಯ, ಕ್ರಿಯೈಕ್ಯ (ನಾಟಕವನ್ನು ಆಡುವುದಕ್ಕೆ ಹಿಡಿಯುವ ಕಾಲವೂ ನಾಟಕದ ಕಥೆ ನಿಜವಾಗಿ ನಡೆಯುವುದಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೇಕಾಗುವ ಕಾಲವೂ ಸರಿಸುಮಾರು ಒಂದೇ ಪರಿಮಿತಿಯುಳ್ಳದ್ದಾಗಿರುವುದು : ಕಾಲೈಕ್ಯ ; ದೃಶ್ಯ ಸ್ಥಳ ಬದಲಾವಣೆಯಿಲ್ಲದೆ, ಒಟ್ಟು ಕಥೆ ಒಂದೇ ಸ್ಥಳದಲ್ಲಾದಂತೆ ತೋರಿಸುವುದು : ಸ್ಥಳೈಕ್ಯ ; ಕಥಾವಸ್ತುವಿಗೆ ನೇರ ಸಂಬಂಧವಿಲ್ಲದ್ದನ್ನೆಲ್ಲಾ ಬಿಟ್ಟು, ಕಥೆಯನ್ನು ಒಮ್ಮುಖವಾಗಿ ನಡಸುವುದು : ಕ್ರಿಯೈಕ್ಯ] ; ಹೊಂದಿಕೆ, ಸಾಮರಸ್ಯ, ಒಮ್ಮನಸ್ಸು (Dwelt together in u. ; At u. with —ಒಡನೆ ಹೊಂದಿಕೊಂಡು) ; (ನ್ಯಾ. ಶಾ.) ಕೂಡು ಹಿಡುವಳಿ ; ಒಬ್ಬನೇ ಹಲವು ಹಕ್ಕುಗಳನ್ನು ಹೊಂದಿರುವುದು : ಕೂಡುಹಕ್ಕು.

Univérsal ಯೂನಿವರ್ಸಲ್ (ಗು., ನಾ.) (ಲೋಕದ ಅಥವಾ ನಿರ್ದಿಷ್ಟ ವರ್ಗದ) ಎಲ್ಲ ಮನುಷ್ಯರ ಅಥವಾ ಎಲ್ಲ ವಸ್ತುಗಳ, ಎಲ್ಲ ಮನುಷ್ಯರಿಗೆ ಅಥವಾ ವಸ್ತುಗಳಿಗೆ ಸಂಬಂಧಿಸಿದ, ಎಲ್ಲರೂ ಮಾಡಿದ, ಎಲ್ಲ ಸಂದರ್ಭಗಳಿಗೂ ಅನ್ವಯಿಸುವ : ಸಾರ್ವತ್ರಿಕ, ಸಾರ್ವಲೌಕಿಕ, ಸರ್ವವ್ಯಾಪಿ, ವಿಶ್ವವ್ಯಾಪಿ [The terror was u. ಭಯ ಲೋಕವನ್ನೆಲ್ಲಾ ಆವರಿಸಿತ್ತು. Met with u. applause ಎಲ್ಲರ ಮೆಚ್ಚಿಕೆಯನ್ನೂ ಪಡೆಯಿತು. The rule does not pretend to be u. ಆ ನಿಯಮ ಸಾರ್ವತ್ರಿಕವೆಂಬ ತೋರ್ಪಡಿಕೆ ಏನೂ ಇಲ್ಲ. U. agent (ಪ್ರತಿನಿಧಿಯ ಎಲ್ಲ ಕೆಲಸಗಳನ್ನೂ ಮಾಡಲು ಅಧಿಕಾರ ಪಡೆದ) ಸರ್ವ—ಪ್ರತಿನಿಧಿ, ನಿಯೋಗಿ. U. provider (Provide ಕೆಳಗೆ Provider ನೋಡಿ). U. compass ದೊಡ್ಡ ವೃತ್ತಗಳನ್ನು ಎಳೆಯಬೇಕಾದಾಗ ಕಾಲುಗಳನ್ನು ಹಿಗ್ಗಲಿಸಬಹುದಾದ ಒಂದು ಬಗೆಯ ದೊಡ್ಡ ಕೈವಾರ : ವ್ಯಾಪಕ ಕೈವಾರ. U. coupling or joint ಬೇಕಾದ ಕೋನದಲ್ಲಿ ಚಾಲಕ ದಂಡದಿಂದ ಬಲವನ್ನು ವರ್ಗಾಯಿಸಲು ಅನುಕೂಲಿಸುವ ಸಂಯೋಜಕ : ಸರ್ವ ಸಂಯೋಜಕ. U. legatee ಒಟ್ಟು ಆಸ್ತಿಯನ್ನೆಲ್ಲಾ ಯಾರಿಗೆ ಬಿಟ್ಟಿದೆಯೋ ಅವನು : ಒಟ್ಟು ಆಸ್ತಿ ಪಡೆದವನು, ಸರ್ವ ಹಕ್ಕುದಾರ. U. proposition ಸಾರ್ವತ್ರಿಕ ಪ್ರತಿಜ್ಞೆ]. (ನಾ.) (ತರ್ಕ)= U. proposition ; (ತ. ಶಾ.) ಸಾರ್ವತ್ರಿಕ, ಸಾಮಾನ್ಯ, —ಭಾವನೆ ; ಸರ್ವ ಸಾಮಾನ್ಯವಾದುದು. **Univérsalism** (ನಾ.) ಎಲ್ಲ ಮಾನವರೂ ಕೊನೆಗೆ ಮೋಕ್ಷ ಪಡೆಯುತ್ತಾರೆ ಎಂಬ (ಒಂದು ಕ್ರೈಸ್ತ ಪಂಗಡದ) ನಂಬಿಕೆ : ಸರ್ವಮೋಕ್ಷ ವಾದ. **Univérsalist** (ನಾ.) ; **Universalístic** (ಗು.) ; **Universálity** —ಸ್ಯಾಲಿ—(ನಾ.); ಸಾರ್ವತ್ರಿಕತ್ವ, ವಿಶ್ವವ್ಯಾಪಕತೆ. **Univérsalize** —ಸ—(ಕ್ರಿ. ಸಕ.) ; **Universalizátion** (ಸ. ನಾ.) ; **Univérsally** (ಕ್ರಿ. ವಿ.)

Ùniverse ಯೂನಿವರ್ಸ್ (ನಾ.) ಸರ್ವ, ಸಮಸ್ತ, —ಸೃಷ್ಟಿ, ಲೋಕ ; ವಿಶ್ವ, ಬ್ರಹ್ಮಾಂಡ ; ಸಮಸ್ತ, ಮನುಷ್ಯ, —ಪ್ರಪಂಚ ; (ತರ್ಕ) ವಿಚಾರಕ್ಕೆ ಒಳಪಟ್ಟ ಸಮಸ್ತ ವಿಷಯ. **Universólogy** —ವರ್ಸಾಲೊಜಿ (ನಾ.) ಸರ್ವಸೃಷ್ಟಿ ಶಾಸ್ತ್ರ ; ವಿಶ್ವ ವಿಜ್ಞಾನ. **Universológical** —ಸೊಲಾ— (ಗು.) ; **Univérsologist** —ಸಾಲೊ— (ನಾ.) ವಿಶ್ವ ವಿಜ್ಞಾನಿ.

Univérsity ಯೂನಿವರ್ಸಿಟಿ (ನಾ.) ವಿಶ್ವವಿದ್ಯಾನಿಲಯ, ವಿಶ್ವವಿದ್ಯಾಪೀಠ (ನಾನಾ ಶಾಸ್ತ್ರಗಳಲ್ಲಿ ಪಾಠ ಪ್ರವಚನ ಮತ್ತು ಪರೀಕ್ಷಾದಿಗಳಿಗೆ ಏರ್ಪಾಟುಳ್ಳ, ಅಥವಾ ಅವುಗಳಲ್ಲಿ ಒಂದರ ಏರ್ಪಾಟು ಮಾತ್ರ ಉಳ್ಳ, ಪದವಿಗಳನ್ನು ಕೊಡುವ, ಅನೇಕ ವೇಳೆ ಪ್ರೌಢ ವಿದ್ಯಾಶಾಲೆಗಳನ್ನು ಒಳಕೊಂಡ, ವಿದ್ಯಾ ಸಂಸ್ಥೆ) ; ವಿಶ್ವವಿದ್ಯಾನಿಲಯದ ಸದಸ್ಯರು, ವಿಶ್ವವಿದ್ಯಾನಿಲಯದವರು ; ವಿಶ್ವವಿದ್ಯಾನಿಲಯದ—(ಕ್ರೀಡಾ) ಸಂಘ, ದಳ (The u. had four wickets to fall ವಿಶ್ವವಿದ್ಯಾನಿಲಯದ ಕ್ರೀಡಾದಳದ ಕಡೆ ಇನ್ನೂ ನಾಲ್ಕು ಮಂದಿ ಆಡುವವರಿದ್ದರು). U. Extension (Extend ಕೆಳಗೆ Extension ನೋಡಿ)

Universólogy, etc. **Universe** ನೋಡಿ.

Unkémpt ಅನ್‌ಕೆಂಪ್ಟ್ (ಗು.) (ತಲೆ) ಬಾಚಿ(ಕೊಂಡಿ)ಲ್ಲದ, ಕೆದರಿಕೊಂಡಿರುವ ; ಕೊಳಕಾದ, ಶುಭ್ರವಿಲ್ಲದ, ಅಪರಿಷ್ಕೃತ (Filthy habits & u. attire) ; (ಭಾಷೆಯ ವಿಷಯದಲ್ಲಿ) ಎಚ್ಚರಿಕೆ ತಪ್ಪಿದ ಒರಟಾದ, ನಯವಿಲ್ಲದ, ಅಸಂಸ್ಕೃತ.

Unléss ಅನ್ಲೆಸ್ (ಸಂ. ಅವ್ಯ.) —ದೆ ಇದ್ದರೆ, ಹೊರತು, ವಿನಾ [Shall go u. I hear from him ಅವನಿಂದ ವರ್ತಮಾನ ಬರದೆ ಇದ್ದರೆ ನಾನು ಹೋಗುತ್ತೇನೆ. U. & until (ದ್ವಿರುಕ್ತಿ ಪ್ರ.) =Until.

Until ಅನ್‌ಟಿಲ್ (ಉಪ., ಸಂ. ಅವ್ಯ.) —ವರೆಗೆ, ವರೆಗೂ, ತನಕ (U. you told me I had no idea of it ನೀನು ಹೇಳುವವರೆಗೂ ನನಗೆ ಅದರ ಭಾವನೆಯೇ ಇರಲಿಲ್ಲ) ; [(ದ್ವಿರುಕ್ತಿ ಅಥವಾ ಆಡಂಬರೋಕ್ತಿ) : Unless & u.]

Únto ಅನ್‌ಟು (ಉಪ.) (ಪ್ರಾಚೀ. ಪ್ರ.)=To (ಕೇವಲ ಚತುರ್ಥೀ ಪ್ರ.) [ತುಮಂತ (Infinitive) ಪ್ರ. ವಿನಾ]

Unwiéldy ಅನ್‌ವೀಲ್ಡಿ (ಗು.) (ಗಾತ್ರ, ಭಾರ, ಆಕಾರ, ಮೊ. ಕಾರಣಗಳಿಂದ) ನಿಧಾನ, ಒಡ್ಡೊಡ್ಡ, —ಚಲನೆಯ ; ಎತ್ತಿಡಲು, ಬಳಸಲು, —ಕಷ್ಟವಾದ ; ನಿರ್ವಹಿಸಲಾಗದ ; ಅತಿಭಾರವಾದ, ವಿಪರೀತ ದೊಡ್ಡ ; ಒಡ್ಡೊಡ್ಡಾದ, ಎಡ್ಡಾದಿಡ್ಡಿಯ. **Unwiéldily** (ಕ್ರಿ. ವಿ.) ; **Unwiéldiness** (ನಾ.)

Up ಅಪ್ (ಕ್ರಿ. ವಿ., ಉಪ., ಗು., ನಾ., ಕ್ರಿ. ಅಕ.) ಮೇಲೆ, ಮೇಲಕ್ಕೆ, ಮೇಲುಗಡೆ(ಗೆ) [High up in the air ಆಕಾಶದಲ್ಲಿ (ಮೇಲುಗಡೆ). What is he doing up there ? ಅವನು ಅಲ್ಲಿ ಮೇಲೆ ಕುಳಿತು ಏನು ಮಾಡುತ್ತಿದಾನೆ ? Horse might have won with a better jockey up ಇನ್ನೂ ಉತ್ತಮ ಸವಾರ ಮೇಲಿದ್ದಿದ್ದರೆ ಕುದುರೆ ಗೆಲ್ಲಬಹುದಾಗಿತ್ತು. Lives four floors up ಮೇಲೆ ನಾಲ್ಕನೆಯ ಅಂತಸ್ತಿನಲ್ಲಿ, ಮಹಡಿಯಲ್ಲಿ, ವಾಸಮಾಡುತ್ತಾನೆ. Total mounts up ಒಟ್ಟು ಮೊತ್ತ ಏರುತ್ತದೆ. Water came up to his chin ಅವನ ಗಲ್ಲದವರೆಗೆ ನೀರು ಬಂತು. A hundred up ನೂರು (ಗೆಲ್ಲಂಕ) ಮುಟ್ಟಿತು. It is up to us to foot the bill ಆ ಖರ್ಚನ್ನು ನಾವು ವಹಿಸಬೇಕಾದ್ದು ನಮ್ಮ ಕರ್ತವ್ಯ. Sums up to £5 ಐದು ಪೌಂಡಿನ ವರೆಗಿನ ಮೊತ್ತಗಳು. Lives up to his income ತನ್ನ ವರಮಾನವಷ್ಟನ್ನೂ ಖರ್ಚುಮಾಡುತ್ತಾನೆ. Up to the mark (ಗೊತ್ತಾದ) ಮಟ್ಟಕ್ಕೆ. Up against a hard job ಕಷ್ಟವಾದ ಕೆಲಸಕ್ಕೆ ಸಿಕ್ಕಿ. Am not up to travelling ಪ್ರಯಾಣ ಮಾಡುವ ಸ್ಥಿತಿಯಲ್ಲಿಲ್ಲ. Custom is traced up to the Stuarts ಆ ಸಂಪ್ರದಾಯ ಸ್ಟೂವರ್ಟ್ ದೊರೆಗಳ ಕಾಲದವರೆಗೆ ಹೋಗುತ್ತದೆ. Up to date (Date[2] ನೋಡಿ). As far up as Aberdeen ಅಬರ್ಡೀನ್ ವರೆಗೆ ಮೇಲಕ್ಕೆ (ಉತ್ತರಕ್ಕೆ). Stayed up at Oxford for the vacation ಬಿಡುವಿನಲ್ಲಿ ಆಕ್ಸ್‌ಫರ್ಡ್‌ನಲ್ಲಿಯೇ ಉಳಿದುಕೊಂಡನು. Was had up on a charge of drunkenness ಕುಡಿದು ಅಮಲೇರಿದ ಆಪಾದನೆಯ ಮೇಲೆ ದಂಡಾಧಿಕಾರಿಯ ಮುಂದೆ ನಿಂತಿದ್ದನು. Sailed up the river ನದಿಯ ಮೇಲಕ್ಕೆ, ಮೂಲದ ಕಡೆಗೆ, ಪ್ರಯಾಣ ಮಾಡಿದೆವು. Corn is up ಧಾನ್ಯದ ಬೆಲೆ ಏರಿಬಿಟ್ಟಿದೆ. Have looked up and down ಎಲ್ಲ ಕಡೆಯೂ ನೋಡಿದ್ದೇನೆ, ಹುಡುಕಿದ್ದೇನೆ. Went straight up to the door ನೇರವಾಗಿ ಬಾಗಿಲಿಗೇ ಹೋದೆನು. Sure to turn up late ಖಂಡಿತ ತಡವಾಗಿ ಬರುತ್ತಾನೆ. Stand up ಎದ್ದು ನಿಲ್ಲು, ನೆಟ್ಟಗೆ ನಿಲ್ಲು. Up ! (ಎದ್ದು) ನಿಂತುಕೊ, ಎದ್ದೇಳು, ಏಳು. Up with you ಎದ್ದೇಳು, ಏಳು, ನಿಂತುಕೊ. Up with it ಮೇಲಕ್ಕೆ ಎತ್ತು, ಎತ್ತಿ ಹಿಡಿ. The game is up (Game[1] ನೋಡಿ). Up the Bolsheviks ! ಬಾಲ್ಶೆವಿಕ್ಕರಿಗೆ ಜಯವಾಗಲಿ ! (ಎದುರು ಪ್ರ. : Down with the—). Was up early this morning ಈ ಬೆಳಗ್ಗೆ ಹೊತ್ತಿಗೆ ಮುಂಚೆ ಎದ್ದಿದ್ದನು. Was up late last night ಹಿಂದಿನ ರಾತ್ರಿ ಬಹಳ ಹೊತ್ತಿನವರೆಗೂ ಎದ್ದಿದ್ದನು. Must be up & doing ಎಚ್ಚತ್ತು ಕೆಲಸಮಾಡಬೇಕು ; ಚಟುವಟಿಕೆಯಿಂದ ಕೆಲಸಮಾಡಬೇಕು. Home Secretary is up ಒಳಾಡಳಿತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾರ್ಯದರ್ಶಿ—ಮಾತಾಡುತ್ತಿದ್ದಾನೆ, ಮಾತಾಡಲು ನಿಂತಿದ್ದಾನೆ. Parliament is up ಪಾರ್ಲಿಮೆಂಟ್ ವಿಸರ್ಜನೆಯಾಯಿತು. Stir up sedition ರಾಜದ್ರೋಹ ಎಬ್ಬಿಸು. Get up (Get ನೋಡಿ). Screw up your courage ಧೈರ್ಯ ತಂದುಕೊ. Wind up watch ಗಡಿಯಾರಕ್ಕೆ ಕೀಲಿಕೊಡು. Put the helm up ಚುಕ್ಕಾಣಿಯನ್ನು ಗಾಳಿಗೆದುರಾಗಿ ತಿರುಗಿಸು. Beer is not up ಬಿಯರ್ ಮದ್ಯದಲ್ಲಿ ಜೋರಿಲ್ಲ. Nation is up in arms ಜನಾಂಗ ಶಸ್ತ್ರಸನ್ನದ್ಧವಾಗಿದೆ, ಯುದ್ಧಕ್ಕೆ ನಿಂತಿದೆ (*Against* ಉಪ. ದೊಡನೆ) (ರೂಪ. ಸಹ). Whole of the west is up ಪಶ್ಚಿಮ ದೇಶವೆಲ್ಲ ದಂಗೆಯೆದ್ದಿದೆ. His blood is up ಅವನಿಗೆ ರೇಗಿದೆ, ಉದ್ರೇಕವಾಗಿದೆ. Is well up in mathematics ಅವನಿಗೆ ಗಣಿತದಲ್ಲಿ ಒಳ್ಳೆಯ ಪರಿಶ್ರಮವಿದೆ. What is up? ಏನು ನಡೆಯುತ್ತಿದೆ? ಏನು ಸಮಾಚಾರ? What tricks have you been up to? ಏನು ತಂತ್ರಗಳನ್ನು ನಡಸುತ್ತಿದ್ದೀಯೆ? Up to snuff (Snuff[1] ನೋಡಿ). Do not feel up to work ಕೆಲಸಕ್ಕೆ ತಕ್ಕವನಾಗಿ, ಸಮರ್ಥನಾಗಿ, ತೋರುವುದಿಲ್ಲ. The cigar is not up to much ಚುಟ್ಟಾ ಅಷ್ಟೇನೂ ಚೆನ್ನಾಗಿಲ್ಲ. Eat up ತಿಂದುಬಿಡು (ಹೀಗೆಯೇ burn, dry, tear, up). Speak up ಗಟ್ಟಿಯಾಗಿ ಮಾತಾಡು. Hunt up ಬೇಟೆಯಾಡಿ ಹಿಡಿ; ಹುಡುಕಿ ತೆಗೆ. Save up ಮಿಗಿಸಿ ಕೂಡಹಾಕು. Bind, chain, fasten, fix, lock, nail, pack, seal, tie, up ಭದ್ರವಾಗಿ ಕಟ್ಟು (ಇತ್ಯಾದಿ). Put up (Put[1] ನೋಡಿ). Time is up ಹೊತ್ತು ಮುಗಿಯಿತು. Give up (Give ನೋಡಿ). Hurry up ಬೇಗ, ಜಾಗ್ರತೆ,—ಮಾಡು. Hard-up (Hard ನೋಡಿ). Make up (Make ನೋಡಿ). It is all up (ಅಸಂ., u.p.) with him (ನಿರಾಶೆಯ ಸೂಚನೆಯಾಗಿ): ಅವನ ಕಥೆ—ಪೂರೈಸಿತು, ಮುಗಿದಂತೆಯೆ. Up the hill ಗುಡ್ಡದ ಮೇಲಕ್ಕೆ. Walked up the street ಬೀದಿಯ ಮೇಲಕ್ಕೆ, ಮಧ್ಯಕ್ಕೆ, ಉದ್ದಕ್ಕೆ—(ನಡೆದು)ಹೋದನು. Up hill & down dale ಹಳ್ಳ ತಿಟ್ಟು ಎಲ್ಲಾ, ಎಲ್ಲಾ ಕಡೆಯೂ. Lives further up the road ಇನ್ನೂ ರಸ್ತೆಯ ಮೇಲ್ಭಾಗದಲ್ಲಿ, ಮೇಲ್ಗಡೆ, ವಾಸಮಾಡುತ್ತಾನೆ. Up a tree (Tree ನೋಡಿ). Up the pole (Pole[1] ನೋಡಿ). Up the spout ಒತ್ತೆಯಾಗಿದೆ (Spout ನೋಡಿ)]. (ಗು.) ಮೇಲಕ್ಕೆ ಹೋಗುವ, ಮೇಲೇರುವ, ಮೇಲ್ಗಡೆಯ [Up stroke ಮೇಲ, ಮೇಲ್ಗಡೆಯ, —ಹೊಡೆತ. Up line ಕೇಂದ್ರ ಕಾರ್ಯಸ್ಥಾನದ ಕಡೆಗೆ ಹೋಗುವ ರೈಲುರಸ್ತೆ. Up train—ಹೋಗುವ ರೈಲು (ಎದುರು ಪದ: Down train ಕೇಂದ್ರ ಕಾರ್ಯಸ್ಥಾನದಿಂದ ಬರುವ ರೈಲು)]. (ನಾ.) ಏರು, ತಿಟ್ಟು [Ups & downs ಏರು ಬೀಳುಗಳು, ಹಳ್ಳ ತಿಟ್ಟುಗಳು. (ರೂಪ.) ಅದೃಷ್ಟದ ಏರಿಳಿತಗಳು, ಕಷ್ಟ ಸುಖಗಳು]. (ಕ್ರಿ.; ಬಳ. ವಾ., ಪ್ರಾಂ. ಪ್ರ.) (ಹೇಳುವುದಕ್ಕೆ, ಮಾಡುವುದಕ್ಕೆ) ತಟಕ್ಕನೆ—ಏಳು, ಹೊರಡು (He ups & says ಅವನು ತಟಕ್ಕನೆ ಎದ್ದು ಹೇಳುತ್ತಾನೆ); (ಮೇಲಕ್ಕೆ) ಎತ್ತು, ಎತ್ತಿಕೊ (*With* ಉಪ. ದೊಡನೆ) (He upped with his fist, with his stick ಮುಷ್ಟಿ ಎತ್ತಿದನು, ಕೋಲು ಎತ್ತಿಕೊಂಡನು)

Up- (ಸ. ಪೂ. ಪ.) ಮೇಲ್—, ಮೇಲೆ—, ಮೇಲಕ್ಕೆ—. **Upbeár** (ಕ್ರಿ. ಸಕ.) (ಮೇಲಕ್ಕೆ) ಎತ್ತಿಹಿಡಿ, ಮೇಲಕ್ಕೆತ್ತು (ಮು., ಭೂ. ಕೃ. ನಲ್ಲಿ). **Upbínd** (ಕ್ರಿ. ಸಕ.) (ಮೇಲಕ್ಕೆ) ಎತ್ತಿಕಟ್ಟು. **Upbláze** (ಕ್ರಿ. ಅಕ.) ಮೇಲಕ್ಕೆ ಉರಿ ಏಳು, ಮೇಲಕ್ಕೆ ಹೊತ್ತಿಕೊಂಡು ಉರಿ. **Úpbringing** (ನಾ.) (ಆಧುನಿಕ ಪ್ರ.) ಪಾಲನೆ, ಶಿಕ್ಷಣ. **Upcást** (ಕ್ರಿ. ಸಕ.) ಮೇಲಕ್ಕೆಸೆ, ಎತ್ತಿಹಾಕು. **Úpcast** (ನಾ.) ಮೇಲೆಸೆತ; (ಗಣಿ ಕೆಲಸ) ಗಣಿಯಿಂದ ಗಾಳಿ ಹೊರಹೋಗುವ ಮಾರ್ಗ: ಊರ್ಧ್ವ ಮಾರ್ಗ. **Úp-country** (ಗು.) ಪ್ರಾಂತದ ಒಳ ಭಾಗದ, ಒಳನಾಡಿನ (U. districts). **Úpgrowth** (ನಾ.) ಬೆಳವಣಿಗೆ, ಬೆಳೆದದ್ದು, (ಅಭಿ)ವರ್ಧನ, (ಅಭಿ)ವೃದ್ಧಿ. **Upheáp** (ಕ್ರಿ. ಸಕ.) ಎತ್ತಿ ಗುಡ್ಡೆಹಾಕು. **Upheával** (ನಾ.) (ಆಧುನಿಕ ಪ್ರ.) ಮೇಲಕ್ಕೆತ್ತುವುದು; (ಮು., ಭೂ. ವಿ.) ಭೂಮಿಯ ಮೇಲ್ಪದರ ಎದ್ದುಕೊಳ್ಳುವುದು: ಭೂಮಿಯ ಉತ್ಥಾನ, ನೆಲದುಬ್ಬರ. (ರೂಪ.) ಕೆಳ ದರ್ಜೆಯ ಜನಗಳು ಪ್ರಬಲರಾಗಿ ಮೇಲಕ್ಕೆ ಬರುವುದು: (ಸಾಮಾಜಿಕ, ಅಥವಾ ಇತರ) ಭಾರಿ ಬದಲಾವಣೆ, ಉತ್ಥಾನ, ಉತ್‌ಪ್ಲವನ, ಮೇಲ್‌ಬರವು. **Upheáve** (ಕ್ರಿ.) ಮೇಲಕ್ಕೆ—ಎತ್ತು, ಎದ್ದುಕೊ, ಏಳು. **Uphíll** (ಕ್ರಿ. ವಿ.) ಮೇಲೇರಾಗಿ (Road runs u.); ಗುಡ್ಡದಮೇಲಕ್ಕೆ, ಗುಡ್ಡವೇರುತ್ತ (Riding u.). **Úphill** (ಗು.) ಮೇಲೇರಾದ. (ರೂಪ.) ದುಷ್ಕರ, ಕಷ್ಟವಾದ, ಶ್ರಮದ (U. work). **Úpkeep** (ನಾ.) (ಆಧುನಿಕ ಪ್ರ.) ಸಂರಕ್ಷಣೆ(ಯ—ಖರ್ಚು, ಮಾರ್ಗ); ದುರಸ್ತು. **Úpland** (ಗು., ನಾ.) (ಒಂದು ಪ್ರಾಂತದ) ಮೇಲಭಾಗ(ದ), ಒಳಭಾಗ(ದ); ಮೇಲ, ಒಳ, —ನಾಡು, ಪ್ರಾಂತ. **Uplíft** (ಕ್ರಿ. ಸಕ.) ಮೇಲೆತ್ತು, ಉದ್ಧಾರಮಾಡು. **Uplift** (ನಾ.) (ಮು., ಅಮೆ. ಸಂ.) ಉತ್ಕರ್ಷ ಪ್ರಭಾವ; ಆತ್ಮೋನ್ನತಿ; (ನೈತಿಕ) ಉದ್ಧಾರ. **Upraíse** (ಕ್ರಿ. ಸಕ.) ಮೇಲಕ್ಕೆತ್ತು; (ಕುಗ್ಗಿದ ಸ್ಥಿತಿ, ಮೊ. ಗಳಿಂದ ಮೇಲೇರುವಂತೆ) ಹುರಿದುಂಬಿಸು, ಉತ್ಕರ್ಷಗೊಳಿಸು. **Upreár** (ಕ್ರಿ. ಸಕ.) ಮೇಲಕ್ಕೆತ್ತು, ನೆಟ್ಟಗೆ ಮಾಡು; ಉನ್ನತಮಾಡು; ಪಾಲಿಸು, ಬೆಳೆಸು. **Upríse** (ಕ್ರಿ. ಅಕ.) ಮೇಲಕ್ಕೇಳು, (ಎದ್ದು)ನಿಂತುಕೊ; (ಹಾಸಿಗೆ ಬಿಟ್ಟು) ಏಳು, ಎದ್ದೇಳು; (ಸೂರ್ಯನ ವಿಷಯದಲ್ಲಿ) ಮೂಡು, ಹುಟ್ಟು; ಮೇಲೇರು, ಉನ್ನತವಾಗು. **Upríising** (ನಾ.) (ಕ್ರಿಯಾರ್ಥಗಳಲ್ಲಿ); ದಂಗೆ (ಏಳುವುದು), ಬಂಡಾಯ. **Uproót** (ಕ್ರಿ. ಸಕ.) (ಆಧುನಿಕ ಪ್ರ.) ಬೇರು ಸಮೇತ ಕಿತ್ತುಹಾಕು; ನಿರ್ಮೂಲಮಾಡು (ರೂಪ. ಸಹ). **Úpstair(s)** (ಗು.) ಮಹಡಿಯ ಮೇಲಿನ. **Upstaírs** (ಕ್ರಿ. ವಿ.) —ಮೇಲೆ, ಮೇಲಕ್ಕೆ. **Úpstanding** (ಗು.) ಸರಿಯಾಗಿ ನಿಂತಿರುವ, ನೆಟ್ಟನೆಯ; (ಕೂಲಿಯ ವಿಷಯದಲ್ಲಿ) ನಿಗದಿಮಾಡಿರುವ, ಬದಲಾಯಿಸದ. **Up-streám** (ಕ್ರಿ. ವಿ.), **Úp-stream** (ಗು.) ಪ್ರವಾಹಕ್ಕೆ ಎದುರಾಗಿ (ಹೋಗುವ). **Úpstroke** (ನಾ.) (ಬರವಣಿಗೆಯಲ್ಲಿ) ಮೇಲೆಳೆತ. **Úptake** (ನಾ.) (ಮೇಲಕ್ಕೆ) ಎತ್ತುವುದು; (ಸ್ಕಾ. ಪ್ರ.) ಗ್ರಹಿಸುವುದು, ಗ್ರಹಣ(ಶಕ್ತಿ), ಗ್ರಹಿಕೆ (Quick in the u. ಗ್ರಹಣಶಕ್ತಿ ಚುರುಕಾಗಿದೆ; ಚುರುಕಾಗಿ ಗ್ರಹಿಸುತ್ತಾನೆ). **Úpthrow** (ನಾ.) ಮೇಲಕ್ಕೆಸೆಯುವುದು, ಮೇಲೆಸೆತ; (ಮು., ಭೂ. ವಿ., ಗಣಿ ಕೆಲಸ) (ಸ್ತರ ಭಂಗದ ಒಂದು ಪಕ್ಕಕ್ಕೆ) ಬಂಡೆ ಎದ್ದುಕೊಳ್ಳುವುದು. **Úpthrust** (ನಾ.) (ಭೂ. ವಿ.) =Upheaval. **Uptúrn** (ಕ್ರಿ. ಸಕ.) (ಮಣ್ಣನ್ನು, ನೆಲವನ್ನು, ನೇಗಿಲು, ಮೊ. ಗಳಿಂದ) (ಮೇಲಕ್ಕೆ) ಎತ್ತಿ, ತಿರುವಿ, —ಹಾಕು.

Úpas ಯೂಪಸ್ (ನಾ.) ತನ್ನ ಕೊಂಬೆಗಳ ಬಳಿ ಸುಳಿದ ಪ್ರಾಣಿಗಳನ್ನೆಲ್ಲಾ ನಾಶಮಾಡುವುದೆಂದು ನಂಬಿರುವ, ಹಾಲಿನಂಥ ಸಸ್ಯರಸವುಳ್ಳ, ಜಾವಾ ದ್ವೀಪದ ಒಂದು ಮರ: ಯೂಪಸ್ ಮರ, ಅಪರಂಜಿ ಮರ (=U.-tree, antiar); (ರೂಪ.) ವಿನಾಶಕಾರಿ; ವಿಷಾತ್ಮಕ—ಪ್ರಭಾವ, ಪದ್ಧತಿ; (ಯೂಪಸ್, ಮೊ. ಮರದ) ವಿಷರಸ.

Upbraíd ಅಪ್‌ಬ್ರೆಯ್ಡ್ (ಕ್ರಿ. ಸಕ.) ಬಯ್ಯಿ, ತಪ್ಪುಹಿಡಿ, ಛೀಮಾರಿ ಮಾಡು (*With, for* ಮೊ. ಉಪ. ದೊಡನೆ). **Upbraíding** (ನಾ.); **Upbraídingly** (ಕ್ರಿ. ವಿ.)

Up-end ಅಪ್‌ಎಂಡ್ (ಕ್ರಿ.) (ಪ್ರಾಂ. ಪ್ರ.) ತುದಿ—ಮೇಲಾಗಿಸು, ಮೇಲೆ ನಿಲ್ಲಿಸು; ಏಳು, ಎದ್ದುನಿಲ್ಲು, ನೆಟ್ಟಗೆ ಕುಳಿತುಕೊ.

Uphóld ಅಪ್‌ಹೋಲ್ಡ್ (ಕ್ರಿ. ಸಕ.) ಎತ್ತಿಹಿಡಿ, ನೆಟ್ಟಗೆ ಹಿಡಿ; (ವ್ಯಕ್ತಿ, ಪದ್ಧತಿ, ಮೊ. ಗಳಿಗೆ) ಬೆಂಬಲ, ಆಶ್ರಯ, ಅವಲಂಬ, —ಕೊಡು; (ನಿರ್ಣಯ, ತೀರ್ಮಾನ, ಮೊ. ನ್ನು) ಎತ್ತಿಹಿಡಿ, ಸ್ಥಿರೀಕರಿಸು, ಸಮರ್ಥಿಸು. **Uphólder** (ನಾ.)

Uphólster ಅಪ್‌ಹೋಲ್ಸ್ಟರ್ (ಕ್ರಿ. ಸಕ.) (ಕೋಣೆ, ಮೊ. ಗಳನ್ನು ತೆರೆ, ಜಮಖಾನ, ಕುರ್ಚಿ, ಮೇಜು, ಮೊ. ಗಳಿಂದ) ಸಜ್ಜುಗೊಳಿಸು; (ಕುರ್ಚಿ, ಮೊ. ಕ್ಕೆ) ಮೆತ್ತೆ, ಬಟ್ಟೆಯ ಗವುಸು, ಮೊ. ನ್ನು ಹವಣಿಸು; (ಕುರ್ಚಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊ. ಕ್ಕೆ) ಮರಸುಹಾಕು. **Uphólsterer** (ನಾ.) (ಪೀಠೋಪಸ್ಕರ, ಮೊ. ರ) ಸಜ್ಜುಗಾರ, ಮೆತ್ತೆಗಾರ. U.-bee ತನ್ನ ಗೂಡನ್ನು ಕತ್ತರಿಸಿದ ಎಲೆಗಳು, ಮೊ. ಗಳಿಂದ ಸಜ್ಜುಗೊಳಿಸುವ ಒಂದು ಬಗೆಯ ದುಂಬಿ: ಸಜ್ಜುಗಾರ ದುಂಬಿ. **Uphólstery** (ನಾ.)

Úphroe ಯೂಫ್ರೋ (ನಾ.) (ನಾವೆ) (ಬಟ್ಟೆಯ ಚಾವಣಿಯನ್ನು ಅಳ ವಡಿಸುವ ಹುರಿಗಳನ್ನು ತೂರಿಸಲು) ರಂಧ್ರಗಳನ್ನು ಕೊರೆದಿರುವ ಉದ್ದ ವಾದ ಮರದ ತುಂಡು.

Upón ಅಪಾನ್ (ಉಪ.)=On.

Úpper ಅಪರ್ (ಗು., ನಾ.) ಮೇಲಿನ, ಮೇಲುಗಡೆಯ, ಮೇಲು ದರ್ಜೆಯ, ಮೇಲಂತಸ್ತಿನ [U. lip ಮೇಲ್ತುಟಿ. U. storey (ಮೇಲು) ಮಹಡಿ; (ರೂಪ.) ಮಿದುಳು (Something wrong in his u. storey ಅವನ ಮಿದುಳು, ತಲೆ, —ಕೆಟ್ಟಿದೆ). U. key-board ಪಿಯಾನೊ ವಾದ್ಯದ ಕೀಲಿಕೈಮಣೆಯ ಬಲ ಪಕ್ಕ. U. case (Case² ನೋಡಿ). Have or get the u. hand (Get ನೋಡಿ). U. works (ನಾವೆ) (ಪ್ರಯಾಣಕ್ಕೆ ಸಮತೂಕಗೊಳಿಸಿದ ಹಡಗಿನ ವಿಷಯದಲ್ಲಿ) ನೀರುಮಟ್ಟದ ಮೇಲಿರುವ ಹಡಗಿನ ಭಾಗ: ಮೇಲ್‌ಭಾಗ. The u. servants ಮೇಲು ದರ್ಜೆಯ ಆಳುಗಳು. The U. House (ಪಾರ್ಲಿಮೆಂಟಿನ) ಶ್ರೀಮಂತ ಸಭೆ. The u. ten (thousand) ಶ್ರೀಮಂತ ವರ್ಗ]. (ನಾ.) ಪಾದರಕ್ಷೆಯ ಮೇಲ್ಭಾಗ (Be on one's uppers ಕಷ್ಟದಲ್ಲಿರು, ಬಡತನಕ್ಕೆ ಸಿಕ್ಕಿರು); (ಬ. ವ. ದಲ್ಲಿ) ಬಟ್ಟೆಯ ಕಣಕಾಲ ಕಾಪು. **Úppermost** (ಗು., ಕ್ರಿ. ವಿ.) ಅತ್ಯಂತ ಮೇಲಿನ (=**Úpmost** ಗು.); (ಕ್ರಿ. ವಿ.) ಮೇಲೆ, ಮೇಲಕ್ಕೆ (Said whatever came u. ಮನಸ್ಸಿಗೆ ಮೊದಲು ಬಂದದ್ದನ್ನು ಹೇಳಿಬಿಟ್ಟನು)

Úppish ಅಪಿಷ್ (ಗು.) ಸ್ವಪ್ರತಿಷ್ಠೆಯ, ಸೊಕ್ಕಿನ, ಅಹಂಕಾರದ. **Úppishly** (ಕ್ರಿ. ವಿ.); **Úppishness** (ನಾ.)

Úpright ಅಪ್‌ರೈಟ್ (ಗು., ಕ್ರಿ. ವಿ., ನಾ.) ನೆಟ್ಟನೆ(ಯ); ನೇರ, ಋಜು, —ಆದ, ಆಗಿ (U. post, posture; Stood u.; Set it u.); ಸತ್ಯವಂತನಾದ, ಪ್ರಾಮಾಣಿಕ, ಯಥಾರ್ಥವಾದಿಯಾದ. (ನಾ.) (ಊರೆಯಾಗಿ) ನೇರವಾಗಿ ನಿಲ್ಲಿಸಿದ, ನೆಟ್ಟನೆಯ, —ಕಂಬ, ದಸಿ. **Úprightly** (ಕ್ರಿ. ವಿ.); **Úprightness** (ನಾ.)

Úproar ಅಪ್‌ರೋ(ಅ)ರ್ (ನಾ.) ಗೊಂದಲ, ಗಲಾಟೆ, ಹುಯಿಲು, ಕೋಲಾಹಲ. **Uproárious** (ಗು.); **Uproáriously** (ಕ್ರಿ. ವಿ.); **Uproáriousness** (ನಾ.)

Upsét¹ ಅಪ್‌ಸೆಟ್ (ಕ್ರಿ., ನಾ.) ತಲೆಕೆಳಕು—ಆಗು, ಮಾಡು; ಉರುಳು, ಉರುಳಿಸು [The carriage (was) u.]; (ಶಾಂತಿ, ಜೀರ್ಣಶಕ್ತಿ, ಮೊ. ನ್ನು) ಕೆಡಿಸು, ಪಲ್ಲಟಗೊಳಿಸು; ರೇಗಿಸು, ಕಲಕು, ಕ್ಷೋಭೆ ಗೊಳಿಸು (The news quite u. him ಆ ಸುದ್ದಿ ಅವನ ಮನಸ್ಸನ್ನು ತೀರ ಕಲಕಿಬಿಟ್ಟಿತು. Ate something that u. him ಅವನು ಏನನ್ನೊ ತಿಂದು ದೇಹಸ್ಥಿತಿ ಕೆಡಿಸಿಕೊಂಡಿದ್ದಾನೆ); (ಲೋಹವನ್ನು, ಮು., ಪಟ್ಟಿಯನ್ನು) ಎರಡೂ ಕೊನೆಗಳಲ್ಲಿ ಬಡಿದು ಅಥವಾ ಒತ್ತಿ ಗಿಡ್ಡೂ ದಪ್ಪಗೂ ಆಗುವಂತೆ ಮಾಡು: ಮೋಟು, ಗುಜ್ಜು, —ಮಾಡು. (ನಾ.) ತಲೆ ಕೆಳಕು (—ಆಗುವುದು, ಮಾಡುವುದು); ಕಲಕ, ಕ್ಷೋಭೆ.

Úpset² ಅಪ್‌ಸೆಟ್ (ಗು.) U. price (ಹರಾಜು, ಮೊ. ಗಳಲ್ಲಿ) ಅತ್ಯಂತ ಕಡಮೆಯ, ಕನಿಷ್ಠ, —ಬೆಲೆ.

Úpshot ಅಪ್‌ಷಾಟ್ (ನಾ.) ಪರಿಣಾಮ, ಪರ್ಯವಸಾನ, ತೀರ್ಮಾನ; (ಒಂದು ವಿಷಯದ) ಒಟ್ಟು ಫಲ, ಇತ್ಯರ್ಥ.

Úpside-down ಅಪ್‌ಸೈಡ್‌ಡೌನ್ (ಕ್ರಿ. ವಿ., ಗು.) ತಲೆಕೆಳಕಾಗಿ, ಬುಡಮೇಲಾಗಿ, ಶುದ್ಧ ಅವ್ಯವಸ್ಥೆಯಾಗಿ [Everything was (turned) u.]. (ಗು.) ತಲೆಕೆಳಕಾದ (An u. arrangement)

Upsídes ಅಪ್‌ಸೈಡ್ಸ್ (ಕ್ರಿ. ವಿ.) (ಪ್ರಾಂ. ಪ್ರ.) Get u. with ಮೇಲುಗೈ ಮಾಡಿಕೊ, ಮುಯ್ಯಿ ತೀರಿಸಿಕೊ.

Upsílon ಯುಪ್ಸೈಲನ್ (ನಾ.) ಗ್ರೀಕ್ ವರ್ಣಮಾಲೆಯ ೨೦ನೆಯ ಅಕ್ಷರ (Υ, υ) (ಇಂಗ್ಲಿಷ್ u; ಉ)

Úpstart ಅಪ್‌ಸ್ಟಾರ್ಟ್ (ನಾ.) ಇದ್ದಕ್ಕಿದ್ದಹಾಗೆ ಬಡತನದಿಂದ ಭಾಗ್ಯಕ್ಕೆ ಬಂದವನು, ದೀನಾವಸ್ಥೆಯಿಂದ ಪದವಿಗೆ ಬಂದವನು: ಅಲ್ಪೋದ್ಧತ; ನವವಿಭವೋದ್ಧತ; ಪ್ರತಿಷ್ಠೆಕೋರ, ದುರಹಂಕಾರಿ.

Úpward ಅಪ್‌ವರ್ಡ್ (ಗು.), **Úpward(s)** (ಕ್ರಿ. ವಿ.) ಮೇಲಿನ, ಊರ್ಧ್ವ, ಮೇಲೆ, ಮೇಲಕ್ಕೆ, ಮೇಲುಗಡೆ(ಯ) (ರೂಪ. ಸಹ) (An u. glance ಮೇಲ್ನೋಟ, ಊರ್ಧ್ವದೃಷ್ಟಿ. Prices show an u. tendency ಬೆಲೆಗಳು ಏರುವಂತೆ ತೋರುತ್ತದೆ. Followed the stream u. ನದಿಯ ಮೇಲ್ಗಡೆಗೆ, ಮೂಲದ ಕಡೆಗೆ, ಹೋದನು. U. of forty ನಲವತ್ತಕ್ಕೆ ಮೇಲ್ಪಟ್ಟು). **Úpwardly** (ಕ್ರಿ. ವಿ.)

Uraémia ಯುರೀಮಿಯ (ನಾ.) (ರೋಗ ನಿದಾನ) ಸಾಧಾರಣವಾಗಿ ಮೂತ್ರಪಿಂಡದಿಂದ ಹೊರಹೋಗಬೇಕಾದ ಮೂತ್ರವಸ್ತು ಅಲ್ಲಿಯೇ ಕಟ್ಟಿಕೊಳ್ಳುವುದರಿಂದ ಆಗುವ ರಕ್ತ ವಿಕಾರ: ಮೂತ್ರ ರಕ್ತ (ವಿಕಾರ). **Uraémic** (ಗು.)

Uraéus ಯುರೀಅಸ್ (ನಾ.) (ಈಜಿಪ್ಟಿನ ದೇವತೆಗಳ ಮತ್ತು ದೊರೆಗಳ ತಲೆಯುಡಿಗೆಯಲ್ಲಿಯ) ಸರ್ಪ ಲಾಂಛನ.

Úral-Altáic ಯೂರಲ್ ಆ್ಯಲ್ಟೇಇಕ್ (ಗು.) ಯೂರಲ್ ಮತ್ತು ಆಲ್ಟೈ ಪರ್ವತಶ್ರೇಣಿಗಳ (ನಿವಾಸಿಗಳ); (ಭಾ. ಶಾ.) ಉ. ಯೂರೋಪು ಮತ್ತು ಏಷ್ಯಾ ಖಂಡಗಳ ಫಿನಿಕ್, ಮಂಗೋಲಿಯನ್, ಮೊ. ಸಂಶ್ಲೇಷ ಭಾಷೆಗಳನ್ನೊಳಕೊಂಡ ಭಾಷಾ ವರ್ಗದ: ಯೂರಲ್ ಆಲ್ಟೈ ಭಾಷಾ ವರ್ಗದ.

Uránian ಯುರೇನಿಯನ್ (ಗು.) ಸ್ವರ್ಗೀಯ, ದಿವ್ಯ.

Uránium ಯುರೇನಿಯಂ (ನಾ.) ಒಂದು ಭಾರವಾದ ಬಿಳಿಯ ಲೋಹ: ಯುರೇನಿಯಂ (ಆ್ಯಟಾಮಿಕ್ ಬಾಂಬ್ ತಯಾರಿಕೆಯಲ್ಲಿ ಉಪಯೋಗಿಸಿದೆ ಎಂದು ಹೇಳುವ ಲೋಹ). **Uránic** ಯುರ್ಯಾನಿಕ್ (ರ. ವಿ.) (ಗು.) (ಹೆಚ್ಚು ಸಂಯೋಗ ಶಕ್ತಿಯಲ್ಲಿ), **Úranous** ಯೂರನಸ್ (ಗು.) (ಕಡಮೆ ಸಂಯೋಗ ಶಕ್ತಿಯಲ್ಲಿ), ಯುರೇನಿಯಂ ಸಂಯುಕ್ತವಾಗಿರುವ.

Urano- ಯೂರನೊ— (ಸ. ಪೂ. ಪ.) ಆಕಾಶ—, ಖಗೋಳ —. **-graphy** (ನಾ.) ವರ್ಣನಾತ್ಮಕ ಖಗೋಳ ವಿಜ್ಞಾನ: ಖಗೋಳ ವಿವರಣೆ. **-gráphic(al)** (ಗು.); **-graphist** (ನಾ.) ಖಗೋಳ ವಿವರಣಕಾರ. **-logy** ಖಗೋಳ ವಿಜ್ಞಾನ. **-metry** ನಕ್ಷತ್ರ ದೂರಮಾಪನ, ಖಗೋಳಮಾಪನ; ನಕ್ಷತ್ರಗಳ ಸ್ಥಾನ ಗಳನ್ನೂ ಪರಿಮಾಣಗಳನ್ನೂ ತೋರಿಸುವ ನಕ್ಷೆ: ಖಗೋಳ ನಕ್ಷೆ.

Úranus ಯೂರನಸ್ (ನಾ.) (ಗ್ರೀಕ್ ಪುರಾಣ) [ಭೂದೇವಿಯ ಮಗನೂ ಕ್ರೋನಸ್ (Saturn), ಟೈಟಾನರು, ಮೊ. ರ ತಂದೆಯೂ ಆದ] ಯೂರ ನಸ್ ದೇವತೆ; ಸೌರವ್ಯೂಹದಲ್ಲಿ ನೆಪ್ಟ್ಯೂನ್ ಗ್ರಹಕ್ಕೂ ಶನಿ ಗ್ರಹಕ್ಕೂ ಮಧ್ಯೆ ಇರುವ ಒಂದು ಗ್ರಹ: ಯೂರನಸ್ ಗ್ರಹ.

Úrban ಅರ್ಬನ್ (ಗು.) ಪಟ್ಟಣದ(ಲ್ಲಿಯ), ನಗರದ(ಲ್ಲಿಯ), ಪೌರ (U. districts, population). **Úrbanize** (ಕ್ರಿ. ಸಕ.) (ಗ್ರಾಮತ್ವ ಕಳೆದು) ನಗರತ್ವಕೊಡು, ಪಟ್ಟಣವಾಗಿಸು. **Urbanizátion** (ನಾ.); **Urbáne** ಅರ್ಬೇನ್ (ಗು.) ನಯವುಳ್ಳ, ಸಭ್ಯ, ಸುಸಂಸ್ಕೃತ, ನಾಗರಿಕ. **Urbánely** (ಕ್ರಿ. ವಿ.); **Urbánity** ಅರ್ಬ್ಯಾನಿಟಿ (ನಾ.) ನಯ, ಸುಸಂಸ್ಕೃತಿ, ನಾಗರಿಕತನ; (ಪ್ರಾಚೀ. ಪ್ರ.) ನಯವಾದ ಹಾಸ್ಯ ಚತುರೋಕ್ತಿ.

Úrceolate ಅರ್ಸಿಯೊಲೆಟ್ (ಗು.) (ಸ. ವಿ.) ಹೂಜಿಯಾಕಾರದ; ದೊಡ್ಡ ಮೈಯೂ ಸಣ್ಣ ಬಾಯೂ ಉಳ್ಳ.

Úrchin ಅರ್ಚಿನ್ (ನಾ.) ತುಂಟ, ಚೇಷ್ಟೆ, —ಹುಡುಗ; ಪೋರ, ಚಿಳ್ಳೆ. ಗೋಳಾಕಾರದ ಮುಳ್ಳುಚಿಪ್ಪಿನಲ್ಲಿ ವಾಸಮಾಡುವ ಒಂದು ಪ್ರಾಣಿ (=Sea-u.); (ಪ್ರಾಚೀ. ಪ್ರ.) ಮುಳ್ಳುಹಂದಿ, ತುಂಟ ಪಿಶಾಚಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Úrdu ಉ(ಊ)ರ್ಡೂ (ನಾ.) ಉರ್ದು (ಭಾಷೆ)

Úrea ಯೂರಿಯ (ನಾ.) (ರ. ವಿ.) ಮು., ಸಸ್ತನಿಗಳ ಮೂತ್ರದಲ್ಲಿರುವ, ನೀರಲ್ಲಿ ಕರಗುವ, ನಿರ್ವರ್ಣವಾದ, ಸ್ಫಟಿಕಾಕೃತಿಯ ಒಂದು ಸಂಯುಕ್ತ : ಮೂತ್ರಧಾತು.

Uréter ಯುರೀಟರ್ (ನಾ.) (ಮೂತ್ರಪಿಂಡದಿಂದ ಮೂತ್ರಕೋಶಕ್ಕೆ ಮೂತ್ರ ಹರಿಯುವ) ಮೂತ್ರನಾಳ. **Ureterítis** (ನಾ.) ಮೂತ್ರ ನಾಳದ ಉರಿಯೂತ.

Uréthra ಯುರೀತ್ರ (ನಾ.) ಮೂತ್ರಕೋಶದಿಂದ ಮೂತ್ರ ಹೊರ ಹೋಗುವ ನಾಳ : ಮೂತ್ರ ವಿಸರ್ಜನ ನಾಳ. **Uréthral** (ಗು.) ; **Urethrítis** (ನಾ.) ಮೂತ್ರ ವಿಸರ್ಜನ ನಾಳದ ಉರಿಯೂತ. **Uréthrocele** (ನಾ.) ಮೂತ್ರ ವಿಸರ್ಜನ ನಾಳದ ಊತ. **Urethrótomy** ಯುರಿತ್ರಾಟೊಮಿ (ನಾ.) ಮೂತ್ರ ವಿಸರ್ಜನ ನಾಳ ಚ್ಛೇದ.

Urétic ಯುರೆಟಿಕ್ (ಗು., ನಾ.) = Diuretic (ಆ ಪದ ನೋಡಿ)

Urge ಅರ್ಜ್ (ಕ್ರಿ. ಸಕ., ನಾ.) ಜೋರಾಗಿ, ಬಲಾತ್ಕಾರದಿಂದ,—ನಡಸು, ಓಡಿಸು, ದೂಡು ; ತಿವಿದು ನಡಸು, (ಪ್ರ)ಚೋದಿಸು, ಪ್ರೇರೇಪಿಸು (Urged his horse forward. We urged our flight northwards ನಾವು ಉತ್ತರಾಭಿಮುಖವಾಗಿ ಓಟಕಿತ್ತೆವು) ; (ಶ್ರದ್ಧೆಯಿಂದ, ಮೇಲಿಂದಮೇಲೆ) ಪ್ರಾರ್ಥಿಸು, ಮೊರೆಯಿಡು, ಪ್ರಚೋದಿಸು, ಪ್ರೋತ್ಸಾಹಿಸು (U. him to action, to take steps) ; (ಒಂದು ಕಾರ್ಯಕ್ರಮ, ಮೊ. ನ್ನು ಕೈಕೊಳ್ಳುವಂತೆ) ಮೇಲಿಂದಮೇಲೆ, ಒತ್ತೊತ್ತಿ, —ಹೇಳು, ವಾದಿಸು ; (ಒಬ್ಬನನ್ನು) ಬೇಡಿ, ವಾದಿಸಿ, —ಒತ್ತಾಯಪಡಿಸು (Urged the difficulty of getting supplies ಸರಬರಾಯಿ ತರಿಸಿಕೊಳ್ಳುವುದಕ್ಕಿರುವ ಕಷ್ಟವನ್ನು ಒತ್ತಿ ಹೇಳಿದನು. Argument was urged in vain ವಾದವನ್ನು ಎಷ್ಟು ಒತ್ತಿ ಹೇಳಿದರೂ ನಿಷ್ಫಲವಾಯಿತು). (ನಾ.) (ಸಾಹಿತ್ಯ ಪ್ರ.) (ಪ್ರ)ಚೋದನೆ, ಪ್ರೇರಣೆ, ಪ್ರೇರೇಪಣೆ.

Úrgent ಅರ್ಜೆಂಟ್ (ಗು.) ಅವಸರದ, ತುರ್ತಿನ, ಜರೂರಾದ, ಒಡನೆ ಗಮನಿಸಬೇಕಾದ (The matter is u.) ; ಒತ್ತೊತ್ತಿ, ಮೇಲಿಂದ ಮೇಲೆ,—ಕೇಳುವ (Was urgent with me for further particulars, to disclose further particulars). **Úrgently** (ಕ್ರಿ. ವಿ.) ; **Úrgency** (ನಾ.) ಅವಸರ, ತುರ್ತು, ಜರೂರು ; ಪ್ರಚೋದನೆ, ಪ್ರೇರೇಪಣೆ ; ಮೊರೆ, ಪ್ರಾರ್ಥನೆ ; (ಪಾರ್ಲಿಮೆಂಟಿನಲ್ಲಿ) ಪ್ರಸಕ್ತ ವಿಷಯ ಜರೂರಾದ್ದೆಂದೂ ಮಿಕ್ಕೆಲ್ಲಕ್ಕಿಂತ ಮೊದಲು ಅದನ್ನು ಪರಿಶೀಲಿಸಬೇಕೆಂದೂ ೩೦೦ ಸದಸ್ಯರಿಗೆ ಕಡಮೆ ಇಲ್ಲದ ಸಭೆಯಲ್ಲಿ ಮುಕ್ಕಾಲುಪಾಲು ಸದಸ್ಯರ ಅಭಿಮತದಿಂದ ಆದ ತೀರ್ಮಾನ : ಅವಸರವನ್ನು ಕುರಿತ ತೀರ್ಮಾನ.

Úric, Úrinal, etc. **Urine** ನೋಡಿ.

Úrine ಯೂರಿನ್ (ನಾ.) ಉಚ್ಚೆ, ಮೂತ್ರ ; ಗಂಜಲ. **Úric** (ಗು.) ಉಚ್ಚೆಯ, ಮೂತ್ರದ. U. acid ಮೂತ್ರಾಮ್ಲ. **Úrinal** (ನಾ.) ಮೂತ್ರಪಾತ್ರೆ ; (ಖಾಸಗಿ ಅಥವಾ ಸಾರ್ವಜನಿಕ) ಮೂತ್ರಸ್ಥಳ, ಮೂತ್ರಿ ; ಮೂತ್ರ ಪರೀಕ್ಷಾ—ಪಾತ್ರೆ, ಸೀಸೆ. **Úrinary** (ಗು., ನಾ.) ಮೂತ್ರದ (U. organs, diseases ಮೂತ್ರಾಂಗಗಳು, ಮೂತ್ರ ರೋಗಗಳು). (ನಾ.) ಗೊಬ್ಬರಕ್ಕಾಗಿ ಮೂತ್ರ ಶೇಖರಿಸಿಡುವ ಸ್ಥಳ: ಉಚ್ಚೆ, ಗಂಜಲ, —ಗುಂಡಿ. **Úrinate** —ನೇಟ್ (ಕ್ರಿ. ಅಕ.) ಉಚ್ಚೆ, ಗಂಜಲ, —ಹೊಯ್ಯು ; ಮೂತ್ರ ವಿಸರ್ಜನೆಮಾಡು. **Urinátion** (ನಾ.) ; **Úrinous** (ಗು.) ಉಚ್ಚೆಯ(ಂಥ), ಮೂತ್ರವುಳ್ಳ. **Urino-** (ಸ. ಪೂ. ಪ.) ಮೂತ್ರ—. **-logy** ಮೂತ್ರ—ಶಾಸ್ತ್ರ, ವಿಜ್ಞಾನ. **-meter** ಮೂತ್ರ (ವಿಶಿಷ್ಟ ಗುರುತ್ವ) ಮಾಪಕ. **-métric** (ಗು.) ; **-metry** (ನಾ.) ; **-scopy** ಮೂತ್ರ ಪರೀಕ್ಷೆ. **-scópic** (ಗು.)

Urn ಅರ್ನ್ (ನಾ., ಕ್ರಿ. ಸಕ.) (ಕಾಲ, ಅಥವಾ ಪೀಠ ಇರುವ, ಸಾ., ಹೆಣದ ಬೂದಿಯನ್ನು ಹಾಕಿಡಲು ಉಪಯೋಗಿಸುತ್ತಿದ್ದ ಅಥವಾ ಪಾತ್ರೆಯಾಗಿ ಅಥವಾ ಅಳತೆಯಾಗಿ ಉಪಯೋಗಿಸುವ) ಗಡಿಗೆ, ಕುಂಭ, ಕಲಶ; (ರೂಪ.) ಕಳೇಬರ, ಅಸ್ಥಿ, ಹೆಣದ ಬೂದಿ, ಮೊ. ನ್ನು ಇಟ್ಟಿರುವ ಸ್ಥಳ : ಗೋರಿ, ಸಮಾಧಿ, ಚೈತ್ಯ ; (ಬೆಂಕಿಯಿಂದ ಬಿಸಿಯಾಗಿಟ್ಟಿರುವ, ನಲ್ಲಿಯುಳ್ಳ) ಕುಂಭಾಕಾರದ (ಕಾಫಿ, ಟೀ) ಪಾತ್ರೆ ; ಬಿಸಿ(ಕಾಫಿಯ) ಡಬರಿ; (U.-flower ಕುಂಭಾಕಾರದ ಹೂವು ಬಿಡುವ ಹಲವು ಬಗೆಯ ಗಡ್ಡೆಸಸ್ಯ: ಕುಂಭಪುಷ್ಪಿ). (ಕ್ರಿ.) —ಲ್ಲಿ ಇಡು. **Úrnful** (ನಾ.)

Uro[1]- ಯೂರೊ— (ಸ. ಪೂ. ಪ.) ಮೂತ್ರ—. **-logy** ಮೂತ್ರ ಶಾಸ್ತ್ರ.

Uro[2]- ಯೂರೊ— (ಸ. ಪೂ. ಪ.) (ಅಂ. ರ. ಶಾ. ಪದಗಳಲ್ಲಿ) ಬಾಲ—.

Úrsa (L) ಅರ್ಸ (ನಾ.) U. Major, Minor ಸಪ್ತರ್ಷಿ ಮಂಡಲ, ಲಘು ಸಪ್ತರ್ಷಿ ಮಂಡಲ.

Úrsine ಅರ್ಸೈ(ಸಿ)ನ್ (ಗು.) ಕರಡಿಯ(ಂಥ); (ಕೀಟ ವಿಜ್ಞಾನ) ಬಿರುಗೂದಲು ತುಂಬಿದ. **Úrsiform** (ಗು.) ಕರಡಿಯಾಕಾರದ.

Úrticate ಅರ್ಟಿಕೇಟ್ (ಕ್ರಿ. ಸಕ.) (ತುರಚಿಯ ಮುಳ್ಳಿನಂತೆ) ಕುಟುಕು ; (ಪಾರ್ಶ್ವವಾಯುಗ್ರಸ್ತವಾದ ಅಂಗ, ಮೊ. ನ್ನು ವೇದನಗ್ರಾಹಿಯಾಗಿ ಮಾಡುವುದಕ್ಕಾಗಿ) ತುರಚಿಯ ಮುಳ್ಳುಗಳಿಂದ ಹೊಡೆ ; ಚುರು ಚುರು ಗುಟ್ಟಿಸು. **Urticátion** (ನಾ.)

Úrus ಯೂರಸ್ (ನಾ.) (ಚರಿತ್ರ ಪೂರ್ವ ಕಾಲದ) ಒಂದು ಬಗೆಯ ಕಾಡು ಗೂಳಿ.

Us ಅಸ್ (ಸ. ನಾ. ; I ಪದದ ದ್ವಿತೀಯಾ ಬ. ವ.) ನಮ್ಮನ್ನು, ನಮಗೆ ; (ಕಾವ್ಯ, ಪ್ರಾಚೀ. ಪ್ರ.) = Ourselves (Let's get us from the walls)

Úsage, Úsance. **Use** ನೋಡಿ.

Use ಯೂಸ್ (ನಾ.) ಬಳಸುವುದು, ಉಪಯೋಗಿಸುವುದು, ಬಳಕೆ, ಉಪಯೋಗ, ಪ್ರಯೋಗ, ವಿನಿಯೋಗ (Taught him the u. of the globe ಗೋಳದ ಉಪಯೋಗವನ್ನು ಅವನಿಗೆ ಹೇಳಿಕೊಟ್ಟೆನು. Put it to a good u. ಅದನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸು ; ಸದುಪಯೋಗಪಡಿಸು. Is meant for use not ornament ಅದರ ಉದ್ದೇಶ, ಉಪಯೋಗ, ಅಲಂಕಾರವಲ್ಲ. Is in daily use ಅದು ದಿನಬಳಕೆಯಲ್ಲಿದೆ. Lost the use of his left arm ಎಡ ತೋಳಿನ ಉಪಯೋಗ ಅವನಿಗೆ ಹೋಗಿಬಿಟ್ಟಿದೆ); ಫಲ, ಪ್ರಯೋಜನ [It is (of) no u. talking *or* to talk ಮಾತಾಡಿ ಪ್ರಯೋಜನವಿಲ್ಲ] ; ಪದ್ಧತಿ, ಅಭ್ಯಾಸ, ವಾಡಿಕೆ, ವಹಿವಾಟು, ಮಾಮೂಲು (In such matters u. is everything ಅಂಥ ವಿಷಯಗಳಲ್ಲಿ ವಾಡಿಕೆ, ಮಾಮೂಲು, —ಮುಖ್ಯವಾದುದು. U. & wont ಅಭ್ಯಾಸ ಮತ್ತು ರೂಢಿ) ; (ಕ್ರೈಸ್ತ ಮತದ, ಆರಾಧನ ಮಂದಿರದ) ಪೂಜಾ, ಕರ್ಮ,—ಪದ್ಧತಿ (Anglican, Roman, u.) ; (ನ್ಯಾ. ಶಾ.) [ಬೇರೊಬ್ಬ ಫಲಾನುಭವಿಯ ಅನುಭೋಗಕ್ಕಾಗಿ ಮಾತ್ರ (ತನ್ನ ಅನುಭೋಗಕ್ಕಲ್ಲ) ಒಬ್ಬನ ವಶದಲ್ಲಿರುವ ಆಸ್ತಿಯ] ಫಲಾನುಭವ, ಫಲಪ್ರಯೋಜನ. **Úseful** (ಗು.) ಉಪಯೋಗಕರವಾದ, ಪ್ರಯೋಜನಕಾರಿಯಾದ, ಫಲದಾಯಕವಾದ, ಉಪಯುಕ್ತ, ಲಾಭಕರ (U. arts ಪ್ರಯೋಜನಕರವಾದ ಕಲೆಗಳು) ; (ಅಸಂ.) ಅತ್ಯುತ್ತಮ, ಭರ್ಜರಿ, ಸಮರ್ಥ (A pretty u. performance ಭರ್ಜರಿ—ಆಟ, ಪ್ರದರ್ಶನ. Is pretty u. at Greek iambics ಗ್ರೀಕ್ ಅಯಾಂಬಿಕ್ ಛಂದಸ್ಸಿನ ಪದ್ಯಗಳನ್ನು ಬರೆಯುವುದರಲ್ಲಿ ಅವನು ಸಮರ್ಥ). **Úsefully** (ಕ್ರಿ. ವಿ.) ; **Úsefulness** (ನಾ.) ; **Úseless** (ಗು.) ನಿಷ್ಪ್ರಯೋಜಕ, ವ್ಯರ್ಥ, ನಿಷ್ಫಲ ; (ಅಸಂ.) ಅಸ್ವಸ್ಥ, ಉತ್ಸಾಹವಿಲ್ಲದ, ಕೆಲಸಕ್ಕೆ ಬಾರದ (Am feeling u.). **Úselessly** (ಕ್ರಿ. ವಿ.); **Úselessness** (ನಾ.) ; **Úsual** ಯೂಝ್ಯುಅಲ್ (ಗು.) ವಾಡಿಕೆಯ, ರೂಢಿಯ, ಯಥಾಪ್ರಕಾರದ, ಸಾಮಾನ್ಯವಾದ [(ಗ್ರಾಮ್ಯ ಅಥವಾ ಹಾಸ್ಯ ಪ್ರ.) As per u.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಡಿಕೆಯಂತೆ, ಪದ್ಧತಿ ಪ್ರಕಾರ]. **Úsually** (ಕ್ರಿ. ವಿ.); **Úsualness** (ನಾ.); **Úsage** ಯೂಸೆ(ಸಿ)ಜ್ (ನಾ.) ಬಳಸುವ, ವ್ಯವಹರಿಸುವ, —ರೀತಿ, ಕ್ರಮ (Damaged by rough u.); ಬಳಕೆ, ಉಪಯೋಗ, ಪ್ರಯೋಗ, ವ್ಯವಹಾರ, ವಹಿವಾಟು (Contrary to the u. of the best writers ಉತ್ತಮೋತ್ತಮ ಲೇಖಕರ ಪ್ರಯೋಗಕ್ಕೆ ವ್ಯತಿರಿಕ್ತವಾಗಿ); ಪದ್ಧತಿ, ಸಂಪ್ರದಾಯ, ವಾಡಿಕೆ (An ancient u. ಪುರಾತನ ಸಂಪ್ರದಾಯ); (ನ್ಯಾ. ಶಾ.) (ಅನಾದಿ ಕಾಲದಿಂದಲ್ಲದಿದ್ದರೂ ರೂಢಿಯಾಗಿ ನಡೆಯುತ್ತ ಬಂದಿರುವ) ಮಾಮೂಲು.

Use (ಕ್ರಿ.) ಬಳಸು, ಉಪಯೋಗಿಸು, ಪ್ರಯೋಗಿಸು, ವಿನಿಯೋಗಿಸು, ಪ್ರಯೋಜನಪಡಿಸು, ಖರ್ಚುಮಾಡು, ವ್ಯಯಮಾಡು [U. your discretion ನಿನ್ನ ವಿವೇಚನೆಯನ್ನು ಉಪಯೋಗಿಸು. May I u. your name ನಾನು ತಮ್ಮ ಹೆಸರನ್ನು ಹೇಳಬಹುದೊ? ಉಪಯೋಗಿಸಿಕೊಳ್ಳಬಹುದೊ? Do not fail to u. this fact (ವಾದ, ಮೊ. ಗಳಲ್ಲಿ) ಈ ಸಂಗತಿಯನ್ನು ಉಪಯೋಗಿಸಿಕೊಳ್ಳಲು ತಪ್ಪಬೇಡ. We seem to u. a great deal of butter ನಾವು ತುಂಬ ಬೆಣ್ಣೆಯನ್ನು ಖರ್ಚುಮಾಡುತ್ತಿರುವಂತೆ ತೋರುತ್ತದೆ]; ವ್ಯವಹರಿಸು, ಕಾಣು, ವರ್ತಿಸು, ನಡೆದುಕೊ (Used me ill. Ill-used me); (ಈಗ ಸಾ., ಭೂತ. ಪ್ರ. ಮಾತ್ರ; ಉಚ್ಚಾರಣೆ: ಯೂಸ್ಟ್) ಪದ್ಧತಿ, ರೂಢಿ, ವಾಡಿಕೆ, ಅಭ್ಯಾಸ,—ಇರು, ಆಗಿರು [I used to take the bus ವಾಡಿಕೆಯಾಗಿ ಬಸ್ಸಿನಲ್ಲಿ ಹೋಗುತ್ತಿದ್ದೆನು; ಬಸ್ಸಿನಲ್ಲಿ ಹೋಗುವುದು ನನ್ನ ವಾಡಿಕೆ. Used not to answer, (ಬಳ. ಮಾ.) Didn't u. to answer ಸಾ., ಉತ್ತರ ಕೊಡುತ್ತಿರಲಿಲ್ಲ]; (ಭೂ. ಕೃ. ನಲ್ಲಿ) ಪದ್ಧತಿ, ಅಭ್ಯಾಸ, ವಾಡಿಕೆ,—ಆದ (Have become used to a vegetarian diet ನನಗೆ ಸಸ್ಯಾಹಾರ ಅಭ್ಯಾಸವಾಗಿದೆ, ಒಗ್ಗಿದೆ). U. up (ಎಲ್ಲವನ್ನೂ) ಖರ್ಚುಮಾಡಿಬಿಡು, ಪೂರೈಸಿಬಿಡು; (ಉಳಿದಿರುವುದನ್ನು) ಉಪಯೋಗಿಸಿಬಿಡು, ಬಳಸಿಬಿಡು; (ಅತಿಶ್ರಮ, ಮೊ. ಗಳಿಂದ) ಸುಸ್ತುಮಾಡಿ ಹಾಕು. **Úsable** (ಗು.); **Úsance** (ನಾ.) (ವಾಣಿಜ್ಯ) ಹೊರದೇಶದ ಮಾರುವೆ ಹುಂಡಿಗೆ ಹಣ ಕೊಡಲು ಇರುವ ಕಾಲಾವಕಾಶ: (ಹುಂಡಿ ಹಣ) ಪಾವತಿ ವಾಯಿದೆ (The u. on Indian bills is four months). **Úser** (ನಾ.) (ಕ್ರಿಯಾರ್ಥಗಳಲ್ಲಿ); (ನ್ಯಾ. ಶಾ.) (ಹಕ್ಕು, ಮೊ. ಗಳ) ನಿರಂತರ ಅನುಭೋಗ, ಮಾಮೂಲು (Right of u. ಉಪಯೋಗದ, ಅನುಭೋಗದ, —ಹಕ್ಕು; ಮಾಮೂಲಿನ ಹಕ್ಕು)

Úsher ಅಷರ್ (ನಾ., ಕ್ರಿ. ಸಕ.) ನ್ಯಾಯಸ್ಥಾನ, ಮೊ. ಗಳಲ್ಲಿ ದ್ವಾರಪಾಲಕನ ಕೆಲಸಮಾಡುವ, ಅಥವಾ ಸಾರ್ವಜನಿಕ ಮಂದಿರ, ಮೊ. ಗಳಲ್ಲಿ ಜನರಿಗೆ ಅವರವರ ಸ್ಥಾನಗಳನ್ನು ತೋರಿಸುವ, ಅಥವಾ ಮೇಲುಪದವಿಯವನ ಮುಂದುಗಡೆ ಗೌರವಾರ್ಥವಾಗಿ ನಡೆದುಹೋಗುವ ಅಧಿಕಾರಿ ಅಥವಾ ಸೇವಕ: ದ್ವಾರಾಧಿಕಾರಿ, ಕಟ್ಟಿಗೆಯವನು, ಪ್ರತೀಹಾರಿ, ದೌವಾರಿಕ [(Gentleman u. of the) Black rod (Black ನೋಡಿ)]; (ಈಗ ತಿರಸ್ಕಾರ ಸೂಚಕ ಪ್ರ.) ಕೆಳ ಉಪಾಧ್ಯಾಯ, ಸಹಾಯೋಪಾಧ್ಯಾಯ. (ಕ್ರಿ.) ಪ್ರತೀಹಾರಿಯಾಗಿರು; ಗೌರವಾರ್ಥವಾಗಿ ಮುಂದುಗಡೆ ಹೋಗು; ಒಳಕ್ಕೆ ಕರೆದುಕೊಂಡುಹೋಗು, ಪ್ರವೇಶ ಮಾಡಿಸು; ಆಗಮನವನ್ನು—ತಿಳಿಸು, ಸಾರು [Was at length ushered (in) to his presence ಕಡೆಗೆ ಅವನ ಸಮ್ಮುಖಕ್ಕೆ ಕರೆದೊಯ್ಯಲ್ಪಟ್ಟನು. Star ushers in the dawn ನಕ್ಷತ್ರವು ಅರುಣೋದಯವನ್ನು ಕರೆತರುತ್ತದೆ]. **Úshership** (ನಾ.)

Úsquebaugh ಅಸ್ಕ್ವಿಬಾ (ನಾ.) ವ್ಹಿಸ್ಕಿ (ಮದ್ಯ); ಐರ್ಲೆಂಡಿನವರು ಬ್ರಾಂದಿ, ಮೊ. ಗಳಿಂದ ತಯಾರಿಸುವ, ಮಸಾಲೆ, ಮೊ. ನ್ನು ಹಾಕಿದ ಒಂದು ಮದ್ಯಪಾನೀಯ.

Ustulátion ಅಸ್ಟ್ಯುಲೇಷನ್ (ನಾ.) (ಔಷಧ ತಯಾರಿಕೆ) (ಪುಡಿಮಾಡುವುದಕ್ಕಾಗಿ, ನೆನೆಸಿದ ಅಥವಾ ಹಸಿಯ ಪದಾರ್ಥವನ್ನು) ಒಣಗಿಸುವುದು ಹುರಿಯುವುದು. ದ್ರಾಕ್ಷಾಮದ್ಯದ ಸುಡುತ.

Úsual. Use (ನಾ.) ನೋಡಿ.

Usucápion ಯೂಸ್ಯುಕೇಪಿಯನ್, **Usucáption** ಯೂಸ್ಯುಕ್ಯಾಪ್ಷನ್ (ನಾ.) (ನ್ಯಾ. ಶಾ.) ಒಬ್ಬನು ಒಂದು ನಿರ್ದಿಷ್ಟ ಕಾಲ ಅವ್ಯಾಹತವಾಗಿ ಒಂದು ಆಸ್ತಿಯನ್ನು ಅನುಭವಿಸಿಕೊಂಡು ಬಂದದ್ದರಿಂದ ಅವನಿಗೆ ಆಸ್ತಿಯ ಮೇಲೆ ಬರುವ ಹಕ್ಕು: ಅನುಭವದ ಹಕ್ಕು.

Úsufruct ಯೂಸ್ಯುಫ್ರಕ್ಟ್ (ನಾ., ಕ್ರಿ. ಸಕ.) ಮತ್ತೊಬ್ಬನ ಆಸ್ತಿಯನ್ನು, ಅದನ್ನು ಯಾವ ರೀತಿಯಲ್ಲಿಯೂ ಹಾಳುಮಾಡದೆ ಅಥವಾ ಕರಗಿಸದೆ, ಅನುಭೋಗಿಸಿಕೊಂಡು ಪ್ರಯೋಜನ ಪಡೆದುಕೊಳ್ಳುವ ಹಕ್ಕು (ಪಡೆದಿರು): ಫಲಾನುಭವದ ಹಕ್ಕು (ಪಡೆದಿರು). **Usufrúctuary** —ಕ್ಚ್ಯುಅರಿ (ಗು., ನಾ.) ಫಲಾನುಭವದ, ಫಲಭೋಗದ. (ನಾ.) ಫಲಾನುಭವದಾರ, ಫಲಭೋಗಿ.

Usúrp ಯೂಸರ್ಪ್ (ಕ್ರಿ.) (ಸಿಂಹಾಸನ, ಪದವಿ, ಅಧಿಕಾರ, ಆಸ್ತಿ, ಮೊ. ನ್ನು) (ಹಕ್ಕಿಲ್ಲದೆ, ನ್ಯಾಯವಿಲ್ಲದೆ) ಆಕ್ರಮಿಸಿಕೊ, ಕಿತ್ತುಕೊ; ದುರಾಕ್ರಮಣಮಾಡು. (ವಿರ. ಪ್ರ.) ಅತಿಕ್ರಮಿಸು (*Up, upon* ಉಪ. ದೊಡನೆ). **Usurpátion** (ನಾ.) ದುರಾಕ್ರಮಣ. **Usúrper** (ನಾ.); **Usúrpingly** (ಕ್ರಿ. ವಿ.)

Úsury ಯೂಷ(ಸ್ಯು)ರಿ (ನಾ.) (ಕಾನೂನಿನಲ್ಲಿ ಅವಕಾಶವಿರುವುದಕ್ಕಿಂತ) ದುಬಾರಿ ಬಡ್ಡಿಗೆ ಸಾಲಕೊಡುವುದು; ಕುಸೀದ ಪದ್ಧತಿ; ದುಬಾರಿ ಬಡ್ಡಿ; (ಈಗ ಸಾ., ರೂಪ.) ಚುಂಗಡಿ, ಬಡ್ಡಿ (The service was repaid with u. ಸೇವೆಗೆ ಮರು ಸೇವೆ ಬಡ್ಡಿ ಸೇರಿಸಿ ಸಲ್ಲಿಸಲಾಯಿತು). **Úsurer** ಯೂಷರರ್ (ನಾ.) ದುಬಾರಿ ಬಡ್ಡಿ ಹಾಕುವ ಸಾಲಗಾರ; ಕುಸೀದಕ. **Usúrious** ಯುಷೂ(ಸ್ಯೂ)ರಿಯಸ್ (ಗು.); **Usúriously** (ಕ್ರಿ. ವಿ.); **Usúriousness** (ನಾ.)

Ut[1] ಉಟ್, ಅಟ್ (ನಾ.) (ಸಂ.) ಸ್ವರಶ್ರೇಣಿಯ ಮೊದಲ ಸ್ವರ: ಸ.

Ut[2] ಅಟ್ (ಕ್ರಿ. ವಿ.) *Ut supra, infra* ಮೇಲೆ, ಕೆಳಗೆ,—ಹೇಳಿರುವಂತೆ, ನಮೂದಿಸಿರುವಂತೆ; ಮೇಲನಂತೆ, ಕೆಳಗಿನಂತೆ.

Uténsil ಯುಟೆನ್ಸಿಲ್ (ನಾ.) (ಮನೆ ಕೆಲಸದ) ಪಾತ್ರೆ(ಪರಟೆ), ಉಪಕರಣ (Kitchen, cooking-, utensils ಅಡಿಗೆ ಮನೆಯ, ಅಡಿಗೆಯ,—ಪಾತ್ರೆಪರಟೆಗಳು)

Úterus ಯೂಟೆರಸ್ (ನಾ., ಬ. ವ. -ri —ರೈ) ಗರ್ಭಕೋಶ, ಗರ್ಭಾಶಯ. **Úterine** —ರೈ(ರಿ)ನ್ (ಗು.) ಗರ್ಭಾಶಯದ; ತಂದೆ ಬೇರೆಯಾಗಿದ್ದು ಒಂದೇ ತಾಯಿಯಲ್ಲಿ ಹುಟ್ಟಿದ; ಏಕ ಮಾತೃಕ, ಸಮಾನ ಮಾತೃಕ (U. brothers). **Uterítis** (ನಾ.) ಗರ್ಭಾಶಯ —ಶೋಫ, ಉರಿಯೂತ.

Utílity ಯುಟಿಲಿಟಿ (ನಾ.) ಉಪಯೋಗ, ಉಪಯುಕ್ತತೆ; ಐಹಿಕ ಪ್ರಯೋಜನ; ಉಪಯುಕ್ತವಾದುದು, ಪ್ರಯೋಜನಕಾರಿಯಾದುದು; ಹೆಚ್ಚು ಜನರ ಹೆಚ್ಚಿನ ಸೌಖ್ಯ; ಸರ್ವಲೋಕ ಹಿತ; = Utilitarianism. (ನಾಟಕದಲ್ಲಿ) ಅತಿ ಸಣ್ಣ ಪಾತ್ರಗಳ ನಟ, ಚಿಲ್ಲರೆ ನಟ (= U.-man). **Utilitárian** (ಗು., ನಾ.) ಉಪಯೋಗಕರ, ಪ್ರಯೋಜನಾತ್ಮಕ; ಪ್ರಯೋಜನ ವಾದದ, ಫಲ ವಾದದ. (ನಾ.) ಪ್ರಯೋಜನ ವಾದಿ, ಫಲ ವಾದಿ. **Utilitárianism** (ನಾ.) ಪ್ರಯೋಜಕತೆಯೇ ಧರ್ಮಕ್ಕೆ ನಿರ್ಣಾಯಕ ಎಂಬ ವಾದ; ಅಧಿಕ ಸಂಖ್ಯೆಯ ಜನರ ಅಧಿಕ ಹಿತ ಸಾಧನೆಯೇ ಧರ್ಮ ಎಂಬ ವಾದ; ಪ್ರಯೋಜಕತಾ (ಪ್ರಾಧಾನ್ಯ) ವಾದ. **Utilize** ಯೂಟಿಲೈಸ್ (ಕ್ರಿ. ಸಕ.) ಉಪಯೋಗಿಸಿಕೊ, ಪ್ರಯೋಜನಕ್ಕೆ ತಂದುಕೊ, ಬಳಸು. **Útilizable** (ಗು.); **Utilizátion** (ನಾ.)

Úti possidétis (L) ಯೂಟೈ(ಟಿ) ಪಾಸಿಡೀಟಿಸ್ (ನಾ.) ಯುದ್ಧ ರಾಷ್ಟ್ರಗಳು ಯುದ್ಧದಲ್ಲಿ ಗಳಿಸಿರುವ ದೇಶ, ಆಸ್ತಿ, ಮೊ. ವು ಅವಕ್ಕೇ ಸೇರಿದುವೆಂದು ಅವು ಸಂಧಿಮಾಡಿಕೊಳ್ಳುವ ಕಾಲದಲ್ಲಿ ಅವಕ್ಕೆ ಕೊಟ್ಟುಬಿಡುವ ತತ್ತ್ವ: ಸ್ವಾಧೀನ ಸ್ವಾಮ್ಯ ತತ್ತ್ವ, ಜಯ ಸ್ವಾಮ್ಯ ತತ್ತ್ವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Útmost ಅಟ್‌ಮೋ(ಮ)ಸ್ಟ್ (ಗು., ನಾ.) ಅತ್ಯಂತ, ಅತ್ಯಧಿಕ, ಪರಾಕಾಷ್ಠ, ಪರಮ, ಕಟ್ಟಕಡೆಯ (U. reluctance. The u. limits ಕಟ್ಟಕಡೆಯ ಮಿತಿ). (ನಾ.) One's u. ಕೈಲಾದ್ದೆಲ್ಲ.

Utópia ಯುಟೋಪಿಯ (ನಾ.) ಯಾವ ಕೊರತೆಯೂ ಇಲ್ಲದ ಸಾಮಾಜಿಕ ಮತ್ತು ರಾಜಕೀಯ ಪದ್ಧತಿಗಳನ್ನುಳ್ಳ ಒಂದು ಕಾಲ್ಪನಿಕ ದ್ವೀಪ(ವನ್ನು ವಿವರಿಸಿ Sir T. More ೧೫೧೬ರಲ್ಲಿ ಬರೆದ ಗ್ರಂಥ); ಆದರ್ಶ (—ರಾಜ್ಯ, ಸ್ಥಿತಿ); ಕಾರ್ಯಸಾಧ್ಯವಲ್ಲದ ಆದರ್ಶ ಯೋಜನೆ. **Utópian** (ಗು., ನಾ.) ಯುಟೋಪಿಯ ದ್ವೀಪದ(ವನು), ಆದರ್ಶ ದ್ವೀಪವಾಸಿ, ಅಸಾಧ್ಯಾದರ್ಶ ವಾದಿ(ಯ). **Utópianism** (ನಾ.)

Útrecht ಯೂಟ್ರೆಕ್ಟ್(ಖ್ಟ್) (ನಾ.) U. velvet ಒಂದು ಬಗೆಯ ಮಖ ಮಲ್ಲಿನಂಥ ಬಟ್ಟೆ (ಹಾಲೆಂಡಿನ ಒಂದು ಪ್ರಾಂತದ ಹೆಸರಿನಿಂದ)

Útricle ಯೂಟ್ರಿಕ್‌ಲ್ (ನಾ.) (ಪ್ರಾಣಿಯ ಅಥವಾ ಸಸ್ಯದ) ಜೀವಕೋಶ, ಜೀವಕಣ; (ಶರೀರದಲ್ಲಿಯ, ಮು., ಒಳಗಿವಿಯಲ್ಲಿಯ) ಸಣ್ಣ ಚೀಲ, ಕುಹರ. **Utrícular** (ಗು.)

Útter[1] ಅಟರ್ (ಗು.) ಸಂಪೂರ್ಣ, ತೀರ, ಅತ್ಯಂತ, ಕೇವಲ (U. misery ದಟ್ಟದಾರಿದ್ರ್ಯ). U. barrister (ನ್ಯಾಯಸ್ಥಾನದಲ್ಲಿ ರಾಜಸನ್ನದಿನ ನ್ಯಾಯವಾದಿಗಳು ವಾದಿಸುವ ಪೀಠಪಂಕ್ತಿಯಿಂದ ಹೊರ ಗಿದ್ದು ವಾದಿಸುವ) ಕಿರಿಯ ನ್ಯಾಯವಾದಿ. **Útterly** (ಕ್ರಿ. ವಿ.); **Úttermost** (ಗು.); **Útterness** (ನಾ.)

Útter[2] ಅಟರ್ (ಕ್ರಿ. ಸಕ.) (ಸುಖ, ದುಃಖ, ಮೊ. ನ್ನು) ಧ್ವನಿಯ ಮೂಲಕ —ಸೂಚಿಸು, ವ್ಯಕ್ತಪಡಿಸು (U. a cry, groan, sigh ಕಿರಿಚಿಕೊ, ನರಳು, ನಿಟ್ಟುಸಿರುಬಿಡು); (ಮಾತಿನಲ್ಲಿ, ಬರವಣಿಗೆಯಲ್ಲಿ) ಹೇಳು, ಉಸಿರು, ನುಡಿ; ಉಚ್ಚರಿಸು. ಖೋಟಾ ನಾಣ್ಯ ಚಲಾವಣೆ ಮಾಡು. **Útterance**[1] (ನಾ.) ಮಾತಿನಲ್ಲಿ ವ್ಯಕ್ತಪಡಿಸುವುದು, ಹೇಳುವುದು, ಹೇಳಿಕೆ (Gave u. to his rage ಅವನ ರೇಗನ್ನು ಮಾತಿನಲ್ಲಿ ಹೊರಗೆಡಹಿದನು); ವಾಕ್‌ಶಕ್ತಿ, ಉಚ್ಚಾರಣೆ (Defective u.); ನುಡಿ, ವಚನ, ಉಕ್ತಿ, ಭಾಷಣ (His pulpit utterances)

Útterance[1]. **Utter**[2] ನೋಡಿ.

Útterance[2] ಅಟರನ್ಸ್ (ನಾ.) (ಸಾಹಿತ್ಯ ಪ್ರ.) To the u. ಪ್ರಾಣ ಹೋಗುವವರೆಗೂ, ಕೊನೆಯುಸಿರಿನವರೆಗೂ, ಕಟ್ಟಕಡೆಯವರೆಗೆ (Fight to the u.)

Úvula ಯೂವ್ಯುಲ (ನಾ.; ಬ. ವ. -lae —ಲೀ) ಕಿರುನಾಲಗೆ; ಮೂತ್ರಕೋಶದಲ್ಲಿಯ, ಉಪ ಮಸ್ತಿಷ್ಕದಲ್ಲಿಯ, —ತೊಂಗಲು. **Úvular** (ಗು.)

Uxórious ಅಕ್ಸೋರಿಯಸ್ (ಗು.) ತನ್ನ ಹೆಂಡತಿಯಲ್ಲಿ ಅತ್ಯಂತ ವ್ಯಾಮೋಹವುಳ್ಳ; ಭಾರ್ಯಾಸಕ್ತ, ಪತ್ನೀವ್ಯಾಮೋಹದ. **Uxóriously** (ಕ್ರಿ. ವಿ.); **Uxóriousness** (ನಾ.)

Úzbeg ಅಸ್‌ಬೆಗ್ (ನಾ.) ಮಧ್ಯ ಏಷ್ಯದ ಒಂದು ತುರುಕ ಕುಲದವನು.

V

V ವೀ. ಇಂಗ್ಲಿಷ್ ವರ್ಣಮಾಲೆಯ ಇಪ್ಪತ್ತೆರಡನೆಯ ಅಕ್ಷರ; V ಆಕಾರದ ವಸ್ತು (ಉದಾ., ಕೀಲು); (ರೋಮನ್ ಅಂಕಿಯಲ್ಲಿ) ೫ (ಉದಾ., IV ೪, VI ೬, viii ೮, xv ೧೫, lv ೫೫)

ಸಂಕ್ಷಿಪ್ತಗಳು: (1) Venereal [**V.D.** (disease) ಮೇಹ ರೋಗ]. (2) Vice- [**V.C.** (chancellor) ಉಪಾಧ್ಯಕ್ಷ]. (3) Victoria [**V.A.** (& Albert) ವಿಕ್ಟೋರಿಯ ಮತ್ತು ಅಲ್ಬರ್ಟ್ ಗೌರವ ವರ್ಗ ಪ್ರಶಸ್ತಿ; **V.C.** (cross) (Cross ನಾ. ನೋಡಿ)]. (4) Voluntary [**V.A.D.** (aid detachment) ಸ್ವಯಂಸೇವಾ ದಳ]. (5) Volunteer [**V.D.** (decoration) ಸ್ವಯಂಸೇವಕ(ರಿಗೆ ಕೊಡುವ ಬಿರುದಿನ) ಪದಕ]. (6) Varia [**v.l.** (lectio) ಪಾಠಾಂತರ]; (7) Verse; (8) Versus; (9) Very [**v.f.** (fair), **v.g.** (good)]; (10) Vide.

Va (Virginia); **Ven.**(erable) (ಆರ್ಚ್‌ಡೀಕನಿನ ವಿಷಯದಲ್ಲಿ) ಪೂಜ್ಯ; **verb.**(um) **sap.**(ienti) (ಆ ಪದ ನೋಡಿ); **Vic.**(toria); **Vis.**(count): **viz** (videlicet) ಎಂದರೆ, ಏನೆಂದರೆ; **vol.**(ume) ಸಂಪುಟ; **Vt** (Vermont) ಅಮೆ. ಸಂ. ದ ಒಂದು ಸಂಸ್ಥಾನ. **vulg.**(arly); **vv.** (Verses)

Va (It.) ವಾ (ಸಂ. ಸೂಚನೆ) ಮುಂದಕ್ಕೆ ಸಾಗು, ಮುಂದುವರಿ [Va crescendo ಏರುವ ದನಿಯಲ್ಲೆ, ಆರೋಹಣದಲ್ಲೆ,—ಮುಂದುವರಿ]

Vácancy. Vacant ನೋಡಿ.

Vácant ವೇಕಂಟ್ (ಗು.) ತೆರಪಾದ, ಬರಿದಾದ, ವಾಸವಾಗಿಲ್ಲದ, ಖಾಲಿ(ಬಿದ್ದಿರುವ), ಶೂನ್ಯ; (ಕೆಲಸವಿಲ್ಲದೆ) ಬಿಡುವಾದ, ವಿರಾಮದ (House is still v. ಮನೆ ಇನ್ನೂ ಖಾಲಿಯಾಗಿದೆ. Have no v. space ತೆರಪಾದ ಸ್ಥಳವೇ ಇಲ್ಲ. Will amuse your v. hours ನಿನ್ನ ಬಿಡುವುಹೊತ್ತಿನಲ್ಲಿ ವಿನೋದಗೊಳಿಸುತ್ತದೆ. V. post ಖಾಲಿ ನೌಕರಿಯ ಸ್ಥಾನ); ಶೂನ್ಯ ಮನಸ್ಸಿನ, ನಿರಾಲೋಚನೆಯ, ಪೊಳ್ಳು ತಲೆಯ, ಬುದ್ಧಿಯಿಲ್ಲದ, ಜಡ, ದಡ್ಡ (A v. stare ಅರ್ಥಶೂನ್ಯ ದೃಷ್ಟಿ. V. frivolities ಅವಿವೇಕದ ಹುಡುಗಾಟಿಕೆಗಳು). **Vácantly** (ಕ್ರಿ. ವಿ.); **Vácancy** ವೇಕನ್ಸಿ (ನಾ.) ತೆರಪಾಗಿರುವುದು, ತೆರಪು, ಖಾಲಿ(ಯಾಗಿರುವುದು), ಬರಿದಾಗಿರುವುದು; ಮನಸ್ಸಿನ ಶೂನ್ಯತೆ, ಬುದ್ಧಿ ಶೂನ್ಯತೆ, ಜಡತೆ; ಸೋಮಾರಿತನ, ನಿರುತ್ಸಾಹ. ಖಾಲಿ ಯಿರುವ—ಹುದ್ದೆ, ಅಧಿಕಾರಸ್ಥಾನ; ಖಾಲಿ ಜಾಗ (Must fill the v.). **Vacáte** ವ(ವೆ)ಕೇಟ್ (ಕ್ರಿ. ಸಕ.) (ಸೈನಿಕ ಸ್ಥಾನ, ಸ್ಥಳ, ಮನೆ, ಸಿಂಹಾಸನ, ಅಧಿಕಾರಸ್ಥಾನ—ಇವನ್ನು) ತೆರಪು ಮಾಡು, ಬಿಟ್ಟು ಹೊರಡು, ತ್ಯಜಿಸು, ಖಾಲಿಮಾಡು; (ನ್ಯಾಯ ನಿಬಂಧನೆ, ಕರಾರು, ಮೊ. ನ್ನು) ರದ್ದುಮಾಡು, ತೊಡೆದುಹಾಕು. **Vacátion** ವ(ವೆ)ಕೇಷನ್ (ನಾ.) (ಮನೆ, ಹುದ್ದೆ, ಮೊ. ನ್ನು) ಬಿಟ್ಟುಬಿಡುವುದು; ತೆರಪು, ಖಾಲಿ, —ಮಾಡುವುದು (*Of* ಉಪ. ದೊಡನೆ). (ಮು., ನ್ಯಾಯಸ್ಥಾನಗಳಲ್ಲಿ ಮತ್ತು ವಿಶ್ವವಿದ್ಯಾನಿಲಯ ಗಳಲ್ಲಿ) ರಜ, ಬಿಡುವು, ಸೂಟಿ, ವಿರಾಮ(ಕಾಲ) (Christmas, Summer, v.)

Vacáte, Vacátion. Vacant ನೋಡಿ.

Váccinate ವ್ಯಾಕ್ಸಿನೇಟ್ (ಕ್ರಿ. ಸಕ.) ಸಿಡುಬು, ದೇವಿ, ದಾಪು,—ಹಾಕು; (ಹೀಗೆಯೆ ಇತರ ರೋಗಗಳಿಗೆ ತಡೆಯಾಗಿ: ಆಯಾ ರೋಗದ) ನಂಜು—ಚುಚ್ಚು, ಸೇರಿಸು. **Vaccinátion** (ನಾ.) —ವುದು. **Vaccinátionist** (ನಾ.) ದೇವಿ ಹಾಕಿಸಬೇಕೆಂದು ವಾದಿಸುವವನು. **Váccinator** (ನಾ.) ದೇವಿ ಹಾಕುವವನು; —ಹಾಕುವ ಸಲಕರಣೆ. **Váccine** ವ್ಯಾಕ್ಸಿನ್, —ಕ್ಸೀನ್ (ಗು., ನಾ.) ಆಕಳ (ಸಿಡುಬಿನ); ದೇವಿಯ; ಸಿಡುಬು ಹಾಕುವುದರ. (ನಾ.) (ದೇವಿ ಹಾಕುವುದರಲ್ಲಿ ಉಪ ಯೋಗಿಸುವ) ಆಕಳ ಸಿಡುಬಿನ ಹಾಲು, ಲಸಿಕೆ (ಅದೇ ರೀತಿ ಉಪಯೋಗಿ ಸುವ ಇತರ) ಹಾಲು, ನಂಜು; ರೋಗವಿಷ (Bovine v. ಆಕಳ ಸಿಡುಬು ಹಾಲು. Humanized v. ಮನುಷ್ಯನ ಸಿಡುಬು ಹಾಲು). V.-farm ಕಡಸುಗಳಿಗೆ ರೋಗವಿಷವನ್ನು ಪ್ರಯೋಗಿಸಿ ಸಿಡುಬಿನ ಹಾಲು ತಯಾರಿಸುವ ಸ್ಥಳ: ಸಿಡುಬು ದನಗಳ ದೊಡ್ಡಿ. V.-point ಸಿಡುಬಿನ ಹಾಲನ್ನು ಚುಚ್ಚಿ ಒಳಹೊಗಿಸಲು ಉಪಯೋಗಿಸುವ ಮೊನಚು ಸಲಕರಣೆ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಿಡುಬು ಸೂಜಿ. **Váccinal** (ಗು.); **Vaccínic** (ಗು.); **Vaccínia** ವ್ಯಾಕ್ಸಿನಿಯ (ನಾ.) (ವೈ. ಶಾ.) (ಮು., ರೋಗವಿಷ ಸೇರಿಸಿ ಬರಿಸಿದ) ಆಕಳ ಸಿಡುಬು.

Vácillate ವ್ಯಾಸಿಲೇಟ್ (ಕ್ರಿ. ಅಕ.) ಪಕ್ಕದಿಂದ ಪಕ್ಕಕ್ಕೆ ಚಲಿಸು; ಓಲಾಡು, ಊಗಲಾಡು, ತೊನೆ, ಹೊಯ್ದಾಡು. (ಅಭಿಪ್ರಾಯದಲ್ಲಿ, ನಿರ್ಧಾರದಲ್ಲಿ) ತೂಗಾಡು, ಡೋಲಾಯಮಾನವಾಗಿರು. **Vácillatingly** (ಕ್ರಿ. ವಿ.); **Vacillátion** (ನಾ.) ತೂಗಾಟ, ಹೊಯ್ದಾಟ, ಓಲೆದಾಟ.

Vácuole, etc. **Vacuous** ನೋಡಿ.

Vácuous ವ್ಯಾಕ್ಯುಅಸ್ (ಗು.) (ಗಾಳಿ, ಅನಿಲ, ಇಲ್ಲದೆ): ಬರಿದಾದ, ತೆರಪಾದ, ಖಾಲಿ, ಶೂನ್ಯ; ನಿರ್ವಾತ; ಬುದ್ಧಿಶೂನ್ಯ, ವಿಷಯಶೂನ್ಯ, ಭಾವಶೂನ್ಯ, ದಡ್ಡ (A v. stare ಭಾವಶೂನ್ಯ ದೃಷ್ಟಿ). **Vacúity** ವ್ಯಾಕ್ಯೂಇಟಿ (ನಾ.); **Vácuousness** —ಕ್ಯು— (ನಾ.); **Vácuum** ವ್ಯಾಕ್ಯುಅಂ (ನಾ.; ಬ. ವ. -ums, -ua) (ಸಂಪೂರ್ಣವಾಗಿ) ನಿರ್ದ್ರವ್ಯಸ್ಥಳ; ಶೂನ್ಯ(ತೆ), ಬರಿದು, ತೆರಪು (Nature abhors a v. ಪ್ರಕೃತಿ ಶೂನ್ಯತೆಯನ್ನು ಸಹಿಸುವುದಿಲ್ಲ). (ವಾಯುರೇಚಕ, ಮೊ. ಗಳಿಂದ ವಾಯುವನ್ನು ಬಹುಮಟ್ಟಿಗೆ ಪೂರ್ತಿಯಾಗಿ ಹೊರಹೊರಡಿಸಿದ) ನಿರ್ವಾಯು, ಶೂನ್ಯ, —ಸ್ಥಳ, ಪಾತ್ರೆ; ವಾಯು ಶೂನ್ಯತೆ (Guerickian v. ವಾಯು ರೇಚಕ ಯಂತ್ರದಿಂದ ಉಂಟಾಗುವ ನಿರ್ವಾಯು ಸ್ಥಳ. Torricellian v. ಪಾದರಸ ಪಂಪಿನಿಂದ ಉಂಟಾಗುವ ನಿರ್ವಾಯು ಸ್ಥಳ). (ಶಿಥಿಲ ಪ್ರ.) ಸಾಧಾರಣ ವಾಯು ಒತ್ತಡಕ್ಕಿಂತ ಕೆಲಮಟ್ಟಿಗೆ ಒತ್ತಡ ಕಡಮೆಯಾಗಿರುವುದು: ವಾಯು ವಿರಳತೆ. V.-brake ರೈಲುಗಾಡಿಯಲ್ಲಿ ಉಪಯೋಗಿಸುವ, ವಾಯು ರೇಚನದಿಂದ ಶೂನ್ಯ ಸ್ಥಳವುಂಟಾಗಿ ಕೆಲಸಮಾಡುವ, ಒಂದು ಬಗೆಯ ಬರಿ: ಗಾಳಿ ತೆರಪಿನ ಬರಿ; ನಿರ್ವಾಯು ರೋಧಕ. V.-cleaner (ವಾಯು) ಚೋಷಣೆಯ ಮೂಲಕ ಧೂಳು, ಮೊ. ನ್ನು ಕಳೆಯುವ ಸಲಕರಣೆ: ನಿರ್ವಾಯು ಮಾರ್ಜಕ; ಧೂಳು ಚೋಷಕ. V.-flask ಒಳಗಿನ ದ್ರವವು ಒಂದೇ ಶಾಖದಲ್ಲಿ ಬಹುಕಾಲವಿರುವಂತೆ ಎರಡು ಗಾಜು ಗೋಡೆಗಳ ನಡುವೆ ನಿರ್ವಾಯು ಆವರಣವಿಟ್ಟು ಮಾಡಿರುವ ಗಾಜುಪಾತ್ರೆ: ನಿರ್ವಾಯು ಗಾಜುಬುಡ್ಡಿ (Thermos ಕೆಳಗೆ Thermos flask ನೋಡಿ). V.-gauge ವಾಯು ಚೋಷಣೆಯ ಪರಿಣಾಮವಾಗಿ ಉಳಿದಿರುವ ವಿರಳ ವಾಯುವಿನ ಒತ್ತಡವನ್ನು ಪರೀಕ್ಷಿಸುವ ಸಲಕರಣೆ: ವಾಯು ಶೂನ್ಯತಾ ಮಾಪಕ. V.-tube ವಿದ್ಯುತ್ ಕಿಡಿಯ ಪಥವನ್ನು ಸಮೀಕ್ಷಿಸುವುದಕ್ಕಾಗಿ ಬಹುಮಟ್ಟಿಗೆ ನಿರ್ವಾಯು ಸ್ಥಳವುಳ್ಳ ಮುಚ್ಚಿದ ಗಾಜಿನ ನಳಿಕೆ: ನಿರ್ವಾಯು ನಳಿಕೆ (Therm ಕೆಳಗೆ Thermionic valve ನೋಡಿ). **Vácuole** ವ್ಯಾಕ್ಯುಓಲ್ (ನಾ.) (ಜೀ. ವಿ.) (ಅಂಗ, ಮೊ. ಗಳಲ್ಲಿ ವಾಯು, ದ್ರವ, ಮೊ. ನ್ನು ಒಳಕೊಂಡ) ಸೂಕ್ಷ್ಮ ಕುಹರ. **Vácuolar** (ಗು.); **Vácuolate** (ಗು.)

Vácuum. **Vacuous** ನೋಡಿ.

Váde-mécum ವೇಡಿ(ಡೆ)ಮೀಕಂ (ನಾ.) (ಸದಾ ಜೊತೆಯಲ್ಲಿ ಇಟ್ಟುಕೊಂಡಿರುವ) ಸಂಗಾತಿ—ಕೈಪಿಡಿ, ಹಸ್ತಪುಸ್ತಕ; ಕೈವಸ್ತು (ಅನೇಕ ವೇಳೆ ಪುಸ್ತಕದ ಹೆಸರಾಗಿ ಪ್ರ.) (ಲ್ಯಾಟಿನ್ ವಾಕ್ಯ: 'ನನ್ನ ಸಂಗಡ ಹೋಗು')

Vae víctis (L) ವೀ ವಿಕ್ಟಿಸ್ (ಭಾವ. ಅವ್ಯ.) ಸೋತವನ ಪಾಡು ಬೇಡ! ಸೋತವನು ಸತ್ತ! (ವಿಜಯದ ಪೂರ್ಣ ಫಲವನ್ನು ಕಸಿದುಕೊಳ್ಳಬೇಕೆಂಬ ವಿಜಯಿಯ ಉದ್ದೇಶಸೂಚಕವಾಗಿ)

Vágabond ವ್ಯಾಗಬಂಡ್ (ಗು., ನಾ., ಕ್ರಿ. ಅಕ.) ಗೊತ್ತಾದ ನೆಲೆಯಿಲ್ಲದ, ಸ್ಥಿರವಾದ ವಾಸಸ್ಥಾನವಿಲ್ಲದ, ಅಲೆದಾಡುವ; ಅಲೆಮಾರಿಯಾಗಿ ಜೀವಿಸುವ; ಅಲ್ಲಿಂದಿಲ್ಲಿಗೆ ಪರೆದಾಡುವ; ತೊಂಡುಬಿದ್ದ, ಪೋಲಿಯಾದ. (ಜೇಡರ ಹುಳುವಿನ ವಿಷಯದಲ್ಲಿ: ತನ್ನ ಆಹಾರಕ್ಕಾಗಿ ಬಲೆಯಲ್ಲಿ ಕಾದು ಕುಳಿತಿರದೆ) ತಿರುಗುತ್ತಿರುವ. (ನಾ.) (ಮು., ಸೋಮಾರಿಯಾದ ಮತ್ತು ನಿಷ್ಪ್ರಯೋಜಕನಾದ) ಅಲೆಮಾರಿ; ತಿರುಕ; (ಬಳ. ಮಾ.) ಅಪಾಪೋಲಿ, ಸ್ವೇಚ್ಛಾಚಾರಿ. (ಕ್ರಿ.) (ಈಗ ಬಳ. ಮಾ.) ಅಲೆದಾಡು, ತೊಂಡು ತಿರುಗು, ಪೋಲಿ ತಿರುಗು. **Vágabondage** (ನಾ.); **Vágabondish** (ಗು.); **Vágabondism** (ನಾ.); **Vágabondize** (ಕ್ರಿ. ಅಕ.)

Vágary ವೇಗರಿ, **Vagáry** ವಗೇರಿ (ನಾ.) ಮನಸೋ ಇಚ್ಛೆಯ, ವಿಚಿತ್ರ, ಹುಚ್ಚಾಬಟ್ಟೆಯ, —ವರ್ತನೆ, ಭಾವನೆ, ಕಲ್ಪನೆ; ಹುಚ್ಚಾಟಿಕೆ.

Vagína ವಜೈನ (ನಾ.; ಬ. ವ. -nae, —ನೀ, -nas) ಚೀಲ, ಕೋಶ(ದಂಥ ಹೊದಿಕೆ, ಆವರಣ); (ಮು., ಅಂ. ರ. ಶಾ.) ಹೆಂಗಸರಲ್ಲೂ ಹೆಣ್ಣು ಪ್ರಾಣಿಗಳಲ್ಲೂ ಗರ್ಭಕೋಶದಿಂದ ಜನನೇಂದ್ರಿಯದ ಹೊರ ದ್ವಾರದವರೆಗಿನ ಲೈಂಗಿಕಮಾರ್ಗ: ಯೋನಿ (—ಮಾರ್ಗ, ನಾಳ) [**Vaginítis** ವ್ಯಾಜಿನೈಟಿಸ್ (ನಾ.) ಯೋನಿನಾಳದ ಉರಿಯೂತ. **Vaginótomy** (ನಾ.) ಯೋನಿಚ್ಛೇದ]; (ಸ. ವಿ.) ಎಲೆಯ ಬುಡದಿಂದ ಹೊರಟು ಕಾಂಡದ ಸುತ್ತ ಆವರಿಸಿಕೊಂಡಿರುವ ಕೋಶ: ಕಾಂಡಕೋಶ. **Vagínal** ವಜೈನಲ್, **Váginal** ವ್ಯಾಜಿನಲ್ (ಗು.); **Váginate(d)** (ಗು.) ಕೋಶಾವೃತ.

Vágrant ವೇಗ್ರಂಟ್ (ಗು., ನಾ.) ತಿರುಗಾಡುವ, ಅಲೆದಾಡುವ, ಸುತ್ತಾಡುವ, ಸಂಚಾರಿ (A v. musician ಸಂಚಾರಿ ಸಂಗೀತಗಾರ). (ನಾ.) ಅಲೆದಾಡುವವನು; ಅಲೆಮಾರಿ; ತಿರುಕುಳಿ, ಪೋಲಿ. (ನ್ಯಾ. ಶಾ.) (ಸಾರ್ವಜನಿಕ ಶಾಂತಿಗೆ ಅಥವಾ ಸಾರ್ವಜನಿಕರ ಯೋಗಕ್ಷೇಮಕ್ಕೆ ಭಂಗತರುವ, ಶಿಕ್ಷಾರ್ಹನಾದ) ಪೋಲಿ ಪುಂಡ, ಪುಂಡ ಅಲೆಮಾರಿ. **Vágrantly** (ಕ್ರಿ. ವಿ.); **Vágrancy** (ನಾ.)

Vague ವೇಗ್ (ಗು.) ವಿಶದವಾಗಿ—ಹೇಳಿಲ್ಲದ, ನಿರ್ದೇಶಿಸಿಲ್ಲದ; ಅನಿಶ್ಚಿತ, ಅಸ್ಪಷ್ಟ, —ಅರ್ಥದ, ಸ್ವಭಾವದ; ಸಂದಿಗ್ಧ, ಅಸ್ಪಷ್ಟ, ಅಸ್ಫುಟ (A v. answer ಅಸ್ಪಷ್ಟ ಉತ್ತರ. V. terrors). **Váguely** (ಕ್ರಿ. ವಿ.); **Vágueness** (ನಾ.)

Vail[1] ವೆಯ್ಲ್ (ಕ್ರಿ.) (ಪ್ರಾಚೀ. ಪ್ರ., ಕಾವ್ಯ) (ವಿಧೇಯತೆಯ ಸೂಚನೆಯಾಗಿ; ಗರಿ, ಕಿರೀಟ, ಮೊ. ನ್ನು) ತಗ್ಗಿಸು, (ಕೆಳಕ್ಕೆ) ಇಳಿಸು, ಬಗ್ಗಿಸು; ತಗ್ಗು, ಬಗ್ಗು, ಮಣಿ, ಒಳಪಡು, ವಶವರ್ತಿಯಾಗು, ಬಿಟ್ಟುಕೊಡು (The Ministry v. to every measure to humour the people); (ಮರ್ಯಾದೆಯ ಸೂಚನೆಯಾಗಿ) ಟೋಪಿ ತೆಗೆ.

Vail[2] ವೆಯ್ಲ್ (ನಾ.) (ಪ್ರಾಚೀ. ಪ್ರ.) ಇನಾಮು, ಬಕ್ಷೀಸು; ಲಂಚ.

Vain ವೇನ್ (ಗು.) ಹುರುಳಿಲ್ಲದ, ತಿರುಳಿಲ್ಲದ, ಪೊಳ್ಳು, ಅಲ್ಪ (V. boasts ಪೊಳ್ಳು ಜಂಬಗಳು. V. distinctions ಅಲ್ಪ ಭೇದಗಳು); ವ್ಯರ್ಥ, ನಿಷ್ಪ್ರಯೋಜಕ, ನಿರರ್ಥಕ, ನಿಷ್ಫಲ [In v. ವ್ಯರ್ಥವಾಗಿ, ನಿಷ್ಫಲವಾಗಿ (We protested in v.). Take God's name in v. (Take ನೋಡಿ). It is v. to resist ಪ್ರತಿಭಟಿಸುವುದು ವ್ಯರ್ಥ]; ಹೆಮ್ಮೆಯ, ಅಹಂಕಾರದ, (ಸ್ವ)ಪ್ರತಿಷ್ಠೆಯ; (ತನ್ನ ಸೌಂದರ್ಯ, ಸಾಮರ್ಥ್ಯ, ಮೊ. ಗಳ ವಿಷಯದಲ್ಲಿ) ದುರಭಿಮಾನವುಳ್ಳ (*Of* ಉಪ. ಜೊಡನೆ). **Vainglóry** (ನಾ.) (ಬಂಡವಾಳವಿಲ್ಲದ) ಬಡಾಯಿ, ಬಡಿವಾರ, ಒಣ ಹೆಮ್ಮೆ. **Vainglórious** (ಗು.); **Vainglóriously** (ಕ್ರಿ. ವಿ.); **Vainglóriousness** (ನಾ.); **Váinly** (ಕ್ರಿ. ವಿ.); **Váinness** (ನಾ.); **Vánity** ವ್ಯಾನಿಟಿ (ನಾ.) ಪೊಳ್ಳು, ಹುರುಳಿಲ್ಲದಿರುವಿಕೆ, ನಿರರ್ಥಕತೆ, ನಿಸ್ಸಾರತೆ; ಹುರುಳಿಲ್ಲದ್ದು, ನಿಸ್ಸಾರ (ವಾದದ್ದು) [The v. of worldly wealth ಐಹಿಕ ಸಂಪತ್ತಿನ ನಶ್ವರತೆ, ವ್ಯರ್ಥತೆ. All is v. ಎಲ್ಲವೂ ನಿಸ್ಸಾರ, ತುಚ್ಛ. V. fair (ಬನ್ಯನಿನ 'Pilgrims' Progress' ಎಂಬ ಗ್ರಂಥದಲ್ಲಿ ಪ್ರಪಂಚವನ್ನು ರೂಪಕ ರೀತಿಯಲ್ಲಿ ನಿರೂಪಿಸಿರುವ) ಆಶೆ ಭೋಗಗಳ ಸಂತೆ]; ಬರಿಯ ಬಡಾಯಿ, ಒಣಹೆಮ್ಮೆ, ಅಹಂಕಾರ, ಪ್ರತಿಷ್ಠೆ [V. bag, case ಸಣ್ಣ ಬಾಚಣಿಗೆ ಪೆಟ್ಟಿಗೆ, ಅಲಂಕಾರದ ಚೀಲ (ಯಾವಾಗಲೂ ಸಂಗಡಲೇ ಒಯ್ಯುವ, ಸಣ್ಣ ಕನ್ನಡಿ, ಮುಖಪುಡಿ, ರಂಗು, ಕುಂಚ, ಮೊ. ಗಳನ್ನುಳ್ಳದ್ದು)]; ಡೌಲು, ಡಬಡ್ಡಾಳಿಕೆ, ಆಡಂಬರ ಪ್ರದರ್ಶನ, ಡಂಭಾಚಾರ; (ಬೈಬಲ್ಲಿನ ಹಳೆಯ ಒಡಂಬಡಿಕೆ) ಅಕ್ರೈಸ್ತ, 'ಹೀದನ್'—ದೇವತೆ (The vanities of the gentiles)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Vaísya ವೈಸ್ಯ (ನಾ.) ಹಿಂದೂಗಳ ನಾಲ್ಕು ವರ್ಣಗಳಲ್ಲಿ ಮೂರನೆಯ ವರ್ಣ(ದವನು) ; ವೈಶ್ಯ.

Vakeél, -kíl ವಕೀಲ್ (ನಾ.) (ಈಸ್ಟ್ ಇಂಡಿಯನ್ ಪ್ರ.) (ಆಸ್ಥಾನದಲ್ಲಿರುವ) ರಾಯಭಾರಿ, ನಿಯೋಗಿ ; (ದೇಶೀಯ) ನ್ಯಾಯವಾದಿ ; ವಕೀಲ.

Válance ವ್ಯಾಲನ್ಸ್, **Válence**[1] —ಲೆನ್ಸ್ (ನಾ.) (ಪೀಠೋಪಕರಣಗಳಿಗೆ ಉಪಯೋಗಿಸುವ) ಒಂದು ಬಗೆಯ ಡಮಾಸ್ಕ್ ಬಟ್ಟೆ ; (ಮಂಚದ ಮೇಲ್ಚಪ್ಪರದ ಅಥವಾ ಚೌಕಟ್ಟಿನ ಸುತ್ತಣ) ವೋಟು ಪರದೆ. **Válanced** (ಗು.)

Vale[1] ವೇಲ್ (ನಾ.) ಕಣಿವೆ [ಈಗ ಸಾ., ಕಾವ್ಯ ಪ್ರ. ಅಥವಾ ಹೆಸರುಗಳಲ್ಲಿ ಮಾತ್ರ: (ಉದಾ., White Horse V.) ; V. of tears ಕಣ್ಣೀರು, ದುಃಖಮಯ, —ಪ್ರಪಂಚ] ; (ಪಂಪು, ಮೊ. ಗಳಿಂದ ನೀರು ಸಾಗಿಸುವ) ಸಣ್ಣ ಕಾಲುವೆ, ದೋಣಿ.

Vále[2] ವೇಲಿ (ಭಾವ. ಅವ್ಯ., ನಾ.) = Farewell. **Valedíction** ವ್ಯಾಲಡಿಕ್‌ಷನ್ (ನಾ.) ಬೀಳ್ಕೊಳ್ಳುವುದು ; ಕಡೆಯ ವಂದನೆ ; ಬೀಳ್ಕೊಳ್ಳುವಾಗ ಹೇಳುವ ಮಾತುಗಳು ; (ಪರಿ)ಸಮಾಪ್ತಿ ಭಾಷಣ ; ಸಮಾಪನ—ಶುಭ ವಾಚನ, ಶುಭಾಶಯ(ಗಳು). **Valedíctory** (ಗು., ನಾ.) ಪರಿಸಮಾಪನ, ಬೀಳ್ಕೊಳ್ಳುವ. (ನಾ.) (ಅಮೆ. ಸಂ.) (ಪದವೀಧರನಾದ ಶ್ರೇಷ್ಠ ದರ್ಜೆಯ ಹಿರಿಯ ವಿದ್ಯಾರ್ಥಿ ಮಾಡುವ) ಬೀಳ್ಕೊಡುವ, ಕಡೆಯ ವಂದನೆಯ, ಪರಿಸಮಾಪನ, —ಭಾಷಣ. **Valedictórian** (ನಾ.) (ಅಮೆ. ಸಂ.) ಪ್ರಾರಂಭದ ದಿನ ಸ್ವಸ್ತಿ ಭಾಷಣಮಾಡಲು ನೇಮಕನಾದ ವಿದ್ಯಾರ್ಥಿ : ಸ್ವಸ್ತಿ ಭಾಷಣಕಾರ.

Valedíction, etc. Vale[2] ನೋಡಿ.

Válence[1]. **Valance** ನೋಡಿ.

Válence[2] ವೇಲೆನ್ಸ್ (ನಾ.) (ರ. ವಿ.) ಜಲಜನಕದ (ಅಥವಾ ಇತರ) ಪರಮಾಣುಗಳೊಡನೆ ಸಂಯೋಗ ಹೊಂದಲು (ಅಥವಾ ಆ ಪರಮಾಣುಗಳ ಸ್ಥಾನಾಕ್ರಮಣ ಮಾಡಲು) ಒಂದು ಮೂಲಧಾತುವಿನ ಪರಮಾಣುವಿಗಿರುವ ಶಕ್ತಿ : ಸಂಯೋಗ ಶಕ್ತಿ (Carbon has a v. of four ಇಂಗಾಲದ ಸಂಯೋಗ ಶಕ್ತಿ ನಾಲ್ಕು). **Válency** (ನಾ.) ಸಂಯೋಗ ಶಕ್ತಿಯ ಏಕಮಾನ ; = Valence[2]. **Válent** (ಗು.) (ಸಾ., ಸಮಾಸಪದಗಳಲ್ಲಿ ಪ್ರ.) ಸಂಯೋಗ ಶಕ್ತಿಯುಳ್ಳ ; ಸಂಯೋಗ ಶಕ್ತ (Monovalent, Bivalent, etc. ಏಕಸಂಯೋಗ ಶಕ್ತ, ದ್ವಿಸಂಯೋಗ ಶಕ್ತ, ಇತ್ಯಾದಿ)

Valéncia ವಲೆನ್ಷ (ನಾ.) ಸ್ಪೆಯ್ನ್ ದೇಶದ ಒಂದು ಪ್ರಾಂತ. (ಸಾ., ಬ. ವ. ದಲ್ಲಿ) ಉಣ್ಣೆಯ ಹೊಕ್ಕು, ರೇಷ್ಮೆಯ, ಹತ್ತಿಯ ಅಥವಾ ನಾರಿನ ಹಾಸೂ ಬೆರಕೆಯಾದ, ಸಾ., ಪಟ್ಟೆಗಳುಳ್ಳ, ಬಟ್ಟೆ. (ಬ. ವ. ದಲ್ಲಿ) ವಲೆನ್ಷದ ಬಾದಾಮಿ ಅಥವಾ ದ್ವೀಪದ್ರಾಕ್ಷಿ.

Valenciénnes ವಾಲಾನ್ಸ್ಯೇನ್ಸ್, ವ್ಯಾಲೆನ್ಸೀನ್ಸ್ (ನಾ.) ಒಂದು ಬಗೆಯ ಬಹು ಬೆಲೆಯ ಜರತಾರಿ, ಅಲಂಕಾರಪಟ್ಟಿ. ಒಂದು ಬಗೆಯ ಬುದ್ಧಿ ಚಮತ್ಕಾರ ಪ್ರಧಾನವಾದ ಕೃತಿ (ರಚನೆ)

Válency. **Valence**[2] ನೋಡಿ.

Válentine ವ್ಯಾಲೆಂಟೈನ್ (ನಾ.) [(St) Valentine's day ಫೆಬ್ರುವರಿ ೧೪ನೆಯ ತಾರೀಖಿನ ದಿನ (ಸಂತ ವ್ಯಾಲೆಂಟೈನಿನ ಶಿರಶ್ಛೇದನವಾದ ದಿನ ; ಅಂದು ಹಕ್ಕಿಗಳು ಕೂಟ ಕೂಡುತ್ತಿದ್ದುವೆಂದು ಊಹೆಯಿತ್ತು)]. ಫೆಬ್ರುವರಿ ೧೪ನೆಯ ತಾರೀಖಿನ ದಿನ ಆರಿಸಿಕೊಂಡ ನಲ್ಲ, ನಲ್ಲೆ ; ವ್ಯಾಲೆಂಟೈನ್ ಪ್ರಣಯಿ(ನಿ); (ಆ ದಿನ ನಲ್ಲನಿಗೆ ಅಥವಾ ನಲ್ಲೆಗೆ ಕಳುಹಿಸಿದ) ಪ್ರಣಯದ ಅಥವಾ ಪ್ರಣಯ ಪರಿಹಾಸದ ಪತ್ರ ಅಥವಾ ಚಿತ್ರ : ವ್ಯಾಲೆಂಟೈನ್—ಪತ್ರ, ಚಿತ್ರ.

Valérian ವಲ(ಯಿ)ರಿಯನ್ (ನಾ.) ಮಾಸಲುಗೆಂಪಿನ ಅಥವಾ ಬಿಳಿಯ ಸಣ್ಣ ಹೂವು ಬಿಡುವ, ಕಟು ವಾಸನೆಯ, ಬೆಕ್ಕುಗಳೂ ಇಲಿಗಳೂ ಆಸೆಪಟ್ಟು ತಿನ್ನುವ, ಒಂದು ಬಗೆಯ ಸಸ್ಯ (ಮು., common v.) ; ಮೃದು ಉತ್ತೇಜಕ, ಮೊ. ಗಿ ಉಪಯೋಗಿಸುವ ಇದರ ಬೇರು. **Válerate** ವ್ಯಾಲೆರೇಟ್, **Valérianate** ವಲೇರಿಯನೇಟ್ (ನಾ.) (ರ. ವಿ.) ಒಂದು ಕ್ಷಾರದೊಡನೆ ವಲೆರಿಕ್ ಆಮ್ಲದ ಸಂಯೋಗದಿಂದ ಉಂಟಾದ ಲವಣ : ವಲೆರಿಕ್ ಆಮ್ಲದ ಲವಣ. **Valéric** ವಲಿಯರಿಕ್, ವಲೆರಿಕ್ (ಗು.) (ರ. ವಿ.) V. acid ವಲೆರಿಕ್ ಆಮ್ಲ ($C_5H_{10}O_2$)

Válet ವ್ಯಾಲೆ(ಲಿ)ಟ್, ವಾಲ್ಯೇ (ನಾ., ಕ್ರಿ. ಸಕ., -eted —ಲಿಟಿಡ್, —ಲೇಡ್) (ದೊಡ್ಡ ಮನುಷ್ಯನ) ಕೈಯಾಳು ; ಅಂಗ ಸೇವಕ, ಭೃತ್ಯ [= **V. de chambre** ವಾಲೇ ಡ ಷಾನ್‌ಬ್ರ್ (F)] (No man is a hero to his v. ಹಳಗಿದ ಆಳಿಗೆ ಧಣಿಯ ಮಹತ್ವ ತಿಳಿಯುವುದಿಲ್ಲ). [**V. de place** (—ಡ ಪ್ಲಾಸ್) (ಮು., ಫ್ರಾನ್ಸಿನಲ್ಲಿ) ಚಾರ, ಹರಿಕಾರ]. ಕುದುರೆಗಳನ್ನು ತರಬೇತುಮಾಡುವಲ್ಲಿ ಉಪಯೋಗಿಸುವ ಕಬ್ಬಿಣದ ಮೊನೆಯುಳ್ಳ ಕೋಲು : ಕುದುರೆ ತರಬೇತಿನ ಕೋಲು. (ಕ್ರಿ.) ಅಂಗ ಸೇವಕನಾಗಿರು ; —ನಾಗಿ ಸೇವೆಮಾಡು.

Valetudinárian ವ್ಯಾಲ(ಲೆ)ಟ್ಯೂಡಿನೇರಿಯನ್ (ಗು., ನಾ.) ನಿತ್ಯ ರೋಗಿ ; ಅಸ್ವಸ್ಥ ; ಕಾಯಿಲೆಯ (ಮನುಷ್ಯ) ; ರೋಗಿ(ಷ್ಠ) ; ಮತ್ತೆ ಆರೋಗ್ಯ ಪಡೆಯಲು ಬಯಸುತ್ತಿರುವವನು, ಪುನರಾರೋಗ್ಯಾಭಿಲಾಷಿ ; ತನ್ನ ಆರೋಗ್ಯದ ವಿಚಾರವಾಗಿ ಆತಂಕಗೊಂಡಿರುವ(ವನು). **Valetudinárianism** (ನಾ.) ; **Valetúdinary** (ಗು., ನಾ.) = Valetudinarian.

Valhálla ವ್ಯಾಲ್‌ಹ್ಯಾಲ (ನಾ.) (ನಾರ್ವೆಯ ಪುರಾಣ) ಕದನದಲ್ಲಿ ಕೊಲ್ಲಲ್ಪಟ್ಟ ವೀರರ ಆತ್ಮಗಳು ಭೋಗಪಡುವ ಸ್ವರ್ಗಮಂದಿರ : ವೀರಸ್ವರ್ಗ. ಒಂದು ಜನಾಂಗದ ಮಹಾಪುರುಷರ ಸಮಾಧಿ ಸ್ಥಳ (ಉದಾ., ಇಂಗ್ಲೆಂಡಿನ Westminster Abbey)

Váliant ವ್ಯಾಲಿಯಂಟ್ (ಗು.) (ವ್ಯಕ್ತಿಯ ಅಥವಾ ವರ್ತನೆಯ ವಿಷಯದಲ್ಲಿ) ಕೆಚ್ಚಿನ, ಧೈರ್ಯದ, ಶೌರ್ಯದ. **Váliantly** (ಕ್ರಿ. ವಿ.)

Válid ವ್ಯಾಲಿಡ್ (ಗು.) (ಕಾರಣ, ಆಕ್ಷೇಪಣೆ, ವಾದ, ಮೊ. ಗಳ ವಿಷಯದಲ್ಲಿ) ಸರಿಯಾದ, ಸಮಂಜಸವಾದ, ಸಪ್ರಮಾಣವಾದ; (ನ್ಯಾ. ಶಾ.) ನ್ಯಾಯ ದೃಷ್ಟಿಯಲ್ಲಿ—ಸರಿಯಾಗಿರುವ, ತಕ್ಕದ್ದಾಗಿರುವ ; ಕ್ರಮಾನುಸಾರವಾಗಿ ನಿರ್ವಹಿಸಿದ ; ನ್ಯಾಯ, ಕಾನೂನು, —ಸಮ್ಮತವಾದ ; ಊರ್ಜಿತವಾಗುವ (V. contract). **Valídity** (ನಾ.) ಸಮಂಜಸತೆ, ಸಪ್ರಮಾಣತೆ ; (ನ್ಯಾ. ಶಾ.) ಕ್ರಮಬದ್ಧತೆ, ಊರ್ಜಿತತ್ವ. **Válidly** (ಕ್ರಿ. ವಿ.) ; **Válidate** ವ್ಯಾಲಿಡೇಟ್ (ಕ್ರಿ. ಸಕ.) ಊರ್ಜಿತಮಾಡು, ಕಾನೂನು ಸಮ್ಮತಮಾಡು ; ಕಾಯಂಮಾಡು, ಸ್ಥಿರೀಕರಿಸು ; (ಚುನಾವಣೆ) ಕ್ರಮಬದ್ಧವೆಂದು, (ವ್ಯಕ್ತಿ) ಕ್ರಮವಾಗಿ ಚುನಾವಣೆಯಾಗಿರುವನೆಂದು, —ಪ್ರಕಟಪಡಿಸು. **Validátion** (ನಾ.)

Valíse ವಲೀಸ್(ಸ್) (ನಾ.) (ಪ್ರಯಾಣದಲ್ಲಿ ಉಪಯೋಗಿಸುವ) ಸಣ್ಣ ತೊಗಲು ಕೈಪೆಟ್ಟಿಗೆ. (ಸೈನಿಕ) ಸಿಪಾಯಿಯ ಸಾಮಾನು ಚೀಲ.

Vallécula ವ್ಯಾಲೆಕ್ಯುಲ (ನಾ.) (ಅಂ. ರ. ಶಾ., ಸ. ವಿ. ; ಬ. ವ. -ae, —ಲೀ) ಗಾಡಿ, ಕಾಲುವೆ. **Vallécular** (ಗು.) ; ಗಾಡಿಯ. **Valléculate** (ಗು.) ಗಾಡಿಗಳುಳ್ಳ.

Válley ವ್ಯಾಲಿ (ನಾ., ಬ. ವ. -eys —ಲಿಸ್) (ಗುಡ್ಡಗಳ ನಡುವಣ, ಸಾ., ತೊರೆ ಹರಿಯುವ) ಕಣಿವೆ, ಕಂದರ [V. of the shadow of death ದಾರುಣ ದುಃಖ(ದ ಕಾಲ); ಮರಣ ಸಂಕಟ(ದ ಕಾಲ). V. of tears = Vale of tears (Vale[1] ನೋಡಿ)] ; (ಕಣಿವೆಯಂಥ) ತಗ್ಗು ಪ್ರದೇಶ, ಹಳ್ಳ ; (ವಾ. ಶಾ.) ಎರಡು ಇಳಿಜಾರು ಚಾವಣಿಗಳು ಕೆಳ ತುದಿಯಲ್ಲಿ ಸಂಧಿಸುವುದರಿಂದ ಆದ (V ಆಕಾರದ) ಒಳ ಕೋನ : ಚಾವಣಿ ಕಣಿವೆ. (ಅಂ. ರ. ಶಾ.) = Vallecula.

Vállum ವ್ಯಾಲಂ (ನಾ.) (ರೋ. ಪ್ರಾ. ; ಕೋಟೆಕೊತ್ತಳ) ಆಳುವೇರಿ; (ಅಂ. ರ. ಶಾ.) ಹುಬ್ಬು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Válorize ವ್ಯಾಲರೈಸ್ (ಕ್ರಿ. ಸಕ.) ಸರ್ಕಾರಿ ಕಾರ್ಯಕ್ರಮದಿಂದ (ಸರಕು, ಮೊ. ರ) ಬೆಲೆಯನ್ನು—ಹೆಚ್ಚಿಸು, ಸ್ಥಿರಪಡಿಸು. **Valorizátion** (ನಾ.)

Válour ವ್ಯಾಲರ್ (ನಾ.) (ಈಗ ಮು., ಕಾವ್ಯ, ಅಲಂ., ಅಥವಾ ಹಾಸ್ಯ ಪ್ರ.) (ಯುದ್ಧದಲ್ಲಿ ತೋರಿಸುವ) ಕಲಿತನ, ಶೌರ್ಯ, ಪರಾಕ್ರಮ. **Válorous** (ಗು.); **Válorously** (ಕ್ರಿ. ವಿ.)

Valse (G) ವಾಲ್ಸ್ (ನಾ.) = Waltz (ಆ ಪದ ನೋಡಿ)

Válue ವ್ಯಾಲ್ಯು (ನಾ., ಕ್ರಿ. ಸಕ.) ಬೆಲೆ, ಮೌಲ್ಯ, ಕಿಮ್ಮತ್ತು; (ಒಂದರ) ಉಪಯುಕ್ತತೆ, ಪ್ರಯೋಜನ, ಮುಖ್ಯತೆ, ಮಹತ್ವ, ಯೋಗ್ಯತೆ [Learnt the v. of fresh water, a friend. Commercial v. (ಒಂದು ಸರಕಿನ) ಕೊಳ್ಳುವ ಸಾಮರ್ಥ್ಯ, ಪೇಟೆಯ ಬೆಲೆ. Economic v. ಇತರ ಸರಕುಗಳನ್ನು ಕೊಳ್ಳಲು ಒಂದು ಸರಕಿಗಿರುವ ಸಾಮರ್ಥ್ಯ: ಆರ್ಥಿಕ ಬೆಲೆ. Exchange(able) v. *or* v. in exchange ಬಹಿರಂಗ ಪೇಟೆಯಲ್ಲಿ ಒಂದು ಪದಾರ್ಥಕ್ಕೆ ವಿನಿಮಯವಾಗಿ ದೊರೆಯುವ (ಬಳಕೆಯ ಅರ್ಥದಲ್ಲಿ) ಹಣದ ಮೊತ್ತ, ಅಥವಾ (ಅರ್ಥ ಶಾಸ್ತ್ರದಲ್ಲಿ) ಇತರ ಸರಕುಗಳ ಮೊತ್ತ: ವಿನಿಮಯ ಮೌಲ್ಯ; ಮಾರುವ ಬೆಲೆ. Face, surrender, v. (ಆಯಾ ಪದ ನೋಡಿ). Surplus v. ಕೆಲಸಗಾರನ ಮತ್ತು ಅವನ ಕುಟುಂಬದ ಜೀವನಕ್ಕೆ ಸಾಕಾಗಿ ಹೆಚ್ಚಿಗೆ ಉಳಿಯುವ ಉತ್ಪನ್ನ: ಹೆಚ್ಚಿಗೆಯ ಉತ್ಪನ್ನ, ಅಧಿಕೋತ್ಪನ್ನ]; (ಬದಲು) ಬೆಲೆ, ಪ್ರತಿಫಲ ಮೌಲ್ಯ [V. received (ಹುಂಡಿ, ಮೊ. ಗಳಲ್ಲಿ ಉಪಯೋಗಿಸುವ ಮಾತು): ಹಣ ಸಂದಿದೆ. Got good v. for his money ತನ್ನ ಹಣಕ್ಕೆ ತಕ್ಕ ಬೆಲೆಯ ಪದಾರ್ಥವನ್ನು ಪಡೆದನು. The precise v. of a word ಪದದ ನಿಷ್ಕೃಷ್ಟ ಅರ್ಥ, ಮಾತಿನ ನಿಷ್ಕೃಷ್ಟ ಬೆಲೆ. Give the note its full time-v. ಸ್ವರಕ್ಕೆ ಅದರ ಪೂರ್ಣ ಕಾಲಪ್ರಮಾಣ ಕೊಡು]; (ವರ್ಣಚಿತ್ರ ಕಲೆ) ನೆಳಲು ಬೆಳಕುಗಳಿಗೆ ಸಂಬಂಧಪಟ್ಟಂತೆ ಚಿತ್ರದ ಒಂದು ಭಾಗಕ್ಕೂ ಇತರ ಭಾಗಗಳಿಗೂ ಇರುವ ಪರಸ್ಪರ ಸಂಬಂಧ: (ವರ್ಣ) ಸಾಮಂಜಸ್ಯ (Out of v. ಬಹು ಪ್ರಕಾಶಮಾನವಾದ ಇಲ್ಲವೆ ಬಹು ಮಸುಕಾದ); (ಬೀಜಗಣಿತ) ಪದದ—ಬೆಲೆ, ಮೂಲ್ಯ; (ಜೀ. ವಿ.) (ವರ್ಗೀಕರಣದಲ್ಲಿ) ಸ್ಥಾನ, ದರ್ಜೆ. (ಕ್ರಿ.) (—ರ) ಬೆಲೆ ಅಂದಾಜುಮಾಡು, ಬೆಲೆ ಕಟ್ಟು (Should v. the whole at £ 2000). (ಒಂದರ ವಿಷಯದಲ್ಲಿ) ಬೆಲೆಕೊಡು, (—ಕ್ಕೆ) ಮುಖ್ಯತೆ ಕೊಡು, ಮಹತ್ವ ಕೊಡು; ಬೆಲೆಯುಳ್ಳದ್ದೆಂದು ಎಣಿಸು; ಬಹುಮಾನಿಸು; ಹೆಮ್ಮೆಪಡು (*Oneself on*) (V. sincerity beyond all things ಎಲ್ಲಕ್ಕಿಂತ ಹೆಚ್ಚಾಗಿ ನಿಷ್ಕಾಪಟ್ಯಕ್ಕೆ ಬೆಲೆಕೊಡು. A valued friend ಸನ್ಮಾನ್ಯ ಮಿತ್ರ, ನಚ್ಚಿನ ಗೆಳೆಯ. Values himself on his conversational powers ತನ್ನ ಸಂಭಾಷಣ ಸಾಮರ್ಥ್ಯಕ್ಕೆ ಹೆಮ್ಮೆಪಡುತ್ತಾನೆ). **Válueless** (ಗು.); **Válue-lessness** (ನಾ.); **Váluer** (ನಾ.) (ಕಸಬಾಗಿ) ಬೆಲೆಕಟ್ಟುವವನು; ಮೌಲ್ಯ ನಿರ್ಣಯಕಾರ. **Váluable** (ಗು., ನಾ.) ಬಹಳ ಬೆಲೆಯ, ಉಪಯುಕ್ತವಾದ; ಬೆಲೆಯುಳ್ಳ; ಬೆಲೆ ಬಾಳುವ; ಅಮೂಲ್ಯ (V. property, information, assistance); ಬೆಲೆ ಕಟ್ಟಲಾಗುವ (A service not v. in money). (ನಾ.; ಸಾ., ಬ. ವ. ದಲ್ಲಿ) ಒಡವೆ ವಸ್ತು(ಗಳು), ನಗನಾಣ್ಯ(ಗಳು) (Sent all her valuables to the Bank). **Valuátion** (ನಾ.) ಬೆಲೆ ಕಟ್ಟುವುದು, ಮೂಲ್ಯ ನಿರ್ಣಯ (ಮು, ಕಸಬುದಾರನಿಂದ); ಕಟ್ಟಿದ ಬೆಲೆ; ಬೆಲೆ, ಮೂಲ್ಯ (Sets too high a v. on his abilities ತನ್ನ ಸಾಮರ್ಥ್ಯಕ್ಕೆ ಅತಿ ಬೆಲೆ ಕಟ್ಟುತ್ತಾನೆ)

Valve ವ್ಯಾಲ್ವ್ (ನಾ.) ಕವಾಟ (ಕೊಳವೆ, ಮೊ. ಗಳ ಮೂಲಕ ದ್ರವದ ಅಥವಾ ಅನಿಲದ ಹರಿವನ್ನು ಹತೋಟಿಯಲ್ಲಿಟ್ಟುಕೊಳ್ಳಲು ತನಗೆ ತಾನೇ ಕಾರ್ಯಮಾಡುವಂಥದು ಅಥವಾ ಇತರ ಬಗೆಯದು) [Clack, rotary, screw, sliding, throttle, v. ('ಕ್ಲಾಕ್' ಎನ್ನುವ) ಫಲಕ, ಸುತ್ತು ತಿರುಗುವ, ತಿರುಪು, ಜಾರು, ನಿಯಂತ್ರಕ,—ಕವಾಟ. Key v. (ಆರ್ಗನ್ ವಾದ್ಯ, ಕೊಳಲು, ಮೊ. ಗಳ) ಕೀಲಿ ಕವಾಟ. Safety v. (Safe² ಕೆಳಗೆ Safety ನೋಡಿ). Thermionic v. (Therm ಕೆಳಗೆ Thermionic ನೋಡಿ)]; (ಅಂ. ರ. ಶಾ., ಪ್ರಾ. ವಿ.) ದೇಹದ ಯಾವುದಾದರೂ ಅಂಗ ಭಾಗದಲ್ಲಿ ರಕ್ತ, ಮೊ. ನ್ನು ಒಂದು ಕಡೆಗೆ ಮಾತ್ರ ಹರಿಯಬಿಡುವ ಮತ್ತು ಹಿಂದಕ್ಕೆ ಹರಿದುಬರದಂತೆ ತಡೆಯುವ ಪೊರೆ: ಕವಾಟ (Valves of the heart ರಕ್ತಕೋಶದ ಕವಾಟಗಳು. Pulmonary valves) [**Valvulítis** ವ್ಯಾಲ್‌ವ್ಯುಲೈಟಿಸ್ (ನಾ.) (ರೋಗ ನಿದಾನ) ರಕ್ತಕೋಶ ಕವಾಟಗಳ ಉರಿಯೂತ]; (ಶಂಖಶಾಸ್ತ್ರ) ಕೀಲುಚಿಪ್ಪಿನ ಒಂದರ್ಧ; ಕಪ್ಪೆಚಿಪ್ಪು, ಮುತ್ತಿನ ಚಿಪ್ಪು. (ಸ. ವಿ.) (ಒಣಗಿ ಬಾಯಿಬಿಟ್ಟ) ಬೀಜಕೋಶದ, ಪರಾಗ ಕೋಶದ, —ಅರ್ಧ ಭಾಗ, ಹೋಳು. (ಈಗ ವಿರ. ಪ್ರ.) ಮಡಿಚು ಕದದ ಒಂದು ಭಾಗ: ಕೀಲುಕದ. V. set ವಿದ್ಯುದಂಶ ಪ್ರಸಾರಕಗಳನ್ನು (Thermionic valves) ಅಳವಡಿಸಿರುವ ನಿಸ್ತಂತು ವಾರ್ತಾ ಗ್ರಾಹಕ [ಎದುರು ಪ್ರ.: crystal set (Crystal ನೋಡಿ)]. **Válval, Válvar** (ಗು.) (ಸ. ವಿ.) = Valvular. **Válvate** ವ್ಯಾಲ್‌ವೇ(ೀ)ಟ್ (ಗು.) (ಅಂ. ರ. ಶಾ., ಸ. ವಿ.) ಕವಾಟಗಳುಳ್ಳ; ಕವಾಟದಂಥ ಭಾಗಗಳುಳ್ಳ; (ಪುಷ್ಪಪಾತ್ರದ ಪತ್ರ, ಪುಷ್ಪದಳ) ಕೀಲುಗೂಡಿದಂತೆ ಅಂಚುಗಳು ಮಾತ್ರ ಕೂಡಿಕೊಂಡಿರುವ; ಕೀಲು—ದಳಗಳ, ಪತ್ರಗಳ. **(-)valved** (ಗು.); **Valveless** (ಗು.); **Válvelet** (ನಾ.) ಸಣ್ಣ, ಕಿರು,—ಕವಾಟ. **Válvule** (ನಾ.) (ಅಂ. ರ. ಶಾ., ಸ. ವಿ.) ಕವಾಟಿಕ. **Valvíferous** (ಗು.) ಕವಾಟಯುಕ್ತ. **Válviform** (ಗು.); **Válvular** ವ್ಯಾಲ್‌ವ್ಯುಲರ್ (ಗು.) ಕವಾಟಗಳುಳ್ಳ, ಕವಾಟದಂತೆ ಕಾರ್ಯಮಾಡುವ; (ರಕ್ತಕೋಶದ) ಕವಾಟದ, ಕವಾಟ ಸಂಬಂಧವಾದ (V. disease)

Vámbrace ವ್ಯಾಂಬ್ರೇಸ್ (ನಾ.) (ಚರಿತ್ರೆ) ಮುಂದೋಳ ಕಾಪು.

Vamóse ವ್ಯಾಮೋಸ್ (ಕ್ರಿ.) (ಅಮೆ. ಸಂ., ಅಸಂ.) ಹೇಳದೆ ಕೇಳದೆ ಪಾಳೆಯ ಎತ್ತು, ಹೊರಟುಹೋಗು, ಪಲಾಯನಮಾಡು, ಕಂಬಿಕೀಳು.

Vamp¹ ವ್ಯಾಂಪ್ (ನಾ., ಕ್ರಿ.) ಮೋಜದ ಅಥವಾ ಜೋಡಿನ ಮೇಲಿನ ಮುಂಭಾಗ: ಮೇಲುಮೂತಿ; ಹಳೆಯ ವಸ್ತು ಹೊಸದರಂತೆ ಕಾಣಲು ಹಾಕಿದ ತೇಪೆ; ತತ್ಕಾಲಕ್ಕೆ ಹೊಂದಿಸಿಕೊಂಡ ಪಕ್ಕವಾದ್ಯ; ತೇಪೆ (ಬರಹದ) ಪುಸ್ತಕ. (ಕ್ರಿ.) (ಮೋಜಕ್ಕೆ, ಜೋಡಿಗೆ) ಹೊಸ ಮೇಲುಮೂತಿ ಹಾಕು; (ತೇಪೆ ಹಾಕಿ) ದುರಸ್ತುಮಾಡು, ರಿಪೇರಿಮಾಡು, ಹೊಸದುಮಾಡು (ಸಾ., *Up* ಉಪ. ಜೊತೆ); ಹರುಕು ಮುರುಕು ಜೋಡಿಸಿ, ತೇಪೆಹಾಕಿ,— (ಸಾಹಿತ್ಯ ಲೇಖನ, ಮೊ. ನ್ನು) ರಚಿಸು (*Up* ಉಪ. ಜೊತೆ ಸಹ. The veriest drudge that vamps books together for his daily bread); ಪಕ್ಕವಾದ್ಯಗಳನ್ನು ತತ್ಕಾಲಕ್ಕೆ ಹೊಂದಿಸಿಕೊ. **Vámper** (ನಾ.)

Vamp² ವ್ಯಾಂಪ್ (ನಾ., ಕ್ರಿ.) (ಅಮೆ. ಸಂ., ಅಸಂ.) (ದುರುದ್ದೇಶದಿಂದ, ಸ್ವಾರ್ಥದಿಂದ) ಗಂಡಸರನ್ನು ಬಲೆಗೆ ಹಾಕಿಕೊಳ್ಳುವ ಹೆಂಗಸು; ಗಂಡಸನ್ನು ಕಿತ್ತುಕೊಂಡು ತಿನ್ನುವವಳು; ಪ್ರಣಯ ಚೇಷ್ಟೆಗಳಿಂದ ಆಕರ್ಷಿಸುವವಳು; ಮಾಯಗಾತಿ. (ಕ್ರಿ.) ಪ್ರಣಯ ಚೇಷ್ಟೆಗಳಿಂದ ಮೋಹಗೊಳಿಸು, ಬಲೆಗೆ ಹಾಕಿಕೊ; ಒಲವು, ಪ್ರಣಯ ವಿಲಾಸ, —ತೋರು.

Vámpire ವ್ಯಾಂಪೈ(ಅ)ರ್ (ನಾ.) ರಾತ್ರಿಯ ವೇಳೆ ಗೋರಿಯನ್ನು ಬಿಟ್ಟುಹೊರಟು ಮಲಗಿದ್ದವರ ರಕ್ತ ಹೀರುವುದೆಂದು ಜನರು ನಂಬಿರುವ (ಮು., ಮಂತ್ರವಾದಿ, ಪಾಷಂಡಿ, ಕೊಲೆಗಡಿಕ, ಮೊ. ರ) ಪ್ರೇತ: ರಕ್ತ ಪಿಶಾಚ, ನೆತ್ತರು ದೆವ್ವ. ಇತರರನ್ನು ಕಾಡಿ ತಿನ್ನುವವನು, ಜಿಗಣೆ (ಯಂಥ) ಮನುಷ್ಯ; (ಅಮೆ. ಸಂ.) = Vamp² (ನಾ.); ಕುದುರೆಗಳ, ದನಕರುಗಳ, ಮತ್ತು ಮಲಗಿರುವ ಮನುಷ್ಯರ ರಕ್ತ ಹೀರುವ (ದೆಂದು ನಂಬಿರುವ) ಹಲವು ಜಾತಿಯ ಬಾವಲಿ: ನೆತ್ತರು ಬಾವಲಿ, ತೊಗಲು ಬಾವಲಿ (= V. bat); (ನಾಟಕಶಾಲೆ) (ಒಬ್ಬ ನಟನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದ್ದಕ್ಕಿದ್ದ ಹಾಗೆ ಕಾಣಿಸಿಕೊಳ್ಳುವಂತೆ ಅಥವಾ ಕಣ್ಮರೆಯಾಗುವಂತೆ ಮಾಡಲು ಉಪಯೋಗಿಸುವ, ಸ್ಪ್ರಿಂಗು ಮೂಲಕ ಚಲಿಸುವ) ಎರಡು ಮಡಿಕೆಯ ಸಣ್ಣ ನೆಲಮಾಳಿಗೆ ಬಾಗಿಲು. **Vampíric** —ಪಿರಿಕ್ (ಗು.); **Vámpirism** —ಪೈರಿಸ್ಮ್ (ನಾ.) ರಕ್ತ ಪಿಶಾಚಿಗಳಲ್ಲಿ ನಂಬಿಕೆ; ರಕ್ತ ಹೀರುವುದು (ರೂಪ. ಸಹ)

Vámplate ವ್ಯಾಂಪ್ಲೇಟ್ (ನಾ.) (ಚರಿತ್ರೆ) ಈಟಿಯಿಂದ ತಿವಿಯಲು ಓರೆಯಾಗಿ ತಗ್ಗಿಸಿದಾಗ ಕೈಗೆ ರಕ್ಷಣೆಕೊಡುತ್ತಿದ್ದ ಕಬ್ಬಿಣದ ತಗಡು: ಈಟಿಯ ಕೈಕಾಪು.

Van[1] ವ್ಯಾನ್ (ನಾ., ಕ್ರಿ. ಸಕ.) (ಪ್ರಾಚೀ. ಪ್ರ.) (ಕಾಳು) ತೂರುವ ಯಂತ್ರ; (ಪ್ರಾಚೀ. ಪ್ರ., ಕಾವ್ಯ) ರೆಕ್ಕೆ; (ಎಲೆಗುದ್ದಲಿಯಮೇಲೆ ತೊಳೆದು ಅಥವಾ ಯಂತ್ರ ಸಹಾಯದಿಂದ) (ಅದುರನ್ನು) ಪರೀಕ್ಷೆಮಾಡು (ನಾ.) (ಇಂಥ) ಅದುರು ಪರೀಕ್ಷೆ. **Vánner** (ನಾ.) —ಪರೀಕ್ಷಕ.

Van[2] ವ್ಯಾನ್ (ನಾ.) ಮುಂದೆ ಸಾಗುತ್ತಿರುವ ಸೈನ್ಯದ, ಪ್ರಯಾಣ ಮಾಡುತ್ತಿರುವ ಹಡಗು ಪಡೆಯ, —ಅತ್ಯಂತ ಮುಂಭಾಗ; ಯುದ್ಧದಲ್ಲಿ ತೊಡಗಿರುವ ಸೈನ್ಯದ ಮುಂಭಾಗ, ಮುನ್‌ಸಾಲು: ಚೂಣಿ, ಸೇನಾಮುಖ; (ರೂಪ.) (ಚಳವಳಿ, ಮೊ. ಗಳ) ಮುಂದಾಳುಗಳು, ನಾಯಕರು, ಅಗ್ರಪಂಕ್ತಿ(ಯವರು) (In the v. of civilization). **V.-bird** ಮುನ್ ವಲಸೆ ಹಕ್ಕಿ. (ರೂಪ.) ಮುನ್ ಸೂಚಕ, ದೂತ. **Vánguard** ಪ್ರಧಾನ ಸೈನ್ಯದಮೇಲೆ ಶತ್ರುಗಳು ಅನಿರೀಕ್ಷಿತ ಆಕ್ರಮಣ ಮಾಡದಂತೆ ಮುಂದಾಗಿ ಹೋಗುವ ಸೈನ್ಯದಳ: ಮುಂ(ಗಾಪು) ದಳ, ಚೂಣಿ (ರೂಪ. ಸಹ)

Van[3] ವ್ಯಾನ್ (ನಾ., ಕ್ರಿ. ಸಕ.) ಪೀಠೋಪಸ್ಕರಗಳನ್ನು ಅಥವಾ ಇತರ ಸರಕುಗಳನ್ನು ಸಾಗಿಸುವ, ಸಾ., ಪೆಟ್ಟಿಗೆಯಾಕಾರದ, ಮುಚ್ಚಿರುವ ಬಂಡಿ: ಸಾಮಾನು(ಸಾಗಣೆ) ಬಂಡಿ; ರೈಲು ಪ್ರಯಾಣಿಕರ ಸಾಮಾನುಗಳನ್ನು ಹಾಕುವ ಡಬ್ಬಿ ಅಥವಾ ರೈಲಿನ ಗಾರ್ಡ್ ಅಧಿಕಾರಿಯ ಬಂಡಿ (Luggage v. ಪ್ರಯಾಣಿಕರ ಸಾಮಾನು ಗಾಡಿ. Guard's v. ಗಾರ್ಡಿನ ಗಾಡಿ). (ಕ್ರಿ.) ಸಾಮಾನು ಗಾಡಿಯಲ್ಲಿ—ಸಾಗಿಸು, ರವಾನಿಸು.

Vanádium ವನೇಡಿಯಂ (ನಾ.) ಒಂದು ಬಿಳಿಯ ಅಪೂರ್ವ ಲೋಹ ಧಾತು. (ಇದರ ಕೆಲವು ಲವಣಗಳಿಂದ ಒಂದು ಸ್ಥಿರ ಕಗ್ಗಪ್ಪು ಬಣ್ಣ ದೊರೆಯುತ್ತದೆ). **Vánadate** ವ್ಯಾನಡೇಟ್ (ನಾ.) (ರ. ವಿ.) ವನೇಡಿಯಂ ಲವಣ. **Vanádic** ವನ್ಯಾ(ನೇ)ಡಿಕ್ (ಗು.) (ಹೆಚ್ಚು ಸಂಯೋಗ ಶಕ್ತಿಯಲ್ಲಿ), **Vanádious, Vánadous** ವ್ಯಾನಡಸ್ (ಗು.) (ಕಡಮೆ ಸಂಯೋಗ ಶಕ್ತಿಯಲ್ಲಿ) ವನೇಡಿಯಂ ಸಂಯುಕ್ತವಾಗಿರುವ.

Vándal ವ್ಯಾಂಡಲ್ (ಗು., ನಾ.) ಗಾಲ್, ಸ್ಪೆಯ್ನ್, ಉ. ಆಫ್ರಿಕ ಮತ್ತು ರೋಮ್‌ಗಳನ್ನು ಕೊಳ್ಳೆಹೊಡೆದು ಹಲವು ಗ್ರಂಥಗಳನ್ನೂ ಕಲಾಕೃತಿಗಳನ್ನೂ ನಾಶಮಾಡಿದ ಒಂದು ಜರ್ಮ್ಯಾನಿಕ್ ಕುಲದ (ವನು); (ರೂಪ.) ಬೇಕೆಂದೋ ತಿಳಿಯದೆಯೋ ಕಲಾಕೃತಿ, ಮೊ. ಗಳನ್ನು ನಾಶಪಡಿಸುವವನು: ಕಲಾವಸ್ತು, ಪೂಜ್ಯವಸ್ತು, —ವಿನಾಶಕ, ವಿಧ್ವಂಸಕ; ಅನಾಗರಿಕ, ಕಿರಾತ. **Vándalism** (ನಾ.); **Vandálic** (ಗು.)

Vandýke ವ್ಯಾನ್‌ಡೈಕ್ (ನಾ., ಗು., ಕ್ರಿ. ಸಕ.) ಫ್ಲ್ಯಾಂಡರ್ಸಿನ ಒಬ್ಬ ವರ್ಣಚಿತ್ರಕಾರ (ಕ್ರಿ.ಶ. ೧೫೯೯-೧೬೪೧); ಆತನು ಬರೆದ ಚಿತ್ರ; ಅಂಚುಪಟ್ಟಿ, ಬಟ್ಟೆ, ಮೊ. ಗಳ ಅಂಚಾಗಿರುವ ಕೋಚು(ಗಳಲ್ಲೊಂದು); ಅಂಚುಕೋಚು(ಗಳು)ಳ್ಳ—ಮೇಲಂಗಿ, ಕೊರಳಪಟ್ಟಿ (=V. cape, collar). (ಗು.; ಸಾ., V-) (ವ್ಯಾನ್‌ಡೈಕಿನ ಭಾವಚಿತ್ರಗಳಲ್ಲಿ ಸಾಮಾನ್ಯವಾಗಿರುವ) ಕೋಚಂಚುಗಳ (ಉಡುಪಿನ) ಮಾದರಿಯ. (ಕ್ರಿ.) (ಬಟ್ಟೆ, ಮೊ. ನ್ನು) ಕೋಚಂಚಿರುವಂತೆ ಕತ್ತರಿಸು; ಕೋಚುಗಳನ್ನಿಡು.

Vane ವೇನ್ (ನಾ.) ಗಾಳಿಯ ದಿಕ್ಕಿಗೆ ತಿರುಗಿಕೊಳ್ಳುವಂತಿರುವ ಅಲಂಕಾರದ ಆಕಾರದ ಲೋಹಕೀಲಕ: ವಾಯು ದಿಕ್‌ಸೂಚಿ (=Weathercock) (Weather ನೋಡಿ); (ಜಲಮಾಪಕ ಯಂತ್ರದಲ್ಲಿಯಂತೆ) ನೀರಿನ ಪ್ರವಾಹ, ಮೊ. ಕ್ಕೆ ಒಡ್ಡಿದ ಅದೇ ವಿಧದ ಸಲಕರಣೆ: ಪ್ರವಾಹ ದಿಕ್ಸೂಚಿ; (ಹಡಗಿನಲ್ಲಿ) ವಾಯು ದಿಕ್ಸೂಚಿಯಾಗಿ ಉಪಯೋಗಿಸುವ ಶಂಕು ಅಥವಾ ಇತರ ಸಲಕರಣೆ (=Dog-v.); (ಗಾಳಿಯಂತ್ರ, ತಿರುಪು ಚಾಲಕ, ಮೊ. ಗಳ) ತೋಳು, ಫಲಕ; (ಮೋಜಣಿ ಸಲಕರಣೆಗಳು, ಕಾಲುವೃತ್ತಾಕಾರದ ಕೋನಮಾಪಕ, ಮಟ್ಟಗೋಲು, ಮೊ. ಗಳ) ಲಕ್ಷ್ಯದರ್ಶಕ. **Vaned** (ಗು.); **Váneless** (ಗು.)

Vang ವ್ಯಾಂಗ್ (ನಾ.) ಉದ್ದಸಾಲು ಪಟದ ಹಗ್ಗ.

Vángee ವ್ಯಾಂಜೀ (ನಾ.) ಹಡಗಿನ ಸೇದುಯಂತ್ರಗಳನ್ನು ನಡಸುವ ಒಂದು ಸಲಕರಣೆ: ಹಡಗಿನ ಪಂಪು ಚಾಲಕ.

Vánguard. **Van**[2] ನೋಡಿ.

Vanílla ವನಿಲ (ನಾ.) ಹಲವು ಬಗೆಯ ಎತ್ತರದ ಸೀತಾಳೆ ಹೂವಿನ ಗಿಡ; ಇದರ ಕಾಯಿ (=V.-bean); ಈ ಕಾಯಿಂದ ತೆಗೆದ ಸುವಾಸನೆಯುಳ್ಳ ಸಾರ: ವನಿಲ ಸಾರ. **Vaníllate** (ನಾ.) ವನಿಲ ಆಮ್ಲದ ಲವಣ. **Vaníllic** (ಗು.) (ರ. ವಿ.) V. acid ವನಿಲ ಆಮ್ಲ; =Vanillin. **Vaníllin** ವನಿಲಿನ್ (ನಾ.) ವನಿಲದ ಮಧ್ಯಸ್ಥವಾದ (ಆಮ್ಲೀಯವೂ ಅಲ್ಲದ ಕ್ಷಾರೀಯವೂ ಅಲ್ಲದ) ಸುವಾಸನೆಯ ಘಟಕದ್ರವ್ಯ. **Vaníllism** (ನಾ.) ವನಿಲದ ಕೆಲಸಗಾರರಲ್ಲಿ ಸಾಮಾನ್ಯವಾಗಿರುವ, ಗುಳ್ಳೆಗಳೇಳುವ, ಕಡಿಯುವ, ಒಂದು ಬಗೆಯ ಚರ್ಮವ್ಯಾಧಿ: ವನಿಲ ಕಜ್ಜಿ.

Vanίllism. **Vanilla** ನೋಡಿ.

Vánish ವ್ಯಾನಿಷ್ (ಕ್ರಿ. ಅಕ., ನಾ.) (ತಟ್ಟನೆ, ಕ್ರಮ ಕ್ರಮವಾಗಿ, ರಹಸ್ಯ ರೀತಿಯಲ್ಲಿ) ಕಣ್ಮರೆಯಾಗು, ಅಗೋಚರವಾಗು; ಅಳಿಸಿಹೋಗು; ಅಂತರ್ಧಾನವಾಗು; ಅದೃಶ್ಯವಾಗು; (ಮಂಗ)ಮಾಯವಾಗು. (ಗಣಿತ) ಸೊನ್ನೆಯಾಗು (Vanishing fraction ತನ್ನಲ್ಲಿಯ ಚಲ ಪರಿಮಾಣದ ಒಂದು ನಿರ್ದಿಷ್ಟ ಬೆಲೆಗೆ ತನ್ನ ಬೆಲೆ ಸೊನ್ನೆಯಾಗುವ ಭಿನ್ನರಾಶಿ: ಅದೃಶ್ಯ, ಲೋಪ, —ಭಿನ್ನರಾಶಿ); [(ಯಥಾದೃಷ್ಟ ರೂಪಣ): Vanishing-point ಒಂದೇ ಸಮತಲದಲ್ಲಿನ ಎಲ್ಲ ಸಮಾನಾಂತರ ರೇಖೆಗಳೂ, ಅವುಗಳನ್ನು ಅನಂತಕ್ಕೆ ಲಂಬಿಸಿದಾಗ, ಸಂಧಿಸುವಂತೆ ಕಾಣುವ ಬಿಂದು: ಅಂತರ್ಧಾನ ಬಿಂದು. Vanishing-line ಒಂದು ದತ್ತ ಸಮತಲವು ಅನಂತತೆಯಲ್ಲಿ ಎಲ್ಲ ಸಮಾನಾಂತರ ಸಮತಲಗಳನ್ನೂ ಛೇದಿಸುವ ರೇಖೆ: ಅಂತರ್ಧಾನ ರೇಖೆ]. (ನಾ.) (ಧ್ವನಿಶಾಸ್ತ್ರ) ಪ್ರಧಾನ ಧ್ವನಿ ಅಂತ್ಯಗೊಳ್ಳುವ ಲಘು ಧ್ವನಿ: ಅದೃಶ್ಯ ಧ್ವನಿ; ಸೂಕ್ಷ್ಮ ಅಂತ್ಯ ಧ್ವನಿ (Ale ಮತ್ತು Go ಪದಗಳಲ್ಲಿಯಂತೆ, ಏ ಮತ್ತು ಓ ಆದಮೇಲೆ ಬರುವ ಇ ಮತ್ತು ಉ)

Vánity. **Vain** ನೋಡಿ.

Vánquish ವ್ಯಾಂಕ್ವಿಷ್ (ಕ್ರಿ. ಸಕ.) ಗೆಲ್ಲು, ಜಯಿಸು, ಸೋಲಿಸು, ದಮನಮಾಡು (ರೂಪ. ಸಹ; ಈಗ ಮು., ಅಲಂ.). **Vánquishable** (ಗು.); **Vánquisher** (ನಾ.)

Vántage ವಾಂಟೇಜ್ (ನಾ.) (=Advantage ಸಮ ಆಟವಾದ ಮೇಲೆ ಗೆದ್ದ ಗೆಲ್ಲಂಕ ಅಥವಾ ಆಟ) [ಈಗ ಮು., ಟೆನಿಸ್ ಆಟದ ಅರ್ಥದಲ್ಲೂ ಮತ್ತು V.-ground (=ಅನುಕೂಲ, ಆಯಕಟ್ಟು, —ಸ್ಥಳ) ಎಂಬಲ್ಲೂ ಮಾತ್ರ ಪ್ರ. Coign of v. (Coign ನೋಡಿ)]

Vápid ವ್ಯಾಪಿಡ್ (ಗು.) ಸಪ್ಪೆ, ನೀರಸ, ರುಚಿಯಿಲ್ಲದ (V. beer, conversation). **Vapídity** ವಪಿಡಿಟಿ (ನಾ.); **Vápidly** ವ್ಯಾ— (ಕ್ರಿ. ವಿ.) **Vápidness** (ನಾ.)

Váporize, etc. **Vapour** ನೋಡಿ.

Vápour ವೇಪರ್ (ನಾ., ಕ್ರಿ. ಅಕ.) ವಾಯುವಿನಲ್ಲಿನ ತೇವ (ಉದಾ., ಇಬ್ಬನಿ), (ಶಿಥಿಲವಾಗಿ) ಹಗುರವಾದ ಮೋಡದಂಥ ದ್ರವ್ಯ (ಉದಾ., ಹೊಗೆ); ಹಬೆ, ಹೊಗೆ, ಧೂಮ; (ಭೌ. ವಿ.) ಸಾಧಾರಣವಾಗಿ ದ್ರವ ಸ್ಥಿತಿಯಲ್ಲೋ ಘನಸ್ಥಿತಿಯಲ್ಲೋ ಇರುವ ಪದಾರ್ಥದ ಅನಿಲರೂಪ: ಆವಿ(ರೂಪ), ಬಾಷ್ಪ. (ವೈ. ಶಾ.) (ಉಸಿರಿನೊಡನೆ ಒಳಕ್ಕೆ ಸೇದಿಕೊಂಡು ಸೇವಿಸಬೇಕಾದ) ಔಷಧದ ಹಬೆ. ಹುರುಳಿಲ್ಲದ್ದು, ಕಳಪೆ(ವಸ್ತು), ವ್ಯರ್ಥ ಕಲ್ಪನೆ; (ಪ್ರಾಚೀ. ಪ್ರ.) ಬರಿಯ ಬಡಾಯಿ, ಒಣ ಜಂಬ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಬ. ವ. ದಲ್ಲಿ ; ಪ್ರಾಚೀ. ಪ್ರ.) ವಿಷಣ್ಣತೆ, ಮಂಕು, ಗ್ಲಾನಿ. [V.-bath ಹಬೆ, ಆವಿ, —ಸ್ನಾನ(ದ ಸಲಕರಣೆ, ಮನೆ). (ರ. ವಿ.) ಒಂದು ಪದಾರ್ಥವನ್ನು ಕಾಯಿಸಲು ಅಥವಾ ಕರಗಿಸಲು ಬಿಸಿ ಹಬೆಯನ್ನು ಉತ್ಪತ್ತಿ ಮಾಡುವ ಪಾತ್ರೆ: ಆವಿ ಪಾತ್ರೆ, ಬಾಷ್ಪ ತಾಪಕ. V.-burner (ಪ್ರಕಾಶಕ್ಕಾಗಿ ಅಥವಾ ಕಾಯಿಸುವುದಕ್ಕಾಗಿ) ಬಾಷ್ಪ ಜ್ವಾಲಕ. V.-engine ಆವಿಯೆಂಜಿನು, ಹಬೆಯೆಂಜಿನು]. (ಕ್ರಿ.) ಹಬೆ, ಆವಿ, —ಬಿಡು, ಕೊಡು ; ಹಬೆಯಾಡು ; ಹಬೆಯಾಗಿ—ಏಳು, ಹರಡಿಕೊ (*Out*, *up* ಉಪ. ದೊಡನೆ) ; ಹಬೆಯಂತೆ ಹೊರಟುಹೋಗು (*Away*) (Their whole life hath vapoured away in hopes) ! ಒಣ ಜಂಬ, ಬಡಾಯಿ, —ಕೊಚ್ಚು ; ಪೊಳ್ಳು ಹರಟೆ, ಬುರುಡೆ, —ಹೊಡೆ. **Vaporable** (ಗು.) ಬಾಷ್ಪೀಕರಣ ಸಾಧ್ಯ; ಹಬೆಯಾಗಿ ಮಾರ್ಪಡಿಸಲಾಗುವ. **Vaporability** (ನಾ.); **Vaporárium** ವೇಪೊರೇರಿಯಂ (ನಾ.) ಹಬೆಸ್ನಾನದ ಮನೆ, ಬಾಷ್ಪ ಸ್ನಾನಗೃಹ. **Vaporíferous** ವೇಪರಿಫೆರಸ್ (ಗು.) ಹಬೆ—ಸಾಗಿಸುವ, ಉಂಟುಮಾಡುವ ; ಬಾಷ್ಪ—ವಾಹಕ, ಜನಕ. **Vaporífic** ವೇಪೊರಿಫಿಕ್ (ಗು.) ; **Vápori-form** ವೇಪರಿಫಾರ್ಮ್ (ಗು.) ಬಾಷ್ಪ—ಸ್ಥಿತಿಯ, ರೂಪದ. **Vaporímeter** ವೇಪೊ— (ನಾ.) ಬಾಷ್ಪ (ಪ್ರಮಾಣ) ಮಾಪಕ. **Váporize** ವೇಪೊರೈಸ್ (ಕ್ರಿ.) ಹಬೆಯಾಗು, ಹಬೆಯಾಗಿಸು. **Váporizable** (ಗು.) = Vaporable. **Vaporizátion** (ನಾ.) ಬಾಷ್ಪೀ—ಕರಣ, ಭವನ. **Váporizer** (ನಾ.) ಬಾಷ್ಪೀಕಾರಕ (ಸಲಕರಣೆ). **Váporose** (ಗು.) = Vaporous. **Váporous** (ಗು.) ಹಬೆಯ, ಬಾಷ್ಪದ ; ಹಬೆ, ಬಾಷ್ಪ, —ಬಿಡುವ, ಉಳ್ಳ ; ಹಬೆಯಿಂದ—ಕವಿದ, ಮಸುಕಾದ ; ಮಂಜಾಗವಿದ ; ಹಬೆಯಂಥ ; ಬಾಷ್ಪ—ಸ್ವಭಾವದ, (ಸ್ವ)ರೂಪದ. (ರೂಪ. ; ಭಾವನೆ, ಮೊ.) ಹುರುಳಿಲ್ಲದ, ಪೊಳ್ಳು, ಕಾಲ್ಪನಿಕ. **Vaporósity** —ರಾಸಿಟಿ (ನಾ.) ; **Váporously** (ಕ್ರಿ. ವಿ.) ; **Váporousness** (ನಾ.) ; **Vápourer** (ನಾ.) ಬಡಾಯಿಗಾರ, ಬುರುಡೆ ಹೊಡೆಯುವವನು. **Vápourish** (ಗು.) ; **Vápourishness** (ನಾ.) ; **Vápoury** (ಗು.) = Vaporous.

Vapulátion ವ್ಯಾಪ್ಯುಲೇಷನ್ (ನಾ.) (ಹಾಸ್ಯ ಪ್ರ.) ಚೆಡಿಯೇಟು, ಕಶಾಪ್ರಹಾರ. **Vápulatory** (ಗು.)

Vaquéro (ಸ್ಪ್ಯಾನಿಷ್) ವಕೇ(ಅ)ರೊ (ನಾ.) (ಮೆಕ್ಸಿಕೊ ದೇಶದಲ್ಲಿ ಅಥವಾ ಅಮೆ. ಸಂ. ದಲ್ಲಿ) ಗೊಲ್ಲ, ದನಕಾಯುವವನು.

Varángian ವರ್ಯಾಂಜಿಯನ್ (ನಾ.) (೯-೧೧ನೆಯ ಶ. ಮಾ. ಗಳಲ್ಲಿ ಬಾಲ್ಟಿಕ್ ತೀರಪ್ರದೇಶಗಳನ್ನು ಕೊಳ್ಳೆಹೊಡೆಯುತ್ತಿದ್ದ) ಸ್ಕಾಂಡಿನೇವಿಯದ ಕಡಲುಗಳ್ಳ(ರಲ್ಲೊಬ್ಬ). V. guard ಬಿಜ಼ಂಟೈನ್ ಚಕ್ರವರ್ತಿಗಳ ಅಂಗರಕ್ಷಕ ದಳ (ಕಡಲುಗಳ್ಳರಿಂದ ಏರ್ಪಡಿಸಿದ್ದು)

Várec ವ್ಯಾರೆಕ್ (ನಾ.) ಬ್ರಿಟನಿಯಲ್ಲಿ (ಸಮುದ್ರದ ಕಳೆಯಿಂದ) ತಯಾರಿಸುವ ಒಂದು ಅಶುದ್ಧ ಸೋಡಿಯಂ ಕಾರ್ಬೊನೇಟು.

Váriable. **Vary** ನೋಡಿ.

Vária léctio (L) ವೇರಿಯ ಲೆಕ್‌ಷಿಯೊ (ನಾ. ; ಬ. ವ. Variae lectiones ವೇರಿಯಾ ಲೆಕ್‌ಷಿಯೋನೀಜ಼್) ಪಾಠಾಂತರ.

Váriance, Váriant, Variátion. **Vary** ನೋಡಿ.

Váricated. **Varix** ನೋಡಿ.

Varicélla ವ್ಯಾರಿಸೆಲ (ನಾ.) ಸೀತಾಳೆ ಸಿಡುಬು (= Chickenpox). **Varicéllar** (ಗು.) ; **Varicélloid** (ಗು.) —ಸಿಡುಬಿನಂಥ (V. smallpox). **Varicéllous** (ಗು.) —ಸಿಡುಬಿನ(ಂಥ); —ಸಿಡುಬು ತಗುಲಿದ.

Váriocele, Váricose, etc. **Varix** ನೋಡಿ.

Váriegate ವೇ(ಅ)ರಿಗೇಟ್ (ಕ್ರಿ. ಸಕ.) ವಿವಿಧ ವರ್ಣಮಾಡು, ವರ್ಣವೈವಿಧ್ಯಕೊಡು; ಬೇರೆ ಬೇರೆ ಬಣ್ಣಗಳ ಮಚ್ಚೆ, ಗುರುತು, —ಹಾಕು; ಶಬಲೀಕರಿಸು ; (ಮು., ಭೂ. ಕೃ. ನಲ್ಲಿ ; ಸ. ವಿ.) ಬಣ್ಣ ಬಣ್ಣದ, ವಿಚಿತ್ರ ಬಣ್ಣಗಳ, —ಎಲೆಗಳನ್ನುಳ್ಳ. **Variegátion** (ನಾ.) (ವರ್ಣ) ಶಬಲತೆ ; ಚಿತ್ರ ವಿಚಿತ್ರ ವರ್ಣ(ವಾಗಿರುವುದು)

Varíety, Váriform. **Vary** ನೋಡಿ.

Varíola ವರ್ಯೈಒಲ (ನಾ.) ಸಿಡುಬು (= Smallpox). **Varíolar** (ಗು.) ಸಿಡುಬಿನ(ಂಥ). **Variolátion** (ನಾ.) (ರಕ್ತದೊಳಕ್ಕೆ) ಸಿಡುಬು ವಿಷ ಚುಚ್ಚುವುದು (ದೇವಿ ಹಾಕುವುದು ಬಳಕೆಗೆ ಬರುವುದಕ್ಕೆ ಮುಂಚೆ ಈ ವಿಧಾನ ರೂಢಿಯಲ್ಲಿತ್ತು). **Váriole** ವೇರಿಯೋಲ್ (ನಾ.) (ಸ. ವಿ., ಪ್ರಾ. ವಿ.) ಸಿಡುಬಿನ (ಕಲೆಯಂಥ) ಕುಳಿ, ಮಚ್ಚೆ. **Váriolate(d)** (ಗು.) ಸಿಡುಬಿನ (ಕಲೆಯಂಥ) ಗುರುತುಗಳುಳ್ಳ. **Variólic** —ಯಾ— (ಗು.); **Váriolite** (ನಾ.) ಸಿಡುಬು ಮಚ್ಚೆಗಳಂತೆ ಮೇಲ್ಮೈರಚನೆಯುಳ್ಳ ಬಂಡೆಗಲ್ಲು : ಸಿಡುಬುಶಿಲೆ. **Variolític** (ಗು.) ; **Várioloid** (ಗು., ನಾ.) ಸಿಡುಬಿನಂಥ. (ನಾ.) (ಮು., ಮೊದಲೇ ದೇವಿ ಹಾಕಿದ್ದರ ಪರಿಣಾಮವಾಗಿ ತೀಕ್ಷ್ಣತೆ ಕಡಮೆಯಾದ) ಲಘು ಸಿಡುಬು. **Varíolous** ವರ್ಯೈಒಲಸ್ (ಗು.) ಸಿಡುಬಿನಂಥ, ಸಿಡುಬು ತಗುಲಿದ.

Variolátion, Váriole, Váriolite, Várioloid. **Variola** ನೋಡಿ.

Variórum ವೇರಿಯೋರಂ (ಗು.) ವಿವಿಧ ಟೀಕಾ(ಕಾರರ) ಟಿಪ್ಪಣಿಗಳನ್ನುಳ್ಳ (A v. edition of Shakespeare)

Várious. **Vary** ನೋಡಿ.

Várix ವೇ(ಅ)ರಿಕ್ಸ್ (ನಾ.; ಬ. ವ. Varices—ಸೀಜ಼್) (ರೋಗ ನಿದಾನ) ಅಪಧಮನಿಯ, ಅಭಿಧಮನಿಯ, ರಕ್ತನಾಳದ, —ಊತ, ವಿಸ್ತರಣ. ಹಿಗ್ಗಿದ ಅಭಿಧಮನಿ, ಅಪಧಮನಿ, ರಕ್ತನಾಳ. (ಶಂಖಶಾಸ್ತ್ರ ; ಚಿಪ್ಪಿನ ಮೇಲ್ಮೈಯಲ್ಲಿರುವ) ಅಡ್ಡ ಉಬ್ಬು(ಗಳಲ್ಲೊಂದು) [**Vári-cated** (ಗು.) ಅಡ್ಡ ಉಬ್ಬುಗಳುಳ್ಳ. **Varicátion** (ನಾ.)]. **Várico-cele** ವ್ಯಾರಿಕೊಸೀಲ್ (ನಾ.) ವೃಷಣಕೋಶದ ಹುರಿಯಲ್ಲಿನ ಊದಿದ ಅಭಿಧಮನಿಗಳಿಂದಾದ ಗಡ್ಡೆ : ವೃಷಣ(ರಜ್ಜು) ಗ್ರಂಥಿ. **Váricose** ವ್ಯಾರಿಕೋಸ್ (ಗು.) ಅಭಿಧಮನಿಯ, ಅಪಧಮನಿಯ, ರಕ್ತನಾಳದ, —ಊತದ, ಊತವುಳ್ಳ, ಊತ ಚಿಕಿತ್ಸೆಯ (V. ulcer, vein, bandage) ; = Varicated. **Váricosed** (ಗು.); **Varicósity** —ಕಾ— (ನಾ.)

Várlet ವಾರ್‌ಲೆಟ್ (ನಾ.) (ಚರಿತ್ರೆ) ನೈಟ್ ವೀರನ ಅನುಚರನಾಗಲು ತರಪೇತು ಪಡೆಯುತ್ತಿದ್ದ ಯುವಕ ; ಬಾಲಭಟ ; ನೈಟ್ ವೀರನ ಅನುಚರ (ಪ್ರಾಚೀ. ಪ್ರ. ; ಮು., ಹಾಸ್ಯ ಪ್ರ.) ಕೀಳಾಳು, ಹಲ್ಕ ಮನುಷ್ಯ, ದಗಾಕೋರ.

Vármint ವಾರ್‌ಮಿಂಟ್ (ನಾ.) (ಗ್ರಾಮ್ಯ, ಹಾಸ್ಯ ಪ್ರ.) ತುಂಟ, ನೀಚ (—ಮನುಷ್ಯ, ಪ್ರಾಣಿ) ; (ಬೇಟೆಯ ಅಸಂ.) ನರಿ (*The* ಪದದೊಡನೆ) [Vermin ಎಂಬ ಪದದ ಅಪಭ್ರಂಶ]

Várnish ವಾರ್ನಿಷ್ (ನಾ., ಕ್ರಿ. ಸಕ.) ಮೆರುಗೆಣ್ಣೆ, ವಾರ್ನೀಸು ; (ಮಣ್ಣಿನ ಪಾತ್ರೆ, ಮೊ. ಗಳ ಮೇಲೆ ಕೊಡುವ) (ನುಣುಪು) ಹೊಳಪು, ಮೆರುಗು; (ಕೃತಕವಾದ ಅಥವಾ ಸಹಜವಾದ) ನುಣ್‌ಹೊಳಪು, ಥಾಳಥಳ್ಯ; (ನಡೆ ನುಡಿಗಳಲ್ಲಿ) ಹೊರ ನಯ, ಥಳುಕು; (ತಪ್ಪು ನಡತೆ, ಮೊ. ಕ್ಕೆ ಕೊಡುವ) ಹೊರಬಣ್ಣ, ಮುಚ್ಚು ಮೆರುಗು ; [V.-tree ಮೆರುಗೆಣ್ಣೆ (ದೊರೆಯುವ ಹಲವು ಬಗೆಯ) ಮರ]. (ಕ್ರಿ.) (ಮರ, ಚಿತ್ರ, ಮೊ. ಕ್ಕೆ) ಮೆರುಗೆಣ್ಣೆ—ಬಳಿ, ತೊಡೆ ; ಮೆರುಗು, ಹೊಳಪು, —ಕೊಡು ; (ನಡತೆ, ವ್ಯಕ್ತಿ, ಕಾರ್ಯ, ಮೊ. ಕ್ಕೆ) ಹೊರ ನಯ, ಥಳುಕು, ಮುಚ್ಚು ಮೆರುಗು, —ಕೊಡು; ಬಣ್ಣ ಕಟ್ಟು. Varnishing-day ಪ್ರದರ್ಶನಕ್ಕಾಗಿ ಆಗಲೇ ತಗುಲುಹಾಕಿದ ತಮ್ಮ ಚಿತ್ರಗಳಿಗೆ ಚಿತ್ರಕಾರರು ಒಪ್ಪ ಕೊಡಬಹುದಾದ ಅಥವಾ ಮೆರುಗೆಣ್ಣೆ ಹಾಕಬಹುದಾದ, ಚಿತ್ರ ಪ್ರದರ್ಶನದ ಹಿಂದಿನ ದಿನ : ಮೆರುಗು ಕೊಡುವ, ಒಪ್ಪವಿಡುವ, —ದಿನ.

Vársal ವಾರ್‌ಸಲ್ (ಗು.) (ಬಳ. ಮಾ. ; ಈಗ ವಿರ. ಪ್ರ.) = Universal (ಎಂಬುದರ ಸಂಕ್ಷಿಪ್ತ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Vársity ವಾರ್ಸಿಟಿ (ನಾ.) (ಬಳ. ಮಾ.) = University (ಎಂಬುದರ ಸಂಕ್ಷಿಪ್ತ)

Várus[1] (L) ವೇ(ಅ)ರಸ್ (ನಾ.) ಒಳಬಾಗಿರುವ ಪಾದವಿಕಾರ, ಒಳ ತಿರುಚು ಪಾದ (=Talipes v.); ತಾಗುಮಂಡಿ(ಗಳ ಮನುಷ್ಯ)

Várus[2] (L) ವೇ(ಅ)ರಸ್ (ನಾ.) =Acne (ಆ ಪದ ನೋಡಿ)

Váry ವೇ(ಅ)ರಿ (ಕ್ರಿ.) ಬದಲಾಯಿಸು, ಮಾರ್ಪಡಿಸು, ವ್ಯತ್ಯಾಸಮಾಡು, ಬಗೆ ಬಗೆ ಮಾಡು, ವೈವಿಧ್ಯವುಂಟುಮಾಡು [Can v. the pressure at will ಒತ್ತಡವನ್ನು ಬೇಕಾದಂತೆ ಬದಲಾಯಿಸಬಲ್ಲದು. Never varies his style ಅವನು ತನ್ನ ಶೈಲಿಯನ್ನು ಬದಲಾಯಿಸುವುದೇ ಇಲ್ಲ, ಶೈಲಿಯಲ್ಲಿ ವೈವಿಧ್ಯ ತರುವುದೇ ಇಲ್ಲ. A varied scene ವೈವಿಧ್ಯವುಳ್ಳ ದೃಶ್ಯ]; (ಸಂ.) (ರಾಗದಲ್ಲಿ) ವಿವಿಧ ವಿನ್ಯಾಸ ತೋರು. ಮಾರ್ಪಡು, (ದರ್ಜೆಯಲ್ಲಿ, ಗುಣದಲ್ಲಿ) ವ್ಯತ್ಯಾಸ ಹೊಂದು; ಬಗೆ ಬಗೆಯಾಗಿರು, ವಿವಿಧವಾಗು (Varies from the type ಮಾದರಿಯಿಂದ ವ್ಯತ್ಯಾಸ ವಾಗುತ್ತದೆ. Opinions v. on this point ಈ ಅಂಶದಮೇಲೆ ಅಭಿಪ್ರಾಯಗಳು ಭಿನ್ನ ಭಿನ್ನವಾಗಿವೆ). V. (directly) as, v. inversely as (—ಕ್ಕೆ ಅನುಗುಣವಾಗಿ) ನೇರ ಪ್ರಮಾಣದಲ್ಲಿ, ವಿಪರ್ಯಯವಾಗಿ, ವ್ಯತ್ಯಾಸವಾಗು [Attraction of bodies varies (directly) as their masses and inversely as the square of their distance ಕಾಯಗಳ ಪರಸ್ಪರ ಆಕರ್ಷಣಶಕ್ತಿ ಅವುಗಳ ಪರಿಮಾಣಕ್ಕೆ ಅನುಗುಣವಾಗಿ (ನೇರ ಪ್ರಮಾಣದಲ್ಲಿ), ಮತ್ತು ಅವುಗಳ ದೂರದ ವರ್ಗಕ್ಕೆ ವಿಪರ್ಯಯವಾಗಿ ವ್ಯತ್ಯಾಸವಾಗುತ್ತದೆ]. **Váriable** (ಗು., ನಾ.) ಬೇಕಾದಂತೆ ಹೆಚ್ಚು, ಕಡಮೆ, ಆಗುವ; ಬದಲಾಯಿಸಲಾಗುವ, ಹೇಗೆಂದರೆ ಹಾಗೆ ಹೊಂದಿಸಲಾಗುವ, ವ್ಯತ್ಯಾಸ ಸಾಧ್ಯ [Rod of v. length. The pressure is v. ಒತ್ತಡವು ಹೆಚ್ಚು ಕಡಮೆಯಾಗುತ್ತದೆ. V. gear ಬೇರೆ ಬೇರೆ ವೇಗಗಳನ್ನು ಕೊಡಲು ಸಾಧ್ಯವಾಗುವಂತೆ, ವೇಗ ಬದಲಾಯಿಸಲಾಗುವಂತೆ, —ಅಳವಡಿಸಿದ ಚಾಲಕ: (ವೇಗ) ವ್ಯತ್ಯಯಕಾರಿ ಚಾಲಕ]; ಬದಲಾಯಿಸುವ, ವ್ಯತ್ಯಾಸಗೊಳ್ಳುವ, ಅಸ್ಥಿರ, ಚಂಚಲ (V. wind, temper, fortune); (ಗಣಿತ: ಪರಿಮಾಣದ ವಿಷಯದಲ್ಲಿ) ಬೇರೆ ಬೇರೆ ಸಂಖ್ಯಾ ಮೌಲ್ಯಗಳನ್ನು ಹೊಂದಬಲ್ಲ; ಅನಿರ್ದಿಷ್ಟ (ಮೌಲ್ಯದ); ಚಲ. (ಸ. ವಿ., ಪ್ರಾ. ವಿ.) (ವಂಶದ ವಿಷಯದಲ್ಲಿ) ಮಾದರಿಯಿಂದ ಭಿನ್ನವಾದ ವ್ಯಕ್ತಿಗಳನ್ನಾಗಲಿ ಪಂಗಡಗಳನ್ನಾಗಲಿ ಒಳಕೊಂಡ: ವ್ಯತ್ಯಾಸಗಳುಳ್ಳ; (ಜೀ. ವಿ.) (ಜೀವಿಯ ವಿಷಯದಲ್ಲಿ) ರಚನೆಯಲ್ಲಾಗಲಿ ಕಾರ್ಯದಲ್ಲಾಗಲಿ ಬದಲಾಯಿಸುವ ಪ್ರವೃತ್ತಿಯುಳ್ಳ: ವ್ಯತ್ಯಾಸ ಹೊಂದುವ; (ಖ. ವಿ.) (ನಕ್ಷತ್ರಗಳ ವಿಷಯದಲ್ಲಿ) ಪ್ರಕಾಶದಲ್ಲಾಗಲಿ ಪ್ರಮಾಣದಲ್ಲಾಗಲಿ ನಿಯತ ಕಾಲಿಕವಾಗಿ ಬದಲಾಯಿಸುತ್ತಿರುವ: ವ್ಯತ್ಯಾಸ ಹೊಂದುತ್ತಿರುವ. (ನಾ.) ಬದಲಾಯಿಸುವ, ವ್ಯತ್ಯಾಸ ಗೊಳ್ಳುವ, —ವಸ್ತು, ಪರಿಮಾಣ; ಚಲ ಪರಿಮಾಣ. (ನಾವೆ.) ಬದಲಾಯಿಸುತ್ತಿರುವ ಗಾಳಿ; (ಬ. ವ. ದಲ್ಲಿ) ವಾಯವ್ಯ ಮತ್ತು ಆಗ್ನೇಯ ವಾಣಿಜ್ಯ ಮಾರುತಗಳ ನಡುವಣ (ಅನಿಯತವಾಗಿ ಗಾಳಿ ಬೀಸುವ ಸಮುದ್ರದ) ಪ್ರದೇಶ: ಅನಿಯತ ಮಾರುತ ಪ್ರದೇಶ. **Variabílity** (ನಾ.); **Váriableness** (ನಾ.); **Váriably** (ಕ್ರಿ. ವಿ.); **Váriance** (ನಾ.) ವ್ಯತ್ಯಾಸ, ಭಿನ್ನತೆ, ಹೊಂದಿಕೆಯಿಲ್ಲದಿರುವುದು, ಒಮ್ಮತವಿಲ್ಲದಿರುವುದು; (ಅಭಿಪ್ರಾಯ, ಮತ—) ಭೇದ; ವೈಮನಸ್ಯ, ವಿವಾದ (On that point we are at v. ಆ ವಿಷಯದಲ್ಲಿ ನಾವು ಅಭಿಪ್ರಾಯ ಭೇದ ಹೊಂದಿದ್ದೇವೆ. At v. with the authorities ಅಧಿಕಾರಿಗಳೊಡನೆ ವಿರೋಧ ಕಟ್ಟಿಕೊಂಡು); (ನ್ಯಾ. ಶಾ.) (ವಾದಕ್ಕೂ ಸಾಕ್ಷ್ಯಕ್ಕೂ ಅಥವಾ ಲಿಖಿತಕ್ಕೂ ಹೇಳಿಕೆಗೂ ಇರುವ) ಪರಸ್ಪರ ವಿರೋಧ, ಭಿನ್ನತೆ, ಅಸಾಮಂಜಸ್ಯ. **Váriant** (ಗು., ನಾ.) (ಇನ್ನೊಂದಕ್ಕಿಂತ ಸ್ವರೂಪದಲ್ಲಿ ಅಥವಾ ವಿವರಗಳಲ್ಲಿ) ಬೇರೆಯಾದ, ವ್ಯತ್ಯಾಸವಾದ, ಭಿನ್ನ (A v. reading ಪಾಠಾಂತರ, ಭಿನ್ನ ಪಾಠ. 40 v. types of pigeon); ಮಾರ್ಪಡುವ, ವ್ಯತ್ಯಾಸ ಹೊಂದುವ; ವೈವಿಧ್ಯವುಳ್ಳ. (ನಾ.) ಬೇರೆಯ, ಭಿನ್ನ, —ರೂಪ, ಮಾದರಿ, ಪಾಠ, ಮೊ. ವು (*Valet* is a v. of *varlet*). **Variátion** ವೇರಿಯೇಷನ್ (ನಾ.) ಬದಲಾವಣೆ, ಮಾರ್ಪಾಟು, ವ್ಯತ್ಯಾಸ, ಪರಿವರ್ತನೆ (—ಆಗುವುದು); ವ್ಯತ್ಯಾಸದ ಮೊತ್ತ (Repeated variations of temperature ಶಾಖದಲ್ಲಿ ಮತ್ತೆ ಮತ್ತೆ ಕಾಣಬರುವ ವ್ಯತ್ಯಾಸಗಳು. Is subject to a v. of several degrees ಅನೇಕ ಡಿಗ್ರಿಗಳಷ್ಟು ವ್ಯತ್ಯಾಸಕ್ಕೆ ಒಳಪಟ್ಟಿದೆ); (ವ್ಯಾ.) (ವಿಭಕ್ತಿ, ಮೊ. ಪ್ರತ್ಯಯ ಹಚ್ಚುವುದರಿಂದಾಗುವ) ರೂಪ ವ್ಯತ್ಯಾಸ; (ಖ. ವಿ.) (ಒಂದು ಆಕಾಶಸ್ಥ ಕಾಯವು ತನ್ನ ಸರಾಸರಿಯ ಪಥದಿಂದಾಗಲಿ ಚಲನೆಯಿಂದಾಗಲಿ ಹೊಂದುವ) ಚ್ಯುತಿ, ಭ್ರಂಶ (Periodic, secular, v. ಅಲ್ಪಕಾಲಾವಧಿಯಲ್ಲಿ, ದೀರ್ಘ ಕಾಲಾವಧಿಯಲ್ಲಿ, ಸಮಗೊಳ್ಳುವ ಚ್ಯುತಿ); (ಕಾಂತ ದಿಕ್ಸೂಚಿಯ ವಿಷಯದಲ್ಲಿ) (ನಿಜ ದಕ್ಷಿಣೋತ್ತರ ರೇಖೆಯಿಂದಿರುವ) ಚ್ಯುತಿ (V.-chart ಸಮಾನ ಚ್ಯುತಿಯುಳ್ಳ ಪ್ರದೇಶಗಳ ಮೂಲಕ ಎಳೆದ ರೇಖೆಗಳುಳ್ಳ ನಕ್ಷೆ: ಸಮಾನ ಚ್ಯುತಿ ನಕ್ಷೆ); (ಜೀ. ವಿ.) ರಚನೆಯಲ್ಲಾಗಲಿ, ಕಾರ್ಯದಲ್ಲಾಗಲಿ ಮಾದರಿಯಿಂದ ವ್ಯತ್ಯಾಸ: ಭಿನ್ನತೆ; (ಬೀ. ಗ.) ಒಂದನ್ನೊಂದು ಅನುಸರಿಸಿ ವ್ಯತ್ಯಾಸ ಹೊಂದುವ ಪರಿಮಾಣಗಳಿಗಿರುವ ಸಂಬಂಧ (ತತ್ತ್ವ): ಚಲಸಂಬಂಧ ತತ್ತ್ವ; =Permutation (ಆ ಪದ ನೋಡಿ); ಒಂದು ಮಾದರಿಯಿಂದ ಭಿನ್ನವಾಗಿರುವ ವಸ್ತು: ಭಿನ್ನವಾದುದು; (ಸಂ.) ವ್ಯತ್ಯಾಸಗೊಳಿಸಿದ ಅಥವಾ ವಿಸ್ತಾರಗೊಳಿಸಿದ ರೂಪದಲ್ಲಿ ಪುನರಾವರ್ತನೆ ಮಾಡಿದ ರಾಗ ಅಥವಾ ಪ್ರಧಾನ ಸ್ವರ ಸಂಗತಿ. **Variátional** (ಗು.); **Varíety** ವರೈಎಟಿ (ನಾ.) ಬಗೆ ಬಗೆ(ಯಾಗಿರುವುದು), ವಿವಿಧತೆ, ವೈವಿಧ್ಯ; ವಿವಿಧ ವಸ್ತು, ಗುಣ, ಮೊ. ಗಳ ಸಂಗ್ರಹ [A v. of silks ಬಗೆ ಬಗೆಯ, ರಕಮುವಾರು, —ರೇಷ್ಮೆ (ಬಟ್ಟೆ). For a v. of reasons ವಿವಿಧ, ನಾನಾ, —ಕಾರಣಗಳಿಗಾಗಿ. V. entertainment *or* show (ನೃತ್ಯಗಳು, ಹಾಡುಗಳು, ದೊಂಬರಾಟ, ಮೊ. ಗಳನ್ನುಳ್ಳ) ವಿವಿಧ ವಿನೋದಾವಳಿ, ವಿವಿಧ ವಿನೋದ ಪ್ರದರ್ಶನ. V. theatre ವಿವಿಧ ವಿನೋದ ಪ್ರದರ್ಶನ ಶಾಲೆ]; ಉಪವರ್ಗ, ಒಳಪಂಗಡ(ಕ್ಕೆ ಸೇರಿದ ವ್ಯಕ್ತಿ, ಮಾದರಿ); ಪ್ರಭೇದ; (ಜೀ. ವಿ.) ತಾನು ಯಾವ ಜಾತಿಗೆ ಸೇರಿದೆಯೊ ಆ ಜಾತಿಯ ಇತರ ಯಾವುದಾದರೂ ವ್ಯಕ್ತಿಯಿಂದ ಗರ್ಭವತ್ತಾಗುವ, ಆದರೆ ಕೆಲವು ಶಾಶ್ವತ ಅಮುಖ್ಯ ಲಕ್ಷಣಗಳಿಂದ ತನ್ನ ಸಂತಾನವು ಭಿನ್ನವಾಗಿರುವ ಸಸ್ಯ ಅಥವಾ ಪ್ರಾಣಿ(ಗಳ ಪಂಗಡ): ಉಪಜಾತಿ, ಪ್ರಭೇದ (Climatic v. ವಾಯುಗುಣ ವಿಶಿಷ್ಟ ಪ್ರಭೇದ. Geographical v. ಪ್ರಾದೇಶಿಕ ಪ್ರಭೇದ). **Varíetal** (ಗು.) (ಜೀ. ವಿ.) ಉಪಜಾತಿಯ, ಪ್ರಭೇದದ; ಉಪಜಾತಿ, ಪ್ರಭೇದ, —ಸಂಬಂಧವಾದ. **Varíetally** (ಕ್ರಿ. ವಿ.); **Váriform** (ಗು.) ವಿವಿಧ ರೂಪಗಳುಳ್ಳ; ವಿವಿಧ ರೂಪಿ. **Várious** ವೇರಿಯಸ್ (ಗು.) ಬಗೆ ಬಗೆಯ, ನಾನಾ (ಪ್ರಕಾರದ), ವಿವಿಧ (V. types of men); ಬೇರೆ ಬೇರೆ, ಅನೇಕ, ಹಲವು (V. reasons ಹಲವು, ನಾನಾ, —ಕಾರಣಗಳು); (ಗ್ರಾಮ್ಯ; ಸ. ನಾ. ದ ಅರ್ಥದಲ್ಲಿ) ಅನೇಕರು, ಹಲವರು, ಹಲವು (This is denied by v.). **Váriously** (ಕ್ರಿ. ವಿ.); **Váriousness** (ನಾ.; ವಿರ. ಪ್ರ.)

Vas (L) ವ್ಯಾಸ್ (ನಾ.; ಬ. ವ. Vasa ವೇಸ) (ಅಂ. ರ. ಶಾ.) ನಾಳ (V. deferens ವೃಷಣದ ವಿಸರ್ಜಕ ನಾಳ; ಶುಕ್ರ, ರೇತ್ರ, —ನಾಳ). **Vásal** ವೇ— (ಗು.)

Váscular, Vásculose. Vasculum ನೋಡಿ.

Vásculum ವ್ಯಾಸ್ಕ್ಯುಲಂ (ನಾ, ಬ. ವ. -la) ಸಸ್ಯ ವೈಜ್ಞಾನಿಕನ ಸಂಗ್ರಹಣ ಕೋಶ (ಸಾ., ತವರದ್ದು): ಸಸ್ಯಕರಂಡ. (ಅಂ. ರ. ಶಾ.) ಸಣ್ಣ ನಾಳ; ಶಿಶ್ನ. **Váscular** (ಗು.) (ರಕ್ತ, ಸಸ್ಯರಸ, ಮೊ. ಗಳನ್ನು ಸಾಗಿಸುವ) ನಾಳಗಳ, ನಾಳಗಳುಳ್ಳ, ನಾಳಗಳಿಂದ ಮಾಡಿದ, ನಾಳ ರಚನೆಯ [V. functions ನಾಳಗಳ ಕಾರ್ಯ. V. tissue ನಾಳಗಳುಳ್ಳ ಅಂಗಾಂಶ. V. system (ಸಸ್ಯದಲ್ಲಿನ) ನಾಳ ವ್ಯೂಹ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಹೃದಯ, ಧಮನಿಗಳು, ಇತರ ರಕ್ತನಾಳಗಳು, ಮೊ. ವು ಸೇರಿ) ರಕ್ತ ಪರಿಚಲನಾಂಗ ವ್ಯೂಹ. V. plants ನಾಳಮಯ ಸಸ್ಯಗಳು]. **Vasculárity** (ನಾ.); **Vascularizátion** (ನಾ.) ನಾಳದ ಸ್ಥಿತಿಗೆ ಮಾರ್ಪಡಿಸುವುದು: ನಾಳೀಕರಣ. **Vásclarize** (ಕ್ರಿ. ಸಕ.); **Vásculary** (ಕ್ರಿ. ವಿ.); **Vásculose** ವ್ಯಾಸ್ಕ್ಯುಲೋಸ್ (ನಾ., ಗು.) ಸಸ್ಯನಾಳದ ಅಂಗಾಂಶದ್ರವ್ಯ. (ಗು.) = Vascular.

Vase ವಾಸ್, (ಪ್ರಾಚೀ. ಪ್ರ. ಮತ್ತು ಅಮೆ. ಸಂ.) ವೇಸ್(ಸ್) (ನಾ.) ಅಲಂಕಾರದ ಕುಂಭ(ಪಾತ್ರೆ), ಕಲಶ, ಕುಂಡ (Flower-v. ಪುಷ್ಪ ಕುಂಭ, ಹೂದಾನಿ); ದ್ವಾರಸ್ತಂಭ, ಮೊ. ಗಳ ಅಲಂಕಾರಕ್ಕಾಗಿ ಅಮೃತಶಿಲೆ, ಮೊ. ಗಳಿಂದ ಮಾಡುತ್ತಿದ್ದ, ಚಿತ್ರಕೊರೆದ ದೊಡ್ಡ ಕಲಶ: ದ್ವಾರಸ್ತಂಭ ಕಲಶ; [Coal-v. (ಗ್ರಾಮ್ಯ ಅಥವಾ ಅಂಗಡಿಯ ಪ್ರ.) (ಅಲಂಕಾರದ ಹೊರ ಆವರಣವುಳ್ಳ) ಕಲ್ಲಿದ್ದಲ ತೊಟ್ಟಿ]; ಕಾರಿಂತಿಯನ್ ಅಥವಾ ಸಂಕೀರ್ಣ ಶೈಲಿಯ ಬೋದಿಗೆಯ ಒಡಲು. V.-painting (ಮು., ಪ್ರಾಚೀನ ಗ್ರೀಕರಲ್ಲಿ ಬಳಕೆಯಲ್ಲಿದ್ದ) ಕುಂಭ—ವರ್ಣಾಲಂಕರಣ, ವರ್ಣಾಲಂಕಾರ. **Váseful** (ನಾ.)

Váseline ವ್ಯಾಸೆ(ಸ)ಲೀ(ಲ)ನ್ (ನಾ.) ಮುಲಾಮು, ಮೊ. ಗಳಲ್ಲಿ ಉಪಯೋಗಿಸುವ, ಪೆಟ್ರೋಲಿಯಮ್ಮಿನಿಂದ ದೊರೆಯುವ, ಒಂದು ಲೇಪನ ದ್ರವ್ಯ; ವ್ಯಾಸ್ಲೀನು (ವ್ಯಾಪಾರ ಸ್ವಾಮ್ಯದ ಹೆಸರು)

Vasi- ವ್ಯಾ(ವೇ)ಸಿ—, **Vaso-** ವ್ಯಾ(ವೇ)ಸೊ— (ಸ. ಪೂ. ಪ.) ನಾಳ—. **Vásiform** ನಾಳರೂಪದ, ನಾಳದಂಥ. **Vaso-constríctor** (ಗು., ನಾ.) ರಕ್ತನಾಳ ಸಂಕೋಚಕ (—ನರ, ಔಷಧ). **Vasodilátor** (ಗು., ನಾ.) ರಕ್ತನಾಳ ವಿಸ್ತಾರಕ (—ನರ, ಔಷಧ). **Vasomótor** ನಾಳಗಳ ಸಂಕೋಚನ ವಿಸ್ತಾರ ಗಳೆರಡನ್ನೂ ಮಾಡಬಲ್ಲ (ನರ). **Vasosénsory** ನಾಳಗಳಿಗೆ ಸಂವೇದನೆಯನ್ನು ಒದಗಿಸುವ: ನಾಳ ಸಂವೇದಕ.

Vással ವ್ಯಾಸಲ್ (ನಾ.) (ಚರಿತ್ರೆ) ಸಾಮಂತ; ಊಳಿಗಮಾನ್ಯ ಪದ್ಧತಿಯ ಜಮೀನು ಹಿಡುವಳಿದಾರ; (ಉಂಬಳಿಯ) ಹಿಡುವಳಿದಾರ, ಜೋಡಿದಾರ [Great v. (ನೇರವಾಗಿ ದೊರೆಯಿಂದ ಹಿಡುವಳಿಯುಳ್ಳ) ದೊಡ್ಡ ಹಿಡುವಳಿದಾರ, ಜೋಡಿದಾರ. Rear v. (ದೊಡ್ಡ ಹಿಡುವಳಿದಾರನಿಂದ ಹಿಡುವಳಿ ಪಡೆದಿರುವ) ಒಳ ಹಿಡುವಳಿದಾರ; ಜೋಡಿದಾರನ ರೈತ]. (ಅಲಂ.) ತೊತ್ತು, ದಾಸ, ಅಡಿಯಾಳು. **Vássalage** ವ್ಯಾಸಲೆ(ಲ)ಜ್ (ನಾ.) (ಚರಿತ್ರೆ) ಹಿಡುವಳಿದಾರನ—ಸ್ಥಿತಿ, ಕರ್ತವ್ಯ, ಸೇವೆ; ಹಿಡುವಳಿದಾರತನ; ತೊತ್ತುಗೆಲಸ, ಅಡಿಯಾಳುತನ, ದಾಸ್ಯ; ಉಂಬಳಿ, ಊಳಿಗಮಾನ್ಯ; (ವಿರ. ಪ್ರ.) ಹಿಡುವಳಿದಾರರು, ಅಡಿಯಾಳುಗಳು [= **Vássalry** (ನಾ.)]

Vast ವಾಸ್ಟ್ (ಗು., ನಾ.) ಬಹು ದೊಡ್ಡ, ಭಾರಿ, ಮಹತ್ತಾದ, ವಿಶಾಲವಾದ, ಬಹು ವಿಸ್ತಾರವಾದ, ಅಪಾರ [Shook his v. frame ಭಾರಿ ಮೈಯನ್ನು ಅಲುಗಾಡಿಸಿದನು. A v. expanse of water. A v. multitude. (ಬಳ. ಮಾ.) Gave him v. satisfaction ಅವನಿಗೆ ಅಪಾರ ತೃಪ್ತಿಯಾಯಿತು. Makes a v. difference ಮಹತ್ತರ ವ್ಯತ್ಯಾಸವುಂಟುಮಾಡುತ್ತದೆ]. (ನಾ.) (ಕಾವ್ಯ, ಅಲಂ.) ವಿಸ್ತಾರ, ವಿಶಾಲ ಪ್ರದೇಶ (The v. of ocean ಸಾಗರದ ವಿಸ್ತಾರ). **Vástly** (ಕ್ರಿ. ವಿ.); **Vástness** (ನಾ.)

Vat ವ್ಯಾಟ್ (ನಾ., ಕ್ರಿ. ಸಕ.) ದೊಡ್ಡ ತೊಟ್ಟಿ, ಪೀಪಾಯಿ, (ಮರದ) ಕೂನಿ, ಕಡಾಯಿ, ಕೊಪ್ಪರಿಗೆ (Fermenting-v. ಹುದುಗೆಬ್ಬಿಸುವ, ಹುದುಗು,—ತೊಟ್ಟಿ. Tan-v. ಚರ್ಮ ಹದಮಾಡುವ ತೊಟ್ಟಿ). (ಕ್ರಿ.) ತೊಟ್ಟಿಯಲ್ಲಿ—ಇಡು, ಸಂಸ್ಕರಿಸು. **Vátful** (ನಾ.)

Vátican ವ್ಯಾಟಿಕನ್ (ನಾ.) ರೋಮಿನಲ್ಲಿ ವ್ಯಾಟಿಕನ್ ಗುಡ್ಡದ (V. hill) ಮೇಲೆ ಕಟ್ಟಿರುವ ಪೋಪ್ ಗುರುವಿನ ಅರಮನೆ ಮತ್ತು ವಾಸಸ್ಥಾನ. (ರೂಪ.) ಪೋಪ್ ಗುರುವಿನ ಆಡಳಿತ (ಪದ್ಧತಿ). V. council ೧೮೬೯-೭೦ರಲ್ಲಿ ನೆರೆದ, ಪೋಪ್ ಗುರುವಿನ ತಪ್ಪಿಗವಕಾಶವಿಲ್ಲದ ಗುಣವನ್ನು ಸಾರಿದ, ಅಖಿಲ ಕ್ರೈಸ್ತ ಸಭೆ. **Váticanism** (ನಾ.) ಪೋಪ್ ಗುರುವಿನ (ತಪ್ಪೇಮಾಡದ) ಅಧಿಕಾರ ನೀತಿ. **Váticanist** (ನಾ.) ಈ ನೀತಿಯ—ಅನುಯಾಯಿ, ವಾದಿ.

Vatícinate ವಟಿಸಿನೇಟ್ (ಕ್ರಿ.) ಭವಿಷ್ಯ, ಕಣಿ, ಕಾಲಜ್ಞಾನ—ಹೇಳು. **Vaticinátion** (ನಾ.); **Vatícinator** (ನಾ.)

Vaúdeville ವೋಡ(ಡ್)ವಿಲ್ (ನಾ.) ಗೀತ ನೃತ್ಯಗಳಿಂದ ಕೂಡಿದ ವಿನೋದಮಯ ಲಘು ನಾಟಕ: ಲಘು ಗೀತ ನೃತ್ಯ ನಾಟಕ; ವಿವಿಧ ವಿನೋದಾವಳಿ; (ತತ್ಕಾಲ ವಿಷಯಕವಾದ ಅಥವಾ ವಿಡಂಬನಾತ್ಮಕವಾದ) ಜನಪ್ರಿಯವಾದ ಲಘು ಫ್ರೆಂಚ್ ಗೀತ. (ಚರಿತ್ರೆ) ಉತ್ಸವ, ಉಲ್ಲಾಸ, —ಗೀತ (ಮು., O. Basselin ಎಂಬ ಕವಿ ರಚಿಸಿದವುಗಳಲ್ಲಿ ಒಂದು). **Vaúdevillist** (ನಾ.) —ಕವಿ, ನಟ, ಗಾಯಕ.

Vaúdoo. Voodoo ನೋಡಿ.

Vault[1] ವಾಲ್ಟ್ (ನಾ., ಕ್ರಿ. ಸಕ.) (ವಾ. ಶಾ.) ಕಮಾನು ಚಾವಣಿ; ನಿರಂತರ ಕಮಾನು; ಒಂದು ಕೇಂದ್ರ ಬಿಂದುವಿನಿಂದ ಅಥವಾ ಕೇಂದ್ರ ರೇಖೆಯಿಂದ ವಿಸರಣವಾಗುವ ಸಂಧಿಗಳುಳ್ಳ ಕಮಾನುಗಳ ತಂಡ, ಶ್ರೇಣಿ; ಗುಮ್ಮಟ(ದಂಥ ಆವರಣ) (The v. of heaven ಆಕಾಶ ಗುಮ್ಮಟ); ಗುಮ್ಮಟ ಚಾವಣಿಯ ಕೋಣೆ; (ದ್ರಾಕ್ಷಾಮದ್ಯ, ಮೊ. ಗಳ ಉಗ್ರಾಣವಾಗಿ ಅಥವಾ ಸಮಾಧಿಭೂಮಿಯಲ್ಲಿ ಹೆಣ ಹೂಳುವುದಕ್ಕಾಗಿ ಉಪಯೋಗಿಸುವ) ಗುಮ್ಮಟ ಚಾವಣಿಯ ಅಥವಾ ಇತರ ನೆಲಮಾಳಿಗೆ (Wine-v. ದ್ರಾಕ್ಷಾಮದ್ಯದ ನೆಲಮಾಳಿಗೆ. Family v. ವಂಶದವರ ಸಮಾಧಿಯ ನೆಲಮಾಳಿಗೆ). (ಅಂ. ರ. ಶಾ.) ಕುಹರದ ಗುಮ್ಮಟ ಚಾವಣಿ. (ಕ್ರಿ.) ಕಮಾನು ಚಾವಣಿ—ಇಡು, ಮಾಡು; ಕಮಾನು ಚಾವಣಿಯಂತೆ—ಬಾಗಿಸು, ಬಾಗಿರು (ಮು., ಭೂ. ಕೃ. ನಲ್ಲಿ)

Vault[2] ವಾಲ್ಟ್ (ಕ್ರಿ., ನಾ.) (ಮು., ಕೈಯೂರಿಕೊಂಡು ಅಥವಾ ಗಣೆಯ ಸಹಾಯದಿಂದ) ನೆಗೆ, ಚಿಗಿ, ಹಾರು (V. over the gate); ಹೀಗೆ ನೆಗೆದು ದಾಟು (Foot-passengers have to v. the gate). Vaulting-horse ಅದರಮೇಲೆ ಕೈಯೂರಿ ಒಂದೇ ಏಟಿಗೆ ಹಾರಿ ದಾಟುವಂತೆ ನೆಲದಲ್ಲಿ ಹೂತ ಮರದ ಕುದುರೆ: ಹಾರು ಕುದುರೆ. **Vaúlter** (ನಾ.) ಹಾರುವವನು.

Vaunt ವಾಂಟ್ (ಕ್ರಿ., ನಾ.) ಜಂಬ, ಬಡಾಯಿ, ಬಡಿವಾರ (—ಕೊಚ್ಚು). **Vaúnter** (ನಾ.); **Vaúntingly** (ಕ್ರಿ. ವಿ.)

Vávasory. Vavasour ನೋಡಿ.

Vávasour ವ್ಯಾವಸೂ(ಅ)ರ್, —ಸೋ(ೞ)ರ್, —ಸರ್ (ನಾ.) (ಚರಿತ್ರೆ) ದೊಡ್ಡ ಧಣಿಯ (Lord) ಕೈಕೆಳಗೆ ತಾನು ಹಿಡುವಳಿ ಹೊಂದಿದ್ದು, ತನ್ನ ಕೈಕೆಳಗೆ ಇತರ ಹಿಡುವಳಿದಾರರನ್ನುಳ್ಳ ಚಿಕ್ಕ ಧಣಿ; ಒಕ್ಕಲ ಧಣಿ. **Vávasory** (ನಾ.) (ಚರಿತ್ರೆ) —ಯ ಹಿಡುವಳಿ, ಜಮೀನು.

've. —ವ್. Have ಪದದ ಸಂಕ್ಷಿಪ್ತ (I've, they've = I have, they have)

Veal ವೀಲ್ (ನಾ.) (ಆಹಾರವಾಗಿ ಉಪಯೋಗಿಸುವ) ಕರುವಿನ ಮಾಂಸ. V.-skin ಮುಖದಮೇಲೂ ಕೊರಳಮೇಲೂ ನುಣುಪಾದ ಬಿಳಿಯ ಕಿರು ಗಂತಿಗಳೇಳುವ ಒಂದು ಬಗೆಯ ಚರ್ಮ ರೋಗ: ಗಂತಿ ಚರ್ಮ(ರೋಗ) **Veály** (ಗು.)

Véctor ವೆಕ್ಟರ್ (ನಾ.) ಗೊತ್ತಾದ ಉದ್ದ ಮತ್ತು ದಿಕ್ಕು ಉಳ್ಳದ್ದೆಂದೂ, ಆದರೆ ಗೊತ್ತಾದ ನೆಲೆಯಿಲ್ಲದ್ದೆಂದೂ ಕಲ್ಪಿತವಾದ ರೇಖೆ: ದಿಕ್ ಪ್ರಮಾಣ ರೇಖೆ. (ಗಣಿತ) ಒಂದು ಬಿಂದುವಿನಿಂದ ಮತ್ತೊಂದು ಬಿಂದು ಇರುವ ದೂರ ಮತ್ತು ದಿಕ್ಕುಗಳನ್ನು ನಿರ್ದಿಷ್ಟಮಾಡುವ ಪರಿಮಾಣ; (ಬಲ, ವೇಗ, ಮೊ. ರ) ಪ್ರಮಾಣವನ್ನೂ ದಿಕ್ಕನ್ನೂ ಸರಳರೇಖೆಯಿಂದ ನಿರ್ದೇಶಿಸಲಾಗುವ ಪರಿಮಾಣ: ದಿಕ್ ಪರಿಮಾಣ [V. quantity ದಿಕ್ ಪರಿಮಾಣದಿಂದ ನಿರೂಪಿಸಲಾಗುವ ಮೊತ್ತ. Radius V. (Radius ನೋಡಿ)]. **Vectórial** (ಗು.)

Védda ವೆಡ (ನಾ.) ಸಿಂಹಳ ದ್ವೀಪದ ಕಾಡುಪ್ರದೇಶಗಳಲ್ಲಿ ವಾಸಿಸುವ ಮೂಲನಿವಾಸಿ; (ಸಿಂಹಳದ) ಬೇಡ ಜಾತಿಯವನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Vedétte, Vi- ವಿಡೆಟ್ (ನಾ.) (ಸೈನ್ಯದ ಉಕ್ಕಡದಾಚೆ ಕಾವಲಿರುವ) ರಾವುತ ಕಾವಲುಗಾರ, ಕಾವಲು ರಾವುತ.

Veer ವಿಯರ್ (ಕ್ರಿ.) (ಗಾಳಿಯ ವಿಷಯದಲ್ಲಿ) (ಮು., ಸೂರ್ಯ ಗತಿಯನ್ನು ಅನುಸರಿಸಿ, ಪ್ರದಕ್ಷಿಣವಾಗಿ) ದಿಕ್ಕು ಬದಲಾಯಿಸು, ತಿರುಗು ; (ರೂಪ.) ಮನಸ್ಸು, ಅಭಿಪ್ರಾಯ, ನಡತೆ, ಮಾತು, —ಬದಲಾಯಿಸು, (ನಾವೆ.) ಸಡಿಲಬಿಡು, ಉದ್ದಕ್ಕೆ ಬಿಡು (V. away, out, the cable); = Wear² (ಆ ಪದ ನೋಡಿ). V. & haul (ಹಗ್ಗ, ಮೊ. ನ್ನು) ಪರ್ಯಾಯವಾಗಿ ಬಿಗಿಯಾಗಿ ಎಳೆ ಮತ್ತು ಸಡಿಲಬಿಡು; (ಗಾಳಿ) ಪರ್ಯಾಯವಾಗಿ ದಿಕ್ಕು ಬದಲಾಯಿಸು ; (ರೂಪ.) (ಅಭಿಪ್ರಾಯ, ಮೊ. ಗಳಲ್ಲಿ) ಇತ್ತ ಅತ್ತ ತೂಗಾಡುತ್ತಿರು, ಡೋಲಾಯಮಾನವಾಗಿರು. **Veéringly** (ಕ್ರಿ. ವಿ.)

Véga ವೇಗ (ನಾ.) ಅಭಿಜಿತ್ (ನಕ್ಷತ್ರಪುಂಜದಲ್ಲಿನ ಅತ್ಯಂತ ಪ್ರಕಾಶಮಾನ) ನಕ್ಷತ್ರ.

Végetable ವೆಜಿಟಬ್‌ಲ್ (ಗು., ನಾ.) ಸಸ್ಯಗಳ, ವನಸ್ಪತಿಯ, ಸಸ್ಯ ಸಂಬಂಧವಾದ ; ಸಸ್ಯದಿಂದ—ತೆಗೆದ, ಪಡೆದ ; ಸಸ್ಯಗಳುಳ್ಳ [V. colic ಕಸುಗಾಯಿ (ತಿನ್ನುವುದರಿಂದ ಬರುವ) ಹೊಟ್ಟೆನೋವು. V. butter ಕೆಲವು ಸಸ್ಯಗಳಿಂದ ತೆಗೆದ, ಬೆಣ್ಣೆಯಂತಿರುವ, ಘನೀಭವಿಸಿದ ತುಪ್ಪ: ಸಸ್ಯದ— ತುಪ್ಪ, ಬೆಣ್ಣೆ. V. ivory, kingdom, marrow, sponge (ಆಯಾ ಪದ ನೋಡಿ). V. jelly = Pectin (Pectose ಕೆಳಗೆ ನೋಡಿ). V. naphtha ಸಸ್ಯ ನಾಫ್ತ. V. physiology ಸಸ್ಯಶರೀರಶಾಸ್ತ್ರ]. (ನಾ.) (ಅಡಿಗೆಗೂ ದನದ ಮೇವಿಗೂ ಉಪಯೋಗಿಸುವ) ಸಸ್ಯ, ಶಾಕ, ಕಾಯಿಪಲ್ಯ, ತರಕಾರಿ (ಅನೇಕ ವೇಳೆ ವಿಶೇಷಣವಾಗಿ ಪ್ರ.: V. diet ಸಸ್ಯಾಹಾರ). **Vegetabílity** (ನಾ.) ; **Végetal** (ಗು., ನಾ.) ಸಸ್ಯಗಳ, ಸಸ್ಯ ಸ್ವಭಾವದ ; ಪ್ರಾಣಿಗಳಿಗೂ ಸಸ್ಯಗಳಿಗೂ ಸಮಾನವಾದ [The v. functions (ಬೆಳವಣಿಗೆ, ಪರಿಚಲನೆ, ಸಂತಾನೋತ್ಪಾದನ, ಮೊ.) ಸಸ್ಯವ್ಯಾಪಾರಗಳು]. (ನಾ.) ಸಸ್ಯ ; ಕಾಯಿಪಲ್ಯ, ತರಕಾರಿ. **Vegetálity** (ನಾ.) ; **Vegetárian** ವೆಜಿಟೇರಿಯನ್ (ನಾ.) ಸಸ್ಯಾಹಾರಿ, ಶಾಕಾಹಾರಿ (ಯೂರೋಪಿಯನ್ನರಲ್ಲಿ ಹಾಲು ಮತ್ತು ಕೋಳಿಮೊಟ್ಟೆಗಳನ್ನು ಸೇವಿಸಿದರೂ ಸಹ) ; ಸಸ್ಯಾಹಾರ ವಾದಿ ; (ಅನೇಕ ವೇಳೆ ವಿಶೇಷಣವಾಗಿ ಪ್ರ. : V. food, diet ಸಸ್ಯಾಹಾರ. V. principles, craze ಸಸ್ಯಾಹಾರದ—ನಿಯಮಗಳು, ಹುಚ್ಚು). **Vegetárianism** (ನಾ.) ; **Végetate** ವೆಜಿಟೇಟ್ (ಕ್ರಿ. ಅಕ.) (ಸಸ್ಯದಹಾಗೆ) ಬೆಳೆ; (ರೂಪ.) ಯಾವ ಚಟುವಟಿಕೆಗಳೂ ಇಲ್ಲದೆ, ಸೋಮಾರಿಯಾಗಿ, ಜೀವಿಸು ; ಸುಮ್ಮನೆ ದೇಹ ಬೆಳಸುತ್ತಿರು ; ಸಸ್ಯಪ್ರಾಯ ಜೀವನ ನಡಸು. **Végetative** (ಗು.) ; **Végetatively** (ಕ್ರಿ. ವಿ.) ; **Végetativeness** (ನಾ.) ; **Vegetátion** (ನಾ.) (ಕ್ರಿಯಾರ್ಥಗಳಲ್ಲಿ). ಸಸ್ಯಗಳು, ಸಸ್ಯಜೀವನ (No sign of v. for miles round ಸುತ್ತ ಅನೇಕ ಮೈಲಿಗಳ ವರೆಗೆ ಒಂದು ಸಸ್ಯವೂ ಇಲ್ಲ, ಹಸುರಿನ ಹೆಸರೇ ಇಲ್ಲ). (ರೋಗ ನಿದಾನ) (ದೇಹದಮೇಲೆ ಏಳುವ) ಗಂತಿ, ಗಂಟು. **Végeto-** ವೆಜಿಟೊ— (ಸ. ಪೂ. ಪ.) ಸಸ್ಯ— ; ಸಸ್ಯಮೂಲದ— (V.-animal, -mineral)

Végetal, Vegetárian, Végetate, Vegetátion. Vegetable ನೋಡಿ.

Véhement ವೀಹಿ(ಇ)ಮೆಂಟ್ (ಗು.) ಆವೇಶಪೂರಿತ, ಭಾವಾವೇಶ ಪ್ರದರ್ಶಕ ; ಆಟೋಪದ ; ಉತ್ಕಟ [V. desire ಉತ್ಕಟೇಚ್ಛೆ. Man of v. character ಆವೇಶ(ಗೊಳ್ಳುವ) ಸ್ವಭಾವದ ಮನುಷ್ಯ]. ಜೋರಾದ, ಉರುವಣೆಯ, ರಭಸದ, ಪ್ರಚಂಡ (A v. wind). **Véhemently** (ಕ್ರಿ. ವಿ.) ; **Véhemence** (ನಾ.)

Véhicle ವೀಇ(ಹಿ)ಕ್‌ಲ್ (ನಾ.) ಬಂಡಿ, ಗಾಡಿ, ವಾಹನ ; ಬಣ್ಣಗಳು, ಔಷಧಗಳು, ಮೊ. ಗಳನ್ನು ಲೀನವಾಗಿಸಲು ಉಪಯೋಗಿಸುವ ದ್ರವ, ಮೊ. ದು : ವರ್ಣವಾಹಕ, ಅನುಪಾನ ; ಅಭಿಪ್ರಾಯ ಪ್ರಕಟನೆ, ಉದ್ದಿಷ್ಟ ಕಾರ್ಯ, ಮೊ. ಕ್ಕೆ ಮಧ್ಯವರ್ತಿಯಾಗಿ ಉಪಯೋಗಿಸುವ ಪದಾರ್ಥ ಅಥವಾ ವ್ಯಕ್ತಿ : ಸಾಧನ, ಉಪಕರಣ, ಪ್ರಾಪಕ (Used the press as a v. for his political opinions ತನ್ನ ರಾಜಕೀಯ ಅಭಿಪ್ರಾಯಗಳ ಪ್ರಕಾಶನಕ್ಕೆ ವೃತ್ತಪತ್ರಿಕೆಗಳನ್ನು ಸಾಧನವಾಗಿ ಬಳಸಿಕೊಂಡನು). **Vehícular** ವಿಹಿ— (ಗು.)

Veil ವೇಲ್ (ನಾ., ಕ್ರಿ. ಸಕ.) (ಜಾಲರಿ ಬಟ್ಟೆಯ) ಮುಖ—ಪರದೆ, ಮುಸುಕು ; ಬುರಕಿ ; ಅವಕುಂಠನ [Took the v. ಸಂನ್ಯಾಸಿನಿಯಾದಳು, ಸಂನ್ಯಾಸಿನೀ ಮಠಕ್ಕೆ ಸೇರಿದಳು. The v. ಸಂನ್ಯಾಸಿನೀ ಜೀವನ]. ತೆರೆ, ಪರದೆ (The v. of the temple. Beyond the v. ಸಾವೆಂಬ ತೆರೆಯಿಂದಾಚೆ, ಮರಣಾನ್ತರ). ಮುಸುಕು, ಸೋಗು, ವೇಷ, ನೆಪ (Under the v. of religion ಮತಧರ್ಮದ ಸೋಗಿನಲ್ಲಿ. Draw a v. over ತೆರೆಯೆಳೆ, ಗಮನಕ್ಕೆ ಬೀಳಿಸದಿರು ; ಚರ್ಚೆಮಾಡದಿರು). ಪಾದ್ರಿಯ ದಂಡದ ವಸ್ತ್ರ. (ಸ. ವಿ., ಪ್ರಾ. ವಿ.) = Velum (ಆ ಪದ ನೋಡಿ). (ಸಹಜವಾದ, ಅಥವಾ ನೆಗಡಿ, ಮೊ. ಗಳಿಂದಾದ) ಗಂಟಲೊಡೆತ, ದನಿಯೊಡೆತ, ಗೊಗ್ಗರ ದನಿ. (ಕ್ರಿ.) (ಮುಖವನ್ನು, ತನ್ನನ್ನು) ಮುಖಪರದೆಯಿಂದ—ಮುಚ್ಚು, ಮುಚ್ಚಿಕೊ ; ತೆರೆ, ಮುಸುಕು, —ಹಾಕು, ಹಾಕಿಕೊ ; (ರೂಪ.) ಮುಚ್ಚು, ಮರೆಮಾಡು, ಆಚ್ಛಾದಿಸು (Veiled resentment ಮರಸಿಟ್ಟುಕೊಂಡ ಅಸಮಾಧಾನ, ಮುಸುಕಿನ ಮುನಿಸು). **Veíling** (ನಾ.) (ಕ್ರಿಯಾರ್ಥಗಳಲ್ಲಿ) ; ಮುಖಪರದೆಯ, ತೆರೆಯ, —ಬಟ್ಟೆ. **Veílless** (ಗು.)

Veilleuse (F) ವೆಯಸ್ (ನಾ.) ಆಚ್ಛಾದಿತ, ಮರೆಯುಳ್ಳ, —(ಇರುಳು) ದೀಪ ; ಮರಸುದೀಪ (ಮು., ಅಲಂಕರಣ ಕಲೆಗೆ ವಿಷಯವಾಗಿ).

Vein ವೇನ್ (ನಾ., ಕ್ರಿ. ಸಕ.) ದೇಹದ ಇತರ ಭಾಗಗಳಿಂದ ರಕ್ತಕೋಶಕ್ಕೆ ರಕ್ತವನ್ನು ಒಯ್ಯುವ ರಕ್ತನಾಳ: ಅಭಿಧಮನಿ [(ಎದುರು ಪದ : Artery = ಅಪಧಮನಿ). (Pulmonary veins ಶ್ವಾಸಕೋಶದಿಂದ ಶುದ್ಧವಾದ ರಕ್ತವನ್ನು ರಕ್ತಕೋಶದ ಎಡಭಾಗಕ್ಕೆ ತರುವ ಅಭಿಧಮನಿಗಳು : ಶ್ವಾಸಕೋಶಾಭಿಧಮನಿಗಳು. Systemic veins ದೇಹದ ಎಲ್ಲ ಭಾಗಗಳಿಂದಲೂ ಮಲಿನ ರಕ್ತವನ್ನು ರಕ್ತಕೋಶದ ಬಲ ಭಾಗಕ್ಕೆ ಸಾಗಿಸುವ ಅಭಿಧಮನಿಗಳು: ಮಲಿನ ರಕ್ತನಾಳಗಳು)] ; (ಬಳಕೆಯ ಅರ್ಥ) (ಯಾವುದಾದರೂ) ರಕ್ತನಾಳ ; (ಕೀಟ ವಿಜ್ಞಾನ, ಸ. ವಿ.) ಕೀಟದ ರೆಕ್ಕೆಯ ಕಾಂಡ, ಎಲೆಯ ದಿಂಡು ; (ಭೂ. ವಿ., ಗಣಿ ವಿದ್ಯೆ) ಕಲ್ಲುಬಂಡೆಯಲ್ಲಿಯ ಶಿರೆ, ಎಳೆ (**Veínstone** ಎಳೆಯಿರುವ ಆದುರಿನ ಕಲ್ಲು) ; (ದಾರು, ಅಮೃತಶಿಲೆ, ಮೊ. ಗಳಲ್ಲಿ) ಒಡಲಿನಿಂದ ಬೇರೆಯಾದ ಬಣ್ಣದ ಗೆರೆ : ಎಳೆ, ನರ. ವಿಶೇಷ-—ಸ್ವಭಾವ, ಪ್ರವೃತ್ತಿ ; ಮನೋಭಾವ, ಧಾಟಿ [Said in a humorous v. ಹಾಸ್ಯದ ಧಾಟಿಯಲ್ಲಿ ಹೇಳಿದನು. Other remarks in the same v. ಅದೇ ಧಾಟಿಯಲ್ಲಿ ಇತರ ಟೀಕೆಗಳು. Am not in (the) v. just now ಈಗ ನನಗೆ (ಅ) ಮನಸ್ಸಿಲ್ಲ]. (ಕ್ರಿ.) ಅಭಿಧಮನಿಗಳಿಂದ, ರಕ್ತನಾಳಗಳಿಂದ, (ಆದುರಿನ) ಎಳೆಗಳಿಂದ, —(ಹೇಗೋ ಹಾಗೆ) ತುಂಬು, ಆವರಿಸು (ಮು., ಭೂ. ಕೃ. ನಲ್ಲಿ). **Veínage** (ನಾ.) = Venation. **Veíning** (ನಾ.) ರಕ್ತನಾಳದಂಥ ಗುರುತುಗಳಿಂದ ಅಲಂಕರಣ ; = Venation. **Veínless** (ಗು.) (ಮು., ಸ. ವಿ.) (ಎಲೆಗಳ ವಿಷಯದಲ್ಲಿ). **Veínlet** (ನಾ.) (ಮು., ಸ. ವಿ.) ಕಿರುದಿಂಡು. **Veínlike** (ಗು.) ; **Veíny** (ಗು.) ; **Venátion** ವಿನೇಷನ್ (ನಾ.) (ಎಲೆಗಳು, ಹಕ್ಕಿಯ ರೆಕ್ಕೆಗಳು, ಮೊ. ಗಳ) ದಿಂಡು, ಕಾಂಡ, —ವಿನ್ಯಾಸ ; ನರ ರಚನೆ. **Venátional** (ಗು.)

Velámen (L) ವಿಲೇಮೆನ್ (ನಾ. ; ಬ. ವ. -mina), **Velaméntum** (L) ವೆಲಾಮೆಂಟಮ್ (ನಾ., ಬ. ವ. -ta) (ಮು., ಮಿದುಳಿನ) ಆವರಣ ಪೊರೆ.

Vélar. Velum ನೋಡಿ.

Veldt ವೆಲ್ಟ್ (ನಾ.) ದ. ಆಫ್ರಿಕದಲ್ಲಿಯ, ಗಿಡಮರಗಳು ಬೆಳೆಯದೆ ಬರಿಯ ಹುಲ್ಲು ಬೆಳೆಯುವ ಪ್ರದೇಶ ; ಹುಲ್ಲುಗಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Velitàtion ವೆಲಿಟೇಷನ್ (ನಾ.) (ಪ್ರಾಚೀ ಪ್ರ.) ಸಣ್ಣ—ಕಾದಾಟ, ಕಾಳಗ ; ವಾದವಿವಾದ, ವ್ಯಾಜ್ಯ.

Vélite ವೀಲಟ್ (ನಾ.) (ರೋ. ಪ್ರಾ.) ಹಗುರ ಶಸ್ತ್ರದ ಸೈನಿಕ.

Velléity ವೆಲೀಇಟಿ (ನಾ.) (ಪ್ರಾಚೀ. ಪ್ರ.) (ಕಾರ್ಯಕಾರಕವಾಗದ) ಬರಿಯ ಇಚ್ಛೆ, ಎಳ ಬಯಕೆ.

Véllicate ವೆಲಿಕೇಟ್ (ಕ್ರಿ.) ನುಲಿ, ತಿರಿಚು ; ಚಿವುಟು, ಚುಚ್ಚು ; ತುಡಿ (ದುಕೊ), ಸ್ಪಂದಿಸು. **Vellicátion** (ನಾ.) ; **Véllicative** (ಗು.)

Véllum ವೆಲಂ (ನಾ.) (ಬರೆಯುವ) ಹಸನಾದ, ನಯವಾದ,—ಚರ್ಮ ಪತ್ರ (ಮೊದಲು ಕರುವಿನ ಚರ್ಮದಿಂದ ಮಾಡುತ್ತಿದ್ದುದು) ; ಚರ್ಮ ಕಾಗದ; ಇದರಮೇಲೆ ಬರೆದ ಹಸ್ತಪ್ರತಿ; ಚರ್ಮ(ಪತ್ರ) ಲೇಖ. V. paper ಚರ್ಮಪತ್ರದಂಥ ಕಾಗದ. **Véllumy** (ಗು.)

Velóce (It.) ವೆಲೋಚೇ (ಕ್ರಿ. ವಿ.) (ಸಂ. ಸೂಚನೆ) ಅತ್ಯಂತ ವೇಗದಿಂದ.

Velócipede ವಿಲಾಸಿಪೀಡ್ (ನಾ.) ಸವಾರನು ಮೆಟ್ಟುಸನ್ನೆ ತುಳಿದು ನಡಸುವ ಒಂದು ಬಗೆಯ ಹಗುರವಾದ (ಬೈಸಿಕಲ್ಲಿನಂಥ) ವಾಹನ [ಈಗ (ಮು., ಚರಿತ್ರೆ) ಬಳಕೆಯಲ್ಲಿಲ್ಲದ ಮಾದರಿಗಳ ವಿಷಯದಲ್ಲಿ ಮಾತ್ರ ಪ್ರ. (ಉದಾ., Hobby[1])] ; (ರೂಢಿಯ ಪ್ರ.) ಬೈಸಿಕಲ್ಲು. **Velócipedist** (ನಾ.)

Velócity ವಿಲಾಸಿಟಿ (ನಾ.) (ನಿರ್ದಿಷ್ಟ ದಿಕ್ಕಿರುವ—) ವೇಗ, ಗತಿ [Initial v. ಪ್ರಾರಂಭ, ಆದಿ, —ವೇಗ. Muzzle v. ಬಂದೂಕಿನ ಬಾಯಿಂದ ಗುಂಡು ಹೊರಡುವ ವೇಗ : ಗುಂಡಿನ ಬಾಯಿ ವೇಗ. Uniform v. ಒಂದೇಸಮನ ವೇಗ, ಸ್ಥಿರ ವೇಗ. Variable v. ವ್ಯತ್ಯಾಸ (ವಾಗುತ್ತ ಹೋಗುವ) ವೇಗ]. **Velocímeter** ವೆಲೊಸಿಮಿಟರ್ (ನಾ.) ವೇಗ ಮಾಪಕ.

Veloúrs ವಲೂ(ಅ)ರ್ (ನಾ.) ಚೊಪ್ಪಿಗೆಗಳು, ಮೊ. ಕ್ಕೆ ಉಪಯೋಗಿಸುವ ಒಂದು ಬಗೆಯ 'ಪ್ಲಷ್' ಬಟ್ಟೆ.

Vélum ವೀಲಂ (ನಾ. ; ಬ. ವ. -la ವೀಲ) (ಅಂ. ರ. ಶಾ., ಸ. ವಿ., ಪ್ರಾ. ವಿ.) (ಹಲವು ಬಗೆಯ) ಪೊರೆ(ಯಾವರಣ) ; (ಮು.) ಮೆತು ಅಂಗುಳು. **Vélar** ವೀಲರ್ (ಗು.) ಪೊರೆಯ, ಪೊರೆಯಾವರಣದ ; ಮೆತು ಅಂಗುಳಿನ [V. Gutturals ಮೆತು ತಾಲುವಿನ (ಸಹಾಯದಿಂದ ಹುಟ್ಟುವ) ಅಕ್ಷರ ಧ್ವನಿಗಳು (ಉದಾ., ಕ್ವ, ಗ್ವ)]

Vélure ವಿ(ವೆ)ಲ್ಯೂರ್ (ನಾ., ಕ್ರಿ. ಸಕ.) ಮಖಮಲ್ಲು ; ಮಖಮಲ್ಲಿನಂಥ ಬಟ್ಟೆ ; (ರೇಷ್ಮೆ ಚೊಪ್ಪಿಗೆಯನ್ನು ನಯಮಾಡಲು ಉಪಯೋಗಿಸುವ) ಮಖಮಲ್ಲಿನ ಅಥವಾ ಇತರ ಒತ್ತುಮೆತ್ತೆ. (ಕ್ರಿ.) —ಇಂದ ನಯ ಮಾಡು.

Velútinous, Vélveret. Velvet ನೋಡಿ.

Vélvet ವೆಲ್ವೆಟ್ (ನಾ., ಗು.) ಮಖಮಲ್ಲು [Cotton v. ಹತ್ತಿ (ಮಿಶ್ರ) ಮಖಮಲ್ಲು. Silk v. (ಪೂರ್ತಿ) ರೇಷ್ಮೆ ಮಖಮಲ್ಲು. Terry v. ಜುಂಗುಗಳನ್ನು ಕತ್ತರಿಸದ ಮಖಮಲ್ಲು. V. pile ಮಖಮಲ್ಲಿನದರಂಥ ಜುಂಗುಳ್ಳ ಬಟ್ಟೆ]; ಸಾರಂಗದ ಬೆಳೆಯುತ್ತಿರುವ ಕೊಂಬಿನಮೇಲಿನ ತುಪ್ಪುಳು ಚರ್ಮ. (ರೂಪ.) ರಾಥ, ಪ್ರಯೋಜನ [On v. (ಮು., ಪಂಥಕ್ಕೆ) ಅನುಕೂಲ ಸ್ಥಾನದಲ್ಲಿ]. (ಗು.) ಮಖಮಲ್ಲಿನಂಥ ; ಮಖಮಲ್ಲಿನಷ್ಟು—ಮೃದುವಾದ, ನಯವಾದ [(ಅನೇಕ ವೇಳೆ ಸಸ್ಯಗಳ ಮತ್ತು ಪ್ರಾಣಿಗಳ ಹೆಸರುಗಳಲ್ಲಿ) : V. ant, v. osier. V. glove ಒಳಗೆ ಬಿಗಿ ಹೊರಗೆ ನಯ (With an iron hand in a v. glove ಒಳಗೆ ಕಠಿನ ಹೊರಗೆ ನಯವಾಗಿ). V. paw ಬೆಕ್ಕಿನ (ಮಖಮಲ್ಲಿನಂಥ) ಪಂಜ; (ರೂಪ.) ನಯ ಮುಸುಕಿನ ಕ್ರೌರ್ಯ, ಗೋಮುಖವ್ಯಾಘ್ರ. V. tread ಮೆದು ನಡಗೆ]. **Velútinous** ವಿಲ್ಯೂಟಿನಸ್ (ಗು.) (ಸ. ವಿ., ಕೀಟ ವಿಜ್ಞಾನ) ಮಖಮಲ್ಲಿನಂಥ. **Vélveret** ವೆಲ್ವರೆಟ್ (ನಾ.) ಕಚ್ಚಾ ಮಖಮಲ್ಲು. **Vélveted** (ಗು.) ಮಖಮಲ್ಲು—ಹಾಕಿದ, ಹೊದಿಸಿದ. **Velveteén** (ನಾ.) ಮಖಮಲ್ಲಿನಂಥ ಗುಂಜುಗಳುಳ್ಳ ಹತ್ತಿಯ ಬಟ್ಟೆ; (ರೇಷ್ಮೆ ಮತ್ತು ಹತ್ತಿ ಬೆರಕೆಯ) ಒಂದು ಬಗೆಯ ಮಿಶ್ರ ಮಖಮಲ್ಲು. **Vélveting** (ನಾ.) ಮಖಮಲ್ಲು ಬಟ್ಟೆ(ಗಳು) ; ಮಖಮಲ್ಲಿನ ಜುಂಗು. **Vélvety** (ಗು.) ಮಖಮಲ್ಲಿನ(ಥ) ; ಮಖಮಲ್ಲಿನಷ್ಟು—ನಯವಾದ, ಮೃದುವಾದ.

Vénal ವೀನಲ್ (ಗು.) (ವ್ಯಕ್ತಿಯ ವಿಷಯದಲ್ಲಿ) ಹಣಕ್ಕಾಗಿಯೊ ಸ್ವಾರ್ಥಕ್ಕಾಗಿಯೊ ತನ್ನ ತತ್ತ್ವವನ್ನು ಬಿಡುವುದಕ್ಕೂ, ತನ್ನ ಪ್ರಭಾವವನ್ನು ಅಥವಾ ತನ್ನ ಸೇವೆಯನ್ನು ಮಾರಿಕೊಳ್ಳುವುದಕ್ಕೂ ಸಿದ್ಧನಾಗಿರುವ : ಹಣಮಾರಿಯಾದ; ಲಂಚಕೊಳ್ಳಗಾಗುವ ; ದ್ರವ್ಯ, ಲಂಚ, —ಸಾಧ್ಯ ; (ನಡತೆ, ಮೊ. ಗಳ ವಿಷಯದಲ್ಲಿ) ಹಣಮಾರಿಯ, ಲಂಚಕೋರತನದ. **Venàlity** (ನಾ.) ; **Vénally** (ಕ್ರಿ. ವಿ.)

Venátion. Vein ನೋಡಿ.

Vend ವೆಂಡ್ (ಕ್ರಿ. ಸಕ.) (ಈಗ ಮು., ನ್ಯಾ. ಶಾ. ಪ್ರ.) ಮಾರು, ವಿಕ್ರಯಿಸು. **Vendeé** (ನಾ.) ಕೊಂಡುಕೊಳ್ಳುವವನು, ಕ್ರಯದಾರ. (-)**vénder** (ನಾ.) (—) ಮಾರುವವನು, ಮಾರಾಟಗಾರ. **Véndible** (ಗು.) ಮಾರಬಹುದಾದ, ವಿಕ್ರಯಿಸಲಾಗುವ. **Véndibly** (ಕ್ರಿ. ವಿ.); **Vendibílity** (ನಾ.) ; **Véndor** (ನಾ.) ಮಾರುವವನು.

Vendétta ವೆಂಡೆಟ (ನಾ.) (ಗಾಯಗೊಂಡವನ ಅಥವಾ ಕೊಲೆಯಾದವನ ಮನೆಯವರು ಅಪರಾಧಿಯಮೇಲೆ ಅಥವಾ ಅವನ ಮನೆಯವರ ಮೇಲೆ ಸೇಡು ತೀರಿಸಿಕೊಳ್ಳಲು ಮಾಡುವ ಮತ್ತು ವಂಶಪಾರಂಪರ್ಯವಾಗಿ ನಡೆಯುವ) ಕುಲ—ಯುದ್ಧ, ವೈರ.

Veneér ವ(ವಿ)ನಿಯರ್ (ಕ್ರಿ.ಸಕ., ನಾ.) (ದಾರು, ಪೀಠೋಪಸ್ಕರ, ಮೊ. ಕ್ಕೆ) ನಯವಾದ ದಾರುವಿನ ತೆಳು ಹೊದಿಕೆ ಹೊದಿಸು ; ನಯ ಮರ ಹೊದಿಸು ; (ಮಣ್ಣಿನ ಪಾತ್ರೆ, ಮೊ. ಗಳಿಗೆ) ನಯಲೇಪ ಕೊಡು ; (ರೂಪ.) (ನಡತೆ, ಮೊ. ನ್ನು) ಹೊರ ನಯದಿಂದ ಮರಸು ; (— ಮೊ. ಕ್ಕೆ) ಹೊರ ಮೆರುಗುಕೊಡು. (ನಾ.) ತೆಳುವಾದ ಹೊರ ಹೊದಿಕೆ, ಹೊರ ಲೇಪ (ರೂಪ. ಸಹ) ; ಹೊರ ನಯ. V.-moth ಹಲವು ಬಗೆಯ ಹೊರ ಮೆರುಗಿನ ಪತಂಗ.

Vénerable ವೆನೆರಬ್‌ಲ್ (ಗು.) (ಶೀಲ, ವಯಸ್ಸು, ಮೊ. ಕಾರಣದಿಂದ) ಗೌರವಾರ್ಹ, ಪೂಜ್ಯ, ಮಾನ್ಯ (V. priest, relics, river) (ಚರ್ಚಿನಲ್ಲಿ ಆರ್ಚ್‌ಡೀಕನ್ ಎಂಬ ಮಠಾಧಿಕಾರಿಗಳ ಒಕ್ಕಣೆಯಲ್ಲಿಯೂ ಪ್ರ. ; ಸಂಕ್ಷಿಪ್ತ : Ven.). **Venerabílity** (ನಾ.); **Vénerableness** (ನಾ.); **Vénerably** (ಕ್ರಿ. ವಿ.) ; **Vénerate** (ಕ್ರಿ. ಸಕ.) ಗೌರವಿಸು, ಪೂಜ್ಯಭಾವದಿಂದ ಕಾಣು. **Venerátion** (ನಾ.) ಗೌರವ, ಪೂಜ್ಯಭಾವ ; (ಕಪಾಲ ಸಾಮುದ್ರಿಕಶಾಸ್ತ್ರ, ಅನೇಕ ವೇಳೆ ಹಾಸ್ಯ ಪ್ರ.) ಪೂಜ್ಯಭಾವನಾಶಕ್ತಿ (Organ, bump, of v.). **Vénerator** (ನಾ.)

Venéreal ವಿನಿಯ‍ರಿಯಲ್ (ಗು.) (ಸ್ತ್ರೀಪುರುಷ) ಸಂಭೋಗದ (V. desire. V. disease ರತಿರೋಗ, ಗುಹ್ಯರೋಗ. V. remedies ರತಿರೋಗ—ಚಿಕಿತ್ಸೆಗಳು, ಪರಿಹಾರಕಗಳು). **Vénery**[1] ವೆನೆರಿ (ನಾ.) (ಪ್ರಾಚೀ. ಪ್ರ.) ರತಿಲಾಲಸೆ.

Vénery[2] ವೆನೆರಿ (ನಾ.) (ಪ್ರಾಚೀ. ಪ್ರ.) ಬೇಟೆ(ಯಾಡುವುದು), ಮೃಗಯಾ ವಿಹಾರ.

Vénesect ವೆನಿಸೆ(ಸಿ)ಕ್ಟ್ (ಕ್ರಿ.), **Veneséction** (ನಾ.) = Phlebotomize, Phlebotomy (Phlebitis ಕೆಳಗೆ ನೋಡಿ)

Venétian ವಿ(ವ)ನೀಷನ್ (ಗು., ನಾ.) ವೆನಿಸ್ ಪಟ್ಟಣದ(ವನು) ; (ಬ. ವ. ದಲ್ಲಿ) ಕಿಟಕಿ ಕದದ ಪಟ್ಟಿಸೇರುವೆಗಳನ್ನು ಹಿಡಿದುಕೊಳ್ಳಲು ಉಪಯೋಗಿಸುವ ಒಂದು ಬಗೆಯ ಪಟ್ಟಿ : ಕಿಟಕಿ ಕದದ ಸೇರುವೆಪಟ್ಟಿ ; ಬೆಳಕು ಬರುವಂತೆ ಅಥವಾ ಬರದಂತೆ ಸರಿಸಲಾಗುವ ಪಟ್ಟಿಸೇರುವೆಗಳ ಕಿಟಕಿ ಕದ : ಪಟ್ಟಿಸೇರುವೆ ಕದ ; ಸಡಿಲಪಟ್ಟಿ ಕದ (= **V. blind**). [**V. carpet** (ಸಾ., ಪಟ್ಟೆ ಪಟ್ಟೆಯಾಗಿ ನೆಯ್ದಿರುವ) ಉಣ್ಣೆಯ ಜಮಖಾನ. **V. chalk** = French chalk (French ನೋಡಿ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

V. glass ವೆನಿಸಿನಲ್ಲಿ (ಅಥವಾ ವೆನಿಸಿನ ಬಳಿಯಲ್ಲಿ) ತಯಾರಾಗುವ ಗಾಜುಪದಾರ್ಥ ; (ವಿಷಪದಾರ್ಥದ ಸಂಪರ್ಕವಾದರೆ ಹಾಳಾಗಿ ಹೋಗುವುವೆಂದು ಹೇಳುವ) ವೆನಿಷಿಯನ್ ಗಾಜು ಬಟ್ಟಲು (= Venice glass). **V. lace** ಒಂದು ಬಗೆಯ ಅಲಂಕಾರ ಪಟ್ಟಿ. **V. mast** ಬೀದಿಯ ಅಲಂಕಾರಗಳಲ್ಲಿ ಉಪಯೋಗಿಸುವ ಸುರುಳಿಯಾಕಾರದ ಬಣ್ಣದ ಪಟ್ಟೆಗಳುಳ್ಳ ಕಂಬ: (ಬಣ್ಣದ) ಪಟ್ಟೆಕಂಬ. **V. pearl** ಕೃತಕ ವಾದ ಗಟ್ಟಿ ಮುತ್ತು. **V. window** (ನಡುವಣದು ದೊಡ್ಡದಾಗಿಯೂ ಪಕ್ಕಗಳದು ಕಿರಿದಾಗಿಯೂ ಇರುವ) ಮೂರು ದ್ವಾರಗಳುಳ್ಳ ಕಿಟಕಿ]. **Venétianed** (ಗು.) ಸಡಿಲ ಪಟ್ಟಿ, ಪಟ್ಟಿಸೇರುವೆ, —ಕದವುಳ್ಳ. **Vénice** ವೆನಿಸ್ (ನಾ.) (ವಿಶೇಷಣ ಪ್ರ.): V. glass = Venetian glass (Venetian ನೋಡಿ). V. treacle = Theriac (ಆ ಪದ ನೋಡಿ)

Véngeance ವೆಂಜನ್ಸ್ (ನಾ.) ಮುಯ್ಯಿ, ಸೇಡು, ಪ್ರತೀಕಾರ. Took a bloody v. on the murderer *or* for the murder, of his children ತನ್ನ ಮಕ್ಕಳ ಕೊಲೆಗಾರನಮೇಲೆ, ಕೊಲೆಗಾಗಿ, ರಕ್ತ ಪಾತದಿಂದ ಸೇಡು ತೀರಿಸಿಕೊಂಡನು. With a v. ಅತಿಯಾಗಿ, ವಿಪರೀತವಾಗಿ, ಸಂಪೂರ್ಣಿಯಾಗಿ (This is punctuality with a v. ಇದು ವಿಪರೀತ, ಅಕ್ಷರಶಃ, ಸಮಯನಿಷ್ಠೆ). **Véngeful** (ಗು.) ಮುಯ್ಯಿ ತೀರಿಸಿಕೊಳ್ಳುವ, ಸೇಡಿನ, ಬದ್ಧವೈರದ, ಪ್ರತೀಕಾರದ. **Véngefully** (ಕ್ರಿ. ವಿ.) ; **Véngefulness** (ನಾ.)

Vénial ವೀನಿಯಲ್ (ಗು.) (ಪಾಪದ ಅಥವಾ ಅಪರಾಧದ ವಿಷಯದಲ್ಲಿ) ಮನ್ನಿಸಬಹುದಾದ, ಕ್ಷಮಿಸಬಹುದಾದ, ಕ್ಷಮ್ಯ ; ಅಷ್ಟೇನೂ ಪ್ರಮಾದ ವಾದದ್ದಲ್ಲದ, ಸಣ್ಣ, ಅಲ್ಪ (V. slip, fault) ; (ದೇವ. ಶಾ.) ಘೋರ ಪಾತಕವಲ್ಲದ. **Veniálity** (ನಾ.) ; **Vénially** (ಕ್ರಿ. ವಿ.) ; **Vénialness** (ನಾ.)

Vénice. Venetian ನೋಡಿ.

Veníre (fàcias) (L) ವಿನೈ(ಅ)ರಿ (ಫೇಷಿಯ್ಯಸ್) (ನಾ.) (ನ್ಯಾ. ಶಾ.) ನ್ಯಾಯದರ್ಶಿಗಳನ್ನು ಕರಸುವಂತೆ ಷೆರೀಫನಿಗೆ ಕೊಟ್ಟ ಆಜ್ಞಾಪತ್ರ.

Vénison ವೆನಿಸ್ನ್, ವೆನ್ಜ್ನ್ (ನಾ.) (ಆಹಾರವಾಗಿ ಉಪಯೋಗಿಸುವ) ಜಿಂಕೆಯ ಮಾಂಸ.

Vénom ವೆನಂ (ನಾ.) (ಹಾವು, ಚೇಳು, ಮೊ. ಗಳ) ವಿಷ, ನಂಜು (ರೂಪ. ನಹ). **Vénomed** (ಗು.) ವಿಷವುಳ್ಳ. **Vénomous** (ಗು.) ವಿಷ—ಮಯ, ಪೂರಿತ. **Vénomously** (ಕ್ರಿ. ವಿ.) ; **Vénomousness** (ನಾ.)

Vénous ವೀನಸ್, **-ose** —ನೋಸ್ (ಗು.) (ಅಂ. ರ. ಶಾ., ಪ್ರಾ. ವಿ.) ಅಭಿಧಮನಿಯ(ಲ್ಲಿಯ), ಮಲಿನ ರಕ್ತನಾಳದ(ಲ್ಲಿಯ) (V. blood ಮಲಿನ ರಕ್ತ. V. congestion ಮಲಿನ ರಕ್ತಾಧಿಕ್ಯ, ಮಲಿನ ರಕ್ತ ಸಂಚಯ) ; (ಪ್ರಾ. ವಿ., ಸ. ವಿ.) (ರೆಕ್ಕೆಯ ವಿಷಯದಲ್ಲಿ) ಕಾಂಡಗಳುಳ್ಳ, (ಎಲೆಯ ವಿಷಯದಲ್ಲಿ) ದಿಂಡುಗಳುಳ್ಳ, ನರಗಳುಳ್ಳ **Venósity** ವಿನಾಸಿಟಿ (ನಾ.) (ಅಂಗ, ಮೊ. ಗಳಲ್ಲಿ) ಮಲಿನ ರಕ್ತಾಧಿಕ್ಯ ; ಶ್ವಾಸ ಕೋಶದಲ್ಲಿ ಮಲಿನ ರಕ್ತ ಆಮ್ಲಜನಕದಿಂದ ಸಾಕಷ್ಟು ಶುದ್ಧಿ ಹೊಂದದೆ, ಶುದ್ಧ ರಕ್ತನಾಳಕ್ಕೆ ಮಲಿನ ರಕ್ತ ಹರಿಯುವುದು: ಮಲಿನ ರಕ್ತವಾಹ. **Vénously** (ಕ್ರಿ. ವಿ.)

Vent ವೆಂಟ್ (ನಾ., ಕ್ರಿ. ನಕ.) (ಒಳಕ್ಕಾಗಲಿ ಹೊರಕ್ಕಾಗಲಿ ಪ್ರವೇಶ ಕೊಡುವ) ತೆರಪು, ಕಂಡಿ, ಬಾಯಿ, ತೊಳೆ, ರಂಧ್ರ, ದ್ವಾರ (= V.-hole) [ಉದಾ., ಫಿರಂಗಿಯ ಹಿಂಭಾಗದಲ್ಲಿಯ ಮದ್ದು ಹೊತ್ತಿಸುವ ಕಂಡಿ, ಪೀಪಾಯಿಯಿಂದ ಹೊರಕ್ಕೆ ದ್ರವವನ್ನು ತೆಗೆಯುತ್ತಿರುವಾಗ ಮೇಲಿನಿಂದ ಒಳಕ್ಕೆ ಗಾಳಿ ಬರುತ್ತಿರುವುದಕ್ಕಾಗಿ ಪೀಪಾಯಿಯ ಮೇಲುಗಡೆ ಮಾಡುವ ತೂತು ; ಓಲಗದಂಥ ವಾದ್ಯಗಳಲ್ಲಿ ಬೆರಳು ಮುಚ್ಚಿ ತೆಗೆದು ನಾದವುಂಟು ಮಾಡುವುದಕ್ಕಾಗಿ ಇರುವ ತೂತು (= **Véntage**) ; ಹೊಗೆಕೊಳವೆಯ ಬಾಯಿ ; ಕೋಟೆತೆನೆಯ ಗೋಡೆಯಲ್ಲಿಯ ಜೇರುಗಂಡಿ] ; (ಪೀಪಾಯಿ, ಮೊ. ಗಳಲ್ಲಿ ಕಂಡಿ ಕೊರೆಯಲು ಉಪಯೋಗಿಸುವ) ಕಂಡಿ ಬೈರಿಗೆ (= **V.-faucet**) ; (ಮು., ಸಸ್ತನಿಗಳಿಗಿಂತ ಕೆಳ ವರ್ಗದ ಪ್ರಾಣಿಗಳ) ಗುದ, ಆಸನದ್ವಾರ ; (ರೂಪ.) (ಹೊರಸೂಸಲು) ದಾರಿ, ಮಾರ್ಗ, ಅವಕಾಶ (Impatience found a v.) ; (ನೀರುನಾಯಿ, ಮೊ. ವು) ಉಸಿರಾಡಲು ಮೇಲಕ್ಕೆ ಬರುವುದು ; [**V.-peg** ಪೀಪಾಯಿ ಗಂಡಿಯ ಬಿರಡೆ, ಬೆಣೆ ; = V.-faucet. **V.-plug** ಫಿರಂಗಿಯ ಮದ್ದು ಕಂಡಿಯ ಬಿರಡೆ, ಪೀಪಾಯಿಗಂಡಿಯ ಬೆಣೆ]. (ಕ್ರಿ.) ರಂಧ್ರ, ಕಂಡಿ, —ಮಾಡು ; ಹೊರಗೆಡವು, ಕಾರು (Vented his disgust in an epigram) ; (ನೀರುನಾಯಿ, ಬೀವರ್, ಮೊ. ಪ್ರಾಣಿಗಳ ವಿಷಯದಲ್ಲಿ) ಉಸಿರಾಡಲು (ನೀರಿನ)ಮೇಲಕ್ಕೆ ಬರು. **Véntless** (ಗು.)

Vénter ವೆಂಟರ್ (ನಾ.) (ಅಂ. ರ. ಶಾ.) ಹೊಟ್ಟೆ, ಉದರ ; (ಸ್ನಾಯು ವಿನ ಅಥವಾ ಎಲುಬಿನ) ಉಬ್ಬು, ತಗ್ಗು ; (ನ್ಯಾ. ಶಾ.) ಬಸಿರು, ತಾಯಿ (A son by, the son of, another v.)

Véntiduct ವೆಂಟಿಡಕ್ಟ್ (ನಾ.) (ವಾ. ಶಾ.) (ಮು., ನೆಲದಡಿಯ) ಗಾಳಿ —ದಾರಿ, ಕೊಳವೆ ; ವಾಯು— ಮಾರ್ಗ, ನಳಿಕೆ.

Véntil ವೆಂಟಿಲ್ (ನಾ.) (ಸಂಗೀತ ವಾದ್ಯದಲ್ಲಿಯ) ಕವಾಟ ; (ಆರ್ಗನ್ ವಾದ್ಯದಲ್ಲಿ) ಗಾಳಿಯನ್ನು ನಿಯಂತ್ರಿಸುವ ಮುಚ್ಚಳ : ಗಾಳಿಮುಚ್ಚಳ.

Véntilate ವೆಂಟಿಲೇಟ್ (ಕ್ರಿ. ನಕ.) (ಕೋಣೆ, ಮೊ. ಗಳಲ್ಲಿ) ಧಾರಾಳ ವಾಗಿ ಗಾಳಿಯಾಡಿಸು, ವಾಯು ಸಂಚಾರ ಮಾಡಿಸು ; (ಕೋಣೆ, ಮೊ. ನ್ನು) ಗಾಳಿಗೆ ತೆರೆ(ದಿಡು) ; (ರಕ್ತವನ್ನು) ವಾಯುವಿನಿಂದ, ಆಮ್ಲ ಜನಕದಿಂದ, —ಶುದ್ಧಿಗೊಳಿಸು ; (ಪ್ರಶ್ನೆ, ವಿಷಯ, ಅಹವಾಲು, ಮೊ. ನ್ನು) ಬಹಿರಂಗಪಡಿಸು, ಪ್ರಕಟಮಾಡು, ಬಯಲಿಗೆ ತರು (The habit of using novels to v. opinions). **Ventilátion** (ನಾ.) ಗಾಳಿಯಾಟ, ವಾಯು ಸಂಚಾರ ; (ವಿಷಯ, ಮೊ. ಗಳನ್ನು) ಬಹಿರಂಗಪಡಿಸುವುದು ; ಪ್ರಕಾಶನ, ಪ್ರಕಟನ. **Véntilative** (ಗು.) ; **Véntilator** (ನಾ.) ವಾಯು ಸಂಚಾರಕ (ಸಲಕರಣೆ) ; ಗಾಳಿ ಕಂಡಿ ; ವಾತಾಯನ.

Véntral ವೆಂಟ್ರಲ್ (ಗು., ನಾ.) (ಪ್ರಾ. ವಿ., ಸ. ವಿ.) ಹೊಟ್ಟೆಯ, ಉದರದ (—ಮೇಲಿನ) ; = V. fin (Fin ನೋಡಿ). **Véntrally** (ಕ್ರಿ. ವಿ.)

Ventre a terre (F) ವಾಂಟ್ರ್ ಆ ಟೇ(ಅ)ರ್ (ಕ್ರಿ. ವಿ.) ಬಹು ವೇಗ ವಾಗಿ, ತುಂಬು ವೇಗದಲ್ಲಿ (ಪದಶಃ ಅರ್ಥ : ಹೊಟ್ಟೆ ನೆಲಕ್ಕೆ ತಾಗಿ)

Véntricle ವೆಂಟ್ರಿಕ್ಲ್ (ನಾ.) (ಅಂ. ರ. ಶಾ.) (ದೇಹದ, ಅಂಗದ) ಕುಳಿ, ಕುಕ್ಷಿ, ಕುಹರ (Ventricles of the brain ಮಿದುಳಿನ ಕುಹರಗಳು) ; ರಕ್ತಕೋಶದ ಕೆಳಗಿನ ಕುಹರಗಳಲ್ಲೊಂದು : ಹೃತ್ಕುಕ್ಷಿ (Right, left, v. ಎಡ, ಬಲ, —ಹೃತ್ಕುಕ್ಷಿ). **Ventrícular, Ventrículous** (ಗು.)

Véntricose ವೆಂಟ್ರಿಕೋಸ್, **-cous** —ಕಸ್ (ಗು.) ಡುಬ್ಬು ಹೊಟ್ಟೆ ಯುಳ್ಳ ; (ಸ. ವಿ.) (ಮಧ್ಯದಲ್ಲಿ) ಉಬ್ಬಿದ, ಉಬ್ಬುಳ್ಳ.

Ventríloquism ವೆಂಟ್ರಿಲೊಕ್ವಿಸ್ಂ (ನಾ.) ಮಾತನಾಡುತ್ತಿರುವ ನಿಂದಲ್ಲದೆ ಮತ್ತೆಲ್ಲಿಂದಲೋ (ದೂರದಿಂದ) ಶಬ್ದ ಬರುತ್ತಿದೆಯೆಂಬ ಭ್ರಮೆಯುಂಟಾಗುವಂತೆ ಧ್ವನಿಮಾಡುವ ಕಲೆ ; ಹಾಗೆ ಧ್ವನಿ ಮಾಡು ವುದು : ದೂರಧ್ವನ್ಯನುಕರಣ, ಧ್ವನ್ಯಂತರಾನುಕರಣ ; ಧ್ವನಿ— ಮಾಯೆ, ಗಾರುಡಿ. **Ventrilocútion** (ನಾ.) = Ventriloquism. **Ventrilóquial** (ಗು.) ; **Ventríloquist** (ನಾ.) ಧ್ವನ್ಯಂತರಾನುಕಾರಿ ; ಧ್ವನಿ ಗಾರುಡಿಗ. **Ventriloquístic** (ಗು.) ; **Ventríloquize** (ಕ್ರಿ. ಅಕ.) ; **Ventríloquous** (ಗು.) ; **Ventríloquy** (ನಾ.) = Ventriloquism.

Ventro- ವೆಂಟ್ರೊ— (ಸ. ಪೂ. ಪ.) ಹೊಟ್ಟೆ—, ಉದರ—. **-dórsal** ಹೊಟ್ಟೆಯಿಂದ ಬೆನ್ನವರೆಗೆ ಇರುವ.

Vénture ವೆಂಚ್ಯು(ಚ)ರ್ (ನಾ., ಕ್ರಿ.) ಪರಿಣಾಮ ಅಥವಾ ಫಲ ಅನಿಶ್ಚಿತ ವಾಗಿರುವ ಮತ್ತು ಕೈಕೊಂಡವನಿಗೆ ಅಪಾಯ ಅಥವಾ ನಷ್ಟ ಸಂಭವಿಸ ಬಹುದಾದ ಉದ್ಯಮ : ಅಪಾಯ ಸಂಭವದ, ಸಾಹಸದ,—ಕೆಲಸ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಕೈಕೊಳ್ಳುವುದು); ಸಾಹಸ (Ready for any v. ಯಾವ ಸಾಹಸಕ್ಕೂ ಸಿದ್ಧನಾಗಿ). ಸಟ್ಟಾ ವ್ಯಾಪಾರ (One lucky v.); (ಪ್ರಾಚೀ. ಪ್ರ.) (ಅಪಾಯಕ್ಕೆ) ಈಡಾದ—ವಸ್ತು, ಆಸ್ತಿ; ಪಣ; (At a v. ಅಕಸ್ಮಾತ್ತಾಗಿ, ಉದ್ದೇಶಪೂರ್ವಕವಾಗಲ್ಲದೆ). (ಕ್ರಿ.) ಧೈರ್ಯ, ಸಾಹಸ, —ಮಾಡು; ಧೈರ್ಯದಿಂದ, ಸಾಹಸದಿಂದ, —ಮುಂದಿಡು, ಕೊಡು, ನುಗ್ಗು (Did not v. to stop him ಅವನನ್ನು ತಡೆಯುವ ಸಾಹಸಕ್ಕೆ ಕೈಹಾಕಲಿಲ್ಲ. Would not v. an opinion ಅಭಿಪ್ರಾಯ ಕೊಡುವ ಧೈರ್ಯ ಮಾಡಲಿಲ್ಲ); (ಅಪಾಯಕ್ಕೆ) ಈಡುಮಾಡು, ಪಣವೊಡ್ಡು (Men who v. their lives for the cause ಆ ಧ್ಯೇಯಕ್ಕಾಗಿ ತಮ್ಮ ಪ್ರಾಣವನ್ನು ಕೊಡಲು ಸಿದ್ಧವಿರುವ ಪುರುಷರು. Will v. five shillings on it ಆ ಬಗ್ಗೆ ಐದು ಷಿಲಿಂಗು ಪಣವೊಡ್ಡುತ್ತೇನೆ, ಕಳೆದುಕೊಳ್ಳಲು ಸಿದ್ಧನಿದ್ದೇನೆ); ನಷ್ಟಕ್ಕೆ, ಅಪಾಯಕ್ಕೆ, —ಸಿದ್ಧವಿರು. V. (up)on ಸಾಹಸಮಾಡು (Shall v. on a mild protest). **Vénturer** (ನಾ.) (ಮು., ಚರಿತ್ರೆ) ವ್ಯಾಪಾರೋದ್ಯಮಿ, ಸಾಹಸ ವ್ಯಾಪಾರಿ, ವ್ಯಾಪಾರೋದ್ಯಮ ಪಾಲುಗಾರ (Merchant venturers). **Vénturesome** (ಗು.) ಸಾಹಸದ, ಧೈರ್ಯದ; ಅಪಾಯಕರವಾದ (A v. journey). **Vénturesomely** (ಕ್ರಿ. ವಿ.); **Vénturesomeness** (ನಾ.)

Vénue ವೆನ್ಯು (ನಾ.) (ಮೊದಲನ ಅರ್ಥ) ತಕ್ಸೀರು ನಡೆದ—ಸ್ಥಳ, ಪ್ರದೇಶ; ಯಾವುದರ ಸರಹದ್ದಿನೊಳಗಿಂದ ನ್ಯಾಯದರ್ಶಿಗಳನ್ನು ಕೂಡಿಸಿ ವ್ಯಾಜ್ಯ ವಿಚಾರಣೆ ನಡಸಬೇಕಾಗಿದೆಯೊ ಆ ಪ್ರದೇಶ, ಪ್ರಾಂತ: ವಿಚಾರಣ—ಸ್ಥಳ, ಪ್ರದೇಶ, ಪ್ರಾಂತ [Change the v. (ದೊಂಬಿ, ಮೊ. ಗಳು ನಡೆಯದಂತೆ, ಪಕ್ಷಪಾತದ ನ್ಯಾಯದರ್ಶಿಗಳು ಬಾರದಂತೆ, ನೋಡಿಕೊಳ್ಳುವುದಕ್ಕಾಗಿ) ವಿಚಾರಣ ಸ್ಥಳವನ್ನು ಬದಲಾಯಿಸು]; (ದಾವಾ ಅರ್ಜಿ, ಮೊ. ಗಳಲ್ಲಿ) ವಿಚಾರಣ ಸ್ಥಳವನ್ನು ಸೂಚಿಸಿ ಕೊಟ್ಟಿರುವ ಹೇಳಿಕೆ; (ಜನರೂಢಿಯಲ್ಲಿ: ಮು., ಪಂದ್ಯಕ್ಕೆ, ಸ್ಪರ್ಧೆಗೆ) ಸೇರಲು ಗೊತ್ತಾದ ಸ್ಥಳ, ರಂಗ.

Vénus ವೀನಸ್ (ನಾ.) (ರೋಮನ್ ಪುರಾಣ) ಕಾಮದೇವತೆ, ರತಿದೇವಿ; ಶುಕ್ರಗ್ರಹ; ಕಾಮ, ಪ್ರಣಯ, ರತಿ [Uranian v. ದಿವ್ಯಕಾಮ. Pandemian v. ವಿಷಯಾಸಕ್ತ ಕಾಮ]; ಪರಮ ಸುಂದರಿ, ರತಿ. Mount of V. (ಹಸ್ತಸಾಮುದ್ರಿಕ) ಹೆಬ್ಬೆಟ್ಟಿನ ಬುಡ. V.'s basin, bath ಟೀಸ್ಲ್ ಸಸ್ಯ (Teazel ನೋಡಿ). V.'s comb ಪಾರ್ಸ್ಲಿ ಜಾತಿಯ ಸಸ್ಯ. V.'s fly-trap ಕೀಟಗಳ ಮೇಲೆ ಮುಚ್ಚಿಕೊಳ್ಳುವ ಎಲೆಗಳುಳ್ಳ ಒಂದು ಸಸ್ಯ. V.'s slipper ಚೀಲದ ಅಥವಾ ಜೋಡಿನ ಆಕಾರದ ಹಳದಿ ಹೂವು ಬಿಡುವ, ಸೀತಾಳೆಗಡ್ಡೆ ಜಾತಿಯ ಸಸ್ಯ.

Verácious ವೆರೇಷಸ್ (ಗು.) ನಿಜ ಹೇಳುವ (ಸ್ವಭಾವದ), ಸತ್ಯಶೀಲನಾದ, ಯಥಾರ್ಥವಾದಿಯಾದ; (ಹೇಳಿಕೆ, ಮೊ. ಗಳ ವಿಷಯದಲ್ಲಿ) ನಿಜವಾದ, ಸತ್ಯವಾದ, ಯಥಾರ್ಥವಾದ. **Veráciously** (ಕ್ರಿ. ವಿ.); **Verácity** ವೆರ್ಯಾಸಿಟಿ (ನಾ.) ಸತ್ಯತೆ, ಸತ್ಯಸಂಧತೆ, ಸತ್ಯಶೀಲತೆ.

Veránda(h) ವೆರ್ಯಾಂಡ (ನಾ.) ಕಟ್ಟಡದ ಮುಂದುಗಡೆಯಾಗಲಿ ಪಕ್ಕದಲ್ಲಾಗಲಿ ಕಂಬಗಳಮೇಲೆ ಚಾವಣಿಯನ್ನು ಕೂರಿಸಿ ಮಾಡಿರುವ ತೆರಸಾಲೆ: ಕೈಸಾಲೆ, ಮೊಗಸಾಲೆ, ವಸಾರೆ, ವರಾಂಡ.

Vératrine ವೆರಟ್ರಿ(ಲ)ನ್, —ಟ್ರೈನ್ (ನಾ.) ನರವ್ಯಾಧಿಯಲ್ಲಿ ಮತ್ತು ವಾಯುರೋಗದಲ್ಲಿ ಉದ್ರೇಕಕಾರಿಯಾಗಿ ಉಪಯೋಗಿಸುವ ಒಂದು ವಿಷಸಂಯುಕ್ತ: ವೆರಟ್ರಿನ್. **Vératrate** (ನಾ.) ವೆರಟ್ರಿನ್ ಲವಣ. **Verátric** (ಗು.); **Vératrize** (ಕ್ರಿ. ಸಕ.) ವೆರಟ್ರಿನ್— ಪ್ರಯೋಗಿಸು, ಚಿಕಿತ್ಸೆ ನಡಸು.

Verb ವರ್ಬ್ (ನಾ.) ಕ್ರಿಯಾಧಾತು, ಆಖ್ಯಾತಪದ [Auxiliary, Copulative, Deponent, Impersonal, Intransitive, Neuter, Reflexive, Substantive, Transitive, v. (ಆಯಾ ಪದ ನೋಡಿ)]. **Vérbal** (ಗು., ನಾ.) ಮಾತಿನ, ಶಾಬ್ದಿಕ, ಪದಗಳ [V. distinctions ಶಾಬ್ದಿಕ ವ್ಯತ್ಯಾಸಗಳು, ಮಾತಿನ ಭೇದಗಳು. V. inspiration (Inspire ಕೆಳಗೆ Inspiration ನೋಡಿ)]; (ಶಿಥಿಲ ಪ್ರ.) ಬಾಯಿಮಾತಿನ (ಲಿಖಿತರೂಪದ್ದಲ್ಲ) (V. contract, evidence ಬಾಯಿಮಾತಿನ ಕರಾರು, ಸಾಕ್ಷ್ಯ); (ಭಾಷಾಂತರದ ವಿಷಯದಲ್ಲಿ) ಮಾತಿಗೆ ಮಾತು ಹಾಕಿದ, ಪದಶಃ (ಮಾಡಿದ); [V. note (ರಾಜ್ಯತಂತ್ರ) (ಜರೂರು ಅಲ್ಲದಿದ್ದರೂ ಅಲಕ್ಷಿಸಕೂಡದ ವಿಷಯವನ್ನು ಕುರಿತ) ರುಜುಹಾಕದೆ ಬರೆದ ಜ್ಞಾಪಕಪತ್ರ]; (ವ್ಯಾ.) ಕ್ರಿಯಾಪದದ, ಕ್ರಿಯಾರ್ಥದ (Used in all the v. senses. V. noun ಕ್ರಿಯಾಪದದಿಂದ ವ್ಯುತ್ಪನ್ನವಾದ ನಾಮವಾಚಕ: ಕೃನ್ನಾಮ). (ನಾ.) ಕೃನ್ನಾಮ, ಕೃದಂತ ನಾಮವಾಚಕ. **Vérbalism** (ನಾ.) ಬರಿಯ ಪದಗಳಿಗೆ ಗಮನಕೊಡುವುದು; ಶಬ್ದೈಕ—ದೃಷ್ಟಿ, ಪರಿಶೀಲನೆ; ಶಬ್ದ—ಮೋಹ, ವಿಮರ್ಶೆ. **Vérbalist** (ನಾ.); **Vérbalize** (ಕ್ರಿ.) (ನಾಮಪದ, ಮೊ. ನ್ನು) ಕ್ರಿಯಾಪದವನ್ನಾಗಿ ಮಾಡು, ಕ್ರಿಯಾರೂಪಕ್ಕೆ ತಿರುಗಿಸು (=**Verbify**); ಬರಿಯ ಮಾತುಗಳನ್ನು ತುಂಬು, (ಅನಾವಶ್ಯಕವಾಗಿ) ಅಧಿಕ ಪದಗಳನ್ನು ಪ್ರಯೋಗಿಸು. **Verbalizátion** (ನಾ.); **Vérbally** (ಕ್ರಿ. ವಿ.); **Verbátim** ವರ್ಬೇಟಿಂ (ಕ್ರಿ. ವಿ., ಗು.) ಅದೇ ಮಾತುಗಳಲ್ಲಿ, ಅದೇ ಮಾತುಗಳನ್ನು,—ಎತ್ತಿ ಬರೆದ; ಮಾತಿಗೆ ಮಾತು (ಹಾಕಿ); ಪದಶಃ (Copied it v. ಪದಶಃ ಪ್ರತಿಮಾಡಿದನು). **Vérbiage** ವರ್ಬಿಯೆಜ್ (ನಾ.) ಶಬ್ದಬಾಹುಳ್ಯ, ಶಬ್ದಾಡಂಬರ, ಬರಿಯ ಮಾತಿನ ಕಂತೆ. **Vérbicide** (ನಾ.) (ಹಾಸ್ಯ ಪ್ರ.) ಮಾತಿನ ಕೊಲೆ(ಗಾರ), ಶಬ್ದಘಾತ(ಕ). **Verbóse** ವರ್ಬೋಸ್ (ಗು.) ಅನಾವಶ್ಯಕವಾಗಿ ಮಾತುಗಳು ತುಂಬಿದ, ಬಹುಪದ ಪ್ರಯೋಗದ, ಅತಿಮಾತುಗಳ. **Verbósely** (ಕ್ರಿ. ವಿ.); **Verbóseness** (ನಾ.); **Verbósity** ವರ್ಬಾಸ— (ನಾ.); **Vérbum (sat) sapiénti** (L) ವರ್ಬಂ (ಸ್ಯಾಟ್) ಸೇಪಿಎಂಟೈ (ವಾಕ್ಯ; ಸಂಕ್ಷಿಪ್ತ: Verb. sap.) ಜಾಣನಿಗೆ ಒಂದು ಮಾತು ಸಾಕು.

Vérbal, etc., Verbátim, Vérbiage, Vérbicide, Verbóse, etc., Vérbum (sat) sapiénti. **Verb** ನೋಡಿ.

Vérdant ವರ್ಡಂಟ್ (ಗು.) (ಹುಲ್ಲು, ಮೊ. ಗಳ ವಿಷಯದಲ್ಲಿ) ಹಸುರಾದ, ಹಚ್ಚನೆಯ; (ಹೊಲ, ಮೊ. ಗಳ ವಿಷಯದಲ್ಲಿ) ಹಸುರು ಹುಲ್ಲು ಬೆಳೆದಿರುವ, ಪಚ್ಚೆ ಬೆಳೆದಿರುವ; (ಮನುಷ್ಯನ ವಿಷಯದಲ್ಲಿ) ಏನೂ ಅರಿಯದ, ಎಳಕಾದ, ಅಪಕ್ವ, ಅನುಭವವಿಲ್ಲದ. **Vérdantly** (ಕ್ರಿ. ವಿ.); **Vérdancy.**

Verd-antíque ವರ್ಡ್‌ಆ್ಯಂಟೀಕ್ (ನಾ.) (ಅಲಂಕಾರಕ್ಕಾಗಿ ಉಪಯೋಗಿಸುವ) ಹಸುರು ಕಟ್ಟಡದ ಕಲ್ಲು; ಕಂಚಿನ ಕಿಲುಬು.

Vérderer, -or ವರ್ಡರರ್ (ನಾ.) (ಚರಿತ್ರೆ) ರಾಜನಿಗೆ ಸೇರಿದ ಅರಣ್ಯಗಳ ನ್ಯಾಯಾಧಿಕಾರಿ: ರಾಜವನ ಪಾಲಕ.

Vérdict ವರ್ಡಿಕ್ಟ್ (ನಾ.) (ಒಂದು ತಕ್ಸೀರು ಅಥವಾ ವ್ಯಾಜ್ಯವಿಷಯವನ್ನು ಕುರಿತು) ಸತ್ಯ ನಿರ್ಣಯ; ನ್ಯಾಯದರ್ಶಿಗಳ—ತೀರ್ಪು, ತೀರ್ಮಾನ [Brought in a v. of not guilty ದೋಷಿಯಲ್ಲವೆಂದು ತೀರ್ಮಾನ ಮಾಡಿದರು. Open v. ಪ್ರಾಥಮಿಕ ಪರಿಶೀಲನೆ ಮಾಡಿ ಅಪರಾಧಿಯನ್ನು ಹೆಸರಿಸದೆ ಅಪರಾಧ ನಡೆಯಿತೆಂದು ಮಾತ್ರ ಹೇಳುವುದು: ಅಪರಾಧ ನಿಶ್ಚಯ. Partial v. ಆಪಾದನೆಗಳಲ್ಲಿ ಕೆಲವು ಮಾತ್ರ ನಿಜವೆಂದು ಕೊಟ್ಟ ತೀರ್ಮಾನ: ಆಂಶಿಕ ನಿರ್ಣಯ. Privy *or* sealed v. (ನ್ಯಾಯದರ್ಶಿಗಳ ಪರ್ಯಾಲೋಚನೆಯ ಕಾಲದಲ್ಲಿ ನ್ಯಾಯಸ್ಥಾನ ನಡೆಯುತ್ತಿಲ್ಲದಿರುವಾಗ, ನ್ಯಾಯದರ್ಶಿಗಳು ನ್ಯಾಯಸ್ಥಾನದ ಕಾರ್ಯದರ್ಶಿಗೆ) ಲಕೋಟೆಯಲ್ಲಿಟ್ಟುಕೊಟ್ಟ ಲಿಖಿತ ತೀರ್ಪು: ಗೋಪ್ಯ, —ತೀರ್ಮಾನ, ನಿರ್ಣಯ. Special v. (ವಾದಾಂಶಗಳು ರುಜುವಾತಾದುವೆಂದು ಮಾತ್ರ ಹೇಳಿ, ಇತ್ಯರ್ಥವನ್ನು ನ್ಯಾಯಸ್ಥಾನಕ್ಕೇ ಬಿಟ್ಟುಬಿಡುವ) ವಿಶೇಷ ತೀರ್ಮಾನ]; (ಒಂದು ವಿಚಾರದಲ್ಲಿ, ಸಾರ್ವಜನಿಕರು, ಮೊ. ರ) ತೀರ್ಪು, ತೀರ್ಮಾನ, ನಿರ್ಣಯ (The v. of the public was in its favour ಜನರ ತೀರ್ಮಾನ—ಅದರ ಪರವಾಗಿತ್ತು, ಅದಕ್ಕೆ ಅನುಕೂಲವಾಗಿತ್ತು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Vérdigris ವರ್ಡಿಗ್ರಿ(ೀ)ಸ್ (ನಾ.) ತಾಮ್ರದಮೇಲೆ ಅಸಿಟಿಕ್ ಅಮ್ಲದ ಪ್ರಯೋಗದಿಂದ ಕಟ್ಟುವ, ಹಸುರು ಬಣ್ಣದ, ಸ್ಫಟಿಕಾಕೃತಿಯ ಪದಾರ್ಥ (ಇದು ಔಷಧ, ವರ್ಣದ್ರವ್ಯ, ಮೊ. ಗಳಿಗಾಗಿ ಉಪಯೋಗವಾಗುತ್ತದೆ); ತಾಮ್ರದ ಕಿಲುಬು.

Vérditer ವರ್ಡಿಟರ್ (ನಾ.) Blue, green, v. (ಕಾಪರ್ ನೈಟ್ರೇಟ್‌ನಿಂದ ಮಾಡಿದ) ನೀಲ, ಹಸುರು, —ವರ್ಣದ್ರವ್ಯ.

Vérdure ವರ್‌ಡ್ಯ(ಜ)ರ್ (ನಾ.) ಹಸುರು (ವಾಣಿ), ಪಚ್ಚೆ, ಪಯಿರು ಪಚ್ಚೆ; (ರೂಪ.) ಹೊಸ ಕಳೆ, ನವ್ಯತೆ. ಪರ್ಣಾಲಂಕಾರ ಹೆಚ್ಚಾಗಿ ರುವ ಒಂದು ಫ್ರೆಂಚ್ ಬಟ್ಟೆ. **Vérdured** (ಗು.); **Vérdureless** (ಗು.); **Vérdurous** (ಗು.) ಹಸುರು, ಪಚ್ಚೆ, —ಬೆಳೆದ; ಹುಲುಸಾಗಿ ಬೆಳೆದ.

Verge[1] ವರ್ಜ್ (ನಾ.) (ತುತ್ತತುದಿಯ, ಅತ್ಯಂತ ಕೊನೆಯ) ಎಲ್ಲೆ, ಅಂಚು, ಗಡಿ (ಸಾ., ರೂಪ.) (On the v. of 70, destruction ಒಂರ ರ, ನಾಶದ, ಹತ್ತಿರ ಹತ್ತಿರ); (ಹೂವಿನ ಪಾತಿ, ಮೊ. ಗಳ) ಹುಲ್ಲಿನ —ಅರುಗು, ತೆಂಡೆ; (ಬಿಷಪ್, ಮೊ. ರ ಮುಂದುಗಡೆ ಅಧಿಕಾರ ಸೂಚಕವಾಗಿ ಹಿಡಿದುಕೊಂಡುಹೋಗುವ) ಅಧಿಕಾರ ದಂಡ; (ಹಲವು ತೆರನ ಯಂತ್ರಗಳಲ್ಲಿ) ಕದಿರು, ತಿರುಗಚ್ಚು; (ವಾ. ಶಾ.) ಕಂಬದ ದಿಂಡು, ಗೇಬಲ್ಲಿನಿಂದ ಹೊರಚಾಚಿಕೊಂಡಿರುವ ಹೆಂಚಿನ ಭಾಗ (V.-board ಈ ಭಾಗಕ್ಕೆ ಹೊದಿಸಿದ ಅಲಂಕಾರದ ಮರದ ಪಟ್ಟಿ)

Verge[2] ವರ್ಜ್ (ಕ್ರಿ. ಅಕ.) (ಕೆಳಮುಖವಾಗಿ, ಒಂದು ಕಡೆಗೆ) ಓಲು, ಓಲಿ ಕೊಂಡಿರು, ಇಳಿ(ಯುತ್ತಿರು), ಬಾಗು, ಬಾಗಿರು, ಉನ್ಮುಖವಾಗು (V. towards old age, to a close ಮುಪ್ಪನ್ನು, ಕೊನೆಯನ್ನು, —ಮುಟ್ಟುತ್ತಿರು, ಸಮೀಪಿಸುತ್ತಿರು. The verging sun ಇಳಿ ಯುತ್ತಿರುವ ಸೂರ್ಯ). V. on ಅಂಚಿನಲ್ಲಿರು, ಸಮೀಪಿಸು (Path verges on the edge of a precipice. A solemnity verging on the tragic ದುರಂತಕ್ಕೆ ಸಮೀಪಿಸುವ ಗಂಭೀರ ಸನ್ನಿವೇಶ). **Vérgency** (ನಾ.) (ದೃ. ವಿ.) ಕಿರಣಗಳ ಅಪಸರಣದ ಅಥವಾ ಅಭಿಸರಣದ ಅಳತೆಯಾಗಿ ಉಪಯೋಗಿಸುವ, ಒಂದು ಲೆನ್ಸಿನ ನಾಭಿ ದೂರದ ವ್ಯುತ್ಕ್ರಮ ಸಂಖ್ಯೆ: ವಿಸರಣ ವ್ಯುತ್ಕ್ರಮ.

Vérgency. **Verge**[2] ನೋಡಿ.

Vérger ವರ್ಜರ್ (ನಾ.) ಚರ್ಚಿನಲ್ಲಿ ಜನರಿಗೆ ಅವರವರ ಪೀಠಗಳನ್ನು ತೋರಿಸುವುದು, ಮೊ. ಕೆಲಸವುಳ್ಳ ಅಧಿಕಾರಿ: ಹರಿಕಾರ; (ವಿ. ವಿ. ನಿ. ದ ಸ್ಥಾನಪತಿ, ಚರ್ಚಿನ ಬಿಷಪ್, ಮೊ. ರ ಮುಂದುಗಡೆ) ಅಧಿಕಾರದ ದಂಡ ಹಿಡಿದುಕೊಂಡುಹೋಗುವವನು: ದಂಡಧಾರಿ, ಕಟ್ಟಿಗೆಯವನು. **Vérgership** (ನಾ.)

Verídical ವಿರಿಡಿಕಲ್ (ಗು.) (ಸಾ., ವ್ಯಂಗ್ಯ ಪ್ರ.) ನಿಜ ಹೇಳುವ, ಸತ್ಯ ಸಂಧ; (ಮ. ಶಾ.; ಕನಸು, ತೋರ್ಕೆ, ಮೊ. ಗಳ ವಿಷಯದಲ್ಲಿ) ವಾಸ್ತವದಂತೆಯೇ ಇರುವ; ನಿಜವಾದ, ವಾಸ್ತವ. **Verídically** (ಕ್ರಿ. ವಿ.); **Verídicous** (ಗು.)

Vérify ವೆರಿಫೈ (ಕ್ರಿ. ಸಕ.) ನಿಜವೆಂದು, ಸತ್ಯವೆಂದು, —ದೃಢಪಡಿಸು, ಸಮರ್ಥಿಸು; ಸರಿ, ತಾಳೆ, ತಾರ್ಕಣೆ, —ನೋಡು; ಪರೀಕ್ಷಿಸು, ಶೋಧಿಸು (Must v. the statement, his figures); (ಘಟನೆ, ಕ್ರಿಯೆ, ಮೊ. ಗಳ ವಿಷಯದಲ್ಲಿ) ನಿರೀಕ್ಷಣೆಯಂತೆ—ನಡೆ, ನಿಜವಾಗು, ದೃಢಪಡು; (ನ್ಯಾ. ಶಾ.) (ದಾವಾ ಅರ್ಜಿಯಲ್ಲಿ ಹೇಳಿರುವುದಕ್ಕೆ) ಪ್ರಮಾಣಪತ್ರ ಲಗತ್ತಿಸು, (ಹೇಳಿಕೆಯನ್ನು) ರುಜುವಾತು ಪಡಿಸು. **Vérifiable** (ಗು.); **Verifiabílity** (ನಾ.); **Verificátion** (ನಾ.); **Vérifier** (ನಾ.)

Vérily ವೆರಿಲಿ (ಕ್ರಿ. ವಿ.) (ಪ್ರಾಚೀ. ಪ್ರ.) ನಿಜವಾಗಿ, ದಿಟವಾಗಿ, ಸತ್ಯ ವಾಗಿ.

Verisimílitude ವೆರಿಸಿಮಿಲಿಟ್ಯೂಡ್ (ನಾ.) ನಿಜದ ತೋರ್ಕೆ, ಸತ್ಯದ ಛಾಯೆ (V. is not proof ನಿಜವಾಗಿರುವಂತೆ ತೋರುವುದೆ ರುಜು ವಾತಲ್ಲ); ನಿಜದಂತೆ ತೋರುವಂಥದು. **Verisímilar** (ಗು.)

Véritable ವೆರಿಟಬ್‌ಲ್ (ಗು.) ನಿಜವಾದ, ವಾಸ್ತವವಾದ, ಸಾಕ್ಷಾತ್ತಾದ, ತದ್ವತ್ತಾದ (A v. boon, idiot). **Véritably** (ಕ್ರಿ. ವಿ.); **Vérity** (ನಾ.) (ಹೇಳಿಕೆ, ಮೊ. ಗಳ) ಸತ್ಯ(ತೆ); ನಿಜವಾದ ಹೇಳಿಕೆ; ವಾಸ್ತವವಾದ್ದು, ವಾಸ್ತವ ವಸ್ತು (These things, alas! are verities). Of a v. (ಪ್ರಾಚೀ. ಪ್ರ.) ನಿಜವಾಗಿ, ವಾಸ್ತವವಾಗಿ.

Vérjuice ವರ್ಜೂಸ್ (ನಾ.) (ಕಾಡುಸೇಬು, ಹುಳಿದ್ರಾಕ್ಷಿ, ಮೊ. ಗಳಿಂದ ತೆಗೆದ, ಅಡಿಗೆಯಲ್ಲಿ ಉಪಯೋಗಿಸುವ) ಹುಳಿರಸ. **Vérjuiced** (ಗು.)

Vérmeil ವರ್ಮಿಲ್ (ನಾ.) ಬೆಳ್ಳಿ—ಮೆರುಗು, ಗಿಲೀಟು; ಗಿಲೀಟಿಗೆ ಹೊಳಪುಕೊಡಲು ಉಪಯೋಗಿಸುವ ಮೆರುಗು: ಹೊಳಪು ಮೆರುಗು; ಕಿತ್ತಿಳೆಕೆಂಪಿನ ಪದ್ಮರಾಗ; (ಕಾವ್ಯ) ಕುಂಕುಮ.

Vermeólogy ವರ್ಮಿಯಾಲೊಜಿ (ನಾ.) ಕೀಟ—ಶಾಸ್ತ್ರ, ವಿಜ್ಞಾನ. **Vermeólogist** (ನಾ.)

Vermi- ವರ್ಮಿ— (ಸ. ಪೂ. ಪ.) ಹುಳು—, ಕೀಟ—, ಕ್ರಿಮಿ—. **-cide** ಕ್ರಿಮಿನಾಶಕ (ಔಷಧ). **-cidal** (ಗು.); **-form** ಹುಳುವಿನ ಆಕಾರದ, ಕೀಟಾಕಾರದ; (ರಚನೆಯಲ್ಲಿ) ಕ್ರಿಮಿರೂಪದ (V. appendix ಅಂತ್ರಪುಚ್ಛ). **-fuge** ಕರುಳಿನಿಂದ ಹುಳುಗಳನ್ನು ಹೊರದೂಡುವ ಔಷಧ: ಕ್ರಿಮಿರೇಚಕ. **-fugal** (ಗು.); **-grade** ಹುಳುವಿನಂತೆ—ಹರಿದಾಡುವ, ನುಲಿದಾಡುವ. **-vorous** ಹುಳುಗಳನ್ನು ತಿನ್ನುವ, ಕ್ರಿಮಿ ಭಕ್ಷಕ.

Vérmian ವರ್ಮಿಯನ್ (ಗು.) ಹುಳುಗಳ, ಹುಳುವಿನ(ಂಥ). **Vermícular** (ಗು.) (ರೂಪದಲ್ಲಾಗಲಿ ಚಲನೆಯಲ್ಲಾಗಲಿ) ಹುಳುವಿನಂಥ (V. appendix ಅಂತ್ರಪುಚ್ಛ); ಹುಳು ತಿಂದಂತೆ ಕಾಣುವ; ಅಲೆಯಾಕಾರದ ಗೆರೆಗಳು ತುಂಬಿರುವ. **Vermículate** —ಕ್ಯುಲೆಟ್ (ಗು.) (ವಿರ. ಪ್ರ.; ಸಾ., ರೂಪ.) = Vermicular. **Vermiculátion** (ನಾ.) ಹುಳು—ಬೀಳುವುದು, ಹಿಡಿಯುವುದು; ಹುಳುತು ಹೋಗುವುದು; ಹುಳು ತಿಂದುಹಾಕಿರುವುದು. ಅಲೆಯಾಕಾರದ ಗೆರೆಗಳ ಗುರುತು; ತರಂಗ ರೇಖಾಂಕತನ.

Vermicélli ವರ್ಮಿಸೆ(ಚೆ)ಲಿ (ನಾ.) ಶಾ(ಸೇ)ವಿಗೆ.

Vermícular, Vermículate, Vermiculátion. Vermian ನೋಡಿ.

Vermílion ವರ್ಮಿಲ್ಯನ್ (ನಾ., ಗು., ಕ್ರಿ. ಸಕ.) (ಕೆಂಪು ಬಣ್ಣದ) ರಸಗಂಧಕ (ಸಂಯುಕ್ತ), ಸಿಂದೂರ, ಇಂಗಲೀಕ, ಕುಂಕುಮ. (ಗು.) ಕುಂಕುಮ ಬಣ್ಣದ, ಸಿಂದೂರ ವರ್ಣದ. (ಕ್ರಿ.) ಕುಂಕುಮ ಬಣ್ಣ —ಕೊಡು, ಹಾಕು.

Vérmin ವರ್ಮಿನ್ (ನಾ.; ಸಾ., ಬ. ವ. ದಂತೆ ಪ್ರ.) ಬೇಟೆ, ಬೆಳೆ, ಮೊ. ಗಳಿಗೆ ಹಾನಿಕರವಾದ ಸಸ್ತನಿಗಳು, ಪಕ್ಷಿಗಳು: ಈತಿ ಜಂತುಗಳು (ಉದಾ., ನರಿ, ಇಲಿ, ಗೂಬೆ, ಮೊ. ವು); ಹಾನಿಕರವಾದ ಹುಳುಹುಪ್ಪಟೆಗಳು (ಉದಾ., ಚಿಗಟ, ಹೇನು, ಕೂರೆ, ತಿಗಣೆ, ಮೊ. ವು); (ಪರೋಪಜೀವಿಗಳಾದ) ಹುಳುಗಳು, ಕ್ರಿಮಿಗಳು, ಕೀಟಗಳು; (ರೂಪ.) ನೀಚ, ಕ್ಷುದ್ರ, —ಜನರು (The v. that infest race-courses). **Vérminate** (ಕ್ರಿ. ಅಕ.) ಹುಳು—ಬೀಳು, ಹತ್ತು. **Verminátion** (ನಾ.); **Vérminous** (ಗು.) ಹುಳು ಹುಪ್ಪಟೆಯ(ಂಥ); ಅಸಹ್ಯಕರ, ಹೇಯ; ಕ್ಷುದ್ರ, ನೀಚ; ಹುಳು ಬಿದ್ದ, ಹುಳುತುಹೋದ. **Vérminously** (ಕ್ರಿ. ವಿ.)

Vérm(o)uth ವರ್ಮೂಟ್(ತ್) (ನಾ.) 'ವರ್ಮ್‌ವುಡ್' ಎಂಬ ಒಂದು ಕಹಿ ಮೂಲಿಕೆಯ ವಾಸನೆ ಕಟ್ಟಿದ ಮದ್ಯ.

Vernácular ವರ್ನ್ಯಾಕ್ಯುಲರ್ (ಗು., ನಾ.) (ಭಾಷೆ, ಪದ, ಮೊ. ಗಳ ವಿಷಯದಲ್ಲಿ) ಹುಟ್ಟುನಾಡಿನ, ತಾಯ್ನುಡಿಯ; ದೇಶೀಯ, ದೇಶ್ಯ; (ರೋಗದ ವಿಷಯದಲ್ಲಿ) ಸ್ಥಳೀಕ = Endemic. (ನಾ.) ದೇಶಭಾಷೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇಶ್ಯ (Latin gave place to the v.). **Vernácularism** (ನಾ.) ದೇಶ್ಯ—ಪದ, ಪ್ರಯೋಗ; ದೇಶ್ಯ (ಪದ) ರೂಢಿ; ದೇಸಿ. **Vernaculárity** (ನಾ.) ದೇಶೀಯತೆ, ದೇಶ್ಯಾಭಿಮಾನ. **Vernácularize** (ಕ್ರಿ. ಸಕ.) ದೇಶ್ಯ ಭಾಷೆಗೆ ಪರಿವರ್ತಿಸು; ದೇಶ್ಯಮಾಡು. **Vernacularizátion** (ನಾ.); **Vernácularly** (ಕ್ರಿ. ವಿ.)

Vérnal ವರ್ನಲ್ (ಗು.) ವಸಂತ ಕಾಲದ(ಲ್ಲಿ—ನಡೆಯುವ, ತಲೆದೋರುವ) [V. equinox (Equinox ನೋಡಿ). V. fever ಮಲೇರಿಯಾ ಜ್ವರ, ಚಳಿಜ್ವರ. V. grass ಒಂದು ಬಗೆಯ ಸುವಾಸನೆಯ ಹುಲ್ಲು: ಶುಂಠಿಹುಲ್ಲು]. **Vérnally** (ಕ್ರಿ. ವಿ.)

Vernátion ವರ್ನೇಷನ್ (ನಾ.) (ಸ. ವಿ.) ಎಲೆಮೊಗ್ಗಿನೊಳಗಡೆಯ ಪತ್ರವಿನ್ಯಾಸ; ಮುಕುಳಪತ್ರ ವಿನ್ಯಾಸ (Aestival ಕೆಳಗೆ Aestivation ನೋಡಿ)

Vérnier ವರ್ನಿಯರ್ (ನಾ.) ಸ್ಥಿರಮಾಪಕದಲ್ಲಿಯ ಕನಿಷ್ಠಾಂಶದ ಭಿನ್ನಾಂಶಗಳನ್ನು ಅಳೆಯಲು ಅನುಕೂಲಿಸುವ, ಸರಿಸಲಾಗುವಂತೆ ಸ್ಥಿರಮಾಪಕಕ್ಕೆ ಜೋಡಿಸಿರುವ, ಸಣ್ಣ ಚಲಮಾಪಕ: ಭಿನ್ನಾಂಶ ಮಾಪಕ, ವರ್ನಿಯರ್ ಮಾಪಕ [Paul Vernier (೧೫೮೦-೧೬೩೭) ಎಂಬ ನಿರ್ಮಾಪಕನ ಹೆಸರಿನಿಂದ]

Véronal ವೆರೊನಲ್ (ನಾ.) ಒಂದು ನಿದ್ರಾಜನಕ ವಸ್ತು.

Veronése ವೆರೊನೀಸ್ (ಗು., ನಾ.; ಬ. ವ. ಅದೇ) (ಇಟಲಿಯಲ್ಲಿಯ) ವೆರೋನ ಪ್ರಾಂತದ(ವನು)

Verónica ವೆರಾನಿಕ (ನಾ.) ನೀಲಿ, ಊದಾ, ನಸುಗೆಂಪು, ಬಿಳಿಯ ಬಣ್ಣಗಳ ಹೂವು ಬಿಡುವ ಹಲವು ಬಗೆಯ ಮೂಲಿಕೆ ಅಥವಾ ಕುರುಚಲು; ಕ್ರಿಸ್ತಮುಖ ಚಿತ್ರಿತವಾದ ಬಟ್ಟೆ (ಯೇಸು ಕ್ರಿಸ್ತನು ಶಿಲುಬೆ ಹೊತ್ತು ಹೋಗುತ್ತಿದ್ದಾಗ ಆತನ ಮುಖದ ಬೆವರನ್ನು ಸಂತ ವೆರಾನಿಕಳು ಬಟ್ಟೆಯಿಂದ ಒರಸಿದಾಗ ಅದರಮೇಲೆ ಪವಾಡದ ಮೂಲಕ ಕ್ರಿಸ್ತನ ಮುಖಚಿತ್ರ ಬಿದ್ದ ಬಟ್ಟೆ)

Vérricule ವೆರಿಕ್ಯೂಲ್ (ನಾ.) (ಕೀಟ ವಿಜ್ಞಾನ) ನಿಮಿರು ಕೂದಲಿನ ದಟ್ಟ ಜುಟ್ಟು. **Verrículate** —ಕ್ಯುಲೆಟ್ (ಗು.)

Verrúca ವೆರೂಕ (ನಾ.) (ರೋಗ ನಿದಾನ, ಪ್ರಾ. ವಿ., ಸ. ವಿ.) (ಚರ್ಮದ ಮೇಲಿನ) ಸಣ್ಣ ಗಂಟು, ಗುಬಟು, ಗುಬಟಿನಂಥ ಉಬ್ಬು. **Verrúciform** —ಸಿ— (ಗು.). **Vérrucose** ವೆರುಕೋಸ್ (ಗು.) ಗುಬಟುಗಳುಳ್ಳ. **Vérrucous** ವೆರೂಕಸ್ (ಗು.) ಗುಬಟಿನಂಥ; ಗುಬಟಾಗುವ. **Verrúculose** ವೆರೂಕ್ಯುಲೋಸ್ (ಗು.) ಸಣ್ಣ ಗುಬಟುಗಳು ತುಂಬಿರುವ.

Vérsant ವರ್ಸಂಟ್ (ನಾ.) ಇಳಿಜಾರು ನೆಲ, ಇಳಿಮೇಡು; (ನೆಲದ) ಇಳಿಜಾರು.

Vérsatile ವರ್ಸಟೈ(ಟಿ)ಲ್ (ಗು.) ಒಂದು ವಿಷಯ, ಕೆಲಸ, ಮೊ. ಗಳಿಂದ ಮತ್ತೊಂದಕ್ಕೆ ಸುಲಭವಾಗಿ ತಿರುಗುವ ಶಕ್ತಿಯುಳ್ಳ; ಹಲವು ವಿಷಯಗಳಲ್ಲಿ—ಪ್ರವರ್ತಿಸಬಲ್ಲ, ವ್ಯವಹರಿಸಬಲ್ಲ; ಬಹುಮುಖ ಸಾಮರ್ಥ್ಯದ, ಸರ್ವತೋಮುಖ ಶಕ್ತಿಯ, ವಿವಿಧ ಶಕ್ತಿಯ (V. author. V. genius ಬಹುಮುಖ ಪ್ರತಿಭೆ); ಕೀಲಿನಮೇಲೆ ಹೇಗೊ ಹಾಗೆ ತಿರುಗಬಲ್ಲ (V. spindle ಕೀಲು ತಿರುಗಣೆಯ ಕದಿರು); (ಸ. ವಿ., ಪ್ರಾ. ವಿ.) ಒಂದು ಆಧಾರದಮೇಲೆ ಮೇಲಕ್ಕೂ ಕೆಳಕ್ಕೂ ಅಥವಾ ಸುತ್ತಲೂ ತಿರುಗಬಲ್ಲ: ಸರ್ವತೋಮುಖ ಭ್ರಮಣದ (V. anther, head); ಬದಲಾಯಿಸುವ, ಚಂಚಲ. **Vérsatilely** (ಕ್ರಿ. ವಿ.); **Versatílity** —ಟಿ— (ನಾ.) ಬಹುಮುಖ ಸಾಮರ್ಥ್ಯ; ಸರ್ವತೋಮುಖ ಶಕ್ತಿ.

Verse ವರ್ಸ್ (ನಾ., ಕ್ರಿ.) ಪದ್ಯ ಪಂಕ್ತಿ, ಸಾಲು, ಪಾದ [Quoted some verses of the Iliad. Cap verses (Cap ಕ್ರಿ., ನೋಡಿ)]; ಪದ್ಯ, ವೃತ್ತ, ಶ್ಲೋಕ; ಪದ್ಯ ಕವಿತೆ [What is not prose is verse ಗದ್ಯವಲ್ಲದ್ದು ಪದ್ಯ. Blank, Society, v. (ಆಯಾ ಪದ ನೋಡಿ)]; ಬೈಬಲ್ಲಿನ ಅಧ್ಯಾಯದ ಸಣ್ಣ ಪ್ರಕರಣ(ಗಳಲ್ಲೊಂದು) [Chapter & v. (Chapter ನೋಡಿ)]; ಕ್ರೈಸ್ತ ಆರಾಧನೆಯ ಭಾಗವಾಗಿ ಹೇಳುವ ಸಣ್ಣ ವಾಕ್ಯ, ವಚನ; (ಸಂವಾದ ಗೀತೆ, ಮೊ. ಗಳಲ್ಲಿಯ) ತನಿ ನುಡಿ. [√.-**monger** ಪದ್ಯ ಹೊಸೆಯುವವನು; ಕುಕವಿ. **V.-mongering** (ನಾ.)]. (ಕ್ರಿ.) ಪದ್ಯ—ಬರೆ, ಹೆಣೆ; ಪದ್ಯದಲ್ಲಿ —ಹೇಳು, ಹಾಕು. **Vérselet** (ನಾ.) ಸಣ್ಣ—ಕವಿತೆ, ಪದ್ಯ. **Vérset** ವರ್ಸೆಟ್ (ನಾ.) (ಸಂ.) ಆರ್ಗನ್ ವಾದನಕ್ಕೆ ರಚಿಸಿದ ಸಣ್ಣ ಉಪಕ್ರಮ ಗೀತೆ ಅಥವಾ ಅಂತರ ಗೀತೆ: ಚುಟುಕ ನುಡಿ. **Vérsicle** ವರ್ಸಿಕ್‌ಲ್ (ನಾ.) ಸಣ್ಣ ಪದ್ಯ, ಚುಟುಕ ನುಡಿ (ಮು., ಚರ್ಚಿನಲ್ಲಿ ಆರಾಧನ ಕಾಲದಲ್ಲಿ ಪುರೋಹಿತನೂ ಜನರೂ ಪರ್ಯಾಯ ಕ್ರಮದಲ್ಲಿ ಹೇಳುವ ಸಣ್ಣ ಪದ್ಯ). **Versícular** (ಗು.) (ಸಣ್ಣ, ಚುಟುಕ—) ಪದ್ಯಗಳ (V. divisions ಪದ್ಯಗಳಾಗಿ—ವಿಂಗಡಣೆ, ವಿಭಾಗ). **Vérsify** (ಕ್ರಿ.) (ಗದ್ಯವನ್ನು) ಪದ್ಯಕ್ಕೆ ತಿರುಗಿಸು; ಛಂದೋರೂಪದಲ್ಲಿ ಬರೆ; ಪದ್ಯ(ದಲ್ಲಿ) ಬರೆ, ಪದ್ಯ ಹೆಣೆ. **Versificátion** (ನಾ.); **Vérsifier** (ನಾ.) ಪದ್ಯಕಾರ.

Versed ವರ್ಸ್ಟ್ (ಗು.) (ವಿಷಯ, ಕೆಲಸ, ಮೊ. ಗಳಲ್ಲಿ) ನುರಿತ, ಪಳಗಿದ, ನಿಷ್ಣಾತ, ನಿಪುಣ. ಪ್ರತಿಲೋಮದ [V. sine ಎಂಬಲ್ಲಿ ಮಾತ್ರ (Sine[1] ನೋಡಿ)]

Vérset, Vérsicle. **Verse** ನೋಡಿ.

Vérsicolour(ed) ವರ್ಸಿಕಲರ್(ಡ್) (ಗು.) ಬಗೆ ಬಗೆಯ ಬಣ್ಣದ, ವಿವಿಧ ವರ್ಣದ; ಬೇರೆ ಬೇರೆ ಬೆಳಕಿನಲ್ಲಿ ಬೇರೆ ಬೇರೆ ಬಣ್ಣವಾಗಿ ಬದಲಾಯಿಸುವ; ವರ್ಣ ವೈವಿಧ್ಯವುಳ್ಳ.

Versícular, Vérsify, etc. **Verse** ನೋಡಿ.

Vérsion ವರ್ಷನ್ (ನಾ.) ಮತ್ತೊಂದು ಭಾಷೆಗೆ ಪರಿವರ್ತನವಾದ ಗ್ರಂಥ, ಮೊ. ವು [Authorized v. (Authority ಕೆಳಗೆ ನೋಡಿ). Revised v. (Revise ನೋಡಿ)]; ಭಾಷಾಂತರ, ಅನುವಾದ, ತರ್ಜುಮೆ (ಮು., ಪಾಠಶಾಲೆಯಲ್ಲಿ ಅಭ್ಯಾಸಕ್ಕಾಗಿ ಮಾಡುವಂಥದು); (ಒಂದು ವಾಕ್ಯ, ಮೊ. ಗಳ) ಪಾಠ, ಪಾಠಾಂತರ; ರೂಪ, ರೂಪಾಂತರ (This painting is a larger v. of one at Windsor Castle); ಒಬ್ಬ ವ್ಯಕ್ತಿ ತನ್ನ ದೃಷ್ಟಿಯಿಂದ ಮಾಡಿದ ಹೇಳಿಕೆ, ವರದಿ, ಕಥನ: ಕಥನ ಭೇದ, ಕಥನಾಂತರ, ವೈಯಕ್ತಿಕ ಕಥನ (Now let me have your own v. of the affair); ಗರ್ಭದಲ್ಲಿಯ ಮಗುವನ್ನು ಹೆರಿಗೆಯಲ್ಲಿ ಅದು ಸರಾಗವಾಗಿ ಹೊರಬರಲು ಅನುಕೂಲಿಸುವಂತೆ, ತಲೆಯೋ ಕಾಲೋ ಮುಂದಾಗಿರುವಂತೆ ತಿರುಗಿಸುವುದು: (ಗರ್ಭಶಿಶು) ಪರಿವರ್ತನ, ನೇರವಾಗಿ ತಿರುಗಿಸುವುದು. **Vérsional** (ಗು.) ಭಾಷಾಂತರದ, ಪಾಠಾಂತರದ. **Vérsionist** (ನಾ.) ಭಾಷಾಂತರಕಾರ.

Vers libre (F) ವೇರ್ ಲೀಬ್ರ್ (ನಾ.) ಮಿಶ್ರ ಛಂದಸ್ಸಿನ, ಅನಿಯತ ಛಂದಸ್ಸಿನ, —ಪದ್ಯ(ಬಂಧ). **Verslíbrist** —ಬ್ರಿಸ್ಟ್ (ನಾ.) —ಪದ್ಯಕಾರ.

Vérso ವರ್ಸೊ (ನಾ.; ಬ. ವ. -os) (ಪುಸ್ತಕದ) ಎಡ—ಪಕ್ಕ, ಪುಟ (Recto ಪದದೊಡನೆ ಹೋಲಿಸಿ). ನಾಣ್ಯದ—ಹಿಂಭಾಗ, ಹಿಮ್ಮುಖ.

Verst ವರ್ಸ್ಟ್ (ನಾ.) ರಷ್ಯಾ ದೇಶದ ಒಂದು ಉದ್ದಳತೆ (೩,೫೦೦ ಅಡಿ)

Vérsus (L) ವರ್ಸಸ್ (ಉಪ.; ಸಂಕ್ಷಿಪ್ತ: v.) ಎದುರು, ಪ್ರತಿ [(ನ್ಯಾ. ಶಾ.) Jones v. Smith. (ಕ್ರಿಕೆಟ್, ಮೊ. ಗಳಲ್ಲಿ) Surrey v. Kent]

Vert[1] ವರ್ಟ್ (ನಾ.) (ಕಾಡಿನಲ್ಲಿಯ) ಹಸುರೆಲೆಯ ಸಸ್ಯಗಳು; ಹಸುರು ಪಾಣಿ (ಕತ್ತರಿಸಿಕೊಳ್ಳುವ ಹಕ್ಕು); (ವಂಶ ಲಾಂಛನ) ಹಸುರು ಬಣ್ಣ.

Vert[2] ವರ್ಟ್ (ನಾ., ಕ್ರಿ. ಅಕ.) (ಬಳ. ಮಾ.) (ಮತ) ಪರಿವರ್ತನ ಹೊಂದಿದವನು, ಧರ್ಮಾಂತರ ಹೊಂದಿದವನು, ಮತಭ್ರಷ್ಟ, ಧರ್ಮಚ್ಯುತ. (ಕ್ರಿ.) (ಒಂದು ಮತ ಬಿಟ್ಟು ಮತ್ತೊಂದು ಮತಕ್ಕೆ) ಪರಿವರ್ತನ ಹೊಂದು; ಸ್ವಧರ್ಮ ತ್ಯಾಗಮಾಡು; ಧರ್ಮಾಂತರ ಹೊಂದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Vértebra ವರ್ಟಿಬ್ರ (ನಾ. ; ಬ. ವ. -ae —ಬ್ರೀ) ಬೆನ್ನುಹುರಿಯ ಪ್ರತಿಯೊಂದು ಸಂಧ್ಯಸ್ಥಿ: ಕಶೇರುಖಂಡ (False v. ಸ್ಥಿರ ಕಶೇರುಕಾಸ್ಥಿ True v. ಚಲ—); (ಬ. ವ. ದಲ್ಲಿ) ಬೆನ್ನುಮೂಳೆ, ಬೆನ್ನುಹುರಿ, ಕಶೇರು(ಕ). **Vértebral** (ಗು.); **Vértebrally** (ಕ್ರಿ. ವಿ.); **Vértebrate** —ಬ್ರೆಟ್ (ಗು., ನಾ.) ಬೆನ್ನುಮೂಳೆಯುಳ್ಳ (ಪ್ರಾಣಿ); ಕಶೇರುಕ (ಪ್ರಾಣಿ). **Vertebráta** (ನಾ. ; ಬ. ವ.) (ಸಸ್ತನಿಗಳು, ಪಕ್ಷಿಗಳು, ಸರೀಸೃಪಗಳು, ಉಭಯಜೀವಿಗಳು, ಮೀನುಗಳು —ಇವನ್ನೊಳಗೊಂಡ) ಕಶೇರುಕಪ್ರಾಣಿವರ್ಗ. **vértebrated** (ಗು.); **Vertebrátion** (ನಾ.) ಕಶೇರು ರಚನೆ, ಬೆನ್ನೆಲುಬು ವಿಂಗಡಣೆ; (ರೂಪ.) ಸ್ಥೈರ್ಯ, ದಾರ್ಢ್ಯ. **Vertebro-** (ಸ.ಪೂ.ಪ.) ಕಶೇರು—.

Vértex ವರ್ಟೆಕ್ಸ್ (ನಾ. ; ಬ. ವ. -tices ವರ್ಟಿಸೀಸ್) ಅತ್ಯುಚ್ಚ ಬಿಂದು, ಅಗ್ರ, ಶಿಖರ, ನೆತ್ತಿ; (ಅಂ. ರ. ಶಾ.) ತಲೆಯ ಮೇಲ್ಭಾಗ, ನೆತ್ತಿ; (ಜ್ಯಾ.) (ತ್ರಿಕೋನ, ಬಹುಭುಜ, ಮೊ. ಗಳ) ಶೃಂಗ (V. of an angle ಕೋನ ಶೃಂಗ). **Vértical** ವರ್ಟಿಕಲ್ (ಗು., ನಾ.) ಶಿಖರದ(ಲ್ಲಿರುವ), ಶೃಂಗದ(ಲ್ಲಿರುವ), ನೆತ್ತಿಯ (ಮೇಲಿರುವ); ನಿಂತಿರುವ, ಲಂಬವಾಗಿರುವ; (ಅಂ. ರ. ಶಾ.) (ತಲೆಯ) ನೆತ್ತಿಯ; [V. angles ಎರಡು ರೇಖೆಗಳು ಪರಸ್ಪರ ಕತ್ತರಿಸಿದಾಗ ಆಗುವ ಎದುರು ಬದುರು ಕೋನಗಳು: ಶಿರಃಕೋನಗಳು. V. circle = Azimuth-circle (Azimuth ನೋಡಿ). V. fins ಬೆನ್ನಮೇಲಿನ, ಗುದದ್ವಾರದ ಬಳಿಯ, ಬಾಲದ ಬಳಿಯ, —ಈಜುರೆಕ್ಕೆ. V. plane ಲಂಬ ಸಮತಲ]. (ನಾ.) ಲಂಬ—ರೇಖೆ, ಸಮತಲ, ವೃತ್ತ (Out of the v. ಲಂಬವಾಗಿಲ್ಲದೆ, ಲಂಬತೆ ತಪ್ಪಿ). **Vértically** (ಕ್ರಿ. ವಿ.); **Verticálity** —ಕ್ಯಾ— (ನಾ.) ಲಂಬತೆ; (ಸೂರ್ಯ ಅಥವಾ ಇತರ ಆಕಾಶಸ್ಥ ಕಾಯ) ನೆತ್ತಿಯ ಮೇಲಿರುವ ಸ್ಥಿತಿ; ಖಮಧ್ಯಸ್ಥತೆ.

Vértical, etc. Vertex ನೋಡಿ.

Vérticil ವರ್ಟಿಸಿಲ್ (ನಾ.) (ಸ. ವಿ., ಪ್ರಾ. ವಿ.) ಸುತ್ತು, ಆವರ್ತ. **Vertícillate(d)** (ಗು.); **Vertícillately** (ಕ್ರಿ. ವಿ.)

Vértigo ವರ್ಟಿ(ಟೈ)ಗೊ (ನಾ.) ತಲೆತಿರುಗು(ವುದು), ತಲೆಸುತ್ತು(ವುದು), ಗಿರಕಿ, ಬವಳಿ (Essential v. ಯಾವ ಗೋಚರ ಕಾರಣವೂ ಇಲ್ಲದೆ ತಲೆಸುತ್ತು: ನಿಷ್ಕಾರಣ ಭ್ರಮಣ. Objective v. ಸುತ್ತಣ ಪದಾರ್ಥಗಳು ಸುತ್ತುತ್ತಿರುವಂತೆ ಭಾಸವಾಗುವ ತಲೆತಿರುಗು: ಹೊರ ಗಿರಕಿ, ಬಾಹ್ಯ ಭ್ರಮಣ. Subjective v. ತಾನೇ ಸುತ್ತುತ್ತಿರುವಂತೆ ತೋರುವ ತಲೆತಿರುಗು: ಒಳ ಗಿರಕಿ, ಅಂತರ್ ಭ್ರಮಣ). **Vertíginous** (ಗು.) ತಲೆ ತಿರುಗುವ, ಗಿರಕಿಯ. (ಚಲನೆಯ ವಿಷಯದಲ್ಲಿ) ಸುತ್ತುವ, ಭ್ರಮಣದ. **Vertíginously** (ಕ್ರಿ. ವಿ.); **Vertíginousness** (ನಾ.)

Vertu ವರ್ಟೂ (ನಾ.) = Virtu.

Verve ವರ್ವ್ (ನಾ.) (ಕಲಾಕೃತಿ ಅಥವಾ ಸಾಹಿತ್ಯ ಕೃತಿಗಳಲ್ಲಿ) ಹುರುಪು, ಓಜಸ್ಸು, ಉತ್ಸಾಹ.

Vérvet ವರ್ವೆಟ್ (ನಾ.) ದ. ಆಫ್ರಿಕದ ಒಂದು ಸಣ್ಣ ಕೋತಿ.; ವರ್ವೆಟ್ ಕೋತಿ (ಅನೇಕ ವೇಳೆ ಆರ್ಗನ್ ವಾದ್ಯಗಾರರು ತಿದಿಯೊತ್ತುವುದಕ್ಕೆ ಉಪಯೋಗಿಸುವರು)

Véry[1] ವೆರಿ (ಗು., ಕ್ರಿ. ವಿ.) ನಿಜವಾದ, ವಾಸ್ತವವಾದ, ಯಥಾರ್ಥವಾದ, ಅಚ್ಚ, ಅಪ್ಪಟ, ಕೇವಲ, ಸಾಕ್ಷಾತ್ತಾದ (V. God of v. God. The veriest simpleton ಶುದ್ಧ—ದಡ್ಡ, ಮೂರ್ಖ. Must consent from v. shame ಕೇವಲ ನಾಚಿಕೆಗಾದರೂ, ಅಪಕೀರ್ತಿ ಭಯದಿಂದಲಾದರೂ ಒಪ್ಪಬೇಕು); [(The, this, that ಅಥವಾ ಷಷ್ಠ್ಯಂತ ಪದಗಳೊಡನೆ ಅವಧಾರಣಾರ್ಥದಲ್ಲಿ): Speaking in this v. room ಇದೇ ಕೋಣೆಯಲ್ಲಿ ಮಾತಾಡುತ್ತ. A needle is the v. thing (for our purpose) ಸೂಜಿಯೇ (ನಮಗೆ) ಬೇಕಾಗಿರುವುದು. His v. servants bully him ಅವನ ಸೇವಕರೇ ಅವನನ್ನು ಬೆದರಿಸುತ್ತಾರೆ. Gave me only a v. little ನನಗೆ ಬಹು ಕೊಂಚ ಕೊಟ್ಟನು]. (ಕ್ರಿ. ವಿ.) ಅತ್ಯಂತ, ಅತಿ, ತುಂಬ, ಬಹಳ, ಬಹು, ತೀರ, ಕೇವಲ (Did the v. best I could ನನ್ನ ಕೈಯಲ್ಲಾದಷ್ಟೂ, ಪರಮಾವಧಿ,—ಮಾಡಿದೆನು. May keep it for your v. own ಕೇವಲ ನಿನ್ನ ಸ್ವಂತಕ್ಕಾಗಿ ಇಟ್ಟುಕೊಳ್ಳಬಹುದು. A v. trying time ತೀರ ಕಠಿನ, ಪರೀಕ್ಷಾ, —ಕಾಲ. Wore a v. surprised expression ಅತ್ಯಾಶ್ಚರ್ಯದ ಮುಖಭಾವವನ್ನು ತಳೆದನು. I was v. pleased ನನಗೆ ಬಹಳ ಮೆಚ್ಚಿಕೆಯಾಯಿತು, ಸಂತೋಷವಾಯಿತು. V. well ಓಹೋ; ಆಗಬಹುದು; ಒಳ್ಳೆಯದು; ಭೇಷಕ್)

Véry[2] ವೆರಿ (ನಾ.) (ವಿಶೇಷಣ ಪ್ರ.) V. light (ರಣರಂಗದ ಒಂದು ಭಾಗ, ಮೊ. ನ್ನು ತಾತ್ಕಾಲಿಕವಾಗಿ ಬೆಳಗಲು ಉಪಯೋಗಿಸುವ) ವೆರಿ ಪಿಸ್ತೂಲಿನಿಂದ (= V. pistol) ಪ್ರಕ್ಷೇಪಿಸಿದ ಪ್ರಕಾಶ: ವೆರಿ ಬೆಳಕು (ಇದನ್ನು ಕಂಡುಹಿಡಿದ S. W. Very ಎಂಬಾತನ ಹೆಸರಿನಿಂದ)

Vesíca ವಿಸೈಕ (ನಾ.) (ಅಂ. ರ. ಶಾ., ಸ. ವಿ.) ಚೀಲ, ಕೋಶ; (ಮು.) ಮೂತ್ರಕೋಶ; ಮಧ್ಯ ಯುಗದ ಶಿಲ್ಪದಲ್ಲೂ ವರ್ಣಚಿತ್ರದಲ್ಲೂ ಪ್ರಭಾವಳಿಯಾಗಿ ರೂಪಿಸಿರುವ ಮೊನಚು ಅಂಡಾಕಾರ, ಮೀನಾಕಾರ [0] (= V. piscis *or* piscium). **Vésical** ವೆಸಿಕಲ್ (ಗು.) ಮೂತ್ರಕೋಶದ, ಕೋಶಾಕಾರದ, (ಮೊನಚು) ಅಂಡಾಕಾರದ. **Vésicate** (ಕ್ರಿ. ಸಕ.) ಗುಳ್ಳೆಗಳೆಬ್ಬಿಸು. **Vésicant** (ಗು., ನಾ.); **Vésicatory** (ಗು., ನಾ.) ಗುಳ್ಳೆಗಳೆಬ್ಬಿಸುವ (ಔಷಧ); ಗುಳ್ಳೆಗಳಾಗುವ. **Vesicátion** (ನಾ.); **Vesico-** (ಸ. ಪೂ. ಪ.) ಮೂತ್ರಕೋಶ—, ಕೋಶ—. **Vésicocele** (ನಾ.) (ಮೂತ್ರ) ಕೋಶದ ಊತ. **Vesicótomy** (ನಾ.) (ಮೂತ್ರ)ಕೋಶಚ್ಛೇದ. **Vésicle** (ನಾ.) (ಅಂ. ರ. ಶಾ., ಸ. ವಿ., ಭೂ. ವಿ.) ಸಣ್ಣ ಚೀಲ, ಕೋಶಕ, ಗುಳ್ಳೆ. **Vesícular** (ಗು.); **Vesículate** (ಗು.) ಸಣ್ಣ ಸಣ್ಣ ಕೋಶಗಳುಳ್ಳ; ಗುಳ್ಳೆಗಳೆದ್ದಿರುವ. **Vesiculátion** (ನಾ.); **Vesiculíferous** (ಗು.) (ಸಣ್ಣ) ಕೋಶಗಳುಳ್ಳ; ಗುಳ್ಳೆಗಳೆದ್ದ. **Vesículiform** (ಗು.); **Vesículose** (ಗು.), **Vesículous** (ಗು.) ಸಣ್ಣ ಸಣ್ಣ ಕೋಶಗಳುಳ್ಳ; ಗುಳ್ಳೆಗಳೆದ್ದ.

Vésper ವೆಸ್ಪರ್ (ನಾ.) (ರಾತ್ರಿ ಕಾಣಿಸುವ) ವೆಳ್ಳಿ, ಶುಕ್ರ; (ಕಾವ್ಯ) ಸಾಯಂಕಾಲ, ಸಂಜೆ, ಬೈಗು; (ಬ. ವ. ದಲ್ಲಿ) ಬೆಳಗ್ಗೆ ೮ರಿಂದ ಮಧ್ಯಾಹ್ನ ೩ರ ವರೆಗೆ ಚರ್ಚಿನಲ್ಲಿ ದೈವ ಪ್ರಾರ್ಥನೆಗಾಗಿ ಗೊತ್ತುಪಡಿಸಿರುವ ಏಳು ಘಂಟೆಗಳಲ್ಲಿ ಆರನೆಯದು (ಮಧ್ಯಾಹ್ನ ೧ರಿಂದ ೩ರ ವರೆಗಿನದು): ಸಾಯಂ ಪ್ರಾರ್ಥನೆ; ಸಾಯಂಪ್ರಾರ್ಥನೆಯ ಘಂಟೆ (= V.-bell). Sicilian Vespers (Sicilian ನೋಡಿ). **Véspertine** ವೆಸ್ಪರ್ಟೈ(ಟಿ)ನ್ (ಗು.) ಸಾಯಂಕಾಲದ, ಸಂಜೆಹೊತ್ತಿನ; (ಸ.ವಿ.; ಹೂವುಗಳ ವಿಷಯದಲ್ಲಿ) ಸಂಜೆ ಅರಳುವ; (ಪ್ರಾ. ವಿ.) ಸಂಜೆ ಹಾರಾಡುವ; (ಖ. ವಿ.) (ಗ್ರಹ ಅಥವಾ ನಕ್ಷತ್ರದ ವಿಷಯದಲ್ಲಿ) ಸಾಯಂಕಾಲದಲ್ಲಿ, ಸೂರ್ಯಾಸ್ತವಾಗುವಾಗ, —ಅಸ್ತವಾಗುವ.

Véspiary ವೆಸ್ಪಿಯರಿ (ನಾ.) ಕಣಜದ ಗೂಡು. **Véspine** ವೆಸ್ಪೈ(ಪಿ)ನ್ (ಗು.) ಕಣಜದ, ಕಣಜಗಳ. **Véspiform** (ಗು.) ಕಣಜದ ಹುಳುವಿನಾಕಾರದ.

Véssel ವೆಸೆಲ್ (ನಾ.) ಪಾತ್ರೆ, ಭಾಂಡ (ತಟ್ಟೆ, ತಂಬಿಗೆ, ತಪ್ಪಲೆ, ಮೊ. ವು); (ದೊಡ್ಡ) ದೋಣಿ, ಹಡಗು, ನೌಕೆ; (ಅಂ. ರ. ಶಾ.) ನಾಳ (Blood-v. ರಕ್ತನಾಳ); (ಸ. ವಿ.) ದ್ರವನಾಳ, ನಳಿಕೆ; (ಬೈಬಲ್ ಪ್ರ., ಅಥವಾ ಹಾಸ್ಯ ಪ್ರ.) ಧರಿಸಿಟ್ಟುಕೊಳ್ಳಬಲ್ಲ, ಆಧಾರ, —ವ್ಯಕ್ತಿ: ಪಾತ್ರ, ಭಾಜನ (Chosen vessels ಮುಕ್ತಿಪಾತ್ರರು. The weaker v. ಹೆಂಗಸು, ಅಬಲೆ. Vessels of mercy ಕೃಪಾಪಾತ್ರರು. The vessels of wrath ಕೋಪಪಾತ್ರರು). **Vésselful** (ಗು.)

Vest[1] ವೆಸ್ಟ್ (ನಾ.) (ಅಂಗಡಿಯ ಮಾತು) ನಡುವಂಗಿ; ಹೆಣೆದ ಅಥವಾ ನೆಯ್ದ ಒಳಜುಬ್ಬ (= Undervest); ಹೆಂಗಸಿನ ಮೇಲುಡುಪಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥವಾ ರವಿಕೆಯ ಮುಂಭಾಗದಲ್ಲಿಯ ಸಾ., V ಆಕಾರದ ರೇಷ್ಮೆಯ ಅಥವಾ ಜರಿಯ ಅಲಂಕಾರ. (ಪ್ರಾಚೀ. ಪ್ರ.) ಬಟ್ಟೆ, ಉಡುಪು, ವಸ್ತ್ರ. **Vésting** (ನಾ.) (ಸಾ., ಬ. ವ. ದಲ್ಲಿ) ನಡುವಂಗಿ ಬಟ್ಟೆ.

Vest² ವೆಸ್ಟ್ (ಕ್ರಿ.) (ಒಬ್ಬನಿಗೆ ಅಧಿಕಾರ, ಪದವಿ, ಆಸ್ತಿ, ಮೊ. ನ್ನು) ಕೊಡು, ವಹಿಸು (V. property *in* person. V. person *with* power. Vested interests, rights, estate ಶಾಸನ ಹಾಕಿಕೊಟ್ಟ, ಪಟ್ಟಭದ್ರ, —ಹಿತಾರ್ಥಗಳು, ಹಕ್ಕು, ಆಸ್ತಿ) ; (ಆಸ್ತಿ, ಹಕ್ಕು, ಮೊ. ಗಳ ವಿಷಯದಲ್ಲಿ) (ಹೀಗೆ ಒಬ್ಬನಲ್ಲಿ) ಇರು, ನೆಲಸಿರು (*In* ಉಪ. ದೊಡನೆ) ; (ಕಾವ್ಯ) ಬಟ್ಟೆ ಹಾಕು ; ಉಡುಪು—ಧರಿಸು, ತೊಡಿಸು.

Vésta ವೆಸ್ಟ (ನಾ.) (ರೋಮನ್ ಪುರಾಣ) ಒಲೆಯ ಅಭಿಮಾನಿ ದೇವತೆ, ಗೃಹಾಭಿಮಾನಿ ದೇವತೆ, ಮನೆ ದೇವತೆ ; (ಖ. ವಿ.) ಅಂಗಾರಕ ಮತ್ತು ಬೃಹಸ್ಪತಿ ಗ್ರಹಗಳ ನಡುವೆ ಸುತ್ತುತ್ತಿರುವ ಒಂದು ಉಪಗ್ರಹ. ಗೀಚಿ ಹೊತ್ತಿಸಬೇಕಾದ ಮೇಣದ ಬೆಂಕಿಕಡ್ಡಿ (=Wax-v.) (Fusee v. ಜೋರುಗಾಳಿಯಲ್ಲಿ ಹೊತ್ತಿಸಲಾಗುವ ಇಂಥ ಮೇಣದ ಬೆಂಕಿಕಡ್ಡಿ : ಜೋರುಗಾಳಿಯ ಬೆಂಕಿಕಡ್ಡಿ). **Véstal** (ಗು., ನಾ.) ಗೃಹಾಭಿಮಾನಿದೇವತೆಯ ; (ಈ ದೇವತೆಯ ಉಪಾಸಕರಾದ) ಕನ್ಯಾ ವ್ರತಧಾರಿಗಳ ; ಈ ದೇವತೆಯ ಬಲಿಪೀಠದಮೇಲೆ ಸಂತತವಾಗಿ ಉರಿಯುವ ಪವಿತ್ರಾಗ್ನಿಯ ಸಂರಕ್ಷಣೆಯ ದೀಕ್ಷೆ ವಹಿಸಿದ, ಕನ್ಯಾ ವ್ರತಧಾರಿಯಾದ, ಉಪಾಸಕಳು : ಕನ್ಯಾವ್ರತಿ (=V. virgin) ; ಪರಿಶುದ್ಧ ಚಾರಿತ್ರೆ, ಸಾಧ್ವೀಮಣಿ; (ಮು.) ಸಂನ್ಯಾಸಿನಿ, ವಿರಾಗಿಣಿ.

Véstibule ವೆಸ್ಟಿಬ್ಯೂಲ್ (ನಾ.) ಹೊರ ಬಾಗಿಲಿನಿಂದ ಅದಕ್ಕೆ ಪ್ರವೇಶ ವಿದ್ದು ಅದರೊಳಗಿನಿಂದ ಇತರ ಕೋಣೆ, ಮೊ. ಗಳಿಗೆ ಪ್ರವೇಶ ವಿರುವ ಹಜಾರ, ಮೊ. ವು : ನಡವೆ, ನಡುಮನೆ, ಮೊಗಸಾಲೆ ; (ಚರ್ಚು, ಮೊ. ಗಳ) ನವರಂಗ, ಮುಖಮಂಟಪ ; [(ಅಮೆ. ಸಂ.) V. train = Corridor train (Corridor ನೋಡಿ)] ; (ಅಂ. ರ. ಶಾ.) ಇತರ ಕೋಶಗಳೊಡನೆ ಸಂಬಂಧವುಳ್ಳ ಕೋಶ, ನಾಳ : ಸಂಬಂಧಕ (ಮು., V. of the ear ಒಳ ಕಿವಿಯ ಸುತ್ತಿನ ಕೇಂದ್ರ ಕುಹರ : ಕಿವಿಯ ನಡವೆ). **Vestíbular** (ಗು.) ನಡವೆಯ(ಂಥ). **Vestíbulate** (ಗು.) (ಅಂ. ರ. ಶಾ.) ಸಂಬಂಧಕದ(ಂಥ), ಸಂಬಂಧಕವುಳ್ಳ. **Véstibuled** (ಗು.)

Véstige ವೆಸ್ಟಿಜ್ (ನಾ.) ಹೆಜ್ಜೆಯ ಗುರುತು (ಈಗ ರೂಪ. ಮಾತ್ರ) ; ಜಾಡು, ಸುಳಿವು, ಕುರುಹು, ಗುರುತು, ಚಿಹ್ನೆ (Vestiges of an earlier civilization) ; (ಶಿಥಿಲ ಪ್ರ. ; ನಿಷೇಧ ಪ್ರ. ಗಳಲ್ಲಿ ಮಾತ್ರ) ಲವ, ಲೇಶ (Without a v. of clothing. Has not a v. of evidence ಸಾಕ್ಷ್ಯ ಲೇಶವೂ ಇಲ್ಲ); (ಜೀ. ವಿ.) ಪೂರ್ವಿಕರಲ್ಲಿ ಅಥವಾ ಹಿಂದಿನ ಸಂತತಿಗಳಲ್ಲಿ ಚೆನ್ನಾಗಿ ಅಭಿವೃದ್ಧಿಯಾಗಿದ್ದು ಈಗ ಅವನತಿ ಹೊಂದಿ ಯಾವ ಉಪಯೋಗವೂ ಇಲ್ಲದ ಅಂಗ, ಭಾಗ : ಅವಶೇಷ (V. of an ear in earless breeds). **Vestígial** (ಗು.) (ಮು., ಜೀ. ವಿ.) ; **Vestígiary** (ಗು.) ಅವಶೇಷದ.

Véstiture ವೆಸ್ಟಿಚ್ಯು(ಚ)ರ್ (ನಾ.) (ಪ್ರಾ. ವಿ.) ಮೇಲ್ಮೈಯ ಕೂದಲು, ಶಲ್ಕ, ಮೊ. ವು. ಬಟ್ಟೆಬರೆ, ಉಡುಪು.

Véstment ವೆಸ್ಟ್‌ಮೆಂಟ್ (ನಾ.) (ಮು., ಅಧಿಕಾರದ) ವಸ್ತ್ರ, ಉಡುಪು, ಬಟ್ಟೆ ; (ಪಾದ್ರಿ, ಮೊ. ರ) ವಿಹಿತ ವಸ್ತ್ರ ; ಬಲಿಪೀಠದ ವಸ್ತ್ರ.

Véstry ವೆಸ್ಟ್ರಿ (ನಾ.) ಚರ್ಚಿಗೆ ಸೇರಿದಂತೆ ಇರುವ, ಪಾದ್ರಿ, ಮೊ. ರ ಉಡುಪನ್ನು ಇಟ್ಟಿರುವ ಕೋಣೆ, ಕಟ್ಟಡ: ಅರ್ಚಕನ ವಸ್ತ್ರದ ಕೊಟಡಿ, ಚರ್ಚಿನ ವಸ್ತ್ರಾಗಾರ; ಪ್ರಾರ್ಥನ ಮಂದಿರ ; (ಸಮೂಹ ವಾಚಕವಾಗಿ; ಒಂದು ಪ್ಯಾರಿಷ್ ಪ್ರಾಂತದ) ತೆರಿಗೆದಾರರು (=Common, general, ordinary, v.) ; ಈ ತೆರಿಗೆದಾರರ ಪ್ರತಿನಿಧಿಗಳು (=Select v.) ; ತೆರಿಗೆದಾರರ (ಪ್ರತಿನಿಧಿಗಳ)—ಸಭೆ, ಸಭಾ ಮಂದಿರ. V.-clerk ಪ್ಯಾರಿಷ್ ಗುಮಾಸ್ತ. **Véstral** (ಗು.) ; **Véstrydom** (ನಾ.) ಪ್ಯಾರಿಷ್ ಪ್ರತಿನಿಧಿಗಳ—ಆಡಳಿತ, ದುರಾಡಳಿತ. Véstryman ಪ್ಯಾರಿಷ್ ಪ್ರಾಂತದ—ತೆರಿಗೆದಾರ, ಪ್ರತಿನಿಧಿ.

Vésture ವೆಸ್‌ಟ್ಯು(ಚ)ರ್ (ನಾ., ಕ್ರಿ. ಸಕ.) (ಕಾವ್ಯ, ಅಲಂ.) ಉಡುಪು, ಬಟ್ಟೆ, ವಸ್ತ್ರ (—ಹಾಕು) ; ಹೊದಿಕೆ (ಹೊದಿಸು). **Vésturer** (ನಾ.) (ಚರ್ಚಿನ) ವಸ್ತ್ರಾಧಿಕಾರಿ, ವಸ್ತ್ರಾಗಾರದ ಪಾರುಪತ್ಯಗಾರ, ಉಪ ಕೋಶಾಧಿಕಾರಿ.

Vesúvian ವಿಸೂ(ಸ್ಯೂ)ವಿಯನ್ (ಗು., ನಾ.) ವಿಸೂವಿಯಸ್ ಅಗ್ನಿ ಪರ್ವತದ ; ಜ್ವಾಲಾಮುಖಿಯ. (ನಾ.) ಒಂದು ಬಗೆಯ ದಪ್ಪ ತಲೆಯ ಬೆಂಕಿಕಡ್ಡಿ (ಜೋರು ಗಾಳಿಯಲ್ಲಿ ಸಹ ಉರಿಯುವಂಥದು) ; ಮೊದಲು ವಿಸೂವಿಯಸ್ಸಿನಲ್ಲಿ ಕಂಡ, ಕಂದು ಬಣ್ಣದ ಅಥವಾ ಹಸುರು ಬಣ್ಣದ, ಒಂದು ಖನಿಜ : ವಿಸೂವಿಯಸ್ ಖನಿಜ [=**Vesúvianite** (ನಾ.)]

Vet ವೆಟ್ (ನಾ., ಕ್ರಿ. ಸಕ.) (ಬಳ. ಮಾ.) =Veterinary. (ಕ್ರಿ.) (ಪ್ರಾಣಿಗೆ) ಚಿಕಿತ್ಸೆ ಮಾಡು, (ಪ್ರಾಣಿಯನ್ನು) ವೈದ್ಯ ಪರೀಕ್ಷೆ(ಮಾಡು (ರೂಪ. ಸಹ)

Vetch ವೆಚ್ (ನಾ.) ವಿಶೇಷವಾಗಿ ದನಕರುಗಳ ಮೇವಾಗಿ ಉಪಯೋಗಿಸುವ, ಅವರೆಜಾತಿಯ, ಒಂದು ಸಸ್ಯ (Common v. ಒಂದು ಬಗೆಯ ಕಳೆ). **Vétchling** (ನಾ.) ವೆಚಿಯಂಥ ಸಸ್ಯ. **Vétchy** (ಗು.)

Véteran ವೆಟೆರನ್ (ಗು., ನಾ.) ಒಂದು ಕಸಬು, ಮೊ. ರಲ್ಲಿ (ಮು., ಸೈನಿಕ ವೃತ್ತಿಯಲ್ಲಿ) ದೀರ್ಘಕಾಲ ಅನುಭವ ಪಡೆದ(ವನು) : ಪರಿಣತ, ಪಳಗಿದ(ವನು), ಹಳಬ, ಅನುಭವ ವೃದ್ಧ, ಕದೀಮ [(ಮು.) ಕದೀಮ, ನುರಿತ,—ಯೋಧ (Wellington's veterans. A v. golfer)] ; ಅನುಭವಶಾಲಿಗಳ, ಕದೀಮರ (V. troops). **Véteranize** (ಕ್ರಿ.)

Véterinary ವೆಟೆರಿನರಿ (ಗು., ನಾ.) ಪಶುವ್ಯಾಧಿಗಳ (ಚಿಕಿತ್ಸೆಯ), ಪಶುವೈದ್ಯದ (V. science, surgeon, college). (ನಾ.) (ಸಂಕ್ಷಿಪ್ತ: Vet.) ಪಶುವೈದ್ಯ, ಪಶುಚಿಕಿತ್ಸಕ [=**Veterinárian** (ನಾ.)]

Véto ವೀಟೊ (ನಾ., ಬ. ವ. -oes; ಕ್ರಿ. ಸಕ.) (ರಾಜ್ಯವ್ಯವಸ್ಥೆಯಲ್ಲಿ ರಾಜ, ಅಧ್ಯಕ್ಷ, ಪ್ರಾಂತಾಧಿಪತಿ, ಶ್ರೇಷ್ಠ ಶಾಸನ ಸಭೆ, ಮೊ. ಕ್ಕೆ ಇರುವ) ಶಾಸನ ಸಭೆ ಮಾಡಿದ ನಿರ್ಣಯವನ್ನು ಅಥವಾ ಶಾಸನವನ್ನು ನಿರಾಕರಿಸುವ ಅಧಿಕಾರ : ಅನಂಗೀಕಾರದ, ನಿರಾಕರಣೆಯ, —ಅಧಿಕಾರ ; ಅನಂಗೀಕಾರ(ದ ಸಂದೇಶ), ನಿರಾಕರಣೆ(ಯ ನಿರೂಪ) (Suspensory v. ತಾತ್ಕಾಲಿಕ ನಿರಾಕರಣೆ) ; ತಡೆ, ನಿರೋಧ, ನಿಷೇಧ [Interposed his v. ; Put a *or* his v. on the proposal ಆ ಸೂಚನೆಯನ್ನು (ತರದಂತೆ) ನಿಷೇಧಿಸಿದನು]. (ಕ್ರಿ.) ನಿರಾಕರಣೆಯ ಅಧಿಕಾರವನ್ನು—ಚಲಾಯಿಸು, ಪ್ರಯೋಗಿಸು ; ನಿರಾಕರಿಸು, ನಿಷೇಧಿಸು. **Vétoist** (ನಾ.)

Vex ವೆಕ್ಸ್ (ಕ್ರಿ. ಸಕ.) (ಕಾಟ, ಕಿರುಕುಳ, ಮೊ. ರಿಂದ) ರೇಗಿಸು (This would v. a saint) ; ಕಾಡು, ಪೀಡಿಸು (How vexing ! ಎಂಥ ಕಾಟ! ಶನಿ!) ; (ಪ್ರಾಚೀ. ಪ್ರ.) ಕ್ಲೇಶಪಡಿಸು, ನೋಯಿಸು, ತೊಂದರೆ ಪಡಿಸು ; (ಕಾವ್ಯ, ಅಲಂ.) (ಸಮುದ್ರ, ಮೊ. ನ್ನು) ಕ್ಷೋಭೆಗೊಳಿಸು ; (A vexed question ವಿಪರೀತ ಚರ್ಚೆಗಿಟ್ಟುಕೊಂಡಿರುವ—ಪ್ರಶ್ನೆ, ವಿಷಯ). **Vexátion** (ನಾ.) ರೇಗಿಸುವುದು, ಕಾಡುವುದು ; ಕಿರುಕುಳ, ಕಾಟ, ಪೀಡೆ, ಉಪದ್ರವ (Subject to many vexations ಹಲವು ಕಾಟಗಳಿಗೆ ಸಿಕ್ಕಿ) ; ಕ್ಷುದ್ರ ಮೊಕದ್ದಮೆಗಳಿಂದ ಕಾಟಕೊಡುವುದು ; ಕ್ಲೇಶ, ಕೋಪ, ರೇಗು (Conceive my v.). **Vexátious** (ಗು.) ; **Vexátiously** (ಕ್ರಿ. ವಿ.) ; **Vexátiousness** (ನಾ.) ; **Véxedly** (ಕ್ರಿ. ವಿ.) ರೇಗಿ, ತೊಂದರೆಗೊಂಡು, ನೊಂದು, ಕ್ಷುಬ್ಧನಾಗಿ. **Véxingly** (ಕ್ರಿ. ವಿ.)

Vexíllum ವೆಕ್ಸಿಲಂ (ನಾ. ; ಬ. ವ. -lla,—ಲ) ಸೈನಿಕ ಧ್ವಜ, (ಮು.) ಸೈನಿಕ ತುಕಡಿಯ ಬಾವುಟ ; (ಈ ಬಾವುಟದ) ತುಕಡಿಯ ಸೈನಿಕರು; (ಸ. ವಿ.) (ಚಿಟ್ಟೆಯಂಥ ದಲವಲಯವುಳ್ಳ ಹೂವಿನಲ್ಲಿ) ಮೇಲುಗಡೆಯ ದೊಡ್ಡ ಎಸಳು [=**Véxil** (ನಾ.)] ; ಗರಿಯ ಸೆರಗು, ಸೋಗೆ [**Véxillate** (ಗು.) ಸೋಗೆಯುಳ್ಳ] ; (ಕ್ರೈಸ್ತ) ಬಿಷಪ್ಪಿನ ದಂಡದ ಬಾವುಟ, ಮೆರವಣಿಗೆಯಲ್ಲಿ ಹಿಡಿಯುವ ಬಾವುಟ ಅಥವಾ ಶಿಲುಬೆ. **Véxillar(y)** (ಗು.) ಸೈನಿಕ ಧ್ವಜದ ; (ಸ. ವಿ.) ದೊಡ್ಡ ಮೇಲೆಸಳಿನ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Vía (L) ವೈಅ (ನಾ., ಉಪ.) ಮಾರ್ಗ, ಪಥ [**V. Láctea** ಆಕಾಶ ಗಂಗೆ, ಛಾಯಾಪಥ. **V. média** (ಎರಡು ಅತಿಗಳ ನಡುವಣ) ಮಧ್ಯ ಮಾರ್ಗ, ನಡುದಾರಿ]. (ಉಪ.) ಮೂಲಕ, ದ್ವಾರಾ, ಮಾರ್ಗವಾಗಿ [V. London ಲಂಡನ್ ಮೂಲಕ (ವಿಷಯ, ಮೊ. ಗಳನ್ನು ಕುರಿತು ಹಾಸ್ಯ ಪ್ರ. ಸಹ)]

Víable ವೈಅಬ್‌ಲ್ (ಗು.) (ಭ್ರೂಣದ ಅಥವಾ ಹೊಸದಾಗಿ ಹುಟ್ಟಿದ ಮಗುವಿನ ವಿಷಯದಲ್ಲಿ) ಬದುಕಬಲ್ಲ, ಜೀವಶಕ್ತಿಯಿರುವ ; (ಸಸ್ಯ, ಪ್ರಾಣಿ, ಮೊ. ಗಳ ವಿಷಯದಲ್ಲಿ ; ಒಂದು ನಿರ್ದಿಷ್ಟ ವಾಯುಗುಣ, ಮೊ. ಗಳಲ್ಲಿ) ಜೀವಿಸಿರಬಲ್ಲ. **Viabílity** (ನಾ.) ಜೀವನ ಸಾಮರ್ಥ್ಯ.

Víaduct ವೈಅಡಕ್ಟ್ (ನಾ.) (ಕಣಿವೆ, ನದಿ, ಹಳ್ಳ, ಮೊ. ನ್ನು ಹಾಯಲು ರಸ್ತೆಯನ್ನಾಗಲಿ ರೈಲುಮಾರ್ಗವನ್ನಾಗಲಿ ಹಾಕುವುದಕ್ಕೆ ಕಟ್ಟಿದ) (ಕಮಾನು ಸಾಲಿನ) ಸೇತುವೆ ; ಸೇತುವೆ—ರಸ್ತೆ, ರೈಲುಮಾರ್ಗ.

Víal ವೈಅಲ್ (ನಾ.) (ದ್ರವ ಔಷಧದ) ಸಣ್ಣ ಸೀಸೆ, ಬುಡ್ಡಿ, ಕುಪ್ಪಿ. Leyden v. = Leyden jar (Leyden ನೋಡಿ). Pour out vials of wrath ಹಗೆ ಸಾಧಿಸು, ಸೇಡು ತೀರಿಸು ; (ಬಳ. ಮಾ.) ಕೋಪ ಕಾರು, ರೇಗಾಡು. **Viálful** (ನಾ.)

Viámeter ವೈಆ್ಯಮಿಟರ್ (ನಾ.) = Hodometer (ಆ ಪದ ನೋಡಿ)

Víand ವೈಅಂಡ್ (ನಾ.) (ಸಾ., ಬ. ವ. ದಲ್ಲಿ) ಆಹಾರ(ಪದಾರ್ಥ) ; ತಿಂಡಿ.

Viáticum ವೈ(ವಿ)ಆ್ಯಟಿಕಂ (ನಾ.) (ರೋ. ಪ್ರಾ.) (ರಾಜ್ಯಕಾರ್ಯದ ಮೇಲೆ ಪ್ರಯಾಣಮಾಡುವ ಅಧಿಕಾರಿಗೆ ಕೊಡುತ್ತಿದ್ದ) ಸರಬರಾಯಿ, ಭತ್ಯ(ದ ಹಣ) ; ಸಾಯುತ್ತಿರುವವನಿಗೆ ಕೊಡುವ ಪ್ರಭುಭೋಜನ ಸಂಸ್ಕಾರ ; ಪ್ರಯಾಣದ ಬುತ್ತಿ.

Vibráculum ವೈಬ್ರಾ್ಯಕ್ಯುಲಂ (ನಾ.; ಬ. ವ. -la —ಲ) (ತನ್ನ ಚಲನೆಗಳಿಂದ ಆಹಾರವನ್ನು ಹತ್ತಿರಕ್ಕೆ ಬರಮಾಡಿಕೊಳ್ಳುವುದಕ್ಕೆ ಕೆಲವು ಪ್ರಾಣಿಗಳಲ್ಲಿರುವ) ಚಾವಟಿಯಂಥ ಅಂಗ. **Vibrácular** (ಗು.)

Víbrant ವೈಬ್ರಂಟ್ (ಗು.) ಅದಿರಾಡುವ, ಸ್ಪಂದಕ, ಕಂಪನಶೀಲ ; ರೋಮಾಂಚಕರ ; ತುಡಿಯುತ್ತಿರುವ (*With* ಉಪ. ಜೊತೆ) ; ಅನುರಣನವಾಗುವ.

Vibráte ವೈಬ್ರೇಟ್ (ಕ್ರಿ.) (ಅತ್ತಿಂದಿತ್ತ) ತೂಗಾಡು, ಓಲಾಡು, ಆಂದೋಲವಾಗು (ರೂಪ. ಸಹ) ; (ಶಬ್ದ : ಕಿವಿಯಲ್ಲಿ, ನೆನಪಿನಲ್ಲಿ) ಕಂಪನವಾಗು, ಅದಿರಾಡು, ಮೊರೆ, ಮಿಡಿ ; (ಭೌ. ವಿ.) (ಸಂತತವಾಗಿ ವೇಗದಿಂದ) ಕಂಪಿಸು, ಸ್ಪಂದಿಸು ; (ಭಾವೋದ್ರೇಕ, ಮೊ. ಗಳಿಂದ) (ಮೈ) ಜುಮ್ಮೆನ್ನು, ರೋಮಾಂಚವಾಗು ; ಆಂದೋಲವಾಗುವಂತೆ ಮಾಡು, ಅದಿರಿಸು ; (ದೋಲಕದ ವಿಷಯದಲ್ಲಿ) (ಸೆಕಂಡು, ಮೊ. ನ್ನು) ಕಂಪನ ದಿಂದ ಸೂಚಿಸು, ಅಳೆ. **Víbratile** ವೈಬ್ರಟೈ(ಟಿ)ಲ್ (ಗು.) ಆಂದೋಲ, ಕಂಪನ,—ಸಮರ್ಥ. **Vibratílity** —ಟಿ— (ನಾ.); **Vibrátion** (ನಾ.) ತೂಗಾಟ, ಓಲಾಟ, ಅದಿರಾಟ ; ಆಂದೋಲನ, ಕಂಪನ, ಸ್ಪಂದನ [Amplitude of v. (Ample ಕೆಳಗೆ Amplitude ನೋಡಿ). Forced v. (ಅನ್ಯಶಕ್ತಿಯಿಂದ) ಬಲಾತ್ಕಾರದ, ನಿಯಂತ್ರಿತ, —ಕಂಪನ. Free v. ನಿರರ್ಗಳ ಕಂಪನ]. **Vibrátional** (ಗು.); **Víbrative** ವೈಬ್ರಟಿವ್ (ಗು.), **Víbratory** —ಟರಿ (ಗು.) ಕಂಪನದ, ಸ್ಪಂದನದ ; ಆಂದೋಲಕ ; (ಧ್ವನಿಯ ವಿಷಯದಲ್ಲಿ) ಅದಿರುವ, ನಡುಗುವ. **Vibrátiuncle** ವೈಬ್ರೇಷಿಯಂಕ್‌ಲ್ (ನಾ.) ಲಘು, ಸೂಕ್ಷ್ಮ, —ಕಂಪನ, ಸ್ಪಂದನ. **Vibráto** (It.) ವೀಬ್ರಾಟೊ (ನಾ.) (ಹಾಡುವಾಗ ಯಾವುದಾದರೂ ಸ್ವರದಮೇಲಿನ ಒತ್ತನ್ನು ಬದಲಾಯಿಸುತ್ತ ಹೋಗುವುದರಿಂದ ಉಂಟಾಗುವ) ಸ್ವರಕಂಪನ. **Vibrátor** ವೈಬ್ರೇಟರ್ (ನಾ.) ಕಂಪನಮಾಡುವ—ವಸ್ತು, ವ್ಯಕ್ತಿ ; ಆಂದೋಲಕ, ಕಂಪಕ, ಸ್ಪಂದಕ, ಕಂಪಕಾರಿ [(ಮು.) (ಸಂ.) ಆರ್ಗನ್ ವಾದ್ಯದ ಧ್ವನಿ ಕಂಪಕ, ಜೀವಾಳ ; (ಮುದ್ರಣ) (ಭ್ರಾಮಕ ಚಲನವೂ ಕಂಪನ ಚಲನವೂ ಉಳ್ಳ) ಕಂಪಕ ಮಸಿಯುರುಳೆ ; (ವೈ. ಶಾ.) ನೀವುವುದರಲ್ಲಿ ಉಪಯೋಗಿಸುವ ವಿದ್ಯುತ್ತಿನ ಅಥವಾ ಇತರ ಕಂಪನ ಸಲಕರಣೆ : ಕಂಪಕ]. **Víbroscope** ವೈಬ್ರೊಸ್ಕೋಪ್ (ನಾ.) ಕಂಪ(ನ)ದರ್ಶಕ.

Víbratile, Vibrátion, Vibrátiuncle, Vibráto, Víbroscope. Vibrate ನೋಡಿ.

Vibríssae ವೈಬ್ರಿಸೀ (ನಾ., ಬ. ವ.) (ಹಲವು ಸಸ್ತನಿಗಳಲ್ಲಿ) ಬಾಯಿ ಸುತ್ತಲಿನ ಒರಟು ಬಿರುಗೂದಲು ; (ಮನುಷ್ಯರಲ್ಲಿ) ಮೂಗಿನಲ್ಲಿಯ ಕೂದಲು ; (ಕೆಲವು ಪಕ್ಷಿಗಳಲ್ಲಿ) ಕೊಕ್ಕುಗಳ ಸುತ್ತಲಿನ ಬಿರುಗರಿಗಳು.

Vícar ವಿಕರ್ (ನಾ.) ಮತಾದಾಯಗಳು ಕ್ರೈಸ್ತ ಮಂಡಲಿಗೊ ಧರ್ಮ ಸಂಸ್ಥೆಗೊ ಅಥವಾ ಯಾವನಾದರೂ ಲೌಕಿಕನಿಗೊ ಸೇರಿ, ಕೇವಲ ಸಂಬಳದ ಮೇಲಿರುವ, ಕ್ರೈಸ್ತ ಗ್ರಾಮದ ಪುರೋಹಿತ : ಪ್ಯಾರಿಷಿನ ಸಂಬಳದ ಪಾದ್ರಿ, ವಿಕರ್ (Rector, Parish ನೋಡಿ) ; ಪ್ರತಿನಿಧಿ (God's v.). V. of Bray ಅನುಕೂಲಕ್ಕೆ ತಕ್ಕಂತೆ ತನ್ನ ತತ್ತ್ವಗಳನ್ನು ಬದಲಾಯಿಸುವವನು : ಸಮಯಾನುವರ್ತಿ. Clerk, lay, secular, v. (ಗ್ರಾಮದ ಚರ್ಚಿನಲ್ಲಿ) ಆರಾಧನೆಯ ಕೆಲವು ಸ್ತೋತ್ರಗಳನ್ನು ಹಾಡುವ ಅಧಿಕಾರಿ : ಸ್ತೋತ್ರಪಾಠಕ. V. choral (ಚರ್ಚಿನ ಆರಾಧನೆಯಲ್ಲಿ) ಸಹಾಯಕ ಗಾಯಕ ' ಪುರೋಹಿತ (ಅಥವಾ ಲೌಕಿಕ). V. general (ಇಂಗ್ಲೆಂಡಿನ ಚರ್ಚಿನಲ್ಲಿ) (ಆರ್ಚ್)ಬಿಷಪ್ಪಿಗೆ ಚರ್ಚು ಸಂಬಂಧವಾದ ವ್ಯವಹಾರಗಳಲ್ಲಿ ಸಹಾಯಕನಾದ ನ್ಯಾಯಾಧಿಕಾರಿ : (ಆರ್ಚ್)ಬಿಷಪ್ಪಿನ ಪ್ರತಿನಿಧಿ ; (ರೋ. ಕ್ಯಾ.) (ಅಧಿಕಾರವ್ಯಾಪ್ತಿ, ಮೊ. ಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ನೆರವಾಗುವ) ಬಿಷಪ್ಪಿನ ಸಹಾಯಕ. Cardinal v. (ರೋ. ಕ್ಯಾ.) ರೋಮ್ ಪಟ್ಟಣದ ಚರ್ಚು ಪ್ರಾಂತದಲ್ಲಿ ಬಿಷಪ್ಪಾಗಿ ಕೆಲಸಮಾಡುವ ಪೋಪ್ ಗುರುವಿನ ಪ್ರತಿನಿಧಿ. V. apostolic ಸಾಧಾರಣ ಧರ್ಮಾಧಿಕಾರಿ ಪರಂಪರೆ ಏರ್ಪಟ್ಟಿಲ್ಲದ, ಅಥವಾ ಬಿಷಪ್ಪಿನ ಆಡಳಿತ ಪ್ರಾಂತವಾಗಿ ಏರ್ಪಟ್ಟಿಲ್ಲದ ಚರ್ಚುಪ್ರಾಂತಗಳಲ್ಲಿ ರೋ. ಕ್ಯಾ. ಮತದ ಚರ್ಚುಗಳ ಮೇಲ್ವಿಚಾರಣೆ ನೋಡಿಕೊಳ್ಳುವ ಬಿಷಪ್ಪು : ಪೋಪಿನ ಪ್ರತಿನಿಧಿ ಬಿಷಪ್ಪು. V. forane ನಿರ್ದಿಷ್ಟ ಪರಿಮಿತ ಸ್ಥಳೀಯ ಅಧಿಕಾರ ನಿರ್ವಹಣಕ್ಕಾಗಿ ಬಿಷಪ್ಪಿನಿಂದ ನಿಯಮಿತನಾದ ಅಧಿಕಾರಿ : ಪರಿಮಿತಾಧಿಕಾರಿ. V. of (Jesus) Christ ಪೋಪ್ ಗುರು. **Vícarage** ವಿಕರೇಜ್ (ನಾ.) ವಿಕರಿನ—ಮಾನ್ಯ, ವಾಸಗೃಹ. **Vicárial** ವಿ(ವೈ)ಕೇರಿಯಲ್ (ಗು.) ವಿಕರಿನ ; ವಿಕರಾಗಿ ಕೆಲಸಮಾಡುವ ; ಪ್ರತಿನಿಧಿಯ. **Vicáriate** —ಯೆಟ್ (ನಾ.) ವಿಕರಿನ—ಅಧಿಕಾರ, ಪದವಿ, ಪ್ರಾತಿನಿಧ್ಯ ; ಪ್ರತಿನಿಧಿ(ಯಧಿಕಾರದ) ಪ್ರಾಂತ.

Vicárious ವೈ(ವಿ)ಕೇರಿಯಸ್ (ಗು.) ವಹಿಸಿಕೊಟ್ಟ, ಪ್ರತಿನಿಧಿರೂಪದ, ಪ್ರಾತಿನಿಧ್ಯದ (V. authority ಪ್ರತಿನಿಧಿಯಧಿಕಾರ) ; ಇತರರಿಗಾಗಿ, ಒಬ್ಬರ ಪರವಾಗಿ,—ಮಾಡಿದ, ಅನುಭವಿಸಿದ : ಪರಾರ್ಥಕ [V. suffering, work. V. sacrifice (ಪಾಪಿಗಳಿಗಾಗಿ) ಯೇಸು ಕ್ರಿಸ್ತನ ಕ್ರೂಶಾರೋಹಣ]. **Vicáriously** (ಕ್ರಿ. ವಿ.); **Vicáriousness** (ನಾ.)

Vice[1] ವೈಸ್ (ನಾ.) ಪಾಪ ; ದುರಾಚಾರ ; ಅವಗುಣ ; ದುರ್ಗುಣ; ದೋಷ ; ವ್ಯಸನ (Drunkenness is not among his vices ಅವನ ದುರ್ಗುಣಗಳಲ್ಲಿ ಕುಡಿತ ಸೇರಿಲ್ಲ. Has no redeeming v. ಅತಿ ಸೌಶೀಲ್ಯವನ್ನು ಬೆಳಗುವ ಒಂದು ದೋಷವೂ ಇಲ್ಲ); (ಕುದುರೆ, ಮೊ. ಗಳಲ್ಲಿ) ಕೆಟ್ಟ ಚಾಳಿ, ದೋಷ, ತುಂಟಾಟ ; (ಈಗ ವಿರ. ಪ್ರ.) ದೇಹದ ವಿಕಾರ (ಸ್ಥಿತಿ) (Inherited vices of constitution) ; (ನೀತಿ ನಾಟಕದಲ್ಲಿ ಬರುವ) ನಕಲಿ, ವಿದೂಷಕ. **Vícious** ವಿಷಸ್ (ಗು.) ಕೆಟ್ಟ, ಕೆಡುಕಿನ, ದುಷ್ಟ, ಪಾಪಕರ (V. tendencies ದುಷ್ಪ್ರವೃತ್ತಿಗಳು. V. company ದುಷ್ಟ ಸಹವಾಸ) ; (ಕುದುರೆ, ಮೊ. ಗಳ ವಿಷಯದಲ್ಲಿ) ಕೆಟ್ಟ ಚಾಳಿಯ, ದುಷ್ಟ ; (ಭಾಷೆ, ತರ್ಕ, ಮೊ. ಗಳ ವಿಷಯದಲ್ಲಿ) ದೂಷಿತ, ಅಶುದ್ಧ, ಅಸಾಧು [A v. style. A notoriously v. manuscript ವಿಪರೀತ ಅಶುದ್ಧ ಹಸ್ತಪ್ರತಿ. V. circle ಅನ್ಯೋನ್ಯಾಶ್ರಯ ದೋಷ, ವಿಷಮಚಕ್ರ (Circle ನೋಡಿ). V. union (ಶಸ್ತ್ರಚಿಕಿತ್ಸೆ) ಮುರಿದ ಎಲುಬುಗಳ ಕೊನೆಯನ್ನು ತಪ್ಪಾಗಿ ಸೇರಿಸುವುದು : ತಪ್ಪು—ಸೇರಿಕೆ, ಜೋಡಣೆ; ಇದರಿಂದಾಗುವ ವಿಕಾರ] ; ದುಷ್ಟ (ಸ್ವಭಾವದ), ದುರ್ಮನಸ್ಸಿನ, ಕುತ್ಸಿತ (V. dog, mood. remarks). **Víciously** (ಕ್ರಿ. ವಿ.) ; **Víciousness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Vice[2] ವೈಸ್ (ನಾ., ಕ್ರಿ. ಸಕ.) ತಿರುಪನ್ನು ತಿರುಗಿಸುವುದರಿಂದ ಅದರ ದವಡೆಗಳು ಸರಿದು ಮಧ್ಯೆ ಇಟ್ಟ ವಸ್ತುವನ್ನು ಬಿಗಿಯಾಗಿ ಹಿಡಿದಿಡುವ ಸಲಕರಣೆ: ತಿರುಡಿ, ಹಿಡಿಕೆ [Bench v. (ಬಡಗಿಯ) ಬೆಂಚಿನ ತಿರುಡಿ. Grips like a v. ತಿರುಡಿಯಹಾಗೆ ಹಿಡಿದುಕೊಳ್ಳುತ್ತದೆ]. (ಕ್ರಿ.) ತಿರುಡಿಯಲ್ಲಿ ಬಿಗಿಸು, ಬಂಧಿಸು (ರೂಪ. ಸಹ)

Vice[3] ವೈಸ್ (ನಾ.) (ಬಳ. ಮಾ.) = Vice-president, etc. (Vice- ನೋಡಿ).

Vice[4] ವೈಸ್ (ಉಪ.) —ರ ಸ್ಥಳದಲ್ಲಿ, ಪ್ರತಿಯಾಗಿ, ಬದಲು (Gazetted as Captain v. Captain Jones promoted)

Vice- ವೈಸ್— (ಸ. ಪೂ. ಪ.) (ಪ್ರತಿನಿಧಿ, ಬದಲು, ತರುವಾಯದ ಕೆಳ ದರ್ಜೆಯವನು, ವೊ. ಅರ್ಥಗಳನ್ನು ಸೂಚಿಸುತ್ತದೆ): ಉಪ—. **-ádmiral** ಮೂರನೆಯ ದರ್ಜೆಯ ಅಡ್ಮಿರಲ್: ಉಪ ಅಡ್ಮಿರಲ್, ಉಪ ನೌಬಲಾಧಿಪತಿ. **-àdmiralty** ಉಪ ನೌಬಲಾಧಿಪತ್ಯ (V.-admiralty courts ಬ್ರಿಟಿಷ್ ನೆಲಸುನಾಡುಗಳಲ್ಲಿ ನೌಬಲಾಧಿಪತಿಯ ಅಧಿಕಾರ ವ್ಯಾಪ್ತಿಯಿರುವ ನ್ಯಾಯಸ್ಥಾನಗಳು: ಉಪ ನೌಬಲಾಧಿಪತ್ಯದ ನ್ಯಾಯಸ್ಥಾನಗಳು). **-ágent** ಉಪನಿಯೋಗಿ. **-chaírman(ship)** ಉಪಾಧ್ಯಕ್ಷ(ತೆ). **-chámberlain** ಗೃಹಮಹತ್ತರನ ಪ್ರತಿನಿಧಿ, ಉಪ ಗೃಹಮಹತ್ತರ. **-cháncellor** (ವಿಶ್ವವಿದ್ಯಾನಿಲಯದ) ಉಪಾಧ್ಯಕ್ಷ. (ನ್ಯಾ. ಶಾ.; ಪ್ರಾಚೀ. ಪ್ರ.) ಶ್ರೇಷ್ಠ ನ್ಯಾಯಸ್ಥಾನದ ಧರ್ಮಸೂಕ್ಷ್ಮ ನ್ಯಾಯ ಶಾಖೆಯ ನ್ಯಾಯಾಧೀಶ; (ರೋ. ಕ್ಯಾ.) ಪೋಪ್ ಗುರುವಿನ ಆಜ್ಞೆಗಳು, ವೊ. ನ್ನು ನಿರ್ವಹಿಸುವ ಕಚೇರಿಯ ಮುಖ್ಯಸ್ಥನಾದ ಧರ್ಮಾಧ್ಯಕ್ಷ. **-cháncellorship** (ನಾ.); **-cónsul(ship)** ಉಪ ರಾಯಭಾರ(ತನ). **-deán** ಉಪ ಶಿಷ್ಟಿ ಪ್ರವರ್ತಕ; ಉಪಾಧ್ಯಕ್ಷ. **-góvernor** ಉಪ ಪ್ರಾಂತಾಧಿಪತಿ, ಉಪಾಧ್ಯಕ್ಷ. **-kíng** = Viceroy. **-présìdent(ship)** ಉಪಾಧ್ಯಕ್ಷ(ತೆ). **-présidency** (ನಾ.); **-príncipal** ಉಪಾಧ್ಯಕ್ಷ. **-queén** (ವಿರ. ಪ್ರ.) ರಾಜ ಪ್ರತಿನಿಧಿಯಾಗಿ ಕೆಲಸ ನೋಡುವವಳು; ರಾಜಪ್ರತಿನಿಧಿಯ ಹೆಂಡತಿ.. **-régent** ಉಪರಾಜ ಪ್ರತಿನಿಧಿ. **-reine** (—ರೇನ್) ರಾಜಪ್ರತಿನಿಧಿಯ ಹೆಂಡತಿ. **-shériff** ಉಪ ಷೆರಿಫ್. **-treásurer(ship)** ಉಪ ಕೋಶಾಧಿಕಾರಿ(ತ್ವ). **-wárden** ಉಪಾಧ್ಯಕ್ಷ, ಉಪ ಪಾಲಕ.

Vicegérent ವೈಸ್‌ಜೆ(ಜಿಯ)ರೆಂಟ್ (ಗು., ನಾ.) ಪ್ರತಿನಿಧಿ(ಯಾದ) (Regarded the Pope as God's v.). **Vicegérency** (ನಾ.)

Vicénnial ವೈಸೆನಿಯಲ್ (ಗು.) ೨೦ ವರ್ಷಕ್ಕೊಮ್ಮೆ—ನಡೆಯುವ, ಸಂಭವಿಸುವ; ೨೦ ವರ್ಷ ಇರುವ.

Víceroy ವೈಸ್‌ರಾಯ್ (ನಾ.) ನೆಲಸುನಾಡು, ಪ್ರಾಂತ, ವೊ. ಗಳಲ್ಲಿ ರಾಜಾಧಿಕಾರವನ್ನು ಚಲಾಯಿಸುವ ಆಡಳಿತಗಾರ: ರಾಜಪ್ರತಿನಿಧಿ. **Viceregal** (ಗು.), **Viceróyal** (ಗು.) ರಾಜಪ್ರತಿನಿಧಿಯ. **Viceróyalty** (ನಾ.); **Víceroyship** (ನಾ.) ರಾಜಪ್ರತಿನಿಧಿತ್ವ.

Více vérsa (L) ವೈಸೆ(ಸಿ) ವರ್ಸ (ಕ್ರಿ. ವಿ.) ತಿರುಗಿಸಿಕೊಂಡು, ಪ್ರತಿಕ್ರಮದಲ್ಲಿ, ವಿಪರ್ಯಯವಾಗಿ (The man blames his wife and v. v. ಗಂಡ ಹೆಂಡತಿಯನ್ನು ಬಯ್ಯುತ್ತಾನೆ, ತಿರುಗಿಸಿಕೊಂಡು ಹೆಂಡತಿ ಗಂಡನನ್ನು ಬಯ್ಯುತ್ತಾಳೆ)

Vichy (water) ವಿಷಿ (ವಾಟರ್) (ನಾ.) ಒಂದು ಖನಿಜ ಜಲ (ಫ್ರಾನ್ಸಿನಲ್ಲಿಯ Vichy ಎಂಬ ಪ್ರಾಂತದ ಹೆಸರಿನಿಂದ)

Vícinage ವಿಸಿನೆ(ನಿ)ಜ್ (ನಾ.) ಸುತ್ತಮುತ್ತ, ಅಕ್ಕಪಕ್ಕ (ಜನ), ನೆರೆ(ಹೊರೆ), ಪರಿಸರ. **Vicínity** (ನಾ.) ನೆರೆಹೊರೆ(ಯ ಪ್ರಾಂತ), ಸುತ್ತಮುತ್ತ(ಲ ಪ್ರದೇಶ); ಪರಿಸರ; ಹತ್ತಿರ, ಸಾಮೀಪ್ಯ (*To* ಉಪ. ದೊಡನೆ) (This v. to the capital ರಾಜಧಾನಿಗಿರುವ ಈ ಸಾಮೀಪ್ಯ); ನಿಕಟ ಸಂಬಂಧ (*To* ಉಪ. ದೊಡನೆ); (In the v. of —ರ ನೆರೆಯಲ್ಲಿ, ಸಮೀಪದಲ್ಲಿ)

Vícious. Vice[1] ನೋಡಿ.

Vicíssitude ವೈ(ವಿ)ಸಿಸಿಟ್ಯೂಡ್ (ನಾ.) (ಸ್ಥಿತಿಯಲ್ಲಿ, ಮು., ಅದೃಷ್ಟದಲ್ಲಿ) ಬದಲಾವಣೆ, ವ್ಯತ್ಯಾಸ, ಹೆಚ್ಚುಕಡಮೆಗಳು, ವ್ಯತ್ಯಯ (The v. of the seasons, of war. A life marked by vicissitudes); (ಪ್ರಾಚೀ. ಪ್ರ., ಕಾವ್ಯ) ಕ್ರಮವಾದ ಬದಲಾವಣೆ, ವಿಪರ್ಯಯ, ಪರ್ಯಾಯ (The v. of night & day). **Vicissitúdinous** (ಗು.)

Víctim ವಿಕ್ಟಿಂ (ನಾ.) ಮತವಿಧಿಯಲ್ಲಿ ಬಲಿಕೊಟ್ಟ ಜೀವಂತ ಪ್ರಾಣಿ: ಯಜ್ಞಪಶು, ಬಲಿ(ಯಾದ ಪ್ರಾಣಿ), ಆಹುತಿ(ಯಾದದ್ದು) (ರೂಪ. ಸಹ) (Fell a v. to his own avarice ತನ್ನ ದುರಾಶೆಗೇ ತಾನು ಬಲಿಯಾದನು. The victims of disease ವ್ಯಾಧಿಗೆ ಆಹುತಿಯಾದವರು); (ಹಿಂಸ್ರ ಜಂತು ಹಿಡಿಯುವ) ಎರೆ, ಆಹಾರಪ್ರಾಣಿ (Held the v. in his talons); ಮೋಸಕ್ಕೆ—ಒಳಗಾದವನು, ತುತ್ತಾದವನು (The victims of the confidence trick ನಂಬಿಕೆ ಮೋಸಕ್ಕೆ ಆಹುತಿಯಾದವರು). **Víctimize** (ಕ್ರಿ. ಸಕ.) (ವ್ಯಕ್ತಿ, ವೊ. ನ್ನು ತನ್ನ ದುರಾಶೆ, ವೊ. ಗಳಿಗೆ) ಬಲಿ, ಆಹುತಿ,—ತೆಗೆದುಕೊ; (ಮುಷ್ಕರದ ಮುಖಂಡ, ವೊ. ರನ್ನು) ಬಲಿಹಾಕು, ಶಿಕ್ಷಿಸು. **Victimizátion** (ನಾ.)

Víctor ವಿಕ್ಟರ್ (ನಾ.) (ಅಲಂ.) ಗೆದ್ದವನು, ವಿಜಯಿ, (ವಿ)ಜೇತ [(ವಿಶೇಷಣ ಪ್ರ.): V. troops ಗೆದ್ದ ದಳಗಳು. V. sword ವಿಜಯ(ಶಾಲಿ) ಖಡ್ಗ]. **Víctress** (ನಾ., ಸ್ತ್ರೀ.); **Victórious** ವಿಕ್ಟೋ(ಅ)ರಿಯಸ್ (ಗು.) ಗೆದ್ದ, ಗೆಲ್ಲುವ, (ವಿ)ಜಯಶಾಲಿಯಾದ, ವಿಜಯದ (V. day). **Victóriously** (ಕ್ರಿ. ವಿ.); **Victóriousness** (ನಾ.); **Víctory** (ನಾ.) ಗೆಲವು, (ವಿ)ಜಯ [(ರೂಪ.) Gained a *or* the v. over his passions ಇಂದ್ರಿಯಗಳನ್ನು ಜಯಿಸಿದನು. Cadmean *or* Pyrrhic v. (Pyrrhic[2] ನೋಡಿ). Moral v. (Moral ನೋಡಿ)]; ಜಯದೇವತೆ, ಜಯಲಕ್ಷ್ಮಿ(ಯ ಪ್ರತಿಮೆ) (Winged v.)

Victória ವಿಕ್ಟೋ(ಅ)ರಿಯ (ನಾ.) ತಗ್ಗೂ ಹಗುರವೂ ಆದ, ನಾಲ್ಕು ಚಕ್ರಗಳುಳ್ಳ, ಇಬ್ಬರು ಕುಳಿತುಕೊಳ್ಳಬಹುದಾದ, ಸಾರಥಿಗಾಗಿ ಎತ್ತರಿಸಿದ ಪೀಠವುಳ್ಳ, ಮಡಿಚು ಚಾವಣಿಯುಳ್ಳ ಒಂದು ಬಗೆಯ ಬಂಡಿ: ಸಾರೋಟು ಬಂಡಿ; ಹಲವು ಬಗೆಯ ರಾಕ್ಷಸಾಕಾರದ ನೈದಿಲೆ; ಹಲವು ಬಗೆಯ ಸಾಕಿದ ಪಾರಿವಾಳ. V. cross (ಸಂಕ್ಷಿಪ್ತ: V. C. ವೀ. ಸೀ.) ೧೮೫೬ರಲ್ಲಿ ವಿಕ್ಟೋರಿಯಾ ರಾಣಿ ರೂಢಿಗೆ ತಂದ, ಧೈರ್ಯ ಸಾಹಸಗಳಿಗಾಗಿ ಕೊಡುವ, ಪ್ರಶಸ್ತಿ(ಪದಕ): ವಿಕ್ಟೋರಿಯಾ ಪ್ರಶಸ್ತಿ(ಪದಕ). **Victórian** (ಗು., ನಾ.) (೧೮೩೭ರಿಂದ ೧೯೦೧ರ ವರೆಗೆ ಬ್ರಿಟನ್ನಿನಲ್ಲಿ ಆಳಿದ) ವಿಕ್ಟೋರಿಯಾ ರಾಣಿಯ (ಕಾಲದ, ಕಾಲದವನು) [Early-V. (Early ನೋಡಿ). V. order ೧೮೯೬ರಲ್ಲಿ ವಿಕ್ಟೋರಿಯಾ ರಾಣಿ ರೂಢಿಗೆ ತಂದ, ರಾಜಸೇವೆಗಾಗಿ ಕೊಡುವ, ಪ್ರಶಸ್ತಿ]. **Victoríne** ವಿಕ್ಟೋರೀನ್ (ನಾ.) ಹೆಂಗಸರು ಹಾಕಿಕೊಳ್ಳುವ ಉದ್ದವೂ ಕಿರಿದೂ ಆದ ಕೊನೆಗಳುಳ್ಳ, ತುಪ್ಪುಳು ಚರ್ಮದ, ಭುಜವಸ್ತ್ರ (ವಿಕ್ಟೋರಿಯಾ ರಾಣಿಯ ಹೆಸರಿನಿಂದ ಇರಬಹುದು)

Victórious, Víctory. Victor ನೋಡಿ.

Víctual ವಿಟ್‌ಲ್ (ನಾ., ಕ್ರಿ.) (ಸಾ., ಬ. ವ. ದಲ್ಲಿ) ಆಹಾರ (—ಪದಾರ್ಥ, ಸಾಮಗ್ರಿ). (ಕ್ರಿ.) —ಒದಗಿಸು, ಪಡೆ, ತಿನ್ನು. **Víctualler** (ನಾ.) ಆಹಾರ—ಒದಗಿಸುವವನು, ಸರಬರಾಯಿಗಾರ (Licensed v. ಮದ್ಯಸಾರ, ವೊ. ನ್ನು ಮಾರಲು ಸನ್ನದುಪಡೆದ ವ್ಯಾಪಾರಿ); ಇತರ ಹಡಗುಗಳಿಗೆ ಆಹಾರ(ಪದಾರ್ಥ) ಒಯ್ಯುವ ಹಡಗು: ಆಹಾರ ಸರಬರಾಯಿ ಹಡಗು. **Víctualless** (ಗು.); **Víctualling** (ನಾ.) (ಕ್ರಿಯಾರ್ಥಗಳಲ್ಲಿ). V.-bill ಬಂಧನದಲ್ಲಿದ್ದ ಸರಕನ್ನು ಹಡಗಿಗೆ ತುಂಬಬಹುದೆಂದು ಕೊಟ್ಟ ಸುಂಕ ಕಚೇರಿಯ ಅಪ್ಪಣೆ ಚೀಟಿ: ಸರಬರಾಯಿ, ಸರಕು, —ಪರವಾನಗಿ. V.-note (ನೌಕೆ) ಹಡಗಿನ ಉಗ್ರಾಣದ ಯಜಮಾನನು ನಾವಿಕನಿಗೆ ಆಹಾರ (ಸಾಮಗ್ರಿ) ಕೊಡಬಹುದೆಂದು ಕೊಟ್ಟ ಅಪ್ಪಣೆ: ಆಹಾರಚೀಟಿ. V.-office ನೌಕಾಬಲಕ್ಕೆ ಆಹಾರಸಾಮಗ್ರಿ ಒದಗಿಸುವ ಕಚೇರಿ: ಆಹಾರ ಸರಬರಾಯಿ ಕಚೇರಿ. V.-yard (ನೌಕಾ ಬಲದ) ಆಹಾರ ಸಾಮಗ್ರಿ ಕೋಠಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Vicúgna, -una ವಿಕೂನ್ಯ (ನಾ.) ಅದರ ಮಾಂಸಕ್ಕಾಗಿಯೂ ತುಪ್ಪಟಕ್ಕಾಗಿಯೂ ಜನರು ಬೇಟೆಯಾಡುವ, ಒಂಟೆ ಜಾತಿಯ, ದ. ಅಮೆರಿಕದ ಒಂದು ಪ್ರಾಣಿ: ವಿಕೂನ್ಯ. V. wool (ವ್ಯಾಪಾರದ ಮಾತು) ಹತ್ತಿ ಮತ್ತು ಉಣ್ಣೆಯ ಮಿಶ್ರ; ವಿಕೂನ್ಯ ಉಣ್ಣೆ.

Víde (L) ವೈಡಿ(ɾ) (ಕ್ರಿ., ವಿಧಿರೂಪ) (ಸಂಕ್ಷಿಪ್ತ: v.) ನೋಡು(ಡಿ). V. infra, supra ಕೆಳಗೆ, ಮೇಲೆ, ನೋಡಿ. Quod v. (Quod[2] ನೋಡಿ). V. the press passim ಪ್ರತಿಯೊಂದು, ಎಲ್ಲಾ, —ವೃತ್ತಪತ್ರಿಕೆಯನ್ನೂ ನೋಡಿ.

Vidélicet (L) ವೈ(ವಿ)ಡೆ(ಡೀ)ಲಸೆಟ್ (ಕ್ರಿ. ವಿ.) [ಸಂಕ್ಷಿಪ್ತ: viz. (ಉಚ್ಚಾರ)=Namely ನೇಮ್ಲಿ] ಎಂದರೆ, ಏನೆಂದರೆ, ಯಾವುದೆಂದರೆ.

Vídette. Vedette ನೋಡಿ.

Vídimus (L) ವೈಡಿಮಸ್ (ನಾ., ಬ. ವ. -uses) (ಲೆಕ್ಕ, ಮೊ. ಗಳ) ತನಿಖೆ, ಶೋಧನೆ; (ದಸ್ತೈವಜು, ಮೊ. ಗಳ) ಸಾರಾಂಶ, ಗೋಪ್ವಾರೆ; ಸರಿಯಾಗಿದೆಯೆಂದು ದೃಢೀಕರಿಸಿದ ಪತ್ರದ ನಕಲು.

Vie ವೈ (ಕ್ರಿ. ಅಕ., ವರ್ತಮಾನ ಕೃ. Vying ವೈಇಂಗ್) ಮೇಲುಗೈಯಾಗಲು ಹೋರಾಡು; ಹುರುಡಿಸು, ಸ್ಪರ್ಧಿಸು (*With* another *in* quality, *in* doing)

Viennése ವಿಯೆನೀಸ್ (ಗು., ನಾ.; ಬ. ವ. ಅದೇ) ವಿಯೆನ್ನದ(ವನು)

Vi et ármis (L) ವೈ ಎಟ್ ಆರ್ಮಿಸ್ (ಕ್ರಿ. ವಿ.) (ನ್ಯಾ. ಶಾ.) ಸಶಸ್ತ್ರ ಬಲಾತ್ಕಾರದಿಂದ, ಬಲಪ್ರಯೋಗದಿಂದ, ಘಾತಿಸುವುದರಿಂದ.

View ವ್ಯೂ (ನಾ.) ನೋಡುವುದು, ವೀಕ್ಷಣ, ಅವಲೋಕನ; (ನ್ಯಾ. ಶಾ.) (ನ್ಯಾಯದರ್ಶಿಗಳು ಮಾಡುವ, ಒಂದು ದಾವೆಗೆ ಸಂಬಂಧಪಟ್ಟ ಸ್ಥಳ, ಆಸ್ತಿ, ಮೊ. ಗಳ ಅಥವಾ ಶವದ) ಪರೀಕ್ಷೆ, ಪರಿಶೀಲನೆ; ನೋಟ, ದೃಷ್ಟಿ, ದರ್ಶನ (Came in v. of the castle ಕೋಟೆ ಮನೆಯನ್ನು, ಕೋಟೆ ಮನೆಗೆ, —ಕಂಡನು. Passed from our v. ನಮ್ಮ ದೃಷ್ಟಿಯಿಂದ ಮರೆಯಾಯಿತು); ದೃಶ್ಯ (A superb v. ಭವ್ಯ ದೃಶ್ಯ); ಮನೋಗ್ರಹಣ, ಸಮೀಕ್ಷಣ (Take a general v. of the subject ವಿಷಯವನ್ನು ಸಾಮಾನ್ಯವಾಗಿ ಸಮೀಕ್ಷಿಸು); ಭಾವ, ಅಭಿಪ್ರಾಯ [Takes a different v. ಬೇರೆ ಅಭಿಪ್ರಾಯಪಡುತ್ತಾನೆ. Extreme views (ರಾಜಕೀಯ, ಮೊ. ಗಳಲ್ಲಿ) ತೀವ್ರಾಭಿಪ್ರಾಯಗಳು, ಅತಿಗಾಮಿ ಅಭಿಪ್ರಾಯಗಳು]; ಉದ್ದೇಶ, ಆಶಯ, ಎಣಿಕೆ (Will this meet your views ಇದು ನಿನ್ನ ಉದ್ದೇಶಕ್ಕೆ ಸರಿಬರುತ್ತದೆಯೊ? Cat has views upon the larder ಬೆಕ್ಕು ಉಗ್ರಾಣದ ಗೂಡಿನಮೇಲೆ ಕಣ್ಣಿಟ್ಟಿದೆ, ಎಣಿಕೆ ಹಾಕಿದೆ). In v. of ದೃಷ್ಟಿಯಿಂದ, ನೋಡಿದರೆ, ಗಮನಿಸಿದರೆ, ಪರಿಗಣಿಸಿದರೆ; (ಗ್ರಾಮ್ಯ) ಉದ್ದೇಶದಿಂದ. On v. ನೋಡುವುದಕ್ಕಾಗಿ, ಪರೀಕ್ಷೆಗಾಗಿ. With a v. to ಉದ್ದೇಶಕ್ಕಾಗಿ, ಸಾಧನವಾಗಿ [=With the v. of, (ಗ್ರಾಮ್ಯ) with a v. of (With a v. to extending *or* extend our trade ನಮ್ಮ ವ್ಯಾಪಾರವನ್ನು ವಿಸ್ತರಿಸುವ ಉದ್ದೇಶದಿಂದ)]; (ಪಡೆಯುವ—) ದೃಷ್ಟಿಯಿಂದ, ಆಸೆಯಿಂದ; (ಮೇಲೆ) ಕಣ್ಣಿಟ್ಟು (Said this with a v. to the vacant secretaryship ತೆರಪಾಗಿರುವ ಕಾರ್ಯದರ್ಶಿಯ ಸ್ಥಾನಕ್ಕೆ ಏಟುಹಾಕಿ ಇದನ್ನು ಹೇಳಿದನು); (ಗ್ರಾಮ್ಯ) ನೋಡಿದರೆ, ಗಮನಿಸಿದರೆ. To the v. (ಎಲ್ಲರಿಗೂ) ಕಾಣುವಂತೆ, ಪ್ರಕಟವಾಗಿ, ಬಹಿರಂಗವಾಗಿ. Bird's-eye v. (Bird ನೋಡಿ). Dissolving views (Dissolve ನೋಡಿ). Have in v. ಉದ್ದೇಶ, ಗುರಿ, —ಇಟ್ಟಿರು; (ತೀರ್ಮಾನಿಸುವಾಗ) ಗಮನದಲ್ಲಿ, ದೃಷ್ಟಿಯಲ್ಲಿ, —ಇಟ್ಟುಕೊಂಡಿರು. Point of v. (Point ನೋಡಿ). Private v. (ಚಿತ್ರ ಪ್ರದರ್ಶನದ ವಿಷಯದಲ್ಲಿ) (ಸ್ನೇಹಿತರು, ವಿಮರ್ಶಕರು, ಮೊ.) ಆಪ್ತವರ್ಗಕ್ಕೆ ಮಾತ್ರ ಪ್ರದರ್ಶನ; ಖಾಸಗಿ ಪ್ರದರ್ಶನ. **V.-finder** (ಛಾಯಾಗ್ರಾಹಕದಲ್ಲಿ) ಚಿತ್ರವ್ಯಾಪ್ತಿಕ್ಷೇತ್ರವನ್ನು ತೋರಿಸುವ ಸಲಕರಣೆ: ದೃಷ್ಟಿ, ವ್ಯಾಪ್ತಿ, —ದರ್ಶಕ. **. halloó** (ಮರಸಿನಿಂದ ನರಿ ಹೊರಹೊರಟಾಗ ಬೇಟೆಗಾರನು ಕೂಗುವ ಕೂಗು): ಹೋ! ಕಂಡಿತು. **Viewless** (ಗು.) (ಕಾವ್ಯ, ಅಲಂ.) ಕಾಣದ, ಅದೃಶ್ಯ. **viewy** (ಗು.) (ಬಳ. ಮಾ.) ವಿಚಿತ್ರಾಭಿಪ್ರಾಯದ; ಭಾವನಾಮಯ; (ಅಸಂ.) ಆಕರ್ಷಕ. **Viewiness** (ನಾ.)

View (ಕ್ರಿ. ಸಕ.) ನೋಡು, ವೀಕ್ಷಿಸು, ಅವಲೋಕಿಸು, ಪರಿಶೀಲಿಸು, ಅಭಿಪ್ರಾಯಪಡು (May be viewed in different ways. He *or* the proposal is viewed unfavourably by the authorities). **Viewable** (ಗು.)

Vígil ವಿಜಿಲ್ (ನಾ.) (ಸಾ., ನಿದ್ದೆಮಾಡಬೇಕಾಗಿರುವ ಸಮಯದಲ್ಲಿ) ಎಚ್ಚರ(ವಾಗಿರುವುದು) (Keep v. ಎಚ್ಚರವಾಗಿರು); (ಸಾ., ಬ. ವ. ದಲ್ಲಿ) (ರಾತ್ರಿ) ಜಾಗರಣೆ; ಹಬ್ಬದ ಮುನ್ನಿರುಳು (ಮು., ಉಪವಾಸದ ಹಿಂದಿನ ರಾತ್ರಿ). **Vígilance** (ನಾ.) ಎಚ್ಚರ(ವಾಗಿರುವುದು); ಎಚ್ಚತ್ತಿರುವುದು; ಎಚ್ಚರಿಕೆ, ಹುಷಾರು, ಜಾಗರೂಕತೆ; (ವೈ. ಶಾ.) ನಿದ್ದೆ ಬಾರದ ಸ್ಥಿತಿ, ನಿರ್ನಿದ್ರತೆ. V. committee ಜನರಲ್ಲಿ ವ್ಯವಸ್ಥೆ ತಪ್ಪಿದಾಗ ಅಥವಾ ಯಾವುದಾದರೊಂದು ಸಾಮಾಜಿಕ ಅಪರಾಧ ಪ್ರಬಲಿಸಿರುವಾಗ ನ್ಯಾಯ ಪರಿಪಾಲನೆಗಾಗಿಯೂ ಶಾಂತಿ ರಕ್ಷಣೆಗಾಗಿಯೂ ಜನರು ತಾವೇ ಏರ್ಪಡಿಸಿಕೊಂಡ ವ್ಯವಸ್ಥಾ ಸಮಿತಿ: ಎಚ್ಚರಿಕೆ ಸಮಿತಿ. **Vígilant** (ಗು.); **Vígilantly** (ಕ್ರಿ. ವಿ.)

Vignétte ವಿನ್ಯೆ(ನೆ)ಟ್ (ನಾ., ಕ್ರಿ. ಸಕ.) (ವಾ. ಶಾ.) ಎಲೆ, ಬಳ್ಳಿ, ಕುಡಿ, ಮೊ. ವನ್ನು ಬಿಡಿಸಿರುವ ಅಲಂಕಾರ: ಪತ್ರಾಲಂಕಾರ, ಲತಾಲಂಕಾರ; ಹಸ್ತಪ್ರತಿಗಳಲ್ಲಿ ದೊಡ್ಡಕ್ಷರದ ಸುತ್ತ ಮಾಡುವ ಇಂತಹ ಅಲಂಕಾರ; ಮು., ಪುಸ್ತಕದ ಮುಖಪತ್ರದಮೇಲೆ, ಸುತ್ತು ಗಟ್ಟನ ಗೆರೆ ಹಾಕದೆ, ಅಚ್ಚು ಕೆತ್ತಿರುವ ಚಿತ್ರ: ಮುಖಪತ್ರದ ಚಿತ್ರ; ಹಿನ್ನೆಲೆ ಕ್ರಮೇಣ ಛಾಯೆಗುಂದುತ್ತ ಹೋಗುವ, ತಲೆ ಮತ್ತು ಭುಜಗಳು ಮಾತ್ರ ಕಾಣುವ ಛಾಯಾಚಿತ್ರ: ಮೇಲಾಯದ ಚಿತ್ರ; (ರೂಪ.) (ಶೀಲ) ಸ್ವಭಾವ—ಚಿತ್ರ, ನಿರೂಪಣೆ. (ಕ್ರಿ.) ಮೇಲಾಯದ ಚಿತ್ರ, ವಿನ್ಯೆಟ್ ಚಿತ್ರ, —ಬರೆ, ತೆಗೆ; (ಛಾಯಾಚಿತ್ರದಲ್ಲಿ) ವಿನ್ಯೆಟ್ ರೀತಿಯಲ್ಲಿ ಕ್ರಮೇಣ ಛಾಯೆಗುಂದಿಸು, ವಿನ್ಯೆಟ್ ಛಾಯೆಕೊಡು. **Vignétter** (ನಾ.); **Vignéttist** (ನಾ.)

Vigoróso (It.) ವಿಗೊರೋಸೊ (ಕ್ರಿ. ವಿ.) ಜೋರಾಗಿ, ಹುರುಪಿನಿಂದ.

Vígour ವಿಗರ್ (ನಾ.) ಚಟುವಟಿಕೆಯಿಂದ ಕೂಡಿದ ದೇಹಶಕ್ತಿ; ಪ್ರಾಯವೇರುತ್ತಿರುವ ದೇಹಸ್ಥಿತಿ; ಆರೋಗ್ಯದ ಬೆಳವಣಿಗೆ; ಕಸುವು, ಜೋರು, ಸತ್ತ್ವ, ವೀರ್ಯ, ಚೈತನ್ಯ, ಹುರುಪು, ಉತ್ಸಾಹ, ಓಜಸ್ಸು (ಭಾಷಣದಲ್ಲಿ, ಆಲೋಚನೆಯಲ್ಲಿ, ಶೈಲಿಯಲ್ಲಿ ಸಹ). **Vígourless** (ಗು.); **Vígorous** (ಗು.) ಕಸುವುಳ್ಳ, ಹುರುಪಿನ, ವೀರ್ಯವತ್ತಾದ. **Vígorously** (ಕ್ರಿ. ವಿ.); **Vígorousness** (ನಾ.)

Víking ವೈ(ವೀ)ಕಿಂಗ್ (ನಾ.) (೮-೧೦ನೆಯ ಶತಮಾನಗಳಲ್ಲಿದ್ದ, ಯೂರೋಪಿನ ಉತ್ತರ ಪ್ರದೇಶಗಳ) ಕಡಲುಗಳ್ಳ. **Víkingism** (ನಾ.)

Viláyet ವಿಲಾಯೆಟ್ (ನಾ.) (ತುರ್ಕೀ ಸಾಮ್ರಾಜ್ಯದಲ್ಲಿ) ಆಡಳಿತ ಪ್ರಾಂತ.

Vile ವೈಲ್ (ಗು.) ಕೆಲಸಕ್ಕೆ ಬಾರದ, ನಿಕೃಷ್ಟ, ಗಣ್ಯವಲ್ಲದ (The vilest & commonest stones); ಕೆಟ್ಟ, ಅಧಮ, ನೀಚ, ತುಚ್ಛ, ಭ್ರಷ್ಟ, ಕುತ್ಸಿತ (Sycophant's v. practices). (ಬಳ. ಮಾ.) ಅತಿಕೆಟ್ಟ, ಅಸಹ್ಯವಾದ (A v. pen ದರಿದ್ರ ಲೇಖನಿ). **Vílely** (ಕ್ರಿ. ವಿ.); **Víleness** (ನಾ.); **Vílify** ವಿಲಿಫೈ (ಕ್ರಿ. ಸಕ.) ಹೆಸರು ಕೆಡಿಸು, ಅವಮಾನಮಾಡು, ಹಳಿ, ದೂಷಿಸು; (ವಿರ. ಪ್ರ.) ಹೀನಯಿಸು, ನಿಕೃಷ್ಟಮಾಡು. **Vilificátion** (ನಾ.); **Vílifier** (ನಾ.)

Vílipend ವಿಲಿಪೆಂಡ್ (ಕ್ರಿ. ಸಕ.) (ಸಾಹಿತ್ಯ ಪ್ರ.) ತಿರಸ್ಕಾರದಿಂದ ಕಾಣು, ಕಡೆಗಣಿಸು, ಜರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Vílla ವಿಲ (ನಾ.) (ಪಟ್ಟಣವಾಸಿಯಾದ ಶ್ರೀಮಂತನ) ಹಳ್ಳಿಯ ಮನೆ, ತೋಟದ ಮನೆ, ಆರಾಮಗೃಹ; ಉಪನಗರದಲ್ಲಿಯ (ಮಧ್ಯಮ ದರ್ಜೆಯವನ) ಬಿಡಿಮನೆ (ಒತ್ತು ಮನೆಗಳಿಲ್ಲದ್ದು). **Vílladom** (ನಾ.) ಉಪನಗರದ ಸಮಾಜ.

Víllage ವಿಲೆ(ಲ)ಜ್ (ನಾ.) ಹಳ್ಳಿ, ಗ್ರಾಮ. **Víllager** (ನಾ.) ಹಳ್ಳಿಗ, ಗ್ರಾಮಸ್ಥ.

Víllain ವಿಲನ್ (ನಾ., ಗು.) ಅತಿ ದುರುಳ, ಬಹು ದುಷ್ಟ, ಶುದ್ಧ ನೀಚ, ಖಳ, ಪಾತಕಿ, ಧೂರ್ತ, ಶಠ [(ಬಳ. ಮಾ.) (ವಿನೋದ ಪ್ರ.) You little v. ಅಯ್ಯೋ ಧೂರ್ತಮರಿ]; (ಪ್ರಾಚೀ. ಪ್ರ.) ಹಳ್ಳಿ ಗಮಾರ, ಒಡ್ಡ; (ಚರಿತ್ರ) ಊಳಿಗಮಾನ್ಯದ ಹಿಡುವಳಿದಾರ(ನ), ಜೀತದವನು(ನ) [=**Víllein** (ಗು., ನಾ.)]. (ಗು.) ದುರಾತ್ಮನ, ಕೆಟ್ಟ, ನಿಕೃಷ್ಟ (V. services). **Vílla(i)nage** (ನಾ.), **Vílle(i)nage** (ನಾ.) ಊಳಿಗ ಮಾನ್ಯ(ದ ಹಿಡುವಳಿ); ಜೀತ, ದಾಸ್ಯ, ಅಡಿಯಾಳುತನ. **Víllainous** (ಗು.) ದೌರಾತ್ಮ್ಯದ, ನೀಚ, ಬಹು ದುಷ್ಟ, ಪಾತಕದ; (ಬಳ. ಮಾ.) ಅತಿ ಕೆಟ್ಟ, ಅಸಹ್ಯವಾದ, ದರಿದ್ರ (A v. style, hotel). **Víllainously** (ಕ್ರಿ. ವಿ.); **Víllainousness** (ನಾ.); **Víllainy** (ನಾ.) ದೌರಾತ್ಮ್ಯ.

Villanélle (F) ವಿಲನೆಲ್ (ನಾ.) ಎರಡೇ ಅಂತ್ಯ ಪ್ರಾಸದಲ್ಲಿ ನಿರ್ವಹಿಸಿದ ೧೯ ಸಾಲಿನ (ಮು., ಫ್ರೆಂಚ್) ಪದ್ಯ.

Villeggiatúra (It.) ವಿಲೆಜಾ(ಜ)ಟೂರ (ನಾ.) ಹಳ್ಳಿಯಲ್ಲಿ ನೆಲಸುವುದು; ಗ್ರಾಮವಾಸ.

Víllein, Vílle(i)nage. Villain ನೋಡಿ.

Víllus ವಿಲಸ್ (ನಾ.; ಬ. ವ. -lli —ಲೈ) (ಅಂ. ರ. ಶಾ.) ಯಾವುದಾದರೂ ಒಳಚರ್ಮದ ಮೇಲಿನ (ಮು., ಕರುಳಿನ ಲೋಳೆ ಪೊರೆಯ) ಕೂದಲನಂಥ ಸಣ್ಣ ಚಾಚು(ಗಳಲ್ಲೊಂದು): ರೋಮ; (ಸ. ವಿ.) (ಬ. ವ. ದಲ್ಲಿ) (ಹೂವು, ಹಣ್ಣು, ಮೊ. ಗಳ ಮೇಲಿನ) ಉದ್ದವಾದ ಮೃದುಗೂದಲು. **Vílliform** (ಗು.) ಲೋಮಾಕಾರದ. **Vílloid** (ಗು.) ರೋಮ ಸದೃಶ. **Víllose, Víllous** (ಗು.) ರೋಮಶ. **Villósity** (ನಾ.)

Vim ವಿಮ್ (ನಾ.) (ಬಳ. ಮಾ.) = Vigour (ಆ ಪದ ನೋಡಿ)

Víminal ವಿಮಿನಲ್ (ಗು.) (ಸ. ವಿ.) ಎಳೆಯ ರೆಂಬೆಗಳ, ಕೊನರುಗಳ; —ಗಳನ್ನು ಬಿಡುವ; ಕೊನರೊಡೆಯುವ. **Vimíneous** (ಗು.)

Vináceous ವೈ(ವಿ)ನೇಷಸ್ (ಗು.) ದ್ರಾಕ್ಷಿಯ, ದ್ರಾಕ್ಷಾ ಮದ್ಯದ; ದ್ರಾಕ್ಷಾ ಮದ್ಯದಂಥ ಕೆಂಪಿನ.

Vinaigrétte ವಿನೇಗ್ರೆಟ್ (ನಾ.) ಮೂಸಿ ನೋಡುವುದಕ್ಕಾಗಿ ಸುವಾಸನಾದ್ರವ್ಯವನ್ನು (ಅಥವಾ ಘಾಟು ಲವಣಗಳನ್ನು) ತುಂಬಿಟ್ಟುಕೊಂಡಿರುವ ಸಣ್ಣ ಅಲಂಕಾರ ಸೀಸೆ: ಗಂಧ ಕೂಪಿ; ಮೂಸು(ಪು) ಸೀಸೆ.

Víncible ವಿನ್ಸಿಬ್‌ಲ್ (ಗು.) (ವಿರ. ಪ್ರ.) ಸೋಲಿಸಬಹುದಾದ, ಜೇಯ; (ಅಡ್ಡಿ, ಮೊ. ಗಳ ವಿಷಯದಲ್ಲಿ) ಗೆಲ್ಲಬಹುದಾದ, ದಾಟಬಹುದಾದ, ನಿವಾರ್ಯ.

Vínculum ವಿಂಕ್ಯುಲಮ್ (ನಾ.; ಬ. ವ. -la —ಲ) ಬಂಧನ, ಕಟ್ಟು; (ಬೀ. ಗ.) ಹಿಂದು ಮುಂದಿನ ಪದಗಳೊಡನೆ ಮಾಡಬೇಕಾದ ಗಣಿತ ಕ್ರಿಯೆಗಳಿಗೆ ಒಂದು ಸಮುದಾಯವಾಗಿ ಪರಿಗಣಿಸಬೇಕೆಂದು ತೋರಿಸುವುದಕ್ಕಾಗಿ ಮೇಲುಗಡೆ ಎಳೆಯುವ ಗೆರೆ: ಬಂಧ, ಸಮುದಾಯ, —ರೇಖೆ (ಉದಾ., $\overline{a+b}\times c=ac+bc$; $a-\overline{b+c}=a-b-c$); (ಮುದ್ರಣ) ಸಂಯೋಜಕ ಚಿಹ್ನೆ ({) (=Brace); (ಅಂ. ರ. ಶಾ.) ನಿರೋಧಕ ಅಸ್ಥಿರಜ್ಜು (=Fraenum)

Víndicate ವಿಂಡಿಕೇಟ್ (ಕ್ರಿ. ಸಕ.) (ವ್ಯಕ್ತಿ, ಧರ್ಮ, ಮೊ. ಗಳ ಹಿತವನ್ನು) ಜಯಪ್ರದವಾಗಿ—ಎತ್ತಿಹಿಡಿ, ಸಂರಕ್ಷಿಸು; (ಹೇಳಿಕೆ, ಶೀಲ, ಸತ್ಯತೆ, ಮೊ. ನ್ನು) ಸ್ಥಾಪಿಸು, ಸಮರ್ಥಿಸು; ನಿರ್ದೋಷೀಕರಿಸು, ಅಪವಾದ ಕಳೆ (I must v. Sterne from a charge of plagiarism). **Víndicable** (ಗು.) ಸ್ಥಾಪಿಸಬಹುದಾದ, ಸಮರ್ಥನೀಯ. **Vindicabílity** (ನಾ.); **Víndicátion** (ನಾ.) ಎತ್ತಿಹಿಡಿಯುವುದು; ಸಮರ್ಥನೆ; ನಿರ್ದೋಷೀಕರಣ, ಅಪವಾದ ನಿವಾರಣೆ. **Víndicative** (ಗು.); **Víndicator** (ನಾ.); **Víndicatress** (ನಾ., ಸ್ತ್ರೀ.); **Víndicatory** (ಗು.) ಸಮರ್ಥಕ; (ಕಾನೂನಿನ ವಿಷಯದಲ್ಲಿ) ಪ್ರತೀಕಾರಕ, ಶಿಕ್ಷಾರೂಪದ. **Vindíctive** (ಗು.) ಸೇಡಿನ; ಪ್ರತಿವೈರ, ಛಲ, —ಸಾಧಿಸುವ; ಪ್ರತೀಕಾರಕ [V. (*or* exemplary) damages (ವಾದಿಗೆ ಪರಿಹಾರವಾಗಿ ಮಾತ್ರವಲ್ಲದೆ ಇತರರಿಗೆ ಎಚ್ಚರಿಕೆಯಾಗಿರುವಂತೆ, ಶಿಕ್ಷಾರೂಪವಾಗಿ ಪ್ರತಿವಾದಿಗೆ ವಿಧಿಸಿದ) ಎಚ್ಚರಿಕೆಯ ಶಿಕ್ಷಾದಂಡ]. **Vindíctively** (ಕ್ರಿ. ವಿ.); **Vindíctiveness** (ನಾ.)

Vindíctive. Vindicate ನೋಡಿ.

Vine ವೈನ್ (ನಾ.) ದ್ರಾಕ್ಷಿ ಬಳ್ಳಿ [Under one's v. & fig-tree (Fig[1] ನೋಡಿ)]; ಬಳ್ಳಿ, ಹಂಬು (Melon-v. ಕಲ್ಲಂಗಡಿ ಬಳ್ಳಿ); V.-borer ದ್ರಾಕ್ಷಿ ಬಳ್ಳಿಯನ್ನು ತಿಂದುಹಾಕುವ ಹಲವು ಬಗೆಯ ಹುಳು: ದ್ರಾಕ್ಷಿ—ಕೀಟ, ಕೊರಕ. V.-disease ಗಿಡಹೇನು, ಮೊ. ಗಳಿಂದ ದ್ರಾಕ್ಷಿ ಬಳ್ಳಿಗೆ ತಗುಲುವ ರೋಗ: ದ್ರಾಕ್ಷಿ (ಬಳ್ಳಿ) ರೋಗ. **Vínery** (ನಾ.) ದ್ರಾಕ್ಷಿ ಬೆಳಸುವ ಗಾಜಿನ ಮನೆ; ದ್ರಾಕ್ಷಾಗಾರ; ದ್ರಾಕ್ಷಿ ಪೊದೆ. **Víneyard** ವಿನ್ಯರ್ಡ್ (ನಾ.) ದ್ರಾಕ್ಷಿ ತೋಟ, ದ್ರಾಕ್ಷಾರಾಮ.

Vínegar ವಿನೆಗರ್ (ನಾ., ಕ್ರಿ. ಸಕ.) ದ್ರಾಕ್ಷಾ ಮದ್ಯ, ಸೇಬು ಮದ್ಯ, ಮೊ. ಗಳಿಂದ ತೆಗೆದ ಒಂದು ಹುಳಿನೀರು: ದ್ರಾಕ್ಷಿ, ಸೇಬು, ಕಡಲೆ, —ಹುಳಿ; [(ರೂಪ.; ಅನೇಕ ವೇಳೆ ವಿಶೇಷಣ ಪ್ರ.) A v. countenance ಸಿಡುಕು, ಹುಳಿ, —ಮೋರೆ. Aromatic v. ದ್ರಾವಣದಲ್ಲಿ ಕರ್ಪೂರ, ಮೊ. ನ್ನೊಳಕೊಂಡ ಹುಳಿ: ಸುವಾಸನೆ ಹುಳಿ. Toilet v. ಮುಖ ತೊಳೆಯುವ ನೀರು, ಮೊ. ಕ್ಕೆ ಬೆರಸಲು ಉಪಯೋಗಿಸುವ ಸುವಾಸನೆ ಹುಳಿ: ಪ್ರಸಾಧನಾಮ್ಲ. Mother of v. (Mother[2] ನೋಡಿ). V.-eel ದ್ರಾಕ್ಷಿಹುಳಿ ರಸದಲ್ಲಿಯ ಸೂಕ್ಷ್ಮಪ್ರಾಣಿ. V. plant ಹುದುಗು ಹುಟ್ಟಿಸುವ ಒಂದು ಸೂಕ್ಷ್ಮದರ್ಶಕೀಯ ಶಿಲೀಂಧ್ರ: ಹುಳಿಯಣಬೆ]. (ಕ್ರಿ.) ದ್ರಾಕ್ಷಿಹುಳಿ—ಬೆರಸು, ಹಾಕು; ಹುಳಿ—ಮಾಡು, ಹಿಂಡು (ರೂಪ. ಸಹ). **Vínegarish** (ಗು.); **Vínegary** (ಗು.)

Vínery, Víneyard. Vine ನೋಡಿ.

Vini- ವಿನಿ— (ಸ. ಪೂ. ಪ.) ದ್ರಾಕ್ಷಾ ಮದ್ಯ—. **-culture** ದ್ರಾಕ್ಷಾ ಕೃಷಿ. **-culturist** (ನಾ.); **-ferous** (ಪ್ರಾಂತದ ವಿಷಯದಲ್ಲಿ) ದ್ರಾಕ್ಷಾ ಮದ್ಯ ತಯಾರಿಸುವ. **-facteur** ದ್ರಾಕ್ಷಾ ಮದ್ಯ (ತಯಾರಿಸುವ) ಸಲಕರಣೆ. **-ficator** (ದ್ರಾಕ್ಷಾ ಮದ್ಯ ತಯಾರಿಕೆಯಲ್ಲಿ) ಮದ್ಯಸಾರದ ಹಬೆಯನ್ನು ಸಂಗ್ರಹಿಸುವ ಸಲಕರಣೆ: ಮದ್ಯಸಾರ ಸಂಗ್ರಾಹಕ.

Vinómeter ವಿ(ವೈ)ನಾಮಿಟರ್ (ನಾ.) ದ್ರಾಕ್ಷಾ ಮದ್ಯದಲ್ಲಿರುವ ಮದ್ಯಸಾರವನ್ನು ಅಳೆಯುವ ಸಲಕರಣೆ: (ದ್ರಾಕ್ಷಾ) ಮದ್ಯಸಾರ ಮಾಪಕ.

Vin ordinaire (F) ವ್ಯಾನ್ ಆರ್ಡಿನೇರ್ (ನಾ.) (ಸಾ., ಫ್ರಾನ್ಸಿನಲ್ಲಿ ಕುಡಿಯುವ, ನೀರು ಬೆರಸಿದ, ಕೆಂಪಾದ) ಅಗ್ಗದ ಮದ್ಯ.

Vínous ವೈನಸ್ (ಗು.) (ದ್ರಾಕ್ಷಾ) ಮದ್ಯದ, (ದ್ರಾಕ್ಷಾ) ಮದ್ಯದಂಥ, (ದ್ರಾಕ್ಷಾ) ಮದ್ಯದಿಂದುಂಟಾದ (V. flavour, fermentation, eloquence). **Vinósity** (ನಾ.) (ದ್ರಾಕ್ಷಾ) ಮದ್ಯತೆ; (ದ್ರಾಕ್ಷಾ) ಮದ್ಯ ರುಚಿ; (ದ್ರಾಕ್ಷಾ) ಮದ್ಯ ಪ್ರಿಯತೆ.

Vint ವಿಂಟ್ (ಕ್ರಿ. ಸಕ.) (ಮದ್ಯ) ತಯಾರಿಸು. **Víntage** (ನಾ.) ದ್ರಾಕ್ಷಿ—ಸುಗ್ಗಿ, ಕಟಾವು; ಸುಗ್ಗಿಯ ದ್ರಾಕ್ಷಿ ಬೆಳೆ(ಯಿಂದ ಮಾಡಿದ ಮದ್ಯ); ಸುಗ್ಗಿ ಮದ್ಯ; (ಕಾವ್ಯ, ಅಲಂ.) ದ್ರಾಕ್ಷಾ ಮದ್ಯ. V. vines ಪ್ರಸಿದ್ಧ ಸುಗ್ಗಿಯ ಮದ್ಯಗಳು. **Víntager** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದ್ರಾಕ್ಷಿ ಕೊಯ್ಲುಗಾರ. **Víntner** ವಿಂಟ್ನರ್ (ನಾ.) (ದ್ರಾಕ್ಷಾ) ಮದ್ಯ ವ್ಯಾಪಾರಿ. **Víntnery** (ನಾ.) (ದ್ರಾಕ್ಷಾ) ಮದ್ಯದ— ಅಂಗಡಿ, ಗಡಂಗು.

Víntage, Víntager, Víntner. **Vint** ನೋಡಿ.

Víol ವೈಅಲ್ (ನಾ.) (ಮಧ್ಯ ಯುಗದಲ್ಲಿ ಬಳಕೆಯಲ್ಲಿದ್ದ) ಸಾ., ಆರು ತಂತಿಗಳ ಪಿಟೀಲಿನಂಥ ಒಂದು ವಾದ್ಯ; (ಆಧುನಿಕ ಪ್ರ.) ದೊಡ್ಡ ಪಿಟೀಲು (= Violoncello). V. class of instruments ಪಿಟೀಲು ವಾದ್ಯವರ್ಗ. **Vióla**[1] ವೈ(ವಿ)ಓಲ (ನಾ.) ದೊಡ್ಡ ತೆರನ ಪಿಟೀಲು; (ಚರಿತ್ರ) = Viol. **Viólist** (ನಾ.) —ವಾದ್ಯಗಾರ.

Víola[1]. **Viol** ನೋಡಿ.

Víola[2] ವೈಓಲ (ನಾ.) ಪುರುಷರತ್ನ ಸಸ್ಯ. **Violáceous** ವೈಓಲೇಷಸ್ (ಗು.) ನೇರಿಳೆ ಬಣ್ಣದ; ವಯೊಲೆಟ್ ಪುಷ್ಪವರ್ಗದ; ಪುರುಷ ರತ್ನ ಸಸ್ಯ ಜಾತಿಯ.

Violáceous. **Viola**[2] ನೋಡಿ.

Víolate ವೈಓಲೇಟ್ (ಕ್ರಿ. ಸಕ.) (ಪ್ರಮಾಣ, ಕರಾರು, ನ್ಯಾಯ, ಷರತ್ತು, ಆತ್ಮಸಾಕ್ಷಿ, ಮೊ. ನ್ನು) ಭಂಗಪಡಿಸು, ಮುರಿ, ಉಲ್ಲಂಘಿಸು; (ಪವಿತ್ರಸ್ಥಳ, ಮೊ. ನ್ನು) ಕೆಡಿಸು, ದೂಷಿತಮಾಡು, ಅಪವಿತ್ರಮಾಡು; (ಒಬ್ಬನ ಏಕಾಂತ, ಮೊ. ಕ್ಕೆ) ಭಂಗಪಡಿಸು, ಅತಿಕ್ರಮ ಪ್ರವೇಶಮಾಡು, ಬಲಾತ್ಕಾರ ಪ್ರವೇಶಮಾಡು; (ಹೆಂಗಸನ್ನು) ಕೆಡಿಸು, ಸತೀತ್ವ ಭಂಗ ಮಾಡು. **Víolable** (ಗು.); **Violátion** (ನಾ.); **Violátor** (ನಾ.)

Víolence ವೈಓಲೆನ್ಸ್ (ನಾ.) ಬಲಾತ್ಕಾರ, ಬಲಪ್ರಯೋಗ, ಜೋರು, ಜುಲುಂ (Was compelled to use v.); ಹಿಂಸೆ; ಬಿರುಸು, ರಭಸ, ಪ್ರಚಂಡತೆ; ಅಪಾಯ, ಹಾನಿ, ಭಂಗ (Did v. to his feelings ಅವನ ಮನಸ್ಸಿಗೆ ಹಿಂಸೆಯುಂಟುಮಾಡಿತು. Did v. to our principles ನಮ್ಮ ತತ್ತ್ವಗಳಿಗೆ ಹಾನಿ, ಭಂಗ, ತಂದಿತು); (ನ್ಯಾ. ಶಾ.) ಅಕ್ರಮ ಬಲಪ್ರಯೋಗ(ದ ಬೆದರಿಕೆ). **Víolent** (ಗು.) ಜೋರಾದ, ಬಿರುಸಾದ, ಪ್ರಚಂಡ, ರಭಸದ (V. storm, collision, blows); ಬಲಾತ್ಕಾರದ, ಬಲಪ್ರಯೋಗದ, ಹಿಂಸಾತ್ಮಕ, ಜುಲುಮಿನ (Laid v. hands on him ಅವನಮೇಲೆ ಅಕ್ರಮವಾಗಿ ಕೈಮಾಡಿದನು, ಜುಲುಂ ನಡಸಿದನು. V. death ಸ್ವಾಭಾವಿಕವಾಗಲ್ಲದೆ ಬಲಪ್ರಯೋಗದಿಂದ ಅಥವಾ ವಿಷಪ್ರಯೋಗದಿಂದ ಆದ ಮರಣ: ಘೋರ ಮರಣ, ದುರ್ಮರಣ); ತೀವ್ರ, ತೀಕ್ಷ್ಣ, ಉಗ್ರ, ಆವೇಶದ (V. contrast, dislike, shock, temper); (ನ್ಯಾ. ಶಾ.) V. presumption ಬಹುಮಟ್ಟಿಗೆ ನಿರ್ಧಾರಕ ಸಾಕ್ಷ್ಯದ ಆಧಾರದಮೇಲೆ ಕಟ್ಟಿದ ಊಹೆ: ಬಲವತ್ತರವಾದ ಊಹೆ. **Víolently** (ಕ್ರಿ. ವಿ.)

Víolet ವೈಓಲೆಟ್ (ನಾ., ಗು.) ನೀಲಿ, ಊದಾ, ಬಿಳುಪು, ಮೊ. ಬಣ್ಣದ ಹೂವು ಬಿಡುವ ಹಲವು ಬಗೆಯ ಸಸ್ಯ: ಪುರುಷರತ್ನ ಸಸ್ಯ; (ಸಪ್ತ ವರ್ಣಪಟಲದಲ್ಲಿ) ನೇರಿಳೆ ಬಣ್ಣ(ದ), ನೀಲಲೋಹಿತ; ಹಲವು ಬಗೆಯ ನೇರಿಳೆ ಬಣ್ಣದ ಚಿಟ್ಟೆ. V.-powder 'ಐರಿಸ್' ಪರಿಮಳ ಕಟ್ಟಿದ ಅಲಂಕಾರ ಪುಡಿ; ಪ್ರಸಾಧನ ಚೂರ್ಣ. V.-wood ಸುಗಂಧ ದಾರುವುಳ್ಳ ಹಲವು ಬಗೆಯ ಮರ. **Violéscent** (ಗು.) ನೇರಿಳೆ— ಛಾಯೆಯ.

Violín[1] ವೈಓಲಿನ್ (ನಾ.) (ನಾಲ್ಕು ತಂತಿಗಳ, ಆಧುನಿಕ ಕಾಲದ) ಪಿಟೀಲು; ಪಿಟೀಲು ಬಾರಿಸುವವನು (= **Violínist**) [First, second, v. (ವಾದ್ಯಮೇಳದಲ್ಲಿ) ಮೊದಲನೆಯ, ಎರಡನೆಯ, ಪಿಟೀಲವನು]. Keyed v. ಸಣ್ಣ ಕಮಾನುಗಳಿಂದ ತಂತಿಗಳನ್ನು ಮಿಟುಕುವ ಏರ್ಪಾಡುಳ್ಳ, ಪಿಯಾನೋವಿನಂಥ ವಾದ್ಯ: ಪಿಯಾನೋ ಪಿಟೀಲು.

Violín[2], **-ine** ವೈಓಲಿನ್, —ಲೈನ್ (ನಾ.) ಪುರುಷರತ್ನ ಸಸ್ಯದ ಹೂವಿನಲ್ಲಿಯ ವಮನಕಾರಕ ಪದಾರ್ಥ.

Víolist. **Viol** ನೋಡಿ.

Violoncéllo ವೈ(ವಿ)ಓಲೊಂಚೆಲೊ (ನಾ.) (ಸಾ., ಸಂಕ್ಷಿಪ್ತ ಪ್ರ. 'cello ಚೆಲೊ) ಮೊಣಕಾಲುಗಳ ನಡುವೆ ಇಟ್ಟುಕೊಂಡು ಬಾರಿಸುವ ಒಂದು ಬಗೆಯ ಪಿಟೀಲು: ದೊಡ್ಡ ಪಿಟೀಲು. **Violoncéllist** (ನಾ.)

Víper ವೈಪರ್ (ನಾ.) ಹಲವು ಬಗೆಯ ವಿಷದ ಹಾವು; ಮಂಡಲದ ಹಾವು [Common v. (ಇಂಗ್ಲೆಂಡಿನಲ್ಲಿಯ) ಆ್ಯಡರ್ ಎಂಬ ವಿಷಸರ್ಪ]; (ರೂಪ.) ಸರ್ಪದಂಥವನು, ವಿಷಕಾರುವವನು ದ್ರೋಹಿ. **Víperiform** (ಗು.) ಮಂಡಲದ ಹಾವಿನಾಕಾರದ. **Víperine** (ಗು.) ಹಾವಿನಂಥ; ವಿಷಮಯ. **Víperish, Víperous** (ಗು.) (ರೂಪ.) ವಿಷಮಯ. **Víperoid** (ಗು.) ವಿಷಸರ್ಪ ಸದೃಶ.

Virágo ವಿರ್ಯಾ(ರೇ)ಗೊ (ನಾ.) ಬಜಾರಿ, ಗಂಡುಬೀರಿ, ತಾಟಕಿತ್ತಿ; (ಪ್ರಾಚೀ. ಪ್ರ.) ಪೌರುಷ ಸ್ತ್ರೀ, ಗಂಡುಬಲದ ಹೆಂಗಸು.

Viréscence ವಿರೆಸೆನ್ಸ್ (ನಾ.) ಹಸುರು, ಪಚ್ಚೆ, ಹರಿತ್ವ; (ಸ. ವಿ.) (ಸಾ., ಸ್ವಲ್ಪ ಹೊಳಪು ಬಣ್ಣವಿರಬೇಕಾದ ಎಲೆ, ಎಸಳು, ಮೊ. ಗಳಲ್ಲಿ) ಅತಿ ಹಸುರು, ಹರಿದತಿರೇಕ. **Viréscent** (ಗು.) ಹಸುರು— ಛಾಯೆಯ, ತಿರುಗುವ.

Vírgate[1] ವರ್ಗೆಟ್ (ಗು.) (ಪ್ರಕೃತಿ ಚರಿತ್ರ) ತೆಳ್ಳಗೆ ನೆಟ್ಟಗಿರುವ; ಸರಳಿನಂತಿರುವ.

Vírgate[2] ವರ್ಗೆಟ್ (ನಾ.) (ಚರಿತ್ರ) (ಅನಿಷ್ಕೃಷ್ಟವಾದ) ಒಂದು ಭೂಮಿಯ ಅಳತೆ.

Virgílian ವರ್ಜಿಲಿಯನ್ (ಗು.) (ಕ್ರಿ. ಪೂ. ೧ರಲ್ಲಿ ಗತಿಸಿದ ರೋಮನ್ ಕವಿ) ವರ್ಜಿಲನ (ರೀತಿಯ)

Vírgin ವರ್ಜಿನ್ (ನಾ., ಗು.) ಪುರುಷಸಂಭೋಗವನ್ನರಿಯದ ಹೆಣ್ಣು, ಅಕ್ಷತ ಯೋನಿ; ಕನ್ಯೆ, ಕನ್ನಿಕೆ; ಕನ್ಯಾವ್ರತ ಸಂಸ್ಥೆಯ ಸದಸ್ಯೆ; [The V. (Mary), The Blessed V. (Mary) (ಸಂಕ್ಷಿಪ್ತ: B.V.M.) (ಯೇಸು ಕ್ರಿಸ್ತನ ತಾಯಿ) ಮೇರಿಕನ್ನಿಕೆ]; ಮೇರಿ ಕನ್ನಿಕೆಯ— ಚಿತ್ರ, ಪ್ರತಿಮೆ; ಗರ್ಭಾಧಾನವಿಲ್ಲದೆಯೆ ಮೊಟ್ಟೆಯಿಡುವ ಹೆಣ್ಣು ಹುಳು; ಕನ್ಯಾ ಕೀಟ; (ಖ. ವಿ.) ಕನ್ಯಾ (ರಾಶಿ); (V.'s-bower ಒಂದು ಬಗೆಯ ಬಳ್ಳಿ). (ಗು.) ಕನ್ಯಾವಸ್ಥೆಯ, ಕನ್ಯೋಚಿತ (V. modesty); ಪರಿಶುದ್ಧ, ನಿಷ್ಕಲಂಕ, ನಿರ್ದುಷ್ಟ; ಉಪಯೋಗಿಸಿಲ್ಲದ, ಕೃಷಿಮಾಡಿಲ್ಲದ, ಅಕೃಷ್ಟ (V. soil ಒಂದುಸಲವೂ ಉತ್ತಿಲ್ಲದ, ಬೆಳೆಯಿಟ್ಟಿಲ್ಲದ, ಭೂಮಿ. V. clay ಸುಟ್ಟಿರದ, ಹಸಿ, —ಜೇಡಿ); (ಹುಳುವಿನ ವಿಷಯದಲ್ಲಿ) ಗರ್ಭಾಧಾನವಿಲ್ಲದೆಯೆ ಮೊಟ್ಟೆಯಿಡುವ; [V. comb ಜೇನುತುಪ್ಪಕ್ಕಾಗಿ ಮಾತ್ರ ಒಮ್ಮೆ ಬಳಸಿದ್ದು, ಸಂತಾನೋತ್ಪತ್ತಿಗಾಗಿ ಎಂದೂ ಬಳಸಿರದ ಜೇನುಹುಟ್ಟು; ಕನ್ನೆಹುಟ್ಟು. V. honey ಕನ್ನೆ ಹುಟ್ಟಿಯ ಜೇನುತುಪ್ಪ; (ಶಾಖದಿಂದಾಗಲಿ ಒತ್ತಡದಿಂದಾಗಲಿ ಅಲ್ಲದೆ) ಹುಟ್ಟಿಯಿಂದ ತಾನಾಗಿ ಸುರಿದ ಜೇನುತುಪ್ಪ. V. queen ಗರ್ಭಾಧಾನವಿಲ್ಲದ ಹೆಣ್ಣು ಜೇನುಹುಳು: ಕನ್ನೆ ಹುಳು. ಎಲಿಸಬೆತ್ ರಾಣಿ (ಸಂಕ್ಷಿಪ್ತ: V.Q.)]. **Vírginal** (ಗು., ನಾ.) (ಪ್ರಾಚೀ. ಪ್ರ.) ಕನ್ಯೆಯ, ಕನ್ಯೋಚಿತ. (ನಾ.) (ಚರಿತ್ರ) ಚೌಕಾಕಾರದ, ಪಿಯಾನೋವಿನಂಥ, ಒಂದು ಬಗೆಯ ತಂತೀವಾದ್ಯ (= Virginals, pair of virginals). **Vírginally** (ಕ್ರಿ. ವಿ.); **Vírginhood** (ನಾ.); **Virgínity** (ನಾ.)

Vírginia ವರ್ಜಿನಿಯ (ನಾ.) ಅಮೆ. ಸಂ. ಗಳ ಒಂದು ಸಂಸ್ಥಾನ; ವರ್ಜಿನಿಯದ ಹೊಗೆಸೊಪ್ಪು. V. creeper ಅಲಂಕಾರಕ್ಕಾಗಿ ಬೆಳಸುವ, ದಾರುಮಯವಾದ, ಒಂದು ಬಗೆಯ ಬಳ್ಳಿ: ವರ್ಜಿನಿಯ ಬಳ್ಳಿ. **Virgínian** (ಗು., ನಾ.) ವರ್ಜಿನಿಯದ(ವನು)

Virgínibus puerísque (L) ವರ್ಜಿನಿಬಸ್ ಪ್ಯೂಅರಿಸ್‌ಕ್ವಿ(ಕ್ವೆ) (ಪದ ಪುಂಜ): ಬಾಲಕ ಬಾಲಕಿಯರಿಗಾಗಿ (ಉದ್ದಿಷ್ಟವಾದ)

Vírgo ವರ್ಗೊ (ನಾ.) (ಖ. ವಿ.) ಕನ್ಯಾ (ರಾಶಿ). V. intacta (ನ್ಯಾ. ಶಾ.) ಅಕ್ಷತ ಯೋನಿ (ಕನ್ಯೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Viridéscent ವಿರಿಡೆಸೆಂಟ್ (ಗು.) ಹಸುರು ಛಾಯೆಯ, ಹಸುರು ತಿರುಗುವ. **Viridéscence** (ನಾ.) ; **Virídity** —ಡಿಟಿ (ನಾ.) ಹಸುರು (ಬಣ್ಣ) (ಮು., ಕೆಲವು ಸಸ್ಯಗಳನ್ನು ತಿಂದ ತರುವಾಯ ಆಯ್ಸ್ಟರ್, ಮೊ. ಪ್ರಾಣಿಗಳಲ್ಲಿ ತೋರುವಂಥದು)

Virídity. Viridescent ನೋಡಿ.

Vírile ವಿ(ವೈ)ರೈ(ರಿ)ಲ್ (ಗು.) ಗಂಡಿನ, ಪುರುಷನ ; ಉತ್ಪತ್ತಿ—ಶಕ್ತಿಯುಳ್ಳ, ಶಕ್ತಿಯ ; ಪುಂಸ್ತ್ವವುಳ್ಳ ; (ಮನಸ್ಸು, ಗುಣ, ಶೈಲಿ, ಮೊ. ಗಳ ವಿಷಯದಲ್ಲಿ) ಪೌರುಷವುಳ್ಳ, ವೀರ್ಯವತ್ತಾದ, ಗಂಡುತನದ, ಓಜಸ್ವಿ. **Virílity** (ನಾ.) ; **Viriléscent** ವಿರಿಲೆಸೆಂಟ್ (ಗು.) (ಹೆಣ್ಣು ಪ್ರಾಣಿಯ ವಿಷಯದಲ್ಲಿ) ಕ್ರಮೇಣ ಪುರುಷಲಕ್ಷಣ ತಾಳುವ, ಪುಂಲಕ್ಷಣ ಪಡೆಯುವ. **Viriléscence** (ನಾ.)

Vírose ವೈರೋಸ್ (ಗು.) ವಿಷಮಯ ; ಸಾಂಕ್ರಾಮಿಕ ವಿಷಪೂರಿತ ; (ಸ. ವಿ.) ಪೂತಿಗಂಧದ, ಕೊಳೆತ ನಾತದ. **Vírous** (ಗು.) (ವಿರ. ಪ್ರ.)

Virtú ವರ್ಟೂ (ನಾ.) (ಲಲಿತ) ಕಲಾಪ್ರೇಮ (Articles of v. ಮಾಟದ ಅಂದ, ಪ್ರಾಚೀನತೆ, ಅಪೂರ್ವತೆ, ಮೊ. ದೃಷ್ಟಿಗಳಿಂದ ಕುತೂಹಲ ಕಾರಿಯಾದ ವಸ್ತುಗಳು : ಕಲಾಕೌತುಕ ವಸ್ತುಗಳು)

Vírtual, etc. Virtue ನೋಡಿ.

Vírtue ವರ್ಚ್ಯು(ರ್ಚು) (ನಾ.) ಗುಣ, ಧರ್ಮ; ಸದ್ಗುಣ, ಸೌಶೀಲ್ಯ ; ಉತ್ಕೃಷ್ಟತೆ, ಶ್ರೇಷ್ಠತೆ ; ಪುಣ್ಯ [Has the v. of resisting temperature ಶಾಖ ತಡೆಯುವ ಗುಣವುಳ್ಳದ್ದಾಗಿದೆ. V. is its own reward ಸದ್ಗುಣಕ್ಕೆ ಅದೇ ಪ್ರತಿಫಲ. Make a v. of necessity (Necessary ಕೆಳಗೆ Necessity ನೋಡಿ). The (seven) cardinal virtues (Cardinal ನೋಡಿ). Natural virtues ಸಹಜ ಗುಣಗಳು : ನ್ಯಾಯ, ವಿವೇಕ, ಮಿತಾಚರಣೆ, ಸ್ಥೈರ್ಯ. Theological virtues ಧಾರ್ಮಿಕ ಗುಣಗಳು : ಶ್ರದ್ಧೆ, ನಿರೀಕ್ಷೆ, ದಯೆ] ; ಸಾಧ್ವೀತ್ವ, ಪಾತಿವ್ರತ್ಯ, ಸಚ್ಚಾರಿತ್ರ (Woman of v.) ; ಶಕ್ತಿ, ಗುಣ, ಪ್ರಭಾವ (No v. in such drugs ಅಂಥ ಔಷಧಗಳಲ್ಲಿ ಏನೂ ಗುಣವಿಲ್ಲ, ಪ್ರಭಾವವಿಲ್ಲ) ; (ಬ. ವ. ದಲ್ಲಿ) ಏಳನೆಯ ವರ್ಗದ ದೇವದೂತರು. By *or* in v. of ಪ್ರಭಾವದಿಂದ, ಬಲದಿಂದ, ಕಾರಣದಿಂದ, ನಿಮಿತ್ತದಿಂದ, ಆಧಾರದಮೇಲೆ (In v. of his long service ಅವನ ದೀರ್ಘಕಾಲದ ಸೇವೆಯ ನಿಮಿತ್ತದಿಂದ). **Vírtual** (ಗು.) (ಹೆಸರಿಗಲ್ಲದಿದ್ದರೂ) ಪರಿಣಾಮ ಸಿದ್ಧವಾದ, ವಾಸ್ತವಪ್ರಾಯವಾದ, ಕಾರ್ಯತಃ (Is the v. manager ಅವನೇ ಕಾರ್ಯತಃ ವ್ಯವಸ್ಥಾಪಕ. Take this as a v. promise ಇದನ್ನು ವಾಸ್ತವವಾದ ವಾಗ್ದಾನವೆಂದು ಭಾವಿಸು). V. focus (ದೃ. ವಿ.) ಕಿರಣಗುಚ್ಛದ ರೇಖೆಗಳನ್ನು ಲಂಬಿಸಿದರೆ ಅವು ಸೇರಬಹುದಾದ ಬಿಂದು : ವಾಸ್ತವಪ್ರಾಯ ನಾಭಿ. V. velocity *or* displacement ಬಲಪ್ರಯೋಗವಾದ ಬಿಂದು ಆ ಬಲದ ದಿಕ್ಕಿನಲ್ಲಿ ಹೊಂದುವ ಅತ ಲ್ಪ ಚಲನೆ, ಸ್ಥಾನಾಂತರ: ಅತ್ಯಲ್ಪ—ವೇಗ, ಸ್ಥಾನಾಂತರತೆ. **Virtuálity** (ನಾ.) ; **Vírtually** (ಕ್ರಿ. ವಿ.); **Vírtueless** (ಗು.); **Virtuóso** ವರ್ಚ್ಯುಓಸೊ (ನಾ. ; ಬ. ವ. -si —ಸೀ) ಲಲಿತ ಕಲಾಭಿಜ್ಞ, ಲಲಿತ ಕಲಾ ಪ್ರೇಮಿ; ಲಲಿತ ಕಲೆಯ ಪರಿಕರ್ಮ ಭಾಗದಲ್ಲಿ ನಿಪುಣನಾದವನು : ಕಲಾ ಪರಿಕರ್ಮ ನಿಪುಣ ; ಅಪೂರ್ವ ವಸ್ತು ಸಂಗ್ರಾಹಕ. **Virtuósity** (ನಾ.) ಲಲಿತ ಕಲಾಭಿಜ್ಞತೆ, ಲಲಿತ ಕಲಾಭಿರುಚಿ ; ಪರಿಕರ್ಮ ಕೌಶಲ. **Virtuósoship** (ನಾ.); **Vírtuous** (ಗು.) ಗುಣವಂತ, ಶೀಲವಂತ, ಧರ್ಮಾತ್ಮ, ಸದ್ಗುಣಿ ; ಪುಣ್ಯಕರ; ಸಾಧ್ವಿಯಾದ, ಪತಿವ್ರತೆಯಾದ, ಸುಶೀಲೆಯಾದ. **Vírtuously** (ಕ್ರಿ. ವಿ.) ; **Vírtuousness** (ನಾ.)

Vírulent ವಿರ್ಯು(ರು)ಲೆಂಟ್ (ಗು.) ವಿಷಮಯ, ವಿಷಯುಕ್ತ ; ಸಾಂಕ್ರಾಮಿಕ —ವಿಷವುಳ್ಳ, ವಿಷದಿಂದಾದ (V. ulcer) ; ಉಗ್ರ, ಘೋರ, ಕ್ರೂರ, ದಾರುಣ (V. animosity, tone, abuse ಕಡು ಹಗೆ, ಉಗ್ರಧ್ವನಿ, ಘೋರವಾದ ಬೈಗುಳು). **Vírulence** (ನಾ.) ; **Vírulently** (ಕ್ರಿ. ವಿ.) ; **Virulíferous** (ಗು.) (ವೈ. ಶಾ.) ಸಾಂಕ್ರಾಮಿಕ —ವಿಷವುಳ್ಳ, ವಿಷೋತ್ಪಾದಕ.

Vírus ವೈರಸ್ (ನಾ.) ವಿಷ, ನಂಜು, ರಸಿಕೆ, ಸಾಂಕ್ರಾಮಿಕ ವಿಷ (Smallpox v. ಸಿಡುಬಿನ ಸಾಂಕ್ರಾಮಿಕ ವಿಷ); (ರೂಪ.) ದುಷ್ಪ್ರಭಾವ, ವಿಷ(ರೂಪ) ; (ರೂಪ.) ವಿಷ ಕಾರುವುದು, ಬದ್ಧವೈರ.

Vis ವಿಸ್ (ನಾ.) (ಯಂತ್ರಶಿಲ್ಪ) ಬಲ. **V. Inertiae** (Inertia ನೋಡಿ); **V. major** ಮನುಷ್ಯನ್ನು ಎದುರಿಸಲಾಗದ, ಅತಿಮಾನುಷ, —ಬಲ. **V. mórtua** ಕಾರ್ಯಕಾರಿಯಲ್ಲದ ಬಲ ; ಮೃತಬಲ. **V. víva** (ಚಲವಸ್ತುವಿನ) ಜೀವಂತ ಬಲ, ಕಾರ್ಯಕಾರೀ ಬಲ, ಕ್ರಿಯಾತ್ಮಕ ಬಲ (= ದ್ರವ್ಯಪರಿಮಾಣ × ವೇಗದ ವರ್ಗ)

Vísage ವಿಸ್ಸೆ(ಸ್ಸಿ)ಜ್ (ನಾ.) (ಈಗ ಮು., ಗ್ರಾಂ.) ಮುಖ ; ಮುಖ—ಭಾವ, ಲಕ್ಷಣ. **-visaged** (ಗು.)

Vísard. Visor ನೋಡಿ.

Vís-a-vís ವಿ(ೕ)ಸಾ(ಸ)ವೀ (ಕ್ರಿ. ವಿ., ನಾ., ಉಪ.) ಪರಸ್ಪರ ಅಭಿಮುಖವಾಗಿ, ಎದುರುಬದುರಾಗಿ, ಎದುರಾಗಿ, ಮುಖತಃ. (ನಾ.) (ಮು , ಕೆಲವು ನೃತ್ಯಗಳಲ್ಲಿ) ಅಭಿಮುಖವಾಗಿರುವವನು, ಅಭಿಮುಖಿ ; ಜನರು ಎದುರುಬದುರಾಗಿ ಕುಳಿತುಕೊಳ್ಳುವ ಬಂಡಿ. (ಉಪ.) ಹೋಲಿಸಿದರೆ ; ಸಂಬಂಧವಾಗಿ.

Viscácha ವಿಸ್ಕ್ಯಾಚ, **Viz-** ವಿಜ್— (ನಾ.) ದ. ಅಮೆರಿಕದ, ಬಿಲ ತೋಡುವ, ಬೆಲೆಯುಳ್ಳ ತುಪ್ಪುಳು ಚರ್ಮವಿರುವ, ಬಾಚಿಹಲ್ಲಿನ ಪ್ರಾಣಿ : ವಿಸ್ಕಾಚ.

Víscera ವಿಸೆರ (ನಾ., ಬ. ವ.) ದೇಹದ ಒಳ ಕುಹರಗಳಲ್ಲಿಯ ಅಂಗಗಳು: ಅಂತರ್‌ಅವಯವಗಳು (ಉದಾ., ಮಿದುಳು, ಹೃದಯ, ಯಕೃತ್ತು); (ಮು.) ಹೊಟ್ಟೆಯೊಳಗಿರುವ ಅಂಗ, ಕರುಳು. **Vísceral** (ಗು.) ; **Víscerate** (ಕ್ರಿ. ಸಕ.) ಕರುಳು—ತೆಗೆ(ದುಹಾಕು), ಬಗಿ(ದುಹಾಕು). **Vísceri-, Víscero-** (ಸ. ಪೂ. ಪ.)

Víscerate. Viscera ನೋಡಿ.

Víscid ವಿಸಿಡ್ (ಗು.) ಅಂಟುವ, ಅಂಟಂಟಾದ ; ಸರಿಯಹಾಗಿರುವ ; (ಜೇನುತುಪ್ಪದಂತೆ) ಅರ್ಧ ದ್ರವಾವಸ್ಥೆಯ, ಜಿಗುಟಾದ. **Viscídity** (ನಾ.) ಅಂಟವಸ್ಥೆ, ಶ್ಯಾನತೆ. **Víscin** (ನಾ.) ಹಕ್ಕಿಯಂಟಿನಲ್ಲಿ ಉಪಯೋಗಿಸುವ ಅಂಟುಪದಾರ್ಥ ; ಶ್ಯಾನದ್ರವ್ಯ. **Víscose** ವಿಸ್ಕೋಸ್ (ನಾ.) ದಾರವಾಗಿ ಎಳೆಯಲು ಅನುಕೂಲಿಸುವಂತೆ ಸೆಲ್ಯುಲೋಸನ್ನು ಕರಗಿಸಿ ಮಾಡಿದ ಸರಿ : ಸೆಲ್ಯುಲೋಸಿನ ಸರಿ (ಇದರಿಂದ ಕೃತಕ ರೇಷ್ಮೆಯನ್ನು ಮಾಡುತ್ತಾರೆ) ; (ವಿಶೇಷಣ ಪ್ರ.) ಸೆಲ್ಯುಲೋಸಿನ ಸರಿಯಿಂದ ಮಾಡಿದ (V. silk). **Viscósity** ವಿಸ್ಕಾಸಿಟಿ (ನಾ.) ಅಂಟುಗುಣ ; ಜಿಗುಟು, ಶ್ಯಾನತ್ವ ; (ಭೌ. ವಿ.) (ದ್ರವಗಳ ಮತ್ತು ಅನಿಲಗಳ ವಿಷಯದಲ್ಲಿ) ವಸ್ತುವಿನ ಅಣು ವಿನ್ಯಾಸದಲ್ಲಿ ವ್ಯತ್ಯಾಸವಾಗುವುದನ್ನು ತಡೆಯುವ ಗುಣ ; ಪ್ರವಾಹ ನಿರೋಧಕತೆ. **Viscómeter** ವಿಸ್ಕಾಮಿಟರ್ (ನಾ.), **Viscosímeter** ವಿಸ್ಕೊಸಿಮೀಟರ್ (ನಾ.) ಪ್ರವಾಹ ನಿರೋಧತಾ ಮಾಪಕ ; ಶ್ಯಾನತ್ವಮಾಪಕ. **Viscómetry** (ನಾ.) ; **Víscous** (ಗು.) ಅಂಟುವ, ಶ್ಯಾನ ; (ಭೌ. ವಿ.) ಪ್ರವಾಹ ನಿರೋಧ ಗುಣವುಳ್ಳ. **Víscousness** (ನಾ.)

Víscin, Víscose, Viscósity, Viscómeter, etc. Viscid ನೋಡಿ.

Víscount ವೈಕೌಂಟ್ (ನಾ.) ಅರ್ಲ್ ಮತ್ತು ಬ್ಯಾರನ್ ಪದವಿಗಳ ನಡುವಣ ಪದವಿಯ ಶ್ರೀಮಂತ (ಅರ್ಲ್ ಪದವಿಯ ಶ್ರೀಮಂತನ ಹಿರಿಯ ಮಗನ ಔಪಚಾರಿಕ ಬಿರುದಾಗಿ ಪ್ರ.). **Víscountcy** (ನಾ.), **Víscountship** (ನಾ.); **Víscountess** (ನಾ., ಸ್ತ್ರೀ.) ವೈಕೌಂಟಿನ ಪತ್ನಿ. **Víscounty** (ನಾ.) ವೈಕೌಂಟಿನ—ಪ್ರಾಂತ, ಅಧಿಕಾರಕ್ಷೇತ್ರ.

Víscous. Viscid ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Vise ವೀಸ್ಗೇ, **Visa** (F) ವಿಸಾ (ನಾ., ಕ್ರಿ. ಸಕ.) ರಹದಾರಿ, ಮೊ. ಗಳನ್ನು ಪರೀಕ್ಷಿಸಿ ಅವುಗಳಮೇಲೆ 'ಸರಿಯಾಗಿದೆ' ಎಂದು ಬರೆದ ಷರಾ: ತನಿಖೆ, ಪರೀಕ್ಷೆ, —ಷರಾ. (ಕ್ರಿ.) ತನಿಖೆ, ಷರಾ—ಹಾಕು, ಬರೆ.

Vísible ವಿಸಿಬ್‌ಲ್ (ಗು.) ಕಣ್ಣಿಗೆ ಕಾಣುವ, ದೃಶ್ಯ, ವ್ಯಕ್ತ, ದೃಗ್ಗೋಚರ; ನೋಡಿ ತಿಳಿಯಲಾಗುವ, ಪ್ರತ್ಯಕ್ಷ (Spoke with v. impatience); ಭೇಟಿಕೊಡಲು, ನೋಡಲು, —ಸಿದ್ಧವಾಗಿರುವ (Is she v.? ಆಕೆಯನ್ನು ನೋಡಬಹುದೊ?). The v. church ಕ್ರೈಸ್ತ ಧರ್ಮಿ ಗಳೆಂದು ಹೇಳಿಕೊಳ್ಳುವ ಜನಸಮುದಾಯ: ದೃಶ್ಯ ಕ್ರೈಸ್ತ ಪ್ರಪಂಚ. V. horizon ದೃಶ್ಯ, ಗೋಚರ, —ಕ್ಷಿತಿಜ, ದಿಗಂತ. V. speech ಉಚ್ಚಾರ ಸಾಧ್ಯವಾದ ಎಲ್ಲ ನುಡಿತಗಳನ್ನೂ ಸಂಕೇತಿಸಲು ಉದ್ದೇಶಿಸಿದ ಲಿಪಿ ಪದ್ಧತಿ: ದೃಶ್ಯ ಭಾಷೆ. **Visibílity** (ನಾ.) ದೃಶ್ಯತೆ, ದೃಗ್ಗೋಚರತ್ವ. **Vísibleness** (ನಾ.); **Vísibly** (ಕ್ರಿ. ವಿ.)

Vísion ವಿಷನ್ (ನಾ., ಕ್ರಿ. ಸಕ.) ನೋಟ, ಕಾಣ್ಕೆ, ದರ್ಶನ, ದೃಷ್ಟಿ, ದೃಶ್ಯ (The field of v. ದೃಷ್ಟಿ—ಕ್ಷೇತ್ರ, ವ್ಯಾಪ್ತಿ. Reflected, refracted, v. ಪ್ರತಿಫಲಿತ, ವಕ್ರೀಕೃತ, —ದೃಷ್ಟಿ); ಕನಸಿನಲ್ಲಿ, ವಶ್ಯ ಸುಪ್ತಿಯಲ್ಲಿ, —ಕಂಡದ್ದು: ಸ್ವಪ್ನ ದರ್ಶನ; ಅತಿಮಾನುಷ ತೋರ್ಕೆ, ಕಾಣಿಸಿಕೊಂಡದ್ದು; ಭಾವನೆಯಲ್ಲಿ ಮೂಡಿದ್ದು, ಕಲ್ಪನೆ. (Romantic visions of youth ಯೌವನದ ಭಾವ ಶೀಲ ಕಲ್ಪನೆ ಗಳು); ದೂರದೃಷ್ಟಿ, (ರಾಜಕೀಯ) ಪ್ರಜ್ಞೆ. (ಕ್ರಿ.) ಕನಸಿನಲ್ಲಿ, ಕಲ್ಪನೆಯಲ್ಲಿ, —(ಕಂಡಂತೆ) ಕಾಣು, ತೋರು; ದರ್ಶನ—ಕಾಣು, ತೋರು. **Vísional** (ಗು.) ಕಾಣ್ಕೆಯ, ಸ್ವಪ್ನದರ್ಶನದ; ಕಾಲ್ಪನಿಕ. **Vísionally** (ಕ್ರಿ. ವಿ.); **Vísionary** (ಗು., ನಾ.) ಕಾರ್ಯ ಸಾಧ್ಯವಲ್ಲದ —ಯೋಜನೆಗಳ, ಭಾವನೆಗಳ; —ಗಳುಳ್ಳ; ಕಲ್ಪನೆಯಲ್ಲಿ, ತೋರ್ಕೆಯಲ್ಲಿ,—ಮಾತ್ರ ಇರುವ; ಭಾವನೈಕಮಯ; ಕಾರ್ಯಪರಿಣಾಮಿಯಲ್ಲದ. (ನಾ.) ಭಾವನಾ ಪ್ರಪಂಚಿ; ಕನಸಿನ ಪ್ರಪಂಚದವನು, ಕನಸಿಗ (=**Vísionist**). **Vísionariness** (ನಾ.)

Vísit ವಿಸಿಟ್ (ಕ್ರಿ. ಸಕ., ನಾ.) (ಸ್ನೇಹದಿಂದ, ಗೌರವ ತೋರಿಸಲು, ಕಾರ್ಯಾರ್ಥವಾಗಿ, ಪರಿಶೀಲನೆಗಾಗಿ ಅಥವಾ ಕುತೂಹಲದಿಂದ) ನೋಡಲು, ಕಾಣಲು, —ಹೋಗು, ಬರು; ಭೇಟಿ—ಕೊಡು, ಆಗು; (ರೋಗ, ಉಪದ್ರವ, ಮೊ. ಗಳ ವಿಷಯದಲ್ಲಿ) ಬಡಿ, ತಗುಲು; (ಬೈಬಲ್ ಪ್ರ.) ದಂಡಿಸು, ಸೇಡು ತೀರಿಸಿಕೊ, ಪ್ರತೀಕಾರಮಾಡು, ಸಂತಯಿಸು, ಹರಸು, ಹಿತ ತರು (Now will He v. their sins ಈಗ ದೇವರು ಅವರ ಪಾಪಗಳಿಗಾಗಿ ದಂಡಿಸುವನು. God hath visited & redeemed his people ದೇವರು ತನ್ನ ಭಕ್ತರನ್ನು ಹರಸಿ ಮೋಕ್ಷವನ್ನು ದಯಪಾಲಿಸಿದ್ದಾನೆ). ಹೋಗಿ, ಬಂದು, —ನೋಡುವುದು, ಕಾಣುವುದು; ಭೇಟಿ, ದರ್ಶನ; ಪರೀಕ್ಷೆಯ, ತನಿಖೆಯ, —ಭೇಟಿ [Domiciliary v. (Domicile ಕೆಳಗೆ Domiciliary ನೋಡಿ). Right of v. (Visitation ನೋಡಿ)]. **Vísitable** (ಗು.); **Vísitant** (ಗು., ನಾ.) (ಗು., ಕಾವ್ಯ) ಭೇಟಿಕೊಡುವ, ಬಂದು ನೋಡುವ. (ನಾ.) ವಲಸೆಹೋಗುವ, ವಲಸೆಬರುವ, —ಪಕ್ಷಿ; ದೇಶಚಾರಿ ಪಕ್ಷಿ; (ಕಾವ್ಯ, ಅಲಂ.) ನೋಡುವುದಕ್ಕೆ ಬಂದವನು, ಭೇಟಿಕಾರ; ಹುಡುಗಿಯರ ಶಿಕ್ಷಣಕ್ಕೆ ಸಂಬಂಧಪಟ್ಟ ಒಂದು ಸಂನ್ಯಾಸಿ ಮಠದವಳು. **Visitátion** (ನಾ.) ಪರೀಕ್ಷಾರ್ಥವಾಗಿ ಭೇಟಿಕೊಡುವುದು: ಪರೀಕ್ಷೆ, ತನಿಖೆ,—ಭೇಟಿ (ಮು., ಬಿಷಪ್ಪು ತನ್ನ ಪ್ರಾಂತದಲ್ಲಿಯ ಚರ್ಚುಗಳಿಗೆ ಕೊಡುವ ಅಧಿಕಾರಿಕ ಭೇಟಿ); ಮತ್ತೊಂದು ರಾಜ್ಯದ ಹಡಗಿಗೆ, ಅದರ ಉದ್ದೇಶ, ರೀತಿ, ಮೊ. ನ್ನು ತಿಳಿದುಕೊಳ್ಳುವುದಕ್ಕಾಗಿ ಪ್ರವೇಶಿಸುವುದು: ಹಡಗಿನ ಭೇಟಿ, ನೌಕಾ ಪ್ರವೇಶ [Right of v. *or* visit (ಪರೀಕ್ಷಾಧಿಕಾರವಿಲ್ಲದ) ನೌಕಾ ಪ್ರವೇಶಾಧಿಕಾರ]; ದೈವ—ಪ್ರತೀಕಾರ, ಶಿಕ್ಷೆ, ಪ್ರತಿಫಲ; ಪೀಡೆ, ಆಪತ್ತು, ಉಪದ್ರವ; (ಕ್ರೈಸ್ತ) ಜಾನಿನ ತಾಯಿಯಾದ ಎಲಿಸಬೆತಿಗೆ ಮೇರಿ ಕನ್ನಿಕೆ ಕರುಣಿಸಿದ ಭೇಟಿ(ಯ—ದಿನ, ಹಬ್ಬ) (ಜುಲೈ ಎರಡನೆಯ ತಾರೀಖು); (ಪ್ರಾ. ವಿ.) (ಅಸಾಧಾರಣವೂ ಹೆಚ್ಚು ಸಂಖ್ಯೆಯದೂ ಆದ) ಪ್ರಾಣಿಗಳ ವಲಸೆ; (ಬಳ. ಮಾ.) ಅತಿಥಿಯಾಗಿ ಬಂದು ದೀರ್ಘಕಾಲ ನಿಂತುಬಿಡುವುದು; ಝಾಂಡ ಹಾಕಿಬಿಡುವುದು, ಅತಿದೀರ್ಘ ಭೇಟಿ. Nuns of the visitation = Visitants (Visitant ಪದದ ಕೊನೆಯ ಅರ್ಥ ನೋಡಿ). V. of the sick ರೋಗಿ(ಗಳನ್ನು ಭೇಟಿ ಮಾಡುವ ಪುರೋಹಿತರು ಅನುಸರಿಸಬೇಕಾದ) ಪ್ರಾರ್ಥನಾ ವಿಧಿ. **Vísiting** (ನಾ.) ಭೇಟಿಕೊಡುವುದು; ನೋಡ—ಹೋಗುವುದು, ಬರುವುದು [Have a v. acquaintance with, be on v. terms with ಹೋಗಿಬಂದು ನೋಡುವಷ್ಟು, ಭೇಟಿಮಾಡುವಷ್ಟು, —ಪರಿಚಯ ವಿರು. V.-book (ಭೇಟಿ ಮಾಡಬೇಕಾದವರ ಹೆಸರುಗಳನ್ನು ಬರೆದಿಟ್ಟು ಕೊಳ್ಳುವ) ಭೇಟಿ ಪುಸ್ತಕ. V.-card (Card² ನೋಡಿ)]. **Vísitor** (ನಾ.) ಭೇಟಿ ಮಾಡುವವನು, ಭೇಟಿಕಾರ; ಅಭ್ಯಾಗತ; (ಪ್ರೌಢ ವಿದ್ಯಾಶಾಲೆ, ಮೊ. ಗಳಲ್ಲಿ) ಆಗಾಗ ಭೇಟಿಕೊಟ್ಟು ವರದಿಮಾಡಬೇಕಾದ ಅಧಿಕಾರ ಅಥವಾ ಕರ್ತವ್ಯ ಉಳ್ಳವನು: ಪರಿಶೀಲಕ. Visitors' book (ಹೋಟಲು, ಮೊ. ಗಳಲ್ಲಿ ಇಟ್ಟಿರುವ) ಗಿರಾಕಿಗಳು, ಭೇಟಿಕಾರರು, ತಮ್ಮ ಅಭಿಪ್ರಾಯಗಳನ್ನು ಬರೆದಿಡಬಹುದಾದ ಪುಸ್ತಕ: ಅಭ್ಯಾಗತರ, ಭೇಟಿಕಾರರ,—ಪುಸ್ತಕ. **Visit(at)órial** (ಗು.) ಸಮೀಕ್ಷಕ, ಪರಿಶೀಲನ,—ಸಂಬಂಧವಾದ; ಭೇಟಿಯ(ಧಿಕಾರದ)

Vísor, Vízor ವೈಸರ್ (ನಾ.), **Vísard, Vízard** ವಿಸರ್ಡ್ (ನಾ.) (ಚರಿತ್ರೆ) ಸೀಸಕದ ಸರಿಸಲಾಗುವ ಮುಖಭಾಗ: ಮುಖತ್ರಾಣ, ಮೊಗಕಾಪು; ಟೋಪಿಯ ಮುಂಚಾಚು; (ಚರಿತ್ರೆ) ಮೊಗವಾಡ. **Vísored** (ಗು.); **Vísorless** (ಗು.)

Vísta ವಿಸ್ಟ (ನಾ.) (ಮರಸಾಲುಗಳ ಮಧ್ಯದಲ್ಲಿ ಕಾಣುವಂಥ ಕಿರಿಯಗಲದ) ನೀಳ ನೋಟ; ದೀರ್ಘ ದರ್ಶನ; ನೆನಸಿಕೊಂಡ ಅಥವಾ ಮುನ್ನಿರೀಕ್ಷಿಸಿದ ಘಟನೆಗಳ ದೀರ್ಘ ಪರಂಪರೆ: ಸಾಲು, ಶ್ರೇಣಿ; (ಮಾನಸಿಕವಾದ) ನೋಟ, ಮುನ್ನೋಟ, ಹಿನ್ನೋಟ, ದೃಶ್ಯ, ದೃಷ್ಟಿಪಥ (Opened up new vistas to his ambition ಅವನ ಹೆಬ್ಬಯಕೆಗೆ ಹೊಸ ದಾರಿಗಳು ಕಂಡವು, ತೆರೆದವು. Searched the dim v. of his childhood ತನ್ನ ಶೈಶವದ ಮಸುಕು ನೆನಪುಗಳನ್ನು ಹುಡುಕಿದನು). **Vísta'd** (ಗು.)

Vísual ವಿಷ್ಯು(ಸ್ಯು)ಅಲ್ (ಗು.) ದೃಷ್ಟಿಯ, ದೃಷ್ಟಿ ಸಂಬಂಧವಾದ, ದೃಷ್ಟಿಗೋಚರ; ಕಣ್ಣಿಗೆ ಕಾಣಿಸುವ, ನೋಟದ, ದೃಶ್ಯ (V. nerve, organ ದೃಷ್ಟಿನರ, ನೇತ್ರೇಂದ್ರಿಯ. V. angle ನೋಟದ ವಸ್ತುವಿನ ಅಂಚಿನಿಂದ ಹೊರಟ ಕಿರಣಗಳು ಕಣ್ಣಿನ ಬಿಂದುವಿನಲ್ಲಿ ಮಾಡುವ ಕೋನ: ದೃಷ್ಟಿಕೋನ. V. field ದೃಷ್ಟಿ—ಕ್ಷೇತ್ರ, ವ್ಯಾಪ್ತಿ. V. rays ವಸ್ತುವಿನಿಂದ ಕಣ್ಣಿಗೆ ಬರುತ್ತವೆಂದು ಊಹಿಸುವ ಬೆಳಕಿನ ಕಿರಣಗಳು: ದೃಷ್ಟಿ, ದೃಶ್ಯ, —ಕಿರಣಗಳು. V. point ದೃಷ್ಟಿ ಕಿರಣಗಳು ಸಂಧಿಸುವ ಕ್ಷಿತಿಜರೇಖೆಯಲ್ಲಿಯ ಬಿಂದು: ದೃಗ್, ದೃಷ್ಟಿ,—ಬಿಂದು). **Visuálity** (ನಾ.) ದೃಶ್ಯತೆ, ಮನಶ್ಚಿತ್ರ; ದೃಷ್ಟಿ, ದೃಶ್ಯ, ನೋಟ. **Vísualize** (ಕ್ರಿ. ಸಕ.) ಕಣ್ಣಿಗೆ ಕಾಣಿಸು, ದೃಗ್ಗೋಚರ ಮಾಡು, ಪ್ರತ್ಯಕ್ಷಮಾಡು; (ಮನಸ್ಸಿನ ಭಾವ, ಮೊ. ಗಳಿಗೆ) ರೂಪ, ಆಕಾರ, —ಕೊಡು; (ಭಾವಿಸಿಕೊಂಡದ್ದನ್ನು, ಹಿಂದೆ ನೋಡಿದ್ದನ್ನು) ಕಣ್ಣ ಮುಂದೆ ತಂದುಕೊ, ಚಿತ್ರಿಸಿಕೊ. **Visualizátion** (ನಾ.); **Vísually** (ಕ್ರಿ. ವಿ.)

Víta glass ವೈಟ ಗ್ಲಾಸ್ (ನಾ.) ನೀಲಲೋಹಿತಾತೀತ ಕಿರಣಗಳನ್ನಾಗಲಿ ರಾಸಾಯನಿಕ ಕಿರಣಗಳನ್ನಾಗಲಿ ತಡೆಯದೆ ಹಾಯಗೊಟ್ಟು, ಅವುಗಳ ಚೈತನ್ಯದಾಯಕ ಅಥವಾ ಚಿಕಿತ್ಸಕ ಪ್ರಭಾವಕ್ಕೆ ಅವಕಾಶಕೊಡುವ ಒಂದು ಬಗೆಯ ಗಾಜು: ವೈಟ ಗಾಜು.

Vítal ವೈಟಲ್ (ಗು.) ಜೀವವ್ಯಾಪಾರಕ್ಕೆ ಸಂಬಂಧಿಸಿದ ಅಥವಾ ಆವಶ್ಯಕವಾದ, ಜೀವನಾಧಾರ(ವಾ)ದ, ಜೀವಂತ, ಸಜೀವ (V. energies ಜೀವಶಕ್ತಿಗಳು, ಚೈತನ್ಯಗಳು. V. functions ಜೀವ ವ್ಯಾಪಾರಗಳು. Wounded in a v. part ಮರ್ಮಸ್ಥಾನದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಾಯಗೊಂಡು) ; ಪ್ರಾಣಾಧಾರವಾದ, ಅತ್ಯಾವಶ್ಯಕವಾದ, ಅತಿ ಮುಖ್ಯವಾದ (A v. question. Question of v. importance) ; ಜೀವನದ, ಪ್ರಾಣದ, —ಮೇಲೆ ಪರಿಣಾಮವುಳ್ಳ ; ಪ್ರಾಣಾಂತಕ (V. wound, error ಪ್ರಾಣಾಂತಕವಾದ ಗಾಯ, ತಪ್ಪು) ; [V. centre (ವೈ. ಶಾ.) ಮರ್ಮಸ್ಥಾನ, ನರ (ಮು., ಮಿದುಳಿನಲ್ಲಿಯ ಶ್ವಾಸನರ ಕೇಂದ್ರ). V. force, V. principle (ಜೀವವ್ಯಾಪಾರಕ್ಕೆ ಕಾರಣವೆಂದು ಭಾವಿಸಿರುವ) ಜೀವ—ಶಕ್ತಿ, ತತ್ತ್ವ. V. statistics ಹುಟ್ಟು, ಸಾವು, ಮದುವೆ, ರೋಗ, ಮೊ. ಗಳಿಗೆ ಸಂಬಂಧಪಟ್ಟ ಲೆಕ್ಕಗಳು : ಜನನ ಮರಣಗಳ ಲೆಕ್ಕಗಳು ; ಜನ ಜೀವನ ಗಣತಿ]. (ನಾ.) (ಬ. ವ. ದಲ್ಲಿ) ಮರ್ಮಸ್ಥಾನಗಳು, ಪ್ರಾಣಾಂಗಗಳು (ಉದಾ., ಶ್ವಾಸಕೋಶಗಳು, ಹೃದಯ, ಮಿದುಳು). **vítalism** (ನಾ.) (ಜೀ. ವಿ.) ರಾಸಾಯನಿಕ ಅಥವಾ ಭೌತಶಕ್ತಿಗಳಿಂದ ಭಿನ್ನವಾದ ಜೀವತತ್ತ್ವದಿಂದ ಪ್ರಾಣೋತ್ಪತ್ತಿಯಾಗುವುದೆಂಬ ವಾದ: ಜೀವತತ್ತ್ವ ವಾದ, ಜೀವಚೈತನ್ಯ ವಾದ. **Vítalist** (ನಾ.); **Vitalístic** (ಗು.) ; **Vitálity** —ಟ್ಯಾಲಿಟಿ (ನಾ.) ಪ್ರಾಣಧಾರಣ ಶಕ್ತಿ, (ಜೀವ) ಚೈತನ್ಯ ; (ಸಂಸ್ಥೆ, ಭಾಷೆ, ಮೊ. ಗಳ ವಿಷಯದಲ್ಲಿ ರೂಪ.) ನಡೆದುಕೊಂಡುಬರಬಲ್ಲ, ಪ್ರಚಲಿತವಾಗಿರಬಲ್ಲ, —ಶಕ್ತಿ : ಜೀವಶಕ್ತಿ, ಸತ್ತ್ವ. **Vitálize** (ಕ್ರಿ. ಸಕ.) ಜೀವ, ಪ್ರಾಣ,—ತುಂಬು, ಹೊಯ್ಯಿ ; ಜೀವಂತಮಾಡು ; ಚೈತನ್ಯಗೊಳಿಸು, ಉಜ್ಜೀವಿಸು. **Vítally** (ಕ್ರಿ. ವಿ.)

Vítamin ವಿ(ವೈ)ಟಮಿನ್, **Vítamine** —ಮಿ(ಲ)ನ್ (ನಾ.) ಗೊತ್ತಾದ ಆಹಾರಪದಾರ್ಥಗಳಲ್ಲಿ ಇದ್ದು ಗೊತ್ತಾದ ವ್ಯಾಧಿಗಳ ನಿವಾರಣೆಗೂ, ಗೊತ್ತಾದ ಶರೀರ ವ್ಯಾಪಾರಗಳಿಗೂ ಅವಶ್ಯಕವಾಗಿರುವ ಹಲವು ಆಹಾರಾಂಶಗಳಲ್ಲೊಂದು : ಅನ್ನಾಂಗ, ಜೀವಸತ್ತ್ವ (ಇದು A, B, C, D, E ಮೊದಲಾಗಿ ಹಲವು ಪ್ರಕಾರದ್ದಾಗಿದೆ)

Vítaphone ವೈಟಫೋನ್ (ನಾ.) ಸಂಭಾಷಣೆಯನ್ನು ಗ್ರಾಮಫೋನ್ ಮೂಲಕ ಕೇಳಿಸುವ ಚಲನಚಿತ್ರ : ಗ್ರಾಮಫೋನ್ ಚಲನಚಿತ್ರ.

Vitéllin ವಿ(ವೈ)ಟೆಲಿನ್ (ನಾ.) (ರ. ವಿ.) ಕೋಳಿಮೊಟ್ಟೆಯ ಹಳದಿ ಲೋಳೆಯಲ್ಲಿಯ ಮುಖ್ಯ ಸಸಾರಜನಕವಸ್ತು : ಅಂಡಸತ್ತ್ವ, ವೈಟೆಲಿನ್. **Vitéllus** ವಿ(ವೈ)ಟೆಲಸ್ (ನಾ. ; ಬ. ವ. -li —ಲಿ) ಕೋಳಿ ಮೊಟ್ಟೆಯ ಒಳಗಿನ ಹಳದಿ: ಜನೆ; ಅಂಡಪೀತದ್ರವ್ಯ; ಅಂಡಾಶಯದ ಜೀವದ್ರವ್ಯ, ಅಂಕುರದ್ರವ್ಯ. **Vítellary** (ಗು.) ; **Vitélline** (ಗು.) ಜನೆ ಬಣ್ಣದ; ಕೆಂಜಾಯ ಹಳದಿಯ; ಜನೆಯ, ಹಳದಿ ಲೋಳೆಯ; ಜೀವ ದ್ರವ್ಯದ, ಅಂಕುರದ್ರವ್ಯದ (V. membrane, sac ಜನೆಯ ಸುತ್ತಲ ಪೊರೆ, ಜನೆ ಚೀಲ; ಭ್ರೂಣಾವರಣ). **Vitelli-, Vitello-** (ಸ. ಪೂ. ಪ.)

Viti- ವಿ(ವೈ)ಟಿ— (ಸ. ಪೂ. ಪ.) ದ್ರಾಕ್ಷಿ—, ದ್ರಾಕ್ಷಿ ಬಳ್ಳಿ—. **-cide** ದ್ರಾಕ್ಷಿ ಬಳ್ಳಿಗೆ ಹಾನಿಕರವಾದ ಹುಳು, ಮೊ. ವು : ದ್ರಾಕ್ಷಾ ನಾಶಕ. **-colous** ದ್ರಾಕ್ಷಿ ಬಳ್ಳಿ ತಿಂದು ಜೀವಿಸುವ : ದ್ರಾಕ್ಷಾ ಜೀವಿ. **-culture** ದ್ರಾಕ್ಷಾ ಕೃಷಿ. **-cúltural** (ಗು.) ; **-cúltur(al)ist** (ನಾ.)

Vítiate ವಿಷಿಯೇಟ್ (ಕ್ರಿ. ಸಕ.) (ಗುಣವನ್ನು) ಕೆಡಿಸು ; ಕಳಂಕಿಸು, ಕಲುಷಿಸು ; ಹೊಲಸೆಬ್ಬಿಸು ; ವಿಷಮಯ, ಮಲಿನ, ದೂಷಿತ, ದೋಷಯುಕ್ತ, —ಮಾಡು (Constitution vitiated by excess ಅತ್ಯಾಚಾರದಿಂದ, ಅಮಿತಿಯಿಂದ,—ಕೆಟ್ಟುಹೋಗಿರುವ ದೇಹಸ್ಥಿತಿ. Vitiated air ಮಲಿನ ವಾಯು, ಕೆಟ್ಟ ಗಾಳಿ. Vitiated mind ಕಲುಷಿತ ಮನಸ್ಸು. Vitiated judgement ದೋಷಯುಕ್ತ ವಿವೇಚನೆ) ; ಊರ್ಜಿತವಾಗದಂತೆ ಮಾಡು, ನಿರರ್ಥಕಮಾಡು, ಅಸಾರ್ಥಕ ಮಾಡು (A word may v. a contract ಒಂದು ಕರಾರನ್ನು ಒಂದು ಮಾತು ನಿರರ್ಥಕ ಮಾಡಿಬಿಡಬಹುದು). **Vitiátion** (ನಾ.); **Vítiator** (ನಾ.)

Vítreous ವಿಟ್ರಿ(ಟ್ರೆ)ಯಸ್ (ಗು.) ಗಾಜಿನ (ಸ್ವಭಾವದ) ; (ಭದುರತೆ, ಗಟ್ಟಿ, ಪಾರದರ್ಶಕತೆ, ರಚನೆ, ಮೊ. ಗಳಲ್ಲಿ) ಗಾಜಿನಂಥ. V. body *or* humour ಕಣ್ಣುಗುಡ್ಡೆಯಲ್ಲಿ ತುಂಬಿರುವ ಪಾರದರ್ಶಕವಾದ ಒಂದು ಲೋಳೆಪದಾರ್ಥ ; ಕಾಚದ್ರವ. V. electricity (Electricity ನೋಡಿ). **Vitreósity** (ನಾ.) ; **Vítreousness** (ನಾ.) ಕಾಚತ್ವ. **Vitréscence** (ನಾ.) ಕಾಚರೂಪವಾಗುವುದು ; ಕಾಚೀ ಭವನ ; ಕಾಚತ್ವ. **Vitréscent** (ಗು.) ಕಾಚರೂಪವಾಗುವ, ಗಾಜಿನಂಥ. **Vítriform** (ಗು.) ಕಾಚರೂಪದ. **Vítrify** (ಕ್ರಿ.) ಗಾಜು—ಆಗು, ಮಾಡು ; ಗಾಜಿನಂತೆ—ಆಗು, ಮಾಡು. **Vitrifáction** (ನಾ.); **Vítrifiable** (ಗು.) ; **Vitrifiability** (ನಾ.) ; **Vitrificátion** (ನಾ.)

Vítriol ವಿಟ್ರಿಯಲ್ (ನಾ.) ಸಲ್ಫ್ಯೂರಿಕ್ ಆಮ್ಲ ಅಥವಾ ಅದರ ಲವಣ; ಗಂಧಕಾಮ್ಲ(ದ ಲವಣ); (ರೂಪ.) ಕಟು ಟೀಕೆ, ಉರಿ ಮಾತು, ಕಟಕಿ ಮಾತು. Black v. ಅಶುದ್ಧವಾದ ಮೈಲತುತ್ತ. Blue *or* copper v. ಮೈಲತುತ್ತ. Oil of v. ತೀಕ್ಷ್ಣ, ಪ್ರಬಲ,—ಗಂಧಕಾಮ್ಲ. V.-throwing (ಪ್ರತೀಕಾರ, ಮೊ. ಕ್ಕಾಗಿ) ಮುಖಕ್ಕೆ ಗಂಧಕಾಮ್ಲ ಎರಚುವುದು. **Vitriólic** (ಗು.); **Vítrioline** (ಗು.) ಗಂಧಕಾಮ್ಲದ; (ರೂಪ.) ಕಟು, ತೀಕ್ಷ್ಣ (V. temper, pen). **Vítriolate** (ಕ್ರಿ. ಸಕ.) ಗಂಧಕಾಮ್ಲವಾಗಿಸು, ಗಂಧಕ ಲವಣವಾಗಿಸು ; ಗಂಧಕಾಮ್ಲ ಪ್ರಭಾವಕ್ಕೆ ಒಳಪಡಿಸು. **Vitriolátion** (ನಾ.); **Vítriolize** (ಕ್ರಿ. ಸಕ.) ಗಂಧಕ ಲವಣವಾಗಿಸು ; ಗಂಧಕಾಮ್ಲದಿಂದ—ಸುಡು, ವಿಷಪ್ರಯೋಗಮಾಡು. **Vítriolizable** (ಗು.) ; **Vitriolizátion** (ನಾ.)

Vítta ವಿಟ (ನಾ. ; ಬ. ವ. -ae —ಟೀ) (ರೋ. ಪ್ರಾ.) (ಪುರೋಹಿತ, ಯಜ್ಞಪಶು, ಪ್ರತಿಮೆ, ಮೊ. ಗಳಿಗೆ ಹಾಕುವ) ಹೂವಿನ ದಂಡೆ, ಮಾಲೆ ; ಬಿಷಪ್ಪಿನ ಟೋಪಿಯ ಚುಂಗು ; (ಸ. ವಿ.) (ಕೆಲವು ಸಸ್ಯಗಳ ಹಣ್ಣಿನಲ್ಲಿಯ) ತೈಲನಾಳ; (ಪ್ರಾ. ವಿ.) ಬಣ್ಣದ ಪಟ್ಟೆ. **Víttate** (ಗು.) ತೈಲನಾಳಗಳುಳ್ಳ ; ಬಣ್ಣದ ಪಟ್ಟೆಗಳುಳ್ಳ.

Vitúperate ವೈ(ವಿ)ಟ್ಯೂಪೆರೇಟ್ (ಕ್ರಿ. ಸಕ.) ಬೈಗುಳು ಸುರಿ, ದೂಷಣೆ ಮಾಡು, ನಿಂದಿಸು. **Vituperátion** (ನಾ.) ; **Vitúperative** (ಗು.) ; **Vitúperatively** (ಕ್ರಿ. ವಿ.) ; **Vituperátor** (ನಾ.)

Víva[1] (It.) ವೀವ(ವಾ) (ಭಾವ. ಅವ್ಯ., ನಾ.) ನಿಡುಗಾಲ ಬಾಳಲಿ ! ಬಾಳ್ಗೆ ! (ಎಂಬ ಉದ್ಗಾರ)

Víva[2] ವೈವ (ನಾ.). **Viva voce** ನೋಡಿ.

Vivace (It.) ವೀವಾಚೆ (ಕ್ರಿ. ವಿ.) (ಸಂ.) ಗೆಲವಾಗಿ, ಉತ್ಸಾಹದಿಂದ.

Vivácious ವೈ(ವಿ)ವೇಷಸ್ (ಗು.) ಗೆಲವಾದ, ಚಟುಲ, ಚಾಕಚಕ್ಯದ, ಉತ್ಸಾಹದ, ಉಲ್ಲಾಸದ, ಚೈತನ್ಯ ಚಿಮ್ಮುತ್ತಿರುವ (V. woman ಚಟುಲಗಾರ್ತಿ) ; (ಸ. ವಿ.) ಗಟ್ಟಿ ಜೀವದ, ಚಳಿಯಲ್ಲಿ ಬದುಕಬಲ್ಲ, ಬಹುವರ್ಷ ಬಾಳುವ. **Viváciously** (ಕ್ರಿ. ವಿ.) ; **Vivácity** —ವ್ಯಾಸಿಟಿ (ನಾ.) ಗೆಲವು, ಉತ್ಸಾಹ, ಉಲ್ಲಾಸ, ಚಾಕಚಕ್ಯ.

Vivandiere (F) ವೀವಾಂಡ್ಯೇರ್ (ನಾ., ಸ್ತ್ರೀ.) (ಮು., ಫ್ರೆಂಚ್ ಸೈನ್ಯದಲ್ಲಿ) ಸೈನಿಕರಿಗೆ ತಿಂಡಿತೀರ್ಥ ಮಾರುವವಳು, ಶಿಬಿರ ವ್ಯಾಪಾರ ಗಿತ್ತಿ.

Vivárium ವೈ(ವಿ)ವೇ(ಅ)ರಿಯಂ (ನಾ. ; ಬ. ವ. -ria —ರಿಯ) ಜೀವಂತ ಪ್ರಾಣಿಗಳನ್ನು ಅವುಗಳ ಸ್ವಾಭಾವಿಕ ಪರಿಸ್ಥಿತಿಯನ್ನು ಕಲ್ಪಿಸಿ ಗಾಜುಪೆಟ್ಟಿಗೆಗಳಲ್ಲಾಗಲಿ ಉದ್ಯಾನಗಳಲ್ಲಾಗಲಿ ಇಡಲು ಕೃತಕವಾಗಿ ಮಾಡಿದ ಸ್ಥಳ : ಪ್ರಾಣಿ—ಶಾಲೆ, ವನ.

Vívat (L) ವೈವ್ಯಾಟ್ (ಭಾವ. ಅವ್ಯ., ನಾ.) ಚಿರಕಾಲ ಬಾಳಲಿ ! ಬಾಳ್ಗೆ ! (ಎಂಬ ಉದ್ಗಾರ) (V. rex, regina ರಾಜ, ರಾಣಿ, ಚಿರಂಜೀವಿಯಾಗಿರಲಿ, ಜೀವತು)

Víva vóce (L) ವೈವ ವೋಸಿ(ಸೆ) (ಕ್ರಿ. ವಿ., ಗು., ನಾ.) ಬಾಯಿ ಮಾತಿನ(ಲ್ಲಿ), ವಾಚಾ. (ನಾ. ; ಬಳ. ಮಾ. ಸಂಕ್ಷಿಪ್ತ: Viva) ವಾಚಾ ಪರೀಕ್ಷೆ.

Vive (F) ವೀವ್ (ಭಾವ. ಅವ್ಯ.) ಚಿರಕಾಲ ಬಾಳಲಿ ! ಬಾಳ್ಗೆ ! ಜಯ. (V. le roi ರಾಜನಿಗೆ ಜಯವಾಗಲಿ ! ದೊರೆ ಬಾಳ್ಗೆ !)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Vívers ವೈವರ್ಸ್ (ನಾ., ಬ. ವ.) (ಸ್ಕಾ. ಪ್ರ.) ಅನ್ನ, ಆಹಾರ (ಸಾಮಗ್ರಿ), ತಿಂಡಿ.

Vives ವೈವ್ಸ್ (ನಾ.) (ಮು., ಕುದುರೆಮರಿಗಳ) ಕಿವಿ ರೋಗ.

Vívid ವಿವಿಡ್ (ಗು.) (ಬೆಳಕು, ಬಣ್ಣ, ಮೊ. ಗಳ ವಿಷಯದಲ್ಲಿ) ಹೊಳಪಿನ, ಉಜ್ಜ್ವಲವಾದ, ಪ್ರಕಾಶಮಾನವಾದ, ಎದ್ದುಕಾಣುವ (V. flash of lightning); (ಮನಶ್ಶಕ್ತಿ, ಭಾವನೆ, ಮೊ. ಗಳ ವಿಷಯದಲ್ಲಿ) ಸ್ಪಷ್ಟ, ಸ್ಫುಟ, ಕಣ್ಣಿಗೆ ಕಟ್ಟುವಂಥ, ವಿಶದ, ಸುವ್ಯಕ್ತ (V. imagination, description, recollection ವಿಶದ ಭಾವನೆ, ಸ್ಪಷ್ಟ ವರ್ಣನೆ, ಸ್ಫುಟ ಸ್ಮರಣೆ). **Vívidly** (ಕ್ರಿ. ವಿ.) ; **Vívidness** (ನಾ.)

Vívify ವಿವಿಫೈ (ಕ್ರಿ. ಸಕ.) ಜೀವ—ಹೊಯ್ಯಿ, ತುಂಬು ; ಚೈತನ್ಯಗೊಳಿಸು ; ಉಜ್ಜೀವಿಸು ; (ರೂಪ.) ಕಳೆದುಂಬು, ಹುರಿದುಂಬಿಸು ; ವಿಶದಪಡಿಸು, ಸ್ಫುಟಮಾಡು.

Vivíparous ವೈ(ವಿ)ವಿಪರಸ್ (ಗು.) (ಪ್ರಾ. ವಿ.) ಮರಿಹಾಕುವ, ಮಗು ಹೆರುವ ; ಜರಾಯುಜ (ಎದುರು ಪದ : Oviparous) ; (ಸ. ವಿ.) ತಾಯಿ ಸಸಿಗೆ ಅಂಟಿಕೊಂಡಿರುವಾಗಲೆ ಮೊಳೆಯುವಂಥ ಗೆಡ್ಡೆಗಳನ್ನಾಗಲಿ ಬೀಜಗಳನ್ನಾಗಲಿ ಬಿಡುವ : ಕಂದು ಬಿಡುವ, ಅಂಕುರಜನಿ. **Vivìparously** (ಕ್ರಿ. ವಿ.) ; **Vivíparousness** (ನಾ.) ; **Viviparity** (ನಾ.) ಜರಾಯುಜತ್ವ.

Vívisect ವಿವಿಸೆಕ್ಟ್ (ಕ್ರಿ. ಸಕ.) ಜೀವಚ್ಛೇದ, ಜೀವಂತ ದೇಹಚ್ಛೇದ, ಪ್ರಾಣಿಚ್ಛೇದ, —ಮಾಡು ; (ರೂಪ.) (ನಿರ್ದಯ ಪರೀಕ್ಷೆ, ಕಟು ಟೀಕೆ, ಮೊ. ಗಳಿಂದ) ಛಿದ್ರ ಛಿದ್ರಮಾಡು, ಕತ್ತರಿಸಿಹಾಕಿಬಿಡು. **Vivisection** (ನಾ.) (ವೈದ್ಯಕೀಯ ಪ್ರಯೋಗಗಳಿಗಾಗಿ) ಜೀವಂತ ದೇಹಚ್ಛೇದನ ; ಪ್ರಾಣಿಚ್ಛೇದನ. ರೋಗವಿಷ ಚುಚ್ಚುವಿಕೆ. **Vivisectional** (ಗು.) ; **Vivisectionist** (ನಾ.) ಪ್ರಾಣಿಚ್ಛೇದ ವಾದಿ. **Vívisector** (ನಾ.) ಪ್ರಾಣಿಚ್ಛೇದಕ.

Vívo (It.) ವೀವೋ (ಕ್ರಿ. ವಿ.) (ಸಂ.) ಗೆಲವಾಗಿ, ಉತ್ಸಾಹದಿಂದ.

Víxen ವಿಕ್ಸನ್ (ನಾ.) ಹೆಣ್ಣು ನರಿ ; ಜಗಳಗಂಟಿ (ಹೆಂಗಸು), ತಾಟಕಿತ್ತಿ, ಬಜಾರಿ. **Víxenish** (ಗು.) ; **Víxenly** (ಕ್ರಿ. ವಿ.)

Viz. **Videlicet** ನೋಡಿ.

Vízard. **Visor** ನೋಡಿ.

Vizcácha. **Viscacha** ನೋಡಿ.

Vizí(e)r ವಿಸ್ಯರ್, ವಿಸಿ(ೕ)ಯರ್ (ನಾ.) (ಮಹಮ್ಮದೀಯ ದೇಶಗಳಲ್ಲಿ) ಸಚಿವ, ಮಂತ್ರಿ, ವಜೀರ (Grand v. ಮುಖ್ಯ ಮಂತ್ರಿ). **Vizí(e)rate** (ನಾ.) ವಜೀರ—ಪದವಿ, ಅಧಿಕಾರ (ಕಾಲ), ಪ್ರಾಂತ. **Vizí(e)rship** (ನಾ.) ; **Vizí(e)rial** (ಗು.)

Vlach ವ್ಲಾಕ್, ವ್ಲ್ಯಾಕ್ (ಗು., ನಾ.) ಯೂರೋಪಿನ ಆಗ್ನೇಯ ಭಾಗ ನಿವಾಸಿಗಳಾದ ಲ್ಯಾಟಿನ್ ವರ್ಗದ ಭಾಷೆಯನ್ನಾಡುವ ಒಂದು ಜನಾಂಗದ(ವನು) ; ವಾಲೇಕಿಯದ(ವನು), ರುಮೇನಿಯದ(ವನು)

Vócable ವೋಕಬ್‌ಲ್ (ನಾ.) ಮಾತು, ಪದ, ಶಬ್ದ, ವಾಚಕ (ಅರ್ಥಕ್ಕಿಂತ ಹೆಚ್ಚಾಗಿ ರೂಪದ ದೃಷ್ಟಿಯಿಂದ). **Vocábulary** ವೊಕ್ಯಾಬ್ಯುಲರಿ (ನಾ.) (ಒಂದು ಭಾಷೆಯಲ್ಲಾಗಲಿ, ಒಬ್ಬ ಗ್ರಂಥಕರ್ತನಿಂದಾಗಲಿ, ಒಂದು ಗ್ರಂಥದಲ್ಲಾಗಲಿ, ಒಂದು ವಿಜ್ಞಾನ ಅಥವಾ ಶಾಸ್ತ್ರದಲ್ಲಾಗಲಿ, ಪ್ರಯೋಗವಾಗುವ) ಅರ್ಥ ವಿವರಿಸಿ ಅಕಾರಾದಿಯಾಗಿ ಪಟ್ಟಿಮಾಡಿದ ಪದಗಳು : ಶಬ್ದಕೋಶ ; (ಒಬ್ಬ ಕವಿ, ಮೊ. ರ, ಒಂದು ಭಾಷೆಯ) ಶಬ್ದ—ಸಂಪತ್ತಿ, ಭಂಡಾರ (A word not found in the Chaucerian v. ಚಾಸರ್ ಕವಿಯ ಶಬ್ದಭಂಡಾರದಲ್ಲಿಲ್ಲದ ಮಾತು. The ever-increasing scientific v. ಸದಾ ಬೆಳೆಯುತ್ತಿರುವ ವಿಜ್ಞಾನ ಶಬ್ದಭಂಡಾರ. His v. is limited ಅವನ ಶಬ್ದಸಂಪತ್ತಿ ಮಿತವಾಗಿದೆ)

Vócal ವೋಕಲ್ (ಗು., ನಾ.) ಉಚ್ಚಾರದ, ಬಾಯಿಮಾತಿನ, ವಾಕ್ಕಿನ, ವಾಚಿಕ, ಧ್ವನಿಯ, ನುಡಿಯ, ಶಬ್ದದ [V. communication ಬಾಯಿಮಾತಿನ—ಸುದ್ದಿ, ವರದಿ. V. auscultation ಎದೆಯ ಗೋಡೆಗಳ ಮುಖಾಂತರ ಶಬ್ದ ಧ್ವನಿಯನ್ನು ಆಲಿಸುವುದು : ಶಬ್ದಾಕರ್ಣನ. V. chords (Chord[1] ನೋಡಿ). V. music ಬಾಯಿ ಸಂಗೀತ, ಹಾಡುಗಾರಿಕೆ, ಗಾಯನ (ಕೃತಿ). V. thrill *or* fremitus ಶಬ್ದೋಚ್ಚಾರದಲ್ಲಿ ಕಂಡುಬರುವ ಎದೆಯ ಗೋಡೆಗಳ ಕಂಪನ : ಶಬ್ದಕಂಪನ] ; (ಕಾವ್ಯ ; ಮರ, ನೀರು, ಮೊ. ಗಳ ವಿಷಯದಲ್ಲಿ) ಧ್ವನಿಮಾಡುವ, ಶಬ್ದಮಾಡುವ ; (ಶಿಕ್ಷಾಶಾಸ್ತ್ರ) ಮೃದು, ಸ್ವರ ಲಕ್ಷಣದ, ಸ್ವರದ. (ನಾ.) ಸ್ವರ. (ರೋ. ಕ್ಯಾ.) (ಕೆಲವು ಚುನಾವಣೆಗಳಲ್ಲಿ) ಅಭಿಮತಕೊಡುವ ಹಕ್ಕುಳ್ಳವನು, ಮತದಾರ. **Vocálic** ವೊಕ್ಯಾ— (ಗು.) (ಕಂಠ) ಸ್ವರದ, ಸ್ವರಮಯ ; ಕಂಠ ಸ್ವರಗಳಿಂದ—ಕೂಡಿದ, ತುಂಬಿದ. **Vócalism** ವೋಕ— (ನಾ.) (ಮಾತಾಡುವುದರಲ್ಲಾಗಲಿ, ಹಾಡುವುದರಲ್ಲಾಗಲಿ) ಉಚ್ಚಾರ, ನುಡಿತ, ಪಲುಕು ; ಸ್ವರ (ಧ್ವನಿ). **Vócalist** (ನಾ.) ಹಾಡುಗಾರ, ಗಾಯಕ (ಎದುರು ಪದ : Instrumentalist). **Vocálity** ವೊಕ್ಯಾ— (ನಾ.) ಉಚ್ಚಾರ—ಶಕ್ತಿ, ಗುಣ; ಉಚ್ಚಾರತೆ, ವಾಚ್ಯತೆ; (ಶಿಕ್ಷಾಶಾಸ್ತ್ರ) ಮೃದುತ್ವ, ಸ್ವರಗುಣ. **Vócalize** ವೋಕ— (ಕ್ರಿ.) ಧ್ವನಿ, ಶಬ್ದ, —ಮಾಡು ; ಉಚ್ಚರಿಸು; ಪಲುಕು ; ಮೃದು (ವರ್ಣ)ವಾಗಿ ಉಚ್ಚರಿಸು (F is vocalized into v.) ; (ಹೀಬ್ರು, ಮೊ. ಭಾಷೆಯನ್ನು) ಸ್ವರಚಿಹ್ನೆ ಹಾಕಿ ಬರೆ, ಸ್ವರಚಿಹ್ನೆ ಹಾಕು ; (ಹಾಸ್ಯ ಪ್ರ.) ಮಾತಾಡು, ಹಾಡು, ಕೂಗು, ಒದರು. **Vocalizátion** (ನಾ.) ; **Vócally** (ಕ್ರಿ. ವಿ.)

Vocátion ವೊಕೇಷನ್ (ನಾ.) (ಉದ್ಯೋಗ, ಮೊ. ಕ್ಕೆ) ದೈವಪ್ರೇರಣೆ, ಅಂತಃಪ್ರೇರಣೆ, ಪ್ರವೃತ್ತಿ, ಪ್ರೇರಣೆ [Felt no v. for the ministry ಪಾದ್ರಿ ಕೆಲಸಕ್ಕೆ, (ಕ್ರೈಸ್ತ) ಪುರೋಹಿತ ವೃತ್ತಿಗೆ, —ಅಂತಃಪ್ರೇರಣೆಯಿರಲಿಲ್ಲ. Has never had the sense of v. ದೈವ ಪ್ರೇರಣೆ ಎಂಬ ಭಾವನೆ ಎಂದೂ ಇರಲಿಲ್ಲ. Little *or* no v. to literature ಸಾಹಿತ್ಯದ ಕಡೆಗೆ ಪ್ರವೃತ್ತಿ (ಅಷ್ಟೇನೂ) ಇಲ್ಲ] ; ಉದ್ಯೋಗ, ವೃತ್ತಿ, ಜೀವನೋಪಾಯ, ಕಸಬು (Mechanical vocations ಯಂತ್ರ ಕಸಬುಗಳು. Mistook his v. ತನಗೆ ಒಗ್ಗುವ ವೃತ್ತಿಯನ್ನು ಹಿಡಿಯಲಿಲ್ಲ, ತಿಳಿದುಕೊಳ್ಳಲಿಲ್ಲ). **Vocátional** (ಗು.) ; **Vocátionally** (ಕ್ರಿ. ವಿ.)

Vócative ವಾಕಟಿವ್ (ಗು., ನಾ.) (ವ್ಯಾ.) ಸಂಬೋಧನೆಯ. (ನಾ.) ಸಂಬೋಧನಾ ವಿಭಕ್ತಿ.

Vocíferate ವೊಸಿಫರೇಟ್ (ಕ್ರಿ. ಸಕ.) ಗಟ್ಟಿಯಾಗಿ ಹೇಳು, ಕೂಗಾಡು, ಕೂಗಿಕೊ, ಅರಚು, ಒದರು, ಬೊಬ್ಬೆಯಿಡು. **Vocíferance** (ನಾ.) (ವಿರ. ಪ್ರ.) ; **Vocíferant** (ಗು., ನಾ.) ; **Vociferátion** (ನಾ.) ; **Vociferátor** (ನಾ.) ; **Vocíferous** (ಗು.) (ವ್ಯಕ್ತಿ, ಮಾತು, ಮೊ. ಗಳ ವಿಷಯದಲ್ಲಿ) ಕೂಗಾಟದ, ಅಬ್ಬರದ, ಬೊಬ್ಬೆಯಿಡುವ. **Vocíferously** (ಕ್ರಿ. ವಿ.) ; **Vocíferousness** (ನಾ.)

Vódka ವಾ(ವೊ)ಡ್ಕ (ನಾ.) ರಷ್ಯಾ ದೇಶದ ಒಂದು ತೀಕ್ಷ್ಣ ಬ್ರಾಂದಿ ಮದ್ಯ.

Voe ವೋ (ನಾ.) (ಪ್ರಾಂ. ಪ್ರ.) ಸಣ್ಣ ಕೊಲ್ಲಿ, ಖಾರಿ.

Vogue ವೋಗ್ (ನಾ., ಕ್ರಿ. ಅಕ.) (ಈಗ ಮು., ಗ್ರಾಂ.) ಜನಮೆಚ್ಚು, ಜನಬಳಕೆ, ವಾಡಿಕೆ (The v. of large hats); (ಜನಸಾಮಾನ್ಯದಲ್ಲಿ) ರೂಢಿ, ಪದ್ಧತಿ (Has had a great v. ; In v. ಬಳಕೆಯಲ್ಲಿ, ಪ್ರಚಾರದಲ್ಲಿ). (ಕ್ರಿ.) V. la galere (—ಲಾ ಗಾಲೇರ್) (ಆದದ್ದಾಗಲಿ) ಹೀಗೆಯೇ—ಹೋಗೋಣ, ನಡೆಯಲಿ.

Voice ವಾಯ್ಸ್ (ನಾ., ಕ್ರಿ. ಸಕ.) (ಮು., ಮನುಷ್ಯರ) ಉಚ್ಚಾರದ ಧ್ವನಿ; (ಕಂಠ) ಸ್ವರ, ಉಸಿರು, ಕಂಠ, ಶಾರೀರ [Heard a v. ಯಾರೋ ಮಾತಾಡಿದ್ದು, ಕೂಗಿದ್ದು, ಕೇಳಿತು. Did not recognize his v. ಅವನ ಧ್ವನಿಯನ್ನು ಗುರುತು ಹಿಡಿಯಲಿಲ್ಲ. Cried out in a loud v. ದೊಡ್ಡ ಗಂಟಲಲ್ಲಿ, ದೊಡ್ಡ ಧ್ವನಿಯಿಂದ, —ಕೂಗಿದನು. Has lost her v. ಆಕೆಯ ಶಾರೀರ ಕೆಟ್ಟುಹೋಗಿದೆ. Is not

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

in v. (ಹಾಡಲು, ಮಾತಾಡಲು) ಗಂಟಲು ಸರಿಯಾಗಿಲ್ಲ. Chest, head, -v. (ಆಯಾ ಪದ ನೋಡಿ). The v. of the cuckoo ಕೋಗಿಲೆಯ ಸ್ವರ. Veiled v. (ರಚನ ವಿಕಾರ, ಮೊ. ಕಾರಣವಾಗಿ) ಮಬ್ಬುದನಿ. (ರೂಪ.) Sea, storm, lifts up its v. ಕಡಲು, ಬಿರುಗಾಳಿ, —ಭೋರ್ಗರೆಯುತ್ತದೆ]; ಮಾತು, ವಾಕ್ಕು, ವಾಣಿ, ಅಭಿಪ್ರಾಯ(ಕೊಡುವ ಹಕ್ಕು) [Gave v. to his indignation ತನ್ನ ರೋಷವನ್ನು ಕಾರಿದನು. Took it for the v. of God (ಸ್ವಾಭಾವಿಕ ಘಟನೆ, ದುರಂತ, ಜನರ ಕೂಗು, ಮೊ. ಗಳ ವಿಷಯದಲ್ಲಿ): ದೈವವಾಣಿ ಯೆಂದು ಭಾವಿಸಿದನು. I count on your v. ತಮ್ಮ ಬೆಂಬಲವನ್ನು, ವಾಕ್ಸಹಾಯವನ್ನು,—ನೆಚ್ಚಿದ್ದೇನೆ. I have no v. in the matter ಆ ವಿಷಯದಲ್ಲಿ ಮಾತನಾಡುವುದಕ್ಕೆ ನನಗೆ ಹಕ್ಕಿಲ್ಲ, ಅವಕಾಶವಿಲ್ಲ. Refused with one v. ಒಕ್ಕೊರಲಿನಿಂದ, ಒಮ್ಮತದಿಂದ,—ನಿರಾಕರಿಸಿದರು. (ಪ್ರಾಚೀ. ಪ್ರ., ಅಲಂ.) My v. is for peace ಶಾಂತಿ (ಮಾಡಿಕೊಳ್ಳ)ಬೇಕೆಂಬುದು ನನ್ನ ಮತ, ನನ್ನ ಅಭಿಪ್ರಾಯ]; (ಶಿಕ್ಷಾಶಾಸ್ತ್ರ) ಧ್ವನಿತಂತುವಿನ ಅನುರಣನದಿಂದ ಅಥವಾ ಕಂಪನದಿಂದ ಹುಟ್ಟುವ ಧ್ವನಿ: ಮೃದು ವರ್ಣ; (ವ್ಯಾ.) ಕ್ರಿಯಾಪದ ಪ್ರಯೋಗ (Active, passive, middle, v. ಕರ್ತರಿ, ಕರ್ಮಣಿ, ಭಾವೇ, ಪ್ರಯೋಗ). (ಕ್ರಿ.) ಮಾತಿನಲ್ಲಿ ವ್ಯಕ್ತಪಡಿಸು, ಹೇಳು, ಉಸಿರು [I am voicing the general sentiment ನಾನು (ಸಭೆಯ, ಜನರ) ಒಟ್ಟಿನ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ, ಹೇಳುತ್ತಿದ್ದೇನೆ]; (ಸಂ.) (ವಾದ್ಯ, ಮೊ. ಗಳ) ಧ್ವನಿ, ಶ್ರುತಿ, —ಸರಿಪಡಿಸು; (ಶಿಕ್ಷಾಶಾಸ್ತ್ರ) ಮೃದುವಾಗಿ ಉಚ್ಚರಿಸು (ಮು., ಧೂ. ಕ್ಯ. ನಲ್ಲಿ). **Voiced** ವಾಯ್ಸ್ಟ (ಗು.) ಧ್ವನಿಯುಳ್ಳ; ಮೃದುವಾಗಿ ಉಚ್ಚರಿಸಿದ, ಮೃದೂಚ್ಚಾರದ. **Voiceful** (ಗು.) (ಕಾವ್ಯ) ನಾದಪೂರ್ಣ, ನಾದ ಗುಂಫನವುಳ್ಳ. **Voiceless** (ಗು.) ಮಾತಿಲ್ಲದ, ಮೂಕ; (ಶಿಕ್ಷಾಶಾಸ್ತ್ರ) ಮೃದೂಚ್ಚಾರವಿಲ್ಲದ. **Voicelessness** (ನಾ.)

Void ವಾಯ್ಡ್ (ಗು., ನಾ., ಕ್ರಿ. ಸಕ.) ಬರಿದು, ಶೂನ್ಯ (V. space ಶೂನ್ಯ ಪ್ರದೇಶ); (ಅಧಿಕಾರಸ್ಥಾನದ ವಿಷಯದಲ್ಲಿ) ತೆರಪಾಗಿರುವ, ಖಾಲಿ (Bishopric fell v.); (ಮು., ನ್ಯಾ. ಶಾ.; ಕರಾರು, ವಾಗ್ದಾನ, ಮೊ. ಗಳ ವಿಷಯದಲ್ಲಿ) ಅನೂರ್ಜಿತ, ನಿರರ್ಥಕ (Null & v.); (ಕಾವ್ಯ, ಅಲಂ.) ಪರಿಣಾಮಕಾರಿಯಲ್ಲದ, ಪ್ರಭಾವವಿಲ್ಲದ, ನಿಷ್ಫಲ, ನಿಷ್ಪ್ರಯೋಜಕ; [V. of ಇಲ್ಲದ, ರಹಿತ, ಶೂನ್ಯ (Proposal v. of sense ಅರ್ಥವಿಲ್ಲದ, ವಿವೇಕಶೂನ್ಯ, —ಸೂಚನೆ. His style is v. of affectation ಅವನ ಶೈಲಿಯಲ್ಲಿ ಕೃತಕತೆ ಇಲ್ಲ)]. (ನಾ.) ಶೂನ್ಯಸ್ಥಳ [Vanished into the v. ಬಯಲಾದನು, ಅಂತರ್ಧಾನನಾದನು. (ರೂಪ.) The aching v. of the heart ಹೃದಯದ ಕೊರೆಯುತ್ತಿರುವ ಶೂನ್ಯತೆ. Cannot fill the v. made by death ಮರಣದಿಂದ ಆದ ಶೂನ್ಯತೆಯನ್ನು ತುಂಬಲು ಆಗುವುದಿಲ್ಲ]. (ಕ್ರಿ.) ನಿರರ್ಥಕ, ಅನೂರ್ಜಿತ, ರದ್ದು, —ಮಾಡು; (ಮಲ, ಮೊ. ನ್ನು) ವಿಸರ್ಜಿಸು; (ಪ್ರಾಚೀ. ಪ್ರ.) ಬಿಟ್ಟುಹೋಗು, ಖಾಲಿಮಾಡು. **Voidable** (ಗು.); **Voidance** (ನಾ.) (ಕ್ರಿಯಾರ್ಥಗಳಲ್ಲಿ); (ಧರ್ಮಾದಾಯ, ಮೊ. ಗಳ) ಅನುಭೋಗ ತಪ್ಪಿಸುವುದು; (—ಮೊ. ಗಳಿಂದ) ಉಚ್ಚಾಟನೆ; (ಮಠವೃತ್ತಿ, ಮೊ. ಗಳಲ್ಲಿ) ತೆರಪು, ಖಾಲಿ. **Voided** (ಗು.) (ಕ್ರಿಯಾರ್ಥಗಳಲ್ಲಿ); (ವಂಶ ಲಾಂಛನ) ಒಳ ಭಾಗವನ್ನು ಕೊರೆದುಹಾಕಿದ, ತೆರಪುಬಿಟ್ಟ. **Voidly** (ಕ್ರಿ. ವಿ.); **Voidness** (ನಾ.)

Voile ವಾಯ್'ಲ್, ವ್ವಾರ್ (ನಾ.) ತೆಳುವೂ ಅರೆಪಾರದರ್ಶಕವೂ ಆದ (ಹತ್ತಿಯ, ಉಣ್ಣೆಯ, ಅಥವಾ ರೇಷ್ಮೆಯ) ಬಟ್ಟೆ: ವಾಯ್'ಲ್ ಬಟ್ಟೆ.

Voiturétte (F) ವ್ವಾಟ್ಯುರೆಟ್ (ನಾ.) ಸಣ್ಣ (ಮೋಟಾರು) ಬಂಡಿ.

Vólant ವೋಲಂಟ್ (ಗು.) (ಪ್ರಾ. ವಿ.) ಹಾರುವ, ಹಾರಬಲ್ಲ; (ವಂಶ ಲಾಂಛನ) ಹಾರುತ್ತಿರುವಂತೆ ಚಿತ್ರಿಸಿರುವ; (ಕಾವ್ಯ) ಚುರುಕಾದ, ಕ್ಷಿಪ್ರ, ದ್ರುತ.

Volapúk ವೋಲಪ್ಯೂಕ್, ವಾಲಪುಕ್ (ನಾ.) ಸು., ೧೮೭೯ರಲ್ಲಿ Johann Martin Schleyer ಎಂಬಾತನು ಕಲ್ಪಿಸಿದ ಒಂದು ಕೃತಕ ಅಂತರ ರಾಷ್ಟ್ರೀಯ ಭಾಷೆ. **Volapúkist** (ನಾ.) ವೋಲಪ್ಯೂಕ್ ಭಾಷಾ ವಾದಿ.

Vólar ವೋಲರ್ (ಗು.) (ಅಂ. ರ. ಶಾ.) ಅಂಗೈಯ, ಅಂಗಾಲಿನ.

Vólatile ವಾಲಟೈ(ಟಿ)ಲ್ (ಗು.) (ಸಾಮಾನ್ಯ ಶಾಖಗಳಲ್ಲಿಯೆ) ಬೇಗ ಹಬೆ, ಬಾಷ್ಪ, —ಆಗುವ [V. salts ಬಾಷ್ಪ (ಗುಣವುಳ್ಳ) ಲವಣಗಳು. V. oil = Essential oil (Essence ನೋಡಿ)]; (ರೂಪ.) ಲಘು ಮನೋಭಾವದ, ಹುಡುಗಾಟಿಕೆಯ, ಗೆಲವಿನ, ಉಲ್ಲಾಸದ, ಕ್ಷಣಿಕೋತ್ಸಾಹದ, ಕ್ಷಣಿಕ, ಚಂಚಲ, ತರಳ (V. wit, writer. V. disposition). **Vólatileness** (ನಾ.); **Volatílity** (ನಾ.); **Volátilize** ವಾಲ(ವೊಲ್ಯಾ)ಟಿಲೈಸ್ (ಕ್ರಿ.) ಹಬೆ, ಬಾಷ್ಪ, —ಆಗು, ಮಾಡು; ಇಮರು, ಇಮರಿಸು. **Volátilizable** (ಗು.); **Volatilizátion** (ನಾ.)

Volcáno ವಾಲ್ಕೇನೊ (ನಾ., ಬ. ವ. -oes) ಅಗ್ನಿಪರ್ವತ, ಜ್ವಾಲಾಮುಖಿ [Active, dormant, extinct, v. ಜಾಗೃತ, ಸುಪ್ತ, ಲುಪ್ತ,—ಜ್ವಾಲಾಮುಖಿ. Submarine v. ಸಮುದ್ರ(ದೊಳಗಿನಿಂದ ಮೇಲಕ್ಕೆ ಬೆಳೆದ) ಜ್ವಾಲಾಮುಖಿ; ಬಡಬಾಗ್ನಿ ಪರ್ವತ. V.-ship ಮತ್ತೊಂದರೊಡನೆ ತಗುಲಿದಾಗ ಸಿಡಿಯುವಂತೆ ದಾಹ್ಯ ಪದಾರ್ಥಗಳನ್ನು ತುಂಬಿದ ಹಡಗು: ಜ್ವಾಲಾಮುಖಿ ನೌಕೆ]. **Volcánic** ವಾಲ್ಕ್ಯಾನಿಕ್ (ಗು.) ಅಗ್ನಿಪರ್ವತದ(ಂಥ), ಜ್ವಾಲಾಮುಖಿಯಿಂದಾದ [V. bomb ಸಾ., ಗುಂಡಾಗಿಯೂ ಕೆಲವು ವೇಳೆ ಪೊಳ್ಳಾಗಿಯೂ ಇರುವ, ಜ್ವಾಲಾಮುಖಿಯ ಶಿಲಾಪ್ರವಾಹದ ಗುಂಡು: ಜ್ವಾಲಾಮುಖಿ ಗುಂಡು. V. glass ಕಾಚಶಿಲೆ(= Obsidian)(ಆ ಪದ ನೋಡಿ)]. **Volcánically** (ಕ್ರಿ. ವಿ.); **Volcanícity** (ನಾ.), **Vólcanism** ವಾಲ್ಕನಿಸಂ (ನಾ.) ಜ್ವಾಲಾಮುಖಿ—ಕ್ರಿಯೆ, ವ್ಯಾಪಾರ, ಸ್ಥಿತಿ; ಜ್ವಾಲಾಮುಖಿತ್ವ. **Vólcanist** (ನಾ.) ಕೆಲವು ಭೂರಚನೆಗಳು ಜ್ವಾಲಾಮುಖಿಯ ಪರಿಣಾಮದಿಂದಾದುವೆಂದು ಹೇಳುವವನು: ಜ್ವಾಲಾಮುಖಿ ವಾದಿ; ಜ್ವಾಲಾಮುಖಿ ಶಾಸ್ತ್ರಜ್ಞ. **Volcanólogy** ವಾಲ್ಕನಾಲೊಜಿ (ನಾ.) ಜ್ವಾಲಾಮುಖಿ ಶಾಸ್ತ್ರ. **Volcanólogist** (ನಾ.); **Volcanológical** —ನೊಲಾಜಿಕಲ್ (ಗು.)

Vole[1] ವೋಲ್ (ನಾ., ಕ್ರಿ. ಅಕ.) (ಕೆಲವು ಇಸ್ಪೀಟಾಟಗಳಲ್ಲಿ) ಎಲ್ಲ ಪಟ್ಟುಗಳನ್ನೂ ಗೆಲ್ಲು(ವುದು)

Vole[2] ವೋಲ್ (ನಾ.) ಇಲಿಯಂಥ ಹಲವು ಬಗೆಯ ಪ್ರಾಣಿ. Water-v. ಈ ಜಾತಿಯ ದೊಡ್ಡ ನೀರ ಇಲಿ.

Vólet (F) ವಾಲೇ (ನಾ.) (ಚಿತ್ರಕಲೆ) ಮೂರು ಫಲಕದ ಚಿತ್ರದಲ್ಲಿಯ ಪಕ್ಕ ಫಲಕ(ಗಳಲ್ಲೊಂದು): ಪಕ್ಷ ಫಲಕ.

Vólitant ವಾಲಿಟಂಟ್ (ಗು.) (ಪ್ರಾ. ವಿ.) ಹಾರುವ, ಹಾರಬಲ್ಲ.

Volítion ವೊಲಿಷನ್ (ನಾ.) ಇಚ್ಛೆ(ಪಡುವುದು), ಸಂಕಲ್ಪ (ಮಾಡುವುದು); ಇಚ್ಛಾ—ಪ್ರವೃತ್ತಿ, ಶಕ್ತಿ. **Volítional** (ಗು.); **Volítionally** (ಕ್ರಿ. ವಿ.); **Volítionary** (ಗು.); **Volítionless** (ಗು.); **Vólitive** ವಾಲಿಟಿವ್ (ಗು.) ಇಚ್ಛೆಯ, ಸಂಕಲ್ಪದ, ಇಚ್ಛಾಶಕ್ತಿಯ.

Vólkslied (G) ಫೋಲ್ಕ್‌ಸ್ಲೀಟ್ (ನಾ.) ಜನಪದ ಗೀತೆ, ನಾಡ ಪದ.

Vólley ವಾಲಿ (ನಾ., ಕ್ರಿ.) ಒಟ್ಟಾಗಿ, ಒಮ್ಮೆಗೆ, —ಕ್ಷಿಪಣಿಗಳನ್ನು ಹಾರಿಸುವುದು, ಬಿಡುವುದು; ಹೀಗೆ ಹಾರಿಸಿದ, ಬಿಟ್ಟ, ಕ್ಷಿಪಣಿಗಳು; (ಬಾಣ, ಗುಂಡು, ಮೊ. ಗಳ) ಸುರಿಮಳೆ, ವೃಷ್ಟಿ; (ರೂಪ.) (ಆಣೆ, ಪ್ರಶ್ನೆ, ಮೊ. ಗಳ) ಮೇಲಿಂದಮೇಲೆ, ಬಡಬಡನೆ, —ಸುರಿತ; ಪುಂಖಾನುಪುಂಖ ಪ್ರಯೋಗ (*Of* ಉಪ. ದೊಡನೆ); (ಟೆನಿಸ್ ಆಟದಲ್ಲಿ) ಚೆಂಡು ನೆಲ ತಾಕುವ ಮೊದಲೆ ಅದನ್ನು ಹಿಂದಕ್ಕೆ ಹೊಡೆಯುವುದು; (ಕ್ರಿಕೆಟ್) ನೆಲ ತಾಕದೆಯೆ ಗುರಿಕೋಲ ತಲೆಗೆ ಚೆಂಡೆಸೆಯುವುದು; [Half-v. (ಟೆನಿಸ್) ಚೆಂಡು ನೆಲ ತಾಕಿದೊಡನೆಯೆ ಅದನ್ನು ಹಿಂದಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೊಡೆಯುವುದು ; (ಕ್ರಿಕೆಟ್) ಒಮ್ಮೆ ಪುಟಹಾರಿ ಗುರಿಕೋಲ ತಲೆಗೆ ತಾಕುವಂತೆ ಚೆಂಡೆಸೆಯುವುದು ; (ಕ್ರಿ. ಸಕ.) ಹೀಗೆ ಚೆಂಡನ್ನು ಎಸೆ, ಹೊಡೆ. V.-gun ಗುಂಡಿನ ಸುರಿಮಳೆ ಕರೆಯುವ ಯಂತ್ರ ಫಿರಂಗಿ : ಸುರಿಮಳೆ, ವೃಷ್ಟಿ, —ಫಿರಂಗಿ]. (ಕ್ರಿ.) (ಕ್ಷಿಪಣಿ, ಮೊ. ನ್ನು) ಎಡೆ ಬಿಡದೆ, ಪುಂಖಾನುಪುಂಖವಾಗಿ, —ಬಿಡು, ಪ್ರಯೋಗಿಸು ; ಮಳೆಗರೆ, ಸುರಿಸು (ರೂಪ.) ; (ಟೆನಿಸ್, ಕ್ರಿಕೆಟ್) ಚೆಂಡು ನೆಲ ತಾಕುವ ಮೊದಲೆ ಹೊಡೆ, ಒಮ್ಮೆಗೇ ಗುರಿಕೋಲಿಗೆ ತಾಕುವಂತೆ ಚೆಂಡೆಸೆ ; (ಕ್ಷಿಪಣಿಗಳ ವಿಷಯದಲ್ಲಿ) ವೃಷ್ಟಿಯಾಗು, ಸುರಿ, ಕರೆ ; (ಫಿರಂಗಿ, ಮೊ. ಗಳ ವಿಷಯ ದಲ್ಲಿ) ಒಟ್ಟಿಗೆ—ಹೊಡೆ, ಹಾರು, ಶಬ್ದಮಾಡು.

Vól-plane ವಾಲ್‌ಪ್ಲೇನ್ (ನಾ., ಕ್ರಿ. ಅಕ.) (ವಿಮಾನದ ಅಥವಾ ಅದರ ಚಾಲಕನ ವಿಷಯದಲ್ಲಿ) (ಎಂಜಿನನ್ನು ಉಪಯೋಗಿಸದೆ) ತೇಲಿಕೊಂಡು ಇಳಿ(ತ) ; ಜಾರಿಳಿ(ತ)

Volt[1] ವಾಲ್ಟ್ (ಕ್ರಿ. ಅಕ., ನಾ.) (ಕತ್ತಿವರಿಸೆಯಲ್ಲಿ ತಿವಿತ ತಪ್ಪಿಸಿಕೊಳ್ಳಲು) ತಟಕ್ಕನೆ ಸರಿ(ಯುವುದು), ಚಂಗನೆ ಚಲಿಸು(ವುದು)

Volt[2] ವೋಲ್ಟ್ (ನಾ.) ವಿದ್ಯುದ್ಬಲವನ್ನು ಅಳೆಯುವ ಒಂದು ಏಕಮಾನ (ಒಂದು ಓಮ್‌ಮಾನದ ಪ್ರತಿರೋಧದ ಮೂಲಕ ಒಂದು ಆಂಪೇರ್ ಪ್ರವಾಹವನ್ನು ಸಾಗಿಸಬಲ್ಲ ವಿದ್ಯುದ್ಬಲ) : ವೋಲ್ಟ್. **Vóltage** (ನಾ.) ವೋಲ್ಟ್‌ಮಾನದಲ್ಲಿ ನಿರ್ದೇಶಿಸಿದ ವಿದ್ಯುದ್ಬಲ : ವೋಲ್ಟ್‌ಮಾನ. **Vóltmeter** (ನಾ.) ವೋಲ್ಟ್‌ಮಾಪಕ.

Vólta (It.) ವಾಲ್ಟ (ನಾ.; ಬ. ವ. -te —ಟೇ) (ಸಂ.) ಸಲ, ಸರದಿ. Una v. ಒಂದು ಸಲ. Due volte ಎರಡು ಸಲ. Prima v. ಮೊದಲ ಸಲ.

Volta- ವಾಲ್ಟ— (ಸ. ಪೂ. ಪ.) ರಾಸಾಯನಿಕ ವಿದ್ಯುತ್ತಿನ—, ಪ್ರವಾಹ ವಿದ್ಯುತ್ತಿನ—. **-eléctric** ರಾಸಾಯನಿಕ ವಿದ್ಯುಚ್ಛಕ್ತಿಯ. **-electrómeter, -meter** ರಾಸಾಯನಿಕ ವಿದ್ಯುತ್ಪ್ರವಾಹಮಾಪಕ. **-métric** —ವಿದ್ಯುತ್ಪ್ರವಾಹ ಮಾಪನದ.

Voltáic ವಾಲ್ಟೇಇಕ್ (ಗು.) ರಾಸಾಯನಿಕ ವಿದ್ಯುತ್ತಿನ, ಪ್ರವಾಹ ವಿದ್ಯುತ್ತಿನ [V. battery, induction ಪ್ರವಾಹ ವಿದ್ಯುತ್ ಕೋಶ ಶ್ರೇಣಿ, ಪ್ರವಾಹ ವಿದ್ಯುತ್ ಚೋದನೆ. V. pile ವಿದ್ಯುತ್ ಪ್ರವಾಹ (ಪರ್ಯಾಯ) ಫಲಕಶ್ರೇಣಿ]. **Voltáism** (ನಾ.) ರಾಸಾಯನಿಕ, ಪ್ರವಾಹ, —ವಿದ್ಯುಚ್ಛಕ್ತಿ (ಶಾಸ್ತ್ರ), ವಿದ್ಯುದುತ್ಪತ್ತಿ.

Voltaír(ian)ism ವಾಲ್ಟೇ(ಅ)ರಿ(ಯನಿ)ಸ್ಟಂ (ನಾ.) (ಫ್ರೆಂಚ್ ಸಾಹಿತಿ) ವಾಲ್ಟೇರಿನ—ತತ್ತ್ವಗಳು, ಪಂಥ (ಮತಾಚಾರ ಮತ್ತು ಸಮಾಜ ಸಂಪ್ರ ದಾಯಗಳ ವಿಚಾರಗಳಲ್ಲಿ ವಿಡಂಬನ ರೀತಿಯಿಂದ ಸಂದೇಹ ಪ್ರಕಟಿಸುವುದು)

Volte ವಾ(ವೋ)ಲ್ಟ್ (ನಾ.) = Volt[1] (ಆ ಪದ ನೋಡಿ); (ಕುದುರೆಯ) ಮಂಡಲ ಚಲನೆ, ಸುತ್ತು ತಿರುಗುವುದು.

Volte-face (F) ವಾಲ್ಟ್‌ಫಾಸ್ (ನಾ.) ಹಿಂದು ಮುಂದಾಗಿ ತಿರುಗು ವುದು ; ತಿರುಗು ಮುರುಗು ; (ಮು., ರೂಪ.) (ವಾದ, ರಾಜಕೀಯ, ಮೊ. ಗಳಲ್ಲಿ) ಪೂರ್ತಿ ಬದಲಾವಣೆ ; ಪ್ರತಿ ಪಕ್ಷಕ್ಕೆ —ತಿರುಗಿಬಿಡುವುದು, ಪರಿವರ್ತನೆ.

Vóluble ವಾಲ್ಯುಬ್‌ಲ್ (ಗು.) (ಮಾತಿನ ಅಥವಾ ಮಾತುಗಾರನ ವಿಷಯ ದಲ್ಲಿ) ಧಾರಾಳವಾದ, ನಿರರ್ಗಳ, ವಾಗ್ಝರಿಯ ; (ಪ್ರಾಚೀ. ಪ್ರ.) ಸುತ್ತು ತಿರುಗುವ, ಗಿರಕಿ ಸುತ್ತುವ ; (ಸ. ವಿ.) (ಆನರೆಯ ಸುತ್ತ) ಸುರುಳಿ ಸುತ್ತಿಕೊಳ್ಳುವ (=**Volúbilate, Vólubile**, ಗು.). **Volubílity** (ನಾ.) ವಾಚಾಲತೆ, ವಾಗ್ಝರಿ. **Vólubleness** (ನಾ.); **Vólubly** (ಕ್ರಿ. ವಿ.)

Vólume ವಾಲ್ಯುಮ್ (ನಾ.) ರಟ್ಟು ಕಟ್ಟಿದ ಮುದ್ರಿತ ಅಥವಾ ಹಸ್ತ ಪ್ರತಿಯ (ಭಾಗಗಳಾಗಿರುವ) ಗ್ರಂಥ: ಸಂಪುಟ [(ಸಂಕ್ಷಿಪ್ತ : Vol.) ; Issued in three volumes ಮೂರು ಸಂಪುಟಗಳಾಗಿ ಹೊರಡಿಸಿದ, ಪ್ರಕಟಿಸಿದ. Speak volumes for (Speak ನೋಡಿ)] ; (ಚರಿತ್ರೆ) ಬರೆದ ಚರ್ಮಪತ್ರ, ಮೊ. ಗಳ ಸುರುಳಿ ; ಓಲೆ ಪುಸ್ತಕ ; (ನಾ., ಬ. ವ. ದಲ್ಲಿ) (ಹೊಗೆ, ಮೊ. ಗಳ) (ನಿಡು) ಸುರುಳಿ, ಮೊತ್ತ, ರಾಶಿ ; ಘನ ಅಳತೆ, ಗಾತ್ರ, ಸಲೆ ; (ಸಂ.) ಧ್ವನಿಯ ತುಂಬು, ಶಾರೀರದ 'ಘಾತ.' **Vólumed** (ಗು.); **Voluménometer** —ಮಿ(ಮೆ)ನಾ— (ನಾ.) ಒಂದು ಘನ ಪದಾರ್ಥ ಸ್ಥಾನಾಕ್ರಮಣಮಾಡಿ ಸರಿಸಿದ ದ್ರವ, ಮೊ. ಗಳ ಮೊತ್ತದಿಂದ, ಅಥವಾ ಒಂದು ನಿರ್ದಿಷ್ಟ ಒತ್ತಡದ ವಾಯು ಸಂಚಯದೊಳಕ್ಕೆ ಆ ಘನ ಪದಾರ್ಥವನ್ನು ಹಾಕಿ ವಾಯುವಿನ ಒತ್ತಡದಲ್ಲಿ ಉಂಟಾಗುವ ವ್ಯತ್ಯಾಸದಿಂದ, ಆ ಘನ ಪದಾರ್ಥದ ಗಾತ್ರವನ್ನು ಕಂಡುಹಿಡಿಯಲಾಗುವ ಸಲಕರಣೆ : ಘನ (ಮಾನ), ಗಾತ್ರ, —ಮಾಪಕ. **Volumenómetry** (ನಾ.); **Volúmeter** (ನಾ.) (ಹಲವು ಬಗೆಯ) ಅನಿಲಗಾತ್ರ ಮಾಪಕ. **Volúmetry** (ನಾ.) ಘನ, ಗಾತ್ರ, —ಮಾಪನ. **Volumétric(al)** (ಗು.) ; **volumétrically** (ಕ್ರಿ. ವಿ.) ; **Volúminal** (ಗು.) ಘನಮಾನದ, ಗಾತ್ರದ. **Volúminous** (ಗು.) (ಈಗ ವಿರ. ಪ್ರ.) (ಹಾವುಗಳು, ಮಿದುಳು, ಮೊ. ಗಳ ವಿಷಯದಲ್ಲಿ) ಸುರುಳಿ ಸುತ್ತಿಕೊಂಡಿರುವ, ತೆಕ್ಕೆ ಗೊಂಡ. ಹಲವು ಸಂಪುಟಗಳುಳ್ಳ (A v. work) ; (ಲೇಖಕನ ವಿಷಯದಲ್ಲಿ) ಹಲವು ಗ್ರಂಥಗಳನ್ನು ರಚಿಸಿರುವ, ವಿಪುಲವಾಗಿ ಬರೆ ದಿರುವ ; ದೊಡ್ಡ ಗಾತ್ರದ, ಭಾರಿ(ಯಾಕಾರದ) ; (ಬಟ್ಟೆ, ಮೊ. ಗಳ ವಿಷಯದಲ್ಲಿ) ಹೆಚ್ಚಾದ, ಹಲವು ನಿರಿಗೆಗಳುಳ್ಳ. **Volúminously** (ಕ್ರಿ. ವಿ.); **Volúminousness** (ನಾ.) ; **Voluminósity** (ನಾ.)

Vóluntary ವಾಲಂಟರಿ (ಗು., ನಾ.) ಸ್ವಂತ ಇಷ್ಟದಿಂದ, ಆತ್ಮಸಂತೋಷ ದಿಂದ, —ಮಾಡಿದ, ಮಾಡುವ ; ಸ್ವಂತ—ಇಷ್ಟದ, ಇಚ್ಛೆಯ ; ಅಪ್ರೇರಿತ ; ಖುದ್ದು ರಾಜಿಯ ; ಸ್ವಪ್ರೇರಣೆಯ ; ಸ್ವಸಂತೋಷದ ; ಇಚ್ಛಾಪೂರ್ವಕ, ಉದ್ದೇಶಪೂರ್ವಕ [A v. gift ಸ್ವಸಂತೋಷದಿಂದ ಕೊಟ್ಟ ದಾನ. There was no v. mis-statement ಉದ್ದೇಶ ಪೂರ್ವಕವಾಗಿ ತಪ್ಪು ಹೇಳಿಕೆ ಕೊಡಲಿಲ್ಲ, ಅಪನಿರೂಪಣೆ ಮಾಡಲಿಲ್ಲ. V. army ಸ್ವಯಂಸೇವಕರ ಸೈನ್ಯ. V. service ಸ್ವಂತ ಇಷ್ಟದಿಂದ ಮಾಡುವ ಸೇವೆ, ಸ್ವಯಂಸೇವೆ. V. confession (ಹೆದರಿಕೆ, ಆಸೆ, ಮೊ. ಗಳಿಂದಲ್ಲದೆ) ಖುದ್ದು ರಾಜಿಯಿಂದ, ಸ್ವಪ್ರೇರಣೆಯಿಂದ, —ತಪ್ಪಿನ ಒಪ್ಪಿಕೆ, ಅಪರಾಧ ನಿವೇದನೆ. V. school ಸ್ವಸಂತೋಷ ದಿಂದ ಚಂದಾ ಹಾಕಿ ನಡಸುವ ಪಾಠಶಾಲೆ : ಸ್ವಯಂ ಧರ್ಮ, ಸ್ವಸಹಾಯ, —ಪಾಠಶಾಲೆ. V. waste (ಹಿಡುವಳಿದಾರನು ಅಥವಾ ಬಾಡಿಗೆದಾರನು) ಉದ್ದೇಶಪೂರ್ವಕವಾಗಿ ಮಾಡಿದ ಆಸ್ತಿ ನಾಶ ; ಬೇಕೆಂದು ಮಾಡಿದ ಹರಾಕು. V. movement (ಶ. ವಿ.) ಸ್ವಯಂಚಲನೆ. (ನ್ಯಾ. ಶಾ.) V. conveyance ಪ್ರತಿಫಲ ತೆಗೆದುಕೊಳ್ಳದೆ ಆಸ್ತಿ ವಹಿಸಿಕೊಡುವುದು : ಸ್ವಯಂ, ಧರ್ಮಾರ್ಥ, —ವರ್ಗಾವಣೆ. V. grantee ಈ ಆಸ್ತಿ ವರ್ಗಾವಣೆಯಲ್ಲಿ ಆಸ್ತಿ ವಹಿಸಿಕೊಂಡವನು : ಗ್ರಾಹಕ. V. partition (ನ್ಯಾಯಸ್ಥಾನದ ತೀರ್ಪಿನ ಮೂಲಕವಲ್ಲದೆ) ಸ್ವಸಂತೋಷದ, ಖುದ್ದು ರಾಜಿಯ, —ಆಸ್ತಿ ವಿಭಾಗ]. (ನಾ.) (ಪ್ರಾರ್ಥನೆಯ ಕಾಲದಲ್ಲಿ ಅಥವಾ ಪ್ರಾರ್ಥನೆಗೆ ಮೊದಲು ಅಥವಾ ತರುವಾಯ) ಚರ್ಚಿನಲ್ಲಿ ತನಿಯಾಗಿ ಬಾಜಿಸುವ ಆರ್ಗನ್ ವಾದ್ಯ ; ಚರ್ಚುಗಳ ಪಾಠಶಾಲೆಯಾಗಲಿ ಸರ್ಕಾರ ದಿಂದ ಸ್ವತಂತ್ರವಾಗಿದ್ದು ಸ್ವಂತ ಇಷ್ಟದಿಂದ ಎತ್ತಿದ ಚಂದಾ ಮೂಲಕ ನಡೆಯಬೇಕೆಂಬ ಮತದವನು : ಸ್ವಸಹಾಯ ವಾದಿ ; (ಸ್ಪರ್ಧೆಗಳಲ್ಲಿ) ಸ್ಪರ್ಧಿಯ ಆಯ್ಕೆಗೆ ಬಿಟ್ಟ ವಿಶೇಷ ಕಾರ್ಯಕ್ರಮ. **Vóluntarily** (ಕ್ರಿ. ವಿ.) ; **Vóluntariness** (ನಾ.) ; **Vóluntaryism** (ನಾ.) ವಿದ್ಯಾಭ್ಯಾಸಕ್ಕೆ ಸರ್ಕಾರದ ಆಶ್ರಯವನ್ನು ನೆಮ್ಮದೆ ಸ್ವಂತ ಇಷ್ಟದ ಚಂದಾ ಹಣದ ಮೇಲೆ ನೆಮ್ಮುವುದು : ಸ್ವಯಂ ಸಹಾಯ ತತ್ತ್ವ ; ಸೈನ್ಯಕ್ಕೆ ಬಲಾತ್ಕಾರದಿಂದ ಸೇರಿಸಿಕೊಳ್ಳದೆ ಜನರು ಸ್ವಂತ ಇಷ್ಟದಿಂದ ಸೇರು ವುದನ್ನೇ ನೆಮ್ಮುವುದು : ಸ್ವಯಂಸೈನಿಕ, ಸ್ವಯಂಸೇವಾ,—ತತ್ತ್ವ, ಪದ್ಧತಿ. **Vóluntaryist** (ನಾ.) ಸ್ವಯಂ ಸಹಾಯ ವಾದಿ. **Volunteér** ವಾಲಂಟಿಯರ್ (ನಾ., ಕ್ರಿ.) ಒಂದು ಕೆಲಸ, ಸೈನಿಕ ಸೇವೆ, ಮೊ. ಕ್ಕೆ ತಾನಾಗಿ ಮುಂದೆ ಬರುವವನು, ಇಷ್ಟಪಡುವವನು : ಸ್ವಯಂ—ಪ್ರವೃತ್ತ, ನಿಯುಕ್ತ ; ಸ್ವಯಂಸೇವಕ (ದಳದವನು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(V. corps ಸ್ವಯಂಸೇವಕ ದಳ). (ಕ್ರಿ.) (ಒಂದು ಕೆಲಸ, ಮೊ. ಕ್ಕೆ); ತಾನಾಗಿ ಮುಂದೆ ಬರು, ಸ್ವಸಂತೋಷದಿಂದ ಹೆಗಲುಕೊಡು; (ವಿವರಣೆ, ಟೀಕೆ, ಮೊ. ನ್ನು; ಮತ್ತೊಬ್ಬರ ಪ್ರೇರಣೆಯಿಲ್ಲದೆ) ತಾನಾಗಿ, ಅಪ್ರೇರಿತವಾಗಿ,—ಹೇಳು, ಮಾಡು; ಸ್ವಯಂಸೇವೆ ಸಲ್ಲಿಸು, ಸ್ವಯಂ ಸೇವಕನಾಗಿ ಸೇರು.

Volúptuary ವೊಲಪ್ಟ್ಯುಅರಿ (ಗು., ನಾ.) ಭೋಗ, ವಿಷಯ,—ಲಾಲಸೆಯ, ಲಂಪಟತ್ವದ. (ನಾ.) ಲಾಲಸ, ಲಂಪಟ. **Volúptuous** (ಗು.) (V. life. V. music ವಿಷಯೋದ್ದೀಪಕ ಸಂಗೀತ. V. beauty ಉದ್ದೀಪಕ ಸೌಂದರ್ಯ. V. woman ಪ್ರಮದೆ). **Volúptuously** (ಕ್ರಿ. ವಿ.); **Volúptuousness** (ನಾ.)

Volúte ವೊಲ್ಯೂಟ್ (ನಾ., ಗು.) (ಅಯೋನಿಕ್, ಮೊ. ಹಲವು ಬಗೆಯ ಕಂಬ ಶೈಲಿಗಳಲ್ಲಿ) ಸುರುಳಿಯಲಂಕಾರ, ಆವರ್ತ; (ಮು., ಉಷ್ಣದೇಶದ, ಅನೇಕ ವೇಳೆ ಸುಂದರವಾದ ಚಿಪ್ಪುಳ್ಳ) ಹಲವು ಬಗೆಯ ಉದರಪಾದಿ; ಸುರುಳಿ, ಶಂಖ, —ಸಿಂಪಿ. (ಗು.) (ಸ. ವಿ.) ಸುರುಳಿ ಸುತ್ತಿದ, ಆವರ್ತ. **Volúted** (ಗು.) ಸುರುಳಿಯಲಂಕಾರದ. **Volútion** (ನಾ.) ಸುರುಳಿ (ಸುತ್ತಿಕೊಂಡಿರುವುದು), ಆವರ್ತ(ನ); (ಸುರುಳಿ ಸಿಂಪಿಯು) ಸುರುಳಿ(ಗಳು); (ಅಂ. ರ. ಶಾ.) ಸುರುಳಿ, ನುಲಿಚು, ವ್ಯಾವರ್ತನ. **Vólutoid** ವಾಲ್ಯುಟಾಯ್ಡ್ (ಗು., ನಾ.) ಸುರುಳಿ ಸಿಂಪಿಯಂಥ (ಪ್ರಾಣಿ)

Vómer ವೋಮರ್ (ನಾ.) (ಅಂ. ರ. ಶಾ.) (ಮನುಷ್ಯನಲ್ಲ ಮತ್ತು ಹಲವು ಕಶೇರುಕಗಳಲ್ಲಿ) ಮೂಗಿನ ಹೊಳ್ಳೆಗಳನ್ನು ವಿಭಾಗಿಸುವ ಸಣ್ಣ ತೆಳು ಮೂಳೆ: ಸೀರಿಕಾಸ್ಥಿ.

Vómit ವಾಮಿಟ್ (ಕ್ರಿ., ನಾ.) ವಾಂತಿ, ವಮನ, —ಮಾಡು; ಕಕ್ಕು, ಕಾರು (ಜ್ವಾಲಾಮುಖಿ, ಹೊಗೆಕೊಳವೆ, ಮೊ. ಗಳ ವಿಷಯವಾಗಿ ರೂಪ.). (ನಾ.) ವಾಂತಿ(ಯಾದದ್ದು), ವಮನ; ವಾಂತಿಮಾಡಿಸುವ ಔಷಧ; ವಮನಕಾರಕ, ವಾಮಕ; [Black v. ಕಾಮಾಲೆ ರೋಗ(ದಲ್ಲ ವಾಂತಿಯಾಗುವ ಕಪ್ಪು ಪದಾರ್ಥ). V.-nut=Nux vomica (ಆ ಪದ ನೋಡಿ)]. **Vómitory** (ಗು., ನಾ.) ವಮನಕಾರಕ, ವಾಂತಿಯೌಷಧ. **Vómitive** (ಗು., ನಾ.) ವಾಂತಿ ಮಾಡಿಸುವ, ವಮನಕಾರಕ (—ವಸ್ತು, ಔಷಧ); (ರೋ. ಪ್ರಾ.) (ಪ್ರೇಕ್ಷಕರ ಪ್ರವೇಶ ನಿರ್ಗಮನಗಳಿಗಾಗಿ) ನಾಟಕಶಾಲೆಯ—ಬಾಗಿಲು, ದ್ವಾರ (ಗಳಲ್ಲೊಂದು); (ಕೊಳವೆ, ಮೊ. ಗಳ) ದ್ವಾರ, ಬಾಯಿ. **Vomitúrition** —ಟ್ಯೂರಿಷನ್ (ನಾ.) ವಾಂತಿಯಾಗುವಂತೆ ತೋರಿ ಆಗದಿರುವುದು: ಓಕರಿಕೆ; ಮೇಲಿಂದಮೇಲೆ ವಾಂತಿಯಾಗುವುದು, ಅತಿ ವಾಂತಿ.

Voódoo ವೂಡೂ (ನಾ., ಕ್ರಿ. ಸಕ.) (ವೆಸ್ಟ್ಇಂಡೀಸಿನ ಮತ್ತು ಅಮೆ. ಸಂ. ಗಳ ನೀಗ್ರೋ ಜನರಲ್ಲಿರುವ) ಯಂತ್ರ ಮಂತ್ರಗಳಲ್ಲಿ ನಂಬಿಕೆ; ಜಾದು, ಮಾಟ (ಮಾಡುವುದು); ಮಂತ್ರವಾದಿ, ಜಾದುಗಾರ, ಮಾಟಗಾರ (=V. doctor, v. priest). (ಕ್ರಿ.) ಮಾಟಮಾಡು. **Voódooism** (ನಾ.); **Voódooist** (ನಾ.)

-vora. **-vorous** ನೋಡಿ.

Vorácious ವೊರೇಷಸ್ (ಗು.) ಹೊಟ್ಟೆಬಾಕತನದ, ಅತ್ಯಾಶೆಯ, ಬಕಾಸುರನಂಥ (ರೂಪ.) (A v. appetite for scandal ಗುಲ್ಲು ಕೇಳುವ, ಗುಲ್ಲು ಹರಡುವ, ದೊಡ್ಡ ಗೀಳು. A v. whirlpool ಎಲ್ಲವನ್ನೂ ನುಂಗಿಬಿಡುವ, ಸರ್ವಗ್ರಾಸಿಯಾದ, —ಸುಳಿ). **Voráciously** (ಕ್ರಿ. ವಿ.); **Voráciousness** (ನಾ.); **Vorácity** —ರ್‍ಯಾಸಿಟಿ (ನಾ.)

-vore. **-vorous** ನೋಡಿ.

-vorous —ವೊರಸ್ (ಗುಣವಾಚಕ ಉ. ಪ್ರ.) —ತಿನ್ನುವ, —ಭಕ್ಷಕ, —ಆಹಾರಿ(ಯಾದ) [Carnivorous ಮಾಂಸಾಹಾರಿ(ಯಾದ)]. **-vora** (ನಾಮವಾಚಕ ಬಹುವಚನ ಉ. ಪ್ರ.) —ಆಹಾರಿಗಳು, —ಭಕ್ಷಕಗಳು (Herbivora ಸಸ್ಯಾಹಾರಿಗಳು, ಶಾಕಾಹಾರಿಗಳು). **-vore** (ನಾಮವಾಚಕ ಏಕವಚನ ಉ. ಪ್ರ.) —ಆಹಾರಿ, —ಭಕ್ಷಕ (Graminivore ತೃಣಾಹಾರಿ, ತೃಣಭಕ್ಷಕ)

Vórtex ವಾರ್ಟೆಕ್ಸ್ (ನಾ., ಬ. ವ. -tices —ಟಿಸೀಸ್, -texes) ಸುಳಿ ಸುತ್ತುತ್ತಿರುವ ದ್ರವ ಅಥವಾ ಅನಿಲ; ಸುಳಿ, ಆವರ್ತ; (ರೂಪ.) (ತನ್ನ ಹತ್ತಿರ ಬಂದವರನ್ನು ಅಥವಾ ತನಗೆ ಸಿಕ್ಕಿದವರನ್ನು) ಸುಳಿಯಂತೆ ನುಂಗಿಬಿಡುವ ಪದ್ಧತಿ, ಮೊ. ವು; (ಭೌ. ವಿ.) ಆವರ್ತ ಚಲನೆಯ ಕಣಗಳುಳ್ಳ ದ್ರವದ ಅಥವಾ ಅನಿಲದ ಭಾಗ: ಘೂರ್ಣಭಾಗ; [(ರೂಪ.) The v. of society ಸಮಾಜದ ಸುಳಿ. V. ring ಅದರ ಭ್ರಮಣಾಕ್ಷ ಒಂದು ಸಂವೃತ ವಕ್ರವಾಗಿರುವ ಸುಳಿ: ಉಂಗುರ ಸುಳಿ (ಉದಾ., ಚುಂಗಾಣಿಯಿಂದ ಅಥವಾ ಸೇದುವವನ ಬಾಯಿಂದ ಬರುವ ಹೊಗೆಸುರುಳಿ). V. of the heart ಹೃದಯಾಗ್ರದಲ್ಲಿಯ (ತಂತುಗಳ) ಸುಳಿ. V. theory ಪರಮಾಣುಗಳು ಘರ್ಷಣ ರಹಿತವಾದ ಈತರಿನಲ್ಲಿಯ ಉಂಗುರ ಸುಳಿಗಳು ಎಂಬ ವಾದ: (ಪರಮಾಣುಗಳ) ಆವರ್ತ ವಾದ]. **Vórtical** (ಗು.), **Vórticose** (ಗು.), **Vortícular** (ಗು.) ಸುಳಿಯಂಥ, ಆವರ್ತ, ಸುಳಿ ಸುತ್ತುವ. **Vórtically** (ಕ್ರಿ. ವಿ.); **Vórticist** —ಸಿಸ್ಟ್ (ನಾ.) (ಅಧ್ಯಾತ್ಮ ಶಾಸ್ತ್ರ) ವಿಶ್ವವು ಭೌತದ್ರವ್ಯದ ಆವರ್ತರೂಪ ಎಂದು ಹೇಳುವ ದಾರ್ಶನಿಕ: ಆವರ್ತವಾದಿ. (ಕಲೆ) (ಘನಾಕೃತಿ ಕಲೆಗಾರನು ಘನಾಕೃತಿಗಳನ್ನು ಉಪಯೋಗಿಸುವಂತೆ) ಸುಳಿಗಳನ್ನು ಉಪಯೋಗಿಸಿ ಚಿತ್ರಿಸುವ ಕಲೆಗಾರ: ಆವರ್ತಾಕೃತಿ ಕಲೆಗಾರ. **Vórticism** (ನಾ.)

Vórticel ವಾರ್ಟಿಸೆಲ್ (ನಾ.) ನಿಂತ ನೀರು, ಮೊ. ಗಳಲ್ಲಿಯ ಗಂಟೆಯಾಕಾರದ ಅಣುಪ್ರಾಣಿಗಳು; ಘಂಟಾಣುಪ್ರಾಣಿ.

Vortíginous ವಾರ್ಟಿಜಿನಸ್ (ಗು.) ಸುಳಿ ಸುತ್ತುವ, ಆವರ್ತ.

Vótary ವೋಟರಿ (ನಾ.) (ದೇವರು, ಮೊ. ರ) ಉಪಾಸಕ, ಭಕ್ತ; (ಪಂಥ, ಮೊ. ಗಳ) ಅವಿಚ್ಛಿನ್ನ ಭಕ್ತ, ಅನುಯಾಯಿ, ವಾದಿ (*Of* ಉಪ. ದೊಡನೆ). **Vótaress** (ನಾ., ಸ್ತ್ರೀ.)

Vote ವೋಟ್ (ನಾ., ಕ್ರಿ.) ಅಧಿಕಾರಿಯನ್ನು ಆಯುವುದು, ಕಾನೂನನ್ನು ಮಂಜೂರು ಮಾಡುವುದು, ನಿರ್ಣಯವನ್ನು ಒಪ್ಪುವುದು —ಇವೇ ಮೊ. ಸಂದರ್ಭಗಳಲ್ಲಿ ಚೀಟಿಯ ಮೂಲಕ, ಕೈಯೆತ್ತಿ, ಕೂಗಿ ಅಥವಾ ಇತರ ವಿಧವಾಗಿ ವ್ಯಕ್ತಪಡಿಸಿದ ಇಷ್ಟ ಅಥವಾ ಅಭಿಪ್ರಾಯ: ಅಭಿಮತ, ಮತ, ವೋಟು [Passed without a dissentient v. ಭಿನ್ನ ಮತವಿಲ್ಲದೆ, ವಿರೋಧವಿಲ್ಲದೆ, —ಒಪ್ಪಲಾಯಿತು. Cast a vote (Cast ನೋಡಿ). Split one's v. (Split ನೋಡಿ). Casting-v. (Cast ಕೆಳಗೆ Casting ನೋಡಿ). Transferable v. ಒಂದು ಚುನಾವಣೆಯಲ್ಲಿ ಯಾವೊಬ್ಬ ಉಮೇದುವಾರನಿಗೂ ಸ್ಪಷ್ಟ ಬಹುಮತದ ಪ್ರಥಮಾಭಿಮತಗಳು ಬಾರದೆಹೋದಾಗ, ತನ್ನ ಅಭಿಮತವನ್ನು ಯಾರಿಗೆ ವರ್ಗಾಯಿಸಬಹುದು ಎಂದು ಅಭಿಮತ ಚೀಟಿಯಲ್ಲಿ ಪ್ರತಿಯೊಬ್ಬ ಮತದಾರನೂ ಸೂಚಿಸಿ ಅಭಿಮತಕೊಡುವ ಪದ್ಧತಿ: ವರ್ಗಾಭಿಮತ]; ಬಹುಮತ—ಅಭಿಪ್ರಾಯ, ಅನುಮೋದನೆ (The ministry received a v. of confidence ಮಂತ್ರಿ ಮಂಡಲಕ್ಕೆ ವಿಶ್ವಾಸ ಸೂಚನೆಯ ಬಹುಮತ ದೊರಕಿತು); (ಒಂದು ಪಕ್ಷ, ಮೊ. ವು ಕೊಟ್ಟ ಅಥವಾ ಮೊ. ಕ್ಕೆ ಕೊಟ್ಟ) ಒಟ್ಟು ಅಭಿಮತಗಳು, ಅಭಿಮತಗಳ ಮೊತ್ತ [Will lose the Labour v. ಕಾರ್ಮಿಕ ಪಕ್ಷದ ಅಭಿಮತಗಳನ್ನು ಕಳೆದುಕೊಳ್ಳುತ್ತಾನೆ. The floating v. (ಪಕ್ಷ ನಿಶ್ಚಯವಿಲ್ಲದೆ) ತೇಲುವ ಅಭಿಮತಗಳು]; ಅಭಿಮತ ಕೊಡುವ ಹಕ್ಕು, ಮತಾಧಿಕಾರ (Shall women have the v.?); ಅಭಿಮತ ಚೀಟಿ, ಮೊ. ವು. (ಕ್ರಿ.) (ಅಭಿ)ಮತ ಕೊಡು (*For*, *against*, person *or* measure); ಬಹುಮತದಿಂದ—ನಿರ್ಣಯಿಸು, ಅನುಮೋದಿಸು, (ಹಣ) ಮಂಜೂರು ಮಾಡು; (ಬಳ. ಮಾ.) ಸಾಮಾನ್ಯಾಭಿಪ್ರಾಯವಾಗಿ ಹೇಳು, ಒಟ್ಟು ಅಭಿಪ್ರಾಯಪಡು (Was voted a failure); (ಬಳ. ಮಾ.) ಸೂಚಿಸು (That ಪದದೊಡನೆ). V. down ಬಹುಮತದಿಂದ ತಿರಸ್ಕರಿಸು, ಸೋಲಿಸು. V. in ಬಹುಮತದಿಂದ—ಚುನಾಯಿಸು, ಆಯ್ದು ಕಳುಹಿಸು. **Vótable** (ಗು.); **Vóteless** (ಗು.) ಮತಾಧಿಕಾರವಿಲ್ಲದ. **Vóter** (ನಾ.) ಮತದಾರ. **Vóting** (ನಾ.) (ಕ್ರಿಯಾರ್ಥಗಳಲ್ಲಿ);

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

V.-paper ಅಭಿಮತ, ಆಯ್ಕೆ, —ಚೀಟಿ. Cumulative v. (Cumulate ಕೆಳಗೆ Cumulative ನೋಡಿ)

Vótive ವೋಟಿವ್ (ಗು.) ಹರಕೆ ಸಲ್ಲಿಸಿದ, ಹರಕೆಯ, ಮುಡುಪಿನ (V. offering ಹರಕೆಯ—ನಲ್ಲಿಕೆ, ಸಮರ್ಪಣೆ)

Vouch ವಾಚ್ (ಕ್ರಿ.) ಸಾಕ್ಷ್ಯಕೊಟ್ಟು ದೃಢಪಡಿಸು, ಸ್ಥಾಪಿಸು ; ರುಜುವಾತು ಮಾಡಿಕೊಡು ; ಪ್ರಮಾಣ, ಖಾತ್ರಿ, —ಪಡಿಸು; ಹೊಣೆಗಾರನಾಗು, ಜವಾಬ್ದಾರನಾಗಿರು (*For* ಉಪ. ದೊಡನೆ) (Will v. for the truth of this, for him, for his honesty). **voúcher** (ನಾ.) (ಕ್ರಿಯಾರ್ಥಗಳಲ್ಲ) ; ರಸೀತಿ, ಸಲ್ಲಿಕೆ (ಚೀಟಿ) ; (ಲೆಕ್ಕ ಸರಿಯಾಗಿದೆ ಎಂಬ) ಪ್ರಮಾಣಪತ್ರ.

Vouchsáfe ವಾಚ್‌ಸೇಫ್ (ಕ್ರಿ. ಸಕ.) ದಯಪಾಲಿಸು, ಅನುಗ್ರಹಿಸು, ಕೃಪೆಮಾಡು (V. me a visit)

Voússoir ವೂಸ್ವಾರ್ (ನಾ.) ಕಮಾನು ಕಟ್ಟಡದ ಬೆಣೆಯಾಕಾರದ ಕಲ್ಲು(ಗಳಲ್ಲೊಂದು) : ಕಮಾನು ಬೆಣೆಕಲ್ಲು.

Vow ವೌ (ನಾ., ಕ್ರಿ. ಸಕ.) (ದೇವರಿಗೆ) ಪ್ರಮಾಣಮಾಡಿ ಕೊಟ್ಟ ಗಂಭೀರ ವಚನ : ಹರಕೆ, ಮುಡುಪು, ವ್ರತ, ಭಾಷೆ, ಪ್ರತಿಜ್ಞೆ, ಶಪಥ, ಆಣೆ ; ಪ್ರತಿಜ್ಞೆಯಾಗಿ, ಹರಕೆಯಾಗಿ, —ಕೈಕೊಂಡ ಕಾರ್ಯ, ನಡೆವಳಿ ; [Baptismal v. ಜ್ಞಾನಸ್ನಾನ ಕಾಲದಲ್ಲಿ ಆ ಸಂಸ್ಕಾರ ಪಡೆದವನಾಗಲಿ, ಅವನ ಧರ್ಮಿಯ ಪಿತನಾಗಲಿ ಕೈಕೊಳ್ಳುವ ಪ್ರತಿಜ್ಞೆ : ಜ್ಞಾನಸ್ನಾನ ಪ್ರತಿಜ್ಞೆ. Monastic v. ಬಡತನ, ಬ್ರಹ್ಮಚರ್ಯೆ, ವಿಧೇಯತೆ, ಇವನ್ನು ಪಾಲಿಸುವುದಾಗಿ ಸಂನ್ಯಾಸಿ ತೆಗೆದುಕೊಳ್ಳುವ ಪ್ರತಿಜ್ಞೆ : ಸಂನ್ಯಾಸಿ ಪ್ರತಿಜ್ಞೆ, ಸಂನ್ಯಾಸಾಶ್ರಮ ಪ್ರತಿಜ್ಞೆ. Lovers' vows ಪ್ರಣಯಿಗಳ (ಪ್ರಣಯ ನಿಷ್ಠೆಯ) ಪ್ರತಿಜ್ಞೆಗಳು. Am under a v. to drink no wine ಮದ್ಯಪಾನ ಮಾಡುವುದಿಲ್ಲವೆಂದು ವ್ರತ ತೊಟ್ಟಿದ್ದೇನೆ. Is this your v.? ಇದು ನಿನ್ನ ವ್ರತವೋ, ಶಪಥವೋ?]. (ಕ್ರಿ.) ಹರಸಿಕೊ, ಹರಕೆಹೊರು ; ಪ್ರತಿಜ್ಞೆ, ಶಪಥ,—ಮಾಡು ; ವ್ರತ —ತೊಡು, ಹಿಡಿ (Vowed a temple to Apollo ಅಪಾಲೊ ದೇವತೆಗೆ ಗುಡಿ ಕಟ್ಟಿಸುವುದಾಗಿ ಹರಸಿಕೊಂಡನು. Vowed vengeance against the oppressor ಪೀಡಕನಮೇಲೆ ಸೇಡು ತೀರಿಸಿಕೊಳ್ಳುವುದಾಗಿ ಶಪಥ ಮಾಡಿದನು) ; (ಪ್ರಾಚೀ. ಪ್ರ.) ಪ್ರತಿಜ್ಞೆಮಾಡಿ, ಆಣೆಯಿಟ್ಟು, ದೃಢವಾಗಿ, —ಹೇಳು (I v. you are most obliging)

Vowel ವೌಎಲ್ (ನಾ.) ಸ್ವರ, ಸ್ವರಾಕ್ಷರ (ಉದಾ., a, e, i, o, u) [Neutral v. ಅಸ್ಪಷ್ಟ, ಅನಿಷ್ಕೃಷ್ಟ,—ಉಚ್ಚಾರಣೆಯ ಸ್ವರ ; ಮಧ್ಯಸ್ಥ ಸ್ವರ (ಉದಾ., ಅಡಿಗೆ, ಹೆಂಗಸು). V. gradation ಸ್ವರ ವ್ಯತ್ಯಯ (=Ablaut). V. mutation ಸ್ವರ ರೂಪಾಂತರ. V. point (ಹೀಬ್ರೂ, ಮೊ. ಭಾಷೆಗಳಲ್ಲಿರುವ) ಸ್ವರಚಿಹ್ನೆ]. **(-)vowelled** (ಗು.) ; **Vówelless** (ಗು.) ; **Vówelly** (ಗು.) ; **Vowélize** (ಕ್ರಿ. ಸಕ.) ಸ್ವರವಾಗಿ—ಮಾರ್ಪಡಿಸು, ಉಪಯೋಗಿಸು ; (ಹೀಬ್ರು, ಮೊ. ಭಾಷೆಗಳಲ್ಲಿ, ಲಘುಲಿಪಿಯಲ್ಲಿ) ಸ್ವರಚಿಹ್ನೆ ಹಾಕು.

Vox ವಾಕ್ಸ್ (ನಾ.) ವಾಣಿ. **V. bárbara** (ಅಂ. ರ. ಶಾ., ಸ. ವಿ., ಮೊ. ಗಳಲ್ಲಿ ಪ್ರ.) ಅಡನಾಡಿ, ಬೆರಕೆ ಜಾತಿಯ, ತಪ್ಪಾಗಿ ರಚಿಸಿದ, ಅಶುದ್ಧ, —ಪದ, ಶಬ್ದ. **V. et praetérea níhil** (—ಎಟ್ ಪ್ರಿಟೀರಿಯ ನೈಹಿಲ್) ಬರಿಯ ಶಬ್ದ ಮತ್ತೇನೂ ಇಲ್ಲ ; ಅರ್ಥವಿಲ್ಲದ ಮಾತು. **V. humána** (—ಹ್ಯುಮೇನ) ಮನುಷ್ಯ ಧ್ವನಿ ಹೋಲುವ, ಆರ್ಗನ್ ವಾದ್ಯದ ಪೀಪಿ: ಮನುಷ್ಯ ಧ್ವನಿಯ ಪೀಪಿ. **V. pópuli** (—ಪಾಪ್ಯುಲೈ) ಜನವಾಣಿ, ಜನಾಭಿಪ್ರಾಯ, ಜನವದಂತಿ.

Vóyage ವಾಯೆ(ಯಿ)ಜ್ (ನಾ., ಕ್ರಿ.) ಕಡಲ ಪ್ರಯಾಣ, ಜಲಯಾನ, ಸಮುದ್ರ ಸಂಚಾರ (—ಮಾಡು) (Broken v. ತಿಮಿಂಗಿಲ ದೊರೆಯದ, ನಿಷ್ಫಲ, —ಸಮುದ್ರ ಸಂಚಾರ). **Vóyageable** (ಗು.) ಪ್ರಯಾಣ, ಸಂಚಾರ, —ಯೋಗ್ಯ. **Vóyager** (ನಾ.)

Vraisemblance (F) ವ್ರೆಸಾನ್‌ಬ್ಲಾನ್ಸ್ (ನಾ.) ನಿಜದ ತೋರ್ಕೆ, ಸತ್ಯಾಭಾಸ.

Vril ವ್ರಿಲ್ (ನಾ.) (Bulwer Lytton ಎಂಬಾತನ 'The Coming Race' ಎಂಬ ಗ್ರಂಥದಲ್ಲಿ ಉಲ್ಲೇಖವಾಗಿರುವ) ಅದ್ಭುತ ಶಕ್ತಿ.

Vúlcan ವಲ್ಕನ್ (ನಾ.) (ರೋಮನ್ ಪುರಾಣ) ಬೆಂಕಿಯ ಮತ್ತು ಲೋಹ ಕೆಲಸದ ಅಧಿದೇವತೆ : ಅಗ್ನಿದೇವತೆ. V. powder ಒಂದು ಸಿಡಿಮದ್ದು. **Vulcanic** (ಗು.)=Volcanic (ಆ ಪದ ನೋಡಿ) ; ಅಗ್ನಿದೇವತೆಯ, ಅಗ್ನಿಯ. **Vúlcanist** (ನಾ.) (ಭೂ. ವಿ.) ಅಗ್ನಿಕ್ರಿಯಾ ವಾದಿ (Plutonic ಕೆಳಗೆ Plutonic theory ನೋಡಿ)

Vúlcanite ವಲ್ಕನೈಟ್ (ನಾ.) ಗಂಧಕ ಸಂಸ್ಕಾರ ಪಡೆದ ರಬ್ಬರು: ಗಂಧಕ ರಬ್ಬರು. **Vúlcanize** (ಕ್ರಿ. ಸಕ.) (ರಬ್ಬರನ್ನು) ಗಂಧಕ ಪ್ರಭಾವದಿಂದ ಸಂಸ್ಕರಿಸು ; (ರಬ್ಬರಿಗೆ) ಗಂಧಕ ಸಂಸ್ಕಾರ ಕೊಡು. **Vúlcanizable** (ಗು.) ; **Vulcanizátion** (ನಾ.) ; **Vúlcanizer** (ನಾ.)

Vúlgar ವಲ್ಗರ್ (ಗು.) ಸಾಮಾನ್ಯ ಜನತೆಯ, ಮಂದಿಯ ; ಅಸಂಸ್ಕೃತ, ಅಸಭ್ಯ, ಗ್ರಾಮ್ಯ, ಒರಟಾದ, ಕೀಳು ತೆರನ, ಪ್ರಾಕೃತ (V. expressions ಗ್ರಾಮ್ಯ—ಪದಗಳು, ಪ್ರಯೋಗಗಳು. V. mind ಅಸಂಸ್ಕೃತ ಮನಸ್ಸು. The v. herd ಜನಜಂಗುಳಿ, ಮಂದಿ. The v. ಸಾಮಾನ್ಯ ಜನ, ಗಾವಿಲರು, ಜಂಗುಳಿ, ಮಂದಿ); ಸಾಮಾನ್ಯ ಬಳಕೆಯಲ್ಲಿರುವ, ಜನರೂಢಿಯ [V. superstitions ಜನಸಾಮಾನ್ಯದ ಮೂಢನಂಬಿಕೆಗಳು. The v. tongue ಜನಭಾಷೆ, ಪಾಮರ ಭಾಷೆ (ಹಿಂದೆ ವಿದ್ವಾಂಸರಲ್ಲಿ ಬಳಕೆಯಲ್ಲಿದ್ದ ಲ್ಯಾಟಿನ್ ಭಾಷೆಗೆ ವ್ಯತಿರಿಕ್ತವಾಗಿ)]. V. fraction (Fraction ನೋಡಿ). The v. era ಕ್ರಿಸ್ತ ಶಕ. **Vulgárian** ವಲ್ಗೇ— (ನಾ.) (ಮು., ಹಣವಂತನಾದ) ಅಸಂಸ್ಕಾರಿ ಮನುಷ್ಯ ; ಹಣವಂತ ಒಡ್ಡ. **Vúlgarism** ವಲ್ಗ— (ನಾ.) ಒರಟುತನ, ಅಸಭ್ಯತೆ ; ಅಸಭ್ಯ, ಗ್ರಾಮ್ಯ, ಅಸಂಸ್ಕಾರಿ, —ಪ್ರಯೋಗ. **Vulgárity** ವಲ್ಗ್ಯಾ— (ನಾ.) ; **Vúlgarize** ವಲ್ಗ— (ಕ್ರಿ. ಸಕ.) ಅಸಭ್ಯ, ಅಸಂಸ್ಕೃತ, —ಮಾಡು ; ಮಂದಿಯದನ್ನಾಗಿ ಮಾಡು, ಗ್ರಾಮ್ಯಮಾಡು ; (ದೃಶ್ಯ, ಭಾವ, ಮೊ. ನ್ನು) ಅತಿಸಾಮಾನ್ಯ ಮಾಡಿ, ಅತಿ ಪರಿಚಯಮಾಡಿಸಿ, ಅತಿ ಅಗ್ಗವಾಗಿಸಿ, —ಕೆಡಿಸು. **Vulgarizátion** (ನಾ.); **Vúlgarly** (ಕ್ರಿ. ವಿ.)

Vúlgate ವಲ್ಗೆಟ್ (ನಾ.) ಕ್ರಿ. ಶ. ೪ನೆಯ ಶ. ಮಾ. ದಲ್ಲಿ Jerome ಎಂಬಾತನು ಸಿದ್ಧಗೊಳಿಸಿದ ಬೈಬಲ್ಲಿನ ಲ್ಯಾಟಿನ್ ಪಾಠ.

Vúlgus ವಲ್ಗಸ್ (ನಾ.) (ಪಾಠಶಾಲೆಯ ಅಸಂ.) ಗ್ರೀಕ್ ಅಥವಾ ಲ್ಯಾಟಿನ್ ಪದ್ಯ ರಚನೆ(ಯ ಅಭ್ಯಾಸ)

Vúlnerable ವಲ್ನೆ(ಲ್ನ)ರಬ್‌ಲ್ (ಗು.) ಗಾಯಗೊಳಿಸಬಹುದಾದ ; ಆಯುಧ, ಟೀಕೆ, ಮೊ. ಗಳಿಂದ ಇರಿಯಲಾಗುವ ; ಭೇದಿಸಲಾಗುವ, ಭೇದ್ಯ ; ಶತ್ರುಗಳಿಂದ ಆಕ್ರಮಣ ಸಾಧ್ಯ (ರೂಪ. ಸಹ) [V. point ಸುಲಭಭೇದ್ಯ ಸ್ಥಾನ, ದುರ್ಬಲ ಸ್ಥಾನ (Every v. point was guarded)]. **Vulnerability** (ನಾ.); **Vúlnerableness** (ನಾ.); **Vúlnerary** ವಲ್ನೆರರಿ (ಗು., ನಾ.) ಗಾಯ ವಾಸಿಮಾಡುವ (ಔಷಧ)

Vúlpine ವಲ್‌ಪೈ(ಪಿ)ನ್ (ಗು.) ನರಿಯ (ಸ್ವಭಾವದ) ; ತಂತ್ರದ, ಕುಯುಕ್ತಿಯ. **Vúlpicide** (ನಾ.) (ಬೇಟೆನಾಯಿಗಳಿಂದ ಬೇಟೆಯಾಡಿ ಕೊಲ್ಲದೆ ಬೇರೆ ರೀತಿಯಾಗಿ) ನರಿ ಕೊಲ್ಲುವವನು, ನರಿಯ ಕೊಲೆ ; ನರಿಯ ಕೊರೆಗಾರ.

Vúlture ವಲ್ಟ್ಯು(ಚ)ರ್ (ನಾ.) ತಲೆಯೂ ಕತ್ತೂ ತುಪ್ಪುಳಿಲ್ಲದೆ ಬೋಳಾಗಿರುವ, ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವ, ಒಂದು ದೊಡ್ಡ ಹಿಂಸ್ರಪಕ್ಷಿ : ರಣಹದ್ದು, ಗೃಧ್ರ ; (ರೂಪ.) ಕ್ರೂರ, ಅತಿ, —ಭಕ್ಷಕ. V. raven ಆಫ್ರಿಕದ, ದಪ್ಪ ಕೊಕ್ಕಿನ, ಹಲವು ಬಗೆಯ ಹಕ್ಕಿ : ಹದ್ದು ಕಾಗೆ. **Vúlturine** (ಗು.) ; **Vúlturish** (ಗು.) ; **Vúlturous** (ಗು.)

Vúlva ವಲ್ವ (ನಾ.) (ಅಂ. ರ. ಶಾ.) ಯೋನಿಮುಖ, ಉಪಸ್ಥ. **Vúlvar** (ಗು.) ಉಪಸ್ಥದ. **Vúlvate** (ಗು.) ಉಪಸ್ಥದ, ಉಪಸ್ಥಾಕಾರದ. **Vúlviform** (ಗು.) ; **Vulvítis** (ನಾ.) ಉಪಸ್ಥದ ಉರಿಯೂತ. **Vulvo-** (ಸ. ಪೂ. ಪ.) ಉಪಸ್ಥಾ—.

Vying. Vie ಧಾತುವಿನ ವರ್ತಮಾನ ಕೃ. ರೂಪ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

W

W ಡಬ್ಲ್ಯು. ಇಂಗ್ಲಿಷ್ ವರ್ಣಮಾಲೆಯ ಇಪ್ಪತ್ತಮೂರನೆಯ ಅಕ್ಷರ.

ಸಂಕ್ಷಿಪ್ತಗಳು: (೧) War [**W.O.** (War office) ಯುದ್ಧ (ಇಲಾಖೆಯ) ಕಚೇರಿ]. (೨) Waste [**W.P.B.** (Waste paper basket) ಕಸ ಕಾಗದದ ಬುಟ್ಟಿ]. (೩) Weather [**W.P.** (Weather permitting) ಹವಾ ಅನುಕೂಲವಾಗಿದ್ದರೆ]. (೪) West [**W.C.** (West central) ಲಂಡನಿನ ಒಂದು ಅಂಚೆಯ ಪ್ರಾಂತ. **W.I.** (West Indies)]. (೫) Wireless [**W.T.** (Wireless Telegraphy) ನಿಸ್ತಂತು ದೂರಲೇಖನ ವಿದ್ಯೆ]. (೬) Women's ಸ್ತ್ರೀ(ಯರ) [**W.A.A.C.** (Women's Army Auxiliary Corps), **W.R.A.F.** (Women's Royal Air Force), **W.R.N.S.** (Women's Royal Naval Service), **W.S.P.U.** (Women's Social & Political Union)]. (೭) Workers' [**W.E.A.** (Workers' Educational Association) ಕೆಲಸಗಾರರ ವಿದ್ಯಾಭ್ಯಾಸ ಸಂಘ]. (೮) Writer [**W.S.** (Writer to the signet) ಸ್ಕಾಟ್ಲೆಂಡಿನ ಸಾಲಿಸಿಟರ್ ವಕೀಲ]. (೯) Water [**w.c.** (Water closet) ಶೌಚದ ಮನೆ]. (೧೦) Wrong [**w.f.** (Wrong fount) ತಪ್ಪು (ಆಕಾರದ) ಅಚ್ಚಿನ ಮೊಳೆ]

War.(wickshire). **Wash.**(ington). **Wigorn.** Worcester ನ ಬಹುಪ್ಪ. **Wilts.**(hire). **Winton.** Winchester ನ ಬಹುಪ್ಪ. **Wisc.**(onsin). **Wisd.** (Wisdom of Solomon) ಸಾಲೊಮನ್ನಿನ—ಬುದ್ಧಿ, ವಿವೇಕ. **Wm.** (William). **Worcs.** (Worcestershire); **Wyo.**(ming) ಅಮೆ. ಸಂ. ದ ಒಂದು ಸಂಸ್ಥಾನ.

Wabble = Wobble.

Wácke ವ್ಯಾಕ (ನಾ.) ಜ್ವಾಲಾಮುಖಿ ಶಿಲೆಯ ವಿಘಟನೆಯಿಂದಾದ ಬೂದಿಹಸುರು ಅಥವಾ ಕಂದುಛಾಯೆಯ ಜೇಡಿಮಣ್ಣು.

Wad ವ್ಯಾಡ್ (ನಾ., ಕ್ರಿ. ಸಕ.) ಪದಾರ್ಥಗಳನ್ನು ಒಂದಕ್ಕೊಂದು ಅಂಟದಂತೆ ಪ್ರತ್ಯೇಕಿಸಿಡುವುದು ಅಥವಾ ಪದಾರ್ಥಗಳನ್ನು ಅವುಗಳ ಸ್ಥಳದಲ್ಲಿ ಅಡಿಗಿಡುವುದು, ತೂತು ಮುಚ್ಚುವುದು, ಮೊ. ಕ್ಕೆ ಉಪಯೋಗವಾಗುವ ಮೆತು ಪದಾರ್ಥದ ತುಂಡು: ಮೆತ್ತೆ, ಸಿಂಬಿ, ಅಡಚು, ಗಿಡುಗು; (ಫಿರಂಗಿಯಲ್ಲಿ ಮದ್ದನ್ನೋ ಗುಂಡನ್ನೋ ಸರಿಯಾಗಿ ಅಡಗಿಡುವುದಕ್ಕಾಗಿ ಹಾಕುವ ಫೆಲ್ಟಿನ) ಮೆದು ಬಿರಡೆ, ಗಿಡಿ; (ಅಮೆ. ಸಂ. ಅಸಂ.) ನೋಟುಗಳ—ಸುರುಳಿ, ಕಟ್ಟು: ಹಣ. (ಕ್ರಿ.) (ಹತ್ತಿ, ಮೊ. ನ್ನು) ಮೆತ್ತೆಯಾಗಿ ದಟ್ಟಿಸು, ಮೆತ್ತೆಮಾಡು; (ಉಡುಪು, ಮೊ. ಕ್ಕೆ) ಒಳಮೆತ್ತೆ ಹಾಕು, ಅಸ್ತರಿ ಹಾಕು; (ವ್ಯಕ್ತಿ, ಗೋಡೆ, ಮೊ. ಕ್ಕೆ) (ರಕ್ಷಣಾರ್ಥವಾಗಿ) ಮೆತ್ತೆ ಸಜ್ಜುಮಾಡು, ರಕ್ಷಾಕವಚ ಹಾಕು [(ರೂಪ. ಸಹ): Well wadded with conceit ಗರ್ವದಿಂದ ಉಬ್ಬಿ]; (ತೂತು, ಕೊಳವೆ, ಮೊ. ನ್ನು) ಗಿಡಿಯಿಂದ, ಬಿರಡೆಯಿಂದ,—ಮುಚ್ಚು, ಅಡಚು; (ಫಿರಂಗಿಯಲ್ಲಿ ಮದ್ದು, ಮೊ. ನ್ನು) ಮೆದು ಗಿಡಿ ಹಾಕಿ ಅಡಚು. ತಲೆಗೆ ಗಿಡಿ, ಮಂದಟ್ಟುಮಾಡಿಸು. **Wádding** (ನಾ.) (ಉಡುಪಿಗೆ ಅಸ್ತರಿಯಾಗಿ, ರಜಾಯಿಗೆ ಗಿಡಿಯಾಗಿ, ಅಥವಾ ಸೂಕ್ಷ್ಮವಸ್ತುಗಳನ್ನು ಸುತ್ತಿಡುವುದಕ್ಕಾಗಿ ಉಪಯೋಗಿಸುವ ಹತ್ತಿಯ ಅಥವಾ ಉಣ್ಣೆಯ) ಸ್ಪಂಜಿನಂಥ—ಮೆತ್ತೆ, ಗಿಡುಗು; ಎಕ್ಕಿದ ಹತ್ತಿಯ ಪಟ್ಟೆ; ಫಿರಂಗಿಯ ಮೆದುಗಿಡಿ (ಪದಾರ್ಥ)

Wáddle ವಾಡ್‌ಲ್ (ಕ್ರಿ. ಅಕ., ನಾ.) (ಕೊಣಪನಂತೆ, ಗಿಡ್ಡ ಕಿಸುಗಾಲಿನ ಹಕ್ಕಿಯಂತೆ) ತೂಗಾಡುತ್ತ, ಒಲೆದಾಡುತ್ತ, ಜೂಗಾಡುತ್ತ,—ನಡೆ. (ನಾ.) ಅಡ್ಡ, ತೂಗಾಟದ, ಜೂಗಾಟದ,—ನಡಗೆ; ಬಾತು ನಡಗೆ; ಜೂಗಾಟ. **Wáddlingly** (ಕ್ರಿ. ವಿ.)

Wáddy ವಾಡಿ (ನಾ.) (ಆಸ್ಟ್ರೇಲಿಯನರ) ಯುದ್ಧದ ದೊಣ್ಣೆ, ಗದೆ.

Wade ವೇಡ್ (ಕ್ರಿ., ನಾ.) (ಚಲನೆಗೆ ತಡೆಮಾಡುವ ನೀರು, ಕೆಸರು, ಹಿಮ, ಧೂಳು, ಮೊ. ಗಳ ಮೂಲಕ) (ಕಷ್ಟಪಟ್ಟುಕೊಂಡು) ಹಾದುಹೋಗು, ದಾಟು, ನಡೆ [(ರೂಪ. ಸಹ): W. through slaughter *or* blood ರಕ್ತಪಾತದಿಂದ ದಾರಿಮಾಡಿಕೊ; ನೆತ್ತರ ತೊರೆ ಹಾಯಿ. W. through book (ಸ್ವಾರಸ್ಯವಿಲ್ಲವಾದರೂ) ಕಷ್ಟಪಟ್ಟುಕೊಂಡು ಓದಿ ಮುಗಿಸು. W. in ಎದುರಾಳಿಯ ಮೇಲೆ ಜೋರಾಗಿ ಬೀಳು. W. into ಜೋರಾಗಿ ಆಕ್ರಮಣಮಾಡು, ಮೇಲೆ ಬೀಳು]. (ನದಿಯನ್ನು) ಕಾಲನಡಗೆಯಿಂದ ದಾಟು, ಹಾಯಿ [Wading bird ಕಾಲನಡಗೆಯ ನೀರಹಕ್ಕಿ) (ಜಾಲಪಾದದ ಈಜುಹಕ್ಕಿಯಲ್ಲ)]. (ನಾ.) ಹಾಯಿಕೆ, ದಾಟು. **Wádable** ವೇಡಬ್‌ಲ್ (ಗು.) (ಕಾಲಿನಿಂದ) ಹಾಯ ಬಹುದಾದ, ದಾಟಲಾಗುವ. **Wáder** (ನಾ.) (ಕ್ರಿಯಾರ್ಥಗಳಲ್ಲಿ); ಕಾಲನಡಗೆಯ ನೀರಹಕ್ಕಿ; (ಬ. ವ. ದಲ್ಲಿ) (ಮೀನು ಹಿಡಿಯುವಾಗ ಹಾಕಿಕೊಳ್ಳುವ) ನೀರಿಳಿಯದ ಎತ್ತರ ಮೋಜ.

Wádi, -y ವಾಡಿ (ನಾ.) ಮಳೆಗಾಲದಲ್ಲಿ ಮಾತ್ರ ನೀರು ಹರಿಯುವ ಹಳ್ಳ, ತೊರೆ, ಕಣಿವೆ; ಒಣಕಲು ತೊರೆ.

Wáfd ವಾಫ್‌ಡ್ (ನಾ.) ಈಜಿಪ್ಟಿನ ಉಗ್ರಗಾಮಿ ರಾಷ್ಟ್ರೀಯ ಪಕ್ಷ. **Wáfdist** (ಗು., ನಾ.)

Wáfer ವೇಫರ್ (ನಾ., ಕ್ರಿ. ಸಕ.) ಜೇನುಗೂಡಿನಂತೆ ರಂಧ್ರಗಳ ಮುಖವುಳ್ಳ, ಹಗುರವೂ ಗರುಗೂ ಬಲು ತೆಳುವೂ ಆದ ಬಿಸ್ಕತ್ತು: ವೇಫರ್ ಬಿಸ್ಕತ್ತು (Thin as a wafer); (ಪ್ರಭುಭೋಜನ ಸಂಸ್ಕಾರ ದಲ್ಲಿ ಉಪಯೋಗಿಸುವ ಹುದುಗುಹಾಕದ) ರೊಟ್ಟಿಯ—ಬಿಲ್ಲೆ, ಹಲ್ಲೆ; (ಕಾಗದ, ಮೊ. ನ್ನು ಒಂದಕ್ಕೊಂದು ಬಂಧಿಸುವುದಕ್ಕಾಗಿ ಹಿಂದೆ ಉಪಯೋಗಿಸುತ್ತಿದ್ದ) ಒಣ ಸರಿಯ ಬಿಲ್ಲೆ, ಅಂಟು ಬಿಲ್ಲೆ; ನ್ಯಾಯ ಸ್ಥಾನದ ಕಾಗದಪತ್ರಗಳಲ್ಲಿ ಮುದ್ರೆಗೆ ಬದಲಾಗಿ ಅಂಟಿಸುವ ಕೆಂಪು ಕಾಗದದ ಬಿಲ್ಲೆ: ಕೆಂಬಿಲ್ಲೆ. (ಕ್ರಿ.) ಅಂಟು ಬಿಲ್ಲೆ, ಕೆಂಬಿಲ್ಲೆ,—ಹಚ್ಚು, ಅಂಟಿಸು. **Wáfery** (ಗು.) (ವೇಫರ್ ಬಿಸ್ಕತ್ತಿನಂತೆ) ಬಲು ತೆಳ್ಳನೆಯ.

Wáffle ವಾಫ್‌ಲ್ (ನಾ.) ದೋಸೆ (W.-iron ದೋಸೆಕಾವಲಿ)

Waft ವಾ(ವ್ಯಾ)ಫ್ಟ್ (ಕ್ರಿ. ಸಕ., ನಾ.) ಗಾಳಿಯಲ್ಲಿ, ನೀರಿನಮೇಲೆ—(ಹೇಗೊ ಹಾಗೆ) ಸಾಗಿಸು, ಸಾಗಿಸಿಕೊಂಡುಹೋಗು, ಒಯ್ಯಿ; ನಯವಾಗಿ, ಹಗುರವಾಗಿ,—ತೆಗೆದುಕೊಂಡುಹೋಗು; ತೇಲಿ(ಸಿ) ಕೊಂಡುಹೋಗು, ತೂರಿಕೊಂಡುಹೋಗು, ತೇಲಾಡು. (ನಾ.) (ಹಕ್ಕಿಯ) ರೆಕ್ಕೆಯ ಒಂದು ಬಡಿತ; (ಗಾಳಿ, ಪರಿಮಳ, ಶಾಂತಿ, ಸಂತೋಷ, ಮೊ. ಗಳ) ಉರುವು, ಸುಳಿವು, ಹರಿವು, ಬೀಸು; ತೇಲಾಟ; (ನಾವೆ) ವಿಪತ್ತಿನ, ಆಪತ್ತಿನ,—ಸಂಕೇತ (=Weft) (ಉದಾ., ಸುತ್ತಿದ ಅಥವಾ ಗಂಟುಹಾಕಿದ ಬಾವುಟ, ಹೊರಜಿಗೆ ಕಟ್ಟಿದ ಬಟ್ಟೆ)

Wag[1] ವ್ಯಾಗ್ (ಕ್ರಿ., ನಾ.) ಆಡು, ಅಲ್ಲಾಡು, ಆಡಿಸು, ಅಲ್ಲಾಡಿಸು [Dog wags his tail ನಾಯಿ (ಸಂತೋಷದಿಂದ) ಬಾಲವಾಡಿಸುತ್ತದೆ. Tail wags dog (ಬಾಲ ನಾಯಿಯನ್ನು ಆಡಿಸುತ್ತದೆ): ಅಲ್ಪ ಮನುಷ್ಯ ದೊಡ್ಡ ಸಮಾಜವನ್ನೇ ಅಲ್ಲಾಡಿಸುತ್ತಾನೆ, ಹತೋಟಿಯಲ್ಲಿಟ್ಟುಕೊಂಡಿದ್ದಾನೆ; ಬಾಲದ ಪಾರುಪತ್ಯವಾಗಿದೆ). W. one's finger at (ಬೆದರಿಕೆ, ಮೊ. ಗಳ ಸೂಚನೆಯಾಗಿ) ಬೆರಳಾಡಿಸು. W. one's head (ತಿರಸ್ಕಾರ, ತಮಾಷೆ, ಮೊ. ಗಳ ಸೂಚಕವಾಗಿ) ತಲೆಯಲ್ಲಾಡಿಸು. Beards, chins, jaws, tongues, are wagging ಮಾತುಕತೆ ನಡೆಯುತ್ತಿದೆ, ಮಾತಾಡುತ್ತಿದ್ದಾರೆ. (ಪ್ರಾಚೀ. ಪ್ರ.) How wags the world? ಪ್ರಪಂಚ ಹೇಗೆ ನಡೆಯುತ್ತಿದೆ? ಸ್ಥಿತಿಗತಿ ಹೇಗಿದೆ?]. (ನಾ.) ಒಂದುಸಲ ಆಡುವುದು, ಅಲ್ಲಾಟ, ವಿಕ್ಷೇಪ (With a w. of his tail, head, etc.). **Wágtail** (ನಾ.) ಸದಾ ಚಲಿಸುತ್ತಿರುವ ಉದ್ದ ತೋಕೆಯುಳ್ಳ ಹಲವು ಬಗೆಯ ಹಕ್ಕಿ: ದಾಸರಿ ಹಕ್ಕಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Wag[2] ವ್ಯಾಗ್ (ನಾ.) ವಿಚಿತ್ರ, ತಮಾಷೆಯ,—ಮನುಷ್ಯ ; ನಕಲಿಯವನು ; (ಅಸಂ.) (ಪಾಠಶಾಲೆ, ಮೊ. ಕ್ಕೆ) ತಪ್ಪಿಸಿಕೊಳ್ಳುವವನು, ಚಕ್ಕರ್ ಹೊಡೆಯುವವನು [Play (the) w. ಚಕ್ಕರ್ ಹೊಡೆ]. **Wággery** (ನಾ.) ತಮಾಷೆ, ಕುಚೋದ್ಯ. **Wággish** (ಗು.) ; **Wággishly** (ಕ್ರಿ. ವಿ.) ; **Wággishness** (ನಾ.)

Wage[1] ವೇಜ್ (ನಾ.) (ಕೆಲವು ಸಂದರ್ಭಗಳಲ್ಲಿ ಹೊರತು ಬ. ವ. ದಲ್ಲಿ ಪ್ರ.) ಕೂಲಿ, ಜೀತ, ಮಜೂರಿ, ಸಂಬಳ [Living wages ಉಪವಾಸ ಭಯವಿಲ್ಲದೆ ಬದುಕಿರುವುದಕ್ಕೆ ಸಾಲುವಷ್ಟು ಕೂಲಿ : ಬದುಕು—ಕೂಲಿ, ಸಂಬಳ. A fair day's work for a fair day's w. ಕೈ ಭರ್ತಿ ಕೂಲಿ, ದಿನ ಭರ್ತಿ ಕೆಲಸ] ; (ಸಾ., ಬ. ವ. ದಲ್ಲಿ) ಪ್ರತಿಫಲ (The wages of sin is death ಪಾಪಕ್ಕೆ ಮರಣವೇ ಪ್ರತಿಫಲ). Wage(s)-fund (ಅರ್ಥಶಾಸ್ತ್ರ) ಕೂಲಿ (ಅಥವಾ ಸಂಬಳಗಳನ್ನು) ಕೊಡುವುದಕ್ಕಾಗಿ ಮೀಸಲಿಟ್ಟ ಸಮುದಾಯ ನಿಧಿ : ಕೂಲಿ, ಸಂಬಳ, —ನಿಧಿ.

Wage[2] ವೇಜ್ (ಕ್ರಿ. ಸಕ.) (ಯುದ್ಧ, ಹೋರಾಟ, ಮೊ. ನ್ನು) ನಡಸು.

Wáger ವೇಜರ್ (ನಾ., ಕ್ರಿ. ಸಕ.) (ಈಗ ಬಳಕೆ ಕಡಮೆ) ಬಾಜಿ (ಕಟ್ಟು), ಪಂದ್ಯ (ಕಟ್ಟು), ಪಣ(ವೊಡ್ಡು). (ಚರಿತ್ರೆ) W. of battle ಆಪಾದಿತನು ತನ್ನ ಅಪರಾಧಿತ್ವ ನಿರಪರಾಧಿತ್ವಗಳನ್ನು ಆಪಾದಕನೊಂದಿಗೆ ದ್ವಂದ್ವ ಯುದ್ಧದ ಮೂಲಕ ನಿರ್ಣಯಿಸುತ್ತಿದ್ದ ಪ್ರಾಚೀನ ಪದ್ಧತಿ : ದ್ವಂದ್ವ ಯುದ್ಧದ ಮೂಲಕ ತೀರ್ಮಾನ. W. of law ತಾನು ನಿರಪರಾಧಿಯೆಂದು (ಅಥವಾ ಸಾಲ ಕೊಡಬೇಕಾದ್ದಿಲ್ಲವೆಂದು) ಪ್ರಮಾಣಮಾಡಿ, ಅದನ್ನು ದೃಢಪಡಿಸಲು ಹನ್ನೊಂದು ಜನರಿಂದ ಅಂತಹ ಪ್ರಮಾಣಮಾಡಿಸಿ ವಿಮೋಚನೆ ಪಡೆಯುವುದು : ದೋಷ ವಿಮೋಚನೆ.

Wággle ವ್ಯಾಗ್ಲ್ (ಕ್ರಿ., ನಾ.) = Wag[1]. **Wággly** (ಗು.) ಅಸ್ಥಿರ, ಚಂಚಲ, ಅಲ್ಲಾಡುತ್ತಿರುವ.

Wág(g)on ವ್ಯಾಗನ್ (ನಾ.) ಸಾ., ಎರಡು ಅಥವಾ ಹೆಚ್ಚು ಕುದುರೆಗಳನ್ನು ಕಟ್ಟಿ, ಭಾರವಸ್ತುಗಳನ್ನು ಸಾಗಿಸುವ, ಕಳಚಲಾಗುವ ಅರೆಕೊಳವಿಯಾಕಾರದ ಚಾವಣಿಯುಳ್ಳ, ನಾಲ್ಕು ಚಕ್ರದ ಬಂಡಿ : ಹೇರು, ಹೊರೆ, ಸಾಮಾನು, —ಬಂಡಿ, ಗಾಡಿ (Hitch one's w. to a star ತನಗಿಂತ ಪ್ರಭಾವಶಾಲಿಯನ್ನು ಅವಲಂಬಿಸು ; ದೊಡ್ಡದಕ್ಕೆ ಗುರಿಯಿಡು); (ತೆರೆದ ಅಥವಾ ಮುಚ್ಚಿದ) ಸಾಮಾನು (ಸಾಗಿಸುವ) ರೈಲುಬಂಡಿ, ಸರಕುಬಂಡಿ. W.-boiler, -ceiling, -roof, -vault ಬಂಡಿ ಚಾವಣಿಯಾಕಾರದ ಕುದಿಪಾತ್ರೆ, ಮೊ. ವು. **Wág(g)oner** (ನಾ.) ಸಾಮಾನುಬಂಡಿ ಹೊಡೆಯುವವನು. The w. ಬ್ರಹ್ಮಹೃದಯ ನಕ್ಷತ್ರಪುಂಜ (=Auriga). **Wag(g)onétte** (ನಾ.) (ಚಾವಣಿಯಿಲ್ಲದ ಅಥವಾ ಕಳಚಲಾಗುವ ಚಾವಣಿಯುಳ್ಳ, ಎದುರುಬದುರಾದ ಪಕ್ಕಪೀಠಗಳುಳ್ಳ, ಒಂದು ಅಥವಾ ಹೆಚ್ಚು ಕುದುರೆಗಳನ್ನು ಕಟ್ಟುವ) ನಾಲ್ಕು ಚಕ್ರದ ವಿಹಾರ ಬಂಡಿ.

Wagon-lit (F) ವಾಗಾನ್‌ಲೀ (ನಾ.) (ಯೂರೋಪು ಖಂಡದ ಕೆಲವು ರೈಲುಗಳಲ್ಲಿ) ಮಲಗಿಕೊಳ್ಳುವ, ನಿದ್ರಿಸುವ,—ಬಂಡಿ.

Wahábi, -ee ವ(ವಾ)ಹಾಬಿ(ೀ) (ನಾ.) (ಕುರಾನನ್ನು ಅಕ್ಷರಶಃ ಅನುಸರಿಸುವ) ವಹಾಬಿ ಪಂಗಡದವನು.

Waif ವೇಯ್‌ಫ್, ವೇಫ್ (ನಾ.) ಒಡೆಯರಿಲ್ಲದ ವಸ್ತು ಅಥವಾ ಪ್ರಾಣಿ; ಸಮುದ್ರದಲ್ಲಿ ತೇಲಾಡುವ, ಅಥವಾ ತೀರಕ್ಕೆ ಹೊಡೆದುಕೊಂಡು ಬಂದ, ವಸ್ತು ; ತಂದವರು ಯಾರೆಂದು ತಿಳಿಯದೆ ಬಂದುಬಿದ್ದಿರುವ ವಸ್ತು ; ಬೇವಾರಸಿ (ಮಾಲು), ಅಸ್ವಾಮಿಕ (ವಸ್ತು) ; ಮನೆಮಠವಿಲ್ಲದವನು, ದಿಕ್ಕಿಲ್ಲದವನು, ನಿರ್ಗತಿಕ, ಭಿಕಾರಿ ; (ಮು.) ಪೋಷಕರಾರೂ ಇಲ್ಲದ, ದಿಕ್ಕೆಟ್ಟ,—ಮಗು ; ಬೇವಾರಸಿ (ಮಗು); (Waifs & strays ಬೇವಾರಸಿ ವಸ್ತುಗಳು, ಹರುಕುಮುರುಕುಗಳು ; ತಬ್ಬಲಿ, ಬೇವಾರಸಿ, —ಮಕ್ಕಳು)

Wail ವೇಯ್‌ಲ್, ವೇಲ್ (ಕ್ರಿ., ನಾ.) ಗಟ್ಟಿಯಾಗಿ, ಗೋಳೋ ಎಂದು, —ಅಳು ; ಗೋಳಾಡು, ರೋದಿಸು, ಪ್ರಲಾಪಿಸು; (ರೂಪ.) (ಮಾತಿನಲ್ಲಿ) ಗೋಳುಗರೆ, ಮರುಗು, ಹಲುಬು (*Over* ಉಪ. ದೊಡನೆ) ; (ಗಾಳಿ, ಮೊ. ಗಳ ವಿಷಯದಲ್ಲಿ) ಅಳುವ ಶಬ್ದಮಾಡು, ಸುಯ್ಯಿ, ಮೊರೆ(ಯಿಡು). (ನಾ.) ಗೋಳಾಟ, ರೋದನ, ಪ್ರಲಾಪ ; ಹಲುಬಾಟ, ಮೊರೆತ. **Waílful** (ಗು.) (ಕಾವ್ಯ) ; **Waílingly** (ಕ್ರಿ. ವಿ.)

Wain ವೇಯ್‌ನ್, ವೇನ್ (ನಾ.) =ಹೇರು ಬಂಡಿ (Wagon) (ಮು., ಕಾವ್ಯ ಅಥವಾ ಕೃಷಿಕ ಪ್ರ.). Charles's, Arthur's, the, W. ಸಪ್ತರ್ಷಿ ಮಂಡಲ.

Waínscot ವೆ(ೕ)ನ್ಸ್ಕಟ್ (ನಾ., ಕ್ರಿ. ಸಕ.) (ಕೋಣೆಯ ಗೋಡೆಗೆ ಹದ್ದಿಸಿರುವ) ಹಲಗೆ ಸೇರುವೆ, ತಃಖ್ತುಬಂದಿ. (ಕ್ರಿ.) —ಮಾಡು ; ಹಲಗೆ ಹದ್ದಿಸು. **Waínscoting** (ನಾ.)

Waist ವೇಯ್‌ಸ್ಟ್, ವೇಸ್ಟ್ (ನಾ.) ನಡು, ಸೊಂಟ, ಕಟಿ, ಮಧ್ಯ (Large, small, w. ದಪ್ಪ, ತೆಳು, —ನಡು. Long, short, w. ನೀಳ, ಗಿಡ್ಡ, —ನಡು. Has no w. ಅವನಿಗೆ ನಡುವೇ ಇಲ್ಲ ; ಅವನು ಬೊಜ್ಜು) ; (ಪಿಟೀಲು, ಮೊ. ಉದ್ದವಾದ ವಸ್ತುಗಳಲ್ಲಿ) ನಡುವಿನಂಥ, ಮಧ್ಯ, —ಭಾಗ ; ಹಡಗಿನ ಮುನ್ನಟ್ಟಕ್ಕೂ ಹಿನ್ನಟ್ಟಕ್ಕೂ ನಡುವಣ ಭಾಗ, ಮೇಲಟ್ಟದ ಮಧ್ಯ ಭಾಗ ; ಉಡುಪಿನ ಸೊಂಟದ ಭಾಗ ; (ಲಂಗ, ಮೊ. ಗಳ) ನಡುಪಟ್ಟಿ ; (ಅಮೆ. ಸಂ.) ರವಿಕೆ, ಕುಪ್ಪಸ. **W.-band, -belt** ನಡು—ಪಟ್ಟಿ, ಕಟ್ಟು. **W.-cloth**=Loin-cloth (Loin ನೋಡಿ). **Waístcoat** ವೇಸ್(ಟ್)ಕೋಟ್, ವೆಸ್(ಟ್)ಕಟ್ (ನಾ.) (ಸಾ., ತೋಳಿಲ್ಲದ) ಸೊಂಟ ಕವಚ, ನಡುವಂಗಿ [Sleeved w.-c. (ಶಾಬುಕ್ಕಾಗಿ ಅಥವಾ ಕೆಲಸಮಾಡುವಾಗ ತೊಡುವ) ತೋಳು ನಡುವಂಗಿ]. **W.-deep, -high** (ಗು., ಕ್ರಿ. ವಿ.) ಸೊಂಟದುದ್ದ, ನಡುಮಟ್ಟ(ದ). **-waisted** (ಗು.)

Wait ವೇಯ್ಟ್, ವೇಟ್ (ಕ್ರಿ.) ತಡೆ(ದಿರು), ಕಾಯಿ, ಕಾದಿರು, ದಾರಿನೋಡು, ಎದುರುನೋಡು, ನಿರೀಕ್ಷಣೆಮಾಡು, ತಾಳು, ನಿಧಾನಿಸು (Everything comes to those who w. ತಾಳ್ಮೆಯಿಂದ ಕಾದಿರುವವರಿಗೆ ಎಲ್ಲವೂ ಕೈಗೂಡುತ್ತದೆ. Always has to be waited for ಯಾವಾಗಲೂ ಹೊತ್ತಿಗೆ ಸರಿಯಾಗಿ ಬರುವುದಿಲ್ಲ, ಅವನಿಗಾಗಿ ಕಾದಿರಬೇಕು. Is waiting his opportunity ಸಮಯ ಕಾಯುತ್ತಿದ್ದಾನೆ. Don't w. dinner for me ನನಗಾಗಿ ಊಟಕ್ಕೆ ಕಾದಿರಬೇಡ); (ಊಟದ ಮೇಜಿನ ಬಳಿ, ಶ್ರೀಮಂತನ ಹತ್ತಿರ) ಪರಿಚಾರಕನಾಗಿರು, ಸೇವಕನಾಗಿರು [Are you accustomed to waiting (at table)? ನಿನಗೆ ಪರಿಚಾರಿಕೆ ಅಭ್ಯಾಸವಿದೆಯೋ ? Lord, Groom, in waiting (ಆಯಾ ಪದ ನೋಡಿ)]. W.-a-bit ದ. ಆಫ್ರಿಕದ, ಕೊಕ್ಕೆಮುಳ್ಳುಗಳಿರುವ, ಹಲವು ಬಗೆಯ ಕುರುಚಲು ಸಸ್ಯ. W.(up)on (ಪ್ರಾಚೀ. ಪ್ರ.) ನೋಡುತ್ತಿರು, ಕಾದುಕೊಂಡಿರು ; (ಮತ್ತೊಬ್ಬನ) ವೇಳೆ ಕಾಯಿ ; ಓಲೈಸು, ಸೇವಿಸು ; ಪರಿಚಾರಿಕೆಮಾಡು ; (ಮೇಲಿನವನ) ದರ್ಶನ, ಭೇಟಿ, —ತೆಗೆದುಕೊ ; (ಪ್ರಾಚೀ. ಪ್ರ.) ಬೆಂಗಾವಲಾಗಿ, ಮರ್ಯಾದೆಗಾಗಿ, —ಜೊತೆಯಲ್ಲಿ ಹೋಗು ; (ಜೂಜಿನಲ್ಲಿ) ಬೇಕೆಂದು (ಸ್ಪರ್ಧಿಯ) ಬೆನ್ನಹಿಂದೆಯೇ—ಇರು, ಹೋಗು ; ಅನುಸರಿಸಿ, ಅನುಗತವಾಗಿ, ಫಲವಾಗಿ, —ಬರು. Waiting-room (ಮು., ರೈಲು ನಿಲ್ದಾಣ, ಆಸ್ಪತ್ರೆ, ಮೊ. ಗಳಲ್ಲಿ) ಜನರು ಕಾದಿರುವುದಕ್ಕಾಗಿರುವ ಕೋಣೆ : ಕಾಯುವ ಕೋಣೆ, ನಿರೀಕ್ಷಕ ಸ್ಥಾನ. **Waíter** (ನಾ.) (ಕ್ರಿಯಾರ್ಥಗಳಲ್ಲಿ) ; (ಹೋಟಲುಗಳಲ್ಲಿ ತಿಂಡಿಯ ಮೇಜಿನ ಬಳಿ ಇರುವ) ಪರಿಚಾರಕ, ಸೇವಕ [**Waítress** (ನಾ., ಸ್ತ್ರೀ.)] ; (ತಿಂಡಿ, ಕಾಗದ, ಮೊ. ನ್ನು ಜವಾನರು ಇಟ್ಟು ತರುವ) ತಟ್ಟೆ. Dumb-w., Tide-w. (ಆಯಾ ಪದ ನೋಡಿ)

Wait (ನಾ.) ಕಾಯುವುದು, ಕಾದ ಹೊತ್ತು (Had a long w. for the train ರೈಲಿಗಾಗಿ ತುಂಬ ಹೊತ್ತು ಕಾಯಬೇಕಾಯಿತು); (ಶತ್ರುವಿಗಾಗಿ) ಹೊಂಚುಹಾಕು(ತ್ತಿರು)ವುದು (Lie in, lay, w. for ಹೊಂಚುಹಾಕಿಕೊಂಡಿರು) ; (ಬ. ವ. ದಲ್ಲಿ) (ಕ್ರಿಸ್ಮಸ್ ಕಾಲದಲ್ಲಿ ಸ್ತೋತ್ರಗಳನ್ನು ಹಾಡಿಕೊಂಡು ಮನೆಗಳಿಗೆ ಬರುವ) ತಿರುಗು ಗಾಯಕ ತಂಡ(ಗಳು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Waive ವೆಯ್ವ್, ವೇವ್ (ಕ್ರಿ. ಸಕ.) (ಅಧಿಕಾರ, ಹಕ್ಕು, ಸಂದರ್ಭ, ಮೊ. ನ್ನು) ಉಪಯೋಗಿಸದೆ, ಚಲಾಯಿಸದೆ, —ತಡೆದಿಡು, ಬಿಟ್ಟಿರು ; ಚಲಾಯಿಸದಿರು , ವರ್ಜಿಸು, ಮನ್ನಾಮಾಡು. **Waíver** (ನಾ.) (ನ್ಯಾ. ಶಾ.) ಬಿಟ್ಟುಕೊಡುವುದು, ವರ್ಜನ, ಮನ್ನಾ(ಮಾಡುವುದು)

Wake[1] ವೇಕ್ (ಕ್ರಿ. ; ಭೂತ. Woke, Waked ; ಭೂ. ಕೃ. Waked, Woken, Woke) ನಿದ್ದೆಯಿಂದ, ನಿದ್ದೆಬಿಟ್ಟು, —ಏಳು ; ಎಚ್ಚರಗೊಳ್ಳು, ಎಚ್ಚತ್ತುಕೊ ; ಎಚ್ಚರಿಸು, ಎಬ್ಬಿಸು [(ರೂಪ.) Spring wakes all nature ವಸಂತಕಾಲ ಪ್ರಕೃತಿಯನ್ನೆಲ್ಲ ಎಚ್ಚರಗೊಳಿಸುತ್ತದೆ, ಚಟುವಟಿಕೆಗೊಳಿಸುತ್ತದೆ. Nature wakes ಪ್ರಕೃತಿ ಜಾಗ್ರತಿಗೊಳ್ಳುತ್ತದೆ, ಪ್ರಸನ್ನವಾಗುತ್ತದೆ]; ಜಾಗರಣೆಮಾಡು, ಜಾಗರವಿರು ; ಎಚ್ಚತ್ತು, ಎಚ್ಚರಿಕೆಯಾಗಿ, —ಇರು [(ಕೆಲವು ಪ್ರಯೋಗಗಳಲ್ಲಿ ಹೊರತು ಪ್ರಾಚೀ. ಪ್ರ.) : In bis waking hours ಅವನು ಎಚ್ಚರವಾಗಿರುವಾಗ. Waking dream ಹಗಲುಗನಸು ; ಭಾವಮಗ್ನತೆ] ; (ಜಡತೆ, ಮಾಂದ್ಯ, ಆಲಸ್ಯ, ಮೊ. ನ್ನು ಬಿಟ್ಟು) ಎದ್ದು ಕೂಡು, ಎಬ್ಬಿಸು, ಚಟುವಟಿಕೆಗೊಳ್ಳು, ಚಟುವಟಿಕೆಗೊಳಿಸು, ಜಾಗ್ರತನಾಗು, ಜಾಗ್ರತಗೊಳಿಸು, ಕೆರಳು, ಕೆರಳಿಸು (W. up there ! ಅಗೋ ಹುಷಾರು ! The insult waked his dull spirit ಆದ ಅವಮಾನ ಅವನ ಜಡ ಮನಸ್ಸನ್ನು ಕೆರಳಿಸಿತು) ; (ಸತ್ತವನು, ಸತ್ತದ್ದು) ಮತ್ತೆ ಎದ್ದುಬರು, ಪುನರುಜ್ಜೀವನಗೊಳ್ಳು ; (—ನ್ನು) ಪುನರುಜ್ಜೀವನಗೊಳಿಸು ; (ಮು., ಐರಿಷ್ ಪ್ರ.) (ಹೂಳುವ ಮೊದಲು) ಹೆಣ ಕಾಯಿ; ಹೆಣದ ಮುಂದೆ ಗೋಳಾಟ, ಹಬ್ಬ—ನಡಸು. ಗಲಾಟೆಮಾಡಿ ಶಾಂತಿಗೆಡಿಸು; ಪ್ರತಿಧ್ವನಿ ಬರಿಸು. W.-robin ಒಂದು ಬಗೆಯ ಸಸ್ಯ. **Wákeful** (ಗು.) ನಿದ್ದೆಬಾರದ, ನಿದ್ದೆಯಿಲ್ಲದ; ಎಚ್ಚತ್ತಿರುವ (ರೂಪ. ಸಹ) ; ಜಾಗರೂಕ. **Wákefully** (ಕ್ರಿ. ವಿ.) ; **Wákefulness** (ನಾ.) ; **Wáken** ವೇಕ್‌ನ್ (ಕ್ರಿ.) (ನಿದ್ದೆಯಿಂದ) ಏಳು, ಎಬ್ಬಿಸು ; ಎಚ್ಚರವಾಗು, ಎಚ್ಚರಗೊಳಿಸು.

Wake (ನಾ.) (ಚರಿತ್ರೆ) ರಾತ್ರಿಯಲ್ಲಿ ಜಾಗರಣೆಮಾಡಿ ನಡಸುವ ಚರ್ಚಿನ ವಾರ್ಷಿಕೋತ್ಸವ: ಜಾಗರಣೋತ್ಸವ, ಜಾಗರಣೆ ; (ಐರಿಷ್ ಪ್ರ. ; ಹೂಳುವ ಮೊದಲು ನೆಂಟರಿಷ್ಟರು) ಹೆಣ ಕಾಯುವುದು, ಹೆಣದ ಮುಂದೆ ಮಾಡುವ ಹಬ್ಬ ; (ಪ್ರಾಚೀ. ಪ್ರ.) ಜಾಗ್ರದವಸ್ಥೆ, ಎಚ್ಚರ (Betwixt w. & sleep)

Wake[2] ವೇಕ್ (ನಾ.) (ಚಲಿಸುವ ಹಡಗಿನ) ಜಾಡು (In the w. of ಹಿಂದೆ, ಅನುಸರಿಸಿ ; ಜಾಡಿನಲ್ಲಿ)

Wál(l)ach ವಾಲಕ್ (ನಾ.) = Vlach (ಆ ಪದ ನೋಡಿ). **Wal(l)áchian** ವಾಲೇಕಿಯನ್ (ಗು., ನಾ.) ವಾಲಕಿಯ ಪ್ರಾಂತದ (ಭಾಷೆ)

Wale ವೇಲ್, **Weal** ವೀಲ್ (ನಾ., ಕ್ರಿ. ಸಕ.) ಬಾಸುಂಡೆ (ಬರಿಸು, ಎಬ್ಬಿಸು). Wale-knot, Wall-knot (ತಿರಿಗಳು ಬಿಚ್ಚಿಕೊಳ್ಳದಂತೆ ಹೊಸೆದ ಹಗ್ಗದ ಕೊನೆಯಲ್ಲಿ ಹಾಕುವ) ತುದಿಗಂಟು.

Wáler ವೇಲರ್ (ನಾ.) ಇಂಡಿಯದ ಸೈನ್ಯಕ್ಕೆ ಆಸ್ಟ್ರೇಲಿಯದ ನ್ಯೂ ಸೌತ್ ವೇಲ್ಸಿನಿಂದ ತರಿಸಿದ ಕುದುರೆ.

Wales ವೇಲ್ಸ್ (ನಾ.) ಗ್ರೇಟ್ ಬ್ರಿಟನಿನ ಒಂದು ಪ್ರಾಂತ [Prince of W. ಗ್ರೇಟ್ ಬ್ರಿಟನಿನ ಯುವರಾಜ(ನ ಬಿರುದು)]

Walhalla (ನಾ.) = Valhalla.

Walk ವಾಕ್ (ಕ್ರಿ.) ನಡೆ, ನಡೆದು(ಕೊಂಡು)ಹೋಗು, ತಿರುಗಾಡು, ಅಡ್ಡಾಡು, (ಪ್ರಾಣಿಗಳ ವಿಷಯದಲ್ಲಿ) ನಿಧಾನವಾಗಿ ಹೋಗು [Heel-&-toe walking (ನಡಗೆ ಪಂದ್ಯದಲ್ಲಿಯಂತೆ) ಹಿಮ್ಮಡಿ ಹೆಬ್ಬೆಟ್ಟುಗಳನ್ನೂರಿ ನಡೆಯುವುದು. W. over (course) ಸುಲಭವಾಗಿ, ಸರಾಗವಾಗಿ, —ಸೋಲಿಸಿಹಾಕು, ಜಯಿಸು (Walk ನಾ., ನೋಡಿ). W. away from (—ಇಂತ) ಸುಲಭವಾಗಿ ಮುಂದೆ ಹೋಗು, (—ನ್ನು) ಹಿಂಬೀಳಿಸು. Walking dictionary (Diction ಕೆಳಗೆ ನೋಡಿ). W. into shop ಅಂಗಡಿಯೊಳಕ್ಕೆ ಹೋಗು. Please w. in ದಯವಿಟ್ಟು ಒಳಕ್ಕೆ ಬನ್ನಿ. W. up (ಪ್ರದರ್ಶನಕಾರನು ಆಟ, ಮೊ. ನ್ನು ನೋಡುವುದಕ್ಕೆ ಕೊಡುವ ಕರೆ) : ಬಂದು ನೋಡಿ, ನೋಡಿ ಬನ್ನಿ. W. (out) with (ಗ್ರಾಮ್ಯ ಪ್ರ. : ಮು., ಸೇವಕರು, ಮೊ. ರ ಮಾತು) —ಲ್ಲಿ ಪ್ರಣಯವಿಟ್ಟಿರು ; (ಮದುವೆಯ ಉದ್ದೇಶದಿಂದ) ಜೊತೆಯಲ್ಲಿ ವಿಹರಿಸು. W. about ಅಡ್ಡಾಡು, ಕಾಲಾಡಿಸು. Ghost walks ಪ್ರೇತ ಕಾಣಿಸಿಕೊಳ್ಳುತ್ತದೆ. W. into (ಅಸಂ.) ಚಚ್ಚಿಹಾಕು, ಬಯ್ದು ಕೆಡವು ; ಪುಷ್ಕಳವಾಗಿ—ತಿನ್ನು, ಹೊಡೆ. W. off (ಇದ್ದಕ್ಕಿದ್ದಹಾಗೆ, ಹಠಾತ್ತಾಗಿ) ಹೊರಟುಹೋಗು, ಹೊರಟುಬಿಡು. W. off *or* away with (ಬಹುಮಾನವನ್ನು) ಗೆದ್ದುಕೊ(ಂಡುಹೋಗು) ; (ವಸ್ತು, ಮೊ. ನ್ನು) ಕದ್ದುಕೊಂಡುಹೋಗು, ಹಾರಿಸಿಕೊಂಡುಹೋಗು. Him that walked the waves ಸಮುದ್ರದಮೇಲೆ ನಡೆದವನನ್ನು. W. the streets ಬೀದಿ ತಿರುಗು ; ಬೀದಿ ಸೂಳೆಯಾಗಿರು. W. the hospitals ವೈದ್ಯ ವಿದ್ಯಾರ್ಥಿಯಾಗಿರು. W. the boards ನಟನಾಗಿರು. W. the plank (Plank ನೋಡಿ) ; W. the chalk (ಪೋಲೀಸಿನವರು, ಮೊ. ರ ಸಮಕ್ಷ) ಸುಣ್ಣದ ಪಟ್ಟೆಗಳ ನಡುವೆ ನೇರವಾಗಿ ನಡೆ(ದು ಅಮಲೇರಿಲ್ಲವೆಂದು ರುಜುವಾತು ಮಾಡಿಕೊಡು)] ; (ಪ್ರಾಚೀ. ಪ್ರ.) ನಡೆದುಕೊ, ಇರು, ಜೀವಿಸು (W. in love ಪ್ರೀತಿಯಿಂದ ಬಾಳು. W. after the flesh ವಿಷಯಲಂಪಟನಾಗಿರು. W. with God ದೈವಭಕ್ತನಾಗಿರು); ನಡಸು, ನಡಸಿಕೊಂಡುಹೋಗು, ತಿರುಗಾಡಿಸು, ಅಡ್ಡಾಡಿಸು ; (ಒಡನೆ) ನಡಗೆ ಪಂದ್ಯವಾಡು (W. the horse ಕುದುರೆಯನ್ನು ನಡಸು. Smith will w. Jones for £100 a side ೧೦೦ ಪೌಂಡು ಬಾಜಿಗೆ ಸ್ಮಿತ್ ಜೋನ್ಸಿನೊಡನೆ ನಡಗೆ ಪಂದ್ಯ ಕಟ್ಟುತ್ತಾನೆ. You have walked me off my legs ನನ್ನನ್ನು ನಡಸಿ ನಡಸಿ ಸುಸ್ತು ಮಾಡಿಬಿಟ್ಟಿದ್ದೀಯೆ) ; (ರೈತ, ಮೊ. ರ ವಿಷಯದಲ್ಲಿ ; ಪಳಗಿಸುವುದಕ್ಕಾಗಿ ಬೇಟೆನಾಯಿ ಮರಿಯನ್ನು) ವಶಕ್ಕೆ ತೆಗೆದುಕೊ. **Walking-chair** = Go-cart (Go ನೋಡಿ). **Walking-delegate** ಸದಸ್ಯರಲ್ಲಿ ರೋಗಿಗಳನ್ನು ನೋಡಿಕೊಂಡು ಬರುವುದು, ಕಾರ್ಖಾನೆಗಳ ಧಣಿಗಳನ್ನು ಭೇಟಿಮಾಡುವುದು, ಮೊ. ಕೆಲಸಗಳುಳ್ಳ ವೃತ್ತಿ ಸಂಘದ ನಿಯೋಗಿ : ಸಂಚಾರೀ ನಿಯೋಗಿ. **Walking-dress** ಹೊರಗೆ ಅಡ್ಡಾಡಲು ಹೋಗುವಾಗ ಹಾಕುವ ಉಡುಪು : ನಡೆಯುಡುಪು. **Walking gentleman, lady** (ಮಾತುಗೀತು ಏನೂ ಆಡಬೇಕಾಗಿಲ್ಲದ) ಬರಿಯ ಓಡಾಟದ ಠೀಕು ನಟ, ನಟಿ ; ರಂಗಭೂಷಣ—ನಟ, ನಟಿ. **Walking-leaf** ಎಲೆಯನ್ನು ಅನುಕರಿಸುವ ಒಂದು ಹುಳು ; ಮಿಳ್ಳಿ. **Walking-papers, -ticket** (ಅಸಂ.) ವಜಾ, ಬರತರಫು (—ಹುಕುಂ). **Walking-stick** ನಡಗೆ(ಯಲ್ಲಿ ಹಿಡಿಯುವ)—ಕೋಲು, ಬೆತ್ತ; ಕೈ—ಕೋಲು, ದೊಣ್ಣೆ. **Walking-tour** ಕಾಲ್ನಡಗೆಯ, ಪಾದ,—ವಿಹಾರ, ಸಂಚಾರ. **Wálk-out** (ಅಮೆ. ಸಂ.) ಕೆಲಸಗಾರರ ಮುಷ್ಕರ ; ಸಭಾ ತ್ಯಾಗ. **Wálkable** (ಗು.) ; **Wálker** (ನಾ.) (ಕ್ರಿಯಾರ್ಥಗಳಲ್ಲಿ) ; (ಹಾರುವುದಾಗಲಿ ಈಜುವುದಾಗಲಿ ಇಲ್ಲದ) ನಡಗೆಯ ಹಕ್ಕಿ, ನಡೆ ಹಕ್ಕಿ (ಉದಾ., ಕೋಳಿ) ; [Shop-w.. Street-w. (ಆಯಾ ಪದ ನೋಡಿ)]

Walk (ನಾ.) ನಡೆ, ನಡಗೆ, ಅಡ್ಡಾಟ, ಗಾಳಿ ಸಂಚಾರ [Go at a w. ನಡಗೆಯ ವೇಗದಲ್ಲಿ ಹೋಗು. Know him a mile off by his w. ಅವನು ಒಂದು ಮೈಲಿ ದೂರದಲ್ಲಿದ್ದರೂ ಅವನ ನಡಗೆಯಿಂದ ಗುರುತಿಸಬಲ್ಲೆ. Go for, take, a w. ತಿರುಗಾಡಲು ಹೋಗು ; ಅಡ್ಡಾಡಿಕೊಂಡು ಬಾ. W. over (ಮಿಕ್ಕ ಸ್ಪರ್ಧಿಗಳ ಗೈರುಹಾಜರಿಯಿಂದಲೊ ದೌರ್ಬಲ್ಯದಿಂದಲೊ ಬಂದ) ಬರಿಯ ನಡಗೆಯಿಂದಲೇ ಪಡೆಯಬಹುದಾದ ಜಯ ; ಸುಲಭ ಜಯ] ; ಒಬ್ಬನ ತಿರುಗಾಟದ ಸ್ಥಳ ; ತಿರುಗು ವ್ಯಾಪಾರಿ, ಮೊ. ರ ಸುತ್ತಾಟ (ದ ಸ್ಥಳ) ; (ಜನರ) ತಿರುಗಾಟಕ್ಕಾಗಿ ಮಾಡಿರುವ ಸ್ಥಳ ; ಪಾದ ಸಂಚಾರ ಸ್ಥಳ ; ಕಾಲ, ನಡೆ, —ದಾರಿ, ಹಾದಿ ; [Rope-w., Sheep-w. (ಆಯಾ ಪದ ನೋಡಿ). W. of life ಕಸಬು, ಉದ್ಯೋಗ, ವೃತ್ತಿ]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Wall ವಾಲ್ (ನಾ.) ಗೋಡೆ, ಭಿತ್ತಿ ; ಕೋಟೆ, ಪ್ರಾಕಾರ, ಪೌಳಿ ; ರಕ್ಷಣೆ ; ಅಡ್ಡಿ, ತಡೆ, ಪ್ರತಿಬಂಧಕ [Party *or* partition w. (ಎರಡು ಕೋಣೆ, ಮನೆ, ಜಮೀನು, ಮೊ. ಗಳನ್ನು ಪ್ರತ್ಯೇಕಿಸುವ) ನಡು, ಅಡ್ಡ, —ಗೋಡೆ. W. of partition (ರೂಪ.) ತಡೆ, ಪ್ರತಿಬಂಧಕ, ಅಂತರ. Blank w. (ಕಿಟಕಿ ಬಾಗಿಲು ಯಾವುದೂ ಇಲ್ಲದ ಅಥವಾ ಅಲಂಕಾರವಿಲ್ಲದ) ಬರಿಯ ಗೋಡೆ, ಬೋಳು ಗೋಡೆ. Run one's head against a w. ಗೋಡೆಗೆ ತಲೆಹಾಯಿ ; ಅಸಾಧ್ಯವಾದುದಕ್ಕೆ —ತಲೆ ಒಡೆದುಕೊ, ಕೈ ಹಾಕು. See through brick w. (See[1] ನೋಡಿ). Walls have ears ಗೋಡೆಗಳಿಗೆ ಕಿವಿಯಿವೆ: ಯಾರೋ ಹೊಂಚಿ ಕೇಳುತ್ತಿದ್ದಾರೆ, ಯಾರಾದರೂ ಹೊಂಚಿ ಕೇಳುತ್ತಿರಬಹುದು. With one's back to the w. (Back[1] ನೋಡಿ). Retaining w. (Retain ನೋಡಿ). Mountain w. ಕಡಿದು ಬೆಟ್ಟಸಾಲು. W. of armed men, fire, bayonets ಸಶಸ್ತ್ರ ಸೈನಿಕರ, ಬೆಂಕಿಯ, ಸನೀನುಗಳ, —ರಕ್ಷಣಸಾಲು, ಪ್ರತಿಬಂಧಕ ಸಾಲು. Cell-w. (ಸ. ವಿ., ಅಂ. ರ. ಶಾ.) ಜೀವಕಣದ ಆವರಣ ಪೊರೆ ; ಜೀವಕಣ ಭಿತ್ತಿ. Walls of the chest (ಅಂ. ರ. ಶಾ.) ಎದೆಯ ಚೌಕಟ್ಟು. Hanging, foot-, w. (ಲೋಹದ ಎಳೆಯ ಅಥವಾ ಅದುರಿನ) ಮೇಲಿನ, ಕೆಳಗಿನ, —ಬಂಡೆ] ; (ರಸ್ತೆಯ ಕಾಲುಹಾದಿಯಲ್ಲಿ) ಗೋಡೆ ಪಕ್ಕ (ಚರಂಡಿ ಪಕ್ಕವಲ್ಲ) [Give one the w. (ಒಬ್ಬರನ್ನೊಬ್ಬರು ಹಾದುಹೋಗುವಲ್ಲಿ, ಒಬ್ಬನಿಗೆ) ಗೋಡೆ ಪಕ್ಕವನ್ನು, ಚೊಕ್ಕಟ ಪಕ್ಕವನ್ನು, —ಬಿಟ್ಟುಕೊಡು. Take the w. of ಹೀಗೆ ಬಿಟ್ಟುಕೊಡದಿರು ; ತಾನೇ ಗೋಡೆ ಪಕ್ಕವನ್ನು ಆಕ್ರಮಿಸಿಕೊ] ; ರಸ್ತೆಯ—ಪಕ್ಕ, ಬದಿ [The weakest goes to the w. ಕೈಲಾಗದವನು ಕೆಟ್ಟ ; (ಅತ್ಯಂತ) ದುರ್ಬಲನಾದವನು ಮೂಲೆಪಾಲಾಗುತ್ತಾನೆ]. **W.-creeper** ಹಲವು ಬಗೆಯ ಹಕ್ಕಿ. **W.-cress** ಕಲ್ಲುಪ್ರದೇಶಗಳಲ್ಲಿ ಬೆಳೆಯುವ ಹಲವು ಬಗೆಯ ಸಸ್ಯ. **W.-fern** ತೇವವಾದ ಗೋಡೆಗಳ ಮೇಲೆ ಬೆಳೆಯುವ ಜರೀ ಗಿಡ. **Wállflower** ಸಾ., ಕಿತ್ತಳೆಯ ಅಥವಾ ಕಂದು ಬಣ್ಣದ ಹೂಗೊಂಚಲು ಬಿಡುವ ವಸಂತ ಕಾಲದ ಒಂದು ಸುವಾಸನಾ ಸಸ್ಯ ; (ಬಳ. ಮಾ.) ನೃತ್ಯಕ್ಕೆ ಜೊತೆಗಾರರು ದೊರೆಯದ್ದರಿಂದ ಹೊರಚ್ಚು ಕುಳಿತಿರುವವಳು. **W.-fruit** (ರಕ್ಷಣೆಗಾಗಿಯೂ ಶಾಖಕ್ಕಾಗಿಯೂ) ಗೋಡೆಗೆ ಹದ್ದಿಸಿ ಬೆಳಸಿದ ಗಿಡಗಳ ಹಣ್ಣು. **W. game** ಒಂದು ಬಗೆಯ ಕಾಲ್ಚೆಂಡಾಟ. **W.-painting** (ಸಾ., ಕೋಣೆಯ) ಗೋಡೆಯ ವರ್ಣಚಿತ್ರ. **W.-paper** (ಸಾ., ಕೋಣೆಗಳು) ಗೋಡೆ(ಗೆ ಹಚ್ಚುವ ಚಿತ್ರ) ಕಾಗದ. **W.-plate** ತೊಲೆ, ಮೊ. ಗಳಭಾರ ಸಮನಾಗಿ ಹಂಚಿಕೊಳ್ಳುವಂತೆ ಗೋಡೆಯ ಉದ್ದಕ್ಕೆ ಹಾಕುವ ಮರ: ಪಟ್ಟಡಿ ಮರ, ಗೋಡೆ ಬೆಲಗು. **W.-rue** ಗೋಡೆಗಳ ಮೇಲೂ ಬಂಡೆಗಳ ಮೇಲೂ ಬೆಳೆಯುವ ಸಣ್ಣ ಜರೀ ಗಿಡ. **W.-washer** ಅಲ್ಲಾಡುವ ಗೋಡೆಗೆ ಬಿಗಿಗಾಗಿ ಹಾಕುವ ಮರದ ಹಲಗೆಯ ಒತ್ತು ಆಸರೆ: ಬಿಗಿ ಹಲಗೆ. **Wáll-less** (ಗು.)

Wall (ಕ್ರಿ. ಸಕ.) ಗೋಡೆ ಹಾಕು [(ಮು., ಭೂ. ಕೃ. ನಲ್ಲಿ) : Walled towns ಕೋಟೆ (ಗೋಡೆಗಳಿಂದ ಸುರಕ್ಷಿತವಾದ) ಪಟ್ಟಣಗಳು] ; (ನಂದು, ಮೊ. ನ್ನು) ಗೋಡೆ ಹಾಕಿ ಮುಚ್ಚು (*Up* ಉಪ. ದೊಡನೆ)

Wàlla(h) ವಾಲ (ನಾ.) (ಆಂ. ಇಂ.) (ಕೆಲವು ಸಮಾನ ಪದಗಳಲ್ಲಿ ಪ್ರ.) ಮನುಷ್ಯ, ಆಸಾಮಿ (Competition-w. ಇಂಡಿಯನ್ ಸಿವಿಲ್ ಸರ್ವಿಸ್ ಕೆಲಸಕ್ಕೆ ಸ್ಪರ್ಧೆಯ ಮೂಲಕ ಬಂದವನು: ಸ್ಪರ್ಧಾವಾಲ. Punkah-w. ಪಂಕ ಎಳೆಯುವವನು ; ಪಂಕಾವಾಲ. Canal-w. ಸೂಯೆಸ್ ಕಾಲುವೆಯ ಸಂಚಾರಕ್ಕಾಗಿ ಕಟ್ಟದ ಹಡಗು)

Wállaby ವಾಲಬಿ (ನಾ.) ಹಲವು ಬಗೆಯ ಸಣ್ಣ ಜಾತಿಯ ಕಾಂಗರು. On the w. (track) ಉದ್ಯೋಗವಿಲ್ಲದೆ, ಕೆಲಸವಿಲ್ಲದೆ, —ಅಲೆಯುತ್ತ.

Wállach = Walach.

Wallaroó ವಾಲರೂ (ನಾ.) ಹಲವು ಬಗೆಯ ದೊಡ್ಡ ಜಾತಿಯ ಕಾಂಗರು.

Wállet ವಾಲೆಟ್ (ನಾ.) (ಪ್ರಾಚೀ. ಪ್ರ.) (ಸಾಮಾನು, ಬುತ್ತಿ, ಮೊ. ನ್ನು ಹಾಕಿಕೊಂಡು ಹೋಗುವ) ಯಾತ್ರಿಕನ ಅಥವಾ ತಿರುಕನ ಚೀಲ ; ಹಸುಬೆ, ಜೋಳಿಗೆ ಚೀಲ ; (ಬೈಸಿಕಲ್ ಆಯುಧಗಳ) ಚರ್ಮದ ಸಣ್ಣ ಪೆಟ್ಟಿಗೆ (ಕೊಕ್ಕೆ ಅಥವಾ ಗುಂಡಿ ಇರುವಂಥದು) ; (ಮೀನು ಹಿಡಿಯುವ ಸಲಕರಣೆ, ಕಾಗದಪತ್ರಗಳು, ಮೊ. ಚಿಲ್ಲರೆ ಸಾಮಾನುಗಳನ್ನು ಹಾಕುವ) ಚರ್ಮದ ಚೌಕಪೆಟ್ಟಿಗೆ ; [ಕಾಗದದ ನಾಣ್ಯಗಳನ್ನು (ನೋಟುಗಳನ್ನು) ಮಡಿಸದೆ ಹಾಗೆಯೇ ಇಡುವ ಜೇಬಿನ ಗಾತ್ರದ] ಚಪ್ಪಟೆ ಕೋಶ.

Wáll-eye ವಾಲ್ಐ (ನಾ.) ಬಿಳಿಚಿಕೊಂಡ ಅಥವಾ ಮಸುಕಾದ, ಅಪಾರದರ್ಶಕವಾದ ಕನೀನಿಕಾ ಪಟಲವುಳ್ಳ ಕಣ್ಣು: ಹೂಗಣ್ಣು (ವ್ಯಾಧಿ) ; (ಶಿಥಿಲ ಪ್ರ.) ವಿಪರೀತ ಬಿಳುಪಿನ ಕಣ್ಣು, (ಕೆಲವು ಮೀನುಗಳಲ್ಲಿರುವಂತೆ) ಹೊಳಪಿನ ಅಗಲ ಕಣ್ಣು. **Wáll-eyed** (ಗು.)

Wall-knot. **Wale** ನೋಡಿ.

Wállop ವಾಲಪ್ (ಕ್ರಿ. ಸಕ.) (ಅಸಂ.) ಬಡಿದುಹಾಕು, ಚಚ್ಚು, ಅಪ್ಪಳಿಸು ; (ವರ್ತಮಾನ ಕೃ.) ದೊಡ್ಡ, ಭಾರಿ, ಬಲವಾದ. **Wálloping** (ನಾ.)

Wállow ವಾಲೊ (ಕ್ರಿ. ಅಕ., ನಾ.) (ಕೆಸರು, ಮರಳು, ನೀರು, ಮೊ. ಗಳಲ್ಲಿ) ಮುಳುಗಿ ತೇಲು, ಹೊರಳಾಡು, ಉರುಳಾಡು (W. in money ಐಶ್ವರ್ಯದಲ್ಲಿ ಓಲಾಡು) ; (ಇಂದ್ರಿಯ ಭೋಗದಲ್ಲಿ) ಮುಳುಗಿ ತೇಲು ; (ಭೋಗ)ಲಾಲಸನಾಗಿರು (*In* ಉಪ. ದೊಡನೆ). (ನಾ.) ಎಮ್ಮೆ, ಮೊ. ವು ಹೊರಳಾಡುವ ಸ್ಥಳ, ಹಳ್ಳ.

Wállsend ವಾಲ್ಸ್‌ಂಡ್ (ನಾ.) ಮನೆಗೆ ಒದಗಿಸುವ ಉತ್ತಮ ಜಾತಿಯ ಕಲ್ಲಿದ್ದಲು (ಸ್ಥಳದ ಹೆಸರಿನಿಂದ)

Wall Street ವಾಲ್ ಸ್ಟ್ರೀಟ್ (ನಾ.) ಅಮೆರಿಕದ ಹಣದ ಪೇಟೆ, ಸರಾಫಕಟ್ಟೆ (ನ್ಯೂಯಾರ್ಕ್ ಪಟ್ಟಣದ ಒಂದು ಬೀದಿ)

Wálnut ವಾಲ್ನಟ್ (ನಾ.) ಪರಸ್ಪರ ಹೋಲುವ ದೋಣಿಯಾಕಾರದ ಬೀಜಕೋಶದ ಜೋಡಿಯಲ್ಲಿ ಸುವಾಸನೆಯ ಕಾಯಿ ಬಿಡುವ ಹಲವು ಬಗೆಯ ಮರ(ದ ಕಾಯಿ): ಅಕ್ಷೋಟ, ಅಕ್ರೋಡು [Over the walnuts & the wine (ಭೋಜನಾನಂತರ) ಹಣ್ಣು ಮಿಠಾಯಿ ತಿನ್ನುತ್ತ ; ಭೋಜನಾನಂತರದ ಮಾತುಕತೆಯಲ್ಲಿ] ; (ಪೆಟ್ಟಿಗೆ, ಬಂದೂಕಿನ ಕಾಂಡ, ಮೊ. ನ್ನು ಮಾಡುವ) ಅಕ್ಷೋಟ ದಾರು.

Walpúrgis-night ವಾಲ್ಪುರ್ಗಿಸ್‌ನೈಟ್ (ನಾ.) ಜರ್ಮನಿಯಲ್ಲಿ ಮೇ ತಿಂಗಳ ಮೊದಲನೆಯ ದಿನದ ಹಿಂದಿನ ರಾತ್ರಿ ಇಂಗ್ಲಿಷ್ ಕ್ರೈಸ್ತ ಸಂತಳಾದ ವಾಲ್‌ಪರ್ಗ್ ಎಂಬವಳ ಜ್ಞಾಪಕಾರ್ಥವಾಗಿ ಭೂತಾರಾಧಕರು ಆಚರಿಸುವ ಮದ್ಯ ನೃತ್ಯ ಕೋಲಾಹಲದ ಹಬ್ಬ

Wálrus ವಾಲ್ರಸ್ (ನಾ.) ಉತ್ತರ ಧ್ರುವ ಪ್ರದೇಶದ, ಉದ್ದ ಕೋರೆಯ, ಸ್ಥಲಜಲಜೀವಿಯಾದ, ಸೀಲ್ ಜಾತಿಯ ಹಲವು ಬಗೆಯ ಸಸ್ತನಿಪ್ರಾಣಿ : (ಕೋರೆಹಲ್ಲುಳ್ಳ) ಕಡಲ್ಗುದುರೆ ; ವಾರ್‌ರಸ್.

Waltz ವಾಲ್ಸ್, (ಗತ ಪ್ರ.) ವಾಲ್(ಟ್)ಸ್ (ನಾ., ಕ್ರಿ. ಅಕ.) ಜೊತೆಗಾರರು ತಬ್ಬಿಕೊಂಡು ಒಬ್ಬರ ಸುತ್ತ ಒಬ್ಬರು ತಿರುಗುತ್ತ ಸಾಗುವ ಒಂದು ಮಾದರಿ ನೃತ್ಯ : ಭ್ರಮಣ ನೃತ್ಯ ; ವಾಲ್ಸ್ (ನೃತ್ಯಕ್ಕೆ ತಕ್ಕ) ಸಂಗೀತ. (ಕ್ರಿ.) ವಾಲ್ಸ್ ನೃತ್ಯವಾಡು ; (ಸಂತೋಷ ಸಂಭ್ರಮಗಳಿಂದ) ಕುಣಿದಾಡು, ಜಿಗಿದಾಡು (*In*, *out*, *round* ಮೊ. ಉಪ. ದೊಡನೆ). **Wáltzer** (ನಾ.)

Wampeé ವಾಂಪೀ (ನಾ.) (ಚೀನ ಮತ್ತು ಈಸ್ಟ್ ಇಂಡೀಸ್ ದ್ವೀಪಗಳಲ್ಲಿ ಬೆಳೆಯುವ) ಚಪ್ಪರದ್ರಾಕ್ಷಿಯಂಥ ಹಣ್ಣು (ಬಿಡುವ ಮರ). ವಾಂಪೀ—ಹಣ್ಣು, ಮರ.

Wámpum ವಾಂಪಂ (ನಾ.) ಚಿಪ್ಪುಮಣಿ (ಸರ), ಶಂಖಮಣಿ (ಸರ) (ಉ. ಅಮೆರಿಕದ ಇಂಡಿಯನರಲ್ಲಿ ಹಣವಾಗಿಯೊ ಅಲಂಕಾರವಸ್ತುವಾಗಿಯೊ ಬಳಸುವರು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Wan ವಾನ್ (ಗು.) ಬಿಳಿಚಿಕೊಂಡ, ರಕ್ತಹೀನ, ಕಳೆಗುಂದಿದ, ನಿಸ್ತೇಜ, ಬಣ್ಣಗೆಟ್ಟ, ವಿವರ್ಣ, ಬಾಡಿದ, ಮ್ಲಾನ, ಬಳಲಿದ, ಸೊರಗಿದ (ಮು., ಮನುಷ್ಯರ, ಅವರ ಬಣ್ಣದ ಅಥವಾ ಮುಖಭಾವದ, ಆಕಾಶದ, ಪ್ರಕಾಶದ ವಿಷಯದಲ್ಲಿ); (ರಾತ್ರಿ, ನೀರು, ಮೊ. ಗಳ ವಿಷಯದಲ್ಲಿ ಪ್ರಾಚೀ. ಪ್ರ.) ಕಪ್ಪಾದ, ಕಾಳ. **Wánly** (ಕ್ರಿ. ವಿ.); **Wánness** (ನಾ.)

Wand ವಾಂಡ್ (ನಾ.) ಮೋಟು—ಕೋಲು, ದಂಡ; (ಈಗ ಮು.) ಐಂದ್ರಜಾಲಿಕನ, ಸಂಗೀತ ಚಾಲಕನ ಅಥವಾ ಅಧಿಕಾರ (ಚಿಹ್ನೆಯ) ದಂಡ.

Wánder ವಾಂಡರ್ (ಕ್ರಿ.) ಅಲೆ, ತೊಳಲು, ಅಲೆದಾಡು, ಸುತ್ತಾಡು, (ಗೊತ್ತುಗುರಿಯಿಲ್ಲದೆ) ತಿರುಗುತ್ತಿರು, ಪರ್ಯಟನಮಾಡು [Wandering Jew ಅಲೆಮಾರಿ ಯೆಹೂದ್ಯ (ಯೇಸು ಕ್ರಿಸ್ತನು ಶಿಲುಬೆ ಹೊತ್ತುಕೊಂಡು ಹೋಗುತ್ತಿದ್ದಾಗ ಆತನನ್ನು ಅಪಮಾನಪಡಿಸಿದ್ದಕ್ಕಾಗಿ ಆತನಿಂದ 'ನಾನು ಮರಳಿ ಬರುವವರೆಗೂ ಭೂಮಿಯಲ್ಲಿ ಅಲೆಯುತ್ತಿರು' ಎಂದು ಶಾಪಪಡೆದು ಇನ್ನೂ ಅಲೆಯುತ್ತಿದ್ದಾನೆಂದು ನಂಬಿಕೆ); ನೆಲೆಯಿಲ್ಲದೆ ಅಲೆಯುತ್ತಿರುವವನು; ಅಲೆಮಾರಿ. ಹಲವು ಬಗೆಯ ಅಡರುಬಳ್ಳಿ, ಹಂಬು. Wandering cell, abscess, kidney (ದೇಹದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ) ಚಲಿಸುವ, ಸಂಚಾರೀ,—ಜೀವಕಣ, ಕುರು, ಮೂತ್ರಪಿಂಡ. Wandering sailor ಹಲವು ಬಗೆಯ ಅಡರುಬಳ್ಳಿ]; ದಾರಿ—ಬಿಟ್ಟುಹೋಗು, ತಪ್ಪು (ರೂಪ. ನಹ); ಮನೆಬಿಟ್ಟು ಅಲೆ; ಅಸಂಬದ್ಧವಾಗಿ, ವಿಷಯ ಬಿಟ್ಟು,—ಮಾತಾಡು, ಯೋಚಿಸು (Wanders in his talk); ಅವಧಾನವಿಲ್ಲದಿರು, ಬುದ್ಧಿ ಭ್ರಮಣೆಯಾಗಿರು (His wits are wandering ಅವನಿಗೆ ಬುದ್ಧಿ ಭ್ರಮಣೆಯಾಗಿದೆ); ಪರಿದಾಡು [You may w. the world (through), and not find another such ನೀನು ಪ್ರಪಂಚವನ್ನೆಲ್ಲಾ ಸುತ್ತಿಬಂದರೂ ಅಂಥ ಇನ್ನೊಂದನ್ನು, ಇನ್ನೊಬ್ಬನನ್ನು, ಕಾಣಲಾರೆ]. **Wánderer** (ನಾ.); **Wándering** (ನಾ.) (ಸಾ., ಬ. ವ. ದಲ್ಲಿ); **Wánderingly** (ಕ್ರಿ. ವಿ.); **Wánderlust** (G) —ಲುಸ್ಟ್ (ನಾ.) ಪ್ರವಾಸದ, ದೇಶ ಸುತ್ತುವ, —ಗೀಳು; ಪರ್ಯಟನಾಕಾಂಕ್ಷೆ.

Wanderjahre (G) ವಾಂಡರ್‌ಯಾರೆ (ನಾ., ಬ. ವ.) ಕಸಬುದಾರ, ವಿದ್ಯಾರ್ಥಿ, ಮೊ. ರು ಉಮೇದುವಾರರಾಗಿ ಪ್ರವಾಸದಲ್ಲಿ ಕಳೆಯುವ ಕಾಲ: ಉಮೇದುವಾರಿಕೆ (ಪ್ರವಾಸ ಕಾಲ)

Wanderoó ವಾಂಡರೂ (ನಾ.) ಸಿಂಹಳ ದ್ವೀಪದ ಒಂದು ಕೋತಿ.

Wane ವೇನ್ (ಕ್ರಿ. ಅಕ., ನಾ.) [ಗಾತ್ರ, ವೈಭವ, ವೀರ್ಯ, ಕೀರ್ತಿ, ಚಂದ್ರನ ಕಲೆ, ಮೊ. ಗಳ ವಿಷಯದಲ್ಲಿ] ಕಡಮೆಯಾಗು, ಕುಂದು, ಕ್ಷಯಿಸು, ಕ್ಷೀಣವಾಗು. (ನಾ.) —ವುದು; (ಕರಾ) ಕ್ಷಯ; ಅವನತಿ (Is on the w. ಕ್ಷೀಣಿಸುತ್ತಿದೆ, ಅವನತಿಯಲ್ಲಿದೆ)

Wángle ವ್ಯಾಂಗ್‌ಗ್ಲ್ (ಕ್ರಿ. ಸಕ.) (ಅಸಂ.) (ಅನುಗ್ರಹ, ಇಷ್ಟಫಲ, ಮೊ. ನ್ನು) ತಂತ್ರದಿಂದ, ಏನಾದರೂ ಮಾಡಿ, —ಸಂಪಾದಿಸು, ಗಿಟ್ಟಿಸು; (ವರದಿ, ಮೊ. ನ್ನು) ಕಲ್ಪನೆ ಮಾಡಿ, ಬಣ್ಣ ಕಟ್ಟಿ, —ತೋರಿಸು; ಸೃಷ್ಟನೆ ಮಾಡು.

Wánion ವಾನ್ಯನ್ (ನಾ.) (ಪ್ರಾಚೀ. ಪ್ರ.) In a w., With a (wild) w. ರೋಷದಿಂದ, ಶಪಿಸುತ್ತ. A w. on, A w. to ಹಾಳಾಗ!

Want ವಾಂಟ್ (ನಾ.) ಇಲ್ಲದಿರುವುದು, ಕೊರತೆ, ಅಭಾವ, ನ್ಯೂನತೆ, ಲೋಪ W. of judgement ವಿವೇಚನೆಯ ಕೊರತೆ); ಬೇಕಾಗಿರುವುದು, ಬಡತನ, ದಾರಿದ್ರ್ಯ (Is in w. of money ಅವನಿಗೆ ಹಣ ಬೇಕಾಗಿದೆ, ಹಣದ ಅಭಾವವಿದೆ. He is living in the direst w. ಅತ್ಯಂತ ದಾರಿದ್ರ್ಯದಲ್ಲಿದ್ದಾನೆ); ಅಪೇಕ್ಷೆ, ಕೋರಿಕೆ, ವಾಂಛೆ, ಅವಶ್ಯಕತೆ (A man of few wants ಹೆಚ್ಚು ಅಪೇಕ್ಷೆಗಳಿಲ್ಲದ ಮನುಷ್ಯ. Superfluities soon become wants ಇವೊತ್ತು ಹೆಚ್ಚಿಕೆ ಎಂದು ತೋರಿದ್ದು ನಾಳೆ ಅವಶ್ಯಕಗಳಾಗುತ್ತವೆ). **Wántless** (ಗು.) ಕೊರೆ, ಅಪೇಕ್ಷೆಗಳು, ಆವಶ್ಯಕಗಳು, —ಇಲ್ಲದ; ಅನ್ಯೂನ, ನಿರಪೇಕ್ಷ.

Want (ಕ್ರಿ.) ಬೇಕಾಗಿರು, ಅಗತ್ಯವಿರು, ಆವಶ್ಯಕವಾಗಿರು; ಕೊರೆ, ಅಭಾವ, ಲೋಪ, —ಆಗಿರು; (ವರ್ತಮಾನ ಕೃ.) ಬೇಕಾಗಿರುವ, ಇಲ್ಲದ, ಸಾಲದ [Wants, is wanting in, judgement ವಿವೇಚನೆ—ಇಲ್ಲ, ಸಾಲದು. What was wanting was the will ಬೇಕಾಗಿದ್ದದ್ದು ಮನಸ್ಸು. Head of statue is wanting ವಿಗ್ರಹಕ್ಕೆ ತಲೆ ಇಲ್ಲ. Infinitive wanting ಧಾತುವಿಗೆ ತುಮಂತ ರೂಪ ಇಲ್ಲ. Wants an inch of the regulation measurement ನಿಯಮಿತ ಅಳತೆಗೆ ಒಂದು ಅಂಗುಲ ಸಾಲದೆ ಬರುತ್ತದೆ. Let him w. for nothing ಅವನಿಗೆ ಯಾವುದರ ಕೊರತೆಯೂ ಇಲ್ಲದಿರಲಿ. It wants careful handling ಅದಕ್ಕೆ ಜಾಗರೂಕತೆಯ ಕೈವಾಡ ಬೇಕು. The boy wants the whip whipping, to be whipped, to feel the whip ಹುಡುಗನಿಗೆ ಚಾವಟಿ ರುಚಿ ತೋರಿಸಬೇಕಾಗಿದೆ]; ಅಪೇಕ್ಷಿಸು, ಆಕಾಂಕ್ಷಿಸು ಬಯಸು, ಕೋರು [Don't w. to go ಹೋಗುವುದಕ್ಕೆ ಇಷ್ಟವಿಲ್ಲ. Is wanted by the police (ಗುನ್ಹೆಗಾರಿಯ ಆಸಾಮಿಯ ವಿಷಯದಲ್ಲಿ) ಪೋಲೀಸಿನವರು ಅವನನ್ನು ಹಿಡಿಯಬೇಕೆಂದಿದ್ದಾರೆ. Tell Jones I w. him ನಾನು ಅವನನ್ನು ನೋಡಬೇಕಾಗಿದೆಯೆಂದು ಜೋನ್ಸಿಗೆ ಹೇಳು]. **Wánting** (ಉಪ.) ಇಲ್ಲದೆ, ಕಡಮೆಯಾಗಿ (Wanting common honesty, nothing can be done ಸಾಮಾನ್ಯ ಪ್ರಾಮಾಣಿಕತೆಯಿಲ್ಲದೆ ಹೋದರೆ ಏನನ್ನೂ ಮಾಡುವುದಕ್ಕಾಗುವುದಿಲ್ಲ. Made a century w. one run ಒಂದು ಕಡಮೆ ನೂರು ಓಟಗಳನ್ನು ಮಾಡಿದನು)

Wánton ವಾಂಟನ್ (ಗು., ನಾ., ಕ್ರಿ. ಅಕ.) ಕುಣಿದಾಡುವ, ಜಿಗಿದಾಡುವ, ಹುಡುಗಾಟದ, ಚೆಲ್ಲಾಟದ, ಲೀಲೆಯ; ಕಟ್ಟುಹರಿದ, ಬೇಜವಾಬ್ದಾರಿಯ, ಮನಸ್ಸಿಗೆ ಬಂದಂತೆ ನಡೆಯುವ, ಸ್ವೇಚ್ಛಾಚಾರದ, ಸ್ವೈರ [W. child, kid, wind, mood ತುಂಟಾಟದ ಮಗು, ಜಿಗಿದಾಡುವ (ಆಡಿನ) ಮರಿ, ಮನಸ್ವೀ ಬೀಸುವ ಗಾಳಿ, ಲಹರಿಯ ಮನೋಭಾವ]; ಹುಲುಸಾದ, ಹೊರವಾದ, ವಿಪರೀತ (W. growth); ವ್ಯಭಿಚಾರದ (W. woman ಸ್ವೈರಿಣಿ. W. thoughts ಗೊತ್ತುಗುರಿಯಿಲ್ಲದ, ಸಿಕ್ಕಾಬಟ್ಟೆಯ (W. destruction); ನಿಷ್ಕಾರಣವಾದ, ಬೇಕೆಂದು ಮಾಡಿದ (W. attack). (ನಾ.) ದಾರಿ ತಪ್ಪಿದವನು(ಳು), ನೀತಿಗೆಟ್ಟವನು(ಳು); (ವಿರ. ಪ್ರ.) ತುಂಟ ಮಗು. (ಕ್ರಿ.) ಆಟವಾಡು, ಹುಡುಗಾಟವಾಡು, ನೆಗೆದಾಡು, ಜಿಗಿದಾಡು; ಮನಬಂದಂತೆ ನಡೆ, ಸ್ವೇಚ್ಛೆಯಾಗಿ ವರ್ತಿಸು; (ವಿರ. ಪ್ರ) ಕಾಮಾಸಕ್ತನಾಗಿರು, ವಿಷಯ ಲಾಲಸನಾಗಿರು. **Wántonly** (ಕ್ರಿ. ವಿ.); **Wántonness** (ನಾ.)

Wap ವಾಪ್ (ಕ್ರಿ. ಸಕ.) = Whop.

Wápiti ವಾಪಿಟಿ (ನಾ.) ದ. ಅಮೆರಿಕದ ಒಂದು ಜಾತಿಯ ಜಿಂಕೆ; ಸಾರಂಗ.

War ವಾರ್ (ನಾ.) ರಾಷ್ಟ್ರ ರಾಷ್ಟ್ರಗಳಿಗಾಗಲಿ ಅಥವಾ ಒಂದು ಜನಾಂಗದಲ್ಲಿಯೇ ಕಕ್ಷಿ ಪ್ರತಿಕಕ್ಷಿಗಳಿಗಾಗಲಿ ಶಸ್ತ್ರಾಸ್ತ್ರಗಳಿಂದ ನಡೆಯುವ ಒಂದು ಅಥವಾ ಹಲವು ಕದನಗಳಿಂದ ಕೂಡಿದ, ದೀರ್ಘ ಕಾಲದ ಹೋರಾಟ: ಯುದ್ಧ, ಕದನ, ಕಾಳಗ, ಜಗಳ (ರೂಪ. ನಹ). Civil war (Civil ನೋಡಿ). Private w. ಸರಕಾರದ ಅನುಮತಿಯಿಲ್ಲದೆ ಒಂದು ಜನಾಂಗದವರು ಮತ್ತೊಂದು ಜನಾಂಗದವರ ಮೇಲೆ ಅಥವಾ ಖೂನಿ ಅಪರಾಧಕ್ಕೀಡಾಗುವವೆಂಬುದನ್ನು ಗಣಿಸದೆ ಪ್ರಜೆಗಳಲ್ಲಿ ಕೆಲವರು ಅಥವಾ ಎರಡು ಕುಲದವರು ಒಬ್ಬರ ಮೇಲೊಬ್ಬರು ನಡಸುವ ಕಾದಾಟ: ಖಾಸಗಿ ಕಾದಾಟ. Holy w. (ಮತಧರ್ಮ ಕಾರಣವಾಗಿ ಹೂಡಿದ) ಧಾರ್ಮಿಕ ಯುದ್ಧ. Make, wage, w. ಯುದ್ಧ—ಹೂಡು, ಮಾಡು; ಹೋರಾಡು. Declare w. (upon) ಯುದ್ಧ ಘೋಷಿಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಸಂಸ್ಥೆ, ಪಕ್ಷ, ಪದ್ಧತಿ, ಮೊ. ಗಳ ಮೇಲೆ ಎಂಬಲ್ಲಿ ರೂಪ.). Declaration of w. ಯುದ್ಧ ಘೋಷಣೆ. Drift into w. (ಸಂದರ್ಭಗಳಿಂದ) ಕ್ರಮೇಣ ಯುದ್ಧಕ್ಕೆ ತೊಡಗುವಂತಾಗು. Be at w. (with) ಯುದ್ಧದಲ್ಲಿ ತೊಡಗಿರು, ವೈರ ಸಾಧಿಸು (ರೂಪ. ಸಹ). Roll back tide of w. ಶತ್ರುವಿನ ದಂಡಯಾತ್ರೆಯನ್ನು ಮುರಿದೋಡಿಸು ; ಆಕ್ರಮಣವನ್ನು ಹಿಮ್ಮೆಟ್ಟಿಸು. Go to the wars (ಪ್ರಾಚೀ. ಪ್ರ.) ಸೈನಿಕನಾಗು. Carry the wars into the enemy's country (ರೂಪ.) (ಸ್ವರಕ್ಷಣೆಯಲ್ಲಿ, ಸ್ವಸಮರ್ಥನೆಯಲ್ಲಿ, ಮಾತ್ರ ತೊಡಗಿರದೆ) ಪ್ರತ್ಯಾಕ್ರಮಣ ಮಾಡು, ಪ್ರತ್ಯಾಪಾದನೆಮಾಡು. Has been in the wars (ರೂಪ.) ಯುದ್ಧ ಕಂಡಿದ್ದಾನೆ, ಯುದ್ಧದ ಅನುಭವವಾಗಿದೆ. On a w. footing (ಸೈನ್ಯ, ಮೊ. ಗಳ ವಿಷಯದಲ್ಲಿ) ಯುದ್ಧದಲ್ಲಿ ಹೇಗೋ ಹಾಗೆ ಸಜ್ಜಾಗಿ, ಯುದ್ಧ ಸನ್ನದ್ಧವಾಗಿ. W. to the knife (ಸಾ., ವ್ಯಕ್ತಿಗಳಿಗೆ ಪರಸ್ಪರ ನಡೆಯುವ) ಮರಣಾಂತ ಯುದ್ಧ (Knife ನೋಡಿ). Secretary (of State) for W., W. Secretary (ಪಾರ್ಲಿಮೆಂಟಿನಲ್ಲಿ) ಯುದ್ಧ ಮಂತ್ರಿ. Art of w. ಯುದ್ಧ—ವಿದ್ಯೆ, ತಂತ್ರ Trade of w. ಯುದ್ಧೋದ್ಯೋಗ, ಸೈನಿಕ ಕಸುಬು. The sinews of w. (Sinew ನೋಡಿ). Contraband, Council, Honours, Tug, of w. (ಆಯಾ ಪದ ನೋಡಿ). Man-of-w. ಯುದ್ಧದ ಹಡಗು. Laws of w. (ಶತ್ರು ಕಾರ್ಯಾಚರಣೆಗೆ ಮಿತಿ ಕಲ್ಪಿಸಲು ನಾಗರಿಕ ಜನಾಂಗಗಳು ಅಂಗೀಕರಿಸಿರುವ) ಯುದ್ಧ ನಿಯಮಗಳು, ಯುದ್ಧ ಧರ್ಮ. Rights of w. ಶಾಂತಿ ಕಾಲದಲ್ಲಿ ಅನ್ಯಾಯವೆಂದು ಗಣನೆಯಾಗುವ ಆದರೆ ಯುದ್ಧ ಕಾಲದಲ್ಲಿ ನಿರಾಕ್ಷೇಪಣೀಯವೆನಿಸುವ ಕಾರ್ಯಾಚರಣೆಯ ಹಕ್ಕುಗಳು : ಯುದ್ಧದ ಹಕ್ಕುಗಳು. The dogs of w. (ಕಾವ್ಯ) ಯುದ್ಧದ ಹಾವಳಿ. Wars & rumours of wars (ಜನಾಂಗಗಳಲ್ಲಿ ಪರಸ್ಪರ) ಯುದ್ಧದ ಕೂಗುಗಳು, ಯುದ್ಧ ಪ್ರೇರಣೆ. W. of the elements (Element ನೋಡಿ). All 's fair in love & w. (Fair² ನೋಡಿ). **W. baby** ಯುದ್ಧ ಕಾಲದ ಜಾರಜ ಶಿಶು ; (ಹಾಸ್ಯ ಪ್ರ.) (೧೯೧೪-೧೮ರ ಮಹಾ ಯುದ್ಧದಲ್ಲಿ) ನೌಕಾಧಿಕಾರಿಯಾಗಿ ನೇಮಕವಾಗುತ್ತಿದ್ದ ನೌಕಾ ವಿದ್ಯಾರ್ಥಿ. **W.-cry** ಹಿಂದಿನ ಕಾಲದಲ್ಲಿ ಆಕ್ರಮಣಕ್ಕೆ ನುಗ್ಗುವಾಗ ಸೈನಿಕರು ಕೂಗುತ್ತಿದ್ದ ಕೂಗು (ಈಗಿನ 'ಜೈ ಹಿಂದ್!' ಎಂಬಂತೆ) : ರಣಘೋಷ ; (ಅನಾಗರಿಕರ) ರಣಗರ್ಜನೆ ; (ಒಂದು ಪಕ್ಷ, ಮೊ. ಗಳ) ಕೂಗು, ಘೋಷಣೆ. **W.-cloud** ಯುದ್ಧ ಸೂಚಕ ಸನ್ನಿವೇಶ ; ಯುದ್ಧದ ಕಾರ್ಮೋಡ. **W.-dance** (ಅನಾಗರಿಕರು ಯುದ್ಧಕ್ಕೆ ಪೂರ್ವಭಾವಿಯಾಗಿ ನಡಸುವ) ಕಾಳಗ ಕುಣಿತ. **W.-game**=Kriegspiel (ಆ ಪದ ನೋಡಿ). **W.-god** ಯುದ್ಧದಲ್ಲಿ ಜಯವನ್ನು ಕೊಡುವನೆಂದು ಪೂಜಿಸುವ ದೇವತೆ: ಯುದ್ಧ ದೇವತೆ (ನಮ್ಮಲ್ಲಿ ಕುಮಾರಸ್ವಾಮಿ ಇದ್ದಂತೆ). **W.-head** (ಶಾಂತಿ ಕಾಲದ ಅಭ್ಯಾಸದಲ್ಲಿ ಪ್ರತ್ಯೇಕಿಸಿ ತೆಗೆದಿಡುವ) ನೌಕಾಸ್ಫೋಟಕದ ಸಿಡಿತಲೆ. **W.-horse** ಯುದ್ಧ ಕುದುರೆ; ಕದೀಮ—ಸಿಪಾಯಿ, ರಾಜ್ಯತಂತ್ರಿ [Like an old w.-h. (ಹಿಂದಿನ ತನ್ನ ಶೌರ್ಯ ಮತ್ತು ಕಾರ್ಯಕಲಾಪಗಳ ಸ್ಮರಣೆಯಿಂದ ಹುರುಪುಗೊಂಡ ಸಿಪಾಯಿಯ ಅಥವಾ ರಾಜ್ಯತಂತ್ರಿಯ ವಿಷಯದಲ್ಲಿ)]. **W.-lord** (ಅಲಂ.) ಮಹಾ—ಸೇನಾನಿ, ಸೇನಾಪತಿ. (ಚೀನದ ಒಳ ಯುದ್ಧದಲ್ಲಿ) ಸೇನಾಪತಿ ಪಾಳೆಯಗಾರ(ರಲ್ಲೊಬ್ಬ). **W. Office** ಯುದ್ಧ—ಖಾತೆ, ಶಾಖೆ. **W.-paint** ಅನಾಗರಿಕ ಜನ ಯುದ್ಧಕ್ಕೆ ಹೋಗುವ ಮೊದಲು ಮೈಗೆ ಹಚ್ಚಿಕೊಳ್ಳುತ್ತಿದ್ದ ಬಣ್ಣ : ರಣಬಣ್ಣ ; (ರೂಪ.) ಉತ್ಸವದ, ಠೀಕಿನ, ಅಧಿಕಾರದ, —ಉಡುಪು, ವೇಷ ; ಸಂಪೂರ್ಣ ಸಜ್ಜು. **W.-path** (ಅಮೆರಿಕದ ಇಂಡಿಯನರ) ದಂಡಯಾತ್ರೆ(ಯ ಮಾರ್ಗ) [Be, go, on the w.-p. (ರೂಪ.) ಹೋರಾಟದಲ್ಲಿ, ವಿವಾದದಲ್ಲಿ,—ತೊಡಗಿರು, ತೊಡಗು]. **W.-plane** ಯುದ್ಧ ವಿಮಾನ. **W.-ship** ಯುದ್ಧದ ಹಡಗು, ಸಮರ ನೌಕೆ. **W.-song** (ಅನಾಗರಿಕರು ಯುದ್ಧಕ್ಕೆ ಹೋಗುವ ಮೊದಲು ಹಾಡುವ) ರಣಗೀತೆ ; (ಯುದ್ಧವಿಷಯಕವಾದ ಯಾವುದಾದರೂ) ಸಮರ ಗೀತೆ. **W.-whoop** (ಅಮೆರಿಕದ ಇಂಡಿಯನರಲ್ಲಿ ; ಯುದ್ಧದಲ್ಲಿ ಮುನ್ನುಗ್ಗುವಾಗ ಮಾಡುವ) ಸಿಂಹನಾದ. **W.-worn** ಯುದ್ಧದಿಂದ ಬಳಲಿದ ; ಯುದ್ಧ ಪರಿಣತ ; ಯುದ್ಧ ನಿಷ್ಣಾತ. **Wárfare** (ನಾ.) ಯುದ್ಧ (ಕಾರ್ಯಾಚರಣೆ), ಕಾದಾಟ, ಹೋರಾಟ (His w. is over). **Wárlike** (ಗು.) ಯುದ್ಧೋತ್ಸಾಹದ, ಯುದ್ಧಯೋಗ್ಯ, ಯೋಧಲಕ್ಷಣದ ; ಯುದ್ಧದ, ಸೈನಿಕ (W. preparations ಯುದ್ಧ ಸನ್ನಾಹಗಳು) ; ಕಲಹಪರ, ಕ್ಷಾತ್ರಭಾವದ ; ಯುದ್ಧದ ಬೆದರಿಕೆ ಹಾಕುವ ; ಯುದ್ಧ ಸೂಚಕ. **Wárrior** ವಾರಿಯರ್ (ನಾ.) ಪ್ರಖ್ಯಾತ, ನುರಿತ, —ಯೋಧ; (ಸು)ಭಟ, (ರಣ)ವೀರ, ಕಲಿ (ಕಾವ್ಯ, ಅಲಂ.) ; ಸೈನಿಕ, ಸಿಪಾಯಿ [The unknown w. *or* soldier (೧೯೧೪-೧೮ರ ಮಹಾ ಯುದ್ಧದಲ್ಲಿ ಮಡಿದ ಸೈನಿಕರಲ್ಲಿ ದೇಶಕ್ಕಾಗಿ ಬಲಿಯಾದವರ ಸಂಕೇತವಾಗಿ ಆರಿಸಿ ಸಾರ್ವಜನಿಕವಾಗಿ ಸಂಸ್ಕಾರ ನಡಸಿ ಗೌರವಿಸಿದ) ಅಜ್ಞಾತ—ಯೋಧ, ಸೈನಿಕ] ; (ವಿಶೇಷಣ ಪ್ರ.) (ಜನಾಂಗ, ಮೊ. ಗಳ ವಿಷಯದಲ್ಲಿ) ಕ್ಷಾತ್ರಗುಣದ ; (ಅನಾಗರಿಕರ ವಿಷಯದಲ್ಲಿ) ಯೋಧ, ಹೋರಾಳು. W. ant ಇತರ ಬಗೆಯ ಇರುವೆಗಳನ್ನು ತಮಗೆ ತೊತ್ತಾಗಿ ಮಾಡಿಕೊಳ್ಳುವ ಹಲವು ಬಗೆಯ ಇರುವೆ : ಯೋಧ ಇರುವೆ.

War (ಕ್ರಿ.) (ಪ್ರಾಚೀ. ಪ್ರ.) ಯುದ್ಧಮಾಡು; ಯುದ್ಧದಿಂದ ಸಾಧಿಸು (*Down* ಪದದೊಡನೆ) ; (ವರ್ತಮಾನ ಕೃ.) ಸ್ಪರ್ಧಿಸುವ, ಪರಸ್ಪರ ವಿರುದ್ಧ (Warring creeds, principles)

Wárble¹ ವಾರ್ಬ್‌ಲ್ (ಕ್ರಿ., ನಾ.) (ಮು., ಪಕ್ಷಿಗಳ ವಿಷಯದಲ್ಲಿ) ಮೃದುವಾಗಿ, ಇಂಚರದಿಂದ, —ಹಾಡು ; ಉಲಿ ; ಹಕ್ಕಿಯಂತೆ ಉಲಿ ; ಪದ್ಯದಲ್ಲಿ ಹೇಳು. (ನಾ.) ಹಕ್ಕಿಯ ಹಾಡು, ಇಂಚರ, ಕೂಜನ (ಧ್ವನಿ) (Spoken in a w.). **Wárbler** (ನಾ.) (ಕ್ರಿಯಾರ್ಥಗಳಲ್ಲಿ); ಹಲವು ಬಗೆಯ ಹಾಡುಹಕ್ಕಿ (ಕೋಗಿಲೆ, ಬೆಳವ, ಮೊ. ವು).

Wárble² ವಾರ್ಬ್‌ಲ್ (ನಾ.) ಜೀನು ಒತ್ತಿ ಒತ್ತಿ ಕುದುರೆಯ ಬೆನ್ನ ಮೇಲೆ ಆದ ಗಂಟು : ಜಡ್ಡು, ಉಜ್ಜುಗಂತೆ ; ತೊಣಚಿಯ ಮರಿಹುಳು (ವಿನಿಂದ ದನಕರುಗಳ ಮೈಮೇಲೆ ಆದ ಗಂತಿ)

Ward ವಾರ್ಡ್ (ನಾ.) ಕಾಪು, ಕಾವಲು, ಪಹರೆ (—ಇರುವುದು) (ಈಗ Keep watch & w. ಎಂಬಲ್ಲಿ ಮಾತ್ರ) ; (ಪ್ರಾಚೀ. ಪ್ರ.) (ಕತ್ತಿವರಿಸೆಯಲ್ಲಿ) ಏಟು ತಪ್ಪಿಸಿಕೊಳ್ಳುವುದು, ಆಘಾತ ನಿವಾರಣೆ ; (ಪ್ರಾಚೀ. ಪ್ರ.) ವಶ, ಸುಪರ್ದು, ಅಧೀನ, ಪಾಲನೆ, ರಕ್ಷಣೆ (Is under w. ; To whom the child is in w.) ; ಪಾಲಕನ ವಶದಲ್ಲಿರುವ ಅಪ್ರಾಪ್ತ ವಯಸ್ಕ : ಪಾಲ್ಯ, ಪಾಲಿತ ; ಪಟ್ಟಣದ ಆಡಳಿತ ವಿಭಾಗ ; ನಗರ ವಿಭಾಗ, ಕೇರಿ, ಮೊಹಲ್ಲಾ ; (ಆಸ್ಪತ್ರೆ, ಮೊ. ಗಳಲ್ಲಿ, ಗೊತ್ತಾದ ಸಂಖ್ಯೆಯ) ರೋಗಿಗಳಿಗೆ, (ಅಥವಾ ಸೆರೆಮನೆಯಲ್ಲಿ) ಕೈದಿಗಳಿಗೆ ನಿಗದಿ ಮಾಡಿರುವ ಭಾಗ, ಶಾಖೆ : ರೋಗಿಗಳ, ಕೈದಿಗಳ, —ಕೊಟಡಿ, ಮಂದಿರ [Condemned w. ಮರಣ ದಂಡನೆಗೆ ಗುರಿಯಾದವರ ಕೋಣೆ. Isolation w. (ಅಂಟುರೋಗದವರ) ಪ್ರತ್ಯೇಕ ಕೋಣೆ. Casual w. (Casual ನೋಡಿ)] ; (ಬ. ವ. ದಲ್ಲಿ) (ಬೇರೆ ಕೈಯಿಂದ ತೆಗೆಯಲು ಬಾರದಂತೆ ಬೀಗದಲ್ಲೂ ಅದರ ಕೈಯಲ್ಲೂ ಮಾಡಿರುವ) ಕಚ್ಚುಗಳು ಮತ್ತು ಹಲ್ಲುಗಳು. W.-mote (ನಗರದ) ಮೊಹಲ್ಲಾ ಸಭೆ. W.-room ನೌಕಾಧಿಪತಿಯ ಕೆಳಗಣ ಸನ್ನದು ಅಧಿಕಾರಿಗಳಿಗಾಗಿ ಯುದ್ಧ ನೌಕೆಯಲ್ಲಿರುವ (ಊಟದ) ಕೋಣೆ : ಸನ್ನದು ಅಧಿಕಾರಿಗಳ ಕೋಣೆ. **Wárden¹** ವಾರ್ಡನ್ (ನಾ.) (ಪ್ರಾಚೀ. ಪ್ರ.) ಕಾವಲುಗಾರ, ಪಹರೆಯವನು ; ಪಾಲಕ, ರಕ್ಷಕ, ಅಧ್ಯಕ್ಷ (*Of* ಉಪ. ದೊಡನೆ) [(ಬಿರುದುಗಳಲ್ಲಿ ಪ್ರ.) : W. of Merton College, the Cinque Ports]. **Wárdenship** (ನಾ.) ; **Wárder** (ನಾ.) (ಪ್ರಾಚೀ. ಪ್ರ.) ಕಾವಲುಗಾರ, ಪಹರೆಯವನು ; ಸೆರೆಮನೆಯ, ಸೆರೆಯಾಳುಗಳ, —ಕಾವಲುಗಾರ ; ಕಾರಾಗಾರ ಪಾಲಕ [**Wárdress** (ನಾ., ಸ್ತ್ರೀ.)] ; (ಚರಿತ್ರೆ) (ರಾಜ ಅಥವಾ ಸೇನಾನಿ ಹಿಡಿದುಕೊಂಡಿರುವ, ಕೆಲವು ವೇಳೆ ಸಂಕೇತ ಕೊಡಲು ಉಪಯೋಗಿಸುವ) ಅಧಿಕಾರ ದಂಡ. **Wárdship** (ನಾ.) ಪಾಲನೆ, ವಶ (Under w.; Has the w. of)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Ward (ಕ್ರಿ. ಸಕ.) (ಮು., ದೇವರ ವಿಷಯದಲ್ಲಿ) ಕಾಪಾಡು, ಪಾರುಮಾಡು, ಪಾಲಿಸು ; (ಏಟು, ಅಪಾಯ, ಬಡತನ, ಮೊ. ನ್ನು) ತಪ್ಪಿಸಿಕೊ, ನಿವಾರಿಸಿಕೊ (*Off* ಉಪ. ದೊಡನೆ)

-ward(s) —ವರ್ಡ್(ಸ್) (ಉ. ಪ್ರ.) —ಕಡೆಗೆ, —(ಅಭಿ)ಮುಖವಾಗಿ, —ದಿಕ್ಕಿನಲ್ಲಿ(ಯ) [Backw., Northw., Homew.; (ಹಾಸ್ಯ ಪ್ರ.) Bankwards, Bedward]

Wárden¹. **Ward** ನೋಡಿ.

Wárden² ವಾರ್ಡ್‌ನ್ (ನಾ.) ಒಂದು ಬಗೆಯ ಅಡುಗೆಯ ಪೇರು ಹಣ್ಣು.

Wárder, Wárdship. **Ward** ನೋಡಿ.

Wárdour Street ವಾರ್ಡರ್ ಸ್ಟ್ರೀಟ್ (ನಾ.) ಪುರಾತನ ಪೀಠೋಪಕರಣ, ಮೊ. ನ್ನು ಮಾಡುವ, ಲಂಡನಿನ ಒಂದು ಪೇಟೆ (W.-S. English ಕೃತಕ ಪ್ರಾಚೀನ ಇಂಗ್ಲಿಷು)

Wárdrobe ವಾರ್ಡ್‌ರೋಬ್ (ನಾ.) ಬಟ್ಟೆಗಳನ್ನಿಡುವ ಗೂಟಗಳು, ಅರೆಗಳು, ಕೊಕ್ಕೆಗಳು, ಮೊ. ಗಳನ್ನುಳ್ಳ ಬೀರು, ಅಲಮಾರು, ಮೊ. ವು : ಉಡುಪಿನ ಬೀರು ; ಬಟ್ಟೆ ಕಪಾಟು; (ಒಬ್ಬನಲ್ಲಿರುವ) ಬಟ್ಟೆಗಳು, ಉಡುಪಿನ ದಾಸ್ತಾನು. W. dealer ಹಳೆಯ ಬಟ್ಟೆಗಳ ವ್ಯಾಪಾರಿ. W. trunk ಸೆಳೆಖಾನೆಗಳು, ಅಂಗಿ ತೂಗಹಾಕುವ ನಿಲುವುಗಳು, ಮೊ. ನ್ನು ಅಳವಡಿಸಿದ್ದು ಅಲಮಾರಿನಂತೆ ನಿಲ್ಲಿಸಲಾಗುವ ಪೆಟ್ಟಿಗೆ : ಬೀರು ಪೆಟ್ಟಿಗೆ.

Ware¹ ವೇ(ಅ)ರ್ (ನಾ.) (ಮಾರಾಟಕ್ಕಾಗಿ ತಯಾರಿಸಿದ) ಸಾಮಾನು, ಜಿನಸು (ಮು., ಕುಂಬಾರನ ಸಾಮಾನು) (Hardw. ಕಬ್ಬಿಣದ ಸಾಮಾನು. Tinw. ತವರದ ಸಾಮಾನು. Tunbridge w. ಹದಿಯಲಂಕಾರದ ಮರದ ಸಾಮಾನು) ; (ಬ. ವ. ದಲ್ಲಿ) (ಮಾರಾಟಕ್ಕಾಗಿ ಅಂಗಡಿಯವನು ಇಟ್ಟಿರುವ) ಸರಕು, ಮಾಲು. **Wárehouse** [—ಹೌಸ್ (ನಾ.), —ಸ್ (ಕ್ರಿ. ಸಕ.)] (ಪ್ರದರ್ಶನಕ್ಕಾಗಿ, ವ್ಯಾಪಾರಕ್ಕಾಗಿ ಅಥವಾ ದಾಸ್ತಾನಾಗಿ) ಸಾಮಾನು, ಸರಕು, —ಇಟ್ಟಿರುವ ಸ್ಥಳ : ಮಳಿಗೆ, ಗಡಂಗು. (ಕ್ರಿ.) (ಮು., ಪೀಠೋಪಕರಣಗಳನ್ನು, ಬಂದ ಸರಕನ್ನು ತಾತ್ಕಾಲಿಕವಾಗಿ) ಗಡಂಗಿನಲ್ಲಿ—ಇಡು, ಅಡಕು. **Waréhouseman** (ನಾ.) ಮಳಿಗೆಯ ಯಜಮಾನ, ಗಡಂಗುಗಾರ.

Ware² ವೇ(ಅ)ರ್ (ಗು.) (ಕಾವ್ಯ) =Aware.

Ware³ ವೇ(ಅ)ರ್ (ಕ್ರಿ. ಸಕ.) (ವಿಧ್ಯರ್ಥದಲ್ಲಿ) ಹುಷಾರು ! ಎಚ್ಚರಿಕೆ ! ಜೋಕೆ ! (W. wire, traps !) ; (ಬಳ. ಮಾ. ; ಸಾ., ವಿಧ್ಯರ್ಥದಲ್ಲಿ) (ಮುಟ್ಟದೆ, ಸೇರದೆ,—) ದೂರವಿರು, ಗೋಜಿಗೆ ಹೋಗದಿರು.

Wárfare, Wárlike. **War** ನೋಡಿ.

Wárlock ವಾರ್ಲಾಕ್ (ನಾ.) (ಪ್ರಾಚೀ. ಪ್ರ.) ಮಂತ್ರವಾದಿ, ಮಾಟಗಾರ ; ಐಂದ್ರಜಾಲಿಕ.

Warm ವಾರ್ಮ್ (ಗು.) ಕೊಂಚ ಬಿಸಿಯಾಗಿರುವ, ಬೆಚ್ಚಗಿರುವ, ಸುಖೋಷ್ಣ [W. water. W. weather ಸೆಕೆಯ ಹವ. W. countries ಉಷ್ಣದೇಶಗಳು. W. blood (ಸಸ್ತನಿಗಳಲ್ಲಿ ಮತ್ತು ಹಕ್ಕಿಗಳಲ್ಲಿ ೯೮ರಿಂದ ೧೧೨ ಫ್ಯಾರೆನ್‌ಹೀಟ್ ಡಿಗ್ರಿಗಳ ವರೆಗಿನ) ಬಿಸಿ ರಕ್ತ] ; (ರೂಪ.) ಉದ್ರೇಕ, ಆವೇಶ, ಅನುರಾಗ, —ಪ್ರಕೃತಿ (**Warmblooded,** ಗು.). W. with (ಅನಂ.) ಬಿಸಿನೀರೂ ಸಕ್ಕರೆಯೂ ಬೆರಸಿದ ಮದ್ಯಪಾನೀಯ : ಬಿಸಿ ಮದ್ಯಪಾನೀಯ] ; (ಮನುಷ್ಯ, ಮೊ. ರ ವಿಷಯದಲ್ಲಿ) (ವ್ಯಾಯಾಮ, ಉದ್ರೇಕ, ಸೆಕೆ, ಮೊ. ಗಳಿಂದ) ಮೈಬೆಚ್ಚಗಿರುವ, ಶಾಖವಾಗಿರುವ; (ಬಟ್ಟೆ, ಮೊ. ಗಳ ವಿಷಯದಲ್ಲಿ) ಬೆಚ್ಚಗಿಡುವ, ಬೆಚ್ಚನೆಯ ; (ಸ್ನೇಹ ಸಂಬಂಧ, ಮೊ. ಗಳ ವಿಷಯದಲ್ಲಿ) ಉತ್ಸಾಹದ, ಹೃತ್ಪೂರ್ವಕ, ಆದರದ, ಆದರಣೆಯ (A w. friend, welcome. W. thanks); ಕಾವೇರಿದ, ಕೆರಳಿದ, ಉದ್ರೇಕದ, ತೀಕ್ಷ್ಣ (W. with wine ಮದ್ಯಪಾನೋದ್ರಿಕ್ತನಾಗಿ. The dispute grew w. ವಿವಾದ —ಕಾವೇರಿತು, ಬಿಸಿ ತಿರುಗಿತು. W. work ಬಿಸಿ, ಚುರುಕಿನ, —ಹೋರಾಟ); (ಸ್ಥಾನ, ಮೊ. ಗಳ ವಿಷಯದಲ್ಲಿ) ಕಷ್ಟವಾದ, ಅಪಾಯಕರವಾದ, ಬಿಸಿ ತಾಗುವ [A w. corner (ಯುದ್ಧ, ಮೊ. ಗಳ) ಕಠಿನ ಭಾಗ, ಜೋರು ಭಾಗ. W. reception (Receive ಕೆಳಗೆ Reception ನೋಡಿ). Make it *or* things w. for one ಒಬ್ಬನಿಗೆ ವಿರುದ್ಧ ಪ್ರಚಾರಮಾಡು, ಬಿಸಿ ತಗುಲುವಂತೆ ಮಾಡು, ಕಷ್ಟವಾಗುವಂತೆ ಕಿರುಕುಳ ಕೊಡು] ; (ಭಾವನೆ, ಮೊ. ಗಳ ವಿಷಯದಲ್ಲಿ) ಅನುರಾಗದ, ಸಹಾನುಭೂತಿಯ, ಪ್ರೀತಿ ಸ್ವಭಾವದ, (ಕಾಮ) ವಿಕಾರಕ್ಕೀಡಾಗುವ [Has a w. heart ಪ್ರೀತಿ ಸ್ವಭಾವದವನು (**Warm-hearted,** ಗು., **Warm-heártedly,** ಕ್ರಿ. ವಿ., **Warm-heártedness,** ನಾ.). A w. temperament ಕಾಮು, ಅನುರಾಗ,—ಪ್ರವೃತ್ತಿ. W. descriptions ಅಶ್ಲೀಲ, ಕಾಮುಕ,—ವರ್ಣನೆಗಳು] ; (ಬಣ್ಣದ ವಿಷಯದಲ್ಲಿ) ಶಾಖ ಸೂಚಕ (ಮು., ಗಾಢಕೆಂಪು ಅಥವಾ ಹಳದಿ) ; (ಬೇಟೆಯಲ್ಲಿ, ವಾಸನೆ : ಬೇಟೆ ಆಗ ತಾನೆ ಹೋಗಿದೆಯೆಂದು ಸೂಚಿಸುವ) ಹೊಸದೂ ತೀಕ್ಷ್ಣವೂ ಆದ; ಜೋರಾದ, ಹೊಸಗಂಪಿನ; (ಮಕ್ಕಳ ಕಣ್ಣುಮುಚ್ಚಾಲೆ ಆಟದಲ್ಲಿ ; ಹುಡುಕುವವನ ವಿಷಯದಲ್ಲಿ) ತನ್ನ ಗುರಿಯ ಹತ್ತಿರ ಬಂದಿರುವ, ಹಕ್ಕಿಯನ್ನು ಕಂಡುಬಿಡುವುದರಲ್ಲಿರುವ; (ವ್ಯಕ್ತಿಯ ವಿಷಯದಲ್ಲಿ) ನೆಮ್ಮದಿಯಾಗಿರುವ, ಹಣವಂತನಾದ ; (ಅಧಿಕಾರಿ, ಮೊ. ರ ವಿಷಯದಲ್ಲಿ ; ಪದವಿಯಲ್ಲಿ) ಸುಖವಾಗಿ ನೆಲಸಿರುವ, ಬೇರೂರಿರುವ (*In* ಉಪ. ದೊಡನೆ). **Wármly** (ಕ್ರಿ. ವಿ.) ; **Wármth** (ನಾ.)

Warm (ಕ್ರಿ.) ಬೆಚ್ಚಗೆ ಮಾಡು, ಕಾಯಿಸು, ಕಾವೇರಿಸು, ಉದ್ರೇಕಗೊಳಿಸು, ಉತ್ಸಾಹಗೊಳಿಸು, ಹುರಿದುಂಬಿಸು [W. person *or* his jacket —ನ್ನು ಚೆನ್ನಾಗಿ ಹೊಡೆ, ಚೆಚ್ಚಿಹಾಕು ; ಬಿಸಿ ತೋರಿಸು (**Wárming,** ನಾ.) (ಅಸಂ.)] ; (ಬೆಂಕಿ) ಕಾಯಿಸಿಕೊ ; ಬೆಚ್ಚಗಾಗು ; ಕಾವೇರು, ಉದ್ರೇಕಗೊಳ್ಳು, ಅನುರಾಗಗೊಳ್ಳು, ಸಹಾನುಭೂತಿ ತೋರು (Room is warming up ಕೊಟಡಿ ಶಾಖವಾಗುತ್ತಿದೆ. My heart warms to him ನನ್ನ ಹೃದಯದಲ್ಲಿ ಅವನ ಬಗ್ಗೆ ಅನುರಾಗ ಹರಿಯುತ್ತದೆ). Warming-pan ಹಾಸಿಗೆಯನ್ನು ಬೆಚ್ಚಗೆ ಮಾಡುವುದಕ್ಕಾಗಿ ಹಿಂದೆ ಉಪಯೋಗಿಸುತ್ತಿದ್ದ, ಒಳಗಡೆ ಕೆಂಡ ಇಟ್ಟು ಮುಚ್ಚಳ ಹಾಕಲಾಗುವಂತೆ ಅಳವಡಿಸಿದ, ಉದ್ದ ಹಿಡಿಯುಳ್ಳ, ಹಿತ್ತಾಳೆ ತಟ್ಟೆ : ಕಾವಿನ (ಬೆಂಕಿ) ತಟ್ಟೆ ; ತಟ್ಟೆ ಅಗ್ಗಿಷ್ಟಿಕೆ. (ರೂಪ.) ಅಪ್ರಾಪ್ತ ವಯಸ್ಕ, ಮೊ. ರ ಪರವಾಗಿ ತಾತ್ಕಾಲಿಕವಾಗಿ ಪದವಿಯಲ್ಲಿ ಬದಲ ಇರುವವನು : ಬದಲಿಗ. **-warmer** (ನಾ.)

Warm (ನಾ.) ಕಾಯಿಸಿಕೊಳ್ಳುವುದು, ಬೆಚ್ಚಗೆ ಮಾಡುವುದು (Must have, give it, another w. first)

Warn ವಾರ್ನ್ (ಕ್ರಿ. ಸಕ.) (ಅಪಾಯ, ಪರಿಣಾಮ, ಒಬ್ಬನ ವಿಚಾರ, ಮೊ. ಗಳ ವಿಷಯದಲ್ಲಿ) ಎಚ್ಚರಿಕೆ, ಹುಷಾರು, —ಕೊಡು, ಹೇಳು (*Of* danger, *against* person, etc.) ; ಹುಷಾರಾಗಿರುವಂತೆ, ಜಾಗರೂಕತೆಯಿಂದಿರುವಂತೆ, —ಹೇಳು ; (ತಪ್ಪುಮಾಡಿದನೆಂದು, ಕರ್ತವ್ಯ ಲೋಪವಾಯಿತೆಂದು) ವಾಗ್ದಂಡನೆಮಾಡು ; ಮುನ್ಸೂಚನೆ ಕೊಡು. **Wárning** (ನಾ.) (ಕ್ರಿಯಾರ್ಥಗಳಲ್ಲಿ) ; ಎಚ್ಚರಿಕೆ, ವಾಗ್ದಂಡನೆ, ಮುನ್ಸೂಚನೆ [Take w. ಹುಷಾರಾಗಿರು, ಎಚ್ಚರಿಕೆ ತೆಗೆದುಕೊ. Palpitation is a w. of heart trouble ಹೃದಯಾತಿಸ್ಪಂದನ ಹೃದ್ರೋಗದ ಮುನ್ ಸೂಚನೆ. Give w. (ಧಣಿ ಕೆಲಸಗಾರನಿಗೆ, ಅವಧಿಯನಂತರ) ಕೆಲಸದಿಂದ ಬಿಡುಗಡೆ ಮಾಡುವುದಾಗಿ ಮುನ್ನೆಚ್ಚರಿಕೆ ಕೊಡು, (ಕೆಲಸಗಾರ ಧಣಿಗೆ) ಕೆಲಸ ಬಿಡುವುದಾಗಿ ಮುನ್ ತಿಳಿವಳಿಕೆ ಕೊಡು]. **Wárningly** (ಕ್ರಿ. ವಿ.)

Warp¹ ವಾರ್ಪ್ (ಕ್ರಿ., ನಾ.) (ಸಹಜ ಆಕಾರ, ಸ್ಥಿತಿ, ತಪ್ಪಿ) ಡೊಂಕು, ವಕ್ರ, —ಮಾಡು, ಆಗು (ರೂಪ. ಸಹ) ; ಸುರುಟು, ಕೊಂಕು (Seasoned timber does not w. ಹದಗೊಳಿಸಿದ ಚೌಬೀನೆ ಡೊಂಕಾಗುವುದಿಲ್ಲ. Hardship warped his disposition ಕಷ್ಟ ಅವನ ಮನೋಭಾವವನ್ನು ವಕ್ರ ಮಾಡಿತು. Judgement

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

warped by self interest ಸ್ವಾರ್ಥದಿಂದ ವಕ್ರವಾದ ವಿವೇಚನೆ); (ನಾವೆ; ಒಂದು ಸ್ಥಿರವಸ್ತುವಿಗೆ ಬಿಗಿದ ಹಗ್ಗದಿಂದ) ಹಡಗನ್ನು (ಯಾವುದಾದರೊಂದು ದಿಕ್ಕಿಗೆ) ಎಳೆ, ತುಯ್ಯು; (ಹಡಗಿನ ವಿಷಯದಲ್ಲಿ) ಹಗ್ಗದಿಂದ ಎಳೆಯಲ್ಪಟ್ಟು—ಚಲಿಸು, ಸಾಗು. (ಪ್ರವಾಹ ಹರಿಸಿ) ಮೆಕ್ಕಲಿನಿಂದ ಫಲವತ್ತುಮಾಡು. (ನಾ.) (ಚೌಬೀನೆ, ಮೊ. ಗಳಲ್ಲಿಯ) ಡೊಂಕು, ಬಾಗು; (ಮನಸ್ಸಿನ) ಸೊಟ್ಟು, ವಕ್ರತೆ; ಹಡಗನ್ನು ಎಳೆಯುವ ಹಗ್ಗ; (ಕೀಳುನೆಲದಮೇಲೆ ರಾಡಿ ನೀರನ್ನು ನಿಲ್ಲಿಸುವುದರಿಂದ ಸೇರುವ) ಮೆಕ್ಕಲು. (ಮಗ್ಗದಲ್ಲಿ) ಹಾಸು, ಉಂಕಿ, ಊಕೆ (—ನೂಲು, ಎಳೆ)

Wárrant ವಾರಂಟ್ (ನಾ.) ಅಧಿಕಾರ, ಆಧಾರ, ಪ್ರಮಾಣ, ಸಮರ್ಥನೆ (You have no w. for what you do ನೀನು ಮಾಡುವ ಕೆಲಸಕ್ಕೆ ನಿನಗೆ ಯಾವ ಅಧಿಕಾರವೂ ಇಲ್ಲ. Good intentions are no w. for irregular actions ಸದುದ್ದೇಶಗಳು ಅಕ್ರಮ ಕಾರ್ಯಗಳಿಗೆ ಸಮರ್ಥನೆಯಾಗುವುದಿಲ್ಲ); ಸಲಿಕೆ, ಪಾವತಿ, —ಪತ್ರ; (ಹಣ ತೆಗೆದುಕೊಳ್ಳಲು) ಅಧಿಕಾರಪತ್ರ [Dividend w. ಲಾಭಾಂಶ ಸಲಿಕೆಪತ್ರ. Treasury w. (Treasure ಕೆಳಗೆ Treasury ನೋಡಿ)]; (ಜಪ್ತಿಯ, ದಸ್ತಗಿರಿಯ—) ಆಜ್ಞಾಪತ್ರ (A w. is out against him); (ನ್ಯಾ.ಶಾ.) ವಕಾಲತ್ತುನಾಮೆ, ಮೊಖ್ತ್ಯಾರುನಾಮೆ (=W. of attorney); ನೌಕಾ ಕಚೇರಿಯ, ಯುದ್ಧ ಕಚೇರಿಯ, —ಅಧಿಕಾರಪತ್ರ (W.-officer ಸನ್ನದು ಅಧಿಕಾರಿಗೂ ನಾನಸನ್ನದು ಅಧಿಕಾರಿಗೂ ನಡುವಣ ದರ್ಜೆಯ ಅಧಿಕಾರಿ: ಪತ್ರದ ಅಧಿಕಾರಿ).

Wárranty (ನಾ.) ಅಧಿಕಾರ, ಆಧಾರ, ಸಮರ್ಥನೆ (*For* ಉಪ. ದೊಡನೆ); (ನ್ಯಾ. ಶಾ.) (ಮಾರುವವನು ಕೊಳ್ಳುವವನಿಗೆ ಸರಕಿನ ಬಗ್ಗೆ ಕೊಡುವ) ಖಾತರಿ, ಭರವಸೆ; ಹೊಣೆ, ಜವಾಬ್ದಾರಿ.

Wárrant (ಕ್ರಿ. ಸಕ.) ಅಧಿಕಾರಕೊಡು, ಪ್ರಮಾಣೀಕರಿಸು, ಸಮರ್ಥಿಸು (Nothing can w. such insolence ಅಂಥ ದುರಹಂಕಾರಕ್ಕೆ ಯಾವ ಸಮರ್ಥನೆಯೂ ಇರಲಾರದು); ಖಾತರಿ, ಭರವಸೆ, —ಕೊಡು (ಈಗ ಈ ಅರ್ಥದಲ್ಲಿ Guarantee ಪದ ಹೆಚ್ಚು ಬಳಕೆ) [Warranted pure ಶುದ್ಧವಾದ್ದೆಂದು ಖಾತರಿಕೊಟ್ಟ. I, I'll, w. (you) ನಾನು (ನಿನಗೆ) ಭರವಸೆಕೊಡುತ್ತೇನೆ; ನಿಸ್ಸಂದೇಹವಾಗಿ]. **Wárrantable** (ಗು.) ಸಮರ್ಥನೀಯ; ಖಾತರಿ ಕೊಡಬಹುದಾದ. **Wárranter, Wárrantor** (ನಾ.) ಖಾತರಿಕೊಡುವವನು, ಹೊಣೆಗಾರ. **Warranteé** (ನಾ.) ಖಾತರಿ ಪಡೆಯುವವನು, ಭರವಸೆ ಕೊಡಲ್ಪಟ್ಟವನು.

Wárren ವಾರೆ(ರ)ನ್ (ನಾ.) ಮೊಲಗಳನ್ನು ಬೆಳೆಸುವ, ಮೊಲಗಳು ತುಂಬಿರುವ, —ಪ್ರದೇಶ: ಮೊಲವೀಡು [Like rabbits in a w. (ಜನಸಂಖ್ಯೆಯ ವಿಷಯದಲ್ಲಿ) (ಮೊಲವೀಡಿನಲ್ಲಿಯ ಮೊಲಗಳಂತೆ): ಕಿಕ್ಕಿರಿದು, ಜನಸಾಂದ್ರತೆ ಹೆಚ್ಚಾಗಿ]

Wárrior. War ನೋಡಿ.

Wart ವಾರ್ಟ್ (ನಾ.) ಚರ್ಮದಮೇಲಿನ ಸಣ್ಣ ಗಂತಿ: ನರಹುಲಿ (Paint one with his warts ಒಬ್ಬನ ಕುಂದುಗಳನ್ನು ಮರೆಮಾಚದೆ ವರ್ಣಿಸು); (ಮರಗಳ ತಾಳು, ಮೊ. ಗಳ ಮೇಲಿನ) ಗಂಟು, ಗಂತಿ. W.-grass, -weed, -wort ನರಹುಲಿ(ಗೆ ಔಷಧವಾಗಿ ಉಪಯೋಗವಾಗುವ ರಸವುಳ್ಳ ಹಲವು ಬಗೆಯ) ಕಳ್ಳಿ. W.-hog (ದ. ಆಫ್ರಿಕ) ನರಹುಲಿ(ಗಳುಳ್ಳ) ಹಂದಿ. **Wárty** (ಗು.)

Wáry ವೇ(ಅ)ರಿ (ಗು.) ಎಚ್ಚರಿಕೆಯ, ಜಾಗರೂಕ, ಹುಷಾರಿನ; —ಇಂದ ಮಾಡುವ, ಮಾಡಿದ. **Wárily** (ಕ್ರಿ. ವಿ.); **Wáriness** (ನಾ.)

Was. **Be** ನೋಡಿ.

Wash ವಾಷ್ (ಕ್ರಿ.) (ಮುಖ, ಮೊ. ನ್ನು, ಪಾತ್ರೆ, ಪದಾರ್ಥ, ಮೊ. ನ್ನು) ತೊಳೆ; ಉಜ್ಜು, ತಿಕ್ಕು [W. thing out (ಪಾತ್ರೆಯನ್ನು) ಒಳಗಡೆ ಚೆನ್ನಾಗಿ ತೊಳೆ, (ಬಟ್ಟೆಯನ್ನು) ಚೆನ್ನಾಗಿ ಜಾಲಾಡು. Wash one's dirty linen (Linen ನೋಡಿ). W. one's hand (of) (ರೂಪ.) ತನ್ನ ಜವಾಬ್ದಾರಿ ಕಳೆದುಕೊ, ಕೈತೊಳೆದುಕೊ(ಂಡುಬಿಡು). W. out, off, away (ಕರೆ, ಮೊ. ನ್ನು ತೆಗೆದುಹಾಕಿ) ಶುಭ್ರಮಾಡು. W. up (ಊಟದ ತಟ್ಟೆ, ಮೊ. ನ್ನು) ತೊಳೆ; (ಮುಸುರೆ, ಮೊ. ನ್ನು) ಉಜ್ಜು, ತಿಕ್ಕು]; (ರೂಪ.) ಶುದ್ಧಿಗೊಳಿಸು, ಪುನೀತಮಾಡು (W. me throughly from mine iniquity ನನ್ನ ಪಾಪಗಳನ್ನೆಲ್ಲಾ ಕಳೆದು ಪರಿಶುದ್ಧಮಾಡು, ಪಾವನಮಾಡು); (ಬಟ್ಟೆ, ಮೊ. ನ್ನು) ಒಗೆ, ಚಲುವೆಮಾಡು (Washes for a living ಬಟ್ಟೆ ಒಗೆದು ಜೀವನ ಮಾಡುತ್ತಾನೆ); ಕೈ (ಕಾಲು ಮುಖ) ತೊಳೆದುಕೊ (Must w. before dinner ಊಟಕ್ಕೆ ಮೊದಲು ಕೈಕಾಲು ತೊಳೆದುಕೊಳ್ಳಬೇಕು); (ಬಣ್ಣ, ಬಣ್ಣದ ಬಟ್ಟೆ, ಮೊ. ಗಳ ವಿಷಯದಲ್ಲಿ) ತೊಳೆದರೆ, ಒಗೆದರೆ, —ಬಣ್ಣ ಹೋಗದಿರು [Won't w. (ರೂಪ.) (ವಾದ, ಮೊ. ಗಳು) ಪರೀಕ್ಷೆಗೆ—ತಡೆ, ಗಟ್ಟಿಯಾಗಿ ನಿಲ್ಲು. Washed out (ರೂಪ.) (ಮು., ವ್ಯಭಿಚಾರಿ ಜೀವನದಿಂದ) ತಟ್ಟುಬಿದ್ದುಹೋದ, ಕ್ಷೀಣವಾದ, ಶಕ್ತಿಗುಂದಿದ, ಭ್ರಷ್ಟನಾದ]; ತೊಯಿಸು, ಆರ್ದ್ರಮಾಡು (Roses washed with dew ಇಬ್ಬನಿಯಲ್ಲಿ ತೊಯ್ದ ಗುಲಾಬಿಗಳು); (ನದಿ, ಸಮುದ್ರ, ಮೊ. ಗಳ ವಿಷಯದಲ್ಲಿ; ನೆಲ, ದೇಶ, ದಡ, ಮೊ. ನ್ನು) ಸೋಕು, ಒತ್ತಿಕೊಂಡಿರು, ಬಡಿ; (ಹರಿಯುವ ದ್ರವದ ವಿಷಯದಲ್ಲಿ) ಹೊಡೆದುಕೊಂಡು, ಕೊಚ್ಚಿಕೊಂಡು, —ಹೋಗು [(ಮು., ಭೂ. ಕೃ.ನಲ್ಲಿ): Was washed up by the sea ಸಮುದ್ರ ಹೊಡೆದುಕೊಂಡು ಬಂತು. Bread washed down with coffee ಕಾಫಿಯಿಂದ ಗಂಟಲನಲ್ಲಿ ಇಳಿಸಿದ ರೊಟ್ಟಿ]; (ಅಲೆ, ಮೊ. ಗಳ ವಿಷಯದಲ್ಲಿ) ಬಡಿ, ಹೊಡೆ, ಅಪ್ಪಳಿಸು (Sea-washed cliffs); ಕೊರೆ(ದು—ಹಾಕು, ಮಾಡು) (Water had washed a channel ನೀರು ಕೊರೆದು ಒಂದು ಕಾಲುವೆ ಮಾಡಿತ್ತು); ಕೊಚ್ಚಿಕೊಂಡುಹೋಗು, ಪ್ರವಾಹ ಬಂದು ಹೊಡೆ (*Along, in, into, out, over* ಉಪ. ದೊಡನೆ); (ಲೋಹ ಭಾಗವನ್ನು ಅದುರಿನಿಂದ) ನೀರು ಹರಿಸಿ, ಪ್ರವಾಹದಲ್ಲಿ, —ತೊಳೆ, ಪ್ರತ್ಯೇಕಿಸು, ಜಾಲಿಸು; (ಕಾಗದ, ಗೋಡೆ, ಮೊ. ಗಳ ಮೇಲೆ) (ತೆಳುವಾಗಿ) ಬಣ್ಣ —ಬಳಿ, ತೊಡೆ; (ಕೀಳು ಲೋಹಗಳಿಗೆ ಚಿನ್ನ, ಮೊ. ಗಳ) ಮುಲಾಮು —ಕೊಡು, ಮಾಡು. **Wáshable** (ಗು.) ತೊಳೆಯಲಾಗುವ, ಒಗೆಯಬಹುದಾದ. **Wásher** (ನಾ.) (ಕ್ರಿಯಾರ್ಥಗಳಲ್ಲಿ); ಹಿಡಿಕೆ, ತಿರುಪುಮೊಳೆ, ಬಂಧನಿ, ಮೊ. ಗಳಿಗೆ ಬಿಗಿಬರುವುದಕ್ಕಾಗಿ ಹಾಕುವ ಚಪ್ಪಟೆಯುಂಗುರ, ತೂತು ಕೊರೆದ ತೊಗಲಬಿಲ್ಲೆ, ಮೊ. ವು: ಬಿಗಿಬಿಲ್ಲೆ, ಇರುಕು. **Wásherman** (ನಾ.) ಅಗಸ, ಮಡಿವಾಳ **Wásherwoman** (ನಾ., ಸ್ತ್ರೀ) ಅಗಸಿತಿ. **Wáshing**[1] (ಗು.) (ಬಟ್ಟೆ) ಒಗೆಯುವ (W. bench, powder, account. W. soda ಸೋಡಿಯಂ ಕಾರ್ಬೊನೇಟು; ಚಲುವೆಯುಪ್ಪು). **Wáshing**[2] (ನಾ.) (ಕ್ರಿಯಾರ್ಥಗಳಲ್ಲಿ); ಒಗೆಯುವುದಕ್ಕೆ ಹಾಕಿದ, ಒಗೆದ, —ಬಟ್ಟೆ; ಒಗೆತ. **W.-stand** = Wash-stand (Wash- ನೋಡಿ).

Wash (ನಾ.) ತೊಳೆತ, ಒಗೆತ; ಒಗೆಯಬೇಕಾದ, ಒಗೆದ, —ಬಟ್ಟೆ(ಗಳು) [The w. ಚಲುವೆ (Send the linen to the w.)]; ಕಲಕು ನೀರಿನ, —ಸಪ್ಪಳ, ಹರಿವು; (ದಡಕ್ಕೆ) ಅಲೆಗಳ ಬಡಿತ; ತೆರೆಗಳ ಮಸಗು (ಮು., ಹಡಗು ಹೋಗುವಾಗ); ಪ್ರವಾಹ ತಂದುಹಾಕಿದ ಮಣ್ಣು: ಮೆಕ್ಕಲು, ಒಂಡು; (ಹಂದಿಗಳಿಗೆ ಕುಡಿಸುವ) ಮುಸುರೆ (ತೊಳೆದ) ನೀರು, ಕಲಗಚ್ಚು (ರೂಪ. ಸಹ); ತೆಳ್ಳನೆಯ, ಕೀಳು ತರನ, ಸಪ್ಪೆಯ, —ದ್ರವಾಹಾರ (This soup, tea, is mere w. ಈ ಸಾರು, ಟೀ, ಬರಿಯ ಕಲಗಚ್ಚು); (ರೂಪ.) ಸಪ್ಪೆಯ, ನೀರಸ, —ಮಾತು; ಚಿಕಿತ್ಸೆಗಾಗಿ, ಬಣ್ಣ ಹಾಕುವುದಕ್ಕಾಗಿ, ತೊಳೆಯುವುದಕ್ಕಾಗಿ, —ಮೇಲೆ ಬಳಿದ ದ್ರವ: ತೊಳೆನೀರು, ಧಾವಕ, ಮಾರ್ಜಕ; ಅಂಗರಾಗ; (ಜಲವರ್ಣ, ಮೊ. ಗಳ) ತೊಡೆತ; (ಗೋಡೆಗೆ) ಬಣ್ಣ ಬಳಿತ; (ಲೋಹ, ಮೊ. ಗಳ) ಲೇಪ, ಮುಲಾಮು. **Wáshy** (ಗು.) (ದ್ರವಾಹಾರ, ಮೊ. ಗಳ ವಿಷಯದಲ್ಲಿ) ಬಲು ತೆಳ್ಳನೆಯ, ಬಲು ನೀರಾದ, ಸಪ್ಪೆಯಾದ; (ಬಣ್ಣದ ವಿಷಯದಲ್ಲಿ) ಬಲು ಮಾಸಲಾದ, ಮಸುಕಾದ, ತೆಳುವಾದ; (ಶೈಲಿ, ಭಾವ, ಮೊ. ಗಳ ವಿಷಯದಲ್ಲಿ) ಶಿಥಿಲ, ಜಾಳಾದ, ಅಡಕವಿಲ್ಲದ, ಜೋರಿಲ್ಲದ. **Wáshily** (ಕ್ರಿ. ವಿ.); **Wáshiness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Wash- (ಸ. ಪೂ. ಪ.) ತೊಳೆಯುವ—, ಒಗೆಯುವ—, ಧಾವಕ—, ಮಾರ್ಜಕ—. **W.-basin** (ಕೈ, ಮುಖ) ತೊಳೆಯುವ ಬೋಗುಣಿ, ತೊಟ್ಟಿ. **W.-board** (ತೆರೆ ತೆರೆಯಾದ ಉಬ್ಬುಗಳುಳ್ಳ) ಒಗೆಯುವ—ಮಣೆ, ಹಲಗೆ; (ಅಲೆಗಳ ಬಡಿತದಿಂದ ನೀರು ಒಳ ನುಗ್ಗದಂತೆ ಹಡಗಿನ ಅಂಚು, ಜೇರುಗಂಡಿ, ಮೊ. ಗಳಿಗೆ ಹಾಕಿರುವ) ಇರಚಲು, ಅಲೆ,—ತಡೆ (ಹಲಗೆ); ಕೋಣೆಯ ಗೋಡೆಯ ಕೆಳ ಅಂಚಿಗೆ ಹದ್ದಿಸಿರುವ ಹಲಗೆ: ತೊಳೆ, ತಳ, —ಪಟ್ಟಿ. **W.-boiler** ಚಲುವೆ ಕಡಾಯಿ. **W.-bottle** ಅನಿಲ, ಮೊ. ನ್ನು ದ್ರವದ ಮೂಲಕ ಹಾಯಿಸಿ ಶುದ್ಧಮಾಡುವ ಸಲಕರಣೆ: ಧಾವಕ, ಮಾರ್ಜಕ, —ಸೀಸೆ. **W.-bowl** ತೊಳೆಯುವ —ಅರಕಂಚಟ್ಟಿ, ಬೋಗುಣಿ. **W.-cloth** (ತಟ್ಟೆ, ಮೊ. ನ್ನು) ತೊಳೆಯುವ, ಒರಸುವ, —ಬಟ್ಟೆ. **W.-day** ಬಟ್ಟೆ ಒಗೆಯುವ ದಿನ, ಚಲುವೆ ದಿನ. **W.-hand-basin** ಕೈ ತೊಳೆಯುವ ಬೋಗುಣಿ. **W.-hand-stand** (ಬೋಗುಣಿ, ಹೂಜಿ, ಸಾಬೂನು, ಮೊ. ನ್ನು ಇಡುವ) ಕೈ ತೊಳೆಯುವ ಗಡಗಂಚಿ. **W.-house** ಚಲುವೆ ಮನೆ. **W.-leather** ಷ್ಯಾಮಿ(ಯಂಥ) ತೊಗಲು, ಮಾರ್ಜನ ಚರ್ಮ. **W.-out** (ಸೈನಿಕ ಅಸಂ.) ಪೂರ್ತಿ ಗುರಿ ತಪ್ಪುವುದು, ಸೋತುಹೋಗುವುದು; ತೀರ—ಬೇಸ್ತು, ಚೊಕ್ಕಟ; (ರೈಲು ಹಾದಿ, ರಸ್ತೆ, ಮೊ. ವು) ಪ್ರವಾಹ, ಭಾರಿ ಮಳೆ, ಮೊ. ಗಳಿಂದ ಕೊಚ್ಚಿಹೋಗಿರುವುದು: ಪ್ರವಾಹ ಛಿದ್ರ, ಕೊಚ್ಚಿಗೆ. **W.-pot** (ಪ್ರಾಚೀ. ಪ್ರ.) ಕೈ ತೊಳೆಯುವ ಪಾತ್ರೆ; ತವರದ ಲೇಪ ಕೊಡಬೇಕಾಗಿರುವ ಕಬ್ಬಿಣದ ತಗಡುಗಳನ್ನು ಅದ್ದುವುದಕ್ಕಾಗಿ ತವರ ಕರಗಿಸಿಟ್ಟಿರುವ ಪಾತ್ರೆ: ತವರ ಮುಲಾಮು ಪಾತ್ರೆ. **W.-stand** = Wash-hand-stand. **W.-tub** (ಬಟ್ಟೆ) ಒಗೆಯುವ ತೊಟ್ಟಿ.

Wásher, Wáshing, Wáshy. **Wash** ನೋಡಿ.

Wasp ವಾಸ್ಪ್ (ನಾ.) ಕಣಜ, ಕಡಜೀರಿಗೆ (ಹುಳು) [She has a waist like a w.'s ಅವಳಿಗೆ (ಕಣಜಕ್ಕಿರುವಂಥ) ತೆಳು ನಡುವಿದೆ. **W.-waisted** ತೆಳು ನಡುವಿನ]. W.-bee, -beetle, -fly ಕಣಜದಂಥ ಜೇನುನೊಣ, ಮೊ. ವು. **Wáspish** (ಗು.) ರೇಗುವ, ಸಿಡುಕಿನ, ಚುಚ್ಚುನುಡಿಯುವ, ಕುಟುಕುವ, ಕುತ್ಸಿತ ಛಲದ. **Wáspishly** (ಕ್ರಿ. ವಿ.); **Wáspishness** (ನಾ.)

Wassail ವಾ(ವ್ಯಾ)ಸ್ಅರ್(ಸೆಲ್) (ನಾ., ಕ್ರಿ. ಅಕ.) (ಪ್ರಾಚೀ. ಪ್ರ.) ಉತ್ಸವ ಸಂಭ್ರಮ, ಪಾನೋತ್ಸವ; ಇಂಥ ಸಂದರ್ಭದಲ್ಲಿ ಕುಡಿಯುವ ಸಂಬಾರ ಹಾಕಿದ ಏಲ್ ಮದ್ಯ: ಕೇಳಿ ಮದ್ಯ (W.-bowl, -cup ಮದ್ಯದ ಬಟ್ಟಲು). (ಕ್ರಿ.) ಪಾನೋತ್ಸವ ನಡಸು, ಮಜಾಮಾಡು.

Waste ವೇಸ್ಟ್ (ಗು.) (ಪ್ರದೇಶ, ಮೊ. ಗಳ ವಿಷಯದಲ್ಲಿ: ಯುದ್ಧದ ಹಾವಳಿ, ಸ್ವಾಭಾವಿಕವಾಗಿ ಫಲವತ್ತಲ್ಲದ್ದು, ಮೊ. ಕಾರಣಗಳಿಂದ) ಜನವಾಸವಿಲ್ಲದ, ನಿರ್ಜನ, ಪಾಳುಬಿದ್ದ, ಬಂಜರಾದ, ಬೆಂಗಾಡಾದ, ಮರಳುಗಾಡಾದ [Lay w. ಪಾಳುಗೆಡವು, ಹಾಳೆಬ್ಬಿಸು. Lie w. (ವ್ಯವಸಾಯವಿಲ್ಲದೆ) ಪಾಳು ಬಿದ್ದಿರು. W. land (ಯಾವ ಕೆಲಸಕ್ಕೂ ಉಪಯೋಗಿಸಿಕೊಂಡಿಲ್ಲದ) ಪಾಳು ನೆಲ, ಬಂಜರು ಜಮೀನು]; (ರೂಪ.) ಸ್ವಾರಸ್ಯಾಂಶಗಳಿಲ್ಲದ, ಬೇಸರ ಹಿಡಿಸುವ, ನಿಸ್ಸಾರ, ಹಾಳು ಸುರಿಯುವ (The w. periods of history); ಉಪಯೋಗವಾಗದೆ —ವ್ಯರ್ಥವಾದ, ಮಿಕ್ಕುಹೋದ; ನಿರುಪಯೋಗವಾದ, ನಿರರ್ಥಕ, ಹಾಳಾದ; ಕಸವಾಗಿ, ಹಿಪ್ಪೆಯಾಗಿ, —ಉಳಿದ [W. products (ತಯಾರಿಕೆಯಲ್ಲಿ) ನಿಷ್ಪ್ರಯೋಜಕವಾದ ಉಪ ಉತ್ಪನ್ನಗಳು; ಕೆಟ್ಟುಹೋದ, ವ್ಯರ್ಥ, —ಉತ್ಪನ್ನಗಳು; ಹಿಪ್ಪೆ. W. steam ಉಪಯೋಗವಾಗದೆ ಹಾಳಾದ ಆವಿ. W. paper (ಮಾರಾಟವಾಗದ ಪುಸ್ತಕಗಳು, ಉಪಯೋಗಕ್ಕೆ ಬರದ ದಸ್ತೈವಜುಗಳು, ಮೊ. ಗಳ ವಿಷಯದಲ್ಲಿ) ಕೆಲಸಕ್ಕೆ ಬಾರದ, ವ್ಯರ್ಥ, —ಕಾಗದ]

Waste (ಕ್ರಿ.) ಪಾಳುಗೆಡವು, ಹಾಳೆಬ್ಬಿಸು; (ನ್ಯಾ. ಶಾ.) (ಹಾನಿ ಮಾಡಿ ಅಥವಾ ಉಪೇಕ್ಷೆಯಿಂದ ಆಸ್ತಿಯನ್ನು) ದುಃಸ್ಥಿತಿಗೆ ತರು, ಬೀಳುಗೆಡವು; ವ್ಯರ್ಥವಾಗಿ, ಸಾಕಷ್ಟು ಫಲವಿಲ್ಲದೆ, —ಖರ್ಚು ಮಾಡು; ವ್ಯರ್ಥಮಾಡು, ಪೋಲುಮಾಡು, ದುಂದುಮಾಡು, ಹಾಳುಮಾಡು [W. money, time, food. Waste not, want not ದುಂದಿಲ್ಲದಿದ್ದರೆ ಕುಂದೂ ಇಲ್ಲ. W. breath *or* words ವ್ಯರ್ಥವಾಗಿ ಮಾತಾಡು]. ನಶಿಸಿಹೋಗು, ನಶಿಸು, ಬಡವಾಗು, ಕ್ಷಯಿಸು; ಹಾಳಾಗು, ನಾಶವಾಗು; (ಪ್ರಾಚೀ. ಪ್ರ.) (ಕಾಲದ ವಿಷಯದಲ್ಲಿ) ಕಳೆ(ದುಹೋಗು). (The day wastes ದಿನ ಕಳೆದುಹೋಗುತ್ತಿದೆ, ಮುಗಿದುಹೋಗುತ್ತಿದೆ. A wasting disease ಕ್ಷಯವಾಗುತ್ತಾ ಬರುವಂತೆ ಮಾಡುವ, ಕ್ಷಯಿಸುವ, —ವ್ಯಾಧಿ. Is wasting away for lack of food ಆಹಾರವಿಲ್ಲದೆ ನಶಿಸಿಹೋಗುತ್ತಿದ್ದಾನೆ, ಬಡವಾಗುತ್ತಿದ್ದಾನೆ. The water is wasting ನೀರು ಹಾಳಾಗಿ ಹೋಗುತ್ತಿದೆ). **Wástage** ವೇಸ್ಟೆ(ಸ್ಟಿ)ಜ್ (ನಾ.) ಹಾಳುಮಾಡುವುದು, ಹಾಳಾದದ್ದು, ಕೆಟ್ಟುಹೋದದ್ದು, ಸವಕಳಿ, ಕಸರು, ನಷ್ಟ. **Wáster** (ನಾ.) (ಕ್ರಿಯಾರ್ಥಗಳಲ್ಲಿ); ತಯಾರಿಕೆಯಲ್ಲಿ ಕೆಟ್ಟುಹೋದ ಪದಾರ್ಥ; ಊನ ಸರಕು. (ಅಸಂ.) ಕೆಲಸಕ್ಕೆ ಬಾರದವನು, ವ್ಯರ್ಥಜೀವಿ, ನಿಷ್ಪ್ರಯೋಜಕ; ದುಂದುಗಾರ. **Wástrel** (ನಾ.) (ಮಾಡುವಾಗ) ಕೆಟ್ಟುಹೋದದ್ದು, ಊನ ಸರಕು; ಬೀದಿ ಪೋರ, ಭಿಕಾರಿ ಹುಡುಗ; ಕೆಲಸಕ್ಕೆ ಬಾರದವನು, ಅಪ್ರಯೋಜಕ; ದುಂದುಗಾರ.

Waste (ನಾ.) ಬೀಳು, ಪಾಳು (—ಭೂಮಿ); ಬಂಜರು (ನೆಲ), ಬೆಂಗಾಡು; ನಿರ್ಜನ ಪ್ರದೇಶ; ಹಾಳು ಸುರಿಯುತ್ತಿರುವ, ಬಿಕೋ ಎನ್ನುವ, —ಪ್ರದೇಶ (A w. of waters ಅಪಾರ ಸಮುದ್ರ); ಸವೆತ, ಕ್ಷಯ, ನಶಿಸುವುದು (The w. of tissue is continuous ಅಂಗಾಂಶದ ಕ್ಷಯ ನಿರಂತರವಾದ್ದು. W. & repair balance each other ಶಿಕಸ್ತು ದುರಸ್ತು ಪರಸ್ಪರ ಸರಿದೂಗುತ್ತವೆ). ವ್ಯರ್ಥವಾದ—ವಸ್ತು, ಆಹಾರ; ನಿರುಪಯೋಗವಾದ್ದು; ಕಚಡ, ಕಳಪೆ, ಕಸ, ಹಾಳು ಮೂಳು; (ಕಾಲ, ಹಣ, ಆಹಾರ, ಮೊ. ನ್ನು) ಹಾಳು, ಅಪವ್ಯಯ, ಪೋಲು, ದುಂದು,—ಮಾಡುವುದು [Run to w. (ದ್ರವದ ವಿಷಯದಲ್ಲಿ; ಪ್ರೀತಿ, ಮೊ. ಗಳ ವಿಷಯದಲ್ಲಿ ರೂಪ.) ಹಾಳಾಗು, ವ್ಯರ್ಥವಾಗು]; (ನ್ಯಾ. ಶಾ.) (ಮು., ಜೀವಾವಧಿ ಹಿಡುವಳಿದಾರನು ಬೇಕೆಂದು ಅಥವಾ ಉಪೇಕ್ಷೆಯಿಂದ ಆಸ್ತಿಗೆ ಉಂಟುಮಾಡಿದ) ಹರಾಕು, ಹಾನಿ, ದುಃಸ್ಥಿತಿ. **Wásteful** (ಗು.) ದುಂದುಮಾಡುವ, ಪೋಲುಮಾಡುವ, ಹಾಳುಮಾಡುವ. **Wástefully** (ಕ್ರಿ. ವಿ.); **Wástefulness** (ನಾ.); **Wásteless** (ಗು.) ಕಡಮೆಯಾಗದ, ಅಕ್ಷೀಣ.

Waste- (ಸ. ಪೂ. ಪ.): **W.-basket** ಕಸದ ಬುಟ್ಟಿ. **W.-book** (ಜಮಾ ಖರ್ಚು ಲೆಕ್ಕವಿಡುವುದರಲ್ಲಿ) ಕಗಡು ಪುಸ್ತಕ, ಕಚ್ಚಾ ಪುಸ್ತಕ. **W.-paper-basket** ಕಸ ಕಾಗದದ ಬುಟ್ಟಿ. **W.-pipe** ಉಪಯೋಗಿಸಿದ ಅಥವಾ ಹೆಚ್ಚಿನ ನೀರು ಹರಿದುಹೋಗುವ ಕೊಳವೆ: ಹರಿನಾಳಿ, ಸಾಗುಗೊಳವೆ.

Watch ವಾಚ್ (ನಾ.) (ಈಗ ವಿರ. ಪ್ರ.) (ರೋಗಿಯ ಉಪಚಾರ, ಒಬ್ಬರ ನಿರೀಕ್ಷಣೆ, ಮೊ. ಕ್ಕಾಗಿ) ರಾತ್ರಿ ಎಚ್ಚರವಾಗಿರುವುದು, ಜಾಗರ (In the watches of the night ಎಚ್ಚರವಾಗಿ ಕಾದಿರುವಾಗ. Pass as a w. in the night ಬೇಗ ಮರೆಯಲ್ಪಡು, ಮರೆತು ಹೋಗು); ಎಚ್ಚರಿಕೆ(ಯಿಂದಿರುವುದು), (ಏನಾಗುವುದೋ, ಯಾರು ಬರುವರೋ ಎಂದು) ಎಡೆಬಿಡದೆ ಗಮನಿಸುತ್ತಿರುವುದು, ಕಣ್ಣಿಟ್ಟಿರುವುದು; ನಿಗಾವಣೆ; ಉಸ್ತುವಾರಿ, ಹುಷಾರು, ಪಹರೆ, ಕಾವಲು [Keep (a) w. ಹುಷಾರಾಗಿ ನೋಡಿಕೊ; ಕಣ್ಣಿಟ್ಟಿರು. Keep (a) good w. ಚೆನ್ನಾಗಿ ನೋಡಿಕೊ; ಒಳ್ಳೆಯ ಹುಷಾರಿನ ಮೇಲಿರು. W. & ward (ಮೊದಲನ ಅರ್ಥ): ಹಗಲಿರುಳೂ ಪಹರೆ; (ಈಗಿನ ಅರ್ಥ): w. ಎಂಬುದರ ಅವಧಾರಣಾರ್ಥ. On the w. ಎದುರು ನೋಡುತ್ತ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಯುತ್ತ, ನಿರೀಕ್ಷಿಸುತ್ತ]; (ಚರಿತ್ರೆ) ರಾತ್ರಿ ಕಾಲದಲ್ಲಿ ಬೀದಿಗಳಲ್ಲಿ ಪಹರೆ ತಿರುಗುವವನು, ತಿರುಗುವ ದಳ: ರಾತ್ರಿ —ಕಾವಲಿನವನು, ಕಾವಲುದಳ [Black W. (Black ನೋಡಿ)]; (ಚರಿತ್ರೆ) ಹಿಂದೆ ರಾತ್ರಿಯನ್ನು ವಿಭಾಗಿಸುತ್ತಿದ್ದ ಮೂರು ಅಥವಾ ನಾಲ್ಕು ಭಾಗ ಗಳಲ್ಲೊಂದು: ಯಾಮ, ಜಾವ (First w. ಮೊದಲನೆಯ ಜಾವ. Evening w. ಬೈಗಿನ ಜಾವ); (ಹಡಗಿನಲ್ಲಿ) ನಾಲ್ಕು ಗಂಟೆಗಳ —ಸರದಿ, ಕೆಲಸ (Dog-w. ಎರಡು ಗಂಟೆಗಳ—ಸರದಿ, ಕೆಲಸ); ಸರದಿಯ ಮೇಲೆ ಕೆಲಸಮಾಡಲು ಎರಡು ತಂಡವಾಗಿ ವಿಭಾಗಿಸಿರುವ ಹಡಗಿನ ಕೆಲಸಗಾರರ ತಂಡ(ಗಳಲ್ಲೊಂದು): ಸರದಿ(ಯವರ) ತಂಡ [Starboard & Port w. (ಹಡಗಿನಲ್ಲಿ; ಪರ್ಯಾಯವಾಗಿ ಸರದಿ ಇರಬೇಕಾದ) ಬಲ ಮತ್ತು ಎಡ ತಂಡಗಳು]; (ಕಿಸೆ, ಕೈ,—) ಗಡಿಯಾರ [Stop-w. (Stop- ನೋಡಿ)]. **W.-case** ಗಡಿಯಾರದ (ಲೋಹ) ಕೋಶ. **W.-chain, -guard** ಗಡಿಯಾರದ ಸರಪಣಿ. **W. committee** ಒಂದು ಪಟ್ಟಣದ ಪೋಲೀಸು ವ್ಯವಸ್ಥೆಯ ಮತ್ತು ದೀಪದ ಏರ್ಪಾಟಿನ ಮೇಲ್ವಿಚಾರಣೆಯುಳ್ಳ ಸಮಿತಿ: ಪಹರೆ, ಕಾವಲು, —ಸಮಿತಿ. **W.-dog** (ಮನೆ, ಮೊ. ಗಳ) ಕಾವಲು ನಾಯಿ. **W.-fire** (ಶಿಬಿರ, ಮೊ. ಗಳಲ್ಲಿ) ಕಾವಲು ಬೆಂಕಿ. **W.-glass** ಗಡಿಯಾರದ (ಮುಖ) ಗಾಜು (ವೈಜ್ಞಾನಿಕ ಪ್ರಯೋಗಗಳದು ಸಹ). **W.-key** ಗಡಿಯಾರದ ಕೀಲಿ. **W.-maker** ಗಡಿಯಾರಗಾರ. **Wátchman** (ಪ್ರಾಚೀ. ಪ್ರ., ಈಗಲೂ ಕಾವ್ಯ ಪ್ರ.) ಬೀದಿ ಕಾವಲಿನವನು, ಪಹರೆ(ಯವನು); (ಈಗಿನ ಅರ್ಥ): ಖಾಲಿಮನೆ, ಮೊ. ನ್ನು ರಾತ್ರಿಯಲ್ಲಿ ನೋಡಿಕೊಳ್ಳುವವನು: ರಾತ್ರಿ ಕಾವಲಿನವನು, ಚೌಕಿದಾರ. **W.-night** (ಮೆತಾಡಿಸ್ಟ್ ಕ್ರೈಸ್ತರು ಆಚರಿಸುವ) ವರ್ಷಾಂತ ರಾತ್ರಿ (ಆರಾಧನೆ). **W.-oil** ಗಡಿಯಾರದ ಯಂತ್ರ ಸಲಕರಣೆಗಳಿಗೆ ಹಾಕುವ ನಯವೂ ತೆಳುವೂ ಆದ ಎಣ್ಣೆ: ಗಡಿಯಾರದೆಣ್ಣೆ. **W.-pocket** (ಅಂಗಿಯಲ್ಲಿ) ಗಡಿಯಾರದ ಜೇಬು. **W.-spring** ಗಡಿಯಾರದ—ಎಗುರುಪಟ್ಟಿ, ಸ್ಪ್ರಿಂಗು. **W.-stand** ಗಡಿಯಾರದ ನಿಲವು. **W.-tower** (ದುರ್ಗದ) ಕಾವಲು ಗೋಪುರ. **Wátchword** (ಹಿಂದಿನ ಅರ್ಥ) ಸೈನಿಕ ಸಂಕೇತ, ಗುರುತು ನುಡಿ; (ಈಗಿನ ಅರ್ಥ) ಒಂದು ಪಕ್ಷ, ಮೊ. ಗಳ ತತ್ತ್ವಗಳನ್ನು (ಉದಾ., ಶಾಂತಿ, ಖರ್ಚು ಬೋತಾ ಮತ್ತು ಸುಧಾರಣೆ) ಅಡಕವಾಗಿ ಹೇಳುವ ಮಾತು, ವಾಕ್ಯ: ಗುರಿ ನುಡಿ, ಸೂತ್ರ(ವಾಕ್ಯ). **Wátchful** (ಗು.); **Wátchfully** (ಕ್ರಿ. ವಿ.); **Wátchfulness** (ನಾ.)

Watch (ಕ್ರಿ.) (ಈಗ ವಿರ. ಪ್ರ.) ಎಚ್ಚರವಾಗಿರು, ಜಾಗರಣೆ ಮಾಡು (W. & pray. Watched all night by his side ರಾತ್ರಿಯೆಲ್ಲ ಅವನ ಪಕ್ಕದಲ್ಲೆ ಎಚ್ಚರವಾಗಿದ್ದನು); ಎಚ್ಚರಿಕೆಯಿಂದ, ಜಾಗರೂಕವಾಗಿ, ಹುಷಾರಾಗಿ, —ಇರು; ಕಾವಲು, ಪಹರೆ, —ಇರು; ಕಾಯಿ; ಗಮನಿಸಿ ನೋಡುತ್ತಿರು; ದೃಷ್ಟಿ, ಕಣ್ಣು, —ಇಡು, ಇಟ್ಟಿರು [Had him watched by detectives ಅವನಮೇಲೆ ಪತ್ತೇದಾರರ ಕಾವಲಿಟ್ಟಿದ್ದನು. If you don't w. it (ಬಳ. ಮಾ.) ಹುಷಾರು ಇರದಿದ್ದರೆ, ಎಚ್ಚರಿಕೆ ತೆಗೆದುಕೊಳ್ಳದಿದ್ದರೆ. Watched pot never boils (Pot ನೋಡಿ)]. (ಸಮಯ) ನಿರೀಕ್ಷಿಸು, ಹೊಂಚು(ಹಾಕು), ಕಾಯುತ್ತಿರು (W. one's time ಸಮಯ ಕಾಯುತ್ತಿರು). **Wátcher** (ನಾ.)

Wáter ವಾಟರ್ (ನಾ.) ನೀರು, ಜಲ [Fresh *or* Sweet w. ಸಿಹಿ ನೀರು. Smooth *or* still w. ಶಾಂತವಾದ, ನಿಶ್ಚಲವಾದ,—ನೀರು. Rough *or* troubled w. ಕಲಕಿದ, ಕ್ಷುಬ್ಧವಾದ, ನೀರು; (ರೂಪ.) ತೊಂದರೆ, ಕ್ಷೋಭೆ, ಫಜೀತಿ. Blue, Hard, Holy, Mineral, w. (ಆಯಾ ಪದ ನೋಡಿ). Soft w. (ಖನಿಜ ಲವಣಗಳು ಕರಗಿಲ್ಲದ) ಮೃದುವಾದ ನೀರು. Strong waters (ಪ್ರಾಚೀ. ಪ್ರ.) ಬಟ್ಟಿಯಿಳಿಸಿದ ಮದ್ಯಗಳು. Table waters (ಊಟದಲ್ಲಿ ಉಪಯೋಗಿಸುವ) ಖನಿಜ ಜಲಗಳು; ಊಟದ ನೀರು. Red w. ರಕ್ತಮೂತ್ರ. In smooth w. ನೆಮ್ಮದಿ ಸ್ಥಿತಿಯಲ್ಲಿ. On the w. ದೋಣಿಯಲ್ಲಿ, ಹಡಗಿನಲ್ಲಿ, ನೀರಿನಮೇಲೆ. By w. ದೋಣಿ, ಹಡಗು, ಮೊ. ಗಳ ಮೂಲಕ; ನೀರಿನ ಮೂಲಕ. In deep water(s) (Deep ನೋಡಿ). Still waters run deep (Deep ಕ್ರಿ. ವಿ. ನೋಡಿ). Fish in troubled waters (Fish[1] ಕ್ರಿ. ನೋಡಿ). Cup of cold w. (ಧರ್ಮೋದ್ದೇಶದ ಚಿಕ್ಕ): ಒಂದು ಬಟ್ಟಲು ತಣ್ಣೀರು. Get into, be in, hot w. (ಅವಿವೇಕ, ಮೊ. ಗಳ ಫಲವಾಗಿ) ಕಷ್ಟಕ್ಕೆ, ಸಂಕಟಕ್ಕೆ, —ಸಿಕ್ಕು, ಈಡಾಗು. Throw cold w. on (Cold ನೋಡಿ). Written in w. (ಕೀರ್ತಿ, ಸಾಧನೆ, ಮೊ. ಗಳ ವಿಷಯದಲ್ಲಿ) ನೀರಿನಮೇಲೆ ಬರೆದ, ಅಸ್ಥಿರ. Keep one's head above w. (ರೂಪ) ಸಾಲಕ್ಕೆ ಬೀಳದಿರು. The waters (ಅಲಂ.) ಕಡಲು, ಸಮುದ್ರ (Cross the waters ಕಡಲು ದಾಟು). Cast one's bread upon the waters ಪ್ರತಿಫಲಾಪೇಕ್ಷೆಯಿಲ್ಲದೆ ಒಳ್ಳೆಯ ಕೆಲಸಮಾಡು. Drink the waters (ಆರೋಗ್ಯಕ್ಕಾಗಿ) ಖನಿಜ ಜಲ ಪ್ರದೇಶಕ್ಕೆ ಹೋಗು. Bring the w. to one's mouth ಬಾಯಲ್ಲಿ ನೀರೂರಿಸು. Fish out of w. (Fish[1] ನಾ. ನೋಡಿ). Between wind & w. (Between ನೋಡಿ). Pour oil on the waters (Oil ನಾ. ನೋಡಿ). Spend money, shed blood, like w. ಹಣವನ್ನು, ರಕ್ತವನ್ನು, —ನೀರು ಚೆಲ್ಲಿದಂತೆ ಚೆಲ್ಲು, ನಿರ್ಲಕ್ಷ್ಯವಾಗಿ ಖರ್ಚುಮಾಡು. Go through fire & w. (Fire ನಾ. ನೋಡಿ). Fire & w. (ಪ್ರಾಚೀ. ಪ್ರ.) (ಬಹಿಷ್ಕೃತನಿಗೆ ಕೊಡಲಾಗದೆಂದು ನಿಷೇಧಿಸುತ್ತಿದ್ದ ಜೀವನಾವಶ್ಯಕ ವಸ್ತುಗಳು): ಬೆಂಕಿ ನೀರು. Hold w. (Hold[1] ನೋಡಿ). Make, pass, w. ಉಚ್ಚೆ ಹೊಯ್ಯಿ. Tread w. (Tread ನೋಡಿ). W. on the brain, knee, etc. ಮಿದುಳು, ಮಂಡಿ, ಮೊ. ಗಳಲ್ಲಿ ಸೇರಿರುವ ರೋಗದ ನೀರು. W. bewitched ಬಲು ತೆಳ್ಳನೆಯ, ನೀರು, —ಟೀ, ಮದ್ಯ. W. of life (ಆತ್ಮಕ್ಕೆ ಸಂಜೀವನವಾದ) ಜ್ಞಾನತೀರ್ಥ. Waters of forgetfulness ವಿಸ್ಮೃತಿ, ಮರಣ]; ಉಬ್ಬರವಿಳಿತದ ಸ್ಥಿತಿ [High w., High watermark (High ನೋಡಿ). Low w., In low w., Low-w. mark (Low[1] ನೋಡಿ). Lavender-w. (Lavender ನೋಡಿ). Rose-w. (Rose[1] ನೋಡಿ). Lithia, Soda, -w. (ಆಯಾ ಪದ ನೋಡಿ). Dill w. ಸಬ್ಬಸಿಗೆ ನೀರು]; (ರತ್ನದ, ಮು., ವಜ್ರದ) ನೀರು, ಹೊಳಪು, ಪ್ರಕಾಶ [Of the first w. ಅತ್ಯುತ್ಕೃಷ್ಟ ಜಾತಿಯ (ರೂಪ. ಸಹ) (Genius, blunder, of the first w.]; (ಹಣಕಾಸಿನ ಶಾಸ್ತ್ರ) ಆಸ್ತಿಯನ್ನು ಹೆಚ್ಚಿಸದೆ ಬಂಡವಾಳ ಪಾಲುಗಳನ್ನು ಮಾತ್ರ ಹೆಚ್ಚಿಸಿ ಅಧಿಕಗೊಳಿಸಿದ ನಾಮ ಮಾತ್ರ ಬಂಡವಾಳ: ನೀರು ಬಂಡವಾಳ.

W.-anchor = Drag-anchor (Drag ನಾ. ನೋಡಿ). **W.-bailiff** ರೇವಿನ ಸುಂಕದ ಅಧಿಕಾರಿ. **W.-bed** ಹಾಸಿಗೆ ಹುಣ್ಣು ಆಗದಂತೆ ರೋಗಿಗಳಿಗೆ ಹಾಸುವ ನೀರು ತುಂಬಿದ ರಬ್ಬರು ಚೀಲ: ನೀರು ಮೆತ್ತೆ. **W.-bellows** ಕವಾಟವುಳ್ಳ ಪಾತ್ರೆಯನ್ನು ನೀರಿನಲ್ಲಿ ತಲೆಕೆಳಗಾಗಿ ಇಟ್ಟು ಅದನ್ನು ಏರಿಳಿಸುವುದರಿಂದ ಗಾಳಿಯನ್ನು ಒಳಸೇದುವಂತೆಯೂ ಹೊರದೂಡುವಂತೆಯೂ ಮಾಡಲಾಗುವ ಒಂದು ಬಗೆಯ ತಿದಿ: ನೀರು ತಿದಿ. **W.-bird** ನೀರ ಹಕ್ಕಿ. **W.-biscuit** ನೀರುಹಾಕಿ ಕಲಸಿದ ಹಿಟ್ಟಿನಿಂದ ಮಾಡಿದ ಬಿಸ್ಕತ್ತು; ನೀರ ಬಿಸ್ಕತ್ತು. **W.-blister** (ರಕ್ತವಿಲ್ಲದ) ನೀರು, ರಸಿಕೆ, —ಗುಳ್ಳೆ; ಹಸಿಯ ಬೊಕ್ಕೆ. **W.-boatman** ಒಂದು ಬಗೆಯ ನೀರು ತಗಣೆ. **W.-borne** (ಸರಕುಗಳ ವಿಷಯದಲ್ಲಿ) ನೀರಿನ ಮೂಲಕ ಸಾಗಿಸುವ, ನೀರ ಸಾಗಣೆಯ; (ವ್ಯಾಧಿಗಳ ವಿಷಯದಲ್ಲಿ) ನೀರಿನ ಮೂಲಕ ಹರಡುವ: ಜಲವಾಹಿತ. **W.-bottle** ನೀರು—ಸೀಸೆ, ಬುಡ್ಡಿ (ಗಾಜಿನದು ಅಥವಾ ಲೋಹದ್ದು). **W.-brash** ಅತಿಯಾಗಿ ಜೊಲ್ಲು ಸುರಿಯುವ ಅಥವಾ ನೀರು ವಾಂತಿಯಾಗುವ ಒಂದು ಅಜೀರ್ಣರೋಗ. **W.-breaker** ನೀರ ಪೀಪಾಯಿ. **W.-buffalo** (ಇಂಡಿಯಾ ದೇಶದ) ಎಮ್ಮೆ. **W.-butt** ನೀರ ಪೀಪಾಯಿ. **W.-carriage** ನೀರ (ಮೂಲಕ) ಸಾಗಣೆ. **W.-carrier** (ಖ. ವಿ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುಂಭ (ರಾಶಿ). **W.-cart** ನೀರಿನ (ಸರಬರಾಯಿ) ಬಂಡಿ. **W.-chute** ಕೆಳಜಾರುವುದಕ್ಕಾಗಿ ಹರಿನೀರಿನಿಂದ ಜಾರಿಕೆಮಾಡಿದ ಹಲಗೆ ಇಳಿಜಾರು: ನೀರುಜಾರು (ಹಲಗೆ). **W.-closet** (ಸಂಕ್ಷಿಪ್ತ : w.c.) : ಹರಿನೀರು ಕಕ್ಕಸು. **W.-colour** (ಎಣ್ಣೆಯೊಡನೆಯಲ್ಲದೆ) ನೀರೊಡನೆ ಬೆರಸಿದ ಬಣ್ಣ : ಜಲವರ್ಣ ; ಜಲವರ್ಣ ಚಿತ್ರ(ಕಲೆ). **Wáter-colourist** ಜಲವರ್ಣ ಚಿತ್ರಕಾರ. **W.-compress** (ಊತಕ್ಕೆ ಕಟ್ಟುವ) ಒದ್ದೆಕಟ್ಟು. **Wátercourse** ತೊರೆ, ಸಣ್ಣ ಹೊಳೆ. **W.-cracker** = W.-biscuit. **Wátercress** ಪಚ್ಚಡಿಗೆ ಬರುವ ಒಂದು ಬಗೆಯ ನೀರು ಬಳ್ಳಿ. **W.-cure** ಜಲ ಚಿಕಿತ್ಸೆ. **W.-drinker** (ಮದ್ಯ ಕುಡಿಯದೆ) ನೀರು ಕುಡಿಯುವವನು ; ಮದ್ಯ ತ್ಯಾಗಿ. **Wáterfall** ನೀರುಬೀಳು, ಜಲಪಾತ. **W.-finder** ನೆಲದಲ್ಲಿ ಅಡಗಿರುವ ನೀರನ್ನು ಊಹೆಕಡ್ಡಿಯ ಮೂಲಕ ಕಂಡುಹಿಡಿಯುವವನು : ಜಲ ಶೋಧಕ. **Wáterfowl** (ಸಮೂಹವಾಚಕ, ಬ. ವ. ವಾಗಿ ಪ್ರ.) ನೀರುಹಕ್ಕಿ(ಗಳು) ; ನೀರುಕೋಳಿ. **W.-gas** (ನೀರನ್ನು ಪೃಥಕ್ಕರಿಸಿ ಇಂಗಾಲದಿಂದ ಸಂಸ್ಕರಿಸಿ ಬೆಳಕಿಗಾಗಿ ಉಪಯೋಗಿಸುವ) ಜಲಾನಿಲ. **W.-gate** ತೂಬು; (ನದಿ, ವೊ. ಗಳಿಗೆ ಪ್ರವೇಶಕೊಡುವ) ಜಲದ್ವಾರ, ನೀರಬಾಗಿಲು. **W.-gauge** ಕಟ್ಟೆ, ಕಡಾಯಿ, ವೊ. ಗಳಲ್ಲಿರುವ ನೀರಿನ ಮಟ್ಟವನ್ನು ಅಳೆಯುವ ಸಲಕರಣೆ : ಜಲ(ಮಟ್ಟ)ದರ್ಶಕ. **W.-glass** ನೀರಿನಲ್ಲಿರುವ ವಸ್ತುಗಳನ್ನು ನೋಡಲು ಅನುಕೂಲಿಸುವಂತೆ ಗಾಜಿನ ತಳವುಳ್ಳ ಕೊಳವೆ: ನೀರು—ಕನ್ನಡಿ, ಗಾಜು(ಕೊಳವೆ) ; ಮಂಡೋದಕ ಚಿತ್ರದಲ್ಲಿ ವಾಹಕವಾಗಿ ಉಪಯೋಗಿಸುವ ಅಥವಾ ಮೊಟ್ಟೆಯನ್ನು ಕೆಡದಂತೆ ಇಡಲು ಉಪಯೋಗಿಸುವ ಸೋಡಿಯಂ ಸಿಲಿಕೇಟು ದ್ರಾವಣ : ನೀರುಗಾಜು. **W.-gruel** ನೀರುಗಂಜಿ, ಅಂಬಲಿ. **W.-hammer** (ನಲ್ಲಿಯಲ್ಲಿ ತಿರುಪನ್ನು ತಟ್ಟನೆ ಬಂದುಮಾಡಿದಾಗ, ಅಥವಾ ಆವಿಕೊಳವೆಯಲ್ಲಿ ನೀರಾವಿಯನ್ನು ಪ್ರವೇಶಗೊಳಿಸಿದಾಗ ಉಂಟಾಗುವ) ನೀರಪೆಟ್ಟು ; ನಿರ್ವಾಯು ಪ್ರದೇಶದಲ್ಲಿ ದ್ರವಗಳೂ ಘನವಸ್ತುಗಳೂ ಒಂದೇ ವೇಗದಲ್ಲಿ ಬೀಳುವುವೆಂಬುದನ್ನು ತೋರಿಸುವ, ಸ್ವಲ್ಪ ನೀರಿಟ್ಟು ಗಾಳಿಯನ್ನು ತೆಗೆದು ಭದ್ರವಾಗಿ ಮುಚ್ಚಿರುವ, ಗಾಜುಗೊಳವೆ : ನೀರಸುತ್ತಿಗೆ (ಇದನ್ನು ತಟ್ಟನೆ ತಲೆಕೆಳಗು ಮಾಡಿದಾಗ ಸುತ್ತಿಗೆಯ ಪೆಟ್ಟಿನಂತೆ ನೀರು ಸದ್ದುಮಾಡುತ್ತದೆ). **W.-hen** ಒಂದು ಬಗೆಯ ನೀರುಹಕ್ಕಿ. **W.-hole** (ಮು., ಒಣಗಿದ ನದೀಪಾತ್ರದಲ್ಲಿ ನೀರು ನಿಂತಿರುವ) ನೀರುಗಂಡಿ, ಹಳ್ಳ. **W.-ice** ಸಕ್ಕರೆ ಹಾಕಿ ಪರಿಮಳ ಕಟ್ಟಿ-ಘನೀಕರಿಸಿದ ನೀರು : ನೀರು ಮಿಠಾಯಿ. **W.-inch** ಒಂದು ಅಂಗುಲ ವ್ಯಾಸದ ಕೊಳವೆಯ ಮೂಲಕ ಅತ್ಯಲ್ಪ ಒತ್ತಡದಲ್ಲಿ ೨೪ ಘಂಟೆಗಳಲ್ಲಿ ಹೊರಬೀಳುವ ನೀರಿನ ಮೊತ್ತ : ನೀರಂಗುಲ. **W.-jacket** (ತಣ್ಣಗಿಟ್ಟಿರಬೇಕಾದ ಯಂತ್ರಭಾಗಕ್ಕೆ ಅಳವಡಿಸಿರುವ) ಜಲಕವಚ, ನೀರಹೊದಿಕೆ. **W.-joint** ನೀರು ಸೋರದ(ಂತೆ ಮಾಡಿದ) ಸೇರಿಕೆ, ಜೋಡಣೆ. **W.-junket** = Sand-piper (Sand ನೋಡಿ). **W.-laid** (ಹಗ್ಗದ ವಿಷಯದಲ್ಲಿ) = Cable-laid (Cable ನೋಡಿ). **W.-lens** ಗಾಜಿನ ತಳದ ಹಿತ್ತಾಳೆಯ ಕೋಶದಲ್ಲಿ ನೀರು ತುಂಬಿ ಮಾಡಿದ ಲೆನ್ಸು : ನೀರು ಲೆನ್ಸು. **W.-level** (ಕೊಳ, ವೊ. ಗಳಲ್ಲಿ) ನೀರುಮಟ್ಟ ; ಯಾವ ಮಟ್ಟದ ಕೆಳಗೆ ಶಿಲೆ ಅಥವಾ ಭೂಮಿ ಜಲಪೂರ್ಣವಾಗಿದೆಯೊ ಆ ಮಟ್ಟ : ಜಲಸ್ತರ(ವಿರುವ ಮಟ್ಟ). ರಸಮಟ್ಟ. **W.-lily** ನೀರು ಹೂವು (ನೈದಿಲೆ, ತಾವರೆ, ಆವಲ). **W.-ilne** ಹಡಗಿನ ಪಕ್ಕವನ್ನು ನೀರಿನಮೇಲ್ಮೈ ಮುಟ್ಟುವ ಗೆರೆ : ನೀರಗೆರೆ, ಜಲರೇಖೆ (Load-w.-l. ಭರತಿ ಹಡಗಿನ ನೀರಗೆರೆ. Light w.-l. ಖಾಲಿ ಹಡಗಿನ ನೀರಗೆರೆ) ; ಕೆಲವು ಬಗೆಯ ಕಾಗದ ತಯಾರಿಕೆಯಲ್ಲಿ ಹಾಳೆಗಳಲ್ಲಿ ಕಾಣುವ ನಸು ಪಾರದರ್ಶಕವಾದ (ಸಮಾನಾಂತರ) ರೇಖೆ(ಗಳಲ್ಲೊಂದು) : ಜಲರೇಖೆ. **Wáterlogged** (ದಾರುವಿನ ವಿಷಯದಲ್ಲಿ) ತೇಲಲಾರದಷ್ಟು ನೀರು ಕುಡಿದ ; (ಹಡಗಿನ ವಿಷಯದಲ್ಲಿ) ತೇಲಲಾರದಷ್ಟು ನೀರು ತುಂಬಿಕೊಂಡ ; (ನೆಲ) ನೀರು ನಿಂತ ; —ನಿಂತು ನಿರುಪಯೋಗವಾದ (Rotten water-logged earth); ಜಲ—ಪೂರಿತ, ಭರಿತ. **W.-main** (ನೀರು ಸರಬರಾಯಿಯ) ಪ್ರಧಾನ—ನೀರು ಕೊಳಾಯಿ, ನಾಳ. **Wáterman** (ಬಾಡಿಗೆಯ) ಅಂಬಿಗ, ದೋಣಿಗ ; ಹುಟ್ಟುಹಾಕುವವನು (Good, bad, w.m.) [**Wátermanship** (ನಾ.)]. **wátermark** (ನಾ., ಕ್ರಿ. ಸಕ.) ಕಾಗದದ ಹಾಳೆಯನ್ನು ಬೆಳಕಿಗೆ ಹಿಡಿದಾಗ ಅದರಲ್ಲಿ ಮಸುಕು ಮಸುಕಾಗಿ ಕಾಣಬರುವ ತಯಾರುಗಾರ, ಆಕಾರ, ವೊ. ನ್ನು ತಿಳಿಸುವ ಗುರುತು: ಜಲ ಚಿಹ್ನೆ. (ಕ್ರಿ.) ಜಲ ಚಿಹ್ನೆ ಹಾಕು. **W.-meadow** ನೀರು ಹರಿಸಿ ಹುಲುಸಾಗಿಟ್ಟಿರುವ ಹುಲ್ಲುಗಾವಲು ; ನೀರು ಹಸಲೆ. **W.-melon** ಕಲ್ಲಂಗಡಿ (ಹಣ್ಣು). **W.-meter** ಜಲಮಾಪಕ. **W.-mill** ನೀರಹರಿತದಿಂದ ಸುತ್ತುವ ಬೀಸುಯಂತ್ರ : ಜಲ(ಚಕ್ರ) ಯಂತ್ರ. **W.-monkey** ಒಂದು ಬಗೆಯ ನೀರಹೂಜಿ. **W.-motor** ಒತ್ತಡದ ನೀರಿನಿಂದ ಕೆಲಸಮಾಡುವ ಯಂತ್ರ : ಜಲಚಕ್ರ. **W.-nymph** ಜಲದೇವತೆ, ಅಪ್ಸರೆ. **W.-pillar** (ಆವಿಯೆಂಜಿನು, ವೊ. ಗಳಿಗೆ ನೀರು ಕುಡಿಸಲು ಉಪಯೋಗಿಸುವ) ನೀರು ಕಂಬ. **W.-pipe** ನೀರು ಕೊಳಾಯಿ, ನಲ್ಲಿ. **W.-plane** ಹಡಗಿನ ಜಲರೇಖೆಯ ಮೂಲಕ ಹಾಯುವ ಸಮತಲ : ಜಲರೇಖಾ ಸಮತಲ. ಜಲವಿಮಾನ [=Sea-plaue (Sea ನೋಡಿ)]. **W.-plate** ಆಹಾರವನ್ನು ಬಿಸಿಯಾಗಿಟ್ಟಿರುವುದಕ್ಕಾಗಿ ಮಧ್ಯದ ಅವಕಾಶದಲ್ಲಿ ಬಿಸಿ ನೀರು ತುಂಬಲನುಕೂಲಿಸುವಂತೆ ಜೋಡಿ ತಳವುಳ್ಳ ತಟ್ಟೆ : ಬಿಸಿ ನೀರು (ತಳದ) ತಟ್ಟೆ. **W.-platter** (ಎಲೆಯ ಅಂಚುಗಳು ಮೇಲ್ಮುಖವಾಗಿ ತಿರುಗಿಕೊಂಡಿರುವ) ಒಂದು ಬಗೆಯ ಆವಲ ಹೂವು. **W. polo** ನೀರಿನ(ಲ್ಲಿ ಈಜಿಕೊಂಡು ಆಡುವ ಒಂದು) ಪೋಲೋ ಆಟ ; ನೀರು ಚೆಂಡಾಟ. **W.-power** (ನೀರಿನ ಭಾರ, ಹರಿನೀರು, ಜಲಪಾತ, ವೊ. ಗಳ) ಜಲಬಲ. **Wáterproof** (ಗು.) ನೀರು—ತೂರದ, ಹೀರದ ; ಜಲಾಭೇದ್ಯ. (ನಾ.) ನೀರಿಳಿಯದ—ಬಟ್ಟೆ, ವಸ್ತ್ರ. (ಕ್ರಿ. ಸಕ.) ನೀರಿಳಿಯದಂತೆ, ಜಲಾಭೇದ್ಯ, —ಮಾಡು [**Wáterproofer** (ನಾ.)]. **W.-ram** = Hydraulic ram (Hydraulic ನೋಡಿ). **W.-rat** ನೀರಿಲಿ, ಜಲಮೂಷಕ. **W.-rate** ನೀರು ತೆರಿಗೆ. **W.-sail** ನೀರಮಟ್ಟಕ್ಕೆ ಕಟ್ಟಿರುವ ಹಡಗಿನ ಪಟ : ನೀರು—ಪಟ, ಹಾಯಿ. **W.-seal** ಅನಿಲ ಹಾದುಹೋಗದಂತೆ ಕೊಳವೆಯ ಬಗ್ಗಿದ ಭಾಗದಲ್ಲಾಗಲಿ ಮೂತಿಯಲ್ಲಾಗಲಿ ಶೇಖರಿಸಿಟ್ಟ ನೀರು : ನೀರಬಿರಡೆ. **Wátershed** ಬಿದ್ದ ಮಳೆಯ ನೀರನ್ನು ಬೇರೆ ಬೇರೆ ನದಿಗಳಿಗೊ ಸಮುದ್ರಗಳಿಗೊ ಪಾತ್ರಗಳಿಗೊ ಹರಿಯುವಂತೆ ಪ್ರತ್ಯೇಕಿಸುವ ನೆಲದ ಉಬ್ಬು ಪ್ರದೇಶ : ಜಲವಿಭಾಜಕ (ಸ್ಥಳ); ನೀರ ಎಂಗಡ ನೆತ್ತಿ; ಇಳಿಮೇಡು, ಜಲಾನಯನಭೂಮಿ. **W.-shoot** (ಮನೆ, ವೊ. ಗಳಿಂದ ನೀರನ್ನು ಹೊರಹಾಕುವ) ಬಚ್ಚಲುಗೊಳವೆ; ಚರಂಡಿ. **Waterside** (ಸಮುದ್ರ, ಸರೋವರ, ನದಿ, ವೊ. ಗಳ) ನೀರಂಚು, ತೀರ. **W.-skin** ನೀರಿನ (ತೊಗಲ) ಚೀಲ ; ಪಕಾಲಿ. **W.-soldier** ಒಂದು ಬಗೆಯ ಜಲಸಸ್ಯ, ಅಂತರಗಂಗೆ ಸಸ್ಯ. **W.-souchet, souchy** ಅದರ ರಸದಲ್ಲೇ ಅಟ್ಟು ಬಡಿಸಿದ ಮೀನು. **Wáterspout** ಸಮುದ್ರದಮೇಲೆ ಸುಳಿಮೋಡವು ಲಾಳಿಕೆಯಾಕಾರದಲ್ಲಿ ಇಳಿಬಿದ್ದು ನೀರನ್ನು ಸುಳಿಯಾಕಾರದಲ್ಲಿ ಮೇಲಕ್ಕೆ ಸೇದಿ, ಸಮುದ್ರವೂ ಆಕಾಶವೂ ಸೇರಿದಂತೆ ಮಾಡುವ ನೀರುಕಂಬ : ನೀರ ಸುಳಿಗಂಬ. **W.-sprite** ನೀರ ದೆವ್ವ ; ಜಲ—ಯಕ್ಷ, ಯಕ್ಷಿಣಿ. **W.-supply** ನೀರು —ಶೇಖರಣೆ, ಸರಬರಾಯಿ ; ಜಲ ವಿತರಣೆ. **W.-table** ಕಟ್ಟಡದಮೇಲೆ ಬಿದ್ದ ನೀರು ಆಚೆಗೆ ಬೀಳಲು ಮಾಡಿರುವ ಇಳಿಜಾರು ಚಾಚು : ಲೋವೆ, ನೀರು ಜಾರು ; ಬೀದಿ ಚರಂಡಿ, ಮೋರಿ. **W.-tiger** ಕೆಲವು ನೀರು ಜೀರುಂಡೆಗಳ ಮರಿಹುಳು. **Wátertight** (ಜೋಡಣೆ, ಜೋಡು, ಹಡಗಿನ ಕೋಣೆಗಳು, ವೊ. ಗಳ ವಿಷಯದಲ್ಲಿ) ನೀರು ತೂರದ(ಂತೆ ಭದ್ರವಾಗಿರುವ), ನೀರುತಡೆಯ, [W.t. compartments (ರೂಪ.) (ವಿಷಯ, ವೊ. ಗಳಲ್ಲಿ) ಪರಸ್ಪರ ಸಂಬಂಧವೇ ಇಲ್ಲದ, ಅನ್ಯೋನ್ಯ ಪ್ರಭಾವವಿಲ್ಲದ,—ಪ್ರತ್ಯೇಕತೆ, ವಿಭಾಗ, ಬೇರ್ಪಾಟು]. **W.-tower** ನೀರು ಸರಬರಾಯಿ ಕಟ್ಟೆಯ ಗೋಪುರ : ನೀರು ಕಟ್ಟೆ ಗೋಪುರ. **W.-tube boiler** ಜ್ವಾಲೆಗೂ ತಪ್ತಾನಿಲಗಳಿಗೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈಡಾದ ಕೊಳವೆಗಳಲ್ಲಿ ನೀರು ಸುತ್ತಾಡುವ ಕುದಿಪಾತ್ರೆ : ನೀರ್ ಗೊಳವೆ ಕುದಿಪಾತ್ರೆ. **W.-vole** = W. rat. **W.-way** ದೋಣಿ, ಮೊ. ಗಳ ಸಂಚಾರಕ್ಕೆ ಯೋಗ್ಯವಾದ ನಾಲೆ : ಜಲಮಾರ್ಗ, ನೀರ ಹಾದಿ ; ಹಡಗಿನ ಅಟ್ಟದ ಹೊರ ಅಂಚಿನ ಸುತ್ತ ಹಾಕಿರುವ, ನೀರು ಹರಿದುಹೋಗಲು ಅನುಕೂಲಿಸುವಂತೆ ಕಾಲುವೆ ತೋಡಿದ, ದಪ್ಪ ಹಲಗೆ(ಗಳು) : ಕಾಲುವೆ—ಮರ, ಹಲಗೆ. **W.-wheel** ನೀರಿನ ಒತ್ತಡದಿಂದ ತಾನು ತಿರುಗಿ ಯಂತ್ರವನ್ನು ನಡಸುವ ಗಾಲಿ : ಜಲ ಚಕ್ರ, ನೀರ್ಗಾಲಿ (Overshot, undershot, breast, turbine, wheel ಇದರ ಪ್ರಭೇದಗಳು) (ಆಯಾ ಪದ ನೋಡಿ). **W.-wings** ಈಜು ಕಲಿಯುವವರು ಭುಜಗಳಿಗೆ ಕಟ್ಟಿಕೊಳ್ಳುವ ತೇಲುವೆಗಳು : ನೀರು, ಈಜು,—ರೆಕ್ಕೆಗಳು. **W.-witch** = W.-finder; ಹಲವು ಬಗೆಯ ಹಕ್ಕಿ. **W.-withe** ಬಳ್ಳಿ ಮುರಿದರೆ ರಸ ಉಕ್ಕಿ ಹರಿಯುವ, ವೆಸ್ಟ್ ಇಂಡೀಸಿನ ಒಂದು ದ್ರಾಕ್ಷಿಬಳ್ಳಿ. **Wáterworks** ನೀರು ಸರಬರಾಯಿ--ಯಂತ್ರಾಲಯ, ಮನೆ ; (ಅಲಂಕಾರದ) ಕಾರಂಜಿ, ಧಾರಾ ಯಂತ್ರ [Turn on the w.-w. (ಅಸಂ.) ಕಣ್ಣೀರು ಸುರಿಸು]

Wáterless (ಗು.) ನೀರಿಲ್ಲದ ; ನಿರ್ಜಲ; ನೀರು ಸರಬರಾಯಿ ಇಲ್ಲದ. **Wátery** (ಗು.) ನೀರು ಹೆಚ್ಚಾಗಿರುವ, ನೀರು ನೀರಾದ, ಅತಿ ತೇವವಾದ ; (ಅಟ್ಟ ಮೀನು, ತರಕಾರಿ, ಮೊ. ಗಳ ವಿಷಯದಲ್ಲಿ : ಅತಿಯಾಗಿ ಬೆಂದು) ಅಂಬಲಿಯಾದ ; (ಕಣ್ಣು, ತುಟಿ, ಮೊ. ಗಳ ವಿಷಯ ದಲ್ಲಿ) ನೀರು ಸುರಿಯುವ, ನೀರೂರುವ ; (ದ್ರವದ ವಿಷಯದಲ್ಲಿ) ನೀರಾದ, ಅಳ್ಳಕವಾದ, ಬಲು ತೆಳ್ಳನೆಯ ; (ರೂಪ.) (ಮಾತು, ಶೈಲಿ, ಮೊ. ಗಳ ವಿಷಯದಲ್ಲಿ) ನೀರಸ, ನಿಸ್ಸಾರ, ಸಪ್ಪೆ ; (ಬಣ್ಣದ ವಿಷಯ ದಲ್ಲಿ) ಮಾಸಲಾದ, ಬಣ್ಣಹೋದ. ಮಳೆ ಸೂಚನೆಯ (A w. moon, sky). **Wáteriness** (ನಾ.)

Wáter (ಕ್ರಿ.) (ರಸ್ತೆ, ಗಿಡ, ಮೊ. ಕ್ಕೆ) ನೀರು—ಹಾಕು, ಹಾಯಿಸು, ಕಟ್ಟು ; (ಹಾಲು, ಮದ್ಯ, ಮೊ. ಕ್ಕೆ) ನೀರು ಬೆರಸು ; (ದನಕರುಗಳಿಗೆ) ನೀರು—ಕುಡಿಸು, ತೋರಿಸು ; (ಪ್ರಾಣಿಗಳ ವಿಷಯ ದಲ್ಲಿ) (ನೀರು ಕುಡಿಯುವುದಕ್ಕಾಗಿ) ನೀರಿಗೆ, ಕಟ್ಟೆಗೆ, —ಹೋಗು ; (ಹಡಗು, ಎಂಜಿನು, ಮೊ. ಗಳ ವಿಷಯದಲ್ಲಿ : ತಮ್ಮ ಕಡಾಯಿಗೆ) ನೀರು ತುಂಬಿಕೊ, ನೀರು ಕುಡಿ ; (ಉರಿಯುವ ಕಣ್ಣು) ನೀರು—ಒಸರು, ಸುರಿ ; (ರುಚಿಯಾದ ಆಹಾರ) ನೀರೂರಿಸು, (ಬಾಯಿ) ನೀರೂರು (Makes one's mouth w.). ತಯಾರಿಸುವಾಗ ತೇವಮಾಡಿ ಒತ್ತಡಕ್ಕೆ ಒಳಪಡಿಸುವುದರಿಂದ ಬಟ್ಟೆಯಮೇಲೆ ಅಲ್ಲಲ್ಲೆ ತೆರೆಯಾಕಾರ ಉಂಟುಮಾಡು : ತೆರೆಯಿಡಿಸು [(ಮು., ಭೂ. ಕೃ. ನಲ್ಲಿ) : Watered silk ತೆರೆಯಿಡಿ(ಸಿ)ದ ರೇಷ್ಮೆ] ; (ಹಣಕಾಸು) ಆಸ್ತಿಯನ್ನು ಹೆಚ್ಚಿಸದೆ ಸಂಸ್ಥೆಯ ನಾಮಮಾತ್ರದ ಬಂಡವಾಳವನ್ನಾಗಲಿ ಸಾಲವನ್ನಾಗಲಿ ಹೆಚ್ಚಿಸು : ನೀರು ಬಂಡವಾಳಮಾಡು, ಬಂಡವಾಳವನ್ನು ತೆಳ್ಳಿಸು. W. down (ಕಥೆಯ ವಿವರ, ಮೊ. ಗಳ) ತೆಳುವುಮಾಡು, ತೀಕ್ಷ್ಣತೆ ಕಡಮೆ ಮಾಡು; ಸಪ್ಪೆಮಾಡು. **Watering-cart** (ನೀರು ತಳಿಯುವುದಕ್ಕೆ ತೂತು ಗಳನ್ನು ಕೊರೆದಿರುವ ಕೊಳವೆಯುಳ್ಳ) ರಸ್ತೆಗೆ ನೀರುಹಾಕುವ ಬಂಡಿ, ನೀರಬಂಡಿ. **Watering-place** (ದನಕರುಗಳು) ನೀರು ಕುಡಿಯುವ ಕುಂಟೆ, ಕಟ್ಟೆ ; ಖನಿಜ ಜಲದ ಊಟೆ ; (ವಿಹಾರಿಗಳೂ ರೋಗಿಗಳೂ ಕೆಲವು ಋತುಗಳಲ್ಲಿ ಹೋಗಿ ತಂಗುವ) ಸಮುದ್ರತೀರ ಸ್ಥಳ. **Watering-pot** ಗಿಡಗಳಿಗೆ ನೀರುಹಾಕುವ, ರಂಧ್ರಗಳನ್ನು ಕೊರೆದಿರುವ ಮೂತಿ ಯುಳ್ಳ, ತೊಟ್ಟಿ : ನೀರೆರೆಯುವ ತೊಟ್ಟಿ, ಸೇಚಕ.

Waterloó ವಾಟರ್ಲೂ (ನಾ.) ನೆಪೋಲಿಯನ್ ಕೊನೆಗೆ ಪೂರ್ತಿ ಸೋತುಹೋದ ಯುದ್ಧ ; (ರೂಪ.) ಸಂಪೂರ್ಣ ಸೋಲು, ಕೊನೆಯ ಹೋರಾಟ (Meet one's w.)

Watt ವಾಟ್ (ನಾ.) ವಿದ್ಯುತ್ ಸಾಮರ್ಥ್ಯದ ಏಕಮಾನ (ಒಂದು ವೋಲ್ಟ್ ವಿದ್ಯುದ್ಬಲವೂ ಒಂದು ಆಂಪೇರ್ ವಿದ್ಯುತ್ ಪ್ರವಾಹವೂ ಇರುವ ವಿದ್ಯುತ್ ಪ್ರವಾಹ ಮಾರ್ಗದಲ್ಲಿ ನಡೆಯುವ ಕಾರ್ಯಪ್ರಮಾಣ) : ವಾಟ್. **Wáttmeter** (ನಾ.) ವಿದ್ಯುತ್ ಕಾರ್ಯಪ್ರಮಾಣ ಮಾಪಕ (J. Watt ಎಂಬ ಶಿಲ್ಪಿಯ ಹೆಸರಿನಿಂದ)

Wáttle[1] ವಾಟ್ಲ್ (ನಾ., ಕ್ರಿ. ಸಕ.) (ಬೇಲಿ, ಗೋಡೆ, ಚಾವಣಿ, ಮೊ. ಗಳನ್ನು ಕಟ್ಟುವುದಕ್ಕಾಗಿ ಮಾಡಿದ) ಕಡ್ಡಿ ರೆಂಬೆಗಳ ಹೆಣಿಗೆ ; ತಡಿಕೆ, ತಟ್ಟಿ, ಹಂದರು (W. & daub ಮಣ್ಣು ಮೆತ್ತಿದ ತಡಿಕೆ, ತಡಿಕೆ ಗೋಡೆ) ; (ಏ. ವ. ಅಥವಾ ಬ. ವ. ದಲ್ಲಿ) ತಡಿಕೆ ಹೆಣೆಯುವ ಕಡ್ಡಿ, ರೆಂಬೆ : ಹೆಣಿಗೆ ಕಡ್ಡಿ ; ಈ ರೆಂಬೆಗಳನ್ನೊದಗಿಸುವ ಆಸ್ಟ್ರೇಲಿಯದ ಒಂದು ಜಾಲಿಯ ಮರ (ಇದರ ಹೊಂಬಣ್ಣದ ಹೂವು ಆಸ್ಟ್ರೇಲಿಯದ ರಾಷ್ಟ್ರೀಯ ಚಿಹ್ನೆ). (ಪ್ರಾಂತ ಪ್ರ.) ತಡಿಕೆ (ಬೇಲಿ). (ಕ್ರಿ.) ತಡಿಕೆ, ತಟ್ಟಿ, ಹಂದರು, —ಮಾಡು ; (ಕಡ್ಡಿ, ಮೊ. ನ್ನು) ಹೆಣೆ ; ತಡಿಕೆ ಬೇಲಿ ಹಾಕು.

Wáttle[2] ವಾಟ್ಲ್ (ನಾ.) (ಟರ್ಕಿ ಕೋಳಿ, ಮೊ. ಕೆಲವು ಹಕ್ಕಿಗಳ ತಲೆಯಲ್ಲಿ ಅಥವಾ ಗಂಟಲಿನಲ್ಲಿ ಇರುವ) ಜೋಲು ಮಾಂಸಲ ಭಾಗ ; ಮೀನಿನ ಸ್ಪರ್ಶಾಂಗ. **Wáttled** (ಗು.)

Waul ವಾರ್ (ಕ್ರಿ.) ಕೀರು, ಚೀರು ; ಬೆಕ್ಕಿನಂತೆ ಕೂಗು.

Wave ವೇವ್ (ಕ್ರಿ.) (ಬಾವುಟ, ಗಿಡ, ಪೈರು, ಮೊ. ಗಳಂತೆ ಗಾಳಿಯಲ್ಲಿ) ತೂಗಾಡು, ಒಲೆ(ದಾಡು), ತೊನೆ(ದಾಡು), ಆಂದೋಲವಾಗು, ಅಲೆ ಯಲೆಯಾಗು, ತರಂಗವೇಳು ; ಆಡಿಸು, ತೂಗು, ಝಳಪಿಸು, ಬೀಸು [W. sword (ಹಿಂಬಾಲಕರಿಗೆ ಪ್ರೋತ್ಸಾಹವಾಗಿ) ಕತ್ತಿಯನ್ನು—ತೂಗು, ಬೀಸು. W. one's hand (to) (ಸಂಧಿಸಿದಾಗ ಅಥವಾ ಸಂಕೇತ ವಾಗಿ) ಕೈಯಾಡಿಸು, ಕೈಬೀಸು] ; (ಸೂಚನೆ ಕೊಡಲು) ಕೈಯಾಡಿಸು. (W. to do ಮಾಡೆಂದು ಕೈಯಾಡಿಸು. W. away ಹೋಗೆಂದು ಕೈಯಾಡಿಸು. W. nearer ಹತ್ತಿರ ಬಾ ಎಂದು ಕೈಯಾಡಿಸು. W. farewell ಕೈಬೀಸಿ ಬೀಳ್ಕೊಡು. W. aside ತಳ್ಳಹಾಕು) ; (ತಲೆ ಕೂದಲು, ಚಿತ್ರದ ರೇಖೆ, ಮೊ. ಕ್ಕೆ) ಅಲೆಯಾಕಾರ ಕೊಡು, ತರಂಗಿತ ಮಾಡು ; (-- ಮೊ. ವು) ಅಲೆಯಲೆಯಾಗಿರು, ತರಂಗಿತ ವಾಗಿರು. **Wáver** (ಕ್ರಿ. ಅಕ.) ಅದಿರು, ಅಡು, ಸಂಚಲಿಸು, ಒಲೆ(ದಾಡು), ತೂಗಾಡು, ಅಲ್ಲಾಡು (ವಿರ. ಪ್ರ. ; ಮು., ಜ್ವಾಲೆಯ ವಿಷಯದಲ್ಲಿ); (ಸೈನ್ಯದಳಗಳ ವಿಷಯದಲ್ಲಿ) ತತ್ತರಿಸು, ಸ್ಥೈರ್ಯಗೆಡು, ಹಿಂದೇಟು ಹಾಕತೊಡಗು ; (ಹೀಗೋ ಹಾಗೋ ಎಂದು) ಮನಸ್ಸು ಆಂದೋಲವಾಗು, ಹೊಯ್ದಾಡು ; (ನಂಬಿಕೆ, ಧೈರ್ಯ) ಕದಲಿಹೋಗು. **Wáverer** (ನಾ.) ; **Wáveringly** (ಕ್ರಿ. ವಿ.)

Wave (ನಾ.) ಅಲೆ, ತೆರೆ [The wave(s) (ಕಾವ್ಯ, ಅಲಂ.) ಕಡಲು, ಸಮುದ್ರ, ನೀರು. Attack in waves (ಸೈನಿಕ) ಸಮುದ್ರದ ಅಲೆಗಳಂತೆ (ಸಾಲಮೇಲೆ ಸಾಲು ಬಂದು)—ಆಕ್ರಮಣಮಾಡು, ದಾಳಿಯಿಡು] ; (ನೀರು, ಗಾಳಿ, ಈತರ್, ಮೊ. ಪ್ರವಾಹಿ ಪದಾರ್ಥಗಳಲ್ಲಿ ತೋರಿಬರುವ, ಕಣಗಳು ವಾಸ್ತವಿಕವಾಗಿ ಚಲನೆಯ ದಿಕ್ಕಿನಲ್ಲಿ ಚಲಿಸದೆ ಚಲನೆಮಾತ್ರ ಮುನ್ಸಾಗುವ) ಕಣಗಳ ಒಂದು ಬಗೆಯ ಆಂದೋಲನ : ತರಂಗ (ಶಾಖ, ಪ್ರಕಾಶ, ವಿದ್ಯುತ್ತು ಮತ್ತು ಧ್ವನಿಗಳದು) ; (ಪ್ರಭಾವ, ಸ್ಥಿತಿ, ಭಾವ, ಮೊ. ಗಳ) ತಾತ್ಕಾಲಿಕ ಉತ್ಕರ್ಷ, ಆವೇಶ, ಉರುಬು, ಲಹರಿ (A w. of enthusiasm ಉತ್ಸಾಹದ ಆವೇಶ, ಉತ್ಸಾಹೋತ್ಕರ್ಷ. A w. of depression. Heat, cold, -w. ವಿಸ್ತಾರವಾದ ಪ್ರದೇಶದಮೇಲೆ ಸಾಗಿಹೋಗುವ ಶಾಖದ ಏರು, ಚಳಿಯ ಬೀಳು : ಉಷ್ಣ, ಶೀತ,—ತರಂಗ) ; ಅಲೆಯಾಕಾರದ—ಮೇಲ್ಮೈ, ರೇಖೆ ; ತರಂಗ ರಚನೆ, ತರಂಗತ್ವ ; (ಕೈ) ಆಡಿಸುವುದು, ಕೈಸನ್ನೆ. **W.-length** (ತರಂಗ ಚಲನೆಯಲ್ಲಿ) ಒಂದು ಶಿಖರದಿಂದ ಅದರ ಮುಂದಿನ ಶಿಖರಕ್ಕೆ ಇರುವ ದೂರ : ಅಲೆಯ ಉದ್ದ, ತರಂಗ ಮಾನ. **Wáveless** (ಗು.) ; **Wávelet** (ನಾ.) ಕಿರಿಯಲೆ, ತರಂಗಕ. **Wávy**[1] (ಗು.) ಅಲೆಯಲೆಯಾದ, ಅಲೆಯಾಕಾರದ, ತರಂಗಿತ, ತೆರೆಯಿಡಿದ (W. hair). **Wávily** (ಕ್ರಿ. ವಿ.) ; **Wáviness** (ನಾ.)

Wáver. **Wave** ಕ್ರಿ., ನೋಡಿ.

Wávy[1]. **Wave** ನಾ., ನೋಡಿ.

Wávy[2], **Wávey** ವೇವಿ (ನಾ.) = Snow-goose (Snow ನೋಡಿ)

Wawl ವಾರ್ (ಕ್ರಿ. ಅಕ.) = Waul.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Wax[1] ವ್ಯಾಕ್ಸ್ (ನಾ.) (ಜೇನು)ಮೇಣ (ಇದನ್ನು ಸಂಸ್ಕರಿಸಿ ನಿರ್ವರ್ಣ ಮಾಡಿದ್ದು ಸಹ) ; ಮೇಣದಂಥ ವಸ್ತು [Mould one like w. (ಒಬ್ಬನ ಶೀಲ, ಸ್ವಭಾವ, ಮೊ. ನ್ನು) ಬೇಕಾದಂತೆ ರೂಪಿಸು ; ತನ್ನ ಇಷ್ಟದ ಪ್ರಕಾರ ನಡೆಯುವಂತೆ ಮಾಡು. Bees-w. (Bee ನೋಡಿ). Cobblers'-w. (Cobble[2] ನೋಡಿ). Ear-w. (Ear ನೋಡಿ). Mineral w. (ಮೋಂಬತ್ತಿ, ಮೊ. ಗಳ ತಯಾರಿಕೆಯಲ್ಲಿ ಉಪಯೋಗಿಸುವ) ಮೇಣದಂಥ ಪಳೆಯುಳಿಕೆಯ ರಾಳ : ಖನಿಜ ಮೇಣ. Sealing-w. ಅರಗು. Vegetable w. ಸಸ್ಯಮೇಣ]. (ವಿಶೇಷಣ ಪ್ರ. ; Waxen ಪದಕ್ಕಿಂತ ಹೆಚ್ಚು ರೂಢಿ) ಮೇಣದ. **Wáxbill** ಅರ್ಧ ಪಾರದರ್ಶಕವಾದ ಕೊಕ್ಕುಳ್ಳ ಹಲವು ಬಗೆಯ ಸಣ್ಣ ಹಕ್ಕಿ. **W.-candle** ಮೇಣದ ಬತ್ತಿ, ಮೋಂಬತ್ತಿ. **W.-chandler** ಮೋಂಬತ್ತಿಗಾರ. **W.-cloth** ಮೇಣಗಪಟ. **W.-doll** ಮೇಣದ ಬೊಂಬೆ; ಚೆಲುವಿದ್ದರೂ ಭಾವಕಳೆಯಿಲ್ಲದ ಮುಖದವಳು : ಜಡ ಸುಂದರಿ. **W.-insect** ಮೇಣ ಸ್ರವಿಸುವ ಹುಳು : ಮೇಣದ ಹುಳು. **W.-light** ಮೋಂಬತ್ತಿ ದೀಪ. **W.-myrtle** ಮೇಣ ದೊರೆಯುವ ಒಂದು ಗಿಡ. **W.-painting** ಮೇಣ ವರ್ಣಚಿತ್ರ (ಕಲೆ) ; ಸುಡು ಚಿತ್ರ (ಕಲೆ). **W.-palm** ರಾಳ ಮೇಣಗಳ ಮಿಶ್ರ ಲೇಪವುಳ್ಳ ಕಾಂಡ ವಿರುವ, ದ. ಅಮೆರಿಕದ ಒಂದು ತಾಳೆ : ಮೇಣ ತಾಳೆ. **W.-paper** (ನೀರಲ್ಲಿ ನೆನೆಯದ) ಮೇಣ (ಬಳಿದ) ಕಾಗದ. **W.-pink** ನೀರ ಗೋಣಿಸೊಪ್ಪು. **W.-pocket** (ಜೇನುಹುಳುವಿನಲ್ಲಿ) ಮೇಣ ಸ್ರವಿಸುವ ರಂಧ್ರ(ಗಳಲ್ಲೊಂದು) ; ಮೇಣ ರಂಧ್ರ. **W.-pod** = Butter-bean (Butter ನೋಡಿ). **W.-tree** ತಾನೇ ಮೇಣ ಸ್ರವಿಸುವ ಅಥವಾ ಹುಳುಗಳು ಅದರಮೇಲೆ ಮೇಣ ಸ್ರವಿಸುವ ಹಲವು ಬಗೆಯ ಸಸ್ಯ : ಮೇಣದ ಮರ. **Wáxwing** ಕೆಂಪು ಅರಗಿನಂಥ ಕೊಂಬು ಪದಾರ್ಥದ ಗರಿಮೊನೆಗಳುಳ್ಳ ಹಲವು ಬಗೆಯ ಹಕ್ಕಿ : ಅರಗುರೆಕ್ಕೆ (ಹಕ್ಕಿ). **Wáxwork** ಮೇಣದ, ಅರಗಿನ, —ಕೆಲಸ ; ಜೀವಂತವಾಗಿ ತೋರುವಂತೆ ಯಥಾವತ್ತಾಗಿ ಮುಖ ಮತ್ತು ಕೈಗಳನ್ನು ಬಣ್ಣದ ಮೇಣದಿಂದ ಮಾಡಿ, ಉಡಿಗೆ ತೊಡಿಗೆಗಳಿಂದ ಅಲಂಕರಿಸಿ ಪ್ರದರ್ಶನಕ್ಕಿಟ್ಟ ಪ್ರಸಿದ್ಧರಾದವರ ವಿಗ್ರಹಗಳು : ಮೇಣ—ವಿಗ್ರಹ, ಪ್ರತಿಮೆ. **Wáxen** ವ್ಯಾಕ್ಸನ್ (ಗು.) ಮೇಣದ(ಂಥ) ; ಮೇಣದಿಂದ ಮಾಡಿದ; ಮೇಣದಹಾಗೆ—ಬಣ್ಣವಿರುವ, ಮೆತುವಾದ, ಬೇಕಾದ ಆಕಾರ ಕೊಡಲಾಗುವ (His rosy neck & w. arm. W. paleness). **Wáxy** (ಗು.) ಮೇಣದಂಥ ; (ಅಂಗಾಂಶದ ವಿಷಯದಲ್ಲಿ) ಕೆಟ್ಟು ಮೇಣದಂತೆ ಆಗಿಹೋಗಿರುವ, ಮೇಣ ವಿಕಾರದ (W. liver) ; (ಅಸಂ.) ಸಿಡುಕಿನ, ಸುಲಭ ಕೋಪಿ. **Wáxily** (ಕ್ರಿ. ವಿ.) ; **Wáxiness** (ನಾ.)

Wax (ಕ್ರಿ. ಸಕ.) ಮೇಣ—ಹಚ್ಚು, ಲೇಪಿಸು, ಸಂಸ್ಕಾರಕೊಡು.

Wax[2] ವ್ಯಾಕ್ಸ್ (ಕ್ರಿ. ಅಕ.) (ಅಮಾವಾಸ್ಯೆಯಿಂದ ಹುಣ್ಣಿಮೆಯ ವರೆಗಿನ ಚಂದ್ರನ ವಿಷಯದಲ್ಲಿ) ವರ್ಧಿಸು, ಕಳೆಯೇರು, ತುಂಬು [W. & wane (ರೂಪ. ಸಹ) ವೃದ್ಧಿ ಕ್ಷಯಗಳನ್ನು ಹೊಂದು] ; (ಪ್ರಾಚೀ. ಪ್ರ., ಕಾವ್ಯ ಪ್ರ.) ಹೆಚ್ಚು, ವೃದ್ಧಿಯಾಗು ; (ಭಾವ, ಸ್ಥಿತಿ, ಮೊ. ನ್ನು) ತಾಳು, ಕೊಳ್ಳು (W. fat ಕೊಬ್ಬು. W. angry ಕೋಪಗೊಳ್ಳು, ಕೋಪವೇರು. W. facetious ಹಾಸ್ಯಮನೋಭಾವ ತಾಳು, ತಮಾಷೆಮಾಡು)

Wax[3] ವ್ಯಾಕ್ಸ್ (ನಾ.) (ಅಸಂ.) ಕೋಪದ ಕೆರಳು, ಸಿಟ್ಟಿನ ಉರುಬು (Is in, got into, a w. ಅವನು ಕೆರಳಿದ್ದಾನೆ. Put him in a w. ಅವನನ್ನು ಕೆರಳಿಸು)

Way ವೇ (ನಾ.) (ಜನರು, ಮೊ. ರ ಓಡಾಟಕ್ಕೆ ಮಾಡಿರುವ) ದಾರಿ, ಹಾದಿ, ರಸ್ತೆ [Highway (High ನೋಡಿ). (The house) over the w. ಎದುರಿಗಿರುವ (ಮನೆ). Permanent w. (Permanent ನೋಡಿ). Six-foot w. (ರೈಲುಮಾರ್ಗದಲ್ಲಿ) ಒಂದು ಕಂಬಿ ಜೋಡಿಗೂ ಪಕ್ಕದ ಕಂಬಿ ಜೋಡಿಗೂ ನಡುವೆ ಬಿಟ್ಟಿರುವ ಆರಡಿ ಸ್ಥಳ : ಆರಡಿ ದಾರಿ. Covered w. ಚಾವಣಿಯ, (ಕೋಟೆ ಕೊತ್ತಲಗಳಲ್ಲಿ) ಮರೆಮಾಡಿದ, —ದಾರಿ. Appian, Latin, etc. w. ಇಟಲಿಯಲ್ಲಿ ಭಾರಿ ರೋಮನ್ ರಸ್ತೆಗಳು. Milky W. (Milk ನೋಡಿ). The w. of the Cross (ಚರ್ಚು, ಮೊ. ಗಳಲ್ಲಿ ಆರಾಧನೆಗಾಗಿರುವ) ಯೇಸುಕ್ರಿಸ್ತನ ಶಿಲುಬೆಯೇರಿದ ಭಂಗಿಯ ಹದಿನಾಲ್ಕು ಚಿತ್ರಗಳು (ಅಥವಾ ವಿಗ್ರಹಗಳು) ; ಶಿಲುಬೆ ಭಂಗಿ ಚಿತ್ರಶ್ರೇಣಿ. Go the w. of all the earth, of all flesh, of nature ಸಾಯಿ. Pave the w. for (Pave ನೋಡಿ)] ; (ಬ. ವ. ದಲ್ಲಿ) (ಕಟ್ಟಿದ ಹಡಗನ್ನು ಸಮುದ್ರಕ್ಕೆ ಸರಿಸುವ) ಜಾರು ಹದಿ ; (ಒಂದು ಊರು, ಮೊ. ಕ್ಕೆ) ದಾರಿ, ಮಾರ್ಗ, ಪಥ (ರೂಪ. ಸಹ) ; ರೀತಿ, ವಿಧಾನ, ಕ್ರಮ [Furthest w. about is nearest w. home (ಕೆಲವು ಸಂದರ್ಭಗಳಲ್ಲಿ) : ಬಳಸು ದಾರಿಯೇ ಹತ್ತಿರದ ದಾರಿ. Find one's *or* the w. ಸೇರಬೇಕಾದ ಸ್ಥಳ ಸೇರು, ಮುಟ್ಟು ; (ತಡಕಾಡಿ) ದಾರಿ ಕಂಡುಕೊ. Lose one's *or* the w. ದಾರಿ ತಪ್ಪು. Parting of the ways (Part ಕ್ರಿ. ನೋಡಿ). Take one's w. (to *or* towards) —ಕಡೆಗೆ ಹೋಗು, ದಾರಿ ಹಿಡಿ. Go one's way(s) ಹೊರಟುಹೋಗು. Came by w. of London ಲಂಡನಿನ ಮೂಲಕ ಬಂದನು. Lead the w. ದಾರಿ ತೋರಿಸು, ಮುಂದಾಳಾಗು, ಮೇಲುಪಂಕ್ತಿ ಹಾಕಿಕೊಡು. Put oneself out of the w. (ತನಗೆ ಅನನುಕೂಲವಾದರೂ ಚಿಂತೆಯಿಲ್ಲವೆಂದು) ಮತ್ತೊಬ್ಬನ ಸೌಕರ್ಯಕ್ಕಾಗಿ ದಾರಿ ಬಿಟ್ಟುಕೊಡು. Is nothing out of the w. ಅಸಾಧಾರಣ, ವಿಶೇಷ, —ಏನೂ ಅಲ್ಲ. An out-of-the-w. corner ಅಭುಕ್ತ ಮೂಲೆ ; ಮೂಲೆಕೊಂಪೆ. Go out of the *or* one's w. to be rude ಬೇಕೆಂದು ಅಸಭ್ಯ ವರ್ತನೆ, ಒರಟುತನ, ತೋರಿಸು. Don't like the w. she smiles ಆಕೆ ಮುಗುಳುನಗೆ ಸೂಸುವ ರೀತಿ ನನಗೆ ಸರಿಬೀಳುವುದಿಲ್ಲ. Where there's a will there's a w. ಮನಸ್ಸಿದ್ದರೆ ಮಾರ್ಗವಿದೆ. You will never manage it that w. ನೀನು ಆ ರೀತಿ ಅದನ್ನು ಸಾಧಿಸಲಾರೆ. Ways & means ಮಾರ್ಗೋಪಾಯಗಳು, ಸಾಧನ ಸಂಪತ್ತಿ (Committee of Ways & Means ಹಣಕಾಸು ಒದಗಿಸುವ ಸಮಿತಿ ; ಮಾರ್ಗೋಪಾಯ ಸಮಿತಿ). Go, take, one's own w. (ಮತ್ತೊಬ್ಬರ ಮಾತು ಕೇಳದೆ) ತನ್ನ ಮನ ಬಂದಂತೆ, ಸ್ವತಂತ್ರವಾಗಿ, —ನಡೆ, ವರ್ತಿಸು. Have one's (own) w. ತನ್ನ ಇಷ್ಟ ಸಾಧಿಸಿಕೊ ; ತನ್ನ ಹಟದಂತೆ ನಡಸಿಕೊ] ; (ಹೋಗಬಹುದಾದ) ದೂರ [England is a long w. off ಇಂಗ್ಲೆಂಡು ತುಂಬ ದೂರವಿದೆ. Once in a w. (Once ನೋಡಿ). Is still a long w. off perfection] ; (ನಿರಾತಂಕವಾದ) ದಾರಿ, ಅವಕಾಶ, ಆಸ್ಪದ, ಎಡೆ [Give, make, w. (ಆಯಾ ಪದ ನೋಡಿ). Lion in the w. (Lion ನೋಡಿ). Stand, be, in the w. (of), in one's w. ಮಾರ್ಗದಲ್ಲಿರು ; ಅಡ್ಡಿ, ಅಡಚಣೆ, —ಆಗಿರು. Get in the w. ದಾರಿಗಟ್ಟು ; ಅಡಚಣೆಯಾಗು. Get out of the w. ದಾರಿ ಬಿಡು. Get thing out of the w. ನಿವಾರಿಸು, ಪರಿಹರಿಸು. Put person out of the w. ಒಬ್ಬನನ್ನು—ಸೆರೆಯಲ್ಲಿಡು, ಗುಟ್ಟಿನಲ್ಲಿ ಕೊಂದುಹಾಕಿಬಿಡು. Clear the w. ಅಡ್ಡಿ ಅಡಚಣೆಗಳನ್ನು ತೆಗೆದುಹಾಕು ; ದಾರಿ ನಿರಾತಂಕಮಾಡಿಕೊ ; ದಾರಿ ಬಿಟ್ಟು ನಿಲ್ಲು, (ಪಕ್ಕಕ್ಕೆ) ಸರಿ. Right of w. (Right ನೋಡಿ). Put one in the w. of (a good bargain, of doing) (ಲಾಭಕ್ಕೆ, ಮಾಡುವುದಕ್ಕೆ) ಅವಕಾಶಮಾಡಿಕೊಡು, ಆಸ್ಪದ ಕಲ್ಪಿಸು] ; ಪ್ರಯಾಣ(ದ ಕಾಲ) (ರೂಪ. ಸಹ) [With songs to cheer the w. ದಾರಿಯ, ಪ್ರಯಾಣದ, —ಬೇಸರ ಕಳೆಯುವುದಕ್ಕಾಗಿ ಹಾಡುತ್ತ. Is on the w. ಪ್ರಯಾಣದಲ್ಲಿದ್ದಾನೆ ; ಬರುತ್ತಿದೆ. By the w. ಪ್ರಯಾಣದಲ್ಲಿ ; (ರೂಪ.) ಪ್ರಾಸ್ತಾವಿಕವಾಗಿ, ಪ್ರಾಸಂಗಿಕವಾಗಿ] ; ದಿಕ್ಕು, ಕಡೆ [Look the other w. (ಒಬ್ಬನ ಮಾತು, ಪರಿಚಯ, ತನಗೆ ಇಷ್ಟವಿಲ್ಲದಾಗ ಅವನನ್ನು ನೋಡದವನಂತೆ) ಬೇರೆ ಕಡೆಗೆ—ನೋಡು, ತಿರುಗಿಕೊ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಬಳ. ಮಾ.) Lives somewhere London w. ಎಲ್ಲೋ ಲಂಡನ್ ಕಡೆ ವಾಸವಾಗಿದ್ದಾನೆ]; ಪದ್ಧತಿ, ನಡತೆ, ವರ್ತನೆ, ರೀತಿ ನೀತಿ [The good old ways ಹಳೆಯ (ನಲ್) ಸಂಪ್ರದಾಯಗಳು. Stand in the ancient ways ಹಳೆಯವನ್ನು ಮೆಚ್ಚು; ಹೊಸವನ್ನು, ನವ ನಾಜೂಕುಗಳನ್ನು, —ಮೆಚ್ಚದಿರು. The w. of the world ಪ್ರಪಂಚದ ರೀತಿ. It is only his w. (ಒಬ್ಬನ ಅಸಭ್ಯತೆ, ಮೊ. ಗಳನ್ನು ಕುರಿತು ಟೀಕಿಸುವಲ್ಲಿ): ಅವನ ರೀತಿಯೇ ಅದು; ಅದೇ ಅವನ ನಡತೆ]. ಹವ್ಯಾಸ, ವೃತ್ತಿ, ವ್ಯಾಪಾರ, ಕ್ಷೇತ್ರ [Hunting is not, does not lie *or* come *or* fall, in my w. ಬೇಟೆ ನನ್ನ ಕ್ಷೇತ್ರವಲ್ಲ, ನನ್ನ ಹವ್ಯಾಸವಲ್ಲ. He is in the grocery w. ಅವನು ಕಿರಾಣಿ ಅಂಗಡಿ ಇಟ್ಟದ್ದಾನೆ. I want a few things in the stationery w. ನನಗೆ ಕೆಲವು ಬರೆವಣಿಗೆಯ ಸಾಮಗ್ರಿಗಳು ಬೇಕಾಗಿವೆ]; ಮುನ್ನಡೆ, ಮುಂದುವರಿಕೆ, ಪ್ರಗತಿ [Make one's w. into a shop ಅಂಗಡಿಯೊಳಕ್ಕೆ (ದಾರಿಮಾಡಿಕೊಂಡು) ಹೋಗು. Make one's (own) w. ಏಳಿಗೆ ಹೊಂದು, ಅಭಿವೃದ್ಧಿಯಾಗು. Make the best of one's w. ಆದಷ್ಟು ಜಾಗ್ರತೆ, ಬೇಗ, ಹೋಗು. Make w. ಮುನ್ಸಾಗು, ಮುಂದುವರಿ (ರೂಪ. ಸಹ). Gather, lose, w. ವೇಗಗೊಳ್ಳು, ವೇಗಗುಂದು. Give w. (ಹುಟ್ಟು ಹಾಕು ವವರ ವಿಷಯದಲ್ಲಿ) ಕಷ್ಟಪಟ್ಟು (ದೋಣಿಯ) ಹುಟ್ಟುಹಾಕು. Ship has w. on, is under w. ಹಡಗು ನೀರಿನಮೇಲೆ ಹೋಗುತ್ತಿದೆ]; ವಿಧ, ದೃಷ್ಟಿ (Not a bad fellow in some ways ಕೆಲವು ವಿಧದಲ್ಲಿ ನೋಡಿದರೆ ಅವನು ಕೆಟ್ಟವನೇನೂ ಅಲ್ಲ. In a w. ಒಂದು ದೃಷ್ಟಿಯಲ್ಲಿ; ಕೊಂಚ ಮಟ್ಟಿಗೆ. No w. inferior ಯಾವ ವಿಧದಲ್ಲೂ ಕೀಳಲ್ಲ); ಸಾಮಾನ್ಯ ನಡೆವಳಿ, ರೂಢಿ (Did it in the w. of business ವ್ಯವಹಾರದ ರೂಢಿಯಲ್ಲಿ ಅದನ್ನು ಮಾಡಿದೆನು); ಸ್ಥಿತಿ, ಅವಸ್ಥೆ, ಸಂದರ್ಭ, ಸನ್ನಿವೇಶ, ಪಕ್ಷ [Things are in a bad w. ಪರಿಸ್ಥಿತಿ ಕೆಟ್ಟಿದೆ; ಅವ್ಯವಸ್ಥೆಯಾಗಿದೆ. Have it both ways (ಸ್ವಪಕ್ಷ ಸಾಧನೆ, ಮೊ. ಗಳಿಗಾಗಿ) ಸನುಯಾನುಸಾರ ವಿರುದ್ಧವಾದ ಎರಡೂ ಮಾರ್ಗಗಳನ್ನು ಅನುಸರಿಸು; ನಂಟೂ ಗಂಟೂ ಎರಡೂ ಉಳಿಸಿಕೊ; ಎರಡು ಕಡೆ ಯಿಂದಲೂ ಲಾಭ ಪಡೆ. Each w., both ways (ಜೂಜಿನಲ್ಲಿ ಕುದುರೆಯ ಮೇಲೆ ಪಣವೊಡ್ಡುವಲ್ಲಿ) (ಮೊದಲನೆಯದಾಗಿ ಗೆಲ್ಲುವುದರ ಮೇಲೆ, ಮೊದಲ ಮೂರರಮೇಲೆ—ಹೀಗೆ) ಎರಡೂ ಪಕ್ಷ, ಉಭಯತಾಪಿ. Any w. ಹೇಗಾದರೂ, ಏನೇ ಆಗಲಿ. Lives in a small w. (Small ನೋಡಿ). In a small w. ಸಣ್ಣ ಪ್ರಮಾಣದಲ್ಲಿ, ಚಿಕ್ಕದಾಗಿ (Is an author, builds ships, in a small w.). Be in a (great) w. (ಬಳ. ಮಾ.) ಮನಸ್ಸು ಕಲಕಿರು, ಕ್ಷೋಭೆಗೊಂಡಿರು. Be in the family w. ಬಸುರಾಗಿರು]. By w. of —ಆಗಿ, ರೂಪವಾಗಿ, ಉದ್ದೇಶದಿಂದ (Carries a stick by w. of weapon ಆಯುಧವಾಗಿ ದೊಣ್ಣೆ ಹಿಡಿದುಕೊಂಡು ಹೋಗುತ್ತಾನೆ. Did it by w. of apology ಕ್ಷಮಾಪಣೆಯಾಗಿ, ಕ್ಷಮಾಪಣೆಯ ಉದ್ದೇಶದಿಂದ, ಅದನ್ನು ಮಾಡಿದನು. Is by w. of making an effort ಪ್ರಯತ್ನಪಡು ತ್ತಿರುವುದಾಗಿ ತೋರಿಸಿಕೊಳ್ಳುತ್ತಾನೆ, ಭಾವಿಸಿಕೊಳ್ಳುತ್ತಾನೆ; ಪ್ರಯತ್ನದ ದಾರಿಯಲ್ಲಿರುವಂತೆ ಕಾಣಿಸಿಕೊಳ್ಳುತ್ತಾನೆ. **W.-bill** (ಮಜಲು ಗಾಡಿ, ಮೊ. ಗಳಲ್ಲಿಯ) ಪ್ರಯಾಣಿಕರ, ಸರಕಿನ, —ಪಟ್ಟಿ; ರವಾನೆ, ಸಾಗಣೆ,—ಪಟ್ಟಿ. **W.-board** (ಗಣಿ, ಭೂ. ವಿ.) ದಪ್ಪ ಸ್ತರಗಳ ನಡುವಣ ತೆಳು ಪದರ; ನಡು ಪದರ. **Wáyfarer** (ಕಾಲುನಡಗೆಯ) ಪ್ರಯಾಣಿಕ, ದಾರಿಗ, ಪಥಿಕ. **Wáyfaring** (ಕಾಲುನಡಗೆಯ) ಪ್ರಯಾಣ. **Wáyfaring-tree** ದಾರಿ ಪಕ್ಕದಲ್ಲಿ ಸಾ., ಬೆಳೆದಿರುವ ಬಿಳಿಯ ಹೂವಿನ ಪೊದರು: ದಾರಿ ಹೊದರು. **Waylaý** (ಬಡಿದು ಕಿತ್ತುಕೊಳ್ಳಲು, ಭೇಟಿಮಾಡಲು) ದಾರಿಯಲ್ಲಿ ಹೊಂಚುಹಾಕು, ಹಾದಿ ಕಟ್ಟು. **W.-leave** (ಗಣಿ ಯಜಮಾನರು, ಮೊ. ರು ಬಾಡಿಗೆಗೆ ಪಡೆದ, ಮತ್ತೊಬ್ಬನ ನೆಲದಮೇಲಿನ) ದಾರಿ ಹಕ್ಕು. **W.-shaft** (ಆವಿಯೆಂಜಿನಿನಲ್ಲಿ) ವಿಷಮ ಕೇಂದ್ರಕದಿಂದ ಜಾರು ಕವಾಟವನ್ನು ನಡಸುವ ತೂಗು ಅಚ್ಚು: ದೋಲಕಾಕ್ಷ. **Waysíde** ದಾರಿಯ ಪಕ್ಕ (ವಿಶೇಷಣ ಪ್ರ.: W.-s. flowers, inn). **W.-worn** ತಿರುಗಾಡಿ, ಪ್ರಯಾಣ ದಿಂದ, —ಬೇಸತ್ತ, ದಣಿದ.

-ways —ವೇಸ್ (ಉ. ಪ್ರ.) —ಆಗಿ, —ದಿಕ್ಕಿನಲ್ಲಿ (Lengthways ಉದ್ದುದ್ದನಾಗಿ. Sideways ಪಕ್ಕ ಪಕ್ಕವಾಗಿ, ಅಡ್ಡಡ್ಡವಾಗಿ)

Wáyward ವೇವರ್ಡ್ (ಗು.) (ಮಕ್ಕಳಂತೆ) ಹಟಮಾರಿತನದ, ಮೊಂಡು ತನದ; ಮನಬಂದ ಗಿರಾಕಿಯ, ಹುಚ್ಚಾಟಚ್ಛೆಯ, ವಕ್ರ. **Wáywardly** (ಕ್ರಿ. ವಿ.); **Wáywardness** (ನಾ.)

Wáyzgoose ವೇಸ್‌ಗೂಸ್ (ನಾ.) ಮುದ್ರಣಶಾಲೆಯ ವಾರ್ಷಿಕ ಉತ್ಸವ.

We ವಿ(ೀ) (ಸ. ನಾ., ಬ. ವ.) ನಾವು (ರಾಜ, ಲೇಖಕ, ವೃತ್ತಪತ್ರಿಕೆಯ ಸಂಪಾದಕ, ಮೊ. ರು ಗೌರವಾರ್ಥವಾಗಿ ಏ. ವ. ಕ್ಕೆ ಬದಲಾಗಿ ಇದನ್ನು ಉಪಯೋಗಿಸುತ್ತಾರೆ)

Weak ವೀಕ್ (ಗು.) ದುರ್ಬಲ, ಅಶಕ್ತ, ನಿತ್ರಾಣ; ಗಟ್ಟಿಯಿಲ್ಲದ, ಮೆತ್ತನೆಯ, ಮೆದುಗಲ; ನಿಸ್ಸತ್ತ್ವ, ಕೃಶವಾದ, ಬಡವಾದ, ಪಟುತ್ವವಿಲ್ಲದ, ಬೀಳು [W. barrier, rope ಭದ್ರವಿಲ್ಲದ ತಡೆ, ಗಟ್ಟಿಯಿಲ್ಲದ ಹಗ್ಗ. W. as a cat ಬೆಕ್ಕಿನಷ್ಟು ಪುಸಕಲು. W. as water ನೀರಿನಷ್ಟು ಸಪ್ಪೆ. A w. eleven ದುರ್ಬಲ ಹನ್ನೊಂದು ಆಟ ಗಾರರ ತಂಡ. W. vessel (ಸಾ., ರೂಪ.) ನಂಬಲರ್ಹನಲ್ಲದವನು, ನೆಚ್ಚರಾಗದವನು. A w. crew ಸಾಕಷ್ಟು ಜನವಿಲ್ಲದ ನಾವಿಕಪಡೆ. W. hand (ಇಸ್ಪೀಟಾಟ) ಮೇಲು ದರ್ಜೆಯ ಎಲೆಗಳಿಲ್ಲದ ಕೈ, ಬೀಳು ಕೈ. The weaker sex ಅಬಲೆಯರು, ಹೆಂಗಸರು. The weakest goes to the wall (Wall ನೋಡಿ). W. knees ನೆಟ್ಟಗೆ ನಿಲ್ಲಲು ತ್ರಾಣವಿಲ್ಲದಿರುವುದು: ಅದೃಢತೆ, ಪುಸಕಲು, ಸ್ಥೈರ್ಯವಿಲ್ಲದಿರುವುದು (ರೂಪ.) (**Weak-kneed**, ಗು.). W. ending ಪಾದಾಂತದ ಸ್ವರಭಾರವಿಲ್ಲದ ಅಕ್ಷರ. W. constitution (ರೋಗರುಜಿನಾದಿಗಳನ್ನು ತಡೆಯಲಾರದ) ದುರ್ಬಲ ಪ್ರಕೃತಿ, ಕಸುವಿಲ್ಲದ ಮೈ. W. stomach ಬೇಗ ಅಜೀರ್ಣವಾಗುವ ಹೊಟ್ಟೆ; ದುರ್ಬಲ ಜಠರ. W. eyes, sight ಪಟುತ್ವವಿಲ್ಲದ ದುರ್ಬಲ ಕಣ್ಣುಗಳು; ಮಂದದೃಷ್ಟಿ (**Weak-eyed, Weak-sighted**, ಗು.). W. heart ದುರ್ಬಲ ಹೃದಯ. W. mind, head ಮಂದಬುದ್ಧಿ, ಪೆದ್ದ (**Weak-minded, Weak-headed**, ಗು.). W. voice ಸುಲಭವಾಗಿ ದಣಿಯುವ, ದೂರಕ್ಕೆ ಕೇಳಿಸದ, —ಕಂಠ: ನಿತ್ರಾಣ ಕಂಠ. W. demand (ಸರಕುಗಳಿಗೆ) ಕುಗ್ಗಿದ ಗಿರಾಕಿ. The market was w. ಪೇಟೆಯಲ್ಲಿ ಗಿರಾಕಿ ಇರಲಿಲ್ಲ; ಪೇಟೆ ಮಂಕಾಗಿತ್ತು]; ಸ್ಥೈರ್ಯವಿಲ್ಲದ, ಮನೋದಾರ್ಢ್ಯವಿಲ್ಲದ, ನಿರ್ಧಾರ ಸಾಲದ, ಮೆದುಗನಾದ, ನಿಗ್ರಹಶಕ್ತಿಯಿಲ್ಲದ (W. character, man. One's w. side *or* point ಒಬ್ಬನ ದೌರ್ಬಲ್ಯ, ಹುಳುಕು. A w. surrender ಸ್ವಲ್ಪವೂ ಪ್ರತಿಭಟಿಸದೆ, ಸ್ಥೈರ್ಯ ವಿಲ್ಲದೆ, —ಶರಣಾಗತನಾಗುವುದು); ದುರ್ಬಲ, ನ್ಯೂನ, ತಿರುಳಿಲ್ಲದ, ಪೊಳ್ಳಾದ (W. logic, evidence, argument); (ಮಿಶ್ರ ದ್ರವ, ದ್ರಾವಣ, ಮೊ. ಗಳ ವಿಷಯದಲ್ಲಿ) ನೀರಾದ, ಅಳ್ಳಕವಾದ, ತೆಳ್ಳನೆಯ (W. tea, brine); (ಶೈಲ, ಮೊ. ಗಳ ವಿಷಯದಲ್ಲಿ) ಬಿಗಿಯಿಲ್ಲದ, ಸಪ್ಪೆಯ, ಶಿಥಿಲ; (ವ್ಯಾ.) (ಇಂಗ್ಲಿಷ್ ಭಾಷೆಯಲ್ಲಿ ಭೂತ. ಮತ್ತು ಭೂ. ಕೃ. ರೂಪಗಳು ಪ್ರಕೃತಿ ರೂಪ ಶಬ್ದದಲ್ಲಿ ಸ್ವರ ವ್ಯತ್ಯಾಸವಾಗದೆ) ವ್ಯಂಜನಾಕ್ಷರ ಪ್ರತ್ಯಯ (-ed, -t) ಸೇರಿ ಧಾತುರೂಪವಾಗುವ: ದುರ್ಬಲ. **Weáken** (ಕ್ರಿ.); **Weákish** (ಗು.); **Weákling** (ನಾ.) ದುರ್ಬಲ —ಮನುಷ್ಯ, ಪ್ರಾಣಿ, ಸಸ್ಯ; ಬಡಕಲು. **weákly**[1] (ಕ್ರಿ. ವಿ.); **Weákly**[2] (ಗು.) ಗಟ್ಟಿಮುಟ್ಟಿಲ್ಲದ; ನರಪೇತ; ರೋಗಿಷ್ಠ. **Weákness** (ನಾ.) (ಗುಣವಾಚಕಾರ್ಥಗಳಲ್ಲಿ); ದೋಷ, ನ್ಯೂನತೆ, ಕುಂದು; ಮನಸೋಲುವುದು, ದೌರ್ಬಲ್ಯ; ಗೀಳು, ಚಾಪಲ್ಯ (*For* ಉಪ. ಜೊತೆ)

पुस्तकालय
गुरुकुल कांगड़ी

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Weal[1] ವೀಲ್ (ನಾ.) ಏಳಿಗೆ, ಅಭಿವೃದ್ಧಿ, ಕ್ಷೇಮ, ಕಲ್ಯಾಣ, ಶ್ರೇಯಸ್ಸು [(ಈಗ ಮು.) W. & woe, w. *or* woe. Commonweal (Common ನೋಡಿ). For the public *or* general w. ಲೋಕ ಕಲ್ಯಾಣಾರ್ಥವಾಗಿ, ಪ್ರಜಾ ಕ್ಷೇಮಕ್ಕಾಗಿ]

Weal[2]. **Wale** ನೋಡಿ.

Weald ವೀಲ್ಡ್ (ನಾ.) ಇಂಗ್ಲೆಂಡಿನಲ್ಲಿ ಕೆಂಟ್, ಸರೆ, ಹ್ಯಾಂಟ್ಸ್ ಮತ್ತು ಸಸೆಕ್ಸ್‌ಗಳ ಕೆಲವು ಭಾಗಗಳನ್ನೊಳಕೊಂಡ, ಹಿಂದೆ ಕಾಡಾಗಿದ್ದ, ಪ್ರದೇಶ (ಇದರಲ್ಲಿ ಭೂವಿಜ್ಞಾನ ದೃಷ್ಟಿಯಿಂದ ಕೆಲವು ಸ್ವಾರಸ್ಯವಾದ ಲಕ್ಷಣಗಳಿವೆ); ಕಾಡುಪ್ರದೇಶ, ಬೆಂಗಾಡು. W.-clay ವೀಲ್ಡ್ ಸ್ತರಗಳ ಮೇಲ್ಭಾಗವಾದ, ವಿಶೇಷ ಪಳೆಯುಳಿಕೆಗಳಿರುವ, ಜೇಡಿ, ಮರಳುಕಲ್ಲು, ಸುಣ್ಣಕಲ್ಲು ಮತ್ತು ಕಬ್ಬಿಣದ ಅದುರುಗಳುಳ್ಳ ಸ್ತರ: ವೀಲ್ಡ್ ಜೇಡಿ, ಕಾಡುಜೇಡಿ. **Weálden** (ಗು., ನಾ.) ವೀಲ್ಡ್ ಪ್ರಾಂತದ; (ಭೂವಿಜ್ಞಾನ ದೃಷ್ಟಿಯಿಂದ) ವೀಲ್ಡ್ ಪ್ರಾಂತದಂಥ. (ನಾ.) ಓಪೊಲೈಟ್ ಸುಣ್ಣಕಲ್ಲಿನ ಸ್ತರಕ್ಕೂ ಸೀಮೆ ಸುಣ್ಣಕಲ್ಲಿನ ಸ್ತರಕ್ಕೂ ಮಧ್ಯೆ ಇರುವ ಸೀನೀರುಳ್ಳ ಸೀಮೆಸುಣ್ಣದ ಸ್ತರಪಂಕ್ತಿ: ವೀಲ್ಡ್ ಸ್ತರ(ಪಂಕ್ತಿ)

Wealth ವೆಲ್ತ್ (ನಾ.) (ಪ್ರಾಚೀ. ಪ್ರ.) ಏಳಿಗೆ, ಅಭಿವೃದ್ಧಿ, ನೆಮ್ಮದಿ, ಕ್ಷೇಮ (In health & w. long to live ಆರೋಗ್ಯಾಭಿವೃದ್ಧಿಗಳಿಂದ ದೀರ್ಘಾಯುವಾಗಿ); ಐಶ್ವರ್ಯ, ಸಂಪತ್ತು, ಭಾಗ್ಯ, ಧನ, ಹಣ; ಧನಿಕತೆ, ಹಣಗಾರಿಕೆ; ಶ್ರೀಮಂತರು, ಧನಿಕರು, ಭಾಗ್ಯವಂತರು; ಸಮೃದ್ಧಿ, ವಿಪುಲತೆ, ವೈಭವ (W. of words is not eloquence ಶಬ್ದಸಂಪತ್ತಿ ವಾಗ್ಮಿತೆಯಲ್ಲ). **Weálthy** (ಗು.); **Weálthily** (ಕ್ರಿ. ವಿ.); **Weálthiness** (ನಾ.)

Wean[1] ವೀನ್ (ಕ್ರಿ. ಸಕ.) (ಮಗು, ಕರು, ಮೊ. ಕ್ಕೆ) ಮೊಲೆ(ಹಾಲು)—ಬಿಡಿಸು, ತಪ್ಪಿಸು (*From* mother *or* breast); (ಬೇರೆ ಆಕರ್ಷಣೆಗಳನ್ನು ತೋರಿಸಿ ಅಭ್ಯಾಸ, ಸಂಗ, ಮೊ. ರಿಂದ) ಬಿಡಿಸು, ತಪ್ಪಿಸು, ತಿರುಗಿಸು (*From*, ವಿರ. ಪ್ರ. *Of* ಉಪ. ಜೊತೆನೆ). **Weánling** (ನಾ.) (ಹೊಸದಾಗಿ) ಮೊಲೆ ಬಿಡಿಸಿರುವ ಮಗು, ಕರು, ಮೊ. ವು.

Wean[2] ವೀನ್ (ನಾ.) (ಸ್ಕಾ. ಪ್ರ.) ಮಗು, ಕೂಸು.

Weápon ವೆಪ(ಪ್)ನ್ (ನಾ.) ಘಾತಿಸುವುದಕ್ಕೆ ಉಪಯೋಗಿಸುವ ಸಲಕರಣೆ: ಆಯುಧ, ಶಸ್ತ್ರ (ರೂಪ. ಸಹ); ಸಾಧನ (Irony is a double-edged w. ಹಾಸ್ಯವಂಗ್ಯ ಇಬ್ಬಾಯಿಯ, ಉಭಯತಾಪಿ ತಟ್ಟುವ, ಆಯುಧ. Tears, the woman's w. ಕಣ್ಣೀರು ಹೆಂಗಸಿನ ಸಾಧನ, ಆಯುಧ. **Weáponless** (ಗು.)

Wear[1] ವೇ(ಅ)ರ್ [ಕ್ರಿ., ಭೂತ. Wore ವೋ(ಅ)ರ್, ಭೂ. ಕೃ. Worn ವೋ(ಅ)ರ್ನ್, ವಾರ್ನ್] ಉಡು, ತೊಡು; ಇಡು, ಇಟ್ಟುಕೊ, ಹಾಕು, ಹಾಕಿಕೊ, ಹೊದೆ, ಧರಿಸು, ತಾಳು [Wears serge ಸಾಮಾನ್ಯವಾಗಿ ಸರ್ಜು ಉಡುಪು ತೊಡುತ್ತಾನೆ. Is wearing diamonds ವಜ್ರದ ಒಡವೆ ಹಾಕಿಕೊಂಡಿದ್ದಾಳೆ; ವಜ್ರಗಳನ್ನು ಧರಿಸಿದ್ದಾಳೆ. Wearing-apparel ಉಡುಪು, ಬಟ್ಟೆ. Worn clothes[1] ಉಟ್ಟ, ಉಪಯೋಗಿಸಿರುವ,—ಉಡುಪು, ಬಟ್ಟೆ. W. the crown ರಾಜ (ಅಥವಾ ಧರ್ಮಬಲಿ) ಆಗಿರು. W. sword ಸೈನಿಕನಾಗಿರು. W. gown ನ್ಯಾಯವಾದಿಯಾಗಿರು. W. willow ವಿರಹಿಯಾಗಿರು. W. breeches ಗಂಡುಬೀರಿಯಾಗಿರು. W. one's hair long, short ತನ್ನ ತಲೆ ಕೂದಲನ್ನು ಉದ್ದನಾಗಿ, ಮೊಟಕಾಗಿ, ಇಟ್ಟುಕೊಂಡಿರು. W. a face of joy ಸಂತೋಷದ ಮುಖ (ಭಂಗಿಯನ್ನು) ತಾಳು; ಸಂತೋಷವಾಗಿರು. W. one's heart upon one's sleeve (Heart ನೋಡಿ). W. person *or* principle in one's heart ವ್ಯಕ್ತಿಗೆ, ತತ್ತ್ವಕ್ಕೆ, ನಿಷ್ಠೆಯುಳ್ಳವನಾಗಿರು;—ನ್ನು ಹೃದಯದಲ್ಲಿ ಧರಿಸಿರು. W. one's years well (ವಯಸ್ಸಾಗಿದ್ದರೂ) ಯೌವನಶಾಲಿಯಂತೆಯೇ ಇರು]. ಸವೆ(ಯಿಸು), ತೇಯಿಸು, ಜೀರ್ಣಮಾಡು, ಕೃಶವಾಗಿಸು, ಕ್ಷೀಣಮಾಡು; ಸವೆದು, ತೇದು,—ಹೋಗು; ಜೀರ್ಣ, ಕ್ಷೀಣ,—ವಾಗು; ಉಜ್ಜಿ, ಅಳಿಸಿ,—ಹಾಕು, ಹೋಗು (*Away*, *down*, *off*, *out* ಉಪ. ಜೊತೆನೆ) [Step worn with pilgrims' knees ಯಾತ್ರಿಕರ ಮಂಡಿಯೂರಿಯೂರಿ ಸವೆದ ಮೆಟ್ಟಲು. Worn clothes[2] (ತೊಟ್ಟು) ಜೀರ್ಣವಾದ ಉಡುಪುಗಳು. W. the freshness off ಹೊಸ ಕಳೆಯನ್ನು ಮಾಸಿಸು. W. the nap off ಜುಂಗನ್ನು ಸವೆಯಿಸು. Impression soon wears off (ಮನಸ್ಸಿನಮೇಲೆ) ಅಚ್ಚೊತ್ತಿದ (ಪ್ರ)ಭಾವ ಬೇಗ ಅಳಿಸಿಹೋಗುತ್ತದೆ. Clothes w. to one's shape ಬಟ್ಟೆಗಳು ತೊಟ್ಟು ತೊಟ್ಟು ಸರಿಹೊಂದಿಕೊಳ್ಳುತ್ತವೆ. W. one's trousers into holes *or* bagginess ಷರಾಯನ್ನು ತೊಟ್ಟುತೊಟ್ಟು ತೂತುಮಾಡಿಹಾಕು, ದಗಲೆಮಾಡಿ ಹಾಕು. Is worn to a shadow with care ಚಿಂತೆಯಿಂದ ಸವೆದುಹೋಗಿದ್ದಾನೆ, ಜೀವಚ್ಛವವಾಗಿದ್ದಾನೆ. A (well-)worn joke ಹಳಸಲು ಹಾಸ್ಯ. Wearing-iron, -plate ಉಜ್ಜುಭಾಗಕ್ಕೆ ರಕ್ಷೆಯಾಗಿ ಹಾಕಿರುವ ಲೋಹಫಲಕ: ಉಜ್ಜುತಗಡು. W. out ಪೂರ್ತಿ— ಉಪಯೋಗಿಸಿಬಿಡು, ಉಪಯೋಗವಾಗಿ ಬಿಡು]. ಬಳಲು, ಬಳಲಿಸು, ದಣಿ(ಸು); ಆಯಾಸ, ಬೇಸರ,—ಪಡು, ಪಡಿಸು; ದಣಿದು, ಸೋತು,—ಹೋಗು; (ಪಟ್ಟುಹಿಡಿದು) ಸುಸ್ತುಮಾಡಿ ಹಾಕು, ಅದುಮಿಹಾಕು, ಕುಗ್ಗಿಸು [Worn with travel ಪ್ರಯಾಣದಿಂದ—ದಣಿದು, ಬೇಸತ್ತು. A wearing occupation ದಣಿಸುವ—ಕೆಲಸ, ಕಸಬು. W. out one's welcome (ಅತಿಥಿ, ಮೊ. ರ ವಿಷಯದಲ್ಲಿ) ಪದೇ ಪದೇ ಹೋಗಿ, ಹೆಚ್ಚು ಕಾಲ ನಿಂತು,—ಆದರಣೆ ಕಳೆದುಕೊ, ಬೇಸರ ಹಿಡಿಸು. His patience wore, *or* was worn, out at last ಕೊನೆಗೆ ಅವನ ತಾಳ್ಮೆ ಕೆಟ್ಟಿತು, ಸಹನೆ ತಪ್ಪಿತು. Succeeded in wearing down opposition ಪ್ರತಿಭಟನೆಯನ್ನು, ಎದುರು ಪಕ್ಷವನ್ನು,—ಸುಸ್ತು ಬೀಳಿಸುವುದರಲ್ಲಿ, ಅಡಗಿಸುವುದರಲ್ಲಿ, ಕೃತಕೃತ್ಯನಾದನು]. ಬಾಳು, ಬಾಳಿಕೆ ಬರು, ತಡೆ(ತ ಬರು), ಸುಸ್ಥಿತಿಯಲ್ಲಿರು [Won't w. ಬಾಳಿಕೆ ಬರುವುದಿಲ್ಲ; ಬಹು ಕಾಲ ತಡೆಯುವುದಿಲ್ಲ. Wears for years ವರ್ಷಗಟ್ಟಳೆ ಬರುತ್ತದೆ. Person wears well (ವಯಸ್ಸಾಗಿದ್ದರೂ) ಯೌವನಶಾಲಿಯಾಗಿಯೇ ಇದ್ದಾನೆ, ಯೌವನದ ಕಳೆ ಇದೆ]. (ಕಾಲದ ವಿಷಯದಲ್ಲಿ) (ನಿಧಾನವಾಗಿ—) ಹೋಗು, ಕಳೆ, ಸಾಗು (Time, day, wears on *or* away. W. through the day ಹೇಗೋ ದಿನ ಕಳೆ, ನೂಕು). (ಸಾ., ನೀರಿನ ವಿಷಯದಲ್ಲಿ) ಸವೆಸಿ, ಕೊರೆದು, (ತೂತು, ಕಾಲುವೆ, ಮೊ. ನ್ನು) ಮಾಡು; ಕೊರೆದು(ಹಾಕು). **Weárable** (ಗು.); **Weárer** (ನಾ.)

Wear (ನಾ.) ಉಡುವುದು, ತೊಡುವುದು; ಉಡುಪು, ಉಡಿಗೆ, ತೊಡಿಗೆ (Sunday, working, w. ಭಾನುವಾರದ, ಕೆಲಸದ, ಉಡುಪು. Serges are now in general w. ಈಗ ಸರ್ಜ್ ಬಟ್ಟೆಗಳು ರೂಢಿಯಲ್ಲವೆ, ಮೆಚ್ಚಾಗಿವೆ. The coat I have in w. ನಾನು ಸಾಮಾನ್ಯವಾಗಿ ತೊಡುವ ಅಂಗಿ. Foot-w. ಪಾದರಕ್ಷೆ). ಸವೆತ, ಸವಕಳಿ, ತೇಮಾನ (W. & tear ಸವಕಲು ಹರುಕಲು. Is the worse for w. ಉಪಯೋಗಿಸಿ ಜೀರ್ಣವಾಗಿದೆ); ತಡೆತ, ಬಾಳಿಕೆ (There is a great deal of, no, w. in it)

Wear[2] ವೇ(ಅ)ರ್ [ಕ್ರಿ.; ಭೂತ., ಭೂ. ಕೃ. Wore ವೋ(ಅ)ರ್] (ನಾವೆ) (ಗಾಳಿಗೆದುರಾಗಿ ಚುಕ್ಕಾಣಿಯನ್ನು ತಿರುಗಿಸಿ) ಹಡಗನ್ನು ತಿರುಗಿಸು, (ಹೀಗೆ ಹಡಗು) ತಿರುಗು (Tack ನೋಡಿ)

Wear[3] ವಿಯರ್ (ನಾ.)=Weir.

Weáry ವಿಯರಿ (ಗು., ಕ್ರಿ.) ಬಳಲಿದ, ದಣಿದ, ಆಯಾಸಪಟ್ಟ, ಉತ್ಸಾಹಗುಂದಿದ; ಬೇಸರಗೊಂಡ, ಬೇಜಾರಾದ, ಆಯಾಸದ, ಬೇಸರದ, ಶ್ರಮದ. (ಕ್ರಿ.) ಬಳಲಿಸು, ಬಳಲು; ಬೇಸರಗೊಳಿಸು,—ಗೊಳ್ಳು; (ಮು., ಸ್ಕಾ. ಪ್ರ.) ಹಂಬಲಿಸು, ಹಾತೊರೆ (*To* do or *for*). **Weáriless** (ಗು.); **Weárily** (ಕ್ರಿ. ವಿ.); **Weáriness** (ನಾ.); **Weárisome** (ಗು.); **Weárisomely** (ಕ್ರಿ. ವಿ.); **Weárisomeness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Weásand ವೀ(ಜೆ)ಸ್ಯಂಡ್ (ನಾ.) (ಪ್ರಾಚೀ. ಪ್ರ.) ಶ್ವಾಸನಾಳ, ಗಂಟಲು (Slit one's w. ಗಂಟಲು—ಸೀಳಿಹಾಕು, ಕೊಯ್ಯು)

Weásel ವೀಸ್ಲ್‌ಲ್ (ನಾ.) ಸಣ್ಣದೂ ಚಳಕವುಳ್ಳದ್ದೂ ಆದ, ಕೆಂಗಂದು ಬಣ್ಣದ ಒಡಲೂ ಬಿಳಿಯ ಹೊಟ್ಟೆಯೂ ತೆಳು ಮೈಯೂ ಉಳ್ಳ, ಮಾಂಸಾಹಾರಿಯಾದ ಒಂದು ಚತುಷ್ಪಾದಿ: (ಒಂದು ಜಾತಿಯ) ಮುಂಗುಲಿ, ವೀಸೆಲ್ ಪ್ರಾಣಿ (Catch a w. asleep ಚೆನ್ನಾಗಿ ಎಚ್ಚತ್ತಿರುವವನನ್ನು, ಹುಷಾರಿನಮೇಲಿರುವವನನ್ನು,—ಮೋಸಮಾಡು). W.-faced ತೆಳ್ಳನೆಯ ಹರಿತ ಮುಖವುಳ್ಳ.

Weáther ವೆದರ್ (ನಾ.) ವಾಯುಸ್ಥಿತಿ, ಹವ, ಹವಾಮಾನ [April w. ಪರ್ಯಾಯವಾಗಿ ಮಳೆ ಬಿಸಿಲುಗಳಿರುವ ಚೈತ್ರದ ಹವ ; (ರೂಪ.) ನಗು ಅಳು, ನಲವು ನೋವು. Fair², fine, soft, w. (ಆಯಾ ಪದ ನೋಡಿ). King's *or* Queen's w. (ಉತ್ಸವ ದಿನಗಳಲ್ಲಿ) ಭರ್ಜರಿ, ರಾಜಾ,—ಹವ. Under stress of w. ಬಿರುಗಾಳಿ ಮಳೆಯ, ಕೆಟ್ಟ ಹವದ,—ಕಾರಣದಿಂದ. Clerk of the w. (Clerk ನೋಡಿ). Make good, bad, w. (ನಾವೆ) ಒಳ್ಳೆಯ ಹವ, ಕೆಟ್ಟ ಹವ,—ಸಂಧಿಸು, ಅನುಭವಿಸು. Make heavy w. of (ರೂಪ.) ಕಷ್ಟಸಾಧ್ಯ, ಶ್ರಮದಾಯಕ,—ಆಗಿರು, ಮಾಡು (The muddle-headed making heavy w. of the simplest tasks). Under the w. (ಅಸಂ.) ಕಷ್ಟದಲ್ಲಿ, ದುಃಸ್ಥಿತಿಯಲ್ಲಿ]. **W.-beaten** ಬಿರುಗಾಳಿ ಮಳೆಗೆ ಸಿಕ್ಕಿ ನಷ್ಟಗೊಂಡ ; (ಬಿರು)ಗಾಳಿ ಪೆಟ್ಟು ಬಿದ್ದ ; (ಮನುಷ್ಯರ ವಿಷಯದಲ್ಲಿ)—ಗೆ ಪಳಗಿ ಗಟ್ಟಿಗೊಂಡ. **W.-board** (ನಾ.) ಮಳೆ ನೀರು ಒಳಗೆ ಬರದಂತೆ ಕದಗಳ ಕೆಳ ಭಾಗದಲ್ಲಿ ಇಳಿಜಾರಾಗಿ ಜೋಡಿಸಿರುವ ಹಲಗೆ : ಮಳೆ ಜಾರುಹಲಗೆ. (ಕ್ರಿ.) ಮಳೆ ಜಾರು ಹಲಗೆ ಹಾಕು. **W.-boarding, -boards** ಮಳೆನೀರನ್ನು ಆಚೆಗೆ ಎಸೆಯುವುದಕ್ಕಾಗಿ ಗೋಡೆ, ಮೊ. ಗಳಿಗೆ ಹೊದಿಸಿರುವ, ಅಡ್ಡಸಾಲಿನ ಹಲಗೆಗಳ ಪದರ ಜೋಡಣೆ: ಮಳೆಹಲಗೆ ಜೋಡಣೆ ; ಮಳೆಹಲಗೆ ಗಳು. **W.-bound** (ಗು.) ಕೆಟ್ಟ ಹವಕ್ಕೆ ಸಿಕ್ಕಿ—ಹೊರಡಲಾರದ, ನಿಂತುಬಿಟ್ಟ. **W.-box** (ಆರ್ದ್ರತಾ ಸೂಕ್ಷ್ಮತೆಯುಳ್ಳ ತಂತುವಿನ ಕಾರ್ಯದಿಂದ ಮಳೆಯ ಸೂಚಕವಾಗಿ ಗಂಡು ಬೊಂಬೆಯೂ ಒಳ್ಳೆಯ ಹವದ ಸೂಚಕವಾಗಿ ಹೆಣ್ಣು ಬೊಂಬೆಯೂ ಬಂದು ನಿಲ್ಲುವಂತೆ ಅಳವಡಿಸಿರುವ) ಹವಾ ಪೆಟ್ಟಿಗೆ. **W.-bureau** ಪವನಶಾಸ್ತ್ರ ಕಾರ್ಯಾಲಯ; ಹವಾ(ಮಾನ) ಕಚೇರಿ. **W.-chart** ಹವಾ(ಮಾನ) ನಕ್ಷೆ. **Weáther-cock** (ಗಾಳಿ ಬೀಸುವ ದಿಕ್ಕನ್ನು ತೋರಿಸುವುದಕ್ಕಾಗಿ ಎತ್ತರವಾದ ಕಟ್ಟಡಗಳಮೇಲೆ ಹಾಕಿರುವ, ಸಾ., ಹುಂಜದಾಕಾರದ) ವಾಯು ದಿಕ್ಸೂಚಿ; ಗಾಳಿ ಹುಂಜ; (ರೂಪ.) ಗಾಳಿ ಹುಂಜದಂತೆ ತಿರುಗುವವನು; ಗಾಳಿ ಬಂದ ಕಡೆ ತೂರಿಕೊಳ್ಳುವವನು ; ಚಂಚಲ ಮನುಷ್ಯ. **W.-contact, -cross** ತಂಡಿ ಹವದ ಕಾರಣದಿಂದ ದೂರಲೇಖಕದ ಒಂದು ತಂತಿಯಿಂದ ಮತ್ತೊಂದು ತಂತಿಗೆ ವಿದ್ಯುಚ್ಛಕ್ತಿ ಸೇರುವುದು: ಹವಾ—ಸಂಪರ್ಕ, ಅಡಚಣೆ. **W.-forecast** (ವೃತ್ತಪತ್ರಿಕೆ, ಹವಾ ಕಚೇರಿ, ಮೊ. ವು ಪ್ರಕಟಿಸುವ) ಹವಾ—ಭವಿಷ್ಯ, ಮುನ್ ಸೂಚನೆ. **W.-glass** ವಾಯುಭಾರಮಾಪಕ. **W.-map** = W.-chart. **W.-moulding** = Drip-moulding (Drip ನೋಡಿ). **W.-proof** (Proof ನೋಡಿ). **W.-prophet** ಹವಾ ಭವಿಷ್ಯವಾದಿ. **W.-service** ಪವನಶಾಸ್ತ್ರ, ವಾಯುಸ್ಥಿತಿ ವೀಕ್ಷಣ, —ಸಂಸ್ಥೆ. **W.-stain** ಮಳೆ ಗಾಳಿ ಬಿಸಿಲುಗಳ ಹೊಡೆತಕ್ಕೆ ಸಿಕ್ಕಿದ್ದರಿಂದ ಗೋಡೆ, ಮೊ. ಗಳ ಮೇಲೆ ಕಾಣಿಸಿಕೊಳ್ಳುವ ಮಾಸಲು ಬಣ್ಣ : ಹವಾ ಕರೆ. **W. stained** (ಗು.); **W.-station** ವಾಯುಸ್ಥಿತಿ ವೀಕ್ಷಣಸ್ಥಾನ, ಹವಾಠಾಣ. **W.-strip** ಬಾಗಿಲು ಅಥವಾ ಕಿಟಕಿಯ ಕದಗಳಿಗೆ ಮಳೆ ಗಾಳಿಗಳ ಹೊಡೆತ ತಟ್ಟದಂತೆ ಹಾಕುವ ಪಟ್ಟಿ : ಹವಾ—ಪಟ್ಟಿ, ರಕ್ಷೆ. **W.-tiles** ಒಂದರ ಮೇಲೊಂದು ಹಾಯ್ದಿರುವ ಹೆಂಚುಗಳು ; ಹವಾ ಜೋಡಣೆ ಹೆಂಚುಗಳು. **W.-vane** = Weathercock. **W.-wise** ವಾಯುಸ್ಥಿತಿಯನ್ನು ಮುಂದಾಗಿ ತಿಳಿಸುವ ಶಕ್ತಿಯುಳ್ಳ : ಹವಾ ಭವಿಷ್ಯ ಜ್ಞಾನವುಳ್ಳ. **W.-worn** ಬಿರುಗಾಳಿ ಮಳೆಗಳಿಂದ—ಪೆಟ್ಟುತಿಂದ, ಕಷ್ಟಪಟ್ಟ.

Weáther (ಗು.) (ನಾವೆ) ಗಾಳಿಯ ದಿಕ್ಕಿನ, ಗಾಳಿ ದಿಕ್ಕಿಗಿರುವ [On the w. beam, bow (ಹಡಗಿನ ವಿಷಯದಲ್ಲಿ) ಗಾಳಿ ದಿಕ್ಕಿಗೆ ತಿರುಗಿಸಿದ ಅಗಲ ಭಾಗವುಳ್ಳ, ಮೂತಿಯುಳ್ಳ. Have the w. gage *or* gauge of (Gauge ನೋಡಿ). Keep one's w. eye open (ರೂಪ.) ಎಚ್ಚರಿಕೆಯಿಂದಿರು, ಹುಷಾರಾಗಿರು]. **Weáthermost** (ಗು.) ಗಾಳಿಯ ಕಡೆಗೆ ಅತ್ಯಂತ ದೂರದ(ಲ್ಲಿರುವ). **Weátherly** (ಗು.) (ನಾವೆ) (ಹಡಗಿನ ವಿಷಯದಲ್ಲಿ) (ಆದಷ್ಟು ಮಟ್ಟಿಗೆ) ಗಾಳಿಯ ದಿಕ್ಕಿಗಿರುವ, ಗಾಳಿಮರೆಯ ದಿಕ್ಕಿಗ ಓಲದ. **Weátherliness** (ನಾ.)

Weáther (ಕ್ರಿ.) ಗಾಳಿ ಬಿಸಿಲುಗಳಿಗೆ ಒಡ್ಡು ; ಹವಾ ಬದಲಾವಣೆಗೆ—ತೆರೆದಿಡು, ಒಡ್ಡು ; (ಸಾ., ಕರ್ಮಣಿ ಪ್ರ.) (ಮು., ಭೂ. ವಿ. ; ಕಲ್ಲು, ಬಂಡೆ, ಮೊ. ಗಳನ್ನು) ಗಾಳಿ ಮಳೆಗೆ ಒಡ್ಡಿ ಬಣ್ಣಗೆಡಿಸು, ಶಿಥಿಲಮಾಡು; (ಹೀಗೆ) ಬಣ್ಣಗೆಡು, ಶಿಥಿಲವಾಗು ; (ಹಡಗಿನ ಅಥವಾ ನಾವಿಕನ ವಿಷಯದಲ್ಲಿ) ಗಾಳಿಯ ದಿಕ್ಕಿನಲ್ಲಿ ಹೋಗು (*Of* ಉಪ. ದೊಡನೆ) ; ಬಿರುಗಾಳಿ ಮಳೆಗೆ ಸಿಕ್ಕಿ ಸುರಕ್ಷಿತವಾಗಿ ಬರು ; (ರೂಪ.) ಕಷ್ಟಗಳನ್ನು ನಿಭಾಯಿಸು, ಕಷ್ಟಗಳಿಂದ ಪಾರಾಗು ; (ಹಲಗೆ, ಹೆಂಚು, ಮೊ. ಗಳನ್ನು) ಒಂದರಮೇಲೊಂದು ಹಾಯ್ದಿರುವಂತೆ ಜೋಡಿಸು : ಹವಾ ಜೋಡಣೆಮಾಡು. **Weáthering** (ನಾ.)

Weave ವೀವ್ (ಕ್ರಿ. ; ಭೂತ. Wove ವೋವ್ ; ಭೂ. ಕೃ. Woven ವೋವನ್, Wove ; ನಾ.) ನೇಯಿ, ನೆಯ್ದು ಬಟ್ಟೆಮಾಡು, ಬಟ್ಟೆ ನೇಯಿ ; (ಸಂಗತಿ, ವಿವರ, ಮೊ. ನ್ನು ಕಥೆಯಾಗಿ, ವೃತ್ತಾಂತವಾಗಿ) ಜೋಡಿಸು, ಹೆಣೆ (*Into* ಉಪ. ದೊಡನೆ); ಸಂಚು, ಕಲ್ಪನೆ,—ಮಾಡು; [Wove(n) paper (ತಂತಿಜಾಲರಿಯ ಚೌಕಟ್ಟಿನಲ್ಲಿ ತಯಾರಿಸುವುದರಿಂದ) ಗೆರೆಗಳಿಲ್ಲದ ಒಂದೇಸಮ ಮೇಲ್ಮೈಯುಳ್ಳ ಕಾಗದ : ನೆಯ್ದ ಕಾಗದ]. (ನಾ.) ನೆಯ್ಗೆ(ಯ ರೀತಿ). **Weáver** (ನಾ.) (ಕ್ರಿಯಾರ್ಥಗಳಲ್ಲಿ) ; ನೆಯ್ಗಕಾರ, ನೇಕಾರ (W.'s knot ಬೇರೆ ಬೇರೆ ಗಾತ್ರದ ದಾರಗಳನ್ನು ಸೇರಿಸುವಲ್ಲಿ ಹಾಕುವ ಹೆಣಿಗೆ ಗಂಟು : ನೇಕಾರ ಗಂಟು); (ಬಹಳ ಜಾಣ್ಮೆಯಿಂದ ತನ್ನ ಗೂಡುಗಳನ್ನು ನೇಯುವ) ಹಲವು ಬಗೆಯ ಜೇಡರ ಹಕ್ಕಿ : ಗೀಜಗ ಹಕ್ಕಿ (= W.-bird)

Weázen. **Wizened** ನೋಡಿ.

Web ವೆಬ್ (ನಾ.) ನೆಯ್ದ ಪದಾರ್ಥ, ನೆಯ್ಗೆ [(ರೂಪ.) A w. of lies ಸುಳ್ಳಿನ —ನೆಯ್ಗೆ, ಕಂತೆ] ; ಜೇಡನ ಬಲೆ (= Spider's w.) ; (ಕಂಬಳಿಹುಳು, ಮೊ. ಇತರ ಹುಳುಗಳು ಹೆಣೆಯುವ) ಬಲೆ ; (ಮು., ಈಜುಹಕ್ಕಿಗಳ ಮತ್ತು ಕಪಟಗಳ) ಕಾಲುಬೆರಳುಗಳ ನಡುವಣ ಚರ್ಮ ಪೊರೆ : ಜಾಲ ; ಸಂಬಂಧಕ—ಅಂಗಾಂಶ, ಪೊರೆ ; ಹಕ್ಕಿಯ ಗರಿಯ ಅಡ್ಡೆಳೆಗಳ ಹೆಣಿಗೆ ; (ಮು., ವೃತ್ತಪತ್ರಿಕೆಯ ಮುದ್ರಣದಲ್ಲಿ ಉಪಯೋಗಿಸುವ) ಕಾಗದದ ದೊಡ್ಡ ಸುರುಳಿ; (ಯಂತ್ರ, ಮೊ. ಗಳಲ್ಲಿ ಘನ ಭಾಗಗಳನ್ನು ಕೂಡಿಸುವ ತೆಳುವಾದ ಚಪ್ಪಟೆಯ ಭಾಗ : ಫಲಕ, ತಗಡು (ಉದಾ., ರೈಲುಬಂಡಿಯ ಚಕ್ರದ ನಾಭಿಗೂ ಪರಿಧಿಗೂ ನಡುವಣ ತಗಡು). **W.-eye** ಕಣ್ಣಿನ ಒಂದು ಪರೆರೋಗ ; ಪರೆಗಣ್ಣು [**Web-eyed** (ಗು.)]. **W.-fingers, -toes** ಜಾಲಾಂಗುಲಗಳು, ಬಲೆಬೆರಳುಗಳು [**W.-fingered, Web-toed** (ಗು.)]. **W.-foot** ಜಾಲಪಾದ [**W.-footed** (ಗು.)]. **W.-wheel** (ಅರೆಗಳಿಗೆ ಬದಲು ತಗಡಿರುವ, ಅಥವಾ ಅರೆಗಳು, ಪರಿಧಿ, ಕೇಂದ್ರ ಎಲ್ಲಾ ಒಂದೇ ತುಂಡಿನಲ್ಲಿರುವ) ಫಲಕ, ಜಾಲ,—ಚಕ್ರ. **W.-worm** ಹಲವು ಬಗೆಯ ಬಲೆ ನೆಯ್ಯುವ ಹುಳು : ಜಾಲಕ್ರಿಮಿ. **Wébbed** (ಗು.); **Wébbing** (ನಾ.) (ಕುದುರೆಯ ಪಟ್ಟಿ, ಕಸರತ್ತು ಪಟ್ಟಿ, ಮೊ. ಗಳಿಗೆ ಉಪಯೋಗಿಸುವ) ಕಿರಿಯಗಲದ ಗಟ್ಟಿ ನೆಯ್ಗೆಯ ಬಟ್ಟೆ : ಗಟ್ಟಿ ಪಟ್ಟಿ ; (ನಯ ನೆಯ್ಗೆಯ) ಗಟ್ಟಿಯಂಚು.

Wed ವೆಡ್ (ಕ್ರಿ. ; ಭೂತ. Wedded ; ಭೂ. ಕೃ. Wedded, ವಿರ. ಪ್ರ. Wed) ಮದುವೆ, ವಿವಾಹ, ಲಗ್ನ, -ಆಗು, ಮಾಡಿಸು (Wedded pair ದಂಪತಿಗಳು, ಸತಿಪತಿಗಳು. Wedded life, bliss ದಾಂಪತ್ಯ—ಜೀವನ, ಸುಖ) ; (ಸಾ., ಭಿನ್ನ ಗುಣಗಳನ್ನು ಒಟ್ಟಿಗೆ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೂಡಿಸು, ಸಂಯೋಜಿಸು (W. efficiency to economy ಮಿತ ವ್ಯಯಕ್ಕೆ ಕಾರ್ಯ ಸಾಮರ್ಥ್ಯವನ್ನು ಕೂಡಿಸು); (ಭೂ. ಕೃ. ನಲ್ಲಿ) (ಅಭಿಪ್ರಾಯ, ತತ್ತ್ವ, ಮೊ. ಗಳಲ್ಲಿ) ನಿಷ್ಠನಾದ, ಆಸಕ್ತನಾದ, ಕಟ್ಟುಬದ್ಧರುವ. **Wédding** (ನಾ.) ಮದುವೆ(ಯೊಸಗೆ), ವಿವಾಹ (ಮಹೋತ್ಸವ). Silver w. ಮದುವೆಯ ೨೫ನೆಯ ವರ್ಷದ ಉತ್ಸವ; ವಿವಾಹದ ರಜತೋತ್ಸವ. Golden w. (Gold ನೋಡಿ). Diamond w. ಮದುವೆಯ ೬೦ನೆಯ (ಕೆಲವು ಸಂದರ್ಭಗಳಲ್ಲಿ ೭೫ನೆಯ) ವರ್ಷದ ಉತ್ಸವ: ಮದುವೆಯ ವಜ್ರೋತ್ಸವ. Penny w. ಅತಿಥಿಗಳೆಲ್ಲರೂ ಚಂದಾಹಾಕಿ ನಡಸುವ ಮದುವೆ: ಚಂದಾ, ಪೈಸಾ, —ಮದುವೆ. W. breakfast ಮದುವೆಯ ಔತಣ. W.-cake (ಮದುವೆಯ ಸಮಾರಂಭದಲ್ಲಿ ನೆರೆದ ಅತಿಥಿಗಳಿಗೆ ಹಂಚಿಕೊಡುವ, ಆಗ ಬರಲಾಗದೆ ನಿಂತ ಸ್ನೇಹಿತರಿಗೆ ಕಳುಹಿಸಿಕೊಡುವ) ವಿವಾಹ ಭಕ್ಷ್ಯ. W.-card (ಮದುವೆಯ) ಲಗ್ನಪತ್ರಿಕೆ. W.-day ಮದುವೆಯ ದಿನ, ವಿವಾಹ ವಾರ್ಷಿಕೋತ್ಸವ. W.-favour ಮದುವೆಯ ಸಮಾರಂಭದಲ್ಲಿ ತೊಡುವ ಬಿಳಿಯ ಗುಲಾಬಿ ಹೂವಿನ ಒಡವೆ ಅಥವಾ ಅಲಂಕಾರಪಟ್ಟಿಯ ಗೊಂಡೆಯ: ಮದುವೆ ಗೊಂಡೆಯ. W. garment ಸಂಕಲಿಕೆ; (ರೂಪ.) (ಯಾವುದರಲ್ಲಾದರೂ ಭಾಗ ವಹಿಸಲು) ಯೋಗ್ಯತೆ, ಅಧಿಕಾರ. W.-ring (ಮದುವೆಯಲ್ಲಿ ಗಂಡ ಹೆಂಡತಿಗೆ ಇಡುವ, ವಿವಾಹಿತ ಸ್ತ್ರೀಯ ಗುರುತಾದ)ಮದುವೆಯುಂಗುರ. **Wédlock** ವೆಡ್‌ಲಾಕ್ (ನಾ.) ವಿವಾಹಿತ ಸ್ಥಿತಿ, ದಾಂಪತ್ಯ (Born in lawful w. ವಿವಾಹಿತರಿಗೆ ಹುಟ್ಟಿದ; ಧರ್ಮ ಸಂತಾನದ)

Wedge ವೆಜ್ (ನಾ., ಕ್ರಿ. ಸಕ.) (ಮರದ ಅಥವಾ ಲೋಹದ) ಬೆಣೆ [Thin end of the w. ಬೆಣೆಯ ಚೂಪು; ಮುಂದಿನ ಮಹತ್ಪರಿಣಾಮವುಳ್ಳ ಸೂಕ್ಷ್ಮಪ್ರವೇಶ]; ಬೆಣೆಯಾಕಾರದ—ವಸ್ತು, ರಚನೆ [A w. of cake. The seats are disposed in wedges. W.-shaped ಬೆಣೆಯಾಕಾರದ; V ಆಕಾರದ. W.-tailed (ಹಕ್ಕಿಗಳ ವಿಷಯದಲ್ಲಿ) ಪುಕ್ಕದ ನಡುಗರಿಗಳು ಉದ್ದವಾಗಿರುವ: ಬೆಣೆಪುಕ್ಕದ]. (ಕ್ರಿ.) ಬೆಣೆ ಹೊಡೆದು ಸೀಳು (ಅರ. ಪ್ರ.); ಬೆಣೆ ಹೊಡೆ(ದು ಬಿಗಿಸು); (ಇತರ ವ್ಯಕ್ತಿಗಳ, ವಸ್ತುಗಳ, ನಡುವೆ) ಇರುಕು, ಇರುಕಿಕೊ, ತುರುಕು, ತುರುಕಿಕೊ (ಸಾ., *in* ಉಪ. ಜೊತೆ); ಬೆಣೆಯಂತೆ ಎರಡು ಪಕ್ಕಗಳನ್ನೂ ನೂಕಿಕೊಂಡು, ಒತ್ತಿಕೊಂಡು,—ಹೋಗು (*Off, away* ಉಪ. ಜೊತೆ). **Wédgewise** (ಕ್ರಿ. ವಿ.) ಬೆಣೆಯಾಕಾರದಲ್ಲಿ, ಬೆಣೆಯಂತೆ.

Wédgwood ವೆಡ್ಜ್‌ವುಡ್ (ನಾ.) ಅರೆ ಗಾಜಾಗಿಸಿದ ಒಂದು ಬಗೆಯ ಮಣ್ಣುಪಾತ್ರೆಗಳು (ನಿರ್ಮಾಪಕನ ಹೆಸರಿನಿಂದ)

Wédlock. **Wed** ನೋಡಿ.

Wédnesday ವೆನ್ಸ್‌ಡೆ(ಡಿ), ವೆಡ್‌ನ್ಸ್‌ಡೆ(ಡಿ) (ನಾ.) ಬುಧವಾರ [Ash W. (Ash² ನೋಡಿ)]

Wee ವೀ (ಗು.) ಕೊಂಚ, ಸ್ವಲ್ಪ, ಬಹು ಸಣ್ಣ, ಪುಟ್ಟ (ಮು., ಮಕ್ಕಳ ಮಾತು ಅಥವಾ ಸ್ಕಾ. ಪ್ರ.)

Weed ವೀಡ್ (ನಾ., ಕ್ರಿ.) ಕಳೆ, ಅಲುಬು [Ill weeds grow apace (ಎತ್ತರವಾಗಿ ಅಥವಾ ಬೇಗ ಬೇಗ ಬೆಳೆಯುತ್ತಿರುವ ಮಗುವಿನ ವಿಷಯದಲ್ಲಿ ಅಪಹಾಸ್ಯ ಪ್ರ.): ಕೆಡುಕಿನ ಕಳೆ ಬೇಗ ಬೆಳೆಯುತ್ತದೆ. W.-grown ಕಳೆ—ಬೆಳೆದ, ತುಂಬಿದ]; (ಬಳ. ಮಾ.) ಹೊಗೆಸುತ್ತು, ಚುಟ್ಟಾ [The (Indian, soothing,) w. ಹೊಗೆಸೊಪ್ಪು]; ಸಣಕಲೂ ಉದ್ದವೂ ಆದ ಕುದುರೆ ಅಥವಾ ಮನುಷ್ಯ: ಕದಿರುಕಡ್ಡಿ. (ಕ್ರಿ.) ಕಳೆ—ಕೀಳು, ಕಿತ್ತುಹಾಕು (ರೂಪ. ನಹ); ಕಳಪೆಗಳನ್ನು ತೆಗೆ(ದು ಹಾಕು). **Weéder** (ನಾ.) ಕಳೆ—ಕೀಳುವವನು, ಕೀಳುವ ಸಲಕರಣೆ. **Weédless** (ಗು.); **Weédy** (ಗು.); **Weédiness** (ನಾ.)

Weeds ವೀಡ್ಸ್ (ನಾ., ಬ. ವ.) ವಿಧವೆಯ ದುಃಖದ ಉಡುಪು, ವಿಯೋಗ ವಸ್ತ್ರ (=Widow's w.)

Week ವೀಕ್ (ನಾ.) ಏಳು ದಿನಗಳು, ವಾರ, ಸಪ್ತಾಹ [What day of the w. is it? ಇವೊತ್ತು ಯಾವ ವಾರ? Easter, Holy, Passion, w. (ಆಯಾ ಪದ ನೋಡಿ). W. of Sundays *or* weeks ಏಳು ವಾರಗಳು. Feast of weeks ಯೆಹೂದ್ಯರ ಸುಗ್ಗಿಯ ಹಬ್ಬ (=Pentecost). Knock one into the middle of next w. (Knock ನೋಡಿ). Today w. ಮುಂದಿನ ವಾರ ಈ ದಿನ. Tomorrow, yesterday, w. ನಾಳೆಗೆ, ನಿನ್ನೆಗೆ, ಒಂದು ವಾರ. Friday w. ಶುಕ್ರವಾರಕ್ಕೆ ಒಂದು ವಾರ. Have not seen you for weeks ಹಲವು ವಾರಗಳಿಂದ ನಿನ್ನನ್ನು ನೋಡಲೇ ಇಲ್ಲ; ವಾರಗಟ್ಟಳೆ ನೀನು ಕಣ್ಣಿಗೆ ಬಿದ್ದೇ ಇಲ್ಲ]. ಎರಡು ಭಾನುವಾರಗಳ ನಡುವಣ ಆರು ದಿನಗಳು [**W.-day** ಭಾನುವಾರ ಬಿಟ್ಟು ಉಳಿದ ಯಾವುದಾದರೂ ವಾರದ ದಿನ. **W.-end** (ನಾ., ಕ್ರಿ. ಅಕ.) (ಭೇಟಿ, ವಿಹಾರ, ಮೊ. ಗಳಿಗಾಗಿ ಹೋಗುವ) ಭಾನುವಾರ ಪೂರ್ತಿ ಮತ್ತು ಶನಿವಾರ ಸೋಮವಾರಗಳ ಕೊಂಚ ಭಾಗ: ವಾರಾಂತ. (ಕ್ರಿ.) ವಾರಾಂತ ಭೇಟಿಗೆ, ವಿಹಾರಕ್ಕೆ, —ಹೋಗು. **W.-ender** ಹೀಗೆ ಹೋಗುವವನು; ವಾರಾಂತ ವಿಹಾರಿ, ವಾರಾಂತಿಗ]. **Weékly** (ಗು., ಕ್ರಿ. ವಿ., ನಾ.) ವಾರಕ್ಕೊಮ್ಮೆ, ವಾರ ವಾರ (—ನಡೆಯುವ, ಹೊರಡುವ); ಒಂದು ವಾರ ಪೂರ್ತಿ—ಬರುವ, ನಡೆಯುವ; (ಒಂದು) ವಾರದ. (ನಾ.) ವಾರ ಪತ್ರಿಕೆ.

Ween ವೀನ್ (ಕ್ರಿ. ಸಕ.) (ಕಾವ್ಯ) ಅಭಿಪ್ರಾಯಪಡು, ಎಣಿಸು, ತಿಳಿ [ಸಾ., I w. (that)]; ನಂಬು, ನಿರೀಕ್ಷಿಸು.

Weep ವೀಪ್ (ಕ್ರಿ.; ಭೂತ., ಭೂ. ಕೃ. Wept ವೆಪ್ಟ್) ಕಣ್ಣೀರು—ಕರೆ, ಸುರಿಸು; ಅಳು, ಹಲುಬು, ಮರುಗು, ರೋದಿಸು, ಶೋಕಿಸು, ಪ್ರಲಾಪಮಾಡು (*For* ಉಪ. ಜೊತೆ); ಹನಿ(ಯುಡು), ಒಸರು, ತೊಟ್ಟಿಕ್ಕು, ಸ್ರವಿಸು (Weeping eczema ನೀರೂರುವ, ರಸಿಕೆ ಯೊಸರುವ, —ಇಸಬು. Weeping pipe ಬಿಟ್ಟು ಬಿಟ್ಟು ತೊಟ್ಟಿಕ್ಕುವ ನಾಳ: ಹನಿನಾಳ); [Weeping Cross (ಚರಿತ್ರೆ) ಪಶ್ಚಾತ್ತಾಪಿಗಳ ಪ್ರಾರ್ಥನೆಗಾಗಿ ದಾರಿಮಗ್ಗುಲಲ್ಲಿ ಏರ್ಪಡಿಸಿರುವ ಶಿಲುಬೆ: ಶೋಕ ಶಿಲುಬೆ (Come home by W. C. ತನ್ನ ವರ್ತನೆ, ಮೊ. ಕ್ಕಾಗಿ ಪಶ್ಚಾತ್ತಾಪಪಡು)]; (ಮರದ ವಿಷಯದಲ್ಲಿ) (ಮು., ವರ್ತಮಾನ ಕೃ. ನಲ್ಲಿ) ರೆಂಬೆಗಳು ಜೋತುಬಿದ್ದಿರು (Weeping birch, willow, etc.). [W. out ಅಳುತ್ತ, ಅತ್ತುಕೊಂಡು, —ಹೇಳು. W. oneself out (ಮನಸ್ಸು ಶಾಂತವಾಗುವವರೆಗೆ) ಪೂರ್ತಿ ಅತ್ತುಬಿಡು. W. away (ಕಾಲವನ್ನು) ಅತ್ತು ಅತ್ತು ಕಳೆ(ದುಬಿಡು)]. **Weéper** (ನಾ.) (ಕ್ರಿಯಾರ್ಥಗಳಲ್ಲಿ); ಅಂತ್ಯಕ್ರಿಯೆಯಲ್ಲಿ ಕೂಲಿ ತೆಗೆದುಕೊಂಡು ಅಳುವವನು: ಅಳು ಕೂಲಿ; ಅಂತ್ಯಕ್ರಿಯೆಯಲ್ಲಿ ಗಂಡಸರು ಹಾಕಿಕೊಳ್ಳುವ ಟೊಪ್ಪಿಗೆವಸ್ತ್ರ: ದುಃಖ ಪಟ್ಟಿ; ವಿಧವೆಯ ಕಪ್ಪು ಕ್ರೇಪು ಬಟ್ಟೆಯ ಬುರುಕಿ: ಶೋಕ ಬುರುಕಿ; (ಬ. ವ. ದಲ್ಲಿ) ವಿಧವೆಯ ಬಿಳಿಯ ಕೈಪಟ್ಟಿಗಳು.

Weéver ವೀವರ್ (ನಾ.) ಕೀವುಗಾಯವುಂಟುಮಾಡುವ ಹಲವು ಬಗೆಯ ಮೀನು (Dragon, Lesser, W. ಇದರ ಭೇದಗಳು)

Weévil ವೀವಿ(ವ್)ಲ್ (ನಾ.) ಕಾಳು, ಕಾಯಿ, ಹಣ್ಣು, ಎಲೆ, ಮೊ. ನ್ನು ತಿಂದು ಜೀವಿಸುವ, ತಲೆ ಉದ್ದವಾಗಿ ಚಾಚಿಕೊಂಡಿರುವ, ಹಲವು ಬಗೆಯ ಜೀರುಂಡೆ; ತುಂಬಿಟ್ಟ ದವಸಧಾನ್ಯಗಳನ್ನು ಹಾಳುಮಾಡುವ ಹುಳು; ವಾಡೆ ಹುಳು. **Weévilled** (ಗು.), **Weévilly** (ಗು.) (ಧಾನ್ಯ) ಹುಳು ತಿಂದು ಹಾಳಾದ, ಹುಳುಕ, ಹುಳು ಹಿಡಿದ.

Weft[1] ವೆಫ್ಟ್ (ನಾ.) (ನೆಯ್ಗೆಯ) ಅಡ್ಡ ಎಳೆ, ಹೊಕ್ಕು; (ಶಿಥಿಲ ಪ್ರ.) ನೆಯ್ಗೆ.

Weft[2] ವೆಫ್ಟ್ (ನಾ.). **Waft** ನೋಡಿ.

Weigh ವೆಯ್, ವೇ (ಕ್ರಿ.) (ತಕ್ಕಡಿ, ಮೊ. ಗಳಿಂದ) ತೂಕಮಾಡು, ತೂಗಿ ನೋಡು, ತೂಗು; [**Weighage** (ನಾ.) ಸರಕು ತೂಗಲು ಕೊಡುವ ತೆರಿಗೆ: ತೂಗು ತೆರಿಗೆ]; (ತೂಕ ನೋಡುವಂತೆ) ಕೈಯಲ್ಲಿ ತೂಗು, ತೂಗಿಸು [Meditatively weighed his stick in his hand ಧ್ಯಾನಪರನಾಗಿ ದೊಣ್ಣೆಯನ್ನು ಕೈಯಲ್ಲಿ ತೂಗಿಸುತ್ತಿದ್ದನು. W. out (ಒಂದು ಗೊತ್ತಾದ ತೂಕದಷ್ಟು) ತೂಗಿ ಕೊಡು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಗೊತ್ತಾದ ತೂಕ) ತೂಗಿತೂಗಿ—ಕೊಡು, ಹಂಚು (W. out 3 lb. of butter)]; ತನ್ನ ದೇಹದ ತೂಕ ನೋಡಿಕೊ, ಮೈ ತೂಗಿಕೊ [When did you w. last? ನೀನು ಹಿಂದೆ ಯಾವಾಗ ತೂಕ ನೋಡಿಕೊಂಡದ್ದು? W. out, in (ಜೂಜು ಕುದುರೆಯ ಸವಾರರನ್ನು) ಜೂಜಿಗೆ ಮೊದಲು, ತರುವಾಯ, ತೂಕಮಾಡು. W. in (ರೂಪ.) ಮುಖಹಾಕು, ಕಾಣಿಸಿಕೊ. W. in with (ವಾದ, ಮೊ. ನ್ನು) ಹೆಚ್ಚಿಗೆಯಾಗಿ, ತೂಕಕ್ಕಾಗಿ, —ಹೆಕ್ಕಳಿಕೆಯಿಂದ ಸೇರಿಸು]; (ಪರಸ್ಪರ ವೈಶಾಲ್ಯ, ಪ್ರಾಮುಖ್ಯತೆ, ಮೊ. ನ್ನು ನಿರ್ಧರಿಸುವುದಕ್ಕಾಗಿ, ಒಂದರ ಆಯ್ಕೆ ಅಥವಾ ನಿರಾಕರಣೆಗಾಗಿ) ಬೆಲೆ ಕಟ್ಟು, ತೂಗಿ ನೋಡು, ಪರಿಶೀಲಿಸು [W. pros & cons ಸಾಧಕ ಬಾಧಕಗಳನ್ನು—ತೂಗಿ ನೋಡು, ಪರಿಶೀಲಿಸು. W. with, against ಸರಿತೂಗು, ಸರಿದೂಗಿಸು. W. one's words ಮಾತುಗಳನ್ನು ತೂಕಮಾಡಿ ಪ್ರಯೋಗಿಸು. W. the claims, merits (of rival candidates) (ಸ್ಪರ್ಧಿ ಪ್ರತಿಸ್ಪರ್ಧಿಗಳ) ಹಕ್ಕನ್ನು, ಯೋಗ್ಯತೆಯನ್ನು, —ತೂಗಿ ನೋಡು, ಬೆಲೆಕಟ್ಟು]; ತೂಕ ವಿರು, ತೂಗು; (ರೂಪ.) ತೂಕವುಳ್ಳದ್ದಾಗಿರು, ಪ್ರಾಮುಖ್ಯತೆಯುಳ್ಳದ್ದಾಗಿರು, ಮಹತ್ವವುಳ್ಳದ್ದಾಗಿರು, ಪ್ರಭಾವವುಳ್ಳದ್ದಾಗಿರು; ಭಾರವಾಗಿರು (ರೂಪ. ಸಹ) [Weighs a ton, little, nothing. W. (heavy) upon ಭಾರವಾಗಿರು, ಒತ್ತು(ತ್ತಿರು). The point that weighs with me ನನಗೆ ಮಹತ್ವದ್ದಾಗಿ ತೋರುವ ಅಂಶ; ನಾನು ಬೆಲೆಕೊಡುವ ಅಂಶ]; ಕೆಳಕ್ಕೆ ಜಗ್ಗು, ಜಗ್ಗಿಸು, ಕುಗ್ಗು, ಕುಗ್ಗಿಸು (*Down* ಉಪ. ದೊಡನೆ); (ಪ್ರತಿ ತೂಕದ ವಿಷಯದಲ್ಲಿ) ಮೇಲಕ್ಕೆಬ್ಬಿಸು (*Up* ಉಪ. ದೊಡನೆ) [Bucket is weighed up by mass of iron at end of lever. Fruit weighs down branch ಹಣ್ಣು ರೆಂಬೆಯನ್ನು ಜಗ್ಗಿಸುತ್ತದೆ. One good argument weighs down six bad ones ಒಂದು ಒಳ್ಳೆಯ ವಾದ—ಆರು ಕೆಟ್ಟವನ್ನು ಎಬ್ಬಿಸಿಬಿಡುತ್ತದೆ. ಆರು ಕೆಟ್ಟವಕ್ಕಿಂತ ತೂಕವಾಗಿರುತ್ತದೆ. Weighed down with cares ಚಿಂತೆಗಳಿಂದ ಕುಗ್ಗಿ]; (ನೀರೊಳಗಿಂದ) ಮೇಲಕ್ಕೆತ್ತು [W. anchor ಲಂಗರು ಎತ್ತು, ಹೊರಡು. W. ship (ವಿರ. ಪ್ರ.) (ಮುಳುಗಿದ್ದ) ಹಡಗನ್ನು ಮೇಲಕ್ಕೆತ್ತು, ತೇಲಿಸು]. **W.-beam** (ಎಡೆಯಿಂದೆಡೆಗೆ ಸಾಗಿಸಲಾಗುವ, ಚೌಕಟ್ಟಿನಲ್ಲಿ ಅಳವಡಿಸಿರುವ) ಚಿಂತಾಲು, ತೋಲನದಂಡ, ದಂಡಿಗೆ ತಕ್ಕಡಿ. **W.-bridge** ತೂಗಬೇಕಾದ ಕುದುರೆಯನ್ನೂ, ಬಂಡಿಯನ್ನೂ ನಿಲ್ಲಿಸಲು ಅನುಕೂಲಿಸುವಂತೆ ಫಲಕ ಹಾಕಿದ ತೂಕದ ಸಲಕರಣೆ: ತೂಕದ, ತಕ್ಕಡಿ, —ಸೇತುವೆ. **W.-house** ಅಧಿಕೃತ ರೀತಿಯಲ್ಲಿ ಸರಕುಗಳನ್ನು ತೂಕಮಾಡುವ ಸ್ಥಳ: ತೂಕದ ಮನೆ. **W.-lock** ಹರಿಗೋಲುಗಳನ್ನು ತೂಕಮಾಡಲು ಅಳವಡಿಸಿರುವ (ಕಾಲುವೆ) ಕಟ್ಟೆ: ತೂಕದ (ಕಾಲುವೆ) ಕಟ್ಟೆ. **Weighing-machine** (ಸಾ., ದೊಡ್ಡ ಸಾಮಾನುಗಳನ್ನು ತೂಗುವ ಅಥವಾ ತೊಡಕು ರಚನೆಯು) ತುಲಾ, ತೋಲನ, —ಯಂತ್ರ.

Weigh (ನಾ.) ತೂಗುವುದು [Under w. = Under way (ಎಂಬುದಕ್ಕೆ ಅಪಭ್ರಂಶ ರೂಪ) (Way ನೋಡಿ)].

Weight ವೆಯ್ಟ್, ವೇಟ್ (ನಾ.) ಒಂದು ವಸ್ತು ಆಕರ್ಷಣ ಕೇಂದ್ರದ ಕಡೆಗೆ ಸೆಳೆಯಲ್ಪಡುವ ಬಲದ ಮೊತ್ತ: ಆಕರ್ಷಣಬಲ (The weights of the planets); (ಭೂಮಿಯ ವಸ್ತುಗಳ ವಿಷಯದಲ್ಲಿ) ಒಂದು ವಸ್ತು ಭೂಕೇಂದ್ರದ ಕಡೆಗೆ ಆಕರ್ಷಣವಾಗುವ ಬಲದ ಮೊತ್ತ: ಭೂಮ್ಯಾಕರ್ಷಣ ಬಲ; (ಪದಾರ್ಥದ ಗುಣವಾದ) ತೂಕ, ಭಾರ [Dead w. (Dead ನೋಡಿ). W. of metal ಹಡಗಿನ ಎಲ್ಲ ಫಿರಂಗಿಗಳೂ ಸೇರಿ ಒಂದು ಹೊಡೆತಕ್ಕೆ ಹೊಡೆಯಲಾಗುವ ಗುಂಡುಗಳ ತೂಕ, ಮೊತ್ತ: (ಒಂದು ನಲದ) ಬಟ್ಟು ಗುಂಡಿನ ತೂಕ]; ಮೈತೂಕ (What is your w.?); ತೂಕದ ಪದ್ಧತಿ [Avoirdupois, Troy, w. (ಆಯಾ ಪದ ನೋಡಿ)]; ಭಾರ (ವಸ್ತು) (Keep papers down with a w. Must not lift weights); ತೂಕದ ಬಟ್ಟು (Where is the ounce w.?); ಹೊತ್ತ ಭಾರ, ಹೊರೆ (The pillars have a great w. to bear); ಜವಾಬ್ದಾರಿ, ಚಿಂತೆ, ಮೊ. ಗಳ ಭಾರ; ಪ್ರಾಮುಖ್ಯತೆ, ಗುರುತ್ವ, ಮಹತ್ವ, ಪ್ರಭಾವ (Men of w. ತೂಕದ ಮನುಷ್ಯರು, ಪ್ರಭಾವಶಾಲಿಗಳು. The w. of evidence is against him ಸಾಕ್ಷ್ಯಗಳ ತೂಕ ಅವನಿಗೆ ವಿರೋಧವಾಗಿದೆ). **Weíghtless** (ಗು.); **Weíghty** (ಗು.) ಭಾರವಾದ, ವಜನಾದ, ತೂಕವಾದ (ರೂಪ. ಸಹ); ಪ್ರಾಮುಖ್ಯತೆಯುಳ್ಳ, ಮಹತ್ವವುಳ್ಳ, ಗುರುತರವಾದ, ಭಾರಿ; ತೂಕಮಾಡಿದ, ಚೆನ್ನಾಗಿ ಪರ್ಯಾಲೋಚಿಸಿದ, ಗಣ್ಯವಾದ; ಪ್ರಭಾವಯುಕ್ತ, ಅಧಿಕೃತ. **Weíghtily** (ಕ್ರಿ. ವಿ.); **Weíghtiness** (ನಾ.)

Weight (ಕ್ರಿ. ಸಕ.) ಭಾರ, ತೂಕ, —ಕಟ್ಟು, ಆಗಿಸು; ಭಾರ, ತೂಕ, —ಕಟ್ಟಿ ಜಗ್ಗಿಸು; ಭಾರ, ಹೊರೆ, —ಮಾಡು, ಹೊರಿಸು (ರೂಪ. ಸಹ); (ಬಟ್ಟೆಯನ್ನು ಖನಿಜ, ಮೊ. ಗಳಿಂದ ಸಂಸ್ಕರಿಸಿ) ಮಂದಮಾಡು, ಗಡುಸುಮಾಡು.

Weir, Wear ವಿಯರ್ (ನಾ.) (ನದಿಗೆ ಅಡ್ಡವಾಗಿ ಹಾಕುವ) ಅಣೆ (ಕಟ್ಟು), (ಅಡ್ಡ)ಕಟ್ಟೆ, ಒಡ್ಡು; ಮೀನು ಹಿಡಿಯುವುದಕ್ಕೆ ಬೋನಾಗಿ ನದಿಯಲ್ಲಿಟ್ಟ ದಸಿಗಳ ಆವರಣ: ಮೀನುಕಟ್ಟೆ.

Weird ವಿಯರ್ಡ್ (ನಾ., ಗು.) ಅದೃಷ್ಟ, ವಿಧಿ (ಮು., ಸ್ಕಾ. ಪ್ರ.) [Dree one's w. (Dree ನೋಡಿ)]. (ಗು.) ಅದೃಷ್ಟದ, ವಿಧಿಯ (The w. sisters ವಿಧಿದೇವಿಯರು; ಮಾಂತ್ರವಾದಿನಿಯರು); ಅಮಾನುಷ, ಅಲೌಕಿಕ; (ಬಳ. ಮಾ.) ವಿಚಿತ್ರ, ವಿಲಕ್ಷಣ, ಅರ್ಥವಾಗದ, ವಿಜಾತೀಯ. **Weírdly** (ಕ್ರಿ. ವಿ.); **Weírdness** (ನಾ.)

Weísmannism ವೈಸ್‌ಮನಿಸ್ಂ (ನಾ.) ಸ್ವಾರ್ಜಿತ ಗುಣಗಳು ವಂಶಪಾರಂಪರ್ಯವಾಗಿ ಸಾಗುವುದಿಲ್ಲವೆಂದು ಹೇಳುವ ಒಂದು ಅನುವಂಶೀಯತಾ ವಾದ: ವೈಸ್ಮನ್ ವಾದ.

Wélcome ವೆಲ್ಕಂ (ಭಾವ. ಅವ್ಯ., ನಾ., ಕ್ರಿ. ಸಕ., ಗು.) ಸ್ವಾಗತ! ಸುಖಾಗಮನ! (W. home!). (ನಾ.) ಸ್ವಾಗತ, ಸುಖಾಗಮನ (ಬಯಸುವುದು); ಆದರಾತಿಥ್ಯ, ಸತ್ಕಾರ; (ದಾನ, ಮೊ. ಗಳ) ಸಂತೋಷ ಸ್ವೀಕಾರ; [Bid one w. ಒಬ್ಬನಿಗೆ ಸ್ವಾಗತ ಹೇಳು. Wear out *or* outstay one's w. (Wear ನೋಡಿ). Give warm w. ಸಂತೋಷದಿಂದ, ಆದರದಿಂದ, —ಸ್ವಾಗತಿಸು; ತೀವ್ರವಾಗಿ ಪ್ರತಿಭಟಿಸು]. (ಕ್ರಿ.) ಸ್ವಾಗತಿಸು, ಸುಖಾಗಮನ ಬಯಸು; (ಅತಿಥಿ, ಸುದ್ದಿ, ಅವಕಾಶ, ಮೊ. ನ್ನು) ಸಂತೋಷದಿಂದ—ಬರಮಾಡಿಕೊ, ಸ್ವೀಕರಿಸು; ಸತ್ಕರಿಸು, ಆದರಿಸು. (ಗು.) ಸ್ವಾಗತಿಸಿದ; ಆದರದಿಂದ, ಸಂತೋಷದಿಂದ, —ಬರಮಾಡಿಕೊಂಡ; ಇಷ್ಟ, ಪ್ರಿಯ (A w. guest, gift, sight. W. as snow in harvest ಬೇಡದ, ಅನಿಷ್ಟ. Make one w. ಸಂತೋಷದಿಂದ—ಆದರಿಸು, ಸತ್ಕರಿಸು; ನಿಸ್ಸಂಕೋಚವಾಗಿರುವಂತೆ ಆದರಾತಿಥ್ಯ ಮಾಡು); (ಆಖ್ಯಾತ ಪ್ರ. ದಲ್ಲಿ ಮಾತ್ರ) (ಮಾಡಲು) ನಿರಾತಂಕ ಸ್ವಾತಂತ್ರ್ಯವುಳ್ಳ, ಧಾರಾಳದ [You are w. to take what steps you please ಧಾರಾಳವಾಗಿ ನಿನಗೆ ಇಷ್ಟಬಂದ ಕಾರ್ಯಕ್ರಮ ನಡಸಬಹುದು. Any one is w. to my share ನನ್ನ ಪಾಲನ್ನು ಯಾರು ಬೇಕಾದರೂ ತೆಗೆದುಕೊಳ್ಳಬಹುದು. You are w., (ಅಧ್ಯಾಹಾರ ಪ್ರ.) w. ಧಾರಾಳವಾಗಿ, ಅಗತ್ಯವಾಗಿ, ಬೇಷಕ್]. **Wélcomeness** (ನಾ.)

Weld[1] ವೆಲ್ಡ್ (ನಾ.) ಹಳದಿ ಬಣ್ಣ ದೊರೆಯುವ ಒಂದು ಕಳೆ ಗಿಡ.

Weld[2] ವೆಲ್ಡ್ (ಕ್ರಿ., ನಾ.) (ಭಾಗಗಳನ್ನು, ಮು., ಲೋಹಗಳನ್ನು) ಬೆಸೆ(ದುಮಾಡು); (ಲೋಹ) ಬೆಸೆದುಕೊ; (ರೂಪ.) (ಅಲಂಭಿಗರು ಭಾಗಗಳು, ವಾದಗಳು, ಮೊ. ನ್ನು) ಏಕವಾಗಿರುವಂತೆ ಚೆನ್ನಾಗಿ ಹೊಂದಿಸು, ಬೆಸೆ (*Into* ಉಪ. ದೊಡನೆ). (ನಾ.) ಬೆಸುಗೆ. **Wéldable** (ಗು.); **Weldabílity** (ನಾ.)

Wélfare ವೆಲ್ಫೇ(ಅ)ರ್ (ನಾ.) ನೆಮ್ಮದಿ, (ಯೋಗ)ಕ್ಷೇಮ, ಸೌಖ್ಯ, ಕುಶಲ, ಹಿತ. W.-work ಜನಹಿತ ಕಾರ್ಯ, ಕ್ಷೇಮಾಭಿವೃದ್ಧಿ ಕಾರ್ಯ.

Welk ವೆಲ್ಕ್ (ಕ್ರಿ. ಅಕ.) (ಪ್ರಾಚೀ. ಪ್ರ.) (ಹೂವು, ಸಸ್ಯ) ಬಾಡು.

Wélkin ವೆಲ್ಕಿನ್ (ನಾ.) (ಕಾವ್ಯ) ಅಂತರಿಕ್ಷ, ಬಾನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Well[1] ವೆಲ್ (ನಾ.) (ಕಾವ್ಯ ಅಥವಾ ಪ್ರಾಚೀ. ಪ್ರ.) ಬುಗ್ಗೆ, ಊಟೆ, ಒರತೆ, ಚಿಲುಮೆ ; (ರೂಪ.) ಮೂಲ, ಉತ್ಪತ್ತಿಸ್ಥಾನ (W. of English undefiled ಚಾಸರ್ ಕವಿ) ; (ನೀರು, ಎಣ್ಣೆ, ಮೊ. ಗಳ) ಬಾವಿ [Artesian w. (Artesian ನೋಡಿ)] ; ಬಾವಿಯಂತೆ ಆವರಣವುಳ್ಳ ಸ್ಥಳ ; (ಮನೆಯ ಮಧ್ಯದಲ್ಲಿ ನೆಲದಿಂದ ಮಾಳಿಗೆಯವರೆಗೆ) ಸುರುಳಿ ಮೆಟ್ಟಿಲಸಾಲನ್ನೊಳಕೊಂಡ ಸ್ಥಳ: ಮೆಟ್ಟಿಲ ತೊಟ್ಟಿ (=**W. staircase**) ; ಮೆಟ್ಟಿಲಸಾಲುಗಳಿಂದ ಸುತ್ತುವರಿದ ತೆರಪು : ಮೆಟ್ಟಿಲಗಂಡಿ (=**W.-hole**) ; ಕಟ್ಟಡದಲ್ಲಿ ಗಾಳಿ ಬೆಳಕು ಗಳಿಗಾಗಿ ತೆರಪಾಗಿ ಬಿಟ್ಟಿರುವ ಸ್ಥಳ: ಬೆಳಕುಗಂಡಿ ; ನ್ಯಾಯ ಸ್ಥಾನದಲ್ಲಿ ನ್ಯಾಯವಾದಿ, ಮೊ. ರಿಗಾಗಿ ಕಟಕಟೆ ಹಾಕಿರುವ ಸ್ಥಳ: ಕಟಕಟೆ, ಕಟ್ಟೆ ; ದೌತಿಯ ಮಣೆಯಲ್ಲಿ ಮಸಿಹಾಕುವ ಕುಳಿ : ಮಸಿ ದಾನಿ, ದೌತಿ (ಕುಳಿ). **W.-deck** ಹಡಗಿನ ಪ್ರಧಾನ ಅಟ್ಟದಮೇಲೆ ಸುತ್ತ ಕಟಕಟೆ ಹಾಕಿರುವ ಸ್ಥಳ: ಕಟ್ಟೆಯಟ್ಟ. **W.-dish** ರಸ ಕೂಡಿಕೊಳ್ಳಲು ಅನುಕೂಲನುವಂತೆ ಮಧ್ಯದಲ್ಲಿ ಕುಳಿಯಿರುವ ತಟ್ಟೆ; ಕುಳಿತಟ್ಟೆ. **W.-head** ಮೂಲ, ಉತ್ಪತ್ತಿಸ್ಥಾನ, ಸೆಲೆ. **W.-room** ಖನಿಜ ಜಲದ (ಸರಬರಾಯಿ) ಕೋಣೆ. **W.-sinker** ಬಾವಿ ತೋಡು ವವನು. **W.-spring** = W.-head.

Well (ಕ್ರಿ. ಅಕ.) ಬುಗ್ಗೆ(ಯಂತೆ), ಚಿಲುಮೆ(ಯಂತೆ), —ಚಿಮ್ಮು, ಉಕ್ಕು ; (ನೀರು, ಮೊ. ಗಳ ವಿಷಯದಲ್ಲಿ) ಉಕ್ಕಿ ಹರಿ (*Up*, *out*, *forth* ಉಪ. ದೊಡನೆ)

Well[2] ವೆಲ್ (ಕ್ರಿ. ವಿ., ಗು., ತರರೂಪ Better ಬೆಟರ್, ತಮರೂಪ Best ಬೆಸ್ಟ್ ; ನಾ., ಭಾವ. ಅವ್ಯ.) ಸರಿಯಾಗಿ, ನೆಟ್ಟಗೆ, ಠೀಕಾಗಿ, ಮೇಲಾಗಿ, ಚೆನ್ನಾಗಿ, ತಕ್ಕಮಟ್ಟಿಗೆ, ಸಮರ್ಪಕವಾಗಿ, ಸಾಂಗವಾಗಿ [A w. situated house ಅನುಕೂಲವಾದ, ಒಳ್ಳೆಯ, —ಸ್ಥಳದಲ್ಲಿರುವ ಮನೆ. W. begun is half done ಸರಿಯಾಗಿ ಆರಂಭವಾದರೆ ಅರ್ಧ ಆದಂತೆಯೆ. W. done! ಶಾಭಾಸ್! ಭಲೆ! W. met! (ನೋಡಬೇಕೆಂದಿದ್ದವನನ್ನು ನೋಡಿದಾಗ ಹೇಳುವ ಮಾತು) : ಚೆನ್ನಾಗಿ ಸಂಧಿಸಿದೆವು! Come off w. ಅದೃಷ್ಟಶಾಲಿಯಾಗಿರು, ಜಯಶೀಲ ನಾಗು, ಮೇಲ್ಮೆ ಪಡೆ. I wish I was w. out of it ಏನೂ ತೊಂದರೆಯಿಲ್ಲದೆ ಪಾರಾದರೆ ಸಾಕಾಗಿದೆ. You did w., it was w. done of you, to come ನೀನು ಬಂದದ್ದು ಒಳ್ಳೆಯದಾಯಿತು. Is w. up in the list ಅವನು ಪಟ್ಟಿಯಲ್ಲಿ ಮೇಲುಗಡೆಯಿದ್ದಾನೆ. Is w. on in life ಅಭಿವೃದ್ಧಿಸ್ಥಿತಿಯಲ್ಲಿದ್ದಾನೆ. Is w. past forty ಧಾರಾಳವಾಗಿ ನಲವತ್ತು (ವರ್ಷ) ಆಗಿದೆ. As w[1]. ಜೊತೆಗೆ, ಮತ್ತು, ಅಲ್ಲದೆ (But he is a Christian as w.; He gave me clothes as w. as food). Treat person w. ಚೆನ್ನಾಗಿ ಕಾಣು, ಸೌಜನ್ಯದಿಂದ ವರ್ತಿಸು. Think *or* speak w. of ಸದಭಿಪ್ರಾಯ ಪಡು, ಪ್ರಶಂಸಿಸು. Stand w. with one ಒಬ್ಬನ ಅನುಗ್ರಹಕ್ಕೆ, ಮೆಚ್ಚಿಕೆಗೆ, ಪಾತ್ರನಾಗಿರು] ; ಪ್ರಾಯಶಃ, ಬಹುಶಃ, ಸುಲಭವಾಗಿ (Can w. manage it ಅದನ್ನು ಸುಲಭವಾಗಿ ನಿರ್ವಹಿಸಬಹುದು. It may w. be that—. —ಪ್ರಾಯಶಃ ಇರಬಹುದು. You might as w. throw your money into the sea as lend it to him ಅವನಿಗೆ ಸಾಲ ಕೊಡುವುದೂ ಒಂದೇ, ಹಣವನ್ನು ಸಮುದ್ರಕ್ಕೆ ಎಸೆಯುವುದೂ ಒಂದೇ. As w. be hanged for a sheep as a lamb (Lamb ನೋಡಿ). That is just as w. ಅದೂ ಸರಿಯೆ. You might as w. (ಮಕ್ಕಳ ಮಾತನಲ್ಲ) —ರೆ ಒಳ್ಳೆಯದು] . (ಕ್ರಿಯಾರ್ಥಕ ಗುಣವಾಚಕ) ನಿಮ್ಮ ದಿಯಾಗಿ, ಕ್ಷೇಮವಾಗಿ, ಆರೋಗ್ಯ ವಾಗಿ (Quite w., thank you ನಿಮ್ಮದಿಯಾಗಿದ್ದೇನೆ, ಚೆನ್ನಾ ಗಿದ್ದೇನೆ,— ನಮಸ್ಕಾರ) ; ಒಳ್ಳೆಯ ಸ್ಥಿತಿಯಲ್ಲಿ(ಯ), ಸಮರ್ಪಕ, ಸರಿ ಯಾಗಿರುವ, ಚೆನ್ನಾಗಿರುವ [All's w. ಎಲ್ಲಾ ಸರಿಯಾಗಿದೆ, ಸಮರ್ಪಕ ವಾಗಿದೆ. It is all very w. (ಅಸಮಾಧಾನ, ಅನುಕೂಲಗಳ ನಿರಾಕರಣೆ, ವಾದ ತಿರಸ್ಕಾರ, ಮೊ. ನ್ನು ಸೂಚಿಸುವಲ್ಲಿ ವ್ಯಂಗ್ಯ ಪ್ರ.) ಎಲ್ಲ ಸರಿಯಾಗಿದೆ ; ಪರವಾಯಿಲ್ಲ. It is w. with him ಅವನು ಚೆನ್ನಾಗಿ, ನೆಟ್ಟಗೆ, ಇದ್ದಾನೆ. It would be w. to inquire ವಿಚಾರಿಸುವುದು—ಮೇಲು, ಒಳ್ಳೆಯದು. W. enough ತಕ್ಕಮಟ್ಟಿಗೆ ಚೆನ್ನಾಗಿ(ರುವ). As w[2]. ಅನುಚಿತವಲ್ಲದ, ಸರಿಯಾದ (It may be as w. to explain ವಿವರಿಸಬಹುದೆಂದು ತೋರುತ್ತದೆ). W. & good ಸರಿ, ಒಳ್ಳೆಯದು, ಆಗಬಹುದು (If you choose to take my advice, w. & good). Very w. (Very ನೋಡಿ)] ; (ವಿಶೇಷಣ ಗುಣವಾಚಕ) (ವಿರ. ಪ್ರ.) ಆರೋಗ್ಯವಾಗಿರುವ, ಸ್ವಸ್ಥ (A w. man should not be dawdling in bed ಆರೋಗ್ಯ ವಂತನಾದ ಮನುಷ್ಯ ಹಾಸಿಗೆಯಲ್ಲಿ ಸೋಮಾರಿಯಾಗಿ ಬಿದ್ದಿರಬಾರದು. The w. are impatient of the sick ಆರೋಗ್ಯವಂತರಿಗೆ ರೋಗಿಗಳನ್ನು ಕಂಡರೆ ತಾಳ್ಮೆಯಿಲ್ಲ). (ನಾ.) ಒಳ್ಳೆಯದು, ಸರಿಯಾದ್ದು, ಸಮರ್ಪಕವಾದ್ದು (I wish him w. ಅವನಿಗೆ ಒಳ್ಳೆಯದು ಕೋರು ತ್ತೇನೆ. Let w. alone ಸರಿಯಾಗಿರುವುದನ್ನು ಹಾಗೆಯೇ ಬಿಡು ; ಸರಿಯಾಗಿರುವುದರ ತಂಟೆಗೆ ಹೋಗಬೇಡ). (ಭಾವ. ಅವ್ಯ.) (ಆಶ್ಚರ್ಯ, ಕಷ್ಟಪರಿಹಾರ, ರಿಯಾಯಿತಿ, ಬಿಟ್ಟ ಮಾತನ್ನು ಮತ್ತೆ ಆರಂಭಿಸುವುದು, ಯಾವು ದಾದರೂ ವಿಷಯವನ್ನು ಕೊಂಚಮಟ್ಟಿಗೆ ಒಪ್ಪಿಕೊಳ್ಳುವುದು, ನಿರೀಕ್ಷೆ, ದಿಕ್ಕು ತೋಚದ ಸ್ಥಿತಿ—ಇವೇ ಮೊ. ಸಂದರ್ಭಗಳಲ್ಲಿ ಪ್ರ.) ಸರಿ, ಆಗಲಿ (W., who would have thought of it? ಸರಿ, ಹಾಗೆ ಆದೀತೆಂದು ಯಾರಿಗೆ ತಾನೆ ತೋಚುತ್ತಿತ್ತು? W., here we are at last. W., come if you like ಸರಿ, ಇಷ್ಟವಿದ್ದರೆ ಬಾ. W., who was it? W., but what about Jones? ಸರಿ, ಆದರೆ ಜೋನ್ಸ್ ವಿಚಾರ ಏನು? W., it can't be helped ಸರಿ, ಏನು ಮಾಡುವುದಕ್ಕೂ ಆಗುವುದಿಲ್ಲ, ಗತ್ಯಂತರವಿಲ್ಲ)

Well- (ಸ. ಪೂ. ಪ.) ಸರಿ—, ಒಳ್ಳೆಯ—, ಸು—, ಸತ್(ದ್)—. **W.-advised** (ಕಾರ್ಯದ ವಿಷಯದಲ್ಲಿ) ವಿವೇಕದ, ಯುಕ್ತ, ವಿವೇಚನೆ ಯಿಂದ ಕೂಡಿದ. **W.-aimed** ಸರಿಯಾಗಿ ಗುರಿಯಿಟ್ಟ. **W.-appointed** (ಮು., ದಂಡಯಾತ್ರೆ, ನೌಕಾಪಡೆ, ಮೊ. ಗಳ ವಿಷಯದಲ್ಲಿ) ಸುಸಜ್ಜಿತ. **W.-armed** ಚೆನ್ನಾಗಿ ಶಸ್ತ್ರ ಸಜ್ಜಿತವಾದ. **W. attested** ಸರಿಯಾಗಿ ಸಾಕ್ಷಿ ಹಾಕಿರುವ, ಸುಪ್ರಮಾಣೀಕೃತ. **W. authenticated** ಸದಧಿಕೃತ. **W.-balanced** ಸಮತೂಕದ ; (ಮು., ಮನಸ್ಸಿನ ವಿಷಯದಲ್ಲಿ) ಸಮಭಾವದ, ವಿವೇಕವುಳ್ಳ, ಸಮಾಹಿತ; **W.-behaved** ಸದ್ವರ್ತನೆಯ, ಒಳ್ಳೆಯ ನಡೆವಳಿಕೆಯ. **W.-being** (ಯೋಗ) ಕ್ಷೇಮ, ಹಿತ. **W. beloved** ಸುಪ್ರಿಯ, ಪರಮಪ್ರಿಯ. **W.-born** ಸದ್ವಂಶದ, ಕುಲೀನ. **W.-bred** ಸುಶಿಕ್ಷಿತ, ಸಂಭಾವಿತ, ಶಿಷ್ಟ ; (ಕುದುರೆ, ಮೊ. ಗಳ ವಿಷಯದಲ್ಲಿ) ಒಳ್ಳೆಯ, ಶುದ್ಧ, —ಜಾತಿಯ, ತಳಿಯ. **W. chosen** (ಮು., ಪದಗಳ ವಿಷಯದಲ್ಲಿ) ಸರಿಯಾಗಿ, ಚೆನ್ನಾಗಿ, —ಆಯ್ದ ; ಸಂದರ್ಭೋಚಿತ. **W.-conditioned** ಒಳ್ಳೆಯ ಮನೋಧರ್ಮದ, ಸಮಾಹಿತ ಮನಸ್ಕ ; ಸುಸ್ಥಿತಿಯ. **W.-conducted** ಸದ್ವರ್ತನೆಯ ; ಸುವ್ಯವಸ್ಥಿತ, ಚೆನ್ನಾಗಿ ನಿರ್ವಹಿಸಿದ. **W.-connected** ಒಳ್ಳೆಯ (ರಕ್ತ) ಸಂಬಂಧವುಳ್ಳ, ಕುಲೀನ ಸಂಬಂಧ ವುಳ್ಳ. **W. contented** ಒಳ್ಳೆಯ ತೃಪ್ತಿಯುಳ್ಳ. **W. contested** ಒಳ್ಳೆಯ ಸ್ಪರ್ಧೆಯಿಂದ ಕೂಡಿದ, ಪೋಟಾಪೋಟಿಯ. **W. defined** ಸುನಿರ್ದಿಷ್ಟ, ಸುಸ್ಪಷ್ಟ. **W. dined** ಚೆನ್ನಾಗಿ ಭೋಜನಮಾಡಿದ. **W.-directed** (ಮು., ಏಟು, ಗುಂಡು, ಮೊ. ಗಳ ವಿಷಯದಲ್ಲಿ) ಚೆನ್ನಾಗಿ, ಸರಿಯಾಗಿ, —ಗುರಿಯಿಟ್ಟ. **W.-disposed** ಸುಮುಖವಾದ, ಅನು ಕೂಲವಾದ (*To*, *towards* ಉಪ. ದೊಡನೆ). **W.-doer** ಸದಾಚಾರಿ, ಸನ್ಮಾರ್ಗಿ. **W.-doing** ಸದಾಚಾರ, ಸದ್ವರ್ತನೆ. **W.-done** (ಮಾಂಸದ ವಿಷಯದಲ್ಲಿ) ಚೆನ್ನಾಗಿ—ಅಟ್ಟ, ಬೆಂದ. **W. dressed** ಒಳ್ಳೆಯ, ಚೆನ್ನಾಗಿ,—ಉಡುಪು ಹಾಕಿದ. **W. earned** ಸರಿಯಾದ ಮಾರ್ಗದಿಂದ ಸಂಪಾದಿಸಿದ, ಸುಪ್ರಾಪ್ತ. **W. educated** ಸುಶಿಕ್ಷಿತ, ಒಳ್ಳೆಯ ವಿದ್ಯಾವಂತನಾದ. **W.-favoured** ಸುಲಕ್ಷಣದ, ಸುಂದರ. **W. fed** ಚೆನ್ನಾಗಿ ತಿಂಡಿಹಾಕಿದ, ಸುಪುಷ್ಟ. **W.-found** = W.-appointed. **W.-founded** ಸರಿಯಾದ ಆಧಾರವುಳ್ಳ, ಸಾಧಾರವಾದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

W. furnished ಸುಸಜ್ಜಿತ. **W.-graced** ಆಕರ್ಷಕ, ಮನೋಹರ (—ಗುಣಗಳುಳ್ಳ). **W. grounded** = W. founded ; (ಮೂಲ ವಿಷಯಗಳಲ್ಲಿ) ಭದ್ರವಾದ —ಶಿಕ್ಷಣವುಳ್ಳ, ತಳಹದಿಯುಳ್ಳ. **W. informed** ಒಳ್ಳೆಯ ಜ್ಞಾನಸಾಮಗ್ರಿ ಸಂಗ್ರಹಿಸಿಕೊಂಡಿರುವ, ಬಹುಶ್ರುತ. **W. intentioned** (ಪ್ರಯತ್ನ, ಮೊ. ವು) ಸದುದ್ದೇಶದ, ಸದ್ಭಾವನೆಯ. **W.-judged** ಚೆನ್ನಾಗಿ —ವಿವೇಚಿಸಿದ, ಗುರಿಯಿಟ್ಟ; ಸುವಿಚಾರಿತ. **W.-knit** ಚೆನ್ನಾಗಿ ಹೆಣೆದ, ದಟ್ಟವಾದ ; (ಮು., ವ್ಯಕ್ತಿ, ಮೈಕಟ್ಟು, ಮೊ. ಗಳ ವಿಷಯದಲ್ಲಿ) ಕಟ್ಟುಮಸ್ತಾದ, ಸುದೃಢ. **W.-known** ಚೆನ್ನಾಗಿ ತಿಳಿದ, ಸುವಿದಿತ. **W.-liking** ಹೃಷ್ಟಪುಷ್ಟವಾಗಿ ಕಾಣುವ (ಸಾ., Fat & w.-l.). **W.-looking** ಚೆನ್ನಾಗಿ ಕಾಣುವ, ಸುಂದರ. **W. made** (ಮು., ಸಮಸೂತ್ರದ ಮೈಕಟ್ಟಿನ ವಿಷಯದಲ್ಲಿ) ಅಂಗಸೌಷ್ಠವವುಳ್ಳ ; ಸುರೂಪಿತ. **W.-mannered** ಒಳ್ಳೆಯ ನಡತೆಯ, ಶಿಷ್ಟ ವರ್ತನೆಯ. **W.-marked** ಸುಲಭವಾಗಿ ಗುರುತಿಸಲಾಗುವ, ಸುಸ್ಪಷ್ಟ. **W.-meaning**, **W.-meant** = W.-intentioned. **W.-nigh** (ಅಲಂ.) ಹತ್ತಿರ ಹತ್ತಿರ, ಬಹುಮಟ್ಟಿಗೆ. **W. off** ಸಮೃದ್ಧಿಯಲ್ಲಿ, ಸುಸ್ಥಿತಿಯಲ್ಲಿ, ಅನುಕೂಲಸ್ಥನಾಗಿ (Does not know when he is w. off. W.-off people ಅನುಕೂಲಸ್ಥರು, ಉಪಪನ್ನರು). **W.-oiled** (ರೂಪ.) (ಮಾತಿನ ವಿಷಯದಲ್ಲಿ) ಬೆಣ್ಣೆಯಂಥ, ಸ್ನೇಹನಯದ. **W. ordered** ಓರಣವಾದ, ಒಪ್ಪವಾದ, ಸುವ್ಯವಸ್ಥಿತ. **W. pleased** ಸುತೃಪ್ತ. **W.-pleasing ; W.-proportioned** ಸುಪ್ರಮಾಣದ. **W.-read** ಚೆನ್ನಾಗಿ, ಹೆಚ್ಚಾಗಿ, —ಓದಿರುವ ; ವ್ಯುತ್ಪನ್ನ. **W.-regulated** ಹತೋಟಿಯಲ್ಲಿ, ಶಿಸ್ತಿನಲ್ಲಿ, —ಇರುವ; ಸುನಿಯಂತ್ರಿತ. **W.-reputed** ಸುಪ್ರಸಿದ್ಧ, ಒಳ್ಳೆಯ ಹೆಸರುವಾಸಿಯಾದ. **W.-rounded** ತುಂಬಿಕೊಂಡು ಅಂದವಾಗಿರುವ, (ದುಂಡು) ದುಂಡಾಗಿರುವ. **W.-seeming** ಮೇಲಕ್ಕೆ ಚೆನ್ನಾಗಿರುವ. **W.-seen** (ಪ್ರಾಚೀ. ಪ್ರ.) ನಿಪುಣನಾದ, ತೇರಿದ (*In* ಉಪ. ದೊಡನೆ). **W. set** ಚೆನ್ನಾಗಿ ಕೂರಿಸಿದ, ಕೇವಣಿಸಿದ ; ಭದ್ರವಾದ, ಒಳ್ಳೆಯ ಮೈಕಟ್ಟುಳ್ಳ, ಅಂಗಸೌಷ್ಠವವುಳ್ಳ (= W. set up). **W.-sifted** (ಮು., ವಿಷಯ, ಸಾಕ್ಷ್ಯ, ಮೊ. ಗಳ ವಿಷಯದಲ್ಲಿ) ಚೆನ್ನಾಗಿ—ಶೋಧಿಸಿದ, ಪರಿಶೀಲಿಸಿದ. **W.-spent** (ಮು., ಹಣದ ಅಥವಾ ಕಾಲದ ವಿಷಯದಲ್ಲಿ) ಸರಿಯಾಗಿ, ಲಾಭಕರವಾಗಿ, —ವ್ಯಯಮಾಡಿದ ; ಸದ್ವಿನಿಯೋಗ ಮಾಡಿದ. **W.-spoken** ನಯಮಾತಿನ, ನವುರು ಮಾತಿನ. **W. timbered** (ಭೂಮಿಯ ವಿಷಯದಲ್ಲಿ) ಚೆನ್ನಾಗಿ ಮರಗಳು ಬೆಳೆದಿರುವ ; (ಮನೆ, ಗಣಿ, ಮೊ. ಗಳ ವಿಷಯದಲ್ಲಿ) ಚೆನ್ನಾಗಿ ಮರ ಹದ್ದಿಸಿ ಭದ್ರಪಡಿಸಿದ. **W.-timed** ಸಮಯಕ್ಕೆ, ಕಾಲಕ್ಕೆ,—ಸರಿಯಾಗಿ ಮಾಡಿದ ; ಸಮಯೋಚಿತ. **W. trained** ಚೆನ್ನಾಗಿ ತರಪೇತಾದ, ಸುಶಿಕ್ಷಿತ. **W.-tried** ಚೆನ್ನಾಗಿ ಪರೀಕ್ಷಿಸಿದ, ನುರಿತ, ಪಳಗಿದ. **W.-trod-(den)** ತುಳಿದು ತುಳಿದು ಸಮೆದ; ಬಳಕೆಯಾದ, ರೂಢಿಬದ್ಧರುವ. **W. tuned** ಸರಿಯಾಗಿ ಶ್ರುತಿಮಾಡಿದ. **W. turned** (ಮಾತು, ಪದ್ಯ, ಮೊ. ಗಳ ವಿಷಯದಲ್ಲಿ) ಚೆನ್ನಾಗಿ —ಹೇಳಿದ, ರೂಪಿಸಿದ ; ಹೊಂದಿಕೆಯಾದ, ಮಾಟವಾದ, ಸೂಕ್ತ. **W.-wisher** ಹಿತಚಿಂತಕ, ಹಿತೈಷಿ. **W.-worn** (ಮು.) (ಬಳಸಿ ಬಳಸಿ) ಹಳಸಲಾದ, ಚರ್ವಿತಚರ್ವಣವಾದ.

Wélladaý, -awaý ವೆಲಡೇ, —ವೇ (ಭಾವ. ಅವ್ಯ.) (ಪ್ರಾಚೀ. ಪ್ರ., ಅಥವಾ ಹಾಸ್ಯ ಪ್ರ.) ಅಯ್ಯೋ ! ಅಕಟ ! ಹಾಯ್ !

Wéllingtons ವೆಲಿಂಗ್‌ಟನ್ಸ್ (ನಾ., ಬ. ವ.) ಮಂಡಿಯುವರೆಗೆ ಬರುವ ಉದ್ದ ಮೋಜ.

Wélsh[1] ವೆಲ್ಷ್ (ಗು., ನಾ.) ವೇಲ್ಸಿನ (ಜನ, ಭಾಷೆ) (W. mutton ವೇಲ್ಸಿನ ಸಣ್ಣ ಬೆಟ್ಟದ ಕುರಿಯ ಮಾಂಸ. W. rabbit *or* rarebit ಹುರಿದ ಚೀಸ್ಸಿನ ಭಕ್ಷ್ಯ). **Wélshman** (ನಾ.) ವೇಲ್ಸಿನವನು. **Wélshwoman** (ನಾ., ಸ್ತ್ರೀ.)

Welsh[2], **Welch** ವೆಲ್ಷ್ (ಕ್ರಿ.) (ಕುದುರೆ ಜೂಜಿನಲ್ಲಿ ಪಣ ಗೆದ್ದವನಿಗೆ) ಹಣಕೊಡದೆ ಪರಾರಿಯಾಗು; ದಗಾಕೊಡು. **Wélsher, Wélcher** (ನಾ.)

Welt[1] ವೆಲ್ಟ್ (ನಾ., ಕ್ರಿ. ಸಕ.) ಮೋಜದ ಅಟ್ಟೆಗೂ ಮೇಲುಚರ್ಮಕ್ಕೂ ನಡುವೆ ಅರುಗಿನ ಸುತ್ತ ಹಾಕಿ ಅವೆರಡನ್ನೂ ಸೇರಿಸಿ ಹೊಲಿಯುವ ಚರ್ಮಪಟ್ಟಿ : ಅರುಗುಪಟ್ಟಿ ; (ಬಟ್ಟೆ, ಮೊ. ಗಳ ಅಂಚಿಗೆ ಹಾಕುವ) ಕರೆಪಟ್ಟಿ; ಅಂಚು, ಕರೆ ; ಬಾಸುಂಡೆ. (ಕ್ರಿ.) ಅರುಗುಪಟ್ಟಿ, ಕರೆಪಟ್ಟಿ, —ಹಾಕು ; ಅಂಚು, ಕರೆ, —ಕಟ್ಟು ; ಬಾಸುಂಡೆ ಎಬ್ಬಿಸು ; ತೀಡು, ಬಾರಿಸು.

Welt[2] (G) ವೆಲ್ಟ್ (ನಾ.) ಪ್ರಪಂಚ, ಜಗತ್ತು (ಎಂಬುದಕ್ಕೆ ಜರ್ಮನ್ ಮಾತು). W.-politik ಭಾರಿ ಪ್ರಮಾಣದಲ್ಲಿ, ಪ್ರಪಂಚ, —ರಾಜಕೀಯ.

Wélter[1] ವೆಲ್ಟರ್ (ಕ್ರಿ. ಅಕ., ನಾ.) (ರಕ್ತ, ಮೊ. ಗಳಲ್ಲಿ) ಬಿದ್ದು ಒದ್ದಾಡು, ಹೊರಳಾಡು, ತೊಯ್ದುಹೋಗಿರು, ಮುಳುಗಿರು. (ನಾ.) (ಹಲವು ಮತಗಳು, ನೀತಿಗಳು, ಪಾಪಗಳು, ಮೊ. ಗಳ) ಗೊಂದಲ, ಅಲ್ಲಕಲ್ಲೋಲ, ಹೊಯ್ದಾಟ, ಸಂಕ್ಷೋಭೆ.

Wélter[2] ವೆಲ್ಟರ್ (ನಾ.) (ಈಗ ವಿರ. ಪ್ರ.) ಭಾರವಾದ ಸವಾರ ; = W.-race ; [(ವಿಶೇಷಣ ಪ್ರ.) W. race, cup, stakes, handicap, etc. ಭಾರಿ ಸವಾರರಿಗಾಗಿ ಏರ್ಪಡಿಸಿದ ಕುದುರೆ ಜೂಜು : ಭಾರಿ ಸವಾರ ಜೂಜು. W.-weight ಭಾರೀ ಸವಾರ ; (ವಯಸ್ಸಿಗೆ ತಕ್ಕ ಭಾರ ಹೊರಿಸುವುದರ ಜೊತೆಗೆ ಹೆಚ್ಚಿಗೆ ಹೊರಿಸಿದ) ಅಧಿಕ ಭಾರ] ; (ಬಳ. ಮಾ.) ಬಲವಾದ, ಭಾರಿ, —ಹೊಡೆತ ; ಭಾರಿ—ಮನುಷ್ಯ, ವಸ್ತು.

Wen ವೆನ್ (ನಾ.) (ಹೆಚ್ಚು ಕಡಮೆ ಕೊನೆಯವರೆಗೆ ನಿಂತುಹೋಗುವ, ಮಂಡೆಯಮೇಲೆ ಅಥವಾ ದೇಹದ ಇತರ ಭಾಗಗಳಲ್ಲಿ ಆಗುವ, ಕೆಡುಕು ಮಾಡದ) ಗುಬಟು, ವಾಳ ; ಗಳಗಂಡ. (ರೂಪ.) ವಿಪರೀತ ಸಾಂದ್ರವಾದ ಅಥವಾ ವಿಪರೀತ ದೊಡ್ಡದಾದ ಪಟ್ಟಣ (The great w. ಲಂಡನ್ ಪಟ್ಟಣ)

Wench ವೆನ್ಷ್, ವೆಂಚ್ (ನಾ., ಕ್ರಿ. ಅಕ.) ಹುಡುಗಿ, ಹೆಣ್ಣು (ಮು., ಹಳ್ಳಿಗರ ಅಥವಾ ಸೇವಕರ ವಿಷಯದಲ್ಲಿ ; ಅಥವಾ ಹಾಸ್ಯ ಪ್ರ., ಬಳ. ಮಾ.) (A strapping, buxom, w. ಬೆಳೆದ, ಬಲತ, —ಹೆಣ್ಣು) ; (ಪ್ರಾಚೀ. ಪ್ರ.) ಸೂಳೆ, ಗುಡಿಸೆಟ್ಟಿ. (ಕ್ರಿ.) (ಗಂಡಸರ ವಿಷಯದಲ್ಲಿ) ವ್ಯಭಿಚಾರಮಾಡು. **Wéncher** (ನಾ.) (ಪ್ರಾಚೀ. ಪ್ರ.) (ಹಳ್ಳಿಯ ಹುಡುಗಿಯರೊಡನೆ) ವ್ಯಭಿಚಾರ ಮಾಡುವವನು.

Wend[1] ವೆಂಡ್ (ಕ್ರಿ.) (ಒಂದು ಕಡೆಗೆ) ತಿರುಗು, ಹೋಗು, ನಡೆ (To w. one's way)

Wend[2] ವೆಂಡ್ (ನಾ.) ಹಿಂದೆ ಉ. ಜರ್ಮನಿಯಲ್ಲಿ ಪ್ರಸರಿಸಿದ್ದ, ಈಗ ಪೂ. ಸ್ಯಾಕ್ಸೊನಿಯಲ್ಲಿ ವಾಸಿಸುವ, ಒಂದು ಸ್ಲಾವಾನಿಕ್ ಕುಲದವನು. **Wéndic** (ಗು.), **Wéndish** (ಗು.) ವೆಂಡ್ ಜನರ (ಭಾಷೆ), ವೆಂಡ್ ಭಾಷೆ.

Went ವೆಂಟ್. Go ಧಾತುವಿನ ಭೂತ ರೂಪ.

Wéntletrap ವೆಂಟ್‌ಲ್‌ಟ್ರ್ಯಾಪ್ (ನಾ.) ಹಲವು ಸುತ್ತಿನ ಸುರುಳಿ ಚಿಪ್ಪಿನ ಚಿಪ್ಪುಮೀನು.

Wept ವೆಪ್ಟ್. Weep ಧಾತುವಿನ ಭೂತ. ಮತ್ತು ಭೂ. ಕೃ.

Were. **Be** ನೋಡಿ.

Wer(é)wolf ವಿಯರ್(ವರ್)ವುಲ್ಫ್ (ನಾ.; ಬ. ವ., -ves) ತೋಳನಾಗಿ ಮಾರ್ಪಟ್ಟ ಮನುಷ್ಯ ; ತೋಳಮನುಷ್ಯ.

Wert ವರ್ಟ್. **Be** ನೋಡಿ.

Wésleyan ವೆಸ್(ಸ್)ಲಿಯನ್, **Wesléyan** ವೆಸ್ಲೀಯನ್ (ಗು., ನಾ.) ಜಾನ್ ವೆಸ್ಲಿ ಎಂಬಾತನು ಸ್ಥಾಪಿಸಿದ ಒಂದು ಕ್ರೈಸ್ತ ಪಂಥದ (ವನು): ವೆಸ್ಲಿಯನ್ ಪಂಥದವನು. **Wesléyanism** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

West ವೆಸ್ಟ್ (ಕ್ರಿ. ವಿ., ನಾ., ಗು.; ಸಂಕ್ಷಿಪ್ತ: W.) ಪಡುವಣ, ಪಶ್ಚಿಮದ—ಕಡೆ(ಗೆ); ಪಡುವಲಾಗಿ, ಪಶ್ಚಿಮಾಭಿಮುಖವಾಗಿ, ಪಶ್ಚಿಮದಲ್ಲಿ [W. by north *or* south ಪಶ್ಚಿಮದಿಂದ ವಾಯವ್ಯದ ಅಥವಾ ನೈರುತ್ಯದ ಕಡೆಗೆ ೧೧¼ ಓಲಿ. W. of —ರ ಪಶ್ಚಿಮಕ್ಕೆ; ಇನ್ನೂ ಪಶ್ಚಿಮಕ್ಕೆ. Due w. ನೇರವಾಗಿ ಪಶ್ಚಿಮದ ಕಡೆ(ಗೆ). Lies east & w. ಪೂರ್ವ ಪಶ್ಚಿಮವಾಗಿ ಹಬ್ಬಿದೆ. Go w. (ಅಸಂ.) ಸಾಯಿ. Gone w. (ಅಸಂ.) ಸತ್ತು. **W.-north-w., W.-south-w.** (ಕ್ರಿ. ವಿ., ನಾ., ಗು.) ಪಶ್ಚಿಮಕ್ಕೂ ವಾಯವ್ಯಕ್ಕೂ, ಪಶ್ಚಿಮಕ್ಕೂ ನೈರುತ್ಯಕ್ಕೂ, —ನಡುವಣ ದಿಕ್ಕು (**W.-north-westerly** ಕ್ರಿ. ವಿ.; **W.-north-western** ಗು.; **W.-north-westwardly** ಕ್ರಿ. ವಿ.)]. (ನಾ.) ಪಡುವಲು, ಪಶ್ಚಿಮ; ಪಶ್ಚಿಮ—ದೇಶ, ಪ್ರಾಂತ, ಭಾಗ [Empire of the W. = Western Empire (Western ನೋಡಿ)]; ಪಶ್ಚಿಮಾನಿಲ, ಪಡುವಣ ಗಾಳಿ. (ಗು.) ಪಡುವಲ (ಕಡೆಯ), ಪಶ್ಚಿಮದ(ಲ್ಲಿರುವ), ಪಾಶ್ಚಾತ್ಯ, (ಗಾಳಿಯ ವಿಷಯದಲ್ಲಿ) ಪಶ್ಚಿಮದಿಂದ ಬೀಸುವ [**W. central** (ಸಂಕ್ಷಿಪ್ತ: W.C.) ಲಂಡನ್ನಿನ ಒಂದು ಅಂಚೆಯ ಪ್ರಾಂತ. **W.-country** ಪಶ್ಚಿಮ ಇಂಗ್ಲೆಂಡಿನ (ಕಡೆಯ, ಲಕ್ಷಣವುಳ್ಳ). **W.-countryman, -countrywoman** ಪಶ್ಚಿಮ ಇಂಗ್ಲೆಂಡಿನವನು(ಳು). **W. End** ಲಂಡನ್ನಿನ ಪಶ್ಚಿಮ ಭಾಗ (ಶ್ರೀಮಂತರ ವಸತಿ). **W.-end** ಶ್ರೀಮಂತರ ವಸತಿಯ(ಲ್ಲಿಯ). **W. Indies** ಮೆಕ್ಸಿಕೊ ಕೊಲ್ಲಿಯ ಮುಖದಲ್ಲಿರುವ ಒಂದು ದ್ವೀಪಸ್ತೋಮ (**W. Indian** ಗು.). **W. longitude** ಪಶ್ಚಿಮ ರೇಖಾಂಶ]. **Wéstering** (ಗು., ವರ್ತಮಾನ ಕೃ.) (ನಾ., ಸೂರ್ಯನ ವಿಷಯದಲ್ಲಿ) ಪಶ್ಚಿಮಕ್ಕೆ ಇಳಿಯುತ್ತಿರುವ, ಪಶ್ಚಿಮಾಭಿಮುಖವಾದ. **Wésterly** (ಗು., ಕ್ರಿ. ವಿ.) = Western (ವಿರ. ಪ್ರ.); ಪಶ್ಚಿಮದ ಕಡೆಗೆ, ಪಶ್ಚಿಮಾಭಿಮುಖ(ವಾಗಿ); ಪಶ್ಚಿಮದಿಂದ ಬೀಸುವ. **Wéstern** (ಗು., ನಾ.) ಪಡುವಣ (ದೇಶದವನು); ಪಶ್ಚಿಮದ(ಲ್ಲಿರುವ); ಪಾಶ್ಚಾತ್ಯ [W. Empire (ರೋಮ್ ನಗರ ರಾಜಧಾನಿಯಾಗಿದ್ದ) ಪುರಾತನ ರೋಮನ್ ಪಶ್ಚಿಮ ಸಾಮ್ರಾಜ್ಯ: ಪಾಶ್ಚಾತ್ಯ ಸಾಮ್ರಾಜ್ಯ. W. *or* Latin Church ೬ನೆಯ ಶ. ಮಾ. ದಲ್ಲಿ ಒಡಕುಂಟಾದಮೇಲೆ ರೋಮಿನ ಪೋಪ್ ಗುರುವನ್ನೇ ಅಂಗೀಕರಿಸಿಕೊಂಡು ಬಂದ ಕ್ರೈಸ್ತ ಪಂಗಡ: ಪಾಶ್ಚಾತ್ಯ, ಲ್ಯಾಟಿನ್, —ಚರ್ಚು (Greek ಕೆಳಗೆ Greek Church ನೋಡಿ)]; (ಗಾಳಿ) ಪಶ್ಚಿಮದಿಂದ ಬೀಸುವ, ಪಡುವಲ (ವಿರ. ಪ್ರ.). **Wésterner** (ನಾ.); **Wésternmost** (ಗು.); **Wésting** (ನಾ.) (ಮು., ನೌಕಾಯಾನದಲ್ಲಿ) ಪಶ್ಚಿಮದ ಕಡೆ—ಸಾಗುವುದು, ತಿರುಗುವುದು. **Wéstward** (ಕ್ರಿ. ವಿ., ನಾ., ಗು.); **Wéstwards** (ಕ್ರಿ. ವಿ., ನಾ.)

Wéstminster ವೆಸ್(ಟ್)ಮಿನ್‌ಸ್ಟರ್ (ನಾ.) (ಲಂಡನ್ನಿನ ಒಂದು ಭಾಗವಾದ) ವೆಸ್ಟ್‌ಮಿನ್‌ಸ್ಟರ್ ಉಪನಗರ [W. Abbey (ರೂಪ.) (ವೆಸ್ಟ್‌ಮಿನ್‌ಸ್ಟರ್ ಮಠದ ಸಮಾಧಿಭೂಮಿಯಲ್ಲಿ ಗೋರಿಯಾಗಲರ್ಹವಾದ) ಘನ, ದಿವ್ಯ, —ಮರಣ]; ಪಾರ್ಲಿಮೆಂಟ್ (ಭವನ); ರಾಜಕೀಯ—ರಂಗ, ಕ್ಷೇತ್ರ. ವೆಸ್ಟ್‌ಮಿನ್‌ಸ್ಟರ್ ವಿದ್ಯಾಶಾಲೆಯವನು (ಸಂತ ಪೀಟರ್ಸ್ ಕಾಲೇಜಿನವನು)

Wet ವೆಟ್ (ಗು., ಕ್ರಿ. ಸಕ., ನಾ.) (ನೀರಿನಲ್ಲ ಅಥವಾ ಇತರ ದ್ರವದಲ್ಲಿ) ನೆನೆದ, ತೊಯ್ದ, ನೆನಸಿದ, ತೊಯಿಸಿದ, ಒದ್ದೆಯಾದ, ತೇವವಾದ, ಆರ್ದ್ರ, ಸಿಕ್ತ (Am w. to the skin ಮೈ ಬಟ್ಟೆಯೆಲ್ಲಾ ಪೂರ್ತಿ ನೆನೆದುಹೋಗಿದ್ದೇನೆ, ಒದ್ದೆಮುದ್ದೆಯಾಗಿದ್ದೇನೆ); (ಅಮೆ. ಸಂ.) ಮದ್ಯಸೇವನೆಮಾಡುವ, ಮದ್ಯ ಮಾರಾಟವನ್ನು ಒಪ್ಪುವ; ಕುಡಿತದಿಂದ ತೂರಾಡುವ; [**W. bargain, blanket, bob**[4] (ಆಯಾ ಪದ ನೋಡಿ). **W. bulb** (ವಾಯುವಿನ ಆರ್ದ್ರತೆಯನ್ನು ಅಳೆಯುವ ಜೋಡಿ ಶಾಖಮಾಪಕದಲ್ಲಿ) ತೇವಬುರುಡೆ (Dry ಕೆಳಗೆ D.-bulb ನೋಡಿ). **W.-crops** ತರಿ—ಫಸಲು, ಬೆಳೆ. **W. dock** (Dock[4] ನೋಡಿ). **W. pack** ಜ್ವರದ ತಾಪವಿಳಿಸಲು ಒಣಹೊದಿಕೆ, ಮೊ. ಗಳಲ್ಲಿಟ್ಟು ದೇಹಕ್ಕೆ ಸುತ್ತಿದ ತೇವಬಟ್ಟೆ: ತೇವ, ಒದ್ದೆ, —ಕಟ್ಟು. **W. land** ತರಿ ಜಮೀನು. **W. plate** (ಛಾಯಾಚಿತ್ರಣದಲ್ಲಿ) ಒದ್ದೆಯಾಗಿರುವಾಗ ಪ್ರಕಾಶಕ್ಕೆ ತೆರೆದಿಡುವ ಕಲೋಡಿಯನ್ ಫಲಕ: ತೇವ ಫಲಕ]; ಮಳೆಯ (W. day, weather); [**W.-nurse** (ನಾ.) ಮೊಲೆಯೂಡಿಸುವ ದಾದಿ (Nurse ನೋಡಿ). (ಕ್ರಿ. ಸಕ.) (ಮತ್ತೊಬ್ಬರ ಮಗುವಿಗೆ) ಮೊಲೆಯೂಡಿಸು(ವ ದಾದಿಯಾಗಿರು)]. (ಕ್ರಿ.) ಒದ್ದೆ, ಆರ್ದ್ರ, —ಮಾಡು; ತೋಯಿಸು (W. one's bargain ವ್ಯಾಪಾರವನ್ನು ಮದ್ಯಪಾನದಿಂದ ಮುಕ್ತಾಯವಾಡು. W. one's whistle ಗಂಟಲು ಒದ್ದೆಮಾಡಿಕೊ, ಕುಡಿ). (ನಾ.) ತೇವ, ಆರ್ದ್ರತೆ; ನೆನಸುವ ದ್ರವ; ನೆನೆ ನೀರು; ಮಳೆಯ ಹವಾ; (ಅಸಂ.) ಕುಡಿತ, ಪಾನ; (ಅಮೆ. ಸಂ.) ಮದ್ಯ(ಪಾನ) ವಾದಿ. **Wétting** (ನಾ.); **Wéttish** (ಗು.); **Wétness** (ನಾ.)

Wéther ವೆದರ್ (ನಾ.) ಹಿಡಮಾಡಿದ ಟಗರು.

Wey ವೇ (ನಾ.) (ಆಯಾ ಸರಕುಗಳನ್ನು ಅನುಸರಿಸಿ ೨ರಿಂದ ೩ ಹಂಡ್ರೆಡ್ ವೇಟಿನ) ಒಂದು ತೂಕದ ಮಾನ.

Whack ಹ್ವ್ಯಾಕ್ (ಕ್ರಿ. ಸಕ., ನಾ.) (ದೊಣ್ಣೆ, ಮೊ. ಗಳಿಂದ) ಬಲವಾಗಿ ಹೊಡೆ, ಚಚ್ಚು, ಸದೆಬಡಿ; (ಅಸಂ.) ಹಂಚಿಕೊ, ಪಾಲು ಮಾಡಿಕೊ. (ನಾ.) ಬಲವಾದ ಹೊಡೆತ, ಬಡಿತ; (ಅಸಂ.) ಪಾಲು, ಭಾಗ (Have had my w. of pleasure ನನ್ನ ಪಾಲಿನ ಸುಖಭೋಗ ಅನುಭವಿಸಿದ್ದಾಯಿತು). **Whácker** (ನಾ.) (ಪ್ರಾಂ. ಪ್ರ.) ಭಾರಿ ಹೊಡೆತ; ಭಾರಿ—ವಸ್ತು, ಮನುಷ್ಯ. **Whácking** (ಗು.) ವಿಪರೀತ ದೊಡ್ಡ, ಭಾರಿ.

Whale ಹ್ವೇಲ್, ವ್ಹೇಲ್ (ನಾ., ಕ್ರಿ. ಅಕ.) ತಿಮಿ, ತಿಮಿಂಗಿಲ [Arctic, bowhead, Greenland, right, w. ಉತ್ಕೃಷ್ಟ ದಂತ ದೊರೆಯುವ ತಿಮಿಂಗಿಲ ಜಾತಿ. Sperm-w. (Sperm ನೋಡಿ). Bull w. ಗಂಡು ತಿಮಿಂಗಿಲ. Cow w. ಹೆಣ್ಣು—. Very like a w. ಕಾಗೆ ಗುಬ್ಬಿ ಕಥೆಯಂತೆ, ಏನೆಂದರೆ ಅದೆ (ಅಸಂಬದ್ಧ ವಾಕ್ಯಕ್ಕೆ ವ್ಯಂಗ್ಯಪೂರ್ವಕ ಸಮ್ಮತಿಕೊಡುವಲ್ಲಿ ಪ್ರ.)]. **W.-boat** (ಎರಡು ತುದಿಗಳೂ ಚೂಪಾಗಿರುವ) ತಿಮಿಂಗಿಲ ಬೇಟೆ ದೋಣಿ; (ಇಂಥ ಯಾವುದಾದರೂ) ಇಮ್ಮೂತಿ ದೋಣಿ. **Whálebone** ಕೆಲವು ತಿಮಿಂಗಿಲಗಳ ಮೇಲ್ದವಡೆಯಲ್ಲಿ ತೆಳು ಫಲಕಗಳಾಗಿ ದೊರೆಯುವ, ಸ್ಥಿತಿಸ್ಥಾಪಕಶಕ್ತಿಯುಳ್ಳ ಕೊಂಬು ಪದಾರ್ಥ: ತಿಮಿಂಗಿಲ ದಂತ, ತಿಮ್ಯಸ್ಥಿ. **W.-calf** ತಿಮಿಂಗಿಲ ಮರಿ. **W.-fin** ತಿಮಿ(ಂಗಿಲ) ದಂತ (ವ್ಯಾಪಾರದ ಹೆಸರು). **W.-line** ತಿಮಿ(ಂಗಿಲ) ಬೇಟೆಯಲ್ಲಿ ಉಪಯೋಗಿಸುವ ಎರಡು ಅಂಗುಲ ಸುತ್ತಳತೆಯ ಉತ್ತಮ ತರದ ಹಗ್ಗ: ತಿಮಿ(ಂಗಿಲ) ಹಗ್ಗ. **Whaleman** ತಿಮಿ(ಂಗಿಲ) ಬೇಟೆಗಾರ. **W.-oil** ತಿಮಿಂಗಿಲದಿಂದ ತೆಗೆದ ಕೊಬ್ಬೆಣ್ಣೆ: ತಿಮಿಯೆಣ್ಣೆ, ತಿಮಿಂಗಿಲೆಣ್ಣೆ.

Whale (ಕ್ರಿ. ಅಕ.) ತಿಮಿಂಗಿಲ—ಬೇಟೆಯಾಡು, ಹಿಡಿ. **Wháler** (ನಾ.) ತಿಮಿಂಗಿಲ—ಬೇಟೆಗಾರ, ಬೇಟೆ ಹಡಗು. Whaling-gun ಈಟಿಗಾಳವನ್ನು ತಿಮಿಂಗಿಲಕ್ಕೆ ಹಾರಿಸುವ ಬಂದೂಕು, ಫಿರಂಗಿ: ತಿಮಿಂಗಿಲ—ಫಿರಂಗಿ, ಬಂದೂಕು. Whaling-master ತಿಮಿಂಗಿಲ ಬೇಟೆ ಹಡಗಿನ ಯಜಮಾನ.

Whang ಹ್ವ್ಯಾಂಗ್ (ಕ್ರಿ., ನಾ.) ಢಂ ಎಂದು ಗಟ್ಟಿಯಾಗಿ, ಬಲವಾಗಿ, —ಹೊಡೆ, ಬಡಿ; (ತಮಟೆ, ಮೊ. ಗಳ ವಿಷಯದಲ್ಲಿ) ಹೀಗೆ ಶಬ್ದಮಾಡು, ಢಂ ಢಂ ಎನ್ನು. (ನಾ.) ಢಂ ಎಂಬ—ಹೊಡೆತ, ಸದ್ದು.

Wharf ವಾರ್ಫ್, ಹ್ವಾರ್ಫ್ (ನಾ.; ಬ. ವ. -fs, -ves; ಕ್ರಿ. ಸಕ.) ಸಾಮಾನು ತುಂಬುವುದು, ಇಳಿಸುವುದು, ಮೊ. ಕ್ಕಾಗಿ ಹಡಗನ್ನು ಪಕ್ಕದಲ್ಲಿ ನಿಲ್ಲಿಸಲು ಅನುಕೂಲಿಸುವ ಮರದ ಅಥವಾ ಕಲ್ಲಿನ ಜಗಲಿ: ಹಡಗು ಜಗಲಿ; ಸರಕುಕಟ್ಟೆ, ಬಂದರುಕಟ್ಟೆ. (ಕ್ರಿ.) ಹಡಗನ್ನು ಕಟ್ಟೆಗೆ—ತರು, ನಿಲ್ಲಿಸು; ಕಟ್ಟೆಯ ಮೇಲೆ ಸರಕು ತುಂಬು, ಭರ್ತಿ ಮಾಡು. **Whárfage** (ನಾ.) ಕಟ್ಟೆ ಸುಂಕ; ಕಟ್ಟೆಗಳು; ಕಟ್ಟೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಕೂಲ. ಕಟ್ಟೆಯಲ್ಲಿ ಸರಕು ಶೇಖರಣೆ. **Whárfinger** (—ಜರ್) (ನಾ.) ಕಟ್ಟೆ ಯಜಮಾನ.

What ಹ್ವಾಟ್ (ಗು., ಸ. ನಾ.) ಯಾವ, ಎಂಥ, ಎಷ್ಟು, ಏನು (ಅನಿರ್ದಿಷ್ಟ ಸಂಖ್ಯೆಯಿಂದ ಆಯುವಂಥ ಸಂದರ್ಭದಲ್ಲಿ What ಪದವೂ, ನಿರ್ದಿಷ್ಟ ಸಂಖ್ಯೆಯಿಂದ ಆಯುವಂಥ ಸಂದರ್ಭದಲ್ಲಿ Which ಪದವೂ ಪ್ರ.) [W. books have you read? ಯಾವ ಪುಸ್ತಕಗಳನ್ನು ಓದಿದ್ದೀಯೆ? W. men, money, abilities, has he? ಅವನಿಗೆ ಎಷ್ಟು ಜನ ಇದ್ದಾರೆ, ಎಷ್ಟು ಹಣ ಇದೆ, ಎಂಥ ಶಕ್ತಿಗಳು ಇವೆ? W. news? ಏನು ಸಮಾಚಾರ? W. matter? ಅದರಿಂದೇನು? W. good, use, is it? ಅದರಿಂದೇನು —ಪ್ರಯೋಜನ, ಫಲ? W. manner of man is he? ಅವನು ಎಂಥ ಮನುಷ್ಯ? (ಆಶ್ಚರ್ಯ ಸೂಚಕವಾಗಿ) W. a fool you are! ನೀನು ಎಂಥ ಮುಟ್ಠಾಳ! W. impudence! ಏನು ಧಾರ್ಷ್ಟ್ಯ! Will give you w. help is possible ಸಾಧ್ಯವಿರುವಷ್ಟು ಸಹಾಯ ಕೊಡುತ್ತೇನೆ. W. time (ಪ್ರಾಚೀ. ಪ್ರ.) ಯಾವಾಗ, —ಆಗ. W. will people say? (ಮರ್ಯಾದೆಯಿಲ್ಲ ಎಂಬರ್ಥದಲ್ಲಿ): ಜನ ಏನೆಂದಾರು? W.? ಏನೆಂದೆ? W. ho! (ಭೇಟಿಯಾದಾಗ ಹೇಳುವ ಮಾತು): ಹೋ! ಏನ್ರಿ! W. is he? ಅವನ ಉದ್ಯೋಗ ಏನು? ಅವನಿಗೆ ಏನು ಕೆಲಸ? W. if we were to try? ಪ್ರಯತ್ನಪಟ್ಟು ನೋಡೋಣ, ಏನಾದೀತು? W. for? ಏಕೆ? ಏತಕ್ಕಾಗಿ? W. though we are poor? ನಾವು ಬಡವರಾಗಿದ್ದರೇನಂತೆ? W. next? (ಅದಕ್ಕಿಂತಲೂ ಅವಿವೇಕ ಇನ್ನಿರಲಾರದು ಎಂಬರ್ಥದಲ್ಲಿ): ಮುಂದೇನು? W. of *or* about—? —ರ ಸಮಾಚಾರ ಏನು? —ರ ವಿಷಯ ಏನು ಮಾಡೋಣ? Well, w. of it? ಒಳ್ಳೆಯದು, ಅದರಿಂದೇನಾದ ಹಾಗಾಯಿತು? W. is he the better for it ಅದರಿಂದ ಅವನಿಗೆ ಹೇಗೆ, ಎಷ್ಟು ಮಟ್ಟಿಗೆ, ಮೇಲಾಯಿತು? W. not ಇನ್ನೂ ಎಷ್ಟೋ ಇಂಥವು; ಯಾವುದಾದರೂ. **What-not** (ನಾ.) ಪುಸ್ತಕಗಳು, ವಿಚಿತ್ರ ವಸ್ತುಗಳು ಮತ್ತು ಇತರ ಅಂಥ ಸಾಮಾನುಗಳು ಮುಂತಾದುವನ್ನು ಪ್ರದರ್ಶಿಸಿ ಇಡಲು ಉಪಯೋಗಿಸುವ, ಬಡುಗಳುಳ್ಳ ಒಂದು ಪೀಠೋಪಕರಣ: ಚಿಲ್ಲರೆ ವಸ್ತುಗಳ ಕಪಾಟು. W. like is he? (ಪ್ರಾಂ. ಪ್ರ.) ಅವನು ಎಂಥವನು? (=W. is he like?). W.-d'ye-call-him, her, it, 'em, w.'s-his (-her, -its)-name (ಮರೆತುಹೋದ ಹೆಸರಿಗೆ ಬದಲಾಗಿ ಪ್ರ.): ಅದು ಏನೋ ಹೇಳುತ್ತಾರಲ್ಲ, ಅದು, ಅವನು, ಅವಳು, ಅವರು. (ಪ್ರಶ್ನೆಯ ಅಥವಾ ಸೂಚನೆಯ ತರುವಾಯ eh ಎಂಬ ಪದಕ್ಕೆ ಬದಲಾಗಿ ಪ್ರ.): Have you heard the latest, w.? ನೀನು ಇತ್ತೀಚಿನ ಸುದ್ದಿ ಕೇಳಿದೆಯಾ, ಏನು? Come along, w. ಬಾ, ಏನು. I know w. ನನಗೆ ಹೊಳೆಯಿತು. I'll tell you w. ಏನೆಂದು, ಸರಿಯಾದ್ದನ್ನು, ನಿಜವಾಗಿ ನಡೆದದ್ದನ್ನು, —(ನಿನಗೆ) ಹೇಳುತ್ತೇನೆ. Know w.'s w. (ಕೆಟ್ಟದು, ಒಳ್ಳೆಯದು ಎಂಬ) ವಿಷಯ ಜ್ಞಾನ, ತಾರತಮ್ಯ ಜ್ಞಾನ, —ಇರು. W. he has suffered! ಎಷ್ಟೊಂದು, ಏನು, ಪಾಡುಪಟ್ಟಿದ್ದಾನೆ! W. followed was unpleasant ಮುಂದಾದ್ದು ಅಹಿತವಾಗಿತ್ತು. W. is called the general reader ಸಾಮಾನ್ಯ ವಾಚಕ (ಎನ್ನಿಸಿಕೊಂಡವನು). Come w. will *or* may ಏನೇ—ಆಗಲಿ, ಬರಲಿ. (But ಎನ್ನುವುದಕ್ಕೆ but w. ಎಂಬ ಅಶುದ್ಧ ಬಳ. ಮಾ. ಪ್ರ.): Not a day but w. it rains ಮಳೆ ಬೀಳದ ದಿನವಿಲ್ಲ. Not but w. (Not ನೋಡಿ). W. with—w. with (ಹಲವು ಕಾರಣಗಳಿಂದ ಎಂಬರ್ಥದಲ್ಲಿ): ಒಂದು ಕಡೆ, ಮತ್ತೊಂದು ಕಡೆ (W. with drink & w. with fright, he did not know much about the facts ಒಂದು ಕಡೆ ಕುಡಿತದ ಅಮಲೇನು, ಒಂದು ಕಡೆ ಹೆದರಿಕೆಯೇನು, ಅವನಿಗೆ ನಿಜಾಂಶಗಳು ಹೆಚ್ಚು ಗೊತ್ತಾಗಲಿಲ್ಲ)]. **Whatéver** ಹ್ವಾಟ್ಎವರ್, **Whate'er** ಹ್ವಾಟ್ಏರ್ (ಗು., ಸ. ನಾ.) ಏನಾದರೂ, ಎಷ್ಟಾದರೂ, ಎಂಥದಾದರೂ, ಯಾವುದಾದರೂ (Do w. you like ನಿನಗೆ ಇಷ್ಟಬಂದದ್ದು ಮಾಡು. W. results follow ಯಾವ ಪರಿಣಾಮವೇ ಆಗಲಿ. W. happens ಏನೇ ಆಗಲಿ, ಏನಾದರಾಗಲಿ); (ನಿಷೇಧಾರ್ಥಕ ಪ್ರ. ಗಳಲ್ಲಿ) ಏನೂ, ಎಂಥದೂ, ಯಾವುದೂ (There is no doubt w. ಏನೂ ಸಂದೇಹವಿಲ್ಲ. No one w. would accept ಯಾರೂ ಒಪ್ಪಿಕೊಳ್ಳರು); (ಗ್ರಾಮ್ಯ ಪ್ರ.) ಇನ್ನೇನು ತಾನೆ (=What ever) (Ever ನೋಡಿ)]. **Whátso** (ಪ್ರಾಚೀ. ಪ್ರ.), **Whatsoéver** (ಅವಧಾರಣ ಪ್ರ.), **Whatsoe'ér** —ಸೋಏರ್ (ಕಾವ್ಯ) (ಗು., ಸ. ನಾ.) ಏನಾದರೂ, ಯಾವುದಾದರೂ, ಎಂಥದಾದರೂ.

Whátman ಹ್ವಾಟ್‌ಮ್ಯನ್ (ನಾ.) ರೇಖನ, ಜಲವರ್ಣ ಚಿತ್ರಗಳು, ಛಾಯಾಚಿತ್ರ, ಮೊ. ಗಳಿಗೆ ಉಪಯೋಗಿಸುವ ಒಂದು ಬಗೆಯ ಕಾಗದ (ನಿರ್ಮಾಪಕನ ಹೆಸರಿನಿಂದ)

Whaup ಹ್ವಾಪ್ (ನಾ.) (ಸ್ಕಾ. ಪ್ರ.) ಒಂದು ಜಾತಿಯ ಕ್ರೌಂಚ ಪಕ್ಷಿ.

Wheal ಹ್ವೀಲ್ (ನಾ., ಕ್ರಿ. ಸಕ.)=Wale, Weal (ಎಂಬುದರ ಅಪಭ್ರಂಶ)

Wheat ಹ್ವೀಟ್ (ನಾ.) ಗೋಧಿ [Winter *or* unbearded w. (ಮಾಗಿಯಲ್ಲಿ ಬಿತ್ತಿ ಬೇಸಗೆಯಲ್ಲಿ ಕಟಾವು ಮಾಡುವ) ಮಾಗಿ ಗೋಧಿ, ಊಬಿಲ್ಲದ ಗೋಧಿ. Summer *or* bearded w. (ಬೇಸಗೆಯಲ್ಲಿ ಬಿತ್ತಿ ಮಾಗಿಯಲ್ಲಿ ಕಟಾವು ಮಾಡುವ) ಬೇಸಗೆ ಗೋಧಿ, ಊಬಿರುವ ಗೋಧಿ. German w. (ಒಳ್ಳೆಯ ಹಿಟ್ಟು ಬರುವ) ಜರ್ಮನ್ ಗೋಧಿ]. W.-grass ಒಂದು ತೆರದ ಹುಲ್ಲು. **Wheáten** (ಗು.)

Wheátear ಹ್ವೀಟಿಯರ್ (ನಾ.) ಒಂದು ಬಗೆಯ ಸಣ್ಣ ಹಕ್ಕಿ.

Wheátstone bridge ಹ್ವೀಟ್‌ಸ್ಟನ್ ಬ್ರಿಜ್ (ನಾ.) (ವಿದ್ಯುತ್) ನಿರೋಧಶಕ್ತಿಯನ್ನು ಅಳೆಯಲು ಅನುಕೂಲಿಸುವ ಒಂದು ಸಲಕರಣೆ: ಹ್ವೀಟ್‌ಸ್ಟನ್ ಸೇತು.

Wheédle ಹ್ವೀಡ್‌ಲ್ (ಕ್ರಿ. ಸಕ.) (ಒಂದು ಕೆಲಸಮಾಡುವಂತೆ, ಪ್ರಸನ್ನನಾಗುವಂತೆ ಹೊಗಳಿಕೆ, ಮೊ. ಗಳಿಂದ) ಮರುಳುಮಾಡು, ಓಲಿಸು, ಪುಸಲಾಯಿಸು (*Into* doing, *into* good temper); ಪುಸಲಾಯಿಸಿ —ಕೀಳು, ಕಸಿ(ದುಕೊ) (Thing *out of* person); ಪುಸಲಾಯಿಸಿ ಮೋಸಮಾಡು (Person *out of* thing). **Wheédler** (ನಾ.); **Wheédling** (ಗು.); **Wheédlingly** (ಕ್ರಿ. ವಿ.)

Wheel ಹ್ವೀಲ್ (ನಾ.) ಗಾಲಿ, ರಾಟೆ, ರಾಟಣ, ತಿಗುರಿ, ಚಕ್ರ [Balance, Cog[1], Fly[2], Mill[1], Paddle, Ratchet, -w. (ಆಯಾ ಪದ ನೋಡಿ); Catherine-w. (ಆ ಪದ ನೋಡಿ); Overshot, Undershot,-w. (Over-, under- ಕೆಳಗೆ ಆಯಾ ಪದ ನೋಡಿ); Potter's-w. (Pot ಕೆಳಗೆ Potter ನೋಡಿ); Spinning-w. (Spin ಕೆಳಗೆ ನೋಡಿ); Steering-w. (Steer[1] ನೋಡಿ); Sun-&-planet-w. (Sun ನೋಡಿ). Eccentric w. ಕೇಂದ್ರದಲ್ಲಿಲ್ಲದ ಅಕ್ಷದಮೇಲೆ ತಿರುಗುವ ಚಕ್ರ: ವಿಷಮ ಕೇಂದ್ರಕ, ವಿಕೇಂದ್ರಕ, —ಚಕ್ರ. Fifth w. ನಾಲ್ಕು ಚಕ್ರದ ವಾಹನದ ಮುನ್ ಚಕ್ರಗಳನ್ನು ಪಕ್ಕಗಳಿಗೆ ತಿರುಗಿಸಲು ಅನುಕೂಲಿಸುವ ಐದನೆಯ ಚಕ್ರ; (ರೂಪ.) ಅನಾವಶ್ಯಕ ಸಲಕರಣೆ. Wheels within wheels ಜಟಿಲ ಯಂತ್ರ; ತಂತ್ರದೊಳಗಿನ ತಂತ್ರ, ಗುಪ್ತ ತಂತ್ರ ಪರಂಪರೆ. The wheels of life ಜೀವಾಧಾರ ವ್ಯಾಪಾರಗಳು, ಜೀವನ ಚಕ್ರಗಳು. W. of life ಹಲವು ನಿಲುವುಗಳ ಪರಂಪರಾ ಚಿತ್ರಗಳ ಸಂಯೋಜನೆಯಿಂದ ಜೀವಂತ ಚಲನೆಯ ಭ್ರಮೆಯನ್ನು ತೋರುವ ಒಂದು ವೈಜ್ಞಾನಿಕ ಸಲಕರಣೆ: ಜೀವ (ದೃಶ್ಯ) ಚಕ್ರ. Fortune's w. ಅದೃಷ್ಟದಲ್ಲಿ ಏರಿಳಿತಗಳು; ಭಾಗ್ಯಚಕ್ರ. Break on the w. ದಂಡನ ಚಕ್ರಕ್ಕೆ ಕಟ್ಟಿ—ಹಿಂಸಿಸು, ಕೊಲ್ಲು (ಮಧ್ಯ ಕಾಲದ ಯೂರೋಪಿನಲ್ಲಿ ಶಿಕ್ಷಿಸಬೇಕಾದವರನ್ನು ಹೀಗೆ ಕಟ್ಟಿ ತಿರುಗಿಸುತ್ತಿದ್ದರು). Break butterfly on w. (Break ನೋಡಿ). A fly on the w. (Fly[1] ನೋಡಿ). Put a spoke in one's w. (Spoke[1] ನೋಡಿ). Put one's shoulder to the w. ಪ್ರಯತ್ನಪಡು, ಹೆಗಲು ಕೊಡು. W. & axle (Axle ನೋಡಿ).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Go on wheels ಸರಾಗವಾಗಿ, ಶೀಘ್ರವಾಗಿ, —ಹೋಗು]; ಭಾಗ್ಯ ಚಕ್ರ (We may be rich at the next turn of the w.); ಚಕ್ರ ಚಲನೆ, ವೃತ್ತ ಚಲನೆ, ಉರುಳು (The wheels & somersaults of gulls); ಒಂದು ಕೊನೆಯಲ್ಲಿ ಕೀಲಿಸಿರುವ ರೇಖೆ ಆ ಕೀಲಿನಮೇಲೆ ತಿರುಗುವಾಗ ಆಗುವಂಥ ಚಲನೆ (ಸಾ., ಸೈನಿಕ ವ್ಯೂಹ ಚಲನೆಯಲ್ಲಿ): ದಂಡವೃತ್ತ ಚಲನೆ [Right, left, w. (ಕವಾಯತಿನಲ್ಲಿ ಆಜ್ಞೆಯ ಮಾತು): ಬಲಕ್ಕೆ, ಎಡಕ್ಕೆ, ದಂಡವೃತ್ತವಾಗಿ ತಿರುಗಿ]. **Wheel-barrow** (Barrow² ನೋಡಿ). **W. chair** (ರೋಗಿಗಳು ಕುಳಿತುಕೊಳ್ಳುವ) ಗಾಲಿ ಕುರ್ಚಿ. **W.-horse** = Wheeler. **W.-house** (ಹಡಗಿನಲ್ಲಿ) ಚುಕ್ಕಾಣಿ ಚಕ್ರದ ಕೋಣೆ; ಜಲಚಕ್ರ ಗೃಹ. **W.-lock** ಹಿಂದಿನ ಕಾಲದ ತುಪಾಕಿಯಲ್ಲಿರುತ್ತಿದ್ದಂತೆ ಚಕಮಕಿ, ಮೊ. ಗಳಿಗೆ ತಿಕ್ಕಿ ಹೊತ್ತಿಕೊಳ್ಳುವಂತೆ ಅನುಕೂಲಿಸುವ ಉಕ್ಕಿನ ಗಾಲಿಯುಳ್ಳ ಚಾಪು: ಗಾಲಿ ಚಾಪು; ಗಾಲಿಚಾಪಿನ ಫಿರಂಗಿ. **Wheélman** ಬೈಸಿಕಲ್ ಸವಾರ. **W.-seat** ಚಕ್ರದ ಗುಂಬದೊಳಗೆ ಕೂರುವ ಅಟ್ಟದ ಭಾಗ. **W.-tread** (ಬಂಡಿ, ಮೊ. ಗಳಲ್ಲಿ) ನೆಲಕ್ಕೆ ತಾಕುವ ಚಕ್ರ ಭಾಗ; ಚಕ್ರದ ಹೆಜ್ಜೆ. **W.-window** ಅರೆಕಾಲಿನಂಥ ಪಟ್ಟಿಗಳುಳ್ಳ ಗುಂಡು ಕಿಟಕಿ: ಚಕ್ರ ಕಿಟಕಿ. **W.-wright** ಚಕ್ರಗಳನ್ನು ಮಾಡುವವನು, ಚಕ್ರಕಾರ. **(-)wheeled** (ಗು.); **Wheélless** (ಗು.)

Wheel (ಕ್ರಿ.) ದಂಡವೃತ್ತವಾಗಿ—ತಿರುಗು, ತಿರುಗಿಸು; (ಶಿಥಿಲ ಪ್ರ.) ದಿಕ್ಕು ಬದಲಾಯಿಸು, ಬೇರೆ ಕಡೆಗೆ ತಿರುಗು, ಬೇರೆ ಮುಖವಾಗು (ರೂಪ. ಸಹ) (ಅನೇಕ ವೇಳೆ *round* ಉಪ. ದೊಡನೆ); ಗಾಲಿಕುರ್ಚಿ, ಮೊ. ನ್ನು (ಒಂದು ಕಡೆಗೆ) ನೂಕು, ತಳ್ಳು, ಎಳೆ; ವೃತ್ತಚಲನೆಯಲ್ಲಿ, ಚಕ್ರಾಕಾರದಲ್ಲಿ, —ಹೋಗು; ಉರುಳುತ್ತಹೋಗು; ಬೈಸಿಕಲ್ ಸವಾರಿಮಾಡು. **Wheéler** (ನಾ.) (ಕ್ರಿಯಾರ್ಥಗಳಲ್ಲಿ); (ನಾಲ್ಕು ಕುದುರೆಗಳ ಗಾಡಿಯಲ್ಲಿ) ಚಕ್ರದ ಹತ್ತಿರದ ಕುದುರೆ (ಮುಂದುಗಡೆಯದಲ್ಲ); ನಾಲ್ಕು ಚಕ್ರದ ಬಂಡಿ. ಚಕ್ರಕಾರ.

Wheeze ಹ್ವೀಸ್ (ಕ್ರಿ., ನಾ.) ಗಸ್‌ಗಸ್ ಎಂದು ಉಸಿರುಬಿಡು; ಗೊರಗುಟ್ಟು, ಉಬ್ಬಸಪಡು (W. out ಗೊರಗುಟ್ಟಿಕೊಂಡು ಹೇಳು). (ನಾ.) ಗಸ್‌ಗಸ್ ಶಬ್ದ, ಉಬ್ಬಸ; (ನಾಟಕಶಾಲೆಯ ಅಸಂ.) (ನಾಟಕದ ಮಧ್ಯದಲ್ಲಿ ಹರ್ಷ ನಟನು ಅಥವಾ ವಿದೂಷಕನು ತಾನೇ ಪ್ರಕ್ಷಿಪ್ತವಾಗಿ ಸೇರಿಸಿಕೊಂಡ) ತಮಾಷೆ, ಹಾಸ್ಯ ಸಂಗತಿ. **Wheézy** (ಗು.); **Wheézily** (ಕ್ರಿ. ವಿ.); **Wheéziness** (ನಾ.)

Whelk¹ ಹ್ವೆಲ್ಕ್ (ನಾ.) ಹಲವು ಬಗೆಯ ಸುರುಳಿಚಿಪ್ಪಿನ ಮೃದ್ವಂಗಿ: ಶಂಖಮೀನು.

Whelk² ಹ್ವೆಲ್ಕ್ (ನಾ.) ಮೊಡವೆ; ಗುಳ್ಳೆ, ಬೊಕ್ಕೆ. **Whelked** (ಗು.)

Whelm ಹ್ವೆಲ್ಮ್ (ಕ್ರಿ. ಸ.) (ಕಾವ್ಯ, ಅಲಂ.) ಮುಳುಗಿಸಿಬಿಡು, ಹೂತುಬಿಡು; ಆವರಿಸು, ಕವಿ.

Whelp ಹ್ವೆಲ್ಪ್ (ನಾ.; ಕ್ರಿ.) ನಾಯಿಮರಿ, (ನಾಯಿ)ಕುನ್ನಿ; (ಸಿಂಹ, ಹುಲಿ, ಕರಡಿ, ತೋಳ, ಮೊ. ಗಳ) ಮರಿ; ಅಸಹ್ಯಕರವಾದ, ಸುಶಿಕ್ಷಣವಿಲ್ಲದ, —ಮಗು, ಹುಡುಗ: ಕುನ್ನಿ. (ಕ್ರಿ.) ಮರಿ ಹಾಕು, ಈನು; (ಮನುಷ್ಯರ ವಿಷಯದಲ್ಲಿ ತಿರಸ್ಕಾರ ಪ್ರ.) ಕುನ್ನಿಗಳನ್ನು ಹೆರು; (ದುಷ್ಟ ಯೋಜನೆ, ಮೊ. ಗಳನ್ನು) ಕಲ್ಪಿಸು, ಸೃಷ್ಟಿಸು.

When ಹ್ವೆನ್ (ಕ್ರಿ. ವಿ., ಸ. ನಾ., ನಾ.) ಯಾವಾಗ; —ಆಗ, ಎಂದು; —ಅಂದು [(ಅಧ್ಯಾಹಾರ ಪ್ರ. ಗಳಲ್ಲಿ): Say w. ಯಾವಾಗ (ಪ್ರಾರಂಭಿಸಬೇಕು, ಮುಗಿಸಬೇಕು) ಎಂದು ಹೇಳು. (ಎಂದಿಗೂ ಇಲ್ಲ ಎಂಬ ಅರ್ಥದಲ್ಲಿ ಅಲಂ. ಪ್ರ.): W. shall we see his like again? ಅವನಂಥವನನ್ನು ಮತ್ತೆಂದು ನೋಡಿಯೇವು? The time w. such things could happen is gone ಅಂಥ ಸಂಗತಿಗಳು ನಡೆಯತಕ್ಕ ಕಾಲ ಆಗಿಹೋಯಿತು. W. Greek meets Greek (Greek ನೋಡಿ). Walks w. he might ride ಸವಾರಿ ಮಾಡಬಹುದಾಗಿರುವಾಗ ನಡೆಯುತ್ತಾನೆ. How convince him w. he will not listen? ಹೇಳುವುದಕ್ಕೆ ಕಿವಿಗೊಡದಿದ್ದಾಗ ಅವನಿಗೆ ಹೇಗೆ ಮನಗಾಣಿಸುವುದು? The conflict began, w. it soon appeared which was stronger ಹೋರಾಟವಾರಂಭವಾದೊಡನೆ ಯಾರು ಹೆಚ್ಚು ಬಲಶಾಲಿಯೆಂಬುದು ಕಂಡುಬಂದಿತು. (ಸ. ನಾ.) Till w. can you stay? ಎಷ್ಟು ಹೊತ್ತಿನವರೆಗೂ ನೀನು ನಿಲ್ಲಬಲ್ಲೆ? Since w. things have been better ಆಗಿನಿಂದ ಸ್ಥಿತಿ ಉತ್ತಮಗೊಂಡಿದೆ. (ನಾ.) Told me the w. & the how of it ಅದು ಆದದ್ದು ಎಂದು, ಹೇಗೆ ಎಂಬುದನ್ನು ನನಗೆ ಹೇಳಿದನು]. **Whenéver, Whene'ér** (—ಏರ್) (ಕಾವ್ಯ), **Whensoéver** (ಅವಧಾರಣ ಪ್ರ.) (ಕ್ರಿ. ವಿ.) ಯಾವಾಗಲಾದರೂ, ಎಂದಾದರೂ; (—) ಆಗಲೆಲ್ಲಾ, (—) ಆಗೆಲ್ಲಾ.

Whence ಹ್ವೆನ್ಸ್ (ಕ್ರಿ. ವಿ., ಸ. ನಾ., ನಾ.) ಎಲ್ಲಿಂದ (ಈಗ ಈ ಪದಕ್ಕೆ ಬದಲಾಗಿ ವಾಚ್ಯಾರ್ಥದಲ್ಲಿ Where—from ಎಂಬುದೂ, ರೂಪಕಾರ್ಥದಲ್ಲಿ How, Why ಮೊ. ವೂ ಪ್ರಯೋಗವಾಗುತ್ತವೆ) [W. comes it that ಅದು ಹೇಗೆ ಆಗುತ್ತದೆ? The source w. these evils spring ಈ ಕೆಡುಕುಗಳು ಎಲ್ಲಿಂದ ಹುಟ್ಟುತ್ತವೋ ಆ ಮೂಲ; ಈ ಕೆಡುಕುಗಳು ಹುಟ್ಟುವ ಮೂಲ. Return w. you came ನೀನು ಎಲ್ಲಿಂದ ಬಂದೆಯೋ ಅಲ್ಲಿಗೆ, ನೀನು ಬಂದ ಸ್ಥಳಕ್ಕೆ,—ಹಿಂದಿರುಗು. (ಸ. ನಾ.) From w. is he? ಅವನು ಎಲ್ಲಿಂದ ಬಂದ? ಅವನು ಎಲ್ಲಿಯವನು? (ನಾ.) (ಮೂಲ ಎಂಬರ್ಥದಲ್ಲಿ): We know neither our w. nor our whither? ನಾವು ಎಲ್ಲಿಂದ ಬಂದೆವೆಂಬುದೂ ಗೊತ್ತಿಲ್ಲ, ಎಲ್ಲಿಗೆ ಹೋಗುತ್ತೇವೆಂಬುದೂ ಗೊತ್ತಿಲ್ಲ]. **Whencesoéver** (ಕ್ರಿ. ವಿ.) ಎಲ್ಲಿಂದಲಾದರೂ, ಎಲ್ಲಿಂದಲಾಗಲಿ.

Where ಹ್ವೇರ್ (ಕ್ರಿ. ವಿ., ಸ. ನಾ., ನಾ.) (ಪ್ರಶ್ನಾರ್ಥಕ): ಎಲ್ಲಿ(ಗೆ), ಯಾವ ಕಡೆ(ಗೆ), ಯಾವ ಸ್ಥಳ(ದಲ್ಲಿ), ಯಾವಲ್ಲಿ, ಎತ್ತ [W. did you read that? ಅದನ್ನು ಎಲ್ಲಿ, ಯಾವ ಪುಸ್ತಕದಲ್ಲಿ, ಓದಿದೆ? W. shall we be if prices fall now? ಈಗ ಬೆಲೆ ಬಿದ್ದುಹೋದರೆ ನಮ್ಮ ಗತಿ ಏನು? Don't know w. to have him (ನುಣುಚಿಕೊಂಡು ಹೋಗುವವನ ವಿಷಯದಲ್ಲಿ; ಅವನು ಪಟ್ಟಿಗೆ ಸಿಕ್ಕುವುದು ಕಷ್ಟ—ಎಂಬ ಅರ್ಥದಲ್ಲಿ): ಅವನನ್ನು ಎಲ್ಲಿ ಹಿಡಿಯಬೇಕೊ ತಿಳಿಯದು. (ನಿಷೇಧಾರ್ಥಕದಲ್ಲಿ ಅಲಂ.): W. is the use of trying? ಪ್ರಯತ್ನಿಸಿ ಫಲವೇನು? W. is the sense of it? ಅದಕ್ಕೆ ಅರ್ಥ ಎಲ್ಲಿದೆ, ಉಂಟೆ?]; (ಸಂಬಂಧಾರ್ಥಕ): —ಅಲ್ಲಿ(ಗೆ), —ಅತ್ತ, —ಆ ಕಡೆ(ಗೆ), —ಆ ಸ್ಥಳದಲ್ಲಿ [Places w. they sing ಅವರು ಹಾಡುವ ಸ್ಥಳಗಳು. (ಅಧ್ಯಾಹಾರ ಪ್ರ.) W. he is weakest is in his facts ಅವನ ಅತ್ಯಂತ ದೌರ್ಬಲ್ಯವೆಂದರೆ ಅವನ ವಾಸ್ತವಾಂಶ ಸಂಗ್ರಹದಲ್ಲಿ. W. your treasure is ನಿನ್ನ ನಿಧಿ ಇರುವಲ್ಲಿ. Go w. you like ನಿನ್ನ ಮನಸ್ಸು ಬಂದ ಕಡೆಗೆ ಹೋಗು. That's w. it is (ಬಳ. ಮಾ.) ಅಲ್ಲಿಯೇ, ಅದೇ (—ನಿಜವಾದ ಕಾರಣ, ಮುಖ್ಯಾಂಶ). (ಸ. ನಾ.) W. are you going to? ನೀನು ಎಲ್ಲಿಗೆ ಹೋಗುತ್ತಿದ್ದೀಯೆ? (ಗ್ರಾಮ್ಯ ಪ್ರ.) The place w. he comes from ಅವನು ಎಲ್ಲಿಂದ ಬಂದನೋ ಆ ಸ್ಥಳ; ಅವನು ಬಂದ ಸ್ಥಳ. (ನಾ.) The wheres & whens are important ಯಾವೆಡೆಗಳು ಯಾವ ಹೊತ್ತುಗಳು ಎಂಬುವು ಮುಖ್ಯ]

Where- (ಸ. ಪೂ. ಪ.): **Whéreabout(s)** (ಕ್ರಿ. ವಿ., ನಾ.) ಎಲ್ಲಿ, ಯಾವ ಕಡೆ, ಯಾವ ಸ್ಥಳ(ದಲ್ಲಿ), ಇರುವ ಸ್ಥಳ, ಪತ್ತೆ (W. is he? ಅವನು ಎಲ್ಲಿ ಇದ್ದಾನೆ? His w. is known ಅವನು ಇರುವುದು ಎಲ್ಲಿ ಎಂಬುದು ಗೊತ್ತಿದೆ). **Whereáfter** (ಕ್ರಿ. ವಿ.) (ಪ್ರಾಚೀ. ಪ್ರ.) ಯಾವುದರ, ಅದರ, —ತರುವಾಯ. **Whereás** (ಕ್ರಿ. ವಿ., ಸಂ. ಅವ್ಯ.) (ಕಾನೂನು, ಮೊ. ಗಳ ಪೀಠಿಕಾ ಭಾಗದಲ್ಲಿ ಪ್ರ.) —ಇಂದ, —ಕಾರಣ(ದಿಂದ); ನೋಡುವಲ್ಲಿ, ಆಲೋಚಿಸುವಲ್ಲಿ; ಆದರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(One thing I know, that, w. I was blind, now I see ಒಂದು ವಿಷಯ ಗೊತ್ತಿದೆ ; ಏನೆಂದರೆ, ಹಿಂದೆ ಕಣ್ಣು ಕಾಣದವನಾಗಿದ್ದೆ, ಆದರೆ ಈಗ ಕಾಣುತ್ತಿದ್ದೇನೆ. His father, whom he had always imagined to be a gentleman; w. he was only a sergeant). **Whereát** (ಕ್ರಿ. ವಿ.) ಎಲ್ಲಿ, ಯಾವ ಕಡೆ, ಏತಕ್ಕಾಗಿ (W. are you offended ? ಏತಕ್ಕಾಗಿ, ಯಾವುದಕ್ಕಾಗಿ, --ನಿನಗೆ ಕೋಪ, ನಿನಗೆ ಅಸಮಾಧಾನ ?). **Wherebý** (ಕ್ರಿ. ವಿ.) ಯಾವ— ಹತ್ತಿರ, ಪಕ್ಕದಲ್ಲಿ, ಕಡೆ ; ಯಾವುದರ ಮೂಲಕ ; ಏತರಿಂದ, ಹೇಗೆ ; ಯಾವ ಕಾರಣದಿಂದ ; ಏತಕ್ಕಾಗಿ. **Wherefóre** (ಕ್ರಿ. ವಿ., ನಾ.) ಯಾವ ಕಾರಣದಿಂದ, ಏಕೆ, ಏತಕ್ಕಾಗಿ. (ನಾ., ಬ. ವ. ದಲ್ಲಿ) ಕಾರಣಗಳು (The whys & wherefores). **Wherefróm** (ಕ್ರಿ. ವಿ.) (ಪ್ರಾಚೀ. ಪ್ರ.) ಎಲ್ಲಿಂದ, ಯಾವುದರಿಂದ. **Whereín** (ಕ್ರಿ. ವಿ.) ಯಾವುದರಲ್ಲಿ, ಯಾವ ವಿಷಯದಲ್ಲಿ. **Whereinsoéver** (ಕ್ರಿ. ವಿ.) ಯಾವುದರಲ್ಲೇ ಆಗಲಿ. **Whereínto** (ಕ್ರಿ. ವಿ.) (ಪ್ರಾಚೀ. ಪ್ರ.) ಯಾವುದರೊಳಕ್ಕೆ, ಯಾವುದನ್ನು ಕುರಿತು. **Whereóf** (ಕ್ರಿ. ವಿ.) ಯಾವುದರಿಂದ, ಏತರಿಂದ, ಯಾವುದರ ವಿಷಯವಾಗಿ, ಯಾವುದನ್ನು ಕುರಿತು [When & w. created ಯಾವಾಗ ಮತ್ತು ಏತರಿಂದ ಸೃಷ್ಟಿ ಯಾಯಿತು. In witness w. I have set my seal (ಯಾವುದನ್ನು ಕುರಿತಿದೆಯೊ ಅದಕ್ಕೆ) ಸಾಕ್ಷಿಯಾಗಿ ಮುದ್ರೆಯೊತ್ತಿದ್ದೇನೆ]. **Whereón** (ಕ್ರಿ. ವಿ.) ಯಾವುದರಮೇಲೆ, ಯಾವ ಕಡೆ (W. do you look). **Whereoút** (ಕ್ರಿ. ವಿ.) (ಪ್ರಾಚೀ. ಪ್ರ.) ಯಾವುದರಿಂದ, ಎಲ್ಲಿಂದ. **Wherethroúgh** (ಕ್ರಿ. ವಿ.) ಯಾವುದರ ಮೂಲಕ, ಯಾವ ಕಾರಣ ದಿಂದ, ಏತರಿಂದ. **Whereto´** (ಕ್ರಿ. ವಿ.) ಯಾವುದಕ್ಕೆ, ಎಲ್ಲಿಗೆ, ಯಾವ ಕಡೆಗೆ. **Whereúnder** (ಕ್ರಿ. ವಿ.) (ಪ್ರಾಚೀ. ಪ್ರ.) ಯಾವುದರ ಕೆಳಗೆ. **Whereuntó** (ಕ್ರಿ. ವಿ.) (ಪ್ರಾಚೀ. ಪ್ರ.) ಯಾವುದಕ್ಕೆ. **Whereupón** (ಕ್ರಿ. ವಿ.) ಯಾವುದರಮೇಲೆ, ಯಾವ ಕಾರಣದಿಂದ, ಏತರಿಂದ, ಏಕೆ ; –ಆಧಾರದಮೇಲೆ; ಯಾವುದರ ತರುವಾಯ ; (–ರ) ಕಾರಣದಿಂದ, ತರುವಾಯ. **Wheréver, Where'ér** (ಕಾವ್ಯ), **Wheresoéver** (ಅವಧಾರಣ ಪ್ರ.) (ಕ್ರಿ. ವಿ.) ಎಲ್ಲಿಯಾದರೂ, ಎಲ್ಲಾಗಲಿ, ಎಲ್ಲಿ ಗಾದರೂ. **Wherewíth** —ವಿತ್(ದ್), **Wherewithál**—ವಿದಾಲ್ (ಕ್ರಿ. ವಿ., ನಾ.) ಯಾವುದರಿಂದ, ಯಾವುದರ ಮೂಲಕ, ಯಾವ ಕಾರಣದಿಂದ, ಯಾವುದರೊಡನೆ; = Whereat; = Whereupon. (ನಾ.) ಸಾಧನ, ಅನುಕೂಲ, ಬೇಕಾದ ಹಣ (Has not the wherewithal to do it or the wherewithal)

Whérry ಹ್ವೆರಿ (ನಾ.) (ಸಾ., ಪ್ರಯಾಣಿಕರನ್ನು ಸಾಗಿಸುವ) ತೆಟ್ಟೆಯಾದ ಹಗುರ ದೋಣಿ ; ಹರಿಗೋಲು.

Whet ಹ್ವೆಟ್ (ಕ್ರಿ. ಸಕ., ನಾ.) ಉಜ್ಜಿ ಹರಿತಮಾಡು, ಮಸೆ, ಸಾಣೆ ಹಿಡಿ ; (ಹಸಿವು, ಆಸೆ, ಮೊ. ಗಳನ್ನು) ಕೆರಳಿಸು, ಚುರುಕುಮಾಡು, ತೀಕ್ಷ್ಣಗೊಳಿಸು. (ನಾ.) ಸಾಣೆ ಹಿಡಿಯುವುದು, ಮಸೆತ ; ಹಸಿವು ಅಥವಾ ರುಚಿ ಕೆರಳಿಸುವ ಸ್ವಲ್ಪ ಆಹಾರ, ಪಾನ : ರುಚಿಕಾರಕ, ಉದ್ದೀಪಕ; (ಮದ್ಯ, ಮೊ. ಗಳ) ಗುಟುಕು. **Whétstone** (ನಾ.) ಸಾಣೆ (ಹಿಡಿಯುವ) ಕಲ್ಲು, ಮಸೆಗಲ್ಲು (ರೂಪ. ಸಹ)

Whéther[1] ಹ್ವೆದರ್ (ಸಂ. ಅವ್ಯ.) (ಹೌದು ಅಥವಾ ಇಲ್ಲ ಎಂಬ ಉತ್ತರ ಕೊಡಲು ಸಾಧ್ಯವಿರುವಂಥ ಪ್ರಶ್ನೆಗಳಲ್ಲೂ, ಎರಡರಲ್ಲೊಂದು ಅಥವಾ ಅದೋ ಇದೋ ಎಂಬರ್ಥದಲ್ಲೂ ಪ್ರ.) : —ಓ —ಓ ; ಅಥವಾ ;— ಆಗಲಿ [Don't know w. he will be here ಅವನು ಇಲ್ಲ ಇರು ತ್ತಾನೆಯೋ (ಇಲ್ಲವೋ) ತಿಳಿಯದು. W. he is here *or* (w. he is) in London ಅವನು ಇಲ್ಲಿರುತ್ತಾನೊ ಲಂಡನಿನಲ್ಲಿರುತ್ತಾನೋ ; ಅವನು ಇಲ್ಲಿರಲಿ ಲಂಡನಿನಲ್ಲಿರಲಿ. The question w. —ಓ —ಓ ಎಂಬ ಪ್ರಶ್ನೆ. W. we stay *or* w. we go ನಾವು ಇರಲಿ (ನಿಲ್ಲಲಿ) ಹೋಗಲಿ. W. *or* no (No ಕ್ರಿ. ವಿ. ನೋಡಿ)]

Whew ಹ್ವ್ಯೂ, ಹ್ಯೂ (ಭಾವ. ಅವ್ಯ.) ಆಶ್ಚರ್ಯ, ಅಸಹ್ಯ, ಮೊ. ನ್ನು ಸೂಚಿಸುವ ಉದ್ಗಾರ.

Whey ಹ್ವೇ (ನಾ.) ಹಾಲನ್ನು ಒಡೆದು ಗರಣೆಯಾಗಿಸಿದಮೇಲೆ ಉಳಿಯುವ ದ್ರವಾಂಶ : ಹಾಲೊಡಕು (ನೀರು), ಮಸ್ತು. W.-faced (ಪ್ರಾಚೀ. ಪ್ರ.) (ಮು., ಭಯದಿಂದ) ಮುಖ ಬಿಳಿಚಿಕೊಂಡ, ವಿವರ್ಣ ವಾದ.

Which ಹ್ವಿಚ್ (ಗು., ಸ. ನಾ.) ಯಾವ, ಯಾವುದು, ಯಾರು (What ನೋಡಿ) [(ಪ್ರಶ್ನಾರ್ಥಕ) : W. way shall w. go? ನಾವು ಯಾವ ಮಾರ್ಗದಲ್ಲಿ ಹೋಗೋಣ ? (ಸಂಬಂಧಾರ್ಥಕ) : W. things are an allegory ಯಾವವು ಅರ್ಥಾಂತರೋಕ್ತಿಗಳೋ (ಅವು). The w. (ಪ್ರಾಚೀ. ಪ್ರ.) = W. (ಸ. ನಾ.) (ಪ್ರಶ್ನಾರ್ಥಕ) : W. of you am I to thank for this ? ಇದಕ್ಕಾಗಿ ನಿಮ್ಮಲ್ಲಿ ಯಾರಿಗೆ ನಾನು ವಂದಿಸಬೇಕು, ಆಭಾರಿಯಾಗಿರಬೇಕು ? W. is w. ? (ಇದರಲ್ಲಿ) ಯಾವುದು ಯಾವುದು ? ಯಾರು ಯಾರು ? (ಸಂಬಂಧಾರ್ಥಕ) ; Our Father, w. art in heaven ಸ್ವರ್ಗದಲ್ಲಿರುವ ನಮ್ಮ ತಂದೆ (ದೇವರು). He said he saw me there, w. was a lie ಅವನು ನನ್ನನ್ನು ಅಲ್ಲಿ ನೋಡಿದ್ದಾಗಿ ಹೇಳಿದನು, ಅದು ಸುಳ್ಳು]. **Whichéver, Whichsoéver** (ಅವಧಾರಣ ಪ್ರ.) (ಗು., ಸ. ನಾ.) ಯಾವುದಾದರೂ, ಯಾರಾದರೂ.

Whiff[1] ಹ್ವಿಫ್ (ನಾ., ಕ್ರಿ.) (ವಾಯು, ಹೊಗೆ, ವಾಸನೆ, ಮೊ. ಗಳ) ಬೀಸು, ತೀಟ, ಉರುವು, ಉಃಫ್ (W. of grape-shot ಕೊಂಚ ರವೆಗುಂಡು ಹಾರಿಕೆ ; ರವೆಗುಂಡಿನ ಸಣ್ಣ ಉರುವು. Want a w. of fresh air ಒಂದು ಬೀಸು ಶುದ್ಧ ಗಾಳಿ ಬೇಕಾಗಿದೆ) ; (ವ್ಯಾಪಾರದ ಮಾತು) ಸಣ್ಣ ಚುಟ್ಟ ; ಮರೆಯಿಲ್ಲದ ಸಣ್ಣ ಹುಟ್ಟುದೋಣಿ. (ಕ್ರಿ.) ಸಣ್ಣಗೆ, ಹಗುರವಾಗಿ, —ಬೀಸು, ಊದು ; ಉಃಫ್ಫೆಂದು ಊದು.

Whiff[2] ಹ್ವಿಫ್ (ನಾ.) ಒಂದು ಬಗೆಯ ಚಪ್ಪಟೆ ಮೀನು.

Whiff[3] ಹ್ವಿಫ್ (ಕ್ರಿ. ಅಕ.) ವೇಗವಾದ ದೋಣಿಯಲ್ಲಿ ಹೋಗುತ್ತ ಎರೆ ಯನ್ನು ನೀರಮೇಲುಗಡೆಯೇ ಎಳೆಯುತ್ತ ಮೀನು ಹಿಡಿ : ಓಟದ ಎಳೆತದಲ್ಲಿ ಮೀನು ಹಿಡಿ.

Whíffle ಹ್ವಿಫ಼ಲ್ (ಕ್ರಿ., ನಾ.) (ಗಾಳಿಯ ವಿಷಯದಲ್ಲಿ) ಹಗುರವಾಗಿ ಉಫ್ ಉಫ್ ಎಂದು—ಬೀಸು, ಸುಳಿ ; ಅತ್ತಿತ್ತ ಬೀಸು ; (ಹಡಗನ್ನು) ಅತ್ತಿತ್ತ—ಒಯ್ಯು, ನಡಸು ; (ಜ್ವಾಲೆ, ಎಲೆ, ಮೊ. ಗಳ ವಿಷಯವಾಗಿ ; ರೂಪ., ಭಾವನೆ, ಮೊ. ಗಳ ವಿಷಯವಾಗಿ) ಅತ್ತಿತ್ತ ಆಡು, ಸಂಚಲಿಸು, (ಪಟಪಟನೆ) ಅಲುಗಾಡು ; ಉಃಫೆನ್ನು. (ನಾ.) ಗಾಳಿಯ—ನಸು ಬೀಸು, ಸುಳಿದಾಟ.

Whig ಹ್ವಿಗ್ (ನಾ., ಗು.) ಇಂಗ್ಲೆಂಡಿನಲ್ಲಿ ಕ್ರಿ. ಶ. ೧೬೮೮ರನೆಯ ಇಸವಿಯ ಕ್ರಾಂತಿಯ ತರುವಾಯ ರಾಜನ ಅಧಿಕಾರವನ್ನು ಪಾರ್ಲಿ ಮೆಂಟಿಗೂ ಸಮಾಜದ ಉಚ್ಚ ಶ್ರೇಣಿಯವರಿಗೂ ಅಧೀನಪಡಿಸುವ ಉದ್ದೇಶವುಳ್ಳದ್ದಾಗಿ ಸುಧಾರಣೆಯ ಮಸೂದೆಯನ್ನು ಆಚರಣೆಗೆ ತಂದ, ಈಚೆಗೆ 'ಲಿಬರಲ್' ಪಕ್ಷಕ್ಕೆ ಎಡೆಕೊಟ್ಟ ಒಂದು ರಾಜಕೀಯ ಪಕ್ಷದ(ವನು): ಹ್ವಿಗ್ ಪಕ್ಷದ(ವನು) (ಎದುರು ಪದ : Tory) [Dishing the Whigs (Dish ಕ್ರಿ. ನೋಡಿ)]. **Whíggery** (ನಾ.), **Whíggism** (ನಾ.) ವ್ಹಿಗ್ (ಪಕ್ಷದ) ತತ್ತ್ವಗಳು. **Whíggish** (ಗು.); **Whíggishly** (ಕ್ರಿ. ವಿ.) ; **Whíggishness** (ನಾ.)

While ಹ್ವೈಲ್ (ನಾ., ಕ್ರಿ. ಸಕ.) (ಒಂದು ಕೆಲಸ, ಮೊ. ಕ್ಕೆ ಹಿಡಿದ, ವಿನಿಯೋಗಿಸಿದ) ಹೊತ್ತು, ವೇಳೆ, ಸಮಯ, ಕಾಲ [In a little w. ಕೊಂಚ ಹೊತ್ತಿನಲ್ಲಿ ; ಬೇಗನೆ. Meanwhile (Mean[1] ನೋಡಿ). Once in a w. ಯಾವಾಗಲಾದರೊಮ್ಮೆ. That is enough for one w. ಸ್ವಲ್ಪ ಕಾಲ ಮಾತ್ರಕ್ಕೆ ಅದು, ಅಷ್ಟು, ಸಾಕು. Worth w. *or* my w. ಪ್ರಯೋಜನಕಾರಿಯಾದ, ಉಪಯುಕ್ತ, ಸಾರ್ಥಕ. The w. *or* whilst (ಕಾವ್ಯ) ಆಗ, ಆ ಹೊತ್ತು]. (ಕ್ರಿ.) (ಕಾಲ)ಹರಣ ಮಾಡು, (ಹೊತ್ತು) ಕಳೆ (*Away* ಉಪ. ದೊಡನೆ)

While, (ಪ್ರಾಚೀ. ಪ್ರ.) **Whiles** —ಲ್ಸ್ (ಸಂ. ಅವ್ಯ.) —ಆಗ, ಅದೇ ಕಾಲದಲ್ಲಿ (Please write while I dictate); —ವರೆಗೂ (While there is life, there is hope) ; ಆದರೂ (While

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

I admit his good points I can see his bad); ಆದರೆ (Jones lost an arm, Brown a leg, w. Robinson had both amputated)

Whilst ಹ್ವೈಲ್ಸ್ಟ್ (ಸಂ. ಅವ್ಯ., ನಾ.) —ಆಗ [(ನಾ.) The w. = The while (ಆ ಪದ ನೋಡಿ)]

Whílom ಹ್ವೈಲಂ (ಕ್ರಿ. ವಿ., ಗು.) ಹಿಂದೊಮ್ಮೆ, ಒಂದಾನೊಂದು ಕಾಲದಲ್ಲಿ (ಪ್ರಾಚೀ. ಪ್ರ.); (ಗು.) ಹಿಂದಿನ, ಹಿಂದೇ ಆಗಿದ್ದ (His w. friend)

Whim ಹ್ವಿಂ (ನಾ.) ಅಕಸ್ಮಾತ್ತಾದ ಮನಸ್ಸಿನ—ಕೊಂಕಾಟ, ಹುಚ್ಚಾಟಿಕೆ; ಕಯಾಲಿ; ವಿಚಿತ್ರಭಾವನೆ, ವಿಪರೀತ ಕಲ್ಪನೆ, ಹುಚ್ಚು ಹುಚ್ಚು. (ಗಣಿಯಿಂದ ಅದುರು ತೆಗೆಯುವ ಒಂದು ಬಗೆಯ) ಎತ್ತು ಯಂತ್ರ. **Whímwham** (ಪ್ರಾಚೀ. ಪ್ರ.) ಆಟದ ಸಾಮಾನು, ಗೊಂಬೆ. **Whímsical** ಹ್ವಿಂಸಿಕಲ್ (ಗು.) ವಿಚಿತ್ರ, ಇಚ್ಛಾ,—ವರ್ತನೆಯ, ಭಾವನೆಯ; ಹುಚ್ಚಾಟದ; ವಿಚಿತ್ರ, ವಿಲಕ್ಷಣದ. **Whimsicálity** —ಕ್ಯಾ— (ನಾ.); **Whímsically** —ಕ— (ಕ್ರಿ. ವಿ.); **Whíms(e)y** ಹ್ವಿಂಸಿ (ನಾ.) ವಿಚಿತ್ರ ಭಾವನೆ, ವಿಪರೀತ ಕಲ್ಪನೆ.

Whímbrel ಹ್ವಿಂಬ್ರೆಲ್ (ನಾ.) ಒಂದು ಜಾತಿಯ ಕಸ್ರೌಂಚ ಪಕ್ಷಿ.

Whímper ಹ್ವಿಂಪರ್ (ಕ್ರಿ., ನಾ.) (ಅಳಲಿರುವ ಹುಡುಗನಂತೆ) ಬಿಕ್ಕು, ಗದ್ಗದಿಸು; ಕುಂಯ್‌ಗುಟ್ಟು; ಕುಂಯ್‌ಗುಟ್ಟಿಕೊಂಡು ಹೇಳು. (ನಾ.) ಅಳುವಿನ—ಬಿಕ್ಕು, ಗದ್ಗದ; ಕುಂಯ್ ಎಂಬ (ಅಳುವಿನ) ಶಬ್ದ: **Whímperer** (ನಾ.); **Whímperingly** (ಕ್ರಿ. ವಿ.)

Whímsy. **Whim** ನೋಡಿ.

Whin¹ ಹ್ವಿನ್ (ನಾ.) ಒಂದು ಬಗೆಯ ಗುಲ್ಮ, ಹೊದರು (ಬ. ವ. ದಲ್ಲಿ ಸಹ ಪ್ರ.). W.-chat ಒಂದು ಬಗೆಯ ಸಣ್ಣ ಹಕ್ಕಿ.

Whin² ಹ್ವಿನ್, **Whínsill** ಹ್ವಿನ್ಸಿಲ್, **Whínstone** ಹ್ವಿನ್‌ಸ್ಟೋನ್ (ನಾ.) ಹಲವು ಬಗೆಯ ಅಗ್ನಿಶಿಲೆ ಅಥವಾ ಗಟ್ಟಿ ಮರಳುಗಲ್ಲು.

Whine ಹ್ವೈನ್ (ಕ್ರಿ., ನಾ.) ಕುಂಯ್‌ಗುಟ್ಟು; ಕುಂಯ್ ಎಂದು ಅಳು(ತ್ತ ಹೇಳು). (ನಾ.) ಕುಂಯ್ ಎಂಬ—ಅಳು, ರಾಗ. **whiner** (ನಾ.); **Whíningly** (ಕ್ರಿ. ವಿ.)

Whínger ಹ್ವಿಂಗ(ಜ)ರ್ (ನಾ.) ಕುರುಗತ್ತಿ, ಬಾಕು, ಕಠಾರಿ; ಉದ್ದ ಚಾಕು.

Whínny ಹ್ವಿನಿ (ಕ್ರಿ. ಅಕ., ನಾ.) (ಸಾ., ಕುದುರೆ, ಮೊ. ಗಳ ವಿಷಯದಲ್ಲಿ) ಮೃದುವಾಗಿ, ಸಂತೋಷದಿಂದ,—ಕೆನೆ. (ನಾ.) ಸಂತೋಷದ, ಮೃದುವಾದ,—ಕೆನೆತ.

Whip ಹ್ವಿಪ್ (ಕ್ರಿ.) ತಟಕ್ಕನೆ, ಛಕ್ಕನೆ, —ಚಲಿಸು, ತೆಗೆ(ದುಕೊ), ಕಸಿ(ದುಕೊ), ಹೊಡೆ, ನುಗ್ಗು, ಹೊರಡು (Whipped away to France ಇದ್ದಕ್ಕಿದ್ದಹಾಗೆ ಫ್ರಾನ್ಸಿಗೆ ಹೊರಟುಬಿಟ್ಟನು. Whipped my purse away ನನ್ನ ದುಡ್ಡಿನ ಚೀಲವನ್ನು ತಟಕ್ಕನೆ ಕಸಿದುಕೊಂಡುಹೋದನು. Whipped out sword ಕತ್ತಿಯನ್ನು ಛಟ್ಟನೆ ಹಿರಿದನು. W. off one's coat ತಟಕ್ಕನೆ ಅಂಗಿ ತೆಗೆದುಹಾಕು); (ಹುರಿ, ಕೋಲು, ಮೊ. ಕ್ಕೆ) ಹತ್ತಿರನಾಗಿ ದಾರ ಸುತ್ತು; ಕಾಜಾ ಹೊಲಿಗೆ ಹಾಕು; (ಕುದುರೆ, ಹುಡುಗ, ಮೊ. ನ್ನು) ಚಾವಟಿಯಿಂದ ಹೊಡೆ, ತೀಡು. [W. in, off, together (ಬೇಟೆನಾಯಿಗಳನ್ನು) ಚಾವಟಿಯಿಂದ ಒಳಕ್ಕೆ ಕೂಡು, ಓಡಿಸು, ಒಟ್ಟು ಸೇರಿಸು; (ರೂಪ.; ಮು., ಶಾಸನ ಸಭೆಯಲ್ಲಿ) ಪಕ್ಷದವರನ್ನೆಲ್ಲಾ ಹಾಜರಾಗುವಂತೆ, ಹೊರಟುಹೋಗುವಂತೆ, ಒಟ್ಟುಕೂಡುವಂತೆ, —ಕರೆಕೊಡು, ಚುರುಕುಕೊಡು. W. stream ಗಾಳವನ್ನು ನೀರಿನಮೇಲೆ (ಚಾವಟಿಯಂತೆ) ಹೊಡೆದು ಮೀನು ಹಿಡಿ. W. horses on ಕುದುರೆಗಳನ್ನು ಚಾವಟಿಯಿಂದ ಹೊಡೆದು ನಡಸು, ಓಡಿಸು. W. fault out of person ಒಬ್ಬನನ್ನು ಹೊಡೆದು ಹೊಡೆದು ತಪ್ಪನ್ನು ಬಿಡಿಸು. W. eggs ಮೊಟ್ಟೆಯ ಲೋಳೆಯನ್ನು (ನೊರೆಗಟ್ಟುವಂತೆ) ಗೋಟಾಯಿಸು]; (ಅಸಂ.) ಮೀರು, ಸೋಲಿಸು, ತಲೆಯ ಮೇಲೆ ಹೊಡೆ (W. creation ಎಲ್ಲವನ್ನೂ ಮೀರು, ತಲೆಮೆಟ್ಟಿ ನಿಲ್ಲು); (ಕಪ್ಪಿಯ ಮೂಲಕ ಹಾಯ್ದಿರುವ ಹಗ್ಗದಿಂದ, ಕಲ್ಲಿದ್ದಲು, ಮೊ. ನ್ನು) ಮೇಲಕ್ಕೆತ್ತು. Whipping-boy (ಚರಿತ್ರೆ) ರಾಜಕುಮಾರನ (ಸಹಪಾಠಿಯಾಗಿದ್ದು ಅವನಿಗೆ) ಬದಲಾಗಿ ಏಟು ತಿನ್ನುತ್ತಿದ್ದ ಹುಡುಗ. Whipping-post ಶಿಕ್ಷಿಸಬೇಕಾದವರನ್ನು ಕಟ್ಟಿ ಹೊಡೆಯುತ್ತಿದ್ದ ಕಂಬ: ಬಾರು, ಹೊಡೆ, —ಗಂಬ. Whipping-top ಚಾವಟಿಯಿಂದ ಹೊಡೆದು ಹೊಡೆದು ಆಡುತ್ತಲೇ ಇರಿಸಿದ ಬುಗುರಿ: ಬಾರು, ಹೊಡೆ, —ಬುಗುರಿ. **Whípper** (ನಾ.) (ಕ್ರಿಯಾರ್ಥಗಳಲ್ಲಿ); [W.-in (Whip, ನಾ. ನೋಡಿ). W.-snapper ಸಣ್ಣ ಮಗು, ಹಸುಳೆ; ಅಧಿಕಪ್ರಸಂಗಿ, ಪಟಿಂಗ, —ಹುಡುಗ]. **Whípping** (ನಾ.)

Whip (ನಾ.) ಚಾವಟಿ, ಚಬುಕು, ಕೊರಡ, ಬಾರುಗೋಲು [Good, poor, w. (ಮು., ನಾಲ್ಕು ಕುದುರೆ ಬಂಡಿಯವನ ವಿಷಯದಲ್ಲಿ) ಚೆನ್ನಾಗಿ, ಕಳಪೆಯಾಗಿ, ಬಂಡಿ ಹೊಡೆಯುವವನು]; ಬೇಟೆ ನಾಯಿಗಳು ಚೆದರಿಹೋಗದಂತೆ ಮಂದೆಯಾಗಿ ಹೊಡೆಯುವ ಕೆಲಸವುಳ್ಳ, ಬೇಟೆಗಾರನ ಸಹಾಯಕ: ಮಂದೆ ಹೊಡೆಯುವವನು (= Whipper-in); (ರೂಪ.) ಪಾರ್ಲಿಮೆಂಟಿನಲ್ಲಿ ಒಂದು ಪಕ್ಷದ ಸದಸ್ಯರ ಶಿಸ್ತು ನೋಡಿಕೊಳ್ಳುವುದು, ಅವರು ಸಭೆಗಳಿಗೆ ಬರುವಂತೆ ನೋಡಿಕೊಳ್ಳುವುದು, ಅವರಿಗೆ ಬೇಕಾದ ತಿಳಿವಳಿಕೆಯನ್ನು ಕೊಡುವುದು, ಮೊ. ಕಾರ್ಯಕ್ಕಾಗಿ ನೇಮಿತನಾದವನು: ಶಿಸ್ತು ನಾಯಕ, ಶಿಷ್ಟಿ ಪ್ರವರ್ತಕ; ಶಿಸ್ತು ನಾಯಕನು ಸದಸ್ಯರಿಗೆ ಕೊಡುವ ನಿರೂಪ; ಹಾಜರಾಗುವಂತೆ ಕಳುಹಿಸಿದ ಕರೆಪತ್ರ: ಶಿಸ್ತು ನಿರೂಪ [Five-line(d) w. (Five ನೋಡಿ)]; ಕಪ್ಪಿ ಮತ್ತು ಹಗ್ಗದ ಒಂದು ಎತ್ತು ಯಂತ್ರ (= W.-&-derry). **Whípcord** (ಚಾವಟಿಯ ದಾರಕ್ಕೆ ಉಪಯೋಗಿಸುವಂಥ) ಗಟ್ಟಿಯಾಗಿ ಹೊಸೆದ ಹುರಿ, ಚಾವಟಿ ಹುರಿ. **W.-fish** ಚಾವಟಿ ಹುರಿಯಂತೆ ಚಾಚಿಕೊಂಡಿರುವ ಈಜುರೆಕ್ಕೆಯುಳ್ಳ ಮೀನು: ಚಾವಟಿ ಮೀನು. **W.-gin** ಕಪ್ಪಿ ಮತ್ತು ಹಗ್ಗ. **W.-hand** ಚಾವಟಿ (ಹಿಡಿಯುವ) ಕೈ (Have the w.-hand of ಹತೋಟಿಯಲ್ಲಿಟ್ಟುಕೊಂಡಿರು). **W.-ray** ಚಾವಟಿ ಬಾಲದ 'ರೇ' ಮೀನು. **W.-saw** ಕೊನೆಗಳನ್ನು ಮರದ ಚೌಕಟ್ಟಿನಲ್ಲಿ ಅಳವಡಿಸಿರುವ, ಕಿರಿಯಗಲದ ಅಲಗುಳ್ಳ ಗರಗಸ: ಬಾರು ಗರಗಸ. **W.-snake** ಹಲವು ಬಗೆಯ ತೆಳುಹಾವು. **Whípster** (ನಾ.) ಸಣ್ಣ ಮಗು, ಕೂಸು; ಚಾವಟಿ ರುಚಿ ತೋರಿಸಬೇಕಾಗಿರುವ, ಕೆಲಸಕ್ಕೆ ಬಾರದ, ಅಧಿಕಪ್ರಸಂಗಿ: ತುಂಟ.

Whíppet ಹ್ವಿಪೆಟ್ (ನಾ.) ಜೂಜಿನಲ್ಲಿ ಉಪಯೋಗಿಸುವ, ಬೆರಕೆ ತಳಿಯ, ಒಂದು ನಾಯಿ; (ಸೈನಿಕ) ಹಗುರವಾದ ವೇಗದ—ಫಿರಂಗಿ ರಥ, ಟ್ಯಾಂಕು.

Whípster. **Whip** ನೋಡಿ.

Whir(r) ಹ್ವರ್ (ಕ್ರಿ. ಅಕ., ನಾ.) (ಹಕ್ಕಿಗಳ ರೆಕ್ಕೆ, ಸುತ್ತುವ ಚಕ್ರ, ಮೊ. ಗಳಂತೆ) ವ್ಹಿರ್ ಶಬ್ದ(ಮಾಡು), ಗಿರ್ರನ್ನು(ವ ಶಬ್ದ); ಗಿರ್ರನೆ —ಹೋಗು, ತಿರುಗು.

Whirl ಹ್ವರ್ಲ್ (ಕ್ರಿ., ನಾ.) ಗುಂಡಗೆ, ಗಿರ್ರನೆ, —ಸುತ್ತು, ಸುತ್ತಿಸು; ಚಕ್ಕರ—ಹಾಕು, ಹಾಕಿಸು; ಪರಿಭ್ರಮಣಮಾಡು; ಗಿರಗಿರ, ಭರಭರ, —ತಿರುಗು, ತಿರುಗಿಸು [Whirling dervish (Dervish ನೋಡಿ)]; ಗಿರ್ರನೆ ಸುತ್ತಿಸಿ ಎಸೆ; —ಸುತ್ತಿ ರಭಸದಿಂದ ಹೋಗು; (ಚಕ್ರದ ಬಂಡಿಯಲ್ಲಿ) ಭರ್ರೆಂದು—ಹೋಗು, ಸಾಗಿಸು (*Away*); (ಮಿದುಳು, ಇಂದ್ರಿಯಗಳು, ಮೊ. ಗಳ ವಿಷಯದಲ್ಲಿ) ಸುತ್ತು, ಗಿರಕಿ ಹೊಡೆ; (ಆಲೋಚನೆಗಳು) ತಲೆಯಲ್ಲಿ ಸುತ್ತು, ತಿರುಗು, ಒಂದರ ಮೇಲೊಂದು ರಭಸವಾಗಿ ಬರು, ಭ್ರಮೆ ಹಿಡಿಸು(ವಂತೆ ಬರು). (ನಾ.) ಸುತ್ತು, ತಿರುಗು, ಗಿರಕಿ, ಪರಿಭ್ರಮಣ (My thoughts are in a w. ನನ್ನ ಆಲೋಚನೆಗಳು ಗಿರಕಿ ಹೊಡೆಯುತ್ತಿವೆ). **Whírligig** —ಗಿಗ್ (ನಾ.) ಹಲವು ಬಗೆಯ ಗಿರಕಿ ಆಟದ ಸಾಮಾನು; ಗಿರಕಿ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ರೂಪ.) ಗಿರಕಿ, ಚಕ್ಕರ, ಆವರ್ತ (W. of time ಅದೃಷ್ಟ, ಭಾಗ್ಯ, —ಪರಿವರ್ತನೆ ; ಭಾಗ್ಯಚಕ್ರದ ಆವರ್ತ) ; ರಂಕರಾಟಣ ; ಗಿರಕಿ ಜೀರುಂಡೆ. **Whírlpool** (ನಾ.) (ಸಮುದ್ರ, ಮೊ. ಗಳಲ್ಲಿ) ಸುಳಿ, ಆವರ್ತ. **Whírlwind** (ನಾ.) ಸುಂಟರಗಾಳಿ, ಚಕ್ರಮಾರುತ [Sow wind & reap w. ಕೊಂಚ ಕೇಡು ಬಿತ್ತಿ ಹತ್ತರಷ್ಟು ಕೇಡನುಭವಿಸು ; ಬೀಸುಗಾಳಿ ಬಿತ್ತಿ ಸುಂಟರಗಾಳಿ ಎಬ್ಬಿಸು]

Whírligig. **Whirl** ನೋಡಿ.

Whisht. **Whist**[1] ನೋಡಿ.

Whisk ಹ್ವಿಸ್ಕ್ (ನಾ., ಕ್ರಿ.) (ದೂಳು, ನೊಣ, ಮೊ. ನ್ನು ಹೊಡೆಯುವುದಕ್ಕಾಗಿ ಹುಲ್ಲು, ಕೂದಲು, ಮೊ. ರ) ಸಣ್ಣ ಬರಲು, ಪೊರಕೆ, ಕುಂಚ, ಕೂರ್ಚ, ದೂಳುತೊಡಪ ; ಮೊಟ್ಟೆಯ ಲೋಳೆ, ಕೆನೆ, ಮೊ. ನ್ನು ಗೋಟಾಯಿಸುವ ತಂತಿಗಳಿಂದ ಮಾಡಿದ ಸಲಕರಣೆ : ತಂತಿ ಬರಲು ; (ಕೂರ್ಚದಂಥ ಅಥವಾ ಪ್ರಾಣಿಯ ಬಾಲದಂಥ) ಚುರುಕು ಚಲನೆ, ಅಲುಗಾಟ, ಝಾಡಿಕೆ. (ಕ್ರಿ.) (ದೂಳು, ನೊಣ, ಮೊ. ನ್ನು) ಹೊಡೆ, ಕೊಡವು, ಝಾಡಿಸು (*Away*, *off* ಉಪ. ದೊಡನೆ) ; (ಮೊಟ್ಟೆಯ ಲೋಳೆ, ಮೊ. ನ್ನು) ತೊಳಸು, ಗೋಟಾಯಿಸು ; ತಟಕ್ಕನೆ—ತೆಗೆ (ದುಬಿಡು), ತೆಗೆದುಕೊಂಡುಹೋಗು (Waiter whisked my plate off) ; ಸರಕ್ಕನೆ, ಥರ್ರನೆ, —ಹೋಗು, ಹಾರಿಹೋಗು, ಸಾಗಿಸು (Was whisked across channel in aeroplane. Mouse whisks into its hole) ; ಆಡಿಸು, ಅಲುಗಿಸು, ಝಳಪಿಸು (Went whisking a cane, her tail). **Whísker** (ನಾ.) (ಗಂಡಸಿನ) ಕೆನ್ನೆಕೂದಲು, (ಗಲ್ಲ) ಮೀಸೆ (ಸಾ., ಬ. ವ. ದಲ್ಲಿ) ; (ಬೆಕ್ಕು, ಮೊ. ಗಳ) ತುಟಿಯ ಬಿರುಗೂದಲು, ಕಲ್ಲಿಮೀಸೆ. **(-)whiskered** (ಗು.)

Whísky[1] ಹ್ವಿಸ್ಕಿ (ನಾ.) ಮೊಳೆತ ಯವೆ, ಆಲೂಗಡ್ಡೆ, ಅಥವಾ ಇತರ ಧಾನ್ಯ ಅಥವಾ ಸಕ್ಕರೆ, ಮೊ. ಗಳಿಂದ ಬಟ್ಟಿಯಿಳಿಸಿದ ಮದ್ಯ ; ವ್ಹಿಸ್ಕಿ. **Whískified** (ಹಾಸ್ಯ ಪ್ರ.) ವ್ಹಿಸ್ಕಿ ಅಮಲೇರಿದ. **W.-liver** ಮದ್ಯಸಾರ ವಿಷದಿಂದಾದ ಯಕೃತ್ತು ವಿಕಾರ : ವ್ಹಿಸ್ಕಿ ಯಕೃತ್ತು.

Whísky[2] ಹ್ವಿಸ್ಕಿ (ನಾ.) ಒಂದು ಬಗೆಯ ಹಗುರ ಕುದುರೆಬಂಡಿ.

Whísper ಹ್ವಿಸ್ಪರ್ (ಕ್ರಿ., ನಾ.) ಪಿಸುಗುಟ್ಟು, ಪಿಸುಮಾತಾಡು ; ಗುಟ್ಟಾಗಿ, ಕಿವಿಯಲ್ಲಿ, —ಉಸಿರು, ಹೇಳು ; ಏಕಾಂತವಾಗಿ ಮಾತಾಡು ; ಚಾಡಿ ಹೇಳು, ಸಂಚು ನಡಸು ; ಒಳಗೊಳಗೇ ಸುದ್ದಿ —ಹರಡು, ಹಬ್ಬಿಸು (It is whispered that) ; (ಎಲೆಗಳು, ಹೊಳೆ, ಮೊ. ಗಳ ವಿಷಯದಲ್ಲಿ) ಮರಮರಗುಟ್ಟು, ಜುಳು ಜುಳು ಧ್ವನಿ ಮಾಡು ; (Whispering-gallery ಒಂದು ಕಡೆ ಮಾಡಿದ ಅತ್ಯಂತ ಪಿಸು ಶಬ್ದ ದೂರದ ಮತ್ತೊಂದು ಕಡೆ ಕೇಳಿಸುವಂಥ ಧ್ವನಿಗುಣವುಳ್ಳ ಕಟ್ಟಡ, ಗುಹೆ, ಮೊ. ವು : ಪಿಸು—ಗುಹೆ, ಗುಮ್ಮಟ). (ನಾ.) ಪಿಸು ಮಾತು, ಕಿವಿಮಾತು ; ಹೇಗೋ ಹುಟ್ಟಿ ಹಬ್ಬಿದ ಸುದ್ದಿ, ಗಾಳಿ ವರ್ತಮಾನ, ವದಂತಿ ; ಮರ ಮರ ಶಬ್ದ, ಜುಳು ಜುಳು ಧ್ವನಿ. **Whísperer** (ನಾ.) ; **Whíspering** (ನಾ.) ; **Whísperingly** (ಕ್ರಿ. ವಿ.)

Whist[1] ಹ್ವಿಸ್ಟ್, **Whisht** ಹ್ವಿಷ್ಟ್ (ಭಾವ. ಅವ್ಯ.) (ಈಗ ವಿರ. ಪ್ರ.) (ನಿಶ್ಶಬ್ದವಾಗಿರು ಎಂದು ಸೂಚಿಸುವಲ್ಲಿ) : ಹುಷ್ !

Whist[2] ಹ್ವಿಸ್ಟ್ (ಗು.) (ಪ್ರಾಚೀ. ಪ್ರ.) ಮೌನವಾದ, ನಿಶ್ಶಬ್ದವಾದ.

Whist[3] ಹ್ವಿಸ್ಟ್ (ನಾ.) ಸಾ., ನಾಲ್ವರೂ, ವಿಶೇಷ ಸಂದರ್ಭಗಳಲ್ಲಿ ಮೂವರೂ ಅಥವಾ ಇಬ್ಬರೂ ಆಡುವ, ಆಟಗಾರರ ಚಾತುರ್ಯಕ್ಕೂ ಅದೃಷ್ಟಕ್ಕೂ ಅವಕಾಶವಿರುವ ಒಂದು ಇಸ್ಪೀಟಾಟ : ವ್ಹಿಸ್ಟ್ ಆಟ [Long, short, w. ೧೦, ೫ ಗೆಲ್ಲಂಕಗಳ ವ್ಹಿಸ್ಟ್ ಆಟ. Dummy, Double dummy, w. (Dummy ನೋಡಿ). Rubber of w. (Rubber[2] ನೋಡಿ)]

Whístle ಹ್ವಿಸ್‌ಲ್ (ಕ್ರಿ., ನಾ.) ಸಿಳ್ಳು, ಸೀಟಿ, ಸಿಲ್ಪೆ,—ಹಾಕು, ಊದು ; (ಕ್ಷಿಪಣಿ, ಗಾಳಿ, ಮೊ. ಗಳ ವಿಷಯದಲ್ಲಿ) ಸಿಳ್ಳುಸದ್ದಿನೊಡನೆ ರೊಯ್ಯನೆ ಚಲಿಸು [W. for a wind (ನಿರ್ವಾತ ಸ್ಥಳದಲ್ಲಿ ಸಿಕ್ಕಿಕೊಂಡ ನಾವಿಕರ ವಿಷಯದಲ್ಲಿ) ಗಾಳಿಗಾಗಿ—ಸಿಳ್ಳು ಹಾಕು, ಹಂಬಲಿಸು. May w. for it ವ್ಯರ್ಥವಾಗಿ ಆಸೆಪಡು, ಹಂಬಲಿಸು. Let one go w. ಒಬ್ಬನ ಆಸೆಯನ್ನು, ಅಪೇಕ್ಷೆಯನ್ನು, —ಲೆಕ್ಕಿಸದಿರು, ಉಪೇಕ್ಷಿಸು]. ಬೇಹುಕಾರನಾಗಿ ಕೆಲಸಮಾಡು, ತಕ್ಕೀರುದಾರರ ಮೇಲೆ ದೂರು ತರು ; (ನಾಯಿ, ಸೇವಕ, ಮೊ. ಗೆ) ಸಿಳ್ಳುಹಾಕಿ ಸೂಚನೆ ಕೊಡು, (—ಮೊ. ನ್ನು) ಸಿಳ್ಳುಹಾಕಿ ಕರೆ [W. down the wind (ರೂಪ.) ಬಿಟ್ಟುಬಿಡು, ತ್ಯಜಿಸು]. (ನಾ.) ಸಿಳ್ಳು, ಸೀಟಿ, ಸಿಲ್ಪೆ (Penny w. ಆರು ಕಂಡಿಗಳುಳ್ಳ ತವರದ ಸಿಲ್ಪೆ : ತವರದ ಪೀಪಿ. Steam w. ಆವಿ ಸಿಳ್ಳು. Pay for one's w. ತನ್ನ ಖುಷಿಯ ವಸ್ತುವಿಗಾಗಿ, ಕಯಾಲಿಗಾಗಿ, ವಿಪರೀತ ತೆರು) ; ಗಂಟಲು [Wet one's w. (Wet ನೋಡಿ)]. **Whístler** (ನಾ.) (ಕ್ರಿಯಾರ್ಥಗಳಲ್ಲಿ) ; ಹಲವು ಬಗೆಯ ಹಕ್ಕಿ. **Whístling** (ವರ್ತಮಾನ ಕೃ., ಗು.) (ಹಕ್ಕಿಗಳ ಮತ್ತು ಪ್ರಾಣಿಗಳ ಕೆಲವು ಜಾತಿನಾಮಗಳಲ್ಲಿ ಪ್ರ.) : Whistling eagle, whistling marmot.

Whit[1] ಹ್ವಿಟ್ (ನಾ.) ಎಳ್ಳಷ್ಟು, ಕಣ, ಲವ, ಲೇಶ (In no w., not *or* never a w. ಲೇಶ ಮಾತ್ರವೂ ಇಲ್ಲ)

Whit[2] ಹ್ವಿಟ್, **Whítsun** ಹ್ವಿಟ್ಸನ್ (ಗು.) Whit Sunday ಈಸ್ಟರ್ ತರುವಾಯದ ಏಳನೆಯ ಭಾನುವಾರ. Whit Monday, Tuesday ಈ ಭಾನುವಾರದ ಮಾರನೆಯ ಸೋಮವಾರ, ಮಂಗಳವಾರ. Whit week, Whitsun week ವ್ಹಿಟ್ ಭಾನುವಾರದ ಸಪ್ತಾಹ. **Whítsuntide** (ನಾ.) ವ್ಹಿಟ್ ಭಾನುವಾರ ಮತ್ತು ಅದರ ಮುಂದಿನ ದಿನಗಳು.

White ಹ್ವೈಟ್ (ಗು.) ಬಿಳಿಯ (ಬಣ್ಣದ), ಶ್ವೇತ (ವರ್ಣದ), ಧವಳ (ವರ್ಣದ) ; ಬಿಳಿಚಿಕೊಂಡ, ನಿಸ್ತೇಜ, ಪಾಂಡುರ [W. as a sheet (ಶವ ವಸ್ತ್ರದಂತೆ) ತುಂಬ ಬಿಳಿಚಿಕೊಂಡು. Bleed w. (ರೂಪ.) (ಹಣ, ಮೊ. ನ್ನು) ಪೂರ್ತಿ ಸುಲಿಗೆ ಮಾಡು, ಬರಿದು ಮಾಡಿಬಿಡು (ಕರುವಿನ ಮಾಂಸವನ್ನು ಬಿಳಿದು ಮಾಡುವುದಕ್ಕಾಗಿ ಕರುವನ್ನು ನೇಣಿಂದ ತೂಗ ಹಾಕುವ ಪದ್ಧತಿಯಿಂದ)] ; ಬಿಳಿಪು ಸೇರಿರುವ, ಕೊಂಚ ಬಿಳುಪಾಗಿರುವ (W.-backed, -beaked, -bearded, -tailed, ಮೊ.) ; (ನೀರು, ಗಾಳಿ, ಬೆಳಕು, ಮೊ. ಗಳ ವಿಷಯದಲ್ಲಿ) ತಿಳಿಯಾದ, ಶುಭ್ರ, ಪಾರದರ್ಶಕ, ನಿರ್ವರ್ಣ ; (ರೂಪ.) ಪರಿಶುದ್ಧ, ಶುಚಿ, ನಿಷ್ಕಳಂಕ, ನಿರ್ಮಲ ; ನಿರಪಾಯದ, ಸಾಧುವಾದ. ಬಿಳಿಯ ಜನರ, ಶ್ವೇತವರ್ಣಿಗಳ (W. culture, civilization) ; (ರಾಜ್ಯಶಾಸ್ತ್ರ) ರಾಜಪಕ್ಷದ, ಕ್ರಾಂತಿ ವಿರುದ್ಧ, ಸುಧಾರಣ ವಿರುದ್ಧ (ಎದುರು ಪದ: Red). **W. alloy** ಬೆಳ್ಳಿಯಂತೆ ಕಾಣುವ ಅಗ್ಗದ ಮಿಶ್ರ ಲೋಹ(ಗಳಲ್ಲೊಂದು) ; ಬೆಳ್ಳಿ ಮಿಶ್ರ ಲೋಹ. **W. ant** ಗೆದ್ದಲು. **Whítebait** ಒಂದು ಜಾತಿಯ ಬೆಳ್ಳಿಬಿಳುಪಿನ ಸಣ್ಣ ಮೀನು : ಬೆಳ್ಮೀನು. **Whítebeam** ಬೆಳ್ಳಿಬಿಳುಪಿನ ತಳ ಪಾರ್ಶ್ವದ ಎಲೆಗಳುಳ್ಳ ಒಂದು ಸಣ್ಣ ಮರ. **W. bear** (ಉ. ಧ್ರುವ ಪ್ರದೇಶದ) ಬಿಳಿಯ ಕರಡಿ. **Whíteboy** ಐರ್ಲೆಂಡಿನಲ್ಲಿ ೧ಲನೆಯ ಶ.ಮಾ. ದಲ್ಲಿ ಭೂಸ್ವತ್ತಿಗೆ ಸಂಬಂಧಪಟ್ಟ ಒಂದು ಕಾನೂನು ವಿರುದ್ಧ ಸಂಘಕ್ಕೆ ಸೇರಿದ್ದ, ರಾತ್ರಿ ಸಭೆಗಳಲ್ಲಿಯೂ ದೊಂಬಿಗಳಲ್ಲಿಯೂ ಬಿಳಿಯ ಅಂಗಿ ತೊಡುತ್ತಿದ್ದ, ಸದಸ್ಯ : ಬೆಳ್ಳಂಗಿ. **W.-caps** (ಸಮುದ್ರದಲ್ಲಿ) ನೊರೆ ತಲೆಯ ಹೆದ್ದೆರೆಗಳು. **W. corpuscle** ಬಿಳಿಯ ರಕ್ತಕಣ, ರಕ್ತದ ಶ್ವೇತಕಣ. **W. crow**[1], **elephant, ensign, feather** (ಆಯಾ ಪದ ನೋಡಿ). **W.-fish** ಬಿಳಿಯ ಜಾತಿಯ ಮೀನು(ಗಳಿಗೆ ಸಾಮಾನ್ಯ ಹೆಸರು). **W. flag**[4], **frost** (ಆಯಾ ಪದ ನೋಡಿ). **W. gloves** (ವಿಚಾರಣೆ ನಡಸುವುದಕ್ಕೆ ತಕ್ಕೀರು ಮೊಕದ್ದಮೆಗಳೇ ಇಲ್ಲದಿರುವ ನ್ಯಾಯಾಧೀಶನಿಗೆ ಗೌರವಾರ್ಥವಾಗಿ ಕೊಡುವ) ಬಿಳಿಯ ಕೈಚೀಲ. **W.-gum** ಮಕ್ಕಳ ಕುತ್ತಿಗೆ ಮತ್ತು ತೋಳುಗಳಮೇಲೆ ಗುಳ್ಳೆಗಳಾಗುವ ಒಂದು ಚರ್ಮರೋಗ : ಬಿಳಿ ಬೊಕ್ಕೆ ರೋಗ. **Whítehall** (ಲಂಡನಿನಲ್ಲಿ) ಸರಕಾರದ ಕಚೇರಿಗಳು ; ಇಲಾಖಾ ಸರಕಾರ (ಲಂಡನಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ಬೀದಿಯ ಹೆಸರು). **W. hands** (ಏನೂ ಕೆಲಸಮಾಡದ್ದರಿಂದ) ಬೆಳ್ಳಗಿರುವ ಕೈಗಳು ; (ರೂಪ.) ನಿರಪರಾಧಿತನ, ಪರಿಶುದ್ಧತೆ, ನಿಷ್ಕಳಂಕತೆ, ಪ್ರಾಮಾಣಿಕತೆ. **W.-handed** (ಗು.) ; **W. heart-cherry** ನಾಸಲು ಬಣ್ಣದ, ಹೃದಯಾಕಾರದ, ಚೆರಿ ಹಣ್ಣು. **W.-heat** ಬೆಳ್ಗಾವು; (ರೂಪ.) (ಮನೋಭಾವ, ಮೊ. ಗಳ ವಿಷಯದಲ್ಲಿ) ಅತ್ಯುದ್ರೇಕ, ತೀಕ್ಷ್ಣತೆ. **W.-hot** (ಗು.) ; **W. horses** ಬೆಳ್ನೊರೆಯ ಹೆದ್ದೆರೆಗಳು. **W. House** ಅಮೆ. ಸಂ. ದ ಅಧ್ಯಕ್ಷನ ಅಧಿಕೃತ ವಾಸಸ್ಥಾನ : ಶ್ವೇತಭವನ. **W. lead**[1], **lie**[1] (ಆಯಾ ಪದ ನೋಡಿ). **Whiteleather** (ನಾ.) (ಓಕ್ ಚೆಕ್ಕೆಯ ಕಷಾಯಕ್ಕೆ ಬದಲು ಪಟಿಕದಿಂದ ಸಂಸ್ಕರಿಸಿದ) ಬಿಳಿ ಚರ್ಮ. **W. light** ನಿರ್ವರ್ಣ ಪ್ರಕಾಶ, ಬಣ್ಣವಿಲ್ಲದ ಬೆಳಕು (ಉದಾ., ಹಗಲ ಬೆಳಕು) ; (ರೂಪ.) ನಿಷ್ಪಕ್ಷಪಾತವಾದ ವಿವೇಚನೆ. **W.-lipped** (ಭಯದಿಂದ) ತುಟಿ ಬಿಳಿಚಿಕೊಂಡ, ಬೆಳ್ದುಟಿಯ. **W.-livered** ಪುಕ್ಕಲಾದ, ಹೇಡಿಯಾದ. **W. magic** (Magic ನೋಡಿ). **W. man** (ಮು., ಯೂರೋಪಿನ) ಬಿಳಿತೊಗಲಿನ ಜನಾಂಗದವನು : ಬಿಳಿಯ, ಶ್ವೇತವರ್ಣಿ [The w. man's burden (ಪ್ರಪಂಚವನ್ನು ಮುನ್ನಡಸಲು ತನಗಿರುವುದೆಂದು ಹೇಳಿಕೊಳ್ಳುವ) ಬಿಳಿಯನ ಕರ್ತವ್ಯಭಾರ] ; (ಬಳ. ಮಾ.) ಒಳ್ಳೆಯ ನಡತೆವಂತ, ಸಭ್ಯ. **W. meat** ಕೋಳಿ, ಕರು, ಮೊಲ, ಹಂದಿ—ಇವುಗಳ ಮಾಂಸ : ಬಿಳಿ ಮಾಂಸ. **W. metal** = W. alloy. **W. mixture** (ಆಸ್ಪತ್ರೆಯಲ್ಲಿ ಕೊಡುವ) ಒಂದು ಭೇದಿ ಔಷಧ. **W. paper** ಜನರ ತಿಳಿವಳಿಕೆಗಾಗಿ ಸರಕಾರದವರು ಹೊರಡಿಸುವ ವರದಿ : ಶ್ವೇತಪತ್ರ. **W. scourge** ಒಂದು ಬಗೆಯ ಕ್ಷಯ ರೋಗ. **W. sheet** (ಬಿಳಿಯ ಹಚ್ಚಡ) : ಪಶ್ಚಾತ್ತಾಪಿಯ ಉಡುಪು (Stand in a w. sheet ಪಶ್ಚಾತ್ತಾಪಪಡು). **W. slave** ಸೂಳೆಗಾರಿಕೆಗಾಗಿ ಮೋಸದಿಂದ ಹಿಡಿದು ರವಾನಿಸಿದ ಹುಡುಗಿ : ಸೂಳೆತೊತ್ತು (The w. slave traffic. The w. slavery). **Whítesmith** ತವರ (ಕೆಲಸ)ಗಾರ ; ಕಬ್ಬಿಣಕ್ಕೆ ತವರದ ಮುಲಾಮು ಕೊಡುವವನು; ಹೊಳಪು ಕೊಡುವವನು. **W. squall** (Squall ನೋಡಿ). **White-thorn** = Hawthorn (ಆ ಪದ ನೋಡಿ). **W.-throat** ಹಲವು ಬಗೆಯ ಹಾಡುಹಕ್ಕಿ. **W. Tsar** = ರಷ್ಯದ ಝಾರ್ ಚಕ್ರವರ್ತಿ(ಗೆ ಏಷ್ಯನರ ಪ್ರ.). **Whítewash** (ನಾ., ಕ್ರಿ. ಸಕ.) ಸುಣ್ಣದ ನೀರು ; (ಶುಭ್ರವಾಗಿ ಕಾಣುವಂತೆ)ಸುಣ್ಣದ—ತೊಡೆತ, ಬಳಿತ; (ರೂಪ.) ದೋಷಾರೋಪಣೆಯನ್ನು ಮುಚ್ಚಿಡುವ, ಬಣ್ಣ ಕಟ್ಟುವ, ಉಪಾಯ : ತಿಪ್ಪೆ ಸಾರಿಸುವುದು; (ಬಳ. ಮಾ.) ಇತರ ಮದ್ಯಗಳನ್ನು ಕುಡಿದ ತರುವಾಯ ಕುಡಿಯುವ ಷರಿ ಮದ್ಯ ; ಮೇಲುವರಿಸೆ ಷರಿ ಮದ್ಯ. (ಕ್ರಿ.) ಸುಣ್ಣ—ತೊಡೆ, ಬಳಿ ; ದೋಷಾರೋಪಣೆಯನ್ನು ಮುಚ್ಚಿಡಲು ಪ್ರಯತ್ನಿಸು, ತಿಪ್ಪೆ ಸಾರಿಸು ; (ಕರ್ಮಣಿ ಪ್ರ.) (ದಿವಾಳಿಯ ವಿಷಯದಲ್ಲಿ) ದಿವಾಳಿ ನ್ಯಾಯಸ್ಥಾನದ ಮೂಲಕ ಸಾಲದ ಹೊಣೆಗಾರಿಕೆ ಕಳೆದುಕೊ(ಂಡು ಹೊಸ ಜೀವನ ಪ್ರಾರಂಭಿಸು). **W. wine** ಅಂಬರ್ ಬಣ್ಣದ ಅಥವಾ ಹೊಂಬಣ್ಣದ ದ್ರಾಕ್ಷಾಮದ್ಯ. **W. witch** ಒಳ್ಳೆಯದಕ್ಕಾಗಿ ಮಾತ್ರ ತನ್ನ ಶಕ್ತಿ ಉಪಯೋಗಿಸುವ ಮಂತ್ರವಾದಿ(ನಿ) : ಸಾಧು ಮಂತ್ರವಾದಿ(ನಿ). **Whítely** (ಕ್ರಿ. ವಿ.) (ವಿರ. ಪ್ರ.) ; **Whíten** (ಕ್ರಿ.) ; **Whítening** (ನಾ.) = Whiting[1]. **Whíteness** (ನಾ.) ; **Whítish** (ಗು.) ; **Whíting**[1] (ನಾ.) ಆಹಾರವಾಗಿ ಉಪಯೋಗಿಸುವ ಒಂದು ಬಗೆಯ ಮೀನು. **W. pout** ವೈಟಿಂಗ್ ಮೀನನ್ನು ಹೋಲುವ, ತಲೆಯಮೇಲೆ ಉಬ್ಬಿಕೊಳ್ಳುವ ಪೊರೆಯುಳ್ಳ, ಒಂದು ಜಾತಿಯ ಮೀನು. **Whíty** (ಗು.) ಬಿಳಿ ಛಾಯೆಯ (W. brown)

White (ಕ್ರಿ. ಸಕ.) (ಪ್ರಾಚೀ. ಪ್ರ.) ಬೆಳ್ಳಗಾಗಿಸು, ಬಿಳಿಚಿಸು. **Whiting**[2] (ನಾ.) ಗೋಡೆಗೆ ತೊಡೆಯುವುದು, ತಟ್ಟೆ ತೊಳೆಯುವುದು, ಮೊ. ಕ್ಕಾಗಿ ಉಪಯೋಗಿಸುವ, ಒಣಗಿಸಿ ಪುಡಿಮಾಡಿದ ಸೀಮೆಸುಣ್ಣ : ಸೀಮೆಸುಣ್ಣದ ಪುಡಿ, ಬೆಳಗುವ ಪುಡಿ.

White (ನಾ.) ಬಿಳಿಯ ಬಣ್ಣ, ಶ್ವೇತವರ್ಣ ; ಹಲವು ಬಗೆಯ ಬಿಳಿಯ ವರ್ಣದ್ರವ್ಯ [Chinese w. (Chinese ನೋಡಿ)] ; ಬಿಳಿಯ—ಬಟ್ಟೆ, ವಸ್ತು (Dressed in w.) ; ಮೊಟ್ಟೆಯ ಬಿಳಿಯ ಲೋಳೆ ; ಕಣ್ಣುಗುಡ್ಡೆಯ ಬಿಳಿಯ ಭಾಗ, ಬಿಳಿಯ ಗುಡ್ಡೆ ; ಬಿಳಿಯ (ಮನುಷ್ಯ), ಶ್ವೇತವರ್ಣಿ [Mean w. (Mean[2] ನೋಡಿ)] ; ಹಲವು ಬಗೆಯ ಚಿಟ್ಟೆ ; (ವೈ. ಶಾ.) (ಬ. ವ. ದಲ್ಲಿ) ಬಿಳಿ ಸೆರಗು, ಶ್ವೇತಪ್ರದರ (= Leucorrhoea)

Whítehall, Whítening. White ನೋಡಿ.

Whíther ಹ್ವಿದರ್ (ಕ್ರಿ. ವಿ., ನಾ.) (ಮು., ಪ್ರಾಚೀ. ಪ್ರ.) ಎಲ್ಲಿಗೆ, ಯಾವೆಡೆಗೆ, ಯಾವ ಕಡೆಗೆ (I see w. your question tends ನಿನ್ನ ಪ್ರಶ್ನೆ ಎಲ್ಲಿಗೆ ಎಳೆಯುತ್ತದೆ, ಯಾವ ಕಡೆಗೆ ಒಲೆಯುತ್ತದೆ, ಎಂದು ತಿಳಿಯಿತು). (ನಾ.) ಮುಟ್ಟಬೇಕಾದ, ಸೇರಬೇಕಾದ,—ಸ್ಥಳ ; ಗಮ್ಯಸ್ಥಾನ [Our w. hence & our w ನಾವು ಬಂದ ಮೂಲ ಮತ್ತು ಹೋಗುವ ಎಡೆ. No w. (ಪ್ರಾಚೀ. ಪ್ರ.) ಎಲ್ಲಿಗೂ, ಯಾವ ಸ್ಥಳಕ್ಕೂ,—ಇಲ್ಲ]. **Whithersoéver** (ಕ್ರಿ. ವಿ.) ಎಲ್ಲಿಗೇ ಆಗಲಿ, ಎಲ್ಲಿಗಾದರೂ. **Whítherward** (ಕ್ರಿ. ವಿ.) ಯಾವ ಕಡೆಗೆ, ಎತ್ತ.

Whíting, Whíteleather. White ನೋಡಿ.

Whítlow ಹ್ವಿಟ್ಲೊ (ನಾ.) ಉಗುರುಸುತ್ತು.

Whítsun. Whit[2] ನೋಡಿ.

Whíttle[1] ಹ್ವಿಟ್‌ಲ್ (ನಾ.) (ಪ್ರಾಚೀ. ಪ್ರ.) (ಮು., ಕಟುಕರು ಉಪಯೋಗಿಸುವಂಥ) ಉದ್ದವಾದ ಚಾಕು.

Whíttle[2] ಹ್ವಿಟ್‌ಲ್ (ಕ್ರಿ.) (ಮರ, ಕೋಲು, ಮೊ. ನ್ನು) ಚಾಕುವಿಂದ ಹೆರೆ(ದುಹಾಕು), ಕೆತ್ತು ; ಹೆರೆದು—ರೂಪಕೊಡು, ಸಣ್ಣದುಮಾಡು ; (ಮೇಲಿಂದಮೇಲೆ ಕಳೆದು ಮೊತ್ತವನ್ನು, ಪ್ರಭಾವವನ್ನು) ಕಡಮೆಮಾಡು, ಕುಗ್ಗಿಸು (ಸಾ., *down, away* ಉಪ. ದೊಡನೆ)

Whíty. White ನೋಡಿ.

Whíz(z) ಹ್ವಿಸ್ (ಕ್ರಿ. ಅಕ., ನಾ.) ವ್ವಿಸ್ ಶಬ್ದ(ಮಾಡು), ರೊಯ್ (ಎನ್ನು). W.-bang ಜರ್ಮನರ, ವಿಪರೀತ ವೇಗದ, ಒಂದು ಸಣ್ಣ ಸಿಡಿಗುಂಡು.

Who ಹೂ (ಸ. ನಾ.; ಕರ್ಮ Whom ಹೂಂ, ಷಷ್ಠೀ Whose ಹೂಸ್) ಯಾರು, ಯಾವನು, ಯಾವಳು, ಎಂಥವನು (—ಳು, —ರು) [W. would have thought it ? (ಯಾರೂ ಅದನ್ನು ಯೋಚಿಸುತ್ತಿರಲಿಲ್ಲ ಎಂಬ ಅರ್ಥದಲ್ಲಿ) : ಯಾರುತಾನೆ ಅದನ್ನು ಯೋಚಿಸುತ್ತಿದ್ದರು ? Know who's w. ಯಾರು ಯಾರು ಎಂಥೆಂಥವರೆಂದು ತಿಳಿದಿರು. A who's who ಪ್ರಖ್ಯಾತ ಪುರುಷರ ಪರಿಚಯ ಪಟ್ಟಿ. The man whom you saw ನೀನು ನೋಡಿದ(ಂಥ) ಮನುಷ್ಯ. (ಪ್ರಾಚೀ. ಪ್ರ.) Who breaks pays ಒಡೆದವನು ತೆರುತ್ತಾನೆ]. **Whoéver, Whóso** (ಪ್ರಾಚೀ. ಪ್ರ.), **Whosoéver** (ಅವಧಾರಣ ಪ್ರ.), **Whoe'ér** (ಕಾವ್ಯ), **Whosoe'er** (ಕಾವ್ಯ) ಯಾರಾಗಲಿ, ಯಾರಾದರೂ. **Whoméver, Whomsoéver** ಯಾರನ್ನಾಗಲಿ, ಯಾರನ್ನಾದರೂ.

Whóa. Wo ನೋಡಿ.

Whole ಹೋಲ್ (ಗು.) (ಪ್ರಾಚೀ. ಪ್ರ.) ಸ್ವಸ್ಥ, ಆರೋಗ್ಯವಾಗಿರುವ, ನೆಮ್ಮದಿಯಾಗಿರುವ (They that be w. need not a physician). ಸುಸ್ಥಿತಿಯ(ಲ್ಲಿರುವ), ಭಂಗಕ್ಕೊಳಗಾಗಿಲ್ಲದ, ಅಖಂಡ, ಇಡಿಯ, ಸಂಪೂರ್ಣ (Hope you will come back w. ನಿರಪಾಯವಾಗಿ ಹಿಂದಿರುಗುತ್ತೀಯೆಂದು ನಂಬಿದ್ದೇನೆ. There is not a plate left w. ಒಂದು ತಟ್ಟೆಯೂ ಮುರಿಯದೆ ಬಿಟ್ಟಿಲ್ಲ. Has swallowed a raisin w. ದೊಡ್ಡ ದ್ರಾಕ್ಷಿಯನ್ನು ಉಂಡೆಯಾಗಿ ನುಂಗಿದ್ದಾನೆ) ; ಭಿನ್ನವಲ್ಲದ, ಪೂರ್ಣ (W. numbers ಪೂರ್ಣಾಂಕಗಳು); ಕಡಮೆ ಮಾಡಿಲ್ಲದ, ಕಳೆದುಹಾಕಿರದ, ಅನ್ಯೂನ (Bread made of w. meal ತವುದು ತೆಗೆಯದ ಹಿಟ್ಟಿನಿಂದ ಮಾಡಿದ ರೊಟ್ಟಿ) ; ಪೂರ್ತಿ, ಪೂರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(Lasted three w. days) ; ಎಲ್ಲ, ಸರ್ವ, ಸಮಸ್ತ [The w. truth, world. Do thing with one's w. heart ಮನಃಪೂರ್ತಿಯಾಗಿ ಮಾಡು. The w. city ಪಟ್ಟಣದ ಜನವೆಲ್ಲ ; ಪಟ್ಟಣವೆಲ್ಲ. Committee of the w. House (Committee ನೋಡಿ). Go the w. hog (Hog ನೋಡಿ)]. **W.-coloured** ಎಲ್ಲವೂ, ಒಟ್ಟು, —ಒಂದೇ ಬಣ್ಣದ. **W.-hearted** (ಗು.) ಮನಃಪೂರ್ತಿಯಾದ. **W.-heártedly** (ಕ್ರಿ. ವಿ.) ; **W.-heártedness** (ನಾ.) ; **W.-hógger** (ಮು., ಸ್ವದೇಶಿ ಕೈಗಾರಿಕೆಗಳ ವಿಷಯದಲ್ಲಿ) ಸಂಪೂರ್ಣ ರಕ್ಷಣವಾದಿ. **W.-hoofed** ಸೀಳದ, ಅಖಂಡ, ಇಡಿಯ, —ಗೊರಸುಳ್ಳ. **W.-length** ಪೂರ್ತಿ ದೇಹದ, ಅಖಂಡಾಕೃತಿಯ (ಚಿತ್ರ). **Whólesale** (ನಾ., ಸಾ., ವಿಶೇಷಣ ಪ್ರ.) ಒಟ್ಟು(ಗಟ್ಟಳೆ) ವ್ಯಾಪಾರ, ಸಗಟು ವ್ಯಾಪಾರ (A w.-s. dealer ಒಟ್ಟುಗಟ್ಟಳೆ ವ್ಯಾಪಾರಿ. W.-s. prices ಒಟ್ಟು ಗಟ್ಟಳೆ ದರ). (ಗು., ಕ್ರಿ. ವಿ.) ಒಟ್ಟುಗಟ್ಟಳೆ(ಯಾಗಿ) (Sells w.-s.); (ರೂಪ.) ಒಟ್ಟುಗಟ್ಟಳೆ (A w.-s. slaughter. Sends out begging letters w.-s.). **Whólesaler** (ನಾ.) ಒಟ್ಟು, ಸಗಟು, —ವ್ಯಾಪಾರಿ. **Whóleness** (ನಾ.) ; **Whólesome** (ಗು.) ಆರೋಗ್ಯಕರ, ಹಿತಕರ, ಬುದ್ಧಿಯನ್ನು ಹದಗೊಳಿಸುವ (W. food, air, advice, excitement). **Whólesomely** (ಕ್ರಿ. ವಿ.) ; **Whólesomeness** (ನಾ.) ; **Whólly** ಹೋಲಿ(ಲ್ಲಿ) (ಕ್ರಿ. ವಿ.) ಪೂರ್ತಿಯಾಗಿ (I am w. yours); ತೀರ (A w. bad example)

Whole (ನಾ.) ಅಖಂಡ, ಸಮಗ್ರ, ಸಂಪೂರ್ಣ, —ವಾದ್ದು ; ಉಂಡೆ ; ಒಟ್ಟು, ಎಲ್ಲ (On, upon, the w. ಒಟ್ಟಿನಮೇಲೆ) ; ಅಖಂಡತೆ, ಸಂಪೂರ್ಣತೆ, ಸರ್ವಾಂಗ ಪೂರ್ಣತೆ (Nature is a w. ಪ್ರಕೃತಿ ಅಖಂಡವಾದುದು. The w. & the parts ಒಟ್ಟು ಮತ್ತು ಅದರ ಭಾಗಗಳು)

Whom, Whomévér, Whomsoéver. Who ನೋಡಿ.

Whoop = Hoop[2].

Whop ಹ್ವಾಪ್ (ಕ್ರಿ. ಸಕ.) (ಅಸಂ.) ಚೆನ್ನಾಗಿ ಹೊಡೆ, ಚಚ್ಚು ; (ರೂಪ.) ಸೋಲಿಸು ; (ವರ್ತಮಾನ ಕೃ.) ಭಾರಿ (A whopping lie ಭಾರಿ ಸುಳ್ಳು). **Whópper** (ನಾ.) ಭಾರಿಯಾದ್ದು, ಭಾರಿ ಸುಳ್ಳು. **Whópping** (ನಾ.)

Whoópee ವೂಪೀ (ನಾ.) (ಅಮೆ. ನಂ., ಬಳ. ಮಾ.) Make w. ಸಂತೋಷ ಸಂಭ್ರಮದಲ್ಲಿರು ; ಮಜಾಮಾಡು.

Whore ಹ್ವೋ(ಅ)ರ್ (ನಾ., ಕ್ರಿ. ಅಕ.) (ಶಿಷ್ಟ ಪ್ರ. ಅಲ್ಲ) ಸೂಳೆ, ಗುಡಿಸೆಟ್ಟಿ, ಹಾದರಗಿತ್ತಿ, ವ್ಯಭಿಚಾರಿಣಿ [The scarlet W. (Scarlet ನೋಡಿ). W.-master, W.-monger ಹಾದರಮಾಡುವವನು, ವ್ಯಭಿಚಾರಿ]. (ಕ್ರಿ.) ಹಾದರ, ವ್ಯಭಿಚಾರ, —ಮಾಡು. (ರೂಪ., ಪ್ರಾಚೀ. ಪ್ರ.) (ನಿಜವಾದ ದೇವರನ್ನು ಬಿಟ್ಟು) ಕಾಕುದೈವಗಳ ಭಜನೆಮಾಡು, ವಿಗ್ರಹಾರಾಧನೆ ಮಾಡು, ಪಾತಕಮಾಡು (Go a-whoring after strange gods). **Whóredom** (ನಾ.) ಹಾದರ, ವ್ಯಭಿಚಾರ, ಸೂಳೆಗಾರಿಕೆ.

Whorl ಹ್ವಾರ್‌ಲ್ (ನಾ.) (ಎಲೆ, ಎಸಳು, ಮೊ. ಗಳ) ಸುತ್ತು, ವಲಯ; ಸುರುಳಿಯ ಒಂದು ಸುತ್ತು ; ಸುರುಳಿ ; ಕದಿರಿನ ಚಲನೆಯನ್ನು ಸಮತೂಕದಲ್ಲಿಡಲು ಅದಕ್ಕೆ ಹಾಕಿರುವ ಬಿಲ್ಲೆ : ಕದಿರುಬಿಲ್ಲೆ. **Whorled** (ಗು.)

Whose, Whoso, Whosoéver. Who ನೋಡಿ.

Why ಹ್ವೈ (ಕ್ರಿ. ವಿ., ನಾ., ಭಾವ. ಅವ್ಯ.) ಏಕೆ, ಏತಕ್ಕಾಗಿ, ಯಾವ ಕಾರಣಕ್ಕಾಗಿ, ಏತಕ್ಕೋಸ್ಕರ. (ನಾ.) ಕಾರಣ, ಸಮಜಾಯಿಷಿ, ಸ್ಪಷ್ಟೀಕರಣ (Cannot go into the whys & wherefores now ಈಗ ಅದರ ಏಕೆ ಎತ್ತಗಳನ್ನು ಶೋಧಿಸಲಾಗುವುದಿಲ್ಲ). (ಭಾವ. ಅವ್ಯ.) (ಆಶ್ಚರ್ಯಸೂಚಕ) : W., what a bruise you have got ! (ಪ್ರಶ್ನೆ, ಮೊ. ವು ಬಹಳ ಸುಲಭವೆಂದು ಹೇಳುವಲ್ಲಿ) : W., a child could answer that. (ಯೋಚನೆ ಮಾಡಲು ನಿಧಾನಿಸುವ ಸಂದರ್ಭದಲ್ಲಿ) : 'Is it true ?' 'W., yes, I think so.' (ಆಕ್ಷೇಪಣೆ—ಸೂಚಿಸುವಲ್ಲಿ, ಇಲ್ಲವೆನ್ನುವಲ್ಲಿ) : W., what is the harm ? (ಸಂಭಾವನಾ ವಾಕ್ಯದಲ್ಲಿ) : If silver will not do, w., we must try gold.

Wick[1] ವಿಕ್ (ನಾ.) (ದೀಪದ) ಬತ್ತಿ ; (ಶಸ್ತ್ರಚಿಕಿತ್ಸೆಯಲ್ಲಿ) ರಸಿಕೆ, ಕೀವು, ಮೊ. ನ್ನು ಹೀರುವುದಕ್ಕಾಗಿ ಗಾಯದೊಳಗಿಡುವ ಜಾಲರಿಬಟ್ಟೆ : ಹೀರುಬತ್ತಿ.

Wick[2] ವಿಕ್ (ನಾ.) (ಸ್ಥಳದ ಹೆಸರುಗಳಲ್ಲಿ ಹೊರತು ಮಿಕ್ಕ ಕಡೆ ವಿರ. ಪ್ರ.) ಹಳ್ಳಿ, ಊರು, ಪ್ರಾಂತ (ಉದಾ., Hampton W. ; Bailiwick)

Wícked ವಿಕೆಡ್ (ಗು.) ಕೆಟ್ಟ, ದುಷ್ಟ, ಖಳ, ದುರುಳ, ನೀಚ, ಪಾಪಿತನದ, ದುರ್ನಡತೆಯ, ದುರುದ್ದೇಶದ, ಹಗೆ ಸಾಧಿಸುವ, ಸೇಡಿನ, ದುರಾಗ್ರಹದ, ಕುಚೇಷ್ಟೆಯ, ಕೇಡಿಗತನದ, ಪಟಿಂಗತನದ. W. bible ಇಂಗ್ಲೆಂಡಿನಲ್ಲಿ ೧೬೩೧ರಲ್ಲಿ ಮುದ್ರಿಸಿದ್ದ, 'Thou shalt not commit adultery' ಎಂಬ ಏಳನೆಯ ವಿಧಿಯಲ್ಲಿ 'not' ಪದ ಬಿಟ್ಟುಹೋಗಿದ್ದ ಬೈಬಲ್ ಮುದ್ರಣ : ಭ್ರಷ್ಟ ಬೈಬಲ್. **Wíckedly** (ಕ್ರಿ. ವಿ.) ; **Wíckedness** (ನಾ.)

Wícker ವಿಕರ್ (ನಾ.) (ಕುಕ್ಕೆ, ಚಾಪೆ, ಕುರ್ಚಿ, ಮೊ. ನ್ನು ಮಾಡುವ) ಚಾಪೆಕಡ್ಡಿ, ಅಪು, ಜೊಂಡು ; 'ವಿಲೊ' ಎಂಬ ಮೊಶು ಕಡ್ಡಿ [(ಅನೇಕ ವೇಳೆ ವಿಶೇಷಣ ಪ್ರ.) : W. chair]. W.-work ಬುಟ್ಟಿ ಹೆಣಿಗೆಯ, ಮೇದರ, —ಕೆಲಸ. **Wíckered** (ಗು.) ಕಡ್ಡಿ, ಅಪು, —ಹೆಣೆದ, ಹೆಣೆದುಮಾಡಿದ.

Wícket ವಿಕೆಟ್ (ಗು.) (ಮು., ಹೆಬ್ಬಾಗಿಲನಲ್ಲಿಯೋ ಅದರ ಪಕ್ಕದಲ್ಲಿಯೋ ಇದ್ದು, ಅದು ತೆರೆದಿಲ್ಲದಾಗ ಬಳಸುವಂಥ) ಸಣ್ಣ ಬಾಗಿಲು, ಸಣ್ಣ ಗೇಟು ; ದಿಡ್ಡಿ(ಬಾಗಿಲು), ಕಡಕಲು (= W.-door, -gate) ; ತಿರುಗು ತೋಳ್ ಬಾಗಿಲು; ಕದದರ್ಲಾಗಲಿ ಗೋಡೆಯರ್ಲಾಗಲಿ ಸರಿಯುವ ಹಲಗೆಯಿಂದ ಮುಚ್ಚರಾಗುವ ತೆರಪು, ಕಂಡಿ : ಕವಾಟ—ಕಂಡಿ, ತೆರಪು ; ಬಾಗಿಲ ಕೆಳ ಅರ್ಧವನ್ನು ಮಾತ್ರ ಮುಚ್ಚುವ ಕದ : ಕೆಳ ಕದ ; (ಕ್ರಿಕೆಟ್ ಆಟ) ಗುರಿಕೋಲು (Keep w. ಗುರಿಕೋಲ ಹಿಂದೆ ನಿಂತು ಕಾಯಿ. W.-keeper ಗುರಿಕೋಲು ಕಾಪಲನವನು. Keep one's w. up ಆಟ ಕಳೆದುಕೊಳ್ಳದೆ ನಿಂತಿರು. Five wickets down ಐದು ದಾಂಡುಗಾರರ ಆಟ ಕಳೆಯಿತು. Match won by two wickets ಇನ್ನೂ ಆಡುವವರು ಮೂವರು ಇರುವಾಗಲೆ ಆಟ ಗೆದ್ದಿತು) ; (ಕ್ರಿಕೆಟ್ ಆಟದ) ರಂಗ (Play began on a perfect w.)

Wide ವೈಡ್ (ಗು., ಕ್ರಿ. ವಿ., ನಾ.) ಅಗಲವಾದ [W. river. W. interval ತುಂಬ ಅಂತರ. W. margin (ರೂಪ.) (ಆವಶ್ಯಕವಾದುದಕ್ಕಿಂತ) ಹೆಚ್ಚಿಗೆ ಅವಕಾಶ. A strip 3 ft w. ಮೂರು ಅಡಿ ಅಗಲದ ಪಟ್ಟಿ] ; ವಿಸ್ತಾರವಾದ, ವಿಶಾಲವಾದ, ವ್ಯಾಪಕವಾದ [W. fame ವ್ಯಾಪಕ ಕೀರ್ತಿ. The w. world ವಿಶಾಲ ಪ್ರಪಂಚ. A w. domain ವಿಶಾಲ—ರಾಜ್ಯ, ಆಧಿಪತ್ಯ. Is of w. distribution ಹಲವು ಸ್ಥಳಗಳಲ್ಲಿ ದೊರಕುತ್ತದೆ, ಹರಡಿದೆ : ವಿಸ್ತಾರವಾಗಿ—ವ್ಯಾಪಿಸಿದೆ, ಚೆದರಿದೆ. There is a w. difference between —ಕ್ಕೂ ತುಂಬ ವ್ಯತ್ಯಾಸವಿದೆ. A w. generalization ಬಹು ವಿಶಾಲವಾದ ಸಾಮಾನ್ಯ ಲಕ್ಷಣೀಕರಣ. (ಕ್ರಿ. ವಿ.) The principle ranges w. ಈ ತತ್ತ್ವ ವಿಶಾಲ ವ್ಯಾಪಕವುಳ್ಳದ್ದು. Far & w. ದೂರವಾಗಿಯೂ ವಿಸ್ತಾರವಾಗಿಯೂ] ; ಸಡಿಲವಾದ, ದಗಲೆಯಾದ (W. knickerbockers ದಗಲೆ ಚಲ್ಲಣ) ; ಎಲ್ಲರಿಗೂ ತೆರೆದ, ಉದಾರವಾದ, ಪಕ್ಷಪಾತವಿಲ್ಲದ, ಸಾಮಾನ್ಯ, ಸಾಧಾರಣ [W. culture

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶಾಲ, ಸಾಮಾನ್ಯ, — ಸಂಸ್ಕೃತಿ. W. views ವಿಶಾಲ, ಉದಾರ, —ಭಾವನೆಗಳು. A w. guess (ಸೂಕ್ಷ್ಮ ವಿವರಗಳಲ್ಲಿ ವ್ಯತ್ಯಾಸ ವಿರಬಹುದಾದ ಅಥವಾ ತಪ್ಪುಗಳಿಗೆ ಅವಕಾಶವಿರಬಹುದಾದ) ಸ್ಥೂಲ ವಾದ, ವ್ಯಾಪಕವಾದ, —ಊಹೆ. Give w. berth to ದೂರದಲ್ಲೇ ಇರು, ಬೇಕಾದಷ್ಟು ಅವಕಾಶಕೊಡು. Staring with w. eyes ಅಗಲಿಸಿದ ಕಣ್ಣುಗಳಿಂದ ದುರುಗುಟ್ಟಿ ನೋಡುತ್ತ. (ಕ್ರಿ. ವಿ.) Person is w. awake ಪೂರ್ತಿ ಎಚ್ಚತ್ತಿದ್ದಾನೆ]; ಗುರಿಬಿಟ್ಟು ದೂರವಾಗಿ ಹೋದ, ನೆರೆಯಿಂದ ದೂರ ಆಚೆಗಾದ [W. ball (ಕ್ರಿಕೆಟ್) ದಾಂಡುಗಾರನ ಹೊಡೆತಕ್ಕೆ ಸಿಕ್ಕದಂತೆ ಗುರಿಕೋಲಿನಿಂದ ದೂರವಾಗಿ ಹೋದ ಚೆಂಡು (ಇದರಿಂದ ದಾಂಡುಗಾರನ ಕಡೆಗೆ ಒಂದು ಓಟದ ಅಂಕ ಸಿಕ್ಕುತ್ತದೆ): ದಾರಿ ತಪ್ಪಿದ ಚೆಂಡು (= **Wide** ನಾ.). Answer w. of the mark *or* purpose ಪ್ರಶ್ನೆಗೆ, ಉದ್ದೇಶಕ್ಕೆ, —ದೂರವಾದ ಉತ್ತರ. (ಕ್ರಿ. ವಿ.) Is shooting w. ಗುರಿಯಿಂದ ದೂರವಾಗಿ (ಬಾಣ) ಹೊಡೆಯುತ್ತಿದ್ದಾನೆ, (ಗುಂಡು) ಹಾರಿಸುತ್ತಿದ್ದಾನೆ]. **W. awake** (ಗು.) (ಬಳ. ಮಾ.) ಚೆನ್ನಾಗಿ—ಕಣ್ಣು ಬಿಟ್ಟುಕೊಂಡಿರುವ, ಎಚ್ಚತ್ತಿರುವ; (ರೂಪ.) ಬಹಳ ಜಾಗರೂಕ(ತೆಯಿಂದಿರುವ); ಹುಷಾರಿನ. **W.-awake** (ನಾ.) ಅಗಲ ಅಂಚಿನ ಮೃದುವಾದ ಫೆಲ್ಟ್ ಟೊಪ್ಪಿಗೆ. **W.-spread** (ಗು.) (ಮು., ನಂಬಿಕೆಗಳ ಅಥವಾ ಅಭಿಪ್ರಾಯಗಳ ವಿಷಯದಲ್ಲಿ) ವಿಸ್ತಾರವಾಗಿ ಹರಡಿರುವ, ಬಹು ವ್ಯಾಪಕ. **Wídely** (ಕ್ರಿ. ವಿ.); **Wíden** (ಕ್ರಿ. ಸಕ.); **Wídish** (ಗು.); **Width** ವಿಡ್ತ್ (ನಾ.) ಅಗಲ, ವಿಸ್ತಾರ; (ಮನಸ್ಸು, ಅಭಿಪ್ರಾಯ, ಮೊ. ಗಳ) ವೈಶಾಲ್ಯ, ಉದಾರತೆ; (ಬಟ್ಟೆ, ಮೊ. ಗಳ) ಪನ್ನ (Shall want three widths of it ಅದರ ಮೂರು ಪನ್ನ ಬೇಕಾಗುತ್ತದೆ)

Wídgeon ವಿಜ್ಜನ್ (ನಾ.) ಹಲವು ಬಗೆಯ ಕಾಡು ಬಾತು.

Wídow ವಿಡೋ (ನಾ., ಕ್ರಿ. ಸಕ.) ಗಂಡ ಸತ್ತವಳು, ವಿಧವೆ, ವಿತಂತು [Grass w. ಗಂಡನು ಬಿಟ್ಟುಬಿಟ್ಟರುವ, ಗಂಡನು ದೂರ ಇರುವ, —ಹೆಂಡತಿ: ಗಂಡನಿದ್ದೂ ಇಲ್ಲದವಳು. W.'s cruse, W.'s weeds (ಆಯಾ ಪದ ನೋಡಿ). W.'s mite ಅಲ್ಪವಾದರೂ ಸಂತೋಷದಿಂದ ಕೊಟ್ಟ ಸಹಾಯದ್ರವ್ಯ; ಯಥಾಶಕ್ತಿ ಸಹಾಯ] [(ವಿಶೇಷಣವಾಗಿ ಪ್ರ.) W. lady, W. woman]. (W.-bird ಕರಿಯ ಪುಕ್ಕದ ಒಂದು ಆಫ್ರಿಕದ ಹಕ್ಕಿ). (ಕ್ರಿ.) (ಒಬ್ಬಳ) ಗಂಡನನ್ನು, (ಒಬ್ಬನ) ಹೆಂಡತಿಯನ್ನು, —ಕೊಲ್ಲು, ಸಾಯಿಸು; ವಿಧವೆಯನ್ನಾಗಿ, ವಿಧುರನನ್ನಾಗಿ, —ಮಾಡು (The widowed father, mother ವಿಧುರನಾದ ತಂದೆ, ವಿಧವೆಯಾದ ತಾಯಿ); (ಕಾವ್ಯ) (ಸ್ನೇಹಿತ, ಮೊ. ರ) ವಿಯೋಗವುಂಟುಮಾಡು. **Wídower** (ನಾ.) ಹೆಂಡತಿ ಸತ್ತವನು, ವಿಧುರ. Grass w. ಹೆಂಡತಿ ಬಿಟ್ಟುಬಿಟ್ಟರುವ, ಹೆಂಡತಿ ದೂರ ಇರುವ, —ಗಂಡ: ಹೆಂಡತಿಯಿದ್ದೂ ಇಲ್ಲದವನು. **Wídowhood** (ನಾ.) ವೈಧವ್ಯ.

Width. **Wide** ನೋಡಿ.

Wield ವೀಲ್ಡ್ (ಕ್ರಿ. ಸಕ.) ನಿಯಂತ್ರಿಸು, ಪ್ರಯೋಗಿಸು, ನಿರ್ವಹಿಸು, ಉಪಯೋಗಿಸು, ಹಿಡಿ [W. power ಅಧಿಕಾರ(ಬಲ) ಚಲಾಯಿಸು, ಬಲ ಪ್ರಭಾವವುಳ್ಳವನಾಗಿರು. W. the sceptre ರಾಜ್ಯದಂಡ ಧರಿಸಿರು, ರಾಜ್ಯಭಾರ ನಡಸು. W. a kingdom ರಾಜ್ಯವಾಳು. W. weapon ಆಯುಧ—ಹಿಡಿ, ಪ್ರಯೋಗಿಸು]

Wife ವೈಫ್ (ನಾ.; ಬ. ವ. Wives ವೈವ್ಸ್) (ನಾ.) ಹೆಂಗಸು, ಸ್ತ್ರೀ [ಮು., ಹಳ್ಳಿಯ ಮುದುಕಿ ಅಥವಾ ಅಶಿಕ್ಷಿತ ಸ್ತ್ರೀ: ಅಮ್ಮಿ (ಈಗ ವಿರ. ಪ್ರ.). Old wives' tale ಅಜ್ಜಿಗೂಳಜ್ಜಿ ಕಥೆ. Fishwife, Housewife (Fish[1], House ನೋಡಿ); Midwife (ಆ ಪದ ನೋಡಿ)]; ಹೆಂಡತಿ, ಪತ್ನಿ, ಭಾರ್ಯೆ [Wedded, lawful, w. (ಅವಧಾರಣ ಪ್ರ.) ವಿವಾಹಿತ, ಧರ್ಮ, —ಪತ್ನಿ. All the world & his wife (World ನೋಡಿ). Have, take, to w. ಮದುವೆಯಾಗಿರು, ಮದುವೆಮಾಡಿಕೊ]. **Wífehood** (ನಾ.); **Wífie** (ನಾ.) ಮುದ್ದು ಮಡದಿ. **Wífeless** (ಗು.); **Wífelike** (ಗು.); **Wífely** (ಗು.) ಹೆಂಡತಿಗೆ ತಕ್ಕ.

Wig[1] ವಿಗ್ (ನಾ.) ಹಿಂದೆ ಅಲಂಕಾರಕ್ಕಾಗಿ, ಈಗಲೂ ಬಕ್ಕತಲೆಗೆ ಮರೆಯಾಗಿಯೋ, ವೇಷ ಮರಸಿಕೊಳ್ಳುವುದಕ್ಕಾಗಿಯೋ, ಅಧಿಕಾರದ ಉಡುಪಿನ ಅಂಗವಾಗಿಯೋ ಹಾಕಿಕೊಳ್ಳುವ ಕೃತಕ ತಲೆಗೂದಲು: ಕೂದಲ, ಚೌರಿ, —ಕುಲಾವಿ, ಟೋಪಿ. There will be wigs on the green ಮಾರಾಮಾರಿ ನಡೆಯುತ್ತದೆ. **-wigged** (ಗು.); **Wígless** (ಗು.)

Wig[2] ವಿಗ್ (ಕ್ರಿ. ಸಕ.) ಛೀಪೆಟ್ಟು ಹಾಕು, ತರಾಟಿಗೆ ತೆಗೆದುಕೊ, ವಾಗ್ದಂಡನೆಮಾಡು. **Wígging** (ನಾ.) ಛೀಪೆಟ್ಟು, ವಾಗ್ದಂಡನೆ.

Wígan ವಿಗನ್ (ನಾ.) ಗಡುಸು ಬರುವುದಕ್ಕಾಗಿ ಉಪಯೋಗಿಸುವ ನಾರುಬಟ್ಟೆಯಂಥ ಒಂದು ಹತ್ತಿಯ ಬಟ್ಟೆ: ವಿಗನ್ ಬಟ್ಟೆ (ಲಾಂಕಷೈರಿನಲ್ಲಿಯ ಊರಿನ ಹೆಸರಿನಿಂದ)

Wight ವೈಟ್ (ನಾ.) (ಪ್ರಾಚೀ. ಪ್ರ. ಅಥವಾ ಹಾಸ್ಯ ಪ್ರ.) ಮನುಷ್ಯ, ವ್ಯಕ್ತಿ (Luckless, wretched, w.)

Wígwam ವಿಗ್‌ವ್ಯಾ(ವಾ)ಂ (ನಾ.) (ಉ. ಅಮೆರಿಕದ ಇಂಡಿಯನರು ಚರ್ಮ, ಚಾಪೆ, ತೊಗಟೆ, ಮೊ. ಗಳಿಂದ ಕಟ್ಟಿಕೊಳ್ಳುವ) ಡೇರ, ಗುಡಿಸಿಲು.

Wild ವೈಲ್ಡ್ (ಗು., ಕ್ರಿ. ವಿ., ನಾ.) ಪಳಗಿ(ಸಿ)ಲ್ಲದ, ಕೃಷಿಮಾಡಿ ಬೆಳಸಿಲ್ಲದ, ವನ್ಯ, ಕಾಡು [W. beast, plant, man ಕಾಡು—ಪ್ರಾಣಿ, ಸಸ್ಯ, ಮನುಷ್ಯ. Wildcat ಕಾಡುಬೆಕ್ಕು; (ರೂಪ.) (ವಿಶೇಷಣ ಪ್ರ.) (ಹಣಕಾಸಿನ ವ್ಯವಹಾರ, ಸಟ್ಟಾ, ವಾಣಿಜ್ಯ ವ್ಯಾಪಾರ, ಮೊ. ಗಳ ವಿಷಯದಲ್ಲಿ) ನಿರ್ಲಕ್ಷ್ಯದ, ಬುಡಭದ್ರವಿಲ್ಲದ (A wild-cat bank) (**Wild-catter, -catting**)]. ನಯವಿಲ್ಲದ, ಒರಟು. [Wildgoose ಕಾಡುವರಟೆ; (ರೂಪ.) W.-g. chase ಅಸಾಧ್ಯ, ವ್ಯರ್ಥ,—ಉದ್ಯಮ(ದಲ್ಲಿ ತೊಡಗುವುದು); ಕಾಡುಕೋಳಿ ಬೇಟೆ, ಬಿಸಿಲ್ಗುದುರೆಯ ಬೇಟೆ. W. horse ಕಾಡುಕುದುರೆ (Be drawn by w. horses ಒಂದು ವಿಧದ ಉಗ್ರ ಯಾತನೆಯ ಮರಣಶಿಕ್ಷೆಯನುಭವಿಸು). W. hyacinth = Bluebell (Blue ನೋಡಿ). W. oat (Oat ನೋಡಿ). W. scenery ಕಾಡು, ಹಾಳು, —ನೋಟ, ದೃಶ್ಯ. Woodnotes w. ಅಕೃತಕ, ನೈಜ, —ಕಾವ್ಯ, ಕವನ]. (ಕುದುರೆ, ಬೇಟೆಹಕ್ಕಿ, ಮೊ. ಗಳ ವಿಷಯದಲ್ಲಿ) ಬೆದರುವ, ಹೆದರಿ ಓಡುವ, ಹತ್ತಿರ ಹೋಗಗೊಡದ: ಕಟ್ಟುನಿಟ್ಟಿಲ್ಲದ, ಹತೋಟಿ ಮೀರಿದ, ಹುಚ್ಚಾಬಟ್ಟೆಯ, ಉಚ್ಛೃಂಖಲ, ಅವ್ಯವಸ್ಥೆಯ, ಸಂಪ್ರದಾಯ ಶಿಷ್ಟಾಚಾರಗಳನ್ನು ಲಕ್ಷಿಸದ (W. times ಕ್ಷೋಭೆಯ ಕಾಲ. Has settled down after a w. youth ಉಚ್ಛೃಂಖಲ ಯೌವನ ಜೀವನದ ತರುವಾಯ ಒಂದು ನೆಲೆಗೆ ಬಂದಿದ್ದಾನೆ. W. work ಅನ್ಯಾಯದ, ನ್ಯಾಯಕ್ಕೆ ವಿರೋಧವಾದ, —ಕೆಲಸ(ಗಳು); ದುರಾಚರಣೆ. Run w. ಹುಚ್ಚಾಬಟ್ಟೆ ಬೆಳೆ); ಉಗ್ರ, ಹಿಂಸ್ರ, ಪ್ರಚಂಡ, ಘೋರ (A w. wind, night); ತೀವ್ರೋತ್ಸಾಹದ, ಆವೇಶದ, ಉದ್ರೇಕದ, ಹುಚ್ಚೆದ್ದ, ಉನ್ಮತ್ತ [W. with excitement ಸಂಭ್ರಮೋನ್ಮತ್ತ. The w. men (ಒಂದು ಪಕ್ಷ, ಮೊ. ಗಳಲ್ಲಿ) ಉಗ್ರಗಾಮಿಗಳು. W. about (person *or* subject) (ವ್ಯಕ್ತಿಯ ಅಥವಾ ವಿಷಯದ ಬಗ್ಗೆ) ತೀವ್ರಾಸಕ್ತಿಯುಳ್ಳ, ಹುಚ್ಚುಹಿಡಿದಿರುವ. W. delight, grief ಆನಂದೋದ್ರೇಕ, ಶೋಕೋದ್ರೇಕ. W. looks, appearance ಮತಿವಿಕಲ, ಉನ್ಮತ್ತ, ಘೋರ, —ಮುಖಭಾವ. Drive w. ಹುಚ್ಚು ಹಿಡಿಸು]; ಗೊತ್ತುಗುರಿಯಿಲ್ಲದ, ಸಿಕ್ಕಾಬಟ್ಟೆಯ, ನಿರ್ಲಕ್ಷ್ಯದ; (ಉದ್ರೇಕದಿಂದ) ಕಲಕಿದ, ಕ್ಷುಬ್ಧ [A w. guess ಸಿಕ್ಕಾಬಟ್ಟೆಯ ಊಹೆ. A w. venture ನಿರ್ಲಕ್ಷ್ಯದ ಸಾಹಸೋದ್ಯಮ. (ಕ್ರಿ. ವಿ.) Shoot, talk, w. ಸಿಕ್ಕಾಬಟ್ಟೆ, ಗೊತ್ತುಗುರಿಯಿಲ್ಲದೆ, —ಗುಂಡು ಹೊಡೆ, ಮಾತಾಡು. Wildfire = Greek fire (Fire ನೋಡಿ); Report spreads like w.-f.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುದ್ದಿ ಕಾಡುಕಿಚ್ಚಿನಂತೆ ಹರಡುತ್ತದೆ]. (ನಾ.) ಕಾಡುಮೇಡು, ಕಾಡು (ನೆಲ), ಮರುಭೂಮಿ. **Wilding** ವೈಲ್ಡಿಂಗ್ (ನಾ.) ಯಾರೂ ಕೃಷಿಮಾಡದೆ ತಾನಾಗಿ ಬೀಜಾವಾಪವಾಗಿ ಬೆಳೆದ ಸಸ್ಯ: ಕಾಡು ಗಿಡ (ಮು., ಕಾಡು ಸೇಬು—ಗಿಡ, ಹಣ್ಣು). **Wildish** (ಗು.); **Wildly** (ಕ್ರಿ. ವಿ.); **Wildness** (ನಾ.)

Wildebeest ವಿ(ೀ)ಲ್ಡಬೀ(ಬೇ)ಸ್ಟ್ (ನಾ.) ಒಂದು ಜಾತಿಯ ಜಿಂಕೆ.

Wilder ವಿಲ್ಡರ್ (ಕ್ರಿ. ಸಕ.) (ಕಾವ್ಯ.) = Bewilder.

Wilderness ವಿಲ್ಡರ್‌ನೆಸ್ (ನಾ.) ಕಾಡು, ಬಂಜರು, ಮರುಭೂಮಿ, ನಿರ್ಜನ ಪ್ರದೇಶ [Voice in the w. ಅರಣ್ಯರೋದನ. Wandering in the w. (ಅಧಿಕಾರದಲ್ಲಿಲ್ಲದ ರಾಜಕೀಯ ಪಕ್ಷದ ವಿಷಯದಲ್ಲಿ) ಕೆಲಸವಿಲ್ಲದೆ ಅಲೆಯುತ್ತ, ಅರಣ್ಯವಾಸ ಮಾಡುತ್ತ, ಹಾಳುಬಿದ್ದ]; (ತೋಟದಲ್ಲಿ) ಬೇಸಾಯಮಾಡದೆ ಪಾಳುಬಿದ್ದ ಪ್ರದೇಶ; ಪಾಳು (ನೆಲ); ಅಪರಿಮಿತ—ಸಂಖ್ಯೆ, ಪ್ರಮಾಣ (*Of* ಉಪ. ದೊಡನೆ) (A w. of monkeys)

Wilding. **Wild** ನೋಡಿ.

Wile ವೈಲ್ (ನಾ., ಕ್ರಿ. ಸಕ.) (ಸಾ., ಬ. ವ. ದಲ್ಲಿ) ತಂತ್ರ, (ಕು)ಯುಕ್ತಿ, ಹೂಟ. (ಕ್ರಿ.) ತಂತ್ರದಿಂದ—ಪಡೆ, ಬಲೆಗೆ ಕೆಡವು; ಮೋಸಗೊಳಿಸು, ಪುಸಲಾಯಿಸು (*Away, into* ಮೊ. ಉಪ. ದೊಡನೆ); (While ಪದಕ್ಕೆ ತಪ್ಪು ಪ್ರ.) (ವಿನೋದವಾಗಿ, ಆರಾಮವಾಗಿ—) ಕಾಲ ಕಳೆ (*Away*). **Wily** (ಗು.) (ಕು)ಯುಕ್ತಿಯ, ಮಾಯಾವಿಯಾದ, ತಂತ್ರಿಯಾದ, ತಂತ್ರದ. **Wilily** (ಕ್ರಿ. ವಿ.); **Wiliness** (ನಾ.)

Wilful. **Will** ನೋಡಿ.

Wilhelmstrasse ವಿಲ್‌ಹೆಲ್ಮ್‌ಷ್ಟ್ರಾಸೆ (ನಾ.) (ಬರ್ಲಿನಿನಲ್ಲಿ) ಜರ್ಮನಿಯ ವಿದೇಶಾಂಗ ಕಚೇರಿ ಮತ್ತು ಹಲವು ಸರ್ಕಾರೀ ಕಚೇರಿಗಳು ಇರುವ ಒಂದು ಬೀದಿ; (ರೂಪ.) ಜರ್ಮನಿಯ ವಿದೇಶಾಂಗ ನೀತಿ.

Will ವಿಲ್ [(ಕ್ರಿ. ಸಕ., ಸಹಾಯಕ ಕ್ರಿ.); ವರ್ತಮಾನ ರೂಪಗಳು: I, he, we, you, they, w. *or* 'll; thou wilt *or* 'lt. ಭೂತ ರೂಪಗಳು: I, he, we, you, they, would (ವುಡ್) *or* 'd; thou wouldst (ವುಡ್‌ಸ್ಟ್) *or* wouldest *or* 'dst. ನಿಷೇಧ ರೂಪಗಳು: Will not *or* won't, would not *or* wouldn't *or* 'd not] ಬಯಸು, ಇಚ್ಛಿಸು, ಆಶಿಸು, ಬೇಕಾಗಿರು [(ಪ್ರಾಚೀ. ಪ್ರ.) What wilt thou? ನಿನಗೆ ಏನು ಬೇಕು? ನಿನ್ನ ಇಚ್ಛೆ ಏನು? Come when you w. ನಿನಗೆ ಇಷ್ಟಬಂದಾಗ ಬಾ. It shall be as you w. ನಿನ್ನ ಇಷ್ಟದಂತೆ ಆಗಲಿ. Would *or* I would I were a bird! ನಾನು ಹಕ್ಕಿಯಾಗಿದ್ದಿದ್ದರೆ! Would God I had died! ನಾನು ಸತ್ತುಹೋಗಿದ್ದರೆ ಆಗಿತ್ತು! Would-be ಆಗಬೇಕೆಂದು ವ್ಯರ್ಥವಾಗಿ ಬಯಸುವ, ಉದ್ದೇಶಿಸಿದ (A would-be gentleman)]; ಒಪ್ಪು, ಸಮ್ಮತಿಸು (W. *or* would not go any further ಇನ್ನು ಮುಂದಕ್ಕೆ ಹೋಗಲು ಒಪ್ಪುವುದಿಲ್ಲ, ಒಪ್ಪಲಿಲ್ಲ. Would not do it for £ 100); ಆಗಿಯೇ ಆಗು, ಹಟ ಹಿಡಿದು ಮಾಡು (Accidents w. happen ಆಕಸ್ಮಿಕಗಳು ಆಗಿಯೇ ಆಗುತ್ತವೆ. You w. have your way ನಿನ್ನ ಇಷ್ಟವನ್ನು ನೀನು ಸಾಧಿಸಿಬಿಡುತ್ತೀಯೆ); ಸಾಮಾನ್ಯವಾಗಿ, ರೂಢಿಯಾಗಿ, —ಆಗು (I don't know who it would be ಅವನು ಯಾರಾಗಿರಬಹುದೆಂದು ನನಗೆ ತಿಳಿಯದು); [(ಸಹಾಯಕ ಕ್ರಿ.) (ಮಧ್ಯಮ ಪುರುಷ ಮತ್ತು ಪ್ರಥಮ ಪುರುಷಗಳಲ್ಲಿ Will, would; ಬರಿಯ ಭವಿಷ್ಯಾರ್ಥ): You will hear soon enough ಶೀಘ್ರದಲ್ಲಿಯೇ (ಆ ಬಗ್ಗೆ) ಕೇಳುವೆ, ಕೇಳುತ್ತೀಯೆ. They would have been killed if they had let go ಕೈಬಿಟ್ಟಿದ್ದರೆ ಅವರು ಸಾಯುತ್ತಿದ್ದರು. (ಉತ್ತಮ ಪುರುಷದಲ್ಲಿ ನಿರ್ಧಾರ, ಸಂಕಲ್ಪ ಸೂಚಕ): We would have come if you had given longer notice]; (ಭೂತ., ಭೂ. ಕೃ. Willed) ಮನಸ್ಸು ಮಾಡು; ಸಂಕಲ್ಪಿಸು (God wills, willeth, willed, that man should be happy ಮನುಷ್ಯನು ಸಂತೋಷವಾಗಿರಬೇಕೆಂಬುದು ದೈವಸಂಕಲ್ಪ. Has no power to w. ಅವನಿಗೆ ಸಂಕಲ್ಪಶಕ್ತಿಯೇ ಇಲ್ಲ. Willing & wishing are not the same ಸಂಕಲ್ಪಿಸುವುದೂ ಆಶಿಸುವುದೂ ಒಂದೇ ಅಲ್ಲ); ಮನೋಬಲದಿಂದ ಪ್ರೇರಿಸು (Mesmerist wills patient to think himself well); (ಆಸ್ತಿಯನ್ನು) ಅಂತಿಮ ಇಷ್ಟಪತ್ರದ ಮೂಲಕ—ಬಿಡು, ಕೊಡು; ಉಯಿಲು ಬರೆ(ದಿಡು) (Shall w. my money to a hospital). **Willing** (ಗು.) ಮನಸ್ಸಿರುವ, ಇಷ್ಟವಿರುವ, ಸಿದ್ಧವಾಗಿರುವ [Spur a w. horse (Spur ನೋಡಿ)]; ಮನಃಪೂರ್ವಕವಾದ, ಸ್ವಂತ ಇಷ್ಟದಿಂದ ಮಾಡಿದ (W. hands, help). **Willingly** (ಕ್ರಿ. ವಿ.); **Willingness** (ನಾ.)

Will (ನಾ.) ಇಷ್ಟ, ಇಚ್ಛೆ, ಉದ್ದೇಶ; ಸಂಕಲ್ಪ, ನಿರ್ಧಾರ [Mind consists of the understanding & the w. ಮನಸ್ಸು ಎಂಬುದರಲ್ಲಿ ಪರಿಜ್ಞಾನ ಮತ್ತು ಸಂಕಲ್ಪ (ಎರಡೂ) ಸೇರಿವೆ. Freedom of the w. ಇಚ್ಛಾಸ್ವಾತಂತ್ರ್ಯ. Free w. ಸ್ವತಂತ್ರ ಸಂಕಲ್ಪಶಕ್ತಿ. The w. to power ಆಳಬೇಕೆಂಬ ಇಚ್ಛೆ, ಅಧಿಕಾರಾಕಾಂಕ್ಷೆ. Did it against my w., of my own free w. ನನ್ನ ಇಷ್ಟಕ್ಕೆ ವಿರೋಧವಾಗಿ, ಸ್ವಂತ ಇಷ್ಟದಿಂದ, ಮಾಡಿದೆನು. Where there's a w. there's a way ಮನಸ್ಸಿದ್ದರೆ ಮಾರ್ಗವಿದೆ. Do thing with a w. ದೃಢ ನಿರ್ಧಾರದಿಂದ, ಮನಃಪೂರ್ವಕವಾಗಿ,—(ಕೆಲಸ) ಮಾಡು. What is your w.? ನಿನ್ನ ಇಷ್ಟ ಏನು? Have one's w. ತನ್ನ ಇಚ್ಛೆ ನೆರವೇರಿಸಿಕೊ. Worked his wicked w. upon them ಅವರಮೇಲೆ ತನ್ನ ದುರುದ್ದೇಶವನ್ನು ಸಾಧಿಸಿಕೊಂಡನು. At w. ಇಷ್ಟಾನುಸಾರ (Tenant at w. ಇಷ್ಟಬಂದಾಗ ಬಿಡಿಸಬಹುದಾದ ಹಿಡುವಳಿದಾರ). W.-worship (ಪ್ರಾಚೀ. ಪ್ರ.) ಸ್ವಾನುಕೂಲ ಧರ್ಮ, ಸ್ವೇಚ್ಛಾಧರ್ಮ. Goodw. ಶುಭಾಶಯ, ಸದುದ್ದೇಶ. Illw. ದುರುದ್ದೇಶ]; (ಆತ್ಮ)ಸಂಯಮ, ಸಂಯಮಶಕ್ತಿ, ಮನಶ್ಶಕ್ತಿ (=W.-power); ಉಯಿಲು, ಅಂತಿಮ ಇಷ್ಟಪತ್ರ, ಮರಣಶಾಸನ (Nuncupative w. ವಾಚಾ ದೃಢೀಕರಿಸಿದ ಮರಣಶಾಸನ. Make one's w. ಉಯಿಲು, ಅಂತಿಮ ಇಷ್ಟಪತ್ರ, —ಬರೆದಿಡು). **Wilful** (ಗು.) ಬೇಕೆಂದು, ಹಟದಿಂದ, —ಮಾಡಿದ; ಉದ್ದೇಶಪೂರ್ವಕ (W. murder, waste); ಹಟ(ಮಾರಿತನ)ದ, ಆಗಡಾದ, ಮೊಂಡು (ತನದ), ಛಲದ. **-willed** (ಗು.); **Will-less** (ಗು.)

Will-o'-the-wisp ವಿಲದವಿಸ್ಪ್ (ನಾ.) = Ignis fatuus (ಆ ಪದ ನೋಡಿ); ಗೊತ್ತುಗುರಿ ತಿಳಿಯದ, ಗುರುತು ಸಿಕ್ಕದ, —ಆಸಾಮಿ.

Willow[1] ವಿಲೋ (ನಾ.) ಮೆತು ರೆಂಬೆಗಳುಳ್ಳ, ಸಾ., ನೀರಿನ ಹತ್ತಿರ ಸಮಶೀತೋಷ್ಣ ಪ್ರದೇಶಗಳಲ್ಲಿ ಬೆಳೆಯುವ, ಹೆಣಿಗೆ ಕಡ್ಡಿ, ಕ್ರಿಕೆಟ್ ದಾಂಡು, ಮೊ. ಕ್ಕೆ ಉಪಯೋಗವಾಗುವಂಥ ದಾರು ದೊರೆಯುವ, ಹಲವು ಜಾತಿಯ (ಕುರುಚಲು) ಸಸ್ಯ: ನೀರುಹಬ್ಬೆ ಗಿಡ, ವಿಲೋ ಮರ [Wear the w. (ತನ್ನ ಪ್ರೇಮಿ, ಪ್ರಣಯಿ, ಇಲ್ಲದ್ದಕ್ಕಾಗಿ) ವಿರಹ ತಾಪ ಪಡು, ವಿಯೋಗದುಃಖ ಅನುಭವಿಸು (ಹಿಂದೆ, ಈ ದುಃಖ ಸೂಚಕವಾಗಿ ಧರಿಸುತ್ತಿದ್ದ ವಿಲೋ ಪತ್ರಹಾರದಿಂದ)]; ಕ್ರಿಕೆಟ್ ದಾಂಡು (Handle the w. ಕ್ರಿಕೆಟ್—ದಾಂಡು ಹಿಡಿ, ಆಟವಾಡು). W.-herb ವಿಲೋ ಎಲೆಯಂಥ ಎಲೆಗಳೂ ಮಾಸಲು ಊದಾ ಬಣ್ಣದ ಹೂವೂ ಬಿಡುವ ಹಲವು ಜಾತಿಯ ಸಸ್ಯ. **Willowy** (ಗು.) ವಿಲೋ ಮರಗಳು ತುಂಬಿದ; ತೆಳ್ಳಗೆ ಬಳುಕುವ.

Willow[2] ವಿಲೋ (ಕ್ರಿ. ಸಕ., ನಾ.), **Willy** ವಿಲಿ (ನಾ.) (ನಾರು ಪದಾರ್ಥವನ್ನು, ಯಂತ್ರದಲ್ಲಿ) ಬಡಿದು, ಹಿಕ್ಕಿ,—ಚೊಕ್ಕಮಾಡು. (ನಾ.) ನಾರು ಚೊಕ್ಕಮಾಡುವ ಯಂತ್ರ, ಹಿಕ್ಕು ಯಂತ್ರ (=W., willowing, -machine)

Willy-nilly ವಿಲಿನಿಲಿ (ಕ್ರಿ. ವಿ., ಗು.). **Nill** ನೋಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Wilt[1]. **Will** ನೋಡಿ.

Wilt[2] ವಿಲ್ಟ್ (ಕ್ರಿ.) (ಸಸ್ಯ, ಎಲೆ, ಹೂವು, ಮೊ. ಗಳ ವಿಷಯದಲ್ಲಿ) ಬಾಡು, ಬತ್ತಿಹೋಗು, ಬಾಡಿಸು, ಬತ್ತಿಸು ; ಸೊರಗು, ಸೊರಗಿಸು ; ಜೋತು ಬೀಳು(ವಂತೆ ಮಾಡು)

Wíly. **Wile** ನೋಡಿ.

Wimble ವಿಂಬ್‌ಲ್ (ನಾ., ಕ್ರಿ.) ಬೈರಿಗೆ (—ಹಿಡಿ, ತಿರುಗಿಸು, —ಯಿಂದ ಕೊರೆ)

Wímple ವಿಂಪ್‌ಲ್ (ನಾ., ಕ್ರಿ.) ಕ್ರೈಸ್ತ ಸಂನ್ಯಾಸಿನಿಯರು ತಲೆಯ ಮೇಲೆ ಕತ್ತಿನವರೆಗೂ ಹಾಕಿಕೊಳ್ಳುವ ನಿರಿಹಿಡಿದ ಬಟ್ಟೆಯ ಗವುಸು : ತಲೆಕವುದಿ ; ತಿರುವು, ಮುರುವು, ನಿರಿ, ತೆರೆ, ಮಡಿಕೆ. (ಕ್ರಿ.) ತಲೆ ಕವುದಿ ಹಾಕಿಕೊ ; (ಶಿಥಿಲ ಪ್ರ.) ಮುಸುಕು, ಬುರುಕಿ, —ಹಾಕಿಕೊ ; ನಿರಿಮಾಡು; ಮಡಿಕೆ ಬೀಳು; (ನದಿ) ತಿರುವು ಮುರುವಾಗು, ಡೊಂಕು ಡೊಂಕಾಗಿ ಹರಿ ; ತೆರೆ ತೆರೆಯಾಗು.

Win ವಿನ್ (ಕ್ರಿ.; ಭೂತ., ಭೂ. ಕೃ. Won ವನ್) (ಹೋರಾಟ, ಸ್ಪರ್ಧೆ, ಜೂಜು, ಪ್ರಯತ್ನ, ಮೊ. ಗಳ ಫಲವಾಗಿ) ಗಳಿಸು, ಪಡೆ, ಸಾಧಿಸಿಕೊ [W. victory, fame, wife. W. one's blue ವ್ಯಾಯಾಮ ಕ್ರೀಡೆಯಲ್ಲಿ ಪ್ರಶಸ್ತಿ ಪಡೆ. W. one's spurs ನೈಟ್ ಪದವಿ ಪಡೆ ; (ರೂಪ.) (ಒಂದರಲ್ಲಿ) ನಿಪುಣನೆಂದು ಹೆಸರು ಪಡೆ, ಪ್ರಸಿದ್ಧಿ ಗಳಿಸು. W. one's way ಹೋರಾಡಿ—ಸಾಧಿಸು, ಮಾರ್ಗ ಮಾಡಿಕೊ. W. one's bread ಅನ್ನ, ಜೀವನ, —ಸಂಪಾದಿಸು. W. ore (ಗಣಿಯಿಂದ) ಅದುರು—ತೆಗೆ, ಪಡೆ] ; ಗೆಲ್ಲು, ಜಯಿಸು [W. game, battle. W. the field ಯುದ್ಧದಲ್ಲಿ ಜಯಶಾಲಿಯಾಗು (ರೂಪ. ಸಹ). W. the toss (Toss ನಾ. ನೋಡಿ). W. by a head (Head ನಾ. ನೋಡಿ). W. in a canter (Canter ನೋಡಿ). W. hands down ಸುಲಭವಾಗಿ ಗೆಲ್ಲು. Winning-post (ಜೂಜಿನಲ್ಲಿ ಮುಟ್ಟಬೇಕಾದ) ಗೆಲ್ಲುಕಂಬ, ಗುರಿಕಂಬ] ; (ವರ್ತಮಾನ ಕೃ.) ಗೆಲ್ಲುವ, ಜಯ ನಿರ್ಧಾರಕ (Winning hit, card) ; ಹೋಗಿ ಸೇರು, ತಲಪು, ಮುಟ್ಟು (W. the shore, summit) ; ಪ್ರಯತ್ನದಿಂದ ಸಾಧಿಸು, ನಿಭಾಯಿಸು (W. through all difficulties) ; ತನ್ನ ಕಡೆಗೆ ಮಾಡಿಕೊ, ಒಲಿಸಿಕೊ (Soon won his audience over) ; ಹೆಚ್ಚು ಹೆಚ್ಚಾಗಿ ಮೆಚ್ಚಿಕೆಗೆ ಬರು (A theory that wins upon one by degrees) ; (ವರ್ತಮಾನ ಕೃ.) ಆಕರ್ಷಕ, ಮನೋಹರ (A winning smile. Winning manners). (-)**wínner** (ನಾ.) ; **Wínningly** (ಕ್ರಿ. ವಿ.); **Wínnings** (ನಾ., ಬ. ವ.) ಗಳಿಕೆ, ಸಂಪಾದನೆ, ಲಾಭ.

Win (ನಾ.) (ಆಟದಲ್ಲಿ) ಗೆಲುವು, ಗೆಲ್ಲು, ಜಯ (Has had three wins & no defeats)

Wince ವಿನ್ಸ್ (ಕ್ರಿ. ಅಕ., ನಾ.) ಬೆಚ್ಚಿಬೀಳು, ಬೆದರು, ಅಳುಕು(ವುದು) (W. under pain, the knife, at allusion)

Wíncey ವಿನ್ಸಿ (ನಾ.) ಉಣ್ಣೆಯಿಂದ ಅಥವಾ ಉಣ್ಣೆಹತ್ತಿ ಮಿಶ್ರಣದಿಂದ ಮಾಡಿದ, ಒಂದು ಬಗೆಯ ಗಟ್ಟಿ ಬಟ್ಟೆ. **Winceyétte** (ನಾ.) ವಿನ್ಸಿಯಂಥ ಬಟ್ಟೆ.

Winch ವಿಂಚ್, ವಿನ್ಷ್ (ನಾ.) ಚಕ್ರದ ಅಥವಾ ಅಚ್ಚಿನ ವಕ್ರದಂಡ; 'ಕ್ರ್ಯಾಂಕು'; ಎತ್ತುಯಂತ್ರ.

Wínchester ವಿಂಚೆಸ್ಟರ್ (ನಾ.) ಭಾರಿ ಷಿಕಾರಿಯವರು ಉಪಯೋಗಿಸುವ ಒಂದು ಬಗೆಯ ಆವರ್ತ ಬಂದೂಕು (=W. rifle) (ನಿರ್ಮಾಪಕನ ಹೆಸರಿನಿಂದ) ; ಅರ್ಧ ಗ್ಯಾಲನ್ (ಸೀಸೆ) (=W. quart) (Hampshire ಜಿಲ್ಲೆಯಲ್ಲಿಯ ಊರಿನ ಹೆಸರಿನಿಂದ)

Wind[1] ವಿಂಡ್, (ಕಾವ್ಯ) ವೈಂಡ್ (ನಾ.) (ಬೀಸು) ಗಾಳಿ, ಮಾರುತ, ಎಲರು (ಗ್ರಾಂ.) ; ವಾಯು, ವಾತ [Fair w. (ಹಡಗಿನ ಚಲನೆಗೆ) ಅನುಕೂಲವಾದ ಗಾಳಿ. Contrary w. ಪ್ರತಿಕೂಲವಾದ ಗಾಳಿ, ಎದುರು ಗಾಳಿ. Constant w. ಒಂದು ಸ್ಥಳದಲ್ಲಿ ಯಾವಾಗಲೂ ಒಂದೇ ದಿಕ್ಕಿನಲ್ಲಿ ಬೀಸುವ ಗಾಳಿ: ಗೊತ್ತು ಗಾಳಿ; ನಿಯತ ಮಾರುತ. Periodical w. ನಿಯತ ಕಾಲಿಕ—ವಾತ, ಗಾಳಿ. W. rises ಗಾಳಿ ಏಳುತ್ತದೆ ; ಗಾಳಿ—ಬೀಸಲಾರಂಭಿಸಿದೆ, ಜೋರಾಗುತ್ತಿದೆ. Capful of w. (Cap ಕೆಳಗೆ Capful ನೋಡಿ). Slant of w. (Slant ನೋಡಿ). It's an ill w. that blows nobody good (Ill ನೋಡಿ). Whistle down the w. (Whistle ನೋಡಿ). Between w. & water ಅಪಾಯಸ್ಥಾನದಲ್ಲಿ. Sail, be, close to *or* near the w. (ಗಾಳಿಯ ಶಕ್ತಿಯ ಉಪಯೋಗವನ್ನು ಕಳೆದುಕೊಳ್ಳದೆ) ಗಾಳಿಗೆ ಆದಷ್ಟು ಎದುರಾಗಿ ಹೋಗು ; (ರೂಪ.) ಅಶ್ಲೀಲತೆಯ, ಅಪ್ರಾಮಾಣಿಕತೆಯ,—ಎಲ್ಲೆಯನ್ನು ಸಮೀಪಿಸು. In the w.'s eye, In the teeth of the w. ಗಾಳಿಗೆ ನೇರೆದುರಾಗಿ. On a w. (ನಾವೆ) ಗಾಳಿ ಬೀಸುವ ದಿಕ್ಕಿಗೆ, ಗಾಳಿಗೆದುರಾಗಿ. Off the w. (ನಾವೆ) ಗಾಳಿ ದಿಕ್ಕನ್ನು ಬಿಟ್ಟು ; ಸರಾಗವಾಗಿ (ಸಾಗುತ್ತ). Fling *or* cast (prudence, etc.) to the winds (ವಿವೇಕ, ಮೊ. ನ್ನು) ಗಾಳಿಗೆ ತೂರಿಬಿಡು, ದುರ್ಲಕ್ಷಿಸು. Put the w. up one ಒಬ್ಬನನ್ನು ಹೆದರಿಸು. Get the w. up (ಅನಂ.) ಗಾಬರಿಪಡು, ದಿಗಿಲುಗೊಳ್ಳು. Go like the w. ವಾಯುವೇಗದಲ್ಲಿ ಹೋಗು. There is something in the w. ಏನೋ ಒಳಗೊಳಗೇ (ಸಂಚು) ನಡೆಯುತ್ತಿರುವಂತೆ ಇದೆ. Find out how the w. blows *or* lies ಸಂದರ್ಭಗಳು ಹೇಗಿವೆ, ಜನಾಭಿಪ್ರಾಯ ಹೇಗಿದೆ,—ಎಂಬುದನ್ನು ಕಂಡುಹಿಡಿ, ತಿಳಿದುಕೊ. Take the w. out of one's sails ಮತ್ತೊಬ್ಬನ ಸಾಧನಗಳನ್ನು (ವಾದ, ಸಾಮಗ್ರಿ, ಮೊ. ನ್ನು) ತಾನೇ ಮೊದಲು ಉಪಯೋಗಿಸಿಕೊಂಡು ಅವನ ಪ್ರಯತ್ನಗಳಿಗೆ ಭಂಗ ತರು. Sow w. & reap whirlwind (Whirl ಕೆಳಗೆ Whirlwind ನೋಡಿ). Raise the w. (ರೂಪ.) ಬೇಕಾದ ಹಣವನ್ನು ಪಡೆ] ; ಗಾಳಿಯ—ದಿಕ್ಕು, ಕಡೆ [Take *or* get the w. of (ಮತ್ತೊಂದು ಹಡಗಿಗೆ ಗಾಳಿ ತಪ್ಪಿಸುವಂತೆ ಅದರ) ಗಾಳಿಪಕ್ಕಕ್ಕೆ ಹೋಗು] ; (ಬ. ವ. ದಲ್ಲಿ) ನಾಲ್ಕು (ಪ್ರಧಾನ) ದಿಕ್ಕುಗಳು (Came from the four winds. Scatter to the four winds of heaven ನಾಲ್ಕು ದಿಕ್ಕಿಗೂ ತೂರು) ; ಬರಿಯ ಪೊಳ್ಳು ಮಾತು, ಶಬ್ದಾಡಂಬರ; (ಕೃತಕವಾಗಿ ಉಂಟುಮಾಡಿದ) ವಾಯು ಪ್ರವಾಹ ; ಪ್ರವಾಹವಾಗಿ ಉಪಯೋಗಿಸಲು ಶೇಖರಿಸಿಟ್ಟ ವಾಯು : ವಾಯು ಸಂಗ್ರಹ ; (ಸಮೂಹವಾಚಕ) (ವಾದ್ಯಮೇಳದಲ್ಲಿ) ವಾಯು, ಗಾಳಿ, —ವಾದ್ಯಗಳು (The strings were drowned by the w. ತಂತಿವಾದ್ಯಗಳ ನಾದ ವಾಯುವಾದ್ಯಗಳ ನಾದದಲ್ಲಿ ಮುಳುಗಿಹೋಯಿತು, ಕೇಳಿಸಲೇ ಇಲ್ಲ. The wood w. ಕೊಳಲು, ಮೊ. ವು) ; ಗಾಳಿಯಲ್ಲಿ ಸಾಗಿಬಂದ ವಾಸನೆ, ಗಂಧ ; (ಒಂದು ವಸ್ತುವಿರುವ) ಸುಳಿವು, ಸೂಚನೆ, (ಒಂದರ) ಪ್ರಚಾರ (Get w. of ವಾಸನೆ ಹಿಡಿ, ಊಹಿಸು, ಶಂಕಿಸು ; ಸುದ್ದಿ, ವದಂತಿ,—ಕೇಳು. Take *or* get w. ಸುದ್ದಿ ಏಳು, ಹರಡಿಕೊ) ; ಹೂಸು, ಅಪಾನವಾಯು [Break w. ಹೂಸು(ಬಿಡು). Baby is troubled with w. ಮಗುವಿಗೆ ಹೊಟ್ಟೆಯಲ್ಲಿ ವಾಯು ತುಂಬಿಕೊಂಡಿದೆ] ; ಉಸಿರು, ದಮ್ಮು, ತ್ರಾಣ (Have lost, let me recover, my w.) ; ಅಳ್ಳೆ ; [Broken w. ನಿತ್ರಾಣ. Second w. (ವ್ಯಾಯಾಮ ಮಾಡುವಾಗ ತೆಗೆದುಕೊಳ್ಳುವ) ದಮ್ಮು. Have one's w. taken (ಪೆಟ್ಟಿನಿಂದ) ಅಳ್ಳೆ ಹಿಡಿದುಕೊ, ದಮ್ಮು ಕಟ್ಟಿಹೋಗು. Hit him in the w. ಅಳ್ಳೆಯ ಮೇಲೆ ಹೊಡೆ]. **Windbag** ಶಬ್ದಾಡಂಬರದ ಭಾಷಣಕಾರ, ಮಾತಿನ ಚೀಲ, ಬುರುಡೆ ಆಸಾಮಿ. **W.-bound** ಎದುರು ಗಾಳಿಗೆ ಸಿಕ್ಕಿ ಹೊರಡಲಾರದ ; ವಾಯುಬಂಧಿತ. **W.-chest** (ಆರ್ಗನ್ ವಾದ್ಯದಲ್ಲಿಯ) ವಾಯು ಸಂಪುಟ. **W.-colic** ಹೊಟ್ಟೆಯಲ್ಲಿ ವಾಯು ಸೇರಿಕೊಂಡು ಆಗುವ ನೋವು : ವಾಯುಶೂಲೆ. **W.-cutter** ಆರ್ಗನ್ ವಾದ್ಯದ ಬಾಯಿಗಂಡಿ ಕೊಳವೆಯ ಮೇಲ್ತುಟಿ : ಗಾಳಿ ಸೀಳುಕ. **W.-egg** (ಮರಿಯಾಗದ) ಬಂಜೆ ಮೊಟ್ಟೆ. **Wíndfall** ಗಾಳಿಗೆ ಉದುರಿದ ಹಣ್ಣು;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ರೂಪ.) ಅನಿರೀಕ್ಷಿತವಾಗಿ ಬಂದ ಆಸ್ತಿ; ಆಕಸ್ಮಿಕ ಲಾಭ ಪ್ರಾಪ್ತಿ. **W.-fanner** = Windhover. **W.-flower** (ಕಾವ್ಯ) ಒಂದು ಜಾತಿಯ ಸಸ್ಯ (= Anemone). **W.-gall** ಕುದುರೆಯ ಚುಂಚುಕಾಲಿನಮೇಲೆ ಏಳುವ ಗಂತಿ. **W.-gauge** ವಾಯು(ಗತಿ) ಮಾಪಕ; (ಆರ್ಗನ್ ವಾದ್ಯದಲ್ಲಿ) ವಾಯುಬಲ ಮಾಪಕ; ಬಂದೂಕು ಹೊಡೆಯುವಲ್ಲಿ ಗಾಳಿಯ ಪ್ರಭಾವಕ್ಕೆ ಅವಕಾಶ ಕೊಡಬೇಕಾದ ಮೊತ್ತವನ್ನು ಸೂಚಿಸಲು ದೃಷ್ಟಿಸಲಕರಣೆಗೆ ತಗುಲಿಸಿರುವ ಸಲಕರಣೆ: ವಾಯು ಪ್ರಭಾವಮಾಪಕ. **Wíndhover** ಒಂದು ಜಾತಿಯ ಸಣ್ಣ ಡೇಗೆ. **W.-instrument** ಗಾಳಿ, ವಾಯು, —ವಾದ್ಯ; ಸುಷಿರ (ಆರ್ಗನ್, ಕೊಳಲು, ಮೊ. ವು). **W.-jammer** (ಅಸಂ.) ವ್ಯಾಪಾರದ ಹಡಗು. **Wíndmill** ಗಾಳಿಯ ಸಹಾಯದಿಂದ ನಡೆಯುವ ಬೀಸು ಯಂತ್ರ: ಗಾಳಿ ಯಂತ್ರ (Fight windmills ಕಾಲ್ಪನಿಕ ಶತ್ರುಗಳೊಡನೆ ಹೋರಾಡು) (Don Quixote ಎಂಬ ಕಾದಂಬರಿಯಲ್ಲಿಯ ಘಟನೆಯಿಂದ). **Wíndpipe** ಶ್ವಾಸನಾಳ, ಉಸಿರುಗೊಳವೆ. **W.-row** ಗಾಳಿ ಹಾಯ್ದು ಒಣಗಲು ಅನುಕೂಲಿಸುವಂತೆ ಒಟ್ಟಿರುವ ಹುಲ್ಲುಮೆದೆ, ಅರಿ, ಮೊ. ವು: ಗಾಳಿಗೊಡ್ಡಿದ ಕೊಯ್ಲು ಕುಪ್ಪೆ. **W.-sail** ಹಡಗಿನ ಕೆಳ ಭಾಗಗಳಿಗೆ ಗಾಳಿ ಸಾಗಿಸಲು ಅನುಕೂಲಿಸುವ ಬಟ್ಟೆಯ ಲಾಳಿಕೆ: ಗಾಳಿಪನ್ನಾಲೆ. **W.-screen** (ಮೋಟಾರು ಬಂಡಿ ನಡಸುವವನ ಮುಂದುಗಡೆ ಹಾಕಿರುವ, ಗಾಜಿನ) ಗಾಳಿ ತಡೆ. **W.-spout** ನೀರಸುಳಿ(ಗಂಬ), ಸುಳಿ(ಗಾಳಿ), ಸುಂಟರಗಾಳಿ. **W.-stick** (ಅಸಂ.) ವಿಮಾನದ ಚಾಲಕ (ದಂಡ). **W.-sucker** ಶಬ್ದ ಮಾಡಿಕೊಂಡು ಉಸಿರು ನುಂಗುವ ಕುದುರೆ: ಗೊರಗುಟ್ಟುವ, ಗಾಳಿ ಹೀರುವ, —ಕುದುರೆ. **W.-sucking** ಗಾಳಿ ಹೀರುವುದು. **W.-swept** ಗಾಳಿಗೆ ತೆರೆದಿಟ್ಟ, ಗಾಳಿಯ ಹೊಡೆತಕ್ಕೆ ಸಿಕ್ಕಿದ. **W.-tight** ಗಾಳಿ ತೂರದ. **Wíndward** (ಗು., ನಾ.) ಗಾಳಿ ಬೀಸುವ ದಿಕ್ಕಿನ (ಪ್ರದೇಶ); ಗಾಳಿಯ ಹೊಡೆತಕ್ಕೆ—ಸಿಕ್ಕಿದ, ತೆರೆದಿರುವ [The w.-w. side ಗಾಳಿಗೆ ತೆರೆದ ಪಕ್ಕ, ಗಾಳಿಯ ಪಕ್ಕ. Get to the w.-w. of ಒಬ್ಬರ ಹಿಡಿತಕ್ಕೆ ಸಿಕ್ಕದಿರು, ವಾಸನೆ ಕೊಡದೆ ತಪ್ಪಿಸಿಕೊ; ಗಾಳಿಯ ದಿಕ್ಕಿಗೆ ಬರು; (ರೂಪ.) ಅನುಕೂಲ (ಸ್ಥಾನ) ಪಡೆ]. **Wíndage** (ನಾ.) ಮದ್ದಿನ ಅನಿಲ ಹೊರಹೋಗುವುದಕ್ಕಾಗಿ ಫಿರಂಗಿಯ ನಳಿಕೆಯ ವ್ಯಾಸಕ್ಕೂ ಕ್ಷಿಪಣಿಯ ವ್ಯಾಸಕ್ಕೂ ಬಿಟ್ಟಿರುವ ಅಂತರ: ಅನಿಲಾವಕಾಶ; (ಕ್ಷಿಪಣಿಯನ್ನು ಮಾರ್ಗ ಬದಲಾಯಿಸುವಂತೆ ಮಾಡುವ) ವಾಯು ಪ್ರಭಾವ(ಕ್ಕೆ ಅವಕಾಶ). **Wíndless** (ಗು.); **Wíndy** (ಗು.) ಗಾಳಿಗೆ—ಈಡಾದ, ಒಡ್ಡಿದ; ಗಾಳಿಯ ಹೊಡೆತಕ್ಕೆ ಸಿಕ್ಕಿರುವ (W. hill-top, plain, situation); ಗಾಳಿ—ಬಲವಾಗಿ ಬೀಸುವ, ಜೋರಾಗಿರುವ (W. night); ಬರಿಯ ಮಾತಿನ, ಶಬ್ದಾಡಂಬರದ, ಪೊಳ್ಳಾದ (W. eloquence, speaker); (ಹೊಟ್ಟೆಯಲ್ಲಿ) ವಾಯು—ಉಂಟುಮಾಡುವ, ತುಂಬಿಕೊಂಡಿರುವ: ವಾಯುಕಾರಕ; (ಪ್ರಾಚೀ. ಪ್ರ.) ಗಾಳಿಯ ದಿಕ್ಕಿನ(ಲ್ಲಿರುವ) (On the w. side of the law ಕಾನೂನಿನ ಹಿಡಿತಕ್ಕೆ—ಸಿಕ್ಕದೆ, ದೂರವಾಗಿ); (ಅಸಂ.) ಗಾಬರಿಯಾದ, ಅಂಜಿಕೊಂಡ. **Wíndily** (ಕ್ರಿ. ವಿ.); **Wíndiness** (ನಾ.)

Wind (ಕ್ರಿ. ಸಕ.) [ಉಚ್ಚಾರ: ವೈಂಡ್; ಭೂತ., ಭೂ. ಕೃ. Winded ವೈಂಡೆಡ್ ಅಥವಾ (ಭ್ರಮೆಯಿಂದ) Wound ವೌಂಡ್] (ಕೊಂಬು, ಕಹಳೆ, ಮೊ. ನ್ನು) ಊದು, (ಊದಿ) ಧ್ವನಿಮಾಡು; (ಉಚ್ಚಾರ: ವಿಂಡ್; ಭೂತ., ಭೂ. ಕೃ. Winded ವಿಂಡೆಡ್) ವಾಸನೆ (ಯಿಂದ ಕಂಡು)ಹಿಡಿ (Hounds w. the fox. Winded his tobacco half a mile off); (ವ್ಯಾಯಾಮದಿಂದ ಆಳವಾಗಿ, ಬೇಗ ಬೇಗನೆ) ಉಸಿರುಬಿಡು(ವಂತೆ ಮಾಡು); ಏದು; ದಮ್ಮು—ಬಿಡು, ಬರಿಸು, ತೆಗೆದುಕೊ (Am quite winded by the climb. Rested to w. the horses)

Wind[2] ವೈಂಡ್ (ಕ್ರಿ., ಭೂತ., ಭೂ. ಕೃ. Wound ವೌಂಡ್) ಸುತ್ತಿಕೊಂಡು, ಸುತ್ತುಸುತ್ತಾಗಿ, ಸುರುಳಿ ಸುರುಳಿಯಾಗಿ, ಸೊಟ್ಟಸೊಟ್ಟಾಗಿ, ವಕ್ರವಾಗಿ,—ಹೋಗು (Path, river, winds. Creeper winds round pole. Winding staircase ಸುತ್ತುಮೆಟ್ಟಿಲ ಸಾಲು); ಬಳಸಿ ದಾರಿಮಾಡಿಕೊಂಡು ಹೋಗು (Brook winds its way); (ಒಬ್ಬರ ಪ್ರೀತಿ, ಮೊ. ಗಳಿಗಾಗಿ) ಹೊಸೆದುಕೊಂಡುಹೋಗು (Wound himself, his way, into my affections); ಸುರುಳಿ, ಸಿಂಬಿ,—ಸುತ್ತು, ಸುತ್ತಿಸು, ಸುತ್ತಿಕೊ; ಸುತ್ತು(ಗಟ್ಟು); ಅಪ್ಪಿಕೊ, ಆಲಿಂಗಿಸು [W. cotton on reel. W. off ಸುತ್ತಿರುವುದನ್ನು ಬಿಚ್ಚು. W. person round one's fingers ಒಬ್ಬನನ್ನು ಹತೋಟಿಯಲ್ಲಿ ಇಟ್ಟುಕೊಂಡಿರು, ಹೇಗೆಂದರೆ ಹಾಗೆ ಆಡಿಸು. Wound the blanket round him ಅವನ ಸುತ್ತ ಕಂಬಳಿಯನ್ನು ಸುತ್ತಿದನು. Wound her arms round the child. Winding-sheet ಹೆಣ ಸುತ್ತುವ ಬಟ್ಟೆ, ಶವವಸ್ತ್ರ. W. pegtop ಬುಗುರಿಗೆ ದಾರ ಸುತ್ತು]; (ಎತ್ತುಯಂತ್ರ, ಮೊ. ನ್ನು) ಸುತ್ತಿ(ಸಿ), ತಿರುಗಿಸಿ, —ಸೇದು, ಎತ್ತು (W. ore up from mine); (ಗಡಿಯಾರ, ಮೊ. ಕ್ಕೆ) ಕೀಲಿಕೊಡು (= W. up). W. ship ಹಡಗನ್ನು ಹಿಂದು ಮುಂದಾಗಿ ತಿರುಗಿಸು. W. up (ಸಿಂಬಿ, ಸುರುಳಿ) ಸುತ್ತು; ಪೂರ್ತಿ ಸುತ್ತು; ಸುರುಳಿಯನ್ನು, ಸಿಂಬಿಯನ್ನು, —ಬಿಗಿಮಾಡು, ಬಿಗಿಯಾಗಿ ಸುತ್ತು; (ರೂಪ.) (ಬಿಗಿ, ತೀವ್ರತೆ, ಸಾಮರ್ಥ್ಯ, ಮೊ. ನ್ನು) ಹೆಚ್ಚಿಸು; ಬಿಗಿಮಾಡು (W. up strings of fiddle ಪಿಟೀಲಿನ ತಂತಿಗಳನ್ನು ಬಿಗಿಮಾಡು. W. up clock ಗಡಿಯಾರಕ್ಕೆ ಕೀಲಿಕೊಡು. The administration needs winding up ಆಡಳಿತವನ್ನು ಬಿಗಿಮಾಡಬೇಕಾಗಿದೆ. Person is wound up to fury ಮನುಷ್ಯ ಬಿಗಿತುಕೊಂಡು ರೇಗಿಬಿಟ್ಟಿದ್ದಾನೆ); ಕೊನೆಮುಟ್ಟಿಸು, ಮುಕ್ತಾಯಮಾಡು, ಕೊನೆಮುಟ್ಟು, ಮುಕ್ತಾಯವಾಗು [Wound up (his speech) by declaring—ಎಂದು ಹೇಳಿ (ತನ್ನ ಭಾಷಣವನ್ನು) ಮುಗಿಸಿದನು. W. up company (ವ್ಯಾಪಾರ) ಸಂಸ್ಥೆಯನ್ನು ಮುಚ್ಚಿಬಿಡು. Company winds up (ವ್ಯಾಪಾರ) ಸಂಸ್ಥೆ ಮುಚ್ಚಿಬಿಡುತ್ತದೆ] [**Winding-up** (ನಾ.) ಮುಚ್ಚಿ—ಬಿಡುವುದು, ಹೋಗುವುದು]. **Wínder** (ನಾ.); **Wíndingly** (ಕ್ರಿ. ವಿ.)

Wind (ನಾ.) ಸುತ್ತು, ತಿರುವು, ಮುರುವು; (ದಾರ, ಗಡಿಯಾರದ ಕೀಲ, ಮೊ. ಗಳ) ಒಂದು ಸುತ್ತು. W. up ಮುಕ್ತಾಯ, ಕೊನೆ ಗಾಣಿಕೆ.

Wíndage. **Wind**[1] ನೋಡಿ.

Wíndlass ವಿಂಡ್ಲಸ್ (ನಾ., ಕ್ರಿ. ಸಕ.) (ಸಾಮಾನುಗಳನ್ನು ಮೇಲಕ್ಕೆ ಎಳೆಯುವುದಕ್ಕೂ ಎತ್ತುವುದಕ್ಕೂ ಅನುಕೂಲಿಸುವ) ಗಾಲಿ ಮತ್ತು ಅಚ್ಚಿನ ಸನ್ನೆಯ ತತ್ತ್ವದ ಒಂದು ಎತ್ತುಯಂತ್ರ: ಅಚ್ಚು ರಾಟಣ. (ಕ್ರಿ.) ಅಚ್ಚು ರಾಟಣದಿಂದ—ಎತ್ತು, ಎಳೆ.

Wíndlestraw ವಿಂಡ್‌ಲ್‌ಸ್ಟ್ರಾ (ನಾ.) (ಹೂವು, ಬೀಜ, ಎಲ್ಲಾ ಉದುರಿ ಹೋಗಿ ನಿಂತಿರುವ) ಒಣ ಹುಲ್ಲುಕಡ್ಡಿ, ಬರಲುಕಡ್ಡಿ.

Wíndow ವಿಂಡೋ (ನಾ.) ಬೆಳಕು, ಗಾಳಿ, —ಕಂಡಿ; ಕಿಟಕಿ, ಜನ್ನಲು, ವಾತಾಯನ (Have all one's goods in the (front) w. ಇರುವುದನ್ನೆಲ್ಲಾ ಹೊರಕ್ಕೆ ತೋರಿಸು; ಬರಿಯ ಬಹಿರಾಡಂಬರವಾಗಿರು. Blank, blind, false, w. ತೆರಪಿಲ್ಲದ ತೋರ್ಕೆ ಕಿಟಕಿ; ಕುರುಡು ಕಿಟಕಿ, ಹುಸಿ ಕಿಟಕಿ. Bay[2], bow[1], casement, dormer, French, lattice, oriel, sash[2], w. (ಆಯಾ ಪದ ನೋಡಿ). W.-box (ಜಾರುಬಾಗಿಲ ಕಿಟಕಿಯಲ್ಲಿ) ಜಾರು ಭಾರ ಸರಿದಾಡಲು ಮಾಡಿರುವ ಗಾಡಿ; ಕಿಟಕಿಯ ಹೊಸಿಲಿನ ಮೇಲೆ ಹೂವಿನ ಗಿಡ ಇಟ್ಟಿರುವ ಪೆಟ್ಟಿಗೆ: ಕಿಟಕಿ ಪೆಟ್ಟಿಗೆ. W.-dressing ಗಾಜಿನ ಮೂಲಕ ಹೊರಕ್ಕೆ ಕಾಣುವಂತೆ ಸರಕುಗಳನ್ನು ಅಂಗಡಿಯ ಕಿಟಕಿಯಲ್ಲಿ ಅಂದವಾಗಿ ಜೋಡಿಸುವುದು: ಕಿಟಕಿ ಪ್ರದರ್ಶನ (ಕಲೆ); (ರೂಪ.) (ಸಂಖ್ಯೆ, ಸಾಮಗ್ರಿ, ಮೊ. ಗಳ) ಆಕರ್ಷಕ, ಚತುರ, —ಪ್ರದರ್ಶನ, ನಿರೂಪಣೆ. W.-shopping ಅಂಗಡಿಯಲ್ಲಿ ಗಾಜುಗಳ ಹಿಂದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರದರ್ಶಿಸಿಟ್ಟಿರುವ ವಸ್ತುಗಳನ್ನು ನೋಡಿ ಸಂತೋಷಪಡುವುದು : ಕಣ್ ಹಬ್ಬ ವ್ಯಾಪಾರ. W.-envelope ಒಳಗೆ ಬರೆದಿರುವ ವಿಳಾಸ ಹೊರಕ್ಕೆ ಕಾಣುವಂತೆ ಮಧ್ಯದಲ್ಲಿ ಪಾರದರ್ಶಕ ಕಾಗದ ಹಾಕಿರುವ ಲಕೋಟೆ: ಕಿಟಕಿ ಲಕೋಟೆ. (-)**windowed** (ಗು.) ; **Wíndowless** (ಗು.)

Wíndsor ವಿನ್ಸರ್ (ನಾ.) ಇಂಗ್ಲೆಂಡಿನ ಬರ್ಕ್‌ಷೈರಿನಲ್ಲಿಯ ಒಂದು ಊರು. House of W. ಕ್ರಿ. ಶ. ೧೯೧೭ರಲ್ಲಿ ಬ್ರಿಟಿಷ್ ರಾಜಮನೆತನ ತಳೆದ ಹೆಸರು: ವಿನ್ಸರ್ ಮನೆತನ. W. chair ಪೂರ್ತಿ ಮರದಿಂದ ಮಾಡಿದ, ಬಾಗು ಬೆನ್ನಿನ (ಮತ್ತು ಬಾಗು ಕೈಗಳ) ಒಂದು ಬಗೆಯ ಕುರ್ಚಿ. Brown w. soap ಸುವಾಸನೆಯ ಒಂದು ಬಗೆಯ ಕಂದು ಸಾಬೂನು. W. uniform ವಿನ್ಸರಿನಲ್ಲಿ ರಾಜಮನೆತನದವರೂ ರಾಜದತ್ತಿ ಪಡೆದ ಇತರರೂ ತೊಟ್ಟುಕೊಳ್ಳುವ, ಕೆಂಪು ಕೊರಳಪಟ್ಟಿ ಕೈಪಟ್ಟಿಗಳುಳ್ಳ ನೀಲಿ ಬಣ್ಣದ ಅಂಗಿ.

Wíndy. Wind[1] ನೋಡಿ.

Wine ವೈನ್ (ನಾ.) (ಹುಳಿ ಹಿಡಿಸಿದ) ದ್ರಾಕ್ಷಾರಸ, ಮದ್ಯ [Adam's, Comet, Dry, w. (ಆಯಾ ಪದ ನೋಡಿ). Green w. ಮೊದಲ ವರ್ಷದ, ಒಂದು ವರ್ಷ ಹದದ,—ಮದ್ಯ. Sparkling w. (Sparkle ನೋಡಿ). Still wines (ಇಂಗಾಲಾಮ್ಲ ಅನಿಲ ಸಣ್ಣ ಗುಳ್ಳೆಗಳಾಗಿ ಏಳದ) ಶಾಂತ, ಮಿರುಗದ,—ಮದ್ಯ. Sweet w. (ಹಣ್ಣಿನ ರುಚಿಯುಳ್ಳ) ಸೀಮದ್ಯ. White w. (White ನೋಡಿ). Good w. needs no bush (Bush[1] ನೋಡಿ). New w. in old bottles ಹಳೆಯ ರೂಪಗಳಲ್ಲಿ ಅಡಗಿಸಲಾಗದ ಹೊಸ ತತ್ತ್ವಗಳು; ಹೊಸ ತತ್ತ್ವಗಳನ್ನು ಹಳೆಯ ಚರಣಿಗಳಲ್ಲಿ ಸೇರಿಸುವುದು. Take w. with (ಸ್ನೇಹ, ಒಪ್ಪಂದ, ಮೊ. ಗಳ ಗುರುತಾಗಿ) ಜೊತೆಯಲ್ಲಿ ಮದ್ಯ ಕುಡಿ. Spirit of w. ಶುದ್ಧ ಮದ್ಯಸಾರ. Tears of strong w. (Tear[2] ನೋಡಿ). Over the walnuts & the w. (Walnut ನೋಡಿ). W. whey ಮದ್ಯ ಮತ್ತು ಒಡೆದ ಹಾಲಿನ ಪಾನೀಯ. In w. ಅಮಲೇರಿ, ಮದ್ಯೋನ್ಮತ್ತನಾಗಿ ; ಮದ್ಯ ಕುಡಿದು ಗೆಲವಾಗಿ]; (ವಿ. ವಿ. ನಿ. ಗಳಲ್ಲಿ) (ಭೋಜನಾನಂತರದ) ಮದ್ಯ(ಪಾನ) ಗೋಷ್ಠಿ (Wines have gone out of fashion ಮದ್ಯಗೋಷ್ಠಿ ಗಳು ಈಗ ರೂಢಿಯಲ್ಲಿಲ್ಲ); (ಹಣ್ಣು, ಮೊ. ಗಳಿಂದ ಮಾಡಿದ) ಮದ್ಯದಂಥ ಪಾನೀಯ, ಸುರೆ, ಹೆಂಡ, ಕಳ್ಳು (Cowslip, currant, gooseberry, orange, palm, w.) ; (ವೈ. ಶಾ.) ಮದ್ಯದಲ್ಲಿ ಔಷಧ ಕರಗಿಸಿ ಮಾಡಿದ ದ್ರಾವಣ: ಮದ್ಯದ್ರಾವಣ (Quinine w. ; W. of opium). **Wínebag** ಮದ್ಯದ ಪಕಾಲಿ ; ಅತಿ ಕುಡುಕ. **Wínebibber** ಅತಿಕುಡುಕ. **Wínebibbing** (ಗು., ನಾ.) ಅತಿ ಕುಡಿತ(ದ). **Wínebottle** ಮದ್ಯದ—ಸೀಸೆ, ಬುದ್ದಲಿ. **Wínebowl** ಮದ್ಯದ ಬಟ್ಟಲು ; ಕುಡಿತದ ಚಾಳಿ. **W.-carriage** ಊಟದ ಮೇಜಿನ ಮೇಲೆ ಮದ್ಯದ ಸೀಸೆಯನ್ನು ಎಡೆಯಿಂದೆಡೆಗೆ ಸಾಗಿಸುವ ಗಾಲಿ ಗಳುಳ್ಳ ಪಾತ್ರೆ : ಮದ್ಯವಾಹಕ. **W.-cooler** ನೀರ್ಗಲ್ಲು ಹಾಕಿ ಮದ್ಯದ ಸೀಸೆಗಳನ್ನು ತಂಪಿಸುವ ಪಾತ್ರೆ: ಮದ್ಯ ಶೀತಕ. **Wínecup** ಮದ್ಯದ ಬಟ್ಟಲು. **Wínefat** (ಪ್ರಾಚೀ. ಪ್ರ.) = Winepress. **Wíneglass** ಮದ್ಯ (ಕುಡಿಯುವ ಗಾಜಿನ) ಲೋಟ ; ಔಷಧದ ಒಂದು ಅಳತೆ (ನಾಲ್ಕು ದೊಡ್ಡ ಚಮಚದಷ್ಟು) (= **Wíneglassful**). **W.-marc** ದ್ರಾಕ್ಷಿ ಚರಟ. **W.-palm** ಮದ್ಯ ತೆಗೆಯುವ ತಾಳೆಮರ : ಕಳ್ಳು ತಾಳೆ. **Wínepress** ದ್ರಾಕ್ಷಿ—ಗಾಣ, ಆಲೆ. **Wíneskin** ಮದ್ಯದ ಬುದ್ದಲಿ. **W.-stone** ಮದ್ಯದ ಪೀಪಾಯಿಗಳಲ್ಲಿ ಕಟ್ಟುವ ಟಾರ್ಟಾರಿಕ್ ಆಮ್ಲದ ಒಂಡು : ಮದ್ಯದ ಒಂಡು. **W.-vault** ಮದ್ಯದ—ಕೋಣೆ, ಉಗ್ರಾಣ ; ಮದ್ಯದ ಅಂಗಡಿ. **Wíneless** (ಗು.) ; **Wíny** (ಗು.) ಮದ್ಯದ, ಮದ್ಯ ಲಕ್ಷಣದ.

Wing ವಿಂಗ್ (ನಾ., ಕ್ರಿ.) ರೆಕ್ಕೆ, ಪಕ್ಷ [Clip one's wings (Clip[2] ನೋಡಿ). Come on the wings of the wind ವಾಯುವೇಗದಲ್ಲಿ ಬಾ. Lend, add, wings to ತ್ವರೆಗೊಳಿಸು, ವೇಗ ಅಗಿಸು. Take under one's w. ತನ್ನ ಆಶ್ರಯಕ್ಕೆ, ರಕ್ಷಣೆಗೆ,—ತೆಗೆದುಕೊ. His wings are sprouting ಅವನಿಗೆ ರೆಕ್ಕೆ ಮೊಳೆಯುತ್ತಿದೆ (ಎಂದರೆ, ಅವನಲ್ಲಿ ಮನುಷ್ಯಾತೀತ ಗುಣಗಳಿವೆ). Money takes to itself wings ಹಣ ಹಾರಿಹೋಗುತ್ತದೆ, ಮಾಯ ವಾಗಿ ಬಿಡುತ್ತದೆ] ; (ಹಾಸ್ಯ ಪ್ರ., ಮು., ಗಾಯಗೊಳಿಸುವಲ್ಲಿ) ತೋಳು ; (ಕಟ್ಟಡ, ಸೈನ್ಯವ್ಯೂಹ, ಮೊ. ಗಳ) ಕಕ್ಷೆ, ಪಾರ್ಶ್ವ, ಪಕ್ಕ (The north w. of the house. Wings in theatre ರಂಗಸ್ಥಳದ ಪಾರ್ಶ್ವ ಗಳು, ಪಕ್ಕಗಳು ; ಪಾರ್ಶ್ವ ದೃಶ್ಯಗಳು) ; ರೆಕ್ಕೆಯ ಹಾರಿಕೆ (On the w. ಹಾರುತ್ತ, ಚಲಿಸುತ್ತ, ಪ್ರಯಾಣದಲ್ಲಿ. Take w. ಹಾರತೊಡಗು) [**W.-beat** (ಹಾರಿಕೆಯಲ್ಲಿ ಒಂದು) ರೆಕ್ಕೆ ಬಡಿತ. **W.-case** (ಕೆಲವು ಹುಳುಗಳಲ್ಲಿ) ಹಾರುರೆಕ್ಕೆಗಳ ರಕ್ಷಣೆಯಾದ ಕೊಂಬಿನಂಥ ಪದಾರ್ಥದ ಕವಚ: ರೆಕ್ಕೆ ಕವಚ. **W.-commander** ಆಕಾಶ ಸೈನ್ಯದ ತುಕಡಿ ನಾಯಕ. **W.-covert** ಹಕ್ಕಿಯ ರೆಕ್ಕೆಯ ಹಾರುಗರಿಯ ಮೇಲೆ ಹರಡಿಕೊಂಡಿರುವ ಸಣ್ಣ ಪುಕ್ಕ : ರೆಕ್ಕೆ ಹೊದಿಕೆ. **W.-footed** (ಕಾವ್ಯ) ಚುರುಕಾದ, ಕ್ಷಿಪ್ರ ಗತಿಯ. **W.-sheath** = W.-case. **W.-spread** ರೆಕ್ಕೆ ಬಿಚ್ಚಿಕೊಂಡಿರುವಾಗ ಎರಡೂ ರೆಕ್ಕೆಗಳ ಒಟ್ಟು ಹರವು : ರೆಕ್ಕೆ ಹರವು, ಪಕ್ಷ ವಿಸ್ತಾರ. **W.-stroke** ರೆಕ್ಕೆ ಬಡಿತ]. (ಕ್ರಿ.) ರೆಕ್ಕೆ ಹವಣಿಸು ; (ಮೇಲಕ್ಕೆ) ಹಾರುವಂತೆ ಮಾಡು, ಹಾರಿಸು ; ತ್ವರೆಗೊಳಿಸು ; ವೇಗ ಗತಿ ಕೊಡು [W. arrow with eagle's feathers ಬಾಣಕ್ಕೆ ಗರುಡನ ಗರಿ ಕಟ್ಟು. Vengeance winged the shaft ಸೇಡು ಬಾಣಕ್ಕೆ ಗರಿಕಟ್ಟಿತು. Winged words (ಬಾಣದಂತೆ) ಗುರಿ ಮುಟ್ಟುವ ಮಾತುಗಳು, ಅರ್ಥಗರ್ಭಿತ ಮಾತುಗಳು, ಪರಿಣಾಮ ಕಾರಿಯಾದ ಮಾತುಗಳು. Fear winged his steps ಭಯ ಅವನನ್ನು ಚುರುಕು ಹೆಜ್ಜೆ ಹಾಕುವಂತೆ, ವೇಗವಾಗಿ ಓಡುವಂತೆ, ಮಾಡಿತು. Winged horse = Pegasus (ಆ ಪದ ನೋಡಿ). Winged God (ರೋಮನ್ ದೇವತೆಯಾದ) ಮರ್ಕ್ಯುರಿ. Winged Victory ರೆಕ್ಕೆಗಳಿರು ವ(ಂತೆ ರೂಪಿಸಿದ) ಜಯದೇವತೆ(ಯ ಪ್ರತಿಮೆ)] ; ರೆಕ್ಕೆಯ ಸಹಾಯದಿಂದ ಸಂಚರಿಸು, ಹಾರು (Bird wings its way, wings the air) ; (ಹಕ್ಕಿಯ) ರೆಕ್ಕೆಗೆ, (ಮನುಷ್ಯನ) ತೋಳಿಗೆ, —ಗಾಯಮಾಡು. (-)**winged** (ಗು.) ; **Wíngless** (ಗು.) ; **Wínglet** (ನಾ.) ಕಿರು ರೆಕ್ಕೆ, ಪಕ್ಷಕ.

Wink ವಿಂಕ್ (ಕ್ರಿ., ನಾ.) ಕಣ್ಣು ಮಿಟುಕು, ಮಿಟುಕಿಸು, ಮಿಳಕಿಸು; ಎವೆಯಿಕ್ಕು; ರೆಪ್ಪೆ—ಬಡಿ, ಹೊಡೆ [Like winking (ಅಸಂ.) ರೆಪ್ಪೆ ಹೊಡೆದಂತೆ, ಬಲು ಚುರುಕಾಗಿ, ಅತಿ ಶೀಘ್ರವಾಗಿ] ; (ಎಚ್ಚರಿಕೆ, ಸೂಚನೆ, ಸಂಕೇತ, ಮೊ. ನ್ನು ತಿಳಿಸಲು) ಕಣ್ಣು ಮಿಟುಕಿಸು, ಕಣ್ಣುಸನ್ನೆಮಾಡು ; (ಬೆಳಕು, ನಕ್ಷತ್ರ, ಮೊ. ಗಳ ವಿಷಯದಲ್ಲಿ) ಮಿನುಗು, ಮಿರುಗುಟ್ಟು ; [W. at (ಒಂದರ ದುರುಪಯೋಗ, ಉಲ್ಲಂಘನೆ, ಮೊ. ನ್ನು) ನೋಡದವ ನಂತೆ ನಟಿಸು, ಕಂಡೂ ಕಾಣದಂತಿರು] . (ನಾ.) ಕಣ್ಣು ಮಿಟುಕು(ವುದು), ಎವೆಯಿಕ್ಕುವುದು, ಕಣ್ಣುಸನ್ನೆ [Nod is as good as w. to blind horse ಕುರುಡು ಕುದುರೆಗೆ ತಲೆ ತೂಗುವುದೂ ಒಂದೆ ಕಣ್ಣು ಮಿಟುಕಿಸುವುದೂ ಒಂದೆ. Tip on the w. (ಅಸಂ.) ಸೂಚನೆ, ಸುದ್ದಿ,—ಕೊಡು : ಕಣ್ಣುಸನ್ನೆ ಮಾಡು. Did not sleep a w. all night ರಾತ್ರಿಯೆಲ್ಲ ರೆಪ್ಪೆ ಮುಚ್ಚಲಿಲ್ಲ. Forty winks ಸಣ್ಣ ನಿದ್ದೆ]

Wínkle ವಿಂಕ್‌ಲ್ (ನಾ.) (ಆಹಾರವಾಗಿ ತಿನ್ನುವ) ಕಡಲ ಬಸವನ ಹುಳು, ಒಂದು ಬಗೆಯ ಸಿಂಪಿ.

Wínnow ವಿನೋ (ಕ್ರಿ. ಸಕ., ನಾ.) (ಜಳ್ಳು ಹೋಗುವಂತೆ) ತೂರು, ಕೇರು ; ಜಳ್ಳು ತೂರಿಹಾಕು (ರೂಪ. ಸಹ) (*Away, from, out* ಉಪ. ದೊಡನೆ) ; ಶೋಧಿಸು, ಸೋಸು ; ಕಸ, ಕಳಪೆ, —ತೆಗೆದು ಹಾಕು (*Out, away*) ; ರೆಕ್ಕೆ—ಬಡಿ, ಬೀಸು ; (ಕೂದಲು, ಮೊ. ನ್ನು) ಆಡಿಸು. (ನಾ.) ಮೊರ [**Wínnower** (ನಾ.)]

Wínsome ವಿನ್ಸಂ (ಗು.) (ವ್ಯಕ್ತಿ, ಮುಖಲಕ್ಷಣ, ನಡತೆ, ಮುಗುಳ್ನಗೆ, ಮೊ. ಗಳ ವಿಷಯದಲ್ಲಿ) ಆಕರ್ಷಕ, ಮನೋಹರ, ಒಲಿಸುವ, ಗೆಲವಾದ, ಪ್ರಸನ್ನ. **Wínsomely** (ಕ್ರಿ. ವಿ.) ; **Wínsomeness** (ನಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Wínter ವಿಂಟರ್ (ನಾ., ಕ್ರಿ.) ಚಳಿಗಾಲ, ಶೀತಕಾಲ, ಮಾಗಿ, ಶಿಶಿರ (Hard, mild, w. ಹೆಚ್ಚು ಹಿಮ ಬೀಳುವ, ಬೀಳದ, ಮಾಗಿ: ಕಠಿನ, ಸೌಮ್ಯ, —ಶಿಶಿರ); (ವಿಶೇಷಣ ಪ್ರ.) ಚಳಿಗಾಲದ [W. solstice (Solstice ನೋಡಿ). W. sleep ಚಳಿಗಾಲದ ನಿಶ್ಚೇಷ್ಟ ಸ್ಥಿತಿ. W. quarters (ಮು., ಸೈನ್ಯಗಳು ಹೋಗಿ ತಂಗುವ) ಚಳಿಗಾಲದ ವಸತಿ. W. garden ಆರಾಮಶಾಲೆಯಾಗಿ ಉಪಯೋಗಿಸುವ, ಗಿಡ, ಮೊ. ಗಳನ್ನು ಬೆಳಸಿರುವ, ಗಾಜಿನ ಆವರಣವುಳ್ಳ ಸ್ಥಳ: ಶಿಶಿರೋದ್ಯಾನ]; (ಅಲಂ., ಕಾವ್ಯ) ಜೀವಮಾನದ ವರ್ಷ (A man of fifty winters ಐವತ್ತು ವರ್ಷ ವಯಸ್ಸಿನವನು); [W.-green ಮಾಗಿಯಲ್ಲಿ ಹಸುರು ತುಂಬಿರುವ ಒಂದು ಸಸ್ಯ. W.-lodge (ಸ. ವಿ.) ಚಳಿಗಾಲದಲ್ಲಿ ಸಸ್ಯದ ಭ್ರೂಣ ವನ್ನು ಕಾಪಾಡುವ ಮೊಗ್ಗು, ಅಥವಾ ಗೆಡ್ಡೆ: ಶೀತ ರಕ್ಷಾವರಣ. W.-tide (ಕಾವ್ಯ) = W.]. (ಕ್ರಿ.) ಚಳಿಗಾಲ ಕಳೆ (*At*, *in* ಮೊ. ಉಪ. ದೊಡನೆ); (ಸಸ್ಯಗಳನ್ನು, ದನಕರುಗಳನ್ನು) ಚಳಿಗಾಲದಲ್ಲಿ —ಸಾಕು, ಬೆಳಸು. **Wínterless** (ಗು.); **Wínterly** (ಗು.); **Wíntry** (ಗು.) ಚಳಿಗಾಲದ (ಲಕ್ಷಣಗಳುಳ್ಳ), ಚಳಿಯ, ಶೀತದ, ಹೆಚ್ಚಾಗಿ ಗಾಳಿಯಿರುವ, ನಿರುತ್ಸಾಹದ, ಗೆಲವಿಲ್ಲದ (W. weather, day, sun, scene); (ಮುಗುಳ್ನಗೆ, ಸ್ವಾಗತ, ಮೊ. ಗಳ ವಿಷಯದಲ್ಲಿ) ಉತ್ಸಾಹ, ಆಸಕ್ತಿ, ಪ್ರಸನ್ನತೆ, —ಇಲ್ಲದ. **Wíntriness** (ನಾ.)

Wipe ವೈಪ್ (ಕ್ರಿ., ನಾ.) (ಬಟ್ಟೆ, ಕಾಗದ, ಕೈ, ಮೊ. ಗಳಿಂದ) ಒರಸು, ತೊಡೆ [W. one's eyes ಕಣ್ಣೀರು ಒರಸಿಕೊ, ಅಳು ನಿಲ್ಲಿಸು. W. one's eye (ಅಸಂ.) ಒಬ್ಬನಿಗಿಂತ ಮುಂಚಿತವಾಗಿ ತಾನು ಅನುಕೂಲ ಪಡೆದುಕೊ; ಇನ್ನೊಬ್ಬನ ಗುರಿಯನ್ನು ತಾನು ಸಾಧಿಸಿಕೊ. W. out bath ಸ್ನಾನದ ತೊಟ್ಟಿಯನ್ನು ಒರಸಿಹಾಕು]; ಒರಸಿ, ಉಜ್ಜಿ, ತೊಡೆದು, —ಹಾಕು (*Away*, *off*, *out* ಉಪ. ದೊಡನೆ) [W. (away) your tears ಕಣ್ಣೀರು—ಒರಸಿಕೊ, ನಿಲ್ಲಿಸು. W. out disgrace (ಮು., ಸೇಡು ತೀರಿಸಿಕೊಂಡು) ಅವಮಾನವನ್ನು ತೊಡೆದುಹಾಕು. W. out ತೊಡೆದುಹಾಕು, ನಿರ್ನಾಮಮಾಡು, ನಿರ್ಮೂಲಮಾಡು (Their very name, the whole army, was wiped out). W. the floor with (ಅಸಂ.) ಪೂರ್ತಿ ಸೋಲಿಸಿ, ಶಿಕ್ಷಿಸಿ, —ಅವಮಾನಪಡಿಸು; ಧೂಗತಮಾಡಿಬಿಡು]. (ಅಸಂ.) ಬೀಸಿ ಹೊಡೆ (Wiped at me with his sword). (ನಾ.) ಒರಸುವುದು; ಒರಸಿಕೆ (Give this plate a w.); (ಅಸಂ.) ಬಲವಾದ ಹೊಡೆತ, ಬೀಸು ಹೊಡೆತ (Fetched him a w. ಅವನಿಗೆ ಬಲವಾದ ಹೊಡೆತ ಕೊಟ್ಟನು); (ಅಸಂ.) ಕೈವಸ್ತ್ರ.

Wire ವೈ(ಅ)ರ್ (ನಾ.) (ಲೋಹದ) ತಂತಿ, ಕಂಬಿ, ಸರಿಗೆ [Barbed w. (Barb[1] ನೋಡಿ). Live w. (Live ಗು. ನೋಡಿ). Private w. ಖಾಸಗಿ ದೂರಲೇಖಕ ತಂತಿ. Telegraph w. ದೂರಲೇಖಕ ತಂತಿ. Was sent for by w. ಬರಹೇಳಿ ತಂತಿ ಕೊಟ್ಟಿತು. Pull the wires (ಬೊಂಬೆಗಳನ್ನು) ಸೂತ್ರ ಎಳೆದು ಆಡಿಸು; (ರೂಪ.) (ರಾಜಕೀಯ ಪಕ್ಷ, ಚಳವಳಿ, ಮೊ. ನ್ನು) ಗುಪ್ತವಾಗಿದ್ದು, ಹಿಂದೆ ನಿಂತು, —ನಡಸು, ಪ್ರಭಾವ ಬೀರು]; ತಂತಿ ಸಮಾಚಾರ, ತಾರು (Sent me a w.). **W.-cloth, gauge, netting** ತಂತಿ—ಬಟ್ಟೆ, ಜಾಲರಿ, ಬಲೆ. **W.-cutter** ತಂತಿ (ಕತ್ತರಿಸುವ) ಕತ್ತರಿ. **W.-dancer** ಎಳೆದು ಕಟ್ಟಿದ ತಂತಿಯಮೇಲೆ ಕಸರತ್ತು ಮಾಡುವವನು: ತಂತಿ ಡೊಂಬ (ರವನು), ತಂತಿ ನರ್ತಕ. **Wíredraw** (ಕ್ರಿ.) (ಲೋಹವನ್ನು) ತಂತಿ, ಕಂಬಿ, ಸರಿಗೆ, —ಎಳೆ; (ರೂಪ.) (ತರ್ಕ, ವಿಷಯ, ಮೊ. ನ್ನು) ಅತಿ ಸೂಕ್ಷ್ಮಕ್ಕೆ ತೆಗೆದುಕೊಂಡುಹೋಗು, ಅತಿನಾಜೂಕು ಮಾಡು (ಮು., ಭೂ. ಕೃ. ನಲ್ಲ). **W.-edge** (ಅಲಗನ್ನು ವಿಪರೀತ ಮಸೆದಾಗ ಹಿಮ್ಮಡಿಚಿ ಕೊಳ್ಳುವಂಥ) ಹುಸಿಯಲಗು. **W. entanglement** (ಶತ್ರು ಬೇಗನೆ ಬಂದೆರಗದಂತೆ ತಡೆಯಾಗಿ ಹಾಕುವ) (ಮುಳ್ಳು)ತಂತಿ ಗೋಜು. **W.-gun** ನಳಿಕೆಯ ಸುತ್ತ ಚಪ್ಪಟೆ ತಂತಿಯನ್ನು ಸುತ್ತಿರುವ ಫಿರಂಗಿ: ತಂತಿ ಫಿರಂಗಿ. **W.-haired** (ಮು., ನಾಯಿಗಳ ವಿಷಯದಲ್ಲಿ) ಬಿರು, ತಂತಿ —ಕೂದಲಿನ. **W.-heel** ಕುದುರೆಯ ಕಾಲಿಗೆ ತಗುಲುವ ಒಂದು ರೋಗ: ತಂತಿ ಹಿಮ್ಮಡಿ. **Wírepuller** ಹಿಂದೆ ನಿಂತು ಸೂತ್ರ ಆಡಿಸುವ ರಾಜಕೀಯದವನು, ಮೊ. ರು: ಸೂತ್ರಧಾರ. **W. rope** ತಂತಿ—ಹಗ್ಗ, ಹೊರಜಿ. **W.-worm** ಹಲವು ಬಗೆಯ ಹಾನಿಕರ ಮರಿಹುಳು: ತಂತಿಹುಳು. **W.-wove** (ಕಾಗದದ ವಿಷಯದಲ್ಲಿ) = Wove (Weave ಕೆಳಗೆ ನೋಡಿ). **Wíreless** (ಗು., ನಾ., ಕ್ರಿ.) ತಂತಿಯಿಲ್ಲದ, ನಿಸ್ತಂತು [W. telegraphy (Telegram ಕೆಳಗೆ Telegraphy ನೋಡಿ)]. (ನಾ.) ನಿಸ್ತಂತು ವಾರ್ತೆ. ನಿಸ್ತಂತು ವಾರ್ತಾ ಸಂಗ್ರಾಹಕ [(ವಿಶೇಷಣ ಪ್ರ.) W. set, station ನಿಸ್ತಂತು ಸಜ್ಜು, ನಿಲ್ದಾಣ]. (ಕ್ರಿ.) ನಿಸ್ತಂತು (ವಾರ್ತೆ) ಕಳಿಸು. **Wíry** (ಗು.) (ಕಾವ್ಯ) ತಂತಿಯಿಂದ ಮಾಡಿದ, ತಂತಿಯ; ತಂತಿಯಂತೆ ದೃಢವೂ ಬಳುಕು ವುದೂ ಆದ, ತಂತಿ ಗಟ್ಟಿಯಾದ; (ಮನುಷ್ಯರ ವಿಷಯದಲ್ಲಿ) ಗಟ್ಟಿ ಸ್ನಾಯುಗಳುಳ್ಳ, ಶ್ರಮ ಸಹಿಷ್ಣುವಾದ, ತಂತಿ ಗಟ್ಟಿಯ. **Wírily** (ಕ್ರಿ. ವಿ.); **Wíriness** (ನಾ.)

Wire (ಕ್ರಿ.) ತಂತಿ—ಬಿಗಿ, ಕಟ್ಟು, ಹವಣಿಸು; (ಮನೆಗೆ) ವಿದ್ಯುತ್ತಂತಿ—ಹಾಕು, ಅಳವಡಿಸು; (ಮಣಿ, ಮೊ. ನ್ನು) ತಂತಿಗೆ ಪೋಣಿಸು; (ಹಕ್ಕಿಯನ್ನು) ತಂತಿಗೆ ಸಿಕ್ಕಹಾಕಿಸು, ತಂತಿಯೊಡ್ಡಿ ಹಿಡಿ. ತಂತಿ (ಸಮಾಚಾರ) ಕಳಿಸು (W. me the result). W.-in (ಅಸಂ.) ಹುರುಪಿನಿಂದ ಮಾಡತೊಡಗು, ಶಕ್ತಿಯನ್ನೆಲ್ಲಾ ಪ್ರಯೋಗಿಸು(ತ್ತ ಮಾಡು)

Wis ವಿಸ್ (ಕ್ರಿ. ಅಕ., ವರ್ತಮಾನ ಉತ್ತಮ ಪುರುಷ ಏ. ವ. ರೂಪ) (ಕೃತಕ ಪ್ರಾಚೀ. ಪ್ರ.) ನನಗೆ (ಚೆನ್ನಾಗಿ) ಗೊತ್ತು(ಂಟು); ನ್ನಾನು (ಚೆನ್ನಾಗಿ) ಬಲ್ಲೆ.

Wise[1] ವೈಸ್ (ಗು.) (ವ್ಯಕ್ತಿಯ ವಿಷಯದಲ್ಲಿ) ಪ್ರಾಜ್ಞನಾದ, ಜ್ಞಾನಿಯಾದ, ವಿವೇಕವುಳ್ಳ, ವಿವೇಚನೆಯುಳ್ಳ; (ಕಾರ್ಯ, ಮಾರ್ಗ, ಮಾತು, ಅಭಿಪ್ರಾಯ, ಮೊ. ಗಳ ವಿಷಯದಲ್ಲಿ) ವಿವೇಕದ [W. after the event ಕೆಟ್ಟಮೇಲೆ ಬುದ್ಧಿ ಬಂತು. Came away none the wiser, as w. as he went ಹೋಗಿಬಂದದ್ದೇ ಹೊರತು ಹೆಚ್ಚು ಏನೂ ತಿಳಿಯಲಿಲ್ಲ; ಹೋದಹಾಗೆ ಬಂದ. Where ignorance is bliss 'tis folly to be w. (Ignorance ನೋಡಿ)]; (ಪ್ರಾಚೀ. ಪ್ರ.) ದಿವ್ಯ ದೃಷ್ಟಿಯುಳ್ಳ, ಮಂತ್ರ ತಂತ್ರಗಳನ್ನು ಅರಿತ (W. man ಮಂತ್ರವಾದಿ. W. woman ಮಂತ್ರವಾದಿನಿ; ಕಣಿ ಹೇಳುವವಳು; ಸೂಲಗಿತ್ತಿ); ಬುದ್ಧಿವಂತಿಕೆ ತೋರುವ (With a w. shake of the head ತುಂಬ ತಿಳಿದವನಂತೆ ತಲೆಯಾಡಿಸಿ, ತಲೆದೂಗಿ. W. saw ನಾಣ್ಣುಡಿ, ಗಾದೆ). **Wísely** (ಕ್ರಿ. ವಿ.); **Wísdom** ವಿಸ್‌ಡಂ (ನಾ.) ಬುದ್ಧಿ(ವಂತಿಕೆ), ಪ್ರಜ್ಞೆ, ವಿವೇಕ, ವಿವೇಚನೆ, ಜ್ಞಾನ; ಸೂಕ್ತಿಗಳು, ಸುಭಾಷಿತಗಳು [Pour forth w. ಸುಭಾಷಿತಗಳನ್ನು ಹೇಳು. W. of Solomon (ಸಂಕ್ಷಿಪ್ತ: Wisd.), W. of Jesus the Son of Sirach *or* Ecclesiasticus ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ ಸಂದಿಗ್ಧ ಪ್ರಮಾಣದ ಎರಡು ಸುಭಾಷಿತ ಗ್ರಂಥಗಳು]. W.-tooth ಸಾ., ೨೦ ವರ್ಷ ವಯಸ್ಸಾದಮೇಲೆ ಮೊಳೆಯುವ ಹಲ್ಲು: ಜ್ಞಾನದಂತ (Cut one's w.-teeth ಬುದ್ಧಿವಂತನಾಗು, ವಿವೇಕಪಡೆ)

Wise[2] ವೈಸ್ (ನಾ.) ಮಾರ್ಗ, ರೀತಿ, ವಿಧಾನ, ಪ್ರಕಾರ, ಬಗೆ [In solemn w. (ಪ್ರಾಚೀ. ಪ್ರ.) ಗಂಭೀರ ರೀತಿಯಲ್ಲಿ. In some w. ಯಾವುದೋ ರೀತಿಯಲ್ಲಿ. In no w. ಯಾವ ಪ್ರಕಾರದಲ್ಲೂ (ಇಲ್ಲ). In any w. ಯಾವುದೇ ಪ್ರಕಾರದಲ್ಲಿ. On this w. ಈ ಪ್ರಕಾರ, ಹೀಗೆ]

-wise —ವೈಸ್ (ಉ. ಪ್ರ.) —ರೀತಿಯಲ್ಲಿ, —ವಿಧವಾಗಿ [Clockw., Crossw., Lengthw. (ಆಯಾ ಪದ ನೋಡಿ). Nowise ಯಾವ ಪ್ರಕಾರದಲ್ಲೂ (ಇಲ್ಲ)]

Wíseacre ವೈಸೇಕರ್ (ನಾ.) ಬುದ್ಧಿವಂತನೆಂದು ತೋರಿಸಿಕೊಳ್ಳುವ ದಡ್ಡ; ಪಂಡಿತಂಮನ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Wish ವಿಷ್ (ಕ್ರಿ., ನಾ.) ಬಯಸು, ಕೋರು, ಹಾರೈಸು, ಇಚ್ಛಿಸು, ಆಶಿಸು, ಅಪೇಕ್ಷಿಸು [W. one at the devil *or* further ದೂರ ತೊಲಗಿಹೋಗಲೆಂದು ಹಾರೈಸು. W. well to all men ಎಲ್ಲರಿಗೂ ಒಳ್ಳೆಯದಾಗಲೆಂದು ಹಾರೈಸು, ಶುಭ ಕೋರು. Wishes nobody ill ಯಾರಿಗೂ ಕೆಟ್ಟದ್ದು ಬಯಸುವುದಿಲ್ಲ. W. person joy of (ವ್ಯಂಗ್ಯ ಪ್ರ.) ಅನುಭೋಗಿಸಲೆಂದು, ಸುಖವಾಗಿರಲೆಂದು, ಹಾರೈಸು. Wishing-bone ಹಕ್ಕಿಯ ಕೊರಳಿಗೂ ಎದೆಗೂ ನಡು ವಿರುವ ಕವಲುಮೂಳೆ (ಇದನ್ನು ಇಬ್ಬರು ಎಳೆದಾಗ ಮುರಿದು ದೊಡ್ಡ ಭಾಗ ಕೈಗೆ ಬಂದವರಿಗೆ ಅವರ ಇಷ್ಟಾರ್ಥಗಳನ್ನು ಸಲ್ಲಿಸುತ್ತದೆ ಎಂದು ನಂಬಿಕೆ): ಉಲ್ಲಾಸದ ಹಾರೈಕೆ; ಇಷ್ಟಪೂರಕ ಮೂಳೆ. Wishing-cap ಕೋರಿದ್ದನ್ನೆಲ್ಲ ಕೊಡುವ ಒಂದು ಐಂದ್ರಜಾಲಿಕ ಟೋಪಿ: ಇಷ್ಟ ಪೂರಕ ಟೋಪಿ]. (ನಾ.) ಬಯಕೆ, ಕೋರಿಕೆ, ಹಾರೈಕೆ, ಆಸೆ, ಇಷ್ಟ, ಇಚ್ಛೆ, ಅಪೇಕ್ಷೆ [W. is father to thought (Father ನೋಡಿ). If wishes were horses beggars would ride ಬಯಕೆಗಳೆಲ್ಲ ಕುದುರೆಗಳಾದರೆ ತಿರುಕರೆಲ್ಲ ಸವಾರಿ ಮಾಡಿಯಾರು Good wishes ಶುಭಾಶಯಗಳು]. (-)**wisher** (ನಾ.) (Well, Ill, -wisher). **Wíshful** (ಗು.)

Wíshwash ವಿಷ್‌ವಾಷ್ (ನಾ.) ನೀರಸ, ಸಪ್ಪೆ, —ಪಾನೀಯ, ಮಾತು. **Wíshy-washy** (ಗು.) ನೀರಸವಾದ, ಸಪ್ಪೆಯಾದ.

Wisp ವಿಸ್ಪ್ (ನಾ.) (ಹುಲ್ಲು, ಮೊ. ಗಳ) ಕಂತೆ, ಕಟ್ಟು.

Wist. **Wit** ನೋಡಿ.

Wístful ವಿಸ್ಟ್‌ಫುಲ್ (ಗು.) (ಕಣ್ಣು, ನೋಟ, ಧ್ವನಿ, ಮನೋಭಾವ, ಮೊ. ವಿಷಯಗಳಲ್ಲಿ) ಚಾಪಲ್ಯದ, ಆಶೆಯ. **Wístfully** (ಕ್ರಿ. ವಿ.); **Wístfulness** (ನಾ.)

Wit ವಿಟ್ (ಕ್ರಿ.; ವರ್ತಮಾನ I, he, wot; thou wottest; ಭೂತ. Wist; ತುಮಂತ Wit; ವರ್ತಮಾನ ಕೃ. Witting) (ಪ್ರಾಚೀ. ಪ್ರ.) ತಿಳಿ(ದಿರು), ಗೊತ್ತಿರು (God wot ದೇವರು ಬಲ್ಲ, ದೇವರಿಗೆ ಗೊತ್ತು. I wot ನಾನು ಚೆನ್ನಾಗಿ ಬಲ್ಲೆ. To w. ಎಂದರೆ). **Witting**[1] (ಗು.) ತಿಳಿದು ತಿಳಿದೂ ಮಾಡಿದ; ಉದ್ದೇಶ ಪೂರ್ವಕ. **Wíttingly** (ಕ್ರಿ. ವಿ.)

Wit (ನಾ.) (ಏ. ವ. ಅಥವಾ ಬ. ವ. ದಲ್ಲಿ) ಅರಿವು, ತಿಳಿವಳಿಕೆ, ಬುದ್ಧಿ, ವಿವೇಕ, ಪ್ರಜ್ಞೆ [Has not the w., the wits, w. enough, to see ನೋಡಿ ತಿಳಿಯುವಷ್ಟು ವಿವೇಕವಿಲ್ಲ. Out of one's wits ಬುದ್ಧಿ ಭ್ರಮಣೆಯಾಗಿ, ಹುಚ್ಚುಹಿಡಿದು. Has his wits about him ಹುಷಾರಾಗಿ, ಎಚ್ಚರವಾಗಿ, ಇದ್ದಾನೆ. Has quick, slow, wits ಅವನ ಬುದ್ಧಿ ಚುರುಕಾಗಿದೆ, ಮಂದವಾಗಿದೆ. At one's wit's end ಏನೂ ತೋಚದೆ; ದಿಕ್ಕು ತೋರದೆ. Live by one's wits (ಗೊತ್ತಾದ ಉದ್ಯೋಗ ಏನೂ ಇಲ್ಲದೆ) ಬುದ್ಧಿವಂತಿಕೆ ತೋರಿಸುತ್ತ ಅಹನ್ಯಹನಿ ಜೀವನ ನಡಸು. The five wits (ಪ್ರಾಚೀ. ಪ್ರ.) ಪಂಚೇಂದ್ರಿಯಗಳು, ಮನಸ್ಸು]. ಪರಸ್ಪರ ಸಂಬಂಧವಿಲ್ಲದ ಭಾವಗಳ ಅಥವಾ ಮಾತುಗಳ ಅನಿರೀಕ್ಷಿತ ಸಂಯೋಜನೆ ಅಥವಾ ವೈದೃಶ್ಯ ನಿರೂಪಣೆ(ಯಿಂದ ಥಟ್ಟನೆ ಬುದ್ಧಿಗೆ ಆನಂದವನ್ನುಂಟು ಮಾಡುವ ಶಕ್ತಿ): ಬುದ್ಧಿ—ಚಮತ್ಕಾರ, ಚಾತುರ್ಯ; ಚತುರೋಕ್ತಿ, ಸರಸೋಕ್ತಿ, ರಸಿಕೋಕ್ತಿ (Pages sparkling with w.). ಚಮತ್ಕಾರ ಮನುಷ್ಯ, ವಾಕ್ಚತುರ; ಚತುರ ಭಾಷಿ, ರಸಿಕ ಭಾಷಿ. (ಪ್ರಾಚೀ. ಪ್ರ.) ಪ್ರಾಜ್ಞ, ವಿದ್ವಾಂಸ, ಜ್ಞಾನಿ. **Witless** (ಗು.) ಬುದ್ಧಿ ಯಿಲ್ಲದ, ದಡ್ಡ. **Witlessly** (ಕ್ರಿ. ವಿ.); **Witlessness** (ನಾ.); **Witling** (ನಾ.) ಅಲ್ಪ ಚತುರ, ಅಲ್ಪಜ್ಞಾನಿ. (-)**witted** (ಗು.) (Quick, slow, -w.). **Witting**[2] (ನಾ.) ಅರಿವು, ತಿಳಿವಳಿಕೆ; ಸಮಾಚಾರ, ಸುದ್ದಿ. **Witty** (ಗು.) ಬುದ್ಧಿವಂತಿಕೆಯ, ಚಮತ್ಕಾರದ, ಸ್ವಾರಸ್ಯದ. **Witticism** (ನಾ.) ಚಮತ್ಕಾರೋಕ್ತಿ, ಸರಸೋಕ್ತಿ, ರಸಿಕೋಕ್ತಿ; ತಮಾಷೆ; ಹಾಸ್ಯಾಭಾಸ; ಹಳಸಲು, ಸಾಮಾನ್ಯ, —ಹಾಸ್ಯ (ಸಾ., ತಿರಸ್ಕಾರ ಪ್ರ.). **Wittily** (ಕ್ರಿ. ವಿ.); **Wittiness** (ನಾ.)

Wítch ವಿಚ್ (ನಾ.) ಮಂತ್ರವಾದಿನಿ, ಮಾಟಗಾತಿ; ಮಾಯಗಾತಿ; (ವಿರ. ಪ್ರ.) ಮಂತ್ರವಾದಿ, ಮಾಟಗಾರ [White w. (White ನೋಡಿ). Witches' Sabbath (Sabbath ನೋಡಿ)]; (ರೂಪ.) ಮೋಹಕ ಸ್ತ್ರೀ, ಮೋಹಿನಿ; ವಿಕಾರ ಮುದುಕಿ, ಮುದಿಗೂಬೆ. **Wítchcraft** ಮಾಟ, ಶೂನ್ಯ. **W.-doctor** ಮಾಂತ್ರಿಕ. **W.-meal** ಒಂದು ತೆರದ ಪಾಚಿಯ ಪರಾಗ. **Wítchery** (ನಾ.) ಶೂನ್ಯ, ಮಾಟ.

Witch (ಕ್ರಿ. ಸಕ.) = Bewitch (ಆ ಪದ ನೋಡಿ) (The witching time of night ಮಾಟಗಾತಿಯರ ಕೆಲಸದ ಹೊತ್ತು, ಮಧ್ಯ ರಾತ್ರಿ); (ರೂಪ.) ಮೋಹಗೊಳಿಸು, (ಮಂತ್ರ) ಮುಗ್ಧಮಾಡು. **Wítching** (ಗು.); **Wítchingly** (ಕ್ರಿ. ವಿ.)

Wítenagemót ವಿಟೆನಗೆಮೋಟ್ (ನಾ.) ಆಂಗ್ಲೊಸ್ಯಾಕ್ಸನರ ಹಿರಿಯರ ಸಭೆ.

With ವಿತ್(ದ್) (ಉಪ.) ಒಡನೆ, ಕೂಡ, ಒಂದಿಗೆ, ಸಂಗಡ, ಜೊತೆ ಯಲ್ಲಿ, ಜೊತೆಗೆ, ಸಮೇತ, ಸಹಿತ [(೧) (ವಿರುದ್ಧವಾಗಿ ಎಂಬ ಅರ್ಥದಲ್ಲಿ): Fight, argue, w.—ಒಡನೆ ಕಾದಾಡು, ವಾದಮಾಡು. (೨) (ಸಹವಾಸ ದಲ್ಲಿ, ಪಕ್ಕದಲ್ಲಿ ಎಂಬ ಅರ್ಥಗಳಲ್ಲಿ): W. God ಸ್ವರ್ಗಸ್ಥನಾಗಿ, ದೇವರ ಪಾದ ಸೇರಿ. Have w. you (ಪ್ರಾಚೀ. ಪ್ರ.) ನಿನ್ನ ಆಹ್ವಾನವನ್ನು, ಪಂಥವನ್ನು, ಒಪ್ಪಿಕೊಳ್ಳುತ್ತೇನೆ. (೩) (—ಅಂತೆಯೆ, ಮೇಳವಾಗಿ ಎಂಬ ಅರ್ಥಗಳಲ್ಲಿ): I feel w. you ನನಗೂ ನಿನ್ನ ಹಾಗೆಯೇ ಎನ್ನಿಸುತ್ತದೆ. I sympathize w. you ನಿನ್ನ ಬಗ್ಗೆ, ನಿನ್ನ ವಿಷಯದಲ್ಲಿ, ನನಗೆ ಸಹಾನುಭೂತಿಯಿದೆ. Blue does not go w. green ನೀಲಿಯೂ ಹಸುರೂ ಹೊಂದುವುದಿಲ್ಲ. One w. ಒಂದಕ್ಕೇ ಸೇರಿದ. (೪) (ಒಳ ಕೊಂಡಿರುವ, ಉಳ್ಳ ಎಂಬ ಅರ್ಥಗಳಲ್ಲಿ): W. child ಬಸುರಾಗಿ, ಗರ್ಭಿಣಿಯಾಗಿ. W. young ಗಬ್ಬವಾಗಿ, ತೆನೆಯಾಗಿ. (೫) (ವಶದಲ್ಲಿ, ಜವಾಬ್ದಾರಿಯಲ್ಲಿ ಎಂಬ ಅರ್ಥಗಳಲ್ಲಿ): It rests w. you to decide ನಿರ್ಣಯಿಸುವುದು ನಿನ್ನ ಕೈಯಲ್ಲಿದೆ. (೬) (—ಉಪಕರಣದಿಂದ ಎಂಬ ಅರ್ಥದಲ್ಲಿ): Cut it with a knife ಚಾಕುವಿನಿಂದ ಕತ್ತರಿಸು. (೭) (ಗುಣ, ಮೊ. ವು ಉಳ್ಳ ಎಂಬ ಅರ್ಥದಲ್ಲಿ): Blessed w. beauty ಸೌಂದರ್ಯವನ್ನು ವರವಾಗಿ ಪಡೆದು, ಸೌಂದರ್ಯದ ಸೌಭಾಗ್ಯ ಹೊಂದಿ. (೮) (ಅದೇ ರೀತಿಯಲ್ಲಿ, ಒಂದರೊಂದಿಗೆ ಎಂಬ ಅರ್ಥಗಳಲ್ಲಿ): Rise w. the sun ಹೊತ್ತು ಹುಟ್ಟುವ ಹೊತ್ತಿಗೆ ಏಳು. W. that ಒಡನೆಯೆ, ಕೂಡಲೆ. Begin w. —ಇಂದ ಮೊದಲು ಮಾಡು, ಪ್ರಾರಂಭಿಸು. (೯) (—ಕಾರಣದಿಂದ ಎಂಬ ಅರ್ಥದಲ್ಲಿ): Is down w. fever ಜ್ವರ ದಿಂದ ಮಲಗಿದ್ದಾನೆ. (೧೦) (ಒಂದು ಗುಣ ಅಥವಾ ಒಂದು ಮನೋಭಾವ ತೋರಿಬರುವಂತೆ ಎಂಬರ್ಥದಲ್ಲಿ): Fought with courage ಧೈರ್ಯ ದಿಂದ ಕಾದಿದನು. (೧೧) (—ಕುರಿತು, ಸಂಬಂಧವಾಗಿ ಎಂಬ ಅರ್ಥ ಗಳಲ್ಲಿ): Bear, do, put up, w. him ಅವನೊಡನೆ ತಾಳ್ಮೆಯಿಂದಿರು, ಸಹನೆಯಿಂದಿರು; ಅವನನ್ನು ತಾಳಿಕೊ, ಸಹಿಸಿಕೊ. Away, down, up, to the devil, w. him ಅವನನ್ನು ತೊಲಗಿಸು, ಆಚೆಗೆ ಕರೆದು ಕೊಂಡುಹೋಗು; ಅವನು ತೊಲಗಿಹೋಗಲಿ. Can do nothing w. him ಅವನೊಡನೆ ಏಗುವುದಕ್ಕಾಗುವುದಿಲ್ಲ. ಅವನನ್ನು ಏನು ಮಾಡು ವುದಕ್ಕೂ ಆಗುವುದಿಲ್ಲ. Is it well w. thee ನೀನು ಕ್ಷೇಮವೇ? ಚೆನ್ನಾಗಿದ್ದೀಯೋ? Has great influence w. the House ಶಾಸನ ಸಭೆಯಲ್ಲಿ ಅವನಿಗೆ ತುಂಬ ಪ್ರಭಾವವಿದೆ. (೧೨) (ಪ್ರತ್ಯೇಕವಾಗು ವುದು ಎಂಬ ಅರ್ಥದಲ್ಲಿ): Part w. ಅಗಲು, ಬೇರಾಗು, ಬೇರ್ಪಡು. (೧೩) (—ಇದ್ದರೂ, ಆದರೂ ಎಂಬ ಅರ್ಥಗಳಲ್ಲಿ): W. all his learning ಅಷ್ಟು ಪಾಂಡಿತ್ಯವಿದ್ದರೂ]

Withál ವಿದಾಲ್ (ಕ್ರಿ. ವಿ., ಉಪ.) (ಪ್ರಾಚೀ. ಪ್ರ.) ಜೊತೆಗೆ, ಅದರ ಮೇಲೆ, ಅಲ್ಲದೆ, ಆದರೂ (ಕೂಡ) (His master was rather severe, but w. a very good man). (ಉಪ.) = With (Having nothing to fill his belly w.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Withdraẃ ವಿತ್(ದ್)ಡ್ರಾ (ಕ್ರಿ.) ಪಕ್ಕಕ್ಕೆ, ಹಿಂದಕ್ಕೆ, —ಎಳೆ, ಸರಿಸು (W. curtain, one's hand) ; ಹಿಂದಕ್ಕೆ, ವಾಪಸು —ತೆಗೆದುಕೊ(ಂಡುಬಿಡು) [W. boy from school ಹುಡುಗನನ್ನು ಶಾಲೆ(ಯಿಂದ) ಬಿಡಿಸು. W. horse from race ಕುದುರೆಯನ್ನು ಜೂಜಿನಿಂದ ಹಿಂದಕ್ಕೆ ತೆಗೆದುಕೊ. W. favour from person ವ್ಯಕ್ತಿಗೆ ಅನುಗ್ರಹ ತಪ್ಪಿಸು. Cries of 'w.' (ಅಸಭ್ಯವೆಂದಾಗಲಿ ಇತರ ಕಾರಣಗಳಿಂದಾಗಲಿ): (ಹೇಳಿದ್ದನ್ನು) 'ಹಿಂದಕ್ಕೆ ತೆಗೆದುಕೊಳ್ಳಿ' ಎಂಬ ಕೂಗು] ; (ಸ್ಥಳದಲ್ಲಿ, ಎದುರಿನಲ್ಲಿ ಇರದೆ) ಹೊರಟುಹೋಗು, ಬಿಟ್ಟು ಹೋಗು. Withdrawing-room (ಪ್ರಾಚೀ. ಪ್ರ.) ದಿವಾನಖಾನೆ, ಭೇಟಿ ಕೊಟಡಿ. **Withdráwal** (ನಾ.) ಹಿಂದೆಗೆದುಕೊಳ್ಳುವುದು, (ಬಿಟ್ಟು)ಹೋಗುವುದು.

Wíthe ವಿತ್(ದ್, ದಿ), ವೈದ್, **Wíthy** ವಿದಿ (ನಾ.; ಬ. ವ. Withes ವಿದೀಸ್, Withs ವಿದ್ಸ್) (ಹೊರೆ, ವೊ. ನ್ನು ಕಟ್ಟಲು ಉಪಯೋಗಿಸುವ, ಮು., ವಿಲೋ ಸಸ್ಯದ) ಸೆಳೆರೆಂಬೆ, ಹಂಬು ; ಒಳ್ಳಿ ಕಟ್ಟು.

Wíther ವಿದರ್ (ಕ್ರಿ.) ಒಣಗಿ ಸುರುಟಿಕೊ, ಸೊರಗು, ಬಾಡು, ಕಂದು, ಕಳೆಗುಂದು, ಮ್ಲಾನವಾಗು, ಕ್ಷೀಣವಾಗು ; —ಇಸು (Has a withered arm ಅವನ ತೋಳು ನವೆದುಹೋಗಿದೆ. Flowers & beauty w. ಹೂವೂ ಚೆಲುವೂ ಬಾಡಿಹೋಗುತ್ತವೆ, ಕಂದುತ್ತವೆ. Age cannot w. her ಮುಪ್ಪು ಅವಳನ್ನು ಕಳೆಗುಂದಿಸದು. The individual withers ವ್ಯಕ್ತಿ ಕ್ಷೀಣಿಸುತ್ತಾನೆ, ಕುಗ್ಗುತ್ತಾನೆ. W. one with a look ನೋಟದಿಂದ ಕಂದಿಸು). **Wíthering** (ಗು.) ; **Wítheringly** (ಕ್ರಿ. ವಿ.)

Wíthers ವಿದರ್ಸ್ (ನಾ., ಬ. ವ.) ಕುದುರೆಯ ಭುಜಾಸ್ಥಿಗಳ ನಡುವಣ ಉಬ್ಬು ಏಣು : ಸ್ಕಂಧ [My w. are unwrung (ಅಪಾದನೆ, ವೊ. ರಿಂದ) ನನಗೇನೂ ಅಳುಕುವುದಿಲ್ಲ, ನನ್ನ ಕೂದಲೂ ಕೊಂಕುವುದಿಲ್ಲ]

Withhóld ವಿದ್(ತ್)ಹೋಲ್ಡ್ (ಕ್ರಿ. ಸಕ., ಭೂತ., ಭೂ. ಕೃ. -held) ತಡೆ(ದಿಡು), ಕೊಡದಿರು, ನಿಲ್ಲಿಸು [W. one's hand (ಪ್ರಾಚೀ. ಪ್ರ.) ಕ್ರಮ ನಡಸದಿರು, ಕೈ ತಡೆದಿಡು. W. one's consent, support ಸಮ್ಮತಿ, ಬೆಂಬಲ, —ಕೊಡದಿರು]

Withín ವಿದಿನ್ (ಕ್ರಿ. ವಿ., ನಾ., ಉಪ.) (ಮು., ಪ್ರಾಚೀ. ಪ್ರ.) ಒಳಗೆ, ಒಳಕ್ಕೆ, ಒಳಗಡೆ [Clean w. & without ಒಳಗೆ ಹೊರಗೆ ಎಲ್ಲಾ ಚೊಕ್ಕಟಮಾಡು. Go w. (ಮನೆಯ, ಕೋಣೆಯ) ಒಳಕ್ಕೆ ಹೋಗು. Stay w. ಒಳಗೇ ಇರು, ಹೊರಹೋಗದಿರು. Is Mr Jones w.? ಜೋನ್ಸ್ ಮನೆಯಲ್ಲಿ ಇದ್ದಾರೋ? Make me pure w. ನನಗೆ ಅಂತಃಶುದ್ಧಿ, ಆತ್ಮಶುದ್ಧಿ, ಉಂಟುಮಾಡು. Beauty without foulness w. ಹೊರಗೆ ಸೊಗಸು ಒಳಗೆ ಹೊಲಸು]. (ನಾ.) ಒಳಗು (As seen from w.). (ಉಪ.) ಒಳಗೆ, ಒಳಗಡೆ (ಯಲ್ಲಿ), ಒಳಕ್ಕೆ [W. doors ಮನೆಯೊಳಗೆ, ಮನೆಯೊಳಕ್ಕೆ. Wheels w. wheels (Wheel ನೋಡಿ). Live, keep, w. one's means ತನ್ನ ವರಮಾನಕ್ಕೆ ಮೀರದೆ ಇರು, ವರಮಾನದೊಳಗೆ ಜೀವನಮಾಡು. W. the meaning of the act ಕಾಯಿದೆಯ ಅರ್ಥವ್ಯಾಪ್ತಿಯೊಳಗೆ. Keep it w. bounds ಅದನ್ನು ಹದ್ದಿನಲ್ಲಿಡು. Immorality w. the law ಕಾಯಿದೆಯ ಹದ್ದಿನೊಳಗಿನ, ನಿರ್ನ್ಯಾಯವಲ್ಲದ, —ದುರ್ನೀತಿ. Running w. himself ತನ್ನ ಶಕ್ತಿಯನ್ನೆಲ್ಲಾ ಪ್ರಯೋಗಿಸದೆ, ಶಕ್ತಿಯನ್ನು ಮಿಗಿಸಿಕೊಂಡು. Is true w. limits ಕೆಲವು ಪರಿಮಿತಿಗೊಳಪಟ್ಟು ಅದು ನಿಜ. Is w. reach ಹತ್ತಿರದಲ್ಲೆ, ನಿಲುಕಿನಲ್ಲೆ, —ಇದೆ. W. sight of port ರೇವು ಕಾಣಿಸುವಷ್ಟು ಹತ್ತಿರದಲ್ಲಿ. W. an ace of destruction ಇನ್ನೇನು ನಾಶವಾಗಿ ಹೋಗುವುದರಲ್ಲಿ. W. an hour ಒಂದು ಗಂಟೆಯೊಳಗೆ]

Wíthout ವಿದೌಟ್ (ಕ್ರಿ. ವಿ., ನಾ., ಉಪ., ಸಂ. ಅವ್ಯ.) (ಮು., ಪ್ರಾಚೀ. ಪ್ರ.) ಹೊರಗೆ, ಹೊರಕ್ಕೆ, ಹೊರಗಡೆ (Stands disconsolate w. ಖಿನ್ನನಾಗಿ ಹೊರಗೆ ನಿಂತಿದ್ದಾನೆ). (ನಾ.) ಹೊರಗು, ಬಾಹ್ಯ (As seen from w. ಹೊರ ನೋಟಕ್ಕೆ, ಬಾಹ್ಯ ದೃಷ್ಟಿಗೆ ; ಹೊರಗಿನಿಂದ ಕಾಣಿಸುವಂತೆ. The suggestion came from w. ಸೂಚನೆ ಹೊರಗಿನಿಂದ ಬಂತು). (ಉಪ.) ಹೊರಗೆ, ಹೊರಗಡೆ(ಯಲ್ಲಿ) (Met us w. the gates ಹೆಬ್ಬಾಗಿಲ ಹೊರಗೆ ನಮ್ಮನ್ನು ಭೇಟಿಯಾದರು. Things w. us ನಮ್ಮಿಂದ ಹೊರಗಿರುವ ವಸ್ತುಗಳು ; ಬಾಹ್ಯ ವಸ್ತುಗಳು) ; ಹೊರತು, ಇಲ್ಲದೆ, ಬಿಟ್ಟು, ರಹಿತವಾಗಿ [A rose w. a thorn ಮುಳ್ಳಿಲ್ಲದ ಗುಲಾಬಿ. Cannot make omelette w. breaking eggs (Omelette ನೋಡಿ). Do, go, w. ಇಲ್ಲದೆಯೇ—ನಿರ್ವಹಿಸು, ನಡೆ. Cold w. (Cold ಗು. ನೋಡಿ). W. doubt ನಿಸ್ಸಂದೇಹವಾಗಿ. W. end ಕೊನೆಯಿಲ್ಲದೆ, ಅನಂತವಾಗಿ. Goes w. saying ಹೇಳಬೇಕಾಗಿಯೇ ಇಲ್ಲ, ಎಲ್ಲರಿಗೂ ತಿಳಿದದ್ದೆ]. (ಸಂ. ಅವ್ಯ.) (ಪ್ರಾಚೀ. ಪ್ರ. ಅಥವಾ ಗ್ರಾಮ್ಯ ಪ್ರ.) ಹೊರತು, ವಿನಾ.

Withstánd ವಿದ್(ತ್)ಸ್ಟ್ಯಾಂಡ್ (ಕ್ರಿ.; ಭೂತ., ಭೂ. ಕೃ. -stood —ಸ್ಟುಡ್) ತಡೆದುಕೊ, ತಾಳಿಕೊ, ಎದುರಿಸು, ಎದುರಿಸಿ ನಿಲ್ಲು ; (ಕಾವ್ಯ) ವಿರೋಧಿಸು, ಪ್ರತಿಭಟಿಸು.

Wíthy. Withe ನೋಡಿ.

Wítness ವಿಟ್ನೆಸ್ (ನಾ., ಕ್ರಿ.) ಸಾಕ್ಷ್ಯ, ಪ್ರಮಾಣ [Bear w. to *or* of ಸಾಕ್ಷ್ಯ—ಹೇಳು, ನುಡಿ; (ನಡೆದುದಕ್ಕೆ, ಒಬ್ಬನಿಗೆ) ಸಾಕ್ಷಿಯಾಗಿರು; ನಿಜವೆಂದು ಹೇಳು, ಸಮರ್ಥಿಸು. My w. is not true (ಪ್ರಾಚೀ. ಪ್ರ.) ನನ್ನ ಸಾಕ್ಷ್ಯ ನಿಜವಲ್ಲ. Call to w. (ದೃಢಪಡಿಸುವುದಕ್ಕಾಗಿ, ಸಮರ್ಥನೆಗಾಗಿ) ಸಾಕ್ಷ್ಯ ಕೋರು, ಪ್ರಮಾಣ ಕೋರು] ; ನ್ಯಾಯಸ್ಥಾನದಲ್ಲಿ ಪ್ರಮಾಣಮಾಡಿ ಮೊಕದ್ದಮೆಯ ಸಂಗತಿಗಳನ್ನು ತಿಳಿಸುವವನು, ಪತ್ರದಲ್ಲಿರುವ ರುಜುವಿನ ಯಾಥಾರ್ಥ್ಯದ ಬಗ್ಗೆ ತನ್ನ ರುಜು ಹಾಕುವವನು : ಸಾಕ್ಷಿ [W.-box (ನ್ಯಾಯಸ್ಥಾನದಲ್ಲಿ) ಸಾಕ್ಷಿ ನಿಲ್ಲುವ ಸ್ಥಳ, ಸಾಕ್ಷಿಕಟ್ಟೆ] ; ಘಟನೆ, ವೊ. ವು ನಡೆದ ಸ್ಥಳದಲ್ಲಿ ಹಾಜರಿದ್ದವನು : ನೋಟಕ, ಸಾಕ್ಷಿ, ಪ್ರೇಕ್ಷಕ (=Eye-w.). (ಕ್ರಿ.) ಸಾಕ್ಷ್ಯ, ಪ್ರಮಾಣ, —ಹೇಳು, ಕೊಡು ; ಸಾಕ್ಷಿಯಾಗಿರು (*Against, for, to* ಉಪ. ದೊಡನೆ) (W. *or* as w. my poverty ನನ್ನ ಬಡತನವೇ ಸಾಕ್ಷಿ) ; ಸೂಚಿಸು (A deathly pallor witnessed his agitation) ; ನೋಡು, ಪ್ರೇಕ್ಷಕನಾಗಿರು ; (ಪತ್ರಕ್ಕೆ) ಸಾಕ್ಷಿ ಹಾಕು.

Wítticism. Wit ನಾ. ಕೆಳಗೆ ನೋಡಿ.

Wíttol ವಿಟಲ್ (ನಾ.) (ಪ್ರಾಚೀ. ಪ್ರ.) ಹೆಂಡತಿಯ ವ್ಯಭಿಚಾರವನ್ನು ಕಂಡೂ ಕಾಣದಂತೆ ಇದ್ದುಬಿಡುವವನು ; ಹಾದರಗಿತ್ತಿಯ ಗಂಡ.

Wive ವೈವ್ (ಕ್ರಿ.) (ಈಗ ವಿರ. ಪ್ರ.) (ಗಂಡಿನ ವಿಷಯದಲ್ಲಿ) ಮದುವೆ ಮಾಡಿಕೊ, ಹೆಂಡತಿಯನ್ನು ಕಟ್ಟಿಕೊ ; (ಒಬ್ಬನಿಗೆ) ಮದುವೆ ಮಾಡಿಸು, ಹೆಂಡತಿಯನ್ನು ಕಟ್ಟು.

Wives. Wife ನೋಡಿ.

Wízard ವಿಸ಼ರ್ಡ್ (ನಾ.) ಮಂತ್ರವಾದಿ, ಮಾಟಗಾರ, ಐಂದ್ರಜಾಲಿಕ; ಅಘಟನ ಘಟನಾ ಸಮರ್ಥ ; ಗಾರುಡಿಗ. The W. of the North ಸರ್ ವಾಲ್ಟರ್ ಸ್ಕಾಟ್. The Welsh W. (ಹಿಂದೆ ಇಂಗ್ಲೆಂಡಿನ ಪ್ರಧಾನಿಯಾಗಿದ್ದ) ಲಾಯ್ಡ್ ಜಾರ್ಜ್. **Wízardry** (ನಾ.) ಮಾಟ, ಇಂದ್ರಜಾಲ, ಗಾರುಡಿ.

Wízen(ed) ವಿಸ಼್ನ್(ಡ್), **Weázen** ವೀಸ಼್ನ್ (ಗು.) (ಮು., ಮನುಷ್ಯನ ಅಥವಾ ಅವನ ಮುಖದ ವಿಷಯದಲ್ಲಿ) ಬಾಡಿದ, ಬತ್ತಿದ, ಸೊರಗಿದ, ಕಂದಿದ.

Wizíer ವಿಸಿ(ೀ)ಯರ್ (ನಾ.) = Vizi(e)r.

Wo ವೋ, **Whóa** ಹೋ, ವೋ (ಭಾವ. ಅವ್ಯ.) ನಿಲ್ಲು (ಮು., ಕುದುರೆಗಳಿಗೆ ಸೂಚನೆಯಾಗಿ). Gee-wo (Gee ನೋಡಿ). Wo-back (ಕುದುರೆಯನ್ನು ಹಿನ್ನಡಸುವಲ್ಲಿ ಹೇಳುವ ಮಾತು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Woad ವೋಡ್ (ನಾ., ಕ್ರಿ. ಸಕ.) ಒಂದು ಬಗೆಯ ನೀಲವರ್ಣ ದ್ರವ್ಯ (ದೊರೆಯುವ ಸಸ್ಯ). (ಕ್ರಿ.) ಈ ನೀಲಿ(ಯಿಂದ) ಬಣ್ಣ ಹಾಕು.

Wóbble, Wábble ವಾಬ್ಲ್ (ಕ್ರಿ. ಅಕ., ನಾ.) (ಬುಗುರಿ, ಮೊ. ಸುತ್ತುತ್ತಿರುವ ವಸ್ತುಗಳ ವಿಷಯದಲ್ಲಿ) ಸೊಟ್ಟ ಸೊಟ್ಟಾಗಿ ಸುತ್ತು, ತೂಗಾಡು; (ವ್ಯಕ್ತಿ, ಕ್ಷಿಪಣಿ, ಮೊ. ಗಳ ವಿಷಯದಲ್ಲಿ) ಊಗಲಾಡು, ತೂಗಾಡುತ್ತ ಹೋಗು, ಓಲಾಡು, ತತ್ತರಿಸು; (ರೂಪ.) ಮನಸ್ಸು—ಚಂಚಲವಾಗು, ಆಂದೋಲವಾಗು; ಅಸಂಬದ್ಧವಾಗಿ, ಬದಲಾಯಿಸುತ್ತ,—ವರ್ತಿಸು. (ಕಂಠ, ಧ್ವನಿ) ಅದಿರು, ಕಂಪಿಸು. (ನಾ.) ತೂಗಾಟ, ತೂರಾಟ, ಓಲಾಟ, ಆಂದೋಲನ, ಅನಿಶ್ಚಯ. **Wóbbler** (ನಾ.)

Woe ವೋ (ನಾ.) (ಮು., ಕಾವ್ಯ ಅಥವಾ ಹಾಸ್ಯ ಪ್ರ.) ತೀವ್ರ ವ್ಯಥೆ, ಸಂಕಟ, ದುಃಖ, ಅಳಲು [Weal & w. ಸುಖದುಃಖಗಳು. W. is me ಅಯ್ಯೋ! W. be to ಹಾಳಾಗ! ಕೇಡು ಬರ! W. worth the day (Worth[2] ನೋಡಿ)]; (ಬ. ವ. ದಲ್ಲಿ) ಕೇಡುಗಳು, ತೊಂದರೆಗಳು, ಕಾಟಗಳು, ಪೇಚಾಟಗಳು, ಪೀಡೆಗಳು. **Woébegone** (ಗು.) ಮಂಕು ಕವಿದ, ವಿಷಣ್ಣ, ಗೋಳುಕರೆಯ. **Woéful** (ಗು.) [(ಅನೇಕ ವೇಳೆ ಹಾಸ್ಯ ಪ್ರ.): W. ignorance ಶೋಚನೀಯ ಅಜ್ಞಾನ]. **Woéfully** (ಕ್ರಿ. ವಿ.) (W. disappointed ವಿಪರೀತ ಆಶಾಭಂಗವಾಗಿ)

Wold ವೋಲ್ಡ್ (ನಾ.) ವ್ಯವಸಾಯ ಮಾಡಿಲ್ಲದ—ನೆಲ, ಬಯಲು; ಪಾಳು ಬಯಲು; ಹುಲ್ಲುಗಾವಲು, ಬೋರೆ.

Wolf ವುಲ್ಫ್ (ನಾ.; ಬ. ವ. -lves) ತೋಳ, ವೃಕ [Cry w. too often 'ತೋಳ ಬಂತು ತೋಳ' ಎಂದು ವಿಪರೀತ ಬಾರಿ ಕೂಗಿಕೊ (ಸುಮ್ಮಸುಮ್ಮನೆ ಅಪಾಯ ಬಂತೆಂದು ಗಾಬರಿಪಡಿಸಿ ನಿಜವಾಗಿ ಅಪಾಯ ಬಂದಾಗ ಕೂಗಿಕೊಂಡರೂ ಯಾರೂ ಮನ್ನಿಸದಂತೆ ಮಾಡಿಕೊ). Have, hold, w. by the ears ಹಿಡಿದಿದ್ದರೂ ಕಷ್ಟ, ಬಿಟ್ಟರೂ ಕಷ್ಟ ಎಂಬ ಇಕ್ಕಟ್ಟಿನ ಸ್ಥಿತಿಯಲ್ಲಿರು; ಬೇತಾಳನನ್ನು ಹಿಡಿದಿರು. Keep w. from door ಹೊಟ್ಟೆಗಿಲ್ಲದೆ ಸಾಯುವುದನ್ನು ತಪ್ಪಿಸಿಕೊ, ದಾರಿದ್ರ್ಯ ಮಾರಿಯನ್ನು ಬಾಗಿಲಿಂದ ದೂರವಿಡು. W. in sheep's clothing ಕುರಿಹೊದಿಕೆಯ ತೋಳ; ಗೋಮುಖವ್ಯಾಘ್ರ]; ಹೊಟ್ಟೆಬಾಕ, ಬಕಾಸುರ (ರೂಪ.); (ಸಂ.) ಅಪ—ಶ್ರುತಿ, ಸ್ವರ. **W.-cub** ತೋಳನ ಮರಿ; ಮರಿ ಸ್ಕೌಟು. **W.-dog** ತೋಳ ಬರದಂತೆ ಕುರಿ ಕಾಯಲು ಇಟ್ಟುಕೊಂಡಿರುವ ನಾಯಿ; ತೋಳ ನಾಯಿಗಳ ಸಂಕರ ಪ್ರಾಣಿ; ತೋಳ ನಾಯಿ. **W.-fish** ದೊಡ್ಡ ಜಾತಿಯ ಒಂದು ಹೊಟ್ಟೆಬಾಕ ಮೀನು; ತೋಳ ಮೀನು. **W.-hound** ರಷ್ಯಾ ದೇಶದ ಒಂದು ಜಾತಿಯ ನಾಯಿ; ಇಂಗ್ಲೆಂಡಿನಲ್ಲಿ ಜನಪ್ರಿಯವಾಗಿರುವ ಆಲ್ಸೇಷಿಯನ್ ಜಾತಿಯ ನಾಯಿ. **W.'s bane** ಹಲವು ಬಗೆಯ ಸಸ್ಯ: ವತ್ಸನಾಭಿ. **W.'s-claws, -foot** ಒಂದು ತೆರದ ಪಾಚಿ. **W.'s-fist** ಒಂದು ಬಗೆಯ ಅಣಬೆ. **Wólfskin** ತೋಳನ ಚರ್ಮ(ದ ಚಾಪೆ, ಹೊದಿಕೆ). **W.'s-milk** ಕಟುವಾದ ಹಾಲಿನಂಥ ರಸವುಳ್ಳ ಒಂದು ಸಸ್ಯ. **W. spider** ನೊಣ, ಮೊ. ನ್ನು ಬಲೆಗೆ ಹಾಕಿಕೊಳ್ಳದೆ ಅಟ್ಟಿಸಿಕೊಂಡು ಹೋಗುವ ಒಂದು ಬಗೆಯ ಜೇಡರ ಹುಳು: ತೋಳ ಜೇಡ. **W.-tooth** (ಕೆಲವು ಕುದುರೆಗಳಲ್ಲಿ) ದವಡೆಹಲ್ಲಿಗೆ ಮುಂಭಾಗದಲ್ಲಿರುವ ಹೆಚ್ಚು ಹಲ್ಲು. **Wólfish** (ಗು.) ತೋಳನಂಥ; ಹೊಟ್ಟೆಬಾಕತನದ. **Wólfishly** (ಕ್ರಿ. ವಿ.); **Wólfishness** (ನಾ.)

Wolf (ಕ್ರಿ. ಸಕ.) ಹೊಟ್ಟೆಬಾಕನಂತೆ, ಬಕಬಕನೆ, —ತಿನ್ನು, ಮುಕ್ಕು.

Wólfram ವು(ವಾ)ಲ್ಫ್ರಂ (ನಾ.) ಟಂಗ್‌ಸ್ಟನ್ ಲೋಹ ದೊರೆಯುವ ಅದುರು; (ಈಗ ವಿರ. ಪ್ರ.) ಟಂಗ್‌ಸ್ಟನ್.

Wólverene, -rine ವುಲ್ವರೀನ್ (ನಾ.) ಅಮೆರಿಕದ ಒಂದು ಮಾಂಸಾಹಾರಿ ಪ್ರಾಣಿ.

Wolves. **Wolf** ನೋಡಿ.

Wóman ವುಮನ್ (ನಾ.; ಬ. ವ. Wómen ವಿಮೆನ್) ಹೆಣ್ಣು, ಹೆಂಗಸು, ಸ್ತ್ರೀ [Every w. is to him a lady ಅವನಿಗೆ ಪ್ರತಿಯೊಬ್ಬ ಹೆಂಗಸೂ ಸದ್ಗೃಹಿಣಿಯೇ, (ಗೌರವಾರ್ಹಳಾದ) ಮಹಿಳೆಯೇ. W.'s or women's rights ಹೆಂಗಸರಿಗೂ ಪುರುಷರಿಗೆ ಸಮನಾದ ಹಕ್ಕುಗಳು: ಸ್ತ್ರೀಯರ ಹಕ್ಕುಗಳು. There's a w. in it (ಗಂಡಸಿನ ಅಸಾಧಾರಣ ವರ್ತನೆಗೆ ಬೇರೆ ಕಾರಣ ಕೊಡಲಾಗದ ಸಂದರ್ಭದಲ್ಲಿ ಹೇಳುವ ಮಾತು): ಅದರಲ್ಲಿ ಹೆಂಗಸಿನ ಸಂಬಂಧ ಇರಬೇಕು. W. with a past (ಹಿಂದೆ ಕೆಟ್ಟ ನಡತೆಯವಳೆಂಬ) ಅಪಕೀರ್ತಿ ಪಡೆದಿರುವ ಹೆಂಗಸು; ಪೂರ್ವ ಚರಿತ್ರೆಯುಳ್ಳ ಸ್ತ್ರೀ. W. of the world ಲೋಕ ಕಂಡವಳು; ಸಮಾಜದಲ್ಲಿ ನುರಿತವಳು. Play the w. (ಹೆಂಗಸಿನಂತೆ) ಅಳು, ಹೆದರು, ಹೇಡಿಯಾಗಿರು. Make an honest w. of (Honest ನೋಡಿ). Tied to w.'s apron-strings ಹೆಂಗಸು ಹೇಳಿದಂತೆ ಕೇಳಿಕೊಂಡು; ಹೆಂಗಸಿನ ವಶವರ್ತಿಯಾಗಿ. Single w. ಅವಿವಾಹಿತೆ, ಬ್ರಹ್ಮಚಾರಿಣಿ. Scarlet, Wise[1], w. (ಆಯಾ ಪದ ನೋಡಿ)]; ಸಾಮಾನ್ಯ ಸ್ತ್ರೀ, ಸ್ತ್ರೀ ಜಾತಿ [How does w. differ from man? ಹೆಂಗಸು ಗಂಡಸಿನಿಂದ ಹೇಗೆ ಭಿನ್ನಳು? ಸ್ತ್ರೀ ಜಾತಿ ಪುರುಷ ಜಾತಿಗಳಿಗೆ ಏನು ಭೇದ? Man born of w. ಹೆಂಗಸಿನ ಹೊಟ್ಟೆಯಲ್ಲಿ ಹುಟ್ಟಿಬಂದ ಮನುಷ್ಯ: ಮಾನವ. W.'s wit ಸ್ತ್ರೀ (ಸಹಜವಾದ ಬುದ್ಧಿ) ಚಾತುರ್ಯ. W.'s reason (Reason ನೋಡಿ)]; (ರಾಣಿಯ ಅಥವಾ ಶ್ರೀಮಂತೆಯ) ಸಖಿ, ಚೇಟಿ (ಪ್ರಾಚೀ. ಪ್ರ.; Sent one of her women to ask); ಸ್ತ್ರೀ ಸ್ವಭಾವದವನು, ಹೆಣ್ಣಿಗ, ಹೆಣ್ಣುಪುಸಕಿ [The old women in the cabinet ಮಂತ್ರಿ ಮಂಡಲದ ಮುದಿ ಹೆಣ್ಣುಪುಸಕಿಗಳು. All the old women of both the sexes ಹೆಣ್ಣು ಮುದುಕಿಗಳು ಗಂಡು ಮುದುಕಿಗಳು ಎಲ್ಲಾ]; ಸ್ತ್ರೀಸಹಜ ರಸ ಭಾವಗಳು, ಸ್ತ್ರೀ ಸ್ವಭಾವ, ಕೋಮಲ ಹೃದಯ (All the w. in her rose in rebellion ಆಕೆಯ ಸ್ತ್ರೀ ಸ್ವಭಾವ, ಸ್ತ್ರೀ ಹೃದಯ, ಪ್ರತಿಭಟಿಸಿ ನಿಂತಿತು. Stirred the w. in him ಅತನ ಕೋಮಲ ಹೃದಯ ಕಲಕಿಹೋಯಿತು); (ವಿಶೇಷಣ ಪ್ರ.) ಹೆಣ್ಣು—, ಸ್ತ್ರೀ— [W. doctor, friend. W. suffrage (Suffrage ನೋಡಿ)]; (ಉ. ಪ್ರ. ವಾಗಿ) —ಹೆಂಗಸು, —ಸ್ತ್ರೀ (Country-w., Shopw., Chairw., Needlew.). **W.-hater** ಸ್ತ್ರೀ ದ್ವೇಷಿ. **Wómankind** ಹೆಂಗಸು, ಸ್ತ್ರೀಜಾತಿ (One's womankind or womenkind ತನ್ನ ಮನೆಯ ಹೆಂಗಸರು). **Wómenfolk** ಹೆಂಗಸರು. **Wómanhood** (ನಾ.) ಸ್ತ್ರೀತ್ವ, ಸ್ತ್ರೀಸ್ವಭಾವ, ಸ್ತ್ರೀ ಜಾತಿ, ಹೆಂಗಸರು. **Wómanish** (ಗು.) (ಗಂಡಸು, ಅವನ ಮನೋಭಾವ, ವರ್ತನೆ, ಮೊ. ಗಳ ವಿಷಯದಲ್ಲಿ) ಹೆಂಗಸಿನಂಥ, ಹೆಣ್ಣಿಗತನದ. **Wómanishly** (ಕ್ರಿ. ವಿ.); **Wómanishness** (ನಾ.); **Wómanize** (ಕ್ರಿ.) ಹೆಣ್ಣಿಗನನ್ನಾಗಿ ಮಾಡು; (ಗಂಡಸಿನ ವಿಷಯದಲ್ಲಿ) ಸೂಳೆಗಾರಿಕೆಮಾಡು, ಸ್ತ್ರೀಲೋಲನಾಗಿರು. **Wómanless** (ಗು.); **Wómanlike** (ಗು.); **Wómanly** (ಗು.) ಸ್ತ್ರೀಸಹಜವಾದ (ಗುಣಗಳುಳ್ಳ), ಗಂಡುಬೀರಿತನವಿಲ್ಲದ, ಹುಡುಗಿತನವಿಲ್ಲದ (A truly w. woman. W. modesty, compassion); **Wómanliness** (ನಾ.)

Woman (ಕ್ರಿ. ಸಕ.) ಹೆಂಗಸಿನಹಾಗೆ ಆಡುವಂತೆ, ಅಳುವಂತೆ, —ಮಾಡು; ಹೆಣ್ಣಿಗನನ್ನಾಗಿ ಮಾಡು; (ಗೌರವದಿಂದ ಮಹಿಳೆ ಎಂದು ಕರೆಯದೆ) ಸ್ತ್ರೀ, ಹೆಂಗಸು—ಎಂದು ಕರೆ, ಸಂಬೋಧಿಸು.

Womb ವೂಮ್ (ನಾ.) ಬಸಿರು, ಗರ್ಭ(ಕೋಶ), ಗರ್ಭಾಶಯ [Falling of the w. ಗರ್ಭಾಶಯ ಕೆಳಜಾರುವುದು. Fruit of the w. (ಹೊಟ್ಟೆಯಲ್ಲಿ ಹುಟ್ಟಿದ) ಮಕ್ಕಳು. (ರೂಪ.) In the w. of time ಕಾಲಗರ್ಭದಲ್ಲಿ, ಭವಿಷ್ಯದಲ್ಲಿ]

Wómbat ವಾಂಬ್ಯಾಟ್ (ನಾ.) ಆಸ್ಟ್ರೇಲಿಯಾ ದೇಶದ, ಹೊಟ್ಟೆಚೀಲವುಳ್ಳ ಒಂದು ಪ್ರಾಣಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Wómen. Woman ಪದದ ಬ. ವ.

Won. Win ಧಾತುವಿನ ಭೂತ ಮತ್ತು ಭೂ. ಕೃ.

Wónder ವಂಡರ್ (ನಾ.) ಬೆರಗು, ಬೆಕ್ಕಸ, ಚೋದ್ಯ, ಸೋಜಿಗ, ಅದ್ಭುತ, ಆಶ್ಚರ್ಯ, ಕೌತುಕ, ವಿಸ್ಮಯ, ಚಮತ್ಕಾರ [Signs & wonders ಪವಾಡಗಳು. Work wonders ಪವಾಡ(ಗಳನ್ನು) ಮಾಡು ; ಅದ್ಭುತ ಕಾರ್ಯಗಳನ್ನು ಸಾಧಿಸು. The child is a w. ಆ ಮಗು ಒಂದು ಆಶ್ಚರ್ಯ. Did wonders ಅದ್ಭುತ ಕಾರ್ಯಗಳನ್ನು ಸಾಧಿಸಿದನು. Seven wonders of the world ಪ್ರಪಂಚದ ಏಳು ಅದ್ಭುತಗಳು (ಉದಾ., ಈಜಿಪ್ಟಿನ ಪಿರಮಿಡ್ ಎಂಬ ಸಮಾಧಿ ಕಟ್ಟಡ). A nine-days' w. (Nine ನೋಡಿ). For a w. (ಹಿತವಾದ ಆಶ್ಚರ್ಯಕಾರಕ ವಿಷಯಗಳಲ್ಲಿ ಪ್ರ.): You are punctual for a w. ಆಶ್ಚರ್ಯ ! ನೀನು ಹೊತ್ತಿಗೆ ಸರಿಯಾಗಿ ಬಂದಿರುವೆ. What w., it is no w., now, that— —ಆಶ್ಚರ್ಯವೇನೂ ಇಲ್ಲ, ಸಹಜವೇ (He refused, and no w.). Were filled with w. ಆಶ್ಚರ್ಯ ಭರಿತರಾದರು]. **W.-land** ವಿಚಿತ್ರ, ಅದ್ಭುತ,—ಲೋಕ; (ಫಲವತ್ತು, ಮೊ. ಗಳನ್ನುಳ್ಳ) ಅದ್ಭುತ ದೇಶ. **W.-struck, -stricken** ಬೆರಗುಗೊಂಡ, ಬೆರಗುಬಡಿದ : ಆಶ್ಚರ್ಯಚಕಿತ. **W.-worker** ಪವಾಡಗಾರ. **Wónderful** (ಗು.) ಅದ್ಭುತವಾದ, ಆಶ್ಚರ್ಯಕರ, ಬೆರಗುಗೊಳಿಸುವ, ಸೋಜಿಗದ. **Wónderfully** (ಕ್ರಿ. ವಿ.); **Wóndrous** (ಗು., ಕ್ರಿ. ವಿ.) (ಕಾವ್ಯ, ಅಲಂ.) =Wonderful ; (ಕ್ರಿ. ವಿ.) ; Wonderfully. **Wóndrously** (ಕ್ರಿ. ವಿ.) ; **Wóndrousness** (ನಾ.)

Wónder (ಕ್ರಿ.) ಬೆರಗಾಗು ; ಆಶ್ಚರ್ಯಗೊಳ್ಳು, ವಿಸ್ಮಯಪಡು [I w. at you (ಮಕ್ಕಳು, ಮೊ. ನ್ನು ಆಕ್ಷೇಪಿಸುವಲ್ಲಿ) ನಿನ್ನನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. I w. he did not kill you ಅವನು ನಿನ್ನನ್ನು ಕೊಲ್ಲದೆ ಇದ್ದದ್ದು ಆಶ್ಚರ್ಯ(ವೆ)]; (ತಿಳಿದುಕೊಳ್ಳಲು) ಕುತೂಹಲಿಯಾಗಿರು (W. what the time is). **Wónderingly** (ಕ್ರಿ. ವಿ.) ; **Wónderment** (ನಾ.) ಆಶ್ಚರ್ಯಸ್ಥಿತಿ, ವಿಸ್ಮಯತೆ.

Wónky ವಾಂಕಿ (ಗು.) (ಅಸಂ.) ಅಲ್ಲಾಡುವ; ತೂರಾಡುವ, ತತ್ತರಿಸುವ; ರೋಗಗ್ರಸ್ತ ; ದುರ್ಬಲ ; ಶಿಥಿಲ.

Wont[1] ವೋ(ವ)ಂಟ್ (ಗು., ನಾ.) ರೂಢಿ, ವಾಡಿಕೆ, ಅಭ್ಯಾಸ, ಪದ್ಧತಿ (—ಆದ) (Use & w. ನೆಲೆಗೊಂಡ ಪದ್ಧತಿ. According to his w. ಅವನ ವಾಡಿಕೆಯಂತೆ, ಪದ್ಧತಿಯ ಪ್ರಕಾರ. As he was w. to say ಅವನು ಪದ್ಧತಿಯ ಪ್ರಕಾರ ಹೇಳುತ್ತಿದ್ದಂತೆ). **Wónted** (ಗು.) ಪದ್ಧತಿಯ, ರೂಢಿಯ (His w. courtesy)

Wont (ಕ್ರಿ. ; ವರ್ತಮಾನ ಏ. ವ. Wont, Wontest, Wonts *or* Wont ; ಬ. ವ. Wont ; ಭೂತ. ಏ. ವ. Wont, Wontest, Wont; ಬ. ವ. Wont or Wonted) (ಕಾವ್ಯ) ರೂಢಿ, ಪದ್ಧತಿ, ವಾಡಿಕೆ, —ಆಗಿರು.

Won't. **Will** ನೋಡಿ.

Woo ವೂ (ಕ್ರಿ. ಸಕ.) (ಮದುವೆಯ ಉದ್ದೇಶದಿಂದ) ಪ್ರಣಯ ತೋರಿಸು, ಅನುಸರಣೆ ಮಾಡು, ಅನುನಯಿಸು, ಓಲೈಸು ; (ಹೆಸರು, ಸಂಪತ್ತು, ಮೊ. ನ್ನು) ಮೋಹಿಸಿಹೋಗು, ಅರಸಿಕೊಂಡುಹೋಗು ; ಪುಸಲಾಯಿಸು, ಪ್ರೇರೇಪಿಸು (*To* ಉಪ. ಜೊಡನೆ). **Wooer** ಅನುಸರಣೆಗಾರ, ಹೆಣ್ಣೋಲೈಕೆಗಾರ, ವಿವಾಹಾರ್ಥಿ. **Wooingly** (ಕ್ರಿ. ವಿ.)

Woóbut ವೂಬಟ್, **Oúbit** ಊಬಿಟ್ (ನಾ.) ಉಣ್ಣೆಗೂಡಲ ಕಂಬಳಿ ಹುಳು.

Wood ವುಡ್ (ನಾ.) ಕಾಡು, ಅಡವಿ, ಜಂಗಲು, ಅರಣ್ಯ (ಬ. ವ. ದಲ್ಲಿ ಸಹ) [Came upon a clearing in the woods ಕಾಡಿನಲ್ಲಿ ತೆರಪಾಗಿದ್ದ ಸ್ಥಳಕ್ಕೆ ಬಂದೆ. Cannot see wood for trees ವಿವರಗಳು ವಿಪರೀತವಾಗಿ ಒಟ್ಟು ಸ್ವರೂಪ ಗೋಚರವಾಗುವುದಿಲ್ಲ. Don't halloo till you are out of the w. ಕಷ್ಟಗಳನ್ನು ಕಡೆಹಾಯ್ದು ಹೊರತು ಹಿಗ್ಗಬೇಡ] ; (ವೃಕ್ಷದ) ದಾರು, ಚೌಬೀನೆ, ಮರ ; ಸೌದೆ ; (ಮದ್ಯ, ಮೊ. ಗಳ) ಪೀಪಾಯಿ (In, from, the w. ಪೀಪಾಯಲ್ಲಿ, ಪೀಪಾಯಿಂದ) ; (ಸಂ.) ವಾದ್ಯಮೇಳದ ವಾದ್ಯಗಳಲ್ಲಿ ದಾರುವಿಂದ ಮಾಡಿದ ರಂಧ್ರವಾದ್ಯಗಳು : ಮರದ ಗಾಳಿವಾದ್ಯಗಳು (=W.-wind). **W.-agate** ದಾರು ಶಿಲೀಭವಿಸಿ ಆದ ಅಗೇಟ್ ಶಿಲೆ : ದಾರು ಅಗೇಟ್. **W.-anemone** ಗಾಳಿಹೂವು ಬಿಡುವ ಒಂದು ಕಾಡು ಸಸ್ಯ. **W.-apple** ಬೇಲ(ದ ಮರ). **Woódbine, -bind** ಒಂದು ಜಾತಿಯ ಕಾಡುಬಳ್ಳಿ. (೧೯೧೪-೧೯೧೮ ಮಹಾ ಯುದ್ಧದಲ್ಲಿ ಬಹಳವಾಗಿ ಉಪಯೋಗಿಸುತ್ತಿದ್ದ) ಅಗ್ಗದ ಸಿಗರೇಟು. **W.-block** (ಮುದ್ರಣಕ್ಕಾಗಿ ಚಿತ್ರಕೊರೆದಿರುವ) ಮರದ ಪಡಿಯಚ್ಚು. **Wood-cock** ಉಲ್ಲಂಗಿ ಜಾತಿಯ ಹಲವು ಬಗೆಯ ಬೇಟೆಯ ಹಕ್ಕಿ, ಕಾಡುಕೋಳಿ. **W.-craft** (ಮು., ಬೇಟೆಗೆ ಸಂಬಂಧಪಟ್ಟಂತೆ) ಅರಣ್ಯ ವಿಜ್ಞಾನ. **Woódcut** ಮರದ ಪಡಿಯಚ್ಚು, ಮರಚ್ಚು (—ಮುದ್ರಣ, ಚಿತ್ರ). **W.-cutter** ಮರ ಕಡಿಯುವವನು ; ಮರಚ್ಚುಗಾರ. **W.-engraver** ಮರ ಕೊರೆಯುವವನು, ಮರಚ್ಚುಗಾರ ; ಮರ ಕೊರಕ (ಹುಳು). **W.-fibre** (ಮು., ಕಾಗದದ ತಯಾರಿಕೆಯಲ್ಲಿ ಉಪಯೋಗಿಸುವ) ಮರದ ನಾರು. **W.-gas** ಮರದಿಂದ ದೊರೆಯುವ ಇಂಗಾಲ ಸಂಯುಕ್ತ ಜಲಜನಕ : ದಾರು ಅನಿಲ. **W.-ibis** ಉ. ಅಮೆರಿಕದ ಒಂದು ಬಗೆಯ ಬಕ ಪಕ್ಷಿ : ಕಾಡು ಕೊಕ್ಕರೆ. **Woód-land** ಕಾಡುಪ್ರದೇಶ ; ಜಂಗಲು (ಅನೇಕ ವೇಳೆ ವಿಶೇಷಣವಾಗಿ ಪ್ರ. : W.-land scenery. The w.-land choir ಹಾಡು ಹಕ್ಕಿಗಳು. **W. leopard** ಒಂದು ಬಗೆಯ ಪತಂಗ. **W.-louse** ರೆಕ್ಕೆಯಿಲ್ಲದ, ಅನೇಕ ಕಾಲುಗಳುಳ್ಳ, ಹಲವು ಬಗೆಯ ಹುಳು: ಮರ, ಗಿಡ,—ಹೇನು. **Woódman** ಕಾಡಿನ ಮರಗಳನ್ನು ನೋಡಿಕೊಳ್ಳುವವನು, ವನಾಧಿಕಾರಿ; ಮರ ಕಡಿಯುವವನು, ಕಟ್ಟಿಗೆಯವನು. **W.-notes** ಸ್ವಯಂಸ್ಫೂರ್ತಿಯ ಕವಿತೆ; ಸಹಜ, ನಿಸರ್ಗ, —ಕವಿತೆ. **W.-nymph** ವನದೇವಿ ; ಗಾನಮಾಡುವ ಹಲವು ಬಗೆಯ ಹಕ್ಕಿ, ಪತಂಗ. **W.-opal** (ಶಿಲೀಭೂತ) ಸಸ್ಯ ಕ್ಷೀರಸ್ಫಟಿಕ. **W. paper** ಮರದ ನಾರಿನಿಂದ ಮಾಡಿದ ಕಾಗದ : ಮರ ಕಾಗದ. **W. pavement** (ರಸ್ತೆಗೆ ಹಾಸಿದ) ಮರದ ನೆಲಗಟ್ಟು. **Woódpecker** ಮರಕುಟಿಗ (ಹಕ್ಕಿ). **W.-pie** ಮಚ್ಚೆ(ಗಳುಳ್ಳ) ಮರಕುಟಿಗ. **W.-pigeon** ಕಾಡು ಪಾರಿವಾಳ. **W.-pulp** ಕಾಗದ ತಯಾರಿಸುವುದಕ್ಕಾಗಿ ತಿಳ್ಳುಮಾಡಿದ ಮರದ ನಾರು : ಮರದ ತಿಳ್ಳು. **Woódruff** ಹಲವು ಬಗೆಯ ಸಸ್ಯ. **Woódsman** ಅರಣ್ಯವಾಸಿ, ವನಚರ. **W. sorrel** ಆಮ್ಲರಸವುಳ್ಳ ಹಲವು ಬಗೆಯ ಸಸ್ಯ (ಉದಾ., ಪುಲ್ಲಂಪುರಚಿ). **W. spirit** ಮರದಿಂದ ತೆಗೆದ ಕಚ್ಚಾ ಮಿಥಿಲ್ ಆಲ್ಕೊಹಾಲ್ : ಮರದ ಮದ್ಯಸಾರ. **W.-tar** ಮರದಿಂದ ತೆಗೆದ ಟಾರೆಣ್ಣೆ : ಮರದ ಟಾರು. **W.-wasp** ಮರದಲ್ಲಿ ಗೂಡು ಕಟ್ಟುವ, ಸತ್ತ ಮರದಲ್ಲಿ ತೂತು ಕೊರೆಯುವ, ಹಲವು ಬಗೆಯ ಕಣಜ : ಮರದ ಕಣಜ. **W.-wool** (ಶಸ್ತ್ರಚಿಕಿತ್ಸೆಯಲ್ಲಿ ಅಥವಾ ಸಾಮಾನು ತುಂಬಿಡುವಲ್ಲಿ ಉಪಯೋಗಿಸುವ, ಸಾ., ಪೈನ್ ದಾರುವಿನ) ನುಣುಪಾದ ಹತ್ತರಿ ಹುಡಿ. **Woódwork** ಮರದ ಸಾಮಾನು (ಮು., ಮನೆ, ಮೊ. ಗಳದು); ಮರಗೆಲಸ. **(-)wooded** (ಗು.) ಕಾಡು—ಬೆಳೆದ, ತುಂಬಿದ. **Woóden** (ಗು.) ಮರದಿಂದ ಮಾಡಿದ, ಮರದ [W. head ಮಡ್ಡಿತಲೆ, ದಡ್ಡತನ (**Wooden-headed,** ಗು. ; **Wooden-headedness,** ನಾ.). W.-horse (ಯೂಲಿಸಿಸ್ಸನು ತಂತ್ರದಿಂದ ನಿರ್ಮಿಸಿ, ಅದರ ಸಹಾಯದಿಂದ ಗ್ರೀಕರು ಟ್ರಾಯ್ ಪಟ್ಟಣವನ್ನು ಪ್ರವೇಶಿಸಿದ) ಮರದ ಕುದುರೆ. W. spoon (Spoon[1] ನೋಡಿ). W. walls (ಹಿಂದೆ, ಇಂಗ್ಲೆಂಡಿನ) ಯುದ್ಧ ನೌಕೆಗಳು] ; ಸೆಡೆತ, ಜಡ, ನಿರ್ಜೀವ, ನಿಸ್ತೇಜ (W. emotions, manners, face). **Woódenly** (ಕ್ರಿ. ವಿ.) ; **Woódenness** (ನಾ.) ; **Woódless** (ಗು.) ; **Woódy** (ಗು.) (ಪ್ರದೇಶದ ವಿಷಯದಲ್ಲಿ) ಕಾಡು ಬೆಳೆದ, ಜಂಗಲಿ ;

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಾರುವಿನ(ಥ), ದಾರುವುಳ್ಳ (W. stem, tissue); (ವಿರ. ಪ್ರ.) ಕಾಡಿನಲ್ಲಿ ಸಿಕ್ಕುವ (W. night-shade). **Woódiness** (ನಾ.)

Woódbury-type ವುಡ್‌ಬರಿಟೈಪ್ (ನಾ.) ಜೆಲಟಿನ್ ವಿಷಮ ಚಿತ್ರದಿಂದ ಛಾಯಾಚಿತ್ರವನ್ನು (ಮೃದು ಲೋಹದ) ಪಡಿಯಚ್ಚಿಗೆ ವರ್ಗಾಯಿಸುವ ಒಂದು ಕ್ರಮ; ಈ ಪಡಿಯಚ್ಚಿನಿಂದ ಮುದ್ರಿಸಿದ ಚಿತ್ರ (ನಿರ್ಮಾಪಕನ ಹೆಸರಿನಿಂದ)

Woof ವೂಫ್ (ನಾ.) ನೆಯ್ಗೆಯಲ್ಲಿ ಅಡ್ಡೆಳೆ, ಹೊಕ್ಕು.

Wool ವುಲ್ (ನಾ.) ಉಣ್ಣೆ, ತುಪಟ, ತುಪ್ಪುಳು [Carding *or* short, Combing *or* long, w. (ಬೇರೆ ಬೇರೆ ವಿಧಾನಗಳಿಂದ ಸಿದ್ಧಪಡಿಸಿದ) ೪ ಅಂಗುಲಕ್ಕಿಂತ ಕಡಮೆ, ಹೆಚ್ಚು, ಉದ್ದದ ಉಣ್ಣೆ: ಎಕ್ಕುಣ್ಣೆ, ಹಿಕ್ಕುಣ್ಣೆ. Dyed in the w. (ನೂಲುವುದಕ್ಕೆ ಅಥವಾ ನೆಯ್ಯುವುದಕ್ಕೆ ಮೊದಲೆ) ಉಣ್ಣೆಗೇ ಬಣ್ಣಹಾಕಿದ. Much cry & little w. (Cry ನೋಡಿ). Go for w. & come home shorn ಲಾಭಕ್ಕೆಂದು ಹೋಗಿ ಇದ್ದದ್ದನ್ನೂ ಕಳೆದುಕೊಂಡುಬಾ]; ಉಣ್ಣೆದಾರ [Berlin w. (ಕಸೂತಿ, ಮೊ. ಕ್ಕೆ ಉಪಯೋಗಿಸುವ) ಉತ್ತಮ ತೆರದ ಬಣ್ಣದ ಉಣ್ಣೆ ದಾರ]; ಉಣ್ಣೆ—ಬಟ್ಟೆ, ಉಡುಪು (Safest to wear w.); ತುಪ್ಪುಳು; ನೀಗ್ರೋ ಜನರ ಕೂದಲು, (ಹಾಸ್ಯ ಪ್ರ.) (ಒಬ್ಬನ) ಕೂದಲು [Lose one's w. (ಅಸಂ.) ಕೋಪ ತೋರಿಸು]; ಉಣ್ಣೆಯಂಥ ಪದಾರ್ಥ [Cotton w. (Cotton ನೋಡಿ). Mineral w. ಲೋಹಕ್ಕಾಗಿ ಅದುರು ಕರಗಿಸುವಲ್ಲಿ ಬರುವ ಗಸಿಯನ್ನು, ಅದರ ಮೂಲಕ ಪ್ರಬಲ ವಾತವನ್ನೋ ಆವಿಯನ್ನೋ ಹೊಗಿಸಿ, ಉಣ್ಣೆಯಂತೆ ಕಾಣುವ ಹಾಗೆ ಮಾಡಿದ ನಾರುಪದಾರ್ಥ: ಖನಿಜ ತುಪ್ಪಟ]. **W.-ball** (ಕುರಿ, ಮೊ.ಗಳ ಹೊಟ್ಟೆಯಲ್ಲಿ ಕೆಲವು ವೇಳೆ ಕಟ್ಟುವ) ಉಣ್ಣೆಗಂತಿ. **W.-carding, -combing** ಗಿಡ್ಡೆಳೆಯ, ಉದ್ದೆಳೆಯ, ಉಣ್ಣೆಯನ್ನು ತಯಾರಿಸುವ ವಿಧಾನಗಳು: ಉಣ್ಣೆ—ಎಕ್ಕುವುದು, ಹಿಕ್ಕುವುದು. **W.-dyed** ಉಣ್ಣೆಗೇ ಬಣ್ಣ ಹಾಕಿದ. **W.-fat, oil** = Lanolin (ಆ ಪದ ನೋಡಿ). **W.-fell** ತುಪಟ ತೆಗೆದಿಲ್ಲದ ಕುರಿ, ಮೊ. ಗಳ ಚರ್ಮ: ತುಪಟ ಚರ್ಮ. **W.-gathering** ಅನವಧಾನ(ತೆ), ಅನ್ಯಮನಸ್ಕ(ತೆ). **W.-hall** ಉಣ್ಣೆಪೇಟೆ. **W.-pack** (ಹಿಂದೆ) ೨೪೦ ಪೌಂಡು ತೂಕದ ಉಣ್ಣೆ ಪಿಂಡಿ; ಉಣ್ಣೆಯಂಥ ಮೋಡ. **Woólsack** (ಇಂಗ್ಲೆಂಡಿನ ಪಾರ್ಲಿಮೆಂಟಿನ ಶ್ರೀಮಂತ ಸಭೆಯಲ್ಲಿ ಅಧ್ಯಕ್ಷನಾದ ಪ್ರಧಾನ ನ್ಯಾಯಾಧೀಶನು ಕುಳಿತುಕೊಳ್ಳುವ) ಉಣ್ಣೆಯ ಮೆತ್ತೆ (Reach the w.-s. ಶ್ರೀಮಂತ ಸಭೆಯ ಅಧ್ಯಕ್ಷನಾಗು, ಪ್ರಧಾನ ನ್ಯಾಯಾಧೀಶನಾಗು. Take seat on the w.-s. ಶ್ರೀಮಂತ ಸಭೆಯ ಅಧ್ಯಕ್ಷತೆ ವಹಿಸು;—ವಹಿಸಿ ಕಾರ್ಯಾರಂಭಮಾಡು). **W.-work** ಉಣ್ಣೆಯ ಕಸೂತಿಯ ಕೆಲಸ. **(-)wooled** (ಗು.) (ನಿರ್ದಿಷ್ಟ ಗುಣದ) ಉಣ್ಣೆಯುಳ್ಳ. **Woólen** (ಗು., ನಾ.) ಉಣ್ಣೆಯ, ಉಣ್ಣೆಯಿಂದ ಮಾಡಿದ. (ನಾ.) ಉಣ್ಣೆಯ ಬಟ್ಟೆ [W. draper ಉಣ್ಣೆಬಟ್ಟೆಯ (ಚಿಲ್ಲರೆ) ವ್ಯಾಪಾರಿ]. **Woollenétte** (ನಾ.) ಕೃತಕ ಉಣ್ಣೆಯ ಬಟ್ಟೆ. **Woólly** (ಗು., ನಾ.) ಉಣ್ಣೆಯ(ಥ), ಉಣ್ಣೆಯುಳ್ಳ, ತುಪ್ಪುಳು ಬೆಳೆದ (W. bear ಹಲವು ಬಗೆಯ ಕಂಬಳಿ ಹುಳು. A w. puppy ಜೂಲು ನಾಯಿಮರಿ. W. voice ಗೊಗ್ಗರ ದನಿ); (ವರ್ಣಚಿತ್ರಣದಲ್ಲಿ) ಅಸ್ಪಷ್ಟ (ರೂಪರೇಖೆಗಳ), ಮಂದಪ್ರಕಾಶದ, ಮಸುಕಾದ (W. texture, style). (ಸ. ವಿ.) (ಹಣ್ಣು, ಎಲೆ, ಮೊ. ವು) ಮೃದು ಗೂದಲುಳ್ಳ, ತುಪ್ಪುಳುಳ್ಳ. **Woólliness** (ನಾ.)

Woólwich ವುಲಿಚ್ (ನಾ.) ಕೆಂಟ್ ಜಿಲ್ಲೆಯಲ್ಲಿ ಒಂದು ಪಟ್ಟಣ; ಇಲ್ಲಿರುವ ಯುದ್ಧಾಯುಧಗಳ ಕಾರಖಾನೆ, ತೋಪುಖಾನೆ; ಇಲ್ಲಿರುವ ರಾಷ್ಟ್ರ ಸೈನಿಕ ಶಿಕ್ಷಣಶಾಲೆ; ಇಲ್ಲಿರುವ ಸೈನಿಕ ಶಿಲ್ಪಿಗಳ ಮತ್ತು ಗೋಲಂದಾಜರ ಶಿಕ್ಷಣಶಾಲೆ. W. infant ೧೯ನೆಯ ಶ. ಮಾ. ದಲ್ಲಿ ತಯಾರಿಸುತ್ತಿದ್ದ ಬಹಳ ಭಾರಿ ಫಿರಂಗಿ.

Wootz ವೂಟ್ಸ್ (ನಾ.) (ಅಲಗು ಆಯುಧಗಳ ತಯಾರಿಕೆಯಲ್ಲಿ ಉಪಯೋಗಿಸುವ, ಇಂಗ್ಲೆಂಡ್ ಮತ್ತು ಅಮೆರಿಕಗಳಿಗೆ ರಫ್ತಾಗುವ) ಇಂಡಿಯದ ಒಂದು ಬಗೆಯ ಉಕ್ಕು (ಬಹುಶಃ ಕನ್ನಡದ 'ಉಕ್ಕು' ಪದದಿಂದ)

Wop ವಾಪ್ (ನಾ.) ಅಮೆ. ಸಂ. ಗಳಿಗೆ ಬಂದು ನೆಲಸಿದ ಇಟಲಿಯವನು.

Word ವರ್ಡ್ (ನಾ.) ಮಾತು, ಶಬ್ದ, ಪದ, ನುಡಿ, ಸೊಲ್ಲು (Is not the w. for it ಅದಕ್ಕೆ ತಕ್ಕ ಮಾತಲ್ಲ. In a *or* one w. ಒಂದು ಮಾತಿನಲ್ಲಿ, ಸಂಕ್ಷೇಪವಾಗಿ. Translate w. for w. ಮಾತಿಗೆ ಮಾತು, ಪದಶಃ, —ಭಾಷಾಂತರ ಮಾಡು. Bold in w. only ಮಾತಿನಲ್ಲಿ ಮಾತ್ರ ಧೀರ. By w. of mouth ಬಾಯಿಮಾತಿನಲ್ಲಿ); (ಸಾ., ಬ. ವ. ದಲ್ಲಿ) ಹೇಳಿದ್ದು, ಉಕ್ತಿ, ಮಾತುಕತೆ, ವಚನ [Take one at his w. ಒಬ್ಬನ ಮಾತು (ನಿಜವೆಂದು) ನಂಬಿ ವರ್ತಿಸು. Fair *or* good words ಒಳ್ಳೆಯ, ಹೊಗಳಿಕೆಯ, ಸಮಾಧಾನದ, —ಮಾತುಗಳು. High, hard, warm, hot, sharp, words ಉದ್ರೇಕದ, ಬಿರು, ಬಿಸಿ (ಬಿಸಿ), ತೀಕ್ಷ್ಣ, —ಮಾತುಗಳು. Big words ಜಂಬದ ಮಾತುಗಳು; ಬಡಾಯಿ. Burning words ಉತ್ಸಾಹದ, ಉದ್ರೇಕದ, ಹುರುಪಿನ,—ಮಾತುಗಳು. Wild & whirling words ಕಟ್ಟುನಿಟ್ಟಿಲ್ಲದ, ಸ್ವೇಚ್ಛೆಯ, ಹುಚ್ಚಾಬಟ್ಟೆ, —ಮಾತುಗಳು. Hard words break no bones, fine words butter no parsnips, words are but wind (ಮಾತು ಪ್ರಯೋಜನಕಾರಿಯಲ್ಲ, ಕಾರ್ಯದಲ್ಲಿ ಫಲಗೊಳ್ಳಬೇಕು ಎಂಬರ್ಥದಲ್ಲಿ): ಮಾತು ಮೂಳೆ ಮುರಿಯಲಾರದು, ಬರಿ ಒಳ್ಳೆಯ ಮಾತು ಊಟಕ್ಕೆ ಬೆಣ್ಣೆಯಾಗಲಾರದು, ಮಾತೇನು ಬರಿ ಗಾಳಿ. Household w. ಎಲ್ಲರಿಗೂ ತಿಳಿದಿರುವ ಮಾತು; ಮನೆಮಾತು; ರೂಢಿಯ — ಹೆಸರು, ಸಂಗತಿ. Have words with (ಒಬ್ಬನೊಡನೆ) ಮಾತು ಹಚ್ಚು, ಜಗಳವಾಡು. They had words ಅವರವರಿಗೆ ಮಾತು ನಡೆಯಿತು; ಅವರು (ಪರಸ್ಪರ) ಜಗಳವಾಡಿದರು. Have a w. with (ಒಡನೆ) ಒಂದು ಮಾತನಾಡು, ಸಂಕ್ಷೇಪವಾಗಿ ಸಂಭಾಷಿಸು. A w. with you ನಿನ್ನೊಡನೆ ಒಂದು ಮಾತನಾಡಬೇಕಾಗಿದೆ. Suit the action to the word (Suit ಕ್ರಿ. ನೋಡಿ). On *or* with the w. ಹೇಳಿದೊಡನೆ, ಆಡಿದೊಡನೆ. A w. & a blow (ಬೇಗ ಕೆರಳುವವರ ವಿಷಯದಲ್ಲಿ): ಮಾತು, ಮಾತಿನ ಹಿಂದೆ ಏಟು; ಏಟುಬಿಟ್ಟು ಮಾತಿಲ್ಲ. Waste words ಪ್ರಯೋಜನವಿಲ್ಲದೆ, ವ್ಯಥಾ, —ಮಾತನಾಡು; ಮಾತು ನಷ್ಟ ಮಾಡಿಕೊ. A w. in, out of, season ಸಮಯ ನೋಡಿ, ಸಮಯ ನೋಡದೆ, —ಹೇಳಿದ ಮಾತು. Have the last w. ತನ್ನದೇ ಕೊನೆಯ ಮಾತಾಗಿರು. The last w. (on a subject) (ಒಂದು ವಿಷಯದಲ್ಲಿ) (ಅತ್ಯಂತ ಈಚಿನ ಅಭಿಪ್ರಾಯಗಳನ್ನೊಳಗೊಂಡ) ತೀರ್ಮಾನದ ಮಾತು; ಕೊನೆಯ ಸಿದ್ಧಾಂತ. Have a w. to say ಹೇಳತಕ್ಕಂಥ, ಕೇಳತಕ್ಕಂಥ, —ಮಾತಿರು. Man of few words ಮಿತಭಾಷಿ. Hasn't a w. to throw at a dog ನಾಯಿಯನ್ನು ಮಾತನಾಡಿಸುವುದಕ್ಕೆ ಕೂಡ ತುಟಿಬಿಡದಷ್ಟು ಬಿಗಿತುಕೊಂಡಿದ್ದಾನೆ; ಮಾತಾಡಿದರೆ ಮುತ್ತು ಸುರಿದುಹೋಗುತ್ತದೆಂದು ಸುಮ್ಮನಿದ್ದಾನೆ. Say a good w. for ಪರವಾಗಿ ಒಂದು ಒಳ್ಳೆಯ ಮಾತಾಡು, ಶಿಫಾರಸು ಮಾಡು. Give person one's good w. (ಅಧಿಕಾರಸ್ಥಾನ, ಮೊ. ಕ್ಕೆ) ಒಬ್ಬನನ್ನು ಶಿಫಾರಸು ಮಾಡು. Eat one's words ಹೇಳಿದ್ದನ್ನು ಹಿಂದೆಗೆದುಕೊ; (ಬಲಾತ್ಕಾರದಿಂದ) ಕ್ಷಮಾಪಣೆ ಕೇಳು, ತಪ್ಪಾಯಿತೆನ್ನು. W. of command (ಸಿಪಾಯಿ, ಮೊ. ರಿಗೆ ಕವಾಯಿತಿನಲ್ಲಿ ಕೊಡುವ) ಆಜ್ಞೆಯ ಮಾತು. A w. to the wise ವಿವೇಕಿಗೆ ಒಂದು ಮಾತು ಸಾಕು. God's w. ವೇದ, ಬೈಬಲ್ಲು. The w. (of God) (ದೇವರಿಗೂ ಮನುಷ್ಯರಿಗೂ ಮಧ್ಯವರ್ತಿ ಎಂದು ಅಥವಾ ಮನುಷ್ಯನಿಗೆ ಪ್ರತ್ಯಕ್ಷವಾದ ದೇವಸ್ವರೂಪವೆಂದು ಕ್ರೈಸ್ತರು ತಿಳಿಯುವ) ಯೇಸು ಕ್ರಿಸ್ತ]; ಸುದ್ದಿ, ಸಮಾಚಾರ, ವರ್ತಮಾನ [Send w. of, send w. ಸುದ್ದಿ, ಸಮಾಚಾರ,—ಕೊಡು, ಕಳಿಸು. W. came that *or* of (—ಎಂದು, —ರ) ಸಮಾಚಾರ, ಸುದ್ದಿ, ಬಂತು]; ವಾಗ್ದಾನ, ಭರವಸೆ [Give, pass, pledge, one's w. ವಾಗ್ದಾನ ಮಾಡು, ಮಾತುಕೊಡು; (ವಿರ. ಪ್ರ.) ಹೇಳಿಕೆ ಕೊಡು, Keep one's w.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಡಿದ ಮಾತನ್ನು ಉಳಿಸಿಕೊ, ಮಾತಿನಂತೆ ನಡೆ. Break one's w. ಮಾತಿಗೆ ತಪ್ಪು. I give you my w. for it ಅದು ಹಾಗೆಯೇ, ನಿಜ, ಎಂದು ಭರವಸೆಕೊಡುತ್ತೇನೆ, ಆಣೆಮಾಡುತ್ತೇನೆ. Upon my w. ನನ್ನ ಆಣೆಗೂ. W. of honour ಗೌರವದಮೇಲೆ ಆಣೆಯಿಟ್ಟು ಮಾಡಿದ ವಾಗ್ದಾನ, ಕೊಟ್ಟ ಮಾತು : ಗೌರವದ ಆಣೆ. A man of his w. ಮಾತಿಗೆ ತಪ್ಪದ, ಆಡಿದಂತೆ ನಡೆಯುವ, —ಮನುಷ್ಯ. Be as good as one's w. ನುಡಿದಂತೆ ನಡೆ. His w. is as good as his bond ಅವನ ಮಾತೇ ಒಂದು ಪತ್ರ]. ಅಪ್ಪಣೆ, ಆಜ್ಞೆ, ಸಂಕೇತ ಪದ [Give the w. to do *or* for. Must give the w. before you can pass. Sharp's the w. (Sharp ನೋಡಿ)]. **W.-blindness, -deafness** ನೋಡಿದ, ಕೇಳಿದ,—ಮಾತಿಗೆ ಅರ್ಥಮಾಡಿಕೊಳ್ಳಲಾಗದ ಒಂದು ಮೆದುಳು ರೋಗ : ಮಾತು—ಕುರುಡು, ಕಿವುಡು. **W.-book** ಶಬ್ದಕೋಶ. **W.-painter, -painting** ಆಕರ್ಷಕವಾಗಿ—ಬರೆಯುವವನು, ಬರೆಯುವುದು : ಶಬ್ದ ಚಿತ್ರಕಾರ, ಶಬ್ದ ಚಿತ್ರಣ. **W.-perfect** ಒಂದು ಮಾತೂ ತಪ್ಪದೆ, ಪದಶಃ, —ಗಟ್ಟಿಮಾಡಿರುವ, ಕಂಠಪಾಠಮಾಡಿರುವ. **W.-picture** ಶಬ್ದ ಚಿತ್ರ. **W.-play** ಮಾತಿನ ಕಸರತ್ತು ; ನುಡಿಯಾಟ, ಶ್ಲೇಷೆ. **W.-splitter, -splitting** ಶಬ್ದಾರ್ಥದಲ್ಲಿ ವಿಪರೀತ ಸೂಕ್ಷ್ಮ ಭೇದಗಳನ್ನು ಮಾಡುವವನು, ಮಾಡುವುದು : ಅತಿಸೂಕ್ಷ್ಮ—ತರ್ಕದವನು, ತರ್ಕ. **W.-square** (Square ನೋಡಿ). **Wórdless** (ಗು.) ; **Wórdy** (ಗು.) ಬರಿಯ ಮಾತಿನ, ಶಬ್ದಾಡಂಬರದ, ಶಬ್ದ ಬಾಹುಳ್ಯದ ; ಶಾಬ್ದ ; ಮಾತಿನ(ಲ್ಲಿಯ) (W. Warfare ಮಾತಿನ —ಜಗಳ, ಚರ್ಚೆ). **Wórdily** (ಕ್ರಿ. ವಿ.) ; **Wórdiness** (ನಾ.)

Word (ಕ್ರಿ. ಸಕ.) ಮಾತಿನಲ್ಲಿ—ರೂಪಿಸು, ಹೇಳು, ಹಾಕು ; (ಅಭಿಪ್ರಾಯ ಹೇಳಲು) ತಕ್ಕ ಮಾತುಗಳನ್ನು ಆಯ್ದುಹಾಕು, ಮಾತು ಜೋಡಿಸು. **Wórding** (ನಾ.) ಶಬ್ದ—ಪ್ರಯೋಗ, ರಚನೆ, ವಿನ್ಯಾಸ.

Wore. Wear¹ ಧಾತುವಿನ ಭೂತರೂಪ ; Wear² ಧಾತುವಿನ ಭೂತ. ಮತ್ತು ಭೂ. ಕೃ.

Work ವರ್ಕ್ (ನಾ.) ಕೆಲಸ, ಗೈಮೆ, ಮಾಟ ; ಕಾರ್ಯ, ಕರ್ಮ, ಕ್ರಿಯೆ, ಕೃತಿ, ಕೃತ್ಯ ; ವ್ಯಾಪಾರ, ಉದ್ಯಮ, ಉದ್ಯೋಗ (Set to w. ಕೆಲಸಕ್ಕೆ—ತೊಡಗು, ಕೈಹಚ್ಚು ; ಕಾರ್ಯಾರಂಭಮಾಡು. Have one's w. cut out for one ಒಬ್ಬನಿಗೆ ಕೈತುಂಬ ಕೆಲಸ ವಿರು. All in the day's w. ಎಲ್ಲ ನಿತ್ಯವೂ ನಡೆಯತಕ್ಕದ್ದೇ) ; (ಭೌ. ವಿ.) ಪ್ರತಿರೋಧವನ್ನು ನಿಭಾಯಿಸುವುದರಲ್ಲಿ ಅಥವಾ ಅಣು ವ್ಯತ್ಯಾಸವುಂಟುಮಾಡುವುದರಲ್ಲಿ ಕಂಡುಬರುವ ಶಕ್ತಿಪ್ರಯೋಗ: ಕ್ರಿಯೆ, ಕ್ರಿಯಾಶಕ್ತಿ [Convert heat into w. ಉಷ್ಣಶಕ್ತಿಯನ್ನು ಕ್ರಿಯಾಶಕ್ತಿಯನ್ನಾಗಿ ಪರಿವರ್ತಿಸು. Unit of w. ಕ್ರಿಯಾಶಕ್ತಿಯ ಏಕಮಾನ (ಒಂದು ಪೌಂಡು ತೂಕವನ್ನು ಒಂದು ಅಡಿ ಎತ್ತರಕ್ಕೆ ಎತ್ತಲು ಬೇಕಾಗುವ ಕ್ರಿಯಾಶಕ್ತಿ). Internal w. (ಒಂದು ವಸ್ತುವಿನ ಅಣುಗಳ ಮೇಲೆ ಪ್ರಯೋಗವಾಗುವ) ಆಂತರಿಕ ಕ್ರಿಯಾಶಕ್ತಿ] ; ಕಾರ್ಯೋಪಕರಣಗಳು, ಕರಾಟಗಳು [Bring your w. downstairs ನಿನ್ನ ಕರಾಟಗಳನ್ನು (ಉದಾ., ಹೊಲಿಗೆ ಯಂತ್ರ, ಪಾಠಪುಸ್ತಕ, ಮೊ. ನ್ನು) ಕೆಳಕ್ಕೆ ತೆಗೆದುಕೊಂಡುಬಾ] ; ಕೃತಿ, ಸಾಧಿಸಿದ ಕಾರ್ಯ, ಸಿದ್ಧಿ ; ಸಂಗೀತದ, ಸಾಹಿತ್ಯದ, —ಕೃತಿ ; ಗ್ರಂಥ ; ಮಾದರಿ(ಯ ಕೃತಿ) ; (ದೇವ. ಶಾ., ; ಸಾ., ಬ. ವ. ದಲ್ಲಿ) (ಶ್ರದ್ಧಾಭಕ್ತಿಯಿಂದ ಅಥವಾ ದೇವಾನುಗ್ರಹದಿಂದ ಭಿನ್ನವಾದ) ಪುಣ್ಯ ಕಾರ್ಯ, ಸತ್ಕರ್ಮ; [Mighty works ಪವಾಡಗಳು. A good day's w. ದಿನಭರ್ತಿ ಕೆಲಸ. The works of God ದೈವಸೃಷ್ಟಿ, ಪ್ರಕೃತಿ. The works of Cicero ಸಿಸಿರೋವಿನ ಕೃತಿಗಳು, ಗ್ರಂಥಗಳು. A learned w. ವಿದ್ವತ್ ಕೃತಿ. A w. of art ಕಲಾಕೃತಿ (ಉತ್ತಮ ಚಿತ್ರ, ಕವಿತೆ, ಕಟ್ಟಡ, ಮೊ. ವು). Works of mercy ದಾನಧರ್ಮದ ಕೆಲಸಗಳು. Covenant of works (ಬೈಬಲ್ಲಿನ ಹಳೆಯ ಒಡಂಬಡಿಕೆ) ಮನುಷ್ಯನು ದೇವರ ನಿಯಮಗಳನ್ನು ಸಂಪೂರ್ಣವಾಗಿ ಪಾಲಿಸಿದರೆ ಮನುಷ್ಯನಿಗೆ ಶಾಶ್ವತ ಸುಖ ಕೊಡುವುದಾಗಿ ದೇವರು ಕೊಟ್ಟ ವಾಗ್ದಾನ : ನಿಯಮ ಪಾಲನೆಯ ಒಪ್ಪಂದ. Works of supererogation (Super- ನೋಡಿ). Give (one) the works (ಅಮೆ. ಸಂ. ಗ್ರಾಮ್ಯ ಅಥವಾ ಅಸಂ.) ವಿಪರೀತ ತೊಂದರೆ, ಕಾಟ, —ಕೊಡು ; ಗೋಳು ಹುಯ್ದುಕೊ. Make short w. of (Short ನೋಡಿ)] ; ನೌಕರಿ, ಜೀವನೋಪಾಯ (Is out of w. ಅವನು ನೌಕರಿಯಲ್ಲಿಲ್ಲ, ಅವನಿಗೆ ಉದ್ಯೋಗವಿಲ್ಲ) ; (ಸಾ., ಬ. ವ. ದಲ್ಲಿ) ಕೋಟೆಯ ಕಟ್ಟಡ, ರಕ್ಷಣ ಸಾಧನ, ದುರ್ಗ [The works are impregnable ಕೋಟೆ ಕೊತ್ತಲಗಳು ಅಭೇದ್ಯವಾಗಿವೆ. Outworks (Out- ನೋಡಿ). Earth-works (Earth ನೋಡಿ)] ; (ಬ. ವ. ದಲ್ಲಿ) ಕಟ್ಟಡ ಕೆಲಸ, ಮೊ. ವು [Public works ಸರ್ಕಾರದ ಪರವಾಗಿ ನಡಸುವ ಕಟ್ಟಡದ ಕೆಲಸ, ಮೊ. ವು : ಮರಾಮತ್ತು, ಕಾಮಗಾರಿ, —ಕೆಲಸ. Clerk of the works (Clerk ನೋಡಿ)] ; (ಬ. ವ. ದಲ್ಲಿ) ಯಂತ್ರದ ಕಾರ್ಯಾಂಗಗಳು (The works of a watch ಗಡಿಯಾರದ ಕಾರ್ಯಾಂಗಗಳು. Something must be wrong with the works) ; (ಬ. ವ. ದಲ್ಲಿ ; ಸಾ., ಏ. ವ. ದಂತೆ ಪ್ರ.) ಕಾರ್ಯಾಲಯ, ಕಾರಖಾನೆ (The owner of iron works ಕಬ್ಬಿಣದ ಕಾರಖಾನೆಯ ಒಡೆಯ); ಅಲಂಕಾರದ ಕೆಲಸ (ಮಾಡಿದ ವಸ್ತು), (ನಿರ್ದಿಷ್ಟ ಪದಾರ್ಥದಿಂದ ಮಾಡಿದ) ಸಾಮಾನು (Covered with elaborate w. ಕುಸುರಿ ಕೆಲಸ ತುಂಬಿದ. Rustic, embossed, beaten, w. ಹಳ್ಳಿಗಾಡಿನ, ಉಬ್ಬುಕೆತ್ತನೆಯ, ಬಡಿದುಮಾಡಿದ, —ಪದಾರ್ಥ, ಸಾಮಾನು. Woodw. ಮರಗೆಲಸ, ಮರದ ಸಾಮಾನು. Stonew. ಕಲ್ಲುಗೆಲಸ, ಕಲ್ಲು ಸಾಮಾನು. Needle-w. ಸೂಜಿ, ಹೊಲಿಗೆ,—ಕೆಲಸ. (ನಾವೆ) Upper works (Upper ನೋಡಿ)]. **Wórkaday** ನಿತ್ಯಗಟ್ಟಳೆಯ ಕೆಲಸಕ್ಕೆ ತಕ್ಕ, ಸಾಧಾರಣ, ವ್ಯಾವಹಾರಿಕ (ಮು., In this workaday world). **W.-bag, -basket, -box** ಉಪಕರಣಗಳ, ಆಯುಧಗಳ, —ಚೀಲ, ಬುಟ್ಟಿ, ಪೆಟ್ಟಿಗೆ. **Wórk-day** (ಭಾನುವಾರ ಅಥವಾ ಇತರ ಹಬ್ಬದ ದಿನ ಬಿಟ್ಟು) ಕೆಲಸದ ದಿನ. **Wórkhouse** ಒಂದು ಪ್ರದೇಶದ ನಿರ್ಗತಿಕರಿಗಾಗಿ ಏರ್ಪಡಿಸಿರುವ ಸಂಸ್ಥೆ: ಅನಾಥಾಲಯ. **Wórkman** ಕೆಲಸದವನು, ಕೂಲಿ(ಯಾಳು), ಕೆಲಸಗಾರ [Good, bad, w.-m. ಒಳ್ಳೆಯ, ಕಳಪೆಯ, —ಕೆಲಸಗಾರ. An ill w.-m. quarrels with his tools (ಕುಣಿಯಲಾರದ ಸೂಳೆ ಮದ್ದಳೆಯವನ ಮೇಲೆ ಬಿದ್ದಳು ಎಂಬಂತೆ): ಕಳಪೆ ಕೆಲಸಗಾರ ಆಯುಧಗಳನ್ನು ದೂರುತ್ತಾನೆ. W.-m.'s train (ಮುಂಬೆಳಗ್ಗೆ ಓಡಾಡುವ, ಕಡಮೆ ದರದ) ಕೆಲಸಗಾರರ ರೈಲುಬಂಡಿ]. **Wórkmanlike** ಒಳ್ಳೆಯ ಕೆಲಸಗಾರತನದ, ಕೆಲಸಗಾರನ ಲಕ್ಷಣದ. **Wórkmanship** ಕೆಲಸಗಾರಿಕೆ, ಕಾರ್ಯಕೌಶಲ, ಕೃತಿಚಾತುರ್ಯ, ಕೈವಾಡ, ಹಸ್ತಕೌಶಲ ; (ಒಬ್ಬನಿಂದಾದ) ನಿರ್ಮಾಣ [We are (of) God's w.]. **W.-people** ಕೆಲಸಗಾರರು, ಕೂಲಿ(ಯಾಳು)ಗಳು. **W.-room** ಕೆಲಸದ ಕೋಣೆ. **Wórkshop** ಕಾರ್ಯಾಲಯ, ಕಾರಖಾನೆ. **W.-shy** (ಗು., ನಾ.) ಕೆಲಸಮಾಡಲು ಮನಸ್ಸಿಲ್ಲದ(ವನು), ಮೈಗಳ್ಳ, ಕೆಲಸಗಳ್ಳ(ನಾದ). **W.-table** (ಉಪಕರಣಗಳಿಗಾಗಿ ಸೆಳೆಖಾನೆಗಳಿರುವ) ಕೆಲಸದ ಮೇಜ. **Wórkwoman** ಕೆಲಸಗಾತಿ, ಕೂಲಿ ಹೆಂಗಸು. **Wórkless** (ಗು.)

Work [ಕ್ರಿ. ; ಭೂತ., ಭೂ. ಕೃ. Worked, Wrought (ರಾಟ್) (ಕೆಲವು ಪ್ರ.ಗಳಲ್ಲಿ ಹೊರತು ಪ್ರಾಚೀ. ಪ್ರ.)] ಕೆಲಸ, ಕಾರ್ಯ, ಪರಿಶ್ರಮ, ಉದ್ಯೋಗ, ಉದ್ಯಮ, —ಮಾಡು ; ದುಡಿ, ಎಸಗು (ಗ್ರಾಂ.) [W. away *or* on (ಬಿಡದೆ) ಕೆಲಸಮಾಡುತ್ತಿರು, ಮುಂದುವರಿಸು. W. double tides (Tide ನೋಡಿ). W. to rule (ಬಹಿರಂಗವಾಗಿ ಮುಷ್ಕರ ಹಿಡಿಯುವುದಕ್ಕೆ ಬದಲಾಗಿ) ಸಮಯಾಸಮಯವೆನ್ನದೆ ಪ್ರತಿಯೊಂದು ನಿಯಮವನ್ನೂ ಅತಿಯಾಗಿ ಪಾಲಿಸಿ ಸರಾಗವಾಗಿ ಕಾರ್ಯ ನಡೆಯುವುದು ಅಸಾಧ್ಯವಾಗುವಂತೆ ಮಾಡು :

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅತಿನಿಯಮಪಾಲನೆಯಿಂದ ಕಾರ್ಯ ಸಾಗದಂತೆ ಮಾಡು. Is working at Greek ಗ್ರೀಕ್ ವ್ಯಾಸಂಗಮಾಡುತ್ತಿದ್ದಾನೆ. Works in leather ಚರ್ಮದ ಕೆಲಸ ಮಾಡುತ್ತಾನೆ. Worked *or* wrought in brass ಹಿತ್ತಾಳೆಯಲ್ಲಿ ಮಾಡಿದ. He is hard to w. with ಅವನೊಡನೆ ವ್ಯವಹರಿಸುವುದು, ಏಗುವುದು, —ಕಷ್ಟ]; (ಯಂತ್ರ, ಮೊ. ಗಳ ವಿಷಯದಲ್ಲಿ) ಕೆಲಸ—ನಡಸು, ನಡೆ (Charm, drug, pump, works); (ಮನುಷ್ಯನ ವಿಷಯದಲ್ಲಿ) ಕೆಲಸ ಮಾಡಿಸು, ದುಡಿಸು, ನಡಸು; (ಚಕ್ರ, ಮೊ. ಗಳ ವಿಷಯದಲ್ಲಿ) ಆಡು, ತಿರುಗು, ಚಲಿಸು (Wheel works on axle. Works freely ಸರಾಗವಾಗಿ ತಿರುಗುತ್ತದೆ); ನಡಸು, ನಿರ್ವಹಿಸು, ನಿಯಂತ್ರಿಸು (W. mine, scheme. Is worked by wires, electricity); ಪರಿಣಾಮವುಂಟುಮಾಡು, ಪ್ರಭಾವ ಬೀರು, ಫಲಿಸು [(ಅನೇಕ ವೇಳೆ Wrought). Now let it w. ಅದು ಕಾರ್ಯ, ಪರಿಣಾಮ,—ಮಾಡಲಿ. W. upon one's mind ವ್ಯಕ್ತಿಯ (ಮನಸ್ಸಿನ)ಮೇಲೆ ಪ್ರಭಾವ ಬೀರು, ಪರಿಣಾಮವುಂಟು ಮಾಡು. W. the oracle (Oracle ನೋಡಿ)]; ಉಂಟುಮಾಡು, ಉಂಟಾಗಿಸು, ಸಾಧಿಸು [(ಅನೇಕ ವೇಳೆ Wrought). W. wonders. W. one's will (*upon* person *or* thing) ತನ್ನ ಉದ್ದೇಶವನ್ನು ಸಾಧಿಸಿಕೊ, ಈಡೇರಿಸಿಕೊ. Will w. it if I can (ಅನಂ.) ಆಗಲಿ—ಮಾಡಿ ತೋರಿಸುತ್ತೇನೆ, ಸಾಧಿಸುತ್ತೇನೆ]. ಆಡು, ಚಲಿಸು, ಹೊಯ್ದಾಡು, ಕ್ಷೋಭೆಗೊಳ್ಳು, ಕ್ಷೋಭೆಗೊಳಿಸು, ತಳಮಳಿಸು, ಹುದುಗೇಳು, ಕಿಣ್ವವಾಗು (ರೂಪ. ಸಹ) (Face, features, worked violently ಮುಖ, ಅಂಗ ಭಾಗಗಳು, —ಬಲವಾಗಿ ಆಡಿತು, ಆಡಿದುವು. Waves w. to & fro ಅಲೆಗಳು ಅತ್ತ ಇತ್ತ ಹೊಯ್ದಾಡುತ್ತವೆ. Thoughts, conscience, working within him. Yeast began to w. ಮಂಡ ಹುದುಗೇಳತೊಡಗಿತು); (ದಾರಿಮಾಡಿಕೊಂಡು) ಹೋಗು, ಹೋಗಿಸು, ಬರು, ಬರಿಸು, ಸರಿ(ಸು), ನುಗ್ಗು, ನುಗ್ಗಿಸು (Stockings w. down, up ಕಾಲುಚೀಲ ಕೆಳಕ್ಕೆ, ಮೇಲಕ್ಕೆ, ಸರಿಯುತ್ತದೆ. Needle worked out eventually from her arm ಕೊನೆಗೆ ಸೂಜಿ ಅವಳ ರಟ್ಟೆಯಿಂದ ಹೊರಬಂದಿತು. Ferrule has worked off, loose ಬಳೆ ಕಳಚಿ ಬಂದುಬಿಟ್ಟಿದೆ. W. your knife through the card ಚೂರಿಯನ್ನು ರಟ್ಟಿನೊಳಕ್ಕೆ ಚುಚ್ಚು. Grub works its way into *or* out of ಹುಳು ಒಳಕ್ಕೆ ಕೊರೆದುಕೊಂಡು ಹೋಗುತ್ತದೆ, ಹೊರಕ್ಕೆ ಕೊರೆದುಕೊಂಡು ಬರುತ್ತದೆ. Ship is working eastwards ಹಡಗು ಪೂರ್ವಾಭಿಮುಖವಾಗಿ ಹೋಗುತ್ತಿದೆ. Angler works up stream ಮೀನು ಹಿಡಿಯುವವನು ಪ್ರವಾಹಕ್ಕೆ ಎದುರಾಗಿ ಗಾಳಹಾಕುತ್ತಾನೆ); ಬೇಕಾದ ಹದಕ್ಕೆ, ರೂಪಕ್ಕೆ, ಮಾಟಕ್ಕೆ,—ತರು, ನಾದು, ಬಡಿ [W. dough, clay ಕಣಕವನ್ನು,ಜೇಡಿಯನ್ನು,—ನಾದು. Butter should be thoroughly worked ಬೆಣ್ಣೆಯನ್ನು ಒಳ್ಳೆಯ ಹದಕ್ಕೆ ಕಡೆಯಬೇಕು. Wrought iron ಮೆತು ಕಬ್ಬಿಣ]; (ಕೃತಕವಾಗಿ ಮತ್ತು ನಿಧಾನವಾಗಿ) ಉದ್ರೇಕಗೊಳಿಸು (Worked his audience, himself, into enthusiasm, a rage); ಕಸೂತಿ, ಮೊ. ನ್ನು —ಹಾಕು, ಮಾಡು (W. pattern, initials); ಗಣಿತ ಪ್ರಶ್ನೆ ಬಿಡಿಸು, ಲೆಕ್ಕಮಾಡು; (ಪ್ರಯಾಣವನ್ನು ಹಣ ಕೊಡದೆ) ದುಡಿದು ಗಿಟ್ಟಿಸು. W. in (ನಿದರ್ಶನ, ಸಂಗತಿ, ಮೊ. ನ್ನು) ಸ್ಥಳ, ಅವಕಾಶ, —ಮಾಡಿ ಸೇರಿಸು, ತೂರಿಸು; ಹೆಣೆ, ನೇಯ್; (ನಿದರ್ಶನ, ಸಂಗತಿ, ಮೊ.ಗಳ ವಿಷಯದಲ್ಲಿ) ಹಾಗೆ ಸೇರಿಕೊ, ಹೆಣೆದುಕೊ. W. off ನಿವಾರಿಸಿಕೊ, ಕಳೆದುಕೊ, ತಟಾಯಿಸು, ತೀರಿಸಿಕೊ; (ಗಿರಾಕಿ, ಮೊ. ನ್ನು ಹೊಂದಿಸಿ) ಮಾರಿಹಾಕು, ವಿಲೇವಾರಿ ಮಾಡು (Works off his bad temper on his servants ತನ್ನ ಕೋಪವನ್ನು ಆಳುಗಳಮೇಲೆ ತೀರಿಸಿಕೊಳ್ಳುತ್ತಾನೆ. Has worked off his debauch ಅವನು ತನ್ನ ವ್ಯಭಿಚಾರಚಾಳಿಯನ್ನು ಕಳೆದುಕೊಂಡಿದ್ದಾನೆ. W. off 3000 copies ೩೦೦೦ ಪ್ರತಿಗಳನ್ನು ವಿಲೇವಾರಿ ಮಾಡು. Works off old jokes on us ಹಳೆಯ ಹಾಸ್ಯಗಳನ್ನು ನಮ್ಮಮೇಲೆ ಪ್ರಯೋಗಿಸುತ್ತಾನೆ). W. out ಮೊತ್ತ ಕಂಡುಹಿಡಿ, ಲೆಕ್ಕ ಮಾಡು; (ಮೊತ್ತದ ವಿಷಯದಲ್ಲಿ) ಆಗು (Works out at £6 10 s.); (ಲೆಕ್ಕದ ವಿಷಯದಲ್ಲಿ) ಮಾಡಲಾಗು, ಮಾಡಬರು (Will not w. out); ಕೆಲಸ ಮಾಡಿಸಿ ಸುಸ್ತಾಗಿರು; ಪೂರೈಸಿಬಿಡು; ದುಡಿಸು (Person is quite worked out ದುಡಿದು ಸುಸ್ತುಬಿದ್ದು ಹೋಗಿದ್ದಾನೆ. Mine is worked out ಅದುರೆಲ್ಲ ತೆಗೆದು ಗಣಿ ಖಾಲಿಯಾಗಿದೆ); ಪ್ರಯತ್ನಪಟ್ಟು, ದುಡಿದು, —ಸಾಧಿಸು (W. out one's salvation); ವಿವರಗಳನ್ನೆಲ್ಲ ಅಣಿಗೊಳಿಸು, ಕೂಲಂಕಷವಾಗಿ ಯೋಜನೆಮಾಡು (Has worked out a scheme of invasion). W. up ಕ್ರಮೇಣ, ನಿಧಾನವಾಗಿ, —(ಪರಮಾವಧಿ) ಸಮರ್ಥ ಸ್ಥಿತಿಗೆ ತರು; ವರ್ಣನೆಯನ್ನು ವಿಸ್ತಾರವಮಾಡು, ವಿವರಮಾಡು (ಅನೇಕ ವೇಳೆ Wrought); (ಗೊತ್ತಾದ ಮೇಲ್ಮಟ್ಟಕ್ಕೆ) ಕ್ರಮೇಣ ಏರು; (ನಿಧಾನವಾಗಿ) ಎಬ್ಬಿಸು, ಉದ್ರೇಕಗೊಳಿಸು [(ಅನೇಕ ವೇಳೆ Wrought). Is in a highly wrought up state ಅವನು ಬಹಳ ಉದ್ರಿಕ್ತ ಸ್ಥಿತಿಯಲ್ಲಿದ್ದಾನೆ]. (ಪದಾರ್ಥಗಳನ್ನು) ಸಂಮಿಳಿತ, ಸಂಮಿಶ್ರ, —ಮಾಡು; (ವಿಷಯವನ್ನು) ಚೆನ್ನಾಗಿ—ಪರಿಚಯ ಮಾಡಿಕೊ, ವ್ಯಾಸಂಗಮಾಡು; ಪರಿಶ್ರಮಪಡೆ. **Wórkable** (ಗು.) ಕೆಲಸಮಾಡಲಾಗುವ, ಕಾರ್ಯರೂಪಕ್ಕೆ ತರಲಾಗುವ, ಕಾರ್ಯಾತ್ಮಕ, ಕಾರ್ಯಸಾಧ್ಯ. **Workabílity** (ನಾ.); **Wórkableness** (ನಾ.); **Wórkably** (ಕ್ರಿ. ವಿ.); **Wórker** (ನಾ.) (ಕ್ರಿಯಾರ್ಥಗಳಲ್ಲಿ); (ಸಂಘಜೀವಿಗಳಾದ ಕೆಲವು ಹುಳು ಜಾತಿಗಳಲ್ಲಿ) ಇನ್ನೂ ಪೂರ್ತಿ ಬೆಳವಣಿಗೆಯಾಗಿರದ ಹೆಣ್ಣು: ದುಡಿತದ ಹೆಣ್ಣು (= W. bee, ant, etc.). **Wórking** (ನಾ., ಗು.) (ಕ್ರಿಯಾರ್ಥಗಳಲ್ಲಿ); ಕಾರ್ಯ —ರೀತಿ, ಕ್ರಮ, ಫಲ; ವ್ಯಾಪಾರ, ಪ್ರವೃತ್ತಿ (The workings of his face, conscience); ಕೆಲಸ ನಡೆದಿರುವ ಅಥವಾ ನಡೆಯುತ್ತಿರುವ ಗಣಿ, ಮೊ. ವು; [W.-day = Work-day; ದಿನದಲ್ಲಿ ಕೆಲಸಮಾಡುವ ಹೊತ್ತು. W. capital, expenses ಕಾರ್ಯೋಪಯೋಗಿಯಾದ ಬಂಡವಾಳ, ಕಾರ್ಯಾರ್ಥವಾದ ವೆಚ್ಚಗಳು. W. drawing, plan ಕಟ್ಟಡ ಕಟ್ಟುವುದರಲ್ಲಿ ಸಹಾಯವಾಗುವ ನಕ್ಷೆ) ಕಾರ್ಯ ನಕ್ಷೆ. W.-out (ಉತ್ತರ, ಫಲ, ಮೊ. ಗಳ) ಗಣನೆ; (ಅಂಶಗಳ, ವಿವರ]. (ಗು.) (ಕ್ರಿಯಾರ್ಥಗಳಲ್ಲಿ); ಕೂಲಿ ಕೆಲಸಮಾಡುವ, ಕೈಕೆಲಸದ, ಕಾಯಕದ (W. man. The w. class)

World ವರ್ಲ್ಡ್ (ನಾ.) ಲೋಕ, ಪ್ರಪಂಚ, ಜಗತ್ತು [The *or* this w. ಮರ್ತ್ಯ, ಇಹ, —ಜೀವನ, ಲೋಕ. The other *or* next w., The w. to come ಪರಲೋಕ, ಆಮುಷ್ಮಿಕ ಜೀವನ. The lower w. ಅಧೋಲೋಕ, ನರಕ; ಭೂಲೋಕ. Prince of this w. ಸೈತಾನ. We bring nothing into the world ನಾವು (ಹುಟ್ಟುತಾ) ಲೋಕಕ್ಕೆ ಏನೂ ತರುವುದಿಲ್ಲ. Bring child into the w. ಮಗು—ಹಡೆ, ಹೆರು. Make the best of both worlds ಮೇಲು ನೋಟಕ್ಕೆ ಪರಸ್ಪರ ವಿರುದ್ಧಗಳೆಂದು ತೋರುವ ಎರಡು ಧ್ಯೇಯಗಳನ್ನು ಸಾಧಿಸು: ಉಭಯ ಪ್ರಪಂಚಗಳನ್ನೂ ಸಾಧಿಸು. The end of the w. ಪ್ರಳಯ. W. without end ಎಂದೆಂದಿಗೂ, ಶಾಶ್ವತವಾಗಿ]; ಲೌಕಿಕಾಸಕ್ತಿಗಳು, ಪ್ರಾಪಂಚಿಕ ವ್ಯಾಪಾರ (The w., the flesh & the devil ಆಸೆ ಆಮಿಷ ಪ್ರಲೋಭನಗಳು; ಪ್ರಾಪಂಚಿಕ ವ್ಯಾಮೋಹಗಳು. Forsake the w. ಸಂಸಾರವನ್ನು ತ್ಯಜಿಸು; ವಿರಕ್ತನಾಗು; ಪ್ರಾಪಂಚಿಕ ವ್ಯಾಮೋಹ ತೊರೆ); ವಿಶ್ವ, ಸೃಷ್ಟಿ, ಸಮಸ್ತ, ಸರ್ವಸ್ವ [The creation of the w. ವಿಶ್ವಸೃಷ್ಟಿ. In the w. ಭೂಮಿಯ ಮೇಲೆ, ಲೋಕದಲ್ಲಿ (Who, how, what, in the w. was it? ಅದು ಯಾರು, ಹೇಗೆ, ಏನು? Nothing in the w. ಏನೂ ಇಲ್ಲ). For all the w. like ತದ್ವತ್ ಹಾಗೆಯೇ. Carry the w. before one ಲೋಕವನ್ನೇ ವಶಪಡಿಸಿಕೊ, ಪೂರ್ಣ ಜಯಶೀಲನಾಗು, ಎಲ್ಲದರಲ್ಲೂ ಗೆದ್ದುಬಿಡು. The external w. ಹೊರಗಣ, ಬಾಹ್ಯ,—ಪ್ರಪಂಚ. The w. of dreams ಕನಸಿನ, ಸ್ವಪ್ನ,—ಪ್ರಪಂಚ. She

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

is all the w. to me ಅವಳೇ ನನಗೆ ಸಮಸ್ತವೂ, ನನ್ನ ಪ್ರಪಂಚ. Would give you the w. to know ಅದನ್ನು ತಿಳಿದುಕೊಳ್ಳುವುದಕ್ಕಾಗಿ ನಿನಗೆ ಏನು ಬೇಕಾದರೂ ಕೊಟ್ಟೇನು]; ಭೂಮಿ, ಭೂಲೋಕ, ಭೂಮಂಡಲ [Go round the w. ಭೂಮಿಯ ಸುತ್ತ ಹೋಗು. To the w.'s end ಭೂಮಿಯ ಕೊಟ್ಟಕೊನೆಗೆ; ಅತ್ಯಂತ ದೂರ. Are there other worlds than ours? ನಮ್ಮದಲ್ಲದೆ (ಭೂಮಿಯಂತಹ) ಇತರ ಲೋಕಗಳು ಉಂಟೊ? Federation of the w. ಪ್ರಪಂಚ ರಾಜ್ಯ ಸಮಷ್ಟಿ. Citizen of the w. ಲೋಕಪ್ರಜೆ, ಜಗನ್ಮಿತ್ರ. Make a noise in the w. ಎಲ್ಲೆಲ್ಲೂ ಹೆಸರುವಾಸಿಯಾಗಿರು, ಜನಜನಿತವಾಗಿರು. All the w. knows ಲೋಕಕ್ಕೆಲ್ಲಾ ತಿಳಿದಿದೆ; ಜಗದ್ವಿಖ್ಯಾತವಾಗಿದೆ. The wise old w. ಲೋಕಾನುಭವ ಮತ್ತು ಸಂಪ್ರದಾಯ. W. politics, movement ಜಗದ್ವ್ಯಾಪಕ ರಾಜ್ಯನೀತಿ, ಚಳವಳಿ. The old w. (ಹಿಂದಿನವರಿಗೆ ತಿಳಿದಿದ್ದ ಪುರಾತನ ಲೋಕ): ಏಷ್ಯ, ಯೂರೋಪು ಮತ್ತು ಆಫ್ರಿಕ. The new w. (ನೂತನ ಲೋಕ): ಅಮೆರಿಕ. The English-speaking w. ಇಂಗ್ಲಿಷ್ ಭಾಷೆಯಾಡುವ ಜನ]; ಮಾನವ ವ್ಯಾಪಾರ, ಲೋಕವ್ಯವಹಾರ, ಲೋಕಾನುಭವ, (ಐಹಿಕ) ಜೀವನ, ಸಂಸಾರ, ಲೌಕಿಕ [So wags the w. ಪ್ರಪಂಚ ಹೀಗೆ ಸಾಗುತ್ತಿದೆ, ನಡೆಯುತ್ತಿದೆ. Know, see, the w. ಲೋಕಾನುಭವ—ಇರು, ಪಡೆ. Man of the w. ಲೋಕಾನುಭವಿ, ಲೌಕಿಕ ವ್ಯವಹಾರಿ. Begin the w. ಜೀವನ (ಯಾತ್ರೆ) ಆರಂಭಿಸು; ಸಂಸಾರಕ್ಕೆ ಕಾಲಿಡು. All's right with the w. (ಆಶಾವಾದಿಯ ಮಾತು): ಪ್ರಪಂಚದಲ್ಲಿ ಎಲ್ಲಾ ಸರಿಯಾಗಿದೆ, ಏನೂ ಕೊರತೆಯಿಲ್ಲ. Take the w. as it is, as one finds it ಪ್ರಪಂಚ ಹೇಗಿದೆಯೊ ಅದಕ್ಕೆ ಒಗ್ಗಿ(ಸಿ)ಕೊಂಡು ಹೋಗು. Let the w. slide (ಆಗುವುದನ್ನು ತಿದ್ದಹೋಗದಿರು ಎಂಬರ್ಥದಲ್ಲಿ): ಲೋಕದ ಪಾಡಿಗೆ ಲೋಕ ಹೋಗಲಿ; (ಅಂದುಕೊಳ್ಳುವವರು ಅಂದುಕೊಳ್ಳಲಿ ಎಂಬರ್ಥದಲ್ಲಿ): ಸಂಪ್ರದಾಯಗಳನ್ನು, ಲೋಕಾಭಿಪ್ರಾಯಗಳನ್ನು, —ಲೆಕ್ಕಿಸದಿರು]; (ಸಾಮಾನ್ಯ ದರ್ಜೆಯ, ಗೌರವಸ್ಥ, ನವನಾಜೂಕಿನ) ಜನ, ಸಮಾಜ(ದ ಪದ್ಧತಿ, ಅಭಿಪ್ರಾಯ) (The great w. ನವನಾಜೂಕಿನ ಸಮಾಜ; ಮಹಾಜನ. All the w. & his wife ಲೆಕ್ಕಕ್ಕೆ ಬರುವ ಗಂಡಸರೂ ಹೆಂಗಸರೂ ಎಲ್ಲರೂ. What will the w. say? ಜನ ಏನೆಂದಾರು? ಲೋಕ ಏನೆಂದೀತು? Live out of the w. ಲೋಕದಿಂದ ದೂರವಿರು. The literary w. ಸಾಹಿತಿಗಳ, ಸಾಹಿತ್ಯ, —ಪ್ರಪಂಚ. The w. of art ಕಲಾ ಪ್ರಪಂಚ); ಅಸಂಖ್ಯಾತ, ಅಪಾರ, —ಮೊತ್ತ, ಸಂಖ್ಯೆ, ವಿಸ್ತಾರ [A w. of meaning ಬ್ರಹ್ಮಾಂಡ ಅರ್ಥ. A w. of waters ಜಲ ಪ್ರಪಂಚ. A w. too wide —ಇಂತ ಬಹಳ, ಬಹು ಮಟ್ಟಿಗೆ. To the w. (ಅಸಂ.) ಪೂರ್ತಿ, ತೀರ (Tired, drunk, to the w.)]. **W. language** ವಿಶ್ವಭಾಷೆ; ಪ್ರಪಂಚದ ಬಹುಭಾಗಗಳಲ್ಲಿ ಮಾತಾಡುವ ಭಾಷೆ. **W.-old** (ಅತಿಶಯೋಕ್ತಿ ಪ್ರ.) ಪ್ರಪಂಚದಷ್ಟು, ಸೃಷ್ಟಿಯಷ್ಟು, —ಹಳೆಯದಾದ, ಬಹು ಪುರಾತನ. **W.-power** ಪ್ರಪಂಚದಮೇಲೆ ಪ್ರಭಾವ ಬೀರಬಲ್ಲ ರಾಷ್ಟ್ರ: ಪ್ರಪಂಚದ ಪ್ರಬಲ ರಾಜ್ಯ, ಲೋಕಪ್ರಭಾವ ರಾಷ್ಟ್ರ. **W.-weary** ಪ್ರಪಂಚ ಬೇಡವಾದ, ಬಾಳು ಬೇಸರವಾದ. **W.-wide** ಜಗದ್ವ್ಯಾಪಕ. **Wórldling** (ನಾ.) ಪ್ರಾಪಂಚಿಕ, ಲೌಕಿಕ (ವ್ಯಕ್ತಿ); ಪ್ರಪಂಚಿ. **Wórldly** (ಗು.) ಪ್ರಾಪಂಚಿಕ, ಲೌಕಿಕ, ಐಹಿಕ, ಸಾಂಸಾರಿಕ [W. goods ಆಸ್ತಿ (ಪಾಸ್ತಿ). W. wisdom ಸ್ವಾರ್ಥಸಾಧಕ ಬುದ್ಧಿವಂತಿಕೆ, ಲೌಕಿಕ ವಿವೇಕ. W. people ಪ್ರಪಂಚಾಸಕ್ತ ಜನ, ಪ್ರಾಪಂಚಿಕರು]. W.-minded ಪ್ರಪಂಚಾಸಕ್ತ; ಪ್ರಾಪಂಚಿಕ, ಐಹಿಕ,—ಪ್ರವೃತ್ತಿಯುಳ್ಳ [**W.-mindedness** (ನಾ.)]. W.-wise ಲೌಕಿಕ ವಿವೇಕವುಳ್ಳ, ಪ್ರಪಂಚ ಬಲ್ಲ. **Wórldliness** (ನಾ.) ಪ್ರಾಪಂಚಿಕತೆ, ಐಹಿಕತೆ.

Worm ವರ್ಮ್ (ನಾ.) ಕೈಕಾಲು, ಮೊ. ಅವಯವಗಳಿಲ್ಲದ(ಂತೆ ಕಾಣುವ), ಸಂಧ್ಯಂತರಗಳುಳ್ಳ ಅಥವಾ ಮನುಷ್ಯರ ಕರುಳಿನಲ್ಲಿಯೊ ಅಂಗಾಂಶಗಳಲ್ಲಿಯೊ ಪರಸತ್ತ್ವೋಪಜೀವಿಯಾಗಿರುವ, ಹರಿದಾಡುವ, ಅಕಶೇರುಕ ಪ್ರಾಣಿ: ಹುಳು, ಜಂತು, ಕ್ರಿಮಿ [Glow, silk, slow, -w. (ಆಯಾ ಪದ ನೋಡಿ). Child has worms ಮಗುವಿನ ಹೊಟ್ಟೆಯಲ್ಲಿ ಜಂತುವಿದೆ. Food for worms (ಸತ್ತವನ ವಿಷಯದಲ್ಲಿ) ಕ್ರಿಮಿಗಳಿಗೆ ಆಹಾರ. A w. will turn (ಮಿತಿಮೀರಿ ಪೀಡಿಸಿದರೆ ಅತಿದುರ್ಬಲನು ಕೂಡ ತಿರುಗಿಬೀಳುತ್ತಾನೆ, ಪ್ರತಿಭಟಿಸುತ್ತಾನೆ ಎಂಬ ಅರ್ಥದಲ್ಲಿ): ಹುಳು ಕೂಡ ತಿರುಗಿಬೀಳುತ್ತದೆ. The w. of conscience ಪಶ್ಚಾತ್ತಾಪದ ಕೊರೆತ; ಆತ್ಮಸಾಕ್ಷಿಯ ನುಲಿತ. Am a w. today ನನಗೆ ಇಂದು ಇರುಸುಮುರುಸಾಗಿದೆ, ಹುಮ್ಮಸ್ಸು ಇಲ್ಲ]; ಅಲ್ಪ, ಕ್ಷುದ್ರ, ನಿಕೃಷ್ಟ, —ವ್ಯಕ್ತಿ, ಮನುಷ್ಯ; ತಿರುಪು ಮೊಳೆಯ ಮರಸುತ್ತು; (ಬಂದೂಕು, ಕೆಲವು ಬಟ್ಟಿಯಂತ್ರ, ಮೊ. ಗಳಲ್ಲಿ) ಮರಸುತ್ತಿನ, ತಿರುಪು, —ಭಾಗ; ಸುರುಳಿ ಕೊಳವೆ; (ನಾಯಿಯ ನಾಲಗೆಯ) ಕೆಳಗಣ ಅಸ್ಥಿರಜ್ಜು. **W.-cast** (ಎರೆಹುಳು ವಿಸರ್ಜಿಸಿದ, ಕೊಳವೆಯಾಕಾರದ) ತೂಪುರು ಮಣ್ಣು, ಮೃಣ್ಮಲ. **W.-eaten** ಹುಳು ತಿಂದ, ಕುಚ್ಚೆ ಹಿಡಿದ, ಹುಳುತುಹೋದ (ರೂಪ. ಸಹ). **W.-fishing** ಎರೆಹುಳುವಿನಿಂದ ಮೀನು ಹಿಡಿಯುವುದು. **W.-gear** ತಿರುಗುವ ಮರಸುತ್ತು ಸಲಕರಣೆಯಿಂದ ಚಾಲಿತವಾಗುವ ಹಲ್ಲುಚಕ್ರ ಯೋಜನೆ: ಮರಸುತ್ತು, ತಿರುಪು, —ಚಾಲಕ. **W.-hole** ಹುಳು ಕೊರೆದ ತೂತು. **W.-holed** ಹುಳು ಕೊರೆದ. **W.-seed** ಕರುಳಿನ ಹುಳುಗಳನ್ನು ಹೊರದೂಡಲು ರೇಚಕವಾಗಿ ಉಪಯೋಗಿಸುವ ಒಂದು ಬಗೆಯ ಬೀಜ (ಬಿಡುವ ಸಸ್ಯ): ಗಂಧಕ ಮೂಲಿಕೆ, ಮೊ. ವು. **W.-wheel** ಮರಸುತ್ತು (ಚಾಲಕದ) ಚಕ್ರ. **Wórmy** (ಗು.) ಹುಳು—ತಿಂದ, ಕೊರೆದ, ಬಿದ್ದ; ಹುಳುತುಹೋದ (ರೂಪ. ಸಹ); ಹುಳುವಿನಂಥ; (ರೂಪ.) ಕ್ಷುದ್ರ, ಕ್ಷುಲ್ಲಕ, ವಕ್ರ. **Wórminess** (ನಾ.)

Worm (ಕ್ರಿ.) (ಒಬ್ಬನ ಅನುಗ್ರಹ, ವಿಶ್ವಾಸ, ಮೊ. ಕ್ಕೆ) ಹೊಸೆದುಕೊ(ಂಡು ಹೋಗು) (W. oneself *into* favour, person's confidence); (ಹುಳುವಿನಂತೆ) ಹರಿದುಕೊಂಡು ಹೋಗು, ನುಸಿದುಕೊಂಡು ಹೋಗು (Wormed himself *or* his way. Wormed through the bushes); (ಗುಟ್ಟು, ಮೊ. ನ್ನು) ಉಪಾಯದಿಂದ ಹೊರಗೆಳೆ (*Out of* ಉಪ. ದೊಡನೆ); (ನಾಯಿಯ) ನಾಲಗೆಯ ಕೆಳಗಣ ಅಸ್ಥಿರಜ್ಜುವನ್ನು ಕತ್ತರಿಸು; (ತೋಟದ ಮಡಿ, ಮೊ. ಗಳಿಂದ) ಹುಳುಗಳನ್ನು—ತೆಗೆದುಹಾಕು, ನಾಶಮಾಡು.

Wórmul ವಾರ್ಮಲ್ (ನಾ.) (ಪ್ರಾಂ. ಪ್ರ.) = Warble².

Wórmwood ವರ್ಮ್‌ವುಡ್ (ನಾ.) ಮಾಚಿಪತ್ರೆ (ಜಾತಿಯ ಸಸ್ಯ) (ಮದ್ಯಕ್ಕೆ 'ವರ್‌ಮೂತ್' ವಾಸನೆ ಕಟ್ಟುವುದು, 'ಆಬ್‌ಸಿಂತ್' ಸಾರ ಪದಾರ್ಥವನ್ನು ತಯಾರಿಸುವುದು, ಔಷಧ ತಯಾರಿಕೆ, ಮೊ. ಗಳಲ್ಲಿ ಉಪಯೋಗವಾಗುವ, ಕಹಿಯೂ ಬಲವರ್ಧಕವೂ ಉತ್ತೇಜಕವೂ ಆದ ಗುಣಗಳುಳ್ಳ ಒಂದು ಮೂಲಿಕೆ); (ರೂಪ.) ಕ್ಲೇಶಕಾರಿ, ಕಹಿ, ವಿಷ (It was w. to him to have to accept charity)

Worn. Wear¹ ಧಾತುವಿನ ಭೂ. ಕೃ.

Wórrit ವರಿಟ್ (ಕ್ರಿ., ನಾ.) (ಗ್ರಾಮ್ಯ ಪ್ರ.) = Worry.

Wórry ವರಿ (ಕ್ರಿ., ನಾ.) (ನಾಯಿಗಳ ವಿಷಯದಲ್ಲಿ: ಇಲಿ, ಕುರಿ, ಮತ್ತೊಂದು ನಾಯಿ, ಮೊ. ನ್ನು) ಮೇಲಿಂದಮೇಲೆ ಕಚ್ಚು, ಹಲ್ಲು ಹಾಕಿ ಅಳ್ಳಾಡಿಸು, ಜಗ್ಗಿಸು [W. problem out ಸಮಸ್ಯೆಯನ್ನು ಪಟ್ಟುಹಿಡಿದು, ಮತ್ತೆ ಮತ್ತೆ ಜಗ್ಗಿಸಿ, ಬಿಡಿಸು. W. the sword (ಕತ್ತಿವರಿಸೆಯಲ್ಲಿ) ಸಂತತ ತೀವ್ರ ಚಲನೆಗಳಿಂದ ಎದುರಾಳಿಯನ್ನು ಗಡಿಬಿಡಿಗೊಳಿಸು, ಕೆರಳಿಸು]; ಕಾಡು, ಕಿರುಕುಳಕೊಡು, ಪೀಡಿಸು, ಕಾಟಕೊಡು, ಗೋಳು ಹುಯ್ದುಕೊ, ಮನಃಕ್ಲೇಶಕೊಡು (W. oneself ಅನಾವಶ್ಯಕವಾಗಿ ತೊಂದರೆ ತೆಗೆದುಕೊ, ಕ್ಲೇಶಪಡು. Is much worried ತುಂಬ ಪೇಚಾಟದಲ್ಲಿದ್ದಾನೆ. Wears a worried look ಪೇಚಾಟದಲ್ಲಿರುವಂತೆ ಕಾಣುತ್ತಾನೆ); ಆತಂಕಗೊಳ್ಳು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪೇಚಾಡು, ಚಡಪಡಿಸು (W. along ತೊಂದರೆ ತಾಪತ್ರಯಗಳನ್ನು ಲೆಕ್ಕಿಸದೆ ಮುಂದುವರಿ). (ನಾ.) (ಬೇಟೆನಾಯಿ ಬೇಟೆಯನ್ನು) ಕಚ್ಚಿ ಕಚ್ಚಿ ಎಳೆದಾಡುವುದು ; (ನಾ., ಬ. ವ. ದಲ್ಲಿ) ಕಾಟ, ಕಿರುಕುಳ, ಉಪಟಳ, ಪೇಚಾಟ, ತಾಪತ್ರಯ, ಕ್ಲೇಶ. **Wórriless** (ಗು.) ; **Wórriment** (ನಾ.) ಕಾಟ, ತೊಂದರೆ (—ಕೊಡುವುದು, ಪಡುವುದು). **Wórryingly** (ಕ್ರಿ. ವಿ.)

Worse ವರ್ಸ್ (ಗು., ಕ್ರಿ. ವಿ., ತರ ರೂಪ ; ನಾ.) (—ಇಂತಲೂ) ಹೆಚ್ಚು —ಕೆಟ್ಟ(ದ್ದಾಗಿ), ದುಷ್ಟ(ವಾಗಿ), ಕೀಳು, ಕೀಳಾಗಿ (Is w. today ಸ್ಥಿತಿ ಇಂದು ಇನ್ನೂ ಕೆಟ್ಟಿದೆ. Is none the w. for it ಅದರಿಂದ ಸ್ಥಿತಿ ಮೊದಲಗಿಂತೇನೂ ಕೆಡಲಿಲ್ಲ). (ನಾ.) ಹೆಚ್ಚು ಕೆಟ್ಟದ್ದು [Have w. to tell ಇನ್ನೂ ಹೆಚ್ಚು ಕೆಟ್ಟದ್ದನ್ನು ಹೇಳುವುದಿದೆ. The w. ಸೋಲು, ಅಪಜಯ (Have, put to, the w. ಸೋತುಹೋಗು, ಸೋಲಿಸು). A change for the w. ಇನ್ನೂ ಕೆಟ್ಟದ್ದಕ್ಕೆ ಪರಿವರ್ತನೆ]. **Wórsen** (ಕ್ರಿ.) ಇನ್ನೂ—ಕೆಡು, ಕೆಡಿಸು.

Wórship ವರ್ಷಿಪ್ (ನಾ., ಕ್ರಿ.) (ಪ್ರಾಚೀ. ಪ್ರ.) ಯೋಗ್ಯತೆ, ಗಣ್ಯತೆ, ಅರ್ಹತೆ, ಗೌರವ, ಮನ್ನಣೆ, ಮರ್ಯಾದೆ [Men of w. ಗಣ್ಯರು, ಗೌರವಸ್ಥರು. Win, have, w. ಮನ್ನಣೆ, ಪ್ರಸಿದ್ಧಿ, —ಪಡೆ, ಗಳಿಸಿರು. (ಕೆಲವು ನ್ಯಾಯಾಧೀಶರನ್ನು ಸಂಬೋಧಿಸುವಲ್ಲಿ, ಅಥವಾ ವ್ಯಂಗ್ಯವಾಗಿ) Your, his, w. ಪೂಜ್ಯರೇ, ಮಹಾಸ್ವಾಮಿ] [**Wórshipful** (ಗು.) ; **Wórshipfully** (ಕ್ರಿ. ವಿ.) ; **Wórshipfulness** (ನಾ.)] ; (ದೇವರಿಗೆ ಸಲ್ಲುವ) ಪೂಜೆ, ಅರ್ಚನೆ, ಆರಾಧನೆ, ಉಪಾಸನೆ (The place of w. ಪೂಜಾಸ್ಥಳ ; ಚರ್ಚು) ; (ಒಂದು ತತ್ತ್ವ, ವ್ಯಕ್ತಿ, ಮೊ. ಗೆ ತೋರಿಸುವ) ಭಕ್ತಿ, ನಿಷ್ಠೆ, ಅತ್ಯಾಸಕ್ತಿ (Regarding her with w. in his eyes ಆಕೆಯನ್ನು ಆರಾಧನ ದೃಷ್ಟಿಯಿಂದ, ಅತ್ಯನುರಕ್ತಿಯಿಂದ, ನೋಡುತ್ತ. The w. of wealth ಐಶ್ವರ್ಯ ಪೂಜೆ, ಧನೋಪಾಸನೆ). (ಕ್ರಿ.) ಪೂಜಿಸು ; ಅರ್ಚಿಸು ; ಆರಾಧಿಸು ; ಉಪಾಸನೆಮಾಡು ; ಭಕ್ತಿ ವಿಶ್ವಾಸಗಳಿಂದ ಕಾಣು (Worships the ground she treads on ಅವಳು ಕಾಲಿಟ್ಟ ನೆಲಕ್ಕೆ ಪೂಜೆಮಾಡುತ್ತಾನೆ) ; (ಸಾರ್ವಜನಿಕ) ಆರಾಧನೆಗೆ ಹೋಗು (Where does he w.? ಅವನು ಪೂಜೆಗೆ ಎಲ್ಲಿಗೆ ಹೋಗುತ್ತಾನೆ ?). **Wórshipper** (ನಾ.)

Worst ವರ್ಸ್ಟ್ (ಗು., ಕ್ರಿ. ವಿ., ತಮರೂಪ. ; ನಾ., ಕ್ರಿ. ಸಕ.) ಅತ್ಯಂತ—ಕೆಟ್ಟ(ದ್ದಾಗಿ), ದುಷ್ಟ(ವಾಗಿ), ಕೀಳು ; ಪರಮ—ನೀಚ, ನಿಕೃಷ್ಟ ; ಅಧಮಾಧಮ [At (the) w. our lives are safe ಏನು ಕೇಡುಬಂದರೂ ನಮ್ಮ ಪ್ರಾಣಗಳು ಕ್ಷೇಮವಾಗಿವೆ. Get the w. of it ಸೋತುಹೋಗು. Have, put to, the w. ಸೋತುಹೋಗು, ಸೋಲಿಸು. If the w. comes to the w. ತೀರ ಕೆಟ್ಟಿತೆಂದರೆ. Do your w. (ಧಿಕ್ಕರಿಸಿ ಮಾತಾಡುವಲ್ಲಿ): ನಿನ್ನ ಕೈಲಾದಷ್ಟು ಕೆಟ್ಟದ್ದನ್ನು ಮಾಡು ; ಏನು ಮಾಡುತ್ತೀಯೋ ಮಾಡು]. (ಕ್ರಿ.) ಸೋಲಿಸು, ಮೇಲುಗೈಯಾಗು, ಮೀರಿಸು.

Wórsted ವುಸ್ಟೆಡ್ (ನಾ.) ಉಣ್ಣೆಯ, ಕಂಬಳಿ, —ದಾರ [(ವಿಶೇಷಣವಾಗಿ ಪ್ರ.) : W. sock]

Wort ವರ್ಟ್ (ನಾ.) ಗಿಡ, ಸಸ್ಯ, ಮೂಲಿಕೆ [(ಸಮಾಸಗಳಲ್ಲಿ ಹೊರತು ವಿರ. ಪ್ರ.): Spleen, stitch, -w. (ಆಯಾ ಪದ ನೋಡಿ)] ; (ಬಿಯರ್ ಮದ್ಯವಾಗಿ ಹುಳಿಯುವುದಕ್ಕೆ ಮುಂಚಿನ) ಮೊಳೆತ ಧಾನ್ಯದ ಕಷಾಯ.

Worth[1] ವರ್ತ್ (ಗು., ನಾ.) ಬೆಲೆಯ, ಬೆಲೆಯುಳ್ಳ, ಬೆಲೆ ಬಾಳುವ [Is w. much ಬಹಳ ಬೆಲೆಯುಳ್ಳದ್ದು. Is w. nothing ಏನೂ ಬೆಲೆಯಿಲ್ಲದ್ದು. Is little w. (ಕಾವ್ಯ) ಅಲ್ಪಬೆಲೆಯದು. Bird in the hand is w. two in bush (Bird ನೋಡಿ)] ; ಅರ್ಹ, ಯೋಗ್ಯ, ತಕ್ಕ, ಪ್ರಯೋಜನಕರ [W. one's salt ತಿಂದ ಉಪ್ಪಿಗೆ ತಕ್ಕಂತೆ ದುಡಿಯುವ ; ಯೋಗ್ಯ, ಸಮರ್ಥ (Salt ಪದವನ್ನೂ ನೋಡಿ). W. doing ಮಾಡಲು ಅರ್ಹವಾದ, ಮಾಡಿ ನೋಡಬಹುದಾದ. W. the trouble ತೊಂದರೆಗೆ, ಶ್ರಮಕ್ಕೆ, —ತಕ್ಕ ಪ್ರತಿಫಲವಿರುವ; ಪ್ರಯೋಜನಕರ. W. while (While ನೋಡಿ). W.-while (ಆಧುನಿಕ ಪ್ರ.; ಗು.) ಮಾಡಿ ನೋಡಲು ಅರ್ಹವಾದ (A w.-w. experiment ಮಾಡಿ ನೋಡಲು ಅರ್ಹವಾದ ಪ್ರಯೋಗ). W. it (ಬಳ. ಮಾ.) = W. while. The game is not w. the candle (Candle ನೋಡಿ). I give you this for what it is w. ಅದರ ವಿಚಾರ ಹೇಗೋ, ಇರುವುದನ್ನು ತಿಳಿಸಿದ್ದೇನೆ ; ಅದರ ಯೋಗ್ಯತೆ, ಬೆಲೆ, ಏನೇ ಇರಲಿ, ತಿಳಿಸಿದ್ದೇನೆ (ಅದರ ನಿಜತ್ವ, ವಿವೇಕ, ಮೊ. ಗಳ ವಿಚಾರದಲ್ಲಿ ಖಾತರಿ ಕೊಡಲಾಗುವುದಿಲ್ಲ ಎಂಬ ಅರ್ಥದಲ್ಲಿ)] ; ಆಸ್ತಿಯುಳ್ಳ [Is w. a million ಹತ್ತು ಲಕ್ಷ ಆಸ್ತಿ ಇದೆ. Spent all he was w. on it ತನ್ನ ಆಸ್ತಿಯನ್ನೆಲ್ಲಾ ಅದರಮೇಲೆ ಹಾಕಿದನು, ಕಳೆದನು. For all one is w. (ಅಸಂ.) ಸರ್ವ ಪ್ರಯತ್ನದಿಂದ, ನಿರ್ವಂಚನೆಯಾಗಿ]. (ನಾ.) ಬೆಲೆ, ಅರ್ಹತೆ, ಯೋಗ್ಯತೆ, ಮಾನ್ಯತೆ (Of little w. ಬೆಲೆಯಿಲ್ಲದ, ಅಯೋಗ್ಯ. Persons of w. ಯೋಗ್ಯರು, ಅರ್ಹರು. Penny w. ಪೆನಿ ಬೆಲೆಯ). **Wórthless** (ಗು.) ಬೆಲೆಯಿಲ್ಲದ, ಅಯೋಗ್ಯ, ಕೆಲಸಕ್ಕೆ ಬಾರದ. **Wórthlessly** (ಕ್ರಿ. ವಿ.) ; **Wórthlessness** (ನಾ.) ; **Wórthy** ವರ್ದಿ (ಗು., ನಾ.) ತಕ್ಕ, ಅರ್ಹ; ಯೋಗ್ಯ, ಗಣ್ಯ, ಗೌರವಾರ್ಹ (—ವ್ಯಕ್ತಿ, ಮನುಷ್ಯ) [Has lived a w. life ಯೋಗ್ಯ ಜೀವನವನ್ನು ನಡಸಿದ್ದಾನೆ. Is w. of remembrance ಅದು ಸ್ಮರಣಾರ್ಹವಾಗಿದೆ. Praise-w. ಕೊಂಡಾಡಲರ್ಹವಾದ, ಪ್ರಶಂಸಾರ್ಹ. Blame-w. ದೂಷಣಾರ್ಹ, ತೆಗಳಿಕೆಗೆ ತಕ್ಕ. In words w. (of) the occasion ಸಂದರ್ಭಕ್ಕೆ ಯೋಗ್ಯವಾದ ಮಾತುಗಳಲ್ಲಿ. A w. reward ಯೋಗ್ಯ, ತಕ್ಕ, —ಪ್ರತಿಫಲ]. (ನಾ.) (ಮು., ಬ. ವ. ದಲ್ಲಿ) The worthies of a country ಒಂದು ದೇಶದ ಮಾನ್ಯರು. **Wórthily** (ಕ್ರಿ. ವಿ.); **Wórthiness** (ನಾ.)

Worth[2] ವರ್ತ್ (ಕ್ರಿ. ಸಕ., ಪ್ರಥಮ ಪುರುಷ ಏ. ವ. ಸಂಭಾವನಾ ರೂಪ) (ಪ್ರಾಚೀ. ಪ್ರ.) ಆಗು, ಉಂಟಾಗು, ಸಂಭವಿಸು (Woe w. the day ಆ ದಿನ ಹಾಳಾಗ, ನಾಶವಾಗ)

Wot. **Wit** ನೋಡಿ.

Would, Would-be. **Will** ನೋಡಿ.

Wound[1] ವೂಂಡ್ (ನಾ., ಕ್ರಿ. ಸಕ.) (ಕೊಯ್ತ, ಇರಿತ, ಮೊ. ಗಳಿಂದಾದ) ಗಾಯ(ದ ಹುಣ್ಣು), ಕ್ಷತಿ, ಶಸ್ತ್ರವ್ರಣ (—ಮಾಡು); (ರೂಪ.) ಹೆಸರಿಗೆ ಹಾನಿ, ಮನಸ್ಸಿಗೆ ಗಾಸಿ, ಮನೋಯಾತನೆ (—ಮಾಡು) ; (ಕಾವ್ಯ) ಪ್ರೇಮಯಾತನೆ; (Festering w. ಕೀತುಕೊಂಡ ಗಾಯ. Mortal w. ಮಾರಕ ವ್ರಣ. Willing to w. ಸೇಡು ತೀರಿಸಿಕೊಳ್ಳುವ, ಜಿದ್ದಿನ. Wounded feelings ನೊಂದ ಮನಸ್ಸು. Wounded vanity ಅವಮಾನಿತ, ನೊಂದ, —ಆತ್ಮಾಭಿಮಾನ). **Wóundless** (ಗು.)

Wound[2]. Wind [1, 2] ಧಾತುವಿನ ಭೂತ., ಭೂ. ಕೃ.

Wove(n). **Weave** ನೋಡಿ.

Wrack ರ್‍ಯಾಕ್ (ನಾ.) ತೀರಕ್ಕೆ ಹೊಡೆದುಕೊಂಡುಬಂದ (ಗೊಬ್ಬರ, ಮೊ. ಕ್ಕೆ ಉಪಯೋಗವಾಗುವ) ಸಮುದ್ರ ಕಳೆ ; (ಒಡೆದುಹೋದ ಹಡಗು, ಮೊ. ರ) ಭಗ್ನಾವಶೇಷ, ಒಡಕು ಮುರುಕು ; ಹಾಳು, ಧ್ವಂಸ, ನಾಶ.

Wraith ರೇತ್ (ನಾ.) (ಸಾವಿಗೆ ಸ್ವಲ್ಪ ಮುಂಚೆ ಅಥವಾ ಹಿಂಚೆ ಕಾಣಿಸಿಕೊಳ್ಳುವ, ಒಬ್ಬನ) ಪ್ರೇತರೂಪ.

Wrángle ರ್‍ಯಾಂಗ್‌ಲ್ (ಕ್ರಿ. ಅಕ., ನಾ.) ಗಟ್ಟಿಯಾಗಿ ಕೂಗಾಡುತ್ತ, ಬಯ್ಯುತ್ತ ಗಲಾಟೆಯಿಂದ ವಾಗ್ವಾದ(ಮಾಡು) : ಕಾದಾಡು, ಕಚ್ಚಾಡು, ಜಗಳವಾಡು, ರಂಪುಮಾಡು. (ನಾ.) ಕಾದಾಟ, ಕಚ್ಚಾಟ, ಜಗಳ. **Wrángler** (ನಾ.) (ಕ್ರಿಯಾರ್ಥಗಳಲ್ಲಿ) ; (ಕೇಂಬ್ರಿಡ್ಜ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿ. ವಿ. ನಿ.) ಗಣಿತ ಶಾಸ್ತ್ರದ ಟ್ರೈಪಾಸ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದವನು (Senior w. ಪ್ರಥಮ ಶ್ರೇಣಿಯಲ್ಲಿ ಪ್ರಥಮ ಸ್ಥಾನ ಪಡೆದವನು : ಪ್ರಪ್ರಥಮನಾದವನು) (ಮೊದಲನೆಯ, ಎರಡನೆಯ, ಮೂರನೆಯ,—ಶ್ರೇಣಿಗಳಲ್ಲಿ ತೇರ್ಗಡೆಯಾದವರಿಗೆ ಕ್ರಮವಾಗಿ Senior, junior, optime ಎಂದು ಕರೆಯುತ್ತಾರೆ). **Wránglership** (ನಾ.)

Wrap ರ್‍ಯಾಪ್ (ಕ್ರಿ., ನಾ.) [ಬಟ್ಟೆ, ಕಾಗದ, ಮೊ. ರಿಂದ (ಹೇಗೊ ಹಾಗೆ)] ಸುತ್ತು, ಸುತ್ತಿಡು, ಹೊದಿಸು, ಮುಚ್ಚು, ಆಚ್ಛಾದಿಸು (ಅನೇಕ ವೇಳೆ *up* ಉಪ. ದೊಡನೆ) (W. up parcel. Mountain is wrapped in mist ಬೆಟ್ಟಕ್ಕೆ ಮಂಜು ಕವಿದಿದೆ. Affair is wrapped in mystery ಸಂಗತಿ ರಹಸ್ಯದಲ್ಲಿ ಮುಚ್ಚಿಕೊಂಡಿದೆ. Wraps up his meaning in tortuous sentences ತನ್ನ ಅಭಿಪ್ರಾಯವನ್ನು ತಿರುಚುವಾಕ್ಯಗಳಲ್ಲಿ ಮುಚ್ಚಿಡುತ್ತಾನೆ); (ಭೂ. ಕೃ. ನಲ್ಲಿ) ಅಡಗಿರುವ, ಅಂತರ್ಗತ, ಮಗ್ನ, ನೆಟ್ಟ, ಹೊಂದಿಕೊಂಡಿರುವ (Mother is wrapped up in her child. Country's prosperity is wrapped up in its shipping); [W. up (ಶಾಲು, ಮೊ.) ಹೊದೆದುಕೊ, ಸುತ್ತಿಕೊ (Mind you w. up well if you go out)]; (ಶಾಲು, ಮೊ.) ಹೊದೆ(ದುಕೊ), ಹೊದಿಸು, ಸುತ್ತಿಕೊ (*Round*, *about* ಉಪ. ದೊಡನೆ) (Wrapped her shawl close about her); ಹೊದಿಸಿದ ಹೆಂಚುಗಳಂತೆ ಒಂದರ ಮೇಲೊಂದು ಕೂಡು, ಪಡಕೂಡು (The edges should w.). (ನಾ.; ಸಾ., ಬ. ವ. ದಲ್ಲಿ) (ಶಾಲು, ಕಂಬಳಿ, ಕವುದಿ, ಕಂಠವಸ್ತ್ರ, ಮೊ.) ಹೊದಿಕೆ(ಗಳು), (ಪರಿ)ವೇಷ್ಟನ. **Wráppage** (ನಾ.) ಹೊದಿಕೆ. **Wrápper** (ನಾ.) (ಕ್ರಿಯಾರ್ಥಗಳಲ್ಲಿ); ಮೇಲಂಗಿ(ಯಂಥ ಹೊದಿಕೆ), (ಪರಿ)ವೇಷ್ಟನ, ಪ್ರಾವಾರ; (ಅಂಚೆಯ ಮೂಲಕ ಕಳಿಸುವ ವೃತ್ತಪತ್ರಿಕೆ, ಕಟ್ಟು, ಮೊ. ಗಳ ಮೇಲಿನ) ಆವರಣ, ಸುತ್ತುಹಾಳೆ; (ಪುಸ್ತಕಗಳಿಗೆ ಹಾಕಿರುವ, ಕಳಚಲಾಗುವ) ಕವಚ, ಹೊದಿಕೆ; ಹೊಗೆಸುತ್ತಿನ ಮೇಲ್ಪದರ ದಲ್ಲಿರುವ ಉತ್ತಮ ತೆರದ ಹೊಗೆಸೊಪ್ಪಿನ ಎಲೆ: ಹೊದಿಕೆಯೆಲೆ. **Wrápping** (ನಾ.) ಹೊದಿಕೆ, ಆವರಣ.

Wrapt. = Rapt.

Wrasse ರ್‍ಯಾಸ್ (ನಾ.) ಕಲ್ಲುಪೊಟ್ಟರೆಯಲ್ಲಿ ಸೇರಿಕೊಳ್ಳುವ, ದಪ್ಪ ತುಟಿಯ, ಗಟ್ಟಿ ಹಲ್ಲಿನ, ಹಲವು ಬಗೆಯ ಕಡಲ ಮೀನು.

Wrath ರಾತ್ (ನಾ.) ಕೋಪ, ಕ್ರೋಧ, ಸಿಟ್ಟು, ರೇಗು (ಕಾವ್ಯ, ಅಲಂ., ಅಥವಾ ಹಾಸ್ಯ ಪ್ರ.) (Vessels, children, of w. ದೈವ ಕೋಪಕ್ಕೆ, ದೈವಶಿಕ್ಷೆಗೆ,—ಪಾತ್ರರು. Slow to w. ಬೇಗ ಕೋಪ ಗೊಳ್ಳದ, ಮಂದಕೋಪಿಯಾದ). **Wráthful** (ಗು.); **Wráthfully** (ಕ್ರಿ. ವಿ.)

Wreak ರೀಕ್ (ಕ್ರಿ. ಸಕ.) ಹಗೆ, ಸೇಡು, ವೈರ, —ತೀರಿಸಿಕೊ, ಸಾಧಿಸು (ಪ್ರಾಚೀ. ಪ್ರ.); (ಹಗೆ, ದ್ವೇಷ, ಕೋಪ, ಮೊ. ನ್ನು) ತೀರಿಸು, ಸಾಧಿಸು, ವ್ಯಕ್ತಪಡಿಸು (*Upon* ಉಪ. ದೊಡನೆ) (W. one's thoughts upon expression ಭಾವನೆಗಳನ್ನು ಸರಿಯಾದ ಮಾತು ಗಳಲ್ಲಿ ವ್ಯಕ್ತಪಡಿಸು)

Wreathe ರೀತ್ (ನಾ.; ಬ. ವ. -s —ದ್ಸ್) (ಹೂವಿನ, ಎಲೆಯ) ಮಾಲೆ, ಹಾರ, ದಂಡೆ; ಇಂಥ ಆಕಾರದ ಶಿಲ್ಪ; (ಹೊಸೆದ ರೇಷ್ಮೆ, ಮೊ. ಗಳ) ಸಿಂಬಿ, ಹಾರ; (ಹೊಗೆಯ) ಸುರುಳಿ; (ಮೋಡದ) ಮಂಡಲ; (ಕಾವ್ಯ) (ಪ್ರೇಕ್ಷಕರ ಅಥವಾ ನರ್ತಕರ) ಮಂಡಲ, ವೃಂದ.

Wreathe ರೀದ್ (ಕ್ರಿ.) ದಂಡೆಯಿಂದ, ದಂಡೆಯಂತೆ, —ಸುತ್ತು ಗಟ್ಟು (Face wreathed in smiles ಮುಗುಳುನಗೆ ಸೂಸುತ್ತಿರುವ ಮುಖ); (ಹೂವು, ರೇಷ್ಮೆ, ಮೊ. ನ್ನು) ದಂಡೆ, ಹಾರ, ಮಾಲೆ, ಸರ,— ಕಟ್ಟು; (ತೋಳು, ಹಾವು, ಮೊ. ಗಳ ವಿಷಯದಲ್ಲಿ) (ವ್ಯಕ್ತಿ, ಮೊ. ನ್ನು) ಸುತ್ತುವರಿ, ಸುತ್ತಿಕೊ, ಸಿಂಬಿ ಸುತ್ತಿಕೊ (*Round* ಉಪ. ದೊಡನೆ); ಹೆಣೆ(ದುಕೊ), ಹೊಸೆ(ದುಕೊ); (ಹೊಗೆಯ ವಿಷಯದಲ್ಲಿ) ಸುರುಳಿ ಸುರುಳಿಯಾಗು, ಸುರುಳಿಗಟ್ಟು.

Wreck ರೆಕ್ (ನಾ., ಕ್ರಿ.) ಹಾಳು, (ವಿ)ನಾಶ, ಧ್ವಂಸ (—ಮಾಡು, ಎಬ್ಬಿಸು); ನೌಕಾಭಂಗ (—ಮಾಡು, ಆಗು); ಹಡಗೊಡೆ(ತ) (Save ship, one's fortune, from w. The w. of his life); ಒಡೆದುಹೋದ ಹಡಗು, ಭಗ್ನ ನೌಕೆ; ಬಹಳ ಶಿಥಿಲವಾದ, ಮುರುಕಲು, ಜರ್ಜರಿತ, ಭಗ್ನ, —ಮನುಷ್ಯ, ಕಟ್ಟಡ; ಭಗ್ನಾವ ಶೇಷ, ಹರುಕು ಮುರುಕು (Is but a *or* the w. of his former life ಅವನು ತನ್ನ ಪೂರ್ವ ಸ್ಥಿತಿಯ ಪ್ರೇತಚ್ಛಾಯೆಯಾಗಿದ್ದಾನೆ). ಸಮುದ್ರದಿಂದ ತೀರಕ್ಕೆ ಹೊಡೆದುಕೊಂಡುಬಂದ ಪದಾರ್ಥಗಳು, ನೌಕಾ ಭಂಗ ವಸ್ತುಗಳು, ಹಡಗೊಡಕು ಸಾಮಾನು (W. of the sea belongs to the crown) (W. master ನೌಕಾ ಭಂಗ ವಸ್ತು ಗಳ ಅಧಿಕಾರಿ. Wrecked sailors, goods ಭಗ್ನ ನೌಕೆಯ —ಅಳಿದುಳಿದ ನಾವಿಕರು, ಸರಕುಗಳು); (ವಿರ. ಪ್ರ.) ನಾಶವಾಗು, ಧ್ವಂಸವೆದ್ದುಹೋಗು [This is the obstacle your hopes will w. on ನಿನ್ನ ಆಶೆಗಳು ಧ್ವಂಸವೆದ್ದುಹೋಗುವ ಅಡಚಣೆಯಿದು. Wrecking amendment (ರಾಜ್ಯನೀತಿ) ಮಸೂದೆಯ ಉದ್ದೇಶಕ್ಕೇ ಭಂಗ ತರುವ ತಿದ್ದುಪಡಿ: (ಉದ್ದೇಶ)ಭಂಗಕಾರಿ ತಿದ್ದುಪಡಿ]. **Wréckage** (ನಾ.) ಭಗ್ನಾವಶೇಷ, ಒಡಕು ಮುರುಕುಗಳು. **Wrécker** (ನಾ.) (ಕ್ರಿಯಾರ್ಥಗಳಲ್ಲಿ); ನೌಕಾ ಭಂಗದಿಂದ ಲಾಭಹೊಂದುವ ಉದ್ದೇಶದಿಂದ ತೀರದಲ್ಲೇ ಇದ್ದುಕೊಂಡು ಹಡಗೊಡೆಯಲು ಪ್ರಯತ್ನಿಸುವವನು: ನೌಕಾ ವಿನಾಶಕ, ಹಡಗೊಡಕ; ನೌಕಾ ಭಂಗ ವಸ್ತುಗಳ ಕಳ್ಳ; ನೌಕಾ ಭಂಗ ವಸ್ತುಗಳನ್ನು, ಭಗ್ನ ನೌಕೆಯನ್ನು, ತೀರಕ್ಕೆ ತರಲು ನೇಮಕವಾದವನು: ಭಗ್ನ ನೌಕೋದ್ಧಾರಕ.

Wren ರೆನ್ (ನಾ.) ಮೊಂಡುಪುಕ್ಕದ, ಕಿರುರೆಕ್ಕೆಯ, ಸಣ್ಣ ಜಾತಿಯ ಹಲವು ಬಗೆಯ, ಯೂರೋಪಿನ ಹಾಡುಹಕ್ಕಿ (=Jenny w.). Wrens = W.R.N.S. (W. ನೋಡಿ)

Wrench ರೆನ್ಚ್, ರೆಂಚ್ (ನಾ., ಕ್ರಿ. ಸಕ.) ಬಲಾತ್ಕಾರವಾಗಿ ತಿರುಚಿ ಕೀಳುವುದು, ಹಿಂಡುವುದು; ಬಲವಾದ ನುಲಿತ, ತಿರುಚು (Gave a w. to his ankle, at the door-handle); (ರೂಪ.) ಅಗಲಿಕೆಯ ನೋವು, ವಿಯೋಗ ಯಾತನೆ (Leaving home was a great w.); ತಿರುಪು, ಮೊ. ನ್ನು ಹಿಡಿದುಕೊಂಡು ತಿರುಗಿಸಲು ಅನುಕೂಲಿಸುವ ಸಲಕರಣೆ: ತಿರಿಚುಳಿ; ಬಿಲ್ಮುಡಿಕೆ. (ಕ್ರಿ.) ಬಲಾತ್ಕಾರವಾಗಿ ತಿರುಚಿ ಕೀಳು, ಎಳೆ; ಬಲವಾಗಿ ಹಿಂಡು, ತಿರುಚು, ನುಲಿ (Wrenched the opponent's sword from him); (ಸಂಗತಿ, ಮೊ. ನ್ನು) ತಿರುಚು, ವಕ್ರಮಾಡಿ ಹೇಳು, ವಕ್ರಪ್ರಯೋಗಮಾಡು, ಪಲ್ಲಟಮಾಡು.

Wrest ರೆಸ್ಟ್ (ಕ್ರಿ. ಸಕ., ನಾ.) ತಿರುಚು, ಪಲ್ಲಟಮಾಡು, ವಕ್ರ ಮಾಡು (Wrests the law to suit himself. W the facts); ಬಲಾತ್ಕಾರದಿಂದ ಕಿತ್ತುಕೊ (Wrested his sword from him). (ನಾ.) (ಹಾರ್ಪ್, ಮೊ. ವಾದ್ಯಗಳಲ್ಲಿ) ಶ್ರುತಿಮಾಡುವ ಕಿವಿ, ಬಿರಡೆ. W.-block (ಪಿಯಾನೊ ವಾದ್ಯದಲ್ಲಿ) ತಂತಿ ಬಿರಡೆ ಗಳ(ನ್ನು ಅಳವಡಿಸಿರುವ) ಹಲಗೆ. W.-pin (ತಂತಿ ವಾದ್ಯಗಳಲ್ಲಿ) ತಂತಿಗಳ ಕೊನೆಯನ್ನು ಎಳೆದುಕಟ್ಟಿರುವ ಬಿರಡೆ, ಕಿವಿ: ತಂತಿ—ಬಿರಡೆ, ಕಿವಿ.

Wréstle ರೆಸ್‌ಲ್ (ಕ್ರಿ., ನಾ.) ಕುಸ್ತಿಮಾಡು, ಜಟ್ಟಿ ಕಾಳಗವಾಡು, ಮಲ್ಲಯುದ್ಧವಾಡು (*With* ಉಪ. ದೊಡನೆ ಸಹ); (ಕೇಡು, ಪ್ರಲೋಭನ, ಕಷ್ಟದ ಕೆಲಸ, ಸಮಸ್ಯೆ, ಮೊ. ಗಳೊಡನೆ) ಹೋರಾಡು, ಹೆಣಗಾಡು, ಗುದ್ದಾಡು (W. with God, in prayer ಶ್ರದ್ಧಾ ಭಕ್ತಿಗಳಿಂದ, ಹಟಮಾಡಿ,—ಪ್ರಾರ್ಥಿಸು). (ನಾ.) ಕುಸ್ತಿ (ಪಂದ್ಯ), ಜಟ್ಟಿ ಕಾಳಗ, ಮಲ್ಲಯುದ್ಧ, ಹೋರಾಟ. **Wréstler** (ನಾ.) ಜಟ್ಟಿ, ಮಲ್ಲ, ಪೈಲವಾನ. **Wréstling** (ನಾ.)

Wretch ರೆಚ್ (ನಾ.) ಹತಭಾಗ್ಯ, ಪಾಪಿ, ದುರಾತ್ಮ; ದರಿದ್ರ, ತುಚ್ಛ, ನೀಚ, ಹತಕ, ಕೀಳ. **Wrétched** (ಗು.) ನಿರ್ಭಾಗ್ಯನಾದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹತಕನಾದ, ದುಃಖಾರ್ತ; ಕೆಟ್ಟ, ದರಿದ್ರ, ಹಾಳು, ಅನಿಷ್ಟ (W. weather, poetry); ಅತಿ (W. insufficiency, stupidity). **Wrétchedly** (ಕ್ರಿ. ವಿ.); **Wrétchedness** (ನಾ.)

Wrick, Rick ರಿಕ್[6] (ಕ್ರಿ. ಸಕ., ನಾ.) (ಕುತ್ತಿಗೆ, ಬೆನ್ನು, ಕೀಲು, ಮೊ. ಗಳನ್ನು) ಸ್ವಲ್ಪ ಉಳುಕಿಸು, ಉಳುಕಿಸಿಕೊ. (ನಾ.) ಉಳುಕು (Have a w. in my neck)

Wríggle ರಿಗ್‌ಲ್ (ಕ್ರಿ., ನಾ.) (ಹುಳು, ಮೊ. ಗಳ ವಿಷಯದಲ್ಲಿ) ದೇಹವನ್ನು ತಿರುಚಿಕೊಂಡು ಮುರುಚಿಕೊಂಡು ಚಲಿಸು; ನುಲಿ(ದಾಡು). (ಪ್ರಾಣಿಯ ಅಥವಾ ಮನುಷ್ಯನ ವಿಷಯದಲ್ಲಿ) ಹುಳುವಿನಂತೆ ವಿಲಿವಿಲಿ—ಒದ್ದಾಡು; (ರೂಪ.) ಹೊರಳಿಕೊ, ನುಣುಚಿಕೊ, ಒದ್ದಾಡಿ ಬಿಡಿಸಿಕೊ (W. out of a difficulty); ನುಲಿಚಿಕೊಂಡುಹೋಗು (*Along, through, out, in* ಮೊ. ಉಪ. ದೊಡನೆ); (ವ್ಯಿ, ಕೈ, ಬಾಲ, ಮೊ. ನ್ನು) ನುಲಿಚು. (ನಾ.) ಹೊರಳಾಟ, ನುಲಿತ, ಒದ್ದಾಟ.

Wright ರೈಟ್ (ನಾ.) ಕೆಲಸಗಾರ, ಕರ್ತೃ [(ಈಗ ಸಮಾಸಗಳಲ್ಲಿ ಹೊರತು ವಿರ. ಪ್ರ.): —ಕಾರ, —ಗಾರ (Play, ship, wheel, -w. ನಾಟಕಕಾರ, ಹಡಗುಗಾರ, ಚಕ್ರಕಾರ)]

Wring ರಿಂಗ್[6] (ಕ್ರಿ. ಸಕ., ಭೂತ., ಭೂ. ಕೃ. Wrung ರಂಗ್; ನಾ.) ಹಿಳಿ, ಹಿಂಡು, ಹಿಸುಕು, ತಿರುಚು; ತಿರುಚಿ—ಕೀಳು, ಮುರಿ; ಅರ್ಥ ತಿರುಚು; ಹಿಂಸೆಕೊಡು [W. person's hands (ಭಾವೋದ್ರೇಕದಿಂದ) ಕೈಹಿಸುಕು. W. one's hands (ಕಷ್ಟದಲ್ಲಿ) ಕೈಕೈ ಹಿಸುಕಿಕೊ. W. (out) clothes ಬಟ್ಟೆ—ಹಿಳಿ, ಹಿಂಡು. Wringing wet, (ಬಳ. ಮಾ.) Wringing ಹಿಂಡಬೇಕಾದಷ್ಟು ಒದ್ದೆಯಾಗಿ. W. neck of (ಕೋಳಿ, ಮೊ. ಗಳನ್ನು) ಕತ್ತು ತಿರುಚಿ ಕೊಲ್ಲು. Has wrung the words from their true meaning ಮಾತುಗಳ ನಿಜವಾದ ಅರ್ಥವನ್ನು ತಿರುಚಿಬಿಟ್ಟಿದ್ದಾನೆ. Soul was wrung with agony ಯಾತನೆಯಿಂದ ಆತ್ಮ ನುಲಿಚಿಹೋಯಿತು]; ಹಿಂಡಿ ತೆಗೆ; ಬಲಾತ್ಕಾರದಿಂದ—ಹೊರಡಿಸು, ಕೀಳು (W. water, groan, money, *from* or *out of* or *out*). (ನಾ.) ಹಿಂಡುವುದು, ಹಿಂಡಿಕೆ (Gave my hand, give those clothes, a w.). **(-)wringer** (ನಾ.)

Wrínkle ರಿಂಕ್‌ಲ್ (ನಾ., ಕ್ರಿ.) (ಸಾ., ವಯಸ್ಸಿನಿಂದಾಗುವ, ಚರ್ಮದ) ಮಡಿಕೆ, ತೆರೆ, ಸುಕ್ಕು (—ಮಾಡು, ಬೀಳಿಸು, ಆಗು) [(ಅನೇಕ ವೇಳೆ *up* ಉಪ. ದೊಡನೆ). He wrinkled his forehead ಹಣೆಯನ್ನು ಸುಕ್ಕಿಸಿದನು. Wrinkled with age ವಯಸ್ಸಿನಿಂದ ಸುಕ್ಕುಬಿದ್ದ]. **Wrinkly** (ಗು.)

Wrínkle[2] ರಿಂಕ್‌ಲ್ (ನಾ.) (ಸಾಮಾನ್ಯವಾಗಿ ತಿಳಿದಿಲ್ಲದ, ಪ್ರಯೋಜನಕಾರಿಯಾದ) ಸುದ್ದಿ, ಗುಟ್ಟು; ತಂತ್ರ, ಉಪಾಯ, ಮರ್ಮ (Is full of wrinkles. Gave me, put me up to, a w. or two ಒಂದೆರಡು ಗುಟ್ಟು ಹೇಳಿಕೊಟ್ಟನು, ಬಿಟ್ಟುಕೊಟ್ಟನು)

Wrist ರಿಸ್ಟ್ (ನಾ.) ಮಣಿಕಟ್ಟು, ಕೈಯ ಹರಡು; (ಕತ್ತಿವರಿಸೆ, ಚೆಂಡಾಟ, ಮೊ. ಗಳಲ್ಲಿ) ಮಣಿಕಟ್ಟಿನ—ಚಳಕ, ವರಿಸೆ (His wonderful w.; That was all w.); (ಯಂತ್ರಶಿಲ್ಪ) (ಸಂಬಂಧಕ ದಂಡವನ್ನು ಕೂಡಿಸಲು ಅನುಕೂಲಿಸುವುದಕ್ಕಾಗಿ ಚಕ್ರ, ಕ್ರ್ಯಾಂಕು, ಮೊ. ಗಳಲ್ಲಿರುವ) ಆಣಿ, ಗುಬಟು (=W. pin). **Wrístband** [ರಿಸ್(ಸ್ಟ್)ಬ್ಯಾಂಡ್] (ಷರಟು ತೋಳಿನ) ಮಣಿಕಟ್ಟು ಪಟ್ಟಿ, ಹರಡು ಪಟ್ಟಿ. **W.-drop** (ಸೀಸದ ವಿಷದಿಂದುಂಟಾಗುವ) ಮುಂದೋಳಿನ ಸ್ನಾಯುಗಳ ಪಾರ್ಶ್ವವಾಯು: ಮಣಿಕಟ್ಟಿನ ಪಾರ್ಶ್ವವಾಯು. **Wrístlet** ರಿಸ್(ಸ್ಟ್)ಲೆಟ್[6] (ನಾ.) ಮಣಿಕಟ್ಟು ಪಟ್ಟಿ; ಕಾಪು, ಬಳೆ, ಕಪ್ಪ, ಕಡಗ (W. watch ಕೈಗಡಿಯಾರ)

Writ[1] ರಿಟ್ (ನಾ.) ಬರೆವಣಿಗೆ, ಶಾಸ್ತ್ರ (ಗ್ರಂಥ) [(ವಿರ. ಪ್ರ.); Holy, sacred, w. ಬೈಬಲ್ಲು]; (ರಾಜ, ರಾಜ್ಯ, ನ್ಯಾಯಸ್ಥಾನ, ಮೊ. ಗಳ ಹೆಸರಿನಲ್ಲಿ ಹೊರಡಿಸಿದ) ಆಜ್ಞಾಪತ್ರ, ನಿರೂಪ [W. of attachment ಜಪ್ತಿ ಆಜ್ಞಾಪತ್ರ. W. of habeas corpus ಆಸಾಮಿ ಹಾಜರಿಯ ಆಜ್ಞಾಪತ್ರ. W. of subpoena ನ್ಯಾಯಸ್ಥಾನದ ಕರೆ ಪತ್ರ. Serve w. on one ಒಬ್ಬನಮೇಲೆ ಆಜ್ಞಾಪತ್ರ ಜಾರಿಮಾಡು. The w. runs in the district ಆ ಆಜ್ಞೆ, ನಿರೂಪ,—ಜಿಲ್ಲೆಯಲ್ಲಿ ಮನ್ನಣೆ ಪಡೆಯುತ್ತದೆ, ಜಾರಿಯಲ್ಲಿದೆ]

Writ[2]. Write ಧಾತುವಿನ ಪ್ರಾಚೀ. ಪ್ರ., ಭೂತ. ಮತ್ತು ಭೂ. ಕೃ.

Write ರೈಟ್[6] (ಕ್ರಿ.; ಭೂತ Wrote ರೋಟ್[6], ಪ್ರಾಚೀ. ಪ್ರ. Writ ರಿಟ್; ಭೂ. ಕೃ. Written ರಿಟ್‌ನ್, ಪ್ರಾಚೀ. ಪ್ರ. Writ) ಬರೆ, ಲಿಖಿಸು; (ರೂಪ.) (ಗುಣ, ಸ್ಥಿತಿ, ಮೊ. ನ್ನು ಸೂಚಿಸಿ) ಗುರುತುಮಾಡು, ಅಂಕಿಸು, ಮುದ್ರಿಸು; ಗ್ರಂಥ, ಪುಸ್ತಕ, ಲೇಖನ, —ಬರೆ, ರಚಿಸು [Writes a good hand ಅಕ್ಷರ ಚೆನ್ನಾಗಿ ಬರೆಯುತ್ತಾನೆ. Has honesty written in his face ಅವನು ಪ್ರಾಮಾಣಿಕನೆಂದು ಮುಖದಲ್ಲಿಯೇ ಕಾಣುತ್ತದೆ, ಮುಖದಮೇಲೆ ಮುದ್ರಿಸಿದೆ. What I have written I have written ಬರೆದದ್ದು ಬರೆದಾಗಿಹೋಯಿತು, ಬದಲಾಯಿಸುವುದಿಲ್ಲ. W. thing down ಬರೆವಣಿಗೆಯಲ್ಲಿ ನಮೂದಿಸು; ಬರೆದಿಡು. W. off[1] (ಪತ್ರವನ್ನು) ಬರೆದು ರವಾನಿಸಿಬಿಡು. W. out[1] ಪೂರ್ತಿ ಬರೆ. W. out fair ಚೊಕ್ಕ ಪ್ರತಿ ಬರೆ. Name is written in book of life ಭಗವಂತನಿಂದ ಅನುಗೃಹೀತರಾದವರ ಪಟ್ಟಿಯಲ್ಲಿ ಹೆಸರು ಸೇರಿಸಿದೆ. Written in *or* on water ನೀರಿನಲ್ಲಿ, ನೀರಿನಮೇಲೆ,—ಬರೆದು(ದ); ದಾಖಲೆಯಿಲ್ಲದ(ದ). Is writ large ಎದ್ದು ಕಾಣುವಂತೆ, ದೊಡ್ಡದಾಗಿ, —ಬರೆದಿದೆ. W. up the books, reports ಲೆಕ್ಕ ಪುಸ್ತಕ, ವರದಿ, —ಬಾಕಿಯಿಲ್ಲದಂತೆ, ಇಂದಿನವರೆಗೆ ಬರೆದಿಡು. W. off[2] ಸರಾಗವಾಗಿ, ಲೀಲಾಜಾಲವಾಗಿ,—ಬರೆ, ರಚಿಸು. Writes home once a week ಮನೆ(ಯವರಿ)ಗೆ ವಾರಕ್ಕೊಮ್ಮೆ ಕಾಗದ ಬರೆಯುತ್ತಾನೆ. W. me all the news ಎಲ್ಲ ಸುದ್ದಿಗಳನ್ನೂ ತಿಳಿಸಿ ಬರೆ. W. him down an ass ಅವನನ್ನು ಕತ್ತೆಯೆಂದು ಬರೆದಿಡು. W. down ಜರೆದು ಬರೆ; (ಬಂಡವಾಳದ) ನಮೂದು ಬೆಲೆಯನ್ನು ಕಡಮೆಮಾಡು, ತಗ್ಗಿಸು. W. off[3] (ವಸೂಲಾಗದ ಸಾಲ, ಮೊ. ನ್ನು) ತೊಡೆದುಹಾಕು, ವಜಾಮಾಡು. W. out[2] ಬರೆದು ಖಾಲಿಮಾಡಿಬಿಡು (Has written himself out ಅವನು ಇದ್ದದ್ದನ್ನೆಲ್ಲಾ ಬರೆದುಹಾಕಿಬಿಟ್ಟಿದ್ದಾನೆ; ಅವನಿಗೆ ಬರೆಯುವುದಕ್ಕೆ ಇನ್ನೇನೂ ವಿಷಯ ಉಳಿದಿಲ್ಲ). W. up ಹೊಗಳಿ ಬರೆ; ವಿವರವಾಗಿ—ಬರೆ, ವರ್ಣಿಸು]. **Writer** (ನಾ.) (ಕ್ರಿಯಾರ್ಥಗಳಲ್ಲಿ); ಕರಣಿಕ, ಗುಮಾಸ್ತೆ, ಕಾರಕೂನ [**Writership** (ನಾ.)]; ಗ್ರಂಥಕರ್ತ, ಲೇಖಕ, ಬರಹಗಾರ; ಲೇಖನ ಬೋಧಿನಿ (French w.). W. to the signet (ಸಂಕ್ಷಿಪ್ತ: W.S.) ಸ್ಕಾಟ್ಲೆಂಡಿನ ಕೆಳ ದರ್ಜೆಯ ವಕೀಲ. W.'s cramp *or* palsy (Cramp[1] ನೋಡಿ). **Wríting** (ನಾ.) (ಕ್ರಿಯಾರ್ಥಗಳಲ್ಲಿ); ಬರೆದಿರುವ ದಾಖಲೆ; ಬರಹ, ಬರೆವಣಿಗೆ, ಲೇಖನ, ಗ್ರಂಥ (The writings of Plato). Put thing in w. ವಿಷಯವನ್ನು ಬರೆದಿಡು. W.-case ಲೇಖನ ಸಾಮಗ್ರಿ ಕೋಶ. W.-desk ಬರೆಯುವ, ಇಳಿ, —ಮೇಜು. W.-ink (ಅಚ್ಚಿನ ಮಸಿಯಿಂದ ಭಿನ್ನವಾದ) ಬರೆವಣಿಗೆ ಮಸಿ; ಶಾಯಿ. The w. on the wall ಬರಲಿರುವ ಕೇಡಿನ ಸ್ಪಷ್ಟ ಸೂಚನೆ, ಅಶುಭ ಚಿಹ್ನೆ. W.-paper ಬರೆಯುವ, ಬರೆವಣಿಗೆಯ,—ಕಾಗದ. W.-table ಬರೆಯುವ ಮೇಜು.

Writhe ರೈದ್ (ಕ್ರಿ., ನಾ.) (ತೀವ್ರ ಯಾತನೆಯಿಂದ) ವಿಲಿವಿಲಿ ಒದ್ದಾಡು, ನುಲಿ(ದಾಡು), ಹೊರಳಾಡು; (ವ್ಯಿ, ಮೊ. ನ್ನು) ತಿರುಚು, ಮುರಿ; ತೀವ್ರ ವೇದನೆಪಡು, ಒದ್ದಾಡಿಹೋಗು, ಚಡಪಡಿಸು (*Under, at,* insult; *with* shame)

Wrítten. Write ಧಾತುವಿನ ಭೂ. ಕೃ.

Wrong ರಾಂಗ್[6] (ಗು., ನಾ., ಕ್ರಿ. ವಿ., ಕ್ರಿ. ಸಕ.) ಕೆಟ್ಟ, ಕೆಟ್ಟಿರುವ, ಅವ್ಯವಸ್ಥೆಯ, ಅಕ್ರಮದ [My liver is, has gone, has got, w. ನನ್ನ ಯಕೃತ್ತು ಕೆಟ್ಟುಹೋಗಿದೆ. What's w. with—? (ಬಳ. ಮಾ.)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದರಲ್ಲಿ ಏನು ದೋಷವಿದೆ ? ಇದೇಕೆ ಬೇಡ ?] ; ಅಧರ್ಮ(ವಾ)ದ, ಅನ್ಯಾಯ(ವಾ)ದ, ಅಶುದ್ಧ, ಅಯುಕ್ತ, ದೋಷಯುಕ್ತ, ತಪ್ಪಾದ [Knows the right from the w. ಸರಿತಪ್ಪುಗಳ ವಿವೇಚನೆ ಇದೆ; ಸದಸದ್ವಿವೇಚನೆ ಇದೆ. Lying is w. ಸುಳ್ಳು ಹೇಳುವುದು ಅಧರ್ಮ. Took the w. way ಅನ್ಯಾಯ ಮಾರ್ಗವನ್ನು, ತಪ್ಪು ದಾರಿಯನ್ನು,—ಹಿಡಿದನು. The w. answer ತಪ್ಪು ಉತ್ತರ. In the w. box ಇಕ್ಕಟ್ಟಿನಲ್ಲಿ, ಸಂಕಟದಲ್ಲಿ, ಪ್ರತಿಕೂಲ ಸ್ಥಿತಿಯಲ್ಲಿ. Is w. side out ಒಳ(ಮುಖ) ಹೊರಗಾಗಿದೆ. Has hold of the w. end of the stick (ವಾದ, ಪರಿಸ್ಥಿತಿ, ಮೊ. ನ್ನು) ಕಡೆ ಮೊದಲು ಮಾಡಿದ್ದಾನೆ, ತಿರುಗ ಮುರುಗ ಮಾಡಿದ್ದಾನೆ. On the w. side of forty ನಲವತ್ತು ವರ್ಷ ಮೀರಿ, ದಾಟಿ. W. side of the blanket (Blanket ನೋಡಿ). W. fount (ಸಂಕ್ಷಿಪ್ತ: w.f.) (ಅಕ್ಷರಗಳು ತಪ್ಪು ಮಾಟದವು ಎಂದು ಅಚ್ಚುಮೊಳೆ ಜೋಡಿಸುವವನಿಗೆ ತಿಳಿಸುವ ಸೂಚನೆ): ತಪ್ಪು—ಮಾಟ, ಮೊಳೆ. A w. opinion, decision ತಪ್ಪು ಅಭಿಪ್ರಾಯ, ತಪ್ಪು ನಿರ್ಣಯ. W.-headed ತಲೆಕೆಟ್ಟ, ವಕ್ರ ಮತ್ತು ಮೊಂಡ, ಮೂರ್ಖ] . (ನಾ.) ತಪ್ಪು, ಅನ್ಯಾಯ, ಅಧರ್ಮ, ಅಪರಾಧ, ಅಸಾಧು, ದೋಷ [Two wrongs cannot make a right ಒಂದು ತಪ್ಪು ಕೆಲಸ (ಅಥವಾ ಪಾಪಕಾರ್ಯ) ಮರಸಲು ಮತ್ತೊಂದು ತಪ್ಪು ಕೆಲಸ (ಅಥವಾ ಪಾಪಕಾರ್ಯ) ಸರಿಯಲ್ಲ ; ತಪ್ಪಿಗೆ ತಪ್ಪು ಮಾಡಿದರೆ ಸರಿಯಾಗುವುದಿಲ್ಲ. Do w. ಅನ್ಯಾಯಮಾಡು, ಪಾಪಮಾಡು, ತಪ್ಪು ಮಾಡು. King can do no w. (ಬ್ರಿಟಿಷ್ ರಾಜ್ಯ ಘಟನೆಯ ಒಂದು ಮೂಲಸೂತ್ರ): ರಾಜನು ತಪ್ಪು ಮಾಡಲಾರ ; ತಪ್ಪು ರಾಜನದಲ್ಲ (ಮಂತ್ರಿಗಳದು ಎಂದು ಅರ್ಥ). Do w. to ಅನ್ಯಾಯ ಮಾಡು. Suffer w. ಅನ್ಯಾಯವನುಭವಿಸು; ಅನ್ಯಾಯಕ್ಕೆ ಗುರಿಯಾಗು. You do me w. ನೀನು ನನಗೆ ಅನ್ಯಾಯ ಮಾಡುತ್ತೀಯೆ. Complains of her wrongs ತನಗೆ ಆದ ಅನ್ಯಾಯಗಳನ್ನು ಹೇಳಿಕೊಳ್ಳುತ್ತಾಳೆ. They are both in the w. ಇಬ್ಬರದೂ ತಪ್ಪು (ಇದೆ). Put one in the w. ಒಬ್ಬನು ತಪ್ಪಿತಸ್ಥನೆಂದು ತೋರಿಸು ; ಒಬ್ಬನಲ್ಲಿ ತಪ್ಪು, ದೋಷ,—ಕಾಣಿಸು]. (ಕ್ರಿ. ವಿ.) ತಪ್ಪಾಗಿ, ತಪ್ಪಿ [Answer w. ತಪ್ಪಾಗಿ ಉತ್ತರಕೊಡು. You led me w. ನೀನು ನನ್ನನ್ನು ತಪ್ಪು ದಾರಿಗೆ ಎಳೆದೆ, ತಪ್ಪು ದಾರಿ ತುಳಿಸಿದೆ. (ಅಮೆ. ಸಂ., ಬಳ. ಮಾ.) Get in w. with person ಒಬ್ಬನ ಮನಸ್ತಾಪ ಕಟ್ಟಿಕೊ. (ಅಮೆ. ಸಂ., ಬಳ. ಮಾ.) Get person in w. ಒಬ್ಬನನ್ನು ಅವಿಶ್ವಾಸಕ್ಕೆ, ಅನಾದರಣೆಗೆ, —ಗುರಿಪಡಿಸು. Go w. ದಾರಿ ತಪ್ಪು, ತಪ್ಪು ದಾರಿ ಹಿಡಿ ; (ಮು., ಹೆಂಗಸಿನ ವಿಷಯದಲ್ಲಿ) ಭ್ರಷ್ಟಳಾಗು, ಪತಿತಳಾಗು]. (ಕ್ರಿ.) ಅನ್ಯಾಯ, ಅಪಚಾರ, ತಪ್ಪು,—ಮಾಡು (His deeply wronged wife) ; ತಪ್ಪು ತಿಳಿವಳಿಕೆಯಿಂದ ದೋಷಾರೋಪಣೆಮಾಡು, ತಿಳಿಯದೆ ದುರುದ್ದೇಶಗಳನ್ನು ಆರೋಪಿಸು (I assure you you w. me). **Wróngdoer** (ನಾ.) ತಪ್ಪಿತಸ್ಥ, ಅನ್ಯಾಯಕಾರ, ಅಪರಾಧಿ. **Wróngdoing** (ನಾ.) ; **Wróngful** (ಗು.) ; **Wróngfully** (ಕ್ರಿ. ವಿ.) ; **Wróngfulness** (ನಾ.) ; **Wróngly** (ಕ್ರಿ. ವಿ.) ತಪ್ಪಾಗಿ, ಅನ್ಯಾಯವಾಗಿ.

Wrote. Write ಧಾತುವಿನ ಭೂತರೂಪ.

Wroth ರೋತ್, ರಾತ್ (ಗು.) (ಕಾವ್ಯ, ಅಲಂ., ಅಥವಾ ಹಾಸ್ಯ ಪ್ರ.) ಕೋಪಗೊಂಡ, ಸಿಟ್ಟಾದ, ರೇಗಿದ.

Wrought. Work (ಕ್ರಿ.) ಕೆಳಗೆ ನೋಡಿ.

Wrung. Wring ಧಾತುವಿನ ಭೂತ., ಮತ್ತು ಭೂ. ಕೃ.

Wry ರೈ (ಗು., ತರ ರೂಪ Wrier, Wryer. ತಮ ರೂಪ Wriest, Wryest) ತಿರುಗಿಕೊಂಡಿರುವ, ತಿರುಚಿದ, ಸೊಟ್ಟ, ವಕ್ರ [A w. face, w. mouth (ಅಸಹ್ಯ ಸೂಚಕವಾದ) ಸೊಟ್ಟ ಮೋರೆ, ಹಲ್ಲು ಕಿರಿತ. Has a w. nose ಮೂಗು ವಕ್ರವಾಗಿದೆ, ಡೊಂಕಾಗಿದೆ]. **Wrýbill** ಒಂದು ಬಗೆಯ ಪ್ಲವರ್ ಹಕ್ಕಿ. **Wrýmouth** ಹಲವು ಬಗೆಯ ಮೀನು. **W.-mouthed** ಸೊಟ್ಟ ಬಾಯಿಯ ; ವ್ಯಂಗ್ಯ ಪ್ರಶಂಸೆಮಾಡುವ. **Wrýneck** ಭುಜಗಳಮೇಲೆ ಕತ್ತನ್ನು ತಿರುಗಿಸ ಬಲ್ಲ ಒಂದು ಜಾತಿಯ ಹಕ್ಕಿ. **Wrýness** (ನಾ.)

Wye ವೈ (ನಾ.) Y ಅಕ್ಷರ ಆಕಾರದ ವಸ್ತು.

Wýkehamist ವಿಕಮಿಸ್ಟ್ (ಗು., ನಾ.) ವಿಂಚೆಸ್ಟರ್ ಕಾಲೇಜಿನ (—ವಿದ್ಯಾರ್ಥಿ, ಸದಸ್ಯ) (ಅದನ್ನು ಸ್ಥಾಪಿಸಿದ William Wykeham ಎಂಬಾತನ ಹೆಸರಿನಿಂದ)

Wynd ವೈಂಡ್ (ನಾ.) (ಸ್ಕಾ. ಪ್ರ.) (ಸ್ಕಾಟ್ಲೆಂಡ್ ಪಟ್ಟಣದಲ್ಲಿ) ಗಲ್ಲಿ, ಓಣಿ.

X

X ಎಕ್ಸ್. ಇಂಗ್ಲಿಷ್ ವರ್ಣಮಾಲೆಯ ಇಪ್ಪತ್ತನಾಲ್ಕನೆಯ ಅಕ್ಷರ ; (ಬೀ. ಗ.) ಮೊದಲನೆಯ ಅಜ್ಞಾತದ ಸಂಕೇತ (x) ; (ರೂಪ.) ಯಾವುದೋ ರಹಸ್ಯ ಪ್ರಭಾವ, ಅಜ್ಞಾತಾಂಶ ; (ರೋಮನ್ ಸಂಖ್ಯೆ) 10 (IX=9 ; XV=15). X-rays (Ray[1] ನೋಡಿ). XX *or* double-X, XXX *or* triple-X, (ale) ನಿರ್ದಿಷ್ಟ ತೀಕ್ಷ್ಣತೆಯ ಏಲ್ ಮದ್ಯ.

ಸಂಕ್ಷಿಪ್ತಗಳು : (1) **X**=Ex (ಇಲ್ಲದೆ, ಬಿಟ್ಟು, ವಿನಾ) [**X-cp** (Ex-coupon) ; **X-d** (Ex-dividend) ; **X-i** (Ex-interest); **X-n.** (Ex-new shares)]. (2) **X**=Christ [**Xmas**=Christmas. **Xt(ian)**=Christ(ian)]

Xanthíppe ಸ್ಯಾಂಟಿ(ತಿ)ಪಿ (ನಾ.) ಗ್ರೀಕ್ ತತ್ತ್ವಜ್ಞಾನಿಯಾದ ಸಾಕ್ರಟೀಸಿನ ಹೆಂಡತಿ ; (ಪ್ರಾಸ್ತಾವಿಕವಾಗಿ) ಚಂಡಿ, ಗಯ್ಯಾಳಿ,—ಹೆಂಡತಿ.

Xanth(o)- ಸ್ಯಾಂತ್(ಒ)— (ಸ. ಪೂ. ಪ.) ಹಳದಿ—, ಪೀತ—. **Xánthate** (ಸ್ಯಾಂತೇಟ್) ಸ್ಯಾಂತಿಕ್ ಆಮ್ಲದ ಲವಣ. **Xánthein(e)** (ಸ್ಯಾಂತಿಇನ್) ಹೂವುಗಳಲ್ಲಿರುವ ಹಳದಿ ವರ್ಣದ್ರವ್ಯದ ಕರಗುವ ಭಾಗ : ಲೀನ ಪೀತ. **Xánthic** (ಸ್ಯಾಂತಿಕ್) ಹಳದಿ ಛಾಯೆಯ [X. acid (ಎತಿಲ್ ಡೈಸಲ್ಫೊ ಕಾರ್ಬಾನಿಕ್ ಆ್ಯಸಿಡ್) : ಸ್ಯಾಂತಿಕ್ ಆಮ್ಲ (ಅದರ ಲವಣಗಳು ಹಳದಿ ಬಣ್ಣವಿರುವ ಕಾರಣದಿಂದ). X. flowers ಹಳದಿ ಹೂವುಗಳು]. **Xánthin** (ಸ್ಯಾಂತಿನ್) ಹೂವಿನ ಹಳದಿ ವರ್ಣದ್ರವ್ಯದ ಕರಗದ ಭಾಗ : ಅಲೀನ ಪೀತ ; ಮ್ಯಾಡರ್ ಬಳ್ಳಿಯ ಪೀತದ್ರವ್ಯ ; ರಕ್ತ, ಮೂತ್ರ, ಪಿತ್ತಕೋಶ, ಮೊ. ಗಳಲ್ಲಿರುವ, ಮೂತ್ರಾಮ್ಲಕ್ಕೆ ಸಂಬಂಧಪಟ್ಟ ಒಂದು ವಸ್ತು : ಸ್ಯಾಂತಿನ್. **Xanthóchroi** (ಸ್ಯಾಂತಾಕ್ರೊಇ, —ತೋಕ್ರಾಯ್) (ಬ. ವ.) (ಮಾನವಕುಲ ಶಾಸ್ತ್ರ) ನಸು ಹೊಂಬಣ್ಣದ ಕೂದಲಿನವರು, ಅಂದವಾದ ಮೈಬಣ್ಣದವರು (Melanochroi ಪದದೊಡನೆ ಹೋಲಿಸಿ). **-chróic** (ಗು.) ; **-chroous** (ಗು.) ; **Xanthomélanous** (ಸ್ಯಾಂತಾಮೆಲನಸ್) (ಮಾನವಕುಲ ಶಾಸ್ತ್ರ) ಕಪ್ಪು ಕೂದಲೂ ಹಳದಿ ಅಥವಾ ಕಂದು ಚರ್ಮವೂ ಉಳ್ಳ. **Xánthophyll** (ಸ್ಯಾಂತೊಫಿಲ್) (ಶರತ್ಕಾಲದ ಎಲೆಗಳಲ್ಲಿಯ) ಪೀತದ್ರವ್ಯ; ಹಣ್ಣೆಲೆ ಹಳದಿ, ಪತ್ರಪೀತ (Chlorophyll ಪದದೊಡನೆ ಹೋಲಿಸಿ). **Xánthous** (ಸ್ಯಾಂತಸ್) (ಮಾನವಕುಲ ಶಾಸ್ತ್ರ) ಹಳದಿಗೂದಲಿನ (ಮತ್ತು ತೆಳು ಬಿಳುಪಿನ ಮೈಬಣ್ಣದ) ; ಪೀತವರ್ಣಿ ; ಮಂಗೋಲಿಯದ ಬುಡಕಟ್ಟಿನ.

Xébec ಸೀಬೆಕ್ (ನಾ.) (ಮೆಡಿಟರೇನಿಯನ್ ಸಮುದ್ರದಲ್ಲಿ ಸಂಚರಿಸುವ) ಒಂದು ಬಗೆಯ ಮುಕ್ಕೂವೆಯ ಹಡಗು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Xenelásia ಜ಼ೆ(ಗ್ಸೆ)ನಿಲೇ(ಲ್ಯಾ)ಸಿ(ಷಿ)ಯ (ನಾ.) (ಸ್ಪಾರ್ಟಾ ರಾಜ್ಯದವರು ಮಾಡುತ್ತಿದ್ದ) ವಿದೇಶೀಯರ—ಗಡೀಪಾರು, ಬಹಿಷ್ಕಾರ.

Xen(o)- ಜ಼ೆ(ಗ್ಸೆ)ನ್(ಒ)— (ಸ. ಪೂ. ಪ.) ಅನ್ಯ—, ಪರ(ಕೀಯ)—, ಅತಿಥಿ—. **Xénial** ಅತಿಥ್ಯದ, ಅತಿಥಿ ಸತ್ಕಾರದ. **Xenógamy** (ಸ. ವಿ.) ಮಿಶ್ರ(ಜಾತಿ) ಗರ್ಭಾಧಾನ. **Xénolith** (ಭೂ. ವಿ.) ತನ್ನಿಂದ ಭಿನ್ನವಾದ ಶಿಲಾಸಮುದಾಯದಲ್ಲಿ ಸೇರಿಕೊಂಡಿರುವ ಕಲ್ಲು, ಬಂಡೆ : ಅನ್ಯಶಿಲೆ. **Xenophóbia** ಅನ್ಯರ, ಪರಕೀಯರ,— ದ್ವೇಷ.

Xénon ಜ಼ೆನಾನ್ (ನಾ.) (ರ. ವಿ.) ಒರ್ಲಲರಲ್ಲಿ ಕಂಡುಹಿಡಿದ ಭಾರವೂ ಜಡವೂ ಆದ ಒಂದು ಅನಿಲ : ಜ಼ೆನಾನ್.

Xer(o)- ಜ಼ಿಯರ್(ಒ)— (ಸ. ಪೂ. ಪ.) ಒಣ—, ಶುಷ್ಕ—. **Xeránsis** ಒಣಗಿಹೋಗುವುದು, ಶೋಷಣ. **Xeránthemum** (ಸ. ವಿ.) ಹಲವು ಬಗೆಯ ಸಂಕೀರ್ಣ ಪುಷ್ಪಿ ಸಸ್ಯ. **Xeróphilous** (ಸ. ವಿ.) ಉಷ್ಣ ದೇಶಕ್ಕೆ—ಹೊಂದಿಕೊಂಡ, ಒಗ್ಗಿದ. **Xerophthálmia** (ಪಿಸರು ಇಲ್ಲದ) ಒಣ ಕಣ್ಣುನೋವು ; ಕಾವುಗಣ್ಣು.

Xi ಕ್ಸೈ (ನಾ.) ಗ್ರೀಕ್ ವರ್ಣಮಾಲೆಯ ಒಂದು ಅಕ್ಷರ (Ξ, ξ) (ಉಚ್ಚಾರಣೆ : ಕ್ಸ್)

Xiph- ಜ಼ಿಫ್—, **Xiphi-** ಜ಼ಿಫಿ—, **Xipho-** ಜ಼ಿಫೊ— (ಸ. ಪೂ. ಪ.) ಕತ್ತಿ—, ಖಡ್ಗ—. **Xíphoid** (ಗು., ನಾ.) ಖಡ್ಗಾಕಾರದ [X. appendage, cartilege *or* process ಎದೆಮೂಳೆಯ ಕೆಳತುದಿ (=**Xíphoid** ನಾ.)]. **Xiphistérnum**=Xiphoid appendage.

Xóanon ಜ಼ೋ(ಗ್ಸೋ)ಅನಾನ್ (ನಾ. ; ಬ. ವ. Xoana) (ಸ್ವರ್ಗದಿಂದ ಕೆಳಕ್ಕೆ ಬಿದ್ದದ್ದೆಂದು ಭಾವಿಸಿದ್ದ) ಆದಿ ಕಾಲದ, ಸಾ., ಮರದ ವಿಗ್ರಹ, ಪ್ರತಿಮೆ : (ದೇವ—) ವಿಗ್ರಹ, ಪ್ರತಿಮೆ.

Xýlem ಜ಼ೈಲೆಮ್ (ನಾ.) (ಸ. ವಿ.) ದಾರು (ಅಂಗಾಂಶ) (ಎದುರು ಪದ : Phloem)

Xyl(o)- ಜ಼ೈ(ಗ್ಸೈ)ಲ್(ಒ) (ಸ. ಪೂ. ಪ.) ದಾರು—, ಮರ—. **Xylobálsamum** ಒಂದು ಬಗೆಯ ಗುಗ್ಗುಲ ಮರದ ಒಣರೆಂಬೆಗಳು (ಹಾಕಿ ಮಾಡಿದ ಕಷಾಯ). **Xýlocarp** ದಾರುವಿನಂಥ ಗಟ್ಟಿಯಾದ ಹಣ್ಣು (ಬಿಡುವ ಮರ) : ದಾರು ಫಲ(ವೃಕ್ಷ). **-cárpous** (ಗು.) ; **Xýlograph** (ಗು.) (ಮು., ೧೫ನೆಯ ಶ. ಮಾ. ದ) ದಾರು, ಮರದ,—ಕೆತ್ತನೆ; ಮರದ ಎಳೆಗಳನ್ನು ಕೃತಕವಾಗಿ ರೂಪಿಸಿದ ಅಲಂಕಾರ ಮಾದರಿ : ದಾರು ಚಿತ್ರಣ. **-ógraphy** (ನಾ.); **-ógrapher** (ನಾ.); **-gráphic** (ಗು.) ; **Xýlonite**=celluloid (ನಾ.) (ಆ ಪದ ನೋಡಿ). **Xylóphagous** (ಹುಳುಗಳ ವಿಷಯದಲ್ಲಿ) ದಾರು—ತಿನ್ನುವ, ಭಕ್ಷಿ. **Xýlophone** ಉದ್ದದಲ್ಲಿ ಕ್ರಮಿಕ ವ್ಯತ್ಯಾಸವಿರುವ ಮರದ ಪಟ್ಟಿಗಳನ್ನು ಜೋಡಿಸಿ, ಬಡಿದು ಅಥವಾ ಸವರಿ ನುಡಿಸುವ ಒಂದು ಬಗೆಯ ವಾದ್ಯ : ದಾರು ವಾದ್ಯ ; ಕಾಷ್ಠತರಂಗ್.

Xýster ಜ಼ಿಸ್ಟರ್ (ನಾ.) (ಶಸ್ತ್ರವೈದ್ಯ) ಮೂಳೆ ಹೆರೆಯುವ ಆಯುಧ : ಮೂಳೆ—ಹೆತ್ತರಿ, ಹೆರಕ.

Xýstus ಜ಼ಿ(ಗ್ಸಿ)ಸ್ಟಸ್ (ನಾ. ; ಬ. ವ. -sti —ಸ್ಟೈ) (ಪುರಾತನ ಗ್ರೀಸಿನಲ್ಲಿ ವ್ಯಾಯಾಮಗಾರರು ಸಾಧನೆಮಾಡುತ್ತಿದ್ದ) ಚಾವಣಿಯ ಮುಖಮಂಟಪ; (ಪುರಾತನ ರೋಮಿನಲ್ಲಿ) ತೋಟದ ತಿರುಗು ದಾರಿ, ಉಪವನ ಪಥ.

Y

ವೈ. ಇಂಗ್ಲಿಷ್ ವರ್ಣಮಾಲೆಯ ಇಪ್ಪತ್ತೈದನೆಯ ಅಕ್ಷರ ; (ಬೀ. ಗ.) ಎರಡನೆಯ ಅಜ್ಞಾತದ ಸಂಕೇತ (y) ; (ರೇಖೆಗಳು, ನಳಿಕೆಗಳು, ರಸ್ತೆಗಳು, ಮೊ. ಗಳ) Y ಆಕಾರದ ರಚನೆ, ಜೋಡಣೆ (Y-branch, -cartilege, -joint, -ligament ; Y-cross=Y ಆಕಾರದ ಶಿಲುಬೆ. Y.-level=Y ಕಾಲುಗಳಮೇಲೆ ಕೂರಿಸಿದ ರಸಮಟ್ಟ. Y-moth ರೆಕ್ಕೆಗಳ ಮೇಲೆ Y ಗುರುತುಗಳುಳ್ಳ ಚಿಟ್ಟೆ. Y-track ಎಂಜಿನನ್ನು ಹಿಂದು ಮುಂದು ಮಾಡಲು ಅನುಕೂಲನುವಂತೆ ಪ್ರಧಾನ ಮಾರ್ಗಕ್ಕೆ ಲಂಬದಲ್ಲಿ ಜೋಡಿಸಿರುವ Y ಆಕಾರದ ಕವಲುಗಂಬಿ ದಾರಿ : Y ಕಂಬಿದಾರಿ)

ಸಂಕ್ಷಿಪ್ತಗಳು : **Y**=Young (**Y.M.C.A.**=Young Men's Christian Association. **Y.W.C.A.**=Young Women's Christian Association)

Yd=Yard (ಗಜ). **Ye** (ಉಚ್ಚಾರ : ದಿ)=The. **Yorks.**=Yorkshire. **Yt** (ಉಚ್ಚಾರ : ದಟ್)=That.

Yacht ಯಾಟ್ (ನಾ., ಕ್ರಿ. ಅಕ.) ಪಂದ್ಯದ ವೇಗದ ಹಗುರ ಹಡಗು, ದೋಣಿ ; ಓಡು ದೋಣಿ ; (ಹುಟ್ಟುಗಳಿಂದಲ್ಲದೆ ಹಾಯಿ, ಆವಿ, ವಿದ್ಯುಚ್ಛಕ್ತಿ, ಮೊ. ಚಾಲಕಗಳಿಂದ ನಡೆಯುವ) ಕ್ರೀಡಾ, ವಿಹಾರ,—ನೌಕೆ, ದೋಣಿ ; [Y.-club (ಮು.) ನೌಕಾ ಪಂದ್ಯ ಸಂಘ]. (ಕ್ರಿ.) ನೌಕಾ ಪಂದ್ಯವಾಡು ; ಕ್ರೀಡಾ, ವಿಹಾರ,— ನೌಕೆಯಲ್ಲಿ ವಿಹರಿಸು. **Yáchting** (ನಾ.) ; **Yáchtsman** (ನಾ.) ನೌಕಾ—ವಿಹಾರಿ, ಪಂದ್ಯದವನು.

Yáffle ಯ್ಯಾಫ಼ಲ್, **Yáffil** ಯ್ಯಾಫಿಲ್ (ನಾ.) ಹಸುರು ಮರಕುಟಿಗ (ಹಕ್ಕಿ)

Yah ಯಾ (ಭಾವ. ಅವ್ಯ.) (ತಿರಸ್ಕಾರ ಸೂಚಕ ಪದ) : ಥೂ, ಥುತ್.

Yahoó ಯಾಹೂ (ನಾ.) ಮನುಷ್ಯ (ರೂಪಿನ) ಮೃಗ ; (ರೂಪ.) ಪಶುವಿನಂತೆ ಕಾಮೋದ್ರೇಕ ಮತ್ತು ಒರಟು ಸ್ವಭಾವಗಳನ್ನುಳ್ಳ ಮನುಷ್ಯ : ಮೃಗಪ್ರಾಯ ವ್ಯಕ್ತಿ (Swift ಎಂಬುವನ 'Gulliver's Travels' ಎಂಬ ಗ್ರಂಥದಲ್ಲಿಯ ಒಂದು ಕಾಲ್ಪನಿಕ ಮೃಗವ್ಯಕ್ತಿಗಳ ಜಾತಿನಾಮದಿಂದ)

Yahvéh ಯಾವೆ (ನಾ.), **Yáhvist** (ಗು.), **Yahvístic** (ಗು.) =Jehova, Jehovist(ic) (ಆ ಪದಗಳನ್ನು ನೋಡಿ)

Yak ಯ್ಯಾಕ್, ಯಾಕ್ (ನಾ.) ಟಿಬೆಟ್ಟಿನ, ರೇಷ್ಮೆಯಂಥ ಉದ್ದ ಕೂದಲಿನ ಹಿಳಿಲುಳ್ಳ, ಗುಟುರುಹಾಕುವ, ಕಾಡು ಅಥವಾ ಸಾಕು ಎತ್ತು : ಚೌರಿ, ಚಮರೀ,—ಮೃಗ. Y.-lace ಚಮರೀ (ಕರೆ)ಪಟ್ಟಿ.

Yále lock ಯೇಲ್ ಲಾಕ್ (ನಾ.) ಉರುಳೆಯಾಕಾರದ ಒಂದು ಬೀಗ (ನಿರ್ಮಾಪಕನ ಹೆಸರಿನಿಂದ)

Yam ಯ್ಯಾಂ (ನಾ.) ಉಷ್ಣದೇಶಗಳಲ್ಲಿ ಬೆಳೆಯುವ, ಹಲವು ಬಗೆಯ ಹಬ್ಬು ಸಸ್ಯ(ದ ಗೆಡ್ಡೆ) : ಮುಳ್ಳು, ಮುಡಿ,—ಗೆಣಸು(ಗೆಡ್ಡೆ) ; (ಸ್ಕಾಟ್ಲೆಂಡಿನಲ್ಲಿ) ಆಲೂಗೆಡ್ಡೆ.

Yank[1] ಯ್ಯಾಂಕ್ (ಕ್ರಿ., ನಾ.) (ಅಮೆ. ಸಂ., ಅಸಂ.) ಥಟ್ಟನೆ ಜಗ್ಗಿಸಿ ಎಳೆ. (ನಾ.) ಥಟ್ಟನೆಯ ಜಗ್ಗೆಳೆತ.

Yank[2] ಯ್ಯಾಂಕ್ (ನಾ.) (ಅಸಂ.)=Yankee (ಎಂಬುದರ ಸಂಕ್ಷಿಪ್ತ)

Yánkee ಯ್ಯಾಂಕೀ (ನಾ.) ಅಮೆರಿಕದ ನ್ಯೂ ಇಂಗ್ಲೆಂಡಿನ ನಿವಾಸಿ ; ಯಾಂಕಿ ; (ಅಮೆರಿಕದ ಒಳ ಯುದ್ಧ ಕಾಲದಲ್ಲಿ) ಅಮೆರಿಕದ ಉತ್ತರ ಸಂಸ್ಥಾನಗಳ ನಿವಾಸಿ ಅಥವಾ ಸೈನಿಕ ; ಯಾಂಕಿ ಸೈನಿಕ ; (ಯೂರೋಪಿನವರ ಬಳಕೆಯಲ್ಲಿ) ಸಂಯುಕ್ತ ಸಂಸ್ಥಾನದವನು, ಅಮೆರಿಕದವನು ; (ವಿಶೇಷಣ ಪ್ರ.) ಯಾಂಕಿಗಳ(ಂಥ) [Y. notions ಅಮೆರಿಕದ ಚಿಲ್ಲರೆ ಸಾಮಾನು. Y. Doodle (ಅವರ ರಾಷ್ಟ್ರೀಯ ಮಟ್ಟು ಎಂದು ಪರಿಗಣಿತವಾಗಿರುವ) ಅಮೆರಿಕನರ—ರಾಗ, ಹಾಡು]. **Yánkeedom** (ನಾ.) ಯಾಂಕಿಗಳು ; ಯಾಂಕಿ—ಗುಣ, ಸ್ವಭಾವ ; ಯಾಂಕಿತ್ವ. **Yánkeefied** (ಗು.) ಯಾಂಕಿ—ಆಗಿಹೋದ, ಆಗಿಸಿದ. **Yánkeeism** (ನಾ.) ಯಾಂಕಿತ್ವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Yap ಯ್ಯಾಪ್ (ಕ್ರಿ. ಅಕ., ನಾ.) ಕೀರಲು ದನಿಯಲ್ಲಿ, ಗಲಭೆಮಾಡುತ್ತ, —ಬಗುಳು(ವುದು) ; ಕೀರಲು ಬಗುಳು ; (ಬಳ. ಮಾ.) ಬಗುಳು (ರೂಪ.)

Yapp ಯಾಪ್ (ನಾ.) ಬಳುಕು ತೊಗಲ ರಟ್ಟು ಹೆಚ್ಚಾಗಿ ಚಾಚಿರುವ ಒಂದು ರಟ್ಟು ಕಟ್ಟು (ನಿರ್ಮಾಪಕನ ಹೆಸರಿನಿಂದ)

Yárborough ಯಾರ್‌ಬರ(ರೊ) (ನಾ.) (ವ್ಹಿಸ್ಟ್ ಅಥವಾ ಬ್ರಿಡ್ಜ್ ಆಟದಲ್ಲಿ) ಒಂಬತ್ತನೆಯ ಬಂದಿಗಿಂತ ಮೇಲ್ಪಟ್ಟು ಎಲೆಯಿಲ್ಲದ ಕೈ.

Yard[1] ಯಾರ್ಡ್ (ನಾ.) ಗಜ (೩ ಅಡಿ) (ಸಂಕ್ಷಿಪ್ತ: yd. ; 5 yards of cloth ೫ ಗಜ ಬಟ್ಟೆ) ; ಹಾಯಿಗೆ ಆಸರೆಯಾಗಿ ಕೂಪಗೆ ಅಡ್ಡಲಾಗಿಯೋ ಓರೆಯಾಗಿಯೋ ತೂಗಹಾಕಿರುವ, ಎರಡು ಕೊನೆಗಳ ಕಡೆಯೂ ಚೂಪಾಗಿರುವ, ಉರುಳೆಯಾಕಾರದ ದಿಮ್ಮಿ: ಪಟದ, ಹಾಯಿ, —ಮರ, ದಿಮ್ಮಿ [Square y. ಪಟದ ಅಡ್ಡದಿಮ್ಮಿ. Lateen y. ಪಟದ ಓರೆದಿಮ್ಮಿ. Lower, topsail, topgallant, royal, y. ಕೆಳ, ನೆತ್ತಿ, ತುದಿನೆತ್ತಿ, ತುತ್ತತುದಿಯ, —ಹಾಯಿ ದಿಮ್ಮಿ. Man the yards (ಕಲಾಸಿಗಳು, ಮೊ. ರು) (ವಂದನಾರ್ಥವಾಗಿ) ಹಾಯಿ ದಿಮ್ಮಿಗಳ ಉದ್ದಕ್ಕೂ ನಿಲ್ಲು, ನಿಲ್ಲಿಸು] ; **Y.-arm** ಹಾಯಿ ದಿಮ್ಮಿಯ—ತುದಿ, ತೋಳು. **Y. measure** ಗಜ—ಕಡ್ಡಿ, ಪಟ್ಟಿ. **Y.-stick, -wand** ಗಜಕಡ್ಡಿ.

Yard[2] ಯಾರ್ಡ್ (ನಾ., ಕ್ರಿ. ಸಕ.) ಸುತ್ತುಗಟ್ಟುಳ್ಳ, ಆವರಣವುಳ್ಳ, —ಪ್ರದೇಶ (ಮು., ಕಟ್ಟಡಗಳಿಂದ ಸುತ್ತುವರಿದದ್ದು ಅಥವಾ ಕಟ್ಟಡಕ್ಕೆ ಸೇರಿದ್ದು): ಅಂಗಳ, ಅಂಗಣ, ಪ್ರಾಂಗಣ [Church, Court, Farm, Rick[1], Timber, Vine, -y. (ಆಯಾ ಪದ ನೋಡಿ). Brick-y. ಇಟ್ಟಿಗೆಯಂಗಳ. Cab-y. ಕ್ಯಾಬ್ ಗಾಡಿಯ ಅಂಗಳ. Dock-y. ಹಡಗುಕಟ್ಟೆಯ ಅಂಗಳ. Railway-y. (ರೈಲುಬಂಡಿಗಳನ್ನು ಇಟ್ಟಿರುವ, ಅವನ್ನು ಪಂಕ್ತಿಯಾಗಿ ಕೂಡಿಸುವ) ರೈಲ್ವೆಯಂಗಳ. Stock-y. ದನಕರುಗಳ ಅಂಗಳ ; ದನದ—ಅಂಗಳ, ಹಟ್ಟಿ. Tan-y. ಚರ್ಮ ಹದಮಾಡುವ ಅಂಗಳ. Y.-man, master ರೈಲ್ವೆ ಅಂಗಳದ—ಕೆಲಸಗಾರ, ಮೇಲ್ವಿಚಾರಕ]. (ಕ್ರಿ.) (ದನಕರುಗಳನ್ನು) ಅಂಗಳದಲ್ಲಿ ಕೂಡು, ಅಂಗಳಕ್ಕೆ ಸೇರಿಸು. **Yárdage** (ನಾ.) ಅಂಗಳದ—ಉಪಯೋಗ, ಬಾಡಿಗೆ.

Yarn ಯಾರ್ನ್ (ನಾ., ಕ್ರಿ. ಅಕ.) (ನೆಯ್ಗೆ, ಹೆಣಿಗೆ, ಹಗ್ಗ, ಮೊ. ಕ್ಕಾಗಿ ನೂತ) ನೂಲು, ಹುರಿ (Y.-beam, roll ನೆಯ್ಯುವುದಕ್ಕಾಗಿ ಹಾಸೆಳೆಗಳನ್ನು ಸುತ್ತಿರುವ ಮರ, ಉರುಳೆ : ಹಾಸು—ಮರ, ಉರುಳೆ); (ಬಳ. ಮಾ., ಮು., ನಾವೆ) (ಕಟ್ಟು, ದಂತ,—) ಕಥೆ ; ಪ್ರಸಂಗ, ಹರಟೆ, ಕಟ್ಟೆ ಪುರಾಣ (Spin a y., yarns). (ಕ್ರಿ.) ಕಥೆ ಹೆಣೆ, ಕಟ್ಟೆ ಪುರಾಣ ಹೇಳು.

Yárrow ಯ್ಯಾರೋ (ನಾ.) ಕಟು ವಾಸನೆಯ ಮತ್ತು ಒಗರು ರುಚಿಯ ಒಂದು ಸಸ್ಯ.

Yáshmak ಯ್ಯಾಷ್‌ಮ್ಯಾಕ್ (ನಾ.) (ಮುಸ್ಲಿಂ ಹೆಂಗಸರ) ಮುಖ ಪರದೆ, ಬುರುಕಿ.

Yátaghan ಯ್ಯಾಟಗ್ಯಾನ್ (ನಾ.) (ಕಾಪು ಅಥವಾ ಅಡ್ಡಪಟ್ಟಿಯಿಲ್ಲದ, ಮುಸ್ಲಿಮರು ಉಪಯೋಗಿಸುವ) ಒಂದು ಬಗೆಯ ಕತ್ತಿ.

Yaw ಯಾ (ಕ್ರಿ. ಅಕ., ನಾ.) (ಹಡಗಿನ ವಿಷಯದಲ್ಲಿ) ನೇರವಾಗಿ, ಸ್ತಿಮಿತವಾಗಿ, —ಹೋಗದಿರು ; ದಾರಿಬಿಟ್ಟು ಹೋಗು, ವಿಚಲಿಸು. (ನಾ.) ದಾರಿಬಿಟ್ಟು ಹೋಗುವುದು, ವಿಚಲನೆ.

Yawl[1] ಯಾಲ್ (ಕ್ರಿ. ಅಕ., ನಾ.) (ವಿವ. ಪ್ರ.) ಅರಚಿಕೊ, ಬೊಬ್ಬೆಯಿಡು, ಹುಯ್ಯಲಿಡು. (ನಾ.) ಅರಚು, ಹುಯ್ಯಲು, ಬೊಬ್ಬೆ.

Yawl[2] ಯಾಲ್ (ನಾ.) ಹಲವು ಬಗೆಯ ಸಣ್ಣ ದೋಣಿ (ಮು., ಹಡಗಿನ ನಾಲ್ಕು ಅಥವಾ ಆರು ಹುಟ್ಟುಗಳ ಸಣ್ಣ ದೋಣಿ) ; ಒಂದು ಬಗೆಯ ಇಕ್ಕೂವೆಯ ದೋಣಿ.

Yawn ಯಾನ್ (ಕ್ರಿ., ನಾ.) (ಬಿರುಕು, ಮೊ. ಗಳ ವಿಷಯದಲ್ಲಿ) ಅಗಲವಾಗಿ ಬಿಚ್ಚಿಕೊಂಡಿರು, ಬಾಯಿ ಬಿಚ್ಚಿಕೊಂಡಿರು (A yawning gulf. Hell yawns for him ಅವನಿಗಾಗಿ ನರಕ ಬಾಯಿ ತೆರೆದುಕೊಂಡಿದೆ) ; (ಮನುಷ್ಯನ ಅಥವಾ ಪ್ರಾಣಿಯ ವಿಷಯದಲ್ಲಿ) ಆಕಳಿಸು ; ಆಕಳಿಸಿಕೊಂಡು, ಆಕಳಿಸುತ್ತ,—ಹೇಳು (Yawned goodnight). (ನಾ.) ಆಕಳಿಕೆ. **Yáwningly** (ಕ್ರಿ. ವಿ.)

Yclépt ಇಕ್ಲೆಪ್ಟ್ (ಗು.) (ಪ್ರಾಚೀ. ಪ್ರ., ಹಾಸ್ಯ ಪ್ರ.) (—ಎಂದು) ಕರೆಯುವ, ಹೆಸರುಳ್ಳ (The sweet wood y. sassafras)

Ye ಯಿ(ೕ) (ಸ. ನಾ. ; ಮಧ್ಯಮ ಪುರುಷ ಬ. ವ.) (ಕಾವ್ಯ, ಪ್ರಾಚೀ. ಪ್ರ., ಧಾರ್ಮಿಕ ಪ್ರ., ಹಾಸ್ಯ ಪ್ರ. ಅಥವಾ ಬಳ. ಮಾ.) ನೀವು, ತಾವು (Ye gods ! ; Go it, ye cripples. How d'ye do ? ಕ್ಷೇಮವಾಗಿದ್ದೀರಾ ?)

Yea ಯೇ (ನಾ. ; ಪ್ರಾಚೀ. ಪ್ರ., ಬ. ವ. Yeas) ಹೌದು [Let your communication be y., y., nay, nay (ಪ್ರಮಾಣದ ಮಾತುಗಳನ್ನು ಬೆಳಸದೆ) ಹೌದನ್ನು (ಅಥವಾ) ಇಲ್ಲವೆನ್ನು. Yeas & nays (ಪ್ರಾಚೀ. ಪ್ರ.) ಹೌದು ಇಲ್ಲಗಳು ; ಬೇಕು ಬೇಡಗಳು] ; ನಿಜವಾಗಿ ? ಹಾಗೆಯೆ ? ಇಲ್ಲ (Y., is it come to this ? Ready, y. eager ಸಿದ್ಧವಾಗಿದ್ದೇನೆ, ಇಲ್ಲ ಆತುರವಾಗಿದ್ದೇನೆ)

Yean ಯೀನ್ (ಕ್ರಿ.) (ಕುರಿಯ ಅಥವಾ ಆಡಿನ ವಿಷಯದಲ್ಲಿ) ಈನು, ಮರಿ ಹಾಕು. **Yeánling** (ನಾ.) ಕುರಿ ಮರಿ, ಆಡಿನ ಮರಿ.

Year ಯಿಯರ್ (ನಾ.) ವರ್ಷ, (ಸಂ)ವತ್ಸರ, ಅಬ್ದ. [Astronomical, equinoctial, natural, solar, tropical, y. (ಭೂಮಿ ಸೂರ್ಯನ ಸುತ್ತಲೂ ಒಂದು ಸಲ ಸುತ್ತಿ ಬರಲು ಹಿಡಿಯುವ, ೩೬೫ ದಿನ ೫ ಘಂಟೆ ೪೮ ನಿಮಿಷ ೪೬ ಸೆಕಂಡುಗಳ) ಸೌರ ವರ್ಷ. Astral *or* sidereal y. (Sidereal ನೋಡಿ). Platonic *or* Great *or* Perfect y. (Platonic ನೋಡಿ). Common y. (೩೬೫ ದಿನಗಳ) ಸಾಮಾನ್ಯ ವರ್ಷ. Leap-y. *or* bissextile y. (೩೬೬ ದಿನಗಳ) ಅಧಿಕ ದಿನದ ವರ್ಷ. Calendar, civil, legal, y. (ಜನವರಿ ಒಂದರಿಂದ ಡಿಸೆಂಬರ್ ಮೂವತ್ತೊಂದರವರೆಗಿನ) ವ್ಯಾವಹಾರಿಕ ವರ್ಷ. Lunar y. (೧೨ ಚಾಂದ್ರಮಾಸಗಳ) ಚಾಂದ್ರಮಾನ ವರ್ಷ. Lunisolar, New, Old, y. (ಆಯಾ ಪದ ನೋಡಿ). Gregorian, Julian, y. ಗ್ರಿಗೊರಿ, ಜೂಲಿಯಸ್ ಸೀಸರ್,—(ಪ್ರಚಾರಕ್ಕೆ ತಂದ ಪಂಚಾಂಗದ ಪ್ರಕಾರದ) ವರ್ಷ. Sabbatical y. (Sabbath ಕೆಳಗೆ Sabbatical ನೋಡಿ). Y. of grace (Grace ನೋಡಿ). Y. of our Lord ಕ್ರಿಸ್ತ ಶಕದಲ್ಲಿ. In the y. 1 ಕ್ರಿ. ಶ. ೧ನೆಯ ವರ್ಷದಲ್ಲಿ ; (ರೂಪ.) ಒಂದಾನೊಂದು ಕಾಲದಲ್ಲಿ, ಬಹು ಕಾಲದ ಹಿಂದೆ. From y. to y., Y. by y. ವರ್ಷ ವರ್ಷಕ್ಕೆ, ವರ್ಷಗಳು ಕಳೆದಂತೆಲ್ಲ, ಪ್ರತಿ ವರ್ಷ(ವೂ). Y. in y. out ವರ್ಷವೆಲ್ಲ, ವರ್ಷ ಪೂರ್ತಿ, ಸದಾ ಕಾಲ. Christian, Church, ecclesiastical, y. (ಯೇಸು ಕ್ರಿಸ್ತನ ಜನ್ಮೋತ್ಸವ ಕಾಲದಿಂದ ಗಣಿಸುವ) ಕ್ರೈಸ್ತ ವರ್ಷ. The fiscal y. (ಇಂಗ್ಲೆಂಡಿನಲ್ಲಿ ತೆರಿಗೆ ಹಾಕುವುದಕ್ಕೆ ಸಂಬಂಧಪಟ್ಟಂತೆ) ಏಪ್ರಿಲ್‌ನಿಂದ ಆರಂಭವಾಗುವ ವರ್ಷ : ಹಣಕಾಸಿನ ವರ್ಷ. The school y. (ಪಾಠಶಾಲೆಯ ಪಾಠಗಳು ಆರಂಭವಾಗಿ ಮುಗಿಯುವ) ಶಾಲಾ ವರ್ಷ. A y. & a day (ಕೆಲವು ಕಾನೂನು ವ್ಯವಹಾರಗಳಲ್ಲಿ ನಿಗದಿಮಾಡುವ) ಒಂದು ವರ್ಷ ಒಂದು ದಿನ] ; (ಬ. ವ. ದಲ್ಲಿ) ವಯಸ್ಸು (Young for his years ವಯಸ್ಸಾಗಿದ್ದರೂ, ಆಗಿರುವ ವಯಸ್ಸಿಗೆ,— ಯುವಕನಂತೆಯೆ ಕಾಣುತ್ತಾನೆ. In years ಮುಪ್ಪಿನಲ್ಲಿ, ವಯಸ್ಸಿನಲ್ಲಿ). **Y.-book** (ಒಂದು ವಿಷಯವಾಗಿ ಇತ್ತೀಚಿನ ಸಂಗತಿಗಳನ್ನೆಲ್ಲ ಒಳಗೊಂಡ) ವಾರ್ಷಿಕ ಪುಸ್ತಕ. **Yeárling** (ನಾ., ಗು. ವರ್ಷಪ್ರಾಯದ (ಪ್ರಾಣಿ) ; ಒಂದು ವರ್ಷದ [Y. heifer. Y. bride (ಮದುವೆ ನಿಶ್ಚಯವಾದ ಬಳಿಕ) ಒಂದು ವರ್ಷ ವಧೂದಸೆಯಲ್ಲಿದ್ದವಳು].

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Yeárlong (ಗು.) ಒಂದು ವರ್ಷ ಬಾಳುವ; ವರ್ಷಗಟ್ಟಳೆಯ. **Yeárly** (ಗು., ಕ್ರಿ. ವಿ.) ವರ್ಷಕ್ಕೊಮ್ಮೆ (ನಡೆಯುವ), ವರ್ಷಂ ಪ್ರತಿಯ, ವಾರ್ಷಿಕ(ವಾಗಿ)

Yearn ಯರ್ನ್ (ಕ್ರಿ. ಅಕ.; ಕ್ರಿ. ಸಕ., ಪ್ರಾಚೀ. ಪ್ರ.) ಹಂಬಲಿಸು, ಹಾತೊರೆ, ಗೀಳಾಗಿರು, ಮರುಗು (For *or* after rest, home, affection, etc.; *to* do; *towards* or *to* person, etc.). It yearns me (ಪ್ರಾಚೀ. ಪ್ರ.) ನಾನು ಹಾತೊರೆಯುತ್ತಿದ್ದೇನೆ; ನನಗೆ ಅದೇ ಹಂಬಲಾಗಿದೆ. **Yeárning** (ನಾ., ಗು.); **Yeárningly** (ಕ್ರಿ. ವಿ.)

Yeast ಯೀಸ್ಟ್ (ನಾ.) ಬಿಯರ್ ತಯಾರಿಕೆ, ಮದ್ಯಮಾಡುವುದು, ಮದ್ಯಸಾರವನ್ನು ಬಟ್ಟಿಯಿಳಿಸುವುದು, ರೊಟ್ಟಿಯನ್ನು ಉಬ್ಬಿಸುವುದು, ಮೊ. ಗಳಲ್ಲಿ ಉಪಯೋಗಿಸುವ, ಶರ್ಕರ ದ್ರವಗಳೊಡನೆ ಸೇರಿ ಉತ್ಪತ್ತಿಯಾಗುವ, ಅಣಬೆಯಂಥ ಜೀವಕಣಗಳುಳ್ಳ, ಹಳದಿ ಛಾಯೆಯ, ನೊರೆನೊರೆಯಾದ, ಜಿಗುಟು ಪದಾರ್ಥ: ಮುಂಡ, ಕಿಣ್ವ, ಹುದುಗು. Y.-powder (ರೊಟ್ಟಿಗೆ ಉಪಯೋಗಿಸುವ) ಹುದುಗು ಪುಡಿ. **Yeásty** (ಗು.) (ಮಂಡದಂತೆ) ನೊರೆಗೂಡಿದ, ನೊರೆನೊರೆಯಾದ (Y. waves); ಉಕ್ಕೇರುವ, ಕಲಕಿದ, ಉದ್ರೇಕದ (A y. conscience, imagination, turmoil); ಶಬ್ದ ಬುದ್ಬುದದ, ಬರಿ ನೊರೆಯ, ನಿಸ್ಸಾರವಾದ (A y. fellow. Y. talk). **Yeástiness** (ನಾ.)

Yelk ಯೆಲ್ಕ್ (ನಾ.). **Yolk** ನೋಡಿ.

Yell ಯೆಲ್ (ಕ್ರಿ., ನಾ.) (ನೋವು, ಭಯ, ಕೋಪ, ಮೊ. ಗಳಿಂದ) ಕೀರು, ಚೀರು, ಅರಚು, ಒರಲು, ಬೊಬ್ಬೆಯಿಡು (Y. with fury, delight. Yelled out an oath. Yelled my name). (ನಾ.) ಚೀರಲು, ಅರಚಾಟ, ಬೊಬ್ಬೆ (With yells of horror); ನಗುವಿನ ಅಬ್ಬರ, ಹರ್ಷ ಘೋಷ, ಅಟ್ಟಹಾಸ.

Yéllow ಯೆಲೋ (ಗು., ನಾ., ಕ್ರಿ.) ಹಳದಿಯ (ಬಣ್ಣದ), ಅರಿಸಿನ ಬಣ್ಣದ, ಪೀತ (ವರ್ಣದ), ಹರಿದ್ರ (ವರ್ಣದ) [(ಸಸ್ಯಗಳ ಮತ್ತು ಪ್ರಾಣಿಗಳ ಹೆಸರುಗಳಲ್ಲಿ; ದೇಹಾಂಗಗಳ ಹಳದಿ ಬಣ್ಣದ ಕಾರಣದಿಂದ): Y. rattle, wagtail. Y.-bill, -head, -legs; -root, rump, -seed, -shanks, -tail, -throat, -top, -wood]. [**Yéllow-back** (೧೯ನೆಯ ಶ. ಮಾ. ದಲ್ಲಿ ಬಳಕೆಯಲ್ಲಿದ್ದ) ಹಳದಿ ರಟ್ಟಿನ ಅಗ್ಗದ ಕಾದಂಬರಿ; ಹಳದಿ ಹೊದಿಕೆಯ ಫ್ರೆಂಚು ಕಾದಂಬರಿ. **Y. boy** (ಅಸಂ.) ಚಿನ್ನದ ನಾಣ್ಯ. **Y. cartilege** ಅಪಧಮನಿಯ ಗೋಡೆಗಳು, ಮೊ. ಗಳ ರಚನಾ ಸಾಮಗ್ರಿಯಾದ, ಸ್ಥಿತಿಸ್ಥಾಪಕ ಗುಣವುಳ್ಳ, ಹಳದಿ ಬಣ್ಣದ, ಮೃದ್ವಸ್ಥಿ: ಪೀತ ಮೃದ್ವಸ್ಥಿ. **Y. fever** ಕಾಮಾಲೆಯೂ ಕಪ್ಪು ಬಣ್ಣದ ವಾಂತಿಯೂ ಕಾಣಿಸಿಕೊಳ್ಳುವ ಒಂದು ಉಷ್ಣದೇಶದ ಜ್ವರ: ಪೀತ ಜ್ವರ (= **Y. Jack**). **Y. gum** ಮಕ್ಕಳ ಒಂದು ಬಗೆಯ ಕಾಮಾಲೆ (ಇದರಲ್ಲಿ ಒಸಡು ಹಳದಿಯಾಗುತ್ತದೆ): ಹಳದಿ ಒಸಡು ಕಾಮಾಲೆ. **Y. leaf** ಹಣ್ಣುವಯಸ್ಸು, ಮುಪ್ಪು (= The sere, & y. leaf). **Y. men, races** ಪೀತವರ್ಣಿಗಳು (ಚೀನೀಯರು, ಜಪಾನೀಯರು, ಮಂಗೋಲರು, ಮೊ. ರು). **Y. metal** ೬೦ ಭಾಗ ತಾಮ್ರ, ೪೦ ಭಾಗ ಸತುವು ಬೆರೆದ ಹಿತ್ತಾಳೆ: ಹಳದಿ ಹಿತ್ತಾಳೆ. **The y. peril** ಪೀತವರ್ಣಿಗಳು (ಚೀನಾ ಮತ್ತು ಜಪಾನ್ ದೇಶೀಯರು) ಪ್ರಪಂಚವನ್ನೆಲ್ಲಾ ವ್ಯಾಪಿಸಿಬಿಡಬಹುದು ಎಂಬ ಭಯ: ಪೀತ ಪೀಡೆ. **The y. press** (ಅನ್ಯಾಕ್ರಮಣಶೀಲ ದೇಶ ಪ್ರೇಮದ) ಉದ್ರೇಕಕಾರಿ ವೃತ್ತಪತ್ರಿಕೆಗಳು. **Y. spot** ಅಕ್ಷಿಪಟದ ಅತ್ಯಂತ ತೀಕ್ಷ್ಣ ದೃಷ್ಟಿಯ ಬಿಂದು: ಪೀತ ಬಿಂದು]; (ರೂಪ.) (ದೃಷ್ಟಿ, ಮನೋಭಾವ, ಮೊ. ಗಳ ವಿಷಯದಲ್ಲಿ) ಮತ್ಸರದ, ಈರ್ಷ್ಯೆಯ, ಸಂಶಯಾತ್ಮಕ. (ಬಳ. ಮಾ.) ಹೇಡಿತನದ, ಪುಕ್ಕಲ. (ನಾ.) ಹಳದಿ (ಬಣ್ಣ), ಹರಿದ್ರ; ಪೀತವರ್ಣದ್ರವ್ಯ; ಹಲವು ಬಗೆಯ ಚಿಟ್ಟೆ, ಪತಂಗ; [The yellows (ಪ್ರಾಚೀ. ಪ್ರ.) ಕಾಮಾಲೆ, ಮತ್ಸರ, ಈರ್ಷ್ಯೆ; (ಅಮೆ. ಸಂ.) ಪೀಚ್ ಗಿಡಗಳಿಗೆ ತಗುಲುವ ಒಂದು ರೋಗ]. (ಬಳ. ಮಾ.) ಹೇಡಿ. (ಕ್ರಿ.) ಹಳದಿ ಬಣ್ಣಕ್ಕೆ ತಿರುಗು, ಹಳದಿಮಾಡು (Paper yellowed with age. The yellowing leaves). **Yéllowish** (ಗು.); **Yéllowly** (ಕ್ರಿ. ವಿ.); **Yéllowness** (ನಾ.); **Yéllowy** (ಗು.)

Yelp ಯೆಲ್ಪ್ (ಕ್ರಿ. ಅಕ., ನಾ.) (ನೋವು ಪಡುತ್ತಿರುವ ಅಥವಾ ಉತ್ಸುಕತೆಯಲ್ಲಿರುವ ನಾಯಿಯ ಅಥವಾ ನಾಯಿಯದರಂಥ) ಕುರೋ ಎಂಬ—ಕೂಗು, ಬಗುಳಿಕೆ. (ಕ್ರಿ.) ಕುರೋ ಎಂದು—ಕೂಗು, ಬಗುಳು; (ರೂಪ.) ಗೋಳಿಡು.

Yen ಯೆನ್ (ನಾ., ಬ. ವ. Yen) ಜಪಾನಿಯರ ನಾಣ್ಯ ಚಲಾವಣೆಯ ಏಕಮಾನ (ಸು., ೨ ಷಿ. ೧½ ಪೆ.)

Yeóman ಯೋಮನ್ (ನಾ., ಬ. ವ. -men, —ಮೆನ್) (ಚರಿತ್ರೆ) (ಶ್ರೀಮಂತ ವರ್ಗದವನಿಗಿಂತ ಕಡಮೆ ದರ್ಜೆಯ) ಸಣ್ಣ ಜಮೀನುದಾರ; (ಸಮಾಜದಲ್ಲಿ ಮಧ್ಯಮ ದರ್ಜೆಯವನಾಗಿ) ಬೇಸಾಯದಲ್ಲಿರುವವನು; ರೈತ, ಬೇಸಾಯಗಾರ, ಒಕ್ಕಲಿಗ; ರೈತ ರಾವುತ(ದಳದವನು); ಬಂಟ; ನಂಬಿಗಸ್ತ. Y.('s) service ಪ್ರಾಮಾಣಿಕ ನಿಷ್ಠೆಯಿಂದ ಸಮಯದಲ್ಲಿ ಮಾಡಿದ ಸೇವೆ; ಗೌಡ ಸೇವೆ. Y. of the guard = Beef-eater (Beef ನೋಡಿ). **Yeómanly** (ಗು.); **Yeómanry** (ನಾ.) ಸಣ್ಣ ಜಮೀನುದಾರರು, ರೈತವರ್ಗ; ರೈತ ರಾವುತದಳ.

Yércum ಯರ್ಕಂ, ಯೆರ್ಕುಂ (ನಾ.) ಎಕ್ಕದ ಗಿಡ.

Yes ಯೆಸ್ (ಅವ್ಯ., ನಾ., ಬ. ವ. Yeses) ಹೌದು, ಹುಂ, ಸರಿ, ದಿಟ (Say y. ಹೌದೆನ್ನು, ಒಪ್ಪು. Confine yourself to y. & no *or* yeses & noes ಹೌದು ಅಲ್ಲ, ಉಂಟು ಇಲ್ಲ,—ಅಷ್ಟು ಮಾತ್ರ ಹೇಳು). **Y.-men** ಗೊತ್ತಾದ ಶೀಲವಿಲ್ಲದ, ನಮ್ರರಾದ, ಎಲ್ಲಕ್ಕೂ ಹೌದೆಂಬ ಒಪ್ಪಿಗೆ ಕೊಡುವ, ನಿಸ್ಸತ್ತ್ವರು: ಹೌದಪ್ಪಗಳು, ಹೌದು ಬಂಟರು; ಜೀಹುಕುಂನವರು.

Yéster- ಯೆಸ್ಟರ್— (ಸ. ಪೂ. ಪ.) ಹಿಂದಿನ—, ಕಳೆದ—, ನಿನ್ನೆಯ. **Yésterday** (ನಾ., ಕ್ರಿ. ವಿ.) ನಿನ್ನೆ(ಯ ದಿನ) [Is but of y. ನಿನ್ನೆ ಮೊನ್ನೆಯದು, ಈಚಿನದು. The day before y. ಮೊನ್ನೆ(ಯ ದಿನ). (ವಿಶೇಷಣವಾಗಿ) Y. morning ನಿನ್ನೆ ಬೆಳಗ್ಗೆ]. (ಮು., ಕಾವ್ಯ, ಪ್ರ.) **Yester-eve, -even(ing)** ನಿನ್ನೆ ಸಂಜೆ. **Yester-morn(ing)** ನಿನ್ನೆ ಬೆಳಗ್ಗೆ. **Yesternight** ನಿನ್ನೆ ರಾತ್ರಿ. **Yester-year** (ನಾ., ಕ್ರಿ. ವಿ.) ಹೋದ ವರ್ಷ.

Yet ಯೆಟ್ (ಕ್ರಿ. ವಿ., ಸಂ. ಅವ್ಯ.) ಇನ್ನೂ, ಈಗಲೂ, ಈಗ್ಗೂ, ಆಗಲೂ, ಆಗ್ಗೂ [Is he y. alive? ಅವನು ಇನ್ನೂ ಬದುಕಿದ್ದಾನೆಯೆ? Much y. remains to be done ಮಾಡಬೇಕಾದ್ದು ಇನ್ನೂ ಬೇಕಾದಷ್ಟಿದೆ. It is not y. time ಇನ್ನೂ ಹೊತ್ತಾಗಿಲ್ಲ, ಕಾಲ ಬಂದಿಲ್ಲ. Y. once more, y. once ಇನ್ನೂ ಒಂದುಸಲ, ಮತ್ತೊಮ್ಮೆ. Y. again ಇನ್ನೂ, ಮತ್ತೂ,—ಒಮ್ಮೆ. More & y. more ಅಧಿಕವಾಗಿ, ಇನ್ನೂ ಅಧಿಕವಾಗಿ; ಇನ್ನೂ ಮತ್ತೂ ಇನ್ನೂ. Won't listen to me nor y. to her ನನ್ನ ಮಾತೂ ಕೇಳುವುದಿಲ್ಲ, ಅವಳದೂ ಕೇಳುವುದಿಲ್ಲ. He will win y. ಈಗಲೂ, ಇನ್ನೂ,— ಅವನು ಗೆಲ್ಲುತ್ತಾನೆ. A y. more difficult task ಇನ್ನೂ ಕಷ್ಟತರವಾದ ಕೆಲಸ. It is strange, y. it is true ಅದು ವಿಚಿತ್ರ, ಆದರೂ ನಿಜ. As y. ಈವರೆಗೆ (It has worked well as y.)]. (ಸಂ. ಅವ್ಯ.) ಆದರೂ, ಆದಾಗ್ಯೂ (Y. what is the use of it all? ಆದರೂ ಅದೆಲ್ಲದರಿಂದ ಏನು ಪ್ರಯೋಜನ? A rough y. ready helper ಒರಟು ತರಹದ ಆದರೂ ಸಿದ್ಧನಾದ ಸಹಾಯಕ)

Yew ಯೂ (ನಾ.) ಅನೇಕ ವೇಳೆ ರುದ್ರಭೂಮಿಯಲ್ಲಿ ಬೆಳೆಸುವ, ಹಿಂದೆ ಬಿಲ್ಲುಗಳನ್ನು ಮಾಡುವುದಕ್ಕೆ ಉಪಯೋಗಿಸುತ್ತಿದ್ದ, ಈಗಲೂ ಪೆಟ್ಟಿಗೆಗಳನ್ನು ಮಾಡುವುದಕ್ಕೆ ಉಪಯೋಗಿಸುವ, ಕಪ್ಪು ಎಲೆಗಳುಳ್ಳ ಹಲವು ಬಗೆಯ ಮರ: ಯೂ ಮರ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Yg(g)drasil ಯುಗ್‌ಡ್ರೇಸಿಲ್ (ನಾ.) (ಸ್ಕಾಂಡಿನೇವಿಯದ ಪುರಾಣ) ಸ್ವರ್ಗ ಮರ್ತ್ಯ ಪಾತಾಳಗಳನ್ನು ವ್ಯಾಪಿಸಿಕೊಂಡು ಬಂಧಿಸಿರುವ, ವಿಶ್ವಕ್ಕೆ ಆಧಾರವಾಗಿರುವ ಒಂದು ಮರ : ವಿಶ್ವವೃಕ್ಷ.

Yield ಯಾಲ್ಡ್ (ಕ್ರಿ. ಸಕ., ನಾ.) ಫಲಕೊಡು ; (ಫಲವಾಗಿ) ಕೊಡು ; ಉತ್ಪತ್ತಿ—ಆಗು, ತರು (Land yields good crops ಜಮೀನು ಒಳ್ಳೆಯ ಬೆಳೆ ಕೊಡುತ್ತದೆ. Sin yields bitter fruit ಪಾಪ ಕಹಿಯ ಫಲವನ್ನು ಕೊಡುತ್ತದೆ) ; (ನೆಲ, ಮೊ. ಗಳ ವಿಷಯದಲ್ಲಿ) ಬೆಳೆ ಕೊಡು, ಪ್ರತಿಫಲ ಕೊಡು (Y. well, poorly) [(ನಾ.) (ಪ್ರತಿ) ಫಲ; ಉತ್ಪನ್ನ, ಉತ್ಪತ್ತಿ, ಬೆಳೆ, ಹುಟ್ಟುವಳಿ, ಫಸಲು] ; ಬಿಟ್ಟು ಕೊಡು ; ಕೊಟ್ಟುಬಿಡು ; ವಶನಾಗು, ಶರಣಾಗತನಾಗು , ಒಗ್ಗು, ತಗ್ಗು, ಮಣಿ ; ಒಳಗಾಗು, ಒಪ್ಪಿಕೊ ; (—ಇಂತ) ಕಡಮೆಯಾಗಿರು, (—ಗೆ) ಸೋಲು [Y. fortress ಕೋಟೆ ಬಿಟ್ಟುಕೊಡು. Y. oneself prisoner ತಾನಾಗಿ ಸೆರೆಯಾಗು. Y. precedence to ಮತ್ತೊಬ್ಬನಿಗೆ, ಮತ್ತೊಂದಕ್ಕೆ, —ಮೊದಲನೆಯ, ಮುಂಚಿನ ಸ್ಥಳಕೊಡು. Y. the palm ಬಹುಮಾನ ಮತ್ತೊಬ್ಬರಿಗೆ ನಲ್ಲತಕ್ಕದ್ದೆಂದು ಒಪ್ಪಿಕೊ; ಬಹುಮಾನ ಬಿಟ್ಟುಕೊಡು. Y. submission, consent ಅಧೀನವಾಗು, ಒಪ್ಪಿಕೆ ಕೊಡು. Y. up the ghost ಪ್ರಾಣ ಬಿಡು. Y. the point (ವಾದದಲ್ಲಿ) ವಾದಾಂಶವನ್ನು ಬಿಟ್ಟುಕೊಡು, ಒಪ್ಪಿಕೊ. Y. to superior force ಹೆಚ್ಚು ಬಲಕ್ಕೆ ಬಗ್ಗು, ಸಗ್ಗು. I y. to none in appreciation of his merits ಅವನ ಗುಣಗಳನ್ನು ಮೆಚ್ಚುವುದರಲ್ಲಿ ನಾನು ಯಾರಿಗೂ ಕಡಮೆಯಲ್ಲ]. **Yíelding** (ಗು.) ; **Yiéldingly** (ಕ್ರಿ. ವಿ.)

Yoicks ಯಾಯ್ಕ್ಸ್ (ಭಾವ. ಅವ್ಯ., ನಾ.) ನರಿ ಬೇಟೆಗಾರನ ಕೂಗು : ಯಾಯ್ಕ್ಸ್ ! **Yoick** (ಕ್ರಿ.) ಯಾಯ್ಕ್ಸ್ ಎಂದು ಕೂಗು ; (ಬೇಟೆ ನಾಯನ್ನು) ಛೂಬಿಡು, ಪ್ರೋತ್ಸಾಹಿಸು (*On* ಉಪ. ದೊಡನೆ)

Yoke ಯೋಕ್ (ನಾ., ಕ್ರಿ.) ನೊಗ ; (ರೋಮನ್ ಚರಿತ್ರೆ) ಸೋತ ಶತ್ರು ಅದರ ಕೆಳಗೆ ಹಾಯ್ದುಹೋಗುವಂತೆ ಎತ್ತಿ ಹಿಡಿಯುತ್ತಿದ್ದ ನೊಗ ಅಥವಾ ಅದರ ಸಂಕೇತವಾದ ಮೂರು ಭರ್ಜಿಗಳ ಕಮಾನು (Send under y. ನೊಗದ ಕೆಳಗೆ ಹಾಯಿಸು, ಸೋಲೊಪ್ಪಿಕೊಂಡಂತೆ ಮಾಡು. Pass under y. ನೊಗದ ಕೆಳಗೆ ಹಾಯಿ, ಸೋಲೊಪ್ಪಿಕೊ) ; (ರೂಪ.) ಪ್ರಭುತ್ವ, ಆಳಿಕೆ, ಅಡಿಯಾಳುತನ, ದಾಸ್ಯ, ಗುಲಾಮಗಿರಿ (Submitted to his y. ಅವನ ಆಳಿಕೆಗೆ, ಅಧಿಕಾರಕ್ಕೆ, —ಒಳಗಾದನು. The heavy y. of opinion ಅಭಿಪ್ರಾಯದ ಭಾರ); (ರೂಪ.) (ಮದುವೆಯ) ಸಂಬಂಧ, ಬಂಧನ, ಕಟ್ಟು ; ಎತ್ತು, ಮೊ. ಗಳ ಜೊತೆ : ಆರು [Y. of land (ಪ್ರಾಚೀ. ಪ್ರ.) ಒಂದು ಆರು ಒಂದು ದಿನದಲ್ಲಿ ಉಳಬಹುದಾದಷ್ಟು ಜಮೀನು : ಒಂಪಾರಿನ ಜಮೀನು] ; (ಹೊರೆ ಹೊರಲು ಹೆಗಲಮೇಲೆ ಇಟ್ಟುಕೊಳ್ಳುವ) ಅಡ್ಡೆ ; (ಪರಟು, ಅಂಗಿ, ರವಿಕೆ, ಮೊ. ಗಳ) ಹೆಗಲಪಟ್ಟಿ, ಭುಜಪಟ್ಟಿ ; (ಅಂಗ, ಮೊ. ಗಳ) ನಡು ಪಟ್ಟಿ, ಸೊಂಟಪಟ್ಟಿ ; (ಗಂಟೆ ತೂಗಹಾಕಿರುವ) ಅಡ್ಡಪಟ್ಟಿ ; (ತುದಿಗಳಿಗೆ ಹಗ್ಗಗಳನ್ನು ಬಿಗಿದಿರುವ ಚುಕ್ಕಾಣಿಯ) ಅಡ್ಡಗಂಬಿ ; ಒಂದೇ ನಳಿಕೆಗೆ ದ್ರವವನ್ನು ಸಾಗಿಸುವ ಎರಡು ನಳಿಕೆಗಳ ಸಂಬಂಧಕ ; (ಯಂತ್ರಗಳಲ್ಲಿ ಹಲವು ಬಗೆಯ) ಸಂಬಂಧಕ, ಜೋಡಕ ; [**Y.-bone** ತಲೆಯ ಮತ್ತು ಮುಖದ ಎಲುಬುಗಳನ್ನು ಕೂಡಿಸುವ ಕನ್ನೆಯೆಲುಬು : ನೊಗದೆಲುಬು, (ಕಪೋಲ) ಯುಗಾಸ್ಥಿ. **Yókefellow, Yókemate** (ದಾಂಪತ್ಯದಲ್ಲಿ) ಗಂಡ, ಹೆಂಡತಿ ; ಸಹಭಾಗಿನಿ) ; (ಕೆಲಸ, ಮೊ. ರಲ್ಲಿ) ಜೊತೆಗಾರ, ಜೊತೆಗಾರ್ತಿ, ಸಂಗಾತಿ. **Y.-lines, -ropes** ಚುಕ್ಕಾಣಿ ನೊಗದ ಹಗ್ಗಗಳು] . (ಕ್ರಿ.) ನೊಗ—ಇಡು, ಹೊರಿಸು, ಹೂಡು ; (ಮು., ಮದುವೆಯ ಮೂಲಕ) ಕೂಡಿಸು, ಜೊತೆಮಾಡು, ಲಗ್ನಮಾಡು ; (ಕೆಲಸ, ಮೊ. ಕ್ಕೆ) ಹೂಡು, ತೊಡಗಿಸು ; (ಕೆಲಸ, ಮೊ. ಕ್ಕೆ) ಜೊತೆಗೂಡು, ಹೊಂದು (*Together, with* ಉಪ. ದೊಡನೆ) (Do not y. well ಅವರು ಸರಿಯಾಗಿ ಹೊಂದಿಕೊಂಡು ಹೋಗುವುದಿಲ್ಲ, ಜೊತೆಗೂಡುವುದಿಲ್ಲ)

Yókel ಯೋಕೆಲ್ (ನಾ.) ಹಳ್ಳಿ ಗಮಾರ, ಗಾಂಪ.

Yolk ಯೋಕ್, (ವಿರ. ಪ್ರ.) **Yelk** ಯೆಲ್ಕ್ (ನಾ.) ಮೊಟ್ಟೆಯ ಹಳದಿ ಲೋಳೆ, ಬಂಡಾರ ; ಕುರಿಚರ್ಮದಿಂದ ಸ್ರವಿಸುವ ಜಿಡ್ಡು : ಉಣ್ಣೆ ಜಿಡ್ಡು. Y.-bag, sac (ಹಳದಿ) ಬಂಡಾರ —ಕೋಶ, ಚೀಲ. **(-)yolked** (ಗು.) ; **Yólky** (ಗು.)

Yon ಯಾನ್ (ಗು., ಕ್ರಿ. ವಿ., ಸ. ನಾ.) (ಪ್ರಾಚೀ. ಪ್ರ., ಕಾವ್ಯ., ಪ್ರಾಂ. ಪ್ರ.) = Yonder. (ಸ. ನಾ.) (ಪ್ರಾಚೀ. ಪ್ರ.) ಆ—ವ್ಯಕ್ತಿ, ವಸ್ತು. **Yónder** ಯಾಂಡರ್ (ಗು., ಕ್ರಿ. ವಿ.) ಅಲ್ಲಿ(ಯ), ಆ ಕಡೆ(ಯ), ಅತ್ತ(ಣ)

Yore ಯೋ(ಅ)ರ್ (ನಾ.) ಹಿಂದಿನ, ಪ್ರಾಚೀನ, ಪೂರ್ವ, —ಕಾಲ [(ಮು.) Of y. ಹಿಂದಿನ ಕಾಲದಲ್ಲಿ]

York[1] ಯಾರ್ಕ್ (ನಾ.) Y. stone ಒಂದು ಬಗೆಯ ಕಟ್ಟಡಗಲ್ಲು. **Yórkist** (ಗು., ನಾ.) (ಮೂರನೆಯ ಎಡ್ವರ್ಡನ ಮಗನಾದ Edmund Duke of York ಎಂಬಾತನಿಂದ ಪ್ರಾರಂಭವಾದ) ಯಾರ್ಕ್ ಮನೆತನದ (ಅನುಯಾಯಿ) ; (Wars of the Roses ಎಂಬ ಯುದ್ಧದಲ್ಲ ಬಿಳಿ ಗುಲಾಬಿ ಚಿಹ್ನೆಯ) ಯಾರ್ಕ್ ಮನೆತನದ ಪಕ್ಷಾವಲಂಬಿ.

York[2] ಯಾರ್ಕ್ (ಕ್ರಿ. ಸಕ.) ದಾಂಡುಗಾರನ ದಾಂಡಿನೆಡೆಯಲ್ಲ ಸರಿಯಾಗಿ ಪುಟವೇಳುವಂತೆ ಚೆಂಡೆಸೆ. **Yórker** (ನಾ.) ಹೀಗೆ ಎಸೆದ ಚೆಂಡು (=Tice)

Yórkshire ಯಾರ್ಕ್‌ಷರ್, —ಷಿಯರ್ (ನಾ.) ಯಾರ್ಕ್—ಜಿಲ್ಲೆ, ಕೌಂಟಿ. Y. flannel ಬಣ್ಣ ಹಾಕದ ಫ್ಲಾನೆಲ್ ಬಟ್ಟೆ. Y. grit ಅಮೃತಶಿಲೆಗೆ ಹೊಳಪು ಕೊಡಲು ಉಪಯೋಗಿಸುವ ಒಂದು ಬಗೆಯ ಕಲ್ಲು. Y. stone ಒಂದು ಬಗೆಯ ಕಟ್ಟಡಗಲ್ಲು. Y. terrier ಸಣ್ಣದಾದ, ಪೊದೆ ಗೂದಲಿನ, ಮುದ್ದಿಗಾಗಿ ಸಾಕುವ, ಟೆರಿಯರ್ ನಾಯಿ. Come y. over (*or* on), Put y. on ಮೋಸಪಡಿಸು, ಏಮಾರಿಸು.

You ಯೂ [ಸ. ನಾ. ; ಮಧ್ಯಮ ಪುರುಷ ಮತ್ತು ಬ. ವ. (ಏ. ವ. ದಲ್ಲಿಯೂ ಪ್ರ.). Thou ದೌ (ಏ. ವ.); ದ್ವಿತೀಯಾ Thee ದೀ ; (ಷಷ್ಠೀ) Your, yours, ಏ. ವ. Thy, thine] ನೀನು, ನೀವು, ತಾವು, ನಿನ್ನನ್ನು, ನಿಮ್ಮನ್ನು, ತಮ್ಮನ್ನು [Are you there? (ದೂರವಾಣಿಯ ಮೂಲಕ ಮಾತಾಡುವಲ್ಲ ಪ್ರಾರಂಭ ವಾಕ್ಯ) : ಇದ್ದೀರೊ ? You're another (ಗ್ರಾಮ್ಯ) (ತಿರುಗಿಸಿಕೊಂಡು ಬಯ್ಯುವಲ್ಲ) ನೀನೂ ಅಂಥವನು ಮತ್ತೊಬ್ಬ. (ವಿಧ್ಯರ್ಥದಲ್ಲಿ) Don't y. go away ನೀನು ತೊಲಗಿ ಹೋಗಬಾರದೇ ? Begin y., Y. begin ನೀನು ಆರಂಭಿಸು. (ಸಂಬೋಧನೆಯಲ್ಲಿ) Y. fool ! ಎಲಾ ಅವಿವೇಕಿ ! Y. idiot y. ! ಎಲ ಎಲಾ ಮಡೆಯಾ ! (ಗವನ ಸೆಳೆಯುವಲ್ಲಿ) Y. there, what is your name ಯಾರೋ ಅಲ್ಲಿ, ನಿನ್ನ ಹೆಸರೇನು ?] ; (ಪ್ರಾಚೀ. ಪ್ರ.) =Yourself (Get y. gone ತೊಲಗಾಚೆ, ತೊಲಗಿಹೋಗು. Y. should find y. a wife ನೀನು ಹೆಂಡತಿಯನ್ನು ಸಂಪಾದಿಸಿಕೊಳ್ಳಬೇಕು. Sit y. down ಕುಕ್ಕರಿಸು) ; (ಸಾಮಾನ್ಯ ಹೇಳಿಕೆಗಳಲ್ಲಿ : ಅನಿರ್ದಿಷ್ಟ ವ್ಯಕ್ತಿ) ಒಬ್ಬ(ರು), ಯಾರೂ, ಯಾರಾದರೂ [Y. never can tell ಯಾರೂ ನಿಷ್ಕರ್ಷೆಯಾಗಿ ಹೇಳಲಾರರು. What are you to do with a child like this ? ಇಂಥ ಮಗುವನ್ನು (ಕಟ್ಟಿಕೊಂಡು) ಯಾರೇನು ಮಾಡಿಯಾರು ?]. **Your** ಯೂ(ಅ)ರ್, ಯೋ(ಅ)ರ್, ಯರ್ (ಗು.) ನಿನ್ನ, ನಿಮ್ಮ, ತಮ್ಮ [Y. father & mine, y. & my father(s) ನಿನ್ನ ನನ್ನ ತಂದೆ(ಗಳು)] ; (ಬಳ. ಮಾ., ಮು., ಪ್ರಾಚೀ. ಪ್ರ., ಈಗ ಸಾ., ತುಚ್ಛೀಕಾರಾರ್ಥದಲ್ಲಿ) ಚಿರಪರಿಚಿತ, ಸುಪ್ರಸಿದ್ಧ (No one so fallible as y. experts ನಿಮ್ಮ ಪಂಡಿತರು ತಪ್ಪು ಮಾಡುವಹಾಗೆ ಯಾರೂ ತಪ್ಪುಮಾಡುವುದಿಲ್ಲ). **Yours** ಯೂ(ಅ)ರ್ಸ್, ಯೋ(ಅ)ರ್ಸ್ (ಸ. ನಾ., ಗು.) ನಿನ್ನದು(ವು), ನಿನ್ನವನ(ಳು, ರು), ನಿಮ್ಮದು(ವು), ನಿಮ್ಮವನು(ಳು, ರು), ತಮ್ಮದು(ವು), ತಮ್ಮವನು(ಳು, ರು) [My father & y. ; Y. & my father (Your & my father ಎಂಬುದಕ್ಕೆ ತಪ್ಪು ಪ್ರ.). You & y. ನೀನೂ ನಿನ್ನ (ಮನೆಯ)ವರು ; ನೀನೂ ನಿನ್ನದು(ವು). Y. is to hand ನಿನ್ನ ಕಾಗದ ಕೈಸೇರಿತು]. (ಗು.) ನಿನ್ನ, ನಿಮ್ಮ, ತಮ್ಮ [It is y. if

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

you accept it ತಾವು ಅಂಗೀಕರಿಸಿದರೆ ಅದು ತಮ್ಮದೆ. Y. truly (ಪತ್ರವ್ಯವಹಾರದ ಒಕ್ಕಣೆಯಲ್ಲಿ) ತಮ್ಮ ವಿಶ್ವಾಸಿ; (ಹಾಸ್ಯ ಪ್ರ.) ನಾನು (But y. truly was not taking any ಆದರೆ ನಾನು ಯಾವುದನ್ನೂ ಒಪ್ಪಲಿಲ್ಲ]. **Yourséif** (ಸ. ನಾ.; ಬ. ವ. -lves) ನೀನೇ, ನೀವೇ, ತಾವೇ [Please see to it y. ದಯವಿಟ್ಟು ತಾವೇ—ಅದಕ್ಕೆ ಗಮನಕೊಡಿ, ಅದನ್ನು ನೋಡಿಕೊಳ್ಳಿ. You y. said so, you said so y. ನೀನೇ ಹಾಗೆ ಹೇಳಿದೆ. (ಪ್ರಾಚೀ. ಪ್ರ., ಕಾವ್ಯ) Y. have said it ನೀವೇ ಅದನ್ನು ಹೇಳಿದ್ದೀರಿ. By y. ತಾವೊಬ್ಬರೇ (Why are you sitting by y.? It is y. I want, not your money ನನಗೆ ಬೇಕಾದ್ದು ನೀನೇ, ನಿನ್ನ ಹಣವಲ್ಲ. How's y. (ಅನಂ.) ತಾವು ಹೇಗಿದ್ದೀರಿ? ತಾವು ಕ್ಷೇಮವೋ? You are not quite y. tonight ಈ ರಾತ್ರಿ ನೀನು ಎಂದಿನಂತಿಲ್ಲ, ನಿನ್ನ ಮನಸ್ಸು ಸರಿಯಾಗಿಲ್ಲ. (ಸ್ವಾರ್ಥಕ) Ask y. whether it is not true ಅದು ನಿಜವೋ ಅಲ್ಲವೋ ಎಂದು ನಿನ್ನನ್ನು ನೀನೇ ಕೇಳಿಕೊ]

Young ಯಂಗ್ (ಗು.) ಎಳೆಯ, ಹರೆಯದ, ಯೌವನಾವಸ್ಥೆಯ, ಯುವಕನಾದ, ತರುಣನಾದ, ಎಳಸಾದ, ಅಪರಿಣತ, ಅನುಭವವಿಲ್ಲದ, ಇತ್ತೀಚಿನ, ಕಿರಿಯ, ಚಿಕ್ಕ [A y. nation, institution ಇತ್ತೀಚಿನ, ಹೊಸ, ಎಳೆಯ,—ಜನಾಂಗ, ಸಂಸ್ಥೆ. A y. family ಸಣ್ಣ, ಎಳೆ, —ಸಂಸಾರ. A y. person (ಕೆಳವರ್ಗದ ಅಪರಿಚಿತ ಹೆಂಗಸಿನ ವಿಷಯದಲ್ಲಿ ಸೇವಕರು ಉಪಯೋಗಿಸುವ ಮಾತು): ಹರೆಯದ ಹೆಣ್ಣು; ತರುಣಿ. The y. person (ಅಶ್ಲೀಲ ವಿಚಾರಗಳಿಂದ ಮನಸ್ಸು ದೂಷಿತವಾಗದಂತೆ ಯಾರ ಸರಳ ಸ್ವಭಾವವನ್ನು ರಕ್ಷಿಸಬೇಕಾಗಿದೆಯೋ ಅಂತಹ) (ಸರಳ ಮನಸ್ಸಿನ) ಚಿಕ್ಕವರು, ಎಳೆಯರು. Y. people ಯುವಕರು, ತರುಣರು (ಮು., ಮದುವೆಗೆ ನೆರೆದವರು). My y. man, woman ನಲ್ಲ, ನಲ್ಲೆ; ಪ್ರಿಯ, ಪ್ರಿಯೆ. The night year, century, is yet y. ರಾತ್ರಿ, ವರ್ಷ, ಶತಮಾನ, ಇನ್ನೂ ಆರಂಭದಶೆಯಲ್ಲಿದೆ. Old head on y. shoulders (Head ನೋಡಿ). Y. & old (Old ನೋಡಿ). You y. rascal (ಪ್ರೀತಿಯಿಂದ ಮಕ್ಕಳನ್ನು ಸಂಬೋಧಿಸುವಲ್ಲಿ) ಎಲಾ ತುಂಟ ಪಿಳ್ಳೆ. A y. man in a hurry (ಮು.) ಉತ್ಸಾಹಭರಿತನಾದ ಸುಧಾರಕ. Y. for his years (Year ನೋಡಿ). Men are now y. at fifty ಈಗಿನ ಜನರು ಐವತ್ತು ವಯಸ್ಸಾದರೂ ಯುವಕರಾಗಿಯೇ ಇರುತ್ತಾರೆ. Y. blood (Blood ನೋಡಿ). Younger son (ಇಂಗ್ಲೆಂಡಿನಲ್ಲಿ: ಶ್ರೀಮಂತ ಮನೆತನದಲ್ಲಿ ಆಸ್ತಿಯೆಲ್ಲ ಹಿರಿಯ ಮಗನಿಗೇ ಹೋಗುವುದರಿಂದ ಬಡವನಾಗಿ ಉಳಿಯುವ) ಕಿರಿಯ ಮಗ. Y. things (ಮನುಷ್ಯರ ವಿಷಯದಲ್ಲಿ; ಔದಾರ್ಯದಿಂದ ಟೀಕಿಸುವಲ್ಲಿ) ಎಳೆಯರು, ಎಳಸುಗಳು. Is y. in crime ಅವನು ಅಪರಾಧದ ಕಸುಬಿನಲ್ಲಿ ಎಳಸು; ಕೆಟ್ಟ ವಿದ್ಯೆಯಲ್ಲಿ ಅಡ್ಡಕಸಬಿ. Y. Jones ಮಗ ಜೋನ್ಸ್. Y.'un ಎಳೆಯ, ಕಿರಿಯ, ಹುಡುಗ (ಮು., ಸಂಬೋಧನೆಯಲ್ಲಿ). In my y. days ನನ್ನ ಎಳವೆಯಲ್ಲಿ. Y. love, ambition ಯೌವನ ಸಹಜವಾದ ಪ್ರಣಯ, ಆಕಾಂಕ್ಷೆ. The younger ಕಿರಿಯ (The younger Pitt. Teniers the younger). The y. pretender (Pretend ನೋಡಿ). Y. England, Italy, India (ಮು., ರಾಜಕೀಯದಲ್ಲಿ ಆಯಾ ದೇಶದ) ಯುವಕ ಪಕ್ಷ. Y. Turks ೧೯೦೮ರಲ್ಲಿ ರಾಜ್ಯ ಘಟನೆಯನ್ನು ಪುನಃ ಸ್ಥಾಪಿಸುವಂತೆ ತುರ್ಕಿಯ ಸುಲ್ತಾನನನ್ನು ಬಲಾತ್ಕಾರ ಪಡಿಸಿದ ತುರ್ಕಿಯ ರಾಜಕೀಯ ಪಕ್ಷ. Youngers (Elders ಪದಕ್ಕೆ ವಿರುದ್ಧವಾಗಿ ಪ್ರ.): ಎಳೆಯರು, ಕಿರಿಯರು (Is kind to his youngers)]

Young (ನಾ.) (The ಅಥವಾ ಸ. ನಾ. ಜೊಡನೆ ಪ್ರ.) (ಮು., ಪ್ರಾಣಿಯ) ಕರು, ಮರಿ, ಪಿಳ್ಳೆ (With y. ಗಬ್ಬವಾಗಿ, ಬಸಿರಾಗಿ. Cares for, deserts, its y. ತನ್ನ ಮರಿಗಳನ್ನು ಸಲಹುತ್ತದೆ, ತೊರೆದುಹೋಗುತ್ತದೆ). **Yóungish** (ಗು.); **Yóungling** (ನಾ.) (ಕಾವ್ಯ) ಮರಿ, ಪಿಳ್ಳೆ; ಎಳೆಯ—ಪ್ರಾಣಿ, ಗಿಡ, ಮನುಷ್ಯ. **Yoúngster** (ನಾ.) (ಚಟುವಟಿಕೆಯಾದ) ಹುಡುಗ, ಮಗು; ಎಳೆಯ.

Yoúnker ಯಂಕರ್ (ನಾ.) (ಪ್ರಾಚೀ. ಪ್ರ., ಬಳ. ಮಾ.) ಹುಡುಗ, ಬಾಲ; = Junker (ಆ ಪದ ನೋಡಿ)

Your, Yours, Yourséif. You ನೋಡಿ.

Youth ಯೂತ್ (ನಾ.) ಹರೆಯ, ಯೌವನ, ತಾರುಣ್ಯ (In my hot, raw, vigorous, y. ನನ್ನ ಬಿಸಿ, ಹಸಿ, ಹುರುಪಿನ, —ಹರೆಯದಲ್ಲಿ; ನನ್ನ ಯೌವನದ ಭರದಲ್ಲಿ. Y.'s a stuff will not endure ಯೌವನ ಬಹುಕಾಲ ಇರುವುದಲ್ಲ, ಅಸ್ಥಿರವಾದುದು. The y. of the world ಪ್ರಪಂಚದ—ತಾರುಣ್ಯಾವಸ್ಥೆ, ಆದಿ ಕಾಲ); ಹರೆಯದವನು, ಯುವಕ, ತರುಣ (A y. of 20 ಇಪ್ಪತ್ತರ ಪ್ರಾಯದ ಯುವಕ. Promising youth ಮುಂದಕ್ಕೆ ಬರುವ ಯುವಕ); ಯುವಕರು, ಯುವತಿಯರು; ತರುಣರು, ತರುಣಿಯರು (The y. of the country). **Yoúthful** (ಗು.); **Yoúthfully** (ಕ್ರಿ. ವಿ.); **Yoúthfulness** (ನಾ.)

Yowl ಯೌಲ್ (ಕ್ರಿ. ಅಕ., ನಾ.) = Yawl².

Yttérbium ಇಟರ್‌ಬಿಯಂ (ನಾ.), **Y'ttrium** ಇಟ್ರಿಯಂ (ನಾ.) (ರ. ವಿ.) ಎರಡು ಅಪೂರ್ವ ಲೋಹಗಳು. **Yttérbic, Y'ttric, Y'ttrious** (ಗು.) —ಉಳ್ಳ; —ಗೆ ಸಂಬಂಧಿಸಿದ. **Yttro-** ಇಟ್ರೊ— (ಸ. ಪೂ. ಪ)

Yugo-sláv. ಯೂಗೊಸ್ಲಾವ್ (ಗು., ನಾ.) = Jugo-slav.

Yule ಯೂಲ್ (ನಾ.) ಕ್ರಿಸ್ಮಸ್ ಹಬ್ಬ (= Y. tide) (Y.-log ಕ್ರಿಸ್ಮಸ್ ಹಬ್ಬದ ಹಿಂದಿನ ರಾತ್ರಿ ಸುಡುವ ಕೊರಡು: ಕ್ರಿಸ್ಮಸ್ ಕೊರಡು)

Z

Z ಜೆಡ್, (ಅಮೆ. ಸಂ.) ಜೀ. ಇಂಗ್ಲಿಷ್ ವರ್ಣಮಾಲೆಯ ಇಪ್ಪತ್ತಾರನೆಯ ಅಕ್ಷರ (From A to Z ಮೊದಲಿಂದ ಕಡೆಯವರೆಗೆ); (ಬೀ. ಗ.) ಮೂರನೆಯ ಅಜ್ಞಾತ ಮೊತ್ತ(ದ ಸಂಕೇತ) (Z)

Záffre, Záffer ಜ್ಯಾಫರ್ (ನಾ.) ಒಂದು ಬಗೆಯ ಅಶುದ್ಧ ಕೋಬಾಲ್ಟ್ ಆಕ್ಸೈಡು.

Zámbo ಜ್ಯಾಂಬೊ (ನಾ.) = Sambo (ಮೊದಲನೆಯ ಅರ್ಥದಲ್ಲಿ)

Zány ಜೇನಿ (ನಾ.) (ಚರಿತ್ರೆ) (ಮುಖ್ಯ ನಕಲಿಯವನನ್ನು ಅನುಕರಿಸುವ) ಉಪ ನಕಲಿ; (ಆಧುನಿಕ ಪ್ರ.) ನಕಲಿ, ತಮಾಷೆ, —ಮನುಷ್ಯ; ಅರೆಬೆಪ್ಪ.

Zanzibári ಜ್ಯಾಂಜಿಬಾರಿ (ನಾ., ಗು.) ಜಾಂಜಿಬಾರಿನ(ವನು)

Záptieh ಜ್ಯಾಪ್ಟಿಏ (ನಾ.) ತುರ್ಕಿಯ ಪೊಲೀಸಿನವನು.

Zarathústrian ಜ್ಯಾರತುಸ್ಟ್ರಿಯನ್ (ನಾ., ಗು.). **Zoroastrian** ನೋಡಿ.

Zaríba, Zaréba ಜರೀಬ (ನಾ.) (ಸೂಡಾನ್, ಮೊ. ಪ್ರದೇಶಗಳಲ್ಲಿ ಶಿಬಿರ, ಹಳ್ಳಿ, ಮೊ. ಗಳ ರಕ್ಷಣೆಗಾಗಿ ಹಾಕುವ) ದಸಿ ಬೇಲಿ, ಸುತ್ತು ಬೇಲಿ.

Zax ಜ್ಯಾಕ್ಸ್ (ನಾ.). **Sax** ನೋಡಿ.

Zeal ಜೀಲ್ (ನಾ.) ಉತ್ಸಾಹ, ಶ್ರದ್ಧೆ, ಹುರುಪು. **Zeálous** ಜೆಲಸ್ (ಗು.); **Zeálously** (ಕ್ರಿ. ವಿ.); **Zeálot** (ನಾ.) ಹಠೋತ್ಸಾಹಿ, ಛಲವಾದಿ, ಅತ್ಯಭಿಮಾನಿ. **Zeálotry** (ನಾ.) ಹಠೋತ್ಸಾಹ, ಅತ್ಯಭಿಮಾನ.

Zébec(k) ಜೀಬೆಕ್ (ನಾ.) = Xebec.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Zébra ಸೀ(ಸ್)ಬ್ರ (ನಾ.) ಕುದುರೆ ಜಾತಿಯ, ಪಟ್ಟೆ ಪಟ್ಟೆಯ, ಒಂದು ಚತುಷ್ಪಾದಿ: ಪಟ್ಟೆಕುದುರೆ, ಸ್ಸೀಬ್ರ; (ವಿಶೇಷಣ ಪ್ರ.) ಸ್ಸೀಬ್ರಾ ಪಟ್ಟೆಯ; —ಉಳ್ಳ (Z. markings, Z. catterpillar, Z.-wood). **Zébrine** —ಬ್ರೈ(ಬ್ರಿ)ನ್ (ಗು.) ಸ್ಸೀಬ್ರದ(ಂಥ)

Zébu ಸ್ಸೀಬ್ಯೂ (ನಾ.) ಈಸ್ಟ್ ಇಂಡಿಯದ, ಹಿಳಿಲುಳ್ಳ ಎತ್ತು.

Zed ಸ್ಸೆಡ್ (ನಾ.) ಸ್ಸೆಡ್ ಅಕ್ಷರ (Z)

Zédoary ಸ್ಸೆಡೋಅರಿ (ನಾ.) ಈಸ್ಟ್ ಇಂಡಿಯದ ಕೆಲವು ಗಿಡಗಳ ಬೇರಿನಿಂದ ತಯಾರಿಸಿದ ಶುಂಠಿಯಂಥ ಪದಾರ್ಥ: ಶತಾವರಿ (ಔಷಧ, ಸುವಾಸನಾ ದ್ರವ್ಯ, ಬಣ್ಣ ಹಾಕುವುದು, ಮೊ. ಕ್ಕೆ ಉಪಯೋಗ)

Zeitgeist (G) ಟ್ಸೈಟ್ಗೈಸ್ಟ್ (ನಾ.) ಕಾಲ—ಮಾಹಾತ್ಮ್ಯ, ಗುಣ. (ಒಂದು ಕಾಲದ ಜನರ) ಭಾವ, ಪ್ರಭಾವ.

Zelánian ಸ್ಸಿಲೇನಿಯನ್ (ಗು.) ನ್ಯೂಸ್ಸೀಲೆಂಡಿನ

Zelóso (It.) ಟ್ಸೆಲೊಸೊ (ಸಂ. ಸೂಚನೆ) ಉತ್ಸಾಹದಿಂದ, ಹುರುಪಿನಿಂದ.

Zemíndar ಸ್ಸೆಮಿನ್ಡಾರ್ (ನಾ.) (ಆಂ. ಇಂ.) (ಚರಿತ್ರೆ) (ಮೊಗಲ ಸಾಮ್ರಾಜ್ಯದ ಕಾಲದಲ್ಲಿ) ಜಿಲ್ಲಾಧಿಕಾರಿ; (ಈಗ) ಜಮೀನುದಾರ.

Zenána ಸ್ಸೆನಾನ (ನಾ.) (ಇಂಡಿಯದಲ್ಲಿ ಪರದಾ ಪದ್ಧತಿಯ ಶ್ರೀಮಂತರ ಮನೆಗಳಲ್ಲಿ) ಹೆಂಗಸರಿರುವ ಭಾಗ, ಜನಾನ, ಪೆಂಡವಾಸ (ಗ್ರಾಂ.). ಹೆಂಗಸರ ಉಡುಪಿಗೆ ಬರುವ ಹಗುರವಾದ ಬಟ್ಟೆ: ಜನಾನ ಬಟ್ಟೆ (=Z. cloth)

Zend ಸ್ಸೆಂಡ್ (ನಾ.) ಸಂಸ್ಕೃತಕ್ಕೆ ಸಮೀಪ ಸಂಬಂಧವುಳ್ಳ, ಪುರಾತನ ಇರಾನಿಯನ್ ಭಾಷೆ: ಸ್ಸೆಂಡ್ ಭಾಷೆ. **Zendavésta** ಸ್ಸೆಂಡವೆಸ್ಟ (ನಾ.) ಪಾರಸಿಗಳ—ವೇದ, ಪವಿತ್ರಗ್ರಂಥ.

Zénith ಸ್ಸೆನಿತ್ (ನಾ.) ನೋಟಕನ ನೆತ್ತಿಯ ಮೇಲಿನ ಆಕಾಶ ಬಿಂದು: ಬಾನ್ ನೆತ್ತಿ, ಖಮಧ್ಯ (ಎದುರು ಪದ: Nadir); (ರೂಪ.) ಉಚ್ಚ—ಸ್ಥಾನ, ಬಿಂದು; (ಅಧಿಕಾರ, ಉಚ್ಛ್ರಾಯ, ಮೊ. ಗಳ) ಶಿಖರ, ಶುತ್ತತುದಿ (Is at his, its, the, z.). Z.-distance ಒಂದು ಕಾಯಕ್ಕೂ ಖಮಧ್ಯಕ್ಕೂ ಇರುವ ಚಾಪ ದೂರ: ಖಮಧ್ಯ ದೂರ, ನತ ಭಾಗ, ನತಾಂಶ. **Zénithal** (ಗು.)

Zéphyr ಸ್ಸೆಫರ್ (ನಾ.) ಪಡುವಣ ಗಾಳಿ, ಪಶ್ಚಿಮಾನಿಲ; ಮೆಲುಗಾಳಿ; ಮಂದಮಾರುತ; (ವ್ಯಾಯಾಮಗಾರನ) ತೆಳು ಜಾಲರದ ಅಂಗಿ; ಹಲವು ಬಗೆಯ ಉಡುಪಿನ ಬಟ್ಟೆ.

Zéppelin ಸ್ಸೆಪಲಿನ್ (ನಾ.; ಬಳ. ಮಾ. ಸಂಕ್ಷಿಪ್ತ: Zepp.) (ಜರ್ಮನಿಯಲ್ಲಿ ಯುದ್ಧೋಪಯೋಗಕ್ಕಾಗಿ ತಯಾರಿಸಿದ) ಒಂದು ಬಗೆಯ ವಿಮಾನ; ಸ್ಸೆಪಲಿನ್ ವಿಮಾನ (ನಿರ್ಮಾಪಕನ ಹೆಸರಿನಿಂದ)

Zéro ಸ್ಸಿಯರೋ (ನಾ.) ಸೊನ್ನೆ, ಶೂನ್ಯ (0); (ಶಾಖಮಾಪಕಗಳಲ್ಲಿ) ನೀರು ಗಡ್ಡೆಯಾಗುವ ಶಾಖಬಿಂದು, ಅಥವಾ ಇತರ ನಿರ್ದಿಷ್ಟ ಪ್ರಾರಂಭ ಬಿಂದು (Absolute z. ಶಾಖಕ್ಕೆ ಕಾರಣವಾದ ಅಣು ಚಲನೆ ಸಂಪೂರ್ಣವಾಗಿ ನಿಂತುಹೋಗಿರುವಾಗಿನ ಶಾಖ: -273·7°c); (ಸೈನಿಕ) ನಿರ್ದಿಷ್ಟ ಕಾರ್ಯಕ್ರಮ ಆರಂಭವಾಗುವ ಕಾಲ: ಪ್ರಾರಂಭ ಕಾಲ (=Z.-hour); ಅತ್ಯಂತ ಕೆಳ, ನೀಚ, ಅಧೋ, —ಬಿಂದು; ತಟ್ಟತಳ.

Zest ಸ್ಸೆಸ್ಟ್ (ನಾ.) ರುಚಿ(ಕಾರಕ) [(ರೂಪ.) Add z. to ರುಚಿ—ಹುಟ್ಟಿಸು, ಸೇರಿಸು]; ತೀವ್ರಾಸಕ್ತಿ, ಹುರುಪು, ಉತ್ಸಾಹ (Entered into it with z.)

Zéta ಸ್ಸೀಟ (ನಾ.) ಒಂದು ಗ್ರೀಕ್ ಅಕ್ಷರ (Z, ζ) (ಮೊದಲ ಉಚ್ಚಾರ: ಸ್ದ ಅಥವಾ ದ್ಸ; ಈಗಿನ ಉಚ್ಚಾರ: ಸ್ಸ)

Zetétic ಸ್ಸಿ(ಎ)ಟೆಟಿಕ್ (ಗು.) (ಎರ. ಪ್ರ.) ಸಂಶೋಧಕ, ಸಂಶೋಧನೆಯಿಂದ ಹೊರಡುವ.

Zeúgma ಸ್ಯೂಗ್ಮ (ನಾ.) (ವ್ಯಾ.) ವಾಕ್ಯದ ಒಂದು ಕ್ರಿಯಾಪದ ಅಥವಾ ಗುಣವಾಚಕ ಆ ವಾಕ್ಯದಲ್ಲಿರುವ ಎರಡು ನಾಮವಾಚಕಗಳಲ್ಲಿ ಸರಿಯಾಗಿ ಒಂದಕ್ಕೆ ಮಾತ್ರ ಅನ್ವಯವಾಗುತ್ತಿದ್ದರೂ ಮತ್ತೊಂದು ನಾಮವಾಚಕಕ್ಕೆ ಅನ್ವಯವಾಗಬೇಕಾದ ಪದವನ್ನು ಲೋಪಿಸಿ, ಎರಡು ನಾಮವಾಚಕಗಳಿಗೂ ಆ ಒಂದೇ ಕ್ರಿಯಾಪದ ಅಥವಾ ಗುಣವಾಚಕ ಅನ್ವಯವಾಗುವಂತೆ ಪ್ರಯೋಗಿಸುವ ಒಂದು ಅಲಂಕಾರ: ಯುಗ್ಮಾನ್ವಯ [ಉದಾ., Kill the boys and (destroy) the luggage. With weeping eyes and (grieving) hearts (ಮೊದಲನ ವಾಕ್ಯದಲ್ಲಿ destroy ಪದವನ್ನೂ, ಎರಡನೆಯ ವಾಕ್ಯದಲ್ಲಿ grieving ಪದವನ್ನೂ ಲೋಪಮಾಡಿ ಪ್ರಯೋಗಿಸುವುದು)]. **Zeugmátic** (ಗು.)

Zeus ಸ್ಯೂಸ್ (ನಾ.) (ಗ್ರೀಕ್ ಪ್ರಾ.) ಗ್ರೀಕರ ದೇವೇಂದ್ರ.

Zíbet ಸ್ಸಿಬೆಟ್ (ನಾ.) =Civet (ಮು., ಏಷ್ಯದ ಪುನಗಿನ ಬೆಕ್ಕು)

Zígzag ಸ್ಸಿಗ್‌ಸ್ಯಾಗ್ (ಗು., ಕ್ರಿ. ವಿ., ಕ್ರಿ. ಅಕ., ನಾ.) ಪರ್ಯಾಯವಾಗಿ ಎಡಬಲ ಮುರುವುಗಳುಳ್ಳ; ವಂಕಿ ವಂಕಿಯಾದ; ಸೊಟ್ಟ ಸೊಟ್ಟ, ಡೊಂಕು ಡೊಂಕು, —ಆದ (A z. line, road). (ಕ್ರಿ. ವಿ.) —ಆಗಿ. (ಕ್ರಿ.) —ಆಗಿ ಹೋಗು. (ನಾ.) ಅಡ್ಡಾದಿಡ್ಡಿ—ಗೆರೆ, ರಸ್ತೆ, ಕಂದಕ.

Zinc ಸ್ಸಿಂಕ್ (ನಾ., ಕ್ರಿ. ಸಕ.) ಸತುವು [Flowers of z. *or* z. oxide (ಕೆಲವು ಮುಲಾಮು, ಸಿಮೆಂಟು, ಬಿಳಿ ವರ್ಣದ್ರವ್ಯ, ಮೊ. ಗಳಲ್ಲಿ ಉಪಯೋಗಿಸುವ) ಸತುಭಸ್ಮ]. (ಕ್ರಿ.) ಸತು—ಲೇಪಮಾಡು, ಮುಲಾಮು ಮಾಡು. **Zíncic** (ಗು.) ಸತುವಿನ, ಸತುವುಳ್ಳ. **Zincíferous** (ಗು.) ಸತುವುಳ್ಳ, ಸತು ದೊರೆಯುವ. **Zíncify** (ಕ್ರಿ. ಸಕ.) ಸತುವು—ಲೇಪಮಾಡು, ಪೂರಣಮಾಡು. **Zincificátion** (ನಾ.); **Zíncode** (ನಾ.) (ಪ್ರವಾಹೀವಿದ್ಯುತ್ಕೋಶದ) ಧನ ಧ್ರುವ, ಸತು ಧ್ರುವ. **Zíncograph, Zinco** (ನಾ., ಕ್ರಿ.) ಸತು ಫಲಕ(ದ ಪಡಿಯಚ್ಚು), ಸತುಪ್ರತಿ. (ಕ್ರಿ.) ಸತು ಫಲಕದಮೇಲೆ ಕೆತ್ತು, ಸತು ಪ್ರತಿಮಾಡು. **Zincógraphy** ಸ್ಸಿಂಕಾಗ್ರಫಿ (ನಾ.); **Zincógrapher** (ನಾ.); **Zincográphic** ಸ್ಸಿಂಕೊ— (ಗು.); **Zíncotype** ಸ್ಸಿಂಕೊಟೈಪ್ (ನಾ.) =Zincograph. **Zíncoid** (ಗು.) ಸತುವಿನಂಥ, ಸತುಕಲ್ಪ. **Zíncous** (ಗು.) ಸತುವಿನ(ಂಥ), ಧನ ವಿದ್ಯುತ್ ಸ್ವಭಾವದ. **Zínky** ಸ್ಸಿಂಕಿ (ಗು.) ಸತು ಸಂಬಂಧವಾದ, ಸತುವುಳ್ಳ. **Zinco-** (ನ. ಪೂ. ಪ.)

Zíngaro ಸ್ಸಿಂಗರೊ (ನಾ., ಬ. ವ. -ri —ರೈ) =Gipsy (ಆ ಪದ ನೋಡಿ)

Zíon ಸ್ಸೈಅನ್ (ನಾ.) ಪುರಾತನ ಜೆರೂಸಲೆಮ್; ಇದರಲ್ಲಿಯ ಪವಿತ್ರ ಪರ್ವತ; ಯೆಹೂದ್ಯ ಧರ್ಮ; ಕ್ರೈಸ್ತ ಮತ; (ಯೆಹೂದ್ಯರ, ಕ್ರೈಸ್ತರ) ದೇವಲೋಕ, ಸ್ವರ್ಗ [**Zíonwards** (ಕ್ರಿ. ವಿ.) ಸ್ವರ್ಗಾಭಿಮುಖವಾಗಿ]. **Zíonist** (ನಾ.) ಯೆಹೂದ್ಯರಿಗೆ ಪ್ಯಾಲೆಸ್ಟೈನಿನಲ್ಲಿ ನೆಲೆವಾಡಬೇಕೆಂದು ವಾದಿಸುವವನು: ಯುಹೂದ್ಯ ಸ್ವಾಸ್ಥ್ಯವಾದಿ. **Zíonism** (ನಾ.) ಯೆಹೂದ್ಯ ಸ್ವಾಸ್ಥ್ಯ ಚಳವಳಿ.

Zírcon ಸ್ಸರ್ಕನ್ (ನಾ.) ಸರ್ಕೋನಿಯಂ ಸಿಲಿಕೇಟು (ಇದರ ಕೆಲವು ಪ್ರಭೇದಗಳನ್ನು ರತ್ನಗಳಾಗಿ ಕೆತ್ತುವುದುಂಟು). **Zircónium** (ನಾ.) ಒಂದು ಲೋಹ. **Zírconate** (ನಾ.) ಸ್ಸರ್ಕನ್ ಲವಣ. **Zircónic** (ಗು.); Z. acid ಸ್ಸರ್ಕನ್ ಆಮ್ಲ.

Zíther(n) ಸ್ಸಿತರ್(ನ್) (ನಾ.) ಪೊಳ್ಳು ನಾದ ಪೆಟ್ಟಿಗೆಯ ಮೇಲೆ ೩೦-೪೦ ತಂತಿಗಳನ್ನು ಅಳವಡಿಸಿದ್ದು, ಬೆರಳಿನಿಂದ ಮಿಾಟುವ ಒಂದು ವಾದ್ಯ: ಒಂದು ಬಗೆಯ ಸಿತಾರ್. **Zítherist** (ನಾ.) —ಬಾರಿಸುವವನು.

Zlóty ಸ್ಲಾಟಿ (ನಾ.) ಪೋಲೆಂಡಿನ ಒಂದು ನಾಣ್ಯ (೧೦ ಪೆನಿ ಬೆಲೆಯದು)

Zóar ಸ್ಸೋಅರ್ (ನಾ.) ಆಶ್ರಯ ಸ್ಥಾನ, ಶರಣ ಸ್ಥಾನ.

Zódiac ಸ್ಸೋಡಿಆ್ಯಕ್ (ನಾ.) ಆಕಾಶದಲ್ಲಿ ಕ್ರಾಂತಿವೃತ್ತದ ಎರಡು ಪಕ್ಕಗಳಲ್ಲಿ ಸಮನಾಗಿ ಪಸರಿಸಿ ಒಟ್ಟು ೧೬° ವಿಸ್ತಾರವುಳ್ಳ, ಸೂರ್ಯ, ಚಂದ್ರ ಮತ್ತು ಇತರ ಗ್ರಹಗಳ ಪಥಗಳನ್ನು ಒಳಗೊಂಡ, ಒಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಊಹಾತ್ಮಕ ಮಂಡಲ (ಇದನ್ನು ಜ್ಯೋತಿಷ್ಕರು ೧೨ ಭಾಗಗಳಾಗಿ ವಿಂಗಡಿಸಿದ್ದಾರೆ): ರಾಶಿ ಚಕ್ರ (Signs of the z. ಮೇಷಾದಿ ಹನ್ನೆರಡು ರಾಶಿಗಳು); (ರೂಪ., ಈಗ ವಿರ. ಪ್ರ.) ಸಂಪೂರ್ಣ ಪಥ, ಪೂರ್ತ ಸುತ್ತು. **Zodíacal** ಸೊಡೈಅಕಲ್ (ಗು.) ರಾಶಿಚಕ್ರ ದ(ಲ್ಲಿರುವ) (Z. constellation ರಾಶಿ ನಕ್ಷತ್ರಪುಂಜ. Z. light ಮು., ಉಷ್ಣವಲಯದಲ್ಲಿ ಸೂರ್ಯೋದಯಕ್ಕೆ ಮೊದಲು ಪೂರ್ವ ದಿಕ್ಕಿನಲ್ಲಿಯೂ, ಸೂರ್ಯಾಸ್ತದಮೇಲೆ ಪಶ್ಚಿಮ ದಿಕ್ಕಿನಲ್ಲಿಯೂ ಆಕಾಶದಲ್ಲಿ ಕೆಲವು ವೇಳೆ ಕಾಣಿಸಿಕೊಳ್ಳುವ ದೀರ್ಘ ತ್ರಿಕೋನಾಕಾರದ ಪ್ರಕಾಶಮಯ ಭಾಗ: ರಾಶಿ ಚಕ್ರ ಪ್ರಕಾಶ)

Zóetrope ಸೋಇಟ್ರೋಪ್ (ನಾ.) = Wheel of life (Wheel ನೋಡಿ)

Zóic ಸೋಇಕ್ (ಗು.) ಪ್ರಾಣಿಗಳ; (ಭೂ. ವಿ.; ಶಿಲೆಗಳ ವಿಷಯದಲ್ಲಿ) ಪ್ರಾಣಿಗಳ ಅಥವಾ ಸಸ್ಯಗಳ—ಗುರುತಿನ, ಪಳೆಯುಳಿಕೆಗಳುಳ್ಳ.

Zólaism ಸೋಲಇಸಂ (ನಾ.) ಅಸಭ್ಯ ಅಥವಾ ಅಶ್ಲೀಲ ವಿಷಯ ಗಳನ್ನು ವರ್ಣಿಸುವುದರಲ್ಲಿ ಗಾಂಭೀರ್ಯವಿಲ್ಲದಿರುವುದು: ಅತಿ ವಾಸ್ತವ ಅಶ್ಲೀಲ ನಿರೂಪಣೆ. **Zólaist** (ನಾ.); **Zolaístic** (ಗು.), **Zolaésque** (ಗು.) ಸೋಲಾವಿನ ರೀತಿಯ. [ಫ್ರೆಂಚ್ ಕಾದಂಬರಿಕಾರ Emile Zola ಎಂಬಾತನ ಹೆಸರಿನಿಂದ]

Zóllverein (G) ಟ್ಸಾ(ಟ್ಸೋ)ಲ್ಲ್‌ಫೆರೈನ್ (ನಾ.) ತಮ್ಮ ತಮ್ಮಲ್ಲಿ ಅನಿರ್ಬಂಧ ವ್ಯಾಪಾರಕ್ಕೂ, ಎಲ್ಲವೂ ಒಟ್ಟುಸೇರಿ ಇತರ ದೇಶಗಳ ಆಮದು ರಫ್ತುಗಳಮೇಲೆ ತಡೆ ಸುಂಕ ಹಾಕುವುದಕ್ಕೂ ಒಪ್ಪಂದ ಮಾಡಿಕೊಂಡ ರಾಷ್ಟ್ರಗಳ ಸಂಯೋಗ: ಸುಂಕ ಸಂಯುಕ್ತ ರಾಷ್ಟ್ರ.

Zone ಸೋನ್ (ನಾ., ಕ್ರಿ. ಸಕ.) (ಮು., ಪ್ರಾಚೀ. ಪ್ರ. ಅಥವಾ ಕಾವ್ಯ) ಡಾಬು, ಒಡ್ಯಾಣ, ನಡುಪಟ್ಟಿ (Maiden *or* Virgin z. ಕನ್ನೆಯ ಒಡ್ಯಾಣ, ಕನ್ಯಾತ್ವ. Loose the maiden z. of ಕನ್ನೆಯ ಒಡ್ಯಾಣ ಕಳಚು, ಕನ್ಯಾತ್ವ ಹಾಳುಮಾಡು); ಪಟ್ಟಿ, ಮಂಡಲ; (ಭೂಗೋಳಶಾಸ್ತ್ರ) ಭೂಮಧ್ಯ ರೇಖೆಗೆ ಸಮಾಂತರವಾದ ವೃತ್ತ ಗಳಿಂದ ವಿಭಕ್ತವಾದ ಭೂಮಂಡಲದ ಐದು ಭಾಗಗಳಲ್ಲೊಂದು: ವಲಯ [Frigid zones (ಉ. ಮತ್ತು ದ.) ಶೀತವಲಯಗಳು. Torrid z. (ಸಂಕ್ರಾಂತಿ ವೃತ್ತಗಳ ನಡುವಣ) ಉಷ್ಣವಲಯ. Temperate z. ಸಮಶೀತೋಷ್ಣ ವಲಯ]; ಹೆಚ್ಚು ಕಡಮೆ ಸಮಾನ ಕೇಂದ್ರಕ ವೃತ್ತಗಳೆರಡರ ನಡುವಣ ಭಾಗ: (ವೃತ್ತ) ಮಂಡಲ, ಸುತ್ತುಪಟ್ಟಿ; ವಲಯಾಕಾರದ ಪ್ರದೇಶ. **Zónal** (ಗು.) ವಲಯಾ ಕಾರದ, ಮಂಡಲಾಕಾರದ; ವಲಯದ, ಮಂಡಲದ. **Zónally** (ಕ್ರಿ. ವಿ.); **Zónary** (ಗು.) ವಲಯದ(ಂಥ), ವಲಯ ಸಂಬಂಧವಾದ. **Zónate** (ಗು.) (ಸ. ವಿ., ಪ್ರಾ. ವಿ.) ವಲಯಗಳುಳ್ಳ, ಮಂಡಲಾಕಾರದ. **Zónular** (ಗು.) ಕಿರುವಲಯದ, ಮಂಡಲಕದ. **Zónule** (ನಾ.) ಕಿರುವಲಯ, ಸಣ್ಣ ಮಂಡಲ, ಮಂಡಲಕ.

Zoo ಸೂ (ನಾ.) (ಬಳ. ಮಾ.) (ಮು., ಲಂಡನಿನಲ್ಲಿಯ) ಪ್ರಾಣಿ ವನ, ಮೃಗಾಲಯ, ಮೃಗಶಾಲೆ.

Zoo- ಸೂ— (ಸ. ಪೂ. ಪ.) (ಪ್ರಾಣಿಗಳ, ಪ್ರಾಣಿ ಜೀವನದ ಎಂಬ ಅರ್ಥ ಗಳಲ್ಲಿ): ಪ್ರಾಣಿ—, ಮೃಗ—. **-chémistry** (ಪ್ರಾಣಿ ಶರೀರ ಘಟಕ ಗಳನ್ನು ಕುರಿತ) ಪ್ರಾಣಿ ರಸಾಯನಶಾಸ್ತ್ರ. **-dynámics** ಪ್ರಾಣಿ ಶರೀರ ವಿಜ್ಞಾನ. **-gamy** (ಪ್ರಾಣಿಗಳ) ಲೈಂಗಿಕ ಜನನ, ಲೈಂಗಿ ಕೋತ್ಪತ್ತಿ. **-geny** ಪ್ರಾಣ್ಯಂಗ ರಚನೆ, ಪ್ರಾಣ್ಯುತ್ಪಾದನೆ. **-geógraphy** (ಭೂಪ್ರದೇಶಗಳಲ್ಲಿ ಪ್ರಾಣಿಗಳ ಹರಡಿಕೆಯನ್ನು ಕುರಿತ) ಪ್ರಾಣಿ—ಭೂಗೋಳ, ಭೂವಿವರಣೆ. **-geógrapher** (ನಾ.); **-geográphic(al)** (ಗು.); **-gony** = Zoogeny. **-graft** ಪ್ರಾಣ್ಯಂಗ ಕಸಿ (Zooplastic ನೋಡಿ). **-graphy** ಪ್ರಾಣಿ ವಿವರಣೆ; ವಿವರಣಾತ್ಮಕ ಪ್ರಾಣಿ ವಿಜ್ಞಾನ. **-grapher** (ನಾ.); **-gráphic(al)** (ಗು.); **-graphist** (ನಾ.); **-latry** ಪ್ರಾಣಿ ಪೂಜೆ, ಪ್ರಾಣಿಗಳ ಆರಾಧನೆ. **-lite** ಶಿಲೀಭೂತ ಪ್ರಾಣಿ (ಪದಾರ್ಥ); ಪ್ರಾಣಿ ಶಿಲೆ. **Zoólogy** ಪ್ರಾಣಿ—ಶಾಸ್ತ್ರ, ವಿಜ್ಞಾನ. **-lógical** (ಗು.) (Zoological garden ಪ್ರಾಣಿ ವನ, ಮೃಗಾಲಯ). **-lógically** (ಕ್ರಿ. ವಿ.); **-logist** (ನಾ.); **-mágnetism** ವಶೀಕರಣ ಸುಪ್ತಿ, ಸುಪ್ತಾ ವಾಹನ ವಿದ್ಯೆ. **-mancy** ಪ್ರಾಣಿಗಳ ತೋರಿಕೆ ಅಥವಾ ನಡೆವಳಿಕೆ ಗಳಿಂದ ಭವಿಷ್ಯ ಹೇಳುವುದು: ಪ್ರಾಣಿ ಶಕುನ. **-mechánics** = Zoodynamics. **-mórphic** ಪ್ರಾಣಿರೂಪದ, ಪ್ರಾಣಿತ್ವಾ ರೋಪಣದ, ಪ್ರಾಣಿವದ್ಭಾವನೆಯ, ಮೃಗರೂಪದ ದೇವತೆಗಳುಳ್ಳ (Anthropomorphic ಪದದೊಡನೆ ಹೋಲಿಸಿ). **-morphism** (ನಾ.); **-phýsics** ಪ್ರಾಣಿಗಳ ಭೌತರಚನ ಶಾಸ್ತ್ರ, ಪ್ರಾಣಿ ಭೌತಶಾಸ್ತ್ರ. **-phyte** ಸಸ್ಯರೂಪದ ಪ್ರಾಣಿಗಳು (ಉದಾ., ಜೆಲ್ಲಿ ಮೀನು, ಸ್ಪಂಜು, ಮೊ.): ಪ್ರಾಣಿ ಸಸ್ಯ. **-phýtic** (ಗು.); **-phytólogy** (ನಾ.) ಪ್ರಾಣಿಸಸ್ಯ ಶಾಸ್ತ್ರ. **-phytológical** (ಗು.); **-phytólogist** (ನಾ.); **-plástic** (ಶಸ್ತ್ರ ಚಿಕಿತ್ಸೆ) ಪ್ರಾಣಿಯ ಜೀವಂತ ಅಂಗಾಂಶ ವನ್ನು ಮನುಷ್ಯನಿಗೆ ಅಂಟಿಸುವುದು: ಪ್ರಾಣ್ಯಂಗ ಸಂಯೋಜನ, ಪ್ರಾಣ್ಯಂಗಕಸಿ. **-psychólogy** ಪ್ರಾಣಿ ಮನಶ್ಶಾಸ್ತ್ರ. **-sperm** ಬೀಜಾಣು, ರೇತ್ರಾಣು; ಚಲ ಜೀವಕಣ. **-spore** ಚಲ ಜೀವಕಣ, ಪ್ರಾಣಿ ಜೀವಕಣ. **-spóric** (ಗು.); **-taxy** ಪ್ರಾಣಿ ವರ್ಗೀಕರಣ. **-théism** ಪ್ರಾಣಿ, ಮೃಗ, —ಪೂಜೆ, ಆರಾಧನೆ(ಯ ಮತ). **-theístic** (ಗು.); **-tony** (ಮನುಷ್ಯ ಶರೀರ ವಿನಾ ಇತರ) ಪ್ರಾಣ್ಯಂಗ ಚ್ಛೇದ, ಪ್ರಾಣಿಚ್ಛೇದನ; ಪ್ರಾಣ್ಯಂಗ ರಚನ (ಶಾಸ್ತ್ರ)

Zóoid ಸೋಆಯ್ಡ್ (ಗು., ನಾ.) ಅಪೂರ್ಣ ಪ್ರಾಣಿಸ್ವಭಾವದ; ಪ್ರಾಣಿ ಕಲ್ಪದ. (ನಾ.) ಪ್ರಾಣಿಯಾಗಲಿ ಸಸ್ಯವಾಗಲಿ ಅಲ್ಲದ, ಆದರೆ ಅದನ್ನು ಹೋಲುವ ಜೀವಕಣ: ಪ್ರಾಣಿಕಣ; ಮುಕುಳಾಂಕುರ ಜನನದಿಂದ ಅಥವಾ ವಿದಳನ ಕ್ರಮದಿಂದ ಹುಟ್ಟಿದ ಸ್ವತಂತ್ರ ಜೀವಿ: ಪ್ರಾಣಿಕಲ್ಪ; ಸಂಯುಕ್ತ ಜೀವಿಯಲ್ಲಿಯ ಒಂದು ಜೀವಿ: ಜೀವಿಕಣ.

Zoom ಸೂಮ್ (ಕ್ರಿ. ಅಕ.) (ವಿಮಾನ ವಿದ್ಯೆ: ಅಸಂ) (ವಿಮಾನವನ್ನು) ಕಡಿದಾಗಿಯೂ ವೇಗವಾಗಿಯೂ ಏರಿಸು, ತಟಕ್ಕನೆ ಮೇಲೇರಿಸು.

Zóril ಸಾರಿಲ್ (ನಾ.) ಆಫ್ರಿಕ, ಏಷ್ಯಾಮೈನರುಗಳಲ್ಲಿಯ, ಮಾಂಸಾಹಾರಿ ಯಾದ, ಒಂದು ಚತುಷ್ಪಾದಿ: ಸಾರಿಲ್.

Zoroástrian ಸೊರೊಆ್ಯಸ್ಟ್ರಿಯನ್, **Zarathústrian** ಸ್ಯಾರತುಸ್ಟ್ರಿ ಯನ್ (ಗು., ನಾ.) (ಪುರಾತನ ಪರ್ಷಿಯದ ಪ್ರವಾದಿಯಾದ) ಸೊರೊ ಆಸ್ಟರಿನ, ಸರತುಷ್ಟ್ರನ—ಅನುಯಾಯಿ; ಸರತುಷ್ಟ್ರ ಮತದ(ವನು). **Zoroástrianism** (ನಾ.); **Zarathústr(ian)ism** (ನಾ.) ಸರತುಷ್ಟ್ರ—ಮತ, ಧರ್ಮ (ಈಗಿನ ಪಾರ್ಶಿ ಜನಗಳ ಮತ, ಧರ್ಮ)

Zouave ಸೂಆವ್ (ನಾ.) ಮೊದಲು ಅಲ್ಜೀರಿಯನ್ನರಿಂದ ಕೂಡಿದ್ದ, ಪೂರ್ವದೇಶೀಯರ ಉಡುಪನ್ನೇ ಧರಿಸುತ್ತಿದ್ದ, ಫ್ರೆಂಚು ಸೈನ್ಯದ ಒಂದು ಪದಾತಿ ದಳದವನು: ಸೂಆವ್ ಪದಾತಿ; ಹೆಂಗಸಿನ ಈ ವಸ್ತ್ರದಂಥ ರವಿಕೆ.

Zounds ಸೌಂಡ್ಸ್ (ಭಾವ. ಅವ್ಯ.) (ಪ್ರಾಚೀ. ಪ್ರ.) ರೋಷ ಸೂಚಕ ಅವ್ಯಯ [God's wounds (ಶಿಲುಬೆಯ ಮೇಲಿನ ಕ್ರಿಸ್ತನ ಗಾಯಗಳು) ಎಂಬುದರ ಸಂಕ್ಷಿಪ್ತ]

Zucchétta ಟ್ಸುಕೆಟ, **-tto** —ಟೊ (ನಾ.) ರೋ. ಕ್ಯಾ. ಪಾದ್ರಿಯ ಕಪಾಲ ಟೋಪಿ, ಕುಲಾವಿ.

Zúlu ಸೂಲು (ನಾ.) (ದ. ಆಫ್ರಿಕದ) ಸೂಲು—ಬುಡಕಟ್ಟಿನವನು, ಬುಡಕಟ್ಟಿನ ಭಾಷೆ; ಸೂಲು—ಜನ, ಭಾಷೆ.

Zwiéback (G) ಟ್ಸೀಬಾಕ್ (ನಾ.) ಒಂದು ಬಗೆಯ ಬಿಸ್ಕತ್ತು ಅಥವಾ ಸುಟ್ಟ ಸೀ ರೊಟ್ಟಿ.

Zýgal ಸೈಗಲ್ (ಗು.) H ಆಕಾರದ, ನೊಗದಾಕಾರದ (ಮು., ಮಿದುಳಿನ ಬಿರಿತಗಳ ಸಂಬಂಧದಲ್ಲಿ ಪ್ರ.)

Zyg(o)- ಸೈಗ್(ಒ)— (ಸ. ಪೂ. ಪ.) ನೊಗ—, ಯುಗ—, ಯುಗ್ಮ—. **Zygapóphysis** ಬೆನ್ನೆಲುಬಿನಲ್ಲಿ ಮತ್ತೊಂದರೊಡನೆ ಕೀಲಿಸಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನುಕೂಲಿಸುವ ಮೂಳೆಯ ಚಾಚು (ಸಾ., ಇಂಥ ನಾಲ್ಕು ಚಾಚುಗಳು ಇರುತ್ತವೆ): ಕೀಲುಚಾಚು. **Zygodáctyl** (ಗು., ನಾ.), **-ctylous** (ಗು.) ಎರಡು ಮುಂದಕ್ಕೂ ಎರಡು ಹಿಂದಕ್ಕೂ ಚಾಚಿಕೊಂಡಿರುವಂತೆ ಜೋಡಿಯಲ್ಲಿ ಅಳವಟ್ಟಿರುವ ಬೆರಳುಳ್ಳ (ಹಕ್ಕಿ): ನೊಗಬೆರಳಿ, ಯುಗಾಂಗುಲಿ. **Zygomórphous** (ಹೂವಿನ ವಿಷಯದಲ್ಲಿ) ಒಂದು ಸಮತಲದಲ್ಲಿ ಮಾತ್ರ ಸದೃಶ ಭಾಗಗಳಾಗಿ ವಿಭಾಗಿಸಲಾಗುವ; ಯುಗ್ಮರೂಪಿ. **Zýgospore** ಯುಗ್ಮ, ಜೋಡಿ, —ಜೀವ ಕಣ.

Zygóma ಝಿ(ಝೈ)ಗೋಮ (ನಾ.; ಬ. ವ. -mata —ಮಟ) ಕೆನ್ನೆಯ ಕಮಾನು (ಮೂಳೆ); ಕೆನ್ನೆಯೆಲುಬು, ಗಂಡಾಸ್ಥಿ. **Zygomátic** (ಗು.)

Zygósis ಝಿ(ಝೈ)ಗೋಸಿಸ್ (ನಾ.) (ಜೀ. ವಿ.) (ಪುನರುತ್ಪತ್ತಿಗಾಗಿ) ಎರಡು ಜೀವಕಣಗಳ ಸಂಯೋಗ: ಜಂಪತಿ ಸಂಯೋಗ.

Zýgote ಝೈಗೋಟ್ (ನಾ.) ಎರಡು ಜಂಪತಿಗಳ ಸಂಯೋಗದಿಂದ ಆದ ಜೀವಕಣ: ಯುಗ್ಮ—ಜೀವಾಣು, ಜೀವಕಣ.

Zymósis ಝಿ(ಝೈ)ಮೋಸಿಸ್ (ನಾ.) ಹುಳಿನೊರೆಯಾಗುವುದು, ಹುದುಗುವುದು, ಕಿಣ್ವವಾಗುವುದು; ಕಿಣ್ವೀಕರಣ; ಕಿಣ್ವ ರೋಗ. **Zymótic** —ಮಾಟಿಕ್ (ಗು.) ಹುದುಗಿನ, ಕಿಣ್ವದ. Z. diseases ಹೊರಗಿನಿಂದ ಬಂದು ಸೇರಿದ ರೋಗ ಕ್ರಿಮಿಗಳು ವೃದ್ಧಿಯಾಗುವುದರಿಂದ ಉಂಟಾಗುವ ಸಾಂಕ್ರಾಮಿಕ ರೋಗಗಳು: ಕಿಣ್ವ ರೋಗಗಳು.

PRINTED BY THE SUPERINTENDENT AT THE GOVERNMENT PRESS, BANGALORE

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

STOCK VERIFY 2020 G.K.V. Library

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar